Reg. No. M. 1350.
If not delivered please return to
"KODAGU" OFFICE MERCARA.

ಕೊಡಗು.

[illegible]

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೨ || ಮಡಿಕೇರಿ, ಸನ್ ೧೯೩೩ನೇ ಇಸವಿ ಡಿಸೆಂಬರ್ ತಾರೀಖು ೩೦ ನೇ [illegible]ವಾರ. || ಸಂಚಿಕೆ ೩೦

SARI-PIN.

BRACELETS.

NECKCHAINS.

EAR-RINGS.
(Thodus)
Cut rubys Rs. 15 to 50
With diamond in centre Rs. 80 to 120

Gold Rs. 10
Set rubys forming any letter Rs. 12

NOSE-RINGS.
Diamond in small size of best quality Rs. 35
& upwards according to size.

MARRIAGE PRESENTATIONS

Attractive and inexpensive articles ready in stock. Prompt execution. Details on enquiry free with catalogue. Numerous customers in Coorg thoroughly satisfied with reliable service. Testimonials pouring in.
Silver Guindys, Photo lockets, Diamond nose screws, cut-ruby ear-rings, etc., etc., etc., in all prices. Very attractive. Prices most moderate.

Estimates free on enquiry

Designs free on enquiry.

Telegrams: 'PRECIOUS.'

Telephone: 3145.

T. Subramaniaier
Jeweller.

CATALOGUE ON ENQUIRY.

52—5

Post Box 423, Triplicane, P. O., MADRAS.



26—26

ಜನರಲ್ ಅಶ್ಯೂರೆನ್ಸ್ ಸೊಸೈಟಿ.

ಅಜಮೀರ್.

ನಮ್ಮ ದಯಪ್ಪಾಲ ದ ಪಟ್ಟಿಯೇ ನಮ್ಮ ಅಭಿವೃದ್ಧಿಯನ್ನು ವ್ಯಕ್ತಗೊಳಿಸುತ್ತದೆ.

ವರ್ಷ	ಮಾಲ್ಪಟ್ಟ ವಹಿವಾಟು	ಮಾಲ್ಪಟ್ಟ ಮೂಲಧನ	ಖರ್ಚು ಶೇಕಡ
1911	46,248	49,442	82.9
1921	2,92,627	6,5[illegible],350	43 2
1931	12,50,000	4[illegible],00,000	28 2

ಬೋನಸ್ಸು.

ಹುಟ್ಟಿದ ತಾರೀಖಿನಿಂದ ಪಾಲಿಸಿಗಳ ಮೇಲೆ ವರ್ಷ ಒಂದಕ್ಕೆ ಶೇಕಡ 22½

ಚೆನ್ನಾಗಿ ಕೆಲಸಮಾಡಿ ಅಭಿವೃದ್ಧಿ ಸ್ಥಿತಿಯಲ್ಲಿರುವ ಈ ಸೊಸೈಟಿಯಲ್ಲಿ ಏನೋ ಕಡಿಮೆ ಪ್ರೀಮಿಯಂ ತಾವಡೆ ಮಾಡುವ ಸೌಲಭ್ಯ ಹೊಂದಿ ಅಥವಾ ಈ ಕಂಪೆನಿಯು ಏಜಂಟರಾಗಿ ಕೆಲಸಮಾಡಿ ಉತ್ತಮ ಕಮಿಶನ್ ದಿಂದ ಪ್ರಯೋಜನ ಹೊಂದಿ.

ಹೆಚ್ಚು ವಿವರಗಳಿಗೆ ಈ ವಿಳಾಸಕ್ಕೆ ಬರೆಯಿರಿ:—

ಎ. ರಾಮಚಂದ್ರರಾವ್,
ಸುಪರಿಂಟೆಂಡೆಂಟ್,
ಮಿಂಟೋ ಆಸ್ಪತ್ರೆ ರೋಡ್,
ಬೆಂಗಳೂರು.

52—35

ಎಂಪಯರ್ ಆಫ್ ಇಂಡಿಯಾ
ಲೈಫ್ ಎಶ್ಯುರೆನ್ಸ್ ಕಂಪೆನಿ ಲಿಮಿಟೆಡ್.

(ಸ್ಥಾಪನೆಯಾದದ್ದು 1897.)

1934ನೇ ಇಸವಿ ಮಾರ್ಚ 1ನೇ ತಾರೀಖಿನೊಳಗೆ ಹುಟ್ಟುವ ಪೋಲಿಸಿಗಳ ಮೇಲೆ ಇಂಟರಿಂ ಬೋನಸ್ಸುಗಳು ವರ್ಷಕ್ಕೆ 1000ಕ್ಕೆ ರೂ. 16ರಂತೆ ಹೋಲ್ ಲೈಫ್ ಎಶ್ಯುರೆನ್ಸಿನ ಮೇಲೆಯೂ
ಮತ್ತು
1000ಕ್ಕೆ ರೂ. 14ರಂತೆ ಎಂಡೋವ್ಮೆಂಟ್ ಎಶ್ಯುರೆನ್ಸಿನ ಮೇಲೆಯೂ ಕೊಡಲ್ಪಟ್ಟಿವೆ.

ಹೆಡ್ ಆಫೀಸು:—
ಎಂಪೈರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್,
ಬೊಂಬಾಯಿ.

ಬ್ರಾಂಚ್ ಆಫೀಸು:—
152—3 ಕಮಸರ್ಲಾ ಸ್ಟ್ರೀಟ್,
ಬೆಂಗಳೂರು.

52—12

ಯು. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಸಿಷಿಯನ್ಸ್, ಕಲ್ಲಿಕೋಟೆ, ಮಂಗಳೂರು, ಇವರ

❋ ಅನುಭವ ಸಿದ್ಧ ಔಷಧಗಳು. ❋

೧. **ಧಾತುಪುಷ್ಟಿ ಲೇಹ**—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೋಗುವಿಕೆ, ನರಗಳು ದುರ್ಬಲವಾಗಿ ಸಂಧಿರೋಗಗಳುಂಟಾಗುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ಬಾಧೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಒಡೆಯುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು. ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7—0—0.

೩. **ಅಶೋಕಾರಿಷ್ಟ ಮತ್ತು ಮಾತ್ರೆ**—ಹೆಂಗಸರ ಮುಟ್ಟಿನ ದೋಷಗಳು, ಮುಟ್ಟು ಸರಿಯಾಗಿ ಆಗದಿರುವುದು, ಹೊಟ್ಟೆನೋವು, ಸೊಂಟನೋವು, ಸೂತಕ ಸನ್ನಿ, ಮೂರ್ಛೆ, ಮಲಬದ್ಧತೆ, ರಕ್ತಹೀನತೆ, ಕೈ ಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನು ಗುಣಪಡಿಸುವುದು. 1 ಬಾಟ್ಲಿ ಔಷಧಕ್ಕೂ, 1 ಡಬ್ಬಿ ಮಾತ್ರೆಗೂ ರೂ. 2—4—0; 2ಕ್ಕೆ ರೂ. 4—1—0.

೪. **ಮೇಹ ಕುಠಾರ**—ಇದು ಮೂತ್ರಸ್ಥಾನದಿಂದ ಕೆಂಪು, ಬಿಳುಪು, ಹಳದಿಯಂತೆ ಹೋಗತಕ್ಕ ಕೀವನ್ನೂ, ವ್ರಣವನ್ನೂ, ಉರಿಯನ್ನೂ ಗುಣಪಡಿಸುತ್ತದೆ. ಡಬ್ಬಿ 1ಕ್ಕೆ ರೂ. 2—8—0; 3ಕ್ಕೆ ರೂ. 7—0—0.

೯. **ಬಾಲಾಗ್ರಹ ಗುಟಿಕೆ**—ಬಾಲಾಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರು ಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧ. ಬಾಟ್ಲಿ ಒಂದಕ್ಕೆ ರೂ. 0—10—0. 3ಕ್ಕೆ ರೂ. 1—12—0. (52—12)

Coorg Civil Surgeon's Office,
Mercara, the 3rd December 1932.

NOTICE.

Sealed tenders will be received at the Civil Surgeon's Office, Mercara, up to 11 a. m. on Friday the 20th January 1933, for the supply by contract of all articles of diet, etc., required separately for the use of the in-patients of (1) Mercara, (2) Virajpet and (3) Somwarpet hospitals from 1st April 1933 to 31st March 1934 (both days inclusive).

For further particulars apply to the Medical Officer in charge of the hospitals concerned.

D. Framjee,
Offg. Civil Surgeon, Coorg.

ಕೊಡಗು ಸಿವಿಲ್ ಸರ್ಜನರ ಆಫೀಸು,
ಮಡಿಕೇರಿ, 3—12—1932.

ನೋಟೀಸು.

(1) ಮಡಿಕೇರಿ, (2) ವೀರರಾಜಪೇಟೆ ಮತ್ತು (3) ಸೋಮವಾರಪೇಟೆ ಆಸ್ಪತ್ರೆಗಳಲ್ಲಿರುವ ಒಳರೋಗಿಗಳ ಉಪಯೋಗಕ್ಕೆ ಬೇಕಾಗುವ ಆಹಾರ ಸಾಮಗ್ರಿಗಳನ್ನು ಒದಗಿಸಲು 1933ನೇ ಏಪ್ರಿಲ್ 1ನೇ ತಾರೀಖಿನಿಂದ 1934ನೇ ಇಸವಿ ಮಾರ್ಚ್ 31ರ ವರೆಗೆ (ಈ ಎರಡು ದಿವಸಗಳು ಸೇರಿ) ಈ ಮೂರು ಆಸ್ಪತ್ರೆಗಳಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಒದಗಿಸಲು ಮುದ್ರೆ ಹಾಕಿದ ದರಪಟ್ಟಿಗಳು (ಟೆಂಡರ್) 1933ನೇ ಇಸವಿ ಜನವರಿ 20ನೇ ಶುಕ್ರವಾರ ಬೆಳಿಗ್ಗೆ 11 ಗಂಟೆಯ ವರೆಗೆ ಮಡಿಕೇರಿ ಸಿವಿಲ್ ಸರ್ಜನರ ಆಫೀಸಿನಲ್ಲಿ ತೆಗೆದುಕೊಳ್ಳಲಾಗುವುದು.

ಹೆಚ್ಚಿನ ಮಾಹಿತಿಗೆ ಸಂಬಂಧಪಟ್ಟ ಆಸ್ಪತ್ರೆಗಳ ಚಾರ್ಜಿನಲ್ಲಿರುವ ಮೆಡಿಕಲ್ ಆಫೀಸರಿಗೆ ಬರೆದುಕೊಳ್ಳುವುದು.

ಡಿ. ಫ್ರಾಮ್ಜಿ,
2—2 ಆಫಿಷಿಯೇಟಿಂಗ್ ಸಿವಿಲ್ ಸರ್ಜನ್, ಕೊಡಗು.

ಗೋಣಿಕೊಪ್ಪಲು ಜಾನುವಾರು, ಕುದುರೆಗಳ ಮತ್ತು ಕೋಳಿಯವುಗಳ ಪ್ರದರ್ಶನದ ಪ್ರಕಟನೆ.

1. ಸನ್ 1933ನೇ ಇಸವಿ ಜನವರಿ ತಾರೀಖು 5, 6, 7 ಮತ್ತು 8ನೇ ತಾರೀಖುಗಳಲ್ಲಿ ದಕ್ಷಿಣ ಕೊಡಗು, ಗೋಣಿಕೊಪ್ಪಲು ಎಂಬ ಸ್ಥಳದಲ್ಲಿ ದನಗಳ, ಕುದುರೆಗಳ ಮತ್ತು ಸಾಕಿದುಂಡ ಹೋಗುವ ಕೋಳಿಗಳ ಪ್ರದರ್ಶನಗಳು ನಡೆಸಲಾಗುತ್ತದೆ.

2. ಕರೆಯುವ ಆಕಳುಗಳು, ಗಾಡಿ ಎತ್ತು ಮತ್ತು ಉಳುವ ಎತ್ತುಗಳು, ಬೀಜದ ಮತ್ತು ಸಾದಾ ಹೋರಿಗಳು, ಕರುಗಳು, ಹಾಲು ಬಿಟ್ಟ ಕರುವುಗಳು, ಕುರಿಗಳು ಮತ್ತು ಎಮ್ಮೆಗಳು, ಇವು ಮೊದಲಾದ್ದು ಈ ಪ್ರದರ್ಶನದಲ್ಲಿ ಪ್ರದರ್ಶಿಸಲ್ಪಡುವ ಜಾನುವಾರುಗಳಾಗಿಯೂ, ಅಲ್ಲದೆ ಕುದುರೆಗಳು, ಹೇಸರಗತ್ತೆ ಮತ್ತು ಕೋಳಿಯವುಗಳ ಕೆಲಸಗಳ ಆಟ ವಿಶೇಷವಾದ ದನಗಳು ಸಹ ಪ್ರದರ್ಶಿಸಲ್ಪಡುವವುಗಳೆಂದು ತಿಳಿಸುತ್ತೇವೆ.

3. ಉತ್ತಮ ರಾಸುಗಳಿಗೂ, ಉತ್ತಮ ಕುದುರೆ ಮತ್ತು ಕೋಳಿಗಳಿಗೂ ಇನಾಮು ಕೊಡಲ್ಪಡುವವು.

4. ಗೋಣಿಕೊಪ್ಪಲು ಪ್ಯಾಕೇಜಿನಿಂದ ಮೂರುಮೈಲು ದೂರದಲ್ಲಿ ಹೋಗುವ ಹೈರೋಡಿನಲ್ಲಿ, ವ್ಯಾಪಾರಿಗಳು ತೀರಾಹೋಗಲು ವ್ಯವಸ್ಥೆ ಮಾಡಿದೆ. ಅನೇಕ ಮಳಿಗೆಗಳಿರುವ ಬೈಲು. ಇಲ್ಲಿ ನ್ಯಾಯವಾದ ವ್ಯಾಪಾರ ಸ್ಥಳಗಳಿಗೆ ಕೊಡಲ್ಪಡುವುದು, ಇದರ ಬಾಬ್ತು ಬಾಡಿಗೆ ಇಲ್ಲಿಗೆ ಬರುವ ಪ್ರಸಿದ್ಧಿಯಾಗಿರುವ ಒಂದು ವ್ಯಾಪಾರ ಸ್ಥಳವು ಇದು. ಇಲ್ಲಿ ದನಗಳಿಗೆ ಹುಲ್ಲುಗಳು ಧಾರಾಳವಾಗಿ ದೊರಕುವುದು ಇಲ್ಲ.

5. ಜಾನುವಾರುಗಳನ್ನು ತರುವ ಪ್ರತಿ ಹಳ್ಳಿಯ ಜನರು ಸಭೆಯ ಹಿಂದಿನ ದಿನ ಕರೆತಂದು ಠಾಣೆ ಮಾಡಿಕೊಂಡಿರಬೇಕು. ತಂಗಲು ಸ್ಥಳವುಳ್ಳ ಪ್ರದೇಶವಾಗಿರುತ್ತದೆ. ಅಲ್ಲದೆ ಹೆಚ್ಚಿನ ಪ್ರದರ್ಶನವನ್ನು ಹೆಚ್ಚು ಜಾನುವಾರುಗಳನ್ನು ಪ್ರದರ್ಶನ ಸಮಿತಿಗೆ ವ್ಯವಸ್ಥೆ ಮಾಡುವುದಕ್ಕೆ ಪ್ರದರ್ಶನದ ಕಮಿಟಿಯವರು ಪ್ರಯತ್ನಿಸುತ್ತಾರೆ.

6. ಅಲ್ಲದೆ ಜಾತ್ರೆಯಲ್ಲಿ ಏರ್ಪಾಡಾಗಿರುವ ಉತ್ಸವ ರಾಸುಗಳನ್ನು ಹೊಸದಾಗಿ ಏರ್ಪಡಿಸಿದ ಸ್ಥಳದಲ್ಲಿ ದಿನ ಸರಿಯಾದ ಪ್ರೋತ್ಸಾಹ ಸಂತೆಯಲ್ಲಿಯೂ (ದನಗಳ ಸಂತೆ) ಆಯಾ ವಾರದ ದಿನ ಮಾರಾಟ ಮಾಡಲಿಕ್ಕೆ ಅನುಕೂಲ ಮಾಡಲ್ಪಟ್ಟಿದೆ.

ವಿ. ಸೂ:—ಜಾತ್ರೆಯ ಸಮಯದಲ್ಲಿ ಕೋಳಿ ಕಾಳಗ ಮತ್ತು ಇತರ ಇತರ ಆಟಗಳು ಸಹ ನಡೆಸಲ್ಪಡುತ್ತವೆ.

ಗೋಣಿಕೊಪ್ಪಲು, ಪುಟ್ಟ ಮಾದ ಮಾದಯ್ಯ,
ತಾ. 10—12—32. (ಕಾರ್ಯದರ್ಶಿ.)

Coorg Civil Surgeon's Office,
Mercara, the 3rd December 1932,

NOTICE.

Sealed tenders for the hiring out of calves to the Vaccine Depot at Mercara for one year commencing from 1st April 1933 to 31st March 1934 will be received at the Civil Surgeon's Office, Mercara, upto 11 a. m on Friday the 20th January 1933.

For terms and other particulars apply to the Vaccine Inspector or the Civil Surgeon's Office at Mercara.

D. Framjee,
Offg. Civil Surgeon, Coorg.

ಕೊಡಗು ಸಿವಿಲ್ ಸರ್ಜನರ ಆಫೀಸು,
ಮಡಿಕೇರಿ, 3—12—1932.

ನೋಟೀಸು.

1933ನೇ ಏಪ್ರಿಲ್ 1ನೇ 1934ನೇ ಮಾರ್ಚಿ 31ರ ವರೆಗೆ ಒಂದು ವರ್ಷ ಮಡಿಕೇರಿ ವೆಕ್ಸಿನ್ ಡಿಪೋಗೆ ಕರುಗಳನ್ನು ಬಾಡಿಗೆಗೆ ಕೊಡಲು ಮುದ್ರೆ ಹಾಕಿದ ದರಪಟ್ಟಿಗಳು (ಟೆಂಡರ್) ಮಡಿಕೇರಿ ಸಿವಿಲ್ ಸರ್ಜನರ ಆಫೀಸಿನಲ್ಲಿ 1933ನೇ ಇಸವಿ ಜನವರಿ 20ನೇ ಶುಕ್ರವಾರ ಬೆಳಿಗ್ಗೆ 11 ಗಂಟೆಯ ವರೆಗೆ ತೆಗೆದುಕೊಳ್ಳಲಾಗುವುದು.

ಕರಾರುಗಳು ಮತ್ತು ವಿವರಗಳಿಗೆ ವೆಕ್ಸಿನ್ ಇನ್ಸ್‌ಪೆಕ್ಟರಿಗೆ ಅಥವಾ ಮಡಿಕೇರಿ ಸಿವಿಲ್ ಸರ್ಜನರ ಆಫೀಸಿಗೆ ಬರೆದುಕೊಳ್ಳುವುದು.

ಡಿ. ಫ್ರಾಮ್ಜಿ,
2—2 ಆಫಿಷಿಯೇಟಿಂಗ್ ಸಿವಿಲ್ ಸರ್ಜನ್, ಕೊಡಗು.

ನೋಟೀಸು.

ಎರಡು ನರ್ಸ್‌ಗಳನ್ನು ಮಡಿಕೇರಿ ಆಸ್ಪತ್ರೆಯಲ್ಲಿಯೂ, ಎರಡು ನರ್ಸ್‌ಗಳನ್ನು ವೀರರಾಜಪೇಟೆ ಆಸ್ಪತ್ರೆಯಲ್ಲಿಯೂ ಆರು ತಿಂಗಳ ವರೆಗೆ ತರಬೇತುಮಾಡುವ ಒಟ್ಟು ಒಪ್ಪಲ್ಪಟ್ಟಿಗೆ 180 ರೂ. ಯಂತೆ ವೇತನ ಕೊಡಲು ಕೊಡಗಿನ 'ಕಾಂಪೌಂಡ್ ನ್ಯಾಯ ವಿಲೇಜ್ ನರ್ಸ್' ಸಂಸ್ಥೆಯವರು ಒಪ್ಪಿಕೊಂಡಿರುವರು. ವಿದ್ಯೆಯ ಮತ್ತು ವಾಸಸ್ಥಳವನ್ನು ಸಮರ್ಪಿಸಿ ಉಮೇದುವಾರರು ಅರ್ಜಿ ಕೊಡತಕ್ಕದ್ದು ಸಿವಿಲ್ ಸರ್ಜನರಿಗೆ ಬರೆದುಕೊಳ್ಳತಕ್ಕದ್ದು. ಹೆಚ್ಚಿನ ಮಾಹಿತಿಯನ್ನು ಕೊಡಗಿನ ಸಿವಿಲ್ ಸರ್ಜನರ ಆಫೀಸಿನಿಂದ ಪಡೆಯಬಹುದು.

ಮಡಿಕೇರಿ, ಡಿ. ಫ್ರಾಮ್ಜಿ
ತಾ. 3—12—1932. ಆಫೀಷಿಯೇಟಿಂಗ್ ಸಿವಿಲ್ ಸರ್ಜನ್.

2—2

ವಿಮರ್ಶೆ.

ಚಿತ್ರಮಯ ನಮ್ಮ ಹಿಮಾಲಯ ಯಾತ್ರೆ.

ಲೇಖಕರು:—ಶ್ರೀಕೃಷ್ಣ ಗೋಕಾಕ, ಭಾರತ ಸಂಚಾರಿ.
ಪ್ರಕಾಶಕರು:—ಶ್ರೀ ಸುರೇಂದ್ರ ದೇಸಾಯಿ, ಎಂ. ಎ. ಕಾರ್ಯಾಲಯ
1೯, ಕರ್ನಾಟಕ ಶಿಕ್ಷಣ ಸಮಾಜ, ಧಾರವಾಡ ಬೆಲೆ ೧ ರೂ.

ಈ ಗ್ರಂಥವನ್ನು ಬರೆದ ಲೇಖಕರು ಕನ್ನಡ ದೇಶಕ್ಕೂ, ಕನ್ನಡ ಭಾಷೆಗೂ ಮಹದುಪಕಾರವನ್ನು ಮಾಡಿರುವರು. ಸ್ವತಃ ಯಾತ್ರೆಯನ್ನು ಮಾಡಿ ಅನ್ಯಸಾಧ್ಯವಲ್ಲ ಮಾಡಿಕೊಂಡಿರುವುದಲ್ಲದೆ ಕನ್ನಡಿಗರು ತಮ್ಮ ಅನುಭವದಿಂದ ಪುಣ್ಯ ಹೊಂದಲೆಂಬ ಅಭಿಪ್ರಾಯದಿಂದ ಹಿಮಾಲಯ ಯಾತ್ರೆಯ ಯಾವತ್ತು ವಿಷಯಗಳು ಸ್ವಲ್ಪವೂ ಬಿಡದೆ ವಿಶದವಾಗಿ ವಿವರಿಸಿ ಕೈಗನ್ನಡಿಯನ್ನಿತ್ತಿರುವರು. ಈ ಗ್ರಂಥದಲ್ಲಿ ಭಾರತ ಸಂಚಾರಿಗಳು ಹೋದೆಡೆಗಳ ನಕ್ಷೆಯೂ, ತೀರ್ಥ ಕ್ಷೇತ್ರಗಳ, ದೇವಾಲಯಗಳ ಮತ್ತು ಪ್ರಕೃತಿ ವಿಶೇಷದ ಚಿತ್ರಪಟಗಳೂ ಇರುವುವು. ಸಾವಿರಾರು ಮೈಲು ದೂರವಿರುವ ಕನ್ನಡಿಗರು ಈ ಮಹಾಯಾತ್ರೆಯನ್ನು ಕೈಕೊಂಡರೆ ಎಲ್ಲೆಲ್ಲಿ ಯಾವ ಯಾವ ರೀತಿ ಸಂಚಾರ ಮಾಡಬೇಕು, ಅದಕ್ಕೆ ಸೌಕರ್ಯಗಳು ಏನೇನು ಬೇಕು ಎಂಬ ಹಲವು ಹಿತ ಸೂಚನೆಗಳನ್ನು ಕೊಟ್ಟಿರುವರು. ತೀರ್ಥ ಕ್ಷೇತ್ರಗಳ ವಿವರಣೆಗಳೂ, ಅವುಗಳ ಮಹಾತ್ಮ್ಯವೂ ಮನೋರಂಜಕವಾಗಿ ವರ್ಣಿಸಲ್ಪಟ್ಟಿರುವುವು. ಇಂತಹ ಕಷ್ಟಸಾಧ್ಯವಾದ ಮಹಾಯಾತ್ರೆಯಿಂದಲೂ, ಕನ್ನಡ ವಾಙ್ಮಯ ಸೇವೆಯಿಂದಲೂ ಕೃಪೆ ಪಡೆದಿರುವ ಶ್ರೀಕೃಷ್ಣ ಗೋಕಾಕರು ಧನ್ಯರು.

WANTED.

Candidates for Electrical, Automobile, Wireless, Telegraph and Commercial classes opening shortly. Railfare paid. Rules on 2 anna stamps.

Imperial Guild Institute,
6—3 Bombay, 18.

ಪತ್ರವ್ಯವಹಾರ.

[ಬಾಕ್ಸಿ ದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಬಾಧ್ಯರಲ್ಲ. ಸಂ.]

ಬಾಡಗ ಗ್ರಾಮದ ರಸ್ತೆ.

ಅಯ್ಯಾ,

ಈ ವಿಷಯವನ್ನು ಕುರಿತು ತಾ. 25—11—32ರ ಸಂಚಿಕೆಯಲ್ಲಿ ಪ್ರಕಟವಾದ ಪತ್ರಿಕೆಯಲ್ಲಿ ಕೆಲವು ನಿಜವಲ್ಲದ ಸಂಗತಿಗಳು ಹೊರಬಿದ್ದಿವೆ. ಅದು ಯಾರಿಂದಲೆ, ಕೇಳದ ಬಿ ಯ್ಯಪ್ಪನವರು, ಪೊಂಗೆಟ್ಟಿರ ಅಂಗ್ಯಪ್ಪನವರು ರಸ್ತೆ ಮಾಡಿಸಿದರು ಎಂದು ಬರೆದಿದ್ದು, ಸಮಗಳಿಂದ ಕೈಯಿಂದ ಸ್ವಂತ ಹಣ ಖರ್ಚು ಮಾಡಲಿಲ್ಲ. ಇವರ ಹೆಸರೇ ತೋರಿಸಿದ್ದ ಸರಿಯಲ್ಲ. ಡಿ. ಬೋರ್ಡಿನಿಂದಲೂ ಮತ್ತು ಬಾಡಗ ಗ್ರಾಮದ ದವಸ ಭಂಡಾರದಿಂದಲೂ ಹಣ ಖರ್ಚು ಮಾಡಿದ್ದಾಗಿದೆ. ಬಗೆತ ದೇವರ ಭಂಡಾರದಿಂದ ಒಂದು ಕಾಸೂ ಖರ್ಚು ಮಾಡಲಿಲ್ಲ. ಈ ರಸ್ತೆ ಕೆಲಸ ಗ್ರಾಮಸ್ಥರೆಲ್ಲರೂ ಸೇರಿ ಮಾಡಿದ್ದಾಗಿದೆ. ಗ್ರಾಮದಲ್ಲಿ ಇದ್ದವರೆಲ್ಲರೂ ಯಾವ ಕೆಲಸವೂ ನಡೆಯುವುದಿಲ್ಲ. ತಾ. 25—11—32ರ ಪತ್ರಿಕೆ ನೋಡಿದರೆ ಗ್ರಾಮದಲ್ಲಿ ಒಡಕು ಬರುವಂತೆ ಕಾಣುತ್ತಾ ಇದೆ. ದವಸದ ಭಂಡಾರದ ಹಣವೆಲ್ಲಾ ಖರ್ಚಾಗುತ್ತಲೇ ಇದೆ. ಇದರಿಂದ ನಿಜವಲ್ಲದ ಪತ್ರಿಕೆಯನ್ನು ಕೆ. ಬಿ. ಪೊನ್ನಪ್ಪನವರು ಬರೆಯಬಾರದಾಗಿ ಕೋರುತ್ತೇನೆ. ಪಿ. ಯು. ಅಂಗಪ್ಪ.

ಭಾಗಮಂಡಲ - ಮಡಿಕೇರಿ ಮೋಟಾರ್ ಬಸ್ ಸರ್ವಿಸ್.

ಕೆಲವು ತಿಂಗಳುಗಳ ಹಿಂದೆ ದಯಾಕರಾದ ಸರ್ವಿಸ್ ಭಾಗಮಂಡಲದಿಂದ ಪುತ್ತೂರಿನ ದಾರಿಯಾಗಿ ಪ್ರತಿದಿನಗಳ, ಮಡಿಕೇರಿ ರಸ್ತೆಯಿಂದ ಡಿ ಟ್ರಂಕ್ ಮೋಟಾರ್ ಸರ್ವಿಸ್ ಬಿಟ್ಟಿರಲಾಗಿ ಭಾಗಮಂಡಲಕ್ಕೆ ಬೆಳಿಗ್ಗೆ ಭಾಗಮಂಡಲದಿಂದ ಮಡಿಕೇರಿ

ಗೂ, ಮಡಿಕೇರಿಯಿಂದ ಭಾಗಮಂಡಲಕ್ಕೂ ದಿನವೂ ಬಸ್ಸುಗಳು ಓಡ್ಯಾಡುತ್ತಿದ್ದುವು. ಆದರೆ ಈಗ ಕೆಲವು ದಿವಸಗಳಿಂದ ಈ ಮೇಲ್ಕಂಡ ಎರಡು ಬಸ್ಸುಗಳು ಭಾಗಮಂಡಲದಿಂದ ಬೆಳಗ್ಗೆ ಹೊರಟು ಸಾಯಂಕಾಲ ಯಥಾ ಪ್ರಕಾರ ಭಾಗಮಂಡಲಕ್ಕೆ ಸೇರುತ್ತವೆ. ಈ ರೀತಿ ಓಡುವುದರಿಂದ ಪುಣ್ಯಕ್ಷೇತ್ರವಾದ ಭಾಗಮಂಡಲಕ್ಕೆ ಬಸ್ಸುಗಳ ಓಡ್ಯಾಟವೇ ನಿಂತು ಹೋಗುವ ಸಂದರ್ಭ ಕಂಡು ಬರುತ್ತದೆ. ಇದರಿಂದ ಬಸ್ಸು ಸರ್ವಿಸುಗಳ ಮಾಲೀಕರಿಗೆ ಸ್ಪರ್ಧೋಟು ಆಗಿ ತಮ್ಮ ಬಸ್ಸುಗಳನ್ನು ಓಡಿಸಲಿಕ್ಕೆ ಅನಾನುಕೂಲವಾಗುವುದಲ್ಲದೆ ಸರ್ಕಾರಕ್ಕೆ ಕೊಡಬೇಕಾದ ಪರ್ಮಿಟಿನ ಕಂದಾಯ ಸಹ ತೆರಲು ಅಶಕ್ತರಾಗುತ್ತಾರೆ. ಇದರಿಂದ ಸರ್ಕಾರಕ್ಕೆ ಕೆಲವು ಮಟ್ಟಿಗೆ ಆದಾಯದಲ್ಲಿ ನಷ್ಟ ಬರುತ್ತದೆ. ಭಾಗಮಂಡಲಕ್ಕೆ ಬಸ್ಸುಗಳು ಇಲ್ಲದೆ ಹೋದಲ್ಲಿ ಹುಂಗಾಮಿ ಯಾ ಬೇರೆ ಕಾಲಗಳಲ್ಲಿ ಭಾಗಮಂಡಲದಿಂದ ಮಡಿಕೇರಿಗೆ ಯಾ ಮಡಿಕೇರಿಯಿಂದ ಭಾಗಮಂಡಲಕ್ಕೆ ವ್ಯಾಪಾರಸ್ಥರಿಗೇ, ಕೋರ್ಟುಗಳಿಗೆ ಹಾಜರು ಆಗಲೂ, ಕಾಯಿಲಸ್ಥರನ್ನು ಸಾಗಿಸುವುದಕ್ಕೆ ಗರೀಬ ಪ್ರಜೆಗಳಿಗೆ ಅಧಿಕ ತೊಂದರೆಗಳೂ, ಅನಾನುಕೂಲಗಳೂ ಉಂಟಾಗುತ್ತವೆ. ಅಲ್ಲದೆ ಈಗಿನ ರೀತಿಯಲ್ಲಿ ಈ ಮುಂದೆಯೂ ಮುಂದರಿಸಿದರೆ ಗರೀಬ ಪ್ರಜೆಗಳಿಗೂ, ಯಾತ್ರಿಕರಿಗೂ, ಸರ್ಕಾರದವರಿಗೂ ಯಾವ ಪ್ರಯೋಜನವೂ ಉಂಟಾಗಲಾರದು. ಅಲ್ಲದೆ ಬಸ್ಸು ಆತುರವಾಗಿ ಮಡಿಕೇರಿಯಿಂದ ಭಾಗಮಂಡಲಕ್ಕೆ ಹೋಗಿ ಆ ದಿನವೇ ಬರಬೇಕಾದರೆ ಈ ಮೇಲ್ಕಂಡ ರೀತಿಯು ತುಂಬಾ ಅಡಚಣೆ ಉಂಟುಮಾಡುತ್ತೆ. ಆದ್ದರಿಂದ ಇನ್ನಾದರೂ ಸರ್ಕಾರದವರು ಈ ಬಾಬಿನಲ್ಲಿ ಹೆಚ್ಚು ಗಮನಕೊಟ್ಟು ತಮಗೂ, ಬಡಪ್ರಜೆಗಳಿಗೂ ಪ್ರಯೋಜನ ಬರುವಂತೆ ಅನುಕೂಲ ಮಾಡಿಸಿ ಈ ಮೊದಲು ಓಡುತ್ತಿದ್ದ ರೀತಿಯಲ್ಲಿ ಮಾಡಬೇಕೆಂದು ಕೋರಿಕೆ.

'ಒಬ್ಬ ಪ್ರಜೆ.'

(FREE INSURANCE)

ಉಚಿತ ವಿಮಾ.

ಮ್ಯೂಚುವಲ್ ಬೆನಿಫಿಟ್ ಸ್ಕೀಂ ಎಂಬ

ಅನ್ಯೋನ್ಯ ಸಹಾಯ ಪದ್ಧತಿ.

(Mutual Benefit Scheme.)

ಜೈ ಭಾರತ ಇನ್‌ಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಹೆಡ್ ಆಫೀಸು—ಮದ್ರಾಸ್.

ಲೈಫ್ ಇನ್‌ಷ್ಯೂರೆನ್ಸ್ ಕಂಪೆನಿಗಳ ಕಾನೂನಿಗೆ ಅಧೀನವಾಗಿದೆ. ಸರಕಾರದಲ್ಲಿ ಹಾಕಬೇಕಾದ ಠೇವಣಿ ಇಡಲಾಗಿದೆ.

ಈ ಮೇಲ್ಕಂಡ ಕಂಪೆನಿಯು ಅನ್ಯೋನ್ಯ ಸಹಾಯಕ್ಕಾಗಿ ಕಳೆದ ವರ್ಷ ಅಂದರೆ 1931ನೇ ಫೆಬ್ರವರಿಯಲ್ಲಿ ಮದ್ರಾಸಿನಲ್ಲಿ ಸ್ಥಾಪಿತವಾಗಿ ಈ ವರೆಗೆ 26000 ಸಾವಿರಕ್ಕೂ ಹೆಚ್ಚಿಗೆ ಪಾಲಿಸಿಗಳನ್ನು ಪಡೆಯಿತು. ಈ ಮೇಲ್ಕಂಡ ಕಂಪೆನಿಗೆ ಐಶ್ವರ್ಯವಂತರೂ, ಬಡವರೂ, ವಿದ್ಯಾಸಂಪಾದನೆಯುಳ್ಳವರೂ, ಜಾತಿ ಮತಗಳ ಭೇದವಿಲ್ಲದೆ ಬಾಲಕರೂ, ಕೋಮುವಾರರೂ, ಹೆಂಗಸರೂ, ಗಂಡಸರೂ ಹೆಚ್ಚು ರುಸುಂ ಕೊಡದೆಯೇ ಉಚಿತ ಜೀವ ವಿಮೆ ಮಾಡಿಕೊಳ್ಳಬಹುದು. 18 ವರ್ಷಕ್ಕೆ ಮೇಲ್ಪಟ್ಟು 60 ವರ್ಷದೊಳಗಿರುವವರು ಈ ಕಂಪೆನಿಗೆ ಸೇರಬಹುದು. ಈ ಕಂಪೆನಿಗೆ ಸೇರಲು ಇಚ್ಛಿಸುವವರು ಸುರುವಿನಲ್ಲಿ ರೂ. 5–8–0ನ್ನು ಮಾತ್ರ ಕಟ್ಟಬೇಕಾದ್ದು. ಅನಂತರ ತಿಂಗಳು ಒಂದಕ್ಕೆ 1 ರೂ. ಸ್ವಲ್ಪದರಲ್ಲಿ ದೊಡ್ಡ ಲಾಭ ದೊರೆಯುತ್ತೆ. ಆದ್ದರಿಂದ ಇಂಥಾ ಸುಸಮಯವನ್ನು ಕಳೆದುಕೊಳ್ಳಬೇಡಿ. ಈ ದಿನವೇ ಪಾಲಿಸಿಗಳನ್ನು ಹೊಂದಲು ಅರ್ಜಿದಾರರಾಗಿರಿ. ಇದರ ಫಲವನ್ನು ಹೊಂದಲು ಭಾಗಿಗಳಾಗಿರಿ.

ಹೆಚ್ಚಿನ ಮಾಹಿತಿಗಳಿಗೆ ಈ ಕೆಳಗಿನವರಿಗೆ ಬರೆದು ತಿಳಿದುಕೊಳ್ಳಬಹುದು. ಅಲ್ಲದೆ ಇವರು ಕೊಡಗಿನ ಎಲ್ಲಾ ಕಡೆಗಳಲ್ಲಿಯೂ ತಿರುಗುತ್ತಲಿರುತ್ತಾರೆ.

ಯಸ್. ಬಿ. ಕರುಂಬಯ್ಯ.
ಏಜೆಂಟ್,
ಜೈ ಭಾರತ ಇನ್‌ಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
12—9 ನಾಪೋಕ್ಲು. (ಕೊಡಗು.)

೪೦ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕಿ ಕಂಪನಿಯವರ

ಜ್ವರದ ಗುಳಿಗೆಗಳು.

ಚಳಿಜ್ವರ, ಚಾತುರ್ಥಿ ಜ್ವರ, ದಿನಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮ ಬಾಣದಂತೆ ಇವೆ. ಬಾಟ್ಲಿಗೆ ರೂ. ೧. ವಿ. ಪಿ. ೭ ಆಣೆ. ಬರೆದು ತರಿಸಿಕೊಳ್ಳಿ.

ಗಣೇಶ ರಾಮಚಂದ್ರ ಕರ್ಕಿ,
(52—18) ಮತು ಕಂಪನಿ,
[illegible] ಗಿರಗಾಂವ, ಮುಂಬಯಿ.

ಇಂಡಿಯಾ ಎಕ್ವಿಟೇಬಲ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

(ಸ್ಥಾಪಿಸಲ್ಪಟ್ಟದ್ದು 1908.)

ಕಳೆದ ವರ್ಷದ ಫಲಿತಾಂಶಗಳು.

ಹಿಂದಿನ ವರ್ಷದ ಕೆಲಸಕ್ಕಿಂತ 64% ಹೆಚ್ಚು.

ಕಳೆದ ವರ್ಷ ಸಂಭವಿಸಿದ ಹಕ್ಕು ಬಾಧ್ಯಸ್ಥರಲ್ಲಿ ಶೇಕಡ 96·6 ಜನರಿಗೆ ಹಣ ಅದೇ ವರ್ಷ ಕೊಡಲಾಗಿದೆ.

ಖರ್ಚಿನ ಪ್ರಮಾಣವು 31% ಮಾತ್ರ.

ಇಂಡಿಯಾ ಎಕ್ವಿಟೇಬಲ್ ಇನ್ಶೂರೆನ್ಸ್ ಕಂಪೆನಿಯು ಬುಡದಿಂದ ತಲೆಯ ವರೆಗೂ ಇಂಡಿಯಾದ್ದೇ.

ವಜನದಾರರಾದ ಏಜೆಂಟರುಗಳು ಬೇಕಾಗಿದ್ದಾರೆ.

ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಕೆ. ಇ. ಚಾಕೊ,
ಬ್ರಾಂಚ್ ಸೆಕ್ರೆಟರಿ,
159 ಶ್ರೀ ನರಸಿಂಹರಾಜ ರೋಡ್,
ಬೆಂಗಳೂರು ಸಿಟಿ.

ಅಥವಾ

(1) ಮಿಸ್ ಸಿ. ಯಂ. ಪೂವಯ್ಯ,
ಲೇಡಿ ಆರ್ಗನೈಜರ್,
'ಪೂವಯ್ಯ ವಿಲ್ಲಾ,'
ಮಡಿಕೇರಿ.

(2) ಯಂ. ಸಿ. ಅಪ್ಪಚ್ಚು,
ರಿಟಯರ್ಡ್ ಪಾರುಪತ್ಯಗಾರ್,
ಹಿಲ್ ರೋಡ್,
ಮಡಿಕೇರಿ.

(12—3)

GOVERNMENT SOAP FACTORY,

Bangalore.

ವಿಶ್ವಾಸಾರ್ಹತೆ.

ಉತ್ಕೃಷ್ಟವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ ಗುಣಗಳು ಅವಶ್ಯಕವೆಂದು ನೀವು ತಿಳಿದಿರುತ್ತೀರೋ ಆ ಗುಣಗಳೆಲ್ಲಾ ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.

ನಾವು ನಿಮಗೆ ಭರವಸೆಯನ್ನೀಯುತ್ತೇವೆ.

ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
52—15 ಬೆಂಗಳೂರು.

ಕಾಪಾಡುತ್ತಿರುವುದು. ಆ ಶಕ್ತಿಯ ಮುಂದೆ ಸಂಸಾರದ ದೊಡ್ಡ ದೊಡ್ಡ ಸಾಗರಗಳು ಅಲೆಗಳು ನಿಷ್ಫಲವಾಗಿವೆ. ಅದೇನು? ಅದೇ ವಿಮಲ ದಿವ್ಯ ಆತ್ಮಶಕ್ತಿ.

ಅಂತಹ ಮನುಷ್ಯನೇ ಸಂಸಾರದಲ್ಲಿ ಮನುಷ್ಯನಾಗಲು ಯೋಗ್ಯನು. ಬೇರೆಯವರು ಬದುಕಿದರೂ, ಕಾಗೆಗಳ ಜೀವನವನ್ನು ನಡೆಸುತ್ತಾರೆ.

ಯಜ್ಜೀವತಿ ಕ್ಷಣಮಪಿ ಪ್ರಥಿತಂ ಮನುಷ್ಯೈಃ
ವಿಜ್ಞಾನ ವಿಭವಾರ್ಯಗುಣೈಃ ಸಮೇತಂ
ತನ್ನಾಮ ಜೀವಿತಮಿಹ ಪ್ರವದಂತಿ ತಜ್ಜ್ಞಾಃ
ಕಾಕೋಽಪಿ ಜೀವತಿ ಚಿರಾಯ ಬಲಿಂ ಚ ಭುಂಕ್ತೇ.

ಕೊಡಗಿನ ಭವಿಷ್ಯತ್ತು.

(2ನೇ ಪುಟದಿಂದ ಮುಂದುವರಿದದ್ದು.)

ನಮ್ಮ ಈ ಸಣ್ಣ ದೇಶದಲ್ಲಿ ಇತ್ತೀಚೆಗೆ ಅನೇಕ ಸಂಗತಿಗಳು ಉಂಟಾಗಿ ಅನೇಕ ತರದ ಭಿನ್ನಾಭಿಪ್ರಾಯಗಳು ಹುಟ್ಟಿ ದೇಶದಲ್ಲಿ ಒಗ್ಗಟ್ಟಿನ ಅಭಿಪ್ರಾಯವು ಸಿಕ್ಕುವುದೇ ಕಷ್ಟವಾಗಿತ್ತು. ಇದರ ಮರ್ಮವನ್ನು ತಿಳಿದು ನಮ್ಮ ಸರ್ಕಾರದವರು ಯಾವಾಗಲೂ "ದೇಶದಲ್ಲಿ ಒಗ್ಗಟ್ಟಿನ ಅಭಿಪ್ರಾಯವಿಲ್ಲ. (Opinion has not crystallised) ದೇಶದವರಲ್ಲೇ ಒಮ್ಮತವಿಲ್ಲದಿದ್ದರೆ ಸರ್ಕಾರದವರು ಏನುಮಾಡಬೇಕು?" ಎಂಬ ಸುಲಭವಾದ ನೆಪದಿಂದ ದೇಶದವರ ಮೇಲೆ ತಪ್ಪು ಹೊರಿಸಿ ಯಾವ ಪ್ರಕಾರವಾಗಿಯೂ ಸಹಾಯವನ್ನು ಮಾಡದೆ ಕಾಲ ಕಳೆಯುತ್ತಿದ್ದರು. ಆದರೆ ತಾ. 18—12—32ರಲ್ಲಿ ನಡೆದ ಸರ್ವ ಪಕ್ಷಗಳ ಪರಿಷತ್ತಿನಲ್ಲಿ ಅಲ್ಲಿ ನೆರೆದಿದ್ದ ಎಲ್ಲಾ ಪಂಗಡಗಳೂ ತಮ್ಮ ತಮ್ಮ ಸ್ವಂತ ಅಭಿಪ್ರಾಯಗಳನ್ನು ಸ್ವಲ್ಪ ಮಟ್ಟಿಗೆ ಬಿಟ್ಟು ದೇಶದ ಒಗ್ಗಟ್ಟಿಗಾಗಿ ಮೇಲೆ ಹೇಳಿದ ಸರ್ವ ಸಮ್ಮತದ ಠರಾವನ್ನು ಮಂಜೂರು ಮಾಡಿದ್ದು ನಮ್ಮ ದೇಶದ ಚರಿತ್ರೆಯಲ್ಲಿ ಹೊಸದೆಂದು ಭಾವಿಸಬೇಕಾಗಿದೆ. ಇನ್ನು ಮುಂದಕ್ಕೆ ಸರ್ಕಾರದವರು ನಮ್ಮೊಳಗೆ ಒಗ್ಗಟ್ಟಿಲ್ಲವೆಂಬ ದೂರು ಹೊರಿಸಲು ಯಾವ ದಾರಿಯೂ ಇರುವುದಿಲ್ಲ. ಈ ಸಂದರ್ಭವನ್ನು ಉಪಯೋಗಿಸಿ ನಮ್ಮ ಸರ್ಕಾರದವರು ದೇಶದವರ ಬಯಕೆಯನ್ನು ನೆರವೇರಿಸತಕ್ಕದ್ದು ಅವರ ಕರ್ತವ್ಯವಾಗಿದೆ. ನಮ್ಮ ದೇಶದ ಸರ್ವಪಕ್ಷದವರೂ ಕೂಡ ಕಾಲವು ಹೋದ ಹಾಗೆ ಅಭಿಪ್ರಾಯ ಬದಲು ಮಾಡುತ್ತಾ ಹೋಗದೆ ಒಗ್ಗಟ್ಟಿನ ಈ ಸಂದರ್ಭವನ್ನು ನೆನಪಿನಲ್ಲಿಟ್ಟು ದೇಶದ ಏಳಿಗೆಗೆ ಸಹಾಯ ಮಾಡುವುದೇ ಅವರ ಕರ್ತವ್ಯವಾಗಿರತಕ್ಕದ್ದು.

ಅಲ್ಲಿ ಹಾಜರಾದ ಇತರ ಠರಾವುಗಳು.

ಸರಕಾರಿ ದೊಡ್ಡ ಉದ್ಯೋಗಗಳಲ್ಲಿ ಈ ಕೆಳಗೆ ಕೊಟ್ಟ ಬದಲಾವಣೆಗಳಾಗಬೇಕೆಂತ ಈ ಪರಿಷತ್ತು ಒಪ್ಪುತ್ತದೆ ಮತ್ತು ಖರ್ಚು ಕಡಮೆಮಾಡುವ ಬಗ್ಗೆ ಮತ್ತು ಎಗ್ಸಿಕ್ಯೂಟಿವ್ ಮತ್ತು ಜುಡಿಶಿಯಲ್ ಅಂದರೆ ಆಡಳಿತ ಮತ್ತು ನ್ಯಾಯಖಾತೆಯ ಅಧಿಕಾರಿಗಳು ಸಾಧ್ಯವಿರುವ ಮಟ್ಟಿಗೆ ಬದಲಾಗುವಂತೆ ಈ ಬದಲಾವಣೆಗಳನ್ನು ಕೂಡಲೇ ಜಾರಿಗೆ ತರಬೇಕೆಂತ ಚೀಫ್ ಕಮಿಷನರವರನ್ನು ಈ ಪರಿಷತ್ತು ಕೇಳಿಕೊಳ್ಳುತ್ತದೆ.

ಈಗಿನ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಅವರ ಉದ್ಯೋಗದ ಅವಧಿ ಬರುವ ಮಾರ್ಚಿಗೆ ತೀರಿದ ನಂತರ ಕೆಳಗೆ ತೋರಿಸಿದ ಉದ್ಯೋಗಗಳ ಮಟ್ಟಿಗೆ ಬದಲಾವಣೆಗಳನ್ನು ಮತ್ತು ಕೆಲವು ಹಂಚುವಿಕೆಗಳನ್ನು ಮಾಡಬೇಕು.

1. ಈಗ ಪ್ರತ್ಯೇಕವಿರುವ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರ ಉದ್ಯೋಗವನ್ನು ತೆಗೆದುಹಾಕಬೇಕು.

ಕೊಡಗು ಕಮಿಷನರು ಅವರ ಕೆಲಸದ ಜೊತೆಗೆ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರ ಕೆಲಸ ನೋಡಬೇಕು

2. ಕಮಿಷನರವರ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜಿಯರ ಅಧಿಕಾರವನ್ನು ತೆಗೆದು, ಮದ್ರಾಸು ಸರ್ಕಾರದೊಂದಿಗೆ ಪತ್ರ ನಡೆಸಿ, ಉತ್ತರ ಮಲಬಾರು ಅಥವಾ ದಕ್ಷಿಣ ಕನ್ನಡದ (ಸಾಧ್ಯವಾದರೆ ಉತ್ತರ ಮಲಬಾರು) ಡಿಸ್ಟ್ರಿಕ್ಟ್ ಜಡ್ಜರು ಕೊಡಗಿನಲ್ಲಿ ತಿಂಗಳಿಗೆ ಎರಡು ದಿವಸ ಅಥವಾ ಎರಡು ತಿಂಗಳಿಗೆ ಒಂದುವಾರ ಕೆಲಸವಿದ್ದಂತೆ ಬಂದು ಡಿಸ್ಟ್ರಿಕ್ಟ್ ಮತ್ತು ಸೆಷನ್ ಜಡ್ಜಿಯವರ ಕೆಲಸವನ್ನು ಮಾಡಬೇಕು. ಇವರಿಗೆ ತಿಂಗಳಿಗೆ ಪ್ರಯಾಣದ ಭತ್ಯವಲ್ಲದೆ 150 ಯಾ 200 ರೂ. ಎಲೋವೆನ್ಸ್ ಕೊಡಬೇಕು.

ಚೀಫ್ ಕಮಿಷನರವರ ಸೆಕ್ರೆಟರಿಯವರು ಪೋಲೀಸ್ ಇಲಾಖೆಯ ಇನ್ಸ್ಪೆಕ್ಟರ್ ಜನರಲಾಗಿರಬೇಕು. ಕಮಿಷನರಲ್ಲಿರುವ ಈ ಅಧಿಕಾರವನ್ನು ತೆಗೆಯಬೇಕು.

4. ಡಿಪ್ಯುಟಿ ಸುಪರಿಂಟೆಂಡೆಂಟರನ್ನು ಪೋಲೀಸ್ ಸುಪರಿಂಟೆಂಡೆಂಟಾಗಿ ಮಾಡಿ ಈಗಿರುವ ಸಂಬಳದಲ್ಲಿ (ಅಂದರೆ 300—500) ಕೆಲಸಮಾಡಬೇಕು.

5 ಈಗಿನ ಡಿಪ್ಯುಟಿ ಡೈರೆಕ್ಟರನ್ನು ಅಸಿಸ್ಟೆಂಟ್ ಕಮಿಷನರನ್ನಾಗಿಯೂ, ಇನ್ಕಮ್‌ಟ್ಯಾಕ್ಸ್ ಅಫೀಸರಾಗಿಯೂ, ಅಬ್ಕಾರಿ ಅಸಿಸ್ಟೆಂಟ್ ಕಮಿಷನರನ್ನಾಗಿಯೂ 300—450 ರೂ. ಸಂಬಳದಲ್ಲಿ ನೇಮಕ ಮಾಡಬೇಕು. ಇವರೇ ಕೊಡಗಿನ ನ್ಯಾಯವಿಧಾಯಕ ಸಭೆಯ ಕಾರ್ಯದರ್ಶಿಯಾಗಿರಬೇಕು.

ಕೋ-ಆಪರೇಟಿವ್ ರಿಜಿಸ್ಟ್ರಾರರ ಕೆಲಸವೊಂದನ್ನು ಹೊಸದಾಗಿ ಮಾಡಬೇಕು. ಸಂಬಳ 200ರಿಂದ 300 ರೂ. ಇವರು ವ್ಯವಸಾಯ ಇಲಾಖೆಯ ಡೆಪ್ಯುಟಿ ಡೈರೆಕ್ಟರ ಕೆಲಸ ಮತ್ತು ವೆಟರಿನರಿ ಇಲಾಖೆಯ ಮೇಲಾಧಿಕಾರಿಯಾಗಿರಬೇಕು.

7 ಅಬ್ಕಾರಿ ಇನ್ಸ್ಪೆಕ್ಟರ ಕೆಲಸವನ್ನು ತೆಗೆದುಹಾಕಬೇಕು. ರಿಜಿಸ್ಟ್ರಾರರವರ ಕೆಲಸಕ್ಕೆ ಬೇಕಾದ ಪ್ರತ್ಯೇಕ ಒಬ್ಬ ಮನುಷ್ಯನು ದೊರಕದಿದ್ದರೆ ಎರಡು ಸುಭೇದಾರರಲ್ಲಿ ಯಾರಾದರೂ ಒಬ್ಬರು ಅಥವಾ ಅಬ್ಕಾರಿ ಇನ್ಸ್ಪೆಕ್ಟರು ರಿಜಿಸ್ಟ್ರಾರರ ಕೆಲಸಕ್ಕೆ ನೇಮಿಸಲ್ಪಡುವರು. ಎರಡು ಸುಭೇದಾರರು ದಕ್ಷಿಣ ಮತ್ತು ಉತ್ತರ ಕೊಡಗಿನ ಅಬ್ಕಾರಿ ಇನ್ಸ್ಪೆಕ್ಟರಾಗಿರಬೇಕು.

8. ಸ್ಪೆಶಲ್ ಗಜೆಟೆಡ್ ಉದ್ಯೋಗಸ್ಥರ ವರ್ಗಾವರ್ಗೀ.

ಇತರ ಸ್ಪೆಶಲ್ ಗಜೆಟೆಡ್ ಉದ್ಯೋಗಸ್ಥರನ್ನು ವರ್ಗಾಯಿಸಲು ಬೇಗನೆ ಏರ್ಪಾಡು ಮಾಡಬೇಕು.

ಈಗಿನ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಶೀಘ್ರದಲ್ಲೇ ಪೆನ್ಶನ್ ಹೊಂದಿ ಕೆಲಸದಿಂದ ನಿವೃತ್ತರಾಗುವಾಗ ಕೂಡಲೇ ಕೊಡಗಿನ ಅಧಿಕಾರಿಗಳಲ್ಲಿ ಕೆಲವು ಬದಲಾವಣೆಗಳನ್ನು ಸೂಚಿಸಲು ಕೊಡಗಿನ ಎಲ್ಲಾ ರಾಜಕೀಯ ಸಂಸ್ಥೆಗಳ ಪ್ರತಿನಿಧಿಗಳು ಚೀಫ್ ಕಮಿಷನರ ಮುಂದೆ ಡೆಪ್ಯುಟೇಶನ್ ಹೋಗಲು ಅವಕಾಶಕೊಡಬೇಕೆಂತ ರಾ. ಬ. [illegible] ನವರ ತಾ. 11—12—32ರ ಕಾಗದಕ್ಕೆ ಆ ವರೆಗೂ ಚೀಫ್ ಕಮಿಷನರು ಜವಾಬು ಬರೆಯದೆ ಇದ್ದ ವರ್ತನೆಯನ್ನು ಈ ಪರಿಷತ್ತು ಖಂಡಿಸುತ್ತದೆ.

ಕೊಡಗಿನ ಗಜೆಟೆಡ್ ಮತ್ತು ನಾನ್ ಗಜೆಟೆಡ್ ಉದ್ಯೋಗಸ್ಥರಿಗೆ ಯಾವ ಸಂದರ್ಭದಲ್ಲೂ (ಎಕ್ಸ್‌ಟೆನ್ಶನ್) ಅವರ ಕೆಲಸದ ಅವಧಿ ತೀರಿದನಂತರ ಅಧಿಕಾರವನ್ನು ಮುಂದರಿಸಿ ಕೊಡಬಾರದೆಂತ ಈ ಪರಿಷತ್ತು ಚೀಫ್ ಕಮಿಷನರವರನ್ನು ಕೇಳಿಕೊಳ್ಳುತ್ತದೆ.

ಈ ಠರಾವನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಅಧ್ಯಕ್ಷರ ಹೆಸರಿನಲ್ಲಿ ಕಳುಹಿಸಬೇಕೆಂತ ಸರ್ವಸಮ್ಮತದಿಂದ ಮಂಜೂರಾಯಿತು.

ರವೀಂದ್ರನಾಥ್ ಠಾಗೋರರ ಪತ್ರ.

ಗುರುವಾಯೂರು ದೇವಸ್ಥಾನಕ್ಕೆ ಹರಿಜನರ ಪ್ರವೇಶವನ್ನು ಕುರಿತು ರವೀಂದ್ರನಾಥ ಠಾಗೋರರು ಜಾಮೊರಿನ್‌ರವರಿಗೆ ಬರೆದ ಪತ್ರದ ಸಾರಾಂಶ

'ಮನಸ್ಪೂರ್ವಕವಾದ ಪರಿಶುದ್ಧ ಭಾವನೆಯಿಂದ ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ತಮ್ಮ ಗುರುವಾಯೂರು ದೇವಸ್ಥಾನದಲ್ಲಿ ಹರಿಜನರಿಗೆ ದೇವದರ್ಶನಕ್ಕೆ ಎಡೆಗೊಡುವಂತೆ ಮಾಡಿಸಬೇಕೆಂದು ತಮಗೆ ಅನೇಕ ಹಿತಚಿಂತಕರ ಪತ್ರಗಳು ಬಂದಿರಬಹುದು. ಅದಕ್ಕಾಗಿ ನಾನಾ ರೀತಿಯ, ಯೋಗ್ಯರೀತಿಯ ಪ್ರಯತ್ನಗಳೂ ಆಗುತ್ತಿವೆ. ಇದಕ್ಕೆ ಕಾರಣವೇನ? ಪ್ರಕೃತದಲ್ಲಿ ಆ ಅಸ್ಪೃಶ್ಯತೆಯೆಂಬುದು ನಮ್ಮ ಜನಾಂಗಕ್ಕೆ ಒಂದು, ಒಂದಣಾಶೆಯ ಕಲೆಯೊಂದು ಬಹಳ ಸಂದಿಗೆ ಪಂಡಟ್ಟಿದ್ದುದೇ ಕಾರಣವು. ತಾವು ಆ ದೇವಸ್ಥಾನದ ಅಧಿಕಾರಿಗಳೊಳಗೆ ಒಬ್ಬರಾದುದರಿಂದ, ಸ್ವತಂತ್ರವಾಗಿ ಒಂದು ಹೊಸ ಸುಧಾರಣೆಯನ್ನು ಜಾರಿಗೊಳಿಸುವುದು ಕಷ್ಟವೆಂಬುದನ್ನು ನಾನು ಬಲ್ಲೆ. ನಡೆದುಬಂದ ಆಚಾರ ಕಾಯಿದೆ ಇವುಗಳಿಂದಲೂ ತಮ್ಮ ಸ್ವಾತಂತ್ರ್ಯಕ್ಕೆ ಅಡ್ಡವಾಗಿ ಬರಬಹುದೆಂದೂ ನನಗೆ ಗೊತ್ತಿದೆ. ಆದರೂ ಅಧಿಕಾರಿಗಳೊಳಗೆ ತಾವು ಶ್ರೇಷ್ಠರಾದುದರಿಂದ ತಾವು ಪ್ರಯತ್ನಿಸಿದರೆ ಆ ಬಡಜನರ ಏಳಿಗೆಗೆ ಪಂಚಾಂಗವನ್ನು ಕಟ್ಟಿದ ಪುಣ್ಯವೂ, ನಮ್ಮ ಜನಾಂಗದಲ್ಲಿ ನಡೆದು ಬಂದ ಈ ಭೇದಭಾವದ ನಿವೃತ್ತಿಯೂ ಒಟ್ಟಿಗೆ ನೆರವೇರುವುದು. ಯಾವ ಕಾರಣದಿಂದ ಅವರು ಅಸ್ಪೃಶ್ಯರಾದರೂ ಅವರೂ ತಮ್ಮಂತೆಯೇ ಮನುಷ್ಯರಲ್ಲವೇ? ತನ್ನ "ಒಂದು ಕಣ್ಣಿಗೆ ಬೆಣ್ಣೆ, ಒಂದು ಕಣ್ಣಿಗೆ ಸುಣ್ಣ" ವನ್ನು ಹಾಕುವುದು ಧರ್ಮ್ಯ ಪುರುಷನಿಗಾದರೂ ಹೇಗೆ ಸುಖಕರವಾದೀತು?

ನಮ್ಮ ಜನಾಂಗ ಮಾತ್ರವಲ್ಲ; ನಾಗರೀಕತೆಯ ತತ್ವವನ್ನೇ ಬಲ್ಲ ಪರದೇಶದ ಜನಾಂಗವೂ ನಮ್ಮ ಈ ಗುರುವಾಯೂರಿನಲ್ಲಿ ನಡೆಯುವ ಪರಿಸ್ಥಿತಿಯನ್ನು ಎಚ್ಚರಿಕೆಯಿಂದ ನಿರೀಕ್ಷಿಸುತ್ತಿದೆ. ಶ್ರೀ ಕೇಳಪ್ಪನವರ ಮತ್ತು ಮಹಾತ್ಮಜೀಯವರ ಅಮೂಲ್ಯವಾದ ಪ್ರಾಣಗಳನ್ನು ನಾವು ಇಂಥ ವಿಷಯಕ್ಕಾಗಿ ಕಳೆದುಕೊಂಡರೆ ಇಡೀ ಪ್ರಪಂಚದ ತಿರಸ್ಕಾರಕ್ಕೆ ನಾವು ಗುರಿಯಾಗಬೇಕಾದೀತು. ಅದರಿಂದೊದಗುವ ನಾಚಿಕೆಯಿಂದಾಗಿ ನಮಗೆ ತಲೆಯೆತ್ತಲಿಕ್ಕೂ ಅಸಾಧ್ಯವಾದೀತು. ಎಲ್ಲದಕ್ಕೂ ಹೆಚ್ಚಾಗಿ ನಾವು ಸತ್ಯಕ್ಕೂ ದೂರವಾಗಬೇಕಾದೀತು. ಹಳೆಯ ಧರ್ಮಶಾಸ್ತ್ರ, ಆಚಾರ ಗ್ರಂಥಗಳಲ್ಲಿ ಮಹತ್ವ ಸಾರವಿಲ್ಲವೆಂದಲ್ಲ; ಆದರೆ ಅದರಲ್ಲಿ ಆ ಸಾರತತ್ವಕ್ಕಿಂತಲೂ ಹೆಚ್ಚಾಗಿ ಈಗಿನ ಕಾಲಕ್ಕೆ ತಕ್ಕುದಲ್ಲದ ಹಲವು ವಿಷಯಗಳ ಕಸವು ಕೂಡಿ ಹೋಗಿದೆ. ಸಂದರ್ಭಾನುಸಾರವಾಗಿ ಆ ಕಸವನ್ನು ತೆಗೆದು ತೋಟವನ್ನು ಅಂದವಾಗಿರಿಸುವುದು ನಮ್ಮ ಕರ್ತವ್ಯವಾಗಿದೆ. ಈಗ ನಮಗೇನೋ ಬಹಳ ಬೇಸರವೆನ್ನಿಸಬಹುದು; ಆದರೂ ಗುರುವಾಯೂರಿನ ಚಳವಳಿಯೆಂಬುದು ನಮ್ಮ ಹಿಂದೂಸ್ಥಾನದ ಸರ್ವಸಮ್ಮತ ಬುದ್ಧಿಯನ್ನು ಪರೀಕ್ಷಿಸಲಿಕ್ಕಾಗಿ ಪರಮಾತ್ಮನು ಒದಗಿಸಿದ ಸಮಯವೆಂದು ತೋರುತ್ತದೆ. ಇಡೀ ಪ್ರಪಂಚದ ಮನಸ್ಸಾಕ್ಷಿಯೇ ಆ ಪರೀಕ್ಷೆಯ ಫಲವನ್ನು ತಿಳಿಯುವ ಪರೀಕ್ಷಕನು. ಗುರುವಾಯೂರಿನಲ್ಲಿ ಈ ಪರೀಕ್ಷೆಯಲ್ಲಿ ಸೋತುಹೋದರೆ ಇಡೀ ಹಿಂದೂಸ್ಥಾನವೇ ಸೋತುಹೋದಂತಾದೀತು.

ಆದ್ದರಿಂದ ತಮ್ಮ ಜವಾಬ್ದಾರಿಯನ್ನು ಸರಿಯಾಗಿ ಉಪಯೋಗಿಸಿ ನಮ್ಮ ಹಿಂದೂಸ್ಥಾನವನ್ನೆಲ್ಲಾ ವಿಜಯಭಾಗಿಗಳನ್ನಾಗಿ ಮಾಡಬೇಕಾಗಿ ಪ್ರಾರ್ಥಿಸುತ್ತೇನೆ. "ಪರೋಪಕಾರಾರ್ಥಮಿದಂ ಶರೀರಂ" ಎಂಬುದು ಹಿರಿಯರ ವಾಕ್ಯ. ಹಸಿವೆಯಾದವನಿಗೆ ಅನ್ನವನ್ನಿಕ್ಕುವುದಲ್ಲವೇ ತಕ್ಕುದು? ಹಾಗೆಯೇ ದೇವದರ್ಶನದ ಹಸಿವೆಯುಳ್ಳ ಈ ಹರಿಜನರಿಗೆ ಎಡೆಗೊಡುವುದೆಂದರೆ ಮಹಾ ಪುಣ್ಯಕಾರ್ಯವೇ. ಆದರಿಂದ ತಮ್ಮ ಸಂಪೂರ್ಣ ಶಕ್ತಿಯನ್ನುಪಯೋಗಿಸಿ ಕೀರ್ತಿ ಪುಣ್ಯಗಳೆರಡಕ್ಕೂ ಭಾಗಿಗಳಾಗಬೇಕೆಂದು ಪ್ರಾರ್ಥಿಸುವ.

ಮಡಿಕೇರಿಯಲ್ಲಿ ಜರುಗುವ ೧೮ನೇಯ ಕರ್ನಾಟಕ ಸಾಹಿತ್ಯ ಪರಿಷತ್ ಸಮ್ಮೇಳನದ ಕಾರ್ಯಕ್ರಮ.

ಮೊದಲನೆಯ ದಿನ (೨೮—೧೨—೩೨)

ಬೆಳಿಗ್ಗೆ ೯—೩೦ಕ್ಕೆ ಪ್ರಾರಂಭ.

೧. ಸ್ವಾಗತ ಗೀತೆ.
೨. ಸಮ್ಮೇಳನವನ್ನು ತೆರೆಯುವ ಸಮಾರಂಭ. (ಕೊಡಗು ಕಮಿಷನರವರು)
೩. ಸ್ವಾಗತಾಧ್ಯಕ್ಷರ ಭಾಷಣ.
೪. ಅಧ್ಯಕ್ಷರ ಚುನಾವಣೆ.
೫. ಹಿಂದಿನ ವರ್ಷದ ವರದಿಯನ್ನು ಓದುವುದು
೬. ಪತ್ರಗಳೇನಾದರೂ ಇದ್ದರೆ ಓದುವುದು.
೭. ಅಧ್ಯಕ್ಷರ ಭಾಷಣ.
೮. ವಿಷಯ ನಿಯಾಮಕ ಮಂಡಲಿಯ ಚುನಾವಣೆ.
೯. ಪ್ರದರ್ಶನವನ್ನು ತೆರೆಯುವುದು. (ಶ್ರೀಮತಿ ವಾಲೇಕಂಡ ಪೂವಮ್ಮ ಮೇದಪ್ಪನವರು)

ಮಧ್ಯಾಹ್ನ ೨—೩೦ಕ್ಕೆ ಪ್ರಾರಂಭ.

೧. ಪ್ರಬಂಧಗಳನ್ನು ಓದುವುದು.
೨. ವಿಷಯ ನಿಯಾಮಕ ಸಮಿತಿಯ ಕೂಟ.
೩. ಬೊಳಕಾಟ ಮತ್ತು ಕೋಲಾಟ.

ರಾತ್ರಿ 9—30ಕ್ಕೆ ಪ್ರಹಸನಗಳು.

ಎರಡನೆಯ ದಿನ (೨೯—೧೨—೩೨)

ಬೆಳಿಗ್ಗೆ ೯ಕ್ಕೆ ಪ್ರಾರಂಭ.

೧. ಕವಿ ಸಮ್ಮೇಳನ.
೨. ಗೊತ್ತುವಳಿಗಳ ಚರ್ಚೆ.

ಮಧ್ಯಾಹ್ನ ೨—೩೦ಕ್ಕೆ ಪ್ರಾರಂಭ.

೧. ಪ್ರಬಂಧಗಳನ್ನು ಓದುವುದು.
೨. ಗೊತ್ತುವಳಿಗಳ ಚರ್ಚೆ.

೫—೩೦ಕ್ಕೆ

೧. ಗೊತ್ತುವಳಿಗಳ ಚರ್ಚೆ.

ರಾತ್ರಿ ೯ಕ್ಕೆ ಯಕ್ಷಗಾನ ಪ್ರಸಂಗ.

ಮೂರನೆಯ ದಿನ (೩೦—೧೨—೩೨)

ಬೆಳಿಗ್ಗೆ ೯ಕ್ಕೆ ಪ್ರಾರಂಭ.

೧. ಪರಿಷತ್ತಿನ ವಾರ್ಷಿಕ ಅಧಿವೇಶನ.

ಮಧ್ಯಾಹ್ನ ೨—೩೦ಕ್ಕೆ ಪ್ರಾರಂಭ.

೧. ಉಳಿದ ಗೊತ್ತುವಳಿಗಳು.
೨. ಅಧ್ಯಕ್ಷರ ಉಪಸಂಹಾರ ಭಾಷಣ.
೩. ಅಭಿವಂದನೆಗಳು.
೪. ಮೈಸೂರು ಅರ್. ಕೃಷ್ಣನವರ ನಾಟಕ (ಟಿಕೆಟ್ ಮೂಲಕ)

ಸೂಚನೆ:—ಮಡಿಕೇರಿಯಲ್ಲಿ ಜರಗುವ ಕರ್ನಾಟಕ ಸಾಹಿತ್ಯ ಪರಿಷತ್ತಿನಿಂದ ಹಿಂತಿರುಗುವವರಿಗೆ ಮಂಗಳೂರಿನ ಸಿ. ಪಿ. ಸಿ. ಬಸ್ಸ್ ಸರ್ವಿಸ್ ಮತ್ತು ಇದರ ಶಾಖಾ ಸರ್ವಿಸುಗಳಲ್ಲಿ ಮಾಫಿಯ ರಿಯಾಯಿತಿಯೂ, ಕೊಡಗಿನ ಶ್ರೀ ಕಾವೇರಿ ಮತ್ತು ದಯಾನಂದ ಸರ್ವಿಸುಗಳಲ್ಲಿ ಹೋಗಬರಲು ಶೇಕಡ 25 ರಷ್ಟು ಕಡಿಮೆ ಚಾರ್ಜಿನ ರಿಯಾಯಿತಿಯೂ ಕೊಟ್ಟಿರುತ್ತಾರೆಂದು ತಿಳಿಸಲು ಸಂತೋಷಪಡುತ್ತೇವೆ.

ಜಂಟಿ ಕಾರ್ಯದರ್ಶಿಗಳು.

COORG FOREST DEPARTMENT, SOUTH DIVISION.

TIMBER SALE NOTICE.

Mercara, the 19th December 1932.

It is hereby notified that about 25,000 c. ft. Teak, 2,000 c. ft. Hoane, 2,000 c. ft. Biti and 3,000 c. ft. Teak branch pieces lying in the Hunsur Depot and about 12,000 c. ft. Matti, 1,900 c ft. Matti branch pieces, 6,000 c. ft. Nandi, 600 c. ft. Nandi branch pieces, 300 c. ft. Honne branch pieces and 400 c. ft. Noga. Noga will be sold by public auction in convenient lots at Hunsur on 5—1—1933 commencing at 10 A. M. All the timber is open for inspection.

For further particulars, please apply to th Divisional Forest Officer, South Coorg, Mercar

ಕೊಡಗಿನಲ್ಲಿ ಸತ್ಯಾಗ್ರಹ.

ಹುತ್ತರಿ ಸಂತೆಯಲ್ಲಿ ದಸ್ತಗಿರಿಯ ಹಬ್ಬ!

ಮಹಿಳೆಯರಿಗೆ ಹುತ್ತರಿ ಹಬ್ಬವು ಜೈಲಿನಲ್ಲಿ!!

ಹಲವು ಯುವಕರೂ ಮಹಾತ್ಮರನ್ನು ಹಿಂಬಾಲಿಸಿ ಜೈಲುಯಾತ್ರೆ ಮಾಡಿದರು.

ಕಾಂಗ್ರೆಸು ಕೆಲಸಗಾರರ ಮನೆಗಳ ಜಪ್ತಿಯ ಸುರಿಮಳೆ!

ಕರಪತ್ರಗಳನ್ನು ತಯಾರಿಸುವ ಯಂತ್ರದ ಹುಡುಕಾಟ.

ಈ ತಾ 11 ರಲ್ಲು ಅಂದರೆ ಹುತ್ತರಿ ಹಬ್ಬಕ್ಕೆ ಒಂದು ದಿನ ಮುಂಚಿತವಾಗಿ ಗೋಣಿಕೊಪ್ಪಲು ಸಂತೆಯಲ್ಲಿ ಶ್ರೀಮತಿಗಳಾದ ಪೋಡನೂಡ ಜಾನಕಿಯವರು, ಕೋದೇರಂಗನ ಮುದ್ದಮ್ಮನವರು, ಮುಳವಂಡ ಅಕ್ಕಮ್ಮನವರು ಮತ್ತು ಶ್ರೀಯುತರುಗಳಾದ ಕೊಳ್ಳಿಮಾಡ ಐಯ್ಯಪ್ಪನವರು, ಅಗಸ ಒಣ್ಣಾರ ಅಯ್ಯನವರು (ಕಳೆದ ತಾ. 28ರಲ್ಲಿ ತಾವು ಕಾಂಗ್ರೆಸು ಕೆಲಸ ಮಾಡುವುದಿಲ್ಲವೆಂದು ಹೇಳಿದರೆಂದು ಬಿಡುಗಡೆಮಾಡಲ್ಪಟ್ಟವರು.) ಪಣಿಯರವರ ದೊಳ್ಳಿಯವರು ಮತ್ತು ಬೊಳಿಯಮಾಡ ಸ್ವಾಮಿ ಐಯ್ಯಣ್ಣನವರು ಮತ್ತು ಮುದ್ದಣ್ಣನವರು ದನಗಳ ಮಾರ್ಕೆಟಿನ ಒಳ ಸೇರಿ ನೆರೆದ್ದ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಲು ಯತ್ನಿಸಿದಕ್ಕೂ, ಬಾತಿಯಮಂ ಕಾಂಗ್ರೆಸಿನ ಕರಪತ್ರಗಳನ್ನು ಹಂಚಿದಕ್ಕೂ ಕೈದುಮಾಡಲ್ಪಟ್ಟರು. ಹುತ್ತರಿ ಹಬ್ಬದ ಸಂತೆಯಾದ ದೆಸೆಯಿಂದ ಜನಸಂದಣಿಯು ಬಹು ವಿಶೇಷವಾಗಿತ್ತು. ಕೂಡಲೇ ಆವರು ಏಳು ಜನರೂ ಬಸ್ಸಿನಲ್ಲಿ ವೀರರಾಜಪೇಟೆಗೆ ಕಳುಹಿಸಲ್ಪಟ್ಟರು.

ತಾ. 14 ರಲ್ಲಿ ವೀರರಾಜಪೇಟೆ ಮುನ್ಸೀಫ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಅವರ ವಿಚಾರವು ನಡೆದು, ಮೂವರು ಮಹಿಳೆಯರಿಗೂ, ಇಬ್ಬರು ಯುವ ಯುವಕರಿಗೂ ಮೂರು ಮೂರು ತಿಂಗಳು ಕಠಿಣ ಸಜವೂ ಮತ್ತು ತಲಾ ಒಂದು ರೂಪಾಯಿ ಜುಲುಮಾನೆಯೂ, ಮಿ. ಕೊಳ್ಳಿಮಾಡ ಐಯ್ಯಪ್ಪನವರಿಗೆ 3 ತಿಂಗಳ ಸಜೆ ಮತ್ತು 20 ರೂ. ಜುಲುಮಾನೆಯೂ, ಮಿ. ಒಣ್ಣಾರ ಅಯ್ಯನವರಿಗೆ 5 ತಿಂಗಳು ಕಠಿಣ ಸಜೆಯೂ ಮತ್ತು 20 ರೂ ಜುಲುಮಾನೆಯೂ, ಜುಲುಮಾನೆ ಕೊಡದೆ ತಪ್ಪಿದರೆ ಎಲ್ಲರಿಗೂ ಒಂದೊಂದು ತಿಂಗಳು ಹೆಚ್ಚಿನ ಸಜೆಯೂ ವಿಧಿಸಲ್ಪಟ್ಟಿತು. ಮರುದಿನವೇ ಅವರೆಲ್ಲರೂ ಕಣ್ಣಾನೂರು ಸೆಂಟ್ರಲ್ ಜೈಲಿಗೆ ಕಳುಹಿಸಲ್ಪಟ್ಟರು.

ಕೊಡಗಿನ ಕಾಂಗ್ರೆಸಿನವರು ಆಗಾಗ್ಯೆ ಸಂತೆಗಳಲ್ಲಿ ಹಂಚುತ್ತಿರುವ ಹಸ್ತಪತ್ರಗಳನ್ನು ತಯಾರಿಸುವ 'ಸೈಕ್ಲೊ ಸ್ಟೈಲ್' ಯಂತ್ರವನ್ನು ಕಂಡು ಹಿಡಿದು ಕೈವಶಮಾಡಿಕೊಳ್ಳುವುದಕ್ಕಾಗಿ ಇನ್‌ಸ್ಪೆಕ್ಟರು, ಸಬ್ ಇನ್‌ಸ್ಪೆಕ್ಟರುಗಳು ಕೆಲವು ಪೋಲೀಸಿನವರೊಂದಿಗೆ ಈ ಕೆಳಗಿನ ಕಾಂಗ್ರೆಸು ಕೆಲಸಗಾರರ ಮನೆಗಳನ್ನು ವಿಶರಾಪದಲ್ಲಿ ಜಪ್ತಿಮಾಡಿದರು. ಈ ತಾ. 17 ನೇ ಶನಿವಾರ ಪ್ರಾತಃಕಾಲ ಮೆ. ಗಳೀರ ಜಮ್ಮಡ ಮಾದಪ್ಪನವರ, ಚೆಪ್ಪುಡಿರ ಪೂಣಚ್ಚನವರ, ಮಾಚಿಮಂಡ ನಂಜುಂಡನವರ, ಐನಂಡ ಕಾರ್ಯಪ್ಪನವರ, ಮಂಡೇಪಂಡ ಸೋಮಣ್ಣನವರ ಮನೆಗಳನ್ನೂ, ವೀರರಾಜಪೇಟೆ ಖಾದಿ ಬಂಡಾರವನ್ನೂ, ತಾ. 19ನೇ ಸೋಮವಾರ ಬೆಳಿಗ್ಗೆ ಮಡಿಕೇರಿಯಲ್ಲಿ "ಕೊಡಗು" ಕಂಪೆನಿಯ ಆಫೀಸನ್ನು ಮತ್ತು ಸದರಿ ಆಫೀಸಿನಲ್ಲಿ ಕೆಲಸ ಮಾಡುವ ಮೆ. ಬೈರೆಟ್ಟಿರ ಚಂಗಪ್ಪನವರ ಮನೆಯನ್ನೂ ಮತ್ತು ತಾ. 21 ನೇ ಬುಧವಾರ ಬೆಳಿಗ್ಗೆ ಮೆ. ಪಿ. ಐ ಬೆಳ್ಯಪ್ಪನವರ ವಾಸದ ಮನೆಯನ್ನೂ ಹುಡುಕಿದರು. ಆದರೆ ಸದರಿ ಯಂತ್ರವು ಎಲ್ಲಿಯೂ ಸಿಕ್ಕಿರುವುದಿಲ್ಲವಾಗಿ ತಿಳಿಯುತ್ತೇವೆ.

ಒಳದೇಶ.

ಚೀಫ್ ಕಮೀಷನರವರು ಈ ತಾ. 20ರಲ್ಲಿ ಮಡಿಕೇರಿಯಿಂದ ಬೆಂಗಳೂರಿಗೆ ಹೋದರೆಂದು ತಿಳಿಯುತ್ತೇವೆ.

ಕಳೆದವಾರ ಫ್ರೇಜರ್‌ಪೇಟೆಯಲ್ಲಿ ಇಬ್ಬರಿಗೂ, ಬೈಚನಹಳ್ಳಿಯಲ್ಲಿ ಒಬ್ಬನಿಗೂ ಪ್ಲೇಗು ಅಂಟಿದೆಯೆಂದು ವರ್ತಮಾನ.

ಕುಶಾಲ್ನಗರ ಗ್ರಾಮದ ಮೆ. ಮಾಳೇಟಿರ ಚಿಣ್ಣಪ್ಪನವರು ಈ ತಾ 16ರಲ್ಲಿ ಶಿವಾಧೀನರಾದರೆಂದು ತಿಳಿಯಲು ವಿಷಾದಿಸುತ್ತೇವೆ.

ಈ ತಾ. 13 ರಲ್ಲಿ ಯಲ್ಕನೂರು ಗ್ರಾಮದ ಬೆಟ್ಟರಳ್ಳಿ ನಂಜಪ್ಪನೆಂಬವನು ಕಾಣಾಂತರದಿಂದ ಗುಂಡು ಹೊಡೆದು ಕೊಂಡು ಮೃತನಾದನೆಂದು ವರ್ತಮಾನ.

ಹುತ್ತರಿ ಹಬ್ಬದಲ್ಲಿ ಪರಿನಾಡಿನಲ್ಲಿ ಹೊಡೆದಾಟವಾಗಿ ಎಂಟ್ಟತ್ತು ಜನರಿಗೆ ಘಾಯಗಳಾಗಿವೆಯೆಂದೂ, ಪೋಲೀಸಿನವರು ತನಿಖೆ ಮಾಡುತ್ತಿರುವರೆಂದೂ ಸುದ್ದಿ.

ಬರುವ ಜನವರಿ ತಾ. 5, 6, 7 ಮತ್ತು 8ನೇ ದಿನಗಳಲ್ಲಿ ಗೋಣಿಕೊಪ್ಪಲಿನಲ್ಲಿ ದನಗಳ, ತರಕಾರಿಗಳ ಮತ್ತು ಸೂಜಿಯಿಂದ ಹೆಣೆಯುವ ಕೆಲಸಗಳ ಪ್ರದರ್ಶನವು ನಡೆಯುವುದು.

ಕೊಡಗಿನ ಭವಿಷ್ಯತ್ತನ್ನು ಕುರಿತು ತೀರ್ಮಾನಿಸಲು ಕಾಂಗ್ರೆಸ್ ಪಕ್ಷ ಮತ್ತು ಯೂರೋಪಿಯನರನ್ನು ಬಿಟ್ಟು ಉಳಿದ ಎಲ್ಲಾ ಪಾರ್ಟಿಗಳ ಮುಖಂಡರ ಸಭೆಯೊಂದು ಈ ತಾ. 18ರಲ್ಲಿ ಮಡಿಕೇರಿಯಲ್ಲಿ ನಡೆಯಿತು. ಇದರ ತಪಶೀಲು ಇನ್ನೊಂದು ಕಡೆ ಪ್ರಕಟವಾಗಿದೆ.

ವೀರರಾಜಪೇಟೆ ಪೋಲೀಸಿನವನಾದ ಐರಿ ಪೂವಯ್ಯನು ಈ ತಾ. 19ರ ರಾತ್ರಿ ಕಾರಣಾಂತರದಿಂದ ವೀರರಾಜಪೇಟೆ–ಮೂರ್ನಾಡು ರಸ್ತೆ ಬಳಿಯಲ್ಲಿರುವ ಮೆ. ಅಬ್ದುಲ್ಲಾಖಾನರವರ ಬಾವಿಗೆ ಬಿದ್ದು ಆತ್ಮಹತ್ಯ ಮಾಡಿಕೊಂಡನೆಂದು ವರ್ತಮಾನ.

ಮಹಾತ್ಮ ಗಾಂಧಿಯವರ ಸೂಚನೆಯಂತೆ ಹಿಂದೂಸ್ಥಾನದ ಹಲವು ಕಡೆಗಳಲ್ಲಿ ನಡಿಸಿದ ಹಾಗೆಯೇ ಕೊಡಗಿನ ಗೋಣಿಕೊಪ್ಪಲು, ಹುದಿಕೇರಿ ಮತ್ತು ಬಿಳುಗುಂದದಲ್ಲಿ ಅಸ್ಪೃಶ್ಯತಾ ನಿವಾರಣಾ ದಿನ ಆಚರಿಸಲ್ಪಟ್ಟಿತು. ಇದರ ವಿವರವು ಬೇರೊಂದು ಕಡೆ ಕೊಡಲಾಗಿದೆ.

ಪೋಸ್ಟಾಫೀಸಿನೊಂದಿಗೆ ಪೈಪೋಟಿ ನಡಿಸುವ ಉದ್ದೇಶದಿಂದ ಬಸ್ಸಿನವರು ಮತ್ತ ಪ್ರಯಾಣಿಕರು ಕಾಗದಗಳನ್ನು ಒಯ್ಯುತ್ತಿರುವರೆಂದು ತಿಳಿದುಬಂದಿರುವುದರಿಂದ, ಇನ್ನು ಮುಂದೆ ಹಾಗೆ ಮಾಡಿದರೆ ಇಂಡಿಯನ್ ಪೋಸ್ಟಾಫೀಸ್ ಆಕ್ಟನ್ನನುಸರಿಸಿ ಶಿಕ್ಷೆಗೆ ಗುರಿಮಾಡಲ್ಪಡಲಾಗುವುದೆಂದೂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಪ್ರಕಟಿಸಿರುವರು.

ಈ ತಾ. 15ರ ರಾತ್ರಿ, ಮಡಿಕೇರಿ ಬಳಿ ಮಂಗಳೂರು ರಸ್ತೆಯಲ್ಲಿ ಕಲ್ಲು ಒಡೆಸುತ್ತಿರುವ ಡಿವಾಸ್ ಮೇಸ್ತ್ರಿಯ ಮನೆಯಲ್ಲಿ ಜೋಸೆಫ್, ವರ್ಗೀಸ್, ಸಂಜಪ್ಪ ಮತ್ತು ಆತನ ಹೆಂಡತಿ, ಇವರು ನಾಲ್ವರಿಗೆ ಜಗಳ ಸಂಭವಿಸಿ, ನಾಲ್ವರಿಗೂ ಚೂರಿಯ ತಿವಿಯುವಿಕೆಯಿಂದ ತುಂಬಾ ಗಾಯ ಉಂಟಾಗಿ, ನಾಲ್ವರೂ ಮಡಿಕೇರಿ ಆಸ್ಪತ್ರೆಯಲ್ಲಿರುವರಾಗಿ ವರ್ತಮಾನ.

ಈ ವರ್ಷ ಹುತ್ತರಿ ಹಬ್ಬದ ಸಮಯದಲ್ಲಿ ಕೊಡಗಿನ ಗದ್ದೆಗಳಲ್ಲಿ ಶಾಲಿಯ ಬೆಳೆಯು ಬಹಳ ಕಡಿಮೆಯಾಗಿದ್ದ ಯಂತಲೂ, 300 ಗ್ಯಾಲನಿಗಿಂತ ಹೆಚ್ಚು ಖರ್ಚಾಗುತ್ತಿದ್ದ ಗೋಣಿಕೊಪ್ಪಲು ಗಡಂಗದಲ್ಲಿ ಮಾರಾಟವು 5 ಗ್ಯಾಲನುಗಳನ್ನು ಮೀರಲಿಲ್ಲವೆಂತಲೂ, 400 ಗ್ಯಾಲನುಗಳಿಗಿಂತ ಹೆಚ್ಚು ಖರ್ಚಾಗುತ್ತಿದ್ದ ವೀರರಾಜಪೇಟೆ ಗಡಂಗದಲ್ಲಿ 100 ಗ್ಯಾಲನುಗಳನ್ನು ಮೀರಲಿಲ್ಲವೆಂತಲೂ ಸುದ್ದಿ.

ಮಂಗಳೂರಿನ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್‌ನ ಹಸ್ತ ಪತ್ರಗಳನ್ನು ಈ ಸಂಚಿಕೆಯ ಪುರವಣಿಯಾಗಿ ಕಳುಹಿಸಿದ್ದೇವೆ.

ಹಿಂದೂದೇಶ.

ಜಬ್ಬಲ್‌ಪುರದ ಹತ್ತಿರ ಸರಕಾರಿ ಮುನ್ಸಿಪಲ್ ರೈಲು ಗಾಡಿಯನ್ನು ನಿಲ್ಲಿಸಿದ್ದರಿಂದ ೧೧ ಜನ ಸ್ವಯಂ ಸೇವಕರನ್ನು ದಸ್ತಗಿರಿ ಮಾಡಿದರು.

ಪರೀಕ್ಷೆಯಲ್ಲಿ ಚೆನ್ನಾಗಿ ಮಾಡಲಿಲ್ಲನೆಂದು, ಗೋವಿಂದ ಚಾಂದ್ರ ಎಂಬ ನಾರಾಯಣಗಂಜಿನ ಶಾಲಾ ವಿದ್ಯಾರ್ಥಿಯು ತನಗೆ ತಾನೇ ಗುಂಡು ಹಾಕಿಕೊಂಡು ಪ್ರಾಣಬಿಟ್ಟಿದ್ದಾನೆ.

ಪೋಲೀಸಿನವರ ಕೈವಶದಲ್ಲಿರುವ ಹರಿದ್ವಾರದ ಗಾಂಧೀ ಆಶ್ರಮವನ್ನು ಕಾಂಗ್ರೆಸ್ ಸ್ವಯಂಸೇವಕರು ವಶಪಡಿಸಲು ಪ್ರಯತ್ನಿಸಿದಾಗ 6 ಜನರು ದಸ್ತಗಿರಿ ಮಾಡಲ್ಪಟ್ಟರು.

ಈ ತಾ 20ರಲ್ಲಿ ಉತ್ತರ ಕಲ್ಕತ್ತಾದಲ್ಲಿ ಪ್ರಾಂತೀಯ ಕಾಂಗ್ರೆಸ್ ಕಮಿಟಿಯ ಆಫೀಸೆಂದು ಒಂದು ಮನೆಯನ್ನು ಜಪ್ತಿ ಮಾಡಿ ಎಂಟು ಜನರನ್ನು ಕೈದು ಮಾಡಿದರು.

ಲಕ್ನೋದಲ್ಲಿ ೧೧ ನೇ ತಾರೀಕು ರಾತ್ರಿ ಸಿಟಿ ಮ್ಯಾಜಿಸ್ಟ್ರೇಟು ಕೋರ್ಟಿಗೆ ಯಾರೋ ಬೆಂಕಿ ಹಾಕಿದರು. ಬೆಂಕಿಯನ್ನು ಆರಿಸುವುದರೊಳಗಾಗಿ ಕೆಲವು ಕಾಗದ ಪತ್ರಗಳು ಮತ್ತು ಸಾಮಾನುಗಳು ಸುಟ್ಟುಹೋದವು.

ಈಗ ಇಡೀ ಪ್ರಪಂಚದಲ್ಲಿ 30 ಮಿಲ್ಲಿಯ ನಿರುದ್ಯೋಗಿಗಳಿರುವರೆಂದೂ, ಕೆಲಸವಿಲ್ಲದ್ದರಿಂದ ಅವರಿಗೆ ದೊರೆಯಬೇಕಾಗಿದ್ದ ಸಂಬಳವು ವರ್ಷಕ್ಕೆ 4000 ಮಿಲ್ಲಿಯ ಪೌನುಗಳು ನಷ್ಟವಾಗುತ್ತಿವೆಯೆಂದೂ ಕಂಡು ಹಿಡಿಯಲಾಗಿದೆ.

ಅಲಹಾಬಾದು ಕಾಂಗ್ರೆಸ್ ಸಭೆಯ ಕೆಲಸ ಕಾರ್ಯಗಳಿಗೆ ಸಹಾಯ ಮಾಡಿದನೆಂಬ ಅಪವಾದನೆಯ ಮೇಲೆ ಪುರುಷೋತ್ತಮದಾಸ್ ಟಾಂಡನ್‌ರವರಿಗೆ ೯ ತಿಂಗಳ ಕಠಿಣ ಶಿಕ್ಷೆಯೂ, ೨೦೦ ರೂ. ಜುಲ್ಮಾನೆ, ತಪ್ಪಿದರೆ ಮತ್ತೆ ೯ ತಿಂಗಳ ಶಿಕ್ಷೆಯೂ ವಿಧಿಸಲ್ಪಟ್ಟಿತು.

ಮಹಾತ್ಮ ಗಾಂಧಿಯವರ ಕೋರಿಕೆಯಂತೆ ತಾ 18ನೇ ದಿನವನ್ನು ಹಿಂದೂಸ್ಥಾನದ ಅನೇಕ ಕಡೆಗಳಲ್ಲಿ ಅಸ್ಪೃಶ್ಯತಾ ನಿವಾರಣಾ ದಿನವಾಗಿ ಆಚರಿಸಲ್ಪಟ್ಟು, ಗುರುವಾಯೂರು ದೇವಸ್ಥಾನಕ್ಕೆ ಹರಿಜನರನ್ನು ಬಿಡಬೇಕೆಂದು ಠರಾವುಗಳು ಪಾಸು ಮಾಡಲಾದವು.

ಈ ತಾ. 13ರಲ್ಲಿ ಬಮರ್ ಕೌನ್ಸಿಲಿನ ಅಧ್ಯಕ್ಷರಾಗಿದ್ದ ಮಿ. ಚಿಟ್ ಹ್ಲೈಂಗ್‌ರವರನ್ನು ಸದರಿ ಪದವಿಯಿಂದ ತೆಗೆದು ಹಾಕಬೇಕೆಂದು ಆ ಕೌನ್ಸಿಲಿನಲ್ಲಿ ಠರಾವು ಪಾಸಾಯಿತು. ಅವರು ಆ ಪದವಿಯನ್ನು ಬಿಟ್ಟರು. ಸರ್ ಒಸ್ಕರ್ ಡಿಗ್ಲೇಸ್ ವಿಲ್ಸನರು ಹೊಸ ಅಧ್ಯಕ್ಷರಾಗಿ ಆರಿಸಲ್ಪಟ್ಟರು.

೧೧ನೇ ತಾರೀಕಿನಲ್ಲಿ ಮದ್ರಾಸು ಸಿಟಿ ಮೂರನೆ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಕೇಸು ವಿಚಾರಣೆ ನಡೆಯುತ್ತಿದ್ದಾಗ ೪ ಜನ ಸ್ವಯಂ ಸೇವಕರು ರಾಷ್ಟ್ರೀಯ ಗೀತೆಗಳನ್ನು ಹೇಳುತ್ತಾ, ಕೋರ್ಟಿನೊಳಗೆ ನುಗ್ಗಿ ಹಸ್ತ ಪತ್ರಿಕೆಗಳನ್ನು ಹಂಚಿದರು. ಕೂಡಲೆ ಪೋಲೀಸಿನವರು ಅವರನ್ನು ದಸ್ತಗಿರಿ ಮಾಡಿದರು.

ಕಾಶಿ ವಿದ್ಯಾ ಪೀಠದ ಆಚಾರ್ಯರುಗಳು, ವಿದ್ಯಾರ್ಥಿಗಳು, ಇತರ ಸದಸ್ಯರುಗಳ ಸಾಧಾರಣ ಸಭೆಯ ತೀರ್ಮಾನದ ಮೇಲೆ ಸಹಿಗಳನ್ನು ಹಾಕಿ ಗುರುವಾಯೂರು ದೇವಾಲಯದ ಬಾಗಿಲುಗಳನ್ನು ಇತರ ಜಾತಿಯ ಹಿಂದುಗಳಿಗೆ ಬಿಡುವಂತೆಯೇ ಅಸ್ಪೃಶ್ಯರಿಗೂ ಬಿಡಬೇಕೆಂದು ಬರೆದು ಝಾಮೋರಿನ್ ರಾಜರಿಗೆ ಕಳುಹಿಸಿದ್ದಾರೆ.

ಹೈದರಾಬಾದು ಪ್ರಾಂತ್ಯದಲ್ಲಿ ೩ ಕೋಟಿನ ಭಯಂಕರ ಪ್ರಾಣಿಯೊಂದು ಕಾಣಿಸಿಕೊಂಡು ಬಹಳ ಹಾವಳಿ ಮಾಡಿತು. ತನ್ನ ಆಹಾರವಾದ ಗಿಡ್ಡಗಳನ್ನು ಹುಡುಕಲಿಕ್ಕಾಗಿ ಅದು ತನ್ನ ಕೊಂಬಿನಿಂದ ಅನೇಕ ಎಕರೆ ನೆಲವನ್ನು ತಿರುವಿ ಹಾಕಿದುದು ಜನರ ಕಣ್ಣಿಗೆ ಬಿದ್ದಿತು. ಕೊನೆಗೆ ನೈಝಾಮ್ ಸ್ಟೇಟ್ ರೈಲ್ವೆ ಟ್ರಾನ್ಸ್‌ಪೋರ್ಟ್ ಅಸಿ|| ಸುಪರಿಂಟೆಂಡೆಂಟರು ಇದನ್ನು ೭ ಗುಂಡು ಹೊಡೆದು ಕೊಂದರು.

ಮುಸ್ಲಿಂ ಸರ್ವಪಕ್ಷೀಯ ಪರಿಷತ್ತು ಈ ತಾ. 10 ರಲ್ಲಿ ಲಖನೌದಲ್ಲಿ ಸೇರಿತು. ಸರ್ ಯಂ. ಇಕ್ಬಾಲ್ ಷಫಿ ಅಲಿ ಖಾನರು ಅಧ್ಯಕ್ಷರಾಗಿದ್ದರು. ಕಳೆದ ತಿಂಗಳು ಅಲ್ಲಹಾಬಾದಿನಲ್ಲಿ ನಡೆದ ಐಕ್ಯಮತ್ಯ ಸಭೆಯ ತೀರ್ಮಾನಗಳನ್ನು ಚರ್ಚಿಸಿ, ಕೆಲವು ಬದಲಾವಣೆಗಳಿಂದ ಅವುಗಳನ್ನು ಒಪ್ಪಿಕೊಂಡರು. ಅಲ್ಲದೆ ತಾ. 14 ರಲ್ಲಿ ಅಲ್ಲಹಾಬಾದಿನಲ್ಲಿ ಪುನಹ ಪ್ರಾರಂಭಿಸುವ ಐಕ್ಯಮತ್ಯ ಪರಿಷತ್ತಿಗೆ ಪ್ರತಿನಿಧಿಗಳನ್ನು ಆರಿಸಿದರು.

ಮೂರನೇ ದುಂಡು ಮೇಜಿನ ಪರಿಷತ್ತಿನ ಮೀಟಿಂಗು ನಡೆಯುತ್ತಲೇ ಇದೆ. ಸದರಿ ಮೀಟಿಂಗಿನ ವಿವರವು ಇಂಡಿಯಾದಲ್ಲಿ ಸರಿಯಾಗಿ ಪ್ರಕಟವಾಗದಿರುವುದರಿಂದ ವಿವಿಧ ವರ್ತಮಾನಗಳು ಬರುತ್ತಿವೆ. ದೇಶ ರಕ್ಷಣೆ (ಸೈನ್ಯ ಇಲಾಖೆ), ಫೈನಾನ್ಸಿನ ಭದ್ರತೆಗಳು, ವೈಸರಾಯರು ಮತ್ತು ಗವರ್ನರುಗಳಿಗೆ ಇರುವ ವಿಶೇಷ ಅಧಿಕಾರಗಳ ವಿಷಯ ಸಹ್ಯ ಜಯಕರರೇ ಮೊದಲಾದ ಲಿಬರಲ್ ಪಕ್ಷದವರಿಗೆ ಅತೃಪ್ತಿಯುಂಟಾಗಿದೆ. ಆದುದರಿಂದ 12 ಮಂದಿ ಪ್ರತಿನಿಧಿಗಳು ತಮ್ಮ ಅಭಿಪ್ರಾಯವನ್ನು ಬರೆದು ಪ್ರಧಾನ ಮಂತ್ರಿಯವರಿಗೆ ಕಳುಹಿಸಿರುವರು. ಉತ್ತರ ದೊರೆತಿಲ್ಲ. ಪರಿಷತ್ತು ಕ್ರಿಸ್‌ಮಸ್ ಹಬ್ಬದೊಳಗೆ ಮುಗಿಯುವಂತಿಲ್ಲವಂತೆ. ಒಟ್ಟಾರೆ ಈ ಪರಿಷತ್ತಿನಿಂದ ನಿರಾಶೆಯುಂಟಾಗು ಸಂಭವವೇ ಹೆಚ್ಚಿರುವುದು ಲಿಬರಲ್ ಪಕ್ಷದವರ ಅಭಿಪ್ರಾಯ.

ಐಕ್ಯಮತ್ಯ ಸಮ್ಮೇಳನವು ಈ ತಾ. 16ರಲ್ಲಿ ಅಲ್ಲಹಾಬಾದಿನಲ್ಲಿ ಪ್ರಾರಂಭಿಸಿತು. ಶ್ರೀ ವಿಜಯ ರಾಘವಾಚಾರ್ಯರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಆಳ್ವಿನ ಮಹಾಶಯರು ಒಗ್ಗಟ್ಟಿನ ಆವಶ್ಯಕತೆಯನ್ನು ಕುರಿತು ಭಾಷಣ ಮಾಡಿದರು. ಸುಮಾರು 140 ಮಂದಿ ಮುಖಂಡರುಗಳು ಪರಿಷತ್ತಿಗೆ ಜಯವನ್ನು ಕೋರಿ ಸಂದೇಶಗಳನ್ನು ಕಳುಹಿಸಿದ್ದರು. ಶೌಕತ್ ಅಬ್ದುಲ್ ಮಜೀದ್, ಡಾ. ಮುಂಜೆ, ಚಿಂತಾಮಣಿ ಮೊದಲಾದವರು ಮಾತಾಡಿದ ಮೇಲೆ ಸಭೆಯು ಮುಂದಕ್ಕೆ ಹಾಕಲಾಯಿತು. ಈ ಮೊದಲಿನ ಐಕ್ಯಮತ್ಯದ ತೀರ್ಮಾನದಲ್ಲಿ ಕೆಲವು ಬದಲಾವಣೆಗಳನ್ನು ಮಾಡಬೇಕೆಂದು ಕೆಲವರು ಸೂಚಿಸಿದ್ದರಿಂದ ಒಗ್ಗಟ್ಟಿನ ಕಮಿಟಿಯವರು ಸದರಿ ಕಾರ್ಯವನ್ನು ನಡಿಸುತ್ತಾ ಇದ್ದಾರೆ. ಈ ಕಮಿಟಿಯ ಕೆಲಸವು ಮುಗಿದ ಕೂಡಲೆ ಸರ್ವ ಪಕ್ಷೀಯ ಪರಿಷತ್ತು ಪುನಹ ಸೇರುವಾಗುವುದು. ಒಗ್ಗಟ್ಟನ್ನು ಸಾಧಿಸಲು ಸರ್ವ ಪ್ರಯತ್ನಗಳೂ ಮಾಡಲಾಗುತ್ತಿವೆ.

ಕಳ್ಳಿರ ಬಾಣೆ ಮೀಟಿಂಗು.

(ಸ್ವಂತ ಬಾತ್ಮಿದಾರರಿಂದ)

ಅಮ್ಮತ್ತಿನಾಡಿನವರ ಮೀಟಿಂಗೊಂದು, ಈ ತಾ. 17 ರಲ್ಲಿ ನಾಡುಕೋಲು ಮಂದಾನ ಕಳ್ಳಿರಬಾಣೆಯಲ್ಲಿ ನಡೆಯಿತು. ಎಲ್ಲಾ ಗ್ರಾಮಗಳಿಂದಲೂ ಜನರು ಬಂದಿದ್ದರು. ಮೆ. ಐಮ್ಮಡ ಮಾದಪ್ಪನವರು ಅಧ್ಯಕ್ಷರಾಗಿದ್ದರು.

ಈ ನಾಡಿನವರು ಹಲವು ವರ್ಷಗಳಿಂದ ನಿಷಾನಿಷೇಧವನ್ನು ಸಾಧಿಸಲು ಪ್ರಯತ್ನಿಸುತ್ತಿದ್ದರೂ ಕೆಲವು ಜಾತಿಗೆ ಅಲ್ಪ ಸ್ವಲ್ಪ ಜನರು ಸೇರಿ ಗುತ್ತಿಗೆ ಕಟ್ಟುವುದನ್ನು ಕಂಡು ಹುಟ್ಟುವರು ಮುಂದಿಸಿ ಮಾತಾಡಿದರು. ನಂತರ ಮೆ. ಪಿ. ಐ ಬೆಳ್ಯಪ್ಪನವರ ಸೂಚನೆಯಂತೆ ಕೆಲವರು ಬೈನೆಮರಗಳನ್ನು ಗುತ್ತಿಗೆ ಕಟ್ಟುತ್ತಿದ್ದ ವ್ಯಸನವನ್ನು ಸೂಚಿಸಿ, ಬರುವ ವರ್ಷದಿಂದ ಗುತ್ತಿಗೆ ಕೊಡುವುದಿಲ್ಲವೆಂದು ಪ್ರತಿಜ್ಞೆ ಮಾಡಿಕೊಂಡರು. ಅಲ್ಲದೆ ಇದೇ ತರಹದ ಮುಂದಿನ ಕಾರ್ಯಕ್ಕೆ ಹಾಗಲ್ಲದ ಕೆಲವರ ರಾಜಿ, ಹಾಗೆಯೇ ಗ್ರಾಮದ 3 ಮಂದಿಗಳು ಆರಿಸಲ್ಪಟ್ಟರು. ಸದರಿ ಕಮಿಟಿ ಮೆಂಬರುಗಳು ತಿಂಗಳ ಒಮ್ಮೆಯ ಅಮಾವಾಸ್ಯೆ ಮಧ್ಯಾಹ್ನ 1 ಗಂಟೆಗೆ ಕಳ್ಳಿರ ಬಾಣೆಯಲ್ಲಿ ಸೇರಿ, ನಿಷಾನಿಷೇಧದ ಮುಂದಿನ ಕೆಲಸವನ್ನು ನಡಿಸತಕ್ಕದ್ದೆಂದೂ, ಅವಶ್ಯವಿದ್ದಲ್ಲಿ ನಾಡಿನ ಜನರ ಮೀಟಿಂಗನ್ನು ನಡಿಸುವದೆಂದೂ ತೀರ್ಮಾನಿಸಲಾಯಿತು. ಆ ಮೇಲೆ ಹೊಸದಾಗಿ ಗ್ರಾಮ ಸ್ವರಾಜ್ಯಕ್ಕೆ ನೇಮಿಸಲಾದ ನಾಡುತಕ್ಕರ ಮೇಲೆ ತಂದ ಪೋಷಾಕವನ್ನು ವಿಚಾರಿಸಿ ತೀರ್ಮಾನಿಸಲಾಯಿತು. ಅಧ್ಯಕ್ಷರ ಭಾಷಣದಿಂದ ಸಭೆಯು ಬರಖಾಸ್ತಾಯಿತು.

ಕೊಡಗು.

ಸನ್ ೧೯೩೨ನೇ ಇಸವಿ

ದಿಸೆಂಬರ್ ತಾ. ೨೩ನೇ ಶುಕ್ರವಾರ.

ಪ್ರೆಸ್ ಆರ್ಡಿನೇನ್ಸ್

ಜಾರಿಯಲ್ಲಿರುವವರೆಗೆ

ನಾವು

ಅಗ್ರಲೇಖನ

ವನ್ನು

ಪ್ರಕಟಿಸುವುದಿಲ್ಲ.

ಅಸ್ಪೃಶ್ಯತಾ ನಿವಾರಣಾ ದಿನ.

(ಸ್ವಂತ ವಾರ್ತಾದಾರರಿಂದ)

ಅಖಿಲ ಭಾರತ ಭೂಮಿಯಲ್ಲಿ ಈ ತಾ. 18ನೇ ದಿನವನ್ನು ಅಸ್ಪೃಶ್ಯತಾ ನಿವಾರಣಾ ದಿನವಾಗಿ ಆಚರಿಸಬೇಕೆಂದು ಮಹಾತ್ಮ ಗಾಂಧಿಯವರು ಸೂಚಿಸಿದಂತೆ ಕೊಡಗಿನಲ್ಲಿ ಸದರಿ ದಿನವನ್ನು ಆಚರಿಸಲು, ಅದರ ಕಾರ್ಯಕ್ರಮವನ್ನು ವಿವರಿಸಿ, ಮೆ. ಸಿ. ಎಮ್. ವೆಂಕಪ್ಪಯ್ಯನವರ ಮತ್ತು ಮೆ ಪಿ. ಐ. ಬೆಳ್ಯಪ್ಪನವರ ರುಜುವಿನೊಡನೆ ಹಸ್ತ ಪತ್ರಗಳು ಕೊಡಗಿನ ಎಲ್ಲಾ ಭಾಗಗಳಲ್ಲಿಯೂ ಒಂದು ವಾರಕ್ಕೆ ಮುಂಚಿತವಾಗಿ ಹಂಚಲ್ಪಟ್ಟಿದ್ದವು. ಅದೇ ಮೇರೆ ಕೆಲವು ಕಡೆಗಳಲ್ಲಿ ಈ ದಿನವು ಆಚರಿಸಲ್ಪಟ್ಟಿತು.

ಗೋಣಿಕೊಪ್ಪಲು.

ತಾ. 18ರ ಬೆಳಿಗ್ಗೆ ಮೆ. ಗಳಾದ ಬಲ್ಯಾಡ ಮಾದಪ್ಪನವರು, ಚೆಪ್ಪುಡಿರ ಪೂಣಚ್ಚನವರು ಮತ್ತು ಪಿ. ಐ. ಬೆಳ್ಯಪ್ಪನವರು ಕೈಕೇರಿ ಗ್ರಾಮದ ಹರಿಜನರ (ಕೆಂಬಟ್ಟಿ ಹೊಲೆಯರ) ಕೇರಿಗೆ ಹೋಗಿ ಅವರ ಮನೆಗಳನ್ನೆಲ್ಲಾ ನೋಡಿದರು. ಹಟ್ಟಿನ ಮನೆಗಳೂ, ಅಂಗಳಗಳೂ ಬಹು ಕುಚಿಯಾಗಿದ್ದವು. ಬಹು ಇಕ್ಕಟ್ಟಾದ ಸ್ಥಳದಲ್ಲಿ ಒತ್ತೊತ್ತಾಗಿ ಕಟ್ಟಲ್ಪಟ್ಟ ಈ ಮನೆಗಳು ಇಷ್ಟು ಕುಚಿಯಾಗಿಡಲ್ಪಟ್ಟದ್ದು ಅವುಗಳ ನಿವಾಸಿಗಳಿಗೆ ಶ್ರೇಯಸ್ಕರವೇ ಸರಿ. ಒಂದೆರಡು ಅಂಗಳಗಳು ಸ್ವಲ್ಪ ಅಶುಚಿಯಾಗಿದ್ದುದನ್ನು ನೋಡಿ, 'ಕಸಬರಿಗೆ ಕೊಡಿರಿ, ನಾವು ಗುಡಿಸಿ ಶುಚಿ ಮಾಡಿ ಕೊಡುತ್ತೇವೆಂದು' ನೋಡಲು ಬಂದ ಜನ ಹೇಳಿದ ಕ್ಷಣ ಆ ಮನೆಯ ನಿವಾಸಿಗಳು ನಾಚಿಕೊಂಡು, ತಾವೇ ಗುಡಿಸಿ ಸ್ವಚ್ಛ ಮಾಡಿದರು. ನಂತರ ಅಲ್ಲಿಯ ನಿವಾಸಿಗಳು ಸುಮಾರು 60 ಜನರನ್ನು ಒಂದು ಕಡೆ ಕೂಡಿಸಿ, ಅವರು ಅಭಿವೃದ್ಧಿಯಾಗಬೇಕಾದರೆ, ಅವರ ಶರೀರವನ್ನು ಮತ್ತು ಉಡವುಗಳನ್ನು ಶುಚಿಯಾಗಿಯೂ, ಮನೆಮಾರುಗಳನ್ನು ಸ್ವಚ್ಛವಾಗಿಯೂ ಇಟ್ಟುಕೊಂಡು, ಸತ್ತ ಪ್ರಾಣಿಗಳ ಮತ್ತು ದನಗಳ ಮಾಂಸವನ್ನು ತಿನ್ನುವುದನ್ನು, ಸೇಂದಿ ಸಾರಾಯಿ ಕುಡಿಯುವುದನ್ನೂ ಬಿಡಬೇಕೆಂದೂ, ಅವರ ಮಕ್ಕಳನ್ನು ಶಾಲೆಗೆ ಕಳುಹಿಸಬೇಕೆಂದೂ ಮುಂತಾಗಿ ಮೆ. ಪಿ. ಐ. ಬೆಳ್ಯಪ್ಪನವರು ಅವರಿಗೆ ಬೋಧನೆ ಹೇಳಿದರು. ಆ ಮೇಲೆ ಇನಾಮು ಕೊಡುವ ಉದ್ದೇಶ್ಯ ಶುಚಿತ್ವದಲ್ಲಿ 1ನೇ ಮತ್ತು 2ನೇಯದಾಗಿರುವ ಮನೆಗಳು ಆರಿಸಲ್ಪಟ್ಟವು.

ಮಧ್ಯಾಹ್ನ 12 ಗಂಟೆಯಿಂದ ಸಾಯಂಕಾಲ 3 ಗಂಟೆಯ ವರೆಗೆ ಸದರಿ ಕೇರಿಯ ಹರಿಜನರು ಹಾರ್ಮೋನಿಯಂ, ತಟ್ಟೆಗಳೊಂದಿಗೆ ಸಂಕೀರ್ತನೆಗಳನ್ನು ಹಾಡುತ್ತಾ ಮೇಲ್ಜಾತಿ ಹಿಂದೂಗಳೊಡನೆ ಗೋಣಿಕೊಪ್ಪಲು ಬೀದಿಗಳಲ್ಲೆಲ್ಲಾ ಮೆರವಣಿಗೆ ಹೋದರು. ಅಂಗಡಿಯಿಂದ ಅಂಗಡಿಗೆ ಚಿಟ್ಟಿ ಹೋಗಿ ಹಣ್ಣು ಹಣವು ವಸೂಲಾಯಿಸಲ್ಪಟ್ಟಿತು. ಈ ಹರಿಜನ ಯುವಕರ ಬಹು ಇಂಪಾದ ಗಾನವನ್ನು ಕೇಳಲು ಜನಸಮೂಹವು ಅಗಾಗ್ಯೆ ಹೆಚ್ಚಾಗುತಿತ್ತು. ಸಬ್ ಇನ್ಸ್‌ಪೆಕ್ಟರವರು ಕೆಲವು ಪೋಲೀಸರೊಂದಿಗೆ ಭಜನೆಗಾರರ ಸಂಗಡವೇ ಇದ್ದರು.

3 ಗಂಟೆ ಸಮಯಕ್ಕೆ ಮೆರವಣಿಗೆ ಹಳೇ ಕಚ್ಚೇರಿ ಬಳಿ ಮೈದಾನಕ್ಕೆ ತಲಪಿತು. ಅಲ್ಲಿ ಒಂದು ಪಬ್ಲಿಕ್ ಮೀಟಿಂಗು ನಡೆಸಲಾಯಿತು. ಹರಿಜನರೂ, ಮೇಲ್ಜಾತಿ ಹಿಂದೂಗಳೂ ಸೇರಿ 300 ಕ್ಕಿಂತ ಹೆಚ್ಚು ಜನರು ನೆರೆದಿದ್ದರು. ಮೆ. ಕಾಡ್ಯಮಾಡ ಐಯ್ಯಮ್ಮನವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಮೆ. ಪಿ. ಐ. ಬೆಳ್ಯಪ್ಪನವರು—ಅಖಿಲಭಾರತ ಅಸ್ಪೃಶ್ಯತಾ ನಿವಾರಣಾ ದಿನದ ಉದ್ದೇಶವನ್ನೂ, ಅಸ್ಪೃಶ್ಯತಾ ನಿವಾರಣೆಯ ಅವಶ್ಯಕತೆಯನ್ನೂ, ಮಲಬಾರಿನ ಗುರುವಾಯೂರು ದೇವಸ್ಥಾನದ ಸಂಬಂಧ ಮಹಾತ್ಮ ಗಾಂಧಿಯವರು ಜನವರಿ 2 ರಲ್ಲಿ ಕೈಕೊಳ್ಳಲಿಕ್ಕಿರುವ ಉಪವಾಸ ವ್ರತವನ್ನೂ ಕುರಿತು ಭಾಷಣ ಮಾಡಿದರು. ಹರಿದಾಸ ಗೋಪಾಲ್‌ದಾಸ್‌ರವರು ಅಸ್ಪೃಶ್ಯತಾ ಭಾವನೆಯು ಶಾಸ್ತ್ರಾಧಾರವಾದುದಲ್ಲವೆಂದು ವಿವರಿಸಿದರು.

ಕೆಳಗಿನ ಇವೆರಡು ಠರಾವುಗಳು ಸರ್ವಸಮ್ಮತದಿಂದ ಮಂಜೂರಾದವು.

'ದೇಶದಲ್ಲಿ ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಒಡೆಬಿಡದೆ ಚಳವಳಿ ನಡಿಸಬೇಕೆಂದು ಈ ಸಭೆಯು ತೀರ್ಮಾನಿಸಿ ತ್ತದೆ.'

'ಗುರುವಾಯೂರು ದೇವಸ್ಥಾನದ ಪ್ರವೇಶಕ್ಕೆ ಹರಿಜನರನ್ನು ಬಿಡಬೇಕೆಂದು ಈ ಸಭೆಯು ಸದರಿ ದೇವಾಲಯದ ಅಧಿಕಾರಿಗಳನ್ನು ಕೇಳಿಕೊಳ್ಳುತ್ತದೆ.'

ನಂತರ, ಬೆಳಿಗ್ಗೆ ಆರಿಸಿದ್ದ ಮೇರೆ, ಕೈಕೇರಿ ಹರಿಜನ ಕೇರಿಯಲ್ಲಿ ಮನೆಗಳನ್ನು ಬಹು ಶುಚಿಯಾಗಿಟ್ಟಿರ.ವ ಪಳನ್ಯಾಗಿ ಅಯ್ಯ ಮತ್ತು ಸಹೋದರರಿಗೆ 1 ನೇ ಇನಾಮನ್ನು, ಕೊಟ್ಟನವರಿಗೆ 2 ನೇ ಇನಾಮನ್ನೂ ಅಧ್ಯಕ್ಷರು ಕೊಟ್ಟರು. ಈ ದಿನದ ಪಠೋಲಾತಿಯ ಬಾಕಿ ಮೊಬಲಗು ಕೈಕೇರಿ ಹರಿಜನರ ಫಂಡಿಗೆ ಕೊಡಲಾಯಿತು. ಅಧ್ಯಕ್ಷರಿಗೆ ವಂದನೆಗಳಿಂದ ಸಭೆಯು ಭರಖಾಸ್ತಾಯಿತು.

ಆ ಮೇಲೆ ಹರಿಜನರು ಮತ್ತು ಮೇಲ್ಜಾತಿಯವರು ರಾಮಭಜನೆ ಮಂದಿರದಲ್ಲಿ ಭಜನೆಯನ್ನು ಮಾಡಿ, ಹರಿಜನ ಯುವಕರಿಂದ ಮಂಗಳಾರತಿ ಎತ್ತಿಸಿ ಪ್ರಸಾದ ವಿನಿಯೋಗದಿಂದ ಆ ದಿನದ ಕಾರ್ಯಕ್ರಮವು ಅಂತ್ಯಗೊಳಿಸಲ್ಪಟ್ಟಿತು.

ಮಡಿಕೇರಿ.

ತಾ. 18 ರಲ್ಲಿ ಮಡಿಕೇರಿ ಮಾರ್ಕೆಟಿನ ಬಳಿ ಮೆ. ಅಜ್ಜಿಕುಟ್ಟಿರ ಮುದ್ದಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಮೀಟಿಂಗು ನಡೆಯಿತು. ಹರಿಜನರೂ, ಬೇರೆ ಹಿಂದೂಗಳೂ ಸೇರಿ ಸುಮಾರು 100 ಜನರು ಹಾಜರಿದ್ದರು. ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಹರಿಜನರು ಮಾಡಬೇಕಾದ ಕೆಲಸಗಳನ್ನು ಕುರಿತು ಮೆ. ಅಜ್ಜಮಾಡ ಮಾದಪ್ಪನವರು ಭಾಷಣ ಮಾಡಿದರು.

'ಗುರುವಾಯೂರು ದೇವಸ್ಥಾನಕ್ಕೆ ಹರಿಜನರನ್ನು ಪ್ರವೇಶ ಮಾಡಲು ಬಿಡಬೇಕು' ಎಂಬ ಠರಾವು ಬಹುಮತದಿಂದ ಪಾಸಾಯಿತು.

ಅಧ್ಯಕ್ಷರ ಭಾಷಣವಾದ ಮೇಲೆ ಸಭೆಯು ಮುಕ್ತಾಯವಾಯಿತು.

ವಿ ರಾ ಜ ಪೇ ಟೆ.

ತಾ. 18 ರಲ್ಲಿ ಬಿಳುಗುಂದ ಸ್ಕೂಲ್ ಮೈದಾನದಲ್ಲಿ ನಲ್ವತೊಕ್ಕಲು ಮತ್ತು ಬಿಳುಗುಂದ ಹರಿಜನರು ಮತ್ತು ಬೇರೆ ಹಿಂದೂಗಳ ಮೀಟಿಂಗೊಂದು ಮೆ. ಮಾಚೆಕೊಂಡ ಉತ್ತಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಅಸ್ಪೃಶ್ಯತಾ ನಿವಾರಣೆಯ ಅವಶ್ಯಕತೆಯನ್ನು, ಮಹಾತ್ಮರ ಉಪವಾಸ ವ್ರತವನ್ನು ಕುರಿತು ಮೆ. ಐ. ಪಿ. ಅಯ್ಯಪ್ಪನವರು ಮತ್ತು ಮೆ. ಅಬ್ದುಲ್ ಗಫೂರ್ ಖಾನರು ಭಾಷಣ ಮಾಡಿದರು. ಪ್ರಾರ್ಥನೆಯಿಂದ ಮೀಟಿಂಗು ಆರಂಭವಾಯಿತು.

ಸಾರ್ವಜನಿಕ ಉಪನ್ಯಾಸ.

ಈ ತಾ. 19ನೇ ಸೋಮವಾರ ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಲ್ಲಿ ಒಂದು ಪಬ್ಲಿಕ್ ಮೀಟಿಂಗು ನಡೆಸಲಾಯಿತು. ಮೆ. ಅಜ್ಜಿಕುಟ್ಟಿರ ಸುಬ್ಬಯ್ಯನವರು ಅಧ್ಯಕ್ಷರಾಗಿದ್ದರು. ಸುಮಾರು 150 ಜನರು ನೆರೆದಿದ್ದರು. ಮೆ. ಪಿ. ಐ. ಬೆಳ್ಯಪ್ಪನವರು ಅಸ್ಪೃಶ್ಯತಾ ಭಾವನೆಗೆ ಹರಿಜನರಷ್ಟೇ ಮೇಲ್ಜಾತಿ ಹಿಂದೂಗಳೂ ಜವಾಬ್ದಾರರಾಗಿರುವರೆಂಬುದನ್ನೂ, ಎರಡು ಪಂಗಡದವರೂ ಹಿಂದೂ ಮತದ ಈ ಕುಂದಕವನ್ನು ಹೋಗಲಾಡಿಸಲು ಯಾವ ಕೆಲಸಗಳನ್ನು ಮಾಡಬೇಕೆಂಬುವುದನ್ನೂ ವಿವರಿಸಿ, ಹರಿಜನೋದ್ಧಾರಕರಾದ ಮಹಾತ್ಮ ಗಾಂಧಿಯವರ ಆಜ್ಞೆಯನ್ನು ನಡಿಸಲು ನಾವೆಲ್ಲರೂ ಸೊಂಟಕಟ್ಟಬೇಕೆಂದು ಮುಂತಾಗಿ ಭಾಷಣ ಮಾಡಿದರು. ಮೆ. ಅಜ್ಜಮಾಡ ಮಾದಪ್ಪನವರು ಮತ್ತು ಚೇಂದಿರ ತಿಮ್ಮಯ್ಯನವರು ಹರಿಜನರೋದ್ಧಾರವನ್ನು ಕುರಿತು ಕೆಲವು ಮಾತುಗಳನ್ನಾಡಿದ ಮೇಲೆ ಸಭೆಯು ಮುಕ್ತಾಯಗೊಂಡಿತು.

ಕೊಡಗಿನ ಭವಿಷ್ಯತ್ತು.

(ಮ. ಐ. ಸಿ. ಸುಬ್ಬಯ್ಯನವರಿಂದ.)

ಕಳೆದ ಅಕ್ಟೋಬರು ತಿಂಗಳಲ್ಲಿ ನಡೆದ ದೇಶದ ಮುಂದಾಳುಗಳ ಸಭೆಯಲ್ಲಿ ತೀರ್ಮಾನವಾದಂತೆ ದೇಶದ ಹಲವು ಕಡೆಗಳಲ್ಲಿ ಮೀಟಿಂಗು ನಡೆಸಿಸೋಡಿದಲ್ಲಿ, ಕೆಲವರು ಪ್ರತ್ಯೇಕವಾಗಿರಬೇಕೆಂತಲೂ, ಕೆಲವರು ಮದ್ರಾಸಿಗೆ ಸೇರಿಸಬೇಕೆಂತಲೂ, ಇನ್ನು ಕೆಲವರು ಮೈಸೂರಿಗೆ ಸೇರಿಸಬೇಕೆಂತಲೂ ಅಭಿಪ್ರಾಯ ಕೊಟ್ಟದ್ದರಿಂದ ಕೊಡಗಿನ ಎಲ್ಲಾ ಪಂಗಡಗಳು ಮತ್ತು ಇತರ ಮುಂದಾಳುಗಳು, ಇದರಿಂದ ಕೂಡಿದ ಒಂದು ಸಭೆಯನ್ನು ಏರ್ಪಡಿಸಿ, ಒಗ್ಗಟ್ಟಿನ ಒಂದು ಅಭಿಪ್ರಾಯಕ್ಕೆ ಬರಬೇಕೆಂತ ತಾ. 18—12—32ರಲ್ಲಿ ರಾ. ಬ. ಪಟ್ಟಮಾಡ ದೇವಯ್ಯನವರ ಅಧ್ಯಕ್ಷತೆಯಲ್ಲಿ ಮಡಿಕೇರಿ ಜಮೀನ್ದಾರರ ಸಂಘದ ಹಾಲ್‌ನಲ್ಲಿ ಸರ್ವ ಪಕ್ಷಗಳ ಒಂದು ಮೀಟಿಂಗು ನಡೆಸಲಾಯಿತು. ಈ ಮೀಟಿಂಗಿನಲ್ಲಿ ಕಾಂಗ್ರೆಸ್ ಮತ್ತು ಯೂರೋಪಿಯನ್ ಪಕ್ಷಗಳಲ್ಲದೆ ಬಾಕಿ ಆರು ಸಂಘಗಳು ಅಂದರೆ ಜಮೀನ್ದಾರರ ಸಂಘ, ಕೊಡವ ಸಭೆ, ಕೊಡಗೇತರರ ಸಭೆ, ಗೌಡ ಸಭೆ, ಲಿಂಗಾಯತರ ಸಭೆ ಮತ್ತು ಮುಸ್ಲಿಂ ಸಂಘ, ಈ ಸಂಘಗಳ ಹತ್ತು ಹತ್ತು ಪ್ರತಿನಿಧಿಗಳು ಮತ್ತು ದೇಶದ ಕಾರ್ಯಗಳಲ್ಲಿ ಭಾಗಿಗಳಾಗಿ ಯಾವ ಪಂಗಡಕ್ಕೂ ಸೇರದೆ ಇರುವ 125 ಇತರ ಮುಂದಾಳುಗಳು, ಇವರಿಗೆ ಆಮಂತ್ರಣ ಕೊಡಲ್ಪಟ್ಟಿತು. ಅದರ ಪ್ರಕಾರ ಮೀಟಿಂಗಿನಲ್ಲಿ ಮೇಲೆ ಹೇಳಿದ ಆರು ಸಂಘಗಳ ಪ್ರತಿನಿಧಿಗಳು ಮತ್ತು ಇತರ ಸಾಧಾರಣ 60 ಪ್ರತಿನಿಧಿಗಳು ನೆರೆದಿದ್ದರು. ದೀರ್ಘ ಚರ್ಚೆ ನಡೆದು ಈ ಕೆಳಗಿನ ಠರಾವು ಸರ್ವ ಸಮ್ಮತದಿಂದ ಪಾಸಾಯಿತು.

"ಕೊಡಗಿನ ಎಲ್ಲಾ ಪಂಗಡಗಳ ಮತ್ತು ವಿಶೇಷ ಹಕ್ಕುಗಳ ಹಕ್ಕುಬಾಧ್ಯತೆಗಳನ್ನು ಕಡೆಯಿಂದ ಚರ್ಚಿಸಿ ಒಪ್ಪುವ ಶರತ್ತಿನಿಂದ ಕೊಡಗಿಗೆ ಸಂಪೂರ್ಣ ಜವಾಬ್ದಾರಿ ಸರಕಾರ ಕೊಡತಕ್ಕದ್ದು. ಅಲ್ಲದೆ ಸದರಿ ಜವಾಬ್ದಾರಿ ಸರಕಾರ ನಡಸಲಿಕ್ಕಾಗಿ ಇಂಡಿಯಾ ಸರಕಾರದವರು ಕೊಡಗಿನ ಹಿಂದಿನ ಉಳಿವರಿಂದಲ್ಲಿ ಕೆಲವು ಭಾಗವನ್ನು ಕೊಟ್ಟು ವರ್ಷಂಪ್ರತಿ 5 ಲಕ್ಷ ರೂ. ಸಬ್‌ವೆನ್ಷನ್ ಕೊಡತಕ್ಕದ್ದು."

ಈ ಕೆಳಗಿನ ಠರಾವು ದೊಡ್ಡ ಬಹುಮತದಿಂದ ಮಂಜೂರಾಯಿತು.'

"ಹಾಗೆ ಧನ ಸಹಾಯಕೊಟ್ಟು ಸಂಪೂರ್ಣ ಜವಾಬ್ದಾರಿ ಸರಕಾರ ಕೊಡದೆ ಹೋದರೆ, ಕೊಡಗನ್ನು ಒಂದು ಪ್ರತ್ಯೇಕ ಜಿಲ್ಲೆಯಾಗಿ ಇಟ್ಟುಕೊಂಡು ಜಮ್ಮ, ಕತ್ತಿ, ಕೋವಿ ಮತ್ತು ಇತರ ಹಕ್ಕುಗಳನ್ನು ಉಳಿಸಿಕೊಂಡು, ಈಗಿನ ಓಟಿನ ಹಕ್ಕನ್ನು ಕಡಿಮೆ ಮಾಡದೆ ಮೈಸೂರಿಗೆ ಸೇರಿಸತಕ್ಕದ್ದು."

ಮೇಲಿನ ಈ ಎರಡು ಠರಾವುಗಳನ್ನು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಿಗೂ, ಮೈಸೂರು ದಿವಾನರಿಗೂ ಅಧ್ಯಕ್ಷರು ಕಳುಹಿಸತಕ್ಕದ್ದೆಂದು ಮೀಟಿಂಗಿನಲ್ಲಿ ತೀರ್ಮಾನವಾಯಿತು.

(4ನೇ ಪುಟದಲ್ಲಿ ಮುಂದುವರಿದಿದೆ.)

ದೃಢ ಸಂಕಲ್ಪ ಮತ್ತು ಆತ್ಮಶಕ್ತಿ.

(ಲೇಖಕ:—[illegible], ಕನ್ಯಾಗುರುಕುಲ, ದೇಹರಾಡೂನ್)

"Only one thing that keeps you down and that is yourself. You must understand that your achievement cannot rise higher than your resolution. So resolve well and come up to my expectation. Your own lack of push and self confidence and not circumtances is the chain that binds you. So you have to push on. Have confidence in you."

ತಾತ್ಪರ್ಯ:—ನಿನ್ನನ್ನು ಕೆಳಗಡೆ ತಳ್ಳುವವನು ನೀನೇ. ನಿನ್ನ ಕಾರ್ಯವೆಂದಿಗೂ ದೃಢತೆಯ ಸಂಕಲ್ಪಕ್ಕಿಂತ ಮೇಲಕ್ಕೆ ಹೋಗಲಾರದು. ಆದುದರಿಂದ ಮನವನ್ನು ದೃಢ ಸಂಕಲ್ಪದ ಸಹಕಾರದಿಂದ ಸೂತ್ರಿಸಿ, ನನ್ನ ಆಶೆಯನ್ನು ನೆರವೇರಿಸು. ನಿನ್ನನ್ನು ಸಾಹಸ ಮತ್ತು ಆತ್ಮವಿಶ್ವಾಸವು ಮುಂದುವರಿಯಲು ಎಡೆಗೊಡದುದಲ್ಲದೆ, ಪರಿಸ್ಥಿತಿಯು ನಿನ್ನನ್ನು ಬಂಧಿಸಲಾರದು. ಆದುದರಿಂದ ನೀನು ನಿನ್ನ ಏಳಿಗೆಯಲ್ಲಿಯೇ ಮನವಿಡಬೇಕು. ಮತ್ತು ಆತ್ಮವಿಶ್ವಾಸದಲ್ಲಿ ಅಚಲನಾಗಿರು.

ಮೇಲೆ ಬರೆದ ವಾಕ್ಯರತ್ನಗಳನ್ನು ಸಂತರೊಬ್ಬರು ತಿಳಿಸಿ, ತನ್ನ ಮಗುವಿಗೆ ಬರೆದುದಾಗಿದೆ. ಇದರಲ್ಲಿರುವ ಒಂದೊಂದು ವಾಕ್ಯದಲ್ಲಿ ನನಗೆ ಗೂಢರಹಸ್ಯಮಯವಾದ ಉಪದೇಶವು ತುಂಬಿದಂತೆ ತೋರುವುದು. ಆದುದರಿಂದ ಮೇಲಿನ ವಾಕ್ಯಗಳನ್ನು ನನ್ನ ಮಂದ ಬುದ್ಧಿಗೆ ತೋರುವಷ್ಟು ವಿವರಿಸುವೆನು.

ಯಾವ ಮನುಷ್ಯನು ದೃಢ ಸಂಕಲ್ಪದ ಸೂತ್ರದಿಂದ ಸೂತ್ರಿತನಾಗುವನೋ, ಅವನ ಕಾರ್ಯವು ಅವನ ಮುಂದೆ ಸುಸ್ಥಿರವಾಗಿ ನಿಲ್ಲುವವು. ಏಕೆಂದರೆ, ಅವನು ತನ್ನ ನಿಶ್ಚಯದಲ್ಲಿ ಧ್ರುವನಾದರೆ, ಅವನು ಎಂಥಾ ಅಸಂಖ್ಯ ಕಾರ್ಯಗಳನ್ನಾದರೂ ಅನಾಯಾಸವಾಗಿ ಎಂದರೆ ಸುಲಭವಾಗಿ ಮಾಡಬಹುದು. ಆದುದರಿಂದ ಮೊಟ್ಟಮೊದಲು ಮನುಷ್ಯನು ಸಂಕಲ್ಪ ಸೂತ್ರದಿಂದ ಸೂತ್ರಿತನಾಗಬೇಕು. ಮನುಷ್ಯನನ್ನು ಮುಂದಕ್ಕೊಯ್ಯುವ ಪಥ ಪ್ರದರ್ಶಕ ಪ್ರದೀಪಗಳ ಹೆಸರೇನೆಂದರೆ—ಸಾಹಸ ಮತ್ತು ಆತ್ಮವಿಶ್ವಾಸ. ಇವುಗಳ ಸಹಾಯದಿಂದ ಮನುಷ್ಯನು ತನ್ನ ಕೋರಿದ ಪ್ರದೇಶಕ್ಕೆ ತಲುಪಬಹುದು. ಯಾವನಲ್ಲಿ ಆತ್ಮವಿಶ್ವಾಸ ಮತ್ತು ಸಾಹಸವಿದ್ದರೆ ಅವನನ್ನು ಸೋಲಿಸುವ ಶಕ್ತಿಯು ಪರಿಸ್ಥಿತಿಯಲ್ಲಿಲ್ಲವು. ಪರಿಸ್ಥಿತಿಯ ಮೇಲೆ ವಿಜಯವನ್ನು ಹೊಂದುವವನೇ ಧೀರನು. ಪರಿಸ್ಥಿತಿಯು ಒಂದು ಸಾಗರದೋಪಾದಿಯಲ್ಲಿರುವುದು. ಮೇಲ್ಪಟ್ಟ ಮಾತಿನ ಉದಾಹರಣೆಗಾಗಿ ನಾವೊಂದು ದೃಶ್ಯವನ್ನು ಕಲ್ಪಿಸೋಣ.

ಒಂದು ಸಾಗರವು ವಾತದ ಪ್ರಕೋಪದಿಂದ ಅಲ್ಲೋಲಕಲ್ಲೋಲವಾಗಿರುತ್ತದೆ. ಅದರಲ್ಲಿ ಎರಡು ಹಡಗುಗಳು ನಡೆಯುತ್ತಿವೆ. ಆ ಸಮುದ್ರದ ದೃಶ್ಯವಾದರೋ ಭಯಂಕರವಾಗಿರುವುದು. ಅದರಲ್ಲಿ ದೊಡ್ಡ ದೊಡ್ಡ ಮೊಸಳೆಯಾಗಿರುವ ಬಂಡೆಗಳಿರುತ್ತವೆ. ಅಲೆಗಳಾದರೋ ಆನೆಗಳಂತೆ ಮೇಲೆ ಮೇಲೆ ಏಳುತ್ತಿವೆ. ಇಂಥಾ ಸ್ಥಿತಿಯಲ್ಲಿ ಹಡಗುಗಳ ಗತಿ ಏನಾಗಬಹುದೆಂಬುದನ್ನು ಯೋಚಿಸುವುದೂ ಕಷ್ಟಸಾಧ್ಯವಾಗಿರುವುದು. ಕೆಲವರು ಸಮುದ್ರದ ಹೊಟ್ಟೆಯೊಳಗೆ ಹಡಗು ಹೋಗಿರಬಹುದೆಂದು ಯೋಚಿಸಬಹುದು. ಆದರೆ ವಾಚಕರೇ! ಇಷ್ಟು ಬೇಗನೆ ಆ ಪರಿಣಾಮಕ್ಕೆ ತಲುಪುವುದು ಬೇಡ. ಮೊದಲು ಎರಡು ಹಡಗುಗಳಿದ್ದವಷ್ಟೇ. ಅದರಲ್ಲಿ ಒಂದು ಕ್ರುದ್ಧ ಸಮುದ್ರರಾಜನ ಬಲಿಯಾಯಿತು. ಆದರೆ ಮತ್ತೊಂದು ಈಗಲೂ ನಿರ್ಭೀತ ಗತಿಯಿಂದ ತನ್ನ ಅಲೆಗಳನ್ನು ಲೆಕ್ಕಿಸದೆ ನಡೆಯುತ್ತಿದೆ. ಒಂದು ಹಡಗೇಕೆ ಮುಳುಗಿ ಹೋಯಿತು, ಮತ್ತೊಂದೇಕೆ ಈಗಲೂ ತನ್ನ ಗತಿಯಿಂದ ಜೀವಿಯಾಗಿರುವುದೆಂದು ವಾಚಕರು ಯೋಚಿಸಬಹುದು; ಮತ್ತು ಆಶ್ಚರ್ಯ ಕುತೂಹಲಗೊಂಡಿರಬಹುದು. ಮುಳುಗಿಹೋದ ಹಡಗಿನ ಹತ್ತಿರ ತನ್ನ ರಕ್ಷಣೆಗೆ ಅನುಕೂಲವಾದ ಸಲಕರಣೆಗಳಿರಲಿಲ್ಲವು. ಆದುದರಿಂದ ಕ್ರುದ್ಧ ಸಮುದ್ರದ ಬಂಡೆಗಳಿಗಾಹುತಿಯಾಯಿತು. ಮತ್ತೊಂದು ಹಡಗಾದರೋ ತನ್ನ ರಕ್ಷಣೆಯ ಸಾಧನಗಳಿಂದ ಭದ್ರವಾಗಿತ್ತು. ಆದುದರಿಂದ ಬಂಡೆಗಳಿಂದ ಮತ್ತು ಮೇಲಕ್ಕೇಳುವ ತೆರೆಗಳಿಂದ ತನ್ನನ್ನು ರಕ್ಷಿಸಿತು.

ಇದೇ ಪ್ರಕಾರವಾಗಿ ಈ ಸಂಸಾರವು ಒಂದು ಕ್ರುದ್ಧ ಸಾಗರದೋಪಾದಿಯಲ್ಲಿರುವುದು. ಸಮುದ್ರದ ಬಂಡೆ ಮತ್ತು ಉಚ್ಚ ಚಂಚಲ ತರಂಗಗಳೇ ಇಲ್ಲಿನ ವಿಪತ್ತು ಮತ್ತು ಸಮಯವು. ಎರಡು ಹಡಗುಗಳಂತಹ ಮನುಜರು ಈ ಜಗತ್ತಿನಲ್ಲಿರುವರು. ಒಬ್ಬ ಮನುಷ್ಯನು ಮೊದಲನೆಯ ಹಡಗಿನಂತೆ ಆತ್ಮಿಕ ಶಕ್ತಿ ಮತ್ತು ಸಂಕಲ್ಪ ಸಲಕರಣೆಗಳಿಂದ ವಂಚಿತನಾಗಿ, ವಿಪತ್ತಿರೂಪೀ ಬಂಡೆಗಳಿಂದ ಮತ್ತು ಚಪಲ ತರಂಗರೂಪೀ ಮಾಯೆಯಿಂದ ಅಬದ್ಧನಾಗಿ ಪರಿಸ್ಥಿತಿ ಪಯೋಧಿಯಲ್ಲಿ ಮುಳುಗುವನು. ಅವನಲ್ಲಿ ಸ್ವಾಧೀನ ಸ್ವಭಾವವೇ ಇರದು. ಪರಿಸ್ಥಿತಿಯಂತೆಯೇ ಆಗುವುದೆಂಬುದು ಅಂತಹ ಮನುಷ್ಯನ ಕಾರ್ಯಮಂತ್ರವಾಗಿರುವುದು. ಸಂಸಾರ ಸಾಗರದಲ್ಲಿ ಮತ್ತೊಬ್ಬ ಮಾನವ ರೂಪೀ ದೇವತೆಯಿರುತ್ತಾನೆ. ಅವನಾರು? ಅವನೇ ಎರಡನೆಯ ಹಡಗಿನ ಅನುಯಾಯಿಯು. ಸಂಸಾರದ ಚಪಲ ಮಾಯೆ ಮತ್ತು ಶತ್ರುಗಳನ್ನು ಎದುರಿಸಿ ವಿಜಯವನ್ನು ಹೊಂದುವವನೂ ಅವನೇ; ಅವನೇ ಧಿಗ್ವಿಜಯಿಯೆನಿಸುವನು. ಅವನೇ ಸಂಸಾರದ ಮಾರ್ಗದರ್ಶಕನಾಗುವನು. ಅವನೇ ಯುದ್ಧ ಮಾಡದೆ ವಿಜಯವನ್ನು ಹೊಂದು[illegible] ದಿಗ್ವಿಜಯೀ ಸಾಮ್ರಾಟನಾಗುವನು. ಅವನೇ ತನ್ನ ಆತ್ಮಿಕ ಶಕ್ತಿಯೆಂಬ ಸಲಕರಣೆಯಿಂದ, ಈ ಪರಿಸ್ಥಿತಿ ಪಯೋಧಿಯಿಂದ ಪಾರಾಗುವನು.

[illegible] ವೇಳೆಯಾಗಿತ್ತು. ಭಗವಾನ್ ಭುವನಭಾಸ್ಕರನು ತನ್ನ ಪ್ರಿಯತಮೆಯಾದ ಪಶ್ಚಿಮೆಗೆ ಪ್ರೇಮಪೂರ್ವಕ[illegible] ಅರುಣ ವರ್ಣದ ಸೀರೆಯನ್ನುಡಿಸಿ, ತನ್ನ ಪ್ರೇಯಸಿಯಲ್ಲಿ ತಲ್ಲೀನನಾಗಿದ್ದನು. ತನ್ನ ಸೇನಾನಾಯಕನ ಪರಾಜಯವನ್ನು ನೋಡಿ, ಪರಾಜಯ[illegible] ಮಂತ್ರವನ್ನು ಜಪಿಸುವ ಸೈನಿಕರೋಪಾದಿಯಲ್ಲಿ, ಪಕ್ಷಿಗಳು ಸಮಾನವು, ತಮ್ಮ ಮುಂಬರುವ ಸಂತಾನದ ಪತನವನ್ನು ವಿಲೋಕಿಸಿ, ಚಿಲಿಪಿಲಿ ಆರ್ತನಾದವನ್ನು ಮಾಡುತ್ತಾ ತಮ್ಮ ಗೂಡುಗಳನ್ನು ಸೇರುತ್ತಿದ್ದವು.

ಇಂತಹ ಸಮಯದಲ್ಲಿ ಭಾರತದ ಮಸ್ತಕವಾದ ಹಿಮಾಲಯದ ಉನ್ನತ ಶೈಲಶೃಂಗಗಳ ಮೇಲಿರುವ ಹಿಮಗಳ ಮೇಲೆ, ಅನೇಕ ಪ್ರಭಾಕರನ ಪ್ರಭೆಯು ಬಿದ್ದು, ವಿವಿಧ ವರ್ಣದ ರತ್ನಗಳ ಪರ್ವತಗಳೋಪಾದಿಯಲ್ಲಿ ಕಂಗೊಳಿಸುತ್ತಿದ್ದವು. ಅಲಕನಂದಾ ನದಿಯು ಪರ್ವತಗಳ ಮೇಲಿಂದ ಬೀಳುತ್ತಾ ಚಿತ್ರವಿಚಿತ್ರವಾಗಿ ಹರಿಯುತ್ತಿತ್ತು.

ಇಂತಹ ಸಮಯದಲ್ಲಿ ಒಬ್ಬ ಸನ್ಯಾಸಿಯು, ಪ್ರಕೃತಿಯ ಲಾವಣ್ಯವನ್ನೀಕ್ಷಿಸದೆ ತ್ವರಿತಗತಿಯಿಂದ ನಡೆಯುತ್ತಿದ್ದನು. ಅವನ ನಡತೆಯನ್ನು ಮತ್ತು ಅವನ ಮುಖದಿಂದ ಹೊರಡುವ ಜ್ಯೋತಿಯನ್ನು ನೋಡುವಾಗ ಆ ಸನ್ಯಾಸಿಯು ಸಾಧಾರಣನಲ್ಲವೆಂದು ತೋರುತ್ತಿತ್ತು. ಅವನ ದೇಹವು ಹೃಷ್ಟಪುಷ್ಟವಾಗಿತ್ತು. ಆದರೆ ಅವನ ಶರೀರದ ಮೇಲೆ ಕೇವಲ ಲಂಗೋಟಿ ಇತ್ತು. ಆದುದರಿಂದ ಆ ಹಿಮಪಾತ್ರೆಯ [illegible] ಪ್ರದೇಶದ ಅತಿಶೀತಲ ಸಮೀರವು ಅವನ ದುಂಡಗಾದ ದೇಹವನ್ನು ಬಾಣಗಳೋಪಾದಿಯಲ್ಲಿ ಚುಚ್ಚಲಾರಂಭಿಸಿತು. ಕ್ಷಣ ಕ್ಷಣಕ್ಕೆ ಹೆಚ್ಚುತ್ತಿರುವ ಶೀತವನ್ನು ಸಹಿಸಲಸಮರ್ಥನಾದನು. ಚಳಿಯಿಂದ ಅವನ ಗಂಟಲು ಕಟ್ಟಿಹೋಗಿತ್ತು. ಅವನಲ್ಲಿ ಯಾವ ಜಠರಾಗ್ನಿಯೂ ತನ್ನ ತಾಪಮಾನವನ್ನು ಒಡಬಡಿಸುತ್ತಿತ್ತು. ಅಂತಹ ದೆಸೆಯಲ್ಲಿ ಹಸಿವು ಬಾಯಾರಿಕೆಯಿಂದ ಬಳಲಿದ ಮನಸ್ಸಿನಿಂದ ಆ ತರುಣ ಸನ್ಯಾಸಿಯು ಸ್ವಲ್ಪ ಹಿಮದ ಮಂಜುಗಡ್ಡೆ [illegible] ಸವಿದನು. ಆದರೆ ಅವು [illegible] ಪ್ರಯೋಜನವಾಗಲಿಲ್ಲ. ಅಂತಹ [illegible] ಆ ಸನ್ಯಾಸಿಯು ಹತಾಶನಾಗಲಿಲ್ಲ. ಆದರೆ ಅವನ್ಯಾವ ಉದ್ದೇಶಕ್ಕಾಗಿ ಬಂದನೋ, ಅದು ನೆರವೇರಲಿಲ್ಲ. ಕಟ್ಟಕಡೆಗೆ ಅವನು ಹಿಂದಿರುಗಲು ಯೋಚಿಸಿದನು. ಆದರೆ ಹಿಂದಿನ ಮಾರ್ಗವು ಹಿಮದಿಂದ ಬಹಳ ಬಿಕ್ಕಟ್ಟಾಗಿತ್ತು. ಆದುದರಿಂದ ಅವನು ಮುಂದುವರಿಯುವುದರಲ್ಲಿಯೇ ತನ್ನ ಕಲ್ಯಾಣವೆಂದು ಭಾವಿಸಿದನು. ಆದರೆ ಮುಂದಿನ ಮಾರ್ಗವು ಹಿಂದಿನದಕ್ಕಿಂತಲೂ ಬಿಕ್ಕಟ್ಟಾಗಿತ್ತು. ಅವನ ಮುಂದೆ ಅಲಕನಂದಾ ನದಿಯು ಗಂಭೀರ ಗತಿಯಿಂದ ಹರಿಯುತ್ತಿತ್ತು. ಅದರ ಅಗಲವು ಮೂರು ಗಜಗಳ ವರೆಗಿತ್ತು. ಮತ್ತು ಸಣ್ಣ ಸಣ್ಣ ಮೊನೆಯಾಗಿರುವ ಹಿಮಖಂಡಗಳಿಂದ ತುಂಬಿತ್ತು. ಆದರೂ ಆ ಧೀರನು ಧೈರ್ಯದಿಂದ ನದಿಯನ್ನು ದಾಟಲು ನಿಶ್ಚಯಿಸಿದನು. ಇಳಿಯುವಾಗ ಅವನ ಅಂಗಾಲು ಮೊನೆಯಾಗಿರುವ ಹಿಮಖಂಡಗಳಿಂದ ಗಾಯವಾಗಿ ಬಿಟ್ಟವು. ದೇಹದ ನಾನಾ ಸ್ಥಾನಗಳಲ್ಲಿ ರಕ್ತಸ್ರಾವವಾಗಲಾರಂಭಿಸಿತು. ಆ ಸನ್ಯಾಸಿಯ ಶರೀರವು ಚಳಿಯ ವೃದ್ಧಿಯಿಂದ ಮರಗಟ್ಟಲಾರಂಭಿಸಿತು. ಅವನು ಮೂರ್ಛಿತನಾಗಿ ಬೀಳುವವರಲ್ಲಿದ್ದನು. ಆದರೆ ಅವನು [illegible] ಚೈತನ್ಯದ ಬೆಳಕು ಬೆಳಗಿತು. ಅವನು ಎಚ್ಚರಗೊಂಡನು. ತಕ್ಷಣವೇ ಅವನು 'ಈಗ ನಾನು ಬಿದ್ದು ಬಿಟ್ಟರೆ ಮತ್ತೇಳಲಾರೆನು. ನನ್ನ ಸಂಕಲ್ಪವೂ ಇಲ್ಲಿಗೆ ಮುಗಿಯುವುದು. ಉದ್ದೇಶದಿಂದ ವಿಮುಖನಾಗುವವನೇ ಕಾಪುರುಷನು' ಎಂದು ವಿಚಾರಿಸಿ ಆ ಧೀರ ಸನ್ಯಾಸಿಯು ಆ ನದಿಯನ್ನು ಸಾಹಸದಿಂದ ದಾಟಿದನು.

ಈ ಮಹಾತ್ಮನ, ಈ ದೇವತಾರೂಪೀ ಮಾನವನ ನಾಮವನ್ನರಿಯಲು ಎಲ್ಲರೂ ಹಾತೊರೆಯಬಹುದು. ಈ ಮಹಾತ್ಮನ ಶುಭ ದಿವ್ಯನಾಮವು ದಯಾನಂದ ಸರಸ್ವತಿಯೆಂದು. ಹಿಮಾಲಯ ಪರ್ವತಗಳಲ್ಲಿ ದೊಡ್ಡ ದೊಡ್ಡ ಯೋಗಿಗಳಿರುತ್ತಾರೆಂದು ಕೇಳಿ, ಅವರಿಂದ ಯೋಗವಿದ್ಯೆಯನ್ನು ಕಲಿಯುವುದಕ್ಕಾಗಿ ಈ ವಿಧದ ಕಷ್ಟಗಳಿಂದ ಪೀಡಿತನಾದನು. ಈ ಪ್ರಕಾರವಾದ ಪೀಡೆಗಳಿಂದ ಪೀಡಿತನಾಗಿಯೇ ಒಂದು ದಿನ ಇವನು ಜಗತ್ತಿನ ಮುಂದೆ ಮಹರ್ಷಿ ದಯಾನಂದನೆಂಬ ನಾಮದಿಂದ ಪ್ರಸಿದ್ಧಿಗೊಂಡನು.

ಈ ಅಖಂಡ ಪ್ರತಾಪಶಾಲಿಯಾದ ಸನ್ಯಾಸಿಗೆ ಜಗದ್ವಂದ್ಯನಾಗುವುದಕ್ಕೆ, ಈಶ್ವರನ ಅಮೃತ ಪುತ್ರನಾಗುವುದಕ್ಕೆ, ತನ್ನ ಉದ್ದೇಶದಲ್ಲಿ ದೃಢನಾಗುವುದಕ್ಕೆ ಮತ್ತೆಷ್ಟೋ ಕ್ಲೇಶಗಳಿಂದ ಕ್ಲೇಶಿತನಾಗಬೇಕಾಗಿ ಬಂತು.

ಈ ಮಹಾತ್ಮನ ಮುಂದೆ ಇಡೀ ಜಗತ್ತು ಪವನ ಪ್ರತಿಪಕ್ಷ ಪಯೋಧಿಯಂತೆ ಗರ್ಜಿಸುತ್ತಿತ್ತು. ಅವನು ಏಕಾಕಿಯಾಗಿ ತಾಯಿ ತಂದೆ ಬಂಧು ಬಳಗವನ್ನು ಮೊದಲೇ ತೊರೆದಿದ್ದನು. ಆದುದರಿಂದ ಈಗ ಅವನ ಹತ್ತಿರ ಏನಿದ್ದವು? (೧) ಮಹಾ ಪ್ರತಿಭಾ ಶಾಲಿನೀ ಆತ್ಮ ಶಕ್ತಿ, (೨) ಅವನಾತ ವಿದ್ಯಾ [illegible]ನ. ಇವುಗಳ ಸಹಾಯದಿಂದ ಆ ಋಷಿವರ್ಯನ '[illegible]ಈ ಜಗತ್ತನ್ನು ಎದುರಿಸಲು ಸಮರ್ಥನಾದನು. ಪದೇ ಪದೇ ಆಧ್ಯಾತ್ಮ ಶಾಲಿನಿಯನ್ನು ತನ್ನ ದೃಢ ಸಂಕಲ್ಪದಿಂದ ವಿಚಲಿತನನ್ನಾಗಿ ಮಾಡುವುದಕ್ಕೆ ವಿವಿಧ ಪ್ರಕಾರವಾದ ವಿಘ್ನ ಮತ್ತು ಪ್ರಲೋಭನೆಗಳು ಅಡ್ಡಗಟ್ಟಿದ್ದವು. ಕೆಲವರು ಆ ದೇವಪುರುಷನನ್ನು ಮಾನವ ಪದದಿಂದ ಕೆಳಗಿಳಿಸುವುದಕ್ಕೆ ಘೋರ ಪ್ರಯತ್ನ ಮಾಡಿದರು. ಕೆಲವರು ವಿಷ ಮಿಶ್ರಿತವಾದ ಅನ್ನವನ್ನು ಕೊಟ್ಟರು. ಕೆಲವರು ಆ ಮಹಾತ್ಮನ ಮೇಲೆ ಶಸ್ತ್ರ ಪ್ರಯೋಗಿಸಿ[illegible] ಇದ್ದರು. ಕೆಲವರು ಅವನ ಮೇಲೆ ಕಲ್ಲು ಮತ್ತು ಕೆಸರುಗಳನ್ನು ತೂರಿದರು. ಕೆಲವರು ಅವನನ್ನು ತನ್ನ ಉದ್ದೇಶದಿಂದ ವಿಮುಖನಾದರೆ, ಎಂದರೆ ಮೂರ್ತಿ ಪೂಜೆಯ ಖಂಡನೆ[illegible] ಬಿಟ್ಟರೆ, ಆ ಅಚಲ್ಯೇಯೇ ದಯಾನಂದನನ್ನು, ಶಿವ ಅವತಾರವೆಂಬುದಾಗಿ ಪೂಜಿಸುವೆವೆಂದರು. ಕೆಲವರು—ನೀವು ಮೂರ್ತಿಪೂಜೆಯ ಖಂಡನೆಯನ್ನು ಬಿಟ್ಟುಬಿಟ್ಟರೆ, ನಿಮ್ಮನ್ನು [illegible] ಮಠಕ್ಕೆ ಪುರೋಹಿತನನ್ನಾಗಿ ಮಾಡಿ ವಿಪುಲ ಐಶ್ವರ್ಯವನ್ನು ಕೊಡುವೆವೆಂದೂ ನಾನಾ ಪ್ರಕಾರದ ಪ್ರಲೋಭನೆಗಳನ್ನು ಒಡ್ಡಿದರು. ಆದರೆ ಆ ಶೀಲಸ್ವಾಮಿಯು ತನ್ನ ಪಥದಿಂದ ವಿಚಲಿತನಾಗಲಿಲ್ಲ. ಅವನ ಪ್ರಲೋಭನೆಗಳನ್ನು ಎದುರಿಸಿ, ಅವುಗಳಿಗೆ ಉತ್ತರವು ಸಂಸಾರದ ಸತ್ಯದ ಇತಿಹಾಸದಲ್ಲಿ ಸ್ವರ್ಣಾಕ್ಷರಗಳಲ್ಲಿ ಅಂಕಿತವಾಗುವುದು. ಅದೇನೆಂದರೆ:—'ನನಗೆ ಧನದ ಲೋಭವಿಲ್ಲ. ನನಗೆ ಅದರ ಜರೂರಿಯಿದ್ದರೆ, ನನ್ನ ಜನಕನ ಪ್ರಚುರ ಸಂಪತ್ತಿಯನ್ನು ತೊರೆಯುತ್ತಿರಲಿಲ್ಲ. ನನ್ನ ಮುಂದೆ ಈ ಸಂಸಾರದ ಧನವು ಧೂಳಿಗಿಂತಲೂ ಕಡೆಯಾಗಿರುವುದು. ನನಗೆ ವಿಘ್ನಗಳ ಭಯವಿಲ್ಲ. ನಾನು ಕೇವಲ ಪರಮೇಶ್ವರನಿಗೆ ಹೆದರುತ್ತೇನೆ.'

ಅವನನ್ನು ಯಾರಾದರೂ ಕೊಲ್ಲುವುದಕ್ಕೆ ಹೆದರಿಸಿದರೆ ಅವನ್ಯಾವ ಉತ್ತರವನ್ನೀಯುತ್ತಿದ್ದನೆಂದರೆ—ನನಗೆ ಮೃತ್ಯುವಿನ ಹೆದರಿಕೆ ಇಲ್ಲ, ನೀವು ನನ್ನ ಶರೀರದ ಮೇಲೆ ಅತ್ಯಾಚಾರವನ್ನು ನಡೆಯಿಸಬಹುದು. ಆದರೆ ನನ್ನ ಆತ್ಮಿಕ ಬಲವನ್ನು ಸೋಲಿಸುವ ಶಕ್ತಿಯು ಬೇರೆ ಯಾರಲ್ಲಿಯೂ ಇಲ್ಲ.

ನೈನಂ ಛಿಂದಂತಿ ಶಸ್ತ್ರಾಣಿ, ನೈನಂ ದಹತಿ ಪಾವಕಃ

ನಚೈನಂ ಕ್ಲೇದಯಂತ್ಯಾಪೋ ನ ಶೋಷಯತಿ ಮಾರುತಃ

ಎಂದು ನಿರ್ಭಯವಾಗಿ ಉತ್ತರವನ್ನೀಯುತ್ತಿದ್ದರು.

ಆದುದರಿಂದ ಸಂಸಾರವನ್ನು ತನ್ನ ಕಡೆಗೂ, ತಾನು ಸಂಸಾರದ ಕಡೆಗೂ ತಿರುಗಿಸುವುದಕ್ಕೆ ಮನುಷ್ಯನೇ ಕಾರಣನು. ಪರಿಸ್ಥಿತಿಯು ಮನುಷ್ಯನನ್ನೆಂದಿಗೂ ಬಂಧಿಸಲಾರದು. "The Man is the creator of the circumstances, not the creature of the circumstance." ಎಂದರೆ ಮನುಷ್ಯನು ಪರಿಸ್ಥಿತಿಯ ಸ್ವಾಮಿಯಲ್ಲದೆ ಪರಿಸ್ಥಿತಿಯ ದಾಸನಲ್ಲ.

ಮೊಟ್ಟ ಮೊದಲು ನಮ್ಮ ಮನದಲ್ಲಿ ಆತ್ಮಶಕ್ತಿ ಇರಬೇಕು. ಅದರ ಬಲದಿಂದಲೇ ನಾವು ಇಡೀ ಜಗತ್ತನ್ನು ಜಯಿಸಬಹುದು.

ಮನುಷ್ಯನ ಶರೀರವು ಒಂದು ಗಡಿಯಾರದಂತಿರುವುದು; ಗಡಿಯಾರವು ಒಳಗಡೆಯ ಯಂತ್ರದ ಸಹಾಯದಿಂದ ಹೇಗೆ ಸರಿಯಾಗಿ ನಡೆಯುತ್ತದೋ, ಹಾಗೆಯೇ ಮನುಷ್ಯನ ಶರೀರ ರೂಪೀ ಗಡಿಯಾರವು. ಆತ್ಮ ಶಕ್ತಿಯೆಂಬ ದೇದೀಪ್ಯಮಾನ ಮತ್ತು ಸ್ಫೂರ್ತಿತ ಶಕ್ತಿಯು ತನ್ನ ಪ್ರಭಾವದಿಂದ ಮನುಷ್ಯನನ್ನು ಮನುಷ್ಯತ್ವಕ್ಕೇರಿಸುವುದು. ಆ ಪವಿತ್ರ ಶಕ್ತಿಯು ಹೊರಗಡೆಯ ಸಲಕರಣೆಗಳಿಂದ ಬಾರದು. ಮನುಷ್ಯನನ್ನು ತನ್ನ ನಿಜ ಮುಖ್ಯೋದ್ದೇಶಕ್ಕೆ ತರುವದು. ಕೇವಲ ಇದೇ ಪರಮ ಪ್ರಭಾವ ಶಾಲಿನಿ ಮತ್ತು ಶಕ್ತಿಶಾಲಿನಿಯಾದ ಆತ್ಮಿಕ ಶಕ್ತಿಯು. ಮನುಷ್ಯನು ತನ್ನ ಹೊರಗಡೆಯ ಏಳಿಗೆಯಲ್ಲಿ, ಬೇರೆಯವರ ಸಹಾಯವನ್ನು ಪಡೆಯಬಹುದು. ಒಂದು ವಸ್ತು ವಿಷಯದಲ್ಲಿ ಬೇರೆಯವರ ಸಹಾಯವನ್ನು ಚೆನ್ನಾಗಿ ತೆಗೆದುಕೊಳ್ಳಬಹುದು. ಆದರೆ ನಿಜ ಉನ್ನತಿಯು ಆತ್ಮಶಕ್ತಿಯನ್ನವಲಂಬಿಸಿರುವುದು. ಇದಕ್ಕೆ ಮನುಷ್ಯನಾಗಿ ತನ್ನ ಕಾಲುಗಳ ಮೇಲೆಯೇ ನಿಲ್ಲಬೇಕಾಗಿರುವುದು. ತನ್ನ ಮನಸ್ಸು ಮತ್ತು ಹೃದಯದ ಶಕ್ತಿಯನ್ನೇ ಉಪಯೋಗಿಸಬೇಕಾಗಿರುವುದು. ಗ್ರಂಥ ಮತ್ತು ಉಪದೇಶಗಳು ಕೇವಲ ಸಹಾಯಕರೋಪಾದಿಯಲ್ಲಿರುವವು. ಗಡಿಯಾರದ ಒಳಗಡೆಯ ಮುಖ್ಯ ಯಂತ್ರವು ಕೆಟ್ಟು ಹೋದರೆ ಎಷ್ಟು ಕಾಲದವರೆಗೆ ಹೇಗೆ ನಡೆಯುವುದೋ, ಹಾಗೆಯೇ ಬೇರೆಯವರು ಎಂದರೆ ಬಾಹ್ಯ ಬಳಗ ಮತ್ತು ಇಷ್ಟ ಮಿತ್ರರು ಕೇವಲ ಎಷ್ಟೋ ರೂಪೀ ಉತ್ಸಾಹವನ್ನು ಕೊಡಬಹುದು. ಗಡಿಯಾರವು ಎಷ್ಟೇ ಪ್ರಯತ್ನ ಮಾಡಿದರೂ, ಬೇರೆಯವರ ಸಹಾಯವನ್ನು ಪಡೆಯದೆ ತನಗೆ ತಾನೇ ನಡೆಯುವದೋ, ಹಾಗೆಯೇ ಮನುಷ್ಯನು ಪರಕೀಯರ ಪ್ರೋತ್ಸಾಹಗಳಿಂದ ಪ್ರೋತ್ಸಾಹಿತನಾಗಬಹುದು. ಆದರೆ ತಾನೇ ತನ್ನ ಆತ್ಮಶಕ್ತಿಯ ಪ್ರಕಾಶದಿಂದ ಮುಂದುವರಿಯಬೇಕು.

ಅನುಪಮವಾದ ಆತ್ಮಿಕ ಶಕ್ತಿಯ ಬೆಳಕಿನ ಮುಂದೆ, ಬೇರೆ ಐಹಿಕ ಶಕ್ತಿಗಳು ಮಂಕಾಗುವವು; ಸೂರ್ಯನ ಮುಂದೆ ತಾರಗಳ ಕ್ಷೀಣಜ್ಯೋತಿಯಂತಿರುವವು. ಇದಕ್ಕಾಗಿ ನಮ್ಮ ಮುಂದೆ ವಿಶ್ವಪ್ರಸಿದ್ಧ ಸಾಮ್ರಾಟರಾದ ಮಹಾತ್ಮ ಗಾಂಧಿಯವರೇ ಸಾಕ್ಷಿ. ಇವರ ಶರೀರವಾದರೋ, ಅಸ್ಥಿಪಂಜರದಂತಿರುವುದು. ಆದರೆ ಅವರ ತುಂಬಿರುವ ಶರೀರದಲ್ಲಿ ಇಡೀ ಸಂಸಾರವನ್ನು ತನ್ನ ಮುಂದೆ ತಗ್ಗಿಸುವ ಆತ್ಮ[illegible]

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್.
ಲಿಮಿಟೆಡ್ ಕೋ ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.
(ಸ್ಥಾಪಿತವಾದದ್ದು 1922ರಲ್ಲಿ)

	ರೂ.
ಶೇರ್ ಬಂಡವಾಳ	50,000—0—0
ವಸೂಲಾದ ಶೇರ್ ಬಂಡವಾಳ	27,67[illegible]—0—0
ಜಾಮೀನಿನ ಡಿಪಾಸಿಟು	23,[illegible]—13—[illegible]
ರಿಸರ್ವ್ ಫಂಡು	[illegible]—14—[illegible]

ಈ ಬ್ಯಾಂಕಿನಿಂದ [illegible]

[illegible] ರೂ. 5-0-0 [illegible]

[illegible]

ಪ್ರೆಸಿಡೆಂಟ್ [illegible]

ಕಾರ್ಯದರ್ಶಿ

ಸಿ. ಯಂ. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.
ಮಡಿಕೇರಿ 1—7—1931.

ಸೂಚನೆ.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿದೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿದೆ.

ಏಜೆಂಟರು.

ಕೊಡಗಿನ ದಕ್ಷಿಣ ಭಾಗಗಳಿಗೆ—ಮೆ. ಮಾಚಂಡ ಯಂ. ಬಿದ್ದಪ್ಪನವರು.

ಉತ್ತರ ಕೊಡಗಿಗೆ ಮೆ. ಬಾಳಿಆರ ಪೂವಯ್ಯನವರು,

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು, (ಸಾಬಿಭಂಡಾರ.)
ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಪೂವಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಬಿ. ಮುದ್ದಯ್ಯನವರು,
ಮತ್ತು ಅರಮಣಮಾಡ ಪಿ ಕಾರ್ಯಪ್ಪನವರು,
ಹುದಿಕೇರಿ & ತಿತಿಮತಿ—ಮೆ. ಬಿ. ಮಾದಯ್ಯನವರು,
ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಪೂವಯ್ಯನವರು,

ಸೂಚನೆ.—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರಿಗೂ ಚಂದಾ ಕೊಡಕೂಡದಾಗಿ ಈ ಮೂಲಕ ತಿಳಿಸಲಾಗಿದೆ.

ಮ್ಯಾನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿದೆ.

ಕೆಳಕಂಡ ಸಂಘಗಳ ಮತ್ತು ಹಣಕಾಸು ಭಂಡಾರಗಳ ಪ್ರತಿ [illegible] ಪುಸ್ತಕಗಳು, ರಶೀತಿ ಪುಸ್ತಕಗಳು, [illegible] ಮಡಿಕೇರಿ [illegible]

ಮ್ಯಾನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳ.

[illegible]—52 ಲಕ್ಷ ರೂ. [illegible]—170 ಲಕ್ಷ ರೂ.
[illegible]—3281 ಜನರಿಗೆ 81 ಲಕ್ಷ ರೂ. [illegible]—8023 ಜನರಿಗೆ 3[illegible] ಲಕ್ಷ ರೂ.
[illegible] ಕೋಟಿ ರೂ.

[illegible]

ಓರಿಯಂಟಲ್ ಕಂಪೆನಿಯು [illegible]

[illegible]

ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್ ಬೆಂಗಳೂರು
ಅಥವಾ ಇನ್ಸ್‌ಪೆಕ್ಟರೇಟ್ ಆಫೀಸು, ಮಡಿಕೇರಿ.

ಅಥವಾ ಕಂಪೆನಿಯ ಈ ಕೆಳಗಿನ [illegible] ಆಫೀಸುಗಳವರು [illegible]

ಆಗ್ರಾ	ಕಲ್ಕತ್ತಾ	ಕೊಯಿಂಬತ್ತೂರು	ನೈರೋಬಿ	ರಂಗೂನು
ಅಹ್ಮದಾಬಾದು	ಕೊಲಂಬೊ	ಜಬಲ್ಪೋರ್	ನಾಗಪುರ	ರಾವಲ್ಪಿಂಡಿ
ಅಜ್ಮೀರ್	ಡಕ್ಕಾ	ಲಾಹೋರ್	ಪಾಟ್ನಾ	ಸಿಂಗಪ್ಪೂರು
ಅಲಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	[illegible]	ಮಂಡಲೆ	ರಾಯಪುರ	ತಿರುವೇಂದ್ರಮ್
ಭೋಪಾಲ್	ಕರಾಚಿ	ಮಡಿಕೇರಿ	ರಾಂಚಿ	ವಿಶಾಖಪಟ್ಟಣ [52—41

ಸಣ್ಣ ಹುಡುಗರ ಸಲುವಾಗಿ

ದೋಂಗರೆ

ಇವರ

ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ
ಮಕ್ಕಳ ಶಕ್ತಿಯೂ, ತೂಕವೂ ಬೆಳೆದು
ಸವಿ ಮತ್ತು [illegible] ಮಧುರವಾಗಿ
ರುವುದರಿಂದ ಮಕ್ಕಳು ಪ್ರೀತಿ
ಯಿಂದ ತೆಗೆದುಕೊಳ್ಳುತ್ತಾರೆ.

ಕ್ರಯ: ಬಾಟ್ಲಿ 1 ಕ್ಕೆ 14 ಆಣೆ. [illegible] 9 ಆಣೆ.

ಕೆ. ಟಿ. ದೋಂಗರೆ ಕಂಪೆನಿ,

52—48 ಗಿರ್ಗಾಂವ್, ಮುಂಬಯಿ.

[illegible]



ಕೋವಿಗಳು, ಕತ್ತಿಗಳು, [illegible] ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBH[illegible] & SONS LTD.,
Largest importers of Firearms and Ammunition
Cheapest priced firm in India,
26—14 210 Abdul Rehiman street, BOMBAY.

Printed & published by P. I. Belliappa at "Kodagu" Press, Mercara
for "Kodagu" Ltd

Reg. No. M. 1550.
if not delivered please return to "KODAGU" OFFICE MERCARA.

ಕೊಡಗು.

ವಾರ್ಷಿಕ ಚಂದಾ ರೂ. ೩—೪—೦.

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೨ || ಮಡಿಕೇರಿ, ಸನ್ ೧೯೩೩ನೇ ಇಸವಿ ಡಿಸೆಂಬರ್ ತಾರೀಖು ೨೨ ನೇ ಶುಕ್ರವಾರ. || ಸಂಚಿಕೆ ೨೯

SARI-PIN.

BRACELETS

NECKCHAINS.

EAR-RINGS (Thodus)
Cut-rubys Rs. 25 to 50
With diamond in centre Rs. 50 to 120

Gold Rs. 10
Set rubys forming any letter Rs. 12

NOSE-RINGS.
Diamond in small size of best quality Rs. 35 & upwards according to size.

MARRIAGE PRESENTATIONS

Attractive and inexpensive articles ready in stock. Prompt execution. Details on enquiry free with catalogue. Numerous customers in Coorg thoroughly satisfied with reliable service. Testimonials pouring in. Silver Guindys, Photo lockets, Diamond nose screws, ear-rings, etc., etc., etc. in all pieces. Very attractive. Prices most moderate.

Estimates free on enquiry.

Designs free on enquiry.

Telegrams: 'PRECIOUS.'

Telephone 3145.

CATALOGUE ON ENQUIRY.

V. Subramaniajer Jeweller.

Post Box 423, Triplicane, P.O., MADRAS.

52—4



26—25

ಜನರಲ್ ಅಶ್ಯೂರೆನ್ಸ್ ಸೊಸೈಟಿ.

ಅಜಮೀರ್.

ನಮ್ಮ ಅಭಿವೃದ್ಧಿಯ ಪಟ್ಟಿಯೇ ನಮ್ಮ ಅಭಿವೃದ್ಧಿಯನ್ನು ವ್ಯಕ್ತಗೊಳಿಸುತ್ತದೆ.

ವರ್ಷ	ಹೊಸ ವ್ಯಾಪಾರ	ಹೆಚ್ಚು ಸಂಗ್ರಹ	ಖರ್ಚಿನ ಪ್ರಮಾಣ ಶೇಕಡ
1911	46,248	49,442	82.9
1921	2,92,627	6,57,350	43.2
1931	12,50,000	4,00,000	28.2

ಬೋನಸ್ಸು.

೧೯೩೦ನೇ ಇಸವಿ ... ಪಾಲಿಸಿಗಳ ಮೇಲೆ ವರ್ಷ ಒಂದಕ್ಕೆ ಶೇಕಡ 22½

ಚೆನ್ನಾಗಿ ಕೆಲಸಮಾಡಿ ಅಭಿವೃದ್ಧಿ ಸ್ಥಿತಿಯಲ್ಲಿರುವ ಈ ಸೊಸೈಟಿಯಲ್ಲಿ ವಿಮೆ ಮಾಡಿ ಕಡಿಮೆ ಪ್ರೀಮಿಯಂ ಪಾವತಿ ಮಾಡುವ ಸೌಲಭ್ಯ ಹೊಂದಿ ಅಥವಾ ಈ ಕಂಪೆನಿಯ ಪರವಾಗಿ ಕೆಲಸಮಾಡಿ ಉತ್ತಮ ಕಮಿಶನ್ ಹಣದ ಪ್ರಯೋಜನ ಹೊಂದಿ.

ಹೆಚ್ಚು ವಿಚಾರಗಳಿಗೆ ಈ ವಿಳಾಸಕ್ಕೆ ಬರೆಯಿರಿ:—

ಎ. ರಾಮಚಂದ್ರರಾವ್,
ಸುಪರಿಂಟೆಂಡೆಂಟ್,
ಮಿಂಟೋ ಆಸ್ಪತ್ರೆ ಬಳಿ,

52—34

EMPIRE OF INDIA
Life Assurance Company, Limited.

Established 1897.

INTERIM BONUS on Policies becoming claims before 1st March 1934 INCREASED TO

Rs. 16 per annum per Rs. 1000/- Assured on Whole Life Assurances

and

Rs. 14 per annum per Rs. 1000/- Assured on Endowment Assurances.

Head Office:— Empire of India Life Building, Bombay

Branch Office:— 152/3, Commercial Street, Bangalore.

52—11

ಕರ್ನಾಟಕ ಸಾಹಿತ್ಯ ಪರಿಷತ್ತಿನ ೧೮ನೆಯ ಅಧಿವೇಶನ ಮಡಿಕೇರಿ.

ಪ್ರಕಟನೆ ೩.

ಈ ಸಾಹಿತ್ಯ ಅಧಿವೇಶನವು ಮಡಿಕೇರಿಯಲ್ಲಿ ತಾ. 28—12—32 ರಲ್ಲು ನಡೆಯುವದಾಗಿ ನಿಶ್ಚಯಿಸಲಾಗಿದೆ. ಈ ಸಂದರ್ಭದಲ್ಲಿ ಕೊಡಗು ದೇಶದ ಚರಿತ್ರೆ, ಜನಜೀವನ, ಸಾಹಿತ್ಯ, ಕಲಾ ಪ್ರದರ್ಶನವೊಂದನ್ನು ನಡೆಸಲು ನಿಶ್ಚಯಿಸಿರುತ್ತದೆ. ಈ ಕಾರ್ಯದಲ್ಲಿ ಕನ್ನಡ ಪತ್ರಿಕೆಗಳ ಮತ್ತು ಉಳಿದ ಪುಸ್ತಕಗಳ ಪ್ರದರ್ಶನ ಶಾಲೆಯೂ ಇರಲಿರುತ್ತದೆ. ಅದು ಕಾರಣ ಬರಹಗಾರರೂ, ಪುಸ್ತಕ, ಪತ್ರ ಸಂಪಾದಕರೂ ತಮ್ಮ ಪುಸ್ತಕ ಪತ್ರಿಕೆಗಳ ಪ್ರತಿಗಳನ್ನು ಪ್ರದರ್ಶನದ ಕಾರ್ಯದರ್ಶಿ ಮೆ. ಬಿ. ಎಸ್. ಕೃಷ್ಣಯ್ಯರ್, ಗವರ್ನ್ಮೆಂಟ್ ಹೈಸ್ಕೂಲ್, ಮಡಿಕೇರಿ. ಇವರ ವಿಳಾಸಕ್ಕೆ ಕಳುಹಿಸಿಕೊಡಬೇಕಾಗಿ ಕೋರಲಾಗಿದೆ. ಕನ್ನಡ ವ್ಯಾಸಂಗವಾದ ಕೊಡಗಿನಲ್ಲಿ ಬರಹಗಾರರಿಗೆ ಇದರ ಕೈಲಿ ಒಳ್ಳೆಯ ಪ್ರೋತ್ಸಾಹ ಬೇಕೆಂದಿದೆ.

ಪ್ರಕಟನೆ ೪.

ಕೊಡಗು ದೇಶದ ಸವುಸ್ತರಲ್ಲಿ ವಿಜ್ಞಾಪನೆ.

ಕರ್ನಾಟಕ ಸಾಹಿತ್ಯ ಪರಿಷತ್ತಿನ ವೇಳೆ ಮಡಿಕೇರಿಯಲ್ಲಿ ಕೊಡಗು ದೇಶದ ಚರಿತ್ರೆ, ಜನಜೀವನ, ಸಾಹಿತ್ಯ ಕಲಾಪ್ರದರ್ಶನವೊಂದನ್ನು ಏರ್ಪಡಿಸಬೇಕೆಂದು ಸ್ವಾಗತ ಸಮಿತಿಯವರು ನಿಶ್ಚಯಿಸಿರುವರು. ಈಗಾಗಲೇ ಹಲವು ಮಹನೀಯರು ಇದಕ್ಕೆ ತಮ್ಮಲ್ಲಿರುವ ಅಮೂಲ್ಯ ವಸ್ತುಗಳನ್ನು ಕೊಟ್ಟು ಸಹಾಯ ಮಾಡುತ್ತಿದ್ದರೂ ದೇಶದ ಸವುಸ್ತರೂ ಸಂಗಡ ಅದನ್ನು ಇನ್ನೂ ಮುಖ್ಯವಾಗಿ ಮಾಡಬೇಕೆಂದು ಕೋರುತ್ತೇವೆ. ಪ್ರದರ್ಶನಕ್ಕೆ ಕಳುಹಿಸುವ ವಸ್ತುಗಳೆಂದರೆ,

1. ತಾಳೆಪತ್ರದ (ಓಲೆಗರಿಯ) ಪುಸ್ತಕಗಳು (ಕನ್ನಡ ಅಕ್ಷರದವು.)
2. ಹಳೆಯ ಬರವಣಿಗೆಯ ಪಟಗಳು.
3. ರಾಜರ ಕಾಲಕ್ಕೆ ಸಂಬಂಧಿಸಿದ, ಚಿತ್ರ, ಬರವಣಿಗೆ ಮತ್ತು ಇತರ ಸಾಮಾನುಗಳು (ಒಡವೆ, ಕೋವಿ, ಖಡ್ಗಗಳು ಮೊದಲಾದವು.)
4. ರಾಜರ ಕಾಲದ ಛತ್ರ, ಚಾಮರ, ದರ್ಬಾರು ಅಂಗಿ, ದುಪಟಲು, ಕಪ್ಪಣದ ಕವಚ, ಗುರಾಣಿ ಇವುಗಳು.
5. ಹಳೆ ಕಾಲದ ಶಾಸನ, ನಿರೂಪ ಇತ್ಯಾದಿಗಳು.
6. ಕೊಡಗು ದೇಶದ್ದೇ ಬಿಡಿಸಿರತಕ್ಕದಾದ ಚಿತ್ರಗಳು, ಮಾಡಿರತಕ್ಕದಾದ ಕೆತ್ತನೆಯ ಕೆಲಸ, ವಿಗ್ರಹ ಇತ್ಯಾದಿಗಳು.

ಇವನ್ನು ಪ್ರದರ್ಶನದ ಕಾರ್ಯದರ್ಶಿ ಮೆ. ಬಿ. ಎಸ್. ಕೃಷ್ಣಯ್ಯರ್, ಗವರ್ನ್ಮೆಂಟ್ ಹೈಸ್ಕೂಲ್ ಮಡಿಕೇರಿ, ಇವರ ವಿಳಾಸಕ್ಕೆ ಕಳುಹಿಸಿಕೊಡಬೇಕು. ಕಳುಹಿಸಿಕೊಡಲು ಅನುಕೂಲವಿಲ್ಲದಿದ್ದಲ್ಲಿ ಸಮಿತಿಯವರಿಗೆ ತಿಳಿಸಲು; ಅದನ್ನು ತರಿಸಿಕೊಳ್ಳುವ ಏರ್ಪಾಡನ್ನು ಅವರು ಮಾಡುವರು. ಪ್ರದರ್ಶನಕ್ಕಿಟ್ಟ ವಸ್ತುಗಳ ಭದ್ರತೆ, ಜವಾಬ್ದಾರಿ ಎಲ್ಲವೂ ಸಮಿತಿಯವರಿಗಿರುವವು. ಅದು ಕಾರಣ ಕೊಡಗು ದೇಶದಲ್ಲಿ ಇದೇ ಮೊದಲಾಗಿ ಏರ್ಪಡಿಸಿರುವ ಈ ಕಾರ್ಯಕ್ಕೆ ಕೊಡಗಿನ ಸವುಸ್ತರೂ, ಮುಖ್ಯವಾಗಿ ವಿದ್ಯಾವಂತ ಮಹಾಶಯರೂ ಸಹಕರಿಸಿ ಪ್ರದರ್ಶನವನ್ನು ಯಶಸ್ವಿಯಾಗಿ ಮಾಡಬೇಕಾಗಿ ಕೋರಿದೆ.

ಸ್ವಾಗತ ಮಂಡಲಿ, ಜಂಟಿ ಕಾರ್ಯದರ್ಶಿಗಳು.
ಕ. ಸಾ. ಪರಿಷತ್ತು. ೧—೧೨—೧೯೩೨.

ಪತ್ರವ್ಯವಹಾರ.

[ವಾಚಕರಿಂದ ಬರುವ ಅಭಿಪ್ರಾಯಗಳಿಗೆ ಪತ್ರಿಕೆ ಜವಾಬ್ದಾರರಲ್ಲ. ಸಂ.]

ಬಾಳೆಗೆ ತಿರಸ್ಕಾರ.

ಅಯ್ಯಾ,

ಕಳೆದ 5 ವರ್ಷಗಳಿಂದ ಬೆಟ್ಟತ್ತೂರಿನವರಿಗೂ, ಮನೆಯವರಿಗೂ ನಡೆಯುತ್ತಿರುವ ವಿವಾದದಲ್ಲಿ ಕನ್ನ ಕುಟುಂಬಕ್ಕೆ ಸೇರಿದ ಬಾಳೆಯಿಂದ ತೀರ್ಮಾನಿಸಿಕೊಳ್ಳುವದಾಗಿ, ಮೆ. ಮನೆಯವರು ಜೆ. ಮುಟ್ಟಯ್ಯನವರ ನಾಡದವರಿಗೆ ಭಯವಿತ್ತು ಪೋಲೀ, ಉಭಯ ಕಡೆಯವರು ಸೇರಬೇಕೆಂದು ನಿಶ್ಚಯಿಸಿಕೊಂಡಿದ್ದ ದಿವಸ, ಗೊತ್ತುಮಾಡಿದ ಸ್ಥಳಕ್ಕೆ ಸಾಯಂಕಾಲದ ವರೆಗೆ ಕಾದಾಗ್ಯೂ ಕೊಡ ಮೆ. ಮುಟ್ಟಯ್ಯನವರಾಗಲೀ ಯಾ ಕುಟುಂಬಕ್ಕಾಗಲೀ ಯಾ ಕೊಳ್ಳಬಹುದೆಂಬ ಬಾಳೆಯೂ, ಕಾರಣ ತಿಳಿಸದೆಯೂ ಹೊರದ ಅದಿಂದ ನಾಡಿನವರು ಮುಂದಿನ ಕಾರ್ಯವನ್ನು ತೀರ್ಮಾನಿಸಿಕೊಳ್ಳ ಬರಬೇಕಾದರೆ ಕಷ್ಟವಾಗುತ್ತಾ ಬಂದು ದೊಡ್ಡವರಿಗೆ ಮನೆ ಸೇರಿಸುವುದು ಕುಂದಾ ಕಷ್ಟಸಾಧ್ಯವಾಯಿತು.

ನಡೆಯುವ ವಿದ್ಯಮಾನಗಳನ್ನೆಲ್ಲ ಚೆನ್ನಾಗಿ ಪರಿಶೀಲಿಸಿದರೆ ಸತ್ಯಕ್ಕೂ, ನ್ಯಾಯಕ್ಕೂ, ಧರ್ಮಕ್ಕೂ ವಿರುದ್ಧವಾಗಿದ ಕಾಡಿಯೂ ಆದ ನಾಡಿನ ನಮ್ಮಲ್ಲಿಯನ್ನು ಕಾಪಾಡುವುದು ಕಷ್ಟ. ನಾಡಿನೊಳಗೂ, ಅವುಗಳಿಗೆ ವಿರುದ್ಧವಾದ ಬಾಳೆಯೇ ಹೊಂದ ಸಾಧ್ಯವೆಂತಲೂ ಬದ್ಧಿವಂತರೂ, ನ್ಯಾಯವಾದಿಗಳು ಛಲವನ್ನು ಹಿಡಿದು ಮುಂದಿನ ದೇಶವು ಹಲವು ಕೆಲವರಲ್ಲಿ ಹೊಸ ಹೊಸ ಕ್ರಮಗಳು ಬಾರತ್ತವೆ. ಇದರಿಂದ ಮುಂದೆ ತಕ್ಕಂತೆ ನಡೆದು ಕೊಂಡು ಕಾರಿಯರಾಜ್ಯವಾಗಿದೆ.

ಶಾಂತಿಪ್ರಿಯ.

ಶ್ರೀಮಂಗಲ ನಾಡಿನ ಪತ್ರ.

ಅಯ್ಯಾ,

ತಾರೀಖು 25—11—32 ರ ನಿಮ್ಮ ಪತ್ರಿಕೆಯಲ್ಲಿ ಪೊನ್ನಂಪೇಟೆಯ ಪತ್ರ ಬರೆದ ಸುದ್ದಿಗಾರರಿಗೆ ಮನಸ್ತಾಪವಾದಂತೆ ತಿಳಿಯಲಿಲ್ಲವೇ? ತಾ. 21—11—32 ರಲ್ಲಿ ಪೊನ್ನಂಪೇಟೆಯಲ್ಲಿ ಕಾಲಿಗೆ ಸಮ್ಮಂಧಿಸಿ ನಡೆದ ಮೀಟಿಂಗು ನೋಟೀಸು ಕಿಗ್ಗಟ್ಟುನಾಡು ಜನ ಮೀಟಿಂಗು ಎಂಬದಾಗಿ ಪ್ರಕಟಿಸಿದೆ. ಹಾಗಿದ್ದಲ್ಲಿ ಆ ಠರಾವುಗಳು ಸಹ ಎಲ್ಲಾ ನಾಡಿನವರೂ ಸೇರಿದ್ದ ಸಭೆಯ ಸಂಖ್ಯೆ 80 ಕ್ಕೆ ಏರಿದ್ದಿಲ್ಲ. ಕಿಗ್ಗಟ್ಟುನಾಡಿನಲ್ಲಿ ಶ್ರೀಮಂಗಲನಾಡು ಸಹ ಅಡಕವಾಗಿದೆಯೆಂಬುದನ್ನು ಮೀಟಿಂಗು ಏರ್ಪಾಡು ಮಾಡಿದವರು ಮರೆಯಬಾರದಿತ್ತು. ಮೀಟಿಂಗು ಏರ್ಪಾಡು ಮಾಡಿದವರು ಯಾವ ಆಲೋಚನೆಯನ್ನು ಮುಂದಿಟ್ಟು ಕಿಗ್ಗಟ್ಟುನಾಡಿನವರ ಮೀಟಿಂಗು ಎಂದು ಪ್ರಕಟಿಸಿದರೋ ತಿಳಿಯದು. ಅವರು ಅವರ ಅಭಿಪ್ರಾಯವನ್ನು ತಿಳಿಸಿದರೆ ನಾನು ಹಕ್ಕಿ ಬಾಧ್ಯಾ ಕೋರುವೆನು. ಯಾವ ದೇಶಕ್ಕೂ ಇದು ಕಿಗ್ಗಟ್ಟುನಾಡಿನವರ ಮೀಟಿಂಗು ಅಲ್ಲವೆಂದೂ, ಬರೇ ಪೊನ್ನಂಪೇಟೆ ಸುತ್ತು ವಾಸಿಸಿರುವವರ ಮೀಟಿಂಗು ಎಂದೂ ಎಲ್ಲರೂ ತಿಳಕೊಳ್ಳಬೇಕಾಗಿ ಈ ಮೂಲಕ ಕೋರುತ್ತೇನೆ.

'ಶ್ರೀಮಂಗಲನಾಡಿನವ'

ಸ್ವದೇಶಾಭಿಮಾನ.

ಸ್ವದೇಶಾಭಿಮಾನಕ್ಕೆ ಸ್ವದೇಶಾಚಾರದಲ್ಲಿ ಮರ್ಯಾದೆಯೇ ಮೂಲ ಕಾರಣವು. ತಿಳ್ಳೀ. ಆಚಾರಃ ಪ್ರಥಮೋಧರ್ಮಃ॥ ಹಾಗೆಂದು ಮಹಾತ್ಮರ ವಚನವೇ ಇದಕ್ಕೆ ಸಾಕ್ಷಿಯಾಗಿರುತ್ತದೆ. ಅಲ್ಲದೆ—

ಕುಲಧರ್ಮಾನ್ ಜಾತಿಧರ್ಮಾನ್ ದೇಶಧರ್ಮಾನ್ ಮಹೇಶ್ವರ। ಯೋಕೃಂತ್ಯಾಚಾರವತ್ತ್ಯಾಂ ಕುಲಾಜ್ಞ ಪತಿತಾಭವೇ॥

ಅವರವರ ಕುಲಾಚಾರವನ್ನೂ, ಆಯಾಯ ಜಾತಿ ನೀತಿಗಳನ್ನೂ ಮತ್ತು ಯಾವ ದೇಶದಲ್ಲಿ ಯಾವ ವಿಧದ ಆಚಾರಗಳಿರಬೇಕೆಂದು ನಡೆಸಬೇಕಾಗಲೀ ಇರುತ್ತವೋ, ಅಂಥ ಆಚಾರಗಳನ್ನು ದೇಶಾಭಿಮಾನಿಗಳು ಬಿಡದೆ ಕಾಪಾಡಬೇಕಾಗಿಯೂ, ಒಂದು ವೇಳೆ ಇದ್ದಲ್ಲಿ ವಿಶ್ವಾಸವಿರದೆ ಕುಕಿ ಬಂದ ಹಾಗೆ ಪ್ರವರ್ತಿಸಿದರೆ ಅದರಿಂದ ಕುಲಭ್ರಷ್ಟನಾಗುವನೆಂದು ಇದರ ತಾತ್ಪರ್ಯ.

ಶ್ಲೋ॥ ದೇಶಸ್ವಧರ್ಮೋತ್ಕರ್ಷಾಃ ನಾನಾ ವರ್ಣಸಂಕರ ಕಾರಕೈಃ। ಉತ್ಸಾದ್ಯಂತೇ ಜಾತಿಧರ್ಮಾಃ ಕುಲಧರ್ಮಾಶ್ಚ ಶಾಶ್ವತಾಃ॥

ಮೇಲೆ ಹೇಳಿದಂತೆ ಕುಲಾಚಾರವನ್ನು ಕೆಡಿಸಿದವರು ವರ್ಣಸಂಕರ ಮಾಡುವ ದೋಷಗಳಿಂದಲೇ ಶಾಶ್ವತವಾದ ಕುಲಧರ್ಮವೂ ಜಾತಿ ಧರ್ಮವೂ ಕೆಡುವವು. ಇದರಿಂದ ಮಹಾ ಪಾಪಕರ್ತೃಕಗಳಾಗುವರೆಂದು ಭಗವದ್ಗೀತೆಯಲ್ಲಿ ಹೇಳಲ್ಪಟ್ಟಿದೆ. ಹೀಗಿರುವ ಕಾರಣ ನಮ್ಮ ದೇಶಾಭಿಮಾನಿಗಳು ಕುಲಾಚಾರ ಮತ್ತು ದೇಶಾಚಾರಗಳಲ್ಲಿ ವಿಶ್ವಾಸವಿಟ್ಟು ಜಾತಿ ಪದ್ಧತಿಗಳನ್ನು ಪಾಲಿಸಿ, ತಿಳಿಯದವರಿಗೆ ಜಾತಿ ಸಂಕರ ಮಾಡದಂತೆ ಪ್ರೋತ್ಸಾಹಿಸಿ ದೇಶಾಭಿಮಾನಿಗಳೆನಿಸುವರು ಕೀರ್ತಿ ಪಾತ್ರರಾಗುವರು ಇದರಿಂದ ವೇದ್ಯವಾಗುತ್ತದೆ.

ಪಿ. ಪದ್ಮನಾಭಾಚಾರ್ಯ.

ಬೆಟ್ಟತ್ತೂರು ಆವಶ್ಯಕತೆಗಳು.

ಕೊಡಗು ಕಮಿಷನರ್ ಮತ್ತು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟ್ ಸಾಹೇಬರವರಲ್ಲಿ ವಿನಂತಿ.

ಕಾಟಗೂರಿನಿಂದ ಬಂದು ಬೆಟ್ಟತ್ತೂರಿಗಾಗಿ ಕಲ್ಲಳ ಗ್ರಾಮಕ್ಕೆ ಹೋಗುವದು ಒಂದು, ಮತ್ತು ಅಲ್ಲಿಂದಲೂ ಗಾಡಿ ರಸ್ತೆಯಿಂದ ಬೆಟ್ಟತ್ತೂರಿಗೆ ಬರುವದು ಇನ್ನೊಂದು. ಅಲ್ಲದೆ 2 ಈ ರಸ್ತೆಗಳೂ ಮತ್ತು ಮಡಿಗಾಗಿ ಬೆಟ್ಟತ್ತೂರಿಗೆ ಬರುವ ಗಾಡಿ ರಸ್ತೆ ಒಂದು ಸಹ ಇರುತ್ತೆ.

ಗಾಡಿ ರಸ್ತೆಗೆ ಮಂಜೂರಾದ ದಿನದಾರಭ್ಯದಿಂದ ಪ್ರತಿಗಾಗಿ ಕೆಲಸ ಮಾಡಿ ತಾ. 16—11—32ಕ್ಕೆ ತೀರಿಸಿರುತ್ತೇವೆ. ಇದರ ಹಣವನ್ನು ಕೊಡಲು ಕಟ್ಟಪ್ಪಣೆ ಆಗಬೇಕು.

ಮೇಲ್ಕಂಡ 2 ಒಳರಸ್ತೆಗಳ ರಿಪೇರಿಗೆ ಈಗ ಸ್ವಲ್ಪ ವರ್ಷಗಳಿಂದ ಕೊಡುತ್ತಿದ್ದ ಹಣವೂ ಈ ವರ್ಷ ಕೊಡದಿರಲು ಕಾರಣ ಗೊತ್ತಾಗುವದಿಲ್ಲ.

ಮೇಲ್ಕಂಡ ದಾರಿಗಳಲ್ಲಿ ಮುಖ್ಯ, ಕಾಡು ಬೆಳೆದ ಮರ ಬಿದ್ದಲ್ಲದೆ, ಕೆಲವೆಡೆ ಗುಂಡಿ ಕೊರಕಲು ಬಿದ್ದು ಜನರಿಗೆ ಸಂಚಾರಕ್ಕೆ ಕುಂದಾ ಆವಶ್ಯಕವಾಗಿರುತ್ತೆ.

ಈ ತೊಂದರೆಯನ್ನು ನೋಡಿ ನಮ್ಮ ಗ್ರಾಮದ ಸಭಾ ಕಾರಂಜಕ ಪ್ರೆಸಿಡೆಂಟರಾದ ಮೆ. ಅ— ನಂದ ಗಣಪತಿಯವರು ಅತಿಯಾಗಿ ಗುಂಡಿ ಕೊರಕಲು ಬಿದ್ದು ಮತ್ತು ಮುಳ್ಳು ಕಾಡು ಕವಿದುಕೊಂಡಿರುವಲ್ಲಾದರೂ ನಾವು ರಿಪೇರಿ ಮಾಡಬೇಕೆಂದ ವಸ್ತ್ರಕೆ ಹೇಳಿದ್ದರಿಂದಲೂ, ಈ ದಾರಿಗಳು ನಮಗೆ ಅವಶ್ಯವಿರುವುದರಿಂದಲೂ 2 ದಾರಿಗಳಿಂದ ಸುಮಾರು 4 ಮೈಲು ನಾವು ಗ್ರಾಮಸ್ಥರು ಕಷ್ಟ ಗುದ್ದಲಿ ಕೆಲಸ ಸಹ ಮಾಡಿರುತ್ತೇವೆ.

ಈ ದಾರಿಗಳಿಗೆ ಮಡುಮಲು ಕೊಡುತ್ತಿದ್ದ ರಿಪೇರಿ ಹಣವನ್ನು ಮತ್ತು ಜಾಗುವ ಮುಂಚೆ ಕಡ್ಡೆ ಕೊಟ್ಟು ಪೂರ್ತಿ ಕೆಲಸ ಮಾಡಬೇಕಾಗಿ ಮೂ, ಮತ್ತು ಗಾಡಿರಸ್ತೆಯ ಹಣದ ಗಳನ್ನು ಮೇ ತಾರೀಖು ಅಪ್ಪಿಸಲ್ಲು ರಿಪೇರಿ ಬಗ್ಗೆ ತಿಂಗಳ 25/ ದಿನಗಳನ್ನು ಸಹ ಕೊಡುವಂತೆ ಮಂಜೂರು ಮಾಡಬೇಕೆಂದಾಗಿ ಪ್ರಾರ್ಥಿಸುತ್ತೇವೆ.

'ಗ್ರಾಮಸ್ಥರು.'

ಮಡಿಕೇರಿಯ ಪತ್ರ.

ರಸ್ತೆದೀಪಗಳು—ಪೇಟೆಬೀದಿಯ ಲ್ಯಾಂಪುಗಳು ಹಗಲು ಕಾಣುತ್ತವೆ. ರಾತ್ರೆ 7 ಗಂಟೆ ನಂತರ ಕಾಣದೆ ಮರೆಯಾಗುತ್ತವೆ. ಇದೇನಾಶ್ಚರ್ಯ! ಸೀಮೆಎಣ್ಣೆಗೆ ಕ್ರಯ ಹೆಚ್ಚಿ ಹಗಲು ಬಿಡುವುದಾಗುತ್ತವೋ ತಿಳಿಯದು. ಹೊಸ ಪುರಾಯ ಒತ್ತು ಒಂದು ಲ್ಯಾಂಪನ್ನಾದರೂ ಹಗಲೂ, ರಾತ್ರಿಯೂ ಇರುವಂತೆ ಇರಬೇಕು ಅಧಿಕಾರಿಗಳು ನಿಗಾ ವಹಿಸಬಾರದೇಕೆ?

ಚಿನ್ನದ ವ್ಯಾಪಾರ—ಮಡಿಕೇರಿಯಲ್ಲಿ ಚಿನ್ನ ವ್ಯಾಪಾರಗಳು ಹೆಚ್ಚುತ್ತಿದೆ. 'ಮುತ್ತಣ್ಣ' ಶೆಟ್ಟರ ದುಡ್ಡು; ಚಿನ್ನದ ಮೇಲೆ ವ್ಯಾಪಾರವಾಗುತ್ತಿದೆ. ಸಾಲಕ್ಕೋಸ್ಕರವಾಗಿ ಇಲ್ಲವಾ—ನನ್ನ ಕೈಲಿ ಏನಿಲ್ಲವೋ, ಅನ್ನುವರು. ಚಿನ್ನಕ್ಕೆ ಹಣ ಕೊಡುತ್ತೀರಾ, ವಡವೆ ಉಂಟು, ಕೊಳ್ಳೀರಾ? ನನಗೆ ಬೇಕು, ನೋಡುವ ಅಂತಾಗ, ಏನನ್ನು ತಾ, ಶೆಟ್ಟರ ಪೆಟ್ಟಿಗೆಯಿಂದ ಹೆಚ್ಚು ತೆ ದುಡ್ಡು ಹೊರಬೀಳುತ್ತೆ. ಅದೂ 100 ರೂಪಾಯಿ ಬೆಲೆ ಬಾಳುವ ಚಿನ್ನಕ್ಕೆ 40 ರೂಪಾಯಿ. ಹೇಗೂ ನಡವೆಗಳು ಇರುವ ವರೆಗೆ ದುಡ್ಡು ಬೇಕಲ್ಲ!

ಮೋಟಾರುಗಳ ಪೈಪೋಟಿ—ಲೆಕ್ಕವಿಲ್ಲದಷ್ಟು ಇವೆ. ಅದರಲ್ಲೂ, ಸಮಯಕ್ಕೆ ಒಂದೂ ಇಲ್ಲ. ಈಗ ಒಂದು ದಬ್ಬಾಳಿಕೆ ಜರುಗಿ ಏರ್ಪಾಡು ನಡೆಯುತ್ತಿದೆ. ಇದರ ಪರಿಣಾಮವೇನೋ ತಿಳಿಯದು.

ಮಡಿಕೇರಿ ಟೌನು ಸಂಘ—ನಿರ್ಮಾಣವಾಗುವ ಸಂದರ್ಭ ಬಂದೊದಗಿದೆ. ಇದರ ಪಾರ್ಶಿಕ ಜನರ ಮೀಟಿಂಗು ನಲ್ಲು ನಾಮಕಾವಾಸ್ತೆಗಳಿಗೆ ಬೇರೆ ಸ್ಥಳ ಏರ್ಪಡಿಸಿ, ಕೆಲವು ಕೊಟ್ಟು ಕಳುಹಿಸಿ, 2 ಗಂಟೆ ಘಂಟೆಯಾದರೂ ಅವರ ದರ್ಶನ ದೊರೆಯಲಿಲ್ಲ. ಭಕ್ತರಿಗೆ ಹಣ ಕೇಳುವವರಿಗೂ, ದುಡ್ಡು ನೋಟು ಬಂದು, ಹೊರಡಬೇಕಾಗದೆಯಿಲ್ಲದೆ ಸಹಕಾರಗಳ ಪ್ರಯೋಜನಕ್ಕಾಗಿ ಸಂಘಗಳಲ್ಲು ದಿವಾನಿಟ್ಟು ಇರುವ ದುಡ್ಡು. ರಾಜ ಎಲ್ಲಿಂದ ಬಂದೀತು? ಎಲ್ಲರೂ ಬಂದಿದ್ದರೆ ಅವರ ದುಡ್ಡು ಕೇಳುವವರ್ಯಾರು? ಹೇಗೂ ನಮ್ಮಲ್ಲು ಸಾಹುಕಾರರಿಗೆ ಕಮ್ಮಿ ಇಲ್ಲ. ಸಾವಿರ ಕುದುರೆಗೆ ಜನಿಸಿಟ್ಟು ಸಾಹುಕಾರರಿದ್ದಾರೆ. ಆದರೆ ಕರ್ತರಲ್ಲಿ ಒಂದೂ ಕುದುರೆಯಿಲ್ಲ. ಈ ವಿಚಾರ ಹೆಚ್ಚೇಕೆ. ಅವರು ಸಹಕಾರಗಳೇ; ಅವರ ಸಹಕಾರ ಪಡೆ ನಂತರ ಪುನಹ ಬರೆಯುವೆನು.

"ಪಟ್ಟಣಿಗ"

ಪೊನ್ನಂಪೇಟೆ ಟೌನ್ ಸಂಘದ ಅಧ್ಯಕ್ಷ ಕಾರ್ಯ.

ಅಯ್ಯಾ,

ನಿಮ್ಮ ತಾ. 25—11—32ರ ಪತ್ರಿಕೆಯಲ್ಲು ಸಂಘದ ಜನರಲ್ ಮೀಟಿಂಗಿನ ವಿಷಯದ ವಾರ್ತೆಯನ್ನು ಓದಿದೆನು. ಸದರಿ ವಾರ್ತೆ ಬರೆದ ಸುದ್ದಿಗಾರರಿಗೆ ಮೆ. ಸಿ. ಎ. ಪೊನ್ನಪ್ಪನವರ ಹೆಸರು ಮಾತ್ರ ಗೊತ್ತಾಯಿತೋ? ಅವರ ಜೊತೆಗೆ ವಡ್ಡಾಸೆಯಾಗಿ ಪಡೆದಿದ್ದವರ ಹೆಸರುಗಳು ಅವರಿಗೆ ತಿಳಿಯದೆ ಇದ್ದಿತೇ ಹೇಗೆ? ಅಂದಿನ ಅಧ್ಯಕ್ಷರ ಅನುಮತಿಯಂತೆ ಹೊಸ ಮೆಂಬರ್ ಆಗಲು ಅರ್ಜಿ ಏಲಿ ಮಾಡಲಾಯಿತೆಂದು ಕೆಲವರು ಹೇಳಿದರೆಂದು ಬರೆದಿದೆ. ಆದರೆ ಕೊಡವ ಮೆಂಬರನು ಅರ್ಜಿ ಕೊಟ್ಟದ್ದಕ್ಕೆ ಅಧ್ಯಕ್ಷರು ಕೊಡ ಮೇಲೆ ಆಗಲೆಂದು ಸಹ ಪಡ ಇ 'ಸ್ವತಂತ್ರವಾದ' ಹೇಳಿ, ಅದು ವಾಸ್ತವಿಕವಾದ ಸಂಗತಿಯಾಗಿ ಬರೆಯಲಿಲ್ಲ? ಸುದ್ದಿಗಾರರಿಗೆ ಅವರಿಗೆ ಹೆಸರಿಲ್ಲವೋ? ಇಂದಿಗೆ ಸಹಕಾರದ ತಕ್ಕ! ಈ ತಕ್ಕ ಹೊಸದೋ, ಹಳೆಯದೋ ತಿಳಿಯದು. ಹೊಸ ಮೆಂಬರ ಅಪ್ಲಿಕೇಶನ್ ಮಂಜೂರಿನ ಮೀಟಿಂಗು ಆಗಬೇಕೆಂದು ನ್ಯಾಯ ಕೇಳಿದ ಮೂರ್ತಿಕ್ಕೆ ಅಧ್ಯಕ್ಷರು ಸವೆಸಿ, ಮನಸಾರ ಪತ್ರ ವಿಶೇಷ ಮಾಡಿದಾತನಿಗೆ ಹೇಳಿದದ್ದು ಅದು ಸಂಘದ ಇನ್ಸ್ಪೆಕ್ಟರಾದವರಿಗೆ ಸರಿಯೋ? ಹಾಗಾದರೆ ಸಹಕಾರ ಸಂಘವೆಂದರೆ ಸರಿ, ಯಾ ಅಲ್ಲವೆಂಬುದು ಇದರಿಂದ ಮನವರಿಕೆಯಾಗಿತ್ತಿಲ್ಲವೇ? ಈ ರಸ್ತೆ ನೋಡಿದ ಯಾರ ಮನಸು ತಾನೇ ಬೇಸರಿಕೆಯನ್ನು ಸೂಚಿಸದಿರದು? ಇದರಿಂದ ಸುದ್ದಿಗಾರರಿಂದ ವಾರ್ತೆ ದೊರೆತ. ಅವರ ಮನಸಿನ ನಿರ್ಧಾರಿತ ಗುಣವನ್ನು ತೋರಿಸುತಿರಲ್ಲದೆ, ಮೀಟಿಂಗಿನಲ್ಲು ನ್ಯಾಯ ವಿಚಾರದ ಮಾತುಗಳೇ ನಡೆದದ್ದಾಗಿದೆ. ಈ ಧ್ವನಿ ಸಹ ಅದೇ ವರ್ಗಕ್ಕೆ ಸೇರಿರಬಹುದೆಂದು ಅವರು ಸಮರ್ಥನೆ ಮಾಡದೆ ಎಲ್ಲ ಹೇಳಿದ್ದರಿಂದ ವೇದ್ಯವಾಗುತ್ತೆ. ಎಂದು ಪಾರ್ಶಿಕ ಮಹಾಶಯರುಗಳಿಗೆ ತಿಳಿಸುತ್ತಾರೆ. ಮುಂದೆ ಮುಂದಕ್ಕಾದ ಈ ರೀತಿ ಅಡಕವುಗಳು ಸಹಕಾರ ಬಂದಲ್ಲು ಸಹಕಾರ ಸಂಘಗಳಿಗೆ ಧಕ್ಕೆ ಬಾರದಂತೆ ಅದಕ್ಕೆ ಮುಕ್ತಿಗಟ್ಟು ಹೋಗಬಹುದೆಂದು ಸ್ವಾಗತ ವಹಿಸಬೇಕಾಗಿದ್ದ ಇಂಥಾ ಅನ್ಯಾಯವನ್ನು ಜನತೆಗೆ ಗಮನ ಕೊಡಲೆಂದು ಈ ವಾರ್ತೆ ಬರೆದದ್ದಾಗಿದೆ.

'ಹಾಜರಿದ್ದ ಮೆಂಬರ'

ಶ್ರೀ ಓಂಕಾರೇಶ್ವರ ದೇವಾಲಯದ ಕಳ್ಳತನ.

ಅಯ್ಯಾ,

ಮಡಿಕೇರಿ ಮಹದೇವಪೇಟೆ ದೇವಾಂಗ ಸಂಘದವರು ತಮ್ಮಲ್ಲಿ ಕಮಿಟಿ ಆರಿಸಿದ ಮೇಲೆ ಶ್ರೀ ಓಂಕಾರೇಶ್ವರ ದೇವಸ್ಥಾನ ಕಾರುಬಾರು ನಡೆಸುವದಾಗಿಯೂ, ಕೈಕೆಳಗೆ ಸಹಾ ದೇವಾಲಯದ ಕಾರುಬಾರು ನಡೆಸುವ ಕಮಿಟಿ ಮೆಂಬರುಗಳಲ್ಲಿ ಮಡುವವರೇ ಇಲ್ಲದೆ ಒಬ್ಬರ ಮೇಲೊಬ್ಬರು ಭಾರ ಹಾಕಿಕೊಂಡು, ಅಂದು ಮಾಡಲಿ, ಇಂದು ಮಾಡಲಿ, ಮ

ತೊಟ್ಟು ಮಡಲಿ, ನನಗೇನು; ಒಬ್ಬನು ಹೇಳಿದ ಹಾಗೆ ಕೇಳಬೇಕೆ? ಪ್ರತಿದಿವಸ ಕೂಡುತ್ತಿರುವ ದೇವಾಲಯಗಳು ತಮ್ಮ ತಮ್ಮ ಕೆಲಸದಲ್ಲಿಯೇ ಇದ್ದು ಸ್ವತಂತ್ರದಲ್ಲಿ ಮಗ್ನರಾಗಿ ಇರುವವರಾಗಿಯೂ ಇದ್ದಾರೆ. ದೇವಾಲಯ, ಮಠ, ಛತ್ರ, ಬಾವಿ, ಕೆರೆ, ತೋಪು, ವಿದ್ಯಾ ಶಾಲೆ, ವಾಚನಾ ಮಂದಿರ ಮುಂತಾದ ಸನಾತನಕಾಲದಿಂದ ಬಂದಿರುವ ಧರ್ಮಕಾರ್ಯಗಳಿಗೆ, ಉದ್ಧಾರ ಕಾರ್ಯಗಳಿಗೆ ಮನಸಿನ ಒಂದು ಕಮಿಟಿಯು ಇದ್ದು ಪ್ರಯೋಜನವಿಲ್ಲ. ಅಲ್ಲದೆ ಇದು ತನ್ನ ಮತದ ಉದ್ಧಾರ ಕಾರ್ಯದ ಮಾತಾಗಿದೆ. ಈ ಕಮಿಟಿಯು ಒಬ್ಬಿಬ್ಬರು ಕುಂಬಾ ಕ್ರಮ ತೆಗೆದುಕೊಂಡು ಮರ ಪೂರಾ ಕಂಡು ಹಾಕಿ ಬಿದ್ದಿರುವುದೂ ಇದ್ದಯೇ. ಹಣಕಾಸು ಇರುವುದು ಇದ್ದಲ್ಲಿಯೇ. ತೆಚ್ಚಗೆ ಕೊಡುವವರಾಗಿ ವಾಗ್ದಾನ ಮಾಡಿರುವವರ ಹಣವು ಮಾಡಿರುವವರಲ್ಲಿಯೇ ಇಗಿ ಹೋಗಿರುವದಾಗಿದೆ. ಹಾಲಿ ಸದರಿ ಕಟ್ಟಡವು ಊರ್ಜಿತವಾಗುವುದಕ್ಕೆ ತಕ್ಕಲವಾಗಿರುತ್ತೆ. ಮಳೆಗಾಲವೂ ಕಳೆದಿರುವದರಿಂದ ಕೈಕೊಂಡಿರುವ ಕೆಲಸವನ್ನು ಪೂರೈಸದೆ ಧೋರಣೆಯಿಂದಲೂ, ಮುಖ್ಯದಿಂದಲೂ ಬಾಕಿ ಮಾಡುವುದು ತಿಳಿದವರಿಗೆ ನ್ಯಾಯವಲ್ಲ. ಸದಿಗಳೂ ಗಿಡ ವೃಕ್ಷಗಳೂ ಸಹ ಪರರ ಉಪಕಾರಕ್ಕಾಗಿ ತಮ್ಮ ಸರ್ವಸ್ವವನ್ನೂ ಅರ್ಪಿಸುವುದು ತಿಳಿದ ಸಂಗತಿಯಾಗಿರುವುದರಿಂದ ಇದು ಒಂದು ಉಪಕಾರವಾಗಿರುವ ಕಾರ್ಯವೆಂದು ಭಾವಿಸಿ ಈ ಕಟ್ಟಡಕ್ಕೆ ಒಂದು ಪ್ರತ್ಯೇಕ ಕಮಿಟಿಯನ್ನಾದರೂ ಏರ್ಪಡಿಸಿ ಆ ಮುಖೇನ ಕಾರ್ಯ ನಿರ್ವಹಿಸಬೇಕಾದ್ದು ಅಗತ್ಯ. ಮತ್ಯಾರಿಗೂ ಬಾಧಕವಿಲ್ಲ. ಆದ್ದರಿಂದ ಸದರಿ ಕಮಿಟಿಯವರು ದಯವಿಟ್ಟು ಸದರಿ ಕಾರ್ಯಕ್ಕೆ ಅವಲಂಭಿಸಿ ಬೇಕಾದ ಏರ್ಪಾಡು ಮಾಡುವರ ಭಾಗಿಗಳಾಗುವರೆಂದು ಪ್ರಾರ್ಥಿಸುವ. ಆದರೆ ಇದಕ್ಕೆ ನಿಗಾ ಕೊಡದೆ ಹೋದರೆ ಈ ಭಾರವು ಅವರದೇ ಆಗಿರುತ್ತೆ. ಹೆಚ್ಚಿಗೆ ಹೇಳಲು ಸಾಧ್ಯವಿಲ್ಲ.

'ಮತಾಭಿಮಾನಿ'

(FREE INSURANCE)

ಉಚಿತ ವಿಮಾ.

ಮ್ಯೂಚುವಲ್ ಬೆನಿಫಿಟ್ ಸ್ಕೀಂ ಎಂದು ಅನ್ಯೋನ್ಯ ಸಹಾಯ ಪದ್ಧತಿ.

(Mutual Benefit Scheme.)

ಜೈ ಭಾರತ ಇನ್‌ಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಹೆಡ್ ಆಫೀಸ್—ಮದ್ರಾಸ್.

ಲೈಫ್ ಇನ್‌ಷ್ಯೂರೆನ್ಸಿನ ಕಂಪನಿಗಳ ಕಾನೂನಿಗೆ ಅಧೀನವಾಗಿದೆ. ಸರಕಾರದಲ್ಲಿ ಡಿಪೋಜಿಟ್ ಕೊಡಲಾಗಿದೆ.

ಈ ಮೇಲ್ಕಂಡ ಕಂಪೆನಿಯು ಅನ್ಯೋನ್ಯ ಸಹಾಯಕ್ಕಾಗಿ ಕಳೆದ ವರ್ಷ ಅಂದರೆ 1931ನೇ ಫೆಬ್ರವರಿಯಲ್ಲಿ ಮದ್ರಾಸಿನಲ್ಲಿ ಸ್ಥಾಪಿತವಾಗಿ ಈ ವರೆಗೆ 26000 ಸಾವಿರಕ್ಕೂ ಹೆಚ್ಚಾಗಿ ಪಾಲಿಸಿಗಳನ್ನು ಪಡೆದಿರುತ್ತೆ. ಈ ಮೇಲ್ಕಂಡ ಕಂಪೆನಿಗೆ ಐಶ್ವರ್ಯವಂತರೂ, ಬಡವರೂ, ಮಿತಸಂಪಾದನೆಯವರೂ ಜಾತಿ ಮತಗಳ ಭೇದವಿಲ್ಲದೆ ಬಾಲಕರೂ, ಕೂಲಿಯವರೂ, ಹೆಂಗಸರೂ, ಗಂಡಸರೂ ಹೆಚ್ಚು ದಿನಂ ಕೊಡದೆಯೇ ಉಚಿತ ಜೀವ ವಿಮೆ ಮಾಡಿಕೊಳ್ಳಬಹುದು. 18 ವರ್ಷಕ್ಕೆ ಮೇಲ್ಪಟ್ಟು 60 ವರ್ಷದೊಳಗಿರುವವರು ಈ ಕಂಪನಿಗೆ ಸೇರಬಹುದು. ಈ ಕಂಪೆನಿಗೆ ಸೇರಲು ಇಚ್ಛಿಸುವವರು ಸುರುವಿನಲ್ಲಿ ರೂ. 5—8—0ನ್ನು ಮಾತ್ರ ಕಟ್ಟತಕ್ಕದ್ದು. ಅನಂತರ ತಿಂಗಳು ಒಂದರ 1 ರೂ. ಸ್ವಲ್ಪದರಲ್ಲಿ ದೊಡ್ಡ ಲಾಭ ದೊರೆಯುತ್ತೆ. ಆದ್ದರಿಂದ ಇಂಥಾ ಸುಸಮಯವನ್ನು ಕಳೆಯತಕ್ಕದ್ದಲ್ಲ. ಈ ದಿನವೇ ಪಾಲಿಸಿಗಳನ್ನು ಹೊಂದಲು ಅರ್ಜಿ ಹಾಕಿರಿ. ಇದರ ಫಲವನ್ನು ಹೊಂದಲು ಭಾಗಿಗಳಾಗಿರಿ.

ಹೆಚ್ಚಿನ ಮಾಹಿತಿಗಳಿಗೆ ಈ ಕೆಳಗಿನವರಿಗೆ ಬರೆದು ತಿಳಿದುಕೊಳ್ಳಬಹುದು. ಅಲ್ಲದೆ ಇವರು ಕೊಡಗಿನ ಎಲ್ಲಾ ಕಡೆಗಳಲ್ಲಿಯೂ ತಿರುಗುತ್ತಲಿರುತ್ತಾರೆ.

ಯಸ್. ಬಿ. ಕರುಂಬಯ್ಯ.
ಏಜೆಂಟ್,
ಜೈ ಭಾರತ ಇನ್‌ಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

12—8 ಸೋಮವಾರಪೇಟೆ, (ಕೊಡಗು)

೪೦ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕ ಕಂಪನಿಯವರ

ಜ್ವರದ ಗುಳಿಗೆಗಳು.

ಚಳಿಜ್ವರ, ಟಾಯಿಫ಼ೋ ಜ್ವರ, ದಿನಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮ ಬಾಣದಂತೆ ಇವೆ. ಬಾಟ್ಲಿಗೆ ರೂ. ೧. ಟಿ. ಖ. ೭ ಆಣೆ. ಬರೂರು ತರಿಸಿಕೊಳ್ಳಿ.

ಗಣೇಶ ರಾಮಚಂದ್ರ ಕರ್ಕ,
(52—17) ಮಾತು ಕಂಪೆನಿ,
ಗಿರಗಾಂವ, ಮುಂಬಯಿ,

ಇಂಡಿಯಾ ಎಕ್ವಿಟೇಬಲ ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್.

(ಸ್ಥಾಪಿಸಲ್ಪಟ್ಟದ್ದು 1908.)

ಕಳೆದ ವರ್ಷದ ಫಲಿತಾಂಶಗಳು.

ಹಿಂದಿನ ವರ್ಷದ ಕೆಲಸಕ್ಕಿಂತ 64% ಹೆಚ್ಚು.

ಕಳೆದ ವರ್ಷ ಸಂಭವಿಸಿದ ಹಕ್ಕು ಬಾಧ್ಯಸ್ಥರಲ್ಲಿ ಶೇಕಡ 96·6 ಜನರಿಗೆ ಹಣ ಅದೇ ವರ್ಷ ಕೊಡಲಾಗಿದೆ.

ಖರ್ಚಿನ ದಾಮಾಶಾಯ 31% ಮಾತ್ರ.

ಇಂಡಿಯಾ ಎಕ್ವಿಟೇಬಲ್ ಇನ್ಸೂರೆನ್ಸ್ ಕಂಪೆನಿಯು ಬುಡದಿಂದ ತಲೆಯ ವರೆಗೂ ಇಂಡಿಯನ್ನೇ.

ವಜನದಾರರಾದ ಏಜೆಂಟರುಗಳು ಬೇಕಾಗಿದ್ದಾರೆ.

ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಕೆ. ಇ. ಜಾಕೊ,
ಬ್ರಾಂಚ್ ಸೆಕ್ರೆಟರಿ,
159 ಶ್ರೀ ನರಸಿಂಹರಾಜ ರೋಡ್,
ಬೆಂಗಳೂರು ಸಿಟಿ.

ಅಥವಾ

(1) ಮಿಸ್ಟರ್ ಸಿ. ಯಂ. ಪೂವಯ್ಯ,
ಚೀಫ್ ಆರ್ಗನೈಸರ್,
'ಪೂವಯ್ಯ ವಿಲ್ಲಾ,'
ಮಡಿಕೇರಿ.

(2) ಯಂ. ಸಿ. ಅಪ್ಪಚ್ಚು,
ರಿಟೈರ್ಡ್ ಪಾರುಪತ್ಯಗಾರ್,
ಹಿಲ್ ರೋಡ್,
ಮಡಿಕೇರಿ.

(12—14)

GOVERNMENT SOAP FACTORY,

Bangalore.

ವಿಶ್ವಾಸಾರ್ಹತೆ.

ಅತ್ಯುತ್ತಮವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ ಯಾವ ಗುಣಗಳು ಅವಶ್ಯಕವೆಂದು ನೀವು ತಿಳಿದಿರುತ್ತೀರೋ ಆ ಗುಣಗಳೆಲ್ಲಾ ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.

ನಾವು ನಿಮಗೆ ಭರವಸೆಯನ್ನೀಯುತ್ತೇವೆ!

ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು.

52—14

ಬಿ. ಸಿ. ಸುಬ್ಬಯ್ಯನವರು, ಮನೆಯಪಂಡ ಚಿಣ್ಣಪ್ಪನವರು. ಜಿ. ಯಂ. ಮಂಜುನಾಥಯ್ಯನವರು, ಯನ್. ಪಂಗಯ್ಯನವರು, ಬಿದರೂರು ಮಾದಯ್ಯನವರು, ಸಿಂಗೂರು ಮಾದಪ್ಪನವರು, ಯನ್. ಶಂಕರಯ್ಯನವರು, ಚೌರ್‍ರ ಕಾಳಪ್ಪನವರು, ಯಂ. ಯಂ. ಸಿದ್ದೇಶರು, ಕೆಸ್ತೂರ ಅನಂತಯ್ಯನವರು, ಮುಕ್ಕಾಟಿರ ಕರುಂಬಯ್ಯನವರು, ತೆಪ್ಪನೆ ಮುತ್ತಣ್ಣಯ್ಯನವರು, ಅಜ್ಜಮಾಡಂಡ ತಿಮ್ಮಯ್ಯನವರು, ಮತ್ತು ಮೊದಲನೇ ಠರಾವು ತೀರ್ಮಾನವಾದ ನಂತರ ಬಂದ ಮಿ. ಬಿದ್ದಂಡ ಸುಬ್ಬಯ್ಯನವರು

ನೋಟೀಸಿನಲ್ಲಿ ನಮೂದಿಸಿದ್ದ ಈ ಕೆಳಗಿನ ಠರಾವನ್ನು ಮಿ. ಐ. ಸಿ. ಸುಬ್ಬಯ್ಯನವರು ಸಭೆಯ ಮುಂದೆ ಇಟ್ಟರು. "ಕೊಡಗಿನ ಸರಕಾರಕ್ಕೆ ಇಂಡಿಯಾ ಸರಕಾರವು ಹಿಂದಿನ ಸಬ್ಸಿಡಿನ ಕೆಲವು ಭಾಗವನ್ನಾದರೂ ಕೊಟ್ಟು ಇನ್ನು ಮುಂದೆ ಸಾಲಿಯಾನ ಐದು ಲಕ್ಷ ರೂಪಾಯಿ (ಸಬ್ಸಿಡಿ) ಕೊಡಲು ಒಪ್ಪಿ ಕೊಡಗಿಗೆ ಸಂಪೂರ್ಣ ಸ್ವಯಂಪ್ರಭುತ್ವದ ಸರಕಾರವನ್ನು ದಯಪಾಲಿಸಬೇಕು, ಹೀಗೆ ಮಾಡಲು ಸಾಧ್ಯವಿಲ್ಲವೆಂತ ಸಂಬಂಧಪಟ್ಟ ಅಧಿಕಾರಿಗಳಿಗೆ ತೋರಿದರೆ ಕೊಡಗಿನ ಜನರಿಗೆ ಇರುವ ಕೋವಿ ಕತ್ತಿ, ಜಮ್ಮಾ ಮತ್ತು ಇತರ ಹಕ್ಕುಗಳನ್ನು ಭದ್ರಪಡಿಸಿಕೊಂಡು ಪ್ರತ್ಯೇಕ ಜಿಲ್ಲೆಯಾಗಿಯೇ ಇಟ್ಟುಕೊಳ್ಳುವ ಶರತ್ತಿನಿಂದ ಮೈಸೂರು ಸಂಸ್ಥಾನಕ್ಕೆ ಸೇರಿಸಬೇಕು."

ಮಿ. ಯಂ. ಯಂ. ಸಿದ್ದೇಶರು ಅನುಮೋದಿಸಿದರು. ಮಿ. ಚೌರ್‍ರ ಕಾಳಪ್ಪನವರು ಪುಷ್ಟೀಕರಿಸಿದರು.

ಮಿ. ರಾ. ಶ್ರಿ. ಮುಕ್ಕಾಟ್ಟಿರ ಕರಿಂಬಯ್ಯನವರು ತಿದ್ದುಪಡಿಯಾಗಿ ಈ ಠರಾವನ್ನು ಬಾಕಿ ಇಟ್ಟು ಹಿಂದಿನಿಂದ ಕಾಂಗ್ರೆಸಿನ ಸಹಕಾರ ಪಡೆದು ಒಗ್ಗಟ್ಟಾಗಿ ತೀರ್ಮಾನಿಸುವುದು ಉತ್ತಮವೆಂತ ಸೂಚಿಸಿದರು. ದೇಶಕ್ಕೆ ಅನುಕೂಲಗಳನ್ನು ನಡೆಸಲು ಮೇಲೆ ದೇಶದೊಂದಿಗೆ ಸೇರಬೇಕಾಗಬಹುದು. ಇದಕ್ಕೆ ಈಗ ಈ ತೀರ್ಮಾನ ಮಾಡುವುದು ಬೇಡವೆಂತ ಸೂಚಿಸಿದರು.

ಮಿ ರಾ. ಶ್ರಿ. ಬಿದರೂರು ಮಾದಯ್ಯನವರು ಕಾಂಗ್ರೆಸಿನ ಜೋರಾಟದಿಂದ ಜಯವಾಗುವುದಿಲ್ಲವೆಂತ ಹೇಳಿದರು. ಜಯವಾಗುತ್ತದೆಯೆಂತ ಧರವಸೆ ಇಟ್ಟು ಕೆಲಸ ಮಾಡಬೇಕು. ಹೀಗೆ ಬೇರೆಯೇ ಇರಲು ಸಾಧ್ಯವಿಲ್ಲವೆಂತಾದರೆ ಮೈಸೂರಿಗೆ ಸೇರಬಹುದು ಎಂತ ಹೇಳಿದರು.

ಮಿ. ರಾ. ಶ್ರಿ. ಜಿ. ಯಂ. ಮಂಜುನಾಥಯ್ಯನವರು ಠರಾವಿನ ಪರವಾಗಿ ಮಾತಾಡಿದ ನಂತರ ಮಿ. ಐ. ಸಿ. ಸುಬ್ಬಯ್ಯನವರು ಜವಾಬುಕೊಟ್ಟರು.

ಮಿ. ಗಳಾದ ಮುಕ್ಕಾಟಿರ ಕರುಂಬಯ್ಯನವರು ಮತ್ತು ಬಿದರೂರು ಮಾದಯ್ಯನವರು ನ್ಯೂಟ್ರಲ್ ಆಗಿದ್ದರು. ಇತರ ಸರ್ವರ ಒಪ್ಪಿಗೆಯಿಂದ ಠರಾವು ಮಂಜೂರಾಯಿತು.

ಶೀಘ್ರದಲ್ಲೇ ಆಗಲಿಕ್ಕಿರುವ ಸರ್ವ ಪಕ್ಷ ಪರಿಷತ್ತಿಗೆ ಸಂಘದ ಪರವಾಗಿ ಈ ಕೆಳಗಿನ ಮಹನೀಯರು ಪ್ರತಿನಿಧಿಗಳಾಗಿ ಹೋಗಬೇಕೆಂತ ತೀರ್ಮಾನವಾಯಿತು.

ಮಿ. ಗಳಾದ ಐ. ಸಿ. ಸುಬ್ಬಯ್ಯನವರು, ಯಂ. ಯಂ. ಚಿಣ್ಣಪ್ಪನವರು, ಅಜ್ಜಮಾಡಂಡ ತಿಮ್ಮಯ್ಯನವರು, ಬಿದ್ದೇಶಂಡ ಮಾದಯ್ಯನವರು, ಚೌರ್‍ರ ಅಪ್ಪಯ್ಯನವರು, ಯಂ. ಯಂ. ಸಿದ್ದೇಶರು, ಕೆಸ್ತೂರ ಅನಂತಯ್ಯನವರು, ಜಿ. ಯಂ. ಮಂಜುನಾಥಯ್ಯನವರು, ಚೌರ್‍ರ ಕಾಳಪ್ಪನವರು ಮತ್ತು ಸಿಂಗೂರು ಮಾದಪ್ಪನವರು.

ಮಿ. ಕೆ. ಪಿ. ಚಿಣ್ಣಪ್ಪನವರು ಜನರಲ್ ಸೆಕ್ರಟರಿ ಕೆಲಸಕ್ಕೆ ಕೊಟ್ಟ ರಾಜಿನಾಮೆಯನ್ನು ಅಂಗೀಕರಿಸಲಾಯಿತು, ಅವರ ಬದಲಿಗೆ ಮಿ. ಐ. ಸಿ. ಸುಬ್ಬಯ್ಯನವರನ್ನು ಆರಿಸಲಾಯಿತು

ರಾಜಿನಾಮೆಕೊಟ್ಟ ಮಿ. ಕೆ. ಪಿ. ಚಿಣ್ಣಪ್ಪನವರು ಸೆಕ್ರೆಟರಿಯಾಗಿ ಮಾಡಿದ ಕೆಲಸಕ್ಕೆ ಅವರಿಗೆ ಅಭಿನಂದನೆಗಳು ಒಪ್ಪಿಸಬೇಕೆಂತ ತೀರ್ಮಾನವಾಯಿತು.

1932 ನೇ ಇಸವಿ ಮಾರ್ಚ ತಿಂಗಳಿನಿಂದ ನವಂಬರ್ ಆಖೈರ್ ವರೆಗಿನ ಲೆಖ್ಖ ನೋಡಿ ಒಪ್ಪಲಾಯಿತು.

ಕೊಡಗು ಕಂಪೆನಿ ಏಜೆಂಟರಾದ ಯಂ. ಬಿದ್ದಪ್ಪನವರನ್ನು ಸಂಘದ ಚಂದಾ ವಸೂಲ್ ಮಾಡುವಾತ ಕೇಳಿಕೊಳ್ಳಬೇಕೆಂತಲೂ, ಹಾಗೆ ವಸೂಲ್ ಮಾಡಿದ ಮೊಬಲಗಿಗೆ ಶೇಕಡ 12½ ಯಂತೆ ಕಮಿಶನ್ ಕೊಡಬಹುದೆಂತಲೂ ತೀರ್ಮಾನಿಸಲಾಯಿತು. ಮಿ. ಅಜ್ಜಮಾಡಂಡ ತಿಮ್ಮಯ್ಯನವರು ಅವರ ಪ್ರಾಂತ್ಯದ ಮೆಂಬರುಗಳಿಂದ ಚಂದಾ ವಸೂಲ್ ಮಾಡಬೇಕೆಂತ ಕೇಳಿಕೊಂಡದ್ದಕ್ಕೆ ಒಪ್ಪಿದರು.

ಅಧ್ಯಕ್ಷರಿಗೆ ವಂದನೆಯೊಡನೆ ಸಭೆಯು ಬರ್ಖಾಸ್ತಾಯಿತು.

ಸಿ. ಯನ್. ವೆಂಕಪ್ಪಯ್ಯ,
(ಅಧ್ಯಕ್ಷ)

ಹರಿಜನರ ಮಹಾಸಭೆ.

(ಸ್ವಂತ ವರ್ತಮಾನದಾರರಿಂದ)

ಶಿಗ್ಗಟ್ಟುನಾಡು ತಾಲೂಕಿನ ಹರಿಜನರ ಮಹಾಸಭೆಯೊಂದು ಈ ತಾ. 2 ರಲ್ಲಿ ಪೊನ್ನಂಪೇಟೆ ಆಶ್ರಮದಲ್ಲಿ ನಡೆಯಿತು. ಸುಮಾರು 150 ಹರಿಜನರೂ, 20 ಮೇಲ್ಜಾತಿಯವರೂ ಹಾಜರಿದ್ದರು. ಆಶ್ರಮದ ಸ್ವಾಮಿ ಶಂಭವಾನಂದರವರು ಮೀಟಿಂಗಿನ ಉದ್ದೇಶ್ಯವನ್ನು ವಿವರಿಸಿದರು. ಮಿ. ಸಿ. ಯಸ್. ಪೂವಯ್ಯನವರ ಸೂಚನೆ ಮೇರೆ ಸ್ವಾಮಿ ಶಂಭವಾನಂದರವರು ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡರು.

ಅಸ್ಪೃಶ್ಯತೆಯನ್ನು ಹೋಗಲಾಡಿಸುವ ಬಗ್ಗೆ ಮಹಾತ್ಮ ಗಾಂಧಿಯವರು ಹರಿಜನ ಪ್ರವಾಸ ಕೈಕೊಂಡಿರುವುದನ್ನೂ, ಈ ಉದ್ದೇಶಕ್ಕೆ ಅಸ್ಪೃಶ್ಯರನ್ನು ಇನ್ನು ಮುಂದೆ ಹರಿಜನರೆಂದು ಕರೆಯಬೇಕೆಂದು ಮಹಾತ್ಮರು ಸೂಚಿಸಿರುವದೆಂತಲೂ ಮುಂತಾಗಿ ಮಿ. ಸಿ. ಯಸ್. ಪೂವಯ್ಯನವರು ಮಾತಾಡಿ, ಹರಿಜನರ ಏಳಿಗೆಗಾಗಿ ಅವರು ಹೇಗೆ ವರ್ತಿಸಬೇಕೆಂಬುದಾಗಿ ಗಾಂಧೀಜಿಯವರು ಕೊಟ್ಟಿರುವ ಸೂಚನೆಗಳನ್ನು ಓದಿ ಹೇಳಿದರು.

ಮಿ. ಪಿ. ಬಿ. ಬೆಳ್ಳಪ್ಪನವರು ತಮ್ಮ ಚಿಕ್ಕ ಭಾಷಣದಲ್ಲಿ ಹೇಳಿದ್ದೇನೆಂದರೆ—'ಮಹಾತ್ಮ ಗಾಂಧಿಯವರ ಉಪವಾಸವ್ರತದಿಂದ ಅಸ್ಪೃಶ್ಯತಾ ನಿವಾರಣೆ ಚಳವಳಿಗೆ ಬಹು ದೊಡ್ಡ ಶಕ್ತಿ ದೊರೆತಿದೆ. ಅವತಾರಪುರುಷರಂತಿರುವ ಗಾಂಧೀಜೀಯವರೇ ಹಿಂದೂ ಮತದ ಈ ದೊಡ್ಡ ಕಳಂಕದ ನಿವಾರಣೆಗೆ ತನ್ನ ದೇಹವನ್ನು ದಾನಮಾಡಿರುವಾಗ್ಯೆ ಅಸ್ಪೃಶ್ಯತಾ ಭಾವನೆಯು ಹೆಚ್ಚು ದಿನ ನಿಲ್ಲಲಾರದು. ಮಹಾತ್ಮರ ಪ್ರಭಾವದಿಂದ ಶಿಕ್ಷಿತ ಸನಾತನಿಗಳೇ ಈ ಕಾರ್ಯಕ್ಕೆ ಕೈ ಹಾಕಿರುವ ಈ ಸಮಯದಲ್ಲಿ ಹರಿಜನರು ನಿದ್ರೆಯನ್ನು ಬಿಟ್ಟು ಮುಂದಕ್ಕೆ ಬರಬೇಕಾಗಿದೆ. ಮಹಾತ್ಮರ ಸೂಚನೆಯಂತೆ, ಹರಿಜನರು ತಮ್ಮ ಅಭಿವೃದ್ಧಿಗಾಗಿ ಪ್ರತಿನಿತ್ಯ ಸಾಧ್ಯವಿಲ್ಲದಿದ್ದರೂ ವಾರಕ್ಕೆ 2—3 ಸಾರಿಯಾದರೂ ಸ್ನಾನ ಮಾಡುವುದು, ತಾವು ತೊಟ್ಟು ಬಟ್ಟೆ ಒಗೆಯುವುದು, ಮನೆಮಾರುಗಳನ್ನು ಚೊಕ್ಕಟವಾಗಿಟ್ಟುಕೊಳ್ಳುವುದು, ಸತ್ತ ಪ್ರಾಣಿಗಳ ಮತ್ತು ದನದ ಮಾಂಸ ತಿನ್ನುವುದನ್ನು ಬಿಡುವುದು, ಸತ್ತ ದನದ ಚರ್ಮವನ್ನು ಸುಲಿಯುವಾಗ ಶವವನ್ನು ಮುಟ್ಟಿದ ಮೇಲೆ ಸ್ನಾನ ಮಾಡುವುದು, ಕುಡಿತವನ್ನು ಬಿಡುವುದು, ತಮ್ಮ ಮಕ್ಕಳನ್ನೆಲ್ಲಾ ಶಾಲೆಗೆ ಕಳುಹಿಸುವದು, ದೊಡ್ಡವರಿಗೆ ಸಾಧ್ಯವಿದ್ದಲ್ಲಿ ರಾತ್ರಿ ಶಾಲೆಗಳನ್ನು ಏರ್ಪಡಿಸಿಕೊಳ್ಳುವದು, ರಾಮ ಭಜನೆಯ ಕೂಟಗಳನ್ನು ಮಾಡುವುದು ಮುಂತಾದ ಕಾರ್ಯಗ... ಘವನ್ನು ಏರ್ಪಡಿಸಿಕೊಳ್ಳುವ... ನಿಗೆ ಕಾರಣರಾದ ಮೇಲ್ಜಾ... ತಮ್ಮ ಭಾಗದ ಕೆಲಸವನ್ನು ... ಗಲಾಡಿಸಿಕೊಂಡು, ಬಡಜ... ಅನುಕೂಲವಾದ ದೇವರನ್ನು...

ಮಿ. ಪಿ. ಜಿ. ಮುದ್ದ... ಕ್ಕ ಪ್ರಾಣಿಗಳ ಮಾಂಸವ... ಉಂಟಾಗುತ್ತವೆ; ಗೋವ... ವಾಸಕರು; ಅವುಗಳ ಮಾಂಸ... ಕ್ಕ ಮಾನಹಾನಿಯಾಗುತ್ತ... ತ್ತಿ. ಇದನ್ನೆಲ್ಲಾ ಬಿಡಲ... ಮೇಲ್ಜಾತಿಯವರೂ ಈ ... ದ್ದು ಎಂದು ಮುಂತಾಗಿ...

ನಂತರ ಹರಿಜನರ ಪೈ... ನ್ನನವರು, ಕೈಕೇರಿ ನಂದ... ದೇವನವರು ಇದಿಯನವರು, ಬಾಳೆಲೆ ಚಿನ್ನನವರು ಮೊದ... ಬಡತನವು ಮತ್ತು ವಿದ್ಯಾಹೀ... ಜಾತಿಯವರು ಸಹಾಯ ಮ... ಪ್ರಯತ್ನಪಡಬೇಕೆಂತಲ...

ಆ ಮೇಲೆ ಅಧ್ಯಕ್ಷರು, ... ಡು ಸಂಘವನ್ನು ಏರ್ಪಡಿಸ... ಕೆಗೊಪ್ಪಿ ನಡೆಯತಕ್ಕದ್ದು... ಜನ ಗಂಡಸರೆಲ್ಲರೂ ಅ... ರ್ತಿಕ ಚಂದವು 8 ಆಣೆ ಆ... ಬಂದೊಂದಾಗಿ ಸಭೆಯು ವ... ನ್ನು ತೆಗೆದುಕೊಂಡರು. ... ಜನರನ್ನು ಸೇರಿಸುವ ಬಗ್ಗೆ ... ಬ್ಬರು ಮೆಂಬರುಗಳಾಗಿ ಸೇ... ದ್ದೇಶಗಳನ್ನೂ, ನಿಬಂಧನೆಗಳ... ಗಿನ ಮೆಂಬರುಗಳ ಕಮಿಟಿಯ... ಶಂಭವಾನಂದರವರು (ಅಧ್ಯ... ಮುದ್ದಯ್ಯನವರು (ಸೆಕ್ರೆ... ಬೆಳ್ಳಿಯಪ್ಪ ಯಸ್. ಪೂವಯ್ಯ... ರು, ಕೂಚ ಸಿಕ್ಕೇರಿ ಚಿನ್ನನವ... ವರು, ಚಿಕ್ಕಮುಂಡಿಯರು ... ರು, ಈಡೂರು ಕಟ್ಟನವ... ನವರು.

ಅಧ್ಯಕ್ಷರ ವಂದನೆ... ವು ಮುಗಿಯಿತು.

ನೋ...

ಎರಡು ನರ್ಸಗಳನ್ನು...

ಎರಡು ನರ್ಸಗಳನ್ನು ... ಆರು ತಿಂಗಳ ವರೆಗೆ ತಯಾರುಮಾಡುವ ಬಗ್ಗೆ ಒಬ್ಬೊಬ್ಬರಿಗೆ 100 ರೂ. ಯಂತೆ ವೇತನ ಕೊಡಲು ಕೊಡಗಿನ 'ಇಂಡಿಯನ್ ರೆಡ್ ಕ್ರಾಸ್' ಸಂಘದವರು ಒಪ್ಪಿಕೊಂಡಿರುವರು. ವಿದ್ಯೆಯ ಮತ್ತು ವಾಸಸ್ಥಳವನ್ನು ನಮೂದಿಸಿ ಉಮೇದುವಾರರು ಅಪ್ಲಿಕೇಶನನ್ನು ಸಿವಿಲ್ ಸರ್ಜನರಿಗೆ ಬರೆಕೊಳ್ಳತಕ್ಕದ್ದು. ಹೆಚ್ಚಿನ ಮಾಹಿತಿಯನ್ನು ಕೊಡಗಿನ ಸಿವಿಲ್ ಸರ್ಜನರ ಆಫೀಸಿನಿಂದ ಪಡೆಕೊಳ್ಳಬಹುದು.

ಮಡಿಕೇರಿ,
ತಾ. 5—12—1933.

ಡಿ. ಕ್ರಾಮ್ಮ್ಯ,
ಅಸಿಸ್ಟೆಂಟ್ ಸಿವಿಲ್ ಸರ್ಜನ್.

2—1

ವೇದಾಂತ ಸಂಘದ ಕಟ್ಟಡ ಫಂಡು.

ಮಡಿಕೇರಿ ವೇದಾಂತ ಸಂಘದ ಕಟ್ಟಡದ ಬಗ್ಗೆ ದ್ರವ್ಯ ಸಹಾಯ ಮಾಡುವದಾಗಿ ಈವರೆಗೆ ವಾಗ್ದಾನ ಮಾಡಿರುವ ಸಂಘದ ಮೆಂಬರುಗಳು ಮತ್ತು ಮಹಾಜನರುಗಳು:—

ಮೆಂಬರುಗಳು

ಮಿ. ಪಟ್ಟಮಾಡ ಚಿಣ್ಣಪ್ಪನವರು	100 ರೂಪಾಯಿ.
„ ಆರ್. ಯಂ. ಕರಿಯಪ್ಪನವರು	300 (125 ಸಂದಿದೆ)
„ ಗಣಪತಂಡ ಸುಬ್ಬಯ್ಯನವರು	100
„ ಸೋಮಂಡ ಕುಟ್ಟಪ್ಪನವರು	60
„ ಎ. ಶಂಕರನಾರಾಯಣರಾಯರು	10
„ ಪಳಂಗಂಡ ಅಪ್ಪಯ್ಯನವರು	30
„ ಬಾಚರಣಿಯಂಡ ಗಣಪತಿಯವರು	50
„ ಚೇಂದ್ರಿಮಾಡ ಗಣಪತಿಯವರು	20
„ ಮುಕ್ಕಾಟಿರ ಅಪ್ಪಯ್ಯನವರು	50
„ ಕೊಕ್ಕಂಗಡ ಬೆಳ್ಯಪ್ಪನವರು	15
„ ಕುಡಿಯಂಡ ಮುತ್ತಣ್ಣನವರು	10
„ ಕುಂಬೆರ ಪೂವಯ್ಯನವರು	10
„ ಸಿ. ಬಿ. ಪ್ರೈಸಿಂಗ್ (ಗೌರ್ನಮೆಂಟ್ ಪ್ಲೀಡರು)	100
„ ಚೇನಂಡ ಅಪ್ಪಯ್ಯನವರು	25
„ ಚಿಕ್ಕಂಡ ಐಯ್ಯಪ್ಪನವರು	75
„ ಸಿ. ಅಚ್ಯುತರಾಯರು	25
„ ಜೆ. ವಿ. ಮನೆ ಪೊನ್ನಪ್ಪನವರು	25
„ ಎಂ.ಎನ್. ಅನಂತಪದ್ಮನಾಭರಾಯರು	20
[illegible]	100

WANTED.

Candidates for Electrical, Automobile, Wireless, Telegraph and Commercial classes opening shortly. Railfare paid. Rules on 2 anna stamps.

IMPERIAL GUILD INSTITUTE,
6—2 Bombay, 18.

ಕೊಡಗಿನಲ್ಲಿ ಸತ್ಯಾಗ್ರಹ.

ಮಡಿಕೇರಿ ಹುತ್ತರಿ ಸಂತೆಯಲ್ಲಿ ದಸ್ತಗಿರಿ.

ಜನಸಮುದಾಯದ ಉತ್ಸಾಹಭರಿತವಾದ ಜಯಘೋಷ.

ಜುಲ್ಮಾನೆಗಾಗಿ ದನಗಳ ಜಪ್ತಿ ಮತ್ತು ಜಪ್ತಿಯ ಮೇಲೆ ತಕರಾರು ಅರ್ಜಿಗಳು.

ಈ ತಾ. 5ನೇ ಸೋಮವಾರ ಮಡಿಕೇರಿಪೇಟೆಯಲ್ಲಿ ಕಾಂಗ್ರೆಸಿನ ಸ್ವಯಂಸೇವಕರಾದ ಶ್ರೀಯುತರುಗಳಾದ ಅಳಮೇಂಗಡ ಮಾಚಯ್ಯನವರು, ಅಪ್ಪನೆರವಂಡ ನಾಣಜ್ಜನವರು, ಚಿರಮಾಣವಂಡ ಮಾದಮ್ಮಯ್ಯನವರು, ಮಲ್ಲಂಡ ಮಾದಯ್ಯನವರು ಮತ್ತು ಹರಿಜನರ (18 ವರ್ಷ ಪ್ರಾಯದ) ಸುಬ್ಬನವರು ಸ್ವದೇಶಿ ಸ್ವಾವಲಂಬನೆಯ ಕರಪತ್ರಗಳನ್ನು ಹಂಚುತ್ತಾ, ಸಾರಾಯಿ ಅಂಗಡಿಯಿಂದ ಸಂತೆಮಾಳದ ಕಡೆಗೆ ಜಯಘೋಷ ಮಾಡುತ್ತಾ ಬರುತ್ತಿದ್ದಾಗ್ಗೆ ಪೊಲೀಸು ಸಬ್ ಇನ್‌ಸ್ಪೆಕ್ಟರವರು 1 ಡಜನ್ ಪೊಲೀಸಿನವರೊಡನೆ ಬಂದು ಅವರೈವರನ್ನು ದಸ್ತಗಿರಿ ಮಾಡಿ, ಪೇಟೆಯಿಂದ ಹೊರಗೆ ಕರೆದುಕೊಂಡು ಹೋದರು. 1000ಕ್ಕಿಂತ ಹೆಚ್ಚಾಗಿ ಜನರು ಉತ್ಸಾಹದಿಂದ ಜಯಘೋಷ ಮಾಡುತ್ತಾ, ಸೈದುಮಾಡಲ್ಪಟ್ಟವರನ್ನು ಸುಮಾರು ಅರ್ಧ ಮೈಲು ದೂರ ಹಿಂಬಾಲಿಸಿದರು; ನಂತರ ಕೆಲವರಿಂದ ಸಮಾಧಾನಗೊಳಿಸಲ್ಪಟ್ಟು, ವಾಪಸು ಹೋದರು. ದಸ್ತಗಿರಿಯಾದವರನ್ನು ಸಾಯಂಕಾಲ ಬಸ್ಸಿನಲ್ಲಿ ವೀರರಾಜಪೇಟೆಗೆ ಒಯ್ದರು.

ಮರುದಿನ ಮುನ್ಸೀಫ್ ಮೇಜಿಸ್ಟ್ರೇಟರ ಕೋರ್ಟಿನಲ್ಲಿ ವಿಚಾರ ನಡೆದು ಅವರೈವರಿಗೂ ಮೂರು ಮೂರು ತಿಂಗಳು ಕಠಿಣ ಸಜೆಯೂ ಮತ್ತು 15 ರೂ. ಜುಲ್ಮಾನೆಯೂ, ಜುಲ್ಮಾನೆ ಕೊಡದೆ ತಪ್ಪಿದರೆ ಎರಡು ತಿಂಗಳು ಹೆಚ್ಚಿನ ಸಜೆಯೂ ವಿಧಿಸಲಾಯಿತೆಂದೂ, ಮಾರನೆ ದಿನ ಅವರು ಕಣ್ಣನ್ನೂರು ಸೆಂಟ್ರಲ್ ಜೈಲಿಗೆ ಕಳುಹಿಸಲ್ಪಟ್ಟರೆಂದೂ ವರ್ತಮಾನ.

ಸತ್ಯಾಗ್ರಹಕ್ಕಾಗಿ ಈಗ ಜೈಲುವಾಸದಲ್ಲಿರುವ ಮೆ. ಪುಟ್ಟೀರಂಡ ಪಿ. ಕಾರ್ಯಪ್ಪನವರ 20 ರೂ. ಜುಲ್ಮಾನೆ ವಸೂಲಾತಿಗಾಗಿ ಅವರ ತಂದೆ ಗಣಪತಿಯವರ 1ಕರು ಮತ್ತು ಅವರ ಕರುವೂ, ಮೆ. ಮಚ್ಚಿಯಂಡ ಕಾರ್ಯಪ್ಪನವರ ಜುಲ್ಮಾನೆಗಾಗಿ ಅವರ ತಂದೆ ಸುಬ್ಬಯ್ಯನವರ 2 ಕೋಣಗಳೂ ಮತ್ತು ಮೆ. ಮುಕ್ಕಾಟೀರ ಕುಶಾಲಪ್ಪನವರ ಜುಲ್ಮಾನೆಗಾಗಿ ಅವರ ಅಣ್ಣ ನಂಜಪ್ಪನವರ 1ಎತ್ತು ಮತ್ತು 1ಹಸುವನ್ನೂ ಕಳೆದ ತಾ. 24ರಲ್ಲಿ ಪೊಲೀಸಿನವರು ಜಪ್ತಿ ಮಾಡಿ ಪಟೇಲರವರ ಜವಾಬ್ದಾರಿ ಮೇಲೆ 15 ದಿವಸಗಳ ವರೆಗೆ ಬಿಟ್ಟಿರುವರೆಂತಲೂ, ಈ ದನಗಳ ವಾರೀಸರು ಮೆ. ಪಳೆಯಂಡ ಕುಶಾಲಪ್ಪ ಲಾಯರವರ ಮೂಲಕ ತಕರಾರು ಅರ್ಜಿಗಳನ್ನು ಹಾಕಿರುವರೆಂತಲೂ, ಅವುಗಳ ವಿಚಾರವು ಈ ತಾರೀಕು 9ಕ್ಕೆ ಇಡಲಾಗಿದೆಯೆಂತಲೂ ವರ್ತಮಾನ.

ಸೂಚನೆ.

ಹುತ್ತರಿ ಹಬ್ಬಕ್ಕಾಗಿ "ಕೊಡಗು" ಕಂಪೆನಿಯ ಆಫೀಸು ಬರುವ ವಾರ ಮುಚ್ಚಲ್ಪಡುವ ಕಾರಣ ನಮ್ಮ ಪತ್ರಿಕೆಯ ಈ ತಾ. 16ರ ಸಂಚಿಕೆಯು ಪ್ರಕಟವಾಗುವುದಿಲ್ಲ.

ತಾ. 9—12—32 **ಮೇನೇಜರ್.**

ಒಳದೇಶ.

ಕಳೆದ ಅಕ್ಟೋಬರು ತಿಂಗಳಲ್ಲಿ ಕೊಡಗಿನಲ್ಲಿ 325 ಜನನಗಳೂ, 307 ಮರಣಗಳೂ ಸಂಭವಿಸಿರುವುದಾಗಿ ತಿಳಿಯುತ್ತದೆ.

ಈ ತಾ. 19ರಲ್ಲಿ ಕೆಗ್ಗಟ್ಟ ನಾಡು ಪಂಚಾಯಿತಿ ಹರಿಜನರ ಸಭೆಯೊಂದು ಪೊನ್ನಂಪೇಟೆಯಲ್ಲಿ ನಡೆಯುವುದಾಗಿ ವರ್ತಮಾನ.

ಸಹಕಾರಿ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ತಾ. 24—12—32ನೇ ಶನಿವಾರ ಬೆಳಿಗ್ಗೆ 11 ಗಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ನಡೆಯುವುದು.

ಕೊಡಗಿನ ಭವಿಷ್ಯತ್ತನ್ನು ಕುರಿತು ತೀರ್ಮಾನಿಸಲು ಎಲ್ಲಾ ಪಕ್ಷಗಳ ಕಾನ್ಫರೆನ್ಸೊಂದು ಈ ತಾ. 18ರಲ್ಲಿ ಮಡಿಕೇರಿಯಲ್ಲಿರುವ ಜವಾಹಿರ್ಲಾಲ್ ಸಂಘದ ಹಾಲ್‌ನಲ್ಲಿ ನಡೆಯುವದೆಯೆಂದು ತಿಳಿಯಬರುತ್ತದೆ.

ಕೊಡಗಿನಲ್ಲಿ ಸಿವಿಲ್ ಸರ್ಜನರಾಗಿದ್ದು ಕಳೆದ ಮೇ ತಿಂಗಳಲ್ಲಿ ರಜೆಯಲ್ಲಿ ಹೋಗಿದ್ದ ಮೇಜರ್ ಯಫ್. ಆರ್. ತಾಂಟನ್‌ರವರು ರಜೆ ತೀರಿ ಬೊಂಬಾಯಿ ಪ್ರಾಂತ್ಯದಲ್ಲಿ ಉದ್ಯೋಗಕ್ಕೆ ಸೇರಿರುವರಾಗಿ ತಿಳಿಯಬರುತ್ತದೆ.

ಅಖಿಲ ಕೊಡಗು ಉಪಾಧ್ಯಾಯರ ಸಂಘದ 4ನೇ ವಾರ್ಷಿಕ ಸಮ್ಮೇಳನವು ಈ ತಾ. 3, 4 ಮತ್ತು 5ರಲ್ಲಿ ನಾಪೋಕ್ಲಿನಲ್ಲಿ ರಿಟಯರ್ಡ್ ಶಾಲಾ ಇನ್‌ಸ್ಪೆಕ್ಟರಾದ ಮೆ. ಎ. ರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಇದರ ವಿವರವು ಇನ್ನೊಂದು ಕಡೆ ಕೊಡಲಾಗಿದೆ.

ಇಂಡಿಯನ್ ಸಿವಿಲ್ ಸರ್ವಿಸಿಗೆ ಸ್ಪರ್ಧೆಯ ಪರೀಕ್ಷೆಯೊಂದು 1933ನೇ ಸೇ ಜುಲೈ ಮತ್ತು ಆಗೋಸ್ತು ತಿಂಗಳುಗಳಲ್ಲಿ ಲಂಡನಿನಲ್ಲಿ ನಡೆಯುವುದು. ಇದಕ್ಕೆ ಸಂಬಂಧಪಟ್ಟ ನಿಬಂಧನೆಗಳನ್ನೂ, ಅಪ್ಲಿಕೇಶನ್ ಫಾರ್ಮನ್ನೂ ಇಚ್ಛಿಸುವವರು ನಮ್ಮ ಆಫೀಸಿನಲ್ಲಿ ಬಂದು ನೋಡಿಕೊಂಡು ಹೋಗಬಹುದು.

ಕಳೆದ ತಾ. 29ರಲ್ಲಿ ಮಂಗಳೂರಿನಲ್ಲಿ ನಡೆದ ಕಾಲೇಜು ವಿದ್ಯಾರ್ಥಿಗಳ ಆಟೋಟಗಳ ಸ್ಪರ್ಧೆಯಲ್ಲಿ ಮೆ. ಯಂ. ಬಿ. ದೇವಯ್ಯನವರು 100, 220, 440, 880 ಗಜಗಳ ಮತ್ತು 1 ಮೈಲು ಓಟಗಳಲ್ಲಿ 1ನೇಯದಾಗಿ ಬಂದು ಇನಾಮುಗಳನ್ನು ಪಡೆದುದಲ್ಲದೆ, 'ಚ್ಯಾಂಪಿಯನ್ ಶಿಪ್' (ವಿಜೇತನದ) ಮೆಡಲನ್ನೂ ಪಡೆದರೆಂದು ತಿಳಿಯಲು ಸಂತೋಷಪಡುತ್ತೇವೆ. ಸಾಯಂಕಾಲ 3ರಿಂದ 5 ಗಂಟೆಯೊಳಗೆ ನಡೆದ ಆಟೋಟಗಳಲ್ಲಿ ಇವರು ಒಂದರನಂತರ ಒಂದರಂತೆ 5 ಓಟಗಳಲ್ಲಿ ಗೆದ್ದದ್ದು ಸ್ತುತ್ಯಾರ್ಹವಾಗಿದೆ.

'ಯಂ. ಪೂಣಚ್ಚ ಗಂಗಮ್ಮ ಕಪ್' ಹಾಕಿ ಟೂರ್ನಮೆಂಟು ಕಳೆದ ತಿಂಗಳ ಆಖೈರು ವಾರದಲ್ಲಿ ಪೊನ್ನಂಪೇಟೆಯಲ್ಲಿ ನಡೆಯಿತು. 5 ಟೀಮುಗಳು ಭಾಗಿಗಳಾಗಿದ್ದವು. ತಾರೀಕು 30—11—32ರಲ್ಲಿ ನಡೆದ ಆಖೈರು ಆಟದಲ್ಲಿ ಗೋಣಿಕೊಪ್ಪ ಯೂನಿಯನ್ನಿನವರು ಪೊನ್ನಂಪೇಟೆ ಕ್ಲಬ್ಬಿನವರನ್ನು ಸೋಲಿಸಿ ಕಪ್ಪನ್ನು ಗೆದ್ದರು. ಮೆ. ಪುಚ್ಚಿಮಾಡ ಕುಟ್ಟಪ್ಪನವರು ಗೆದ್ದವರಿಗೆ ಕಪ್ಪನ್ನು ಕೊಟ್ಟರು. ಮೆ. ಪೂ ಣಚ್ಚ ಮಾಡ ನಾಣಯ್ಯನವರು ತಮ್ಮ ತಂದೆಯವರ ಹೆಸರಿನಲ್ಲಿ ಒಂದು ಹಾಕಿ ಕಪ್ಪನ್ನು ಕೊಡುತ್ತಾರಾಗಿ ಸುದ್ದಿ.

ಈ ಮೊದಲು ಕೊಡಗಿನ ಶಾಲೆಗಳ ಇನ್‌ಸ್ಪೆಕ್ಟರಾಗಿದ್ದು ರಜೆಯಲ್ಲಿ ಹೋಗಿದ್ದ ಮೆ. ಎಫ್. ಯಫ್. ಸಿ. ಎಡ್ಮಂಡ್ಸ ರವರು ರಜೆ ತೀರಿ ಕಳೆದ ತಾ. 12ರಲ್ಲಿ ಪುನಃ ಇನ್ಸ್‌ಪೆಕ್ಟರ್ ಹುದ್ದೆಯನ್ನು ಕೈಕೊಂಡಿರುವರು. ಹಂಗಾಮಿ ಇನ್ಸ್‌ಪೆಕ್ಟರಾಗಿದ್ದ ಮೆ. ಯಂ. ಸುಲ್ತಾನ್ ಮೊಹಿದೀನ್‌ರವರು ಪುನಃ ಮೈಸೂರು ಸರ್ವಿಸಿಗೆ ವರ್ಗಾಯಿಸಲ್ಪಟ್ಟಿರುವರು. ಆದುದರಿಂದ ಮೆ. ಮೊಹಿದೀನ್‌ರವರು ಕೊಡಗು ಕೌನ್ಸಿಲ್ ಮೆಂಬರು ತನಕ್ಕೆ ರಾಜೀನಾಮೆ ಕೊಟ್ಟಿರುವರು. ಆ ಸ್ಥಳಕ್ಕೆ ಮೆ. ಎಡ್ಮಂಡ್ಸ ರವರು ಮೆಂಬರಾಗಿ ನೇಮಿಸಲ್ಪಟ್ಟಿರುವರು.

ಮಡಿಕೇರಿ ವೇದಾಂತ ಸಂಘದ ಆಶ್ರಯದಲ್ಲಿ 'ಗೀತಾಜಯಂತಿ' ದಿನವು ತಾ. 8ರಲ್ಲಿ ಜಹೂನಾಥರ ಸುಭಾ ಹಾಲ್‌ನಲ್ಲಿ ಆಚರಿಸಲ್ಪಟ್ಟಿತು. ಮೆ. ಆರ್. ಹೆಚ್. ಶೆಣ್ಯೆಯವರು ಅಧ್ಯಕ್ಷರಾಗಿದ್ದರು. ಬಾಲಿಕೆಯರ ಗೀತಾ ಪಠಣ ಸ್ಪರ್ಧೆಯಲ್ಲಿ ಮೆ. ಸಿ. ಯನ್. ಮೊಣ್ಣಪ್ಪಯ್ಯನವರ ಪುತ್ರಿ, ಶ್ರೀಮತಿ ಸೀತಾ ಲಕ್ಷ್ಮಿಯು 1ನೇ ಇನಾಮನ್ನು ಗೆದ್ದಳು. ಸಾಯಂಕಾಲ ಭಜನೆಯಾದನಂತರ ಮೆ. ಕೇಲಸರ ಅಣ್ಣಯ್ಯನವರು ಗೀತೆಯನ್ನು ಕುರಿತು ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದರು. ಅಧ್ಯಕ್ಷರ ಭಾಷಣಾನಂತರ ಮಂಗಳಾರತಿ ಮತ್ತು ಪ್ರಸಾದ ವಿನಿಯೋಗವಾಯಿತು.

ಹೊರದೇಶ.

ಈ ತಾ. 4ರಲ್ಲಿ ಲಕ್ನೋದಲ್ಲಿ 'ಗಾಂಧಿ ದಿನ'ವನ್ನು ಆಚರಿಸಿದಾಗ್ಯೆ 70 ಕಾಂಗ್ರೆಸ್ ಸ್ವಯಂಸೇವಕರು ಸೈದುಮಾಡಲ್ಪಟ್ಟರು.

ಮೂರು ವಾರಗಳಿಂದ ಅಸೆಂಬ್ಲಿಯಲ್ಲಿ ಚರ್ಚೆ ನಡೆಯುತ್ತಿದ್ದ ಆರ್ಡಿನೇನ್ಸ್ ಬಿಲ್ಲು ತಾ. 7ರಲ್ಲಿ ಬಹು ಮತದಿಂದ ಪಾಸಾಯಿತು.

ಅಹ್ಮದಾಬಾದಿನಲ್ಲಿ ಗುಜರಾತ್ ರಾಜಕೀಯ ಪರಿಷತ್ತನ್ನು ನಡೆಸಲು ಯತ್ನಿಸಿದಾಗ ತಾ. 4ರಲ್ಲಿ 100 ಕ್ಕೆ ಮೀರಿ ಗಂತಲೂ ಹೆಚ್ಚಾಗಿಯೂ, ತಾ 5ರಲ್ಲಿ 20 ಜನರೂ ದಸ್ತಗಿರಿ ಮಾಡಲ್ಪಟ್ಟರು.

ಈ ತಾ. 18 ನೇ ಆದಿತ್ಯವಾರವನ್ನು ಅಸ್ಪೃಶ್ಯತಾ ನಿವಾರಣೆಯ ದಿನವಾಗಿ ಹಿಂದೂಸ್ಥಾನದ ಪ್ರತಿಯೊಂದು ಪಟ್ಟಣ, ಗ್ರಾಮ ಮತ್ತು ದುನಿಯಲ್ಲಿಯೂ ಆಚರಿಸಬೇಕಾಗಿ ಮಹಾತ್ಮ ಗಾಂಧಿಯವರ ಕೋರಿಕೆಯಾಗಿದೆ.

ಸರ್ವ ಪಕ್ಷ ಮುಸ್ಲಿಂ ಕಾನ್ಫರೆನ್ಸು ಈ ತಾ. 10 ಮತ್ತು 11ರಲ್ಲಿ ಲಕ್ನೋದಲ್ಲಿಯೂ, ಅಲ್ಲಹಾಬಾದಿನಲ್ಲಿ ಐಕ್ಯತಾ ಸಮ್ಮೇಳನವು ತಾ. 13ರಲ್ಲಿಯೂ, ಹಿಂದೂ ದೇಶದ ಸರ್ವ ಪಕ್ಷ ಪ್ರತಿನಿಧಿಗಳ ಸಭೆಯು ತಾ 14ರಲ್ಲಿಯೂ ನಡೆಯುವವು.

ಡಿಸೆಂಬರು ತಿಂಗಳಲ್ಲಿ ತನ್ನ ಸಮಯವನ್ನೆಲ್ಲಾ ಅಸ್ಪೃಶ್ಯತಾ ನಿವಾರಣೆ ಕೆಲಸಕ್ಕೆ ಉಪಯೋಗಿಸುವ ಉದ್ದೇಶವೆ. ರಾಜಗೋಪಾಲಾಚಾರ್ಯರು ಕಾಂಗ್ರೆಸಿನ ಅಧ್ಯಕ್ಷ ಪದವಿಯನ್ನು ಮೆ. ರಾಜೇಂದ್ರ ಪ್ರಸಾದ್‌ರವರಿಗೆ ವಹಿಸಿರುವರೆಂದು ವರ್ತಮಾನ.

'ಲಂಡನಿನಲ್ಲಿ ಎಷ್ಟು ದುಂಡು ಮೇಜು ಪರಿಷತ್ತುಗಳು ನಡೆದರೂ ಪ್ರಯೋಜನವಿಲ್ಲ. ಮಹಾತ್ಮ ಗಾಂಧಿಯವರು ಜೇನಿನ ಲಾಗಿರುವ ವರೆಗೆ ಅವರ ಸಹಕಾರವಿಲ್ಲದೆ ಇಂಡಿಯಾದಲ್ಲಿ ಶಾಂತಿ ದೊರಕದು. ಅವರ ಜೈಲು ವಾಸವನ್ನು ದೀರ್ಘಪಡಿಸಿದರೆ ಅವರ ಮೇಲೆ ಜನಸಮುದಾಯದ ಭಕ್ತಿಯು ಮತ್ತಷ್ಟು ಹೆಚ್ಚುವುದು' ಎಂದು ಮಿಸ್ ಎಲೆನ್ ವಿಲ್ಕಿನ್‌ಸನ್‌ರವರು ಒಂದು ಲೇಖನದಲ್ಲಿ ಬರೆದಿರುವರು.

3ನೇ ದುಂಡು ಮೇಜು ಪರಿಷತ್ತು ನಡೆಯುತ್ತಾ ಇದೆ. ಗವರ್ನರ್ ಜನರಲರಿಗೆ ಮಾತ್ರವಲ್ಲ ಪ್ರಾಂತೀಯ ಗವರ್ನರುಗಳಿಗೂ ತುರ್ತ ವೇಳೆಯಲ್ಲಿ ಆರ್ಡಿನೇನ್ಸ್‌ಗಳನ್ನೂ, ವಿಶೇಷ ಶಾಸನಗಳನ್ನೂ ಮಾಡುವ ಹಕ್ಕಿರಬೇಕೆಂತಲೂ, ರಕ್ಷಣೆ (ಸೈನ್ಯ ಇಲಾಖೆ) ಯ ವಿಷಯದಲ್ಲಿ ಅಧಿಕಾರವೆಲ್ಲವೂ ಗವರ್ನರ್ ಜನರಲರಿಗೆ ಇರಬೇಕೆಂದೂ ಬ್ರಿಟಿಷ್ ಮೆಂಬರುಗಳ ವಾದ. ಫೈನಾನ್ಸ್ (ಆರ್ಥಿಕ) ವಿಷಯದಲ್ಲೂ ಕೂಡ ಭದ್ರತೆಗಳು ಹಲವು ಇಡಲ್ಪಡುವಂತೆ ಕಾಣುತ್ತೆ. ಇಷ್ಟರ ವರೆಗಿನ ಚರ್ಚೆಗಳಿಂದ ಇಂಡಿಯನ್ ಲಿಬರಲ್ ಪಕ್ಷದವರಿಗೆ ತೃಪ್ತಿಯಾಗಿರುವಂತೆ ತೋರುವುದಿಲ್ಲ.

ರತ್ನಗಿರಿ ಜೈಲಿನಲ್ಲಿರುವ ಗುಜರಾತ ವಿದ್ಯಾಪೀಠದ ಪ್ರೊಫೆಸರಾದ ಅಪ್ಪಾ ಸಾಹೇಬ್ ಪಟವರ್ಧನ್‌ರವರು ತನ್ನ ಜೈಲು ಕೆಲಸದೊಂದಿಗೆ ತೋಟಿ ಕೆಲಸ ಮಾಡಲು ಬಿಡಬೇಕೆಂದು ಕೇಳಿಕೊಂಡದಕ್ಕೆ ಅಧಿಕಾರಿಗಳು ಸ್ವಲ್ಪದಿವಸ ಬಿಟ್ಟು, ನಂತರ ನಿಲ್ಲಿಸಿಬಿಟ್ಟದ್ದರಿಂದ ಅವರು ಪಾರ್ಕ್ಷ ಉಪವಾಸವ್ರತವನ್ನು ಕೈಕೊಂಡರು. ಇದನ್ನು ತಿಳಿದು ಮಹಾತ್ಮ ಗಾಂಧಿಯವರು ತನ್ನ ಸ್ನೇಹಿತ ಪಟವರ್ಧನರವರ ನ್ಯಾಯವಾದ ಕೋರಿಕೆಯನ್ನು ನಡಸಿ ಕೊಡದೆ ಹೋದರೆ ತಾನೂ ಉಪವಾಸ ಮಾಡುವನೆಂದು ಸರ್ಕಾರಕ್ಕೆ ಬರೆದರು. ಸರ್ಕಾರದವರು ಆಗುವುದಿಲ್ಲವೆಂದು ಕಠಿಣ ತರದ ಜವಾಬು ಕೊಟ್ಟದ್ದರಿಂದ ಮಹಾತ್ಮರು ಕಳೆದ ಶನಿವಾರ ಉಪವಾಸವನ್ನು ಕೈಕೊಂಡರು. ಕಡಲೇ ಜೈಲುಗಳ ಮುಖ್ಯಾಧಿಕಾರಿಯು ಗಾಂಧಿಯವರಲ್ಲಿಗೆ ಹೋಗಿ ತಾನು ಬುಧವಾರದೊಳಗೆ ಸರ್ಕಾರದ ವಿಷಯವನ್ನು ಸಂಪಾದಿಸುತ್ತೇನೆಂದು ಹೇಳಿದ್ದರಿಂದ 24 ಗಂಟೆಗಳ ನಂತರ ಮಹಾತ್ಮರು ಉಪವಾಸವ ಬಿಟ್ಟರು. ಅಷ್ಟರಲ್ಲಿ ಅವರ ತೂಕ 6 ಪೌಂಡು ಕಡಿಮೆಯಾಗಿತ್ತು. ಆ ವಿಷಯ ವಿಚಾರ ನಡೆಯುತ್ತಿರುವುದರಿಂದ ಪಟವರ್ಧನ್‌ರವರೂ ಉಪವಾಸವನ್ನು ಬಿಟ್ಟಿರುವರು.

ಕೊಡಗಿನ ಭವಿಷ್ಯತ್ತು.

ಸುಂಟಿಕೊಪ್ಪ ನಾಡಿನ ಗರ್ವಾಲೆ, ಶಿರಂಗಳ್ಳಿ, ಕಿರುವಾಲೆ, ಮಾದಾಪುರ, ಇಗ್ಗೋಡ್ಲು, ಹಾಡಗೇರಿ, ಐಗೂರು, ಕುಂಬೂರು ಮತ್ತು ಮಾದಾಪುರ ಗ್ರಾಮಸ್ಥರ ಮೀಟಿಂಗೊಂದು ಈ ತಾ. 2ರಲ್ಲಿ ಮಾದಾಪುರ ಮಠದಲ್ಲಿ ಮೆ. ಐಮುಡಿಯಂಡ ಕಾರ್ಯಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಸುಮಾರು 100 ಜನರು ಹಾಜರಿದ್ದರು.

ಮೆ ಗಳಾದ ಪಾಸೂರ ಕಾರ್ಯಪ್ಪನವರು, ಮುಕ್ಕಾಟಿರ ಮಾದಪ್ಪನವರು, ಬಿ. ಟಿ. ಪೂವಯ್ಯನವರು, ಬಿ. ಪೂವಯ್ಯನವರು, ಚೇರಿಯ ಮಂದಣ್ಣನವರು ಮತ್ತು ಮುಕ್ಕಾಟಿರ ಚಂಗಪ್ಪನವರು—ಕೊಡಗನ್ನು ಬೇರೆ ಯಾವ ಪ್ರಾಂತ್ಯಕ್ಕೂ ಸೇರಿಸದೆ, ಪ್ರತ್ಯೇಕವಾಗಿಟ್ಟುಕೊಂಡು ಪ್ರಾಂತೀಯ ಸ್ವಾತಂತ್ರ್ಯ ಸರ್ಕಾರ ಪಡೆಯಲು ಪ್ರಯತ್ನಿಸಬೇಕೆಂದು ಮುಂತಾಗಿಯೂ, ಅಧ್ಯಕ್ಷರು—ಹಿಂದೂ ದೇಶದಲ್ಲೂ, ಮುಖ್ಯವಾಗಿ ಕೊಡಗಿನಲ್ಲೂ ಸ್ವರಾಜ್ಯದ ಹೋರಾಟವು ನಡೆಯುತ್ತಿರುವಾಗ್ಗೆ, ಆ ಹೋರಾಟದಲ್ಲಿ ಕಷ್ಟಪಡುವವರನ್ನು ಬಿಟ್ಟು ನಾವು ಯಾವ ತೀರ್ಮಾನವನ್ನಾದರೂ ಮಾಡಲಾರದು, ಸರಿಯಲ್ಲವೆಂತ ಮೊದಲಾಗಿಯೂ ಮಾತಾಡಿದ ಮೇಲೆ ಈ ಕೆಳಗಿನ ಠರಾವು ಸರ್ವಸಮ್ಮತದಿಂದ ಮಂಜೂರಾಯಿತು.

"ಕಾಂಗ್ರೆಸಿಗೂ ಮತ್ತು ಸರ್ಕಾರಕ್ಕೂ ನಡೆಯುತ್ತಿರುವ ಹೋರಾಟವು ತೀರಿ, ಬಂಧಿತರು ಬಿಡುಗಡೆ ಹೊಂದಿ, ದೇಶದಲ್ಲಿ ಶಾಂತಿ ಉಂಟಾಗುವ ವರೆಗೆ, ಕೊಡಗಿನ ಭವಿಷ್ಯತ್ತನ್ನು ತೀರ್ಮಾನಿಸುವ ಚಳವಳಿಯನ್ನು ಈ ಸಭೆಯು ವಿರೋಧಿಸುತ್ತದೆ."

ಪಿ. ಕಾರ್ಯಪ್ಪ,
(ಅಧ್ಯಕ್ಷ.)

(ಸೂಚನೆ.—ಸ್ಥಳ ಸಂಕೋಚದಿಂದ ಭಾಷಣಗಳ ವಿವರವನ್ನು ಹಾಕಲು ಸಾಧ್ಯವಾಗಲಿಲ್ಲ. ಸಂ. ಕೊ.)

COORG CIVIL SURGEON'S OFFICE.
Mercara, the 3rd December 1932,

NOTICE.

Sealed tenders for the hiring out of calves to the Vaccine Depot at Mercara for one year commencing from 1st April 1933 to 31st March 1934 will be received at the Civil Surgeon's Office, Mercara, upto 11 a. m on Friday the 20th January 1933.

For terms and other particulars apply to the Vaccine Inspector or the Civil Surgeon's Office at Mercara.

D FRAMJEE,
Offg. Civil Surgeon, Coorg.

ಕೊಡಗು ಸಿವಿಲ್ ಸರ್ಜನರ ಆಫೀಸು,
ಮಡಿಕೇರಿ. 3—12—1932.

ನೋಟೀಸು.

1933ನೇ ಏಪ್ರಿಲ್ 1ರಿಂದ 1934ನೇ ಮಾರ್ಚ 31ರ ವರೆಗೆ ಒಂದು ವರ್ಷ ಮಡಿಕೇರಿ ವ್ಯಾಕ್ಸಿನ್ ಇಲಾಖೆಗೆ ಕರುಗಳನ್ನು ಬಾಡಿಗೆಗೆ ಕೊಡಲು ಮುದ್ರೆ ಹಾಕಿದ ದರಖಾಸ್ತುಗಳು (ಟೆಂಡರ್) ಮಡಿಕೇರಿ ಸಿವಿಲ್ ಸರ್ಜನರ ಆಫೀಸಿನಲ್ಲಿ 1933ನೇ ಜನವರಿ 20ನೇ ಶುಕ್ರವಾರ ಬೆಳಿಗ್ಗೆ 11 ಗಂಟೆಯ ವರೆಗೆ ತೆಗೆದುಕೊಳ್ಳಲಾಗುವವು.

ಕರಾರುಗಳು ಮತ್ತು ವಿವರಗಳಿಗೆ ವ್ಯಾಕ್ಸಿನ್ ಇನ್ಸ್‌ಪೆಕ್ಟರಿಗೆ ಅಥವಾ ಮಡಿಕೇರಿ ಸಿವಿಲ್ ಸರ್ಜನರ ಆಫೀಸಿಗೆ ಬರೆದು ಕೇಳಬಹುದು.

ಡಿ. ಫ್ರಾಮ್ಜಿ.

ಎ. ಕೆ. ಸುಬ್ಬೈಯ್ಯನವರು, ಮನೆಯಪಂಡ ಚಿಣ್ಣಪ್ಪನವರು, ಜಿ. ಯಂ. ಮಂಜುನಾಥೈಯ್ಯನವರು, ಯನ್. ಸಂಣೈಯ್ಯನವರು, ಬಿದರೂರು ಮಾದೈಯ್ಯನವರು, ಸಿಂಗೂರು ಮಾದಪ್ಪನವರು, ಯನ್. ಶಂಕರೈಯ್ಯನವರು, ಬಾಳೆಕ್ಕಲ್ಲು ಕಾಳಪ್ಪನವರು, ಯಂ. ಯಂ. ಸಿದ್ದೇಶರು, ಕೆಕ್ಕರ ಅನಂದೈಯ್ಯನವರು, ಮುಕ್ಕಾಟಿರ ಕರುಂಬೈಯ್ಯನವರು, ಚೆಮ್ಮನೆ ಮುತ್ತಣ್ಣೈಯ್ಯನವರು, ಅಂಜಪರವಂಡ ತಿಮ್ಮಯ್ಯನವರು, ಮತ್ತು ಮೊದಲನೇ ಠರಾವು ತೀರ್ಮಾನವಾದ ನಂತರ ಬಂದ ಮೆ. ಬಿದ್ದಂಡ ಸುಬ್ಬೈಯ್ಯನವರು.

ನೋಟೀಸಿನಲ್ಲಿ ನಮೂದಿಸಿದ್ದ ಈ ಕೆಳಗಿನ ಠರಾವನ್ನು ಮೆ. ಐ. ಕೆ. ಸುಬ್ಬೈಯ್ಯನವರು ಸಭೆಯ ಮುಂದೆ ಇಟ್ಟರು. "ಕೊಡಗಿನ ಸರಕಾರಕ್ಕೆ ಇಂಡಿಯಾ ಸರಕಾರವು ಹಿಂದಿನ ಸಿಲ್ಕಿನ ಕೆಲವು ಭಾಗವನ್ನು ದಾನ ಕೊಟ್ಟು, ಇನ್ನು ಮುಂದೆ ಸಾಲಿಯಾನ ಐದು ಲಕ್ಷ ರೂಪಾಯಿ (ಸಬ್ಸಿಡಿ) ಕೊಡಲು ಒಪ್ಪಿ ಕೊಡಗಿಗೆ ಸಂಪೂರ್ಣ ಸ್ವಾತಂತ್ರ್ಯದ ಸರಕಾರವನ್ನು ಮಂಜೂರುಮಾಡಿಕೊಡಬೇಕು, ಹೀಗೆ ಮಾಡಲು ಸಾಧ್ಯವಿಲ್ಲವೆಂತ ಸಂಬಂಧಪಟ್ಟ ಅಧಿಕಾರಿಗಳಿಗೆ ತೋರಿದರೆ ಕೊಡಗಿನ ಜನರಿಗೆ ಇರುವ ಕೋವಿ ಕತ್ತಿ, ಜಮ್ಮ ಮತ್ತು ಇತರ ಹಕ್ಕುಗಳನ್ನು ಭದ್ರಪಡಿಸಿಕೊಂಡು ಪ್ರತ್ಯೇಕ ಜಿಲ್ಲೆಯಾಗಿಯೇ ಇಟ್ಟುಕೊಳ್ಳುವ ಶರತ್ತಿನಿಂದ ಮೈಸೂರು ಸಂಸ್ಥಾನಕ್ಕೆ ಸೇರಿಸಬೇಕು."

ಮೆ. ಯಂ. ಯಂ. ಸಿದ್ದೇಶರು ಅನುಮೋದಿಸಿದರು. ಮೆ. ಬಾಳೆಕ್ಕಲ್ಲು ಕಾಳಪ್ಪನವರು ಪುಷ್ಟೀಕರಿಸಿದರು.

ಮ. ರಾ. ಶ್ರೀ ಮುಕ್ಕಾಟ್ಟಿರ ಕರುಂಬೈಯ್ಯನವರು ತತ್ಕ್ಷಣಕ್ಕೆ ಈ ಠರಾವನ್ನು ಬಾಕಿ ಇಟ್ಟು ಹಿಂದಿನಿಂದ ಕಾಂಗ್ರೆಸಿನ ನಿಶ್ಚಯದ ಹಾಗೆ ನಡೆದು ಒಗ್ಗಟ್ಟಾಗಿ ತೀರ್ಮಾನಿಸುವುದು ಉತ್ತಮವೆಂತ ಸೂಚಿಸಿದರು. ದೇಶಕ್ಕೆ ಅನುಕೂಲಗಳನ್ನು ಪಡೆಯಲು ಬೇರೆ ದೇಶದೊಂದಿಗೆ ಸೇರಬೇಕಾಗಬಹುದು. ಆದರೆ ಈಗ ಈ ತೀರ್ಮಾನ ಮಾಡುವುದು ಬೇಡವೆಂತ ಸೂಚಿಸಿದರು.

ಮ. ರಾ. ಶ್ರೀ. ಬಿದರೂರು ಮಾದೈಯ್ಯನವರು ಕಾಂಗ್ರೆಸಿನ ಹೋರಾಟದಿಂದ ಜಯವಾಗುವುದಿಲ್ಲವೆಂತ ಹೇಳಲಾಗದು. ಜಯವಾಗುತ್ತದೆಯೆಂತ ಭರವಸೆ ಇಟ್ಟು ಕೆಲಸ ಮಾಡಬೇಕು. ಹೀಗೆ ಬೇರೆಯೇ ಇರಲು ಸಾಧ್ಯವಿಲ್ಲವೆಂತಾದರೆ ಮೈಸೂರಿಗೆ ಸೇರಬಹುದು ಎಂತ ಹೇಳಿದರು.

ಮ. ರಾ. ಶ್ರೀ. ಜಿ. ಯಂ. ಮಂಜುನಾಥೈಯ್ಯನವರು ಠರಾವಿನ ಪರವಾಗಿ ಮಾತಾಡಿದ ನಂತರ ಮೆ. ಐ. ಕೆ. ಸುಬ್ಬೈಯ್ಯನವರು ಜವಾಬುಕೊಟ್ಟರು.

ಮೆ. ಗಳಾದ ಮುಕ್ಕಾಟಿರ ಕರುಂಬೈಯ್ಯನವರು ಮತ್ತು ಬಿದರೂರು ಮಾದೈಯ್ಯನವರು ನ್ಯೂಟ್ರಲ್ ಆಗಿದ್ದರು. ಇತರ ಸರ್ವರ ಒಪ್ಪಿಗೆಯಿಂದ ಠರಾವು ಮಂಜೂರಾಯಿತು.

ಶೀಘ್ರದಲ್ಲೇ ಆಗಲಿಕ್ಕಿರುವ ಸರ್ವ ಪಕ್ಷ ಪರಿಷತ್ತಿಗೆ ಸಂಘದ ಪರವಾಗಿ ಈ ಕೆಳಗಿನ ಮಹನೀಯರು ಪ್ರತಿನಿಧಿಗಳಾಗಿ ಹೋಗಬೇಕೆಂತ ತೀರ್ಮಾನವಾಯಿತು.

ಮೆ. ಗಳಾದ ಐ. ಕೆ. ಸುಬ್ಬೈಯ್ಯನವರು, ಯಂ. ಯಂ. ಚಿಣ್ಣಪ್ಪನವರು, ಅಂಜಪರವಂಡ ತಿಮ್ಮೈಯ್ಯನವರು, ಬಿದ್ದೀರಂಡ ಮಾಚೈಯ್ಯನವರು, ಪಾರಿಂದ ಅಪ್ಪೈಯ್ಯನವರು, ಯಂ. ಯಂ. ಸಿದ್ದೇಶರು, ಕೆಕ್ಕರ ಅನಂದೈಯ್ಯನವರು, ಜಿ. ಯಂ. ಮಂಜುನಾಥೈಯ್ಯನವರು, ಬಾಳೆಕ್ಕಲ್ಲು ಕಾಳಪ್ಪನವರು ಮತ್ತು ಸಿಂಗೂರು ಮಾದಪ್ಪನವರು.

ಮೆ. ಕೆ. ಪಿ. ಚಿಣ್ಣಪ್ಪನವರು ಜನರಲ್ ಸೆಕ್ರೆಟರಿ ಕೆಲಸಕ್ಕೆ ಕೊಟ್ಟ ರಾಜಿನಾಮೆಯನ್ನು ಅಂಗೀಕರಿಸಲಾಯಿತು. ಅವರ ಬದಲಿಗೆ ಮೆ. ಐ. ಕೆ. ಸುಬ್ಬೈಯ್ಯನವರನ್ನು ಆರಿಸಲಾಯಿತು.

ರಾಜಿನಾಮೆಕೊಟ್ಟ ಮೆ. ಕೆ. ಪಿ. ಚಿಣ್ಣಪ್ಪನವರು ಸೆಕ್ರೆಟರಿಯಾಗಿ ಮಾಡಿದ ಕೆಲಸಕ್ಕೆ ಅವರಿಗೆ ಅಭಿವಂದನೆಗಳು ಒಪ್ಪಿಸಬೇಕೆಂತ ತೀರ್ಮಾನವಾಯಿತು.

1932 ನೇ ಇಸವಿ ಮಾರ್ಚಿ ತಿಂಗಳಿನಿಂದ ನವೆಂಬರ್ ಆಖೈರ್ ವರೆಗಿನ ಲೆಖ್ಖ ನೋಡಿ ಒಪ್ಪಲಾಯಿತು.

ಕೊಡಗು ಬಂಡಿನ ಏಜೆಂಟರಾದ ಯಂ. ಬಿದ್ದಪ್ಪನವರನ್ನು ಸಂಘದ ಚಂದಾ ವಸೂಲ್ ಮಾಡುವಂತೆ ಕೇಳಿಕೊಳ್ಳಬೇಕೆಂತಲೂ, ಹಾಗೆ ವಸೂಲ್ ಮಾಡಿದ ಮೊಬಲಗಿಗೆ ಶೇಕಡ 12½ ಯಂತೆ ಕಮಿಶನ್ ಕೊಡಬಹುದೆಂತಲೂ ತೀರ್ಮಾನಿಸಲಾಯಿತು. ಮೆ. ಅಂಜಪರವಂಡ ತಿಮ್ಮೈಯ್ಯನವರು ಅವರ ಪ್ರಾಂತ್ಯದ ಮೆಂಬರುಗಳಿಂದ ಚಂದಾ ವಸೂಲ್ ಮಾಡಬೇಕೆಂತ ಕೇಳಿಕೊಂಡದ್ದಕ್ಕೆ ಒಪ್ಪಿದರು.

ಅಧ್ಯಕ್ಷರಿಗೆ ವಂದನೆಯೊಡನೆ ಸಭೆಯು ಬರ್ಖಾಸ್ತಾಯಿತು.

ಸಿ. ಯನ್. ಮೊಣ್ಣಪ್ಪೈಯ್ಯ,
(ಅಧ್ಯಕ್ಷ)

ಹರಿಜನರ ಮಹಾಸಭೆ.

(ಸ್ವಂತ ಬಾತ್ಮೀದಾರರಿಂದ)

ಕಿಗ್ಗಟ್ಟುನಾಡು ತಾಲೋಕಿನ ಹರಿಜನರ ಮಹಾಸಭೆ ಯೊಂದು ಈ ತಾ. 2 ರಲ್ಲಿ ಪೊನ್ನಂಪೇಟೆ ಶಾರದಾಶ್ರಮದಲ್ಲಿ ನಡೆಯಿತು. ಸುಮಾರು 150 ಹರಿಜನರೂ, 20 ಮೇಲ್ಜಾತಿಯವರೂ ಹಾಜರಿದ್ದರು. ಶಾರದಾಶ್ರಮದ ಸ್ವಾಮಿ ಶಿವಧನಾನಂದರವರು ಸಭೆಯ ಉದ್ದೇಶವನ್ನು ವಿವರಿಸಿದರು. ಮ. ರಾ. ಯಸ್. ಪೂವಯ್ಯನವರ ಸೂಚನೆ ಮೇರೆ ಸ್ವಾಮಿ ಶಾಂಭವಾನಂದರವರು ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡರು.

ಅಸ್ಪೃಶ್ಯತೆಯನ್ನು ಹೋಗಲಾಡಿಸುವ ಬಗ್ಗೆ ಮಹಾತ್ಮ ಗಾಂಧಿಯವರು ಹುಂಬ ಪ್ರಯತ್ನಪಡುತ್ತಿರುವರೆಂತಲೂ, ಈ ಉದ್ದೇಶಕ್ಕೆ ಅಸ್ಪೃಶ್ಯರನ್ನು ಇನ್ನು ಮುಂದೆ ಹರಿಜನರೆಂದು ಕರೆಯಬೇಕೆಂದು ಮಹಾತ್ಮರು ಸೂಚಿಸಿರುವರೆಂತಲೂ ಮುಂತಾಗಿ ಮೆ. ಸಿ. ಯಸ್. ಪೂವಯ್ಯನವರು ಮಾತಾಡಿ, ಹರಿಜನರ ಏಳಿಗೆಗಾಗಿ ಅವರು ಹೇಗೆ ವರ್ತಿಸಬೇಕೆಂಬುದಾಗಿ ಗಾಂಧೀಜಿಯವರು ಕೊಟ್ಟಿರುವ ಸೂಚನೆಗಳನ್ನು ಓದಿ ಹೇಳಿದರು.

ಮೆ. ಪಿ. ಐ. ಬೆಳ್ಯಪ್ಪನವರು ತಮ್ಮ ಚಿಕ್ಕ ಭಾಷಣದಲ್ಲಿ ಹೇಳಿದ್ದೇನೆಂದರೆ—'ಮಹಾತ್ಮ ಗಾಂಧಿಯವರ ಉಪವಾಸದಿಂದ ಅಸ್ಪೃಶ್ಯತಾ ನಿವಾರಣೆ ಚಳವಳಿಕ್ಕೆ ಬಹು ದೊಡ್ಡ ಶಕ್ತಿ ದೊರೆತಿದೆ. ಅವತಾರಪುರುಷರಂತಿರುವ ಗಾಂಧೀಜೀಯವರೇ ಹಿಂದೂ ಮತದ ಈ ದೊಡ್ಡ ಕಳಂಕದ ನಿವಾರಣೆಗೆ ತನ್ನ ಜೀವವನ್ನು ದಾನಮಾಡಿರುವಾಗ್ಯೆ ಅಸ್ಪೃಶ್ಯತಾ ಭಾವನೆಯು ಹೆಚ್ಚು ದಿನ ನಿಲ್ಲಲಾರದು. ಮಹಾತ್ಮರ ಪ್ರಭಾವದಿಂದ ಕಠಿಣ ಸನಾತನಿಗಳೇ ಈ ಕಾರ್ಯಕ್ಕೆ ಕೈ ಹಾಕುವ ಈ ಸಮಯದಲ್ಲಿ ಹರಿಜನರು ನಿದ್ರೆಯನ್ನು ಬಿಟ್ಟು ಮುಂದಕ್ಕೆ ಬರಬೇಕಾಗಿದೆ. ಮಹಾತ್ಮರ ಸೂಚನೆಯಂತೆ, ಹರಿಜನರು ತಮ್ಮ ಅಭಿವೃದ್ಧಿಗಾಗಿ ಪ್ರತಿನಿತ್ಯ ಸಾಧ್ಯವಿಲ್ಲದಿದ್ದರೂ ವಾರಕ್ಕೆ 2—3 ಸಾರಿಯಾದರೂ ಸ್ನಾನ ಮಾಡುವುದು, ವಾರಕ್ಕೊಂದು ಸಾರಿ ಬಟ್ಟೆ ಒಗೆಯುವುದು, ಮನೆಮಾರುಗಳನ್ನು ಚೊಕ್ಕಟವಾಗಿಟ್ಟುಕೊಳ್ಳುವುದು, ಸತ್ತ ಪ್ರಾಣಿಗಳ ಮತ್ತು ದನದ ಮಾಂಸ ತಿನ್ನುವುದನ್ನು ಬಿಡುವುದು, ಸತ್ತ ದನದ ಚರ್ಮವನ್ನು ಸುಲಿಯುವ ಪಾಠವನ್ನು ಮಾತ್ರ ಮೇಲೆ ಸ್ನಾನ ಮಾಡುವುದು, ಕುಡಿತವನ್ನು ಬಿಡುವುದು, ತಮ್ಮ ಮಕ್ಕಳನ್ನೆಲ್ಲಾ ಶಾಲೆಗೆ ಕಳುಹಿಸುವುದು, ದೊಡ್ಡವರಿಗೆ ಸಾಧ್ಯವಿದ್ದಲ್ಲಿ ರಾತ್ರಿ ಶಾಲೆಗಳನ್ನು ಏರ್ಪಡಿಸಿಕೊಳ್ಳುವುದು. ಈ ಸುಧಾರಣೆಯ ಕಸುಬುಗಳನ್ನು ಮಾಡುವ ಮುಂತಾದ ಕಾರ್ಯಗಳನ್ನು ನಡಿಸಲು ಒಂದು ಸಂಘವನ್ನು ಏರ್ಪಡಿಸಿಕೊಳ್ಳುವದು ಅವಶ್ಯ. ಅಸ್ಪೃಶ್ಯ ಭಾವನೆಗೆ ಕಾರಣರಾದ ಮೇಲ್ಜಾತಿಯವರೂ, ಹರಿಜನರೂ ತಮ್ಮ ತಮ್ಮ ಭಾಗದ ಕೆಲಸವನ್ನು ಮಾಡಿ ಈ ಭಾವನೆಯನ್ನು ಹೋಗಲಾಡಿಸಿಕೊಂಡು, ಬಹುಜನೋದ್ಧಾರಕ್ಕಾಗಿರುವ ಮಹಾತ್ಮರ ಅಮೂಲ್ಯವಾದ ಜೀವವನ್ನು ಉಳಿಸಬೇಕು.'

ಮೆ. ಪಿ. ಜಿ. ಮುದ್ದಯ್ಯನವರು ಮಾತಾಡುತ್ತಾ, ಸತ್ತ ಪ್ರಾಣಿಗಳ ಮಾಂಸವನ್ನು ತಿನ್ನುವುದರಿಂದ ರೋಗಗಳುಂಟಾಗುತ್ತವೆ; ಗೋಮಾಂಸ ತಿನ್ನುವುದು ಹಿಂದೂಗಳಿಗೆ ಪಾಪಕರ; ಅಮಲು ಪದಾರ್ಥ ಸೇವನೆಯಿಂದ ದೇಹ, ಧನ ಮತ್ತು ಮಾನಹಾನಿಯಾಗುತ್ತೆ; ಶುಚಿಯಿಂದ ಆರೋಗ್ಯಕರವು ಸ್ತ್ರೀ. ಇವನ್ನೆಲ್ಲಾ ಬಿಡಲು ಹರಿಜನರು ತಯಾರಾಗಬೇಕು. ಮೇಲ್ಜಾತಿಯವರೂ ಈ ಕೆಲಸದಲ್ಲಿ ಸಹಾಯ ಮಾಡತಕ್ಕದ್ದು ಎಂದು ಮುಂತಾಗಿ ಹೇಳಿದರು.

ನಂತರ ಹರಿಜನರ ಪೈಕಿ ಮೆ. ಗಳಾದ ಕುಡಿ ನೂಕೇರಿ ಚೆನ್ನನವರು, ಕೈಕೇರಿ ಮುಂಡನವರು, ನೂಕೇರಿ ಮೋಡನವರು, ದೇವನೂರು ಇಬ್ಬನವರು, ಚಿಕ್ಕಮುಂಡೂರು ಪುಟ್ಟನವರು, ಬಾಳೆಲೆ ಚೆನ್ನನವರು ಮೊದಲಾದವರು ತಮ್ಮ ಕೀಳು ಸ್ಥಿತಿಗೆ ಬಡತನವು ಮತ್ತು ವಿದ್ಯಾಹೀನತೆಯೇ ಕಾರಣವೆಂತಲೂ, ಮೇಲ್ಜಾತಿಯವರು ಸಹಾಯ ಮಾಡಿದರೆ ತಮ್ಮ ಸ್ಥಿತಿ ಉತ್ತಮಗೊಳ್ಳುವುದು. ಪ್ರಯತ್ನ ಮಾಡಬೇಕೆಂತಲೂ ಮುಂತಾಗಿ ಮಾತಾಡಿದರು.

ಆ ಮೇರೆ ಅಧ್ಯಕ್ಷರು, ಕಿಗ್ಗಟ್ಟುನಾಡು ಹರಿಜನಾಭಿವೃದ್ಧಿ ಸಂಘವನ್ನು ಏರ್ಪಡಿಸತಕ್ಕದ್ದು, ಅದು ತಿಂಗಳಿಗೊಮ್ಮೆ ನಡೆಯತಕ್ಕದ್ದು, 18 ವರ್ಷ ಪ್ರಾಯದವರು ಹರಿಜನ ಗಂಡಸರೆಲ್ಲರೂ ಅದರ ಮೆಂಬರುಗಳಾಗಬೇಕು, ವಾರ್ಷಿಕ ಚಂದವು 8 ಆಣೆ ಆಗಬೇಕು, ಎಂಬ ವಿಷಯಗಳನ್ನು ಒಡನೆಯೇ ಸಭೆಯ ಮುಂದಿಟ್ಟು ಸಭೆಯ ಸಮ್ಮತಿಯನ್ನು ತೆಗೆದುಕೊಂಡರು. ಬರುವ ಮೀಟಿಂಗಿಗೆ ಎಲ್ಲಾ ಹರಿಜನರನ್ನು ಸೇರಿಸುವ ಬಗ್ಗೆ ಪ್ರತಿಯೊಂದು ಗ್ರಾಮದಲ್ಲಿ ಇಬ್ಬರು ಮೆಂಬರುಗಳಾಗಿ ನೇಮಿಸಲ್ಪಟ್ಟರು. ಈ ಸಂಘದ ಉದ್ದೇಶಗಳನ್ನೂ, ನಿಬಂಧನೆಗಳನ್ನೂ ತಯಾರಿಸುವ ಬಗ್ಗೆ ಈ ಕೆಳಗಿನ ಮೆಂಬರುಗಳ ಕಮಿಟಿಯು ನೇಮಿಸಲಾಯಿತು. ಸ್ವಾಮಿ ಶಾಂಭವಾನಂದರವರು (ಅಧ್ಯಕ್ಷರು) ಮೆ. ಗಳಾದ ಪಿ. ಜಿ. ಮುದ್ದಮ್ಮಯ್ಯನವರು (ಸೆಕ್ರೆಟರಿ) ಚಮ್ಮರ ಮಾದಪ್ಪನವರು, ಚೆಪ್ಪುಡಿರ ಯಸ್. ಪೂವಯ್ಯನವರು, ಬಾಳೆಲೆ ಇದಿಯನವರು, ಕುಡಿ ನೂಕೇರಿ ಚೆನ್ನನವರು, ಹೊನ್ನಿಕೊಪ್ಪಲು ಚಾರಿಯನವರು, ಚಿಕ್ಕಮುಂಡೂರು ಪುಟ್ಟನವರು, ಕೈಕೇರಿ ಮುಂಡನವರು, ಈಚೂರು ಕುಟ್ಟನವರು, ಮತ್ತು ಕೋತೂರು ಮೆಸಣ್ಣನವರು.

ಅಧ್ಯಕ್ಷರ ಉಪಸಂಹಾರ ಭಾಷಣವಾದ ಮೇಲೆ ಫಲಹಾರವು ಹಂಚಲಾಯಿತು.

ನೋಟೀಸು.

ಎರಡು ನರ್ಸ್‌ಗಳನ್ನು ಮಡಿಕೇರಿ ಆಸ್ಪತ್ರೆಯಲ್ಲಿಯೂ, ಎರಡು ನರ್ಸ್‌ಗಳನ್ನು ವೀರಾಜಪೇಟೆ ಆಸ್ಪತ್ರೆಯಲ್ಲಿಯೂ ಆರು ತಿಂಗಳ ವರೆಗೆ ತರಬೇತುಮಾಡುವ ಬಗ್ಗೆ ಒಬ್ಬೊಬ್ಬರಿಗೆ 100 ರೂ. ಯಂತೆ ವೇತನ ಕೊಡಲು ಕೊಡಗಿನ 'ಇಂಡಿಯನ್ ರೆಡ್ ಕ್ರಾಸ್' ಸಂಘದವರು ಒಪ್ಪಿಕೊಂಡಿರುವರು. ಪ್ರಾಯ ಮತ್ತು ವಿದ್ಯಾರ್ಹತೆಯನ್ನು ನಮೂದಿಸಿ ಉಮೇದುವಾರರು ಅಪ್ಲಿಕೇಶನನ್ನು ಸಿವಿಲ್ ಸರ್ಜನರಿಗೆ ಬರಕೊಳ್ಳತಕ್ಕದ್ದು. ಹೆಚ್ಚಿನ ಮಾಹಿತಿಯನ್ನು ಕೊಡಗಿನ ಸಿವಿಲ್ ಸರ್ಜನರ ಆಫೀಸಿನಿಂದ ಪಡಕೊಳ್ಳಬಹುದು.

ಮಡಿಕೇರಿ,
ತಾ. 3—12—1932.

ಡಿ. ಫ್ರಾಮ್ಜಿ,
ಅಫಿಷಿಯೇಟಿಂಗ್ ಸಿವಿಲ್ ಸರ್ಜನ್.

2—1

ವೇದಾಂತ ಸಂಘದ ಕಟ್ಟಡದ ಫಂಡು.

ಮಡಿಕೇರಿ ವೇದಾಂತ ಸಂಘದ ಕಟ್ಟಡದ ಬಗ್ಗೆ ದ್ರವ್ಯ ಸಹಾಯ ಮಾಡುವದಾಗಿ ಇದುವರೆಗೆ ವಾಗ್ದಾನ ಮಾಡಿರುವ ಸಂಘದ ಮೆಂಬರುಗಳು ಮತ್ತು ಮಹಾಶಯರುಗಳು :—

ಮೆಂಬರುಗಳು

ಮೆ. ಪಟ್ಟಮಾಡ ಚಿಣ್ಣಪ್ಪನವರು	100	ರೂಪಾಯಿ.
„ ಆರ್. ಯಂ. ಕರಿಯಯ್ಯನವರು	300	(125 ಕೊಡಿದೆ)
„ ಗಣಪಂಡ ಸುಬ್ಬಯ್ಯನವರು	100	
„ ನೆರವಂಡ ಕುಟ್ಟಪ್ಪನವರು	60	
„ ಎಂ. ಕಾಶೀನಾಥ ಪಂಡಿತಯ್ಯರು	10	
„ ಪಳಂಗಂಡ ಅಪ್ಪಯ್ಯನವರು	30	
„ ಬಾಚಮನಿಯಂಡ ಗಣಪತಿಯವರು	50	
„ ಚೋಂದ್ರಿಮಾಡ ಗಣಪತಿಯವರು	20	
„ ಮುಕ್ಕಾಟಿರ ಅಚ್ಚಯ್ಯನವರು	50	
„ ಕೊಕ್ಕಂಗಡ ಬೆಳ್ಯಪ್ಪನವರು	15	
„ ಕುಡಿಯಂಡ ಮುತ್ತಣ್ಣನವರು	10	
„ ಕುಂಬೆರ ಸೋಮಯ್ಯನವರು	10	
„ ಸಿ.ಬಿ ಜೈಸಿಂಗರು (ಗೌರವ ಮೆಂಬರು)	100	
„ ಚೇನಂಡ ಅಪ್ಪಯ್ಯನವರು	25	
„ ಬೊಳ್ಯಂಡ ಐಯ್ಯಪ್ಪನವರು	75	
„ ಸಿ. ಅಚ್ಚು ತರಾಯರು	25	
„ ಚೆರುಮನೆ ಪೊನ್ನಪ್ಪನವರು	25	
„ ಎಂ.ಎಸ್ ಅನಂತಪದ್ಮನಾಭರಾಯರು	20	
„ ಬಿದ್ದಂಡ ಬೆಳ್ಯಪ್ಪನವರು	100	
ಜುಮ್ಲ	1125	

ಮೆಂಬರಲ್ಲದ ಮಹಶಯರು.

ಮೆ. ಕೋದಂಡ ದೇವೈಯ್ಯನವರು	125	(ಸಂದಿದೆ)
„ ಕಾಟ್ಯಮಾಡ ಐಯ್ಯಪ್ಪನವರು	30	
ಮಿಸೆಸ್ ಡಾಕ್ಟರ್ ಕೋದಂಡ ಸಂಬಪ್ಪನವರು	25	(ಸಂದಿದೆ)
ಮಿಸೆಸ್ ಕೋದಂಡ ತಿಮ್ಮಯ್ಯನವರು	100	
ಜುಮ್ಲ	280	

ಜಿ. ಸುಬ್ಬಯ್ಯ,
(ಕಾರ್ಯದರ್ಶಿ.)

COORG CIVIL SURGEON'S OFFICE,
Mercara, the 3rd December 1932

NOTICE.

Sealed tenders will be received at the Civil Surgeon's Office, Mercara, up to 11 a. m. on Friday the 20th January 1933, for the supply by contract of all articles of diet, etc., required separately for the use of the in-patients of (1) Mercara, (2) Virajpet and (3) Somwarpet hospitals from 1st April 1933 to 31st March 1934 (both days inclusive).

For further particulars apply to the Medical Officer in charge of the hospitals concerned.

D. FRAMJEE,
Offg. Civil Surgeon, Coorg.

ಕೊಡಗು ಸಿವಿಲ್ ಸರ್ಜನರ ಆಫೀಸು,
ಮಡಿಕೇರಿ, 3—12—1932.

ನೋಟೀಸು.

(1) ಮಡಿಕೇರಿ, (2) ವೀರಾಜಪೇಟೆ ಮತ್ತು (3) ಸೋಮವಾರಪೇಟೆ ಆಸ್ಪತ್ರೆಗಳಲ್ಲಿರುವ ರೋಗಿಗಳ ಉಪಯೋಗಕ್ಕೆ ಬೇಕಾಗುವ ಆಹಾರ ಸಾಮಗ್ರಿಗಳನ್ನು, ಕಂಟ್ರಾಕ್ಟು ಮೂಲಕ 1933ನೇ ಏಪ್ರಿಲ್ 1ರಿಂದ 1934ನೇ ಇಸವಿ ಮಾರ್ಚ 31ರ ವರೆಗೆ (ಆ ಎರಡು ದಿವಸಗಳು ಸೇರಿ) ಆ ಮೂರು ಆಸ್ಪತ್ರೆಗಳಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಒದಗಿಸಿಕೊಡಲು ಮುದ್ರೆ ಹಾಕಿದ ದರಖಾಸ್ತುಗಳು (ಟೆಂಡರ್) 1933ನೇ ಇಸವಿ ಜನವರಿ 20ನೇ ಶುಕ್ರವಾರ ಬೆಳಿಗ್ಗೆ 11 ಗಂಟೆಯ ವರೆಗೆ ಮಡಿಕೇರಿ ಸಿವಿಲ್ ಸರ್ಜನರ ಆಫೀಸಿನಲ್ಲಿ ತೆಗೆದುಕೊಳ್ಳಲಾಗುವವು.

ಹೆಚ್ಚಿನ ಮಾಹಿತಿಗೆ ಸಂಬಂಧಪಟ್ಟ ಆಸ್ಪತ್ರೆಗಳ ಚಾರ್ಜಿನಲ್ಲಿರುವ ಮೆಡಿಕಲ್ ಆಫೀಸರಿಗೆ ಬರೆದುಕೊಳ್ಳುವುದು.

ಡಿ. ಫ್ರಾಮ್ಜಿ,
2—1 ಅಫಿಷಿಯೇಟಿಂಗ್ ಸಿವಿಲ್ ಸರ್ಜನ್, ಕೊಡಗು.

WANTED.

Candidates for Electrical, Automobile Wireless, Telegraph and Commercial classes opening shortly. Railfare paid. Rules on 1 anna stamps.

IMPERIAL GUILD INSTITUTE,
6—2 Bombay, 18.

ಕೊಡಗಿನಲ್ಲಿ ಸತ್ಯಾಗ್ರಹ.

ಹುದಿಕೇರಿ ಹುತ್ತರಿ ಸಂತೆಯಲ್ಲಿ ದಸ್ತಗಿರಿ.

ಜನಸಮುದಾಯದ ಉತ್ಸಾಹಭರಿತವಾದ ಜಯಘೋಷ.

ಜುಲ್ಮಾನೆಗಾಗಿ ದನಗಳ ಜಪ್ತಿ ಮತ್ತು ಜಪ್ತಿಯ ಮೇಲೆ ತಕರಾರು ಅರ್ಜಿಗಳು.

ಈ ತಾ. 5ನೇ ಸೋಮವಾರ ಹುದಿಕೇರಿಪೇಟೆಯಲ್ಲಿ ಕಾಂಗ್ರೆಸಿನ ಸ್ವಯಂಸೇವಕರಾದ ಶ್ರೀಯುತರುಗಳಾದ ಆಲೆಮೇಂಗಡ ಮಾಚಯ್ಯನವರು, ಅರಮಣಮಾಡ ನಾಣಯ್ಯನವರು, ಚಮ್ಮಣಮಾಡ ಪೂವಮ್ಮಯ್ಯನವರು, ಮಲ್ಲಂಡ ಮಾದಯ್ಯನವರು ಮತ್ತು ಹರಿಜನರ (14 ವರ್ಷ ಪ್ರಾಯದ) ಸುಬ್ಬನವರು ಸ್ವದೇಶಿ ಸ್ಟಾಲ್ ಮಾಡಿದ ಸತ್ಯಾಗ್ರಹ ಕರಪತ್ರಗಳನ್ನು ಹಂಚುತ್ತಾ, ಸಾರಾಯಿ ಅಂಗಡಿಯಿಂದ ಸಂತೆಮಾಳದ ಕಡೆಗೆ ಜಯಘೋಷ ಮಾಡುತ್ತಾ ಬರುತ್ತಿದ್ದಾಗ್ಗೆ ಪೋಲೀಸು ಸಬ್ ಇನ್ಸ್‌ಪೆಕ್ಟರವರು 1 ಡಜನ್ ಪೋಲೀಸಿನವರೊಡನೆ ಬಂದು ಅವರೈವರನ್ನು ದಸ್ತಗಿರಿ ಮಾಡಿ, ಪೇಟೆಯಿಂದ ಹೊರಗೆ ಕರೆದುಕೊಂಡು ಹೋದರು. 1000ಕ್ಕಿಂತ ಹೆಚ್ಚಾಗಿ ಜನರು ಉತ್ಸಾಹದಿಂದ ಜಯಘೋಷ ಮಾಡುತ್ತಾ ಸ್ವಯಂಸೇವಕರನ್ನು ಸುಮಾರು ಅರ್ಧ ಮೈಲು ದೂರ ಹಿಂಬಾಲಿಸಿದರು; ನಂತರ ಕೆಲವರಿಂದ ಸಮಾಧಾನಗೊಳಿಸಲ್ಪಟ್ಟು ವಾಪಸು ಹೋದರು. ದಸ್ತಗಿರಿಯಾದವರನ್ನು ಸಾಯಂಕಾಲ ಬಸ್ಸಿನಲ್ಲಿ ವೀರಾಜಪೇಟೆಗೆ ಒಯ್ದರು.

ಮರುದಿನ ಮುನ್ಸೀಫ್ ಮ್ಯಾಜಿಸ್ಟ್ರೇಟು ಕೋರ್ಟಿನಲ್ಲಿ ವಿಚಾರ ನಡೆದು ಅವರೈವರಿಗೂ ಮೂರು ಮೂರು ತಿಂಗಳು ಕಠಿಣ ಸಜೆಯು ಮತ್ತು 15 ರೂ ಜುಲ್ಮಾನೆಯೂ ಜುಲ್ಮಾನೆ ಕೊಡದೆ ತಪ್ಪಿದರೆ ಒಂದು ತಿಂಗಳು ಹೆಚ್ಚಿನ ಸಜೆಯೂ ವಿಧಿಸಲಾಯಿತೆಂದೂ, ಮಾರನೆ ದಿನ ಅವರು ಕಣ್ಣೂರು ಸೆಂಟ್ರಲ್ ಜೈಲಿಗೆ ಕಳುಹಿಸಲ್ಪಟ್ಟರೆಂದೂ ವರ್ತಮಾನ.

ಸತ್ಯಾಗ್ರಹಕ್ಕಾಗಿ ಈಗ ಜೈಲುವಾಸದಲ್ಲಿರುವ ಮೇ. ಬಿಟ್ಟಿಯಂಡ ಐಯ್ಯಪ್ಪನವರ 20 ರೂ. ಜುಲ್ಮಾನೆ ವಸೂಲಾತಿಗಾಗಿ ಅವರ ತಂದೆ ಗಣಪತಿಯವರ 1ಹಸು ಮತ್ತು ಅದರ ಕರುವೂ, ಮೇ. ಬಿಟ್ಟಿಯಂಡ ... ಜುಲ್ಮಾನೆಗಾಗಿ ಅವರ ತಂದೆ ಸುಬ್ಬಯ್ಯನವರ 2 ಕೋಣಗಳೂ ಮತ್ತು ಮೇ. ಮಾತಂಡ ... ಜುಲ್ಮಾನೆಗಾಗಿ ಅವರ ಅಣ್ಣ ನಂಜಪ್ಪನವರ 1ಎತ್ತು ಮತ್ತು 1ಹಸುವನ್ನೂ ಕಳೆದ ತಾ. 24ರಲ್ಲಿ ಪೋಲೀಸಿನವರು ಜಪ್ತಿ ಮಾಡಿ ಪಟೇಲರವರ ಜವಾಬ್ದಾರಿ ಮೇಲೆ 15 ದಿವಸಗಳ ವರೆಗೆ ಬಿಟ್ಟಿರುವರೆಂತಲೂ, ಈ ದನಗಳ ಮಾಲೀಕರು ಮೇ. ಪಳೆಯಂಡ ಕುಶಾಲಪ್ಪ ಲಾಯರವರ ಮೂಲಕ ತಕರಾರು ಅರ್ಜಿಗಳನ್ನು ಹಾಕಿರುವರೆಂತಲೂ, ಅವುಗಳ ವಿಚಾರವು ಈ ತಾರೀಕು 9ಕ್ಕೆ ಇರುವುದೆಂತಲೂ ...

(ಸ್ವಸ್ಥ ಇರಾಕ್) ಯ ವಿಷಯದಲ್ಲಿ ಅಧಿಕಾರವೆಲ್ಲವೂ ಗವರ್ನರ್ ಜನರಲರಿಗೆ ಇಂಗ್ಲೆಂಡಿನ ಬ್ರಿಟಿಷ್ ಮೆಂಬರುಗಳ ವಾದ. ಫೈನಾನ್ಸ್ (ಆರ್ಥಿಕ) ವಿಷಯದಲ್ಲೂ ಕೂಡ ಭಾರತೀಯರಿಗೆ ಹಲವು ಇರುವಂತೆ ಕಾಣುತ್ತೆ. ಇತ್ಯಾದಿ ಮತ್ತೆ ... ಲಿಬರಲ್ ಪಕ್ಷದವರಿಗೆ ತೃಪ್ತಿಯಾಗಿರುವಂತೆ ತೋರುವುದಿಲ್ಲ.

ರತ್ನಗಿರಿ ಜೈಲಿನಲ್ಲಿರುವ ಗುಜರಾತ ವಿದ್ಯಾಪೀಠದ ಪ್ರೊಫೆಸರರಾದ ಅಪ್ಪಾ ಸಾಹೇಬ್ ಪಟವರ್ಧನ್‌ರವರು ತನ್ನ ಜೈಲು ಕೆಲಸದೊಂದಿಗೆ ತೋಟಿ ಕೆಲಸ ಮಾಡಲು ಬಿಡಬೇಕೆಂದು ಕೇಳಿಕೊಂಡದಕ್ಕೆ ಅಧಿಕಾರಿಗಳು ಸ್ವಲ್ಪ ದಿವಸ ಬಿಟ್ಟು, ನಂತರ ನಿಲ್ಲಿಸಿಬಿಟ್ಟದ್ದರಿಂದ ಅವರು ಪ್ರಾಣಾಂತ ಉಪವಾಸವ್ರತವನ್ನು ಕೈಕೊಂಡರು. ಇದನ್ನು ತಿಳಿದು ಮಹಾತ್ಮ ಗಾಂಧಿಯವರು ತನ್ನ ಸ್ನೇಹಿತ ಪಟವರ್ಧನರವರ ನ್ಯಾಯವಾದ ಕೋರಿಕೆಯನ್ನು ನಡಸಿ ಕೊಡದೆ ಹೋದರೆ ತಾನೂ ಉಪವಾಸ ಮಾಡುವೆನೆಂದು ಸರ್ಕಾರಕ್ಕೆ ಬರೆದರು. ಸರ್ಕಾರದವರು ಆಗುವುದಿಲ್ಲವೆಂದು ಕಠಿಣ ತರದ ಜವಾಬು ಕೊಟ್ಟದ್ದರಿಂದ ಮಹಾತ್ಮರು ಕಳೆದ ಶನಿವಾರ ಉಪವಾಸವನ್ನು ಕೈಕೊಂಡರು. ಕಡೆಗೆ ಜೈಲುಗಳ ಮುಖ್ಯಾಧಿಕಾರಿಯು ಗಾಂಧಿಯವರಲ್ಲಿಗೆ ಹೋಗಿ ತಾನು ಬಂಧವಾಸದೊಳಗೆ ನಡಬ ವಿಷಯವನ್ನು ಸಂಪಡಿಸುತ್ತೇನೆಂದು ಹೇಳಿದ್ದರಿಂದ 24 ಗಂಟೆಗಳ ನಂತರ ಮಹಾತ್ಮರು ಉಪವಾಸಬಿಟ್ಟರು. ಅಷ್ಟರಲ್ಲಿ ಅವರ ತೂಕ 6 ಪೌಂಡು ಕಡಿಮೆಯಾಗಿತ್ತು. ಆ ವಿಷಯ ವಿಚಾರ ನಡೆಯುತ್ತಿರುವುದರಿಂದ ಪಟವರ್ಧನ್‌ರವರೂ ಉಪವಾಸವನ್ನು ಬಿಟ್ಟಿರುವರು.

Supplement to the issue of 'Kodagu' of 9—12—1932.

ಅಸ್ಪೃಶ್ಯತಾ ನಿವಾರಣೆ ದಿನ.

ಮಹಾತ್ಮ ಗಾಂಧಿಯವರ ಅಪೇಕ್ಷೆ.

"ಈ ತಾ. 18ನೇ ಆದಿತ್ಯವಾರವನ್ನು ಅಸ್ಪೃಶ್ಯತಾ ನಿವಾರಣೆ ದಿನವಾಗಿ ಹಿಂದೂಸ್ಥಾನದ ಪ್ರತಿಯೊಂದು ಪಟ್ಟಣ, ಗ್ರಾಮ ಮತ್ತು ಮನೆಯಲ್ಲಿ ಆಚರಿಸಿ, ಈ ಕೆಳಗಿನ ಕಾರ್ಯಕ್ರಮವನ್ನು ನಡೆಸಬೇಕಾಗಿ ಮಹಾತ್ಮ ಗಾಂಧಿಯವರ ಅಪೇಕ್ಷೆಯಾಗಿದೆ.

ಅಸ್ಪೃಶ್ಯತಾ ನಿವಾರಣೆ ಸಂಘದ ಕೆಲಸಕ್ಕಾಗಿ ಎಲ್ಲಾ ಕಡೆಗಳಲ್ಲಿಯೂ ಮನೆಯಿಂದ ಮನೆಗೆ ಹೋಗಿ ವಸೂಲಾತಿ ಮಾಡುವುದು.

ಕೆಲವು ಮೇಲ್ಜಾತಿಯ ಹಿಂದುಗಳು ಹರಿಜನರ ವಾಸಸ್ಥಳವನ್ನು ಶುಚಿ ಮಾಡಿಯೂ, ಸೇವೆ ಮಾಡಿಯೂ ಅವರಿಗೆ ಉದಾಹರಣೆ ಹಾಕಿಕೊಡುವುದು.

ಹರಿಜನರ ಮತ್ತು ಮೇಲ್ಜಾತಿಯ ಹಿಂದೂಗಳ ಮಕ್ಕಳಿಗೆ ಮಿಶ್ರವಾಗಿ ಆಟೋಟಗಳನ್ನೂ ... ದ ಕೂಟಗಳನ್ನೂ ನಡಿಸುವುದು.

ಹರಿಜನರು ಮತ್ತು ಮೇಲ್ಜಾತಿ ಹಿಂದೂಗಳು ಮಿಶ್ರವಾಗಿ ಮೆರವಣಿಗೆಗಳನ್ನೂ, ... ಕೂಟಗಳನ್ನೂ ನಡಿಸುವುದು ಮತ್ತು ಇವೆರಡು ಪಂಗಡಗಳನ್ನು ಜೊತೆ ಸೇರಿಸಲು ಯತ್ನಿಸುವುದು.

ಎಲ್ಲಾ ಕಡೆಗಳಲ್ಲಿಯೂ ಸಾರ್ವಜನಿಕ ವಿೂಟಿಂಗುಗಳನ್ನು ಮಾಡಿ, ಅಸ್ಪೃಶ್ಯತೆಯ ಕೇಡನ್ನು ಚೆನ್ನಾಗಿ ವಿವರಿಸುವುದು ಮತ್ತು ಶೀಘ್ರದಲ್ಲೇ ಅದರ ನಿವಾರಣೆ ಬಗ್ಗೆ ದೇವರಿಗೆ ... ಸುವುದು.

ಈ ವಿೂಟಿಂಗುಗಳಲ್ಲಿ, ಎಲ್ಲಾ ಹಿಂದೂ ದೇವಸ್ಥಾನಗಳಿಗೆ ಮುಖ್ಯವಾಗಿ ಗುರುವಾಯೂರು ದೇವಸ್ಥಾನಕ್ಕೆ ಹರಿಜನರ ಪ್ರವೇಶಕ್ಕೆ ಎಡೆಬಿಡದೆ ಚಳವಳ ನಡಿಸುವಂತೆ ಠರಾವುಗಳನ್ನು ಪಾಸುಮಾಡುವುದು.

ಕೇರಳದ ಮುಂದಿನ ಜನಾಂಗವಾದ ವಿದ್ಯಾರ್ಥಿಗಳೆಲ್ಲರೂ ಗುರುವಾಯೂರು ದೇವಸ್ಥಾನದ ... ನರನ್ನು ಬಿಡಬೇಕೆಂಬ ಅರ್ಜಿಗೆ ರುಜು ಮಾಡಿ ಅದು ದೇವಸ್ಥಾನದ ಮುಖ್ಯಾಧಿಕಾರಿ ... ಕೋಟೆಯ ಜಾಮೊರಿನ್‌ರವರಿಗೆ ಕಳುಹಿಸುವುದು.

ದೇಶೀಯರಲ್ಲಿ ವಿಜ್ಞಾಪನೆ.

ಅಸ್ಪೃಶ್ಯತೆಯನ್ನು ಶೀಘ್ರದಲ್ಲಿಯೇ ಹೋಗಲಾಡಿಸುವ ಪ್ರಯತ್ನ ಮಾಡುತ್ತಾ, ಮಲಬಾರ್ ಗುರುವಾಯೂರು ದೇವಸ್ಥಾನಕ್ಕೆ ಹರಿಜನರ ಪ್ರವೇಶಕ್ಕೆ ಬಿಡುವಂತೆ ಮಾಡದೆ ಹೋದರೆ ಗಾಂಧಿಯವರು ಬರುವ ಜನವರಿ ತಾ. 2 ರಲ್ಲಿ ಉಪವಾಸವನ್ನು ಪ್ರಾರಂಭಿಸಲು ನಿಶ್ಚಯಿಸಿರುವರು. ಆದುದರಿಂದ ನಮ್ಮ ದೇಶೀಯರೆಲ್ಲರೂ ಮಹಾತ್ಮರ ಅಪೇಕ್ಷೆಯಂತೆ ಮೇಲಿನ ಕಾರ್ಯಕ್ರಮವನ್ನು ನಡಿಸಿ ಮಹಾತ್ಮರ ಪ್ರಾಣವನ್ನು ಉಳಿಸಲು ಸಹಾಯ ಮಾಡಬೇಕಾಗಿದೆ.

ಮಡಿಕೇರಿ. }
...12—32. }

ಸಿ. ಯಮ್. ವೆಂಕಟಯ್ಯ,
ಪಿ. ಐ. ಬೆಳ್ಯಪ್ಪ.

K. P. M.

12ರಲ್ಲಿ ಪ್ರಧಾನ ಇನ್ಸ್‌ಪೆಕ್ಟರ್ ರು, ಹುಂಗಾಮಿ ಇನ್ಸ್‌ಪೆಕ್ಟರ್ ಮೊಹಿದಿನ್‌ರವರು ಪ್ರಧಾನ ... ಯಮಿಸಲ್ಪಟ್ಟಿರುವರು. ಆದುದರಿಂದ ಕೊಡಗು ಕೌನ್ಸಿಲ್ ಮೆಂಬರು ವರು. ಅವರ ಸ್ಥಳಕ್ಕೆ ಮೇ. ... ನೇಮಿಸಲ್ಪಟ್ಟಿರುವರು.

... ಸಂಘದ ಆಶ್ರಯದಲ್ಲಿ ಗೀತಾ ಜಯಂತ್ಯುತ್ಸವದ ಸಂಘದ ಹಾಲ್ ... ಮೇ. ಶೆಟ್ಟಿಯವರು ಅಧ್ಯಕ್ಷರಾಗಿದ್ದ ಗೀತಾ ಪಠನ ಸ್ಪರ್ಧೆ ... ಕಪ್ಪಯ್ಯನವರ ಪುತ್ರಿ ಶ್ರೀಮತಿ ... ನಾಕವನ್ನು ಗಿದ್ದಳು. ಸಾಯಂಕಾಲ ... ಲೇಬನಾ ... ಅಪ್ಪನವರು ... ಉಪನ್ಯಾಸವನ್ನು ಮಾಡಿದ ಮೇಲೆ ಮಂಗಳಾರತಿಯಾಯಿತು.

ಸ್ವದೇಶಿ.

... ರಲ್ಲಿ 'ಗಾಂಧಿ ದಿನ' ವನ್ನು ... ಸ್ವಯಂಸೇವಕರು ಕೈದುಮಾಡ ...

ಎಸೆಂಬ್ಲಿಯಲ್ಲಿ ಚರ್ಚೆ ನಡೆಯು ... ತಾ. 7ರಲ್ಲಿ ಬಹು ಮತದಿಂದ ಪಾ ...

ಜರಾತ್ ರಾಜಕೀಯ ಪರಿಷತ್ತು ... ತಾ. 4ರಲ್ಲಿ 100 ರ ನಂತರೆಂತಲೂ 20 ಜನರೂ ದಸ್ತಗಿರಿ ಮಾಡಲ್ಪ ...

... ಕಾರದನ್ನು ಅಸ್ಪೃಶ್ಯತಾ ನಿವಾರ ... ಸ್ಥಾನದ ಪ್ರತಿಮೆಯ ... ಬಿಟ್ಟ, ... ಯೂ ಅರ್ಜಿಯಬೇಕಾಗಿ ... ಯಾಗಿದೆ.

ಕಾನ್‌ಫರೆನ್ಸು ಈ ತಾ. 10 ... ಪೂ, ಅಲ್ಲಹಾಬಾದಿನಲ್ಲಿ ಜಗ್ಗಟ್ಟು, ... ಹಿಂದೂ ಸೇವಕ ಸರ್ವ ಪಕ್ಷ ... 14ರಲ್ಲಿ ... ನಡೆಯುವವು.

... ನಮಯವನ್ನೆಲ್ಲಾ ಅಸ್ಪೃಶ್ಯ ... ಉಪಯೋಗಿಸುವ ಉದ್ದೇಶ ... ಕಾಂಗ್ರೆಸಿನ ಅಧ್ಯಕ್ಷ ಪದವಿಯ ... ಸಾರ್‌ರವರಿಗೆ ವಹಿಸಿರುವರೆಂದು ...

ಕೊಡಗಿನ ಭವಿಷ್ಯತ್ತು.

ಸಂಟಿಕೊಪ್ಪ ನಾಡಿನ ಗರಗಂದೂರು, ತಿರಂಗಳ್ಳಿ, ಕಿರುವಾಳೆ, ಮಾದಾಪುರ, ಇಗ್ಗೋಡ್ಲು, ಹಾಡಗೇರಿ, ಐಬಾಣಿ, ಕುಂಬೂರು ಮತ್ತು ಮಾದಾಪುರ ಗ್ರಾಮಸ್ಥರ ವಿೂಟಿಂಗೊಂದು ಈ ತಾ. 2ರಲ್ಲಿ ಮಾದಾಪುರ ಮಠದಲ್ಲಿ ಮೇ. ಐಮುಡಿಯಂಡ ಕಾಳಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಸುಮಾರು 100 ಜನರು ಹಾಜರಿದ್ದರು.

ಮೇ ಗಳಾದ ಪಾಸೂರ ಕಾರ್ಯಪ್ಪನವರು, ಮುಕ್ಕಾಟಿರ ಮಾದಪ್ಪನವರು, ... ಪೂವಯ್ಯನವರು, ... ಪೂವಯ್ಯನವರು, ಚೇರಂಡ ಮಂದಣ್ಣನವರು ಮತ್ತು ಮುಕ್ಕಾಟಿರ ... ಪ್ಪನವರು—ಕೊಡಗನ್ನು ಬೇರೆ ಯಾವ ಪ್ರಾಂತ್ಯಕ್ಕೂ ಸೇರಿಸದೆ, ಪ್ರತ್ಯೇಕವಾಗಿಟ್ಟುಕೊಂಡು, ಪ್ರಾಂತೀಯ ಸ್ವಾತಂತ್ರ್ಯ ಸರ್ಕಾರ ಪಡೆಯಲು ಪ್ರಯತ್ನಪಡಬೇಕೆಂದು ಮಾತನಾಡಿದರು. ಅಧ್ಯಕ್ಷರು—ಹಿಂದೂ ದೇಶದಲ್ಲಾದರೂ ಕೊಡಗಿನಲ್ಲಾದರೂ ಸ್ವರಾಜ್ಯದ ಹೋರಾಟವು ನಡೆಯುತ್ತಿರುವಾಗ್ಗೆ, ಆ ಹೋರಾಟದಲ್ಲಿ ಕಷ್ಟಪಡುವವರನ್ನು ಬಿಟ್ಟು ನಾವು ಯಾವ ತೀರ್ಮಾನವ ನ್ನಾದರೂ ಮಾಡುವ, ನಮ್ಮ ... ಮೇಲಾಗಿಯೂ ಮಾತಾಡಿದ ಮೇಲೆ ಈ ಕೆಳಗಿನ ಠರಾವು ಸರ್ವಸಮ್ಮತದಿಂದ ಮಂಜೂರಾಯಿತು.

"ಕಾಂಗ್ರೆಸಿಗೂ ಮತ್ತು ಸರ್ಕಾರಕ್ಕೂ ನಡೆಯುತ್ತಿರುವ ಹೋರಾಟವು ತೀರಿ, ಶಾಸನಭಂಗ ಚಳವಳವು ನಿಂತು, ದೇಶದಲ್ಲಿ ಶಾಂತತೆ ಉಂಟಾಗುವ ವರೆಗೆ, ಕೊಡಗಿನ ಭವಿಷ್ಯತ್ತನ್ನು ತೀರ್ಮಾನಿಸುವ ಚಳವಳವನ್ನು ಈ ಸಭೆಯು ವಿರೋಧಿಸುತ್ತದೆ."

ಐ. ಕಾಳಪ್ಪ,
(ಅಧ್ಯಕ್ಷರು.)

(ಸೂಚನೆ—ಸ್ಥಳ ಸಂಕೋಚದಿಂದ ಭಾಷಣಗಳ ವಿವರವನ್ನು ಹಾಕಲು ಸಾಧ್ಯವಾಗಲಿಲ್ಲ. ಸಂ. ಕೊ.)

COORG CIVIL SURGEON'S OFFICE,
Mercara, the 3rd December 1932.

NOTICE.

Sealed tenders for the hiring out of calves to the Vaccine Depot at Mercara for one year commencing from 1st April 1933 to 31st March 1934 will be received at the Civil Surgeon's Office, Mercara, upto 11 a. m on Friday the 20th January 1933.

For terms and other particulars apply to the Vaccine Inspector or the Civil Surgeon's Office at Mercara.

D FRAMJEE,
Offg. Civil Surgeon, Coorg.

ಕೊಡಗು ಸಿವಿಲ್ ಸರ್ಜನರ ಆಫೀಸು,
ಮಡಿಕೇರಿ, 3—12—1932.

ನೋಟೀಸು.

1933ನೇ ಏಪ್ರಿಲ್ 1ರಿಂದ 1934ನೇ ಮಾರ್ಚಿ 31ರ ವರೆಗೆ ಒಂದು ವರ್ಷ ಮಡಿಕೇರಿ ವೇಕ್ಸಿನ್ ಡಿಪೋಗೆ ಕರುಗಳನ್ನು ಬಾಡಿಗೆಗೆ ಕೊಡಲು ಮುದ್ರೆ ಹಾಕಿದ ದರಖಾಸ್ತುಗಳು (ಟೆಂಡರ್) ಮಡಿಕೇರಿ ಸಿವಿಲ್ ಸರ್ಜನರ ಆಫೀಸಿನಲ್ಲಿ 1933ನೇ ಇಸವಿ ಜನವರಿ 20ನೇ ಶುಕ್ರವಾರ ಬೆಳಿಗ್ಗೆ 11 ಗಂಟೆಯ ವರೆಗೆ ತೆಗೆದುಕೊಳ್ಳಲಾಗುವವು.

ಕರಾರುಗಳು ಮತ್ತು ವಿವರಗಳಿಗೆ ವೇಕ್ಸಿನ್ ಇನ್ಸ್‌ಪೆಕ್ಟರಿಗೆ ಅಥವಾ ಮಡಿಕೇರಿ ಸಿವಿಲ್ ಸರ್ಜನರ ಆಫೀಸಿಗೆ ಬರೆದುಕೊಳ್ಳುವುದು.

ಡಿ ಫ್ರಾಮ್ಜಿ,
2—1 ಆಫೀಶಿಯೇಟಿಂಗ್ ಸಿವಿಲ್ ಸರ್ಜನ್, ಕೊಡಗು

'ಯಂ. ಪೊನ್ನಚ್ಚ ಗಂಗಪ್ಪ ಕಪ್' ಹಾಕಿ ಟೂರ್ನಮೆಂಟು ಕಳೆದ ತಿಂಗಳ ಆಖೈರು ವಾರದಲ್ಲಿ ಪೊನ್ನಂಪೇಟೆಯಲ್ಲಿ ನಡೆಯಿತು. 5 ಟೀಮುಗಳು ಭಾಗಿಗಳಾಗಿದ್ದವು. ತಾರೀಕು 29—11—32ರಲ್ಲಿ ನಡೆದ ಆಖೈರು ಆಟದಲ್ಲಿ ಗೋಣಿಕೊಪ್ಪಲು ಯೂನಿಯನ್ನಿನವರು ಪೊನ್ನಂಪೇಟೆ ಕ್ಲಬ್ಬಿನವರನ್ನು ಸೋಲಿಸಿ ಕಪ್ಪನ್ನು ಗೆದ್ದರು. ಮೇ. ... ಕುಟ್ಟಪ್ಪನವರು ಗೆದ್ದವರಿಗೆ ಕಪ್ಪನ್ನು ಕೊಟ್ಟರು. ಮೇ. ಪೊ. ... ನಾಯ್ಯನವರು ತನ್ನ ತಂದೆಯವರ ಹೆಸರಿನಲ್ಲಿ ಒಂದು ಹಾಕಿ ಕಪ್ಪನ್ನು ಕೊಡುತ್ತಾರಾಗಿ ಸುದ್ದಿ.

ಮೊದಲು ಕೊಡಗಿನ ಶಾಲೆಗಳ ಇನ್ಸ್‌ಪೆಕ್ಟರಾಗಿದ್ದು ... ಯಲ್ಲಿ ಹೋಗಿದ್ದ ಮಿ. ಎಫ್. ಯಸ್. ಸಿ. ಎಡ್ಮಂಡ್ಸ್ ...

... ದುಂಡು ಮೇಜು ಪರಿಷತ್ತುಗಳ ನಡೆಸುವುದೂ ಪ್ರಯೋಜನವಿಲ್ಲ. ಮಹಾತ್ಮ ಗಾಂಧಿಯವರು ಜೇನು ... ವರೆಗೆ ಅವರ ಸಹಕಾರವಿಲ್ಲದೆ ಇಂಡಿಯಾದಲ್ಲಿ ಶಾಂತಿ ... ಅವರ ಜೈಲು ವಾಸವನ್ನು ದೀರ್ಘಪಡಿಸಿದರೆ ಅವರ ಮೇಲೆ ಜನಸಮುದಾಯಕ್ಕಿರುವ ಭಕ್ತಿಯು ... ಹೆಚ್ಚುವುದು" ಎಂದು ಮಿಸ್ ಎಲನ್ ವಿಲ್ಕಿನ್‌ಸನ್‌ರವರು ಒಂದು ಲೇಖನದಲ್ಲಿ ಬರೆದಿರುವರು.

3ನೇ ದುಂಡು ಮೇಜು ಪರಿಷತ್ತು ನಡೆಯುತ್ತಾ ಇದೆ. ಗವರ್ನರ್ ಜನರಲರಿಗೆ ಮಾತ್ರವಲ್ಲ ಪ್ರಾಂತೀಯ ಗವರ್ನರುಗಳಿಗೂ ತುರ್ತು ವೇಳೆಯಲ್ಲಿ ಆರ್ಡಿನೇನ್ಸ್‌ಗಳನ್ನೂ, ವಿಶೇಷ ಶಾಸನಗಳನ್ನೂ ಮಾಡುವ ಹಕ್ಕಿರಬೇಕೆಂದೂ, ರಕ್ಷಣೆ ...

ಕೊಡಗು.

ಸನ್ ೧೯೩೦ನೇ ಇಸವಿ

ಡಿಸೆಂಬರ್ ೯ನೇ ಮಂಗಳವಾರ.

ಪ್ರೆಸ್ ಆರ್ಡಿನೇನ್ಸ್

ಜಾರಿಯಲ್ಲಿರುವ ವರೆವಿಗೆ

ನಾವು

ಅಗ್ರಲೇಖನ

ವನ್ನು

ಪ್ರಕಟಿಸುವುದಿಲ್ಲ.

ಅಧ್ಯಕ್ಷರ ಭಾಷಣದ ಸಾರಾಂಶ.

ಈ ತಾ. 4ರಲ್ಲು ನಾಪೋಕ್ಲಿನಲ್ಲಿ ನಡೆದ ಅಖಿಲ ಕೊಡಗು ಉಪಾಧ್ಯಾಯರ ಸಂಘದ ಸಮ್ಮೇಳನದಲ್ಲಿ ಅಧ್ಯಕ್ಷರಾದ ಮಿ. ಎ. ರಾಮರಾಯರು ಮಾಡಿದ ಭಾಷಣದ ಸಾರಾಂಶ

[illegible]

ಉಪಾಧ್ಯಾಯರ ಸಂಘದ ಸಮ್ಮೇಳನದ ಅಧ್ಯಕ್ಷರ ಭಾಷಣ.

ವಿದ್ಯಾರ್ಥಿಯರಲ್ಲಿ ರಾಷ್ಟ್ರಸೇವೆಯ ಭಾವನೆ ಹುಟ್ಟಿಸಿರಿ.

ಕೈನೂಲಿನ ಸ್ವದೇಶೀ ಬಟ್ಟೆಯನ್ನು ಪ್ರೋತ್ಸಾಹಿಸಿರಿ.

ಪ್ರತಿಯೊಂದು ಮನೆಯಲ್ಲೂ ಚರ್ಖಾ ಮತ್ತು ಮಗ್ಗಗಳಿರಬೇಕು.

ಪ್ರಾಥಮಿಕ ವಿದ್ಯಾಭ್ಯಾಸವನ್ನು ಕಡ್ಡಾಯವಾಗಿ ಮಾಡತಕ್ಕದ್ದು.

ಓದುಬರಹ ತಿಳಿಯದವರು ದೇಶದಲ್ಲಿಲ್ಲದಂತಾಗಬೇಕು.

ಕೈಗಾರಿಕೆಗಳಿಂದಲೇ ದೇಶದ ಏಳಿಗೆಯಾಗುವದು.

ಸ್ವಾರ್ಥತ್ಯಾಗಿಗಳಾದ ಉಪಾಧ್ಯಾಯರು ಗ್ರಾಮಸ್ಥರಿಗೆ ಮಾದರಿ ಪುರುಷರಾಗಬೇಕು.

[illegible]

ಅಖಿಲ ಕೊಡಗು ಉಪಾಧ್ಯಾಯರ ಸಂಘದ ಚತುರ್ಥ ವಾರ್ಷಿಕ ಸಮ್ಮೇಳನ.

ಈ ಸಮ್ಮೇಳನವು ಡಿಸೆಂಬರ್ ತಾರೀಖು 3,4 ಮತ್ತು 5 ರಲ್ಲಿ ಸಾಂಪೋಕ್ಸು ನೋರ್ಮಲ್ ಶಾಲೆಯಲ್ಲಿ ಮೆ. ಎ. ರಾಮರಾವ್, ಬಿ. ಇ. ಯಸ್ (ರಿಟಯರ್ಡ್) ರವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು. ಈ ಸಮ್ಮೇಳನಕ್ಕೆ ಅನೇಕ ಉದ್ಯೋಗಸ್ಥರೂ, ಡಿಸ್ಟ್ರಿಕ್ಟ್ ಬೋರ್ಡಿನ ಉಪಾಧ್ಯಕ್ಷರಾದ ಮೆ. ಪಾಂಡಂಡ ಚಂಗಪ್ಪನವರೂ, ಕೌನ್ಸಿಲು ಮೆಂಬರಾದ ಮೆ. ಗಳಾದ ಅಪ್ಪಾರಂಡ ಚಂಗಪ್ಪನವರೂ, ಬಲ್ಲಚಂಡ ಮತ್ತು ಬೆಳ್ಯಪ್ಪನವರೂ ಮೆ. ಅಪ್ಪಾರಂಡ ತಿಮ್ಮಯ್ಯನವರ್, ಇನ್ನೂ ಅನೇಕ ದೇಶದ ಮಹಾಜನರೂ ಅತಿಥಿಗಳಾಗಿ ಹಾಜರಾಗಿದ್ದರು.

ಸಮ್ಮೇಳನದ ಮೊದಲನೆಯ ದಿನದ ಕೊಡಗಿನ ಶಾಲೆಗಳ ಉಪಾಧ್ಯಾಯರ ಸಹಕಾರ ಸೊಸೈಟಿ ಮತ್ತು ಸಹಕಾರ ಸಂಘದ ವಾರ್ಷಿಕ ಅಧಿವೇಶನಗಳು ಜರುಗಿದವು. ಅವುಗಳಿಗೆ ಕ್ರಮವಾಗಿ ಮೆ. ಗಳಾದ ಅಪ್ಪಾರಂಡ ಚಂಗಪ್ಪ ಬಿ. ಎಲ್. ಸಿ. ಯವರೂ, ಪಾಂಡಂಡ ಚಂಗಪ್ಪ ಬಿ. ಎಲ್. ಸಿ. ಯವರೂ ಅಧ್ಯಕ್ಷರಾಗಿದ್ದರು. ಇವುಗಳ ಕಾರ್ಯಕ್ರಮವು ಎಂದಿನಂತೆ ಸುಸೂತ್ರವಾಗಿ ನಡೆದವು. ಅಧ್ಯಕ್ಷರ ಭಾಷಣಗಳು ಸ್ವಾರಸ್ಯವಾಗಿಯೂ ಅರ್ಥಗರ್ಭಿತವಾಗಿಯೂ ಇದ್ದವು.

ಎರಡನೆ ದಿವಸ ಪ್ರಾತಃಕಾಲ 8 ಗಂಟೆಯಿಂದ 12—30 ಗಂಟೆಯ ವರೆಗೆ ಆಟೋಟಗಳು ಶಾಲೆಯ ಮೈದಾನದಲ್ಲಿ ನಡೆದವು. ಅವುಗಳನ್ನು ಪ್ರೇಕ್ಷಿಸುವುದಕ್ಕೆ ಸುಮಾರು 1500 ಕ್ಕೆ ಮಿಕ್ಕಿ ಜನರು ನೆರೆದಿದ್ದರು. ಅನೇಕ ಮಹಿಳೆಯರೂ ಸೇರಿದ್ದರು. ಆಟೋಟಗಳ ವಿಷಯಗಳಲ್ಲಿ ಅನೇಕ ಯುವಕರೂ, ಬಾಲಕ ಬಾಲಿಕೆಯರೂ ಭಾಗಿಗಳಾಗಿದ್ದರು.

ಅನಂತರ ಮಧ್ಯಾಹ್ನದ ವೇಳೆ 2 ಘಂಟೆಗೆ ಸಮ್ಮೇಳನದ ವಸ್ತು ಪ್ರದರ್ಶನವು ತೆರೆಯಲ್ಪಟ್ಟಿತು. ಮೊದಲು ನಿಶ್ಚೈಸಿದಂತೆ ರಾ. ಬಾ. ಕೆ. ಚಂಗಪ್ಪ, ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್, ಇವರಿಗೆ ಬರಲಿಕ್ಕೆ ಅನಾನುಕೂಲವಾದ್ದರಿಂದ ಸಮ್ಮೇಳನದ ಅಧ್ಯಕ್ಷರೇ ಇದನ್ನು ತೆರೆದರು. ತೆರೆಯುವ ಸಂದರ್ಭದಲ್ಲಿ ಅವರು ಹೀಗೆಂದರು:—

"ಶಾಲೆಗಳಲ್ಲಿ ಕೊಡುವ ವಿದ್ಯಾಭ್ಯಾಸದ ಉದ್ದೇಶವು ಮಕ್ಕಳಿಗೆ ಓದುವುದು, ಬರೆಯುವುದು ಮತ್ತು ಲೆಕ್ಕ ಮಾಡುವುದು ಮಾತ್ರವಲ್ಲ, ಅವರು ಮುಂದೆ ಉತ್ತಮ ಜೀವನವನ್ನು ಮಾಡುವುದಕ್ಕೆ ತಯ್ಯಾರಿ ಮಾಡುವುದಾಗಿದೆ. ಈ ತರದ ವಿದ್ಯಾಭ್ಯಾಸವು ಮಕ್ಕಳಿಗೆ ಬಡಗಿ ಕೆಲಸ, ಬೆತ್ತದ ಕೆಲಸ, ಹಗ್ಗ ಮಾಡುವುದು ಮೊದಲಾದ ಯಾವುದಾದರೊಂದು ಕೈಗಾರಿಕೆಯನ್ನು ಕಲಿಸುವುದಾಗಬೇಕು. ಹೀಗೆ ಮಾಡುವುದರಿಂದ ಅವರ ಕಣ್ಣು, ಕೈ, ಮತ್ತು ಮಿದುಳು ಎಲ್ಲಾ ಒಂದಾಗಿ ಸೇರಿ ಕೆಲಸ ಮಾಡುವುದಕ್ಕೆ ಕಲಿಯುತ್ತಾರೆ. ಹೀಗೆ ಅವರು ತಮ್ಮ ಕೈಯನ್ನು ಚೆನ್ನಾಗಿ ಉಪಯೋಗಿಸಲಿಕ್ಕೆ ಕಲಿತುಕೊಂಡರೆ ಅವರು ದೊಡ್ಡವರಾದ ಮೇಲೆ ಯಾವುದಾದರೊಂದು ರೀತಿಯಿಂದ ತಮ್ಮ ಜೀವನವನ್ನು ತಾವು ಸಂಪಾದಿಸಲಿಕ್ಕೆ ಸಾಧ್ಯವಾಗುತ್ತದೆ. ಈಗ ಕೊಡಗಿನ ಶಾಲೆಗಳಲ್ಲಿ 9000 ವಿದ್ಯಾರ್ಥಿಗಳು ಇದ್ದಾರೆಂದು ಕೇಳುತ್ತೇನೆ. ಆದರೆ ಅವರಿಗೆಲ್ಲಾ ಬೇಕಾದ ನೌಕರಿಗಳು ಇವೆಯೇ? ಈಗ ತಂದೆ ತಾಯಿಗಳಿಗೂ ಮತ್ತು ವಿದ್ಯಾರ್ಥಿಗಳಿಗೂ ಸರಕಾರಿ ನೌಕರಿಗಳನ್ನು ಸಂಪಾದಿಸುವುದೇ ವಿದ್ಯಾಭ್ಯಾಸದ ಗುರಿಯೆಂದು ಅಭಿಪ್ರಾಯವಿದೆ. ಆದರೆ ಈಗ ಹೆಚ್ಚು ವಿದ್ಯಾಭ್ಯಾಸವನ್ನು ಪಡೆದರೂ ಒಬ್ಬ ಗುಮಾಸ್ತನ ಕೆಲಸವಾಗಲೀ, ಜವಾನನ ಕೆಲಸವಾಗಲೀ ಪಡೆಯುವುದು ಕಷ್ಟವಾಗಿದೆ. ಆದ್ದರಿಂದ ನಾವು ಈಗ ಕೊಡಬೇಕಾದ ವಿದ್ಯೆಯು, ವಿದ್ಯಾರ್ಥಿಯನ್ನು ತನ್ನ ತಂದೆ ತಾಯಿಗಳ ಕಸಬಿನಲ್ಲಿ ಹೆಚ್ಚಿನ ನೈಪುಣ್ಯವನ್ನು ಕೊಡುವಂಥಾದ್ದಾಗಿರಬೇಕು. ವಿದ್ಯಾರ್ಥಿಯು ಗ್ರಾಮವಾಸಿಯಾಗಿದ್ದರೆ ಆ ವಿದ್ಯಾಭ್ಯಾಸದಿಂದ ಈಗಿನದಕ್ಕಿಂತ ಉತ್ತಮ ಜೀವನವನ್ನು ನಡೆಸುವುದಕ್ಕೆ ತಯ್ಯಾರು ಮಾಡುವಂಥಾದ್ದಾಗಿರಬೇಕು. ಒಂದು ದೇಶದ ಶ್ರೀಮಂತಿಕೆಯು ಅದರ ವ್ಯಾಪಾರದ ಮತ್ತು ಕೈಗಾರಿಕೆಯ ಮೇಲೆ ಹೊಂದಿದೆ. ಇಂಗ್ಲೆಂಡು ದೇಶವು ಲೋಕದಲ್ಲೆಲ್ಲಾ ಈಗ ಮೊದಲನೆಯ ಸ್ಥಾನವನ್ನು ಹೊಂದಿ, 6000 ಮೈಲು ದೂರದಿಂದ ಬಂದು ಹಿಂದೂದೇಶವನ್ನು ಆಳುತ್ತಿರುವುದು ಕೈಗಾರಿಕೆ ಮತ್ತು ವ್ಯಾಪಾರದಲ್ಲಿ ಮುಂದೆ ಬಂದಿರುವುದರಿಂದ ಆಗಿದೆ. ಅದು ಹಿಂದೂಸ್ಥಾನವನ್ನು ಇಟ್ಟುಕೊಳ್ಳುವುದಕ್ಕೆ ಇಷ್ಟಪಡುವುದು ಸಹ ಅದರ ಕೈಗಾರಿಕೆ ಸಾಮಾನುಗಳನ್ನು ಮಾರಾಟ ಮಾಡುವ ಉದ್ದೇಶದಿಂದಾಗಿದೆ. ಆದುದರಿಂದ ಕೈಗಾರಿಕೆಗಳ ಪ್ರಾಮುಖ್ಯತೆಯನ್ನು ಮಕ್ಕಳ ತಂದೆ ತಾಯಿಗಳೂ ಮತ್ತು ಉಪಾಧ್ಯಾಯರೂ ತಿಳಿದುಕೊಳ್ಳಬೇಕು. ಅವರು ಬಾಲಕ ಬಾಲಿಕೆಯರಲ್ಲಿ ಕೈಗಾರಿಕೆಗಳ ಮೇಲೆ ಅಭಿರುಚಿಯನ್ನು ಹುಟ್ಟಿಸಿದರೆ ಕೊಡಗು ಬೇಗನೆ ಕೈಗಾರಿಕೆ ಮತ್ತು ವ್ಯಾಪಾರದ ದೇಶವಾಗುವುದು ಎಂದು ನನಗೆ ಭರವಸೆ ಇದೆ. ನೀವೀಗ ಪ್ರದರ್ಶನ ವಸ್ತುಗಳನ್ನು ನೋಡಿ ಸಂತೋಷಪಟ್ಟರೆ ಮಾತ್ರ ಸಾಲದು. ನೀವು ಹಿಂದಕ್ಕೆ ಹೋಗುವಾಗ ಇಂಥ ವಸ್ತುಗಳನ್ನು ನಿಮ್ಮ ಮನೆಗಳಲ್ಲೂ, ಶಾಲೆಗಳಲ್ಲೂ ಕಲಿಸುವುದಕ್ಕೆ ಯತ್ನಿಸಬೇಕು. ಈ ಮಾತುಗಳಿಂದ ನಾನು ಪ್ರದರ್ಶನವನ್ನು ತೆರೆಯುತ್ತೇನೆ" ಎಂದು ಹೇಳಿ ವಸ್ತು ಪ್ರದರ್ಶನವನ್ನು ತೆರೆದರು. ಅನಂತರ ಪ್ರದರ್ಶನದಲ್ಲಿದ್ದ ವಸ್ತುಗಳನ್ನು—ಇವರೂ, ಮಿಸೆಸ್ ಬಿ. ಯಸ್. ಕುಶಾಲಪ್ಪನವರು ಮತ್ತು, ಮಿಸೆಸ್ ಸಿ. ಸಿ. ಉತ್ತಯ್ಯನವರು ಪರೀಕ್ಷಿಸಿ ಉತ್ತಮವಾದ ವಸ್ತುಗಳಿಗೆ ಬಹುಮಾನಗಳನ್ನು ನಿಶ್ಚಯಿಸಿದರು.

ಇದಾದ ನಂತರ ಸಮ್ಮೇಳನವು ಮೆ. ಎ. ರಾಮರಾಯರಿಂದ ತೆರೆಯಲ್ಪಟ್ಟಿತು. ಪ್ರಾರಂಭದಲ್ಲಿ ಸ್ವಾಗತ ಮಂಡಳಿಯ ಅಧ್ಯಕ್ಷರಾದ ಮೆ. ಕೆ. ಎಸ್. ಸುಬ್ಬಯ್ಯನವರು ತಮ್ಮ ಭಾಷಣದಲ್ಲಿ ತಮ್ಮ ನಾಡಿನ ಪರವಾಗಿ ಅಧ್ಯಕ್ಷರಿಗೆ, ನೆರೆದಿದ್ದ ಮಹಿಳೆ ಮಹನೀಯರಿಗೂ ಸ್ವಾಗತವಿತ್ತು, ತಮ್ಮ ನಾಡಿನ ಕೊರತೆಗಳನ್ನು ವರ್ಣಿಸಿದರು. ಅನಂತರ ಆಟೋಟಗಳಲ್ಲಿ ಮತ್ತು ಪ್ರದರ್ಶನದಲ್ಲಿಯೂ ಬಹುಮಾನಗಳನ್ನು ಹೊಂದಿದವರಿಗೆ ಮಿಸೆಸ್. ಬಿ. ಯಸ್. ಕುಶಾಲಪ್ಪನವರು ಬಹುಮಾನಗಳನ್ನು ಹಂಚಿದರು. ಇದಾದ ಮೇಲೆ ಅಧ್ಯಕ್ಷರು ತಮ್ಮ ಸ್ವಾರಸ್ಯವಾದ ಭಾಷಣವನ್ನು ಮಾಡಿದರು. ಈ ಭಾಷಣವು ಇನ್ನೊಂದು ಕಡೆ ಪ್ರಕಟಿಸಲಾಗಿದೆ.

ಆ ವೇಳೆ ಉಪಾಧ್ಯಾಯರ ಸಂಘದ ಎಕ್ಸಿಕ್ಯೂಟಿವ್ ಮೀಟಿಂಗು ನಡೆಯಿತು. ರಾತ್ರಿ 9ರಿಂದ 12 ಗಂಟೆ ವರೆಗೆ 'ಬೊಂಡ ದ ಬಾಕ್ಸ್' ಮತ್ತು 'ವಿಂದರಾಜವಿಜಯ'ವೆಂಬ ನಾಟಕವನ್ನು ವೀರರಾಜಪೇಟೆ ಹೈಸ್ಕೂಲಿನ ವಿದ್ಯಾರ್ಥಿಗಳು ಅಭಿನಯಿಸಿದರು.

ಮೂರನೆ ದಿನ ಬೆಳಿಗ್ಗೆ ಮೆ. ಬಿ. ಎಸ್. ಕುಶಾಲಪ್ಪನವರು ಭೂಗೋಳ ಪಾಠವನ್ನೂ ಮೆ. ಕೆ. ಪಿ. ಮುತ್ತಣ್ಣನವರು ಇಂಗ್ಲಿಷ್ ಪದ್ಯಪಾಠವನ್ನೂ ಮಾಡಿದರು. ಇದಾದ ಮೇಲೆ ಶಾಲೆಗಳಲ್ಲಿ ಮತ ಸಂಬಂಧವಾದ ಶಿಕ್ಷಣ ಕೊಡಬೇಕೋ ಬೇಡವೋ ಎಂಬ ವಿಷಯವನ್ನು ಚರ್ಚಿಸಿದರು.

ಮಧ್ಯಾಹ್ನದ ವೇಳೆ ಕೊಡಗು—ಬೆಂಗಳೂರಿನ ತಾಲೂಕು ಇನ್‌ಸ್ಪೆಕ್ಟರು 'ಬೋಧನಾ ಕ್ರಮದಲ್ಲಿ ಆಧುನಿಕ ಬದಲಾವಣೆ'ಯ ವಿಷಯವನ್ನೂ, ಮೈಸೂರಿನ ಮಹಾರಾಜಾ ಕಾಲೇಜಿನ ಲೆಕ್ಚರರಾದ ಮೆ. ನಾರಾಯಣ ಶಾಸ್ತ್ರಿಯವರು ಸಾಹಿತ್ಯ [illegible]ಗಳಿಂದ 'ಮಕ್ಕಳ ಶಿಕ್ಷಣ'ವನ್ನೂ, ವೀರಾಜಪೇಟೆ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಮೆ. ಪಿ. ಸಿ. ಉತ್ತಯ್ಯನವರು 'ಪ್ರಪಂಚ ಶಾಂತಿಯೂ, ಉಪಾಧ್ಯಾಯರ ಕರ್ತವ್ಯ'ವೆಂಬ ವಿಷಯವನ್ನೂ ಕುರಿತು ಭಾಷಣ ಮಾಡಿದರು. ನಂತರ ಶ್ರೀ. ಭವಾನಂದ ಸ್ವಾಮಿಯವರು ಮಲೇರಿಯದ ವಿಷಯ ಕೊಡಗು ಭಾಷೆಯಲ್ಲಿ ಹಾಡುಗಳನ್ನು ತಯಾರಿಸಿ ಹಾಡಿದರು. ಅಧ್ಯಕ್ಷರು ಮೂರು ದಿನಗಳಲ್ಲಿ ನಡೆದ ಕಾರ್ಯಕಲಾಪಗಳನ್ನು ಪರಿಶೀಲಿಸಿ ಮಾತನಾಡಿದರು. ಕಡೆಯಲ್ಲಿ ಸಂಘದ ಅಧ್ಯಕ್ಷರಾದ ಪಿ. ಎಂ. ಉತ್ತಪ್ಪನವರು ಅಧ್ಯಕ್ಷರಿಗೂ, ಭಾಷಣ ಕರ್ತರುಗಳಿಗೂ, ಪಾಠ ಹೇಳಿದವರಿಗೂ, ಇತರರೆಲ್ಲರಿಗೂ ವಂದನೆಯನ್ನು ಅರ್ಪಿಸಿದ ಮೇಲೆ ಸಭೆಯು ಮುಕ್ತಾಯವಾಯಿತು.

ಹಲವು ವಿಷಯಗಳನ್ನು ಜನರಲ್ ಬಾಡಿ ಮೀಟಿಂಗಿನಲ್ಲಿ ಚರ್ಚಿಸಿ ಮುಂದಿನ ವರ್ಷಕ್ಕೆ ಬೇಕಾದ ಉದ್ಯೋಗಸ್ಥರನ್ನು ಚುನಾಯಿಸಿದರು. ಮೆ. ಡಿ. ಯಂ. ಶಿದ್ದಲಿಂಗಯ್ಯನವರು ಸಂಘದ ಅಧ್ಯಕ್ಷರಾಗಿಯೂ, ಮೆ. ನಡಿಕೇರಿಯಂಡ ಸುಬ್ಬಯ್ಯನವರು ಕಾರ್ಯದರ್ಶಿಯಾಗಿಯೂ, ಮೆ. ಗುಮ್ಮಟ್ಟೀರ ನಂಜಪ್ಪನವರು ಕೋಶಾಧ್ಯಕ್ಷರಾಗಿಯೂ, ಮೆ. ಟಿ. ಯಂ. ಕಾರ್ಯಪ್ಪನವರು 'ಶಾರದಾ' ಪತ್ರಿಕೆಯ ಸಂಪಾದಕರಾಗಿಯೂ ಚುನಾಯಿಸಲ್ಪಟ್ಟರು. ಮುಂದಿನ ವರ್ಷದ ಕಾನ್‌ಫರೆನ್ಸನ್ನು ಪೊನ್ನಂಪೇಟೆಯಲ್ಲಿ ನಡೆಸಬೇಕೆಂದೂ, ಆ ಸಮಯದಲ್ಲಿ ಊಟದ ಏರ್ಪಾಡನ್ನು ಮುಫ್ತಾಗಿ ತಾನು ನಡೆಸುತ್ತೇನೆಂದು ಪತ್ರ ಮೂಲಕ ಮೆ. ಸಿ. ಎಸ್. ಪೂವಯ್ಯನವರು ಕೇಳಿಕೊಂಡದ್ದರಿಂದ ಅವರಿಗೆ ವಂದನಾಪೂರ್ವಕ ಆತಿಥ್ಯ ನಡೆಸುವುದಕ್ಕೆ ತೀರ್ಮಾನವಾಯಿತು.

ವೀರಾಜಪೇಟೆ, ಡಿ. ಎನ್. ಕೃಷ್ಣಯ್ಯ,
ತಾ. 6—12—1932. (ಗೌರವ ಕಾರ್ಯದರ್ಶಿ.)

ಶಾಕ್‌ಗೋಟು ಪರಂಬು ಹೈಯರ್ ಎಲಿಮೆಂಟರಿ ಶಾಲಾ 'ಸ್ಕೂಲ್ ಡೇ.'

(ಒಬ್ಬ ಉಪಾಧ್ಯಾಯರಿಂದ)

ನವೆಂಬರ್ ತಾರೀಖು 27ನೇಯ ಆದಿತ್ಯವಾರ ಪ್ರಾತಃಕಾಲ 8½ ಗಂಟೆಗೆ ಶಾಲೆಯ ಬಾಲಕರೆಲ್ಲರೂ ಶಾಲಾ ಅಂಗಳದಲ್ಲಿ ಪ್ರಾರ್ಥನೆ ಮಾಡಿ, ಉಪಾಧ್ಯಾಯರೊಡನೆ, ವಾದ್ಯಘೋಷದೊಡನೆ ಆಟದ ಮೈದಾನಕ್ಕೆ ಹೋದರು. ಅಲ್ಲಿ ಸಾಧಾರಣ ಒಂದು ಗಂಟೆ ಅಪರಾಹ್ನದ ವರೆಗೆ ಬಾಲಕ ಬಾಲಿಕೆಯರ ಆಟೋಟಗಳೂ, ಪಬ್ಲಿಕನವರ ಸೈಕಲ್ ರೇಸ್, ವೈಟ್ ರೇಸ್, ಎತ್ತರ ಮತ್ತು ದೂರ ಹಾರುವುದು ಮತ್ತು, ತೆಂಗಿನಕಾಯಿಗೆ ಗುಂಡು ಹೊಡೆಯುವುದು ನಡೆಯಿಸಲಾಯಿತು. ಒಂದುವರೆ ಗಂಟೆ ಅಪರಾಹ್ನಕ್ಕೆ ನೆರೆದಿದ್ದ ಸಾಧಾರಣ 2000 ಮಹಿಳೆಯರಿಗೂ, ಮಹನೀಯರಿಗೂ ಉಪಹಾರ [illegible] ಮೂರು ಘಂಟೆಗೆ ಹೆಡ್ಮಾಸ್ಟರವರ ಕೋರಿಕೆ ಮೇರೆ ಡಿಸ್ಟ್ರಿಕ್ಟ್ ಬೋರ್ಡ್ ವೈಸ್ ಪ್ರೆಸಿಡೆಂಟರೂ ಮತ್ತು ಕೌನ್ಸಿಲ್ ಮೆಂಬರೂ ಆದ ಮೆ. ಪಾಂಡಂಡ ಚಂಗಪ್ಪನವರು ಚಿಕ್ಕ ಭಾಷಣ ಮಾಡಿ, ವಿದ್ಯಾರ್ಥಿಗಳ ಕೈಗಾರಿಕೆಯ, ಬರವಣಿಗೆಯ, ಚಿತ್ರಲೇಖನದ, ಹೊಲಿಗೆ, ಮಣ್ಣು ಕೆಲಸದ ಪ್ರದರ್ಶನ ತೆರೆದರು. ಆ ವೇಳೆ ಹುಡುಗಿಯರ ಶಾಲೆಯ ಬಾಲಿಕೆಯರ ಪ್ರಾರ್ಥನೆಯಾದನಂತರ ಕೌನ್ಸಿಲ್ ಮೆಂಬರಾದ ಮೆ. ಅಪ್ಪಾರಂಡ ಚಂಗಪ್ಪನವರು ಅಧ್ಯಕ್ಷಸ್ಥಾನವನ್ನು ವಹಿಸಿದರು. ಶಾಲಾ ಹೆಡ್ಮಾಸ್ಟರ್ ಮೆ. ಯಮ್. ಯಸ್. ಗಂಗಾಧರವರು ಶಾಲೆಯ ದೀರ್ಘವಾದ ವರದಿಯನ್ನೂ, ವಿದ್ಯಾರ್ಥಿ-ಶಿಕ್ಷಕರ ಸಂಘದ ಸೆಕ್ರಟರಿಯವರು ಸಂಘದ ವರದಿಯನ್ನೂ ಓದಿದನಂತರ ವಿದ್ಯಾರ್ಥಿಗಳಿಗೂ, ಪಬ್ಲಿಕರವರಿಗೂ, ಸಾಧಾರಣ ಒಂದುನೂರರಷ್ಟು ರೂಪಾಯಿ ಬೆಲೆಯ ಅನೇಕ ಇನಾಮುಗಳನ್ನು ಅಧ್ಯಕ್ಷರು ಹಂಚಿದರು. ಮಳೆಯು ಬರುವ ಹಾಗೆ ಕಂಡದ್ದರಿಂದ ನಾಳೆಯ ಹೊರಗೆ ಉಂಟಾದುದರಿಂದ ಪ್ರದರ್ಶನದ ಭಾಗಕ್ಕೆ ಇನಾಮು ಹಂಚುವುದನ್ನು ಬಾಕಿ ಮಾಡಲಾಯಿತು. ಅಧ್ಯಕ್ಷರು ಬೆಳ್ಯಪ್ಪನವರು ಕೋ-ಆಪರೇಟಿವ್ ಸಂಘದ ಸ್ಕಾಲರ್‌ಶಿಪ್ಪನ್ನು ಆರು ಹುಡುಗರಿಗೆ ಹಂಚಿದ ಮೇಲೆ ಕೊಡಗು ಮಾತಿನಲ್ಲಿ [illegible] ಶಾಲಾ [illegible], ಬಾಲಕ ಬಾಲಿಕೆಯರಿಗೂ ಬೋಧಪ್ರದವಾದ ಭಾಷಣ ಮಾಡಿದರು. ಆ ವೇಳೆ ವಿದ್ಯಾರ್ಥಿಗಳು ಶಿವಾಜಿಯ ಜೀವನ ಚರಿತ್ರೆಯ ಒಂದು ಭಾಗದ ಕಥೆಯನ್ನು ಇಂಗ್ಲಿಷಿನಲ್ಲಿಯೂ, 'ಭಾರ್ಗವ ಗರ್ವಭಂಗ' ಎಂಬುವುದನ್ನು ಕನ್ನಡದಲ್ಲಿಯೂ ಆಡಿ ತೋರಿಸಿದರು. ಅಂತ್ಯದಲ್ಲಿ ಹೆಡ್ಮಾಸ್ಟರವರು ನೆರೆದಿದ್ದ ಮಹಿಳೆಯರಿಗೂ, ಮಹನೀಯರಿಗೂ, ಅಧ್ಯಕ್ಷರಿಗೂ ವಂದಿಸಿದನಂತರ ಅಧ್ಯಕ್ಷರ ಮುಕ್ತಾಯ ಭಾಷಣದೊಡನೆ ಸ್ಕೂಲ್ ಡೇ ಉತ್ಸವವು ರಾತ್ರಿ 8.15 ಗಂಟೆಗೆ ಅಂತ್ಯವಾಯಿತು.

(ಮೇಲಿನ ಕಾರ್ಯಭಾಗದಲ್ಲಿ ಚಂದಾ ಮೂಲಕವೂ, ಇನಾಮುಗಳ ಮುಖಾಂತರವೂ, ತನು ಮನ ಧನ [illegible] ಶಾಲಾ ಉಪಾಧ್ಯಾಯರುಗಳಿಗೆ ನೆರವಾದ ಮಹಿಳೆಯರಿಗೂ, ಮಹನೀಯರಿಗೂ ಶಾಲೆಯ ಕೃತಜ್ಞತಾಪೂರ್ವಕವಾದ ವಂದನೆಗಳಿವೆ.)

ಚೈಯಂಡಾಣೆ ಶಾಲೆಯ ನಾಲ್ಕನೇ ವಾರ್ಷಿಕೋತ್ಸವವು.

(ಹಾಜರಿದ್ದವರಿಂದ.)

ಕಳೆದ ನವೆಂಬರ್ ತಾ. 27ನೇ ಆದಿತ್ಯವಾರ ಚೈಯಂಡಾಣೆ ಶಾಲೆಯ ನಾಲ್ಕನೇ ವಾರ್ಷಿಕೋತ್ಸವವು ಮೆ. ಬಿ. ಎ. ಬೆಳ್ಯಪ್ಪ ಬಿ.ಎ. ಎಲ್. ಟಿ. ಯವರ ಅಧ್ಯಕ್ಷತೆಯಲ್ಲಿ ನಡೆಯಿತು.

ಕಾರ್ಯಕ್ರಮ ಪಟ್ಟಿಯಲ್ಲಿ ತೋರಿಸಿದಂತೆ 8½ ಗಂಟೆಗೆ ಶಾರದಾ ಪೂಜೆಯಾಗಿ ತೀರ್ಥ ಪ್ರಸಾದವನ್ನು ಸ್ವೀಕರಿಸಿದ ನಂತರ ಶಾಲೆಯ ಹಿಂಬದಿಯಲ್ಲಿರುವ ಶಾಲಾ ಮೈದಾನಕ್ಕೆ ತೆರಳಿ ಆಟಕ್ಕೆ ಪ್ರಾರಂಭವಾಗುವಷ್ಟರಲ್ಲಿ ಅಧ್ಯಕ್ಷರು ಬಂದದ್ದರಿಂದ, ಶಾಲಾ ಹೆಡ ಮಾಸ್ಟರು ಇನ್ನು ಕೆಲವು ಮಹನೀಯರು ವಾದ್ಯ ಮೇಳದೊಡನೆ ಶಾಲೆಗೆ ಕರೆತಂದು ತೀರ್ಥ ಪ್ರಸಾದವನ್ನು ಕೊಟ್ಟು ಮೈದಾನಕ್ಕೆ ಕರೆತಂದರು. ಈ ವರ್ಷ ಆಟ ಓಟಗಳಿಗೆ ಬಹಳ ದೂರದಿಂದ ಅನೇಕ ಮಹನೀಯರು ಬಂದು ಇನಾಮುಗಳನ್ನು ಪಡೆದುಕೊಂಡದ್ದಲ್ಲದೆ ವೃದ್ಧರುಗಳೂ ಸಹ ಓಟವನ್ನಿಟ್ಟದ್ದು ವಿಶೇಷವಾಗಿದೆ. ಇದು ತೀರಿದ ನಂತರ ಸೇರಿದ ಎಲ್ಲಾ ಜನರಿಗೂ ಊಟ ಉಪಚಾರಗಳಾದವು.

ಅನಂತರ 1½ ಗಂಟೆಗೆ ಶಾಲೆಯ ಅಂಗಳದಲ್ಲಿ ಹಾಕಿದ್ದ ಚಪ್ಪರದಲ್ಲಿ ಸಭೆ ಸೇರಿತು. ಬಾಲಿಕೆಯರಿಂದ ಪ್ರಾರ್ಥನೆಯಾದನಂತರ ಶಾಲಾ ಹೆಡ್‌ಮಾಸ್ಟರು ಶಾಲಾ ವರದಿಯನ್ನು, ಬಾಲ ಸಮಾಜದ ಸೆಕ್ರೆಟರಿಯವರು ಅವರ ವರದಿಯನ್ನು ಓದಿದರು. ಶಾಲೆಯ ಅಭಿವೃದ್ಧಿಯೂ, ಬಾಲಕರು ಚರ್ಚಿಸಿ ತೀರ್ಮಾನಿಸಿಕೊಂಡ ವಿಷಯವೂ ಅತಿ ಸಂತೋಷವನ್ನುಂಟುಮಾಡತಕ್ಕದ್ದಾಗಿದೆ.

ಅನಂತರ ಬಾಲಕರು 'ಶನಿ ಪ್ರಭಾವ'ವೆಂಬ ಕಥೆಯನ್ನೂ, ಬಾಲಿಕೆಯರು 'ನವೀನ ಭಾರತಮಾತೆ'ಯೆಂಬ ಸ್ತ್ರೀ ಸಂವಾದವನ್ನೂ ರಂಗಕ್ಕೆ ತಕ್ಕ ಗುಣಗಳನ್ನು ಅಭಿನಯಿಸಿ ತೋರಿಸಿದರು. ಆ ವೇಳೆ ಮೆ. ಎನ್. ಸಿ. ಸುಬ್ಬಯ್ಯನವರು ಉಪಾಧ್ಯಾಯರಿಗೂ—ಪೋಷಕರ್ತರಿಗೂ, ಬಾಲಕರಿಗೂ—ಪ್ರೋತ್ಸಾಹಕರ್ತರಿಗೂ ಇರತಕ್ಕ ಸಂಬಂಧದ ಕುರಿತೂ, ಮೆ. ಬಿ. ಬಿ. ಮುದ್ದಯ್ಯನವರು ಮಕ್ಕಳ ಆಹಾರದ ವಿಷಯವಾಗಿಯೂ, ಮೆ. ಕೋಚಂಡ್ರ ಅಪ್ಪಣ್ಣನವರು ಯುವಕರು [illegible] ಮಾಡಬೇಕಾದ [illegible] ಮತ್ತು [illegible] ವನ್ನು ಕುರಿತೂ, ಮೆ. ಉಯ್ಯಂಡ [illegible] ಬಾಲಕ ಬಾಲಿಕೆಯರಿಗೆ [illegible] ಆ ದಿನ [illegible] ಮಹಿಳೆಯರು ನೆರೆದಿರುವುದು ಸಂತೋಷವೆಂದೂ ಭಾಷಣ ಮಾಡಿದರು. ಅನಂತರ ಇನಾಮುಗಳನ್ನು ಹಂಚಿ, ಅಧ್ಯಕ್ಷರು ಸ್ವಾರಸ್ಯವಾದ ಭಾಷಣ ಮಾಡಿದರು. ಆ ಮೇಲೆ ಹೆಡ್‌ಮಾಸ್ಟರು ಎಲ್ಲರಿಗೂ ವಂದನೆಯನ್ನಿತ್ತ ಮೇಲೆ 5 ಗಂಟೆಗೆ ಸಭೆ ಬರಖಾಸ್ತುಮಾಡಲಾಯಿತು.

ಪುನಃ ಎಲ್ಲರೂ ರಾತ್ರಿ 8 ಗಂಟೆಗೆ ಬಂದನಂತರ ಮೆ. ಅಪ್ಪನೆರವಂಡ ಅಪ್ಪಚ್ಚು ಕವಿಯವರು ಮಾರ್ಕಂಡೇಯ ಚರಿತ್ರೆಯನ್ನು ಭಕ್ತಿ ಸನ್ಮಾರ್ಗದಿಂದ ಕೂಡಿ ರಸಭರಿತವಾಗಿ ಮಾಡಿದ ಹರಿಕಥೆಯನ್ನು ಕೇಳಿ ಸಂತೋಷಪಡಿದರು.

ಆ ದಿನಕ್ಕೆ ಮುಂಚೆ ಇನ್ನು ಮಳೆಯನ್ನು ನೋಡಿ ಭೀತಿಗೊಂಡಿದ್ದರೂ ಆ ದಿನ ಮಳೆ ಇಲ್ಲದೆ ದೇವರ ಕೃಪೆಯಿಂದ ಉತ್ಸವವು ಬಹಳ ಚೆನ್ನಾಗಿ ನಡೆಯಿತು.

ಜಮೀನ್ದಾರರ ಸಂಘದ ಕಮಿಟಿ ಮೀಟಿಂಗು.

ತಾ. 3—12—32 ರಲ್ಲಿ ವೀರರಾಜಪೇಟೆಯಲ್ಲಿ ಕೊಡಗು ಜಮೀನ್‌ದಾರರ ಸಂಘದ-ಕಮಿಟಿ ಮೀಟಿಂಗು ನಡೆಯಿತು. ಈ ಕೆಳಗಿನವರು ಹಾಜರಿದ್ದರು. ಮಾ. ರಾ. ಶ್ರೀ. ಗೌಡ ಸಿ. ಯಮ್. ಮೊಣ್ಣಯ್ಯನವರ್, (ಪ್ರೆಸಿಡೆಂಟು.)

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.
(ಸ್ಥಾಪಿತವಾದದ್ದು 1922ರಲ್ಲಿ)

	ರೂ.
ಷೇರ್ ಬಂಡವಾಳ —	50,000—0—0
ವಸೂಲಾದ ಷೇರ್ ಮೊಬಲಗು —	27,670—0—0
ಜಮೆಯಾದ ಠೇವಣಿ —	23,159—13—9
ವಸೂಲಾದ ಕ್ಷೇಮನಿಧಿ —	45,868—14—0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರ ಸಂಘಗಳಿಗೆ ಹೊರತಾಗಿ ಸಾಲ ಕೊಡತಕ್ಕದ್ದಲ್ಲ.

ಒಂದು ವರ್ಷ ಗಡುವಿನ ಅಥವಾ ಹೆಚ್ಚಿನ ಗಡುವಿನ ಠೇವಣಿದಾರರಿಗೆ ಶೇಕಡ ಸಾಲಿಯಾನ ರೂ. 5—0—0ರ ಮೇರೆಗೆ ಬಡ್ಡಿ ದೊರೆಯುತ್ತೆ. ಕಡಿಮೆ ಗಡುವಿನ ಠೇವಣಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ಸರಕಾರದವರಿಂದ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ.

ಪ್ರೆಸಿಡೆಂಟರು,	ಟ್ರೆಜರರ್
ಪಟ್ಟಮಾಡ ದೇವಯ್ಯನವರು, ರಾವ್ ಬಹದ್ದೂರ್.	ಮನೆಯಪ್ಪಂಡ ಬೆಳ್ಯಪ್ಪನವರು.

ಸೆಕ್ರೆಟರಿ
ಸಿ. ಬಿ. ವೆಂಕಟಯ್ಯನವರು, ಬಿ.ಎ., ಬಿ.ಎಲ್.
ತಾರೀಖು 1—7—1932.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿದೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿದೆ.

ಏಜಂಟರುಗಳು.

ಕೊಡಗಿನ ಎಲ್ಲಾ ಭಾಗಗಳಿಗೆ—ಮೆ. ಮಾಚಂಡ ಎಂ. ಬಿದ್ದಪ್ಪನವರು
ಉತ್ತರ ಕೊಡಗಿಗೆ ಮೆ. ಚೌರಿರ ಮೊದ್ದಯ್ಯನವರು,

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು, (ಚಾವಡಿಭಂಡಾರ.)
ಅಮ್ಮತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಯ್ಯನವರು, ಮತ್ತು ಅರಮಣಮಾಡ ಪಿ ಕಾರ್ಯಪ್ಪನವರು,
ಹುದಿಕೇರಿ & ತಿತಿಮತಿ—ಮೆ. ಜಿ. ಮಾದಯ್ಯನವರು,
ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಪೊನ್ನಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಿಸಲು ಅವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಖರಾರು ಫಾರಮುಗಳೂ, ಜಮ್ಮ ಸುಂಕಾಪಿರಾತಿ ಫಾರಮುಗಳೂ, ಕುಟುಂಬದ ಒಪ್ಪಿಗೆ ಫಾರಮುಗಳೂ, ಜಾಮೀನು ಖರಾರು ಫಾರಮುಗಳೂ, ಸ್ಟೋರ್ ಕೀಪರ್ ಖರಾರು ಫಾರಮುಗಳೂ, ಒವರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮಾ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಮುದ್ದಾಂ ಬರೆದು ತರಿಸುವವರು ಅಂಚೆ ಖರ್ಚು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.
ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.
ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ. ಪಾಲಿಸಿ ದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.
ಬಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,78,322 ಜನರಿಗೆ 38 ಕೋಟಿ ರೂ.
ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ರಕ್ಕಿಂತ ವಿಪರೀತ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದಾಗಿದೆ. ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ನೋಡಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಒತ್ತಾಸೆಯನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬುದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್ ಬೆಂಗಳೂರು
ಅಥವಾ ಇನ್ಸ್‌ಪೆಕ್ಟರೇಟ್ ಆಫೀಸು, ಮಡಿಕೇರಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರಾ	ಕಲ್ಕತ್ತಾ	ಕೌಲಾಲಂಪೂರು	ಮೊಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೋ	ಪಾಟ್ನಾ	ಸಕ್ಕೂರು
ಅಲಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	[illegible]	ಮಂಡಲೆ	ರಾಯಪುರ	ತಿರುವೆಂದ್ರಮ್
ಭೋಪಾಲ್	ಕರಾಚಿ	ಮಡಿಕೇರಿ	ರಾಂಚಿ	ವಿಶಾಖಪಟ್ಣ

[52—40

ಸಣ್ಣ ಹುಡುಗರ ಸಲುವಾಗಿ

ಡೋಂಗರೆ
ಇವರ
ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತಾರೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
52—47 ಗಿರಿಗಾಂವ್, ಮುಂಬಯಿ.

ಕಾಗದ ಬರೆದರೆ ಈಗಿನ
ಕ್ಯಾಟಲಾಗು ಮಾಫಿಯಾಗಿ
ಕಳುಹಿಸಲ್ಪಡುವುದು.



ಕೋವಿಗಳು, ಕತ್ತಿಗಳು, ಬಚೇಗಳು, ಕಾಟ್ರಿಡ್ಜುಗಳು, ಕೊಕ್ಕೆಗಳು, ಮತ್ತು ಶಿಕಾರಿ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುತ್ತವೆ.

GOOLAMHUSAIN ALLIBHOY & SONS LTD.,
Largest Importers of Firearms and Ammunition
Cheapest priced firm in India,
26—13 **210 Abdul Rehiman Street, BOMBAY.**

Printed & published by P. I. Belliappa at "Kodagu" Press Mercara for "Kodagu" Ltd.

Reg. No. M. 1530.
If not delivered please return to
"KODAGU" OFFICE MERCARA.

ಕೊಡಗು.

[illegible]
ವಾರ್ಷಿಕ ಚಂದಾ ರೂ. ೩—೪—೦.
ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೨ | ಮಡಿಕೇರಿ, ಸನ್ ೧೯೩೨ನೇ ಇಸವಿ ಡಿಸಂಬರ್ ತಾರೀಖು ೯ ನೇ ಶುಕ್ರವಾರ. | ಸಂಚಿಕೆ ೨೮

SARI-PIN.

BRACELETS.

NECKCHAINS.

EAR-RINGS
(Thodus)
Cut-rubys Rs. 25 to 50
With diamond in centre Rs. 80 to 120

Gold Rs. 10
Set rubys forming any letter Rs. 12

NOSE-RINGS.
Diamond in small size of best quality Rs. 35
& upwards according to size.

MARRIAGE PRESENTATIONS

Attractive and inexpensive articles ready in stock. Prompt execution. Details on enquiry free with catalogue. Numerous customers in Coorg thoroughly satisfied with reliable service. Testimonials pouring in. Silver Guindys, Photo lockets, Diamond nose-screws, cut-ruby ear-rings, etc., etc., etc., in all prices. Very attractive. Prices most moderate.

Estimates free on enquiry.

Designs free on enquiry.

Telegrams: 'PRECIOUS.'

Telephone: 3145.

CATALOGUE ON ENQUIRY.

V. Subramaniar Jeweller,
Post Box 423, Triplicane, P. O., MADRAS.

52—3

26—24

ಜನರಲ್ ಅಷ್ಯೂರೆನ್ಸ್ ಸೊಸೈಟಿ.

ಅಜಮೀರ್.

ನಮ್ಮ ಆಯವ್ಯಯದ ಪಟ್ಟಿಯೇ ನಮ್ಮ ಅಭಿವೃದ್ಧಿಯನ್ನು ವ್ಯಕ್ತಗೊಳಿಸುತ್ತದೆ.

ವರ್ಷ	ಮಾಡಲ್ಪಟ್ಟ ವಿಮಾ ದಾರು	ಮಾಡಲ್ಪಟ್ಟ ವಿಮಾ ಧನ	ಖರ್ಚಿನ ಪ್ರಮಾಣದ ಶೇಕಡ
1911	40,248	49,442	82.9
1921	2,91,627	6,59,350	43 2
1931	12,50,000	40,00 000	28 2

ಬೋನಸ್ಸು.

ಕೊನೆಯ ಸಲ ದೊರಕುವ ಬೇರೆ ಅವಧಿ ಪಾಲಿಸಿಗಳ ಮೇಲೆ ವರ್ಷ ಒಂದಕ್ಕೆ ಶೇಕಡ 22½

ಚೆನ್ನಾಗಿ ಕೆಲಸಮಾಡಿ ಅಭಿವೃದ್ಧಿ ಸ್ಥಿತಿಯಲ್ಲಿರುವ ಈ ಸೊಸೈಟಿಯಲ್ಲಿ ವಿಮೆ ಮಾಡಿ ಕಡಿಮೆ ಪ್ರೀಮಿಯಂ ಪಾವತಿ ಮಾಡುವ ಸೌಲಭ್ಯ ಹೊಂದಿ ಅಥವಾ ಈ ಕಂಪೆನಿಯ ಏಜಂಟರಾಗಿ ಕೆಲಸಮಾಡಿ ಉತ್ತಮ ಕಮಿಶನ್ ದಿಂದ ಪ್ರಯೋಜನ ಹೊಂದಿ.

ಹೆಚ್ಚು ವಿಚಾರಗಳಿಗೆ ಈ ವಿಳಾಸಕ್ಕೆ ಬರೆಯಿರಿ:—

ಎ. ರಾಮಚಂದ್ರರಾವ್,
ಸೂಪರಿಂಟೆಂಡೆಂಟ್,
ಮಿಂಟೋ ಆಸ್ಪತ್ರೆ ಬಳಿ,
ಬೆಂಗಳೂರು.

52—33

ಎಂಪಯರ್ ಆಫ್ ಇಂಡಿಯಾ ಲೈಫ್ ಎಷ್ಯೂರೆನ್ಸ್ ಕಂಪೆನಿ ಲಿಮಿಟೆಡ್.

(ಸ್ಥಾಪನೆಯಾದದ್ದು 1897.)

1934ನೇ ಇಸವಿ ಮಾರ್ಚ 1ನೇ ತಾರೀಖಿನೊಳಗೆ ಪಕ್ವವಾಗುವ ಪೋಲಿಸಿಗಳ ಮೇಲೆ ಇಂಟೆರಿಮ್ ಬೋನಸು ವರ್ಷಕ್ಕೆ 1000ಕ್ಕೆ ರೂ. 16ರಂತೆ ಹೋಲ್ ಲೈಫ್ ಎಷ್ಯೂರೆನ್ಸಿನ ಪೋಲಿಸಿಯೂ ಮತ್ತು 1000ಕ್ಕೆ ರೂ. 14ರಂತೆ ಎಂಡೋಮೆಂಟ್ ಎಷ್ಯೂರೆನ್ಸಿನ ಪೋಲಿಸಿಯೂ ಕೊಡಲ್ಪಟ್ಟವೆ.

ಹೆಡ್ ಆಫೀಸು:—
ಎಂಪೈರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್,
ಬೊಂಬಾಯಿ.

ಬ್ರಾಂಚ್ ಆಫೀಸು:—
152—3 ಕನಿಂಗ್‌ಹ್ಯಾಮ್ ಸ್ಟ್ರೀಟ್,
ಬೆಂಗಳೂರು.

52—10

ಪತ್ರವ್ಯವಹಾರ.

[ವಾಚಕರು ಬರೆದ ಅಭಿಪ್ರಾಯಗಳಿಗೆ ಪತ್ರಿಕೆ ಹೊಣೆಯಲ್ಲ. ಸಂ]

ಸ್ತ್ರೀಯರ ಉದ್ಯೋಗ.

ಅಯ್ಯಾ,

ಪ್ರತಿಯೊಬ್ಬನೂ ಆವನವನ ಕರ್ತವ್ಯವನ್ನು ಸಮಯಕ್ಕೆ ಸರಿಯಾಗಿ ಮಾಡಿಕೊಂಡು ಬರಬೇಕು. ಆವನು ಯಾವ ಕೆಲಸವನ್ನು ಕೈಕೊಂಡಿರುತ್ತಾನೋ ಅದೇ ಅವನ ಉದ್ಯೋಗವು (Duty). ಅವನು ಅದರಲ್ಲಿ ದುರಂಧರನಾಗಿರಬೇಕು. ಇದೇ ಅವನಿಗೆ ಲಕ್ಷಣವಾಗಿರುವುದು. ಈ ವಿಷಯವನ್ನು ತಿಳಿಯದೆ ತಪ್ಪು ಅರ್ಥ ಮಾಡಿಕೊಂಡದ್ದರಿಂದಲೇ ನಮ್ಮ ದೇಶದ ಹೆಂಗಸರೂ ಸಹ ತಮಗೆ ಯಾವುದು ಉದ್ಯೋಗವಾಗಬೇಕೆಂದು ತಿಳಿಯದೆ ಈಗೀಗ ಸರ್ಕಾರಿ ಉದ್ಯೋಗವನ್ನು ಕೈಕೊಂಡಿರುವರು. ಹೀಗೆ ಹೆಂಗಸರು ಸಹ ಸರ್ಕಾರಿ ಉದ್ಯೋಗಗಳಿಗೆ ಅಪೇಕ್ಷಿಸುವುದು ನಮ್ಮ ದೇಶದ ಅಧೋಗತಿಗೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಇದು ಹೇಗೆಂದರೆ—ಗಂಡಸರು ಈಗ ಸರ್ಕಾರಿ ಉದ್ಯೋಗವನ್ನು ಕೈಕೊಂಡು ದುಃಖವನ್ನು ಚೆನ್ನಾಗಿ ಅನುಭವಿಸಿದ್ದಾರೆ. ಅದೇ ಈಗ ಗುಲಾಮರನ್ನಾಗಿ ಮಾಡಿ ದೇಶವು ಗುಲಾಮಗಿರಿಯಲ್ಲಿದೆ. ಇದರಿಂದಲೇ ಇನ್ನು ಹೆಂಗಸರು ಸರ್ಕಾರಿ ಉದ್ಯೋಗವನ್ನು ಕೈಕೊಂಡರೆ ಮತ್ತೆ ಪಾಪ್ಪ ಹೇಳುವುದೇ ಬೇಡ.

ಗಂಡಸರು ಯಾವಾಗಲೂ ಹೊರಗೆ ಹೋಗಿ ದುಡಿದು ಹಣಸಂಪಾದಿಸಿ ಜೀವನಕ್ಕೆ ಅವಶ್ಯವಿರುವ ಎಲ್ಲಾ ಸಾಮಾನುಗಳನ್ನು ತಂದು ಹಾಕುತ್ತಾನೆ. ಅದನ್ನು ಹೆಂಗಸರು ತಮ್ಮ ಮಕ್ಕಳ ಅಭಿರುಚಿಗನುಸಾರವಾಗಿ ಸಿದ್ಧಪಡಿಸಿಟ್ಟು ಪತಿಯ ಸಾಮಾನುಗಳಲ್ಲಿ ದೇವರ ಪೂಜೆ ಪುನಸ್ಕಾರಗಳನ್ನು ಸಹ ಅವರೇ ನಡಿಸಬೇಕು. ಮಕ್ಕಳ ಪೋಷಣೆಯು ಸಹ ಅವರ ಮುಖ್ಯವಾದ ಕೆಲಸ. ಈ ದಿನದ ಮಕ್ಕಳೇ ಮುಂದಿನ ಜನಾಂಗವಾಗಲಿಕ್ಕಿರುವ ಕಾರಣ ಎಲ್ಲರೂ ಮಕ್ಕಳ ಅಭಿವೃದ್ಧಿಯನ್ನು ನೋಡಿಕೊಳ್ಳುವುದು ಅತ್ಯಾವಶ್ಯಕವಾದ ಕೆಲಸ. ಬೇರೆ ಮಕ್ಕಳ ಪಾಲನೆಗಿಂತ ತಾಯಿಯು ಹತ್ತಿರದೇ ಹೆಚ್ಚು. ಇದೀಗ ಕಾರಣ ಮಕ್ಕಳನ್ನು ಯಾವ ರೀತಿಯಲ್ಲಿ ತಂದೆ ಮಾಡಬೇಕೆಂದು ತಾಯಿಯು ಚೆನ್ನಾಗಿ ತಿಳಿದುಕೊಂಡಿರಬೇಕು.

ಮಕ್ಕಳಿಗೆ ತಾಯಿಯ ಮೇಲೆಯೇ ಪ್ರೀತಿಯೂ, ಪ್ರೇಮವೂ ಹೆಚ್ಚು. ಹೀಗೆ ಅವರು ತಾಯಿಯ ಗುಣಗಳನ್ನೇ (Character) ಕಲಿತುಕೊಂಡು ದೊಡ್ಡವರಾಗುತ್ತಾರೆ. ಮಕ್ಕಳು ಇತರರು ನಡೆದಂತೆ ನಡೆವ ಸ್ವಭಾವವುಳ್ಳವರು. ಹೆಂಗಸರು ಅಟ್ಟಾಸಿಗಳಾಗಿದ್ದರೆ ಮಕ್ಕಳು ಏನಾಗಿ ಬರುವುದು ಕಷ್ಟ. ಹೆಂಗಸರು ಸರ್ಕಾರಿ ಉದ್ಯೋಗವನ್ನು ಮಾಡಿದರೆ ಮಕ್ಕಳ ಸಹ ಅವನ್ನು ಹಿಂಬಾಲಿಸ ಬೇಕಾಗಿ ವಿನಾಶಕ್ಕೆ ಒಯ್ಯಲ್ಪಡುತ್ತಾರೆ. ಮೇಲೆ ಹೇಳಿದ ರೀತಿ ನಿಮಗೆ ತಿಳಿಯುತ್ತದೆ. ಇದಕ್ಕಿಂತ ಸ್ವದೇಶ ಸೇವೆಯನ್ನು ಕೈಕೊಳ್ಳುವುದು ಬಹಳ ಉತ್ತಮವಾಗಿದೆ. ಒಂದು ದೇಶವು ಏಳಿಗೆಗೆ ಬರಬೇಕಾದರೆ ಪ್ರತಿಯೊಬ್ಬನೂ ಸ್ವದೇಶವನ್ನು ಸಂಸ್ಕರಿಸಬೇಕು. ಸ್ತ್ರೀಯರೂ ಈ ಹಿತ ಶ್ರೇಯಸ್ಸಿಗಾಗಿ ಕಷ್ಟವನ್ನು ಅನುಭವಿಸಬೇಕು. ಸ್ವದೇಶ ವಿಷಯದಲ್ಲಿ ಪ್ರತಿಯೊಬ್ಬನಿಗೂ ಇರಬೇಕಾದ ಇಂಥಾ ಪ್ರೀತಿಗೆ ಸ್ವದೇಶಾಭಿಮಾನವೆಂದು ಹೇಳುವರು. ಸ್ವದೇಶಕ್ಕಾಗಿ ಪ್ರಾಣಗಳನ್ನು ಒಪ್ಪಿಸಿದ ಜನರು ಬಹಳ ಇರುವರು. ಕಳೆದ ಸಾರಿ ದೊಡ್ಡ ಯುದ್ಧದಲ್ಲಿ ಅನೇಕ ಆಂಗ್ಲೇಯ ವಿದ್ಯಾರ್ಥಿಗಳು ಸ್ಕೂಲ್ ಬಿಟ್ಟು ಯುದ್ಧದಲ್ಲಿ ಸೇರಿದರು. ಕಳೆದ ಜರ್ಮನ್ ಯುದ್ಧದಲ್ಲಿ ಸಹ ಸ್ತ್ರೀಯರು ಪತ್ರಿಕಾ ಉದ್ಯೋಗಗಳಲ್ಲಿಯೂ ಸಹ ಸೇರಿ ತಮ್ಮ ಪ್ರಾಣಗಳನ್ನು ಒಪ್ಪಿಸಿದ್ದರಿಂದಲೇ ಅವರ ಕಡೆ ಅತ್ಯುತ್ತಮವಾದ ಜಯವುಂಟಾಯಿತು. ಹೀಗೆ ನಮ್ಮ ದೇಶದ ಹೆಂಗಸರೂ ಉದಾಸೀನತೆಯನ್ನು ತೆಗೆದು ಹಾಕಿ ಸ್ವದೇಶ ಪ್ರೀತಿಗಾಗಿ ಹೋರಾಡುವರೇ ಹೊರತು ಸರ್ಕಾರಿ ಉದ್ಯೋಗಕ್ಕೆ ಗಣನೆ ಮಾಡಬಾರದೆಂದೂ ಅದನ್ನು ಅತೀ ಹೀನ ಕರಾಗಿ ಎಣಿಸುವರೆಂದೂ ನಂಬುತ್ತೇನೆ. ಅದಲ್ಲದೆ ಎಲ್ಲರಿಗೂ ತಿಳಿದಿರುವಂತೆ ನಮ್ಮ ಹಿಂದೂದೇಶದಲ್ಲಿ ಈಗಿನ ಕಾಲದಲ್ಲಿ ಸ್ತ್ರೀಯರೇ ಮೋಸಹೋಗಿದ್ದಾರೆ. ಇದು ಖಂಡಿತವಾಗಿಯೂ ದೇಶಕ್ಕೆ ದ್ರೋಹವಾಗಿದೆ. ಖಂಡಿತವಾಗಿಯೂ ದೇಶವು ಅಧಃಪತನದಲ್ಲಿ ಸ್ತ್ರೀಯರಿಂದಲೇ ಮುಂದೆ ಬರಬೇಕಾಗಿದೆ. ಇಂಥಾ ವಿಷಯದಲ್ಲಿ ನಮ್ಮ ಪುಟ್ಟ ದೇಶದಲ್ಲಿ ಸಹ ಸ್ತ್ರೀಯರಲ್ಲಿ ಕೆಲವರು ಈಗಾಗಲೇ ದುಡಿ ತೊಡಗಿಕೊಂಡಿದ್ದಾರೆ. ಇನ್ನು ಮುಂದೆನ್ನು ಸಹ ಇದರ ಬಗೆ ಉತ್ತೇಜನದಿಂದ ಕೆಲಸ ಮಾಡಿ ದೇಶವನ್ನು ಮುಂದಕ್ಕೆ ತರಲು ಪ್ರಯತ್ನಿಸುವರೆಂದು ತಿಳಿಯುತ್ತೇನೆ. ಹೀಗೆಯೇ ಇನ್ನು ಮುಂದೆಯೂ ಇವರು ಸಂಘಗಳನ್ನು ಅಭಿವೃದ್ಧಿಗೊಳಿಸಿ ತಮ್ಮ ಸ್ವಜನಾಭಿಮಾನ, ಸ್ವದೇಶಾಭಿಮಾನಗಳಿಂದ ಉತ್ತಮವಾದ ಕಾರ್ಯಗಳಲ್ಲಿ ತೊಡಗಿಕೊಳ್ಳುತ್ತಾರೆಂಬುದು ನಂಬುತ್ತೇನೆ.

ಪಿ. ಸಿ. ದೇವಯ್ಯ.

ಮಾನವನ ಮುಖ್ಯ ಕರ್ತವ್ಯ.

ಸಂಪಾದಕರೇ,

ಪ್ರಪಂಚದಲ್ಲಿ ಪ್ರತಿಯೊಬ್ಬನೂ ಮಾಡಬೇಕಾದ ಕೆಲಸವನ್ನು ತಿಳಿಸುವ ಮೊದಲು ಭಗವಧ್ಯಾನವನ್ನು ಮಾಡುವುದು ಸರ್ವರಿಗೂ ವಿದಿತವಾದ ವಿಷಯವಾಗಿದೆ. ಪ್ರತಿಯೊಬ್ಬನಿಗೂ ಇಂಥಾ ಕೆಲಸವನ್ನು ಮಾಡಿದರೆ ಪುಣ್ಯ, ಇಂಥಾದ್ದನ್ನು ಮಾಡಿದರೆ ಪಾಪವೆಂಬ ಅರಿವು ಇದ್ದರೂ, ಕೆಲವರು ಅದನ್ನು ಪಾಪಕೃತ್ಯಗಳನ್ನೇ ಮಾಡಿ ಅದರಿಂದ ತಮಗೆ ಸೌಖ್ಯ ಸುಖ ದೊರೆಯುವುದೆಂಬ ಹಂಬಲದಲ್ಲಿದ್ದಾರೆ. ಇದಕ್ಕೆ ಮುಖ್ಯವಾಗಿ ಭಗವಂತನಲ್ಲಿ ಭಯ ವಿಲ್ಲದಿರುವುದೂ, ತನ್ನಲ್ಲಿ ವಿಶ್ವಾಸವಿಲ್ಲದಿರುವುದೂ, ಅನ್ಯರಲ್ಲಿ ಪ್ರೀತಿ ಇಲ್ಲದಿರುವುದೂ ಕಾರಣವಾಗಿದೆ. ಇಷ್ಟಕ್ಕೂ ಮೂಲ ಯಾವುದೆಂದರೆ:—ಅವರಿಗೆ (1) ಸರಿಯಾದ ಶಿಕ್ಷಣ ಇಲ್ಲದಿರುವುದು, (2) ಸಜ್ಜನ ಸಹವಾಸವಿಲ್ಲದಿರುವುದು, (3) ಸದ್ಗ್ರಂಥಗಳಲ್ಲಿ ಅಭಿರುಚಿ ಇಲ್ಲದಿರುವುದು. ಗ್ರಾಮಾಂತರಗಳಲ್ಲಿ ವಾಸಿಸುವ ಜನರಿಗೆ ಮೊದಲನೆಯ ಎರಡು ವಿಧದಲ್ಲಿ ಅನುಕೂಲ ದೊರೆಯದಿದ್ದರೂ ಕೇವಲ ಆಸಂಗತ ಮಾತಾಡದೆ ಪುರಾಣಸಂಪಾದಿತ ಸದ್ಗ್ರಂಥಗಳು ದೊರಕುವುದರಲ್ಲಿ ಬಹಳ ಮಾತ್ರವು ಅನುಕೂಲವಿಲ್ಲ. ಇದರಿಂದ ಬರಹಾಯಿಯುಳ್ಳವರು ಇಂಥಾ ಪುಸ್ತಕವನ್ನೆಲ್ಲ ತರಿಸಿ ಓದುವುದು, ಇಲ್ಲವೆ ಓದಿಸಿ ಕೇಳುವುದೆಂದರೆ ಅನೇಕರಿಗೆ ಆಗದು. ಹಣವನ್ನು ಎಲ್ಲಿಂದ ತರಬೇಕು? ಇದರಿಂದ ಸರ್ವ ವಿಷಯಗಳನ್ನು ಒಳಕೊಂಡಿರುವ ಭಗವದ್ಗೀತೆಯನ್ನು ಏನ ಮತ್ತು ಪುರಾಣ ನಿಸಾರುಂತಗಳಲ್ಲಿ ಸ್ವಲ್ಪ ಸ್ವಲ್ಪವಾಗಿ ಪ್ರತಿ ಒಬ್ಬ ಗೃಹಸ್ಥನೂ, ಗೃಹಿಣಿಯೂ, ಹುಡುಗರು, ಪ್ರತಿಯೊಬ್ಬ ಮಾನವನೂ ಓದಿಸುತ್ತಾ ಬಂದರೆ ತಮ್ಮಲ್ಲಿರುವ ದುರ್ಗುಣಗಳೆಲ್ಲಾ ಹೋಗಿ ಸಾಧಿ "ಉದಯವು ಕೆಲಸ ತಣಿವ ತಕ್ಕ" ಎಂಬಂತೆ ತನ್ನದಲ್ಲಿ ಉದಯಿಸಲು ಅಪ್ಪ ಒಂದುಸಂಗತಿ ಹೆಸರಿಸಬಲ್ಲಿ ಕೊಡುತ್ತಾ, ತಿಳಿಯಬೇಕೆಂದು ಹಚ್ಚಿ, ಮಾಡಿದ ಪಾಪವೆಲ್ಲಾ ನಶಿಸಿ ಹೋಗಿ, ದೇವರಲ್ಲಿ ಭಯವೂ, ತನ್ನಲ್ಲಿ ವಿಶ್ವಾಸವೂ, ಅನ್ಯರಲ್ಲಿ ಪ್ರೀತಿಯೂ, ತಡದಲ್ಲಿ ಇಷ್ಟವೂ, ಪರರಲ್ಲಿ ದೋಷವೂ ಉಂಟಾಗುವಂತೆ ಮಾಡುವುದೂ ಈಡಲ್ಲಿ ಎಲ್ಲಿಷ್ಟು ಅನುಮಾನವಿಲ್ಲ. ಈಗ ಮೇಲೆ ಹೇಳಿದ ಭಗವದ್ಗೀತೆಯ ವಿಷಯದಲ್ಲಿ ನಾನೊಂದು ದಿಗ್ದರ್ಶನಗಳನ್ನು ಬಯಸುತ್ತೇನೆ. ನಮ್ಮ ಕೊಡಗು ದೇಶದಲ್ಲಿ ಪುರಾತನ ಕಾಲದಿಂದ ಬಂದ "ಪಟ್ಟೋಲೆ ಪಳಮೆ" ಅಲ್ಲದೆ ಈಗಿನ ಶೃಂಗಾರವಾದ ಪ್ರಾಸಗಳಿಲ್ಲವು ದೂರ ಇರಲಿಲ್ಲ. ಇತ್ತೀಚೆಗೆ ಮೆ. ಅಪ್ಪನೆರವಂಡ ಅಪ್ಪಚ್ಚ ನವರು ಬಹಳ ಶ್ರದ್ಧೆಯಿಂದ ಬರೆದ 3—4 ನಾಟಕ ಪುಸ್ತಕಗಳನ್ನು ನಮ್ಮ ಕೊಡಗು ಸಹೋದರರನೇಕರು ಓದಿರಬಹುದು. ಅಲ್ಲದೆ ಐಯಂಗರರು ಮೆ. ಕಾಂಡಂಡ ಮುತ್ತಣ್ಣ ನವರು ಹೆಚ್ಚು ಶ್ರಮವಹಿಸಿ ನಮ್ಮ ಸಹೋದರರ ಹಿತಕ್ಕಾಗಿ ಬರೆದ (1) ಕೊಡಗಿನ ಕೃಷಿ, ಕೊಡಗು ಮತ್ತು ಕೊಡಗರು (Coorg and the Coorgs), (3) ನವನಾಗರಿಕರ ಪರಿಣಾಮ. (4) ಶಿಲ್ಪವೃದ್ಧಿ ಸ್ವರ್ಗದಾಗಿನ, ಎಂಬ ಪುಸ್ತಕಗಳಿಂದ ಕೊಡಗು ಸಹೋದರರಿಗೆ ತಮ್ಮ ದೇಶ, ತಮ್ಮ ಜಾತಿ, ತಮ್ಮ ನಡತೆಯ ವಿಚಾರವಾಗಿ ಎಷ್ಟೋ ತಿಳುವಳಿಕೆಯುಂಟಾಗಿರಬಹುದು. ಅಲ್ಲದೆ ಕೈಲಾಸವಾಸಿ ನಡಿಕೇರಿಯಂಡ ಚಿನ್ನಪ್ಪನವರು ಬಹುಕಾಲ ಪ್ರಯಾಸದೊಡನೆ ಭಾಷೆಗೆ ತನ್ನ ಭಾಷೆಯಲ್ಲಿಯೂ, ಆಂಗ್ಲೇಯ ಭಾಷೆಯಲ್ಲಿಯೂ ಬರೆಯಲ್ಪಟ್ಟ ಭಗವದ್ಗೀತೆಯನ್ನು ಕೊಡವ ಭಾಷೆಗೆ ಅನುವಾದ ಮಾಡಿ ಅದಕ್ಕೆ "ಭಗವಂತನ ಪಾಟ್" ಎಂಬುದಾಗಿ ಹೆಸರು ಕೊಟ್ಟು ಸರ್ವರೂ ಓದಲು ಅನುಕೂಲಿಸುವಂತೆ ಸುಲಭ ಶೈಲಿಯಲ್ಲಿ ಬರೆದು ಪ್ರಕಟಿಸಿರುವ ಈ ಪುಸ್ತಕವನ್ನು, ತಿರುವ ಮಹಾರಾಜರು ವಗ್ಗಿರೆಯಲು ಬರೆದಿರುವ ಗೀತರತ್ನವೆಂಬ ಪುಸ್ತಕ ವಗ್ಗಿರೆಗಳನ್ನು ತರಿಸಿ ಓದಿ, ಅರ್ಥಮಾಡಲು ಸಾಧ್ಯವಿಲ್ಲದ ಪ್ರತಿಯೊಬ್ಬ ಕೊಡಗು ಮಹಾಶಯರು ದಿನವೂ ಮುಂಜಾನೆ ಸಾಯಂಕಾಲ ಸ್ವಲ್ಪ ಸ್ವಲ್ಪವಾಗಿ ಪಠಿಸುತ್ತಾ ಬಂದರೆ ಅದರಿಂದ ಮಾನವನ ಮುಖ್ಯ ಕರ್ತವ್ಯವನ್ನು ಮಾಡಿದಂತಾಗುವುದಲ್ಲದೆ ಬುದ್ಧಿ ಶಕ್ತಿಯೂ ಹೆಚ್ಚಿ ಸಂಸಾರವೆಂಬ ಸಾಗರವನ್ನು ಸುಲಭದಿ ದಾಟಿಸುವುದಕ್ಕೆಂದು ತೋರುವ ಬಹಳ ಮಟ್ಟಿಗೆ ಸಹಾಯ ಮಾಡುತ್ತದೆ.

ಒಂದಾನೊಂದು ವೇಳೆ ನಾನೊಂದು ಗ್ರಾಮದ ಕಡೆಗೆ ಹೋಗಿದ್ದಾಗ್ಗೆ ಅಲ್ಲಿ ಒಬ್ಬ ಮಹಾಶಯರು ದಾಕ್ಕಿ ಊಟ ಮಾಡಿಕೊಂಡು "ಅಯ್ಯೋರ" ತಕ್ಕಂಡ ಓದು ಎಗ್ಗ" ಎಂದು ವಗ್ಗಿರೆ ಹಾಡುತ್ತಿದ್ದರು. ಆದರ ಬದಲು ಅವರು ಈ ಗದ್ದಲಿ ಗೀತವನ್ನು ಹಾಡಿದ್ದರೆ ದೇವರ ನಾಮ ಸ್ಮರಣೆ ಮಾಡಿದಂತೆ ಮಾತ್ರವಲ್ಲದೆ ಆ ಮೂಲಕ ಮನಸ್ಸಿಗೆ ಉಲ್ಲಾಸವೂ, ಸ್ವ ದೈವಿಕವಾದ ಸಂತೋಷವೂ ಆಗುತ್ತಿದ್ದವನಿಗೂ, ಕೇಳುವವರಿಗೂ ಉಂಟಾಗುತ್ತಿತ್ತು. ಒಂದಾವರ್ತಿ, ಉತ್ತರ ಹಿಂದೂಸ್ಥಾನದ ಸ್ವರ್ಗಸ್ಥರಾದ ರಾವ್ ಬಹದ್ದೂರ್ ಕೋಡಂಡ ಅಪ್ಪಯ್ಯನವರ ಜೊತೆ ಹೋಗಿದ್ದ ವೇಳೆಯಲ್ಲಿ ಅಲ್ಲಿ ಅವರು ಒಬ್ಬ ಗಾಡಿಯವನಲ್ಲಿಯೂ ಸಹ ಗೀತದ ಪುಸ್ತಕ ನೋಡಿದ್ದೇನೆಂದು ಬಂದು ಕೆಲವು ಸಂದರ್ಭದಲ್ಲಿ ಭಾಷಣ ಮಾಡಿದರು. ಹೀಗಿರುವಲ್ಲಿ ಒಂದೇ ಒಂದು ರೂಪಾಯಿ ಕ್ರಯ ಬಾಳುವ ಈ ಅಮೂಲ್ಯ ಪುಸ್ತಕವನ್ನು ಸರ್ವರೂ ಹೊಂದಿಕೊಂಡು ಓದಿ ಆನಂದ ಮನಸ್ಸುಳ್ಳವನು, ಅವನ ಕರ್ತವ್ಯವೇನು ಎಂದು ತಿಳಿದು ಕೊಂಡು ಸುಖಿಗಳಾಗಬೇಕೆಂದು ಕೋರುತ್ತೇನೆ. ಇತರ ಭಾಷೆಗಳಲ್ಲಿ ಬರೆದಿರುವ ಭಗವದ್ಗೀತೆಗೆ ಹೆಚ್ಚಿನ ಕ್ರಯ ಇರುವುದರಿಂದ ಸಾಮಾನ್ಯರಿಗೆ ತೆಗೆದುಕೊಳ್ಳಲು ಸ್ವಲ್ಪ ಕಷ್ಟವಾಗಿರುವುದರಿಂದ ಈ "ಭಗವಂತನ ಪಾಟ್" ಎಂಬ ಪುಸ್ತಕವು ಸರ್ವಸಾಧಾರಣವಾದುದಾಗಿರುವುದರಿಂದಲೂ ಕೊಡಗಿನ ಪುಸ್ತಕವು ಬರೆದುದಾಗಿರುವುದರಿಂದಲೂ ಅದನ್ನು ಪ್ರತಿ ಒಬ್ಬ ಕೊಡಗರು ಕೊಂಡುಕೊಂಡು ಉಪಯೋಗಿಸಿದಲ್ಲಿ ಸ್ವಸುಖವನ್ನು ಹೊಂದುವುದು ಮಾತ್ರವಲ್ಲದೆ ದೇಶಕ್ಕೆ ಗ್ರಂಥಕರ್ತರಿಗೆ ಪ್ರೋತ್ಸಾಹವನ್ನು ಕೊಟ್ಟಂತಾಗುವುದಲ್ಲವೇ. ನಮ್ಮ ದೇಶದಲ್ಲಿ ಅನೇಕ ಗ್ರಂಥಕರ್ತರೇನೂ ಇಲ್ಲ. ಗ್ರಂಥ ಬರೆಯಲು ಶಕ್ತಿ ಇರುವವರು ಇರಬಹುದು; ಆದರೆ ಕ್ರಯ ಕೊಡುವವರು ಕಮ್ಮಿ. ಅದ್ದರಿಂದ ನಮ್ಮ ಈ ಪುಟ್ಟ ದೇಶದಲ್ಲಿ ಸ್ವಲ್ಪವಾಗಿ ಬರೆದ ಪ್ರತಿ ಒಬ್ಬ ಮಹನೀಯರ ಪುಸ್ತಕಗಳನ್ನು ಕೊಂಡು ಓದಿಕೊಂಡು ಆ ಗ್ರಂಥಕರ್ತರಿಗೆ ಪ್ರೋತ್ಸಾಹ ಮಾಡಬೇಕಾಗಿ ನನ್ನ ಕೋರಿಕೆ. ಹಾಗೆ ನಾವು ಪ್ರೋತ್ಸಾಹ ಮಾಡದೆ ಹೋದರೆ ಕೊಡಗು ಭಾಷೆಯಲ್ಲಿ ಒಂದು ಗಾದೆ ಇದೆ "ನಾ ಬಂಗ್ ಇರಂಬಿಡು. ತಾಲಿ ತೆಗೆದಿರು" ಎಂಬಂತೆ ಆಗುವುದಲ್ಲವೇ? ಇಂಥ ಭಾಷೆಯಲ್ಲಿ ಮಾನವ ವರ್ಗದಲ್ಲಿ ಜನಿಸಿದ ಪ್ರತಿ ಒಬ್ಬನೂ ತನ್ನ ನಿತ್ಯ ಕರ್ಮದಲ್ಲಿ ಬೇಕಾದ ಅನುಭವಾದ ಧ್ಯಾನವನ್ನು ಮಾಡಲು ಇಂಥಾ ಗ್ರಂಥಗಳ ಮೂಲಕ ದಿನಕ್ಕೆ ಸ್ವಲ್ಪ ಹೊತ್ತಾದರೂ ಓದಿ ತಾನು ಸಾರ್ಥಕನಾಗಿ ತನ್ನ ಇಹಲೋಕ ಪರಲೋಕಗಳ ಶ್ರೇಯೋಭಿವೃದ್ಧಿಯನ್ನು ಪಡೆ ಯುವಂತೆ ಮಾಡುವುದು ಮಾನವನ ಮುಖ್ಯ ಕರ್ತವ್ಯವಲ್ಲವೇ?

ಕೇತಿ ಮಂಡ ಬೆಳ್ಯಪ್ಪ.

ಹರಿಜನರು ದೇವಸ್ಥಾನ ಪ್ರವೇಶ ಮಾಡುವಿಕೆ.

ಮ. ಕ್ರಿ. ಅಕ್ಕರಾಮಶಾಸ್ತ್ರಿಗಳಿಗೆ ಕೆಲವು ಪ್ರಶ್ನೆಗಳು.

ಹರಿ ಜನರು ದೇವಸ್ಥಾನ ಪ್ರವೇಶ ಮಾಡ ಕೂಡದೆಂದು ಮೆ. ಶ್ರೀ ಮಾನ್ ಅಕ್ಕರಾಮ ಶಾಸ್ತ್ರಿಗಳು ಸಂಸ್ಕೃತದಲ್ಲಿ ಒಂದು ಪತ್ರವನ್ನು ಮಹಾತ್ಮ ಗಾಂಧಿಯವರಿಗೆ ಬರೆದಿರುತ್ತಾರೆಂದು ಕೇಳಿದೆನು. ಅವರು ಏನೆಂದು ಬರೆದರೆಂಬುದು ತಿಳಿಯದಿದ್ದರೂ ಆ ವಾದದ ಮುಖ್ಯಾಂಶಗಳು ಗೊತ್ತಿರುವುದರಿಂದ ಮೆ. ಶಾಸ್ತ್ರಿಗಳಿಗೆ ಕೆಲವು ಪ್ರಶ್ನೆಗಳನ್ನು ಕೇಳುವೆನು. ಅವರು ದಯವಿಟ್ಟು ಉತ್ತರಿಸಿದರೆ ಇನ್ನೂ ಕೆಲವು ಹೆಚ್ಚಿನ ಪ್ರಶ್ನೆಗಳನ್ನು ಕೇಳುವೆನು. ಅವುಗಳಿಗೆ ಸಮರ್ಪಕವಾದ ಉತ್ತರಗಳು ದೊರಕಿದರೆ ಮೆ. ಶಾಸ್ತ್ರಿಗಳ ಪರವಾಗಿ ಪಾಸಾದ ಪಾಳಯವೆನ್ನಿಸಿಕೊಳ್ಳಲಾಗುವೆನು. ಮಹಾತ್ಮ ಗಾಂಧಿಯವರೂ ಅದಕ್ಕೆ ಒಪ್ಪುವರೆಂದು ನಾನು ಸ್ಪಷ್ಟವಾಗಿ ಹೇಳಬಲ್ಲೆ.

ಪ್ರಶ್ನೆಗಳು.

(1) ದೇವಸ್ಥಾನದಲ್ಲಿ ಅಶುದ್ಧವೆಂಬುವುದು ಅವರ ಅದರಿಂದ ನಮಗೆ ಉಂಟಾಗುವ ಪರಿಣಾಮವೇನು? ದೇವರು ಮಹಿಮೆಯನ್ನು ಕ್ಷಯಿಸಿ ಹೋಗುವನೇ? ಹಾಗಾದರೆ ಅವನು ಸರ್ವಶಕ್ತನೂ ಮಹಿಮನೂ ಆಗುವನೇ? ದೇವರು ನಂಬಿಕೆ ಮಾತ್ರದಲ್ಲಿರುವ ಪ್ರೀ ಅಣ ಹೊರಗೂ ಇರುವನೇ, ಇಲ್ಲವೇ?

(2) ಜನರಲ್ಲಿ ಶುದ್ಧ ಮತ್ತು ಅಶುದ್ಧರೆಂಬುವುದನ್ನು ಹೇಗೆ ನಿರ್ಣಯಿಸುತ್ತೀರಿ? ಹುಟ್ಟಿನಿಂದ ಶುದ್ಧಾಶುದ್ಧ ನಿರ್ಣಯ ಮಾಡುವುದು ಹೇಗೆ? ಬ್ರಾಹ್ಮಣ ಹೊಟ್ಟೆಗೆ ಹುಟ್ಟಿದ ಪ್ರತಿಯೊಬ್ಬನೂ ಬ್ರಾಹ್ಮಣನಾಗೇ ಹುಟ್ಟಿದ್ದೆಂದು ಹೇಳುವುದು ಹೇಗೆ? ಮಲ ಮೂತ್ರಗಳು ಶುದ್ಧವೇ ಅಶುದ್ಧವೇ? ಬ್ರಾಹ್ಮಣರ ಶರೀರದಲ್ಲಿ ಮಲವಿದ್ದಾಗ ಅವರು ಶುದ್ಧ ಹೇಗೆ?

(3) ದೇವರು ಸರ್ವಶಕ್ತನೂ ಮಹಿಮೆಯೇ, ಅಲ್ಲವೇ? ಬ್ರಾಹ್ಮಣರ ಶರೀರದಲ್ಲಿ ಮಲ ಮೂತ್ರಗಳುಂಟೇ ಇಲ್ಲವೇ? ಅದರಿಂದ ಬ್ರಾಹ್ಮಣರು ದೇವಸ್ಥಾನವನ್ನು ಪ್ರವೇಶಿಸಿದ ಕೂಡಲೆ ದೇವರು ಮೈಲಿಗೆಯನ್ನು ಬಿಟ್ಟು ಹೋಗುವನೇ, ಇಲ್ಲವೇ? ಬ್ರಾಹ್ಮಣರ ಮತ್ತು ಹರಿ ಜನರ ಮಲ ಮೂತ್ರಗಳಿಗೆ ಇರುವ ವ್ಯತ್ಯಾಸವೇನು?

(4) ಶರೀರವನ್ನು ತ್ಯಜಿಸಿದ ಕೂಡಲೆ ಮಲ ಮೂತ್ರಗಳು ಅಶುದ್ಧವಾಗುವುದಾದರೆ ಪೂಜಾರಿಯು ಗರ್ಭ ಗುಡಿಯಲ್ಲಿ ದುರ್ವಾಯು ಬಿಟ್ಟರೆ ಮಹಾ ಪ್ರಮಾದವಾಯಿತೆಂದು ಗರ್ಭ ಗೃಹವನ್ನು ಶುದ್ಧ ಮಾಡಲು ಏನು ಉಪಾಯ ಬಳಸಿ ಮಾಡುತ್ತೀರಿ? ದೇವಾಲಯಗಳ ಹೊರಗಿನ ಚರಂಡಿಗಳು ಸಹ ಇಲ್ಲದೆ ಮುತ್ತಲೂ ಅನಾರೋಗ್ಯವುದರಿಂದ ಅವುಗಳು ಅಲ್ಲೇ ಇರುತ್ತವೆಂದು ಯೋಚಿಸಬೇಕಾಗಿದೆ. ಸುಗಂಧಗಳನ್ನು ಉಪಯೋಗಿಸುವುದು ಈ ಕಾರಣಗಳಿಂದಲ್ಲವೇ, ಏನು?

(5) ಪದ್ಧತಿ ಅಥವಾ ಆಚಾರಗಳಿಗೇ ಹೆಚ್ಚಿನ ಪ್ರಾಮುಖ್ಯತೆ ಎನ್ನುವ ಕೂಡದೇ ಅದರಿಂದಲೂ, ಅಲ್ಪ ಸಂಖ್ಯಾತ ಅಥವಾ ಬಹು ಸಂಖ್ಯಾತ ಜನರು ಬಹು ಸಂಖ್ಯಾತ ಅಥವಾ ಅಲ್ಪ ಸಂಖ್ಯಾತರನ್ನು ಅವರ ಹಕ್ಕುಗಳಿಂದ ವಂಚಿಸುವುದು ನ್ಯಾಯವೆಂದಾಗಲೀ (1) ಬಹು ಪೂರ್ವ ಕಾಲದಿಂದಲೂ ಕಳ್ಳತನ ನಡೆದು ಬಂದ ಆಚಾರ ಪದ್ಧತಿ ಮತ್ತು ಅನುಭವವುಳ್ಳ ಪ್ರಸುತ್ತ (2) ಕಾವ್ಯ ಹಾಗೆ ಮಾಡುವುದು ನ್ಯಾಯವೂ, ದೇವರ ಸತ್ಯತೆಯ ರುಪಂಥವೂ ಎಂದು ಸಂಪೂರ್ಣ ನಂಬುವ, ಕೊಲಿದ, ಕಳ್ಳರು ಮುಂತಾದ ಅಳ್ಳರ ಜಾತಿಗಳನ್ನು ತಿಕ್ಕಿಸುವುದು ತಪ್ಪಲ್ಲವೇ? ಪೂಜೆಯಿಲ್ಲದೆ ವೇದೋಪಾಸನೆ ಮಾಡದ ಹರಿಜನನನ್ನು ತಿರುಪು ಬೇರೆ ಕಳವಂತೆ ತಮ್ಮನ್ನು ದೇವರು ಆ ರೂಪದಲ್ಲೇ ಇದ್ದರು ಇರುತ್ತಾನೆಂದರೆ, ಒಂದಲ್ಲಿ ನೀವು ಮಾತಾಡುವುದಕ್ಕೆ ಅವರಿಗೆ ಅದು ಕೆಟ್ಟದ್ದು ತಪ್ಪಿದರೆ ನಡೆಸುವಂತೆ ಹಾಗೂ ನಡೆಸುತ್ತೇ.

ಹಿಂದೂ ಅವರು ಭಾವಿಸುತ್ತಾರೆ. ಹಾಗಾದರೆ ಅವರಿಗೆ ಪಿಸರ್ ಕೋರ್ಟಿನಲ್ಲಿ ವಿವಾಹಯುಕ್ತಿ ಕೊಡಬೇಕಲ್ಲವೇ ? ಒಬ್ಬ ವ್ಯಾಪಾರಿಯು ತನ್ನ ಪೂರ್ವಿಕ ತಲೆಮಾರಿನವರಿಂದ ಹುಟ್ಟಿ ಬಂದ, ಅಳತೆಗಳನ್ನು ಕೊಡುತ್ತಿದ್ದೇವೆಯೆಂಬುದನ್ನು ರುಜುವಾತು ಪಡಿಸಿದರೂ, ಒಬ್ಬ ಪೋಲೀಸು ಠಾಣೆ ದಂಡಿಸಿ, ಹಳೆಯದಾದ ಅಳತೆಗಳನ್ನು ನಡೆಸುವವನ ವಂಶಕ್ಕೆ ಸೇರುವುದನ್ನು ಕಾನೂನು ಪಡಿಸಿದರೂ, ಅವರಿಗೆ ಶಿಕ್ಷೆ ಕೊಡತಕ್ಕದ್ದೆಂದಾಗಲಿಲ್ಲವೇ? ಹಾಗೂ ಯಾವ ಸತ್ಯವನ್ನೂ ಪಡೆಯದ ಹರಿಜನರು ದೇವಸ್ಥಾನಗಳನ್ನು ಪ್ರವೇಶಿಸಿದ ಮಾತ್ರಕ್ಕೆ ಬ್ರಾಹ್ಮಣರ ನರ ಸ್ವಾಮ್ಯಕ್ಕೆ ಧಕ್ಕೆಯಾಗುತ್ತದಾದರೆ ಧನ, ಮಾನ ಪ್ರಾಣಗಳಿಗೆ ಕೇಡುಂಟು ಮಾಡಿಯೇ ಜೀವನ ನಡೆಸಬೇಕಾಗಿರುವವನನ್ನು ತಿಕ್ಕಿಸುವುದರಿಂದ ಅವರ ಎಂದುಳುಗಳಿಗೆ ಎಂಥಾ ಧಕ್ಕೆಯುಂಟಾಗದು?

(6) ಬ್ರಾಹ್ಮಣರು ಶ್ರೀ ಶಂಕರಾಚಾರ್ಯರೂ, ರಾಮಾನುಜಾಚಾರ್ಯರುಗಳಿಗೆ ಮುಂಚೆ ಇದ್ದರೇ? ಶ್ರೀ ಶಂಕರಾಚಾರ್ಯರೂ ರಾಮಾನುಜಾಚಾರ್ಯರೂ ತಮ್ಮ ಮತಗಳಿಗೆ ಸೇರಿಸಿದ ಜನರು ಯಾವ ಜಾತಿಯವರಾಗಿದ್ದರು ? ಅವರನ್ನು ಬ್ರಾಹ್ಮಣರಾಗಿ ಮಾಡಲು ಮಾಡಿದ ಉಪಾಯಗಳಾವುವು ? ದೇವಿ ಪುರಾಣಗಳನ್ನು ಬರೆದವನು ಬ್ರಾಹ್ಮಣನು ಹೌದೇ ಅಲ್ಲವೇ ? ಅದರಲ್ಲಿರುವ ನೀತಿಗಳು ಶುದ್ಧವೇ ಅಶುದ್ಧವೇ ? ಆ ಬ್ರಾಹ್ಮಣನನ್ನು ಜಾತಿಯಿಂದ ತೆಗೆದರೇ ?

ದೇವರ ಕಾಯಿದೆಗಳನ್ನು ಜ್ಞಾಪಕದಲ್ಲಿಡುತ್ತಾ, ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ತಾನು ಆ ಕಾಯಿದೆಗಳಿಗೆ ಸರಿಯಾಗಿ ನಡೆಯುತ್ತೇನೆ, ಎಂದರೆ ಪ್ರಕೃತಿಗೂ ಹೊಂದಿಕೆಯಾಗಿ ಅನುಕೂಲವಾಗಿ ನಡೆಯುತ್ತಾ ಇರುತ್ತೇನೆ, ಎಂದು ಪ್ರತಿ ದಿನವೂ ದೃಢ ಪ್ರತಿಜ್ಞೆ ಮಾಡುವ ಅನುಕೂಲ ಕೊಡುವುದಕ್ಕೆ ಮಾತ್ರ ದೇವಸ್ಥಾನಗಳ ಇರುವಿಕೆಯ ಉದ್ದೇಶವಾಗಿದೆ. ಕಳೆದ ಕೆಲವು ಶತಮಾನಗಳಿಂದ ವಿದ್ಯೆಗೆ ಕಟ್ಟಿನ ಬೆಲೆಯು ದೊರೆಯದಿದ್ದುದರಿಂದ ಆ ಉದ್ದೇಶವು ಬದಲಾಗಿದೆ. ಜನರ ಮೂಢತನಗಳಿಂದ ಪ್ರಯೋಜನಪಡೆಯುವುದಕ್ಕಾಗಿ ವಿದ್ಯೆಗೆ ದೃಶ್ಯ ಮತ್ತು ಅದೃಶ್ಯ ಶಕ್ತಿಗಳುಂಟೆಂದು ಸಂಚಿಕೆ ಹುಟ್ಟಿಸಲು ಸ್ವಾರ್ಥಪರರಾದ ದುರ್ಜನರು ದೇವಸ್ಥಾನಗಳ ಉದ್ದೇಶಗಳನ್ನು ಇತರ ದಾರಿಗಳಿಗೆ ಆಳಮಾಡಿಸಿದರು. ವ್ಯಕ್ತಿಯು ತನ್ನ ತಪ್ಪುಗಳನ್ನು ಒಪ್ಪಿಕೊಂಡು ಇನ್ನು ಮುಂದಾದರೂ ಅವುಗಳನ್ನು ಮಾಡುವುದಿಲ್ಲವೆಂದು ಪಶ್ಚಾತ್ತಾಪಪಡುವಂತೆ ಮಾಡುವ ಬದಲಾಗಿ ಅವರಿಂದ ತಾವು ಲಾಭ ಪಡೆಯಲು 'ಪೂಜೆ' 'ದಾನ' ಅಥವ ಹರಕೆ'ಗಳಿಂದ ಅವುಗಳನ್ನು ಮರೆಯುವಂತೆ ಮಾಡಿದರು. ಪೂಜೆ' ಎಂದರೆ ತಮ್ಮ ಆರು ಇಂದ್ರಿಯಗಳನ್ನು ತೃಪ್ತಿಪಡಿಸುವ ಕಾರ್ಯವಾಗಿ ಮಾಡಿದರು, ದೃಷ್ಟಿಗೆ ಶೃಂಗಾರ, ಮೂಗಿಗೆ ಸುವಾಸನೆ, ಕಿವಿಗೆ ಸಂಗೀತ, ಬಾಯಿಗೆ ತಿಂಡಿ, ಸ್ಪರ್ಶಕ್ಕೆ, ಆರನೆಯ ಇಂದ್ರಿಯಕ್ಕೆ ವೇಶ್ಯೆಯರು, ಹೀಗೆ ವ್ಯವಸ್ಥೆಯಾಯಿತು. ಸ್ವಲ್ಪತಿಯಲ್ಲಿ ಪೂಜೆಯು ಹೀಗೆ ದೇವರ ವಿಗ್ರಹವಿರುವಲ್ಲಿ ಕಕ್ಕಿರಿ ಮಾಡಿದರು. ಈ ಸಂದರ್ಭದಲ್ಲಿ ನಿಜವಾಗಿ ನಡೆದ ಮತ್ತು ನಡೆಯುತ್ತಿರುವ ಸಂಗತಿಗಳನ್ನು ಹೇಳಬಹುದು. ಆದರೆ ಅಗಿನ ವಾದಕ್ಕೆ ಅವು ಅನಾವಶ್ಯಕ. ದೇವಸ್ಥಾನಗಳ ಉದ್ದೇಶವನ್ನು ಬದಲಾಯಿಸಿದ ಕಾರ್ಯವು ಹಿಂದೂಗಳಿಂದ ಬಂದಿರುವುದನ್ನು ನಾವು ತಿಳಿದುಕೊಳ್ಳಬೇಕು. ಹಿಂದೂ ಜನಾಂಗದ ಒಂದು ಭಾಗವನ್ನು ದುಸ್ಥಿತಿಯಲ್ಲಿ ಅವಮಾನದ ಸ್ಥಿತಿಯಲ್ಲಿ ಇಡುವುದರ ಪರಿಣಾಮವು ಭಯಾನಕವಾದುದು. ಹರಿಜನರು ನಮ್ಮವರಾಗಿಯೇ ಇದ್ದು ನಮ್ಮ ಸಂಗಡ ಸಹಕರಿಸಬೇಕೇ ಬೇಡವೇ ? ಅಥವಾ ಮತ್ತೆಯ ಮತ್ತು ಕ್ರಿಶ್ಚಿಯನರಾಗಿ ನಮ್ಮ ಮೇಲೆ ಕತ್ತಿ ಕಟ್ಟಬೇಕೇ ? ನಮ್ಮವರಾಗಿಯೇ ಇರಬೇಕಾದರೆ ನಮ್ಮ ಹಕ್ಕುಗಳನ್ನು ಅವರಿಗೂ ಕೊಡಬೇಕು.

'ನ್ಯಾಯವಾದಿ'

---

೪೦ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕರೆ ಕಂಪನಿಯ

ಜ್ವರದ ಗುಳಿಗೆಗಳು.

ಚಳಿಜ್ವರ, ಚಾತುರ್ಥಿ ಜ್ವರ, ದಿನಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮ ಬಾಣದಂತೆ ಇವೆ. ಬಾಟ್ಲಿಗೆ ರೂ. ೧. ವಿ. ಪಿ. ೭ ಅಣೆ. ಬರೆದು ತರಿಸಿಕೊಳ್ಳಿ.

ಗಣೇಶ ರಾಮಚಂದ್ರ ಕರ್ಕರೆ,
(52–16) ಮತ್ತು ಕಂಪನಿ,
ಗಿರಗಾಂವ, ಮುಂಬಯಿ,

ಇಂಡಿಯಾ ಎಕ್ವಿಟೇಬಲ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

(ಸ್ಥಾಪಿಸಲ್ಪಟ್ಟದ್ದು 1908.)

ಕಳೆದ ವರ್ಷದ ಫಲಿತಾಂಶಗಳು.

ಹಿಂದಿನ ವರ್ಷದ ಕೆಲಸಕ್ಕಿಂತ 64% ಹೆಚ್ಚು.

ಕಳೆದ ವರ್ಷ ಸಂಭವಿಸಿದ ಹಕ್ಕು ಬಾಧ್ಯಸ್ಥರಲ್ಲಿ ಶೇಕಡ 96·6 ಜನರಿಗೆ ಹಣ ಅದೇ ವರ್ಷ ಕೊಡಲಾಗಿದೆ.

ಖರ್ಚಿನ ಪ್ರಮಾಣವು 31% ಮಾತ್ರ.

ಇಂಡಿಯಾ ಎಕ್ವಿಟೇಬಲ್ ಇನ್ಶೂರೆನ್ಸ್ ಕಂಪೆನಿಯು ಬುಡದಿಂದ ತಲೆಯ ವರೆಗೂ ಇಂಡಿಯನ್.

ವಜನದಾರರಾದ ಏಜೆಂಟರುಗಳು ಬೇಕಾಗಿದ್ದಾರೆ.

ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಕೆ. ಇ. ಜಾಕೊ,
ಬ್ರಾಂಚ್ ಸೆಕ್ರೆಟರಿ,
159 ಶ್ರೀ ನರಸಿಂಹರಾಜ ರೋಡ್,
ಬೆಂಗಳೂರು ಸಿಟಿ.

ಅಥವಾ

(1) ಮಿಸ್ಟರ್ ಸಿ. ಯಂ. ಪೂವಯ್ಯ,
ಲೀಡಿ ಆರ್ಗನೈಜರ್,
'ಪೂವಯ್ಯ ವಿಲ್ಲ,'
ಮಡಿಕೇರಿ.

(2) ಯಂ. ಸಿ. ಅಪ್ಪಚ್ಚು,
ರಿಟಯರ್ಡ್ ಪಾರುಪತ್ಯಗಾರ್,
ಹಿಲ್ ರೋಡ್,
ಮಡಿಕೇರಿ.

(12—13)

GOVERNMENT SOAP FACTORY, Bangalore.

ವಿಶ್ವಾಸಾರ್ಹತೆ.

ಅತ್ಯುತ್ತಮವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ ಯಾವ ಗುಣಗಳು ಅವಶ್ಯಕವೆಂದು ನೀವು ತಿಳಿದಿರುತ್ತೀರೋ ಆ ಗುಣಗಳೆಲ್ಲಾ ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.

ನಾವು ನಿಮಗೆ ಭರವಸೆಯನ್ನೀಯುತ್ತೇವೆ!

ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
52–13 ಬೆಂಗಳೂರು.

ಕೆಸಿ, ಮುಕ್ತಿ ನೀವಾರುದಂಧರನಾಗಿ ಮಾಡು. ನಿನ್ನ ಅಭಾವದಿಂದಲೇ ಈ ಹೀನಾವಸ್ಥೆ. ಮಾಯಾವಿ ದೇವಾ, ನಾನಾ ದೇ ಶಗಳು, ವಿಶ್ವಂಟು ಕಾಡು ಕಗ್ಗದಂತೆ ಅಡಗುವದೆಂದು ಕೋಪಿಸಬೇಡಿ. ಯಾವದನ್ನು ಅನ್ಯೋನ್ಯನು ಅಭಾವದಿಂದ ಕಾಣುವನೋ ಅದಕ್ಕೆ ದಾರಿಯಾದಿಯುದ ಪ್ರಭಾವ. ದಾಯಾದಿಯುರಿಂದಾಗುವ ಕಾರ್ಯಕ್ಕೆ ಅನ್ಯೋನ್ಯನ ಅಭಾವ. ಇದೇ ಇದರ ಪ್ರಾಶಸ್ತ್ಯಭಾವ. ಇಂತಹ ಮಹಾಮಹಿಮೆಯುಳ್ಳ ಅನ್ಯೋನ್ಯನು ಆರಾವ ದೇವರನ್ನು ಪೂಜಿಸುವನು? ಅವನೇ ದೇವಾದಿ ದೇವನು, ಅಮಿತ ಪ್ರಭಾವನು, ಸುಗುಣ ಸ್ವಭಾವನು, ಸುಗುಣಾಭಾವನು ಅಂತ ಮೇಲೆ ಅವನೇ ದೇವರಲ್ಲವೇ. ವಿಷ್ಣು, ಬ್ರಹ್ಮ, ಶಿವ, ಸ್ವಗುಣ, ಶ್ರೀಕೃಷ್ಣ, ವೈಷ್ಣವ, ಲಕ್ಷ್ಮಿ, ಸರಸ್ವತಿ, ಪಾರ್ವತಿ, ಎಲ್ಲರೂ ಅವನಿಂದಲೇ ಹುಟ್ಟಿದ್ದು. ಪರಸ್ಪರ ಸಹಾಯ, ಇದರ ಸು ಫು ವಿ ನೆ ಅಂ ದ ಕ್ಕದಿಂದ ಪರಮೋತ್ಕರ್ಷ, ಅದೇ ವ ಎಂಬುದರಿಂದ ಶಾಂತಿ, ಪರ್ಮಸಂಭವ, ಭಕ್ತಿಕನ್ಯಾಸ್ಯಹಸ್ಯಗಳುಳ್ಳ ಸಂಸ್ಥೆ. ಹೀಗೆ ತ್ರಿಮೂರ್ತಿಗಳೂ, ಇವರ ಪತ್ನಿಯರೂ ಉದ್ಭವಿಸಿದರು. ಸೃಷ್ಟಿ, ಸ್ಥಿತಿ, ಲಯ, ಇವೆಲ್ಲಾ ಕಾರಣನೂ ಇವನೇ. ಇಂತಿರುವ ಇವನ ಪ್ರಭಾವವನ್ನು ಅದಾರು ತಿಳಿವ ಸಮರ್ಥರು? ಹೇ ದೇವಾದಿದೇವಾ, ಅನ್ಯೋನ್ಯ ದೇವಾ, ನಿನ್ನ ಅಭಾವದಿಂದ ನಿನ್ನ ದಾಯಾದಿಯ ಮಾಯಾಜಾಲದಿಂದ ನಮ್ಮನ್ನು ಉದ್ಧರಿಸಿ ಕರ್ತವ್ಯನಿಷ್ಠರನ್ನಾಗಿ ಮಾಡುವ ಭಾರವು ನಿನ್ನದು. ನೀನೇ ಎಂತೆಂತಹ ಕವಿವರರಿಂದ ಗ್ರಂಥಗಳಲ್ಲಿ "ಹುಟ್ಟಿದ ಮನುಷ್ಯನಿಗೆ ತಗ್ಗುರುತಿಂದರೆ ಕರ್ತವ್ಯ, ಕರ್ತವ್ಯ" ವೆಂದು ಬರೆಸಿರುವೆ? ಅದೆಂತಹ ಕರ್ತವ್ಯ ಹೊಟ್ಟೆ ತೊರೆಯುವುದೇ? ಮಕ್ಕಳ ಪೋಷಣೆಯೇ? ಹೊಟ್ಟೆ ತುಂಬಲು ಬೇಕಾದಂಥ ಉದ್ಯೋಗವೇ? ಅಲ್ಲಾ ಅಗಿದ್ದರೆ ನೀನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಇವೆಲ್ಲಾ ಹೊಟ್ಟೆ ಹುರುಗುಟ್ಟುವಾಗ ಎಲ್ಲರಿಗೂ ತಿಳಿಯುತ್ತೆ. ಅಂದರೆ ಬೇರೇ ಇರಬೇಕು. ಅದಾವುದು? ಕಾಲಕ್ಕೆ ತಕ್ಕಮ್ಮ ಅಂದರೆ ಅಧರ್ಮವು ಹೆಚ್ಚಿದಾಗ ಧರ್ಮವನ್ನು ಕಾಪಾಡುವುದೂ, ಭಕ್ತಿ ಬಂದಿದಾಗ ಭಕ್ತಿಯ ಮಹತ್ವವನ್ನು ಸಾರುವುದೂ, ದೇಶದ ಅಧೋಗತಿಯ ಸಮಯದಲ್ಲಿ ದೇಶೋದ್ಧಾರವೂ, ಐಕ್ಯಮತ್ಯವಿಲ್ಲದೆ ಸಂಗದ ಸಂಗಡವಾಗುವಲ್ಲಿ ಅನ್ಯೋನ್ಯನ ಪ್ರಭಾವವನ್ನು ಸಾರುವದೂ, ಇಂತಹುದೇ ಅಲ್ಲವೇ? ನೀನು ಹೇಳಿದ ಕರ್ತವ್ಯ. ಭಲೆ, ಅಂತೆಸದು ವೆವು. ಈ ತನಕ ನಮ್ಮ ಭಾರತೀಯರು ಕಣ್ಣು ಮಿಟಿ ಮಿಟಿ ನೋಡುತ್ತಿದ್ದವರು ಈಗ ಎಚ್ಚತ್ತುಕೊಳ್ಳುತ್ತಾ ನಿನ್ನ ಕೃಪಾಭಿಕ್ಷೆಯನ್ನು ಬೇಡುತ್ತಿದ್ದೇವೆ. ಹೇ, ಧೀನದಯಾಸಿಂಧೋ, ನಿನ್ನ ಮರೆಹೊಕ್ಕಿರುವ ನಮ್ಮ ಉದ್ಧಾರವನ್ನು ಮಾಡಲು ನಮ್ಮ ಪ್ರತಿಯೊಬ್ಬ ಭಾರತೀಯರ ಹೃದಯದೊಳಗೂ ನೀನು ನೆಲೆಯಾಗಿ ನಮ್ಮನ್ನು ಕರ್ತವ್ಯವಿಮುಖರನ್ನಾಗಿ ಮಾಡದೆ, ನಿನ್ನ ವಾಸಸ್ಥಳವಾದ ಆನಂದ ಸಾಗರವನ್ನು ನಮ್ಮ ಈ ಆರ್ಯಾವರ್ತಕ್ಕೆ ವಗರ್ಗಾಯಿಸಿಕೊಳ್ಳಬೇಕಾಗಿ ಶಿರಬಾಗಿ ನಮಿಸುವೆವು. ಸ್ವಾಮಿ ವಾಚಕ ಮಹಾಶಯರೇ, ತಿಳಿದವರು ತಿಳಿಸುದೆ ಕ್ಷಮೆಯನ್ನಿಡಿ.

ಕರ್ನಾಟಕ ಸಾಹಿತ್ಯ ಪರಿಷತ್ತು,
ಬಸವನಗುಡಿ, ಬೆಂಗಳೂರು.

ಕರ್ನಾಟಕ ಸಾಹಿತ್ಯ ಪರಿಷತ್ತಿನ ಸದಸ್ಯರ ಸಿ. ಕ್ಕೆ ವಿಜ್ಞಾಪನೆಗಳು.

೧. ಇದೇ ಅಂಗೀರಸ ಸಂವತ್ಸರ ಪುಷ್ಯ ಶುದ್ಧ ನವಮಿ ಬುಧವಾರ (೪-೧-೧೯೩೩)ದಿಂದ ಶನಿವಾರದ (೭-೧-೧೯೩೩)ರ ವರೆಗೆ ಕರ್ನಾಟಕ ಸಾಹಿತ್ಯ ಪರಿಷತ್ತಿನ ಹದಿನೆಂಟನೆಯ ಸಮ್ಮೇಳನವೂ, ಅದೇ ತಿಂಗಳ ೨ನೇ ಶನಿವಾರ (೭-೧-೧೯೩೩) ಬೆಳಿಗ್ಗೆ ೯ ಗಂಟೆಗೆ ಪರಿಷತ್ತಿನ ವಾರ್ಷಿಕ ಅಧಿವೇಶನವೂ ಮಡಿಕೇರಿಯಲ್ಲಿ ಕರ್ನಾಟಕ ಸಾಹಿತ್ಯ ಸಮ್ಮೇಳನ ಮಂದಿರದಲ್ಲಿ ನಡೆಯುವಂತೆ ಏರ್ಪಾಡಾಗಿರುತ್ತದೆ.

೨. ಪರಿಷತ್ತಿನ ನಿಬಂಧನೆಗಳಲ್ಲಿ ತಿದ್ದುಪಾಟುಗಳನ್ನು ಸೂಚಿಸಬೇಕೆಂಬುಯಲ್ಲ ಪರಿಷತ್ತಿನ ಸದಸ್ಯರು ಈ ನೋಟೀಸನ್ನು ಕಳುಹಿಸಿದ ಹತ್ತು ದಿನಗಳೊಳಗಾಗಿ ತಮ್ಮ ಸೂಚನೆಗಳನ್ನು ಲಿಖಿತ ಮೂಲಕ ಪರಿಷತ್ತಿನ ಗೌ. ಕಾರ್ಯದರ್ಶಿಯವರಿಗೆ ದಯಮಾಡಿ ಕಳುಹಿಸಿಕೊಡಬೇಕು. (೩೦ನೆಯ ನಿಬಂಧನೆ)

೩. ಸಮ್ಮೇಳನದಲ್ಲಿ ಚರ್ಚಿಸಬೇಕೆಂದಿರುವ ವಿಷಯಗಳೂ, ಓದಬೇಕೆಂದಿರುವ ಉಪನ್ಯಾಸಗಳೂ ಪರಿಷತ್ತಿನಿಂದ ಮೊದಲೇ ಅಂಗೀಕೃತವಾಗಿರಬೇಕು. (೩೪ನೆಯ ನಿಬಂಧನೆ) ಅಂತಹ ಅಭಿಪ್ರಾಯಗಳುಳ್ಳವರು ಅವುಗಳ ನಕಲನ್ನು ಇದೇ ಡಿಸೆಂಬರು ತಿಂಗಳು ೧೫ನೆಯ ತಾರೀಖಿನೊಳಗಾಗಿ ಪರಿಷತ್ತಿನ ಗೌ. ಕಾರ್ಯದರ್ಶಿಯವರಿಗೆ ತಲಪುವಂತೆ ದಯಮಾಡಿ ಬೆಂಗಳೂರಿಗೆ ಕಳುಹಿಸಿಕೊಡಬೇಕು.

೪. ಉಪನ್ಯಾಸಗಳು ಮುಂದೆ ಹೇಳುವ ವಿಷಯಗಳ ಮೇಲೆ ಇರಬೇಕು:—(೧) ಪ್ರಾಚೀನ, ಅಥವಾ ನವೀನ ಗದ್ಯ, ಅಥವಾ ಪದ್ಯ ಕಾವ್ಯಗಳು, (೨) ನಾಟಕಗಳು, (೩) ನಾವೆಲುಗಳು, (೪) ಕಾವ್ಯಾಲಂಕಾರ, ವ್ಯಾಕರಣ ವಿಷಯಗಳು ಮತ್ತು ಭಾಷಾ ಮರ್ಯಾದೆಗಳು, (೫) ಪ್ರಾಚೀನ, ಅಥವಾ ನವೀನ ಇತಿಹಾಸಗಳು.

ಸಿ. ಕೆ. ವೆಂಕಟರಾಮಯ್ಯ,
ಯಂ. ಎ., ಎಲ್‌ಎಲ್. ಬಿ.
ಗೌ. ಕಾರ್ಯದರ್ಶಿ.

ಸೆಂಟ್ರಲ್ ಬ್ಯಾಂಕ್ ಮೀಟಿಂಗು.

ಈ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ತಾರೀಖು 26—11—1932ರಲ್ಲಿ ಬ್ಯಾಂಕಿನ ಆಫೀಸಿನಲ್ಲಿ ಬೆಳಿಗ್ಗೆ 11 ಗಂಟೆಗೆ ನಡೆಯಿತು. ಈ ಕೆಳಗಿನ ಡೈರೆಕ್ಟರುಗಳು ಹಾಜರಿದ್ದರು. 1. ರಾ. ಬಾ. ಪಟ್ಟಮಾಡ ದೇವಯ್ಯನವರು (ಪ್ರೆಸಿಡೆಂಟರು), 2. ಮಿ. ಗಳಿಂದ ಕಾಂಡಂಡ ಜಂಗಪ್ಪನವರು, 3. ಅಪ್ಪಾರಂಡ ಜಂಗಪ್ಪನವರು, 4. ಮನೆಯಪಂಡ ಬೆಳ್ಯಪ್ಪನವರು (ಟ್ರೆಜರರ್), ೫. ಕೋಡಿರ ತಮ್ಮಯ್ಯನವರು, 6. ಕೊಂಗಂಡ ಗಣಪತಿಯವರು, 7. ಪುಚ್ಚಮಾಡ ಮಾದಯ್ಯನವರುಮತ್ತು 8. ನಡಿಕೇರಿಯಂಡ ಸೋಮಯ್ಯನವರು.

1. ಕಳೆದ ಮೀಟಿಂಗಿನ ಪ್ರೊಸಿಡಿಂಗ್ಸನ್ನು ಓದಿ ಒಪ್ಪಲಾಯಿತು.

2. ಕಳೆದ ಅಕ್ಟೋಬರ್ ತಿಂಗಳ ಜಮಾ ಮತ್ತು ಖರ್ಚಿನ ಲೆಕ್ಕ ಓದಿ ಮಂಜೂರು ಮಾಡಲಾಯಿತು.

ಕಳೆದ ತಿಂಗಳ ಸಿಲ್ಕು	ರೂ.	10370	12	11
ಈ ತಿಂಗಳಲ್ಲಿ ವಸೂಲಿ	"	4663	2	0
ಜುಮ್ಲ	"	15033	14	11
ಈ ತಿಂಗಳಲ್ಲಿ ಖರ್ಚು	"	4160	9	0
ಬಾಕಿ ಸಿಲ್ಕು	"	10873	5	11

3. ಈ ಕೆಳಗಿನ ಸಂಘಗಳಿಗೆ ಸಾಲ ಮಂಜೂರು ಮಾಡಲಾಯಿತು:—(1)ಬೇಟೋಳಿ ಸೊಸೈಟಿಗೆ ರೂ. 200 ಮತ್ತು (2) ಅಮ್ಮತ್ತಿ ಸೊಸೈಟಿಗೆ ರೂ. 1000.

4. ಕಳೆದ ಮೀಟಿಂಗಿನಲ್ಲಿ ತೀರ್ಮಾನವಾದ ಮೇರೆ ಸಬ್ ಕಮಿಟಿಯವರು ತಯಾರಿಸಿದ ಪ್ರಾವಿಡೆಂಟ್ ಫಂಡಿನ ಕರಡು ರೂಲ್ಸ್ ಓದಲಾಯಿತು.

ಈ ಮೇಲ್ಕಂಡ ರೂಲ್ಸನ್ನು ಮಂಜೂರುಮಾಡುವುದಕ್ಕೆ ಮೊದಲು ಎಲ್ಲಾ ಡೈರೆಕ್ಟರುಗಳಿಗೂ ಈ ರೂಲ್ಸಿನ ಒಂದೊಂದು ನಕಲನ್ನು ಕಳುಹಿಸಬೇಕೆಂತ ತೀರ್ಮಾನವಾಯಿತು.

5. ಸೌತ್ ಇಂಡಿಯಾ ಕೋ-ಆಪರೇಟಿವ್ ಇನ್ಶೂರೆನ್ಸ್ ಸೊಸೈಟಿಯವರಿಂದನ್ನು ಸೆಂಟ್ರಲ್ ಬ್ಯಾಂಕಿನಲ್ಲಿ ಶೇರಿಗೆ ಸೇರಿಕೊಳ್ಳುವ ವಿಷಯ ನೋಟೀಸು, ಈ ಇನ್ಶೂರೆನ್ಸ್ ವಿಷಯದ ತಿಳಿವಳಿಕೆಯ ಬಗ್ಗೆ ಇನ್ನೊಂದು ಮೀಟಿಂಗಿಗೆ ಮುಂದರಿಸಿ ಇಡಬೇಕೆಂತ ತೀರ್ಮಾನವಾಯಿತು.

6. ಸೆಂಟ್ರಲ್ ಬ್ಯಾಂಕಿನ ಬೈಲಾ 31 (ಬಿ)ಗೆ ಅನುಗುಣವಾಗಿ ಕೋ-ಆಪರೇಟಿವ್ ಫೆಡರೇಶನ್ನಿನವರು ಸೊಸೈಟಿಗಳ ಮೇಲು ವಿಚಾರಣೆಗಳನ್ನು ನಡೆಸಬಹುದೆಂದು ಬ್ಯಾಂಕಿನವರು ಒಪ್ಪಿಕೊಂಡಿದ್ದೇವೆಂತ ಕಳುಹಿಸಿದ ಪತ್ರವನ್ನು ಓದಲಾಯಿತು.

ಫೆಡರೇಶನ್ನಿನವರು ಯಾವ ಶರತ್ತಿನ ಮೇಲೆ ಬ್ಯಾಂಕಿನ ಮೆಂಬರು ಸಂಘಗಳ ಮೇಲು ವಿಚಾರಣೆಗಳನ್ನು ನೋಡಿಕೊಳ್ಳಲು ಒಪ್ಪಿಕೊಂಡಿರುತ್ತಾರೆಂಬವನ್ನು ಅವರನ್ನು ಕೇಳಬೇಕೆಂತ ತೀರ್ಮಾನವಾಯಿತು.

7. ಕೋ-ಆಪರೇಟಿವ್ ಫೆಡರೇಶನ್ನಿನ ಜನರಲ್ ಮೀಟಿಂಗಿಗೆ 5 ಡೆಲಿಗೇಟರನ್ನು ಕಳುಹಿಸಬೇಕೆಂತ ಕಳುಹಿಸಿದ ನೋಟೀಸು ಓದಲಾಯಿತು.

8. ಮಿ. ಪುಚ್ಚಮಾಡ ಮಾದಯ್ಯನವರು 50ರಿಂದ 500 ರೂಪಾಯಿಗಳ ವರೆಗೆ ಸೆಂಟ್ರಲ್ ಬ್ಯಾಂಕಿನಲ್ಲಿ ಫಿಕ್ಸೆಡ್ ಡಿಪಾಜಿಟ್ಟು ಹೊಂದಿಕೊಳ್ಳಲು ಒಪ್ಪಿಕೊಳ್ಳಬೇಕೆಂತ ಬರೆದ ಪತ್ರವನ್ನು ಓದಲಾಯಿತು.

ಇವರ ಕರಾರಿಗೆ ಅನುಮೋದಿಸುವವರು ಯಾರೂ ಇಲ್ಲದ್ದರಿಂದ ಅದನ್ನು ಚರ್ಚಿಸಲಿಲ್ಲ.

9. ಮಡಿಕೇರಿಯಲ್ಲಿರುವ ಕೆ. ಬಿ. ಕಾವೇರಮ್ಮನವರು ಬ್ಯಾಂಕಿನಲ್ಲಿರುವ ತನ್ನ ಶೇರನ್ನು ವಾಪಸು ಕೊಡಬೇಕಾಗಿ ಬರಕೊಂಡ ಅರ್ಜಿ ಓದಲಾಯಿತು.

ಶೇರು ಮೊಬಲಗನ್ನು ವಾಪಸು ಕೊಡಬಹುದಾಗಿ ತೀರ್ಮಾನವಾಯಿತು.

10 ಚೀಫ್ ಕಮಿಷನರ್ ಸಾಹೇಬರವರಿಂದ ಫೆಡರೇಶನ್ ಮತ್ತು ಯೂನಿಯನ್‌ಗಳು ಈಗ ನಡೆಸುತ್ತಿರುವ ಸಂಘಗಳ ಮೇಲು ವಿಚಾರಣೆಗಳನ್ನು ಸೆಂಟ್ರಲ್ ಬ್ಯಾಂಕು ವಹಿಸುವ ವಿಷಯದಲ್ಲಿ ಬಂದ ಕಾಗದ ಓದಲಾಯಿತು.

ಕೊಡಗು ಸಹಕಾರಿ ಸಂಘಗಳ 1932ನೇ ಇಸವಿ ಜೂನ್ 30ಕ್ಕೆ ಆಗುವ ವಾರ್ಷಿಕ ರಿಪೋರ್ಟಿನ 13ನೇ ಪ್ಯಾರಾದಲ್ಲಿ ಸಿವಾಯರನ್ನು ಮಾಡಿರುವ ಮೇರೆ ಫೆಡರೇಶನ್ ಮತ್ತು ಸೆಂಟ್ರಲ್ ಬ್ಯಾಂಕಿನ ಕೆಲಸಗಳನ್ನು ಜೋಡಿಸೇರಿಸುವ ವಿಷಯದಲ್ಲಿ ಯಾವ ರೀತಿ ನಡೆಸಬೇಕೆಂಬ ಬಗ್ಗೆ ಕೋ-ಆಪರೇಟಿವ್ ರಿಜಿಸ್ಟ್ರಾರವರನ್ನು ಬರೆದುಕೊಳ್ಳುವಂತೆ ತೀರ್ಮಾನವಾಯಿತು.

11. ಮಡಿಕೇರಿ ಪಟ್ಟಣ ಕೋ-ಆಪರೇಟಿವ್ ಸ್ಟೋರಿನ ಗೌರವ ಸೆಕ್ರೆಟರಿಯವರು ಸದರಿ ಸ್ಟೋರಿಗೆ ತಾ. 30—3—32 ರಲ್ಲಿ ಮಂಜೂರು ಮಾಡಿದ 3ನೇ ಸಾಲದ ಮರುಪಾವತಿ ಕಂತು 2ನೇ ಸಾಲದ ಮರುಪಾವತಿ ತೀರಿದನಂತರ ಮರುಪಾವತಿ ಕೊಡಬೇಕಾಗಿ ಬರಕೊಂಡ ಪತ್ರವು ಓದಲಾಯಿತು.

ಅವರ ಕೋರಿಕೆ ಮೇರೆ 2ನೆಯ ಸಾಲದ ಮರುಪಾವತಿ ಕಂತು ತೀರಿದ ನಂತರ ತಾ. 1—3—33ರಿಂದ ಪ್ರಾರಂಭಿಸಬಹುದಾಗಿ ತೀರ್ಮಾನವಾಯಿತು.

12. ಡೈರೆಕ್ಟರುಗಳ ಮಂಜೂರಾತಿ ನಿರೀಕ್ಷಣೆಯಿಂದ ಒಂದು ಸಾವಿರ ರೂಪಾಯಿ ಫಿಕ್ಸೆಡ್ ಡಿಪಾಜಿಟ್ಟು (ನಿರತು ಠೇವಣಾತಿ) ತೆಗೆದುಕೊಂಡದ್ದನ್ನು ಮಂಜೂರುಮಾಡಿದ್ದಲ್ಲದೆ ಪುನಃ ನಾಲ್ಕು ಸಾವಿರ ರೂಪಾಯಿ ಡಿಪಾಜಿಟ್ಟು ತೆಗೆದುಕೊಳ್ಳಬಹುದಾಗಿ ತೀರ್ಮಾನವಾಯಿತು.

ಪಿ. ದೇವಯ್ಯ,
(ಅಧ್ಯಕ್ಷರು.)

(FREE INSURANCE)
ಉಚಿತ ವಿಮಾ.

ಮ್ಯೂಚುವಲ್ ಬೆನಿಫಿಟ್ ಸ್ಕೀಂ ಎಂಬ ಅನ್ಯೋನ್ಯ ಸಹಾಯ ಪದ್ಧತಿ.
(Mutual Benefit Scheme.)

ಜೈ ಭಾರತ ಇನ್‌ಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಹೆಡ್ ಆಫೀಸು—ಮದ್ರಾಸ್.

ಲೈಫ್ ಇನ್‌ಷ್ಯೂರೆನ್ಸಿನ ಕಂಪೆನಿಗಳ ಕಾನೂನಿಗೆ ಅಧೀನವಾಗಿದೆ. ಸರಕಾರದಲ್ಲಿ ದಸ್ತೇವಾರು ಠೇವಣಾತಿ ಇಡಲಾಗಿದೆ.

ಈ ಮೇಲ್ಕಂಡ ಕಂಪೆನಿಯು ಅನ್ಯೋನ್ಯ ಸಹಾಯಕ್ಕಾಗಿ ಕಳೆದ ವರ್ಷ ಅಂದರೆ 1931ನೇ ಫೆಬ್ರವರಿಯಲ್ಲಿ ಮದ್ರಾಸಿನಲ್ಲು ಸ್ಥಾಪಿತವಾಗಿ ಈ ವರೆಗೆ 26000 ಸಾವಿರಕ್ಕೂ ಹೆಚ್ಚಾಗಿ ಪಾಲಿಸಿಗಳನ್ನು ಪಡೆದಿರುತ್ತೆ. ಈ ಮೇಲ್ಕಂಡ ಕಂಪೆನಿಗೆ ಐಶ್ವರ್ಯವಂತರೂ, ಬಡವರೂ, ವಿದ್ಯಾವಂತರೂ, ಜಾತಿ ಮತಗಳ ಬೇಧವಿಲ್ಲದೆ ಹಾಸಿವಾದಿ, ಕೋಮುವಾರು, ಹೆಂಗಸರೂ, ಗಂಡಸರೂ ಹೆಚ್ಚು ರುಸುಂ ಕೊಡದೆಯೇ ಉಚಿತ ಜೀವ ವಿಮೆ ಮಾಡಿಕೊಳ್ಳಬಹುದು. 18 ವರ್ಷಕ್ಕೆ ಮೇಲ್ಪಟ್ಟು 60 ವರ್ಷದೊಳಗಿರುವವರು ಈ ಕಂಪೆನಿಗೆ ಸೇರಬಹುದು. ಈ ಕಂಪೆನಿಗೆ ಸೇರಲು ಇಚ್ಚಿಸುವವರು ಸುರುವಿನಲ್ಲಿ ರೂ. 5—8—0ನ್ನು ಮಾತ್ರ ಕಟ್ಟಬೇಕಿದ್ದು. ಅನಂತರ ತಿಂಗಳು ಒಂದರ 1 ರೂ. ಸ್ವಲ್ಪದರಲ್ಲು ದೊಡ್ಡ ಲಾಭ ದೊರೆಯುತ್ತೆ. ಅದ್ದರಿಂದ ಇಂಥಾ ಸುಸಮಯವನ್ನು ಕಳೆಯಕೂಡದು. ಈ ದಿನವೇ ಪಾಲಿಸಿಗಳನ್ನು ಹೊಂದಲು ಅರ್ಜಿದಾರರಾಗಿರಿ. ಇದರ ಫಲವನ್ನು ಹೊಂದಲು ಭಾಗಿಗಳಾಗಿರಿ.

ಹೆಚ್ಚಿನ ಮಾಹಿತಿಗಳಿಗೆ ಈ ಕೆಳಗಿನವರಿಗೆ ಬರೆದು ತಿಳಿದುಕೊಳ್ಳಬಹುದು. ಅಲ್ಲದೆ ಇವರು ಕೊಡಗಿನ ಎಲ್ಲಾ ಕಡೆಗಳಲ್ಲಿಯೂ ತಿರುಗುತ್ತಲಿರುತ್ತಾರೆ.

ಯನ್. ಬಿ. ಕರುಂಬಯ್ಯ,
ಏಜೆಂಟ್,
ಜೈ ಭಾರತ ಇನ್‌ಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
12—7 ನಾಪೋಕ್ಲು, (ಕೊಡಗು)

ಯಂ. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಸಿಷಿಯನ್ಸ್, ರತ್ನಪೇಟೆ, ಬೆಂಗಳೂರು, ಇವರ

ಅನುಭವ ಸಿದ್ಧ ಔಷಧಗಳು.

೧. **ಧಾತುಪುಷ್ಟಿ ಲೇಹ**—ಬಾಲ್ಯಕಾಲದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ದೇಹ, ಪಿತ್ತದ ಬಾಧೆ, ರಕ್ತಪಿತ್ತ, ಜ್ವರ, ಮಲಬದ್ಧತೆ, ಕೈಕಾಲು ಉರಿಯುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು. ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7—0—0.

೨. **ಅಶೋಕಾರಿಷ್ಟ, ಮತ್ತು ಮಾತ್ರೆ**—ಹೆಂಗಸರ ಮುಟ್ಟಿನದೋಷಗಳು, ಮುಟ್ಟುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾನಹೀನತೆ, ಪಾಂಡು, ಮಲಬದ್ಧತೆ, ರಕ್ತಹೀನತೆ, ಕೈ ಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನು ಗುಣಪಡಿಸುವದು. 1 ಬಾಟ್ಲಿ ಔಷಧಕ್ಕೂ, 1 ಡಬ್ಬಿ ಮಾತ್ರೆಗೂ ರೂ. 2—4—0; 2ಕ್ಕೆ ರೂ. 4—4—0.

೩. **ಮೇಹ ಸಂಹಾರಿ**—ಇದು ಮೂತ್ರಸ್ಥಾನದ ಕೆಂಪು, ಬಿಳಿದು, ಹಳದಿಯಂತೆ ಹೋಗತಕ್ಕ ಕೀವನ್ನೂ, ವ್ರಣವನ್ನೂ, ಉರಿಯನ್ನೂ ಗುಣಪಡಿಸುತ್ತದೆ. ಡಬ್ಬಿ 1ಕ್ಕೆ ರೂ. 2—8—0; 3ಕ್ಕೆ ರೂ. 7—0—0.

೪. **ಬಾಲಗ್ರಹ ಗುಟಿಕೆ**—ಬಾಲಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರು ಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧ. ಬುಡ್ಡಿ ಒಂದಕ್ಕೆ ರೂ. 0—10—0. 3ಕ್ಕೆ ರೂ. 1—12—0. (52—11)

ವರ್ತಮಾನ ಸಂಗ್ರಹ.

ಒಳ ದೇಶ.

ಕೊಡಗಿನ ಭವಿಷ್ಯತ್ತನ್ನು ಕುರಿತು ಆಲೋಚಿಸಲು ಕೊಡವ ಸಭೆಯ ಮೀಟಿಂಗೊಂದು ಈ ತಾ. 10 ರಲ್ಲಿ ಮಡಿಕೇರಿಯಲ್ಲಿ ನಡೆಯುವದೆಂದು ತಿಳಿಯಬರುತ್ತದೆ.

ಈ ತಾ. 12 ನೇ ಸೋಮವಾರ (ಹುತ್ತರಿ) ಆರಮನೆ ಪೋಳುವೂ, ತಾ. 13 ನೇ ಮಂಗಳವಾರ ನಾಡ ಪೋಳುವೂ ಆಗುವದೆಂದು ಮುಜಾಯಿ ಇಲಾಖೆಯವರು ಪ್ರಕಟಿಸಿರುವರು. ಇದರ ವಿವರವು ಇನ್ನೊಂದು ಕಡೆ ಕೊಡಲಾಗಿದೆ.

ಮಡಿಕೇರಿ ವೇದಾಂತ ಸಂಘದವರು 'ಗೀತಾಜಯಂತಿ' ಉತ್ಸವವನ್ನು ಈ ತಾ. 8 ನೇ ಗುರುವಾರ ಜವಿಾನ್ದಾರರ ಸಂಘದ ಹಾಲ್‌ನಲ್ಲಿ ಮಿ. ಆರ್. ಹೆಚ್. ಕಣ್ಣೈಯವರ ಅಧ್ಯಕ್ಷತೆಯಲ್ಲಿ ನಡಿಸುವರೆಂದು ತಿಳಿಯುತ್ತೇವೆ.

ಫಾರೆಸ್ಟರಾಗಿದ್ದ ಮಿ. ಮಂಡೇಪಂಡ ಅಪ್ಪಯ್ಯನವರು ಕ್ಷಯರೋಗದಿಂದ ತಾ. 23 ರಲ್ಲಿ ಫ್ರೇಜರ್‌ಪೇಟೆಯಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವ್ಯಸನಪಡುತ್ತೇವೆ. ಅವರ ಶವವನ್ನು ಅವರ ನಾಡುಮನೆಗೆ ಸಾಗಿಸಿ ದಫನ ಮಾಡಲಾಯಿತು.

ಹತ್ತು ದಿವಸಗಳ ವರೆಗೆ ನಾಗರ ಹೊಳೆ ಫಾರೆಸ್ಟ್ ಕ್ಯಾಂಪಿನಲ್ಲಿದ್ದ ಚೀಫ್ ಕಮಿಷನರವರು ಕಳೆದ ತಾ. 26 ರಲ್ಲಿ ಬೆಂಗಳೂರಿಗೆ ವಾಪಸು ಹೋದರೆಂತಲೂ, ತಾ. 29 ರಲ್ಲಿ ಪುನಹ ಕೊಡಗಿಗೆ ಬಂದು ತ್ರೀಮಂಗಲದಲ್ಲಿ ಹತ್ತು ದಿವಸಗಳು ಕ್ಯಾಂಪ್ ಮಾಡುವರೆಂದೂ ವರ್ತಮಾನ.

ಸುಬ್ರಮಣ್ಯ ಷಷ್ಠಿ ದಿನವಾದ ಈ ತಾ 3 ನೇ ಶನಿವಾರ ಜವಿಾನ್ದಾರರ ಸಂಘದ ಹಾಲ್‌ನಲ್ಲಿ ಮಹಾತ್ಮ ಕಬೀರ್‌ದಾಸರ ಜೀವನಚರಿತ್ರೆಯನ್ನು ಕುರಿತು ಮಿ. ಬಿ. ಕೆ. ಸುಬ್ರಾಯರು ಸಾಯಂಕಾಲ 5½ ಯಿಂದ 8½ ಗಂಟೆ ವರೆಗೆ ಹರಿಕಥೆ ಮಾಡುತ್ತಾರೆಂದೂ, ಸರ್ವರಿಗೂ ಆಮಂತ್ರಣವಿದೆಯೆಂದೂ ವೇದಾಂತ ಸಂಘದ ಸೆಕ್ರೆಟರಿಯವರು ತಿಳಿಸಿರುತ್ತಾರೆ.

ಕಳೆದ ತಾ. 21 ರಲ್ಲಿ ಮಡಿಕೇರಿಯಲ್ಲಿ ಸತ್ಯಾಗ್ರಹ ಪತ್ರಿಕೆಗಳನ್ನು ಹಂಚಿದಕ್ಕಾಗಿ ದಸ್ತಗಿರಿ ಮಾಡಲ್ಪಟ್ಟಿದ್ದ ಮಿ. ಶೆಟ್ಟಿಯಂಡಮಾಡ ತಿಮ್ಮಯ್ಯನವರ ಮತ್ತು ಆಗಸ ಮಿ. [illegible] ಅಯ್ಯರವರ ವಿಚಾರವು ತಾ 29 ರಲ್ಲಿ ನಡೆದಾಗ್ಯೂ, ಇವರು ತಮ್ಮ ಅಂಥಾ ಕೆಲಸವೂ ಮಾಡಿಲ್ಲವೆಂದು ಹೇಳಿದ್ದರಿಂದೂ, ಸಮರ್ಥನ ಇವರನ್ನು ಬಿಡುಗಡೆ ಮಾಡಿದರೆಂದೂ ವರ್ತಮಾನ.

ಡೆಹ್ರಾಡೂನ್‌ನಲ್ಲಿರುವ ಇಂಡಿಯನ್ ಮಿಲಿಟರಿ ಅಕಾಡೆಮಿ ಮತ್ತು ರಾಯಲ್ ಏರ್ ಫೋರ್ಸ್ ಕಾಲೇಜಿನ ಪ್ರವೇಶಕ್ಕಾಗಿ 1933 ನೇ ಮಾರ್ಚಿ ತಾ. 27 ರಲ್ಲಿ ಡೆಲ್ಲಿಯಲ್ಲಿ ಸ್ಪರ್ಧಾ ಪರೀಕ್ಷೆಯು ನಡೆಯುವದೆಂದೂ. ಈ ಪರೀಕ್ಷೆಗೆ ಹೋಗ ಬಯಸುವವರು ಈ ತಾ. 20 ರೊಳಗೆ ತಮ್ಮ ಅಪ್ಲಿಕೇಷನು ಗಳನ್ನು ಕಳುಹಿಸತಕ್ಕದೆಂತಲೂ, ಅಪ್ಲಿಕೇಷನ್ ಫಾರಮುಗಳು ಮತ್ತು ಪರೀಕ್ಷೆಗೆ ಸಂಬಂಧಪಟ್ಟ ನಿಬಂಧನೆಗಳನ್ನು ಪಬ್ಲಿಕ್ ಸರ್ವಿಸ್ ಕಮಿಷನಿನ ಸೆಕ್ರೆಟರಿ, ಮೆಟ್ಕಾಫ್ ಹೌಸ್, ಡೆಲ್ಲಿ, ಇವರಿಂದ ಪಡಕೊಳ್ಳಬಹುದೆಂದೂ ಪ್ರಕಟವಾಗಿದೆ.

ಮಡಿಕೇರಿಯಲ್ಲಿ ಹಂಗಾಮಿ ರೆವಿನ್ಯು ಅಸಿಸ್ಟೆಂಟ್ ಕಮಿಷನರಾಗಿದ್ದ ಮಿ. ಕೇಚಮಾಡ ಬೆಳ್ಯಪ್ಪನವರು ಸನ್ನಿಪಾತ ಜ್ವರದಿಂದ ಪೀಡಿತರಾಗಿ ಸುಮಾರು ಒಂದೂವರೆ ತಿಂಗಳಿಂದ ಮಡಿಕೇರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದು, ಸ್ವಲ್ಪ ವಾಸಿಯಾಗಿ, ಕಳೆದ ತಾ. 27 ರಲ್ಲಿ ಅವರ ಮನೆಗೆ ಸಾಗಿಸಲ್ಪಟ್ಟವರು, ಜ್ವರ ಪುನಹ ಕೆರಳಿ ತಾ. 30 ರಲ್ಲಿ ವಿರಾಜಪೇಟೆ ಆಸ್ಪತ್ರೆಗೆ ತರಲ್ಪಟ್ಟು, ಅಲ್ಲಿ ಅದೇ ದಿನ ಸಾಯಂಕಾಲ ಶಿವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಮೈಸೂರಿನ ಕಾಲೇಜಿನ ತಮ್ಮ ಪರೀಕ್ಷೆಯಲ್ಲಿ ಮುದ್ರಾಸು ವಿಶ್ವವಿದ್ಯಾನಿಲಯದಲ್ಲೇ 1 ನೇಯವರಾಗಿ ತೇರ್ಗಡೆ ಹೊಂದಿದ್ದರು.

ಹಿಂದೂ ದೇಶ.

ತಿರುವಾಂಕೂರಿನ ಒಂದು ಕಾಡಿನಲ್ಲಿ ಬಿಳೀ ಆನೆಯೊಂದು ಕಾಣಿಸಿಕೊಂಡಿದೆಯೆಂದೂ, ಅದನ್ನು ಕೊಲ್ಲದೆ, ಸಾಧುವಾಗಿ ಹಿಡಿಯಬೇಕೆಂದು ಅಲ್ಲಿಯ ರಾಜರು ಹುಕುಂ ಮಾಡಿರುವರೆಂದೂ ವರ್ತಮಾನ.

ಶ್ರೀ ಎಂ. ವಿ. ಅಭ್ಯಂಕರ ಮೇಲೆ ವಿಧಿಸಿದ್ದ ಜುಲ್ಮಾನೆಯನ್ನು ಪಡೆಯಲು ಅವರ ಮೋಟಾರನ್ನು ಹರಾಜು ಮಾಡಿದರು. ಇದನ್ನು ಮಿ. ಕ್ರೈಚಲ್ಟರ್ ಎಂಬುವರು ಕೊಂಡು, ಅದನ್ನು ಶ್ರೀ ಅಭ್ಯಂಕರರ ಪತ್ನಿಯವರಿಗೆ ಕೊಟ್ಟಿರುವರು.

ಹಲವು ದಿನಗಳಿಂದ ಉಪವಾಸವನ್ನು ಕೈಕೊಂಡ ರಾಜಮಹೇಂದ್ರಿಯ ರಾಜಕೀಯ ಕೈದಿಗಳನ್ನು ಆಸ್ಪತ್ರೆಗೊಯ್ದರು. ಬಲಾತ್ಕಾರದಿಂದ ಆಹಾರ ಕೊಟ್ಟುದನ್ನವರು ಬಾಯಿಯ ದ್ವಾರದಿಂದಲೇ ಹೊರಗೆ ಸುರಿಯುತ್ತಿರುವದಾದ ಕಾರಣ ಮಹಾಸಂಕಟವಾಗಿದೆ.

ಮುಂಬಯಿಯಲ್ಲಿ ಸ್ವಯಂಸೇವಕರು ಎರಡನೇ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರ ಕೋರ್ಟಿನೊಳಕ್ಕೆ ನುಗ್ಗಿ, ಹಾಡುಗಳನ್ನು ಹೇಳುತ್ತಾ, ಮ್ಯಾಜಿಸ್ಟ್ರೇಟರು ರಾಜೀನಾಮೆ ಕೊಡಲಿ ಎಂಬುದಾಗಿ ಬರೆದಿದ್ದ ಕರಪತ್ರಗಳನ್ನು ಹಂಚಿದರು. ಸ್ವಯಂಸೇವಕರನ್ನು ಪೋಲೀಸರು ದಸ್ತಗಿರಿ ಮಾಡಿದರು.

ಮದ್ರಾಸ್ ಶೆರೀಫ್ ಆಫೀಸಿನಿಂದ ಕಳೆದ ತಾ ೧೮ ರಲ್ಲಿ ೩೦ ಸಾವಿರ ನೋಟನ್ನು ಕಳುವು ಮಾಡಿದ್ದ ... ನ ಮಾನೇಜರು ಆದೇ ಆಫೀಸಿನ ಕ್ಲಾರ್ಕನಾದ ಜಿ. ವೆಂಕಟರಾಮಯ್ಯರ ಪಿಳ್ಳೆಯನ್ನು ೨೫೦೦೦ ರೂಗಳ ನೋಟುಗಳೊಂದಿಗೆ ಚಿಕ್ಕಾರನಲ್ಲಿ ದಸ್ತಗಿರಿ ಮಾಡಿದೆ. ಇವನ ವಿಶ್ವಯೋಗದ ಆಯುಷ್ಯ, ಪಾಪ, ಎಂಟೇ ದಿನ.

'ಭಾರತ ದೇಶೀಯ ಸಂಸ್ಥಾನಾಧಿಪತಿಗಳಿಗೆ ಸಮುಚಿತ ಭದ್ರತೆಗಳು ಶಾಸನದಲ್ಲಿ ಸೇರಲ್ಪಟ್ಟರೆ ಮಾತ್ರ ಅವರು ಫೆಡರೇಶನಿಗೆ ಸೇರಲು ಒಪ್ಪುವರು' ಎಂದು ಕಳೆದ ತಾ. 14 ರಲ್ಲಿ ಲಂಡನಿನಲ್ಲಿ ನೆರೆದಿದ್ದ ಕನ್ಸರ್ವೇಟಿವ್ ಇಂಡಿಯಾ ಕಮಿಟಿಯ ಸಭೆಯಲ್ಲಿ ನವಾನಗರದ ಮಹಾರಾಜರು ಮಾಡಿದ ಭಾಷಣದಲ್ಲಿ ಹೇಳಿದರು.

ಪಂಚಮರೆಂದು ಕರೆಯಲ್ಪಡುತ್ತಿರುವ ಜಾತಿಯವರು ಅಸ್ಪೃಶ್ಯರೆಂಬುದು ಅಶಾಸ್ತ್ರೀಯವೆಂದೂ, ಅವರು ದೇವಾಲಯಗಳಿಗೆ ಬರುವುದು ಶಾಸ್ತ್ರಸಮ್ಮತವೆಂದೂ ಬಂಗಾಲದಲ್ಲಿ ಮುಸ್ಲಿಂ ಶಾಸ್ತ್ರಿಗಳು ಪ್ರಕಟಿಸಿರುವರಲ್ಲದೆ, ಈ ವಿಷಯವನ್ನು ಸಿದ್ಧಾಂತಪಡಿಸಲು ಪಂಡಿತರುಗಳ ಸಭೆಯೊಂದನ್ನು ಸೇರಿಸಬೇಕೆಂದೂ ಸೂಚಿಸಿರುವರು.

ಬರೋಡಾ ಸಂಸ್ಥಾನದವರು ೧೯೩೩ ನೇ ಇಸವಿಯಿಂದ ಹಿಂದೀಯನ್ನು ರಾಜಭಾಷೆಯನ್ನಾಗಿ ಸ್ವೀಕರಿಸಿ, ವ್ಯವಹಾರಕ್ಕೆ ಹಚ್ಚುವರು. ಅಷ್ಟರೊಳಗೆ ಸರಕಾರೀ ನೌಕರರೆಲ್ಲ ಹಿಂದಿಯಲ್ಲಿ ತರಬೇತಿ ಹೊಂದಿ,—ಪರೀಕ್ಷೆ ಕೊಡಬೇಕಾಗಿ ತಿಳಿಸಲಾಗಿದೆ. ಅಲ್ಲಲ್ಲಿ ಹಿಂದೀ ಶಾಲೆಗಳನ್ನು ಅಲ್ಲಿಯವರು ಸ್ಥಾಪಿಸಿದ ವ್ಯವಸ್ಥೆಯಾಗುತ್ತಿದೆ.

ದೇವದಾಸ್ ಗಾಂಧಿಯವರು ಮಂಗಳವಾರದ ದಿವಸ ಎರವಾಡಾ ಜೈಲಿನಲ್ಲಿ ಗಾಂಧಿಯವರನ್ನು ನೋಡಿಕೊಂಡು ಬಂದರು. ಮೊಣಕೈಯಲ್ಲಿ ನೋವುಂಟಾಗಿದೆ ಎಂದೂ ಆ ಬಗ್ಗೆ ಮೇಜರ್ ಭಂಡಾರಿಯವರೂ ಮತ್ತು ಡಾ. ಮೆಹತಾರವರೂ ಚಿಕಿತ್ಸೆ ನಡಿಸುತ್ತಿದ್ದಾರೆಂದೂ, ಅವರ ತೂಕವು ಈಗ ೧೦೩. ೫ ಪೌಂಡುಗಳಿವೆಯೆಂದೂ, ಮುಂದಾಗಿ ದೇವದಾಸ ರು ತಿಳಿಸಿದ್ದಾರೆ.

'ನಾನು ಈ ೧ ತಿಂಗಳವನ್ನು ಬಿಳಿಸಕ್ಕರೆ ಪದಾರ್ಥಗಳನ್ನೂ ಪುಷ್ಟಿಯನ್ನುಂಟುಮಾಡತಕ್ಕ ಪದಾರ್ಥ (ಟಾನಿಕ್ಸ್)ಗಳನ್ನೂ ಸೇವಿಸಿರುವುದಿಲ್ಲ. ಮೇಕೆ ಹಾಲು, ಕೊಟ್ಟು ಸಮೇತವಾದ ಗೋಧಿರೊಟ್ಟಿ, ನೀರಿನಲ್ಲಿ ನೆನೆ ಹಾಕಿದ ಖರ್ಜೂರ, ಬೇಯಿಸಿದ ಟೊಮೇಟೋ, ಕಿತ್ತಳೆ ಹಣ್ಣು ಇವುಗಳನ್ನು ಮಾತ್ರ ಸೇವಿಸುತ್ತಿದ್ದೇನೆ. ರೊಟ್ಟಿಯಂತಲೂ, ಹಾಲಿನಂತಲೂ ಕೆಲಸಕ್ಕೆ ಪೋಷಣವರ್ಧಕ ಪದಾರ್ಥವು ನನಗೆ ಲಭಿಸುತ್ತಿದೆ.' ಎಂದು ಮಹಾತ್ಮರು ಒಬ್ಬ ಸ್ನೇಹಿತರಿಗೆ ಬರೆದಿರುತ್ತಾರೆ.

ಪೀರಾಪುರದ ಭಾರತಿ ತೀರ್ಥಸ್ವಾಮಿಗಳು ಪಂಡಿತ ಸೀತಾರಾಮಯ್ಯನವರು ಮಹಾತ್ಮ ಗಾಂಧಿಯವರ ಜನನ ಕುಂಡಲಿ ಹಾಕಿ, ತಾತ್ಕಾಲಿಕ ಗ್ರಹಚಾರವನ್ನು ಗುಣಿಸಿ ಫಲವನ್ನು ಪ್ರಕಟಿಸಿರುವುದರಲ್ಲಿ ಮಹಾತ್ಮರ ಆರೋಗ್ಯವು ಈ ತಾ. 14 ರ ಮೇಲೆ ವೃದ್ಧಿಯಾಗಿ ಸೌಖ್ಯವು ಸಿದ್ಧಿಸುವದೆಂದೂ, 1933 ನೇ ಜನವರಿ ತಿಂಗಳು ಕಳೆದ ಮೇಲೆ ರಾಜಕೀಯ ವಿಚಾರದಲ್ಲಿ ಜಯವಾಗಲು ತಕ್ಕ ಏರ್ಪಾಡು ನಡೆಯುವದೆಂದೂ ತಿಳಿಸಿರುತ್ತಾರೆ. ಇದರ ಫಲಿತಾಂಶವನ್ನು ಮುಂದೆ ನೋಡಬೇಕಷ್ಟೆ.

ಗುರುವಾಯ್ಯೂರು ದೇವಸ್ಥಾನ ಪ್ರವೇಶಕ್ಕೆ ಹರಿಜನರನ್ನು ಬಿಡಬಹುದೋ ಎಂಬವಿಷಯ ಆ ದೇವಸ್ಥಾನದ ಸುತ್ತುಮುತ್ತಲಿನ ಹತ್ತು ಮೈಲು ವಿಸ್ತೀರ್ಣದಲ್ಲಿರುವ ಜಾತಿ ಹಿಂದೂಗಳ ಓಟು ತೆಗೆದು, ಬಹುಮತದವರು ಕೊಡದೆಂದು ತೀರ್ಮಾನಿಸಿದರೆ ಆಥವಾ ಬಹುಮತದವರು ವಿರೋಧವಿಲ್ಲವೆಂದು ತೀರ್ಮಾನಿಸಿ... ಹಾಗೆ ಏಡಲು ಜಮೂರಿನ ಆಡಚಣೆ ಇದ್ದರೆ ನಾನು ಜನವರಿ 2 ರಲ್ಲಿ ಉಪವಾಸವನ್ನು ಕೈಕೊಳ್ಳುವದನ್ನು ಕತ್ತರಿಸಬೇಕಾಗಿ ಮಾಡುವೆನೆಂದು ಮಹಾತ್ಮಗಾಂಧಿಯವರು ಸೂಚಿಸಿರುವರು.

ಮಿಸೆಸ ಕಸನ್ಸ್‌ರು ಪೂನಾದಲ್ಲಿ ಪ್ರವಾಸ ಮಾಡುವಾಗ ಮಹಾತ್ಮ ಗಾಂಧಿಯವರನ್ನು ಜೈಲಿನಲ್ಲಿ ಸಂಧಿಸಿ ಚೈನಾದಲ್ಲಿ ನಡೆದ ಇಂಡಿಯಾ ಇಂಟರ್ ನ್ಯಾಷನಲ್ ಕಮಿಟಿಯವರ ಭಕ್ತಿಪೂರಸ್ಸರ ಅಭಿನಂದನೆಗಳನ್ನು ಮಹಾತ್ಮರಿಗೆ ಅರುಹಿ ಮಹಾತ್ಮರು ಉಪವಾಸ ಪ್ರಕರಣವು ಪಾಶ್ಚಿಮಾತ್ಯರಲ್ಲಿ ಎಂಥಾ ಪರಿಣಾಮಕಾರಿಯಾಗಿದೆಯೆಂದೂ ಹಿಂದೂಗಳಿಗೂ ಹರಿಜನರಿಗೂ ಆದ ತೀರ್ಮಾನದ ಬಗ್ಗೆ ಅವರಿಗೆ ಎಷ್ಟು ಸಂತೋಷವನ್ನುಂಟುಮಾಡಿತೆಂದೂ ತಿಳಿಸಿದರು. ಮಾಲಬಾರಿನಲ್ಲಿ ಮುಖ್ಯವಾಗಿ ಹೆಂಗಸರ ಭಾರತೀಯ ಸಂಘದವರು ನಡೆಸಿರುವ ಕಾರ್ಯಕ್ರಮವನ್ನು ಮಹಾತ್ಮರಿಂದ ಪಡೆದರು.

ಕಲ್ಕತ್ತಾ ಚಿತ್ತರಂಜನ ಏವ [illegible] ವರ್ಷದ ಯುವಕನು ಲೈಸನ್ಸಿಲ್ಲದೆ ೫೦ ಗುಂಡುಗಳನ್ನು ಒಂದು ರಿವಾಲ್ವರನ್ನು ಮತ್ತು ಎರಡು ಬಾಂಬುಗಳನ್ನು ಇಟ್ಟಿದ್ದನೆಂತಲೂ, ಇವನನ್ನು ಪೋಲೀಸಿನವರು ಅಕ್ಟೋಬರ್ ೧೩ನೇ ತಾರೀಖಿನಲ್ಲಿ ಹುಡುಕಿದಾಗ ಸರ್ಕಾರಿ ನೌಕರರನ್ನು ಕೊಲ್ಲಬೇಕೆಂತಲೂ, ಆದನಿಲ್ಲಾ ಯೂರೋಪಿಯನ್ನರನ್ನು ಸಿಕ್ಕಿದ ಕಡೆ ಕೊಂದು ಅವರ ಶಸ್ತ್ರಾಸ್ತ್ರಗಳನ್ನು ದೋಚಬೇಕೆಂತಲೂ, ಇತ್ತ ಎರಡು ಹುಸ್ತ ಪ್ರತಿಪತ್ರಗಳು ಸಿಕ್ಕಿದುವೆಂದೂ, ಈ ಯುವಕನ ಮೇಲೆ ಅಲಿಪುರದ ಸ್ಪೆಷಲ್ ಜಡ್ಜರಾದ ಮಿ. ಟಿ. ಹೆಚ್. ಎಲಿಸರ ಎದುರಿಗೆ ವಿಚಾರಣೆಗಾಗಿ ನಿಲ್ಲಿಸಿದರು. ಹುಡುಗನು ನಾನು ತಪ್ಪಿತಸ್ಥನಲ್ಲವೆಂದು ಹೇಳಿದನು. ಸ್ಪೆಷಲ್ ಜಡ್ಜರು ಎಕ್ಸ್‌ಪ್ಲೋಸಿವ್ ಆಕ್ಟಿನ ಪ್ರಕಾರ ಯುವಕನಿಗೆ ೧೦ ವರ್ಷ ಕಾರಾಗೃಹವಾಸವನ್ನು ವಿಧಿಸಿದರು.

'ಇಂಡಿಯಾ ಲೀಗ್'ನ ಲಂಡನಿನ ಆಂಗ್ಲೇಯ ಸದಸ್ಯರು ಹಿಂದೂ ದೇಶದ ಸಂಚಾರವನ್ನು ಮುಗಿಸಿ ಲಂಡನಿಗೆ ಹೋಗಿ ತಿಳಿಸಿರುವದರ ಸಾರಾಂಶವಿಷ್ಟು:—'ಇಂಡಿಯಾದಲ್ಲಿ ವೀರಶಕ್ತಿಯ ಏಕಟರೂಪವು ದೃಗ್ಗೋಚರವಾಗುತ್ತಿದೆ. ಕಾಂಗ್ರೆಸಿನವರ ಕಡೆಗೆ ಪ್ರಜಾವರ್ಗದ ಅಭಿಮಾನವು ಒಂದಿರುವದೆಂಬುದು ಸುಸ್ಪಷ್ಟ ದಬ್ಬಾಳಿಕೆ ವಿಪರೀತವಾಗಿದೆ. ಸಿ. ಐ. ಡಿ. ಗಳ ಕಾಟ ಸಹಿಸಲಾರದಂತಿದೆ. ಎಲ್ಲ ಆಂಗ್ಲೇಯರ ಹಿತಾಹಿತಗಳು ಗಾಂಧಿಜೀಯವರ ಕೈಯಲ್ಲಿದೆ. ಅವರೇ ಈಗ ಇಂಡಿಯದ ಅತಿ ವಿಚಕ್ಷಣ ಪೊಲಿಟಿಷನ್ನೆನ್ನಬಹುದು. ಅದರೂ ವೈಶಂಪಾಯನ,—೧॥ ವರ್ಷ ಹಿಂದೆ ಇದ್ದುದಕ್ಕಿಂತ ಈಗ ಇಂಡಿಯದವರ ಅಧಿಕ ಸ್ಥಿತಿಯು ನಾವು ಮಾಡಿ ಸುಧಾರಿಸಿದ್ದು, ನೂರು ಮಂದಿ ಸಂತೋಷದಿಂದಿರುವರು ಎಂದು ನುಡಿಯುವರು! ರೌಂಡ್ ಟೇಬಲ್ ಕಾನ್ಫರೆನ್ಸಿನ ಕಡೆಗೆ ಯಾರ ಗೃಷ್ಟಿಯೂ ಇಲ್ಲ; ಪ್ರಾತಿನಿಧ್ಯವು ತಮ್ಮದಲ್ಲವೆಂದೇ ಪ್ರಜಾವರ್ಗಕ್ಕೆ ಅತ್ಯ ಅನಾಸಕ್ತಿ,

'ಕೊಡಗು' ಕಂಪೆನಿಯ ಜನರಲ್ ಮೀಟಿಂಗು.

'ಕೊಡಗು' ಲಿಮಿಟೆಡ್ ಕಂಪೆನಿಯ ಶೇರುದಾರರ ಜನರಲ್ ಮೀಟಿಂಗು ತಾ. 26—11—32 ರಲ್ಲಿ ವಿರಾಜಪೇಟೆಯಲ್ಲಿ ನಡೆಯಿತು. ಮಿ. ಸಿ ಯನ್ ವೆಂಕಪ್ಪಯ್ಯನವರು ಅಧ್ಯಕ್ಷರಾಗಿದ್ದರು. 17 ಶೇರುದಾರರು ಹಾಜರಿದ್ದರು.

1. ಕಂಪೆನಿಯ ಡೈರೆಕ್ಟರುಗಳ 1931—32ನೇ ವರ್ಷದ ವರದಿಯು ಚರ್ಚಿಸಲಾಯಿತು.

(ಎ) ವರದಿಯ 9ನೇ ಪುಟದ 4ನೇ ಐಟಮಿನಲ್ಲಿ ಕಾಣುವ 0—0—9 ವ್ಯತ್ಯಾಸವನ್ನು ಮಿವರಿಸಿ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ನಿಶ್ಚೈಸಲಾಯಿತು.

(ಬಿ) ಇನ್ನು ಮುಂದೆ ಸ್ಟೇಶನರಿಯ ಸ್ಟಾಕ್ ಲೆಕ್ಕವನ್ನು ವರದಿಯಲ್ಲಿ ನಮೂದಿಸಬೇಕೆಂದು ಸೂಚಿಸಲಾಯಿತು.

2. '1931—32ನೇ ವರ್ಷದ ಡೈರೆಕ್ಟರ ವರದಿಯನ್ನೂ, ಆ ದೇ ವರ್ಷದ ಆದಾಯ ವೆಚ್ಚ, ಬ್ಯಾಲೆನ್ಸ್ ಶೀಟ್, ಲಾಭ ನಷ್ಟಗಳ ಪಟ್ಟಿಗಳನ್ನೂ ಈ ಸಭೆಯು ಒಪ್ಪುತ್ತದೆ' ಎಂಬ ಠರಾವನ್ನು ಮಿ. ಅಜ್ಜಮಾಡ ಪೂವಪ್ಪನವರು ಸೂಚಿಸಿದರು.

ಮಿ. ಪಾರ್ವಂಗಡ ಅಪ್ಪಯ್ಯನವರು ಅನುಮೋದಿಸಿದರು. ಠರಾವು ಸರ್ವಸಮ್ಮತದಿಂದ ಮಂಜೂರಾಯಿತು.

3. 1932—33ನೇ ವರ್ಷಕ್ಕೆ ಮಿ. ಬಿ. ಕ್ಯಾಪಣ್ಣನವರನ್ನು ಆಡಿಟರಾಗಿ ನೇಮಿಸುವಂತೆ ಮಿ. ಬಿ ಸಿ. ಸುಬ್ಬಯ್ಯನವರು ಸೂಚಿಸಿದರು. ಮಿ. ಪಿ. ಕಾರ್ಯಪ್ಪನವರಿಂದ ಅನುಮೋದಿಸಲ್ಪಟ್ಟು ಬಹುಮತದಿಂದ ಪಾಸಾಯಿತು.

4. ಆಡಿಟರ್ ಮಿ. ಬಿ. ಕ್ಯಾಪಣ್ಣನವರಿಗೆ 1931—32ನೇ ವರ್ಷಕ್ಕೆ ರೂ. 60/ನ್ನು ಆಡಿಟ ಫೀಜಾಗಿ ಕೊಡತಕ್ಕದಾಗಿ ಮಿ. ಬಿ ಸಿ. ಸುಬ್ಬಯ್ಯನವರು ಸೂಚಿಸಿದರು. ಮಿ. ಮನೆಯಪಂಡ ಚಿಣ್ಣಪ್ಪನವರಿಂದ ಅನುಮೋದಿಸಲ್ಪಟ್ಟು ಸರ್ವಸಮ್ಮತದಿಂದ ಪಾಸಾಯಿತು.

5. ಮಿ ಬಿ ಪಿ. ಕಾರ್ಯಪ್ಪನವರು ಮೇಗಳಡ ಬಿ. ಸಿ. ಸುಬ್ಬಯ್ಯನವರು, ಯಂ. ಯಂ. ಸಿದ್ದೀಕ್‌ರವರು, ಯು. ಯಂ. ಬೋಪಯ್ಯನವರು ಮತ್ತು ಕೆ. ಕುಶಾಲಪ್ಪನವರನ್ನು ಮುಂದಿನ ಡೈರೆಕ್ಟರುಗಳನ್ನಾಗಿ ಚುನಾಯಿಸಬೇಕೆಂತ ಸೂಚಿಸಿದರು. ಮಿ. ಪಿ. ಗಣಪತಿಯವರು ಅನುಮೋದಿಸಿದರು. ಮೇಲಿನ 6 ಹೆಸರುಗಳಿಗೆ ಬೇಲೆಟ್ ತೆಗೆದಲ್ಲಿ ಮಿ. ಬಿ ಸಿ. ಸುಬ್ಬಯ್ಯನವರು, ಯಂ. ಯಂ. ಚಿಣ್ಣಪ್ಪನವರು, ಯಂ ಯಂ. ಸಿದ್ದೀಕರವರು, ಕೆ. ಸಿ. ಕರುಂಬಯ್ಯನವರು ಮತ್ತು ಕಂಜಿತಂಡ ಕುಶಾಲಪ್ಪನವರು ಬಹುಮತದಿಂದ ಚುನಾಯಿಸಲ್ಪಟ್ಟರು ಮ. ಕ್ಯಾಪೆಟ್ಟರಂತರದಿಂದ ನಿವೃತ್ತಿ ಹೊಂದಿದ ಮಿ ಅದಿಯಂಡ ಮಾದಯ್ಯನವರಿಗೆ ಮಿ. ವೆಂಕಪ್ಪಯ್ಯನವರು ವಂದನೆಯನ್ನರ್ಪಿಸಿದರು.

ನಂತರ ಅಧ್ಯಕ್ಷರಿಗೆ ವಂದನೆಗಳಿಂದ ಮೀಟಿಂಗು ಅಂತ್ಯಗೊಂಡಿತು.

ಸಿ. ಯನ್. ವೆಂಕಪ್ಪಯ್ಯ,
(ಕಾರ್ಯಾಧ್ಯಕ್ಷರು)

॥ ಓಂ ॥

ಮಡಿಕೇರಿ ವೇದಾಂತ ಸಂಘದವರು ಇದೇ ಡಿಸೆಂಬರ್ ತಾರೀಕು 8 ರಲ್ಲು "ಗೀತಾಜಯಂತಿ" ಉತ್ಸವವನ್ನು ಮಿ. ಆರ್. ಹೆಚ್. ಕಣ್ಣೈ ಬಿ. ಎ. ಎಲ್. ಟಿ. ಇವರ ಅಧ್ಯಕ್ಷತೆಯಲ್ಲು ಜವಿಾನ್ದಾರರ ಸಂಘದ ಹಾಲ್‌ನಲ್ಲು ಜರಗಿಸುತ್ತಾರೆ. ಈ ಉತ್ಸವಕ್ಕೆ ಸರ್ವರೂ ದಯಮಾಡಿಸಬೇಕಾಗಿ ಕೋರುತ್ತೇವೆ.

ಕಾರ್ಯಕ್ರಮ.

ಡಿಸೆಂಬರ್ 8ನೇ ಗುರುವಾರ.

ಪೂರ್ವಾಹ್ಣ 9ರಿಂದ 10 ಗಂಟೆ ವರೆಗೆ ಗೀತಾ ಪಠನ ಸ್ಪರ್ಧೆ.

ಸಾಯಂಕಾಲ.

6ರಿಂದ 6.30ರ ವರೆಗೆ ಭಜನೆ.

6.30ರಿಂದ 7.30ರ ವರೆಗೆ ಗೀತೆಯನ್ನು ಕುರಿತು ಮಿ. ಕೇಲಪಂಡ ಕಾರ್ಯಪ್ಪ ಬಿ. ಎ. ಇವರ ಕನ್ನಡ ಉಪನ್ಯಾಸ.

7.30ರಿಂದ 8ರ ವರೆಗೆ ಅಧ್ಯಕ್ಷರ ಭಾಷಣ, ಮಂಗಳಾರತಿ ಮತ್ತು ಪ್ರಸಾದ ವಿನಿಯೋಗ.

ಮಡಿಕೇರಿ, ತಾ. 1—12—1932.

ಸಿ. ಯಂ. ತಿಮ್ಮಯ್ಯ,
(ಸಂಘದ ಅಧ್ಯಕ್ಷ.)

ಕೊಡಗು.

ಸನ್ ೧೯೩೨ನೇ ಇಸವಿ

ಡಿಸೆಂಬರ್ ತಾ. ೨ ನೇ ಶುಕ್ರವಾರ.

ಪ್ರೆಸ್ ಆರ್ಡಿನೇನ್ಸ್

ಜಾರಿಯಲ್ಲಿರುವ ವರೆಗೆ

ನಾವು

ಅಗ್ರಲೇಖನ

ವನ್ನು

ಪ್ರಕಟಿಸುವುದಿಲ್ಲ.

ಹರಿಜನರ ಕರ್ತವ್ಯ.

ಅಸ್ಪೃಶ್ಯತಾನಿವಾರಣೆ ಕಾರ್ಯಕ್ಕೆ ಹರಿಜನರು ಯಾವ ರೀತಿಯಲ್ಲಿ ಸಹಾಯಮಾಡಬಹುದು ಎಂತ ಶ್ರೀ. ರಾಜಭೋಜ ಎಂಬುವವರು ಕೇಳಿದರು. ಹರಿಜನರಲ್ಲಿ ಹೆಚ್ಚಿನವರು ಇರುವ ಹೀನಾವಸ್ಥೆಗೆ ಜಾತಿ ಹಿಂದೂಗಳೇ ಜವಾಬ್ದಾರರೆಂತಲೂ ಅಸ್ಪೃಶ್ಯತಾ ನಿವಾರಣೆಯಾದ ಒಡನೇ ಅವರ ಸ್ಥಿತಿಯು ಉತ್ತಮವಾಗುವುದರಲ್ಲಿ ಸಂಶಯವಿಲ್ಲವೆಂತಲೂ ಬಲವಾದ ಮಾತುಗಳಿಂದ ಮೊದಲೇ ಹೇಳಿರುತ್ತೇನೆ. ಪರಿಶುದ್ಧರಾದ ಸಂತರು ಅಸ್ಪೃಶ್ಯತಾ ನಿವಾರಣೆ ಮಾಡುವುದೆಂತ ಹೇಳಬಾರದು. ಆದರೂ ಈಗಿನ ಪರಿಸ್ಥಿತಿಗಳಲ್ಲಿ ಸಾಧ್ಯವಿರುವಷ್ಟು ಮಟ್ಟಿಗೆ ಹರಿಜನರು ತಮ್ಮನ್ನು ತಾವೇ ಸುಧಾರಿಸಿಕೊಳ್ಳಬೇಕು.

ಆದ್ದರಿಂದ ಹರಿಜನ ಕೆಲಸಗಾರರು ತಮ್ಮ ಎಲ್ಲಾ ಶಕ್ತಿಯನ್ನೂ ಈ ಕೆಳಗಿನ ಕಾರ್ಯಗಳಿಗೆ ಉಪಯೋಗಿಸಬೇಕು. (1) ಹರಿಜನರೊಳಗೆ ಶುಚಿಯೂ ಆರೋಗ್ಯದ ಅನುಕೂಲಗಳೂ ಹೆಚ್ಚುವಂತೆ ಮಾಡುವುದು. (2) ಅಶುಚಿಯೆನಿಸಿಕೊಳ್ಳುವ ತೋಟಿ ಮತ್ತು ಚರ್ಮಗಳ ಹದಬರಿಸುವ ಕೆಲಸಗಳನ್ನು ಸುಧಾರಿಸಿಕೊಳ್ಳುವುದು. (3) ಮಾಂಸವನ್ನು ಪೂರ್ತಿಯಾಗಿ ಬಿಟ್ಟಿದ್ದರೂ ಸತ್ತ ದನಗಳ ಮತ್ತು ಗೋಮಾಂಸವನ್ನು ತಿನ್ನುವುದನ್ನು ಬಿಡುವುದು. (4) ಮಾದಕಸೇವನೆಯನ್ನು ಬಿಡುವುದು. (5) ಹುಡುಗರನ್ನು ಶಾಲೆಗೆ ಕಳುಹಿಸುವಂತೆ ಬೋಧಿಸುವುದು, ಆ ಬಗ್ಗೆ ಶಾಲೆಗಳಿದ್ದರೆ ಅವುಗಳಿಗೆ ದೊಡ್ಡವರೂ ಸಹ ಶಾಲೆಗೆ ಹೋಗುವುದು. (6) ತಮ್ಮೊಳಗೆ ಇರುವ ಅಸ್ಪೃಶ್ಯತೆಯನ್ನು ಹೋಗಲಾಡಿಸಿಕೊಳ್ಳುವುದು.

ಇವುಗಳ ಕುರಿತು ವಿವರವಾಗಿ ಹೇಳಬೇಕಾಗಿದೆ. ನಮ್ಮ ಹವೆಯಲ್ಲಿ ದಿನಕ್ಕೆ ಒಂದು ಸ್ನಾನ ಅತ್ಯವಶ್ಯ. ಯಾವ ಹವೆಯಲ್ಲೂ ಶುಚಿಯಾದ ಬಟ್ಟೆಯನ್ನು ಧರಿಸಬೇಕು. ಹರಿಜನರ ವಸತಿಗಳಲ್ಲಿ ನೀರು ಸುಲಭವಾಗಿ ದೊರಕುವುದಿಲ್ಲವೆಂತ ಗೊತ್ತಿದೆ. ಅವರು ಸಮುದಾಯದ ಬಾವಿ ಕೆರೆಗಳನ್ನು ಮುಟ್ಟಕೂಡದು. ಬಟ್ಟೆ ಬದಲಾಯಿಸಿಕೊಳ್ಳುವಷ್ಟು ಅನುಕೂಲವಿಲ್ಲ. ಒಂದು ತಂಬಿಗೆ ತುಂಬ ನೀರಿದ್ದರೆ ಕುಳಿಯೂ ಗುವ ಸ್ನಾನ ಮಾಡಿಕೊಳ್ಳಬಹುದೆಂತ ಈಗ ಒಪ್ಪುವ ಮಾತಾಗಿದೆ. ಒದ್ದೆ ಬಟ್ಟೆಯಿಂದ ತಲೆ ಮೈಯೆಲ್ಲಾ ಒರಸಿಕೊಂಡು ಒಣಗಿದ ಬಟ್ಟೆಯಿಂದ ಒರಸಿಕೊಂಡರಾಯಿತು. ನಿತ್ಯ ಸ್ನಾನಮಾಡುವುದಾದರೆ ಒದ್ದೆ ಬಟ್ಟೆಯನ್ನೇ ಚೆನ್ನಾಗಿ ಹಿಂಡಿದರೆ ಈ ಹವದಲ್ಲಿ ನೀರು ಇಲ್ಲದೆಯೂ ಅದನ್ನೇ ಉಪಯೋಗಿಸಬಹುದು. ಬರೀ ಲಂಗೋಟಿ ಉಟ್ಟುಕೊಂಡು ಬಟ್ಟೆಯನ್ನೆಲ್ಲಾ ಒಗೆದು ಒಣಗಿಸಿಕೊಳ್ಳಬಹುದು. ಈ ಮಾತುಗಳಲ್ಲಿ ಹೊಸದೇನೂ ಇಲ್ಲ. ಆದರೆ ಅದನ್ನಾದರೂ ನಮ್ಮ ಕೆಲಸಗಾರರಿಗೆ ಹೇಳಿಕೊಡಬೇಕಾಗುತ್ತದೆ. ಗ್ರಾಮ್ಯಯೋಚನೆಗಳಿಗೂ ಸಹ ಈ ಆರೋಗ್ಯದ ಸುಲಭ ಉಪಾಯಗಳು ತಿಳಿದಿರುವುದಿಲ್ಲ.

ತೋಟಿ ಕೆಲಸವನ್ನು ಮರ್ಯಾದೆಯಿಂದ ಮಾಡುವುದು ಅಸಾಧ್ಯವಾಗುವಂತೆ ಜಾತಿ ಹಿಂದೂಗಳು ಮಾಡಿಬಿಟ್ಟಿದ್ದಾರೆ. ಅಸ್ಪೃಶ್ಯರು ಕೆಲಸ ಮಾಡುವುದೆಂಬ ಕಾರಣದಿಂದ ಕಕ್ಕಸುಗಳನ್ನು ಬಹಳ ಅಶುಚಿಯಾಗಿ ಇಡುತ್ತಾರೆ. ಅವು ಕತ್ತಲಾಗಿ, ಗಾಳಿ ಇಲ್ಲದೆ ಬರೀ ಸ್ವಲ್ಪ ಭಾಗ ಮಾತ್ರ ಬಹಳ ಕಷ್ಟದಿಂದ ಶುದ್ಧ ಮಾಡಲು ಅನುಕೂಲವಿರುವುದಾಗಿ ಇರುತ್ತವೆ. ಇಂಥವುಗಳನ್ನು ಶುದ್ಧ ಮಾಡುವುದೆಂದರೆ ನಿಜವಾಗಿಯೂ ನರಕಕ್ಕೆ ಇಳಿದಂತೆಯೇ ಸರಿ. ಮಲವನ್ನು ನೋಡಬಾರದೆಂಬ ಮೂಢ ನಂಬಿಕೆಯಿಂದ ತೋಟಿಗಳಿಗೆ ಕಕ್ಕಸನ್ನು ಚೆನ್ನಾಗಿ ಕ್ಲೀನ್ ಮಾಡಲು ಅನುಕೂಲ ಕೊಡದ್ದರಿಂದ ಈ ದೇಶದ ಹವಾಗುಣ ಎಲ್ಲದಿದ್ದರೆ ಈಗಕ್ಕಿಂತಲೂ ಎಷ್ಟೋ ಹೆಚ್ಚಿನ ಸಂಖ್ಯೆ ಜನರು ಬೇಗನೇ ಸಾಯುತ್ತಿದ್ದರು. ಈಗಿನ ಅನಾನುಕೂಲದ ಪರಿಸ್ಥಿತಿಯಲ್ಲಾದರೂ ಹರಿಜನರು ಅವಶ್ಯವಾಗಿ ಮಾಡಬೇಕಾಗಿರುವ ಸಮಾಜ ಸೇವೆಯನ್ನು ಮಾಡಿದ ಕೂಡಲೇ ಸ್ನಾನ ಮಾಡಬೇಕು. ಶುದ್ಧ ಮಾಡಲು ಬರೀ ಸ್ವಲ್ಪ ಹುಲ್ಲು ಉಪಯೋಗಿಸುವ ಬದಲು ತುಂಬಾ ಒಣಗಿದ ಮಣ್ಣನ್ನು ಉಪಯೋಗಿಸಬಹುದು.

ನಿಪುಣ ತೋಟಿಯೆಂತ ಹೇಳಿಕೊಳ್ಳುವ ನಾನು ಹೆಚ್ಚು ಖರ್ಚಿಲ್ಲದೆ ಚೆನ್ನಾಗಿ ಶುದ್ಧ ಮಾಡುವ ಬೇರೆ ರೀತಿಗಳನ್ನೂ ತೋಟಿ ಕೆಲಸದಲ್ಲಿ ತೋರಿಸಿಕೊಟ್ಟೇನು. ಈ ಕೆಲಸಕ್ಕೆ ಊರವರು ಹೆಚ್ಚಾಗಿ ಸಹಕರಿಸಬೇಕು. ಈ ಅಭಿರುಚಿ ಇರುವ ವಿಷಯವನ್ನು ಹೀಗೆ ಪೂರ್ತಿಯಾಗಿ ಬರೆಯಲು ಸಾಧ್ಯವಿಲ್ಲ. ಇಚ್ಛೆ ಇರುವವರು ಆರೋಗ್ಯಸಾಧನಗಳ ವಿಷಯ ನಾನು ಈ ಮೊದಲು ಬರೆದ ಲೇಖನಗಳನ್ನು ನೋಡಬಹುದು. ತೋಟಿಗಳು ಈ ಕೆಲಸ ಮಾಡುವಾಗ ಒಂದು ಪ್ರತ್ಯೇಕ ಉಡುಪನ್ನೇ ಧರಿಸಬೇಕು. ಅವರನ್ನು ಇಟ್ಟುಕೊಳ್ಳುವ ಜನರು ಅವರಿಗೆ ಇಂಥಾ ಉಡುಪನ್ನು ಮಾಡಿಕೊಡಬೇಕು.

ಪರಿಶುದ್ಧವಾಗಿದ್ದುಕೊಂಡು ಚರ್ಮಗಳ ಹದಬರಿಸುವ ಕೆಲಸವು ಇನ್ನೂ ಕಷ್ಟದ್ದು. ನಮ್ಮ ಈ ಕೆಲಸಗಾರರಿಗೆ ಈಗಿನ ಕಾಲದ ಚರ್ಮಗಳ ಸುಲಿಯುವ ಮತ್ತು ಹದಬರಿಸುವ ರೀತಿಗಳು ತಿಳಿದಿಲ್ಲ. ಮೇಲ್ಜಾತಿಯವರೆನ್ನಿಸಿಕೊಳ್ಳುವವರು ಈ ಒಳ್ಳೇ ಕೆಲಸ ಮಾಡುವ ನಮ್ಮ ಜಾತಿಯವರ ಸಹಾಯ ತೆಗೆದುಕೊಂಡಿಲ್ಲ. ಸತ್ತ ದನಗಳನ್ನು ಸಾಗಿಸುವಲ್ಲಿಂದ ಹಿಡಿದು ಚರ್ಮವನ್ನು ಹದ ಬರಿಸುವ ವರೆಗಿನ ಎಲ್ಲಾ ಕೆಲಸಗಳನ್ನೂ ಬಹಳ ಶುಚಿ ರೀತಿಯಲ್ಲಿ ಮಾಡಿ ಚರ್ಮ ಕೆಡುವಂತೆ ಸಹ ಮಾಡುತ್ತಾರೆ. ಹೊಸ ರೀತಿಗಳನ್ನು ಕಲಿತುಕೊಳ್ಳಬಹುದು.

ತೋಟಿಗಳಿಗೆ ಮನೆ ಎಂಜಲನ್ನು ಬಹು ಅಸಹ್ಯ ರೀತಿಯಿಂದ ಬಿಸಾಡುತ್ತಾರೆ. ಈ ಪದ್ಧತಿಯನ್ನು ನಿಲ್ಲಿಸಬೇಕು. ತೋಟಿಗಳಿಗೆ ಈ ಪದ್ಧತಿಯು ಅಭ್ಯಾಸವಾಗಿ ಇದರಲ್ಲಿ ಅಸಹ್ಯ ಪಡೆಯೋ ತೋರುವುದಿಲ್ಲ. ಈ ರೀತಿ ಎಂಜಲು ತಿನ್ನುವುದು ಆಕ್ಷೇಪಕರವೆಂತ ಶಾಲೆಗಳಲ್ಲಿ ಹೇಳುತ್ತಾರೆಂಬ ಕಾರಣದಿಂದ ಮಕ್ಕಳನ್ನು ಶಾಲೆಯಿಂದಲೇ ಬಿಡಿಸಿಬಿಟ್ಟ ಉದಾಹರಣೆ ನನಗೆ ಗೊತ್ತಿದೆ.

ಚರ್ಮಗಳ ಹದ ಮಾಡುವವರು ಸತ್ತ ಮೃಗಗಳ ಮಾಂಸವನ್ನು ತಿನ್ನುವುದನ್ನು ಬಿಡಿಸಬೇಕು. ಸಸ್ಯಾಹಾರಿಯಾದ ನಾನು ಹರಿಜನರು ಮಾಂಸಾಹಾರವನ್ನೇ ಬಿಡಬೇಕೆಂತ ಹೇಳುತ್ತೇನೆ. ಇಡೀ ಮನುಷ್ಯ ಜಾತಿಯೇ ತಿರಸ್ಕರಿಸುವ ಸತ್ತ ಮೃಗಗಳ ಮಾಂಸವನ್ನೂ ಹಿಂದೂಧರ್ಮಕ್ಕೆ ವಿರೋಧವಾದ ಗೋಮಾಂಸವನ್ನೂ ಇವರು ಬಿಡಬೇಕು. ಸತ್ತ ದನಗಳನ್ನು ಸಾಗಿಸಿದ್ದಕ್ಕೆ ಇವರಿಗೆ ಅದರ ಮಾಂಸವೇ ಕೂಲಿಯಾಗಿ ದೊರೆಯುವಂಥಾದ್ದು ಎಂತ ನನಗೆ ಗೊತ್ತಿದೆ. ಸತ್ತ ಮೃಗಗಳ ಮಾಂಸವನ್ನು ತಿನ್ನುವುದು ಬಿಟ್ಟದ್ದಕ್ಕೆ ಇವರನ್ನು ಗ್ರಾಮಸ್ಥರು ಹೊಡೆದಿದ್ದಾರೆ ಎಂತ ಡಾಕ್ಟರ್ ಅಂಬೇಡ್ಕರರು ನನಗೆ ಹೇಳಿದ್ದಾರೆ. ಹೀಗೆ ತಿನ್ನುವುದನ್ನು ಬಿಟ್ಟರೆ ಸತ್ತದ್ದನ್ನು ಸಾಗಿಸುವದಕ್ಕೆ ದುಡ್ಡು ಕೇಳಬೇಕಾಗುತ್ತದೆ, ಸಾಗಿಸದೆ ಹೋದಾರೆಂತಲೂ ಇವರ ಭಯವಾಗಿದೆ. ಹೇಗಾದರೂ ಈ ಕೆಟ್ಟ ಅಭ್ಯಾಸವನ್ನು ಬಿಡಬೇಕು. ಈ ಒಂದು ದುರ್ಗುಣವನ್ನು ಬಿಡುವುದರಿಂದ ಜಾತಿ ಹಿಂದೂಗಳಿಗೆ ಇವರ ಮೇಲೆ ಗೌರವ ಹೆಚ್ಚುತ್ತದೆ. ಮತ್ತು ಸಧಾರಣ ಕೆಲಸ ಸುಲಭವಾಗುತ್ತದೆ.

ನಾಲ್ಕು ಐದನೇ ವಿಷಯಗಳು ಸ್ವತಃ ಸಿದ್ಧವಾಗಿದೆ. ಅದರ ಬಗ್ಗೆ ಬರೆಯಬೇಕಾದದ್ದಿಲ್ಲ.

ಕಡೆಯದು ಅಸ್ಪೃಶ್ಯರೊಳಗೆ ಅಸ್ಪೃಶ್ಯತೆಯನ್ನು ಹೋಗಲಾಡಿಸುವುದು ಇದು ಅವಶ್ಯವಾಗಿ ಆಗಬೇಕಾದ ಸುಧಾರಣೆ. ಈ ದ್ವಿಗುಣ ಅಸ್ಪೃಶ್ಯತೆಯನ್ನು ಹೋಗಲಾಡಿಸದಿದ್ದರೆ ಅಸ್ಪೃಶ್ಯತಾ ನಿವಾರಣೆ ಕೆಲಸವು ಕಷ್ಟವಾದೀತು. ಹಿಂದೂ ಧರ್ಮದ ಕೊರತೆಯನ್ನು ಹೋಗಲಾಡಿಸುವ ಕೆಲಸವಾದ್ದರಿಂದ ಎಷ್ಟೇ ಅಡ್ಡಿಗಳಿದ್ದರೂ ಇದನ್ನು ಹೋಗಲಾಡಿಸಲೇಬೇಕು. ಕೆಲಸಗಾರರು ಒಳ್ಳೇ ನಡತೆಯುಳ್ಳವರಾಗಿರಬೇಕು.

ಎಷ್ಟೇ ಉತ್ಸಾಹ ಇರುವವನಿಗಾದರೂ ಈ ಕಾರ್ಯಕ್ರಮವು ಸಾಕಾಗಿದೆ. ಇನ್ನೂ ಒಂದೆರಡು ವಿಷಯ ಬರೆಯಬೇಕಾಗಿದೆ. ಹರಿಜನರು ಯಾವುದೇ ಕಾರಣಕ್ಕಾದರೂ ಉಪವಾಸವ್ರತವನ್ನು ಕೈಕೊಳ್ಳಬಾರದು, ಸತ್ಯಾಗ್ರಹ ಮಾಡಬಾರದು. ಜಾತಿ ಹಿಂದೂಗಳು ಏನೇನು ಮಾಡುತ್ತಾರೆಂತ ನೋಡಲಿ. ಜಾತಿ ಹಿಂದೂಗಳೊಂದಿಗೆ ಜಗಳವಾಡಬಾರದು. ಅವರು ಜಾತಿ ಹಿಂದೂಗಳೊಂದಿಗೆ ಯಾವಾಗಲೂ ಗೌರವದಿಂದಲೂ ಮರ್ಯಾದೆಯಿಂದಲೂ ಇರಬೇಕು. ಈಗಲಾದರೂ ಹೀಗಿರಲು ಹೆಚ್ಚಿನ ಅವಕಾಶವಿದೆ. ಸ್ವತಃ ಕಷ್ಟಪಡುವುದರಿಂದ ಧರ್ಮದ ಜಯವಾಗುತ್ತದೆಯೇ ಹೊರತು ಜಗಳವಾಡುವುದರಿಂದಲ್ಲ. ಹಿಂಸೆಪಡಿಸಿ ಪಡೆಯಬಹುದಾದ ಹಕ್ಕುಗಳು ಕೆಲವು ಇದೆಯಾದರೂ ಜಾತಿ ಹಿಂದೂಗಳ ಮನಸ್ಸನ್ನು ಬದಲಾಯಿಸಿ ಪಡೆಯುವುದೇ ಮೇಲು. ಅದಲ್ಲದೆ ಈಗ ಹತ್ತೆಂಟು ಸಾವಿರ ಜನರು ಈ ಕೆಲಸದಲ್ಲಿರುವಾಗ ನಿರಾಶೆಯಾಗಲು ಕಾರಣವಿಲ್ಲ. ತಮ್ಮ ಹಕ್ಕುಗಳು ನ್ಯಾಯಕ್ಕೆ ಸಮ್ಮತವಾಗಿದೆಯೆಂತ ನಂಬಿ, ತಾವು ಕಷ್ಟಪಟ್ಟೇ ತಮ್ಮ ಮೇಲ್ಮೆಯನ್ನು ಗಳಿಸಿಕೊಳ್ಳುತ್ತೇವೆಂತ ನಂಬಬೇಕು.

ಹುತ್ರಿ ಹಬ್ಬದ ಮುಹೂರ್ತ ಪಟ್ಟಿ.

ಇದೇ ವೃಶ್ಚಿಕ ಮಾಸ ತೇದಿ 26ನೇ ಅಂದರೆ ಡಿಸೆಂಬರ್ ತಾ. 11ನೇ ಆದಿತ್ಯವಾರ ದಿನ ಕೃತಿಕಾ ನಕ್ಷತ್ರದಲ್ಲು ಇಗ್ಗುತಪ್ಪ ದೇವರ ಕರಾಡ್ಡ ಹಬ್ಬವಾಗುತ್ತೆ.

ಇದೇ ವೃಶ್ಚಿಕ ಮಾಸ ತೇದಿ 27ನೇ ಅಂದರೆ ಡಿಸೆಂಬರ್ ತಾ. 12ನೇ ಸೋಮವಾರ ದಿನ ರೋಹಿಣಿ ನಕ್ಷತ್ರದಲ್ಲು ದೇವ ಪೊಳ್ದು. ಸದರಿ ದಿನ ಸಾಯಂಕಾಲ 6 ಗಂಟೆಗೆ ನೆರೆ ಕಟ್ಟುವದು, 7 ಗಂಟೆಗೆ ಕದಿರು ತೆಗೆಯುವದು, 8 ಗಂಟೆಗೆ ಊಟಮಾಡುವ ಶುಭ ಮುಹೂರ್ತ.

ಇದೇ ವೃಶ್ಚಿಕ ಮಾಸ 28ನೇ ತೇದಿ ಅಂದರೆ ಡಿಸೆಂಬರ್ ತಾ. 13ನೇ ಮಂಗಳವಾರ ದಿನ ಸಾಯಂಕಾಲ ಮೃಗಶಿರ ನಕ್ಷತ್ರದಲ್ಲು ನಾಡ ಪೊಳ್ದು. ಸದರಿ ದಿನ ಸಾಯಂಕಾಲ 7 ಗಂಟೆಗೆ ನೆರೆಕಟ್ಟುವುದು, 8 ಗಂಟೆಗೆ ಕದಿರು ತೆಗೆಯುವದು, 9 ಗಂಟೆಗೆ ಊಟಮಾಡುವ ಶುಭ ಮುಹೂರ್ತ.

ಕೊಡಗು ಮುಖ್ಯಾಯ ಅರಾಮ್, ಮಡಿಕೇರಿ. — ಕೆ. ಚಂಗಪ್ಪ, (ಪ್ರಸಿಡೆಂಟ್.)

WANTED.

Candidates for Electrical, Automobile, Wireless, Telegraph and Commercial classes opening shortly. Railfare paid. Rules on 2 anna stamps.

IMPERIAL GUILD INSTITUTE,

6—1 Bombay, 18.

ಅಸ್ಪೃಶ್ಯತೆ.

ಅಮೇರಿಕಾದ ಮಿಸ್ ಪಿಂಕಲವಾಗಿನ್ಸಿಯ (ನ್ಯೂಯಾರ್ಕ್ ಬರ್ಗ್) ಎಂಬ ಮಹಿಳೆಯು ಕಳೆದ ವರ್ಷ ಹಿಂದೂ ಧರ್ಮವನ್ನು ಅವಲಂಬಿಸಿರುವಳು. ಅವಳು ಮಹಾತ್ಮರ ಸಂಗಡ ಬರುವ ಜನವರಿ 2 ರಲ್ಲಿಯುವವಾಕ ವಹಿಸುವ ಕೆಲ್ಸೃತಾಹಿ ಮಹಾತ್ಮರಿಗೆ ಬರೆದ ಪತ್ರ ಈ ಕೆಳಗೆ ಕೊಡಲಾಗಿದೆ.

ಮಹಾತ್ಮರೇ, ಈಗಿನ ಕಾಲದ ಬೋಧಕರಾದ ವಾಲ್ಟ್ ವ್ಹಿಟ್‌ಮ್ಯಾನ್ ಎಂಬವರು ಹೇಳುವುದೇನೆಂದರೆ:—

ಭೂಮಿಯ ಮಹತ್ವವನ್ನು, ಶಕ್ತಿಯನ್ನು ಹೋಲುವ ಮಹತ್ವವೂ, ಶಕ್ತಿಯೂ ಬೇರೊಂದಿಲ್ಲ.

ಭೂಮಿಯು ತತ್ವವನ್ನು ಅನುಸರಿಸದ ತತ್ವವು ಬೇರೊಂದಿಲ್ಲ.

ಭೂಮಿಯ ವಿಶಾಲದಂತೆ ವಿಶಾಲವಾಗಿರದ ರಾಜಕೀಯ ವಿಷಯ, ಹಾಡು, ಧರ್ಮ, ನಡತೆ ಮುಂತಾದವು ಯಾವ ಬೆಲೆಗೂ ಬಾರದವಾಗಿವೆ. ಅವು ಭೂಮಿಯಂತೆ ನಿಜವಾಗಿಯೂ, ಶಕ್ತಿಯುತವಾಗಿಯೂ ವಿಸ್ತೃತವಾಗಿಯೂ ಇರಬೇಕು.

ವಾಲ್ಟ್ ವ್ಹಿಟ್‌ಮ್ಯಾನ್ನ ನೈತಿಕ ದೃಷ್ಟಿಯಿಂದ ಮಗಳಾದ ನಾನು, ಅವರ ಈ ಹೇಳಿಕೆಗಳ ಮೇರೆ ನಿಮ್ಮಲ್ಲಿ ಮತ್ತು ಭಾರತದಲ್ಲಿ ನಿಮ್ಮ ಶಿಷ್ಯಳಾಗಿದ್ದೇನೆ. ನಮ್ಮ ಸ್ನೇಹಿತನಾದ ಮಿ. ವಿಲ್ಸನ್ನರೊಂದಿಗೆ, 'ನೀವು ಅವಳು ಬರಲಿ, ಹಿಂದೂಸ್ಥಾನದ ಸೇವೆಮಾಡಬೇಕಾದರೆ ಅವಳ ಧರ್ಮವನ್ನು ಬಿಡಬಾರದು, ಬಿಡಬೇಕಾದದ್ದಿಲ್ಲ' ವೆಂದು ಹೇಳಿದ್ದಿರಿ. ನನ್ನ ಧರ್ಮವನ್ನು ನಾನು ಬಿಡಬಾರದೆಂದಿಲ್ಲವೆಂದು ಹೇಳುವ ಕಾಲ ಬಂದಿದೆ. ಹಿಂದೂಸ್ಥಾನಕ್ಕೆ ಬರುವ ಅನೇಕ ವರ್ಷಗಳ ಮುಂಚೆಯೇ ಸನಾತನ ಧರ್ಮವೇ ಅತ್ಯುತ್ತಮ ಧರ್ಮವೆಂದು ನಾನು ನಂಬಿದ್ದೆನು. ಅಮೇರಿಕಾದ ನ್ಯೂಯಾರ್ಕ ಪಟ್ಟಣದಲ್ಲಿ ಹಿಂದೂಧರ್ಮ ನನ್ನ ಪೂರ್ವಜರು ಸ್ವೀಕರಿಸಿದ ಆಧ್ಯಾತ್ಮಿಕ ವಿದ್ಯೆಗೆ ಸೇರಿದವಳಾಗಿದ್ದೆನು. ಅವರು ಹಿಂದೂಯುರೋಪಿಯನರಿಗೆ ಭೂಮಿಯ ಸಾರವನ್ನು ತಿಳಿಸಿದವರಾಗಿದ್ದರು. ಪ್ರೈಸ್ತ ವೃತ್ತಿಯನ್ನು ಪೂಜಿಸುವ ಅಮೇರಿಕಾದವರಿಗೆ ಹಿಂದೂಸ್ಥಾನದ ಸಮಸ್ತವು ದೇವರ ಮಾಯೆಯೆಂಬ ಭಾವನೆಯು ಅಷ್ಟು ಸ್ಪಷ್ಟವಾಗಿ ತೋರುತ್ತದೆ.

ಕಳೆದ ವರ್ಷ ನಾನು ಅಧಿಕೃತವಾಗಿ ಸನಾತನ ಧರ್ಮವನ್ನು ಸ್ವೀಕರಿಸಿದಾಗ ನಾನು ಒಂದು ಧರ್ಮದಿಂದ ಇನ್ನೊಂದು ಧರ್ಮಕ್ಕೆ ಬದಲಾಗಲಿಲ್ಲ. ವೇದಾಂತದಲ್ಲಿರುವ ಹಲವು ಧರ್ಮದ ತತ್ವಗಳನ್ನು ನಾನು ಅಂಗೀಕರಿಸುತ್ತಿದ್ದೆ. ನಾನು ಕ್ರೈಸ್ತ ಧರ್ಮವನ್ನು ಬಿಟ್ಟು ಹಿಂದೂ ಆದವಳಲ್ಲ. ಕ್ರೈಸ್ತ ಧರ್ಮವನ್ನು ಅನುಸರಿಸುವ ಚರ್ಚುಗಳಲ್ಲಿ ನಿಜವಾದ ಕ್ರೈಸ್ತಧರ್ಮವಿಲ್ಲ. ಯಾಕೆಂದರೆ, ನೀಗ್ರೋ ಜನರನ್ನು ಆ ಚರ್ಚುಗಳಲ್ಲಿ ಅಸ್ಪೃಶ್ಯರಾಗಿ ಕಾಣುತ್ತಾರೆ.

ಹಿಂದೂಸನಾತನದಲ್ಲಿ ಅಲ್ಪ ಸಂಖ್ಯಾತರಾಗಿರುವ ಹಳೇ ಪದ್ಧತಿಯನ್ನನುಸರಿಸುವವರೇ ಹೊರತು ನಾನು ಹಿಂದೂ ಧರ್ಮವನ್ನು ಮನಃಪೂರ್ವಕವಾಗಿ ಅನುಸರಿಸುತ್ತಿರಲಿಲ್ಲ. ಮಹಾಭಾರತ, ಉಪನಿಷತ್ತುಗಳು, ವೇದ ಮತ್ತು ಶಾಸ್ತ್ರಗಳಲ್ಲಿ ಇರುವ ಸರ್ವವೂ ದೇವರಿಂದ ಹುಟ್ಟಿದವೆಂಬ ನಂಬಿಕೆಯು, ನನ್ನನ್ನು ಹಿಂದೂಧರ್ಮಕ್ಕೆ ಸೇರಿಸುವ ಕ್ರಿಯೆಯನ್ನು ನಡೆಸಿದ ಶಾಸ್ತ್ರೀಯರ ಪೂರ್ವಪದ್ಧತಿಯನ್ನನುಸರಿಸುವ ಹಿಂದೂಗಳಲ್ಲಿ ನನಗೆ ಕಂಡು ಬಂತು. ನನ್ನನ್ನು ಅವರ ಮಗಳಾಗಿ ಅಂಗೀಕರಿಸಿದರು. ಅವರನ್ನು ನನ್ನ ಗುರುಗಳಾಗಿ ನಾನು ಪೂಜಿಸುತ್ತೇನೆ.

ನಾನು ಹೋದ ಎಲ್ಲಾ ದೇವಸ್ಥಾನಗಳಲ್ಲೂ, ಮಠಗಳು, ಸ್ಥಳಗಳಲ್ಲೂ ಗುಂಪಿಗೆ ಸೇರಿಕೊಂಡು ನಾನೂ ಪೂಜೆಗಳನ್ನು ನಡೆಸುತ್ತೇನೆ. ಅಂಥಲ್ಲೆಲ್ಲಾ ಪ್ರಪಂಚದ ಎಲ್ಲದರಲ್ಲೂ ಏಕತ್ವವೆಂಬ ಭಾವವೂ, ಭ್ರಾತೃತ್ವಭಾವವೂ, ಸ್ತ್ರೀ ಸಮಾನತ್ವಗೌರವವೂ, ಅತ್ಯಕ್ಕೆ ಸಾವಿಲ್ಲವೆಂಬುದರಲ್ಲಿ ನಂಬಿಕೆಯೂ, ಆತ್ಮರು ತಿಳಿಗೆ ಗುಣಯುತರಾಗುವರೆಂಬೂ ಮತ್ತು ತಾನು ಮಾಡಿದ ಕರ್ಮದ ಫಲವನ್ನು ತಾನೇ ಅನುಭವಿಸಬೇಕೆಂಬ ತಿಳುವಳಿಕೆಯೂ ಕಂಡುಬರುತಿತ್ತು. ಹಿಂದಿನ ರೀತಿಗಳನ್ನು ಬಿಡದೆ ನಾ ಇದ್ದ ಇರುವ ಮುಟ್ಟ (ಮಡಿಯಾ) ದಲ್ಲಿ ಪ್ರಸಾದ (ನೈವೇದ್ಯ) ವನ್ನು ಮಾಡುವಲ್ಲಿಗೆ ನನ್ನನ್ನು ಕರೆದುಕೊಂಡು ಹೋಗಿದ್ದರು. ಪುರೋಹಿತರಾಗಲೀ, ಇತರ ಜನರಾಗಲೀ ಅವರ ಹ್ಯಾಗಲ್ಲಾಗಲೀ, ಅಭಿಪ್ರಾಯಗಳಲ್ಲಾಗಲೀ, ಪೂಜೆಗಳಲ್ಲಾಗಲೀ ನಾನು ಸೇರಕೂಡದೆಂದು ಎಲ್ಲಿಯೂ ಹೇಳಲಿಲ್ಲ. ಹೀಗೆ ನಾನು ಸೇರಿದ್ದರಿಂದ ಅನೇಕ ಕಡೆಯೂ ಅನೇಕ ಜಾತಿಗೆ ಸೇರಿದವರು, ಹಿಂದೂ ಧರ್ಮವು ಸರ್ವರನ್ನೂ ವ್ಯಾಪಿಸುವುದಾಗಿದೆ ಎಂದ ನನಗೆ ಬೋಧಿಸುತ್ತಿದ್ದರು. ಯಾತ್ರಿಕರೊಂದಿಗೆ ಯಾತ್ರಾ ಸ್ಥಳಗಳಿಗೆ ನಡೆದು ಹೋಗುವಾಗಲೂ, ಪೂಜೆಗಳಲ್ಲಿ, ಕಥೆಯಲ್ಲಿ, ಧರ್ಮ ಶಾಲೆಗಳಲ್ಲಿ ಒಟ್ಟಿಗೆ ಊಟ ಮಾಡುತ್ತಲೂ ಅನೇಕ ತಿಂಗಳುಗಳ ವರೆಗೆ ಅವರ ಜೊತೆಯಲ್ಲೇ ಇದ್ದೆ. ಪುರೋಹಿತ ಒಂದು ಗುಂಪು ಇಲ್ಲೇ ಚೆಗೆ ಹಿಂದೂ ಧರ್ಮಕ್ಕೆ ಹುಟ್ಟಿರುವ ಬೇರೆಯವರಿ(?)ಯಿಂದ ಮಹತ್ವವಾದ ಹಿಂದೂ ಸನಾತನ ಹೃದಯವು ಕೆಡಲಿಲ್ಲವೆಂಬ ನನ್ನ ಅನುಭವದಿಂದ ನನಗೆ ತಿಳಿದಿದೆ.

ದೇವಸ್ಥಾನಗಳಲ್ಲಿ ಮಾಡುವ ಪೂಜಾ ವಿಧಿಗಳಲ್ಲಿ ಅನೇಕ ಮಹತ್ವವಾದ ತತ್ವಗಳು ಕೂಡಿ ಬರುತ್ತವೆ. ಉದಾಹರಣೆಯಾಗಿ ಹಿಂದನ್ನು ಹೇಳಬಹುದು. ತನ್ನನ್ನು ತಾನೇ ಹೂವು ಶೀಘ್ರದಿಂದ ಪೂಜಿಸುವುದಿದೆ. ಇದರಿಂದ ಸರ್ವರಲ್ಲೂ ಅಸ್ಪೃಶ್ಯ ಇದ್ದಾನೆ ನಮ್ಮಲ್ಲೂ ಇರುವ ಶಿವನೆಂಬ ತತ್ವವಿರುವ ಪರಮಾತ್ಮನು ನಮ್ಮಲ್ಲಿ ಇದ್ದಾನೆ ಎಂಬ ಭಾವವನ್ನು ಈ ಪೂಜೆಯು ಹೇಳಿಕೊಡುತ್ತದೆ. ಇಂಥಾ ಪೂಜಾ ವಿಧಿಗಳು ಇನ್ನೂ ಅನೇಕ ಇವೆ. ಅವುಗಳನ್ನು ತಿಳಿಸಬೇಕಾದರೆ, ಅಂಥಾ ಕ್ರಿಯೆಗಳಿಂದ ನಮ್ಮ ಒಳಗೆ ಅತ್ಮ ನಿರ್ಮಾಣವಾಗಿ ಬ್ರಹ್ಮ ವಿಸ್ತರಿಸಿಕೊಂಡು ಅಂಥಾ ಪರಮಾತ್ಮನ ಕೆಲಸ ವ್ಯಾಪಿಸಿಯಾಗಿದ್ದೆನೆಂಬ ಭಾವವೇ ಇಟ್ಟು ಕೆಲಸ ಮಾಡಲು ಸಹಾಯವಾಗುತ್ತದೆ.

ಹಿಂದೂ ಧರ್ಮಕ್ಕೆ ಪುರೋಹಿತರು ಸೇರಿಸುವ ಕೆಲವು ಕ್ರಿಯೆಗಳಿಂದ ದೇವರಿಟ್ಟು ಇರುವಿಕೆಯ ಭಾವಕ್ಕೆ ಸಹಾಯವಾಗುತ್ತದೆ. ಅಂಥಾ ಕ್ರಿಯೆಗಳನ್ನು ತಿರಸ್ಕರಿಸಬೇಕು.

ಶಂಕರಾಚಾರ್ಯರು ಬ್ರಹ್ಮನಿಂದ ಬೇರಾದ ಒಂದು ವಸ್ತುವಾದರೂ ಇಲ್ಲವೆಂತಲೂ, ಒಳ್ಳೇದು ಕೆಟ್ಟದ್ದು, ಹೊಂಗಳಿಕೆ ದೂರು ಎಂಬ ಇತ್ಯಾದಿ ದ್ವಂದ್ವಗಳನ್ನು ವಿಚಾರಿಸುವುದೇ ಮೋಕ್ಷಕ್ಕೆ ದಾರಿಯೆಂತಲೂ, ಎಲ್ಲವನ್ನು ಬ್ರಹ್ಮನೆಂದು ಭಾವಿಸುವುದೇ ಮೆಟ್ಟಿಲೆಂತಲೂ ಹೇಳಿದ್ದಾರೆ. ಅವರೆ ಅವರ ಶಂಕರಾಚಾರ್ಯರ ಪ್ರತಿನಿಧಿಯು, ನೀವು ಕೋಟಿಯ ಕೆಲಸವು ಹೇಳುವಲ್ಲವೆಂದ ಹೇಳುವಾಗ ನಿಮ್ಮನ್ನು ವಿರೋಧಿಸುತ್ತಾರೆ! ಅಲ್ಲದೆ ಇದರಿಂದ ಶಂಕರರು ಮಾನವರೂಪದ ಇಂಥಾ ಬೆಳ್ಳಗನನ್ನು, ಪ್ರಿಯರುಗಳನ್ನು ಮಾಡಿದ್ದಾರೆಯೋ ಹೊರತೆ, ಬುದ್ಧಿಯಿಂದ ಮನಸ್ಸಿನವರಿಗೆ ಎಲ್ಲವೂ ಶುದ್ಧವಾಗಿವೆ ಎಂಬ ತತ್ವದ ದೇವತಾ ಮನುಷ್ಯನಿಗೆ ಸರ್ವವೂ ದೇವರಾಗಿವೆ. ಶಾಸ್ತ್ರದ ತತ್ವವಾದ ಮನನಶೀಲನಿಗೆ ಸ್ಪೃಶ್ಯತೆಯಿಲ್ಲಗಳಿಗೆ ಭಾವನೆಯಾಗಿಲ್ಲ. ಅಸ್ಪೃಶ್ಯನ್ನೇ ಶಂಕರಾಚಾರ್ಯರು ಉಪನಿಷತ್ತುಗಳ ಮತ್ತು ವೇದಗಳ ಸಾರವೆಂದ ಸ್ಥಾಪಿಸಿರುವುದು. ಈಗಿನ ಕಾಲದ ಶಂಕರರು ಅಷ್ಟು ಈ ಪುರಾತನ ಸತ್ಯವನ್ನು ನೆರೆಗೊಳಿಸುವುದು ಇದೇ.

ಕಾಶ್ಮೀರದ ಹಿಡಿದ ಹಳವೇ ನೋಡಿನ್ನುವ ಪುರೋಹಿತರುಗಳು ನಿಜವಾದ ಧರ್ಮತತ್ವ, ಜಾತಿ ಭೇದಕ್ಕೆ ಗಳಿಸಿದ ದಾಸ್ಯದಿಂದ ಇದ್ದಾರೆ. ಗ್ರಾಮಗಳಲ್ಲಿ ಜಾತಿಭೇದಗಳಿಂದ ಪ್ರೀತಿಯ ಹೋಗುವ ಮೇರೆ ತಮ್ಮ ನಿಮ್ಮ ಕಷ್ಟಗಳನ್ನು ಎಂಗಡೆ ಕೊಂಡು ಸರ್ವರೂ ಒಂದೇ ರೀತಿ ಊಟ ಮಾಡಲು ನೀಡಿದರೆ ವಿರುದ್ಧ ವಿಚಾರವಾಗಿದೆ. ಅವರೆ ಈ ವಿಚಾರವು ಧರ್ಮವನ್ನು ಅವನತಿಗೆ ತರುವುದಾಗಿದೆ ಮಹಾ ಭಾರತದ ಮಹಾ ಯುದ್ಧವು ನಡೆದಾಗ ಕೃಷ್ಣನ ಮುಖೇನ ಹೊರಡಿದ ಉಪದೇಶವು ಕ್ಷತ್ರಿಯರ ಅರ್ಜುನನಿಗೆ ಆಗಲಿ (ಅಥವಾ) ವರಿಗೆ ಕಲುಷಿತವಿದ್ದರು, ಮಹಾ ಭಾರತದ ಯುದ್ಧವೆಂದರೆ ಗೀತೆಯ ಜಯ. ಹಾಗೆ ಶ್ರೀಕೃಷ್ಣನು ಯಾರಿಗೂ ಆಲೋಚನವನ್ನು ನಿಜ್ಜಾರಿಂದಲೇ ಪರಿತ್ಯಕ್ತ ಹೊರಡಿ ಸಹಕಾರದಿಂದ ಹಿಂದೀಯ ದಿಗೀಷ ಇರುವ ಆತ್ಮ ಸಂಬಂಧವನ್ನು ಜ್ಞಾಪಿಸಿಕೊಟ್ಟರು. ಹಿಂದೂಸ್ಥಾನವು ಸನಾತನ ಧರ್ಮದ ಮೂಲಸ್ಥಾನವಾಗಿದ್ದ ವರೆಗೆ ಎಲ್ಲಾ ಜಾತಿಯ ಪುರೋಹಿತರು ಒಂದೇ ಅಧಿಕಾರಯುತರಾಗಿದ್ದರು.

ಈಗ ಮಹಾಭಾರತ ಯುದ್ಧವು ನಡೆದು 5000 ವರ್ಷಗಳ ಕಳೆದರೂ ಯುದ್ಧದಲ್ಲಿ ಕಾದ್ಯವ ನೆನಪುಗಳು ನಾಶವಾಗಲಿಲ್ಲ. ಆ ಸರ್ವವ್ಯಾಪಿಯಾದ ಸತ್ಯವನ್ನು ಸಾಧಿಸುವ ಕೃತ್ಯವಾಗಿ ಸಂಗತಿಯಲ್ಲಿ ನಡೆದ ಯುದ್ಧವಾಗಿದೆ. ಈಗಲೂ ಹಿಂದೂಸ್ಥಾನದ ಹೋರಾಟವು ರಾಜಕೀಯವಲ್ಲ. ಸರ್ವ ವ್ಯಾಪಿಯಾದ ಭಗವಂತನ ದೇವಸ್ಥಾನಗಳನ್ನೂ, ಪುರೋಹಿತರನ್ನು ಶುದ್ಧಿ ಮಾಡುವುದು ಆ ಹೋರಾಟದ ಕ್ಷೇತ್ರಗಳಲ್ಲಿ ಕೋರಿಬಂದ ಗುರುಗಳು ಹಿನ್ನಲೆಯನ್ನು ಎದುರಿಸಿ ನೋಡಿದರು. ಹಿಂದೂಸ್ಥಾನವು ಸ್ವರಾಜ್ಯ ಆತ್ಮಿಕ ಏಕತೆಯನ್ನು ಪುನಃ ಬೋಧಿಸಿದರೆ ಜನಾಂಗಗಳು ಪ್ರಾಚೀನದ ಅನುಕೂಲತೆಗಾಗಿ ಹೋರಾಡುವುದನ್ನು ಬಿಟ್ಟು ದೇವರ ಹೆಸರಿನಲ್ಲಿ ಒಂದಾಗುವರು.

ನಾನು ಪೂರ್ವದ ದೀಕ್ಷಾ ರೋಹಕ್ಕೆ ಸೇರಿದವಳು. ನನ್ನನ್ನು ಹಿಂದೂ ಸಮಾಜಕ್ಕೆ ಸೇರಿಸಿಕೊಂಡದ್ದು ಒಟ್ಟು ಪ್ರಪಂಚವನ್ನೇ ಹಿಂದೂ ಧರ್ಮಕ್ಕೆ ತಿರುಗಿಸುವ ಕಾಲದ ಪ್ರಾರಂಭವಾಗಲಿ. ಒಟ್ಟು ಪ್ರಪಂಚವು ಹಿಂದೂ ಧರ್ಮಕ್ಕೆ ತಿರುಗುವ ಕಾಲ ಬಂದಲ್ಲ ಒಂದು ದಿನ ಬಂದೇ ಬರುತ್ತದೆ. ಸನಾತನ ಧರ್ಮವು ಬೇರೆ ಜಾತಿಯವರನ್ನು ತನ್ನ ಜಾತಿಗೆ ತಿರುಗಿಸಿಕೊಳ್ಳುವ ಪದ್ಧತಿಯನ್ನು ಇಟ್ಟುಕೊಂಡಿಲ್ಲ. ಅದರ ತೀರ್ಮಾನ ಯೇ ತನ್ನ ಪೂರ್ವದ ಧರ್ಮಕ್ಕೆ ಹಿಂತಿರುಗಿ ಬರುತ್ತೇನೆನ್ನುವಾಗ ಸೇರಿಸಿಕೊಳ್ಳುವುದು ಮನುಧರ್ಮಕ್ಕೆ ಸಂಬಂಧಿಸಿದ್ದು ಇದೆ. ಶಾಸ್ತ್ರವನ್ನು ಮಾಡಿದವರು ಸಾವಿಲ್ಲದಿರುವಿಕೆಯನ್ನು ತಿಳಿದು ಮಾಡಿದ್ದಾರೆ. ಅನಂತರದಲ್ಲಿ 5000 ವರ್ಷ ಹಿಂದೆ ಬಿಟ್ಟ ಕ್ರಮ ಬರುವುದಿಲ್ಲ. ಇದರ ಶಾಸ್ತ್ರಗಳನ್ನು ಅರ್ಥಮಾಡಿದವರು ತನ್ನ ಮೂಲಗಿರುವ ಅಡೆಗೆ ಸೇರಿದವರಾಗಿಲ್ಲ.

ಆದ್ದರಿಂದ ನಾನು ನಿಮ್ಮ ಸಂಗಡ ಜನವರಿ 2 ರಲ್ಲಿ ಅರ್ಧ ದಿನ ಉಪವಾಸ ಮಾಡುವುದರ ದೇವಸ್ಥಾನಗಳ ಶುದ್ಧಿಗಾಗಿ ಜನರ ಮನಸ್ಸನ್ನು ಮಾಡುತ್ತಲು ನೀವು ಉಪವಾಸ ಮಾಡುವಾಗ ಒಂದೇ, ಆಗ ಉಪವಾಸವನ್ನು ಕೈಕೊಳ್ಳುತ್ತೇನೆ. ನಿಮ್ಮ ವ್ಯಾರ್ಥನೆಯಿಂದ ಪ್ರಪಂಚದ ಎಲ್ಲಾ ಕಡೆಗಳ ಮೇಲ್ಜಾತಿಯ ಮನಸು ಒಂದಾಗಲಿ. ನಿಮ್ಮ ಜೀವನವನ್ನು ಸುಧ್ವ ನಡುವವರು ಅನುಸರಿಸುವಂತೆಯೇ, ನಿಮ್ಮ ಸತ್ಯವನ್ನು ನಿಮ್ಮ ಸ್ನೇಹಿಗರು ಅನುಸರಿಸುವಂತೆಯೇ ಅಮೇರಿಕಾದ ಬಿಳೇ ಜನರ ಮನಸು ಕಪ್ಪು ಜನರ ಕಡೆಗೆ ತಿರುಗಲಿ. ಆಗ ಪ್ರಪಂಚದ ಬೇರೆ ಬೇರೆ ಜನರೆಲ್ಲಾ ಒಂದಾಗಿ ಸುಖವಾಗಿರಲಿ.

ಅಸ್ಪೃಶ್ಯನು ಯಾರು?

ಅನಸ್ಪೃಶ್ಯನೇ ಕರಣ್ಯವಾದ ಸಹ.

(ಲೇಖಕ—ಬಿ. ಗಣಪಯ್ಯ.)

ಅಸ್ಪೃಶ್ಯನ್ಯಾರು? ಅಸ್ಪೃಶ್ಯನು ಅಸ್ಪೃಶ್ಯನೇ. ಅವನೇನು ಮನುಷ್ಯನೋ, ಮೃಗವೋ, ದೇವತೆಯೋ, ಗಂಧರ್ವನೋ ಪದಾರ್ಥವೋ? ಅಲ್ಲ. ಅಲ್ಲವೋ? ಹೌದು. ಎಲ್ಲವೂ ಹೌದು, ಸರಿ. ಹಾಗೆ ಹೇಳಲು ಸುಲಭ. ಅಸ್ಪೃಶ್ಯನೆಂದರೆ ಎಲ್ಲವೂ ಅಲ್ಲ, ಎಲ್ಲವೂ ಹೌದು, ಈ ತರ್ಕ ಗಂಟಿನಿಂದ ಬಿಡಿಸಿ ಒಂದು ಮಾತು ಹೇಳಿ. ಅವನಿಗೆ ಬೇರೆ ಹೆಸರುಗಳಿವೆಯೋ? ಇವೆ. ಬೇಕಷ್ಟಿವೆ; ಕೇಳಿ. ಅವನ ಹೆಸರು ಅಸ್ಪೃಶ್ಯ. ಪಿತೃ ಮಾತೃವೆಂಬುವ ಅವನಪ್ಪ ಇಟ್ಟದ್ದು, ಅವನಮ್ಮ ಇಟ್ಟದ್ದು, ಪರಸ್ಪರ ಸಹಾಯ. ಅವನ ಪತ್ನಿ ನಾಮಕರಣ ಮಾಡಿದ್ದು, ಸಹ ರಕ್ಷಕ. ಅವನ ಧರ್ಮಪಿತನು ಕರೆದದ್ದು ಬೇರೆ—ಸೇವಕನಾದ. ಹೀಗೆ ಇನ್ನೂ ಎಷ್ಟೋ ಅವನ ಹೆಸರುಗಳಿವೆ. ಅದರ ಅಸ್ಪೃಶ್ಯನ ಅಪ್ಪನ ಹೆಸರೇನು. ವಿವೇಕ. ನಾನಾ ಸಾಧನೆಗಳಿಂದ ಅವನಪ್ಪನ ಹೆಸರು. ಇನ್ನು ಪತ್ನಿಯ ಹೆಸರೆಂದರೆ, ಶಕ್ತಿ ದೇವಿ. ಅಸ್ಪೃಶ್ಯನ ಮಾತೃವಿನ ಹೆಸರು ಕೇಳುವಿರೇ? ಕೇಳಿ, ಗಂಡು ಮತ್ತು ಹೆಣ್ಣು ಸಂತಾನ. ಧೈರ್ಯ, ಉದ್ಯೋಗ, ಮಿತವ್ಯಯ, ದೃಢನಂಬಿಕೆ, ಇತ್ಯಾದಿಗಳು. ಹೆಣ್ಣು ಮಕ್ಕಳು: ಸಹನೆ, ಸುಶೀಲತೆ, ಪ್ರೀತಿ, ವಿಶ್ವಾಸ, ಕಳಕಳಿ, ಉದಾರತೆ, ಉಪಕಾರಬುದ್ಧಿ ಮತ್ತು ಚಾತುರ್ಯತೆ. ಇವನನ್ನು ಇವನ ಮಕ್ಕಳು. ಇನ್ನು ಪತ್ನಿಗೆ ವೈರಿಗಳಿರುವರೇ? ಇದ್ದರೆ ಇವರ ಶತ್ರುಗಳು ಯಾರು, ದಾಯಾದಿಗಳು? ಅವರ ಹೆಸರೇನು? ವಾಸಸ್ಥಳವೆಲ್ಲಿ? ಅಸ್ಪೃಶ್ಯನ ವಾಸಸ್ಥಳ, ಅನಂತಾಕಾಶ. ಅವನ ದಾಯಾದಿಯರು ದೊಡ್ಡವರು. ದಾಯಾದಿ ಎಂದರೆ ಅಸ್ಪೃಶ್ಯನ ಚಿಕ್ಕಪ್ಪ. ಅವನ ಹೆಸರು ಅವಿವೇಕ; ಚಿಕ್ಕಮ್ಮ ಅದರ ಅವಿವೇಕನ ಪತ್ನಿ ಅಹಂಕಾರ. ಸುಗ್ರೀವ ದುರಹಂಕಾರ. ಇವರಿಗೆ ಜಾತಿಬೇಧವೆಂಬ ಮಗನು ಹುಟ್ಟಿದ್ದಾನೆ. ಈತನಿಗೆ ತನ್ನ ಪುತ್ರ ಸುತನ ಮನಸ್ಸು ಕೆಟ್ಟಿದ್ದವನು. ಅವನ ಹೆಸರು ಕೇಳುವಿರಾ? ಆಮ್ಮಾ. ಯಾವ ಯಾವ ಜಾತಿಗಳೆಂದರೆ ನ್ಯಾಯವೆಂಬ ಶಾಸ್ತ್ರವನ್ನು ಎಳೆದು ಬಂದವನು. ಕೇಳಿ, ಗಂಡು ಮಕ್ಕಳು: ಸೋಮಾರಿತನ, ಕಳವು ಸ್ವಾರ್ಥ, ಮತ್ಸರ, ವೈಷಮ್ಯ, ದ್ವೇಷ, ಕ್ರೌರ್ಯ, ದುರಾಗ್ರಹ, ನಿಂದಕತ್ವ ಇತ್ಯಾದಿ. ಹೆಣ್ಣುಮಕ್ಕಳು ಎಂದರೆ ಅವರು ಎಂದು ಗಂಡು ಮಕ್ಕಳ ನಾಲಿಗೆ ಹೊರು ಬೇರೆ ನಾಲ್ಕು. ದುರಾಶೆ, ದುರ್ಬಲತೆ, ಹಾಹಾಕಾರ, ಭೀಕೃತ್ಯ, ನಿರಾಶೆ, ಇವರಲ್ಲದೆ ಮತ್ತು (ಹೆಸರು ಗೊತ್ತಿಲ್ಲ) ಎಂದವರು ಜನ. ಅವರೆಲ್ಲರು ಅಸ್ಪೃಶ್ಯನ ವಾಸಸ್ಥಳದ ಅವನ ಗಡಸಲ್ಲಿ, ತಾನೇನು ತನ್ನ ಕೃತಿ ಹೃದಯದಲ್ಲಿ ಸಕಲ ವಿಷಯ. ಮಕ್ಕಳ ಮನಸ್ಸಿನಲ್ಲಿ ಸರ್ವದಾ ಅವರ, ಸುಗುಣಿಯ ಹೃದಯದಲ್ಲಿ ಸ್ವಪ್ನಾವಸ್ಥೆ, ವಿವೇಕಿ ವರ್ಗದಲ್ಲಿ ಉಪವಾಸ, ನೆನೆಯುವವರ ಮನದಲ್ಲಿ ನನವಾಸ. ಇವರನ್ನು ಭೀತಿಕಕ್ಕವರು ಅದೇ ತವನ ದಾಯಾದಿ ವರ್ಗದವರೇ. ಅಸ್ಪೃಶ್ಯನ ಅಧಿಕೃತಿಯಲ್ಲಿ ಈ ದಾಯಾದಿಗಳು ವಿರೋಧಿಗಳು. ಅಸ್ಪೃಶ್ಯನು ಏನೇನು ಮಾಡುತ್ತಿರುವನು? ಏನು ತೊಂದರೆ ಪಡುತ್ತಾನೆ? ಅದರಿಂದಾಗದ ಕೆಲಸಗಳೇ ಇಲ್ಲ. ಕೇಳಿದವನಿಗೆ ಕೇಳಿದ್ದನ್ನು, ಕೇಳಿದ ಕಡೆ, ಕೇಳಿದ ಸಮಯ, ಕೇಳಿದಷ್ಟನ್ನು, ಪೂರೈಸಿಕೊಳ್ಳುವ ಕೇಳಿದ ನಿವಿದ ಕೊಡುವ ಸಾಮರ್ಥ್ಯವು ಇವನಿಗುಂಟು. ಪತ್ನಿ ಏನೂ, ಏನು ಸತಕಲೆ, ಏನು ಶಕ್ತಿ. ಅವನ ಅಂಥ ಧೀರನೇ? ನೆಂಟರಲ್ಲವೇನು. ಅಸ್ಪೃಶ್ಯನು ಧೀರನು, ವೀರನು, ಶೂರನು, ಕರ್ಮನು, ಸಾಹಸು, ಉದಾರನು, ಉಪಕಾರನು. ಹಾಗಾದರೆ ಏನೇನನ್ನು ಮಾಡಿದನು? ಏನೇನನ್ನು ಮಾಡುತ್ತಿರುವನು, ಮಾಡುತ್ತಿದ್ದಾನೆ. ಇನ್ನೂ ಮಾಡುವವನಾಗಿದ್ದಾನೆ. ಅವನನ್ನು, ಆಗುತ್ತಿರುವುದು, ಆಗುವುದು ಎಲ್ಲವೂ ಅವನ ಕಾರ್ಯವಲ್ಲವೆ? ಕೇಳಿರೇ? ಕಷ್ಟ, ನಷ್ಟ, ಭಯಗಳು, ಅಸ್ಪೃಶ್ಯನ ನಿನ್ನ ಪ್ರಭಾವವು ನಮ್ಮ ದೊಡ್ಡ ಭೂಮಿಯಿಂದ ಭಾರತ ಖಂಡದ ಕೋಣೆಯೊಳಗೆ ಮೇಲೆ ಆದುದಿಗೆ ಏನಾಯಿತೆ? ಒಗ್ಗಟ್ಟಿಲ್ಲದ ಯುಗ್ಗಳನ್ನು ನನ್ನು ಮಕ್ಕಳ ತಿಂತರವಾಗಳೊಳಗೆ ಶ್ರೇಣಿಗ ನುಗ್ಗುವ? ನೋಡಿರಿ, ಇವನು ಸ್ಪೃಶ್ಯ, ಇವನು ಅಸ್ಪೃಶ್ಯ ಈ ತಮೋಮಯ, ಇವನಿಗೆ ಸ್ಪರ್ಶ, ಮತ್ತು ಇಷ್ಟ ಚೌಕ್ಕ, ಮಗನಗೆ ಹಿತ. ಈ ಭಸ್ಮಗಳಿಗೆ ನಿನ್ನ ಈ ದಾಯದಿ ಚಿಕ್ಕಪ್ಪನೇ ಏರಣನಲ್ಲವೇ? ಪರಜಾತ್ಮಗಳಲ್ಲಿ ಏನಂತು ಧನ್ಯನಾಗಿದ್ದೀಯೋ ಆತನೇ ಪಸುಷ್ಕೃತ ಮತ್ತು ನಿನ್ನ ಚಿಕ್ಕಪ್ಪನು ಮನನಾಶಕೀಯು ಇದುವರ. ಇವರ ಈಗಾಗಲೇ ಆ ವಾಯದಿಯು ಇಲ್ಲಿಂದಲೇ ಗಂಟು ಮಟ್ಟಿ ಕಟ್ಟಿದ ಗತಿಯು ಮಿತ್ತದ್ದಾನೆ. ಜೇಷ್ಠರವರು ಜೋಡು, ಸುಭಿಕ್ಷವಾಗ ನಡೆ ನಡೆ ಬೇಗನೆ, ಇತ್ತ ಬಾರದವ ಬೇರೆ ವನೆ ಇಲ್ಲ ನೋಡು. ನನ್ನ ಪುಣ್ಯಭೂಮಿಯಾದ ಈ ಅರ್ಯಾವರ್ತದ ಹೆಸರಿನ ಶಂಕರನ ವಾಯುದೆ ಈ ದೇಶ ಮುಗಿಸುತ್ತ ಬಂದ. ಇಂಥ ತರ ಇದ್ದ ಮಹಾತ್ಮನು ಉದ್ಧರಿಸುವ ಈಗ ಇಲ್ಲಿ ಅತನ ಜಾತಿಗೆ ಮನಸ್ಸು ಗೆದೆಹಿದ ನನ್ನ ಮತ್ತು ನಿನ್ನ ಪತ್ನಿ ಪುತ್ರನ ತಾಳು ಹೊಟ್ಟ ಹೊರ. ಆಗಲೇ ಅಸ್ಪೃಶ್ಯನ ಪೂಜೆಗಾಗಿ ಹೊಣೆ ನಾನು ಎಲ್ಲ ಕಡೆಯು ಪೂಜಿಸಲು ಬೇಡವೆ ನಿನ್ನ ಭಕ್ತಿಯೂ ನಾಡಲ್ಲಿ ಬಾರ ಅಧಿಕವಾಗಿ ನೀನು ಕುಡುಗುವೊಂದು ನಿನ್ನ ಕೃತಜ್ಞತೆಯಿಂದ ದಿನದ ಮಲ್ಲಿವೇ! ಅದರಿಂದ ಪ್ರತಿ ಧರ್ಮಗಳಲ್ಲಿಯೂ ನೀನು ನಿನ್ನ ಮಹಿಮೆಯನ್ನು ಪ್ರಕಾಶಿಸು.

ಪ್ರಕಟಣೆ.

ಕೊಡಗು ಡಿಸ್ಟ್ರಿಕ್ಟ್ ಸಹಕಾರ ಬ್ಯಾಂಕ್,
ಮಡಿಕೇರಿ—೧೯೩೧ ಜೂನ್ ೩೦ನೇ ತಾರೀಖಿನ
ಅಂದಾಜು ಸಂಕ್ಷೇಪವಾಗಿ.
(ಸ್ಥಾಪಿತವಾದದ್ದು 1922ರಲ್ಲಿ)

		ರೂ.
ಶೇರ್ ಬಂಡವಾಳ	—	50,000— 0—0
ವಸೂಲಾದ ಶೇರ್ ಮೊಬಲಗು	—	27,670— 0—0
ಜನರಿಂದ ಠೇವಣಾತಿ	—	23,15(9—13—9
ವಸೂಲಾದ ಕ್ಷೇಮನಿಧಿ	—	45,868—14—0

ಈ ಬ್ಯಾಂಕಿನಲ್ಲಿ ಕೊಡಗು ದೇಶದ ಸಹಕಾರ ಸಂಘಗಳಿಗೆ ಸಾಲ ಕೊಡಲಾಗುತ್ತದೆ.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ತಕ್ಕೊಂಡವರ ಕೊಡಗು ಡಿಸ್ಟ್ರಿಕ್ಟ್ ರಿಜಿಸ್ಟ್ರಾರವರು ಶಿಕ್ಷ ಅನುಮತಿಯಿಂದ ನೋಡುತ್ತಾರೆ.

ಪ್ರೆಸಿಡೆಂಟರು, | ಡೈರೆಕ್ಟರ್
ಪಟ್ಟಮಾಡ ದೇವಯ್ಯನವರು, | ಮನೆಯಪ್ಪಂಡ ಬೆಳ್ಯಪ್ಪ
ರಾವ್ ಬಹದ್ದೂರ್. | ನವರು.

ಸೆಕ್ರೆಟರಿ

ಸಿ. ಯು. ವೆಂಕಟಪ್ಪಯ್ಯನವರು, ಬಿ.ಎ., ಬಿ.ಎಲ್.
ತಾರೀಖು 1—7—1932.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲಿ ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿದೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿದೆ.

ಏಜೆಂಟರುಗಳು.

ಕೊಡಗಿನ ಎಲ್ಲಾ ಭಾಗಗಳಿಗೆ—ಮೆ. ಮುಂಡಂಡ ಯಂ. ವಿಠ್ಠಪ್ಪನವರು.

ಉತ್ತರ ಕೊಡಗಿಗೆ ಮೆ. ಚಂಗಿರ ಮಾದಯ್ಯನವರು,

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮುಂಡಂಡ ಸೋಮಯ್ಯನವರು, (ಪಾಲಿಭಂಡಾರ.)

ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಪೂಣಚ್ಚನವರು,

ಪೊನ್ನಂಪೇಟೆ ನಾಡು—ಮೆ. ಪಿ. ಜಿ. ಮುತ್ತಮ್ಮಯ್ಯನವರು, ಮತ್ತು ಅಜ್ಜಮಾಡ ಪಿ ಕಾರ್ಯಪ್ಪನವರು,

ಮಡಿಕೇರಿ & ತಿತಿಮತ್ತಿ—ಮೆ. ಜಿ. ಪೂವಮ್ಮಯ್ಯನವರು,

ಕುಂಬಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ದೇವಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮ್ಯಾನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿ ದೊಡ್ಡ ಪುಸ್ತಕಗಳಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಸಲು ಅವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಖರಾರು ಫಾರಮುಗಳೂ, ತಮ್ಮ ನುಂಬೂರಿನ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಖರಾರು ಫಾರಮುಗಳೂ, ಸ್ಪೆಷಲ್ ಲೀಸ್ ಖರಾರು ಫಾರಮುಗಳೂ, ಲೆಡ್ಜರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ದವಸ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು ಬೇರೆ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಮತ್ತು ಬೇರೆಲ್ಲ ಅಗತ್ಯವುಳ್ಳ ಅಚ್ಚು ಕೆಲಸಗಳೂ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮ್ಯಾನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. | ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.
ವಿಮೆದಾರರಿಗೆ ಕೊಟ್ಟದ್ದು—3291 ಜನರಿಗೆ 81 ಲಕ್ಷ ರೂ. | ಪಾಲಿಸಿ ಆಧಾರಿಗೆ ಸಾಲ—8013 ಜನರಿಗೆ 37 ಲಕ್ಷ ರೂ.
ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮೊಬಲಗಿನ 1,78,322 ಜನರಿಗೆ 58 ಕೋಟಿ ರೂ. ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ರಷ್ಟರ ವಿಸ್ತರದ ಕಮ್ಮಿ ಖರ್ಚಿನಲ್ಲಿಯೇ ನಡಸಲ್ಪಟ್ಟಿದ್ದಾಗಿದೆ. ಈ ದೊಡ್ಡ ಇಂಡಿಯನ್ ಕಂಪೆನಿಯು ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚಿನ ಪ್ರೋತ್ಸಾಹವನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಏಕೆಂದರೆ ಇದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಡಿಸ್ಟ್ರಿಕ್ಟ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್ ಬೆಂಗಳೂರು
ಅಥವಾ ಇನ್ಸ್‌ಪೆಕ್ಟರೇಟ್ ಆಫೀಸು, ಮಡಿಕೇರಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರಾ	ಕಲ್ಕತ್ತಾ	ಕೊಲಂಬೋ	ನಾಗಪುರ	ರಂಗೂನು
ಅಹ್ಮದಾಬಾದು	ಕೊಲಂಬೋ	ಲಾಹೋರ್	ನಾಗಪುರ	ರಾವಲ್ಪಿಂಡಿ
ಅಜ್ಮೀರ್	ಢಾಕ್ಕಾ	ಲಕ್ನೋ	ಪಾಟ್ನಾ	ಸುಕ್ಕೂರು
ಅಲ್ಲಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಡೌಲಗಾಸ್	ಮಂಡಲೆ	ರಾಯಪುರ	ತಿರುವೆಂಡ್ರಮ್
ಭೋಪಾಲ್	ಕರಾಚಿ	ಮಡಿಕೇರಿ	ರಾಂಚಿ	ವಿಶಾಖಪಟ್ಣ [52—39

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
52—46 **ಗಿರಿಗಾಂವ, ಮುಂಬಯಿ.**

ಕಾರ್ಡು ಬರೆದರೆ ಆಗನ
ಕ್ಯಾಟಲಾಗು ಮಫಿಯಾಗಿ
ಕಳುಹಿಸಲ್ಪಡುವುದು.



ಕೋವಿಗಳು, ಕತ್ತಿಗಳು, ಬಂದೂಕುಗಳು, ತೋಟೆಗಳು, ಕೀಪ್ಲುಗಳು, ಮದ್ದು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS LTD.
Largest Importers of Firearms and Ammunitio[n]
Cheapest priced firm in India,
26—12 **210 Abdul Rehiman Street, BOMBAY.**

Printed & published by P. I. Belliappa at "Kodagu" Press Merca[ra] for "Kodagu" Ltd.

Reg. No. M. 1556.
"If not delivered please return to
"KODAGU" OFFICE MERCARA.

ಕೊಡಗು.

[illegible]
ವಾರ್ಷಿಕ ಚಂದಾ ರೂ. ೩—೮—೦.
[illegible]
ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೨ | ಮಡಿಕೇರಿ, ಸನ್ ೧೯೩೭ನೇ ಇಸವಿ ಡಿಸೆಂಬರ್ ತಾರೀಕು ೩ ನೇ ಶುಕ್ರವಾರ. | ಸಂಚಿಕೆ ೨೭

SARI-PIN.

EAR-RINGS.
(Thodus)
Cut-rubys Rs. 25 to 50
With diamond in centre Rs. 80 to 120

BRACELETS.
Gold Rs. 10
Set rubys forming any letter Rs. 12

NECKCHAINS.

NOSE-RINGS.
Diamond in small size of best quality Rs. 35 & upwards according to size.

MARRIAGE PRESENTATIONS

Attractive and inexpensive articles ready in stock. Prompt execution. Details on enquiry free with catalogue. Numerous customers in Coorg thoroughly satisfied with reliable service. Testimonials pouring in. Silver Guindys, Photo lockets, Dimond nose-screws cut-ruby ear-rings, etc., etc., etc. in all prices. Very attractive. Prices most moderate.

Estimates free on enquiry.

Telegrams: 'PRECIOUS.'

CATALOGUE ON ENQUIRY.

V. Subramaniaier Jeweller.

Designs free on enquiry.

Telephone: 3145.

Post Box 423, Triplicane, P. O., MADRAS.

52—2



26—23

ಜನರಲ್ ಅಶ್ಯೂರೆನ್ಸ್ ಸೊಸೈಟಿ.

ಅಜಮೀರ್.

ನಮ್ಮ ಆಯವ್ಯಯದ ಪಟ್ಟಿಯೇ ನಮ್ಮ ಅಭಿವೃದ್ಧಿಯನ್ನು ವ್ಯಕ್ತಗೊಳಿಸುತ್ತದೆ.

ವರ್ಷ	ಮಾಡಲ್ಪಟ್ಟ ವಹಿವಾಟು	ಮಾಡಲ್ಪಟ್ಟ ಸಂಪಾದನೆ	ಖರ್ಚಿನ ಪ್ರಮಾಣದ ಶೇಕಡ
1911	46,248	49,44?	82.9
1921	2,92,627	6,53,350	43.2
1931	12,50,000	4?,00,000	28.2

ಬೋನಸ್ಸು.

ಕಡೆಯ ಸಲ ದೊರಕುವ ಜೀವಾವಧಿ ಪಾಲಿಸಿಗಳ ಮೇಲೆ ವರ್ಷ ಒಂದಕ್ಕೆ ಶೇಕಡ 22½

ಚೆನ್ನಾಗಿ ಕೆಲಸಮಾಡಿ ಅಭಿವೃದ್ಧಿ ಸ್ಥಿತಿಯಲ್ಲಿರುವ ಈ ಸೊಸೈಟಿಯಲ್ಲಿ ಏನು ಮಾಡಿ ಕಡಿಮೆ ಪ್ರೀಮಿಯಂ ಪಾವತಿ ಮಾಡುವ ಸೌಲಭ್ಯ ಹೊಂದಿ ಅಥವಾ ಈ ಕಂಪೆನಿಯ ಪರವಾಗಿ ಕೆಲಸಮಾಡಿ ಉತ್ತಮ ಕಮಿಶನ್ ದಿಂದ ಪ್ರಯೋಜನ ಹೊಂದಿ.

ಹೆಚ್ಚು ವಿವರಗಳಿಗೆ ಈ ವಿಳಾಸಕ್ಕೆ ಬರೆಯಿರಿ:—

ಎ. ರಾಮಚಂದ್ರರಾವ್,
ಸುಪರಿಂಟೆಂಡೆಂಟ್,
ಮಿಂಟೋ ಅಸ್ಪತ್ರೆ ಬಳಿ,
ಬೆಂಗಳೂರು.

52—32

EMPIRE OF INDIA
Life Assurance Company, Limited.

Established 1897.

INTERIM BONUS on Policies becoming claims before 1st March 1934 INCREASED TO

Rs. 16 per annum per Rs. 1000/- Assured on Whole Life Assurances.

and

Rs. 14 per annum per Rs. 1000/- Assured on Endowment Assurances.

Head Office:—
Empire of India Life Building,
Bombay

Branch Office:—
152/3, Commercial Street,
Bangalore.

52—9

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ]

ವ್ಯೆಸೂರು ವಿಷಯ.

ಕೊಡಗು ವ್ಯೆಸೂರಿಗೆ ಸೇರಬಹುದೋ ಎಂತ ಯೋಚಿಸುತ್ತಿರುವ ಈ ಕಾಲದಲ್ಲಿ ವ್ಯೆಸೂರಿನ ವಿಷಯ ಮೂರನೇಯವರು ಕೊಡುವ ಅಭಿಪ್ರಾಯಗಳು ವಾಚಕರಿಗೆ ರುಚಿಸಬಹುದು. ಪಾರ್ಲಿಮೆಂಟಿನಲ್ಲಿ ಲೇಬರ್ ಪಾರ್ಟಿಯ ಮೆಂಬರಾದ ಮಿ. ಮೋರ್ಗನ್ ಜೋನ್ಸ್‌ರು ಬೆಂಗಳೂರಲ್ಲಿ ಕಳೆದ ವಾರ ಮಾಡಿದ ಕೆಲವು ಉಪನ್ಯಾಸಗಳಿಂದ ಆರಿಸಿದ್ದನ್ನು ಇಲ್ಲಿ ಕೊಡುತ್ತೇನೆ.

"ಇನ್ನು ಮುಂದೆ ಹಿಂದೂಸ್ಥಾನದಲ್ಲಿ ಸ್ಥಾಪನೆಯಾಗಲಿರುವ ಫೆಡರೇಶನಲ್ಲಿ ಬ್ರಿಟಿಷ್ ಇಂಡಿಯಾದ ಪ್ರಜೆಗಳಿಗೆ ದೊರಕುವ ಹಕ್ಕುಗಳನ್ನೇ ದೇಶೀಯ ಸಂಸ್ಥಾನಗಳ ಪ್ರಜೆಗಳಿಗೂ ರಾಜರುಗಳು ಕೊಡಬೇಕಾಗುತ್ತದೆ. ಆದರೆ ಬ್ರಿಟಿಷ್ ಇಂಡಿಯಾದಲ್ಲಿ ಸ್ಥಾಪಿತವಾಗುವ ಪ್ರಜಾಪ್ರತಿನಿಧಿ ಸರಕಾರ ಕ್ರಮವನ್ನೇ ದೇಶೀಯ ರಾಜರುಗಳೂ ಅನುಸರಿಸಬೇಕಾಗುತ್ತದೆ. ಈಗಾಗಲೇ ಪ್ರಜಾಪ್ರತಿನಿಧಿ ಸಂಸ್ಥೆಗಳನ್ನು ಸ್ಥಾಪಿಸಿರುವ ರಾಜರುಗಳಿಗೆ ಬ್ರಿಟಿಷ್ ಇಂಡಿಯಾದ ಮೇಲ್ಪಂಕ್ತಿಯನ್ನು ಅನುಸರಿಸಲು ಏನೂ ಕಷ್ಟವಿಲ್ಲ. ಆದರೆ ನಿರಂಕುಶ ಪ್ರಭುತ್ವ ನಡೆಸುತ್ತಿರುವ ರಾಜರುಗಳು ಪ್ರಜಾಪ್ರತಿನಿಧಿ ಸರಕಾರವನ್ನು ಸ್ಥಾಪಿಸಬೇಕಾದರೆ ಬ್ರಿಟಿಷ್ ಸರಕಾರವೂ ಇಂಡಿಯಾ ಸರಕಾರವೂ ಕುಂಜಾ ಮಧ್ಯಪ್ರವೇಶಿಸಬೇಕಾಗುತ್ತದೆ."

ವ್ಯೆಸೂರು ದಿವಾನರಾದ ಸರ್ ಮಿರ್ಜಾರವರು ದುಂಡುಮೇಜು ಪರಿಷತ್ತಿಗೆ ಹೋಗಿದಲ್ಲಿ ಅತ್ಯಂತ ಶಕ್ತಿವಂತರೆಂತಲೂ, ರಾಜಕೀಯ ಸುಧಾರಣೆಗೆ ಒಪ್ಪುವವರಾಗಿದ್ದಾರೆಂತಲೂ ಮುಂದಿನ ಫೆಡರೇಶನಲ್ಲಿ ಪ್ರಾಮುಖ್ಯ ಭಾಗತೆಗೆದುಕೊಳ್ಳತಕ್ಕವರಾಗಿದ್ದಾರೆಂತಲೂ ಹೇಳಿದರು.

"ಆರ್ಥಶಾಸ್ತ್ರ ತಿಳಿದವನಾಗಿ ನಾನು ಹೇಳುವುದೇನೆಂದರೆ—ಒಟ್ಟು ಬ್ರಿಟಿಷ್ ಇಂಡಿಯಾ ಮತ್ತು ದೇಶೀಯ ರಾಜ್ಯಗಳನ್ನು ನಾನು ನೋಡಿದ್ದರಲ್ಲಿ ವ್ಯೆಸೂರು ಅದಕ್ಕೆಷ್ಟು ಧನ್ಯವಾದದ್ದು ಮತ್ತು ಜಾಗ್ರತೆ ರೀತಿಯಿಂದ ನಡಿಸಲ್ಪಡುವಂಥದ್ದು ಬೇರೆ ಎಲ್ಲಿಯೂ ನೋಡಿಲ್ಲವೆಂತ ಹೇಳಲು ಏನೂ ಸಂದೇಹವಿಲ್ಲ." "ವಾಚಕ"

ಬಾಡಗ ಗ್ರಾಮದ ರಸ್ತೆ.

ಅಯ್ಯಾ,

ಈ ವಿಷಯವನ್ನು ಕುರಿತು ತಾ. 18—11—32 ರಲ್ಲಿ ಪ್ರಕಟವಾದ ಬಾತ್ಮಿಯಲ್ಲಿ ಕೆಲವು ನಿಜವಲ್ಲದ ಸಂಗತಿಗಳು ಕೂಡಿದ್ದವೆ. ಆದುದರಿಂದ ಅವುಗಳನ್ನು ತಿದ್ದುವ ಉದ್ದೇಶದಿಂದ ಈ ಕೆಳಗಿನ ಬಾತ್ಮಿಯನ್ನು ಬರೆದಿರುವದಾಗಿದೆ.

ನಾನು ಗ್ರಾಮದವರಿಂದ ತಿಳಿದ ಮಟ್ಟಿಗೆ ಹೀಗಿರುತ್ತೆ. ಸದರಿ ರಸ್ತೆಯನ್ನು ಕಳೆದ ವರ್ಷ ಸುರುಮಾಡುವಾಗ ಮೆ. ಕೇಕಡ ಐಯ್ಯಪ್ಪನವರೂ, (ದಿವಸ ಒಂದಾರರ ಪ್ರೆಸಿಡೆಂಟರು,) ಕುಂಜಿಲಿಯಂಡ ಪೊನ್ನಪ್ಪ ಪಟೇಲರೂ ಮುಂದಾಳಾಗಿ ಊರವರ ಸಹಾಯದಿಂದಲೂ, ದಿವಸದ ಒಂದಾರದಿಂದ 150—0—0 ರೂಪಾಯಿಗಳಿಂದಲೂ, ಕೇಕಡ ಐಯ್ಯಪ್ಪನವರು, ಡಿ. ಬೋರ್ಡಿಗೆ ಅರ್ಜಿ ಮಾಡಿದ ಮೇರೆ ಡಿ. ಬೋರ್ಡಿನಿಂದ 175—0—0 ರೂಪಾಯಿಗಳಿಂದಲೂ ಕೆಲಸ ಮಾಡಿಸಿದ್ದಾಗಿದೆ. ಈ ವರ್ಷವೂ ಸಹ ಕೇಕಡ ಐಯ್ಯಪ್ಪನವರೂ, ಮತ್ತು ಸಣ್ಣಂಗಟ್ಟಿರ ಚಂಗಪ್ಪನವರು ಸಹ ಮುಂದಾಳಾಗಿ ಊರವರ ಸಹಾಯದಿಂದ ಕೆಲಸಕ್ಕೆ ದಿವಸದ ಒಂದಾರದಿಂದ 55—0—0 ರೂಪಾಯಿ, ದೇವರ ಒಂದಾರದಿಂದ 50—0—0 ರೂಪಾಯಿ, ಡಿ. ಬೋರ್ಡಿನಿಂದ 42—0—0 ರೂಪಾಯಿ ಸಹ ಸೇರಿಸಿ ಕೆಲಸ ನಡಿಸಿದ್ದಾಗಿದೆ. ಮೆ. ಕೇಕಡ ಸುಬ್ಬಣ್ಣನವರೂ, ಕುಂಜಿಲಿಯಂಡ ಪೊನ್ನಪ್ಪನವರೂ ಈ ವರ್ಷ ಕೆಲಸಕ್ಕೆ ಆಗಲಿ, ಯಾವ ಎಸ್ಟಿಮೇಟುಗಳಿಗಾಗಲಿ ಒಂದವರಲ್ಲ. ಮತ್ತು ಕೇಕಡ ಅಚ್ಚಯ್ಯನವರು ಸತ್ತು ಸುಮಾರು ಹತ್ತು ವರ್ಷವಾಗಿರಬಹುದು. ಹಾಗಿರುವಾಗ ತಾ. 18—11—32 ರಲ್ಲಿ ಕೊಡಗು ಪತ್ರಿಕೆಯಲ್ಲಿ ಕೇಕಡ ಸುಬ್ಬಣ್ಣನವರು, ಕೇಕಡ ಅಚ್ಚಯ್ಯನವರು ಮತ್ತು ಕುಂಜಿಲಿಯಂಡ ಪೊನ್ನಪ್ಪನವರು ಸೇರಿದ್ದಾರೆಯೆಂಬದಾಗಿ ಬರೆದದ್ದು ನ್ಯಾಯವಲ್ಲ. ಕೆ. ಐ. ಪೊನ್ನಪ್ಪ.

[ಸೂಚನೆ:—ತಾ. 18—11—32 ರಲ್ಲಿ ಪ್ರಕಟವಾದ ಈ ಸಂಬಂಧದ ಬಾತ್ಮಿಯಲ್ಲಿ ಮೆ. ಕೇಕಡ ಐಯ್ಯಪ್ಪನವರು ಎಂಬುದರ ಬದಲು ಮೆ. ಕೇಕಡ ಅಚ್ಚಯ್ಯನವರೆಂದು ಕ್ಷಮಿಸಬೇಕು ತಪ್ಪಿನಿಂದ ಪ್ರಿಂಟಾದದ್ದಾಗಿದೆ.

ಸಂ. ಕೊ.]

ಕೊಡಗಿನ ಗಜೆಟೆಡ್ ಉದ್ಯೋಗಸ್ಥರು.

ಅಯ್ಯಾ,

ಕೊಡಗಿನ ಗಜೆಟೆಡ್ ಉದ್ಯೋಗಸ್ಥರ ವರ್ಗಾವರ್ಗಿ ಪಡೆಯುವಾಗಿಯೂ, ಅವರು ಕೊಡಗಿನಲ್ಲಿ ಮೂರೈದು ಇಪ್ಪತ್ತು ವರ್ಷಗಳ ವರೆಗೂ ಇರುವುದರಿಂದ ಕೊಡಗಿನ ಜನರ ಸ್ವತಂತ್ರ ಜೀವನಗಳಿಗೆ ಉಂಟಾಗುವ ಬಾಧೆಯನ್ನು ಕುರಿತೂ ಕೊಡಗಿಗೆ ಕೌನ್ಸಿಲ್ ಬಂದ ಆರಂಭದಿಂದಲೂ, ಕೌನ್ಸಿಲಿನಲ್ಲಿಯೂ, ಪತ್ರಿಕೆಗಳಲ್ಲಿಯೂ ಹಲವು ಹೊರಟಿರುವ ವಿಷಯವಾಗಿ ಸರಕಾರದವರಿಗೂ ಮತ್ತು ಸರ್ವರಿಗೂ ತಿಳಿದ ವಿಷಯವಾಗಿದೆ. ಗಜೆಟೆಡ್ ಉದ್ಯೋಗಸ್ಥರನ್ನು ಮೂರು ಯಾ ಐದು ವರ್ಷಕ್ಕೊಂದಾವೃತ್ತಿ ವರ್ಗಾಯಿಸುವ ತತ್ವವನ್ನು ಸ್ಥಳೀಕ ಸರಕಾರದವರು ಒಪ್ಪಿಕೊಳ್ಳದಿದ್ದರೂ, ಹಾಗೆ ವರ್ಗಾಯಿಸಲು ನೆವಾಂತ್ರಗಳೊಡನೆ ನ್ಯಾಯವಾದ ಒಪ್ಪಂದಕ್ಕೆ ಬರಲು ಸಾಧ್ಯವಿಲ್ಲವೆಂತ ಸರಕಾರದವರು ಹೇಳಬಹುದು. ಕೊಡಗು ಪ್ರತ್ಯೇಕವಾಗಿರುವಷ್ಟು ಕಾಲ ಹಾಗೆ ವರ್ಗಾವರ್ಗಿಯ ವಿಷಯ ಏರ್ಪಾಡು ಮಾಡುವದು ಸ್ವಲ್ಪ ಕಷ್ಟವಾಗಿದೆಯೆಂತ ಒಪ್ಪಿಕೊಳ್ಳಬಹುದು. ಆದರೆ ಅಂಥಾ ಉದ್ಯೋಗಸ್ಥರನ್ನು ಒಂದೇ ಸ್ಥಳದಲ್ಲಿಟ್ಟುಕೊಳ್ಳುವದರಿಂದುಂಟಾಗುವ ಹಾನಿಯನ್ನು ಕೆಲವು ಮಟ್ಟಿಗಾದರೂ ತಪ್ಪಿಸಲು ನಮ್ಮ ಸ್ಥಳೀಯ ಸರಕಾರದವರಿಗೆ ಖಂಡಿತವಾಗಿಯೂ ಸಾಧ್ಯವಿದೆ. ಕೆಲವರ ಅಭಿಪ್ರಾಯದಲ್ಲಿ ನಮ್ಮ ಉದ್ಯೋಗಸ್ಥರಿದ್ದರೆ ಒಳ್ಳೇದು, ಅವರಿಗೆ ನಮ್ಮ ಮೇಲೆ ಪ್ರೀತಿಯುಂಟು, ದಯೆಯುಂಟು ಎಂತ ವಾದಿಸಬಹುದು. ಆದರೆ ಅಂಥಾ ಪ್ರೀತಿಯನ್ನು ಅರ್ಧರ್ಕಾಕ ತೋರಿಸುವದು ಬಹಳ ಕಷ್ಟವಾಗಿದೆ. ಹಾಗೆ ಪ್ರೀತಿಯನ್ನೂ ದಯೆಯನ್ನೂ ಕೆಲವರಿಗೆ ತೋರಿಸಿದ್ದಾದರೆ, ಇನ್ನು ಕೆಲವರಿಗೆ ಅದು ಅನ್ಯಾಯವಾಗುವ ಸಂದರ್ಭವಿದೆಯೆಂತ ಸರ್ವರೂ ಒಪ್ಪತಕ್ಕದ್ದಾಗಿದೆ. ನಮ್ಮ ಸಿವಿಲ್ ಮತ್ತು ಜುಡಿಶಿಯಲ್ ಮತ್ತು ಪೋಲೀಸ್ ಇಲಾಖೆಯ ಗಜೆಟೆಡ್ ಉದ್ಯೋಗಸ್ಥರು ನಮ್ಮ ಕೊಡಗಿನವರೇಯಾದ್ದರಿಂದ, ಅವರಿಗೆ ನೆಂಟರಿಷ್ಟರೂ, ಇಷ್ಟ ಮಿತ್ರರೂ, ಆಸ್ತಿ ಪಾಸ್ತಿಗಳೂ ಸಹ ಇರುವಂಥದ್ದನ್ನು ಇಲ್ಲದೆ ಮಾಡುವದು ಬಹಳ ಕಷ್ಟ. ಈ ಸಂಬಂಧ ಮೇಲೆ ನಮ್ಮ ಗಜೆಟೆಡ್ ಉದ್ಯೋಗಸ್ಥರಿಗೆ ಅವರ ಉದ್ಯೋಗದ ಪ್ರತಿಯೊಂದು ಅಂಶದಲ್ಲೂ ಬೇರೆ ಯಾರ ಸಂಬಂಧವೂ ಸರ್ವರಿಗೂ ಒಪ್ಪುವಂತೆ ಕೆಲಸ ನಡಿಸುವದು ಮನುಷ್ಯನ ಸ್ವಭಾವಕ್ಕೆ ಮೀರಿದ್ದೆಂತ ಹೇಳಬೇಕಾಗಿದೆ. ಸದ್ಯದಲ್ಲಿ ಸರಕಾರದವರು ಇದರ ಕೊರತೆಯನ್ನು ಅರಿತು ಗಜೆಟೆಡ್ ಉದ್ಯೋಗಸ್ಥರನ್ನು ತಮ್ಮ ಸರ್ವಿಸ್ ತುಂಬಿದ ಕೂಡಲೇ ಪೆನ್ಶನ್ ಕೊಟ್ಟು ಕಳುಹಿಸುವುದು ನ್ಯಾಯವಾಗಿದೆ. ಮತ್ತು ನಮ್ಮ ಸರಕಾರದವರು ಕೊಡಗಿನ ಜನರ ಹಿತವನ್ನು ಬಯಸುವುದಾದರೆ, ಹಾಗೆ ಅದಷ್ಟು ತ್ವರಿತದಲ್ಲಿಯೇ ಪೆನ್ಶನ್ ಕೊಟ್ಟು ಕಳುಹಿಸುವುದು ಧರ್ಮವೂ, ಕರ್ತವ್ಯವೂ ಆಗಿದೆ ಅಲ್ಲದೆ ಇದೇ ವಿಷಯ ಕೌನ್ಸಿಲಿನಲ್ಲಿ ಚರ್ಚೆ ಒಂದಾಗ, ನಾಲ್ಕೈದು ವರ್ಷಗಳೊಳಗಾಗಿ ರಿಟಯರ್ ಆಗುವ ಉದ್ಯೋಗಸ್ಥರನ್ನೇ ಗಜೆಟೆಡ್ ಉದ್ಯೋಗಗಳಿಗೆ ನೇಮಿಸಿ, ಒಂದೇ ಕೆಲಸದಲ್ಲಿ ಬಹುಕಾಲ ಒಬ್ಬ ಉದ್ಯೋಗಸ್ಥನು ಇರುವುದರಿಂದುಂಟಾಗುವ ದೋಷಗಳನ್ನು ಹೋಗಲಾಡಿಸುವ ಏರ್ಪಾಡು ಮಾಡುವುದಾಗಿಯೂ ಸರಕಾರದವರು ಹೇಳಿದ ನೆನಪಿದೆ. ಆದರೆ ಸ್ಥಳೀಯ ಸರಕಾರದವರು ಕೆಲವು ಸಂದರ್ಭದಲ್ಲಿ ಗಜೆಟೆಡ್ ಉದ್ಯೋಗಸ್ಥರಿಗೆ ಒಂದು ವರ್ಷ, ಎರಡು ವರ್ಷ, ಸರ್ವಿಸ್ ತುಂಬಿದ ನಂತರವೂ (Extension) ಸರ್ವಿಸನ್ನು ಮುಂದರಿಸುವದನ್ನು ನಾವು ನೋಡುತ್ತಿದ್ದೇವೆ. ಹೀಗೆ ಒಂದೆರಡು ವರ್ಷ ಸರ್ವಿಸನ್ನು ಮುಂದರಿಸಲಿಕ್ಕೆ ಯಾವ ಕಾರಣವೂ ನ್ಯಾಯವಾಗಿ ಕಾಣುವುದಿಲ್ಲ. ಒಂದು ಉದ್ಯೋಗಕ್ಕೆ ಒಬ್ಬ ಮನುಷ್ಯನೇ ಕಾಯಂ ಆಗಿ ಯೋಗ್ಯನೆಂತ ತಿಳಿದುಕೊಳ್ಳುವುದು ತಪ್ಪು ಅಭಿಪ್ರಾಯ. ಮತ್ತು ನಮ್ಮ ಜನರ ಯೋಗ್ಯತೆಗೂ ತಕ್ಕ ಮರ್ಯಾದೆಕೊಟ್ಟಂತಾಗುವುದಿಲ್ಲ. ಅಥವಾ ಹಾಗೆ ಯೋಗ್ಯತೆ ಇರುವಂಥವರನ್ನು ಕೂಡಲೇ ದೊರಕಿಸಿಕೊಳ್ಳುವುದು ಸಾಧ್ಯವಿಲ್ಲದಿದ್ದರೆ ನೆರೆಪ್ರಾಂತ್ಯಗಳಿಂದಾದರೂ ಉದ್ಯೋಗಸ್ಥರನ್ನು ಬರಮಾಡಿಕೊಳ್ಳಬಹುದು. ಮತ್ತು ಹಾಗೆ ಬರಮಾಡಿಕೊಳ್ಳುವುದು ನಮ್ಮ ಸರಕಾರಕ್ಕೆ ಹೊಸ ವಿಷಯವಲ್ಲ. ಹೇಗೂ ಗಜೆಟೆಡ್ ಉದ್ಯೋಗಸ್ಥರಿಗೆ ಸರ್ವಿಸ್ ತುಂಬಿದವೂ ಸಹ ಪೆನ್‌ಶನ್ ಕೊಟ್ಟು ಕೂಡಲೇ ಕಳುಹಿಸದೆ ಸರ್ವಿಸನ್ನು ಮುಂದರಿಸುವ (Extension) ನಮ್ಮ ಸರಕಾರದ ನೀತಿಯನ್ನು ಕೊಡಗಿನ ಜನಸಮುದಾಯವು ಕುತೂಹಲವಾಗಿ ನಿರೀಕ್ಷಿಸುತ್ತಿದೆಯೆಂತ ಸರಕಾರದವರು ಖಂಡಿತವಾಗಿಯೂ ಮರೆಯಬಾರದು. "ದೇಶಹಿತೈಷಿ"

ಪೊನ್ನಂಪೇಟೆಯ ಪತ್ರ.

ಈ ಊರಿಗೆ ಈಗಲೇ ಒಂದು ಗ್ರಾಮಪಂಚಾಯಿತಿ ಸಭೆ ಆಗಿದೆ. ಈ ಸಭೆಗೆ ಎಂಟುಮಂದಿ ಪಂಚಾಯಿತರು. ಇವರಲ್ಲಿ ನಾಲ್ಕು ಜನ ಹಿಂದುಗಳು, ನಾಲ್ಕು ಜನ ಮಹಮ್ಮದೀಯರು; ಅಂತೂ ಹಿಂದೂ ಮುಸಲ್ಮಾನರು ಒಗ್ಗಟ್ಟು. ಆದರೆ ವರ್ಷದ ಆರು ತಿಂಗಳು ನಮ್ಮ ಸಹೋದರರಾದ ಮಾಪಿಳ್ಳೆ ಮುಂಬಾಪುಗಳು ಮಳೆಯೊಳಗಿಲ್ಲ; ಆದರೂ ಮೀಟಿಂಗಿಗೆ ಕೋರಂ ಇದೆ. ಕಳೆದ ತಿಂಗಳು ಹಾಕಿದ ಸಭೆ ಮಾಡಿದ್ದಾರೆ. ಆಕ್ಷೇಪಣೆಗಳ ಮುಖ್ಯ ಬೀಳಲಿಲ್ಲ. ಹಕ್ಕು ನಿರೀಕ್ಷಣೆಯಲ್ಲಿದ್ದಾರೆ.

ಬೆಂಚ್‌ಕೋರ್ಟು—ಕೇಸು ಇದ್ದೇ ಇದೆ. ರಾಯರುಗಳು ನಮ್ಮ ಕೋರ್ಟಿನಲ್ಲಿ ಭಾಗವಹಿಸಿಕೊಳ್ಳುತ್ತಾರೆ. ಸದ್ಯ ಸರಕಾರಕ್ಕೆ ತಿಂಗಳಿಗೆ ಹತ್ತು ರೂಪಾಯಿಯಾದರೂ ಉತ್ಪತ್ತಿ ಮಾಡುತ್ತಾರೆ; ಪಬ್ಲಿಕ್ ಕಾರಣವಾದ ಇಷ್ಟು ಉತ್ಪತ್ತಿ ಮಾಡುವುದು ಸಾಲದೇ!

ಟೌನ್ ಸಂಘ—ಒಳ್ಳೆ ತಮಾಷೆ! ನಾಚಿಕೆಗೇಡು! ತಾರೀಕು 19—11—32 ರಲ್ಲಿ ವಾರ್ಷಿಕ ಸಭೆ ಜರಗಿತು. ಅಧ್ಯಕ್ಷಪದವಿಗೆ ಒಪ್ಪಿದ ಚಿಬಸ್ಸೈರವರು ಕಾರಣಾಂತರದಿಂದ ಬರಲಿಲ್ಲ. ಸಹಕಾರಿ ಇನ್ಸ್‌ಪೆಕ್ಟರನ್ನು ಮೆ. ಸಿ. ಎ. ಪೊನ್ನಪ್ಪನವರು ಅಧ್ಯಕ್ಷಪದವಿಗೆ ಸೂಚಿಸಿದರು. ಮೀಟಿಂಗು ಶುರುವಾಯಿತು. ಮೀಟಿಂಗಿನ ಕ್ರಮ ಹೇಗೆ? ಕಾರ್ಯಕ್ರಮದ ಶೀರ್ ವಿಷಯದಿಂದ ಶುರು ವಿಷಯಕ್ಕೆ, ನೇರೇ ಆಲೋಚಿಸಿ. ಈ ಮಹಾಸಭೆ ಐ ದಿನ ಮೆಂಬರುಗಳು ಹುಡುಕ್ಕಿದರು. ತಪಾಸಿಕೆ ಮಹಾಶಯರು ಒಂದಿದ್ದರು ಇವರ ಪರವಾಗಿ ಮೆ. ಸಿ. ಎ. ಪೊನ್ನಪ್ಪನವರು, ಈ ದಿನ ಮೀಟಿಂಗು ನಡೆಸಬೇಕಾದರೆ ಇವರನ್ನೆಲ್ಲಾ ಮೆಂಬರಾಗಿ ಆರಿಸಬೇಕೆಂದರು. ಅವರ ಮಿತ್ರರೊಬ್ಬರು ಅನುಮೋದಿಸಿದರು. ಈ ಪಕ್ಷವು ಪಟ್ಟಿಯಲ್ಲಿದ್ದಂತೆ ಮೀಟಿಂಗು ನಡೆಯಬೇಕೆಂದೂ, ಅಧ್ಯಕ್ಷರ ಅನುಮತಿ ಮೇರೆ ಇತರ ವಿಷಯ ಎನ್ನುವಲ್ಲಿ ಅವರ ಆರ್ಜಿ ವಿಲೆವಾರಿ ಮಾಡಬಹುದೆಂದೂ ಕೆಲವರು ಹೇಳಿದರು. ಅದಕ್ಕೆ ಅಧ್ಯಕ್ಷರು ಒಪ್ಪಿ ಈ ವಿಷಯವನ್ನು ಚೆನ್ನಾಗಿ ವಿವರಿಸಿ ಹೇಳಿದರು. ಅದರೆ ಅವರು ಈ ಮೀಟಿಂಗು ಆಗಬೇಕಾದರೆ ಅರ್ಜಿದಾರರನ್ನು ಸೇರಿಸಿ ಮೀಟಿಂಗು ನಡೆಸಬೇಕೆಂದು ಹಠ ಮಾಡಿದರು. ಅಧ್ಯಕ್ಷರು ನಾಲ್ಕೈದು ಸರ್ತಿ ಆಗುವುದಿಲ್ಲವೆಂದು ವಿನಾಯವಾಗಿ ಹೇಳಿದರೂ ಆಗಲಿಲ್ಲ, ಕಡೆಗೆ ಅಧ್ಯಕ್ಷರು, ಅಧ್ಯಕ್ಷರ ಮಾತಿಗೆ ಬೆಲೆಯಿಲ್ಲದ ಮೀಟಿಂಗಿಗೆ ನಾನು ಅಧ್ಯಕ್ಷನಾಗಿರಲು ಇಷ್ಟಪಡುವುದಿಲ್ಲವೆಂದು, ಮೀಟಿಂಗು ಬಿಟ್ಟು ಹೊರಟುಹೋದರು. ಇನ್ನು ನಾವು ನಾವೇ, ಅವರು ಅವರೇ, ನೋಡಿದಿರಾ ಸಹಕಾರದ ಶಕ್ತಿ! ಹೀಗಾಗಿಯೇ, ಸಹಕಾರಿ ಸಂಘಗಳು ಈ ಸ್ಥಿತಿಗೆ ಬರಲು ಕಾರಣ. ಇನ್ನಾದರೂ ಇದರ ಮಾತು ಊರಿನಲ್ಲೇ ನಡೆಯುತ್ತಲೇ ಇದೆ.

ಶಾಲೆ—ಸ್ಥಳಸಂಕೋಚ, ಮಕ್ಕಳು ಜಾಸ್ತಿಯಾಗಿದ್ದಾರೆ, ಕ್ರೈಸ್ತಾಲ್ ಮಾಡಬೇಕೆಂದು ಒಂದು ದೊಡ್ಡ ಮಹಾಸಭೆ ತಾರೀಕು 21 ರಲ್ಲಿ ನಡೆಯಿತು. ಮುಂದಿನ ಏರ್ಪಾಟಿನ ಕಟ್ಟಡ ಮಾಡುವುದು. ಇದಕ್ಕೆ ಬೇಕಾದ ಹಣ ಸಂಪಾದಿಸಲು ಜನರನ್ನು ನೇಮಿಸಿ ನಿರ್ಧರಿಸಿದರು. ಕಟ್ಟಡವಾದರೆ ಬರುವ ಎಪ್ರಿಲ್‌ನಿಂದ ನಾಲ್ಕನೇ ಫಾರಂ ಇಲ್ಲೇ ಆಗಬಹುದು. ಇದು ಬಹಳ ಪೂರೈಸುವ ಹಾಗೆ ಸಹಾಯ ಮಾಡುವ ದ್ರವ್ಯದಾನಿಯ ಮಾಡಬೇಕಾಗಿ ಪ್ರಾರ್ಥನೆ.

ಭತ್ತದ ಸ್ಟೋರ್—ಇನ್ನೂ ಒಂದು ಸಾವಿರ ಬಟ್ಟಿ ಭತ್ತ ಮಾರಾಟಕ್ಕಿದೆ ಅಂತೆ. ನಗದು ಕ್ರಯಕ್ಕೆ ಕೊಳ್ಳುವದಕ್ಕಾಳಿಗಳೇ ಇಲ್ಲ. ಸಾಲಕೊಡುವುದು ಅಪ್ರಯೋಜನ. ಹೊಸ ಭತ್ತ ಇನ್ನು ಎರಡು ವಾರದಲ್ಲಿ ಪೇಟೆಗೆ ಬರುವಾಗ ಹಳೇ ಭತ್ತ ಕೇಳುವವರ್ಯಾರು? ನೆಲ್ಲೂರಿನಿಂದ ಮಾಪಿಳ್ಳೆಗಳಿಗೆ ಕೊಂಚ ಭತ್ತ ಬರುವುದು. ನಗದಿ ಕ್ರಯಕ್ಕೆ ಕೊಳ್ಳುವವರು ಅವರಿಗಿಂತ ಕಡಿಮೆ. ಜೆಂಕಿನ ಸಾಲಕ್ಕೆ ಇನ್ನೂ ತಕ್ಕ ಭತ್ತವಿದೆ. ಇನ್ನು ಬೆಲೆ ಇಲ್ಲ. ಸಬೂರಿನಲ್ಲಿ ಪ್ರೆಸಿಡೆಂಟರ ಮನೆಯಲ್ಲಿ ಒಂದು ಚಿಕ್ಕ ಸ್ಟೋರು; ಅಲ್ಲಿರುವ ಭತ್ತ ವ್ಯೆಸೂರಿನಂತೆ. ವ್ಯೆಸೂರಿನವರು ಇನ್ನೂ ಯಾವಾಗ ಬರುತ್ತಾರೋ? ದಾರಿ ನೋಡುತ್ತಾ ಇದ್ದೇವೆ. ಅಂತೂ ಹಳೇ ಅಕ್ಕಿ ಬೇಕಾದವರಿಗೆ ಹೊಸ ಭತ್ತ ಬಂದಾಗ ನಮ್ಮ ಸ್ಟೋರಿನಲ್ಲಿ ಭತ್ತ ಸಿಕ್ಕುತ್ತೆ.

ಸಹಕಾರಿ ಯೂನಿಯನ್—ಹೆಚ್ಚಿನ ಸಹಕಾರ ಪ್ರಚಾರ ಕೆಲಸ ಮಾಡಿದ್ದರೂ ಫೆಡರೇಶನಿಗೆ ಮತ್ತು ಸಂಘಕ್ಕೆ ಮಧ್ಯೆ ಟಪಾಲು ನಡಿಸುತ್ತದೆ. ಲೋಕಲ್ ಫಂಡ್ ರೋಡ್ ಕೆಲಸ ಕಂಟ್ರಾಕ್ಟು ನಡಿಸುತ್ತಾರೆ. ಕುಡಿಯುವ ನೀರಿನ ಸಂಗತಿ ಪ್ರಚಾರ ಇನ್ನೂ ಆಗಬೇಕು. ಆಗ ಪ್ರತಿ ಪಕ್ಷದ ನಮ್ಮ, ಆಗಲೇ ಮಾಡಿದ ನಮ್ಮ ಈಗಲೇ ಯೂನಿಯನ್ ಮೆಂಬರುಗಳು ಎಚ್ಚರವಾಗಿರಬೇಕಾದದ್ದು.

ಅರಮನೆ ಕಾರ್ಯ—ಯೋಗಾಗಲೂ ಗೀತಾ ಕ್ಲಾಸು ನಡೆಯುತ್ತದೆ. ಇನ್ನು ತಿಂಗಳೊಳಗೊಂದು ಮಹಾಸಭೆ ನಡೆಯುವುದಂತೆ. ಒಬ್ಬ ಸ್ವಾಮಿಯವರು ಮತ್ತು ಒಬ್ಬ ಬ್ರಹ್ಮಚಾರಿಯು ಇದ್ದಾರೆ. ಇನ್ಸ್‌ಪೆಕ್ಟರು ಬೀಳುವ ಮತಕ್ಕೆ ಸಂಸಾರ್ತ ಅವರ ದರ್ಶನಕ್ಕೆ ದಯಮಾಡಿಸಿದರು.

ಕುಶಾಲಪುರ—ಕಳೆದ ತಿಂಗಳಿನಲ್ಲಿ ಯಾರೋ ಸತ್ಯಾಗ್ರಹಿಗಳು ಸ್ವರಾಜ್ಯ ಬಾವುಟ ಹಾರಿಸಿದರಂತೆ! ಅದ್ದರಿಂದ ಈಗ ಆದಿತ್ಯವಾರದ ದಿನ ಒಬ್ಬ ಪೋಲೀಸನವನಿಗೆ ಅಲ್ಲಿ ಪಹರೆ ಡ್ಯೂಟಿ! ನೋಡಿದಿರಾ ಸ್ಥಳದ ಮಹಿಮೆ! ಕಾರಾಗೃಹಕ್ಕೆ ಹೋದ ಸತ್ಯಾಗ್ರಹಿಗಳ ಜುಲುಮೆಗೆ ಪೋಲೀಸರಿಗೆ ಬಿಡುವು ಸಿಕ್ಕಿದ್ದಾಯಿತು. ಇರಲಿ, ನಮ್ಮ ಊರಿನಲ್ಲಿ ಕಳವು, ಕೊಲೆ ತಪ್ಪಿ. ಹೀಗಾದರೆ ಪೋಲೀಸಿನವರಿಗೆ ಈ ಕೆಲಸವಾದರೂ ಸಹಕಾರ ಇರಲಿ.

ಯಾವ ತಿಂಗಳು ಮಳೆ. ಮತ್ತು ಹುಟ್ಟು ಹತ್ತಿರವಾಯಿತು. ಭತ್ತದ ಬೆಲೆ ಕಮ್ಮಿಯಾಗುತ್ತಾ ಬರುತ್ತಲಿದೆ. ಈ ವರ್ಷದ ಬೆಳೆಯೇನೋ ಚೆನ್ನಾಗಿದೆ. ಆದರೆ ಮುಂದಕ್ಕೆ ಗಾಡಿಗೆ 35/ರೂ. ಆಗಬಹುದೋ ಎಂದು ಮೆದಲಿಕೆ. ಕಳೆದ ವರ್ಷದ ಕಂದಾಯವೇ ಇನ್ನೂ ಬಾಕಿ. ಹಾಗಾದರೆ, ಇನ್ನು ಮುಂದಿನ ವರ್ಷದ ಗತಿಯೇನು? ಸೆಂಟ್ರಲ್ ಬ್ಯಾಂಕಿನ ಸಾಲ ಸಂಘಗಳು ಕೇಳಿದರೆ ಹಣ ಸಿಕ್ಕುವುದೂ ಇಲ್ಲ. ಬೇರೆ ಹಣ ಸಿಕ್ಕಿದರೆ ವಾಪಸು ಕೊಡಲು ನಮ್ಮಲ್ಲಿ ಉಳಿಯುವುದೂ ಇಲ್ಲ. ಈಗಾಗಲೇ ದೇವಮಾನ ವಾಡಿಕೆ ಕಂಪೆನಿಯಿಂದ ಸಾಲ ತೆಗೆಯುವ ಏರ್ಪಾಡು ಮಾಡುತ್ತಲಿದ್ದಾರೆ. ಅದರೊಂದಿಗೆ ಹರಿಜನರಿಗೆ ದೇವರ ದರ್ಶನ, ಹರಿಸಮಾನತೆ ಕೊಡಬೇಕೆನ್ನುವವರ ಮೀಟಿಂಗು. ಈಗ ಬಡ ರೈತನ ಗೋಳು ನೋಡುವವರಿಲ್ಲ. ಹಣವಿದ್ದರೆ ಹುತ್ರಿಗೆ ಗಾಡಿಗೆ 20/ರೂಪಾಯಿಯಂತೆ ಅಡ್ವಾನ್ಸ್. ಹೇಗೆ ನಾವು ಮುಂದಕ್ಕೆ ಬಾಳುವರಾಗಬೇಕು, ಆಲೋಚಿಸಿ. ಅಂತೂ ದೇಶದಲ್ಲಿ ಶಾಂತಿಯುಂಟಾಗಲೆಂದೇ ನನ್ನ ಪ್ರಾರ್ಥನೆ.

(FREE INSURANCE)

ಉಚಿತ ವಿಮಾ.

ಮ್ಯೂಚುವಲ್ ಬೆನಿಫಿಟ್ ಸ್ಕೀಂ ಎಂಬ
ಅನ್ಯೋನ್ಯ ಸಹಾಯ ಪದ್ಧತಿ.

(Mutual Benefit Scheme.)

ಜೈ ಭಾರತ ಇನ್‌ಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಹೆಡ್ ಆಫೀಸ್—ಮದ್ರಾಸ್.

ಲೈಫ್ ಇನ್‌ಷ್ಯೂರೆನ್ಸಿನ ಕಂಪೆನಿಗಳ ಕಾನೂನಿಗೆ ಅಧೀನವಾಗಿದೆ. ಸರಕಾರದಲ್ಲಿ ಬೇಕಾದ ಠೇವಣಾತಿ ಇಡಲಾಗಿದೆ.

ಈ ಮೇಲ್ಕಂಡ ಕಂಪೆನಿಯು ಅನ್ಯೋನ್ಯ ಸಹಾಯಕ್ಕಾಗಿ ಕಳೆದ ವರ್ಷ ಅಂದರೆ 1931ನೇ ಫೆಬ್ರವರಿಯಲ್ಲಿ ಮದ್ರಾಸಿನಲ್ಲಿ ಸ್ಥಾಪಿತವಾಗಿ ಈ ವರೆಗೆ 25500 ಸಾವಿರಕ್ಕೂ ಹೆಚ್ಚಾಗಿ ಪಾಲಿಸಿಗಳನ್ನು ಪಡೆದಿರುತ್ತೆ. ಈ ಮೇಲ್ಕಂಡ ಕಂಪೆನಿಗೆ ಐಶ್ವರ್ಯವಂತರೂ ಬಡವರೂ, ಮಿತಸಂಪಾದನೆಯವರೂ, ಜಾತಿ ಮತಗಳ ಭೇದವಿಲ್ಲದೆ ಬಾಲಕಿಯರೂ, ಕೂಲಿಯವರೂ, ಹೆಂಗಸರೂ, ಗಂಡಸರೂ ಹೆಚ್ಚು ಖರ್ಚು ಕೊಡದೆಯೇ ಉಚಿತ ಜೀವ ವಿಮೆ ಮಾಡಿಕೊಳ್ಳಬಹುದು. 18 ವರ್ಷಕ್ಕೆ ಮೇಲ್ಪಟ್ಟು 60 ವರ್ಷದೊಳಗಿರುವವರು ಈ ಕಂಪೆನಿಗೆ ಸೇರಬಹುದು. ಈ ಕಂಪೆನಿಗೆ ಸೇರಲು ಇಚ್ಛಿಸುವವರು ಮೊದಲಿನಲ್ಲಿ ರೂ. 5—8—0ನ್ನು ಸದಸ್ಯ ಶುಲ್ಕ ಕಟ್ಟತಕ್ಕದ್ದು. ಅನಂತರ ತಿಂಗಳು ಒಂದರ 1 ರೂ. ಸ್ವಲ್ಪದರಲ್ಲಿ ದೊಡ್ಡ ಲಾಭ ದೊರೆಯುತ್ತೆ. ಆದ್ದರಿಂದ ಇಂಥಾ ಸುಸಮಯವನ್ನು ಕಳೆದುಕೊಳ್ಳಬೇಡಿ. ಈ ದಿನವೇ ಪಾಲಿಸಿಗಳನ್ನು ಹೊಂದಲು ಅರ್ಜಿದಾರರಾಗಿರಿ. ಇದರ ಫಲವನ್ನು ಹೊಂದಲು ಭಾಗಿಗಳಾಗಿರಿ.

ಹೆಚ್ಚಿನ ವಿವರಗಳಿಗೆ ಈ ಕೆಳಗಿನವರಿಗೆ ಬರೆದು ತಿಳಿದುಕೊಳ್ಳಬಹುದು. ಅಲ್ಲದೆ ಇವರು ಕೊಡಗಿನ ಎಲ್ಲಾ ಕಡೆಗಳಲ್ಲಿಯೂ ತಿರುಗುತ್ತಲಿರುತ್ತಾರೆ.

ಯುನ್. ಬಿ. ಕರುಂಬಯ್ಯ.
ಏಜೆಂಟ್,
ಜೈ ಭಾರತ ಇನ್‌ಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
12—6 ನಾಪೋಕ್ಲು, (ಕೊಡಗು)

ಆಟೋಹಾರ್ಪ್ ಪಿಯೋನೋ ಫೋರ್ಟ್ ಎಂಬ ಹಾರ್ಮೋನಿಯಂಗಳು.

ಒಂದಕ್ಕೆ ರೂ. 4—8—0.

ಈ ಹಾರ್ಮೋನಿಯಂಗಳು ಹೊಸದಾಗಿ ತಯಾರಾದವು. 23 (ರೀಡ್ಸ್) ಸ್ವರಗಳು ಇರುವವು. ಭಾರಿ ಕ್ರಯದ ಹಾರ್ಮೋನಿಯಂಗಳಿಗಿಂತಲೂ ಚೆನ್ನಾಗಿರುವವು. ನಾಟಕ, ಗುಡಿ ಮುಂತಾದವುಗಳಲ್ಲಿ ಉಪಯೋಗಿಸಲು ಬಹು ಚೆನ್ನಾಗಿರುವವು. 23 ಸ್ವರಗಳುಳ್ಳ ಹಾರ್ಮೋನಿಯಂ 1ಕ್ಕೆ 4—8—0. ಪೇಕಿಂಗ್, ವಿ. ಪಿ. 1—8—0 ಪ್ರತ್ಯೇಕ.

ವಿಳಾಸ.— ಎ.ಬಿ. ಮೂರ್,
168, ಚೈನಾ ಬಜಾರ್,
4—3 ಮದ್ರಾಸು.

---

೫೦ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕಿ ಕಂಪನಿ ರವರ

ಜ್ವರದ ಗುಳಿಗೆಗಳು.

ಚಳಿಜ್ವರ, ಚಾತುರ್ಥಿ ಜ್ವರ, ದಿನಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮ ಬಾಣದಂತೆ ಇವೆ. ಬಾಟ್ಲಿಗೆ ರೂ. ೧. ವಿ. ಪಿ. ೭ ಆಣೆ. ಬರೆದು ತರಿಸಿಕೊಳ್ಳಿ.

ಗಣೇಶ ರಾಮಚಂದ್ರ ಕರ್ಕಿ,
(52—15) ಕರ್ಕಿ ಕಂಪನಿ,
ಗಿರಗಾಂವ, ಮುಂಬಯಿ.

ಇಂಡಿಯಾ ಎಕ್ವಿಟೇಬಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

(ಸ್ಥಾಪಿಸಲ್ಪಟ್ಟದ್ದು 1908.)

ಕಳೆದ ವರ್ಷದ ಫಲಿತಾಂಶಗಳು.

ಹಿಂದಿನ ವರ್ಷದ ಕೆಲಸಕ್ಕಿಂತ 64% ಹೆಚ್ಚು.

ಕಳೆದ ವರ್ಷ ಸಂಭವಿಸಿದ ಹಕ್ಕು ಬಾಧ್ಯಸ್ಥರಲ್ಲಿ ಶೇಕಡ 96·6 ಜನರಿಗೆ ಹಣ ಅದೇ ವರ್ಷ ಕೊಡಲಾಗಿದೆ.

ಖರ್ಚಿನ ದಾಮಾಷಾಯು 31% ಮಾತ್ರ.

ಇಂಡಿಯಾ ಎಕ್ವಿಟೇಬಲ್ ಇನ್ಶೂರೆನ್ಸ್ ಕಂಪೆನಿಯು ಬುಡದಿಂದ ತಲೆಯ ವರೆಗೂ ಇಂಡಿಯನ್.

ಜವಾಬ್ದಾರರಾದ ಏಜೆಂಟರುಗಳು ಬೇಕಾಗಿದ್ದಾರೆ.

ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಕೆ. ಇ. ಹಾಕಿನ್,
ಬ್ರಾಂಚ್ ಸೆಕ್ರೆಟರಿ,
159 ಶ್ರೀ ನರಸಿಂಹರಾಜ ರೋಡ್,
ಬೆಂಗಳೂರು ಸಿಟಿ.

ಅಥವಾ

(1) ಮಿಸ್ಟರ್ ಸಿ. ಯಂ. ಪೂವಯ್ಯ,
ಲೀಡ ಆರ್ಗನೈಜರ್,
'ಪೂವಯ್ಯ ವಿಲ್ಲ,'
ಮಡಿಕೇರಿ.

(2) ಯಂ. ಸಿ. ಅಪ್ಪಚ್ಚು,
ರಿಟೈರ್ಡ್ ಪಾರುಪತ್ಯಗಾರ್,
ಹಿಲ್ ರೋಡ್,
ಮಡಿಕೇರಿ.

(12—12)

GOVERNMENT SOAP FACTORY,

Bangalore.

ವಿಶ್ವಾಸಾರ್ಹತೆ.

ಅತ್ಯುತ್ತಮವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ
ರೀತಿಯ ಗುಣಗಳು ಅವಶ್ಯಕವೆಂದು ನೀವು
ತಿಳಿದಿರುತ್ತೀರೋ ಆ ಗುಣಗಳೆಲ್ಲಾ
ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.

ನಾವು ನಿಮಗೆ ಭರವಸೆಯನ್ನೀಯುತ್ತೇವೆ.

ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
52—12 ಬೆಂಗಳೂರು.

(೨) ಚೌರೀರ ಕಾಳಪ್ಪನವರು, (3) ಕುಂದಳ್ಳಿ ಜಂಗಪ್ಪನವರು (4) ಹರಗದ ಅಪ್ಪಯ್ಯನವರು, (5) ಮಡೂರು ಅನೇಗೌಡ ಬೈರಪ್ಪನವರು, (6) ಬೇಳೂರು ಚೆನ್ನಬಸಪ್ಪನವರು, (7) ನೇಗಳೆ ಮಂಜಪ್ಪನವರು, (8) ದೊಡ್ಡಕೋಳೂರು ಪಟೇಲ್ ಅಪ್ಪಯ್ಯನವರು, (9) ಕಣಿ ಹೊಸಮನೆ ತಮ್ಮಣ್ಣನವರು ಮತ್ತು (10) ಕೊತ್ನಳ್ಳಿ ದೊಣ್ಣಂಡ ಪೊನ್ನಪ್ಪನವರು, ಈ ಹತ್ತು ಮೆಂಬರನ್ನು ಸರ್ವಸಮ್ಮತದಿಂದ ಆರಿಸಲಾಯಿತು.

ಕೊಡಗಿನ ಸರ್ವ ಪಕ್ಷೀಯ ಪರಿಷತ್ತನ್ನು ಮಡಿಕೇರಿಯಲ್ಲಿ ನಡಿಸಬೇಕಾಗಿ ಬೇಕಾದ ಏರ್ಪಾಡುಗಳನ್ನು ಈ ಸಭೆಯು ಕೇಳಿಕೊಳ್ಳುತ್ತದೆಯೆಂದು ಮ. ಅಪ್ಪಯ್ಯನವರು ಸೂಚಿಸಿ, ಮ. ಸುಬ್ಬಯ್ಯನವರು ಅನುಮೋದಿಸಿ ಸರ್ವಸಮ್ಮತದಿಂದ ಒಪ್ಪಲಾಯಿತು.

ಕೊಡಗಿನ ಭವಿಷ್ಯತ್ತಿನ ವಿಷಯ ನಡೆಯುವ ಪಂಚಾಯ್ತಿಗೆ ಈ ನಾಡಿನಿಂದ ಹೋಗುವ ಪ್ರತಿನಿಧಿಗಳಿಗೆ ಈ ಸಭೆಯು ಸ್ವತಂತ್ರ ಕೊಡುತ್ತದೆಯೆಂಬ ಠರಾವನ್ನು ಅಧ್ಯಕ್ಷರು ಸಭೆಯ ಮುಂದಿಟ್ಟರು. ಮ. ಕುಂದಳ್ಳಿ ಜಂಗಪ್ಪನವರು ಮತ್ತು ಬೇಳೂರು ಚೆನ್ನಬಸಪ್ಪನವರು ಅನುಮೋದಿಸಲಾಗಿ, ಸರ್ವ ಸಮ್ಮತದಿಂದ ಒಪ್ಪಿಗೆ ಕೊಡಲಾಯಿತು. ಸರ್ವಪಕ್ಷದ ಪರಿಷತ್ತಿನ ತಾರೀಖನ್ನು ಒಂದು ವಾರಕ್ಕೆ ಮುಂಚೆ ಪ್ರತಿನಿಧಿಗಳಿಗೆ ತಿಳಿಸುವಂತೆ ಮ. ವೆಂಕಪ್ಪಯ್ಯನವರನ್ನು ಕೇಳಿಕೊಳ್ಳುವಂತೆ ತೀರ್ಮಾನಿಸಲಾಯಿತು. ಈ ದಿವಸದ ರಿಪೋರ್ಟನ್ನು ಪ್ರತಿನಿಧಿಯಾಗಿ ಆರಿಸಿರುವ ಮ. ಹರಗದ ಅಪ್ಪಯ್ಯನವರು ಇಟ್ಟುಕೊಳ್ಳುವಂತೆ ತೀರ್ಮಾನಿಸಲಾಯಿತು.

ಮ. ಕುಂದಳ್ಳಿ ಜಂಗಪ್ಪನವರು ಮೀಟಿಂಗು ಸಂತೋಷವಾಗಿ ನಡೆದುದಕ್ಕೆ ಅಧ್ಯಕ್ಷರಿಗೂ, ಸಭಿಕರಿಗೂ ವಂದಿಸಿದನಂತರ ಮೀಟಿಂಗು ಬರಕಾಸ್ತು ಮಾಡಲಾಯಿತು.

ಹೆಚ್. ಸಿ. ಅಪ್ಪಯ್ಯ,
(ಅಧ್ಯಕ್ಷ)

ಅಖಿಲ ಭಾರತ ಸಹಕಾರ ದಿನಾಚರಣೆ.
ಮೂರ್ನಾಡು.

ತಾರೀಖು 5—11—1932 ರಲ್ಲು ಮೂರ್ನಾಡು ಕೋಯೂನಿಯನ್ ಆಫೀಸಿನಲ್ಲು ಮೇಲಿನ ದಿನವನ್ನು ವ್ಯವಸಾಯಕ ಶಾಸ್ತ್ರಜ್ಞರಾದ ಮ. ಕೆ. ಬಿ. ಪೊನ್ನಪ್ಪನವರ ಅಧ್ಯಕ್ಷತೆಯಲ್ಲಿ ಹಗಲು 2 ಗಂಟೆಗೆ ಆಚರಿಸಲಾಯಿತು.

ಈ ಸಮ್ಮೇಳನಕ್ಕೆ ಈ ಯೂನಿಯನ್ನಿನ ಸಂಯೋಜಿತವಾದ ಪ್ರತಿ ಸಂಘಗಳ ಮೆಂಬರುಗಳು ಸೇರಿ 200 ಜನರೂ, ಸಹಕಾರಿ ಸಂಘಗಳ ಇನ್ಸ್‌ಪೆಕ್ಟರಾದ ಮ. ಬೊಳ್ಳಚೆಟ್ಟಿರ ಜಂಗಪ್ಪನವರು, ಸುಪರ್‌ವೈಜರಾದ ಮ. ಮೊಣ್ಣಂಡ ಅಪ್ಪಯ್ಯನವರೂ ಹಾಜರಿದ್ದರು.

ಅಧ್ಯಕ್ಷರು ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡ ನಂತರ ಸಭೆಯ ಮುಂದೆ ಮ. ಬಲ್ಲಚಂಡ ಕಾಳಿಂಗನವರು ಸ್ವಾರಸ್ಯವಾಗಿ ದೇವರ ಪ್ರಾರ್ಥನೆಯನ್ನು ಮಾಡಿದರು.

ಅನಂತರ ಅಧ್ಯಕ್ಷರು ಈ ಕೂಟದ ಉದ್ದೇಶವನ್ನೂ ಸಹಕಾರದ ಚರಿತ್ರೆಯನ್ನೂ ಸೂಕ್ಷ್ಮವಾಗಿ ವಿವರಿಸಿದ ಮೇಲೆ ಕಾರ್ಯಕ್ರಮ ಪಟ್ಟಿಯಲ್ಲಿ ನಮೂದಿಸಿದ ಮೇರೆ ಸಹಕಾರದ ಉದ್ದೇಶವನ್ನೂ, ಧರ್ಮವನ್ನೂ ಮೆಂಬರುಗಳಿಗೆ ಬೋಧಿಸಲು ಮ. ಮುಡಿಯಂಡ ದೇವಯ್ಯನವರನ್ನು ಕೇಳಿಕೊಳ್ಳಲು ದೇವಯ್ಯನವರು ಸಭಿಕರಿಗೆ ವಂದಿಸಿ:—ಬಡ ರೈತರ ಅಥವಾ ಬಡ ಜನರ ಸಾಂಪತ್ತಿಕ ಮತ್ತು ಸಾಮಾಜಿಕ ಸ್ಥಿತಿಗಳನ್ನು ಅಭಿವೃದ್ಧಿಗೊಳಿಸಿ, ಅವರ ಕಷ್ಟಗಳನ್ನು ನೀಗಿ ಸುಖದ ದಾರಿಯನ್ನು ತೋರಿಸಿಕೊಡುವಂಥಾದ್ದೇ ಸಹಕಾರವೆಂದೂ, ಇಂಥಾ ಸಹಕಾರದ ಅಭಿವೃದ್ಧಿಯೂ ಕ್ಷೀಣಗತಿಯೂ ಪ್ರತಿ ಒಬ್ಬ ಮೆಂಬರನನ್ನು ಅವಲಂಬಿಸಿರುತ್ತೆಂದೂ, ಆದುದರಿಂದ ಪ್ರತಿ ಒಬ್ಬರೂ ಅವರವರ ಸಂಘದ ಮೇಲೆ ವಿಶ್ವಾಸ, ಪ್ರೀತಿ ಮತ್ತು ಭಕ್ತಿಗಳನ್ನು ಇಟ್ಟುಕೊಂಡು ಎಲ್ಲರ ಸುಖಕ್ಷೇಮಕ್ಕೆ ಎಲ್ಲರೂ ಪ್ರಯತ್ನಪಡುವದೇ ಸಹಕಾರ ಧರ್ಮವೆಂದು ಹೇಳಿದರು. ಅಲ್ಲದೆ ಇಂಥಾ ಪ್ರತಿ ಒಂದು ಸಂಘದ ಏಳಿಗೆಯು ಆಯಾಯ ಸಂಘದ ಪ್ರೆಸಿಡೆಂಟರು ಮತ್ತು ಸೆಕ್ರೆಟರಿಗಳ ಕೆಲಸದ ಮೇಲೆ, ಇರುತ್ತದೆಂದೂ ಹೇಳಿ ಅವರ ಭಾಷಣವನ್ನು ಮುಗಿಸಿದರು.

ಅಧ್ಯಕ್ಷರ ಕೋರಿಕೆ ಮೇರೆ ಮ. ಸಿ ಯಂ. ಉಲ್ಲಾಸನವರು ಮಿತವ್ಯಯವನ್ನು ಕುರಿತು ಮಾತಾಡುತ್ತಾ, 'ಒಬ್ಬ ಮನುಷ್ಯನು ಸುಖದಿಂದ ಬಾಳಬೇಕಾದರೆ, ಅವನ ಆರ್ಥಿಕ ಸ್ಥಿತಿಯು ಅಭಿವೃದ್ಧಿಯಾಗಬೇಕಾದರೆ ಅವನು ಮಿತವ್ಯಯವನ್ನು ಕಲಿತು, ಆಚರಣೆಗೆ ತರಬೇಕೆಂದು ಮುಂತಾಗಿ ಹೇಳಿ, ಮಿತವ್ಯಯದ ತತ್ವವಾದ ದುಂದುಗಾರಿಕೆಯ ಕೆಟ್ಟ ಪರಿಣಾಮಗಳನ್ನು ಚೆನ್ನಾಗಿ ವಿವರಿಸಿದರು.

ಮ. ಚೌರೀರ ಅಪ್ಪಯ್ಯನವರು ಸ್ವಾವಲಂಬನದ ವಿಷಯ ಭಾಷಣ ಮಾಡುವಾಗ್ಯೆ, ಪರರ ಆಶ್ರಯವನ್ನು ಆದಷ್ಟು ಕಡಿಮೆ ಮಾಡಿ, ತನ್ನ ಸಂಪಾದನೆಯಿಂದ ತಾನು ಜೀವನ ನಡಿಸುವುದು ಶ್ರೇಷ್ಠವಾದುದೆಂದೂ, ತನ್ನ ಕಾಲಿನ ಮೇಲೆ ತಾನು ನಿಲ್ಲುವ ಈ ಗುಣವೇ ಸ್ವಾವಲಂಬನವೆಂದೂ, ಸಹಕಾರ ತತ್ವಗಳಲ್ಲಿ ಒಂದಾದ ಇದನ್ನು ಎಲ್ಲಾ ಸಹಕಾರಿಗಳು, ಜಾರಿಗೆ ತರಬೇಕೆಂದೂ, ರೈತನಿಗೆ ವ್ಯವಸಾಯಕ್ಕೆ ಬೇಕಾಗುವ ಎಲ್ಲಾ ಸಾಮಾನುಗಳನ್ನೂ, ಸಂಸಾರದ ಖರ್ಚಿಗೆ ಅವಶ್ಯವಿರುವ ಎಲ್ಲಾ ಸಾಮಗ್ರಿಗಳನ್ನೂ ತಾವಾಗಿಯೇ ಮಾಡಿಕೊಳ್ಳಲು ಗ್ರಾಮಸ್ಥರೆಲ್ಲರೂ ಪ್ರಯತ್ನಿಸಬೇಕೆಂದು ಮುಂತಾಗಿ ಹೇಳಿದರು.

ಈ ಯೂನಿಯನ್ನಿನ ಪ್ರೆಸಿಡೆಂಟರಾದ ಮ. ಬಡುವಂಡ ಗಣಪತಿಯವರು ಸಹಕಾರಿಗಳ ಕರ್ತವ್ಯವನ್ನು ಕುರಿತು ಮಾತಾಡುತ್ತಾ, ಸಂಘದ ಮೆಂಬರುಗಳು ಸಾಲದ ಮೊಬಲಗನ್ನು ಕಂತುವಾರು ತಪ್ಪದೆ ಮರುಪಾವತಿ ಮಾಡಬೇಕೆಂದೂ, ಈ ವಿಷಯ ಕಮಿಟಿಯವರು ನಿರ್ದಾಕ್ಷಿಣ್ಯದಿಂದ ವರ್ತಿಸಬೇಕೆಂದೂ, ಈ ಉತ್ತಮವಾದ ತತ್ವವನ್ನು ಎಲ್ಲರೂ ಜಾರಿಗೆ ತಾರದೆ ಹೋದರೆ ಹಲವರು ಸಾಹುಕಾರರ ಬಲೆಗೆ ಪುನಹ ಬೀಳಬೇಕಾಗುವದೆಂದೂ ಮುಂತಾಗಿ ಹೇಳಿದರು.

ಈ ಸರ್ಕಲಿನ ಸುಪರ್‌ವೈಜರಾದ ಮ. ಮೊಣ್ಣಂಡ ಅಪ್ಪಯ್ಯನವರು ಸಹಕಾರದ ತತ್ವಗಳನ್ನು ಇನ್ನೂ ವಿಸ್ತಾರವಾಗಿ ವಿವರಿಸಿ, ಗ್ರಾಮಸ್ಥರಲ್ಲಿರುವ ಪರಸ್ಪರ ಮತ್ಸರವು ಸಂಘಗಳ ಅಭಿವೃದ್ಧಿಗೆ ದೊಡ್ಡ ಅಡಚಣೆಯೆಂತಲೂ, ಇದನ್ನು ಬಿಟ್ಟು 'ತಾನು ಪರರಿಗೆ, ಪರರು ತನಗೆ' ಎಂಬ ತತ್ವದಂತೆ ಪರೋಪಕಾರವನ್ನು ಮಾಡುತ್ತಾ ಬಂದರೆ ಈ ಜನ್ಮವು ಸಾರ್ಥಕವಾಗುವದೆಂತಲೂ, ಒಗ್ಗಟ್ಟಿನಲ್ಲಿ ವರ್ತಿಸಿದರೆ ಸಹಕಾರ ಚಳವಳಿಕ್ಕೆ ದೊಡ್ಡ ಕೀರ್ತಿ ದೊರೆಯುವದೆಂತಲೂ ಮುಂತಾಗಿ ಸ್ವಾರಸ್ಯವಾಗಿ ಭಾಷಣ ಮಾಡಿದರು.

ಸಹಕಾರಿ ಸಂಘಗಳ ಇನ್‌ಸ್ಪೆಕ್ಟರಾದ ಮ. ಬೊಳ್ಳಚೆಟ್ಟಿರ ಜಂಗಪ್ಪನವರು ಸಹಕಾರಿ ಸ್ಟೋರುಗಳ ಪ್ರಯೋಜನವನ್ನು ಬೇರೆ ದೇಶಗಳಲ್ಲಿರುವವುಗಳ ಉದಾಹರಣೆಯಿಂದ ವಿವರಿಸಿ, ಜಂಟಿ ವಿಕ್ರಯದ ಸ್ಟೋರುಗಳಿಂದ ರೈತರ ಫಸಲ್ಗೆ ಒಳ್ಳೇ ಬೆಲೆ ದೊರೆಯುವದೆಂದೂ, ಕೊಂಡುಕೊಳ್ಳುವ ಸ್ಟೋರ್‌ಗಳಿಂದ ಸರಿಯಾದ ಅಳತೆಯಿಂದ ನಷ್ಟವಿಲ್ಲದೆ ಒಳ್ಳೇ ಸಾಮಾನುಗಳು ದೊರೆಯುವವೆಂದೂ ಮುಂತಾಗಿ ಮಾತಾಡಿದರು.

ಅನಂತರ ಕೆಳಗಿನ ಠರಾವುಗಳು ಸರ್ವಸಮ್ಮತದಿಂದ ಪಾಸಾದವು.

1 ಪ್ರತಿ ಒಬ್ಬ ರೈತನು ಅವನವನ ಹಿತ್ತಲಲ್ಲಿ ಕಮ್ಮಿ ಪಕ್ಷ ಒಂದು ವಿಳದೆ ಬಾಳೆ, ಅರಸಿನ ಮತ್ತು ಶುಂಠಿ, ಇವುಗಳ ತೋಟವನ್ನು ಮಾಡಬೇಕೆಂದೂ, ಕಮ್ಮಿ ಪಕ್ಷ ವರ್ಷಕ್ಕೊಂದು ವಿಳದೆ ಬಂತಿನ ಕಡಿಯುತ್ತಾ ಬರಬೇಕೆಂದೂ, ಈ ವಿಷಯ ಎಚ್ಚರ ತೆಗೆದುಕೊಳ್ಳಲು ಪ್ರತಿ ಸಂಘಗಳಲ್ಲೂ ಒಂದೊಂದು ಕಮಿಟಿಯನ್ನು ನೇಮಕಮಾಡಬೇಕೆಂದೂ ಮ. ಚೌರೀರ ಅಪ್ಪಯ್ಯನವರು ಸೂಚಿಸಿದ ಠರಾವಿಗೆ ಮ. ಮುಡಿಯಂಡ ದೇವಯ್ಯನವರು ಅನುಮೋದಿಸಲು ಸರ್ವಸಮ್ಮತದಿಂದ ಮಂಜೂರುಮಾಡಲಾಯಿತು.

2. ವ್ಯವಸಾಯದ ಅಭಿವೃದ್ಧಿಗೆ, ಈಗ ಅಧ್ಯಕ್ಷರಾಗಿರುವ ಎಗ್ರಿಕಲ್ಚರ್ ಡೆಮಾನ್‌ಸ್ಟ್ರೇಟರು ಗ್ರಾಮಕ್ಕೆ ಬಂದು ಭಾಷಣ ಕೊಟ್ಟು ಒಳ್ಳೆ ನಮೂನೆಯ ವ್ಯವಸಾಯದ ವಿಷಯವನ್ನು ತಿಳಿಸಬೇಕೆಂದು. ರೈತರು ಬರಕೊಳ್ಳುವಾಗ ಬಂದು ಸಹಾಯವನ್ನೂ ಮಾಡಬೇಕೆಂದು ಮ. ಪಳಂಗಂಡ ಜಂಗಪ್ಪನವರು ತಂದ ಠರಾವಿಗೆ ಮ. ಬಡುವಂಡ ಗಣಪತಿಯವರು ಅನುಮೋದಿಸಲು ಸರ್ವಸಮ್ಮತದಿಂದ ಪಾಸುಮಾಡಲಾಯಿತು.

ಅನಂತರ ಅಧ್ಯಕ್ಷರು ವ್ಯವಸಾಯದ ವಿಷಯದಲ್ಲಿಯೂ, ಸಹಕಾರದ ವಿಷಯದಲ್ಲಿಯೂ ಬಹು ಸ್ವಾರಸ್ಯವಾಗಿ ಬೋಧಿಸಿದರು. ರೈತನಿಗೆ ದನವೇ ಶ್ರೇಷ್ಠವಾದ ವಸ್ತುವೆಂದೂ, ಗ್ರಾಮಾಭಿವೃದ್ಧಿಗೆ ದನವೇ ಕಾರಣವೆಂತಲೂ, ಆದುದರಿಂದ ಅವುಗಳನ್ನು ಸರಿಯಾಗಿ ಸಾಕಲು ಪ್ರತಿ ಒಬ್ಬ ರೈತನೂ ಪ್ರಯತ್ನಪಡುವುದು ಒಂದನೇ ಕೆಲಸವೆಂದೂ ವಿವರಿಸಿದರು. ಉತ್ತಮವಾದ ಬೆಳೆಯನ್ನು ತೆಗೆಯುವ ವಿಷಯವನ್ನು ವಿವರಿಸಿ, ಗೊಬ್ಬರವನ್ನು ಸಂಪಾದಿಸುವುದು ಮತ್ತು ಇದನ್ನು ಉಪಯೋಗಿಸುವದು ಇವುಗಳ ಕ್ರಮವನ್ನು ಬೋಧಿಸಿದರು. ಇವುಗಳಲ್ಲದೆ ಸಹಕಾರದ ತತ್ವಗಳಾದ ಮಿತವ್ಯಯ, ಸ್ವಾವಲಂಬನ ಮತ್ತು ಪರಸ್ಪರ ಸಹಾಯ ಇವುಗಳನ್ನೂ ಸಹ ಸೂಕ್ಷ್ಮವಾಗಿ ವಿವರಿಸಿ, ಸಹಕಾರವೇ ದೇಶದ ಏಳಿಗೆಯ ತಳಹದಿ ಎಂದು ಭಾಷಣವನ್ನು ಮುಗಿಸಿದರು.

ಈ ಕೂಟವನ್ನು ಸಾಂಗವಾಗಿ ನಡಿಸಿಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ಸಭೆಯವರ ಪರವಾಗಿ ಮ. ಚೌರೀರ ಅಪ್ಪಯ್ಯನವರು ವಂದನಾದಿಗಳನ್ನರ್ಪಿಸಿದರು.

ಮ. ಬಲ್ಲಚಂಡ ಕಾಳಿಂಗನವರು ಸ್ವಾರಸ್ಯವಾಗಿ ಮಂಗಳ ಪದವನ್ನು ಹಾಡಿದರು.

ಅನಂತರ ಕೂಡಿದ ಮೆಂಬರುಗಳಿಗೆಲ್ಲಾ ತಿಂಡಿ ತೀರ್ಥಗಳ ಏರ್ಪಾಡು ಆದನಂತರ 5.45 ಗಂಟೆಗೆ ಮೀಟಿಂಗನ್ನು ಬರಕಾಸ್ತು ಮಾಡಲಾಯಿತು.

ಕೆ. ಬಿ. ಪೊನ್ನಪ್ಪ,
(ಅಧ್ಯಕ್ಷರು)

ನೋಟೀಸು.

ಸಂಘದ ಕಮಿಟಿ ಮೀಟಿಂಗೊಂದು ವೀರಾಜಪೇಟೆ ಖದ್ದರ್ ಸ್ಟೋರಿನಲ್ಲಿ ತಾ. 3—12—32ನೇ ಶನಿವಾರ ಮಧ್ಯಾಹ್ನ 11 ಗಂಟೆಗೆ ನಡೆಯುತ್ತದೆ. ಮಹತ್ವದ ವಿಷಯಗಳು ಚರ್ಚೆಗೆ ಇರುವದರಿಂದ ಪ್ರತಿಯೊಬ್ಬ ಮೆಂಬರನು ಖಂಡಿತವಾಗಿ ಹಾಜರಾಗಬೇಕಾಗಿ ಕೋರಲಾಗಿದೆ.

1. "ಕೊಡಗಿನ ಸರಕಾರಕ್ಕೆ ಇಂಡಿಯಾ ಸರಕಾರವು ಹಿಂದಿನ ಸಿಲ್ಕಿನ ಕೆಲವು ಭಾಗವನ್ನಾದರೂ ಕೊಟ್ಟು ಇನ್ನು ಮುಂದೆ ಕಾಲಿಯಾಗುವ ಐದು ಲಕ್ಷ ರೂಪಾಯಿ (ಸಬ್ವೆನ್ಷನ್) ಕೊಡಲು ಒಪ್ಪಿ ಕೊಡಗಿಗೆ ಸಂಪೂರ್ಣ ಪ್ರಜಾಪ್ರಭುತ್ವ ಸರಕಾರವನ್ನು ಮಂಜೂರು ಮಾಡಿಕೊಡಬೇಕು ಹೀಗೆ ಮಾಡಲು ಸಾಧ್ಯವಿಲ್ಲವೆಂತ ಸಂಬಂಧಪಟ್ಟ ಅಧಿಕಾರಿಗಳಿಗೆ ತೋರಿದರೆ ಕೊಡಗಿನ ಜನರಿಗೆ ಇರುವ ಕೋವಿ, ಕತ್ತಿ, ಜಮ್ಮ ಮತ್ತು ಇತರ ಹಕ್ಕುಗಳನ್ನು ಭದ್ರಪಡಿಸಿಕೊಂಡು ಪ್ರತ್ಯೇಕ ಜಿಲ್ಲೆಯಾಗಿಯೇ ಇಟ್ಟುಕೊಳ್ಳುವದಕ್ಕಿನಿಂದ ಮೈಸೂರು ಸಂಸ್ಥಾನಕ್ಕೆ ಸೇರಿಸಬೇಕು" ಎಂಬ ಠರಾವನ್ನು ಚರ್ಚಿಸಿ ತೀರ್ಮಾನಿಸುವುದು.
2. ಜನರಲ್ ಸೆಕ್ರೆಟರಿ ಮ. ಕೆ. ಪಿ. ಚಿಣ್ಣಪ್ಪನವರ ರಾಜಿನಾಮೆ, ಬದಲಿಗೆ ಇನ್ನೊಬ್ಬರ ಚುನಾವಣೆ.
3. ಜಂಡಾ ವಸೂಲಿನ ವಿವಾದ.
4. ಸಂಘದ ಜಮಾ ಖರ್ಚಿನ ಲೆಖ್ಖ.

ಕೊಡಗು [illegible] ಸಂಘ, ಮಡಿಕೇರಿ, ತಾ: [illegible] — ಸಿ. ಎಸ್. ವೆಂಕಪ್ಪಯ್ಯ, (ಪ್ರೆಸಿಡೆಂಟ್.)

ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನ.
೧೮ನೆಯ ಅಧಿವೇಶನ.
ಪ್ರಕಟಣೆ ೪.

ಬರುವ ಡಿಸೆಂಬರ್ ತಿಂಗಳ ಕಡೆಯ ವಾರದಲ್ಲಿ ಮಡಿಕೇರಿಯಲ್ಲಿ ಜರಗತಕ್ಕ ಕರ್ನಾಟಕ ಸಾಹಿತ್ಯ ಪರಿಷತ್ತಿನ ಅಧಿವೇಶನದ ಮುಂದೆ ಸಾಹಿತ್ಯ ಸಂಬಂಧವಾಗಿ ಪ್ರಬಂಧಗಳನ್ನು ಓದಲು ತತ್ಸಂಬಂಧವಾದ ಠರಾವುಗಳನ್ನು ತರಲು ಇಷ್ಟವಿರುವ ಸಾಹಿತ್ಯಾಭಿಮಾನಿಗಳು ತಂತಮ್ಮ ಪ್ರಬಂಧಗಳನ್ನೂ ಠರಾವುಗಳನ್ನೂ ಡಿಸೆಂಬರ್ ತಾರೀಖು ೧೫ರೊಳಗೆ ಹಿಡ್ಲಮನೆ ಅಣ್ಣಾರಾಮ ಶಾಸ್ತ್ರಿ, ಸಾಹಿತ್ಯ ಕಮಿಟಿಯ ಕಾರ್ಯದರ್ಶಿ, ಹೈಸ್ಕೂಲು, ಮಡಿಕೇರಿ— ಈ ವಿಳಾಸಕ್ಕೆ ಕಳುಹಿಸಿ ಕೊಡಬೇಕಾಗಿ ಈ ಮೂಲಕ ವಿಜ್ಞಾಪಿಸಿಕೊಳ್ಳಲಾಗಿದೆ. ಪ್ರಬಂಧಗಳನ್ನು ಅಧಿವೇಶನದ ಮುಂದೆ ಓದಲು ಬಿಡುವ ಹಕ್ಕೂ ಅವುಗಳನ್ನು ಲೇಖನ ಕರ್ತೃಗಳಿಗೆ ಮರಳಿಸುವ ಹಕ್ಕೂ ವಿಷಯ ನಿಯಾಮಕ ಮಂಡಲದ ಕೈಯಲ್ಲಿರುತ್ತದೆ.

ಮೇಲೆ ನಮೂದಿಸಿದ ತಾರೀಖಿನೊಳಗೆ ತಪ್ಪದೆ ಪ್ರಬಂಧಗಳನ್ನಾಗಲೀ ಠರಾವುಗಳನ್ನಾಗಲೀ ರವಾನಿಸಿ ಕೊಡಬೇಕಾಗಿ ವಿನಂತಿ.

ಮಡಿಕೇರಿ, ಕ. ಸಾ. ಪ. ಸ್ವಾ. ಮಂಡಲ, [illegible], ಕಾರ್ತಿಕ ಬಹುಳ ಸಪ್ತಮಿ. — ಜಂಟಿ ಕಾರ್ಯದರ್ಶಿಗಳು.

ಯಂ. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಸಿಶಿಯನ್ಸ್, ರಥಬೀದಿ, ಮಂಗಳೂರು, ಇವರ

ಅನುಭವ ಸಿದ್ಧ ಔಷಧಗಳು.

೧. ಧಾತುಪುಷ್ಟಿ ಲೇಹ—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದುವಿಕೆ, ಸ್ವಪ್ನದಲ್ಲಿ ಧಾತು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ಬಾಧೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಉರಿಯುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು. ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7—0—0.

೨. ಅಶೋಕಾರಿಷ್ಟ ಮತ್ತು ಮಾತ್ರೆ—ಹೆಂಗಸರ ಮುಟ್ಟುದೋಷಗಳು, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾನಹೀನತೆ, ಮೂರ್ಛೆ, ಮಲಬದ್ಧತೆ, ರಕ್ತಹೀನತೆ, ಶ್ವೇತ [illegible] ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನು ಗುಣಪಡಿಸುವದು. 1 ಬಾಟ್ಲಿ ಔಷಧವೂ, 1 ಡಬ್ಬಿ ಮಾತ್ರೆಗೂ ರೂ. 2—4—0; 2ಕ್ಕೆ ರೂ. 4—4—0.

೩. ಮೇಹ ಕುಠಾರ—ಇದು ಮೂತ್ರಸ್ಥಾನದಿಂದ ಕೆಂಪು, ಬಿಳಿದು, ಹಳದಿಯಾಗಿ ಹೋಗತಕ್ಕ ಕೀವನ್ನೂ, ವ್ರಣವನ್ನು, ಉರಿಯನ್ನೂ ಗುಣಪಡಿಸುತ್ತದೆ. ಡಬ್ಬಿ 1ಕ್ಕೆ ರೂ. 2—8—0; 3ಕ್ಕೆ ರೂ. 7—0—0.

೪. ಬಾಲಗ್ರಹ ಗುಟಿಕೆ—ಬಾಲಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರು ಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧ. ಬಾಟ್ಲಿ ಒಂದಕ್ಕೆ ರೂ. 0—10—0. 3ಕ್ಕೆ ರೂ. 1—12—0. (52—30)

ಕೊಡಗಿನಲ್ಲಿ ಸತ್ಯಾಗ್ರಹ.

ಮಡಿಕೇರಿಯಲ್ಲಿ ಸ್ವಯಂ ಸೇವಕರ ಕೈದು.

ಜುಲುಮೆನೆಗಾಗಿ ಎತ್ತುಗಳ ಜಪ್ತು.

ಈ ತಾ. 21ನೇ ಸೋಮವಾರ ಮಡಿಕೇರಿ ಸಂತೆಯಲ್ಲಿ 'ಸೈಕ್ಲೊಸ್ಟೈಲ್' ಮಾಡಿದ 'ವೀರ ಭಾರತಿ' ಎಂಬ ಕೊಡಗಿನ ಸತ್ಯಾಗ್ರಹ ಹಸ್ತ ಪತ್ರಗಳನ್ನು ಹಂಚಿದಕ್ಕಾಗಿ ಶ್ರೀಯುತರುಗಳಾದ ಚೊಟ್ಟೆಯಂಡಮಾಡ ಐಮ್ಯಣ್ಣನವರು ಮತ್ತು ಬೇಗೂರು ಗ್ರಾಮದ ಅಗಸ ಬಣ್ಣಾರ ದಿಮ್ಮಯ್ಯನವರು ಪೊಲೀಸು ಸಬ್ ಇನ್ಸ್ಪೆಕ್ಟರವರಿಂದ ದಸ್ತಗಿರಿ ಮಾಡಲ್ಪಟ್ಟು, ಅದೇ ದಿನ ಸಾಯಂಕಾಲ ಬಸ್ಸಿನಲ್ಲಿ ವೀರರಾಜಪೇಟೆ ಪೊಲೀಸು ಲಾಕಪ್ಪಿಗೆ ಒಯ್ಯಲ್ಪಟ್ಟರು.

ಕಾನೂನುಭಂಗ ಚಳವಳಿಯಲ್ಲಿ ಭಾಗಿಯಾಗಿ ಈಗ ಜೈಲುವಾಸದಲ್ಲಿರುವ ಶ್ರೀಯುತ ಅಲ್ಲುಮಾಡ ಚಿಟ್ಟಿಯಪ್ಪನವರ 20 ರೂ. ಜುಲುಮಾನೆ ವಸೂಲಾತಿಗಾಗಿ ಪೊಲೀಸಿನವರು ಈ ತಾ. 10ರಲ್ಲಿ ಚಿಟ್ಟಿಯಪ್ಪನವರ ತಂದೆ ಐಯ್ಯಪ್ಪನವರ 2 ಎತ್ತುಗಳನ್ನು ಜಪ್ತಿಮಾಡಿ, 15 ದಿವಸಗಳ ವರೆಗೆ ಪಟೇಲರ ಜವಾಬುದಾರಿಯ ಮೇಲೆ ಬಿಟ್ಟಿರುವರೆಂತಲೂ, ಮೆ. ಐಯ್ಯಪ್ಪನವರು ಈ ಬಗ್ಗೆ ಮೆ. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಕೋರ್ಟಿಗೆ ತಕರಾರು ಅರ್ಜಿ ಹಾಕಿರುವರೆಂತಲೂ ವರ್ತಮಾನ.

ಬೊಂಬಾಯಿಯಲ್ಲಿ 2 ತಿಂಗಳ ಜೈಲುವಾಸಕ್ಕೆ ಗುರಿಮಾಡಲ್ಪಟ್ಟಿದ್ದ ಸತ್ಯಾಗ್ರಹೀ ಶ್ರೀಯುತ ಅಜ್ಜಿಕುಟ್ಟಿರ ತಿಮ್ಮಯ್ಯನವರು ಅವಧಿ ತೀರಿ ಈ ತಾ. 17ರಲ್ಲಿ ಬಿಡುಗಡೆಮಾಡಲ್ಪಟ್ಟರೆಂತಲೂ, ಆದರೆ, ಬೊಂಬಾಯಿಯನ್ನು ತಾ. 18ರ ಮಧ್ಯ ರಾತ್ರಿಯೊಳಗೆ ಬಿಟ್ಟು ಹೋಗಬೇಕೆಂದು ಅವರಿಗೆ ಕೂಡಲೆ ಪೊಲೀಸು ಕಮಿಷನರು ಹುಕುಂ ಕೊಟ್ಟರೆಂತಲೂ ವರ್ತಮಾನ.

ಒಳದೇಶ.

ಫ್ರೇಜರ್‌ಪೇಟೆಯಲ್ಲಿ ಪ್ಲೇಗು ಉಂಟಾದ ಮೂರು ಜನರ ಪೈಕಿ ಒಬ್ಬನು ಮೃತಪಟ್ಟಿರುವನೆಂದು ಇತ್ತೀಚೆಗೆ ತಿಳಿದು ಬರುತ್ತದೆ.

ಕರ್ನಾಟಕ ಸಾಹಿತ್ಯ ಸಮ್ಮೇಳನದ 18ನೇ ಅಧಿವೇಶನವು ಬರುವ ಡಿಸೆಂಬರು ತಾ. 28, 29 ಮತ್ತು 30ರಲ್ಲು ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಲ್ಲಿ ನಡೆಯುವ ಏರ್ಪಾಡಾಗುತ್ತಿದೆಯೆಂದು ತಿಳಿಯುತ್ತೇವೆ.

ಕೊಯಮುತ್ತೂರು ಫಾರೆಸ್ಟ್ ಕಾಲೇಜಿನಲ್ಲಿ ರೇಂಜರ್ ಕೆಲಸಕ್ಕೆ ತರಬೇತು ಹೊಂದುತ್ತಿದ್ದ ಮೆ. ಪೋಕೇರಿರ ಜಿ. ನಂಜುಂಡನವರು ಈ ತಾ. 24ರಲ್ಲಿ ಅಲ್ಲಿಯೇ ಕಿವಾಧೀನರಾದರೆಂದು ತಿಳಿಯಲು ವ್ಯಸನ ಪಡುತ್ತೇವೆ.

ಕೊಡಗಿನ ಭವಿಷ್ಯತ್ತನ್ನು ಕುರಿತು ಆಲೋಚಿಸಲು ಕೊಡಗು ಜವಾಬ್ದಾರಿ ಸಂಘದ ಕಾರ್ಯಕಾರಿ ಮಂಡಳಿಯ ಮೀಟಿಂಗೊಂದು ಬರುವ ಡಿಸೆಂಬರು ತಾ. 3ರಲ್ಲಿ ವೀರರಾಜಪೇಟೆ ಸಾರ್ವ ಭಂಡಾರದಲ್ಲಿ ನಡೆಯಲಿಕ್ಕಿದೆ.

ಈ ತಾ. 27ರಲ್ಲಿ ಕಾಕೋಟು ಪರಂಬು ಹಯರ್ ಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವವು ಮೆ. ಎ. ಬಿ. ಬಂಗಿಪ್ಪನವರ ಅಧ್ಯಕ್ಷತೆಯಲ್ಲಿಯೂ, ಜೈಂಟ್ಮೆಂಡಿಂಗ್ ಪೈಮರಿ ಶಾಲೆಯ ವರ್ಧಂತಿಯು ಮೆ. ಬಿ. ಎ. ಚಿಣ್ಣಪ್ಪನವರ ಅಧ್ಯಕ್ಷತೆಯಲ್ಲಿಯೂ ನಡೆಯುವುದಾಗಿ ವರ್ತಮಾನ.

ಅಖಿಲ ಕೊಡಗು ಉಪಾಧ್ಯಾಯರ ಸಂಘದ ಸಮ್ಮೇಳನವು ಬರುವ ಡಿಸೆಂಬರು ತಾ. 3, 4 ಮತ್ತು 5ರಲ್ಲಿ ನಾಪೋಕ್ಲು ಮೋಡಲ್ ಶಾಲೆಯಲ್ಲಿ ಮೆ. ಎ. ರಾಮರಾವ್ ಬಿ. ಎ. ಎಲ್. ಟಿ. ರವರ ಅಧ್ಯಕ್ಷತೆಯಲ್ಲಿ ನಡೆಯುವುದು. ಇದರ ಕಾರ್ಯಕ್ರಮ ಪಟ್ಟಿಯು ಇನ್ನೊಂದು ಕಡೆ ಪ್ರಕಟವಾಗಿದೆ.

ಕುಂದದ ಕೊಟ್ಟು ದೇವಸ್ಥಾನದ ಸಂಬಂಧ ಬೆಟ್ಟ ಮತ್ತು ನಾಡಿನವರಿಗೂ, ಮನೆಯಪಂಡ ಕುಟುಂಬಸ್ಥರಿಗೂ 5 ವರ್ಷಗಳಿಂದಲೂ ನಡೆಯುತ್ತಿರುವ ವಿವಾದವನ್ನು ರಾಜಿಯಿಂದ ತೀರ್ಮಾನಿಸಿಕೊಳ್ಳಲು ಪ್ರಯತ್ನಗಳು ನಡೆಯುತ್ತಿವೆಯೆಂತಲೂ, ಉಭಯ ಕಡೆಯವರೂ ಉದಾರ ಭಾವವನ್ನು ತೋರಿಸಿ ನಾಡಿನ ಒಗ್ಗಟ್ಟನ್ನು ಕಾಪಾಡಬೇಕೆಂತಲೂ ಒಂದು ಬಾತ್ಮಿ.

ಪೆಸ್ಟನ್ಸ್ ಶಾರುಪತ್ಯಗಾರರು ಮತ್ತು ನಾಪೋಕ್ಲು ಬೆಂಚು ಕೋರ್ಟಿನ ಅಧ್ಯಕ್ಷರು ಆಗಿದ್ದ ಮುಪ್ಪಟ್ಟನಾಡು ಗ್ರಾಮದ ಮೆ. ಮಾಡಂಡ ಮಂದಣ್ಣನವರು ತಾ. 20ನೇ ಆದಿತ್ಯವಾರ ಮಡಿಕೇರಿಯಲ್ಲಿ ಕಿವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅದೇ ದಿನ ಅವರ ಶವವನ್ನು ಅವರ ನಾಡು ಮನೆಗೆ ಒಯ್ದು ಅಲ್ಲಿ ದಹನ ಮಾಡಿದರು.

ಕಳೆದ ವಾರ ವೀರರಾಜಪೇಟೆಯಲ್ಲಿ ನಡೆದ 'ಪುಲಿಯಂಡ ಕಪ್ಪಿನ' ಹಾಕಿ ಟೂರ್ನಮೆಂಟಿನಲ್ಲಿ 11 ಟೀಮುಗಳು ಭಾಗಿಗಳಾಗಿದ್ದವು. ತಾ. 22ರಲ್ಲಿ ನಡೆದ ಕಡೆಯ ಆಟದಲ್ಲಿ ಮಡಿಕೇರಿ ಹೈಸ್ಕೂಲು ಟೀಮಿನವರು ಪೊನ್ನಂಪೇಟೆ ಟೀಮಿನವರನ್ನು ಸೋಲಿಸಿ 'ಕಪ್ಪ'ನ್ನು ಗೆದ್ದರೆಂತಲೂ, ಸಬ್ ಮ್ಯಾಜಿಸ್ಟ್ರೇಟರಾದ ಮೆ. ಕೆ. ರಾಮಪ್ಪನವರು ಗೆದ್ದವರಿಗೆ 'ಕಪ್ಪ'ನ್ನು ಕೊಟ್ಟರೆಂತಲೂ ತಿಳಿಯಬರುತ್ತದೆ.

ಬೆಂಗಳೂರಿನ ಕನ್ಯಾ ಗುರುಕುಲದಲ್ಲಿ ವಿದ್ಯಾಭ್ಯಾಸಂಗ ಮಾಡುತ್ತಿರುವ ಮೆ. ಕೆ. ಪಿ. ಚಿಣ್ಣಪ್ಪನವರ ಪುತ್ರಿ (ಕೊಡಗು) ಕುಮಾರಿ ಪದ್ಮಾವತಿಯವರು ಕಳೆದ ತಾರೀಕು 31ರಲ್ಲಿ ಅಲ್ಲಿ ಆದ ಆರ್ಯ ಸಮಾಜದ ವಾರ್ಷಿಕ ಸಮ್ಮೇಳನದಲ್ಲಿ 'ಅಧುನಿಕ ಜಾತಿ ವಿಚಾರಗಳಿಂದ ದೇಶಕ್ಕೆ ತುಂಬಾ ಹಾನಿ' ಎಂಬ ವಿಷಯದಲ್ಲಿ ಹಿಂದೀ ಭಾಷೆಯಲ್ಲಿ ಪಬ್ಲಿಕ್ ಸ್ಪರ್ಧೆಗೆ ನಿಂತು ಪ್ರಥಮ ಭಾಷಣಕಾರರಲ್ಲಿ ಮೊದಲನೆಯದಾಗಿ ಬಂದರೆಂತಲೂ, ಆ ಭಾಷಣಕ್ಕೆ ಮೆಚ್ಚಿ ಸಭಾಧ್ಯಕ್ಷರು ಬಹಳ ಕ್ರಯ ಬಾಳುವ ಅನೇಕ ಗ್ರಂಥಗಳನ್ನು ಬಹುಮಾನ ಕೊಟ್ಟರೆಂತಲೂ, ದಕ್ಷಿಣದಿಂದ ಬಂದರ ಕನ್ಯಾ ಸಮಾಜದಿಂದ ಬಂದವರು ಎಲ್ಲರನ್ನೂ ಸೋಲಿಸಿದ್ದಕ್ಕೆ ಅಲ್ಲಿಯವರು ಬಹಳ ಶ್ಲಾಘಿಸಿದರೆಂದೂ, ಅದೇ ದಿನ ಸಾವಿರಾರು ಮಹಿಳೆಯರು ನೆರೆದಿದ್ದ ಸಭೆಯಲ್ಲಿ ಸ್ವದೇಶಿಪ್ರಚಾರ ಸಂಬಂಧ ಉಪನ್ಯಾಸ ಕೊಟ್ಟರೆಂದೂ, ತಿಳಿಯಲು ಸಂತೋಷಪಡುತ್ತೇವೆ.

ಹಿಂದೂದೇಶ.

ತಾ. 17ರಲ್ಲಿ ಬೊಂಬಾಯಿಯಲ್ಲಿ 3 ಕಾಂಗ್ರೆಸು ಕೆಲಸಗಾರರಿಗೆ ಆರಾರು ತಿಂಗಳು ಸಜೆ ವಿಧಿಸಲಾಯಿತು.

ತಾ. 22ರಲ್ಲಿ ಲಾಹೋರಿನಲ್ಲಿ ಪರದೇಶೀ ಬಟ್ಟೆ ಅಂಗಡಿಯನ್ನು ಪಿಕೆಟ್ ಮಾಡಿದಕ್ಕಾಗಿ ಮೂರು ಸತ್ಯಾಗ್ರಹಿಗಳಿಗೆ ನಾಲ್ಕು ತಿಂಗಳು ಸಜೆ ವಿಧಿಸಲಾಯಿತು.

ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದವರೆಂದು ಮೆ. ಆರ್. ಕೆ. ಟಿವಾರಿಯವರು ಈ ತಾ. 22ರಲ್ಲಿ ಕಾಶಿಯಲ್ಲಿ ಕೈದುಮಾಡಲ್ಪಟ್ಟರು.

ಈ ತಾ. 18ರಲ್ಲಿ ಮದ್ರಾಸಿನ ಕರೆನ್ಸಿ ಆಫೀಸಿನ ಗುಮಾಸ್ತನಾದ ವಿ. ಪಿ. ಅರುಣಾಚಲಂ ಪಿಳ್ಳೆಯೆಂಬುವನು 300 ಒಂದು ನೂರು ರೂಪಾಯಿಯ ನೋಟುಗಳನ್ನು ಕಳವು ಮಾಡಿ ಕಾಣದೆ ಆಗಿರುವನು.

ಕಲ್ಕತ್ತೆಯ ಸರ್ ವಾಟ್ಸನ್ ಸಾಹೇಬರವರ ಕಡೆಗೆ ಪಿಸ್ತೂಲು ಹಾರಿಸಿದ ಸುನೀಲ ಚಟರ್ಜಿಗೆ ಅಜನ್ಮ ದ್ವೀಪಾಂತರವಾಸದ ಶಿಕ್ಷೆಯಾಯಿತು. (ಅವನ ಪ್ರಾಯ 23) ಉಳಿದ ಮೂವರನ್ನು ಬಿಡುಗಡೆ ಮಾಡಿದರು.

ಸುಭಾಷ್ ಚಂದ್ರಬೋಸರಿಗೆ ಕ್ಷಯವ್ಯಾಧಿ, ಅವರ ಆರೋಗ್ಯ ಬಹಳ ಮಟ್ಟಿಗೆ ಕೆಟ್ಟು ಹೋಗಿರುವದರಿಂದಲೂ, ಸೆನ್‌ಗುಪ್ತರವರು ಬಹು ಅನಾರೋಗ್ಯ ಸ್ಥಿತಿಯಲ್ಲಿರುವದರಿಂದಲೂ ಇವರಿಬ್ಬರನ್ನು ಕೂಡಲೇ ಜೈಲಿನಿಂದ ಬಿಡುಗಡೆಮಾಡಬೇಕೆಂದು ಕಲ್ಕತ್ತಾದಲ್ಲಿ ಪಬ್ಲಿಕ್ ಮೀಟಿಂಗುಗಳು ನಡೆದು ಠರಾವುಗಳು ಪಾಸುಮಾಡಲಾದವು.

ಅಬೀಸೀನಿಯಾದ ಮೇರೆ 1½ ವರ್ಷ ಕಠಿಣ ಸಜೆಗೂ, 20,000 ರೂ. ಜುಲುಮಾನೆಗೂ ಗುರಿಮಾಡಲ್ಪಟ್ಟಿದ್ದ ಕೋಲಾಪುರದ ಸಾಹುಕಾರರಾದ ಮೆ. ಗುಲಾಬ್‌ಚಂದ್ ಹಿರಾಚಂದ್‌ರವರ ಅಪೀಲಿನ ಮೇರೆ ಹೈಕೋರ್ಟಿನವರು ಅವರನ್ನು ಖುಲಾಸು ಮಾಡಿರುವರು.

ಬರೋಡದ ಚುನಾವಣೆಯಲ್ಲಿ ಬರತಕ್ಕವನ್ನು ಇಡಿಯಾಗಿ ಅಂದ ಪ್ರತ್ಯೇಕಿಸಬಾರದೆಂಬುವ ಪಕ್ಷ 43 ಮೆಂಬರುಗಳೂ, ಪ್ರತ್ಯೇಕಿಸಬೇಕೆನ್ನುವವರ ಪಕ್ಷ 29 ಮೆಂಬರುಗಳೂ, ಇವೆರಡು ಪಕ್ಷಕ್ಕೆ ಸೇರದ 9 ಮೆಂಬರುಗಳೂ ಚುನಾಯಿಸಲ್ಪಟ್ಟಿರುವರು. ಪ್ರತ್ಯೇಕಿಸಬಾರದೆಂಬುವವರ ಪಕ್ಷಕ್ಕೆ ಬಹುಮತ ದೊರೆತಿದೆ. ಆದರೂ ಆ ಪಕ್ಷದ ಮುಂದಾಳು ಮಂತ್ರಿ ಮಂಡಳಿಯನ್ನು ಏರ್ಪಡಿಸಲು ಒಪ್ಪಿಕೊಂಡಿರುವುದಿಲ್ಲ.

ಧೂಳಿಯಾದ ಜೈಲಿನಲ್ಲಿರುವ ಮೆ. ಜಮ್ನಾಲಾಲ್ ಬಜಾಜರವರ ತೂಕವು 70 ಪೌಂಡು ಕಡಿಮೆಯಾಗಿದೆ; ಇನ್ನು ಕೆಟ್ಟ ಕಡಿಮೆಯಾಗಲು ಸಾಧ್ಯವಿಲ್ಲ. ಅವರನ್ನು ಹೊಟ್ಟೆಯ ಕೆಮ್ಮಲೂ, ಎದೆನೋವೂ ಬಾಧಿಸುತ್ತಿದೆ. ಕಿವಿ ನೋವೂ ದಿನೇ ದಿನೇ ಜೋರಾಗುತ್ತಿದೆ. ಅವರನ್ನು ಕೂಡಲೇ ನ್ಯಾಯವಾದ ಡಾಕ್ಟರಿಂದ ಪರೀಕ್ಷಿಸದೆ ಹೋದರೆ ಅವರ ಆರೋಗ್ಯ ಬಹು ಮಟ್ಟಿಗೆ ಕೆಟ್ಟು ಹೋಗುವದೆಂದು ಅವರನ್ನು ನೋಡಿದ ಜಾನಕೀಬಾಯಿ ಬಜಾಜ್‌ರವರು ಪ್ರಕಟಿಸಿರುತ್ತಾರೆ.

ಇಂಗ್ಲೆಂಡ್‌ಗಾಗಿ ಅಮೇರಿಕಕ್ಕೆ ಹೋಗಿದ್ದ ಮಿ. ಶಿಲಾಸ ಕ್ಲೀಕ್ ಎಂಬುವವರು ತಾ. 22ರಲ್ಲಿ ಲಂಡನಿಗೆ ತಲಪಿದರು. ಅವರು ತಾ. 23ರಲ್ಲಿ ಪಬ್ಲಿಕಿನಲ್ಲಿ ಭಾಷಣ ಮಾಡಿದಾಗ್ಯೆ, ಅಮೆರಿಕದ ಒಪ್ಪಂದದಿಂದ ಹಿಂದೂ—ಮುಸ್ಲಿಂ—ಸಿಖ್ ಒಗ್ಗಟ್ಟು ಸಾಧಿಸಲ್ಪಟ್ಟಿದೆಯೆಂದೂ, ಈ ಒಪ್ಪಂದಕ್ಕೆ 95% ಮುಸಲ್ಮಾನರ ಸಮ್ಮತಿ ಇದೆಯೆಂದೂ, ಇದನ್ನು ವಿರೋಧಿಸುವವರು ಬಹು ಸ್ವಲ್ಪ ಮಂದಿ ಮಾತ್ರವೆಂದೂ, ಇನ್ನು ಬ್ರಿಟಿಷ್ ಸರ್ಕಾರಕ್ಕಾಗಿ ಹಿಂದೀಯರ ಒಗ್ಗಟ್ಟಿನ ಕೋರಿಕೆಯನ್ನು ಬ್ರಿಟಿಷರು ತಿರಸ್ಕರಿಸಲು ಸಾಧ್ಯವಿಲ್ಲವೆಂದೂ ಮುಂತಾಗಿ ಹೇಳಿದರು.

ಪಾರ್ಲಿಮೆಂಟಿನ ಮೆಂಬರರಾದ ಮೆ. ಹೆಚ್. ಕೆ. ಹೇಲ್ಸ್‌ರವರು ಹಿಂದೂಸ್ಥಾನದ ಪ್ರವಾಸವನ್ನು ಮುಗಿಸಿಕೊಂಡು ವಾಪಸು ಇಂಗ್ಲೆಂಡಿಗೆ ಹೋಗುವ ಮುಂಚೆ ಮಹಾತ್ಮರ ಭೇಟಿಗೆ ಸರ್ಕಾರದವರು ಬಿಡದಿರುವ ಗಾಂಧೀಜಿಯವರಿಗೆ ಬರೆದ ಪತ್ರದಲ್ಲಿ, 'ಕಾಂಗ್ರೆಸಿನವರು ದುಂಡು ಮೇಜು ಪರಿಷತ್ತಿನಲ್ಲಿ ಭಾಗವಹಿಸದ್ದು ವ್ಯಸನಕರ. ಕಾಂಗ್ರೆಸ್ಸಿನ ಸಹಕಾರವಿಲ್ಲದೆ ಮಾಡುವ ರಚನೆಯನ್ನು ಜಾರಿಗೆ ತರಲು ಸಾಧ್ಯವಿಲ್ಲ. ಇದನ್ನು ಮಾಡಲು, ಇಂಗ್ಲೆಂಡಿಗೂ ಭಾರತಕ್ಕೂ ಹಿಂದೂಸ್ಥಾನದಲ್ಲದೆ ಬೇರೆ ಯಾರಿಂದಲೂ ಸಾಧ್ಯವಿಲ್ಲ. ಆದುದರಿಂದ ನೀವು ಮತ್ತೂ ತ್ಯಾಗಮಾಡಿ, ರಾಜಿ ಸಂಧಾನಕ್ಕೆ ಯತ್ನಿಸಬೇಕು.' ಎಂದು ಮುಂತಾಗಿ ಬರೆದಿರುವರು.

'ಅಸ್ಪೃಶ್ಯತಾ ನಿವಾರಣೆಯ ಕೆಲಸಕ್ಕೇನೇ ನಿಮ್ಮ ಸಮಯವನ್ನೆಲ್ಲಾ ಉಪಯೋಗಿಸಲು ನಿಶ್ಚಯಿಸಿರುವಿರೋ' ಎಂದು ಒಬ್ಬ ಪತ್ರಿಕಾ ಪ್ರತಿನಿಧಿಯು ಕೇಳಿದ್ದಕ್ಕೆ, ಮಹಾತ್ಮ ಗಾಂಧಿಯವರು ಹೇಳಿರುವದೇನೆಂದರೆ—'ನನ್ನ ಈಗಿನ ಇರಾದೆಯು ಹಾಗೆಂದು ಹೇಳಲಾರೆ. ಅತ್ಯವಶ್ಯವಾದ ಅಸ್ಪೃಶ್ಯತಾ ನಿವಾರಣೆಗೂ, ಹಾಗೆಯೇ ಬೇರೆ ಹಲವು ಕೆಲಸಗಳಿಗೂ ನನ್ನ ಜೀವವನ್ನು ಧಾರೆ ಎರೆದಿರುವೆನು. ನನ್ನ ಜೀವವನ್ನು ಭಾಗಗಳಾಗಿ ವಿಂಗಡಿಸಲು ಸಾಧ್ಯವಿಲ್ಲ; ಅದು ಒಂದು ಇಡೀ ಆಗಿದೆ. ಯಾವ ಕೆಲಸವನ್ನು ನಾನು ಮಾಡುವದಾದರೂ, ಸತ್ಯ ಮತ್ತು ಅಹಿಂಸಾತತ್ವವನ್ನು ಕಾಪಾಡುವ ಉದ್ದೇಶದಿಂದಲೇ ಮಾಡುವದಾಗಿದೆ.'

ಗುರುವಾಯೂರು ದೇವಸ್ಥಾನದ ಮುಖ್ಯಾಧಿಕಾರಿ ಜಾಮೋರಿನ್‌ರವರು ಅಲ್ಲಿಯ ದೇವಸ್ಥಾನವನ್ನು ಅಸ್ಪೃಶ್ಯರಿಗಾಗಿ ತೆರೆಯಬೇಕೆಂದು ಮಹಾತ್ಮರು ತಂತಿ ಕೊಟ್ಟರು. ಅದಕ್ಕೆ ಸ್ಥಿರವಾಗಿ ಮುಖ್ಯಾಧಿಕಾರಿಯು ಉತ್ತರ ಕೊಡದ್ದು, ಇದು ತನ್ನಿಂದ ಅಸಾಧ್ಯವೆಂದಿರುವರು. ಈ ದೇವಸ್ಥಾನದ ಧರ್ಮದರ್ಶಿಗಳನ್ನು ಒಂದುಗೂಡಿಸುವುದಕ್ಕಾಗಿ ಪಂಡಿತ ಮಾಲವೀಯರು ಆದಷ್ಟು ತ್ವರೆಯಿಂದ ಮಲಬಾರಿಗೆ ಹೋಗಬೇಕೆಂದು ಅಖಿಲ ಭಾರತ ಅಸ್ಪೃಶ್ಯತಾ ನಿರೋಧ ಚಳವಳಿಯ ಅಧ್ಯಕ್ಷರಾದ ಶ್ರೀ. ಜಿ. ಡಿ. ಬಿರ್ಲಾರವರು ಬರೆದಿದ್ದುದರಿಂದ ಮಾಲವೀಯರು ಅಲ್ಲಿಗೆ ಬೇಗನೇ ಹೊರಡಲಿರುವರು.

ಇನ್ನೂ ಭಯೋತ್ಪಾದಕ ಅತ್ಯಾಚಾರಗಳು ಹೆಚ್ಚುತ್ತಲೇ ಇವೆ! ಕಳೆದ ಶುಕ್ರವಾರ ರಾಜಶಾಹಿ (ಬಂಗಾಳ) ಸೆಂಟ್ರಲ್ ಜೈಲಿನ ಸುಪರಿಂಟೆಂಡೆಂಟರಾದ ಮೆ. ಚಾರ್ಲ್ಸ್ ಲ್ಯೂಕಸ್‌ರವರು ತಮ್ಮ ಪತ್ನಿ ಹಾಗೂ ಮಗಳೊಂದಿಗೆ ಮೋಟಾರಿನಲ್ಲಿ ವಿಹಾರಾರ್ಥ ಹೋಗುತ್ತಿರಲು, ಅಕಸ್ಮಾತ್ತಾಗಿ ಯುವಕನೊಬ್ಬನು ತನ್ನ ಸೈಕಲನ್ನು ಅವರ ಮೋಟಾರಿನ ಎದುರಿಗೆ ಬಿಸಾಡಿದನು. ಲ್ಯೂಕಸರವರು ತಮ್ಮ ಮೋಟಾರನ್ನು ನಿಲ್ಲಿಸಿದರು. ತಕ್ಷಣವೇ ಯುವಕನ ಕೈಯಲ್ಲಿ ಪಿಸ್ತೂಲು ಮಿಂಚಿತು. ಸಾಹೇಬರ ಕಡೆಗೆ ಹಾರಿತು! ಒಂದು ಪೆಟ್ಟು ಮುಖಕ್ಕೆ, ಇನ್ನೊಂದು ಕುತ್ತಿಗೆಗೆ!! ಯುವಕನು ಪರಾರಿಯಾದನು. ರಕ್ತಸ್ರಾವದಿಂದ ಬಿದ್ದ ಸಾಹೇಬರನ್ನು ಜೈಲು ಗಾಡಿಯಲ್ಲಿ ಕಲ್ಕತ್ತೆಗೊಯ್ದರು. ರಾಜಶಾಹಿ ನಗರದಲ್ಲಿ ಮನೆಜಪ್ತಿಗಳಾರಂಭವಾಗಿವೆ. ಸಂದೇಹದಿಂದೊಬ್ಬನನ್ನು ಸೆರೆ ಹಿಡಿದಿರುವರು. ನಗರದಲ್ಲಿ ಈ ಘಟನೆಯಿಂದ ಸಂಕ್ಷೋಭವೇ ಮಾಯವಾದಂತೆ ಹಾಹಾಕಾರ!

ಅಂಕೋಲೆ ತಾಲೋಕಿನಲ್ಲಿ ಕಾಂಗ್ರೆಸ್ಸು ಜನಗಳು ಪಿಕೆಟಿಂಗ್ ಮಾಡಿದ್ದರಿಂದ ೩೭ ಹೆಂಡದ ಅಂಗಡಿಗಳು ಮುಚ್ಚಲ್ಪಟ್ಟವು. ಮಧ್ಯೆ ತಿಂಗಳಿನಲ್ಲಿ ಹೆಂಡದ ಅಂಗಡಿ ಹರಾಜಾದಾಗ ಹೊಸದಾಗಿ ೭ ಅಂಗಡಿಗಳು ತೆರೆಯಲ್ಪಟ್ಟವು. ಈ ಅಂಗಡಿಗಳಿಗೆ ಸೇರಿದ ಸಾವಿರಾರು ಈಚಲು ಗಿಡಗಳನ್ನು ಕತ್ತರಿಸಿ ಹಾಕಿದರು. ಹಾಗೆ ಕತ್ತರಿಸಿ ಹಾಕಿದ್ದರಿಂದ ಹೆಂಡದ ಅಂಗಡಿ ಮಾಲೀಕರಿಗೆ ಬಹಳ ನಷ್ಟವಾಗಿ ಎಲ್ಲಾ ಅಂಗಡಿಗಳನ್ನೂ ಮುಚ್ಚಿದರು. ಅನಂತರ ಚಳವಳಿಯನ್ನು ಪ್ರಚಾರ ಮಾಡುವ ಕಾಂಗ್ರೆಸ್ಸು ಜನಗಳನ್ನು ಹುಡುಕಲು ಪೊಲೀಸಿನವರು ಪ್ರಯತ್ನಿಸುತ್ತಿದ್ದಾರೆ. ಅಂಕೋಲ ತಾಲೋಕಿನಲ್ಲಿ ಕಂದಾಯ ಕೊಡತಕ್ಕುದಲ್ಲವೆಂದು ಚಳವಳಿಯನ್ನು ಪ್ರಚಾರ ಮಾಡುತ್ತಿರುವ ಬಾಸಗೋಡಿನ ಶ್ರೀ. ರಾಮನಾಯ್ಕರನ್ನು ಹುಡುಕುವುದಕ್ಕೋಸ್ಕರ ಅನೇಕ ಮನೆಗಳನ್ನು ಪೊಲೀಸರು ಜಪ್ತಿ ಮಾಡಿದರು.

ಅಫಘಾನಿಸ್ತಾನ ನಾದಿರ್ ಖಾನರಾದ ಅಮಾನುಲ್ಲರನ್ನು ಪುನಃ ಸಿಂಹಾಸನದ ಮೇಲೆ ಕುಳ್ಳಿರಿಸಲು ಕಾಬೂಲಿಗೆ ಬಂದು ಪಿತೂರಿ ನಡೆಸುತ್ತಿದ್ದ ಗುಲಾಂ ನಬೀಖಾನ್ ಎಂಬ ಅಮಾನುಲ್ಲರ ಮಾಜಿ ಸೇನಾಧ್ಯಕ್ಷನಿಗೆ ರಾಜದ್ರೋಹದ ಅಪರಾಧಕ್ಕಾಗಿ ಮರಣ ದಂಡನೆ ವಿಧಿಸಲಾಯಿತು.

3ನೇ ದುಂಡು ಮೇಜು ಪರಿಷತ್ತು ಈ ತಾ. 17ರಲ್ಲಿ ಲಂಡನಿನಲ್ಲಿ ಪ್ರಾರಂಭವಾಯಿತು. ಅಧ್ಯಕ್ಷರಾಗಿದ್ದ ಪ್ರಧಾನಿ ಮೆ. ರಾಮ್ಸೆ ಮೆಕ್ಡೊನಾಲ್ಡರವರು ಕಳೆದ ಪರಿಷತ್ತುಗಳ ಕೆಲಸವನ್ನು ವಿವರಿಸಿ, ಮುಂದಿನ ಕಾರ್ಯಕ್ರಮವನ್ನು ಸೂಚಿಸಿದರು. ಕೆಲವು ಸತ್ಕಾರದ ಭಾಷಣಗಳಾದ ಮೇಲೆ ಅರ್ಧ ಗಂಟೆಯಲ್ಲಿ ತಾ. 21ಕ್ಕೆ ಮೀಟಿಂಗು ಮುಂದರಿಸಲಾಯಿತು. ತಾ. 21ರಲ್ಲಿ ಪರಿಷತ್ತಿನ ಮೆಂಬರುಗಳೆಲ್ಲಾ ಸೇರಿ ಲೋಥಿಯನ್ (ಫ್ರಾಂಚೈಸ್) ಕಮಿಟಿಯ ಶಿಫಾರಸ್ಸುಗಳನ್ನು ಚರ್ಚಿಸಿದರು. ತಾ. 23ರ ವರೆಗೆ ನಡೆದ ಚರ್ಚೆಯಲ್ಲಿ ಲೋಥಿಯನ್ ಕಮಿಟಿ ರಿಪೋರ್ಟಿನ ಹೆಚ್ಚಿನ ಭಾಗಗಳು ಒಪ್ಪಲ್ಪಟ್ಟವು. ಫ್ರೀ ಸ್ಕೂಲಿನ ಹಕ್ಕನ್ನು ಕುರಿತು ಚರ್ಚೆಯು ನಡೆಯುತ್ತಾ ಇದೆ.

ಪ್ರಕಟಣೆ.

ಕರ್ನಾಟಕ ಸಾಹಿತ್ಯಪರಿಷತ್ತು ೧೮ನೇ ಸಮ್ಮೇಳನ.

ಪರಿಷತ್ತಿನವರ ನಿಭಾಯಿಸಿ ಮೇರೆಗೆ ಡೆಲಿಗೇಟ್ ಫೀಜಿನ ವಿಷಯ ಚರ್ಚಿಸಲು ಮುಖ್ಯಸಭೆಯೊಂದು, ಈ ತಾರೀಕು 26—11—32ನೇ ಶನಿವಾರ ಬೆಳಗ್ಗೆ 9 ಗಂಟೆಗೆ ಹೈಸ್ಕೂಲಿನಲ್ಲಿ ನಡೆಯುವ ಕಾರಣ ಸರ್ವರೂ ದಯಮಾಡಿಸಬೇಕಾಗಿ ಕೋರಿದೆ.

ಮಡಿಕೇರಿ, ಪಂಚಾಯತ್ ಕಾರ್ಯದರ್ಶಿಗಳು.
ತಾ. 24—11—32.

ಕೊಡಗು.

ಸನ್ ೧೯೩೨ನೇ ಇಸವಿ

ನವಂಬರ್ ೨೫. ತಾರೀ ಶುಕ್ರವಾರ.

ಪ್ರೆಸ್ ಆರ್ಡಿನೇನ್ಸ್

ಜಾರಿಯಲ್ಲಿರುವ ಪರಿವಿಗೆ

ನಾವು

ಅಗ್ರಲೇಖನ

ವನ್ನು

ಪ್ರಕಟಿಸುವುದಿಲ್ಲ.

ಕೋಮುವಾರು ಸಮಸ್ಯೆ.

ಅಲ್ಲಹಾಬಾದು ಪರಿಷತ್ತಿನ ಜಯ.

ಒಗ್ಗಟ್ಟು ಕಮಿಟಿಯ ತೀರ್ಮಾನ.

ಹಿಂದೂ–ಮುಸ್ಲಿಂ–ಸಿಕ್ಖರ ಒಪ್ಪಂದ.

ಮುಂದಾಳುಗಳ ಅಭಿಪ್ರಾಯ.

ಈ ತಿಂಗಳ ಸುರುವಿನಲ್ಲಿ ಅಲ್ಲಾಹಾಬಾದಿನಲ್ಲಿ ಪ್ರಾರಂಭವಾದ ಹಿಂದೂ–ಮುಸ್ಲಿಂ–ಸಿಕ್ ಪ್ರತಿನಿಧಿಗಳ ಸಭೆಯಿಂದ ಒಗ್ಗಟ್ಟನ್ನು ಸಾಧಿಸಲು ನೇಮಿಸಲ್ಪಟ್ಟ ಕಮಿಟಿಯು 17 ದಿವಸಗಳು ಎಡೆಬಿಡದೆ ಕೆಲಸ ಮಾಡಿ, ತಾ 17ರಲ್ಲಿ ತನ್ನ ಕಾರ್ಯವನ್ನು ಜಯಪ್ರದವಾಗಿ ಅಂತ್ಯಗೊಳಿಸಿತು. ಈ ಒಗ್ಗಟ್ಟಿನ ತೀರ್ಮಾನಕ್ಕೆ ಬರಲು ಆ ಕಮಿಟಿಯವರು 150 ಗಂಟೆ ಕಾಲ ದೀರ್ಘ ಚರ್ಚೆ ಮಾಡಬೇಕಾಯಿತು. ಇಷ್ಟು ದೀರ್ಘ ಕಾಲ ಎಡೆಬಿಡದೆ ಚರ್ಚೆ ನಡಿಸಿದ ಮೀಟಿಂಗೇ ಈ ವರೆಗೆ ಆಗಿರುವುದಿಲ್ಲವಂತೆ. ಮಹಾತ್ಮ ಗಾಂಧಿಯವರು ಕಳೆದ ವರ್ಷ 2 ನೇ ದುಂಡು ಮೇಜು ಪರಿಷತ್ತಿಗೆ ಹೋಗುವ ಮೊದಲು ಬೊಂಬಾಯಿಯಲ್ಲಿ ಕಾಂಗ್ರೆಸಿನ ವರ್ಕಿಂಗ್ ಕಮಿಟಿಯ ಮೀಟಿಂಗು 14 ದಿವಸಗಳ ವರೆಗೆ ನಡೆಯಿತು. ಆ ದೀರ್ಘ ಚರ್ಚೆಯನ್ನೂ ಕೂಡ ಈ ಕಮಿಟಿಯು ಮೀರಿತು.

ಒಗ್ಗಟ್ಟಿನ ಕಮಿಟಿಯನ್ನು ನೇಮಿಸಿದ ಸರ್ವಪಕ್ಷೀಯ ಸಭೆಯಲ್ಲಿ 63 ಹಿಂದೂಗಳೂ, 39 ಮುಸಲ್ಮಾನರೂ, 11 ಸಿಖ್ಖರೂ ಮತ್ತು 8 ಇಂಡಿಯನ್ ಕ್ರಿಶ್ಚಿಯನರೂ, ಒಟ್ಟು 121 ಪ್ರತಿನಿಧಿಗಳು ಹಾಜರಿದ್ದರು. ಇವರು, ಹಿಂದೂ ಮಹಾ ಸಭೆ, ಪಂಜಾಬಿನ ರಾಷ್ಟ್ರೀಯ ಹಿಂದೂ ಸಭಾ, ಇಂಡಿಯನ್ ನೇಶನಲ್ ಕಾಂಗ್ರೆಸ್, ಲಿಬರಲ್ ಪಕ್ಷ, ನೇಶನಲಿಸ್ಟ್ ಪಕ್ಷ, ವ್ಯಾಪಾರಿಗಳ ಸಂಘ, ಜಮೀನ್ದಾರರ ಪಕ್ಷ, ಸಿಂಧಿನ ಹಿಂದುಗಳ ಪಕ್ಷ, ಅಖಿಲ ಭಾರತ ಖಿಲಾಫತ್ ಕಮಿಟಿ, ಅಖಿಲಭಾರತ ಮುಸ್ಲಿಂ ಕಾನ್‌ಫರೆನ್ಸ್, ಅಖಿಲ ಭಾರತ ನೇಶನಲಿಸ್ಟ್ ಪಾರ್ಟಿ, ಅಖಿಲ ಭಾರತ ಮುಸ್ಲಿಂ ಲೀಗ್, ಮುಸ್ಲಿಂಯೂತ್ ಲೀಗ್ ಜಮಿಯತ್ ಉಲ್ ಉಲೇಮಾ ಹಿಂದ್, ಪಂಜಾಬಿನ ಅಹರಾರ್ ಪಾರ್ಟಿ, ಅಖಿಲ ಭಾರತ ಶಿಯಾ ಕಾನ್‌ಫರೆನ್ಸ್, ಸಿಖ್ಖರು ಮತ್ತು ಇಂಡಿಯನ್ ಕ್ರಿಶ್ಚಿಯನರ ಪ್ರತಿನಿಧಿಗಳಾಗಿದ್ದರು.

ಈ ಕಮಿಟಿಯವರು ಅಖೈರಿನಲ್ಲಿ ಮಾಡಿದ ಒಪ್ಪಂದದ ಪ್ರತಿಯೊಂದು ಭಾಗವೂ ಚೆನ್ನಾಗಿ ಚರ್ಚಿಸಲ್ಪಟ್ಟು, ಅದಕ್ಕೆ ಸಂಬಂಧಪಟ್ಟ ಪಾರ್ಟಿಯ ಮೆಂಬರುಗಳಿಗೆ ತೃಪ್ತಿಕರವಾದ ಮೇಲೆ ಸರ್ವಾನುಮತದಿಂದ ಮಂಜೂರು ಮಾಡಿದ್ದಾಗಿದೆ. ಅಲ್ಲದೆ ಸದರಿ ಮೆಂಬರುಗಳು ಈ ಒಪ್ಪಂದವನ್ನು ತಮ್ಮ ತಮ್ಮ ಸಂಸ್ಥೆಗಳ ಮುಂದಿಟ್ಟು, ಅವುಗಳ ಅಭಿಪ್ರಾಯಗಳನ್ನು ಡಿಸೆಂಬರು ತಾರೀಕು 4ರಲ್ಲಿ ನಡೆಯುವ ಸರ್ವ ಪಕ್ಷೀಯ ಸಭೆಗೆ ತಿಳಿಸಲು ಒಪ್ಪಿರುವರು. ಸದರಿ ಕಾನ್‌ಫರೆನ್ಸಿನಲ್ಲಿ ಎಲ್ಲಾ ತರಹದ ಸೂಚನೆಗಳನ್ನು ಸಾಂಗವಾಗಿ ಚರ್ಚಿಸಿ ಒಂದು ತೀರ್ಮಾನಕ್ಕೆ ಬರಲಾಗುವುದು.

ಒಪ್ಪಂದದ ಶರತುಗಳು.

ಪ್ರಾಥಮಿಕ ಹಕ್ಕುಗಳ ಪಟ್ಟಿಯಲ್ಲಿ ಪ್ರತಿಯೊಂದು ಕೋಮಿನ ಸಾಹಿತ್ಯ, ಭಾಷೆ, ವಿದ್ಯೆ, ಮತಾಚಾರಗಳ ಆಚರಣೆ ಮುಂತಾದವುಗಳಿಗೆ ತಕ್ಕ ಭದ್ರತೆ ಇಡಲಾಗುವುದು. ಕೋಮುಗಳಿಗೆ ಸಂಬಂಧಿಸುವ ಕಾನೂನುಗಳೂ ಕಾಯಲ್ಪಡುವವು. ಕಮ್ಮಿ ಸಂಖ್ಯೆ ಕೋಮಿನವರ ರಾಜಕೀಯ ಮೊದಲಾದ ಹಕ್ಕುಗಳ ಭದ್ರತೆಯು ಮಧ್ಯವರ್ತಿ ಸರಕಾರದ ಅಧೀನದಲ್ಲಿರುವವು.

ಬಲೂಚಿಸ್ತಾನಕ್ಕೆ ಕಾನೂನು ಬದ್ಧವಾದ, ಕ್ರಮವಾದ ಆಡಳಿತ ಪದ್ಧತಿಯನ್ನು ಕೊಡಬೇಕು. ಇದನ್ನು ಸಾಧಿಸುವ ದಾರಿಯು ಇನ್ನು ಆಲೋಚಿಸಲ್ಪಡಲಾಗುವುದು.

ವಾಯುವ್ಯ ಗಡೀ ಪ್ರಾಂತ್ಯಕ್ಕೂ ಬೇರೆ ಪ್ರಾಂತ್ಯಗಳ ಆಡಳಿತ ರಚನೆಯನ್ನೇ ಕೊಡಬೇಕು.

ಸರಕಾರಿ ಉದ್ಯೋಗಗಳಿಗೆ ಜನರನ್ನು ಆರಿಸಲು ಒಂದು ಪಬ್ಲಿಕ್ ಸರ್ವಿಸ್ ಕಮಿಷನ್ ಇರತಕ್ಕದ್ದು. ಉದ್ಯೋಗಗಳ ಕಾರ್ಯದಕ್ಷತೆಯನ್ನು ಕಾಪಾಡುವುದೂ, ಎಲ್ಲಾ ಕೋಮುಗಳಿಗೆ ಸರಿಯಾದ ಅವಕಾಶ ದೊರೆಯುವಂತೆ ಮಾಡುವುದೂ ಈ ಕಮಿಷನಿನ ಧ್ಯೇಯವಾಗಿರಬೇಕು. ಈ ಕಮಿಷನಿನಲ್ಲಿ ಪ್ರಾಂತ್ಯದ ಮುಖ್ಯ ಕೋಮುಗಳೆಲ್ಲ ಪ್ರತಿನಿಧಿಗಳಿರತಕ್ಕದ್ದು. ಈ ಧ್ಯೇಯವನ್ನು ಸಾಧಿಸಲು ಒಂದು ಯೋಜನೆಯನ್ನು ತಯಾರಿಸುವ ಬಗ್ಗೆ 3 ಹಿಂದುಗಳು, 2 ಮುಸಲ್ಮಾನರು, ಒಬ್ಬ ಸಿಕ್ಖ ಮತ್ತು ಒಬ್ಬ ಕ್ರಿಶ್ಚಿಯನ್ ಮೆಂಬರುಗಳುಳ್ಳ ಕಮಿಟಿಯನ್ನು ನೇಮಿಸತಕ್ಕದ್ದು.

ಮತೀಯ ಪ್ರಾಥಮಿಕ ಹಕ್ಕುಗಳ ಸಂಬಂಧದ ಕಾನೂನು ಕೌನ್ಸಿಲಿನಲ್ಲಿ ಮಂಜೂರಾಗಿ, ಸಂಬಂಧಪಟ್ಟ ಕೋಮಿನವರ ¾ ಮೆಂಬರುಗಳಿಂದ ವಿರೋಧಿಸಲ್ಪಟ್ಟರೆ, ಅದರ ರದ್ದಿಯಾತಿ ಬಗ್ಗೆ ಗವರ್ನರ್ ಜನರಲರು ಯಾ ಗವರ್ನರರಿಗೂ, ನಂತರ ಸುಪ್ರೀಮ್ ಕೋರ್ಟಿಗೂ ಅಪ್ಪೀಲು ಮಾಡುವ ಹಕ್ಕು ಆ ಕೋಮಿನವರಿಗೆ ಇದೆ.

ಬ್ರಿಟಿಷ್ ಸರಕಾರದವರು ಕೋಮುವಾರು ತೀರ್ಮಾನವನ್ನು ಕೊಟ್ಟ ಮೊದಲು ಇದ್ದಂಥಾ ಜನಸಂಖ್ಯೆ ಮೀರಿದ ಪ್ರಾತಿನಿಧ್ಯ (ವೈಟೇಜ್) ಮುಸಲ್ಮಾನರಿಗೆ ಇನ್ನು ಹತ್ತು ವರ್ಷಗಳ ವರೆಗೆ ಇರತಕ್ಕದ್ದು.

ಸೈನ್ಯ ಮತ್ತು ನ್ಯಾಯ ಇಲಾಖೆಗಳಿಗೆ ಜಾತಿ ಮತ ಪಾರ್ಟಿ, ಸ್ಥಳಗಳನ್ನು ಗಣಿಸದೆ ಯೋಗ್ಯತೆಯನ್ನನುಸರಿಸಿಯೇ ಉದ್ಯೋಗಸ್ಥರನ್ನು ನೇಮಿಸತಕ್ಕದ್ದು.

ಮಧ್ಯವರ್ತಿ ಕೌನ್ಸಿಲಿನಲ್ಲಿ ಬ್ರಿಟಿಷ್ ಇಂಡಿಯಾಕ್ಕೆ ದೊರೆಯುವ ಮೆಂಬರುಶಿಪ್ಪುಗಳಲ್ಲಿ ಶೇಕಡ 32ರಷ್ಟು ಮುಸಲ್ಮಾನರಿಗೂ, ಶೇಕಡ 4⅓ರಷ್ಟು ಸಿಖ್ಖರಿಗೂ ಕಾಯ್ದಿಡಲ್ಪಡಬೇಕು.

ಜನರಿಗೆ ಜವಾಬ್ದಾರಿಯಾದಂಥ ಮತ್ತು ರಾಷ್ಟ್ರೀಯ ಸರಕಾರಕ್ಕೆ ಇರಬೇಕಾದ ಸಂಪೂರ್ಣ ಹಕ್ಕುಗಳಿರುವ ಮಧ್ಯವರ್ತಿ ಸರಕಾರದಿಂದಲೇ ಹಿಂದೀಯರಿಗೆ ತೃಪ್ತಿಯೂ, ಅವರ ಅಭಿವೃದ್ಧಿಯೂ ಆಗುವ ಕಾರಣ, ಹಿಂದೂದೇಶದ ಹಿತದಲ್ಲಿ ಅವಶ್ಯವಿರುವ ಭದ್ರತೆಗಳನ್ನು ಇಟ್ಟುಕೊಂಡು ಇಂಡಿಯಾ ಸರಕಾರದ ಅಧಿಕಾರವನ್ನು ಹಿಂದೀಯರಿಗೆ ಬಿಟ್ಟುಕೊಡತಕ್ಕದ್ದೆಂದು ಈ ಸಭೆಯು ತೀರ್ಮಾನವಾಗಿದೆ.

ಈ ಒಪ್ಪಂದದ ಶರತುಗಳು ಒಂದಕ್ಕೊಂದು ಸಂಬಂಧಿಸಿರುವುದರಿಂದ ಇದನ್ನು ವಿಂಗಡಿಸಲಾಗುವುದಿಲ್ಲ; ಮತ್ತು ಇದನ್ನು ಒಟ್ಟಾಗಿ ಜಾರಿಗೆ ತರತಕ್ಕದ್ದು.

ಪ್ರಾಂತೀಯ ಸರಕಾರಗಳಿಗೆ ಅಧಿಕಾರವಿರುವ ವಿಷಯುಗಳ ಪಟ್ಟಿಯನ್ನು ವಿವರವಾಗಿ ತಯಾರಿಸಿ, ಸದರಿ ಅಧಿಕಾರಗಳನ್ನು ಆಯಾಯ ಪ್ರಾಂತೀಯ ಸರಕಾರಗಳು ನಡಿಸತಕ್ಕದ್ದು. ಹೊಸ ವಿಷಯುಗಳಲ್ಲಿ ಸಂಶಯ ಬಂದರೆ ಸುಪ್ರೀಮ್ ಕೋರ್ಟು ತೀರ್ಮಾನಿಸತಕ್ಕದ್ದು. ಅಂಥಾ ತೀರ್ಮಾನದ ವರೆಗೆ ಇಂಡಿಯಾ ಸರಕಾರ ಹುಕುಮನ್ನು ನಡಿಸತಕ್ಕದ್ದು.

ಜಾತಿಗಳಿಗೆ ಅನ್ವಯಿಸುವ ಕಾನೂನುಗಳನ್ನು ಸಂಬಂಧಪಟ್ಟ ಕೋಮಿನ ಪ್ರತಿನಿಧಿಗಳ ಮತ್ತು ಜನಸಮುದಾಯದ ಒಪ್ಪಿಗೆ ಇಲ್ಲದೆ ಬದಲಾಯಿಸಕೂಡದು. ಮುಸಲ್ಮಾನರಿಗೆ ಅನ್ವಯಿಸುವ ಕಾನೂನುಗಳನ್ನು ಇಸ್ಲಾಮೀ ತತ್ವಗಳಿಗೆ ವಿರೋಧವಾಗಿ ಬದಲಾಯಿಸಕೂಡದು.

ಮಧ್ಯವರ್ತಿ ಸರಕಾರದ ಮಂತ್ರಿಮಂಡಳಿಯಲ್ಲಿ ಮುಸಲ್ಮಾನ್, ಸಿಕ್ಖ್ ಮತ್ತು ಸಾಧ್ಯವಾದಷ್ಟು ಹೆಚ್ಚು ಸಂಖ್ಯೆಯ ಮೈನಾರ್ಟಿ ಕೋಮಿನವರ ಪ್ರತಿನಿಧಿಗಳು ಇರುವಂತೆ ಪದ್ಧತಿ ಮಾಡಿಕೊಳ್ಳಬೇಕು. 10 ವರ್ಷಗಳ ವರೆಗೆ ಒಬ್ಬ ಸಿಖ್ ಮಂತ್ರಿ ಇದ್ದೇ ಇರಬೇಕು.

ಪ್ರಾಂತೀಯ ಮಂತ್ರಿ ಮಂಡಳಿಗಳಲ್ಲಿ ಪ್ರಾಮುಖ್ಯವಾದ ಮೈನಾರ್ಟಿ ಕೋಮುಗಳ ಪ್ರತಿನಿಧಿಗಳು ಇರುವ ಪದ್ಧತಿ ಮಾಡಿಕೊಳ್ಳಬೇಕು.

ಎಲ್ಲಾ ಚುನಾವಣೆಗಳು ಮಿಶ್ರ ಚುನಾವಣೆ ರೀತಿಯಿಂದಲೇ ಆಗಬೇಕು. ಆದರೆ 10 ವರ್ಷಗಳ ವರೆಗೆ ಈ ಕೆಳಗಿನ ರೀತಿಯನ್ನು ಅನುಸರಿಸತಕ್ಕದ್ದು.

ತನ್ನ ಕೋಮಿನವರ ಕನಿಷ್ಠ 30% ಓಟು ಪಡೆದು, ಮಿಶ್ರ ಚುನಾವಣೆಯಲ್ಲಿ ಬೇರೆಯವರಿಗಿಂತ ಹೆಚ್ಚು ಓಟು ಪಡೆಯುವವನು ಆರಿಸಲ್ಪಡುವನು.

ತನ್ನ ಕೋಮಿನ 30% ಓಟು ದೊರೆತವನು ಇಲ್ಲದೆ ಹೋದರೆ, ಆ ಕೋಮಿನ ಎಲ್ಲರಿಗಿಂತಲೂ ಹೆಚ್ಚು ಓಟು ಪಡೆದು, ಮಿಶ್ರ ಚುನಾವಣೆಯಲ್ಲಿ ಬೇರೆಯವರಿಗಿಂತ ಹೆಚ್ಚು ಓಟು ಪಡೆದವನು ಜಯಶೀಲನಾಗುವನು.

10 ವರ್ಷಗಳ ಅಂತ್ಯದಲ್ಲಿ 30% ಓಟುಗಳ ಪದ್ಧತಿಯು ವಜಾವಾಗುವುದು. ಅದಕ್ಕೆ ಮೊದಲು ಇಷ್ಟವಿರುವ ಕೋಮಿನವರು ಈ ಪದ್ಧತಿಯನ್ನು ವಜಾಮಾಡಿಸಿಕೊಳ್ಳಬಹುದು.

ಬಂಗಾಳ, ಪಂಜಾಬು ಮತ್ತು ಸಿಂಧ್ ಪ್ರಾಂತ್ಯಗಳ ಒಪ್ಪಂದದ ಶರತುಗಳು ಈ ಮೊದಲೇ ಪ್ರಕಟಿಸಲ್ಪಟ್ಟಿವೆ.

ಈ ತಾ. 17 ರಲ್ಲಿ ಈ ಪ್ರಾಮುಖ್ಯ ತೀರ್ಮಾನವು ಆದ ಕೂಡಲೆ ಮಹಾತ್ಮ ಗಾಂಧಿಯವರು, ಪಂಡಿತ ಜವಾಹಿರ್‌ಲಾಲ್ ನೆಹರು, ಸರ್ ತೇಜ್‌ಬಹದ್ದೂರ್ ಸಪ್ರು, ಸದರಿ ಸಭೆಯ ಅಧ್ಯಕ್ಷರಾಗಿದ್ದು ಸ್ವಲ್ಪ ಮೊದಲು ಹೊರಟು ಹೋಗಿದ್ದ ವಿಜಯರಾಘವಾಚಾರ್ಯರು ಮೊದಲಾದವರಿಗೆ ತಂತೀ ವಾರ್ತೆ ಕಳುಹಿಸಲಾಯಿತು. ಪಂಡಿತ ಮದನಮೋಹನ ಮಾಳವೀಯ ಸೋಲರಿಯದ ಪ್ರಯತ್ನಗಳೇ ಈ ಚಾರಿತ್ರ್ಯಾರ್ಹವಾದ ಒಪ್ಪಂದಕ್ಕೆ ಕಾರಣವೆಂದು ಹಲವರ ಅಭಿಪ್ರಾಯ. ಈ ಮೊದಲು ಯಾರೂ ಯೋಚಿಸದೆ ಇದ್ದಂಥ ಈ ವಿಶೇಷ ಜಯಕ್ಕೆ ಸಂತೋಷವನ್ನು ಸೂಚಿಸಿಯೂ, ಈ ಒಪ್ಪಂದವನ್ನು ಹೊಗಳಿಯೂ ಡಾ. ಮಹಮ್ಮದ್, ನವಾಬು ಮಹಮ್ಮದ್ ಇಸ್ಮೈಲ್, ಮೌಲಾನ ಅಬುಲ್ ಕಲಂ ಅಜಾದ್, ಪಂಡಿತ ಗೋವಿಂದ ಮಾಳವೀಯ, ಮೌಲಾನ ಜಾಫರ್ ಅಲಿಖಾನ್, ಮಿ. ಸಿ. ಯಫ್ ಆಂಡ್ರ್ಯೂಸ್, ಶೇಖ್ ಅಬ್ದುಲ್ ಮಜೀದ್, ಮೌಲಾನ ಶೌಕತ್‌ಅಲಿ, ಸಯ್ಯದ್ ಮಹಮ್ಮದ್ ಹುಸ್ಸೇನ್, ಡಾ. ಅನ್ಸಾರಿ, ಸಿ. ರಾಜಗೋಪಾಲಚಾರಿ ಮೊದಲಾದ ಮುಂದಾಳುಗಳು ಅಭಿಪ್ರಾಯ ಸೂಚಿಸಿರುವರು.

ಅಖಿಲ ಕೊಡಗು ಉಪಾಧ್ಯಾಯರ ಸಂಘದ ಸಮ್ಮೇಳನ.

ಅಖಿಲ ಕೊಡಗು ಉಪಾಧ್ಯಾಯರ ಸಂಘದ ನಾಲ್ಕನೆಯ ವಾರ್ಷಿಕ ಸಮ್ಮೇಳನವು ಮೆ. ಎ. ಬಿ. ಜಂಗಪ್ಪನವರು ಬಿ. ಎ. ಎಲ್. ಟಿ. ರವರ ಅಧ್ಯಕ್ಷತೆಯಲ್ಲಿ ಬರುವ ಡಿಸೆಂಬರು 3, 4 ಮತ್ತು 5ರಲ್ಲಿ ವೀರರಾಜಪೇಟೆ ಬೋರ್ಡ್ ಶಾಲೆಯಲ್ಲಿ ಜರುಗುವುದು. ಈ ಸಮ್ಮೇಳನಕ್ಕೆ ಸಂಘದ ಸದಸ್ಯರಿಗೂ, ಇತರ ವಿದ್ಯಾಭಿಮಾನಿಗಳಿಗೂ ಸುಸ್ವಾಗತವಿದೆ. ಸರ್ವರೂ ದಯಮಾಡಿಸಬೇಕೆಂದು ಕೋರುತ್ತೇವೆ.

ಕಾರ್ಯಕ್ರಮ.

ಡಿಸೆಂಬರ್ 3ನೇ ಶನಿವಾರ.

10 ಪೂ.—12.30 ಅ.—ಅಖಿಲ ಕೊಡಗು ಉಪಾಧ್ಯಾಯರ ಸಹಕಾರ ಸ್ಟೋರಿನ ವಾರ್ಷಿಕ ಅಧಿವೇಶನ. ಅಧ್ಯಕ್ಷರು—ಮೆ. ಎ. ಬಿ. ಜಂಗಪ್ಪನವರು, ಬಿ. ಎ. ಎಲ್. ಟಿ.

2 ಅ.—4.30 ಅ.—ಅಖಿಲ ಕೊಡಗು ವಿದ್ಯಾ ಇಲಾಖೆ ಉದ್ಯೋಗಸ್ಥರ ಸಹಕಾರ ಸಂಘದ ವಾರ್ಷಿಕ ಸಮ್ಮೇಳನ. ಅಧ್ಯಕ್ಷರು—ಮೆ. ಪಿ. ಎ. ಜಂಗಪ್ಪನವರು, ಯಂ. ಎಲ್. ಸಿ.

ಡಿಸೆಂಬರ್ 4ನೇ ಆದಿತ್ಯವಾರ.

8.30 ಪೂ.—12.30 ಅ.—ಆಟಗಳ ಸ್ಪರ್ಧೆಗಳು. (ಶಾಲೆಯ ಮೈದಾನದಲ್ಲಿ.)

2 ಅ.—3 ಅ.—ಪ್ರದರ್ಶನ ತೆರೆಯುವ ಸಮಾರಂಭ. ತೆರೆಯುವವರು—ರಾ. ಬ. ಕೆ. ಚಂಗಪ್ಪನವರು, ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್, ಕೊಡಗು.

3 ಅ.—4.30 ಅ.—ವಾರ್ಷಿಕ ಸಮ್ಮೇಳನವನ್ನು ತೆರೆಯುವಿಕೆ.

5 ಅ.—7.30 ಅ.—ಬಿಸಿನೆಸ್ ಮೀಟಿಂಗ್ (ಸದಸ್ಯರಿಗೆ ಮಾತ್ರ).

9 ಅ.—12 ಅ.—ನಾಟಕ "ಪೀಠ ಪ್ರೇಮ ವಿಜಯ" (ಪ್ರವೇಶವು ಟಿಕೇಟುಗಳ ಮೂಲಕ).

ಡಿಸೆಂಬರ್ 5ನೇ ಸೋಮವಾರ.

8 ಪೂ.—9.30 ಬಿಸಿನೆಸ್ ಮೀಟಿಂಗ್ (ಸದಸ್ಯರಿಗೆ ಮಾತ್ರ).

9.30 ಪೂ.—10 ಪೂ.—ಪಾಠ "ಭೂಗೋಳ" ಐದನೇ ತರಗತಿಗೆ. ಮೆ. ಪಿ. ಎಸ್. ಕಾಳಪ್ಪನವರು, ಬಿ. ಎ. ಡಿ. ಇ. ಡಿಸ್ಟ್ರಿ. ಇನ್ಸ್‌ಪೆಕ್ಟರು, ಕೊಡಗು.

10 ಪೂ.—10.40 ಪೂ.—ಪಾಠ "ಇಂಗ್ಲಿಷ್" ಆರನೇ ತರಗತಿಗೆ. ಮೆ. ಕೆ. ಪಿ. ಮುತ್ತಣ್ಣನವರು, ಬಿ. ಎ. ಎಲ್. ಟಿ.

10.40 ಪೂ.—12.30 ಅ.—ಚರ್ಚೆ—"ಶಾಲೆಗಳಲ್ಲಿ ಮತ ಸಂಬಂಧದ ಶಿಕ್ಷಣವನ್ನು ಕೊಡಬೇಕೆಂದು ಸಂಘವು ಅಭಿಪ್ರಾಯ ಪಡುತ್ತದೆ."

ಪ್ರಾರಂಭಕ—ಮೆ. ಟಿ. ಎನ್. ಕಾರ್ಯಪ್ಪನವರು, ಬಿ. ಎ.

ವಿರೋಧಿ—ಮೆ. ಬಿ. ಎಲ್. ಕಾಳಪ್ಪನವರು, ಬಿ. ಎ. ಡಿ. ಇ.

2 ಅ.—2.45 ಅ.—ಭಾಷಣ "Modern Tendencies in Teaching." ಮೆ. ಎಫ್. ಎಫ್. ಸಿ. ಬಿಡ್ಡಪ್ಪರವರು, ಎಮ್. ಎ., ಬಿ. ಎಸ್. ಸಿ. ಕೊಡಗು—ಬೆಂಗಳೂರು ಶಾಲಾ ಇನ್ಸ್‌ಪೆಕ್ಟರು.

2.45 ಅ.—3.30 ಅ.—ಭಾಷಣ 'ಮಕ್ಕಳ ಶಿಕ್ಷಣ' ಮೆ. ಎಸ್. ಎಸ್. ನಾರಾಯಣ ಶಾಸ್ತ್ರಿ, ಯಂ. ಎ. ಲೆಕ್ಚರರು, ಮಹಾರಾಜಾ ಕಾಲೇಜು, ಮೈಸೂರು.

3.30 ಅ.—4.15 ಅ.—ಭಾಷಣ 'ಪ್ರಪಂಚದ ಶಾಂತಿಯೂ, ಉಪಾಧ್ಯಾಯರ ಕರ್ತವ್ಯಗಳೂ.' ಮೆ. ಪಿ. ಸಿ. ಉತ್ತಯ್ಯನವರು, ಬಿ. ಎ., ಎಲ್. ಟಿ. ಮ. ಜೆ. ನ ಧ್ಯಾಪಕ, ಗವರ್ನ್‌ಮೆಂಟ್ ಹೈಸ್ಕೂಲ್, ವೀರರಾಜಪೇಟೆ.

4.15 ಅ.—4.30 ಅ.—'ಪಾಠಶಾಲೆಯ ಕುರಿತು ಸೂಚನೆಗಳು' ಶ್ರೀ ಸ್ವಾಮಿ ಶಂಭುಪವಾನಂದರು ಮಠ, ಪೊನ್ನಂಪೇಟೆ.

4.30 ಅ.—5 ಅ.—ಅಧ್ಯಕ್ಷರ ಕಡೆಯ ಭಾಷಣ

ವಂದನಾರ್ಪಣ

9 ಅ.—12 ಅ.—ನಾಟಕ (ಸದಸ್ಯರಿಗೆ ಮಾತ್ರ).

ವೀರರಾಜಪೇಟೆ,
ತಾ. 21—11—32. 1—1

ಪಿ. ಯಂ. ಉತ್ತಪ್ಪ,
(ಸಂಘದ ಅಧ್ಯಕ್ಷ)

ಅಸ್ಪೃಶ್ಯತಾ ನಿವಾರಣೆ.

ಮಹಾತ್ಮ ಗಾಂಧಿಯವರ ಏಳನೆಯ ಪತ್ರ

ನನಗೆ ಬರುವ ಸವಾಲುಗಳಲ್ಲಿ ಇದೊಂದಾಗಿದೆ. 'ನೀವು ಶಾಸ್ತ್ರಗಳಲ್ಲಿ ನಂಬಿಕೆ ಉಳ್ಳವರು ಎಂದು ಹೇಳುತ್ತೀರಿ; ಹೀಗೆಂದರೇನೆಂತ ಗೊತ್ತಾಗುವುದಿಲ್ಲ. ಯಾಕೆಂದರೆ ಶಾಸ್ತ್ರಗಳಲ್ಲಿ ಹೇಳುವ ಅನೇಕ ಸಂಗತಿಗಳನ್ನು ನೀವು ತಿರಸ್ಕರಿಸುತ್ತೀರಿ. ನೀವು ಅಗಾಧ್ಯ ನಮೂದಿಸುವ ಗೀತೆಯು ಸಹ ಶಾಸ್ತ್ರವನ್ನು ಸರಿಸಬೇಕೆಂತ ಹೇಳಿದೆ.'

ನಾನು ಈ ಮೊದಲು ಬರೆದ ಒಂದು ಪತ್ರದಲ್ಲಿ ಹೇಳುವ ಮೇರೆ ಗೀತೆಯ ಮುಖ್ಯ ಉದ್ದೇಶಕ್ಕೆ ವಿರೋಧವಾದಂಥದ್ದನ್ನು ಎಲ್ಲಿಯೇ ಆದು ಪ್ರಿಂಟಾಗಲಿ ಅದನ್ನು ಶಾಸ್ತ್ರವೆಂದು ನಾನು ಅಂಗೀಕರಿಸಲಾರೆ. ಹಳೇ ಪದ್ಧತಿಗಳನ್ನು ಬದಲಾಯಿಸಲು ಬೇಸರವಾಗುವುದಿಲ್ಲವಾದರೆ ನನ್ನ ಅರ್ಥವನ್ನು ಇನ್ನೂ ಸ್ಪಷ್ಟೀಕರಿಸುತ್ತೇನೆ. ಸರ್ವರಿಂದಲೂ ಒಪ್ಪಿಕೊಂಡಿರುವ ಮೂಲ ನೀತಿಗಳಿಗೆ ವಿರೋಧವಾದದ್ದನ್ನು ನಾನು ಶಾಸ್ತ್ರವೆಂತ ಅಂಗೀಕರಿಸುವುದಿಲ್ಲ. ಶಾಸ್ತ್ರಗಳು ಮೂಲ ನೀತಿಗಳಿಗೆ ವಿರೋಧಿಸಲು ಉಂಟಾದುವಲ್ಲ. ಅವುಗಳನ್ನು ಸಾಧಿಸಲಿಕ್ಕಾಗಿಯೇ ಆದವು. ಗೀತೆಯು ನನಗೆ ಸಮಸ್ತ ಶಾಸ್ತ್ರವಾಗಿದೆ. ಯಾಕೆಂದರೆ, ಅದು ಮೂಲ ನೀತಿಗಳನ್ನು ಬೋಧಿಸುವುದು ಮಾತ್ರವಲ್ಲದೆ, ಅವುಗಳನ್ನು ಸರ್ವ ರೀತಿಯಿಂದಲೂ ಯಾಕೆ ಸಾಧಿಸಬೇಕೆಂತ ಕಾರಣಗಳನ್ನು ಸಹ ಕೊಡುತ್ತದೆ. ಈಗ ನಾನು ಸೂಚಿಸಿದ ಉತ್ತಮ ಸೂತ್ರವನ್ನು ಅನುಸರಿಸಿದ್ದರೆ, ಶಾಸ್ತ್ರ ತಿಳಿಯದ ನನ್ನಂಥವನಿಗೆ, ಒಂದಕ್ಕೊಂದು ವಿರೋಧವಾದ ಅರ್ಥಗಳುಳ್ಳ, ಸೊಗಸಾಗಿ ಅಚ್ಚಾದ, ಇನ್ನೂ ಸೊಗಸಾಗಿ ಬೈಂಡು ಕಟ್ಟಿರುವ, ಒಬ್ಬರೊಬ್ಬರಿಗೆ ವಿರೋಧಿಸುವ ಪಂಡಿತರು ದೇವರಿಂದಲೇ ನಿರ್ಮಾಣವಾದದ್ದೆನ್ನುವ, ಸಂಸ್ಕೃತ ಗ್ರಂಥಗಳ ರಾಶಿಯಲ್ಲಿ ದಿಕ್ಕು ತೋರದೆ ಹೋಗುವುದೇ ನಿಂತಿತು.

ನೂರಾರು ಜನರಿಗೆ ಮಾತ್ರ ತಿಳಿದಿರುವ ಎಷ್ಟೋ ಸ್ಮೃತಿಗಳಿವೆ. ಅಂಥವನ್ನು ಬರೆದದ್ದು ಯಾರು, ಯಾವಾಗ ಎಂತ ಯಾರೂ ಹೇಳಲಾರರು. ಅಂಥ ಒಂದು ಗ್ರಂಥವನ್ನು ನಾನು ದಕ್ಷಿಣ ದೇಶದಲ್ಲಿ ನೋಡಿದೆ. ತಿಳಿದ ಪಂಡಿತರನ್ನು ಕೇಳುವಾಗ ಅದರ ವಿಷಯ ನನಗೆ ಗೊತ್ತಿಲ್ಲವೆಂದರು. ಒಂದಕ್ಕೊಂದು ವಿರೋಧವಿರುವ ಅನೇಕ ಆಗಮಗಳಿವೆ. ಅವುಗಳನ್ನು ಅನುಸರಿಸುವ ಚಿಕ್ಕ ಕೂಟದ ಆಚೆ ಅವನ್ನು ಕೇಳುವವರಿಲ್ಲ. ಈ ಎಲ್ಲಾ ಗ್ರಂಥಗಳೂ ಹಿಂದೂಗಳಿಗೆ ಸಂಬಂಧಿಸುವವು ಎನ್ನುವುದಾದರೆ ಯಾವ ದುರಾಚಾರಕ್ಕಾದರೂ ಶಾಸ್ತ್ರದ ಆಧಾರವಿಲ್ಲವೆಂತ ಹೇಳಲು ಸಾಧ್ಯವಿಲ್ಲ. ಪುರಾತನ ಕಾಲದಿಂದಲಾದ ಸ್ಮೃತಿ ಎಂಬುದ ಗ್ರಂಥಗಳಲ್ಲಿ ಬೋಧಿಸಿರುವ ನೀತಿಗಳಿಗೆ ವಿರೋಧವಾದ ಅನೀತಿಗಳನ್ನು ಸಮರ್ಥಿಸುವ ಶ್ಲೋಕಗಳೂ ಅಂಥ ಗ್ರಂಥಗಳಲ್ಲಿರುತ್ತವೆ. ಭಗವದ್ಗೀತೆಯಲ್ಲಿ ಒಂದೇ ಕಡೆಯಲ್ಲಿರುವ ಶಾಸ್ತ್ರ ಎಂಬ ಶಬ್ದಕ್ಕೆ ಗೀತೆಯಿಂದ ಹೊರಗಿರುವ ಗ್ರಂಥಗಳೆಂತ ನಾನು ಒಪ್ಪುವುದಿಲ್ಲ. ಉದಾಹರಣೆಯಿಂದ ಸ್ಥಾಪಿಸಲ್ಪಟ್ಟಿರುವ ಒಳ್ಳೇ ನೀತಿಗಳೆಂಬ ಅರ್ಥ. ಇದು ಟೀಕಾಕಾರರಿಗೆ ತೃಪ್ತಿಯನ್ನು ಉಂಟುಮಾಡದಿದ್ದರೂ ಶಾಸ್ತ್ರ ತಿಳಿಯದವನಾದ ನಾನು ಯಾರಿಗೂ ಬೋಧಕನಾಗಿರಲಾರೆನು. ಆದರೆ ಕೇಳುವವರಿಗೆ, 'ಶಾಸ್ತ್ರ'ವೆಂದರೆ ಏನೆಂತ ನಾನು ತಿಳಿದಿದ್ದೇನೆಂತ ಮಾತ್ರ ಹೇಳಬಲ್ಲೆನಷ್ಟೆ.

ಇನ್ನು ಬಲವಾಗಿ ಕೇಳುವ ಇನ್ನೊಂದು ಪ್ರಶ್ನೆ ಯಾವುದೆಂದರೆ—'ಸ್ವಧರ್ಮ ನಿಯಮ, ಅಥವಾ ಅಂತರಾತ್ಮನ ಬೋಧನೆ' ಎಂದರೇನು? ಪ್ರತಿಯೊಬ್ಬನೂ ತನ್ನ ತನ್ನ ಅಂತರಾತ್ಮ ಬೋಧನೆಯಂತೆ ತನ್ನ ನೆರೆಯವರಿಗೆ ವಿರೋಧವಾಗಿ ನಡೆಯಲು ಪ್ರಾರಂಭಿಸಿದರೆ ಪ್ರಪಂಚವು ಏನಾದೀತು?' ಇದು ನ್ಯಾಯವಾದ ಸವಾಲೇ. ದೇವರು ಅತ್ತ ರಕ್ಷಣೆಗೆ ಧರ್ಮವನ್ನು ಏರ್ಪಡಿಸದಿದ್ದರೆ ಕಷ್ಟವಾಗುತ್ತಿತ್ತು. ಅಂಥ ಅಂತರಾತ್ಮನ ಬೋಧನೆ ತನಗೂ ಇದೆಯೆಂತ ಪ್ರತಿಯೊಬ್ಬನೂ ಹೇಳಬಹುದು. ಆದರೆ ಅದನ್ನು ನಿಜವೆಂತ ಹೇಳುವುದು ಕಠಿಣ ಸಂಗತಿ. ಇದರ ಒಳಗಿನ ದೈವೀ ಆಜ್ಞೆಯಿಂದ ಅಥವಾ ಅಂತರಾತ್ಮನ ಬೋಧನೆಯಂತೆ ನಡೆಯುವುದೆಂತ ಸುಳ್ಳಾಗಿ ಹೇಳುವವನು, ಪ್ರಾಪಂಚಿಕ ರಾಜನ ಹೇಳಿಕೆ ಮೇರೆ ನಡೆಯುವವನೆಂತ ಸುಳ್ಳಾಗಿ ಹೇಳುವವನಿಗಿಂತ ಕಷ್ಟಕ್ಕೆ ಗುರಿಯಾಗುವನು. ರಾಜನ ಹೇಳಿಕೆಯಂತೆ ನಡೆಯುತ್ತೇನೆಂತ ಹೇಳುವವನು ಒಲೇ ಕಾಯಿಲೆ ಶಿಕ್ಷೆಯನ್ನು ಅನುಭವಿಸಿ ತಪ್ಪಿಸಿಕೊಳ್ಳಬಹುದು. ಆದರೆ ದೇವರ ಆಜ್ಞೆಯಂತೆ ನಡೆಯುತ್ತೇನೆಂತ ಸುಳ್ಳು ಹೇಳುವವನು ದೇಹ ಆತ್ಮ ಸಹಿತ ನಾಶವಾಗುತ್ತಾನೆ.

ದಯವಿಟ್ಟು ಟೀಕಾಕಾರರು ನಾನು ಮೋಸಗಾರನೆಂತ ಹೇಳುವುದಿಲ್ಲ. ಆದರೆ ಏನೋ ಭ್ರಮೆಗೆ ಒಳಗಾಗಿರುತ್ತೇನೆಂದು ಹೇಳುತ್ತಾರೆ. ಹಾಗಾದರೂ ನನ್ನ ಭಾಗಕ್ಕೆ ಸುಳ್ಳು ತನದಿಂದ ದುಷ್ಪರಿಣಾಮವನ್ನು ಹೊಂದುವಷ್ಟೇ ಫಲವುಂಟಾಗುತ್ತದೆ. ನನ್ನಂಥ ಸತ್ಯಶೋಧಕನು ಬಹಳ ಜಾಗರೂಕನಾಗಿದ್ದು, ಮನಸ್ಸಿನ ಸ್ಥಿರತೆಯನ್ನು ಕಳೆಕೊಳ್ಳಬಾರದು. ದೇವರ ಕರೆಯ ದೊರೆಯಬೇಕಾದರೆ ನನ್ನ ವ್ಯಕ್ತಿತ್ವವನ್ನು ಸಂಪೂರ್ಣವಾಗಿ ಕಳೆದುಕೊಳ್ಳಬೇಕು. ಈ ವಿಷಯ ಇನ್ನು ಹೆಚ್ಚಿಗೆ ಹೇಳಬೇಕಾಗಿಲ್ಲ. ನನಗೆ ಅಂತರಾತ್ಮನ ಸೂಚನೆ ಇದೆಯೆಂತ ಅಥವಾ ದೇವರ ಕರೆಯ ಇದೆಯೆಂತ ಹೇಳುವುದೇನೂ ಕಡ್ಡಾಯವಲ್ಲ. ಅದು ನನಗೆ ಮಾತ್ರ ಅಗಬೇಕಾದ ವಿಷಯವಲ್ಲ. ಏನೂ ಚಿಂತೆ ಮಾಡಿಕೊಳ್ಳದೆ ಸಂಪೂರ್ಣವಾಗಿ ದೇವರಲ್ಲಿ ಶರಣಾಗತರಾದವರ ಜೀವನವನ್ನು ದೇವರೇ ನಡೆಸುತ್ತಾನೆ. ಸಂಪೂರ್ಣವಾಗಿ ಆಸಕ್ತಿಯನ್ನು ಬಿಟ್ಟವರ ಅಂದರೆ ಸಂಪೂರ್ಣವಾಗಿ ನಾನು ಎಂಬುದನ್ನು ಮರೆತವರ ಮೂಲಕ ದೇವರು ಕೆಲಸ ಮಾಡಿಸುತ್ತಾನೆಂತ ಗೀತೆಯಲ್ಲಿ ಹೇಳಿದೆ. ಇದರಲ್ಲಿ ಭ್ರಮೆ ಏನೂ ಇಲ್ಲ. ಈ ಅರ್ಹತೆಯನ್ನು ಪಡೆಯಲು ಮನಸ್ಸೂ, ದೃಢ ನಿಶ್ಚಯವೂ ಇರುವವರು ಅಜಮಾಯಿಸಿ ನೋಡಬಹುದಾದಂಥ ವೈಜ್ಞಾನಿಕ ಸತ್ಯವನ್ನೇ ನಾನು ಹೇಳುತ್ತಿರುವುದಾಗಿದೆ. ಮನಸ್ಸಿದ್ದರೆ ಸುಲಭವಾಗಿ ತಿಳಿದುಕೊಂಡು ಸಾಧಿಸಬಹುದಾದಂಥ ಸಂಗತಿಯಾಗಿದೆ.

ನಾನು ನನ್ನ ಕಾರ್ಯಗಳಿಗೆ ದೇವರ ಆಜ್ಞೆ ಇದೆಯೆಂತ ಹೇಳುವುದನ್ನು ಯಾರೂ ಮನಸ್ಸಿಗೆ ತೆಗೆದುಕೊಳ್ಳಬೇಕಾದದ್ದಿಲ್ಲ. ನಾನು ಹೇಳುವ ಮಾತುಗಳನ್ನು ಕಾರಣ ಯುಕ್ತವೋ ಅಲ್ಲವೋ ಎಂಬುದನ್ನು ಅಜಮಾಯಿಸಿ ನೋಡಬಹುದು. ನಾನು ಈ ಪ್ರಪಂಚದಿಂದ ಕಣ್ಮರೆಯಾದರೂ ಅಸ್ಪೃಶ್ಯತೆಯು ನಿವಾರಣೆಯಾಗಲೇ ಬೇಕು. ಉಪವಾಸಕ್ಕೆ ದೇವರ ಆಜ್ಞೆ ಇದೆಯೋ ಇಲ್ಲವೋ ಎಂಬುದು ನನ್ನ ಸಮೀಪದ ಜೊತೆಗಾರರಿಗೂ ಸಹ ಏನೂ ಯೋಚನೆಗೆ ಕಾರಣ ಕೊಡಬಾರದು. ನನ್ನ ಮೇಲೆ ಪ್ರೀತಿಗಾಗಿಯಾದರೂ ಇಮ್ಮಡಿ ಉತ್ಸಾಹದಿಂದ ಕೆಲಸ ಮಾಡಬೇಕು. ಹಟಗಾರನಾದ ಸ್ನೇಹಿತನು ಮಾಡಿದ ಉಪವಾಸವು ಒಳ್ಳೇ ಹುಚ್ಚುತನದ್ದೆಂತಾದರೂ ಯಾವ ಕೇಡೂ ಸಂಭವಿಸುವುದಿಲ್ಲ. ನನ್ನ ಮೇಲೆ ನಂಬಿಕೆಯಾಗಲೀ, ಪ್ರೀತಿಯಾಗಲೀ ಇಲ್ಲದವರಿಗೆ ನನ್ನ ಉಪವಾಸದಿಂದ ಏನೂ ತೊಂದರೆಯಾಗುವುದಿಲ್ಲ. ನನ್ನ ಉಪವಾಸವನ್ನು ಕುರಿತಾಗಲೀ, ಅದಕ್ಕೆ ಕಾರಣವೇನೆಂಬುದನ್ನಾಗಲೀ ಯೋಚಿಸುತ್ತಾ, ಕೂತರೆ ಜನರಾಗವು ಕೈಕೊಂಡಿರುವ ಮಹಾ ಕಾರ್ಯವು ಹಿಂದೆ ಬೀಳಬಹುದು.

ಕೊಡಗಿನ ಭವಿಷ್ಯತ್ತಿನ ವಿಷಯ.

ಸೋಮವಾರಪೇಟೆ ನಾಡವರ ಮೀಟಿಂಗು.

ತಾ. 12—11—32ರಲ್ಲಿ ಯಡೂರು ಗ್ರಾಮದ ಗುಂಡ್ಯ ಪುರದ ಬಾಣೆಯಲ್ಲಿ ನಾಡಿನ ಸವರು 300 ಜನರು ಸೇರಿ ಮ. ಹರಗದ ಅಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಮೀಟಿಂಗು ನಡೆಸಿ, ಕೊಡಗಿನ ಭವಿಷ್ಯತ್ತನ್ನು ಕುರಿತು ದೀರ್ಘ ಚರ್ಚೆ ನಡೆಸಿ ಮೆ. ಚಾರಿಮ್ಮ ಕಾಳಪ್ಪನವರು, ನಾಡಿನ ಪ್ರತಿಯೊಂದು ಗ್ರಾಮದಲ್ಲಿ ಮೀಟಿಂಗು ಮಾಡಿ, ಎಲ್ಲಾ ಗ್ರಾಮಗಳಿಂದ ಪ್ರತಿನಿಧಿಗಳನ್ನು ಆರಿಸಿಕೊಂಡು ತಾ. 21—11—32ರಲ್ಲಿ ಅದೇ ಜಾಗಕ್ಕೆ ಮೀಟಿಂಗಿಗೆ ಬರಬೇಕಾಗಿ ಸೂಚಿಸಿದ ಮೇರೆ ಸರ್ವಸಮ್ಮತದಿಂದ ಎಲ್ಲರೂ ಒಪ್ಪಿಗೆ ಕೊಟ್ಟರು. ಈ ಮೇರೆ ತಾ. 20—11—32ರಲ್ಲು ನಾಡಿನ ಎಲ್ಲಾ ಗ್ರಾಮಗಳ ಪ್ರತಿನಿಧಿಗಳು ಸುಮಾರು 150 ಜನರು ಸೇರಿ ಮೆ. ಹರಗದ ಅಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಮೀಟಿಂಗು ನಡೆಸಿದರು.

ನಾಡಿನ ಎಲ್ಲಾ ಗ್ರಾಮಸ್ಥರು ತಮ್ಮ ತಮ್ಮ ಗ್ರಾಮಗಳಲ್ಲಿ ಮೀಟಿಂಗ್ ನಡೆಸಿ ತಂದ ಪ್ರೊಸೀಡಿಂಗ್ಸ್‌ಗಳನ್ನು ಮೆ. ಹರಗದ ಮುತ್ತಣ್ಣನವರು ಓದಿ ಹೇಳಿದರು. ಕೊಡಗನ್ನು ಯಾವ ಪ್ರಾಂತ್ಯಕ್ಕೂ ಸೇರಿಸದೆ ಕೊಡಗಿಗೆ ಸಂಪೂರ್ಣ ಪ್ರಜಾ ಜವಾಬ್ದಾರಿ ಸರಕಾರ ಪಡೆದು ಪ್ರತ್ಯೇಕ ಇಟ್ಟುಕೊಳ್ಳಬೇಕೆಂದು ಎಲ್ಲಾ ಗ್ರಾಮಗಳ ಮೀಟಿಂಗಿನ ಅಭಿಪ್ರಾಯವಾಗಿತ್ತು.

ಮೆ. ಚಾರಿಮ್ಮ ಕಾಳಪ್ಪನವರು, ಈಗೆ ಮೀಟಿಂಗಿನ ಉದ್ದೇಶ ಅನಾದಿಕಾಲದಿಂದಲೂ, ಕೊಡಗು ಪ್ರತ್ಯೇಕವಾಗಿದ್ದು ಬೇರೆ ಪ್ರಾಂತ್ಯಗಳಿಗೆ ಸೇರದ ಪದ್ಧತಿಯ ಪದ್ಧತಿಯೂ ಸರಕಾರದಿಂದ ಹಿಂದಿನ ಸ್ಥಿತಿಯನ್ನು ಕೇಳಬೇಕಾಗಿ ಮತ್ತು, ಇದಕ್ಕೆ ಇಂಡಿಯಾ ಸರಕಾರವು ಒಪ್ಪದಿದ್ದರೆ ನಮ್ಮನ್ನು ಮದರಾಸಿಗೆ ಸೇರಿಸುವ ಬದಲು ಮೈಸೂರಿಗೆ ಸೇರಿಸಲು ಇಷ್ಟಪಡುತ್ತೇನೆಂದೂ, ಇನ್ನು ತಮಗಳ ತೀರ್ಮಾನ ತಿಳಿಸಬೇಕೆಂದೂ ಬರೆದ ಪತ್ರ ಓದಲಾಯಿತು.

1. ಸಂಪೂರ್ಣ ಪ್ರಜಾ ಜವಾಬ್ದಾರಿ ಸರಕಾರ ಪಡೆದು ಕೊಡಗು ಪ್ರತ್ಯೇಕವಾಗಿರಬೇಕೆಂದು ಈ ಸಭೆಯು ಅಭಿಪ್ರಾಯಪಡುತ್ತದೆ.

2. ಕೊಡಗನ್ನು ಮೈಸೂರು ಯಾ ಇತರ ಪ್ರಾಂತ್ಯಗಳಿಗೆ ಸೇರಿಸುವುದಕ್ಕೆ ಈ ಸಭೆಯು ವಿರೋಧಿಸುತ್ತದೆ.

3. ತಾ. 5—11—32ರಲ್ಲು ಮೆ. ಡಿ. ನಾರಾಯಣ ಶೆಟ್ಟಿರವರ ಅಧ್ಯಕ್ಷತೆಯಲ್ಲು ನಡೆದ ಮೀಟಿಂಗಿನ ತೀರ್ಮಾನವನ್ನು ಈ ಸಭೆಯು ವಿರೋಧಿಸುತ್ತದೆ.

ಎಂಬ ಠರಾವುಗಳನ್ನು ಮೆ. ಹರಗದ ಮುತ್ತಣ್ಣನವರು ಸಭೆಯ ಮುಂದಿಟ್ಟರು. ಇವುಗಳನ್ನು ಮೆ. ಕಟ್ಟನಳ್ಳಿ ಪೊನ್ನಪ್ಪನವರು ಮತ್ತು ಇನ್ನನಳ್ಳಿ ದೇವಯ್ಯನವರು ಅನುಮೋದಿಸಲಾಗಿ ಸರ್ವಸಮ್ಮತದಿಂದ ಮಂಜೂರಾಯಿತು.

ಮೆ. ಬೈರಪ್ಪನವರು, ಕೊಡಗಿನ ಭವಿಷ್ಯತ್ತನ್ನು ಕುರಿತು ಆಲೋಚಿಸಲು ಮಡಿಕೇರಿ ಯಾ ವೀರರಾಜಪೇಟೆಯಲ್ಲು ನಡೆಯಲಿರುವ ಪರಿಷತ್ತಿಗೆ 10 ಜನ ಪ್ರತಿನಿಧಿಗಳನ್ನು ಆರಿಸಬೇಕಾಗಿ ಸೂಚಿಸಿದ ಮೇರೆ, (1) ಮೆ. ಹರಗದ ಮುತ್ತಣ್ಣನವರು

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ೧೯೧೨ ನೇ ಕೋಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲು)

		ರೂ.
ಶೇರ್ ಬಂಡವಾಳ	—	0,00?— 0—0
ವಸೂಲಾದ ಶೇರ್ ಮೊಬಲಗು	—	27,350— 0—0
ಜಮೆಯಾದ ಠೇವಣಾತಿ	—	22,5380—10—7
ವಸೂಲಾದ ಕ್ಷೇಮನಿಧಿ	—	37,914—12—0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5–0–0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವಿಶೇಷ ವಿವರಗಳಿಗೆ ಕೆಳಗೆ ಸಹಿ ಮಾಡಿರುವ ಮ್ಯಾನೇಜರವರಿಗೆ ಅರ್ಜಿ ಹಾಕಿಕೊಳ್ಳಬಹುದು.

ಪ್ರೆಸಿಡೆಂಟರು,	ಟ್ರೆಜರರ್
ಪಟ್ಟುವಾಡ ದೇವಯ್ಯನವರು, ರಾವ್ ಬಹದ್ದೂರ್.	ಮನೆಯಪ್ಪಂಡ ದೇವಪ್ಪನವರು.

ಸೆಕ್ರೆಟರಿ

ಸಿ. ಯಸ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಖು 1—7—1932.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಕೊಡಗಿನ ಎಲ್ಲಾ ಭಾಗಗಳಿಗೆ—ಮೆ. ಮೂಣಂಡ ಯಂ. ಬಿದ್ದಪ್ಪನವರು.

ಉತ್ತರ ಕೊಡಗಿಗೆ ಮೆ. ಚೌರಿರ ಮಾದೈಯ್ಯನವರು,

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮುಂಡ್ಯೋಲಂಡ ಸೋಮೈಯ್ಯನವರು, (ಪಾರಿಭಂಡಾರ.)

ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,

ಪೊನ್ನಂಪೇಟೆನಾಡು—ಮೆ. ಪಿ. ಜೆ. ಮುತ್ತವೈಯ್ಯನವರು, ಮತ್ತು, ಅರಮಣಮಾಡ ಪಿ ಕಾರ್ಯಪ್ಪನವರು,

ಹುದಿಕೇರಿ & ತಿತಿಮತ್ತಿ—ಮೆ. ಜೆ. ಮಾದವೈಯ್ಯನವರು,

ಸುಂಟಿಕೊಪ್ಪ—ಮೆ. ಅಪ್ಪಚಟ್ಟೋಳಂಡ ಮಾಚೈಯ್ಯನವರು,

ಸೂಚನೆ.—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರಿಗೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿ ದೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಬವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಿಸಲು ಅತ್ಯವಶ್ಯವಾಗಿರುವ, ರೂಲ್ಸಿನ ಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಖರಾರು ಫಾರಮುಗಳೂ, ಜಮ್ಮ ಮುಚ್ಚಳಿಕೆ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಖರಾರು ಫಾರಮುಗಳೂ, ಸ್ಟೋರ್ ಕೀಪರ್ ಖರಾರು ಫಾರಮುಗಳೂ, ಓವರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮಾ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು ಶೇರ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಮುದ್ದು ಬರಲಿಕ್ಕೆ ಆಗದವರು ಅರ್ಜಿ ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.

ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 37 ಲಕ್ಷ ರೂ.

ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,78,322 ಜನರಿಗೆ 38ಕೋಟಿ ರೂ.

ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ರಕ್ಕಿಂತ ವಿಾರದ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದಾಗಿದೆ.

ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಬೆಂಬಲವನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬುದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.

ಹೆಚ್ಚಿನ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು

ಅಥವಾ ಇನ್ಸ್‌ಪೆಕ್ಟರೇಟ್ ಆಫೀಸು, ಮಡಿಕೇರಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ಮೊಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೋ	ಪಾಟ್ನಾ	ಸುಕ್ಕೂರು
ಅಲ್ಲಾಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಡೌಲಗಾಸ್	ಮಂಡಲೆ	ರಾಯಪುರ	ತಿರುವೆಂಡ್ರಮ್
ಭೋಪಾಲ್	ಕರಾಚಿ	ಮಡಿಕೇರಿ	ರಾಂಚಿ	ವಿಶಾಖಪಟ್ಟ [52—38

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ. ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,

52—45 **ಗಿರಿಗಾಂವ, ಮುಂಬಯಿ.**

ಕಾರ್ಡು ಬರೆದರೆ ಉಚಿತ
ಕೆಟ್ಯಾಲಾಗು ಮಫತ್ತಾಗಿ
ಕಳುಹಿಸಲ್ಪಡುವುದು.

ಕೋವಿಗಳು, ಕತ್ತಿಗಳು, ಚೂರಿಗಳು, ತೋಟೆಗಳು, ಕೇಪುಗಳು, ಮದ್ದು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವುವು.

GOOLAMHUSAIN ALLIBHOY & SONS LTD.,
Largest Importers of Firearms and Ammunitior
Cheapest priced firm in India,

26—11 **210 Abdul Rehiman Street, BOMBAY.**

Printed & published by P. I. Belliappa at "Kodagu" Press Mercar for "Kodagu" Ltd.

Reg. No. M. 1550.
If not delivered please return to
"KODAGU" OFFICE MERCARA.

ಕೊಡಗು.

ವಾರ್ಷಿಕ ಚಂದಾ ರೂ. ೩—೮—೦.
ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೨	ಮಡಿಕೇರಿ, ಸನ್ ೧೯೩೩ನೇ ಇಸವಿ ನವಂಬರ್ ತಾರೀಕು ೨೪ ನೇ ಶುಕ್ರವಾರ.	ಸಂಚಿಕೆ ೨[illegible]

SARI-PIN.

EAR-RINGS (Thodus)
Cut-rubys Rs. 25 to 50
With diamond in centre Rs. 80 to 120

BRACELETS
Gold Rs. 10
Set rubys forming any letter Rs. 12

NECKCHAINS.

NOSE-RINGS.
Diamond in small size of best quality Rs. 35 & upwards (according to size)

MARRIAGE PRESENTATIONS

Attractive and inexpensive articles ready in stock. Prompt execution. Details on enquiry free with catalogue. Numerous customers in Coorg thoroughly satisfied with reliable service. Testimonials pouring in. Silver Guindys, Photo lockets, Dimond nose-screws cut-ruby ear-rings, etc., etc., etc., in all prices Very attractive. Prices most moderate.

Estimates free on enquiry.

Telegrams: 'PRECIOUS.'

CATALOGUE ON ENQUIRY.

52–1

V. Subramaniyer Jeweller,

Post Box 423, Triplicane, P. O., MADRAS.

Designs free on enquiry.

Telephone: 3145.



26–22

ಜನರಲ್ ಅಷ್ಯೂರೆನ್ಸ್ ಸೊಸೈಟಿ.

ಅಜಮೀರ್.

ನಮ್ಮ ಆಯವ್ಯಯದ ಪಟ್ಟಿಯೇ ನಮ್ಮ ಅಭಿವೃದ್ಧಿಯನ್ನು ವ್ಯಕ್ತಗೊಳಿಸುತ್ತದೆ.

ವರ್ಷ	ಮೇಲ್ಪಟ್ಟ ವರಮಾನ	ಮೇಲ್ಪಟ್ಟ ಮೊತ್ತ	ಖರ್ಚಿನ ಪ್ರಮಾಣದ ಶೇಕಡ
1911	46,248	49,447	82.9
1921	2,92,627	6,53,350	43.2
1931	12,50,000	4[illegible],00 000	28.2

ಬೋನಸ್ಸು.

ಹೋಲ್ ಲೈಫ್ ಜೊರತುವ ಜೀವಾವಧಿ ಪಾಲಿಸಿಗಳ ಮೇಲೆ ವರ್ಷ ಒಂದಕ್ಕೆ ಶೇಕಡ 22½

ಚೆನ್ನಾಗಿ ಕೆಲಸಮಾಡಿ ಅಭಿವೃದ್ಧಿ ಸ್ಥಿತಿಯಲ್ಲಿರುವ ಈ ಸೊಸೈಟಿಯಲ್ಲಿ ವಿಮೆ ಮಾಡಿ ಕಡಿಮೆ ಪ್ರೀಮಿಯಂ ಪಾವತಿ ಮಾಡುವ ಸೌಲಭ್ಯ ಹೊಂದಿ ಅಥವಾ ಈ ಕಂಪೆನಿಯ ಏಜೆಂಟ್ ರಾಗಿ ಕೆಲಸಮಾಡಿ ಉತ್ತಮ ಕಮಿಶನ್ ದರದ ಪ್ರಯೋಜನ ಹೊಂದಿ.

ಹೆಚ್ಚು ವಿಚಾರಗಳಿಗೆ ಈ ವಿಳಾಸಕ್ಕೆ ಬರೆಯಿರಿ:—

ಎ. ರಾಮಚಂದ್ರರಾವ್,
ಸುಪರಿಂಟೆಂಡೆಂಟ್,
ಮಿಂಟೋ ರಸ್ತೆ ೬೪,
ಬೆಂಗಳೂರು.

52—31

ಎಂಪಯರ್ ಆಫ್ ಇಂಡಿಯಾ
ಲೈಫ್ ಎಷ್ಯೂರೆನ್ಸ್ ಕಂಪೆನಿ ಲಿಮಿಟೆಡ್.

(ಸ್ಥಾಪನೆಯಾದದ್ದು 1897.)

1934ನೇ ಇಸವಿ ಮಾರ್ಚ 1ನೇ ತಾರೀಕಿನೊಳಗೆ ಹಕ್ಕಾಗುವ ಪೋಲಿಸಿಗಳ ಮೇಲೆ ಇಂಟೆರಿಮ್ ಬೋನಸುಗಳು ವರ್ಷಕ್ಕೆ 1000ಕ್ಕೆ ರೂ. 16ರಂತೆ ಹೋಲ್ ಲೈಫ್ ಎಷ್ಯೂರೆನ್ಸಿನ ಮೇಲೆಯೂ
ಮತ್ತು
1000ಕ್ಕೆ ರೂ. 14ರಂತೆ ಎಂಡೋವ್ಮೆಂಟ್ ಎಷ್ಯೂರೆನ್ಸಿನ ಮೇಲೆಯೂ ಏರಿಸಲ್ಪಟ್ಟಿವೆ.

ಹೆಡ್ ಆಫೀಸು:—
ಎಂಪೈರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್,
ಬೊಂಬಾಯಿ.

ಬ್ರಾಂಚ್ ಆಫೀಸು:—
152–3 ಕಮರ್ಷಿಯಲ್ ಸ್ಟ್ರೀಟ್,
ಬೆಂಗಳೂರು.

52–8

ಳ್ಳೂರುವಯ್ಯನವರು ಸನಾತನ ಧರ್ಮವನ್ನು ಕುರಿತು ಸ್ವಾರಸ್ಯವಾದ ಉಪನ್ಯಾಸ ನೀಡಿದರು. ನಂತರ ಮಿ. ಪಿ. ಐ. ಬೆಳ್ಯಪ್ಪನವರು ಅಸ್ಪೃಶ್ಯತಾ ನಿವಾರಣೆಯನ್ನು ಕುರಿತು ಭಾಷಣ ಮಾಡಿ, ನೆರೆದಿದ್ದವರ ಮನಸ್ಸಿನಲ್ಲಿದ್ದ ಸಂಶಯಗಳನ್ನೂ, ಆಕ್ಷೇಪಗಳನ್ನೂ ನಿವಾರಿಸಿದರು. ಅದೇ ದಿನ ರಾತ್ರಿ, ಮಾಯಮುಡಿ ಗ್ರಾಮದ ಮಿ. ಚೆಪ್ಪುಡಿರ ಬೆಳ್ಯಪ್ಪನವರ ಭವನದಲ್ಲಿ ನಡೆದ ಸತ್ಯನಾರಾಯಣ ಪೂಜೆಗಾಗಿ ನೆರೆದಿದ್ದ ಸುಮಾರು 75 ಜನರ, ಮಹನೀಯರ ಸಭೆಯಲ್ಲೂ ಮೇ. ನಾಯಡ ಚಿಣ್ಣಪ್ಪನವರು ಸಭಾಧ್ಯಕ್ಷರಾಗಿಯೂ, ಮಿ. ಪಿ. ಐ. ಬೆಳ್ಯಪ್ಪನವರು ಹರಿಜನರನ್ನು ದೇವಸ್ಥಾನಗಳೊಳಗೆ ಬಿಡುವುದನ್ನು ಕುರಿತ ಭಾಷಣ ಮಾಡಿದರು.

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಬಾಡಗ ಗ್ರಾಮದ ರಸ್ತೆ.

ಅಯ್ಯಾ,

ನಮ್ಮ ಬಾಡಗ ಗ್ರಾಮದೊಳಗೆ ಗಾಡಿ ವಗೈರೆ ಬರುವ ರಸ್ತೆ ಇಲ್ಲದೆ ಇಲ್ಲಿಯ ಜನರು ಬಹು ಕಷ್ಟಪಡುತ್ತಿದ್ದರು. ಈ ಕಷ್ಟವನ್ನು ನಿವಾರಿಸುವ ಬಗ್ಗೆ. ಕೇಕಡ ಮುತ್ತಣ್ಣನವರು, ಕೇಕಡ ಅಚ್ಚಯ್ಯನವರು, ಕಟ್ಟೇರ ಕುಂಞಾಳಿಯಂಡ ಪೊನ್ನಪ್ಪನವರು, ಪಳಂಗೇಟಿರ ಚಂಗಪ್ಪನವರೇ ಮೊದಲಾದ ಗ್ರಾಮಸ್ಥರೆಲ್ಲರೂ ಸೇರಿ, ಪಬ್ಲಿಕ್ ರಸ್ತೆಯಿಂದ ನಮ್ಮ ಗ್ರಾಮದೊಳಗೆ ಗಾಡಿ, ಮೋಟಾರು ವಗೈರೆ ಬರುವ ಹಾಗೆ ರಸ್ತೆ ಮಾಡಿರುತ್ತೇವೆ. ಇದಕ್ಕೆ ಸುಮಾರು 500 ಜನರಷ್ಟು ಕೆಲಸ ಹಿಡಿದಿದೆ. ಇದರ ಮಂಜೂರಿಯನ್ನು ಮಂಜೂರು ಮಾಡಿ ಕಳುಹಿಸಿಕೊಡಬೇಕಾಗಿ ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರವರಿಗೆ ತಾರೀಕು 6—10—32ರಲ್ಲೂ ಮತ್ತು ತಾರೀಕು 20—10—32ರಲ್ಲೂ ಅರ್ಜಿಗಳು ಕಳುಹಿಸಲಾಗಿದೆ. ಆದರೆ ಈ ವರೆಗೂ ಜವಾಬು ಬಂದಿರುವುದಿಲ್ಲ. ಗ್ರಾಮಸ್ಥರು ತಮ್ಮ ಕೈಯಿಂದ ಖರ್ಚು ಹಾಕಿಕೊಂಡು ಕೆಲಸ ಮಾಡಿದರೂ ಕೂಡ ಡಿ. ಬೋರ್ಡಿನವರು ಸದರಿ ಖರ್ಚನ್ನು ಕೊಡಲು ಹೀಗೆ ತಡ ಮಾಡುವುದು ನ್ಯಾಯವಲ್ಲ. ಅಲ್ಲದೆ ಇದರಿಂದ ಗ್ರಾಮಸ್ಥರಿಗೆ ತುಂಬಾ ತೊಂದರೆ ಕೊಟ್ಟಂತೆಯೂ ಆಗುತ್ತದೆ. ಆದುದರಿಂದ ಡಿ. ಬೋರ್ಡಿನವರು ಕೂಡಲೆ ಹಣ ಮಂಜೂರು ಮಾಡಿ ಕಳುಹಿಸುವರಾಗಿ ಕೋರಿಕೆ.

ಪಿ. ಚಂಗಪ್ಪ.

ಕೋ-ಆಪರೇಟಿವ್ ರಿಜಿಸ್ಟ್ರಾರವರಿಗೆ ಸಂಬಳ ಬಡ್ತಿ.

ಅಯ್ಯಾ,

ನಮ್ಮ ಕೋ-ಆಪರೇಟಿವ್ ರಿಜಿಸ್ಟ್ರಾರ್ ಮತ್ತು ಡಿಪ್ಯುಟಿ ರೆಜಿಸ್ಟ್ರಾರವರಿಗೆ ನಾಲ್ಕು ವರ್ಷಗಳಲ್ಲಿ ಸಿಕ್ಕುವ ಸಂಬಳ ಬಡ್ತಿಯು (Increment) ಒಡನೆ ದೊರೆಯುವಂತೆ ನಮ್ಮ ಸ್ಥಳೀಯ ಸರಕಾರವು ಮಂಜೂರು ಮಾಡಿದ್ದಾರೆಂತ ತಿಳಿಯುತ್ತೇನೆ. ಅಂದರೆ ತಿಂಗಳಿಗೆ 60/— ರೂ. ಪ್ರಕಾರ ವರ್ಷಕ್ಕೆ 720/— ರೂ. ಕೂಡಲೇ ಸಿಕ್ಕಿದಂತಾಯಿತು. ಈ ಬಡ್ತಿಯನ್ನು ಯಾವ ಕಾರಣದಿಂದ ಮಂಜೂರು ಮಾಡಿದ್ದಾರೆಂತ ತಿಳಿಯಲಿಲ್ಲ. ಈ ಸಂಬಳ ಬಡ್ತಿಯನ್ನು ಕೊಡಬೇಕಾದರೆ ನಮ್ಮ ಸ್ಥಳೀಯ ಸರ್ಕಾರದವರು ಕೊಡಗಿನ ಕೌನ್ಸಿಲಿನವರಿಗಳೀ, ಪ್ರೆಸ್ಸಿನವರಿಗಳೀ ಕೇಳಿದರೇ? ಅಥವಾ ನಮ್ಮ ಸರ್ಕಾರದ ಖಜಾನೆಯಲ್ಲಿ ಹಣವು ಇದ್ದಕಿದ್ದ ಹಾಗೆ ಹೆಚ್ಚಾಯಿತೋ? ಒಂದು ಕಡೆಯಲ್ಲಿ ಸರ್ಕಾರದವರು ರೌಂಡ್ ಟೇಬಲ್ ಅರ್ಜಿಗೆ ಎರವಾಳಿಯಿಂದ ಹಸ್ತದಾನಿಗೆ ಐರವುದು. ಕೋ-ಆಪರೇಟಿವ್ ಸೊಸೈಟಿ ಲದಾರುಗಳಿಗೆ ಅರ್ಧಕ್ಕಿಂತ ಡ್ಯೂಟಿ ಹಾಕಿ ಹಾಕಿ ನಮ್ಮ ಸರ್ಕಾರದ ಉತ್ಪತ್ತಿ ಹೆಚ್ಚಿಸುವ ಪ್ರಯತ್ನ; ಇನ್ನೊಂದು ಕಡೆ ಉದ್ಯೋಗಸ್ಥರ ಸಂಬಳವನ್ನು ಶೇಕಡ 10ರಂತೆ ಕಡಿಮೆ ಮಾಡುವಿಕೆ, ಮತ್ತೊಂದು ಕಡೆ ದೊಡ್ಡ ಉದ್ಯೋಗಸ್ಥರ ಸಂಬಳವನ್ನು ಶೇಕಡ 20/— ರಂತೆ ಹೆಚ್ಚಿಸುವಿಕೆ. ಅಂತು ಕೆಲವರ ಬಾಯಿಯಲ್ಲಿ ಉದ್ಯೋಗಸ್ಥರ ಸಂಬಳ ಕಮ್ಮಿ ಮಾಡಬೇಕು. ಕೊಡಗಿಗೆ ಪ್ರಾಂತೀಕ ಸ್ವರಾಜ್ಯ ಪಡೆಯಬೇಕು ಎಂಬ ಕೂಗು. ಈ ಕೂಗಿನಲ್ಲಿ ನಮ್ಮ ಕೆಲವು ಉದ್ಯೋಗಸ್ಥರು ಸಹ ಹೌದು ಸಂಬಳ ಕಡಿಮೆ ಮಾಡಿಕೊಂಡು ಸ್ವರಾಜ್ಯ ನಡಿಸಬಹುದೆಂದನ್ನುವುದು. ಒಹ್ಯ ಅಂಥಾ ಸ್ವರಾಜ್ಯ ಬಂದಾಗ್ಗೆ ಹಾಗೆ ಸಂಬಳ ಕಡಿಮೆ ಮಾಡಬೇಕೆಂದನ್ನುವ ಉದ್ಯೋಗಸ್ಥರು ಆ ಸಮಯಕ್ಕೆ ನಾವು ಪೆನ್ಶನ್ ಪಡೆದು ಮನೆಯಲ್ಲಿ ಸ್ವಸ್ಥವಾಗಿ ಕೂರುತ್ತೇವೆನ್ನುವ ಧೈರ್ಯ. ಹೀಗೆ ಉಚ್ಚ ಉದ್ಯೋಗಸ್ಥರಿಗೆ ಸಂಬಳ ಬಡ್ತಿ ಮಾಡಿ ದಾರಿ ತೋರಿಸಿದನಂತರ ಇತರ ಉದ್ಯೋಗಸ್ಥರಿಂದ ಅಂಥಾ ಬಡ್ತಿ ಅರ್ಜಿಗಳು ಇನ್ನೂ ಬಂದಾವೆಂತ ನಾನು ಧೈರ್ಯವಾಗಿ ಹೇಳಬಹುದು. ಹೇಗೂ ರಿಟ್ರೆಂಚ್‌ಮೆಂಟ್ ಒಂದು ನಾಟಕ (Farce)ವೆಂತನ್ನಬೇಕಾಗಿದೆ.

'ಕೃಷಿ'

ಸಹಕಾರ ದಿನ.

ಮಹನೀಯರೇ,

ತಾವುನಾಡು ಯೂನಿಯನ್ನಿನವರು 'ಸಹಕಾರ ದಿನ'ವನ್ನು ಈ ತಾರೀಕು 5ರಲ್ಲಿ 'ಕೋಲಾಟ ಮಂದಿ'ನಲ್ಲಿ ಬಹು ವಿಜೃಂಭಣೆಯಿಂದ ನಡೆಸಿದರು. ಈ ಕೂಟಕ್ಕೆ ಸೇರಿದ ಸಂಘಗಳ ಪೈಕಿ ಭಾಗಮಂಡ್ಲ, ಪಣ್ಣುಮೊಸ, ಚೇರಂಗಾಲ ಸಹಕಾರಿ ಸಂಘಗಳೂ ಮತ್ತು ಚೇರಂಗಾಲ ದವಸಭಂಡಾರವೂ, ಈ ನಾಲ್ಕು ಸಂಘಗಳ ಸದಸ್ಯರು 150 ಜನರು ಅಲ್ಲದೆ, ಇಲ್ಲಿನ ಅಧಿಕಾರ ಹೊಂದಿದ ಮಹಾಶಯರು ಮತ್ತು ಇನ್ನಿತರ ಮಹಾಜನರು ಕೂಡಿ 50 ಜನರ ಮೇಲ್ಪಟ್ಟು ಜನರು. ನಿಗದಿತ ದಿ. ಪೂರ್ವಾಹ್ನ 9 ಗಂಟೆಯಿಂದ ಮಕ್ಕಳ ಮತ್ತು ಅಲ್ಲಿ ನೆರೆದ ಮಹಾಶಯರುಗಳ ಆಟ ಓಟಗಳ ಸ್ಪರ್ಧೆಗಳು 12 ಗಂಟೆಯ ತನಕ ನಡೆದವು.

ಸ್ಪರ್ಧೆಗಳಲ್ಲಿ ಗೆದ್ದವರಿಗೆ ಮೇಲಿನ 4 ಸಂಘಗಳು ಪಾರಿತೋಷಕ ಹಂಚುವುದಕ್ಕೆ ಭಾಗ ವಹಿಸಿದ್ದಲ್ಲದೆ ಅಲ್ಲಿ, ನೆರೆದ ಮಹಾಶಯರು ಸಹ ಈ ಸಂಭ್ರಮದಲ್ಲಿ ಭಾಗ ವಹಿಸಿಕೊಂಡು ಪಾರಿತೋಷಕವನ್ನು ಹಂಚುವುದಕ್ಕೆ ಕೊಟ್ಟಂಥವುಗಳನ್ನು ಅತ್ಯಾದರದಿಂದ ಸ್ವೀಕರಿಸಿಕೊಂಡು, ಈ ದಿನದ ಕೂಟಕ್ಕೆ ಅಧ್ಯಕ್ಷರಾದ ರಾ. ಸಾ. ಬಿ. ಶ್ರೀಪತಿರಾವ್‌ರವರಿಂದ ಸದರಿ ಪಾರಿತೋಷಕಗಳು ಹಂಚಲಾದವು.

ನಂತರ ರಾ. ಸಾ. ಬಿ. ಶ್ರೀಪತಿರಾವ್‌ರವರ ಅಧ್ಯಕ್ಷತೆಯಲ್ಲಿ ಮಿಟಿಂಗು ಪ್ರಾರಂಭವಾಗಿ ಅಧ್ಯಕ್ಷರು ಸಹಕಾರದ ಮೂಲತತ್ವಗಳನ್ನು ಮತ್ತು 'ಸಹಕಾರ ದಿನ' ಆಚರಣೆಯ ವಿಷಯಗಳನ್ನು ಎಲ್ಲರಿಗೂ ತಿಳಿಯುವಂತೆ ಭಾಷಣ ಮಾಡಿದರು. ಅಧ್ಯಕ್ಷರ ಅನುಮತಿ ಮೇರೆ ನಾಡು ಪಾರುಪತ್ಯಗಾರರಾದ ಮಿ. ಯಂ. ಯಂ ತಿಮ್ಮಯ್ಯನವರು, ಡಾಕ್ಟರ್ ಯಂ. ಎ. ಚಂಗಪ್ಪನವರು ಮತ್ತು ಈ ಸಹಕಾರಿ ಕೂಟದ ಸುಪರ್‌ವೈಸರು ಯಂ. ಯಂ ಸುಬ್ಬಯ್ಯನವರು ಸಹ ಅಧ್ಯಕ್ಷರ ಭಾಷಣವನ್ನೇ ಪುಷ್ಟೀಕರಿಸಿ ಮಾತಾಡಿದರು.

ಮಿ. ಕೆ. ಕೆ ಶ್ರೀನಿವಾಸಯ್ಯನವರು ಮೇಲಿನ 4 ಸಂಘಗಳಿಗೆ ದಿವಂಗತ ಮಿ. ರಾಮಣ್ಣನವರ ಸ್ಮರಣಾರ್ಥ ಕಟ್ಟಿದ ಕಪ್ಪಿನ ಬಗ್ಗೆ ಅವರ ತಮ್ಮಂದಿರು ಮಿ. ಗಳಾದ ಯಂ. ಬಿ. ತಿಮ್ಮಂಪರ್ತಿಗಳೂ ಮತ್ತು ಮಂಜಪ್ಪರ್ತಿಗಳೂ ಸೇರಿ ಉಚಿತಾರ್ಥವಾಗಿ ಕೊಟ್ಟ ಸ್ಥಳದಲ್ಲಿ ಈ ಮೊದಲು ಸದರಿ ಸಂಘಗಳ ಜನರಲ್ ಮಿಟಿಂಗಿನಲ್ಲಿ ನಿಶ್ಚೈಸಿದಂತೆ ಡಿವಿಡೆಂಡ್ ಮತ್ತು ರಿಸರ್ವ್‌ಗುಡ್ ಫಂಡ್ ಹಣದಿಂದ ಕಟ್ಟಡ ಕಟ್ಟುವಂತೆ ನಿಶ್ಚೈಸಿದ ಠರಾವನ್ನು ಓದಿ ಹೇಳಲು ಎಲ್ಲರಿಂದಲೂ ಅಂಗೀಕರಿಸಲ್ಪಟ್ಟು ಈ ವಿಷಯ ಯೂನಿಯನ್ನಿನವರು ನಡೆಸುವಂತೆ ತೀರ್ಮಾನಿಸಲಾಯಿತು.

ಈ ದಿವಸದ ಕೂಟಕ್ಕೆ ದಯಮಾಡಿಸಿ ಅಗ್ರಾಸನವನ್ನು ಕೈಕೊಂಡು 'ಸಹಕಾರ ದಿನ' ಮತ್ತು ಸಹಕಾರ ತತ್ವಗಳನ್ನು ಸಾಂಗವಾಗಿ ವಿವರಿಸಿದ ಮಿ. ಬಿ. ಶ್ರೀಪತಿರಾವ್‌ರವರಿಗೂ, ಮೇಲಿನ ಸಂಘಗಳಿಗೆ ಕಟ್ಟಡದ ಬಗ್ಗೆ ಉಚಿತಾರ್ಥವಾಗಿ ಸ್ಥಳ ಕೊಟ್ಟ ಮಿ. ಗಳಾದ ಯಂ. ಬಿ. ತಿಮ್ಮಂಪರ್ತಿಯವರಿಗೂ ಮತ್ತು ಮಂಜಪ್ಪರ್ತಿಗಳವರಿಗೂ ವಂದನೆಗಳಿಂದ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

'ಸೆಕ್ರಟರಿ'

ಬೊಂಬಾಯಿಯಲ್ಲಿ ಸ್ವದೇಶಿ ಹಬ್ಬ.

ಹಿಂದೂಸ್ಥಾನದಲ್ಲಿ ಹಬ್ಬಗಳಿಗೆ ಏನೂ ಕಡಿಮೆ ಇಲ್ಲ. ಸದಾ ಏನಾದರೊಂದು ಹಬ್ಬದ ಆಚರಣೆಯು ನಡೆಯುತ್ತಿರುವುದು. ಪ್ರತಿಯೊಂದು ಜಾತಿಗೂ, ಮತಕ್ಕೂ ಅವರವರ ವಿಶೇಷವಾದ ಹಬ್ಬಗಳು ಇರುವುವು. ಮತ್ತು ಅವಕ್ಕೆ ತಕ್ಕ ಪ್ರಾಶಸ್ತ್ಯವನ್ನು ಕೊಡುವರು. ಆ ಹಬ್ಬಗಳಿಗೂ "ಸ್ವದೇಶಿ ಹಬ್ಬ" (Swadeshi Festival) ಕ್ಕೂ ಬಹಳ ಭೇದವಿದೆ. 'ಸ್ವದೇಶಿ ಹಬ್ಬ'ವು ರಾಷ್ಟ್ರೋದ್ಧಾರದ ಕಾರ್ಯದಲ್ಲಿ ಪ್ರಥಮ ಕರ್ತವ್ಯವಾಗಿರುವುದು. ನರನಾರಿ, ದೇಶಪ್ರೇಮಿಗಳೆಲ್ಲರೂ ಜಾತಿ ಕುಲ ಗೋತ್ರಗಳನ್ನು ಕಲ್ಪಿಸದೆ ಸಮಬಾಂಧವರಾಗಿ ಏಕಕಂಠದಿಂದ ರಾಷ್ಟ್ರಗೀತೆಯನ್ನು ಹಾಡುತ್ತಾ, ದೇಶೀಯ ವಸ್ತುಗಳಿಗೆ ಪ್ರೋತ್ಸಾಹ ಕೊಡಬೇಕು. 'ಸ್ವದೇಶಿ ಹಬ್ಬ'ವು ಬರೇ ಹಿಂದೂಗಳದ್ದಲ್ಲ, ಮುಸಲ್ಮಾನರದ್ದಲ್ಲ, ಪಾರ್ಸಿಗಳದ್ದೇ ಅಲ್ಲ. ಇದೀ ಹಿಂದೂ ಜನಾಂಗದ ಹಬ್ಬವಾಗಿರುವುದು. ಸ್ವದೇಶಾಭಿಮಾನವುಳ್ಳ ಪ್ರತಿಯೊಬ್ಬ ಭಾರತೀಯನು ಈ ಹಬ್ಬವನ್ನು ತನಗೆ ಪವಿತ್ರವೆಂದು ಆಚರಿಸಬೇಕಾದುದು ಕರ್ತವ್ಯವು. ತಮ್ಮಲ್ಲಿ ಜಾಗೃತಿಗೊಂಡು ರಾಷ್ಟ್ರ ಕಾರ್ಯದಲ್ಲಿ ಸಂತೋಷ ಉತ್ಸಾಹಗಳೊಡನೆ ಯಾವ ಕಾರ್ಯದಿಂದ ಹಿಂದೂಸ್ಥಾನದ ಮುಂದಿನ ಕೀರ್ತಿಯು, ಪ್ರಶಸ್ತಿಯು ಲೋಕದಲ್ಲಿ ಬೆಳೆಯುವುದೋ ಅಂಥಾ ಅಸ್ಪೃಶ್ಯ ನಿವಾರಣದಲ್ಲಿ ತೊಡಗಬೇಕು. ಈ ಉದ್ದೇಶದಿಂದ ಬೊಂಬಾಯಿಯಲ್ಲಿ ಈ ತಾ. 5ರಿಂದ 15ರ ವರೆಗೆ 'ಸ್ವದೇಶೀ ಹಬ್ಬವು' ಜರುಗಿತು. ಮುದುಕರೂ ಯುವತಿಯರೂ, ಸ್ತ್ರೀ ಪುರುಷರೂ, ಭಾಗಿಗಳಾಗಿ ದೇಶೀಯ ಕೈಗಾರಿಕೆ ಸಾಮಾನುಗಳಿಗೆ ಬಹಳ ಪ್ರೋತ್ಸಾಹವನ್ನು ಕೊಟ್ಟಿರುವರು. ಅವರ ಕರ್ತವ್ಯ ಇಷ್ಟೆ. ರಾಷ್ಟ್ರೋದ್ಧಾರದ ಕೆಲಸದಲ್ಲಿ ಜಾತಿ ಭೇದವನ್ನು ಗಣನೆಗೆ ತಾರದೆ ಆಬಾಲವೃದ್ಧರೂ ಟೊಂಕ ಕಟ್ಟಿ ಮಾಡಬೇಕಾದ ಕರ್ತವ್ಯವು. ಹಿಂದೂ ಮಹಾಜನರು ಸ್ವದೇಶದ ಸಾಮಾನುಗಳನ್ನೇ ಉಪಯೋಗಿಸಲು ದೃಢೀಕರಿಸುವುದು; ಅಂತ್ಯಜರ ಉದ್ಧಾರಕ್ಕೆ ತೊಡಗುವುದು. ದೇಶೀಯ ಸಾಮಾನುಗಳ ಪ್ರಚಾರವನ್ನು ಏರ್ಪಡಿಸಿ ತಕ್ಕ ಬಹುಮಾನವನ್ನು ಕೊಡುವುದು. ತಾನು ಕೊಂಡುಕೊಳ್ಳುವ ಪ್ರತಿ ಸಾಮಾನೂ ಸ್ವದೇಶದಲ್ಲಿಯೇ ತಯಾರಾಗಿದ್ದಿರಬೇಕು. ಅಂದರೆ ಬಟ್ಟೆ ಬರೆಗಳು, ಮನೆಕೆಲಸಕ್ಕೆ ಆವಶ್ಯವಿರುವ ವಸ್ತುಗಳು, ಮಕ್ಕಳ ಆಟದ ಸಾಮಾನುಗಳು ಸ್ವದೇಶಿ ಸಿಗರೇಟುಗಳು ಇತ್ಯಾದಿ. ಸಾಧ್ಯವಿದ್ದಷ್ಟು ದೇಶೀಯ ಕೈಗಾರಿಕೆಗಳಿಗೆ ಉತ್ತೇಜನ ಕೊಡುವುದು. ತನ್ನ ಸ್ನೇಹಿತರನ್ನು ಕಂಡಷ್ಟು ಸಲವೂ, ಅವನಿಗೆ ಅವಳಿಗೆ, ಸ್ವದೇಶೀ ಸಾಮಾನುಗಳನ್ನು ಉಪಯೋಗಿಸುವುದರ ಗುಟ್ಟು ಮತ್ತು ಆವಶ್ಯಕತೆಯನ್ನು ಹೇಳುವುದು. ಅಲ್ಲದೆ ತಾನು ಕೊಂಡುಕೊಳ್ಳುವ ಪ್ರತಿಯೊಂದು ಸ್ವದೇಶಿ ಸಾಮಾನುಗಳಿಂದ ಇಂಡಿಯಾ ದೇಶದ ಬಡತನವು ನೀಗಿಸಿದಂತೂ, ಹೊಟ್ಟೆಗಿಲ್ಲದೆ ಕಂಗೆಡುತ್ತಿರುವ ನಮ್ಮ ಸಹೋದರರಿಗೆ ಒಂದು ಹಿಡಿ ಅನ್ನ ದೊರಕಿಸಿದಂತೂ ಭಾವಿಸಿ ಅವರ ಕೃತಜ್ಞತೆಗೆ ಪಾತ್ರನಾಗಿ ಧನ್ಯನಾದನೆಂದು ತಿಳಿಯುವುದು.

ವಿದೇಶದ ಬಟ್ಟೆಗಳನ್ನು ಅಭಿಮಾನದಿಂದ ಕೊಂಡುಕೊಳ್ಳುವ ಹೆಂಗಸು, ತನ್ನ ದೇಶದ ಬಡತನ ಮತ್ತು ಅದರಿಂದ ಕಷ್ಟಪಡುವ ಅಸಂಖ್ಯ ಸಹೋದರ ಅನ್ನಾಭಾವದ ಕಡೆಗೆ ಗಮನವನ್ನು ಕೊಡಬೇಕು. ಸ್ವದೇಶಿ ಬಟ್ಟೆಗಳೆಂದರೆ ತನ್ನ ದೇಶದಲ್ಲಿ ತಯಾರಾದ ಬಟ್ಟೆಗಳನ್ನೇ ಉಪಯೋಗಿಸುವುದು. ಇದೇ ಇಂಗ್ಲೆಂಡಿನಲ್ಲೂ ಕೇಳಬರುವುದು. ಅಲ್ಲಿಯೂ ಕೂಡ 'ಬ್ರಿಟಿಷ್ ಸಾಮಾನುಗಳನ್ನು ಕೊಂಡುಕೊಳ್ಳಿರಿ' (Buy British) ಎಂಬ ಚಳವಳವನ್ನು ಹೂಡಿರುವರು. ಅದರಂತೆಯೇ ಹಿಂದೂಸ್ಥಾನದಲ್ಲಿ ಪ್ರತ್ಯೇಕದಲ್ಲಿ 'ಹಿಂದೂಸ್ಥಾನದಲ್ಲಿ ತಯಾರಾದ ವಸ್ತುಗಳನ್ನು ಕೊಂಡುಕೊಳ್ಳಿರಿ' ಎಂಬ ಚಳವಳ (Buy Indian) ವು ಸ್ಥಾಪಿಸಲ್ಪಟ್ಟು ಬೊಂಬಾಯಿಯಲ್ಲಿ ನಡೆದ 'ಸ್ವದೇಶಿ ಹಬ್ಬ'ದಿಂದ ಮತ್ತು ಅದರಲ್ಲಿ ಸ್ತ್ರೀ ಪುರುಷರು ಜಾತಿ ಭೇದವನ್ನು ಕಲ್ಪಿಸದೆ ಭಾಗಿಗಳಾಗಿ ದೇಶೋದ್ಧಾರದ ಕಾರ್ಯದಲ್ಲಿ ತೊಡಗಿರುವುದನ್ನು ನೋಡಿದರೆ ಭಾರತೀಯರ ಸ್ವಾತಂತ್ರ್ಯ ಸೂರ್ಯನು ಉದಯಿಸಿದನೆಂದು ತಿಳಿಯಬೇಕು. ಭಾರತ ಮಾತೆಗೆ ಲೋಕದ ಜನರ ಹೃದಯದಲ್ಲಿ ತನ್ನ ಮಹಿಮೆಯನ್ನು ಬಿತ್ತುವ ಕಾಲವು ಸದ್ಯದಲ್ಲೇ ಒದಗಿ ಬರುವುದು

'ಕೆ. ಎ. ಯಸ್. ಆರ್.'

ಯಂ. ಗಣಪತಿಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಸಿಶಿಯನ್ಸ್, ರಥಬೀದಿ, ಮಂಗಳೂರು, ಇವರ

❀ ಅನುಭವ ಸಿದ್ಧ ಔಷಧಗಳು. ❀

೧. **ಧಾತುಪುಷ್ಟಿ ಲೇಹ**—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ಥದ ಬಾಧೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಉಬ್ಬುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು. ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7—0—0.

೨. **ಅಶೋಕಾರಿಷ್ಟ ಮತ್ತು ಮಾತ್ರೆ**—ಹೆಂಗಸರ ಮುಟ್ಟಿನ ದೋಷಗಳು, ಮುಟ್ಟುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾನಹೀನತೆ, ಗರ್ಭ, ಮಲಬದ್ಧತೆ, ರಕ್ತಹೀನತೆ, ಕೈ ಕಾಲು ನೋವು ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನು ಗುಣಪಡಿಸುವದು. 1 ಬಾಟ್ಲಿ ಔಷಧಕ್ಕೂ, 1 ಡಬ್ಬಿ ಮಾತ್ರೆಗೂ ರೂ. 2—4—0; 2ಕ್ಕೆ ರೂ. 4—4—0.

೩. **ಮೇಹ ಕುಠಾರ**—ಇದು ಮೂತ್ರಸ್ಥಾನದ ಕೆಂಪು, ಬಿಳಿದು, ಹಳದಿಯಂತೆ ಹೋಗತಕ್ಕ ಕೀವನ್ನೂ, ವ್ರಣವನ್ನೂ, ಉರಿಯನ್ನೂ ಗುಣಪಡಿಸುತ್ತದೆ. ಡಬ್ಬಿ 1ಕ್ಕೆ ರೂ. 2—8—0; 3ಕ್ಕೆ ರೂ. 7—0—0.

೪. **ಬಾಲಗ್ರಹ ಗುಟಿಕೆ**—ಬಾಲಗ್ರಹ, ಕಫ, ಕೆಮ್ಮು, ಉಬ್ಬಸ. ಎದೆಯಲ್ಲಿ ಗುರು ಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧ. ಬಾಟ್ಲಿ ಒಂದಕ್ಕೆ ರೂ. 0—10—0. 3ಕ್ಕೆ ರೂ. 1—12—0.

(52—9)

(FREE INSURANCE)

ಉಚಿತ ವಿಮಾ.

ಮ್ಯೂಚುವಲ್ ಬೆನಿಫಿಟ್ ಸ್ಕೀಂ ಎಂಬ ಅನ್ಯೋನ್ಯ ಸಹಾಯ ಪದ್ಧತಿ.

(Mutual Benefit Scheme.)

ಜೈ ಭಾರತ ಇನ್‌ಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಹೆಡ್ ಆಫೀಸು— ಮದ್ರಾಸ್.

ಲೈಫ್ ಇನ್‌ಷ್ಯೂರೆನ್ಸಿನ ಕಂಪೆನಿಗಳ ಕಾನೂನಿಗೆ ಅಧೀನವಾಗಿದೆ. ಸರಕಾರದಲ್ಲಿ ಡಿಪಾಜಿಟ್ ಕಟ್ಟಿ ಹಣ ಇಟ್ಟಿರುತ್ತದೆ.

ಈ ಮೇಲ್ಕಂಡ ಕಂಪೆನಿಯು ಅನ್ಯೋನ್ಯ ಸಹಾಯಕ್ಕಾಗಿ ಕಳೆದ ವರ್ಷ ಅಂದರೆ 1931ನೇ ಫೆಬ್ರವರಿಯಲ್ಲಿ ಮದ್ರಾಸಿನಲ್ಲಿ ಸ್ಥಾಪಿತವಾಗಿ ಈ ವರೆಗೆ 25500 ರೂಪಾಯಿಗಳ ಪಾಲಿಸಿಗಳನ್ನು ಪಡೆದಿರುತ್ತೆ. ಈ ಮೇಲ್ಕಂಡ ಕಂಪನಿಗೆ ಐಶ್ವರ್ಯವಂತರೂ ಬಡವರೂ, ಹಿತಸಂಬಂಧದ ಮನುಷ್ಯರು, ಜಾತಿ ಮತಗಳ ಭೇದವಿಲ್ಲದೆ ಜಾತಿಯವರು, ಹೆಂಗಸರೂ ಗಂಡಸರೂ ಹೆಚ್ಚು ಕಡಿಮೆ ಇಲ್ಲದೆ ಉಚಿತ ಜೀವ ವಿಮೆ ಮಾಡಿಕೊಳ್ಳಬಹುದು. 18 ವರ್ಷಕ್ಕೆ ಮೇಲ್ಪಟ್ಟು 60 ವರ್ಷದೊಳಗಿರುವವರು ಈ ಕಂಪೆನಿಗೆ ಸೇರಬಹುದು. ಈ ಕಂಪೆನಿಗೆ ಸೇರಲು ಇಚ್ಛಿಸುವವರು ಮೊದಲಲ್ಲಿ ರೂ. 5—8—0ನ್ನು ಮಾತ್ರ ಕಟ್ಟತಕ್ಕದ್ದು. ಅನಂತರ ತಿಂಗಳು ಒಂದಕ್ಕೆ 1 ರೂ. ಸ್ವಲ್ಪದರಲ್ಲಿ ದೊಡ್ಡ ಲಾಭ ದೊರೆಯುತ್ತೆ. ಆದ್ದರಿಂದ ಇಂಥಾ ಸುಸಮಯವನ್ನು ಕಳೆಯಕೂಡದು. ಈ ಬೇಗನೇ ಪಾಲಿಸಿಗಳನ್ನು ಹೊಂದಲು ಅರ್ಜಿ ಹಾಕಿ. ಇದರ ಫಲವನ್ನು ಹೊಂದಲು ಭಾಗಿಗಳಾಗಿರಿ.

ಹೆಚ್ಚಿನ ಮಾಹಿತಿಗಳಿಗೆ ಈ ಕೆಳಗಿನವರಿಗೆ ಬರೆದು ತಿಳಿದುಕೊಳ್ಳಬಹುದು. ಅಲ್ಲದೆ ಇವರು ಕೊಡಗಿನ ಎಲ್ಲಾ ಕಡೆಗಳಲ್ಲಿಯೂ ತಿರುಗುತ್ತಲಿರುತ್ತಾರೆ.

ಯಂ. ಬಿ. ಕರುಂಬಯ್ಯ,
ಏಜೆಂಟ್,
ಜೈ ಭಾರತ ಇನ್‌ಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
12—5 ನಾಪೋಕ್ಲು, (ಕೊಡಗು)

ಆಟೋಹಾರ್ಪ್ ಪಿಯೋನೋ ಪೋರ್ಟ್ ಎಂಬ ಹಾರ್ಮೋನಿಯಂಗಳು.

ಒಂದಕ್ಕೆ ರೂ. 4—8—0.

ಈ ಹಾರ್ಮೋನಿಯಂಗಳು ಹೊಸದಾಗಿ ತಯಾರಾದವು. 23 (ರೀಡ್ಸ್) ಸ್ವರಗಳು ಇರುವವು. ಭಾರಿ ಕ್ರಯದ ಹಾರ್ಮೋನಿಯಂಗಳಿಗಿಂತಲೂ ಚೆನ್ನಾಗಿರುವವು. ನಾಟಕ, ಗುಡಿ ಮುಂತಾದವುಗಳಲ್ಲಿ ಉಪಯೋಗಿಸಲು ಬಹು ಚೆನ್ನಾಗಿರುವವು. 23 ಸ್ವರಗಳುಳ್ಳ ಹಾರ್ಮೋನಿಯಂ 1ಕ್ಕೆ 4—8—0 ಪೇಕಿಂಗ್, ವಿ. ಪಿ. 1—8—0 ಪ್ರತ್ಯೇಕ.

ವಿಳಾಸ— ಸಿಟಿ ಮಾರ್ಟ್,
168, ಚೈನಾ ಬಜಾರ್,
4—2 ಮದ್ರಾಸು.

---

೪೦ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕೆ ಕಂಪೆನಿಯ

ಜ್ವರದ ಗುಳಿಗೆಗಳು.

ಚಳಿಜ್ವರ, ಟಾಯಿಫೋ ಜ್ವರ, ದಿನಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮ ಬಾಣದಂತೆ ಇವೆ. ಬಾಟ್ಲಿಗೆ ರೂ. ೧. ವಿ. ಪಿ. ೭ ಆಣೆ. ಬರೂರು ತರಿಸಿಕೊಳ್ಳಿ.

ಗಣೇಶ ರಾಮಚಂದ್ರ ಕರ್ಕೆ,
(52—14) ಮತು ಕಂಪೆನಿ,
ಗಿರಗಾಂವ, ಮುಂಬಯಿ,

ಇಂಡಿಯಾ ಎಕ್ವಿಟೇಬಲ್ ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್.

(ಸ್ಥಾಪಿಸಲ್ಪಟ್ಟದ್ದು 1908.)

ಕಳೆದ ವರ್ಷದ ಫಲಿತಾಂಶಗಳು.

ಹಿಂದಿನ ವರ್ಷದ ಕೆಲಸಕ್ಕಿಂತ 64% ಹೆಚ್ಚು.

ಕಳೆದ ವರ್ಷ ಸಂಭವಿಸಿದ ಪಕ್ಕಾ ಬಾಧ್ಯಸ್ಥರಲ್ಲಿ ಶೇಕಡ 96·6 ಜನರಿಗೆ ಹಣ ಅದೇ ವರ್ಷ ಕೊಡಲಾಗಿದೆ.

ಖರ್ಚಿನ ದಾಮಾಶಾಯಿ 31% ಮಾತ್ರ.

ಇಂಡಿಯಾ ಎಕ್ವಿಟೇಬಲ್ ಇನ್ಸೂರೆನ್ಸ್ ಕಂಪೆನಿಯು ಬುಡದಿಂದ ತಲೆಯ ವರೆಗೂ ಇಂಡಿಯನ್.

ವಜನದಾರರಾದ ಏಜೆಂಟರುಗಳು ಬೇಕಾಗಿದ್ದಾರೆ.

ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಕೆ. ಇ. ಚಾಕೊ,
ಬ್ರಾಂಚ್ ಸೆಕ್ರೆಟರಿ,
159 ಶ್ರೀ ನರಸಿಂಹರಾಜ ರೋಡ್,
ಬೆಂಗಳೂರು ಸಿಟಿ

ಅಥವಾ

(1) ಮಿಸ್ಟರ್ ಸಿ. ಯಂ. ಪೂವಯ್ಯ,
ಲೇಟ್ ಇನ್ಸ್‌ಪೆಕ್ಟರ್,
'ಪೂವಯ್ಯ ವಿಲ್ಲ,'
(12—11) ಮಡಿಕೇರಿ.

(2) ಯಂ. ಸಿ. ಅಪ್ಪಚ್ಚು,
ರಿಟೈಯರ್ಡ್ ಪಾರುಪತ್ಯಗಾರ್,
ಮಿಲ್ ರೋಡ್,
ಮಡಿಕೇರಿ.

GOVERNMENT SOAP FACTORY,

Bangalore.

ವಿಶ್ವಾಸಾರ್ಹತೆ.

ಉತ್ಕೃಷ್ಟವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ ಯಾವ ಗುಣಗಳು ಅವಶ್ಯಕವೆಂದು ನೀವು ತಿಳಿದಿರುತ್ತೀರೋ ಆ ಗುಣಗಳೆಲ್ಲಾ ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.

ನಾವು ನಿಮಗೆ ಭರವಸೆಯನ್ನೀಯುತ್ತೇವೆ.

ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
52—11 ಬೆಂಗಳೂರು.

ದುತ್ತೇನೆ. ಆದರೆ ಇದು ಅಖಿಲ ಹಿಂದುಸ್ಥಾನದಲ್ಲಿ ಆಗಬೇಕಾದ ಅಸ್ಪೃಶ್ಯತಾನಿವಾರಣೆಯ ಕೆಲಸದ ಭಾಗವಾಗಿದೆಯೆಂತ ನನಗೆ ಸಿಸಲ್ಲಿ ನೆತ ನಾನು ಯೋಚಿಸಿದ್ದುದಿಲ್ಲ. ಅಸ್ಪೃಶ್ಯತೆಯು ಹಿಂದೂ ಸಮಾಜದ ಜೀವವನ್ನೇ ನಾಶಪಡಿಸುತ್ತಿರುವ ದೋಷವಾಗಿದೆ. ಆದ್ದರಿಂದ ಸಹಪಂಕ್ತಿ ಭೋಜನವನ್ನು ಈ ಸುಧಾರಣೆಯೊಂದಿಗೆ ಬೆರೆಸಬೇಕಾರದು. ಇದನ್ನು ಬೆರೆಸಿದರೆ ಮುಖ್ಯ ಸುಧಾರಣೆಗೆ ತಡೆಯುಂಟಾದೀತು; ಅಲ್ಲದೆ ಈ ವರೆಗೆ ಅಸ್ಪೃಶ್ಯತಾನಿವಾರಣೆಯನ್ನು ಒಂದು ವಿಧವಾಗಿ ಜನರಿಗೆ ತಿಳಿಸಿ ಈಗ ಬೇರೆ ವಿಧವಾಗಿ ಹೇಳಿದರೆ ಜನರನ್ನು ಮೋಸಗೊಳಿಸಿದಂತಾದೀತು. ಸಮಾಜವು ತಯಾರಾಗಿರುವಲ್ಲಿ ಸಹಪಂಕ್ತಿ ಭೋಜನ ನಡೆಸಬಹುದಾದರೂ ಅಖಿಲ ಹಿಂದೂಸ್ಥಾನದ ಅಸ್ಪೃಶ್ಯತಾನಿವಾರಣೆ ಕೆಲಸದ ಭಾಗವಾಗಿ ಮಾಡಿಕೊಳ್ಳಬಾರದು.

ದೇವರಂತೆ ವೇದವೂ ಅವರ್ಣನೀಯವಾಗಿದೆ.

ಸನಾತನಿಗಳೆಂದು ಹೇಳಿಕೊಳ್ಳುವವರಿಂದ ಸಿಟ್ಟಿನಿಂದ ಬರೆದ ಪತ್ರಗಳು ಬಂದಿವೆ. ಅವರಿಗೆ ಅಸ್ಪೃಶ್ಯತೆಯು ಹಿಂದೂ ಧರ್ಮದ ಮುಖ್ಯ ಅಂಶವಾಗಿದೆ. ಅವರಲ್ಲಿ ಕೆಲವರು, ನಾನು ಹಿಂದೂ ಧರ್ಮವನ್ನು ಬಿಟ್ಟವನೆಂತ ಯೋಚಿಸುತ್ತಾರೆ. ಅಸ್ಪೃಶ್ಯತೆ ನಿವಾರಣೆ ಮುಂತಾದ ಸುಧಾರಣೆಯ ಅಭಿಪ್ರಾಯವನ್ನು ಕ್ರಿಸ್ತ ಮತ್ತು ಇಸ್ಲಾಮ್ ಧರ್ಮಗಳಿಂದ ನಾನು ತೆಗೆದುಕೊಂಡವನೆಂತ ಇನ್ನು ಕೆಲವರು ಯೋಚಿಸುತ್ತಾರೆ. ಅಸ್ಪೃಶ್ಯತೆಯು ನ್ಯಾಯವಾದದ್ದೆಂಬುದಕ್ಕೆ ಇನ್ನು ಕೆಲವರು ಶಾಸ್ತ್ರದ ಆಧಾರ ಕೊಡುತ್ತಾರೆ. ಇವರಿಗೆಲ್ಲಾ ಈ ಹೇಳಿಕೆ ಮೂಲಕ ನಾನು ಜವಾಬುಕೊಡುವುದಾಗಿ ತಿಳಿಸಿರುತ್ತೇನೆ. ಇವರಿಗೆಲ್ಲರಿಗೂ ನಾನು ಸನಾತನಿಯೆಂತ ತಿಳಿಸಬೇಕಾಗಿದೆ. ಸನಾತನಿಯೆಂದರೆ ಏನೆಂಬುದರಲ್ಲಿ ಅವರಿಗೂ ನನಗೂ ಮತಭೇದವಿದೆಯೆಂಬುದು ಸ್ಪಷ್ಟ. ಸನಾತನ ಧರ್ಮವೆಂಬುದು ಪುರಾತನ ಕಾಲದಿಂದ ನಡೆದು ಬಂದ ವೇದ ಮತ್ತು ಅನಂತರ ಹೊರಟ ಆಧಾರಗಳ ಮೇಲೆ ನಿಂತಿರುವ, ಜೀವವಿರುವ ಧರ್ಮವಾಗಿದೆ. ನನ್ನ ಅಭಿಪ್ರಾಯದಲ್ಲಿ ದೇವರು ಮತ್ತು ಹಿಂದೂ ಧರ್ಮವನ್ನು ಹೇಗೆ ವರ್ಣಿಸಲು ಸಾಧ್ಯವಿಲ್ಲವೋ ಹಾಗೆಯೇ ವೇದವನ್ನೂ ವರ್ಣಿಸಲು ಸಾಧ್ಯವಿಲ್ಲ. ಪ್ರಿಂಟಾಗಿರುವ ನಾಲ್ಕು ಪುಸ್ತಕಗಳೇ ವೇದವೆಂತ ಹೇಳುವುದು ಸ್ವಲ್ಪ ಮಟ್ಟಿಗೆ ಸಹ ಸರಿಯಲ್ಲ. ಋಷಿಗಳು ಹೇಳಿದ ಮಾತುಗಳಲ್ಲಿ ಉಳಿದು ನಮಗೆ ದೊರೆತಿದವು ಅವು. ಈ ಮೂಲ ಭಂಡಾರಕ್ಕೆ ಅನಂತರದ ಜನರು ಅವರಿಗೆ ತೋರಿದಂತೆ ಹೆಚ್ಚಿಗೆ ಸೇರಿಸಿದ್ದಾರೆ. ಅನಂತರ ಗೀತೆಯನ್ನು ಬರೆದ ಆ ಮಹಾಪುರುಷನ ಉದಯವಾಯಿತು. ಅವನು ಹಿಂದೂ ಧರ್ಮದ ಗೌರವವನ್ನು ತತ್ವಜ್ಞಾನಿಯುಳ್ಳವರಾದರೂ ಸರ್ವರಿಗೂ ತಿಳಿಯುವಂತೆ ಹಿಂದೂ ಜನಾಂಗಕ್ಕೆ ತಿಳಿಸಿಕೊಟ್ಟನು.

ಅಭ್ಯಾಸ ಮಾಡಲು ಇಚ್ಛೆ ಇರುವ ಪ್ರತಿಯೊಬ್ಬ ಹಿಂದೂವಿಗೂ ಇದೊಂದೇ ಪುಸ್ತಕ ಸಾಕು. ಬೇರೆ ಎಲ್ಲಾ ವೇದ ವೇದಾಂಗಗಳನ್ನೂ ಸುಟ್ಟುಬಿಟ್ಟರೂ, ಈ ಗೀತೆಯ 700 ಶ್ಲೋಕಗಳು ಹಿಂದೂ ಧರ್ಮವೇನೆಂತ ತಿಳಿಸಲೂ, ಹಿಂದೂ ಧರ್ಮದಂತೆ ನಡೆಸುಕೊಳ್ಳಲೂ ಸಾಕಾಗಿವೆ. ಈ ಗೀತೆಯ ಮುಖ್ಯ ಬೋಧನೆಗೆ ವಿರೋಧವಾಗಿರುವ ಯಾವುದನ್ನೇ ಆದರೂ ಹಿಂದೂ ಧರ್ಮಕ್ಕೆ ಸೇರಿದ್ದಲ್ಲವೆಂತ ನಾನು ತಿರಸ್ಕರಿಸುತ್ತೇನೆ. ಯಾವ ಧರ್ಮವನ್ನೂ, ಯಾವ ಮತಬೋಧಕನನ್ನೂ ಅದು ಅಲ್ಲಗಳೆಯುವುದಿಲ್ಲ.

ಬೈಬಲ್, ಕೊರಾನ್, ಜೆಂಡಾವೆಸ್ತಾ ಮುಂತಾದ ಪ್ರಪಂಚದ ಇತರ ಧರ್ಮ ಗ್ರಂಥಗಳನ್ನೂ, ಗೀತೆಯನ್ನು ಯಾವ ಶ್ರದ್ಧೆಯಿಂದ ಓದಿದೆನೋ ಅದೇ ಶ್ರದ್ಧೆಯಿಂದ ಓದಿದ್ದೇನೆಂತ ಹೇಳಲು ಸಂತೋಷಪಡುತ್ತೇನೆ. ಹೀಗೆ ಭಕ್ತಿ ಪುರಸ್ಸರವಾಗಿ ನಾನು ಓದಿದ್ದರಿಂದ ಗೀತೆಯಲ್ಲಿ ನನ್ನ ನಂಬಿಕೆಯು ಇನ್ನೂ ಹೆಚ್ಚಾಗಿದೆ. ಈ ಓದುಗಾರಿಕೆಯಿಂದ ನನ್ನ ದೃಷ್ಟಿಯು ವಿಶಾಲವಾಯಿತು. ಅದರಿಂದ ನನ್ನ ಹಿಂದೂ ಧರ್ಮವೂ ವಿಶಾಲವಾಯಿತು. ಜೋರೋಯಾಸ್ಟರ್, ಯೇಸು ಮತ್ತು ಮಹಮ್ಮದರ ಜೀವನಗಳು ಗೀತೆಯ ಕೆಲವು ಮಾತುಗಳನ್ನು ಸ್ಪಷ್ಟೀಕರಿಸುತ್ತವೆ. ನನ್ನನ್ನು ಹುಚ್ಚೆಬ್ಬಿಸಲೆತ್ನಿಸುವ ಹೇಳುವ ಮಾತುಗಳು ನನ್ನನ್ನು ಸಮಾಧಾನಗೊಳಿಸುತ್ತವೆ. ನಾನು ಹಿಂದೂವೆನಿಸಿಕೊಳ್ಳಲು ಹೆಮ್ಮೆಪಡುತ್ತೇನೆ. ಯಾಕೆಂದರೆ, ಅದರಂಥ ಸಹನಶಕ್ತಿ ಇರುವುದಲ್ಲದೆ ಪ್ರಪಂಚದ ಎಲ್ಲಾ ಧರ್ಮಗಳ ಸಾರಗಳನ್ನು ಆಕರ್ಷಿಸಿಕೊಳ್ಳಲು ಹಿಂದೂ ಧರ್ಮದಲ್ಲಿ ಎಡೆಯುಂಟು.

ಗೀತೆಯಲ್ಲಿ ಅಸ್ಪೃಶ್ಯತೆಗೆ ಆಧಾರವಿಲ್ಲ.

ಈ ಜೀವ ಕೊಡುವ ಪುಸ್ತಕದಲ್ಲಿ ಅಸ್ಪೃಶ್ಯತೆಗೆ ಆಧಾರವಿಲ್ಲ. ಅದಕ್ಕೆ ಬದಲಾಗಿ ಅದರಲ್ಲಿ ಕೊಟ್ಟಿರುವ ಕಾರಣಗಳೂ, ಹೃದಯಕ್ಕೆ ಮುಟ್ಟುವ ಮಾತುಗಳೂ ಜೀವವೆಲ್ಲಾ ಒಂದೇ ದೇವರಿಂದ ಹುಟ್ಟಿದ್ದು, ದೇವರನ್ನೇ ಸೇರತಕ್ಕದ್ದು ಎಂಬ ಅಭಿಪ್ರಾಯವನ್ನು ನನ್ನಲ್ಲಿ ಪರ್ಯಾಯದಿಂದ ಹುಟ್ಟಿಸುತ್ತವೆ. ಈ ಪೂಜ್ಯ ಬೋಧಕರಿಂದ ಹೇಳಲ್ಪಟ್ಟಿರುವ ಮಾತುಗಳಿಂದ, ಸನಾತನ ಧರ್ಮವೆಂದರೆ ಹೊರಗಿನ ತೋರಿಕೆಯ ಕರ್ಮವಲ್ಲ, ಒಳಗೆ ಶುಚಿಯಾಗಿ ದೇವರಲ್ಲಿ ಒಂದೇ ಸಮನ ಕೃತ್ಯಗಳಲ್ಲಿಯೂ ಬೆರೆಯುವುದೇ ಎಂಬುದು ಸ್ಪಷ್ಟವಾಗುತ್ತದೆ. ಗೀತೆಯ ಬೋಧನೆಯನ್ನು ನನ್ನ ಜೀವನಕ್ಕೆ ಬೆರೆಸಿಕೊಂಡು ಕೋಟಿಗಟ್ಟಳೆ ಜನಂ ಗುಂಪಿಗೆ ಹೋಗಿದ್ದೇನೆ. ಅವರು ನನ್ನ ಮತವನ್ನು ತಿರಸ್ಕರಿಸಿ ಕೇಳಿದ್ದಾರೆ. ಹಾಗೆ ಕೇಳಿದ್ದು ನನ್ನ ರಾಜಕೀಯ ಜ್ಞಾನಕ್ಕಾಗಿಯಲ್ಲ, ನನ್ನ ಪಾಂಡಿತ್ಯಕ್ಕಾಗಿಯಲ್ಲ, ನನ್ನನ್ನು ಅವರಲ್ಲಿ ಒಬ್ಬನೆಂತಲೇ, ಅವರ ಧರ್ಮಕ್ಕೆ ಸೇರಿದವನೆಂತಲೇ ತಿಳಿದುಕೊಂಡು ನನ್ನ ಮಾತುಗಳಿಗೆ ಕಿವಿಗೊಟ್ಟರು. ದಿನಗಳು ಹೋದಂತೆಯೇ ನಾನು ಸನಾತನ ಧರ್ಮಕ್ಕೆ ಸೇರಿದವನೆಂಬ ನನ್ನ ನಂಬಿಕೆಯು ಬಲವಾಗುತ್ತಲೇ ಇದೆ. ದೇವರು ಇಚ್ಛೆಪಟ್ಟರೆ ಈ ನನ್ನ ನಂಬಿಕೆಗೆ ನನ್ನ ಮರಣದಿಂದ ಮೊಹರು ಹಾಕುತ್ತೇನೆ.

ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನ.

೧೮ನೆಯ ಅಧಿವೇಶನ.

ಪ್ರಕಟಣೆ ೨.

ಬರುವ ಡಿಸೆಂಬರ್ ತಿಂಗಳ ಕೊನೆಯಲ್ಲಿ ಮಡಿಕೇರಿಯಲ್ಲಿ ನಡೆಯಬೇಕೆಂದಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಅಧಿವೇಶನದ ಕಾಲದಲ್ಲಿ ಕೊಡಗಿನಲ್ಲಿರುವ ಮೇಲಾದ ಕನ್ನಡ ಬರೆಹಗಾರರ ಕೆಲವು ಬರೆಹಗಳನ್ನು ಜತೆಗೂಡಿಸಿ ಒಂದು ಕೃತಿಯನ್ನು ಪ್ರಕಟಿಸಬೇಕೆಂದು ಗೊತ್ತುಮಾಡಿದೆ. ಅದನ್ನು ಅಧಿವೇಶನದ ನೆನಪಿಗಾಗಿ ಪ್ರಕಟಿಸುವರು. ಅದರಲ್ಲಿ ಹಿರಿಯರಿಗೂ, ಕಿರಿಯರಿಗೂ ಬೇರೆ ಬೇರೆ ಎಡೆಗಳನ್ನು ಏರ್ಪಡಿಸಿದೆ. ಆದುದರಿಂದ ಬರೆಯಬಲ್ಲವರೆಲ್ಲರೂ ಸ್ತ್ರೀ ಪುರುಷರೂ ಹೆಚ್ಚು ಕಡಿಮೆ ೮ ಫೂಲ್ಸ್‌ಕೇಪ್ ಪುಟಗಳಿಗೆ ಮೀರದಂತೆ ಕಾಗದದ ಒಂದೇ ಬದಿಯಲ್ಲಿ ಈ ಕೆಳಗೆ ಸೂಚಿಸಿರುವ ವಿಷಯಗಳ ಮೇಲಾಗಲೀ, ತಮಗೆ ತೋರುವ ಬೇರೆ ಉತ್ತಮ ವಿಷಯಗಳ ಮೇಲಾಗಲೀ ಬರೆಹಗಳನ್ನು ಕಳುಹಿಸಿ ಮೇಲಿನ ಒಯ್ಕೆಯನ್ನು ಕೈಗೂಡಿಸಬೇಕೆಂದು ಕೋರಿದೆ. ಇವುಗಳನ್ನು ಮಡಿಕೇರಿ ಹೈಸ್ಕೂಲು ಉಪಾಧ್ಯಾಯರು ಶ್ರೀ ಟಿ. ಎಸ್. ರಾಮ ಶಾಸ್ತ್ರಿಗಳ ವಿಳಾಸಕ್ಕೆ, ಈಗಿನಿಂದ ಮೂರು ವಾರಗಳೊಳಗೆ ಕಳುಹಿಸಬೇಕೆಂದು ವಿನಂತಿ. ಬರೆಹವು ಗದ್ಯಪದ್ಯಗಳಲ್ಲಿ ಎರಡೂ ಆಗಬಹುದು. ಇವುಗಳಲ್ಲಿ ಕೆಲವನ್ನು ಆರಿಸಿಕೊಳ್ಳುವ ಹಕ್ಕನ್ನು ಸಂಪಾದಕ ಮಂಡಲವು ಉಳಿಸಿಕೊಂಡಿದೆ.

ವಿಷಯಗಳು :—(1) ಸಾಹಿತ್ಯ, (2) ವಿಮರ್ಶೆ, (3) ಶೋಧನೆ, (4) ಕೊಡಗಿಗೆ ಸಂಬಂಧಪಟ್ಟ ಚರಿತ್ರೆ, (5) ಕಥೆ, (6) ನೃತ್ಯ.

ಸಿ. ಎಚ್. ಸ್ಕೂಲ್, ಮಡಿಕೇರಿ.
ಕಾರ್ತಿಕ ಬಹುಳ ಚತುರ್ಥಿ,
17—11—1932. } ಜಂಟಿ ಕಾರ್ಯದರ್ಶಿಗಳು.

ಸೋಮವಾರಪೇಟೆ ಶಾಲೆಯ 4ನೆ ವಾರ್ಷಿಕೋತ್ಸವ.

(ಒಬ್ಬ ಬಾತ್ಮಿದಾರರಿಂದ)

ಇದೇ ನವಂಬರು ತಾ. 12ನೇ ಶನಿವಾರ ಸೋಮವಾರಪೇಟೆಯ ಶಾಲೆಯ 4ನೇ ವಾರ್ಷಿಕೋತ್ಸವವು ಬಹು ವಿಜೃಂಭಣೆಯಿಂದ ಪಿ. ಬಿ. ಚಿತ್ತರಂಜನ ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ಜರುಗಿತು. ಸುಮಾರು ಒಂದು ಸಾವಿರ ಪ್ರೇಕ್ಷಕರು ನೆರೆದಿದ್ದರು. ಮಹಿಳಾ ವರ್ಗದವರು ಹೆಚ್ಚಾಗಿದ್ದುದು ಒಂದು ವಿಶೇಷ ವಿಷಯವಾಗಿತ್ತು.

ಕಾರ್ಯಕ್ರಮ ಪಟ್ಟಿಯಲ್ಲಿ ನಮೂದಿಸಿದ್ದಂತೆ 9½ ಗಂಟೆಗೆ ಆಟೋಟಗಳ ಸ್ಪರ್ಧೆಗೆ ಅಣಿ ಮಾಡುತ್ತಿರುವಷ್ಟರಲ್ಲಿ, ಅಧ್ಯಕ್ಷರು, ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರೇ ಮೊದಲಾದವರು ಬಂದರು. ಓಟಗಳ ಸ್ಪರ್ಧೆಯು ಮೊದಲಾಯಿತು. ಈ ವರ್ಷ ಪದ್ಮಿನಿಯವರಿಗೆ ಸ್ಯಾಕ್ ರೇಸ್ ಮತ್ತು ಹುಡುಗರಿಗೆ ಹಾಕಿ ಸಿಕ್ಸ್, ಒಬ್‌ಸ್ಟೇಕಲ್ ರೇಸ್ ಮೊದಲಾದವುಗಳು ವಿಶೇಷ ರೀತಿಯದಾಗಿದ್ದುವು.

ಈ ಮಧ್ಯೆ ಇಬ್ಬರು ಮಹನೀಯರು ಪದ್ಮಿನಿಯವರನ್ನು ಪ್ರೋತ್ಸಾಹಿಸುವುದಕ್ಕಾಗಿ ಬೆಂಡು ಎನಿಸಿ ಹೊಸದೊಂದು ವಿಷಯವನ್ನು ಸೇರಿಸಿ ಎರಡು ಇನಾಮುಗಳನ್ನು ಕೊಟ್ಟರು. ಸಾಧಾರಣ 12 ಗಂಟೆಗೆ ಮೇಲ್ಕಂಡ ವಿಷಯವು ಮುಗಿದು, ಮಧ್ಯಾಹ್ನ ಊಟ ಮಾಡುವುದಕ್ಕಾಗಿ ಶಾಲೆಗೆ ತೆರಳಿದರು. ಸುಮಾರು ಸಾವಿರ ಜನರಿಗೆ ಇಕ್ಕಟ್ಟಾದ ಸ್ಥಳದಲ್ಲಿ ಅನ್ನ ಬಡಿಸುವ ಕೆಲಸವು ಸುಲಭ ಸಾಧಾರಣವಾದ ಕೆಲಸವಲ್ಲದಿದ್ದರೂ ಜಯಪ್ರದವಾದದ್ದನ್ನು ನೋಡಿದರೆ ಶಾಲೆಯ ಸುಕೃತವೆಂದೇ ಎಣಿಸಬೇಕು.

ಅನಂತರ 3 ಗಂಟೆಗೆ ಅಧ್ಯಕ್ಷರನ್ನೂ, ಡೆಪ್ಯುಟಿ ಇನ್ಸ್‌ಪೆಕ್ಟರನ್ನೂ ವಾದ್ಯಘೋಷದೊಡನೆ ಶಾಲೆಗೆ ಕರೆತಂದರು. ಅಧ್ಯಕ್ಷರು ಆಟೋಟಗಳಲ್ಲಿ ಗೆದ್ದವರಿಗೆ ಇನಾಮುಗಳನ್ನು ಹಂಚಿದರು. ಹೆಡ್ಮಾಸ್ಟರವರು ಕಳೆದ ವರ್ಷದ ವರದಿಯನ್ನು ಓದಿದರು. ಅದರ ಪ್ರಕಾರ ಈ ಶಾಲೆಯು ಬಹು ಮಟ್ಟಿಗೆ ಅಭಿವೃದ್ಧಿಯನ್ನು ಹೊಂದುತ್ತಿರುವುದು ಸಂತೋಷದ ವಿಷಯವೇ ಸರಿ. 'ಕುಶಾಲ್ ವಾಣಿ ವರ್ಧಕ ಬಾಲಕನಮಾಜ'ವೆಂಬ ಬಾಲಕರ ಸಮಾಜದ ರಿಪೋರ್ಟನ್ನು ಸೆಕ್ರೆಟರಿಯವರು ಓದಿದರು. ಮಾತುಗಾರಿಕೆಯಲ್ಲಿ ಜಯಶೀಲರಾದ ವಿದ್ಯಾರ್ಥಿಯರಿಬ್ಬರಿಗೆ ಸಹ ಇನಾಮುಗಳು ಕೊಡಲಾದವು. ಹಳೆ ವಿದ್ಯಾರ್ಥಿಯ ಪರವಾಗಿ ಮೆ. ಡಿ. ಯಸ್. ಕೃಷ್ಣಯ್ಯನವರು ದೀರ್ಘವಾದ ಭಾಷಣ ಮಾಡಿದರು. ಡಿಪ್ಯುಟಿ ಇನ್ಸ್‌ಪೆಕ್ಟರವರು ಮಹಿಳೆಯರಿಗೆ ವಿದ್ಯಾಭ್ಯಾಸವನ್ನು ಕೊಡುವುದರ ವಿಷಯವಾಗಿ ಭಾಷಣ ಮಾಡಿ, ಈ ಶಾಲೆಯು ಹೈಯರ್ ಎಲಿಮೆಂಟರಿ ಶಾಲೆಯಾಗುವ ಕಾಲವು ಹತ್ತಿರದಲ್ಲೇ ಇದೆ ಎಂಬುದಾಗಿ ಹೇಳಿದರು.

ಹಾಗೆಯೇ ಅಧ್ಯಕ್ಷರು ಸ್ವಾರಸ್ಯವಾದ ಭಾಷಣ ಮಾಡಿದರು. ಸಭೆಯ ಪರವಾಗಿ ಮೆ. ಬದ್ದಂಡ ಜಿ. ಮುತ್ತಣ್ಣನವರು ವಂದನೆಗೈದರು. 5½ ಗಂಟೆಗೆ ಸಂಕ್ಷಿಪ್ತ ಪೂಜೆಯೊಡನೆ ನಾಟಕವನ್ನು ಸುರುಮಾಡಿದರು. ಇಂಗ್ಲಿಷಿನಲ್ಲಿ 'ಆಂಡ್ರೊಕ್ಲೀಸ್ ಮತ್ತು ಸಿಂಹ' ಎಂಬದಾಗಿ ಎಂಬುದಾಗಿತ್ತು. ಅದರಲ್ಲಿ ಡ್ವಾರ್ಫ್ ಮತ್ತು ಕರಡಿ ಪಾತ್ರಗಳನ್ನಭಿನಯಿಸಿದವರು ಪ್ರೇಕ್ಷಕರನ್ನು ತಮ್ಮ ಅಭಿನಯ ಚಮತ್ಕಾರಗಳಿಂದ ಸಂತೋಷಪಡಿಸಿದರು. ಸಹಕಾರದ ನಾಟಕವನ್ನು ಬಹಳ ಚೆನ್ನಾಗಿ ಅಭಿನಯಿಸಿದರು. ಈ ಲೋಕದಲ್ಲಿ ಈಗ ನಡೆಯುತ್ತಿರುವ ಆರ್ಥಿಕ ತಾಪತ್ರಯಗಳನ್ನೂ, ಸಹಕಾರದ ಮಹಿಮೆಯನ್ನೂ ಹೃದಯದಲ್ಲಿ ಚಿತ್ರಿಸಿದರು ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಈ ನಾಟಕವು 7½ ಗಂಟೆಗೆ ಲಕ್ಷ್ಮೀ ಪೂಜೆಯೊಡನೆ ಅಂತ್ಯವಾಯಿತು. ಕಡೆಗೆ ಹರಿದಾಸರೊಬ್ಬರು ಧ್ರುವನ ಕಥೆಯನ್ನು ರಸವತ್ತಾಗಿ ಹೇಳಿ ದೇವರ ಮಹಿಮೆಯನ್ನೂ, ಭಾಗವತರ ಅದ್ಭುತ ಶಕ್ತಿಯನ್ನೂ ವರ್ಣಿಸಿದರು. ಕಡೆಗೆ ಶಾಲಾ ಹೆಡ್ಮಾಸ್ಟರರು ನೆರೆದ್ದ ಮಹನೀಯರಿಗೆ ವಂದನೆಯನ್ನರ್ಪಿಸಿ ಆ ದಿನ ಉತ್ಸವವನ್ನು ಮುಕ್ತಾಯಗೊಳಿಸಿದರು.

ಕಳ್ಳೀ!

(ಚವಲಿಕೆ ಸಿಕಿಸು—ಆರುವಿಲಾಸ—ಎಂಬಂತೆ.)

ಕಳ್ಳನು ಯಾತಕೆ ಕುಡಿಯುವೆ ಪಾಪಿ
ಒಳ್ಳೆಯುವರೆಂದು ಕುಡಿಯುರು ಕಳ್ಳಾ || ಅ | ಪ ||

ಕಳ್ಳನ ಸ್ನೇಹವು ಕಳ್ಳದು ನೋಡು
ಸುಳ್ಳನುಡಿಸುವ ಕಳ್ಳದು ಅರಿಯೊ || ೧ ||

ಅಂಗಡಿ ಬೀದಿಯೊಳ್ ಅಲೆಸುದು ಕಳ್ಳು
ಮಂಗನಂತಾಡಿಸಿ ಬಯ್ಯುದು ನೆರೆಗೆ || ೨ ||

ಸುತ್ತಲು ನೋಡೊಮ್ಮೆ ಮುಂತಿನ ಮಿತ್ರ
ಕತ್ತೆಯ ಮರಿಯಂತೆ ಕುಣಿವನು ಪಾಪಿ || ೩ ||

ತನ್ನನು ಅರಿಯದ ಮನುಜನ ಯಾಕೆ?
ನಿನ್ನನೆ ಮರೆಯುವೆ ಕಳ್ಳದು ನೋಡೆ || ೪ ||

ನಿನ್ನನು ಸೇರಿದ ನಿನ್ನಯ ತರುಣಿ
ಅನ್ಯರ ಬಳಿಗೆ ಬೀಳ್ವಳು ಬೇಗ || ೫ ||

ಕಳ್ಳನು ನೀನು ಸೇವಿಸುತಿರಲು
ಒಳ್ಳೆಯವರೆಲ್ಲ ತೊರೆವರು ನಿನ್ನ || ೬ ||

ಬಡವಾಪಿ ಮಕ್ಕಳ ಪಡೆಯಲು ನೀನು
ಬಡಿಯುವೆ ಅವರನು ನಡು ಇರುಳಲ್ಲಿ || ೭ ||

ನಿನ್ನಯ ಕುವರರು ಕುಡಿಯುತ ತಿರುಗೆ
ಬನ್ನವ ಪಡುವೆಯೊ ಇಲ್ಲವೊ ಪೇಳು || ೮ ||

ನಿನ್ನಲ್ಲಿ ಹುಟ್ಟಿದ ಬಲಹೀನ ಮಕ್ಕಳು
ಬನ್ನವ ಪಡುವುದು ಕಣ್ಣಾರೆ ಕಾಂಬೆ || ೯ ||

ಕಾಂದೆಯ ಗಳಿಸಿದ ಕಾಸಿಗೆ ಎಲ್ಲ
ಮಂಧಬುದ್ಧಿನೀ ಕೊಳ್ಳುವೆ ಕಳ್ಳು || ೧೦ ||

ಹಸಿರುತೆಲ್ಲವು ದುಡಿಯುತ್ತಲಿದು
ತೆಗೆದು ಬಿಸುಡುವೆ ಕಳ್ಳನ ಮನೆಗೆ || ೧೧ ||

ಪಂಡೇತಿ ಕಳ್ಳನು ಪಂಪರಿ ಕುಡಿಯೆ
ಬರದಾಯ್ತು ಮನೆಯು ಹೊರೆಯನಾಯ್ತು ಸಾಲ || ೧೨ ||

ಕಳ್ಳನು ನೀರತು ಒಳ್ಳೆವನಾಗು
ಮುಳ್ಳಿನ ಮನೆಯಲಿ ಸುಳಿಯದೆ ಸಾಗು || ೧೩ ||

ಲೋಕವೆ ಹಳಿವುದು ಯಾಕದು ನಿನಗೆ
ಬೋಧಿಸಿದಂತೆ ಮಹಾತ್ಮರ ನಾವು || ೧೪ ||

ಸೇವಕ.

ಸರ್ಕ್ಯೂಲಾರ್.

ಲಿಮಿಟೆಡ್ ಸಹಕಾರ ಸಂಘಗಳು ಸೆಂಟ್ರಲ್ ಬ್ಯಾಂಕಿಗೆ ಸಾಲಕ್ಕೆ ಅರ್ಜಿ ಬರೆದುಕೊಳ್ಳುವಾಗ ಅವರ ಅರ್ಜಿ ಫಾರಮನ್ನು ಸಂಘಕ್ಕೆ ಸಾಲದ ಬಗ್ಗೆ ದರಖಾಸ್ತು ಮಾಡಿದವರ ಪಟ್ಟಿಯಲ್ಲಿ ಅಂಥಾ ದರಖಾಸ್ತುದಾರರ ಕಸಬನ್ನೂ, ಮೊದಲು ಸಾಲ ಪಡೆಕೊಂಡಿದ್ದಪಕ್ಷ ಅಂಥಾ ಸಾಲಗಳೇನಾದರೂ ಬಾಕಿ ಇದೆಯೋ ಯಾ ಇಲ್ಲವೋ ಎಂಬುದನ್ನೂ ಮತ್ತು ಸ್ಥಿರಸೊತ್ತುಗಳೇನಾದರೂ ಇದೆಯೋ ಯಾ ಇಲ್ಲವೋ ಎಂಬುದನ್ನೂ ಸಹ ತಪಶೀಲ್ ನಮೂದಿಸಬೇಕೆಂತ ಡೈರೆಕ್ಟರುಗಳು ತಾರೀಖ 29—10—1932ರ ಮೀಟಿಂಗಿನಲ್ಲಿ ಸೂಚಿಸುತ್ತಾರೆ. ಇನ್ನು ಮುಂದೆ ಲಿಮಿಟೆಡ್ ಸಂಘಗಳು ಬ್ಯಾಂಕಿಗೆ ಸಾಲಕ್ಕೆ ಅರ್ಜಿ ಬರೆದುಕೊಳ್ಳುವಾಗ ದರಖಾಸ್ತುದಾರರ ಮೇಲ್ಕಂಡ ಸೂಚನೆಗಳನ್ನು ಪೂರ್ತಿಯಾಗಿ ಬರೆದು ಕಳುಹಿಸದೆ ಹೋದರೆ ಅಂಥಾ ಸಂಘಗಳಿಗೆ ಸಾಲ ಮಂಜೂರ್ ಮಾಡಲು ಆಗುವುದಿಲ್ಲವೆಂಬ ಸಂಗತಿ ನಿಮಗೆ ಈ ಮೂಲಕ ತಿಳಿಸಲಾಗಿದೆ.

ಕೋ-ಆಪರೇಟಿವ್ ಸೆಂಟ್ರಲ್ ಸಿ. ಎಸ್. ವೆಂಕಟಯ್ಯ
ಸಹಕಾರ ಬ್ಯಾಂಕ್, ಲಿಮಿಟೆಡ್, (ಗೌರವ ಕಾರ್ಯದರ್ಶಿ.)
ಮಡಿಕೇರಿ. ತಾ: 10—11—1932.

ವರ್ತಮಾನ ಸಂಗ್ರಹ.

ಒಳದೇಶ.

ಫ್ರೇಜರ್ ಪೇಟೆಯಲ್ಲಿ ಇಲಿಗಳು ಕುಂಬಿ ಸಾಯುತ್ತಿರುವದಲ್ಲದೆ, ಮೂರು ಜನರಿಗೆ ಪ್ಲೇಗು ಅಂಟಿದೆಯೆಂದು ವರ್ತಮಾನ.

ಮೆ. ಸಿ. ಯಸ್. ವೆಂಕಪ್ಪಯ್ಯನವರು ಸಹಕಾರಿ ಸೆಂಟ್ರಲ್ ಬ್ಯಾಂಕಿನ ಗೌರವ ಸೆಕ್ರೆಟರಿ ಪದವಿಗೆ ರಾಜಿನಾಮೆ ಕೊಟ್ಟಿರುವರೆಂದು ತಿಳಿಯಬರುತ್ತದೆ.

ತಾ. 9 ರಲ್ಲಿ ಬೆಂಗಳೂರಿನಿಂದ ಮಡಿಕೇರಿಗೆ ಬಂದ ಚೀಫ್ ಕಮಿಷನರವರು ತಾ. 16 ರಲ್ಲಿ ನಗರ ಹೊಳೆ ಕಾಡಿಗೆ ಹೋಗಿರುತ್ತಾರೆಂದು ತಿಳಿಯುತ್ತೇವೆ.

ಸಹಕಾರಿ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ತಾ. 26—11—32 ನೇ ಶನಿವಾರ ದಿನ ಬೆಳಿಗ್ಗೆ 11 ಗಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ನಡೆಯುವುದಾಗಿ ತಿಳಿಯುತ್ತೇವೆ.

ಮೂರ್ನಾಡಿನ ಕೋಡಂಬೂರು ಗ್ರಾಮದಲ್ಲಿ ವಾಸವಿದ್ದ ಬಿಲ್ಲವರ ಕರಿಂಬನು ಕಾರಣಾಂತರದಿಂದ ಈ ತಾ. 11 ರ ಸಾಯಂಕಾಲ ಗುಂಡು ಹೊಡೆದುಕೊಂಡು ಆತ್ಮಹತ್ಯ ಮಾಡಿಕೊಂಡನೆಂದು ವರ್ತಮಾನವಿದೆ.

"ಕೊಡಗು" ಲಿಮಿಟೆಡ್ ಕಂಪೆನಿಯ ಶೇರುದಾರರ ವಾರ್ಷಿಕ ಜನರಲ್ ಮೀಟಿಂಗು ಈ ತಾ. 26 ನೇ ಶನಿವಾರ ಬೆಳಿಗ್ಗೆ 11 ಗಂಟೆಗೆ ವೀರರಾಜಪೇಟೆ ರೀಡಿಂಗ್ ರೂಮಿನ ಒಳ ಪ್ರಾಕಾರದಲ್ಲಿ ನಡೆಯುವುದು.

ಮಡಿಕೇರಿ ಸ್ವಾಗತ ಮಂಡಳಿಯವರ ಆಹ್ವಾನದ ಮೇರೆ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನವನ್ನು ಈ ವರ್ಷ ಮಡಿಕೇರಿಯಲ್ಲಿ ನಡಿಸಲು ಸದರಿ ಪರಿಷತ್ತಿನ ಹೆಡ್ಡು ಆಫೀಸಿನವರು ಒಪ್ಪಿರುವರಾಗಿ ತಿಳಿಯಬರುತ್ತದೆ.

ಭೂಮಿ ರೂಪಿಕಕ್ಕು ಮತ್ತು ವ್ಯವಸಾಯ ಕೆಲಸಕ್ಕು ಸರ್ಕಾರದಿಂದ ಕೊಡುವ ಸಾಲಗಳಿಗೆ ಇಷ್ಟರವರೆಗೆ ಇದ್ದ ಶೇಕಡ $7\frac{1}{2}$ ರೂ. ಬಡ್ಡಿಯನ್ನು ಇನ್ನು ಮುಂದಕ್ಕೆ $6\frac{1}{2}$ ರೂ. ಬಡ್ಡಿಗೆ ಇಳಿಸಿರುವುದಾಗಿ ಗಜೆಟಿನಲ್ಲಿ ಪ್ರಕಟವಾಗಿದೆ.

'ಆರ ಮಿಸ್ಟಿಸ್' ದಿನವು ಎಲ್ಲಾ ಕಡೆ ಆಚರಿಸಲ್ಪಟ್ಟಂತೆಯೇ ಮಡಿಕೇರಿಯಲ್ಲಿಯೂ ಈ ತಾ. 11 ರಲ್ಲಿ ಆಚರಿಸಲ್ಪಟ್ಟಿತು. ಆ ದಿನ ಮಧ್ಯಾಹ್ನದ ಮೇಲೆ ಉತ್ತರ ಕೊಡಗ. ಬ ಮ್ಯಾಥ ಕ್ಲಬ್ಬಿನವರು ರಾಜಾಸೀಟಿನ ಬಳಿ ಮೈದಾನದಲ್ಲಿ ಆಟೋಟಗಳನ್ನು ನಡಿಸಿದರು.

ಈ ಮೊದಲು ಪ್ರಕಟಿಸಿದ್ದಂತೆ ಮಡಿಕೇರಿ ಮುನ್ಸಿಪಲ್ ಆಫೀಸಿನ ಹೆಡ್ಡು ಕ್ಲಾರ್ಕರಾಗಿದ್ದ ಮೆ. ಅಲ್ಲಾರಂಡ ಮಾದಪ್ಪನವರು ಲೆಕ್ಕದಲ್ಲಿ ಹೆಚ್ಚು ಕಡಿಮೆ ಮಾಡಿರುವರೆಂದು ಪೊಲೀಸಿನವರು ಅವರ ಮೇಲೆ ಚಾರ್ಜು ಹಾಕಿದ್ದರಷ್ಟೆ. ಈ ಕೇಸು ಸಬ್‌ಜಡ್ಜಿಯವರ ಕೋರ್ಟಿನಲ್ಲಿ ವಿಚಾರವಾಗಿ ಮೆ. ಮಾದಪ್ಪನವರು ತಪ್ಪಿತಸ್ಥರಲ್ಲವೆಂದು ತಾ. 12ರಲ್ಲಿ ಅವರನ್ನು ಖುಲಾಸು ಮಾಡಿರುವರಾಗಿ ತಿಳಿಯಬರುತ್ತದೆ.

ಶರೀರಸ್ಥಿ ರೀಂಬರಾಗಿದ್ದು ಈ ವರ್ಷದ ಪ್ರಾರಂಭದಲ್ಲಿ ಸಿಬ್ಬಂದಿ ಟೀಕೆಯಲ್ಲಿ ರಿಟಯರಾದ ಮೆ. ಚರ್ಮಂಡ ಗಣಪತಿಯವರು ಕೆಲವು ತಿಂಗಳುಗಳಿಂದ ಕಾಯಿಲಸ್ಥರಾಗಿ ಕಾಸರಗೋಡಿನಲ್ಲಿ ಚಿಕಿತ್ಸೆ ಹೊಂದುತ್ತಿದ್ದು, ಈ ತಾ. 13 ರಲ್ಲಿ ಶಿವಾಧೀನರಾದರೆಂದು ತಿಳಿಯಲು ವಿಷಾದಿಸುತ್ತೇವೆ. ಅವರ ಶವವನ್ನು ಹೊದ್ದೂರಲ್ಲಿರುವ ಅವರ ಮನೆಗೆ ತಂದು ದಫನ ಮಾಡಿದರೆಂದು ತಿಳಿಯುತ್ತೇವೆ.

ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನವನ್ನು ಈ ವರ್ಷ ಮಡಿಕೇರಿಯಲ್ಲಿ ನಡಿಸುವ ಉದ್ದೇಶ ತಾ. 14 ರಲ್ಲಿ ಸೆಂಟ್ರಲ್ ಹೈಸ್ಕೂಲು ಹಾಲ್‌ನಲ್ಲಿ ಮೆ. ಬಿ. ಎ. ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಪಬ್ಲಿಕ್ ಮೀಟಿಂಗು ನಡೆಯಿತು. ಸದರಿ ಸಮ್ಮೇಳನವನ್ನು ಡಿಸೆಂಬರು ತಿಂಗಳ ಅಖೈರು ವಾರದಲ್ಲಿ ನಡೆಸುವಂತೆ ತೀರ್ಮಾನಿಸಿ, ಇದರ ನಿರ್ವಾಹಕ್ಕಾಗಿ ಮೆ. ಕೋಳಂಡ ದೇವಯ್ಯನವರು ಅಧ್ಯಕ್ಷರಾಗಿಯೂ, ಮೆ. ಸಿ. ಯಂ. ಪೊಮಂದರಾಯರು ಮತ್ತು ಮೆ. ಬಿ. ಯಸ್. ಕುಶಾಲಪ್ಪನವರು ಜಂಟಿ ಸೆಕ್ರೆಟರಿಗಳಾಗಿಯೂ ಒಂದು ಸ್ವಾಗತ ಕಮಿಟಿಯು ಚುನಾಯಿತವಾಯಿತು. ಈ ಪ್ರಾಂತ್ಯದಲ್ಲಿ ಪ್ರಥಮವಾಗಿ ನಡೆಯುವ ಈ ಸಮ್ಮೇಳನಕ್ಕೆ ಕನ್ನಡಿಗರಾದ ಕೊಡಗಿನವರು ಎಲ್ಲಾ ರೀತಿಗಳಲ್ಲಿಯೂ ಪ್ರೋತ್ಸಾಹನ ಕೊಡುವರಾಗಿ ಕೋರಲಾಗಿದೆ.

ಕಮಿಷನರವರ ಜಮಾಬಂದಿಗಳು.

ನವಂಬರು 16 ರಲ್ಲಿ ಮಡಿಕೇರಿನಾಡು ಜಮಾಬಂದಿ; 17 ಮತ್ತು 18 ರಲ್ಲಿ ಮಡಿಕೇರಿನಾಡಿನ ಭೂಮಿ ಇನ್‌ಸ್ಪೆಕ್ಷನ್. ತಾ. 19 ರಲ್ಲಿ ಫ್ರೇಜರ್‌ಪೇಟೆ ಜಮಾಬಂದಿ; ತಾ. 20 ಮತ್ತು 21 ರಲ್ಲಿ ಫ್ರೇಜರ್‌ಪೇಟೆ ಹೋಬಳಿಯ ಭೂಮಿ ಇನ್‌ಸ್ಪೆಕ್ಷನ್. ಡಿಸೆಂಬರು 9 ರಲ್ಲಿ ಸುಂಟಿಕೊಪ್ಪನಾಡು ಜಮಾಬಂದಿ; ತಾ. 10 ರಲ್ಲಿ ಸುಂಟಿಕೊಪ್ಪನಾಡಿನ ಭೂಮಿ ಇನ್‌ಸ್ಪೆಕ್ಷನ್. ಜನವರಿ 12 ರಲ್ಲಿ ಶನಿವಾರಸಂತೆ ಜಮಾಬಂದಿ; 13 ಮತ್ತು 14 ರಲ್ಲಿ ಶನಿವಾರಸಂತೆ ಹೋಬಳಿ ಭೂಮಿ ಇನ್‌ಸ್ಪೆಕ್ಷನ್. ತಾ. 26 ರಲ್ಲಿ ಸೋಮವಾರಪೇಟೆ ಜಮಾಬಂದಿ; ತಾ. 27 ಮತ್ತು 28 ರಲ್ಲಿ ಸೋಮವಾರಪೇಟೆನಾಡು ಭೂಮಿ ಇನ್‌ಸ್ಪೆಕ್ಷನ್. ಫೆಬ್ರವರಿ 10 ರಲ್ಲಿ ಭಾಗಮಂಡಲನಾಡು ಜಮಾಬಂದಿ; ತಾ. 11 ಮತ್ತು 12 ರಲ್ಲಿ ಭಾಗಮಂಡಲನಾಡು ಭೂಮಿ ಇನ್‌ಸ್ಪೆಕ್ಷನ್. ಜಮಾಬಂದಿಗಳೆಲ್ಲಾ ಮಧ್ಯಾಹ್ನ 1 ಗಂಟೆಗೆ ನಡೆಯುವವು.

ಹಿಂದೂದೇಶ.

ತಾ. 14 ರಲ್ಲಿ ಕಲ್ಕತ್ತಾದಲ್ಲಿ ಮೆರವಣಿಗೆ ನಡಿಸಿದಕ್ಕಾಗಿ 7 ಸ್ವಯಂಸೇವಕರಿಗೆ 4 ತಿಂಗಳು ಕಠಿಣ ಸಜೆಯಾಯಿತು.

'ದರಿದ್ರ ದಿನ' (ಚರಕ) ಸಂಬಂಧ ತಾ. 12ರಲ್ಲಿ ಅಹ್ಮದಾಬಾದಿನಲ್ಲಿ ಮೆರವಣಿಗೆ ಹೋದದಕ್ಕಾಗಿ ಮತ್ತು ಕಾಂಗ್ರೆಸ ಕೆಲಸಗಾರರು ಕೈದು ಮಾಡಲ್ಪಟ್ಟರು.

ಕರ್ನಾಟಕದ ಸಿದ್ದಾಪುರ ತಾಲೋಕಿನಲ್ಲಿ 11 ಜನ ಸತ್ಯಾಗ್ರಹಿಗಳಿಗೆ ಆರಾರು ತಿಂಗಳು ಕಠಿಣ ಸಜೆಯೂ, 15 ರೂ. ಮೇರೆ ಜುಲುಮಾನೆಯೂ ವಿಧಿಸಲಾಯಿತು.

ಮೈಸೂರು ಸಂಸ್ಥಾನದ ಹೈಕೋರ್ಟಿನ ಚೀಫ ಜಸ್ಟಿಸರಾದ ರಾಜಧರ್ಮ ಪ್ರವೀಣ ಸಿ. ಯಸ್. ದೊರೆಸ್ವಾಮಿ ಐಯ್ಯರವರು ಈ ತಾ. 12ರಲ್ಲಿ ಸ್ವರ್ಗಸ್ಥರಾದರು.

ತಾ. 12ರಲ್ಲಿ ಕಣ್ಣಾನೂರಿನಲ್ಲಿ ಮೆರವಣಿಗೆ ಹೋಗುತ್ತಿದ್ದ ನಾಲ್ಕು ಹರಿಜನ ಸ್ವಯಂ ಸೇವಕರು ದಸ್ತಗಿರಿ ಮಾಡಲ್ಪಟ್ಟು, 24 ಗಂಟೆಗಳನಂತರ ಬಿಡುಗಡೆ ಮಾಡಲ್ಪಟ್ಟರು.

ಬಂಗಾಳದ ಬಾಗರಟ್ ಎಂಬ ಗ್ರಾಮದಲ್ಲಿ ಸ್ವದೇಶೀ ಪ್ರಚಾರದ ಬಗ್ಗೆ ನಡೆದ ಮೀಟಿಂಗಿನಲ್ಲಿ ಅಲ್ಲಿಯ ಗ್ರಾಮಸ್ಥರೆಲ್ಲರೂ, ಹೆಚ್ಚಾಗಿ ಮುಸಲ್ಮಾನರು, ಸ್ವದೇಶೀ ಸಾಮಾನುಗಳನ್ನೇ ಉಪಯೋಗಿಸುವುದಾಗಿ ಪ್ರತಿಜ್ಞೆ ಮಾಡಿಕೊಂಡರು.

ಕಾಠ್ಯಾವಾಡ್ ಮತ್ತು ಬರೋಡ ಸಂಸ್ಥಾನಗಳ ರಾಜರುಗಳೂ, ಭೋರ್ ಸಂಸ್ಥಾನದ ನವಾಬರೂ ತಮ್ಮ ಪ್ರಾಂತ್ಯಗಳಲ್ಲಿ ಪಬ್ಲಿಕ್ ಸ್ಥಳ, ಬಾವಿ, ದೇವಸ್ಥಾನ ಮೊದಲಾದುವುಗಳಿಗೆ ಹರಿಜನರ ಪ್ರವೇಶಕ್ಕೆ ಅಡ್ಡಿ ಇಲ್ಲವೆಂದು ಹುಕುಂ ಮಾಡಿರುವರು.

ಸಿದ್ದಾಪುರ ತಾಲೋಕಿನ ಬಿಳ್ಗಿ ಎಂಬಲ್ಲಿ ಪ್ರಭಾತ್ ಫೇರಿಯನ್ನು ನಡಿಸಿದಕ್ಕಾಗಿ 20 ಹುಡುಗರು ದಸ್ತಗಿರಿಮಾಡಲ್ಪಟ್ಟು, ನಂತರ ಬಿಡುಗಡೆ ಮಾಡಲ್ಪಟ್ಟರು. ಅದರ ಬಳಿಕ ಹುಡುಗನಿಗೆ ಲಾಕಪ್ಪಿನಲ್ಲಿ 20 ಪೆಟ್ಟುಗಳನ್ನು ಹೊಡೆದರೆಂದೂ ಸುದ್ದಿ.

ಈ ತಾ. 15 ರಲ್ಲಿ ಲಕ್ನೋವಿನಲ್ಲಿ ಪ್ರಾರಂಭಿಸಿದ ಸ್ವದೇಶೀ ಪ್ರದರ್ಶನವನ್ನು ಪಂಡಿತ ಮೋತಿಲಾಲ್ ನೆಹರೂರವರ ಪತ್ನಿಯವರು ತೆರೆದರು. ಈ ಕೆಲಸವನ್ನು ನಡಿಸಲು ಒಪ್ಪಿದ್ದ ರಜೇಂದ್ರ ಪ್ರಸಾದರವರಿಗೆ ಅಕಸ್ಮಾತ್ ಕಾಯಿಲೆಯಾದುದರಿಂದ ಬರಲು ಸಾಧ್ಯವಾಗಲಿಲ್ಲ.

ತಾ. 8 ರಲ್ಲಿ ಕಲ್ಕತ್ತಾದ ಬೆಲ್ಘಾಟಿಯ ಎಂಬಲ್ಲಿ ಕಾಂಗ್ರೆಸ ಗುಟ್ಟಿನ ಮನೆಗೆ ನುಗ್ಗಿ ಪೋಲೀಸಿನವರು, 5 ಜನರನ್ನು ದಸ್ತಗಿರಿಮಾಡಿ, ಹಲವು ಹಸ್ತಪತ್ರಗಳನ್ನು ಕೈವಶ ಮಾಡಿಕೊಂಡರು. ಅದೇ ದಿನ ಕಲ್ಕತ್ತಾದಲ್ಲಿ 10 ಗಂಡಸರು ಮತ್ತು ಇಬ್ಬರು ಹೆಂಗಸರಿಗೆ 6 ವಾರಗಳಿಂದ 4 ತಿಂಗಳ ವರೆಗೆ ಶಿಕ್ಷೆಯು ವಿಧಿಸಲಾಯಿತು.

ಶ್ರೀ ಜಮುನಾಲಾಲ ಬಜಾಜರು ತಮ್ಮ ಚಿಕ್ಕ ಮಗನಾದ ಕಮಲನಯನ ಬಜಾಜರನ್ನು ವಿಚಾರಣೆಯಿಲ್ಲದೇ ರೀತಿಯಿಂದ ಸೆರೆಯಲ್ಲಿಟ್ಟದಕ್ಕಾಗಿ ಭಾರತ ಮಂತ್ರಿಗಳು ಕ್ಷಮೆ ಕೇಳಬೇಕೆಂದೂ ಮತ್ತು ಹಾನಿಗಾಗಿ ೫೦೦೦ ರೂಪಾಯಿಗಳನ್ನು ಕೊಡಬೇಕೆಂದೂ ತಮ್ಮ ಮಗನ ಸಂರಕ್ಷಣಾತಕರಾಗಿದ್ದ ಭಾರತ ಮಂತ್ರಿಗಳ ಮೇಲೆ ದಾವೆಯನ್ನು ಹೂಡಿರುವವರು.

ಮಹಾತ್ಮ ಗಾಂಧಿಯವರು ರಾಜಕೀಯವನ್ನು ಬಿಟ್ಟು ಅಸ್ಪೃಶ್ಯತಾ ನಿವಾರಣೆಗೆ ಹೆಚ್ಚಿನ ಗಮನವೀಯುತ್ತಿರುವುದರಿಂದ ಅವರನ್ನು ಜೈಲಿನಿಂದ ಬಿಡುಗಡೆ ಮಾಡಬೇಕೆಂದು ಬ್ರಿಟಿಷ್ ಮಂತ್ರಿಗಳನ್ನು ಕೆಲವರು ಒತ್ತಾಯಪಡಿಸುತ್ತಿರುವರೆಂದೂ, ಆದರೆ ಮಹಾತ್ಮರು ಅವರ ಮುಂದಿನ ವರ್ತನೆಯನ್ನು ಕುರಿತು ಭರವಸೆ ಕೊಟ್ಟ ವಿನಹ ಬಿಡುಗಡೆಯ ವಿಷಯ ಮಂತ್ರಿಗಳು ಒಪ್ಪಲಿಕ್ಕಿಲ್ಲವೆಂದೂ ಲಂಡನಿನ ಸುದ್ದಿ.

ಸಿದ್ದಾಪುರ ತಾಲೋಕಿನಲ್ಲಿ ಸತ್ಯಾಗ್ರಹಿಗಳ ಸಾಮಾನುಗಳನ್ನು, ಎತ್ತುಗಳ ಕೊಟ್ಟಿಗೆಯ ಕೂಡ, ಹರಾಜಿನಲ್ಲಿ ಮಾರಿಕೊಂಡವರ ಮನೆಗಳಿಗೆ ಜನರು ಗುಂಪಾಗಿ ಹೋಗಿ ಸದರಿ ಸಾಮಾನುಗಳನ್ನು ಕೈವಶಮಾಡಿಕೊಳ್ಳುವ ಪ್ರಯತ್ನಗಳು ನಡೆಯುತ್ತವೆಯೆಂದೂ, ಈ ಸಂಬಂಧ ಹಲವರು ದಸ್ತಗಿರಿ ಮಾಡಲ್ಪಟ್ಟಿರುವರಾಗಿಯೂ ಸುದ್ದಿ. ಈ ತಾಲೋಕಿನಲ್ಲಿ 10 ಕುಟುಂಬದವರನ್ನು ಅಧಿಕಾರಿಗಳು ಅವರ ಮನೆಯಿಂದ ಹೊರಡಿಸಿ, ಮನೆಗೆ ಬೀಗ ಹಾಕಿರುವರಂತೆ.

ಮಹಾತ್ಮ ಗಾಂಧಿಯವರೊಂದಿಗೆ ಲಿಬರಲ್ ಮುಂದಾಳುಗಳಿಗೆ ಸಂಭಾಷಣೆಗೆ ಅವಕಾಶ ಕೊಡದ ಸರ್ಕಾರದ ವರ್ತನೆಯನ್ನು ಖಂಡಿಸಿ; ಗಾಂಧೀಜೀಯವರನ್ನು ಬಿಡುಗಡೆ ಮಾಡಿದುದು, ಮೇಜು ಪರಿಷತ್ತನ್ನು ಅವರ ಸಹಕಾರದಿಂದ ಜಯಪ್ರದವಾಗಿ ಮಾಡಲು ಯತ್ನಿಸಬೇಕೆಂದು ಬ್ರಿಟಿಷ್ ಸರ್ಕಾರವನ್ನು ಕೇಳಿಕೊಳ್ಳುವ ಪತ್ರ ಒಂದನ್ನು ಜೆ. ಜೆ. ಎ ಸ್ಪೆಂಡರ್ ಎಂಬ ಸುಪ್ರಸಿದ್ಧ ಬ್ರಿಟಿಷ್ ಲೇಖಕರು 'ನ್ಯೂಸ್ ಕ್ರಾನಿಕಲ್' ಎಂಬ ಪತ್ರಿಕೆಯಲ್ಲಿ ಪ್ರಕಟಿಸಿರುವರು.

ಪಂಜಾಬು ಕೌನ್ಸಿಲಿನಲ್ಲಿರುವ 37 ಚುನಾಯಿತ ಹಿಂದೂ ಮತ್ತು ಸಿಕ್ಖ ಮೆಂಬರುಗಳ ಪೈಕಿ 25 ಜನರು ಅಲ್ಲಿಯ ಕೌನ್ಸಿಲು ಮೀಟಿಂಗಿನಿಂದ ಹೊರಗೆ ಹೊರಟು ಹೋದರು. ಸರ್ಕಾರದ ಕೋಮುವಾರು ತೀರ್ಮಾನದ ಮೇಲೆ ತಮ್ಮ ಅತೃಪ್ತಿಯನ್ನು ಸೂಚಿಸಲು ಅಧ್ಯಕ್ಷರು ಬಿಡದ್ದೇ ಈ 'ಹೊರಗೆ ಹೋಗಲಿಕ್ಕೆ' ಕಾರಣ. ಮರುದಿನ, ಉಳಿದಿದ್ದ 12 ಜನರ ಪೈಕಿ 10 ಜನರೂ ಮೀಟಿಂಗಿಗೆ ಹೋಗಲಿಲ್ಲ. ಕೋಮುವಾರು ತೀರ್ಮಾನದ ಮೇಲೆ ತಮ್ಮ ಅತೃಪ್ತಿಯನ್ನು ಸೂಚಿಸಲು, ಅವರು ಅತ್ಯವಶ್ಯದ ಸಮಯವಲ್ಲದೆ ಬೇರೆ ಕಾಲಗಳಲ್ಲಿ ಕೌನ್ಸಿಲಿಗೆ ಬಹಿಷ್ಕಾರ ಹಾಕುವರಂತೆ.

ವಿದೇಶ.

ಅಮೇರಿಕದ ಸಂಯುಕ್ತ ಸಂಸ್ಥಾನಗಳ ಪೈಕಿ 8 ಪ್ರಾಂತ್ಯಗಳಲ್ಲಿ ಮರಣ ದಂಡನೆಯನ್ನು ಪೂರ್ತಿಯಾಗಿ ವಜ ಮಾಡಿದ್ದಾರೆ. ಈ ಬಗ್ಗೆ ಬೇರೆ ಪ್ರಾಂತ್ಯಗಳಲ್ಲಿ ತೀವ್ರ ಚಳವಳವು ನಡೆಯುತ್ತಿದೆ.

ಬ್ರಿಟಿಷ್ ಪ್ರಧಾನ ಮಂತ್ರಿಯವರು ತನ್ನ ಪದವಿಗೆ ರಾಜಿನಾಮೆ ಕೊಡುವರೆಂಬ ಸುದ್ದಿಯು ನಿಜವಲ್ಲವೆಂತಲೂ, ಅವರು ಜಿನೀವಾಕ್ಕೆ ಹೋಗಲು ವಿಚಾರ ಮಾಡುತ್ತಿದ್ದಾರೆಂತಲೂ ಈಗಿನ ವರ್ತಮಾನ.

ತಾ. 15ರಲ್ಲಿ ಜಮಾಯಿಕ ಮೇಲೆ ಸಮುದ್ರದಿಂದ ಭಯಂಕರವಾದ ಬಿರುಗಾಳಿಯು ಬೀಸಿ ಸುಮಾರು 100 ಜನರು ಮರಣ ಹೊಂದಿದರು. ಸುಮಾರು 40,000 ಮನೆಗಳು ಹಾಳಾದವು. ಬೆಳೆಗಳಿಗೂ ವಿಪರೀತ ನಷ್ಟ ಸಂಭವಿಸಿದೆಯಂತೆ.

ಅಮೇರಿಕಾದ ಸಂಯುಕ್ತ ಸಂಸ್ಥಾನದ ಸರ್ಕಾರದ ಅಧ್ಯಕ್ಷರಾಗಿ ಡೆಮೊಕ್ರಾಟಿಕ್ ಪಾರ್ಟಿಯ ಮೆ. ಫ್ರಾಂಕ್ಲಿನ್ ಡಿ. ರೂಸ್‌ವೆಲ್ಟರವರು ಆರಿಸಲ್ಪಟ್ಟಿರುವರು. ಹಾಲಿ ಅಧ್ಯಕ್ಷರಾಗಿರುವ ರಿಪಬ್ಲಿಕನ್ ಪಾರ್ಟಿಯ ಮೆ. ಹೆಚ್. ಸಿ. ಹೂವರವರು ಚುನಾವಣೆಯಲ್ಲಿ ಸೋತು ಹೋದರು.

ಸ್ಪೇನಿಷ್ ಗಿನಿಯದ ಗವರ್ನರಾದ ಜನರಲ್ ಸೊಸೆಕ್ಕೋ ಎಂಬವರು ಅನ್ನಬೊನ್ ಎಂಬ ದ್ವೀಪದಲ್ಲಿ ಇನ್ಸ್‌ಪೆಕ್ಷನ್ ಬಗ್ಗೆ ಹೋಗಿದ್ದಾಗ್ಯೆ, ಅವರ ಗೌರವಾರ್ಥವಾಗಿ ಏರ್ಪಡಿಸಿದ್ದ ಒಂದು 'ಬಾಲ್' ಎನ್ನೋದ ಕೂಟದಲ್ಲಿ ಒಬ್ಬ ಸಾರ್ಜೆಂಟನು ಅವರನ್ನು ಕತ್ತಿಗೆ ಇರಿದು ಕೊಂದನಂತೆ!

ಐರಿಷ್ ರಿಪಬ್ಲಿಕ್ ಸರ್ಕಾರದ ಅಧ್ಯಕ್ಷರಾಗಿರುವ ಮೆ. ಡಿ ವೇಲೆರಾರವರ ಮೇಲೆ ಅವಿಶ್ವಾಸದ ಠರಾವನ್ನು ಅವರ ವಿರೋಧ ಪಕ್ಷದವರು ಅಲ್ಲಿಯ ಪಾರ್ಲಿಮೆಂಟಿನಲ್ಲಿ ಚರ್ಚೆಗೆ ತಂದರು. ಅದರ ಠರಾವಿಗೆ ಒದಗುವ ತವು ಬೊಂಯಿದೆ, ಡಿವೇಲೆರರ ಅಧ್ಯಕ್ಷಪದವಿಯು ಭದ್ರವಾಗಿರುತ್ತದಾಗಿದೆ.

ದುಂಡು ಮೇಜು ಪರಿಷತ್ತಿನ ಹಲವು ಡೆಲಿಗೇಟರುಗಳು ತಾ. 15 ರಲ್ಲಿ ಲಂಡನಿಗೆ ತಲಪಿದರು. ಸದರಿ ಪರಿಷತ್ತು ತಾ. 17 ರಲ್ಲಿ ಪ್ರಾರಂಭವಾಗುತ್ತೆ. ಅವರ ಇಂಗ್ಲೆಂಡಿನಲ್ಲಿರುವ ವಿರೋಧಪಕ್ಷದವರ ಅಭಿಪ್ರಾಯ ಬಲವಾಗಿರುವುದರಿಂದ ಈ ಪರಿಷತ್ತಿನಿಂದ ಹೆಚ್ಚಿನ ಪ್ರಯೋಜನವಾಗಲಾರದೆಂಬ ಭಯವು ಕೆಲವು ಇಂಡಿಯನ್ ಡೆಲಿಗೇಟರುಗಳಿಗೆ ಇದೆಯಂತೆ.

ಟ್ರೇಸ್ಟಿ ಎಂಬಲ್ಲಿ ಕಿರಿಯ ಮೇರಿಯಾ ಎಂಬಾಕೆಯು ತನ್ನ ಮನೆಯಲ್ಲಿ ಸತ್ತಂತೆ ಬಿದ್ದದನ್ನು ಕಂಡು ಅವಳ ಸೇವಕರು ಅವಳನ್ನು ಆಸ್ಪತ್ರೆಗೆ ಒಯ್ದರು. ಅಲ್ಲಿ 2 ದಿವಸ ಡಾಕ್ಟರುಗಳು ಪರೀಕ್ಷಿಸಿ ಅವಳು ಸತ್ತಿರುವಳೆಂದು ಹೇಳಿದರು. ಶವವು ಸ್ಮಶಾನಕ್ಕೆ ಒಯ್ಯಲ್ಪಟ್ಟಿತು. ದಫನ ಮಾಡಲು ಸ್ವಲ್ಪ ಸಮಯಕ್ಕೆ ಮೊದಲು ಅವಳು ಎದ್ದು ತನ್ನ ಮನೆಗೆ ನಡೆದಳು! ಇದೇನು ದೀರ್ಘನಿದ್ದೆಯೋ ?

ನೋಟೀಸು.

1932ನೇ ಇಸವಿ ನವಂಬರ್ ತಾರೀಕು 26ನೇ ಶನಿವಾರ ದಿನ ಬೆಳಿಗ್ಗೆ 11 ಗಂಟೆಗೆ ವೀರರಾಜಪೇಟೆಯಲ್ಲಿ ರೀಡಿಂಗ್ ರೂಮಿನ ಒಳ ಪ್ರಾಕಾರದಲ್ಲಿ ಶೇರುದಾರರ ಮಹಾ ಸಭೆಯು (ಜನರಲ್ ಮೀಟಿಂಗು) ಸೇರುವುದೆಂದು ಈ ಮೂಲಕ ತಿಳಿಸಲಾಗಿದೆ.

ಮೀಟಿಂಗಿನಲ್ಲಿ ಈ ಕೆಳಗೆ ಕಂಡ ಕಾರ್ಯಗಳು ನಡೆಯುತ್ತವೆ.

1. 1931—1932ನೇ ವರ್ಷದ ಆಡಿಟ ಮಾಡಿದ ಮತ್ತು ಇದೇ ವರ್ಷದ ಆದಾಯ ವೆಚ್ಚ, ಬ್ಯಾಲೆನ್ಸ್ ಶೀಟ್, ಲಾಭ ನಷ್ಟಗಳ ಪಟ್ಟಿಗಳನ್ನೂ ಮತ್ತು ಆಡಿಟರರ ಸರ್ಟಿಫಿಕೇಟನ್ನೂ ಸಹ ಸಭೆಯ ಮುಂದೆ ಇಡುವುದು.

2. ಆಡಿಟರನ್ನು ನೇಮಿಸುವುದು.

3. 1931—1932ನೇ ವರ್ಷಕ್ಕೆ ಶೇರುದಾರರಿಗೆ ಕೊಡಬೇಕಾದ ಡಿವಿಡೆಂಡ ನಿಶ್ಚಯ ಮಾಡುವುದು.

4. ಕೆಲಸದಿಂದ ನಿವೃತ್ತರಾಗುವ ಡೈರೆಕ್ಟರುಗಳ ಬದಲಿಗೆ ಬೇರೆಯವರ ಚುನಾವಣೆ.

"ಕೊಡಗು" ಲಿಮಿಟೆಡ್.
ಮಡಿಕೇರಿ, 9—11—1932.

ಸಿ. ಯಸ್. ವೆಂಕಪ್ಪಯ್ಯ.
(ಕಾರ್ಯಾಧ್ಯಕ್ಷರು)

ಕೊಡಗಿನಲ್ಲಿ ಅಸ್ಪೃಶ್ಯತಾ ನಿವಾರಣೆ.

ಈ ತಾ. 12 ನೇ ಶನಿವಾರ ಕಿಗ್ಗಟ್ಟು ನಾಡು ಮತ್ತೂರು ಶ್ರೀ ಭೂತನಾಥ ಐಯ್ಯಪ್ಪ ದೇವಸ್ಥಾನದಲ್ಲಿ ಕಿರುನಾಡು ನಾಡು ತಕ್ಕ ಮುಖ್ಯಸ್ಥರ ಸಭೆಯೊಂದು ನಡೆಯಿತು. ಮೆ. ಯಸ್. ಸಿ. ಚಿಣ್ಣಪ್ಪನವರು ಅಧ್ಯಕ್ಷರಾಗಿದ್ದರು. ದೇವಸ್ಥಾನದಲ್ಲಿ ಪೂಜೆಯಾದ ನಂತರ ದೇವಸ್ಥಾನ ಕಮಿಟಿಯು ಮಾಡಿಯನ್ನು ಚರ್ಚಿಸಿ ಪಾಸುಮಾಡಲಾಯಿತು. ಆ ಮೇರೆ ದೇವಸ್ಥಾನದ ಮುಂದಿನ ವರ್ಷದ ಕಮಿಟಿಯು ಚುನಾಯಿಸಲ್ಪಟ್ಟಿತು. ನಾಡಿನವರ ಕಾರ್ಯವು ಮುಗಿದ ಮೇಲೆ ಮೆ. ಸಿ. ಯ

ಕೊಡಗು.

ಸನ್ ೧೯೩೨ನೇ ಇಸವಿ

ನವೆಂಬರ್ ತಾ. ೧೮ನೇ ಶುಕ್ರವಾರ.

ಪ್ರೆಸ್ ಆರ್ಡಿನೇನ್ಸ್

ಜಾರಿಯಲ್ಲಿರುವವರೆವಿಗೆ

ನಾವು

ಅಗ್ರಲೇಖನ

ವನ್ನು

ಪ್ರಕಟಿಸುವುದಿಲ್ಲ.

ಅಲ್ಲಾಹಬಾದು ಪರಿಷತ್ತು.

ಪಂಜಾಬಿನ ಸಮಸ್ಯೆಯ ತೀರ್ಮಾನ.

ಸಿಂಧನ್ನು ಪ್ರತ್ಯೇಕಿಸಲು ಒಪ್ಪಿಗೆ.

ಈ ತಾ. 3 ರಲ್ಲಿ ಅಲ್ಲಾಹಬಾದಿನಲ್ಲಿ ಪ್ರಾರಂಭವಾದ ಹಿಂದೂ—ಮುಸ್ಲಿಂ—ಸಿಖ್ ಒಗ್ಗಟ್ಟಿನ ಪರಿಷತ್ತು ನಡೆಯುತ್ತಲೇ ಇದೆ. ಬಂಗಾಳದ ಸಮಸ್ಯೆಯು ಎಲ್ಲರಿಗೂ ಸಮರ್ಪಕವಾಗಿ ಪ್ರಥಮ ವಾರದಲ್ಲೇ ತೀರ್ಮಾನವಾಯಿತು. ಪಂಜಾಬಿನ ಕೋಮುವಾರು ಸಮಸ್ಯೆ ಹೆಚ್ಚು ಕಮ್ಮಿ ಎಲ್ಲರಿಂದಲೂ ಕಳೆದ ವಾರ ಒಪ್ಪಲ್ಪಟ್ಟಿದ್ದರೂ, ಸರ್ವಸಮ್ಮತವಾಗಿರಲಿಲ್ಲ. ಆದರೆ ಈ ವಾರದ ಪರ್ಯಾಲೋಚನದಲ್ಲಿ ಅದನ್ನು ಸಿಖ್ ಪ್ರತಿನಿಧಿಗಳು ತಮ್ಮ ಪಾಲಿನ್ನ ದರ್ಬಾರಿನ ಮುಂದಿಡಬೇಕಾಗಿರುವದಾದರೂ ಅದಕ್ಕೆ ಎಲ್ಲರ ಒಪ್ಪಿಗೆ ದೊರೆತಿದೆಯೆಂದೇ ತಿಳಿಯಬಹುದಾಗಿದೆ.

ಪಂಜಾಬಿನ ಸಮಸ್ಯೆಯ ತೀರ್ಮಾನದ ಮುಖ್ಯಾಂಶಗಳಾವುವೆಂದರೆ:—

(1) ಪಂಜಾಬಿನ ಮಂತ್ರಿ ಮಂಡಳಿಯಲ್ಲಿ ಒಬ್ಬ ಸಿಖ್ ಮತ್ತು ಒಬ್ಬ ಹಿಂದು ಮಂತ್ರಿಗಳು ಇದ್ದೇ ಇರಬೇಕು.

(2) ಮಂತ್ರಿ ಮಂಡಳಿಯು ಒಟ್ಟಾಗಿ ನ್ಯಾಯವಿಧಾಯಕ ಸಭೆಗೆ ಜವಾಬ್ದಾರಿ ಉಳ್ಳದ್ದಾಗಬೇಕು.

(3) ಮಂತ್ರಿ ಮಂಡಳಿಯವರು ಮಾಡುವ ನ್ಯಾಯವಿಧಾಯಕ ಯೂ ಆಡಳಿತ ತೀರ್ಮಾನಗಳು, ಕಡಿಮೆ ಜನಸಂಖ್ಯೆಯ ಎಲ್ಲಾ ಕೋಮುಗಳ ಕೌನ್ಸಿಲ ಪ್ರತಿನಿಧಿಗಳಲ್ಲಿ ಮುಕ್ಕಾಲು ಜನರು ತಮ್ಮ ಕೋಮುಗಳಲ್ಲಿ ಹಸ್ತಕ್ಷೇಪ ಮಾಡುವ [illegible] ನಿರ್ಣಯಿಸಿದರೆ, ಆ ಆಕ್ಷೇಪವು [illegible] ಗೆ ಒಪ್ಪಿಗೆಯಾದರೆ, ಅಂಥಾ ತೀರ್ಮಾನಗಳನ್ನು [illegible] ಕೂಡದು. ಸದರಿ ಆಕ್ಷೇಪವನ್ನು ಮಂತ್ರಿ ಮಂಡಳಿಯು ಒಪ್ಪದೆ ಹೋದರೆ, ಆ ವಿಷಯವನ್ನು ಮಧ್ಯವರ್ತಿ ಸರಕಾರದವರು ನೇಮಿಸುವ ಮೂರು ಇಂಡಿಯನ್ ಜಡ್ಜಿಗಳ ತೀರ್ಮಾನಕ್ಕೆ ಬಿಡತಕ್ಕದ್ದು. ಅವರ ತೀರ್ಮಾನಕ್ಕೆ ಮಂತ್ರಿ ಮಂಡಳಿಯು ಒಪ್ಪದೆ ಹೋದರೆ, ಮಂತ್ರಿಗಳು ರಾಜೀನಾಮೆ ಕೊಡತಕ್ಕದ್ದು. ಉದ್ಯೋಗಸ್ಥರಲ್ಲದ ಮೆಂಬರುಗಳು ಸೂಚಿಸುವ ಮೇಲಿನ ತರಹದ ತೀರ್ಮಾನಗಳನ್ನು ಇದೇ ರೀತಿ ನಿರ್ಣಯಿಸತಕ್ಕದ್ದು.

ಮೇಲಿನ ತರಹದ ಭದ್ರತೆಗಳನ್ನು ಸಂಯುಕ್ತ ಪ್ರಾಂತ್ಯ, ಬಿಹಾರ್, ಒರಿಸ್ಸಾ ಮತ್ತು ಬೊಂಬಾಯಿ ಪ್ರಾಂತ್ಯಗಳಲ್ಲಿಯೂ ಇಡತಕ್ಕದ್ದು.

(4) ನ್ಯಾಯವಿಧಾಯಕ ಸಭೆಯಲ್ಲಿ ಶೇಕಡ 51 ರಷ್ಟು ಮುಸಲ್ಮಾನರೂ, 20 ರಷ್ಟು ಸಿಕ್ಕರೂ, 27 ರಷ್ಟು ಹಿಂದೂಗಳೂ ಮತ್ತು 2 ರಷ್ಟು ಇಂಡಿಯನ್ ಕ್ರಿಶ್ಚಿಯನರು, ಆಂಗ್ಲೋ-ಇಂಡಿಯನರು ಮತ್ತು ಯೂರೋಪಿಯನರು ಮೆಂಬರುಗಳಾಗಿರತಕ್ಕದ್ದು. ಅಲ್ಲದೆ ಸರಕಾರದ ತೀರ್ಮಾನದಲ್ಲಿ ಅಲ್ಲಿಯ ಕೌನ್ಸಿಲಿನಲ್ಲಿ 175 ಮೆಂಬರುಗಳಿರಬೇಕೆಂದಿದ್ದರೂ, ಅದನ್ನು 200 ಕ್ಕೆ ಏರಿಸಬೇಕೆಂದು ನಿರ್ಣಯಿಸಲಾಯಿತು.

(5) ಈ ಕರಾರುಗಳೆಲ್ಲಾ ಒಂದಕ್ಕೊಂದು ಹೊಂದಿಕೊಂಡಿರತಕ್ಕದ್ದು.

ಈ ಮೇಲಿನ ಒಪ್ಪಂದವು ಶುರುವಾಗುವಂದಿನಿಂದ ಹತ್ತು ವರ್ಷಗಳ ವರೆಗೆ ಜಾರಿಯಲ್ಲಿರತಕ್ಕದ್ದು.

ಕಠಿಣ ಸಮಸ್ಯೆಯು ಬಿಡಿಸಲ್ಪಟ್ಟಿತು.

ಹಿಂದೂ—ಮುಸಲ್ಮಾನರೊಳಗೆ ಇದ್ದ ಭಿನ್ನಾಭಿಪ್ರಾಯಗಳಲ್ಲಿ ಸಿಂಧು ಪ್ರಾಂತ್ಯವನ್ನು ಪ್ರತ್ಯೇಕಿಸುವುದೇ ಅತಿ ಕಠಿಣದ ಸಮಸ್ಯೆಯಾಗಿತ್ತು. ಇದನ್ನು ಬಿಡಿಸಲು ಹಲವು ದಿನಗಳ ದೀರ್ಘ ಚರ್ಚೆ ನಡೆಯಿತು. ಆದರೂ ಕೂಡ ತೀರ್ಮಾನಿಸಲು ಸಾಧ್ಯವಿಲ್ಲವೆಂದು ತೋರಿ, ಒಗ್ಗಟ್ಟಿನ ಪ್ರಯತ್ನವೇ ನಿಷ್ಫಲವಾಗುವಂತಾಯಿತು. ಅಧ್ಯಕ್ಷರಾಗಿದ್ದ ಮಿ. ವಿಜಯರಾಘವಚಾರ್ಯರು ಇನ್ನು ಇಂಥಾ ಚರ್ಚೆಯಲ್ಲಿ ಹೊತ್ತು ಕಳೆಯುವದು ವ್ಯರ್ಥವೆಂದು ಭಾವಿಸಿ, ಆ ಊರನ್ನು ಬಿಟ್ಟು ಹೊರಡಲು ಸಿದ್ಧರಾದರು. ಟ್ರೈನಿನಲ್ಲಿ ಟಿಕೇಟು ತೆಗೆದು ತನ್ನ ಸಾಮಾನುಗಳನ್ನೆಲ್ಲಾ ರೈಲ್ವೆ ಸ್ಟೇಷನಿಗೆ ಕಳುಹಿಸಿ, ಕಮಿಟಿಯವರಿಗೂ, ಪಂಡಿತ ಮಾಳವೀಯರಿಗೂ ವಂದನೆ ಮಾಡಲು ಬಂದಾಗ್ಯೆ, ಪಂಡಿತರು 'ಎಲ್ಲವೂ ತೀರ್ಮಾನಕ್ಕೆ ಬಂದಿದೆ; ನೀವು ದಯವಿಟ್ಟು ಹೋಗಬೇಡಿ' ಎಂದು ಅವರನ್ನು ತಡೆದರು. ಅದೇ ಮೇರೆ ಅಧ್ಯಕ್ಷರು ಆ ದಿನ ಹೋಗುವದನ್ನು ಬಾಕಿ ಮಾಡಿ ಚರ್ಚೆಯನ್ನು ಮುಂದರಿಸಿದರು. ಸ್ವಲ್ಪ ಸಮಯದಲ್ಲಿಯೇ ಸಿಂಧು ಪ್ರಾಂತ್ಯದ ಕಠಿಣ ಪ್ರಶ್ನೆಯು ಎರಡು ಕಡೆಯವರಿಗೂ ತೃಪ್ತಿಕರವಾಗುವಂತೆ ತೀರ್ಮಾನಿಸಲ್ಪಟ್ಟಿತು. 'ಸಂತೋಷದಲ್ಲಿ ಎಲ್ಲರೂ ಭಾಗಿಗಳಾದರೆ ಅದು ಮತ್ತಷ್ಟು ಹೆಚ್ಚಾಗುತ್ತದೆ' ಎಂದು ಹೇಳುತ್ತಾ ಹಳೆ ಅಧ್ಯಕ್ಷರು [illegible] ಹೊರಗೆ ಬಂದರು. ಈ ತೀರ್ಮಾನವನ್ನು ತಿಳಿಸಿದರು.

ಈ ತೀರ್ಮಾನದ ವಾರ್ತೆಯನ್ನು ಕೇಳಿದ ಕೂಡಲೇ ಅಲ್ಲಿಗೆ ನೆರೆದಿದ್ದ ಪ್ರತಿನಿಧಿಗಳಿಗೆ ಉಂಟಾದ ಸಂತೋಷವು ವರ್ಣಿಸಲಸಾಧ್ಯವಾಗಿತ್ತಂತೆ. ಮುಖಂಡರು ಒಬ್ಬರನ್ನೊಬ್ಬರು ಅಪ್ಪಿಕೊಂಡರು. ನವಾಬ ಜಾಫರ್ ಅಲಿಖಾನ್‌ರವರು ತಕ್ಷಣವೇ ಪದ್ಯಗಳನ್ನು ರಚಿಸಿ, ಸಂತೋಷದ ಹಾಡುಗಳನ್ನು ಹಾಡಿದರು. ಕೂಡಲೇ ಪತ್ರಿಕಾ ಪ್ರತಿನಿಧಿಗಳನ್ನು ವಿಚಾರಣೆಯ ಕೋಣೆಯೊಳಗೆ ಬಿಟ್ಟು ಸುವಾರ್ತೆಯನ್ನು ಅವರಿಗೆ ಹೇಳಿದರು. ಸಿಂಧು ಪ್ರಾಂತ್ಯದ ಹಿಂದು ಮುಖಂಡರು ತಮ್ಮಿಂದ ಒಗ್ಗಟ್ಟಿನ ಪ್ರಯತ್ನಗಳು ಮುರಿಯಲ್ಪಡಬಾರದೆಂದು ತಮ್ಮ ಆಕ್ಷೇಪಣೆಗಳನ್ನು ಬಹು ಮಟ್ಟಿಗೆ ಬಿಟ್ಟು ಕೊಟ್ಟು, ಸಿಂಧನ್ನು ಪ್ರತ್ಯೇಕಿಸಲು ಒಪ್ಪಿಕೊಂಡದ್ದರಿಂದಲೇ ಈ ಸಮಸ್ಯೆಯು ತೀರ್ಮಾನಕ್ಕೆ ಬರಲು ಸಾಧ್ಯವಾದದ್ದಾಗಿದೆ.

ಸಿಂಧು ಪ್ರಾಂತ್ಯದ ತೀರ್ಮಾನ.

ಈ ಕೆಳಗಿನ ಕರಾರುಗಳೊಡನೆ ಸಿಂಧನ್ನು ಪ್ರತ್ಯೇಕ ಪ್ರಾಂತ್ಯವಾಗಿ ವಿಂಗಡಿಸಬೇಕೆಂದೂ, ಅದಕ್ಕೆ ಬೇರೆ ಪ್ರಾಂತ್ಯಗಳಿಗೆ ಕೊಡುವಂತೆ ಪೂರ್ಣ ಸ್ವಾತಂತ್ರ್ಯ ಸರಕಾರ ಕೊಡಬೇಕೆಂದೂ ನಿಶ್ಚೈಸಲಾಯಿತು.

(1) ಈ ಪ್ರಾಂತ್ಯದ ಮಂತ್ರಿ ಮಂಡಳಿಯು ಒಟ್ಟಾಗಿ ಕೌನ್ಸಿಲಿಗೆ ಜವಾಬ್ದಾರಿಯುಳ್ಳದ್ದಾಗಿರಬೇಕು ಮತ್ತು ಅದರಲ್ಲಿ ಒಬ್ಬ ಹಿಂದು ಮಂತ್ರಿಯಾದರೂ ಇರಬೇಕು.

(2) ಪಂಜಾಬಿನ ಪ್ರಶ್ನೆಯ ತೀರ್ಮಾನದ 3ನೇ ಪ್ಯಾರಾದಲ್ಲಿರುವ ಕರಾರು ಇಲ್ಲಿಗೂ ಅನ್ವಯಿಸತಕ್ಕದ್ದು.

(3) (ಅ) ಗ್ರಾಮಗಳಲ್ಲಿಯೂ ಪಟ್ಟಣಗಳಲ್ಲಿಯೂ ಹಿಂದೂಗಳಿಗೂ ಮುಸಲ್ಮಾನರಿಗೂ ಒಂದೇ ತರದ ಓಟಿನ ಅರ್ಹತೆ ಇರಬೇಕು.

(ಆ) ಹತ್ತು ವರ್ಷಗಳನಂತರ 1ನೇ ತರತಿನ ತತ್ವದ ಮೇರೆಯೇ ಜನಸಂಖ್ಯೆಗನುಸಾರವಾಗಿ ಓಟುಗಳ ಪಟ್ಟಿಯನ್ನು ತಯಾರಿಸುವ ಯುಕ್ತ ಮಾಡಬೇಕು.

(ಇ) ಮಿಶ್ರಚುನಾವಣೆ ಪದ್ಧತಿ ಇರಬೇಕು. ಅದರಲ್ಲಿ ಹಿಂದೂಗಳಿಗೆ 37½ ರಷ್ಟು ಪ್ರತಿನಿಧಿತನವು ಸಿಕ್ಕಬೇಕು. 10 ವರ್ಷಗಳನಂತರ ಹಿಂದೂಗಳು ಇಷ್ಟಪಟ್ಟರೆ ಅದರ ಜನಸಂಖ್ಯೆಗನುಸಾರವಾಗಿ ಮೆಂಬರತನವು ರಕ್ಷಿಸಲ್ಪಡವುದು, ಆದರೆ ಮಿಶ್ರ ಸ್ಥಳಗಳಿಗೆ ಅವರು ಚುನಾವಣೆಗೆ ನಿಲ್ಲಬಹುದು.

(ಈ) ಸ್ಥಳೀಕ ಸಂಸ್ಥೆಗಳಲ್ಲಿ ಬಹುಮತ ಕೋಮಿನವರಿಗೆ ಸ್ಥಳ ಕಾದಿಟ್ಟಿರತಕ್ಕದ್ದು. [illegible] ಕೋಮಿನವರು ಇಷ್ಟಪಟ್ಟರೆ ಜನಸಂಖ್ಯೆ [illegible] ಸ್ಥಳ [illegible] ಕೊಡುವುದು. ಅದರಲ್ಲಿ ½ ಹಿಂದೂಗಳಾಗಿರತಕ್ಕದ್ದು. 6½ ಉದ್ಯೋಗಗಳನ್ನು ಅರ್ಹತೆ [illegible] ಮೇರೆ, ಶೇಕಡ 40 ನ್ನು ಕೋಮುವಾರು ಅನುಪಾತದ ಮೇರೆ ಕೊಡಬೇಕು. ಉದ್ಯೋಗಗಳನ್ನು ಕೊಡುವುದರಲ್ಲಿ ಸಿಂಧಿನವರಿಗೇ ಹೆಚ್ಚಿನ ಅವಕಾಶ ಕೊಡಬೇಕು.

(5) ಆಸ್ತಿ ಪಾಸ್ತಿ ಪಡೆಯುವುದರಲ್ಲಾಗಲೀ, ಉದ್ಯೋಗದಲ್ಲಾಗಲೀ ಜಾತಿ ಮತ ಭೇದಗಳನ್ನನುಸರಿಸಿ ತಾರತಮ್ಯದ ಶಾಸನವನ್ನು ಯಾರಿಗೆ ಯಾವುದೂ ಇರಕೂಡದು.

(6) ನ್ಯಾಯ ತೀರ್ಪಿನ ಅಧಿಕಾರವು (ಜುಡಿಶ್ಯಲ್) ಆಡಳಿತ ಅಧಿಕಾರದಿಂದ (ಎಕ್ಸಿಕ್ಯೂಟಿವ್) ಬೇರ್ಪಟ್ಟಿರಬೇಕು.

(7) ಸಿಂಧ್‌ನಲ್ಲಿ ಒಂದು ಚೀಫ್ ಕೋರ್ಟು ಇರತಕ್ಕದ್ದು.

(8) ಈ ಒಪ್ಪಂದವು ಅಖಿಲ ಹಿಂದೂಸ್ಥಾನದ ಕೋಮುವಾರು ತೀರ್ಮಾನದ ಒಂದು ಅಖಂಡ ಭಾಗವಾಗಿರತಕ್ಕದ್ದು. ಇಡೀ ಕೋಮುವಾರು ತೀರ್ಮಾನವು ಜಾರಿಗೆ ತಲ್ಪದಿದ್ದರೆ ಈ ಒಪ್ಪಂದವು ರದ್ದಾಗತಕ್ಕದ್ದು.

(9) ಬ್ರಿಟಿಷ್ ಕಮಿಟಿ [illegible] ಸೂಚಿಸಿರುವಂತೆ ಸಿಂಧು ಪ್ರಾಂತ್ಯದಲ್ಲಿ ಖರ್ಚು ಉತ್ಪತ್ತಿಯನ್ನು ಸರಿದೂಗಿಸಲು ದಾರಿ ಕಂಡು ಹಿಡಿಯಲಿಕ್ಕೆ ಸಿಂಧ್‌ನ ಪ್ರಾಂತೀಯ ಮುಂದಾಳುಗಳು ಸಭೆಯೊಂದನ್ನು ಈ ತಿಂಗಳ ಅಂತ್ಯದೊಳಗೆ ನಡಿಸತಕ್ಕದ್ದು.

ಮಿ. ವಿಜಯರಾಘವಚಾರ್ಯರು ಅಲ್ಲಾಹಬಾದಿನಿಂದ ಹೊರಟು ಹೋದರು. ಕಮಿಟಿಯು ಬಾಕಿ ಸಮಸ್ಯೆಗಳು ಮಧ್ಯವರ್ತಿ ಎಸೆಂಬ್ಲಿಯಲ್ಲಿ ಮೆಂಬರತನಗಳು ಹೇಗಿರಬೇಕೆಂಬುದನ್ನು, [illegible] ಚುನಾವಣೆಯ ಪದ್ಧತಿ ಯಾವ ತರಹದ್ದಾಗಿರಬೇಕೆಂಬುದನ್ನು ಚರ್ಚಿಸುತ್ತಿರುವರು. ಒಂದೆರಡು ದಿನಗಳಲ್ಲಿ ಈ ಪರಿಷತ್ತು ಮುಗಿಯಬಹುದೆಂದು ಆಶಿಸಲಾಗಿದೆ. ಹೇಗೂ ಈ ಪರಿಷತ್ತು ಜಯಪ್ರದವಾಗಿ ಅಂತ್ಯವಾಗುವದೆಂಬುದರಲ್ಲಿ ಸಂಶಯವಿಲ್ಲ.

ಬ್ರಾಹ್ಮಣರೂ ಮತಾಚಾರಗಳೂ.

ಮಹಾತ್ಮ ಗಾಂಧಿಯವರ ಅಭಿಪ್ರಾಯ.

ದೇವಸ್ಥಾನಗಳಿಗೆ ಹರಿಜನರ ಪ್ರವೇಶದ ಚಳವಳಿಯಲ್ಲಿ ಸನಾತನಿಗಳ ಮನೋಭಾವಕ್ಕೆ ಸಹಾನುಭೂತಿ ಇರುವ ಮತ್ತು ಮರ್ಯಾದೆ ತೋರಿಸುವ [illegible], ಹುಟ್ಟಿದ ದಿನದಲ್ಲಿ ಧ್ವಜಸ್ಥಂಭದ ವರೆಗೆ ಮಾತ್ರ ಹರಿಜನರನ್ನು ಬರಲು ಬಿಟ್ಟು, ಅಲ್ಲಿಗೆ ದೇವತೆಯನ್ನು ತಂದು ಅವರಿಗೆ ದರ್ಶನಕ್ಕೆ ಅವಕಾಶ ಮಾಡಿಕೊಡಬಹುದು ಎಂದು ಹೇಳುವವರನ್ನು ಕುರಿತು ಮಹಾತ್ಮರು ಹೀಗೆಂದಿರುವರು:—

'ಈ ಚಳವಳಿಯು ಅಸ್ಪೃಶ್ಯತೆಯನ್ನು ಹೋಗಲಾಡಿಸುವದಕ್ಕಾಗಿಯಾಗಿದೆ. ಆಸ್ಪೃಶ್ಯರು ಅನುಭವಿಸುವ ಹಕ್ಕುಗಳೇ ಅಸ್ಪೃಶ್ಯರಿಗೂ ದೊರೆಯಬೇಕು; ಪೂಜೆ ಮಾಡುವವರು ಮಾತ್ರ ಹೋಗುವಂಥ ಗರ್ಭ ಗುಡಿಗೆ ಅವರು ನುಗ್ಗಬಹುದೆಂದಲ್ಲ. ಬ್ರಾಹ್ಮಣೇತರರು ಅಸ್ಪೃಶ್ಯರೆಂಬ ಕಾರಣದಿಂದ ಅವರನ್ನು ಗರ್ಭಗುಡಿಗೆ ಹೋಗಲು ಬಿಡುವುದಿಲ್ಲವಾದರೆ, ಆ ಅಸ್ಪೃಶ್ಯತೆಯನ್ನೂ ಹೋಗಲಾಡಿಸಬೇಕು. ಆದರೆ ಬ್ರಾಹ್ಮಣೇತರರ ಮೇಲೆ ಅಸ್ಪೃಶ್ಯತೆಯು ಕಟ್ಟು ಇಲ್ಲದೆ, ಬ್ರಾಹ್ಮಣರು ಮಾತ್ರ ಪರಿಶುದ್ಧ ಸ್ಥಳದ ಕೆಲವು ಭಾಗಗಳಿಗೆ ಹೋಗಬಹುದೆಂದಿರುವದಾದರೆ, ಈ ಚಳವಳಿಯ ಭಾಗವಾಗಿ, ಅದಕ್ಕೆ ವಿರೋಧ ನಾನೇನೂ ಹೇಳಲಾರೆ. ಪೂಜೆ ಪುರಸ್ಕಾರಗಳನ್ನು ನಡಿಸುವ ಹಕ್ಕು ಬ್ರಾಹ್ಮಣರಿಗೇ ಇರುವ ಪ್ರಶ್ನೆಯು ಬೇರೆ ತರಹದ್ದಾಗಿದೆ; ಮತ್ತು ಈ ಹಕ್ಕು ಹೋಗಬೇಕಾದರೆ ಅದನ್ನು ಪ್ರತ್ಯೇಕವಾಗಿ ಪರೀಕ್ಷಿಸಬೇಕಾಗಿದೆ. ಕೆಲವು ಮತಾಚಾರಗಳನ್ನು ಕೆಲವು ವರ್ಗದವರೇ ನಡಿಸಬೇಕೆಂಬ ಪದ್ಧತಿಯನ್ನು ನಾನು ಆಲೋಚಿಸದೆ ಖಂಡಿಸಲು ತಯಾರಿಲ್ಲ. ಇದು, ಅವಶ್ಯವಿರುವ ಅರ್ಹತೆಗಳಿಂದ ಕೂಡಿದ ಕೆಲವು ಪಂಡಿತರುಗಳಿಂದ ನಡಿಸಲ್ಪಡುವ ಕರ್ತವ್ಯವಲ್ಲವೆ, ಹಕ್ಕಿನ ಸವಾಲಲ್ಲ.'

ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನ.

ಪ್ರಕಟನೆ ೧.

ಕನ್ನಡಿಗರಲ್ಲಿ ವಿನಂತಿ

ಅಖಿಲ ಕರ್ನಾಟಕ ಸಾಹಿತ್ಯ ಪರಿಷತ್ತಿನ ಸಮ್ಮೇಳನವೊಂದನ್ನು ಕೊಡಗು ಪ್ರಾಂತ್ಯದಲ್ಲಿ ಜರುಗಿಸಬೇಕೆಂಬ ಆಕಾಂಕ್ಷೆಯು ಶ್ರೀಯುತ ಆಲೂರು ವೆಂಕಟರಾಯರು, ಶ್ರೀಯುತ ಬಿ. ಎಂ. ಶ್ರೀಕಂಠಯ್ಯನವರು ಮೊದಲಾದ ನಮ್ಮ ಮುಖ್ಯ ಸಾಹಿತ್ಯ ಧುರಂಧರಲ್ಲಿ ಹುಟ್ಟಿ, ಅವರು ತಮ್ಮ ಆ ಆಕಾಂಕ್ಷೆಯನ್ನು ಕೊಡಗಿನವರೊಡನೆ ತೋರಿಸಿ ಹಲವು ವರ್ಷಗಳಾದುವು. ಆದರೆ ಅಂಥದೊಂದು ಸಮ್ಮೇಳನವನ್ನು ನಡೆಸುವ ಸುಯೋಗವು ಇದು ವರೆಗೂ ಇಲ್ಲಿ ಒದಗಿರುವುದಿಲ್ಲ. ಪರಂತು ಕರ್ನಾಟಕ ಭಾಷಾ ಮಾತೆಯ ಅನುಗ್ರಹದಿಂದ ಈ ವರ್ಷದ ಕ್ರಿಸ್‌ಮಸ್ ರಜಾ ಕಾಲದಲ್ಲಿ ಅಂಥದೊಂದು ಅಧಿವೇಶನವನ್ನು ಕೊಡಗು ರಾಜಧಾನಿಯಾದ ಮಡಿಕೇರಿಯಲ್ಲಿ ಜರುಗಿಸಲು ಆಲೋಚನೆಯು ನಡೆದು ಬಂದು, ಸ್ವಾಗತ ಮಂಡಲವು ಸ್ಥಾಪಿತವಾಗಿದೆ. ಮತ್ತು ಅದು ಸಿದ್ಧತೆಯ ಕಾರ್ಯವನ್ನು ನಡೆಸಿದೆ.

ನಮ್ಮ ಕೊಡಗು ಕನ್ನಡ ನಾಡಿನ ಸೇವೆಯಲ್ಲಿ ಹಿಂದುಳಿದ ನಾಡು. ವರ್ತಮಾನಪತ್ರಿಕೆ, ಮಾಸಿಕಪತ್ರಿಕೆಗಳು, ಸಾಹಿತ್ಯ ಧುರಂಧರ ಸಮೂಹ ಮೊದಲಾದ ಸಾಹಿತ್ಯ ಸಂಪತ್ತನ್ನು ಅಭಿವೃದ್ಧಿಪಡಿಸುವ ಸಾಧನೆಗಳೂ ನಮ್ಮ ಕೊಡಗಿನಲ್ಲಿ ಕಡಿಮೆ. ಈ ಮುಂತಾದ ಕಾರಣಗಳಿಂದ ಸಮ್ಮೇಳನವನ್ನು ಇಲ್ಲಿಗೆ ಆಮಂತ್ರಿಸಲಿಕ್ಕೆ ಹಿಂದೆಗೆಯಲು ಇರುವೆವು. ಆದರೆ [illegible]

[illegible]

ಜಂಟೀ ಕಾರ್ಯದರ್ಶಿಗಳು.

ಕ. ಸಾ. ಸ್ವಾಗತ ಮಂಡಲ

ಸಿ ಎಚ್. ಸ್ಕೂಲ್, ಮಡಿಕೇರಿ.

[illegible]

(ತಾ. ೧೫–೧೧–೩೨)

'ನಿಮ್ಮ ಮೋಕ್ಷ ನಿಮ್ಮ ಕೈಯಲ್ಲಿದೆ.'

ಬ್ರಿಟಿಷ್ ಪಾರ್ಲಿಮೆಂಟಿನ ಸದಸ್ಯರಾದ ಮಿ. ಮಾರ್ಗನ್ ಜೋನ್ಸ್‌ರವರು ಈಗ ಹಿಂದೂಸ್ಥಾನದಲ್ಲಿ ಸಂಚಾರ ಮಾಡುತ್ತಿದ್ದಾರೆ. ಅವರು ಬೆಂಗಳೂರಿನಲ್ಲಿ ಲೇಬರ್ ಪಕ್ಷವೂ ಮತ್ತು ಭಾರತಖಂಡವೂ ಎಂಬ ವಿಚಾರವನ್ನು ಕುರಿತು ಭಾಷಣ ಮಾಡಿದಾಗ್ಗೆ ಹೀಗೆಂದರು:—

"ಈಗ ಕೂಲಿ ಪಕ್ಷಕ್ಕೆ ಬಲವಿಲ್ಲ. [illegible]

[illegible]

ವಿಮಾನ ಸಂಚಾರದ ವಿಚಿತ್ರ ಪ್ರಗತಿ.

ಈಗ ವಿಮಾನ ಯುಗವಾರಂಭವಾಗಿದೆಯೆಂಬುದು ಸ್ಪಷ್ಟವು. ಇಂದಿನ ಇಂಗ್ಲೆಂಡಿನಿಂದ ಯುರೋಪಿನ ಸುಮಾರು 100 ಪಟ್ಟಣಗಳಿಗೆ ವಾಯುಮಾರ್ಗವಾಗಿ ಸಂಚರಿಸಬಹುದು. [illegible] ಪಟ್ಟಣಗಳಿಗೆ ಒಂದೇ ದಿವಸದಲ್ಲಿ ಹೋಗಿ ಸೇರಬಹುದು. [illegible] 6 ದಿನಗಳಲ್ಲಿ ಮುಟ್ಟಬಹುದು. [illegible] 20ರ ವರೆಗಿನ ಗಗನ ಪ್ರಯಾಣ ಕಂಪೆನಿಗಳಿವೆ. [illegible] ಪಟ್ಟಣದ ವರೆಗಿನ 1740 ಮೈಲುಗಳ ದೂರವನ್ನು 28 ಗಂಟೆಗಳಲ್ಲಿ 30 ಗಂಟೆಗಳನ್ನು [illegible]

[illegible]

"ಸ. ಯು."

ಅಸ್ಪೃಶ್ಯತಾ ನಿವಾರಣೆ.

ಮಹಾತ್ಮ ಗಾಂಧಿಯವರ ಹೇಳಿಕೆ.

(ಕಳೆದ ಸಂಚಿಕೆಯಿಂದ ಮುಂದುವರಿದದ್ದು.)

ಸರ್ಕಾರವು ಇದರಿಂದ ದೂರ.

ಈಗ ಸರ್ಕಾರವು ಇದರಿಂದ ದೂರವಾಗಿದೆ. ತಮ್ಮ ಭಾಗದ ಜವಾಬ್ದಾರಿಯನ್ನು [illegible] ನಡೆಸುತ್ತಾರೆ. [illegible]

[illegible]

ನಾಗ ತ್ರಿಸ್ಪೃಶ್ಯ ಜಾತಿ ಹಿಂದುಗಳೆನಿಸಿಕೊಂಡವರು ನಡೆಸಿಕೊಂಡ ರೀತಿಯಾಗಿದೆ. ದಬ್ಬಾಳಿಕೆಗೆ ಗುರಿಯಾದ ಅವರ ಸಹೋದರರನ್ನು ತಮ್ಮ ವರೆವರಾಗಿ ಒಪ್ಪಿಕೊಳ್ಳಬೇಕು. ತಮ್ಮ ಮನೆಗಳಿಗೂ, ದೇವಸ್ಥಾನಗಳಿಗೂ, ಶಾಲೆಗಳಿಗೂ ಅವರನ್ನು ಕರೆಯಬೇಕು.

ಗ್ರಾಮಾಂತರಗಳಲ್ಲಿರುವ ಅಸ್ಪೃಶ್ಯರಿಗೆ ತಮ್ಮ ಬೇಡಿಗಳು ಮುರಿದು ಹೋಗಿದೆಯೆಂಬ ಭಾವನೆ ಹುಟ್ಟುವಂತೆ ಮಾಡಬೇಕು. [illegible]

ಜಾತಿ ಹಿಂದುಗಳು ಈ ಕರ್ತವ್ಯಗಳನ್ನು ನಡೆಸಿಕೊಡದೆ ಹೋದರೆ ದೇವರ ಮತ್ತು ಮನುಷ್ಯರ ಮುಂದೆ ನಾನು ಹೇಗೆ [illegible] ಡಾಕ್ಟರ್ ಅಂಬೇಡ್ಕರ್ ಮತ್ತು ರಾ. ಬಾ. [illegible]

[illegible]

ಗುರುವಾಯೂರು ದೇವಸ್ಥಾನ ಪ್ರವೇಶ.

[illegible]

ಸಹಪಂಕ್ತಿ ಭೋಜನ.

[illegible]

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್. ಕೋ ಆಪರೇಟಿವ್ ಸೊಸೈಟೀಸ್
ಆಕ್ಟ್ : ಪ್ರಕಾರ ರಿಜಿಸ್ಟರಾಗಿದೆ.
(ಸ್ಥಾಪಿತವಾದದ್ದು 1922ರಲ್ಲಿ)

		ರೂ.
ಶೇರ್ ಬಂಡವಾಳ	—	50,000—[illegible]
ವಸೂಲಾದ ಶೇರ್ ಮೊಬಲಗು	—	27,[illegible]
ಜನರಿಂದ ಠೇವಣಾತಿ	—	22,538—[illegible]—7
ವಸೂಲಾದ ಕ್ಷೇಮನಿಧಿ	—	37,914—12—[illegible]

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ಮಾಯಿದೆ ಅಥವಾ ಹೆಚ್ಚಿನ ಮಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ, ಕಡಿಮೆ ಮಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವ್ಯವಹಾರಕ್ಕೋಸ್ಕರ ಕೋಅಪರೇಟಿವ್ ರಿಜಿಸ್ಟ್ರಾರರವರು ಹೆಚ್ಚು ಅನುಮೋದನೆ ಮಾಡುತ್ತಾರೆ.

ಪ್ರೆಸಿಡೆಂಟರು	ಮ್ಯಾನೇಜರ್
ಪಟ್ಟಚೆರವಂಡ ದೇವಯ್ಯನವರು, ರಾವ್ ಬಹದ್ದೂರ್.	ಮನೆಯಪಂಡ ಬೆಳ್ಳಿಯಪ್ಪನವರು.

ಸೆಕ್ರೆಟರಿ
ಸಿ. ಎಸ್. ವೆಂಕಟಯ್ಯನವರು, ಬಿ.ಎ., ಬಿ.ಎಲ್.
ಮಡಿಕೇರಿ 1-7-193[illegible].

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀದಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜೆಂಟರುಗಳು.

ಕೊಡಗಿನ ಎಲ್ಲಾ ಭಾಗಗಳಿಗೆ—ಮೆ. ಮುಂಡಂಡ ಯು. ಬಿದ್ದಪ್ಪನವರು.
ಉತ್ತರ ಕೊಡಗಿಗೆ ಮೆ. [illegible] ಮಾಚಯ್ಯನವರು,

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು, (ಖಾದಿಭಂಡಾರ.)
ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಪೂವಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಯ್ಯನವರು, ಮತ್ತು ಅಡಮಣಪಾಡ ಪಿ ಕಾರ್ಯಪ್ಪನವರು,
ಹುದಿಕೇರಿ & ತಿತಿಮತಿ—ಮೆ. ಜಿ. ಮಾದಯ್ಯನವರು,
ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾಚಯ್ಯನವರು,

ಸೂಚನೆ.—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿ ದಿನ್ನ ಲೆಕ್ಕದಲ್ಲಿಯೂ ಇರಬೇಕಾದ [illegible] ಸರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡೆಸಲು ಅತ್ಯವಶ್ಯಕವಾಗಿರುವ, ರಿಜಿಸ್ಟ್ರಾರ್ ಸಾಹೇಬರವರಿಂದ ಶಿಫಾರಸ್ಸು ಮಾಡಲ್ಪಟ್ಟಿರುವ ದಾಖಲಾ ಫಾರಮುಗಳೂ, ಪಿರಾಯಿ ಫಾರಮುಗಳೂ, ಜಮಾ ಖರ್ಚು ಸಂಬಂಧಪಟ್ಟ ಫಾರಮುಗಳೂ, ಕುಟುಂಬದ ಖರ್ಚಿಗೆ ಫಾರಮುಗಳೂ, ಜಾಮೀನು ಕರಾರು ಫಾರಮುಗಳೂ, ಸ್ಟೋರ್ ಕೀಪರ್ ಕರಾರು ಫಾರಮುಗಳೂ, ಓವರ್ಸಿಯರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಒಪ್ಪ ಮೆಂಬರರ ರಿಜಿಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಮುಂಬಯಿಯಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಂ ವಿನ ವರಮಾನ—179 ಲಕ್ಷ ರೂ.
ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.
ಭಂಡವಾಳವು ಹೆಚ್ಚಾದದ್ದು—ಸುಮಾರು 1¼ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ [illegible] ಜನರಿಗೆ [illegible] ಕೋಟಿ ರೂ.
ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ರಕ್ಕಿಂತ ಕಡಿಮೆ ಖರ್ಚಿನಲ್ಲಿಯೇ ನಡೆಸಲ್ಪಟ್ಟಿವೆ.
ಈ ದೊಡ್ಡ ಇಂಡಿಯನ್ ಕಂಪೆನಿಯು ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡೆಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.
ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಿರುವುದು [illegible]
ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚಿನ ಉತ್ಸಾಹವನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಇಂದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು —

ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು
ಅಥವಾ ಇನ್ಸ್‌ಪೆಕ್ಟರೇಟ್ ಆಫೀಸು, ಮಡಿಕೇರಿ.

ಅಥವಾ ಕಂಪೆನಿಯ ಈ ಕೆಳಗಿನ ಬ್ರಾಂಚ್ ಆಫೀಸುಗಳಿಗೂ ಬರೆಯಬಹುದು.

ಆಗ್ರಾ	ಕಲ್ಕತ್ತಾ	ಕೌಲಾಲಂಪೂರು	ಮೊಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೋ	ಪಾಟ್ನಾ	ಸಿಕ್ಕಾಪುರು
ಅಲ್ಲಾಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಲ್ಲಿ
ಬೊಂಬಾಯಿ	ಡಾಲಿಗಾನ್	ಮಂಡಲೆ	ರಾಯಪುರ	ತಿರುವೆಂಡ್ರಮ್
ಭೋಪಾಲ್	ಕರಾಚಿ	ಮಡಿಕೇರಿ	ರಾಂಚಿ	ವಿಶಾಖಪಟ್ಣ

52—37

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತಾರೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ. ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
52—44 ಗಿರಿಗಾಂವ, ಮುಂಬಯಿ.

ಕಾರ್ಡು ಬರೆದರೆ ನಮ್ಮ ಕ್ಯಾಟಲಾಗು ಮಾಫಿಯಾಗಿ ಕಳುಹಿಸಲ್ಪಡುವವು.



ಕೋವಿಗಳು, ಕತ್ತಿಗಳು, ಬಚೀಗಳು, ತೋಟಿಗಳು, ಕೇಪುಗಳು, ಮದ್ದು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS LTD.,
Largest Importers of Firearms and Ammunition
Cheapest priced firm in India,
26—10 **210 Abdul Rehiman Street, BOMBAY.**

Printed & published by P. I. Belliappa at "Kodagu" Press, Mercara for "Kodagu" Ltd.

Reg. No. M. 1. 56.
if not delivered please return to
"KODAGU" OFFICE MERCARA.

ಕೊಡಗು.

ಸತ್ಯೇನ ಧಾರ್ಯತೇ ... ವಿದ್ಯಾ ... ಸಂಚರಿಕಾ ...

ವಾರ್ಷಿಕ ಚಂದಾ ರೂ. ೩—೮—೦.

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೨ | ಮಡಿಕೇರಿ, ಸನ್ ೧೯೩೩ನೇ ಇಸವಿ ನವಂಬರ್ ತಾರೀಕು ೧೮ ನೇ ಶುಕ್ರವಾರ. | ಸಂಚಿಕೆ ೨೫

SARI PINS

EAR-RINGS (Thodus)
Cut-rubys Rs. 25 to 50
With diamond in centre Rs. 80 to 120

BRACELETS
Gold Rs. 10
Set rubys forming any letter Rs. 12

NECKCHAINS

NOSE-RINGS
Diamond in small size of best quality Rs. 35 & upwards according to size.

MARRIAGE PRESENTATIONS

Attractive and inexpensive articles ready in stock. Prompt execution. Details on enquiry free with catalogue. Numerous customers in Coorg thoroughly satisfied with reliable service. Testimonials pouring in. Silver Gnindys, Photo lockets, Dimond nose-screws, cut-ruby ear-rings, etc. etc. etc. in all prices. Very attractive. Prices most moderate.

Estimates free on enquiry.

Designs free on enquiry.

Telegrams: 'PRECIOUS.'

Telephone: 3145.

CATALOGUE ON ENQUIRY.

V. Subramaniaiyer
Jeweller.
Post Box 423, Triplicane, P. O., MADRAS.

52—52



26—21

EMPIRE OF INDIA
Life Assurance Company, Limited.
Established 1897.

INTERIM BONUS on Policies becoming claims before 1st March 1934 INCREASED TO

Rs. 16 per annum per Rs. 1000/- Assured on Whole Life Assurances and Rs. 14 per annum per Rs. 1000/- Assured on Endowment Assurances.

Head Office:— EMPIRE OF INDIA LIFE BUILDING, Bombay

Branch Office:— 152/3, COMMERCIAL STREET, Bangalore.

52—7

ಜನರಲ್ ಅಷ್ಯೂರೆನ್ಸ್ ಸೊಸೈಟಿ.

ಅಜಮೀರ್.

ನಮ್ಮ ... ದ ಪಟ್ಟಿಯೇ ನಮ್ಮ ಅಭಿವೃದ್ಧಿಯನ್ನು ವ್ಯಕ್ತಗೊಳಿಸುತ್ತದೆ.

ವರ್ಷ	[illegible]	[illegible]	[illegible] ಶೇಕಡ
1911	46,?78	19,44?	82.9
1921	2,92,627	6,53,350	43.2
1931	12,50,000	4,00,000	28.2

ಬೋನಸ್ಸು.

ಹೋಲ್ ಲೈಫ್ ... ಸಾವಿರ ರೂಪಾಯಿಗೆ ... ವರ್ಷ ಒಂದಕ್ಕೆ ಶೇಕಡ 22½

ಚೆನ್ನಾಗಿ ಕೆಲಸಮಾಡಿ ಅಭಿವೃದ್ಧಿ ... ಈ ಸೊಸೈಟಿಯಲ್ಲಿ ... ಪ್ರೀಮಿಯಂ ... ಅಥವಾ ಈ ಕಂಪೆನಿಯ ... ಕೆಲಸಮಾಡಿ ಉತ್ತಮ ಕಮಿಶನ್ ... ಪ್ರಯೋಜನ ಹೊಂದಿ.

ಹೆಚ್ಚು ವಿಚಾರಗಳಿಗೆ ಈ ವಿಳಾಸಕ್ಕೆ ಬರೆಯಿರಿ:—

ಎ. ರಾಮಚಂದ್ರರಾವ್,
ಸೂಪರಿಂಟೆಂಡೆಂಟ್,
ಅಪ್ಪೆಕ್ಸ್ ಬಿ.,
ಬೆಂಗಳೂರು.

52—30

ದೇಶೀಯರಲ್ಲಿ ವಿಜ್ಞಾಪನೆ.

ಸ್ತ್ರೀ ಪುರುಷರು ವೇದಾಂತವನ್ನು ವಿಶೇಷವಾಗಿ ವಿದ್ಯಾಭ್ಯಾಸಂಗ ಮಾಡಿ ಹಿಂದೂ ಧರ್ಮದ ಶಾಸ್ತ್ರಾರ್ಥವನ್ನೂ, ವಿಜ್ಞಾನವನ್ನೂ ತಿಳಿದು ಶಾಶ್ವತ ಪ್ರೇಮಭಾವದ ಸೇವಾ ಮುಖಾಂತರ ಮನುಷ್ಯತ್ವದ ಪ್ರೇಮವನ್ನು ಹರಡುವಂತೆ ಮಾಡಲು ಮಡಿಕೇರಿಯಲ್ಲಿ ಒಂದು ಕಾರ್ಯಾಲಯವನ್ನು ಸ್ಥಾಪಿಸಲು ಮಡಿಕೇರಿ ವೇದಾಂತ ಸಂಘದವರು ನಿಶ್ಚಯಿಸಿರುತ್ತೇವೆ. ಇದಕ್ಕಾಗಿ ಸದರಿ ಸಂಘದವರು ಕೊಂಡು ಕೊಂಡ ಮನೆ ದಾರದಲ್ಲಿ ಆಲಯಕ್ಕಾಗಿ ಒಂದು ಕಟ್ಟಡವನ್ನು ಕಟ್ಟಲು ಅಭಿಪ್ರಾಯಪಟ್ಟಿರುತ್ತೇವೆ. ಶ್ರೀರಾಮಕೃಷ್ಣ ಪರಮಹಂಸ ದೇವರ ಶಿಷ್ಯ ವರ್ಗಕ್ಕೆ ಸೇರಿದ ಸನ್ಯಾಸಿ ಮಂಡಲಿಯವರು ಮತ್ತು ಧರ್ಮಾಧಿಗಳು ಹಿಂದೂ ಧರ್ಮದ ಮಹಾ ತತ್ವಗಳನ್ನು ಕಾರ್ಯತಃ ಆಚರಿಸಿ, ಪ್ರಪಂಚದಲ್ಲಿ ಲೋಕ ಹಿತೈಷಿತ್ವ, ಮನುಷ್ಯ ಸೇವೆಗಳ ಪ್ರಖ್ಯಾತಿಪಟ್ಟ ಕೆಲಸಗಳನ್ನು ಮಾಡುತ್ತಿರುವುದನ್ನು ಸರ್ವರೂ ಬಲ್ಲರು. ಶ್ರೀರಾಮಕೃಷ್ಣ ಸಂಸ್ಥೆಯ ಮತ್ತು ಇತರ ಸ್ಥಳಗಳ ಸ್ವಾಮಿಗಳು, ಪಂಡಿತರು, ವಿದ್ವಾಂಸರು, ಮತ್ತು ಹರಿದಾಸರು ವೇದಾಂತದ ಪರಮಾರ್ಥ ವಾಕ್ಯಗಳನ್ನು ಸರ್ವರಿಗೆ, ವಿವರಿಸಲಿಕ್ಕೂ ಮತ್ತು ಉಪನ್ಯಾಸ ಮಾಡಲಿಕ್ಕೂ ಸಂಘದವರಿಂದ ಆಗಿಂದಾಗ್ಗೆ ಕರೆಸಲ್ಪಡುವರು. ಮೇಲ್ಕಂಡ ಬಗೆ ನಿರ್ಮಿಸಲ್ಪಡುವ ಕಟ್ಟಡದಲ್ಲಿ ಅವರು ಬಂದು ಇಳಿಯುವರು.

ಮೇಲಿನ ಉದ್ದೇಶಕ್ಕೆ ಎಂಟು ಸಾವಿರ ರೂಪಾಯಿಗಳು ಬೇಕಾಗುವದು. ಈ ಸ್ಥಳಿಕ ವೇದಾಂತ ಸಂಘದ ಸ್ಥಳೀಕ ಸಭಿಕರುಗಳು ಒಂದು ಸಾವಿರ ರೂಪಾಯಿ ಚಂದಾ ಹಾಕಿದ್ದಾರೆ. ಬಾಕಿ ಹಣಕ್ಕೆ ದೇಶದ ಸ್ತ್ರೀಪುರುಷರು ಸಹಾಯ ಮಾಡಬೇಕೆಂದು ಸಂಘದವರು ಈ ಮೂಲಕ ಭಕ್ತಿ ಪೂರ್ವಕವಾಗಿ ಕೇಳಿಕೊಳ್ಳುತ್ತೇವೆ. ಈ ಸಾವಿರಗಳಲ್ಲಿ ಧರ್ಮಕಾರ್ಯ ನಡೆಯುವ ದೇಶದಲ್ಲಿ ದ್ರವ್ಯ ಸಹಾಯವು ದೊರೆಯುದಿರದು ಎಂಬ ಧೈರ್ಯವು ನಮಗಿದೆ. ಸ್ವಕೀಯ ಅಪಾರ ಉದ್ದೇಶಗಳು ಮತ್ತು ಸ್ವಯಂ ಕೃತಿಯಿಂದ ಕಾರ್ಯವು ಜನರಿಗೆ ನರ ಚಂದಾ ಹಣವು ಸಮರ್ಪಕವಾಗಿ ಮತ್ತು ಉದಾರವಾಗಿ ಸದುಪಯೋಗ ಮಾಡಲ್ಪಡುವದೆಂದು ದೃಢಪಡಿಸುತ್ತೇವೆ. ದಯವಿಟ್ಟು ಪರಿಶೀಲಿಸಿ ಈ ಸತ್ಕಾರ್ಯದ ಕೆಲಸವನ್ನು ಸಫಲಮಾಡಲು ಈ ಸಮುದಾಯಸಹಕಾರವನ್ನು ಬಿಟ್ಟರೆ ಅಥವಾ ಉದಾಸೀನಮಾಡಿದರೆ ನಿಂದನೆಗೆ ಕಾರಣವಾಗುವುದು. ಶ್ರೀ ರಾಮಕೃಷ್ಣ ಪರಮಹಂಸ ದೇವರ ಮತ್ತು ಈ ಪ್ರಾಚೀನ ದೇಶದ ಋಷಿಗಳ ಪವಿತ್ರ ಆಶೀರ್ವಾದ ಬಲದಿಂದ ನಾವು ಕೈಕೊಂಡ ಕಾರ್ಯವು ಸಫಲವಾಗುವದೆಂದು ನಾವು ವಿಶ್ವಾಸಪೂರ್ವಕ ನಂಬುತ್ತೇವೆ.

ವೇದಾಂತ ಸಂಘ, ಮಡಿಕೇರಿ. ತಾ. 7–1 1–3	ಪಿ. ಯಂ. ಚಿಣ್ಣಪ್ಪ (ಪ್ರೆಸಿಡೆಂಟ್).
	ಆರ್. ಯಂ. ಕೇಶವೈಯ್ಯ (ವೈಸ್ ಪ್ರೆಸಿಡೆಂಟ್)
	ಟಿ. ಸುಬ್ಬಯ್ಯ (ಸೆಕ್ರೆಟರಿ).
	ಯನ್. ಯನ್. ಕುಟ್ಟಪ್ಪ (ಟ್ರೆಷರರ್)
	ಯಂ. ಶಂಕರನಾರಾಯಣರಾವ್
	ಸಿ. ಅಪ್ಪಯ್ಯ
	ಕೆ. ಬಿ. ಗಣಪತಿ,

(ವೇದಾಂತ ಸಂಘದ ಕಮಿಟಿ ಮೆಂಬರುಗಳು.)

ಪತ್ರವ್ಯವಹಾರ.

[ಬರಹಗಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ವೀರಾಜಪೇಟೆಯಲ್ಲಿ ಬಸ್ಸುಗಳೂ, ಅಲ್ಲಿಯ ರಸ್ತೆಯು.

ಸ್ವಾಮಿ,

ವೀರಾಜಪೇಟೆಯು ಕೊಡಗಿನ 2ನೇ ಪಟ್ಟಣವಾಗಿದೆಯೆಂಬ ವಿಷಯ ತಿಳಿಸಬೇಕಾಗಿಲ್ಲ. ಸದರಿ ಪೇಟೆಯಲ್ಲಿ ಮಡಿಕೇರಿಗಿಂತ ಮತ್ತು ಕೊಡಗಿನ ಬೇರೆ ಪಟ್ಟಣಗಳಿಗಿಂತ ಜನರು ಸೇರುವರೆಂದರೆ ಅದು ತಪ್ಪಾಗಲಾರದಾಗಿ ನಂಬಿರುವೆನು. ಮಡಿಕೇರಿಯಲ್ಲಿ ಸಾಧಾರಣ ಒಂದು ವರ್ಷದಿಂದ ಅಲ್ಲಿಯ ಮುನ್ಸಿಪಾಲಿಟಿಯ ಮೆಂಬರುಗಳು ಮತ್ತು ಪ್ರೆಸಿಡೆಂಟರು ಒಂದು ಬಸ್ಸ್ ಸ್ಟೇಂಡ್ ಮಾಡಿ, ಎಲ್ಲಾ ರಸ್ತೆಗಳಲ್ಲಿ ಓಡಾಡುವ ಬಸ್ಸುಗಳು ಆ ಸ್ಟೇಂಡ್ (ಬಸ್ಸ್ ನಿಲ್ಲಿಸುವ ಸ್ಥಳ)ನಲ್ಲಿ ನಿಂತು ಅವುಗಳ ಗಂಟೆಗೆ ಸರಿಯಾಗಿ ಹೊರಡುವುದು ನಮ್ಮ ವಾಚಕರಿಗೆ ತಿಳಿಯದ್ದಲ್ಲ. ಅಷ್ಟೇ ಅಲ್ಲ, ಅಲ್ಲಿ ಒಂದು ಕಟ್ಟಡವೂ ಕೆಲವು ಅಂಗಡಿಗಳೂ, ಮತ್ತು ಕಾಫಿ ಕ್ಲಬ್ಬುಗಳೂ ಸಹ ಇವೆ. ಪ್ರಯಾಣಿಕರು ತಮಗೆ ಬೇಕಾದ ಬಸ್ಸು ಬರುವುದಕ್ಕೆ ಮುಂಚೆ ಸದರಿ ಕಟ್ಟಡದಲ್ಲಿ ವಿಶ್ರಾಂತಿ ತೆಗೆದುಕೊಂಡು ಮಳೆಗಾಲದಲ್ಲಿ, ಬಿಸಿಲುಗಾಲದಲ್ಲಿ ಅದಾಗದೆ ತೃಪ್ತಿಯುಂಟಾಗುತ್ತಾರೆಂತ ಬರೆದರೆ ಅತಿಶಯೋಕ್ತಿಯಾಗಲಾರದು.

ಆದರೆ ವೀರಾಜಪೇಟೆಯಲ್ಲಾದರೋ ಮಡಿಕೇರಿಯಂತೆ ಬಸ್ಸುಗಳು, ಹಲವು ಓಡಾಡುತ್ತವೆ. ಅಲ್ಲಿ ಮೇಲ್ಕಂಡ ವಾಹನಗಳಿಗೆ ನಿಲ್ಲುವ ಸ್ಥಳವಿಲ್ಲದೆ, ಗವರ್ನಮೆಂಟ್ ಬೋರ್ಡಿನ ಒಂದು ಬದಿಯಲ್ಲಿ (ಗಡಿಯಾರ ಕಂಭದಿಂದ ಸಾಧಾರಣ ಅರ್ಧ ಫರ್ಲಾಂಗಿನ ವರೆಗೆ) ನಿಲ್ಲುವುದು ಸಹ ನಮ್ಮ ವಾಚಕರಿಗೆ ತಿಳಿಯದ್ದಲ್ಲ. ಆದರೆ ನಮ್ಮ ವೀರಾಜಪೇಟೆಯ ಮುನ್ಸಿಪಾಲಿಟಿಯವರು ಮಡಿಕೇರಿ ಮುನ್ಸಿಪಾಲಿಟಿಯವರು ಹಾಕಿಕೊಟ್ಟ ಮೇಲ್ಪಂಕ್ತಿಯನ್ನು ಅನುಸರಿಸಿದರೆ ನಿಲ್ಲಿಸಬಹುದು ಎನ್ನುತ್ತೇನೆ. ವಿಶ್ರಾಂತಿಯ ಕ್ಲಬ್ಬಿನ ಮುಂದುಗಡೆ ಇರುವ ಮೈದಾನದಲ್ಲಿ ವಾಹನಗಳಿಗೆ ನಿಲ್ಲುವ ಸ್ಥಳವೂ, ಪ್ರಯಾಣಿಕರಿಗೆ ವಿಶ್ರಾಂತಿಗಾಗಿ ವಿಶ್ರಾಂತಿಯ ಕ್ಲಬ್ಬಿನ ವರಾಂಡವೂ ಸಹ ಇದೆ. ಇದು ಮುನ್ಸಿಪಾಲಿಟಿಯವರ ಜಾಗವೋ ಯಾರೋ ಬೇರೆ ಜನರ ಜಾಗವೋ ಎಂದು ಗೊತ್ತಿಲ್ಲ. ಬೇರೆ ಜನರ ಜಾಗವಾದರೂ ಮುನ್ಸಿಪಾಲಿಟಿಯವರು ಕ್ರಯಕ್ಕೆ ತೆಗೆದುಕೊಳ್ಳಬಹುದು. ಹೀಗೆ ಮಾಡದಿದ್ದರೆ ಸಂತೆ ದಿನದಲ್ಲಿ ಪಟ್ಟಣಿಗರಿಗೂ, ಗಾಡಿ ವಗೈರೆ ವಾಹನಗಳಿಗೂ ಬಹಳ ತೊಂದರೆಯಾಗಿದೆ. ಆದುದರಿಂದ ವೀರಾಜಪೇಟೆಯ ಮುನ್ಸಿಪಾಲಿಟಿಯವರು ಈ ಸಂಗತಿ ತಮ್ಮ ಚಿತ್ತಕ್ಕೆ ತಂದು ಮಡಿಕೇರಿಯಲ್ಲಿ ಮಾಡಿದ ಪ್ರಕಾರ ಬಸ್ಸು ಸ್ಟೇಂಡ್ ಇಲ್ಲಿಯೂ ಮಾಡಲು ತೊಂದರೆ ತೆಗೆದುಕೊಂಡಾರೆಂದು ನಂಬುವ.

ಯಂ. ಎ. ಬಿ.

ಪುರ್ ದಿಲ್ಲತ ಕೊಡವ.

ಸಂಗತ ಈ ಕಾವೇರಿ ಭೂಮಿ ಅಂಗ್ಡೇರಗಲ ಉಳ್ಳದ್ ಇಲ್ಲಿ ನಲ್ಲ ಜನಳೂ ಉಂಡ್, ಪಾಳ್ ಜನಳೂ ಉಂಡ್. ಆ ಚೆಂಗಿ ಸಂಗದಾರ್, ಸಂಗತ ಕೂಟ್‌ಲ್ ಗಟ್ಟಿಗಂಗದಾತ್, ಸಂಗತ ಕೂಟ್‌ಲ್ ಬುದ್ಧಿವಂತಂಗದಾರ್‌ಂದ್ ಎಳ್‌ದಿ ಬೆಚ್ಚವು ಇಂಜ್‌ಲೆ. ತಾಂಡ ತಡಿಸೋ, ಅತ್ತ ತ್‌ನೆಸೋ ಕಾವೇರಿ ಭೂಮಿತ್ ಥಾನ ಎರಂಧಿತ್ ಇಕ್ಕ ತಿವಳೋತವಾಸಿಯೂಯಿತು ಕೃಂತ ವಾಂಡಂಡ ಮುಕ್ಕಣ್ಣಾ ಅದ್‌ನೆಲ್ಲ ಎಷ್ಟ ಕೋರ್ ಚಿಪ್ಪಿಯೋಡಿ, ಕನ್ನಡತೂ, ಇಂಗ್ಲೀಷ್‌ಲೂ ಎಳ್‌ದಿತ್.

ಒಳ್ಳ ಒಳ್ಳ ಪುಸ್ತಕ್ ಎಳ್‌ತ್ ಪಡಿಪತ್ಯುತಿ, ಒಳ್ಳ ಪಣಗಾರಂಡ ಪೋಲಂಪನಾಯಿತೂ ಇಲ್ಲತ ಪುಟ್ಟನಗಳಗೆ ಫಲತ್‌ಲ್ ಕಾರ್ದಾಸಂಗ್ ಕಾರ್ಪರ ಕೊಡ್‌ತೆನ್ನಕ್ಕ ಹವದಾಸ ಅಪ್ಪಚ್ಚಕವಿರ್ ಹವದಾಸಕೊಡ್‌ತತ್, ಕುಚ್‌ಚ ತೀಪತ್ಯುತಾತ ಯಯಾತಿರಾಜಂತ ನಾಟಕೋ, ಸುಬ್ರಮಣ್ಯ ನಾಟಕೋ, ಕಾವೇರ್ಯಮ್ಮೆರ ನಾಟಕೋ ಎಣ್ಣವ ಇವು ಮೂಂದ್ ನಾಟಕ ಎಳ್‌ದಿಚಿ ಅದ್‌ರ್ ಒಂದ್ ದಂಡ್ ತ್‌ಂದಿತ್ ರಚಿಂಗಿಯು ಸಂಗತ ಜನಕ್ ಸ್ವಭಾಷೆರ ಪುರ್‌ದಿಲ್ಲತಾಸಗುಂಡ್ ಆದನ ಪುನಃ ಅಟ್ಟ ಇಡ್‌ಚಿರುವ ಧೈರ್ಯವೇ ಇಲ್ಲತನ್ನೆ ಆಂಬ.

ಚೆನ್ನ ದಿನಕ್ ಬಪ್ಪ ಬಂಗಳೂರ್‌ಂಜಿ ಒರ್ ಕಿಟ್ ರಾಕ್ಷಸ್ ಬಂದತ್ ಸಂಗತಯಂಗತ ಮನಸ್ ಚೆನ್ನ ದಿನ ಒಳ್‌ಂಜಿತ್, ಆ ಮನಸ್ ಜನತ ನಡಪ್ ಇರ್‌ಪ್‌ನೋ, ಆಶೇನೋ, ಊಟ ಉಪಚಾರ್‌ತ್‌ನೋ ಕಂಡತ್ ಕೊಡದೆಲ್ಲ ಪೆಪರ್ ಹಿಂದುವಳಯಿತುಂಡ್‌ಗಿಯೂ ಪನತ್‌ಲೂ ಪೋತ್‌ಲೂ ತಿಚ್ಚಿಂದ್ ಅಯಿಂಗತ ಜಾತಿ ಸಂಬಂಧದಲ್ಲ ಒರ್ ಪುದ್‌ಮೆ ಪತ್ರಿಕೆ ಎಳ್‌ದಿತ್. ಪರದೇಶತ್‌ಂಜಿ ಬಂದ ಅನೇಕ ಜನ ಈ ಅಭಿಪ್ರಾಯ ಪಟ್ಟಿತ್. ಅನ್ನತಾನ ಅಪಚ್ಚಿತ್ ದಿನರ ಮೂಪತಾಯಿತ್ ಬ್ರಹ್ಮಂಬಲ್ಲಿ ಇಕ್ಕ ವಿಶ್ವನಾಸಂತ ಸಡಿಕೇರಿಯೂರ ಚಿಣ್ಣವಣ್ಣ 'ಚಿಟ್ಟೋಳಿ ಪಾಟ್' ಎಳ್‌ದಿತ್ ಬೆಚ್ಚತ್.

ಅದ್‌ಲ್ ಅಯಿಂಗತ ಸ್ವಂತ ಕವಿತೆ ಒಂದೂ ಇಲ್ಲ. ನೇರೆ. ಅಚೆಂಗಿಯೂ ಶಾರಿಪೋಪಂಚ್ ಪರತಿನ ಪೋರ್‌ತಿ ಎಡ್‌ತ್ ಜಾತಿ ನೀತಿ ಪದ್ಧತಿ ಎಳಪನ್ನತ ಒರ್ ಪರತಿ ಕಥೆ ನೂಡ್‌ಚಿ. ಅದ್‌ಂಡ ಗುಣ ಕಂಡಿತ್ ಸರ್ಕಾರತಾರ 300 ಉರುಪಿಯ ಕೊಡ್‌ತಿತೋಲೊ. ಅಚ್ಚಾಯಿತ್ ಕಾಲ ಪೆರ್ ಆಚಿ. ಅಚೆಂಗಿಯೂ ತಪ್ಪ್‌ನೆಲ್ಲ ತಿದ್ದಿತ್ ಪುನಃ ಅಚ್ಚ ಮಾಡ್‌ಚಿರನ ಎಚ್ಚೆಂಗಿ ಒಮ್ಮ ಇಟ್ಟ ಕೊಳ್ ಉಂಡ್‌ತಯಿಂಜಿತಿಲ್ಲೆ.

ಪಿಂಞ ಅವು ಸರ್ಕಾರ ಉದ್ಯೋಗತ್‌ಂಜ ತಾಂಡ ಸ್ನೇಹಿತಾಂಗಡೋ, ಊರ್‌ಲಂಡ ಬೊಡು ಜಂಜಾಡಿಯೋ ಕುತ್ತ್ ತಡಪಕ್ಕತಿ ತಾಂಡ ಅಕ್ಕತ್‌ನ ಕೃಷ್ಣಾರ್ಪಣ ಮಾಡುವಂಗ್‌ಂಜಿ ಪಿಂಞ ಶ್ರೀಕೃಷ್ಣ ಭಗವಂತಂಡ ಪಾಟ್‌ನ ಬೊಣ್ಣನೆಯು ನಂತ ವಾಗಡ ಕೊಡುವ ತಕ್ಕ್‌ಲ್ ಎಳ್‌ದಿ ಬೆಚ್ಚತ್. ಅದ್‌ನ ಓದ್‌ನವು, ಕಮ್ಮ ಒಮ್ಮ ಓದಿ ನೋಟ್‌ನವು ಅದ್‌ನ ಪೆರ್ ಅರಿಯು. ಸಂಗತ ತೀತಯಂಡ ಬೊಳ್ಳಿಯಣ್ಣ ಅದ್‌ನ ಓದಿತ್ ಪತ್ರಿಕೆಲ್ ಅರ್ಥ ಮಾಡಿತ್ ಅದ್‌ಲ್ ಚೆನ್ನಂಗಾನ ಲೋಕ ಎಂದ್ ನನ್ನತ್ ಸಂಗತ ತಂಡ್ ಪತ್ರಿಕೆಲ್ ಎಳ್‌ದಿತ್ತತ್.

ಅಲ್ಲತಿ ಪೋನೆಯಂದಾಯಿತ್ ರಾಮಕೃಷ್ಣ ವ. ತಿಂಞ್ಞ ಇಲ್ಲ್‌ತ್ ಬಂದಿಂಜ ಸ್ವಾಮಿತ್ ಸಂಗತ ಭಾಷೆರ ಮೇಲೆ ಪುಂಡ್ ಬೆಚ್ಚತ್ ಅಯಿಂಗತ ಕೊಡವ ತಿಕ್ಕ ದಾರಿಯೋ ಒನ್ ಕೊಡ್‌ತಾನ ಅವು ಎತ್ತ ಪರಂದತ್.

ಇನ್ನನೆ ಈ ಮೂಂದ್ ಮಹನೀಯಂಗ ಎಳ್‌ದಿ ಬೆಚ್ಚತ್ ಭಾಷೆ ಸೇವೆ ಮಾಡಿತೂ ಅಯಿಂಗಕ್ ಒರ್ ಫಲೋ ಆಯಿಲೆ. ದುಂಡಾಳ್ ಸ್ವರ್ಗ ಸೇರ್‌ಚಿ. ಒಪ್ಪ ಮುಪ್ಪುಲುಂಡ್; ಇಂಞ್‌ಚೆಂಗಿಯೂ ಸಂಗತ ಜನ ಪ್ರದೇಶತಾಂಡ ಪುಸ್ತಕ ಪ್ರಕಾಶನ ಕರ್ಮ ಮಾಡುವತ ಸಂಗತಯಂಡಾಂಗ್ ಒರ್ ಗಿರಿಂಗಿ ಕರ್ಮ ಮಾಡ್‌ಲಂಗಿ ಈ ಕಾವೇರ್ಯಮ್ಮೆರ ಮಕ್ಕ ಪುಟ್ಟುವತ್ ಅಯೋಗ್ಯಗಂಡ್ ಆಂಜೋಲಿ.

ಪಣ ಮಲೆ ಸೇರ್‌ತಾ? ಮಂಗಾಲತ್‌ರ ಕಾಲಬಾತ್. ಮಂಗಾಲತಾಂಗೂ ಮಂಗ್‌ಲತರತೂ ಪರದೇಶತ್ ಅಂಗ್‌ಗಾಣ್ ಮಂಗಣ್ ಕೊಡ್‌ತಾಂಗ್‌ಂಜ ಈ ಓರೋರ ಬುಳ್ ಕೊಡಿ. ಕೊಡ್‌ಚತ್ ಬುಜ್ಜಾರ್ ಇಡೋರ್ ಬಾತ್ ಎ

ದ್‌ತಿತ್ ಕೊಡಿ. ಪರದೇಶತ ಲ್ಲ ಕೊಡವರ ಸ್ನೇಹಿತಳ್ ಒರಂದ್ ಆಯಿಚ ಕೊಡಿ. ಭಾಷೆ ಸೇವೆ ಮಾಡಿ, ಉಳ್ಳವಂಗ್ ಧೈರ್ಯ ಕೊಡಿ. ಬಪ್ಪವಂಗ್ ಬಟ್ಟೆ ಕಾಟಿ.

'ಸೇವಕ.'

(FREE INSURANCE)
ಉಚಿತ ವಿಮಾ.

ಮ್ಯೂಚುವಲ್ ಬೆನಿಫಿಟ್ ಸ್ಕೀಂ ಎಂಬ ಅನ್ಯೋನ್ಯ ಸಹಾಯ ಪದ್ಧತಿ.

(Mutual Benefit Scheme.)

ಜೈ ಭಾರತ ಇನ್‌ಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಹೆಡ್ ಆಫೀಸ–ಮದ್ರಾಸ್

ಲೈಫ್ ಇನ್‌ಷ್ಯೂರೆನ್ಸ್ ಕಂಪೆನಿಗಳ ಕಾನೂನಿಗೆ ಅಧೀನವಾಗಿದೆ. ಸರಕಾರದಲ್ಲಿ ಡಿಪೋಸಿಟ್ ಇಡಲಾಗಿದೆ.

ಈ ಮೇಲ್ಕಂಡ ಕಂಪೆನಿಯು ಅನ್ಯೋನ್ಯ ಸಹಾಯಕ್ಕಾಗಿ ಕಳೆದ ವರ್ಷ ಅಂದರೆ 1931ನೇ ಫೆಬ್ರವರಿಯಲ್ಲಿ ಮದ್ರಾಸಿನಲ್ಲಿ ಸ್ಥಾಪಿತವಾಗಿ ಈ ವರೆಗೆ 25500 ಸಾವಿರಕ್ಕೂ ಹೆಚ್ಚಾಗಿ ಪಾಲಿಸಿಗಳನ್ನು ಪಡೆದಿರುತ್ತೆ. ಈ ಮೇಲ್ಕಂಡ ಕಂಪೆನಿಗೆ ಐಶ್ವರ್ಯವಂತರೂ ಬಡವರೂ, ವಿದ್ಯಾವಂತರೂ ಅವಿದ್ಯಾವಂತರೂ, ಜಾತಿ ಮತಗಳ ಬೇಧವಿಲ್ಲದೆ ಜಾತಿವಾರು, ಕೋಮುವಾರು, ಹೆಂಗಸರೂ, ಗಂಡಸರೂ ಹೆಚ್ಚು ಖರ್ಚು ಕೊಡದೆಯೇ ಉಚಿತ ಜೀವ ವಿಮೆ ಮಾಡಿಸಿಕೊಳ್ಳಬಹುದು. 18 ವರ್ಷಕ್ಕೆ ಮೇಲ್ಪಟ್ಟು 60 ವರ್ಷದೊಳಗಿರುವವರು ಈ ಕಂಪೆನಿಗೆ ಸೇರಬಹುದು. ಈ ಕಂಪೆನಿಗೆ ಸೇರಲು ಇಚ್ಛಿಸುವವರು ಸುರುವಿನಲ್ಲಿ ರೂ. 5–8–0ನ್ನು ಮಾತ್ರ ಕಟ್ಟತಕ್ಕದ್ದು. ಅನಂತರ ತಿಂಗಳು ಒಂದಕ್ಕೆ 1 ರೂ. ಸ್ವಲ್ಪದರಲ್ಲಿ ದೊಡ್ಡ ಲಾಭ ದೊರೆಯುತ್ತೆ. ಆದ್ದರಿಂದ ಇಂಥಾ ಸುಸಮಯವನ್ನು ಕಳೆಯಕೂಡದು. ಈ ದಿನವೇ ಪಾಲಿಸಿಗಳನ್ನು ಹೊಂದಲು ಅರ್ಜಿದಾರರಾಗಿರಿ. ಇದರ ಫಲವನ್ನು ಹೊಂದಲು ಭಾಗಿಗಳಾಗಿರಿ.

ಹೆಚ್ಚಿನ ಮಾಹಿತಿಗಳಿಗೆ ಈ ಕೆಳಗಿನವರಿಗೆ ಬರೆದು ತಿಳಿದುಕೊಳ್ಳಬಹುದು. ಅಲ್ಲದೆ ಇವರು ಕೊಡಗಿನ ಎಲ್ಲಾ ಕಡೆಗಳಲ್ಲಿಯೂ ತಿರುಗುತ್ತಲಿರುತ್ತಾರೆ.

ಯನ್. ಬಿ. ಕರುಂಬಯ್ಯ.
ಏಜೆಂಟ್,
ಜೈ ಭಾರತ ಇನ್‌ಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
12–4 ನಾಪೋಕ್ಲು, (ಕೊಡಗು.)

ಆಟೋಹಾರ್ಪ್ ಪಿಯಾನೋ ಪೋರ್ಟ್
ಎಂಬ ಹಾರ್ಮೋನಿಯಂಗಳು.

ಒಂದಕ್ಕೆ ರೂ. 4–8–0.



ಈ ಹಾರ್ಮೋನಿಯಂಗಳು ಹೊಸದಾಗಿ ತಯಾರಾದವು. 23 (ರೀಡ್ಸ್) ಸ್ವರಗಳು ಇರುವವು. ಭಾರಿ ಕ್ರಯದ ಹಾರ್ಮೋನಿಯಂಗಳಿಗಿಂತಲೂ ಚೆನ್ನಾಗಿರುವವು. ನಾಟಕ, ಗುಡಿ ಮುಂತಾದವುಗಳಲ್ಲಿ ಉಪಯೋಗಿಸಲು ಬಹು ಚೆನ್ನಾಗಿರುವವು. 23 ಸ್ವರಗಳಿರುವ ಹಾರ್ಮೋನಿಯಂ 1ಕ್ಕೆ 4–8–0. ಪ್ಯಾಕಿಂಗ್, ಟಿ. ಖ. 1–8–0 ಪ್ರತ್ಯೇಕ.

ಹೊಸ ಮಷಿನ ಪಾಕೆಟ್ ಡ್ರೆಂ ಇನಾಂ.

ಪಿಲಾಮತಿಯ ಈ ಪೇನಾವನ್ನು ಕೊಳ್ಳುವವರಿಗೆ ಕನ್ನಡ ಇಂಗ್ಲೀಷು, ತೆಲುಗು ಭಾಷೆಗಳಲ್ಲಿ ಪ್ರಿಂಟಾದ 1933ನೇ ಇಸವಿಯ ಪಾಕೆಟ್ ಡ್ರೆಂ ಇನಾಂ ಆಗಿ ಕೊಡುವೆವು. ಇವರಲ್ಲಿ ಎಲ್ಲಾ ರಾಜರುಗಳ ಹೆಸರೂ, ಗವರ್ನರುಗಳ ಹೆಸರೂ, ಪಂಚಾಂಗ, ರಜಾ ದಿನಗಳೂ, ಹಬ್ಬಗಳೂ, ರೈಲು, ಟಪ್ಪಾಲು, ರಿಜಿಸ್ಟ್ರೇಷನ್ ಚಾರ್ಜುಗಳೂ ವಿವರವಾಗಿ ತಿಳಿಯುವಂತೆ ಪ್ರಿಂಟಾಗಿದೆ. ಈ ವಾರದಲ್ಲಿ ಈ ಪೇನಾವನ್ನು ತರಿಸಿಕೊಳ್ಳುವವರಿಗೆ ಪಾಕೆಟ್ ಡ್ರೆಂ ಇನಾಂ ಕೊಡುವೆವು.

ಡ್ರೆಂ ಸಹಿತ ಪೇನಾ 1ಕ್ಕೆ ರೂ. 1–12–0.

ವಿಳಾಸ— **ಸಿಟಿ ಮಾರ್ಟ್,**
168, ಜೈನಾ ಬಜಾರ್,
4–1 ಮದ್ರಾಸು.

೫೬ ವರುಷಗಳ ಅನುಭವ ಸಿದ್ಧ ಔಷಧಗಳು.

೧. ಧಾತುಪುಷ್ಟಿ ಲೇಹ—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ಬಾಧೆ, ರಕ್ತಪಿತ್ತ, ಜೀರ್ಣಜ್ವರ, ಮಲಬದ್ಧತೆ, ಕೈಕಾಲು ಬಚ್ಚುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು.
ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7—0—0.

೨. ಅಶೋಕಾರಿಷ್ಟ ಮತ್ತು ಮಾತ್ರೆ—ಹೆಂಗಸರ ಮುಟ್ಟಿನ ದೋಷಗಳು, ಮುಟ್ಟು ಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾನಹೀನತೆ, ಮೂರ್ಛೆ, ಮಲಬದ್ಧತೆ, ಚಳಿಜ್ವರ, ರಕ್ತಹೀನತೆ, ಕೈ ಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಗುಣಪಡಿಸುವದು. ಬಾಟ್ಲಿ 1ರ 1—4—0; 1 ಡಬ್ಬಿ ಮಾತ್ರೆಗೆ 1—0—0; 3 ಬಾಟ್ಲಿ ಔಷಧಕ್ಕೂ, 3 ಡಬ್ಬಿ ಮಾತ್ರೆಗೂ 6—4—0.

೩. ಚಂದನಾಸವ ಮತ್ತು ಮಾತ್ರೆಗಳು
ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರವು ಆಗಾಗ್ಗೆ ಬಂದು ತಡಿಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳನ್ನೂ, ಬಾಯಾರಿಕೆ, ಮಲಬದ್ಧತೆ, ಸ್ವಪ್ನಸ್ಖಲನ ಇವುಗಳ ಮೇಲೆ ಸಿದ್ಧೌಷಧ. ಬಾಟ್ಲಿ 1ರ 1—2—0; 1ಡಬ್ಬಿ ಮಾತ್ರೆಗೆ 1—6—0. 2 ಬಾಟ್ಲಿ ಔಷಧಕ್ಕೂ, 2 ಡಬ್ಬಿ ಮಾತ್ರೆಗೂ 4—12—0.

೪. ಬಾಲಗ್ರಹ ಗುಟಿಕೆ—ಬಾಲಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರು ಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧ. ಬಾಟ್ಲಿ ಒಂದಕ್ಕೆ 0—10—0. 3ಕ್ಕೆ 1—12—0.

೫. ಸುಖಬೇಧಿ ಗುಟಿಕೆ—ಆಯಾಸವನ್ನುಂಟುಮಾಡದ ಸುಖವಿರೇಚಕ. ಬಾಟ್ಲಿ 1ರ 0—10—0. 3ಕ್ಕೆ 1—12—0.

೬. ಸ್ಪಂದನ ವಟಿ—ಜ್ವರ ನಿಂತು ಪ್ರಯಾಸವಿಲ್ಲದೆ ಮಲವಿಸರ್ಜನೆ ಆಗುವದು. ಬಾಟ್ಲಿ 1ಕ್ಕೆ 1—0—0;

೭. ಮಲೇರಿಯಾ ನಿವಾರಿಣಿ—ಎಲ್ಲಾ ನಮೂನೆಯ ಜ್ವರಕ್ಕೆ ಬಾಟ್ಲಿಗೆ 1—8—0

೮. ಮಹಾ ಮದನಕಾಮೇಶ್ವರಿ ಲೇಹ
ಡಬ್ಬಿ 1ಕ್ಕೆ 2—0—0.

೯. ದಂತಕಾಂತಿ ಚೂರ್ಣ—ಡಬ್ಬಿ 1ರ 3 ಆಣೆ. 6 ಡಬ್ಬಿಗಳಿಗೆ 1—2—0.

ಯಂ. ಗಣಪಯ್ಯ ಎಂಡ್ ಸನ್ಸ್,
ಆಯುರ್ವೇದಿಕ್ ಫಿಸಿಶಿಯನ್ಸ್,
52—8 ರಥಬೀದಿ, ಮಂಗಳೂರು.

ಬರ್ಥ್ ಕಂಟ್ರೋಲ್ ಟಾಬಲೆಟ್ಸ್ ಎಂಬ

ಸಂತತಿ ಪ್ರತಿಬಂಧಕ ಗುಳಿಗೆಗಳು.

ಪ್ರಸಿದ್ಧ ಡಾಕ್ಟರುಗಳಿಂದ ಪರೀಕ್ಷಿಸಿ ಶಿಫಾರಸ ಮಾಡಲ್ಪಟ್ಟಿದೆ.

ಬಹಳ ಸಾರಿ ಹಡಿಯುವದರಿಂದ ಹೆಂಗಸರಿಗೆ ಅಶಕ್ತಿಯೂ ಚಿಕ್ಕದೆ ಬಡತನದಲ್ಲಿ ಮಕ್ಕಳಾಗುವದರಿಂದ ದುಃಖವಾಗುತ್ತ, ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬೇಡವೆಂದು ಇಚ್ಛಿಸುವವರು ಈ ಗುಳಿಗೆಯನ್ನು ಉಪಯೋಗಿಸಬೇಕು ಇದರಿಂದ ಮುಟ್ಟಾಗುವಿಕೆಯು ನೇಮದಂತೆ ನಡೆಯುವದು ಆದರೆ ಗರ್ಭ ಧರಿಸುವದಿಲ್ಲ ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರ ಸುಖವು ಪೂರ್ಣವಾಗಿದ್ದು ಗರ್ಭಧಾರಣ ಬಂದಾಗುವದು. ಅನುಪಾನ ಪತ್ರಿಕೆ ಔಷಧದ ಜೊತೆಯಲ್ಲಿ ಇಟ್ಟಿದೆ.

ಬಾಟ್ಲು ಕ್ರಯ ರೂ. 2—0—0.

ಚಂದ್ರಭಾನ್ ಅಂಡ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂ. 216,
ಮದ್ರಾಸು.

Chandrabhan & Co.,
Post Box No. 216,
Madras.

2-6

ಇಂಡಿಯಾ ಎಕ್ವಿಟೇಬಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

(ಸ್ಥಾಪಿಸಲ್ಪಟ್ಟದ್ದು 1908.)

ಕಳೆದ ವರ್ಷದ ಫಲಿತಾಂಶಗಳು.

ಹಿಂದಿನ ವರ್ಷದ ಕೆಲಸಕ್ಕಿಂತ 64% ಹೆಚ್ಚು.

ಕಳೆದ ವರ್ಷ ಸಂಭವಿಸಿದ ಹಕ್ಕು ಬಾಧ್ಯಸ್ಥರಲ್ಲಿ ಶೇಕಡ 96·6 ಜನರಿಗೆ ಹಣ ಅದೇ ವರ್ಷ ಕೊಡಲಾಗಿದೆ.

ಖರ್ಚಿನ ಪ್ರಮಾಣವು 31% ಮಾತ್ರ.

ಇಂಡಿಯಾ ಎಕ್ವಿಟೇಬಲ್ ಇನ್ಶೂರೆನ್ಸ್ ಕಂಪೆನಿಯು ಬುಡದಿಂದ ತಲೆಯ ವರೆಗೂ ಇಂಡಿಯನ್.

ಸಜನದಾರರಾದ ಏಜೆಂಟರುಗಳು ಬೇಕಾಗಿದ್ದಾರೆ.

ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಕೆ. ಇ. ಜಾಕೊ,
ಬ್ರಾಂಚ್ ಸೆಕ್ರೆಟರಿ,
159 ಶ್ರೀ ನರಸಿಂಹರಾಜ ರೋಡ್,
ಬೆಂಗಳೂರು ಸಿಟಿ.

ಅಥವಾ

(1) ಮಿಸ್ಟರ್ ಸಿ. ಯಂ. ಪೂವಯ್ಯ,
ರೋಡ್ ಇನ್ಸ್ಪೆಕ್ಟರ್,
'ಪೂವಯ್ಯ ವಿಲ್ಲಾ,'
ಮಡಿಕೇರಿ.

(2) ಯಂ. ಸಿ. ಅಪ್ಪಚ್ಚು,
ರಿಟಯರ್ಡ್ ಪಾರುಪತ್ಯಗಾರ್,
ಹಿಲ್ ರೋಡ್,
ಮಡಿಕೇರಿ.

(12—10)

GOVERNMENT SOAP FACTORY,
Bangalore.

ವಿಶ್ವಾಸಾರ್ಹತೆ.

ಅತ್ಯುತ್ತಮವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ ಯಾವ ಗುಣಗಳು ಅವಶ್ಯಕವೆಂದು ನೀವು ತಿಳಿದಿರುತ್ತೀರೋ ಆ ಗುಣಗಳೆಲ್ಲಾ ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.

ನಾವು ನಿಮಗೆ ಭರವಸೆಯನ್ನೀಯುತ್ತೇವೆ.

ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು.

52—10

ಸ್ಪೃಶ್ಯತೆಯನ್ನು ಕುರಿತು ನನ್ನ ಅಭಿಪ್ರಾಯಗಳನ್ನು ಯಾರೂ ವಿರೋಧಿಸುವುದಿಲ್ಲ. ಎಷ್ಟೋ ಜನ ಸಮುದಾಯಗಳು, ಅಸ್ಪೃಶ್ಯತೆಯನ್ನು ಖಂಡಿಸಿಯೂ, ತಮ್ಮ ಮಧ್ಯದಿಂದ ಅದನ್ನು ಹೋಗಲಾಡಿಸಲು ಪ್ರಮಾಣ ಮಾಡಿಯೂ ಠರಾವು ಪಾಸುಮಾಡಿರುವುದಲ್ಲದೆ, ಹಲವು ಸಾರಿ ತಮ್ಮ ಪ್ರಮಾಣಗಳಿಗೆ ದೇವರನ್ನು ಸಾಕ್ಷಿಯಾಗಿ ಇಟ್ಟುಕೊಂಡಿರುವರು. ಮತ್ತು, ತಮ್ಮ ವ್ರತವನ್ನು ನಡಿಸಲು ಶಕ್ತಿ ಕೊಡಬೇಕೆಂದು ದೇವರ ಆಶೀರ್ವಾದವನ್ನು ಬೇಡಿರುವರು. ಈ ಮಿಲಿಯ ಜನರಿಗೆ ವಿರೋಧವಾಗಿ ನಾನು ಉಪವಾಸವನ್ನು ಕೈಕೊಂಡದ್ದಾಗಿದೆ. ಮತ್ತು, ಅವರ ಅತ್ಯ ಸಂತೋಷದ ಪ್ರೀತಿಯು 5 ದಿನ ಕಾಲಗೆ ದೊಡ್ಡ ಬದಲಾವಣೆಯನ್ನು ತಂದು ಪುಣವಾದ ಒಪ್ಪಂದ ಸ್ಥಂಟುಮಾಡಿದ್ದಾಗಿದೆ; ಮತ್ತು ಸದರಿ ಒಪ್ಪಂದವನ್ನು ಸಂಪೂರ್ಣವಾಗಿ ಜಾರಿಗೆ ತರದೆ ಹೋದರೆ ಅವರಿಗೆ ವಿರೋಧವಾ ಪುನಹ ಉಪವಾಸವನ್ನು ಕೈಕೊಳ್ಳುವದಾಗಿದೆ.

(ಮುಂದುವರಿಯುವುದು)

ಕೊಡಗಿನ ಭವಿಷ್ಯತ್ತು.

ಸಾರ್ವಜನಿಕ ಸಭೆಗಳು.

(ಸ್ವಂತ ವಾತ್ಮಿದಾರರಿಂದ.)

ಮಡಿಕೇರಿ.

ತಾ. 4—11—32ರಲ್ಲಿ ಮಡಿಕೇರಿ ನಾಡವರ ಮೀಟಿಂಗು . ಉಳುವಾರಂಡ ಅಪ್ಪಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿ ಸುಮಾರು 55 ಜನರು ಹಾಜರಿದ್ದರು. ಮೈಸೂರಿಗೆ ಸೇರಕೆಂದು ಮೆ. ಗಳಿಯ ಬಲ್ಲಚಂಡ ಬೆಳ್ಯಪ್ಪ, ಮನೆಯಪಂಡ ಬೆಳ್ಯಪ್ಪ, ಸಿ. ಎನ್. ವೆಂಕಪ್ಪಯ್ಯ, ಐ. ಸಿ. ಸುಬ್ಬಯ್ಯನವರು, ಕಾಂಗ್ರೆಸಿನ ಹೋರಾಟವು ತೀರುವ ವರೆಗೆ ಅಭಿಪ್ರಾಯ ಕೊಡಬಾರದೆಂದು ಮೆ. ಗಳಿಯ ಬಿದ್ದಂಡ ಐಯ್ಯಪ್ಪ, ... ಪಯ್ಯ ಮತ್ತು ಪಿ. ಐ. ಬೆಳ್ಯಪ್ಪನವರೂ ಮಾತಾಡಿದರು. ... ವಾಗಿ ಸುಮಾರು 31 ಜನರೂ, ವಿರೋಧವಾಗಿ ಮೂರು ಜನ ಓಟ್ ಮಾಡಿದರು.

ಶನಿವಾರಸಂತೆ.

ತಾ. 4—11—32ರಲ್ಲಿ ಶನಿವಾರ ಸಂತೆಯಲ್ಲಿ ಶ್ರೀ ಹಾ ಜೆಸ್ಟ ಮಲ್ಲಪ್ಪನವರ ಅಧ್ಯಕ್ಷತೆಯಲ್ಲಿ ಆ ಪ್ರಾಂತ್ಯದವರ ಮೀಟಿಂಗು ನಡೆಯಿತು. ಸುಮಾರು 400 ಹಾಜರಿದ್ದರು. ಕೊಡಗಿನವರ ಹಕ್ಕುಗಳನ್ನು ಉಳಿಸಿಕೊಂಡು ಪ್ರತ್ಯೇಕ ಜಿಲ್ಲೆಯಾ ಗಿ ಇಟ್ಟು ಮೈಸೂರು ಸಂಸ್ಥಾನಕ್ಕೆ ಕೊಡಗನ್ನು ಸೇರಿಸುವಂತೆ ಬ್ರಿಟಿಷ್ ಸರ್ಕಾರವನ್ನು ಕೇಳಬೇಕೆಂತ ಸರ್ವಸಮ್ಮತದಿಂದ ಮಂಜೂರಾಯಿತು.

ನಾಪೋಕ್ಲು.

ಈ ತಾ. 5 ನೇ ಶನಿವಾರ ನಾಪೋಕ್ಲು ನಾಡಿನವರ ಮೀಟಿಂಗು ನಾಪೋಕ್ಲು ಶಾಲೆಯ ಬಳಿ ಮೈದಾನದಲ್ಲಿ ನಡೆಯಿತು. ಸುಮಾರು 500 ಜನರು ಹಾಜರಿದ್ದರು. ಮೆ. ಪಂಡಂಡ ಗಣಪತಿಯವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಮೆ. ... ಯಂಡ ಮಾಚಯ್ಯನವರು ಮೀಟಿಂಗಿನ ಉದ್ದೇಶವನ್ನು ವಿವರಿಸಿ ಹೇಳಿ, ಕೊಡಗನ್ನು ಮೈಸೂರಿಗೆ ಸೇರಿಸುವ ವಿಷಯದಲ್ಲಿ ಅಭಿಪ್ರಾಯವನ್ನು ಕೊಡಬೇಕೆಂದು ಕೇಳಿಕೊಂಡರು. ... ಅವೆಯಂಡ ಸುಬ್ಬಯ್ಯನವರು ಕೊಡಗನ್ನು ಪ್ರತ್ಯೇಕವಾಗಿ ... ಇಡಬೇಕೆಂತಲೂ, ಮೆ. ಕುದಿಯಂಡ ಗಣಪತಿಯವರು ... ಸೂರಿಗೆ ಸೇರುವುದು ಒಳ್ಳೇಯದು, ಆದರೆ ಕಾಂಗ್ರೆಸ್ಸಿನ ಚಳವಳಿ ನಿಲ್ಲುವ ವರೆಗೆ ಕಾಯುವುದು ಉತ್ತಮವೆಂತಲೂ, ಮೆ. ... ಡ ದೇವಯ್ಯನವರು ಮತ್ತು ಮೆ. ಮುಕ್ಕಾಟಿರ ಗಣಪತಿ ... ವರು ಕಾಂಗ್ರೆಸ್ಸಿನ ಚಳವಳಿ ಮುಗಿಯುವ ವರೆಗೆ ಯಾವ ... ರ್ಮಾನವನ್ನೂ ಮಾಡಬಾರದೆಂತಲೂ, ಮೆ. ... ರಂಡ ... ತಿಮ್ಮಣ್ಣನವರು ಮತ್ತು ಮೆ. ಅರಿಸೆಂಪಂಡ ಸೋಮಯ್ಯನವರು ಮೈಸೂರಿಗೆ ಸೇರಿಸಬಾರದೆಂತಲೂ, ಮೆ. ಬಲ್ಲಚಂಡ ಬೆಳ್ಯಪ್ಪನವರು ಮೈಸೂರಿಗೆ ಸೇರುವುದು ಉತ್ತಮವೆಂತಲೂ, ಮೆ ... ಪಸೆಂಪಂಡ ಪೊಣ್ಣಪ್ಪನವರು ಮತ್ತು ಮೆ. ಐಲಂಡಂಡ ಚಂಗಪ್ಪನವರು ಮೈಸೂರಿಗೆ ಸೇರಬಾರದೆಂತಲೂ, ಮೆ. ಕೀಯಕ ... ಪಂಡ ಭೀಮಯ್ಯನವರು ಪ್ರತ್ಯೇಕ ಇಡಬೇಕೆಂತಲೂ, ಮೆ. ... ನೆಯಪಂಡ ಬೆಳ್ಯಪ್ಪನವರು ಮೈಸೂರಿಗೆ ಸೇರುವದು ಒಳ್ಳೇದೆಂತಲೂ, ಮೆ ಬಿದ್ದಂಡ ಸುಬ್ಬಯ್ಯನವರು ಸತ್ಯಾಗ್ರಹ ಚಳವಳಿ ಮುಗಿಯುವ ವರೆಗೆ ಕಾಯುವುದು ಒಳ್ಳೇದೆಂತಲೂ, ಮೆ. ಐ ... ಟ್ಟಿರ ಸುಬ್ಬಯ್ಯನವರು ಮೈಸೂರಿಗೆ ಸೇರುವುದು ಪ್ರಯೋಜನಕರವಾದುದೆಂತಲೂ, ಮೆ. ಬಿದ್ದಂಡ ಯಂ. ಐಯ್ಯಪ್ಪನವ ... ಪ್ರತ್ಯೇಕ ಇರುವುದು ಉತ್ತಮವೆಂತಲೂ, ಮೆ. ಪಾಡ್ಯಂಡ ... ಪ್ಪನವರು, ಮೆ. ಕಣ್ಣಾಪಾಣಿ ಉಮ್ಮರಯವರು ಮತ್ತು ... ರಂಡ ಐರಿರ ಮುದ್ದಪ್ಪನವರು ಕಾಂಗ್ರೆಸ್ಸಿನ ಚಳವಳಿ ನಿಲ್ಲುವ ವರೆಗೆ ಯಾವ ತೀರ್ಮಾನವನ್ನೂ ಮಾಡಬಾರದೆಂತಲೂ ಭಾಷಣ ಮಾಡಿದರು. ರಾ. ಬಾ. ಕಷ್ಟೀರ ಮಣಿಯಂಡ ಸುಬ್ಬಯ್ಯನವರು ಮೈಸೂರಿಗೆ ಸೇರಿಸಬೇಕೆಂದೂ, ಮೆ. ಬೊಟ್ಟೋಳಂಡ ಮಾ ... ಯ್ಯನವರು ಪ್ರತ್ಯೇಕವಾಗಿರಲು ಸಾಧ್ಯವಿಲ್ಲದಿದ್ದರೆ ಮೈಸೂರಿಗೆ ಸೇರಿಸಬೇಕೆಂದೂ ಬರೆದ ಪತ್ರಗಳು ಓದಲ್ಪಟ್ಟವು. ... ಒಂದು ಠರಾವನ್ನು ಮೆ. ಉ. ಮಾಚಯ್ಯನವರು ಓದು ... ದ್ದಾಗ್ಯೂ ಅವರಿಗೂ, ಮೆ. ಬಿದ್ದಂಡ ಐಯ್ಯಪ್ಪನವರಿಗೂ ... ಸಿಟ್ಟಿನ ಮಾತುಗಳಾದವು. ಅದು ಶಾಂತವಾದ ಮೇಲೆ ... ಐ. ಸಿ. ಸುಬ್ಬಯ್ಯನವರು, ಕೊಡಗನ್ನು ಮೈಸೂರಿಗೆ ಸೇರಿಸಬೇಕೆಂಬ ಠರಾವನ್ನು ಓಟಿಗೆ ಹಾಕಿದರು. ಇದಕ್ಕೆ ಪರವಾಗಿ ಯಾರೂ ಕೈಎತ್ತಲಿಲ್ಲ; ವಿರೋಧವಾಗಿ ಹೆಚ್ಚು ತಮ್ಮ ಎಲ್ಲರೂ ಕೈಎತ್ತಿದರು. ಮೆ ಐ. ಸುಬ್ಬಯ್ಯನವರು ಅಧ್ಯಕ್ಷರನ್ನು ವಂದಿಸಿದ ಮೇಲೆ ಸಭೆಯು ಬರಖಾಸ್ತಾಯಿತು.

ಗೋಣಿಕೊಪ್ಪಲು.

ಪೊನ್ನಂಪೇಟೆ ನಾಡಿನವರ ಮೀಟಿಂಗು ತಾ. 6 ನೇ ಆದಿತ್ಯವಾರ ಮಿಶನ್ ಶಾಲೆಯ ಬಳಿ ಮೆ. ಮನೆಯಪಂಡ ಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಸುಮಾರು 400 ಜನರು ನೆರೆದಿದ್ದರು. ಮೆ. ಬಲ್ಲಚಂಡ ಬೆಳ್ಯಪ್ಪನವರು ಕೊಡಗನ್ನು ಮೈಸೂರಿಗೆ ಸೇರಿಸಬೇಕೆಂತಲೂ, ಮೆ. ಚೇಯಕಪೂವಂಡ ಭೀಮಯ್ಯನವರು ಪ್ರತ್ಯೇಕವಾಗಿ ಇಡಬೇಕೆಂತಲೂ, ಮೆ. ಅಬ್ದುಲ್ ಗಫೂರ್ ಖಾನ್‌ರವರು ಕಾಂಗ್ರೆಸ್ಸಿನ ಅಹಿಂಸಾ 'ಯುದ್ಧವು' ನಿಲ್ಲುವ ವರೆಗೆ ಕಾಯಬೇಕೆಂತಲೂ, ಮೆ ಮನೆಯಪಂಡ ಬೆಳ್ಯಪ್ಪನವರು ಮೈಸೂರಿಗೆ ಸೇರಿಸಬೇಕೆಂತಲೂ, ಮೆ. ಕೊಡಂದೆರ ಚಂಗಪ್ಪನವರು, ಮೆ. ಚೇಂದಿರ ತಮ್ಮಯ್ಯನವರು ಮತ್ತು ಮೆ. ನಾಯಡ ಬೆಳ್ಯಪ್ಪನವರು ದೇಶದಲ್ಲಿ ಶಾಂತಿ ಉಂಟಾಗುವ ವರೆಗೆ ಕಾಯಬೇಕೆಂತಲೂ, ಮೆ. ಮಾಚಿಮಂಡ ನಂಜುಂಡನವರು ಮೈಸೂರಿಗೆ ಸೇರಿಸಬೇಕೆಂತಲೂ, ಮೆ. ಚೆಪ್ಪುಡಿರ ಪೂವಯ್ಯನವರು ನೆರೆದವರು ತಮ್ಮ ಅಭಿಪ್ರಾಯವನ್ನು ಸೂಚಿಸಬೇಕೆಂತಲೂ, ಮೆ. ಮನೆಯಪಂಡ ಚಿಣ್ಣಪ್ಪನವರು ಮೈಸೂರಿಗೆ ಸೇರಿಸಬೇಕೆಂತಲೂ, ಮೆ. ಕೀತಿಯಂಡ ಕುಶಾಲಪ್ಪನವರು ಪ್ರತ್ಯೇಕ ಇಡಬೇಕೆಂತಲೂ, ಮೆ. ಐ. ಸಿ. ಸುಬ್ಬಯ್ಯನವರು ಮೈಸೂರಿಗೆ ಸೇರಿಸುವುದು ಉತ್ತಮವೆಂತಲೂ, ಮೆ. ಬಿದ್ದಂಡ ಅಪ್ಪಯ್ಯನವರು ಮೈಸೂರಿಗೆ ಸೇರಿಸಬಾರದೆಂತಲೂ, ಮೆ. ಕೊಡಂದೆರ ಕರುಂಬಯ್ಯನವರು ಪ್ರತ್ಯೇಕ ಇಡುವದು ಒಳ್ಳೇದು, ಆದರೆ ಕಾಂಗ್ರೆಸಿನ ಚಳವಳಿ ನಿಲ್ಲುವ ವರೆಗೆ ಕಾಯಬೇಕೆಂತಲೂ, ಮೆ. ಪುಚ್ಚಿಮಾಡ ನಾಣಯ್ಯನವರು ಮೈಸೂರಿಗೆ ಸೇರಿಸುವುದು ಒಳ್ಳೇದೆಂತಲೂ ಮತ್ತು ಮೆ. ಪಿ ಐ. ಬೆಳ್ಯಪ್ಪನವರು ಮಹಾತ್ಮ ಗಾಂಧಿಯವರನ್ನು ಮತ್ತು ಕಾಂಗ್ರೆಸಿನವರನ್ನು ಜೈಲಿನಿಂದ ಬಿಡುಗಡೆ ಮಾಡುವ ವರೆಗೆ ಯಾವ ಅಭಿಪ್ರಾಯ ಕೊಡಬಾರದೆಂತಲೂ ಭಾಷಣ ಮಾಡಿದರು. 'ಕೊಡಗನ್ನು ಪ್ರತ್ಯೇಕ ಜಿಲ್ಲೆಯಾಗಿಟ್ಟುಕೊಂಡು, ಕೊಡಗಿನವರ ಎಲ್ಲಾ ಹಕ್ಕು ಬಾಧ್ಯತೆಗಳನ್ನು ಕಾಪಾಡುವ ಶರ್ತಿನ ಮೇಲೆ ಕೊಡಗನ್ನು ಮೈಸೂರಿಗೆ ಸೇರಿಸಬೇಕು' ಎಂಬ ಠರಾವನ್ನು ಮೆ. ಐ. ಸಿ. ಸುಬ್ಬಯ್ಯನವರು ಸೂಚಿಸಿದರು. ಅಷ್ಟರಲ್ಲಿ ಕತ್ತಲಾದುದರಿಂದ ಹಲವರು ಹೋಗಿಬಿಟ್ಟಿದ್ದರು. ಉಳಿದಿದ್ದ ಸುಮಾರು 150 ಜನರಲ್ಲಿ 12 ಜನರು ಠರಾವಿಗೆ ಪರವಾಗಿಯೂ ಅನೇಕರು ವಿರೋಧವಾಗಿಯೂ ಓಟು ಮಾಡಿದರು.

ಸೋಮವಾರಪೇಟೆ.

ತಾ. 6—11—32ರಲ್ಲು ಸೋಮವಾರಪೇಟೆ ನಾಡವರ ಮೀಟಿಂಗು ಮೆ. ಸಾಹುಕಾರ್ ಡಿ. ನಾರಾಯಣ ಶೆಟ್ಟರ ಅಧ್ಯಕ್ಷತೆಯಲ್ಲಿ ಸೋಮವಾರಪೇಟೆಯಲ್ಲಿ ನಡೆಯಿತು. ಸುಮಾರು 300 ಜನರು ಹಾಜರಿದ್ದರು. ಅಮಲ್ದಾರ್ ಕೆ. ಮಲ್ಲಪ್ಪನವರು ಮೈಸೂರಿಗೆ ಸೇರುವುದರ ಪ್ರಯೋಜನಗಳನ್ನು ವಿವರಿಸಿ ಪ್ರತ್ಯೇಕವಿರಲು ಸಾಧ್ಯವಿಲ್ಲವೆಂತಲೂ ಭಾಷಣ ಮಾಡಿದರು. ಸ್ಕೂಲ್ ಮಾಸ್ಟರ್ ಪೊಯ್ಯಟಿರ ಉತ್ತಪ್ಪನವರು ಕೊಡಗಿನ ಮೂಲ ನಿವಾಸಿಗಳಲ್ಲಿ ಕಲಹಗಳಿಲ್ಲ ಇರುವಾಗ ಸ್ವರಾಜ್ಯ ಸಿಕ್ಕುವ ವರೆಗೆ, ಪ್ರತ್ಯೇಕವಾಗಿರುವುದು ಸಾಧ್ಯವಿದೆ, ಕಾಂಗ್ರೆಸಿನ ಚಳವಳಿ ತೀರುವ ವರೆಗೆ ಅಭಿಪ್ರಾಯ ಕೊಡಬಾರದೆಂತಲೂ ಭಾಷಣ ಮಾಡಿದರು. ಹರಗದ ಮುತ್ತಣ್ಣನವರು ಕಾಂಗ್ರೆಸ್ಸಿನ ಚಳವಳಿ ತೀರುವ ವರೆಗೆ ಅಭಿಪ್ರಾಯ ಕೊಡಬಾರದೆಂತಲೂ ಸಿ. ಎನ್. ವೆಂಕಪ್ಪಯ್ಯನವರೂ, ಸಿಂಗೂರು ಮಾದಪ್ಪನವರೂ, ಕೆ. ಚಂದ್ರಶೇಖರಯ್ಯನವರೂ ಮೈಸೂರಿಗೆ ಸೇರಿಸಬೇಕೆಂತಲೂ, ಪಟೇಲ ಚಂಗಪ್ಪನವರು ನಾಡವರು ಹೆಚ್ಚಿನ ಜನರು ಸೇರದ್ದರಿಂದ ಈ ದಿನ ತೀರ್ಮಾನ ಮಾಡಬಾರದೆಂತಲೂ ಹೇಳಿದರು. ಕೊಡಗಿನವರ ಹಕ್ಕುಗಳನ್ನು ಉಳಿಸಿಕೊಂಡು ಪ್ರತ್ಯೇಕ ಜಿಲ್ಲೆಯಾಗಿರುವ ಶರತಿನಿಂದ ಮೈಸೂರಿಗೆ ಸೇರಿಸುವಂತೆ ಬ್ರಿಟಿಷ್ ಸರ್ಕಾರವನ್ನು ಕೇಳಬೇಕೆಂಬ ಠರಾವು ಓಟಿಗೆ ಹಾಕಲಾಗಿ ನೂರ್ಕವತ್ತು ಜನರಿಗಿಂತ ಹೆಚ್ಚಾಗಿ ಪರವಾಗಿಯೂ 25 ಜನರು ವಿರೋಧವಾಗಿಯೂ ಓಟ್ ಮಾಡಿದರು. ಒಪ್ಪಿಗೆ ಇದ್ದವರ ಸೈನ್ ತೆಗೆದುಕೊಳ್ಳಲಾಯಿತು.

ಮಡಿಕೇರಿ.

ಶ್ರೀಮಂಗಲನಾಡಿನವರ ಪಬ್ಲಿಕ್ ಮೀಟಿಂಗು ತಾ. 7ನೇ ಸೋಮವಾರ ಸಂತೆಯ ಬಳಿ ಮೈದಾನದಲ್ಲಿ ಮೆ. ಮಲ್ಲಂಗಡ ದೇವಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಮೆ. ಚೆಪ್ಪುಡಿರ ಪೂವಯ್ಯನವರು ಮೀಟಿಂಗಿನ ಉದ್ದೇಶವನ್ನು ವಿವರಿಸಿ, ಮಡಿಕೇರಿಯಲ್ಲಿ ತಾ. 23—10—32 ರಲ್ಲಿ ನಡೆದ ಮೀಟಿಂಗಿನ ವಿವರವನ್ನು ಹೇಳಿ, ಕೊಡಗನ್ನು ಮೈಸೂರಿಗೆ ಸೇರಿಸುವದರ ವಿಷಯ ಜನರು ಅಭಿಪ್ರಾಯ ಕೊಡಬೇಕೆಂದು ಕೇಳಿಕೊಂಡರು. ಮೆ. ಮ. ಪಿ. ಜಿ. ಮುದ್ದಮ್ಮಯ್ಯನವರು ಮೈಸೂರಿಗೆ ಸೇರಿಸುವುದಕ್ಕೆ ವಿರೋಧವಾಗಿಯೂ, ಆದರೆ ದೇಶದಲ್ಲಿ ಶಾಂತಿಸ್ಥಾಪನೆಯಾಗುವ ವರೆಗೆ ಯಾವ ತೀರ್ಮಾನ ಮಾಡಬಾರದಾಗಿಯೂ, ಮೆ. ತಿರಿಯಾಬಾಡ ಸಂಬಪ್ಪನವರು ಮೈಸೂರಿಗೆ ಸೇರಿಸಬಾರದೆಂತಲೂ, ಮೆ. ಗಳಿಯ ಚೇಂದಿರ ತಿಮ್ಮಯ್ಯನವರು, ತಮ್ಮಯ್ಯನವರು, ಅಜ್ಜಿಕುಟ್ಟಿರ ಪೊನ್ನಪ್ಪನವರು, ಮಲಚ್ಚಿರ ಬೆಳ್ಯಪ್ಪನವರು ಮತ್ತು ಪಿ. ಐ. ಬೆಳ್ಯಪ್ಪನವರು ಕಾಂಗ್ರೆಸಿನ ಅಹಿಂಸಾ 'ಯುದ್ಧ' ವುನಿಲ್ಲುವ ವರೆಗೆ ಯಾವ ತೀರ್ಮಾನವನ್ನೂ ಮಾಡಬಾರದೆಂತಲೂ ಭಾಷಣ ಮಾಡಿದರು. 'ದೇಶದಲ್ಲಿ ಈಗ ಕಾಂಗ್ರೆಸಿಗೂ, ಸರ್ಕಾರಕ್ಕೂ ಸ್ವಾತಂತ್ರ್ಯದ ಹೋರಾಟವು ನಡೆಯುತ್ತಾ, ಶಾಂತತೆಯು ಇಲ್ಲದ ಇರುವುದರಿಂದ ಕೊಡಗಿನ ಭವಿಷ್ಯತ್ತನ್ನು ಕುರಿತು ಆಲೋಚಿಸಲು ಈಗ ಸಮಯವಲ್ಲವೆಂದೂ, ಈ ಹೋರಾಟವು ನಿಂತ ವಿನಹ ಯಾವ ತೀರ್ಮಾನವನ್ನೂ ಮಾಡಕೂಡದೆಂದೂ ಈ ಸಭೆಯು ಅಭಿಪ್ರಾಯಪಡುತ್ತದೆ.' ಎಂಬ ಠರಾವನ್ನು ಮೆ. ಪಿ. ಮುದ್ದಮ್ಮಯ್ಯನವರು ಸೂಚಿಸಲಾಗಿ ಸರ್ವಸಮ್ಮತದಿಂದ ಪಾಸಾಯಿತು. ನಂತರ ಮೆ. ಚೆಪ್ಪುಡಿರ ಪೂವಯ್ಯನವರು ಕೊಡಗನ್ನು ಮೈಸೂರಿಗೆ ಸೇರಿಸಬೇಕೆಂಬುದಕ್ಕೆ ಒಪ್ಪಿಗೆ ಇರುವವರು ಓಟು ಕೊಡಿರೆಂದು ಕೇಳಿದಾಗ್ಯೂ ಯಾರೂ ಕೈಎತ್ತಲಿಲ್ಲ. ವಿರೋಧವಾಗಿ ಹಲವರು ಕೈಎತ್ತಿದರು. ಅಧ್ಯಕ್ಷರ ಚಿಕ್ಕ ಭಾಷಣವಾದ ಮೇಲೆ ಮೀಟಿಂಗು ಮುಕ್ತಾಯವಾಯಿತು.

ವೀರಾಜಪೇಟೆ.

ಅಂಜುಮನ್ ಇತ್ತಿಹಾದಿ ಇಸ್ಲಾಂ ಸಂಘದ ಮೀಟಿಂಗು ತಾ. 8ರಲ್ಲಿ ವೀರಾಜಪೇಟೆಯಲ್ಲಿರುವ ಸದರಿ ಸಂಘದ ಹಾಲ್‌ನಲ್ಲಿ ಮೆ. ಎ. ಯಂ. ಸಿದ್ದೀಕ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಕೊಡಗನ್ನು ಮೈಸೂರಿಗೆ ಸೇರಿಸುವ ವಿಷಯ ದೀರ್ಘ ಚರ್ಚೆ ನಡೆದು, ಯಾವದೊಂದೂ ತೀರ್ಮಾನಕ್ಕೆ ಬರದೆ, ಈ ವಿಷಯವನ್ನು ಆಲೋಚಿಸಲು ಇನ್ನೊಂದು ಮೀಟಿಂಗು ಮಾಡುವಂತೆ ನಿಶ್ಚಯಿಸಲಾಯಿತು.

ವೀರಾಜಪೇಟೆ ನಾಡಿನವರ ಪಬ್ಲಿಕ್ ಮೀಟಿಂಗು ತಾ. 8ರಲ್ಲಿ ವೀರಾಜಪೇಟೆ ರೀಡಿಂಗ್ ರೂಮ್ ಬಳಿ ಮೈದಾನದಲ್ಲಿ ನಡೆಯಿತು. ಮೆ. ಕೇಳಪಂಡ ಅಪ್ಪಯ್ಯನವರು ಅಧ್ಯಕ್ಷರಾಗಿದ್ದರು. ಸುಮಾರು 300 ಜನರು ನೆರೆದಿದ್ದರು. ಮೆ. ನಡಿಕೇರಿಯಂಡ ಸೋಮಯ್ಯನವರು ಮೀಟಿಂಗಿನ ಉದ್ದೇಶವನ್ನು ವಿವರಿಸಿ ಹೇಳಿದರು. ನಂತರ ಅಧ್ಯಕ್ಷರು, ತಾರೀಖು 23—10—32ರಲ್ಲಿ ನಡೆದ ಮೀಟಿಂಗು ಎಲ್ಲಾ ಪಾರ್ಟಿಗಳ ಮತ್ತು ನಾಡುಗಳ ಪ್ರತಿನಿಧಿಗಳು ಸೇರಿ ಮಾಡಿದ ಮೀಟಿಂಗು ಅಲ್ಲವೆಂತಲೂ, ಆದುದರಿಂದ ಇನ್ನೊಂದು ಸರ್ವ ಪಕ್ಷೀಯ ಪರಿಷತ್ತನ್ನು ನಡಿಸಿ ಈ ಕೆಲಸವನ್ನು ಮುಂದರಿಸಬೇಕಲ್ಲದೆ ಈ ದಿನ ಮೀಟಿಂಗು ಮಾಡಿ ಪ್ರಯೋಜನವಿಲ್ಲವೆಂತಲೂ ಭಾಷಣ ಮಾಡಿದರು. ಈ ಸೂಚನೆಯ ಮೇಲೆ ದೀರ್ಘ ಚರ್ಚೆ ನಡೆಯಿತು. ಮೀಟಿಂಗು ನಡೆಯುವುದಿಲ್ಲವೆಂದು ಕಂಡು ಹಲವು ಜನರು ಹೊರಟು ಹೋಗಲಾರಂಭಿಸಿದರು. ಕಡೆಗೆ ಈ ಕೆಳಗಿನ ಠರಾವು ಪಾಸುಮಾಡಲಾಯಿತು.

'ಈ ತಾ. 13ರಲ್ಲಿ ಮಡಿಕೇರಿಯಲ್ಲಿ ನಡೆಯಲಿಕ್ಕಿರುವ ಮೀಟಿಂಗಿನಲ್ಲಿ ದೇಶದ ಎಲ್ಲಾ ಪಂಗಡ ಮತ್ತು ಕೋಮುಗಳ ಪ್ರತಿನಿಧಿಗಳು ಸೇರಲಿಲ್ಲವಾದರಿಂದ ಈ ಸಭೆಯವರಿಗೆ ತೋರುವದರಿಂದ, ಸದರಿ ಮೆಂಬರುಗಳು ಪ್ರತಿಯೊಂದು ಪೂರ್ವದ ನಾಡಿನಿಂದ 10 ಮೆಂಬರುಗಳನ್ನು ಆರಿಸಿಯು ನಾಡುತಕ್ಕರೂ, ಊರುತಕ್ಕರೂ ಸೇರಿ ಮೀಟಿಂಗು ಮಾಡಿ ಚುನಾಯಿಸಿ ಕಳುಹಿಸಬೇಕಾಗಿಯೂ, ಪ್ರತಿಯೊಂದು ಸಂಘವೂ ಮೀಟಿಂಗು ಮಾಡಿ 10 ಜನ ಪ್ರತಿನಿಧಿಗಳನ್ನು ಆರಿಸಿ ಕಳುಹಿಸುವಂತೆಯೂ ಕೇಳಿಕೊಂಡು, ವೀರಾಜಪೇಟೆಯಲ್ಲಿ ಎಲ್ಲಾ ಪಂಗಡದವರು ಕೂಡಿ ಕೊಡಗಿನ ರಾಜಕೀಯ ಭವಿಷ್ಯತ್ತನ್ನು ತೀರ್ಮಾನಿಸಲಿಕ್ಕಾಗಿ ಒಂದು ದುಂಡು ಮೇಜು ಪರಿಷತ್ತನ್ನು ನಡಿಸಬೇಕಾಗಿ ಈ ಸಭೆಯಲ್ಲಿ ತೀರ್ಮಾನವಾಯಿತು.

ಇದರ ನಕಲನ್ನು ಈ ತಾ. 13 ರಲ್ಲಿ ಮಡಿಕೇರಿಯಲ್ಲಿ ನಡೆಯಲಿಕ್ಕಿರುವ ಮೀಟಿಂಗಿಗೆ ಕಳುಹಿಸುವಂತೆಯೂ, ಸದರಿ ಸಭೆಯವರು ಎಲ್ಲಾ ಜಾತಿ ಮುಖಂಡರಿಗೆ ನೋಟೀಸು ಕೊಟ್ಟು ಒಂದು ದಿನವನ್ನು ನೇಮಕ ಮಾಡಬೇಕೆಂದೂ ಈ ಸಭೆಯು ಕೇಳಿಕೊಳ್ಳುತ್ತದೆ.

ಕೊಡ್ಲಿಪೇಟೆ.

ತಾ. 8ರಲ್ಲಿ ಕೊಡ್ಲಿಪೇಟೆಯಲ್ಲಿ ಮೆ. ಕಲ್ಲಳ್ಳಿ ಸಿದ್ದಬಸಪ್ಪ ಶೆಟ್ಟರ ಅಧ್ಯಕ್ಷತೆಯಲ್ಲಿ ಆ ಪ್ರಾಂತ್ಯದವರ ಮೀಟಿಂಗು ನಡೆಯಿತು. ಸುಮಾರು 500 ಜನರಿದ್ದರು. ಸೋಮವಾರಪೇಟೆಯಲ್ಲಿ ಮಂಜೂರಾದ ಠರಾವೇ ಸರ್ವಸಮ್ಮತದಿಂದ ಮಂಜೂರಾಯಿತು.

(ಒಬ್ಬ ವಾತ್ಮಿದಾರರಿಂದ.)

ಅಮ್ಮಂದೂರು.

ಭಾಗಮಂಡಲ ನಾಡು ಅಮ್ಮಂದೂರು ಗ್ರಾಮಸ್ಥರ ಮೀಟಿಂಗು ತಾ. 5 ರಲ್ಲಿ ಮೆ. ಜಾ. ಗಣಪಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಸುಮಾರು 50 ಜನರು ಹಾಜರಿದ್ದರು. ಅಧ್ಯಕ್ಷರು, ಮೆ. ಪಟ್ಟಡ ಮುತ್ತಣ್ಣನವರು ಮತ್ತು ಕೆಲವರು ಮೈಸೂರಿಗೆ ಸೇರಿಸಬೇಕೆಂತಲೂ, ಕೆಲವರು ಕೊಡಗನ್ನು ಪ್ರತ್ಯೇಕವಾಗಿ ಇಡಬೇಕೆಂತಲೂ, ಮೆ. ಜಾ. ತಿಮ್ಮಪಯ್ಯನವರು ಕಾಂಗ್ರೆಸಿನ ಚಳವಳಿ ನಿಲ್ಲುವ ವರೆಗೆ ಕಾಯಬೇಕೆಂತಲೂ ಮಾತಾಡಿದರು. ಕಾಂಗ್ರೆಸ್ಸಿನ ಸ್ವಾತಂತ್ರ್ಯ ಹೋರಾಟವು ನಿಲ್ಲುವ ವರೆಗೆ ಕಾಯುವುದು ಒಳ್ಳೇದೆಂಬ ಅಭಿಪ್ರಾಯಕ್ಕೆ ಬಹುಮತದವರು ಒಪ್ಪಿದರು.

ಸುಂಟಿಕೊಪ್ಪ.

ಸುಂಟಿಕೊಪ್ಪ ನಾಡಿನವರ ಮೀಟಿಂಗು ತಾ. 6ರಲ್ಲಿ ಸುಂಟಿಕೊಪ್ಪದಲ್ಲಿ ಮೆ. ಪಟ್ಟಚೆರವಂಡ ಚಂಗಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಸುಮಾರು 100 ಜನರು ನೆರೆದಿದ್ದರು. ಮೆ. ಕುಟ್ಟಂಡ ಕಾರ್ಯಪ್ಪನವರು ಮತ್ತು ಮೆ. ಅಮ್ಮಟಂಡ ಕಾಳಪ್ಪನವರು ಸ್ವರಾಜ್ಯದ ಹೋರಾಟವು ನಿಲ್ಲುವ ವರೆಗೆ ತೀರ್ಮಾನಿಸುವುದು ಒಳ್ಳೆದಲ್ಲವೆಂತಲೂ, ಮೆ. ಪೊಯ್ಯಟಿರ ಪೂವಯ್ಯನವರು ಮತ್ತು ಮುಂಡೇಟಿರ ಚಿಮ್ಮಣ್ಣನವರು ಮೈ

ಸೂರಿಗೆ ಸೇರಬಾರದೆಂತಲೂ, ಮೆ. ಯಂಕನ ಅಣ್ಣಯ್ಯನವರು ಮತ್ತು ಅಪ್ಪಚೆಟ್ಟೋಳಂಡ ಮಾಚಯ್ಯನವರು ಕಾಂಗ್ರೆಸು ಚಳವಳಿ ನಿಲ್ಲುವ ವರೆಗೆ ಯಾವ ತೀರ್ಮಾನವನ್ನು ಮಾಡಬಾರದೆಂತಲೂ, ಭಾಷಣ ಮಾಡಿದ ಮೇಲೆ ಈ ಕೆಳಗಿನ ತೀರ್ಮಾನವು ಸರ್ವಸಮ್ಮತದಿಂದ ಮಂಜೂರಾಯಿತು.

'ಕಾಂಗ್ರೆಸಿಗೂ, ಸರ್ಕಾರಕ್ಕೂ ನಡೆಯುತ್ತಿರುವ ಹೋರಾಟವು ತೀರಿ, ಶಾಸನಭಂಗ ಚಳವಳಿಯು ನಿಂತು, ಎಲ್ಲೆಲ್ಲೂ ಶಾಂತತೆ ನೆಲೆಗೊಂಡಹೊರತು ಕೊಡಗಿನ ಭವಿಷ್ಯತ್ತನ್ನು ಆಲೋಚಿಸುವ ಸಮಯ ಈಗ ಬಂದಿಲ್ಲವೆಂದು ಈ ಸಭೆಯ ಅಭಿಪ್ರಾಯವಾಗಿದೆ."

ಸುಂಟಿಕೊಪ್ಪಲಲ್ಲಿ ತಾ. 9ರಲ್ಲಿ ಮೀಟಿಂಗು ಮಾಡಬಾರದೆಂದು ಮೆ. ಸಿ. ಯನ್. ವೆಂಕಪ್ಪಯ್ಯನವರು ನೋಟೀಸು ಹಂಚಿದ್ದರಿಂದ, ವೀರರಾಜಪೇಟೆ ಮೀಟಿಂಗಿನವರ ಇರಾದೆ ಮೇರೆ ಇನ್ನೊಂದು ಸರ್ವ ಪಕ್ಷೀಯ ಪರಿಷತ್ತನ್ನು ನಡಿಸುವ ಏರ್ಪಾಡು ಮಾಡುವದರಿಂದ ಸದರಿ ಮೀಟಿಂಗನ್ನು ನಡಿಸದೆ ಬಾಕಿ ಮಾಡಲಾಯಿತು.

ಮೂರ್ನಾಡು.

ಮೂರ್ನಾಡಿನವರ ಮೀಟಿಂಗು ಈ ತಾ. 10ರಲ್ಲಿ ಮೆ. ಬಿದ್ದಂಡ ಕಟ್ಟಂಬಯ್ಯನವರ ಅಧ್ಯಕ್ಷತೆಯಲ್ಲಿ ಮೂರ್ನಾಡಿನಲ್ಲಿ ನಡೆಯಿತು. ಸುಮಾರು 200 ಜನರು ಹಾಜರಿದ್ದರು. ಮೆ. ಉಳುವಾರಂಡ ಅಪ್ಪಯ್ಯನವರು, ಮೆ. ಬಿದ್ದಂಡ ತಿಮ್ಮಪ್ಪನವರು ಮತ್ತು ರಾ. ಬ. ಕೋದಂಡ[illegible]ಯಂಡ ಸಿಪ್ಪಯ್ಯನವರು ಮೈಸೂರಿಗೆ ಸೇರುವುದು ಉತ್ತಮವೆಂದೂ, ಮೆ. ಗಗಾಂದ ರಾಮನಾಯಕರವರು, ಬಿದ್ದಂಡ ಜಿ. [illegible]ಕೃಷ್ಣನವರು, ಚೇನಂಡ ಮಾಚಯ್ಯನವರು, ಬಿದ್ದಂಡ ಕಾರ್ಯಪ್ಪನವರು, ಬಿದ್ದಂಡ ಎಂ. ಐಯ್ಯಪ್ಪನವರು, ಪಳಂಗಂಡ [illegible]ಂಗಪ್ಪನವರು, ಪಾಂಡಂಡ ಮಣ್ಣಪ್ಪನವರು, ಕೆಂಬಡಕಂಡ ಅಣ್ಣಪ್ಪನವರು ಮತ್ತು ಮಡೆಯಂಡ ದೇವಯ್ಯನವರು ಮೈಸೂರಿಗೆ ಸೇರಿಸಬಾರದೆಂದೂ ಮಾತಾಡಿದರು. ನಂತರ ಕೆಳಗಿನ ಠರಾವುಗಳು ಬಹುಮತದಿಂದ ಪಾಸು ಮಾಡಲಾದವು.

'ಕೊಡಗು ದೇಶವನ್ನು ಬೇರೆ ಪ್ರಾಂತ್ಯಕ್ಕೆ ಸೇರಿಸದೆ, ಪ್ರತ್ಯೇಕ ಇಟ್ಟು ಇದಕ್ಕೆ ಸಂಪೂರ್ಣ ಪ್ರಜಾ ಜವಾಬ್ದಾರಿ ಸರ್ಕಾರ ಕೊಡಬೇಕು.'

'ಕೊಡಗು ಜನತೆಯಲ್ಲಿ ಹೊಟ್ಟೆಕಿಚ್ಚಿನಿಂದ ವೈಮನಸ್ಯ ಹೆಚ್ಚಿರುವುದರಿಂದ ಎಲ್ಲಾ ಜನರ ವಿಶ್ವಾಸವನ್ನು ಪಡೆದ ಒಬ್ಬ ಮಂತ್ರಿಯನ್ನು ಕಂಡುಹಿಡಿಯುವುದು ಅಸಾಧ್ಯ. ಈ ಪ್ರಾಂತೀಕ ಸರ್ಕಾರವು ಸೈಮನ್ ಕಮಿಷನಿಗೆ ಕೊಟ್ಟ ಅಭಿಪ್ರಾಯದಲ್ಲಿ ಸೂಚಿಸಿರುವುದು ತಪ್ಪು ಕಲ್ಪನೆಯಾಗಿದೆ ಮತ್ತು ನಮ್ಮನ್ನು ಎಂದೆಂದಿಗೂ ಅವರ ಅಧೀನದಲ್ಲಿಟ್ಟುಕೊಳ್ಳಲು ಕೊಟ್ಟ ಈ ಅಭಿಪ್ರಾಯವನ್ನು ಈ ಸಭೆಯು ಖಂಡಿಸುತ್ತದೆ."

ವಿಜ್ಞಾಪನೆ.

ತಾ. 23—10—1932ರಲ್ಲಿ ಮಡಿಕೇರಿಯಲ್ಲಿ ನಡೆದ ವಿಧವಿಧದ ಅಭಿಪ್ರಾಯದ ಜನರ ಮೀಟಿಂಗನ್ನು ತಾ. 13—11—32 ಕ್ಕೆ ಮುಂದರಿಸಿ ಇಡಲಾಗಿದೆಯೆಂತಲೂ ಆ ಸಂಧ್ಯೆ ದೇಶದ ಅಭಿಪ್ರಾಯ ತೆಗೆದುಕೊಳ್ಳಬೇಕೆಂತಲೂ ತೀರ್ಮಾನವಾಗಿತ್ತು. ದಕ್ಷಿಣ ಕೊಡಗಿನಲ್ಲಿ ಈಗ ರಾಜಕೀಯ ಭವಿಷ್ಯತ್ತಿನ ವಿಷಯ ಅಭಿಪ್ರಾಯ ಕೊಡಬಾರದೆಂತ ಕಾಂಗ್ರೆಸಿನವರು ಬೋಧಿಸಿದ್ದರಿಂದ ಜನರು ತಮ್ಮ ಅಭಿಪ್ರಾಯವನ್ನು ಸರಿಯಾಗಿ ಕೊಡಲಿಲ್ಲವಾದ್ದರಿಂದಲೂ ವೀರರಾಜಪೇಟೆ ಮೀಟಿಂಗಿನಲ್ಲಿ ಪುನಃ ಇನ್ನೊಂದು ಸರ್ವ ಪಕ್ಷ ಪರಿಷತ್ತು ಮಾಡಬೇಕೆಂತ ತೀರ್ಮಾನವಾದ್ದರಿಂದಲೂ ತಾ. 13—11—32ರಲ್ಲಿ ಮಡಿಕೇರಿಯಲ್ಲಿ ಸರ್ವ ಪಕ್ಷ ಪರಿಷತ್ತು ನಡಿಸಲಾಗುವುದಿಲ್ಲ. ಪುನಃ ಯಾವ ತಾರೀಕಿನಲ್ಲಿ ಸರ್ವ ಪಕ್ಷ ಪರಿಷತ್ತು ನಡಿಸಲಾಗುವುದೆಂದು ಶೀಘ್ರದಲ್ಲೇ ತಿಳಿಸಲಾಗುತ್ತದೆ.

ಮಡಿಕೇರಿ,
ತಾ. 11—11—32. ಸಿ. ಎನ್. ವೆಂಕಪಯ್ಯ.

ಸರ್ಕ್ಯುಲಾರ್.

ಲಿಮಿಟೆಡ್ ಸಹಕಾರ ಸಂಘಗಳು ಸೆಂಟ್ರಲ್ ಬ್ಯಾಂಕಿಗೆ ಸಾಲಕ್ಕೆ ಅರ್ಜಿ ಬರೆದುಕೊಳ್ಳುವಾಗ ಅವರ ಅರ್ಜಿ ಫಾರಂನಲ್ಲಿ ಸಂಘಕ್ಕೆ ಸಾಲದ ಬಗ್ಗೆ ದರಕಾಸ್ತು ಮಾಡಿದವರ ಪಟ್ಟಿಯಲ್ಲಿ ಅಂಥಾ ದರಕಾಸ್ತುದಾರರ ಕಸಬನ್ನೂ, ಮೊದಲು ಸಾಲ ಪಡಕೊಂಡಿದ್ದವರು ಅಂಥಾ ಸಾಲಗಳೇನಾದರೂ ಬಾಕಿ ಇದೆಯೋ ಯಾ ಇಲ್ಲವೋ ಎಂಬದನ್ನೂ ಮತ್ತು ಸ್ಯೂರಿಟಿ ಸಾಲಗಳೇನಾದರೂ ಇದೆಯೋ ಯಾ ಇಲ್ಲವೋ ಎಂಬದನ್ನೂ ಸಹ ತಪಶೀಲ್ ನಮೂದಿಸಬೇಕೆಂತ ಡೈರೆಕ್ಟರುಗಳು ತಾರೀಕು 29—10—1932ರ ಮೀಟಿಂಗಿನಲ್ಲಿ ಸೂಚಿಸುತ್ತಾರೆ. ಇನ್ನು ಮುಂದೆ ಲಿಮಿಟೆಡ್ ಸಂಘಗಳು ಬ್ಯಾಂಕಿಗೆ ಸಾಲಕ್ಕೆ ಅರ್ಜಿ ಬರೆದುಕೊಳ್ಳುವಾಗ ದರಕಾಸ್ತುದಾರರ ಮೇಲ್ಕಂಡ ಸೂಚನೆಗಳನ್ನು ಪೂರ್ತಿಯಾಗಿ ಬರೆದು ಕಳುಹಿಸದೆ ಹೋದರೆ ಅಂಥಾ ಸಂಘಗಳಿಗೆ ಸಾಲ ಮಂಜೂರ್ಮಾಡಲು ಆಗುವುದಿಲ್ಲವೆಂಬ ಸಂಗತಿ ನಿಮಗೆ ಈ ಮೂಲಕ ತಿಳಿಸಲಾಗಿದೆ.

ಕೋ-ಆಪರೇಟಿವ್ ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್,
ಮಡಿಕೇರಿ, ತಾ: 10—11—1932.
ಸಿ. ಎನ್. ವೆಂಕಪ್ಪಯ್ಯ, (ಗೌರವ ಕಾರ್ಯದರ್ಶಿ.)

ಕೊಡಗಿನಲ್ಲಿ ಶಾಸನಭಂಗ.

ಸುಭೇದಾರರ ದರ್ಜೆಯಲ್ಲಿ ಸತ್ಯಾಗ್ರಹಿ! ವೀರರಾಜಪೇಟೆ ಕೋರ್ಟಿನಲ್ಲಿಯೂ, ಪೇಟೆಯಲ್ಲಿಯೂ ದಸ್ತಗಿರಿ.

ಹಸ್ತಪತ್ರ ಹಂಚಿದ್ದಕ್ಕೆ ಆರು ತಿಂಗಳ ಬಂಧನ.

ಈ ತಾ. 9ನೇ ಬುಧವಾರ ಶ್ರೀಯುತ ತೀತಿರ ಕಾರ್ಯಪ್ಪನವರು ಸ್ವದೇಶಿ ಸಾಮಾನುಗಳನ್ನು ಬಹಿಷ್ಕರಿಸಿರಿ ಎಂಬ ಹಸ್ತಪತ್ರಿಕೆಗಳನ್ನು ಸಂತೆಯಲ್ಲಿ ಹಂಚಿದಕ್ಕಾಗಿ ದಸ್ತಗಿರಿ ಮಾಡಲ್ಪಟ್ಟರು. ಅದೇ ದಿನ ಶ್ರೀಯುತ ಮಲ್ಲೇಂಗಡ ಜಂಗಪ್ಪನವರು ದಕ್ಷಿಣ ಕೊಡಗು ಸುಭೇದಾರರ ಕೋರ್ಟಿಗೆ ಹೋಗಿ, ಅವರ ದರ್ಜೆಯಲ್ಲಿ ಕುಳಿತುಕೊಂಡು ಸುಭೇದಾರನೆಂದು ಹೇಳುತ್ತಾ, ಕೂತಲ್ಲಿಂದ ಏಳದೆ ರಾಷ್ಟ್ರೀಯ ಧ್ವಜವನ್ನೆತ್ತಿ, ಜಯಘೋಷ ಮಾಡಿದರೆಂದೂ ತಾನೇ ಸುಭೇದಾರನೆಂದು ಹೇಳುತ್ತಾ, [illegible] ಸುಭೇದಾರರು ಬಂದಾಕ್ಷಣ ಕೂಡಲೇ ಅವರು ಕೈದು ಮಾಡಲ್ಪಟ್ಟರೆಂದೂ ವರ್ತಮಾನ. ಅವರಿಬ್ಬರ ವಿಚಾರವು ಮರುದಿನ ಮುನ್ಸೀಫ್ ಮೇಜಿಸ್ಟ್ರೇಟರ ಕೋರ್ಟಿನಲ್ಲಿ ನಡೆದು, ಮೆ. ಮಲ್ಲೇಂಗಡ ಜಂಗಪ್ಪನವರಿಗೆ 5 ತಿಂಗಳು ಸಜೆಯು ಮತ್ತು 40 ರೂ. ಜುಲುಮಾನೆಯು, ಜುಲುಮಾನೆ ಕೊಡದೆ ತಪ್ಪಿದರೆ ಒಂದು ತಿಂಗಳು ಹೆಚ್ಚಿನ ಸಜೆಯೂ, ಮೆ. ತೀತಿರ ಕಾರ್ಯಪ್ಪನವರಿಗೆ 3 ತಿಂಗಳು ಸಜೆಯು ಮತ್ತು 20 ರೂ. ಜುಲುಮಾನೆಯು, ಜುಲುಮಾನೆ ಕೊಡದೆ ತಪ್ಪಿದರೆ ಒಂದು ತಿಂಗಳು ಹೆಚ್ಚಿನ ಸಜೆಯೂ ವಿಧಿಸಲಾಯಿತು. ಮಾರು ದಿನ ಅವರಿಬ್ಬರೂ ಕಣ್ಣಾನೂರು ಜೈಲಿಗೆ ಕಳುಹಲ್ಪಟ್ಟರು.

ತಾ. 30—10—32ರಲ್ಲಿ ಗೋಣಿಕೊಪ್ಪಲಲ್ಲಿ ದಸ್ತಗಿರಿ ಮಾಡಿ ಮಡಿಕೇರಿಗೆ ತರಲ್ಪಟ್ಟ ಶ್ರೀಯುತ ಪೂಜಾರಿ ರಾಮಪ್ಪನವರಿಗೆ ತಾ. 5ರಲ್ಲಿ ಸಬ್ ಜಡ್ಜರು ಕಾಂಗ್ರೆಸಿನ ಹಸ್ತಪತ್ರ ಹಂಚಿದಕ್ಕಾಗಿ 6 ತಿಂಗಳು ಕಠಿಣ ಸಜೆ ವಿಧಿಸಿದರು. ಅದೇ ದಿನ ಮೆ. ರಾಮಪ್ಪನವರು ಕಾಲ್ನಡಿಗೆಯಲ್ಲಿ ವೀರರಾಜಪೇಟೆಗೆ ಕಳುಹಿಸಲ್ಪಟ್ಟರೆಂತಲೂ, ಅಲ್ಲಿಂದ ಕಣ್ಣಾನೂರು ಜೈಲಿಗೆ ಬಸ್ಸಿನಲ್ಲಿ ಕಳುಹಿಸಲ್ಪಟ್ಟರೆಂತಲೂ ಸುದ್ದಿ.

ಒಳದೇಶ.

ಶ್ರೀಮಂಗಲದ [illegible]ಯಲ್ಲಿ ಪ್ಲೇಗು ಇಲಿಗಳು ಸಾಯುತ್ತಿವೆಯೆಂದು ವರ್ತಮಾನ.

ಕಳೆದ ಸೆಪ್ಟಂಬರು ತಿಂಗಳಲ್ಲಿ ಕೊಡಗಿನಲ್ಲಿ 276 ಮರಣಗಳೂ 376 ಜನನಗಳೂ ಆದವೆಂದು ಗಜೆಟ್ಟಿನಲ್ಲಿ ಪ್ರಕಟವಾಗಿದೆ.

ಮದ್ರಾಸು ಚಂದ್ರಭಾನ್ ಕಂಪೆನಿಯು 'ರತಿಮನ್ಮಥ ರಹಸ್ಯ' ವೆಂಬ ಪ್ರಕಟಣೆಯನ್ನು ಈ ಸಂಚಿಕೆಯ ಪುರವಣಿಯಾಗಿ ಕಳುಹಿಸಿರುತ್ತೇವೆ.

ಈ ವಾರ ಮಡಿಕೇರಿಯಲ್ಲಿ ಮಳೆ ಕಡಿಮೆ. 2—3 ದಿವಸಗಳಿಂದ ಮಳೆಯೇ ಇಲ್ಲ. ತಾ. 5ರಿಂದ ಇಂದಿನ ವರೆಗೆ 73 ಸೆಂಟ್ ಮಳೆ ಮಾತ್ರ ಬಿದ್ದಿದೆ.

ದಕ್ಷಿಣ ಕೊಡಗಿನ ಸುಭೇದಾರ ಮೇಜಿಸ್ಟ್ರೇಟರಾದ ಮೆ. ಕೋದಿರ ಉತ್ತಪ್ಪನವರಿಗೆ ಈ ವರೆಗೆ ಇದ್ದ ಫಸ್ಟ್ ಕ್ಲಾಸ್ ಮೇಜಿಸ್ಟ್ರೇಟರ ಅಧಿಕಾರವು ತೆಗೆಯಲ್ಪಟ್ಟಿದೆ.

ಈ ತಾ. 12ನೇ ಶನಿವಾರ [illegible] ಶ್ರೀ ಭಗವತಿ[illegible] ಐಯ್ಯಪ್ಪ ದೇವಸ್ಥಾನದಲ್ಲಿ ಮಹಾಪೂಜೆಯೂ, ಸಾರ್ವಜನಿಕ ಸಭೆಯೂ ನಡೆಯುವದೆಂದು ತಿಳಿಯಬರುತ್ತದೆ.

ಕೊಡಗು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರವರ ಆಫೀಸಿನ ಎದುರಿನಲ್ಲಿ ಡಿಸೆಂಬರು ತಾ. 2ರಲ್ಲಿ 11 ಬಂಟಕೊಳವಿನ ಕೇಪು ಕೋವಿಗಳೂ, 2 ಜೋಡುಕೊಳವಿನ ಕೇಪು ಕೋವಿಗಳೂ ಮತ್ತು 1 ಜೋಡುಕೊಳವಿನ ತೋಟದ ಕೋವಿಯೂ ಹರಾಜು ಮಾಡಲ್ಪಡುವದೆಂದು ತಿಳಿಯುತ್ತೇವೆ.

ಟರಾವಿ ಶಾಲೆಗಳ ಕಂತುಗಳನ್ನು ಮುಂದರಿಸಲು ಕೇಳಿಕೊಳ್ಳುವ ಅರ್ಜಿಗಳನ್ನು ಪ್ರತಿ ವರ್ಷವೂ ಫೆಬ್ರವರಿ ಅಖೈರು ಒಳಗೆ ಸುಭೇದಾರರ ಗ್ರೇಡಿನ ಮತ್ತು ಅದರ ಮೇಲಿನ ಗ್ರೇಡಿನ ಉದ್ಯೋಗಸ್ಥರಿಗೆ ಕೊಡತಕ್ಕದ್ದೆಂತಲೂ, ಅಂಥಾ ಅರ್ಜಿಗಳಿಗೆ ಸ್ಟಾಂಪು ಹಚ್ಚುವ ಅವಶ್ಯಕತೆ ಇಲ್ಲವೆಂತಲೂ ಕಮಿಷನರವರು ಹೊಸನಿಬಂಧನೆ ಮಾಡಿರುವರು.

ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನದ 18ನೇ ಅಧಿವೇಶನವನ್ನು ಬರುವ ಡಿಸೆಂಬರಿನಲ್ಲಿ ಮಡಿಕೇರಿಯಲ್ಲಿ ಜರುಗಿಸುವ ಬಗ್ಗೆ ಸ್ವಾಗತ ಏರ್ಪಾಡು ಮಾಡುವುದನ್ನು ಕುರಿತು ಆಲೋಚಿಸಲು ಈ ತಾ. 14ನೇ ಸೋಮವಾರ ಮಧ್ಯಾಹ್ನ 3½ ಗಂಟೆಗೆ ಸೆಂಟ್ರಲ್ ಹೈಸ್ಕೂಲ್ ಹಾಲ್‌ನಲ್ಲಿ ಒಂದು ಪಬ್ಲಿಕ್ ಮೀಟಿಂಗು ನಡೆಯುವದೆಂದು ತಿಳಿಯಬರುತ್ತದೆ.

ಕಳೆದ ವಾರ ಸಿದ್ದಾಪುರದ [illegible] ಗ್ರಾಮದಲ್ಲಿ ರಾತ್ರಿ ಸಮಯ ಅಡ್ಡಲಾಗಿ ಈಚೆ ದಾಟುವ ಒಂದು ಕಾಡುಕುರಿಯನ್ನು ದಡದಲ್ಲಿ ನಿಂತುಕೊಂಡಿದ್ದ ಮೂರು ಜನರು ದೊಣ್ಣೆಗಳಿಂದ ಹೊಡೆದು ಗಾಯಮಾಡಲು ಅದು ಪುನಃ ಹೊಳೆಗೆ ಹಾರಿಬಿತ್ತೆಂತಲೂ ಅದನ್ನು ಎಳೆದುಕೊಂಡು ಬರಲು ಕಾಸರಗೋಡು ತೋಟದ ಆಳೊಬ್ಬನು ನೀರಿನಲ್ಲಿ ಧುಮುಕಿದವನ ಪತ್ತೆ ಇಲ್ಲದಾಗಿದೆಯೆಂತಲೂ ವರ್ತಮಾನ.

ವೀರರಾಜಪೇಟೆ ಮುನ್ಸಿಪಾಲಿಟಿಯಲ್ಲಿ, ಕುರಿ ಮನೆಯಲ್ಲಿ ಕಟಾವು ಮಾಡುವ ಪ್ರತಿಯೊಂದು ಕುರಿ ಯಾ ಆಡು ಒಂದಕ್ಕೆ 2 ಪೈಯಿಂದ 3 ಪೈಗೂ, ಹೊಟೇಲು ಒಂದಕ್ಕೆ ಈಗಿರುವ 5 ರೂಪಾಯಿಯಿಂದ 1ನೇ ತರಗತಿಯ ಹೊಟೇಲಿಗೆ 15 ರೂ. ಗೂ ಮತ್ತು 2ನೇ ತರಗತಿಯ ಹೋಟೇಲಿಗೆ 8 ರೂ. ಗೂ, ರೊಟ್ಟಿ ಕಾರ್ಖಾನೆ ಒಂದಕ್ಕೆ 15 ರೂ ಮತ್ತು ಸೋಡಾ ಕಾರ್ಖಾನೆಗೆ 5ರೂ. ಯಿಂದ 15 ರೂ. ಗೂ ತೆರಿಗೆ ಏರಿಸಲಾಗಿದೆ.

ವೀರರಾಜಪೇಟೆ ಮುನ್ಸೀಫರಾದ ಮೆ. ಯನ್. ಮುದ್ದಪ್ಪನವರಿಗೆ ಫಸ್ಟ್ ಕ್ಲಾಸ್ ಮೇಜಿಸ್ಟ್ರೇಟರ ಅಧಿಕಾರ ಕೊಟ್ಟಿರುವುದಲ್ಲದೆ, ಇಂಡಿಯನ್ ಪೀನಲ್ ಕೋಡಿನ [illegible] ಆಕ್ಟಿನ ಸೆಕ್ಷನ್ 8ರ ಸಬ್‌ಸೆಕ್ಷನ್ (1)ರ ಮೇರೆಯೂ, ಕ್ರಿ. ಪ್ರೊ. ಕೋಡಿನ 108 ಮತ್ತು 110ನೇ ಸೆಕ್ಷನುಗಳ ಮೇಲೆ ಒಳ್ಳೇ ನಡತೆಗೆ ಜಾಮೀನು ಕೇಳುವಂತೆಯೂ ಮತ್ತು ಇ. ಪಿ. ಕೋಡಿನ 124 ಎ ಸೆಕ್ಷನಿನ ಮೇರೆಯೂ ಕೇಸುಗಳನ್ನು ವಿಚಾರಿಸುವ ಅಧಿಕಾರವು ಕೊಡಲಾಗಿದೆ.

ಕೊಡ್ಲಿಪೇಟೆ ಬಳಿ ಅಕ್ಕಸಾಲಿ ಮುತ್ತಚಾರಿಯು ಒಬ್ಬ ಹುಡುಗಿಯನ್ನು ಕೊಲೆ ಮಾಡಿದನೆಂಬ ಕೇಸು ಸೆಷನ್ ಕೋರ್ಟಿನಲ್ಲಿ ವಿಚಾರ ನಡೆದು, ಜ್ಯೂರಿಗಳು ಕೊಂದವನು ಮುತ್ತಚಾರಿಯೇ ಆದರೂ ಅವನಿಗೆ ಬುದ್ಧಿ ಸರಿ ಇಲ್ಲದೆ ಅವನು ಮಾಡಿದ್ದೇನೂ ಅವನಿಗೆ ಗೊತ್ತಿರಲಿಲ್ಲವಾದ ಕಾರಣ ಅವನನ್ನು ಬಿಡುಗಡೆ ಮಾಡಬೇಕೆಂದು ಸ್ಥಳೀಯ ಸರ್ಕಾರದ ತೀರ್ಮಾನ ಬರುವ ವರೆಗೆ ಅವನನ್ನು ಮಡಿಕೇರಿ ಜೈಲಿನಲ್ಲಿ ಇಡುವಂತೆ ಹುಕುಂ ಆಗಿದೆಯೆಂದು ವರ್ತಮಾನ.

ಈ ತಾ. 8ರಲ್ಲಿ ಮಡಿಕೇರಿ ಕಾನ್ವೆಂಟ್ ಹೈಸ್ಕೂಲಿನ ವಾರ್ಷಿಕೋತ್ಸವವು ಕಮಿಷನರವರ ಅಧ್ಯಕ್ಷತೆಯಲ್ಲಿ ಜರಗಿತು. ಕಮಿಷನರವರು 'ಲೇಡಿ ಇರ್ವಿನ್ ಹಾಲ್' ಎಂಬ ಹೊಸ ಕಟ್ಟಡವನ್ನು ತೆರೆದರು. ಮೆ. ಬಿ. ಯಸ್. ಕುಶಾಲಪ್ಪನವರು ಹೊಸ ಕಟ್ಟಡಕ್ಕೆ ಧನ ಸಹಾಯಮಾಡಿದವರನ್ನು ವಂದಿಸಿದರು. ಕಮಿಷನರವರ ಪತ್ನಿಯವರು ವಿದ್ಯಾರ್ಥಿನಿಯರಿಗೆ ಬಹುಮಾನಗಳನ್ನು ಹಂಚಿದರು. ಮನೋಹರವಾದ ನಾಟಕವೂ ಅಭಿನಯಿಸಲ್ಪಟ್ಟಿತೆಂದು ತಿಳಿಯಬರುತ್ತದೆ.

ಹಿಂದೂದೇಶ.

ಈ ತಾ. 8ರಲ್ಲಿ ಮಲಬಾರಿನ ರಾಜಕೀಯ ಪರಿಷತ್ತಿನ ಸಂಬಂಧ ಕಾಂಗ್ರೆಸಿನ 15 ಜನರು ದಸ್ತಗಿರಿ ಮಾಡಲ್ಪಟ್ಟಿರುವರಂತೆ.

ಪಂಡಿತ ಜವಾಹರಲಾಲ್ ನೆಹರುರವರ ಪತ್ನಿಯವರಿಗೆ ರಾಯಿಪುರ ಜೈಲು ಸರಿಯಾಗಿದೆ [illegible] ಪ್ರಯಾಣಕ್ಕೆ ಯೋಗ್ಯರಾದ ಕೂಡಲೆ ಅವರನ್ನು ಅಲ್ಲಹಾಬಾದಿನಿಂದ ಕಲ್ಕತ್ತಾಕ್ಕೆ ಚಿಕಿತ್ಸೆ ಬಗ್ಗೆ ಸಾಗಿಸುವರಂತೆ.

ಮಲಬಾರಿನ ಗುರುವಾಯೂರು ದೇವಸ್ಥಾನವನ್ನು ಹರಿಜನರ ಪ್ರವೇಶಕ್ಕೆ ಜನವರಿ 1ರೊಳಗೆ ಬಿಡದೆ ಹೋದರೆ ತಾವು ಉಪವಾಸವ್ರತವನ್ನು ಕೈಕೊಳ್ಳಬೇಕಾಗುವದೆಂದು ಮಹಾತ್ಮ ಗಾಂಧಿಯವರು ಸೂಚಿಸಿರುವರು.

ಬೊಂಬಾಯಿಯಲ್ಲಿ ಕಾಂಗ್ರೆಸಿನವರು ತಮ್ಮ ಪ್ರಚಾರ ಕಾರ್ಯಕ್ಕಾಗಿ ಉಪಯೋಗಿಸುತ್ತಿರುವ 'ವಯರ್ ಲೆಸ್ ಟ್ರಾನ್ಸ್‌ಮಿಟ್ಟಿಂಗ್ ಸೆಟ್'ನ್ನು ಪೋಲೀಸಿನವರಿಗೆ ಕಂಡುಹಿಡಿಯಲಿಕ್ಕೆ ಸಾಧ್ಯವಾಗಲಿಲ್ಲವೆಂದು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಪಾರ್ಲಿಮೆಂಟಿನಲ್ಲಿ ಹೇಳಿದರು.

ಡಾ. ಅನ್ಸಾರಿಯವರು ಹೃದಯ ರೋಗಕ್ಕಾಗಿ ಜರ್ಮನಿಯಲ್ಲಿ ಚಿಕಿತ್ಸೆ ಹೊಂದುತ್ತಿರುವರು. ಅವರ ಡಾಕ್ಟರರ ಸೂಚನೆ ಮೇರೆ ಆಯಾಸವನ್ನುಂಟು ಮಾಡುವ ಕೆಲಸಗಳನ್ನು ಬಿಟ್ಟು ವಿಶ್ರಾಂತಿ ತೆಗೆದುಕೊಳ್ಳಲು ನಿಶ್ಚಯಿಸಿರುವರು. ಆದರೂ ತಮ್ಮ ಜೀವನದ ಕೊನೆಯ ಭಾಗವನ್ನು ಡೆಲ್ಲಿಯಲ್ಲಿ ಸ್ಥಾಪಿತವಾಗಿರುವ ಮುಸ್ಲಿಂ ವಿಶ್ವ ವಿದ್ಯಾಲಯದ ಕೆಲಸದಲ್ಲಿ ಕಳೆಯಲಿರುವರಂತೆ.

ಪ್ರಸಿದ್ಧ ಪತ್ರಿಕೆ.

ಇದರಿಂದ ಶ್ರೀ ಯಂ. ಪಿ. ಲೋಬೋರವರ ಸಮಸ್ತ ಜನರಿಗೂ ತಿಳಿಸುವದೇನೆಂದರೆ—ನನಗೂ ನನ್ನ ತಂದೆ ಮರಿಯನ್ ಲೋಬೋಗೂ ಒಂದೇ ಗೃಹಕೃತ್ಯದಲ್ಲಿರಲು ಸಾಧ್ಯವಿಲ್ಲದ ಕಾರಣ ತಾ. 30—8—1932ರಲ್ಲಿ ಆದ ಒಪ್ಪಂದ ಚೀಟಿಯ ಪ್ರಕಾರ ನಾನು ಬೇರೆ ಇದ್ದೇನೆ. ಈಗ ನನ್ನ ತಾಬೆಯ ಸ್ವಾಧೀನದಲ್ಲಿರತಕ್ಕ ಸ್ಥಿರ, ಜಂಗಮ, ಜಮೀನು, ಮರಮಟ್ಟು, ವ್ಯಾಪಾರ, ಮನೆ ವಸ್ತುಗಳನ್ನು ವಿಕ್ರಯ, ಗಿರ್ವಿ ಸ್ವಾಧೀನ ಭೋಗ್ಯವಾಗಲಿ ಯಾ ಬೇರಾವುದೇ ಹೆಸರಿಗೆ ವಿಲೇವಾರಿ ಮಾಡುವ ಸಂಗತಿಯು ನನಗೆ ತಿಳಿದು ಬಂದಿರುವದರಿಂದ ಮೇಲ್ಕಂಡ ಮರಿಯನ್ ಲೋಬೋರ ಸ್ವತ್ತುಗಳಿಗೆ ನಾನು ಒಬ್ಬ ನ್ಯಾಯವಾದ ಹಕ್ಕುದಾರನಾಗಿರುವದರಿಂದ ಕಡಮುಳ್ಳೂರು ಗ್ರಾಮದಲ್ಲಿರುವ ಸದರಿ ಮರಿಯನ್ ಲೋಬೋರ ಸ್ವತ್ತುಗಳನ್ನು ಯಾರಾದರೂ ವಿಕ್ರಯ ಗಿರ್ವಿ ಸ್ವಾಧೀನ ಭೋಗ್ಯವಾಗಲಿ ಯಾ ವಿಲೇವಾರಿಗಳೇ ನನ್ನ ಅನುಮತಿ ವಿನಹ ಮಾಡಿಕೊಂಡಲ್ಲಿ ಅಂಥವರಿಗೆ ಆದ ಎಷ್ಟು ಮೊತ್ತಕ್ಕೂ ಹೊಣೆಗಾರನಾಗುವದಿಲ್ಲ ಎಂಬುದನ್ನು ಈ ಮೂಲಕ ತಿಳಿಸಿದ್ದೇನೆ.

ಯಂ. ಪಿ. ಲೋಬೋ.

ಕೊಡಗು.

ಸನ್ ೧೯೩೨ನೇ ಇಸವಿ

ನವೆಂಬರ್ ೧೮ನೇ ಶುಕ್ರವಾರ.

ಪ್ರೆಸ್ ಆರ್ಡಿನೇನ್ಸ್

ಜಾರಿಯಲ್ಲಿರುವ ಪರಿವಿಗೆ

ಇವು

ಅಗ್ರಲೇಖನ

ನಮ್ಮ

ಪ್ರಕಟಿಸುವುದಿಲ್ಲ.

ಇಂಡಿಯಾ ಲೀಗಿನ ಪ್ರತಿನಿಧಿಪ್ರೇಷಣ.

ಅವರ ಪ್ರವಾಸದ ನೆನಪುಗಳು.

ಇಂಡಿಯಾ ಲೀಗಿನ ಪ್ರತಿನಿಧಿ ಪ್ರೇಷಣದವರು (ಡೆಲಿಗೇಶನ್) ತಾ. 7ರಲ್ಲಿ ಬೊಂಬಾಯಿಯಿಂದ ಇಂಗ್ಲೆಂಡಿಗೆ ವಾಪಸು ಹೊರಟರು. ಇಡೀ ಇಂಡಿಯಾದಲ್ಲಿ ಅವರ ಪ್ರವಾಸಕ್ಕೆ 83 ದಿನಗಳು ಹಿಡಿದವು. ಅವರು ಶಾಸನಭಂಗ ಚಳವಳಿಯನ್ನು ಕುರಿತು ಮಾಹಿತಿಯನ್ನು ಸಂಗ್ರಹಿಸುತ್ತಿದ್ದಾಗ ಎಲ್ಲಾ ರಾಜಕೀಯ ಮತ್ತು ರಾಜಕೀಯವಲ್ಲದ ಪಾರ್ಟಿಗಳನ್ನು ಭೇಟಿಮಾಡಿದಲ್ಲದೆ, ಸರ್ಕಾರಿ ವಿವರಣೆಯನ್ನು ಪಡೆದುಕೊಂಡರು.

ಸ್ವರಾಜ್ಯವು ದೊರೆತ ನಂತರ ಸರ್ಕಾರಿ ಅಧಿಕಾರವನ್ನು ಹಂಚುವ ವಿಷಯದಲ್ಲಿ ಹಲವು ತರದ ಅಭಿಪ್ರಾಯಗಳಿದ್ದರೂ ಸ್ವರಾಜ್ಯಪಡೆಯುವ ಆಶೆಯಲ್ಲಿಯೂ, ದಬ್ಬಾಳಿಕೆ ಮತ್ತು ಆರ್ಡಿನೇನ್ಸುಗಳನ್ನು ವಿರೋಧಿಸುವುದರಲ್ಲಿಯೂ ಒಗ್ಗಟ್ಟು ಇತ್ತೆಂಬುದು ಅವರಿಗೆ ಚೆನ್ನಾಗಿ ಮನದಟ್ಟಾಗಿದೆ. ಸರ್ಕಾರಿ ಉದ್ಯೋಗಸ್ಥರ ಅಭಿಪ್ರಾಯಗಳನ್ನೇ ಪ್ರತಿಧ್ವನಿಮಾಡುತ್ತಿರುವವರಲ್ಲದೆ ಬಾಕಿ ಎಲ್ಲಾ ಜನರೂ ಬ್ರಿಟಿಷ್ ಮತ್ತು ಇಂಡಿಯಾದ ಸರ್ಕಾರಗಳ ಸದುದ್ದೇಶಗಳಲ್ಲಿ ವಿಶ್ವಾಸವಿಲ್ಲದವರಾಗಿರುವರೆಂದು ಅವರ ಅಭಿಪ್ರಾಯ.

ಎಲ್ಲಾದಕ್ಕಿಂತಲೂ ಬಲವಾದ ರಾಜಕೀಯ ಪಾರ್ಟಿಯೇ ಕಾಂಗ್ರೆಸು.

ಇಂಡಿಯಾದಲ್ಲಿ ಕಾಂಗ್ರೆಸೇ ಎಲ್ಲಾದಕ್ಕಿಂತಲೂ ಹೆಚ್ಚು ಶಕ್ತಿಯುಳ್ಳ ರಾಜಕೀಯ ಪಾರ್ಟಿಯೆಂತಲೂ ಮತ್ತು ಅದರ ಆಟಂಕವಿಲ್ಲದ ಯಾವ ಚುನಾವಣೆಯಾಗಲಿ ನಡೆಯಲಾರದೆಂದೂ ಈ ಡೆಲಿಗೇಶನಿನ ಸದಸ್ಯರಿಗೆ ದೃಢವಾಗಿದೆ. ಕಾಂಗ್ರೆಸಿನವರ ಸಹಕಾರವಿಲ್ಲದೆ ಯಾವ ರಚನೆಯನ್ನೂ ನಡಿಸಲು ಸಾಧ್ಯವಿಲ್ಲವೆಂದು ಅವರು ಹೇಳಿದರು. ಉದ್ಯೋಗಸ್ಥರೂ ಕೂಡ ಈ ಅಭಿಪ್ರಾಯವುಳ್ಳವರಾಗಿರುವರು.

ಸ್ವರಾಜ್ಯದ ಅರ್ಥವು ಗ್ರಾಮಸ್ಥರಿಗೆ ಗೊತ್ತಾಗಿದೆ.

ಅವರು ತುಂಬಾ ಪರಿಚಯಮಾಡಿದ ಗ್ರಾಮಾಂತರಗಳ ಸ್ಥಿತಿಯು ಭಯಂಕರವಾದ ಬಡತನದ್ದೂ, ಕುಗ್ಗಿಸುವಂಥ ತೆರಿಗೆ, ಸಾಲ ಮತ್ತು ಅವಿದ್ಯೆಗಳುಳ್ಳದ್ದೂ ಆಗಿದೆ. ಹಿಂದೀ ಗ್ರಾಮಸ್ಥನ ಮೇಲೆ ಸಾಧಾರಣವಾಗಿ ಹರಡಿರುವ ಕಥೆಗಳನ್ನು ಅವನು ಸುಳ್ಳು ಮಾಡಿರುವನು. ಅವನು ತನ್ನ ಬಡ ಸ್ಥಿತಿಯನ್ನೂ, ಅದರ ಆರ್ಥಿಕ ಮತ್ತು ರಾಜಕೀಯ ಕಾರಣಗಳನ್ನೂ ಚೆನ್ನಾಗಿ ತಿಳಿದುಕೊಂಡು, ಸ್ವರಾಜ್ಯದ ಹೋರಾಟವನ್ನು ಜಯವಾಗುವ ವರೆಗೂ ನಡಿಸಬೇಕೆಂದು ಅಂತುಕೊಂಡಿರುವನು. ಜನ ಸಮುದಾಯವೂ, ಗ್ರಾಮಸ್ಥರೂ ಸ್ವಾತಂತ್ರ್ಯದ ಹೋರಾಟದ ಅರ್ಥವನ್ನು ತಿಳಿದುಕೊಂಡು, ಕಾಂಗ್ರೆಸಿನವರು ತಮ್ಮ ಸ್ನೇಹಿತರೆಂದು ಕಾಣುತ್ತಿರುವರು.

ಪ್ರತಿಯೊಂದು ಗ್ರಾಮದಲ್ಲಿಯೂ ಮಹಾತ್ಮರ ಹೆಸರು.

ಆರ್ಡಿನೇನ್ಸುಗಳಿಂದ ಗ್ರಾಮಸ್ಥರ ಮೇಲೆ ಪರಿಣಾಮವೇನೂ ಆಗಿರುವುದಿಲ್ಲವೆಂಬುದು ನಿಜವಲ್ಲ; ಗ್ರಾಮಸ್ಥರು ಖರ್ಚಿಗೆ ಕೊಡಬೇಕಾದಂಥ (ಪ್ಯುನಿಟಿವ್) ತಿಕ್ಷೆಯ ಪೋಲೀಸು ಕೆಲವು ಗ್ರಾಮ ನಿವಾಸಿಗಳ ಜೀವನವನ್ನು ಸಹಿಸಲಾರದಂತೆ ಮಾಡಿದೆ. ಪ್ರತಿಯೊಂದು ಗ್ರಾಮದಲ್ಲಿಯೂ ಗಾಂಧಿಜೀಯವರ ಹೆಸರು ಜನರಿಗೆ ಗೊತ್ತಿದೆ ಮತ್ತು ಅವರನ್ನು ತುಂಬಾ ಗೌರವಿಸುತ್ತಾರೆ. ಗುಜರಾತಿನಲ್ಲಿ ಮಿ. ವಲ್ಲಭಭಾಯಿ ಪಟೇಲರವರ ಹೆಸರು ಮತ್ತು ಸಂಯುಕ್ತ ಪ್ರಾಂತ್ಯದಲ್ಲಿ ಪಂಡಿತ ಜವಾಹಿರ್‌ಲಾಲ್ ನೆಹರುವರ ಹೆಸರು ಪ್ರತಿಯೊಂದು ಮನೆಯಲ್ಲೂ ಕೇಳಿಬರುತ್ತದೆ.

ಅವರು ಉದ್ಯೋಗಸ್ಥರ ಸಂಗಡ ಸಂಭಾಷಣೆ ನಡಿಸಿದಲ್ಲಿ ಆರ್ಡಿನೇನ್ಸಿನ ಮಾನಸಿಕ ಸ್ಥಿತಿಯೇ ಕಂಡುಬಂತು. ಬ್ರಿಟಿಷ್ ಮತ್ತು ಇಂಡಿಯನ್ ಉದ್ಯೋಗಸ್ಥರು ಜನ ಸಮುದಾಯದ ಸಂಪರ್ಕದಲ್ಲಿಯೂ ಇಲ್ಲ, ಸಹಾನುಭೂತಿಯಲ್ಲಿಯೂ ಇಲ್ಲ. ಅವರ ಮಾತು ನಡೆಯುವುದು, ಅದು ಜನರ ಅಭಿಪ್ರಾಯಕ್ಕನುಗುಣವಾಗಿರುವುದರಿಂದಲ್ಲ; ಆದರೆ ಜನರ ಅಭಿಪ್ರಾಯವನ್ನು ಗಣಿಸದೆ, ತಮ್ಮ ಅಧಿಕಾರದಲ್ಲಿರುವ ಶಕ್ತಿಯಿಂದ ನಡೆಯುವುದಾಗಿದೆ.

ಗ್ರಾಮಗಳಲ್ಲಿ ಕೋಮುವಾರು ಭಾವನೆಯಿಲ್ಲ.

ಹಿಂದೂ—ಮುಸ್ಲಿಂ ಸಮಸ್ಯೆಯನ್ನು ಕುರಿತು ಹೇಳುವಾಗ್ಯೆ, ಕೋಮುವಾರು ಭಾವನೆಯು ಗ್ರಾಮಗಳಲ್ಲಿ ಇಲ್ಲವೆಂತಲೂ, ಒಂದು ಕೋಮಿನ ಜನರು ಬಹು ಕಡಿಮೆ ಇರುವ ಕಡೆಯಲ್ಲಿಯೂ ಕೂಡ ಆ ಜನರು ಬಹುಮತ ಕೋಮಿನವರ ದೆಸೆಯಿಂದ ತೊಂದರೆಯುಳ್ಳವರಾಗಿಲ್ಲವೆಂತಲೂ ಸೂಚಿಸಿದರು. ಮುಸಲ್ಮಾನರಲ್ಲಿ ಯುವಕ ಸಂಗಡದವರು ಕಾಂಗ್ರೆಸಿಗೆ ಒಲ್ಮೆಯುಳ್ಳವರು. ಕೋಮುವಾರು ಭಾವನೆಯುಳ್ಳವರಲ್ಲಿಯೂ ರಾಷ್ಟ್ರೀಯತ್ವದ ಭಾವನೆಯು ಇದೆ; ಇವರಿಗೂ, ಕಾಂಗ್ರೆಸ್ ಮತ್ತು ರಾಷ್ಟ್ರೀಯ ಹಿಂದೂಗಳಿಗೂ ಭೇದವಿರುವುದು ಬರೀ ಸಣ್ಣ ವಿಷಯಗಳಲ್ಲಿ ಮಾತ್ರ. ಆದುದರಿಂದ ಮುಸಲ್ಮಾನರಲ್ಲಿ ಬಹುಮತದವರು ಸ್ವರಾಜ್ಯಕ್ಕೆ ವಿರೋಧವಾಗಿರುವರೆಂಬುದು ನಿಜವಲ್ಲ. ಹಿಂದೂ ದೇಶದ ಯಾವ ಸಮಸ್ಯೆಯ ತೀರ್ಮಾನವೇ ಆಗಲಿ ತೃಪ್ತಿಕರವಾಗಿ ಆಗಬೇಕಾದರೆ ಅದು ಇಂಡಿಯಾದಲ್ಲಿ ಆಗಬೇಕಲ್ಲದೆ ವೆಸ್ಟ್‌ಮಿನಿಸ್ಟರ್ ಯಾ ವೈಟ್ ಹಾಲ್ (ಲಂಡನ್) ನಲ್ಲಿ ಆಗಕೂಡದೆಂದು ಪೂನಾ ಒಪ್ಪಂದದಿಂದ ಸ್ಪಷ್ಟವಾಗುತ್ತದೆ.

ಮಹಾತ್ಮರ ಬಿಡುಗಡೆಯಾಗದೆ ಶಾಂತಿ ಇಲ್ಲ.

ಸರ್ಕಾರದ ಈಗಿನ ತತ್ವವನ್ನು ಬಿಟ್ಟು, ಕಾಂಗ್ರೆಸು ಮತ್ತು ಮಹಾತ್ಮಗಾಂಧಿಯವರ ಸಹಕಾರವನ್ನು ಪಡೆದಾಗ ಮಾತ್ರ ದೇಶದಲ್ಲಿ ಶಾಂತಿಯುಂಟಾಗುವದೆಂದು ಅವರ ಅಭಿಪ್ರಾಯ. ಸರ್. ಟಿ. ಬಿ. ಸಪ್ರು, ಮಿ ಜಯಕರ್ ಮತ್ತು ಮೌ. ಶೌಕತ್ ಅಲಿಯವರಂಥ ಸಹಕಾರಿಗಳನ್ನೂ ಕೂಡ ಮಹಾತ್ಮರೊಂದಿಗೆ ಸಂಭಾಷಣೆ ನಡಿಸಲು ಸರ್ಕಾರದವರು ಬಿಡದೆ ಹೋದದ್ದು ವ್ಯಸನಕರವೆಂತಲೂ, ಇಂಥಾ ಕಾರ್ಯಗಳು ಶಾಂತತೆಗೆ ಅಡಚಣೆಯಾಗುವದೆಂತಲೂ ಅವರ ಸೂಚನೆ.

ಯಾವದಾದರೊಂದು ತರದ ರಚನೆಯನ್ನು ಕೊಟ್ಟರೆ ದೇಶದಲ್ಲಿ ಶಾಂತಿಯುಂಟಾಗುವದೆಂದು ಸರ್ಕಾರದವರು ತಪ್ಪು ಅಭಿಪ್ರಾಯ ಪಡೆದುಕೊಂಡಿರುವುದು ವ್ಯಸನಕರ. ಡೆಲ್ಲಿಯು (ಹಿಂದೂ ಸರ್ಕಾರವು) ಅವರ ತತ್ವದಿಂದ ಶಾಂತಿಗೆ ಎಲ್ಲಾ ವಿಧದಿಂದ ಅಡ್ಡ ಬರುತ್ತಿರುವುದು ಮತ್ತಷ್ಟು ದುಃಖಕರ. ಅದು ಈಗಿರುವ ವ್ಯತ್ಯಾಸಗಳನ್ನು ಸರಿಪಡಿಸಲು ಪ್ರಯತ್ನಿಸುತ್ತಲೇ ಇಲ್ಲ. ಆರ್ಡಿನೇನ್ಸುಗಳು ಅತೃಪ್ತಿ ಮತ್ತು ದ್ವೇಷಗಳನ್ನು ಹೆಚ್ಚಿಸಿದವಲ್ಲದೆ ಮತ್ತೇನೂ ಮಾಡಿಲ್ಲ. ಜನ ಸಮುದಾಯದ ಕಷ್ಟಗಳು ಬಹು ದೊಡ್ಡವಾಗಿವೆ; ಆದರೆ ಅವರು ಅವನ್ನು ಅತಿ ಕಠಿಣ ತರದ ದಬ್ಬಾಳಿಕೆಯನ್ನು ಎದುರಿಸುವಂಥಾ ಧೈರ್ಯದಿಂದಲೂ, ಸಹನೆ ಶಕ್ತಿಯಿಂದಲೂ ಅನುಭವಿಸಿರುವರು.

ರಾಜಿ ಸಂಧಾನವೇ ಸರಿಯಾದ ದಾರಿ.

ಲಂಡನಿನಲ್ಲಿರುವ ಅವರ ಸಂಸ್ಥೆಯು ಕೈಕೊಂಡಿರುವ (ರಾಜಿ ಸಂಧಾನದ) ತತ್ವವೇ ಸರಿಯಾದದ್ದೆಂದು ಅವರ ಅನುಭವವು ದೃಢೀಕರಿಸಿದೆ. ಲೇಬರ್ ಪಾರ್ಟಿಯವರು ದುಂಡುಮೇಜು ಪರಿಷತ್ತಿನೊಂದಿಗೆ ಸಹಕರಿಸುವುದಿಲ್ಲವೆಂತ ಮಾಡಿದ ತೀರ್ಮಾನದಿಂದ ಇಂಡಿಯಾದ ಪರವಾಗಿ ಬ್ರಿಟನಿನಲ್ಲಿ ನಿಜವಾದ ಚಳವಳವನ್ನು ಪ್ರಾರಂಭಿಸಿದಂತಾಗಿದೆ. ಬಲತ್ಕಾರದಿಂದ ಹಿಂದೀಯರ ಮೇಲೆ ಹಾಕುವ ತೀರ್ಮಾನಕ್ಕೆ ವಿರೋಧಿಸುವುದರಲ್ಲಿ ಇಂಗ್ಲೆಂಡಿನ ಮುಂದುವರಿಯುತ್ತಿರುವ ಪಾರ್ಟಿಗಳು ತಮ್ಮೊಂದಿಗೆ ಸೇರಿಯಾವೆಂದು ಈ ಡೆಲಿಗೇಶನಿನವರ ಆಶೆಯಾಗಿದೆ.

ಒಗ್ಗಟ್ಟಿನ ಪರಿಷತ್ತು.

ಹಿಂದೂ-ಮುಸ್ಲಿಂ-ಸಿಖ್ಖ ಮತಸ್ಥರೊಳಗೆ ಇರುವ ರಾಜಕೀಯ ವ್ಯತ್ಯಾಸಗಳನ್ನು ಹೋಗಲಾಡಿಸಿ, ಒಗ್ಗಟ್ಟನ್ನು ಸಾಧಿಸುವ ಬಗ್ಗೆ ಅಲಹಾಬಾದಿನಲ್ಲಿ ಒಂದು ಪರಿಷತ್ತು ತಾ. 3ರಲ್ಲಿ ಪ್ರಾರಂಭವಾಯಿತು. ಹಿಂದೂ ದೇಶದ ಎಲ್ಲಾ ಭಾಗಗಳಿಂದ ಈ ಮೂರು ಮತಸ್ಥರ ಮುಂದಾಳುಗಳು ಸಾರಕ್ಕಿಂತ ಹೆಚ್ಚಾಗಿ ಸೇರಿದ್ದರು. ಮಿ ಸಿ. ವಿಜಯರಾಘವಚಾರ್ಯರವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಅಧ್ಯಕ್ಷರ ಚಿಕ್ಕ ಭಾಷಣವಾದ ಮೇಲೆ ಎಲ್ಲರೂ ಎದ್ದು ನಿಂತು 2 ಮಿನಿಟುಗಳ ವರೆಗೆ ಮೌನವಾಗಿ ಪರಿಷತ್ತಿನ ಜಯಕ್ಕಾಗಿ ಪ್ರಾರ್ಥನೆಯನ್ನು ಮಾಡಿದರು. ನಂತರ ಹಲವು ಮುಖಂಡರಿಂದಲೂ, ಸಂಘಗಳಿಂದಲೂ ಸಭೆಗೆ ಜಯವನ್ನು ಬಯಸಿ ಕಳುಹಿಸಿದ್ದ ತಂತಿ ವಾರ್ತೆಗಳು ಓದಲ್ಪಟ್ಟವು.

ಈ ಸಭೆಗೆ ಅಮೂಲ್ಯವಾಗಿದ್ದ ಮಹಾತ್ಮರ ಸಹಾಯವನ್ನು ಪಡೆಯಲು ಮೌಲಾನಾ ಶೌಕತ್‌ಅಲಿಯವರಿಗೆ ಮಹಾತ್ಮರ ಭೇಟಿ ಮಾಡಲು ಸರ್ಕಾರದವರು ಬಿಡದ್ದಕ್ಕೆ ವ್ಯಸನವನ್ನು ಸೂಚಿಸುವ ಠರಾವು ಪಾಸು ಮಾಡಲಾಯಿತು.

ನಂತರ ಒಗ್ಗಟ್ಟಿನ ಪ್ರಾಮುಖ್ಯತೆಯನ್ನೂ, ಅದನ್ನು ಸಾಧಿಸಲು ಎಲ್ಲರೂ ಮಾಡಬೇಕಾದ ಪ್ರಯತ್ನಗಳನ್ನೂ ಕುರಿತು ಪಂಡಿತ ಮದನಮೋಹನ ಮಾಳವೀಯರು, ಮೌಲಾನಾ ಶೌಕತ್ ಅಲಿಯವರು, ಮೌಲಾನಾ ಜಾಫರ್ ಅಲಿಯವರು, ದರ್ಭಾಂಗದ ಮಹಾರಾಜಾಧಿರಾಜರವರು, ಮಿ. ಜೆ. ಯನ್. ಬಾಸುರವರು, ಡಾ. ಡಿಸೋಜರವರು ಮತ್ತು ಮೌಲಾನ ಅಬ್ದುಲ್ ಕಲಾಂ ಆಜಾದ್‌ರವರು ಸ್ವಾರಸ್ಯವಾದ ಭಾಷಣಗಳನ್ನು ಮಾಡಿದರು.

ಆ ಮೇಲೆ ರಾಜಿಯ ಶರತುಗಳನ್ನು ತೀರ್ಮಾನಿಸಲು ಒಂದು ಕಮಿಟಿಯು ನೇಮಿಸಲಾಯಿತು. ಈ ಕಮಿಟಿಯವರು ತಾ. 8ರ ವರೆಗೂ ಪ್ರತಿ ದಿನವೂ ಚರ್ಚೆ ನಡಿಸುತ್ತಾ ಬಂದಿರುವರು. ಬಂಗಾಳದ ಕೌನ್ಸಿಲಿನಲ್ಲಿ ಮುಸಲ್ಮಾನರಿಗೆ ಶೇಕಡ 51 ರಷ್ಟು ಸ್ಥಳಕೊಡುವಂತೆ ಒಪ್ಪಿರುವುದರಿಂದ ಅಲ್ಲಿಯ ಸಮಸ್ಯೆಯನ್ನು ಕುರಿತು ಒಂದು ತೀರ್ಮಾನಕ್ಕೆ ಬರಲಾಗಿದೆ. ಆದರೆ ಈ ತೀರ್ಮಾನದ ಮೇರೆ ಯೂರೋಪಿಯನರಿಗೆ 7 ಮೆಂಬರುತನಗಳು ಮಾತ್ರ ಸಿಕ್ಕುತ್ತೆ. ಅವರು ಸರ್ಕಾರದವರ ತೀರ್ಮಾನದ ಮೇರೆ ತಮಗೆ ಸಿಕ್ಕುವ 11 ಮೆಂಬರುತನಗಳಲ್ಲಿ 4ನ್ನು ಬಿಟ್ಟುಕೊಡಲು ಒಪ್ಪುತ್ತಾರೋ ಎಂದು ನೋಡಬೇಕಾಗಿದೆ.

ಪಂಜಾಬಿನ ಸಮಸ್ಯೆಯನ್ನು ಮತ್ತು ಸಿಂಧ್‌ನ್ನು ಪ್ರತ್ಯೇಕಿಸುವುದನ್ನು ಕುರಿತು ಚರ್ಚೆಗಳು ನಡೆಯುತ್ತಲೇ ಇವೆ. ಈ ಮಧ್ಯೆ ಶೌಕತ್ ಅಲಿಯವರು ತಮ್ಮ ಅಮೇರಿಕಾ ಪ್ರವಾಸಕ್ಕೆ ಹೊರಟು ಹೋದರು. ಡಾ. ಮೂಂಜೆಯವರು, ರಾಜಾ ನರೇಂದ್ರನಾಥರವರೇ ಮೊದಲಾದ ಕೆಲವರೂ ಅಲಹಾಬಾದನ್ನು ಬಿಟ್ಟುಹೋಗಿರುವರು. ಆದರೆ ಅವರೆಲ್ಲರೂ ಉಳಿದವರು ಮಾಡುವ ತೀರ್ಮಾನಕ್ಕೆ ಒಪ್ಪಲು ಸಮ್ಮತಿಸಿರುವರು. ಹೇಗೂ ಒಗ್ಗಟ್ಟಿನ ತೀರ್ಮಾನಕ್ಕೆ ಬರಬಹುದೆಂಬ ಆಶೆಯು ತುಂಬಾ ಇದೆ.

ಫೆಡರಲ್ ಇಂಡಿಯಾದಲ್ಲಿ ವಿದ್ಯಾಭ್ಯಾಸ.

ಈ ವಿಷಯವನ್ನು ಕುರಿತು ಮೈಸೂರು ವಿದ್ಯಾ ಇಲಾಖೆಯಲ್ಲಿ ಉದ್ಯೋಗದಲ್ಲಿರುವ ಮಿ॥ ಕೆ ಯಸ್ ಕಿಣಿ, ಯಂ. ಎ. ಪಿ. ಹೆಚ್. ಡಿ. ಯವರು ಕೃಷ್ಣರಾಜ ಹಾಲಿನಲ್ಲಿ ಮಿ॥ ಎ. ಸಿ. ಸುಬ್ಬಯ್ಯ ಯಂ. ಎ. ಬಿ. ಎಲ್ ರವರ ಅಧ್ಯಕ್ಷತೆಯಲ್ಲಿ ತಾ. ೨೦ಲ್ಲಿ ಒಂದು ಉಪನ್ಯಾಸ ಮಾಡಿದರು. ಅದರ ಸಾರಾಂಶವೇನೆಂದರೆ:—

ಒಂದು ನಾಗರೀಕ ಜನಾಂಗವು ಅಕ್ಷರ ತಿಳಿವಳಿಕೆಯಿಲ್ಲದಿದ್ದಾಗ್ಯೂ ಅಕ್ಷರ ತಿಳಿದಿದ್ದರೆ ಜನಾಂಗದ ನಾಗರೀಕತೆಯು ಬೆಳೆಯಲು ತುಂಬಾ ಸಹಾಯವಾಗುತ್ತದೆ. ಪ್ರಜಾಪ್ರಭುತ್ವ ಸರಕಾರವು ಜಯಪ್ರದವಾಗಿ ನಡೆಯಬೇಕಾದರೆ ಜನಸಮೂಹವೆಲ್ಲಾ ಓದುಬರಹ ತಿಳಿದವರಾಗಿರಬೇಕು. ಇನ್ನು ಮುಂದೆ ಹಿಂದೂಸ್ಥಾನದಲ್ಲಿ ಸ್ಥಾಪಿತವಾಗಲಿಕ್ಕಿರುವ ಪ್ರಜಾಸತ್ತಾತ್ಮಕ ಸರಕಾರದಲ್ಲಿ ಸರ್ವರಿಗೂ ಓದುಬರಹ ತಿಳಿದಿರಬೇಕಾದದ್ದು ಬಹಳ ಅವಶ್ಯವಿದೆ. ಆದ್ದರಿಂದ ಆರು ವರ್ಷಗಳ ವರೆಗೆ ಕಡ್ಡಾಯವಾದ ಮತ್ತು ಪುಕ್ಕಟೆಯಾದ ಪ್ರೈಮರಿ ವಿದ್ಯಾಭ್ಯಾಸವನ್ನು ಕೊಡಲು ಏರ್ಪಡಿಸಬೇಕು. ಹಣವಿಲ್ಲವೆನ್ನಬಹುದು; ಆದರೆ ಇದಕ್ಕಾಗಿಯೇ ಕೊಡುವ ತೆರಿಗೆಯನ್ನು ಬೇರೆ ಉದ್ದೇಶಗಳಿಗೆ ಉಪಯೋಗಿಸುವುದಿಲ್ಲವೆಂತ ಭರವಸೆ ದೊರೆತರೆ ಜನರು ಹೊಸ ತೆರಿಗೆಯನ್ನು ಕೊಡಲು ಹಿಂಜರಿಯುವುದಿಲ್ಲ.

ಪ್ರೈಮರಿ ವಿದ್ಯಾಭ್ಯಾಸ ತೀರಿದ ನಂತರ ವಾರಕ್ಕೆ 6 ರಿಂದ 8 ಗಂಟೆ ವರೆಗೆ ಮಾತ್ರ ಶಾಲೆಗೆ ಹೋಗಿ ಕಲಿಯುವ ಏರ್ಪಾಡು ಪುನಃ ನಾಲ್ಕು ವರ್ಷಗಳ ವರೆಗೆ ಇರಬೇಕು. ಕ್ರಮಕ್ರಮವಾಗಿ ಈ ವಿದ್ಯಾಭ್ಯಾಸವನ್ನು ಸಹ ಕಡ್ಡಾಯವಾಗಿ ಮಾಡಬೇಕು. ವಾರಂಪ್ರತಿ ಶಾಲೆಗೆ ಹೋಗುವ ಅನುಕೂಲವಿರುವವರನ್ನು ಅಂಥಾ ಶಾಲೆಗಳಿಗೆ ಕಳುಹಿಸುವುದು ಅವಶ್ಯವಾದರೂ, ಸಾಧ್ಯವಿಲ್ಲದವರಿಗೆ ವಾರಕ್ಕೆ ಒಂದು ದಿನದ ವಿದ್ಯಾಭ್ಯಾಸ ಕೊಡುವುದು ಅವಶ್ಯ.

ಆರು ವರ್ಷ ಪ್ರೈಮರಿ ವಿದ್ಯೆ ಪಡೆದವರಿಗೆ ತರ್ವಾತ ಮತ್ತೆ ಆರು ವರ್ಷ ಸೆಕೆಂಡರಿ ವಿದ್ಯೆ ಪಡೆದವರಿಗೆ ತರ್ವಾತ ಆಯಾ ದರ್ಜೆಯವರಿಗೆ ಸರಿಯಾಗಿ ಕಸುಬುದಾರಿ ಶಾಲೆಗಳನ್ನು ಏರ್ಪಡಿಸಬೇಕು. ಕಸುಬುದಾರಿ ಶಾಲೆಗಳಲ್ಲೂ ಭಾಷೆ, ಗಣಿತ ಮತ್ತು ಕಸುಬಿಗೆ ಸಂಬಂಧಪಡುವ ಸಾಧಾರಣ ವಿಷಯಗಳನ್ನು ಸಹ ಕಲಿಸಬೇಕು.

ಒಳ್ಳೇ ಬುದ್ಧಿ ಶಕ್ತಿ ಇರುವವರೆಲ್ಲರೂ ಯೂನಿವರ್ಸಿಟಿ ವಿದ್ಯಾಭ್ಯಾಸಕ್ಕೆ ಹೋಗಬೇಕು. ಈಗ ಹಿಂದೀ ಡಿಗ್ರಿಗಳಿಗೆ ಇರುವ ಲೋಪವನ್ನು ಹೋಗಲಾಡಿಸಬೇಕು. ಬೇರೆ ದೇಶದ ಅತ್ಯುತ್ತಮ ಬುದ್ಧಿಶಾಲಿಗಳೆಲ್ಲಾ ಸಿವಿಲ್ ಸರ್ವಿಸ್ ಮುಂತಾದ ಒಳ್ಳೇ ಸಂಬಳವಿರುವ ಕೆಲಸಗಳಿಗೆ ಹೋಗಬಯಸುತ್ತಾರೆ. ಅಂಥವರಿಗೆ ಒಳ್ಳೇ ಸಂಬಳ ಕೊಟ್ಟು ವಿದ್ಯಾಪೀಠಗಳಲ್ಲಿ ಅಧ್ಯಾಪಕರನ್ನು ಮಾಡುತ್ತಾ ವಿದ್ಯಾರ್ಥಿಗಳನ್ನು ತರಬೇತು ಮಾಡುವ ಏರ್ಪಾಡು ಮಾಡಬೇಕು. ನಮ್ಮ ಹಿಂದೀ ಯುವಕರು ಪಾಶ್ಚಿಮಾತ್ಯ ದೇಶಗಳಿಗೆ ಬರೇ ಡಿಗ್ರಿಗಳನ್ನು ಪಡೆಯಲಿಕ್ಕಾಗಿ ಮಾತ್ರ ಹೋಗಬಾರದು. ಒಳ್ಳೇ ಪ್ರೊಫೆಸರುಗಳಲ್ಲಿ ತರಬೇತು ಹೊಂದಲಿಕ್ಕಾಗಿ ಹೋಗಬೇಕು.

ಯೂನಿವರ್ಸಿಟಿಗಳು ಈಗ ಇರುವುದೇ ಹೆಚ್ಚು ಎನ್ನುತ್ತಾರೆ. ಶೀಘ್ರದಲ್ಲೇ ಹಿಂದೂಸ್ಥಾನದ ಎಲ್ಲಾ ಇಲಾಖೆಗಳೂ, ನಾಗರೀಕತ್ವವೂ ಹಿಂದೀಯರಿಗೇನೇ ಸಿಕ್ಕುವುದರಲ್ಲಿ ಸಂಶಯವಿಲ್ಲ. ಹಾಗೆ ಸಿಕ್ಕುವಾಗ ವಿದ್ಯಾವಂತ ಯುವಕರು ಎಷ್ಟು ಇದ್ದರೂ ಸಾಲದಾಗಬಹುದು.

ಸ್ತ್ರೀ ವಿದ್ಯಾಭ್ಯಾಸದ ಅವಶ್ಯಕತೆಯನ್ನು ನಮ್ಮ ಜನರು ಇತ್ತೀಚೆಗೆ ಸಂಪೂರ್ಣವಾಗಿ ಒಪ್ಪುತ್ತಾರೆ. ಸ್ತ್ರೀಯರು ವಿದ್ಯಾವಂತರಲ್ಲದಿದ್ದರೆ ಗಂಡಸರ ಕೆಲಸ ಕಾರ್ಯಗಳಿಗೆ ಸಹಾಯಕರಾಗದೆ ಅಡಚಣೆಯಾಗುತ್ತಾರೆ. ಅಲ್ಲದೆ ಅವರ ಸ್ವಂತ ಜೀವನವನ್ನು ನಡಿಸಲು ಅವರಿಗೆ ಅನುಕೂಲವೂ ಇರಬೇಕು. ಅವರ ಸ್ವಭಾವಕ್ಕೂ ಕಸುಬಿಗೂ ಸರಿಹೊಂದುವ ವಿದ್ಯೆ ಕೊಡಬೇಕು. ಹೊಲಿಗೆ, ಅಡಿಗೆ, ಮನೆಗಳನ್ನು ಅಲಂಕರಿಸುವುದು ಮುಂತಾದ ವಿಷಯಗಳನ್ನು ಕಲಿಸಬೇಕು. ಸ್ತ್ರೀ ವಿದ್ಯಾಭ್ಯಾಸವನ್ನು ಹಿಂಡಿಸುವ ಶಾಸ್ತ್ರಿಗಳೂ ಇದ್ದಾರೆ. ಆದರೆ ಅವರ ಸಂಖ್ಯೆಯು ಕಡಿಮೆಯಾಗುತ್ತಲಿದೆ.

ಅಸ್ಪೃಶ್ಯರೆನಿಸಿಕೊಂಡವರಿಗೆ ವಿದ್ಯೆ ಕೊಡುವುದು ಬಹಳ ಅವಶ್ಯ. ನಾಲ್ಕೈದು ಕೋಟಿ ಜನರೆಂದರೆ ಅಲ್ಪವಾಗಲಿಲ್ಲ. ಅಂಥವರನ್ನು ಅಜ್ಞಾನದಲ್ಲಿ ಬಿಟ್ಟು ದೇಶವು ಮುಂದುವರಿಯುವುದು ಸಾಧ್ಯವಿಲ್ಲ.

ಪ್ರಾಯಬಂದ ಜನರಿಗೆ ವಿದ್ಯಾಭ್ಯಾಸದ ಅನುಕೂಲ ಕೊಡಬೇಕು. ಮಧ್ಯ ಪ್ರಾಯದಲ್ಲಿ ತಮಗೆ ಇದ್ದ ಕಸುಬು ತಪ್ಪಿಹೋದವರಿಗೆ ಇದರಿಂದ ತುಂಬಾ ಸಹಾಯವಾಗುತ್ತದೆ. ಡೆನ್ಮಾರ್ಕಿನಲ್ಲಿ 40, 50 ವರ್ಷ ಪ್ರಾಯದವರೂ ಸಹ ಇಂಥಾ ಶಾಲೆಗಳಲ್ಲಿ ಕಲಿಯುತ್ತಾರೆ.

ಮೇಲ್ವಿಚಾರದ ಸಿಬ್ಬಂದಿ ಯಾಕೆ ಎಂತ ಕೆಲವರು ಕೇಳುತ್ತಾರೆ. ಇದು ಬಹಳ ಅವಶ್ಯವಿದೆ. ಅವರು ಈಗ ನಡೆಯುವ ರೀತಿ ವರ್ಷಕ್ಕೆ ಒಂದಾವರ್ತಿ ಶಾಲೆಗಳನ್ನು ಸಂದರ್ಶಿಸಿ ಪುಸ್ತಕದಲ್ಲಿ ಏನೋ ಬರೆದರೆ ಸಾಲದು. ವಿದ್ಯಾಭ್ಯಾಸವನ್ನು ದೇಶ ಕಾಲಕ್ಕೆ ಸರಿಯಾಗಿ ಸುಧಾರಿಸಿಕೊಂಡು ಕೆಲಸ ಮಾಡುವವರಾಗಬೇಕು.

ಸ್ಥಳೀಯ-ಸ್ವರಾಜ್ಯ ಸಂಸ್ಥೆಗಳೂ, ಪ್ರಾಂತೀಕ ಸರಕಾರಗಳೂ, ಮಧ್ಯವರ್ತಿ ಸರಕಾರವೂ ಹಣ ಹಾಕಿ ಈ ಮೇಲ್ಗಂಡ ತರದಲ್ಲಿ ವಿದ್ಯೆಯನ್ನು ಕೊಟ್ಟು ತಮ್ಮ ಹಕ್ಕು ಬಾಧ್ಯತೆಗಳನ್ನು ಅರಿತವರನ್ನಾಗಿ ಮಾಡಿ, ತಮ್ಮ ಅನುಕೂಲಗಳನ್ನು ಹೆಚ್ಚಿಸಿಕೊಳ್ಳುವ ಜನಾಂಗವನ್ನಾಗಿ ಮಾಡಬೇಕು.

ಮಹಾತ್ಮರಿಗೆ ಈಜಿಪ್ಟಿನ ಪೂಜ್ಯಭಾವ.

ಮಹಾತ್ಮರೆಂದರೆ ಹಲವರಿಗೆ ಅಭಿಮಾನವಿರಬಹುದು; ಆದರೆ ಮುಸಲ್ಮಾನರಲ್ಲಿ ಮೂರು ಮುಕ್ಕಾಲು ಪಾಲಿನವರಲ್ಲಿ ಅಭಿಮಾನವಿರಲಾರದೆಂದು ಕೆಲವರೆಣಿಸಬಹುದು. ಆ ಭಾವನೆ ತಪ್ಪು ತಿಳುವಳಿಕೆಯ ನಿವೃತ್ತಿಗಾಗಿ, ಉಪವಾಸ ವ್ರತವನ್ನು ಕೈಕೊಂಡಾಗ ಈಜಿಪ್ಟಿನಿಂದ ಅವರಿಗೆ ಬಂದ ತಂತಿಗಳಲ್ಲಿಗೆ ಪ್ರಮುಖವಾದ ಎರಡರ, ಅವಕ್ಕೆ ಮಹಾತ್ಮರು ಕಳುಹಿಸಿದ ಉತ್ತರದ ತಾತ್ಪರ್ಯವನ್ನು ಕನ್ನಡಿಸಿ ಬರೆಯುತ್ತೇವೆ. ಇವು ಈಜಿಪ್ಟಿನ ಕೈರೋ ಪಟ್ಟದಲ್ಲಿ ಪ್ರಕಟವಾಗುವ 'ಅಲ್-ಬಲಘ್' ಎಂಬ ದೈನಿಕ ಪತ್ರಿಕೆಯಲ್ಲಿ ಪ್ರಕಟವಾಗಿವೆ.

ಬೇಗಂ ಜಗ್ಲುಲ್ ಪಾಶಾರವರ ತಂತಿ.

ಕೀರ್ತಿಶೇಷ 'ಜಗ್ಲುಲ್ ಪಾಶ'ರವರ ಧರ್ಮಪತ್ನಿಯವರಾದ 'ಬೇಗಮ್' ಜಗ್ಲುಲ್ ಪಾಶಾರವರು ಗಾಂಧಿಯವರಿಗೆ ಕಳುಹಿದ ತಂತಿ ಇದು.

ಮಹಾತ್ಮಾಜೀಯವರೆ,

ಇಡೀ ಪೌರ್ವಾತ್ಯ ರಾಷ್ಟ್ರಗಳಿಗೆ ಮಾರ್ಗಸ್ವರೂಪಿಗಳಾದ ನೀವು ಕೈಕೊಂಡಿರುವ ಲೋಕಾಭಿವೃದ್ಧಿ ಕಾರ್ಯಕ್ರಮವನ್ನು, ಅದರ ಪರಿಣಾಮವನ್ನು ನಮ್ಮ ಇಡೀ ರಾಷ್ಟ್ರವು ಅತಿ ಸೂಕ್ಷ್ಮ ದೃಷ್ಟಿಯಿಂದ ನಿರೀಕ್ಷಿಸುತ್ತಿದೆ. ಆದರೆ ನಿಮ್ಮ ಈಗಿನ ಕರುಣಾಪೂರ್ವವಾಗಿದ್ದು ಭಯಂಕರವಾಗಿ ತೋರುವ ಆತ್ಮತ್ಯಾಗ ವ್ರತವನ್ನರಿತು ನಮ್ಮ ರಾಷ್ಟ್ರವು ಕಳವಳಗೊಂಡಿದೆ. ಆದರೆ ಇಂಥ ರಾಷ್ಟ್ರ ಸೇವೆಯ ಕಷ್ಟದಿಂದೊದಗುವ ಜಯವನ್ನು ಹೊಂದಿಸ್ಸಿ ಸವಿಯುವ ಭಾಗ್ಯವು ನನಗೂ ಒದಗಿತ್ತು. ನಮ್ಮಲ್ಲಿಯ ಮುಸಲ್ಮಾನ ಎರಡು ಪಂಗಡದ ಮನಃಕ್ಷೋಭವನ್ನು ಹೋಗಲಾಡಿಸಲಿಕ್ಕಾಗಿ ಕೀರ್ತಿಶೇಷರಾದ ಜಗ್ಲುಲ್ ಪಾಶರವರೊಡನೆ ನಾನೂ ಪ್ರಯತ್ನಿಸಿದ್ದೆ. ಆ ಪ್ರಯತ್ನವು ಸಫಲವಾದುದರಿಂದಲೇ ಈಗಿನ ಈಜಿಪ್ಟ್ ರಾಷ್ಟ್ರವೆಂಬುದು ಪ್ರಪಂಚದ ಎದುರಿನಲ್ಲಿ ತಲೆ ಎತ್ತಿಕೊಂಡಿದೆ. ಇಂಡಿಯಾದ ಭಿನ್ನ ಭಿನ್ನ ಮತದವರೂ, ಪಂಗಡದವರೂ, ದೇವರ ದಯೆಯಿಂದ ನಿಮ್ಮ ನಾಯಕತ್ವದಿಂದ ಬೇಗನೆ ಒಳಗೊಳಗಿನ ಭೇದಭಾವಗಳನ್ನು ತೊರೆದು, ರಾಷ್ಟ್ರಕಾರ್ಯದಲ್ಲಿ ಒಂದಾಗಲಿ; ಅದರಿಂದ ಇಂಡಿಯಾದ ಉದ್ದೇಶವು ಗುರಿಮುಟ್ಟಲಿ. ಮಹಾತ್ಮರಾದ ಮತ್ತು ಆದರ್ಶಸ್ವರೂಪರಾದ ನೀವು ಇನ್ನೂ ಹಲಕಾಲ ಜೀವಂತರಾಗಿದ್ದು ಲೋಕಕ್ಕೆ ಮಾರ್ಗವನ್ನು ತೋರಿಸುತ್ತಿರುವಂತಾಗಲಿ. ನಿಮ್ಮ ಜೀವಿತವೆಂದರೆ ಈಗ ಬರಿಯ ಏಶ್ಯಾ ರಾಷ್ಟ್ರದ ಹಕ್ಕಿನದಲ್ಲ; ಈಗ ಅದು ಇಡೀ ಪ್ರಪಂಚದ ರಾಷ್ಟ್ರಗಳ ಹಕ್ಕಿನದಾಗಿಬಿಟ್ಟಿದೆ. ಅದರಿಂದ, ಎಷ್ಟು ಬೆಲೆಗೊಟ್ಟಾದರೂ ಅದನ್ನು ರಕ್ಷಿಸಿಕೊಳ್ಳುವುದು ಪ್ರಪಂಚದ ಕರ್ತವ್ಯವೂ ಆಗಿದೆ.

ನಿಮ್ಮ ಆಪ್ತೆಯಾದ "ಸಾಫಿಯಾ ಜಗ್ಲುಲ್"

ಮಹಾತ್ಮರ ಉತ್ತರ.

ಹೃದಯೋತ್ತೇಜಕವಾದ ಮತ್ತು ಆಹ್ಲಾದಕಾರಿಯಾದ ನಿಮ್ಮ ತಂತಿಯನ್ನೋದಿದೆನು. ಮಿತಿಮೀರಿದ ಕೃತಜ್ಞತೆಯನ್ನರ್ಪಿಸುತ್ತೇನೆ. ತನ್ನ ಸಿದ್ಧಾಂತವನ್ನು ಪರಮಾತ್ಮನು ನಡೆಯಿಸಿಯೇ ಬಿಡುತ್ತಾನೆ.

ನಹಾಸ್ ಪಾಶಾರವರ ತಂತಿ.

ಈಜಿಪ್ಟಿನ ಮಾಜಿ ಮಂತ್ರಿಗಳೂ, ಈಗ "ವಾಫ್ದ್" ಪಂಗಡದ ಅಧ್ಯಕ್ಷರೂ ಆದ ಶ್ರೀಯುತ ನಹಾಸ್ ಪಾಶರು ಮಹಾತ್ಮರಿಗೆ ಕಳುಹಿದ ತಂತಿಯ ತಾತ್ಪರ್ಯವಿದು.

ಪ್ರಿಯ ಮಹಾತ್ಮಾಜೀ,

ಮೋಕ್ಷಧಾಮವಾದ ಇಂಡಿಯಾದ ತತ್ವವನ್ನು ನೆಲೆಗೊಳಿಸುವುದಕ್ಕಾಗಿ ನೀವು ಪ್ರಾಣಪೂರ್ವಕವಾಗಿಯೂ, ದೃಢನಿಶ್ಚಯದಿಂದಲೂ ಕೈಕೊಂಡಿರುವ ಆತ್ಮಾರ್ಪಣವ್ರತದ ಸುದ್ದಿಯನ್ನರಿತು ನಮ್ಮ ಇಡೀ ರಾಷ್ಟ್ರದ ಹೃದಯವು ತಲ್ಲೀನವಾಗಿದೆ. ಇಂಡಿಯವು ಈಗ ಅನುಭವಿಸುತ್ತಿರುವ ಕಷ್ಟ ನಷ್ಟ ಪರಂಪರೆಗಳನ್ನೇ ಅನುಭವಿಸಿಯೇ ನಮ್ಮ ಜನಾಂಗಕ್ಕೆ ಈಗಿನ ರಾಷ್ಟ್ರೀಯ ಜಾಗೃತಿಯುಂಟಾದುದು.

ಪಂಗಡಗಳೊಳಗಿನ ವೈಷಮ್ಯಗಳನ್ನು ಕಳೆದು ಐಕ್ಯವಾಗದಿದ್ದರೆ ರಾಷ್ಟ್ರಾಭಿವೃದ್ಧಿಯೆಂಬುದು ಕನಸಿನ ಗಂಟೆಂದು ನಮ್ಮ ರಾಷ್ಟ್ರಕ್ಕೆ ಮನದಟ್ಟಾಗಿದೆ. ಅದರಿಂದಲೇ ಅದು ಒಗ್ಗಟ್ಟಾಗಿ ರಾಷ್ಟ್ರಕಾರ್ಯ ಸಮರ್ಥವಾಗಿದೆ. ತಾಕ್ಷಣವೇ ಒಳಗೊಳಗಿನ ಕ್ಷೋಭಗಳನ್ನೆಲ್ಲ ಹೋಗಲಾಡಿಸಿ, ಇಂಡಿಯವು ರಾಷ್ಟ್ರನಾಯಕರಾದ ನಿಮ್ಮ ಈ ಭಯಂಕರ ವ್ರತವನ್ನು ಕೊನೆಗೊಳಿಸೀತೆಂದು ಸಹಾನುಭವದಿಂದಲೂ ನಮ್ಮ ರಾಷ್ಟ್ರವು ನಂಬುತ್ತದೆ. ಇಷ್ಟೇ ಅಲ್ಲ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ನಮ್ಮ ಇಡೀ ಪೌರ್ವಾತ್ಯ ರಾಷ್ಟ್ರವು ನಿಮ್ಮ ಸದುದ್ದೇಶದ ತತ್ವವನ್ನರಿತು ಪ್ರಯತ್ನಿಸಬೇಕೆಂದೂ ನಮ್ಮ ರಾಷ್ಟ್ರವು ಬಯಸುತ್ತದೆ.

ಮಹಾತ್ಮಾಜೀ, ಸತ್ಯಸ್ವಾತಂತ್ರ್ಯಗಳ ಗುರಿಯಿಡಿದು ನೀವು ಪ್ರಾರಂಭಿಸಿದ ಈ ಪವಿತ್ರ ವ್ರತಕ್ಕಾಗಿ ನಮ್ಮ ರಾಷ್ಟ್ರದ ಪರವಾಗಿ ವಂದನೆಗಳನ್ನರ್ಪಿಸುತ್ತೇನೆ. ನಿಮ್ಮ ಜೀವವು ಉಳಿಯಲಿ, ಹೋಗಲಿ, ಅವೆರಡೂ ಆ ಸದುದ್ದೇಶಕ್ಕೆ ಕಾರಣವಾದರೆ ಕೃತಾರ್ಥರಾದಂತಾಯಿತು.

ಮಹಾತ್ಮರ ಉತ್ತರ:

'ನಿಮ್ಮ ಹೃತ್ಪೂರ್ವಕವಾದ ತಂತಿಯು ನನ್ನ ಹೃದಯತಂತಿಗಳಿಗೆ ಬಹಳ ಮಟ್ಟಿಗೆ ಹುರುಪುಗೊಟ್ಟಿದೆ. ನನ್ನ ಉಪವಾಸವ್ರತವು ಎಲ್ಲಾ ಪಂಗಡಗಳವರ ಮನಸ್ಸನ್ನು ಸ್ಪರ್ಶಿಸುವಂತಾಗಲೆಂದೂ, ಎಲ್ಲಾ ಪಂಗಡಗಳಲ್ಲಿ ಸ್ಥಿರವಾದ ಐಕ್ಯವೂ ನೆಲಸುವಂತಾಗಲೆಂದೂ ಪರಮಾತ್ಮನನ್ನು ಪ್ರಾರ್ಥಿಸುತ್ತೇನೆ. ಅದೇ ನನ್ನ ಮುಖ್ಯವಾದ ಮನೋರಥ. ಕಳೆದ ಸರ್ತಿ ಯುರೋಪಿನಿಂದ ಬರುವಾಗ ಈಜಿಪ್ಟಿನಲ್ಲಿ ತಂಗಿದ್ದೆನಷ್ಟೆ. ಆಗ ನಿಮ್ಮ ರಾಷ್ಟ್ರಕ್ಕೆ ನನ್ನಲ್ಲಿರುವ ಪ್ರೇಮದ ಚಿಹ್ನೆಯಾಗಿ ಉಡುಗರೆ ಮಾಡಿದ ನಿಮ್ಮ ರಾಷ್ಟ್ರದ 'ಶಾಲ'ನ್ನೇ ಈ ವ್ರತಸಮಯದಲ್ಲಿ ಧರಿಸಿಕೊಂಡಿರುತ್ತೇನೆ. ನಿಮ್ಮ ತಂತಿಯೆಂಬುದು ಹೃತ್ಪೂರ್ವಕವಾದ ಇನ್ನೊಂದು ಉಡುಗರೆ. ನಾನಾವಾಗಲೂ ಕರುಣಾಳುವಾದ ಪರಮಾತ್ಮನಲ್ಲಿ ದೃಢವಿಶ್ವಾಸವನ್ನಿಟ್ಟು ಅವನನ್ನಾಶ್ರಯಿಸಿಕೊಂಡಿರುತ್ತೇನೆ.'

ಮುಸಲ್ಮಾನ ರಾಷ್ಟ್ರವಾದ ಈಜಿಪ್ಟು ಗಾಂಧಿಯವರನ್ನು ಯಾವ ರೀತಿಯಲ್ಲಿ ದೃಷ್ಟಿಸುತ್ತಿದೆ, ಎಂಬುದನ್ನು ಈ ಪತ್ರವ್ಯವಹಾರಗಳಿಂದ ವಾಚಕರು ಊಹಿಸಬೇಕೆಂದು ಪ್ರಾರ್ಥನೆ.

'ರಾ ಬ.'

ಅಸ್ಪೃಶ್ಯತಾ ನಿವಾರಣೆ.

ಮಹಾತ್ಮ ಗಾಂಧಿಯವರ ಹೇಳಿಕೆ.

ಅಸ್ಪೃಶ್ಯತಾ ನಿವಾರಣೆಯನ್ನು ಕುರಿತು ಸಂಭಾಷಣೆಗಳನ್ನಾಗಲೀ, ಪತ್ರವ್ಯವಹಾರಗಳನ್ನಾಗಲೀ ಅಟಂಕವಿಲ್ಲದೆ ನಡೆಸಬಹುದೆಂಬ ರಿಯಾಯಿತಿಯನ್ನು ಸರಕಾರದವರು ಈಗ ಪುನಃ ಮಹಾತ್ಮರಿಗೆ ಕೊಟ್ಟಿರುವರು. ಈ ರಿಯಾಯಿತಿಯು ದೊರೆತ ಕೂಡಲೆ ಮಹಾತ್ಮರು ಈ ಕೆಳಗಿನ ಹೇಳಿಕೆಯನ್ನು ಪತ್ರಿಕೆಗಳಲ್ಲಿ ಪ್ರಕಟಿಸಿದರು.

'ಉಪವಾಸವನ್ನು ನಿಲ್ಲಿಸಿದ ನಂತರ ಅಸ್ಪೃಶ್ಯತಾ ಸಮಸ್ಯೆಯನ್ನು ಕುರಿತು ನಾನು ಯೋಚಿಸಿದಂತೆ ನಡಿಸಲು ನನ್ನ ಅಧೀನವೊಳಗೆ ಇಲ್ಲದ ಕಾರಣಗಳಿಂದ ನನಗೆ ಸಾಧ್ಯವಾಗಲಿಲ್ಲ. ಈ ಸಮಸ್ಯೆಯ ಸಂಬಂಧ ಪ್ರಚಾರ ಕೆಲಸ ನಡಿಸಲು ಸರಕಾರದವರು ಈಗ ಅನುಮತಿ ಕೊಟ್ಟಿರುವದರಿಂದ, ಯರವಾಡ ಒಪ್ಪಂದವನ್ನು ಟೀಕಿಸಿಯೂ, ಹೆಚ್ಚಿನ ಮಾಹಿತಿಗಾಗಿ ಮನವಿ ಮತ್ತು ಅಸ್ಪೃಶ್ಯತೆಯನ್ನು ಹೋಗಲಾಡಿಸುವ ಕೆಲಸದಲ್ಲಿ ಉಂಟಾಗುವ ಹಲವು ಪ್ರಶ್ನೆಗಳ ಮೇಲೆ ನನ್ನ ಅಭಿಪ್ರಾಯಕ್ಕಾಗಿಯೂ ನನಗೆ ಬಂದಿರುವ ಅನೇಕ ಪತ್ರಗಳಿಗೆ ಜವಾಬು ಕೊಡಲು ಅವಕಾಶ ದೊರೆತಿದೆ.

ನನ್ನ ಈ ಪ್ರಥಮ ಹೇಳಿಕೆಯಲ್ಲಿ, ತತ್ಕಾಲ ಬಿಡಿಸಲು ಅಗತ್ಯವಿಲ್ಲದ ಪ್ರಶ್ನೆಗಳನ್ನು ಬಿಟ್ಟು, ಪ್ರಾಮುಖ್ಯವಾದವುಗಳನ್ನು ಮಾತ್ರ ಬರೆಯುತ್ತೇನೆ.

ಉಪವಾಸವನ್ನು ಪುನಃ ಕೈಕೊಳ್ಳಬೇಕಾಗುವ ಸಂಭವವನ್ನು ಕುರಿತು ಮೊದಲು ಬರೆಯುತ್ತೇನೆ. ಉಪವಾಸವು ನಿರ್ಬಂಧದ ವಾಸನೆಯುಳ್ಳದ್ದಾಗಿರುವುದರಿಂದ ಅದನ್ನು ಕೈಕೊಳ್ಳಬಾರದಿತ್ತೆಂತಲೂ, ಅದಕಾರಣ ಅದನ್ನು ಪುನಹ ಆಚರಿಸಬಾರದೆಂತಲೂ ಕೆಲವು ಬಾತ್ಮಿದಾರರು ಬರೆದಿರುವರು. ಹಿಂದೂ ಮತದಲ್ಲಿ ಯಾಕೆ, ಬೇರೆ ಯಾವ ಮತದಲ್ಲೂ ನನ್ನ ಈ ಕಾರ್ಯಕ್ಕೆ ಅನುಮತಿ ಇಲ್ಲವೆಂದು ಇನ್ನು ಕೆಲವರು ವಾದಿಸುತ್ತಾರೆ. ಇದರ ಮತಭಾಗವನ್ನು ಕುರಿತು ನಾನು ಆಲೋಚಿಸಲು ಇಚ್ಛಿಸುವುದಿಲ್ಲ. ಕಳೆದ ಉಪವಾಸವನ್ನು ನಾನು ದೇವರ ಸೂಚನೆಯ ಮೇರೆ ಕೈಕೊಂಡದ್ದಾಗಿದೆ ಮತ್ತು ಪುನಃ ಕೈಕೊಳ್ಳುವುದಾದರೂ ಅದರ ಸೂಚನೆಯಂತೆಯೇ ಆಚರಿಸಲಾಗುವದೆಂದು ಮಾತ್ರ ಹೇಳುತ್ತೇನೆ. ಆದರೆ ಅದನ್ನು ಪ್ರಾರಂಭಿಸಿದಾಗ ಅಸ್ಪೃಶ್ಯತೆಯನ್ನು ಬೇರು ಸಹಿತ ಕೀಳಲಿಕ್ಕಾಗಿಯೇ ಕೈಕೊಂಡದ್ದಾಗಿದೆ. ಅದು ತೆಗೆದುಕೊಂಡ ದಾರಿಯು ನನ್ನ ಅಪೇಕ್ಷೆಯದ್ದಾಗಿರಲಿಲ್ಲ. ಮಂತ್ರಿ ಮಂಡಳಿಯ ತೀರ್ಮಾನವು ನನ್ನ ಜೀವಮಾನದ ಒಂದು ಸಂದರ್ಭವನ್ನು ಉಂಟುಮಾಡಿತು. ಆದರೆ ಸದರಿ ತೀರ್ಮಾನದ ಬದಲಾವಣೆಯು ಅಂತ್ಯದ ಗುರುವೆಂದು ನನಗೆ ಗೊತ್ತಿತ್ತು. ತೀರ್ಮಾನವನ್ನು ಮಾಡಿದವರಿಗೂ ಸಹ ಗೊತ್ತಿಲ್ಲದ ಆಳವಾದ ಅರ್ಥವಿಲ್ಲದೆ ಹೋಗಿದ್ದ ಪಕ್ಷದಲ್ಲಿ ಬರೇ ಒಂದು ರಾಜಕೀಯ ತೀರ್ಮಾನವನ್ನು ಬದಲಾಯಿಸಲು ಬಹು ದೊಡ್ಡದೊಂದು ಶಕ್ತಿಯನ್ನು ಚಲನೆಗೆ ಬಿಡಲಾಗುತ್ತಿರಲಿಲ್ಲ. ಸಂಬಂಧಪಟ್ಟ ಜನರು ಸ್ವಭಾವಿಕವಾಗಿ ಆ ಅರ್ಥವನ್ನು ತಿಳಿದುಕೊಂಡು, ಅದಕ್ಕೆ ಸರಿಯಾಗಿ ವರ್ತಿಸಿದರು.

ಈಗಿನವರು [illegible] ತಮಗೆ ಕೊಳ್ಳಬಹುದಾದದ್ದನ್ನು ಕಾಲದಿಂದ ಹಿಂದೂಸ್ಥಾನದ ಒಂದು ತುದಿಯಿಂದ ಇನ್ನೊಂದರಲ್ಲಿ ನನ್ನಷ್ಟು ಸಂಚರಿಸಿದವರೂ, ಗ್ರಾಮಾಂತರಗಳೊಳಗೆ ನುಗ್ಗಿದವರೂ ಮತ್ತು ನನ್ನಷ್ಟು ಮಿಲಿಯ ಜನರೊಂದಿಗೆ ಸಂಪರ್ಕವಾದವರೂ ಒಂದು ವೇಳೆ ಯಾರೂ ಇರಲಿಕ್ಕಿಲ್ಲ. ಅವರೆಲ್ಲರಿಗೂ ನನ್ನ ಜೀವಮಾನದ ವಿಷಯವು ಗೊತ್ತಿದೆ ಮತ್ತು ನಾನು ಅಸ್ಪೃಶ್ಯರಿಗೂ, ಸ್ಪೃಶ್ಯರಿಗೂ ಜಾತಿ ಜಾತಿಗೂ ಮಧ್ಯೆ ಬೇಲಿ ಇದೆಯೆಂಬುದನ್ನು ಒಪ್ಪಿಕೊಂಡಿರುವುದಿಲ್ಲವೆಂತ ಅರಿತಿದ್ದಾರೆ. ಅಸ್ಪೃಶ್ಯತೆಯು ಹಿಂದೂ ಮತದ ಮೇಲಿರುವ ಒಂದು ಕಳಂಕವೆಂತಲೂ ಮತ್ತು ಶೋಚನೀಯವೆಂತಲೂ, ನಾನು ಅದನ್ನು ಮಿತಿಯಿಲ್ಲದ ಶಬ್ದಗಳಿಂದ ಹಲವು ಸಾರಿ ಅತಿ ಘೋರತೆಯಿಂದಲೇ ವರ್ಣಿಸಿರುವುದನ್ನು ಅವರು ಕೇಳಿರುವರು. ಹಿಂದೂಸ್ಥಾನದ ಎಲ್ಲಾ ಕಡೆಗಳಲ್ಲಿ ಈ ಸಭೆಗಳು ಪಬ್ಲಿಕ್ ಅಥವಾ ಖಾಸಗಿ ಮೀಟಿಂಗುಗಳಲ್ಲಿ, ಬಹು ಅಪರೂಪದಲ್ಲಿ ಮಾತ್ರವಲ್ಲದೆ, ಈ

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಆಫ್ ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲು)

		ರೂ.
ಶೇರ್ ಬಂಡವಾಳ	—	50,000—0—0
ವಸೂಲಾದ ಶೇರ್ ಬಂಡವಾಳ	—	27,350—0—0
ಜನರಿಂದ ಠೇವಣಾತಿ	—	22,538—10—7
ವಸೂಲಾದ ಕ್ಷೇಮನಿಧಿ	—	37,914—12—0

ಈ ಬ್ಯಾಂಕಿನಿಂದ ಕೊಡಗು ಜಿಲ್ಲಾ ಸಹಕಾರ ಸಂಘಗಳಿಗೆ ಸಾಲ ಕೊಡಲ್ಪಡುವುದು.

ಒಂದು ವರ್ಷ ಗಡುವಿನ ಅಥವ ಹೆಚ್ಚಿನ ಗಡುವಿನ ಠೇವಣಾತಿಗಳಿಗೆ ಶೇಕಡ ವಾರ್ಷಿಕ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ಗಡುವಿನ ಠೇವಣಾತಿಗಳಿಗೆ ಶೇಕಡ ವಾರ್ಷಿಕ 4ರ ಬಡ್ಡಿ ದೊರೆಯುತ್ತೆ.

ಹೆಚ್ಚಿನ ವಿವರಗಳಿಗೆ ಬ್ಯಾಂಕಿನ ಸೆಕ್ರಿಟರಿ ರವರನ್ನು ಕಂಡು ತಿಳಿಯಬಹುದು.

ಪ್ರೆಸಿಡೆಂಟರು	ಸೆಕ್ರಟರಿ
ಪಟ್ಟಮಾಡ ದೇವಯ್ಯನವರು, ರಾವ್ ಬಹದ್ದೂರ್.	ಮನೆಯಪ್ಪಂಡ ಬೆಳ್ಯಪ್ಪನವರು.

ಬಿತ್ತರ

ಸಿ. ಎ. ವೆಂಕಟಯ್ಯನವರು, ಬಿ.ಎ., ಬಿ.ಎಲ್.

ತಾರೀಖು 1-7-193

ಸೂಚನೆ.

[ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿದೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿದೆ.]

ಏಜಂಟರುಗಳು.

ಕೊಡಗಿನ ಎಲ್ಲಾ ಭಾಗಗಳಿಗೆ—ಮೆ. ಮಂಡೇಪಂಡ ಮು. ಬಿದ್ದಪ್ಪನವರು.

ಉತ್ತರ ಕೊಡಗಿಗೆ ಮೆ. ಚೌರಿರ ಮೊಣ್ಣಯ್ಯನವರು

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು, (ಪಾರಿಭಂಡಾರ.)

ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮೊದಪ್ಪನವರು,

ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಯ್ಯನವರು,

ಮತ್ತು, ಅರಮಣಮಾಡ ಪಿ ಕಾರ್ಯಪ್ಪನವರು,

ಮಡಿಕೇರಿ & ತಿತಿಮತಿ—ಮೆ. ಜಿ. ಮೊಣ್ಣಯ್ಯನವರು,

ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಪೊನ್ನಯ್ಯನವರು,

ಸೂಚನೆ.—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

ನಮೂನೆಗಳು ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿ ಜಿಲ್ಲಾ ಬೆಂಬಲದಲ್ಲಿಯೂ ಕರಡೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಿಸಲು ಅವಶ್ಯವಾಗಿರುವ, ರೂಲ್ಸಿನ ಕಾರಣವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಕರಾರು ಫಾರಮುಗಳೂ, ಜಮ್ಮ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಕರಾರು ಫಾರಮುಗಳೂ, ಸ್ಟೋರ್ ಕೀಪರ್ ಕರಾರು ಫಾರಮುಗಳೂ, ಓಚರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮಾ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಮುದ್ದೆ ಬರೆದು ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಮುಂಬಯಿಯಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.

ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.

ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮೊತ್ತದ 1,78,322 ಜನರಿಗೆ 38 ಕೋಟಿ ರೂ.

ಮೇಲಿನ ಕೆಲಸಗಳಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ರಷ್ಟರ ವೆಚ್ಚದ ಕಡಿಮೆ ಖರ್ಚಿನಲ್ಲಿಯೇ ನಡೆಸಲ್ಪಟ್ಟಿದ್ದಾಗಿದೆ.

ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಬೆಂಬಲವನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬುದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು ಅಥವಾ ಇನ್ಸ್‌ಪೆಕ್ಟರೇಟ್ ಆಫೀಸು, ಮಡಿಕೇರಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ಮೆಸಪೊಟೇಮಿಯ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೋ	ಪಾಟ್ನಾ	ಸುಕ್ಕೂರು
ಅಲ್ಲಾಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಡಾಲ್ಟನ್‌ಗಂಜ್	ಮಂಡಲೆ	ರಾಯಪುರ	ತಿರುವೇಂದ್ರಮ್
ಭೋಪಾಲ್	ಕರಾಚಿ	ಮಡಿಕೇರಿ	ರಾಂಚಿ	ವಿಜಗಾಪಟ್ಟಣ [52—36

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ. ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,

52—43 **ಗಿರಿಗಾಂವ, ಮುಂಬಯಿ.**

ಕಾರ್ಡು ಬರೆದರೆ ಆಗನ ಕ್ಯಾಟಲಾಗು ಮಾಫಿಯಾಗಿ ಕಳುಹಿಸಲ್ಪಡುವುದು.



ಕೋವಿಗಳು, ಕತ್ತಿಗಳು, ಬಟಾಗಳು, ತೋಟಿಗಳು, ರಿವಾಲ್ವರುಗಳು, ತೋಟೆ ಮುಂತಾದ ಬೇಟೆಯ ಎಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS LTD.,

Largest Importers of Firearms and Ammunition

Cheapest priced firm in India,

26—9 **210 Abdul Rehiman Street, BOMBAY.**

Printed & published by P. I. Belliappa at "Kodagu" Press Mercara for "Kodagu" Ltd

Reg. No. M. 1150.
If not delivered please return to:
"KODAGU" OFFICE MERCARA.

ಕೊಡಗು.

ಸತ್ಯೇನ ಭೂತದಯಯಾ ವಿದ್ಯಾ ಶೀಲ ಶೌಚಂ ತಥಾ / ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ

ವಾರ್ಷಿಕ ಚಂದಾ ರೂ. ೩—೪—೦.

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೨	ಮಡಿಕೇರಿ, ಸನ್ ೧೯೩೨ನೇ ಇಸವಿ ನವಂಬರ್ ತಾರೀಕು ೧೧ ನೇ ಶುಕ್ರವಾರ.	ಸಂಚಿಕೆ ೨೪

SARI-PIN.

EAR-RINGS (Thodus)
Cut-rubys Rs. 25 to 50
With diamond in centre Rs. 80 to 120

BRACELETS
Gold Rs. 10
Set rubys forming any letter Rs. 12

NECKCHAINS.

NOSE-RINGS.
Diamond in small size of best quality Rs. 35 & upwards according to size.

MARRIAGE PRESENTATIONS

Attractive and inexpensive articles ready in stock. Prompt execution. Details on enquiry free with catalogue. Numerous customers in Coorg thoroughly satisfied with reliable service. Testimonials pouring in. Silver Guindys, Photo lockets, Dimond nose-screws cut-ruby ear-rings, etc., etc., etc., in all prices Very attractive. Prices most moderate.

Estimates free on enquiry

Designs free on enquiry.

Telegrams: 'PRECIOUS.'

Telephone: 3145.

V. Subramaniaier
Jeweller,

CATALOGUE ON ENQUIRY.

52—51

Post Box 423, Triplicane, P. O., MADRAS.



26—20

ಜನರಲ್ ಅಶ್ಯೂರೆನ್ಸ್ ಸೊಸೈಟಿ.

ಅಜಮೀರ್.

ನಮ್ಮ ಆಯವ್ಯಯದ ಪಟ್ಟಿಯೇ ನಮ್ಮ ಅಭಿವೃದ್ಧಿಯನ್ನು ವ್ಯಕ್ತಗೊಳಿಸುತ್ತವೆ.

ವರ್ಷ	ಹೊಸ ವಾರ್ಷಿಕ ವರಮಾನ	ಸೇರಿಟ್ಟ ಮೂಲಧನ	ಖರ್ಚಿನ ಪ್ರಮಾಣದ ಶೇಕಡ
1911	46,248	49,442	82.9
1921	2,92,627	6,53,350	43.2
1931	12,50,000	40,00,000	28.2

ಬೋನಸ್ಸು.

ಕಡೆಯ ಸಲ ದೊರಕುವ ಜೀವಾವಧಿ ಪಾಲಿಸಿಗಳ ಮೇಲೆ ವರ್ಷ ಒಂದಕ್ಕೆ ಶೇಕಡ 22½

ಚೆನ್ನಾಗಿ ಕೆಲಸಮಾಡಿ ಅಭಿವೃದ್ಧಿ ಸ್ಥಿತಿಯಲ್ಲಿರುವ ಈ ಸೊಸೈಟಿಯಲ್ಲಿ ವಿಮೆ ಮಾಡಿ ಕಡಿಮೆ ಪ್ರೀಮಿಯಂ ಪಾವತಿ ಮಾಡುವ ಸೌಲಭ್ಯ ಹೊಂದಿ ಅಥವಾ ಈ ಕಂಪೆನಿಯ ಪರವಾಗಿ ಕೆಲಸಮಾಡಿ ಉತ್ತಮ ಕಮಿಶನ್ ದರದ ಪ್ರಯೋಜನ ಹೊಂದಿ.

ಹೆಚ್ಚು ವಿಚಾರಗಳಿಗೆ ಈ ವಿಳಾಸಕ್ಕೆ ಬರೆಯಿರಿ:—

ಎ. ರಾಮಚಂದ್ರರಾವ್,
ಸುಪರಿಂಟೆಂಡೆಂಟ್,
ಮಿಂಟೋ ಆಸ್ಪತ್ರೆ ಬಳಿ,

52—29

ಎಂಪಯರ್ ಆಫ್ ಇಂಡಿಯಾ ಲೈಫ್ ಎಶ್ಯುರೆನ್ಸ್ ಕಂಪೆನಿ ಲಿಮಿಟೆಡ್.

(ಸ್ಥಾಪನೆಯಾದದ್ದು 1897.)

1934ನೇ ಇಸವಿ ಮಾರ್ಚ 1ನೇ ತಾರೀಕಿನೊಳಗೆ ಪಕ್ವವಾಗುವ ಪೋಲಿಸಿಗಳ ಮೇಲೆ ಇಂಟರಿಮ್ ಬೋನಸುಗಳು ವರ್ಷಕ್ಕೆ 1000ಕ್ಕೆ ರೂ. 16ರಂತೆ ಹೋಲ್ ಲೈಫ್ ಎಶ್ಯುರೆನ್ಸಿನ ಮೇಲೆಯೂ

ಮತ್ತು

1000ಕ್ಕೆ ರೂ. 14ರಂತೆ ಎಂಡೋಮೆಂಟ್ ಎಶ್ಯುರೆನ್ಸಿನ ಮೇಲೆಯೂ ಏರಿಸಲ್ಪಟ್ಟಿವೆ.

ಹೆಡ್ ಆಫೀಸು:—
ಎಂಪೈರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್,
ಬೊಂಬಾಯಿ.

ಬ್ರಾಂಚ್ ಆಫೀಸು:—
152—3 ಕಮರ್ಷಲ್ ಸ್ಟ್ರೀಟ್,
ಬೆಂಗಳೂರು.

52—6

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ.]

ಮಡಿಕೇರಿ ಸಭೆ ಸರ್ವ ಪಕ್ಷ ಪರಿಷತ್ತೋ?

ಅಯ್ಯಾ,

ಕಳೆದ ತಾ. 23 ರಲ್ಲಿ ಮಡಿಕೇರಿಯಲ್ಲಿ ಕೊಡಗಿನ ಭವಿಷ್ಯತ್ತನ್ನು ಕುರಿತು ನಡೆದ ಮೀಟಿಂಗಿನ ವಿವರವನ್ನು ಕಳೆದ ವಾರದ ನಿಮ್ಮ ಪತ್ರಿಕೆಯಲ್ಲಿ ಓದಿದೆನು. ಅಲ್ಲದೆ ತಾ. 29-10-32 ರ 'ಹಿಂದೂ' ಪತ್ರಿಕೆಯಲ್ಲಿ 'ಕೊಡಗಿನ ಭವಿಷ್ಯತ್ತನ್ನು ಕುರಿತು ಸರ್ವಪಕ್ಷ ಪರಿಷತ್ತು' ಎಂಬ ಶಿರೋನಾಮೆಯ ಲೇಖನವನ್ನು ನೋಡಿ ನನಗೆ ಆಶ್ಚರ್ಯವಾಯಿತು. ಸದರಿ ಸಭೆಯನ್ನು ಐದಾರು ಮಹನೀಯರುಗಳು ರುಜುಮಾಡಿ ಕೆಲವರಿಗೆ ಆಮಂತ್ರಣ ಕಳುಹಿಸಿ ಸೇರಿಸಿದ್ದಾಗಿದೆ. ಪಲವು ತರಹದ ಅಭಿಪ್ರಾಯವಿರುವ ಮಹನೀಯರುಗಳನ್ನು ಕರೆದಿದ್ದರೂ ತಮಗೆ ಇಷ್ಟಬಂದವರಿಗೇನೇ ಆಮಂತ್ರಣ ಕಳುಹಿಸಿದ್ದರೆಂಬ ತಪ್ಪಾಗಲಾರದು. ಮಾತ್ರವಲ್ಲ, ಅಲ್ಲಿ ನೆರೆದ್ದವರ್ಯಾರೂ ಕೊಡಗಿನ ರಾಜಕೀಯ ಸಂಸ್ಥೆಗಳಾದ ಜಮೀನ್ದಾರರ ಸಂಘ, ಕೊಡವ ಸಭೆ, ಕೊಡಗೇತರ ಸಂಘ, ಗೌಡುಗಳ ಸಭೆ, ತಿವಾಟಾ ಬ್ರಾಹ್ಮಣ ಸಭೆ, ಮುಸಲ್ಮಾನರ ಸಭೆ ಮುಂತಾದವುಗಳ ಪ್ರತಿನಿಧಿಗಳಾಗಿ ಆರಿಸಿ ಕಳುಹಿಸಲ್ಪಟ್ಟವರಲ್ಲವಾಗಿ ತಿಳಿಯುತ್ತೇನೆ. ಅಲ್ಲದೆ, ಮುಸಲ್ಮಾನರ ಸಭೆಯೂ ಅಂಜುಮನ್ ಇತ್ತೆಹಾದೆ ಇಸ್ಲಾಂ ಸಂಘದವರನ್ನು ಬಿಟ್ಟು ಬಿಟ್ಟಿದ್ದರೆಂಬ ಭಾಸವು ತೋರುತ್ತದೆ; ಮತ್ತು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಕಾಂಗ್ರೆಸ್ ಪಕ್ಷದವರು ಈ ಸಭೆಯಲ್ಲಿ ಭಾಗ ತೆಗೆದುಕೊಳ್ಳಲಿಲ್ಲವೆಂಬುದು ಅವರಲ್ಲಿ ಕೆಲವರು ಮೀಟಿಂಗಿಗೆ ಬರೆದಿದ್ದ ಪತ್ರಗಳಿಂದ ಗೊತ್ತಾಗುತ್ತದೆ. ಇದೂ ಅಲ್ಲದೆ ಅಲ್ಲಿ ನೆರೆದ್ದವರ ಪೈಕಿ ಪಾಲ್ಗೊಂಡಲ್ಲಿ ಒಂದು ಭಾಗವೂ ಕೂಡ, ಹೆಚ್ಚಿನ ಜನಸಂಖ್ಯೆ ಇರುವ ದಕ್ಷಿಣ ಕೊಡಗಿನಿಂದ ಬಂದವರಾಗಿರಲಿಲ್ಲ. ಮುಕ್ಕಾಲು ಭಾಗವು ಉತ್ತರ ಕೊಡಗಿನವರಾಗಿದ್ದರು. ಹೀಗಿರುವಲ್ಲಿ ಈ ಸಭೆಯನ್ನು ಸರ್ವಪಕ್ಷ ಪರಿಷತ್ತೆಂದು ಕರೆದುಕೊಳ್ಳುವದು ಯಾವ ನ್ಯಾಯವೋ ನನಗೆ ತಿಳಿಯದು.

"ವಾಚಕ"

ಹಬ್ಬವು ಭಕ್ತಿಗೆ, ಭಕ್ತಿಯು ಹಬ್ಬಕ್ಕಲ್ಲ.

ಜನ್ಮಭೂಮಿಯು ಗೌರಿ ಹಬ್ಬದ ವಿಷಯ ಬಾತ್ಮಿಯನ್ನು ನೋಡಿದೆನು. ಪಟ್ಟಣಿಗರು ತನ್ನ ಬಾತ್ಮಿಯ ವಿಳಾಸಕ್ಕೆ ಅದರೊಳಗಿನ ವಿಷಯವನ್ನು ಸಮರ್ಪಕವಿಲ್ಲದಂತೆ ಕೊಟ್ಟಿದ್ದಾರೆ. ಅದರಲ್ಲಿ ಉಲ್ಲೇಖಿಸುವುದಾದರೆ "ಭಕ್ತಿಬೇಕಾದಲ್ಲಿ ಮಡಿಕೇರಿ ಗೌರಿಹಬ್ಬ" ಮುಂತಾಗಿ ಹೇಳಿ ಮತ್ತು ಹಬ್ಬವಲ್ಲ, ಹುಟ್ಟು ಮತವಲ್ಲ ಎಂದು ಹೇಳಿದ್ದಾರೆ. ಇದರ ಅರ್ಥ ಏನೋ? ಅದು ಅವರಿಗೆ ಇರಲಿ.

ಇವರ ಇಂಥಾ ಲೇಖನಗಳು ಕೇವಲ ಪಕ್ಷವ್ಯವಹಾರವನ್ನು ಬೆಳೆಸುವ ಅಭಿಪ್ರಾಯವಾದವು ಆದ್ದರಿಂದ ಮತ್ತು ಇವರ ಬಾತ್ಮಿಯು ನಿಷ್ಕ್ರಿಯವಾದ ಕಾಲವನ್ನು ಕೊಡದ್ದರಿಂದ ಇವರ ಬಾತ್ಮಿಯನ್ನು ಟೀಕಿಸದೆ ಗೌರಿ ಹಬ್ಬ, ಗಣೇಶನ ಹಬ್ಬ ದಸರಾ ಮತ್ತು ಏಕಾದಶಿ ಇಂಥಾವುಗಳು ಭಕ್ತಿಯನ್ನು ಹೆಚ್ಚಿಸುವಂಬಾಸ್ಪದವಾದ ವಿಷಯಗಳನ್ನು ಕಡಿಮೆಮಾಡಿ ಉಳ್ಳ ಭಕ್ತಿಯನ್ನು ಕುಂದಿಸುವುದಕ್ಕೆ ಹೊರತು ಅನ್ಯಥಾ ಅಲ್ಲವೆಂದು ಹೇಳಬಹುದು. ಭಕ್ತನಾದ ಮೇಲೆ ಆ ಭಕ್ತನಿಗೆ ಹಬ್ಬದ ಅವಶ್ಯಕತೆ ಇಲ್ಲ. ಅಂತೂ ಇಂಥಾ ಹಬ್ಬಗಳು ರಾಜರ ಕಾಲದಿಂದಲೂ ನಡೆದು ಬಂದು ಜನರಲ್ಲಿ ವೈಶಮ್ಯವನ್ನೂ, ಡಂಬವನ್ನೂ, ಹೆಚ್ಚು ಮಾಡುತ್ತಾ ಬಂದೇ ರೀತಿಯಾಗಿವೆಯೋ ಹೊರತು ಆ ಲಾಗಾಯಿತು ಭಕ್ತಿಯ ಮೇಲ್ಪಂಕ್ತಿಯನ್ನು ಹಾಕುವುದಿಲ್ಲ. ಪಟ್ಟಣಿಗರು ಇಂಥಾದ್ದಕ್ಕೆ ಎಡೆಕೊಟ್ಟು ಡಂಬವನ್ನು, ವೈಶಮ್ಯವನ್ನೂ ತಂದಿರಲೆಂದೂ ಹೇಳಿ ಈ ಬಾತ್ಮಿಯನ್ನು ಉದ್ದ ಮಾಡದೆ, ನಾಡದ ಅಭಿಪ್ರಾಯಕ್ಕೆ ಹೋಗದೆ, ಭಕ್ತಿಯು ಶಿಖರಕ್ಕೆ "ಜಯ"ವಾಗಲೆಂದು ಬಾತ್ಮಿಯನ್ನು ಪೂರೈಸುವೆನು. ಇದಕ್ಕೆ ಇನ್ನು ಮುಂದೆ ಬಾತ್ಮಿಯನ್ನು ಬರೆದರೆ ಅದಕ್ಕೆ ಜವಾಬನ್ನು ಬರೆಯುವುದು ಉತ್ತಮ ಮತವಲ್ಲವೆಂದು ಬರೆಯುವುದಿಲ್ಲ.

"ಒಬ್ಬ ಭಕ್ತ."

ಮತ್ತೂರು ದೇವಸ್ಥಾನವೂ, ಹರಿಜನರೂ.

ಮಹನೀಯರೇ,

ಮತ್ತೂರಿನಾಡು ದೇವಸ್ಥಾನಕ್ಕೆ ಹರಿಜನರಿಗೆ (ಅಸ್ಪೃಶ್ಯರಿಗೆ) ಪ್ರವೇಶಕೊಡಲಿಕ್ಕಾಗಿ ತಾರೀಖು 22—10—32 ರಲ್ಲಿ ಸದರಿ ದೇವಸ್ಥಾನದ ತಕ್ಕರುಗಳ [illegible] ಮೀಟಿಂಗೊಂದು ನಡೆಯಿತು. ಮೀಟಿಂಗಿನಲ್ಲಿ ಈಗಿನ ಕಾಲಕ್ಕೆ ಸರಿಯಾಗಿ ಮಹಾತ್ಮರ ಉಪದೇಶವನ್ನು ಪರಿಪಾಲಿಸಲಿಕ್ಕಾಗಿ ಈ ನಾಡುದೇವಸ್ಥಾನಕ್ಕೆ ದೇವರ ದರ್ಶನಕ್ಕೆ ಎಲ್ಲರಿಗೂ ಪ್ರವೇಶ ಕೊಡಬೇಕೆಂದು ದೀರ್ಘ ಚರ್ಚೆ ನಡೆಯಿತು. ಸದರಿ ಮೀಟಿಂಗಿನಲ್ಲಿ ಬಹಳ ಮಹನೀಯರು ತಕ್ಷಣಕ್ಕೆ ಎಲ್ಲರಿಗೂ ಪ್ರವೇಶಕ್ಕೆ ಅನುಕೂಲಪಡಿಸದಿದ್ದರೂ, ಸದ್ಯಕ್ಕೆ ಹರಿಜನರನ್ನು ದೇವಸ್ಥಾನದಿಂದ ಬಹುದೂರ ಹಿಂದುಗಡೆ ಇರುವ ಬಾಗಿಲ ಹೊರಗೆ ನಿಂತು ದೇವರ ದರ್ಶನಕ್ಕೆ ಅನುಕೂಲಪಡಿಸಬೇಕೆಂತಲೂ, ದೇವರ ಸದಾ ಉತ್ಸವಾದಿಗಳಲ್ಲಿ ಕೆಲಸ ಕಾರ್ಯಗಳನ್ನು ನಡೆಸುತ್ತಿರುವ ಬೆಟ್ಟಕುರುಬರು ದೇವಸ್ಥಾನದ ಬಾಗಿಲಿಗೆ ಇಳಿಯಲು, ಸ ...ಮ್ಮತಿಸಬೇಕೆಂತಲೂ, ಬಾಕಿ ಉಳಿದ ಉತ್ತಮ ವರ್ಗದವರೆಲ್ಲರು ತ್ರೀಗೋಲಪೊಂದುಕೆದು ಬಾಕಿ ಎಲ್ಲಾ ಸ್ಥಳಕ್ಕೆ ಪ್ರವೇಶಕ್ಕೆ ಅನುಕೂಲಪಡಿಸಿಕೊಡಬೇಕೆಂಬ ಠರಾವು ತಂದರು. ದೀರ್ಘ ಚರ್ಚೆನಡೆದು ನೆರೆದವರ ಪೈಕಿ ಕೆಲವರು ಇದಕ್ಕೆ ಬಹುಮತ ನೀಡಿ ಸಮ್ಮತಿಸಿದರೂ, ಇನ್ನು ಕೆಲವರು ನಾಡಿನವರನ್ನು ಕೇಳದೆ ನಾವು ಒಪ್ಪುವುದಿಲ್ಲವೆಂದು ಹೇಳಿದರ ಮೇಲೆ ನವಂಬರ್ ತಾರೀಕು 12 ನೇ ಶನಿವಾರಕ್ಕೆ ಒಂದು ಜನರಲ್ ಮೀಟಿಂಗ್ ಮಾಡಿ ತೀರ್ಮಾನ ಮಾಡಬಹುದೆಂದು ರಿಕಾರ್ಡು ಮಾಡಲಾಯಿತು. ನಾಡಿನ ಮಹನೀಯರೆಲ್ಲರು ಮಹಾತ್ಮರ ಉಪದೇಶವನ್ನು ಚೆನ್ನಾಗಿ ಆಲೋಚಿಸಿ, ಈ ವಿಷಯಕ್ಕೆ ತಕ್ಕ ಪ್ರೋತ್ಸಾಹಮಾಡಿ ಹಿಂದೂ ಸಮಾಜವನ್ನು ಉದ್ಧಾರಮಾಡಲು ಮುಂಬರುವರೆಂದೂ ಮತ್ತು ನಮ್ಮ ಕೊಡಗು ದೇಶದಲ್ಲೂ ಮಹಾತ್ಮರ ಉಪದೇಶವು ಕಾರ್ಯತಃ ಜಾರಿಗೆ ಬರದು ನಾವೂ ಸಹ ಭಾರತ ಮಾತೆಯ ಆಶೀರ್ವಾದಕ್ಕೆ ಭಾಗಿಗಳಾಗಬೇಕಾಗಿ ನಾಡಿನ ಮುಖ್ಯ ಮಹನೀಯರಲ್ಲಿ ಬೇಡಿಕೊಳ್ಳುವುದಲ್ಲದೆ ಮತ್ತೂರು ಭೂತನಾಥ ಅಯ್ಯಪ್ಪದೇವರು ಸಹ ಇಂಥಾ ಸಮಾಜ ಉದ್ಧಾರದ ಕೆಲಸಕ್ಕೆ ಸಕಲರಿಗೂ ಒಳ್ಳೆ ಬುದ್ಧಿಕೊಟ್ಟು ಆ ದಿನದ ಮೀಟಿಂಗನ್ನು ಜಯಪ್ರದಮಾಡಲು ಆಶೀರ್ವದಿಸಲೆಂದು ಅಡ್ಡಬಿದ್ದು ಬೇಡುತ್ತೇನೆ.

"ನಾಡಿನವ"

ಕೊಡಗಿನ ನಿರುದ್ಯೋಗದ ಸಮಸ್ಯೆ.

ಅಯ್ಯಾ,

ಕೊಡಗಿನ ಭವಿಷ್ಯತ್ತಿನ ವಿಚಾರವಾಗಿ ಸರಕಾರದವರ ಕೋರಿಕೆ ಮೇರೆ ಅನೇಕರು ಅನೇಕ ಸಲಹೆಗಳನ್ನು ಕೊಟ್ಟಿರುವರು. ಘನ ಸರ್ಕಾರಕ್ಕೆ ಉಚಿತವೆಂದು ತೋರಿದಂತೆ ಕೊಡಗಿನ ಭವಿಷ್ಯತ್ತನ್ನು ನಿರ್ಧರಿಸುವರೆಂಬುದರಲ್ಲಿ ಸಂದೇಹವಿಲ್ಲ. ಲೇಖಕನ ಉದ್ದೇಶವು ಈ ಸಲಹೆಗಳಲ್ಲಿ ಕಂಡು ಬಂದ ಯುವಕರ ನಿರುದ್ಯೋಗವನ್ನು ಕುರಿತು ವಿಮರ್ಶಿಸುವುದಾಗಿದೆ.

ನಮ್ಮನ್ನಾಳುವ ಇಂಡಿಯಾ ಸರ್ಕಾರದವರಿಗೂ, ಮದ್ರಾಸ್, ಮೈಸೂರು ಮತ್ತು ಬೊಂಬಾಯಿ ಸರ್ಕಾರದವರಿಗೂ, ಅನ್ಯೋನ್ಯ ಸಂಬಂಧವಿರುವುದರಿಂದ ಕೊಡಗಿನ ಸರ್ಕಾರವು ಸರಿಯಾಗಿ ಪತ್ರವ್ಯವಹಾರವನ್ನು ನಡೆಸಿದರೆ ಆಗ ಮೇಲಿನ ಸರ್ಕಾರಗಳಿಂದ ಕೊಡಗಿನವರಿಗೆ ಉಂಟಾಗುವ ವೈದ್ಯ, ವಿದ್ಯಾಭ್ಯಾಸ ವಗೈರೆ ಅನಾನುಕೂಲತೆಗಳನ್ನು ಹೋಗಲಾಡಿಸಿಕೊಳ್ಳಬಹುದೆಂಬುದರಲ್ಲಿ ಸಂಶಯವಿಲ್ಲ.

ನಮ್ಮ ಪುಟ್ಟ ದೇಶವನ್ನು ಈ ಮೂರು ಪ್ರಾಂತ್ಯಗಳಲ್ಲಿ ಯಾವುದಾದರೊಂದಕ್ಕೆ ಸೇರಿಸಿದರೆ ನಮ್ಮ ಯುವಕರಿಗೆ ಉದ್ಯೋಗಸಿಕ್ಕುವುದು ಸುಲಭವೆನ್ನುವುದು ಶುದ್ಧ ಭ್ರಮೆಯಾಗಿದೆ. ಯಾಕೆಂದರೆ, ಇಷ್ಟರ ವರೆಗೆ ಈ ಮೇಲಿನ ಪ್ರಾಂತ್ಯಗಳಲ್ಲಿ ನಮ್ಮ ಯುವಕರಿಗೆಷ್ಟು ಜನರಿಗೆ ಉದ್ಯೋಗ ದೊರಕಿದೆ, ಅಲ್ಲಿ ಈಗ ವಿದ್ಯಾವಂತ ಯುವಕರಿಲ್ಲವೋ ಮತ್ತು ಆಯಾ ಪ್ರಾಂತ್ಯಗಳಲ್ಲಿಯೂ ನಿರುದ್ಯೋಗದ ಭೂತದ ಹಾವಳಿ ಇಲ್ಲವೋ, ಎಂಬುದನ್ನು ಚೆನ್ನಾಗಿ ತಿಳಿಕೊಳ್ಳಬೇಕಾಗಿದೆ.

ನಮ್ಮ ವಿದ್ಯಾವಂತರಾದ ಯುವಕರ ನಿರುದ್ಯೋಗಕ್ಕೆ ನಮ್ಮ ಸರ್ಕಾರದ ಮತ್ತು ಮುಖಂಡರ ಉದಾಸೀನತೆಯೂ ಮತ್ತು ದೊಡ್ಡ ಪದವಿಯಲ್ಲಿರುವ ನಮ್ಮ ದೇಶಸ್ಥರ ಕೆಲವರ ದುರಭಿಮಾನವೂ ಕಾರಣವೆಂದು ನನಗೆ ತೋರುತ್ತೆ. ನಾವು ಇಂಪೀರಿಯಲ್ ಗೌವರ್ನಮೆಂಟಿನ ಅಧಿಕಾರಕ್ಕೆ ಒಳಪಟ್ಟಿದ್ದೇವೆ. ಆ ಘನಸರ್ಕಾರದ ಕೈಕೆಳಗೆ ಎಷ್ಟೋ ಆಲ್ ಇಂಡಿಯಾ ಡಿಪಾರ್ಟುಮೆಂಟ್‌ಗಳಿವೆ. ಇವುಗಳಲ್ಲಿ ಎಷ್ಟು ಜನ ಕೊಡಗಿನ ಯುವಕರಿದ್ದಾರೆಂದು ಯೋಚಿಸುವ. ಸ್ಟೇಟ್ ರೈಲುವೆಗಳು ಅನೇಕ ಇವೆ. ಒಂದೊಂದರಲ್ಲಿಯೂ ಲಕ್ಷಾಂತರ ಜನರು ಕೆಲಸದಲ್ಲಿದ್ದಾರೆ. ಮಿಲಿಟರಿ ಇಲಾಖೆಯನ್ನು ತೆಗೆದುಕೊಳ್ಳುವ. ನಮ್ಮನ್ನು ಯುದ್ಧ ಪ್ರಿಯರೆಂದೂ, ಮಾರ್ಷಿಯಲ್ ರೇಸ್ (ಕ್ಷಾತ್ರ ಗುಣದವರು) ಎಂದೂ ಬೇಕುಬೇಕಾದಾಗಲೆಲ್ಲಾ ಇಂಗ್ಲಿಷರು ಹೊಗಳಿದ್ದಾರೆ. ಇಷ್ಟಕ್ಕೇನೇ ನಮ್ಮ ಮುಖಂಡರಿಗೆ ಆನಂದವಾಗಿ ಹೋಗುತ್ತೆ. ಇನ್ನೂ ನಮಗೆ ಒಂದು ನ್ಯಾಯವಾದ ರೆಜಿಮೆಂಟು ಕೊಟ್ಟಿಲ್ಲ. ಟೆರಿಟೋರಿಯಲ್ ಪಟಾಲಮಿನ ಮಾತನ್ನೆತ್ತದಿರುವುದೇ ಲೇಸು. ಹಾಗೂ ಯುದ್ಧಪ್ರಿಯರಾದ ನಮಗೆ ಬೇರೆ ಯಾವುದಾದರೂ ರೆಜಿಮೆಂಟಿನಲ್ಲಾದರೂ ಸ್ಥಳಕೊಟ್ಟಿರುವರೊ, ಅದೂ ಇಲ್ಲ. ಕೆಲವು ಕಮಿಷನ್ಡ್ ಆಫೀಸರುಗಳನ್ನೇನೊ ಮಾಡಿದ್ದಾರೆ. ಆದರೆ ಇದರಿಂದ ದೇಶಕ್ಕೆ ಹೆಚ್ಚಿನ ಪ್ರಯೋಜನವೇನು? ಮಿಲಿಟರಿಯೆಂಬುದೊಂದು ದೊಡ್ಡ ಆಲದ ಮರ; ಅದರ ಶಾಖೋಪಶಾಖೆಗಳು ಅನೇಕ ಇವೆ. ಮಿಲಿಟರಿ ಎಕೌಂಟ್ಸ್, ಆಡಿಟ್, ಮೆಕಾನಿಕಲ್, ಟ್ರಾನ್ಸ್‌ಪೋರ್ಟ್, ಇಂಜಿನೀಯರಿಂಗ್ ಇತ್ಯಾದಿ. ಇದಲ್ಲದೆ ಕಸ್ಟಮ್ಸ್, ಪೋಸ್ಟ್ ಟ್ರಸ್ಟ್, ಟೆಲಿಗ್ರಾಫ್, ಪೋಲೀಸ್, ಎಟಿಕ್ಟಿವ್ ಸರ್ವೀಸ್, ನಾನಾತರದ ಸರ್ವೆ, ಫಾರೆಸ್ಟ್, ಇಂಪೀರಿಯಲ್ ಸೆಕ್ರೆಟರಿಯೇಟ್, ಇಂಜಿನೀಯರಿಂಗ್ ಡಿಪಾರ್ಟ್‌ಮೆಂಟ್, ಪಬ್ಲಿಕ್ ಸರ್ವೀಸ್ ಇವೇ ಮೊದಲಾದ ಅನೇಕ ಆಲ್ ಇಂಡಿಯಾ ಸರ್ವೀಸುಗಳು ಇವೆ. ಇವುಗಳೆಲ್ಲಾ ಒಂದೊಂದರಲ್ಲಿಯೂ ಸಾವಿರಾರು ಯುವಕರು ಪ್ರತಿ ವರ್ಷವೂ ಸೇರುತ್ತಾರೆ, ಹೀಗಿದ್ದರೂ ಒಂದು ಶತಮಾನದಿಂದ ಒಬ್ಬರಾದರೂ ಕೊಡಗಿನ ಯುವಕರು ಈ ಇಲಾಖೆಗಳಲ್ಲಿ ಇಲ್ಲದಿರಲು ಕಾರಣವೇನು? ಕೊಡಗಿನ ಯುವಕರು ವಿದ್ಯೆಯಲ್ಲಿ ಕಡಿಮೆಯೋ? ಇಲ್ಲ. ದೇಹಬಲದಲ್ಲಿ ಕಡಿಮೆಯೋ? ಈ ವಿಷಯದಲ್ಲಿ ಕೊಡಗಿನ ಯುವಕರನ್ನು ಮೀರುವವರು ಹಿಂದೂಸ್ಥಾನದಲ್ಲಿ ವಿರಳ. ಕ್ರಮಶಃ ಹಿಮ್ಮತಿಯಲ್ಲಿಯೂ, ದೇಶದಿಂದ ಹೊರಗೆ ಹೋಗುವುದರಲ್ಲಿಯೂ ಇವರು ಹಿಂಜರಿಯುವವರೆ, ಎಂದಿಗೂ ಇಲ್ಲ. ಆಫ್ರೀಕ, ಬಸ್ರ, ಬೊಂಬಾಯಿ, ಕಲ್ಕತ್ತಾ, ಸಿಂಗಪೂರ್ ಮೊದಲಾದ ಪ್ರದೇಶಗಳಿಗೆಲ್ಲಾ ಇವರು ಹೋಗಿರುತ್ತಾರೆ. ಕೆಲಸದಲ್ಲಿ ಕಡಿಮೆಯೇನೂ ಇಲ್ಲ. ಸತ್ಯಸಂಧತೆಯಲ್ಲಿಯೂ, ಕಷ್ಟಪಟ್ಟು ಕೆಲಸ ಮಾಡುವುದರಲ್ಲಿಯೂ ಯಾರಿಗೂ ಹಿಂದೆಬೀಳುವುದಿಲ್ಲನೆಂದು ಪರಪ್ರಾಂತ್ಯಗಳಲ್ಲಿ ಹೆಸರು ಪಡೆದಿರುವರು. ಮೇಲಾಫೀಸರುಗಳು ಇದನ್ನು ಅನೇಕ ವೇಳೆ ಪ್ರಕಟಗೊಳಿಸಿದ್ದಾರೆ. ಹಾಗಾದರೆ ನಮ್ಮ ಯುವಕರಿಗೆ ಯಾತಕ್ಕಾಗಿ ಉದ್ಯೋಗ ದೊರಕುವುದಿಲ್ಲ? ಬಂದನೇ, ಈ ಬಡ ಯುವಕನೇಕರಿಗೆ ಈ ಡಿಪಾರ್ಟ್‌ಮೆಂಟ್‌ಗಳಿವೆ ಯೆಂಬುದೇ ಗೊತ್ತಿರಲಿಕ್ಕಿಲ್ಲ. ಗೊತ್ತಿದ್ದರೂ ಆಯಾ ಡಿಪಾರ್ಟ್‌ಮೆಂಟುಗಳಲ್ಲಿ ಅವರಿಗೆ ಉದ್ಯೋಗದೊರಕಲು ಉತ್ತೇಜನ ಕೊಡುವವರೇ ಗತಿ ಇಲ್ಲ. ಅಲ್ಲಿ ಇಲ್ಲಿ ನೌಕರಿ ಕ್ಯಲ್ಲಿರುವ ಹಣವನ್ನೆಲ್ಲಾ ವೆಚ್ಚಮಾಡಿಕೊಂಡು ಕಂಗೆಟ್ಟು ನನ್ನ ಪಾಡವೇ ಗತಿಯೆಂದು ಕೊಡಗಿಗೆ ವಾಪಸು ಬರುವರು.

ನಮ್ಮ ಸರ್ಕಾರವು ಈ ವಿಷಯದಲ್ಲಿ ಕಳೆದ ಒಂದು ಶತಮಾನದಿಂದ ಏನೊಂದೂ ತೊಂದರೆ ತೆಗೆದುಕೊಂಡಿರುವುದಿಲ್ಲ. ಮೈಸೂರು ಮೈಸೂರಿನವರಿಗೆಂಬ ಕ್ಯಾನ ರೋಗವು ಹುಟ್ಟಿ ಬಹಳ ವರ್ಷವಾಯಿತು. ಈ ರೋಗವು ಇಂಡಿಯಾ ದೇಶವೆಲ್ಲೆಲ್ಲಾ ಹರಡಿದೆ. ಇಂಪೀರಿಯಲ್ ಆಫ್ ಇಂಡಿಯಾ ಸರ್ವೀಸುಗಳಲ್ಲೇಕೆ, ಆ ಸರ್ಕಾರದ ಆಡಳಿತಕ್ಕೆ ಒಳಪಟ್ಟ ನಮ್ಮ ಸಣ್ಣ ದೇಶಗಳ ಪ್ರಜೆಗಳಿಗೆ ಸ್ವಲ್ಪವೂ ಹಕ್ಕಿಲ್ಲದಿರುವುದು? ಇದರ ಬಂದೊಂದು ಡಿಪಾರ್ಟ್‌ಮೆಂಟಿನಲ್ಲಿಯೂ ಕೆಲವು ಹುದ್ದೆಗಳನ್ನು ಈ ಬಡ ದೇಶಸ್ಥರಿಗೆ ಒದಗಿಸಿಕೊಟ್ಟರೆ ಆ ದೇಶಗಳಲ್ಲಿನ ನಿರುದ್ಯೋಗವು ಕಡಿಮೆಯಾಗುವುದಲ್ಲದೆ, ಈಗ ಈ ಹುದ್ದೆಗಳನ್ನು ಹೊಂದಿಕೊಂಡಿರುವ ಇತರ ದೇಶಸ್ಥರಿಗೆ ಸ್ವಲ್ಪವೂ ಅನ್ಯಾಯವೇನೂ ಆಗದು. ಆದರೆ ಸರ್ಕಾರದವರು ತಮ್ಮ ತಮ್ಮ ಹುದ್ದೆಗಳನ್ನೇ ಅಲ್ಲ, ವಿದ್ಯಾ ಸಂಸ್ಥೆಗಳನ್ನೂ, ಆಸ್ಪತ್ರೆಗಳನ್ನೂ ನಮ್ಮ ಪುಟ್ಟ ದೇಶಸ್ಥರಿಗೆ ಸುಲಭವಾಗಿ ಕೊಡದಿರುವಾಗ ನಮ್ಮ ಸರ್ಕಾರವೇಕೆ ಆಲ್ ಇಂಡಿಯಾ ಡಿಪಾರ್ಟ್‌ಮೆಂಟ್‌ಗಳಲ್ಲಿ ನಮ್ಮ ಜನರಿಗೆ ಅನುಕೂಲಮಾಡಿಕೊಡಬಾರದು? ಇದೊಂದು ಹಕ್ಕಾಗಿ ಕೇಳಬಹುದು. ಹಾಗಿಲ್ಲದಿದ್ದರೂ ತಕ್ಕ ಪತ್ರವ್ಯವಹಾರಗಳ ಮೂಲಕ ಒಂದೊಂದು ಡಿಪಾರ್ಟ್‌ಮೆಂಟಿನಲ್ಲಿಯೂ ಆ ಅನುಕೂಲ ಮಾಡಿಕೊಳ್ಳಬಹುದು.

ಇನ್ನೊಂದು ವಿಚಿತ್ರ ಸಂಗತಿ. ಹಜೂರ್ ಚೀಫ್ ಕಮಿಷನರವರ ಆಫೀಸಿನಲ್ಲಿ ಗುಟ್ಟು ಬೈಲಾಗುವುದೆಂಬ ಹೆದರಿಕೆಯಿಂದಲೋ ಏನೋ, ಮದ್ರಾಸು ಅಧಿಪತ್ಯಕ್ಕೆ ಸೇರಿದವರನ್ನು ಕೆಲಸಕ್ಕೆ ಇಟ್ಟುಕೊಂಡಿದ್ದಾರೆ. ಮೈಸೂರು, ಮದ್ರಾಸು, ಬೊಂಬಾಯಿ ಮೊದಲಾದ ಪ್ರಾಂತ್ಯಗಳ ಮುಖ್ಯ ಪಟ್ಟ ಆಫೀಸುಗಳಲ್ಲೇಕೆ ಕೊಡಗಿನವರನ್ನು ನೇಮಿಸಿಲ್ಲ? ಬದಲು ಆಯಾ ಸಂಸ್ಥಾನದವರೆ ಇದ್ದಾರೆ. ಮುಖ್ಯ ಸಂಗತಿ ಏನೆಂದರೆ, ಆ ಸರ್ಕಾರದವರೂ, ಅಲ್ಲಿಯ ಜನರೂ ಅವರವರ ಜನರಿಗೆ ಉತ್ತೇಜನ ಕೊಡುತ್ತಿದ್ದಾರೆ. ನಮ್ಮವರಾದರೊ?

ನಮ್ಮ ಜನರು ಕೆಲಸ ತೆಗೆದುಕೊಂಡಲ್ಲೆಲ್ಲಾ ತಮ್ಮ ಶ್ರದ್ಧೆ, ಪ್ರಾಮಾಣಿಕತನ, ಸತ್ಯಸಂಧತೆಗಳಿಂದ ಪ್ರಖ್ಯಾತಿಗೆ ಬಂದಿರುವರಾದರೂ, ದೊಡ್ಡ ಪದವಿಗಳಲ್ಲಿರುವ ನಮ್ಮ ದೇಶಸ್ಥರಲ್ಲಿ ಕೆಲವರು ನಮ್ಮ ಯುವಕರನ್ನು ಪ್ರೋತ್ಸಾಹಿಸದಿರುವುದು ನಿರುದ್ಯೋಗದ ಇನ್ನೊಂದು ಕಾರಣವಾಗಿದೆ. ಇತರ ಯಾವ ಜನರೇ ಆಗಲಿ ತಮ್ಮ ತಮ್ಮ ಜನರಿಗೆ ಎಲ್ಲ ವಿಧದ ಸಹಾಯ ಮಾಡುತ್ತಾರೆ. ಅಬ್ಬ ಅಯ್ಯರ್, ಅಯ್ಯಂಗಾರ್, ಮುಸಲ್ಮಾನ್ ಆಫೀಸರಾದೊಡನೆ ಅವರವರ ಮತ್ತು ಸ್ನೇಹಿತರ ಆಫೀಸುಗಳನ್ನು ಆಯಾ ಜನಾಂಗದವರೇ ತುಂಬಿಸುವುದು ಎಲ್ಲೆಲ್ಲಿಯೂ ನೋಡುತ್ತೇವೆ. ಹೆಚ್ಚೇಕೆ, ಇಂಗ್ಲಿಷ್ ಅಧಿಕಾರಿಗಳೂ ತಮ್ಮ ಜನಾಂಗ, ಎಂಗ್ಲೋ ಇಂಡಿಯನ್‌ರಿಗೂ ಎಷ್ಟೊಂದು ಪ್ರೋತ್ಸಾಹ ಕೊಡುತ್ತಾರೆ. ನಮ್ಮ ಜನರಲ್ಲಿ ಅನೇಕರಿಗಾದರೊ ಬಡ ಯುವಕರಿಗೆ ಕೆಲಸ ಸಿಕ್ಕಲು ಸಹಾಯಮಾಡಿದಾಕ್ಷಣವೆ ಅವರ ಡಿಗ್ನಿಟಿಗೆ (ಗೌರವಕ್ಕೆ) ಕುಂದಕ ಬಂದು ಬಿಡುತ್ತೆಯಂತೆ! ಕೆಲವು ಸಮಯಗಳಲ್ಲಿ ಇಂತಹ ಮಹನೀಯರು ಸಹಾಯಮಾಡುವುದರ ಬದಲು ನಾನಾವಿಧಗಳಿಂದ ಯುವಕರಿಗೆ ಕೆಲಸ ಸಿಕ್ಕುವುದನ್ನು ವಿರೋಧಿಸುವುದು ನೋಡುವಾಗ [illegible] ಬೇಕಾದ ಕನಿಕರದ ಬದಲು ಅಸೂಯೆ ಇವರಿಗೆ ಇರುವುದೆಂದು ತೋರಿಬರುತ್ತೆ. ಹಾಗೂ ಬಡ ಕೊಡಗು ನಿವಾಸಿಗಳು ಇಂತಹ ಮಹನೀಯರು ರೆಸ್ಟರಿಗೆ ಬಂದು, ಬಂದೆಂದು ಮೀಟಿಂಗುಗಳಲ್ಲಿ "ಮಾತೃಭೂಮಿ"ಯ ವಾಚನಮಾಡಬಿಟ್ಟರೆ ಹಿಂದುಮುಂದು ನೋಡದೆ ಇವರಿಗೆ ದೇಶಾಭಿಮಾನಿಗಳೆಂಬ ಬಿರುದುಗಳನ್ನು ದಯಪಾಲಿಸಿಬಿಡುತ್ತಾರೆ.

ಕೈಗಾರಿಕೆಗೆ (ಇಂಡಸ್ಟ್ರಿಯಲ್ ಡೆವಲಪ್ಮೆಂಟ್) ನಮ್ಮ ಪುಟ್ಟ ದೇಶದಲ್ಲಿ ಬಹಳ ಎಡೆಯುದೆಯಾದರೂ ಇದನ್ನು ಪ್ರೋತ್ಸಾಹಿಸಲು ತಕ್ಕ ಏರ್ಪಾಟುಗಳೇನೂ ನಡೆದಿಲ್ಲ.

ನಮ್ಮ ದೇಶವನ್ನು ಬೇರೆ ಪ್ರಾಂತ್ಯದೊಂದಿಗೆ ಸೇರಿಸಲಿ, ಸೇರಿಸದಿರಲಿ ಯುವಕರ ನಿರುದ್ಯೋಗದಿಂದ ದೇಶಕ್ಕೆ ಉಂಟಾಗುವ ಹಾನಿಯನ್ನು ಗಣನೆಗೆ ತಂದುಕೊಂಡು ನಮ್ಮ ಸರ್ಕಾರವೂ, ಮುಖಂಡರೂ ಮತ್ತು ದೇಶಸ್ಥರೂ ಈ ವಿಷಯಕ್ಕೆ, ಬೇರೆ ವಿಧಾನಗಳಿಗೂ ಒಡನೆ ಗಮನಕೊಡುವರೆಂದು ಅತಿ ವಿನಯದಿಂದ ಪ್ರಾರ್ಥಿಸುವ.

"[illegible] ವ ಕೊಡಗಿ"

೫೬ ವರುಷಗಳ ಅನುಭವ ಸಿದ್ಧ ಔಷಧಗಳು.

೧. ಧಾತುಪುಷ್ಟಿ ಲೇಹ—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ಬಾಧೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಉರಿಯುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು.
ಡಬ್ಬಿ 1ಕ್ಕೆ ರೂ 2—8—0. 3ಕ್ಕೆ ರೂ. 7—0—0.

೨. ಅಶೋಕಾರಿಷ್ಟ ಮತ್ತು ಮಾತ್ರೆ—ಹೆಂಗಸರ ಮುಟ್ಟಿನದೋಷಗಳು, ಮುಟ್ಟು ನಿಲ್ಲುವುದು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾನಹೀನತೆ, ಮೂರ್ಛೆ, ಮಲಬದ್ಧತೆ, ಒಳಜ್ವರ, ರಕ್ತಹೀನತೆ, ಕೈ ಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಗುಣಪಡಿಸುವದು. ಬಾಟ್ಲಿ 1ರ 1—4—0, 1 ಡಬ್ಬಿ ಮಾತ್ರೆಗೆ 1—0—0; 3 ಬಾಟ್ಲಿ ಔಷಧಕ್ಕೂ, 3 ಡಬ್ಬಿ ಮಾತ್ರೆಗೂ 6—4—0.

೩. ಚಂದನಾಸವ ಮತ್ತು ಮಾತ್ರೆಗಳು—ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಪೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರವು ಆಗಾಗ್ಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳನ್ನೂ, ಬಾಯಾರಿಕೆ, ಮಲಬದ್ಧತೆ, ಸ್ವಪ್ನಾವಸ್ಥೆ ಇವುಗಳ ಮೇಲೆ ಸಿದ್ಧೌಷಧ. ಬಾಟ್ಲಿ 1ರ 1-2-0; 1ಡಬ್ಬಿ ಮಾತ್ರೆಗೆ 1-6-0. 2 ಬಾಟ್ಲಿ ಔಷಧಕ್ಕೂ, 2 ಡಬ್ಬಿ ಮಾತ್ರೆಗೂ 4—12—0.

೪. ಬಾಲಾಗ್ರಹ ಗುಟಿಕೆ—ಬಾಲಾಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರು ಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧ. ಬಾಟ್ಲಿ ಒಂದಕ್ಕೆ 0—10—0. 3ಕ್ಕೆ 1—12—0.

೫. ಸುಖಬೇಧಿ ಗುಟಿಕೆ—ತಿಯಾಸವನ್ನುಂಟುಮಾಡದ ಸುಖವಿರೇಚಕ. ಬಾಟ್ಲಿ 1ರ 0—10—0. 3ಕ್ಕೆ 1—12—0.

೬. ಸ್ಪಂದನ ವಟಿ—ಜ್ವರ ನಿಂತು ಜ್ವರಗಡ್ಡೆ ಕರಗಿ ಮಲವಿಸರ್ಜನೆ ಆಗುವದು. ಬಾಟ್ಲಿ 1ಕ್ಕೆ 1—0—0;

೭. ಮಲೇರಿಯಾ ನಿವಾರಿಣಿ—ಎಲ್ಲಾ ನಮೂನೆಯ ಜ್ವರಕ್ಕೆ ಬಾಟ್ಲಿಗೆ 1—8—0.

೮. ಮಹಾ ಮದನಕಾಮೇಶ್ವರಿ ಲೇಹ ಡಬ್ಬಿ 1ಕ್ಕೆ 2—0—0.

೯. ದಂತಕಾಂತಿ ಚೂರ್ಣ—ಡಬ್ಬಿ 1ರ 3 ಅಣೆ. 6 ಡಬ್ಬಿಗಳಿಗೆ 1—2—0.

ಯಂ. ಗಣಪಯ್ಯ ಎಂಡ್ ಸನ್ಸ್,
ಆಯುರ್ವೇದಿಕ್ ಫಿಸಿಶಿಯನ್ಸ್,
52—7 ರಥಬೀದಿ, ಮಂಗಳೂರು.

ರತಿ ಮನ್ಮಥ ಎಂಬ ಮರ್ಮಶಾಸ್ತ್ರ.

ಕ್ರಯ ರೂ. 1—1—0.

ಕನ್ನಡ ಭಾಷೆಯಲ್ಲಿ ಅಂದವಾಗಿ ಪ್ರಿಂಟಾಗಿದೆ. ಇದರಲ್ಲಿ ಸ್ತ್ರೀ ಪುರುಷರ ಪ್ರೀತಿಯ ರಹಸ್ಯಗಳು, ಪ್ಯಾರಿಸ್ ವೇಶ್ಯಾ ಸ್ತ್ರೀಯರ ಪ್ರೀತಿಯ ವರ್ಣನೆಗಳು, ಮಲೆಯಾಳ, ಜಪಾನ್, ಫ್ರೆಂಚ್ ದೇಶದ ವೇಶ್ಯಾ ಸ್ತ್ರೀಯರ ಮಲಗುವ ಫೋಟೋಗಳು, ಇನ್ನೂ ಸ್ತ್ರೀ ಪುರುಷರ ಅನೇಕ ರಹಸ್ಯಗಳು 22 ರೀತಿಗಳ ಫೋಟೋಗಳ ಸಹಿತ ಕೂಡಿದೆ. ಈ ಶೃಂಗಾರವಾದ ಪುಸ್ತಕವನ್ನು ಓದಲು ಆನಂದವಾಗಿರುವುದು. 22 ಫೋಟೋಗಳ ಸಹಿತ ಪ್ಯಾರಿಸ್ ದೇಶದ ವ್ಯಭಿಚಾರಿಗಳ ವಿನೋದಗಳು, ಕನ್ಯೆಗಳ ಪ್ರೀತಿ, ಶಯ್ಯಾಗೃಹದ ರಹಸ್ಯಗಳು ಅಡಗಿದೆ.

ಕ್ರಯ ಪುಸ್ತಕ 1ಕ್ಕೆ ರೂ. ೧—೦—೦.

ಯಂ. ಲಿಂಗಂ ಬುಕ್ ಡಿಪೋ,
ಪೋಸ್ಟ್ ಬಾಕ್ಸ್ ನಂ. 245.
12—5 ಮದರಾಸ್.

M. Lingam Book Depot.
Post Box No. 245. Madras.

ಇಂಡಿಯಾ ಎಕ್ವಿಟೇಬಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

[(ಸ್ಥಾಪಿಸಲ್ಪಟ್ಟದ್ದು 1908.)]

ಕಳೆದ ವರ್ಷದ ಫಲಿತಾಂಶಗಳು.

ಹಿಂದಿನ ವರ್ಷದ ಕೆಲಸಕ್ಕಿಂತ 64% ಹೆಚ್ಚು.

ಕಳೆದ ವರ್ಷ ಸಂಭವಿಸಿದ ಪಕ್ವ ಬಾಧ್ಯಸ್ಥರಲ್ಲಿ ಶೇಕಡ 96·6 ಜನರಿಗೆ ಹಣ ಅದೇ ವರ್ಷ ಕೊಡಲಾಗಿದೆ.

ಖರ್ಚಿನ ಪ್ರಮಾಣವು 31% ಮಾತ್ರ.

ಇಂಡಿಯಾ ಎಕ್ವಿಟೇಬಲ್ ಇನ್ಶೂರೆನ್ಸ್ ಕಂಪೆನಿಯು ಬುಡದಿಂದ ತಲೆಯ ವರೆಗೂ ಇಂಡಿಯನೇ.

ಮಜಬೂತರಾದ ಏಜೆಂಟರುಗಳು ಬೇಕಾಗಿದ್ದಾರೆ.

ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಕೆ. ಇ. ಜಾಕೊ,
ಬ್ರಾಂಚ್ ಸೆಕ್ರೆಟರಿ,
159 ಶ್ರೀ ನರಸಿಂಹರಾಜ ರೋಡ್,
ಬೆಂಗಳೂರು ಸಿಟಿ.

ಅಥವಾ

(1) ಮಿಸ್ಟರ್ ಸಿ. ಯಂ. ಪೂವಯ್ಯ,
ಲೇಡಿ ಟೈಲರಿಂಗ್ ಹೌಸ್,
'ಪೂವಯ್ಯ ವಿಲ್ಲಾ,'
ಮಡಿಕೇರಿ.

(2) ಯಂ. ಸಿ. ಅಪ್ಪಚ್ಚು,
ರಿಟೈರ್ಡ್ ವಾರ್ತಾಪತ್ರಿಕಾಗಾರ್,
ಹಿಲ್ ರೋಡ್,
ಮಡಿಕೇರಿ.

(12—9)

GOVERNMENT SOAP FACTORY,
Bangalore.

ವಿಶ್ವಾಸಾರ್ಹತೆ.

ಅತ್ಯುತ್ತಮವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ ಯಾವ ಗುಣಗಳು ಅವಶ್ಯಕವೆಂದು ನೀವು ತಿಳಿದಿರುತ್ತೀರೋ ಆ ಗುಣಗಳೆಲ್ಲಾ ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.

ನಾವು ನಿಮಗೆ ಭರವಸೆಯನ್ನೀಯುತ್ತೇವೆ.

ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
52—9 ಬೆಂಗಳೂರು.

ಮೂರನೇ ದುಂಡು ಮೇಜು ಪರಿಷತ್ತು.

ಈ ತಿಂಗಳ ಮೂರನೇ ವಾರದಲ್ಲಿ ಲಂಡನಿನಲ್ಲಿ ನಡೆಯುತ್ತಿರುವ 3ನೇ ದುಂಡು ಮೇಜು ಪರಿಷತ್ತಿಗೆ ಸರ್ಕಾರದವರು ಈ ಕೆಳಗಿನ ಮೆಂಬರುಗಳನ್ನು ನೇಮಿಸಿರುವರು.

ಬ್ರಿಟಿಷ್ ಹಿಂದೂಸ್ಥಾನದಿಂದ 1. ಆಗಾ ಖಾನರು, 2. ಡಾ. ಅಂಬೇಡ್ಕರ್, 3. ಬೊಬ್ಬಿಲಿ ರಾಜರು, 4. ಸರ್. ಹ್ಯೂಬರ್ಟ್ ಕಾರ್, 5. ಮಿ. ಹೆಚ್. ಫಜ್ಲುಲ್ ಹಕ್, 6. ಸರ್. ಹೆನ್ರಿ ಗಿಡ್ನೆ, 7. ಸರ್. ಮಹ್ಮದ್ ಇಕ್ಬಾಲ್, 8. ಶ್ರೀ. ಯಂ. ಆರ್. ಜಯಕರ್, 9. ಸರ್. ಕೌಸಾಜಿ ಜಹಾಂಗೀರ್, 10. ಶ್ರೀ. ಯನ್. ಸಿ. ಕೇಳ್ಕರ್, 11. ದಿವಾನ್ ಬಹದ್ದೂರ್ ರಾಮಸ್ವಾಮಿ ಮೊದಲಿಯಾರ್, 12. ಪಂಡಿತ ನಾನಕ್‌ಚಂದ್. 13 ಡಾ. ಬಿ. ಎಸ್. ಮೂಂಜೆ, 14. ಸರ್. ಪುರುಷೋತ್ತಮದಾಸ್ ಠಾಕೂರ್‌ದಾಸ್, 15. ಸರ್. ಸಪ್ರು, 16 ಡಾ. ಶಫಾತ್ ಅಹಮದ್ ಖಾನ್, 17. ಸರ್ದಾರ್ ತಾರಾಸಿಂಗ್, 18 ಚೌಧುರಿ ಜಫರುಲ್ಲಾ ಖಾನ್.

ಸಂಸ್ಥಾನಗಳಿಂದ.

1. ರಾ. ಬ. ವಿ. ಟಿ. ಕೃಷ್ಣಮಾಚಾರಿ (ಬರೋಡ), 2. ರಾ. ಬ. ರಾಜಾ ಕೃಷ್ಣನಾರಾಯಣಪ್ರಯಾಗ (ಧಾರ್), 3. ಸರ್. ಮನುಭಾಯಿ ಮೆಹತ (ಬಿಕಾನೀರ್), 4. ನವಾಬ್ ಸರ್. ಮಹ್ಮದ್ ಅಕ್ಬರ್ ಹೈದರಿ (ಹೈದರಾಬಾದ್), 5. ಮಿ. ವಜಹತ್ ಹುಸೇನ್ (ಕಾಶ್ಮೀರ್), 6 ರಾ. ಬ. ಡಿ. ಎ. ಸುರ್ವೆ, (ಕೊಲ್ಹಾಪೂರ್), 7. ಸರ್. ಮಿರ್ಜಾ ಮಹ್ಮದ್ ಇಸ್ಮಾಯಿಲ್ (ಮೈಸೂರು), 8. ಮಿ. ರಷ್‌ಬ್ರೂಕ್ ವಿಲಿಯಮ್ಸ್, (ನವಾನಗರ್), 9. ನವಾಬ್ ಲಿಯಾಖತ್ ಹಯಾತ್ ಖಾನ್, (ಪಾಟಿಯಾಲ), 10. ಸರ್. ಸುಖದೇವಪ್ರಸಾದ್ (ಜಯಪೂರ್, ಜೋಧಪುರ, ಉದಯಪುರ), 11. ಸರಿಲಾ ರಾಜರು, (ಸಣ್ಣ ಸಂಸ್ಥಾನಗಳು), 12. ಮತ್ತು 13. ತಿರುವಾಂಕೂರು ಮತ್ತು ರೇವಾ ಪ್ರತಿನಿಧಿಗಳು.

ಈ ಹೆಸರುಗಳನ್ನು ನೋಡಿ ಹಲವು ಮುಂದಾಳುಗಳು ಆಶ್ಚರ್ಯವನ್ನೂ, ಅಸಮಾಧಾನವನ್ನೂ ಸೂಚಿಸಿರುವರು. 100 ಮೆಂಬರುಗಳಿದ್ದ ಕಳೆದ ದುಂಡು ಮೇಜು ಪರಿಷತ್ತಿನಲ್ಲಿ 13 ಜನರು ಇಂಡಿಯಾದ ಲಿಬರಲ್ ಪಕ್ಷದವರಾಗಿದ್ದರು. ಆದರೆ ಈ ಸಾರಿ 33 ಮೆಂಬರುಗಳಲ್ಲಿ ಒಬ್ಬರು ಮಾತ್ರ ಆ ಪಕ್ಷದವರಿರುವರು. ಮಿ. ಶ್ರೀನಿವಾಸಶಾಸ್ತ್ರಿ ಮತ್ತು ಸಿ. ವೈ. ಚಿಂತಾಮಣಿಯವರನ್ನು ನೇಮಿಸದೆ ಇದ್ದದ್ದು ಆಶ್ಚರ್ಯವೇ ಸರಿ.

ಮುಸಲ್ಮಾನರ ಪ್ರತಿ ಕೋಮುವಾರು ತತ್ವವಾದಿಗಳನ್ನೇ ಈ ಪರಿಷತ್ತಿಗೆ ನೇಮಿಸಿರುತ್ತಾರೆ. ರಾಷ್ಟ್ರೀಯ ಪಂಗಡದ ಮುಸ್ಲಿಂರಾರಿಗೂ ಆಮಂತ್ರಣವಿಲ್ಲ. ಮುಸಲ್ಮಾನರ 14 ಕರಾರುಗಳನ್ನು ರಚಿಸಿದ ಮಿ. ಜಿನ್ನಾರವರಿಗೆ ಈ ಪರಿಷತ್ತಿನಲ್ಲಿ ಸ್ಥಳವಿಲ್ಲದ್ದಾಗಿದೆ.

ಕಳೆದ ಸಾರಿ ಸಂಸ್ಥಾನಗಳ ಪರ ರಾಜರುಗಳೇ ಹೆಚ್ಚಾಗಿ ಪರಿಷತ್ತಿಗೆ ಹೋಗಿದ್ದರು. ಆದರೆ ಈ ಸಲ ಅವರ ಮಂತ್ರಿಗಳನ್ನು ಕಳುಹಿಸುವಂತೆ ಏರ್ಪಡಿಸಿರುವರು. ಆದರೂ ಕೂಡ ಹಿಂದಿನ ಪರಿಷತ್ತಿನಲ್ಲಿ ಫೆಡರೇಶನಿಗಾಗಿ ಬಹಳವಾಗಿ ಕೆಲಸ ಮಾಡಿದ ಸರ್ ಕೆ. ಯಮ್. ಹೈದರಿಯವರನ್ನು ಬಿಟ್ಟು ಬಿಟ್ಟಿರುವರು.

ಈ ಪರಿಷತ್ತಿಗೆ ಕಾಂಗ್ರೆಸ್ಸಿನ ಪ್ರತಿನಿಧಿಗಳನ್ನು ಕರೆಯಬೇಕೆಂದು ಪ್ರಧಾನ ಮಂತ್ರಿಯವರು, ಬಾಲ್ಡ್ವಿನ್ನರು, ಲಾರ್ಡ್ ಇರ್ವಿನ್ನರು ಮತ್ತು ನೇಶನಲ್ ಲೇಬರ್ ಪಕ್ಷದವರು ಇರಾದೆ ಪಟ್ಟಿದ್ದರಂತೆ. ಆದರೆ ಬಹುಮತದಲ್ಲಿರುವ ಕನ್ಸರ್ವೇಟಿವ್ ಪಕ್ಷದವರು ಇದಕ್ಕೆ ಅಡ್ಡಿ ಬಂದು, ಇದನ್ನು ನಡಿಸಲು ಬಿಟ್ಟಿರುವುದಿಲ್ಲ. ಆದರೂ ದು. ಮೇ. ಪರಿಷತ್ತಿನ ಪ್ರಾರಂಭದಲ್ಲಿ ಪ್ರಧಾನಿಯವರು, ಲಾರ್ಡ್ ಶ್ಯಾಂಕಿ, ಸಪ್ರು, ಆಗಾಖಾನ್ ಮತ್ತು ಕೇಳ್ಕರವರೊಂದಿಗೆ ಸಂಭಾಷಿಸಿ, ಒಂದು ಪ್ರಕಟಣೆಯನ್ನು ಹೊರಡಿಸುವರೆಂದೂ, ಅದರ ಮೇಲೆ ಮಹಾತ್ಮರೊಂದಿಗೆ ರಾಜಿ ಸಂಧಾನಗಳನ್ನು ಮಿ. ಶ್ರೀನಿವಾಸ ಶಾಸ್ತ್ರಿ ಮುಂತಾದವರ ಮೂಲಕ ನಡಿಸುವ ಪ್ರಯತ್ನಗಳಾಗುವವೆಂದೂ ವರ್ತಮಾನ.

ಈ ಮಧ್ಯೆ ನಿರುದ್ಯೋಗಿಗಳ ಗಲಾಟೆಯು ಇಂಗ್ಲೆಂಡಿನಲ್ಲಿ ಜೋರಾಗುತ್ತಿದೆ. ಅವರು ಮೆರವಣಿಗೆ ಹೊರಟಾಗ್ಯೆ ಅವರ ಮೇಲೆ ಲಾಠಿ ಪ್ರಯೋಗಗಳೂ, ದಸ್ತಗಿರಿಗಳೂ ಆಗುತ್ತಿವೆ. ಈ ಸಮಯದಲ್ಲಿ ಮಹಾತ್ಮರನ್ನು ಇಂಗ್ಲೆಂಡಿಗೆ ಕರೆಸಿಕೊಂಡರೆ ಈ ನಿರುದ್ಯೋಗಿಗಳಿಗೆ ಹೆಚ್ಚಿನ ಉತ್ತೇಜನ ದೊರೆಯುವುದೆಂದೂ, ಒಟ್ಟಿನ ಪರಿಷತ್ತಿನ ನಿರ್ಣಯಗಳಿಂದ ಇಂಗ್ಲೆಂಡಿನಲ್ಲಿ ಕೆಲವರಿಗೆ ಹುಟ್ಟಿರುವ ಅಸಮಾಧಾನವು ವೃದ್ಧಿಯಾಗಬಹುದೆಂತಲೂ ಕೆಲವರು ಅಭಿಪ್ರಾಯ ಸೂಚಿಸಿರುವರು.

ಗಾಂಧೀಜೀಯವರನ್ನು ಬಂಧನದಿಂದ ಬಿಡುಗಡೆ ಮಾಡದೆ ಹೋದರೆ ಕೋಮುವಾರು ಸಮಸ್ಯೆಯು ತೀರ್ಮಾನವಾಗಲೀ, ದುಂಡು ಮೇಜು ಪರಿಷತ್ತಿನ ಕಾರ್ಯಕಲಾಪಗಳಾಗಲೀ ಉಪಯುಕ್ತವಾಗಲಾರವೆಂದು ಎಲ್ಲಾ ಕೋಮಿನವರಿಗೂ, ಎಲ್ಲಾ ಪಾರ್ಟಿಯವರಿಗೂ ಮತ್ತು ಸರ್ಕಾರದವರಿಗೂ ಚೆನ್ನಾಗಿ ಗೊತ್ತಿದೆ. ಹಿಂದೂ ದೇಶದಲ್ಲಿ ಮಾತ್ರವಲ್ಲ ಇಂಗ್ಲೆಂಡಿನಲ್ಲಿಯೂ ಕೂಡ ಅವರನ್ನು ಬಿಡುಗಡೆಮಾಡಿ ಅವರ ಸಹಕಾರವನ್ನು ಪಡೆಯಬೇಕೆಂದು ಜನರು ಒತ್ತಿ ಕೇಳುತ್ತಿದ್ದಾರೆ. ಸ್ಟಾಫರ್ಡ್ ಕ್ರಿಪ್ಸ್, ಶಿವಸ್ವಾಮಿ ಅಯ್ಯರ್, ಶ್ರೀನಿವಾಸ ಶಾಸ್ತ್ರಿಗಳಂಥ ಮುತ್ಸದ್ದಿಯರುಗಳೂ ಕೂಡ ಮಹಾತ್ಮರನ್ನು ಬಿಡಬೇಕೆಂದು ವೈಸರಾಯರನ್ನು ಕೇಳಿಕೊಂಡಿರುವರು. ಬ್ರಿಟಿಷ್ ಲೇಬರ್ ಪಾರ್ಟಿಯವರೇ, ಕಾಂಗ್ರೆಸು ಸಹಕರಿಸದೆ ಹೋದರೆ ತಾವು ದು. ಮೇ. ಪರಿಷತ್ತನ್ನು ಬಹಿಷ್ಕರಿಸುವೆವೆಂದು ನಿಶ್ಚಯಿಸಿರುವರು. ಇಂಡಿಯಾ ಸ್ವಾತಂತ್ರ್ಯದ ಅತಿ ತೀವ್ರ ಶತ್ರುವಾದ ಮಿ. ಚರ್ಚಿಲ್ಲರೂ ಕೂಡ, ಇಂಡಿಯಾದ ಪರವಾಗಿ ಮಾತಾಡಬಹುದಾದ ಸಂಸ್ಥೆಯು ಕಾಂಗ್ರೆಸಾಗಿದೆ, ಅದು ಸಹಕರಿಸದೆ ಹೋದರೆ ಯಾವ ಪರಿಷತ್ತಿನ ತೀರ್ಮಾನವನ್ನೂ ಜಾರಿಗೆ ತರಲು ಸಾಧ್ಯವಾಗಲಿಕ್ಕಿಲ್ಲವೆಂದು ಹೇಳಿರುವರು. ಹೀಗಿರುವಾಗ್ಯೆ ಕಾಂಗ್ರೆಸ್ಸಿನ ಪ್ರತಿನಿಧಿಯಾದ ಮಹಾತ್ಮರು ಸೇರದ ಪರಿಷತ್ತು ಹೇಗೆ ಅಂತ್ಯವಾಗುವದೆಂದು ಜನರು ಎದುರು ನೋಡುತ್ತಿದ್ದಾರೆ.

ಕೊಡಗಿನ ಭವಿಷ್ಯತ್ತನ್ನು ಕುರಿತು ಮೀಟಿಂಗುಗಳು.

(ಬಟ್ಟ ಬಾತ್ಮೀದಾರರಿಂದ.)

ಹೆಬ್ಬಾಲೆ.

ತಾ. 30—10—32 ನೇ ಆದಿತ್ಯವಾರ 12 ಗಂಟೆಗೆ ಕಣಿವೆ, ಹೆಬ್ಬಾಲೆ, ಹುಲುಸೆ, ಶಿರಂಗಾಲ ವಗೈರೆ ಗ್ರಾಮಗಳ ರೈತರು ಹೆಬ್ಬಾಲೆಯಲ್ಲಿ ದೂಪದ ಶಾಂತಮಲ್ಲಪ್ಪ ಶೆಟ್ಟರ ಅಧ್ಯಕ್ಷತೆಯಲ್ಲಿ ಮೀಟಿಂಗ್ ಮಾಡಿ, ಕೊಡಗನ್ನು ಪ್ರತ್ಯೇಕ ಜಿಲ್ಲೆಯಾಗಿಯೇ ಇಟ್ಟುಕೊಂಡು ಮೈಸೂರಿಗೆ ಸೇರಿಸುವಂತೆ ಬ್ರಿಟಿಷ್ ಸರಕಾರವನ್ನು ಕೇಳಿಕೊಳ್ಳಬೇಕೆಂತ ಸರ್ವಸಮ್ಮತದಿಂದ ಮಂಜೂರಾಯಿತು. ಸಿರಂಗಾಲದ ದಾಸಪ್ಪನೆಂಬವರು ಮಾತ್ರ ಚಿಕ್ಕ ಭಾಷಣದಿಂದ ವಿರೋಧಿಸಿದರೂ ಸಹ ಅನಂತರ ಒಪ್ಪಂದಕೊಟ್ಟು ಸೈನ್ ಹಾಕಿದರು. ಸುಮಾರು 165 ಜನರು ಹಾಜರಿದ್ದರು. ಶ್ರೀಮತಿ ಡಿ. ಸೀತಮ್ಮನವರೂ, ಮಿ. ಸಿ. ಯನ್. ವೆಂಕಪ್ಪಯ್ಯನವರೂ, ಮಿ. ಬೇಳೂರು ಬಸವೇಗೌಡರೂ, ಸೋಮವಾರಪೇಟೆ ಮಿ. ಮರಿಬಸಪ್ಪಯ್ಯನ ತಿಮ್ಮಪ್ಪಶೆಟ್ಟರೂ, ಚಂದ್ರಶೇಖರಯ್ಯನವರೂ ಸಹ ಹಾಜರಿದ್ದರು. ರಾಮಸ್ವಾಮಿ ಕಣಿವೆ ಗ್ರಾಮದವರು ತಾ. 29 ರಲ್ಲೇ ಮೀಟಿಂಗ್ ಮಾಡಿ ಮೈಸೂರಿಗೆ ಸೇರಲು ಒಪ್ಪಿಗೆಕೊಟ್ಟು ಸೈನ್ ಹಾಕಿದ ಪತ್ರವನ್ನು ಹೆಬ್ಬಾಲೆ ಮೀಟಿಂಗ್ ಮುಂದೆ ಇಟ್ಟರು.

ಫ್ರೇಜರ್ ಪೇಟೆ.

ಅದೇ ದಿನ ಸಾಯಂಕಾಲ 4 ಗಂಟೆಗೆ ಫ್ರೇಜರ್‌ಪೇಟೆಯಲ್ಲಿ ಫ್ರೇಜರ್‌ಪೇಟೆ ಹೋಬಳಿಯ ಕಾವೇರಿ ಹೊಳೆಯ ದಕ್ಷಿಣ ದಿಕ್ಕಿನ ಎಲ್ಲಾ ಗ್ರಾಮಗಳ ಜನರು ಸೇರಿ ಮಿ. ಯಸ್. ಯನ್. ರಾಮಶೆಟ್ಟರ ಅಧ್ಯಕ್ಷತೆಯಲ್ಲಿ ಮೀಟಿಂಗ್ ಮಾಡಿ ಸರ್ವಸಮ್ಮತದಿಂದ ಮೈಸೂರಿಗೆ ಸೇರಲು ಒಪ್ಪಿಗೆ ಕೊಟ್ಟರು. ಮಡಿಕೇರಿಯಿಂದ ಬಂದಿದ್ದ ಮಿ. ಬಿ. ಯಂ. ಐಯ್ಯಪ್ಪನವರು ಮೈಸೂರಿಗೆ ಸೇರುವುದನ್ನು ವಿರೋಧಿಸಿ ಮಾತಾಡಿದರು. ಸುಮಾರು 75 ಜನರು ಹಾಜರಿದ್ದರು. ಹೆಬ್ಬಾಲೆಗೆ ಬಂದಿದ್ದ ಶ್ರೀ. ಸೀತಮ್ಮನವರು ವಗೈರೆರು ಹಾಜರಿದ್ದರು. ಮತ್ತು ಗೋಣಿಕೊಪ್ಪದ ಮಿ. ಕಾಳೇಗೌಡರು ಸಹ ಹಾಜರಿದ್ದರು.

ಶಾಗುಂಡ.

ತಾ. 1—11—32ರಲ್ಲು ಶಾಗುಂಡದಲ್ಲಿ ಮಿ. ಕುಟ್ಟೇಟಿರ ಮಾದಪ್ಪನವರ ಅಧ್ಯಕ್ಷತೆಯಲ್ಲಿ ಮೀಟಿಂಗ್ ನಡೆಯಿತು. ಕೆಲವರು ಮಹಾತ್ಮ ಗಾಂಧಿಯವರು ಜೈಲಿನಲ್ಲಿರುವಾಗ ಕೊಡಗಿನ ಭವಿಷ್ಯತ್ತನ್ನು ನಿರ್ಣಯಿಸಬಾರದೆಂತಲೂ, ಕೆಲವರು ಕೊಡಗು ಬೇರೆಯೇ ಇರಬೇಕೆಂತಲೂ ಭಾಷಣ ಮಾಡಿದರು. ಅಷ್ಟರಲ್ಲಿ ಮಡಿಕೇರಿಯಿಂದ ರಾ. ಬ. ಕೋಡಿಮಣಿಯಂಡ ಸುಬ್ಬಯ್ಯನವರೂ, ಬಲ್ಲಚಂಡ ಬೆಳ್ಯಪ್ಪನವರೂ, ಮನೆಯಪಂಡ ಬೆಳ್ಯಪ್ಪನವರೂ ಬಂದು ವಿಷಯಗಳನ್ನು ವಿವರಿಸಿದನಂತರ ಕೊಡಗಿನವರ ಹಕ್ಕುಗಳನ್ನು ರಿಯಾಯಿತಿಗಳನ್ನು ಭದ್ರಪಡಿಸಿಕೊಂಡು ಮೈಸೂರಿಗೆ ಸೇರಬಹುದೆಂತ ಹೆಚ್ಚಿನ ಜನರು ಅಭಿಪ್ರಾಯಪಟ್ಟು ಆ ಬಗ್ಗೆ ಸೈನ್ ಕೊಟ್ಟರು. ಇದಕ್ಕೆ ಒಪ್ಪದ ಕೆಲವರು ಸೈನ್ ಹಾಕದೆ ಹೋಗಿಬಿಟ್ಟರು.

ಮೂರ್ನಾಡು.

ತಾ. 3—11—32ರಲ್ಲಿ ಮೂರ್ನಾಡಿನವರು ಮೂರ್ನಾಡಿನಲ್ಲಿ ಮಿ. ಪಾಂಡಂಡ ಪೊನ್ನಪ್ಪನವರ ಅಧ್ಯಕ್ಷತೆಯಲ್ಲಿ ಕೊಡಗಿನ ಭವಿಷ್ಯತ್ತನ್ನು ಕುರಿತು ಒಂದು ಮೀಟಿಂಗು ನಡೆಯಿತು. ಮಡಿಕೇರಿಯಿಂದ ಬಂದಿದ್ದ ಮಿ. ಬಲ್ಲಚಂಡ ಬೆಳ್ಯಪ್ಪನವರು ಮನೆಯಪಂಡ ಬೆಳ್ಯಪ್ಪನವರು, ಅಜ್ಜಿಕುಟ್ಟಿರ ಸುಬ್ಬಯ್ಯನವರು ಮೈಸೂರಿಗೆ ಯಾಕೆ ಸೇರಬೇಕೆಂಬುದನ್ನು ವಿವರಿಸಿದನಂತರ ತಾ. 10—11—32ರಲ್ಲು ಇನ್ನೊಂದು ಮೀಟಿಂಗ್ ನಡಸಿ, ಅಭಿಪ್ರಾಯವನ್ನು ಕೊಡಬಹುದೆಂತ ತೀರ್ಮಾನವಾಯಿತು. ಸುಮಾರು 200 ಜನರು ಹಾಜರಿದ್ದರು.

ವೀರಾಜಪೇಟೆ.

ತಾ. 2—11—32ರಲ್ಲು ವೀರಾಜಪೇಟೆಯಲ್ಲಿ ಮೀಟಿಂಗು ಮಾಡಬೇಕೆಂತ ಯೋಚಿಸಿದ್ದನ್ನು ಬದಲಾಯಿಸಿ, ವೀರಾಜಪೇಟೆ ನಾಡಿನವರ ಮೀಟಿಂಗುಗಳನ್ನು ತಾ. 8—11—32ನೇ ಮಂಗಳವಾರ 2 ಗಂಟೆಗೆ ವೀರಾಜಪೇಟೆಯಲ್ಲಿ ಮಾಡಲು ಏರ್ಪಡಿಸಲಾಗಿದೆ.

ಶಾಗುಂಡದ ಮೀಟಿಂಗು.

ಬೇಂಗುನಾಡಿನವರ ಒಂದು ಪಬ್ಲಿಕ್ ಮೀಟಿಂಗು ತಾ. 1—11—32ರಲ್ಲಿ ಶಾಗುಂಡದಲ್ಲಿ ನಡೆಯಿತು. ಸುಮಾರು 70 ಜನರು ಹಾಜರಿದ್ದರು. ಮಿ. ಕುಟ್ಟೇಟಿರ ಮಾದಪ್ಪನವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಅಧ್ಯಕ್ಷರು ಮೀಟಿಂಗಿನ ಉದ್ದೇಶ್ಯವನ್ನು ಕುರಿತು ಮಿ. ಗಳಿರದ ಬಲ್ಲಚಂಡ ಬೆಳ್ಯಪ್ಪನವರು, ಪಟ್ಟಮಾಡ ಕುಂಞಪ್ಪನವರು ಮತ್ತು ಮುಂಜಾಂದಿರ ದೇವಯ್ಯನವರ ರುಜುವಿನಲ್ಲಿ ಹಂಚಿದ್ದ ನೋಟೀಸನ್ನೂ, ಮಿ. ಪಿ. ಐ. ಬೆಳ್ಯಪ್ಪನವರು ಕೊಡಗಿನ ಭವಿಷ್ಯತ್ತನ್ನು ಕುರಿತು ಕಾಂಗ್ರೆಸ್ಸಿನವರ ಅಭಿಪ್ರಾಯವನ್ನು ಸೂಚಿಸಿ ಪ್ರಕಟಿಸಿರುವ ಹಸ್ತಪತ್ರವನ್ನೂ ಓದಿ ಹೇಳಿದರು. ನಂತರ ಮಿ. ಕೋದಂಡ ಮಾಚಯ್ಯನವರ ಪುಸ್ತಕದಿಂದ ಕೆಲವು ವಿಷಯಗಳನ್ನು ಓದಿದರು. ಆ ಮೇಲೆ ಮಿ. ಪಟ್ಟಮಾಡ ಪೂವಯ್ಯನವರು ಮತ್ತು ಪಟ್ಟಮಾಡ ಕುಶಾಲಪ್ಪನವರು ಕೊಡಗನ್ನು ಪ್ರತ್ಯೇಕವಾಗಿಯೇ ಇಡಬೇಕೆಂತಲೂ, ಮೈಸೂರಿಗೆ ಸೇರಕೂಡದೆಂತಲೂ ಭಾಷಣ ಮಾಡಿದರು. ಮಿ. ಕೇಕಡ ಐಯ್ಯಪ್ಪನವರು ಮತ್ತು ತೇಲಪಂಡ ಮಾಚಯ್ಯನವರು ಮಹಾತ್ಮ ಗಾಂಧಿಯವರನ್ನೂ ಕಾಂಗ್ರೆಸ್ಸಿನವರನ್ನೂ ಜೈಲಿನಿಂದ ಬಿಡುಗಡೆ ಮಾಡುವವರೆಗೆ ಕೊಡಗಿನ ಭವಿಷ್ಯತ್ತನ್ನು ತೀರ್ಮಾನಿಸಬಾರದೆಂದು ಮಾತಾಡಿದರು. ಪಟ್ಟಮಾಡ ಕುಂಞಪ್ಪನವರು ಕೊಡಗನ್ನು ಮೈಸೂರಿಗೆ ಸೇರಿಸುವುದು ಒಳ್ಳೆಯದೆಂತಲೂ, ಮಿ. ಕಲ್ಯಾಂಡ ಬೆಳ್ಯಪ್ಪನವರು, ಕಾಂಗ್ರೆಸ್ ಚಳವಳವು ನಿಂತು ದೇಶದಲ್ಲಿ ಶಾಂತಿ ಉಂಟಾಗುವ ವರೆಗೆ ಯಾವುದನ್ನೂ ತೀರ್ಮಾನಿಸಬಾರದೆಂತಲೂ ಮಾತಾಡಿದರು. ಇಷ್ಟರಲ್ಲಿ ಮಡಿಕೇರಿಯಿಂದ ಬಂದ ಮಿ. ಗಳಿರದ ಮನೆಯಪಂಡ ಬೆಳ್ಯಪ್ಪನವರು ಮತ್ತು ಬಲ್ಲಚಂಡ ಬೆಳ್ಯಪ್ಪನವರು ಕೊಡಗನ್ನು ಮೈಸೂರಿಗೆ ಸೇರಿಸುವುದೇ ಉತ್ತಮವೆಂದು ಭಾಷಣ ಮಾಡಿದರು. ಆ ವೇಳೆ ಬಿದ್ದಂಡ ಯಂ. ಐಯ್ಯಪ್ಪನವರು ಕೊಡಗಿಗೆ ಪ್ರತ್ಯೇಕ ಸ್ವಾತಂತ್ರ್ಯ ಸರಕಾರ ಪಡೆಯಬೇಕೆಂತಲೂ, ರಾ. ಬ. ಕೋಡಿಮಣಿಯಂಡ ಸುಬ್ಬಯ್ಯನವರು ಮೈಸೂರಿಗೆ ಸೇರಿಸುವುದು ಒಳ್ಳೆಯದೆಂತಲೂ ಮಾತಾಡಿದರು. ಇಷ್ಟರಲ್ಲಿ ಹೊತ್ತು ಬಹಳವಾದ್ದರಿಂದ ಕೊಡಗನ್ನು ಮೈಸೂರಿಗೆ ಸೇರಿಸಬೇಕೋ, ಬೇಡವೋ ಎಂಬ ಕರಾರನ್ನು ಓಟಿಗೆ ಹಾಕಬೇಕೆಂದು ಮಿ. ಕಲ್ಯಾಂಡ ಬೆಳ್ಯಪ್ಪನವರು ಅಧ್ಯಕ್ಷರನ್ನು ಕೇಳಿಕೊಂಡರು. ಮೈಸೂರಿಗೆ ಸೇರಬೇಕೆಂದು ಮಾತಾಡಿದ ಕೆಲವರು ಓಟಿಗೆ ಹಾಕುವುದು ಬೇಡವೆಂದರು. ಈ ವಿಷಯ ಸ್ವಲ್ಪ ತಕರಾರು ಉಂಟಾಗಿ ನಡೆದಿದ್ದವರಲ್ಲಿ ಅನೇಕರು ಮೀಟಿಂಗನ್ನು ಬಿಟ್ಟು ಹೋದರು. ನಂತರ ಉಳಿದಿದ್ದ ಕೆಲವರಿಂದ ಮೈಸೂರಿಗೆ ಸೇರಬೇಕೆಂಬ ಕರಾರಿಗೆ ರುಜು ತೆಗೆದುಕೊಳ್ಳಲಾಯಿತಂತೆ. ಹೇಗೂ ನೆರೆದಿದ್ದವರಲ್ಲಿ ದೊಡ್ಡ ಬಹುಮತದವರು ಕೊಡಗನ್ನು ಮೈಸೂರಿಗೆ ಸೇರಿಸುವುದಕ್ಕೆ ವಿರೋಧವಾಗಿದ್ದರೆಂದು ಹೇಳಬಲ್ಲೆನು.

ಬಿ. ಯಂ. ಐಯ್ಯಪ್ಪ.
(ಹಾಜರಿದ್ದವ)

ಕೊಡಗು ಸಬಾರ್ಡಿನೇಟ್ ಜಡ್ಜಿಯವರ ಕೋರ್ಟಿನಲ್ಲಿ.

ಓ. ಎಸ್. ನಂ $\frac{64}{1932}$

ಅರ್ಜಿದಾರ:—ಸೈಯದ್ ಗೌಸ್ ಸಾಬಿ.

ಎದುರುದಾರ—ಫರ್ಯುಸನ್ಸನ್ ಕಂಪೆನಿ ವಗೈರೆಯವರು.

ಕೇಲ್ಯಂಡ ಪೊಬವ್ವಿಯವರ ಪರಿಯವರನ್ನು ಕೋರ್ಟ್ ಹುಕುಂ ಮೇರೆ ಸ್ವಾಧೀನ ತೆಗೆದುಕೊಂಡಿರುವ ಅರ್ಜಿದಾರನ ಬಾಪ್ತು ಎರಡು ಲಾರಿಗಳು, ಕೆಲವು ಪಲ್ಲಂಗಗಳು, ಮಂಗಳೂರು ಹಂಚುಗಳು, ಒಂದು ಕಾರು ಮತ್ತು ಚಿಲ್ಲರೆ ಮೋಟಾರು ಮತ್ತು ಸೈಕಲ್ ಸಾಮಾನುಗಳು ವಗೈರೆಯನ್ನು ಕೋರ್ಟ್ ಹುಕುಂ ಮೇರೆ ಮಡಿಕೇರಿಯಲ್ಲಿ ಸೂತ್ರಗಳ ಒಳ 1932 ನೇ ಇಸವಿ ನವಂಬರ್ ಮಾಹೆ ತಾರೀಕು 20 ನೇ ಆದಿತ್ಯವಾರ ದಿವಸ ಹಗಲು 10 ಘಂಟೆ ಸಮಯಕ್ಕೆ ಹರಾಜು ಮಾಡಲ್ಪಡುತ್ತೆ.

ಮಡಿಕೇರಿ, ಯಸ್. ಆರ್. ಗೋಪಾಲಕೃಷ್ಣ.
ತಾ. 25—10—32 ರಿಸಿವರು.

೪೦ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕಿ ಕಂಪನಿಯವರ

ಜ್ವರದ ಗುಳಿಗೆಗಳು.

ಚಳಿಜ್ವರ, ಚಾತುರ್ಥ ಜ್ವರ, ದಿನಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮಬಾಣದಂತೆ ಇವೆ. ಬಾಟ್ಲಿಗೆ ರೂ. ೧. ಟಿ. ಖ. ೭ ಆಣೆ. ಬರೆದು ತರಿಸಿಕೊಳ್ಳಿ.

ಗಣೇಶ ರಾಮಚಂದ್ರ ಕರ್ಕಿ,
(52—13) ಮತ್ತು ಕಂಪನಿ,
ಗಿರಗಾಂವ, ಮುಂಬಯಿ,

ಕೊಡಗಿನಲ್ಲಿ ಸತ್ಯಾಗ್ರಹ.

ಮಡಿಕೇರಿ ಮತ್ತು ಗೋಣಿಕೊಪ್ಪಲಲ್ಲಿ ಹಸ್ತಪತ್ರಿಕೆ ಹಂಚುವಿಕೆ.

ಜುಲುಮಾನೆಗಾಗಿ ಕೋಣಗಳ ಜಪ್ತಿ.

ಪೊನ್ನಂಪೇಟೆಯಲ್ಲಿ ವಿದ್ಯಾರ್ಥಿಗಳ ದಸ್ತಗಿರಿ.

ಶ್ರೀಯುತ ಪೂಜಾರಿ ರಾಮಪ್ಪನವರು ಕಳೆದ ತಾ. 30ನೇ ಆದಿತ್ಯವಾರ ಗೋಣಿಕೊಪ್ಪಲು ಸಂತೆಯಲ್ಲಿ ಜಯಘೋಷಮಾಡುತ್ತಾ, ಕಾಂಗ್ರೆಸಿನ ಸೈಕ್ಲೋಸ್ಟೈಲ್ ಮಾಡಿದ ಹಸ್ತಪತ್ರಿಕೆ ಹಂಚುತ್ತಿದ್ದಾಗ್ಗೆ ಪೋಲೀಸಿನವರು ಅವರನ್ನು ದಸ್ತಗಿರಿ ಮಾಡಿದರೆಂದೂ, ಮಡಿಕೇರಿ ಪೋಲೀಸರ ವಾರಂಟಿನಿಂದ ದಸ್ತಗಿರಿ ಮಾಡಿದ್ದರಿಂದ ಅವರನ್ನು ಅದೇ ದಿನ ಮಡಿಕೇರಿಗೆ ಬಸ್ಸಿನಲ್ಲಿ ಸಾಗಿಸಿದರೆಂದೂ ತಿಳಿಯುತ್ತೇವೆ. ಈಗ ಮಡಿಕೇರಿ ಜೈಲಿನಲ್ಲಿ ಇಟ್ಟಿರುವ ಅವರ ವಿಚಾರವು ಈ ತಾ 5ರಲ್ಲಿ ಸಬ್ ಜಡ್ಜರ ಕೋರ್ಟಿನಲ್ಲಿ ನಡೆಯುವುದು.

ಶಾಸನಭಂಗ ಚಳವಳಿ ದೆಸೆಯಿಂದ ಈಗ ಜೈಲುವಾಸ ಮಾಡುತ್ತಿರುವ ಶ್ರೀಯುತ ಕೊಳ್ಳಿಮಾಡ ಕರುಂಬಯ್ಯನವರಿಗೆ ವಿಧಿಸಿದ್ದ 70 ರೂ. ಜುಲುಮಾನೆಯ ವಸೂಲಾತಿಗಾಗಿ ಪೋಲೀಸು ಸಬ್ ಇನ್‌ಸ್ಪೆಕ್ಟರು ಕಳೆದ ತಾ. 26ರಲ್ಲಿ ಮೆ. ಕರುಂಬಯ್ಯನವರ ಮನೆಗೆ ಹೋಗಿ, ಅವರ ಕೊಟ್ಟಿಗೆಯಲ್ಲಿದ್ದ 5 ಕೋಣಗಳನ್ನು ಜಪ್ತಿಮಾಡಿದರೆಂದೂ, ಸದರಿ ಕೋಣಗಳನ್ನು ಜಾಮೀನಿನಲ್ಲಿ ಬಿಡಿಸಿಕೊಳ್ಳಲು ಯಾರೂ ಸಿಕ್ಕಲಿಲ್ಲವೆಂತಲೂ, ಅಷ್ಟರಲ್ಲಿ ಪೊನ್ನಂಪೇಟೆ ಶಾಲೆಯಲ್ಲಿ ಓದುತ್ತಿದ್ದ ಕರುಂಬಯ್ಯನವರ ಮಗ ಅಚ್ಚಯ್ಯ ಮತ್ತು ಕರುಂಬಯ್ಯನವರ ಅಣ್ಣನವರ ಮಗ ಅಪ್ಪಾಜಿ ಎಂಬ ಸುಮಾರು 11 ವರ್ಷ ಪ್ರಾಯದ ಇಬ್ಬರು ಹುಡುಗರು ಶಾಲೆಯಿಂದ ಮನೆ ಬಂದಾಗ, ಕೋಣಗಳನ್ನು ಜಪ್ತಿಮಾಡಿದ್ದನ್ನು ನೋಡಿ, ತಮ್ಮ ಕುಟುಂಬದ ಸೊತ್ತಾದ ಅವುಗಳನ್ನು ಬಿಟ್ಟುಕೊಡದೆ ಹೋದರೆ ತಾವೂ ಸತ್ಯಾಗ್ರಹ ಮಾಡುತ್ತೇವೆಂದು ಹೇಳಿದ್ದಕ್ಕೆ ಪೋಲೀಸರು ಗದರಿಸಿದ್ದರಿಂದ, ಅವರಿಬ್ಬರು ಮತ್ತು ಅವರ ಅಡಿಗೆಯವನಾದ ಸುಮಾರು ಅಷ್ಟೇ ಪ್ರಾಯದ ತಿಮ್ಮ ಎಂಬ ಹುಡುಗನೂ ಪೊನ್ನಂಪೇಟೆಗೆ ಹೋಗಿ ಜಯಘೋಷ ಮಾಡ ತೊಡಗಿದರೆಂದೂ, ಪೋಲೀಸಿನವರು ಅವರು ಮೂವರನ್ನು ದಸ್ತಗಿರಿಮಾಡಿ ವೀರಾಜಪೇಟೆಗೆ ಕಳುಹಿದರೆಂದೂ, ತಾ. 29ರಲ್ಲಿ ಅವರ ಮನೆ ಮೆ. ವಿಶ್ವನಾಥನವರು ದಸ್ತಗಿರಿಯಾದ ಇಬ್ಬರು ಮಕ್ಕಳ ಗಾರ್ಡಿಯನ್ನಾಗಿ, ಮೆ. ಸಿ. ಎಸ್. ಉತ್ತಯ್ಯ ಲಾಯರವರ ಮೂಲಕ ಮುನ್ಸೀಫ್ ಮೇಜಿಸ್ಟ್ರೇಟ್ ಕೋರ್ಟಿಗೆ ತಕರಾರು ಅರ್ಜಿ ಹಾಕಿದ್ದರಿಂದ ತಾ. 30ಕ್ಕೆ ಇಟ್ಟಿದ್ದ ಕೋಣಗಳ ಹರಾಜನ್ನು ನಿಲ್ಲಿಸಿ ಅವುಗಳನ್ನು ಜಾಮೀನು ಮೇಲೆ ಬಿಟ್ಟಿರುವರೆಂದೂ, ಈ ಅರ್ಜಿಯ ವಿಚಾರವು ಈ ತಾ 4ರಲ್ಲಿ ನಡೆಯುವುದೆಂದೂ, ದಸ್ತಗಿರಿಯಾದ ಮೂರು ಮಕ್ಕಳನ್ನು ಕಳೆದ ತಾ. 31ರಲ್ಲಿ ಬಿಡುಗಡೆ ಮಾಡಿರುವರೆಂದೂ ವರ್ತಮಾನ

ಒಳದೇಶ.

ಚೀಫ್ ಕಮಿಷನರವರು ಈ ತಾ. 9ರಲ್ಲಿ ಬೆಂಗಳೂರಿನಿಂದ ಮಡಿಕೇರಿಗೆ ಬರುತ್ತಾರೆಂದೂ ತಿಳಿಯಬರುತ್ತದೆ.

ಮಡಿಕೇರಿ ಕಾನ್ವೆಂಟ್ ಹೈಸ್ಕೂಲಿನ ವಾರ್ಷಿಕ ಇನಾಮುಗಳ ಹಂಚುವಿಕೆಯು ಈ ತಾ. 8ರಲ್ಲಿ ನಡೆಯುವುದಾಗಿ ತಿಳಿಯಬರುತ್ತದೆ.

ಮಡಿಕೇರಿಯಲ್ಲಿ ಕಳೆದ ಶುಕ್ರವಾರದಿಂದ ಇಂದಿನ ವರೆಗೆ 3.45 ಇಂಚೂ, ಜನವರಿ 1ರಿಂದ ಅಕ್ಟೋಬರು ಅಂತ್ಯದ ವರೆಗೆ 133.16 ಇಂಚೂ ಮಳೆಯಾಗಿದೆಯೆಂದು ತಿಳಿಯುತ್ತೇವೆ

ಮಂಗಳೂರಿನ ಹೈದ್ರೋಸ್‌ನೆಂಬ ಒಬ್ಬ ಕಿತ್ತಳೆ ವ್ಯಾಪಾರಿಯು ನಾಪೋಕ್ಲು—ಮೂರ್ನಾಡು ರೋಡಿನ ವಾರಂಗದ ಗದ್ದೆ ಮಧ್ಯೆ ಇರುವ ಸೇತುವೆಯಲ್ಲಿ ಬಟ್ಟೆ ಒಗೆಯಲಿಕ್ಕೆಂದು ಹೋಗಿದ್ದವನು ಗ್ರಹ ರೋಗದಿಂದ ನೀರಿಗೆ ಬಿದ್ದು ಮೃತಪಟ್ಟನೆಂದು ವರ್ತಮಾನ.

ವಿದ್ಯಾಭ್ಯಾಸ ಕ್ರಮದಲ್ಲಿ ಅಮೇರಿಕದ ನ್ಯೂಯಾರ್ಕಿನಲ್ಲಿ ತರಬೇತುಹೊಂದಿ ಈಗತಾನೇ ವಾಪಸು ಬಂದ ಮೈಸೂರು ಸರ್ವಿಸಿನ ಮೆ. ಕೆ. ಎಸ್. ಕಿಣಿ ಯಂ. ಎ. ಪಿ ಹೆಚ್ ಡಿ. ಯವರು ಫೆಡರಲ್ ಇಂಡಿಯಾದ ವಿದ್ಯಾಭ್ಯಾಸ ಕ್ರಮವನ್ನು ಕುರಿತು ಈ ತಾ. 2ರಲ್ಲಿ ಸಾಯಂಕಾಲ ಸೆಂಟ್ರಲ್ ಹೈಸ್ಕೂಲು ಹಾಲ್‌ನಲ್ಲಿ ಮೆ. ಎ. ಸಿ. ಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ಸ್ವಾರಸ್ಯವಾದ ಭಾಷಣವನ್ನು ಮಾಡಿದರು.

ತಾ. 23ರಲ್ಲು ಮೂರ್ನಾಡು ಹೊದ್ದೂರಿನಲ್ಲಿ ವಾರಂಬರ ಮನೆಯ ಒಳ ಐದು ಜನರು ಒಂದು ಮಾಪಿಳ್ಳೆ ಮಗುವಿಗೆ ಮಾತಾಡುತ್ತಾ ಇರುವಾಗ ಆಕಸ್ಮಿಕವಾಗಿ ಆ ಮನೆಯ ಕೊಂಬೆಯೊಂದು ಮುರಿದು ಬಿದ್ದು ವಾರಂಬರ ಸಂಬಂಧನವರಿಗೂ ಮತ್ತು ನೆಂಟನಾದ ಅಪ್ಪಯ್ಯನವರಿಗೂ ಬಲವಾದ ಜಖಂ ಆಗಿ, ಆಸ್ಪತ್ರೆಗೆ ಒಯ್ಯಲ್ಪಟ್ಟು ಅಲ್ಲಿ ಮೃತಪಟ್ಟರೆಂತಲೂ, ಬಿ. ಭೀಮನವರಿಗೂ ಸಹ ಜಖಂ ಆಗಿದೆಯೆಂತಲೂ, ಒಬ್ಬ ಪಿಳ್ಳೆ ಮತ್ತು ಒಬ್ಬ ಹುಡುಗನಿಗೆ ಯಾವ ಅಪಾಯವೂ ಸಂಭವಿಸಿರುವುದಿಲ್ಲವೆಂದೂ ವರ್ತಮಾನ.

ಈ ವಾರ ಮಡಿಕೇರಿಯಲ್ಲಿ ಕಳ್ಳರ ಹಾವಳಿಯು ಹೆಚ್ಚಾಗಿದೆ. 2 ದಿವಸಗಳ ಹಿಂದೆ ರಾತ್ರಿ ಬ್ರಾಹ್ಮಣರ ಕೇರಿಯಲ್ಲಿರುವ ಮೆ. ಚೆನ್ನಿಂಗರಾಯರ ಮನೆಯ ಮೊಗಸಾಲೆ ಒಣಗಲು ಹಾಕಿದ್ದ ಕೆಲವು ಬಟ್ಟೆಗಳು ಕದಿಯಲ್ಪಟ್ಟವೆಂದೂ, ನಿನ್ನೆ ರಾತ್ರಿ ಪುನಹ ಬ್ರಾಹ್ಮಣಕೇರಿಯ ಒಂದೆರಡು ಮನೆಗಳ ಹತ್ತಿರ ಕಳ್ಳರನ್ನು ಕಂಡು ಜನರು ಬೆನ್ನಟ್ಟಿದರೂ, ಹಾಗೆಯೇ 2—3 ದಿವಸಗಳ ಹಿಂದೆ ಗಣಪತಿ ಬೀದಿಯಲ್ಲಿರುವ ಎ. ದೊಡ್ಡಯ್ಯನವರ ಮನೆಗೆ ರಾತ್ರಿ ಕಳ್ಳರು ನುಗ್ಗಿ ಕದಿಯಲು ಯತ್ನಿಸುವಷ್ಟರಲ್ಲಿ ಮನೆಯವರು ಕಂಡುಬಿಟ್ಟದ್ದರಿಂದ ತಪ್ಪಿಸಿಕೊಂಡು ಓಡಿಹೋದರೆಂತಲೂ, ಮತ್ತು ಮಹದೇವಪೇಟೆಯಲ್ಲಿರುವ ಮೆ. ಶಕುನಯ್ಯಶೆಟ್ಟಿಯವರ ಮನೆ ಒಳ ಕಳ್ಳರು ಬಂದಾಗ್ಗೆ ನಾಯಿ ಬೊಗಳಿದನ್ನು ಕೇಳಿ ಪೋಲೀಸರು ಅಲ್ಲಿಗೆ ಬಂದದ್ದರಿಂದ ಕಳ್ಳರು ಕಾಣಿಸಿಕೊಳ್ಳದೆ ಓಡಿಹೋದರೆಂದೂ ವರ್ತಮಾನ ಹೇಗೂ ಈ ವರ್ತಮಾನಗಳಿಂದ ಇಲ್ಲಿಯ ಜನರ ಮನಸ್ಸಿನಲ್ಲಿ ತುಂಬಾ ಗಲಿಬಿಲಿಯುಂಟಾಗಿದೆ.

ಹಿಂದೂದೇಶ.

ಪೀಠಾಪುರ ಸಂಸ್ಥಾನದ ಮಹಾರಾಜರು ಅಸ್ಪೃಶ್ಯ ನಿವಾರಣೆಯ ಕಾರ್ಯಗಳನ್ನು ನಡೆಸುವ ಬಗ್ಗೆ 5000 ರೂ. ಗಳನ್ನು ಮೆ. ಯಂ. ಸಿ. ರಾಜರವರಿಗೆ ಕಳುಹಿಸಿರುವರು.

ನಾಗರಕೋಯಿಲ ಅಸ್ಪೃಶ್ಯನಿವಾರಣ ಸಮಿತಿಯವರು ಭಾಷಣಗಳನ್ನೂ, ಸಭೆಗಳನ್ನೂ ಮತ್ತು ಸಹಭೋಜನಗಳನ್ನು ನಡಸಿ ಹರಿಜನ ಉದ್ಧಾರದ ಕೆಲಸವನ್ನು ಸಾಧಿಸುತ್ತಿದ್ದಾರೆ.

ತಿರುವಾಂಕೂರಿನಲ್ಲಿ ಒಬ್ಬ ಸ್ತ್ರೀ ಶಾಯರು ಎರಡನೇ ತರಗತಿಯ ಮ್ಯಾಜಿಸ್ಟ್ರೇಟರಾಗಿ ನೇಮಕವಾಗಿದ್ದಾರೆ. ಈ ಸಂಸ್ಥಾನದಲ್ಲಿ ಸ್ತ್ರೀಯರನ್ನು ಮ್ಯಾಜಿಸ್ಟ್ರೇಟರ ಕೆಲಸಕ್ಕೆ ನೇಮಿಸಿರುವರು.

ಬೊಂಬಾಯಿಯ 'ಫ್ರೀಪ್ರೆಸ್ ಜರ್ನಲ್' ಪತ್ರಿಕೆಯ ಮೊದಲಿನ 10 ಸಾವಿರ ರೂ. ಡಿಪಾಜಿಟ್ಟನ್ನು ಸರ್ಕಾರದವರು ವಶಪಡಿಸಿಕೊಂಡರು, ಈಗ ಪುನಹ ಪತ್ರಿಕೆ ನಡಿಸಲು 20 ಸಾವಿರ ರೂ. ಡಿಪಾಜಿಟ್ಟು ಕಟ್ಟಿರುವರು.

ಶ್ರೀಯುತ ಸುಬಾಸ್ ಚಂದ್ರಬೋಸ್‌ರವರನ್ನು ಭೋವಾಲಿ ಜೈಲಿಗೆ ಸಾಗಿಸಿ ಮೂರು ವಾರಗಳಾದರೂ, ಅವರ ಆರೋಗ್ಯವು ಉತ್ತಮವಾಗುತ್ತಿಲ್ಲವೆಂದೂ, ಡಾಕ್ಟರುಗಳ ಸರ್ವ ಪ್ರಯತ್ನಗಳನ್ನು ಮಾಡುತ್ತಿರುವರೆಂದೂ ವರ್ತಮಾನ.

ಬೊಂಬಾಯಿ ಪ್ರಾರ್ಥನಾ ಸಮಾಜದ ಒಂದು ಕಟ್ಟಡವನ್ನು ಪೋಲೀಸಿನವರು ಸಂಶಯದ ಮೇಲೆ ಜಪ್ತಿಮಾಡಿ, ನಿದ್ರಿಸುತ್ತಿದ್ದ 10 ಜನ ಯುವಕರನ್ನು ದಸ್ತಗಿರಿಮಾಡಿ, ಅವರಲ್ಲಿದ್ದ ಕಾಂಗ್ರೆಸು ಹಸ್ತಪತ್ರಗಳ ಕಟ್ಟುಗಳನ್ನು ವಶಪಡಿಸಿಕೊಂಡರು.

ಮಹಾತ್ಮ ಗಾಂಧಿಯವರನ್ನು ಜೈಲಿನಿಂದ ಬಿಡುಗಡೆಮಾಡದೆ ಹೋದರೆ ಇಂಡಿಯಾದ ಲಿಬರಲ್ ಪಕ್ಷದವರು ದುಂಡು ಮೇಜು ಪರಿಷತ್ತಿಗೆ ಹೋಗಬಾರದೆಂದು ಲಂಡನಿನಲ್ಲಿರುವ ಇಂಗ್ಲೆಂಡ್ ಭಾರತ ಮಿತ್ರಮಂಡಲಿಯವರು ತಂತೀ ಕಳುಹಿಸಿರುವರು.

ಕಳೆದ ವಾರ ಪೋಲೀಸಿನವರು ಕಾಶೀ ದೇವಾಲಯವನ್ನು ಜಪ್ತಿಮಾಡಿ ಸುಮಾರು 15,000 ಕಾಂಗ್ರೆಸ್ ಕರಪತ್ರಗಳನ್ನು ತೆಗೆದುಕೊಂಡು ಹೋದರು. ಎಷ್ಟೋ ಕಾಲದಿಂದ ಈ ದೇವಸ್ಥಾನದಲ್ಲಿ ಇಂಥಾ ಕರಪತ್ರಗಳು ಸಂಗ್ರಹಿಸಲ್ಪಡುತ್ತಿದ್ದವೆಂದು ಊಹಿಸಲಾಗಿದೆ.

ಮಹಾತ್ಮ ಗಾಂಧಿಯವರ ಆರೋಗ್ಯವು ದಿನೇ ದಿನೇ ವೃದ್ಧಿಯಾಗುತ್ತಿದೆ. ಈಗ ಅವರ ತೂಕವು 99 ಪೌಂಡಿಗೆ ಏರಿದೆ. ಆದರೂ ಅವರ ಮೊದಲಿದ್ದ (103 ಪೌಂಡ್) ತೂಕಕ್ಕೆ ತಲುಪಿರುವುದಿಲ್ಲ. ಅವರ ರಕ್ತಚಲನೆಯು ಸರಿಯಾಗಿದೆ. ಅವರಿಗೆ ಜೈಲಿನಲ್ಲಿ ಈ ಮೊದಲು ಕೊಟ್ಟಿದ್ದ ರಿಯಾಯಿತಿಗಳನ್ನೆಲ್ಲಾ ತೆಗೆದು ಬಿಟ್ಟಿರುವರು.

ದೇಶದಲ್ಲಿ ಶಾಂತಿ ಸ್ಥಾಪಿಸಲಿಕ್ಕೂ, ರಾಜಕೀಯ ಸಂಧಾನಗಳನ್ನು ಸಫಲವಾಗಿ ನಡಿಸಲಿಕ್ಕೂ ಮಹಾತ್ಮ ಗಾಂಧಿಯವರ ಬಿಡುಗಡೆಯು ಅತ್ಯಾವಶ್ಯವಾಗಿದೆಯೆಂದು ತಾ. 1ರಲ್ಲಿ ಮೆ. ಚಿಂತಾಮಣಿಯವರ ಅಧ್ಯಕ್ಷತೆಯಲ್ಲಿ ಅಲ್ಲಾಹಾಬಾದಿನಲ್ಲಿ ನಡೆದ ಸಂಯುಕ್ತ ಪ್ರಾಂತ್ಯದ ಲಿಬರಲ್ ಪಕ್ಷದ ಮಹಾಸಭೆಯಲ್ಲಿ ಠರಾವು ಪಾಸಾಯಿತು.

ಸರ್ ಪುರುಷೋತ್ತಮ ದಾಸ್ ಠಾಕೂರ್ ದಾಸರು ದುಂಡು ಮೇಜು ಪರಿಷತ್ತಿಗೆ ಆಮಂತ್ರಣವನ್ನು ಸ್ವೀಕರಿಸಿದ್ದು ತಮ್ಮ ಈ ಮೊದಲಿನ ತೀರ್ಮಾನಕ್ಕೆ ವಿರೋಧವೆಂತಲೂ, ಮ್ಮ ಸಂಘದ ಪರವಾಗಿ ಮಾತಾಡುವ ಹಕ್ಕು ಅವರಿಗಿಲ್ಲವೆಂದೂ ಬೊಂಬಾಯಿಯಲ್ಲಿರುವ ಹಿಂದೀ ವ್ಯಾಪಾರಿಗಳವರು ಬಹುಮತದಿಂದ ಠರಾವು ಪಾಸುಮಾಡಿರುವರು. ಕಾರಣ ಠಾಕೂರ್ ದಾಸರು ಸದರಿ ಸಂಘದ ಮೆಂಬರು ರಾಜಿನಾಮೆ ಕೊಟ್ಟಿರುವರು. ಅವರ ಪಕ್ಷದ ಹಲವರು ಜಿನಾಮೆ ಕೊಡುವ ಆಲೋಚನೆಯಲ್ಲಿರುವರು.

ಸರ್ ಅಲಿ ಇಮಾಂ ಎಂಬವರು ಕಳೆದ ವಾರ ಮೃತರೆಂದು ಪ್ರಕಟವಾಗಿದೆ. ಇವರು ಪಾಟ್ನಾ ನಗರದ ಸ್ಟೇಟ್ ಬಾರ್ ಜಡ್ಜರಾಗಿದ್ದು ಆ ಮೇಲೆ ಬಿಹಾರ್ ಪ್ರಾಂತ್ಯದ ಎಕ್ಸಿಕ್ಯೂಟಿವ್ ಕೌನ್ಸಿಲ್ ಮೆಂಬರಾಗಿಯೂ ಅನಂತರ ಹೈದರಾಬಾದ್ ಸಂಸ್ಥಾನದ ನಿಜಾಮರವರ ಸರ್ಕಾರದ ಎಗ್ಸಿಕ್ಯೂಟಿವ್ ಕೌನ್ಸಿಲಿನಲ್ಲಿನ ಪ್ರೆಸಿಡೆಂಟರಾಗಿಯೂ ತದನಂತರ ಲಾರ್ಡ್ ಹಾರ್ಡಿಂಜರ ಸ್ಥಾನದಲ್ಲಿ ವೈಸರಾಯರವರ ಕೌನ್ಸಿಲ್ ಮೆಂಬರಾಗಿಯೂ ನೇಮಕವಾಗಿ ಕೀರ್ತಿ ಗೌರವಗಳನ್ನು ಸಂಪಾದಿಸಿದ್ದರು. ಇವರು ರಾಷ್ಟ್ರೀಯ ಪಕ್ಷಕ್ಕೆ ಸೇರಿದವರಾಗಿದ್ದರು

ಲಂಡನಿನ ಬ್ರಿಸ್ಟಲ್ ಕೋರ್ಟಿಗೆ, 27 ವರ್ಷ ಪ್ರಾಯದ ಒಬ್ಬಳನ್ನು ತಂದು ವಿಚಾರಣೆ ನಡೆಸಲಾಯಿತು. ವ್ಯವಹಾರಿಯಿಂದ ತಿಳಿದು ಬಂದುದುದೇನೆಂದರೆ—ಎವೆಲೈನ್ ಮೇ ವಿಲ್ಕೊಕಳು ಒಂದು ವರ್ಷದಿಂದೀಚೆಗೆ ಸಿಗರೇಟಿನ ಅಭ್ಯಾಸಕ್ಕೆ ಒಳಬಿದ್ದಳು. ಅವಳ ಹೆತ್ತವರು ಎಷ್ಟು ತಡೆದರೂ ಅವಳು ಆ ಅಭ್ಯಾಸವನ್ನು ತ್ಯಜಿಸಲಿಲ್ಲ. ಕೆಲವು ಸಮಯದ ಮೇಲೆ ಅವಳನ್ನು ಒಬ್ಬನಿಗೆ ವಿವಾಹ ಮಾಡಿಕೊಟ್ಟರು. ಸಿಗರೇಟು ಎಳೆಯಬಾರದೆಂದು ಅವಳ ಗಂಡನು ಎಷ್ಟು ಹೇಳಿದರೂ ಕೇಳದೆ, ಒಂದು ದಿನ ಅವನ ಮನೆಯಿಂದ ಎಲ್ಲಿಯೋ ಓಡಿಹೋದಳು. ದಾರಿಯಲ್ಲಿ ಸಿಕ್ಕ ಸಿಕ್ಕವರೊಡನೆ ಸಿಗರೇಟು ಬೇಡಿದಳು. ಕೆಲವು ಅಂಗಡಿಗಳಿಗೆ ಹೋಗಿ ಸಿಗರೇಟು ಪೆಟ್ಟಿಗೆಗಳನ್ನು ಪಡೆದುಕೊಂಡು ಹಣ ಕೊಡದೆ ಹೊರಟು, ಅಪಮಾನಕ್ಕೊಳಗಾದಳು. ಕೆಲವು ಕಡೆಗಳಲ್ಲಿ ಸ್ತ್ರೀ ಪುರುಷರ ಜೇಬಿಗೆ ಕೈಹಾಕಿ ಸಿಗರೇಟು ತೆಗೆದಳು. ಪೋಲೀಸ್ ಸ್ಟೇಶನಿಗೆ ಕರೆದೊಯ್ಯಲ್ಪಟ್ಟಳು. ಅಲ್ಲಿಯವರು ಸ್ಟೇಶನಿನ ಒಳಗೆ ಸಿಗರೇಟು ಎಳೆಯಬಿಡದಿದ್ದುದಕ್ಕಾಗಿ ಅಲ್ಲಿಂದ ಮೆಲ್ಲನೆ ಜಾರಿ ಶಿಕ್ಷೆಗೊಳಗಾದಳು. ಸುಂದರಿಯಾದ ಇವಳ ಬೆರಳುಗಳು ಸಿಗರೇಟಿನ ಹೊಗೆಯಿಂದಾಗಿ ಹಳದಿಯಾಗಿವೆಯೆಂದು ತಿಳಿದುಬರುತ್ತದೆ.

(FREE INSURANCE)

ಉಚಿತ ವಿಮಾ.

ಮ್ಯೂಚುವಲ್ ಬೆನಿಫಿಟ್ ಸ್ಕೀಂ ಎಂಬ ಅನ್ಯೋನ್ಯ ಸಹಾಯ ಪದ್ಧತಿ.

(Mutual Benefit Scheme.)

ಜೈ ಭಾರತ ಇನ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಹೆಡ್ ಆಫೀಸು—ಮದ್ರಾಸ್.

ಲೈಫ್ ಇನ್‌ಶ್ಯೂರೆನ್ಸಿನ ಕಂಪೆನಿಗಳ ಕಾನೂನಿಗೆ ಅಧೀನವಾಗಿದೆ. ಸರಕಾರದಲ್ಲಿ ಡಿಪೋಜಿಟ್ ಹಣ ಇಡಲಾಗಿದೆ.

ಈ ಮೇಲ್ಕಂಡ ಕಂಪೆನಿಯು ಅನ್ಯೋನ್ಯ ಸಹಾಯಕ್ಕಾಗಿ ಕಳೆದ ವರ್ಷ ಅಂದರೆ 1931ನೇ ಫೆಬ್ರವರಿಯಲ್ಲಿ ಮದ್ರಾಸಿನಲ್ಲಿ ಸ್ಥಾಪಿತವಾಗಿ ಈ ವರೆಗೆ 25000 ಸಾವಿರಕ್ಕೂ ಹೆಚ್ಚಾಗಿ ಪಾಲಿಸಿಗಳನ್ನು ಪಡೆದಿರುತ್ತೆ. ಈ ಮೇಲ್ಕಂಡ ಕಂಪೆನಿಗೆ ಐಶ್ವರ್ಯವಂತರೂ, ಬಡವರೂ, ವಿದ್ಯಾವಂತರೂ, ವಿದ್ಯೆಯಿಲ್ಲದವರೂ, ಜಾತಿ ಮತಗಳ ಬೇಧವಿಲ್ಲದೆ ಚಾಕರದಾರರು, ಕೂಲಿಯವರೂ, ಹೆಂಗಸರೂ, ಗಂಡಸರೂ ಹೆಚ್ಚು ಖರ್ಚು ಕೊಡದೆಯೇ ಉಚಿತ ಜೀವ ವಿಮೆ ಮಾಡಿಕೊಳ್ಳಬಹುದು. 18 ವರ್ಷಕ್ಕೆ ಮೇಲ್ಪಟ್ಟು 60 ವರ್ಷದೊಳಗಿರುವವರು ಈ ಕಂಪೆನಿಗೆ ಸೇರಬಹುದು. ಈ ಕಂಪೆನಿಗೆ ಸೇರಲು ಇಚ್ಛಿಸುವವರು ಸೇರುವಲ್ಲಿ ರೂ. 5—8—0ನ್ನು ಮಾತ್ರ ಕಟ್ಟತಕ್ಕದ್ದು. ಅನಂತರ ತಿಂಗಳು ಒಂದಕ್ಕೆ 1 ರೂ. ಸ್ವಲ್ಪದರಲ್ಲು ದೊಡ್ಡ ಲಾಭ ದೊರೆಯುತ್ತೆ. ಆದ್ದರಿಂದ ಇಂಥಾ ಸುಸಮಯವನ್ನು ಕಳೆಯಕೂಡದು. ಈ ದಿನವೇ ಪಾಲಿಸಿಗಳನ್ನು ಹೊಂದಲು ಅರ್ಜಿ ಹಾಕಿರಿ. ಇದರ ಫಲವನ್ನು ಹೊಂದಲು ಭಾಗಿಗಳಾಗಿರಿ.

ಹೆಚ್ಚಿನ ಮಾಹಿತಿಗಳಿಗೆ ಈ ಕೆಳಗಿನವರಿಗೆ ಬರೆದು ತಿಳಿದುಕೊಳ್ಳಬಹುದು. ಅಲ್ಲದೆ ಇವರು ಕೊಡಗಿನ ಎಲ್ಲಾ ಕಡೆಗಳಲ್ಲಿಯೂ ತಿರುಗುತ್ತಲಿರುತ್ತಾರೆ.

ಯಂ. ಬಿ. ಕರುಂಬಯ್ಯ.
ಏಜೆಂಟ್,
ಜೈ ಭಾರತ ಇನ್‌ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
12—2 ನಾಪೋಕ್ಲು, (ಕೊಡಗು)

ಕೊಡಗು.

ಸನ್ ೧೯೩೨ನೇ ಇಸವಿ

ಸಪ್ಟಂಬರ್ ತಾ. ೨ನೇ ಶುಕ್ರವಾರ.

ಪ್ರೆಸ್ ಆರ್ಡಿನೇನ್ಸ್

ಜಾರಿಯಲ್ಲಿರುವ ವರೆವಿಗೆ

ನಾವು

ಅಗ್ರಲೇಖನ

ವನ್ನು

ಪ್ರಕಟಿಸುವುದಿಲ್ಲ.

ದು. ಮೇ. ಪರಿಷತ್ತಿಗೆ ಲೇಬರ್ ಪಾರ್ಟಿಯ ಬಹಿಷ್ಕಾರ!

ಕಾಂಗ್ರೆಸ್ಸಿನ ಗೈರ್‌ಹಾಜರಾತಿಯೇ ಇದಕ್ಕೆ ಕಾರಣ

ಇಂಡಿಯನ್ ನ್ಯಾಷನಲ್ ಕಾಂಗ್ರೆಸಿನವರು 3ನೇ ದುಂಡು ಮೇಜು ಪರಿಷತ್ತಿಗೆ ಹೋಗದಿದ್ದರೆ ಬ್ರಿಟಿಷ್ ಲೇಬರ್ ಪಾರ್ಟಿಯವರೂ ಅದಕ್ಕೆ ತಮ್ಮ ಪ್ರತಿನಿಧಿಗಳನ್ನು ಕಳುಹಿಸುವುದಿಲ್ಲವೆಂದು ನಿಶ್ಚಯಿಸಿರುವುದಾಗಿ ಸದರಿ ಪಾರ್ಟಿಯ ಮುಂದಾಳಾದ ಮಿ. ಲ್ಯಾನ್ಸ್‌ಬರಿಯವರು 'ಹಿಂದೂ' ಪತ್ರಿಕೆಯ ಪ್ರತಿನಿಧಿಯೊಂದಿಗೆ ಹೇಳಿರುವರು.

ವಿರೋಧ ಪಕ್ಷದ (ಲೇಬರ್ ಪಕ್ಷದ) ಪ್ರತಿನಿಧಿಗಳ ಸಂಖ್ಯೆಯನ್ನು ಕಡಿಮೆ ಮಾಡುವರೆಂಬ ವರ್ತಮಾನದಿಂದ ಈ ತೀರ್ಮಾನಕ್ಕೆ ಬಂದದ್ದಲ್ಲವೆಂತಲೂ, ಒಪ್ಪಂದಕ್ಕೆ ಬರಲು ಸಾಧ್ಯವಿದ್ದರೆ ಅದಕ್ಕೆ ಲೇಬರ್ ಪಾರ್ಟಿಯು ಅಡ್ಡಿ ಮಾಡಲು ಇಚ್ಛಿಸುವದಿಲ್ಲವೆಂತಲೂ, ಆದರೆ ಹಿಂದೂದೇಶದ ಪರವಾಗಿ ಮಾತಾಡಲು ಹೆಚ್ಚಿನ ಹಕ್ಕಿರುವವರು ಸೇರದೆ ಇರುವ ಕೂಟದ ತೀರ್ಮಾನಗಳ ಜವಾಬ್ದಾರಿಯನ್ನು ಈ ಸಮಯದಲ್ಲಿ ತಾವು ವಹಿಸಿಕೊಳ್ಳುವುದಿಲ್ಲವೆಂತಲೂ ಅವರ ಹೇಳಿಕೆಯಾಗಿದೆ

ಮಿ. ಲ್ಯಾನ್ಸ್‌ಬರಿಯವರು, ಕನ್‌ಸರ್ವೇಟಿವ್ ಪಾರ್ಟಿಯ ಹುಟ್ಟಿಟ್ಟುವ ಅಭಿಪ್ರಾಯಕ್ಕೆ ವ್ಯಸನಪಡುವುದಲ್ಲದೆ, ದು. ಮೇ. ಪರಿಷತ್ತು ಸಫಲವಾಗಲಾರದೆಂದು ನೆನಸುತ್ತಾರೆ. ಆದರೆ ಈಗ ಅವರು ಯಾವ ತೀರ್ಮಾನಕ್ಕೂ ಸೇರಿದ್ದರೆ ನಂತರದ ಆಲೋಚನೆಗಳಲ್ಲಿ ಅವರ ಪಾರ್ಟಿಯ ಶಕ್ತಿಯು ಹೆಚ್ಚಾಗುವದೆಂದು ಆಲೋಚಿಸುತ್ತಾರೆ. ಜಾಯಿಂಟ್ ಪಾರ್ಲಿಮೆಂಟ್ ಕಮಿಟಿಯಲ್ಲಿ ಟೋರಿ ಪಾರ್ಟಿಯ ದೊಡ್ಡ ಬಹುಮತವಿರುವದಾದರೂ ಕೂಡ ಲೇಬರ್ ಪಾರ್ಟಿಯು ಈಗಿನ ಅಸಹಕಾರವು ಈ ಕಮಿಟಿಗೆ ಅವರ ಪ್ರತಿನಿಧಿಗಳನ್ನು ಕಳುಹಿಸ ವುದಕ್ಕೆ ಅಡ್ಡಿಯಾಗುವುದಿಲ್ಲವಂತೆ.

ಸರಕಾರದವರು ಇಟ್ಟಿರುವ ರಚನೆಯನ್ನು ಒಪ್ಪಿಕೊಳ್ಳಲು ಸಿದ್ಧರಿರುವ ಇಂತಹ ಡೆಲಿಗೇಟರುಗಳನ್ನು ಕಳಿಸುವುದರಿಂದ ಲೇಬರ್ ಮುಂದಾಳುಗಳು ಸಂತಸಪಡರು; ಆದರೆ ಮಂತ್ರಿಮಂಡಳಿಯವರ ಸದ್ಯದ ಅಭಿಪ್ರಾಯದ ತಾತ್ಪರ್ಯವು, ಮಹಾತ್ಮ ಗಾಂಧಿಯವರನ್ನು ಮತ್ತು ಆರ್ಡಿನೇನ್ಸುಗಳನ್ನು ಕುರಿತು ಸರಕಾರದವರು ಒಂದಿಷ್ಟು ಬದಲಾಗದೆ ಇರುವುದೂ ಈಗಿನ ವಾತಾವರಣದಲ್ಲಿ ಪರಿಷತ್ತು ಸಫಲವಾಗಲಾರದೆಂಬ ಭಯವನ್ನು ದೃಢೀಕರಿಸುತ್ತದೆ ಎಂದು ಅವರ ಅಭಿಪ್ರಾಯ.

ಇಂಡಿಯನ್ ಕ್ರಿಶ್ಚಿಯನ್ ಪರಿಷತ್ತು.

ಕೋಮುವಾರು ತೀರ್ಮಾನದ ಖಂಡನೆ.

ಅಖಿಲ ಭಾರತ ಕ್ರಿಶ್ಚಿಯನ್ ಕಾನ್‌ಫರೆನ್ಸು ಕಳೆದ ತಾ. 28 ಮತ್ತು 29 ರಲ್ಲಿ ಪೂನಾದಲ್ಲಿ ನಡೆಯಿತು. ಎಮ್‌ಬ್ರಿಯ ವೆಂಕಟರಾಧ ಡಾ. ದಿಸೋಜರವರು ಅಧ್ಯಕ್ಷರಾಗಿದ್ದರು. ಹಿಂದುದೇಶದ ಎಲ್ಲಾ ಭಾಗಗಳಿಂದಲೂ ಪ್ರತಿನಿಧಿಗಳು ಸೇರಿದ್ದರು. ಆದರೆ ಮದ್ರಾಸಿನ ರಾ. ಬ. ಪನ್ನೀರ್‌ಸೆಲ್ವಂರವರು ಮತ್ತು ಅವರ ಪಾರ್ಟಿಯವರು ಬಂದಿರಲಿಲ್ಲ. ಮತ ಮತ್ತು ಸಂಸ್ಕೃತಿ ಹಕ್ಕುಗಳನ್ನು ಕಾಪಾಡುವದನ್ನು ಕುರಿತು ಠರಾವುಗಳು ಪಾಸುಮಾಡಲಾದವು.

ಡಾ. ಯಸ್. ಕೆ. ದತ್ತರವರು ಕೋಮುವಾರು ಚುನಾವಣೆಯನ್ನು ಕುರಿತು ಭಾಷಣ ಮಾಡುತ್ತಾ, ಈ ತರಹದ ಚುನಾವಣೆಯಿಂದ ಒಂದು ವೇಳೆ ದೊಡ್ಡ ಮೈನಾರಿಟಿ (ಕಡಿಮೆ ಸಂಖ್ಯೆಯವರು) ಯವರಿಗೆ ಪ್ರಯೋಜನವಾದರೂ, ಕ್ರಿಶ್ಚಿಯನರಂಥ ಸಣ್ಣ ಮೈನಾರಿಟಿಯವರಿಗೆ ಅದರಿಂದ ಕಿಡಕಲ್ಲದೆ ಪ್ರಯೋಜನವಾಗಲಾರದೆಂತಲೂ, ಬಹುಮತ ಜಾತಿಯವರ ಪ್ರೀತಿಭಾವವನ್ನು ಸಂಪಾದಿಸುವುದೇ ಉತ್ತಮವೆಂತಲೂ, ಸರ್ಕಾರದವರು ಮಾಡಿರುವ ಕೋಮುವಾರು ತೀರ್ಮಾನವು ತುಂಬಾ ಅತೃಪ್ತಿಕರವೆಂತಲೂ ಮುಂತಾಗಿ ಹೇಳಿದರು. ನಂತರ ದೀರ್ಘ ಚರ್ಚೆ ನಡೆದು ಈ ಕೆಳಗಿನ ಠರಾವು ಮಂಜೂರುಮಾಡಲಾಯಿತು.

'ಕೌನ್ಸಿಲುಗಳಿಗೆ ಕ್ರೈಸ್ತರ ಚುನಾವಣೆಯನ್ನು ಕುರಿತು ಚರ್ಚೆ ನಡೆಸಿದ ನಂತರ, ಒಮ್ಮತವಲ್ಲದಿದ್ದರೂ ಬಹು ದೊಡ್ಡ ಬಹುಮತದವರು ಸರಕಾರದವರ ಕೋಮುವಾರು ತೀರ್ಮಾನವನ್ನು ಬದಲಾಯಿಸಬೇಕೆಂದು ಅಭಿಪ್ರಾಯಪಡುತ್ತಾರೆ. ಈ ವಿಷಯ ಬೇರೆ ಕೋಮುಗಳ ಮುಂದಾಳುಗಳೊಂದಿಗೆ ಸಂಭಾಷಣೆ ನಡಿಸಿ, ತೃಪ್ತಿಕರವಾದ ತೀರ್ಮಾನಕ್ಕೆ ಬರಲು ಈ ಸಭೆಯು ಒಂದು ಕಮಿಟಿಯನ್ನು ನೇಮಿಸುತ್ತದೆ.

ಈ ಬಗ್ಗೆ 12 ಮೆಂಬರುಗಳ ಒಂದು ಕಮಿಟಿಯು ನೇಮಿಸಲಾಯಿತು.

ಸಂಯುಕ್ತ ಪ್ರಾಂತ್ಯದ ಕ್ರಿಶ್ಚಿಯನ್ ಪರಿಷತ್ತು.

ಸಂಯುಕ್ತ ಪ್ರಾಂತ್ಯದ ಇಂಡಿಯನ್ ಕ್ರಿಶ್ಚಿಯನ್ ಸಭೆಯ ವಾರ್ಷಿಕ ಸಮ್ಮೇಳನವು ಕಳೆದ ತಾ. 29ರಲ್ಲಿ ಲಕ್ನೋದಲ್ಲಿ ನಡೆಯಿತು. ಅಧ್ಯಕ್ಷರಾಗಿದ್ದ ಮಿ. ಜಾರ್ಡನ್‌ರವರು ತಮ್ಮ ಭಾಷಣದಲ್ಲಿ ಸರ್ಕಾರದ ಕೋಮುವಾರು ತೀರ್ಮಾನವನ್ನು ತೀವ್ರವಾಗಿ ಖಂಡಿಸಿದಲ್ಲದೆ, ಮಿಶ್ರ ಚುನಾವಣೆಯಲ್ಲಿ ತಮ್ಮ ಕೋಮಿನವರಿಗೆ ಮೆಂಬರುತನಗಳನ್ನು ಕಾಯ್ದಿಡುವುದು ಉತ್ತಮವೆಂತಲೂ, ಈ ಸಂಬಂಧ ಎಲ್ಲಾ ಪಾರ್ಟಿಗಳ ಕಾನ್‌ಫರೆನ್ಸೊಂದನ್ನು ನಡಿಸುವುದು ಅವಶ್ಯವೆಂತಲೂ ಮುಂತಾಗಿ ಹೇಳಿದರು. ಮಾತ್ರವಲ್ಲ, ಅವರು, ಪ್ರತ್ಯೇಕ ಚುನಾವಣೆ ಬೇಕೆಂಬವರನ್ನೇ ಖಂಡಿಸುವ ಮತ್ತು, ಇಂಡಿಯನ್ ಕ್ರಿಶ್ಚಿಯನರಿಗೆ ಸ್ಥಳ ಕೊಡದೆ ಇರುವ 3ನೇ ದುಂಡು ಮೇಜು ಪರಿಷತ್ತನ್ನು ಖಂಡಿಸಿದರು.

ಈ ಸಭೆಯವರು ಪ್ರತ್ಯೇಕ ಕೋಮುವಾರು ಚುನಾವಣೆ ಪದ್ಧತಿ ಇರಬೇಕೆಂಬ ಠರಾವನ್ನು ಮಂಜೂರು ಮಾಡಲಿಲ್ಲ. ಅದರ ಬದಲು, ಮಿಶ್ರ ಚುನಾವಣೆಯಲ್ಲಿ ಮೆಂಬರುತನಗಳನ್ನು ಕಾದಿಡುವ ಶರ್ತದ ಮೇಲೆ ಬೇರೆ ಕೋಮುಗಳ ಮುಖಂಡರೊಡನೆ ರಾಜಿ ಸಂಧಾನಗಳನ್ನು ನಡಿಸಲು ಒಪ್ಪುವಂಥ ಠರಾವೊಂದು ಪಾಸು ಮಾಡಲಾಯಿತು. ಈ ಉದ್ದೇಶಕ್ಕಾಗಿ ಒಂದು ಕಮಿಟಿಯು ನೇಮಕ ಮಾಡಲಾಯಿತು.

ಕೋಮುವಾರು ಸಮಸ್ಯೆ.

ಹಿಂದೂ—ಮುಸ್ಲಿಂ—ಸಿಕ್ಕ್ ಒಗ್ಗಟ್ಟಿನ ಪ್ರಯತ್ನಗಳು.

ಮುಸಲ್ಮಾನರ ಹಲವು ಪಾರ್ಟಿಗಳ ಧುರೀಣರು ಲಕ್ನೋದಲ್ಲಿ ಸೇರಿ, ಕೋಮುವಾರು ಸಮಸ್ಯೆಯನ್ನು ಕುರಿತು, ಮಿಶ್ರ ಚುನಾವಣೆಯಲ್ಲಿ ಮೆಂಬರುತನಗಳನ್ನು ಕಾದಿಡುವ ಶರ್ತದ ಮೇಲೆ ಹಿಂದೂ ಮತ್ತು ಸಿಕ್ಕ್ ಮುಖಂಡರೊಂದಿಗೆ ರಾಜಿ ಸಂಧಾನಗಳನ್ನು ನಡಿಸಲು ಒಂದು ಕಮಿಟಿಯು ನೇಮಿಸಲಾಗಿತ್ತಷ್ಟೆ. ಇದನ್ನನುಸರಿಸಿ, ಹಿಂದೂ-ಮುಸ್ಲಿಂ-ಸಿಕ್ಕ್ ಮುಂದಾಳುಗಳ ಪರಿಷತ್ತನ್ನು ಈ ತಾ. 3ರಲ್ಲಿ ಅಲ್ಲಾಹಾಬಾದಿನಲ್ಲಿ ನಡಿಸಬೇಕೆಂತೆ ಪಂಡಿತ ಮದನಮೋಹನ ಮಾಳವೀಯರು ಮತ್ತು ಮೌಲನಾ ಶೌಕತ್ ಅಲಿಯವರು ಏರ್ಪಡಿಸಿದರು.

ಈ ಕಾನ್‌ಫರೆನ್ಸಿನಲ್ಲಿ ಕೋಮುವಾರು ಸಮಸ್ಯೆಯನ್ನು ಎಲ್ಲರಿಗೂ ತೃಪ್ತಿಕರವಾಗಿ ತೀರ್ಮಾನಿಸಲು ಮಹಾತ್ಮ ಗಾಂಧಿಯವರ ಹಾಜರಾತಿಯು ಅವಶ್ಯವಿರುವುದರಿಂದ ಅವರನ್ನು ಜೈಲಿನಿಂದ ಬಿಡುಗಡೆ ಮಾಡಬೇಕೆಂತಲೂ, ಇದು ಸಾಧ್ಯವಿಲ್ಲವಾದರೆ ಅವರೊಂದಿಗೆ ಯಾರೊಂದೂ ಅಡಚಣೆಯಿಲ್ಲದೆ ತಾನು ಸಂಭಾಷಣೆ ನಡಿಸಲು ಅವಕಾಶ ಕೊಡಬೇಕೆಂತಲೂ ಮೌಲಾನ ಶೌಕತ್ ಅಲಿಯವರು ವೈಸರಾಯರಿಗೆ ಪತ್ರ ಬರೆದಿದ್ದರು. ಮಹಾತ್ಮ ಗಾಂಧಿಯವರು ಶಾಸನಭಂಗ ಚಳವಳವನ್ನು ನಿಲ್ಲಿಸಿದ ವಿನಹ ಅವರನ್ನು ಬಿಡುಗಡೆ ಮಾಡಲಾಗುವುದಿಲ್ಲವೆಂತಲೂ, ಮಾತ್ರವಲ್ಲ, ಮೌಲಾನರವರಿಗೆ ಮಹಾತ್ಮರೊಂದಿಗೆ ಸಂಭಾಷಣೆ ನಡಿಸಲು ಬಿಡಲಾಗುವದಿಲ್ಲವೆಂತಲೂ ವೈಸರಾಯರು ಶೌಕತ್ ಅಲಿಯವರಿಗೆ ಜವಾಬಿತ್ತಿದ್ದಾರೆ. ಮೌಲಾನರವರು ಇದರಿಂದ ಧೈರ್ಯಗುಂದದೆ, ಹಲವು ಮುಸಲ್ಮಾನ ಮುಖಂಡರೊಡನೆ ರಾಜಿಯ ಮಾತುಕತೆ ನಡಿಸುತ್ತಾ, ಅಲ್ಲಾಹಾಬಾದು ಪರಿಷತ್ತನ್ನು ಜಯಪ್ರದವಾಗಿ ಮಾಡಲು ತುಂಬಾ ಪ್ರಯತ್ನಗಳನ್ನು ನಡಿಸುತ್ತಿದ್ದಾರೆ. ಇವರ ಶ್ರಮವನ್ನು ನೋಡಿ ಇವರಿಗೆ ಅನೇಕ ಮುಸ್ಲಿಂ ಧುರೀಣರು ಬೆಂಬಲವನ್ನು ಕೊಡುತ್ತಿರುವುದಲ್ಲದೆ, ಅಮೇರಿಕಾದಿಂದ ಕೂಡ ಅವರಿಗೆ ಅಭಿನಂದನೆಗಳು ಬಂದಿವೆ.

ಇನ್ನೊಂದು ಕಡೆ ಪಂಡಿತ ಮಾಳವೀಯರು, ತನ್ನ ಆರೋಗ್ಯವು ಚೆನ್ನಾಗಿ ಇಲ್ಲದೆ ಹೋದರೂ ಕೂಡ ಹಿಂದೂ ಮುಸಲ್ಮಾನ-ಸಿಕ್ಕರ ಒಗ್ಗಟ್ಟಿಗಾಗಿ ಸತತ ಪ್ರಯತ್ನಗಳನ್ನು ನಡಿಸುತ್ತಿದ್ದಾರೆ. ಕೆಲವು ಸಾರಿ ಅವರು ಹಾಸಿಗೆಯಿಂದ ಏಳಲಾರದ ಸ್ಥಿತಿಯಲ್ಲಿದ್ದರೂ ಕೂಡ ಮಂಚದಲ್ಲಿ ಮಲಗಿಕೊಂಡೇ ಮಾತುಕತೆಗಳನ್ನು ನಡಿಸಿರುವರು. ಅವರು ಪಂಜಾಬಿಗೆ ಹೋಗಿ ಅಲ್ಲಿಯ ಹಿಂದೂ ಮತ್ತು ಸಿಕ್ಕ್ ಮುಖಂಡರನ್ನು ಭೇಟಿಯಾಗಿ ಒಗ್ಗಟ್ಟಿನ ತೀರ್ಮಾನಕ್ಕೆ ಅವರ ಸೂಚನೆಗಳನ್ನು ತೆಗೆದುಕೊಂಡಿರುವರು. ಬ್ರಾಗಾಳದಲ್ಲಿ ಸುತ್ತಿ ಅಲ್ಲಿಯ ಹಿಂದೂ ಮುಂದಾಳುಗಳೊಂದಿಗೆ ದೀರ್ಘ ಚರ್ಚೆ ನಡಿಸಿ ಅವರ ಸಹಕಾರವನ್ನು ಪಡೆದಿರುವರು. ಪಂಡಿತರ ಕೋರಿಕೆಯಂತೆ ಹಿಂದೂ ಮತ್ತು ಸಿಕ್ಕ್ ಧುರೀಣರು ಈ ತಾ. 1 ರಲ್ಲಿಯೇ ಅಲ್ಲಾಹಾಬಾದಿನಲ್ಲಿ ಸೇರಿ ತಮ್ಮೊಳಗೆ ಆರಂಭದ ಚರ್ಚೆ ನಡಿಸುತ್ತಿರುವರು. ತಾ. 3ರಲ್ಲಿ ಆಹ್ವಾನಿಸಲ್ಪಟ್ಟ ಮುಖ್ಯಸ್ಥರಲ್ಲಿ ಹಲವರು ಬಂದು ಸೇರುವರೆಂತಲೂ, ಪರಿಷತ್ತು ಸಫಲವಾಗುವ ಚಿಹ್ನೆಗಳು ತುಂಬಾ ಇವೆಯೆಂತಲೂ ಧುರೀಣರ ಅಭಿಪ್ರಾಯವಾಗಿದೆ. ಈ ಕಾನ್‌ಫರೆನ್ಸಿನ ಸಾಧ್ಯಾಸಾಧ್ಯತೆಯನ್ನು ಕುರಿತು ಹಲವರು ತಮ್ಮ ದೃಷ್ಟಿಯನ್ನು ಲಂಡನಿನಲ್ಲಿ ನಡೆಸಲ್ಪಡುತ್ತಿರುವ ದುಂಡು ಮೇಜು ಪರಿಷತ್ತಿನ ಕಡೆಯಿಂದ ಅಲ್ಲಹಾಬಾದು ಪರಿಷತ್ತಿನ ಕಡೆಗೆ ತಿರುಗಿಸಿರುವರು.

ಹರಿಜನರು.

ಅಸ್ಪೃಶ್ಯರಿಗೆ ಮಹಾತ್ಮರು ಹರಿಜನರೆಂದು ನಾಮಕರಣ ಮಾಡಿರುವುದರ ಮೇಲೆ ದಕ್ಷಿಣ ದೇಶದಲ್ಲಿ ಕೆಲವರು ಅಸ್ಪೃಶ್ಯರು, ಆ ಹೆಸರು ವೈಷ್ಣವ ಮತಾವಲಂಬಿಗಳೆಂಬ ಮಾತ್ರವೇ ಅರ್ಥಕೊಡುತ್ತದೆಂದು ಆಕ್ಷೇಪಿಸುತ್ತಿರುವರೆಂದು ಮದರಾಸು ಹರಿಜನ ಸಂಘದ ಕಾರ್ಯದರ್ಶಿಯವರು ಮಹಾತ್ಮರಿಗೆ ಬರೆದು ಅವರ ಅಭಿಪ್ರಾಯವನ್ನು ಕೇಳಿದ್ದರು. ಅದಕ್ಕೆ ಮಹಾತ್ಮರು "ಹರಿಜನರೆಂಬ ಹೆಸರನ್ನಿಟ್ಟಿರುವುದಕ್ಕಾಗಿ ಆಕ್ಷೇಪಿಸುವುದು ಬಹಳ ವಿಚಾರಕರವಾಗಿದೆ. ಹರಿಜನರೆಂದು ನಾಮಕರಣ ಮಾಡುವಾಗ್ಗೆ ನಾನು ವಿಷ್ಣುವನ್ನಾಗಲೀ, ಶಿವನನ್ನಾಗಲೀ ನನ್ನ ಮನಸ್ಸಿನಲ್ಲಿ ಧ್ಯಾನಿಸಿರಲಿಲ್ಲವೆಂದು ನೀವು ಅವರಿಗೆ ತಿಳಿಸುತ್ತಕ್ಕದ್ದು. ಆ ಹೆಸರು ದೇವರ ಸಂಬಂಧವೆಂದು ಮಾತ್ರ ನಾನು ತಿಳಿದಿರುವೆನಲ್ಲದೆ ವಿಷ್ಣು, ಶಿವ, ಬ್ರಹ್ಮ ಮೊದಲಾದ ಹೆಸರುಗಳಲ್ಲಿ ನನಗೆ ಭೇದ ಭಾವವಿಲ್ಲವು. ಎಲ್ಲ ಹೆಸರುಗಳೂ ಒಬ್ಬ ದೇವರ ನಾಮಗಳೇ" ಎಂದು ಉತ್ತರವನ್ನಿತ್ತಿರುವರು.

ಸ್ವದೇಶಿ ಚಳವಳದ ಪ್ರಯೋಜನ.

ಮಂಗಳೂರಿನ ಸ್ವದೇಶಿ ಪ್ರಚಾರ ಪತ್ರಿಕೆಯಲ್ಲಿ ಶ್ರೀ. ಸಿ. ರಾಜಗೋಪಾಲಾಚಾರ್ಯರು ಸ್ವದೇಶಿಯಿಂದುಂಟಾದ ಪ್ರಯೋಜನವನ್ನು ಮನಗಾಣಿಸಿರುವರು. 1927 ರಲ್ಲಿ ನಾವು ರೂ. 65 ಕೋಟಿಯಷ್ಟರ ನೂಲು ಮತ್ತು ವಸ್ತ್ರವನ್ನು ಪರದೇಶದಿಂದ ತರಿಸುತ್ತಿದ್ದೆವು. ರಾಷ್ಟ್ರೀಯ ಚಳವಳದ ಮತ್ತು ಸ್ವದೇಶಿ ಗಿರಣಿಗಳ ಪ್ರಯತ್ನದ ನಿಮಿತ್ತ 1931 ರಲ್ಲಿ ಇದು ರೂ. 25 ಕೋಟಿಗಿಳಿದಿರುವುದು. ಸ್ವದೇಶಿ ಪ್ರೇಮವೆಂದರೆ ಪರದೇಶಗಳ ದ್ವೇಷಸಾಧನೆಯಲ್ಲ. ವ್ಯಕ್ತಿಯೊಬ್ಬನು ಪ್ರಯತ್ನಿಸಿದರೆ ತಾನಾಗಿಯೇ ಮಾಡಿಕೊಳ್ಳಬಹುದಾದ ವಸ್ತುಗಳನ್ನು ನಿರಂತರವೂ ಇತರರ ಮೇಲೆ ಅವಲಂಬಿಸಿಕೊಂಡು, ಅವನ್ನೇ ಉಪಯೋಗಿಸುತ್ತಾ, ಇರುವುದು ಅನುಚಿತವಾಗಿರುವಂತೆ, ಒಂದು ರಾಷ್ಟ್ರವು ತಾನಾಗಿ ಉತ್ಪಾದಿಸಬಲ್ಲ ಸಾಮಾನುಗಳಿಗಾಗಿ ಇತರ ರಾಷ್ಟ್ರಗಳ ಕೈಗಾರಿಗಳ ಮೇಲೆ ಹೊಂದಿಕೊಂಡಿರುವುದು ಹಾನಿಕರವಿದೆ. ಇಂತಹ ಅನೇಕ ಸಾಮಾನುಗಳೀಗ ಹಿಂದು ದೇಶದಲ್ಲಿವೆ. ನಮ್ಮಲ್ಲಿ ಬೇಕಷ್ಟು ಬೆಲ್ಲವು ಸಿಕ್ಕುತ್ತಿದ್ದು ಅದನ್ನು ಸಕ್ಕರೆಯಾಗಿ ಸಹ ಮಾಡಬಹುದಾದರೂ ನಾವು ರೂ. 15 ಕೋಟಿಯಷ್ಟರ ಸಕ್ಕರೆಯನ್ನು ಪರದೇಶಗಳಿಂದ ತರುಮಾಡುತ್ತೇವೆ. ದೇಶದಲ್ಲೇ ಸಿಗುವ ಆಹಾರ ಪದಾರ್ಥಗಳಿಂದ ನಾವು ತೃಪ್ತರಿಲ್ಲ. ನಮ್ಮ ದನಗಳು ಕೊಡುವ ಹಾಲು, ನಮ್ಮ ಮನೆ, ಹೊಟೇಲುಗಳಲ್ಲಿ ತಯಾರಾಗುವ ತಿಂಡಿತಿನಸುಗಳು ನಮಗೆ ಸಾಕಾಗುವುದಿಲ್ಲ. ನಾವು ಗೋದಿಹುಡಿ, ಬಿಸ್ಕತು, ಗಟ್ಟಿ ಹಾಲು, ಜೆಮ್ಸ್, ಬೇರೆ ಬೇರೆ ವಿಧದ ಮಕ್ಕಳ ಆಹಾರ, ಟಿನ್ನಿನಲ್ಲಿ ಇರುವ ತಿಂಡಿಗಳು, ಚಾಕಲೇಟು, ಒಣಹಣ್ಣು ಮುಂತಾದ ಪದಾರ್ಥಗಳಿಗೋಸ್ಕರ 1931 ರಲ್ಲಿ ರೂ. 9 ಕೋಟಿಯಷ್ಟನ್ನು ಹೊರಗೆ ಕಳುಹಿಸಿರುತ್ತೇವೆ. ಈಗ ನಾನಾಬಗೆಯ ಉತ್ಕೃಷ್ಟ ಸ್ವದೇಶಿ ಸಾಬೂನುಗಳಿರುವವಾದರೂ ಇನ್ನೂ ರೂ. 1½ ಕೋಟಿಯಷ್ಟರ ಸಾಬೂನುಗಳನ್ನು ಹೊರಗಿನಿಂದ ತರಿಸುತ್ತೇವೆ. 1931 ರಲ್ಲಿ ಇದು ಸುಮಾರು ರೂ. 50 ಲಕ್ಷದಷ್ಟು ಕಡಿಮೆಯಾಗಿರುವುದು. ನಾವು ಉಪ್ಪನ್ನೂ ಪರದೇಶದಿಂದ ತರಿಸಿ, ಅದಕ್ಕಾಗಿ ರೂ 1 ಕೋಟಿಯಷ್ಟನ್ನೀಯುವೆವೆಂಬುದು ಹಲವರಿಗೆ ತಿಳಿದಿರಲಾರದು. ಸಿಗರೇಟೇ ಮೊದಲಾದುವುಗಳಿಗೆ ಮೊದಲು ರೂ. 3 ಕೋಟಿ ಹೊರಹೋಗುತ್ತಿತ್ತು. 1931 ರಲ್ಲಿ ಇದು 1¾ ಕೋಟಿ ಕಡಿಮೆಯಾಗಿರುವುದು. ಕಬ್ಬಿಣ ಸಾಮಾನುಗಳಿಗಾಗಿ ಇನ್ನೂ ನಾವು ರೂ. 26 ಲಕ್ಷ ಕೊಡುತ್ತಿದ್ದೇವೆ. ಮೊದಲು ಕುಪ್ಪಿ ಸಾಮಾನುಗಳಿಗೆಲ್ಲಾ ರೂ. 80 ಲಕ್ಷ ಕೊಡುತ್ತಿದ್ದುದು 1931 ರಲ್ಲಿ 48 ಲಕ್ಷಕ್ಕಿಳಿದಿರುವುದು. ಗಾಜಿನ ಸಾಮಾನುಗಳಿಗೆ ಸುಮಾರು ರೂ. 2 ಕೋಟಿ ಹೊರಹೋಗುತ್ತಿದೆ. ಮೊದಲು ರೂ. 5 ಕೋಟಿಗಳಿಗಿಂತಲೂ ಮಿಕ್ಕಿದ ಉಕ್ಕಿನ ಸಾಮಾನುಗಳ ಆಮದಾಗುತ್ತಿತ್ತು. 1931 ರಲ್ಲಿ ಇದು 2½ ಕೋಟಿ ಕಡಿಮೆಯಾಗಿರುವುದು. ಇನ್ನೂ ವಿದೇಶಗಳಿಗೆ ಹರಿಯುವ ಕೋಟಿಗಟ್ಟಲೆ ಹಣವನ್ನು ನಾವು ಮನಸ್ಸು ಮಾಡಿದರೆ ಕೆಲವೇ ವರ್ಷಗಳಲ್ಲಿ ನಿಲ್ಲಿಸುವುದು ಸಾಧ್ಯವಿದೆ. ಸರಕಾರವೂ ಜನರೂ ಪ್ರಯತ್ನಿಸಿದರೆ ಹಿಂದೂದೇಶವು ಸರ್ವ ವಿಧದಿಂದಲೂ ಸ್ವಾವಲಂಬನೆಯಿಂದ ಸ್ವತಂತ್ರವಾಗಿರುವುದು ಅಸಾಧ್ಯವೇನೂ ಅಲ್ಲ. ಸರಕಾರವು ಈ ಕುರಿತು ಉದಾಸೀನದಿಂದಿರುವಾಗ ಜನತೆಯ ಮೇಲಿನ ಜವಾಬ್ದಾರಿಯು ಇಮ್ಮಡಿ ಹೆಚ್ಚಾಗಿದೆ.

'ಸ. ಯು.'

ಮೈಸೂರಿಗೆ ಹೊಗಳಿಕೆ.

(ಮದ್ರಾಸಿನಲ್ಲಿ ಚೀಫ್ ಮಿನಿಸ್ಟರಾಗಿದ್ದ ಡಾಕ್ಟರ್ ಸುಬ್ಬರಾಯನ್ ರವರು ಬೆಂಗಳೂರಿನಲ್ಲಿ ಸ್ವದೇಶಿ ವಸ್ತು ಪ್ರದರ್ಶನವನ್ನು ತೆರೆಯುವ ಸಮಾರಂಭ ನಡೆಸುವಾಗ ಮಾಡಿದ ಭಾಷಣದಿಂದ. ಬರೆದು ಬಂದದ್ದು :)

ಬ್ರಿಟಿಷ್ ಇಂಡಿಯಾಕ್ಕೂ ದೇಶೀಯ ರಾಜ್ಯಗಳಿಗೂ ಬಹು ಮುಖ್ಯವಾದ ವ್ಯತ್ಯಾಸವಿರುವುದೇನೋ ನಿಜ. ಆದರೆ ಎರಡು ಭಾಗದ ಜನರೂ ಒಂದೇ ಕುಲಕ್ಕೆ ಸೇರಿದವರೆಂಬುದಕ್ಕೆ ಇಲ್ಲಿ ನಿದರ್ಶನವಿದೆ. ಬ್ರಿಟಿಷ್ ಇಂಡಿಯಾಕ್ಕೆ ಸೇರಿದ ನನ್ನಂಥವನನ್ನು ದೇಶೀಯ ರಾಜ್ಯದಲ್ಲಿ ನಡೆಯುವ ಈ ಸಮಾರಂಭಕ್ಕೆ ಆಮಂತ್ರಿಸಿದ್ದೀರಿ ಎಂಬುದೇ ಇದಕ್ಕೆ ಸಾಕ್ಷಿ. ದೇಶೀಯ ರಾಜ್ಯದ ಮತ್ತು ಬ್ರಿಟಿಷ್ ಹಿಂದೂಸ್ಥಾನದ ಜನರಲ್ಲೂ ಒಂದೇ ತರದ ಅಭಿಲಾಷೆಗಳೂ ಆಕಾಂಕ್ಷೆಗಳೂ ಇವೆ. ಬ್ರಿಟಿಷ್ ಹಿಂದುಸ್ಥಾನದ ನಾವು ಸ್ವತಂತ್ರರಾದರೆ ಅಂಥಾ ಸ್ವಾತಂತ್ರ್ಯದ ಫಲಿತಾಂಶವನ್ನು ದೇಶೀಯ ರಾಜ್ಯದ ಪ್ರಜೆಗಳಾದ ನೀವು ಅನುಭವಿಸುತ್ತೀರಿ ಎಂತ ನನಗೆ ಭರವಸೆ ಇದೆ. ದೇಶೀಯ ರಾಜ್ಯಗಳಲ್ಲಿ ಇರುವ ಆಡಳಿತಕ್ಕಿಂತ ಬ್ರಿಟಿಷ್ ಇಂಡಿಯಾದಲ್ಲಿ ಒಳ್ಳೇ ಆಡಳಿತವಿದೆಯೆಂತಲೂ ಅದ್ದರಿಂದ ಬ್ರಿಟಿಷ್ ಇಂಡಿಯಾದ ಜನರಿಗೆ ಹೆಚ್ಚಿನ ಅನುಕೂಲಗಳಿವೆಯೆಂತಲೂ ಹೇಳುವುದನ್ನು ಕೇಳಿದ್ದೇನೆ. ನಿಮ್ಮ ಮೈಸೂರ ಸಂಸ್ಥಾನದ ಉದ್ದಗಲಕ್ಕೂ ತಿರುಗಿದ ನಾನು ನನ್ನ ಅನುಭವದಿಂದ ಹೀಗೆ ಹೇಳಬಲ್ಲೆನೆಂದರೆ—ಸಂಸ್ಥಾನದ ಪ್ರಜೆಗಳಿಗೆ ಅನುಕೂಲಗಳನ್ನು ಒದಗಿಸಿಕೊಡುವುದರಲ್ಲಿ ನಿಮ್ಮ ಸರಕಾರವು ಎಳ್ಳಷ್ಟೂ ಹಿಂದಿಲ್ಲ. ಅಷ್ಟು ಮಾತ್ರವಲ್ಲ, ನಿಮ್ಮ ಮಹಾರಾಜರೂ ಮತ್ತು ಅವರ ಧಾರಾಳ ಬುದ್ಧಿಯುಳ್ಳ ಸರಕಾರವೂ, ಬ್ರಿಟಿಷ್ ಇಂಡಿಯಾದ ಪ್ರಜೆಗಳಾದ ನಮಗೆ ದೊರಕುವುದಕ್ಕಿಂತ ಎಷ್ಟೋ ಹೆಚ್ಚು ಅನುಕೂಲಗಳನ್ನು ಒದಗಿಸಿಕೊಟ್ಟಿದ್ದಾರೆ. ಹೊಸ ಬಸಿರಿ ಇಲ್ಲಿಗೆ ಬರುವಾಗ ಚಿಕ್ಕ ಚಿಕ್ಕ ಗ್ರಾಮಗಳಲ್ಲಿ ವಿದ್ಯುಚ್ಛಕ್ತಿ ದೀಪಗಳನ್ನು ನೋಡಿದೆ. ನಮ್ಮ ಬ್ರಿಟಿಷ್ ಇಂಡಿಯಾದ ಗ್ರಾಮಗಳಲ್ಲಿ ಇಂಥಾ ಅನುಕೂಲಗಳಿವೆಯೋ? ಪ್ರಜೆಗಳಿಗೆ ಏನು ಬೇಕೆಂಬುದನ್ನು ರಾಜರು ತಿಳಿದುಕೊಂಡಿರುವರೆಂದು ಗೊತ್ತಾಗುತ್ತದೆ. ನಾವು ಇದನ್ನು ಏರಂಕುಶ ದಯಾವಂತ ಪ್ರಭುತ್ವವೆನ್ನಬಹುದು. ನಾವು ಪ್ರಜಾಪ್ರತಿನಿಧಿ ಸರಕಾರವನ್ನು ಅನುಭವಿಸುತ್ತೇವೆಯೆಂದು ಹೇಳಿಕೊಳ್ಳುತ್ತೇವೆ. ಆದರೆ ನಮ್ಮ ಪ್ರಜಾಪ್ರತಿನಿಧಿ ಸರಕಾರವನ್ನು ನಿಮ್ಮ ದೇಶದ ಆಡಳಿತದೊಂದಿಗೆ ಹೋಲಿಸಿ ನೋಡಿಕೊಳ್ಳಲು ನಾನು ಹಿಂಜರಿಯುತ್ತೇನೆ. ಪ್ರಜಾನಿಧಿ ಸರಕಾರವನ್ನು ಪಡೆಯಲು ಬ್ರಿಟಿಷ್ ಇಂಡಿಯಾದ ನಾವು ಪ್ರಯತ್ನಿಸುತ್ತಿರುವಾಗ್ಯೂ ನಿಮ್ಮ ದೇಶದಲ್ಲಿ ಪ್ರಜೆಗಳ ಆವಶ್ಯಕತೆಗಳನ್ನು ಅರಿತು ನಡೆಸುವ ಸರಕಾರ ಪದ್ಧತಿಯು ಜಾರಿಯಲ್ಲಿದೆ. ಆಲ್ಲದೇ ದೇಶೀಯ ರಾಜ್ಯಗಳೂ ಇವೆ. ಉತ್ತರ ಹಿಂದೂಸ್ಥಾನದಲ್ಲಿ ನೀವು ಪ್ರಯಾಣ ಮಾಡಿದವರಾಗಿದ್ದರೆ ಅಂಥಾ ದೇಶೀಯ ರಾಜ್ಯಗಳಲ್ಲಿರುವುದಕ್ಕಿಂತ ಬ್ರಿಟಿಷ್ ಇಂಡಿಯಾದಲ್ಲೇ ಇರಲು ಅಪೇಕ್ಷಿಸುತ್ತೀರಿ ಎಂಬುದರಲ್ಲಿ ಸಂಶಯವಿಲ್ಲ. ಅಲ್ಲಿನ ಅರಸುಗಳು ತಮ್ಮ ರಾಜ್ಯವು ತಮ್ಮ ಸ್ವಂತ ಆಸ್ತಿಗಳೆಂತ ಭಾವಿಸಿದ್ದಾರೆ. ಆದರೆ ಈ ಸಂಸ್ಥಾನದ ಪ್ರಾಚೀನ ರಾಜವಂಶಕ್ಕೆ ಸೇರಿದ ರಾಜರಿದ್ದಾರೆ. ಅವರು ತಮ್ಮ ಪ್ರಜೆಗಳ ಕ್ಷೇಮವನ್ನು ಎಷ್ಟರ ಮಟ್ಟಿಗೆ ತಮ್ಮ ಮನಸ್ಸಿಗೆ ತೆಗೆದುಕೊಂಡಿದ್ದಾರೆಂಬುದು ಹಿಂದೂಸ್ಥಾನದಲ್ಲಿ ಮಾತ್ರವಲ್ಲ ಒಟ್ಟು ಪ್ರಪಂಚದಲ್ಲೇ ಪ್ರಖ್ಯಾತಿಯನ್ನು ಪಡೆದಿದೆ. ಹಿಂದೀ ಫೆಡರೇಶನ್ ಸ್ಥಾಪನೆಯಾದಾಗ ಇವರ ಉದಾಹರಣೆಯನ್ನೇ ಬೇರೆ ರಾಜರುಗಳೂ ಅನುಸರಿಸಿಯಾರೆಂತ ನಂಬುತ್ತೇನೆ.

ಕೊಡಗಿನ ಭವಿಷ್ಯತ್ತು.

ಅಮ್ಮತ್ತಿ ನಾಡಿನವರ ಮೀಟಿಂಗು.

ತಾರೀಕು 30—10—32 ರಲ್ಲು ಅಮ್ಮತ್ತಿ ನಾಡವರು ಸುಮಾರು 300 ಜನರು ಅಮ್ಮತ್ತಿಯಲ್ಲಿ ಸಭೆ ಸೇರಿದ್ದರು. ಈ ನಾಡಿನ ಎಲ್ಲಾ ಗ್ರಾಮಗಳಿಂದಲೂ ಮುಖಂಡರು ಹಾಜರಿದ್ದರು. ಮೇ. ಪಟ್ಟಂಡ ಐಯಪ್ಪನವರು ಸೂಚಿಸಿದ ಮೇರೆ, ಸರ್ವಜನ ಸಮ್ಮತದಿಂದ ಮೇ. ಐ. ಪಿ. ಕಾರ್ಯಪ್ಪನವರು ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡು, ಕೊಡಗನ್ನು ಮೈಸೂರಿಗೆ ಸೇರಿಸಬೇಕೆಂದು ಕೆಲವು ಮುಖಂಡರು ಇತ್ತೀಚೆಗೆ ಹೂಡಿದ ಚಳವಳವನ್ನು ವಿವರಿಸಿ ಹೇಳಿ, ಇಡೀ ಹಿಂದೂಸ್ಥಾನದಲ್ಲಿ ಸ್ವರಾಜ್ಯಕ್ಕಾಗಿ ಸಾವಿರಗಟ್ಟಲೆ ಮುಖಂಡರು ತಮ್ಮ ತನು ಮನ ಧನಗಳನ್ನು ಅರ್ಪಿಸಿ ಜೈಲುವಾಸದಲ್ಲಿದ್ದು ಹಿಂದೂಸ್ಥಾನವು 'ಯುದ್ಧ'ರಂಗವಾಗಿ ಪರಿಣಮಿಸಿರುವ ಸಮಯದಲ್ಲಿಯೂ, ಕೊಡಗಿನಲ್ಲಿಯೂ ಕೂಡ ಅನೇಕ ಮುಖಂಡರು ಹೋರಾಡಿ ಕಾರಾಗೃಹ ವಾಸದಲ್ಲಿ ನರಳುತ್ತಿರುವಾಗಲೂ ಕೊಡಗಿನ ಭವಿಷ್ಯತ್ತನ್ನು ತೀರ್ಮಾನಿಸುವ ಆಲೋಚನೆ ಮಾಡಿದ ಸಂಗತಿಯನ್ನು ವಿವರಿಸಿ ಹೇಳಿದ ನಂತರ ಈ ಕೆಳಗಿನ ಠರಾವುಗಳನ್ನು ಸರ್ವಸಮ್ಮತದಿಂದ ಮಂಜೂರು ಮಾಡಲಾಯಿತು.

1. ಕಾಂಗ್ರೆಸಿಗೂ ಮತ್ತು ಸರಕಾರಕ್ಕೂ ನಡೆಯುತ್ತಿರುವ ಹೋರಾಟವು ತೀರಿ, ಶಾಸನಭಂಗದ ಚಳವಳವು ನಿಂತು, ಹಿಂದೂದೇಶದಲ್ಲಿ ಹಾಗೂ ಕೊಡಗಿನಲ್ಲಿ ಶಾಂತತೆಯು ನೆಲೆಗೊಂಡಬಳಿಕ, ಕೊಡಗಿನ ಭವಿಷ್ಯತ್ತನ್ನು ಆಲೋಚನೆ ಮಾಡುವ ಸಮಯವು ಈಗ ಬಂದಿಲ್ಲವಾಗಿ ಈ ಸಭೆಯು ತೀರ್ಮಾನಿಸುತ್ತದೆ.

2. ಕೊಡಗಿನ ಭವಿಷ್ಯತ್ತನ್ನು ಕುರಿತು ಕೊಡಗಿನ ಕೆಲವು ಮುಖಂಡರು ಈಗ ಹೂಡಿದ ಚಳವಳವನ್ನು ಈ ಸಭೆಯು ವಿರೋಧಿಸುತ್ತದೆ.

ಐ. ಪಿ. ಕಾರ್ಯಪ್ಪ,
(ಅಧ್ಯಕ್ಷ)

ಸೆಂಟ್ರಲ್ ಬ್ಯಾಂಕು ಮೀಟಿಂಗು.

ಈ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ತಾರೀಕು 29—10—32 ರಲ್ಲಿ ಬ್ಯಾಂಕಿನ ಆಫೀಸಿನಲ್ಲಿ ರಾವ್ ಬಹದ್ದೂರ್ ಪಟ್ಟಮಾಡ ದೇವಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಕೆಳಗಿನ ಡೈರೆಕ್ಟರುಗಳು ಹಾಜರಿದ್ದರು. 1. ರಾವ್ ಬಹದ್ದೂರ್ ಪಟ್ಟಮಾಡ ದೇವಯ್ಯನವರು (ಪ್ರೆಸಿಡೆಂಟರು) 2 ಮೇ. ಗಳಾದ ಅಪ್ಪಾರಂಡ ಚಂಗಪ್ಪನವರು, 3 ಮಾಚಮಾಡ ಚಂಗಪ್ಪನವರು, 4. ಕೋರಂಗಡ ಗಣಪತಿಯವರು, 5. ಮನೆಯಪಂಡ ಬೆಳ್ಯಪ್ಪನವರು (ಟ್ರೆಜರರ್), 6 ಐಚೆಟ್ಟಿರ ಸುಬ್ಬಯ್ಯನವರು, 7. ಪುಚ್ಚಿಮಾಡ ಮಾದಯ್ಯನವರು ಮತ್ತು 8. ಸಿ. ಎನ. ವೆಂಕಪ್ಪಯ್ಯನವರು (ಗೌರವ ಕಾರ್ಯದರ್ಶಿ)

1 ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸ ಓದಿ ಒಪ್ಪಲಾಯಿತು.

2. ಕಳೆದ ಸೆಪ್ಟಂಬರ್ ತಿಂಗಳ ಜಮಾ ಮತ್ತು ಖರ್ಚಿನ ಲೆಕ್ಕ ಓದಿ ಮಂಜೂರ್ಮಾಡಲಾಯಿತು.

ಕಳೆದ ತಿಂಗಳ ಸಿಲ್ಕು	ರೂ	19781— 5 —11
ಈ ತಿಂಗಳಲ್ಲಿ ವಸೂಲಿ	,,	10992—15— 1
ಒಟ್ಟು	,,	30774— 5— 0
ಈ ತಿಂಗಳಲ್ಲಿ ಖರ್ಚು	,,	20403— 8— 1
ಬಾಕಿ ಸಿಲ್ಕು	,,	10370—12—11

3 ಈ ಕೆಳಗಿನ ಸೊಸೈಟಿಗಳಿಗೆ ಸಾಲಗಳು ಮಂಜೂರಾದವು. (1) ವೀರಾಜಪೇಟೆ ಟೌನು ಸೊಸೈಟಿಗೆ ರೂ. 6500, (2) ಕುರ್ಚಿ ಮುಟ್ಲು ಸೊಸೈಟಿಗೆ ರೂ 2000 ಮತ್ತು, (3) ಕೊಡಗು ಕಾಫಿ ಪ್ಲಾಂಟರುಗಳ ಸೊಸೈಟಿಗೆ ರೂ 3,300.

4. ಬ್ಯಾಂಕಿನ ಬೈಲಾ 31 (b)ರ ಪ್ರಕಾರ ಸಂಘಗಳ ಠೇವಣಿ ಹಣಗಳ ತೆಗೆದುಕೊಳ್ಳಲು ಪ್ರಾವಿನ್ಶಿಯಲ್ ಕೋ-ಆಪರೇಟಿವ್ ಫೆಡರೇಶನ್ನಿನವರಿಗೆ ಅಧಿಕಾರ ಕೊಡತಕ್ಕದ್ದಾಗಿದೆಯೆಂತ ತೀರ್ಮಾನವಾಯಿತು.

5. ಬ್ಯಾಂಕಿನ ಪ್ರಕಟಣೆ, ನೋಟೀಸು, ಪ್ರೊಸೀಡಿಂಗ್ಸ್ ವಗೈರೆ ಎಲ್ಲಾ ವಿಷಯಗಳನ್ನೂ 'ಜನ್ಮ ಭೂಮಿ'ಯಾದ ಪತ್ರಿಕೆಯಲ್ಲಿ 6 ತಿಂಗಳಿಗೆ 25 ರೂಪಾಯಿ ದರದಲ್ಲಿ ಪ್ರಕಟಿಸುವಂತೆ ಆದರ ಪತ್ರಿಕೆಯವರನ್ನು ಕೇಳಿಕೊಂಡು ಒಪ್ಪಿದರೆ ಹಾಗೆ ಪ್ರಕಟಣೆಗೆ ಕೊಡಬೇಕೆಂತ ತೀರ್ಮಾನವಾಯಿತು.

6 ಬ್ಯಾಂಕಿನ ಖಾಯಂ ಸಿಬ್ಬಂದಿಯವರಿಗೆ ಪ್ರಾವಿಡೆಂಟ್ ಫಂಡನ್ನು ಏರ್ಪಡಿಸಲು ತೀರ್ಮಾನವಾಯಿತು. ಈ ಬಾಬಿನಲ್ಲಿ ರೂಲ್ಸ್ ವಗೈರೆ ತಯಾರಿಸಲು ಮೇ. ಗಳಾದ ಸಿ ಎನ್. ವೆಂಕಪ್ಪಯ್ಯನವರು, ಮಾಚಮಾಡ ಚಂಗಪ್ಪನವರು, ಮತ್ತು ಮನೆಯಪಂಡ ಎಂ. ಬೆಳ್ಯಪ್ಪನವರು, ಈ ಮೂರು ಮುಖಂಡರು ಸೇರಿದ ಒಂದು ಕಮಿಟಿಯು ಏರ್ಪಡಿಸಲಾಯಿತು.

7. ಯೂನಿವರ್ಸಲ್ ಮ್ಯೂಚುವಲ್ ಏಯಿಡ್ ಅಂಡ್ ಪೂವರ್ ಹೌಸಸ್ ಎಸೋಸಿಯೇಶನ್ ಕಂಪೆನಿಯ ಜಾಯಿಂಟ್ ಲಿಕ್ವಿಡೇಟರಿಂದ ಬಂದ ಪತ್ರ ಓದಲಾಯಿತು. ಆ ಪತ್ರದ ಮೇರೆ ಬ್ಯಾಂಕಿನಲ್ಲಿ ಮೇಲ್ಕಂಡ ಕಂಪೆನಿಯ ಹೆಸರಿನಲ್ಲಿ ಫಿಕ್ಸಡ್ ಡಿಪಾಜಿಟ್‌ನಲ್ಲಿರುವ ಮೊಬಲಗುಗಳನ್ನು ಬ್ಯಾಂಕಿನ ಡಿಪಾಜಿಟ್ಸು ಸಂಬಂಧದ ಕರಾರು ಮೇರೆ ವಾಪಸು ಕೊಡಬಹುದೆಂತ ತೀರ್ಮಾನವಾಯಿತು.

8 ಬ್ಯಾಂಕಿನ ಉಪಯೋಗಕ್ಕಾಗಿ ಈ ಮೊದಲು ತರಿಸಿದ ಹಳೇ ನಂಬ್ರ ಹಾಕುವ ಮೆಶಿನು ರಿಪೇರಿಗೆ ಬಂಗಳೂರಿನಿಂದ ಒಂದು ಹೊಸ ನಂಬ್ರ ಹಾಕುವ ಮೆಶಿನನ್ನು ತರಿಸಬಹುದೆಂತ ತೀರ್ಮಾನವಾಯಿತು.

9. ಅಚ್ಚೆಟ್ಟಿರ ಡೇಟ್ ಕರುಂಬೈಯ್ಯನವರ ಪತ್ನಿ ಶ್ರೀಮತಿ ಬೊಳ್ಳವ್ವನವರ ಬಾಬ್ತು, 900 ರೂಪಾಯಿಗಳನ್ನು ಸೆಕ್ಯುರಿಟಿ ಡೆಪಾಸಿಟ್ ಆಗಿ ಫಿಕ್ಸಡ್ ಡಿಪಾಜಿಟ್ಟು ತೆಗೆದುಕೊಳ್ಳಬಹುದೆಂತ ತೀರ್ಮಾನವಾಯಿತು.

10. ಈ ನವಂಬರ್ ತಾ. 5 ರಲ್ಲು ಆಲ್ ಇಂಡಿಯಾ ಕೋ-ಆಪರೇಟಿವ್ ದಿವಸವನ್ನು ಬೇರೆ ಕಡೆಗಳಲ್ಲಿ ಆಚರಿಸುವಂತೆ ಇಲ್ಲಿಯೂ ಆಚರಿಸಬೇಕಾಗಿ ಫೆಡರೇಶನ್ನಿನಿಂದ ಬಂದ ಪತ್ರವು ಓದಲಾಯಿತು.

ಪಿ. ದೇವಯ್ಯ,
(ಅಧ್ಯಕ್ಷರು.)

ನಾವು ನಿಮ್ಮವರಾಗೆವೇ?

(ಕೇಳಮ್ಮ ಮಕ್ಕಳಿರಾ ಎಂಬಂತೆ)

ನಾವು ನಿಮ್ಮವರಾಗೆ | ಆನಂದದ ಹಾಡುವೇ ||ಪ||
ಬಾಲಿಸಿದನ ಸಹೋದರಿ | ಶೀಲದಿಂದ ಸುಶಿವ ಸಾಡಿಯೂ
ಬಾಲರಂತೆ ಪರರ ವಶದ | ಹಾಲಕ್ಕೀಗ ಸಿಲುಕದಿರ ||ನಾ||
ಮಾತೆ ನಮಗೆಲ್ಲಿ ನವಗಳವಳ | ಜಾತರೇಕೆ ಪಂಚ ವರ್ಷ
ಭೂತಳದೊಳಿಲ್ಲ ಇಲ್ಲ | ಸೇತುಹಿಮಾಚಲದಲ್ಲೇ ||ನಾ||
ಅಂದು ಪೂರ್ವದಲ್ಲಿ ನಿಮ್ಮ | ಅಂದದಿಂದ ವಿರಾಗಿಸಿದರೆ
ಅಂದು ನಮ್ಮ ಬೇರೆ ತದೆ | ತಾದಿರದ ಮಧ್ಯದಲ್ಲಿ ||ನಾ||
ಅಂದು ನಾವು ಒಂದಾಗಿದ್ದು | ನಂದು ಬಂಧು ದುರಿತನಾದು
ಇಂದು ಭರತನೂತೆಗದು | ಕುಂದಕರ ತಂದೊಡ್ಡಿತು ||ನಾ||
ಕಸಬಿನಂತೆ ವರ್ಣಕಲ್ಲ | ಹೆಸರ ತಂದು ಹಚ್ಚಿದರು
ವ್ಯಸನವೇಕೆ ದಿಟವನುಡಿಯೆ | ಕಸುಬು ಹಳೇದ ಗೈವೆವೆಂದು ||ನಾ||
ಹೊಲಸರೀಗ ನಾವು ಎಂದು | ಬಲುಪವಿತ್ರರ್ ನೀವು ಎಂದು
ಹಲುಬುತಿರುವಿರೇಕೆ ಬರಿದೆ | ಬಲವು ಎಮ್ಮ ಕೊಳೆಸುವೇನು ||ನಾ||
ಬಹಳವಾಗ್ರ ನಮ್ಮವರ | ಹಿರಿಯ. ..ಡುತಿರುವುದರಿಯ್ಯಾ!
ಬಡವನ ನಮ್ಮ ನೋಯು ಏನೆ, ಕವಲವರ ಬಂದಿಹರು ||ನಾ||
ನಿಮ್ಮಲ್ಲಿಯ ಬಹತರ ಸಹ, ನಮ್ಮಂತೆಯೇ ಇಲ್ಲವೇನು
ನಿಮ್ಮವೋಲ್ ನಾವು ಧನಿಕರಾಗೆ | ಎಮ್ಮ ತಡೆದು ನೋಡುವ ವಿರಂತೆ ||ನಾ||
ತಿಂದು ನೀಚತರವು ಹೇಗು | ಹಿಂದೆ ನಾವು ಕುಡಿ ಮುದ್ದಿಟ್ಟು
ಬಾಡಲೆಷ್ಟು ನಿಮ್ಮಲಿಲ್ಲ | ಮೂಡಿಸಿ ವಾವೆಲ್ಲ ಬರುವ ||ನಾ||
ಜಾತಿಕಟ್ಟು ನಾವು ಒಡನೆ | ಜಾತ್ಯತೀ ಇರುವ ಕೃಷ್ಣರಾಗೆ
ಮೈತ್ರಿ ಇಂದಸಂಭ್ರಮದೆಮ್ಮ | ಪ್ರೀತಿಯೊಳ ಆಗ್ಗರಿ ||ನಾ||
ವಿದ್ಯಾಹೀನರೇನು ನಾವು | ಬುದ್ಧಿಯೇಕೆ ನಮಗಿಲ್ಲ
ಮೊದಲು ನಮೋವರನೆ | ವೃದ್ಧಿಯಾಗುವುದೇನು ಮತ ||ನಾ||
ದೇವಸ್ಥಾನದೊಳಗೆ ನಾವು | ಸೇರೆ ಜನರ ನ್ಯಾಯವೇನು
ಯಾವ ವೈರಂಥ ಜವರನಲ್ಲ | ನೀವು ಮುಂದೆ ಕರೆವಿರೇನು ||ನಾ||
ಕಟ್ಟುಕಟ್ಟಳೆ ಹಳೆಯದೆಲ್ಲ | ಅಟ್ಟದಲ್ಲಿ ಕಟ್ಟಿ ಇಂದು
ಕೆಟ್ಟ ಕಾಲ ಹೀಗೆ ಬರಲು | ಪುಟ್ಟಿರುವ ಪುಣ್ಯ ಕೃಷ್ಣ ||ನಾ||
ಭರತ ಖಂಡದುದ್ದಗಲ | ಭರದಿಂದೆಮ್ಮ ಎತ್ತುತಿಹನು
ಬರದೆ ನಿಲ್ಲೆ ಕೊಡಗಿನಾಗ | ನರ ನೀವಾಗ ಕೂಪಕೂರ್ಮ ||ನಾ||
ಅವತಾರ ಗಾಂಧಿಯನ್ನು | ತವಕಪಡದೆ ಹಿಂಬಾಲಿಸಿ
ಅವನ ನುಡಿಯ ನಡೆಸೆ ನಾವು | ನವಕಳೆಯು ಮಾತಗದುದು ||ನಾ||

'ಸೇವಕ'

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್. ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್: ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲಿ)

		ರೂ.
ಷೇರ್ ಬಂಡವಾಳ	—	50,000—0—0
ವಸೂಲಾದ ಷೇರ್ ಮೊಬಲಗು	—	27,350—0—0
ಜಮೆಯಾದ ಠೇವಣಾತಿ	—	22,538—10—7
ವಸೂಲಾದ ಕ್ಷೇಮನಿಧಿ	—	37,914—12—0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ವಾರ್ಷಿಕ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ವಾರ್ಷಿಕ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು. ಪಟ್ಟುವಡ ದೇವಯ್ಯನವರು, ರಾವ್ ಬಹದ್ದೂರ್.

ಟ್ರೆಜರರ್ ಮನೆಯಪ್ಪಂಡ ಬೆಳ್ಯಪ್ಪನವರು.

ಸೆಕ್ರೆಟರಿ

ಸಿ. ಎಸ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಖು 1—7—1932.

ನೋಟೀಸು.

ಈ ಕೆಳಗಿನ ಮಹಾಶಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿದೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ [illegible] ಸ್ಥಳದಲ್ಲಿ ತಮ್ಮ ಚಂದಾವನ್ನು [illegible] ರಶೀತಿ [illegible].

ಏಜೆಂಟರುಗಳು.

ಕೊಡಗಿನ ಎಲ್ಲಾ ಭಾಗಗಳಿಗೆ—ಮೆ. ಮಾಚಂಡ ಎ. ಬಿದ್ದಪ್ಪನವರು.

ಉತ್ತರ ಕೊಡಗಿಗೆ ಮೆ. ಬಾಳೆರ ಪೂವಯ್ಯನವರು,

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮುಂಡೀರಂಡ ಸೋಮಯ್ಯನವರು, (ಖಾದಿಭಂಡಾರ.)

ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,

ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುತ್ತಪ್ಪಯ್ಯನವರು, ಮತ್ತು ಅರಮಣಮಾಡ ಪಿ ಕಾರ್ಯಪ್ಪನವರು,

ಮಡಿಕೇರಿ & ತಿತಿಮತಿ—ಮೆ. ಜಿ. ಮಾದಪ್ಪಯ್ಯನವರು.

ಸುಂಟಿಕೊಪ್ಪ—ಮೆ. ಅಪ್ಪನೆರವಂಡ ಮಾಚಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮ್ಯಾನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿ ಜಿಲ್ಲಾ ಮೀಟಿಂಗಿನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ [illegible] ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು [illegible] ಬೇಕಾಗುವ [illegible], ಮುಖ್ಯವಾಗಿ ಉಪಯೋಗಿಸಲ್ಪಟ್ಟಿರುವ ದಾವಾ ಫಾರಮುಗಳೂ, ಖರಾರು ಫಾರಮುಗಳೂ, ಜಮ್ಮ ಮುಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಖರಾರು ಫಾರಮುಗಳೂ, ಸ್ಟೋರ್ ಕೀಪರ್ ಖರಾರು ಫಾರಮುಗಳೂ, ಮಿನಟ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮಾ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಮುದ್ದು ಬರೆಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮ್ಯಾನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.

ವಿಮೆದಾರರಿಗೆ ಕೊಟ್ಟದ್ದು—3231 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.

ಫಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,78,322 ಜನರಿಗೆ 38ಕೋಟಿ ರೂ.

ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ರಕ್ಕಿಂತ ವಿಾರದ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದಾಗಿ ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಬಿಕ್ಕಾಸೆಯನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್ ಬೆಂಗಳೂರು

ಅಥವಾ ಇನ್ಸ್‌ಪೆಕ್ಟರೇಟ್ ಆಫೀಸು, ಮಡಿಕೇರಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ಮೊಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಡಕ್ಕಾ	ಲಕ್ನೋ	ಪಾಟ್ನಾ	ಸುಕ್ಕೂರು
ಅಲಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಡೌಲಗಾನ್	ಮಂಡಲೆ	ರಾಯಪುರ	ತಿರುವೆಂದ್ರಮ್
ಭೋಪಾಲ್	ಕರಾಚಿ	ಮಡಿಕೇರಿ	ರಾಂಚಿ	ವಿಶಾಖಪಟ್ಣ [52—35

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚು ವವು ಮತ್ತು ಇದು ಮಧುರವಾಗಿ ರುವುದರಿಂದ ಮಕ್ಕಳು ಪ್ರೀತಿ ಯಿಂದ ತೆಗೆದುಕೊಳ್ಳುತ್ತವೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ. ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,

52—42 **ಗಿರಿಗಾಂವ, ಮುಂಬಯಿ.**

ಬಾರ್ಡರ್ ಜಂಪಿನ ಹಾಗೆ [illegible]



ಕೋವಿಗಳು, ಕತ್ತಿಗಳು, ಬಂದೂಕುಗಳು, ತೋಟೆಗಳು, ಈಟಿಗಳು, ಮದ್ದು ಗುಂಡು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವುವು.

GOOLAMHUSAIN ALLIBHOY & SONS LTD.,

Largest Importers of Firearms and Ammunition

Cheapest priced firm in India,

26—8 **210 Abdul Rehman Street, BOMBAY.**

Printed & published by P. I. Belliappa at "Kodagu" Press, Mercara for "Kodagu" Ltd

Reg. No. M. 1:50.
If not delivered please return to
"KODAGU" OFFICE MERCARA.

ಕೊಡಗು.

ಸತ್ಯೇನ ಧೊತದಯುರ್ಮ ವಿದ್ಯಾ ನೀತಿ ಪ್ರಯೋಜ್ಞನಾ / ಅಜ್ಞಮುಕ್ತೇನ ದೇಶಕಾರಾಂ ಶುಸ್ಥಿರಾ ರಾಜ್ಯ ಸಂಪದಾ

ವಾರ್ಷಿಕ ಚಂದಾ ರೂ. ೩—೯—೦.

ಸಂಪಾದಕ— ಪಂದ್ಯಂಡ ಐ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೨ | ಮಡಿಕೇರಿ, ಸನ್ ೧೯೩೨ನೇ ಇಸವಿ ನವಂಬರ್ ತಾರೀಖು ೪ ನೇ ಶುಕ್ರವಾರ. | ಸಂಚಿಕೆ ೨(

SARI PIN

BRACELETS

NECKCHAINS

EAR-RINGS (Thodus)
Cut-rubys Rs. 25 to 50
With diamond in centre Rs. 80 to 120

Gold R 10
Set rubys for ... any letter Rs. 12

NOSE-RINGS
Diamond in small size of best quality Rs. 35 & upwards according to size

MARRIAGE PRESENTATIONS

Attractive and inexpensive articles ready in stock. Prompt execution. Details on enquiry free with catalogue. Numerous customers in Coorg thoroughly satisfied with reliable service. Testimonials pouring in. Silver Guindys, Photo lockets Dimond nose-screws, cut-ruby ear-rings, etc., etc., etc., in all prices. Very attractive. Prices most moderate.

Estimates free on enquiry

Designs free on enquiry

Telegrams: 'PRECIOUS.'

Telephone: 3145.

V. Subramaniaier Jeweller

CATALOGUE ON ENQUIRY.

Post Box 423, Triplicane, P. O., MADRAS.

52—50



26—19

ಜನರಲ್ ಅಷ್ಯೂರೆನ್ಸ್ ಸೊಸೈಟಿ.

ಅಜಮೀರ್.

ನಮ್ಮ ... ದ ಪಟ್ಟಿಯೇ ನಮ್ಮ ಅಭಿವೃದ್ಧಿಯನ್ನು ವ್ಯಕ್ತಗೊಳಿಸುತ್ತದೆ.

ವರ್ಷ	... ವಿಮಾ ಮೊಬಲಗು	...	ಖರ್ಚಿನ ಪ್ರಮಾಣ ಶೇಕಡ
1911	[illegible]	[illegible]	82.9
1921	2,92,027	6,54,350	43.2
1931	12,70,000	4,500,000	28.2

ಬೋನಸ್ಸು.

ಕುರ್ಡ ... ಪಾಲಿಸಿಗಳ ಮೇಲೆ ... ಒಂದಕ್ಕೆ ಶೇಕಡ 22½

ಚೆನ್ನಾಗಿ ... ಅಭಿವೃದ್ಧಿ ಸ್ಥಿತಿಯಲ್ಲಿರುವ ಈ ಸೊಸೈಟಿಯಲ್ಲಿ ವಿಮೆ ಮಾಡಿ ಕಡಿಮೆ ಪ್ರೀಮಿಯಂ ಪಾವತಿ ಮಾಡುವ ... ಹೊಂದಿ ಅಥವಾ ಈ ಕಂಪೆನಿಯ ಪರವಾಗಿ ಕೆಲಸಮಾಡಿ ಉತ್ತಮ ಕಮಿಶನ್ ಪಡೆದು ಪ್ರಯೋಜನ ಹೊಂದಿ.

ಹೆಚ್ಚು ವಿಚಾರಗಳಿಗೆ ಈ ವಿಳಾಸಕ್ಕೆ ಬರೆಯಿರಿ—

ಎ. ರಾಮಚಂದ್ರರಾವ್,
ಸುಪರಿಂಟೆಂಡೆಂಟ್,
ಮಂಗಳೂ...

52—28

EMPIRE OF INDIA
Life Assurance Company, Limited.

Established 1897.

INTERIM BONUS on Policies becoming claims before 1st March 1934 INCREASED TO

Rs. 16 per annum per Rs. 1000/— Assured on Whole Life Assurances

and

Rs. 14 per annum per Rs. 1000/— Assured on Endowment Assurances.

Head Office:—
EMPIRE OF INDIA LIFE BUILDING,
Bombay

Branch Office:—
152/3, COMMERCIAL STREET,
Bangalore.

52—5

ದೇವರ ದರ್ಶನ.

(ಹರಿಜನ ಪ್ರಲಾಪ)

ದೇವದರ್ಶನಕಾಗಿ ಬಂದಿಹೆವು ನಾವು ||ಪಲ್ಲ.||
ಪಾವನಕುಮುತಿಯನು ಕಾಣಲಿಚ್ಛಿಪೆವು ||ಅ ಪ.||

ಆ ದಯಾಸಿಧಿಯಾದ ಜಗದೀಶನಾಥನಿಗೆ |
ಭೇದವಿರುವುದೆ ಸಕಲ ಜಗದ ಜನರಲ್ಲಿ ? ||
ಸೋದರರೆ ದಯಮಾಡಿ ನಮಗೆ ದಾರಿಯ ಬಿಡಿರಿ |
ಕ್ರೋಧವನು ಮಾಡದಿರಿ ಹೊರಗೆ ದೂಡದಿರಿ | ||೧||

ಆದಿಕವಿ ವಾಲ್ಮೀಕಿ ಮುನಿಯ ನುಡಿಸಿದ ದೇವ
ಸಾಧುವಾದಾ ಕಬೀರನಿಗೊಲಿದ ದೇವ ||
ಹಾದಿಯೊಳಗೆ ಕನಕನಿಗೆ ದರ್ಶನವಿತ್ತ ದೇವ |
ಮೋದದಿಂ ಕರುಣಿಸುವನೆಮಗೆ ದರುಶನವ ||೨||

ದಾಸರೊಳು ಶ್ರೇಷ್ಠನಾದ ತಿರುಗಿದ ದೇವ
ದಾನವೇಂದ್ರನ ಮಗನ ಸಲಹಿರುವ ದೇವ ||
ದೀನಗೋಪಾಲಕರಿಗೆ ಒಲಿದಾಡಿದ ದೇವ
ದೀನಬಾಂಧವ ಕೊಡುವನೆಮಗೆ ದರುಶನವ ||೩||

ಶಬರಿಯೆಂಜಲ ತಿಂದ ಭಕ್ತವತ್ಸಲ ದೇವ !
ಸಭೆಯ ಹಸ್ತವ ಸಭಾಮಿನಿಗಿತ್ತ ದೇವ |
ಪ್ರಬಲ ಪಾಂಡವರ್ಗೆ ವರವಿತ್ತೊಲಿದಾ ದೇವ |
ಶುಭವಿಭವ ನೀಡುವನೆಮಗೆ ದರುಶನವ ||೪||

ಆ ಸುರಾಪಾನವಭ್ಯಾಸವನು ಬಿಟ್ಟಿಹೆವು !
ದೋಷ ಹಿಂಸಾಕೃತ್ಯವ ತ್ಯಜಿಸಿಬಿಟ್ಟಿಹೆವು ||
ದೇಶ ಸೇವೆಗೆ ನಮ್ಮ ಸರ್ವಸ್ವವೀಯುವೆವು |
ದೇಶ ಬಂಧುಗಳೆ ! ಬಿಡಿಸ್ಮಾದಪಡುವೆವು ನಾವು ||೫||

ಹಿಂದಿನಪರಾಧ ಕಠವಿದ್ದರೂ ಕ್ಷಮಿಸಿರೈ |
ಬಂಧುಗಳೆ! ದೇವದರ್ಶನವ ಕರುಣಿಸಿರೈ ||
ಹಿಂದುಗಳು ನಾವು ನಿಮ್ಮವರೆಂದು ನೆನೆಸಿರೈ |
ಗಾಂಧಿ ಸಂದೇಶವನು ತಿಳಿದು ಪಾಲಿಸಿರೈ ||೬||

'ದೀನದಾಸ'

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ.]

ಬಡ ರೈತರ ಗೋಳು.

ಸಂಪಾಜೆ—ಇಲ್ಲಿ ಬೆಳೆ ಕಟಾವಿನ ಟಾಯಿಮು ಸಮಯವಾಗಿದೆ. ಈ ವರ್ಷ ಮಿತಿಮೀರಿದ ಮಳೆಯ ದೆಸೆಯಿಂದ ರೈತರ ಕಷ್ಟ ನಷ್ಟವನ್ನು ಬರೆದು ಪೂರೈಸಲಾರೆನು. ನಾಲ ದುದಕ್ಕೆ ಕಾಡಾನೆಗಳ ಧಾಳಿಯು ಒಂದು ಕಡೆಯಿಂದ ಹಾಗೂ ಹೀಗೂ ಇಲ್ಲಿಯ ಬಡರೈತರ ಗೋಳನ್ನು ಹೇಳಿ ತೀರದು. ಆನೆಗಳ ಹಾವಳಿಯಿಂದ ಅನೇಕ ರೈತರ ಅಡಿಕೆ ತೋಟಗಳೊಳಗೆ ನುಗ್ಗಿ ಅಡಿಕೆ, ತೆಂಗು, ಬಾಳೆ ವಗೈರೆ ಫಲ ಗಿಡಗಳನ್ನು ಮುರಿದು ತಿನ್ನುವ ವಿಷಯವಾಗಿ ಮಾನ್ಯ ಸರ್ಕಾರದವರಿಗೆ ಹೇಳಿಕೊಂಡು ಈ ವರೆಗೆ ಪ್ರಯೋಜನವಾಗಿಲ್ಲ. ಇನ್ನಾದರೂ ಈ ಪ್ರಾಂತ್ಯಕ್ಕೆ ಕೆಲವು ಕಪ್ಪಗಳನ್ನು ತೋಡಿಸಿ ಆನೆಗಳನ್ನು ಹಿಡಿಸುತ್ತಿದ್ದರೆ ಸರ್ಕಾರದವರಿಗೆ ಲಾಭವೂ ರೈತರ ನಷ್ಟ ಪರಿಹಾರವೂ ಆಗುತಿತ್ತು.

ಒಡರೈತ.

ಹರಿಜನರು ದನದ ಮಾಂಸ ಬಿಡಲಾರರೇ ?

ಕೊಡುಕತನದ ಒಲೆಗೆ ಬಿದ್ದಿರುವ ಕೆಲವರು ಹೇಗೆ ಅದರಿಂದ ತಪ್ಪಿಸಿಕೊಳ್ಳಲಾರದೆ ಪೇಚಾಡುತ್ತಿರುವರೋ ಹಾಗೆಯೇ ಬಹು ಕಾಲದಿಂದ ಸತ್ತ ದನದ ಮಾಂಸವನ್ನು ತಿನ್ನುತಿರುವ ಹರಿಜನರು (ಪಂಚಮರು) ಅದನ್ನು ಬಿಡಲಾರರೆಂದೂ, ಹಿಂದೂ ಗಳಿಕ್ಕೆ ಪವಿತ್ರವಾದ ಗೋವಿನ ಮಾಂಸವನ್ನು ಭಕ್ಷಿಸುವವರನ್ನು ದೇವಸ್ಥಾನದೊಳಗೆ ಬಿಡುವದು ಯೋಗ್ಯವಲ್ಲವೆಂದೂ ಕೆಲವರು ವಾದಿಸುತ್ತಿರುವರು.

ಈಗಿನ ಕಾಲದಲ್ಲಿ ವಾದಕ್ಕೆ ಅಂತ್ಯವೇ ಇಲ್ಲ. ಆದರೆ ಅನುಭವ ಸಿದ್ಧ ಸಂಗತಿಗಳನ್ನು ನೋಡುವ. ಮೊನ್ನೆ ಕಾರ್ನೇಗೀ ಕೊಳಕಪ್ಪಲು ಒಳ ಇರುವ ಕೃಷ್ಣರಿ ಗ್ರಾಮದ ಕೆಂಪಟ್ಟಿ ಹೊಲೆಯರ ಕೇರಿಗೆ ಹೋಗಿದ್ದೆನು. ಅವರ ಮನೆ ಅಂಗಳಗಳನ್ನು ಶುಚಿಯಾಗಿಟ್ಟುಕೊಂಡಿರುವುದಲ್ಲದೆ, ಈಗ ಕೆಲವು ವರ್ಷಗಳಿಂದ ಅವರ್‍ಯಾರೂ ಸತ್ತ ದನದ ಮಾಂಸವನ್ನು ತಿನ್ನುವದಿಲ್ಲವೆಂತಲೂ, ಮಾತ್ರವಲ್ಲ ಸತ್ತ ದನದ ಚರ್ಮವನ್ನು ಸಹ ಸುಲಿಯದೆ ಅವುಗಳನ್ನು ಗುಂಡಿಗೆ ಹಾಕುತ್ತಾರೆಂತಲೂ, ಅಲ್ಲಿರುವ ಸುಮಾರು 150 ಜನರ ಪೈಕಿ ಕೇವಲ 5ರಷ್ಟು ಮಾತ್ರ ಕುಡುಕತನದ ಒಲೆಯಲ್ಲಿರುವರೆಂತಲೂ ತಿಳಿದೆನು. ಶುಚಿಯಾದ ಬಟ್ಟೆಗಳನ್ನು ಹಾಕಿಕೊಂಡು ದೇವಸ್ಥಾನಗಳಿಗೆ ಬರಲು ಅವರೆಲ್ಲರೂ ತಯಾರಾಗಿರುವರು. ಹೀಗೆಯೇ ನ. ಹಾಳೇರಿ ಶಾಖೆಯ ಹರಿಜನರಲ್ಲಿ ಕೇವಲ 50ರಷ್ಟು ಜನರು ದನದ ಮಾಂಸ ತಿನ್ನುತ್ತಿಲ್ಲವಂತೆ. ಮೊನ್ನೆ ಪೊಳ್ಳಿಬೆಟ್ಟದ ಹರಿಜನರು ದೇವಸ್ಥಾನದ ಎದುರಿನಲ್ಲಿ ನಿಂತು ದನದ ಮಾಂಸ ತಿನ್ನುವುದಿಲ್ಲವೆಂದು ಪ್ರಮಾಣ ಮಾಡಿರುವರು. ಆದುದರಿಂದ ಅವರ ಈ ಕೆಟ್ಟ ಪದ್ಧತಿಯನ್ನು ನಿಲ್ಲಿಸುವುದು ಕಷ್ಟದ ಕೆಲಸವೇನೂ ಅಲ್ಲ. ದೇವಸ್ಥಾನದ ಪ್ರವೇಶವು ಅವರ ಈ ಪದ್ಧತಿಯನ್ನು ಬಹು ಬೇಗನೆ ಹೋಗಲಾಡಿಸಲು ಸಹಾಯ ಮಾಡುವುದು.

'ಸುಧಾರಕ'

ಕೊಡಗು ಡಿಸ್ಟ್ರಿಕ್ಟ್ ರಿಜಿಸ್ಟ್ರಾರವರ ಅವಗಾಹನೆಗೆ.

ವೀರಾಜಪೇಟೆನಾಡು ಮತ್ತು ಅಮ್ಮತ್ತಿನಾಡು ರೈತರು ಬರಕೊಂಡ ಅರ್ಜಿ.

ವಿರಾಜಪೇಟೆ ಸಬ್ ರಿಜಿಸ್ಟ್ರಾರವರ ಕೆಲಸವನ್ನು ಸಬ್ ಮೇಜಿಸ್ಟ್ರೇಟ್‌ರವರಿಂದ ತಿರಸ್ತೇದಾರರವರಿಗೆ ಕೊಡುವದರಿಂದ ರೈತರಿಗೆ ಹಲವು ವಿಧದ ಕಷ್ಟ ಮತ್ತು ನಷ್ಟ ವಗೈರೆಯಾಗಿ ನಾವುಗಳು ಎರಡು ತಿಂಗಳ ಹಿಂದೆ ಒಂದು ಅರ್ಜಿ ಬರೆದದ್ದಕ್ಕೆ ಯಾವದೊಂದು ಹುಕುಂ ದೊರೆಯಲಿಲ್ಲ.

ತಿರಸ್ತೇದಾರರಿಂದ ರೈತರಿಗೆ ಕರಾರು ವಗೈರೆ ರಿಜಿಸ್ಟರ್ ಮಾಡುವದರಲ್ಲಿ ನ್ಯಾಯವಾದ ಸಮಯ ಸಿಕ್ಕುವುದಿಲ್ಲವೆಂದು ಸರ್ಕಾರಕ್ಕೆ ರುಜುವಾತುವಾದನಂತರ ಸಬ್ ಮೇಜಿಸ್ಟ್ರೇಟರವರಿಗೆ ಕೆಲಸವನ್ನು ವರ್ಗಾಯಿಸಿದರು.

ಈಗ ಈ ಕೆಲಸವನ್ನು ಪುನಹ ತಿರಸ್ತೇದಾರರವರಿಗೇನೇ ಕೊಟ್ಟದ್ದು ಪುನಹ ರೈತರಿಗೆ ತುಂಬಾ ಕಷ್ಟನಷ್ಟವಾಗಿದೆ.

ಬಿರಾರು ರಿಜಿಸ್ಟರಿಗೆ ಹೋದರೆ ಸಾಯಂಕಾಲ 5 ಗಂಟೆ ವರೆಗೆ ಕಾದು ತಿರಸ್ತೇದಾರರಿಗೆ ಸಮಯ ಸಿಕ್ಕದೆ ವಾಪಸು ಮನೆಗೆ ಹೋದ ಸಂದರ್ಭವೂ ಅನೇಕ ಇದೆ. ಒಂದು ವೇಳೆ ಜನರ ಗೋಳು ನೋಡಿ ರಿಜಿಸ್ಟರ್ 5 ಗಂಟೆಗೆ ಮಾಡಿದರೂ ಕೂಡ ತಮ್ಮ ಮನೆಗೆ ತಲಪುವದೇ ಕತ್ತಲೆಯಲ್ಲಿ ಬದ್ದು ನರಳಬೇಕಾಗುತ್ತದೆ.

ರಿಜಿಸ್ಟರು ಚಾರ್ಜು ಮಾಫಿಯಾಗಿದ್ದ ಕೋಪರೇಟಿವ್ ಬಿರಾರುಗಳಿಗೆ ಈವಾಗ್ಯೆ ಸ್ಟಾಂಪು ಕಾಗದವನ್ನು ಮತ್ತು ಫೀಜು ವಗೈರೆ ಚಾರ್ಜನ್ನು ಸರ್ಕಾರದವರು ರೈತರಿಂದ ವಸೂಲು ಮಾಡುತ್ತಾರೆ. ಈ ಬಗ್ಗೆ ರೈತರಿಂದ ಸರ್ಕಾರಕ್ಕೆ ಹೆಚ್ಚಿನ ಉತ್ಪತ್ತಿ ಕಂಡು ಬಂದರೂ ಕೂಡ ಬಡ ರೈತರ ತೊಂದರೆಗಳಿಗೆ ಗಮನ ಕೊಡದೆ ಇರುವದು ತುಂಬಾ ವ್ಯಸನಕರವಾಗಿದೆ.

ವಿರಾಜಪೇಟೆಯು ಕೊಡಗಿನ ಲೇವಾದೇವಿ ಸಮುದಾಯದ ಪೈಕಿ ಒಂದನೆಯದಾಗಿದೆ. ಬೇರೆ ನಾಡು ಕಚೇರಿಗಳಲ್ಲಿ ರಿಜಿಸ್ಟರ್ ಮಾಡುವದಾದರೂ ಅಲ್ಲಲ್ಲಿ ಸ್ಟಾಂಪು ಕಾಗದಗಳು ಬರುವಾಗಿನಾರು ಇಲ್ಲದ್ದರಿಂದ ಅಲ್ಲಿ ಕೆಲಸ ಜರುಗಿಸಲು ಅನುಕೂಲವಿಲ್ಲ.

ಆದುದರಿಂದ ಮಹಾಪಂದರವರು ಗರೀಬ ರೈತರ ಮೇಲಣ ತೊಂದರೆಗಳನ್ನು ಹೋಗಲಾಡಿಸಲಿಕ್ಕೆ ಒಬ್ಬ ಪ್ರತ್ಯೇಕ ಸಬ್ ರಿಜಿಸ್ಟ್ರಾರನ್ನು ನೇಮಕ ಮಾಡಬೇಕಾಗಿ ಪ್ರಾರ್ಥಿಸುತ್ತೇವೆ.

ಯಂ. ಕುಟ್ಟಪ್ಪ.

ಅಮ್ಮತ್ತಿ ಶಾಲಾ ಕಟ್ಟಡ.

ಮಹನೀಯರೇ,

ಕೆಲವು ವರ್ಷಗಳ ಹಿಂದೆಯೇ ನಮ್ಮ ಶಾಲೆಗೆ ಒಂದು ಹೆಚ್ಚಿನ ಕಟ್ಟಡವು ಬೇಕಾಗಿತ್ತು. ಆದರೆ ಈ ವರ್ಷ ಆ ಪ್ರಶ್ನೆಯು ಮುಂದಕ್ಕೆ ಬಂದಿದೆ. ನಮ್ಮ ಶಾಲೆಗೆ ಸಿಕ್ಕಿದ ಹಯರ್ ಎಲಿಮೆಂಟ್ರಿ ಗ್ರೇಡಿನ I ಮತ್ತು II ಫಾರಂ ತರಗತಿಗಳನ್ನು ಇಷ್ಟರ ವರೆಗೆ ನಮ್ಮ ಹಳೆಯ ಕಟ್ಟಡದಲ್ಲಿಯೇ ಇಡಲಾಯಿತು. ಈ ವರ್ಷ III ಫಾರಂ ತರಗತಿಯನ್ನು ಇಡಲು ಸರ್ಕಾರದವರು ಒಪ್ಪಿರುವರು. ಆದರೆ ನಮಗೆ ಸಾಕಷ್ಟು ಕೊಟಡಿಗಳು ಇಲ್ಲದ್ದರಿಂದ ಸರ್ಕಾರದವರನ್ನು ನಮ್ಮ ಶಾಲೆಗೆ ಹೊಸ ಕಟ್ಟಡಕ್ಕೆ ಹಣವನ್ನು ಕೇಳಿಕೊಂಡಲ್ಲಿ ಕಟ್ಟಡಕ್ಕೆ ಬೇಕಾಗುವ ಅರ್ಧ ಹಣವನ್ನು ಕೊಡಲು ಒಪ್ಪಿರುವರು. ಬಾಕಿ ಅರ್ಧ ಹಣವನ್ನು ನಾಡಿನವರು ಕೊಡಬೇಕಾಗಿ ಕೇಳಿಕೊಂಡರು.

ಈ ಭಾರವನ್ನು ನಾಡಿನವರಾದ ನಾವೆಲ್ಲರೂ ವಹಿಸಿಕೊಂಡು, ಸರ್ಕಾರದವರು ಒದಗಿಸಿಕೊಟ್ಟಿರುವ ಈ ಸಂದರ್ಭವನ್ನು ಕಳಕೊಳ್ಳಕೂಡದು. ಸರ್ಕಾರದವರು ಮಾತು ಕೊಡುವುದೇ ಕಷ್ಟ. ಕೊಟ್ಟುದನ್ನು ಬಿಟ್ಟರೆ ಮುಂದಕ್ಕೆ ಸರ್ಕಾರದವರು ನಮಗೆ ಯಾವುದೊಂದು ಕಾರ್ಯಕ್ಕೂ ದ್ರವ್ಯ ಸಹಾಯ ಮಾಡಲಾರರೆಂದು ಊಹಿಸಬಹುದು. ಸದರಿ ಕಟ್ಟಡಕ್ಕೆ ಸಾಧಾರಣ ಒಂದು ಸಾವಿರ ರೂಪಾಯಿಗಳ ಅಂದಾಜು ಮಾಡಲಾಗಿದೆ. ಇದರಲ್ಲಿ 500 ರೂ. ಗಳನ್ನು ನಾಡಿನವರು ಜಮೆ ಮಾಡಿದರೆ ಬಾಕಿ ಇರುವ 500 ರೂ.ಗಳನ್ನು ಸರ್ಕಾರದವರು ಕೊಡುವರು. ಮೇಲೆ ಹೇಳಿದ ಮೊಬಲಗನ್ನು ಚಂದಾ ರೂಪದಿಂದ ಎತ್ತಿಸುವುದೆಂದರೆ ಬಡ ರೈತರಾದ ನಮ್ಮಲ್ಲಿ ಹಣವೇ ಕಾಣುವುದಿಲ್ಲ. ಇಂಥಾ ಬಿಕ್ಕಟ್ಟಿನ ಸಮಯದಲ್ಲಿ ಕೋ ಆಪರೇಟಿವ್ ಸೊಸೈಟಿಗಳ ತತ್ವವಾದ ಕೋಪರೇಶನ್ ನಮ್ಮ ಸಹಾಯಕ್ಕೆ ಬರುತ್ತದೆ. ಕೋ-ಆಪರೇಟಿವ್ ಸೊಸೈಟಿಗಳು ಪ್ರತಿಯೊಬ್ಬ ಮನುಷ್ಯನ ಮನೆತನವೂ, ಪ್ರತಿಯೊಂದು ಕುಟುಂಬವೂ, ಪ್ರತಿಯೊಂದು ಗ್ರಾಮವೂ, ಪ್ರತಿಯೊಂದು ನಾಡಿನ ಒಗ್ಗಟ್ಟಿಗೆ ಹೇಳುವುದಾದರೆ ಇಡೀ ದೇಶದ ಕ್ಷೇಮವನ್ನು ಸಾಧಿಸುತ್ತವೆ.

ನಮ್ಮ ನಾಡಿನ ಪ್ರತಿಯೊಬ್ಬ ಮನುಷ್ಯನು ಅವರವರ ಗ್ರಾಮದ ಸೊಸೈಟಿಗಳ ಮೆಂಬರಾಗಿರುತ್ತಾರೆ. ಆದಕಾರಣ ಪ್ರತ್ಯೇಕ ಚಂದಾ ಎತ್ತುವ ಆವಶ್ಯಕತೆ ಇಲ್ಲ. ಬದಲು ಒಮ್ಮನಸಿನಿಂದ ಎಲ್ಲರೂ ಅವರವರ ಸೊಸೈಟಿಗಳಲ್ಲಿರುವ ಕಾಮನ್‌ಗುಡ್ ಫಂಡ್ ಮತ್ತು ಡಿವಿಡೆಂಡುಗಳ ಕಮ್ಮಿ ಪಕ್ಷ ಅರ್ಧವನ್ನು ಸದರಿ ಸ್ಕೂಲ್ ಕಟ್ಟಡಕ್ಕೆ ಕೊಡಲು ಒಪ್ಪಿದರೆ ಸಾಕು. ಇನ್ನೂ ಹಣ ಸಾಲದೆ ಹೋದರೆ ಆ ಸ್ಕೂಲಿನವರಿಂದ ಚಂದಾ ವಸೂಲು ಮಾಡಬಹುದು. ಇಂಥಾ ಕೆಲಸಕ್ಕೆ ಯಾವ ಸೊಸೈಟಿಯ ಮೆಂಬರನು ಒಪ್ಪುವುದಿಲ್ಲವೋ ಆತನು ತನ್ನ ಮಕ್ಕಳ ಉನ್ನತ ಸ್ಥಿತಿಗೆ ತಡೆ ಮಾಡುವವನೆಂದು ಹೇಳದರೆ ತಪ್ಪಾಗಲಾರದು. ನಮ್ಮ ಶರೀರದ ಬೆಳವಣಿಗೆಗೆ ಹೇಗೆ ಆಹಾರವು ಆಗತ್ಯವೋ ಹಾಗೆಯೇ ಬುದ್ಧಿ ಸೋದಯಕ್ಕೆ ವಿದ್ಯೆಯೆಂಬ ಆಹಾರವನ್ನೀಯಬೇಕು. ನಮ್ಮ ದೇಶದ ಮೇಲ್ಮೆಗೆ ಕಾಲೇಜು ವಿದ್ಯಾಭ್ಯಾಸದಿಂದ ಹೆಚ್ಚಿನ ಪ್ರಯೋಜನವಿಲ್ಲ. ನಮ್ಮ ದೇಶದ ಸಂಪತ್ತು ಒಕ್ಕಲಿಗರಾದ ನಮ್ಮ ಕೈಯಲ್ಲಿದೆ. ಆದಕಾರಣ ಜನಸಮುದಾಯಕ್ಕೆ ಹೆಚ್ಚಿನ ಪ್ರಯೋಜನಕಾರಿಯಾದ ಕೆಳ ತರಗತಿಗಳ ವಿದ್ಯಾಭ್ಯಾಸಕ್ಕೆ ನಮ್ಮೆಲ್ಲರ ಕೈಲಾದಷ್ಟು ಮಟ್ಟಿಗೆ ದ್ರವ್ಯಸಹಾಯ ಮಾಡಬೇಕಾಗಿ ನನ್ನ ಕೋರಿಕೆ.

ಅಚ್ಚಪ್ಪ.

(FREE INSURANCE)

ಉಚಿತ ವಿಮಾ.

ಮ್ಯೂಚುವಲ್ ಬೆನಿಫಿಟ್ ಸ್ಕೀಂ ಎಂಬ ಅನ್ಯೋನ್ಯ ಸಹಾಯ ಪದ್ಧತಿ.

(Mutual Benefit Scheme.)

ಜೈ ಭಾರತ ಇನ್‌ಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಹೆಡ್ ಆಫೀಸು—ಮದ್ರಾಸ್.

ಲೈಫ್ ಇನ್‌ಷ್ಯೂರೆನ್ಸಿನ ಕಂಪೆನಿಗಳ ಕಾನೂನಿಗೆ ಅಧೀನವಾಗಿದೆ. ನಂಬಲಾದಲ್ಲಿ ಡಿಪಾಸಿಟ್ ಬೇಕಾದ ಶೇ‌ವಣಾತಿ ಇಡಲಾಗಿದೆ.

ಈ ಮೇಲ್ಕಂಡ ಕಂಪೆನಿಯು ಅನ್ಯೋನ್ಯ ಸಹಾಯ ಪಕ್ಷವಾಗಿ ಕಳೆದ ವರ್ಷ ಅಂದರೆ 1931ನೇ ಫೆಬ್ರವರಿಯಲ್ಲಿ ಮದ್ರಾಸಿನಲ್ಲಿ ಸ್ಥಾಪಿತವಾಗಿ ಈ ವರೆಗೆ 24000 ಸಾವಿರಕ್ಕೂ ಹೆಚ್ಚಾಗಿ ಪಾಲಿಸಿಗಳನ್ನು ಪಡೆದಿರುತ್ತೆ. ಈ ಮೇಲ್ಕಂಡ ಕಂಪೆನಿಗೆ ಐಶ್ವರ್ಯವಂತರೂ, ಬಡವರೂ, ವಿದ್ಯಾವಂತರೂ, ಅವಿದ್ಯಾವಂತರೂ, ಜಾತಿ ಮತಗಳ ಬೇಧವಿಲ್ಲದೆ ಜಾತಿವಾರು, ಕೋಮುವಾರು, ಹೆಂಗಸರೂ, ಗಂಡಸರೂ ಹೆಚ್ಚು ರುಸುಂ ಕೊಡದೆಯೇ ಉಚಿತ ಜೀವ ವಿಮೆ ಮಾಡಿಕೊಳ್ಳಬಹುದು. 18 ವರ್ಷಕ್ಕೆ ಮೇಲ್ಪಟ್ಟು 60 ವರ್ಷದೊಳಗಿರುವವರು ಈ ಕಂಪೆನಿಗೆ ಸೇರಬಹುದು. ಈ ಕಂಪೆನಿಗೆ ಸೇರಲು ಇಚ್ಛಿಸುವವರು ಸೇರುವಲ್ಲಿ ರೂ 5—8—0ನ್ನು ಮಾತ್ರ ಕಟ್ಟತಕ್ಕದ್ದು. ಅನಂತರ ತಿಂಗಳು ಒಂದರ 1 ರೂ. ಸ್ವಲ್ಪದರಲ್ಲಿ ದೊಡ್ಡ ಲಾಭ ದೊರೆಯುತ್ತೆ. ಆದ್ದರಿಂದ ಇಂಥಾ ಸುಸಮಯವನ್ನು ಕಳಕೊಳ್ಳಬೇಡಿ. ಈ ದಿನವೇ ಪಾಲಿಸಿಗಳನ್ನು ಹೊಂದಲು ಅರ್ಜಿದಾರರಾಗಿರಿ. ಇತರ ಕೆಲಸವನ್ನು ಹೊಂದಲು ಭಾಗಿಗಳಾಗಿರಿ.

ಹೆಚ್ಚಿನ ಮಾಹಿತಿಗಳಿಗೆ ಈ ಕೆಳಗಿನವರಿಗೆ ಬರೆದು ತಿಳಿದುಕೊಳ್ಳಬಹುದು. ಅಲ್ಲದೆ ಇವರು ಕೊಡಗಿನ ಎಲ್ಲಾ ಕಡೆಗಳಲ್ಲಿಯೂ ತಿರುಗುತ್ತಲಿರುತ್ತಾರೆ.

ಯೆಸ್. ಬಿ. ಕರುಂಬಯ್ಯ.
ಏಜೆಂಟ್,
ಜೈ ಭಾರತ ಇನ್‌ಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
12—2 ನಾಪೋಕ್ಲು, (ಕೊಡಗು.)

---

೪೦ ವರ್ಷಗಳಿಂದ ಅನವರತವಾಗಿ ಪ್ರಖ್ಯಾತಿ ಹೊಂದಿದ

ಕರ್ಕಕಂಪನಿ ಇವರ

ಜ್ವರದ ಗುಳಿಗೆಗಳು.

ಚಳಿಜ್ವರ, ಚಾತುರ್ಥಿ ಜ್ವರ, ದಿನಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮಬಾಣದಂತೆ ಇವೆ. ಬಾಟ್ಲಿಗೆ ರೂ. ೧. ಟ. ಪಾ. ಬೇರೆ, ಎಲ್ಲಾ ಕಡೆಯೂ ದೊರೆಯುತ್ತವೆ. ಕರಿಸಿಕೊಳ್ಳಿ.

(32—12) **ಗಣೇಶ ರಾಮಚಂದ್ರ ಕರ್ಕ,**
ಮತ್ತು ಕಂಪನಿ,
ಗಿರಗಾಂವ, ಮುಂಬಯಿ,

೫೬ ವರುಷಗಳ ಅನುಭವ ಸಿದ್ಧ ಔಷಧಗಳು.

೧. ಧಾತುಪುಷ್ಟಿ ಲೇಹ—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ಬಾಧೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಉಬ್ಬುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು.

ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ 7—0—0.

೨. ಅಶೋಕಾರಿಷ್ಟ ಮತ್ತು ಮಾತ್ರೆ—ಹೆಂಗಸರ ಮುಟ್ಟಿನದೋಷಗಳು, ಮುಟ್ಟಿನ ಸ್ರಾವವು ಹೆಚ್ಚು ಕಡಿಮೆಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾನಹೀನತೆ, ಮೂರ್ಛೆ, ಮಲಬದ್ಧತೆ, ಚಳಿಜ್ವರ, ರಕ್ತಹೀನತೆ, ಕೈಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಗುಣಪಡಿಸುವುದು. ಬಾಟ್ಲಿ 1ರ 1—4—0; 1 ಡಬ್ಬಿ ಮಾತ್ರೆಗೆ 1—0—0; 3 ಬಾಟ್ಲಿ ಔಷಧಕ್ಕೂ, 3 ಡಬ್ಬಿ ಮಾತ್ರೆಗೂ 6—4—0.

೩. ಚಂದನಾಸವ ಮತ್ತು ಮಾತ್ರೆಗಳು—ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರವು ಬಹಳ ಹೊತ್ತು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳನ್ನೂ, ಬಾಯಾರಿಕೆ, ಮಲಬದ್ಧತೆ, ಸ್ವಪ್ನಾವಸ್ಥೆ ಇವುಗಳ ಮೇಲೆ ಸಿದ್ಧೌಷಧ. ಬಾಟ್ಲಿ 1ರ 1—2—0; 1ಡಬ್ಬಿ ಮಾತ್ರೆಗೆ 1—6—0. 2 ಬಾಟ್ಲಿ ಔಷಧಕ್ಕೂ, 2 ಡಬ್ಬಿ ಮಾತ್ರೆಗೂ 4—12—0.

೪. ಬಾಲಾಗ್ರಹ ಗುಟಿಕೆ—ಬಾಲಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರು ಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧ. ಬಾಟ್ಲಿ ಒಂದಕ್ಕೆ 0—10—0. 3ಕ್ಕೆ 1—12—0.

೫. ಸುಖಬೇಧಿ ಗುಟಿಕೆ—ಶರೀರವನ್ನು ಕೆಡಿಸದ ಸುಖವಿರೇಚಕ. ಬಾಟ್ಲಿ 1ರ 0—10—0. 3ಕ್ಕೆ 1—12—0.

೬. ಸೈಂಧವ ವಟಿ—ಜ್ವರ ನಿಂತು ಜ್ವರಗಡ್ಡೆ ಕರಗಿ ಮಲವಿಸರ್ಜನೆ ಆಗುವದು. ಬಾಟ್ಲಿ 1ಕ್ಕೆ 1—0—0;

೭. ಮಲೇರಿಯಾ ನಿವಾರಿಣಿ—ಎಲ್ಲಾ ನಮೂನೆಯ ಜ್ವರಕ್ಕೆ ಬಾಟ್ಲಿಗೆ 1—8—0.

೮. ಮಹಾ ಮದನಕಾಮೇಶ್ವರಿ ಲೇಹ ಡಬ್ಬಿ 1ಕ್ಕೆ 2—0—0.

೯. ದಂತಕಾಂತಿ ಚೂರ್ಣ—ಡಬ್ಬಿ 1ರ 3 ಅಣೆ. 6 ಡಬ್ಬಿಗಳಿಗೆ 1—2—0.

ಯಂ: ಗಣಪಯ್ಯ ಎಂಡ್ ಸನ್ಸ್,
ಆಯುರ್ವೇದಿಕ್ ಫಿಸಿಶಿಯನ್ಸ್,
52—6 ರಥಬೀದಿ, ಮಂಗಳೂರು.

ರತಿ ಮನ್ಮಥ ಎಂಬ ಮರ್ಮಶಾಸ್ತ್ರ.

ಕ್ರಯ ರೂ. 1—0—0.

ಕನ್ನಡ ಭಾಷೆಯಲ್ಲಿ ಅಂದವಾಗಿ ಪ್ರಿಂಟಾಗಿದೆ. ಇದರಲ್ಲಿ ಸ್ತ್ರೀ ಪುರುಷರ ಪ್ರೀತಿಯ ರಹಸ್ಯಗಳು, ಪ್ಯಾರಿಸ್ ವೇಶ್ಯ ಸ್ತ್ರೀಯರ ಪ್ರೀತಿಯ ಮರ್ಮಗಳು, ಮಲೆಯಾಳ, ಜಪಾನ್, ಫ್ರೆಂಚ್ ದೇಶದ ವೇಶ್ಯ ಸ್ತ್ರೀಯರ ಮಲಗುವ ಫೋಟೋಗಳು, ಇನ್ನೂ ಸ್ತ್ರೀ ಪುರುಷರ ಅನೇಕ ರಹಸ್ಯಗಳು 22 ಲೇಡಿಗಳ ಫೋಟೋಗಳ ಸಹಿತ ಕೂಡಿದೆ. ಈ ಶೃಂಗಾರವಾದ ಪುಸ್ತಕವನ್ನು ಓದಲು ಆನಂದವಾಗಿರುವುದು. 22 ಫೋಟೋಗಳ ಸಹಿತ ಪ್ಯಾರಿಸ್ ದೇಶದ ವ್ಯಭಿಚಾರಿಗಳ ವಿನೋದಗಳು, ಕನ್ಯೆಗಳ ಪ್ರೀತಿ, ಕಷ್ಯಾಗೃಹದ ರಹಸ್ಯಗಳು ಅಡಗಿರುತ್ತೆ.

ಕ್ರಯ ಪುಸ್ತಕ 1ಕ್ಕೆ ರೂ. ೧—೦—೦.

ಯಂ. ಲಿಂಗಂ ಬುಕ್ ಡಿಪೋ,
ಪೋಸ್ಟ್ ಬಾಕ್ಸ್ ನಂ. 245.
12—4 ಮದರಾಸ್.

M. Lingam Book Depot.
Post Box No: 245. Madras.

ಇಂಡಿಯಾ ಎಕ್ವಿಟೇಬಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

(ಸ್ಥಾಪಿಸಲ್ಪಟ್ಟದ್ದು 1908)

ಕಳೆದ ವರ್ಷದ ಫಲಿತಾಂಶಗಳು.

ಹಿಂದಿನ ವರ್ಷದ ಕೆಲಸಕ್ಕಿಂತ 64% ಹೆಚ್ಚು.

ಕಳೆದ ವರ್ಷ ಸಂಭವಿಸಿದ ಹಕ್ಕು ಬಾಧ್ಯಸ್ಥರಲ್ಲಿ ಶೇಕಡ 96·6 ಜನರಿಗೆ ಹಣ ಅದೇ ವರ್ಷ ಕೊಡಲಾಗಿದೆ.

ಖರ್ಚಿನ ಪ್ರಮಾಣವು 31% ಮಾತ್ರ.

ಇಂಡಿಯಾ ಎಕ್ವಿಟೇಬಲ್ ಇನ್ಶೂರೆನ್ಸ್ ಕಂಪನಿಯು ಬುಡದಿಂದ ತಲೆಯ ವರೆಗೂ ಇಂಡಿಯನೇ.

ವಜನದಾರರಾದ ಏಜೆಂಟರುಗಳು ಬೇಕಾಗಿದ್ದಾರೆ.

ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಕೆ. ಇ. ಜಾಕೊ,
ಬ್ರಾಂಚ್ ಸೆಕ್ರಟರಿ,
159 ಶ್ರೀ ನರಸಿಂಹರಾಜ ರೋಡ್,
ಬೆಂಗಳೂರು ಸಿಟಿ

(1) ಮಿಸ್ ಸಿ. ಯಂ. ಪೂವಯ್ಯ,
ಲೇಡಿ ಆರ್ಗನೈಜರ್,
'ಪೂವಯ್ಯ ಪಿಳ್ಳ,'
ಮಡಿಕೇರಿ.

ಅಥವಾ

(2) ಯಂ. ಸಿ. ಅಪ್ಪಚ್ಚು,
ರಿಟೈರ್ಡ್ ಪಾರುಪತ್ಯಗಾರ್,
ಹಿಲ್ ರೋಡ್,
ಮಡಿಕೇರಿ.

(12—8)

GOVERNMENT SOAP FACTORY,
Bangalore.

ವಿಶ್ವಾಸಾರ್ಹತೆ.

ಉತ್ಕೃಷ್ಟವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ ಯಾವ ಗುಣಗಳು ಆವಶ್ಯಕವೆಂದು ನೀವು ತಿಳಿದಿರುತ್ತೀರೋ ಆ ಗುಣಗಳೆಲ್ಲಾ ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.

ನಾವು ನಿಮಗೆ ಭರವಸೆಯನ್ನೀಯುತ್ತೇವೆ.

ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು.

52—8

ಮೆ. ಎನ್. ನಮ್ಮಿಕರವರು—ಖರ್ಚಿಗೆ ಶಕ್ತ ಹಣವಿಲ್ಲದಿರುವುದು ಕೊಡಗಿನಲ್ಲಿ ಮಾತ್ರವಲ್ಲ. ಒಟ್ಟು ಪ್ರಪಂಚದಲ್ಲೇ ಹಾಗಾಗಿದೆ. ಇಂಡಿಯಾ ಸರಕಾರವನ್ನು ಒಗ್ಗಟ್ಟಿನಿಂದ ಒತ್ತಾಯಪಡಿಸಿದರೆ ಹಿಂದಿನ ಸಲ್ಯ ಸಿಕ್ಕೀತು. ಮದ್ರಾಸ್ ಯುವಕರು ಬುದ್ಧಿ ಚುರುಕಿರುವವರು. ಕೊಡಗಿನವರಿಗೆ ಅವರ ಸಂಗಡ ಸ್ಪರ್ಧೆ ಮಾಡಲು ಸಾಧ್ಯವಾಗಲಿಕ್ಕಿಲ್ಲ. ಕೊಡಗಿನಲ್ಲಿ ಕಮ್ಮಿ ಬಂದು ಕಂಬಿಯೂರು, ಕೊಡಗಿಗೆ ಸುಧಾರಣೆ ದೊರಕೀತು. ಕೊಡಗು ಮೈಸೂರಿಗೆ ಸೇರಿದರೆ ಪ್ರಯೋಜನವಾಗುವ ಅನೇಕ ಬಾಬುಗಳಿವೆ (attractions). ಆದರೆ ಇಂಡಿಯಾ ಸರಕಾರವು ಮೈಸೂರಿಗೆ ಸೇರಲು ಒಪ್ಪಲಿಕ್ಕಿಲ್ಲವೆಂತ ದೊಡ್ಡ ಅಧಿಕಾರಿಗಳಿಂದ ತಿಳಿದಿದ್ದೇನೆ. ಕೆನರಾ, ದಕ್ಷಿಣ ಜಿಲ್ಲೆ, ಮಲಬಾರು ಸೇರಿ ಒಂದು ಪ್ರಾಂತ್ಯವಾಗಬಹುದು. ಕೊಡಗರದು ಪುರಾತನ ಚರಿತ್ರೆ ಇದೆ. ಅವರೆಲ್ಲನೇಕರು ರಾವ್ ಬಹದ್ದೂರ್ ಮಾದಯ್ಯನವರು, ಡಾಕ್ಟರ್ ಸಂಜಪ್ಪನವರು, ಕೋದಂಡ ಕಾರ್ಯಪ್ಪನವರು ಸಹ ಮುಂದೆ ಕೀರ್ತಿ ಪಡೆದಿದ್ದಾರೆ. ಕೊಡಗರಿಗೆ ಇರುವ ವಿಯಮ..ಗಳು ಹೊರಗೆ ಹೋದರೆ ಇದ್ದಾವೆಂತ ಹೇಳಲಾಗುವುದಿಲ್ಲ.

ಮೆ. ಕುದಿಯಂಡ ಪೂಣಚ್ಚನವರು—1834ನೇ ಇಸವಿಯಲ್ಲಿ ನಮಗೆ ವಾಗ್ದಾನ ಮಾಡಿದ ಹಕ್ಕುಗಳನ್ನು ಕೊಟ್ಟರೆ ಬೇರೆ ಇರಲು ಸಾಧ್ಯವಿದೆ. ಅವರೆ ಕೊಡಗಿಗೆ ಪುತ್ತೂರು, ಸುಳ್ಯ, ವಯನಾಡು, ಮಂಜರಾಬಾದು ಸಹ ಬಿಟ್ಟು ಕೊಡಬೇಕು.

ಪುಟ್ಟಿಮಾಡ ನಾಣಯ್ಯನವರು—ಕೊಡಗಿಗೆ ಸೇರಿ ಜಿಲ್ಲೆಯ ಭಾಗಗಳನ್ನು ಸೇರಿಸಲು ಆಯಾ ಪ್ರಾಂತ್ಯದವರ ಒಪ್ಪಿಗೆಯಾಗಬೇಕು. ಹಿಂದಿನ ಸಿಲ್ಕನ್ನೇ ಕೊಡದಿರುವಾಗ ವಾರ್ಷಿಕ ಸಹಾಯ ಇಂಡಿಯಾ ಸರಕಾರದಿಂದ ಸಿಕ್ಕಲಾರದು. ಖರ್ಚಿಗೆ ತಕ್ಕ ಉತ್ಪತ್ತಿ ಇಲ್ಲದಿರುವ ಬೇರೆ ಪ್ರಾಂತ್ಯಗಳು ಇವೆ. ಅವುಗಳಿಗೆ ವಾರ್ಷಿಕ ಧನಸಹಾಯ ಕೊಡಲು ಬಲವಾದ ಕಾರಣಗಳಿವೆ. ಆದರೆ ಕೊಡಗಿಗೆ ಕೊಡಲು ಏನೂ ಕಾರಣವಿಲ್ಲ. ಕೌನ್ಸಿಲ್ ಮೀಟಿಂಗಿಗೆ ಮೊದಲು ಆಫೀಸರುಗಳು ಸೇರಿ ಮೀಟಿಂಗ್ ಮಾಡಿ ಕೊಡಗು ಹೀಗೆಯೇ ಇರಬೇಕೆಂತ ಮಾಡಿಕೊಂಡರು. ಜನರನ್ನು ವಿಂಗಡಿಸಿ ಆಳುವ ತತ್ವವನ್ನು ಸರ್ಕಾರದವರು ಜಾರಿ ಮಾಡುತ್ತಾರೆ. ಮದ್ರಾಸಿನಲ್ಲಿ ವಿದ್ಯೆಯ ಅನುಕೂಲ ತುಂಬಾ ಇರುವುದರಿಂದ ಅವರ ಬುದ್ಧಿ ಚುರುಕು ಇರಬಹುದು. ಪ್ರತ್ಯೇಕ ನಡಿಸಲು ಹಣವಿಲ್ಲ. ಹಣ ಉಳಿಸಿದರೂ ಬೇರಾದ ಬಾಬುಗಳಿಗೆ ಖರ್ಚು ಮಾಡಿದ್ದರಿಂದ, ಬೇರೆ ಪ್ರಾಂತ್ಯದೊಂದಿಗೆ ಸೇರಬೇಕು.

ಬಿದ್ದಂಡ ಯಂ. ಬಿಯ್ಯಪ್ಪನವರು—ನಾನು ಬೇರೆ ಇರಬೇಕೆನ್ನುವವನು. ಈಗ ಸ್ವಾತಂತ್ರ್ಯ ಸ್ವಾತಂತ್ರ್ಯವಿರುವ ಕಾಲ. ಮೈಸೂರು ಸರ್ಕಾರಕ್ಕೂ ಹಣವಿಲ್ಲ. ಸಾಲ ತೆಗೆದುಕೊಳ್ಳುತ್ತಿದ್ದಾರೆ. ಹೊಗದ ಬಿಡಬೇಕೆಂತ ಕೇಳುತ್ತಾರೆ. ದೊಡ್ಡ ಪ್ರಾಂತ್ಯಕ್ಕೆ ಕೊಟ್ಟ ಸುಧಾರಣೆ ಕೊಡಲೇ ಬೇಕು. ಪಕ್ಷಪಾತ ಮಾಡಲು ಕಾರಣವಿಲ್ಲ. ಡಿಸ್ಟ್ರಿಕ್ಟ್ ಬೋರ್ಡಿಗೆ ನಾನ್ ಆಫೀಷಿಯಲ್ ಪ್ರೆಸಿಡೆಂಟರನ್ನು ಮಂಜೂರು ಮಾಡುತ್ತಾರೆ. ನಮಗೆ ಸ್ವರಾಜ್ಯ ಸಿಕ್ಕಿದಾಕೆಯೇ ಆಯಿತು. ಮೈಸೂರಿಗೆ ಬೇರೆ ದೇಶದ ಜನರನ್ನು ಅಧಿಕಾರಕ್ಕೆ ತರುತ್ತಾರೆ, ಅದರಿಂದ ಅಲ್ಲಿನವರಿಗೆ ಸ್ವಬುದ್ಧಿಯನ್ನು ಉಪಯೋಗಿಸಲು ಶಕ್ತಿ ಕಡಿಮೆ. ನಮ್ಮ ದೇಶದ ಆಫೀಸರುಗಳು ಸಂಬಳ ಕಡಿಮೆ ಮಾಡಲು ಒಪ್ಪಿಕೊಳ್ಳಬೇಕು. ಬಿದಿರಿನಿಂದ ಕಾಗದ ಮಾಡಬಹುದು, ಮರದ ಸಾಮಾನುಗಳನ್ನು ಮಾಡಿಕೊಳ್ಳಬಹುದು.

ಮೆ. ಕಾಳ್ಮಾಡ ಪೆಮ್ಮಯ್ಯನವರು—ಬಾವಿಯೊಳಗಿನ ಕಪ್ಪೆಯು ನಾನು ಮೃಗೇಂದ್ರ, ನಾನು ಗಜೇಂದ್ರನೆಂದು ಭಾವಿಸುವಂತೆ ನಾವು ಭಾವಿಸಿದ್ದೇವೆ. ಕುಪ್ಪಸ ಬಟ್ಟೆ, ಬೇರೆ ಕಡೆ ನೋಡಿದರೂ ಇದ್ದೇ ಇರುವುದು. ಮೈಸೂರು ಆಸ್ಪತ್ರೆಗೆ ಕೊಡಗಿನಿಂದ ದಂಡಿನಂತೆ ರಾಯಲಸ್ಟರು ಹೋಗುತ್ತಾರೆ. ಇಲ್ಲಿ ಬೆಳೆದ ಸಾಮಾನುಗಳನ್ನು ಸಾಗಿಸಲು ರೈಲ್ವೇ ಬೇಕು. ಮದ್ರಾಸಿನಲ್ಲಿ ಪ್ರೊವಿನ್ಷಿಯಲ್ ಅಟಾನಮಿ, ಆದರೆ ಕಾಲೇಜಿಗೆ ಹಣದ ಸವಲತ್ತು ಕೇಳಿಯೂರು. ಆವರ್ಗ ಪರ್ಕ್ ಇಂದು ಪ್ರಪಂಚದಲ್ಲಿ ಎಲ್ಲರಿಗೂ ಪರಿವಾಗುವ ಕಾಲ ಬರುತ್ತದೆ. ಆದ್ದರಿಂದ ಮೈಸೂರಿಗೆ ಸೇರಿಕೊಳ್ಳಬೇಕು.

ಮೆ. ಕಟ್ಟೆಮಾಡ ಪೂವಯ್ಯನವರು—ಕೊಡಗು ಪ್ರತ್ಯೇಕ ವಿಭಾಗಬೇಕು. ಕೊಡಗಿನ ಆಡಳಿತದಲ್ಲಿ ಲೋಪಗಳಿವೆ. ಅವನ್ನು ಜನರು ಪತ್ರಾಯ ಪಡಿಸಿ ಸರಿಪಡಿಸಿಕೊಳ್ಳಬಹುದು. ದೇಶದ ಉತ್ಪತ್ತಿಯನ್ನು ಹೆಚ್ಚಿಸಿಕೊಳ್ಳಬಹುದು. ಕೊಡಗು ಪ್ರತ್ಯೇಕವಾಗಿಯೇ ಇದ್ದು ಅಭ್ಯಾಸವಾದವರಿಗೆ ಮದ್ರಾಸಿನಲ್ಲಿ ಸೇರಿ ಇರಲು ಸಾಧ್ಯವಾಗಲಾರದು. ಸ್ಕಾಟ್‌ಲ್ಯಾಂಡಿನ ಜನರು ಬಲಾತ್ಕಾರದಿಂದ ಬೇರೆ ಹೋಗಲು ಪ್ರಯತ್ನಿಸುತ್ತಿದ್ದಾರೆ. ಮೈಸೂರು ಪಟ್ಟಣಗಳ ಥಳಕಿನಿಂದ ಮರುಳಾಗಬಾರದು. ರೈತರ ಸ್ಥಿತಿ ನೋಡಬೇಕು. ಕೊಡಗಿನ ಮನೆಗಳನ್ನೂ ಮೈಸೂರು ಹಳ್ಳಿ ಮನೆಗಳನ್ನೂ ನೋಡಿ. ಮೈಸೂರಲ್ಲಿ ಒಟ್ಟಿನ ಆಳಿಕೆ. ಈಗಿನ ರಾಜರು ಒಳ್ಳೆಯವರು ಅವರ ನಂತರದವರು ಹಾಗೆ ಇದ್ದಾರೆಂತ ಹೇಳಲು ಸಾಧ್ಯವಿಲ್ಲ. ನೇಟಿವ್ ರಾಜರಿಗೆ ಬಿಟ್ಟುಕೊಡಲು ಇಂಡಿಯಾ ಸರಕಾರವು ಒಪ್ಪಲಾರದು. ಒಗ್ಗಟ್ಟಿನಿಂದ ಇಂಡಿಯಾ ಸರಕಾರವನ್ನು ಕೇಳಿದರೆ ನಮಗೆ ಬೇಕಾದ ರಿಯಾಯ್ತಿಗಳು ಸಿಕ್ಕುತ್ತವೆ. ಸ್ವಾರ್ಥಕ್ಕೆ ಇರುವವರು ಮುಂದಾಳುಗಳಾಗಿ ಈ ವರೆಗೆ ಜಯವಾಗಲಿಲ್ಲ.

ಮೆ. ಮಹಾಬಲಯ್ಯನವರು—ಮದ್ರಾಸಿನ ಹಳ್ಳಿಗಳು ಕೊಡಗಿನಂತೆ ಹಿಂದಿಲ್ಲ. ಮದ್ರಾಸಿಗೆ ಸೇರುವುದೇ ಒಳ್ಳೇದು.

ಮೆ. ಚೇಯಂಡಮಾಡ ಭೀಮಯ್ಯನವರು—ಮೈಸೂರಿಗೆ ಸೇರಿದರೆ ಏನೂ ನಿರ್ಬಂಧವಾಗುತ್ತದೆ. ಮೈಸೂರು ದೇಶದಲ್ಲಿ ಕೆಲಸ ಮಾಡಿದವರಾದ ಮೆ. ಕೋದಂಡ ಮೊಣ್ಣಯ್ಯನವರು ಮೈಸೂರಿಗೆ ಸೇರಬೇಕೆಂತ ಹೇಳುವುದು ಸ್ವಾಭಾವಿಕವೇ. ಮೈಸೂರಲ್ಲಿ ಯುವಕರಿಗೆ ಕೆಲಸ ಸಿಕ್ಕಬೇಕಾದರೂ ಆ ಬಗ್ಗೆ ಇರುವ ಕಮಿಟಿಯಿಂದ ಶಿಫಾರಸ್ಸಾಗಬೇಕು. ಸೈಕ್ರೆಟರಿಯೇಟ್‌ ಬೇಕಾದದ್ದು ದುಂದು ಖರ್ಚು ಮಾಡುವ ದೊಡ್ಡ ವರಿಗೆ ಮಾತ್ರ. ಅಲ್ಲಿನ ಆಡಳಿತದಲ್ಲಿ ಬಿಗು ಇಲ್ಲ. ನಮ್ಮ ದೇಶವು ಬೇರೆಯಾಗಿಯೇ ಇದ್ದು ಹೆಚ್ಚಿಗೆ ಕಂದಾಯ ಹಾಕಿಕೊಂಡು ಅನುಕೂಲ ಮಾಡಿಕೊಳ್ಳಬಹುದು. ಬೇರೆ ಇದ್ದರೆ ಮುಖ್ಯ ಅಧಿಕಾರಿಗಳನ್ನು ಸುಲಭವಾಗಿ ಕಾಣಬಹುದು. ನಮ್ಮ ಹಕ್ಕುಗಳ ವಾದೇನಾಗಿತು? ದೊಡ್ಡ ಸಂಖ್ಯೆ ಜನರು ತಮ್ಮ ಇಚ್ಛೆಯಂತೆ ನಡೆಸಿಯಾರು. ಸಿಂಧ್ ಪ್ರಾಂತ್ಯದ ಬಹು ಸಂಖ್ಯೆ ಮುಸಲ್ಮಾನರು ಅಲ್ಪ ಸಂಖ್ಯೆ ಹಿಂದುಗಳ ಹಿತದಿಂದ ಬಿಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಇಂಡಿಯಾ ಸರಕಾರದಿಂದ ಹಣವನ್ನು ಪಡೆದು ಬೇರೆ ಇರಲು ಸಾಧ್ಯವಿದೆ.

ಮೆ. ಮೂಡಮಾಡ ಸುಬ್ಬಯ್ಯನವರು—ಕೊಡಗಿನ ಮುಂದಾಳುಗಳು ಈ ವರೆಗೆ ಸರಿಯಾಗಿ ಯತ್ನಿಸಲಿಲ್ಲ. ಕೊಡಗು ಪ್ರತ್ಯೇಕವಿರಲು ಸಾಧ್ಯವಿಲ್ಲ. ಕೃಷಿ, ಕೈಗಾರಿಕೆ, ಪಶುವೈದ್ಯ, ಆಸ್ಪತ್ರೆ ಮೊದಲಾದ ಅನುಕೂಲಗಳನ್ನು ಪಡೆಯಬೇಕಾದರೆ ಮೈಸೂರಿಗೆ ಸೇರಬೇಕು.

ಮೆ. ಯಂ. ಎಂ. ಸಿದ್ದೀಕರು—ಬೇರೆ ಇದ್ದರೆ ಈ ದೇಶವು ಮುಂದುವರಿಯಲು ಸಾಧ್ಯವಿಲ್ಲ. ಮೈಸೂರಿಗೆ ಸೇರಬೇಕೋ ಮದ್ರಾಸಿಗೆ ಸೇರಬೇಕೋ ಎಂಬುದನ್ನು ನಿರ್ಧರಿಸಲು ಒಂದು ಕಮಿಟಿಯಾಗಬೇಕು.

ಮೆ. ಪಟ್ಟಮಾಡ ಕಾರ್ಯಪ್ಪನವರು—ಈವರೆಗೆ ಪಟ್ಟದಿಂದಿಗಳೇ ಮಾತಾಡಿದರು. ನಮ್ಮ ದೇಶದಲ್ಲಿ ಯೂರೋಪಿಯನರು ತಿರುಗುವ ರಸ್ತೆ ವಿನಹ ಬೇರೆ ರಸ್ತೆಗಳು ಎಷ್ಟು ಹಾಳಾಗಿವೆ ನೋಡಿದ್ದೀರಾ? ನಮ್ಮ ದೇಶವನ್ನು ಮೈಸೂರಿಗೇನೇ ಸೇರಿಸಬೇಕು.

ಬಿದ್ದಾಟಂಡ ಮಾದಯ್ಯನವರು—ಮೈಸೂರು ರಿಜಿಸ್ಟ್ರೇಶನ್ ಮುಂತಾದ ಇಲಾಖೆಗಳನ್ನು ತುಂಬಾ ಲಂಚ ಬಾಬಿನಲ್ಲಿದೆ. ಆದರೆ ಮುಂದಾಳುಗಳು ಯುಕ್ತತೋರಿದಂತೆ ಮಾಡಿದ್ದಕ್ಕೆ ನಾವು ಒಪ್ಪಬೇಕು.

ಮೆ. ಮೇರಿಯಂಡ ಮಾದಪ್ಪನವರು—ಈ ವರೆಗೆ ಕೊಡಗು ದೇಶವನ್ನು ಕೆಡಸ್ಟ್ರಲ್ ಡಿಸ್ಟ್ರಿಕ್ಟಾಗಿ ಇಟ್ಟು ಅಂಡಮೂನಿಗೆ ಸಮ ಮಾಡಿ ಇಟ್ಟಿದ್ದಾರೆ. ಮದ್ರಾಸಿಗೆ ಪ್ರಾಂತೀಕ ಸ್ವಾತಂತ್ರ್ಯ ಸಿಕ್ಕಿದರೆ ವಿದ್ಯಾಭ್ಯಾಸಕ್ಕೆ ತುಂಬಾ ಅನುಕೂಲ ಇದೆ. ಕುಪ್ಪಸ ಬಿಟ್ಟು ನೋಡಿ ಕೆಲಸ ಕೊಡುತ್ತಾರೆಂಬುದು ಸಿಐವಲ್ಲ. ಸೇರಬೇಕಾದದ್ದು ಮದ್ರಾಸಿಗೋ ಮೈಸೂರಿಗೋ ಎಂತ ನಿರ್ಣಯಿಸಲು ಒಂದು ಕಮಿಟಿಯಾಗಬೇಕು.

ರಾ. ಸಾ. ಕೋದಂಡ ತಿಮ್ಮಣ್ಣನವರು—ರೈತರಿಗೆ ಹೊಟ್ಟೆಗೆ ಏನಾದರೂ ಹೆಚ್ಚಿಗೆ ಸಿಕ್ಕುವ ಅನುಕೂಲ ಹೇಗೆ ದೊರಕೀತೆಂತ ಯೋಚಿಸಬೇಕಾದದ್ದೇ ಮುಖ್ಯ. ಕೊಡಗು ಪ್ರತ್ಯೇಕ ಸ್ವಾತಂತ್ರ್ಯವನ್ನು ಪಡೆಯಬೇಕು. ಇದು ಸಾಧ್ಯವಿಲ್ಲದಿದ್ದರೆ ಮೈಸೂರಿಗೆ ಸೇರಬೇಕು.

ಮೆ. ನಡಿಕೇರಿಯಂಡ ಸೋಮಯ್ಯನವರು—ಈ ವಿಷಯ ತೀರ್ಮಾನಿಸಲು ಒಗ್ಗಟ್ಟಿನ ನೋಟೀಸ್ ಕಳುಹಿಸದ್ದು ನೋಡಿ ಬಹಳ ಸಂತೋಷವಾಯಿತು. ಬ್ರಿಟಿಷರು ಈ ವರೆಗೆ ನಮಗೆ ಅನುಕೂಲಗಳನ್ನು ಮಾಡಿಕೊಟ್ಟಿರುವುದಿಲ್ಲ. ಹಳೇ ಕಾಲದ ಕೃಷಿಯೇ ನಮ್ಮ ಪಾಡು. ರೈತರು ಬಹಳ ಗರೀಬರಾಗಿದ್ದಾರೆ. ನಮ್ಮ ಪೂರ್ವಿಕರು ಕಟ್ಟಿದ ದೊಡ್ಡ ಮನೆಗಳನ್ನು ನೋಡಿ ರೈತರ ಸ್ಥಿತಿಯನ್ನು ಊಹಿಸಬಾರದು. ಪ್ರತ್ಯೇಕ ಪ್ರಾಂತ್ಯಕ್ಕೆ ಸ್ವಾತಂತ್ರ್ಯ ದೊರೆಯುವುದಿಲ್ಲವಾದರೆ ಮೈಸೂರಿಗೆ ಸೇರಿಕೊಳ್ಳಬೇಕು.

ಮೆ. ಐ. ಯಸ್. ಸಂಜೀವರಾಯರು—ಪ್ರತ್ಯೇಕ ಕೊಡಗಿಗೆ ಎಂಭತ್ತು ಲಕ್ಷ ರೂಪಾಯಿ ಸಿಕ್ಕಿದರೂ ಪ್ರಜಾಪ್ರಭುತ್ವ ಸರಕಾರವನ್ನು ಹೆಚ್ಚು ವರ್ಷ ನಡಿಸಲು ಹಣ ಉಳಿಯದು. ಖರ್ಚು ಕಡಿಮೆ ಮಾಡಿಕೊಳ್ಳಬಹುದೆನ್ನುತ್ತಾರೆ. 10 ರೂ. ಜೀವನ ನಡಿಸಿಕೊಳ್ಳುತ್ತಾನೆ—ಅದರಿಂದ ತೃಪ್ತಿಯೋ? ಬೇರೆ ಇದ್ದರೆ ಅಭಿವೃದ್ಧಿಗೆ ಎಡೆಯೇ ಇಲ್ಲ. ದೇಶದಲ್ಲಿ ಇರುವ ಅನುಕೂಲಗಳನ್ನು ಉಪಯೋಗಿಸಿಕೊಂಡು ಉತ್ಪತ್ತಿ ಮಾಡಿಕೊಳ್ಳಬಹುದೆನ್ನುತ್ತಾರೆ. ಇದಕ್ಕೆ ದೊಡ್ಡ ಮೂಲಧನ ಬೇಕು.

ಐಬಿಲ್ ವಾಸರು—ಕೊಡಗಿನ ಭವಿಷ್ಯತ್ತಿನ ಪ್ರಶ್ನೆ ಕೊಡಗಿನಲ್ಲಿರುವ ಯೂರೋಪಿಯನರ ಕೈಯಲ್ಲಿದೆ. ಸರಕಾರದ ಅಭಿಪ್ರಾಯವೇನಿದೆಯೆಂತ ನೋಡಿ ಮುಂದರಿಸಬೇಕು.

ಮೆ. ಬಿದ್ದಂಡ ಸುಬ್ಬಯ್ಯನವರು—ನಮ್ಮ ದೇಶದ ವ್ಯಕ್ತಿತ್ವವನ್ನು ಉಳಿಸಬೇಕೆಂತ ಯೋಚಿಸಿದ್ದೆ—ಆದರೆ ಬೇರೆ ಇದ್ದರೆ ಯಾವ ಅನುಕೂಲಗಳೂ ದೊರಕುವುದಿಲ್ಲ. ದೇಶದ ಆಗಿನ ಅಧಿಕಾರಿಗಳು ಕಾಯುತ್ತಿಯಿಂದ 1834 ರಲ್ಲಿ ಬ್ರಿಟಿಷರಿಗೆ ಬಿಟ್ಟುಕೊಟ್ಟರು. ಈಗಲೂ ಜನರು ಅಪೇಕ್ಷಿಸಿದರೆ ದೇಶವನ್ನು ಸರಕಾರವು ಬಿಟ್ಟುಕೊಡಬೇಕು. ಒಂದು ಕಮಿಟಿಯಾಗಿ ಇತ್ಯರ್ಥ ಮಾಡಿಕೊಳ್ಳಬೇಕು.

ಮೆ. ನಿಡ್ಯಮಲೆ ಸೋಮಣ್ಣನವರು—ಕೊಡಗು ಬೇರೆ ಇರಲು ಸಾಧ್ಯವಿಲ್ಲ. ಸರಕಾರವು ಸುಧಾರಣೆ ಕೊಡುವುದಿಲ್ಲ. ಯಾವ ದೇಶಕ್ಕೆ ಸೇರಬೇಕೆಂಬದಕ್ಕೆ ಕಮಿಟಿಯಾಗಬೇಕು.

ಮೆ. ಕೆ. ಮಲ್ಲಪ್ಪನವರು ಮೈಸೂರಿಗೆ ಸೇರಬೇಕೆಂತ ಹೇಳಿದರು. ಮೆ. ಪಿ. ಜಿ. ಬೋಜೆಗೌಡರು, ಮೆ. ಚಿಪ್ಪುರಿದ ಪೂಣಚ್ಚನವರು, ಮತ್ತು ಮೆ. ತಿರುವೆಂಗಡಂ ಪಿಳ್ಳೆಯವರೂ ಸಹ ಯಾವ ಪ್ರಾಂತ್ಯಕ್ಕೆ ಸೇರಬೇಕೆಂಬದಕ್ಕೆ ಕಮಿಟಿಯಾಗಬೇಕೆಂದರು.

ಮೆ. ಕೊಡಂದೆರ ಮಾದಪ್ಪನವರು—ನಾವು ದೇಶವನ್ನು ಬ್ರಿಟಿಷರಿಗೆ ಕೊಟ್ಟು ಈಗ ಮೈಸೂರಿಗೆ ಕೊಡುವುದಾದರೆ ನಾಳೆ ಹೈದರಾಬಾದಿಗೆ ಕೊಡುವುದೋ? ಖರ್ಚು ಕಡಿಮೆ ಮಾಡಿಕೊಂಡು ಬೇರೆಯೇ ಇರಬೇಕು.

ರಾ. ಬಾ. ಕೋಡಿಮಣಿಯಂಡ ಸುಬ್ಬಯ್ಯನವರು—ಕೊಡಗಿನಲ್ಲಿ ರಸ್ತೆಗಳು ಚೆನ್ನಾಗಿಲ್ಲ. ಸೇತುವೆಗಳು ಮುರಿದುಹೋದರೆ ರಿಪೇರಿಯಾಗುವುದಿಲ್ಲ. ಇರುವ ಹಣವೂ ರೈತರಿಗೆ ಸಹಾಯವಾಗುವಂತೆ ಖರ್ಚಾಗುತ್ತಿಲ್ಲ. ಪ್ರತ್ಯೇಕವಾಗಿದ್ದು ಪ್ರಜಾಪ್ರಭುತ್ವ ಸರಕಾರ ನಡಿಸಲು ಸಾಧ್ಯವಿಲ್ಲ. ರೈತರಿಗೆ ಹಕ್ಕು ಕೊಡುವ ನೋಟೀಸ್ ಇತ್ತಿಲ್ಲ. ಈಗ ತಿಳುವಳಿಕೆ ಬಂದಾಗ ಅವರ ಕ್ಷೇಮವೆಲ್ಲಿ ದೊರಕೀತೆಂತ ತಿಳಿದು, ಕೇಳುವುದು ಯಕ್ತವೇ—ಮೈಸೂರಿನ ಭಾಷೆ ರುಲ್ಲಿಯೂ, ನಂಬಿಕೆಯಲ್ಲಿಯೂ ನಮಗೆ ಸಂಬಂಧಪಟ್ಟವರಾಗಿದ್ದಾರೆ. ವ್ಯಾಪಾರ, ಆಸ್ಪತ್ರೆಗಳ ಚಿಕಿತ್ಸೆ ಬಾಬುಗಳಲ್ಲಿ ಈಗಲೇ ನಮಗೆ ತುಂಬಾ ಸಂಬಂಧವಿದೆ. ವೈದ್ಯವಿದ್ಯೆ, ಇಂಜನೀಯರಿಂಗ್ ಮತ್ತು ಇತರ ವಿದ್ಯೆಗಳಿಗೂ ಮೈಸೂರಿನಲ್ಲಿ ಬೇಕಾದ ಅನುಕೂಲಗಳಿವೆ. ಯುವಕರಿಗೆ ಮುಂದುವರಿಯಲೂ ತುಂಬಾ ಅವಕಾಶವಿದೆ. ರೈತರಿಗೆ ತುಂಬಾ ಅನುಕೂಲಗಳನ್ನು ಕೊಡುತ್ತಾರೆ. ಎಂತ ವಗೈರೆ ವಿವರ ಮೈಸೂರಿಗೆ ಸೇರಬೇಕೆಂತ ಹೇಳಿದರು.

ಮೆ. ಗಳಂಡ ಬೋಪಯ್ಯ ವಿಶಿ ಬೆಗ್ಗಡರು, ಹಂಚೆಟ್ಟಿ ಪುಟ್ಟಣ್ಣನವರು, ಸರಿಪಂಡ ಸುಬ್ಬಯ್ಯನವರು ಸಹ ವಿರಿ ದೊಡ್ಡ ಪ್ರಾಂತ್ಯದೊಂದಿಗೆ ಸೇರಿಸುವ ಯೋಚನೆ ಮಾಡಲು ಕಮಿಟಿ ಮಾಡಬೇಕೆಂದರು.

ಮೆ. ಕೊಕ್ಕಲೆರ ತಿಮ್ಮಯ್ಯನವರೂ, ಚಂದ್ರಶೇಖರಯ್ಯನವರೂ ಮೈಸೂರಿಗೇ ಸೇರಬೇಕೆಂದರ.

ಐ. ಸಿ. ಸುಬ್ಬಯ್ಯನವರು—ಈ ದಿವಸದ ಚರ್ಚೆಯಲ್ಲಿ ಭಾಗಿಗಳಾದ ಮಹನೀಯರೆಲ್ಲರೂ ಕೊಡಗು ಈಗಿನ ಸ್ಥಿತಿಯಲ್ಲಿ ಪ್ರತ್ಯೇಕ ಪ್ರಾಂತ್ಯವಾಗಿ ಇರಲು ಅಸಾಧ್ಯವೆಂತ ಮಾತಾಡಿದರು. ಆದರೆ ನಾಲ್ಕೈದು ಮಹನೀಯರು ಮಾತ್ರ ಕೊಡಗಿಗೆ ಸಂಪೂರ್ಣ ಜವಾಬ್ದಾರಿ ಸರ್ಕಾರವನ್ನು ಕೊಟ್ಟು, ಇಂಡಿಯಾ ಸರ್ಕಾರದವರು ನಮ್ಮ ದೇಶದಿಂದ ತೆಗೆದುಕೊಂಡ ಹೊರದ 80 ಲಕ್ಷ ರೂಪಾಯಿಯ ಉಳುವರಿಯನ್ನು ಕೊಟ್ಟದ್ದಾದರೆ ಕೊಡಗು ಪ್ರತ್ಯೇಕವಿರಲು ಸಾಧ್ಯವಿದೆಯೆಂತ ಹೇಳಿದರು. ಆದರೆ ಕೊಡಗಿಗೆ ಸಂಪೂರ್ಣ ಜವಾಬ್ದಾರಿಯ ಸರ್ಕಾರವನ್ನು ಕೊಡುವ ವಿಷಯದಲ್ಲಿಯೂ ಉಳುವರಿಯ ಹಣದ ವಿಷಯದಲ್ಲಿಯೂ, ಸೈಮನ್ ಕಮಿಷನಿನವರೂ, ಇಂಡಿಯಾ ಸರ್ಕಾರದವರೂ ಸಾಧ್ಯವಿಲ್ಲವೆಂತ ಖಂಡಿತ ಹೇಳುತ್ತಾರೆ. ಆದ್ದರಿಂದ ಈ ವಿಷಯವಾಗಿ 'ಕೊಟ್ಟರೆ' ಕೊಡಗು ಪ್ರತ್ಯೇಕವಿರಲು ಸಾಧ್ಯವಿದೆಯೆಂತ ಹೇಳುತ್ತಾ ಇರುವುದರಿಂದ ನಾವು ನಮ್ಮ ಕರ್ತವ್ಯವನ್ನು ಕಾರ್ಯದಕ್ಷತೆಯಿಂದ ಮಾಡಿದಂತಾಗುವುದಿಲ್ಲ. ಕೊಡಗು ಪ್ರತ್ಯೇಕವಾಗಿರಲು ಸಾಧ್ಯವಿಲ್ಲವೆಂತ ನಮಗೆಲ್ಲರಿಗೂ ದೃಢವಾದ ಮೇಲೆ ನಾವು ಕೂಡಲೇ ನಮ್ಮ ಸಮೀಪದ ದೊಡ್ಡ ಪ್ರಾಂತ್ಯಕ್ಕೆ ಕೊಡಗನ್ನು ಸೇರಿಸಿ ನಮ್ಮ ದೇಶವನ್ನು ಉದ್ಧಾರ ಮಾಡಬೇಕಾದಂಥದ್ದು ನಮ್ಮ ಕರ್ತವ್ಯವಾಗಿದೆ. ಕೊಡಗು ಪ್ರತ್ಯೇಕವಾಗಿದ್ದಷ್ಟು ದಿನ ಸಂಪೂರ್ಣ ಜವಾಬ್ದಾರಿಯ ಸರ್ಕಾರವನ್ನು ಎಂದೂ ನಡಿಸಲು ಸಾಧ್ಯವಿಲ್ಲ. ಈ ನಮ್ಮ ದರಿದ್ರ ಹಣದ ಅಭಾವವನ್ನು ಕಂಡು ಅನೇಕ ಮಹನೀಯರು ಮಾತಾಡುತ್ತಾರೆ. ನಾನು ಈ ವಿಚಾರದಲ್ಲಿ ರಾಜಕೀಯ ದೃಷ್ಟಿಯಿಂದ ಹೇಳುವುದಾದರೆ ಕೊಡಗು ಬಹಳ ಚಿಕ್ಕ ದೇಶವಾಗಿರುವುದರಿಂದ ಸಂಗಡ ಭೇದಗಳು, ವ್ಯಕ್ತಿ ದ್ವೇಷಗಳು ಹೆಚ್ಚಾಗುವ ಸಂಭವವಿದೆ ಮತ್ತು ಸಂಪೂರ್ಣ ಜವಾಬ್ದಾರಿಯ ಸರ್ಕಾರವು ಸಿಕ್ಕಿದರೆ ಇಂಥಾ ಭೇದಗಳು ಪ್ರಬಲವಾಗುವದರಲ್ಲಿ ಯಾವ ಸಂದೇಹವೂ ಇಲ್ಲ. ಆದ್ದರಿಂದ ನಮ್ಮ ದೇಶದ ಏಳಿಗೆಯನ್ನು ಬಯಸುವ ಮಹನೀಯರೆಲ್ಲರೂ ಕೊಡಗನ್ನು ದೊಡ್ಡ ಪ್ರಾಂತ್ಯಕ್ಕೆ ಸೇರಿಸುವ ಪ್ರಯತ್ನವನ್ನು ಮಾಡಬೇಕು. ಕೊಡಗನ್ನು ಮದ್ರಾಸು ಪ್ರಾಂತ್ಯಕ್ಕೆ ಸೇರಿಸುವುದು ಅಗತ್ಯವೆಂತ ನಮಗೆಲ್ಲರಿಗೂ ತೋರುವುದರಿಂದ ಮದ್ರಾಸು ಅಧಿಪತ್ಯಕ್ಕೆ ಸೇರಿಸುವುದೋ ನಮ್ಮ ನೆರೆ ಪ್ರಾಂತ್ಯಕ್ಕೆ ಸೇರಿಸುವದೋ ಎಂತ ಆಲೋಚಿಸಬೇಕಾಗಿದೆ. ನಾನು ಈಗ ಐದು ವರ್ಷಗಳಿಂದಲೂ ಕೊಡಗನ್ನು ಮದ್ರಾಸಿಗೆ ಸೇರಿಸಿದರೇನೇ ಕೊಡಗಿನ ಏಳಿಗೆಯಾಗುವುದು ಎಂತ ಯೋಚಿಸಿದ್ದೆನು. ಆದರೆ ಈಗ ದೇಶೀಯ ಸಂಸ್ಥಾನವಾದ ಮೈಸೂರಿಗೆ ಕೊಡಗು ಸೇರುವುದರಿಂದ ಕೊಡಗಿಗೆ ತುಂಬಾ ಪ್ರಯೋಜನವಿದೆಯೆಂತ ನಾನು ಸಂಪೂರ್ಣ ನಂಬುತ್ತೇನೆ. ಮೈಸೂರು ಮದ್ರಾಸಿಗಿಂತ ಚಿಕ್ಕ ದೇಶವಾಗಿರುವುದರಿಂದ ಕೊಡಗಿನ ಜನರು ಮೈಸೂರಿಗೆ ಸೇರಿಕೊಂಡು ದೊಡ್ಡ ಪ್ರಾಂತ್ಯದ ಅನುಕೂಲಗಳೆಲ್ಲವನ್ನೂ ಅನುಭವಿಸಿಕೊಂಡು ತಮ್ಮ ಪ್ರಾಮುಖ್ಯತೆಯನ್ನು ಉಳಿಸಿಕೊಳ್ಳುವುದಕ್ಕೆ ತುಂಬಾ ಅನುಕೂಲವಿದೆ. ಮೈಸೂರು ಕನ್ನಡ ದೇಶವಾಗಿದ್ದು ಕೊಡಗಿನ ಆರ್ಥಿಕ ಸ್ಥಿತಿಗೂ ಮೈಸೂರಿನ ಆರ್ಥಿಕ ಸ್ಥಿತಿಗೂ ತುಂಬಾ ಹೋಲಿಕೆ ಇರುವುದು. ನಮ್ಮ ಕಾಫಿ, ಭತ್ತ, ಯಾಲಕ್ಕಿ ವಗೈರೆ ದವಸ ಧಾನ್ಯಗಳು ಮೈಸೂರಿನಲ್ಲಿ ಯಥೇಚ್ಛವಾಗಿ ಬೆಳೆಯುತ್ತಿರುವವು. ಆದುದರಿಂದ ರೈತಾವಳಿಯ ಅಭಿವೃದ್ಧಿಗೆ ಮೈಸೂರಿನ ಸರ್ಕಾರದವರು ಒದಗಿ

ನೀಡಬೇಕಿರುವ ಸವಲತ್ತುಗಳನ್ನು ಕೊಡಗಿನವರು ಸುಲಭದಲ್ಲಿಯೇ ಉಪಯೋಗಿಸಿಕೊಳ್ಳಬಹುದು. ಅಲ್ಲದೆ ನಮ್ಮ ಯುವಕರಿಗೂ ಸಹ ಮೈಸೂರಿನಲ್ಲಿ ತುಂಬಾ ಉದ್ಯೋಗವೂ ಸಿಕ್ಕಬಹುದು. ಮೈಸೂರಿನ ಸರ್ಕಾರವು ಮದ್ರಾಸಿನ ಸರ್ಕಾರದಂತೆ ಕಡೆಭಾರದ ಸರ್ಕಾರವಲ್ಲ. ಉಳುವವರಿಂದ ಹಣವನ್ನು ದೋಚಿ ಜನರ ಹಿತಕ್ಕೋಸ್ಕರ ಖರ್ಚು ಮಾಡದೆ ಇರಲು ಸಾಧ್ಯವಿಲ್ಲ. ಅಲ್ಲದೆ ಹೊಸ ನಾಲೆಗಳಿಗಾಗಿಯೂ, ರೈತರುಗಳ ಅಭಿವೃದ್ಧಿಗಾಗಿ ಮೈಸೂರು ಸರ್ಕಾರವು ವರ್ಷ ವರ್ಷ ಲಕ್ಷಗಟ್ಟಲೆ ಹಣ ವಿನಿಯೋಗಿಸುತ್ತಾರೆ. ಹೀಗಿರುವಲ್ಲಿ ನಮ್ಮ ದೇಶಕ್ಕೆ ಬೇಕಾದ ಸಹಾಯಗಳನ್ನು ಸುಲಭದಲ್ಲಿಯೇ ಪಡೆಯಬಹುದು. ಮೈಸೂರಿಗೆ ಸೇರುವ ಪಕ್ಷ ನಮ್ಮ ಜನ್ಮದ ಹಕ್ಕು ಕೋವಿ ಹಿಡಿಯುವ ಹಕ್ಕು ಕೊಡಗನ್ನು ಪ್ರತ್ಯೇಕ ಜಿಲ್ಲೆಯಾಗಿ ಇಟ್ಟುಕೊಳ್ಳುವದು ಇವೇ ಮೊದಲಾದವುಗಳನ್ನು ಭದ್ರಪಡಿಸಿಕೊಂಡು ನಾವು ಮೈಸೂರಿಗೆ ಸೇರಬಹುದು. ಈ ನಮ್ಮ ಹಕ್ಕುಗಳ ವಿಷಯವಾಗಿ ಮೈಸೂರು ಸರ್ಕಾರದವರು ತುಂಬಾ ದಯೆಯ ದೃಷ್ಟಿಯಲ್ಲಿದ್ದಾರೆಂತ ತಿಳಿಯುತ್ತೇನೆ. ಬ್ರಿಟಿಷ್ ಸರ್ಕಾರದವರು ಕೊಡಗನ್ನು ಮೈಸೂರಿಗೆ ಸೇರಿಸಲು ಒಪ್ಪುವದಿಲ್ಲವೆಂತ ಕೆಲವರು ಹೇಳುತ್ತಾರೆ. ಈ ಸಂಶಯಕ್ಕೆ ಆಸ್ಪದವಿಲ್ಲ. ಕೊಡಗಿನ ಇಡೀ ಜನಾಂಗದವರು ಮೈಸೂರಿಗೆ ಸೇರದಲ್ಲದೆ ಕೊಡಗು ದೇಶವು ಉದ್ಧಾರವಾಗದೆಂತ ಕಂಠೋಕ್ತವಾಗಿ ಕೇಳಿಕೊಂಡರೆ ಪ್ರಜೆಗಳ ಹಿತವನ್ನು ಬಯಸುವ ಬ್ರಿಟಿಷ್ ಸರ್ಕಾರದವರು ಎಂದೂ ಅಡ್ಡಿ ಬರಲಿಕ್ಕೆ ಕಾರಣವಿಲ್ಲ. ಮೈಸೂರಿನಲ್ಲಿ ಪ್ರಜಾ ಜವಾಬ್ದಾರಿಯ ಸರ್ಕಾರವಿಲ್ಲವೆಂತ ಕೆಲವರ ಸಂಶಯವಿರಬಹುದು. ಆದರೆ ಮೈಸೂರಿನಲ್ಲಿ ಈಗಲೇ ಪ್ರಜಾ ಜವಾಬ್ದಾರಿಯ ಸರ್ಕಾರವು ಒಂದು ಮಟ್ಟಿಗೆ ಜಾರಿಯಲ್ಲಿದೆ. ಅಲ್ಲದೆ ಮೈಸೂರಿನ ಜನರೆಲ್ಲರೂ ಸಂಪೂರ್ಣ ಜವಾಬ್ದಾರಿ ಸರ್ಕಾರಕ್ಕೆ ಪ್ರಯತ್ನಿಸುತ್ತಾ ಇದ್ದಾರೆ. ನೆರೆ ದೇಶಗಳಿಂದ ಬ್ರಿಟಿಷ್ ಪ್ರಾಂತ್ಯಗಳಲ್ಲಿ ಸಂಪೂರ್ಣ ಜವಾಬ್ದಾರಿಯ ಸರ್ಕಾರವು ಸ್ಥಾಪಿತವಾದ ಮೇಲೆ ಮೈಸೂರು ದರ್ಬಾರಿನವರೂ ತಮ್ಮ ಪ್ರಜೆಗಳಿಗೆ ಅದೇ ರೀತಿಯ ರಾಜಕೀಯ ಸುಧಾರಣೆಗಳನ್ನು ಖಂಡಿತವಾಗಿಯೂ ಕೊಡುತ್ತಾರೆ ಎಂಬುವುದರಲ್ಲಿ ಯಾವ ಸಂದೇಹವೂ ಇಲ್ಲ. ಇಲ್ಲಿ ನೆರೆದಿರುವ ಮಹಾಜನರೆಲ್ಲರೂ ಮೈಸೂರಿಗೆ ಕೊಡಗನ್ನು ಸೇರಿಸುವ ವಿಷಯಕ್ಕೆ ಐಕಮತ್ಯ ಸೇರಿ ಸಹಾನುಭೂತಿ ತೋರುವುದು ಕೊಡಗಿನ ಏಳಿಗೆಗೆ ಶುಭ ಸೂಚನೆಯೇ ಸರಿ.

ಈ ವಿಷಯಗಳಿಗೆ ತೀರ್ಮಾನವು ಬೇಗನೆ ಬೇಕೆಂಬುದಕ್ಕೆ ಚರ್ಚೆ ನಡೆದು ಈ ಕೆಳಗೆ ಬರೆದಂತೆ ದೇಶಕ್ಕೆ ತಿಳಿಸಬಹುದೆಂತ ಸರ್ವಸಮ್ಮತದಿಂದ ಒಪ್ಪಿಗೆಯಾಯಿತು. ಈ ಸಭೆಯಲ್ಲಿ ಚರ್ಚೆಯಾದ ಮೂರು ಅಭಿಪ್ರಾಯಗಳೆಂದರೆ ರಾಜಕೀಯ ಸುಧಾರಣೆಗಳನ್ನು ಪಡೆದು ಕೊಡಗು ಪ್ರತ್ಯೇಕವಾಗಿರುವುದು (2) ಮೈಸೂರಿಗೆ ಸೇರುವದು ಮತ್ತು (3) ಮದ್ರಾಸಿಗೆ ಸೇರುವುದು ಎಂಬವುಗಳಲ್ಲಿ ಮೈಸೂರಿಗೆ ಸೇರಬೇಕೆಂಬುದೇ ಬಹುಜನ ಸಮ್ಮತವಾಗಿದೆ. (preponderating opinion is for amalgamation with Mysore,)

ಈ ಅಭಿಪ್ರಾಯವನ್ನು ದೇಶಕ್ಕೆ ತಿಳಿಸಿ ಜನರ ಅಭಿಪ್ರಾಯವನ್ನು ಪಡೆದು ಇದೇ ಸಭೆಯು ತಾ. 13—11—32 ರಲ್ಲಿ ಪುನಃ ಕೂಡಿ ಅಖೈರ್ ತೀರ್ಮಾನ ಮಾಡಿಕೊಳ್ಳಬೇಕೆಂತಲೂ ಒಪ್ಪಿಕೊಳ್ಳಲಾಯಿತು. ದೇಶದ ಅಭಿಪ್ರಾಯ ತಗೆದುಕೊಳ್ಳಲು ದೇಶದ ಎಲ್ಲಾ ಭಾಗಗಳಿಂದಲೂ ಪ್ರತಿನಿಧಿಗಳುಳ್ಳ ಒಂದು ಕಮಿಟಿಯು ನೇಮಕವಾಯಿತು.

ಕೊಡಗು ಸಬಾರ್ಡಿನೇಟ್ ಜಡ್ಜಿಯವರ ಕೋರ್ಟಿನಲ್ಲಿ.

ಓ. ಎಸ್. ನಂ $\frac{64}{1932}$

ಅರ್ಜಿದಾರ.—ಸೈಯದ್ ಗೌಸ್ ಸಾಬಿ.

ಎದ್ರಿಯರು—ಫರ್ಗುಸನ್ಸ್ ಕಂಪೆನಿ ವಗೈರೆಯವರು.

ಮೇಲ್ಕಂಡ ಮೊಕದ್ದಮೆಯಲ್ಲಿ ಎಕ್ಸಿಕ್ಯೂಶನ್ ಕೋರ್ಟ್ ಹುಕುಂ ಮೇರೆ ಸ್ವಾಧೀನ ತೆಗೆದುಕೊಂಡಿರುವ ಅರ್ಜಿದಾರನ ಬಾಪ್ತು, ಎರಡು ಲಾರಿಗಳು, ಕೆಲವು ಅಲ್ಮೇರಗಳು, ಮಂಗಳೂರು ಹಂಚುಗಳು, ಒಂದು ಕಾರು ಮತ್ತು ಬೈಸಿಕಲ್ ಮೋಟಾರು ಮತ್ತು ಸೈಕಲ್ ಸಾಮಾನುಗಳು ವಗೈರೆಯನ್ನು ಕೋರ್ಟ್ ಹುಕುಂ ಮೇರೆ ಮಡಿಕೇರಿಯಲ್ಲಿ ನೊವೆಂಬರ್ ಒಳೆ 1932 ನೇ ಇಸವಿ ನವಂಬರ್ ಮಾಹೆ ತಾರೀಕು 20 ನೇ ಆದಿತ್ಯವಾರ ದಿವಸ ಹಗಲು 10 ಘಂಟೆ ಸಮಯಕ್ಕೆ ಹರಾಜು ಮಾಡಲ್ಪಡುತ್ತೆ.

ಮಡಿಕೇರಿ,	ಯ. ಸ್. ಆರ್. ಗೋಪಾಲಕೃಷ್ಣ.
ತಾ. 25—10—32	ದಿವಾನ.

COORG FOREST DEPARTMENT, SOUTH DIVISION.

Building Sale Notice.

Mercara, the 21st October 1932.

The Saw Mill Shed at Tittimatti will be sold by public auction by the Divisional Forest Officer, South Coorg, on 12—11—1932 at 2 p.m. at the site.

For further particulars, please apply to the TITTIMATTI RANGE OFFICER, TITTIMATTI.

ಕೊಡಗಿನಲ್ಲಿ ಶಾಸನ ಭಂಗ.

ಗೋಣಿಕೊಪ್ಪಲಲ್ಲಿ ಪ್ರಚಂಡ ಮೆರವಣಿಗೆ.

ಜನಸ್ತೋಮದ ವಿಶೇಷ ಉತ್ಸಾಹ.

ಪೊಲೀಸಿನವರ ಬೆತ್ತದ ಪೆಟ್ಟು.

9 ಸ್ವಯಂ ಸೇವಕರ ದಸ್ತಗಿರಿ.

ಮಡಿಕೇರಿ ಕೋಟೆಯಲ್ಲಿ ಬ್ರಿಟಿಷ್ ಪತಾಕೆಯ ಬದಲು ರಾಷ್ಟ್ರೀಯ ಧ್ವಜ.

ಈ ತಾ. 23ನೇ ಆದಿತ್ಯವಾರ ದಿನ ಗೋಣಿಕೊಪ್ಪಲು ಪೇಟೆಯಲ್ಲಿ ಕೆಲವು ಕಾಂಗ್ರೆಸ್ ಕೆಲಸಗಾರರು ರಾಷ್ಟ್ರೀಯ ಧ್ವಜದೊಡನೆ, ರಾಷ್ಟ್ರೀಯ ಪದಗಳನ್ನು ಹಾಡುತ್ತಾ, ಜಯಘೋಷ ಮಾಡುತ್ತಾ ಬೆಳ್ಳಿಗೆ ಆರು ಗಂಟೆಗೆ ಕಡೆಯಿಂದ ನಾಡ ಮೊಳೆದ ಕಡೆಗೆ ಮೆರವಣಿಗೆ ಹೊರಟರು. ಜಯಘೋಷವನ್ನು ಕೇಳಿದ ಕೂಡಲೇ ಎಲ್ಲಾ ಕಡೆಗಳಿಂದಲೂ ಜನರು ಬಂದು ಮೆರವಣಿಗೆಯನ್ನು ಸೇರಿದರು. ಅಷ್ಟರಲ್ಲೇ ಪೊಲೀಸು ಇನ್‌ಸ್ಪೆಕ್ಟರು, ಸಬ್ ಇನ್‌ಸ್ಪೆಕ್ಟರು, ಕಾನ್‌ಸ್ಟೇಬಲುಗಳ ಸಮೇತ ಅಲ್ಲಿ ಬಂದು ಮೆರವಣಿಗೆಯನ್ನು ನಡೆಸುತ್ತಿದ್ದ ಶ್ರೀಯುತರುಗಳಾದ ಅಪ್ಪಚೆಟ್ಟಿರ ಚಿಣ್ಣಪ್ಪನವರು, ಕಣ್ಣೋಮಾಡ ಸಂಜಪ್ಪನವರು, ಮಳ್ಳಂಡ ಚಂಗಪ್ಪನವರು, ಅಪ್ಪಂಡೆರಂಡ ಬಿದ್ದಪ್ಪನವರು, ಅಲ್ಲುಮಾಡ ಚೆಟ್ಟಪ್ಪನವರು, ಮೂಕಳೆರ ಕುಶಾಲಪ್ಪನವರು, ಮಂಡೆಯಂಡ ದಿ ಸ್ಸಿಪ್ಪನವರು, ಸಣ್ಣುವಂಡ ಬೋಪಯ್ಯನವರು ಮತ್ತು ಮಡ್ಡಯಂಡ ಬೋಪಯ್ಯನವರು, ಈ ಒಂಭತ್ತು ಮಹನೀಯರನ್ನು ದಸ್ತಗಿರಿ ಮಾಡಿದರು. ಇದನ್ನು ನೋಡಲು ಜನರ ಉತ್ಸಾಹವು ಬಹಳ ಜೋರಾಯಿತು. 1500ಕ್ಕಿಂತ ಹೆಚ್ಚಾಗಿಯೇ ಜನರು ನೆರೆದಿದ್ದರು. ಉತ್ಸಾಹಭರಿತರಾಗಿ ನೆರೆದ್ದ ಜನರ ಮಧ್ಯೆ ದಸ್ತಗಿರಿಯಾದವರನ್ನು ಕರೆದುಕೊಂಡು ಹೋಗಲು ದಾರಿಯೇ ಸಿಕ್ಕುತ್ತಿರಲಿಲ್ಲ. ಜಯಘೋಷವು ಜೋರಾಗಿಯೇ ನಡೆಯುತ್ತಿತ್ತು. ಇಷ್ಟರಲ್ಲಿ ಪೊಲೀಸು ಸಬ್ ಇನ್‌ಸ್ಪೆಕ್ಟರಾದ ಮಿ. ಮಂಡೇಪಂಡ ಗಣಪತಿಯವರು ಸ್ವಲ್ಪ ಮುಂದಕ್ಕೆ ನುಗ್ಗಿ ದಾರಿ ಬಿಡಿ ಎಂದು ಹಲವಂಗೆ ತನ್ನ ಕೈಯಲ್ಲಿದ್ದ ಬೆತ್ತದಿಂದ ಹೊಡೆದರಂತಲೂ, ಇದನ್ನು ನೋಡಿದ ಜನರು ರೇಗಿಬೀಳುವಂತಿದ್ದರಂತಲೂ, ಆದರೆ ನೆರೆದಿದ್ದವರಲ್ಲಿ ಕೆಲವರು ಜನಸಮೂಹವನ್ನು ಶಾಂತಿಗೊಳಿಸಿದರಂತಲೂ ಸುದ್ದಿ. ಹೀಗೆ ದಸ್ತಗಿರಿಯ ವರೆಗೆ ಸುಮಾರು 3 ಗಂಟೆ ಸಮಯ ಹಿಡಿಯಿತೆಂತಲೂ, ಬಹಳ ಕಿತ್ತಳೆ ಹಣ್ಣು ಮೊದಲಾದ ಅಂಗಡಿಗಳು ಜನಸ್ತೋಮದ ತುಳಿತಕ್ಕೆ ಸಿಕ್ಕಿ ನಷ್ಟವಾಯಿತೆಂತಲೂ, ಈ ದುಮ್ಮಿಕದಿಂದ ಮೆ. ಕಡ್ಯದ ಮಾದಪ್ಪನವರ ಸಣ್ಣ ಮಗನೊಬ್ಬನು ಕಳಕ್ಕೆ ಬಿದ್ದು ಕೈಗೆ ತುಂಬಾ ಬಲವಾದ ಏಟು ಅವನು ಆಸ್ಪತ್ರೆಗೆ ಸಾಗಿಸಲ್ಪಟ್ಟು ಚಿಕಿತ್ಸೆ ಮಾಡಲಾಯಿತೆಂದೂ, ಪೊಲೀಸಿನವರು ದಸ್ತಗಿರಿಯಾದವರನ್ನು ಪ್ರಯಾಸದಿಂದ ಬಸ್ಸಿಗೆ ಕರತಂದು, ಬಸ್ಸಿನಲ್ಲಿ ಅವರನ್ನು ವೀರಾಜಪೇಟೆಗೆ ಸಾಗಿಸಿದರೆಂತಲೂ ವರ್ತಮಾನ.

ದಸ್ತಗಿರಿಯಾದ ಈ 9 ಜನರ ವಿಚಾರಣೆಯು, ಇತ್ತಲಾಗಿ ಫಸ್ಟ್ ಕ್ಲಾಸ್ ಮೇಜಿಸ್ಟ್ರೇಟ್ ಅಧಿಕಾರ ಕೊಡಲ್ಪಟ್ಟಿರುವ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ನಡೆದು ಅವರೆಲ್ಲರಿಗೂ ಮೂರು ಮೂರು ತಿಂಗಳು ಕಠಿಣ ಸಜೆಯು ಮತ್ತು 20 ರೂಪಾಯಿ ಯಂತೆ ಜುಲ್ಮಾನೆಯೂ, ಜುಲ್ಮಾನೆ ಕೊಡದೆ ತಪ್ಪಿದರೆ ಹೆಚ್ಚಿಗೆ ಒಂದೊಂದು ತಿಂಗಳು ಕಠಿಣ ಸಜೆಯು ವಿಧಿಸಲಾಯಿತು. ಮರುದಿನ ಇವರೆಲ್ಲರೂ ಕಣ್ಣನೂರು ಸೆಂಟ್ರಲ್ ಜೈಲಿಗೆ ಕಳುಹಿಸಲ್ಪಟ್ಟರೆಂದು ತಿಳಿಯಬರುತ್ತದೆ.

ಈ ತಾ. 25ನೇ ಮಂಗಳವಾರ ಬೆಳಗ್ಗೆ 6 ಗಂಟೆಗೆ ಮಡಿಕೇರಿ ಕೋಟೆಯಲ್ಲಿರುವ ಧ್ವಜಸ್ತಂಭದ ಮೇಲೆ ಬ್ರಿಟಿಷರ 'ಯೂನಿಯನ್ ಜಾಕ್' ಪತಾಕೆಯು ಎಂದಿನಂತೆ ಏರಿಸಲ್ಪಟ್ಟಿತಂತಲೂ, ನಂತರ ಕಾಂಗ್ರೆಸ್ಸಿನವರು ಯಾರೋ ಸದರಿ ಪತಾಕೆಯನ್ನು ಕೆಳಗೆ ಇಳಿಸಿ ತೆಗೆದಿಟ್ಟು ರಾಷ್ಟ್ರೀಯ ಧ್ವಜವನ್ನು ಏರಿಸಿದ್ದರಂತಲೂ, ಸ್ವಲ್ಪ ಸಮಯದ ನಂತರ ಇದು ಪೊಲೀಸಿನವರ ದೃಷ್ಟಿಗೆ ಬಿದ್ದು, ಅವರು ರಾಷ್ಟ್ರೀಯ ಧ್ವಜವನ್ನು ತೆಗೆದು, 'ಯೂನಿಯನ್ ಜಾಕ್'ನ್ನು ಏರಿಸಿದರೆಂತಲೂ, ಈಗ ಆ ಸ್ತಂಭದ ಬುಡದಲ್ಲಿ ಹಾವುದಿಯವರ ಪಹರೆ ಇಟ್ಟಿರುವರೆಂತಲೂ, ಈ ಕಾರ್ಯವನ್ನು ನಡೆಸಿದವರನ್ನು ಪೊಲೀಸಿನವರು ಹುಡುಕುತ್ತಾ ಇದ್ದಾರೆಂತಲೂ ವರ್ತಮಾನ.

ಒಳದೇಶ.

ಮಡಿಕೇರಿಯಲ್ಲಿ ಕೊಡಗಿನ ಭವಿಷ್ಯತ್ತನ್ನು ಕುರಿತು ಒಗ್ಗಟ್ಟಿನ ತೀರ್ಮಾನಕ್ಕೆ ಬರಲು ಮಾಡಿದ ತಾ. 23 ರ ಮೀಟಿಂಗಿನಲ್ಲಿ ಮೈಸೂರಿಗೆ ಕೊಡಗನ್ನು ಸೇರಿಸುವ ಅಭಿಪ್ರಾಯಕ್ಕೆ ಹೆಚ್ಚಿನ ಬೆಂಬಲವಿದೆಯೆಂತ ಸರ್ವಸಮ್ಮತದಿಂದ ಒಪ್ಪಂದವಾಯಿತು. ಈ ತೀರ್ಮಾನವನ್ನು ದೇಶಕ್ಕೆಲ್ಲಾ ಪ್ರಸರಿಸಿ ಅಭಿಪ್ರಾಯ ತೆಗೆದುಕೊಳ್ಳಲು ಮೀಟಿಂಗುಗಳನ್ನು ಮಾಡಲು ಒಂದು ಕಮಿಟಿ ನೇಮಕವಾಗಿದೆ. ಈ ಕಮಿಟಿಯವರು ಮೀಟಿಂಗುಗಳನ್ನು ಏರ್ಪಡಿಸುತ್ತಿದ್ದಾರೆ.

	ತಾರೀಖು	ಗಂಟೆ
ನಾಪೋಕ್ಲು ನಾಡಿನವರದು ನಾಪೋಕ್ಲಿನಲ್ಲಿ	5—11—32	2
ವೀರಾಜಪೇಟೆ ನಾಡಿನವರದು		
ರೋಮನ್ ಕಾಮ್ ಒಳ ಮೈದಾನದಲ್ಲಿ	2—11—32	2
ಪೊನ್ನಂಪೇಟೆ ನಾಡಿನವರದು		
ಗೋಣಿಕೊಪ್ಪಲು ದನದ ಮಾರ್ಕೆಟ್ ಒಳ	6—11—3	2
ಶ್ರೀಮಂಗಲ ನಾಡಿನವರದು		
ಹುದಿಕೇರಿಯಲ್ಲಿ	7—11—32	2
ಮಡಿಕೇರಿ ನಾಡಿನವರದು		
ಮಡಿಕೇರಿ ಜಮೀನ್ದಾರರ ಸಂಘದ ಒಳ	4—11—32	2
ಸುಂಟಿಕೊಪ್ಪ ನಾಡಿನವರದು		
ಸುಂಟಿಕೊಪ್ಪಲಲ್ಲಿ	6—11—32	2
ನಾಪೋಕ್ಲು ನಾಡಿನವರದು		
ನಾಪೋಕ್ಲಿನಲ್ಲಿ	5—11—32	2
ಶನಿವಾರಸಂತೆ ಕಡೆಯದು		
ಗುಡುಗಳಲೆ ಬಾಗೆಯಲ್ಲಿ	4—11—32	2
ಹೆಬ್ಬಾಲೆಯವರದು		
ಹೆಬ್ಬಾಲೆ ಬೋಡಿಯಲ್ಲಿ	30—10—32	11
ಫ್ರೇಜರ್‌ಪೇಟೆಯವರದು ಸ್ಕೂಲ್ ಒಳ	30—10—32	3
ಸೋಮವಾರಪೇಟೆಯವರದು		
ಮಾದಾಪುರ ಬಂಗ್ಲೆಯ ಒಳ	6—11—32	1
ಸೋಮವಾರಪೇಟೆಯಲ್ಲಿ	10—11—32	2

ಮಡಿಕೇರಿಯಲ್ಲಿ ತಾ. 22 ರಿಂದ ತಾ. 28 ರ ವರೆಗೆ 1 95 ಇಂಚು ಮಳೆಯಾಗಿದೆ.

ಕಳೆದ ಕೆಲವು ದಿನಗಳಿಂದ ಪ್ಲೇಗಿನಿಂದ ನರಳುತ್ತಿದ್ದ ಪೊಲೀಸಿನವನು ಈಚೆಗೆ ಮೃತಪಟ್ಟಿರುತ್ತಾನೆಂದು ತಿಳಿಯುತ್ತೇವೆ.

ಮೂರ್ನಾಡು ಶಾಲೆಯ ನಾಲ್ಕನೇ ವಾರ್ಷಿಕೋತ್ಸವವು ಬರುವ ನವಂಬರು ತಾ. 13 ನೇ ಶನಿವಾರ ಮೂರ್ನಾಡಿನಲ್ಲಿ ಮೆ. ಬಲ್ಲಚಂಡ ಬೆಳ್ಯಪ್ಪ ಬಿ. ಎ. ಯವರ ಅಧ್ಯಕ್ಷತೆಯಲ್ಲಿ ನಡೆಯಲಿಕ್ಕಿರುವುದು.

ಕಳೆದ ಇಂಟರ್ ಮೀಡಿಯೇಟ್ ಪರೀಕ್ಷೆಯಲ್ಲಿ ಮೆ. ಗಣಪದ ಕಂಡ್ರತಂಡ ಪಿ. ಚಂಗಪ್ಪನವರು, ಮತ್ತು ಮೊಣ್ಣಂಡ ಪಿ. ಬೆಳ್ಯಪ್ಪನವರು ಪೂರೈಸಿಯೂ, ಮತ್ತು ಸಿ. ಪಿ. ಸೋಮಪ್ಪನವರು 1 ನೇ ಕ್ಲಾಸಿನಲ್ಲಿಯೂ ಪಾಸಾಗಿರುತ್ತಾರೆಂದು ಇತ್ತೀಚೆಗೆ ತಿಳಿದು ಸಂತೋಷಿಸುತ್ತೇವೆ.

ಕಳೆದ ಯಲ್. ಯಂ. ಪಿ. ಪರೀಕ್ಷೆಯಲ್ಲಿ ಮೆ. ನಾಳಿಯಮಾಡ ಯಂ. ಕುಶಾಲಪ್ಪನವರು (ಫೈನಲ್) ಮಾದೆಯಂಡ ಬೋಪಯ್ಯನವರು, ಬಿಟ್ಟಿಯಂಡ ಕೆ. ಸುಬ್ಬಯ್ಯನವರು ಮತ್ತು ಚೋಂದ್ರಮಾಡ ಕೆ. ಅಪ್ಪಯ್ಯನವರು, ತಮ್ಮ ಮೊದಲನೆಯ ವರ್ಷದ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುತ್ತಾರೆಂದು ತಿಳಿಯುತ್ತೇವೆ.

ಕೊಡಗಿನ ಭವಿಷ್ಯತ್ತನ್ನು ಕುರಿತು ಆಲೋಚಿಸಲು ಈ ತಾ 23 ರಲ್ಲಿ ಮಡಿಕೇರಿಯಲ್ಲಿ ನಡೆದ ಮೀಟಿಂಗಿಗೆ ಎಲ್ಲಾ ಕೋಮುವಾರು ಸಂಘಗಳ ಪ್ರತಿನಿಧಿಗಳನ್ನು ಸೇರಿಸದೆ, ತಮ್ಮನ್ನು ಆಮಂತ್ರಿಸದ್ದನ್ನು ಕುರಿತು ಪರ್ಯಾಲೋಚಿಸಲು ಕೊಡಗಿನ ಅಂಜುಮನ್ ಇಸ್ಲಾಂ ಸಭೆಯವರು ತಾ. 1—11—'32 ರಲ್ಲಿ ವೀರಾಜಪೇಟೆಯಲ್ಲಿ ಅವರವರೊಂದು ಜನರಲ್ ಮೀಟಿಂಗನ್ನು ನಡೆಸುವರೆಂದು ತಿಳಿಯುತ್ತೇವೆ.

ಹಿಂದೂದೇಶ.

ಮುಂದಿನ ದುಂಡು ಮೇಜು ಪರಿಷತ್ತಿಗೆ ಹಿಂದೂಸ್ಥಾನದಿಂದ ಹೋಗುವ ಪ್ರತಿನಿಧಿಗಳ ಹೆಸರು ಪ್ರಕಟವಾಗಿದೆ. ಕಾಂಗ್ರೆಸನ್ನು ಆಮಂತ್ರಿಸುವುದಿಲ್ಲ. ಪರಿಷತ್ತು ಮುಗಿದ ನಂತರ ಕಾಂಗ್ರೆಸನ್ನು ಸೇರಿಸುವ ಬಗ್ಗೆ ನಡೆಯಬೇಕಾದ ಕರ್ತವ್ಯಗಳನ್ನು ಪ್ರಕಟಿಸುತ್ತಾರೆಂದು ವರ್ತಮಾನವಿದೆ.

ಹಿಂದೂ ಮುಸಲ್ಮಾನರುಗಳಿಗೆ ರಾಜಕೀಯ ಹಕ್ಕುಗಳ ಕುರಿತು ಒಪ್ಪಂದವಾಗಲು ಪ್ರಯತ್ನಗಳು ನಡೆಯುತ್ತಲೇ ಇವೆ. ಅದೇ ಕಾರಣದ ಮೇಲೆ ಉಪವಾಸ ಬಿಡದೆ ನಾಲಡು, ಮುಸ್ಲಿಂ ರಿಂದ ಸುಗಬೇಕೆಂತ ಮಹಾತ್ಮಾ ಗಾಂಧಿಯವರು ಪ್ರಕಟಿಸಿರುತ್ತಾರೆ.

ಅಸ್ಪೃಶ್ಯತಾ ನಿವಾರಣೆಯ ಪ್ರಚಾರ ಕೆಲಸವು ಶ್ರೀ. ಸಿ. ರಾಜಗೋಪಾಲಾಚಾರ್ ಮುಂತಾದವರಿಂದ ನಡೆಯುತ್ತಲೇ ಇದೆ. ಈ ಬಗ್ಗೆ ಬಾಸನಿನ ಮಾಡಬೇಕೆಂತ ಮಹಾತ್ಮಾ ಗಾಂಧಿ ಸ್ಟೇಲಿನಲ್ಲಿ ಕರಾವು ನಡೆ ಬಂದಿದೆ. ಅಸ್ಪೃಶ್ಯರನ್ನು ದೇವಸ್ಥಾನಗಳಿಗೆ ಸೇರಬಾರದೆಂಬವರ್ಕೆ ಮೈಸೂರಿನಲ್ಲಿ ಒಂದು ಸಂಘ ಸೇರಿ ಬಂದು ಅರ್ಜಿ ಬರೆ...

ಕೊಡಗು.

ಸನ್ ೧೯೪೩ನೇ ಇಸವಿ

ಅಕ್ಟೋಬರ್ ತಾ ೨೯ನೇ ಶುಕ್ರವಾರ.

ಪ್ರೆಸ್ ಆರ್ಡಿನೇನ್ಸ್

ಜಾರಿಯಲ್ಲಿರುವ ಪರಿವಿಗೆ

ನಾವು

ಅಗ್ರಲೇಖನ

ವನ್ನು

ಪ್ರಕಟಿಸುವುದಿಲ್ಲ.

ಅಮ್ಮತ್ತಿನಾಡಿನಲ್ಲಿ ಒಂದು ಪಬ್ಲಿಕ್ ಸಭೆ.

ಬಿಳುಗುಂದ ಗ್ರಾಮದಲ್ಲಿರುವ, ಅಮ್ಮತ್ತಿನಾಡು ದೇವಸ್ಥಾನವಾದ ಮಹದೇವರ ದೇವಾಲಯದಲ್ಲಿ ಹೊಸ ವಿಗ್ರಹ ಪ್ರತಿಷ್ಠೆ ಮಾಡುವ ಪೂಜೋತ್ಸವವು ಈ ತಾ. 26 ನೇ ಬುಧವಾರ ನಡೆಯಿತು. ಮುಖ್ಯವಾಗಿ ಬಿಳುಗುಂದ ಮತ್ತು ನಲ್ವತೊಕ್ಲು ಗ್ರಾಮಸ್ಥರೂ, ಅಮ್ಮತ್ತಿನಾಡಿನ ಬೇರೆ ಗ್ರಾಮಸ್ಥರು ಕೆಲವರೂ ಸೇರಿದ್ದಲ್ಲದೆ ಪರನಾಡುಗಳ ಕೆಲವು ಮಹನೀಯರೂ ಬಂದಿದ್ದರು. ಮಹಿಳೆಯರು ಮತ್ತು ಮಹನೀಯರು ಸೇರಿ ಸುಮಾರು 500 ಜನರು ಹಾಜರಿದ್ದಲ್ಲದೆ ಸುಮಾರು 100 ಹರಿಜನರು ಹೊರಗೆ ಸೇರಿದ್ದರು.

ಪೂಜೆಯು ಪ್ರಾರಂಭವಾಗುವ ಮುಂಚೆ ಸೇರಿದ್ದ ಜನರ ಅಪೇಕ್ಷೆ ಮೇರೆ ಒಂದು ಮೀಟಿಂಗು ನಡಿಸಲಾಯಿತು. ಮೆ. ಮಾಳೇಟೀರ ಅಚ್ಚಪ್ಪನವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಸಭಿಕರ ಕೋರಿಕೆ ಮೇರೆ ಮೆ. ಪಿ. ಐ. ಬೆಳ್ಯಪ್ಪನವರು, ಕೊಡಗಿನ ಭವಿಷ್ಯತ್ತನ್ನು ಕುರಿತು ತಾ. 23 ರಲ್ಲಿ ಮಡಿಕೇರಿಯಲ್ಲಿ ನಡೆದ ಮೀಟಿಂಗಿನ ವಿವರವನ್ನು ಸಭೆಯವರಿಗೆ ತಿಳಿಸಿ ದೇಶದ ರಾಜಕೀಯ ವಿಚಾರವನ್ನು ಕುರಿತು ಯಾವ ತೀರ್ಮಾನಕ್ಕೂ ಇದು ಸಮಯವಲ್ಲವೆಂತಲೂ, ಕಾಂಗ್ರೆಸಿನ ಚಳವಳಿ ನಿಂತು ದೇಶದಲ್ಲಿ ಶಾಂತಿಯುಂಟಾದ ವೇಳೆ ಎಲ್ಲವನ್ನೂ ತೀರ್ಮಾನಿಸಬಹುದೆಂತಲೂ ಚಿಕ್ಕ ಭಾಷಣ ಮಾಡಿದರು. ನಂತರ ಮೆ. ಐ. ಪಿ. ಕಾರ್ಯಪ್ಪನವರು ಅಸ್ಪೃಶ್ಯತೆಯನ್ನು ಹೋಗಲಾಡಿಸುವುದನ್ನು ಕುರಿತು ಮಾತಾಡಿದರು. ಇವೆರಡು ಸಂಗತಿಗಳನ್ನು ಕುರಿತು ಮೆ. ಮಂಡೆಯಂಡ ಬೆಳ್ಯಪ್ಪನವರು ಭಾಷಣ ಮಾಡಿದ ಮೇಲೆ, ಮೆ. ಪಿ. ಐ. ಬೆಳ್ಯಪ್ಪನವರು ಅಸ್ಪೃಶ್ಯತೆಯನ್ನು ಹೋಗಲಾಡಿಸುವ ವಿಷಯ ಜನರ ಮನಸ್ಸಿನಲ್ಲಿದ್ದ ಸಂಶಯಗಳನ್ನು ನಿವಾರಿಸುವ ಉದ್ದೇಶ್ಯ ಕೆಲವು ಮಾತುಗಳನ್ನು ಆಡಿದರು. ಇದಾದ ಮೇಲೆ ಈ ಕೆಳಗಿನ 2 ಠರಾವುಗಳು ಸರ್ವಸಮ್ಮತಿಯಿಂದ ಮಂಜೂರು ಮಾಡಲ್ಪಟ್ಟವು.

ದೇಶದಲ್ಲಿ ಈಗ ಅಶಾಂತಿಯುದ್ಧವು ನಡೆಯುತ್ತಾ ಶಾಂತತೆ ಇಲ್ಲದಿರುವುದರಿಂದ ಕೊಡಗಿನ ಭವಿಷ್ಯತ್ತನ್ನು ಕುರಿತು ಆಲೋಚಿಸಲು ಇದು ಸಮಯವಲ್ಲವೆಂತಲೂ ಶಾಂತತೆಯು ನೆಲೆಗೊಂಡ ಮೇಲೆ ಈ ವಿಷಯ ಆಲೋಚಿಸಬಹುದೆಂತಲೂ ಈ ಸಭೆಯು ಅಭಿಪ್ರಾಯಪಡುತ್ತದೆ

ಅಸ್ಪೃಶ್ಯತೆಯನ್ನು ಹೋಗಲಾಡಿಸುವ ತತ್ವಕ್ಕೆ ಈ ಸಭೆಯು ಒಪ್ಪುತ್ತದೆ.

ನೆರೆದಿದ್ದ ಜನರೆಲ್ಲರೂ ಪೂಜೆಯ ಪ್ರಸಾದವನ್ನು ಹೊಂದಿಕೊಂಡು ಭೋಜನ ತೀರಿಸಿಕೊಂಡು ಉತ್ಸವವನ್ನು ಅಂತ್ಯಗೊಳಿಸಿದರು.

ಕೊಡಗಿನಲ್ಲಿ ವ್ಯವಸಾಯ.

(ಕುಂ. ಬಿ. ಚಿನ್ನಪ್ಪನವರಿಂದ.)

ಈಗ ಕೊಡಗಿನ ವ್ಯವಸಾಯಗಾರರ ನಾಟಿ ಕೆಲಸವು ಮುಗಿದು ದೇಶವು ಸುಂದರವಾದ ಗದ್ದೆಗಳ ಪಚ್ಚೆ ಬಣ್ಣದಿಂದ ಮನೋಹರವಾಗಿ ಕಂಗೊಳಿಸುತ್ತದೆ. ಗದ್ದೆಗಳಲ್ಲಿ ಕಷ್ಟಪಟ್ಟು ದುಡಿಯುತ್ತಿದ್ದ ರೈತರಿಗೆ ಈಗೊಂದು ವಿರಾಮ ಕಾಲ. ಇನ್ನು ಮುಂದೆ ಕಟಾವಿನ ವರೆಗೆ ಕಾಡುಗಳಲ್ಲಿ ಬೇಟೆಯಾಡುವುದೇ ಮುಖ್ಯ ಕೆಲಸ. ಗ್ರಾಮದವರು ತಂಡ ತಂಡವಾಗಿ ಕೋವಿಗಳನ್ನು ಹೊತ್ತು ನಾಯಿಗಳ ಸಹಿತ ಬೇಟೆಗೆ ಹೋಗುವುದು ಒಂದು ಚಮತ್ಕಾರದ ದೃಶ್ಯ. ಯುವಕರು ತಮ್ಮ ಕಿರು ವಯಸ್ಸಿನಲ್ಲೇ ಗುರಿ ಹೊಡೆಯುವುದರಲ್ಲಿ ಪ್ರವೀಣರಾಗುತ್ತಾರೆ. ನಾನು ಅವರನ್ನು ಯುದ್ಧಾಳಿಗಳಾದ ನಮ್ಮ ಪೂರ್ವಜರಿಗೆ ಮಾನವನ್ನು ತರತಕ್ಕ ಮಕ್ಕಳೆಂದೇ ಭಾವಿಸುವೆನು.

ಆದರೆ ಬಾಂಧವರೇ, ಸಮಯ ಬದಲಾವಣೆಯ ಕುರಿತು ನಾವು ನಿಗಾ ಇಡಬೇಕಾಗಿದೆ. ಬ್ರಿಟಿಷ್ ಸರ್ಕಾರವು ನೆಲೆಗೊಂಡಂದಿನಿಂದ ಯುದ್ಧ ಭೀತಿಯು ದೂರವಾಗಿದೆ. ವಿಷಯಾಸಕ್ತವಾದ ಈ ಕಾಲದಲ್ಲಿ ಆರ್ಥಿಕ ಲಾಭವೇ ಮುಖ್ಯ ಉದ್ದೇಶ್ಯವಾಗಿದೆ. ಮನುಷ್ಯನ ಬೆಲೆಯು ಆತನ ಶರೀರ ಪರಾಕ್ರಮದ ಮೇಲೆ ಇರದೆ ಆತನಲ್ಲಿರುವ ಹಣದ ಲೆಕ್ಕವನ್ನು ಅನುಸರಿಸಿದೆ. ಕತ್ತಿ ಕೋವಿಗಳ ಯುದ್ಧವು ಕೇವಲ ಹಳೇದಾಗಿಹೋಗಿ ಈಗ ಗುದ್ದಲಿ ಗುಳಗಳ ಯುದ್ಧವೇ ನಡೆಗುತ್ತದೆ. ಈಗ ನಾವು ದುಡಿತಕ್ಕೆ ಹೆಚ್ಚು ಸಮಯವನ್ನು ಉಪಯೋಗಿಸಬೇಕಾಗಿದೆ, ಸಮಯ ಬದಲಾವಣೆಗೆ ಸರಿಯಾಗಿ ನಮ್ಮ ಜೀವನ ಕ್ರಮವನ್ನು ಬದಲಾಯಿಸಿಕೊಳ್ಳಬೇಕು.

ಈಗಿನ ಕಾಲದಲ್ಲಿ ಜೀವನದ ಅವಶ್ಯಕತೆಗಳು ಹೆಚ್ಚಿವೆ. ಇಂಡಿಯಾ ದೇಶದ ನಿವಾಸಿಗಳು ನೂರಕ್ಕೆ 75ರಷ್ಟು ವ್ಯವಸಾಯವನ್ನು ಅವಲಂಬಿಸಿದ್ದಾರೆ. ಕೊಡಗಿನಲ್ಲಿ ಯಾವ ತರದ ಕೈಗಾರಿಕೆಯೂ ನಡೆಯದಿರಲು ವ್ಯವಸಾಯಗಾರರ ಸಂಖ್ಯೆಯು ಇನ್ನೂ ಹೆಚ್ಚು ಪ್ರಮಾಣದಲ್ಲುಂಟೆಂದು ಹೇಳಬಹುದು. ಇದರಿಂದ ಈ ದೇಶದಲ್ಲಿ ವ್ಯವಸಾಯ ವೃತ್ತಿಯು ಎಷ್ಟು ಪ್ರಾಮುಖ್ಯವಾದದ್ದೆಂದು ತೋರುತ್ತದೆ. ಆ ಕಾರಣ ಯಾವ ಆರ್ಥಿಕ ಅಭಿವೃದ್ಧಿಯೂ ವ್ಯವಸಾಯದ ಮೂಲಕವೇ ಆಗಬೇಕು. ವ್ಯವಸಾಯದ ವಿಷಯಕ್ಕೆ ಹಿಂದೂ ದೇಶವು ಇತರ ನಾಗರೀಕ ದೇಶಗಳಿಗಿಂತ ಬಹಳ ಹಿಂದುಳಿದಿದೆ. ಕೊಡಗು ದೇಶವಂತೂ ಹಲವು ಶತಮಾನಗಳ ಹಿಂದಿನಂತಿದೆ. ಈ ದೇಶದ ರೈತರಿಗೆ ನವೀನದ ಬೆಳೆಯೇ ತಿಳಿದಿರುವುದಿಲ್ಲ. ವರ್ಷದ ಕೊಂಚ ಭಾಗವನ್ನು ಮಾತ್ರ ಫಲಕಾರಿಯಾಗತಕ್ಕ ಕೆಲಸಕ್ಕೆ ಉಪಯೋಗಿಸುವರು. ಬೇಟೆ ಇತ್ಯಾದಿ ವಿನೋದ ಕಾರ್ಯಗಳಿಗೆ ಕಡಿಮೆ ಸಮಯವನ್ನು ಉಪಯೋಗಿಸಬೇಕು. ಶಿಕಾರಿಯೇ ಬೇಡವೆಂದು ಹೇಳಲಾರೆ. ವಾರಕ್ಕೊಂದು ನಿಯಮಿತ ದಿನದಲ್ಲಿ ಅಂಥಾ ವಿನೋದಗಳಿಗೆ ಆಸ್ಪದ ಕೊಡಬಹುದು. ಇತರ ಎಲ್ಲಾ ದಿನಗಳನ್ನು ಗದ್ದೆ ಹೊಲಗಳಲ್ಲಿಯೇ ಕಳೆಯಬೇಕು. ವ್ಯವಸಾಯದಲ್ಲಿ ತಮ್ಮ ಮನಃಪೂರ್ವಕ ಶ್ರಮವನ್ನು ನಡಿಸಬೇಕು. ಈ ದೇಶದ ಕೃಷಿಕರು ತಮ್ಮ ಸುಸಮಯವನ್ನು ಸೋಮಾರಿತನದಲ್ಲಿ ಖರ್ಚು ಮಾಡುವುದು ಪೂರ್ವ ಅಭ್ಯಾಸ ಬಲದಿಂದಲೋ ಯಾ ಉತ್ತಮ ತಿಳುವಳಿಕೆ ಇಲ್ಲದ್ದರಿಂದಲೋ ಎಂದು ತಿಳಿಯುವುದಿಲ್ಲ. ಹ್ಯಾಗೂ ನಾನು ನಿಮ್ಮವನೊಬ್ಬನಾಗಿ ಈ ಕೃಷಿ ಶಾಸ್ತ್ರದಲ್ಲಿ ಕೊಂಚ ಅಭ್ಯಾಸ ಮಾಡಿರುವ ಕಾರಣ ನನಗೆ ತಿಳಿದ ಕೆಲವು ವಿಷಯಗಳನ್ನು ನಿಮ್ಮ ಮುಂದಿಡುವುದು ನನ್ನ ಕರ್ತವ್ಯವೆಂದು ತಿಳಿಯುತ್ತೇನೆ. ಈ ಕೆಳಗೆ ನಾನು ಕೆಲವು ಕೈಗಾರಿಕೆಗಳ ಮತ್ತು ಬೆಳೆಗಳ ಪಟ್ಟಿಯನ್ನು ಕೊಟ್ಟಿರುವೆನು. ಅವುಗಳಲ್ಲೊಂದನ್ನು ಅನುಸರಿಸಿದರೆ ಜನರ ವಿರಾಮ ಕಾಲಕ್ಕೆ ಕೆಲಸವೂ ತಮ್ಮ ಮುಖ್ಯ ಬೆಳೆಯ ಆದಾಯಕ್ಕಿಂತ ಹೆಚ್ಚಿನ ಆದಾಯವೂ ಉಂಟಾಗುವುದು ಖಂಡಿತ. ಈ ಕೆಳಗೆ ಹೇಳತಕ್ಕ ಬೆಳೆಗಳ ಉತ್ಪತ್ತಿಗೆ ಅನುಕೂಲವಾಗಿ ಕೊಡಗು ದೇಶವು (ಮದ್ರಾಸು ಸಂಸ್ಥಾನದ ಇತರ ಭಾಗಗಳಿಗಿಲ್ಲದ) ಹಲವು ಸ್ವಾಭಾವಿಕ ಅನುಕೂಲತೆಗಳಿಂದ ಕೂಡಿರುತ್ತದೆ. ಕೆಳಗಿನ ಬೆಳೆಗಳು ಇಲ್ಲಿ ಫಲದಾಯಕವಾಗುವವೋ ? ಎಂಬ ಬಗ್ಗೆ ನಾನು ಹಲವು ಪರೀಕ್ಷೆಗಳನ್ನು ನಡಿಸಿರುತ್ತೇನೆ. ನಮ್ಮ ಜನರಿಗೆ ಬಳಕೆಯಲ್ಲಿರತಕ್ಕ ಮತ್ತು ಹೆಚ್ಚು ಉತ್ಪತ್ತಿಯನ್ನು ಕೊಡುವ ಬೆಳೆಗಳನ್ನು ಮಾತ್ರ ನಾನು ಹೇಳುತ್ತೇನೆ. ಕೆಲವು ಮನೆಗೆಲಸಗಳನ್ನು ಮತ್ತು ಕೆಲವು ಬೆಳೆಗಳನ್ನು ಅವುಗಳ ಹಂಗಾಮು, ಎಕ್ರೆಗೆ ಬರತಕ್ಕ ಆದಾಯ ಇತ್ಯಾದಿಗಳನ್ನು ನಮೂದಿಸಿರುತ್ತೇನೆ. ವೇಳೆ ಸಿಕ್ಕಿದಾಗಲೆಲ್ಲಾ ಇವುಗಳ ವ್ಯವಸಾಯ ಕುರಿತು ಮುಂದೆ ಬರೆಯಬೇಕೆಂದಿರುವೆನು. ಇವುಗಳನ್ನು ಕುರಿತು ಹೆಚ್ಚಿನ ತಿಳುವಳಿಕೆ ಬೇಕಾದಲ್ಲಿ ಈಗಿನ ಡಿಮಾನ್‌ಸ್ಟ್ರೇಟರಿಂದ ಯಾ ನನ್ನಿಂದ ಪತ್ರ ಮೂಲಕ ಹೊಂದಬಹುದು.

ಕೊಡಗಿನಲ್ಲಿ ಸುಲಭವಾಗಿ ನಡಿಸಬಹುದಾದ ಕೆಲವು ಮನೆಗೆಲಸಗಳು.

ಖರ್ಚು ಕಳೆದುಳಿಯುವ ಆದಾಯ.

1. ಜೇನು ವ್ಯವಸಾಯ — ರೂ. 10 (ಗೂಡು ಒಂದಕ್ಕೆ).
2. ರೇಷ್ಮೆ — ,, 100 (ಎಕ್ರೆಗೆ).
3. ಅರಗು — ,, 40 .
4. ಕೇಲಿಕೋ ಪ್ರಿಂಟಿಂಗ್ ಮತ್ತು ಡೈಯಿಂಗ್—ಕ್ರಮಪಟ್ಟಷ್ಟು.

ಹಂದಿ ಮತ್ತು ಆಡು ಸಾಕುವುದರಿಂದಲೂ ಯಥೇಷ್ಟವಾದ ಲಾಭವುಂಟಾಗುವುದು.

ಕೊಡಗಿನಲ್ಲಿ ಸಾಧ್ಯವಾತಕ್ಕ ಬೆಳೆಗಳು.

ಬೆಳೆಯ ಹೆಸರು.	ಹಂಗಾಮು ಪ್ರಾರಂಭ.	ಬೆಳೆಯು ಕಾಲ ತಿಂಗಳು.	ಎಕ್ರೆಗೆ ಖರ್ಚು ಕಳೆದುಳಿಯಬಹುದಾದ ಉಳಿತೆ.
1. ಕಬ್ಬು	ಜೂನ್	20	ರೂ 250
2. ಹೂ, ಕೋಸು	ಆಗಸ್ಟ್	4	,, 250
3. ಅರಿಸಿನ	ಜೂನ್	8	,, 225
4. ನೀರುಳ್ಳಿ & ಬೆಳ್ಳುಳ್ಳಿ	ಸೆಪ್ಟಂಬರ್	4	,, 200
5. ಆಲೂಗಡ್ಡೆ	ಸೆಪ್ಟಂಬರ್	4	,, 700

ಈ ಕಾಲದಲ್ಲಿ ಭತ್ತದ ವ್ಯವಸಾಯದಲ್ಲಿ ಎಕ್ರೆಗೆ ರೂ. 3 ರಷ್ಟು ಸಿಗುವುದು ಕಷ್ಟ. ಅದನ್ನು ಮೇಲಿನ ಬೆಳೆಗಳಿಗೆ ಹೋಲಿಸಿದರೆ ಅಜಗಜಾಂತರ ವ್ಯತ್ಯಾಸ ತೋರುವುದು.

ಶುಂಠಿ ಮತ್ತು ಮೆಣಸಿನ ವ್ಯವಸಾಯವೂ ಸಹ ಹೆಚ್ಚು ಲಾಭಕಾರಿಯಾಗಬಹುದು.

ಬೇಟೆ, ಜೂಜಾಟ, ಸೋಮಾರಿತನ ಇವುಗಳಲ್ಲಿ ಕಾಲ ಹರಣ ಮಾಡುವುದಕ್ಕಿಂತ ಪ್ರತಿ ರೈತನು ಸದ್ಯ ಒಂದೆರಡು ಎಕ್ರೆಗಳಲ್ಲಿ ಮೇಲಿನ ಬೆಳೆಯೊಂದನ್ನು, ಕೈಗಾರಿಕೆಯೊಂದನ್ನು ನಡಿಸಿದರೆ ದೇಶದ ದಾರಿದ್ರ್ಯವು ನೀಗುವುದರಲ್ಲಿ ಸಂಶಯವಿಲ್ಲ. ಭತ್ತದ ವ್ಯವಸಾಯದಿಂದ ರೈತನಿಗೆ ತನ್ನ ಕುಟುಂಬಕ್ಕೆ ಆಹಾರವು ಮಾತ್ರ ಒದಗುತ್ತದೆ. ಸಣ್ಣ ಹಿಡುವಳಿದಾರರ ಜೀವನದ ಅವಶ್ಯಕತೆಯೆಲ್ಲಾ ಭತ್ತದಿಂದಲೇ ಒದಗಿಸಿಕೊಳ್ಳಲಾಗುವುದಿಲ್ಲ. ಬೇರೆ ವ್ಯವಸಾಯ ಮತ್ತು ಕಸಬುಗಳನ್ನು ಭತ್ತದ ವ್ಯವಸಾಯದ ಜೊತೆಗೆ ನಡಿಸಲೇ ಬೇಕು. ಭತ್ತದ ಹಂಗಾಮಿನಲ್ಲಿ ಮೇಲೆ ಹೇಳಿದ ಬೆಳೆಗಳಿಗೆ ಹೆಚ್ಚು ನಿಗಾ ಇಡಬೇಕಿಲ್ಲ. ಭತ್ತದ ಗದ್ದೆಯ ಕಡೆಗೆ ರೈತನ ದೃಷ್ಟಿ ಹೆಚ್ಚು ಬೇಕಿಲ್ಲದ ಕಾಲದಲ್ಲಿ ಅವುಗಳನ್ನು ನಡಿಸಬಹುದಾಗಿದೆ. ಅಲ್ಲದೆ ಹೆಂಗಸರು ಮಕ್ಕಳು ಮೇಲಿನವುಗಳ ಕೃಷಿಯಲ್ಲಿ ಹೆಚ್ಚು ಭಾಗವನ್ನು ವಹಿಸಿಕೊಳ್ಳಬಹುದು.

ಈ ಪತ್ರಿಕೆಯನ್ನು ಓದಿದವರ್ಯಾರಾದರು ಯಾವ ಒಂದು ವ್ಯವಸಾಯವನ್ನು ನಡಿಸಲು ಮನಸ್ಸುಳ್ಳವರಾಗಿ ಅದರ ಕುರಿತು ಪೂರ್ಣ ತಿಳುವಳಿಕೆಯನ್ನು ಕೊಡಬೇಕೆಂದರೆ (ಕೃಷಿಕರ ಕ್ಷೇಮಾಭಿಲಾಷೆಯಿಂದ) ಮುಂದೆ ತಿಳಿಸಲು ಉತ್ಸಾಹವುಳ್ಳವನಾಗಿರುವೆನು.

—

ಕೊಡಗಿನ ಭವಿಷ್ಯತ್ತು.

ಕೊಡಗಿನ ಭವಿಷ್ಯತ್ತನ್ನು ಕುರಿತು ಒಗ್ಗಟ್ಟಿನ ಅಭಿಪ್ರಾಯಕ್ಕೆ ಬರಲು ಮಡಿಕೇರಿಯಲ್ಲಿ ನಡೆಸಿದ ಮೀಟಿಂಗಿನ ಕಾರ್ಯಗಳು. ಹಾಜರಿದ್ದವರು:—

ರಾ. ಬಾ. ಪಟ್ಟಮಾಡ ಬೋಪೈಯ್ಯನವರು ರಾ. ಬಾ. ಕೋಡಿಮಣಿಯಂಡ ಸುಬ್ಬಯ್ಯನವರು ರಾ. ಸಾ. ಕೋದಂಡ ಬಯ್ಯಣ್ಣನವರು ಶ್ರೀಮತಿ ಡಿ. ಸಾಕಮ್ಮನವರು, ಮೆ. ಗಣಾಚ ಯಲ್. ನ್ಯಾಕರಂವರು, ಸಿ. ಯನ್. ಮುತ್ತಣ್ಣನವರು, ಅಪ್ಪಾರಂಡ ಚಂಗಪ್ಪನವರು, ಸಡಿಕೇರಿಯಂಡ ನಂಜಪ್ಪನವರು, ಉಳುವಾರಂಡ ಅಪ್ಪಯ್ಯನವರು, ಪಿ. ಜೆ. ಲೋಬೋರವರು, ತಿರುವಂಗಡಂ ಪಿಳ್ಳೆಯವರು, ಯಂ. ಎ. ಸಿದ್ದೀಕರು, ಸಡಿಕೇರಿಯಂಡ ಸೋಮಯ್ಯನವರು, ಕಾಡ್ಯಮಾಡ ಸೋಮಯ್ಯನವರು, ಬಿದ್ದಂಡ ಕರುಂಬಯ್ಯನವರು, ಕಲ್ಯಾಡ ಪೂವಯ್ಯನವರು, ಪಾಂಡಂಡ ಚಂಗಪ್ಪನವರು, ಪುಚ್ಚಿಮಾಡ ನಾಣಯ್ಯನವರು, ಮಹಮದ್ ಗೌಸ್‌ರವರು, ಪಟ್ಟಮಾಡ ತಿಮ್ಮಪ್ಪನವರು, ಕೊಂಗಡ ಅಪ್ಪಯ್ಯನವರು, ಐಚೆಟ್ಟಿರ ಸುಬ್ಬಯ್ಯನವರು, ಒಡ್ಡನ ಮುತ್ತಣ್ಣನವರು, ಚೇಯಕಪೂವಂಡ ಭೀಮಯ್ಯನವರು, ಮಂಡೆಪಂಡ ದೇವಯ್ಯನವರು, ಒಲ್ಲಡಂಡ ಬೆಳ್ಯಪ್ಪನವರು, ಉದಿಯಂಡ ಮಾಚಯ್ಯನವರು, ಬಿದ್ದಂಡ ಸುಬ್ಬಯ್ಯನವರು ಬಿದ್ದಂಡ ಕಾರ್ಯಪ್ಪನವರು, ಕೊಂಗೆಟ್ಟಿರ ಅಪ್ಪಯ್ಯನವರು ಮನೆಯಪ್ಪಂಡ ತಿಮ್ಮಯ್ಯನವರು, ಬೆಳ್ಯಪ್ಪನವರು, ನಿಡ್ಯಮಲೆ ಸೋಮಣ್ಣನವರು, ಆರ್. ಯಸ್. ಕಂಜೀವರಾಯರು, ಗೋಣಿಕೊಪ್ಪದ ಕಾಳೇಗೌಡರು, ಕೆ. ಮಲ್ಲಪ್ಪನವರು, ಬೇಳೂರು ಬಸವೇಗೌಡರು ಹಂಡ್ಲಿ ಚೆನ್ನಮಲ್ಲಪ್ಪನವರು, ಹಂಡ್ಲಿ ಪುಟ್ಟಣ್ಣನವರು, ಚಾಗೌಡ್ಲು ಕಾಳಪ್ಪನವರು, ಚಂದ್ರಿಕೇ ಬಸಪ್ಪನವರು, ಯಸ್. ಬಸಪ್ಪನವರು, ಪಟ್ಟಮಾಡ ಕುಂಞಪ್ಪನವರು, ಕೊಕ್ಕಲೆರ ತಿಮ್ಮಯ್ಯನವರು, ಆರ್. ಫ್ರಾಂಕ್ ಮಾಚೀಯವರು, ಮೇರಿಯಂಡ ಮಾದಪ್ಪನವರು ನಾಲ್ಕುನಾಡು, ಪಾಂಡಂಡ ಚಂಗಪ್ಪನವರು, ಕೊತಂಡ ಪೂವಯ್ಯನವರು, ಕಂಬಾಚೆ ಸುಬ್ಬಯ್ಯನವರು, ಅಪ್ಪಾರಂಡ ತಿಮ್ಮಯ್ಯನವರು, ಸೋಮಯ್ಯನವರು, ಕೊಡಂದೆರ ಮಾದಪ್ಪನವರು, ಅಬೆರ್‌ಪಾಕಸು, ಕಂಡೋಕ್ ಅಮ್ಮಕಾಕನವರು, ಕೆ. ಕೃಷ್ಣಮೂರ್ತಿಯವರು, ಹೆಚ್. ತಿರುಮಲಾಚಾರ್ಯರು, ಮಾಚೆರ ಪೊನ್ನಪ್ಪನವರು, ಮಾಚಿಮಂಡ ನಂಜುಂಡನವರು, ಮಹಾಬಲಶೆಟ್ಟಿಯವರು, ಬಿದ್ದಂಡ ಐಯ್ಯಪ್ಪನವರು, ಬಿದರೂರು ಮಾದಯ್ಯನವರು, ಬಿ. ಕೃಷ್ಣಪ್ಪನವರು, ಚೆಪ್ಪುಡಿರ ಪೂಣಚ್ಚನವರು, ಪಾಂಡಂಡ ನಂಜಪ್ಪನವರು, ಸಿ. ಯನ್. ವೆಂಕಟಯ್ಯನವರು. ರಾ. ಬಾ. ಪಟ್ಟಮಾಡ ದೇವಯ್ಯನವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ದೇಶದ ಉದ್ಧಾರಕ್ಕಾಗಿ ವಿಧ ವಿಧವಾದ ಅಭಿಪ್ರಾಯದವರಿರುವ ಈ ಸಭೆಯಲ್ಲಿ ಒಗ್ಗಟ್ಟಿನ ತೀರ್ಮಾನಕ್ಕೆ ಬರಲು ದೇವರು ಸಹಾಯ ಮಾಡಲಿ ಎಂತ ಅಧ್ಯಕ್ಷರು ಹೇಳಿದರು. ಮೆ. ಸಿ. ಯನ್. ವೆಂಕಟಯ್ಯನವರು ಕೆಲವು ಮಹನೀಯರಿಂದ ಬಂದ ಕಾಗದಗಳನ್ನು ಓದಿ ಹೇಳಿದರು—ಅವುಗಳ ಸಾರಾಂಶವೇನೆಂದರೆ—

ಮ. ರಾ. ಶ್ರೀ. ಪಂದಿಯಂಡ ಬೆಳ್ಯಪ್ಪನವರ ಪತ್ರ—ಕೊಡಗಿನ ಭವಿಷ್ಯತ್ತನ್ನು ಕುರಿತು ಆಲೋಚಿಸಲು ನಾಳೆ ದಿನ ನಡೆಯುವ ಮೀಟಿಂಗಿಗೆ ನೀವು ನನಗೆ ಕಳುಹಿಸಿದ ಆಮಂತ್ರಣಕ್ಕೆ ನಿಮಗೆ ತುಂಬಾ ವಂದನೆಗಳಿವೆ. ಆದರೆ ಕೊಡಗಿನ ರಾಜಕೀಯ ಭವಿಷ್ಯತ್ತನ್ನು ಕುರಿತು ಆಲೋಚನೆ ಮಾಡಲು ಇದು ತಕ್ಕ ಸಮಯವಲ್ಲವೆಂದು ನನ್ನ ಅಭಿಪ್ರಾಯವಾಗಿದೆ. ನಮ್ಮೆಲ್ಲರ ಸ್ವಾತಂತ್ರ್ಯಕ್ಕಾಗಿ ನಮ್ಮ ಸಹೋದರ—ಸಹೋದರಿಯರು ಸಾವಿರ ಗಟ್ಟಲೆಯಲ್ಲಿ ಜೈಲುಗಳಲ್ಲಿ ಕೊಳೆಯುತ್ತಿರುವಾಗ್ಯೆ, ನಾವು ಶಾಂತಚಿತ್ತದಿಂದ ರಾಜಕೀಯ ವಿಚಾರವನ್ನು ಕುರಿತು ಆಲೋಚಿಸುವುದೂ, ನಂತರ ನಮ್ಮ ಆಲೋಚನೆಯ ಫಲಿತಾಂಶವನ್ನು ನಮ್ಮ ಮಾತೃಭೂಮಿಯ ಗುಲಾಮಗಿರಿಯನ್ನು ಹೋಗಲಾಡಿಸಲು ಹೋರಾಡುವವರ ಕಡೆಗೆ ಅಮಾನುಷ ರೀತಿಗಳಲ್ಲಿ ವರ್ತಿಸುತ್ತಿರುವ ಬ್ರಿಟಿಷ್ ಸರ್ಕಾರದ ಮುಂದೆ ಇಡುವುದೂ ಭಾರತ ಪುತ್ರರಿಗೂ ಯೋಗ್ಯವಲ್ಲವೆಂದೇ ನನಗೆ ಅನ್ನಿಸುತ್ತದೆ. ಮಾತ್ರವಲ್ಲ, ಈಗ ನೀವು ಯಾವ ತೀರ್ಮಾನವನ್ನು ಮಾಡಿದರೂ ಅದರಿಂದ ಪ್ರಯೋಜನವಾಗಲಾರದೆಂದು ನನಗೆ ತೋರುತ್ತದೆ. ದೇಶದವರೆಲ್ಲರೂ ಒಗ್ಗಟ್ಟಾಗಿ ವರ್ತಿಸಬೇಕೆಂಬ ಉದ್ದೇಶವು ನಿಮಗಿದ್ದರೆ, ಹಿಂದೂ ದೇಶದಲ್ಲಿ ಈಗ ನಡೆಯುತ್ತಿರುವ ಅಹಿಂಸಾತ್ಮಕ "ಯುದ್ಧವು" ನಿಂತ ಮೇಲೆ ರಾಜಕೀಯ ವಿಚಾರವನ್ನು ಆಲೋಚಿಸುವುದು ಉತ್ತಮವೆಂದು ಸೂಚಿಸಬೆ ಇಚ್ಛಿಸುತ್ತೇನೆ. ಆದುದರಿಂದ ನಾಳೆಯ ಮೀಟಿಂಗಿಗೆ ನಾನು ಬರಲಾರೆನೆಂದು ತಿಳಿಸಲು ವಿಷಾದಿಸುತ್ತೇನೆ. ಹೇಗೂ ದೇಶದ ಸ್ವಾತಂತ್ರ್ಯದ ಉದ್ದೇಶವನ್ನು ನೀವು ಮರೆಯದಂತೆ ದೇವರು ನಿಮಗೆ ಮನಸ್ಸು ಕೊಡಲೆಂದು ಪ್ರಾರ್ಥಿಸುವ.

ಮೆ. ಅಬ್ದುಲ್ ಗಫೂರ್ ಖಾನ್ ಸಾಹೇಬರು ಕಾಂಗ್ರೆಸ ಮುಖ್ಯಸ್ಥರಾದ ಬೆಳ್ಯಪ್ಪನವರ ಅಭಿಪ್ರಾಯವೇ ನನ್ನ ಅಭಿಪ್ರಾಯವೆಂತ ಬರೆದಿದ್ದರು.

ಮೆ. ಎ. ಯಿ. ಜೆ. ನಿಕೊಲ್ಸನವರು "ನನಗೆ ಬರಲಿಕ್ಕೆ ಅನುಕೂಲವಿಲ್ಲ. ಕೊಡಗಿಗೆ ಹೆಚ್ಚಿಗೆ ಸುಧಾರಣೆ ಕೊಡಬಾರದೆಂತಲೂ ಈಗ ಇರುವಂತೆಯೇ ಇರಬೇಕೆಂತ ಒಬ್ಬ ಯೂರೋಪಿಯನ್ ಮೆಂಬರು ಕೌನ್ಸಿಲಿನಲ್ಲಿ ಹೇಳಿದರೆಂತ ನೋಟೀಸಿನಲ್ಲಿ ಬರೆದಿದೆ, ಇದು ಸರಿಯಲ್ಲ. ಆದರೆ ನಾನು ಹೇಳಿದ್ದೇನೆಂದರೆ—ಕೊಡಗಿಗೆ ಸುಧಾರಣೆ ಬೇಕೆಂಬುದಕ್ಕೆ ನನ್ನ ಸಹಾನುಭೂತಿ ಇದೆ, ಆದರೆ ಕೌನ್ಸಿಲ್ ಮುಂದೆ ಇದ್ದ ಕರಾರನ್ನು ಅಂಗೀಕರಿಸಲಾಗುವುದಿಲ್ಲ. ಅದರಲ್ಲಿ ಸೈಮನ್ ಶಿಫಾರಸ್ಸು ಕೃಷ್ಟಿಯಲ್ಲವೆಂತ ಬರೆದಿದೆ. ಆದರೆ ನನ್ನ ಅಭಿಪ್ರಾಯದಲ್ಲಿ ಸೈಮನ್ ಶಿಫಾರಸಿನ ಕೊಡಗಿನಲ್ಲಿ ವಿಷಯ ಬರೆದಿರುವುದು ನ್ಯಾಯವಾದದ್ದು. ಎಸೆಂಬ್ಲಿಗೆ ಪ್ರತಿನಿಧಿತ್ವ ಸಿಕ್ಕಿದ್ದಕ್ಕೆ ಕೃಷ್ಣರಾಗಿ ಹಿಂದಿನಿಂದ ಬೇರೆ ಸುಧಾರಣೆ ಪಡೆಯಬಹುದು, ಎಂತ ನನ್ನ ಅಭಿಪ್ರಾಯ'—ಹೀಗೆಂತ ನಾನು ಹೇಳಿದ್ದು. ಇದನ್ನು ಸಭೆಗೆ ತಿಳಿಸಬೇಕು.

ಮೇಜರ್ ಮೂರ್‌ಬ್ಯಾಂಡರು ಕೊಡಗಿನ ಭವಿಷ್ಯತ್ತನ್ನು ನಿರ್ಣಯಿಸಲು ತನ್ನಿಂದ ಸಹಾಯವಾಗಲಾರದೆಂತಲೂ ತನಗೆ ಬರಲು ಅನುಕೂಲವಿಲ್ಲವೆಂತಲೂ ಬರೆದಿದ್ದರು.

ಮೆ. ಕೋದಂಡ ಉತ್ತಯ್ಯನವರು ಈ ಒಗ್ಗಟ್ಟಿನ ಪ್ರಯತ್ನವು ಬಹಳ ಒಳ್ಳೇದೆಂತಲೂ ಕೊಡಗಿಗೆ ಪ್ರಜಾಪ್ರಭುತ್ವ ಸರಕಾರ ಕೊಡಲೇಬೇಕೆಂತಲೂ, ತಪ್ಪಿದರೆ ಮೈಸೂರಿಗೆ ಸೇರಬೇಕೆಂತಲೂ ಮದ್ರಾಸಿಗೆ ಸೇರಿಸಲೇ ಬಾರದೆಂತಲೂ ಆ ಬಗ್ಗೆ ಒಂದು ಕಮಿಟಿ ಆಗಬೇಕೆಂತ ಬಗ್ಗೆ ಬರೆದಿದ್ದರು.

ಮೆ. ಐಚೆಟ್ಟಿರ ಸುಬ್ಬಯ್ಯನವರು ಮೀಟಿಂಗಿನ ಉದ್ದೇಶವನ್ನು ವಿವರಿಸಿದರು. ಹಿಂದೂಸ್ಥಾನದ ಭವಿಷ್ಯತ್ತನ್ನು ನಿರ್ಣಯಿಸಲು ರೌಂಡ್ ಟೇಬಲ್ ಪರಿಷತ್ತು ಸೇರುವುದರಲ್ಲಿ ಕೊಡಗಿನವರು ಒಗ್ಗಟ್ಟಾಗಿ ಒಟ್ಟು ದೇಶದ ಒಂದೇ ಒಂದು ಅಭಿಪ್ರಾಯವನ್ನು ತಿಳಿಸಬೇಕು. ಕೊಡಗು ಪ್ರತ್ಯೇಕವಾಗಿಯೇ ಇದ್ದು ಪ್ರಜಾಪ್ರಭುತ್ವ ಸರಕಾರ ಪಡೆಯಬೇಕು, ಮೈಸೂರಿಗೆ ಸೇರಬೇಕು, ಮದ್ರಾಸಿಗೆ ಸೇರಬೇಕು, ಕೊಡಗಿಗೆ ಸಮೀಪವಾಗಿರುವ ಸುಳ್ಯ ಪುತ್ತೂರು ನೀಲಗಿರಿ ಮತ್ತು ವಯನಾಡನ್ನು ಸೇರಿಸಿಕೊಂಡು ಪ್ರತ್ಯೇಕವಾಗಿರಬಹುದು ಎಂಬ ವಿಧ ವಿಧದ ಅಭಿಪ್ರಾಯಗಳಿವೆ. ತಾವು ಹಿಡಿದದ್ದೇ ಆಗಬೇಕೆಂತ ವಾದಿಸದೆ ಸ್ನೇಹಭಾವದಿಂದ ರಾಜಿ ಒಪ್ಪಂದಕ್ಕೆ ಬರಬೇಕಾದದ್ದು ಅವಶ್ಯವಿದೆಯೆಂತ ವಿಸ್ತಾರವಾಗಿ ವಿವರಿಸಿದರು.

ಮೆ. ಸಿ. ಯನ್. ವೆಂಕಟಯ್ಯನವರು ಅನಂತರ ಹೇಳಿದ್ದೇನೆಂದರೆ—ಹಿಂದೂಸ್ಥಾನದ ದೊಡ್ಡ ಪ್ರಾಂತ್ಯಗಳಿಗೆಲ್ಲಾ ಪೂರ್ತಿ ಪ್ರಜಾಪ್ರಭುತ್ವ ಸರಕಾರವನ್ನು ಕೊಡಬಹುದೆಂತ ಬ್ರಿಟಿಷ್ ಸರಕಾರವು ಹೇಳಿದೆ. ಹಾಗೆ ಬೇರೆ ಪ್ರಾಂತ್ಯಗಳಿಗೆ ಪ್ರಜಾಪ್ರಭುತ್ವ ಸರಕಾರ ದೊರಕಿದ ನಂತರ ಕೊಡಗು ಪ್ರಜಾಪ್ರಭುತ್ವ ಸರಕಾರವಿಲ್ಲದೆ ಇದ್ದರೆ ಜನರು ಎಂದೂ ಒಪ್ಪಲಾರರು. ಕೊಡಗಿಗೆ ಪ್ರಜಾಪ್ರಭುತ್ವ ಸರಕಾರ ಬೇಡವೆಂತ ಹೇಳುವವರು ದೇಶೀಯರಲ್ಲಿ ಯಾರೂ ಇಲ್ಲ. ಕೊಡಗಿಗೆ ಪ್ರಜಾಪ್ರಭುತ್ವ ಸರಕಾರವನ್ನು ಕೊಡಲು ಹಣವಿಲ್ಲ ಕೊಟ್ಟರೂ ಅದರಿಂದ ಜನರಿಗೆ ಸುಖವಿಲ್ಲ. ಪ್ರಜಾಪ್ರಭುತ್ವ ಸರಕಾರ ನಡಿಸಲು ಹಣ ಬಂದರೂ ಜನಗಳಿಗೆ ಪ್ರಯೋಜನವಾಗುವ ಇಲಾಖೆಗಳಿಗೆ ಹಣ ದೊರಕುವುದೇ ಇಲ್ಲ—ಎಂತ ಹೇಳುವ ಒಂದು ಗುಂಪು. ಮೈಸೂರಿಗೆ ಸೇರಬೇಕೆಂತ ಇನ್ನೊಂದು ಮತ. ಮದ್ರಾಸಿಗೆ ಸೇರಬೇಕೆಂತ ಮೂರನೇದು. ಕೊಡಗಿಗೆ ಪ್ರಜಾಪ್ರಭುತ್ವ ಸರಕಾರ ಸಿಕ್ಕದಿದ್ದರೆ ಮದ್ರಾಸಿಗೆ ಸೇರಬೇಕೆಂಬ ಚಳವಳವು 1917 ರಲ್ಲಿ ಸ್ವರೂಪಗಳೇ ಮೈಸೂರಿಗೆ ಸೇರಬೇಕೆಂತಲೂ ಒಂದು ಅಭಿಪ್ರಾಯವಿತ್ತು. ಆದರೆ ಆಗಿನ ವಿದ್ಯಮಾನಗಳಲ್ಲಿ ಅದು ಸಾಧ್ಯವೆಂತ ಯಾರೂ ಯೋಚಿಸಿರಲಿಲ್ಲ. ಕೊಡಗು ಪ್ರತ್ಯೇಕವಾಗಿಯೇ ಇರಬೇಕೆನ್ನುವವರಲ್ಲಿ ಕೆಲವರು ಮೈಸೂರಿಗಾದರೆ ಸೇರಬಹುದೆಂತ ಯೋಚಿಸುತ್ತಿದ್ದಾರೆ. ಮದ್ರಾಸಿಗೇನೇ ಸೇರಬೇಕೆಂತ ಹೇಳುತ್ತಿದ್ದವರ ಪೈಕಿ ಕೆಲವರು ಮೈಸೂರಿಗಾಗಬಹುದು ಎನ್ನುತ್ತಾರೆ. ಇವರಲ್ಲಿ ಕೆಲವರು ಇನ್ನೂ ತನಿಖೆಮಾಡಬೇಕೆನ್ನುತ್ತಾರೆ. ನಾನು ಮೈಸೂರಿಗೆ ಸೇರಿಕೊಳ್ಳುವುದು ಉತ್ತಮವೆಂತ ಹೇಳುವವನಾಗಿದ್ದೇನೆ. ಪ್ರತ್ಯೇಕವಾಗಿರುವವಳ್ಳ ಕಾಲ ಪ್ರಜಾಪ್ರಭುತ್ವ ಸರಕಾರ ದೊರಕುವುದಿಲ್ಲ. ಸಿಕ್ಕಿದರೂ ರೈತರಿಗೆ ಪ್ರಯೋಜನವಾಗುವ ಇಲಾಖೆಗಳಿಗೆ ಹಣ ದೊರಕುವುದಿಲ್ಲ. ಮದ್ರಾಸಿಗೆ ಸೇರಿದರೆ ಪ್ರಜಾಪ್ರಭುತ್ವ ಸರಕಾರ ದೊರಕುತ್ತದಾದರೂ ಇದಕ್ಕೆ ಒಪ್ಪದ ಬಲವಾದ ಪಂಗಡ ಒಂದು ಇದೆ. ಅದ್ದರಿಂದ ಇದನ್ನು ಸರಕಾರವು ಅಂಗೀಕರಿಸುವುದಿಲ್ಲ. ಅಲ್ಲದೆ ಮದ್ರಾಸಿಗೆ ಹೋದರೆ ಈ ದೇಶವು ಪ್ರತ್ಯೇಕವಾಗಿರುವ ಸಂಭವವಿಲ್ಲ. ಮದ್ರಾಸಿನ ದೊಡ್ಡ ಕೌನ್ಸಿಲಿನಲ್ಲಿ ಕೊಡಗಿನ ಒಬ್ಬರಿಬ್ಬರು ಮೆಂಬರುಗಳಿಂದ ಕೊಡಗಿಗೆ ಸಹಾಯವಾಗುವ ಅನುಕೂಲಗಳು ಸಿಕ್ಕುವುದು ಕಷ್ಟ. ಅಲ್ಲದೆ ಪ್ರಜಾಪ್ರಭುತ್ವ ಸರಕಾರದ ಕೆಲಸ ಪ್ರಾರಂಭಿಸಿದ ಬಹು ಕಾಲದ ನಂತರ ರೈತರಿಗೆ ಅಲ್ಪ ಸ್ವಲ್ಪ ಪ್ರಯೋಜನ ದೊರಕೀತಷ್ಟೆ. ಆದರೆ ಮೈಸೂರಿಗೆ ಸೇರಿಕೊಂಡರೆ ಪ್ರಜಾಜನರಿಗೆ ಸಹಾಯಗಳು ಕೂಡಲೇ ದೊರಕುತ್ತವೆ. ಸಾಲವೂ, ಶಾಲೆಗಳೂ ಸುಲಭವಾಗಿ ಆಗುತ್ತವೆ. ಪ್ರತ್ಯೇಕವಾಗಿರುವ ಕೊಡಗಿನಲ್ಲಿ ಮುಂದು ಹೋದ ಚಿಕ್ಕ ಚಿಕ್ಕ ನೀರಾವರಿಗಳನ್ನು ಐದು ವರ್ಷಗಳಿಂದ ಹೊಸದಾಗಿ ಕಟ್ಟದಿರುವಾಗ ಬೇರೆ ಯಾವ ನೀರಾವರಿ ಹೇಗೆ ಕಟ್ಟಿಯಾರು? ಮೈಸೂರಿಗೆ ಕೊಡಗಿನ ಮೇಲೆ ಇರುವ ಕೃತಜ್ಞತೆಯಿಂದ ಈ ಕಾವೇರಿ ನೀರಾವರಿಯು ತಡವಿಲ್ಲದೆ ಆದೀತು. ಮೈಸೂರು ಸರಕಾರವು ನಾಲೆಗಳಿಗಾಗಿ ಕೋಟ್ಯಾಂತರ ರೂಪಾಯಿ ಖರ್ಚು ಮಾಡುವುದು ಎಲ್ಲರಿಗೂ ತಿಳಿದಿದೆ. ಅದ್ದರಿಂದ ನಮ್ಮ ದೇಶದ ಒಂದು ಹೋಬಳಿಯ ಸುಮಾರು 10000 ಜನರಿಗೆ ಕ್ಷಾಮ ನಿವಾರಣೆ ಮಾಡುವ ಹಾರಂಗಿ ನಾಲೆಯನ್ನು ಶೀಘ್ರದಲ್ಲೇ ಮಾಡಿಕೊಡುತ್ತಾರೆಂತ ಭರವಸೆ ಇಡಬಹುದು. ಕೊಡಗಿಗೆ ರೈಲ್ ತರಲು ಮೈಸೂರು ಸರಕಾರವು ಸರ್ವೆ ಮಾಡಿತ್ತು. ಕೊಡಗು ಮೈಸೂರು ಸಂಸ್ಥಾನದ ಒಂದು ಜಿಲ್ಲೆಯಾದರೆ ಕೊಡಗಿಗೆ ರೈಲ್ ತರದೆ ಇರಲು ಸಾಧ್ಯವಿಲ್ಲ. ಕೊಡಗಿನವರ ಅಪೇಕ್ಷೆಯಂತೆ ಪ್ರತ್ಯೇಕ ಜಿಲ್ಲೆಯಾಗಿ ಇರಿಸಿಕೊಳ್ಳುವುದು ಕಷ್ಟವಿಲ್ಲ. ಕೊಡಗಿನವರಿಗೆ ಇರುವ ಹಕ್ಕುಗಳನ್ನು ಉಳಿಸಿಕೊಂಡು ಸೇರುವುದಾದರೆ ಮೈಸೂರಿಗೆ ಸೇರುವುದು, ಉಳಿಸಿಕೊಡದೆ ಇರಲು ಕಾರಣವಿಲ್ಲ. ಅವರ ದೇಶದಲ್ಲೂ ಇನಾಮ್ ಜಮೀನ್‌ಗಳು ಹುಂಬಾ ಇವೆ. ಮೈಸೂರಿನಲ್ಲಿ ಈಗ ಪ್ರಜಾಪ್ರಭುತ್ವ ಸರಕಾರವಿಲ್ಲದಿದ್ದರೂ ಪ್ರಜಾಜನರ ಅಭಿಪ್ರಾಯವನ್ನನುಸರಿಸಿ ಸರಕಾರ ನಡಿಸಲು ಏರ್ಪಾಡುಗಳಿವೆ. ಪ್ರಜಾಪ್ರತಿನಿಧಿ ಸಭೆಯನ್ನು ಕೇಳದೆ ಹೊಸ ಕಂದಾಯ ಹಾಕಕೂಡದು, ಹೊಸ ಕಾನೂನು ಮಾಡಕೂಡದು, ಆದಾಯವೆಚ್ಚದ ಮೇಲೆ ಸಹ ಅಭಿಪ್ರಾಯ ಕೊಡುವ ಹಕ್ಕಿದೆ. ಕೌನ್ಸಿಲಿನ ಓಟು ಇಲ್ಲದೆ ಯಾವ ಇಲಾಖೆಗೂ ಖರ್ಚು ಮಾಡಕೂಡದು. ಆ ಕೌನ್ಸಿಲಿನಲ್ಲಿ ಚುನಾಯಿತ ಮೆಂಬರುಗಳ ಬಹುಮತವಿದೆ. ಕೌನ್ಸಿಲಿನ ಚುನಾವಣೆಗೆ ಓಟು ಕೊಡುವವರು 50 ರೂ. ಕಂದಾಯ ಕೊಡುವವರು, ಪ್ರತಿನಿಧಿ ಸಭೆಗೆ 25 ರೂ. ಕಂದಾಯ ಕೊಡುವವರು, ಹೀಗೆ ಕೆಲವು ಕೊರತೆಗಳಿವೆ. ಆದರೂ ಪ್ರಜಾಪ್ರಭುತ್ವ ಸರಕಾರವು ಬೇಕಾದದ್ದು ಯಾಕೆ? ಪ್ರಜಾಜನರಿಗೆ ಒಂದು ಕಾಳು ಬೆಳೆಯುವಲ್ಲಿ ಎರಡು ಕಾಳು ಬೆಳೆಯುವ ಅನುಕೂಲವಾಗಬೇಕು, ಆ ತರದ ಎಲ್ಲಾ ಅನುಕೂಲಗಳನ್ನು ಮೈಸೂರು ಸರಕಾರವು ಈಗಲೇ ಕೊಡುತ್ತದೆ. ಕೃಷಿಗೆ ತುಂಬಾ ಸಹಾಯ ಮಾಡುತ್ತಲಿದೆ. ನಾವು ಸೇರಿ ಮೈಸೂರಿನ ಪ್ರಜೆಗಳಿಗೆ ಹೆಚ್ಚು ಹಕ್ಕು ಸಿಕ್ಕುವಂತೆ ಮಾಡಿಕೊಳ್ಳಬಹುದು. ಮದ್ರಾಸಿಗೆ ಸೇರಿದರೆ ಮದ್ರಾಸಿನ ಬುದ್ಧಿ ಸೂಕ್ಷ್ಮತೆಯ ಜನರೊಂದಿಗೆ ಕೊಡಗಿನವರು ಮುಂದೆ ಬರುವುದು ಕಷ್ಟ. ಮೈಸೂರಿನಲ್ಲಿ ನಮ್ಮವರು ಈಗಾಗಲೇ ಹೆಸರು ಪಡೆದಿರುವವರು ಅನೇಕರಿದ್ದಾರೆ. ಎಲ್ಲಾ ರೀತಿಯಿಂದ ನೋಡಿದರೂ ಕೊಡಗು ಮೈಸೂರಿಗೆ ಸೇರುವುದು ಉತ್ತಮ.

ಮೆ. ಬಿದ್ದಂಡ ಯಂ. ಕಾರ್ಯಪ್ಪನವರು ಹೇಳಿದ್ದೇನೆಂದರೆ—ಕೊಡಗಿಗೆ ಪ್ರಜಾಪ್ರಭುತ್ವ ಸರ್ಕಾರ ಬೇಗನೇ ಬರಬಹುದು. ರೈತರಿಗೆ ಅನುಕೂಲವಾಗುವುದೇ ಮುಖ್ಯ. ಹಣವಂತ, ವಿದ್ಯಾವಂತರಿಗೆ ಅನುಕೂಲವಾದರೆ ಸಾಲದು. ಈಗ ಇರುವ ಸರ್ಕಾರಿ ಇಲಾಖೆಗಳನ್ನೂ, ಅಧಿಕಾರಗಳನ್ನೂ ಇಟ್ಟುಕೊಂಡು ಆಡಳಿತ ನಡಿಸಲು ಹಣವಿಲ್ಲ. ಗ್ರಾಮ ಪಂಚಾಯತಿಗಳನ್ನು ಮಾಡಿಕೊಂಡು ಖರ್ಚು ಕಡಿಮೆ ಮಾಡಿಕೊಳ್ಳಬೇಕು. ರೇಷ್ಮೆ, ಹಣ್ಣು ಮುಂತಾದ್ದನ್ನು ಬೆಳೆಸಿ ಉತ್ಪತ್ತಿ ಹೆಚ್ಚಿಸಿಕೊಳ್ಳಬಹುದು. ಎಕ್ಸೈಸ್ ಇಲಾಖೆಯಿಂದ ಉತ್ಪತ್ತಿ ಕಡಿಮೆಯಾದರೂ ನೀರಾವರಿಯಿಂದ ಬೆಳೆ ಮಾಡಿಕೊಳ್ಳಬಹುದು. ದೊಡ್ಡ ದೇಶವಾದರೆ ಮೇಲ್ವಿಚಾರ ಸರಿಯಾಗಿರುವುದಿಲ್ಲ. ಸರ್ಕಾರದಿಂದ ಹಣ ಸಹಾಯ ಕೇಳಬೇಕು. ಸ್ಥಳೀಯ ಸರ್ಕಾರದವರು ಸೈಮನ್ ಕಮಿಷನಿಗೆ ಕೊಟ್ಟ ಅಭಿಪ್ರಾಯವನ್ನು ಮೆ. ಕೋದಂಡ ಮಾಚಯ್ಯನವರು ಅವರ ಲೇಖನದಲ್ಲಿ ಪ್ರಕಟಿಸಿದ್ದಾರೆ. ಕೊಡಗಿನಲ್ಲಿ ಕುಟುಂಬಗಳೊಳಗೆ ಇರುವ ಹುಟ್ಟಿಕಟ್ಟಿನಿಂದ ಸರ್ವರಿಗೆ ಒಪ್ಪಿಗೆಯಾಗುವ ಮಂತ್ರಿ ಇಲ್ಲಿ ದೊರೆಯಲಾರರೆಂತ ಸರ್ಕಾರವು ಹೇಳಿರುವುದು ಬಹಳ ದುಃಖಕರ.

ಮೆ. ಉಳುವಾರಂಡ ಅಪ್ಪಯ್ಯನವರು—ಪೂರ್ವಕಾಲಗಳಲ್ಲಿ ಇದ್ದ ಸ್ಥಿತಿಗೆ ಪುನಃ ಬರುವುದು ಅಸಾಧ್ಯ. ಈಗ ದಸ್ತು, ಶಾಂತಿ, ಟಪಾಲು ವಗೈರೆ ಅನುಕೂಲಗಳಿರಲಿಲ್ಲ. ಅಧಿಕಾರಿಗಳ ಸಂಬಳ ಮುಂಚಿನಷ್ಟು ಕಡಿಮೆ ಮಾಡಲು ಸಾಧ್ಯವಿಲ್ಲ. ಬ್ರಿಟಿಷ್ ಜನಾಂಗವು ತಮ್ಮ ದೇಶವನ್ನು ಬಿಟ್ಟು ಹೋಗಬೇಕಾದವರಾದದ್ದು. ಸೇಂದಿ ಮುಂಗಳಿಂದ ಬೆಲ್ಲ ಮಾಡಲು ಹಣ ಎಷ್ಟು ಬೇಕು. ಮದ್ರಾಸಿಗೆ ಸೇರಿದರೆ ಅನುಕೂಲವೇ, ಅದೂ ಬ್ರಿಟಿಷ್ ರಾಜ್ಯವೇ. ಮೈಸೂರಿಗೂ ನಮಗೂ ತುಂಬಾ ಸಂಬಂಧವಿದೆ. ಮದ್ರಾಸ್ ಒಳ್ಳೇದೋ ಮೈಸೂರು ಒಳ್ಳೇದೋ ಎಂಬುದನ್ನು ನಿರ್ಣಯಿಸಲು ಒಂದು ಕಮಿಟಿ ಆಗಬೇಕು.

ಮೆ. ಒಲ್ಲೀರಂಡ ಬೆಳ್ಯಪ್ಪನವರು—ಈ ದೇಶದಲ್ಲಿ ಒಬ್ಬನಿಗೇ ಅನೇಕ ಅಧಿಕಾರಗಳಿವೆ. ಅದನ್ನು ಬದಲಾಯಿಸಿದಾಗ್ಯೂ ಎತ್ತ ಕೇಳಿದರೆ ಹಣವಿಲ್ಲವೆನ್ನುತ್ತಾರೆ. ಆದ್ದರಿಂದ ಪ್ರಜಾಪ್ರಭುತ್ವ ಸರಕಾರಕ್ಕೆ ಹಣವಿಲ್ಲೆಂದು ಬೇರೆ ಪ್ರಾಂತ್ಯಗಳಿಗೆ ಕೊಟ್ಟದ್ದನ್ನು ನೋಡಿ ಆ ಮೇಲೆ ಯೋಚಿಸುವ ಎನ್ನುತ್ತಾರೆ ಆಗ ಕೇಳುವವರಿಲ್ಲ. ಈ ಸಮಯವನ್ನು ಬಿಡಬಾರದು. ಬೇರೆ ಇರಲು ಸಾಧ್ಯವಿಲ್ಲ.

ಮೆ. ಪಟ್ರಪಂಡ ಬೆಳ್ಯಪ್ಪನವರು—ಯುವಕರು ಮುಂದರಿಸಲು ಇಚ್ಛೆ ಇಲ್ಲದವರಾಗಿದ್ದಾರೆ. ಈಗ ಬ್ರಿಟಿಷ್ ಆಧಿಪತ್ಯ ಕೊಡಗಿನಲ್ಲಿ 100 ವರ್ಷಗಳಿಂದ ನಡೆಯಿತು. ಹಣ್ಣು ಹಂಪಲುಗಳು ಬೆಳೆದದ್ದು ಕಾಣೆ. ಸೇಂದಿಯಿಂದ ಬೆಲ್ಲವಾದದ್ದು ಕಾಣೆ. ಗಂಧದ ಮರ ಬೆಳಸಲು ರೈತರಿಗೆ ಉತ್ತೇಜನ ದೊರಕಿಲ್ಲ. ಗವರ್ನಮೆಂಟಿನವರು ಸೈಮನ್ ಕಮಿಷನಿಗೆ ಕೊಟ್ಟ ಅಭಿಪ್ರಾಯವೇ ಸರ್ಕಾರದ ತೀರ್ಮಾನ. ರೈತರ ಆರ್ಥಿಕ ಸ್ಥಿತಿಯು ಅಭಿವೃದ್ಧಿಯಾಗಬೇಕು. ಇದು ಸಾಧ್ಯವಾಗಬೇಕಾದರೆ ಮದ್ರಾಸಿಗಿಂತ ಮೈಸೂರೇ ಉತ್ತಮ.

ನಾಲ್ಕುನಾಡು ಮೆ. ಪಾಂಡಂಡ ಚಂಗಪ್ಪನವರು—ಪ್ರಜಾಪ್ರಭುತ್ವ ಸರ್ಕಾರ ಪಡೆದು ಪ್ರತ್ಯೇಕವಿರಲು ಸಿದ್ಧವಿದೆ. ಕೊಡಗಿಗಿಂತ ಚಿಕ್ಕ ದೇಶಗಳಲ್ಲಿ ಆಡಳಿತ ಸರಿಯಾಗಿ ನಡೆಯುತ್ತಿದೆ, ಕೃಷಿಯೇ ಸ್ವರಾಜ್ಯ. ಇದ್ದದ್ದರಲ್ಲಿ ತೃಪ್ತರಾಗಿರಬೇಕು. ಪ್ರಯತ್ನಿಸಿದರೆ ಪ್ರಜಾಪ್ರಭುತ್ವ ಸರ್ಕಾರ ದೊರಕೀತು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್. ಕೊ ಅಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲು)

		ರೂ.
ಶೇರ್ ಬಂಡವಾಳ	—	50,000— 0—0
ವಸೂಲಾದ ಶೇರ್ ಮೊಬಲಗು	—	27,350— 0—0
ಜಮೆಬಂದ ಠೇವಣಾತಿ	—	22,5380—10—7
ವಸೂಲಾದ ಕ್ಷೇಮನಿಧಿ	—	37,914—12—0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5–0–0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ತಕರ್ಮಂಡಾಪತಿ ಕೊಳ ಪರೇಟಿವ್ ಬರಸ್ತಾರವರು ಕೆಲ್ಸ ಅಜಮಾಯಿಸಿ ಮಾಡುತ್ತಾರೆ.

ಪ್ರೆಸಿಡೆಂಟರು,	ಟ್ರೆಜರರ್
ಪಟ್ಟಮಾಡ ದೇವಯ್ಯನವರು,	ಮಂಡೆಪಂಡ ಬೆಳ್ಯಪ್ಪನವರು.
ರಾವ್ ಬಹದ್ದೂರ್.	

ಸೆಕ್ರೆಟರಿ

ಸಿ. ಯಸ್. ವೆಂಕಟ್ಯಯ್ಯನವರು, ಬಿ.ಎ, ಬಿ.ಎಲ್

ತಾರೀಖು 1–7–1932.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿದೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.]

ಏಜಂಟರುಗಳು.

ಕೊಡಗಿನ ಎಲ್ಲಾ ಭಾಗಗಳಿಗೆ—ಮೆ. ಮಂಡಂಡ ಯ. ಪದ್ದಪ್ಪನವ.

ಉತ್ತರ ಕೊಡಗಿಗೆ ಮೆ. ಚಾಂರ ಪೊನ್ನಯ್ಯನವರು,

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು, (ಖಾದಿಭಂಡಾರ.)

ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,

ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಮ್ಮಯ್ಯನವರ.,

ಮತ್ತು, ಅರಮೇರಿಯಾಡ ಪಿ ಕಾರ್ಯಪ್ಪನವರು,

ಮಡಿಕೇರಿ & ತಿತಿಮತ್ತಿ—ಮೆ. ಜೆ. ಪೂಣಚ್ಚಯ್ಯನವರು,

ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಪೊನ್ನಯ್ಯನವರು,

ಸೂಚನೆ.—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿ ಹೊತ್ತು ಮೊಬಲಗಿನಲ್ಲಿಯೂ ಇರಬೇಕಾದ ಅಮಿತ ಜವಾ... ಸರಸ್ವರ ಸಹಾಯಕ ಸಂಘದ ಮತ್ತು ದವಸ ಭಂಡಾ... ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹ... ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ... ಪ್ರಕಾರ ನಡೆಸಲು ಅತ್ಯವಶ್ಯವಾಗಿರುವ, ರೂಲ್ಸ್ ಗಳು... ನಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ...ಮ ಫಾರಮುಗಳೂ, ಜಮ್ಮ ಮಂಜೂರಾತಿ ಫಾರಮು... ಕಟುಂಬಸ್ಥರ ಒಪ್ಪಿಗೆ ಫಾರಮುಗಳೂ, ದಾವಿಯ... ಫಾರಮುಗಳೂ, ಸ್ಟಾಕ್ ಶೇರ್ ಸರ್ಟಿಫಿಕೇಟ್ ಫಾರ...ಗಳೂ, ಲೆಡ್ಜರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ... ಮೆಂಬರ್ಸ ರಿಜಿಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತ... ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ...ಸ್ತು ಬರಲಿಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ...ಲಕ ಕಳುಹಿಸಲಾಗುವುದು.

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ.　　ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.

ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ.　　ಪಾಲಿಸಿದಾರರಿಗೆ ಸಾಲ—8013 ಜನರಿಗೆ 37 ಲಕ್ಷ ರೂ.

ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,78,322 ಜನರಿಗೆ 38ಕೋಟಿ ರೂ.

ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ರಕ್ಕಿಂತ ವಿವರದ ಕಮ್ಮಿ ಖರ್ಚಿನಲ್ಲಿಯೇ ನಡೆಸಲ್ಪಟ್ಟಿದ್ದಾಗಿದೆ.

ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡೆಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಬೆಂಬಲ ಪ್ರೋತ್ಸಾಹವನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್ ಬೆಂಗಳೂರು ಅಥವಾ ಇನ್ಸ್‌ಪೆಕ್ಟರೇಟ್ ಆಫೀಸು. ಮಡಿಕೇರಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೊಲಂಬೊ	ಮೈಮಿನ್‌ಸಿಂಗ್	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೋ	ಪಾಟ್ನಾ	ಸುಕ್ಕೂರು
ಅಲ್ಲಾಹಾಬಾದು	ಡಿಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಡಾರ್ಜಿಲಿಂಗ್	ಮಂಡಲೆ	ರಾಯಪುರ	ತಿರುವೆಂದ್ರಮ್
ಭೋಪಾಲ್	ಕರಾಚಿ	ಮಡಿಕೇರಿ	ರಾಂಚಿ	ವಿಶಾಖಪಟ್ಣ [52—34

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,

52–4　　**ಗಿರಿಗಾಂವ, ಮುಂಬಯಿ.**

ಕಾರ್ಡು ಬರೆದರೆ ಈಗಿನ
ಕ್ಯಾಟಲಾಗು ಪುಕ್ಕಟೆಯಾಗಿ
ಕಳುಹಿಸಲ್ಪಡುವುದು.



ಕೋವಿಗಳು, ಕತ್ತಿಗಳು, ಬಟೇಗಳು, ಕೋಟೆಗಳು, ಕೈತ್ತುಗಳು, ಮದ್ದು ಮತ್ತು ಬೇಟೆಯ ಎಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS LTD.,

Largest Importers of Firearms and Ammunition

Cheapest priced firm in India,

26–7　　**210 Abdul Rehiman Street, BOMBAY.**

Printed & published by P. I. Belliappa at "Kodagu" Press, Mercara for "Kodagu" Ltd

Reg. No. M. 1550.
if not delivered please return to,
"KODAGU" OFFICE MERCARA.

ಕೊಡಗು.

ಸರ್ವೇಷಾಂ ಭೂತದಯಯಾ ವಿದ್ಯಾ ಶೀಲ ಪೌರುಷ್ಯತಾ / ಸ್ವಾತಂತ್ರ್ಯೇಣ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೨	ಮಡಿಕೇರಿ, ಸನ್ ೧೯೩೨ನೇ ಇಸವಿ ಅಕ್ಟೋಬರ್ ತಾರೀಕು ೨೮ ನೇ ಶುಕ್ರವಾರ.	ಸಂಚಿಕೆ ೨೨

SARI-PIN.

BRACELETS.

NECKCHAINS.

EAR-RINGS.
(Thodus)
Cut-rubys Rs. 25 to 50
With diamond in centre Rs. 80 to 120

Gold Rs. 10
Set rubys forming any letter Rs. 12

NOSE-RINGS.
Diamond in small size of best quality Rs. 35 & upwards according to size.

MARRIAGE PRESENTATIONS.

Attractive and inexpensive articles ready in stock. Prompt execution. Details on enquiry free with catalogue. Numerous customers in Coorg thoroughly satisfied with reliable service. Testimonials pouring in.
Silver Guindys, Photo Lockets, Dimond nose-screws, cut-ruby ear-rings, etc., etc., etc., in all prices. Very attractive. Prices most moderate.

Estimates free on enquiry.

Designs free on enquiry.

Telegrams: 'PRECIOUS.'

Telephone: 3145.

V. Subramaniaier Jeweller,

CATALOGUE ON ENQUIRY.

52—49

Post Box 423, Triplicane, P. O., MADRAS.



26—18

ಜನರಲ್ ಅಷ್ಯೂರೆನ್ಸ್ ಸೊಸೈಟಿ.

ಅ ಜ ಮೀ ರ್.

ನಮ್ಮ ಆಯುಷ್ಯಾಂತದ ಪಟ್ಟಿಯೇ ನಮ್ಮ ಅಭಿವೃದ್ಧಿಯನ್ನು ವ್ಯಕ್ತಗೊಳಿಸುತ್ತದೆ.

ವರ್ಷ	ಮೇಲ್ಪಟ್ಟ ವ್ಯಾಪಾರದಾಯ	ಮೇಲ್ಪಟ್ಟ ಮೂಲಧನ	ಖರ್ಚಿನ ವರಮಾನದ ಶೇಕಡ
1911	46,248	49,442	82.9
1921	2,92,627	6,53,350	43.2
1931	12,50,000	40,00 000	28.2

ಬೋನಸ್ಸು.

ಹುಕುಂ ನಫೆ ದೊರಕುವ ಜೀವಾವಧಿ ಪಾಲಿಸಿಗಳ ಮೇಲೆ ವರ್ಷ ಒಂದಕ್ಕೆ ಶೇಕಡ 22½

ಚೆನ್ನಾಗಿ ಕೆಲಸಮಾಡಿ ಅಭಿವೃದ್ಧಿ ಸ್ಥಿತಿಯಲ್ಲಿರುವ ಈ ಸೊಸೈಟಿಯಲ್ಲಿ ವಿಮೆ ಮಾಡಿ ಕಡಿಮೆ ಪ್ರೀಮಿಯಂ ಪಾವತಿ ಮಾಡುವ ಸೌಲಭ್ಯ ಹೊಂದಿ ಅಥವಾ ಈ ಕಂಪೆನಿಯ ಪರವಾಗಿ ಕೆಲಸಮಾಡಿ ಉತ್ತಮ ಕಮಿಶನ್ ದಿಂದ ಪ್ರಯೋಜನ ಹೊಂದಿ.

ಹೆಚ್ಚು ವಿಚಾರಗಳಿಗೆ ಈ ವಿಳಾಸಕ್ಕೆ ಬರೆಯಿರಿ:—

ಎ. ರಾಮಚಂದ್ರರಾವ್,
ಸುಪರಿಂಟೆಂಡೆಂಟ್,
ಮಿಂಟೋ ಆಫೀಸ್ ಲೇ,
ಬೆಂಗಳೂರು.

52—27

ಎಂಪಯರ್ ಆಫ್ ಇಂಡಿಯಾ ಲೈಫ್ ಎಷ್ಯೂರೆನ್ಸ್ ಕಂಪೆನಿ ಲಿಮಿಟೆಡ್.

(ಸ್ಥಾಪನೆಯಾದದ್ದು 1897.)

1931ನೇ ಇಸವಿ ಮಾರ್ಚ 1ನೇ ತಾರೀಕಿನೊಳಗೆ ಹುಕ್ಕಾಗುವ ಪೋಲಿಸಿಗಳ ಮೇಲೆ ಇಂಟರಿಮ್ ಬೋನಸುಗಳು ವರ್ಷಕ್ಕೆ 1000ಕ್ಕೆ ರೂ. 16ರಂತೆ ಹೋಲ್ ಲೈಫ್ ಎಷ್ಯೂರೆನ್ಸಿನ ಮೇಲೆಯೂ
ಮತ್ತು
1000ಕ್ಕೆ ರೂ. 14ರಂತೆ ಎಂಡೋಮೆಂಟ್ ಎಷ್ಯೂರೆನ್ಸಿನ ಮೇಲೆಯೂ ಏರಿಸಲ್ಪಟ್ಟಿವೆ.

ಹೆಡ್ ಆಫೀಸು:—
ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್,
ಬೊಂಬಾಯಿ.

ಬ್ರಾಂಚ್ ಆಫೀಸು:—
152—3 ಕಮರ್ಷಲ್ ಸ್ಟ್ರೀಟ್,
ಬೆಂಗಳೂರು.

52—4

ಕೊಡಗಿನಲ್ಲಿ ಕಾಫಿತೋಟದ ಕಾರ್ಯ.

1878ರಲ್ಲಿ ಪ್ರಕಟವಾದ ರೈಸ್ ಎಂಬವರ ಗಜೆಟೀಯರ್ ಎಂಬ ಪುಸ್ತಕದಲ್ಲಿ ಕೊಡಗರ ಕಾಫಿತೋಟದ ಸಂಬಂಧವಾಗಿ ಹೀಗೆ ಬರೆದಿದೆ.

'ಕೊಡಗು ದೇಶದಲ್ಲಿ ಕಾಫಿ ಪ್ಲಾಂಟರುಗಳಾಗಿ ನೆಲಸಿದ ಯೂರೋಪಿಯನರೊಂದಿಗೆ ಕೊಡಗರ ಸಂಪರ್ಕವಾದ್ದರಿಂದ ಕೊಡಗಿನವರಿಗೆ ಒಳ್ಳೇದರೊಂದಿಗೆ ಕೆಟ್ಟದ್ದೂ ಆಯಿತು. ಕೊಡಗಿಗೆ ಹೆಚ್ಚಿಗೆ ಹಣ ಬರಲಿಕ್ಕೆ ಅನುಕೂಲವಾದ್ದರಿಂದ ಯೂರೋಪಿಯನರ ನಾಗರೀಕತೆಯೊಂದಿಗೆ ಇರುವ ಕೇಡಕ ಸಹ ಕೊಡಗಿನಲ್ಲಿ ಹಬ್ಬಿ ಇತ್ತು. ಕೊಡಗು ನಿವಾಸಿಗಳು ಮಿತಿಮೀರಿ ಕುಡಿಯಲಾರಂಭಿಸಿದರು. ದೇಶೀಯ ಸಾರಾಯಿಗಳಿಂದ ತೃಪ್ತರಾಗದೆ ಪರದೇಶದಿಂದ ಬರುವ ಅತಿ ಕಠಿಣ ಸಾರಾಯಿಗಳನ್ನು ಧಾರಾಳವಾಗಿ ಉಪಯೋಗಿಸತೊಡಗಿದರು. ಈ ದುರ್ಗುಣವನ್ನು ರಾಜರ ಕಾಲದಲ್ಲಿ ತಡೆದಿದ್ದರು. ಅವರ ಈಗ ಸಾರಾಯಿ ಅಂಗಡಿಗಳನ್ನು ದೇಶದ ಎಲ್ಲಾ ಕಡೆಗಳಲ್ಲಿ ತುಂಬಾ ಹೆಚ್ಚಿಸಿ ಈ ದುರ್ಗುಣಕ್ಕೆ ಉತ್ತೇಜನ ಕೊಟ್ಟಿದ್ದಾರೆ. ಕೊಡಗರಲ್ಲಿ ಉತ್ತಮ ಸ್ಥಾನದಲ್ಲಿರುವವರಿಗೆ ಒಳ್ಳೇ ಬುದ್ಧಿ ಹುಟ್ಟಿ, ಈ ಹಾನಿಕರವಾದ ಕಸ್ಟಮನ್ನು ಮುಖ್ಯವಾಗಿ ಮನ್ನು ಹುಣ್ಣುಮೆಗಳಲ್ಲಿ ಹಾಳಾಗುವದನ್ನು ತಡೆದು ಬಿಡಿಸಲು ಒಗ್ಗಟ್ಟಿನಿಂದ ಪ್ರಯತ್ನಿಸಬೇಕಷ್ಟೆ.

ರೈಸ್ ಗಜೆಟೀಯರ್ ಪುಟ 236.

ಅಖಿಲ ಕೊಡಗು ಉಪಾಧ್ಯಾಯರ ಸಂಘದ ವಾರ್ಷಿಕ ಸಮ್ಮೇಳನದ ಪಂದ್ಯಾಟಗಳು ಮತ್ತು ವಸ್ತು ಪ್ರದರ್ಶನ.

ಅಖಿಲ ಕೊಡಗು ಉಪಾಧ್ಯಾಯರ ಸಂಘದ ವಾರ್ಷಿಕ ಸಮ್ಮೇಳನವು ಬರುವ ಡಿಸಂಬರ್ 3ನೇ ತಾರೀಖಿನಿಂದ 5ರ ವರೆಗೆ ಮ. ರಾ. ಶ್ರೀ. ಎ. ರಾಮರಾವ್ B. A. (Cantab) I. E. S ರವರ (ಕೊಡಗಿನಲ್ಲಿ ಮೊದಲು ಅಸಿಸ್ಟೆಂಟ್ ಇನ್‍ಸ್ಪೆಕ್ಟರ್ ರಾಗಿದ್ದವರು) ಅಧ್ಯಕ್ಷತೆಯಲ್ಲಿ ನಾಪೋಕ್ಲಿನಲ್ಲಿ ನಡೆಯುವುದು.

ಈ ಸಮಯದಲ್ಲಿ ಸಂಘದ ನೇತೃತ್ವದಲ್ಲಿ ಕೊಡಗಿನ ಶಾಲೆಗಳ ಬಾಲಕ ಬಾಲಕಿಯರಲ್ಲಿ ಮತ್ತು ದೇಶದ ಯುವಕರಲ್ಲಿ ಆಟ ಓಟಗಳ ಮೇಲೆ ಉತ್ಸಾಹವನ್ನು ಹೆಚ್ಚಿಸುವುದಕ್ಕೋಸ್ಕರ ಒಂದು ಪಂದ್ಯಾಟವು ಗತ ವರ್ಷದಂತೆ ನಡೆಸಲ್ಪಡುವದು. ಆ ಸ್ಪರ್ಧೆಯಲ್ಲಿ ಒಂದು ಮೈಲಿನ ಓಟ, ನೂರು ಗಜದ ಓಟ, ಎತ್ತರ ಹಾರುವುದು, ದೂರ ಹಾರುವುದು, ಕಟ್ಟಿ ಹಾರಿ ಓಡುವುದು, ಗೆಣೆಹಾರುವುದು ಮತ್ತು ಉತ್ತಿನ ಭಾರದ ಚಂಡು ಎಸೆಯುವುದು, ಇವೇ ಮೊದಲಾದ ವಿಷಯಗಳಿರುವವು. ಪ್ರತಿಯೊಂದು ಸ್ಪರ್ಧೆಗೂ ಮೊದಲನೇ ಇನಾಮಾಗಿ ಒಂದೊಂದು ಬೆಳ್ಳಿಯ ಬಟ್ಟಲು ಕೆಲವು ರೂಪಾಯಿಗಳೂ, ಎರಡನೇ ಇನಾಮಾಗಿ ಸ್ವಲ್ಪ ಹಣವೂ ಕೊಡಲಾಗುವವು. ಒಬ್ಬನೇ ಬಟ್ಟಲು ಒಪ್ಪಟ್ಟಿನ ಹಕ್ಕುಗಳೇನಾದರೆ ಅದನ್ನು ಮೂರು ವರ್ಷಗಳು ತಪ್ಪದೆ ಗೆಲ್ಲಬೇಕು. ಮೇಲಿನ ಸ್ಪರ್ಧೆಯಲ್ಲಿ ಭಾಗಿಗಳಾಗಲಿಚ್ಛಿಸುವವರು ಮಡಿಕೇರಿ, ಸೋಮವಾರಪೇಟೆ, ನಾಪೋಕ್ಲು, ವೀರರಾಜೇಂದ್ರಪೇಟೆ ಮತ್ತು ಪೊನ್ನಂಪೇಟೆಗಳ ಉಪಾಧ್ಯಾಯರ ಸಂಘಗಳ ಕಾರ್ಯದರ್ಶಿಗಳ ಮೂಲಕ ಸಂಘದ ಪಂದ್ಯಾಟಗಳ ಅಧ್ಯಕ್ಷರ್ ಮ ರಾ. ಶ್ರೀ. ಎಮ್. ಎ. ಚಂಗಪ್ಪನವರಿಗೆ ತಿಳಿಸಬೇಕಾಗಿ ಕೋರುತ್ತೇವೆ. ಮೇಲಿನ ಸ್ಪರ್ಧೆಯು ಡಿಸಂಬರ್ 4ನೇ ತಾರೀಖಿನ ಬೆಳಗ್ಗೆ ನಾಪೋಕ್ಲು ಶಾಲೆಯ ಬಳಿಯ ಮೈದಾನದಲ್ಲಿ ನಡೆಯುವುದು.

ಈ ಸ್ಪರ್ಧೆಯಲ್ಲಿ ಬಾಲಕ ಬಾಲಕಿಯರೂ, ಯುವಕರೂ, ವೃದ್ಧರೂ, ಭಾಗಿಗಳಾಗಬೇಕೆಂದು ಹಾರೈಸುತ್ತೇವೆ. ಪ್ರಪಂಚವೇ ಆಟ ಓಟಗಳಿಗೆ ಹೆಚ್ಚಿನ ಉತ್ತೇಜನವನ್ನು ಕೊಡುತ್ತಿರುವ ಕಾಲದಲ್ಲಿ ನಮ್ಮ ದೇಶದವರು ಈ ವಿಷಯದಲ್ಲಿ ಹಿಂದುಳಿಯಲಾರರೆಂದು ನಮಗೆ ತುಂಬಾ ಭರವಸೆಯಿದೆ. ಇದರಲ್ಲಿ ಜಯಶೀಲರಾಗಿ ಇನ್ನೂ ಹೆಚ್ಚಿನ ಸ್ಪರ್ಧೆಗಳಲ್ಲಿ ಭಾಗವಹಿಸಿ ಕೀರ್ತಿಯನ್ನು ತರಲೆಂದು ನಮ್ಮ ದೀನ ಕೋರಿಕೆ.

ಶಾಲೆಗಳೂ ಇಂಟರ್ ಸ್ಕೂಲ್ ಸ್ಪರ್ಧೆಯಲ್ಲಿ ಭಾಗವಹಿಸಿ ಗೆಲಬೇಕೆಂದು ಹಾರೈಸಲಾಗಿದೆ. ಇಂಥಾ ಸ್ಪರ್ಧೆಗಳಲ್ಲಿ ಭಾಗವಹಿಸುವುದರಿಂದ ಬಾಲಕ ಬಾಲಕಿಯರಿಗೆ ತಮ್ಮ ಯೋಗ್ಯತೆಯನ್ನು ತಿಳಿದುಕೊಳ್ಳಲು ಸಾಧ್ಯವಾಗುವುದಲ್ಲದೆ, ಬೇರೆ ಬೇರೆ ಶಾಲೆಗಳ ವಿದ್ಯಾರ್ಥಿಗಳಲ್ಲಿ ಭ್ರಾತೃಭಾವನೆಯೂ, ಪ್ರೀತಿ, ಉತ್ಸಾಹವಾಗಿ ಅವರ ಮುಂದಿನ ಜೀವನಕ್ಕೆ ಸಹಾಯವಾಗುವುದೆಂದು ಆಶಿಸಬೇಕಾಗಿದೆ. ಈ ಸ್ಪರ್ಧೆಯಲ್ಲಿ ಜಯವನ್ನು ಹೊಂದಿದ ಬಾಲಕರಿಗೆ ಬಹು ಮಾನಗಳನ್ನು ಕೊಡುವುದಕ್ಕೆ 'ಅದರಲ್ಲಿ ಭಾಗವಹಿಸುವ ಪ್ರತಿ ಯೊಬ್ಬ ಸ್ಪರ್ಧಿಯೂ ಹೈಸ್ಕೂಲು ರೂಪಾಯಿಗಳನ್ನೂ, ಮಾಧ್ಯಮಿಕ ಶಾಲೆಗಳು ಆರು ರೂಪಾಯಿಗಳನ್ನೂ, ಪ್ರಾಥಮಿಕ ಶಾಲೆಗಳು ಮೂರು ರೂಪಾಯಿಗಳನ್ನು ಪ್ರವೇಶಧನ (Entrace fees) ವಾಗಿ ಕೊಡತಕ್ಕದ್ದಾಗಿ ನಿರ್ಧರಿಸಲಾಗಿದೆ. ಹೈಸ್ಕೂಲುಗಳೊಳಗಿನ ಪಂದ್ಯಾಟಗಳಲ್ಲಿ ಹದಿನಾರು ವಯಸ್ಸಿನ ಬಾಲಕರೂ, ಮಾಧ್ಯಮಿಕ ಶಾಲೆಗಳೊಳಗಿನ ಪಂದ್ಯಾಟಗಳಲ್ಲಿ ಹದಿನಾಲ್ಕರಿಂದ ಹದಿನಾರು ವರ್ಷದೊಳಗಿನ ಬಾಲಕರೂ, ಪ್ರಾಥಮಿಕ ಶಾಲೆಗಳೊಳಗಿನ ಪಂದ್ಯಾಟಗಳಲ್ಲಿ ಹದಿಮೂರು ವರ್ಷಗಳ ವಿದ್ಯಾರ್ಥಿಗಳು ಪ್ರವೇಶಿಸಬಹುದು ಸೂಚಿಸಬೇಕಾಗಿದೆ. ಪ್ರತಿ ಶಾಲೆಯ ಮುಖ್ಯೋಪಾಧ್ಯಾಯರು ತಮ್ಮ ಶಾಲೆಯಿಂದ ಕಳುಹಿಸುವ ಬಾಲಕರ ಹೆಸರುಗಳನ್ನು ಮೇಲೆ ನಮೂದಿಸಿದ ಮ. ರಾ. ಶ್ರೀ. ಯಮ್. ಎ. ಚಂಗಪ್ಪನವರಿಗೆ ನವಂಬರ್ ತಿಂಗಳ ಹದಿನೈದನೆಯ ತಾರೀಖಿಗೆ ಕಳುಹಿಸಬೇಕೆಂದು ಅಪೇಕ್ಷಿಸುತ್ತೇವೆ.

ನಮ್ಮ ಗುರುಗಳ ಓಟ, ಎತ್ತರ ಹಾರುವುದು, ದೂರ ಹಾರುವುದು ಇವು ಸಾಮಾನ್ಯವಾಗಿ ಎಲ್ಲಾ ಶಾಲೆಯವರಿಗೂ, ಒಂದು ಮೈಲಿನ ಓಟವು ಹೈಸ್ಕೂಲಿನವರಿಗೂ, ಅರ್ಧ ಮೈಲಿನ ಓಟವು ಮಾಧ್ಯಮಿಕ ಶಾಲೆಯವರಿಗೂ, ಕಾಲು ಮೈಲಿನ ಓಟವು ಪ್ರಾಥಮಿಕ ಶಾಲೆಯವರಿಗೂ ಇರತಕ್ಕದ್ದಾಗಿದೆ. ಪ್ರಾಥಮಿಕ ಶಾಲೆಗಳಿಂದ ಒಂದೊಂದು ವಿಷಯಕ್ಕೆ ಇಬ್ಬಿಬ್ಬರು ಹುಡುಗರನ್ನು ಕಳುಹಿಸುವುದು.

ಈ ವಾರ್ಷಿಕ ಸಮ್ಮೇಳನದ ಸಮಯದಲ್ಲಿ ವಸ್ತುಪ್ರದರ್ಶನವೊಂದು ನಡೆಯುವುದು. ಇದರಲ್ಲಿ ಕೊಡಗಿನವರಿಂದ ತಯಾರಿಸಿದ ಕೊಳ್ಳುವಂತೆ ಪೈಯಿಂಟಿಂಗ್, ಕಸೂತಿ ಕೆಲಸ, ನೇಯಿಗೆ, ಕೈಯಲ್ಲಿ ಆಟಿಗೆಗಳನ್ನು ಹೊಲಿಯುವುದು, ಮರದ ಕೆಲಸ, ಬುಟ್ಟಿ ಹೆಣೆಯುವುದು, ನೇಗಿಲುಗಳನ್ನು ಮಾಡುವುದು, ಮೊದಲಾದ ವಿಷಯಗಳನ್ನು ಇಡಲಾಗಿದೆ. ಮಹನೀಯರೂ, ಮಹಿಳೆಯರೂ ಇದರಲ್ಲಿ ಶ್ರದ್ಧೆಯನ್ನು ವಹಿಸಿ ಪ್ರದರ್ಶನವು ಯಶಸ್ವಿಯಾಗುವಂತೆ ಮಾಡಬೇಕೆಂದು ಬಿನ್ನೈಸಬೇಕಾಗಿದೆ ಮತ್ತು ಪಂದ್ಯಾಟಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನೂ, ಪ್ರದರ್ಶನದ ವಸ್ತುಗಳಿಗೆ ಬಹುಮಾನಗಳನ್ನು ಕೊಡುವುದಕ್ಕೆ ದೇಶದ ಮಹನೀಯರೂ, ಮಹಿಳೆಯರೂ, ಧಾರಾಳವಾಗಿ ದ್ರವ್ಯಸಹಾಯವನ್ನು ಮಾಡಬೇಕಾಗಿ ಬಹಳ ನಮ್ರಭಾವದಿಂದ ಪ್ರಾರ್ಥಿಸುತ್ತೇವೆ. ಇಂಥಾ ಪಂದ್ಯಾಟಗಳೂ, ಪ್ರದರ್ಶನಗಳೂ ಮಕ್ಕಳಲ್ಲಿ ಉತ್ಸಾಹವನ್ನು, ಉನ್ನೋದಯವನ್ನೂ ಹೆಚ್ಚು ಉತ್ತೇಜನವನ್ನು ಪ್ರಕಟಿಸಬೇಕಾದರೂ, ಬಹುಮಾನಗಳು ಬಹು ಅಗತ್ಯವಾಗಿ ಬೇಕೆಂದು ನಾವು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಆದರೆ ಇವುಗಳಿಗೆ ಬೇಕಾಗುವ ಬಹುಮಾನಗಳನ್ನು ದೇಶದ ಹಿರಿ ಮಹನೀಯರ ಸಹಾಯವಿಲ್ಲದೆ ಒದಗಿಸುವುದು ಸಾಧ್ಯವಿಲ್ಲದ್ದರಿಂದ ನಾವು ದ್ರವ್ಯಸಹಾಯವನ್ನು ಕೋರುವುದಾಗಿದೆ. ಬಹುಮಾನಗಳಿಗೆ ಹಣದ ಬದಲಾಗಿ ವಸ್ತುಗಳನ್ನು ಕೊಡುವುದು 'ಇಷ್ಟಪಡುವವರು ವಸ್ತುಗಳನ್ನೇ ಕೊಡಬಹುದು. ಆ ವಸ್ತುಗಳನ್ನು ಅವರು ಇಷ್ಟಪಟ್ಟ ಬಹುಮಾನಕ್ಕೆ ಇಡುವೆವು. ಅದರಿಂದ ದೇಶದ ಮಹನೀಯರೂ, ಮಹಿಳೆಯರೂ ನಮ್ಮ ಕೋರಿಕೆಯನ್ನು ವ್ಯರ್ಥಮಾಡಲಾರರೆಂದು ಆಶಿಸುವೆವು. ಅವರು ಹಣವನ್ನಾಗಲೀ, ಇತರ ವಸ್ತುಗಳನ್ನಾಗಲೀ ತಮ್ಮ ಹತ್ತಿರದ ತಾಲೂಕುಗಳಲ್ಲಿರುವ ಉಪಾಧ್ಯಾಯರ ಸಂಘಗಳ ಕಾರ್ಯದರ್ಶಿಗಳಿಗಾಗಲೀ ಮುಖಾಂತರವಾಗಿ ಮ. ರಾ. ಶ್ರೀ. ಯಮ್. ಎ. ಚಂಗಪ್ಪ ಬಿ. ಎ. ಎಲ್. ಟಿ. ಯವರಿಗಾಗಲೀ ಕಳುಹಿಸಬೇಕಾಗಿದೆ. ಉಪಾಧ್ಯಾಯರೂ ತಮ್ಮ ತಮ್ಮ ಗ್ರಾಮಗಳಲ್ಲಿ ಹೆಚ್ಚು ಶ್ರದ್ಧೆಯನ್ನು ವಹಿಸಿ ಧನ ಸಂಗ್ರಹ ಮಾಡಬೇಕಾಗಿ ಕೇಳಿಕೊಳ್ಳುವೆವು. ಹೀಗೆ ಸಂಗ್ರಹಿಸಿದ ಹಣವನ್ನು ನವಂಬರ್ ತಿಂಗಳ ಹದಿನೈದರೊಳಗಾಗಿ ಉಪಾಧ್ಯಾಯರ ಸಂಘದ ಕಾರ್ಯದರ್ಶಿಗಳು ಮ. ರಾ. ಶ್ರೀ. ಯಮ್. ಎ. ಚಂಗಪ್ಪನವರಿಗೆ ಕಳುಹಿಸಬೇಕಾಗಿ ಅಪೇಕ್ಷಿಸುತ್ತೇವೆ.

ಟಿ. ಯಸ್. ಕೃಷ್ಣಯ್ಯ,
ಗೌರವ ಕಾರ್ಯದರ್ಶಿ,
ಅಖಿಲ ಕೊಡಗು ಉಪಾಧ್ಯಾಯರ ಸಂಘ.

ಸಂಪಾದಕೀಯ.

[ಪತ್ರಿಕಾದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಅಸ್ಪೃಶ್ಯರು.

ಪೂರ್ವಕಾಲದಲ್ಲಿ ಆರ್ಯರು ತಮ್ಮ ಕಾರ್ಯಗಳನ್ನು ನಿರಂತರವಾಗಿ ನಡೆಸಲೋಸುಗ, ತಮ್ಮ ವಂಶದವರನ್ನು ನಾಲ್ಕು ವರ್ಣಗಳನ್ನಾಗಿ ವಿಭಾಗಿಸಿದರು. ಇವರಲ್ಲಿ ಗುರುಕುಲವನ್ನಿಟ್ಟುಕೊಂಡು ತಮ್ಮ ಮಕ್ಕಳಿಗೆ ಶಿಕ್ಷಣಕೊಡುವ ಮತ್ತು ವೇದಶಾಸ್ತ್ರಾದಿಗಳಲ್ಲಿ ಪಂಡಿತರಾದ ವಿದ್ವಾಂಸರು ಬ್ರಾಹ್ಮಣರೆಂದು ಕರೆಯಲ್ಪಟ್ಟರು. ರಾಜ್ಯ ಆಳುವುದರಲ್ಲಿಯೂ, ಯುದ್ಧದಲ್ಲಿ ಧೀರರಾಗಿ, ರಾಜ್ಯಧರ್ಮದಲ್ಲಿ ನಿಪುಣರಾಗಿದ್ದವರು ಕ್ಷತ್ರಿಯರೆಂದೆನ್ನಿಸಿಕೊಂಡರು. ಪಶುಪಾಲನ, ಕೃಷಿ, ವ್ಯಾಪಾರ ಮೊದಲಾದ ಕೆಲಸ ಮಾಡುವವರಿಗೆ ವೈಶ್ಯರೆಂಬ ಹೆಸರಿಟ್ಟರು. ಯಾರಿಗೆ ಜ್ಞಾನಶಕ್ತಿಯು ಕಮ್ಮಿಯಾಗಿ, ಮೇಲಿನ ಮೂರು ವರ್ಣಗಳ ಸೇವಕನ್ಯಾ ಅರ್ಹರಾಗಿರಲಿಲ್ಲವೋ, ಅವರು ಶೂದ್ರರೆಂಬ ನಾಮಧೇಯದಿಂದ ಕರೆದರು.

ಆದರೆ, ಅನೇಕ ಶತಮಾನಗಳ ವರೆಗೆ, ಎಲ್ಲಾ ವರ್ಣಗಳವರ ಕುಟುಂಬಗಳಂತೆ ವರ್ತಿಸುತ್ತಾ, ಒಂದು ವರ್ಣದವರು ಇನ್ನೊಂದು ವರ್ಣದವರೊಂದಿಗೆ ಊಟ ಉಪಚಾರ ಮಾಡುತ್ತಾ, ವಿವಾಹ ಕಾರ್ಯಗಳನ್ನು ಸಹ ನಡೆಸುತ್ತಾ ಬಂದಿದ್ದರು. ಬ್ರಾಹ್ಮಣರು ಎಲ್ಲಾ ರೀತಿಯ ಹಕ್ಕುಗಳನ್ನು ಹೊಂದಿಕೊಂಡು ಪೋಷಿಸಿ, ಅವು ನಮಗೇ ಬರಬೇಕೆಂದು ಅಪೇಕ್ಷಿಸುತ್ತಿದ್ದರು. ಇವನು ಬ್ರಾಹ್ಮಣ ಪುತ್ರ, ಇವನು ಶೂದ್ರ ಪುತ್ರನೆಂಬ ಭೇದವಿಲ್ಲದೆ ಎಲ್ಲರಿಗೂ ವಿದ್ಯೆಗಳ ಸುತ್ತಿದ್ದರು. ಇತ್ತೀಚೆಗೆ ಕೆಲವು ವಿವೇಕರಾದ ಬ್ರಾಹ್ಮಣರಿಂದಲೂ, ಇತರ ಕೆಲವು ಅವಿವೇಕಿಗಳಿಂದಲೂ, ಈ ವರ್ಣಗಳಿಗೆ ಬೇರೆ ಅರ್ಥವು ಕಲ್ಪಿಸಲ್ಪಟ್ಟು, ನಮ್ಮ ಇಡೀ ಹಿಂದೂ ದೇಶದ ಆರ್ಯ ಬಾಂಧವರು ಸಮಾನವು ಜಾತಿಬದ್ಧ ಬೇಲಿಗಳಲ್ಲಿ ಬಂಧಿಸಲ್ಪಟ್ಟರು. (Cursed be the day when the classes were turned into castes by these cunning priests!) ಇವರು ವರ್ಣಗಳನ್ನು ಜಾತಿಗಳನ್ನಾಗಿ ಮಾಡಿದರು. ಶೂದ್ರರಲ್ಲಿ ಅಸ್ಪೃಶ್ಯರೆಂಬ ಇನ್ನೊಂದು ವರ್ಗವನ್ನು ಸೃಷ್ಟಿಸಿದರು.

ಇಂಥಹ ಕುಯುಕ್ತಿಗಳಾದ ವಿದ್ವಾಂಸರು, ತಮ್ಮ ಸ್ವಾರ್ಥಸಾಧನೆಯನ್ನು ನೆರವೇರಿಸಲು ಯಜುರ್ವೇದದಲ್ಲಿ ಬರೆದ ಶ್ಲೋಕಕ್ಕೆ ತಪ್ಪರ್ಥವನ್ನು ಕೊಟ್ಟು, ಇದನ್ನು ಪ್ರಕ್ಷೇಪಿಸಿದರು. ಯಜುರ್ವೇದದಲ್ಲಿ,

ಬ್ರಾಹ್ಮಣೋಸ್ಯ ಮುಖಮಾಸೀತ್ ಬಾಹೂ ರಾಜನ್ಯಃ ಕೃತಃ
ಊರೂ ತದಸ್ಯ ಯದ್ವೈಶ್ಯಃ ಪದ್ಭ್ಯಾಂ ಶೂದ್ರೋ ಅಜಾಯತ :

ಎಂದು ಹೇಳಿದೆ. ಇದರಿಂದ, ಈ ಲೋಕದಲ್ಲಿ ಜನಿಸಿದ ಒಬ್ಬ ಪುರುಷನ ಶರೀರದಲ್ಲಿ, ಆತನ ಮಾತನಾಡುವ ಬಾಯಿಯು ಎಷ್ಟು ಸಾರ್ಥಕತೆಯನ್ನು ಹೊಂದಿದೆಯೋ, ಹಾಗೆಯೇ ಈ ಲೋಕದ ಆರ್ಯಸಮಾಜದಲ್ಲಿ ಬ್ರಾಹ್ಮಣರು ಶೋಭಿಸುತ್ತಿರುವರೆಂದೂ, ಅವನ ಬಾಹುಗಳು ಎಷ್ಟು ಉಪಯೋಗವಾಗಿರುವವೋ ಹಾಗೆಯೇ ಕ್ಷತ್ರಿಯರು ಉಪಯೋಗಿಗಳಾಗಿರುವರೆಂದೂ, ಅವನ ತೊಡೆಗಳು ಎಷ್ಟು ಪ್ರಯೋಜನಕಾರಿಯಾಗಿದೆಯೋ ಹಾಗೆಯೇ ವೈಶ್ಯರು ಪ್ರಯೋಜನಕಾರಿಗಳೆಂದೂ, ಮತ್ತು ಅವನ ಪಾದಗಳು ಎಷ್ಟು ಸಹಾಯವನ್ನು ಮಾಡುತ್ತಿವೆಯೋ ಅಷ್ಟೇ ನಮ್ಮ ಸಮಾಜಕ್ಕೆ ಶೂದ್ರನು ಸಹಾಯಕಾರಿಗಳೆಂದೂ ಅರ್ಥವಾಗುತ್ತದೆ. ಎಂದರೆ, ಯಾರು ಜನರಿಗೆ ಉಪದೇಶವನ್ನು ಕೊಟ್ಟು, ಅವರ ಜ್ಞಾನಶಕ್ತಿಯನ್ನು ಹೆಚ್ಚಿಸುತ್ತಾನೋ, ಆತನೇ ಬ್ರಾಹ್ಮಣನೆಂದೂ, ಯಾರು ಬಾಹುಶಕ್ತಿಯಿಂದ ರಾಜ್ಯವ ಪಾಲಿಸಿ ಕಾಪಾಡುತ್ತಾನೋ ಆತನೇ ಕ್ಷತ್ರಿಯನೆಂದೂ, ಯಾರು ತೊಡೆಶಕ್ತಿಯಿಂದ ವ್ಯವಸಾಯ ಮೊದಲಾದ ಕೆಲಸವನ್ನು ಮಾಡುತ್ತಾನೋ, ಆತನೇ ವೈಶ್ಯನೆಂದೂ, ಯಾರು ವಿವೇಕ ಶಕ್ತಿ ಕಮ್ಮಿಯಾಗಿ, ಹೆಚ್ಚು ಜ್ಞಾನ ಅವಶ್ಯವಿಲ್ಲದಿರುವ ಕೆಲಸಗಳನ್ನು ಮಾಡುತ್ತಾನೋ, ಅತನೇ ಶೂದ್ರನೆಂದೂ, (An ignorant and unintelligent person) ಸ್ಪಷ್ಟವಾಗಿದೆ ಯೆಂತ ಸತ್ಯಾರ್ಥ ದಯಾನಂದರವರು ಸಹ ಹೇಳಿರುವರು.

ಇದರ ಬದಲು ಮೇಲೆ ಹೇಳಿದ ಕಪಟಿಗಳು ಈ ಶ್ಲೋಕಕ್ಕೆ ಸ್ವಉಪಯೋಗದ ಅರ್ಥವನ್ನು ಕಲ್ಪಿಸಿ, ಬ್ರಾಹ್ಮಣನು ದೇವರ ಬಾಯಿಯಿಂದಲೂ, ಕ್ಷತ್ರಿಯನು ದೇವರ ಬಾಹುಗಳಿಂದಲೂ, ವೈಶ್ಯನು ದೇವರ ತೊಡೆಗಳಿಂದಲೂ ಮತ್ತು ಶೂದ್ರನು ದೇವರ ಪಾದಗಳಿಂದಲೂ ಜನಿಸಿದನು, ಎಂಬದಾಗಿ ಕರ್ಮವನ್ನು ಈ ವರ್ಣಗಳಲ್ಲಿ ಬಿನ್ನಭೇದವನ್ನು ಹೂಡಿದ್ದಾರೆ. ದೇವನು ನಿರಂಜನನು, ನಿರ್ಗುಣನು ಮತ್ತು ನಿರಾಕಾರನು. ಅಂದ ಮೇಲೆ, ದೇವರಿಗೆ ಬಾಯಿ, ಬಾಹು, ತೊಡೆ, ಮತ್ತು ಪಾದಗಳು ಎಲ್ಲಿಂದ ಬಂದವು! ಹಾಗೆ ಒಂದು ವೇಳೆ ಪೂರ್ವದಲ್ಲಿ ಕೆಲವರು ಜನಿಸಿದ್ದರೂ ಕೂಡ, ಈಗಿನ ಕಾಲದಲ್ಲಿ ಜನಿಸಿದ ನಮಗೆ, ನಾನು ಬ್ರಾಹ್ಮಣನ, ನಾನು ಕ್ಷತ್ರಿಯನು, ನಾನು ವೈಶ್ಯನು ಎಂಬ ಹೆಮ್ಮೆ ಏಕೆ!! ಇದರಿಂದ ನಿಜವಾದ ಚರಿತ್ರೆ ನಮ್ಮ ಜಾತಿ ಭೇದಗಳ ನಿಜಾಂಶವನ್ನು ತಿಳಿದುಕೊಳ್ಳ ಬಹುದು.

ಒಬ್ಬನು ಶೂದ್ರ ಕುಲದಲ್ಲಿ ಹುಟ್ಟಿದ್ದರೂ, ಅವನು ತನ್ನ ನಡತೆ, ಸದ್ಗುಣ ಮತ್ತು ಜ್ಞಾನಶಕ್ತಿಯಿಂದ ಬ್ರಾಹ್ಮಣನಾಗಬಹುದು; ಹಾಗೆಯೇ ಬ್ರಾಹ್ಮಣ ಕುಲದಲ್ಲಿ ಹುಟ್ಟಿದವನು, ಅವಿದ್ವಾಂಸನಾಗಿಯೂ, ನಿರ್ಗುಣನಾಗಿಯೂ, ದುರ್ನಡತೆಯುಳ್ಳವನಾಗಿಯೂ ಇದ್ದರೆ, ಆತನು ಶೂದ್ರನಾಗುವನು, ಎಂದು ಮನು ಮಹರ್ಷಿಯು ಹೇಳಿರುವರು. ವರ್ಣವನ್ನು ಪೂರ್ವಕಾಲದಲ್ಲಿ ನಿರ್ಧರಿಸುತ್ತಿದ್ದುದು, ಒಬ್ಬನ ಹುಟ್ಟಿನಲ್ಲಿ ಧರಿಸಿದ ನಾಮದಿಂದ, ಈ ಹುಟ್ಟು ಕುಲದಿಂದಲ್ಲ. ಅವನ ಯೋಗ್ಯತೆ, ವೃತ್ತಿ, ಗುಣ ಮತ್ತು ವಿದ್ಯೆಗೆ ಅವನಲ್ಲಿದ್ದ ಅರ್ಹತೆಯಿಂದ, ಅಕ್ಷೋಕ, ದ್ರೋಣನು ಕುಲದಲ್ಲಿ ಬ್ರಾಹ್ಮಣನಾದರೂ ಹುಟ್ಟು ಯೋಧನಾಗಿದ್ದನು. ಶೂದ್ರ ಸ್ತ್ರೀ ಹೊಟ್ಟೆಯಲ್ಲಿ ಹುಟ್ಟಿದ್ದರೂ ವಿದುರನು ಕ್ಷತ್ರಿಯನು. ಕ್ಷತ್ರಿಯ ಕುಲದಲ್ಲಿ ಜನಿಸಿದ್ದರೂ ವಿಶ್ವಾಮಿತ್ರನು ಬ್ರಾಹ್ಮಣನು.

ಈ ಜಾತಿಭೇದಗಳಿಂದ ಹಿಂದೂಗಳು ನೂರಾರು ಪಂಗಡಗಳಾಗಿ, ತಮ್ಮ ಸಮಾಜದ ಮಂಗಳ ಸಾಧನೆಮಾಡುವ ಬದಲು, ಒಬ್ಬರನೊಬ್ಬರು ಹೀನದೃಷ್ಟಿಯಿಂದ ಕಾಣುತ್ತಿದ್ದಾರೆ. ಹಿಂದೂಸ್ಥಾನದ ಅನೇಕ ಕಡೆಗಳಲ್ಲಿ ಜಾತಿ ಹಿಂದೂಗಳನ್ನಿಸಿಕೊಳ್ಳುವವರು, ತಮ್ಮ ಸಹೋದರರಾದ ಕೆಲವರನ್ನು ಅಸ್ಪೃಶ್ಯರನ್ನಾಗಿ, ಇವರನ್ನು ಪ್ರಾಣಿಗಳಿಗಿಂತಲೂ ತುಚ್ಛವಾಗಿ ಕಾಣುತ್ತಿದ್ದಾರೆ. ಇದರಿಂದಲ್ಲವೇ ಮಹಾತ್ಮ ಗಾಂಧಿಯವರು ತಮ್ಮ ಜೀವವನ್ನು ಸಹ ಅಸ್ಪೃಶ್ಯರೋದ್ಧಾರಕ್ಕೋಸ್ಕರ ತ್ಯಾಗಮಾಡಲು ಹೊರಟಿದ್ದರು. ದೈವದ ಸಹಾಯದಿಂದ ಅನೇಕ ಶತಮಾನಗಳಿಂದ ಸಾಧ್ಯವಾಗದ ಈ ಕಾರ್ಯವನ್ನು, ಮಹಾತ್ಮರು ಒಂದು ವಾರದಲ್ಲಿ ನೆರವೇರಿಸಿದರು.

ಇನ್ನು ಮುಂದೆ ನಮ್ಮ ಆರ್ಯಬಾಂಧವರನ್ನು ಉದ್ಧರಿಸುವ ಕರ್ತವ್ಯವು ಜಾತಿ ಹಿಂದೂಗಳ ಕೈಯಲ್ಲಿದೆ. ಈ ಕರ್ತವ್ಯವು ನೆರವೇರುವುದು ಕೇವಲ ಒಂದು ಸರಿಸಿದ ಅನ್ನವನ್ನು ಒಟ್ಟಿಗೆ ಭೋಜನ ಮಾಡುವುದರಿಂದ ಮಾತ್ರವಲ್ಲ, ದೇವಸ್ಥಾನಗಳ ಬಾಗಿಲುಗಳನ್ನು ಅವರಿಗೆ ತೆರೆದು ಅಮಂತ್ರಣವಿತ್ತಿಯು ವುದರಿಂದ ಮಾತ್ರವಲ್ಲ, ಅವರ ಸಾಮಾಜಿಕ, ವಿದ್ಯಾಭ್ಯಾಸ, ಆರ್ಥಿಕ ಮೊದಲಾದುವುಗಳಿಗೆ ಉತ್ತೇಜನಕೊಟ್ಟು, ಅವರ ಜ್ಞಾನಶಕ್ತಿಯನ್ನು ವಿಶಾಲಮಾಡಿ, ಅವರು ನಮ್ಮಂತೆಯೆ ಹೊಂದಿದ ಸುಸ್ಥಿತರಾಗಿರಲು ಮಾಡುವುದರಿಂದ. ಇದು ಜಾತಿ ಹಿಂದೂಗಳ ಉದ್ದೇಶವಾಗಬೇಕಾಗಿದೆ. ಈ ಉದ್ದೇಶವು ದುಂದುಭಿಯಂತೆ ನಮ್ಮ ದೇಶದ ಎಲ್ಲಾ ಕಡೆಗಳಲ್ಲೂ ಕೇಳಿ, ಎಲ್ಲರ ಮನ್ಸಿನಲ್ಲಿ ಕಾರ್ಯೋನ್ಮುಖರಾಗುವಂತೆ ಮಾಡಲೆಂದು ದೇವರನ್ನು ಹಾರೈಕೆ.

ಮ. ಉ. ಶಾರದ.

೫೬ ವರುಷಗಳ ಅನುಭವ ಸಿದ್ಧ ಔಷಧಗಳು.

೧. ಧಾತುಪುಷ್ಟಿ ಲೇಹ—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ಬಾಧೆ, ರಕ್ತಪಿತ್ತ, ಬಿಳಿಚ್ಚು, ಮಲಬದ್ಧತೆ, ಕೈಕಾಲು ಉರಿಯುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು.

ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7—0—0.

೨. ಅಶೋಕಾರಿಷ್ಟ ಮತ್ತು ಮಾತ್ರೆ—ಹೆಂಗಸರ ಮುಟ್ಟಿನದೋಷಗಳು, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು. ಹೊಟ್ಟೆನೋವು, ಸೊಂಟನೋವು, ಸಂತಾನಹೀನತೆ, ಮೂರ್ಛೆ, ಮಲಬದ್ಧತೆ, ಬಿಳಿಚ್ಚು, ರಕ್ತಹೀನತೆ, ಕೈ ಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಗುಣಪಡಿಸುವುದು. ಬಾಟ್ಲಿ 1ರ 1—4—0; 1 ಡಬ್ಬಿ ಮಾತ್ರೆಗೆ 1—0—0; 3 ಬಾಟ್ಲಿ ಔಷಧಕ್ಕೂ, 3 ಡಬ್ಬಿ ಮಾತ್ರೆಗೂ 6—4—0.

೩. ಚಂದನಾಸವ ಮತ್ತು ಮಾತ್ರೆಗಳು—ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರವು ಆಗಾಗ್ಗೆ ಒಂದು ತಡಿಯ ಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ಇವೇ ಮೊದಲಾದ ಪಲವು ಮೂತ್ರಕೋಶದ ರೋಗಗಳನ್ನೂ, ಬಾಯಾರಿಕೆ, ಮಲಬದ್ಧತೆ, ಸ್ವಪ್ನಾವಸ್ಥೆ ಇವುಗಳ ಮೇಲೆ ಸಿದ್ಧೌಷಧ. ಬಾಟ್ಲಿ 1ರ 1—2—0; 1ಡಬ್ಬಿ ಮಾತ್ರೆಗೆ 1—6—0. 2 ಬಾಟ್ಲಿ ಔಷಧಕ್ಕೂ, 2 ಡಬ್ಬಿ ಮಾತ್ರೆಗೂ 4—12—0.

೪. ಬಾಲಗ್ರಹ ಗುಟಿಕೆ—ಬಾಲಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರು ಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧ. ಬಾಟ್ಲಿ ಒಂದಕ್ಕೆ 0—10—0. 3ಕ್ಕೆ 1—12—0.

೫. ಸುಖಬೇಧಿ ಗುಟಿಕೆ—ಆಯಾಸವಿಲ್ಲದ ಸುಖವಿರೇಚಕ. ಬಾಟ್ಲಿ 1ರ 0—10—0. 3ಕ್ಕೆ 1—12—0.

೬. ಸ್ಪಂದನ ವಟಿ—ಜ್ವರ ಸಿಂತು ಜ್ವರಗಡ್ಡೆ ಕರಗಿ ಮಲವಿಸರ್ಜನೆ ಆಗುವುದು. ಬಾಟ್ಲಿ 1ಕ್ಕೆ 1—0—0.

೭. ಮಲೇರಿಯಾ ನಿವಾರಿಣಿ—ಎಲ್ಲಾ ವಿಧವಾದ ಜ್ವರಕ್ಕೆ ಬಾಟ್ಲಿಗೆ 1—0—0.

೮. ಮಹಾ ಮದನಕಾಮೇಶ್ವರಿ ಲೇಹ ಡಬ್ಬಿ 1ಕ್ಕೆ 2—0—0.

೯. ದಂತಕಾಂತಿ ಚೂರ್ಣ—ಡಬ್ಬಿ 1ರ 3 ಆಣೆ. 6 ಡಬ್ಬಿಗಳಿಗೆ 1—2—0.

ಯಂ. ಗಣಪಯ್ಯ ಎಂಡ್ ಸನ್ಸ್,
ಆಯುರ್ವೇದಿಕ್ ಫಿಸಿಶಿಯನ್ಸ್,
52—5 **ರಥಬೀದಿ, ಮಂಗಳೂರು.**

---

೩ ರೂಪಾಯಿಗೆ ೯೦ ಇನಾಮುಗಳೊಡನೆ ೪ ವಾಚುಗಳು.



"ಅಟೊರೋಸ್" ಎಂಬುದು ಸುಗಂಧಗಳಲ್ಲೆಲ್ಲಾ ಪ್ರಖ್ಯಾತಹೊಂದಿದ್ದು, ಹೂಗಳಿಂದ ತಯಾರಿಸಲ್ಪಟ್ಟು, ಹಲವು ದಿನಗಳ ವರೆಗೂ ಪರಿಮಳವನ್ನು ಬೀರುವುದು. ಒಂದೇ ಸಲ 6 ಬಾಟ್ಲಿ ತರಿಸಿದವರಿಗೆ ರೂ. 3 ಮಾತ್ರ, ಮತ್ತು 1 ರಿಸ್ಟ್ ವಾಚ್, 1 ಫ್ಲೈಟ್ ವಾಚ್, 1 ಪಾಕೆಟ್ ವಾಚ್, 1 'B' ಟೈಂಪೀಸ್. 5 ವರ್ಷದ ಖಾತರಿ. ಮತ್ತು 14 ಕೇರೆಟ್ ಬಂಗಾರದ ಸಿಬ್ಬಿನ ಫೌಂಟನ್ ಪೆನ್ ಮತ್ತು 90 ಇನ್ನಿತರ ಇನಾಮುಗಳು ಮಾಫಿಯಾಗಿ ಕೊಡಲ್ಪಡುವವು. ಪೋಸ್ಟೇಜು 10 ಆಣೆ

NATIONAL WATCH STORE,
1-A. Raja Narain Biswas Lane,
(4—4) P. O. Bagh Bazar, Calcutta.

ಇಂಡಿಯಾ ಎಕ್ವಿಟೇಬಲ್ ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್.

(ಸ್ಥಾಪಿಸಲ್ಪಟ್ಟದ್ದು 1908.)

ಕಳೆದ ವರ್ಷದ ಫಲಿತಾಂಶಗಳು.

ಹಿಂದಿನ ವರ್ಷದ ಕೆಲಸಕ್ಕಿಂತ 64% ಹೆಚ್ಚು.

ಕಳೆದ ವರ್ಷ ಸಂಭವಿಸಿದ ಹಕ್ಕು ಬಾಧ್ಯಸ್ಥರಲ್ಲಿ ಶೇಕಡ ೯೬·೬ ಜನರಿಗೆ ಹಣ ಅದೇ ವರ್ಷ ಕೊಡಲಾಗಿದೆ.

ಖರ್ಚಿನ ಸಾಮಾನ್ಯ 31% ಮಾತ್ರ.

ಇಂಡಿಯಾ ಎಕ್ವಿಟೇಬಲ್ ಇನ್ಸೂರೆನ್ಸ್ ಕಂಪೆನಿಯು ಬುಡದಿಂದ ತಲೆಯ ವರೆಗೂ ಇಂಡಿಯನೇ.

ಪಜನವಾರರಾದ ಏಜೆಂಟರುಗಳು ಬೇಕಾಗಿದ್ದಾರೆ.

ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಕೆ. ಇ. ಜಾಕೊ,
ಬ್ರಾಂಚ್ ಸೆಕ್ರೆಟರಿ,
159 ಶ್ರೀ ನರಸಿಂಹರಾಜ ರೋಡ್,
ಬೆಂಗಳೂರು ಸಿಟಿ.

ಅಥವಾ

(1) ಮಿಸ್ಟರ್ ಸಿ. ಯಂ. ಪೂವಯ್ಯ,
ಲೇಡಿ ಆರ್ಗನೈಸರ್,
'ಪೂವಯ್ಯ ವಿಲ್ಲಾ,'
ಮಡಿಕೇರಿ.

(2) ಯಂ. ಸಿ. ಅಪ್ಪಚ್ಚು,
ರಿಟಯರ್ಡ್ ಪಾರುಪತ್ಯಗಾರ್,
ಹಿಲ್ ರೋಡ್,
ಮಡಿಕೇರಿ

(12—7)

GOVERNMENT SOAP FACTORY,
Bangalore.

ವಿಶ್ವಾಸಾರ್ಹತೆ.

ಅತ್ಯುತ್ತಮವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ ಯಾವ ಗುಣಗಳು ಅವಶ್ಯಕವೆಂದು ನೀವು ತಿಳಿದಿರುತ್ತೀರೋ ಆ ಗುಣಗಳೆಲ್ಲಾ ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.

ನಾವು ನಿಮಗೆ ಭರವಸೆಯನ್ನೀಯುತ್ತೇವೆ.

ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
52—7 ಬೆಂಗಳೂರು.

ಹಾಕೂಕು ಭಾಗ.

ದೇವಸ್ಥಾನಗಳ ಪ್ರವೇಶದ ಸವಾಲನ್ನು ಪಂಡಿತರಿಂದಲೂ, ಪೂಜಾರಿಗಳಿಂದಲೂ ಮಾತ್ರ ಬಿಡಿಸಲ್ಪಡತಕ್ಕದೆಂತ ಯೋಚಿಸಬೇಡಿ. ಹಿಂದೂ ಸಮಾಜಕ್ಕೆ ಸೇರಿದ ಪ್ರತಿಯೊಬ್ಬ ಗಂಡಸೂ, ಹೆಂಗಸೂ ಈ ಸಮಸ್ಯೆಯನ್ನು ಬಿಡಿಸಲು ಸಹಕರಿಸಬೇಕು. ಹರಿಜನರು ದೇವಸ್ಥಾನಗಳಿಗೆ ಪ್ರವೇಶಿಸುವ ಬಾಬಿನಲ್ಲಿ ಕಾನೂನಿನ ಆಕ್ಷೇಪಣೆ ಇದೆಯೆಂತ ನನಗೆ ಗೊತ್ತಿದೆ. ಈ ಆಕ್ಷೇಪಣೆಯನ್ನು ಯುದ್ಧದಿಂದ ಪರಿಹರಿಸಬಾರದು. ವಾದಿಸಿ, ಒಪ್ಪಿಸಿ, ಈ ಸುಧಾರಣೆಯಾಗುವಂತೆ ಮಾಡಬೇಕು. ಅನೇಕ ಕಡೆಗಳಲ್ಲಿ ದೇವಸ್ಥಾನದ ಅಧಿಕಾರಿಗಳು ಈ ಸುಧಾರಣೆಗೆ ತಯಾರಾಗಿದ್ದರೂ, ಕಾನೂನೂ, ಮಾಮೂಲೂ ಇದಕ್ಕೆ ವಿರೋಧವೆನ್ನುತ್ತಾರೆ. ಈ ತರದ ಕಾನೂನು ನನಗೆ ತಿಳಿಯುವುದಿಲ್ಲ. ಅಂಥಾ ಕಾನೂನೇನಾದರೂ ಇದ್ದರೆ ಅದನ್ನು ಕೌನ್ಸಿಲುಗಳು ತಿದ್ದುಪಡಿಮಾಡಬೇಕು. ಸಮಾಜದ ಒಳ್ಳೇದಕ್ಕಾಗಿ, ಕ್ಷೇಮಕ್ಕಾಗಿ ಕಾನೂನು ಬದಲಾಗುತ್ತಲೇ ಇರುತ್ತದೆ. ಸಮಾಜವು ಕಾನೂನಿಗಾಗಿ ಇರುವುದಿಲ್ಲ. ಸಮಾಜದ ಕ್ಷೇಮಕ್ಕಾಗಿ ಕಾನೂನು ಮಾಡಿಕೊಳ್ಳುವುದಾಗಿದೆ. ದೇವಸ್ಥಾನಗಳಿಗೆ ಹರಿಜನರು ಪ್ರವೇಶಿಸುವ ವಿಷಯದಲ್ಲಿ ಕಾನೂನಿದ್ದರೂ ಅಂಥಾ ಕಾನೂನು ಖಾಸ್ಗಿ ದೇವಸ್ಥಾನಗಳಿಗೆ ಅನ್ವಯಿಸುವುದಿಲ್ಲ. ಸ್ವಂತ ದೇವಾಲಯಗಳ ಮೇಲಿನ ಹಕ್ಕು ಇವರ್ಕಡಿ ಜನಾಬಕ್ಕಿರುವುದೆ. ತಮ್ಮ ದೇವಸ್ಥಾನಗಳನ್ನು ಹರಿಜನರಿಗೆ ಬಿಟ್ಟುಕೊಡುವುದೂ ಅಲ್ಲದೆ ಹಾಗೆ ಮಾಡಬೇಕೆಂತ ಬೇರೆಯವರನ್ನು ಕೇಳಿಕೊಳ್ಳಬೇಕು. ಇದು ಮಹತ್ವದ ಸುಧಾರಣೆಯಾಗಿದೆ, ರಾಷ್ಟ್ರ ಕಾರ್ಯವಾಗಿದೆ. ಇದರಲ್ಲಿ ಎಲ್ಲರೂ, ಜಾತಿ ಮತ ಭೇದವಿಲ್ಲದೆ, ರಾಜಕೀಯ ಮತಭೇದವನ್ನೆಣಿಸದೆ ಕೆಲಸ ಮಾಡಬಹುದಾಗಿದೆ. ಈ ಕೆಲಸವನ್ನು ಮುಂದಿನ ಜನಾಂಗಗಳಿಗೆ ಬಿಡದೆ ಕೂಡಲೇ ಪ್ರಾರಂಭಿಸಿರಿ. ಈ ದಿನವೇ ಮನಸ್ಸು ನಿಶ್ಚಯಮಾಡಿರಿ; ನೀವು ಜಯಶೀಲರಾಗುತ್ತೀರಿ. ನಮ್ಮ ದೇಶದ ಉದ್ಯೋಗಗಳಲ್ಲಿ ಹರಿಜನರೊಳಗೆ ದೊಡ್ಡದೊಂದು ಜಾಗೃತಿಯಾಗಿದೆ. ಅವರ ಆತ್ಮಗೌರವವೂ, ಸಮಾಜದಲ್ಲಿ ಸಮಾನತ್ವವೂ ಅವರಲ್ಲಿ ಉತ್ಕೇರಿ ಬಂದಿದೆ. ಈ ವರೆಗೆ ಇದ್ದ ಸ್ಥಿತಿಯಲ್ಲಿ ಇನ್ನು ಹೆಚ್ಚು ಕಾಲ ಅವರು ಇರಲಾರರು. ಅವರಿಗೆ ಸಮಾಜದಲ್ಲಿ ಸಮಸಮಾನತ್ವವನ್ನು ಕೊಡುವುದು ಬುದ್ಧಿವಂತಿಕೆಯ ಕೆಲಸವಾಗಿದೆ. ಆ ಮುಂದಾಲೋಚನೆಯಿಲ್ಲದಿದ್ದರೆ ನಾವು ಹರಿಜನರನ್ನು ಕಳೆದುಕೊಂಡೇವು.

ಈ ಸುಧಾರಣೆಯನ್ನು ಹೆದರಿಕೆಯಿಂದ ಮಾಡಬೇಡಿ. ಪ್ರೀತಿಯಿಂದಲೂ, ನ್ಯಾಯಬದ್ಧರಾಗಿಯೂ ಮಾಡಿ. ಪ್ರಪಂಚದ ಇತರ ಜನಾಂಗಗಳೊಂದಿಗೆ ಹಿಂದೀಯರು ಸಮಸಮಾನರಾಗಿರಬೇಕೆಂತ ಕೇಳುತ್ತೇವೆ. ಆದರೆ ನಮ್ಮ ದೇಶದಲ್ಲೇ ನಮ್ಮ ಸಹೋದರರಿಗೆ ಸಮಸಮಾನತ್ವವನ್ನು ಕೊಡುವುದಿಲ್ಲ. ಈ ರೀತಿಯಲ್ಲಿ ಎಷ್ಟು ದಿನ ನಡೆದೀತು? ನ್ಯಾಯಸಿಕ್ಕಬೇಕಾದರೆ ನಾವು ನ್ಯಾಯಕೊಡಬೇಕು. ಈ ರೀತಿಯಲ್ಲಿ ಸರಿಯಾದ ರೀತಿಯಿಂದ ಈ ಪ್ರಶ್ನೆಯನ್ನು ತಿಳಿದುಕೊಳ್ಳಬೇಕು. ಹರಿಜನರಿಗೆ ಸಮಸಮಾನ ಹಕ್ಕು ಕೊಡುವುದರಿಂದ ನೀವು ದಯತೋರಿಸುವುದೆಂತ ಭಾವಿಸಬೇಡಿ. ಇದು ಹಿಂದೂ ಸಮಾಜದ ಸೇವೆಯೆಂತ ಮಾಡಿ. ನಮ್ರಭಾವದಿಂದ ಮಾಡಿ. ಈ ಮನೋಭಾವದಿಂದಲೇ ಮಹಾತ್ಮ ಗಾಂಧಿಯವರು ಕೆಲಸ ಮಾಡುತ್ತಿರುವುದು. ಹರಿಜನ ಸಹೋದರರಿಗೆ ಬಹಳ ಅನ್ಯಾಯ ಮಾಡಿದ್ದೇವೆ. ಅದನ್ನು ಈಗ ಸರಿಪಡಿಸಿಕೊಳ್ಳಬೇಕು. ಈ ರಾಷ್ಟ್ರೀಯ ಉದ್ಧಾರದ ಕೆಲಸದಲ್ಲಿ ಹಿಂದೂ ಸಮಾಜದ ಎಲ್ಲಾ ಭಾಗದವರೂ ಸೇರಬೇಕು. ನೀವು ಸರಿಯಾದ ಮನೋಭಾವದಿಂದ ಕೆಲಸ ಮಾಡಿದರೆ ಹಿಂದೂ ಜನ್ಮವು ಪುನಃ ಜೀವಕಳೆಯಿಂದ ತುಂಬುತ್ತದೆಯೆಂತ ನಾನು ನಿಮಗೆ ಭರವಸೆಕೊಡುತ್ತೇನೆ. ನಮ್ಮ ಸಮಾಜವು ಪುರಾತನ ಕಾಲದ್ದೇನೋ ನಿಜ. ಅದು ನಾಶವಾಗುವಂತೆ ಮಾಡಬೇಕೋ ಅಥವಾ ಅದು ಪುನಃ ಜನ್ಮವೆತ್ತುವಂತೆ ಮಾಡಬೇಕೋ? ಸರಿಯಾದ ದಾರಿಯನ್ನು ಹಿಡಿದು ನಿಮ್ಮ ಕರ್ತವ್ಯವನ್ನು ಮಾಡಿ.

ಸ್ಪೃಶ್ಯಬೆಟ್ಟದ ಹಿಂದೂಗಳು ಮಾಡಿದ್ದೇನು?

ಹರಿಜನರನ್ನು ದೇವಸ್ಥಾನಕ್ಕೆ ಬಿಡಲು ಒಪ್ಪಿದ್ದು.

ಮಹಾತ್ಮಾಜೀಯವರ ಉಪವಾಸ ವ್ರತದಿಂದ ಇಂಡಿಯಾ ದೇಶದ ಕೋಮುವಾರು ಸಮಸ್ಯೆಯು ಬಿಡಿಸಲ್ಪಟ್ಟು, ಮಹಾತ್ಮರ ಸಂದೇಶವನ್ನು ಕಾರ್ಯತಃ ನಡಿಸಲು ಯಾವ ಪಾರ್ಟಿಯ ಗಳೂ, ಯಾ ಯಾವ ಮಾನವನಾಗಲೀ ತನ್ನ ಶಕ್ತ್ಯಾನುಸಾರ ಆಗುವ ಮಟ್ಟಿಗೆ ಕೆಲಸ ಮಾಡುವುದು ಶ್ರೇಯಸ್ಕರ.

ಈ ಉದ್ದೇಶಕ್ಕಾಗಿ ಸ್ಪೃಶ್ಯಬೆಟ್ಟ ಊರಿನ ಸರ್ವ ಮಹಾಜನರು ಕಳೆದ ಸೆಪ್ಟೆಂಬರ್ ತಾ 20ನೇ ದಿನ, ಮಹಾತ್ಮರ ಉಪವಾಸ ವ್ರತವನ್ನು ಕೈಕೊಂಡ ದಿನ, ಅವರಿಗೆ ದೀರ್ಘಾಯುರಾರೋಗ್ಯವನ್ನು ಕೊಡುವಂತೆಯೂ, ಬ್ರಿಟಿಷ್ ಸರಕಾರಕ್ಕೆ ಮಹಾತ್ಮರ ಮೇಲೆ ದಯೆ ಬರುವಂತೆಯೂ ಪ್ರಾರ್ಥಿಸಿದಲ್ಲದೆ, ಅಸ್ಪೃಶ್ಯತೆ ನಿವಾರಣೆಯ ಕೆಲಸವನ್ನು ಕೈಕೊಳ್ಳಬೇಕೆಂದು ನಿರ್ಣೈಸಿದರು.

ಇದನ್ನು ಸಾಧಿಸಲಿಕ್ಕಾಗಿಯೇ ಇಂಡಿಯಾ ದೇಶದಲ್ಲಿ ಅತಿ ಪೂರ್ವದಿಂದ ಪುರಾತನ ದೇವಾಲಯಗಳನ್ನು ಅಸ್ಪೃಶ್ಯರ ಪ್ರವೇಶಕ್ಕೆ ಬಿಡುತ್ತಾ ಇರುವದು ತಂತೀಕದ ಸಂಗತಿಯಾಗಿದೆ. ಇದಕ್ಕೆ ಸಾಮಾನ್ಯ ಬುದ್ಧಿಯ ಮಾನವನ್ಯಾವನೂ ತಕ್ಕ ಕಾರಣಗಳಿಂದ ಅಡ್ಡಿ ಬರಲು ಸಾಧ್ಯವಿಲ್ಲ.

ಸ್ಪೃಶ್ಯಬೆಟ್ಟ ಚೆನ್ನಯ್ಯನಕೋಟೆ ಗ್ರಾಮದ ಕೆಂಪಾದ ಬಸವೇಶ್ವರ ದೇವಸ್ಥಾನವು ಪುರಾತನದು. ಇದರ ಅತಳಿತೆಯ ವಿಷಯ ಮಹನೀಯರ ತಿಳುವಳಿಕೆಗಾಗಿ ಇಲ್ಲಿ ಸ್ವಲ್ಪ ವಿವರಿಸಬೇಕಾಗಿದೆ. ಈ ಕೆಂಪಾದ ಬಸವೇಶ್ವರ ದೇವಾಲಯದ ಟ್ರಸ್ಟಿಗಳು ಕೊಡವರು. ಪೂಜಾರಿ ಶಿವಚಾರಪವನು. ದೇವರು ಒಬ್ಬವದು ಪಂಚಮನ ಮೇಲೆಯೂ ಮತ್ತು ಯರವನ ಮೇಲೆಯೂ ಆಗಿದೆ. ಪಂಚಾಯಿತಿದಾರರಲ್ಲಿ ಒಬ್ಬ ಮುಸಲ್ಮಾನ.

ಈ ಮೇಲಿನ ದೇವಸ್ಥಾನಕ್ಕೆ ಪಂಚಮರ ಪ್ರವೇಶದ ಉದ್ದೇಶಕ್ಕಾಗಿ ಈ ತಾ. 17ನೇ ಸೋಮವಾರ ಅಪರಾಹ್ನ 2 ಗಂಟೆಗೆ ಒಂದು ದೊಡ್ಡ ಮೀಟಿಂಗು ಚೆನ್ನಯ್ಯನ ಕೋಟೆ ದೇವಾಲಯದಲ್ಲಿ ಜರುಗಿತು. ಸುಮಾರು 150 ಜನರಿದ್ದರು; ಇವರ ಪೈಕಿ ಮೇಲ್ಜಾತಿಯವರು 90 ಜನರು ಇದ್ದರು. ಬಾಕಿಯವರೆಲ್ಲರೂ ಪಂಚಮರು.

ಸದರಿ ಮೀಟಿಂಗಿನಲ್ಲಿ ಮಹಾತ್ಮರ ಸಂದೇಶವನ್ನು ಪೂರ್ತಿಯಾಗಿ ಓದಿ ವಿವರಿಸಿದಲ್ಲದೆ, ಅಸ್ಪೃಶ್ಯ ಸಹೋದರರು ಏನು ಮಾಡಬೇಕು ಎಂಬ ಸಂಗತಿಯನ್ನು ತಿಳಿಸಿ, ಇನ್ನು ಮುಂದೆ ಅಸ್ಪೃಶ್ಯತೆಯನ್ನು ಉತ್ತಮ ಕುಲದ ಹಿಂದುಗಳಾದ ನಾವುಗಳು ಹೋಗಲಾಡಿಸಲು ತಯಾರಿದ್ದೇವೆಂತಲೂ, ಈ ಪುರಾತನ ದೇವಾಲಯವಾದ ಕೆಂಪಾದ ಬಸವೇಶ್ವರ ದೇವರ ಗುಡಿಗೆ ಪಂಚಮರ ಪ್ರವೇಶಕ್ಕೆ ಮನಃಪೂರ್ವಕವಾಗಿ ಬಿಡುತ್ತೇವೆಂತಲೂ, ಹರಿಜನರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಬೇಕೆಂತಲೂ, ಪಬ್ಲಿಕ್ ಬಾವಿಗಳಲ್ಲಿ ನೀರು ತೆಗೆಯಲು ಅಡ್ಡಿಯಿಲ್ಲವೆಂತಲೂ, ಮೇಲ್ಜಾತಿಯವರು ಈ ವರೆಗೆ ಮಾಡಿದ ಈ ವಿಷಯದ ಅನ್ಯಾಯಗಳಿಗೆ ಆಗಬೇಕಾದರೂ ಪ್ರಾಯಶ್ಚಿತ್ತ ಮಾಡಬೇಕೆಂದದ್ದು ತಮ್ಮ ಕರ್ತವ್ಯವೆಂತಲೂ ಮುಂತಾಗಿ ವಿವರಿಸಿದರು.

ಅಸ್ಪೃಶ್ಯತೆಯುಳ್ಳ 3—4 ವಿದ್ಯಾವಂತರಿದ್ದರು. ಇವರು ವೇದಮಂತ್ರಗಳನ್ನು ಓದಿದರು. ಇವರೆಲ್ಲರೂ ಎದ್ದು ನಿಂತು, ಹೇಳಿದ್ದೇನೆಂದರೆ—ಮಹಾತ್ಮಾಜೀಯವರ ದೃಢ ಸಂಕಲ್ಪವು ನಮ್ಮನ್ನು ಉನ್ನತ ಸ್ಥಿತಿಗೆ ತರುತ್ತಲಿದೆ. ಮಹಾತ್ಮರ ಹೇಳಿಕೆಯಂತೆ ಉತ್ತಮರಾದ ಹಿಂದುಗಳು ಪ್ರವರ್ತಿಸುತ್ತಿರುವದು ನಮಗೆ ತುಂಬಾ ಸಂತೋಷ. ನಾವುಗಳು ಬಹುಕಾಲದಿಂದ ಉಪಯೋಗಿಸುವ ಸತ್ತ ದನದ ಮಾಂಸ, ಕೊಳಕು ಬಟ್ಟೆ, ಅಶುಚಿಯ ರೀತಿಗಳು ವಗೈರೆ ಬಿಡಲಿಕ್ಕೆ ತಯಾರಿದ್ದೇವೆ. ಇದಕ್ಕಾಗಿ ಈ ದೇವಾಲಯದ ಮುಂದೆ ಈಗ ಪ್ರಾರ್ಥನೆ ಮಾಡಿ ಆಣೆ ಇಟ್ಟುಕೊಳ್ಳುತ್ತೇವೆ. ಈ ಆಣೆಯಿಂದಲೇ ನಮಗೆ ಆತ್ಮಶುದ್ಧಿಯಾಗಬೇಕು. ಇಲ್ಲವಾದರೆ ಇದು ಫಲವೇ ಸಾಧ್ಯವಿಲ್ಲವೆಂತ ಹೇಳಿದ ಮೇಲೆ, ಎಲ್ಲಾ ಪಂಚಮರು ಎದ್ದು ನಿಂತು ತಮ್ಮ ಮನಃಪೂರ್ತಿ ಒಪ್ಪಿಗೆಯಿಂದ ಪ್ರಮಾಣ ಮಾಡಿದರು.

ಇದಾದನಂತರ ದೇವರನ್ನು ನಿಲ್ಲಿಸಿ ಕೇಳಲು, ದೇವಾಲಯದ ಪ್ರವೇಶಕ್ಕೆ ಉತ್ತಮರಾದ ನೀವುಗಳು ಹೇಳುವದು ನಮ್ಮ ಮಕ್ಕಳಿಗೆ ಶ್ರೇಯಸ್ಕರ. ಆದರೆ 2 ಮಂಡಲದ ವರೆಗೆ ಅವರ ಆತ್ಮಶುದ್ಧಿಗೆ ಸಮಯ ಬೇಕೆಂತ ದೇವರ ಅಪ್ಪಣೆಯಾಯಿತು.

ನೆರೆದಿದ್ದ ಸಭಿಕರೆಲ್ಲರಿಗೂ ತಿಂಡಿ ತೀರ್ಥಗಳನ್ನು ಹಂಚಿದ ನಂತರ ಮೀಟಿಂಗು ರಾಮಭಜನೆಯಿಂದಲೂ ವಾದ್ಯಘೋಷದಿಂದಲೂ ಅಂತ್ಯವಾಯಿತು.

ಪಿ. ಸಿ. ಯು!

ವಿಮರ್ಶೆ.

ಸತ್ಯಾರ್ಥ ಪ್ರಕಾಶ:—ವೇದಮೂರ್ತಿ ಬ್ರಹ್ಮ ಶ್ರೀ ಭಾಸ್ಕರ್ ಪಂತ್ ಸುಬ್ಬನರಸಿಂಹಶಾಸ್ತ್ರಿ ವಿಶಾರದರು ಕನ್ನಡಕ್ಕೆ ಭಾಷಾಂತರಿಸಿದ್ದು.

ಪ್ರಕಾಶಕರು:—ಬೆಂಗಳೂರು ಆರ್ಯ ಸಮಾಜ. ಬೆಲೆ ಎರಡು ರೂಪಾಯಿ.

ಈ ಸದ್ಗ್ರಂಥವು ಲೋಕವಿಖ್ಯಾತರಾದ ದಯಾನಂದ ಸರಸ್ವತಿಗಳಿಂದ ಮೊದಲು ರಚಿತವಾಯಿತ. ಇದು ಹಿಂದೂ ದೇಶದ ಇತರ ಭಾಷೆಗಳಿಗೆ ಪರಿವರ್ತಿತವಾಗಿದ್ದರೂ, ನಮ್ಮ ಕನ್ನಡ ನುಡಿಗೆ ಪರಿವರ್ತಿತವಾಗದೆ ಇದ್ದದ್ದು ಒಂದು ನ್ಯೂನತೆಯೇ ಆಗಿತ್ತು. ಈ ನ್ಯೂನತೆಯನ್ನು ಹೋಗಲಾಡಿಸಿದ ಸುಬ್ಬನರಸಿಂಹ ಶಾಸ್ತ್ರಿಗಳಿಗೆ ಸಮಗ್ರ ಕನ್ನಡ ನಾಡು ಋಣಿಯಾಗಿದೆ.

ಆರ್ಯ ಸಮಾಜವು ಸ್ಥಾಪಿತವಾದ ಐವತ್ತು ವರ್ಷಗಳೊಳಗಾಗಿ ಮಹತ್ತರವಾದ ಕಾರ್ಯವನ್ನೆಸಗಿದೆ. ಏಕದೇವೋಪಾಸನೆ, ವಿಗ್ರಹಾರಾಧನಾ ನಿರೋಧ, ಸಣ್ಣ ಸಣ್ಣ ಜಾತಿಗಳನ್ನೆಲ್ಲಾ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಈ ನಾಲ್ಕು ವರ್ಣಗಳಲ್ಲಿ ಸೇರಿಸಿಕೊಂಡು, ದೇಶದಲ್ಲಿ ಐಕ್ಯತೆಯನ್ನು ಹರಡಿಸುವದು, ವೇದಗಳನ್ನು ಧಾರ್ಮಿಕ ಗ್ರಂಥಗಳೆಂದು ಸ್ವೀಕರಿಸುವುದು, ಇವೇ ಈ ಸಮಾಜದ ಮುಖ್ಯ ತತ್ವಗಳು. ಇವುಗಳು ಮೇಲಿನ ಗ್ರಂಥದಲ್ಲಿ ಚೆನ್ನಾಗಿ ವಿವರಿಸಲ್ಪಟ್ಟಿವೆ. ಆರ್ಯ ಸಮಾಜದವರು ಬಾಲ್ಯವಿವಾಹ ನಿರೋಧ, ವಿಧವಾ ವಿವಾಹ, ಅಸ್ಪೃಶ್ಯತಾ ನಿವಾರಣೆ ಮೊದಲಾದ ಸುಧಾರಣೆಗಳಿಗಾಗಿ ಪ್ರಚಂಡವಾದ ಚಳವಳಿಯನ್ನು ನಡಿಸುತ್ತಾರೆ. ಇವರು ವಿದ್ಯಾ ಪ್ರಸಾರವನ್ನು ರಾಷ್ಟ್ರೀಯವಾಗಿ ಮಾಡಿದ್ದಾರೆ. ಅನೇಕ ವಿದ್ಯಾ ಸಂಸ್ಥೆಗಳನ್ನು ನಡಿಸುತ್ತಿದ್ದಾರೆ.

ಹಿಂದೂ ಮತದವರು ಜಾತಿಗೆಟ್ಟು ಹೋಗುತ್ತಿದ್ದುದನ್ನು ನಿಲ್ಲಿಸಿ, ಮತಾಂತರವಾದವರನ್ನು ಪುನಃ ಶುದ್ಧೀಕರಣದಿಂದ ಹಿಂದೂ ಜಾತಿಗೆ ಸೇರಿಸಿದವರು ಇವರೇ. ಈ ಆರ್ಯಮತವು ತಾತ್ವಿಕವಾದದ್ದು. ಆದುದರಿಂದ ಕನ್ನಡಿಗರು ಈ ಪುಸ್ತಕವನ್ನು ಓದಲೇ ಬೇಕೆಂದು ನಮ್ಮ ಆಗ್ರಹ.

(FREE INSURANCE)

ಉಚಿತ ವಿಮಾ.

ಮ್ಯೂಚುವಲ್ ಬೆನಿಫಿಟ್ ಸ್ಕೀಂ ಎಂಬ ಅನ್ಯೋನ್ಯ ಸಹಾಯ ಪದ್ಧತಿ.

(Mutual Benefit Scheme.)

ಜೈ ಭಾರತ ಇನ್‌ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಹೆಡ್ ಆಫೀಸು—ಮದ್ರಾಸ್.

ಲೈಫ್ ಇನ್‌ಶ್ಯೂರೆನ್ಸಿನ ಕಂಪೆನಿಗಳ ಕಾನೂನಿಗೆ ಅಧೀನವಾಗಿದೆ. ಸಂಕಟಕಾಲದಲ್ಲಿ ಬೇಕಾದ ಜೀವನಾಧಾರ ಇದಾಗಿದೆ.

ಈ ಮೇಲ್ಕಂಡ ಕಂಪೆನಿಯು ಅನ್ಯೋನ್ಯ ಸಹಾಯಕ್ಕಾಗಿ ಕಳೆದ ವರ್ಷ ಅಂದರೆ 1931ನೇ ಫೆಬ್ರವರಿಯಲ್ಲಿ ಮದ್ರಾಸಿನಲ್ಲಿ ಸ್ಥಾಪಿತವಾಗಿ ಈ ವರೆಗೆ 24000 ಸಾವಿರಕ್ಕೂ ಹೆಚ್ಚಾಗಿ ಪಾಲಿಸಿಗಳನ್ನು ಪಡೆದಿರುತ್ತೆ. ಈ ಮೇಲ್ಕಂಡ ಕಂಪೆನಿಗೆ ಐಶ್ವರ್ಯವಂತರೂ ಬಡವರೂ, ವಿತಸಂಪಾದನೆಯವರೂ, ಜಾತಿ ಮತಗಳ ಭೇದವಿಲ್ಲದೆ ಹಿಂದೂವಾದರೂ, ಕ್ರೈಸ್ತರೂ, ಮುಸ್ಲಿಮರೂ, ಹೆಂಗಸರೂ, ಗಂಡಸರೂ ಹೆಚ್ಚು ಹಣ ಕೊಡದೆಯೇ ಉಚಿತ ಜೀವ ವಿಮೆ ಮಾಡಿಕೊಳ್ಳಬಹುದು. 18 ವರ್ಷಕ್ಕೆ ಮೇಲ್ಪಟ್ಟು 60 ವರ್ಷದೊಳಗಿರುವವರು ಈ ಕಂಪೆನಿಗೆ ಸೇರಬಹುದು. ಈ ಕಂಪೆನಿಗೆ ಸೇರಲು ಇಚ್ಛಿಸುವವರು ಸೇರುವಲ್ಲಿ ರೂ. 5—8—0ನ್ನು ಮಾತ್ರ ಕಟ್ಟತಕ್ಕದ್ದು. ಅನಂತರ ತಿಂಗಳು ಒಂದರ 1 ರೂ. ಸ್ವಲ್ಪದರಲ್ಲಿ ದೊಡ್ಡ ಲಾಭ ದೊರೆಯುತ್ತೆ. ಆದ್ದರಿಂದ ಇಂಥಾ ಸುಸಮಯವನ್ನು ಕಳೆದುಕೊಳ್ಳಬೇಡಿ. ಈ ದಿನವೇ ಪಾಲಿಸಿಗಳನ್ನು ಹೊಂದಲು ಅರ್ಜಿದಾರರಾಗಿರಿ. ಇದರ ಫಲವನ್ನು ಹೊಂದಲು ಭಾಗಿಗಳಾಗಿರಿ.

ಹೆಚ್ಚಿನ ಮಾಹಿತಿಗಳಿಗೆ ಈ ಕೆಳಗಿನವರಿಗೆ ಬರೆದು ತಿಳಿದುಕೊಳ್ಳಬಹುದು. ಅಲ್ಲದೆ ಇವರು ಕೊಡಗಿನ ಎಲ್ಲಾ ಕಡೆಗಳಲ್ಲಿಯೂ ತಿರುಗುತ್ತಲಿರುತ್ತಾರೆ.

ಯಸ್. ಬಿ. ಕರುಂಬಯ್ಯ,
ಏಜೆಂಟ್,
ಜೈ ಭಾರತ ಇನ್‌ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
12—1 ನಾಪೋಕ್ಲು. (ಕೊಡಗು)

ರತಿ ಮನ್ಮಥ ಎಂಬ ಮರ್ಮಶಾಸ್ತ್ರ.

ಕ್ರಯ ರೂ. 1—0—0.

ಕನ್ನಡ ಭಾಷೆಯಲ್ಲಿ ಅಂದವಾಗಿ ಪ್ರಿಂಟಾಗಿದೆ. ಇದರಲ್ಲಿ ಸ್ತ್ರೀ ಪುರುಷರ ಪ್ರೀತಿಯ ರಹಸ್ಯಗಳು, ಪ್ಯಾರಿಸ್ ವೇಶ್ಯ ಸ್ತ್ರೀಯರ ಪ್ರೀತಿಯ ಮರ್ಮಗಳು, ಮಲಯಾಳ, ಜಪಾನ್, ಫ್ರೆಂಚ್ ದೇಶದ ವೇಶ್ಯ ಸ್ತ್ರೀಯರ ಮಲಗುವ ಫೋಟೋಗಳು, ಇನ್ನೂ ಸ್ತ್ರೀ ಪುರುಷರ ಅನೇಕ ರಹಸ್ಯಗಳು 22 ಬಗೆಗಳ ಫೋಟೋಗಳ ಸಹಿತ ಕಾಣಿಸಿದೆ. ಈ ಶೃಂಗಾರವಾದ ಪುಸ್ತಕವನ್ನು ಓದಲು ಆನಂದವಾಗಿರುವುದು. 22 ಫೋಟೋಗಳ ಸಹಿತ ಪ್ಯಾರಿಸ್ ದೇಶದ ವ್ಯಭಿಚಾರಿಗಳ ವಿನೋದಗಳು, ಕನ್ಯೆಗಳ ಪ್ರೀತಿ, ಶಯ್ಯಾಗೃಹದ ರಹಸ್ಯಗಳು ಅಡಗಿರುತ್ತೆ. ಕ್ರಯ ಪುಸ್ತಕ 1ಕ್ಕೆ ರೂ. ೧—೦—೦.

ಯಂ. ಲಿಂಗಂ ಬುಕ್ ಡಿಪೋ,
ಪೋಸ್ಟ್ ಬಾಕ್ಸ್ ನಂ. 245.
12-4 **ಮದರಾಸ್.**

M. Lingam Book Depot.
Post Box No 245. Madras.

---

೪೦ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕಿ ಕಂಪನಿ ಇವರ

ಜ್ವರದ ಗುಳಿಗೆಗಳು.

ಚಳಿಜ್ವರ, ಚಾತುರ್ಥಿ ಜ್ವರ, ದಿನಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮ ಬಾಣ ದಂತೆ ಇವೆ. ಬಾಟ್ಲಿಗೆ ರೂ. ೧. ಟಿ. ಪಿ. ೭ ಆಣೆ, ಜರೂರು ತರಿಸಿಕೊಳ್ಳಿ.

(52—11) **ಗಣೇಶ ರಾಮಚಂದ್ರ ಕರ್ಕಿ,**
ಮತ್ತು ಕಂಪೆನಿ,
ಗಿರಗಾಂವ, ಮುಂಬಯಿ,

ವರ್ತಮಾನ ಸಂಗ್ರಹ.

ಒಳ ದೇಶ.

ಈ ತಾ. 14 ರಿಂದ ಇಂದಿನ ವರೆಗೆ ಮಡಿಕೇರಿಯಲ್ಲಿ 4-16 ಇಂಚು ಮಳೆಯಾಗಿದೆ.

ಈ ತಾ. 15 ರಲ್ಲಿ ಮೂರ್ನಾಡಿನಲ್ಲಿ ಕುಡಿಯುವ ಅಣ್ಣು ಎಂಬವನು ಬೈಸಿಕಲಿನಿಂದ ಕೆಳಗೆ ಬಿದ್ದು ಮೃತನಾದನೆಂದು ತಿಳಿಯುತ್ತೇವೆ.

'ಕೊಡಗು' ಕಂಪೆನಿಯ ಡೈರೆಕ್ಟರುಗಳ ಮೀಟಿಂಗೊಂದು ಈ ತಾ. 24 ನೇ ಸೋಮವಾರ ಪೂರ್ವಾಹ್ನ 11 ಗಂಟೆಗೆ ವೀರಾಜಪೇಟೆ ಖಾದಿಭಂಡಾರದಲ್ಲಿ ನಡೆಯುವುದು.

ಪೊನ್ನಂಪೇಟೆ ಹಿಂದೂಗಳು ಅಲ್ಲಿಯ ಪುರಾತನವಾದ ಲಿಂಗದ ಬಸವೇಶ್ವರ ದೇವಸ್ಥಾನಕ್ಕೆ ಹರಿಜನರ ಪ್ರವೇಶಕ್ಕೆ ಅಡ್ಡಿ ಇಲ್ಲವೆಂದು ನಿಶ್ಚಯಿಸಿರುವರಾಗಿ ತಿಳಿಯುತ್ತೇವೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ತಾ. 29-10-32 ನೇ ಶನಿವಾರ ದಿನ ಬೆಳಿಗ್ಗೆ 11 ಗಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ನಡೆಯುತ್ತೆ.

ಹೆಬ್ಬಾಲೆಯಲ್ಲಿ ಪ್ಲೇಗ್ ಡ್ಯೂಟಿ ಮಾಡುತ್ತಿದ್ದ ಪೋಲೀಸಿನವನೊಬ್ಬನಿಗೆ ಪ್ಲೇಗು ಅಂಟಿದೆಯೆಂಬ ಸಂಶಯದಿಂದ ಅವನನ್ನು ಮಡಿಕೇರಿ ಪ್ಲೇಗ್ ಶೆಡ್ಡಿನಲ್ಲಿ ಇಟ್ಟಿರುವರಾಗಿ ಸುದ್ದಿ.

ರಜೆಯಲ್ಲಿದ್ದ ಎಗ್ಸಿಕ್ಯುಟಿವ್ ಇಂಜಿನಿಯರಾದ ಮಿ. ಬಿಗ್ನೆಲ್‌ರವರು ರಜೆ ತೀರಿ ಬಂದು ಈ ತಾ. 17 ರಲ್ಲಿ ತಮ್ಮ ಕೆಲಸದ ಚಾರ್ಜನ್ನು ವಹಿಸಿಕೊಂಡಿರುವರೆಂದು ತಿಳಿಯುತ್ತದೆ.

ಈ ತಾ 14 ರಲ್ಲಿ ಸಣ್ಣ ಕಾಡಿನ ಪಂಜರಿಯರವರಲ್ಲಿ ನಾಗರಾಜು ಕಾಳಾಸ್ಥಿಮೆಯವರು ಕಾಡುಕೋಣವೊಂದು ಕಾಡಾನೆ ಮರಿ ಮಸನವರನ್ನು 2 ಗುಂಡುಗಳಿಂದ ಕೊಲ್ಲಿಸಿದರೆಂದು ವರ್ತಮಾನ.

ಇನ್‌ಸ್ಪೆಕ್ಟರಗಳಾದ ರಜೆ ತೀರಿ ಬಂದ ಮಿ. ಕಂಪ್ಲತುಡ ಕಾರ್ಯಪ್ಪನವರು ಸಿದ್ದಾಪುರಕ್ಕೂ, ಮಿ. ಕೋದಂಡ ಮುದ್ದಪ್ಪನವರು ವೀರಾಜಪೇಟೆಗೂ ಈ ತಾ. 20 ರಲ್ಲಿ ವರ್ಗಮಾಡಲ್ಪಟ್ಟಿರುವರಾಗಿಯೂ ತಿಳಿಯುತ್ತದೆ.

ಫ್ರೇಜರ್‌ಪೇಟೆ ಬಳಿ ರಂಗಸಮುದ್ರದ ಬೆಂಬಲ್ಲಿ ಕೆಲವು ದಿವಸಗಳ ಹಿಂದೆ ಬೇಟೆಗೆ ಹೋಗಲು ಕಾವೇರಿ ಸಮೀಪ ಕಾವೇರಿ ನದಿಯನ್ನು ದಾಟಿದಾಗ್ಯೆ ನೀರಿನಲ್ಲಿ ಸಾಯುಗಿ ಹೋದ ಗ್ರಾಮಗಳ ನಂಜಪ್ಪನೆಂಬವರ ಶವವು ಈ ತಾ. 11 ರಲ್ಲಿ ಕಾಣಸಿಕ್ಕಿತೆಂದು ವರ್ತಮಾನ.

ಪೋಲೀಸು ಪ್ರಾಸಿಕ್ಯೂಟಿಂಗ್ ಇನ್‌ಸ್ಪೆಕ್ಟರ್ ಉದ್ಯೋಗಕ್ಕೆ ಆರಿಸಲ್ಪಟ್ಟು ತರಬೇತಿಗಾಗಿ ಬೆಳಗಾಂಗೆ ಕಳುಹಿಸಲ್ಪಟ್ಟಿದ್ದ ಮಿ. ಮಲ್ಲೇಂಗಡ ಮುತ್ತಣ್ಣನವರು ತರಬೇತು ಮುಗಿಸಿಕೊಂಡು ವಾಪಸು ಬಂದಿರುವರು. ಅವರು ಇನ್ನು ಮಡಿಕೇರಿಯಲ್ಲಿ ಕೆಲವು ತಿಂಗಳು ತರಬೇತು ಹೊಂದಲಿಕ್ಕಿರುವರೆಂತ ವರ್ತಮಾನ.

ಕಳೆದ ಕುಲಾಶೋತ್ಸವದಂದು ಕಾವೇರಿ ಜಾತ್ರೆಗೆ ಜನರು ಸೇರಿದ್ದು ಬಹಳ ಕಡಿಮೆಯೆಂತಲೂ, ತೀರ್ಥ ಬಂದ ಕಾತ್ರಿ ಭಾಗಮಂಡಲದ ದೇವಸ್ಥಾನದಲ್ಲಿ ಭಜನೆಮಾಡುತ್ತಿದ್ದಾಗ್ಯೆ ಮಹಾತ್ಮ ಗಾಂಧಿಯವರ ಹೆಸರಿಗೆ ಜಯಘೋಷ ಮಾಡಿದ್ದಕ್ಕಾಗಿ ದಕ್ಷಿಣ ಕನ್ನಡದ ಮೂರುಜನ ಯಾತ್ರಿಕರನ್ನು ಪೋಲೀಸು ಸಬ್ ಇನ್‌ಸ್ಪೆಕ್ಟರು ದಸ್ತಗಿರಿ ಮಾಡಿ, ಲಾಕಪ್ಪಿನಲ್ಲಿಟ್ಟು ಮರು ದಿನ ಬೆಳಿಗ್ಗೆ ಬಿಡುಗಡೆ ಮಾಡಿದರೆಂತಲೂ ವರ್ತಮಾನ.

ಮಡಿಕೇರಿ ಪಾಡುಕಚ್ಚೇರಿ ಕ್ಲಾರ್ಕರಾಗಿದ್ದ ಕುಶಾಲಪ್ಪ ಅರ್ಜುನನವರು ಸರ್ಕಾರದ ಒಂದು ಸಾವಿರದ ನಾಲ್ಕುವರೆಕ್ಕೆಲು ಚಿಲ್ಲರೆ ರೂಪಾಯಿಗಳನ್ನು ದುರುಪಯೋಗಪಡಿಸಿದರೆಂಬ ತಕ್ಸೀರಿಗಾಗಿ ಸಬ್ ಡಿವಿಜನ್ ಕೋರ್ಟಿನಲ್ಲಿ ಈ ತಾ. 14ರಲ್ಲಿ ಜಡ್ಜ್‌ಮೆಂಟ್ ಆಗಿ, ಅವರಿಗೆ ಒಂದು ವರ್ಷ 9 ತಿಂಗಳು ಕಠಿಣ ಸಜೆಯೂ, ಮತ್ತು ದುರುಪಯೋಗಪಡಿಸಿದ ಮೊಬಲಗಿನಷ್ಟು ಜುಲುಮಾನೆಯೂ, ಜುಲುಮಾನೆ ಕೊಡಲು ತಪ್ಪಿದರೆ 9 ತಿಂಗಳು ಹೆಚ್ಚಿನ ಸಜೆಯೂ ವಿಧಿಸಲಾಗಿರುವುದಾಗಿ ತಿಳಿಯುತ್ತೇವೆ.

ಕಳೆದ ಬಿ. ಎ. ಪರೀಕ್ಷೆಯಲ್ಲಿ ಪೂರ್ತಿಯಾಗಿ ಮಿ. ಚೇರಂದಿರ ಕಾರ್ಯಪ್ಪನವರು ಮತ್ತು 1 ನೇ ಭಾಗದಲ್ಲಿ ಮಿ. ಮುಕ್ಕಟಿರ ಯಸ್. ಸುಬ್ಬಯ್ಯನವರೂ, ಇಂಟರ್ ಮೀಡಿಯೇಟ್ ಪರೀಕ್ಷೆಯಲ್ಲಿ ಮಿ. ಗಳಾಡ ಕೆ. ಯಸ್. ಪದ್ಮನಾಭನವರು, ಚಾಮುಮಂಡ ಯಂ. ಐಯ್ಯಪ್ಪನವರು, ಮಾರ್ಪಂಗಡ ಕೆ. ಮಾದಪ್ಪನವರು, ಪೆಮ್ಮಣಮಾಡ ಯಸ್. ಚಂಗಪ್ಪನವರು ಮತ್ತು ಕೋಡಿಮಣಿಯಂಡ ಕೆ. ಮುತ್ತಪ್ಪನವರು ಪೂರ್ತಿಯಾಗಿಯೂ, ಪಾಲೇಕಂಡ ಯಂ. ಸುಬ್ಬಯ್ಯನವರು 1 ನೇ ಮತ್ತು 2 ನೇ ಭಾಗಗಳಲ್ಲೂ, ಮುಕ್ಕ... [illegible] ಟಿ. ಅಪ್ಪಯ್ಯನವರು 2 ನೇ ಮತ್ತು 3 ನೇ ಭಾಗಗಳಲ್ಲೂ ತೇರ್ಗಡೆಯಾಗಿರುವರೆಂದು ತಿಳಿಯುತ್ತೇವೆ. ಇವರೆಲ್ಲರನ್ನು ಅಭಿನಂದಿಸುತ್ತೇವೆ.

ಹೊರ ದೇಶ.

ಎಡಿನ್ಬರೋ ಶಿರೋಮಣಿಕ್ಕೆ ಅಖಿಲಭಾರತ ಪಾರ್ಟಿಯ ಮಂಡಳಿ ಇದು ಒಪ್ಪಿಗೆಯನ್ನಿತ್ತಿರುವುದು.

ಪೇಡಶಾಲೆಯ 2 ದೇವಸ್ಥಾನಗಳೂ, ಪಾಲಕ್ಕಾಡಿನಲ್ಲಿ ಒಂದು ದೇವಸ್ಥಾನವೂ ಹರಿಜನರ ಪ್ರವೇಶಕ್ಕೆ ಬಿಡಲಾಗಿದೆ.

ಬೆಂಗಳೂರಿನಲ್ಲಿ ಔಷಧ ಅಂಗಡಿಯನ್ನು ಪಿಕೆಟ್ ಮಾಡುವುದಕ್ಕಾಗಿ ತಾ. 18ರಲ್ಲಿ 6 ಜನ ಸ್ವಯಂ ಸೇವಕರು ಕೈದು ಮಾಡಲ್ಪಟ್ಟರು.

ಲಾಹೋರಿನ ಜೈಲಿನಲ್ಲಿ ಡಾ. ಆಲಂರವರು ಸ್ವಭಾವದ ಕಾಯಿಲೆಯಿಂದ ನರಳುತ್ತಿರುವರು. ಅವರ ತೂಕವು 46 ಪೌಂಡು ಕಡಿಮೆಯಾಗಿದೆ.

ಕಲ್ಕತ್ತದಲ್ಲಿ ಪೋಲೀಸರ ಹುಕುಂ ಮೀರಿ ಮೆರವಣಿಗೆಗಳನ್ನು ನಡೆಸಿದ್ದಕ್ಕಾಗಿ ತಾ. 17ರಲ್ಲಿ 15 ಜನ ಸ್ವಯಂ ಸೇವಕರಿಗೆ ಸಜೆಯು ವಿಧಿಸಲಾಯಿತು.

ತಾ. 17 ರಲ್ಲಿ ಮದ್ರಾಸಿನಲ್ಲಿ ಪಿಕೆಟ್ ಮಾಡುತ್ತಿದ್ದ 15 ಸ್ವಯಂಸೇವಕರೂ, ಮೆರವಣಿಗೆ ಹೋಗುತ್ತಿದ್ದ 5 ಕಾಂಗ್ರೆಸ್ಸಿನವರೂ ದಸ್ತಗಿರಿಮಾಡಲ್ಪಟ್ಟು, ಸಾಯಂಕಾಲ ಬಿಡುಗಡೆಮಾಡಲ್ಪಟ್ಟರು.

ಪಂಡಿತ ಮಾಳವೀಯರು ಹಿಂದೂ-ಮುಸ್ಲಿಂ-ಸಿಖ್ ಸಮಸ್ಯೆಯನ್ನು ಕುರಿತು ಪಂಜಾಬಿನ ಹಿಂದೂ ಮುಸ್ಲಿಂ ಮುಖಂಡರೊಡನೆ ಸಂಭಾಷಣೆ ನಡಸಿ ಈಗ ಬನಾರಸ್ಸಿಗೆ ಹಿಂತಿರುಗಿರುವರು.

ತಾ. 15ರಲ್ಲಿ ಬೆಂಗಳೂರಿನಲ್ಲಿ ಪಿಕೆಟ್ ಮಾಡುತ್ತಿದ್ದ 4 ಜನರು ಕೈದು ಮಾಡಲ್ಪಟ್ಟದ್ದಲ್ಲದೆ ಕಾಂಗ್ರೆಸ್ಸಿನ ಧ್ವಜ ರಗಟ್ಟಿ ಹಸ್ತ ಪತ್ರಿಕೆಗಳನ್ನು ಪೋಲೀಸಿನವರು ಜಪ್ತಿ ಮಾಡಿಕೊಂಡರು.

3ನೇ ದುಂಡು ಮೇಜು ಪರಿಷತ್ತಿಗೆ ಬ್ರಿಟಿಷ್ ಇಂಡಿಯದಿಂದ 20 ಮುಖಂಡರೂ, ಸಂಸ್ಥಾನಗಳಿಂದ 10 ಮುಖಂಡರೂ ಆಹ್ವಾನಿಸಲ್ಪಡುವರೆಂದೂ, ಅವರಲ್ಲಿ 10 ಬ್ರಿಟಿಷ ಸರ್ಕಾರದ ಪ್ರತಿನಿಧಿಗಳಿರುವರೆಂದೂ ಸುದ್ದಿ.

ಬೆಳಗಾಂ ಡಿಸ್ಟ್ರಿಕ್ಟಿನಲ್ಲಿ ಪ್ಲೇಗಿನ ಹಾವಳಿಯು ಹೆಚ್ಚಾಗಿದೆ. ಕಳೆದ ವಾರ ಅಲ್ಲಿ ಪ್ಲೇಗು ತಗಲಿದ 441 ಜನರಲ್ಲಿ 235 ಮಂದಿ ಮೃತರಾದರು. ಅಡಿಗಾರ 289 ಜನರಿಗೆ ಅಂಟಿ, 176 ಮರಣಗಳುಂಟಾದವು.

ಸಪ್ಟೆಂಬರು ಆಖೈರು ವರೆಗೆ ಮಾರ್ವಾಡ ಡಿಸ್ಟ್ರಿಕ್ಟಿನಲ್ಲಿ ಕಾನೂನುಭಂಗ ಚಳವಳದಲ್ಲಿ ದಸ್ತಗಿರಿ ಮಾಡಲ್ಪಟ್ಟ 2388 ಜನರ ಪೈಕಿ 1126 ಜನರು ಪಡತ್ರ ಶಿಕ್ಷಿಸಲ್ಪಟ್ಟರೆಂತಲೂ, ಅವರಲ್ಲಿ 100 ಮಂದಿ ಸ್ತ್ರೀಯರೆಂತಲೂ ತಿಳಿಯುವುದಿದೆ.

ಮಂಗಳೂರಿನ ಬಳಿ ನಡೆಯುವ ಎಂಬಲ್ಲಿ ರಾಜಕೀಯ ಕಾನ್ಫರೆನ್ಸು ನಡಸಿದರೆಂಬ ಕಾರಣದಿಂದ ಮಿಸ್ ಸುಶೀಲಾ ಬಾಯಿಯವರು ಮತ್ತು 12 ಸ್ವಯಂ ಸೇವಕರು ಈ ತಾ. 12ರಲ್ಲಿ ದಸ್ತಗಿರಿ ಮಾಡಲ್ಪಟ್ಟು, ಅದೇ ಸಾಯಂಕಾಲ ಬಿಡುಗಡೆ ಮಾಡಲ್ಪಟ್ಟರು.

ಸರ್ ಪುರುಷೋತ್ತಮದಾಸ್ ಠಾಕೂರ್‌ದಾಸ್‌ರವರು 3 ನೇ ದುಂಡು ಮೇಜು ಪರಿಷತ್ತಿಗೆ ಹೋಗಲು ಆಮಂತ್ರಣವನ್ನು ಅಂಗೀಕರಿಸುವರಂತೆಯೂ, ಇದು ವಿರಾ ಪೆ. ಜಯಕರರಿಗೆ ಆಮಂತ್ರಣ ಬಂದ ಸುದ್ದಿ ಇಲ್ಲವೆಂತಲೂ ವರ್ತಮಾನ.

ಭೂ ಕಂದಾಯ ಮತ್ತು ನೀರು ತೆರಿಗೆಯನ್ನು ಶೇಕಡ 50ರಷ್ಟು ಕಡಿಮೆ ಮಾಡಬೇಕೆಂಬ ಠರಾವು ಪಂಜಾಬ ಪ್ರಾಂತ್ಯದ ಕೌನ್ಸಿಲಿನಲ್ಲಿ ಬಹುಮತದಿಂದ ಪಾಸಾಯಿತು. ಇದರಿಂದ ಅಲ್ಲಿಯ ಸರ್ಕಾರದ ಉತ್ಪತ್ತಿಯಲ್ಲಿ 17 ಲಕ್ಷ ರೂ. ಕಡಿಮೆಯಾಗುವುದು.

ಜೈಲು ಅಧಿಕಾರಿಗಳು ರಾಜಕೀಯ ಕೈದಿಗಳನ್ನು ಕೆಟ್ಟ ರೀತಿಯಿಂದ ಕಾಣುತ್ತಿರುವುದನ್ನು ಪ್ರತಿಭಟಿಸುವುದಕ್ಕಾಗಿ ಗಯಾದ ಜೈಲಿನಲ್ಲಿ ಒಬ್ಬ ಸಿಂಗರೆಂಬ ಕೈದಿಯು 54 ದಿವಸಗಳಿಂದಲೂ, ಕೇದಾರರಾಮ ಶುಕ್ಲರೆಂಬವರು 38 ದಿವಸಗಳಿಂದಲೂ ಉಪವಾಸ ಮಾಡುತ್ತಿರುವರಂತೆ!

ಬೊಂಬಾಯಿಯ ಯುರೋಪಿಯನ್ ಹತ್ತಿ ಕಂಪೆನಿಗಳು ಮಹಾತ್ಮರ ಬಿಡುಗಡೆಯ ಕೋರಿಕೆಗೆ ಒತ್ತಾಸೆಯನ್ನಿತ್ತು 'ಇಂಡಿಯನ್' ವ್ಯಾಪಾರಿಗಳೊಡನೆ ರಾಜಿಯಾಗಿರುವುದರಿಂದ ಕಾಂಗ್ರೆಸು ಸ್ವಯಂಸೇವಕರು ಹತ್ತಿ ಮಾರ್ಕೆಟನ್ನು ಪಿಕೆಟ್ ಮಾಡುವುದನ್ನು ಬಾಕಿ ಮಾಡಿರುವರು.

ಸ್ಕೂಲುಗಳು, ಕೋರ್ಟುಗಳು ಆಫೀಸುಗಳು, ಚಾವಡಿಗಳು, ಧರ್ಮಶಾಲೆಗಳೇ ಮುಂತಾದ ಪಬ್ಲಿಕ್ ಸ್ಥಳಗಳಲ್ಲಿ ಅಸ್ಪೃಶ್ಯರ ಪ್ರವೇಶವನ್ನು ಈ ತಾ. 18ರಿಂದ ಇಟ್ಟುಕೊಳ್ಳಕೂಡದೆಂದು ಭೋರ್ ಸಂಸ್ಥಾನದ ಅರಸರಾದ ಚೀಫ್ ಸಾಹೇಬರವರು ಕೌನ್ಸಿಲಿನಲ್ಲಿ ಪ್ರಕಟಿಸಿರುವರು.

ಬಂಗಾಳದ ಚಿತಗಾಂಗಿನಲ್ಲಿ ಕೆಲವರಿಗೆ ಅವರ ಮನೆಬಿಟ್ಟು ಒಂದು ತಿಂಗಳ ವರೆಗೆ ಎಲ್ಲಿಗೂ ಹೋಗಕೂಡದೆಂದು ಅಲ್ಲಿಯ ಅಧಿಕಾರಿಗಳ ಹುಕುಂ ಆಗಿದೆ. ಕ್ರಾಂತಿಕಾರರ ಪಕ್ಷಕ್ಕೆ ಇವರು ಸಹಾಯ ಮಾಡುತ್ತಿರಬಹುದೆಂಬ ಸಂಶಯವೇ ಈ ಹುಕುಮಿಗೆ ಕಾರಣವಂತೆ. ಅವರ ಮನೆಯೇ ಅವರಿಗೆ ಜೈಲಾಯಿತು!

ಈ ತಾ. 11ರಲ್ಲಿ ಮಧುರೆ ಪಟ್ಟಣದಲ್ಲಿ ಕಲ್ಲಂದಾಯಿ ಸನ್ನಿಧಿಯೆಂಬ ಬಹಳ ಹಳೆ ಮನುಷ್ಯನೊಬ್ಬನು ಮೃತನಾದನು. ಅವನಿಗೆ 245 ವರ್ಷ ವಯಸ್ಸಾಗುತ್ತಿತ್ತೆಂತಲೂ, ಈ ಮಾದರಿ ನಾಲ್ಕು ತಲೆ ಜೀವ ಮಾಡಿಸಿ ಭೂತಹ ವಿರುಕಿಸಿಕೊಂಡಿದ್ದನೆಂತಲೂ, ಪ್ರಪಂಚದಲ್ಲಿ ಇದನ್ನು ವಯಸ್ಸಾದವನು ಈ ಕಾಲದಲ್ಲಿ ಯಾರೂ ಇಲ್ಲವೆಂತಲೂ, ಇವರ ಸಾವಿನ ಮೆರವಣಿಗೆ ಸಾವಿರಗಟ್ಟಲೆ ಜನರು ನೆರೆದಿದ್ದರೆಂತಲೂ ವರ್ತಮಾನ.

ಹಿಂದೂ ಪೇಶಾನ ರಚನೆಯನ್ನು ತಯಾರಿಸುವ ಅಖೈರು ಕಾಲದಲ್ಲಿ ಕಾಂಗ್ರೆಸ್ಸಿನವರ ಸಹಕಾರವು ಅತ್ಯಗತ್ಯವಾಗಿರುವುದರಿಂದ ಮಹಾತ್ಮ ಗಾಂಧಿಯವರನ್ನು, ಸತ್ಯಾಗ್ರಹ ಕೈದಿಗಳನ್ನು ಕೂಡಲೆ ಸರ್ಕಾರದವರು ಬಿಡುಗಡೆಮಾಡಬೇಕೆಂತಲೂ, ಆರ್ಡಿನೆನ್ಸುಗಳನ್ನು ಸಾರ್ವಜನಿಕ ವಾಪಸಾಗಿ ಪಡೆಯುವುದನ್ನು ಚಾಚಿಸಬೇಕೆಂತಲೂ ದಕ್ಷಿಣ ಸಭೆಯ ಕೌನ್ಸಿಲಿನವರ ಠರಾವು [illegible].

ಹರಿಜನರನ್ನು ಸೇರಿಸಿಕೊಳ್ಳಲು ತಿರಸ್ಕರಿಸುವ ಅಥವಾ ಅವರಿಗೆ ಬೇರೆಯವರೊಂದಿಗೆ ಸಮಾನತೆ ಕೊಡದೆ ಇರುವ ಸರ್ಕಾರಿ, ಮುನ್ಸಿಪಲ್, ಡಿಸ್ಟ್ರಿಕ್ಟ್ ಯಾ ಲೋಕಲ್ ಬೋರ್ಡ್ ಮತ್ತು ಸರ್ಕಾರಿ ಸಹಾಯದಿಂದ ನಡೆಯುವ ಎಲ್ಲಾ ಪ್ರೈಮರಿ ಮತ್ತು ಸೆಕೆಂಡರಿ ಶಾಲೆಗಳಿಗೂ, ಆಸ್ಪತ್ರೆಗಳಿಗೂ ಸರ್ಕಾರದವರು ಕೊಡುವ ದ್ರವ್ಯಸಹಾಯವನ್ನು ಕಡಿಮೆ ಮಾಡಬೇಕೆಂಬ ಠರಾವು ಬೊಂಬಾಯಿ ಕೌನ್ಸಿಲಿನಲ್ಲಿ ಪಾಸಾಯಿತು.

ಈ ತಾ 17 ರಲ್ಲಿ ಲಾಹೋರಿನಲ್ಲಿ ಒಬ್ಬ ಆಗಸನು ಬಟ್ಟೆ ಒಗೆಯುತ್ತಿದ್ದಾಗ್ಯೆ ಬಂದೂವರೆ ಅಡಿ ಉದ್ದದ ಒಂದು ಹಾವು ಅವನನ್ನು ಕಚ್ಚಿತು. ಕೂಡಲೆ ಅವನು ಆ ಹಾವನ್ನು ಹಿಡಿದು ಕಚ್ಚಿ ತಲೆಯನ್ನು ಮುಂಡದಿಂದ ಬೇರ್ಪಡಿಸಿದನು. 5 ನಿಮಿಷದೊಳಗೆ ಅವನ ಕಣ್ಣು, ಬಾಯಿ, ಕಿವಿ ಮತ್ತು ಮೂಗುಗಳಿಂದ ರಕ್ತದ ಹನಿಗಳು ಬೀಳಲಾರಂಭಿಸಿದವು! ಅವನನ್ನು ಆಸ್ಪತ್ರೆಗೆ ಸಾಗಿಸಿ 'ಇಂಜೆಕ್ಷನ್' ಕೊಟ್ಟ ಮೇಲೆ ಗುಣವಾದನಂತೆ.

ನವಂಬರು ತಾ. 12 ಯಾ 19ರಲ್ಲಿ ಲಂಡನಿನಲ್ಲಿ ಸೇರುವ ಭವಿಷ್ಯದ 3ನೇ ದುಂಡು ಮೇಜು ಪರಿಷತ್ತಿಗೆ ಈ ಕೆಳಗಿನ ಮಹನೀಯರು ಆಹ್ವಾನಿಸಲ್ಪಡುವರೆಂದು 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಯ ಊಹೆ. ಆಗಾಖಾನ್, ಸರ್. ಕಾಸಿಂ ಜಹಾಂಗೀರ್, ಡಾ. ಅಂಬೇಡ್ಕರ್, ಜಯಕರ್, ಸರ್ ತೇಜ್ ಬಹದ್ದೂರ್ ಸಪ್ರು, ಡಾ. ಸಾಫತ್ ಅಹ್ಮದ್‌ಖಾನ್, ಸರ್ ಎ. ಪಿ. ಪಾತ್ರೊ, ರಾಮಸ್ವಾಮಿ ಮೊದಲಿಯಾರ್, ಚಿಂತಾಮಣಿ, ಗಜ್ನವಿ, ಜೋಷಿ, ಸರ್ ಹ್ಯೂಬರ್ಟ್ ಕಾರ್, ಬೆಂಥಾಲ್, ಜಫರುಲ್ಲಾಖಾನ್, ಸರ್. ಹೆಚ್. ಗಿಡ್ನಿ, ಸರ್ ಮಹಮ್ಮದ್ ಇಕ್ಬಾಲ್, ಸಯ್ಯದ್ ಸುಲ್ತಾನ್ ಸೈ. ಇವರಲ್ಲಿ ಹಲವರು ಈ ತಾ. 29ರಲ್ಲಿ ಇಂಗ್ಲೆಂಡಿಗೆ ಹೊರಡುವರೆಂದು ವರ್ತಮಾನ.

ವಿ ದೇ ಶ.

ಜರ್ಮನಿಗೂ, ಫ್ರಾನ್ಸಿಗೂ ಯುದ್ಧದ ಸನ್ನಾಹಗಳು ನಡೆಯುತ್ತಿವೆಯೆಂದು ಹೊರಬಿದ್ದ ವರ್ತಮಾನದಲ್ಲಿ ಸತ್ಯವೇನೂ ಇಲ್ಲವೆಂದು ಅಲ್ಲಿಯ ಸರ್ಕಾರಗಳು ಪ್ರಕಟಿಸಿರುವುವು.

ಐರ್ಲೆಂಡಿನ ಸರ್ಕಾರವು ಬ್ರಿಟಿಷ್ ಸರ್ಕಾರಕ್ಕೆ ಕೊಡಬೇಕಾಗಿರುವ ಭೂ ಕಪ್ಪವನ್ನು ಕುರಿತು ಪುನಹ ಲಂಡನಿನಲ್ಲಿ ಡಿ ವೇಲರನವರೂ, ಬ್ರಿಟಿಷ್ ಮಂತ್ರಿಗಳೂ ಸಂಭಾಷಣೆ ನಡಸಿದರು ಏನೊಂದೂ ತೀರ್ಮಾನಕ್ಕೆ ಬರಲಿಲ್ಲ.

ಮಹಾತ್ಮ ಗಾಂಧಿಯವರನ್ನೂ, 60,000 ಹಿಂದಿಯರನ್ನೂ ಜೈಲಿಗೆ ಕಳುಹಿಸಿದ ಸರ್ಕಾರದವರ ಕೃತ್ಯವನ್ನು ವಿರೋಧಿಸದೆ ಇರುವ ಲೇಬರ್ ಪಾರ್ಟಿ ಪಾರ್ಲಿಮೆಂಟ್ ಮೆಂಬರುಗಳು ಇಂಡಿಯದ ಸ್ನೇಹಿತರಲ್ಲವೆಂತಲೂ, ಅಧಿಕಾರದಲ್ಲಿರುವ ಇಂಡಿಯಾ ಲೀಗಿನಲ್ಲಿ ತನಗಿರಲು ಇಷ್ಟವಿಲ್ಲವಾದುದರಿಂದ ತಾನು ಅದರ ಸದಸ್ಯತನಕ್ಕೆ ರಾಜಿನಾಮೆಕೊಟ್ಟಿರುತ್ತೇನೆಂದೂ ಮಿ. ಫೆನ್ನರ್ ಬ್ರಾಕ್ವೆ ಯವರು ಪ್ರಕಟಿಸಿರುವರು.

ಜೋಹಾನಸ್‌ಬರ್ಗ್ ಎಂಬಲ್ಲಿ ಮಿಸೆಸ್ ಡೈಸಿ ಲೂಯಿಸ್ ಡಿವಿಲ್ಲರ್ಸ್ ಎಂಬ ಮುದಿ ನರ್ಸ್ ಒಬ್ಬಳು ತನ್ನ ಇಬ್ಬರು ಗಂಡಂದಿರನ್ನೂ, 20 ವರ್ಷ ಪ್ರಾಯದ ಒಬ್ಬ ಮಗನನ್ನೂ ಕೊಂದಳೆಂದು ಅವಳ ಮೇಲೆ ಮೊಕದ್ದಮೆ ನಡೆಯುತ್ತಿದೆ. ಅವಳ ಗಂಡಂದಿರಿಬ್ಬರು (ಒಬ್ಬನ ನಂತರ ಇನ್ನೊಬ್ಬನು) ತಮ್ಮ ಹಣವನ್ನು ಅವಳ ಹೆಸರಿಗೆ 'ವಿಲ್' ಬರೆದ ನಂತರ ಅವಳು ಅವರಿಗೆ ವಿಷಹಾಕಿದಳೆಂತಲೂ, ಮರಣ ವಿಮೆ ಹಣಕ್ಕಾಗಿ ತನ್ನ ಮಗನಿಗೂ ವಿಷಕೊಟ್ಟಳೆಂತಲೂ ಅವಳ ಮೇಲಿನ ಅಪರಾಧ. ಇವಳೆಂಥಾ ರಾಕ್ಷಸಿ!

ವಿ ಜ್ಞಾ ಪ ನೆ.

ಕಪ್ಪು ವರ್ಣದ, ಸುಮಾರು ಮುಕ್ಕಾಲು ಅಡಿ ಉದ್ದದ ಸೆಬ್ಬಗೋಟಿನ ಮತ, ಮಧ್ಯ ತುದಿಯ ಸಣ್ಣ ಹಸು ಒಂದು ಕಾಣೆಯಾಗಿರುವುದು. ಇದರ ವಿಷಯ ಸೂಚನೆಯನ್ನು ಪ್ರಕಟ ಕೊಟ್ಟವರಿಗೆ 3 ರೂ. ಬಹುಮಾನ ಕೊಡಲಾಗುವುದು.

ತಾ. 14-10-32

ಬಿ. ಸಿ. ಸಬ್ಬಯ್ಯ,
ಲಾಯರು,
ಮಡಿಕೇರಿ

ವಿ ಜ್ಞಾ ಪ ನೆ.

ಕೊಡಗಿನ ಮುಂದಿನ ರಾಜಕೀಯ ಕ್ರಮವನ್ನು ಕುರಿತು ಕನ್ನಡದಲ್ಲಿ ಬರೆದ ಪುಟಕ್ಕೆ ಮೀರದ ಒಳ್ಳೆ ಪ್ರಬಂಧವನ್ನು ಬರೆದು, ಬರುವ ನವಂಬರು 15ರೊಳಗೆ ಕಳುಹಿಸಿದರೆ, ಆ ಪೈಕಿ ಅತ್ಯುತ್ತಮವಾದ ಪ್ರಬಂಧಕ್ಕೆ 5 ರೂಪಾಯಿ ಇನಾಮು ಕೊಡಲ್ಪಡುವುದು. ಪ್ರತಿಯೊಬ್ಬ ಗ್ರಾಮ ಸ್ಥರೂ, ವಿದ್ಯಾರ್ಥಿಯೂ, ಸರಕಾರಿ ನೌಕರನೂ ಮತ್ತು ನಗರವಾಸಿಯೂ ತಮ್ಮ ತಮ್ಮ ಮನಸಿನ ಅಭಿಪ್ರಾಯಗಳನ್ನು ಹೊರಗೆಡಹಲು ಈ ಸ್ಪರ್ಧೆಯು ಅನುವಾಗುತ್ತದೆ. ಅತ್ಯುತ್ತಮವಾಗಿ ಕಂಡುಬರುವ ಪ್ರಬಂಧವು ಸಣ್ಣ ಪುಸ್ತಕ ರೂಪದಲ್ಲಿ ಪ್ರಕಟಿಸಲ್ಪಡುವುದು. ಉಪನ್ಯಾಸಗಳನ್ನು ವಿಮರ್ಶಿಸುವ ಬಗ್ಗೆ ಪ್ರತಿಯೊಂದು ಉಪನ್ಯಾಸದೊಂದಿಗೆ ಎರಡು ಆಣೆ ಟಪಾಲು ಸ್ಟಾಂಪನ್ನು ಕಳುಹಿಸತಕ್ಕದ್ದು. ಸ್ಟಾಂಪು ಕಳುಹಿಸದ ಉಪನ್ಯಾಸಗಳನ್ನು ಅಂಗೀಕರಿಸುವುದಿಲ್ಲ. ಈ ಕೆಳಗಿನ ವಿಳಾಸಕ್ಕೆ ನಿಮ್ಮ ಎಲ್ಲಾ ಪತ್ರಗಳನ್ನು ಕಳುಹಿಸಿ.

ಪ್ರಬಂಧ ವಿಮರ್ಶಕರು,

ಕೊಡಗು.

ಸನ್ ೧೯೩೨ನೇ ಇಸವಿ

ಅಕ್ಟೋಬರ್ ತಾ. ೨೧ನೇ ಶುಕ್ರವಾರ.

ಪ್ರೆಸ್ ಆರ್ಡಿನೇನ್ಸ್

ಜಾರಿಯಲ್ಲಿರುವವರೆಗೆ

ನಾವು

ಅಗ್ರಲೇಖನ

ವನ್ನು

ಪ್ರಕಟಿಸುವುದಿಲ್ಲ.

ಮುಂದಾಳುಗಳ ಸಂಭಾಷಣೆ.

ಮಹಾತ್ಮ ಗಾಂಧಿಯವರ ಉಪವಾಸ ವ್ರತದಿಂದ ಅಸ್ಪೃಶ್ಯರೆನಿಸಿಕೊಂಡವರಿಗೂ, ಮೇಲ್ಜಾತಿ ಹಿಂದೂಗಳಿಗೂ ಇದ್ದಂಥ ಭೇದಭಾವಗಳು ಹೋಗಲಾಡಿಸಲ್ಪಟ್ಟು, ಸರಕಾರದವರು ಹರಿಜನರಿಗೆ ಇಟ್ಟಿದ್ದ ಪ್ರತ್ಯೇಕ ಚುನಾವಣೆಯು ಏರ್ಪಾಡು ಬದಲಾಯಿಸಲ್ಪಟ್ಟದನ್ನು ನೋಡಿ ಮುಸ್ಲಿಂ ಮುಖಂಡರೂ ಹಾಗೂ ಹಿಂದೂ ಧುರೀಣರೂ ಹಿಂದೂ-ಮುಸ್ಲಿಂ ಸಮಸ್ಯೆಯನ್ನು ತೀರ್ಮಾನಿಸಲು ಇದೀಗ ತಕ್ಕ ಸಮಯವೆಂದು ತಿಳಿದುಕೊಂಡರು. ಹಾಗೆಯೇ ಮುಸ್ಲಿಂ ರಾಷ್ಟ್ರೀಯ ಪಕ್ಷದವರಾದ ಅಬುಲ್ ಕಲಾಂ ಅಜಾದ್‌ರವರು ಮತ್ತು (ಕಾಂಗ್ರೆಸಿನ ಖಾಯಂ ಕಾರ್ಯದರ್ಶಿಯಾದ) ಡಾ. ಸಯ್ಯದ್ ಮಹಮ್ಮದ್‌ರವರು ಈ ತಿಂಗಳ ಪ್ರಾರಂಭದಲ್ಲಿ ಪಂಡಿತ ಮದನಮೋಹನ ಮಾಳವೀಯರೊಂದಿಗೂ, ಮೌಲಾನಾ ಶೌಕತ್ ಅಲಿ ಮತ್ತು ಖಿಲಾಫತ್ ಕಮಿಟಿಯ ಅಧ್ಯಕ್ಷರಾದ ಶೇಕ್ ಅಬ್ದುಲ್ ಮಜೀದ್‌ರವರೊಂದಿಗೂ ಬೊಂಬಾಯಿಯಲ್ಲಿ ರಾಜಿಮಾತುಗಳನ್ನು ನಡಿಸಿದರು. ಇದರ ಫಲಿತಾಂಶವಾಗಿ ಪಂಡಿತ ಮಾಳವೀಯರು ಶೌಕತ್ ಅಲಿಯವರನ್ನು ಭೇಟಿಮಾಡಿ 2 ಗಂಟೆ ಕಾಲ ಸಂಭಾಷಣೆ ನಡಿಸಿದರು. ಮಹಾತ್ಮರ ಭೀಷ್ಮ ಪ್ರತಿಜ್ಞೆಯ ಪ್ರಭಾವದಿಂದಲೋ ಏನೋ, ಶೌಕತ್ ಅಲಿಯವರ ಮನಸ್ಸು ಒಮ್ಮೆಗೆ ಬದಲಾಯಿತು. ಆದ್ದರಿಂದ ಹಿಂದೂ ಮುಸಲ್ಮಾನರೊಳಗೆ ಒಗ್ಗಟ್ಟನ್ನು ಸಾಧಿಸುವುದು ಅತ್ಯಗತ್ಯವೆಂದು ಶೌಕತ್ ಅಲಿಯವರು ನಿರ್ಧರಿಸಿ, ಈ ವಿಷಯ ಮುಸ್ಲಿಂ ಮುಂದಾಳುಗಳ ಅಭಿಪ್ರಾಯ ಕೇಳಲು ಈ ತಾ. 15 ಮತ್ತು 16ರಲ್ಲಿ ಲಕ್ನೋದಲ್ಲಿ ಅಖಿಲ ಪಾರ್ಟಿ ಮುಸ್ಲಿಂ ಕಾನ್ಫರೆನ್ಸೊಂದನ್ನು ನಡಿಸಲು ಏರ್ಪಾಡ ಮಾಡಿದರು.

ಹಿಂದೂ-ಮುಸ್ಲಿಂ ಸಮಸ್ಯೆ.

ಜಯಪ್ರದವಾದ ಲಕ್ನೋ ಪರಿಷತ್ತು.

ಮುಸ್ಲಿಂ ಮುಖಂಡರೊಳಗೆ ಒಪ್ಪಿಗೆ.

ಹಿಂದೂ ಮುಂದಾಳುಗಳೊಡನೆ ಮಾತು ನಡಿಸಲು ಮುಸ್ಲಿಂ ಧುರೀಣರ ಕಮಿಟಿ ನೇಮಕ.

'ಎರಡು ವಾರಗಳೊಳಗೆ ಒಗ್ಗಟ್ಟಿನ ಇಂಡಿಯಾ'ವಾಗುವದೆಂದು ಶೌಕತ್ ಅಲಿಯವರ ಹೇಳಿಕೆ.

ಮಹಾತ್ಮರನ್ನು ಬಿಡುಗಡೆಮಾಡಬೇಕೆಂದು ಯೂರೋಪಿಯನ್ ಕಂಪೆನಿಗಳ ಕೋರಿಕೆ.

ಆದರೆ ಅಖಿಲ ಭಾರತ ಮುಸ್ಲಿಂ ಕಾನ್ಫರೆನ್ಸಿನ ಅಧ್ಯಕ್ಷರಾದ ಸರ್ ಮಹಮ್ಮದ್ ಇಕ್ಬಾಲ್‌ರವರು ಮತ್ತು ಅವರ ಪಾರ್ಟಿಯವರು ಕೆಲವರು ಈ ಕಾನ್ಫರೆನ್ಸಿಗೆ ವಿರೋಧವಾಗಿ ಅಭಿಪ್ರಾಯ ಸೂಚಿಸಿದರು. ಹಿಂದೂಗಳು ಮುಂದೆ ಒಂದು ತಮ್ಮ ಶರತ್ತುಗಳನ್ನು ಸೂಚಿಸಿ, ರಾಜಿಯಾಗಲು ಕೇಳಿಕೊಂಡ ಹೊರತು ಮುಸಲ್ಮಾನರು ಈ ವಿಷಯ ಆಲೋಚಿಸುವ ಅವಶ್ಯವಿಲ್ಲವೆಂದೂ, ಆದಕಾರಣ ತಾವು ಈ ಸಭೆಗೆ ಬರುವುದಿಲ್ಲವೆಂದೂ ಪ್ರಕಟಿಸಿದರು. ಇದಕ್ಕೆ ಬಂಗಾಳದ ಕೆಲವು ಮುಸಲ್ಮಾನರು ಒತ್ತಾಸೆಕೊಟ್ಟರು.

ಶೌಕತ್ ಅಲಿಯವರ ಬದಲಾವಣೆ.

ಇಷ್ಟು ಮಾತ್ರವಲ್ಲ, ಹಿಂದೂ ಮುಸಲ್ಮಾನರ ಸಮಸ್ಯೆಯನ್ನು ಬಿಡಿಸಲು ಮಹಾತ್ಮ ಗಾಂಧಿಯವರ ಸಹಕಾರವು ಅಗತ್ಯವಾಗಿರುವುದರಿಂದ ಅವರನ್ನು ಜೈಲಿನಿಂದ ಕೂಡಲೆ ಬಿಡುಗಡೆ ಮಾಡಬೇಕೆಂತಲೂ, ಇದು ಸಾಧ್ಯವಿಲ್ಲದೆ ಹೋದರೆ ಅವರು ಹೊರಗಿನವರೊಂದಿಗೆ ಏನೊಂದೂ ಅಡಚಣೆ ಇಲ್ಲದೆ ಸಂಭಾಷಣೆ ನಡೆಸಲು ಬಿಡಬೇಕೆಂತಲೂ ಮೌಲಾನಾ ಶೌಕತ್ ಅಲಿಯವರು ವೈಸರಾಯರಿಗೆ ತಂತೀ ಕಳುಹಿಸಿದರು. ಆದರೆ ವೈಸರಾಯರು ಉತ್ತೇಜನಕರವಾದ ಜವಾಬನ್ನು ಕೊಡಲಿಲ್ಲ. 'ಹಿಂದೂ-ಮುಸ್ಲಿಂ ಒಗ್ಗಟ್ಟನ್ನು ಸಾಧಿಸುವ ಮುಂಚೆ, ಈ ಕಾರ್ಯಕ್ಕೆ ನಿಮಗೆ ಮುಸಲ್ಮಾನರೆಲ್ಲರ ಒತ್ತಾಸೆ ಇದೆಯೋ ಎಂದು ನೋಡಿ' ಎಂದು ಮುಂತಾಗಿ ವೈಸರಾಯರ ಉತ್ತರ ಬಂದರೂ ಮೌಲಾನರವರು ಎದೆಗುಂದಲಿಲ್ಲ.

ಅಲ್ಲದೆ, ಮೌಲಾನರವರು, 'ತಮಗೆ ಹಿಂದೀಯರ ಮೇಲಿರುವ ಮಹತ್ವಾದ ಶಕ್ತಿಯನ್ನು ಹಿಂದೂ-ಮುಸಲ್ಮಾನರ ಒಗ್ಗಟ್ಟನ್ನು ಸಾಧಿಸಲು ಉಪಯೋಗಿಸಬೇಕೆಂದು' ಮಹಾತ್ಮ ಗಾಂಧಿಯವರನ್ನು ತಂತೀ ಮೂಲಕ ಬೇಡಿಕೊಂಡರು. ಮಹಾತ್ಮರು ಶೌಕತ್ ಅಲಿಯವರ [illegible] ನೋಡಿ ಸಂತೋಷಪಟ್ಟು, ತನ್ನ ಸಂಪೂರ್ಣ ಸಹಾನುಭೂತಿಯನ್ನು ಸೂಚಿಸಿ ಜವಾಬುಕೊಟ್ಟರು.

ಲಕ್ನೋ ಕಾನ್ಫರೆನ್ಸ್.

ಮುಸಲ್ಮಾನರ ಎಲ್ಲಾ ಪಾರ್ಟಿಗಳ ಮುಂದಾಳುಗಳ ಕಾನ್ಫರೆನ್ಸು ಈ ತಾ. 15ರಲ್ಲಿ ಸಾಲೆಂಪುರದ ರಾಜರವರ ಅಧ್ಯಕ್ಷತೆಯಲ್ಲಿ ಲಕ್ನೋದಲ್ಲಿ ನಡೆಯಿತು. ಅದಕ್ಕೆ ಸರ್. ಮಹಮ್ಮದ್ ಇಕ್ಬಾಲ್‌ರವರ ಪಾರ್ಟಿಯವರು ಮತ್ತು ಬಂಗಾಳದ ಕೆಲವು ಮುಸಲ್ಮಾನರು ಬಾರದೆ ಹೋದರೂ, ಮುಸ್ಲಿಂ ಲೀಗಿನ ಬೊಂಬಾಯಿ, ಮದ್ರಾಸು, ಬಂಗಾಳ ಮತ್ತು ಅಸ್ಸಾಂ ಶಾಖೆಗಳೂ, ಇಕ್ಬಾಲ್‌ರವರು ಅಧ್ಯಕ್ಷರಾಗಿರುವ ಅಖಿಲ ಮುಸ್ಲಿಂ ಕಾನ್ಫರೆನ್ಸಿನ ವೈಸ್ ಪ್ರೆಸಿಡೆಂಟರುಗಳಾದ ಸಾಲೆಂಪುರದ ರಾಜರು ಮತ್ತು ಶೌಕತ್ ಅಲಿಯವರೂ, ಅಖಿಲ ಭಾರತ ಖಿಲಾಫತ್ ಕಾನ್ಫರೆನ್ಸಿನವರೂ, ಜಮಿಯತ್ ಉಲ್ ಉಲೆಮಾ-ಇ-ಹಿಂದ್‌ನವರೂ, ಮುಸ್ಲಿಂ ನ್ಯಾಶನಲಿಸ್ಟ್ ಪಾರ್ಟಿಯವರೂ, ಅಖಿಲ ಭಾರತ ಶಿಯಾ ಕಾನ್ಫರೆನ್ಸಿನವರೇ ಮೊದಲಾದ 26 ಸಂಸ್ಥೆಗಳ ಪ್ರತಿನಿಧಿಗಳು ಈ ಪರಿಷತ್ತಿನಲ್ಲಿ ಭಾಗಿಗಳಾಗಿದ್ದರು.

ತಾ. 15 ರಲ್ಲಿ ನೆರೆದಿದ್ದ ಮುಖಂಡರು ಗುಂಪು ಗುಂಪಾಗಿ ಸೇರಿ ಖಾಸಗಿಯಾಗಿ ಚರ್ಚೆ ನಡೆಸಿದರು. ಈ ಮಧ್ಯೆ, 'ಹಿಂದೂ ಮುಖಂಡರೊಡನೆ ರಾಜಿಸಂಧಾನಗಳನ್ನು ನಡಿಸಲು ಲಕ್ನೋ ಕಾನ್ಫರೆನ್ಸಿನವರು ಒಂದು ಕಮಿಟಿಯನ್ನು ನೇಮಿಸುವುದು ಉತ್ತಮ'ವೆಂದು ಪಂಡಿತ ಮಾಳವೀಯರು ತಂತೀ ಕಳುಹಿಸಿದರು. ಅಲ್ಲದೆ, 'ಮುಸಲ್ಮಾನರು ತಮ್ಮ 14 ಶರತ್ತುಗಳನ್ನು ಬಿಟ್ಟುಕೊಡಬಾರದಾದರೂ, ಮಿಶ್ರಚುನಾವಣೆಯ ತತ್ವದ ಮೇಲೆ ರಾಜಿಸಂಧಾನಗಳನ್ನು ನಡಿಸಲು ಸಾಧ್ಯವಿದ್ದರೆ ಆ ಸಂದರ್ಭವನ್ನು ಬಿಟ್ಟುಬಿಡಬಾರದು' ಎಂದು ಮಿ. ಜಿನ್ನಾರವರ ತಂತಿಯು ಇಂಗ್ಲೆಂಡಿನಿಂದ ಬಂತು. ಇಂಥ ಸೂಚನೆಗಳು ನೆರೆದಿರುವರಿಗೆ ಹೆಚ್ಚಿನ ಉತ್ತೇಜನಕೊಟ್ಟವು. ಆ ದಿನ ರಾತ್ರಿ 20 ಜನರ ಒಂದು ಕಮಿಟಿಯು ಮರುದಿನ ಸಭೆಯ ಮುಂದಿಡಲು ಠರಾವುಗಳನ್ನು ತಯಾರಿಸಿತು.

ತಾ. 16 ರಲ್ಲಿ ಕಾನ್ಫರೆನ್ಸು ನಡೆದು ಈ ಕೆಳಗಿನ ತೀರ್ಮಾನಗಳನ್ನು ಸರ್ವಸಮ್ಮತದಿಂದ ಪಾಸುಮಾಡಿದರು.

'ಇಂಡಿಯಾದ ಮುಸಲ್ಮಾನರ ನ್ಯಾಯವಾದ ಅಪೇಕ್ಷೆಗಳು ನೆರವೇರಬೇಕಾದರೆ ಮುಸಲ್ಮಾನರ ಎಲ್ಲಾ ಪಾರ್ಟಿಗಳ ಒಪ್ಪಂದವೂ, ಒಗ್ಗಟ್ಟೂ ಅವಶ್ಯವಿರುವುದೆಂದೂ, ಮತ್ತು ಜವಾಬದ್ದಾರಿ ಸರಕಾರ ಸ್ಥಾಪಿತವಾಗಬೇಕಾದರೆ ಇಂಡಿಯಾದ ಎಲ್ಲಾ ಜಾತಿಗಳ ಒಪ್ಪಿಗೆಯು ಅಗತ್ಯವಾಗಿರುವುದರಿಂದಲೂ, ಮತ್ತು 1929 ನೇ ಜನವರಿ 1 ರಲ್ಲಿ ಡೆಲ್ಲಿಯಲ್ಲಿ ನಡೆದ ಸರ್ವಪಕ್ಷ ಕಾನ್ಫರೆನ್ಸಿನಲ್ಲಿ ತೀರ್ಮಾನವಾದ, ಪ್ರತ್ಯೇಕ ಚುನಾವಣೆ ಪದ್ಧತಿಯೊಂದನ್ನು ಬಿಟ್ಟು ಉಳಿದ ಎಲ್ಲಾ ಶರತ್ತುಗಳಿಗೆ ಈ ಮುಸ್ಲಿಂ ಕಾನ್ಫರೆನ್ಸಿನವರು ಸರ್ವಸಮ್ಮತದಿಂದ ಒಪ್ಪಿರುವುದರಿಂದಲೂ, ಮುಸಲ್ಮಾನರ ಶರತ್ತುಗಳನ್ನು ಒಪ್ಪಿಕೊಳ್ಳುವದಾದರೆ, ಪ್ರಾಂತೀಕ ಮತ್ತು ಮಧ್ಯವರ್ತಿ ಶಾಸನವಿಧಾಯಕ ಸಭೆಗಳ ಚುನಾವಣೆ ಕ್ರಮದ ವಿಷಯದಲ್ಲಿ ಲೇಟ್ ಮಹಮ್ಮದ್ ಅಲಿಯವರ ಸೂಚನೆಯ ತತ್ವದ ಅಥವಾ ಬೇರೆ ಯಾವುದಾದರೂ ತೃಪ್ತಿಕರವಾದ ತತ್ವದ ಮೇಲೆ ಬೇರೆ ಕೋಮಿನವರುಗಳೊಂದಿಗೆ ಸಂಧಾನ ನಡಿಸುವಂತೆ ಈ ಸಭೆಯು ತೀರ್ಮಾನಿಸುತ್ತದೆ. ಆದರೆ ಈ ಸಂಧಾನಗಳ ಫಲಿತಾಂಶವು ಮುಸಲ್ಮಾನರ ಪ್ರತಿನಿಧಿಗಳ ಸಭೆಯ ಒಪ್ಪಿಗೆಯನ್ನು ಪಡೆಯತಕ್ಕದ್ದು.'

'ಹಿಂದೂ ಸಿಖ್ ಪ್ರತಿನಿಧಿಗಳೊಡನೆ ರಾಜಿ ಸಂಧಾನಗಳನ್ನು ನಡಿಸಲು ಈ ಸಭೆಯು ಒಂದು ಕಮಿಟಿಯನ್ನು ನೇಮಿಸಬೇಕೆಂದು ಪಂಡಿತ ಮಾಳವೀಯವರು ಮಾಡಿದ ಸೂಚನೆಯನ್ನು ಈ ಸಭೆಯು ಸಂತೋಷದಿಂದ ಒಪ್ಪುತ್ತದೆ. ಮುಸಲ್ಮಾನರು ದೇಶದ ಹಿತಕ್ಕಾಗಿ ಹೋರಾಡಲು ಬೇರೆ ಜಾತಿಯವರಂತೆಯೇ ತಯಾರಾಗಿರುವರೆಂಬುದನ್ನು ಸೂಚಿಸುತ್ತಾ, ರಾಜಿ ಸಂಧಾನಗಳನ್ನು ನಡಿಸಲು ಒಂದು ಕಮಿಟಿಯನ್ನು ಈ ಸಭೆಯು ನೇಮಿಸಿರುತ್ತದೆ.'

ಈ ಠರಾವುಗಳನ್ನು ತಂತೀ ಮೂಲಕ ಪಂಡಿತ ಮದನಮೋಹನ ಮಾಳವೀಯರಿಗೆ ಕಳುಹಿಸಲಾಯಿತು. ಅಲ್ಲದೆ ಈ ಕಮಿಟಿಯೊಂದಿಗೆ ಹಿಂದೂ-ಸಿಖ್ ಪ್ರತಿನಿಧಿಗಳು ಸಂಧಾನಗಳನ್ನು ನಡಿಸುವ ಬಗ್ಗೆ ಲಕ್ನೋ ಯಾ ಅಲ್ಲಹಾಬಾದಿನಲ್ಲಿ ಆದಷ್ಟು ಬೇಗನೆ ಒಂದು ಮೀಟಿಂಗನ್ನು ಏರ್ಪಡಿಸುವಂತೆ ಶೌಕತ್ ಅಲಿಯವರು ಪಂಡಿತ ಮಾಳವೀಯರನ್ನು ಕೇಳಿಕೊಂಡಿರುವರು.

ಶೌಕತ್ ಅಲಿಯವರ ಅಭಿಪ್ರಾಯ.

ಲಕ್ನೋ ಕಾನ್ಫರೆನ್ಸ್ ಮುಗಿದ ಮೇಲೆ ಸಾಯಂಕಾಲ ಅಲ್ಲಿ ಒಂದು ದೊಡ್ಡ ಪಬ್ಲಿಕ್ ಸಭೆಯು ಜರುಗಿತು. ಅಲ್ಲಿ ಮುಸಲ್ಮಾನರೂ, ಹಿಂದೂಗಳೂ ಹಾಜರಿದ್ದರು. ಮುಸಲ್ಮಾನರ ಎಲ್ಲಾ ಪಾರ್ಟಿಗಳು ಒಂದು ಒಪ್ಪಿಗೆಗೆ ಬಂದದ್ದರಿಂದ ಅವರನ್ನು ಅಭಿನಂದಿಸಿ ಠರಾವು ಪಾಸು ಮಾಡಲಾಯಿತು. ಶೌಕತ್ ಅಲಿಯವರು ಈ ಸಭೆಯಲ್ಲಿ ಮಾತನಾಡುತ್ತಾ, '2 ವಾರಗಳೊಳಗೆ ಒಗ್ಗಟ್ಟಿನ ಹಿಂದೂ ದೇಶವು ನಮಗೆ ಲಭಿಸುವದೆಂದೂ, 1928ರಲ್ಲಿ ಲಕ್ನೋದಲ್ಲಿ ಉಂಟಾದ ಕೋಮುವಾರು ಒಡಕು ಈಗ ಅದೇ ಸ್ಥಳದಲ್ಲಿ ಹೋಗಲಾಡಿಸಲ್ಪಟ್ಟದ್ದು ಸಂತೋಷದ ಸಂಗತಿಯೆಂದೂ, ಕೋಮುವಾರು ಸಮಸ್ಯೆಯು ತೀರ್ಮಾನಿಸಲ್ಪಟ್ಟ ವಿನಹ ಯಾವ ಅಭಿವೃದ್ಧಿಗೂ ಸಾಧ್ಯವಿಲ್ಲವೆಂದೂ' ಮುಂತಾಗಿ ಹೇಳಿದರು.

ಇನ್ನೊಂದು ಕಡೆ ಪತ್ರಿಕಾ ಪ್ರತಿನಿಧಿಯೊಂದಿಗೆ ಮೌಲಾನರವರು ಹೀಗೆಂದರು—"ತಪ್ಪು ಅರ್ಥಗಳಿಂದಲೂ, ಅಪನಂಬಿಗೆಯಿಂದಲೂ ಎಲ್ಲರೂ [illegible] ಕಷ್ಟಕ್ಕೊಳಗಾದರು. ಇದನ್ನು ಬಿಟ್ಟು, ನ್ಯಾಯದ ಮತ್ತು ಬುದ್ಧಿವಂತಿಕೆಯ ದಾರಿಯಲ್ಲಿ ವರ್ತಿಸುವ ಕಾಲವು ಬಂದೊದಗಿದೆ. ಒಬ್ಬರನ್ನೊಬ್ಬರು ದಬಾಯಿಸುವ ರೀತಿಯನ್ನು ಬಿಟ್ಟು, ಎಲ್ಲರೂ ದೇಶದ ಏಳಿಗೆಗೆ ಗೌರವದಿಂದ ಕೆಲಸ ಮಾಡುವ ಅವಕಾಶವನ್ನುಂಟು ಮಾಡಲು ಪ್ರಯತ್ನಿಸತಕ್ಕದ್ದೆಂದು ಬೇಡಿಕೊಳ್ಳುತ್ತೇನೆ."

ಮಹಾತ್ಮರ ಬಿಡುಗಡೆಯೂ, ಯೂರೋಪಿಯನ್ ಕಂಪೆನಿಗಳೂ.

ಕಾಂಗ್ರೆಸ್ಸಿನವರು ಬಹಿಷ್ಕೃತ ಪಟ್ಟಿಯಲ್ಲಿ ಸೇರಿಸಿದ್ದ ಬೊಂಬಾಯಿಯ ಕೆಲವು ಯೂರೋಪಿಯನ್ ಕಂಪೆನಿಗಳೊಂದಿಗೆ ಹಿಂದೀ ಕಂಪೆನಿಗಳು ಅಡಚಣೆ ಇಲ್ಲದೆ ವ್ಯಾಪಾರ ನಡಿಸಬೇಕೆಂದೂ, ಆದರೆ ಯೂರೋಪಿಯನ್ ಕಂಪೆನಿಯವರು ಮಹಾತ್ಮರ ಬಿಡುಗಡೆಗೆ ಒತ್ತಾಸೆಕೊಡಬೇಕೆಂದೂ ಈಸ್ಟ್ ಇಂಡಿಯಾ ಹತ್ತಿ ಸಂಘದವರು ನಿಶ್ಚಯಿಸಿದ್ದರು.

ಸ್ವಲ್ಪ ಕಾಲದ ನಂತರ ಸದರಿ 8 ಯೂರೋಪಿಯನ್ ಸಂಘಗಳ ಪ್ರತಿನಿಧಿಗಳು, ರಾಜಕೀಯ ಪರಿಸ್ಥಿತಿಯ ಶಾಂತಿಗೆ ತಾವೂ ಕುತೂಹಲರಾಗಿದ್ದೇವೆಂದೂ, ಆರ್ಡಿನೇನ್ಸ್‌ಗಳ ಮತ್ತು ಶಾಸನ ಭಂಗ ಚಳವಳಿಯ ಹಿಂತೆಗೆಯುವಿಕೆಯು ಸರಾಗವಾದ ವ್ಯಾಪಾರಕ್ಕೆ ಸಹಾಯವಾಗುವದೆಂತಲೂ, ಮಹಾತ್ಮ ಗಾಂಧಿಯವರ ತ್ವರಿತದ ಬಿಡುಗಡೆಯು ಈಗಿನ ಗಲಾಟೆಯನ್ನು ಅಡಗಿಸಲು ಸಹಾಯ ಮಾಡೀತೆಂತಲೂ' ಪ್ರಕಟಿಸಿರುವರು.

ಕವೀಂದ್ರ ರವೀಂದ್ರನಾಥರ ಮಹತ್ವಪೂರ್ಣ ಭಾಷಣ.

ಮಹಾತ್ಮ ಗಾಂಧೀಯವರಿಗೂ ಕವೀಂದ್ರ ರವೀಂದ್ರನಾಥರಿಗೂ, ಅನೇಕ ವಿಷಯಗಳಲ್ಲಿ ಮತಭೇದವಿದೆ, ಇದು ಸ್ವಾಭಾವಿಕವೇ. ಇಬ್ಬರು ಸ್ವತಂತ್ರ ವಿಚಾರಕರು. ಇವರಿಬ್ಬರಿಂದ ಭಾರತ ಮಾತೆಯ ಮುಖವು ದೇಶ ದೇಶಾಂತರಗಳಲ್ಲಿ ಪ್ರಕಾಶಿಸುತ್ತಲಿದೆ. ಈಗ ದೇಶದ ಮುಂದೆ ಇರುವ ಮಹತ್ವದ ವಿಷಯದಲ್ಲಿ ಕವೀಂದ್ರರು ತಮ್ಮ ಮಹಾ ಭಾಷಣದಿಂದ ಮಹಾತ್ಮರಿಗೆ ಕೊಟ್ಟಿರುವ ಸಹಾಯವು ದೊಡ್ಡದಾಗಿದೆ. ಕವಿವರರ ಭಾಷಣದ ಕೆಲವು ಅಂಶಗಳು ಇಲ್ಲಿ ಕೊಡಲ್ಪಟ್ಟಿವೆ:— ಯಾರು ಅಸ್ತ್ರ ಶಸ್ತ್ರ ಸೈನ್ಯ ಸಾಮಗ್ರಿಯಿಂದೊಡಗೂಡಿ ಬಾಹು ಬಲದ ಸಹಾಯದಿಂದ ದೇಶದಲ್ಲಿ ಅಧಿಕಾರ ನಡಿಸುತ್ತಾರೋ, ಅವರು ಪ್ರಪಂಚದಲ್ಲಿ ಸೂಜಿಯ ಮೊನೆಯಷ್ಟು ಜಾಗ ಬಿಡದೆ ಆಕ್ರಮಿಸಿಕೊಳ್ಳುತ್ತಾರೆ. ಅಸ್ತ್ರದ ಬಲದಿಂದ ಹಿಂದೂಸ್ಥಾನದ ಮೇಲೆ ಎಷ್ಟೋ ವಿದೇಶಿಯರು ಅನೇಕ ವೇಳೆ ತಮ್ಮ ಅಧಿಕಾರ ನಡಿಸಿದರು. ಅಂಥವರೆಲ್ಲ ತಮ್ಮ ಪತಾಕೆಯನ್ನು ಭೂಮಿಯಲ್ಲಿ ಹೂಣಿದರು. ಇನ್ನು ಮೇಲೆಯೂ ಯಾರು ಅಸ್ತ್ರ ಶಸ್ತ್ರದ ಬಲದಿಂದ ವಿದೇಶದಲ್ಲಿ ತಮ್ಮ ಅಧಿಕಾರವನ್ನು ಶಾಶ್ವತಗೊಳಿಸಲು ಪ್ರಯತ್ನಿಸುತ್ತಾರೋ ಕಾಲವಶದಿಂದ ಅಂಥವರ ಅಧಿಪತ್ಯವು ಅಂತ್ಯವಾದೊಡನೆಯೇ ಅವರ ಸಮಸ್ತ ಕೀರ್ತಿಯು ನಾಶವಾಗಿ ಹೋಗುತ್ತದೆ; ಮತ್ತು ಯಾರು ಸತ್ಯದ ಬಲದಿಂದ ಜಯಶಾಲಿಗಳಾಗುತ್ತಾರೋ ಅಂಥವರು ನಾಶವಾದನಂತರವೂ ಅವರ ಕೀರ್ತಿಯ ಅಧಿಪತ್ಯವು ದೇಶದ ಪವಿತ್ರ ಸ್ಥಾನಗಳಲ್ಲಿ ಪ್ರಕಾಶಿಸುತ್ತಲಿರುತ್ತದೆ.

ಭಾರತ ದೇಶದ ಗೌರವದ ನಾಶಕ್ಕೆ ಕಾರಣ.

ದೇಶದ ಸಮಸ್ತ ಹೃದಯಗಳ ಮೇಲೆ ಅಧಿಕಾರವಿರುವ ಮಹಾತ್ಮ ಗಾಂಧಿಯವರು ಸಮಸ್ತ ದೇಶದ ಕಲ್ಯಾಣಕ್ಕಾಗಿ ಹೊಸ ಬಯಕೆಗಾಗಿ ಆತ್ಮೀಯ ದೇಹ ತ್ಯಾಗದ ದಾರಿಯನ್ನು ಹಿಡಿದಿದ್ದಾರೆ. ಯಾವ ಕಠಿಣ ಬಾಧೆಯನ್ನು ದೂರ ಮಾಡಲು ಅವರು ಇಚ್ಛಿಸುತ್ತಾರೋ, ಯಾರಿಗಾಗಿ ಇಷ್ಟು ದೊಡ್ಡ ಬೆಲೆ ಕೊಡಲು ಅವರು ಹಿಂಜರಿಯಲಿಲ್ಲವೋ ಅಂಥಾವರ ವಿಷಯವನ್ನೇ ಕುರಿತು ನಾವು ಸ್ವಚ್ಛವಾಗಿ ಈ ದಿನ ಯೋಚಿಸಬೇಕಾಗಿದೆ.

ಮಹಾತ್ಮ ಗಾಂಧಿಯವರು ಏನು ಹೇಳುತ್ತಾರೆಂಬುದನ್ನು ನೀವು ಯೋಚಿಸಬೇಕಾಗಿದೆ. ಮನುಷ್ಯ ಜಾತಿಯ ಒಂದು ವರ್ಗವು ಇನ್ನೊಂದು ವರ್ಗವನ್ನು ಕೆಳಗೆ ದೂಡಿಸಿಕೊಂಡು ಅವರ ಮೇಲೆ ನಿಂತು ತನ್ನ ಉನ್ನತಿಯನ್ನು ಪ್ರಚಾರ ಮಾಡುತ್ತಿರುವುದು ಮನುಷ್ಯ ಜಾತಿಯ ಇತಿಹಾಸದ ಪ್ರಾರಂಭದಿಂದಲೇ ಕಂಡು ಬರುತ್ತದೆ. ತನ್ನ ಪಕ್ಷದ ಪ್ರಭಾವವನ್ನು ಇನ್ನೊಂದು ಪಕ್ಷದ ದಾಸತ್ವದ ಮೇಲೆ ಉಳಿಸಿಕೊಳ್ಳುತ್ತದೆ. ಮನುಷ್ಯನು ಬಹಳ ಕಾಲದಿಂದ ಹೀಗೆಯೇ ಮಾಡುತ್ತಾ ಬಂದಿದ್ದಾನೆ. ಆದರೆ ನಾನು ಇದನ್ನು ಅಮಾನುಷಿಕವೆನ್ನುತ್ತೇನೆ. ಇದರಿಂದ ದಲಿತ ವರ್ಗದ ನಾಶವಾಗುವುದೂ ಅಲ್ಲದೆ ದಬ್ಬಾಳಿಕೆ ನಡಿಸುವವರೂ ಸಹ ನಾಶವಾಗುತ್ತಾರೆ. ನಾವು ಯಾರನ್ನು ಅಪಮಾನಪಡಿಸಿ ಕೆಳಗೆ ಹಾಕಿಬಿಡುತ್ತೇವೋ ಅವರೇ ನಮ್ಮ ದಾರಿಯಲ್ಲಿ ವಿಘ್ನಕಾರಿಗಳಾಗುತ್ತಾರೆ. ಯಾರನ್ನು ನಾವು ಹೀನರನ್ನಾಗಿ ಮಾಡುತ್ತೇವೋ ಅವರೇ ನಮ್ಮನ್ನು ಹೇಯರನ್ನಾಗಿ ಮಾಡುತ್ತಾರೆ. ಹಿಂದೂಸ್ಥಾನದಲ್ಲಿ ಕೆಲವರಿಗೆ ನಾವು ಮನುಷ್ಯರಿಗೆ ದೊರಕಬೇಕಾದ ಸನ್ಮಾನ ಸಹ ಕೊಡದೆ, ಅವರು ಹಿಂದೆ ಬಿದ್ದಿರುವ ಕಾರಣದಿಂದಲೇ ಹಿಂದೂಸ್ಥಾನದ ಗೌರವವು ಕಡಿಮೆಯಾಗಿದೆ.

ಮುಕ್ತಿ ಕೊಡುವುದರಿಂದ ಮುಕ್ತಿ ದೊರೆಯುತ್ತದೆ.

ಈಗ ಹಿಂದೂಸ್ಥಾನದ ಜೈಲುಗಳಲ್ಲಿ ಸಾವಿರಾರು ಸ[illegible]ರು ಕೊಳೆಯುತ್ತಿದ್ದಾರೆ. ಮನುಷ್ಯರಿದ್ದರೂ ಸಹ ಅವರು ಪಶುಗಳಂತೆ ಪೀಡಿಸಲ್ಪಡುತ್ತಲೂ, ಅಪಮಾನಿಸಲ್ಪಡುತ್ತಲೂ ಇದ್ದಾರೆ. ಈ ರೀತಿ ಮನುಷ್ಯರನ್ನು ಗುಂಪು ಗುಂಪಾಗಿ ಅಪಮಾನಪಡಿಸುವುದರಿಂದ ಸಮಸ್ತ ಶಾಸನ ಸೂತ್ರಗಳನ್ನು ಅಪಮಾನಿಸಿದಂತಾಗಿದೆ. ಹಾಗೆಯೇ ನಾವು ಸಮಾಜದ ಒಂದು ದೊಡ್ಡ ಭಾಗಕ್ಕೆ ಅವಮರ್ಯಾದೆಯ ಬೇಡಿಗಳನ್ನು ತೊಡಿಸಿ ಇಟ್ಟಿದ್ದೇವೆ. ಬಂಧೀಖಾನೆಯು ಬರೀ ನಾಲ್ಕು ಗೋಡೆಗಳ ಒಳಗೆ ಮಾತ್ರ ಇರುತ್ತದೆಂತಲ್ಲ. ಮನುಷ್ಯನ ಹಕ್ಕುಗಳನ್ನು ಕಡಿಮೆ ಮಾಡುವುದೂ ಬಂಧನವೇ ಆಗಿದೆ. ಅವಮರ್ಯಾದೆಗೆ ಹೋಲಿಸಿದರೆ ಜೈಲ್ ವಾಸವು ಅಷ್ಟೊಂದು ಕಷ್ಟವಲ್ಲವೆಂತ ತೋರುತ್ತದೆ. ಹಿಂದೂಸ್ಥಾನದಲ್ಲಿ ನಾವೇ ಈ ಸಾಮಾಜಿಕ ಬಂಧೀಖಾನೆಯನ್ನು ಬಹಳ ವಿಸ್ತಾರವಾಗಿ ಮಾಡಿ ಇಟ್ಟಿದ್ದೇವೆ. ಬಂಧೀಖಾನೆಯಾದ ಈ ದೇಶದಲ್ಲಿ ನಮಗೆ ಹೇಗೆ ತಾನೇ ಮುಕ್ತಿ ದೊರಕೀತು? ಯಾರು ಮುಕ್ತಿ ಪ್ರಧಾನ ಮಾಡುತ್ತಾರೋ ಅವರಿಗೆ ಮುಕ್ತಿ ದೊರಕುತ್ತದೆ.

ಮುಕ್ತಿ ಸಾಧಿಸಲು ಯಾರು ಅರ್ಹ?

ಇಷ್ಟು ದಿನ ಹೀಗೆ ಕಳೆದುಹೋಯಿತು. ನಾವು ಯಾವ ಕಡೆಗೆ ಹೋಗುತ್ತಿದ್ದೇವೆಂತ ನಮಗೆ ತಿಳಿಯಲು ಶಕ್ಯವಾಗಲಿಲ್ಲ. ಈಗ ಹಿಂದೂಸ್ಥಾನವು ಮುಕ್ತಿಸಾಧನೆಗಾಗಿ ಎಚ್ಚೆತ್ತು ಎದ್ದಿದೆ. ಬಹಳ ಕಾಲದ ವಿದೇಶೀ ಪ್ರಭುತ್ವವು ಮನುಷ್ಯತ್ವವನ್ನು ಕೈಕಾಲು ಇಲ್ಲದನ್ನಾಗಿ ಮಾಡಿದೆ. ಇನ್ನು ಮೇಲೆ ವಿದೇಶಿ ಆಕ್ರಮಣೆಯನ್ನು ಸಹಿಸುವುದಿಲ್ಲವೆಂತ ಹಿಂದೂಸ್ಥಾನವು ಪ್ರತಿಜ್ಞೆ ಮಾಡಿಕೊಂಡಿದೆ. ಇಂಥಾ ಸಮಯದಲ್ಲಿ ನಮ್ಮ ಅಜ್ಞಾನದ ಅಂಧಕಾರಮಯದ ಗುಹೆಯನ್ನು ವಿಧಿಯು ನಮಗೆ ತೋರಿಸುತ್ತದೆ. ಮುಕ್ತಿ ಸಾಧನೆಯ ತಪಸ್ವಿಯಾದ ಗಾಂಧೀಜೀಯವರಿಗೆ ನಾವು ಅಸಹಾಯರನ್ನಾಗಿ ಮಾಡಿ ಇಟ್ಟವರೇ ವಿಘ್ನ ತರುವವರಾಗಿದ್ದಾರೆ.

ಸಮತ್ವವು ಮೂಲ ಧರ್ಮವಾಗಿದೆ.

ಯಾವ ಸ್ಥಳದಲ್ಲಿ ಒಂದು ಕೂಟದ ಅಸನ್ಮಾನದಿಂದ ಇನ್ನೊಂದು ಕೂಟದ ಸನ್ಮಾನವು ನಿಂತಿದೆಯೋ ಅಲ್ಲಿ ಭಾವ ಸಮಂಜಸ್ಯ (ಮನಸಿನ ಏಕತ್ವ)ವು ಇಲ್ಲದೆ ಹೋಗುತ್ತದೆ ಮತ್ತು ಅದರಿಂದ ವಿಪತ್ತುಗಳು ಹೆಚ್ಚುತ್ತವೆ. ಇದರಿಂದಲೇ ಸಮತ್ವವು ಮನುಷ್ಯನ ಮೂಲಧರ್ಮವಾಗಿದೆಯೆಂತ ತಿಳಿಯುತ್ತದೆ. ಯೂರೋಪಿನಲ್ಲಿ ರಾಷ್ಟ್ರ ಜಾತಿಯಲ್ಲಿ ಭೇದವಿಲ್ಲದಿದ್ದರೆ ವರ್ಗದ ಭೇದವಿದೆ. ಈ ವರ್ಗದ ಭೇದದಿಂದ ಸನ್ಮಾನ ಸಾಮ್ಯದ ರಚನೆಯು ಸರಿಸಮಾನವಾಗಿ ಆಗುವುದಿಲ್ಲ. ಅಲ್ಲಿ ಹಣಗಾರರಿಗೂ ಕೂಲಿಕಾರರಿಗೂ ತುಂಬಾ ಅಸಮಾನವಿರುವುದರಿಂದ ಸಮಾಜದಲ್ಲಿ ಅಷ್ಟೇ ಗಡಿಬಿಡಿಯಾಗುತ್ತಲಿದೆ. ಸಮತ್ವವು ಸ್ಥಾಪಿತವಾದರೆ ಕಲ್ಯಾಣವಾದೀತು. ಮನುಷ್ಯನು ಯಾವಾಗ ಬೇರೆ ಮನುಷ್ಯನನ್ನು ಪೀಡಿಸುತ್ತಾನೋ ಆಗಲೇ ಅವನ ಸಮಸ್ತ ಮನುಷ್ಯತ್ವವು ನಾಶವಾಗುತ್ತದೆ. ಆದ್ದರಿಂದ ಮನುಷ್ಯನು ವ್ಯಕ್ತ್ಯಪನ ಕಡೆಗೆ ಎಳೆಯಲ್ಪಡುತ್ತಾನೆ.

ಯುದ್ಧದ ಭಾರವೂ ನಮ್ಮ ಹೆಗಲ ಮೇಲೆ.

ಸಮಾಜದ ಈ ಅಸಮಾನತ್ವ ಮತ್ತು ಅಸನ್ಮಾನದ ಕಡೆಗೆ ಮಹಾತ್ಮಾಜಿಯವರು ನಮ್ಮ ದೃಷ್ಟಿಯನ್ನು ಬಹಳ ಕಾಲದಿಂದಲೇ ತಿರುಗಿಸುತ್ತಿದ್ದರು. ಆದರೂ ನಾವು ಅದರ ಕಡೆ ಮನಸು ಕೊಡಲಿಲ್ಲ. ಚರಕಾ ಮತ್ತು ಖದ್ದರಿನ ಕಡೆ ನಾವು ಮನಸು ಕೊಟ್ಟೆವು, ಆರ್ಥಿಕ ದುರ್ಗತಿಯ ಕಡೆಗೆ ಮನಸು ಕೊಟ್ಟೆವು; ಆದರೆ ಈ ಸಾಮಾಜಿಕ ಪಾಪದ ಕಡೆ ಯಾರೂ ತಿರುಗಿ ನೋಡಲಿಲ್ಲ. ಆದ್ದರಿಂದಲೇ ಈಗ ಈ ದುಃಖದ ದಿವಸ ಬಂದೊದಗಿದೆ. ಹೊರಗಿನಿಂದ ಆರ್ಥಿಕ ವಿಪತ್ತುಗಳು ಅನೇಕ ಬಂದವು. ಅವುಗಳನ್ನು ನಿವಾರಿಸಿಕೊಳ್ಳುವುದು ಕಷ್ಟವಾಗಲಿಲ್ಲ. ಆದರೆ ನಮ್ಮ ಶತ್ರುಗಳ ಆಶ್ರಯವಾಗಿರುವ ಈ ಸಾಮಾಜಿಕ ಪಾಪವನ್ನು ಮಾತ್ರ ದೂರ ಮಾಡಲು ನಮ್ಮಿಂದ ಆಗಲಿಲ್ಲ. ಯಾಕೆಂದರೆ ಅದರ ಮೇಲೆ ನಮ್ಮ ಮಮತೆ ಇದೆ. ಈ ಪರಂಪರಾಗತವಾದ ಪಾಪವನ್ನು ನಿವಾರಿಸಲಿಕ್ಕಾಗಿಯೇ ಮಹಾತ್ಮರು ಆತ್ಮೀಯ ಯುದ್ಧವನ್ನು ಹೂಡಿದ್ದಾರೆ. ನಮ್ಮ ದುರ್ಭಾಗ್ಯದ ದೆಸೆಯಿಂದ ಈ ಯುದ್ಧದಲ್ಲಿ ಅವರ ದೇಹಾವಸಾನವಾಗಬಹುದು. ಆದರೆ ಅವರು ಈ ಯುದ್ಧದ ಭಾರವನ್ನು ಪ್ರತಿಯೊಬ್ಬರ ಮೇಲೆಯೂ ಹೊರಿಸಿ ಹೋದಾರು.

ಅವರ ಕೃಪೆಯಿಂದ ನಾವು ಈ ದಾನವನ್ನು ಸರ್ವಾಂತಃಕರಣದಿಂದ ತೆಗೆದುಕೊಳ್ಳಲು ಶಕ್ತರಾದರೆ ಈ ದಿವಸವು ಸಾರ್ಥಕವಾದೀತು. ಇಷ್ಟು ದೊಡ್ಡ ಆಹ್ವಾನದ ನಂತರವೂ ಒಂದು ದಿವಸ ಉಪವಾಸವಿದ್ದು ಮಾರನೇ ದಿನದಿಂದ ಉದಾಸೀನರಾದರೆ ಉಪವಾಸವನ್ನು ಹಾಸ್ಯ ಮಾಡಿದಂತೆಯೇ ಆದೀತು. ನಾವೂ ಸ್ವ ತುಚ್ಛ ಸಾಧನೆಯಿಂದ ಸತ್ಯದ ಸಾಧನೆಯು ತುಚ್ಛವಾಗಲು ಬಿಡಬಾರದು.

ಬಿಳಿ ಜನರು ತಿಳಿಯಲಾರರು.

ಮಹಾತ್ಮಾಜೀಯವರ ಈ ಸಂಕಲ್ಪದಿಂದ ನಮ್ಮನ್ನಾಳುವವರ ಮೇಲೆ ಯಾವ ಪ್ರಭಾವವಾದೀತೆಂತ ನಾನು ಹೇಳಲಾರೆ. ರಾಜನೀತಿಯ ತರ್ಕ ವಿತರ್ಕ ಮಾಡಲು ಇದು ದಿವಸವಲ್ಲ. ಒಂದು ಮಾತು ಹೇಳುವುದು ಮಾತ್ರ ಉಚಿತ. ಅದನ್ನು ಹೇಳುತ್ತೇನೆ. ಮಹಾತ್ಮಾಜೀಯವರ ಈ ಅಂತಿಮ ಉಪವಾಸದ ಅರ್ಥವನ್ನು ಇಂಗ್ಲಿಷರು ತಿಳಿದುಕೊಳ್ಳಲಾರರೆಂತ ನನಗೆ ತೋರುತ್ತದೆ. ಇದಕ್ಕೆ ಮಹಾತ್ಮಾಜೀಯವರ ಭಾಷೆಯು ಅವರ ಭಾಷೆಯಲ್ಲದಿರುವುದು ಒಂದು ಕಾರಣವಾಗಿದೆ. ತನ್ನ ಸಮಾಜದ ದುರಾಚಾರವನ್ನು ತಡೆಯಲಿಕ್ಕಾಗಿ ಗಾಂಧಿಯವರು ಈ ಭೀಷಣ ವ್ರತವನ್ನು ಪ್ರಾರಂಭಿಸಿದ್ದಾರೆ. ಇಂಗ್ಲಿಷರು ಅನುಸರಿಸುವ ಪದ್ಧತಿಗೆ ಮಹಾತ್ಮಾಜೀಯವರ ರೀತಿಯು ಬೇರೆಯಾಗಿದೆ. ಐರ್ಲೆಂಡಿನವರು ಇಂಗ್ಲೆಂಡಿನಿಂದ ಬಿಡುಗಡೆ ಹೊಂದುವಾಗ ಎಂಥಾ ಭಯಂಕರ ಕೆಲಸಗಳು ನಡೆದವು ಎಂಬುದನ್ನು ಇಂಗ್ಲಿಷರಿಗೆ ತಿಳಿಸಿ ಕೊಡಬೇಕಾಗಿದೆ. ಎಷ್ಟೊಂದು ರಕ್ತಪಾತ, ಎಷ್ಟೊಂದು ಅಮಾನುಷ ರಾಜನೀತಿಯಲ್ಲಿ ಈ ಹಿಂಸಾ ರೀತಿಯೇ ಪಶ್ಚಿಮ ದೇಶಗಳಲ್ಲಿ ವಾಡಿಕೆಯಾಗಿದೆ. ಆದ್ದರಿಂದ ಐರ್ಲೆಂಡಿನ ಈ ರಕ್ತಪಾತ ರೀತಿಯು ಯಾರಿಗೂ ಅದ್ಭುತವಾಗಿ ಕಾಣಲಿಲ್ಲ. ಆದರೂ ಮಹಾತ್ಮಾಜೀಯವರ ಅಹಿಂಸಾ ಆತ್ಮತ್ಯಾಗದ ಶಾಂತಮೂರ್ತಿಯೇ ಅದ್ಭುತವಾಗಿದೆ. ಸಂಗಡವೇ ಮಹಾತ್ಮಾಜಿಯವರಿಗೆ ಹಿಂದೂಸ್ಥಾನದ ದಲಿತ ಜಾತಿಯವರ ಮೇಲೆ ಮಮತೆ ಇಲ್ಲವೆಂತಲೂ ಹೇಳುತ್ತಾರೆ. ಅವರು ಇದೇ ರೀತಿಯಿಂದಲೇ ಈಗಿನ ರಾಜಸಿಂಹಾಸನಕ್ಕೂ ಬಹಳ ಸಂಕಟವನ್ನುಂಟುಮಾಡುವುದೇ ಇಂಗ್ಲಿಷರು ಹೀಗೆ ಹೇಳಲು ಕಾರಣ. ರಾಜಪುರುಷರ ಮನವು ವಿಕಲವಾಗಿ ಹೋಗಿರುವುದರಿಂದಲೇ ಅವರು ಹೀಗೆ ಹೇಳುವುದು. ರಾಷ್ಟ್ರೀಯ ಅಸ್ತಿತ್ವದ ಪೆಟ್ಟಿನಿಂದ ಹಿಂದೂ ಸಮಾಜವು ಎರಡು ತುಂಡುಗಳಾದರೆ ಹಿಂದೂ ಸಮಾಜವು ಮೃತ್ಯುವಿನ ವಿಪತ್ತಿಗಿಂತಲೂ ಕಠಿಣ ಅವಸ್ಥೆಗೆ ಗುರಿಯಾಗುತ್ತದೆಯೆಂತ ಅವರಿಗೆ ತಿಳಿಯುವುದಿಲ್ಲವೇ? ಯಾಕಾದರೂ ಮೊದಲನೇ ಮನುಷ್ಯರು ಬಂದು ಇಂಗ್ಲೆಂಡಿನಲ್ಲಿ ಪ್ರೊಟೆಸ್ಟಂಟರನ್ನೂ, ರೋಮನ್ ಕಥೋಲಿಕರನ್ನೂ ಸಂಪೂರ್ಣವಾಗಿ ಪ್ರತ್ಯೇಕಿಸಿದರೆ ಅಲ್ಲಿ ವಿಪರೀತ ಸಂಘರ್ಷವಾಗುತ್ತದೆಂಬುದು ಅಸಂಭವದ ಮಾತಲ್ಲ. ಈಗ ಹಿಂದೂಸ್ಥಾನದಲ್ಲಿ ಈ ವಿಧ ಸಂಕಟದ ಸಮಯದಲ್ಲಿ ಆ ಬಹು ಪ್ರಾಣ ಘಾತಕ ಯುದ್ಧದ ಭಾವಾಂತರವು ತೋರಿ ಬರುತ್ತದೆ. ಇಂಗ್ಲೆಂಡಿನಲ್ಲಿ ರೋಮನ್ ಕೆಥೋಲಿಕರಿಗೂ ಪ್ರೊಟೆಸ್ಟಂಟರಿಗೂ ಇದ್ದ ಅಧಿಕಾರ ಭೇದಗಳನ್ನು ದೇಶದವರೇ ತೀರಿಸಿಕೊಂಡರು. ಆ ವ್ಯತ್ಯಾಸಗಳನ್ನು ನಿವಾರಿಸಿಕೊಳ್ಳಲು ಬೇರೆ ದೇಶದವರನ್ನು ಕರೆಯಲಿಲ್ಲ. ನಮ್ಮ ದೇಶದ ಸಾಮಾಜಿಕ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವ ಭಾರವು ನಮ್ಮ ಮೇಲೆಯೇ ಬೀಳಬೇಕಾದ್ದು ಯುಕ್ತವಾಗಿದೆ.

ಆ ಪ್ರಶ್ನೆಗಾಗಿ ಮಹಾತ್ಮಾಜಿಯವರು ಈ ವರೆಗೆ ಪ್ರಚಾರ ಮಾಡುತ್ತಿದ್ದ ಅಹಿಂಸಾ ನೀತಿಯನ್ನು ತಮ್ಮ ಜೀವ ಕೊಟ್ಟಾದರೂ ಸಮರ್ಥಿಸಲಿಕ್ಕೆ ಈ ದಿನ ಹೊರಟಿದ್ದಾರೆ. ಈ ಮಾತನ್ನು ತಿಳಿದುಕೊಳ್ಳಲು ನನಗೇನೂ ಕಷ್ಟ ತೋರುವುದಿಲ್ಲ.

ಅಸ್ಪೃಶ್ಯತಾ ನಿವಾರಣೆ.

([illegible]ಲ್ಲಿ ಬಾಬು ರಾಜೇಂದ್ರ ಪ್ರಸಾದರು ಮಾಡಿದ ಭಾಷಣ.)

ಅಸ್ಪೃಶ್ಯತಾ ನಿವಾರಣೆಯ ಚಳವಳವು ಹೊಸದಲ್ಲ. ಅನೇಕ ವರ್ಷಗಳಿಂದಲೇ ಈ ಕೆಲಸ ನಡೆಯುತ್ತಲೇ ಇದೆ. ಪುರಾತನ ಕಾಲದ ಚರಿತ್ರೆ ನೋಡಿದರೂ ಸಹ ದಕ್ಷಿಣದಲ್ಲಿ ಶ್ರೀ ರಾಮಾನುಜಾಚಾರ್ಯರೂ, ಉತ್ತರದಲ್ಲಿ ಶ್ರೀ ಚೈತನ್ಯ ದೇವರೂ ಇದೇ ಕೆಲಸ ಮಾಡಿದ್ದಾರೆ. ಗುರುನಾನಕ ಮತ್ತು ಕಬೀರರಂಥ ಸುಧಾರಕರೂ ಸಹ ಇದೊಂದೇ ಕೆಲಸ ಮಾಡಿದರು. ಸಮಾಜದವರೆಲ್ಲರೂ ಬೆರೆತು ಒಬ್ಬ ದೇವರನ್ನು ಇವರೆಲ್ಲರೂ ಭಕ್ತಿಯಿಂದೊಡಗೂಡಿ ಪೂಜಿಸುವಂತೆ ಮಾಡಲು ಪ್ರಯತ್ನಿಸಿದರು. ಈಗ ಮಹಾತ್ಮ ಗಾಂಧಿಯವರ ಉಪವಾಸದಿಂದ ಈ ಚಳವಳಕ್ಕೆ ಹೊಸ ಹುರುಪು ಬಂದಿದೆ.

ಪ್ರಪಂಚವು ಕಾಲದಿಂದ ಕಾಲಕ್ಕೆ ಬದಲಾಗುತ್ತಲಿದೆ, ಸುಧಾರಕರಿದ್ದರೂ ಪದ್ಧತಿಗಳೂ, ನಡವಳಿಕೆಗಳೂ ಬೆಳೆಯುತ್ತಲೇ ಇರುತ್ತವೆ. ಇವು ಸಹ ವಿದ್ಯಮಾನಗಳಿಗೆ ಸರಿಯಾಗಿ ಬದಲಾಗಬೇಕು. ಈ ಮೊದಲು ಹಿಂದೂಸ್ಥಾನದ ಮೇಲೆ ಅನೇಕ ತರದ ಮುತ್ತಿಗೆಗಳಾದವು. ಪಶ್ಚಿಮ ದೇಶಗಳಿಂದ ರಾಜಕೀಯ ಮುತ್ತಿಗೆಗಳು ಆದವು. ಪ್ರಪಂಚದ ಎಲ್ಲಾ ಭಾಗಗಳಿಂದ ಧಾರ್ಮಿಕ ಮತ್ತು ಸಂಸ್ಕೃತಿಕ ಮುತ್ತಿಗೆಗಳಾದವು. ಈ ಎಲ್ಲಾ ಮುತ್ತಿಗೆಗಳಾದರೂ ಹಿಂದೂ ಸಮಾಜವೂ, ಹಿಂದೂ ಜನಾಂಗವೂ, ಹಿಂದೂ ಧರ್ಮವೂ ಉಳಿದು ಬಂದಿವೆ. ಇದರಿಂದ ಬದಲಾಗುತ್ತಿರುವ ಕಾಲಕ್ಕೂ, ವಿದ್ಯಮಾನಗಳಿಗೂ ಸರಿಯಾಗುವಂಥ ಶಕ್ತಿಯು ಹಿಂದೂ ಧರ್ಮದಲ್ಲಿದೆಯೆಂತ ಸ್ಪಷ್ಟವಾಗುತ್ತದೆ. ಅಲ್ಲದೆ ಹಿಂದೂ ಧರ್ಮವು ನಿರ್ಜೀವವಲ್ಲವೆಂತಲೂ ತಿಳಿಯುತ್ತದೆ. ಈಗಲೂ ಹಿಂದೂ ಧರ್ಮದ ಸತ್ವಪರೀಕ್ಷೆಯಾಗುತ್ತಲಿದೆ. ಪೂನಾ ಒಪ್ಪಂದದಿಂದ ಹಿಂದೂ ಸಮಾಜದಲ್ಲಿ ಜೀವವೂ, ಶಕ್ತಿಯೂ ಇದೆಯೆಂತ ಸ್ಪಷ್ಟವಾಯಿತು.

ದೇವಸ್ಥಾನ ಪ್ರವೇಶ.

ಶಾಸ್ತ್ರಗಳನ್ನು ನೋಡಿದರೆ ಅಸ್ಪೃಶ್ಯತೆ ವಿಷಯದಲ್ಲಿ ವಿಧವಿಧದ ಆಧಾರಗಳಿವೆ. ಒಂದಕ್ಕೊಂದು ವಿರೋಧವಾದವು! ಈ ವ್ಯತ್ಯಾಸಗಳಿರುವುದರಿಂದಲೇ ಇವನ್ನೆಲ್ಲಾ ಒಂದೇ ಕಾಲದಲ್ಲಿ ಮಾಡಿದ್ದಲ್ಲವೆಂತಲೂ, ಶಾಶ್ವತವಾಗಿಂದೇತೆಂತ ಮಾಡಿದ್ದಲ್ಲವೆಂತಲೂ ತಿಳಿಯುತ್ತದೆ. ಆಯಾ ಕಾಲದ ವಿದ್ಯಮಾನಗಳಿಗೆ ಸರಿಯಾಗಿಯೇ ಶಾಸ್ತ್ರಗಳು ಆದದ್ದು. ಯಾವುದೇ ಒಂದು ಗ್ರಂಥವೇ, ಒಂದು ಸೂತ್ರವೇ ಸರಿಯೆಂತ ನಂಬಲು ಸಾಧ್ಯವಿಲ್ಲ. ಅಸ್ಪೃಶ್ಯತೆಯು ಬದಲಾಗಬಾರದಂಥ ಪದ್ಧತಿಯೆಂತ ಶಾಸ್ತ್ರಗಳಿಂದ ತಿಳಿಯುವುದಿಲ್ಲ. ವಿದ್ಯಮಾನಗಳು ಬದಲಾದಂತೆ ನಮ್ಮ ಪದ್ಧತಿಗಳೂ ಆಚಾರಗಳೂ ಬದಲಾಗಬೇಕು. ಬದಲಾವಣೆಯಾಗದಿದ್ದರೆ ಜೀವವಿರುವುದಕ್ಕೂ, ಸತ್ತದ್ದಕ್ಕೂ ವ್ಯತ್ಯಾಸವೇನು? ಸತ್ತದ್ದು ಬೆಳೆಯುವುದಿಲ್ಲ, ಜೀವವಿರುವುದು ಬೆಳೆಯುತ್ತದೆ. ಈ ತತ್ವವು ಕಲ್ಲುಗಳಿಗೆ, ಸಸ್ಯಾದಿಗಳಿಗೆ, ಜೀವಜಂತುಗಳಿಗೆ ಅನ್ವಯಿಸುತ್ತದೆ. ಇದು ಮನುಷ್ಯ ಜಾತಿಗೂ, ಸಮಾಜಕ್ಕೂ ಅನ್ವಯಿಸಲೇ ಬೇಕು. ಈ ಅಸ್ಪೃಶ್ಯತಾ ನಿವಾರಣೆಯ ಸಮಸ್ಯೆಯನ್ನು ಧಾರಾಳ ಬುದ್ಧಿಯಿಂದ ನೋಡಬೇಕೆಂತ ಕೇಳಿಕೊಳ್ಳುತ್ತೇನೆ. ಮೇಲ್ಜಾತಿಯವರೆನಿಸಿಕೊಳ್ಳುವ ಹಿಂದೂಗಳು ತಮ್ಮ ಕೋಟಿಗಟ್ಟಲೆ ಸಹೋದರ ಸಹೋದರಿಯರನ್ನು ಎಂದೆಂದೂ ದೂರವಾಗಿಯೇ ಇಟ್ಟುಕೊಂಡು, ತಾವೂ ಹಿಂದೂಗಳೇ ಎಂತ ಹೇಳಲು ಸಾಧ್ಯವಿಲ್ಲ. ಇದರಿಂದ ಅವರು ಹೆಮ್ಮೆ ಪಡುವಂತಿಲ್ಲ. ಹರಿಜನರನ್ನು ತಮ್ಮ ಮನೆಗೆ ಸೇರಿಸಿಕೊಳ್ಳುವುದಿಲ್ಲ, ಮುಟ್ಟುವುದಿಲ್ಲ ಮತ್ತು ಬಾವಿಗಳಿಂದ ನೀರು ತೆಗೆದುಕೊಳ್ಳಲು ಬಿಡುವುದಿಲ್ಲ. ದೇವಸ್ಥಾನಗಳಲ್ಲಿ ದೇವರ ದರ್ಶನಕ್ಕೆ ಬಿಡುವುದಿಲ್ಲ. ನಮ್ಮ ಈ ಹರಿಜನ ಸಹೋದರರನ್ನು ಶತಮಾನಗಳಿಂದ ಈ ರೀತಿ [illegible] ಹಿಂಸೆಗೆ ಗುರಿಮಾಡಿದರೂ ಸಹ ತಾವು ಹಿಂದುಗಳೆಂತಲೇ ಅವರು ಅಂದುಕೊಳ್ಳುವುದೇ ವಿಶೇಷವಾಗಿದೆ. ಜಾತಿ ಹಿಂದೂಗಳು ಹರಿಜನರೊಂದಿಗೆ ಊಟಮಾಡಬೇಕೆಂತ ನಾನು ಹೇಳುವುದಿಲ್ಲ. ಅವರೊಂದಿಗೆ ಹೆಣ್ಣು ಕೊಟ್ಟು ತರಬೇಕೆಂತ ಅನ್ನುವುದಿಲ್ಲ. ಆದರೆ ಹರಿಜನರನ್ನು ಜಾತಿ ಹಿಂದೂಗಳ ಮನೆಗೆ ಬಿಡಬೇಕೆಂತಲೂ, ದೇವಸ್ಥಾನಗಳ ಪ್ರವೇಶಕ್ಕೆ ಬಿಡಬೇಕೆಂತಲೂ, ಹರಿಜನ ಹುಡುಗರೂ ಜಾತಿ ಹಿಂದೂ ಹುಡುಗರೂ ಕಲೆತು ಆಡಲು ಬಿಡಬೇಕೆಂತಲೂ, ಎಲ್ಲಾ ಬಾವಿಗಳಿಂದ ನೀರು ತೆಗೆಯಲು ಬಿಡಬೇಕೆಂತಲೂ ಕೇಳಿಕೊಳ್ಳುತ್ತೇನೆ. ಹೀಗೆ ಮಾಡಿದರೆ ವರ್ಣಸಂಕರವಾಗುವುದೂ ಇಲ್ಲ. ಹಿಂದೂ ಸಮಾಜವು ನಾಶವಾಗಿ ಹೋಗದಂತೆಯೂ ಆಗುತ್ತದೆ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಕೋ-ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.
(ಸ್ಥಾಪಿತವಾದದ್ದು 1922ರಲ್ಲಿ)

		ರೂ.
ಶೇರ್ ಬಂಡವಾಳ	—	50,000— 0—0
ವಸೂಲಾದ ಶೇರ್ ಮೊಬಲಗು	—	27,350— 0—0
ಜಮಾಬಂದ ಠೇವಣಾತಿ	—	22,5380—10—7
ವಸೂಲಾದ ಕ್ಷೇಮನಿಧಿ	—	37,914—12—0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೆ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0 ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 40 ಬಡ್ಡಿ ದೊರೆಯುತ್ತೆ.

ಹೆಚ್ಚಿನ ವಿವರಗಳಿಗೆ ರಿಜಿಸ್ಟ್ರಾರವರು ಸೆಕ್ರೆಟರಿ ಅವರನ್ನು ವಿಚಾರಿಸಬಹುದು.

ಪ್ರೆಸಿಡೆಂಟರು,	ಟ್ರೆಜರರ್
ಪಟ್ಟಮಾಡ ದೇವಯ್ಯನವರು, ರಾವ್ ಬಹದ್ದೂರ್.	ಮನೆಯಪ್ಪಂಡ ಬೆಳ್ಯಪ್ಪನವರು.

ಸೆಕ್ರೆಟರಿ
ಸಿ. ಯಸ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್

ತಾರೀಖು 1—7—1932.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿದೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಕೊಡಗಿನ ಎಲ್ಲಾ ಭಾಗಗಳಿಗೆ—ಮೆ. ಮುಂಡಂಡ ಯಂ. ಬಿದ್ದಪ್ಪನವರು.

ಉತ್ತರ ಕೊಡಗಿಗೆ ಮೆ. ಚೌರಿರ ಮೊಣ್ಣಯ್ಯನವರು,

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು, (ಪಾಡಿಭಂಡಾರ.)
ಅಮ್ಮತ್ತಿ—ಸಿದ್ದಾಪುರ—ಮೆ. ಬಿಸಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಯ್ಯನವರು, ಮತ್ತು ಅರಮಣಮಾಡ ಪಿ ಕಾರ್ಯಪ್ಪನವರು,
ಸುಂಟಿಕೇರಿ & ತಿತಿಮತ್ತಿ—ಮೆ. ಜಿ. ಪೂವಯ್ಯನವರು,
ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಪೊಣ್ಣಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಬಡ್ಡಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಿಸಲು ಅತ್ಯವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾಖಲೆ ಫಾರಮುಗಳೂ, ಖರಾರು ಫಾರಮುಗಳೂ, ಜಮ್ಮ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಖರಾರು ಫಾರಮುಗಳೂ, ಸ್ಟೋರ್ ಕೀಪರ್ ಖರಾರು ಫಾರಮುಗಳೂ, ಓಚರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮಾ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು ಶೇರ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಬುದ್ಧು ಬರಲಿಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಛಪ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ.	ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.
ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ.	ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.

ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,78,322 ಜನರಿಗೆ 38ಕೋಟಿ ರೂ.
ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ಕ್ಕಿಂತ ವಿಶದ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದಾಗಿದೆ.
ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.
ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ನೋಡಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚಿನ ಉತ್ಸಾಹವನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬುದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು
ಅಥವಾ ಇನ್ಸ್‌ಪೆಕ್ಟರೇಟ್ ಆಫೀಸು, ಮಡಿಕೇರಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರಾ	ಕಲ್ಕತ್ತಾ	ಕೊಲ್ಹಾಪುರ	ಪೇಷಾವರ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೋ	ಪಾಟ್ನಾ	ಸುಕ್ಕೂರು
ಅಲಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಜಾಲಗಾಂವ್	ಮಂಗಳೂರು	ರಾಯಪುರ	ತಿರುವೆಂಡ್ರಮ್
ಭೋಪಾಲ್	ಕರಾಚಿ	ಮಡಿಕೇರಿ	ರಾಂಚಿ	ವಿಶಾಖಪಟ್ಣ [52—33

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ. ಟಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
52—40 **ಗಿರಿಗಾಂವ, ಮುಂಬಯಿ.**

ಕಾರ್ಡು ಬರೆದರೆ ಇಗಿನ
ಪಟ್ಟಿಯನ್ನು ಪುಕ್ಕಟೆಯಾಗಿ
ಕಳುಹಿಸಲ್ಪಡುವುದು.



ಕೋವಿಗಳು, ಕತ್ತಿಗಳು, ಬಿಚ್ಚುಗಳು, ತೋಟೆಗಳು, ಕೇಪುಗಳು, ಮದ್ದು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS LTD.,
Largest Importers of Firearms and Ammunition
Cheapest priced firm in India,
26—6 **210 Abdul Rehiman Street, BOMBAY.**

Printed & published by P. I. Belliappa at "Kodagu" Press Mercara for "Kodagu" Ltd

Reg. No. M. 1:50.
if not delivered please return to
"KODAGU" OFFICE MERCARA.

ಕೊಡಗು.

ಸರ್ವೇಶ ಭೂತದಯೆಯುಂ ವಿದ್ಯಾ ನೀತಿ ಪ್ರೋತ್ಸಾಹಮುಂ ಸತ್ಯಮುಕ್ತಿಯ ಶೀಲಾಭಿಮಾನ ಸುಸ್ಥಿರಾ ರಾಜ್ಯ ಸಂಪದಾ

ವರ್ಷಕ್ಕೆ ಚಂದಾ ರೂ. ೩—೧—೦.

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೨ | ಮಡಿಕೇರಿ, ಸನ್ ೧೯೩೨ನೇ ಇಸವಿ ಅಕ್ಟೋಬರ್ ತಾರೀಕು ೨೧ ನೇ ಶುಕ್ರವಾರ. | ಸಂಚಿಕೆ ೨೧

SARI-PIN.

EAR-RINGS.
(Thodus)
Cut-rubys Rs. 25 to 50
With diamond in centre Rs. 80 to 120

BRACELETS.
Gold Rs. 10
Set rubys forming any letter Rs. 12

NECKCHAINS.

NOSE-RINGS.
Diamond in small size of best quality Rs. 35 & upwards according to size.

MARRIAGE PRESENTATIONS.

Attractive and inexpensive articles ready in stock. Prompt execution. Details on enquiry free with catalogue. Numerous customers in Coorg thoroughly satisfied with reliable service. Testimonials pouring in.
Silver Guindys, Photo lockets, Dimond nose-screws, cut-ruby ear-rings, etc., etc., etc., in all prices. Very attractive Prices most moderate.

Estimates free on enquiry.

Designs free on enquiry.

Telegrams: 'PRECIOUS.'

Telephone: 3145.

V. Subramaniaier Jeweller,

CATALOGUE ON ENQUIRY.

52—48

Post Box 423, Triplicane, P. O., MADRAS.



26—17

ಜನರಲ್ ಅಷ್ಯೂರೆನ್ಸ್ ಸೊಸೈಟಿ.

ಅ ಜ ಮಿ ರ್.

ನಮ್ಮ ಆಯವ್ಯಯದ ಪಟ್ಟಿಯೇ ನಮ್ಮ ಅಭಿವೃದ್ಧಿಯನ್ನು ವ್ಯಕ್ತಗೊಳಿಸುತ್ತದೆ.

ವರ್ಷ	ಮೊತ್ತ ವರ್ಷಾದಾಯ	ಮೊತ್ತ ಮೂಲಧನ	ಖರ್ಚಿನ ಪ್ರಮಾಣದ ಶೇಕಡ
1911	40,248	49,447	82.9
1921	2,94,627	6,53,350	43.2
1931	12,50,000	40,00,000	28.2

ಬೋನಸ್ಸು.

ಮುಕ್ತಾಯ ನಷ್ಟೆ ದೊರಕುವ ಜೀವಾವಧಿ ಪಾಲಿಸಿಗಳ ಮೇಲೆ ವರ್ಷ ಒಂದಕ್ಕೆ ಶೇಕಡ 22½

ಚೆನ್ನಾಗಿ ಕೆಲಸಮಾಡಿ ಅಭಿವೃದ್ಧಿ ಸ್ಥಿತಿಯಲ್ಲಿರುವ ಈ ಸೊಸೈಟಿಯಲ್ಲಿ ವಿಮೆ ಮಾಡಿ ಕಡಿಮೆ ಪ್ರೀಮಿಯಂ ಪಾವತಿ ಮಾಡುವ ಸೌಲಭ್ಯ ಹೊಂದಿ ಅಥವಾ ಈ ಕಂಪೆನಿಯ ಪರವಾಗಿ ಕೆಲಸಮಾಡಿ ಉತ್ತಮ ಕಮಿಶನ್ ದರದ ಪ್ರಯೋಜನ ಹೊಂದಿ.

ಹೆಚ್ಚು ವಿಚಾರಗಳಿಗೆ ಈ ವಿಳಾಸಕ್ಕೆ ಬರೆಯಿರಿ:—

ಎ. ರಾಮಚಂದ್ರರಾವ್,
ಸುಪರಿಂಟೆಂಡೆಂಟ್,
ಮಿಂಟೋ ಆಸ್ಪತ್ರೆ ಬಳಿ,
ಬೆಂಗಳೂರು.

52—26

EMPIRE OF INDIA
Life Assurance Company, Limited.

Established 1897.

INTERIM BONUS on Policies becoming claims before 1st March 1934 INCREASED TO

Rs. 16 per annum per Rs. 1000/— Assured on Whole Life Assurances.

and

Rs. 14 per annum per Rs. 1000/— Assured on Endowment Assurances

Head Office:—
Empire of India Life Building,
Bombay

Branch Office:—
152/3, Commercial Street,
Bangalore.

52—3

ಯರವಾಡಾ ತಪಸ್ವಿಯ ಅನುಷ್ಠಾನ.

ಯರವಾಡಾ ತಪಸ್ವಿಯ ಅನುಷ್ಠಾನವು ಪೂರೈಸಿತು. ಅವರ ಯೋಗವು ಸಫಲವಾಯಿತು. ಅವರು ಕರ್ಮಯೋಗಿಗಳಾಗಿದ್ದಾರೆ. ಅವರಿಗೆ ಫಲದ ಚಿಂತೆಯಿಲ್ಲ. ಅವರು ನಿಷ್ಕಾಮ ಕರ್ಮ ಮಾಡುತ್ತಾರೆ. ಅವರು ಮಾಡಿದ್ದನ್ನು ತನ್ನ ಕರ್ತವ್ಯವೆಂತ ಭಾವಿಸಿ ಮಾಡಿದರು. ಅವರ ಜೀವನವೇ ಸತ್ಯ ಮತ್ತು ಧರ್ಮದ ಉಪಾಸನೆಯಾಗಿದೆ. ಅವರು ಸ್ಥಿತಪ್ರಜ್ಞರಾಗಿದ್ದಾರೆ. ಅವರ ಈ ನಶ್ವರ ಜೀವನದಲ್ಲಿ ದ್ವಾಪರ ಯುಗದ 'ಮೋಹನ'ನ ಅಪೂರ್ವ ಪ್ರಭೆ ಇದೆ. 'ಕರ್ಮಣ್ಯೇವಾಧಿಕಾರಸ್ತೆ ಮಾಫಲೇಷು ಕದಾಚನ' ಎಂತ ಲಕ್ಷಾಂತರ ಜನರು ಪ್ರತಿ ದಿನ ಓದುತ್ತಾರೆ. ಆದರೆ ಗೀತೆಯ ಈ ಪಂಕ್ತಿ, ಭಗವಂತನ ಈ ಅಮರ ಉಪದೇಶವು ಲಕ್ಷಾಂತರ ಜನರಿಂದ ಉಚ್ಚರಿಸಲ್ಪಟ್ಟರೂ ಶೂನ್ಯದಲ್ಲಿ ಲಯವಾಗಿ ಹೋಗುತ್ತದೆ. ನಮ್ಮ ಅಭಿಪ್ರಾಯದಲ್ಲಿ ಒಬ್ಬನೇ ಮನುಷ್ಯನು ಈ ಪಂಕ್ತಿಯನ್ನು ತನ್ನ ಜೀವನದ ಮೂಲ ಮಂತ್ರವಾಗಿ ಮಾಡಿಕೊಳ್ಳಲು ಶಕ್ತನಾಗಿದ್ದಾನೆ. ಇದರಿಂದಲೇ ಅವರ ಆತ್ಮವು ಇಷ್ಟೊಂದು ಶಕ್ತಿಶಾಲಿಯಾಗಿದೆ. ಅವರ ಉದ್ದೇಶದಲ್ಲಿ ಸಮಾವೇಶವಿದೆ, ಅವರ ನಿಶ್ಚಯದಲ್ಲಿ ವಜ್ರಾಯುಧದ ದೃಢತೆಯಿದೆ ಮತ್ತು ಹೃದಯವು ಹೂವಿನಂತೆ ಕೋಮಲವಾಗಿದೆ.

ಕೃಷ್ಣನ ಗೀತಾ, ಬುದ್ಧನ ಅಹಿಂಸೆ, ಮತ್ತು ಕ್ರಿಸ್ತನ ಭಕ್ತಿ, ಇವೆಲ್ಲವೂ ಆ ತಪೋಪುಂಜದಲ್ಲಿ ಕೇಂದ್ರಿತವಾಗಿದೆ. ನಿಷ್ಕಾಮಕರ್ಮವಾದವೋ ಅವರ ಜೀವನವೇ ಆಗಿದೆ; ಅಹಿಂಸೆಯು ಅವರ ಆತ್ಮದ ಅಂಗವೇ ಆಗಿದೆ. ಭಕ್ತಿಯು ಅವರ ಆಧಾರವಾಗಿದೆ. ಶತಾಬ್ದಿಗಳಲ್ಲೊಂದಾವರ್ತಿ ಈ ದಿವ್ಯ ವಿಭೂತಿಗಳು ಅವತರಿಸುತ್ತಾರೆ. ಇದು ಪ್ರಪಂಚದ ಸೌಭಾಗ್ಯವಾಗಿದೆ. ಈಗ ಸಜೀವಮೂರ್ತಿಯ ಯೋಗಿಯು ನಮ್ಮ ಮಧ್ಯೆ ಇರುತ್ತಾರೆಂಬುದು 20ನೇ ಶತಮಾನದ ಯಾವುದೋ ಪುಣ್ಯ ರಾಶಿಗಳ ಫಲವಾಗಿದೆ.

ಈ ವೃದ್ಧ ತಪಸ್ವಿಗಳು ಕೋಮುವಾರು ಚುನಾವಣೆಯ ವರ್ತಮಾನ ತಿಳಿದೊಡನೆಯೇ ಸರ್ವನಾಶವಾದೀತೆಂಬ ಭಯದಿಂದ ಅವರ ಹೃದಯವು ನಡುಗಿತು. ಅವರ ಪ್ರಭಾವವು ಯಾವ ಸಮಾಜದ ಮೇಲೆ ತುಂಬಾ ಇದೆಯೋ ಆ ಸಮಾಜವು ವಿಷದ ಬಟ್ಟಲನ್ನು ತನ್ನ ತುಟಿಯಲ್ಲಿರಿಸಿದ್ದಾರೆಂತ ತಿಳಿದರು. ಈ ದೃಶ್ಯವನ್ನು ಅವರು ಸುಮ್ಮನೆ ಇದ್ದು ನೋಡಲಾಪರೇ? ಅದು ತಮ್ಮ ಪ್ರಿಯ ಸಮಾಜಕ್ಕೆ ಬರೇ ಮಾತುಗಳಿಂದ ತಿಳುವಳಿಕೆ ಕೊಡುವುದಾದರೆ ದುಂಡಿಯೊಂದಿಗೆ ಇದನ್ನೇ ಹೇಳಿದ್ದರು. ಆದರೆ ಲಂಡನ್ನಿನಿಂದ ವಾಪಸು ಬಂದನಂತರ ಅವರಿಗೆ ಈ ತಿಳುವಳಿಕೆ ಕೊಡಲು ಅವಕಾಶವೇ ದೊರೆಯಲಿಲ್ಲ. ಅದಲ್ಲದೆ ಈಗ ಅವರು ಮಾಡಲಾರದೆ ಹೋದರು. ಸರ್ಕಾರದ ಈ ಪ್ರತ್ಯೇಕ ಚುನಾವಣೆಯ ತೀರ್ಮಾನದಿಂದ ಹಿಂದೂ ಸಮಾಜಕ್ಕೆ ನೋವು ತಗಲದಷ್ಟು ಹಿಂದೂ ಸಮಾಜವು ಪ್ರಾಣಸಾಧ್ಯವಾಗಿದೆ. ತಾನು ಸರ್ವನಾಶವಾಗುವುದನ್ನು ನೋಡಿಯೂ, ತಾನು ಛಿನ್ನಭಿನ್ನವಾಗಿ ಚದುರಿ ಹೋಗುವ ಭಯ ತೋರಿದರೂ ಸಹ ತನ್ನ ಆತ್ಮವು ಎದ್ದು ನಡೆಗಲಿಲ್ಲ. ಇದೇ ಬಹು ದುಃಖಕರವಾದ ಸಂಗತಿಯಾಗಿದೆ. ಅವರು ತಮ್ಮ ತಪಸ್ಸಿನಿಂದ ಹಿಂದೂ ಸಮಾಜದ ಆತ್ಮವನ್ನು ಪುನರುಜ್ಜೀವನ ಮಾಡುವ ಪ್ರಯತ್ನ ಮಾಡಿದರು. ಯಾವ ಶತ ಬಲವು ಮಾಡಲಿಕ್ಕಾಗಿಯಾಗಲೀ, ಎದುರು ಪಕ್ಷ ವಿರೋಧಿಗಳನ್ನು ಬೆದರಿಸಲಿಕ್ಕಾಗಿಯಾಗಲೀ ರಾಜನೈತಿಕ ಯಾ ಸಾಮಾಜಿಕ ಏರುಗಾಳಿ ಹುಟ್ಟಿಸಲಿಕ್ಕಾಗಿಯಾಗಲೀ ಸಾಯುವ ಪರ್ಯಂತರ ಉಪವಾಸವನ್ನು ಅವರು ಪ್ರಾರಂಭಿಸಿದ್ದಲ್ಲ. ಬೆದರಿಕೆಗಳಿಂದಲೂ, ಸಿಟ್ಟಿನಿಂದಲೂ, ರಾಜನೈತಿಕ ಚಾಲಾಕುಗಳಿಂದಲೂ ಬಹುಗಾವುಗಳಿಂದಲೂ ಅಲಕ್ಷ್ಯಗಿರುವ ಮನುಷ್ಯರಾಗಿದ್ದಾರೆ. ಇಂಥಾ ನ್ಯಾಸಂಚಿಕ ಕಾರಣಗಳನ್ನು ಅವರು ಮುಟ್ಟುವುದು ಸಹ ಇಲ್ಲ. ವ್ರತ ಮಾಡಿ, ಉಪವಾಸ ಮಾಡಿ, ತಮ್ಮ ಪ್ರಾಣವನ್ನು ಒತ್ತೆ ಇಟ್ಟು ಅವರು ನಿರ್ಮಿಸುತ್ತಿರುವ ತನ್ನ ಭಕ್ತರನ್ನು ಎಚ್ಚರಿಸಲು ಇಚ್ಛೆಪಟ್ಟರು. ವಿಷದ ಬಟ್ಟಲು ತುಟಿಗೆ ತಲಪಿತು. ವಿಶ್ವ ಚಕ್ರದ ಅತಿಯಲ್ಲಿ ಇನ್ನೊಂದು ಕ್ಷಣವಾಗಿದ್ದರೆ ಎಲ್ಲಾ ಮುಗಿದು ಹೋಗುತಿತ್ತು. ಇಂಥಾ ಬಿಕ್ಕಟ್ಟಿನ ಸಂದರ್ಭದಲ್ಲಿ ಪ್ರಪಂಚದ ಹಿತವನ್ನು ಬಯಸುವ ಆ ಮಹಾಪುರುಷರು ಆ ಕಾಲಕೂಟ ವಿಷವಿರುವ ಬಟ್ಟಲಿಗೆ ಗುರ್ತು ಹಚ್ಚಿದರು. ಬಟ್ಟಲು ಒಡೆದು ಹೋಯಿತು. ಈ ಸಂಬಂಧವಾಗಿ ಅಪೂರ್ವ ಸಫಲತೆಯುಂಟಾಗಿದೆ. ಗಾಂಧಿಯವರ ಹೆಸರು ಜಪಿಸಿ ತಾವು ಕೃತಾರ್ಥರಾಗುತ್ತೇವೆಯೆಂತ ನಂಬಿರುವ ಕೋಟಿಗಟ್ಟಲೆ ನರನಾರಿಯರು ಗಾಂಧಿಯವರ ವ್ರತದ ಸಮಾಚಾರ ತಿಳಿದು ಹೆದರಿ ನಡುಗುತ್ತಿದ್ದರು. ಅಸ್ಪೃಶ್ಯತೆಯು ಪಾಪವೆಂತ ಹೇಳುವವರು ಬಹಳ ಇದ್ದರು. ಆದರೆ ಹಿಂದೂಸ್ಥಾನದ ಇತಿಹಾಸದಲ್ಲಿ ಎಂದೂ ನಡೆಯದ ಸಾಮಾಜಿಕ ಕ್ರಾಂತಿಯನ್ನುಂಟುಮಾಡಿ ಸೆಪ್ಟಂಬರ್ 20ನೇ ತಾರೀಖು ಚಿರಸ್ಮರಣೀಯವಾಗಿದ್ದೀತು. ಆ ದಿವಸವೇ ಅಸ್ಪೃಶ್ಯತೆಯು ನಿರ್ಮೂಲವಾಗಿಯೂ ತಾನು ಪಾಪವೆಂದ ಸರ್ವರಿಗೂ ಅನುಭವವಾಯಿತು. ಆ ದಿನವೇ ಈ ಪಾಪದ ಪ್ರಾಯಶ್ಚಿತ್ತದ ಬಗೆ ಗೊತ್ತಾಯಿತು. ಆ ದಿನವೇ ಹಿಂದೂ ಸಮಾಜವು ತಾನು ಮಾಡಿದ ಪಾಪಕೃತ್ಯವನ್ನು ನೆನೆಸಿಕೊಂಡು ರೋಮಾಂಚನವನ್ನು ಹೊಂದಿತು. ಆ ದಿನವೇ ಒಟ್ಟು ರಾಷ್ಟ್ರವು ಎಚ್ಚರದಿಂದ ಅಸ್ಪೃಶ್ಯತೆಯನ್ನು ಹೋಗಲಾಡಿಸುತ್ತೇನೆಂತ ತೀರ್ಮಾನಿಸಿಕೊಂಡಿತು.

ಆ ದಿನವು ಮತ್ತು ರಾಷ್ಟ್ರವು ಮಾಡಿಕೊಂಡ ಪ್ರತಿಜ್ಞೆಯು ಇತಿಹಾಸದಲ್ಲಿ ಅಮರವಾಗಿರುತ್ತೆ..

ಅಸ್ಪೃಶ್ಯರ ಮತ್ತು ಹಿಂದೂಗಳ ಮುಖಂಡರು ಮಹಾತ್ಮರ ಆಶೀರ್ವಾದವೆಂಬ ಛತ್ರಿಯ ನೆರಳಲ್ಲಿ ಅನ್ಯೋನ್ಯ ರಾಜಿ ಮಾಡಿಕೊಂಡರು. ಈಗ ಡಾಕ್ಟರ್ ಅಂಬೇಡ್ಕರವರು ಮಹಾತ್ಮರ ಸ್ತೋತ್ರ ಗಾನವನ್ನು ಮಾಡುತ್ತಿದ್ದಾರೆ. ಯಾರ್ಯಾರು ನಿನ್ನೆ ಆ ಯೋಗಿಯನ್ನು ವಿರೋಧಿಸುತ್ತಿದ್ದರೋ ಅವರೇ ಈ ದಿನ ಅವರ ಭಕ್ತಿ ಭಾವನೆಯಲ್ಲಿ ಮುಳುಗಿದ್ದಾರೆ. ಅವರು ಮೇಲ್ಜಾತಿ ಹಿಂದೂಗಳ ಪಕ್ಷವಿದ್ದಾರೆಂತ ಕೆಲವು ಅಸ್ಪೃಶ್ಯ ಮುಖಂಡರು ನೆನೆಸಿದ್ದರು. ಜಾತಿ ಹಿಂದೂಗಳ ಪಕ್ಷ ವಹಿಸಿ ಸ್ವಾರ್ಥತೆಯಿಂದ ಒಂದೊಂದೇ ಹೆಜ್ಜೆ ಮುಂದೆ ಇಡುತ್ತಾರೆಂತ ಯೋಚಿಸಿದ್ದರು. ಗಾಂಧಿಯವರ ಹೃದಯವು ಸಮುದ್ರಕ್ಕಿಂತಲೂ ಹೆಚ್ಚಾಗಿ ವಿಶಾಲವಾಗಿಯೂ ಆಕಾಶಕ್ಕಿಂತಲೂ ನಿರ್ಮಲವಾಗಿಯೂ ಇದೆಯೆಂತ ಅಸ್ಪೃಶ್ಯ ಮುಖಂಡರಿಗೆ ಹೇಗೆ ಗೊತ್ತು? ಅವರಿಗೆ ಗಾಂಧಿಯವರ ಪರಿಚಿತಿಯೇ ಇಲ್ಲ. ಅವರು ಗಾಂಧಿಯವರ ಹತ್ತಿರ ಹೋಗಿ ಅವರ ಹೃದಯವನ್ನು ಪರೀಕ್ಷಿಸಿದಾಗ ಗಾಬರಿಗೊಂಡರು. ಗಾಂಧಿಯವರ ಉದಾರತ್ವವು ಅವರನ್ನು ಚಕಿತರನ್ನಾಗಿ ಮಾಡಿಬಿಟ್ಟಿತು. ಅವರು ಅಸ್ಪೃಶ್ಯರಿಗಾಗಿ ಯಾವ ರಿಯಾಯಿತಿಯನ್ನಾದರೂ ಕೊಡಲು ತಯಾರಿದ್ದಾರೆಂತಲೂ ಎಲ್ಲರಿಗಿಂತಲೂ ಹೆಚ್ಚು ಹಿತೈಷಿಯಾಗಿದ್ದಾರೆಂತಲೂ ಅಸ್ಪೃಶ್ಯ ಮುಖಂಡರು ಯಾವುದನ್ನು ಅಪೇಕ್ಷಿಸುತ್ತಿದ್ದರೋ ಅದನ್ನೇ ಅವರು ಬಯಸಿದ್ದರೆಂತಲೂ ತಿಳಿದು ಅಸ್ಪೃಶ್ಯ ಮುಖಂಡರು ಗದ್ಗದರಾಗಿ ಹೋದರು. ಮಹಾತ್ಮರು ಅವರ ಹೃದಯವನ್ನು ಜಯಿಸಿಕೊಂಡರು. ಸಜೀವಮೂರ್ತಿ ತಪಸ್ವಿಯು ಯಾರ ಹೃದಯವನ್ನು ತಾನೇ ಜಯಿಸಲಿಲ್ಲ!

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಮೂರ್ನಾಡು ಶಾಲೆಯ ಟೀಮಿನವರೊಡನೆ ಹಾಕಿ ಪಂದ್ಯದಾಟ.

ಅಯ್ಯಾ,

ಮೂರ್ನಾಡು ಶಾಲೆಯು ಓದುಗಾರಿಕೆಯ ವಿಷಯದಲ್ಲಿ ಮುಂದುವರಿಯುತ್ತಿರುವಂತೆಯೇ ಸ್ಪೋರ್ಟ್ಸ್ ಮುಂತಾದವುಗಳಲ್ಲಿಯೂ ಬಹುಮಟ್ಟಿಗೆ ಉನ್ನತಿಯನ್ನು ಹೊಂದುತ್ತಿರುವಂತೆ ಭಾಸವಾಗುತ್ತದೆ. ಮೇಲಿನ ಅಭಿಪ್ರಾಯವು ಕೆಳಗಿನ ವಿಷಯಗಳಿಂದ ವೇದ್ಯವಾಗುತ್ತದೆ. ಅದೇನೆಂದರೆ—ಕಳೆದ ಸೆಪ್ಟಂಬರ್ ತಾ. 23ನೇ ಶುಕ್ರವಾರ ದಿವಸ ಕಾಕೋಟುಪರಂಬು ಅಪ್ಪರ್ ಎಲಿಮೆಂಟರಿ ಶಾಲಾ ಟೀಮಿನವರು ತಮಗೆ ಆಡಲು ಸದೃಶ ಪ್ರತಿದ್ವಂದ್ವಿ ಇಲ್ಲದಿರುವುದರಿಂದ ಮೂರ್ನಾಡಿನಲ್ಲಿಯೇ ಮೇಲಿನ ಟೀಮನ್ನು ಆಹ್ವಾನಿಸಿ, ಪಂದ್ಯದಾಟವಾಡಿದರು. ಪೋಟಿಗೆ ಬಂದವರು IIIನೇ ಫಾರಂ ವಿದ್ಯಾರ್ಥಿಗಳಾಗಿದ್ದು, 2—3 ವರ್ಷಗಳಿಂದ ಅಭ್ಯಾಸಮಾಡುತ್ತ ಇದ್ದರೂ, ಈಗ ತಾನೇ ತಲೆ ಎತ್ತುತ್ತಿರುವ ಮೂರ್ನಾಡು ಶಾಲಾ ಟೀಮಿನವರನ್ನು ಸೋಲಿಸಲಿಕ್ಕಾಗಲಿಲ್ಲ.

ಇದನ್ನು ಕಂಡ ಮೂರ್ನಾಡು ಪಟ್ಟಣಿಗರು ತಮ್ಮದೊಂದು ಟೀಮನ್ನು ಏರ್ಪಡಿಸಿ ಶಾಲಾ ಟೀಮಿನವರೊಡನೆ ಬಹು ಸಾಹಸ ಚಮತ್ಕಾರದಿಂದ ಆಡಿದರೂ ಒಂದು ಗೋಲಿನಿಂದ ಸೋಲಿಸಲ್ಪಟ್ಟರು. ಶಾಲೆಯ ಪುಟ್ಟ ಬಾಲಕರು ಯುವ ವಯಸ್ಕರಿಂದ ರಚಿತವಾದ ಟೀಮಿನವರನ್ನು ಸದೆ ಬಡಿದರು.

ಇದನ್ನು ನೋಡಿದ ಪರನಾಡಿನ ಪ್ರೇಕ್ಷಕರೊಬ್ಬರಿಗೆ ಎಚ್ಚರವಾಯಿತು. ಅವರು ಅರಮೇರಿ "ಗಾರ್ಡ್ ಏನ್ಸ್" ಟೀಮನ್ನು ಕರೆದುಕೊಂಡು ಮೂರ್ನಾಡಿಗೆ ಬಂದರು. ಅವರಲ್ಲೂ ಬಹುಮಟ್ಟಿಗೆ IV, V, VIನೇ ಫಾರಂಗಳಲ್ಲಿ ಓದತಕ್ಕವರೂ, ಕಾಲೇಜು ವಿದ್ಯಾವ್ಯಾಸಂಗ ಮಾಡಿದವರೂ ಆಗಿದ್ದು, ಹಾಕಿಯಾಟದಲ್ಲಿ ಬಹು ಅಭಿರುಚಿಯುಳ್ಳವರು. ಅದರೇನು, ಅವರೂ ಮೂರ್ನಾಡಿನವರಿಂದ ಸೋಲಿಸಲ್ಪಟ್ಟರು.

ಈ ಮೂರು ಆಟಗಳನ್ನು ನೋಡುವುದಕ್ಕಾಗಿ ಅನೇಕ ಪ್ರೇಕ್ಷಕರು ನೆರೆದಿದ್ದರು. ಅವರೆಲ್ಲರೂ ಮೂರ್ನಾಡು ಶಾಲೆಯ ಅಭಿವೃದ್ಧಿಗೆ ಆಶ್ಚರ್ಯಚಕಿತರೂ, ಹೆಮ್ಮೆಗೊಂಡವರೂ ಆಹ್ಲಾದಪರರೂ ಆದರು. ಇದು ಸಹ ಸ್ತುತ್ಯವೇ ಸರಿ. ಅವರು ಇನ್ನು ಮುಂದಕ್ಕೂ ಇದೇ ರೀತಿ ಶಾಲೆಯವರಿಗೆ ಪ್ರೋತ್ಸಾಹ ಕೊಟ್ಟು, ಒಡನೆ ಸದರಿ ಶಾಲೆಯನ್ನು ಪೂರ್ತಿ ಅಪ್ಪರ್ ಎಲಿಮೆಂಟರಿ ಶಾಲೆಯನ್ನಾಗಿ ಮಾಡಲು ಪ್ರಯತ್ನಪಡಬೇಕಾಗಿ ಕೋರುವ.

"ಪ್ರೇಕ್ಷಕ."

ಸುಬ್ರಹ್ಮಣ್ಯ ರಸ್ತೆ.

ತಾ. 9—9—'32ನೇ 'ಕೊಡಗು' ಪತ್ರಿಕೆಯಲ್ಲು ಸುಬ್ರಹ್ಮಣ್ಯ ರಸ್ತೆಯ ವಿಷಯವಾಗಿ ಬರೆದ ಬಾತ್ಮಿಗೆ ಮತ್ತು ತಾ. 16—9—'32ರಲ್ಲಿ ಜವಾಬಾಗಿ ಬರೆದ ಬಾತ್ಮಿಗೆ ಇದು ಪ್ರತ್ಯುತ್ತರವಾಗಿರುತ್ತದೆ.

ಅಯ್ಯಾ,

ಬಾತ್ಮಿ ನೋಡಿದ ತಾವು ಇದರ ವಿವರವನ್ನು ತಿಳಿದಿರುವಿರಾ? ತಮಗಳಿಗೆ ಇದರ ವಿವರ ತಿಳಿಯದಿದ್ದಲ್ಲು, ಕಿಂಚಿತ ವಿವರಿಸಬೇಕಾಗಿದೆ.

ಸೋಮವಾರಪೇಟೆ ಚಿಕ್ಕನಳ್ಳಿ ರಸ್ತೆಯಿಂದ ಬಿಸ್ಲೆಘಾಟಿ ಸಬ್ಬಾರ್ ರಸ್ತೆಗೆ ಕೂಡುವಂತೆ ಗಾಡಿ ರಸ್ತೆ ಮಾಡಲು ಅನುಕೂಲ ಇರುವದರಿಂದ ರಸ್ತೆ ಮಾಡಿಸಿ ಕೊಡಬೇಕಾಗಿ ಈ ಪ್ರಾಂತ್ಯದ ಒಕ್ಕಲಿಗರು ಘನ ಸರಕಾರದವರಲ್ಲಿ ಅರಿಕೆ ಮಾಡಿಕೊಂಡದಕ್ಕೆ ಸರಕಾರದಲ್ಲು ಶಿಲ್ಕು ಹಣ ಇಲ್ಲದ್ದರಿಂದ ಅನಾನುಕೂಲವೆಂಬುದಾಗಿ ತೃಪ್ತಪಡಿಸಿದರು.

ಡಿ. ಬೊ. ಮೀಟಿಂಗಿನಲ್ಲು ಈ ರಸ್ತೆ ವಿಷಯ ಆಗಾಗ್ಗೆ ಬಂದು ಚರ್ಚಿಸಿದಲ್ಲು ಡಿ. ಬೊ. ಅಧಿಕಾರಿಗಳು ಅಜಮಾಯಿಸಿ ಆದ ಮೇಲೆ ಆಲೋಚಿಸಬಹುದಾಗಿ ತೀರ್ಮಾನಿಸಿರುವದು ತಮಗಳಿಗೆ ತಿಳಿದಿರಬಹುದು. ಡಿ. ಬೊ. ವೈಸ್ ಪ್ರೆಸಿಡೆಂಟರವರು ಮತ್ತು ಸ್ಥಳೀಕ ಮೆಂಬರರು ರಸ್ತೆ ಮಾಡಲು ಅನುಕೂಲ ಇದೆಯೋ ಎಂಬದಾಗಿ ಅಜಮಾಯಿಸಿದರು.

ಡಿ. ಬೊ. ಮೇಲ್ಕಂಡ ಮಹನೀಯರುಗಳು ರಸ್ತೆಯ ಅಜಮಾಯಿಸಿಗೆ ಬಂದಾಗ್ಯೂ ಡಿ. ಬೋರ್ಡಿನಿಂದ ಮುಂದೆ ಹಣ ಕೊಟ್ಟು ಕೆಲಸಮಾಡಲು ಆಗುವುದಿಲ್ಲ; ಗ್ರಾಮಸ್ಥರು ಸ್ವಂತ ಖರ್ಚಿನಿಂದ ರಸ್ತೆ ಕೆಲಸಮಾಡಿದಲ್ಲು, ಖರ್ಚಿನ ಮೊಬಲಗನ್ನು ಬೋರ್ಡಿನಿಂದ ಕೊಡುವುದಾಗಿ ವಾಗ್ದಾನ ಇತ್ತಮೇರೆ ರಸ್ತೆಯ ಮಣ್ಣು ಕೆಲಸವನ್ನು ಮಾಡಿ ಪೂರೈಸಿರುತ್ತೆ.

ತಮಗಳ ಬಾತ್ಮಿಯಲ್ಲು ಕಂಟ್ರಾಕ್ಟು ವಹಿಸಿಕೊಂಡವರು ಕೆಲಸ ಪೂರೈಸಿರುವುದಿಲ್ಲ. ಕೆಲಸ ಪೂರೈಸಿ ನಾಡು ಪಾರುಪತ್ಯಗಾರರಿಂದ ರಿಪೋರ್ಟನ್ನು ಡಿ. ಬೊ. ಆಫೀಸಿಗೆ ಕಳುಹಿಸಿ ಹಣವನ್ನು ಹೊಂದಿಕೊಳ್ಳಬಹುದೆಂದು ನಮೂದಿಸಿರುತ್ತದೆ. ಈ ವಿಷಯವು ಹೊಸ ಸಮಸ್ಯೆಯಾಗಿರುತ್ತದೆ.

ಗ್ರಾಮಸ್ಥರು ವಾಗ್ದಾನದ ಮೇರೆ ಕೆಲಸಮಾಡಿರುವುದಲ್ಲದೆ ಕಂಟ್ರಾಕ್ಟಿನ ಮೂಲಕವಲ್ಲ. ಕಂಟ್ರಾಕ್ಟಿನ ವಿಷಯ ತಮಗಳಿಗೆ ತಿಳಿದಿದ್ದರೆ ಇದರ ಸರ್ವ ವಿಷಯ ವಿವರಿಸಿ ಕೊಡುವಿರಾ?

ತಾ. 9—9—'32ರ ಬಾತ್ಮಿಯು ಬಡ ರೈತರ ಕಷ್ಟವನ್ನು ವಿಶದಪಡಿಸಿದಲ್ಲದೆ, ಅಧಿಕಾರಿಗಳನ್ನಾಗಲಿ, ಮೆಂಬರರನ್ನಾಗಲಿ ದೂಷಿಸಿದಲ್ಲ. 'ಬಡವನ ಸಿಟ್ಟು ದವಡೆಗೆ ಮೂಲ,' 'ಸಾಚದ್ದು ಹೇಳಿದರೆ ಸಿಂಡಲೂಕ ಕೋಪ'ಯೆಂಬ ಹಾಗೆ ತಮಗಳ ಬಾತ್ಮಿಯ ಅರ್ಥವಾಗಿರುತ್ತದೆ.

ತಾವುಗಳು ಧನಿಕರಾಗಿರಬಹುದು. ಖರ್ಚಿನ ಮೊಬಲಗು ತಮಗಳಿಗೆ ಕಿಂಚಿತವಾಗಿರಬಹುದು. ಆದರೂ ತಾವುಗಳು ಇಂಥಾ ಕೆಲಸವನ್ನು ಮಾಡಿಸಿದ್ದಲ್ಲು ಹೆಚ್ಚಿನ ಬಾತ್ಮಿಯನ್ನು ಬರೆಯುತ್ತಿದ್ದಿರಿ. ಮತ್ತು ಖರ್ಚಿನ ಮೊಬಲಗನ್ನು ಡಿ. ಬೋರ್ಡಿನಿಂದ ಹೊಂದಿಕೊಳ್ಳಲು ಸಹ ಪ್ರಯತ್ನ ಮಾಡುತ್ತಿದ್ದೀರಾಗಿ ನಂಬಬೇಕಾಗಿದೆ. ಪೂರಾ ಗರೀಬರಾಗಿಯೂ, ಅಜ್ಞಾನಿಗಳಾಗಿಯೂ ಇರುವವರು ಬರೆದ ಬಾತ್ಮಿಗೆ ತಮಗಳ ಪ್ರತ್ಯುತ್ತರವು 'ಬೆಕ್ಕಿಗೆ ಆಟ, ಇಲಿಗೆ ಪ್ರಾಣಸಂಕಟ' ಎಂಬ ಗಾದೆಗೆ ಹೋಲುತ್ತದೆ.

ತಮಗಳ ಬಾತ್ಮಿಯಲ್ಲು ಕೆಲಸ ಪೂರೈಸಿರುವುದಿಲ್ಲ. ಕೆಲಸ ಪೂರೈಸಿ, (ಅಂದರೆ ಕಲ್ಲು ಒಡೆಯುವದು ಮತ್ತು ಸ್ವಲ್ಪ ಮಣ್ಣು ತೆಗೆಯುವುದು) ಮೊಬಲಗನ್ನು ಹೊಂದಿಕೊಳ್ಳತಕ್ಕದ್ದಾಗಿ ಇರುತ್ತದೆ. ಈ ವಿಷಯ ಆಶ್ಚರ್ಯ!

ಮಣ್ಣಿನ ಕೆಲಸ ಪೂರೈಸಿದ ನಂತರ ಅಧಿಕಾರಿಗಳು ಖುದ್ದು ಬಂದು ಅಜಮಾಯಿಸಿ, ಬೋರ್ಡಿನಲ್ಲಿ ಸದರಿ ಕೆಲಸಕ್ಕೆ 420 ರೂ. ಮಂಜೂರಾಗಿರುವುದು ತಮಗಳಿಗೆ ತಿಳಿದಿರುವುದಿಲ್ಲವೇ?

ಕಲ್ಲು ಒಡೆಯಲು ಡಿ. ಪಿ. ಡಬ್ಲ್ಯು. ಇಲಾಖೆಯವರು ಅಜಮಾಯಿಸಿ, ಆಫೀಸಿಗೆ ಅಂದಾಜು ಪಟ್ಟಿ ಕಳುಹಿಸಿರುವುದು ತಮಗಳಿಗೆ ತಿಳಿದಿಲ್ಲವೇ?

ಮಂಜೂರಾದ ಹಣದಲ್ಲಿ ಕಲ್ಲು ಒಡೆಯುವದೆಂದರೆ ಮಣ್ಣು ಕೆಲಸಮಾಡಿದ ಗ್ರಾಮಸ್ಥರಿಗೆ ಉಳಿಯುವ ಹಣಾಕ್ಷೇಪವನ್ನು ತಾವುಗಳೇ ಯೋಚಿಸಿರಿ. ಕೆಲಸಕ್ಕೆ ತಗಲಿದ ಖರ್ಚಿನ ಅರ್ಧಾಂಶವೂ ಮಂಜೂರು ಆಗಿರುವುದಿಲ್ಲ. ಇದರಲ್ಲು ಕಲ್ಲು ತೆಗೆಯುವುದೆಂದರೆ ವಿಷಾದಕರವಾಗಿರುತ್ತದೆ.

"ಗ್ರಾಮಸ್ಥ."

ರತಿ ಮನ್ಮಥ ಎಂಬ ಮರ್ಮಶಾಸ್ತ್ರ.

ಕ್ರಯ ರೂ. 1—0—0.

ಕನ್ನಡ ಭಾಷೆಯಲ್ಲಿ ಅಂದವಾಗಿ ಪ್ರಿಂಟಾಗಿದೆ. ಇದರಲ್ಲಿ ಸ್ತ್ರೀ ಪುರುಷರ ಪ್ರೀತಿಯ ರಹಸ್ಯಗಳು, ಪ್ಯಾರಿಸ್ ವೇಶ್ಯಾ ಸ್ತ್ರೀಯರ ಪ್ರೀತಿಯ ಮರ್ಮಗಳು, ಮಲೆಯಾಳ, ಜಪಾನ್, ಫ್ರೆಂಚ್ ದೇಶದ ವೇಶ್ಯಾ ಸ್ತ್ರೀಯರ ಮಲಗುವ ಫೋಟೋಗಳು, ಇನ್ನೂ ಸ್ತ್ರೀ ಪುರುಷರ ಅನೇಕ ರಹಸ್ಯಗಳು 22 ಲೇಡಿಗಳ ಫೋಟೋಗಳ ಸಹಿತ ಕೂಡಿದೆ. ಈ ಶೃಂಗಾರವಾದ ಪುಸ್ತಕವನ್ನು ಓದಲು ಆನಂದವಾಗಿರುವುದು. 22 ಫೋಟೋಗಳ ಸಹಿತ ಪ್ಯಾರಿಸ್ ದೇಶದ ವ್ಯಭಿಚಾರಿಗಳ ವಿನೋದಗಳು, ಕನ್ಯೆಗಳ ಪ್ರೀತಿ, ಶಯ್ಯಾಗೃಹದ ರಹಸ್ಯಗಳು ಅಡಗಿರುತ್ತೆ. ಕ್ರಯ ಪುಸ್ತಕ 1ಕ್ಕೆ ರೂ. ೧—೦—೦.

ಎಂ. ಲಿಂಗಂ ಬುಕ್ ಡಿಪೋ,
ಪೋಸ್ಟ್ ಬಾಕ್ಸ್ ನಂ. 245.
12—3 **ಮದರಾಸ್.**

M. Lingam Book Depot.
Post Box No. 245. Madras.

೫೬ ವರುಷಗಳ ಅನುಭವ ಸಿದ್ಧ ಔಷಧಗಳು.

೧. ಧಾತುಪುಷ್ಟಿ ಲೇಹ—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ಬಾಧೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಉರಿಯುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು.

ಡಬ್ಬಿ 1ಕ್ಕೆ ರೂ 2—8—0. 3ಕ್ಕೆ ರೂ. 7—0—0.

೨. ಅಶೋಕಾರಿಷ್ಟ ಮತ್ತು ಮಾತ್ರೆ—ಹೆಂಗಸರ ಮುಟ್ಟಿನ ದೋಷಗಳು, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾನಹೀನತೆ, ಮೂರ್ಛೆ, ಮಲಬದ್ಧತೆ, ಚಳಿಜ್ವರ, ರಕ್ತಹೀನತೆ, ಕೈ ಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನು ಗುಣಪಡಿಸುವದು. ಬಾಟ್ಲಿ 1ರ 1—4—0; 1 ಡಬ್ಬಿ ಮಾತ್ರೆಗೆ 1—0—0; 3 ಬಾಟ್ಲಿ ಔಷಧಕ್ಕು, 3 ಡಬ್ಬಿ ಮಾತ್ರೆಗೂ 6—4—0.

೩. ಚಂದನಾಸವ ಮತ್ತು ಮಾತ್ರೆಗಳು ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರವು ಆಗಾಗ್ಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳನ್ನು, ಬಾಯಾರಿಕೆ, ಮಲಬದ್ಧತೆ, ಸ್ವಪ್ನಾವಸ್ಥೆ ಇವುಗಳ ಮೇಲೆ ಸಿದ್ಧೌಷಧ. ಬಾಟ್ಲಿ 1ರ 1—2—0; 1ಡಬ್ಬಿ ಮಾತ್ರೆಗೆ 1-6-0. 2 ಬಾಟ್ಲಿ ಔಷಧಕ್ಕು, 2 ಡಬ್ಬಿ ಮಾತ್ರೆಗೂ 4—12—0.

೪. ಬಾಲಾಗ್ರಹ ಗುಟಿಕೆ—ಬಾಲಾಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರು ಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧ. ಬಾಟ್ಲಿ ಒಂದಕ್ಕೆ 0—10—0. 3ಕ್ಕೆ 1—12—0.

೫. ಸುಖಬೇಧಿ ಗುಟಿಕೆ—ಅಜೀರ್ಣವನ್ನು ಉಂಟುಮಾಡದ ಸುಖವಿರೇಚಕ, ಬಾಟ್ಲಿ 1ರ 0—10—0. 3ಕ್ಕೆ 1—12—0.

೬. ಸ್ಪಂದನ ವಟಿ—ಜ್ವರ ನಿಂತು ತ್ವರೆಗಡ್ಡೆ ಕರಗಿ ಮಲವಿಸರ್ಜನೆ ಆಗುವದು. ಬಾಟ್ಲಿ 1ಕ್ಕೆ 1—0—0;

೭. ಮಲೇರಿಯಾ ನಿವಾರಿಣಿ—ಎಲ್ಲಾ ನಮೂನೆಯ ಜ್ವರಕ್ಕೆ ಬಾಟ್ಲಿಗೆ 1—8—0.

೮. ಮಹಾ ಮದನಕಾಮೇಶ್ವರಿ ಲೇಹ ಡಬ್ಬಿ 1ಕ್ಕೆ 2—0—0.

೯. ದಂತಕಾಂತಿ ಚೂರ್ಣ—ಡಬ್ಬಿ 1ರ 3 ಆಣೆ. 6 ಡಬ್ಬಿಗಳಿಗೆ 1—2—0.

ಯಂ. ಗಣಪಯ್ಯ ಎಂಡ್ ಸನ್ಸ್,
ಆಯುರ್ವೇದಿಕ್ ಫಿಸಿಶಿಯನ್ಸ್,
52–4 ರಥಬೀದಿ, ಮಂಗಳೂರು.

---

3 ರೂಪಾಯಿಗೆ 90 ಇನಾಮುಗಳೊಡನೆ 4 ವಾಚುಗಳು.



"ಅಟೋರೋಸ್" ಎಂಬುದು ಸುಗಂಧಗಳೆಲ್ಲಾ ಪ್ರಖ್ಯಾತಹೊಂದಿದ್ದು, ಹೂಗಳಿಂದ ತಯಾರಿಸಲ್ಪಟ್ಟು, ಮೂರು ದಿನಗಳ ವರೆಗೂ ಪರಿಮಳವನ್ನು ಬೀರುವುದು. ಒಂದೇ ಸಲ 6 ಬಾಟ್ಲಿ ತರಿಸಿದವರಿಗೆ ರೂ. 3 ಮಾತ್ರ. ಮತ್ತು 1 ರಿಸ್ಟ್ ವಾಚ್, 1 ರೈಲ್ವೆ ವಾಚ್, 1 ಪಾಕೆಟ್ ವಾಚ್, 1 'ಚ' ಟೈಂಪೀಸ್. 5 ವರ್ಷದ ಖಾತರಿ. ಮತ್ತು 14 ಕ್ಯಾರೆಟ್ ಭಂಗಾರದ ನಿಬ್ಬಿನ ಫೌಂಟನ್ ಪೆನ್ ಮತ್ತು 90 ಇನ್ನಿತರ ಇನಾಮುಗಳು ಮಫತಯಾಗಿ ಕೊಡಲ್ಪಡುವವು. ಪೋಸ್ಟೇಜು 10 ಆಣೆ

NATIONAL WATCH STORE,
1· A· Raja Namin Biswan Lane,
(4–4) P. O. Bagh Bazar, Calcutta.

ಇಂಡಿಯಾ ಎಕ್ವಿಟೇಬಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

(ಸ್ಥಾಪಿಸಲ್ಪಟ್ಟದ್ದು 1908.)

ಪೋಲಿಸಿಗಳು ಕಳಕೊಳ್ಳುವಂಥವುಗಳಲ್ಲ.

ಯಾವ ತಡೆಯೂ ಇಲ್ಲದೆ ಪ್ರತಿ ವರ್ಷವೂ ಬೋನಸ್ಸು.

ಹಕ್ಕು ಬಾಧ್ಯಸ್ಥರಿಗೆ ಸರಿಯಾಗಿ ಹಣ ಕೊಡಲ್ಪಡುವದು, ಇಲ್ಲದಿದ್ದರೆ ಬಡ್ಡಿಯು ದೊರಕುವುದು.

ಹೆಡ್ ಆಫೀಸು:—

102· ಕ್ಲೈವ್ ಸ್ಟ್ರೀಟ್, ಕಲ್ಕತ್ತಾ.

I. E. . P. S. 12–6

GOVERNMENT SOAP FACTORY,
Bangalore.

ನಿಶ್ವಾಸಾರ್ಹತೆ.

ಅತ್ಯುತ್ತಮವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ ಯಾವ ಗುಣಗಳು ಅವಶ್ಯಕವೆಂದು ನೀವು ತಿಳಿದಿರುತ್ತೀರೋ ಆ ಗುಣಗಳೆಲ್ಲಾ ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.

ಸಾಬೂ ನಿಮಗೆ ಭರವಸೆಯನ್ನೀಯುತ್ತೇವೆ.

ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
52–6 ಬೆಂಗಳೂರು.

ಗೆ ಈ ಅಸ್ಪೃಶ್ಯತೆಯನ್ನು ಅಂಗೀಕರಿಸುವ ಆಧಾರವು ಯಾವುದೂ ಸಿಕ್ಕುತ್ತಿಲ್ಲ. ಸಂಸ್ಕೃತದಲ್ಲಿ ಬರೆದು ಅಚ್ಚು ಹಾಕಿದ್ದೆಲ್ಲಾ ಶಾಸ್ತ್ರವೆಂದೂ, ಅದನ್ನು ಪಾಲಿಸುವುದು ನಮ್ಮ ಕರ್ತವ್ಯವೆಂದೂ ಭಾವಿಸುವ ಚಟ್ಟಿಗೆ ನಾವು ಒಳಗಾಗಬಾರದು. ನೀತಿಯ ಮೂಲ ಸಿದ್ಧಾಂತಗಳಿಗೆ ವಿರೋಧವಾಗಿರುವುದು, ಎಷ್ಟೇ ಪುರಾತನವಾದದ್ದಾದರೂ ಅದು ಶಾಸ್ತ್ರವಾಗಲಾರದು.

ಅಸ್ಪೃಶ್ಯ ಸಹೋದರರೇನು ಮಾಡಬೇಕು ?

ನಿಮ್ಮನ್ನು (ಅಸ್ಪೃಶ್ಯರನ್ನು) ಮುಟ್ಟದಿರುವವರೊಂದಿಗೆ ಹೀಗೆ ಮಾತನಾಡಿದಂತೆ ಕೇಳುವಾಗ ಅಂತ್ಯಜರು (ಅಸ್ಪೃಶ್ಯರು) ಬಹಳ ಅಸಹ್ಯರಾಗಿದ್ದಾರೆ, ಸಾರಾಯಿ ಕುಡಿಯುತ್ತಾರೆ, ಮಾಂಸ ತಿನ್ನುತ್ತಾರೆಯೆಂತ ಜವಾಬು ಕೊಡುತ್ತಾರೆ. ಬ್ರಾಹ್ಮಣರೂ, ವೈಶ್ಯರೂ ಮತ್ತು ಇತರ ಜಾತಿಯವರು ಸಹ ಇಂಥವರು ಇದ್ದಾರೆ, ಆದರೂ ಅವರ ಮಕ್ಕಳು ಸ್ಕೂಲಿಗೆ ಹೋಗುತ್ತಾರೆ, ಹೋಗಲು ಅಡ್ಡಿ ಇಲ್ಲ. ಹಾಗಾದರೆ ಈ ತಲೆ ಕೆಳಗಾದ ವಾದದ ಅರ್ಥವೇನು ಎಂತ ನಾನು ಕೇಳುತ್ತೇನೆ. ಅವರಲ್ಲಿ ಹೀಗೆ ನಾನು ವಾದ ಮಾಡಿದರೂ, ನಿಮ್ಮ ಮೇಲೆ ಏನೇನು ಆಕ್ಷೇಪಣೆ ಮಾಡುತ್ತಾರೋ ಅವುಗಳನ್ನು ಹೋಗಲಾಡಿಸಿಕೊಂಡು ಇಂಥಾ ಆಕ್ಷೇಪಕ್ಕೆ ಎಡೆ ಇಲ್ಲದಂತೆ ಮಾಡಿಕೊಳ್ಳಬೇಕೆಂತ ನಿಮ್ಮನ್ನು ಕೇಳಿಕೊಳ್ಳುತ್ತೇನೆ. ನಿಮ್ಮ ಕೆಲಸ ತೀರಿದನಂತರ ಪ್ರತಿ ದಿನವೂ ಸ್ನಾನ ಮಾಡಬೇಕಾದದ್ದು ಅವಶ್ಯ. ತೋಟಿಯ ಕೆಲಸ ನಾನು ಬಹಳ ಮಾಡಿದ್ದೇನೆ. ಅದರಲ್ಲಿ ಅಗೌರವವು ಸ್ವಲ್ಪವೂ ಇಲ್ಲ. ಅದೂ ಪವಿತ್ರ ಕೆಲಸವಾಗಿದೆ. ಯಾವನು ಅಸಹ್ಯವನ್ನು ದೂರ ಮಾಡುತ್ತಾನೋ ಅವನು ಪವಿತ್ರ ಕೆಲಸ ಮಾಡುತ್ತಾನೆ. ನೀವು ಚಕ್ಕಳ ಹದಮಾಡುವ ಕೆಲಸ ಮಾಡುವವರಾದರೆ ಆ ಕೆಲಸ ಮಾಡಿದನಂತರ ಸ್ನಾನ ಮಾಡಿ. ಒಳ್ಳೆಯವರು ಪ್ರತಿನಿತ್ಯವೂ ಹಲ್ಲು ಉಜ್ಜಿ, ಸ್ವಚ್ಛ ಮಾಡಿಕೊಂಡು ಸ್ನಾನ ಮಾಡಿ, ಬಟ್ಟೆ ಒಗೆದುಕೊಂಡು, ಶರೀರವನ್ನು ಶುದ್ಧವಾಗಿ ಇಟ್ಟುಕೊಳ್ಳುತ್ತಾರೆ. ನೀವು ಇಷ್ಟು ಕೆಲಸ ಮಾಡಬೇಕು. ಕೈಯ್ಯಲ್ಲಿ ಜಪ ಮಾಲೆ ತೆಗೆದುಕೊಂಡು ರಾಮನಾಮ ಎಂತ ಜಪ ಮಾಡಬೇಕು. ಜಪಮಾಲೆ ಇಲ್ಲದಿದ್ದರೆ ಬೆರಳುಗಳಿಂದಲೂ ಎಣಿಸಿಕೊಂಡು ಮಾಡಬೇಕು. ರಾಮಧ್ಯಾನ ಮಾಡಿದರೆ ನಿಮ್ಮ ಕಷ್ಟಗಳೆಲ್ಲಾ ಪರಿಹಾರವಾಗಿ ನಿಮಗೆ ಒಳ್ಳೇದಾಗುತ್ತದೆ. ಬೇರೆ ಎಲ್ಲರೂ ನಿಮ್ಮನ್ನು ಪೂಜೆ ಮಾಡುತ್ತಾರೆ. ಬೇರೆಯವರ ಎಂಜಲು ತಿನ್ನಬಾರದು. ನಾರುವ ಮತ್ತು ಕೊಳೆತ ಆಹಾರ ತೆಗೆದುಕೊಳ್ಳಬಾರದು. ಹಣ್ಣು ಮೊದಲಾದುವೂ ಎಂಜಲಾಗಿದ್ದರೆ ನಿಮ್ಮ ಮುಖವನ್ನು ತಿರುಗಿಸಿಕೊಳ್ಳಬೇಕು. ಮತ್ತು ನೀವು ಕೈಯಿಂದಲೇ ತಯಾರಿಸಿದ ಆಹಾರ ತೆಗೆದುಕೊಳ್ಳಬೇಕು. ಮತ್ತು ಎಂಜಲು ತಿನ್ನಲಿಕ್ಕೆ ನೀವು ಬಲ್ಲವರಲ್ಲ. ನಿಮಗೂ ಕಣ್ಣು, ಮೂಗು, ಕಿವಿ ಇವೆ. ನೀವು ಪೂರ್ತಿಯಾಗಿ ಮನುಷ್ಯರಾಗಿದ್ದೀರಿ. ಆದ್ದರಿಂದ ಮನುಷ್ಯತ್ವವನ್ನು ಕಾಪಾಡಿಕೊಳ್ಳಲು ಕಲಿಯಿರಿ.

ನಿಮ್ಮ ಕೆಲಸವು ಅಸಹ್ಯವೆಂತ ನಿಮಗೆ ಹೇಳಲಿಕ್ಕೆ ಅನೇಕರು ಬಂದಾರು. ನಿಮ್ಮನ್ನು ಸ್ಕೂಲಿಗೆ ಹೋಗಲಿಕ್ಕೆ ಬಿಡದಿದ್ದರೆ, ದೇವಸ್ಥಾನಗಳಿಗೆ ಬಿಡದಿದ್ದರೆ, ಹಿಂದೂ ಅನ್ಯಾಯದಿಂದ ನಾವು ಒಳ್ಳೇ ಗುಣಗಳನ್ನು ಕಲಿತುಕೊಳ್ಳದೇ ಆಗದೆಯೆಂತ ನೀವು ಹೇಳಬೇಕು. ಅಣ್ಣ ತಮ್ಮಂದಿರೂ, ಒಂದೆ ಮಕ್ಕಳೂ ಜಗಳ ಮಾಡಿದರೆ ಪುನಃ ಸ್ನೇಹದಿಂದ ಇರುತ್ತಾರೆ. ಹಾಗೆಯೇ ನಿಮಗೂ ಜಾತಿ ಹಿಂದೂಗಳಿಗೂ ಇರುವ ಮನಸ್ತಾಪವನ್ನು ಮರೆಯಲಿಕ್ಕೆ ಪ್ರಯತ್ನಿಸಬೇಕೆಂತ ಅವರು ಕೇಳಲು ಸಿದ್ಧರಿರಬೇಕು. ನಿಮ್ಮ ಧರ್ಮದಲ್ಲೇ ಸ್ಥಿರವಾಗಿರಬೇಕು. ಹಿಂದೂ ಶಾಸ್ತ್ರವು ನನ್ನದು, ನನ್ನ ಆತ್ಮೀಯರದ್ದು ಅನೇ ಸಾರಿ ಎಂತ ಮುಸಲ್ಮಾನ್ ಮತ್ತು ಕ್ರಿಸ್ತ ಸಹೋದರರಿಗೆ ನೀವು ಹೇಳಿ, ಹಿಂದೂ ಧರ್ಮದಲ್ಲೇ ದೃಢವಾಗಿ ಇರಬೇಕು. ಅಂತ್ಯಜರನ್ನು ಹಿಡಿದು ಯಾರಾದರೂ ಹೇಗೆ ಇರಬೇಕು. ಅಸ್ಪೃಶ್ಯರನ್ನು ಹಿಡಿದು ಯಾರಾದರೂ ಹೇಗೆ ಬೇಕಾದರೂ ಆಡಲು ಅವರು ಹಗೆಯ ಆಳದ ದಾಳಗಳಲ್ಲ. ನಿಮ್ಮನ್ನು ಅಣ್ಣ ತಮ್ಮಂದಿರು, ಅಕ್ಕ ತಂಗಿಯರು ಎಂತ ಹೇಳುತ್ತಾ, ನಾನು ನಿಮ್ಮ ಹತ್ತಿರ ಬರುವುದು ನನ್ನ ಅವಶ್ಯಕತೆಗಾಗಿ, ನನ್ನ ಸ್ವಾರ್ಥಕ್ಕಾಗಿ ಅಗದೆ, ಯಾಕೆಂದರೆ ನನ್ನ ಪೂರ್ವಜರು ನಿಮಗೆ ಮಾಡಿದ ಪಾಪವನ್ನು ಕಳೆದುಕೊಳ್ಳುವುದಕ್ಕಾಗಿ ನಾನು ಈ ಕೆಲಸ ಮಾಡುವುದಾಗಿದೆ. ನಾವು ನಿಮಗೆ ಮಾಡಿದ ಪಾಪದಿಂದ ನಿಮಗೇನು ? ಯಾತಕ್ಕಾಗಿ ನೀವು ಧರ್ಮವನ್ನು ಬಿಡಬೇಕಾಗಿದೆ ! ನಮಗೆ ಪ್ರಾಯಶ್ಚಿತ್ತವಾಗಬೇಕಾಗಿದೆ. ನೀವು ರಾಮ ರಾಮವೆನ್ನುವುದನ್ನು ಯಾಕೆ ಬಿಡುತ್ತೀರಿ? ಗುಹನು ಶ್ರೀರಾಮನ ಸೇವಕನಾಗಿದ್ದಾನೋ, ದಾಸನಾಗಿದ್ದಾನೋ ಅವನಿಗೆ ರಾಮನು ಗುಹನನ್ನೇ ಕೊಟ್ಟು ಅವನನ್ನು ಅಪ್ಪಿಕೊಳ್ಳುತ್ತಾನೆ. ಈ ಅಪ್ಪಿಕೊಳ್ಳುವಿಕೆಯಲ್ಲಿ ನೀವು ಭಾಗಿಗಳಾಗಬೇಕೆಂತ ನನ್ನ ಆಶಯಾಗಿದೆ.

ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗು.

ತಾ. 28—3—1932 ರಲ್ಲು ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗು ಮಡಿಕೇರಿಯಲ್ಲಿ ಜರುಗಿತು. ಅಧ್ಯಕ್ಷರವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು.

1. ಫ್ರೇಜರ್‌ಪೇಟೆ ಮುಸಾಫರಿ ಬಂಗ್ಲೆಯನ್ನು ಪೋಸ್ಟ್ ಡಿಪಾರ್ಟ್‌ಮೆಂಟಿನವರು ಉಪಯೋಗಿಸಿದ ದಿನಗಳ ಬಾಡಿಗೆ ವಸೂಲು ಮಾಡಬೇಕೆಂದು ಬಂದ ಪತ್ರವನ್ನು ಓದಿ ಒಪ್ಪಲಾಯಿತು

2. ಚಿಕ್ಕಳುವಂದ ಗ್ರಾಮದ ಶಾಲೆಯನ್ನು ಡಿ. ಬೋರ್ಡಿನವರು ವಹಿಸಿಕೊಳ್ಳುವಂತೆ ತಂದಕಾಗದವನ್ನು ಹಿಂತೆಗೆಯಲಾಯಿತು.

3. ಸಂಪಾಜೆಯಿಂದ ಚೆಂಬು ಗ್ರಾಮಕ್ಕೆ ರಸ್ತೆ ಮಾಡಬೇಕೆಂಬ ಅಂದಾಜನ್ನು ಒಪ್ಪಿ ರೂ. 218/ನ್ನು ಮಂಜೂರು ಮಾಡಲಾಯಿತು.

4. ಮುಸಾಫರಿ ಬಂಗ್ಲೆಗಳ ಮೇಲ್ವಿಚಾರಕರ ಬಗ್ಗೆ ರೂಲ್ಸನ್ನು ಮಾಡಬೇಕೆಂಬ ಕಮಿಷನರವರ ಪತ್ರವನ್ನು ಓದಿ ಮುಂದೆ ಒಪ್ಪಿಗೆಯೂ ಆಗದೆ ಹಾಗೆಯೇ ಬಿಡಲಾಯಿತು.

5. ಫಾರೆಸ್ಟು ಇಲಾಖೆಯು ಡಿಸ್ಟ್ರಿಕ್ಟ್ ಬೋರ್ಡು ರಸ್ತೆಯನ್ನು ಉಪಯೋಗಿಸುವುದಕ್ಕಾಗಿ ರಿಪೇರಿ ಬಗ್ಗೆ ಸ್ವಲ್ಪ ಹಣವನ್ನು ಕೊಡುವಂತೆಯೇ ಪಬ್ಲಿಕನವರು ಫಾರೆಸ್ಟು ರಸ್ತೆಯನ್ನು ಉಪಯೋಗಿಸುವದಕ್ಕಾಗಿ ರಿಪೇರಿ ಬಗ್ಗೆ ಹಣ ಕೊಡಬೇಕೆಂದು ಬರೆದ ಫಾರೆಸ್ಟು ಇಲಾಖೆಯವರ ಪತ್ರಕ್ಕೆ ಉಭಯತ್ರರು ರಿಪೇರಿ ಖರ್ಚಿಗೆ ಹಣ ಕೊಡುವಂತೆ ತೀರ್ಮಾನವಾಯಿತು.

6. ಗೋಣಿಕೊಪ್ಪಲಿನಿಂದ ಪೊನ್ನಪ್ಪಸಂತೆಯ ವರೆಗೆ ರಸ್ತೆ ರಿಪೇರಿಯ ಬಗ್ಗೆ ಮತ್ತು ಬಿಳೂರಿನಲ್ಲಿ ಒಂದು ಶಾಲೆಯನ್ನು ಸ್ಥಾಪಿಸುವಂತೆ ಕೇಳಿಕೊಂಡ ಪತ್ರವನ್ನು ಓದಿ, ಬೋರ್ಡಿನವರು ಮೊಳ್ಳಂಡ ರಸ್ತೆಯನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು ಅವಶ್ಯವಿದ್ದಲ್ಲಿ ಮಾತ್ರ ರಿಪೇರಿ ಮಾಡಲು ಹಣ ಕೊಡುವಂತೆಯೂ ಮತ್ತು ಬಿಳೂರಿನಲ್ಲಿ ಶಾಲೆಯು ಅವಶ್ಯವಿಲ್ಲವೆಂದೂ ತೀರ್ಮಾನವಾಯಿತು.

7. ಶಾಲಾ ಡೆಪ್ಯುಟಿ ಇನ್ಸ್‌ಪೆಕ್ಟರರ ಕೋರಿಕೆಯಂತೆ ಹುದಿಕೇರಿ ಶಾಲೆಯಲ್ಲಿ ಬೆಕ್ಕದ ಕೆಲಸವನ್ನು ಕಲಿಸುವಂತೆ ಏರ್ಪಾಡು ಮಾಡಲು ತೀರ್ಮಾನಿಸಲಾಯಿತು.

8. ಶನಿವಾರಸಂತೆ ಹೋಬಳಿಯಲ್ಲಿ ಒಂದು ಬಾವಿಯನ್ನು ತೆಗೆಯಲು ಬರಕೊಂಡ ಅಲ್ಲಿನ ಪಾರುಪತ್ಯಗಾರರ ಪತ್ರವನ್ನು ಓದಿ ಹಣ ಒದಗಿದಂತೆ ಇದನ್ನು ಮಂಜೂರುಮಾಡಬಹುದೆಂದು ತೀರ್ಮಾನವಾಯಿತು.

9. ರೂ. 600 ಖರ್ಚು ಮಾಡಿ ಒಂದು ಬಾವಿಯನ್ನು ಬಿದಿಗನ ಹಳ್ಳಿಯಲ್ಲಿ ತೋಡಿಸುವಂತೆ ಶನಿವಾರಸಂತೆ ಹೋಬಳಿಯ ಪಾರುಪತ್ಯಗಾರರು ಬರೆದ ಪತ್ರವನ್ನು ಓದಿ ಹಣವಿದ್ದರೆ ಮಂಜೂರು ಮಾಡಬಹುದೆಂದು ತೀರ್ಮಾನಿಸಲಾಯಿತು.

10. ಡಿಸ್ಟ್ರಿಕ್ಟ್‌ಬೋರ್ಡ್ ಲೆಕ್ಕವನ್ನು ಆಡಿಟ್ ಮಾಡುವದಕ್ಕೆ 200 ರೂ. ಕೊಡಬೇಕೆಂದು ಮದರಾಸು ಎಕೌಂಟೆಂಟ್ ಜನರಲರು ಬರೆದ ಪತ್ರವನ್ನು ಓದಿ, ಹಣ ಮಂಜೂರು ಮಾಡಲಾಯಿತು.

11. ಹೆಬ್ಬಾಲೆ ಅಂಬಲದಲ್ಲಿ ಬಾವಿ ತೋಡಬೇಕೆಂಬ ವಿಷಯವನ್ನು ಆಲೋಚಿಸಿ, ಹಣ ದೊರಕಿದಂತೆ ಬಾವಿ ತೋಡಿಸಲು ತೀರ್ಮಾನವಾಯಿತು.

12. ಅರಟೋಕಿ ಸ್ಕೂಲಿಗೆ ಹೆಚ್ಚಿಗೆ ಒಬ್ಬ ಉಪಾಧ್ಯಾಯನನ್ನು ಮಂಜೂರು ಮಾಡಿ 30ಕ್ಕೆ ಮೇಲ್ಪಟ್ಟು ವಿದ್ಯಾರ್ಥಿಗಳಿರುವ ಎಲ್ಲಾ ಶಾಲೆಗಳಿಗೆ ಒಬ್ಬ ಉಪಾಧ್ಯಾಯನನ್ನು ಹೆಚ್ಚಿಗೆ ಕೊಡುವಂತೆ ತೀರ್ಮಾನವಾಯಿತು.

13. ಚೆಂಬೆಬೆಳ್ಳೂರು ಶಾಲೆಯಿಂದ ಒಬ್ಬ ಉಪಾಧ್ಯಾಯನನ್ನು ವರ್ಗಮಾಡಿ, ಅಮ್ಮತಿ ಸ್ಕೂಲಿಗೆ ಒಬ್ಬ ಉಪಾಧ್ಯಾಯನನ್ನು ಹೆಚ್ಚಿಗೆ ಕೊಡುವಂತೆ ತೀರ್ಮಾನವಾಯಿತು.

14. ... ರಸ್ತೆಯನ್ನು ಸರಿಪಡಿಸಲಿಕ್ಕೆ ರೂ. 15 ಮಂಜೂರು ಮಾಡಲಾಯಿತು.

15. ಶಾಂತಳ್ಳಿಯಲ್ಲಿ ವಾರಕ್ಕೊಂದಾವರ್ತಿ ಆಸ್ಪತ್ರೆಯನ್ನು ತೆರೆಯಬೇಕೆಂದು ಮೆ. ಪಟ್ಟಮಾಡ ಕುಂಞಪ್ಪನವರು ಬರಕೊಂಡ ಪತ್ರವನ್ನು ಓದಿ, ಒಪ್ಪಲಾಯಿತು.

16. ತಿತಿಮತಿ ಶಾಲೆಯನ್ನು ಪುನಃ ತೆರೆಯುವಂತೆ ತೀರ್ಮಾನಿಸಲಾಯಿತು.

17. ಗೋಣಿಕೊಪ್ಪಲು ಟೌನಿಗೆ ಒಂದು ಕೈಗಾಡಿಯನ್ನು ಕೊಡುವಂತೆ ಮಂಜೂರಾಯಿತು.

18. ಈ ಕೆಳಗಿನ ಸ್ಥಳಗಳಲ್ಲಿ ಬಾವಿಗಳನ್ನು ತೋಡಲು ಹಣ ಒದಗಿದ ಹಾಗೆ ಮಂಜೂರು ಮಾಡುವಂತೆ ತೀರ್ಮಾನಿಸಲಾಯಿತು.

ಅಂಕನಳ್ಳಿ ರೂ. 770, ಅಲ್ಲೂರು ರೂ. 75, ಕೂಡಿಗೆ ರೂ. 320, ಕಡನೂರು 700, ಎಮ್ಮೆಮಾಡು 700, ಚಿಕ್ಕಭಂಡಾರ ರೂ. 400 ಮತ್ತು ಅರಮೇರಿ ರೂ. 400.

19. ಕಕ್ಕಬೆ ಸ್ಕೂಲಿನಲ್ಲಿ 7ನೇ ತರಗತಿಯನ್ನು ತೆರೆಯುವಂತೆಯೂ, ಇದಕ್ಕಾಗಿ ಹೆಚ್ಚಿಗೆ ಒಬ್ಬ ಉಪಾಧ್ಯಾಯನನ್ನು ನೇಮಿಸುವಂತೆಯೂ ತೀರ್ಮಾನಿಸಲಾಯಿತು.

20. ಕೈಕೇರಿಯಲ್ಲಿ ಪಂಚಮರಿಗೆ ಒಂದು ಬಾವಿ ಅವಶ್ಯವೆಂದು ಕೋರಿಕೆಯಿತ್ತು, ಪಂಚಮರು ಸದರಿ ಬಾವಿ ತೋಡಲು ಮುಟ್ಟುಕೈ ಕೆಲಸ ಮಾಡುತ್ತೇವೆಯೆಂದು ಒಪ್ಪಿದರೆ ಹಣ ಮಂಜೂರು ಮಾಡುವಂತೆ ತೀರ್ಮಾನಿಸಲಾಯಿತು.

21. ಹಾಲುಗುಂದ ಶಾಲೆಗೆ ಒಬ್ಬ ಹೆಚ್ಚಿಗೆ ಉಪಾಧ್ಯಾಯನನ್ನು ನೇಮಿಸುವುದನ್ನು ಕುರಿತು ಯೋಚಿಸಿ ಹಣ ಒದಗಿದಾಗಲೂ ಮತ್ತು ಶಾಲೆಯಲ್ಲಿ 30 ಹುಡುಗರ ಮೇಲ್ಪಟ್ಟು ವಿದ್ಯಾರ್ಥಿಗಳಿದ್ದರೆ ಮಂಜೂರು ಮಾಡುವಂತೆ ತೀರ್ಮಾನಿಸಲಾಯಿತು.

22. ಲೋಕಲ್ ಫಂಡ್ ಶಾಲೆಯ ಉಪಾಧ್ಯಾಯರ ಸಂಬಳವನ್ನು ರಿವೈಸ್ ಮಾಡಬೇಕೆಂದು ಶಾಲಾ ಡೆಪ್ಯುಟಿ ಇನ್ಸ್‌ಪೆಕ್ಟರರು ಬರೆದ ಪತ್ರವನ್ನು ಓದಿ ಹಣದ ತೊಂದರೆ ತೀರಿದ ನಂತರ ಆಲೋಚಿಸುವಂತೆ ತೀರ್ಮಾನವಾಯಿತು.

23. ಮಡಿಕೇರಿ ಮುಸಾಫರಿ ಬಂಗ್ಲೆಯನ್ನು ರಿಪೇರಿ ಮಾಡಲು, ಕೊಡಗಿನ ಎಕ್ಸಿಕ್ಯುಟಿವ್ ಇಂಜಿನೀಯರವರ ಪತ್ರದ ಪ್ರಕಾರ ರೂ. 700 ಮಂಜೂರು ಮಾಡಲಾಯಿತು.

24. ಸ್ಯಾನಿಟರಿ ಇನ್ಸ್‌ಪೆಕ್ಟರವರ ಸಂಬಳವನ್ನು ಮುಂದಿನ 60—5—90—5—100—4—120 ಗ್ರೇಡಿನಲ್ಲಿರಿಸುವಂತೆ ತೀರ್ಮಾನವಾಯಿತು.

25. ಕುಟ್ಟದಲ್ಲಿ ಒಂದು ಸಂತೆ ಮೈದಾನವನ್ನು ರೂ. 120ರ ಒಳಗೆ ಏರ್ಪಡಿಸುವಂತೆ ತೀರ್ಮಾನ ಮಾಡಲಾಯಿತು.

26. ಹಣದ ಅಭಾವದಿಂದ ಬೆಳ್ಳುಮಾಡು ಸೇತುವೆಯ ಕೆಲಸವನ್ನು ಸದ್ಯಕ್ಕೆ ಕೈಕೊಳ್ಳಲಾಗುದಿಲ್ಲವೆಂದೂ, ಹಣದ ತೊಂದರೆ ಕಳೆದ ನಂತರ ಇದನ್ನು ಕುರಿತು ಆಲೋಚಿಸುವುದಾಗಿಯೂ ತೀರ್ಮಾನವಾಯಿತು.

27. ತಿಂಗಳಿಗೆ 35/ರೂ ಸಂಬಳದಲ್ಲಿ ಒಬ್ಬ ವರ್ಕ್ಸ್ ಸುಪರ್‌ವೈಸರನ್ನು ಡಿಸ್ಟ್ರಿಕ್ಟ್ ಬೋರ್ಡಿಗೆ ಅವಶ್ಯವಿರುವವರೆಗೆ ಇಟ್ಟುಕೊಳ್ಳುವಂತೆ ತೀರ್ಮಾನವಾಯಿತು.

28. ಪೇರೂರು ಗ್ರಾಮದ ಕೇಳಪ್ಪರ ಹೊಳೆಗೆ ಸೇತುವೆ ಕಟ್ಟಲು 100 ರೂ. ಮಂಜೂರು ಮಾಡಲಾಯಿತು.

29. ಮಾಹೆಯಾನ 30 ರೂ. ಸಂಬಳದಲ್ಲಿ ಎರಡು ಅರ್ಜಿ ಬೇದಾರುಗಳನ್ನು ನೇಮಿಸುವಂತೆ ತೀರ್ಮಾನಿಸಲಾಯಿತು.

30. ಅಮ್ಮತ್ತಿ, ಚಿಕ್ಕಬಂಡಾರ, ದೊಡ್ಡಳ್ಳಿ ಮತ್ತು ಸಂಪಿಗೆವಾಳುಗಳಲ್ಲಿ ತೋಡಿರುವ ಬಾವಿಗಳಿಗೆ ರಿವೈಸ್ ಮಾಡಿದ ಎಸ್ಟಿಮೇಟನ್ನು ಮಂಜೂರು ಮಾಡಲಾಯಿತು.

31. ಕೂಡಿಗೆ ಮತ್ತು ಮುಳ್ಳುಸೋಗೆ ಗ್ರಾಮಗಳಲ್ಲಿ ಬಾವಿಗಳನ್ನು ತೋಡಿಸಬೇಕೆಂದು ಮೆ. ರಾಮಶೆಟ್ಟಿಯವರು ಕೇಳಿದಕ್ಕೆ ಎಸ್ಟಿಮೇಟನ್ನು ತಯಾರಿಸಿ ಒಪ್ಪಿಸುವಂತೆ ತೀರ್ಮಾನಿಸಲಾಯಿತು.

32. ಕಾಲೂರು ರಸ್ತೆ ರಿಪೇರಿಗೂ ಮತ್ತು ನೋಡೂರು ಹೊಳೆಗೆ ಸೇತುವೆ ಕಟ್ಟಲಿಕ್ಕಾ 500 ರೂ. ಗೆ ಎಡಿಶನ್‌ ಕೊಡುವಂತೆ ತೀರ್ಮಾನವಾಯಿತು.

33. ಮೆ. ಚಾಮೆರ ಕಾಳಪ್ಪನವರ ಠರಾವಿನ ಮೇರೆ ಡಿಸ್ಟ್ರಿಕ್ಟ್ ಬೋರ್ಡಿಗೆ ಒಬ್ಬ ನಾನ್ ಅಫಿಷಿಯಲ್ (ಉದ್ಯೋಗಸ್ಥನಲ್ಲದ) ಪ್ರೆಸಿಡೆಂಟರನ್ನು ಚುನಾಯಿಸುವಂತೆ ತೀರ್ಮಾನವಾಯಿತು. ಅಲ್ಲದೆ ಈಗಿನ ಕಮಿಟಿಯ ಅವಧಿ ಮುಗಿಯುವ ವರೆಗೆ ಅಧ್ಯಕ್ಷರಾಗಿರಲು ಸರ್ಕಾರದವರು ಚುನಾಯಿತ ಮೆಂಬರುಗಳ ಪೈಕಿ ಒಬ್ಬರನ್ನು ಪ್ರಥಮ ಅಧ್ಯಕ್ಷರಾಗಿ ನೇಮಿಸುವಂತೆಯೂ ಒಪ್ಪಲಾಯಿತು.

ವಿರಾಜಪೇಟೆ ಪಬ್ಲಿಕ್ ಮೀಟಿಂಗು.

(2ನೇ ಪುಟದಿಂದ ಮುಂದುವರಿದದ್ದು)

ಮಾಡುವದು ನ್ಯಾಯವಲ್ಲ. ಈ ದಿನ ಮಾಡಿದಂಥಾ ಪಬ್ಲಿಕ್ ಸಭೆಗಳಿಗೂ, ಫಲಾಹಾರ ಕೂಟಗಳಿಗೂ ನಾವು ಮಹಮ್ಮದೀಯರನ್ನೂ, ಕ್ರೈಸ್ತರನ್ನೂ ಇಷ್ಟರಾಗಿ ಸೇರಿಸಿಕೊಳ್ಳುತ್ತಾ ಬಂದಿದ್ದೇವೆ. ಆದರೆ ಇಷ್ಟರ ವರೆಗೆ ನಾವು ಅಸ್ಪೃಶ್ಯರ ಮದುವೆ ಮಾಡಿಕೊಳ್ಳುವುದಾಗಲೀ, ಮನೆಯೊಳಗೆ ಸೇರಿಸಿಕೊಳ್ಳುವದಾಗಲೀ ಮಾಡಿರುವುದಿಲ್ಲ. ಅಷ್ಟು ಮಾತ್ರವಲ್ಲ, ಹಿಂದೂ ಧರ್ಮದ ಒಂದೇ ಜಾತಿಯವರಾದರೂ ಅವರಲ್ಲಿರುವ ಬೇರೆ ಬೇರೆ ಪಂಗಡಗಳಲ್ಲಿ ಅನ್ಯೋನ್ಯ ಮದುವೆಯಾಗಲೀ, ಭೋಜನವಾಗಲೀ ಮಾಡುವುದಿಲ್ಲ. ಪಬ್ಲಿಕ್ ಕೂಟಗಳಿಗೂ, ಮದುವೆ, ಭೋಜನಗಳಿಗೂ ಏನೊಂದೂ ಸಂಬಂಧವಿಲ್ಲ. ಕೊಡಗಿನಲ್ಲಿಯೂ ಅಸ್ಪೃಶ್ಯತೆ ಇದೆ. ಇಲ್ಲವಾದರೆ, ಪಂಚಮರನ್ನು ದೇವಸ್ಥಾನಗಳಿಗೆ ಇಷ್ಟರ ವರೆಗೆ ಬಿಡದೆ ಇರಲು ಕಾರಣವೇನು ? ದೇವರ ಮುಂದೆ ಎಲ್ಲರೂ ಸಮಾನರೇ. ಆದುದರಿಂದ ಹರಿಜನರನ್ನು ದೇವಸ್ಥಾನಗಳಿಗೆ ಹೋಗಲು ಬಿಟ್ಟು, ಪಬ್ಲಿಕ್ ಕೂಟ, ಸಂಸ್ಥೆಗಳಿಗೆ ಸೇರಿಸಿಕೊಂಡು, ಅಸ್ಪೃಶ್ಯತಾ ಭಾವನೆಯನ್ನು ಹೋಗಲಾಡಿಸಿ, ಮಹಾತ್ಮರ ಸಂದೇಶವನ್ನು ಪಾಲಿಸುವದು ನಮ್ಮೆಲ್ಲರ ಪರಮ ಕರ್ತವ್ಯವಾಗಿದೆ." ಇವರು ಮಾತಾಡುತ್ತಾ ಇದ್ದ ಹಾಗೆ ಮೆ. ಚೀಯಂಡಪೂವಂಡ ಥಿಮ್ಮಯ್ಯನವರು ಮತ್ತು ಒಬ್ಬಿಬ್ಬರು ಅಡ್ಡ ಮಾಡುತ್ತಿದ್ದರು. ಅಧ್ಯಕ್ಷರು ಅವರನ್ನು ಸುಮ್ಮನಿರಲು ಹೇಳಿದರು, ಮೆ. ಕಾರ್ಯಪ್ಪನವರು ಮುಗಿಸಿದ ಕೂಡಲೇ ಮೆ. ಥಿಮ್ಮಯ್ಯನವರು, ಅಧ್ಯಕ್ಷರು ಅಪ್ಪಣೆ ಕೊಡದಿದ್ದರೂ ಕೂಡ ಮಾತಾಡತೊಡಗಿದರು. ಇನ್ನೂ ಹಲವರು ಮಾತಾಡಲಿಕ್ಕಿರುವುದರಿಂದ ಮೆ. ಥಿಮ್ಮಯ್ಯನವರನ್ನು ಈಗ ಮಾತಾಡಲು ಬಿಡಲಾಗದೆಂದು ಹಲವರು ಕೂಗಿ ಹೇಳಿದರು. ರಾತ್ರಿಯಾಗಿ ಹೋಗಿದ್ದದರಿಂದಲೂ, ಕೆಲವರು ಅಧ್ಯಕ್ಷರ ಮಾತನ್ನು ಉಲ್ಲಂಘನೆ ಮಾಡುತ್ತಿದ್ದುದರಿಂದಲೂ ಅಧ್ಯಕ್ಷರು ಮೀಟಿಂಗನ್ನು 7 ಗಂಟೆಗೆ ಮುಕ್ತಾಯಗೊಳಿಸಿದರು.

೫ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕಕಂಪನಿಯವರ

ಜ್ವರದ ಗುಳಿಗೆಗಳು.

ಚಳಿಜ್ವರ, ಚಾತುರ್ಥಿ ಜ್ವರ, ದಿನದಿನ ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮ ಬಾಣದಂತೆ ಇವೆ. ಬಾಟ್ಲಿಗೆ ರೂ. ೧. ೪ ಪ. ೭ ಆಣೆ. ಬರೂರು ತರಿಸಿಕೊಳ್ಳಿ.

(32—10) ಗಣೇಶ ರಾಮಚಂದ್ರ ಕರ್ಕ,
ಮತ್ತು ಕಂಪನಿ,
ಗಿರಗಾಂವ, ಮುಂಬಯಿ.

ಒಳದೇಶ.

ತಾ. 8 ರಿಂದ ಇಂದಿನ ವರೆಗೆ ಮಡಿಕೇರಿಯಲ್ಲಿ 1.75 ಇಂಚು ಮಳೆಯಾಗಿದೆ.

ಶಾಸನ ಭಂಗದಲ್ಲಿ ಭಾಗಿಗಳಾದ ಮಿ. ಅಜ್ಜಿಕುಟ್ಟಿರ ತಿಮ್ಮಯ್ಯನವರು ಪುನಹ ಬೊಂಬಾಯಿಯಲ್ಲಿ ಸೈದು ಮಾಡಲ್ಪಟ್ಟಿರುವರೆಂದು ವರ್ತಮಾನ.

ಕೊಡಗಿನ ಭವಿಷ್ಯತ್ತನ್ನು ಕುರಿತು ಆಲೋಚಿಸಲು ಈ ತಾ. 23ರಲ್ಲಿ ಕೆಲವು ಮಹನೀಯರ ಸಭೆಯೊಂದು ಮಡಿಕೇರಿಯಲ್ಲಿ ನಡಿಸಲಾಗುವುದೆಂದು ತಿಳಿಯುತ್ತೇವೆ.

ಕಮಿಷನರವರು ಈ ತಾ. 7 ರಲ್ಲಿ ಕೊಡೈಕೆನಾಲಿಗೆ ಹೋಗಿ, ಅಲ್ಲಿರುವ ತಮ್ಮ ಕುಟುಂಬ ಸಮೇತ ತಾ. 13ರಲ್ಲಿ ಅವರು ವಾಪಸು ಬಂದರೆಂದೂ ತಿಳಿಯಬರುತ್ತದೆ.

ಮಿ. ಮುಂಡೇಪಂಡ ಕಾರ್ಯಪ್ಪನವರು ಸತ್ಯಾಗ್ರಹ ಚಳವಳದ ದೆಸೆಯಿಂದ 6 ತಿಂಗಳು ಸಜೆಯನ್ನು ಅನುಭವಿಸಿ ಈ ತಾ. 7ರಲ್ಲಿ ಕಣ್ಣಾನೂರು ಜೈಲಿನಿಂದ ಬಿಡುಗಡೆಯಾಗಿ ಬಂದರು.

ಮಿ. ಮಾತಂಡ ಮುಂದಣ್ಣನವರು ಶಾಸನಾನುಭಂಗ ಚಳವಳದಲ್ಲಿ ಭಾಗಿಗಳಾದುದರಿಂದ ಕಳೆದ ಆಗಸ್ಟು ತಿಂಗಳಲ್ಲಿ ಕಾರಾಗಾರದಲ್ಲಿ ದಸ್ತಗಿರಿ ಮಾಡಲ್ಪಟ್ಟು, 6 ತಿಂಗಳ ಸಜೆಗೆ ಗುರಿಮಾಡಲ್ಪಟ್ಟಿರುವರೆಂದು ತಿಳಿಯಬರುತ್ತದೆ.

ಕಳೆದ ಆದಿತ್ಯವಾರ ರಾತ್ರಿ ದಸರ ಹಬ್ಬದ ಮೆರವಣಿಗೆಗಳು ಮಡಿಕೇರಿ ಮತ್ತು ವೀರರಾಜಪೇಟೆ ಪಟ್ಟಣಗಳಲ್ಲಿ ವಿಜೃಂಭಣೆಯಿಂದ ನಡೆದವು. ಆದರೆ ಮಳೆಯು ಜನರ ಉತ್ಸಾಹವನ್ನು ಸ್ವಲ್ಪ ಕಡಿಮೆ ಮಾಡಿತಂತೆ.

ಮಡಿಕೇರಿಯಲ್ಲಿ ಮಲೇರಿಯಾ ಆಫೀಸರಾಗಿದ್ದ ಮಿ. ಅಜ್ಜಮಾಡ ಕಾಳಯ್ಯನವರು ಮಲೇರಿಯಾ ಚಿಕಿತ್ಸೆಯಲ್ಲಿ ಒಂದು ವರ್ಷ ತರಬೇತು ಹೊಂದುವ ಬಗ್ಗೆ ಈ ತಾ. 9 ರಲ್ಲಿ ಕಲ್ಕತ್ತಾಕ್ಕೆ ಹೊರಟು ಹೋದರೆಂದು ತಿಳಿಯುತ್ತೇವೆ.

ಈ ತಾ. 6ರಲ್ಲಿ ವೀರರಾಜಪೇಟೆ ಹೈಸ್ಕೂಲಿನಲ್ಲಿ ನಡಿಸಿದ ಶಾರದಾ ಪೂಜೆಯಲ್ಲಿ ಎಲ್ಲಾ ವಿದ್ಯಾರ್ಥಿಗಳ ಅನುಮತಿಯಿಂದ ಪಿ. ಯಸ್. ಅಣ್ಣು ಎಂಬ ಹರಿಜನ ವಿದ್ಯಾರ್ಥಿಯು ಮಂಗಳಾರತಿ ಎತ್ತಿದನೆಂತಲೂ, ಕೆಲವು ಉಪಾಧ್ಯಾಯರುಗಳು ಮಾತ್ರ ಅಲ್ಲಿಂದ ಹೋಗಿಬಿಟ್ಟರೆಂತಲೂ ವರ್ತಮಾನ.

ಮಡಿಕೇರಿ ಹೈಸ್ಕೂಲಿನಲ್ಲಿ ವಿದ್ಯಾರ್ಥಿಗಳಿಗೆ ಚಿತ್ರದ ಕೆಲಸ ಕಲಿಸುವ ಏರ್ಪಾಡು ಮಾಡಲಾಗಿದೆ. ಕೆಲವು ವರ್ಷಗಳಿಂದ ಮಡಿಕೇರಿಯಲ್ಲಿ ಚಿತ್ರದ ಕೆಲಸದ ಅಂಗಡಿಯನ್ನು ಇಟ್ಟುಕೊಂಡಿದ್ದ ಮಿ. ಕೊಂಬಂಡ ಕಾರ್ಯಪ್ಪನವರು ಚಿತ್ರ ಕೆಲಸದ ಉಪಾಧ್ಯಾಯರಾಗಿ ನೇಮಿಸಲ್ಪಟ್ಟಿರುವರು.

ಮಡಿಕೇರಿಯ ಮಿ. ವೈ. ಕೃಷ್ಣಪ್ಪನವರು, ಬೊಂಬಾಯಿಯಲ್ಲಿ ಕಳೆದ ಮೇ ತಿಂಗಳಲ್ಲಿ ನಡೆದ 'ಟೀಚರ್ಸ್ ನೇಶನಲ್ ಯೂನಿಯನ್'ನ ಪರೀಕ್ಷೆಯಲ್ಲಿ 'ಬುಕ್ ಕೀಪಿಂಗ್,' ಎಕೌಂಟೆನ್ಸಿ ಮತ್ತು ಕಮರ್ಷಿಯಲ್ ಕರೆಸ್ಪೊಂಡೆನ್ಸ್' ಗಳಲ್ಲಿ ಫಸ್ಟ್ ಕ್ಲಾಸಿನಲ್ಲಿ ತೇರ್ಗಡೆಯಾಗಿರುವರೆಂದು ತಿಳಿಯುತ್ತೇವೆ.

ಕಳೆದ ವಾರ ಪ್ರಕಟಿಸಿದಂತೆ ಮಿ. ಕೊಳ್ಳಿಮಾಡ ಕರುಂಬಯ್ಯನವರಿಗೂ ಮತ್ತು ಕು. ಬಿಳ್ಳಂಗಡ ಬೋಪಯ್ಯನವರಿಗೂ ಜುಲುಮಾನೆ ಕೊಡದೆ ತಪ್ಪಿದರೆ 4 ವಾರ ಜೆಯ್ಲಿನ ಸಜೆ ವಿಧಿಸಲಾಗಿದೆ ಎಂಬುದು ಸರಿಯಲ್ಲವೆಂತಲೂ, ಜುಲುಮಾನೆ ಕೊಡದೆ ತಪ್ಪಿದರೆ 1½ ತಿಂಗಳು ಜೆಯ್ಲಿನ ಸಜೆ ವಿಧಿಸಲಾಗಿದೆಯೆಂತಲೂ ಈಗ ತಿಳಿಯುತ್ತೇವೆ.

ಅಸ್ಪೃಶ್ಯತಾ ನಿವಾರಣೆಯ ಬಗ್ಗೆ ಕಳೆದ ಸೋಮವಾರ ಸಾಯಂಕಾಲ ವೀರರಾಜಪೇಟೆಯಲ್ಲಿ ಮೇಲ್ಜಾತಿ ಹಿಂದೂಗಳು ಮತ್ತು ಹರಿಜನರು ಸೇರಿ ಒಂದು ಫಲಹಾರ ಕೂಟವೂ, ನಂತರ ಮಿ. ಕೇಳಪಂಡ ಅಜ್ಜಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆಯೂ ನಡಿಸಲಾದವು. ಇದರ ವಿವರವು ಇನ್ನೊಂದು ಕಡೆ ಪ್ರಕಟಿಸಲಾಗಿದೆ.

ಕೊಡಗಿನ ಮುಜರಾಯಿ ಇಲಾಖೆಯ ಆಡಳಿತದಲ್ಲಿರುವ ದೇವಸ್ಥಾನಗಳ ಪ್ರವೇಶಕ್ಕೆ ಹರಿಜನರನ್ನು ಬಿಡಬೇಕೆಂದು ಹಲವು ಪ್ರಮುಖರ ಸಮೇತ ಸುಮಾರು 500 ಜನ ಸಹಿ ಹಾಕಿದವರು ಸದರಿ ಇಲಾಖೆಯ ಅಧ್ಯಕ್ಷರು ಮತ್ತು ಕಮಿಟಿಯವರಿಗೆ ಬರೆದ ಅರ್ಜಿಗಳನ್ನು ಈ ತಾ. 11ರಲ್ಲಿ ನಡೆದ ಅವರ ಮೀಟಿಂಗಿನಲ್ಲಿ ಚರ್ಚೆ ಯೇನೂ ನಡಸದೆ, ಹಿಂದಕ್ಕೆ ವಾಪಸು ಮಾಡಿದರೆಂದು ತಿಳಿಯುತ್ತೇವೆ.

ಮೈಸೂರು ಸರ್ಕಾರದವರು ಬಸ್ಸುಗಳ ತೆರಿಗೆಯನ್ನು ಹೆಚ್ಚಿಸಿದ್ದರಿಂದ ಅಲ್ಲಿಯ ಬಸ್ಸು ಕಂಪೆನಿಗಳು ಬಸ್ಸು ನಡಿಸದೆ ಮುಷ್ಕರ ಹಿಡಿದಿದ್ದುವಷ್ಟೆ. ಆದರೆ ಒಂದು ತಿಂಗಳೊಳಗಾಗಿ ಈ ವಿಷಯವನ್ನು ತೀರ್ಮಾನಿಸುವಂತೆಯೂ, ಅಷ್ಟರ ವರೆಗೆ ಹೆಚ್ಚಿನ ತೆರಿಗೆ ಕೊಡುವುದನ್ನು ಬಿಡಬಹುದೆಂತಲೂ ಸರ್ಕಾರದವರು ಒಪ್ಪಿದ್ದರಿಂದ, ನಿಲ್ಲಿಸಲ್ಪಟ್ಟ ಸುಮಾರು 150 ಬಸ್ಸುಗಳು ಪುನಹ ಈ ತಾ. 7ರಿಂದ ನಡೆಯುತ್ತಿವೆ.

ಬರುವ ಡಿಸೆಂಬರು ತಾ. 8ರಲ್ಲಿ ಮಡಿಕೇರಿ ವೇದಾಂತ ಸಂಘದವರು ನಡಿಸಲಿರುವ ಗೀತಾ ಜಯಂತಿ ದಿವಸ ಭಗವದ್ಗೀತೆಯ 18, ಯಾ 12, ಯಾ 6, ಯಾ 3, ಅಥವಾ ಒಂದು ಅಧ್ಯಾಯವನ್ನು ಕಂಠಪಾಠ ಮಾಡಿ, ಸಭೆಯಲ್ಲಿ ಪಠನ ಮಾಡುವ ಮಹನೀಯರುಗಳಿಗೂ ಮತ್ತು ವಿದ್ಯಾರ್ಥಿಗಳಿಗೂ ಸಂಘದವರು ಬಹುಮಾನಗಳನ್ನು (ಪುಸ್ತಕಗಳನ್ನು) ಕೊಡುವರೆಂದು ಸದರಿ ಸಂಘದ ಕಾರ್ಯದರ್ಶಿಯಾದ ಮಿ. ಜಿ. ಸುಬ್ಬಯ್ಯನವರು ತಿಳಿಸಿರುತ್ತಾರೆ.

ದಿವಂಗತ ಮಾಳೆಯಂಡ ಮುತ್ತಣ್ಣನವರ ಹೆಸರಿನಲ್ಲಿರುವ ಟೆನ್ನಿಸ್ ಹಾಕಿ ಟೂರ್ನಮೆಂಟು ಈ ತಾ. 5 ರಿಂದ 12 ರ ವರೆಗೆ ವೀರರಾಜಪೇಟೆಯಲ್ಲಿ ನಡೆಯಿತು. ಏಳು ಟೀಮುಗಳು ಭಾಗಿಗಳಾಗಿದ್ದವು. ತಾ. 12 ರಲ್ಲಿ 'ಫ್ರೆಂಡ್ಸ್ ಇಲೆವೆನ್' ಟೀಮಿನವರೂ, ವೀರರಾಜಪೇಟೆ ಸ್ಕೂಲ್ ಫಸ್ಟ್ ಟೀಮಿನವರೂ ಅಖೈರು ಆಟವನ್ನು ಆಡಿ, ಸ್ಕೂಲು ಫಸ್ಟ್ ಟೀಮಿನವರು ಗೆದ್ದರು. ದಕ್ಷಿಣ ಕೊಡಗಿನ ಸಬ್ ಡಿವಿಜನಲ್ ಆಫೀಸರಾದ ಮಿ. ಮುನಿಸ್ವಾಮಿಯವರು ಬಟ್ಟಲನ್ನು ಗೆದ್ದವರಿಗೆ ಕೊಟ್ಟರು.

ಹಿಂದೂದೇಶ.

ಡೆಲ್ಲಿಯಲ್ಲಿ ಜಮಾಯತ್ ಉಲ್ ಉಲೆಮಾದ 8 ನೇ ಸರ್ವಾಧಿಕಾರಿಯಾದ ಮೌಲಾನ ಮಹ್ಮದ್ ಇಸ್ಮೈಲ್‌ರವರು ತಾ. 8 ರಲ್ಲಿ ಸೈದು ಮಾಡಲ್ಪಟ್ಟರು.

ತಾ. 10ರಲ್ಲಿ ಕಲ್ಕತ್ತಾದಲ್ಲಿ ಪೋಲೀಸರ ಹುಕುಮಿಗೆ ವಿರೋಧವಾಗಿ ಮೆರವಣಿಗೆ ನಡಿಸಿದ್ದಕ್ಕಾಗಿ 14 ಸ್ವಯಂ ಸೇವಕರು ದಸ್ತಗಿರಿ ಮಾಡಲ್ಪಟ್ಟರು.

ಕರಾಚಿಯಲ್ಲಿ ಸಿಂಧಿಮದ್ದುಗಳ ಅಂಗಡಿಗಳನ್ನು ಪಿಕೆಟ್ ಮಾಡಿದ್ದಕ್ಕಾಗಿ 10 ಗಂಡಸರಿಗೂ ಮತ್ತು 3 ಸ್ತ್ರೀಯರಿಗೂ 4 ರಿಂದ 6 ತಿಂಗಳ ವರೆಗೆ ಸಜೆಯು ವಿಧಿಸಲಾಗಿದೆ.

ಕೋಮುವಾರು ತೀರ್ಮಾನವನ್ನು ಆಲೋಚಿಸುವ ಬಗ್ಗೆ ಹಿಂದೂ ದೇಶದ ಶ್ರೇಷ್ಠ ಮುಂದಾಳುಗಳ ಕಾನ್ಫರೆನ್ಸೊಂದು ಈ ತಾ. 24ರಲ್ಲಿ ಪೂನಾದಲ್ಲಿ ನಡೆಯುವುದು.

ತಾ. 11ರಲ್ಲಿ ಮದ್ರಾಸಿನ ಶ್ರೀ ಸುಂದರ ವಿನಾಯಗರ್ ದೇವಸ್ಥಾನವು ಹರಿಜನರ ಪ್ರವೇಶಕ್ಕೆ ಬಿಡಲಾಯಿತು. ಈ ಸಂತೋಷದ ಕಾರ್ಯವನ್ನು ಬಾಬು ರಾಜೇಂದ್ರ ಪ್ರಸಾದ್‌ರವರು ನಡಿಸಿದರು.

ಮದ್ರಾಸಿನಲ್ಲಿ ಪಿಕೆಟ್ ಮಾಡಿದ್ದಕ್ಕಾಗಿ ಈ ತಾ. 11ರಲ್ಲಿ 12 ಜನರೂ, ತಾ. 12ರಲ್ಲಿ 8 ಜನ ಸ್ವಯಂ ಸೇವಕರೂ ದಸ್ತಗಿರಿ ಮಾಡಲ್ಪಟ್ಟರು. ಆದರೆ ಮರುದಿನ ಅವರೆಲ್ಲರೂ ಬಿಡುಗಡೆ ಮಾಡಲ್ಪಟ್ಟರು.

ಅನಾರೋಗ್ಯದ ದೆಸೆಯಿಂದ ಸುಭಾಷ್‌ಚಂದ್ರ ಬೋಸ್‌ರವರು ಮದ್ರಾಸು ಜೈಲಿನಿಂದ ಸಂಯುಕ್ತ ಪ್ರಾಂತ್ಯದ ಭೋವಾಲಿ ಎಂಬ ಆರೋಗ್ಯಕರ ಸ್ಥಳಕ್ಕೆ ತಾ. 9ರಲ್ಲಿ ವರ್ಗಾಯಿಸಲ್ಪಟ್ಟಿರುವರು.

ಒಂದು ವಾರದಿಂದ ಪ್ರತಿ ದಿನವೂ ಬೊಂಬಾಯಿಯ ಹತ್ತಿ ಮಾರ್ಕೆಟಿನ ವ್ಯಾಪಾರ ಬಜಾರನ್ನು ಕಾಂಗ್ರೆಸಿನ ಸ್ವಯಂಸೇವಕರು ಪಿಕೆಟ್ ಮಾಡುತ್ತಿರುವರು. ಹಲವರು ದಸ್ತಗಿರಿ ಮಾಡಲ್ಪಟ್ಟಿರುವರು.

ಹಿಂದೂ ಮುಸ್ಲಿಂ ಸಮಸ್ಯೆಯನ್ನು ಬಿಡಿಸಲು ಪ್ರಯತ್ನಗಳನ್ನು ನಡಿಸುವುದಕ್ಕಾಗಿ ಶೌಕತ್ ಆಲಿಯವರು ಈ ತಾ. ...ರಲ್ಲಿ ಅಮೇರಿಕಕ್ಕೆ ಹೋಗುವುದನ್ನು ಎರಡು ವಾರಗಳ ವರೆಗೆ ಬಾಕಿ ಮಾಡಿರುವರು.

ಅಸ್ಪೃಶ್ಯತೆಯನ್ನು ಹೋಗಲಾಡಿಸುವ ಬಗ್ಗೆ ಕಳೆದ ತಾ. 25ರಲ್ಲಿ ಬೆಂಗಳೂರಿನಲ್ಲಿ ಹರಿಜನರು ಮತ್ತು ಮೇಲ್ಜಾತಿ ಹಿಂದೂಗಳು ಸೇರಿ ಒಂದು ಭೋಜನವನ್ನೂ, ನಾಗಪುರದಲ್ಲಿ ಈ ತಾ. 10ರಲ್ಲಿ ಸುಮಾರು 3000 ಜನರು ಸೇರಿ ಒಂದು ಪಾನ್ ಸುಪಾರಿ ಪಾರ್ಟಿಯನ್ನೂ ನಡಿಸಿದರು.

ಈ ತಾ. 8 ಮತ್ತು 9ರಲ್ಲಿ ತಂಜಾವೂರಿನಲ್ಲಿ ನಡೆಯಬೇಕಾಗಿದ್ದ ಬ್ರಾಹ್ಮಣೇತರರ ಫೆಡರೇಶನಿನ ಪರಿಷತ್ತು ಗಲಿಬಿಲಿಯಲ್ಲಿ ಅಂತ್ಯವಾಯಿತು. ಅಧ್ಯಕ್ಷರ ಚುನಾವಣೆಯೂ, ಅಧ್ಯಕ್ಷರ ಭಾಷಣದ ಓದುವಿಕೆಯೂ ಬಲವಾಗಿ ವಿರೋಧಿಸಲ್ಪಟ್ಟದ್ದರಿಂದ ಮೀಟಿಂಗೇ ನಡೆಯಲಿಲ್ಲ.

ಕರ್ನೂಲಿನ ದತ್ತಾತ್ರೇಯ ದೇವಸ್ಥಾನವೂ, ಬೆಂಗಳೂರಿನ ಶ್ರೀ ಮೀನಾಕ್ಷಿ ಅಮ್ಮ ದೇವಾಲಯವೂ, ಕುರುಮುಲ್ಲೂರಿನ ಸುಬ್ರಹ್ಮಣ್ಯ ದೇವಸ್ಥಾನವೂ, ಅಮರಾವತಿಯಲ್ಲಿರುವ ಅಮರೇಶ್ವರ ದೇವಾಲಯವೂ ಮತ್ತು ಬಂಗಾಳದ ಮತ್ತೊಂದು ಬಹು ಪ್ರಾಮುಖ್ಯವಾದ ಕಲ್ಕತ್ತಾದ ಜಗನ್ನಾಥೇಶ್ವರ ದೇವಾಲಯವೂ ಹರಿಜನರ ಪ್ರವೇಶಕ್ಕೆ ಬಿಡಲಾಗಿವೆ.

ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಮೇಲ್ಜಾತಿ ಹಿಂದೂಗಳು ತಯಾರಾಗಿರುವರೋ ಎಂಬುದನ್ನು ಪರೀಕ್ಷಿಸಲಿಕ್ಕಾಗಿ ಲಾಹೋರಿನಲ್ಲಿ ಹರಿಜನರೇ ತಯಾರು ಮಾಡಿದ ಮಿಠಾಯಿ ಅಂಗಡಿಯೊಂದು ತೆರೆಯಲಾಯಿತು. "ಹರಿಜನರು ತಯಾರು ಮಾಡಿದ ಮಿಠಾಯಿ" ಎಂಬ ಬೋರ್ಡು ಹಾಕಲಾಗಿತ್ತು. ಅಲ್ಲಿಂದ ಹಲವು ಮೇಲ್ಜಾತಿ ಹಿಂದೂಗಳು ಮಿಠಾಯಿಯನ್ನು ಕೊಂಡರು.

ಈಗಿನ ರಾಜಕೀಯ ಚಳವಳದ ಫಲವಾಗಿ ಬಂಗಾಳ ಸರ್ಕಾರಕ್ಕೆ ಉಂಟಾಗಿರುವ ಖರ್ಚಿನ ಕಿರುಪಟ್ಟಿ ಅಲ್ಲಿಯ ಕೌನ್ಸಿಲಿನಲ್ಲಿ ಈ ಕೆಳಗೆ ಕಂಡಂತೆ ಹೊರಬಿತ್ತು. ಬಂಗಾಳ ಪ್ರಾಂತ್ಯದ ಪೋಲೀಸಿಗೆ—1930—31ರಲ್ಲಿ ರೂ. 12,00,500, 1931—32ರಲ್ಲಿ 13,69,000, 1932—33ರಲ್ಲಿ 14,94,000. ಕಲ್ಕತ್ತಾ ಪೋಲೀಸಿಗೆ—1930—31ರಲ್ಲಿ ರೂ. 2,01,000, 1931—32ರಲ್ಲಿ ರೂ. 1,70,000, 1932—33ರಲ್ಲಿ ರೂ. 2,77,000. ಒಂದು ಪ್ರಾಂತ್ಯದಲ್ಲಿ ಇಷ್ಟಾದರೆ ಇಡೀ ಹಿಂದೂಸ್ಥಾನದಲ್ಲಿ ಎಷ್ಟಾಗಿರಬಹುದು!

'ಹಿಂದೂ—ಮುಸ್ಲಿಂ ಐಕ್ಯತೆಯನ್ನು ಸಾಧಿಸಲು ಮಹಾತ್ಮರಿಗೆ ಹಿಂದೀಯರ ಮೇಲಿರುವ ದೊಡ್ಡ ಶಕ್ತಿಯನ್ನು ಉಪಯೋಗಿಸುವಂತೆ ಬೇಡಿಕೊಳ್ಳುತ್ತೇನೆಂದು' ಶೌಕತ್ ಆಲಿಯವರು ಮಹಾತ್ಮ ಗಾಂಧಿಯವರಿಗೆ ತಂತಿ ಕಳುಹಿಸಿದ್ದರು. ಆದಕ್ಕೆ ಮಹಾತ್ಮರು 'ನೀವು ಅಮೇರಿಕಕ್ಕೆ ಹೋಗುವುದನ್ನು ಮುಂದಕ್ಕೆ ಇಟ್ಟದ್ದು ಸಂತೋಷಕರ. ಹಿಂದೂ, ಮುಸ್ಲಿಂ, ಸಿಖ್ ಐಕ್ಯತೆಯ ದಿವಸವು ಹಿಂದೂ ದೇಶಕ್ಕೆ ಬೇಕೋಯೆಂಬ ದಿನವಾಗುವುದು. ನೀವು ಚೆನ್ನಾಗಿ ಹುಡುಕಿದರೆ ನನ್ನನ್ನು ನಿಮ್ಮ ಜೇಬಿನಲ್ಲಿ ಇರುವುದಾಗಿ ಕಾಣುವಿರಿ' ಎಂದು ಜವಾಬನ್ನು ಕಳುಹಿಸಿರುವರು.

ಬ್ರಿಟಿಷ್ ಚಕ್ರವರ್ತಿಯವರಿಗೆ ಸ್ವಂತ ಆದಾಯವು ತುಂಬಾ ಇದೆ. ಇದನ್ನು ಅವರೇ ಸಾಗುವಳಿ ಮಾಡಿಕೊಂಡು, ಆ ಸ್ವತ್ತಿಯನ್ನು ತೆಗೆದುಕೊಳ್ಳಬಹುದು ಅಥವಾ ಸರ್ಕಾರದ ಮೂಲಕ ಗುತ್ತಿಗೆ ಕೊಡಬಹುದು. ಈಗಿನ ಚಕ್ರವರ್ತಿಯವರ ತಂದೆಯವರ ಕಾಲದಿಂದ ಅದನ್ನು ಸರ್ಕಾರಕ್ಕೆ ಗುತ್ತಿಗೆ ಕೊಡುತ್ತಿದ್ದಾರೆ. ಈ ಜಮೀನುಗಳಿಗಾಗಿ ಸರ್ಕಾರದವರು ಚಕ್ರವರ್ತಿಯವರಿಗೆ ವರ್ಷಕ್ಕೆ 4,500,000 ರೂಪಾಯಿ ಗುತ್ತಿಗೆ ಕೊಡುತ್ತಾರೆ. ಆದರೆ ಇಷ್ಟು ಕೊಟ್ಟ ಮೇಲೂ ಸರ್ಕಾರಕ್ಕೆ ಈ ಆಸ್ತಿಯಿಂದ ವರ್ಷಕ್ಕೆ 45,000,000 ರೂಪಾಯಿ ಲಾಭ ಸಿಕ್ಕುತ್ತಂತೆ!

ಸೊಳ್ಳೆಗಳ ಕಾಟವನ್ನು ತಪ್ಪಿಸಲು ಅವುಗಳನ್ನು ಹಿಡಿಯುವ ಯಂತ್ರ ಒಂದನ್ನು ಬರ್ಟ್ರನ್ ಗಾರ್ಡನ್ ಎಂಬಾಕೆಯು ಕಂಡು ಹಿಡಿದಿರುವಳು. ಇದು ಒಂದು ಕೊಳವೆಯಾಗಿದೆ. ಅದರ ಮೇಲ್ಭಾಗದಲ್ಲಿ ಒಂದು ದೀಪ ಉರಿಯುತ್ತಿರುತ್ತೆ. ಕೊಳವೆಯ ಕೆಳಭಾಗದಲ್ಲಿ ಎಳೆದುಕೊಳ್ಳುವ (ಸಕ್ಷನ್) ಯಂತ್ರ ಒಂದು ಇರುತ್ತೆ. ದೀಪದ ಬಳಿ ಸೊಳ್ಳೆಗಳು ಬಂದ ಕೂಡಲೆ ಈ ಯಂತ್ರವು ಅವನ್ನು ಕೊಳವೆಯೊಳಕ್ಕೆ ಎಳೆದುಕೊಳ್ಳುತ್ತದೆ. ಈ ಯಂತ್ರವು 4 ಗಂಟೆಯೊಳಗೆ ಐದು ಪೌಂಡು ತೂಕ ಅಂದರೆ 3,400,000 ಸೊಳ್ಳೆಗಳನ್ನು ಎಳೆದು ಕೊಲ್ಲಬಲ್ಲುದಂತೆ!

ಹಿಂದೂ, ಮುಸ್ಲಿಂ ಐಕ್ಯತೆಯ ಸಂಬಂಧ ಬೊಂಬಾಯಿಯಲ್ಲಿ ಪಂಡಿತ ಮಾಳವೀಯರಿಗೂ, ಶೌಕತ್ ಆಲಿಯವರಿಗೂ ದೀರ್ಘ ಸಂಭಾಷಣೆ ನಡೆದು, ಈ ವಿಷಯವನ್ನು ಆಲೋಚಿಸಲು ಹಿಂದೂಸ್ಥಾನದ ಎಲ್ಲಾ ಪಕ್ಷಗಳ ಮುಖಂಡರ ಸಭೆಯೊಂದನ್ನು ಈ ತಾ. 15 ಮತ್ತು 16 ರಲ್ಲಿ ಲಕ್ನೋದಲ್ಲಿ ನಡಿಸಲು ಶೌಕತ್ ಆಲಿಯವರು ಸುಮಾರು 30 ಮಹನೀಯರನ್ನು ಆಹ್ವಾನಿಸಿರುವರು. ಆದರೆ ಅಖಿಲ ಭಾರತ ಮುಸ್ಲಿಂ ಕಾನ್ಫರೆನ್ಸಿನ ಅಧ್ಯಕ್ಷರಾದ ಸರ್ ಮಹ್ಮದ್ ಇಕ್ಬಾಲ್‌ರವರು ಮತ್ತು ಅವರ ಪಕ್ಷದ ಕೆಲವರು ಈ ಮೀಟಿಂಗಿಗೆ ಬರುವದಿಲ್ಲವೆಂದು ಸೂಚಿಸಿರುವರು. ಬೇರೆ ಹಲವು ಕಡೆಗಳಿಂದ ಶೌಕತ್ ಆಲಿಯವರ ಪ್ರಯತ್ನಕ್ಕೆ ಬೆಂಬಲವು ದೊರೆಯುತ್ತಿದೆ.

ತಾ. 10ರ ರಾತ್ರಿ ನೈಸೂರಿನಲ್ಲಿ ಮಹಾರಾಜರು ದಸರಾ ಮೆರವಣಿಗೆಯಲ್ಲಿ ಬರುತ್ತಿದ್ದಾಗ್ಯೆ, ಪೋಲೀಸಿನವರು ಒಬ್ಬ ಹಿಂದೂ ಯುವಕನಿಗೆ ಹೊಡೆದು ಗಾಯಮಾಡಿದ್ದರಿಂದ ಅವನನ್ನು ಮಹಾರಾಜರಿಗೆ ತೋರಿಸಲು ಪ್ರಯತ್ನಿಸಿದವರು ಯತ್ನಿಸಿದಾಗ್ಯೆ ಮಹಾರಾಜರು ಕೂತಿದ್ದ ಆನೆಯು ಗಾಬರಿಯಾಗಿ ಜನರ ಮೇಲೆ ಬೀಳುವಂತೆ ಇತ್ತೆಂದೂ, ಅಷ್ಟರಲ್ಲೇ ಬೇರೆ ಆನೆಗಳನ್ನು ತಂದು ಅದರ ಸುತ್ತಲೂ ನಿಲ್ಲಿಸಿ ಗಲಾಟೆಯನ್ನು ನಿವಾರಿಸಲಾಯಿತೆಂದೂ, ಆದರೂ ಮೆರವಣಿಗೆಯು ಅರಮನೆಗೆ ತಲುಪಿದ ಮೇಲೆ ಪ್ರತಿಮೆ ಚೌಕದಲ್ಲಿ ಜನರ ಕೂಡುವಿಕೆ, ಗಲಾಟೆಯೂ ಹೆಚ್ಚಾಯಿತೆಂಬ ಕಾರಣ ಪೋಲೀಸರೂ, ಸವಾರರೂ ಜನರ ಮೇಲೆ ಲಾಠಿ ಪ್ರಯೋಗ ಮಾಡಿ ಹಲವರಿಗೆ ಏಟು ಆಗಿದೆಯೆಂದೂ ವರ್ತಮಾನ.

ಹಿಂದೂ—ಮುಸ್ಲಿಂ ಸಮಸ್ಯೆಯನ್ನು ತೀರ್ಮಾನಿಸುವ ಬಗ್ಗೆ ಮಹಾತ್ಮ ಗಾಂಧಿಯವರನ್ನು ಬಿಡುಗಡೆ ಮಾಡಬೇಕೆಂದೂ, ಬಿಡುಗಡೆ ಮಾಡಲು ಸಾಧ್ಯವಿಲ್ಲದೆ ಹೋದರೆ ಜೈಲಿನಲ್ಲಿ ಅವರೊಂದಿಗೆ ಸಂಭಾಷಣೆ ನಡಿಸಲು ಅವಕಾಶ ಮಾಡಿಕೊಡಬೇಕೆಂದೂ ಮೌಲಾನ ಶೌಕತ್ ಆಲಿಯವರು ವೈಸರಾಯರವರಿಗೆ ತಂತೀವಾರ್ತೆ ಕಳುಹಿಸಿದ್ದರು. 'ಮತಗಳೊಳಗೆ ಐಕ್ಯತೆಯನ್ನು ಸಾಧಿಸುವುದು ಒಳ್ಳೆಯದಾದರೂ, ಈ ವಿಷಯದಲ್ಲಿ ಸರಕಾರದವರೇನೂ ಮಧ್ಯಸ್ಥಿಕೆಯು ನಿಮಗೆ ಬೇಕಿದೆಯೋ ಎಂದು ಕೇಳಲು ನೀವು ಇನ್ನು ಕೂಡ ಅಖಿಲ ಭಾರತ ಮುಸ್ಲಿಂ ಕಾನ್ಫರೆನ್ಸಿನ ಮುಂದಾಳುಗಳ ಪ್ರಕಟಣೆಯನ್ನು (ಲಕ್ನೋ ಪರಿಷತ್ತಿಗೆ ವಿರೋಧವಾಗಿ) ನೋಡಿ' ಎಂದು ವೈಸರಾಯರು ಶೌಕತ್ ಆಲಿಯವರಿಗೆ ಜವಾಬು ಕೊಟ್ಟಿರುವರು. 'ಮುಸಲ್ಮಾನರೊಳಗೆ ಐಕ್ಯತೆ ತರಲು ಪ್ರಯತ್ನಿಸುತ್ತಿದ್ದೇನೆ. ಇಂಡಿಯಾದ ಮತಗಳೊಳಗೂ, ಇಂಡಿಯಾಕ್ಕೂ ಬ್ರಿಟನ್ನಿಗೂ ರಾಜಿಯಾಗದೆ ಇರುವುದು ಇನ್ನು ಯೋಗ್ಯವಲ್ಲ; ಇದಕ್ಕೆ ಸರ್ಕಾರದವರೂ ಸಹಾಯ ಮಾಡಬೇಕೆಂದು' ಶೌಕತ್ ಆಲಿಯವರು ಪುನಹ ವೈಸರಾಯರಿಗೆ ತಂತೀ ಕಳುಹಿಸಿದರು.

ವಿಜ್ಞಾಪನೆ.

ಕಪ್ಪು ಬಣ್ಣದ, ಸುಮಾರು ಮುಕ್ಕಾಲು ಅಡಿ ಉದ್ದದ ಸೆಟ್ಟಿಗೋಡಿನ ಮತ್ತು ಮಧ್ಯ ತರಹದ ಸಣ್ಣ ಹದ ಒಂದು ಕಳೆದು ಹೋಗಿ ಒಂದು ವಾರವಾಯಿತು. ಇದರ ವಿಷಯ ಮಾಹಿತಿಯನ್ನು ಪ್ರಥಮ ಕೊಟ್ಟವರಿಗೆ 3 ರೂ. ಬಹುಮಾನ ಕೊಡಲಾಗುವುದು.

ಬಿ. ಸಿ. ಸುಬ್ಬಯ್ಯ

ತಾ. 14—10—32

ಅಧ್ಯಾಪಕರು,

ಮಡಿಕೇರಿ.

ಕೊಡಗು.

ಸನ್ ೧೯೩೨ನೇ ಇಸವಿ

ಅಕ್ಟೋಬರ್ ತಾ. ೧೪ನೇ ಶುಕ್ರವಾರ.

ಪ್ರೆಸ್ ಆರ್ಡಿನೇನ್ಸ್

ಜಾರಿಯಲ್ಲಿರುವವರೆವಿಗೆ

ನಾವು

ಅಗ್ರಲೇಖನ

ವನ್ನು

ಪ್ರಕಟಿಸುವುದಿಲ್ಲ.

ಅಸ್ಪೃಶ್ಯತಾ ನಿವಾರಣೆ.

ವೀರಾಜಪೇಟೆಯ ಪ್ರಚಂಡ ಸಭೆ.

ಹರಿಜನರ ಮತ್ತು ಹಿಂದೂ ಧರ್ಮದ ನಾಲ್ಕು ವರ್ಣಗಳ ಜನರ ಸಮ್ಮಿಳಿತ ಫಲಹಾರ ಕೂಟ.

ಮಹಾತ್ಮರ ಪ್ರಾಣವನ್ನು ಕಾಪಾಡಿದಕ್ಕೆ ದೇವರಿಗೆ ಪ್ರಾರ್ಥನೆ.

ಗಾಂಧಿಜೀಯವರ ಉಪವಾಸವನ್ನು ನಿಲ್ಲಿಸಿದ್ದಕ್ಕೆ ಪ್ರಧಾನ ಮಂತ್ರಿಯವರಿಗೆ ಧನ್ಯವಾದ.

ಹಿಂದೂ ಮತ್ತು ಹರಿಜನರ ಮುಖಂಡರ ಪೂನಾ ತೀರ್ಮಾನಕ್ಕೆ ಸಭಿಕರ ಒಪ್ಪಿಗೆ.

ಫಲಹಾರ ಕೂಟ.

ಬ್ರಿಟಿಷ್ ಸರ್ಕಾರದ ಕೋಮುವಾರು ತೀರ್ಮಾನದಲ್ಲಿ, ಹಿಂದೂ ಮತದೊಳಗೇ ಇರುವ ಅಸ್ಪೃಶ್ಯರೆನಿಸಿಕೊಂಡವರಿಗೆ ಪ್ರತ್ಯೇಕ ಚುನಾವಣೆಯ ಏರ್ಪಾಡು ಇಟ್ಟಿದ್ದನ್ನು ಬದಲಾಯಿಸಬೇಕೆಂಬ ಉದ್ದೇಶದಿಂದ ಮಹಾತ್ಮ ಗಾಂಧಿಯವರು ಯರವಾಡ ಜೈಲಿನಲ್ಲಿ ಕಳೆದ ತಾ. 20 ರಲ್ಲಿ ಉಪವಾಸವ್ರತವನ್ನು ಕೈಕೊಂಡದ್ದೂ, ಅದು ತಾ. 26 ರಲ್ಲಿ ಜಯಪ್ರದವಾಗಿ ಅಂತ್ಯವಾದದ್ದೂ ಯಾರಿಗೂ ತಿಳಿಯದ ವಿಷಯವಲ್ಲ. ಮಹಾತ್ಮರ ಉಪವಾಸ ವ್ರತದ ಶಕ್ತಿಯ ಮೇರೆ ಅಸ್ಪೃಶ್ಯರ ಪ್ರತ್ಯೇಕ ಚುನಾವಣೆಯು ಬದಲಾಯಿಸಲ್ಪಟ್ಟು, ತತ್ಕಾಲ ಅವರ ವ್ರತವು ನಿಲ್ಲಿಸಲ್ಪಟ್ಟರೂ ಕೂಡ, ಅವರ ಉದ್ದೇಶವಾದ ಅಸ್ಪೃಶ್ಯತಾ ನಿವಾರಣೆಯ ಕಾರ್ಯವು ಬೇಗನೆ ನಡೆಸಲ್ಪಡದೆ ಹೋದರೆ ತಾನು ಪುನಃ ಉಪವಾಸವನ್ನು ಕೈಕೊಳ್ಳಬೇಕಾಗುವದೆಂದು ಮಹಾತ್ಮರು ಹೇಳಿರುವುದರಿಂದ ಹಿಂದೂ ದೇಶದ ಉದ್ದಗಲಕ್ಕೂ ಅಸ್ಪೃಶ್ಯತೆಯ ಭಾವನೆಯನ್ನು ನಿರ್ಮೂಲವಾಡಲು ಅದ್ಭುತ ಪ್ರಯತ್ನಗಳು ನಡೆಸಲ್ಪಡುತ್ತಿವೆ. ಹಾಗೆಯೇ ಹರಿಜನರನ್ನು ಸಾರ್ವಜನಿಕ ಸ್ಥಳಗಳಲ್ಲಿಯೂ, ಕೂಟಗಳಲ್ಲಿಯೂ ಸೇರಿಸಿಕೊಳ್ಳಲು ಮೇಲ್ಜಾತಿ ಹಿಂದೂಗಳ ಅಡ್ಡಿ ಇಲ್ಲವೆಂಬುದನ್ನು ತೋರಿಸಲಿಕ್ಕಾಗಿ ಈ ತಾ. 10 ನೇ ಸೋಮವಾರ ಸಾಯಂಕಾಲ 5 ಗಂಟೆಗೆ ವೀರಾಜಪೇಟೆ ತಾಲೋಕು ಕಚ್ಚೇರಿ ಮೈದಾನದಲ್ಲಿ ಒಂದು ಫಲಹಾರ ಕೂಟವು ನಡೆಸಲಾಯಿತು. ಮೆ. ಗಳಾದ ನಡಿಕೇರಿಯಂಡ ಸೋಮಯ್ಯನವರು, ಎ. ಯಸ್. ರಾಮಯ್ಯನವರು, ಪಾಂಡಂಡ ಸೋಮಪ್ಪನವರು, ಆರ್. ಯಸ್. ಸಂಜೀವರಾಯರು ಮತ್ತು ಪಂದ್ಯಂಡ ಬೆಳ್ಯಪ್ಪನವರು ಸಹಿ ಮಾಡಿ ಕಳುಹಿಸಿದ ಆಮಂತ್ರಣದ ಮೇರೆ ಹಿಂದೂ ಧರ್ಮದ ಎಲ್ಲಾ ವರ್ಣಗಳ ಮಹನೀಯರೂ ಸೇರಿದ್ದರು. ಸುಮಾರು 275 ಆಮಂತ್ರಣಗಳು ಮಾತ್ರ ಕಳುಹಿಸಲ್ಪಟ್ಟಿದ್ದರೂ ಜನ ಸಂದಣಿಯು 500 ಕ್ಕೆ ಏರಿತ್ತು. 50 ಕ್ಕಿಂತ ಹೆಚ್ಚು ಹರಿಜನರೂ ಸೇರಿದ್ದರು. ಪೇಟೆಯ ಮಾತ್ರವಲ್ಲ, ಸುತ್ತು ಮುತ್ತಲಿನ ಗ್ರಾಮಗಳ ಹಲವು ಮಹನೀಯರೂ ಬಂದಿದ್ದರು.

ಇಷ್ಟುಮಂದಿ ಜನರಿಗೆ ಮಾತ್ರ ಫಲಾಹಾರದ ಏರ್ಪಾಡು ಮಾಡಲಾಗಿದ್ದರೂ ಕೂಡ ಅದನ್ನು ನೆರೆದಿದ್ದ ದೊಡ್ಡ ಸಭೆಗೆ ಹಂಚಲಾಯಿತು. ಪ್ರಾರಂಭದಲ್ಲಿ ದೂರದಲ್ಲಿ ನಿಂತುಕೊಂಡಿದ್ದ ಹರಿಜನರು, ಅಲ್ಲಿ ನೆರೆದಿದ್ದ ವಿದ್ಯಾರ್ಥಿಗಳ ಪ್ರೋತ್ಸಾಹದಿಂದ, ಕಡೆ ಕಡೆಗೆ ಸಭೆಯ ಮಧ್ಯದಲ್ಲಿ ಬಂದು ಕುಳಿತರು. ಮೇಲ್ಜಾತಿ ಹಿಂದೂಗಳು ಕೆಲವರು ಹರಿಜನರ ನಡುವೆ ಮಧ್ಯೆ ಕುಳಿತುಕೊಂಡರು. ಕೋತ್ತಂಬರಿ, ಕಿತ್ತಳೆ, ಬಾಳೆ ಹಣ್ಣುಗಳೂ ನೆರೆದಿದ್ದವರಿಗೆ ಹಂಚಲ್ಪಟ್ಟವು. ಕೂಡಲೇ ಟೀ ಸರಬರಾಯಿಯೂ ಆಯಿತು. ಅನಂತರ ಬೀಡಗಳೂ (ಪಾನ್ ಸುಪಾರಿ) ಕೊಡಲ್ಪಟ್ಟವು. ಆಮಂತ್ರಣವಿಲ್ಲದೆ ನೋಡಲಿಕ್ಕಾಗಿ ಬಂದಿದ್ದವರಲ್ಲಿ ಕೆಲವರು ಮಾತ್ರ ಫಲಹಾರ ಕೂಟದಲ್ಲಿ ಭಾಗಿಗಳಾಗಲಿಲ್ಲ. ಏರ್ಪಾಡು ಮಾಡಿದ್ದಕ್ಕಿಂತ ಎರಡರಷ್ಟು ಜನರು ಭಾಗಿಗಳಾದರೂ ಕೂಡ ಫಲಹಾರ ಕೂಟವು ಜಯಪ್ರದವಾಗಿ ನಡೆಯಿತೆಂಬುದು ಸಂತೋಷದ ವಿಷಯವಾಗಿದೆ.

ಪಬ್ಲಿಕ್ ಮೀಟಿಂಗು.

ಫಲಹಾರ ಕೂಟಕ್ಕೆ ಆಮಂತ್ರಣವನ್ನು ಕಳುಹಿಸಿದ್ದವರೇ ನೋಟೀಸು ಪ್ರಕಟಿಸಿದ್ದ ವೇಳೆ 5½ ಗಂಟೆಗೆ ಸರಿಯಾಗಿ ಅದೇ ಸ್ಥಳದಲ್ಲೇ ಸಾರ್ವಜನಿಕ ಸಭೆಯು ಪ್ರಾರಂಭವಾಯಿತು. ಮೆ. ಪಿ. ಪಿ. ಬೆಳ್ಯಪ್ಪನವರು ಸೂಚಿಸಿದ ಮೇರೆ, ಸಭೆಯವರ ಅನುಮತಿಯಿಂದ ಮೆ. ಕೇಳಪಂಡ ಅಚ್ಚಯ್ಯನವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದರು. ಮೀಟಿಂಗನ್ನು ಪ್ರಾರಂಭಿಸುವಷ್ಟರಲ್ಲಿಯೇ ಕೆಲವು ಕೊಡವ ಮಹಿಳೆಯರು ಬಂದು ಸಭೆಯ ಮಧ್ಯದಲ್ಲಿ ಕುಳಿತರು. ಕೂಡಲೇ ವಿದ್ಯಾರ್ಥಿಗಳ ಉತ್ತೇಜನದಿಂದ, ದೂರದಲ್ಲಿ ನಿಂತುಕೊಂಡಿದ್ದ ಕೆಲವು ಹರಿಜನ ಸ್ತ್ರೀಯರೂ ಬಂದು ಸಭೆಯ ಮಧ್ಯದಲ್ಲಿ ಕುಳಿತುಕೊಂಡರು. ಇದನ್ನು ನೋಡಿ ಸಭಿಕರು ಉತ್ಸಾಹದಿಂದ ಕೈಚಪ್ಪಾಳೆ ಹೊಡೆದರು.

1. 'ಮಹಾತ್ಮ ಗಾಂಧಿಯವರು ಉಪವಾಸ ವ್ರತದಲ್ಲಿ ಕೈಕೊಂಡ ಉದ್ದೇಶವು ಅವರಿಗೆ ತೃಪ್ತಿಕರವಾಗಿ ಕೈಗೂಡುವಂತೆಯೂ, ಇದರಿಂದ ಮಹಾತ್ಮರ ಜೀವ ಉಳಿಯಲು ಸಾಧ್ಯವಾಗುವಂತೆಯೂ ಆದದ್ದಕ್ಕೆ ಈ ಸಭೆಯು ದೇವರನ್ನು ಭಕ್ತಿಪೂರ್ವಕವಾಗಿ ಪ್ರಾರ್ಥಿಸುತ್ತದೆ" ಎಂಬ ಠರಾವನ್ನು ಅಧ್ಯಕ್ಷರೇ ಸಭೆಯ ಮುಂದಿಟ್ಟು ಹೇಳಿದ್ದೇನೆಂದರೆ—'ಹಿಂದೂ ಸಮಾಜದ ದೊಡ್ಡ ಭಾಗವಾದ ಸುಮಾರು 65 ಮಿಲಿಯ ಹರಿಜನರನ್ನು ಮೇಲ್ಜಾತಿ ಹಿಂದೂಗಳು ಹಲವು ಶತಮಾನಗಳಿಂದ ಮೂಲೆಗೊತ್ತಿ, ಅವರನ್ನು ಅಸ್ಪೃಶ್ಯರನ್ನಾಗಿ ಮಾಡಿಬಿಟ್ಟರು. ಆದುದರಿಂದ ಹರಿಜನರ ಮುಂದಾಳುಗಳು ದುಂಡು ಮೇಜು ಪರಿಷತ್ತಿನಲ್ಲಿ ಅವರಿಗೆ ಪ್ರತ್ಯೇಕ ಚುನಾವಣೆ ಪದ್ಧತಿಯನ್ನು ಕೊಡಬೇಕೆಂದು ಕೇಳಿಕೊಂಡ ಮೇರೆ ಸರ್ಕಾರದವರು ತಮ್ಮ ಕೋಮುವಾರು ತೀರ್ಮಾನದಲ್ಲಿ ಅವರ ಕೋರಿಕೆಯನ್ನು ನೆರವೇರಿಸಿಕೊಟ್ಟರು. ಇದರಿಂದ ಹಿಂದೂ ಸಮಾಜಕ್ಕೆ ಧಕ್ಕೆ ತಗಲುವ ಸಂಭವ ಬಂತು. ಮಹಾತ್ಮ ಗಾಂಧಿಯವರು ಇದನ್ನು ನೋಡಿ ತಾನು ಈ ಮೊದಲೇ ಬ್ರಿಟಿಷ್ ಮಂತ್ರಿಗಳಿಗೆ ಪತ್ರ ಬರೆದಿದ್ದ ವೇಳೆ ಉಪವಾಸ ವ್ರತವನ್ನು ಕೈಕೊಂಡರು. ಶಾಸ್ತ್ರಗಳ ಪ್ರಕಾರ ಹಿಂದೂ ಧರ್ಮದಲ್ಲಿ ನಾಲ್ಕು ವರ್ಣಗಳು ಮಾತ್ರ ಇರುವುದರಿಂದ 5ನೇ ವರ್ಗದವರಾಗಿರುವ ಅಸ್ಪೃಶ್ಯರನ್ನು ಮೇಲ್ಜಾತಿ ಹಿಂದುಗಳು ತಮ್ಮ ಸಮಾಜಕ್ಕೆ ಸೇರಿಸಿಕೊಳ್ಳುವದು ತಮ್ಮ ಕರ್ತವ್ಯವೆಂಬುವುದನ್ನು ತಿಳಿದು, ಅಸ್ಪೃಶ್ಯತೆಯನ್ನು ಹೋಗಲಾಡಿಸುವ ಕರಾರಿನಿಂದ ಹರಿಜನರ ಮತ್ತು ಮೇಲ್ಜಾತಿ ಹಿಂದೂಗಳ ಮುಖಂಡರು ಪೂನಾದಲ್ಲಿ ಒಪ್ಪಂದಕ್ಕೆ ಬಂದರು. ಆದುದರಿಂದ ಮಹಾತ್ಮರು ತಮ್ಮ ಉಪವಾಸವನ್ನು ನಿಲ್ಲಿಸಿದರು. ದೇವರು ಒಂದು ವಾರದೊಳಗೇನೇ ದೇಶದವರ ಮನಸಿನಲ್ಲಿ ಇಷ್ಟು ದೊಡ್ಡ ಬದಲಾವಣೆಯನ್ನುಂಟುಮಾಡಿ ಮಹಾತ್ಮರ ಜೀವವನ್ನು ಉಳಿಸಿದ್ದಕ್ಕಾಗಿ ನಾವೆಲ್ಲರೂ ಆತನಿಗೆ ಪ್ರಾರ್ಥಿಸುವದು ನಮ್ಮ ಧರ್ಮ.'

ಎಲ್ಲರೂ ಎದ್ದು ನಿಂತುಕೊಂಡ, 5 ಮಿನಿಟು ಮೌನವಾಗಿ ಪ್ರಾರ್ಥಿಸಿ, ಈ ಠರಾವನ್ನು ಸರ್ವಸಮ್ಮತದಿಂದ ಪಾಸು ಮಾಡಿದರು.

2. "ಮಹಾತ್ಮ ಗಾಂಧಿಯವರ ಉಪವಾಸದ ಉದ್ದೇಶವನ್ನು ನೆರವೇರಿಸಲಿಕ್ಕಾಗಿ ಮೇಲ್ಜಾತಿಯವರೆನಿಸಿಕೊಂಡ ಹಿಂದೂ ಜನರ ಮುಖಂಡರೂ, ಅಸ್ಪೃಶ್ಯರೆನಿಸಿಕೊಂಡವರ ಮುಖಂಡರೂ ಪೂನಾದಲ್ಲಿ ಸೇರಿ ಮಾಡಿಕೊಂಡ ತೀರ್ಮಾನವನ್ನು ಈ ಸಭೆಯು ಒಪ್ಪಿಕೊಳ್ಳುತ್ತದೆ." ಈ ಠರಾವನ್ನು ಮೆ. ಆರ್. ಎಸ್. ಸಂಜೀವರಾಯರು ಸೂಚಿಸಿದಾಗ, ಈ ತೀರ್ಮಾನಕ್ಕೂ, ಬ್ರಿಟಿಷ್ ಸರ್ಕಾರದವರು ಮಾಡಿದ ಕೋಮುವಾರು ತೀರ್ಮಾನಕ್ಕೂ ಇರುವ ತಾರತಮ್ಯವನ್ನು ವಿವರಿಸಿ, ಈ ಒಪ್ಪಂದದಿಂದ ಹಿಂದೂ ಮತದ ಒಗ್ಗಟ್ಟು ಸಾಧಿಸಲ್ಪಟ್ಟು, ಹೇಗೆ ಅದರ ಏಳಿಗೆಗೆ ಅನುಕೂಲವಾಗುವದೆಂಬುದನ್ನು ಕುರಿತು ಭಾಷಣ ಮಾಡಿದರು.

ಮೆ. ನಡಿಕೇರಿಯಂಡ ಸೋಮಯ್ಯನವರು ಅನುಮೋದಿಸಿದರು. 'ಈ ತೀರ್ಮಾನಕ್ಕೆ ನಾವು ಒಪ್ಪಲಿ ಯಾ ಒಪ್ಪದಿರಲಿ, ಅದು ನಮಗೆ ಒಪ್ಪುವುದರಿಂದ ನಾವು ಅದಕ್ಕೆ ಸಮ್ಮತಿಸುವ' ಎಂದು ಮೆ. ಚೀಯಕಪೂವಂಡ ಭೀಮಯ್ಯನವರು ಹೇಳಿದರು. ಠರಾವು ಓಟಿಗೆ ಹಾಕಲಾಗಿ ಯಾರೊಬ್ಬರ ವಿರೋಧವಿಲ್ಲದೆ ಪಾಸಾಯಿತು.

3. "ಮೇಲ್ಜಾತಿಯವರೆನಿಸಿಕೊಂಡ ಹಿಂದೂಗಳ ಮತ್ತು ಅಸ್ಪೃಶ್ಯರೆನಿಸಿಕೊಂಡವರ ಮುಖ್ಯಸ್ಥರು ಮಾಡಿಕೊಂಡ ತೀರ್ಮಾನವನ್ನು ಬ್ರಿಟಿಷ್ ಪ್ರಧಾನ ಮಂತ್ರಿಯವರು ಶೀಘ್ರದಲ್ಲೇ ಅಂಗೀಕರಿಸಿ, ಮಹಾತ್ಮ ಗಾಂಧಿಯವರ ಜೀವಕ್ಕೆ ಅಪಾಯ ಬಾರದಂತೆ ಮಾಡಿದ್ದಕ್ಕೆ ಪ್ರಧಾನ ಮಂತ್ರಿಯವರಿಗೆ ಈ ಸಭೆಯು ಧನ್ಯವಾದಗಳನ್ನು ಒಪ್ಪಿಸುತ್ತದೆ" ಎಂಬ ಠರಾವನ್ನು ಮೆ. ಪುಚ್ಚಿಮಾಡ ನಾಣಯ್ಯನವರು ಸಭೆಯ ಮುಂದಿಟ್ಟು, ಮಹಾತ್ಮರ ಒಂದು ವಾರದ ಉಪವಾಸದಿಂದ ಹಿಂದೂದೇಶದ ಜನರಲ್ಲಿ ಉಂಟಾದ ಐಕ್ಯವಾಗುವ ಬದಲಾವಣೆಯನ್ನು ವಿವರಿಸಿ, 'ಬ್ರಿಟಿಷ್ ಪ್ರಧಾನ ಮಂತ್ರಿಯವರು ಮಹಾತ್ಮರ ಅಮೂಲ್ಯವಾದ ಜೀವವನ್ನು ಉಳಿಸಲು ತ್ವರಿತದಲ್ಲೇ ಪೂನಾ ಒಪ್ಪಂದವನ್ನು ಅಂಗೀಕರಿಸಿದ್ದರಿಂದ ಅವರಿಗೆ ನಾವು ವಂದಿಸುವದು ನಮ್ಮ ಕರ್ತವ್ಯವೆಂದು' ಮುಂತಾಗಿ ಮಾತಾಡಿದರು. ಠರಾವನ್ನು ಮೆ. ಎ. ಎಸ್. ರಾಮಯ್ಯನವರು ಅನುಮೋದಿಸಲಾಗಿ ಅಧ್ಯಕ್ಷರು ಅದನ್ನು ಓಟಿಗೆ ಹಾಕಿದರು. ಯಾರೂ ವಿರೋಧಿಸದ್ದರಿಂದ ಸರ್ವಸಮ್ಮತದಿಂದ ಮಂಜೂರಾಯಿತು.

4. "ಅಸ್ಪೃಶ್ಯತೆಯ ಭಾವನೆಯನ್ನು ಶೀಘ್ರದಲ್ಲೇ ನಿರ್ಮೂಲ ಮಾಡಬೇಕೆಂತ ಈ ಸಭೆಯು ದೇಶಕ್ಕೆ ವಿಜ್ಞಾಪಿಸಿಕೊಳ್ಳುತ್ತದೆ" ಎಂಬ ನಾಲ್ಕನೇ ಠರಾವನ್ನು ಮೆ. ಬಿದ್ದಂಡ ಕಾರ್ಯಪ್ಪನವರು ಸೂಚಿಸಿ, ಅಸ್ಪೃಶ್ಯತಾ ಭಾವನೆಯಿಂದ ಹಿಂದೂ ಮತಕ್ಕೂ ಹಾಗೂ ಹಿಂದೂದೇಶಕ್ಕೂ ಉಂಟಾಗಿರುವ ಹಾನಿಯನ್ನು ವಿವರಿಸಿ, ಹಿಂದೂ ಮತವನ್ನು ಉದ್ಧರಿಸಬೇಕೆಂದಿರುವವರೆಲ್ಲರೂ ಮಹಾತ್ಮರ ಸಂದೇಶದಂತೆ ಸದರಿ ಭಾವನೆಯನ್ನು ನಿರ್ಮೂಲ ಮಾಡಲು ಪ್ರಯತ್ನಿಸಬೇಕೆಂದು ಮೊದಲಾಗಿ ಮಾತಾಡಿದರು. ಮೆ. ಪಾಂಡಂಡ ಸೋಮಪ್ಪನವರು ಠರಾವನ್ನು ಅನುಮೋದಿಸಿದರು.

ಮೆ. ಚೀಯಕಪೂವಂಡ ಭೀಮಯ್ಯನವರು ಠರಾವನ್ನು ಕುರಿತು ಮಾತಾಡುತ್ತಾ, 'ಹಿಂದೂ ಶಾಸ್ತ್ರದ ಮೇರೆ ಬ್ರಾಹ್ಮಣರು ಬ್ರಹ್ಮನ ಬಾಯಿಯಿಂದಲೂ, ಕ್ಷತ್ರಿಯರು ಭುಜಗಳಿಂದಲೂ, ವೈಶ್ಯರು ತೊಡೆಗಳಿಂದಲೂ, ಮತ್ತು ಶೂದ್ರರು ಪಾದಗಳಿಂದಲೂ ಹುಟ್ಟಿದವರು; ಶೂದ್ರರಲ್ಲಿ 2 ಭಾಗವಾಗಿ ಅತಿಚಿಕ್ಕದವರು ಪಾಂಚಮರಾದರು. ಹುಟ್ಟು ಪಂಚಮರನ್ನು ಉತ್ತಮರನ್ನಾಗಿ ಮಾಡುವುದು ಹೇಗೆ? ಈಗ ಮಾಡಿದಂತೆ ಅವರನ್ನು ಟೀ ಪಾರ್ಟಿಗೆ ಸೇರಿಸಿಕೊಂಡರೆ ನಾಳೆ ನಮ್ಮ ಹೆಣ್ಣುಮಕ್ಕಳನ್ನು ಬೇಡುವ ಮಾಡಿಕೊಡಿರೆಂದೂ, ನಮ್ಮ ಮನೆಯೊಳಗೆ ಸೇರಿಸಿಕೊಳ್ಳಿರೆಂದೂ ಅವರು ಹೇಳುವರು. ಹಾಗೆ ಮಾಡಿದರೆ ಮೇಲ್ಜಾತಿ ಹಿಂದೂಗಳ ರಕ್ತವು ಕೆಟ್ಟುಹೋಗುವುದು. ಅಸ್ಪೃಶ್ಯರು ಹಿಂದೂಗಳೇ; ಅವರನ್ನು ಹಿಂದೂ ಸಮಾಜದಿಂದ ಹೊರಗೆ ಇರಿಸುವುದಿಲ್ಲ. ಮಲಬಾರು ಮೊದಲಾದ ಕಡೆಗಳಲ್ಲಿರುವಂತೆ ಕೊಡಗಿನಲ್ಲಿ ಅಸ್ಪೃಶ್ಯ ಭಾವನೆಯೇ ಇಲ್ಲ. ಇಲ್ಲಿ ಇಂಥಾ ಮೀಟಿಂಗುಗಳ ಅವಶ್ಯಕತೆಯೇ ಇಲ್ಲ. ಈ ಜಾತಿಯಲ್ಲಿ ಇರುವ ಕಡೆ ಔಷಧಿ ಮಾಡಬೇಕಲ್ಲದೆ ಬೇರೆ ಕಡೆ ಮಾಡಿ ಪ್ರಯೋಜನವಿಲ್ಲ,' ಎಂದು ಮೊದಲಾಗಿ ಹೇಳಿದರು. ಇವರು ಮಾತನಾಡುತ್ತಿದ್ದಾಗ್ಯೆ ಸಭೆಯಲ್ಲಿ 'ನಾಚಿಕೆ, ನಾಚಿಕೆ,' 'ಸಾಕು, ಕುಳಿತುಕೊಳ್ಳಿ' ಎಂಬ ಶಬ್ದಗಳು ಕೇಳಿಬರುತ್ತಿದ್ದವು. ಇವರ ಭಾಷಣವು ದೀರ್ಘವಾದುದರಿಂದಲೂ, ಈ ವಿಷಯ ಇನ್ನೂ ಹಲವರು ಮಾತಾಡಲಿಕ್ಕಿರುವದರಿಂದಲೂ ಮತ್ತು ರಾತ್ರಿಯಾಗುತ್ತಾ ಬರುವದರಿಂದಲೂ ಇವರ ಭಾಷಣವನ್ನು ನಿಲ್ಲಿಸಬೇಕೆಂದು ಕೆಲವರು ಅಧ್ಯಕ್ಷರನ್ನು ಕೇಳಿಕೊಂಡರು. ಅಧ್ಯಕ್ಷರು ಹಾಗೆ ಕೇಳಿದಾಗ್ಯೂ, ಮೆ. ಭೀಮಯ್ಯನವರು, ತನಗೆ ಇನ್ನೂ ಮಾತಾಡಲಿಕ್ಕಿದೆಯೆಂದೂ, ತನಗೆ ಹೆಚ್ಚು ಸಮಯ ಕೊಡಬೇಕೆಂದೂ ಹೇಳುತ್ತಾ ಭಾಷಣವನ್ನು ಮುಂದರಿಸಿದರು. ಅಧ್ಯಕ್ಷರು ಹೆಚ್ಚಿಗೆ 3 ಮಿನಿಟು ಸಮಯಕೊಟ್ಟು ನಂತರ ಅವರಿಗೆ ಕುಳಿತುಕೊಳ್ಳಲು ಹೇಳಿದರು. ಇಷ್ಟರಲ್ಲಿ ರಾತ್ರಿಯಾಗುತ್ತಾ ಬಂದುದರಿಂದ ಮೀಟಿಂಗಿನಿಂದ ಜನರು ಹೊರಟು ಹೋಗತೊಡಗಿದರು. ಮೆ. ಭೀಮಯ್ಯನವರಿಗೆ ಜವಾಬು ಕೊಡಲು ಹಲವರು ಎದ್ದು ನಿಂತರು. ಆದರೆ ಅಧ್ಯಕ್ಷರು ಮೆ. ಬಿದ್ದಂಡ ಕಾರ್ಯಪ್ಪನವರನ್ನು ಮಾತಾಡಲು ಬಿಟ್ಟು, ಬಾಕಿಯವರಿಗೆ ಕುಳಿತುಕೊಳ್ಳುವಂತೆ ಹೇಳಿದರು.

ಮೆ. ಬಿ. ಪಿ. ಕಾರ್ಯಪ್ಪನವರು ಹೇಳಿದ್ದೇನೆಂದರೆ—'ಹಿಂದೂ ಧರ್ಮದಲ್ಲಿರುವ ನಾಲ್ಕು ವರ್ಣಗಳು ಹುಟ್ಟಿನಿಂದ ಬಂದವಲ್ಲ; ಅವರವರ ಕಾರ್ಯಗಳಿಂದ ಆದವಾಗಿವೆ. ಕೆಲವರಿಗೆ ಉತ್ತಮ ಜಾತಿಯಲ್ಲಿ ಹುಟ್ಟಿದರೂ ಹೀನ ಗುಣಗಳಿರುವದು. ಪಂಚಮರೆನಿಸಿಕೊಂಡವರಲ್ಲಿ ಜನಿಸಿದರೂ ಉತ್ತಮ ಗುಣಗಳಿರುವದೂ ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಆದುದರಿಂದ ಗುಣದಲ್ಲಿ ಪಂಚಮನಾದವನನ್ನು ದೂರ ಮಾಡಬೇಕೇ ಹೊರತು, ಜನ್ಮದಲ್ಲಿ ಪಂಚಮನಾದವನನ್ನು ದೂ

(4ನೇ ಪುಟದಲ್ಲಿ ಮುಂದುವರಿದಿದೆ.)

ಅಸ್ಪೃಶ್ಯ ಭಾವನೆಯು ಹಿಂದೂ ಧರ್ಮಕ್ಕೆ ಕಳಂಕವಾಗಿದೆ.

ಇದನ್ನು ದೂರ ಮಾಡಿದ ವಿನಹ ಸ್ವರಾಜ್ಯ ಅಸಂಭವವದೆ.

ಮಹಾತ್ಮ ಗಾಂಧಿಯವರ ಮಹತ್ವ ಪೂರ್ಣ ವಿಚಾರ.

35 ಕೋಟಿ ಭಾರತ ವಾಸಿಗಳ ಹೃದಯ ಸಮ್ರಾಟ್‌ನೂ ಮತ್ತು ದಲಿತ ಜಾತಿಯವರ ಸರ್ವರಿಗಿಂತ ಹೆಚ್ಚು ಹಿತೈಷಿಯೂ ಆದ ಮಹಾತ್ಮ ಗಾಂಧಿಯವರು ಹಿಂದೂಸಮಾಜದಿಂದ ಅಸ್ಪೃಶ್ಯತೆಯ ಕಳಂಕವನ್ನು ಹೋಗಲಾಡಿಸಲಿಕ್ಕಾಗಿ ಆಗಾಗ್ಯೆ ಯಾವ ಪರಿಶುದ್ಧ ವಿಚಾರಮಾಡಿದ್ದಾರೆಯೋ ಅವುಗಳ ಕೆಲವು ಅಂಶಗಳನ್ನು ಇಲ್ಲಿ ಕೊಡುತ್ತೇವೆ.

ಅಸ್ಪೃಶ್ಯತೆಯ ನಿವಾರಣೆಯೆಂದರೆ ಹಿಂದೂ ಧರ್ಮದ ಶುದ್ಧಿಯಾಗಿದೆ.

ಒಂದು ವಿಧದ ಅಸ್ಪೃಶ್ಯತೆಗೆ ಹಿಂದೂ ಧರ್ಮದಲ್ಲಿ ಸ್ಥಾನವಿದೆ. ಒಬ್ಬ ಮನುಷ್ಯನು ಅಶುದ್ಧವನ್ನು ಮುಟ್ಟಿದ ನಂತರ ಸ್ನಾನಮಾಡುವ ವರೆಗೂ ಅಸ್ಪೃಶ್ಯನಾಗಿರುವುದು ಒಳ್ಳೇದೇ? ನನ್ನ ತಾಯಿಯು ಮಲಮೂತ್ರವನ್ನು ತೆಗೆದು ಶುದ್ಧ ಮಾಡಿದ ನಂತರ ಸ್ನಾನಮಾಡಿದ ವಿನಹ ಯಾವ ವಸ್ತುವನ್ನೂ ಮುಟ್ಟುವುದಿಲ್ಲ. ನಾನು ವೈಷ್ಣವ ಸಂಪ್ರದಾಯದವನಾಗಿದ್ದೇನೆ. ಆದ್ದರಿಂದ ಈ ತರದ ಕ್ಷಣಿಕ ಅಸ್ಪೃಶ್ಯತೆಯನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಜನ್ಮದ ಅಸ್ಪೃಶ್ಯತೆಯನ್ನು ನಾನು ಅಂಗೀಕರಿಸುವುದಿಲ್ಲ. ನನ್ನ ಮಲಮೂತ್ರವನ್ನು ತೆಗೆಯುವ ತಾಯಿಯನ್ನು ನೆನಪಿಸಿಕೊಂಡಾಗ ನನಗೆ ತಾಯಿಯು ಹೆಚ್ಚು ಪೂಜ್ಯಳಾಗಿ ತೋರುತ್ತಾಳೆ. ಹಾಗೆಯೇ ತೋಟಿಯು ಮಾಡುವ ಸೇವೆಯನ್ನು ಯೋಚಿಸಿದಾಗ ನನ್ನ ದೃಷ್ಟಿಯಲ್ಲಿ ಹೆಚ್ಚಿಗೆ ಪೂಜ್ಯನಾಗಿ ತೋರುತ್ತಾನೆ.

ನಾನು ಅಸ್ಪೃಶ್ಯರೊಂದಿಗೆ ಆಹಾರ ಸಂಪರ್ಕವಿಟ್ಟುಕೊಂಡಿದ್ದರೂ ಅಂತ್ಯಜರೊಂದಿಗೆ ಆಹಾರ ಸಂಪರ್ಕವನ್ನೂ, ಹೆಣ್ಣು ಕೊಟ್ಟು ತರುವಿಕೆಯನ್ನೂ ಮಾಡಬೇಕೆಂತ ನಾನು ಎಂದೂ ಹೇಳಿರುವುದಿಲ್ಲ. ಹೆಣ್ಣು ಕೊಡಲು ನನ್ನಲ್ಲಿ ಅನುಕೂಲವಿಲ್ಲ. ನಾನು ವಾನಪ್ರಸ್ಥಾಶ್ರಮವನ್ನು ಅನುಸರಿಸಿದ್ದೇನೆ. ಸನ್ಯಾಸ ಆಶ್ರಮವನ್ನು ಅನುಸರಿಸುತ್ತಿದ್ದೇನೆಯೋ ಇಲ್ಲವೋ ಹೇಳಲಾರೆ. ಯಾಕೆಂದರೆ ಕಲಿಯುಗದಲ್ಲಿ ಸನ್ಯಾಸಧರ್ಮವನ್ನು ನಡಿಸುವುದು ಬಹಳ ಕಷ್ಟವಾಗಿದೆ. ನಾನು ಸಾಧಾರಣ ಮನುಷ್ಯನಾಗಿದ್ದೇನೆ. ನಾನು ವೇದಾಧ್ಯಯನ ಮಾಡಿರುವುದಿಲ್ಲ. ನಾನು ಮೋಕ್ಷಕ್ಕೆ ಅರ್ಹನಾಗಿದ್ದೇನೋ ಇಲ್ಲವೋ ಎಂಬ ವಿಷಯದಲ್ಲಿ ಸಂದೇಹವಿದೆ. ಯಾಕೆಂದರೆ ನಾನು ರಾಗದ್ವೇಷವನ್ನು ಪೂರ್ತಿ ಬಿಟ್ಟಿರುವುದಿಲ್ಲ. ಪಂಡಿತ ಮಾಳವೀಯ ಜೀಯವರಂತೆ ವೇದದ ಉಚ್ಚಾರಣೆ ಮಾಡಲಾರೆನು. ಆದ್ದರಿಂದ ಮೋಕ್ಷ ಸಿಕ್ಕಿದೆ ಇದೆಯೆಂತ ಹೇಳುವುದಿಲ್ಲ. ಆದರೆ ನನ್ನಲ್ಲಿ ಎಲ್ಲಿ ವರೆಗೆ ರಾಗದ್ವೇಷವಿದೆಯೋ ಅಲ್ಲಿ ವರೆಗೆ ಮೋಕ್ಷ ಸಿಕ್ಕುವುದು ಸಾಧ್ಯವಿಲ್ಲ. ನಾನು ಸನ್ಯಾಸಿಯಾಗಿರದಿದ್ದರೂ ನನ್ನಂಥ ಹಿಂದುವು [illegible]ರೊಂದಿಗೆ ಆಹಾರ ತೆಗೆದುಕೊಂಡರೆ ದೋಷವಿದೆಯೆಂತ ನನಗೆ ತೋರುವುದಿಲ್ಲ. ಆದರೆ ದೂರ ಮಾಡಬೇಕಾದ ದೋಷವು ಯಾವುದೆಂದರೆ, ಅಸ್ಪೃಶ್ಯತಾಭಾವನೆಯು. ಅದರಲ್ಲಿ, ಬೇರೆ ಆಹಾರ ತೆಗೆದುಕೊಳ್ಳಬೇಕೆನ್ನುವುದು ಸೇರುವುದಿಲ್ಲ.

ಅಸ್ಪೃಶ್ಯತಾ ನಿವಾರಣೆಯನ್ನು ಕಾಂಗ್ರೆಸಿನ ಒಂದು ಕಾರ್ಯವನ್ನಾಗಿ ಮಾಡಿಕೊಂಡರೂ ಅದು ಬರೇ ರಾಜಕೀಯ ಸ್ಥಿತಿ ಕಾರಣದಿಂದಲ್ಲ. ಈ ಕಾರಣವು ಅಲ್ಪವಾದದ್ದು, ಶಾಶ್ವತವಾದದ್ದಲ್ಲ. ಹಿಂದೂ ಧರ್ಮದಲ್ಲಿ ಅಸ್ಪೃಶ್ಯತೆ ಕಳಂಕವಿರಬಾರದೆಂಬುದು ಶಾಶ್ವತ ಕಾರಣವಾಗಿದೆ. ಬರೇ ಸ್ವರಾಜ್ಯಕ್ಕಾಗಿ ಅಸ್ಪೃಶ್ಯರನ್ನು ಹೊಗಳಲು ನಾನು ಇಚ್ಛಿಸುವುದಿಲ್ಲ. ಈ ಆಶೆಯಿಂದ ನಾನು ಅವರನ್ನು ವಶಪಡಿಸಿಕೊಳ್ಳಲು ಇಚ್ಛಿಸುವುದಿಲ್ಲ. ಹಿಂದೂಗಳು ಅಸ್ಪೃಶ್ಯತೆಯನ್ನು ಅಂಗೀಕರಿಸಿಕೊಂಡದ್ದರಿಂದ ಭಾರೀ ಪಾಪಮಾಡಿದ್ದಾರೆಂತ ನಾನು ನಂಬುತ್ತೇನೆ. ಅದಕ್ಕಾಗಿ ಅವರು ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು. ಅಸ್ಪೃಶ್ಯರನ್ನು ಶುದ್ಧಿಮಾಡುವುದೆಂಬುದನ್ನು ನಾನು ಒಪ್ಪುವುದಿಲ್ಲ. ನಮ್ಮನ್ನೇ ನಾವು ಶುದ್ಧಿಮಾಡಿಕೊಳ್ಳಬೇಕಾದ ಅವಶ್ಯವಿದೆಯೆಂತ ನನಗೆ ನಂಬಿಕೆಯಾಗಿದೆ.

ನಾನೇ ಅಶುದ್ಧನಾಗಿರುವಾಗ್ಯೆ ಬೇರೆಯವರನ್ನು ನಾನು ಹೇಗೆ ಶುದ್ಧಿಮಾಡಬಲ್ಲೆನು? ನಾನು ಅಸ್ಪೃಶ್ಯತೆಯೆಂಬ ಪಾಪ ಮಾಡಿರುವಾಗ ಶುದ್ಧಿಯು ನನಗೇನೇ ಆಗಬೇಕಾಗಿದೆ. ಆದ್ದರಿಂದ ನಾವು ಅಸ್ಪೃಶ್ಯತಾನಿವಾರಣೆಯ ಕಾರ್ಯ ಮಾಡುತ್ತಿರುವುದು ಒಂದೇ ಆತ್ಮಶುದ್ಧಿಯಾಗಿದೆ. ಅಸ್ಪೃಶ್ಯರ ಶುದ್ಧಿಯಲ್ಲ. ಹಿಂದೂ ಧರ್ಮದ ಈ ಕೃತ್ರಿಮ ಭಾವವನ್ನು ನಿರ್ಮೂಲ ಮಾಡುತ್ತಿದ್ದೇನೆಯೇ ಹೊರತು ಅಸ್ಪೃಶ್ಯರನ್ನು ಪುಸಲಾಯಿಸುವುದಿಲ್ಲ.

ಆದರೆ ಹಿಂದೂ ಜಾತಿಯಲ್ಲಿ ಅನ್ನ ನೀರಿನ ಸೇವನೆಯು ಸಂಬಂಧವಿದೆ. ರೂಢಿಯಲ್ಲಿರುವ ಹಿಂದೂ ಧರ್ಮದ ಕ್ರಮವನ್ನು ಅನುಸರಿಸುವವರು ನನ್ನ ಕುಟುಂಬದಲ್ಲಿದ್ದಾರೆ. ಅವರು ಬೇರೆ ಯಾರೊಂದಿಗೂ ಭೋಜನ ಮಾಡುವುದಿಲ್ಲ. ಅವರ ಊಟ ಉಪಚಾರದಲ್ಲಿ ಪಾತ್ರೆಗಳೂ ಒಲೆಗಳೂ ಸಹ ಬೇರೆಯೇ ಇವೆ. ಈ ಕ್ರಮದಲ್ಲಿ ಅಜ್ಞಾನವಾಗಲೀ, ಅಂಧಕಾರವಾಗಲೀ, ಹಿಂದೂ ಧರ್ಮದ ಕ್ಷಯವಾಗಲೀ ಇದೆಯೆಂತ ನಾನು ತಿಳಿಯುವುದಿಲ್ಲ. ನನ್ನ ಮಟ್ಟಿಗೆ ನಾನು ಈ ತರಗಿನ ಆಚರಣೆಗಳನ್ನು ಅನುಸರಿಸುವುದಿಲ್ಲ. ಈ ರೀತಿಯನ್ನು ಹಿಂದೂ ಸಮಾಜವು ಹಿಂಬಾಲಿಸುವಂತೆ ನಾನು ಬೋಧಿಸಬೇಕೆಂತ ಯಾರಾದರೂ ಹೇಳಿದರೆ ನಾನು ಹಾಗೆ ಮಾಡಲು ಇನಕಾರ ಮಾಡಿಯೇನು. ಆಹಾರ ಮತ್ತು ಹೆಣ್ಣು ಕೊಟ್ಟು ತರುವುದು ಯಾವ ದರ್ಜೆ ವರೆಗೆ ಆಟಂಕದಲ್ಲಿದೆಯೋ ಅಷ್ಟರ ಮಟ್ಟಿಗೆ ಆಟಂಕವಾಗಿರುವುದು ಒಳ್ಳೇದೇ. ಯಾರೊಂದಿಗಾದರೂ ಭೋಜನ ಮಾಡಿದರೆ ಮನುಷ್ಯನ ಪತನವಾಗುತ್ತದೆಯೆಂಬ ಮಾತು ಎಲ್ಲಾ ಸ್ಥಳಗಳಲ್ಲೂ ನಿಜವಲ್ಲ. ನನ್ನ ಮಗನು ಇಷ್ಟ ಬಂದಲ್ಲಿ, ಕೈಗೆ ಸಿಕ್ಕಿದ್ದನ್ನು ತಿಂದುಕೊಂಡು ತಿರುಗಲಿ ಎಂಬುದನ್ನು ನಾನು ಒಪ್ಪಲಾರೆ. ಯಾಕೆಂದರೆ ಆಹಾರದ ಪರಿಣಾಮವು ಆತ್ಮಕ್ಕೆ ತಟ್ಟುತ್ತದೆ. ಆದರೆ ಅವನು, ಸೇವೆಯು ಸರಿಯಾಗಿ ಆಗುವ ಬಗ್ಗೆ ಯಾರಲ್ಲಿಯಾದರೂ, ತಾನು ತಿನ್ನಬಹುದಾದ ಆಹಾರವನ್ನು ತಿಂದರೆ ಅವನು ಹಿಂದೂ ಧರ್ಮವನ್ನು ಬಿಟ್ಟವನಾಗುತ್ತಾನೆಂತ ನಾನು ಯೋಚಿಸುವುದಿಲ್ಲ. ಹಿಂದೂ ಧರ್ಮದಲ್ಲಿರುವ ಆಹಾರ ಸೇವನೆಯ ನಿರ್ಬಂಧವು ಹೋಗಿಬಿಡಬೇಕೆಂತ ನಾನು ಇಚ್ಛಿಸುವುದಿಲ್ಲ. ಈ ಆಹಾರ ನಿರ್ಬಂಧವನ್ನು ಸಹ ಬಿಡಬೇಕಾದ ಕಾಲ ಬರಬಹುದು. ಹಾಗಾಗುವುದರಿಂದ ನಮ್ಮ ವಿನಾಶವಾಗಲಾರದು. ನನ್ನ ಮನಸ್ಸು ಅಷ್ಟು ವರೆಗೆ ಹೋಗಲು ನಾನು ತಯಾರಿದ್ದೇನೆ. ನನ್ನ ವಿಚಾರ ಶ್ರೇಣಿಯಲ್ಲಿ ಕೆಲವು ಕಾಲದ ವರೆಗೆ ಆಹಾರ ಮತ್ತು ಹೆಣ್ಣು ಕೊಟ್ಟು ತರುವುದರಲ್ಲಿ ಇರುವ ನಿರ್ಬಂಧಗಳು ಆಕ್ಷೇಪವಾದುದೆಂತ ತೋರುವುದಿಲ್ಲ. ನನ್ನ ಈ ವೃತ್ತಿಯ ದೆಸೆಯಿಂದ ಎಷ್ಟೋ ಮಿತ್ರರು ನನ್ನನ್ನು ದಾಂಭಿಕನಾದವನು ಎನ್ನುತ್ತಾರೆ. ಆದರೆ ಇದರಲ್ಲಿ ಯಾವ ತರಹದ ಮೋಸವೂ ಇಲ್ಲ.

ಅಂತ್ಯಜ ಸಹೋದರರೇ, ನಿಮ್ಮ ಮೇಲೆ ನನಗೆ ಪ್ರೇಮವಿದೆ. ನಿಮ್ಮ ಮೇಲೆ ನಾವು ಈ ವರೆಗೆ ಮಾಡಿದ ಪಾಪಗಳಿಗಾಗಿ ನಿಮ್ಮನ್ನು ಕ್ಷಮೆ ಕೇಳಿಕೊಳ್ಳುತ್ತೇನೆ. ಆದರೆ ನಿಮ್ಮ ಉನ್ನತಿಗಾಗಿ ಯಾವ ಶರತ್ತುಗಳನ್ನು ನೀವು ನಡಿಸಬೇಕೆಂತಲೂ ನೀವು ತಿಳಿದುಕೊಳ್ಳಬೇಕು. ನಾನು ಪೂನಕ್ಕೆ ಹೋಗಿದ್ದಾಗ ಒಂದು ಸಭೆಯಲ್ಲಿ ಒಬ್ಬ ಅಂತ್ಯಜ ಸಹೋದರನೆದ್ದು, "ಜಾತಿ ಹಿಂದುಗಳು ನಮಗೆ ನ್ಯಾಯ ತೋರಿಸದಿದ್ದರೆ ನಾವು ಹೊಡೆದು ಬಡೆದಾದರೂ ನಮ್ಮ ಹಕ್ಕುಗಳನ್ನು ಪಡೆವೆವು" ಎಂತ ಹೇಳಿದರು. ಇದನ್ನು ಕೇಳಿ ನನಗೆ ದುಃಖವೆನಿಸಿತು. ಈ ರೀತಿಯಿಂದ ಹಿಂದೂ ಜಾತಿಯ ಮತ್ತು ನಿಮ್ಮ ಉದ್ಧಾರವಾದೀತೋ? ಇದರಿಂದ ಅಸ್ಪೃಶ್ಯತೆಯು ದೂರವಾದೀತೋ? ಧರ್ಮಾಂಧ ಹಿಂದೂಗಳನ್ನು ಒಪ್ಪಿಸಿ, ಸಮಾಧಾನಪಡಿಸುವುದರಿಂದಲೂ, ಅವರು ಕೊಡುವ ಕಷ್ಟಗಳನ್ನು ಸಹಿಸುವುದರಿಂದಲೂ ನಿಮ್ಮ ಉದ್ಧಾರವಾದೀತು; ಅಸ್ಪೃಶ್ಯತೆಯು ನಿವಾರಣೆಯಾದೀತು. ಸ್ಕೂಲುಗಳಿಗೆ ಹೋಗಲಿಕ್ಕೆ, ನಾಲ್ಕು ವರ್ಣದವರು ಎಲ್ಲೆಲ್ಲಿ ಹೋಗುತ್ತಾರೋ ಅಲ್ಲೆಲ್ಲ ಹೋಗಲಿಕ್ಕೆ, ಜಾತಿ ಹಿಂದೂಗಳಿಗೆ ಸಿಕ್ಕಬಹುದಾದ ಅಧಿಕಾರಗಳೂ, ಸ್ಥಾನಗಳೂ ನಿಮಗೆ ಸಿಕ್ಕಲಿಕ್ಕೂ ನೀವು ಕೇಳಬೇಕಾದದ್ದು ಯುಕ್ತವಾಗಿದೆ. ಅಸ್ಪೃಶ್ಯತೆಯ ನಿವಾರಣೆಯ ಅರ್ಥವೇನೆಂದರೆ, ಯಾವುದಾದರೂ ಐಹಿಕಸ್ಥಿತಿಯು ನಿಮಗೆ ಸಿಕ್ಕಲು ಅಡ್ಡಿ ಇರಬಾರದು ಎಂಬುದಾಗಿದೆ. ಆದರೆ ಇವೆಲ್ಲವುಗಳನ್ನೂ ನೀವು ಶಾಂತಿಮಯದ ರೀತಿಯಿಂದ ಪಡೆಯಬಲ್ಲಿರಿ. ಹಿಂದೂ ಧರ್ಮದಲ್ಲಿ ಯಾವ ರೀತಿಯು ಕಲ್ಯಾಣಕಾರಿಯಾಗಿ ಭಾವಿಸಲ್ಪಟ್ಟಿದೆಯೋ ಆ ರೀತಿಯಿಂದಲೇ ನಿಮ್ಮ ಇಷ್ಟ ಸಿದ್ಧಿಯಾಗುತ್ತದೆ. ಶರೀರ ಬಲದಿಂದ ಕಾರ್ಯ ಸಿದ್ಧಿಯಾದೀತೆಂತ ಭಾವಿಸಿದರೆ ಆಸುರೀ ಸಾಧನೆಗಳಿಂದ ಧರ್ಮಕಾರ್ಯ ಸಿದ್ಧಮಾಡಿಕೊಳ್ಳಬಹುದೆಂತ ಯೋಚಿಸಿದಂತಾಯಿತು. ನಿಮ್ಮಲ್ಲಿ ಈ ಆಸುರೀ ಭಾವನೆಗೆ ಎಡೆಕೊಡಬಾರದೆಂತಲೂ, ಭಗವಂತನ ನಿಜವಾದ ಧರ್ಮವನ್ನು ಪರಿಪಾಲನೆಮಾಡಿರೆಂತಲೂ ನಿಮ್ಮನ್ನು ಕೇಳಿಕೊಳ್ಳುತ್ತೇನೆ. ಅಸ್ಪೃಶ್ಯತೆಯು ಒಂದು ಕ್ಷಣದಲ್ಲಿ ನಿವಾರಣೆಯಾಗುವಂತೆ ದೇವರು ಅನುಜ್ಞೆ ಮಾಡಲಿ ಎಂತ ನಾವು ಪ್ರಾರ್ಥಿಸಬೇಕಾಗಿದೆ.

ಅಸ್ಪೃಶ್ಯತೆಯ ಭಾವನೆಯನ್ನು ದೂರ ಮಾಡಿದ ವಿನಹ ಸ್ವರಾಜ್ಯವು ವ್ಯರ್ಥ.

ಹಿಂದೂ ಧರ್ಮಕ್ಕೆ ಅಸ್ಪೃಶ್ಯತೆಯ ಭಾವನೆಯೇ ಎಲ್ಲಕ್ಕಿಂತಲೂ ಬಲವಾದ ಕೊಡಲಿ ಪೆಟ್ಟೆಂತ ನಾನು ಭಾವಿಸುತ್ತೇನೆ. ದಕ್ಷಿಣ ಆಫ್ರಿಕಾದಲ್ಲಿ ನಾನು ನಡಿಸಿದ ಸತ್ಯಾಗ್ರಹ ಸಂಗ್ರಾಮದಲ್ಲಿ ನನಗೆ ಅಡಚಣೆಗಳು ಬಂದದ್ದರಿಂದ ಅಸ್ಪೃಶ್ಯತಾ ನಿವಾರಣೆಯ ಯೋಚನೆ ಹುಟ್ಟಿತೆಂತಲೂ, ಅದಕ್ಕೆ ಮೊದಲು ನಾನು ಅಸ್ಪೃಶ್ಯತೆಯನ್ನು ಒಪ್ಪುವವನಾಗಿದ್ದೇನೆಂತಲೂ ಅನ್ನುತ್ತಾರೆ. ನಾನು ಕ್ರಿಸ್ತ ಧರ್ಮ ಗ್ರಂಥಗಳನ್ನು ಓದಲು ಪ್ರಾರಂಭಿಸಿದ ನಂತರ ನನ್ನಲ್ಲಿ ಈ ಬದಲಾವಣೆ ಆಯಿತೆಂತ ಅನ್ನುತ್ತಾರೆ. ಈ ಎಲ್ಲಾ ಅಭಿಪ್ರಾಯಗಳು ತಪ್ಪೆಂತಲೂ, ಭ್ರಮೆಯಿಂದ ಕೂಡಿದ್ದೆಂತಲೂ ನಾನು ದೃಢವಾಗಿ ಹೇಳಬಲ್ಲೆನು. ನಾನು ಬೈಬಲನ್ನು ಓದುವ ಮುಂಚೆ ಮತ್ತು ಕ್ರಿಸ್ತ ಧರ್ಮೀಯರೊಂದಿಗೆ ಸಂಪರ್ಕವಾಗುವ ಮುಂಚೆಯೇ ನನ್ನಲ್ಲಿ ಅಸ್ಪೃಶ್ಯತೆಗೆ ವಿರೋಧ ಭಾವವು ಹುಟ್ಟಿತ್ತು.

ಕೆಲವರನ್ನು ಅಸ್ಪೃಶ್ಯರನ್ನಾಗಿ ಭಾವಿಸಬೇಕೆಂತಲೂ, ಅವರನ್ನು ಸ್ಪರ್ಶಿಸಿದರೆ ಪಾಪವೆಂತಲೂ ನಿಜವಾದ ಹಿಂದೂ ಧರ್ಮದಲ್ಲಿ ಎಲ್ಲಿಯೂ ಇಲ್ಲ. ಶಾಸ್ತ್ರಗಳ ಮೇಲೆ ಮಾಡಿರುವ ವ್ಯಾಖ್ಯಾನಗಳ ಮೇಲೆ ನಾನು ಏನೂ ಹೇಳಲು ಇಚ್ಛಿಸುವುದಿಲ್ಲ. ಈ ಸಂಬಂಧವಾಗಿ ವಾದವಿವಾದ ಹುಟ್ಟಿಸಲು ಇಚ್ಛಿಸುವುದಿಲ್ಲ. ನನ್ನ ತಿಳಿವಿಗೆ ಭಾಗವತದಿಂದಾಗಲೀ, ಮನುಸ್ಮೃತಿಯಿಂದಾಗಲೀ ಆಧಾರ ಕೊಡಲು ನನ್ನಿಂದ ಸಾಧ್ಯವಿಲ್ಲ. ಆದರೆ ಹಿಂದೂ ಧರ್ಮದ ಮರ್ಮವನ್ನು ನಾನು ತಿಳಿದಿದ್ದೇನೆಂತ ಧೈರ್ಯವಾಗಿ ಹೇಳಬಲ್ಲೆನು. ಹಿಂದೂ ಧರ್ಮವು ಅಸ್ಪೃಶ್ಯತೆಗೆ ಎಡೆಕೊಟ್ಟು ಪಾಪಮಾಡಿ ಇದೆ. ಅದರಿಂದ ನಾವು ಕೆಳಗೆ ಬಿದ್ದಿದ್ದೇವೆ. ಅದರಿಂದಲೇ ನಾವು ಸಾಮ್ರಾಜ್ಯದಲ್ಲಿ ಅಸ್ಪೃಶ್ಯರಾಗಿದ್ದೇವೆ. ಈ ಎಲ್ಲಾ ಪಾಪಗಳೂ ಆ ಅಸ್ಪೃಶ್ಯತಾಭಾವನೆಯಿಂದ ಹುಟ್ಟಿದ್ದಾಗಿದೆ.

ಇಲ್ಲಿಯೇ ನನ್ನ ಸೂತ್ರವನ್ನು ತಿಳಿಸಲು ಅಪೇಕ್ಷಿಸುತ್ತೇನೆ. "ಎಲ್ಲಿ ವರೆಗೆ ಹಿಂದೂಗಳು ಅಸ್ಪೃಶ್ಯತಾಭಾವನೆಯು ತಮ್ಮ ಧರ್ಮದ ಅಂಗವಾಗಿ ಭಾವಿಸುತ್ತಾರೋ, ಎಲ್ಲಿ ವರೆಗೆ ತಮ್ಮ ಕೆಲವು ಸಹೋದರರನ್ನು ಮುಟ್ಟಿದರೆ ಪಾಪವೆಂತ ಭಾವಿಸುತ್ತಾರೋ ಅಲ್ಲಿ ವರೆಗೆ ಹಿಂದೂಸ್ಥಾನದಲ್ಲಿ ಸ್ವರಾಜ್ಯ ಸ್ಥಾಪನೆಯು ಆಗಲಾರದು. ಯುಧಿಷ್ಠಿರನಿಗೆ ತನ್ನ ನಾಯಿಯನ್ನು ಕರಕೊಂಡು ವಿನಹ ಸ್ವರ್ಗಕ್ಕೆ ಪ್ರವೇಶಿಸಲು ಸಾಧ್ಯವಾಗಲಿಲ್ಲ. ಯುಧಿಷ್ಠಿರನ ವಂಶಸ್ಥರಾದ ನಾವು ನಮ್ಮ ಆ ಅಸ್ಪೃಶ್ಯ ಸಹೋದರರನ್ನು ಬಿಟ್ಟು ಸ್ವರಾಜ್ಯ ಪಡೆಯುವ ಅಭಿಲಾಷೆ ಹೇಗೆ ಮಾಡಲಾಪೆವು?

ನಾವು ಇತರರನ್ನು ಪಾದದಲಿತರನ್ನಾಗಿ ಮಾಡಿದ್ದೇವೆ. ಅಂದರೆ ಕಾಲಿನ ಅಡಿಗೆ ಹಾಕಿ ದಬ್ಬಾಳಿಕೆ ನಡಿಸಿದ್ದೇವೆ. ನಾವು ಈ ಪಾಪಕ್ಕೆ ಭಾಗಿಗಳಾಗಿದ್ದೇವೆ. ನಾವು ಇವರನ್ನು ನೆಲದ ಮೇಲೆ ಹೊಟ್ಟೆ ಎಳೆಸಿಕೊಂಡು ಚಲಿಸುವ ಹಾಗೆ ಮಾಡಿದ್ದೇವೆ. ನಾವು ಇವರಿಂದ ಮೂಗನ್ನು ನೆಲಕ್ಕೆ ಉಜ್ಜಿಸುತ್ತೇವೆ, ರೈಲ್ವೇ ಗಾಡಿಗಳಿಂದ, ಕಣ್ಣು ಕೆಂಪುಮಾಡಿ ಹೊರಕ್ಕೆ ದೂಡುತ್ತೇವೆ. ನಾವು ಈ ಪಾಪದಿಂದ ಮುಕ್ತರಾಗಬೇಕು. ಎಲ್ಲಿ ವರೆಗೆ ನಾವು ಗರೀಬರ, ನಿರ್ಬಲರ, ಅಸಹಾಯಕರ ರಕ್ಷಣೆ ಮಾಡುವುದಿಲ್ಲವೋ, ಅಥವಾ ಯಾವನಾದರೂ ಇವರೊಬ್ಬನ ಆತ್ಮಕ್ಕೆ ನೋವು ಮಾಡಲು ಇಚ್ಛಿಸುತ್ತಾನೋ, ಅಲ್ಲಿ ವರೆಗೆ ನಾವು ಸ್ವರಾಜ್ಯ ಸಂಪಾದನೆಯ ಹರ್ಷ ಮಾಡುವುದು ವ್ಯರ್ಥವಾಗಿದೆ. ಯಾವನಾದರೂ ಹಿಂದೂ ಆಗಲೀ, ಮುಸಲ್ಮಾನನಾಗಲೀ, ದುರ್ಬಲ ಹಿಂದೂವನ್ನಾಗಲೀ, ಮುಸಲ್ಮಾನನನ್ನಾಗಲೀ ಒಂದು ಕ್ಷಣವಾದರೂ ದಬ್ಬಾಳಿಕೆಗೆ ಗುರಿಮಾಡಿಯಾನೆಂಬ ಯೋಚನೆ ಸಹ ಮಾಡಲು ಅವಕಾಶವಿರಬಾರದೆಂದೇ ಸ್ವರಾಜ್ಯದ ಅರ್ಥ. ಈ ಮಾತು ಎಲ್ಲಿ ವರೆಗೆ ದೂರವಾಗುವುದಿಲ್ಲವೋ ಅಲ್ಲಿ ವರೆಗೆ ಸ್ವರಾಜ್ಯ ಸಿಕ್ಕಿದರೂ ಲಾಭವಿಲ್ಲ. ಯಾಕೆಂದರೆ, ಸಿಕ್ಕಿದರೂ ಕಳಕೊಳ್ಳುತ್ತೇವೆ. ನಾವು ನಮ್ಮ ಹೀನ ಸಹೋದರರ ಕಡೆಗೆ ಮಾಡಿದ ಪಾಪಾಚಾರವನ್ನು ತೊಳೆದುಕೊಳ್ಳುವ ವರೆಗೆ ನಾವು ಪಶುಗಳಿಗಿಂತ ಉನ್ನತವಾಗುವುದಿಲ್ಲ.

ನನ್ನ ಹೃದಯದಲ್ಲಿ ಎರಡು ಬಲಿಷ್ಠವಾದ ಅಭಿಲಾಷೆಗಳಿವೆ. ಅವುಗಳನ್ನು ಪೂರೈಸಲಿಕ್ಕಾಗಿಯೇ ನಾನು ದೇಹಧಾರಣೆ ಮಾಡಿಕೊಂಡಿದ್ದೇನೆಂತ ಯೋಚಿಸುತ್ತೇನೆ. ಒಂದು ಅಸ್ಪೃಶ್ಯರ ಉದ್ಧಾರ; ಇನ್ನೊಂದು ಗೋರಕ್ಷಣೆ. ಯಾವಾಗ ಈ ಅಭಿಲಾಷೆಗಳು ನೆರವೇರುತ್ತವೋ ಆಗ ನನಗೆ ಮುಕ್ತಿಯಾಗುತ್ತದೆ.

ಅಸ್ಪೃಶ್ಯತೆಯು ನಮ್ಮ ದೇಶದ ಒಂದು ಪುರಾತನ ಕಾಯಿಲೆಯಾಗಿದೆ.

ಅಸ್ಪೃಶ್ಯತೆಯು ನಮ್ಮ ದೇಶದಿಂದ ಕುದುರೆ ಓಟದ ವೇಗದಲ್ಲಿ ಹೊರಟು ಹೋಗುತ್ತಲಿರುವುದು ಕಾಣುತ್ತದೆ. ಆದರೆ ಅದು ವಾಯುವೇಗದಿಂದ ಹೊರಟು ಹೋಗಬೇಕೆಂತ ನಾನು ರಾತ್ರಿ ಹಗಲು ಆಶಿಸುತ್ತಿದ್ದೇನೆ. ಹಾಗೆ ಖಂಡಿತವಾಗಿಯೂ ವಾಯುವೇಗದಿಂದಲೇ ಹೊರಟು ಹೋದೀತೆಂತ ನನಗೆ ನಂಬಿಕೆ ಇದೆ. ಆ ವರೆಗೆ ಧೈರ್ಯ ತಾಳಬೇಕು. ಈ ಪ್ರಪಂಚದಲ್ಲಿ, ಪ್ರಾರಂಭದಲ್ಲಿ ಸುಧಾರಕನು ಒಬ್ಬನೇ ಹೊರಡಬೇಕಾಗುತ್ತದೆ. ಅವನಿಗೆ ಯೋಚಿಸಿದಂತೆ ಜೊತೆಗಾರರು ಸಿಕ್ಕಿದರೆ ಅವನ ಸುಧಾರಣೆಗೆ ಹೆಚ್ಚು ಬೆಲೆ ಇರುವದಿಲ್ಲ. ಅಸ್ಪೃಶ್ಯತೆಯು ನಮ್ಮ ದೇಶದ ಬಹಳ ಪುರಾತನ ರೋಗವಾಗಿದೆ. ಅಲ್ಲದೆ ಇದಕ್ಕೆ ಧರ್ಮದ ಉಡುಪು ಹಾಕಿದ್ದಾರೆ. ಇಂಥ ರೋಗವನ್ನು ಹೋಗಲಾಡಿಸಲು ತೊಡಗುವವನಿಗೆ ಶೀಘ್ರವಲ್ಲೇ ಜೊತೆಗಾರರು ಸಿಕ್ಕುವರೆಂತ ಆಶೆ ಇಟ್ಟುಕೊಳ್ಳಬಾರದು. ಈ ಭಾಗದಲ್ಲಿ ಈ ವರೆಗೆ ಆದ ಕೆಲಸವೂ, ಈ ಕೆಲಸಕ್ಕೆ ಸಿಕ್ಕಿದಷ್ಟು ಜೊತೆಗಾರರು ಸಿಕ್ಕಿದ್ದೂ ದೇವರ ಕೃಪಾಫಲದಿಂದಲೇ ಆಗಿದೆ.

ಅಸ್ಪೃಶ್ಯತೆಯು ಹಿಂದೂ ಧರ್ಮದ ಮೇಲಿನ ಶಾಪವಾಗಿದೆ.

ಅಸ್ಪೃಶ್ಯತೆಯು ಹಿಂದೂ ಧರ್ಮದ ಮೇಲಿನ ಒಂದು ಶಾಪವಾಗಿದೆ. ಇದು ಹಿಂದೂ ಧರ್ಮದ ಜೀವವನ್ನೇ ತಿನ್ನುತ್ತಿದೆ. ನಾವು ಎಚ್ಚರಗೊಂಡು ಇದನ್ನು ನಿವಾರಿಸಿಕೊಳ್ಳದಿದ್ದರೆ ಹಿಂದೂ ಧರ್ಮದ ಜೀವವೇ ನಾಶವಾದೀತೆಂತ ನನಗೆ ಅನೇಕ ಸಲ ತೋರುತ್ತದೆ. ತರ್ಕಕ್ಕೆ ಪ್ರಾಮುಖ್ಯತೆ ಇರುವ ಈ ಕಾಲದಲ್ಲಿ, ಭಿನ್ನ ಭಿನ್ನ ಧರ್ಮಗಳನ್ನು ಮಿತ್ರ ಮಾಡಿ ಅಭ್ಯಾಸ ಮಾಡುವ ಕಾಲದಲ್ಲಿ ಒಬ್ಬ ಮನುಷ್ಯನಾದರೂ ತನ್ನ ಜನ್ಮದ ಕಾರಣದಿಂದ ಮುಟ್ಟಲಿಕ್ಕೆ ಅರ್ಹನಲ್ಲ, ನೋಡಲಿಕ್ಕೆ ಅರ್ಹನಲ್ಲ, ಸಮೀಪ ಬರಲು ಲಾಯಕ್ಕಲ್ಲವೆಂಬ ಭಯಂಕರವಾದ ಸಿದ್ಧಾಂತವನ್ನು ಒಪ್ಪುವ ಹಿಂದೂ ಎಂಥ ತಿಳಿದ ಜನರೂ ಹೇಗೆ ಇರಲು ಸಾಧ್ಯವಿದೆಯೆಂದು ನನಗೆ ಗೊತ್ತಾಗುವುದಿಲ್ಲ. ಹಿಂದೂ ಧರ್ಮದ ನಮ್ಮ ವಿದ್ಯಾರ್ಥಿಯಾಗಿರುವ, ಆದರೆ ಶಿಷ್ಟ ಮತ್ತು ಅರ್ಥವನ್ನು ಸಾಧಿಸಬೇಕೆಂಬ ಅಭಿಲಾಷೆಯುಳ್ಳ ... ನನ

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಈ ಬ್ಯಾಂಕಿನ ಬ್ಯಾಲೆನ್ಸ್ ಶೀಟು ಪ್ರಕಾರ ತಿಳಿಸಲಾಗಿದೆ.

(ಸ್ಥಾಪಿತವಾದದ್ದು 1922ರಲ್ಲು)

		ರೂ.
ಶೇರ್ ಬಂಡವಾಳ್	—	50,00—0—0
ವಸೂಲಾದ ಶೇರ್ ಮೊಬಲಗು	—	27,350—0—0
ಜನರಿಂದ ಠೇವಣಾತಿ	—	22,5380—10—7
ವಸೂಲಾದ ಕ್ಷೇಮನಿಧಿ	—	37,914—12—0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೆ ಮಾತ್ರ ಸಾಲಕೊಡತಕ್ಕದ್ದು.

ಒಂದು ವರ್ಷ ಮಾಯಿದೆ ಅಥವ ಹೆಚ್ಚಿನ ಮಾಯಿದೆಯ ಠೇವಣಾತಿಗಳಿಗೆ ಶೇಕಡ ನಾಲ್ಕು ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ಮಾಯಿದೆಯ ಠೇವಣಾತಿಗಳಿಗೆ ಶೇಕಡ ನಾಲ್ಕರ 4ರ ಬಡ್ಡಿ ದೊರೆಯುತ್ತೆ.

ವರ್ಕಿಂಗ್ ಕಮಿಟಿ ಕೊಂಡ ಸರ್ವೀಸ್ ರಿಜಿಸ್ಟ್ರಾರವರು ಅಧ್ಯಕ್ಷ ಉಪಾಧ್ಯಕ್ಷರ ಮಾಡುತ್ತಾರೆ.

ಪ್ರೆಸಿಡೆಂಟರು, ಪಟ್ಟಮಾಡ ದೇವಯ್ಯನವರು. ರಾವ್ ಬಹದ್ದೂರ್.

ವೈಸ್ ಚೆರ್ಮನ್, ಮನೆಯಪ್ಪಂಡ ಬೆಳ್ಯಪ್ಪನವರು.

ಸೆಕ್ರೆಟರಿ

ಸಿ. ಯಸ್. ವೆಂಕಟಪ್ಪಯ್ಯನವರು, ಬಿ.ಎ., ಬಿ.ಎಲ್

ತಾರೀಖು 1—7—1932.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡಿದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿದೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಲಾಗಿದೆ.

ಏಜೆಂಟರುಗಳು.

ಕೊಡಗಿನ ಎಲ್ಲಾ ಭಾಗಗಳಿಗೆ—ಮೆ. ಮುಂಡಂಡ ಯಂ. ಬಿದ್ದಪ್ಪನವರು.

ಉತ್ತರ ಕೊಡಗಿಗೆ ಮೆ. ಚೌರಿರ ಮಾದೈಯ್ಯನವರು,

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮಂಗೇರಂಡ ಸೋಮೈಯ್ಯನವರು, (ಪಾಡಿಭಂಡಾರ.)

ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,

ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಯ್ಯನವರು. ಮತ್ತು ಅರಮಣಮಾಡ ಪಿ ಕಾರ್ಯಪ್ಪನವರು,

ಹುದಿಕೇರಿ ಟಿ ಶೆಟ್ಟಿಗೇರಿ—ಮೆ. ಜಿ. ಮಾದಪ್ಪಯ್ಯನವರು,

ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾಚೈಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿ ಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಬಡಾ ಬಡ್ಡಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಿಸಲು ಅತ್ಯವಶ್ಯವಾಗಿರುವ, ರೂಲ್ಸಿನನುಸಾರವಾಗಿ ತಯಾರಿಸಲ್ಪಟ್ಟಿರುವ ದರಖಾಸ್ತು ಫಾರಮುಗಳೂ, ಕರಾರು ಫಾರಮುಗಳೂ, ಬಿಮ್ಮ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಕರಾರು ಫಾರಮುಗಳೂ, ಸ್ಟೋರ್ ಕೀಪರ್ ಕರಾರು ಫಾರಮುಗಳೂ, ಓವರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮಾ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಮುದ್ದು ಬರಲಿಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.

ವಿಮೆದಾರರಿಗೆ ಕೊಟ್ಟದ್ದು—3231 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.

ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,78,322 ಜನರಿಗೆ 38ಕೋಟಿ ರೂ.

ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ರಕ್ಕಿಂತ ವಿಪರೀತ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದಾಗಿದೆ.

ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂಬ ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚಿನಷ್ಟು ಬೆಂಬಲವನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬುದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜು ವ್ಯಕ್ತವಾಗುತ್ತದೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕಿದ್ದು:—

ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು

ಅಥವಾ ಇನ್ಸ್‌ಪೆಕ್ಟರೇಟ್ ಆಫೀಸು, ಮಡಿಕೇರಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರಾ	ಕಲ್ಕತ್ತಾ	ಕೌಲಾಲಂಪೂರು	ಮೊಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಡಕ್ಕಾ	ಲಕ್ನೋ	ಪಾಟ್ನಾ	ಸಕ್ಕೂರು
ಅಲಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚನಾಪಳ್ಳಿ
ಬೊಂಬಾಯಿ	ಡಾಲಿಗಾನ್	ಮಂಡಲೆ	ರಾಯಪುರ	ತಿರುವೆಂದ್ರಮ್
ಭೋಪಾಲ್	ಕರಾಚಿ	ಮಡಿಕೇರಿ	ರಾಂಚಿ	ವಿಶಾಖಪಟ್ಣ [52—32

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,

52—39 ಗಿರಿಗಾಂವ, ಮುಂಬಯಿ.

ಕಾರ್ಡು ಬರೆದರೆ ಇಗನ ಕ್ಯಾಟಲಾಗು ಮುಫತಾಗಿ ಕಳುಹಿಸಲ್ಪಡುವದು.



ಕೋವಿಗಳು, ಕತ್ತಿಗಳು, ಬಟಿಗಳು, ತೋಟೆಗಳು, ಕೇಪುಗಳು, ಮದ್ದು ಮುಂತಾದ ಬೇಟೆಯ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS LTD.,

Largest Importers of Firearms and Ammuniti

Cheapest priced firm in India,

26—5 **210 Abdul Rehman Street, BOMBAY.**

Printed & published by P. I. Belliappa at "Kodagu" Press Me for "Kodagu" Ltd

Reg. No. M. 1 50.
if not delivered please return to
"KODAGU" OFFICE MERCARA.

ಕೊಡಗು.

ಸತ್ಯೇನ ಭೂತದಯಯಾ ವಿದ್ಯಾ ನೀತಿ ಪ್ರಯತ್ನತಃ ಐಕ್ಯಮತ್ಯೇನ ಕೌಶಾಲಾಂ ಕುಪ್ಯಾಂ ರಾಜ್ಯ ಸಂಪದಾ

ವಾರ್ಷಿಕ ಚಂದಾ ರೂ. ೪—೮—೦.

ಸಂಪಾದಕ— ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೨	ಮಡಿಕೇರಿ, ಸನ್ ೧೯೩೨ನೇ ಇಸವಿ ಅಕ್ಟೋಬರ್ ತಾರೀಕು ೧೪ ನೇ ಶುಕ್ರವಾರ.	ಸಂಚಿಕೆ ೨೦

SARI PIN.

BRACELETS

NECKCHAINS.

EAR-RINGS (Thodus)
Cut-rubys Rs. 25 to 50
With diamond in centre Rs. 80 to 150

Gold Rs. 10
Set rubys forming any letter Rs. 12

NOSE-RINGS.
Diamond in small size of best quality Rs. 35 & upwards according to size.

MARRIAGE PRESENTATIONS

Attractive and inexpensive articles ready in stock. Prompt execution. Details on enquiry free with catalogue. Numerous customers in Coorg thoroughly satisfied with reliable service. Testimonials pouring in. Silver Guindys, Photo lockets, Dimond nose-screws, cut-ruby ear-rings, etc., etc., etc., in all prices. Very attractive. Prices most moderate.

Estimates free on enquiry

Designs free on enquiry

Telegrams: 'PRECIOUS.'

Telephone: 8145.

V. Subramaniar Jeweller,

CATALOGUE ON ENQUIRY.

52—47

Post Box 423, Triplicane, P. O., MADRAS.



26—16

ಜನರಲ್ ಅಶ್ಶೂರೆನ್ಸ್ ಸೊಸೈಟಿ.

ಅಜಮೀರ್.

ನಮ್ಮ ವ್ಯವಹಾರದ ಪಟ್ಟಿಯೇ ನಮ್ಮ ಅಭಿವೃದ್ಧಿಯನ್ನು ವ್ಯಕ್ತಗೊಳಿಸುತ್ತದೆ.

ವರ್ಷ	ಕೊಟ್ಟ ವಹಿವಾಟು	ಕೊಟ್ಟ ಮೂಲಧನ	ಖರ್ಚಿನ ಪ್ರಮಾಣದ ಶೇಕಡ
1911	46,248	49,442	82.9
1921	2,92,627	6,53,350	43.2
1931	12,50,000	40,00 000	28.2

ಬೋನಸ್ಸು.

ಹೋಲ್ ಲೈಫ್ ಮತ್ತು ಎಂಡೋಮೆಂಟ್ ಪಾಲಿಸಿಗಳ ಮೇಲೆ ವರ್ಷ ಒಂದಕ್ಕೆ ಶೇಕಡ 22½

ಚೆನ್ನಾಗಿ ಕೆಲಸಮಾಡಿ ಅಭಿವೃದ್ಧಿ ಸ್ಥಿತಿಯಲ್ಲಿರುವ ಈ ಸೊಸೈಟಿಯಲ್ಲಿ ವಿಮೆ ಮಾಡಿ ಕಡಮೆ ಪ್ರೀಮಿಯಂ ಪಾವತಿ ಮಾಡುವ ಸೌಲಭ್ಯ ಹೊಂದಿ ಅಥವಾ ಈ ಕಂಪೆನಿಯ ಪರವಾಗಿ ಕೆಲಸಮಾಡಿ ಉತ್ತಮ ಕಮಿಶನ್ ದರದ ಪ್ರಯೋಜನ ಹೊಂದಿ.

ಹೆಚ್ಚು ವಿಚಾರಗಳಿಗೆ ಈ ವಿಳಾಸಕ್ಕೆ ಬರೆಯಿರಿ:—

ಎ. ರಾಮಚಂದ್ರರಾವ್,
ಸುಪರಿಂಟೆಂಡೆಂಟ್,
ಮಿಂಟೋ ಆಸ್ಪತ್ರೆ ಬಳಿ,
ಬೆಂಗಳೂರು.

52—25

EMPIRE OF INDIA
Life Assurance Company, Limited.

Established 1897.

INTERIM BONUS on Policies becoming claims before 1st March 1934 INCREASED TO

Rs. 16 per annum per Rs. 1000/- Assured on Whole Life Assurances. and Rs. 14 per annum per Rs. 1000/- Assured on Endowment Assurances

Head Office:—
EMPIRE OF INDIA LIFE BUILDING,
Bombay

Branch Office:—
152/3, COMMERCIAL STREET,
Bangalore.

52—2

ಕ ಪ್ರಯತ್ನ ಮತ್ತು ಸ್ವತಂತ್ರ ಕಾರ್ಯಶಕ್ತಿಯು ಸತತ ಅವಶ್ಯಕವಾದ ಸಾಧನೆಗಳಾಗಿವೆ. ಯಾವ ರಾಷ್ಟ್ರವು ಸ್ವಾಧೀನತೆಯ ಉತ್ಕ ರ್ಷವನ್ನು ಹೊಂದಲು ಪ್ರಯತ್ನಿಸುವುದಿಲ್ಲವೋ ಅಂಥಾ ರಾಷ್ಟ್ರವು ಪ್ರಪಂಚದ ಇತರ ರಾಷ್ಟ್ರಗಳ ದೃಷ್ಟಿಯಲ್ಲಿ ಅದರ ತಿರಸ್ಕಾರಕ್ಕೆ ಭಾಗಿಯಾಗುತ್ತದೆ.

ಯಾವ ರಾಜ್ಯವು ಪೂರ್ಣ ಸ್ವಾತಂತ್ರ್ಯವನ್ನು ಪಡೆಯುತ್ತದೋ ಅದು ಪೂರ್ಣ ಜಯಶಾಲಿಯೆನಿಸಿಕೊಳ್ಳುತ್ತದೆ. ಸ್ವತಂತ್ರ ರಾಷ್ಟ್ರದ ಸಮಸ್ತ ಚಿಂತೆಗಳೂ, ಕಷ್ಟಗಳೂ ದೂರವಾಗಿ ಹೋಗುತ್ತವೆ. ಪ್ರಪಂಚದ ಸಮಸ್ತ ಸೌಭಾಗ್ಯಗಳು ಸ್ವತಂತ್ರ ರಾಷ್ಟ್ರದ ಪಾದಗಳಿಗೆ ತಾವಾಗಿಯೇ ಬಂದು ಬೀಳುತ್ತವೆ. ಯಾವ ರಾಜ್ಯವು ಪರಾಧೀನದಲ್ಲಿರುತ್ತದೋ ಅದು ಪತಿತವಾಗಿರುತ್ತದೆ. ಅದಕ್ಕೆ ಸನ್ಮಾನ ಮತ್ತು ಗೌರವದ ಅರ್ಥಗಳು ದೊರಕುವುದಿಲ್ಲ. ಅದಕ್ಕೆ ಎಲ್ಲಿಯೂ ತಿರಸ್ಕಾರವೇ ಸಿಕ್ಕುತ್ತದೆ. ಮನುಷ್ಯ ಮಾತ್ರರಿಗೆ ಇರುವ ಸ್ವಾಭಾವಿಕ ಸಿದ್ಧತ್ವಗಳೂ ಅಂಥಾ ಪರಾಧೀನ ರಾಜ್ಯಕ್ಕೆ ಇರುವುದಿಲ್ಲ. ಅನ್ಯ ರಾಷ್ಟ್ರಗಳ ಗುಲಾಮಗಿರಿಯಲ್ಲಿರದೇ ಹೊರತು ಅದು ಅದೃಷ್ಟಕ್ಕೆ ಬೇರೆ ಏನೂ ಲಭಿಸುವುದಿಲ್ಲ.

ಇಸ್ಲಾಮ್ ಧರ್ಮದಲ್ಲಿ ಸ್ವಾಧೀನತೆಯ ಸ್ಥಾನವು ಬಹಳ ಮೇಲೆ ಇದೆ. ಸ್ವಾಧೀನತೆಯಲ್ಲೇ ಇಸ್ಲಾಮಿನ ಜೀವನವಿರುವುದು. ಪೂರ್ಣ ಸ್ವಾತಂತ್ರ್ಯವಿದ್ದ ವಿನಹ ಧಾರ್ಮಿಕ ಕರ್ತವ್ಯಗಳನ್ನು ಮಾಡಲು ಒಂದು ಕ್ಷಣಕ್ಕೂ ಸಾಧ್ಯವಿಲ್ಲ. ಧರ್ಮದ ಸನ್ಮಾನವೂ ಸಹ ಸ್ವಾಧೀನತೆಯನ್ನೇ ಹೊಂದಿದೆ. ನಾವು ಸ್ವಾಧೀನರಾಗಿರುವುದಕ್ಕಾಗಿ ದೇವರಿಗೆ ಸಾವಿರ ವಂದನೆಗಳನ್ನು ಒಪ್ಪಿಸುತ್ತೇನೆ. ಬಹಳ ಪ್ರಯತ್ನಪಟ್ಟು ಸ್ವಾಧೀನತೆಯು ಪಡೆದಿದ್ದೇವೆ. ನಮ್ಮ ದೇಶದ ಸ್ವಾಧೀನತೆಯನ್ನು ರಕ್ಷಿಸಿಕೊಳ್ಳಲು ನಮಗೆ ಶಕ್ತಿಕೊಡಬೇಕೆಂತ ಆ ಶಕ್ತಿಶಾಲಿ ಪರಮಾತ್ಮನನ್ನು ನಮ್ರಭಾವದಿಂದ ಕೇಳಿಕೊಳ್ಳುತ್ತೇನೆ. ಸಧವಾಯದಲ್ಲಿ ಸ್ವಾಧೀನತೆಗಿಂತ ಪ್ರಿಯವಾದ ವಸ್ತುವೊಂದಿಲ್ಲ. ಈ ಶುಭದಿನದಲ್ಲಿ ನಮ್ಮ ಅತ್ಯಧಿಕ ಮಹತ್ವವಾದ ಸ್ವಾಧೀನತೆಯ ರಕ್ಷಣೆಗಾಗಿ ಕೆಲವು ಉಪಾಯಗಳನ್ನೂ, ಇತರ ಮಹತ್ವದ ಕೆಲವು ನಿರ್ದೇಶಗಳನ್ನೂ ಮುಂದೆ ಇಡುತ್ತೇನೆ.

(1) ಪ್ರಪಂಚದಲ್ಲಿ ಸ್ವಾಧೀನತೆಯೇ ಅತಿ ಅಮೂಲ್ಯ ವಸ್ತುವೆಂತ ತಿಳಿಸಲ್ಪಡಲಿ.

(2) ಸ್ವಾಧೀನತೆಯ ರಕ್ಷಣೆಗಾಗಿ ನಿಮ್ಮ ಪ್ರಾಣ, ಸಂಪತ್ತು ಮತ್ತು ಸರ್ವಸ್ವವನ್ನು ಅರ್ಪಣೆ ಮಾಡಲು ತಯಾರಿರಿ.

(3) ಯಾವನಿಗೆ ಸ್ವಾತಂತ್ರ್ಯದ ಮೇಲೆ ಸಂಪೂರ್ಣ ಪ್ರೇಮ ಶ್ರದ್ಧೆ ಇದೆಯೋ ಅಂಥವನನ್ನು ಸನ್ಮಾನಿಸಿ. ಯಾಕೆಂದರೆ ಸ್ವಾತಂತ್ರ್ಯವೇ ಮನುಷ್ಯನಿಗೆ ಅತಿ ಪ್ರಿಯ ವಸ್ತುವಾಗಿದೆ.

(4) ಸ್ವಾಧೀನತೆಗೂ ರಾಷ್ಟ್ರದ ಏಳಿಗೆಗೂ ಬಹಳ ನಿಕಟ ಸಂಬಂಧವಿದೆ.

(5) ಸ್ವಾಧೀನತೆಯ ಕಲ್ಪನೆಯೊಂದಿಗೆ ಈ ಕೆಳಗೆ ಬರೆದ ಭಾವಗಳ ಸಂಬಂಧವಿದೆ. ತಾನೂ ಸು ಮೇಲೆ ಸ್ಥಾಪಿಸಲ್ಪಟ್ಟ ರಾಜ್ಯಾಡಳಿತದ ಮೇಲೆ ಗೌರವಭಾವ; ದೇಶ ಮತ್ತು ರಾಷ್ಟ್ರದ ಮೇಲೆ ಪ್ರೇಮಭಾವ.

(6) ನಿಮ್ಮ ದೇಶದ ಸ್ವಾತಂತ್ರ್ಯ ಸಂಪಾದನೆಗಾಗಿ ಯಾವಾಗಲೂ ಪ್ರಯತ್ನಶೀಲರಾಗಿರಿ. ದೇಶದ ಸ್ವಾಧೀನತೆಯ ರಕ್ಷಣೆಯಲ್ಲಿ ಭಾಗ ತೆಗೆದುಕೊಳ್ಳಲು ಉತ್ಸುಕರಾಗಿರಿ.

(7) ಸ್ವಾಧೀನತೆಗಾಗಿ ಬಲಿದಾನರಾಗುವ ವೀರಪುರುಷರನ್ನು ಎಂದೂ ಮರೆಯಬೇಡಿ. ಅವರ ಆತ್ಮಕ್ಕೆ ಸದ್ಗತಿಪೂರ್ವಕ ದೇವರಲ್ಲಿ ಯಾವಾಗಲೂ ಪ್ರಾರ್ಥಿಸಿರಿ. ಅಂಥವರ ಬಲಿದಾನದಿಂದಲೇ ನಿಮ್ಮ ಸ್ವತಂತ್ರ ರಾಷ್ಟ್ರದ ನಿರ್ಮಾಣವಾದುದು.

"ಪ್ರತಾಪ"

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕೆಯು ಜವಾಬ್ದಾರರಲ್ಲ. ಸಂ.]

ದಿವಾನ್ ಸಾಹೇಬರಲ್ಲಿ ಮೈಸೂರು ಸಂಸ್ಥಾನದ ಬಸ್ಸು ಮಾಲೀಕರುಗಳ ಹವಾಲ್.

ಕಳೆದ ಬಹಳ ದಿನದಿಂದ ಮೋಟಾರು ಬಸ್ಸುಗಳ ಮೇಲೆ ಹಾಕಿರುವ ಟ್ಯಾಕ್ಸ್ ನನ್ನು ವಜಾ ಮಾಡಿ ಮಾಮೂಲಿನಂತೆ ಸಹಾಯ ಕೊಡಿಸುವ ಬಗ್ಗೆ ಪ್ರಾರ್ಥಿಸಿಕೊಳ್ಳಲು ಬೆಂಗಳೂರು ಸಿಟಿ ಬಳಿಯ ಸಂಸ್ಥಾನದ ಎಲ್ಲಾ ಡಿಸ್ಟ್ರಿಕ್ಟ್ ಬಸ್ಸು ಮಾಲೀಕರುಗಳು ದಿವಾನ್ ಸಾಹೇಬರವರನ್ನು ಕಂಡಿದ್ದರು. ನಿವಾಸದಿಂದ ಅಗತ್ಯನೇ ಬಂದ ನವಾಬ್ ದಿವಾನ್ ಸಾಹೇಬರವರು ಮೋಟಾರ್ ಮಾಲೀಕರ ಹವಾಲನ್ನು ಸಾವಧಾನದಿಂದ ಕೇಳಿ ಅವರ ಭಾಗದ ಸಮಾಧಾನಕ್ಕಾಗಿ 28ನೇ ತಾರೀಖಿನ [illegible] ಬರಮಾಡಿಕೊಂಡು ಅವರ ಹವಾಲನ್ನು [illegible] ಅಧಿಕಾರಿಗಳ ಗಮನಕ್ಕೆ ತಂದದ್ದಲ್ಲದೆ ಇವರ ಕ್ಷೇಮಕ್ಕಾಗಿ ಪ್ರತ್ಯೇಕ ಕಮಿಟಿ ಏರ್ಪಡಿಸುವಂತೆಯೂ ಅದರಲ್ಲಿ [illegible] ಗಳಾದ ಕೆಲವು ಬಸ್ಸು ಮಾಲೀಕರುಗಳನ್ನು ಸಹ ಮೆಂಬರುಗಳಾಗಿ ತೆಗೆದುಕೊಳ್ಳುವಂತೆಯೂ ಹೇಳಿ, ಬಸ್ಸು ಮಾಲೀಕರುಗಳಿಂದ ಪ್ರಾರ್ಥಿಸಲ್ಪಟ್ಟ ಟ್ಯಾಕ್ಸ್ ನನ್ನು ನಾಳೆ ಅಕ್ಟೋಬರ್ 1ನೇ ತಾರೀಖಿನಿಂದ ವಜಾ ಮಾಡುವ ವಿಷಯವನ್ನು ಪರ್ಯಾಲೋಚಿಸುತ್ತೇವೆಂದು ಭರವಸೆ ಕೊಟ್ಟಿರುತ್ತಾರೆ. ಇದೇ ವಿಚಾರವಾಗಿ ಮಲಬಾರಿನಲ್ಲಿ ಸರ್ಕಾರದವರು ಮಾಮೂಲ್ ಟ್ಯಾಕ್ಸನ್ನು ಜಾಯಿಂಟ್ ಮಾಡಿ ಅದಕ್ಕೆ ಮಾಡಿದ ಟ್ಯಾಕ್ಸ್ ನನ್ನು ವಜಾ ಮಾಡಿ ಬಸ್ ಮಾಲೀಕರುಗಳಿಗೆ ಸಹಾಯ ಕೊಡಿಸುವ ಪ್ರಯತ್ನ ನಮ್ಮ ಘನ ಸರ್ಕಾರದವರು ಮೇಲ್ಕಂಡ ಟ್ಯಾಕ್ಸ್ ರೋಡ್ ಟ್ಯಾಕ್ಸನ್ನು ವಜಾ ಮಾಡಿ ಬಸ್ಸು ಮಾಲೀಕರುಗಳು ಅನುಭವಿಸುತ್ತಿರುವ ಕಷ್ಟಗಳನ್ನು ನಿವಾರಿಸುತ್ತಾರೆಂದು ನಂಬಿದ್ದೇವೆ.

ಆಟೊಮೊಬಯಿಲ್ ಎಸೋಸಿಯೇಶನ್, ಮೈಸೂರು ಡಿಸ್ಟ್ರಿಕ್ಟ್. — ಯಂ. ಮಲ್ಲರಾಜ್, ಗೌ. ಸೆಕ್ರೆಟರಿ.

ಕೊಡಗಿನ ಬಾಲ ಹರಿದಾಸ.

ಅಯ್ಯಾ,

ಈ ತಿಂಗಳ ತಾರೀಕು 3 ಮತ್ತು 4 ರಲ್ಲಿ ಶ್ರೀರಾಮ ಭಕ್ತ ಮಂಡಳಿಯವರು ಮಡಿಕೇರಿಯಲ್ಲಿ 'ಶತಿಸೀತಾಪರಿಣಯ' ಮತ್ತು "ಶ್ರೀಗಣೇಶ ಜನನ" ಗಳೆಂಬ ಎರಡು ಹರಿಕಥೆಗಳನ್ನು ಮಾಡಿ ಮಹಿಳಾ ಮಹನೀಯರನ್ನೂ, ಬಾಲಕ ಬಾಲಕಿಯರನ್ನೂ ಬಹಳವಾಗಿ ಸಂತೋಷಪಡಿಸಿದರು.

ಈ ಹರಿಕಥಾ ಕಲೆಯನ್ನು ಕೊಂಚ ಟೀಕಿಸಬೇಕಾಗಿದೆ. ಈ ಮಹನೀಯರ ಸಾಮರ್ಥ್ಯವನ್ನು ಕೇಳುವಾಗ ಯಾರೋ ನಮ್ಮ ನಿರ್ದೇಶಕರಂತೆ ಕೇಳುತ್ತೆ. ಆದರೆ ಅವರು ನಮ್ಮವರೆ. ಬಾಳಲಿ ಅವರ ಗಾನ. ವಯಸ್ಸಿನಲ್ಲಿನ್ನು ಬಾಲಕರೆನ್ನಬೇಕು. ಬಾಳಿ ಇವರಿಂದ ನಮ್ಮ ದೇಶದ ಕೀರ್ತಿಯನ್ನು ಹರಡಿಸುವರು. ಒಂದೆರಡು ಕಥೆಗಳಲ್ಲಿ ಅವರ ಪ್ರಸಂಗ [illegible] ಹೇಳಲಾರೆ. ಆದರೆ ಅವರು ಮಾಡುವ ಹರಿಕಥೆಗಳು ಓದಿ ಕಲಿತಂತೆ ಕಾಣುವುದಿಲ್ಲ. ಕೊಂಚ ಪೂರ್ವ ವಾಸನೆಯ ಶಕ್ತಿಯಿಂದ ಮಾಡುವಂತೆ ನನಗೆ ತೋರಿತು. ರಂಗಸ್ಥಳವನ್ನೇರಿದ ಮೇಲೆ ಅವರ ರೂಪವೇ ಬದಲಾದಂತಾಯಿತು, ಕಥೆಯು ಮುಂದರಿದಂತೆ ತಮ್ಮನ್ನು ತಾವು ಮರೆತಂತೆ ತೋರುವರು.

ಗಾನ ಕಲೆಯೊಂದೇ ಅತಿ ಉತ್ತಮ ತರದೆಂದು ನಾನು ಹೇಳದರೆ ಮುಖಮುದ್ರೆ ಅಭಿನಯಗಳಿಂದು ಅದರೆ ಹಾಡುವ ಪದಗಳು ಸ್ವಭಾವಸಿದ್ಧವಾಗಿವೆ. ಹೃದಯ ಜನನದಂತೆ ತೋರಿಬಂತು. ಕೇಳುವ ಬಾಲಕ ಬಾಲಕಿಯರನ್ನು ತಾವಾಗಿಯೇ ಕೃಷ್ಣಪ್ಪಾಳಿ ಹೊಡಿಸುವಂತೆಯೂ ತಲೆತೂಗಿಸುವಂತೆಯೂ ಮಾಡುತಿತ್ತು. ಇವರ ಮಾಡಿದ ಎರಡು ಹರಿಕಥೆಗಳಲ್ಲಿ ರೂ. 6—4—5 ದಕ್ಷಿಣೆಯಾಗಿ ವಸೂಲಾಯಿತು.

ಶ್ರೀಯುತ ಗೋಪಾಲದಾಸರಿಗೆ ಅವರ ಪೂಜಾವಸ್ತುವಾದ ಶ್ರೀರಾಮರೇ ದೀರ್ಘಾಯುಷ್ಯವನ್ನೂ, ಹರಿಕಥಾ ಪ್ರವೀಣತೆಯನ್ನೂ, ಜನಸಾಮಾನ್ಯದಿಂದ ಸನ್ಮಾನವನ್ನೂ ಕೊಡಲೆಂದು ಪ್ರಾರ್ಥಿಸುತ್ತೇನೆ.

ಪ್ರೇಕ್ಷಕ.

ಬಡ ರೈತರ ಸುಲಿಗೆ

ಅಯ್ಯ ಮುತ್ತಣ್ಣನವರೇ,

ತಮ್ಮ ಲೇಖನದಿಂದ ತಾವು ಬಹು ದೊಡ್ಡ ಐಶ್ವರ್ಯವಂತರ ಹಾಗೆ ತೋರುತ್ತೀರಿ! ಇರಬಹುದು. ಯಾಕೆಂದರೆ, ದೇಶದ ಬಡತನವು ಇನ್ನೂ ತಮಗೆ ತಿಳಿದಿಲ್ಲ. ಎಲ್ಲರೂ ತಮ್ಮಂತೆಯೇ ಇರುವ ಹಾಗೆ ತಿಳಿದುಕೊಂಡಿರುತ್ತೀರಿ. 'ಮನಸೋಂದವ'ನ ಲೇಖನವನ್ನು ಬರೆಯುವಾಗ ದೇಶದ ಬಡ ರೈತರ ಈಗಿನಂಥ ವಿಷಮ ಸಮಯದಲ್ಲಿ ತಮ್ಮ ಚಿಕ್ಕ ಉತ್ಪತ್ತಿಯನ್ನು ದುಂದುಗಾರಿಕೆಯಲ್ಲಿ ಖರ್ಚು ಮಾಡಬಾರದೆಂಬುವುದನ್ನೇ ಮನಸಿನಲ್ಲಿಟ್ಟುಕೊಂಡು ಬರದದ್ದೆಂದು ತಾವು ತಿಳಿಯಬೇಕು. ಒಂದೇ ಸಾರಿ ಹಣ ಕೊಟ್ಟು ಗ್ರಾಮಫೋನುಗಳನ್ನು ಕೊಂಡು ಶಾಶ್ವತವಾಗಿ ಅನುಕೂಲವಾಗುವ ಹಾಗೆ ನೀವು ಬರೆಯುವಂಥಾ ಬೇರೆಗಳನ್ನು ಎತ್ತುವದೆಂದು ಹೇಳುತ್ತೀರಿ. ಅಂದರೆ ಬಡ ರೈತರ ನಿಕ್ಕ ಗ್ರಾಮಫೋನುಗಳ ಬಳಿಗೆ ಸಿಕ್ಕಿಸಲಿಕ್ಕಾಗಿ, ಕಳಕುಮಳಕುಗಳಿಂದ ಮೋಹಗೊಳಿಸಲಿಕ್ಕಾಗಿ. ಹ್ಯಾಗಾದರೂ ಕಷ್ಟಪಟ್ಟು ಒಂದು ಮೆಶಿನನ್ನು ಸಂಪಾದಿಸಿದರೂ ಕೆಲವು ರೆಕಾರ್ಡುಗಳ ಹಾಡನ್ನೇ ಕೇಳಿ ಕೇಳಿ ಜಿಗುಪ್ಸೆ ಹುಟ್ಟಿ ಹೊಸ ರೆಕಾರ್ಡುಗಳನ್ನು ಕೊಳ್ಳಬೇಕಾಗುತ್ತದೆ. ಹಣ ತೀರಿದ ಮೇಲೆ ತಮ್ಮಂಥವರಿಗೆ ಪ್ರೋನೋಟು ಬರೆಯುವುದೇ ಕೆಲಸ. ಸಾಲ ಸಿಕ್ಕದಿದ್ದರೆ ಮೆಶಿನುಗಳು ಮೂಲೆಗೆ. ಆದುದರಿಂದ ಗಂಟಿಗೆ ಮೆಶಿನುಗಳು ಪುಕ್ಕಟೆ ಸಿಕ್ಕಿದರೂ ನಷ್ಟವೇ. 'ಬಡವನಿಗೆ ಆನೆಯಾದೇವಿ' ಎಂಬುವುದನ್ನು ಮರೆಯಬೇಡಿ. ತಮ್ಮಂಥ ಐಶ್ವರ್ಯವಂತರು ಬೇಕಾದರೆ ಕೊಂಡುಕೊಂಡು ವೇದಮಂತ್ರ ಇನ್ನು ಕೇಳಿ ತಮ್ಮ ಮನಸ್ಸನ್ನು ಶುದ್ಧ ಮಾಡಿಕೊಳ್ಳಿರಿ.

ತಮ್ಮ ಸಂದೇಶೀ ಪ್ರೋತ್ಸಾಹವನ್ನು ನೋಡಿದರೆ ತಾವು ಈಗ ತಾನೇ ವಿದೇಶದಿಂದ ಬಂದು, ಭಾರತದಲ್ಲಿ ವ್ಯಾಪಾರಕ್ಕಾಗಿ ನೆಲೆಸಿದ ಹಾಗೆ ತೋರುತ್ತದೆ. ತಾವು ಭಾರತೀಯರೇ [illegible] ತಮ್ಮಲ್ಲಿ ಎಳ್ಳಷ್ಟು ರಾಷ್ಟ್ರಾಭಿಮಾನ, ಸ್ವಜನಾಭಿಮಾನ, ಸ್ವದೇಶಾಭಿಮಾನವೆಂಬ ಉಚ್ಚವಾದ ಗುಣಗಳು ಪ್ರಕಟವಾಗುತ್ತಿದ್ದವು. ನೀವು ಸ ನಾಲ್ಕಾರ್ ಕಂಪೆನಿಗಳು, ಸ್ವದೇಶಿ ಕಂಪೆನಿಗಳು ಆವರುಗಳನ್ನು ಬಯಸುತ್ತೀರಿ. ಲಾಭವಿಲ್ಲದೆ ಯಾವ ಕೆಲಸವನ್ನು ಯಾವ ಕಂಪೆನಿಯೂ ಮಾಡುತ್ತಿರುವುದಿಲ್ಲ. ತಮ್ಮ ಮಗುವು ಕಪಿಯಾಗಿದ್ದರೂ ಅದನ್ನು ಮುದ್ದಿಸುವಷ್ಟು ಪರರ ಮಗುವನ್ನು ಯಾವ ತಾಯಿಯೂ ಪ್ರೀತಿಸುವುದಿಲ್ಲ. ಆದುದರಿಂದ ಭಾರತೀಯರು ತಮ್ಮಿಂದಾಗುವ ಲಾಭವು ಭಾರತದಲ್ಲೇ ನಿಲ್ಲುವಂತೆ ಮಾಡುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವು.

ಮುತ್ತಣ್ಣನವರೇ, ದೇಶಬಂಧುಗಳನ್ನು ಮರಳುಗೊಳಿಸಿ ತಮ್ಮ ಬಲೆಗೆ ಸಿಕ್ಕಿಸಬೇಡಿ. ನಮ್ಮ ಹಳ್ಳಿಯ ಬಡ ರೈತರ ಸ್ಥಿತಿ ಏನು ಮಾಡಿದವರು 100ಕ್ಕೆ 90 ಜನರು ತಮ್ಮ ಕಂಠವನ್ನು ಕಟ್ಟಲಾರದೆ ತಮ್ಮ ಪೋಲಿಸಿಯನ್ನು ಕಳೆದುಕೊಂಡಿರುವುದನ್ನು ತಿಳಿದೂ ನೀವು ಜನರನ್ನು ಮರುಳುಮಾಡುತ್ತೀರಿ. ತಮ್ಮ ಜೀವನವನ್ನು ಏನು ಮಾಡುವುದಾದರೂ ಯಾತಕ್ಕೆ? ತಮ್ಮ ಮರಣಾನಂತರ [illegible] ಕ್ಕನ್ನು ಪೂರೈಸಲಿಕ್ಕಾಗಿ. ಆ ಕೆಲಸವನ್ನು ನೋಡಿಕೊಳ್ಳಲು ಶ್ರೀರಾಮಚಂದ್ರನಿದ್ದಾನೆ. ಜನರಿಗೆ ಯಾವ ಹೆದರಿಕೆಯೂ ಇಲ್ಲ. ಆತನು ತನ್ನನ್ನು ನಂಬಿದವರನ್ನು ಕೈಬಿಡುವವನಲ್ಲ. ಬೇಡಿದನ್ನು ನೀಡುವನು.

'ಮನಸೋಂದವ'ರ ಪರಿಚಯವನ್ನು ತಿಳಿಯಲು ಅಪೇಕ್ಷಿಸುತ್ತೇನೆ. ಹಾಗೆಯೇ ದೇಶದಲ್ಲಿ ಮೋಸ ಮಾಡಿ ಹೊಂಗಿ ಹೋಗಿ ಪುನಃ ಬಂದು ವ್ಯಾಪಾರ ಮಾಡುವವರ ಹೆಸರನ್ನು ಪ್ರಕಟಿಸಿದ್ದರೆ ಅಂಥವರ ವಿಷಯದಲ್ಲಿ ನಾವುಗಳೆಲ್ಲರೂ ಎಚ್ಚರವಾಗಿರುತ್ತೇವೆ. 'ಮನಸೋಂದವ'ರು ಅನೇಕರಿರುವುದರಿಂದ ಅವರ ಹೆಸರುಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಲು ಸಾಧ್ಯವಿಲ್ಲ. ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಅಥವಾ ಖುದ್ದಾಗಿ ಕಂಡಾಗ ಸಾಯಂಕಾಲ ಬಂದರೆ ತಿಳಿಸುತ್ತೇನೆ.

ರಾಮಮಂದಿರ, ಗೋಣಿಕೊಪ್ಪಲು. — ರಾಮದಾಸ್.

ಡಿಸ್ಟ್ರಿಕ್ಟ್ ಬೋರ್ಡಿಗೆ ಅರ್ಜಿ.

ಅಯ್ಯಾ,

ಕೊಡಗ ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟ್ ಮತ್ತು ಕಮಿಟಿಯವರಲ್ಲಿ ಪೊನ್ನಂಪೇಟೆನಾಡ ದೇವನೂರು ಮತ್ತು ಮಲ್ಲೂರು ಗ್ರಾಮಸ್ಥರು ಸೇರಿ ಬರಕೊಂಡ ಅರ್ಜಿಯು ಈ ಕೆಳಗಿನ ಸಕಲರಿಗೂ ವಾಚಕರ ತಿಳುವಳಿಕೆ ಬಗ್ಗೆ ಪ್ರಕಟಿಸಬೇಕಾಗಿ ಕೋರುತ್ತೇನೆ.

ನಮ್ಮ ಗ್ರಾಮಕ್ಕೆ ಗಾಡಿ ರಸ್ತೆಯು ಇಲ್ಲದ ಕಾರಣ ನಾವು ಗ್ರಾಮಸ್ಥರು ಹಾತ್ ಲಾಗ್ಯಾಡಿನಿಂದ ತಿತಿಮತಿಯಿಂದ ಆನೆ ಬಾಣೆಗೆ ಹೋಗುವ ರಸ್ತೆಯ 8ನೇ ಮೈಲು 5ನೇ ಫರ್ಲಾಂಗಿನಿಂದ ಎಡ ಭಾಗಕ್ಕೆ ಹೋಗುವ ಅಂದರೆ ದೇವನೂರು ಮತ್ತು ಲಕ್ಷ್ಮಣ ತೀರ್ಥ ಹೊಳೆ ಹಾದು, ಮಲ್ಲೂರಿಗಾಗಿ ಕಾವರ್ಗೀ ಫಾರೆಸ್ಟ್ ದಾಟಿ, ಮೂರು ಕಲ್ಲು ಬಲ್ಲಿರೋಡಿಗೆ ಹೋಗಿ ಸೇರುವ ಒಂದು ಒಳ ರಸ್ತೆ ಮಾಡಿದ್ದೇವೆ. ಈ ರಸ್ತೆಯು ಮೇಲ್ಕಂಡ ಆನೆ ಬಾಣೆ ರಸ್ತೆಯಿಂದ ಅಂದಾಜು 6 ಮೈಲು ದೂರ ಇರಬಹುದು. ಈ ರಸ್ತೆಯನ್ನು ಸಾಧಾರಣ 15 ವರ್ಷದಿಂದ ನಾವುಗಳೇ ಅಂದರೆ ಗ್ರಾಮಸ್ಥರೇ ತಕ್ಕ ಮಟ್ಟಿಗೆ ರಿಪೇರಿ ಮಾಡುತ್ತಾ ಬಂದೆವು. ಬಾಗಾಯತಿನಿಂದ ಮೈಸೂರಿಗೂ ಮತ್ತು ಪೊನ್ನಂಪೇಟೆ—ಗೋಣಿಕೊಪ್ಪಲಿಗೂ ಭತ್ತ ಮತ್ತು ಕಿತ್ತಳೆ ಹಣ್ಣು ವಗೈರೆ ಸಾಮಾನುಗಳನ್ನು ಸಾಗಿಸುತ್ತಾ ಬಂದೆವು. ಆದರೂ ರಸ್ತೆಯು ತಕ್ಕಷ್ಟು ರಿಪೇರಿ ಸಾಲದೆ ಮತ್ತು ಈ ವರ್ಷ ಮಳೆಯು ಬಹಳ ಜೋರಾದ್ದರಿಂದ ಕೊರಕಲು ಬಿದ್ದು ರಸ್ತೆಯು ಬಹಳ ಹೀನಸ್ಥಿತಿಯಿಂದ ವ್ಯಾಪಾರಗಳು ಭತ್ತ ವಗೈರೆಗೆ ಬಹಳ ಧಾರಣೆ ಕಮ್ಮಿಯಾಗಿ ಕೇಳುವದರಿಂದ ಈ ರಸ್ತೆಯನ್ನು ಡಿಸ್ಟ್ರಿಕ್ಟ್ ಬೋರ್ಡಿಗೆ ತಾವುಗಳೇ ಸೇರಿಸಿಕೊಂಡು ರಸ್ತೆ ರಿಪೇರಿಗೆ ಬೇಕಾದ ರೂಪಾಯಿಯನ್ನು ಮಂಜೂರು ಮಾಡಿ ಕೊಡಬೇಕಾಗಿ ಪ್ರಾರ್ಥಿಸುತ್ತೇವೆ.

ಈ ರಸ್ತೆ ಹಾದು ಹೋಗುವ ಲಕ್ಷ್ಮಣತೀರ್ಥ ಹೊಳೆಗೆ ಒಂದು ಸೇತುವೆಕ್ಕೆ ಇರುವ ರೂಪಾಯಿಯನ್ನು ಮೇಲ್ಕಂಡ ರಸ್ತೆಯೊಡನೆ ಸೇರಿಸಿ ಮಂಜೂರು ಮಾಡಿಸಿಕೊಡಬೇಕಾಗಿ ಪ್ರಾರ್ಥನೆ. ಈ ಹೊಳೆಯ ಎರಡು ಭಾಗಗಳಲ್ಲಿ ಭೂಮಿ ಇರುವವರು ಬಹಳ ಜನರಿರುತ್ತಾರೆ. ಅವರಿಗೆ ದಿವಸವೂ ಹೊಳೆಯ ಎರಡು ಭಾಗಕ್ಕೆ ಹೋಗಲು ತುಂಬಾ ತೊಂದರೆಯಾಗುವದಲ್ಲದೆ ಪಟೇಲರು, ಕಾಯಿಲಸ್ಥರು ಮತ್ತು ಪೇಟೆ ವಗೈರೆಗೆ ಹೋಗಬೇಕಾದವರಿಗೆ ದೊಡ್ಡ ಕಷ್ಟ. ನಿಟ್ಟೂರು ಗ್ರಾಮದ ಮಧ್ಯದಲ್ಲಿರುವ ತೋಡು ತುಂಬಿಕೊಂಡು ಫಾರೆಸ್ಟಿಗಾಗಿ ಗೋಣಿಕೊಪ್ಪಲಿಗೆ 7—8 ಮೈಲು ಸುತ್ತಿಕೊಂಡು ಮಳೆಗಾಲ 3 ತಿಂಗಳಲ್ಲಿ ಹೋಗಬೇಕಾಗಿ 2 ಯಾ 3 ದಿವಸ ಪ್ರಯಾಣವಾಗುವದರಿಂದ ಆಪತ್ಕಾಲದಲ್ಲಿ ಪೇಟೆಗೆ ಹೋಗಲು ಮತ್ತು ಕಾಯಿಲಸ್ಥರನ್ನು ಒಡನೆ ಆಸ್ಪತ್ರೆಗೆ ಸಾಗಿಸಲು, ಅಥವ ಔಷಧ ತರಲು ಬಹಳ ತಡವಾಗುವದರಿಂದ ಮೇಲ್ಕಂಡ ಹೊಳೆಗೆ ಸೇತುವೆಗೆ ರೂಪಾಯಿಯನ್ನು ಒಡನೆ ಮಂಜೂರು ಮಾಡಿ ಕೊಡಬೇಕಾಗಿ ಕೋರುತ್ತೇವೆ. ಮೇಲೆ ಕಾಣಿಸಿದ ಗ್ರಾಮಸ್ಥರಿಗೆ ಆಸ್ಪತ್ರೆಯು 17 ಮೈಲು ದೂರದಲ್ಲಿರುವದರಿಂದಲೂ, ಸ್ಕೂಲಿಗೆ ಮಕ್ಕಳು ಹೋಗಲು ಹೊಳೆಯು ಅಡ್ಡಲಾಗಿರುವದರಿಂದಲೂ, ಗ್ರಾಮದೊಳಗೆ ರಸ್ತೆಯಂತು ಮೇಲೆ ಕಾಣಿಸಿದಂತೆ ಇರುವದರಿಂದಲೂ ಡಿಸ್ಟ್ರಿಕ್ಟ್ ಬೋರ್ಡಿನಿಂದ ಈ ಗ್ರಾಮಸ್ಥರಿಗೆ ಯಾವದೊಂದು ಸಹಾಯವಿಲ್ಲವೆಂದರೆ ತಪ್ಪಾಗಲಾರದು. ಡಿಸ್ಟ್ರಿಕ್ಟ್ ಬೋರ್ಡಿನವರು ನಮ್ಮ ಈ ಹವಾಲ್ ಅರ್ಜಿಯನ್ನು ಘನಚಿತ್ತಕ್ಕೆ ತೆಗೆದುಕೊಂಡು, ದೇಶದ ಅನಿವಾರ್ಯದಂತಿರುವ ರೈತರ ದವಸ ವಗೈರೆಗೆ ಒಳ್ಳೆ ಬೆಲೆ ಸಿಕ್ಕುವಂತೆ ಮಾಡಿಕೊಟ್ಟು, ಗರೀಬ ರೈತರನ್ನು ಉದ್ಧರಿಸಬೇಕಾಗಿ ಪ್ರಾರ್ಥನೆ. ಈ ಅರ್ಜಿಗೆ 36 ಜನರು ಸಹಿ ಮಾಡಿರುವರು.

ಅ. ಸು. ಪೊನ್ನಪ್ಪ.

೫೬ ವರುಷಗಳ ಅನುಭವ ಸಿದ್ಧ ಔಷಧಗಳು.

೧. ಧಾತುಪುಷ್ಟಿ ಲೇಹ—ಬಾಲ್ಯತನದ ದುರ್ಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ಥದ ಬಾಧೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಉರಿಯುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು.

ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7—0—0.

೨. ಅಶೋಕಾರಿಷ್ಟ ಮತ್ತು ಮಾತ್ರೆ—ಹೆಂಗಸರ ಮುಟ್ಟಿನ ದೋಷಗಳು, ಮುಟ್ಟು ಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾನಹೀನತೆ, ಮೂರ್ಛೆ, ಮಲಬದ್ಧತೆ, ಚಳಿಜ್ವರ, ರಕ್ತಹೀನತೆ, ಕೈಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಗುಣಪಡಿಸುವುದು. ಬಾಟ್ಲಿ 1ರ 1—4—0; 1 ಡಬ್ಬಿ ಮಾತ್ರೆಗೆ 1—0—0; 3 ಬಾಟ್ಲಿ ಔಷಧಕ್ಕೂ, 3 ಡಬ್ಬಿ ಮಾತ್ರೆಗೂ 6—4—0.

೩. ಚಂದನಾಸವ ಮತ್ತು ಮಾತ್ರೆಗಳು—ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರವು ಆಗಾಗ್ಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳನ್ನೂ, ಬಾಯಾರಿಕೆ, ಮಲಬದ್ಧತೆ, ಸ್ವಪ್ನಾವಸ್ಥೆ ಇವುಗಳ ಮೇಲೆ ಸಿದ್ಧೌಷಧ. ಬಾಟ್ಲಿ 1ರ 1-2-0; 1ಡಬ್ಬಿ ಮಾತ್ರೆಗೆ 1-6-0. 2 ಬಾಟ್ಲಿ ಔಷಧಕ್ಕೂ, 2 ಡಬ್ಬಿ ಮಾತ್ರೆಗೂ 4—12—0.

೪. ಬಾಲಾಗ್ರಹ ಗುಟಿಕೆ—ಬಾಲಾಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರು ಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧ. ಬಾಟ್ಲಿ ಒಂದಕ್ಕೆ 0—10—0. 3ಕ್ಕೆ 1—12—0.

೫. ಸುಖಭೇದಿ ಗುಟಿಕೆ—ಆಯಾಸವನ್ನುಂಟುಮಾಡದ ಸುಖವಿರೇಚಕ. ಬಾಟ್ಲಿ 1ರ 0—10—0. 3ಕ್ಕೆ 1—12—0.

೬. ಸ್ಪಂದನ ವಟಿ—ಜ್ವರ ಸಿಂಹ. ಜ್ವರಗಡ್ಡೆ ಕರಗಿ ಮಲವಿಸರ್ಜನೆ ಆಗುವದು. ಬಾಟ್ಲಿ 1ಕ್ಕೆ 1—0—0;

೭. ಮಲೇರಿಯಾ ನಿವಾರಿಣಿ—ಎಲ್ಲಾ ನಮೂನೆಯ ಜ್ವರಕ್ಕೆ ಬಾಟ್ಲಿಗೆ 1—8—0.

೮. ಮಹಾ ಮದನಕಾಮೇಶ್ವರಿ ಲೇಹ ಡಬ್ಬಿ 1ಕ್ಕೆ 2—0—0.

೯. ದಂತಕಾಂತಿ ಚೂರ್ಣ—ಡಬ್ಬಿ 1ರ 3 ಆಣೆ. 6 ಡಬ್ಬಿಗಳಿಗೆ 1—2—0.

ಡಾ: ಗಣಪಯ್ಯ ಎಂಡ್ ಸನ್ಸ್,
ಆಯುರ್ವೇದಿಕ್ ಫಿಸಿಸಿಯನ್ಸ್,
52—3 ರಥಬೀದಿ, ಮಂಗಳೂರು.

---

3 ರೂಪಾಯಿಗೆ 9೦ ಇನಾಮುಗಳೊಡನೆ 4 ವಾಚುಗಳು.



"ಅಟೊರೋಸ್" ಎಂಬುದು ಸುಗಂಧಗಳಲ್ಲೆಲ್ಲಾ ಪ್ರಖ್ಯಾತಹೊಂದಿದ್ದು, ಹೂಗಳಿಂದ ತಯಾರಿಸಲ್ಪಟ್ಟು, ಮೂರು ದಿನಗಳ ವರೆಗೂ ಪರಿಮಳವನ್ನು ಬೀರುವುದು. ಒಂದೇ ಸಲ 6 ಬಾಟ್ಲಿ ತರಿಸಿದವರಿಗೆ ರೂ. 3 ಮಾತ್ರ, ಮತ್ತು 1 ರಿಸ್ಟ್ ವಾಚ್, 1 ರೈಲ್ವೆ ವಾಚ್, 1 ಪಾಕೆಟ್ ವಾಚ್, 1 'ಜ' ಟೈಂಪೀಸ್. 5 ವರ್ಷದ ಖಾತರಿ. ಮತ್ತು 14 ಕೇರೆಟ್ ಬಂಗಾರದ ನಿಬ್ಬಿನ ಫೌಂಟನ್ ಪೆನ್ ಮತ್ತು 90 ಇನ್ನಿತರ ಇನಾಮುಗಳು ಮುಫತಿಯಾಗಿ ಕೊಡಲ್ಪಡುವವು. ಪೋಸ್ಟೇಜು 10 ಆಣೆ.

NATIONAL WATCH STORE,
1· A· Raja Narain Biswan Lane,
(4—3) P. O. Bagh Bazar, Calcutta.

ಇಂಡಿಯಾ ಎಕ್ವಿಟೇಬಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

(ಸ್ಥಾಪಿಸಲ್ಪಟ್ಟದ್ದು 1908.)

ಪೋಲಿಸಿಗಳು ಕಳಕೊಳ್ಳುವಂಥವುಗಳಲ್ಲ.

ಯಾವ ತಡೆಯೂ ಇಲ್ಲದೆ ಪ್ರತಿ ವರ್ಷವೂ ಬೋನಸ್ಸು.

ಹಕ್ಕು ಬಾಧ್ಯಸ್ಥರಿಗೆ ಸರಿಯಾಗಿ ಹಣ ಕೊಡಲ್ಪಡುವದು, ಇಲ್ಲದಿದ್ದರೆ ಬಡ್ಡಿಯು ದೊರಕುವುದು.

ಹೆಡ್ ಆಫೀಸು:—

102· ಕ್ಲೈವ್ ಸ್ಟ್ರೀಟ್, ಕಲ್ಕತ್ತಾ.

I. E., . P. S. 12—5

GOVERNMENT SOAP FACTORY, Bangalore.

ವಿಶ್ವಾಸಾರ್ಹತೆ.

ಅತ್ಯುತ್ತಮವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ ಯಾವ ಗುಣಗಳು ಅವಶ್ಯಕವೆಂದು ನೀವು ತಿಳಿದಿರುತ್ತೀರೋ ಆ ಗುಣಗಳೆಲ್ಲಾ ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.

ನಾವು ಶಿಫಾರಸು ಮಾಡುತ್ತೇವೆ.

ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
52—5 ಬೆಂಗಳೂರು.

ಇತರ ಸೇವಾಫಲವು ದೊರಕದಿರಬಹುದು. ಅತೀತನವು. ಹಾಗಾದರೆ, ನನ್ನ ವಿಷಯದಲ್ಲಿ ತನ್ನ ಪರಿಚಿತ ಮತ್ತು ಅಪರಿಚಿತ ಮಿತ್ರರು, ಕ್ಷೀರದಾಯಕವಾದ ನನ್ನ ಈ ಸಮಯದಲ್ಲಿ ತನ್ನ ಸಹಾನುಭೂತಿಯನ್ನು ತೋರ್ಪಡಿಸುವಲ್ಲಿ, ಅದು ನನ್ನ ಅಸ್ಪೃಶ್ಯತೆಯ ಮರ್ಮವೇನೆಂದು ತಿಳಿಯುವಂತಾಗಿ, ಆ ನನ್ನ ಅಸ್ಪೃಶ್ಯತೆಯ ಪರವಾಗಿ ಹಿಂದೂ ಜಗತ್ತಿನ ಅಭಿಪ್ರಾಯವನ್ನು ಸಂಗ್ರಹಿಸಲೆಂದು ನಾನು ಅಪೇಕ್ಷಿಸುತ್ತೇನೆ. ಇದು ಜಗತ್ತಿನ ಒಂದು ಮೂಲೆಗೆ ಮಾತ್ರ ಅನ್ವಯಿಸುವಂತೆ ತೋರಿತಗಿ ಕಂಡರೂ ಇದು ಇಡೀ ಜಗತ್ತನ್ನೇ ವ್ಯಾಪಿಸುವ ಉದ್ದೇಶವುಳ್ಳದ್ದು. ನನ್ನನ್ನು ಮೂಢಭಕ್ತಿಯಿಂದ ಹಿಂಬಾಲಿಸಿದವರು ಕೂಡ, ನನ್ನ ಜೀವಮಾನದ ಧ್ಯೇಯದೊಂದು ಕಾರ್ಯವಾದುದೂ ಯಾವನೊಬ್ಬ ವ್ಯಕ್ತಿಯನ್ನಾಗಲಿ, ಜನಾಂಗವನ್ನಾಗಲೀ ನೋಯಿಸತಕ್ಕುದಲ್ಲವೆಂದು ಬಲ್ಲರು. ನನ್ನ ರಾಷ್ಟ್ರೀಯತ್ವವೂ, ಸ್ವಭಾವವೂ ಬೇರೆ ಬೇರೆಯಾಗಿರದೆ ಒಂದೇಯಾಗಿರುವುದರಿಂದ, ಅವು ಎಲ್ಲಾ ಜೀವಗಳ ಹಿತವನ್ನೂ ಸಾಧಿಸುವವುಗಳಾಗಿಯೇ ಇವೆ.

ಮಡಿಕೇರಿ ಸಾರ್ವಜನಿಕ ಸಭೆ.

(2ನೇ ಪುಟದಿಂದ ಮುಂದುವರಿದದ್ದು)

ಮೆ. ಚೇಂದಿರ ತಮ್ಮಯ್ಯನವರು ಠರಾವನ್ನು ಅನುಮೋದಿಸುತ್ತಾ, ಸಂಸ್ಕೃತದಲ್ಲಿಯೂ, ಇಂಗ್ಲಿಷಿನಲ್ಲಿಯೂ ಶಿಷ್ಟೀಕರನ್ನೂ ಪದ್ಯಗಳನ್ನೂ ಹೇಳಿ, ವರ್ಣಭೇದವು ಗುಣಸ್ವಭಾವಗಳನ್ನನುಸರಿಸಿರಬೇಕಲ್ಲದೆ, ಹುಟ್ಟಿನಿಂದಲ್ಲ ಎಂದು ಸಂಯುಕ್ತವೆಂದು ಮುಂತಾಗಿ ಹೇಳಿದರು. ರಾ. ಸಾ. ಕೋಡಂದ ಐಮ್ಮಣ್ಣನವರು, 'ಪಂಚಮರು ಮತ್ತು ದೀಯಯೂ ಕೈಸ್ತ ಮತವನ್ನವಲಂಬಿಸಿದ ಕೂಡಲೆ ಅವರೊಂದಿಗೆ ನಾವುಸಮ್ಮಿಳಿತರಾಗುತ್ತೇವೆ; ಆದರೆ ಪಂಚಮರನ್ನು ದೂರವಿಡುತ್ತೇವೆ. ಈ ದೊಡ್ಡ ಅನ್ಯಾಯವನ್ನು ಬಿಡಿಸಬೇಕಾಗಿಯೂ ಹೋಗಲಾಡಿಸಬೇಕೆಂಬುದು. 'ಅಸ್ಪೃಶ್ಯತೆಯು ಕೊಡಗಿನಲ್ಲಿ ಅಷ್ಟೊಂದು ಕಠಿಣತರದಲ್ಲಿ ಇಲ್ಲ. ಹರಿಜನರು ತಮ್ಮ ದುಸ್ಸಂಗತಿಗಳನ್ನು ಬಿಟ್ಟು ಶುಚಿಯಾಗಿ ಬಂದ ಪಕ್ಷ ಅವರೊಂದಿಗೆ ಮಿಳಿತವಾಗಲು ಕಷ್ಟವಿಲ್ಲ. ಅವರ ಅಜ್ಞಾನವನ್ನು ಹೋಗಲಾಡಿಸಿ ನಮ್ಮೊಂದಿಗೆ ಸೇರಿಸಿಕೊಳ್ಳಬೇಕಾದದ್ದು ನಮ್ಮೆಲ್ಲರ ಕರ್ತವ್ಯವಾಗಿದೆ. ಹಾಗೆ ಮಾಡಲು ಇದೀಗ ತಕ್ಕ ಸಮಯವಾಗಿದೆ'ಯೆಂದು ಮುಂತಾಗಿ ಮೆ. ಮೇರಿಯಂಡ ಮಾದಪ್ಪನವರು ಭಾಷಣ ಮಾಡಿದರು.

ಮೆ. ನರವಂಡ ಕುಟ್ಟಪ್ಪನವರು ಹೇಳಿದ್ದೇನೆಂದರೆ—'ಅಸ್ಪೃಶ್ಯರನ್ನು ದೇವಸ್ಥಾನಗಳೊಳಗೆ ಬಿಡದೆ ಇದ್ದರೆ ದೇವರು ವಿಗ್ರಹದಲ್ಲಿ ಇರಲಿಕ್ಕಿಲ್ಲ, ಪಂಚಮರಲ್ಲಿಗೆ ಹೊರಟು ಹೋದಾರು ಎಂತ ಮಹಾತ್ಮ ಗಾಂಧಿಯವರು ಹೇಳಿದ್ದಾರೆ. ಸರ್ವರೂ ದೇವರ ಪುತ್ರರು, ಸರ್ವರಲ್ಲಿಯೂ ಪರಮಾತ್ಮನ ಅಂಶವೇ ಇರುವುದು. ಬರೇ ಬಾಹ್ಯಶುಚಿತ್ವವನ್ನು ನೋಡಿದರೆ ಸಾಲದು. ಅಂತರಂಗದ ಶುಚಿತ್ವವನ್ನು ನೋಡಬೇಕು. ಕೋಟಿ ಮನೆಯನ್ನು ರಾಮಕೃಷ್ಣ ಪರಮಹಂಸರು ತನ್ನ ತಲೆ ಕೂದಲಿನಿಂದ ಶುಚಿಮಾಡಿದರು. ಹರಿಜನರ ಉದ್ಧಾರಕ್ಕಾಗಿ ಸ್ವಾಮಿ ವಿವೇಕಾನಂದರು ತಾನು ಜನ್ಮವೆತ್ತುವೆನು ಎಂತ ಹೇಳಿದ್ದರು. ಮಹಾತ್ಮ ಗಾಂಧಿಯವರ ಉದಾಹರಣೆಯನ್ನು ಅನುಸರಿಸಬೇಕು. ವೇದದಲ್ಲಿ ಮತ್ತು ಗೀತೆಯಲ್ಲಿ ಭೇದ ಹೇಳಿಲ್ಲ. ದೇವರ ಪ್ರಾರ್ಥನೆಗೆ ಯಾರಿಗೂ ಅಡ್ಡಿ ಇರಬಾರದು. ಇಷ್ಟು ಕಾಲ ಇವರಿಗೆ ತೋರಿಸಿದ ವರ್ತನೆಯ ಪಾಪಕ್ಕಾಗಿ ಮಹಾತ್ಮ ಗಾಂಧಿಯವರು ಪ್ರಾಯಶ್ಚಿತ್ತ ಮಾಡಲು ಹೊರಟಿದ್ದರು. ಆದ್ದರಿಂದ ಈ ಹರಿಜನರ ಉದ್ಧಾರಕ್ಕಾಗಿ ಎಲ್ಲರೂ ಪ್ರಯತ್ನಿಸಬೇಕು.

4 ನೇ ಫಾರಮಿನ ವರೆಗೆ ಓದಿದ ಹರಿಜನ ಯುವಕನಾದ ಮೆ. ಬೆಳ್ಳಿಯವರು, 'ನಾನು ಅಸ್ಪೃಶ್ಯ ವರ್ಗಕ್ಕೆ ಸೇರಿದವನೆಂದು ನನಗೆ ಉದ್ಯೋಗ ದೊರೆಯಲು ಹಲವು ತರದ ಅಡಚಣೆಗಳುಂಟಾದವೆಂದೂ, ಮೇಲ್ಜಾತಿಯವರು ಮಹಾತ್ಮರ ಅಪೇಕ್ಷೆಯಂತೆ ಇನ್ನು ಮುಂದಕ್ಕಾದರೂ ತನ್ನ ವರ್ಗದವರನ್ನು ದೂರವಿಡಬಾರದೆಂತಲೂ, ತನ್ನ ಜಾತಿಯವರು ನಿರ್ಮಲತ್ವವನ್ನು ಅಭ್ಯಾಸಿಸುವಂತೆ ಮಾಡಲು ತಾನು ಪ್ರಯತ್ನಿಸುತ್ತೇನೆಂತಲೂ ನಿವೇದಿಸಿದರು. ಈಗ ಸೆಂಟ್ರಲ್ ಹೈಸ್ಕೂಲಿನಲ್ಲಿ ಸ್ಕೂಲ್ ಫೈನಲ್ ಕ್ಲಾಸಿನಲ್ಲಿ ಓದುತ್ತಿರುವ ಹರಿಜನ ವಿದ್ಯಾರ್ಥಿಯಾದ ಮೆ. ಜಟ್ಟಪ್ಪನವರು ತಮ್ಮ ಚಿಕ್ಕ ಭಾಷಣದಲ್ಲಿ, ಮೇಲ್ಜಾತಿ ಹಿಂದೂಗಳು ತನ್ನ ಜಾತಿಯವರನ್ನು ಮೇಲೆಕ್ಕೆತ್ತಲು ಮಾಡುತ್ತಿರುವ ಪ್ರಯತ್ನಕ್ಕೆ ಅವರನ್ನು ವಂದಿಸಿದಲ್ಲದೆ, 'ಹಿಂದೂ ಸಮಾಜದ ಹಲವು ಮಹನೀಯರು ಮಾಡಿದ ಪ್ರಯತ್ನದಿಂದ ತನ್ನ ಜಾತಿಯವರಲ್ಲಿ ಹಲವರು ಸತ್ತ ದನಗಳನ್ನು ತಿನ್ನುವುದನ್ನು ಮತ್ತು ಕೆಲವರು ಮದ್ಯಪಾನವನ್ನು ಬಿಟ್ಟಿರುವರು. ಇಂದಿನ ಕಾಲದಿಂದ ಮುಂದಕ್ಕೂ ಪ್ರೋತ್ಸಾಹವನ್ನಿತ್ತರೆ ತನ್ನ ಜಾತಿಯವರೆಲ್ಲರೂ ಅನಿಷ್ಟ ಪದ್ಧತಿಗಳನ್ನು ಬಿಟ್ಟುಬಿಡುವರು. ಉತ್ತಮವರ್ಗದವರು ಸಹಾಯ ಮಾಡಬೇಕು' ಎಂದು ಮುಂತಾಗಿ ಹೇಳಿದರು. ಈ ಪರಿಗಳ ಭಾಷಣಗಳಾದ ನಂತರ ಅಧ್ಯಕ್ಷರು ಠರಾವನ್ನು ಓಟಿಗೆ ಹಾಕಿದರು. ಒಮ್ಮತದಿಂದ ಪಾಸಾಯಿತು.

3. "ಅಸ್ಪೃಶ್ಯ ಭಾವನೆಯನ್ನು ಹೋಗಲಾಡಿಸಲಿಕ್ಕಾಗಿ ಹಿಂದೂಗಳೇ ಆಗಿರುವ ಅಸ್ಪೃಶ್ಯರೆನಿಸಿಕೊಂಡವರಿಗೆ ಜನಾಂಗದ ದೊರಕುವಂತೆ ದೇವಸ್ಥಾನಗಳಿಗೆ ಪ್ರವೇಶಕ್ಕೆ ಬಿಡಲು ಈ ಸಭೆಯು ಒಪ್ಪುತ್ತದೆ. ಮತ್ತು ದೇಶದ ಎಲ್ಲಾ ದೇವಸ್ಥಾನಗಳನ್ನು ಬಿಡಬೇಕೆಂತ ಈ ಸಭೆಯು ಕೇಳಿಕೊಳ್ಳುತ್ತದೆ."

ಈ ಠರಾವನ್ನು ಸೂಚಿಸುವಾಗ ಮೆ. ಸಿ. ಯಸ್. ವೆಂಕಪ್ಪಯ್ಯನವರು ಹೇಳಿದ್ದೇನೆಂದರೆ—'ಈ ಠರಾವಿನಲ್ಲಿ ಈ ಸಭೆಯು ಹರಿಜನರಿಗೆ ದೇವಸ್ಥಾನಗಳಿಗೆ ಪ್ರವೇಶಕ್ಕೆ ಅನುಕೂಲಿಸಿಕೊಡುತ್ತದೆ ಎಂತ ಇರುವುದರಿಂದ ಎಲ್ಲರೂ ತಮ್ಮ ಮನಸ್ಸನ್ನು ಚೆನ್ನಾಗಿ ಅಜಮಾಯಿಸಿ ಒಪ್ಪಿಗೆಕೊಡಬೇಕಾಗಿದೆ. ಈ ವಿಷಯವಾಗಿ ಮಡಿಕೇರಿಯ ಜನರಲ್ಲಿ ಮಹಾಜನವಾಗ ಬಲವಾದ ವಿರೋಧ ಕಂಡುಬರಲಿಲ್ಲ. ಸಂಯುಕ್ತವಾಗಿ ಕೂಡಿ ಫಲಸಾರ ನೂರಾರು ಜನರನ್ನು ನವರು ಸಹ ದೇವಸ್ಥಾನಗಳ ಪ್ರವೇಶಕ್ಕೆ ಒಪ್ಪಿಗೆಕೊಟ್ಟಿರುತ್ತಾರೆ. ಮಡಿಕೇರಿ ಓಂಕಾರೇಶ್ವರ ದೇವಸ್ಥಾನದ ಹೆಬ್ಬಾಗಿಲು ವರೆಗೆ ಮುಸಲ್ಮಾನರು, ಕ್ರಿಸ್ತಿಯನರು ಬರುತ್ತಾರೆ ಆದರೂ ನಮ್ಮ ದೇವರುಗಳನ್ನೇ ಪೂಜಿಸುವ ಈ ನಮ್ಮ ಸಹೋದರರಾದ ಹರಿಜನರಿಗೆ ದೇವರ ದರ್ಶನಕ್ಕೆ ಬಿಡದಿರುವುದು ಶೋಚನೀಯ. ಹಿಂದೂಸ್ಥಾನದ ಇತರ ಅನೇಕ ಕಡೆಗಳಲ್ಲಿ ಮುಖ್ಯ ಮುಖ್ಯ ದೇವಾಲಯಗಳಿಗೆ ಹರಿಜನರನ್ನು ಬಿಡುತ್ತಲಿದ್ದಾರೆ. ಅಸ್ಪೃಶ್ಯಭಾವನೆಯು ಅತಿ ಕಠಿಣವಾಗಿರುವ ಮಲಬಾರಿನ ಕಲ್ಲಿಕೋಟೆ, ಕೊಲ್ಲಿ, ಪಾಲಕ್ಕಾಟು ಕೆಲವು ದೇವಸ್ಥಾನಗಳನ್ನು ಸಹ ಹರಿಜನರಿಗೆ ಬಿಟ್ಟಿರುವಾಗ ಅಸ್ಪೃಶ್ಯತೆ ಕಡಿಮೆ ಇರುವ ನಮ್ಮ ದೇಶದಲ್ಲಿ ದೇವಸ್ಥಾನಗಳಿಗೆ ಇವರನ್ನು ಬಿಡುವುದೇನೂ ಕಷ್ಟವಿಲ್ಲ. 22 ಕೋಟಿ ಹಿಂದುಗಳಲ್ಲಿ 6½ ಕೋಟಿ ಸಂಖ್ಯೆ ಇರುವ ಈ ಹರಿಜನರು ನಮ್ಮ ಸಮಾಜವನ್ನು ಬಿಟ್ಟು ಹೋಗದಂತೆ ಇವರಿಗೆ ಸಂಪೂರ್ಣ ಹಕ್ಕು ಕೊಡಬೇಕಾದದ್ದು ನಮ್ಮ ಕರ್ತವ್ಯವಾಗಿದೆ. ಆದ್ದರಿಂದ ಈ ಠರಾವಿಗೆ ಒಪ್ಪಿಗೆ ಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

ಮೆ. ಬಾಚಮಂಡ ಗಣಪತಿಯವರು ಅನುಮೋದಿಸಿ ಹೇಳಿದ್ದೇನೆಂದರೆ—'ಹಿಂದೂ ಸಮಾಜವು ಈ ಹರಿಜನರಿಗೆ ಮಾಡುತ್ತಿರುವ ಅನ್ಯಾಯವನ್ನು ನೋಡಿ ಮುಸಲ್ಮಾನ, ಕ್ರೈಸ್ತರು ಇವರಲ್ಲಿ ಅನೇಕರನ್ನು ತಮ್ಮ ಮತಕ್ಕೆ ಸೇರಿಸಿಕೊಂಡರು. ಆದರೂ ಹಿಂದೂ ಸಮಾಜಕ್ಕೆ ಎಚ್ಚರವಾಗಲಿಲ್ಲ. ಅನಂತರ ಕ್ರೈಸ್ತ ಸಹೋದರರು ಸಹ ಇವರನ್ನು ತಮ್ಮ ಮತಕ್ಕೆ ಸೇರಿಸಿಕೊಂಡರು. ಆದರೂ ಹಿಂದೂಗಳು ಕಣ್ಣು ತೆರೆಯಲಿಲ್ಲ. ರಾಮಕೃಷ್ಣ ಪರಮಹಂಸರಂಥ ವೇದಾಂತಿಗಳು ಅಸ್ಪೃಶ್ಯರ ಮನೆಗಳನ್ನು ತಮ್ಮ ಕೂದಲಿನಿಂದ ಒರಸಿ, ಇವರಿಗೂ ಬ್ರಾಹ್ಮಣನಾದ ತನಗೂ ವ್ಯತ್ಯಾಸವಿಲ್ಲವೆಂತ ತೋರಿಸಿದರು. ಈ ನಮ್ಮ ಸಹೋದರರನ್ನು ದೂರ ಮಾಡಬಾರದು. ಅಲ್ಲದೆ ಈ ಹಿಂದುಳಿದ ಜನರಿಂದಲೇ ಅತ್ಯಧಿಕ ಉಪಕಾರವಾಗಿರುವುದು. ಇವರು ತಮ್ಮ ರಕ್ತವನ್ನು ಬೆವರು ಮಾಡಿ ಭೂಮಿಗೆ ಚೆಲ್ಲಿ ಬಂದ ಉತ್ಪತ್ತಿಯಿಂದಲೇ ಇಂದು ದೊಡ್ಡ ಮನುಷ್ಯರಾಗಿರುವುದು. ಆದ್ದರಿಂದ ಇವರನ್ನು ದೂರ ಮಾಡಕೂಡದು ಎಂತ ವಿಸ್ತರಿಸಿ ಮಾತಾಡಿದರು.

ಮೆ. ಕಾಳಿಮಾಡ ಅಪ್ಪಯ್ಯನವರು—'ಅಸ್ಪೃಶ್ಯತೆಯ ಭಾವನೆಯನ್ನು ಇಟ್ಟುಕೊಂಡಿರುವುದು ಹಿಂದೂ ಸಮಾಜದ ಒಂದು ದೊಡ್ಡ ಭಾಗಕ್ಕೆ ಬಹಳ ಅನ್ಯಾಯವಾಗಿದೆ. ಹಿಂದೂ ಜೀವದ ಜೊತೆಗೆ ಈ ಭಾವನೆಯು ಇಲ್ಲ. ಇದನ್ನು ಮೊದಲಿಗೆ ಆರಂಭಿಸಿದವನು ಹಿಂದೂ ಧರ್ಮಕ್ಕೆ ಪೂರ್ತಿ ದ್ರೋಹ ಬಗೆದವನು. ಪವಿತ್ರವಾದ ದೇವರ ಭಕ್ತಿ ಇದ್ದವರು ಅಂತ್ಯಜರ ದುರಭ್ಯಾಸಗಳನ್ನು ಬಿಟ್ಟು ಶುಚಿಯಾಗಿದ್ದುಕೊಂಡು ದೇವರ ಧ್ಯಾನ ಮಾಡುತ್ತಾ, ಇರಬೇಕು. ದೇವಸ್ಥಾನಗಳಿಗೆ ಪವಿತ್ರರನ್ನು ಹೋಗಲು ಬಿಡಬೇಕು' ಎಂದು ಮಾತಾಡಿದರು.

ಮೆ. ಐಯ್ಯಮಲೆ ಸೋಮಣ್ಣನವರು ಮಾಡಿದ ಭಾಷಣದ ಸಾರಾಂಶವೇನೆಂದರೆ—'ಬ್ರಿಟಿಷ್ ಪ್ರಧಾನ ಮಂತ್ರಿಗಳು ಅಸ್ಪೃಶ್ಯರಿಗೆ ಕೊಟ್ಟ ಸುಧಾರಣೆಗೂ, ಮಹಾತ್ಮ ಗಾಂಧಿ ಯವರು ಇವರಿಗೆ ಕೊಡಿಸಿದ ಸುಧಾರಣೆಗೂ ಇರುವ ವ್ಯತ್ಯಾಸವನ್ನು ತಿಳಿಸಿ, ಬ್ರಿಟಿಷ್ ಮಂತ್ರಿಗಳು ಕೊಟ್ಟ ಸುಧಾರಣೆಯಲ್ಲಿ 6½ ಕೋಟಿ ಜನಸಂಖ್ಯೆಯುಳ್ಳ ಹರಿಜನರು ಅನೇಕ ಕಾಲದ ವರೆಗೆ ಹಿಂದೂಗಳಿಂದ ಬೇರೆಯೇ ಇದ್ದು ಅವಮಾನವನ್ನು ಹೊಂದಿ ದಾಡುವ ಸಂದರ್ಭವಿದೆ. ಅವರು ಹಿಂದೂ ಸಮಾಜದಿಂದ ಕ್ರಮೇಣ ಬೇರ್ಪಟ್ಟೇ ಹೋಗುವರು. ಆದರೆ ಮಹಾತ್ಮ ಗಾಂಧಿಯವರ ಸುಧಾರಣೆಯಲ್ಲಿ ಹರಿಜನರೆಲ್ಲರೂ ಹಿಂದೂ ಸಮಾಜದ ಒಂದು ಶಾಖೆಯಾಗಿದ್ದು, ಹಿಂದೂ ಸಮಾಜದಲ್ಲಿ ಅಡಗಿ ಹೋಗಲಿಕ್ಕಿರುವರು. ಬ್ರಿಟಿಷ್ ಪ್ರಧಾನ ಮಂತ್ರಿಗಳು ಹರಿಜನರನ್ನು ಪ್ರತ್ಯೇಕ ಮಾಡಲು ನಾವೇ ಕಾರಣರಾಗಿರುವೆವು. ನಾವು ಅನೇಕ ಕಾಲಗಳಿಂದ ಅವರನ್ನು ಪ್ರತ್ಯೇಕವಾಗಿಟ್ಟು, ನಮ್ಮ ದೇವಸ್ಥಾನಗಳಿಗೂ ಕೂಡ ಅವರನ್ನು ಬಿಡದೆ, ಅವರನ್ನು ಒಂದು ಪ್ರತ್ಯೇಕ ಜಾತಿಯಾಗಿ ಇಟ್ಟುಬಿಟ್ಟೆವು. ಹಿಂದೂ ಧರ್ಮದ ತತ್ವವನ್ನು ತಿಳಿಯದೆ ಹರಿಜನರನ್ನು ಹಿಂದುಳಿಸಿ ತಲಾ, ದನದ ಮಾಂಸ ತಿನ್ನುವರೆಂತಲೂ, ಮದ್ಯಪಾನ ಮಾಡುವರೆಂತಲೂ, ಶೀಲದ ಶುಚಿಯಿಲ್ಲದವರೆಂತಲೂ ಅವರನ್ನು ದೂರವಿಡುತ್ತಿರುವೆವು. ಈ ದುರ್ಗುಣಗಳು ವಿದ್ಯೆಯಿಂದಲೂ, ತಿಳುವಳಿಕೆಯಿಂದಲೂ ಬಿಡತಕ್ಕವುಗಳಾಗಿವೆ. ಇನ್ನೂ ವಿಲಂಬಿಸದೆ ಹರಿಜನರನ್ನು ದೇವಸ್ಥಾನಗಳಿಗೆ ಬಿಡುವುದು ಅವರನ್ನು ಉದ್ಧರಿಸಲು ಇರುವ ಸುಲಭವಾದ ಒಂದು ಮಾರ್ಗವೆಂದು ನಾನು ನಂಬುತ್ತೇನೆ. ಹಾಗೆ ನಾವು ಅವರನ್ನು ನಮ್ಮ ದೇವರ ಸ್ಥಳಗಳಿಗೆ ಬಿಟ್ಟರೆ ತನ್ನಷ್ಟಕ್ಕೆ ತಾನೇ ಹಿಂದೂ ಧರ್ಮ ಗುಣಗಳು ಬರುವವು. ಹರಿಜನರನ್ನು ದೇವಾಲಯಗಳಿಗೆ ಬಿಡದಿದ್ದರೆ, ದೇವರು ಅಲ್ಲಿ ಇರಲಿಕ್ಕಿಲ್ಲವೆಂದು ಮಹಾತ್ಮ ಗಾಂಧಿಯವರು ಹೇಳಿದ ಮಾತು ಸತ್ಯವಾಗಿಯೇ ಇದೆ. ಅದು ನಿಜವಾಗಿಯೂ ದೇವಾಲಯಗಳು ನಮ್ಮ ಸ್ವತ್ತು ಅಲ್ಲ. ನಾವು ಹರಿಜನರಿಗೆ ಬಿಡಲು ಇಷ್ಟಪಟ್ಟರೆ ದೇವರು ನಮ್ಮನ್ನು ಮನ್ನಿಸಿ ಇದ್ದರೆ ದೇವರು ನಮ್ಮನ್ನು ಕೈಬಿಟ್ಟು ಹರಿಜನರಲ್ಲೇ ವಾಸಿಸುವುದು ಖಂಡಿತ. ಆದ್ದರಿಂದ ಹರಿಜನರನ್ನು ಉದ್ಧರಿಸಲಿಕ್ಕಾಗಿಯೂ, ಮಹಾತ್ಮರ ತಪಸ್ಸನ್ನು ಕಾಪಾಡಲಿಕ್ಕಾಗಿಯೂ ನಾವು ಹರಿಜನರನ್ನು ನಮ್ಮ ದೇವಾಲಯಗಳಿಗೆ ಬಿಡಬೇಕೆಂದು ನಿಮ್ಮನ್ನು ಧೈರ್ಯದಿಂದ ಕೇಳಿಕೊಳ್ಳುತ್ತೇನೆ.

ಮೇಲಿನ ಸ್ವಾರಸ್ಯವಾದ ಭಾಷಣಗಳು ಮುಗಿದನಂತರ ಠರಾವನ್ನು ಓಟಿಗೆ ಹಾಕಲಾಗಿ ಸರ್ವಸಮ್ಮತದಿಂದ ಮಂಜೂರಾಯಿತು. ಮೆ. ಸಿ. ಯಸ್. ವೆಂಕಪ್ಪಯ್ಯನವರು ಅಧ್ಯಕ್ಷರಿಗೂ, ಅಧ್ಯಕ್ಷರು ಸಭಿಕರಿಗೂ ವಂದಿಸಿದನಂತರ ಸಭೆಯು 7½ ಗಂಟೆಗೆ ಜಯ ಘೋಷದಿಂದ ಬರಖಾಸ್ತಾಯಿತು.

ಮಹಾತ್ಮರ ವ್ರತ.

(ಮೇರೆ ಮೌಲಾ ಧುಲ—ಎಂಬಂತೆ)

ಗಾಂಧಿ ನಮ್ಮವಗೇ | ಜೀವದಾನಗೈವೇ || ಅ. ಪ. ||
ಭೀತಿ ತೊರೆದ್ವ ಜನರ ಸೇವೆ | ಖ್ಯಾತ ತಳೆಯು ದಾರಿ ತೋರ್ಪ |
ಜಾತಿ ಭೇದ ನಿರತರು | ಭೀತಿ ಇಲ್ಲದುಳಿಸಿ | ಸೇತು ಹಿಡಿದರು || ೧ ||
ಸೇವೆ ಪರರ ನಾಚಿಕೆಯ | ನಾವು ಗೈಯುತ್ತಿರುವುದು ಸೇವೆ ಗಾಂಧಿಯದು | ನಾವು ಗೈಯುತ್ತಿರೆ ಇವಾ ಸ್ವರ್ಗದೇವ || ೨ ||
ಅಸ್ಪೃಶ್ಯದಂಶ್ಯಕಾಲದಲ್ಲಿ | ಕಾಲುವನ್ನು ಹಿಂಡುತ್ತಿರುವ | ಘಾಸಿ ತಡಲು ಆಗೆ | ನ್ಯಾಯ ಕರ್ಮವೀರ | ಸಾಯ ಗೈದ ಇವನು || ೩ ||
ಇಂದು ಅವನು ಜೀವ ಕೇಡಿಸಿ | ಮುಂದೆ ನನ್ನ ಗತಿಯು ಏನು |
ಬಂಧು ಭಗಿನಿಯರೆ, ಇಂದು ಚಿಂತಿಸಿ | ಮುಂದೆ ಸಾಗು ಬೇಗ || ೪ ||

'ಸೇವಕ'

ಶ್ರೀ ಕಾವೇರಿ ತುಲಾ ಸಂಕ್ರಮಣದ ಮುಹೂರ್ತ ಪಟ್ಟಿ.

1932ನೇ ಇಸವಿ ಅಕ್ಟೋಬರ್ ತಾರೀಕು 14ನೇ ಕನ್ಯಾಮಾಸ 28ನೇ ಶುಕ್ರವಾರ ಬೆಳಗ್ಗೆ 9 ಗಂಟೆಗೆ ಚಂದ್ರನ ಕಾಲ ಹೊರಡುವುದು ಅಕ್ಷಯ ಪಾತ್ರ ಪಡೆಗುವ ಶುಭ ಮುಹೂರ್ತ.

ಇದೇ ದಿನ ಸಾಯಂಕಾಲ 5 ಗಂಟೆ 30 ಮಿನಿಟಿಗೆ ಸರಿಯಾಗಿ ಗುರುಕಾಲ ಹೊರಡುವುದು. ಕಾಣಿಕೆ ಹಣ್ಣು ಪಡೆಗುವ ಶುಭ ಮುಹೂರ್ತ.

ಇನ್ನೇ ಅಕ್ಟೋಬರ್ ತಾರೀಕು 16ನೇ ಕನ್ಯಾ ಮಾಸ ತೇದಿ 30ನೇ ಬುಧವಾರ ರವಿವಾರ ರಾತ್ರಿ 10 ಗಂಟೆ 45 ಮಿನಿಟಿಗೆ ಭರಣಿ ನಕ್ಷತ್ರದಲ್ಲಿ ಶ್ರೀ ಮೂಲ ಕಾವೇರಮ್ಮನವರ ತುಲಾ ಸಂಕ್ರಮಣದ ತೀರ್ಥೋದ್ಭವ ಪುಣ್ಯಕಾಲದ ಶುಭ ಮುಹೂರ್ತ.

ಕೆ. ಚಂಗಪ್ಪ.
ಕೊಡಗು ಮುಜ್ರಾಯಿ ಇಲಾಖೆ. (ಪ್ರೆಸಿಡೆಂಟ್.)

೪ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕಿ ಕಂಪನಿ ಯವರ

ಜ್ವರದ ಗುಳಿಗೆಗಳು.

ಚಳಿಜ್ವರ, ಜಾತಿಜ್ವರ, ದಿನದಿನ್ನ ಬರುವ ಜ್ವರ ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮಬಾಣದಂತೆ ಇವೆ. ಡಬ್ಬಿಗೆ ರೂ. ೧. ಟ. ಪಾ. ೭ ಆಣೆ ಬೇರೆ ತರಿಸಿಕೊಳ್ಳಿ.

(52—9) ಗಣೇಶ ರಾಮಚಂದ್ರ ಕರ್ಕಿ,
ಮತ್ತು ಕಂಪನಿ,
ಗಿರಗಾಂವ, ಮುಂಬಯಿ.

ರತಿ ಮನ್ಮಥ ಎಂಬ ಮರ್ಮಶಾಸ್ತ್ರ.

ಕ್ರಯ ರೂ. 1—1—0.

ಕನ್ನಡ ಭಾಷೆಯಲ್ಲಿ ಅಂದವಾಗಿ ಪ್ರಿಂಟಾಗಿದೆ. ಇದರಲ್ಲಿ ಸ್ತ್ರೀ ಪುರುಷರ ಪ್ರೀತಿಯ ರಹಸ್ಯಗಳು, ಪ್ರ್ಯಾರಿಸ್ ವೇಶ್ಯಾ ಸ್ತ್ರೀಯರ ಪ್ರೀತಿಯ ಪರ್ಯಾಗಸು ಮಲಯಾಳ, ಜಪಾನ್, ಫ್ರೆಂಚ್ ದೇಶದ ವೇಶ್ಯಾ ಸ್ತ್ರೀಯರ ಮಲಗುವ ಫೋಟೋಗಳು, ಇನ್ನೂ ಸ್ತ್ರೀ ಪುರುಷರ ಅನೇಕ ರಹಸ್ಯಗಳು 22 ಬಗೆಗಳ ಫೋಟೋಗಳ ಸಹಿತ ಕೂಡಿದೆ. ಈ ಶೃಂಗಾರವಾದ ಪುಸ್ತಕವನ್ನು ಓದಲು ಆನಂದವಾಗಿರುವುದು.

22 ಫೋಟೋಗಳ ಸಹಿತ ಪ್ರ್ಯಾರಿಸ್ ದೇಶದ ವ್ಯಭಿಚಾರಿಗಳ ವಿನೋದಗಳು, ಕನ್ಯೆಗಳ ಪ್ರೀತಿ, ತುಮ್ಯಾಗೃಹದ ರಹಸ್ಯಗಳು ಅಡಗಿವೆ. ಕ್ರಯ ಪುಸ್ತಕ 1ಕ್ಕೆ ರೂ. ೧—೦—೦.

ಎಂ. ಲಿಂಗಂ ಬುಕ್ ಡಿಪೋ,
ಪೋಸ್ಟ್ ಬಾಕ್ಸ್ ನಂ. 245.
12-2 ಮದರಾಸ್.
M. Lingam Book Depot.
Post Box No. 245. Madras.

ಕೊಡಗಿನಲ್ಲಿ ಸತ್ಯಾಗ್ರಹ.

ಪ್ರಾಂತೀಯ ಪರಿಷತ್ತಿನ ಅಧ್ಯಕ್ಷರು ಮತ್ತು ಇಬ್ಬರಿಗೆ ೪ ತಿಂಗಳ ಸಜೆ.

ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಟೀ ಪಾರ್ಟಿ ಮತ್ತು ಪಬ್ಲಿಕ್ ಮೀಟಿಂಗುಗಳು.

ಕಳೆದ ತಾ. 26 ರಲ್ಲಿ ಮಡಿಕೇರಿಯಲ್ಲಿ ರಾಜಕೀಯ ಮೆರವಣಿಗೆಯನ್ನು ನಡೆಸಿದ್ದಕ್ಕಾಗಿ ಶ್ರೀಯುತರುಗಳಾದ ಕೊಳ್ಳಿಮಾಡ ಕರುಂಬಯ್ಯನವರು, ಬೆಟ್ಟಂಗಡ ಬೋಪಯ್ಯನವರು ಮತ್ತು ರಾಮನಾರಾಯಣರವರು ದಸ್ತಗಿರಿ ಮಾಡಲ್ಪಟ್ಟದ್ದು ಸರಿಯಷ್ಟೆ. ಅದರ ಕ್ರಿ. ಪ್ರೊ. ಕೋ. 144 ನೇ ಸೆಕ್ಷನ್ ಮೇರೆಗೆ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ಹೊರಡಿಸಿದ್ದ ನೋಟೀಸಿನ ಅವಧಿಯು ಕಳೆದ ಸೆಪ್ಟೆಂಬರು ತಾ. 21 ರಲ್ಲಿ ಮುಗಿದು ಹೋಗಿದ್ದುದರಿಂದ ದಸ್ತಗಿರಿಯಾದವರಿಗೆ ಯಾವ ಸೆಕ್ಷನಿನ ಮೇರೆ ಶಿಕ್ಷೆಯನ್ನು ವಿಧಿಸಬೇಕೆಂದು ಆಲೋಚಿಸಲು ಅಧಿಕಾರಿಗಳು 10 ದಿವಸ ಸಮಯ ತೆಗೆದುಕೊಂಡರೆಂತ ವರ್ತಮಾನ. ಹೇಗೂ ಈ ತಾ. 6 ರಲ್ಲಿ ಕ್ರಿಮಿನಲ್ ಎಮೆಂಡ್‌ಮೆಂಟ್ ಆಕ್ಟಿನ 17 (1) ಸೆಕ್ಷನಿನ ಮೇರೆ ಶ್ರೀ. ಕೊಳ್ಳಿಮಾಡ ಕರುಂಬಯ್ಯನವರಿಗೆ ನಾಲ್ಕು ತಿಂಗಳ, ಕಠಿಣ ಸಜೆಯೂ ಮತ್ತು 70 ರೂ. ಜುಲ್ಮಾನೆಯೂ, ಜುಲ್ಮಾನೆ ಕೊಡದೆ ತಪ್ಪಿದರೆ ನಾಲ್ಕು ವಾರಗಳ ಹೆಚ್ಚಿನ ಸಜೆಯೂ, ಶ್ರೀ. ಬೆಟ್ಟಂಗಡ ಬೋಪಯ್ಯನವರಿಗೆ 4 ತಿಂಗಳು ಕಠಿಣ ಸಜೆಯೂ ಮತ್ತು 25 ರೂ. ಜುಲ್ಮಾನೆಯೂ, ಜುಲ್ಮಾನೆ ಕೊಡದೆ ತಪ್ಪಿದರೆ ನಾಲ್ಕು ವಾರಗಳ ಹೆಚ್ಚಿನ ಸಜೆಯೂ ಮತ್ತು ಶ್ರೀ. ರಾಮನಾರಾಯಣರವರಿಗೆ ನಾಲ್ಕು ತಿಂಗಳು ಕಠಿಣ ಸಜೆ ಮಾತ್ರವೂ ವಿಧಿಸಲಾಗಿದೆಯೆಂದು ತಿಳಿಯುತ್ತದೆ.

ಕಳೆದ ಸೋಮವಾರ ಪೊಲೀಸ್ ಡೆಪ್ಯುಟಿ ಸುಪರಿಂಟೆಂಡೆಂಟರು, ಇನ್‌ಸ್ಪೆಕ್ಟರು ಮತ್ತು ಸಬ್‌ಡಿವಿಜನ್ ಮೆಜಿಸ್ಟ್ರೇಟರು ಹಲವು ಪೊಲೀಸರೊಂದಿಗೆ ಅರೆ ಮತ್ತು ಕೋಟೆ ಸಮೇತ ಸುಂಟಿಕೊಪ್ಪಕ್ಕೆ ಹೋಗಿದ್ದರೆಂತಲೂ, ಆದರೆ ಅಲ್ಲಿ ಏನೊಂದು ಗಲಾಟೆಯಾಗಲೀ, ದಸ್ತಗಿರಿಯಾಗಲೀ ಆಗಲಿಲ್ಲವೆಂತಲೂ ವರ್ತಮಾನ.

ಅಸ್ಪೃಶ್ಯತೆಯನ್ನು ಹೋಗಲಾಡಿಸುವ ಉದ್ದೇಶ್ಯ ಮೇಲ್ಜಾತಿ ಹಿಂದೂಗಳೂ, ಹರಿಜನರೂ ಸಮ್ಮಿಳಿತವಾಗಿ ಒಂದು ಟೀ ಪಾರ್ಟಿಯೂ, ನಂತರ ಒಂದು ಸಾರ್ವಜನಿಕ ಸಭೆಯೂ ಕಳೆದ ರವಿವಾರ ಸಾಯಂಕಾಲ ಮಡಿಕೇರಿಯಲ್ಲಿ ಜವಾಹರ್ ದರ ಸಂಘದ ಹಾಲ್‌ನಲ್ಲಿ ನಡೆಯಿತು. ಇದರ ವಿವರವು ಇನ್ನೊಂದು ಕಡೆ ಪ್ರಕಟವಾಗಿದೆ.

ಹೀಗೆಯೇ ಈ ತಾ. 10ನೇ ಸೋಮವಾರ ಮಧ್ಯಾಹ್ನದ ಮೇಲೆ ವೀರರಾಜಪೇಟೆಯಲ್ಲಿ ಒಂದು ಟೀ ಪಾರ್ಟಿಯನ್ನೂ, ನಂತರ ಒಂದು ಪಬ್ಲಿಕ್ ಮೀಟಿಂಗನ್ನು ನಡೆಸಲು ಏರ್ಪಾಡಾಗುತ್ತಿದೆಯೆಂದೂ ತಾ. 12 ನೇ ಬುಧವಾರ ವೀರರಾಜಪೇಟೆಯಲ್ಲಿ ಒಂದು ಸಾರ್ವಜನಿಕ ಸಭೆಯು ನಡೆಸಲ್ಪಡುವುದೆಂದೂ ತಿಳಿಯುತ್ತೇವೆ.

ಒಳದೇಶ.

ಕಳೆದ ಆಗೋಸ್ಟು ತಿಂಗಳಲ್ಲಿ ಕೊಡಗು ಪ್ರಾಂತ್ಯದಲ್ಲಿ 435 ಜನನಗಳೂ, 32? ಮರಣಗಳೂ ಸಂಭವಿಸಿದವೆಂದು ಗಜೆಟಿನಲ್ಲಿ ಪ್ರಕಟವಾಗಿದೆ.

ಗಣಪತಿ ರಥೋತ್ಸವದ ಸಂದರ್ಭದಲ್ಲಿ ಫ್ರೇಜರ್‌ಪೇಟೆಯಲ್ಲಿ ನವಂಬರು ತಾ. 2ರಿಂದ 4ರ ವರೆಗೆ ದನಗಳ ಪ್ರದರ್ಶನವು ನಡೆಯುವುದೆಂದು ತಿಳಿಯಬರುತ್ತದೆ.

ವೀರರಾಜಪೇಟೆ ಮುನ್‌ಸೀಫರಾದ ಮಿ. ಎಸ್. ವ...ಪ್ಪನವರಿಗೆ ಫಸ್ಟ್‌ಕ್ಲಾಸ್ ಮೆಜಿಸ್ಟ್ರೇಟರ ಅಧಿಕಾರವು ದೊರಕಲಾಗಿದೆಯೆಂದು ತಿಳಿಯುತ್ತೇವೆ.

ಮಡಿಕೇರಿಯಲ್ಲಿ ಈ ತಾ 1 ರಿಂದ 7ರ ವರೆಗೆ 2.46 ಇಂಚೂ, ಸೆಪ್ಟೆಂಬರು ತಿಂಗಳಲ್ಲಿ 20.48 ಇಂಚೂ ಮತ್ತು ಜೂನ್ 1ರಿಂದ ಸೆಪ್ಟೆಂಬರು ಅಖೈರಿನ ವರೆಗೆ 100.92 ಇಂಚೂ ಮಳೆಯಾಗಿದೆ.

ಈ ತಾ. 1ರಿಂದ ಗಾಡಿ ಬಾಡಿಗೆಯು ಸರಕಾರಿ ದರವು ಅಕ್ಟೋಬರಿನಿಂದ ಮೇ ವರೆಗೆ ಮೈಲಿಗೆ 3½ ಆಣೆಯೂ, ಜೂನ್‌ನಿಂದ ಸೆಪ್ಟೆಂಬರ್ ವರೆಗೆ ಮೈಲಿಗೆ 5 ಆಣೆಯೂ ಆಗಿರತಕ್ಕದ್ದೆಂದು ಕಮಿಷನರವರು ಪ್ರಕಟಿಸಿರುವರು.

ಕಳೆದವಾರದ ಆಖ್ಯದಲ್ಲಿ ವೀರರಾಜಪೇಟೆ ಹೈಸ್ಕೂಲು ಹಾಕಿ ಟೀಮಿನವರು ಮಡಿಕೇರಿಯಲ್ಲಿ ಪಬ್ಲಿಕನವರೊಂದಿಗೂ ಮತ್ತು ಸೆಂಟ್ರಲ್ ಹೈಸ್ಕೂಲು ಟೀಮಿನವರೊಂದಿಗೂ ಪಂದ್ಯಾಟಗಳನ್ನು ಆಡಿ, ಮೂರು ಆಟಗಳಲ್ಲಿಯೂ ಜಯಶೀಲರಾದರೆಂದು ತಿಳಿಯುತ್ತೇವೆ.

ಈ ತಾ. 2ರಲ್ಲಿ ಮಡಿಕೇರಿ ಸೆಂಟ್ರಲ್ ಹೈಸ್ಕೂಲು, ಡೇವಿ ಡಿಬೇಟಿಂಗ್ ಸಂಘದ ಆಶ್ರಯದಲ್ಲಿ ಮಿ. ಪಿ. ಬಿ. ಮೇದಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಪಬ್ಲಿಕ್ ಡಿಬೇಟಿನಲ್ಲಿ 'ಕೊಡಗಿಗೆ ಕಾಲೇಜು ಅವಶ್ಯವೇ' ಎಂಬ ಗೊತ್ತುವಳಿಯು ಬಹುಮತದಿಂದ ಪಾಸಾಯಿತು.

1933—34ನೇ ವರ್ಷದ ಫೈನಾನ್ಸ್ ಕಮಿಟಿಗೆ ಚೀಫ್ ಫಾರೆಸ್ಟ್ ಆಫೀಸರಾದ ಮಿ. ಹೆಚ್. ಜಿ. ಸಿಕ್ಸ್‌ರವರು ಮತ್ತು ಲೆಫ್ಟಿನೆಂಟ್ ಕರ್ನಲ್ ಪಿಜ್. ಯಫ್. ...ಂಡ್‌ರವರು ಮೆಂಬರುಗಳಾಗಿ ನೇಮಿಸಲ್ಪಟ್ಟಿರುವರು. ಮೂರು ಚುನಾಯಿತಮೆಂಬರುಗಳ ಹೆಸರುಗಳು ಇನ್ನೂ ಪ್ರಕಟಿಸಲ್ಪಟ್ಟಿವೆ.

ಗೋಣಿಕೊಪ್ಪಲಿನ ರಾಮ ಭಕ್ತ ಮಂಡಲಿಯವರು ಈ ತಾ. 3 ಮ. ಶು. 4ರಲ್ಲಿ ಮಡಿಕೇರಿಯಲ್ಲಿರುವ ಒಮಿಡಿನಾದರ ಸಂಘದ ಹಾಲ್‌ನಲ್ಲಿ 'ಶರೀಖ ಪರಿಣಯ' ಮತ್ತು 'ಶ್ರೀ ಗಣೇಶ ಜನ್ಮ'ವೆಂಬ ಹರಿಕಥೆಗಳನ್ನು ನಡಿಸಿ ನೆರೆದಿದ್ದವರಿಗೆ ಆನಂದವನ್ನುಂಟುಮಾಡಿದರು. ಕಥೆ ಮಾಡಿದವರು ಈ ಮಂಡಳಿಗೆ ಸೇರಿದ ಬಾಲೆಯ ಗೋಪಾಲದಾಸರಾಗಿರುವರು.

ಮೈಸೂರು ಪ್ರಾಂತ್ಯ ... ಪೋರ್ಟ್‌ಗೇಟ್ ಫೀಜನ್ನು ವಜಾ ಮಾಡಿ ಮೋಟಾರು ತೆರಿಗೆಯನ್ನು ಏರಿಸಿದ್ದು ... ನ ಕಾರಣ ಈ ತಾ. 1ರಿಂದ ಅಲ್ಲಿಯ ಬಸ್ಸು ಕಂಪೆನಿಗಳು ಬಸ್ಸು ನಡಿಸದೆ ನಿಲ್ಲಿಸಿಬಿಟ್ಟಿರುವರೆಂದೂ, ಅದರಿಂದ ಸಿ. ಪಿ. ಟಿ. ಬಸ್ಸೊಂದಲ್ಲದೆ ಬೇರೆ ಯಾವ ಬಸ್ಸು ಮೈಸೂರಿನಿಂದ ಕೊಡಗಿಗೆ ಬರುತ್ತಿಲ್ಲವೆಂದೂ ತಿಳಿಯಬರುತ್ತದೆ.

ಶ್ರೀ ರಾಮ ಕೃಷ್ಣ ಮಠದ ಸ್ವಾಮಿ ಶ್ರೀವಾಸಾನಂದಜೀಯವರು ಮತ್ತು ಸ್ವಾಮಿ ಸಿದ್ಧೇಶ್ವರನಂದಜೀಯವರು ಈ ತಾ. 5ರಲ್ಲಿ ಪುತ್ತೂರಿನಿಂದ ಮಡಿಕೇರಿಗೆ ಬಂದರು. ಅದೇ ಸಾಯಂಕಾಲ ಇವರಿಬ್ಬರು ಜವಹಿರ್‌ದಾರ ಸಂಘದ ಹಾಲ್‌ನಲ್ಲಿ ಮಿ. ಕೆ ಎಸ್. ಸುಬ್ರಾಯರವರ ಅಧ್ಯಕ್ಷತೆಯಲ್ಲಿ 'ಹಿಂದೂ ಧರ್ಮ'ವನ್ನು ಕುರಿತು ಸ್ವಾರಸ್ಯವಾದ ಭಾಷಣಗಳನ್ನು ಮಾಡಿದರು. ಮರುದಿನ ಇವರು ತಲಕಾವೇರಿಗೆ ಹೋಗಿ ಬಂದು ಸಾಯಂಕಾಲ ಪುನಃ 'ಮತದ ಆವಶ್ಯಕತೆ'ಯನ್ನು ಕುರಿತು ಭಾಷಣ ಮಾಡಿದ್ದಲ್ಲದೆ ಸಭಿಕರಲ್ಲಿ ಕೆಲವರು ಕೇಳಿದ ಪ್ರಶ್ನೆಗಳಿಗೆ ಉತ್ತರಗಳನ್ನೂ ಕೊಟ್ಟರು. ಇವರು ಈ ತಾ. 7 ರಲ್ಲಿ ಮೈಸೂರಿಗೆ ಹೊರಟು ಹೋದರು.

ಹಿಂದೂದೇಶ.

ಮದ್ರಾಸಿನಲ್ಲಿ ಮಿ. ಟಿ. ಪ್ರಕಾಶಂರವರು ಕಳೆದ ತಾ. 30 ರಲ್ಲಿ ಅಸ್ಪೃಶ್ಯ ... ಗೆ ಒಂದು ಔತಣವನ್ನು ಕೊಟ್ಟರು. ಅದರಲ್ಲಿ ಬ್ರಾಹ್ಮಣರಿಂದ ತಗ್ಗಿನ ವರೆಗಿನ ಸುಮಾರು 60 ಸ್ತ್ರೀಪುರುಷರು ಭಾಗಿಗಳಾಗಿದ್ದರು.

ಮಹಾತ್ಮ ಗಾಂಧಿಯವರಿಗೆ ಕೊಟ್ಟಿದ್ದ ರಿಯಾಯಿತಿಗಳನ್ನು ಅವರ ಅಶಕ್ತಿಯ ಸಮಯದಲ್ಲೇ ತೆಗೆದುಬಿಟ್ಟದ್ದು ಸರಿಯಲ್ಲವೆಂತಲೂ, ಕಾಂಗ್ರೆಸ್ಸಿನ ಸಹಕಾರವನ್ನು ಪಡೆಯಲು ಈ ಸುಸಂಧಿಯನ್ನು ಕಳಕೊಳ್ಳಬಾರದೆಂತಲೂ ಸರ್ ಸಪ್ರುರವರು ಸೂಚಿಸಿರುವರು.

ಸಂಯುಕ್ತ ಪ್ರಾಂತ್ಯದ ಶಿವಪುರವೆಂಬ ಊರಿನಲ್ಲಿ ಪರದೇಶೀ ಬಟ್ಟೆ ಅಂಗಡಿಗಳನ್ನು ಪಿಕೆಟ್ ಮಾಡಿದ್ದರಿಂದ ಕಳೆದ ತಾ. 30ರಲ್ಲಿ 15 ಸ್ವಯಂ ಸೇವಕರು ಕೈದು ಮಾಡಲ್ಪಟ್ಟರು. ಆದರೆ ಮರುದಿನ ಬೆಳಗ್ಗೆ ಅವರಲ್ಲಿ ಆರು ಜನರು ಬಿಡುಗಡೆ ಮಾಡಲ್ಪಟ್ಟರು.

ಅನಾರೋಗ್ಯದ ದೆಸೆಯಿಂದ ಮದ್ರಾಸಿನ ಮಿ. ಯಸ್. ಸತ್ಯಮೂರ್ತಿಯವರು ಜೈಲಿನಿಂದ ಕಳೆದ ತಾ. 30ರಲ್ಲಿ ಬಿಡುಗಡೆ ಮಾಡಲ್ಪಟ್ಟರು. ಹೊರಗೆ ಬಂದ ಸ್ವಲ್ಪ ದಿವಸಗಳಲ್ಲಿಯೇ ಅವರ ಹೊಟ್ಟೆಯಲ್ಲಿ ಕಾಯಿಲೆಗೆ ಶಸ್ತ್ರಕ್ರಿಯೆ ಮಾಡಲ್ಪಟ್ಟು ಚಿಕಿತ್ಸೆ ಹೊಂದುತ್ತಿರುವರು.

ಮಹಾತ್ಮ ಗಾಂಧಿಯವರಿಗೆ ಕಳೆದ ತಾ. 20 ರಿಂದ ಜೈಲಿನಲ್ಲಿ ಕೊಟ್ಟಿದ್ದ ರಿಯಾಯಿತಿಗಳನ್ನು ತೆಗೆದು ಹಾಕಿದ್ದಕ್ಕಾಗಿ ಪಂಡಿತ ಮಾಳವೀಯ, ಯಂ. ಜಯಕರ್, ಪಂಡಿತ ಕುಂಜ್ರು, ಎ. ರಂಗಸ್ವಾಮಿ ಅಯ್ಯಂಗಾರ್ ಮತ್ತು ಎ. ಠಕ್ಕರವರು ವಿಷಾದವನ್ನು ಸೂಚಿಸಿರುವರು.

ಮಹಾತ್ಮ ಗಾಂಧಿಯವರ ಪತ್ನಿಯಾದ ಕಸ್ತೂರಿಬಾಯಿ ಗಾಂಧಿಯವರನ್ನು ಅವರ ಅವಧಿಗೆ 4 ದಿನಗಳಿಗೆ ಮುಂಚಿತವಾಗಿಯೇ ಕಳೆದ ತಾ. 30 ರಲ್ಲಿ ಅವರನ್ನು ಜೈಲಿನಿಂದ ಬಿಡುಗಡೆಮಾಡಿದರು. ಆದರೆ ಮಹಾತ್ಮರ ಆರೋಗ್ಯ ಚೆನ್ನಾಗಿ ಆಗುವ ವರೆಗೆ, ಅಂದರೆ 3—4 ದಿವಸಗಳ ವರೆಗೆ ಅವರನ್ನು ಗಾಂಧೀಜಿಯವರೊಂದಿಗೆ ಇರಲು ಬಿಟ್ಟಿರುವರು.

'ಗಾಂಧಿ ವಾರದ' ಸಂಬಂಧವಾಗಿ ಪರದೇಶೀ ಬ್ಯಾಂಕುಗಳ ಪಿಕೆಟಿಂಗ್, ಧ್ವಜಾಭಿವಂದನೆ ಮತ್ತು ಮೆರವಣಿಗೆಗಳನ್ನು ನಡಿಸಿದ್ದಕ್ಕಾಗಿ ಕಳೆದ ತಾ. 29ರಲ್ಲಿ ಬೊಂಬಾಯಿಯಲ್ಲಿ ಸುಮಾರು 30 ಜನ ಕಾಂಗ್ರೆಸ್ಸಿನವರು ದಸ್ತಗಿರಿ ಮಾಡಲ್ಪಟ್ಟರು. ಅವರ ಪೈಕಿ 21 ಜನರಿಗೆ ಮೂರುವಾರದಿಂದ 6 ತಿಂಗಳ ವರೆಗೆ ಸಜೆಯು ವಿಧಿಸಲಾಯಿತು.

ಆರ್ಡಿನೇನ್ಸಿನ ಮೇರೆ ನಾಸಿಕ್ ಜೈಲಿನಲ್ಲಿ ಹಲವು ದಿವಸಗಳು ಇಡಲ್ಪಟ್ಟಿದ್ದು, ನಾಸಿಕ್ ಪಟ್ಟಣವನ್ನು ಬಿಡಕೂಡದೆಂಬ ಶರತ್ತಿನ ಮೇಲೆ ಕಳೆದ ತಾ. 23ರಲ್ಲಿ ಬಿಡುಗಡೆ ಮಾಡಲ್ಪಟ್ಟ ಬೊಂಬಾಯಿ ಪ್ರಾಂತ್ಯದ ಲೀಡರಾದ ಮಿ. ಭುಲಾಭಾಯಿ ದೇಸಾಯಿಯವರು ನಾಸಿಕ್ ಪಟ್ಟಣದಿಂದ ಹೊರಗೆ ಬಂದ ಕಾರಣ ಅವರನ್ನು ಪುನಃ ದಸ್ತಗಿರಿ ಮಾಡಿ ಅವರಿಗೆ ಒಂದು ವರ್ಷ ಕಠಿಣ ಸಜೆಯೂ, 10,000 ರೂ. ಜುಲ್ಮಾನೆಯೂ ವಿಧಿಸಲಾಗಿದೆ.

ಒಟ್ಟಾವ ಕಾನ್‌ಫರೆನ್ಸಿನ ತೀರ್ಮಾನಗಳನ್ನು ಕುರಿತು ಧಿ ನ್ನಾಧಿಪತ್ಯಗಳು ಹುಟ್ಟಿ ಬ್ರಿಟನ್ನಿನ ಲಿಬರಲ್ ಪಕ್ಷದ ಮೂರು ಮಂತ್ರಿಗಳು ಮತ್ತು ಏಳು ಜೂನಿಯರ್ ಮಂತ್ರಿಗಳು ತಮ್ಮ ಪದವಿಗಳಿಗೆ ರಾಜೀನಾಮೆಕೊಟ್ಟಿರುವರು. ಇವರಲ್ಲಿ ಇಂಡಿಯಾದ ಅಂಡರ್ ಸೆಕ್ರೆಟರಿಯಾಗಿದ್ದ ಮತ್ತು ಫ್ರಾಂಚೈಸ್ ಕಮಿಟಿಯ ಅಧ್ಯಕ್ಷರಾಗಿದ್ದ ಲಾರ್ಡ್ ಲೋಥಿಯನ್‌ರವರು ಒಬ್ಬರಾಗಿರುವರು. ಇವರ ಸ್ಥಳಕ್ಕೆ ಬೇರೆ ಮಂತ್ರಿಗಳು ನೇಮಿಸಲ್ಪಟ್ಟಿರುವರು.

ಮೇಲ್ಜಾತಿ ಹಿಂದೂಗಳಿಗೂ, ಹರಿಜನರಿಗೂ ಜ. ನಾವರಣ ಯ ವಿಷಯದಲ್ಲಿ ಒಪ್ಪಂದವಾದಂತೆ ಮುಸಲ್ಮಾನರಿಗೂ ಹಿಂದೂಗಳಿಗೂ ರಾಜಿಮಾಡಲು ಪ್ರಯತ್ನಗಳು ನಡೆಯುತ್ತಿವೆ. ರಾಷ್ಟ್ರೀಯ ಪಕ್ಷದ ಅಬುಲ್‌ಕಲಾಂ ಆಜಾದ್, ಮತ್ತು ಡಾ. ಮಹ್ಮದ್‌ರವರು ಒಂದು ಕಡೆ ಪಂಡಿತ ಮಾಳವೀಯರೊಂದಿಗೂ, ಇನ್ನೊಂದು ಕಡೆ ಶೌಕತ್ ಅಲಿಯ ಪಾರ್ಟಿಯವರೊಂದಿಗೂ ರಾಜಿ ಸಂಧಾನಗಳನ್ನು ಬೊಂಬಾಯಿಯಲ್ಲಿ ನಡಿಸುತ್ತಿರುವರು. ಪಂಡಿತ ಮಾಳವೀಯರ ಮತ್ತು ಶೌಕತ್ ಅಲಿಯವರ ಭೇಟಿಯು ಬೇಗನೆ ಆಗಲಿಕ್ಕಿದೆಯೆಂದೂ, ರಾಜಿ ಆಗುವ ಆಶೆಯು ಇಲ್ಲದಿಲ್ಲವೆಂತಲೂ ವರ್ತಮಾನ.

ಅಸ್ಪೃಶ್ಯತೆಯನ್ನು ಹೋಗಲಾಡಿಸಲು ತಕ್ಕ ಏರ್ಪಾಡು ಮಾಡುವ ಬಗ್ಗೆ ಕಳೆದ ತಾ. 30ರಲ್ಲಿ ಬೊಂಬಾಯಿಯಲ್ಲಿ ಪಂಡಿತ ಮಾಳವೀಯರ ಅಧ್ಯಕ್ಷತೆಯಲ್ಲಿ ಒಂದು ದೊಡ್ಡ ಪಬ್ಲಿಕ್ ಮೀಟಿಂಗು ನಡೆಯಿತು. ಈ ಉದ್ದೇಶ್ಯ ಒಂದು ಅಖಿಲ ಭಾರತ ಕಮಿಟಿಯು ನೇಮಿಸಲಾಯಿತು. ಅದಕ್ಕೆ ಮಿ. ಜಿ. ಡಿ. ಬಿರ್ಲಾರವರು ಅಧ್ಯಕ್ಷರಾಗಿಯೂ, ಸರ್ವೆಂಟ್ ಆಫ್ ಇಂಡಿಯಾ ಸಂಘದ ಮಿ. ಅಮೃತಲಾಲ್ ಠಕ್ಕರವರು ಸೆಕ್ರೆಟರಿಯಾಗಿಯೂ ಆರಿಸಲ್ಪಟ್ಟರು. ಇದರ ಶಾಖೆಗಳು ಎಲ್ಲಾ ಪ್ರಾಂತ್ಯಗಳಲ್ಲೂ ನೇಮಿಸಲ್ಪಡತಕ್ಕವೆಂದು ತೀರ್ಮಾನಿಸಿದರು. ಭೋಪಾಲದ ನವಾಬರು (ಮುಸಲ್ಮಾನರು) ಕಮಿಟಿಗೆ 5000 ರೂ. ಉಚಿತವಾಗಿ ಕೊಟ್ಟಿರುವರು. ಅಲ್ಲದೆ ಈ ವರ್ಷವೂ, ಬರುವ ವರ್ಷವೂ 70,000 ರೂ. ಕೊಡಲು ಒಂದು ಧಣಿ ಮಹನೀಯರು ಭಾಷೆ ಕೊಟ್ಟಿರುವರೆಂದು ಅಧ್ಯಕ್ಷರು ಹೇಳಿದರು.

ಉಪವಾಸವ್ರತವನ್ನು ಕೈಕೊಂಡಂದಿನಿಂದ ಸರ್ಕಾರದವರು ಮಹಾತ್ಮ ಗಾಂಧಿಯವರಿಗೆ ಹೊರಗಿನ ಜನರೊಂದಿಗೆ ಸಂಭಾಷಣೆ ಮಾಡಲೂ, ಪತ್ರವ್ಯವಹಾರ ನಡಿಸಲೂ ಅಡಚಣೆ ಇಲ್ಲದಂತೆ ಮಾಡಿದ್ದರು. ಆದರೆ ಕಳೆದ ತಾ. 29ರಲ್ಲಿ ಥಟ್ಟನೆ ಈ ರಿಯಾಯಿತಿಗಳನ್ನು ವಜಾ ಮಾಡಿ ಮುಂಚಿನಂತೆ ಜೈಲು ನಿಬಂಧನೆಗಳನ್ನು ಜಾರಿಗೆ ತಂದಿರುವರು. ಇದು ಹೊರಗಿನ ಜನರಿಗೂ ಮತ್ತು ಮುಂದಾಳುಗಳಿಗೂ ಮಾತ್ರವಲ್ಲ, ಮಹಾತ್ಮರಿಗೂ ಕೂಡ ಆಶ್ಚರ್ಯವನ್ನುಂಟುಮಾಡಿದೆಯಂತೆ. ಮಹಾತ್ಮರು ಉಪವಾಸವನ್ನು ಬಿಟ್ಟು 72 ಗಂಟೆಗಳಾಗುವದರೊಳಗೇನೇ ರಿಯಾಯಿತಿಗಳನ್ನು ತೆಗೆದು ಹಾಕಿರುವುದರಿಂದ ಅಸ್ಪೃಶ್ಯತೆಯ ಸಮಸ್ಯೆಯನ್ನು ಕುರಿತು ಮಹಾತ್ಮರಿಗೆ ಬಂದಿರುವ ಸುಮಾರು 2000 ಪತ್ರಗಳಿಗೆ ಜವಾಬು ಕೊಡಲು ಅಸಾಧ್ಯ ಮಾಡಿದಂತಾಗಿದೆಯೆಂದು ಮುಂತಾಗಿ ಮಹಾತ್ಮರು ಸರ್ಕಾರಕ್ಕೆ ಪತ್ರ ಬರೆದಿರುವರಂತೆ. ಸರ್ಕಾರದವರ ಈ ವರ್ತನೆಯ ದೆಸೆಯಿಂದ ಮಹಾತ್ಮರೊಂದಿಗೆ ರಾಜಕೀಯ ರಾಜಿ ಸಂಧಾನಗಳನ್ನು ನಡಿಸುತ್ತಿದ್ದ ಪಂಡಿತ ಮದನಮೋಹನ ಮಾಳವೀಯರು ಮತ್ತು ಮಿ. ಜಯಕರರವರಿಗೂ ಕೂಡ ಮಹಾತ್ಮರ ಸಂಗಡ ಸಂಭಾಷಣೆ ಅಸಾಧ್ಯವಾಗಿದೆ.

ದಕ್ಷಿಣ ಹಿಂದೂಸ್ಥಾನಕ್ಕೆ ಮಹಾತ್ಮರ ಸಂದೇಶ:

"ಗುರುವಾಯೂರಿನ ದೊಡ್ಡ ದೇವಾಲಯಗಳು ದಿನೇ ದಿನೇ ಅಸ್ಪೃಶ್ಯರ ಪ್ರವೇಶಕ್ಕೆ ಬಿಡಲ್ಪಟ್ಟು, ಪವಿತ್ರಮಾಡಲ್ಪಡುತ್ತಿರುವದು ಸಂತೋಷದ ಸಂಗತಿ. ನನ್ನ ಈ ಸಂಕಷ್ಟದ ಕಾಲದಲ್ಲಿ ಇದೊಂದು ಸಂಗತಿಯು ನನಗೆ ತುಂಬಾ ಸಮಾಧಾನವನ್ನುಂಟುಮಾಡಿದೆ. ಆದರೆ ಅಸ್ಪೃಶ್ಯತೆಯ ನಿವಾರಣೆಗಾಗಿ ನಾನು ಹೆಚ್ಚು ಕೆಲಸ ಮಾಡಿದ ದಕ್ಷಿಣ ಹಿಂದೂಸ್ಥಾನದಲ್ಲಿ ದೇವಸ್ಥಾನಗಳಿಗೆ ಅಸ್ಪೃಶ್ಯರನ್ನು ಬಿಡುವ ಕಾರ್ಯವು ನಾಕಷ್ಟು ಧಾರಿಯಿಂದ ನಡೆಯದೆ ಇರುವದು ವ್ಯಸನಕರ. ದೇವಾಲಯಗಳಿಗೆ ಅಸ್ಪೃಶ್ಯರನ್ನು ಬಿಟ್ಟರೆ ಮಾತ್ರ ಅಲ್ಲಿಯ ವಿಗ್ರಹಗಳಲ್ಲಿ ದೇವರಿರುವನು ಎಂದು ಧೈರ್ಯವಾಗಿ ಹೇಳಬಲ್ಲೆ. ಇಂದು ಅಸ್ಪೃಶ್ಯ ಮನುಷ್ಯರೊಂದಿಗೆ ದೇವರೂ ಅಸ್ಪೃಶ್ಯನಾಗಿರುವನು."

ಇಸ್ಲಾಮಿನ ಜೀವನವು ಸ್ವಾಧೀನತೆಯಲ್ಲಿದೆ.

ಅಫ್ಘಾನಿಸ್ಥಾನದ ರಾಜರಾದ ನಾದಿರ್‌ಖಾನರವರು ಮಾಡಿದ ಓಜಸ್ವೀ ಭಾಷಣ.

ಈಗ ಸ್ವಲ್ಪ ದಿವಸಗಳ ಕೆಳಗೆ ಅಫ್ಘಾನಿಸ್ಥಾನದಲ್ಲಿ ಸ್ವಾತಂತ್ರ್ಯ ದಿವಸವನ್ನು ಆಚರಿಸಿದರು. ಆ ದಿವಸ ಅಲ್ಲಿನ ರಾಜರಾದ ನಾದಿರ್‌ಖಾನರು ಒಂದು ಓಜಸ್ವಿಯಾದ ಭಾಷಣ ಮಾಡಿದರು. ಆ ಭಾಷಣದ ಕೆಲವು ಅಂಶವನ್ನು ಇಲ್ಲಿ ಕೊಡಲಾಗಿದೆ.

ಮನುಷ್ಯನನ್ನು ಆತ್ಮರಕ್ಷಣೆ ಮಾಡಿಕೊಳ್ಳಲು ಯೋಗ್ಯನನ್ನಾಗಿ ಮಾಡುವ ಶಕ್ತಿಗೆ ಸ್ವಾಧೀನತೆಯೆನ್ನುವುದಾಗಿದೆ. ಈ ಶಕ್ತಿಯೇ ಸ್ವದೇಶದ ಜನರ ಜೀವನವನ್ನು ವಿದೇಶೀಯರ ಆಕ್ರಮಣದಿಂದ ರಕ್ಷಣೆಕೊಡಿಕೊಳ್ಳಲು ಬೇಕಾದ ಸಾಧನೆಯಾಗಿದೆ. ಸ್ವಾಧೀನತೆಯು ಮನುಷ್ಯಜೀವನದ ಪ್ರತಿಯೊಂದು ಕ್ರಮದ ಮತ್ತು ಕ್ರಿಯೆಯ ಮೇಲೆ ತನ್ನ ಪ್ರಭಾವವನ್ನು ಹಾಕುತ್ತದೆ. ಒಂದು ದೇಶದ ಸ್ವಾಧೀನತೆಯು ರಕ್ಷಣೆ ... ...

ಇದರ ಸೇವಾಫಲವು ದೊರಕದಂತಾಗುತ್ತದೆ. ಅಮೇರಿಕವು, ಹಾಗಾದರೆ, ನನ್ನ ವಿಷಯದಲ್ಲಿ ತನ್ನ ಪರಿಚಿತ ಮತ್ತು ಅದರ ಆಚರ ಮೂಲಕ, ಶ್ರೇಯದಾಯಕವಾದ ನನ್ನ ಈ ಸಮಯದಲ್ಲಿ ತನ್ನ ಸಹಾನುಭೂತಿಯನ್ನು ತೋರ್ಪಡಿಸುವಲ್ಲಿ, ಅದು ನನ್ನ ಆತ್ಮಬಲಿಯ ಮರ್ಮವೇನೆಂದು ತಿಳಿಯುವುದಕ್ಕಾಗಿ, ಆ ನನ್ನ ಆತ್ಮಬಲಿಯ ಪರವಾಗಿ ಅಮೇರಿಕವು ಜಗತ್ತಿನ ಅಭಿಪ್ರಾಯವನ್ನು ಸಂಗ್ರಹಿಸಲೆಂದು ನಾನು ಅಪೇಕ್ಷಿಸುತ್ತೇನೆ. ಇದು ಜಗತ್ತಿನ ಒಂದು ಮೂಲೆಗೆ ಮಾತ್ರ ಅನ್ವಯಿಸುವಂತೆ ತೋರಿಕೆಗೆ ಕಂಡರೂ ಇದು ಇಡೀ ಜಗತ್ತನ್ನೇ ವ್ಯಾಪಿಸುವ ಉದ್ದೇಶವುಳ್ಳದ್ದು. ನನ್ನನ್ನು ಮೂಢಶ್ರದ್ಧೆಯಿಂದ ಹಿಂಬಾಲಿಸುವವರೂ ಕೂಡ, ನನ್ನ ಜೀವಮಾನದ ಯಾವುದೊಂದು ಕಾರ್ಯವಾದರೂ ಯಾವನೊಬ್ಬ ವ್ಯಕ್ತಿಯನ್ನಾಗಲಿ, ಜನಾಂಗವನ್ನಾಗಲೀ ನೋಯಿಸತಕ್ಕದ್ದಲ್ಲವೆಂದು ಬಲ್ಲನು. ನನ್ನ ರಾಷ್ಟ್ರೀಯತ್ವವೂ, ಮತಭಾವವೂ ಬೇರೆ ಬೇರೆಯಾಗಿರದೆ ಒಂದೇಯಾಗಿರುವುದರಿಂದ, ಅವು ಎಲ್ಲ ಜೀವಗಳ ಹಿತವನ್ನೂ ಸಾಧಿಸುವವುಗಳಾಗಿಯೇ ಇವೆ.

ಮಡಿಕೇರಿ ಸಾರ್ವಜನಿಕ ಸಭೆ.

(2ನೇ ಪುಟದಿಂದ ಮುಂದುವರಿದದ್ದು.)

ಮಿ. ಚೇಂದಿರ ತಮ್ಮಯ್ಯನವರು ಠರಾವನ್ನು ಅನುಮೋದಿಸುತ್ತಾ, ಸಂಸ್ಕೃತದಲ್ಲಿಯೂ, ಇಂಗ್ಲಿಷಿನಲ್ಲಿಯೂ ಶ್ಲೋಕಗಳನ್ನೂ ಪದ್ಯಗಳನ್ನೂ ಹೇಳಿ, ವರ್ಣಭೇದವು ಗುಣಸ್ವಭಾವಗಳನ್ನನುಸರಿಸಬೇಕಲ್ಲದೆ, ಹುಟ್ಟುವಿಕೆಯಲ್ಲಿರುವದು ಸರಿಯಲ್ಲವೆಂದು ಮುಂತಾಗಿ ಹೇಳಿದರು. ರಾ. ಸಾ. ಕೋದಂಡ ಐಯ್ಯಣ್ಣನವರು. 'ಸಂಚಯನು ಮತ್ತು ದೀಯ ಯೂ ಕ್ರೈಸ್ತ ಮತವನ್ನವಲಂಬಿಸಿದ ಕೂಡಲೆ ಅವನೊಂದಿಗೆ ನಾವುಸಮ್ಮಿಳಿತರಾಗುತ್ತೇವೆ; ಆದರೆ ಪಂಚಮರನ್ನು ದೂರಮಾಡುತ್ತೇವೆ. ಈ ದೊಡ್ಡ ಅನ್ಯಾಯವನ್ನು ಖಂಡಿತವಾಗಿಯೂ ಹೋಗಲಾಡಿಸಬೇಕೆಂದರು 'ಅಸ್ಪೃಶ್ಯತೆಯು ಕೊಡಗಿನಲ್ಲಿ ಅಷ್ಟೊಂದು ಕಠಿಣತರದಲ್ಲಿ ಇಲ್ಲ. ಹರಿಜನರು ತಮ್ಮ ದುಸ್ಸಂಗತಿಗಳನ್ನು ಬಿಟ್ಟು, ಶುಚಿಯಾಗಿ ಬಂದ ಪಕ್ಷ ಅವರೊಂದಿಗೆ ಮಿಳಿತವಾಗಲು ಕಷ್ಟವಿಲ್ಲ. ಅವರ ಅಜ್ಞಾನವನ್ನು ಹೋಗಲಾಡಿಸಿ ನಮ್ಮೊಂದಿಗೆ ಸೇರಿಸಿಕೊಳ್ಳಬೇಕಾದದ್ದು ನಮ್ಮೆಲ್ಲರ ಕರ್ತವ್ಯವಾಗಿದೆ. ಹಾಗೆ ಮಾಡಲು ಇದೀಗ ತಕ್ಕ ಸಮಯವಾಗಿದೆ'ಯೆಂದು ಮುಂತಾಗಿ ಮಿ. ಮೇರಿಯಂಡ ನಾಣಪ್ಪನವರು ಭಾಷಣ ಮಾಡಿದರು.

ಮಿ. ನೆರವಂಡ ಕುಟ್ಟಪ್ಪನವರು ಹೇಳಿದ್ದೇನೆಂದರೆ—'ಅಸ್ಪೃಶ್ಯರನ್ನು ದೇವಸ್ಥಾನಗಳೊಳಗೆ ಬಿಡದೆ ಇದ್ದರೆ ದೇವರು ವಿಗ್ರಹದಲ್ಲಿ ಇರಲಿಕ್ಕಿಲ್ಲ, ಪಂಚಮರಲ್ಲಿಗೆ ಹೊರಟು ಹೋದಾರು ಎಂತ ಮಹಾತ್ಮ ಗಾಂಧಿಯವರು ಹೇಳಿದ್ದಾರೆ. ಸರ್ವಸ್ವರೂ ದೇವರ ಪುತ್ರರು, ಸರ್ವರಲ್ಲಿಯೂ ಪರಮಾತ್ಮನ ಅಂಶವೇ ಇರುವುದು. ಬರೇ ಬಾಹ್ಯಶುಚಿತ್ವವನ್ನು ನೋಡಿದರೆ ಸಾಲದು. ಅಂತರಂಗದ ಶುಚಿತ್ವವನ್ನು ನೋಡಬೇಕು. ತೋಟಿ ಮನೆಯನ್ನು ರಾಮಕೃಷ್ಣ ಪರಮಹಂಸರು ತನ್ನ ತಲೆ ಕೂದಲಿನಿಂದ ಶುಚಿಮಾಡಿದರು. ಹರಿಜನರ ಉದ್ಧಾರಕ್ಕಾಗಿ ಸ್ವಾಮಿ ವಿವೇಕಾನಂದರು ತಾನು ಜನ್ಮವೆತ್ತುವೆನು ಎಂತ ಹೇಳಿದ್ದರು. ಮಹಾತ್ಮ ಗಾಂಧಿಯವರ ಉದಾಹರಣೆಯನ್ನು ಅನುಸರಿಸಬೇಕು. ವೇದದಲ್ಲಿ ಮತ್ತು ಗೀತೆಯಲ್ಲಿ ಭೇದ ಹೇಳಿಲ್ಲ. ದೇವರ ಪ್ರಾರ್ಥನೆಗೆ ಯಾರಿಗೂ ಅಡ್ಡಿ ಇರಬಾರದು. ಇಷ್ಟು ಕಾಲ ಇವರಿಗೆ ತೋರಿಸಿದ ವರ್ತನೆಯ ಪಾಪಕ್ಕಾಗಿ ಮಹಾತ್ಮ ಗಾಂಧಿಯವರು ಪ್ರಾಯಶ್ಚಿತ್ತ ಮಾಡಲು ಹೊರಟಿದ್ದರು. ಆದ್ದರಿಂದ ಈ ಹರಿಜನರ ಉದ್ಧಾರಕ್ಕಾಗಿ ಎಲ್ಲರೂ ಪ್ರಯತ್ನಿಸಬೇಕು.

4 ನೇ ಫಾರಮಿನ ವರೆಗೆ ಓದಿದ ಹರಿಜನ ಯುವಕನಾದ ಮಿ. ಬೆಳ್ಳಿಯವರು, 'ನಾನು ಅಸ್ಪೃಶ್ಯ ವರ್ಗಕ್ಕೆ ಸೇರಿದವನೆಂದು ತನಗೆ ಉದ್ಯೋಗ ದೊರೆಯಲು ಹಲವು ತರದ ಅಡಚಣೆಗಳುಂಟಾದವೆಂದೂ, ಮೇಲ್ಜಾತಿಯವರು ಮಹಾತ್ಮರ ಅಪೇಕ್ಷೆಯಂತೆ ಇನ್ನು ಮುಂದಕ್ಕಾದರೂ ತನ್ನ ವರ್ಗದವರನ್ನು ದೂರಮಾಡಬಾರದೆಂತಲೂ, ತನ್ನ ಜಾತಿಯವರು ನಿರ್ಮಲತ್ವವನ್ನು ಅಭ್ಯಾಸಿಸುವಂತೆ ಮಾಡಲು ನಾನು ಪ್ರಯತ್ನಿಸುತ್ತೇನೆಂತಲೂ ಮೊದಲಾಗಿ ಮಾತಾಡಿದರು. ಈಗ ಸೆಂಟ್ರಲ್ ಹೈಸ್ಕೂಲಿನಲ್ಲಿ ಸ್ಕೂಲ್ ಫೈನಲ್ ಕ್ಲಾಸಿನಲ್ಲಿ ಓದುತ್ತಿರುವ ಹರಿಜನ ವಿದ್ಯಾರ್ಥಿಯಾದ ಮಿ. ಬಸವನವರು ತಮ್ಮ ಚಿಕ್ಕ ಭಾಷಣದಲ್ಲಿ, ಮೇಲ್ಜಾತಿ ಹಿಂದೂಗಳು ತನ್ನ ಜಾತಿಯವರನ್ನು ಮೇಲೆತ್ತಲು ಮಾಡುತ್ತಿರುವ ಪ್ರಯತ್ನಕ್ಕೆ ಅವರನ್ನು ವಂದಿಸಿದಲ್ಲದೆ, 'ಹತ್ತು ವರ್ಷಗಳ ಹಿಂದೆ ಕೆಲವು ಮಹಸ್ತೀಯರು ಮಾಡಿದ ಪ್ರಯತ್ನದಿಂದ ತನ್ನೂರಿನಲ್ಲಿ ಹಲವರು ಸತ್ತ ದನವನ್ನು ತಿನ್ನುವದನ್ನೂ ಮತ್ತು ಕೆಲವರು ನಿಷಾಪದಾರ್ಥ ಸೇವಿಸುವದನ್ನೂ ಬಿಟ್ಟಿರುವರು; ಇಂದಿನ ಕೆಲಬರಂತೆ ಮುಂದಕ್ಕೂ ಪ್ರೋತ್ಸಾಹವನ್ನೀಡಿದರೆ ತನ್ನ ಜಾತಿಯವರೆಲ್ಲರೂ ಅನಿಷ್ಟ ಪದ್ಧತಿಗಳನ್ನು ಬಿಟ್ಟುಬಿಡಲು ಎಟ್ಟಿಸಬೆ ಇರರು.' ಎಂದು ಮುಂತಾಗಿ ಹೇಳಿದರು. ಈ ದೀರ್ಘ ಭಾಷಣಗಳಾದ ನಂತರ ಅಧ್ಯಕ್ಷರು ಠರಾವನ್ನು ಓಟಿಗೆ ಹಾಕಿದರು. ಒಮ್ಮತದಿಂದ ಪಾಸಾಯಿತು.

೨. "ಅಸ್ಪೃಶ್ಯ ಭಾವನೆಯನ್ನು ಹೋಗಲಾಡಿಸಲಿಕ್ಕಾಗಿ ಹಿಂದೂಗಳು ಆಗಿರುವ ಅಸ್ಪೃಶ್ಯರೆನಿಸಿಕೊಂಡಿದ್ದವರಿಗೆ ದೇವದರ್ಶನ ದೊರಕುವಂತೆ ದೇವಸ್ಥಾನಗಳಿಗೆ ಪ್ರವೇಶಿಕ್ಕೆ ಪಡಲು ಈ ಸಭೆಯು ಅಪೇಕ್ಷಿಸಿದೆ; ಮತ್ತು ದೇಶದ ಎಲ್ಲ ದೇವಸ್ಥಾನಗಳಲ್ಲೂ ಪಾಲಿಸಬೇಕೆಂತ ಈ ಸಭೆಯು ಕೇಳಿಕೊಳ್ಳುತ್ತದೆ."

ಈ ಠರಾವನ್ನು ಸೂಚಿಸುವಾಗ ಮಿ. ಸಿ. ಯಸ್. ವೆಂಕಪ್ಪಯ್ಯನವರು ಹೇಳಿದ್ದೇನೆಂದರೆ—'ಈ ಠರಾವಿನಲ್ಲಿ ಈ ಸಭೆಯು ಹರಿಜನರಿಗೆ ದೇವಸ್ಥಾನಗಳಿಗೆ ಪ್ರವೇಶಕ್ಕೆ ಅನುಮತಿಕೊಡುತ್ತದೆ ಎಂತ ಇರುವುದರಿಂದ ಎಲ್ಲರೂ ತಮ್ಮ ಮನಸನ್ನು ಚೆನ್ನಾಗಿ ಅಜಮಾಯಿಸಿ ಒಪ್ಪಿಗೆಕೊಡಬೇಕಾಗಿದೆ. ಈ ವಿಷಯವಾಗಿ ಮಡಿಕೇರಿಯ ಜನರಲ್ಲಿ ಮಾತಾಡುವಾಗ ಏನೇನೂ ವಿರೋಧ ಕಂಡುಬರಲಿಲ್ಲ. ಸಂಪ್ರೀತವಾಗಿ ಕೂಡ ಘಟಾರ ಮಠಾಧಿಪತಿಗಳವರು ಸಹ ದೇವಸ್ಥಾನಗಳ ಪ್ರವೇಶಕ್ಕೆ ಒಪ್ಪಿಗೆಕೊಟ್ಟಿರುತ್ತಾರೆ. ಮಡಿಕೇರಿ ಓಂಕಾರೇಶ್ವರ ದೇವಸ್ಥಾನದ ಹೆಬ್ಬಾಗಿಲು ವರೆಗೆ ಮುಸಲ್ಮಾನರು, ಕ್ರಿಸ್ತಿಯನರು ಬರುತ್ತಾರೆ ಆದರೆ ನಮ್ಮ ದೇವರುಗಳನ್ನೇ ಪೂಜಿಸುವ ಈ ನಮ್ಮ ಸಹೋದರರಾದ ಹರಿಜನರಿಗೆ ದೇವರ ದರ್ಶನಕ್ಕೆ ಬಿಡದಿರುವುದು ಶೋಚನೀಯ. ಹಿಂದೂಸ್ಥಾನದ ಇತರ ಅನೇಕ ಕಡೆಗಳಲ್ಲಿ ಮುಖ್ಯ ಮುಖ್ಯ ದೇವಾಲಯಗಳಿಗೆ ಹರಿಜನರನ್ನು ಬಿಡುತ್ತಲಿದ್ದಾರೆ. ಅಸ್ಪೃಶ್ಯಭಾವನೆಯು ಅತಿ ಕಠಿಣವಾಗಿರುವ ಮಲಬಾರಿನ ಕಲ್ಲಿಕೋಟೆ, ಕೊಲ್ಲ, ಪಾಲ್ಘಾಟಿನ ಕೆಲವು ದೇವಸ್ಥಾನಗಳನ್ನು ಸಹ ಹರಿಜನರಿಗೆ ಬಿಟ್ಟಿರುವಾಗ ಅಸ್ಪೃಶ್ಯತೆ ಕಡಿಮೆ ಇದೆಯೆನ್ನುವ ನಮ್ಮ ದೇಶದಲ್ಲಿ ದೇವಸ್ಥಾನಗಳಿಗೆ ಇವರನ್ನು ಬಿಡುವುದೇನೂ ಕಷ್ಟವಲ್ಲ. 22 ಕೋಟಿ ಹಿಂದುಗಳಲ್ಲಿ 6½ ಕೋಟಿ ಸಂಖ್ಯೆ ಇರುವ ಈ ಹರಿಜನರು ನಮ್ಮ ಸಮಾಜವನ್ನು ಬಿಟ್ಟು ಹೋಗದಂತೆ ಇವರಿಗೆ ಸಂಸರ್ಗದ ಹಕ್ಕು ಕೊಡಬೇಕಾದದ್ದು ನಮ್ಮ ಕರ್ತವ್ಯವಾಗಿದೆ. ಆದ್ದರಿಂದ ಈ ಠರಾವಿಗೆ ಒಪ್ಪಿಗೆ ಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

ಮಿ. ಬಾಚರಣಿಯಂಡ ಗಣಪತಿಯವರು, ಅನುಮೋದಿಸಿ ಹೇಳಿದ್ದೇನೆಂದರೆ—'ಹಿಂದೂ ಸಮಾಜವು ಈ ಹರಿಜನರಿಗೆ ಮಾಡಿದ ಅನ್ಯಾಯವನ್ನು ನೋಡಿ ಮುಸಲ್ಮಾನ್ ಬಂಧುಗಳು ಇವರಲ್ಲಿ ಅನೇಕರನ್ನು ತಮ್ಮ ಮತಕ್ಕೆ ಸೇರಿಸಿಕೊಂಡರು. ಆದರೂ ಹಿಂದೂ ಸಮಾಜಕ್ಕೆ ಎಚ್ಚರವಾಗಲಿಲ್ಲ. ಅನಂತರ ಕ್ರೈಸ್ತ ಸಹೋದರರು, ಸಹ ಇವರನ್ನು ತಮ್ಮ ಮತಕ್ಕೆ ಸೇರಿಸ ಹತ್ತಿದರು. ಆದರೂ ಹಿಂದೂಗಳು ಕಣ್ಣು ತೆರೆಯಲಿಲ್ಲ. ರಾಮಕೃಷ್ಣ ಪರಮಹಂಸರಂಥ ವೇದಾಂತಿಗಳು ಅಸ್ಪೃಶ್ಯರ ಮನೆಗಳನ್ನು ತಮ್ಮ ಕೂದಲಿನಿಂದ ಒರಸಿ, ಇವರಿಗೂ ಬ್ರಾಹ್ಮಣನಾದ ತನಗೂ ವ್ಯತ್ಯಾಸವಿಲ್ಲವೆಂತ ತೋರಿಸಿದರು. ಈ ನಮ್ಮ ಸಹೋದರರನ್ನು ದೂರ ಮಾಡಬಾರದು. ಅಲ್ಲದೆ ಈ ಹಿಂದುಳಿದ ಜನರಿಂದಲೇ ಆಶ್ಚರ್ಯವಂತರು ಹುಟ್ಟಿಬಂದಿರುವುದು. ಇವರು ತಮ್ಮ ರಕ್ತವನ್ನು ಬೆವರು ಮಾಡಿ ಭೂಮಿಗೆ ಚೆಲ್ಲಿ ಬಂದ ಉತ್ಪತ್ತಿಯಿಂದಲೇ ಕಳ್ಳರು ದೊಡ್ಡ ಮನುಷ್ಯರಾಗಿರುವುದು ಆದ್ದರಿಂದ ಇವರನ್ನು ದೂರ ಮಾಡಕೂಡದು. ಎಂತ ವಿಸ್ತಾರವಾಗಿ ಮಾತಾಡಿದರು.

ಮಿ. ಉಳುವಂಗಡ ಅಪ್ಪಯ್ಯನವರು—'ಅಸ್ಪೃಶ್ಯತೆಯ ಭಾವನೆಯನ್ನು ಇಟ್ಟುಕೊಳ್ಳಬಾರದು. ಹಿಂದೂ ಸಮಾಜದ ಒಂದು ದೊಡ್ಡ ಭಾಗಕ್ಕೆ ಬಹಳ ಅನ್ಯಾಯವಾಗಿದೆ. ಹಿಂದೂ ದೇಶದ ಹೊರಗೆ ಈ ಭಾವನೆಯು ಇಲ್ಲ. ಇದನ್ನು ಹೋಗಲಾಡಿಸಿದರೆ ಹಿಂದೂ ಧರ್ಮಕ್ಕೆ ಪೂರ್ಣ ಶಕ್ತಿ ಬರುವದು. ಪತಿತರೆಲ್ಲರೂ ದೇವರ ಭಕ್ತರೇ. ಅಸ್ಪೃಶ್ಯರು ದುರಭ್ಯಾಸಗಳನ್ನು ಬಿಟ್ಟು ಶುಚಿಯಾಗಿದ್ದುಕೊಂಡು ದೇವರ ಭಜನೆ ಮಾಡುತ್ತಾ ಇರಬೇಕು. ದೇವಸ್ಥಾನಗಳಿಗೆ ಪತಿತರನ್ನೂ ಹೋಗಲು ಖಂಡಿತ ಬಿಡಬೇಕು' ಎಂದು ಮಾತಾಡಿದರು.

ಮಿ. ನಿಡ್ಯಮಲೆ ಸೋಮಣ್ಣನವರು ಮಾಡಿದ ಭಾಷಣದ ಸಾರಾಂಶವೇನೆಂದರೆ—ಬ್ರಿಟಿಷ್ ಪ್ರಧಾನ ಮಂತ್ರಿಗಳು ಅಸ್ಪೃಶ್ಯರಿಗೆ ಕೊಟ್ಟ ಸುಧಾರಣೆಗೂ, ಮಹಾತ್ಮ ಗಾಂಧಿಯವರು ಅವರಿಗೆ ಕೊಡಿಸಿದ ಸುಧಾರಣೆಗೂ ಒಂದು ಮುಖ್ಯವಾದ ವ್ಯತ್ಯಾಸವಿದೆ. ಬ್ರಿಟಿಷ್ ಮಂತ್ರಿಗಳು ಕೊಟ್ಟ ಸುಧಾರಣೆಯಲ್ಲಿ 6½ ಕೋಟಿ ಜನಸಂಖ್ಯೆಯುಳ್ಳ ಹರಿಜನರು ಅನೇಕ ಕಾಲದ ವರೆಗೆ ಹಿಂದೂಗಳಿಂದ ಬೇರೆಯೇ ಇದ್ದು ಅವರೊಡನೆ ಹೊಡೆದಾಡುವ ಸಂದರ್ಭವಿದೆ. ಅವರು ಹಿಂದೂ ಸಮಾಜದಿಂದ ಕ್ರಮೇಣ ಬೇರ್ಪಟ್ಟೇ ಹೋಗುವರು. ಆದರೆ ಮಹಾತ್ಮ ಗಾಂಧಿಯವರ ಸುಧಾರಣೆಯಲ್ಲಿ ಹರಿಜನರೆಲ್ಲರೂ ಹಿಂದೂ ಸಮಾಜದ ಒಂದು ಶಾಖೆಯಾಗಿದ್ದು, ಹಿಂದೂ ಸಮಾಜದಲ್ಲಿ ಅಡಗಿ ಹೋಗಲಿಕ್ಕಿರುವರು. ಬ್ರಿಟಿಷ್ ಪ್ರಧಾನ ಮಂತ್ರಿಗಳು ಹರಿಜನರನ್ನು ಪ್ರತ್ಯೇಕ ಮಾಡಲು ನಾವೇ ಕಾರಣರಾದೆವು. ನಾವು ಅನೇಕ ಕಾಲಗಳಿಂದ ಅವರನ್ನು ಪ್ರತ್ಯೇಕವಾಗಿಟ್ಟು, ನಮ್ಮ ದೇವಸ್ಥಾನಗಳಿಗೂ ಕೂಡ ಅವರನ್ನು ಬಿಡದೆ, ಅವರನ್ನು ಒಂದು ಪ್ರತ್ಯೇಕ ಕೂಟವಾಗಿ ಬಿಟ್ಟುಬಿಟ್ಟೆವು. ಹಿಂದೂ ಧರ್ಮದ ತತ್ವವನ್ನು ತಿಳಿಯದೆ ಹರಿಜನರು ಸತ್ತ ದನದ ಮಾಂಸ ತಿನ್ನುವರೆಂತಲೂ, ಮದ್ಯಪಾನ ಮಾಡುವರೆಂತಲೂ, ಕೇವಲ ಕಿರಿಚಿತವಾದ ಕೆಲಸಗಳಿಂದ ಅವರನ್ನು ದೂರಮಾಡುತ್ತಿರುವೆವು. ಈ ಮೂರು ಕಾರಣಗಳೂ ವಿದ್ಯೆಯಿಂದಲೂ, ತಿಳುವಳಿಕೆಯಿಂದಲೂ ಖಂಡಿತವಾಗಿಯೂ ನಿರ್ಮೂಲವಾಗತಕ್ಕವು. ಹರಿಜನರನ್ನು ದೇವಸ್ಥಾನಗಳಿಗೆ ಬಿಡುವುದು ಅವರನ್ನು ಉದ್ಧರಿಸಲು ಬಹು ಸುಲಭವಾದ ಒಂದು ಮಾರ್ಗವೆಂದು ನಾನು ನಂಬುತ್ತೇನೆ. ಹಾಗೆ ನಾವು ಅವರನ್ನು ನಮ್ಮ ದೇವರ ಸ್ಥಳಗಳಿಗೆ ಬಿಟ್ಟರೆ ತನ್ನಷ್ಟಕ್ಕೆ ತಾನೇ ಹರಿಜನರ ಕೆಟ್ಟ ಗುಣಗಳು ಮಾಯವಾಗುವವು. ಹರಿಜನರನ್ನು ದೇವಾಲಯಗಳಿಗೆ ಬಿಡದಿದ್ದರೆ, ದೇವರು ಅಲ್ಲಿ ಇರಲಿಕ್ಕಿಲ್ಲವೆಂಬುದಾಗಿ ಮಹಾತ್ಮ ಗಾಂಧಿಯವರು ಹೇಳಿದ ಮಾತು ಭಾವನಾಲಂಕಾರವಲ್ಲ. ಅದು ನಿಜವಾಗಿಯೂ ದೇವವಾಕ್ಯ. ನಮ್ಮ ಸತ್ಯಧರ್ಮದ ದೇವರು ಮತ್ತು ನಮ್ಮನ್ನು ನಾವು ಹರಿಜನರಿಗೆ ಬಿಡದ್ದು ದೇವರು ನಮ್ಮನ್ನು ತೊರೆದು ಹರಿಜನರಲ್ಲೇ ವಾಸಿಸಹೊರಡುವನು ಖಂಡಿತ. ಆದ್ದರಿಂದ ಹರಿಜನರನ್ನು ಉದ್ಧರಿಸಲಿಕ್ಕಾಗಿಯೂ, ಮಹಾತ್ಮರ ತಪಸ್ಸನ್ನು ಕಾಪಾಡಲಿಕ್ಕಾಗಿಯೂ ನಾವು ಹರಿಜನರನ್ನು ನಮ್ಮ ದೇವಾಲಯಗಳಿಗೆ ಬಿಡಬೇಕೆಂದು ನಿಮ್ಮನ್ನು ದೈನ್ಯದಿಂದ ಕೇಳಿಕೊಳ್ಳುತ್ತೇನೆ.

ಮೇಲಿನ ಸ್ವಾರಸ್ಯವಾದ ಭಾಷಣಗಳು ಮುಗಿದನಂತರ ಠರಾವನ್ನು ಓಟಿಗೆ ಹಾಕಲಾಗಿ ಸರ್ವಸಮ್ಮತದಿಂದ ಮಂಜೂರಾಯಿತು. ಮಿ. ಸಿ. ಯಸ್. ವೆಂಕಪ್ಪಯ್ಯನವರು ಅಧ್ಯಕ್ಷರಿಗೂ, ಅಧ್ಯಕ್ಷರು ಸಭಿಕರಿಗೂ ವಂದಿಸಿದನಂತರ ಸಭೆಯು 7½ ಗಂಟೆಗೆ ಜಯ ಘೋಷದಿಂದ ಬರಕಾಸ್ತಾಯಿತು.

ಮಹಾತ್ಮರ ವ್ರತ.

(ಮೇರೆ ಮೌಲಾ ಭುಲಾ—ಎಂಬಂತೆ)

ಗಾಂಧಿ ನಮ್ಮವಗೇ | ಜೀವದಾನಗೈವೆ? || ಅ. ಪ. ||
ಧೀರ ತೋರ್ದ್ವ ಜನರ ಸೇವೆ | ಶಾಂತ ಕಳೆಯು ದಾರಿ ತೋರ್ದ್ವ |
ಜಾತಿ ಭೇದ ವನಿತು | ಭೀತಿ ಇಲ್ಲ ಮುಳಿಸಿ | ನೀತು ಹಿರಿ
ಚಲ || ೧ || ಸೇವೆ ಸರರ ನಾಚಿಕೆಯು | ನಾವು ಗೈಯುತ್ತಿ
ರುವುದು | ಸೇವೆ ಗಾಂಧಿಯದು | ನಾವು ಗೈಯುತ್ತಿರೆ ಇ
ವಾ ಸ್ವರ್ಗ ದೇವ || ೨ || ಅಸ್ಪೃಶ್ಯರುಂಕಾಲದಲ್ಲಿ |
ರಾಮನನ್ನು ಹಿಂದುತ್ತಿರುವ | ಘೋರ ಇಡಲು ಅತಿ | ನಿತ್ಯ
ಮ ಕರ್ಮಮೀರ | ನಾಯ ಗೈರಿ ಇಂದು || ೩ || ಇಂದು ಅ
ವನ ಜೀವ ತೆರುವೆ | ಮುಂದೆ ನಮ್ಮ ಗತಿಯು ಏನು |
ಬಂಧು ಭಗವಂತ | ಇಂದು ಚಿಂತಿಸು | ಮುಂದೆ ಸಾರ
ಬೇಗ || ೪ || 'ಸೇವಕ'

ಶ್ರೀ ಕಾವೇರಿ ತುಲಾ ಸಂಕ್ರಮಣದ ಮುಹೂರ್ತ ಪಟ್ಟಿ.

1932ನೇ ಇಸವಿ ಅಕ್ಟೋಬರ್ ತಾರೀಕು 14ನೇ ಕನ್ಯಾಮಾಸ ತೇದಿ 28ನೇ ಶುಕ್ರವಾರ ಬೆಳಿಗ್ಗೆ 9 ಗಂಟೆಗೆ ಚಂದ್ರನ ಕಾಲ ಹೊರೆಯಲ್ಲು ಅಕ್ಷಯ ಪಾತ್ರ ಮಡಗುವ ಶುಭ ಮುಹೂರ್ತ.

ಇದೇ ದಿನ ಸಾಯಂಕಾಲ 5 ಗಂಟೆ 30 ಮಿನಿಟಿಗೆ ಸರಿಯಾಗಿ ಗುರುಕಾಲ ಹೊರೆಯಲ್ಲು ಕಾಣಿಕೆ ಡಬ್ಬಿ ಮಡಗುವ ಶುಭ ಮುಹೂರ್ತ.

ಇದೇ ಅಕ್ಟೋಬರ್ ತಾರೀಕು 16ನೇ ಕನ್ಯಾ ಮಾಸ ತೇದಿ 30ನೇ ಆದಿತ್ಯವಾರ ರಾತ್ರಿ 10 ಗಂಟೆ 45 ಮಿನಿಟಿಗೆ ಭರಣಿ ನಕ್ಷತ್ರದಲ್ಲು ಶ್ರೀ ಮೂಲ ಕಾವೇರಮ್ಮನವರ ತುಲಾ ಸಂಕ್ರಮಣದ ತೀರ್ಥೋದ್ಭವ ಪುಣ್ಯಕಾಲದ ಶುಭ ಮುಹೂರ್ತ.

ಕೆ. ಚೆಂಗಪ್ಪ.
ಕೊಡಗು ಮುಜ್ರಾಯಿ ಇಲಾಖೆ. (ಪ್ರೆಸಿಡೆಂಟ್.)

---

೪ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕ ಕಂಪನಿ ಯವರ

ಜ್ವರದ ಗುಳಿಗೆಗಳು.

ಚಳಿಜ್ವರ, ಚಾತುರ್ಥೀ ಜ್ವರ, ದಿನಬಿಟ್ಟು ಬರುವ ಜ್ವರ ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮಬಾಣದಂತೆ ಇವೆ. ಬಾಟ್ಲಿಗೆ ರೂ. ೧. ಟಿ. ಪಿ. ೭ ಆಣೆ ಖರ್ಚು ತರಿಸಿಕೊಳ್ಳಿ.

(12—9) ಗಣೇಶ ರಾಮಚಂದ್ರ ಕರ್ಕ,
ಮತ್ತು ಕಂಪನಿ,
ಗಿರಗಾಂವ, ಮುಂಬಯಿ,

ರತಿ ಮನ್ಮಥ ಎಂಬ ಮರ್ಮಶಾಸ್ತ್ರ.

ಕ್ರಯ ರೂ. 1—0—0.

ಕನ್ನಡ ಭಾಷೆಯಲ್ಲಿ ಅಂದವಾಗಿ ಪ್ರಿಂಟಾಗಿದೆ. ಇದರಲ್ಲಿ ಸ್ತ್ರೀ ಪುರುಷರ ಪ್ರೀತಿಯ ರಹಸ್ಯಗಳು, ಪ್ಯಾರಿಸ್ ವೇಶ್ಯಾ ಸ್ತ್ರೀಯರ ಪ್ರೀತಿಯ ಮರ್ಮಗಳು, ಮಲೆಯಾಳ, ಬನಾರಸ್, ಫ್ರೆಂಚ್ ದೇಶದ ವೇಶ್ಯಾ ಸ್ತ್ರೀಯರ ಮಲಗುವ ಫೋಟೋಗಳು, ಇನ್ನು ಸ್ತ್ರೀ ಪುರುಷರ ಅನೇಕ ರಹಸ್ಯಗಳು 22 ಲೇಡಿಗಳ ಫೋಟೋಗಳ ಸಹಿತ ಕೂಡಿದೆ. ಈ ಶೃಂಗಾರವಾದ ಪುಸ್ತಕವನ್ನು ಓದಲು ಆನಂದವಾಗಿರುವುದು. 22 ಫೋಟೋಗಳ ಸಹಿತ ಪ್ಯಾರಿಸ್ ದೇಶದ ವ್ಯಭಿಚಾರಿಗಳ ವಿನೋದಗಳು, ಕನ್ಯೆಗಳ ಪ್ರೀತಿ, ಶಯನಾಗೃಹದ ರಹಸ್ಯಗಳು ಅಡಗಿವೆ. ಕ್ರಯ ಪುಸ್ತಕ 1ಕ್ಕೆ ರೂ. ೧—೦—೦.



ಯಂ. ಲಿಂಗಂ ಬುಕ್ ಡಿಪೋ,
ಪೋಸ್ಟ್ ಬಾಕ್ಸ್ ನಂ. 245.
12-2 ಮದರಾಸ್.

M. Lingam Book Depot.
Post Box No. 245. Madras.

ಅಸತ್ಯವನ್ನು ತಿರಸ್ಕರಿಸಿ, ಮನುಷ್ಯರನ್ನಲ್ಲ.

ಶ್ರೀಯುತ ಭಗವಾನ್‌ದಾಸರವರ ಭಾಷಣ.

ತಾ. 22–9–32ರಲ್ಲಿ ಕಾಶೀ ಪಟ್ಟಣದಲ್ಲಿ ನಡೆದ ಮಹಾಸಭೆಯಲ್ಲಿ ಬಾಬೂ ಭಗವಾನ್‌ದಾಸರು ಹೇಳಿದ್ದೇನೆಂದರೆ:—

ಈಗ ಎರಡೂವರೆ ಸಾವಿರ ವರ್ಷಗಳ ಹಿಂದೆ ಈ ಭಾರತಭೂಮಿಯಲ್ಲಿ ಬುದ್ಧ ದೇವನು ಜನ್ಮವೆತ್ತಿ, ಅವರ ಶೀಲ ತಪಸ್ಸಿನ ಬಲದಿಂದ ಅವರ ಜೀವನ ಕಾಲದಲ್ಲಿ ಗಂಗಾ ನದಿಯ ಉಪ್ಪತ್ಯಕ್ಕೆ ಸುತ್ತ, ಉತ್ತರ ಭಾರತದ ಮನುಷ್ಯ ವರ್ಗ ಪ್ರವೃತ್ತಿಯನ್ನು ಅನಾಚಾರ, ದುರಾಚಾರ, ಭೇದಭಾವ, ಹಿಂಸಾ, ಅಸತ್ಯ, ಮುಂತಾದ ಅಸುರ ಭಾವಗಳಿಂದ ತಪ್ಪಿಸಿ, ಅಹಿಂಸಾ, ಸತ್ಯ, ಅಸ್ತೇಯ, ಸದಾಚಾರ, ಮುಂತಾದ ಸದ್ಗುಣಗಳ ಕಡೆಗೆ ತಿರುಗಿಸಿದರು. ಇದರ ಫಲಿತಾಂಶವೇನಾಯಿತೆಂದರೆ, ಭಾರತ ವರ್ಷದ ಇತಿಹಾಸವು ಸುಮಾರು ಸಾವಿರ ವರ್ಷಗಳ ವರೆಗೆ ಅಂಧಕಾರದಿಂದ ತಪ್ಪಿ ಉಜ್ವಲ ಪ್ರಕಾಶದಲ್ಲಿ ಇತ್ತು. ಈಗ ಎರಡೂವರೆ ಸಾವಿರ ವರ್ಷಗಳನಂತರ ಎಂಥಾ ಒಂದು ಉತ್ಕೃಷ್ಟ ಜೀವವು ಇಲ್ಲಿ ಜನಿಸಿತ್ತಿದೆಯೆಂದರೆ ಅವರ ಜೀವನಕಾಲದಲ್ಲಿ ಬರೇ ಉತ್ತರ ಹಿಂದೂಸ್ಥಾನದಲ್ಲಲ್ಲ, ಬರೇ ದಕ್ಷಿಣ ಹಿಂದೂಸ್ಥಾನದಲ್ಲಲ್ಲ, ಬರೇ ಪೂರ್ವ ಹಿಂದೂಸ್ಥಾನದಲ್ಲಲ್ಲ, ಬರೇ ಪಶ್ಚಿಮ ಹಿಂದೂಸ್ಥಾನದಲ್ಲಲ್ಲ, ಸಮಸ್ತ ಹಿಂದೂಸ್ಥಾನವೂ ಅಲ್ಲ, ಆದರೆ ಪೃಥ್ವೀತಲದ ಸಮಸ್ತ ದ್ವೀಪಗಳ, ಸಮಸ್ತ ಭೂಮಿಗಳ, ಸಮಸ್ತ ನಾಗರೀಕ ದೇಶಗಳ ಮತ್ತು ಜಾತಿಗಳ ಧ್ಯಾನವನ್ನು, ವ್ಯಕ್ತಿಗಳ ಮತ್ತು ಜಾತಿಗಳ ಉದ್ಧಾರದ ಒಂದೇ ಶಾಶ್ವತ ಉಪಾಯದ ಅಹಿಂಸಾ, ಸತ್ಯ ಮುಂತಾದವುಗಳ ಕಡೆಗೆ ತನ್ನ ಶೀಲ ಸತ್ಯಾಗ್ರಹ ಅಹಿಂಸಾಗ್ರಹದಿಂದ, ತನ್ನ ಉಗ್ರ ತಪಸ್ಸು ಮತ್ತು ಸ್ವಾರ್ಥ ತ್ಯಾಗದ ಬಲದಿಂದ ತಿರುಗಿಸುತ್ತಾರೆ.

ಈ ತ್ಯಾಗ, ವಿಭೂತಿಮತ್, ಶ್ರೀಮತ್, ಸತ್ವದ ಬಲದಿಂದಲೂ ಜೀವವಾದ ಶೀಲೋಂತ ಪ ಭವವಾದ ಈ ಈಶ್ವರನ ಕಲೆಯು ಭಾರತ ಭೂಮಿಗೆ ಯಾಕೆ ಕಳುಹಿಸಲ್ಪಟ್ಟಿದೆಯೆಂದರೆ, ಸಮಸ್ತ ಮನುಷ್ಯ ಜಾತಿಗೆ ಒಳ್ಳೇದು ಮಾಡಲಿಕ್ಕಾಗಿಯೂ, ದಂಭ, ದರ್ಪ, ಅಭಿಮಾನ, ಕಾಮ, ಕ್ರೋಧ, ಲೋಭ ಈ ಕಾರ್ ಮುಂತಾದ ಅಧರ್ಮಮಯವಾದ ಅಸುರಭಾವಗಳನ್ನು ನಾಶ ಮಾಡಿ ಅಹಿಂಸಾ, ಸತ್ಯ, ಅಸ್ತೇಯ, ಶೌಚ, ಇಂದ್ರಿಯ ನಿಗ್ರಹ ಮುಂತಾದ ಮೂಲ ಧರ್ಮಗಳನ್ನು ತನ್ನ ಅದ್ಭುತ ತಪಸ್ಸಿನ ಆಚರಣದಿಂದ, ಜೀವನದಿಂದ ಮಾನವ ಸಮಾಜದ ಚಿತ್ತದಲ್ಲಿ ಪುನಃ ಸ್ಥಾಪನೆ ಮಾಡಲಿಕ್ಕಾಗಿಯೂ ಆಗಿದೆ.

ನೋಡಿದರೆ ಅಸ್ಪೃಶ್ಯ ಸಮಸ್ಯೆಯು ಬೇರೆ ಪ್ರಶ್ನೆಗಳಿಗಿಂತ ಕಡಿಮೆ ಗಂಭೀರದ್ದಾಗಿ ಕಾಣುವುದು. ಆದರೆ ನಿಜವಾಗಿಯೂ ಎಲ್ಲದಕ್ಕಿಂತಲೂ ದೊಡ್ಡದಾಗಿದೆ. ಪ್ರಾಚೀನ ಕಾಲದಲ್ಲಿ ಈ ದೇಶದಲ್ಲಿ ಅಭೇದ ಬುದ್ಧಿಯು, ಅದ್ವೈತ ಭಾವನೆಯು, ಸಮಸ್ತ ಜೀವಾತ್ಮಗಳು ಒಂದೇ ಪರಮಾತ್ಮನ ಅಂಶಗಳೆಂಬ ಭಾವನೆಯು ಸಂಚರಿಸುತ್ತ. ಮತ್ತು ಎಷ್ಟರ ವರೆಗೆ ಈ ಸಂಚಿಕೆಯು ಇತ್ತೋ ಅಷ್ಟರ ವರೆಗೆ ಎಲ್ಲಾ ತರದ ಪರಸ್ಪರ ಸಹಕಾರ, ಸ್ವಾತಂತ್ರ್ಯ ಮತ್ತು ಸುಖ ಸಮೃದ್ಧಿ ಇತ್ತು. ಎಂದಿನಿಂದ ಈ ಅಭೇದ ಬುದ್ಧಿಯು ಮಾಯವಾಯಿತೋ ಮತ್ತು ಪರಸ್ಪರ ಭೇದ ಭಾವಗಳೂ ಮತ್ತು ಪರಸ್ಪರ ಅಸಹಕಾರ ಹುಟ್ಟಿತೋ, ಅಂದಿನಿಂದ ಈ ದೇಶದ ಪತನವಾಯಿತು.

ಈ ಮಹಾ ಭೇದ ಬುದ್ಧಿ, ದುರ್ಬುದ್ಧಿಯು ಸಂಪೂರ್ಣವಾಗಿ ತೊಳೆದು ಹೋಗದ ವಿನಹ ಭಾರತ ವರ್ಷದ ಜೀರ್ಣೋದ್ಧಾರವು ಅಸಂಭವವಾಗಿದೆ. ಮತ್ತು ಈ ತೊಳೆಯುವಿಕೆಯು ಆಗದೇ ಇದ್ದರೆ ಮಹಾತ್ಮ ಗಾಂಧಿಯವರಂಥ ಮಹಾಪುರುಷನು ಅಂತಿಮ ಉಪವಾಸದ ವ್ರತವನ್ನು ಕೈಕೊಂಡು ಹಿಂದೂಗಳೆನಿಸಿಕೊಂಡವರ ಹೃದಯದಲ್ಲಿ ಬೆಂಕಿ ಹಚ್ಚಬೇಕು. ಅಂಥಾ ಬೆಂಕಿಯಿಂದ ದುರ್ಭಾವ, ಭೇದಭಾವ ಸುಟ್ಟು ಹೋಗಿ ಅಭೇದಭಾವ, ಸದ್ಭಾವವೆಂಬ ಚಿನ್ನ ಮಾತ್ರ ಉಳಿದೀತು. ಹಿಂದೂ ಸಮಾಜದ ಒಳಗಿರುವ ಈ ಸ್ಪೃಶ್ಯಾಸ್ಪೃಶ್ಯವೆಂಬ ಕಳಂಕವನ್ನು ಹೋಗಲಾಡಿಸಿಕೊಂಡರೆ ಬೇರೆ ಕಳಂಕಗಳೆಲ್ಲಾ ತಾವಾಗಿಯೇ ಹೋಗುತ್ತವೆ. ಮತ್ತು ಹಿಂದೂ ಸಮಾಜಕ್ಕೂ ಬೇರೆ ಸಮಾಜಗಳಿಗೂ ಇರುವ ವ್ಯತ್ಯಾಸಗಳನ್ನು ತೀರಿಸಿಕೊಳ್ಳಬಹುದು. ಮತ್ತು ಸಮಸ್ತ ಮನುಷ್ಯ ಜಾತಿಯ ಸಂಧಿಯ ಯುಗದ ಅವತಾರವಾದೀತು. ಇದು ಸಾಧ್ಯವಾಗದಿದ್ದರೆ ಹಿಂದೂ ಸಮಾಜವು ಉಳಿಯಲಿಕ್ಕಿಲ್ಲ.

ಹಿಂದೂ ಸಮಾಜದ ದೋಷಕ್ಕಾಗಿ, ಪಾಪಕ್ಕಾಗಿ ಮಹಾತ್ಮ ಗಾಂಧಿಯವರಿಗೆ ದೇಹ ಬಿಡಬೇಕಾಗಿ ಬಂದರೆ ಹಿಂದೂ ಸಮಾಜದ ಶರೀರವೂ ಸ್ಥಿರವಾಗಿಯೂ ಉಳಿಯಲಿಕ್ಕಿಲ್ಲ. ಹಿಂದೂ ಸಮಾಜವು ನಷ್ಟ ಭ್ರಷ್ಟವಾಗಿ ಹೋದೀತು. ಮತ್ತು ಒಂದು ವೇಳೆ ಭಾರತ ಭೂಮಿಯಲ್ಲಿ ಮಾತ್ರವಲ್ಲ, ಒಟ್ಟು ಭೂಮಂಡಲದಲ್ಲಿ ಧರ್ಮವು ಹ್ರಾಸವಾಗಿ, ದೈವೀ ಸಂಪತ್ತಿಯನ್ನು ನಿಬಿಡತ ಆಸುರೀ ಸಂಪತ್ತಿಯು, ಆಸುರೀ ಸ್ವಭಾವ ಭಾವನೆಗಳ ಅಹಂಕಾರ ದರ್ಪ, ಮದ, ಲೋಭ, ಹಿಂಸಾ, ಅಸತ್ಯ ಮುಂತಾದವುಗಳ ಆಧಿಪತ್ಯವು ನಡೆದೀತು. ಮೂಲ ಧರ್ಮ ಉಚ್ಛೇದನಕಾರಕ, ಸಮರ್ಥನಕಾರಕ, ಪೋಷಕರಾದ ಮಹಾತ್ಮರ ತನ್ನ ಕಾರ್ಯವು ಸಾಧ್ಯವಿಲ್ಲವೆಂತ ಯೋಚಿಸಿ ಅಥವಾ ಸೋತೆನೆಂತ ಎಣಿಸಿ, ಪೃಥ್ವಿಯಿಂದ ಬಿಟ್ಟು ಹೋದರೆ ಸ್ವಲ್ಪ ಕಾಲದ ವರೆಗೆ ಸಮಸ್ತ ಪೃಥ್ವೀತಲದಲ್ಲಿ ಅಧರ್ಮದ, ದೈತ್ಯಭಾವದ, ರಾಕ್ಷಸಭಾವದ ಪ್ರಭಾವವು ತುಂಬಿ ಹೋದೀತು. ಆದರೆ ಒಂದು ದಿನವಲ್ಲ, ಒಂದು ದಿನ, ಸ್ವಲ್ಪ ಹಿಂದು ಮುಂದೆ, ಕಡವಾಗಿಯಾದರೂ, ಸ್ವಂತವಾಗಿಯಾದರೂ ಮತ್ತೆ ಧರ್ಮದ ಅವತಾರವು, ಜಯವೂ ಆದೀತು. ಆದರೆ ಹಿಂದೂ ಧರ್ಮ ಮತ್ತು ಹಿಂದೂ ಸಮಾಜದ ಹೆಸರು ಸಹ ಉಳಿಯಲಿಕ್ಕಿಲ್ಲ. ಯಹೂದಿ ಜಾತಿಯು ತನ್ನ ಜಾತಿಯ ಧರ್ಮವತಾರ ಏಸು ಕ್ರಿಸ್ತನನ್ನು ಕೊಲ್ಲಿಸಿದರು. ಅದಾದ 35, 40 ವರ್ಷಗಳ ಒಳಗೇನೇ ಏಸುವಿನ ಧರ್ಮವು ಕ್ರಮ ಕ್ರಮವಾಗಿ ಹಬ್ಬಲು ಪ್ರಾರಂಭವಾಗಿ ಈಗ ಮನುಷ್ಯ ಜಾತಿಯ ನಾಲ್ಕನೇ ಒಂದು ಭಾಗಕ್ಕಿಂತ ಹೆಚ್ಚು ಜನರು ಆ ಧರ್ಮವನ್ನು ಅವಲಂಬಿಸಿದವರಾಗಿದ್ದಾರೆ. ಮತ್ತು ಅಧಿಕ ಬಲಾಢ್ಯ ಸಾಮ್ರಾಜ್ಯವು ಆ ಧರ್ಮವನ್ನೇ ಅನುಸರಿಸಿದ್ದಾಗಿದೆ.

ಇಂಥಾ ಉದಾಹರಣೆಗಳನ್ನು ನೋಡಿ ಹಿಂದೂ ಸಮಾಜವು ಈಗ ಮಾಡಬೇಕಾದ ಮುಖ್ಯ ಕೆಲಸವು ಯಾವುದಾಗಿರಬೇಕೆಂದರೆ, ಹಿಂದು ಮುಂದು ನೋಡದೆ ಸ್ಪೃಶ್ಯಾಸ್ಪೃಶ್ಯ ಭಾವನೆಯ ಭೇದ ಭಾವವನ್ನು ಬಿಟ್ಟು ಬಿಡಬೇಕು. ಧರ್ಮವು ನಾಶವಾದರೆ ಮನುಷ್ಯ ವ್ಯಕ್ತಿ, ಮನುಷ್ಯ ಜಾತಿಯು ನಾಶವಾಗುತ್ತದೆ. ಧರ್ಮದ ರಕ್ಷಣೆಯಾದರೆ ಮನುಷ್ಯ ಜಾತಿಯು, ವ್ಯಕ್ತಿಯು ರಕ್ಷಣೆಹೊಂದುತ್ತದೆ. ಧರ್ಮವು ನೀತಿವಾಗಲು ಬಿಡಬಾರದು. ಬಿಟ್ಟರೆ ನಾವೂ ನಾಶವಾಗುತ್ತೇವೆ. ಯಾವ ಒಳ್ಳೇ ಕಾರ್ಯವೂ ಧರ್ಮವಿಲ್ಲದೆ ಆಗುವುದಿಲ್ಲ. ಪ್ರತ್ಯೇಕ ಧರ್ಮದ ಹೇತುವನ್ನು ತಿಳಿದುಕೊಂಡು ಆಚರಿಸಬೇಕು. ಹಾಗಾದರೆ ಮಾತ್ರ ಶುಭ ಲೋಕಗಳ ಪ್ರಾಪ್ತಿಯಾದೀತು.

ಸಹೋದರ, ಸಹೋದರಿಯರೇ, ಅಸ್ಪೃಶ್ಯತೆಯ, ಮುಟ್ಟಬಾರದೆಂಬುದರ ಕಾರಣಗಳನ್ನು ತಿಳಿದುಕೊಳ್ಳಿ. ಹಿಂದೂಗಳಲ್ಲಿ ಎಲ್ಲಾ ವರ್ಣಗಳಲ್ಲಿ ಮನುಷ್ಯ ಬಂದ ಪ್ರತಿಯೊಂದು ಹುಳಿಯೂ ತಿಂಗಳಿಗೆ ಮೂರುದಿನ ಅಸ್ಪೃಶ್ಯಳಾಗುತ್ತಾಳೆ. ಯಾರಾದರೂ ಮೃತರಾದರೆ ಅಂಥಾ ಮೃತನ ಸಮೀಪ ಬಂಧುಗಳು ಹತ್ತು ದಿನಗಳ ವರೆಗೆ ಅಸ್ಪೃಶ್ಯರಾಗುತ್ತಾರೆ. ಯಾವನೊಬ್ಬನ ಕೈಕಾಲು ಅಥವಾ ಪೂರಾ ದೇಹವು ಯಾವುದಾದರೂ ವಿಶೇಷ ಮಲದ ಸ್ಪರ್ಶದಿಂದ ಮೈಲಿಗೆಯಾದರೆ ಸರ್ವ ಜಾತಿಯಲ್ಲಿಯೂ ಮಿಂದು ತೊಳೆದು ಸ್ವಚ್ಛ ಶುಚಿಯಾಗುವ ವರೆಗೂ ಅವನು ಅಸ್ಪೃಶ್ಯನಾಗುತ್ತಾನೆ. ತಾನು ಪವಿತ್ರನೆಂದು ಭಾವಿಸುವ ಹಿಂದೂವು ಸಹ ನಿತ್ಯವೂ ಬೆಳಿಗ್ಗೆ ಎದ್ದ ಮಲವನ್ನು ತನಗಾಗಿ ತೊಳೆಯುವ ಕೆಲಸ ಮಾಡುತ್ತಾನೆ; ತಾನೇ ಅಸ್ಪೃಶ್ಯನಾಗುತ್ತಾನೆ. ಆದರೆ ಮತ್ತೆ ಸ್ನಾನ ಮಾಡಿಕೊಂಡನಂತರ ಸ್ಪೃಶ್ಯನಾಗುತ್ತಾನೆ. ಆದರೆ ಅಸತ್ಯವನ್ನು ತಿರಸ್ಕರಿಸಬೇಕು, ಮನುಷ್ಯರನ್ನಲ್ಲವೆಂತಾಯಿತು.

ಹಿಂದೂಗಳ ನಂಬಿಕೆ ಮೇರೆ ಬ್ರಹ್ಮದೇವನ ಶರೀರದಿಂದ ಹುಟ್ಟಿದ ನಾಲ್ಕು ಪುತ್ರರು ಅಣ್ಣ ತಮ್ಮಂದಿಯರು. ಮುಂಚೆ ಹುಟ್ಟಿದವನು, ಅನಂತರ ಹುಟ್ಟಿದವನು ಆದಾಗ್ಯೂ ತಮ್ಮನೆಂತ ಎನಿಸಿಕೊಂಡರೂ ಸಹೋದರರೇ. ಯಾವನಾದರೂ ಒಬ್ಬ ಸಹೋದರನು ಇನ್ನೊಬ್ಬನನ್ನು ಅಸ್ಪೃಶ್ಯನೆನ್ನಲಿಕ್ಕೂ, ಬ್ರಹ್ಮದೇವನ ಪಿತಾ, ಪಿತಾಮಹನ ದರ್ಶನಕ್ಕಾಗಿ ಅವನ ದೇವಸ್ಥಾನದಲ್ಲಿ ಹೋಗಲಿಕ್ಕೆ ಬಿಡುವುದಿಲ್ಲವೆನ್ನಲಿಕ್ಕೂ ಹೇಗೆ ಅಧಿಕಾರ ಬಂದೀತು? ಇದೆಲ್ಲಾ ಅಹಂಕಾರ, ತಿರಸ್ಕಾರದಿಂದ ಹುಟ್ಟಿದ ದುಷ್ಟಾಕೆಯಾಗಿದೆ. ಅಲ್ಲದೆ ಇದು ಒಟ್ಟು ಹಿಂದೂ ಸಮಾಜದ ಶರೀರದಲ್ಲಿ ವಿಷವನ್ನು ತುಂಬಿದೆ.

ಯಾರಿಗಾದರೂ ಏನಾದರೂ ಅಂಟು ರೋಗ ತಗಲಿದರೆ, ಯಾರದ್ದಾದರೂ ಶರೀರ ವಸ್ತ್ರವು ಕೊಳಕಾಗಿರದಿದ್ದರೆ, ಸ್ನಾನ ಮಾಡಿಕೊಳ್ಳದಿದ್ದರೆ ಅಂಥವನನ್ನು ಯಾವ ಜಾತಿಯವನೇ ಆದರೂ ದೇವಸ್ಥಾನಗಳಿಗಾಗಲೀ, ತೀರ್ಥಸ್ಥಾನಗಳಿಗಾಗಲೀ ಹೋಗದಂತೆ ತಡೆಯಬೇಕು. ಮತ್ತು ಅವನು ನಿರ್ಮಲವಾಗುವ ವರೆಗೂ ತಡೆಯಬೇಕು. ಇದು ಉಚಿತವಾಗಿದೆ. ಯಾಕೆಂದರೆ, ಬೇರೆಯವರಿಗೆ ಪ್ರತ್ಯಕ್ಷ ಕ್ಲೇಶವಾಗುವ ಸಂಭವವಿದೆ. ಇಷ್ಟಲ್ಲದೆ ಒಬ್ಬ ಸಹೋದರನು ಇನ್ನೊಬ್ಬನನ್ನು ತಡೆಯಲಿಕ್ಕಾಗಲೀ ಯಾವ ಜಾತಿಯವನೆಂತ ಕೇಳಲಿಕ್ಕಾಗಲೀ ಹಕ್ಕಿರುವುದಿಲ್ಲ. ಈ ಹೇತುಯುಕ್ತವಾದ ಸದ್ವರ್ಮದ ಪ್ರಚಾರದಿಂದ ಈ ಸಮಸ್ಯೆಯು ಅಂತಿಮ ನಿರ್ಣಯವಾಗಲು ಸಾಧ್ಯವಿದೆ. ಮತ್ತು ಮಹಾತ್ಮಾಜೀಯವರ ದಾರುಣ ಪ್ರತಿಜ್ಞೆಯಿಂದ ಹಿಂದೂ ಜನರ ಮನಸ್ಸು ಬದಲಾದೀತು ಮತ್ತು ಈ ಕಾರ್ಯವು ಸಿದ್ಧಿಯಾದೀತು ಎಂಬ ಆಶೆ ಇದೆ; ಸರಿಯಾದ ದಾರಿಯಲ್ಲಿ ಹೋಗಲಿಕ್ಕೂ, ತ್ವರೆಯಿಂದ ಹೋಗಲಿಕ್ಕೂ, ತನ್ನೊಳಗೆ ಶೀಘ್ರದಲ್ಲಿ ರಾಜಿಮಾಡಿಕೊಳ್ಳಿ ಎಂಬುದಕ್ಕೂ ಮಹಾತ್ಮ ಗಾಂಧಿಯವರ ಈ ಮಹಾವ್ರತವು ಚಾವಟಿಕೆಯಾಗಿದೆ. ಸೂರ್ಯನು ಆಕಾಶದಲ್ಲಿ ಹೊಳೆಯುತ್ತಿದ್ದಾನೆ. ಆದರೆ ಅವನ ಕಡೆ ಕಣ್ಣು ತಿರುಗಿಸದಿದ್ದರೆ ಅವನು ಇರುವುದು ಹೇಗೆ ತಿಳಿದೀತು? ಮನುಷ್ಯ ಸಮಾಜದ ಕಣ್ಣನ್ನು ತಿರುಗಿಸುವುದೂ, ಅವರ ಹೃದಯವನ್ನು ಸದ್ಧರ್ಮದ ಕಡೆ ಬಾಗಿಸುವುದೂ, ಅವರ ಕಲೆಯನ್ನು ಒದಲಾಯಿಸುವುದೂ, ಈ ಕೆಲಸಗಳು ಮಹಾತ್ಮರ, ಅವತಾರ ಪುರುಷರ ಅತ್ಯಂತ ಬಲ, ತಪೋ ಬಲದ ಕೆಲಸವಾಗಿದೆ. ಇಂಥಾ ಕೆಲಸವು ಮಹಾತ್ಮ ಗಾಂಧಿಯವರ ಈ ಭೀಷಣ ಪ್ರತಿಜ್ಞೆಯಿಂದ ಆಗಬೇಕು, ಆಗುತ್ತಲಿದೆ. ಮನಸು ಬದಲಾಗುತ್ತಾ ಬಂದಂತೆ ಅಹಂಕಾರವು ದೂರವಾದಂತೆ ಅಸತ್ಯವನ್ನು ಮಾತ್ರ ದೂರ ಮಾಡಿ ವರ್ಜಿಸಬೇಕೇ ಹೊರತು, ಮನುಷ್ಯರನ್ನಲ್ಲ, ಸಹೋದರಿಯರನ್ನಲ್ಲ, ಜಾತಿಯವರನ್ನಿಂದಲ್ಲ, ಎಂಬ ಸ್ವತಃಸಿದ್ಧವಾದ ಸತ್ಯವು ಹೊಳವಳಿಕೆಗೆ ಬಂದೀತು.

'ಪ್ರತಾಪ'

ಅಮೇರಿಕದ ಮಿತ್ರರೊಬ್ಬರು ಗಾಂಧಿಯವರಿಗೆ ಬರೆದ ಪತ್ರ.

ಸ್ವರಾಜ್ಯದ ಗುರಿಯನ್ನು ಮುಟ್ಟಲಿರುವಾಗಲೇ, ನೀವು ಸಾಯುವ ವರೆಗೂ ಉಪವಾಸ ಮಾಡುವ ಈ ವ್ರತವನ್ನು ಕೈಕೊಂಡು, ತನ್ಮೂಲಕ ಹಿಂದೀ ರಾಷ್ಟ್ರೀಯತ್ವದ ನಿಮ್ಮ ನಿರ್ವಿವಾದದ ಜನಮುಖಂಡತ್ವವನ್ನು ಮನಃಪೂರ್ವಕವಾಗಿ ಕೈಬಿಟ್ಟು, ಈ ಪ್ರಕಾರ ಹಿಂದೀ ರಾಷ್ಟ್ರೀಯತ್ವದ ವಿನಾಶವನ್ನು ಬಯಸುವುದೇಕೆಂದು ಅಮೇರಿಕದವರಿಗೆ ತಿಳಿಯದಾಗಿದೆ. ಇಂಡಿಯಕ್ಕಾಗಿ ಸಾಯುತ್ತೇನೆಂದು ನೀವು ಅನೇಕ ಬಾರಿ ಹೇಳುತ್ತೀರಿ. ಹಾಗಿರುತ್ತ, ಯಾರ ಪ್ರತಿನಿಧಿಗಳೆಂದು ನೀವು ಹೇಳುತ್ತೀರೋ ಅಂಥಹ ಸಮಗ್ರ ಭಾರತಕ್ಕೆ ಸಾಯದೆ, ಕೇವಲ ಹಿಂದೀಯರ ಒಂದು ಪಂಗಡಕ್ಕಾಗಿಯೇ ನೀವು ಸಾಯಲು ಹೊರಟಿರುವಿರಲ್ಲ! ಸ್ವರಾಜ್ಯದ ರಣಾಗ್ರವೆಂಬುದು ಮತಸಂಬಂಧವಿಲ್ಲದ್ದೆಂದೂ, ಕಾಂಗ್ರೆಸಿನ ಮುಖಂಡರಾಗಿ ನೀವು ಹಿಂದೂ, ಮುಸ್ಲಿಮ್, ಪಾರ್ಸಿ, ಕ್ರೈಸ್ತ ಇವರೆಲ್ಲರ ಪರವಾಗಿಯ ಈ ವ್ಯಾಜ್ಯ ನಡೆಯಿಸುವಿರೆಂದೂ, ನೀವೇ ನನಗೊಮ್ಮೆ ಹೇಳಿದ್ದೀರಿ. ಹಾಗಾದರೆ ಮತಸಂಬಂಧವಾದ ಒಂದು ತತ್ವ ಸಾಧನೆಗಾಗಿ, ನೀವೀಗ ನಿಮ್ಮ ಮುಖಂಡತ್ವವನ್ನು ಉದ್ದೇಶಪೂರ್ವಕವಾಗಿ ಕೈಬಿಡುವುದೇಕೆ? ಇದಕ್ಕೆ ನೀವು ಕೊಡುವ ಉತ್ತರವನ್ನು ಅಮೇರಿಕವು ಮೆಚ್ಚದಿರಲಾರದು.

ಮಹಾತ್ಮರ ಉತ್ತರ.

ನಿಜವಾದ ಸ್ವರಾಜ್ಯಕ್ಕೆ ಇದೇ ನಿಶ್ಚಿತ.

ನಿಮಗೆ ವಂದನೆ. ಅಮೇರಿಕದ ಈ ಭ್ರಮೆಯಿಂದ ನನಗೇನೂ ಆಶ್ಚರ್ಯವಾಗಿಲ್ಲ. ಜಗತ್ತನ್ನು ಯಥಾರ್ಥವಾಗಿ ಪರಿಗಣಿಸದಿರುವುದು ನನ್ನ ಒಳ್ಳೆಯ ಅದೃಷ್ಟವೋ, ಕೆಟ್ಟ ಅದೃಷ್ಟವೋ ತಿಳಿಯದು. ಹೊಸ ರೀತಿಯ ಮೇರೆಗೆ ಹೊಸ ಪ್ರಯೋಗಗಳೂ, ಹಳೇ ಪ್ರಯೋಗಗಳೂ ಅನೇಕಾವರ್ತಿ ತಪ್ಪುಗ್ರಹಿಕೆಗೆ ಕಾರಣವಾಗುತ್ತದೆ. ಧ್ಯಾನದ ನಿಯಮಗಳು ಹೊರಗಿನ ಪ್ರಪಂಚದೊಡನೆ ಪತ್ರವ್ಯವಹಾರವನ್ನು ನಡೆಸದಂತೆ ನಿಷೇಧಿಸುತ್ತದೆ. ಈ ನಿಯಮಗಳನ್ನು ನಾನು ಅಕ್ಷರಶಃ ಹೃದಯದ ಸತ್ಯಾರ್ಥದ ಮೇರೆಗೆ ಪಾಲಿಸುತ್ತ ಬಂದಿರುತ್ತೇನೆ.

ಈಗ ನಡೆಯುತ್ತಿರುವ ಸಂಧಿಪ್ರಸ್ತಾವದಿಂದ ಅಸ್ಪೃಶ್ಯರಿಗೆ ಪ್ರಬಲವು ಕೊಟ್ಟದ್ದಕ್ಕಿಂತಲೂ ಹೆಚ್ಚಾದ ಪಿಶಾಚವಾದ ಪ್ರಾತಿನಿಧ್ಯವೇ ದೊರೆಯುವುದು. ಅಸ್ಪೃಶ್ಯರ ಮುಖಂಡರಿಗಿಂತಲೂ ನನ್ನನ್ನೇ ಅಸ್ಪೃಶ್ಯರು ಹೆಚ್ಚಾಗಿ ಅನುಸರಿಸುತ್ತಿರುವರೆಂದು ನನಗೆ ಖಚಿತವಿದ್ದುದರಿಂದಲೇ, ನಾನು ಈ ರೀತಿಯ ಉಪವಾಸವ್ರತವನ್ನು ಕೈಕೊಳ್ಳಲು ಧೈರ್ಯಗೊಂಡೆ. ಅಸ್ಪೃಶ್ಯರ ಮುಖಂಡರಲ್ಲಿ ಕೂಡ ಅನೇಕ ಮಂದಿ ನನ್ನ ಅನುಯಾಯಿಗಳಿರುವರೆಂದು ನಾನು ಬಲ್ಲೆ. ಅವರೊಡನೆ ವ್ಯವಹಾರ ನಡೆಯಿಸಿ, ಅಸ್ಪೃಶ್ಯರ ಹಿತಾಭಿವೃದ್ಧಿಯನ್ನು ಮಾಡಲು ನಾನು ಶಕ್ತಿಮೀರಿ ಯತ್ನಿಸುವೆನು.

ಅಸ್ಪೃಶ್ಯರ ಮುಖಂಡರಿಗಿಂತಲೂ ನನಗೇ ಅವರ ವಿಷಯದಲ್ಲಿ ಹೆಚ್ಚು ಗೊತ್ತಿದೆ ಎಂದು ನಾನು ಊಹಿಸಿಕೊಂಡು ಹೇಳುತ್ತಿರುವುದರ ಕುರಿತು ಅಮೇರಿಕವು ಗಾಬರಿಯಾಗಬೇಕಿಲ್ಲ. ನಾನು ಜನ್ಮತಃ ಸ್ಪೃಶ್ಯನಾದರೂ ಕಳೆದ ಐವತ್ತು ವರ್ಷಗಳಿಂದ, ನನ್ನ ಅಭ್ಯಾಸಾನುಸಾರವಾಗಿ ನಾನು ಅಸ್ಪೃಶ್ಯನಾಗಿಯೇ ಇದ್ದೇನೆ. ನನ್ನ ಮತವೇ ನನ್ನ ರಾಜನೀತಿಗೆ ಮೂಲವೆಂಬುದು ಅಮೇರಿಕದವರಿಗೆ ತಿಳಿದಿರಲಿ. ನನ್ನ ಅಂತ್ಯವು ಉಪವಾಸದಿಂದಲೇ ಆಗಬೇಕೆಂದು ದೇವರ ಆಜ್ಞೆ ಇರುವುದಾದರೆ ಅದು ರಾಷ್ಟ್ರೀಯತ್ವದ ಮುಖಂಡತ್ವವನ್ನು ಇಷ್ಟಕ್ಕೇ ಬಿಟ್ಟ ಸಿದೆ ಎಂಬುದು ನಿಜ ನಾದ. ಆತ್ಮಬಲಿಯ ಮರಣದಿಂದ ರಾಷ್ಟ್ರೀಯತ್ವವು ಬಲಗೊಳ್ಳುವುದೆಂಬುದು ನಿಸ್ಸಂದೇಹ.

ನನ್ನ ಉಪವಾಸದ ಅಂತರಂಗದ ಉದ್ದೇಶವನ್ನು ಹಿಂದೂಗಳಲ್ಲಿ ಬಹುಮಂದಿ ಈಗಾಗಲೇ ತಿಳಿದಿರುವರು. ಈ ಪ್ರಸ್ನದ ಫಲವಾಗಿ, ನಿರಂತರ 'ಸೆಲ್ಫ್ ಗವರ್ನಮೆಂಟು' ಮುಂದುವರಿಯುತ್ತಿರುವುದು ನನಗೆ ಖಚಿತವಾಗಿದೆ. ಈ ಉಪವಾಸವ್ರತವನ್ನು ಪೂರೈಸುವ ಶಕ್ತಿ ದೇವರು ನನಗೆ ಕೊಡುವುದಾದರೆ, 'ಸೆಲ್ಫ್ ಗವರ್ನಮೆಂಟು' ಮುಂದುವರಿಯುವುದನ್ನು ನಾವು ನೋಡಬಹುದು. ಅದು ಆರಂಭ ಸಮಾಪ್ತಿಯವರೆಗೆ ನಡೆಯುವ ಪ್ರತಿ ದಿನವೂ, ನನಗೆ 'ಸೆಲ್ಫ್ ಗವರ್ನಮೆಂಟ'ನ್ನು ಹತ್ತಿರ ತರುತ್ತಿದೆ ಎಂದೂ, ಅದಕ್ಕೆ ಈ ಉಪಾಯವಲ್ಲದೆ ಬೇರೊಂದು ಇಲ್ಲವೆಂಬುದೂ ಖಚಿತ.

ಅಸ್ಪೃಶ್ಯತೆಗಾಗಿ ನಾನು ಸಾಯಲು ಸಿದ್ಧನಾದುದು, ಹಿಂದೀ ಇಂಡಿಯಾಕ್ಕಾಗಿ, ಅಸ್ಪೃಶ್ಯತೆಯ ನಿವಾರಣೆಗಾಗಿ, ಸ್ವರಾಜ್ಯ ಸಾಧನೆಗಾಗಿ ಮಾಡಿದ ಒಂದು ಸಿದ್ಧತೆ. ಅದು ಸ್ವರಾಜ್ಯಸಿದ್ಧಿಯ ಒಂದು ಮುಖ್ಯಾಂಗ. ಹಿಂದೂಸಮಾಜವನ್ನು ಭ್ರಷ್ಟವನ್ನಾಗಿ ಮಾಡುವ ಯಾವನೊಬ್ಬ ಅಲ್ಪ ಬಡ ಹಿಂದೀಯನಾದರೂ ಇಲ್ಲದ ಆ ಸ್ವರಾಜ್ಯವು ನನಗೆ ಬೇಡ. ನನಗೆ ಮತವೆಂಬುದು ಸಾಂಪತ್ತ್ಯದರೂ, ಅದಕ್ಕೆ ಹೊರ್ಕೆ ಶಾಖೆಗಳೂ ಇವೆ. ನಾನು ಹಿಂದೀ ಭಾಗದವನು, ಮುಖ್ಯ ಶಾಖೆಯ ಕುರಿತ ನನ್ನ ಕರ್ತವ್ಯವನ್ನು ನೆರವೇರಿಸಬಾರದವನಾದರೆ ವಿಭಾಗಿಸಲು ಅಸಾಧ್ಯವಾದ ಆ ಒಂದು ಮತದ ಅನುಯಾಯಿಯಾಗಿರಲು ಅಯೋಗ್ಯನು. ಈ ವಾದದ ಪ್ರಕಾರ, ನನ್ನ ಆತ್ಮಬಲಿಯು, ಪ್ರತಿ ಒಂದು ವಿಧದಲ್ಲಿಯೂ, ರೀತಿಯಲ್ಲಿಯೂ ಅಸ್ಪೃಶ್ಯತೆಯನ್ನು ನಿವಾರಿಸುವ ಕಾರ್ಯವನ್ನು ಬೇಗನುವಾಗಿ ಮಾಡುತ್ತದೆ. ಅದ್ದರಿಂದಲೇ ಮತದ ಎಲ್ಲ ತಂಡಗಳಿಗೂ

ಕೊಡಗು.

ಸನ್ ೧೯೩೨ನೇ ಇಸವಿ

ಅಕ್ಟೋಬರ್ ತಾ ೬ನೇ ಶುಕ್ರವಾರ.

ಪ್ರೆಸ್ ಆರ್ಡಿನೇನ್ಸ್

ಜಾರಿಯಲ್ಲಿರುವವರಿವಿಗೆ

ನಾವು

ಅಗ್ರಲೇಖನ

ವನ್ನು

ಪ್ರಕಟಿಸುವುದಿಲ್ಲ.

ಅಸ್ಪೃಶ್ಯತಾ ನಿವಾರಣೆ.

ಮೇಲ್ಜಾತಿ ಹಿಂದೂಗಳ ಮತ್ತು ಹರಿಜನರ ಸಮ್ಮಿಳಿತ ಫಲಹಾರ ಕೂಟ.

ದೇವಾಲಯಗಳಿಗೆ ಹರಿಜನರ ಪ್ರವೇಶಕ್ಕೆ ಮಡಿಕೇರಿ ಸಾರ್ವಜನಿಕ ಸಭೆಯ ಒಪ್ಪಿಗೆ.

ಹಿಂದೂ ಮುಂದಾಳುಗಳ ಪೂನಾ ಒಪ್ಪಂದಕ್ಕೆ ಮಡಿಕೇರಿಯವರ ಸಮ್ಮತಿ.

ಮಹಾತ್ಮರ ಜೀವ ಉಳಿಸಿದ್ದಕ್ಕೆ ದೇವರಿಗೆ ಪ್ರಾರ್ಥನೆ ಮತ್ತು ಪ್ರಧಾನಿಯವರಿಗೆ ವಂದನೆ.

ಫಲಹಾರ ಕೂಟ.

ಮಹಾತ್ಮ ಗಾಂಧಿಯವರು ಉಪವಾಸವ್ರತವನ್ನು ಕೈಕೊಂಡಂದಿನಿಂದ ಅಸ್ಪೃಶ್ಯತಾ ನಿವಾರಣೆಗಾಗಿ ಒಟ್ಟು ಹಿಂದೂಸ್ಥಾನದಲ್ಲಿ ಅದ್ಭುತ ಪ್ರಯತ್ನಗಳು ಸಫಲವಾಗಿ ನಡೆಯುತ್ತಿರುವದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಕೊಡಗು ದೇಶದಲ್ಲಿಯೂ ಸಹ ಅಸ್ಪೃಶ್ಯರೆನಿಸಿಕೊಂಡವರನ್ನು ಹಿಂದೂಗಳ ಸಾರ್ವಜನಿಕ ಕೂಟಗಳಿಗೆ ಸೇರಿಸಿಕೊಳ್ಳಲು ಮೇಲ್ಜಾತಿ ಹಿಂದೂಗಳು ತಯಾರಾಗಿದ್ದಾರೆಂಬುದನ್ನು ನಿದರ್ಶಿಸಲಿಕ್ಕಾಗಿ ಈ ತಾ. 2ನೇ ಆದಿತ್ಯವಾರ ಸಾಯಂಕಾಲ 4.45 ಗಂಟೆಗೆ ಮಡಿಕೇರಿಯಲ್ಲಿ ಐವಿಷನ್ಸ್ಟಾರರ ಸಂಘದ ಹಾಲ್‌ನಲ್ಲಿ ಒಂದು ಫಲಹಾರ ಕೂಟವು (ಟೀ ಪಾರ್ಟಿ) ನಡಿಸಲಾಯಿತು. ಮೆ. ಗಳಾದ ಐಚೆಟ್ಟಿರ ಸುಬ್ಬಯ್ಯನವರು, ಸಿ. ಯನ್. ವೆಂಕಟಯ್ಯನವರು ಮತ್ತು ಪಂದ್ಯಂಡ ಬೆಳ್ಯಪ್ಪನವರು ಕೂಡಿ ಕಳುಹಿಸಿದ ಆಮಂತ್ರಣದ ಮೇರೆ ಹಿಂದೂ ಮತದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರೆಂಬ ಎಲ್ಲಾ ವರ್ಗದ ಮಹನೀಯರೂ ಬಂದಿದ್ದರು. ಪಂಗಡ ಭೇದವಿಲ್ಲದೆ ಸೇರಿದ್ದ ಈ ಕೂಟದಲ್ಲಿ ಸುಮಾರು 175 ಜನರು ಹಾಜರಿದ್ದರು. ಇವರ ಪೈಕಿ ಈ ಕೆಳಗಿನವರು ಕೆಲವರಾಗಿರುವರು.

ರಾ. ಬಾ. ಪಟ್ಟಮಾಡ ದೇವಯ್ಯನವರು, ರಾ. ಸಾ. ಕೋದಂಡ ಐಯ್ಯಣ್ಣನವರು, ಮೆ. ಗಳಾದ ಕೆ. ಎಸ್. ಸುಬ್ರಾಯರು, ಗುಂಡುಗುಟ್ಟಿ ಮಂಜುನಾಥಯ್ಯನವರು, ಉಳ್ಳಿಯಡ ಅಪ್ಪಯ್ಯನವರು, ಎಸ್. ಬಸಪ್ಪನವರು, ಆರ್. ಭುಜಂಗರಾವ್‌ರವರು, ಪುಟ್ಟಿಚಂಡ ನಾಣಯ್ಯನವರು, ಸಿ. ಯಂ. ರಾಮರಾಯರು, ಕೆ. ಮಲ್ಲಪ್ಪನವರು, ಬಲ್ಲಚಂಡ ಬೆಳ್ಯಪ್ಪನವರು, ಪಿನ್ನಮಾಲೆ ಸೋಮಣ್ಣನವರು, ಬಿದ್ದಂಡ ಕರುಂಬಯ್ಯನವರು, ಕೆ. ತಂಗಳ್ ನಾರಾಯಣರವರು, ಮೇರಿಯಂಡ ಮಾದಪ್ಪನವರು, ವೆಂಕಟಾಚಲ ರಾವ್‌ರವರು, ಕುಟ್ಟೇಟಿರ ಸುಬ್ಬಯ್ಯನವರು, ಪತ್ಕಳ ಮೇದಯ್ಯನವರು, ಐಚೆಟ್ಟಿರ ಸುಬ್ಬಯ್ಯನವರು, ಗುಬ್ಬಿ ಬಸಪ್ಪನವರು, ಸಿ. ಯನ್. ವೆಂಕಪ್ಪಯ್ಯನವರು ಬಂಟ್ರ ಸುಬ್ಬಣ್ಣನವರು, ಬಿದ್ದಂಡ ಯಂ. ಕಾರ್ಯಪ್ಪನವರು, ನೂರೊಕ್ಲುನಾಡು ಯಸ್. ಶಂಭೈಯ್ಯನವರು, ಪುಟ್ಟಿಚಂಡ ಮಂದಪ್ಪನವರು, ಕೋದಿಮಣಿಯಂಡ ಬೆಳ್ಯಪ್ಪನವರು, ನೆಲ್ಲಮಕ್ಕಳ ಕರುಂಬೈಯ್ಯನವರು, ಕುಟ್ಟಂಡ ಮುದ್ದಯ್ಯನವರು, ಆರ್. ಯಂ. ಕಪನೈಯ್ಯನವರು, ಮುಗೂರು ವೆಂಕಪ್ಪಯ್ಯನವರು, ಕೇಳಪಂಡ ಐಯ್ಯಣ್ಣನವರು, ಜೆ. ಗಣೇಶರಾವ್‌ರವರು, ಮುಂಜಾಂದಿರ ಅಯ್ಯಪ್ಪನವರು, ಕಾಡುಮಂಡ ಮುತ್ತಣ್ಣನವರು, ಯಂ. ಪಿ. ಚೆನ್ನಬಸಪ್ಪನವರು, ಸಿ. ಎಸ್. ನಾರಾಯಣನವರು, ಮಂಡೇಪಂಡ ಅಪ್ಪಚ್ಚನವರು, ಆದಿಮೂಲನಾಯುಡುರವರು, ಚೆಂಬಾಂಡ ಕಾರ್ಯಪ್ಪನವರು, ಸಿ. ಯಸ್. ಕೃಷ್ಣರಾವ್‌ರವರು, ನೆರವಂಡ ಕುಟ್ಟಪ್ಪನವರು, ಬಲ್ಯಂಡ ಪೂವಯ್ಯನವರು, ಎ. ಪಿ. ಶ್ರೀನಿವಾಸನ್‌ರವರು, ಚೇಂದಿರ ತಮ್ಮಯ್ಯನವರು, ಮಾಳೇಟಿರ ಮುದ್ದಪ್ಪನವರು, ಕೋದಂಡ ಬೆಳ್ಯಪ್ಪನವರು, ಬಿದ್ದಂಡ ಬೆಳ್ಯಪ್ಪನವರು, ವಿ. ಯನ್. ಸಂಜಪ್ಪಶೆಟ್ಟಿಯವರು, ಕುಮಾರಪ್ಪನವರು, ... ಟಿ. ಗೋವಿಂದನವರು, ಕೆ. ರಾಮಚಂದ್ರನವರು, ಚೇಂದ್ರಿಮಾಡ ಗಣಪತಿಯವರು, ಕೋದಂಡ ಟಿ. ಸೋಮಯ್ಯನವರು, ಕೊಕ್ಕೇಂಗಡ ಬೆಳ್ಯಪ್ಪನವರು, ಪಬವಾರ ಪೊನ್ನಪ್ಪನವರು, ಚೆರಿಯಮನೆ ಪೊನ್ನಪ್ಪನವರು, ಸಿ. ಯನ್. ಕಂಥಯ್ಯನವರು, ಮಣವಟ್ಟಿರ ಮಾಚಯ್ಯನವರು, ಚೇಸಂಡ ಅಪ್ಪಯ್ಯನವರು, ಬಿ. ಎಸ್. ಶ್ರೀನಿವಾಸ ಮೂರ್ತಿಯವರು, ಎ. ಸಂಜೀವರಾಯರು, ಗುಡಮ್ಮಂಡ ಸುಬ್ಬಯ್ಯನವರು, ಬಾಚರಣಿಯಂಡ ಗಣಪತಿಯವರು, ಬಲ್ಯಂಡ ಬಿದ್ದಪ್ಪನವರು, ರಾಮಚಂದ್ರಶರ್ಮರವರು, ದ್ವೈಟ್ಟಿರ ಗಣಪತಿಯವರು, ಉದಿಯಂಡ ಮುತ್ತಣ್ಣನವರು, ಆರ್. ಶ್ರೀನಿವಾಸ ಮೂರ್ತಿಯವರು, ಕೋಚನ ದೊಡ್ಡಯ್ಯನವರು, ಅಪ್ಪಯ್ಯನವರು, ಬಲ್ಯಂಡ ಚಿಣ್ಣಪ್ಪನವರು, ಕೈಬಲಿರ ಐಯ್ಯಪ್ಪನವರು, ಪುಟ್ಟಿಚಂಡ ಪೊನ್ನಪ್ಪನವರು, ಪೂಜಾರಿರ ಕರುಂಬಯ್ಯನವರು, ರಾಮಪ್ಪನವರು, ಕುಂಬುಗೌಡನ ಬೆಳ್ಯಪ್ಪನವರು ಮತ್ತು ಪಂದ್ಯಂಡ ಬೆಳ್ಯಪ್ಪನವರು.

ಪ್ರಾರಂಭದಲ್ಲಿ ಹರಿಜನರು (ಅಸ್ಪೃಶ್ಯರು) ಕೆಲವರನ್ನು ಬೇರೆಯವರೊಂದಿಗೆ ಕೂರುವಂತೆ ಕೇಳಿಕೊಂಡರೂ ಕೂಡ ಅವರು ಪ್ರತ್ಯೇಕ ಬೆಂಚುಗಳ ಮೇಲೆ ಕೂತುಕೊಂಡರು. ಮೇಲ್ಜಾತಿಯ ಹಿಂದೂ ಯುವಕರು ಕೆಲವರು ಹೋಗಿ ಅವರ ಪಕ್ಕದಲ್ಲೂ ಕೂತರು. ಕಡೆಕಡೆಗೆ ಬಂದ ಹರಿಜನರು ಎಲ್ಲರ ಮಧ್ಯದಲ್ಲಿ ಪಿತ್ರವಾಗಿಯೇ ಕುರ್ಚಿಗಳ ಮೇಲೆ ಕೂತರು. ಸುಮಾರು ಮೂವತ್ತು ಜನ ಹರಿಜನರು ಬಂದಿದ್ದರು. ಅವರೆಲ್ಲರೂ ಕುಪ್ಪಸಾಡ ಬಟ್ಟೆಗಳನ್ನು ಧರಿಸಿದ್ದರಿಂದ ಅವರ ಪರಿಚಯವಿಲ್ಲದವರಿಗೆ ಅವರನ್ನು ಪ್ರತ್ಯೇಕಿಸಲು ಸಾಧ್ಯವೇ ಇರಲಿಲ್ಲ. ಹೋಟೇಲಿನಿಂದ ತಯಾರಿಸಿ ತರಲ್ಪಟ್ಟಿದ್ದ ತಿಂಡಿಯ ಪೊಟ್ಟಣಗಳು 5 ಗಂಟೆಗೆ ಹಂಚಲ್ಪಟ್ಟವು. ಕೂಡಲೆ ಕಿತ್ತಳೆ ಹಣ್ಣು, ಬಾಳೆ ಹಣ್ಣುಗಳೂ ಕೊಡಲ್ಪಟ್ಟವು. ನಂತರ ಟೀಯ ಸಂಭಾರವು ಆಯಿತು. ಇದು ಮುಗಿದ ನಂತರ ಪಾನ್ ಸುಪಾರಿಯು (ಬೀಡ) ಹಂಚಲಾಯಿತು. ಈ ಮಧ್ಯೆ ಮೆ. ಪುಟ್ಟಿಚಂಡ ಮೊಣ್ಣಪ್ಪನವರು ಮತ್ತು ಇಬ್ಬರು ಹರಿಜನರು ಗಾನಗಳನ್ನು ಹಾಡುತ್ತಿದ್ದರು. ಉತ್ಸಾಹ ಭರಿತವಾಗಿದ್ದ ಈ ಕೂಟದಲ್ಲಿ ಯಾವರೊಂದು ಸಂಕೋಚವನ್ನೂ ತೋರಿಸದೆ ಹಾಜರಿದ್ದವರು ಹರಿಜನರೊಂದಿಗೆ ಸಮ್ಮಿಳಿತರಾದರು.

ಸಾರ್ವಜನಿಕ ಸಭೆ.

ರಾ. ಬಾ. ಕೋದಿಮಣಿಯಂಡ ಸುಬ್ಬಯ್ಯನವರು, ಮೆ. ಐಚೆಟ್ಟಿರ ಸುಬ್ಬಯ್ಯನವರು, ಮು. ಸಿ. ಯನ್. ವೆಂಕಪಯ್ಯನವರು ಮತ್ತು ಪಿ. ಎ. ಬೆಳ್ಯಪ್ಪನವರ ನೋಟೀಸಿನ ಮೇರೆ 5½ ಗಂಟೆಗೆ ಸರಿಯಾಗಿ ಸಾರ್ವಜನಿಕ ಸಭೆಯು ಪ್ರಾರಂಭವಾಯಿತು. ಮೇಲಿನ ಟೀ ಪಾರ್ಟಿಯಲ್ಲಿ ಹಾಜರಿದ್ದವರಲ್ಲದೆ ಬೇರೆ ಕೆಲವರೂ ಬಂದು ಸೇರಿದರು. ಒಟ್ಟು ಸುಮಾರು 250 ಜನರು ಸೇರಿದ್ದರು. ರಾ. ಬಾ. ಪಟ್ಟಮಾಡ ದೇವಯ್ಯನವರು ಸಭೆಯವರ ಕೋರಿಕೆ ಮೇರೆ ಅಧ್ಯಕ್ಷಸ್ಥಾನವನ್ನು ವಹಿಸಿದರು. ಈ ಕೆಳಗಿನ ಠರಾವುಗಳನ್ನು ಚರ್ಚಿಸಿ, ಮಂಜೂರುಮಾಡಲಾಯಿತು.

1. "ಮಹಾತ್ಮ ಗಾಂಧಿಯವರು ಉಪವಾಸ ವ್ರತದಲ್ಲಿ ಕೈಕೊಂಡ ಉದ್ದೇಶವು ಅವರಿಗೆ ತೃಪ್ತಿಕರವಾಗಿ ಕೈಗೂಡುವಂತೆಯೂ, ಅದರಿಂದ ಮಹಾತ್ಮರ ಜೀವ ಉಳಿಯಲು ಸಾಧ್ಯವಾಗುವಂತೆಯೂ ಆದದ್ದಕ್ಕೆ ಈ ಸಭೆಯು ದೇವರನ್ನು ಭಕ್ತಿಪುರಸ್ಸರವಾಗಿ ಪ್ರಾರ್ಥಿಸುತ್ತದೆ."

ಈ ಠರಾವನ್ನು ಅಧ್ಯಕ್ಷರೇ ಸಭೆಯ ಮುಂದಿಟ್ಟರು. ಎಲ್ಲರೂ ಎದ್ದು ನಿಂತುಕೊಂಡು, ಒಂದು ಮಿನಿಟು ಮೌನವಾಗಿ ಪ್ರಾರ್ಥಿಸಿ, ಠರಾವನ್ನು ಮಂಜೂರು ಮಾಡಿದರು.

2. "ಮಹಾತ್ಮ ಗಾಂಧಿಯವರ ಉಪವಾಸದ ಉದ್ದೇಶವನ್ನು ನೆರವೇರಿಸಲಿಕ್ಕಾಗಿ ಮೇಲ್ಜಾತಿಯವರೆನಿಸಿಕೊಂಡ ಹಿಂದೂ ಜನರ ಮುಖಂಡರೂ, ಅಸ್ಪೃಶ್ಯರೆನಿಸಿಕೊಂಡವರ ಮುಖಂಡರೂ ಪೂನಾದಲ್ಲಿ ಸೇರಿ ಮಾಡಿಕೊಂಡ ತೀರ್ಮಾನವನ್ನು ಈ ಸಭೆಯು ಒಪ್ಪಿಕೊಳ್ಳುತ್ತದೆ." ಎಂಬ ಠರಾವನ್ನು ಮೆ. ಐ. ಸಿ. ಸುಬ್ಬಯ್ಯನವರು ಸೂಚಿಸಿ ಹೇಳಿದ್ದೇನೆಂದರೆ—'ಮಹಾತ್ಮರ ಉಪವಾಸ ವ್ರತದ ಕಾಠಿಣ್ಯವನ್ನರಿತು ಹಿಂದೂ ಮುಖಂಡರೂ, ಅಸ್ಪೃಶ್ಯರ ಮುಂದಾಳುಗಳೂ ಬಹು ಸಾಹಸಪಟ್ಟು ಒಂದು ವಾರದೊಳಗೇನೇ ಒಂದು ಒಪ್ಪಂದಕ್ಕೆ ಬಂದದ್ದು ಹಿಂದೂ ಸಮಾಜದ ಏಳಿಗೆಗೆ ಶುಭ ಸೂಚನೆಯಾಗಿದೆ. ಈ ಒಪ್ಪಂದದಿಂದ ಹಿಂದೂ ಮತದ ಒಗ್ಗಟ್ಟು ಸಾಧಿಸಲ್ಪಟ್ಟಿದೆ. ಬ್ರಿಟಿಷ್ ಪ್ರಧಾನಿಯವರ ತೀರ್ಮಾನದಂತೆ ಅಸ್ಪೃಶ್ಯರಿಗೆ ಪ್ರತ್ಯೇಕ ಚುನಾವಣೆಯೇ ಇದ್ದಿದ್ದರೆ ಹಿಂದೂ ಸಮಾಜವು ಒಡೆಯಲ್ಪಟ್ಟು, ಅದರ ಬಲವು ಬಹು ಮಟ್ಟಿಗೆ ಕುಂದಿ ಹೋಗುತಿತ್ತು' ಎಂದು ಮುಂತಾಗಿ ಮಾತಾಡಿ, ಪೂನಾ ಒಪ್ಪಂದದ ಕರತುಗಳನ್ನು 'ಕೊಡಗು' ಪತ್ರಿಕೆಯಿಂದ ಓದಿ ಹೇಳಿ, ಅವುಗಳನ್ನು ವಿವರಿಸಿದರು. ಅಲ್ಲದೆ ಅಸ್ಪೃಶ್ಯತೆಯನ್ನು ಹೋಗಲಾಡಿಸುವ ಉದ್ದಿಶ್ಯದಿಂದ ಅಸ್ಪೃಶ್ಯರನ್ನು 'ಹರಿಜನ'ರೆಂದು ಕರೆಯಬೇಕೆಂದು ಮಹಾತ್ಮರು ಸೂಚಿಸಿರುವರೆಂದೂ ಹೇಳಿ, ಹಿಂದೂ ಮತದ ಕಲ್ಯಾಣಕ್ಕಾಗಿರುವ ಪೂನಾದ ತೀರ್ಮಾನವನ್ನು ಎಲ್ಲರೂ ಒಪ್ಪಿಕೊಳ್ಳಬೇಕೆಂದು ಸಭೆಯವರನ್ನು ಕೇಳಿಕೊಂಡರು.

ಮೆ. ಬಲ್ಲಚಂಡ ಬೆಳ್ಯಪ್ಪನವರು ಈ ಠರಾವನ್ನು ಅನುಮೋದಿಸಿದರು. ಠರಾವು ಓಟಿಗೆ ಹಾಕಲಾಗಿ ಯಾರ ವಿರೋಧವಿಲ್ಲದೆ ಪಾಸಾಯಿತು.

3. "ಮೇಲ್ಜಾತಿಯರೆನಿಸಿಕೊಂಡ ಹಿಂದೂಗಳ ಮತ್ತು ಅಸ್ಪೃಶ್ಯರೆನಿಸಿಕೊಂಡವರ ಮುಖ್ಯಸ್ಥರು ಮಾಡಿಕೊಂಡ ತೀರ್ಮಾನವನ್ನು ಬ್ರಿಟಿಷ್ ಪ್ರಧಾನ ಮಂತ್ರಿಯವರು ಶೀಘ್ರದಲ್ಲೇ ಅಂಗೀಕರಿಸಿ, ಮಹಾತ್ಮ ಗಾಂಧಿಯವರ ಜೀವಕ್ಕೆ ಅಪಾಯಬಾರದಂತೆ ಮಾಡಿದ್ದಕ್ಕೆ ಬ್ರಿಟಿಷ್ ಪ್ರಧಾನ ಮಂತ್ರಿಯವರಿಗೆ ಈ ಸಭೆಯು ಧನ್ಯವಾದಗಳನ್ನು ಒಪ್ಪಿಸುತ್ತದೆ." ಎಂಬ ಠರಾವನ್ನು ಮೆ. ಪುಚ್ಚಿಮಾಡ ನಾಣೈಯ್ಯನವರು ಸಭೆಯ ಮುಂದಿಟ್ಟು, 'ಮಹಾತ್ಮರ ಜೀವದ ಬೆಲೆಯನ್ನರಿತು ಹಿಂದೂ ಮುಖಂಡರು ಎಷ್ಟು ಶೀಘ್ರದಲ್ಲಿ ಒಪ್ಪಂದಕ್ಕೆ ಬಂದರೋ ಅಷ್ಟೇ ತ್ವರಿತದಲ್ಲಿ ಬ್ರಿಟಿಷ್ ಪ್ರಧಾನಿಯವರು ಅದನ್ನು ಅಂಗೀಕರಿಸಿ ಮಹಾತ್ಮರ ಜೀವವನ್ನು ಉಳಿಸಲು ಸಹಾಯ ಮಾಡಿದ್ದಕ್ಕೆ ಅವರಿಗೆ ನಾವೆಲ್ಲರೂ ವಂದಿಸಬೇಕಾಗಿದೆ' ಎಂದು ಮುಂತಾಗಿ ಮಾತಾಡಿದರು. ಮೆ. ಯಸ್. ಬಸಪ್ಪನವರು ಠರಾವನ್ನು ಅನುಮೋದಿಸಲಾಗಿ ಸರ್ವಸಮ್ಮತದಿಂದ ಪಾಸಾಯಿತು.

4. "ಅಸ್ಪೃಶ್ಯತೆಯ ಭಾವನೆಯನ್ನು ಶೀಘ್ರದಲ್ಲೇ ನಿರ್ಮೂಲ ಮಾಡಬೇಕೆಂತ ಈ ಸಭೆಯು ದೇಶಕ್ಕೆ ವಿಜ್ಞಾಪಿಸಿಕೊಳ್ಳುತ್ತದೆ" ಎಂಬ ಠರಾವನ್ನು ಮೆ. ಪಿ. ಎ. ಬೆಳ್ಯಪ್ಪನವರು ಸೂಚಿಸಿ ಹೀಗೆಂದರು:—ಭಾರತ ಭೂಮಿಯನ್ನು ಮಾತ್ರವಲ್ಲ, ಇಡೀ ಪ್ರಪಂಚವನ್ನೇ ಕಲ್ಲಣಿಸಿರುವ ಮಹಾತ್ಮ ಗಾಂಧಿಯವರ ಉಪವಾಸ ವ್ರತದ ಉದ್ದೇಶವೇ ಅಸ್ಪೃಶ್ಯತೆಯನ್ನು ನಿವಾರಿಸುವುದಾಗಿದೆ. ವಿಶಾಲ ತತ್ವಗಳನ್ನೊಳಗೊಂಡಿರುವ ಹಿಂದೂ ಮತಕ್ಕೆ ಇದೊಂದು ದೊಡ್ಡ ಕಳಂಕವಾಗಿದೆ. ಮೇಲ್ಜಾತಿ ಹಿಂದೂಗಳು ಎಷ್ಟು ತುಚ್ಛೀಕರಿಸಿದರೂ ಕೂಡ ಹಲವು ಶತಮಾನಗಳಿಂದ ಹಿಂದೂ ದೇವತೆಗಳನ್ನೇ ಪೂಜಿಸುತ್ತಾ, ಹಿಂದೂ ಮತದೊಳಗೇ ಇರುವ ಹರಿಜನರಿಗೆ ನಾವು ಪರಮತಾವಲಂಬಿಗಳಿಗೆ ಕೊಡುವಷ್ಟಾದರೂ ಪಬ್ಲಿಕ್ ಸ್ಥಳ, ಕೂಟ ಮತ್ತು ಸಂಸ್ಥೆಗಳಲ್ಲಿ ಸರಿ ಸಮಾನತ್ವವನ್ನು ತೋರಿಸದೆ ಇರುವುದು ತುಂಬಾ ನಾಚಿಕೆಗೇಡು. ದೇವರ ಮುಂದೆ ಮನುಷ್ಯರೆಲ್ಲರೂ ಸಮಾನರಾದುದರಿಂದ ಒಬ್ಬನನ್ನು ಅಸ್ಪೃಶ್ಯನೆಂದು ಹೇಳುವ ಹಕ್ಕು ಇನ್ನೊಬ್ಬನಿಗೆ ಇಲ್ಲ. ಹಿಂದೂ ಧರ್ಮದ ಹಾಗೂ ಹಿಂದೂ ದೇಶದ ಹೀನ ಸ್ಥಿತಿಯು ಹೋಗಿ, ಉನ್ನತಿಯುಂಟಾಗಬೇಕಾದರೆ ಅಸ್ಪೃಶ್ಯತೆಯು ಹೋಗಬೇಕು. ಶತಮಾನಗಳಿಂದ ಆಗದಂಥಾ ಕಾರ್ಯವು ಲೋಕ ವಿಖ್ಯಾತರಾದ ಮಹಾತ್ಮರ ವ್ರತದಿಂದ ಕೆಲವು ದಿವಸಗಳಲ್ಲಿಯೇ ಆಗುವಂತೆ ಕಾಣುತ್ತದೆ. ಹಿಂದೂಗಳಿಗೆ ಅವತಾರ ಪುರುಷರಂತಿರುವ ಗಾಂಧೀಜಿಯವರ ಪ್ರಭಾವದಿಂದ ಈಗ ಉಂಟಾಗಿರುವ ಜನ ಜಾಗೃತಿಯಲ್ಲಿ ಹಿಂದೂ ಮತದ ಈ ಕೊರತೆಯನ್ನು ಹೋಗಲಾಡಿಸಬೇಕಾದದ್ದು ನಮ್ಮ ಕರ್ತವ್ಯ. ಅದೇ ಸಮಯದಲ್ಲಿ ಮಹಾತ್ಮರ ಸಂದೇಶದಂತೆ, ಹರಿಜನರು ಸತ್ತದನದ ಮಾಂಸ ಭಕ್ಷಿಸುವ ಮತ್ತು ನಿಷಾ ಸೇವನೆ ಮಾಡುವ ಕೆಟ್ಟ ಪದ್ಧತಿಗಳನ್ನು ಬಿಟ್ಟು, ಶುಚಿಯಾಗಿ ಜೀವಿಸಲು ಯತ್ನಿಸಬೇಕಾಗಿದೆ. ನಮ್ಮ ಮತ್ತು ನಮ್ಮ ಪೂರ್ವಿಕರ ಪಾಪಗಳಿಗಾಗಿ ಪ್ರಾಯಶ್ಚಿತ್ತ ಮಾಡಲು ಯೇಸು ಕ್ರಿಸ್ತನಂತೆ ಪ್ರಾಣ ಬಲಿ ಕೊಡಲಿಕ್ಕಾಗಿ ನಿರ್ಧರಿಸಿರುವ ಮಹಾತ್ಮರ ಜೀವವನ್ನು ಉಳಿಸಲಿಕ್ಕಾಗಿಯಾದರೂ ಅಸ್ಪೃಶ್ಯತೆಯನ್ನು ನಿರ್ಮೂಲ ಮಾಡಲಿಕ್ಕೆ ನಾವೆಲ್ಲರೂ ಸೊಂಟಗಟ್ಟುವ.'

(4ನೇ ಪುಟದಲ್ಲಿ ಮುಂದುವರಿದಿದೆ.)

Reg. No. M. 1550.

if not delivered please return to
"KODAGU" OFFICE MERCARA.

ಕೊಡಗು.

ಸತ್ಯೇನ ಬ್ರಹ್ಮಚರ್ಯೇಣ ವಿದ್ಯಾ ನೀತಿ ಪ್ರಯತ್ನತಾ ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ

ವಾರ್ಷಿಕ ಚಂದಾ ರೂ. ೩—೮—೦.

ಸಂಪಾದಕ— ಪಂದ್ಯಂಡ ಐ. ಬೆಳ್ಯಪ್ಪ

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೨ | ಮಡಿಕೇರಿ, ಸನ್ ೧೯೩೨ನೇ ಇಸವಿ ಅಕ್ಟೋಬರ್ ತಾರೀಕು ೭ ನೇ ಶುಕ್ರವಾರ. | ಸಂಚಿಕೆ ೧೯

SARI PIN.

EAR-RINGS. (Thodus)

Cut-rubys Rs. 25 to 50

With diamond in centre Rs. 80 to 120

BRACELETS.

Gold Rs. 10

Set rubys forming any letter Rs. 12

NECKCHAINS.

NOSE-RINGS.

Diamond in small size of best quality Rs. 35 & upwards according to size.

MARRIAGE PRESENTATIONS

Attractive and inexpensive articles ready in stock. Prompt execution. Details on enquiry free with catalogue. Numerous customers in Coorg thoroughly satisfied with reliable service. Testimonials pouring in. Silver Guindys, Photo lockets, Dimond nose-screws, cut-ruby ear-rings, etc., etc., etc., in all prices. Very attractive. Prices most moderate.

Estimates free on enquiry.

Designs free on enquiry.

Telegrams: 'PRECIOUS.'

Telephone: 3145.

CATALOGUE ON ENQUIRY.

V. Subramaniaier Jeweller,

Post Box 423, Triplicane, P. O., MADRAS.

52—46



26—15

Empire of India Life Assurance Company, Ltd.

Established 1897.

The New "FAMILY SECURITY" Policy issued by this Company provides.

A In the event of death during an agreed period,

1. The immediate payment to the Widow, Son or legal representative of a part of the sum Assured together with the Bonus accrued.

2. The payment of a guaranteed Yearly Income, payable by monthly instalments, during the balance of the period.

3. The payment of the balance of the sum of assured at the end of the period.

OR

B In the event of death after the period has expired the payment of the sum assured together with any Bonus that has accrued.

Descriptive Pamphlet on application to—

Head Office:—
EMPIRE OF INDIA LIFE BUILDING,
Bombay

52—1

Branch Office:—
152, COMMERCIAL STREET,
Bangalore.

ಜನರಲ್ ಅಷ್ಯೂರೆನ್ಸ್ ಸೊಸೈಟಿ.

ಅ ಜ ಮಿ ರ್.

ನಮ್ಮ ಆಯವ್ಯಯದ ಪಟ್ಟಿಯೇ ನಮ್ಮ ಅಭಿವೃದ್ಧಿಯನ್ನು ವ್ಯಕ್ತಗೊಳಿಸುತ್ತದೆ.

ವರ್ಷ	ಮೇಲ್ಪಟ್ಟ ವರ್ಷಾದಾಯ	ಮೇಲ್ಪಟ್ಟ ಮೂಲಧನ	ಖರ್ಚಿನ ಪ್ರಮಾಣ ಶೇಕಡ
1911	46,248	49,442	82.9
1921	2,92,627	6,53,350	43.2
1931	12,50,000	40,00,000	28.2

ಬೋನಸ್ಸು.

ಕುರ್ಗ ನಫೆ ದೊರಕುವ ಜೀವಾವಧಿ ಪಾಲಿಸಿಗಳ ಮೇಲೆ ವರ್ಷ ಒಂದಕ್ಕೆ ಶೇಕಡ 22½

ಚೆನ್ನಾಗಿ ಕೆಲಸಮಾಡಿ ಅಭಿವೃದ್ಧಿ ಸ್ಥಿತಿಯಲ್ಲಿರುವ ಈ ಸೊಸೈಟಿಯಲ್ಲಿ ವಿಮೆ ಮಾಡಿ ಕಡಿಮೆ ಪ್ರೀಮಿಯಂ ಪಾವತಿ ಮಾಡುವ ಸೌಲಭ್ಯ ಹೊಂದಿ ಅಥವಾ ಈ ಕಂಪೆನಿಯ ಪರವಾಗಿ ಕೆಲಸಮಾಡಿ ಉತ್ತಮ ಕಮಿಶನ್ ಪಡೆದು ಪ್ರಯೋಜನ ಹೊಂದಿ.

ಹೆಚ್ಚು ವಿಚಾರಗಳಿಗೆ ಈ ವಿಳಾಸಕ್ಕೆ ಬರೆಯಿರಿ:—

ಎ. ರಾಮಚಂದ್ರರಾವ್,
ಸುಪರಿಂಟೆಂಡೆಂಟ್,
ಮಿಂಟೋ ಆಸ್ಪತ್ರೆ ಬಳಿ,
ಬೆಂಗಳೂರು.

52—24

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್. ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲಿ)

		ರೂ.
ಶೇರ್ ಬಂಡವಾಳ	—	50,000—0—0
ವಸೂಲಾದ ಶೇರ್ ಮೊಬಲಗು	—	27,350—0—0
ಜಮೆಯಿಂದ ಠೇವಣಾತಿ	—	22.5380—10—7
ವಸೂಲಾದ ಕ್ಷೇಮನಿಧಿ	—	37,914—12—0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ೪ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಪರಿಶೋಧಿಸಿ ನೋಡುತ್ತಾರೆ.

ಪ್ರೆಸಿಡೆಂಟರು, ಪಟ್ಟಮಾಡ ದೇವಯ್ಯನವರು, ರಾವ್ ಬಹದ್ದೂರ್.

ಟ್ರೆಜರರ್ ಮನೆಯಪ್ಪಂಡ ಬೆಳ್ಯಪ್ಪನವರು.

ಸೆಕ್ರೆಟರಿ

ಸಿ. ಜಿ. ವೆಂಕಟಯ್ಯನವರು, ಬಿ.ಎ., ಬಿ.ಎಲ್.

ತಾರೀಖು 1—7—1932.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿದೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜೆಂಟರುಗಳು.

ಕೊಡಗಿನ ಎಲ್ಲಾ ಭಾಗಗಳಿಗೆ—ಮೆ. ಮುಂಡಂಡ ಯಂ. ಬಿದ್ದಪ್ಪನವರು.

ಉತ್ತರ ಕೊಡಗಿಗೆ ಹೆಚ್. ಆರ್. ಮಾದಯ್ಯನವರು,

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು, (ಪಾದಿಭಂಡಾರ.)

ನಾಪೋಕ್ಲು—ಎಸ್. ಆರ್. ವೆಂಕಟಯ್ಯನವರು.

ಅಮ್ಮತ್ತಿ—ಸಿದ್ದಾಪುರ—ಮೆ. ಅಸಂಡ ಮಾದಪ್ಪನವರು,

ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುತ್ತಣ್ಣಯ್ಯನವರು, ಮತ್ತು ಅಜ್ಜಮಾಡ ಪಿ. ಕಾರ್ಯಪ್ಪನವರು,

ಮಡಿಕೇರಿ & ತಿತಿಮತ್ತಿ—ಮೆ. ಜಿ. ಮಾದಯ್ಯನವರು,

ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾದಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಕೂಡದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಿಸಲು ಅತ್ಯವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಖರಾರು ಫಾರಮುಗಳೂ, ಜಮ್ಮ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಖರಾರು ಫಾರಮುಗಳೂ, ಸ್ಟೋರ್ ಕೀಪರ್ ಖರಾರು ಫಾರಮುಗಳೂ, ಓವರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮಾ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.

ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.

ಧನಭಂಡಾರವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿಸುವ 1,78,322 ಜನರಿಗೆ 38ಕೋಟಿ ರೂ.

ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ಕ್ಕಿಂತ ಮೀರದ ಕಮ್ಮಿ ಖರ್ಚಿನಲ್ಲಿಯೇ ನಡೆಸಲ್ಪಟ್ಟಿದ್ದಾಗಿದೆ.

ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಒತ್ತಾಸೆಯನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು ಅಥವಾ ಇನ್ಸ್ಪೆಕ್ಟರೇಟ್ ಆಫೀಸು, ಮಡಿಕೇರಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ಮೊಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್ಪಿಂಡಿ
ಅಜ್ಮೀರ್	ಡಕ್ಕಾ	ಲಕ್ನೌ	ಪಾಟ್ನಾ	ಸುಕ್ಕೂರು
ಅಲಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಜಲಗಾನ್	ಮಂಡಲೆ	ರಾಯಪುರ	ತಿರುವೆಂಡ್ರಮ್
ಭೋಪಾಲ್	ಕರಾಚಿ	ಮಡಿಕೇರಿ	ರಾಂಚಿ	ವಿಶಾಖಪಟ್ಟ [52—31

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
52—38 ಗಿರ್ಗಾಂವ, ಮುಂಬಯಿ.

ಕಾರ್ಡು ಬರೆದರೆ ಆಗಿನ ಕ್ಯಾಟಲಾಗು ಪುಕ್ಕಟೆಯಾಗಿ ಕಳುಹಿಸಲ್ಪಡುವುದು.



ಕೋವಿಗಳು, ಕತ್ತಿಗಳು, ಬ್ಯಾಟರಿಗಳು, ತೋಟೆಗಳು, ಕೇಪುಗಳು, ಮದ್ದು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS LTD.,

Largest Importers of Firearms and Ammunition

Cheapest priced firm in India,

26—4 **210 Abdul Rehiman Street, BOMBAY.**

Printed & published by P. I. Belliappa at "Kodagu" Press Mercara for "Kodagu" Ltd.

೫೬ ವರುಷಗಳ ಅನುಭವ ಸಿದ್ಧ ಔಷಧಗಳು.

೧. ಧಾತುಪುಷ್ಟಿ ಲೇಹ—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ಬಾಧೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಬಚ್ಚುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು.

ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7—0—0.

೨. ಅಶೋಕಾರಿಷ್ಟ ಮತ್ತು ಮಾತ್ರೆ—ಹೆಂಗಸರ ಮುಟ್ಟಿನ ದೋಷಗಳು, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾನಹೀನತೆ, ಮೂರ್ಛೆ, ಮಲಬದ್ಧತೆ, ಚಳಿಜ್ವರ, ರಕ್ತಹೀನತೆ, ಕೈ ಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಗುಣಪಡಿಸುವದು. ಬಾಟ್ಲಿ 1ರ 1—4—0; 1 ಡಬ್ಬಿ ಮಾತ್ರೆಗೆ 1—0—0; 3 ಬಾಟ್ಲಿ ಔಷಧಕ್ಕೂ, 3 ಡಬ್ಬಿ ಮಾತ್ರೆಗೂ 6—4—0.

೩. ಚಂದನಾಸವ ಮತ್ತು ಮಾತ್ರೆಗಳು ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರವು ಆಗಾಗ್ಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳನ್ನೂ, ಬಾಯಾರಿಕೆ, ಮಲಬದ್ಧತೆ, ಸ್ವಪ್ನಾವಸ್ಥೆ ಇವುಗಳ ಮೇಲೆ ಸಿದ್ಧೌಷಧ. ಬಾಟ್ಲಿ 1ರ 1—2—0; 1ಡಬ್ಬಿ ಮಾತ್ರೆಗೆ 1—6—0. 2 ಬಾಟ್ಲಿ ಔಷಧಕ್ಕೂ, 2 ಡಬ್ಬಿ ಮಾತ್ರೆಗೂ 4—12—0.

೪. ಬಾಲಾಗ್ರಹ ಗುಟಿಕೆ—ಬಾಲಾಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರು ಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧ. ಬಾಟ್ಲಿ ಒಂದಕ್ಕೆ 0—10—0. 3ಕ್ಕೆ 1—12—0.

೫. ಸುಖಬೇಧಿ ಗುಟಿಕೆ—ಆಯಾಸವನ್ನುಂಟುಮಾಡದ ಸುಖವಿರೇಚಕ. ಬಾಟ್ಲಿ 1ರ 0—10—0. 3ಕ್ಕೆ 1—12—0.

೬. ಸ್ಪಂದವ ವಟಿ—ಜ್ವರ ನಿಂತು ಜ್ವರಗಡ್ಡೆ ಕರಗಿ ಮಲವಿಸರ್ಜನೆ ಆಗುವದು. ಬಾಟ್ಲಿ 1ಕ್ಕೆ 1—0—0;

೭. ಮಲೇರಿಯಾ ನಿವಾರಿಣಿ—ಎಲ್ಲಾ ನಮೂನೆಯ ಜ್ವರಕ್ಕೆ ಬಾಟ್ಲಿಗೆ 1—8—0.

೮. ಮಹಾ ಮದನಕಾಮೇಶ್ವರಿ ಲೇಹ ಡಬ್ಬಿ 1ಕ್ಕೆ 2—0—0.

೯. ದಂತಕಾಂತಿ ಚೂರ್ಣ—ಡಬ್ಬಿ 1ರ 3 ಆಣೆ. 6 ಡಬ್ಬಿಗಳಿಗೆ 1—2—0.

ಯಂ. ಗಣಪಯ್ಯ ಎಂಡ್ ಸನ್ಸ್,
ಆಯುರ್ವೇದಿಕ್ ಫಿಸಿಶಿಯನ್ಸ್,
52—2 ರಥಬೀದಿ, ಮಂಗಳೂರು.

3 ರೂಪಾಯಿಗೆ 9೦ ಇನಾಮುಗಳೊಡನೆ 4 ವಾಚುಗಳು.



"ಅಟೊರೋಸ್" ಎಂಬುದು ಸುಗಂಧಗಳೆಲ್ಲಾ ಪ್ರಖ್ಯಾತಹೊಂದಿದ್ದು, ಹೂಗಳಿಂದ ತಯಾರಿಸಲ್ಪಟ್ಟು, ಮೂರು ದಿನಗಳ ವರೆಗೂ ಪರಿಮಳವನ್ನು ಬೀರುವುದು. ಒಂದೇ ಸಲ 6 ಬಾಟ್ಲಿ ತರಿಸಿದವರಿಗೆ ರೂ. 3 ಮಾತ್ರ, ಮತ್ತು 1 ಡಬ್ಬಿ ರಿಸ್ಟ್ ವಾಚ್, 1 ರೈಲ್ವೆ ವಾಚ್, 1 ಪಾಕೆಟ್ ವಾಚ್, 1 'B' ಟೈಂಪೀಸ್. 5 ವರ್ಷದ ಖಾತರಿ. ಮತ್ತು 14 ಕೇರೆಟ್ ಭಂಗಾರದ ನಿಬ್ಬಿನ ಫೌಂಟನ್ ಪೆನ್ ಮತ್ತು 90 ಇನ್ನಿತರ ಇನಾಮುಗಳು ಮಾಫಿಯಾಗಿ ಕೊಡಲ್ಪಡುವವು. ಪೋಸ್ಟೇಜು 10 ಆಣೆ.

NATIONAL WATCH STORE,
1. A. Raja Narain Biswan Lane,
(4—2) P. O. Bagh Bazar, Calcutta.

ಇಂಡಿಯಾ ಎಕ್ವಿಟೇಬಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

(ಸ್ಥಾಪಿಸಲ್ಪಟ್ಟದ್ದು 1908.)

ಪೋಲಿಸಿಗಳು ಕಳಕೊಳ್ಳುವಂಥವುಗಳಲ್ಲ.

ಯಾವ ತಡೆಯೂ ಇಲ್ಲದೆ ಪ್ರತಿ ವರ್ಷವೂ ಬೋನಸ್ಸು.

ಹಕ್ಕು ಬಾಧ್ಯಸ್ಥರಿಗೆ ಸರಿಯಾಗಿ ಹಣ ಕೊಡಲ್ಪಡುವದು, ಇಲ್ಲದಿದ್ದರೆ ಬಡ್ಡಿಯು ದೊರೆಕುವುದು.

ಹೆಡ್ಡ್ ಆಫೀಸು:—

102· ಕ್ಲೈವ್ ಸ್ಟ್ರೀಟ್, ಕಲ್ಕತ್ತಾ.

I. E., P. S. 12—4

GOVERNMENT SOAP FACTORY,
Bangalore.

ವಿಶ್ವಾಸಾರ್ಹತೆ.

ಅತ್ಯುತ್ತಮವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ ಯಾವ ಗುಣಗಳು ಅವಶ್ಯಕವೆಂದು ನೀವು ತಿಳಿದಿರುತ್ತೀರೋ ಆ ಗುಣಗಳೆಲ್ಲಾ ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.

ನಾವು ನಿಮಗೆ ಭರವಸೆಯನ್ನೀಯುತ್ತೇವೆ.

ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
52—4 ಬೆಂಗಳೂರು.

ಸೆಂಟ್ರಲ್ ಬ್ಯಾಂಕು ಮೀಟಿಂಗು.

ಈ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ತಾರೀಖು 24—9—1932ರಲ್ಲು ರಾವ್ ಬಹದ್ದೂರ್ ಪಿ ದೇವಯ್ಯನವರ ಅಧ್ಯಕ್ಷತೆಯಲ್ಲಿ ಬ್ಯಾಂಕಿನ ಆಫೀಸಿನಲ್ಲಿ ನಡೆಯಿತು. ಈ ಕೆಳಗಿನ ಡೈರೆಕ್ಟರುಗಳು ಹಾಜರಿದ್ದರು. (1) ರಾವ್ ಬಹದ್ದೂರ್ ಪಟ್ಟಮಾಡ ದೇವಯ್ಯನವರು (ಪ್ರೆಸಿಡೆಂಟರು), (2) ಮಿ. ಗಳಾಡ ಕೆ. ಎನ್. ಸುಬ್ಬಯ್ಯರು, (3) ಪಾಂಡಂಡ ಚಂಗಪ್ಪನವರು ಯಂ. ಎಲ್. ಸಿ. (4) ಅಪ್ಪಾರಂಡ ಚಂಗಪ್ಪನವರು ಯಂ. ಎಲ್. ಸಿ. (5) ಸಣ್ಣೇರಿಯಂಡ ಸೋಮಯ್ಯನವರು ಯಂ. ಎಲ್. ಸಿ. (6) ಯಂ. ಯಂ. ಬೆಳ್ಯಪ್ಪನವರು (ಟ್ರೆಜರರ್), (7) ಉದಿಯಂಡ ಮಾಚಯ್ಯನವರು, (8) ಪುಚ್ಚಿಮಾಡ ಮಾದಯ್ಯನವರು, (9) ಎಸ್. ಎನ್. ರಾಮಸೆಟ್ಟಿ, (10) ಕೋಳೀರ ತಮ್ಮಯ್ಯನವರು ಮತ್ತು (11) ಸಿ. ಎನ್. ವೆಂಕಪ್ಪಯ್ಯನವರು ಬಿ. ಎ., ಬಿ. ಎಲ್. (ಗೌರವ ಕಾರ್ಯದರ್ಶಿ).

1. ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು.

2. ಆಗೋಸ್ಟು ತಿಂಗಳ ಜಮಾ ಮತ್ತು ಖರ್ಚಿನ ಲೆಕ್ಕ ಓದಿ ಮಂಜೂರ್ಮಾಡಲಾಯಿತು.

ಕಳೆದ ತಿಂಗಳ ಸಿಲ್ಕು	ರೂ. 27554— 7— 8
ಸದರಿ ತಿಂಗಳಲ್ಲಿ ಜಮಾ	,, 34034— 6— 5
ಜುಮ್ಲಾ	,, 61588—14— 1
ಸದರಿ ತಿಂಗಳ ಖರ್ಚು	,, 41807— 8— 2
ಜಾತ ಬಾಕಿ	,, 19781— 5—11

3. ದೇವಣಗೇರಿ ಸೊಸೈಟಿಗೆ ರೂ. 800 ಮತ್ತು ನಾರಂಬಡ ಸೊಸೈಟಿಗೆ ರೂ. 1000 ಸಾಲಗಳು ಮಂಜೂರಾದವು.

4. ಬ್ಯಾಂಕಿನ ಕೈಯಲ್ಲಿರುವ ಹಣವನ್ನು ಮೈಸೂರು ಬ್ಯಾಂಕಿನಲ್ಲಿ ಕರೆಂಟ್ (ಚಾಲ್ತಿ) ಡಿಪಾಜಿಟ್ಟಾಗಿ ಇಡಬೇಕೆಂತಲೂ ಮತ್ತು ಈ ಮೊದಲೇ ಗೌರವ ಸೆಕ್ರೆಟರಿಯವರು ಬ್ಯಾಂಕಿನ ಬಾಬ್ತು 8000 ರೂಪಾಯಿಗಳನ್ನು ಕಳೆದ ಮೀಟಿಂಗಿನಲ್ಲಿ ಡೈರೆಕ್ಟರುಗಳು ಸೂಚಿಸಿದ ಮೇರೆ ಮೈಸೂರು ಬ್ಯಾಂಕಿನಲ್ಲಿ ಕರೆಂಟ್ ಡಿಪಾಜಿಟ್ಟಾಗಿ ಇಟ್ಟದ್ದನ್ನು ಮಂಜೂರ್ಮಾಡಲಾಯಿತೆಂತಲೂ ತೀರ್ಮಾನವಾಯಿತು. ಅಲ್ಲದೆ ಬ್ಯಾಂಕಿನ ಬಾಬ್ತು, ಮೈಸೂರು ಬ್ಯಾಂಕಿನಲ್ಲಿ ಕರೆಂಟ್ ಡಿಪಾಜಿಟ್ಟಾಗಿ ಮಾಡುವ ಎಲ್ಲಾ ಮೊಬಲಗುಗಳಿಗೆ ಹುಂಡಿ ಎಷ್ಟೇ ಆದರೂ ಬಡ್ಡಿ ಕೊಡಬೇಕೆಂತ ಮೈಸೂರು ಬ್ಯಾಂಕಿನವರನ್ನು ಕೇಳಿಕೊಳ್ಳುವಂತೆ ಸಹ ತೀರ್ಮಾನವಾಯಿತು.

5. ಸೆಂಟ್ರಲ್ ಬ್ಯಾಂಕಿನ ಬಾಬ್ತು ಟ್ರಜರಿ ರೂಮಿನಲ್ಲಿರುವ ಕಬ್ಬಿಣದ ಪೆಟ್ಟಿಗೆಯನ್ನು ಅಲ್ಲಿಂದ ಹೊರತೆಗೆದು ಬಿಡಬೇಕೆಂತ ಕೊಡಗು ಕಮಿಷನರವರಿಂದ ಬಂದ ಪತ್ರವು ಓದಲಾಯಿತು.

ಬ್ಯಾಂಕಿನ ಪ್ರೆಸಿಡೆಂಟರಾದ ರಾವ್ ಬಹದ್ದೂರ್ ಪಿ. ದೇವಯ್ಯನವರು, ಡೈರೆಕ್ಟರುಗಳು ಮಿ. ಗಳಾಡ ಪಾಂಡಂಡ ಚಂಗಪ್ಪ ಯಂ. ಎಲ್. ಸಿ. ಯವರು ಮತ್ತು ಕೆ. ಎನ್. ಸುಬ್ಬಯ್ಯರು ಸಹ ಮೇಲ್ಕಂಡ ಪೆಟ್ಟಿಗೆಯನ್ನು ಟ್ರಜರಿ ರೂಮಿನಿಂದ ಸಾಗಿಸುವ ವಿಷಯ ಪುನರಾಲೋಚನೆ ಮಾಡಿ, ಕಳುಹಿಸಿದ ಆರ್ಡರನ್ನು ರದ್ದು ಮಾಡಬೇಕಾಗಿ ಕೇಳಲು ಕಮಿಷನರವರಲ್ಲಿಗೆ ಹೋಗಿ ಭೇಟಿಮಾಡಬೇಕಾಗಿ ತೀರ್ಮಾನವಾಯಿತು.

6. ಮಿ. ಮನೆಯಪಂಡ ಬೆಳ್ಯಪ್ಪನವರು, ವೀರಾಜಪೇಟೆ ಕ್ಲಾಸ್, ಕೋಸ್, ಸೇಲ್ ಅಂಡ್ ಸಪ್ಲೈ ಸೊಸೈಟಿಯು ಯೂನಿಯನ್ನಿಗೆ ಅಥವ ಫೆಡರೇಷನ್ನಿಗೆ ಸಂಯೋಜನೆಯಾಗದ್ದರಿಂದ ಬ್ಯಾಂಕಿನಿಂದ ಸದರಿ ಸೊಸೈಟಿಗೆ ಕೊಟ್ಟಿರುವ ಸಾಲವನ್ನು ವಸೂಲ್ಮಾಡಬೇಕಾಗಿ ಬರಕೊಂಡ ಪತ್ರವು ಓದಲಾಯಿತು.

ಈ ಬಾಬಿನಲ್ಲಿ ದೀರ್ಘ ಚರ್ಚೆ ನಡೆದು ಕಡೆಗೆ ಮಿ. ಬೆಳ್ಯಪ್ಪನವರು ಅವರ ಠರಾವನ್ನು ವಾಪಸು ತೆಗೆದುಕೊಂಡರು.

ಫೆಡರೇಶನನ್ನು ಬ್ಯಾಂಕಿನ ಮೇಲ್ವಿಚಾರಕ್ಕೆ ನೇಮಿಸುವ ವಿಷಯ ಬರುವ ಮೀಟಿಂಗಿನಲ್ಲಿ ಚರ್ಚೆಗೆ ಇಡಬೇಕಾಗಿ ಸೂಚಿಸಲಾಯಿತು.

7. ಮಿ. ಪುಚ್ಚಿಮಾಡ ಮಾದಯ್ಯನವರು ಬ್ಯಾಂಕಿನ ಮೀಟಿಂಗಿನ ಪ್ರೊಸೀಡಿಂಗ್ಸ್‌ಗಳನ್ನು ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಿಸಬೇಕೆಂತ ಕಳುಹಿಸಿದ ಠರಾವು ಓದಲಾಯಿತು.

ಈ ವಿಷಯ ಮಾತಾಡಿದ ನಂತರ ಬ್ಯಾಂಕಿನ ವಿಷಯಗಳನ್ನು ಪತ್ರಿಕೆಗಳಲ್ಲಿ ಚಾರ್ಜ್ ಕೊಟ್ಟು ಪ್ರಿಂಟು ಮಾಡಿಸಬೇಕೋ ಎಂಬ ವಿಷಯ ಇನ್ನೊಂದು ಮೀಟಿಂಗಿನಲ್ಲಿ ಚರ್ಚಿಸಿದ ನಂತರ ಯೋಚಿಸಬಹುದಾಗಿ ತಿಳಿಸಲಾಯಿತು.

ಪಿ. ದೇವಯ್ಯ,
(ಅಧ್ಯಕ್ಷರು.)

ಪತ್ರವ್ಯವಹಾರ.

[ಬಾತ್ಮಿದಾರರು ಬರುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಸುಂಟಿಕೊಪ್ಪದ ಕೈಲ್‌ಪೋಳುದು ಹಬ್ಬವು.

ಇದೇ ಸೆಪ್ಟಂಬರ್ ೩ ರಲ್ಲಿ ಸುಂಟಿಕೊಪ್ಪದ ಕ್ಲಬ್ ಹಾಲ್‌ನಲ್ಲು ಹಬ್ಬವು ವಿಜೃಂಭಣೆಯಿಂದ ಜರಗಿಸಲ್ಪಟ್ಟಿತು. ಸುಮಾರು 100 ಜನರು ಹಾಜರಿದ್ದರು. ಕೆಲವರು ಅತಿಥಿಗಳಾಗಿದ್ದರು. ಸದರಿ ದಿನ ೪ ಗಂಟೆ ಸಮಯಕ್ಕೆ ತಿಂಡಿತೀರ್ಥವಾದ ನಂತರ ಒಡೆಯಾಳಗಳೊಡನೆ ಸಮೀಪ ಇರುವ ಮೈದಾನಕ್ಕೆ ತೆರಳಿ ತೆಂಗಿನ ಕಾಯಿಗೆ ಗುರಿಹೊಡೆಯುವುದು ಮತ್ತು ಅನೇಕ ತರದ ಹೂಡಾಟ ಮುಗಿದ ನಂತರ ಸದರಿ ಕ್ಲಬ್ ಹಾಲ್‌ನಲ್ಲಿ 8 ಗಂಟೆಗೆ ಸರಿಯಾಗಿ ಆಟೋಟಗಳಲ್ಲಿ ಗೆದ್ದವರಿಗೆ ಮಿ. ಪಿ. ಯಂ. ಮಂಜನಾಥಯ್ಯನವರೊಡಗೂಡಿ ಬಹುಮಾನ ಕೊಡಲ್ಪಟ್ಟು ಸಂಗೀತಗಾನದಿಂದ 9 ಗಂಟೆಗೆ ಔತಣವು ಪ್ರಾರಂಭವಾಗಿ 11 ಗಂಟೆ ಸಮಯಕ್ಕೆ ಸಭೆಯು ಕೆಲವರ ಭಾಷಣವಾದ ನಂತರ ಮೌನದಿಂದ ಬರಖಾಸ್ತಾಯಿತು. ನಿಶಾದೇವಿಗೆ ಲೇಶಮಾತ್ರವೂ ಆಮಂತ್ರಣವಿರಲಿಲ್ಲ.

'ಹಾಜರಿದ್ದವ.'

ಕೊಡಗಿನ ಪ್ರಾಥಮಿಕ ಶಾಲೆಗಳಲ್ಲಿಯ ಉಪಾಧ್ಯಾಯರುಗಳ ಸ್ಥಿತಿ.

ಕೊಡಗಿನಲ್ಲಿಯ ಹೆಚ್ಚು ಪ್ರಾಥಮಿಕ ಶಾಲೆಗಳು ಡಿಸ್ಟ್ರಿಕ್ಟ್ ಬೋರ್ಡಿನ ಕೈಕೆಳಗೆ ಇವೆ. ಈ ಶಾಲೆಗಳನ್ನು ಇವರು ನಡಿಸಿಕೊಂಡು, ವರ್ಷಂಪ್ರತಿ ಹೊಸ ಶಾಲೆಗಳನ್ನು ತೆರೆಯುವುದು ಈ ಚಿಕ್ಕ ಪ್ರಾಂತ್ಯಕ್ಕೆ ಒಂದು ದೊಡ್ಡ ಉಪಕಾರವೇ ಸರಿ. ಆಗ ಈ ಲೋಕಲ್‌ಫಂಡ್ ಶಾಲೆಗಳಲ್ಲಿ ಹೇಗೆ ಕೆಲಸವು ನಡೆಯುವುದು ಮತ್ತು ಯಾವ ತರದ ಬೋಧನೆಯು ಯಾರಿಂದ ಬೋಧಿಸಲ್ಪಡುವುದು ಎಂಬುದನ್ನು ಕುರಿತು ಸ್ವಲ್ಪ ಬರೆಯಬೇಕೆಂದಿರುವೆನು.

ಐದನೇ ಸ್ಟೇಂಡಾರ್ಡ್ ವರೆಗೆ ಇರುವಂತ, ಅಂದರೆ, ಸಂಪೂರ್ಣ ಎಲಿಮೆಂಟರಿ ಶಾಲೆಗಳು ಅನೇಕ ಇವೆ. ಹೀಗಿರುವಂತ ಅನೇಕ ಶಾಲೆಗಳಲ್ಲಿ ಎರಡು ಯಾ ಮೂರು ಉಪಾಧ್ಯಾಯರು ಮಾತ್ರವೇ ಬೋಧಿಸಬೇಕಾಗಿದೆ. ಹೀಗೆ 2 ಮತ್ತು 3 ಉಪಾಧ್ಯಾಯರುಗಳಿಂದ 5 ತರಗತಿಗಳಿಗೆ ಬೋಧಿಸಲು ಸಾಧ್ಯವಾಗುವುದೇ? ಸರ್ಕಾರಕ್ಕೆ ಅವರು ಮುಖ್ಯವಾದ ಪಾಠಗಳನ್ನು ಅಂದರೆ ನನ್ನ ಮಟ್ಟಿಗೆ ತೋರಿದ ಮೇರೆ, ಇಂಗ್ಲಿಷ್, ಕನ್ನಡ ಮತ್ತು ಲೆಕ್ಕ ಇವುಗಳಿಗೆ ಮಾತ್ರ ಹೆಚ್ಚು ಗಮನವಿಟ್ಟು ಕಲಿಸುತ್ತಾರೆಂದು ನನ್ನ ಊಹನೆ. ಅಲ್ಲ, ಇವರು ಎಲ್ಲಾ ಪಾಠಗಳಲ್ಲೂ ಒಂದೇ ತರವಾದ ಮುತುವರ್ಜಿಯಿಟ್ಟು ಕೆಲಸ ಮಾಡುವುದಾದರೂ ಕೂಡ, ಎಷ್ಟು ಕಷ್ಟದಿಂದ ಕೆಲಸ ಮಾಡಬೇಕಾಗಿರುವುದೆಂಬುದನ್ನು ಸರಕಾರದವರು ಒಂದಿಷ್ಟು ಯೋಚಿಸಿದರೆ ಇದರ ನಿಜಸಂಗತಿಯು ವೇದ್ಯವಾಗದೆ ಇರದು. ಮೊದಲನೇ ತರಗತಿ ಎಂದರೆ, ಕಿಂಡರ್‌ಗಾರ್ಟನ್ ಕ್ಲಾಸಿನ ಮಕ್ಕಳ ಗೋಜನ್ನು ನಿಲ್ಲಿಸಲಿಕ್ಕೇ ಒಬ್ಬ ಉಪಾಧ್ಯಾಯನು ಬೇಕಾಗುವುದೆಂದು ನನ್ನ ಭಾವನೆ. ಇದೂ ಸಾಲದೆ, ಈಗಿನ ಕೆಲವು ತಾಯಿ ತಂದೆಯವರು ತಮ್ಮ ಮಕ್ಕಳು ಮೊಲೆ ಹಾಲು ಕುಡಿಯುವುದು ಬಿಟ್ಟವೋ, ಇಲ್ಲವೋ, ಅಷ್ಟರಲ್ಲಿ ಅವರನ್ನು ಮನೆಯಲ್ಲಿ ತಡಕೊಳ್ಳಲು ಕಷ್ಟವೆಂಬದಾಗಿ ಕಂಡೋ ಏನೋ, ಅದು ಅಲ್ಲದಿದ್ದರೆ ತಮ್ಮ ಮಕ್ಕಳು ಬೇಗನೆ ದೊಡ್ಡ ವಿದ್ಯಾವಂತರಾಗಲಿ ಎಂಬ ಯೋಚನೆಯಿಂದಲೋ ಶಾಲೆಗೆ ಕಳುಹಿಸಿಬಿಡುತ್ತಾರೆ. ಆದರೆ ಹೀಗೆ ಮಾಡುವುದರ ಪರಿಣಾಮವು ಏನಾಗುವುದೆಂದು ಮಕ್ಕಳ ಪೋಷಕರೇ ದಯವಿಟ್ಟು ಊಹಿಸಲಿ.

ಹೀಗಿರುವಂತ ಸ್ಥಿತಿಯಲ್ಲಿ ಒಂದು ಪೂರ್ಣ ಎಲಿಮೆಂಟರಿ ಶಾಲೆಯಲ್ಲಿ ಎರಡು ಯಾ ಮೂರು ಉಪಾಧ್ಯಾಯರುಗಳಿಂದ ಪಾಠ ಹೇಳುವುದು ಎಷ್ಟು ಕಷ್ಟಕರವಾದ ಕೆಲಸವಾಗಿರಬಹುದೆಂಬುದಾಗಿ ಬರೇ ಸರಕಾರವಲ್ಲ, ಬೇರೆ ಅನೇಕ ಹಿತಚಿಂತಕರು ಕೂಡ ಚಿಂತಿಸದೆ ಇರರು. ಇಷ್ಟೂ ಅಲ್ಲದೆ ಹೀಗೆ 2 ಯಾ 3 ಉಪಾಧ್ಯಾಯರಿಂದ ಬೋಧಿಸಲ್ಪಡುವಂತ ಒಂದು ಪೂರ್ಣ ಎಲಿಮೆಂಟರಿ ಶಾಲೆಯಲ್ಲಿರುವ ವಿದ್ಯಾರ್ಥಿಗಳು ತಮ್ಮ ಪ್ರತಿ ಪಾಠದಲ್ಲಿ ಪ್ರವೀಣರಾಗಿರುವರೋ ಎಂಬ ಇನ್ನೊಂದು ಸಂಶಯವಾಗಿದೆ. ಆದುದರಿಂದ ಸರಕಾರದವರು ಇನ್ನಾದರೂ ಇಂಥಾ ಬಡ ಉಪಾಧ್ಯಾಯರ ಮೇಲೆ ಕರುಣೆ ಇಟ್ಟು, ಎಲ್ಲಿ ಎಲಿಮೆಂಟರಿ ಶಾಲೆಗಳು ಇವೆಯೋ ಅಂಥ ಶಾಲೆಗಳಲ್ಲಿ ಮಾತ್ರವೇ ಅಲ್ಲ, ಪ್ರತಿ ಲೋಕಲ್‌ಫಂಡ್ ಪ್ರಾಥಮಿಕ ಶಾಲೆಯಲ್ಲಿಯೂ ಪ್ರತಿ ಒಂದೊಂದು ತರಗತಿಗೆ ಒಬ್ಬೊಬ್ಬ ಉಪಾಧ್ಯಾಯರನ್ನು ನೇಮಿಸಿ ಅವರು ಈಗ ಪಡುತ್ತಿರುವ ಕಷ್ಟವನ್ನು ಆದಷ್ಟು ಬೇಗನೆ ನೀಗಿಸುವರಾಗಿ ನನ್ನ ಕೋರಿಕೆ.

ಲೋಕಲ್‌ಫಂಡ್ ಪ್ರಾಥಮಿಕ ಶಾಲೆಗಳಲ್ಲಿ ಯಾವ ತರದ ಉಪಾಧ್ಯಾಯರು ಕಲಿಸುತ್ತಿದ್ದಾರೆ ಮತ್ತು ಅವರು ಅವರವರ ಕೆಲಸವನ್ನು ಯಾವ ರೀತಿಯಿಂದ ನಡೆಸುತ್ತಾ ಇರುವರು ಎಂಬದನ್ನು ಯೋಚಿಸುವ. ಈಗ ಒಬ್ಬನು ಉಪಾಧ್ಯಾಯ ವೃತ್ತಿಯನ್ನು ಕೈಕೊಳ್ಳಬೇಕಾದರೆ ಅವನು ಕನಿಷ್ಠ ಲೋವರ್ ಸೆಕೆಂಡರಿ ಪರೀಕ್ಷೆ ಪಾಸಾಗಿರಬೇಕು. ಅಂತು ಈಗ ಎಲ್ಲೆಲ್ಲಿಯೂ ವಿದ್ಯಾವಂತರು ಹೆಚ್ಚಾಗಿ ಉಪಾಧ್ಯಾಯ ವೃತ್ತಿಗೆ ಬರುವವರೆಲ್ಲರೂ ಯಸ್. ಎಸ್. ಎಲ್. ಸಿ. ಓದಿದವರು, ಪಾಸಾದವರು, ಇಂಟರ್‌ಮೀಡಿಯೇಟ್ ಓದಿದವರು, ಪಾಸಾದವರು, ಎಫ್, ಬಿ. ಎ. ಯವರು ಸಹ ಈಗೀಗ ಈ ವೃತ್ತಿಯನ್ನು ಎಲಿಮೆಂಟರಿ ಶಾಲೆಯಲ್ಲಿ ಕೈಕೊಳ್ಳುವವರಾಗಿರುವರು. ಈ ತರದ ಯೋಗ್ಯತೆ ಇರುವವರನ್ನು ಉಪಾಧ್ಯಾಯರನ್ನಾಗಿ ನೇಮಕಮಾಡಿ, ಅವರಿಗೆ 4—5 ವರ್ಷ ಸರ್ವಿಸ್ ಆದ ಮೇಲೆ ಅವರನ್ನು ಟ್ರೈನಿಂಗಿಗೆ ಕಳಿಸುವರು. ಪ್ರಾಥಮಿಕ ಶಾಲೆಗಳಲ್ಲಿ ಬೋಧಿಸಲಿಕ್ಕೆ ಈಗ ಕೆಲವು ವರ್ಷಗಳಿಂದೀಚೆಗೆ ಎರಡು ತರನಾಗಿ ಟ್ರೈನಿಂಗ್ ಹೊಂದುತ್ತಾರೆ. ಅಂದರೆ ಲೋವರ್ ಸೆಕೆಂಡರಿ ಪರೀಕ್ಷೆ ಪಾಸ್‌ಮಾಡಿ ಯಸ್. ಯಸ್. ಎಲ್. ಸಿ. ವರೆಗೆ ಓದಿದವರನ್ನು ಹೈಯ್ಯರ್ ಎಲಿಮೆಂಟರಿ ಟ್ರೈನ್ಡ್ ಟೀಚರ್ಸ್ ಎಂದೂ, ಎಸ್. ಎಸ್. ಎಲ್. ಸಿ. ಪಾಸು ಮಾಡಿ ಬಿ. ಎ. ವರೆಗೆ ಓದಿದವರನ್ನು ಸೆಕೆಂಡರಿ ಗ್ರೇಡ್ ಟ್ರೈನ್ಡ್ ಟೀಚರ್ಸ್ ಎಂದೂ ವಿಭಾಗಿಸುವರು. ಹೀಗೆ ಟ್ರೈನ್ ಆದ ಮೇಲೆ ಹೈಯರ್ ಎಲಿಮೆಂಟರಿ ಟ್ರೈನ್ಡ್ ಟೀಚರುಗಳಿಗೆ ರೂ. 30—1—55 ರ ಸಂಬಳವೆಂದೂ, ಸೆಕೆಂಡರಿ ಗ್ರೇಡ್ ಟ್ರೈನ್ಡ್ ಟೀಚರ್ಸ್‌ಗೆ ರೂ. 40—2—60—1—70 ರ ಸಂಬಳವೆಂದು ಹೆಸರಿಗೆ ಮಾತ್ರ ಇಟ್ಟಿರುತ್ತಾರೆಯೇ ಹೊರತು ಅನೇಕ ಲೋಕಲ್‌ಫಂಡ್ ಶಾಲೆಗಳಲ್ಲಿ ಹೈಯರ್ ಎಲಿಮೆಂಟರಿ ಟೀಚರ್ಸ್‌ಗೆ ಮತ್ತು ಸೆಕೆಂಡರಿ ಗ್ರೇಡ್ ಟೀಚರ್ಸ್‌ಗೆ ಈ ತೆರನಾದ ಸಂಬಳ ದೊರಕದೆ ಬರೇ ರೂ. 20/—ಯಾ 25 ರಲ್ಲಿ ಕಷ್ಟಪಡುತ್ತಾ ಇದ್ದಾರೆ. ಇದೂ ಅಲ್ಲದೆ ಮೊದಲು ಲೋವರ್ ಎಲಿಮೆಂಟರಿ ಟ್ರೈನಿಂಗ್ ಎಂಬದಾಗಿ ಇತ್ತು. ಈ ತೆರನಾಗಿ ಟ್ರೈನಿಂಗ್ ಹೊಂದಿದವನಿಗೆ ರೂ. 25—1—35 ರ ಸಂಬಳವೆಂದೂ ಇಟ್ಟಿರುವರು. ಆದರೆ ಎಷ್ಟೋ ಲೋವರ್ ಎಲಿಮೆಂಟರಿ ಟ್ರೈನ್ಡ್ ಉಪಾಧ್ಯಾಯರು ಕೂಡ ಈ ತರದ ಗ್ರೇಡು ಸಿಕ್ಕದೆ ಬರೇ 20—25 ರಲ್ಲಿ ತೃಪ್ತಿಹೊಂದಬೇಕಾಗಿದೆ. ಏನು ಕಾರಣದಿಂದ ಹೀಗೆಲ್ಲಾ ಇದೆಯೋ ಎಂಬುದು ಗೊತ್ತಾಗುವುದಿಲ್ಲ. ಈ ಬಡ ಉಪಾಧ್ಯಾಯರ ಮೇಲೆ ಯಾರಿಗೂ ಕರುಣೆ ಇಲ್ಲದೆ ಹೋಯಿತಲ್ಲಾ! ಎಲ್ಲಿಯಾದರೂ ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರವರು ಉಪಾಧ್ಯಾಯರ ಪಕ್ಷವನ್ನು ವಹಿಸುವದೆಂದರೆ ಹೇಗೆ ಸಾಧ್ಯವಾದೀತು! ಇವರೊಬ್ಬರು ಮಾತ್ರ ಉಪಾಧ್ಯಾಯರ ವಿಷಯವಾಗಿ ಏತಕ್ಕಾಗಿ ಇಷ್ಟೆಲ್ಲಾ ಹೋರಾಡುತ್ತಾರೆಂಬ ಯೋಚನೆಯು ಸರಕಾರದಲ್ಲಿ ಹುಟ್ಟುವಲ್ಲಿ ಏನೊಂದು ಸಂಶಯವಿಲ್ಲ. ಅಲ್ಲ ಇವರು ಹೋರಾಡಿದಾಗ್ಯೂ ಕೂಡ ಇವರೊಬ್ಬರು ಎಷ್ಟರ ಮಟ್ಟಿಗೆ ಹೋರಾಡಲು ಸಾಧ್ಯವಾದೀತು? ಸರಕಾರಕ್ಕೇ ಕರುಣೆ ಹುಟ್ಟದಲ್ಲದೆ ಈ ಬಡ ಉಪಾಧ್ಯಾಯರ ಸ್ಥಿತಿಯು ಎಂದಾದರೂ ಯಾವ ರೀತಿಯಿಂದಲೂ ಒಳ್ಳೇದಾಗಲಿಕ್ಕಿಲ್ಲ. ಕಳೆದ ಕುರ್ಗ್ ಟೀಚರ್ಸ್ ಕಾನ್ಫರೆನ್ಸಿನಲ್ಲಿ ಈಗಿನ ಡಿಪ್ಯುಟಿ ಇನ್ಸ್‌ಪೆಕ್ಟರವರು ಉಪಾಧ್ಯಾಯರುಗಳ ಹಿತದ ಉದ್ಧಾರಣೆಗೋಸ್ಕರ ಮಾತಾಡುತ್ತಾ ಹೋದಾಗ್ಯೆ ಅನೇಕರ ಕಿವಿಗಳು ನೆಟ್ಟಗಾದುವು.

ಆದರೆ ಒಂದೇ ಭಾವನೆಯುಂಟಲ್ಲ. ಬಾಕಿ ಎಲ್ಲಾ ಪ್ರಾಣಿಗಳಿಗಿಂತಲೂ ಮನುಷ್ಯ ಜಾತಿಯೇ ಶ್ರೇಷ್ಠವೆಂದೆನಿಸಿಕೊಂಡು ಅದಷ್ಟು ವಿದ್ಯೆಯನ್ನು ಸಂಪಾದಿಸಿ ಬರೇ 20—25 ರಲ್ಲಿ ತನ್ನ ಸಂಸಾರವನ್ನು ಹೇಗೆ ತಾನೇ ನಡಿಸಿಕೊಂಡು ಹೋಗುವನೆಂದು ಯೋಚಿಸಿ! ಒಬ್ಬ ಪೋಲೀಸ್ ಸಬ್ ಇನ್ಸ್‌ಪೆಕ್ಟರನ ಕುದುರೆಯನ್ನು ಸಾಕಲಿಕ್ಕೆ ತಿಂಗಳಿಗೆ 25/— ರೂ ಎಲೋಯನ್ಸ್ ಎಂಬದಾಗಿ ಕೊಡುತ್ತಿರುವಾಗ್ಗೆ ಈ ಮನುಷ್ಯ ಪ್ರಾಣಿಯು ಆ ಕುದುರೆಗಿಂತಲೂ ಕೀಳಾಗಿ ಹೋದ ಸಂದರ್ಭವು ಒದಗಿದೆಯಲ್ಲಾ! ಸೆಕೆಂಡರಿ ಟೀಚರಿಗೆ ರೂ. 40—2—60—1—70 ಎಂದೂ, ಹಯರ್ ಎಲಿಮೆಂಟರಿ ಟೀಚರ್‌ಗೆ 30—1—55 ಎಂದೂ ಮತ್ತು ಲೋವರ್ ಎಲಿಮೆಂಟರಿ ಟೀಚರ್‌ಗೆ 25—1—35 ಎಂದೂ ಇಟ್ಟದ್ದು ಈ ಪ್ರಕಾರ ಕೊಡದೆ ಹೋದದ್ದೇ ಆದರೆ ಅವರ ಮನಸ್ಸಿನಲ್ಲಿ ಎಷ್ಟು ಬೇಸರಿಕೆ ಇರಲಿಕ್ಕಿಲ್ಲ? ಇಂಥಾ ಸಂದರ್ಭದಲ್ಲಿದ್ದರೂ ಕೂಡ ಒಂದು ಲೋಕಲ್‌ಫಂಡ್ ಸ್ಕೂಲಿನ ವಿದ್ಯಾಭಿವೃದ್ಧಿಯ ಪ್ರಮಾಣವು ಒಂದು ಇಂಪೀರಿಯಲ್ ಸ್ಕೂಲಿನ ವಿದ್ಯಾಭಿವೃದ್ಧಿಯ ಪ್ರಮಾಣಕ್ಕೆ ಸಮಾನವಾಗಿಯೇ ಇರುತ್ತದೆ ಹೊರತು ಎಂದಾದರೂ ಕಮ್ಮಿಯಾಗಿರುವುದಿಲ್ಲ. ಇಷ್ಟೂ ಅಲ್ಲ, ಒಬ್ಬ ಉಪಾಧ್ಯಾಯನು ಟ್ರೈನಿಂಗ್ ಆಗಿ ಬರುವಾಗ್ಗೆ 29—30 ವರ್ಷ ಪ್ರಾಯವಾಗಿರುವುದು. ಆ ಮೇಲೆ ಅವನಿಗೆ ಅವನ 30 ಯಾ 40 ರ ಗ್ರೇಡು ಸಿಕ್ಕುವಾಗ ಕಮ್ಮಿ 35—40 ವರ್ಷ ಪ್ರಾಯವಾಗುವುದು. ಅವನು ತನ್ನ 55ನೇ ವಯಸ್ಸಿನಲ್ಲಿ ಕೆಲಸದಿಂದ ನಿವೃತ್ತಿ ಹೊಂದುವಾಗ್ಯೆ ಅವನವನ ಮಹತ್ಪ್ರಮಾಣದ ಸಂಬಳವು ಸಿಕ್ಕುವುದೇ ಬಹಳ ಅಪರೂಪ. ಆಗ ಅವನಿಗೆ ಸಿಕ್ಕುವ ಪೆನ್ಶನ್ ಕೂಡ ಅವನು ಪಡೆಯುತ್ತಿದ್ದ ಸಂಬಳದ ಮೇಲೆ ಹೊಂದಿರುವುದು. ಈ ತರದ ವಿವರಣೆಯು ಬರೇ ವಿದ್ಯಾ ಇಲಾಖೆಯಲ್ಲಿ ಅದರಲ್ಲೂ ಲೋಕಲ್‌ಫಂಡ್ ಶಾಲೆಗಳಲ್ಲಿ ಅಲ್ಲದೆ ಬೇರೆ ಯಾವುದಾದರೂ ಒಂದು ಡಿಪಾರ್ಟ್‌ಮೆಂಟಿನಲ್ಲಿ ಈ ತರದ ವರ್ತನೆಯು ಜಾರಿಯಲ್ಲಿರುವುದು ಎಂಬದಾಗಿ ಹೇಳುವವರು ಯಾರಾದರೂ ಇರುವರೇ?

ಇದೂ ಅಲ್ಲ, ಒಬ್ಬ ಸಾಧಾರಣ ಗುಮಾಸ್ತನನ್ನು ತೆಗೆದುಕೊಂಡರೆ, ಸುರುವಿನಲ್ಲಿ ಅವನನ್ನು ನೇಮಕ ಮಾಡುವಾಗ, ಅವನು ಕೇವಲ ಹೊಸಬನಾಗಿದ್ದರೂ ಕೂಡ ಅವನಿಗೆ ಪ್ರಾರಂಭದಲ್ಲಿ ರೂ. 30/—ಸಂಬಳ ಕೊಟ್ಟು ಆ ಮೇಲೆ ಅವನಿಗೆ ಯಾವ ಉಚ್ಚ ಪದವಿಯನ್ನು ಅಪೇಕ್ಷೆ ಮಾಡುವಂಥಾ ಅಧಿಕಾರವೂ ಅವನಿಗಿರುತ್ತದೆ. ಆದರೆ ಪ್ರಾಥಮಿಕ ಶಾಲೆಯ ಉಪಾಧ್ಯಾಯ ವೃತ್ತಿಯಲ್ಲಿ ಪ್ರತಿಯೊಬ್ಬನ ವೇತನವು 30—1—55 ಯಾ 40—2—60—1—70 ಹೀಗಿರುವಾಗ್ಗೆ ಸರಕಾರವು, ಪ್ರತಿ ಟ್ರೈನ್ ಆದ ಮತ್ತು ಆಗಿ ಬರುವಂತ ಉಪಾಧ್ಯಾಯರುಗಳಿಗೆ ಅವರವರಿಗೆ ಸಲ್ಲತಕ್ಕ ಗ್ರೇಡನ್ನು ಸಹ ಕೊಡದೆ ಇರುವುದು ಎಷ್ಟು ದೊಡ್ಡ ವ್ಯಸನಕರವಾದ ಸಂಗತಿ. ಈ ಸಮ್ಮಂಧದಲ್ಲಿ ಶಾಲಾ ಇಲಾಖೆಯು ಬಿನ್ನ ಭಾವದಿಂದ ನಡಿಸಲ್ಪಟ್ಟದೆ ಎಂದರೆ ಏನೂ ತಪ್ಪಾಗಲಿಕ್ಕಿಲ್ಲವೆಂದು ನಂಬುತ್ತೇನೆ. ಈ ಕಾರಣಗಳಿಂದ ನರಳುತ್ತಿರುವಂಥಾ ಬಡ ಉಪಾಧ್ಯಾಯರ ಮೇಲೆ ಸರ್ಕಾರವು ಇನ್ನಾದರೂ ಕರುಣೆಯಿಟ್ಟು ಪ್ರತಿ ಟ್ರೈನ್ ಆದ ಮತ್ತು ಆಗಿ ಬರುವಂಥಾ ಉಪಾಧ್ಯಾಯರಿಗೆ ಅವರಿಗೆ ಸಲ್ಲತಕ್ಕಂಥಾ ಗ್ರೇಡನ್ನು ಕೂಡಲೇ ಕೊಟ್ಟವರನ್ನು ಒಳ್ಳೆಯ ಸ್ಥಿತಿಗೆ ತರುವರಾಗಿ ನನ್ನ ಅತಿ ವಿನಯದ ಕೋರಿಕೆ.

ಉಪಾಧ್ಯಾಯರ ಹಿತಚಿಂತಕ.

ಕೊಡಗಿನಲ್ಲಿ ಶಾಸನ ಭಂಗ.

ಮಡಿಕೇರಿಯಲ್ಲಿ ಪ್ರಾಂತೀಯ ರಾಜಕೀಯ ಪರಿಷತ್ತು.

ಅಧ್ಯಕ್ಷರಾದ ಶ್ರೀ. ಕೊಳ್ಳಿಮಾಡ ಕರುಂಬಯ್ಯನವರ ಮತ್ತು ಇಬ್ಬರ ದಸ್ತಗಿರಿ.

ದೇವಾಲಯಗಳಿಗೆ ಅಸ್ಪೃಶ್ಯರ ಪ್ರವೇಶಕ್ಕೆ ಪ್ರಯತ್ನಗಳು.

ಮುಜರಾಯಿ ಇಲಾಖೆಯ ಕಮಿಟಿಗೆ ಅರ್ಜಿ.

ದೇಶದ ಹಿಂದೂ ಜನರಿಗೆ ಕೆಲವು ಮಹನೀಯರ ವಿನಂತಿ.

ಮಹಾತ್ಮರೊಂದಿಗೆ ಶ್ರೀ. ವಿ. ತಮ್ಮಯ್ಯನವರ ಉಪವಾಸ.

ಬ್ರಿಟಿಷ್ ಪ್ರಧಾನಿಯವರಿಗೆ ಜಮೀನ್ದಾರರ ಸಂಘದ ತಂತಿ.

ಕೊಡಗು ಪ್ರಾಂತೀಯ ರಾಜಕೀಯ ಪರಿಷತ್ತು ಈ ತಾ 26 ನೇ ಸೋಮವಾರ ಮಡಿಕೇರಿಯ ಪಾತೆಮೂಲದ ಬಳಿ ನಡೆಯಿತು. ಸುಮಾರು 300 ಜನರಿಗಿಂತ ಹೆಚ್ಚಿನ ಜನಸ್ತೋಮವು ಕೂಡಿತ್ತು. ಸ್ವಾಗತ ಅಧ್ಯಕ್ಷರಾಗಿದ್ದ ಶ್ರೀಯುತ ಬಿಜ್ಜಂಗಳ ಬೋಪಯ್ಯನವರ ಕೋರಿಕೆ ಮೇರೆ ಸಭೆಯವರ ಅನುಮತಿಯಿಂದ ಶ್ರೀಯುತ ಕೊಳ್ಳಿಮಾಡ ಕರುಂಬಯ್ಯನವರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದರು. ಕೂಡಲೆ ಅಧ್ಯಕ್ಷರು, ಈಗಿನ ರಾಜಕೀಯ ಪರಿಸ್ಥಿತಿಯನ್ನೂ, ಮಹಾತ್ಮರ ಉಪವಾಸ ವ್ರತದಿಂದ ದೇಶದಲ್ಲಿ ಉಂಟಾಗಿರುವ ವ್ಯಸನ ಮತ್ತು ಗಲಿಬಿಲಿಯನ್ನೂ ಮತ್ತು ಸ್ಥಳೀಕ ಸರ್ಕಾರದವರು ರಾಜಕೀಯ ಕೈದಿಗಳ ಬಿಡುಗಡೆ ವಿಷಯದಲ್ಲಿ ಕೈಕೊಂಡಿರುವ ದಬ್ಬಾಳಿಕೆಯನ್ನೂ ಕುರಿತು ಭಾಷಣ ಮಾಡಿದರು. ಈ ಭಾಷಣದ "ಸೈಕ್ಲೋಸ್ಟೈಲ್" ಮಾಡಿದ ಪ್ರತಿಗಳು ಈ ಮೊದಲು ಜನರಿಗೆ ಹಂಚಲ್ಪಟ್ಟಿದ್ದವು. ಅವರು ಕಾಲು ಗಂಟೆ ಸಮಯ ಭಾಷಣ ಮಾಡುವಷ್ಟರಲ್ಲಿ ಪೋಲೀಸು ಸಬ್ ಇನ್ಸ್‌ಪೆಕ್ಟರವರು ಬಂದು, ಮೆ॥ ಗಳಾದ ಕೆ. ಸಿ. ಕರುಂಬಯ್ಯನವರು, ಬಿಜ್ಜಂಗಳ ಬೋಪಯ್ಯನವರು ಮತ್ತು ರಾಮನಾಯರವರನ್ನು ದಸ್ತಗಿರಿಮಾಡಿ, ಕರೆದುಕೊಂಡು ಹೋದರು. ನೆರೆದಿದ್ದ ಜನಸ್ತೋಮವು ಜಯಘೋಷ ಮಾಡುತ್ತಾ ಒಂದು ಫರ್ಲಾಂಗು ದೂರ ಅವರನ್ನು ಹಿಂಬಾಲಿಸಿದರು. ಸಾಯಂಕಾಲದ ಬಸ್ಸಿನಲ್ಲಿ ದಸ್ತಗಿರಿ ಮಾಡಿದವರನ್ನು ವೀರರಾಜಪೇಟೆ ಪೋಲೀಸು ಸ್ಟೇಶನಿಗೆ ಸಾಗಿಸಿದರೆಂದು ತಿಳಿದು ಬರುತ್ತದೆ.

ಲಂಡನಿನಲ್ಲಿರುವ ಬ್ರಿಟಿಷ್ ಪ್ರಧಾನ ಮಂತ್ರಿಯವರಿಗೆ ಕೊಡಗು ಜಮೀನ್ದಾರರ ಸಂಘದ ಅಧ್ಯಕ್ಷರಾದ ಮೆ॥ ಸಿ. ಯಸ್. ವೆಂಕಪ್ಪಯ್ಯನವರು ಈ ಕೆಳಗಿನ ತಂತೀ ವಾರ್ತೆಯನ್ನು ಈ ತಾ 24 ರಲ್ಲಿ ಕಳುಹಿಸಿದರು:—"ಕೊಡಗಿನ ಪ್ರಧಾನ ರಾಜಕೀಯ ಸಂಸ್ಥೆಯಾದ ಜಮೀನ್ದಾರರ ಸಂಘವು, ಮಹಾತ್ಮ ಗಾಂಧಿಯವರ ಜೀವವನ್ನು ಉಳಿಸಬೇಕೆಂದು ಪ್ರಾರ್ಥಿಸುತ್ತದೆ. ಮಹಾತ್ಮರ ಅಂತ್ಯದಿಂದ ವಿಪತ್ತಿನ ಮತ್ತು ಊಹಿಸಲಸಾಧ್ಯವಾದ ಫಲಗಳು ಸಂಭವಿಸುವವು. ಮುಂದಾಳುಗಳ ಒಪ್ಪಿಗೆಯ ತೀರ್ಮಾನವನ್ನು ಕಾಯದೆ, ಅಸ್ಪೃಶ್ಯರ ಪ್ರತ್ಯೇಕ ಚುನಾವಣೆಯನ್ನು ಬದಲಾಯಿಸಬೇಕೆಂದು ಕೇಳುತ್ತದೆ. ಮಿತ್ರ ಜನಾಂಗಗಳು ಅಖಿಲ ಹಿಂದೂಸ್ಥಾನದ ಅಸ್ಪೃಶ್ಯರ ದೊಡ್ಡ ಬಹುಮತದ ಅಭಿಪ್ರಾಯ ಇದೆಯೆಂದು ಸಂಘವು ಭಾವಿಸುತ್ತದೆ."

ಮಹಾತ್ಮರು ಈ ತಾ. 20ರಲ್ಲಿ ಉಪವಾಸವನ್ನು ಪ್ರಾರಂಭಿಸಿದಾಗ್ಯೆ ಕಣ್ಣಾನೂರು ಜೈಲಿನಲ್ಲಿ ಐದು ಜನ ರಾಜಕೀಯ ಕೈದಿಗಳು ಗಾಂಧಿಜೀಯವರೊಂದಿಗೆ ಉಪವಾಸವನ್ನು ಕೈಕೊಂಡರೆಂತಲೂ, ಅವರ ಪೈಕಿ ಮಗ್ಗುಲ ಗ್ರಾಮದ ಶ್ರೀಯುತ ಎ. ತಮ್ಮಯ್ಯನವರು ಒಬ್ಬರಾಗಿದ್ದರೆಂತಲೂ ತಿಳಿಯುತ್ತೇವೆ. ಮಹಾತ್ಮರು ಉಪವಾಸ ಬಿಟ್ಟದ್ದರಿಂದ ಇವರೂ ಈಗ ಆಹಾರವನ್ನು ತೆಗೆದುಕೊಂಡಿರಬಹುದೆಂದು ತೋರುತ್ತದೆ.

ಒಳದೇಶ.

ಮಡಿಕೇರಿಯಲ್ಲಿ ತಾ. 24ರಿಂದ 30ರ ವರೆಗೆ 1.38 ಇಂಚು ಮಳೆಯಾಗಿದೆ.

ಬರುವ ಅಕ್ಟೋಬರು ತಾ. 16ನೇ ಆದಿತ್ಯವಾರ ರಾತ್ರಿ 10.45 ಗಂಟೆಗೆ ತಲಕಾವೇರಿಯಲ್ಲಿ ತೀರ್ಥ ಉದ್ಭವವಾಗುತ್ತದೆ.

ಕೊಡಗು ಡಿಸ್ಟ್ರಿಕ್ಟ್ ಬೋರ್ಡಿನ ಮೀಟಿಂಗು ಈ ತಾ. 28 ರಲ್ಲಿ ಕಮೀಶನರವರ ಅಧ್ಯಕ್ಷತೆಯಲ್ಲಿ ಮಡಿಕೇರಿಯಲ್ಲಿ ನಡೆಯಿತು.

ಸಬ್ ಅಸಿಸ್ಟೆಂಟ್ ಸರ್ಜನರಾದ ಮೆ॥ ಸುಬ್ರಮಣ್ಯರವರನ್ನು ಸಿದ್ದಾಪುರಕ್ಕೂ, ಮೆ॥ ಮಂದೇಪಂಡ ಬೋಪಯ್ಯನವರನ್ನು ವೀರರಾಜಪೇಟೆಗೂ, ಮೆ॥ ಕೋದಂಡ ಕಾರ್ಯಪ್ಪನವರನ್ನು ಮಲೇರಿಯಾ ಆಫೀಸರಾಗಿ ಮಡಿಕೇರಿಗೂ ತಾ. 1—10—'32 ರಿಂದ ವರ್ಗಾಯಿಸಿರುವರೆಂದು ತಿಳಿಯುತ್ತೇವೆ.

ಮಹಾತ್ಮ ಗಾಂಧಿಯವರ ಜೀವವನ್ನು ಉಳಿಸಲು ಪ್ರಾರ್ಥನೆ ನಡಿಸುವುದಕ್ಕಾಗಿ ಈ ತಾ. 20 ರಲ್ಲಿ ಬಿಟ್ಟಂಗಾಲ ಗ್ರಾಮಸ್ಥರು ಭಗವತಿ ದೇವಸ್ಥಾನದಲ್ಲಿ ಮೆ॥ ಪೊನ್ನಕಚ್ಚಿರ ಕಾರ್ಯಪ್ಪನವರ ಅಧ್ಯಕ್ಷತೆಯಲ್ಲಿ ಮೀಟಿಂಗು ನಡಿಸಿದಲ್ಲದೆ, ಸದರಿ ದೇವಸ್ಥಾನದಲ್ಲೂ ಮತ್ತು ವಿಷ್ಣು ದೇವಾಲಯದಲ್ಲೂ ಪೂಜೆಗಳನ್ನು ನಡಿಸಿದರೆಂದು ತಿಳಿಯಬರುತ್ತದೆ.

'ಕೊಡಗಿಗೆ ಕಾಲೇಜು ಅವಶ್ಯವಿದೆಯೋ' ಎಂಬ ವಿಷಯವನ್ನು ಕುರಿತು ಚರ್ಚಿಸಲು ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ಡಿಬೇಟಿಂಗ್ ಸೊಸೈಟಿಯ ಆಶ್ರಯದಲ್ಲಿ ಪಬ್ಲಿಕ್ ಮೀಟಿಂಗೊಂದು ಅಕ್ಟೋಬರು ತಾ 2 ನೇ ಆದಿತ್ಯವಾರ ಮಧ್ಯಾಹ್ನ 2 ಗಂಟೆಗೆ ಮೆ॥ ಪಿ. ಬಿ. ಮೇದಪ್ಪನವರ ಅಧ್ಯಕ್ಷತೆಯಲ್ಲಿ ಸದರಿ ಸ್ಕೂಲು ಹಾಲ್‌ನಲ್ಲಿ ನಡೆಯುವದೆಂದು ತಿಳಿಯುತ್ತೇವೆ.

ಮಹಾತ್ಮರ ಉಪವಾಸವನ್ನು ಕುರಿತು ಮಡಿಕೇರಿಯಲ್ಲಿ ಮೀಟಿಂಗು ನಡಿಸಲು ಪೋಲೀಸು ಸಬ್ ಇನ್ಸ್‌ಪೆಕ್ಟರವರು ಅಡ್ಡಿ ಮಾಡಿದರೆಂಬ ವರ್ತಮಾನವನ್ನು ಕಳೆದ ವಾರ ಪ್ರಕಟಿಸಿದ್ದೆವು. ಆದರೆ ಅದಕ್ಕೆ ಸಂಬಂಧಪಟ್ಟ ಹಸ್ತ ಪತ್ರಿಕೆಗಳನ್ನು ಹಂಚಲು ಪೋಲೀಸು ಸಬ್ ಇನ್ಸ್‌ಪೆಕ್ಟರು ತಡೆಮಾಡಿದ್ದರಿಂದ, ಮೀಟಿಂಗನ್ನು ನಡಿಸುವ ಪ್ರಯತ್ನ ಮಾಡಲಾಗಲಿಲ್ಲವೆಂತ ಇತ್ತೀಚೆಗೆ ತಿಳಿಯುತ್ತೇವೆ.

ಅಸ್ಪೃಶ್ಯತೆಯನ್ನು ಹೋಗಲಾಡಿಸುವ ಉದ್ದಿಶ್ಯ ಜಾತಿ ಹಿಂದೂಗಳು ಅಸ್ಪೃಶ್ಯರನ್ನು ತಮ್ಮ ಸಮೂಹಕ್ಕೆ ಸೇರಿಸಿಕೊಳ್ಳಲು ತಯಾರಾಗಿದ್ದಾರೆಂಬುದನ್ನು ಸಿದರ್ಶಿಸಲಿಕ್ಕಾಗಿ 2—10—'32 ರಲ್ಲಿ ಮಡಿಕೇರಿಯಲ್ಲಿ, ಹಿಂದೂ ಮತಕ್ಕೆ ಸೇರಿದ ಎಲ್ಲಾ ಪಂಗಡಗಳ ಕೆಲವು ಮಹನೀಯರು ಅಸ್ಪೃಶ್ಯರು ಕೆಲವರನ್ನು ಸೇರಿಸಿಕೊಂಡು ಒಂದು ಫಲಹಾರದ (ಟೀ ಪಾರ್ಟಿ) ಕೂಟವನ್ನು ನಡಿಸಲು ಏರ್ಪಡಾಗುತ್ತಿದೆ.

ಕಡಿಯತ್ತೂರು ನಾಡು ನರಿಯಂದಡ ಗ್ರಾಮದ ಮೆ॥ ಯಸ್. ಶಂಕರನಾರಾಯಣರವರು, ಕಳೆದ ಸುಮಾರು 10 ತಿಂಗಳಿಂದ ಕಾಯಿಲೆಯಾಗಿದ್ದವರು ಕಳೆದ ವಾರ ಬೆಳಗ್ಗೆ 8 ಗಂಟೆಗೆ ಅವರ ವೀರರಾಜಪೇಟೆ ಭವನದಲ್ಲಿ ಶಿವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಜಮೀನ್ದಾರರ ಸಂಘದ ಕಾರ್ಯಕಾರಿ ಮಂಡಳಿಯಲ್ಲಿ ಹಲವು ವರ್ಷಗಳಿಂದ ಒಬ್ಬ ಮೆಂಬರಾಗಿದ್ದವಲ್ಲದೆ, ದಕ್ಷಿಣದ ಕೊಡಗಿನ ಸಾರ್ವಜನಿಕ ಕಾರ್ಯಗಳಲ್ಲಿ ಭಾಗ ವಹಿಸುತ್ತಿದ್ದರು.

ಮಹಾತ್ಮ ಗಾಂಧಿಯವರು ತಾ. 20ರಲ್ಲಿ ಕೈಕೊಂಡಿದ್ದ ಉಪವಾಸವು ಅವರ ಶಪಥಕ್ಕೆ ಸರಿಯಾಗಿ ಅಂತ್ಯವಾಗಿ ಅವರ ಜೀವವು ಉಳಿದದ್ದಕ್ಕೆ ದೇವರ ಪ್ರಾರ್ಥನೆ ಮಾಡಲಿಕ್ಕೂ, ಅವರ ಉಪವಾಸವನ್ನು ಬೇಗನೇ ಬಿಡಲು ಸಹಾಯವಾಗುವಂತೆ ಮುಖಂಡರ ರಾಜಿ ತೀರ್ಮಾನವನ್ನು ಶೀಘ್ರದಲ್ಲೇ ಅಂಗೀಕರಿಸಿಕೊಂಡದ್ದಕ್ಕೆ ಬ್ರಿಟಿಷ್ ಪ್ರಧಾನ ಮಂತ್ರಿಯವರಿಗೆ ಧನ್ಯವಾದ ಕೊಡಲಿಕ್ಕೂ ಮತ್ತು ಪೂನಾದಲ್ಲಿ ಆದ ರಾಜಿ ಕರಾರುಗಳು ನಮ್ಮ ಪ್ರಾಂತ್ಯದವರಿಗೂ ಒಪ್ಪಿಗೆ ಇದೆಯೆಂತ ತಿಳಿಸಲಿಕ್ಕೂ ಅಕ್ಟೋಬರ್ ತಾ. 2ನೇ ಆದಿತ್ಯವಾರ ಸಾಯಂಕಾಲ 5—30 ಘಂಟೆಗೆ ಜಮೀನ್ದಾರರ ಸಂಘದ ಹಾಲಿನಲ್ಲಿ ಒಂದು ಹಿಂದೂ ಸಾರ್ವಜನಿಕ ಸಭೆ ನಡೆಯುತ್ತದೆ.

ಕೊಡಗು ಮುಜರಾಯಿ ಇಲಾಖೆಯ ಅಧೀನದಲ್ಲಿರುವ ಪ್ರಾಮುಖ್ಯ ದೇವಸ್ಥಾನಗಳಾದ ತಲಕಾವೇರಿ ಅಗಸ್ತ್ಯೇಶ್ವರ, ಭಾಗಮಂಡಲ ಭಗಂಡೇಶ್ವರ, ಮಡಿಕೇರಿ ಓಂಕಾರೇಶ್ವರ, ಇರ್ಪು ರಾಮೇಶ್ವರ ಮತ್ತು ಪಾಲೂರು ಮಹಾಲಿಂಗೇಶ್ವರ ದೇವಾಲಯಗಳಲ್ಲಿ ಅಸ್ಪೃಶ್ಯರೆನಿಸಿಕೊಂಡಿರುವ ನಮ್ಮ ಸಹೋದರರಿಗೆ ದೇವರ ದರ್ಶನಕ್ಕೆ ಅವಕಾಶವನ್ನು ಕೂಡಲೇ ಒದಗಿಸಿಕೊಡಬೇಕೆಂದು ಪಗ್ಗೆರೆಯಾಗಿ ಪ್ರಿಂಟಾದ ಅರ್ಜಿ ಫಾರಮುಗಳಿಗೆ ದೇಶದ ಹಲವು ಭಾಗಗಳಿಂದ ನೂರಾರು ಜನರು ಸಹಿಮಾಡಿ, ಅವುಗಳನ್ನು ಮುಜರಾಯಿ ಇಲಾಖೆಯ ಕಮಿಟಿಯವರಿಗೆ ಕಳುಹಿಸಲಾಗಿದೆ. ಅಲ್ಲದೆ ಈ ತಾ 29 ರಲ್ಲಿ ಸದರಿ ಕಮಿಟಿಯ ಮೀಟಿಂಗು ನಡೆಯುವದೆಂದು ತಿಳಿದು, ರಾ. ಬಾ. ಕೋಡಿಮನೆಯಂಡ ಸುಬ್ಬಯ್ಯನವರು, ಮೆ॥ ಗಳಾದ ಸಿ. ಯಸ್. ವೆಂಕಪ್ಪಯ್ಯನವರು, ಐಚೆಟ್ಟಿರ ಸುಬ್ಬಯ್ಯನವರು, ಹೆಚ್. ತಿರುಮಲಾಚಾರಿಯವರು ಮತ್ತು, ಪಂದ್ಯಂಡ ಬೆಳ್ಯಪ್ಪನವರು ಮೇಲಿನ ಅರ್ಜಿಯ ಪ್ರಾಮುಖ್ಯತೆಯನ್ನು ಕುರಿತು ಕಮಿಟಿಯವರಿಗೆ ಮಂದಟ್ಟುಮಾಡುವುದಕ್ಕಾಗಿ ಮೀಟಿಂಗು ಸ್ಥಳಕ್ಕೆ ಅರ್ಧ ಗಂಟೆ ಮುಂಚಿತವಾಗಿ ಹೋಗಿದ್ದರು. ಆದರೆ ಕಮಿಟಿಯ ಅಧ್ಯಕ್ಷರಿಗೆ ಅಸ್ವಸ್ಥವಾದ ಕಾರಣ ಮೀಟಿಂಗನ್ನು ನಡಿಸದೆ ಮುಂದರಿಸಿಟ್ಟದ್ದರಿಂದ ಏನೊಂದೂ ಕಾರ್ಯವಾಗಲಿಲ್ಲ. ಹೇಗೂ ಕಾವೇರಿ ತುಲಾ ಸಂಕ್ರಮಣಕ್ಕೆ ಮೊದಲು ಈ ಕಮಿಟಿಯ ಮೀಟಿಂಗು ನಡೆಯಬೇಕಾಗಿರುವದರಿಂದ ಮೇಲೆ ಸೂಚಿಸಿದ ಅರ್ಜಿಗೆ ಜನಸಮುದಾಯದವರು ಇನ್ನೂ ಹೆಚ್ಚು ರುಜು ಹಾಕಿ ಬೇಗನೇ ಕಮಿಟಿಯ ಅಧ್ಯಕ್ಷರಿಗೆ ಕಳುಹಿಸುವುದು ಉಚಿತವಾಗಿದೆ.

ಇದೂ ಅಲ್ಲದೆ ಊರು, ನಾಡುದೇವಸ್ಥಾನಗಳಿಗೆ ಅಸ್ಪೃಶ್ಯರ ಪ್ರವೇಶಕ್ಕೆ ಬೇಗನೆ ಅವಕಾಶ ಮಾಡಿ ಕೊಡಬೇಕೆಂದು ಹಿಂದೂ ಮತದ ಮುಖ್ಯವಾದ ಎಲ್ಲಾ ಪಂಗಡಗಳ 37 ಮಹನೀಯರು ರುಜುಮಾಡಿ ಇನ್ನೊಂದು ಕಡೆ ಪ್ರಕಟಿಸಿರುವ ವಿಜ್ಞಾಪನಾ ಹಸ್ತ ಪತ್ರಿಕೆಗಳನ್ನು ತಯಾರಿಸಿ ನಾಲ್ಕು ಗಳ್ಳಿಯಲ್ಲಿ ದೇಶದಲ್ಲಿ ಹಂಚುತ್ತಿರುವರು.

ಹಿಂದೂದೇಶ.

ಜಬ್ಬಲ್‌ಪುರದ ಎಲ್ಲಾ ದೇವಾಲಯಗಳೂ ಅಸ್ಪೃಶ್ಯರ ಪ್ರವೇಶಕ್ಕೆ ತೆರೆಯಲ್ಪಟ್ಟಿವೆ.

ಮಹಾತ್ಮರ ಪ್ರಾಣವನ್ನು ಕಾಪಾಡುವದಕ್ಕಾಗಿ ಇಂಡಿಯದಲ್ಲೂ, ಇಂಗ್ಲೆಂಡಿನಲ್ಲೂ ಹಲವು ಕಡೆಗಳಲ್ಲಿ ದೇವರಿಗೆ ಪ್ರಾರ್ಥನೆಗಳು ನಡಿಸಲ್ಪಡುತ್ತಿವೆ.

ಕಾರಾಚಿಯ ದಕ್ಷಿಣ ಬ್ರಾಹ್ಮಣ ಸಭೆಯವರು ತಮ್ಮ ಮಂದಿರವನ್ನು ಅಸ್ಪೃಶ್ಯರ ಪ್ರವೇಶಕ್ಕೆ ಬಿಟ್ಟದ್ದಲ್ಲದೆ, ಅಸ್ಪೃಶ್ಯರೂ, ಬ್ರಾಹ್ಮಣರೂ ಕಲೆತು ಭಜನೆ—ಕೀರ್ತನೆಗಳನ್ನು ನಡಿಸಿದರು.

ಬೊಂಬಾಯಿಯ ಪ್ರಸಿದ್ಧ ವಕೀಲರಾದ ಮೆ॥ ಭೂಲಾಭಾಯಿ ದೇಸಾಯಿಯವರನ್ನು ನಾಸಿಕ್ ಪಟ್ಟಣವನ್ನು ಬಿಟ್ಟು ಹೊರಗೆ ಹೋಗಕೂಡದೆಂಬ ಕರಾರಿನಿಂದ ಜೈಲಿನಿಂದ ಬಿಡುಗಡೆ ಮಾಡಿರುವರು.

ಉಪವಾಸದ ಕಾರಣ ಮಹಾತ್ಮರ ಶಕ್ತಿಯು ಬಹಳ ಕುಂದಿರುವದರಿಂದ ಅವರನ್ನು ಒಂದು ವಾರದೊಳಗೆ ಬಿಡುಗಡೆ ಮಾಡುವ ಸಂಭವವಿದೆಯೆಂದು ಎಸೋಸಿಯೇಟೆಡ್ ಪ್ರೆಸ್ಸಿನವರು ವಾರ್ತೆ ತಿಳಿಸುತ್ತಿದ್ದಾರೆಂತ ವಿಶ್ವಾಸದ ಸುದ್ದಿ.

ಕಾಶೀ ಪಟ್ಟಣದಲ್ಲಿ ಅನೇಕ ದೇವಾಲಯಗಳಲ್ಲಿ ದೇವರ ದರ್ಶನಕ್ಕೆ ಅಸ್ಪೃಶ್ಯರನ್ನು ಬಿಟ್ಟಿರುವರು. ಜಾತಿ ಹಿಂದೂಗಳೂ, ಅಸ್ಪೃಶ್ಯರೂ ಸೇರಿ ಸಭೆ ನಡಿಸಿ ಮಹಾತ್ಮರೇ ತಮ್ಮ ಉದ್ಧಾರಕರೆಂಬ ತೀರ್ಮಾನವನ್ನು ಮಾಡಿದರು.

ಲಾಹೋರಿನ ಚಾಪುರ್ ನೋರಿ ದೇವಾಲಯದ ಅಧಿಕಾರಿಗಳು ದೇವಸ್ಥಾನದ ಬಾವಿಯಿಂದ ನೀರು ತೆಗೆಯಲು ಅಸ್ಪೃಶ್ಯರನ್ನು ಬಿಟ್ಟಿರುವರು. ಅಲ್ಲಿ ಹಲವು ನೇಬ್ಭತಿಯ ಹಿಂದುಗಳು, ಅಸ್ಪೃಶ್ಯರು ಆಡಿಗ್ಗೆಮಾಡಿದ ಭೋಜನವನ್ನು ಉಂಡರು.

ಪೇಶಾವರದಲ್ಲಿ ಎಷ್ಟೋ ಹಿಂದೂ ದೇವಾಲಯಗಳು ಪಂಚಮರಿಗೆ ತೆರೆಯಲ್ಪಟ್ಟಿವೆ. ಕಲ್ಲಿಕೋಟೆಯ ರಾಮಸ್ವಾಮಿ ದೇವಸ್ಥಾನಕ್ಕೂ, ಕಣ್ಣನೂರಿನ ತೀಯರ ಒಂದು ದೇವಸ್ಥಾನಕ್ಕೂ ಅಂತ್ಯಜರನ್ನು ಹೋಗಲು ಬಿಟ್ಟರು. ನಾಗಪುರದ 3 ದೇವಾಲಯಗಳಿಗೆ ಅಸ್ಪೃಶ್ಯರು ಏನೊಂದೂ ಅಡ್ಡಿ ಇಲ್ಲದೆ ನುಗ್ಗಿ ದೇವರ ದರ್ಶನ ಮಾಡಿದರು.

ಅಲಹಾಬಾದಿನ ಭರದ್ವಾಜ ಆಶ್ರಮದಲ್ಲಿ ಸತ್ಯನಾರಾಯಣ ಕಥೆಯ ಪಾರಾಯಣ ನಡೆಸಿದಲ್ಲಿ ಮೇಲ್ಜಾತಿ ಹಿಂದೂಗಳೂ, ಅಸ್ಪೃಶ್ಯರೂ ಜೊತೆಯಲ್ಲಿಯೇ ಕುಳಿತಿದ್ದರು. ನೇಹ್ರು ಮನೆತನದ ಹಿಂದೂ ಸ್ತ್ರೀಯರು ಅಸ್ಪೃಶ್ಯರ ಸ್ತ್ರೀಯರನ್ನು ಸನ್ಮಾನಿಸಿದರು. ಪಂಡಿತ ಜವಾಹರ್ ಲಾಲರ ತಾಯಿಯವರೂ ಹಾಜರಿದ್ದರು.

ಮದ್ರಾಸಿನಲ್ಲಿ ತಾ. 20 ರಲ್ಲಿ ಹಿಂದೂ ಮತದ ಎಲ್ಲಾ ಜಾತಿಗಳೂ ಅಸ್ಪೃಶ್ಯ ಭಾವನೆಯನ್ನು ತೊರೆದು ಮೆರವಣಿಗೆ ಸಭೆಗಳನ್ನು ನಡಿಸಿದಲ್ಲದೆ, ಕಂದಸ್ವಾಮಿ ದೇವಾಲಯ, ಏಳು ಬಾವಿಗಳ ದೇವಸ್ಥಾನ ಮತ್ತು ಆಂಜನೇಯ ದೇವಸ್ಥಾನಗಳೊಳಗೆ ಹೊಲೆಯರನ್ನು ಬಿಟ್ಟರು. ಮಾತ್ರವಲ್ಲ ಪಂಚಮರೂ, ಬ್ರಾಹ್ಮಣರೂ ಎಲ್ಲರೂ ಕಲೆತು ಒಂದು ಭೋಜನವೂ ನಡೆಯಿತು.

ಮಲಬಾರಿನ ಗುರುವಾಯೂರು ದೇವಸ್ಥಾನಕ್ಕೆ ಪಂಚಮರನ್ನು ಬಿಡಬೇಕೆಂದು ಅಲ್ಲಿಯ ಒಬ್ಬ ಮುಂದಾಳಾದ ಶ್ರೀ ಕೇಳಪ್ಪ ನಾಯರವರು ಈ ತಾ. 20ರಿಂದ ದೇವಸ್ಥಾನದ ಮುಂದುಗಡೆ ಕೂತು ಉಪವಾಸ ಮಾಡುತಿದ್ದಾರೆ. ಅವರು ಬಹಳ ನಿಶಕ್ತರಾಗಿದ್ದಾರೆ. ಆ ದೇವಸ್ಥಾನದ ಟ್ರಸ್ಟಿಯು ಅಧ್ಯಕ್ಷರಾದ ಜಾಮೊರಿನ್‌ರವರಿಗೆ ಎಷ್ಟೋ ಡೆಪ್ಯುಟೇಶನುಗಳು ಹೋಗುತ್ತಿರುವವು. ಅಲ್ಲದೆ ಮಾಳವೀಯ, ಮೂಂಜೆ, ಅಂಬೇಡ್ಕರ್ ಮೊದಲಾದ ಹಲವು ಮುಂದಾಳುಗಳೂ ಸದರಿ ದೇವಸ್ಥಾನದ ಬಾಗಿಲನ್ನು ಅಸ್ಪೃಶ್ಯರಿಗೆ ತೆರೆಯುವಂತೆ ಜಾಮೊರಿನರಿಗೆ ತಂತೀ ಕಳುಹಿಸಿರುವರು.

ಪತ್ರಿಕಾ ಪ್ರತಿನಿಧಿಗಳು ಕೇಳಿದ್ದಕ್ಕೆ, ಸರ್ಕಾರದೊಂದಿಗೆ ಯೋಗ್ಯವಾದ ಸಹಕಾರಕ್ಕೆ ತಾನೀಗ ಸಿದ್ಧನಲ್ಲವೆಂದು ಮಹಾತ್ಮ ಗಾಂಧಿಯವರು ಹೇಳಿರುವರು. 3ನೇ ದುಂಡುಮೇಜು ಪರಿಷತ್ತಿಗೆ ಕಾಂಗ್ರೆಸ್ಸಿನ ಸಹಕಾರವನ್ನು ಕುರಿತು ಮಾತಾಡಲು ಮೆ॥ ಜಯಕರವರು ಗಾಂಧಿಯವರೊಂದಿಗೆ ಮಾತಾಡಲು ಪೂನಾಕ್ಕೆ ಹೋಗಿರುವರೆಂತಲೂ, ಡಾ॥ ರವೀಂದ್ರನಾಥ್ ಠಾಗೋರರವರು ಮಹಾತ್ಮರೊಂದಿಗೆ ಈಗಿನ ರಾಜಕೀಯ ಪರಿಸ್ಥಿತಿಯನ್ನು ಕುರಿತು ಬೇಗನೇ ಆಲೋಚಿಸುವರೆಂತಲೂ ವರ್ತಮಾನಗಳಿವೆ. ಹೇಗೂ ಕಾಂಗ್ರೆಸಿನ ಸರ್ಕಾರದೊಡನೆ ರಾಜಿ ಮಾಡಬೇಕೆಂಬ ಸೂಚನೆಗಳು ಹಲವು ಹೆಚ್ಚುತ್ತಿವೆ.

ಮಹಾತ್ಮರು ತಾ. 27 ರಲ್ಲಿ ಹಣ್ಣುಗಳನ್ನು ಮಾತ್ರ ತೆಗೆದುಕೊಂಡರು. ತಾ. 28 ರಿಂದ ಕಿತ್ತಳೆ, ದ್ರಾಕ್ಷೆ ಹಣ್ಣುಗಳು, ಮತ್ತು ಜೇನಿನ ಜೊತೆಗೆ ಆಡಿನ ಹಾಲನ್ನೂ ಸೇವಿಸಲು ಪ್ರಾರಂಭಿಸಿರುವರು. ಅವರ ದೇಹಸ್ಥಿತಿ ಬಹು ಬೇಗನೆ ಚೆನ್ನಾಗಿ ಆಗುತ್ತಿದೆ. ಅವರಾಯುದಿಂದ ಸಂಪೂರ್ಣ ಪಾರಾಗಿರುವರೆಂದು ಡಾಕ್ಟರುಗಳ ಅಭಿಪ್ರಾಯ. ಹಲವು ಗ್ರಾಮದ ಸ್ತ್ರೀಯರೂ, ಮಕ್ಕಳೂ ಬಂದು ಅವರನ್ನು ನೋಡಿಕೊಂಡು ಹೋದರು. ಹಾಸಿಗೆಯ ಮೇಲೆ ಕೂತುಕೊಂಡು ಸಾಲು ಮಾಡುವಷ್ಟು ಶಕ್ತಿ ಉಂಟಾಗಿದೆ. ಮಹಾತ್ಮರು ಇದರಲ್ಲಿ ಕೂತು ಉಪವಾಸ ಮಾಡಿದ ಮಾವಿನ ಮರದ ಎಲೆ ಮತ್ತು ಕಡ್ಡಿಗಳನ್ನು (ಬುದ್ಧರ ಬೋಧಿ ಮಂದಾರ) ಜೈಲಿನವರ ಅಪ್ಪಣೆ ಪಡೆದು ...

ಡು. ಇದರಿಂದ ಉತ್ತಮ ಸ್ಥಿತಿಯು ದೊರಕುವ ಪಕ್ಷಕ್ಕೆ ನಾನು ಸಮ್ಮತಿಸುವೆನು. ಆದರೆ ಸ್ವತಂತ್ರಾಧಿಕಾರವು ಇರುವುದರಿಂದ ಪರಮತ, ಅಂದರೆ, ಕ್ರೈಸ್ತ ಮತ ಇಲ್ಲವೇ ಮುಸಲ್ಮಾನ ಧರ್ಮ ಅವಲಂಬನೆಯು ಸಾಧ್ಯವಾಗಲಾರದು. ಹಿಂದೂ ಧರ್ಮಕ್ಕೆ ಇದಿರು ನಿಂತು ಹೋರಾಡುವ ಆ ಶಕ್ತಿಯೂ ಇಲ್ಲ. ಕಾರಣ, ಅಸ್ಪೃಶ್ಯರಲ್ಲಿ ವಿದ್ಯೆಯ ಅಭಾವ ಮತ್ತು ಸರಿಯಾದ ಮುಂದಾಳು ಇಲ್ಲದಿರುವಿಕೆ. ಆದ್ದರಿಂದ ಹಿಂದೂ ಧರ್ಮದಲ್ಲಿ ಸೇರುವುದೇ ಮುಖ್ಯ ಸಾಧನ. ಅದಲ್ಲದೆ ಹಿಂದೂ ಮತವನ್ನು ಬಿಟ್ಟು ಅನೇಕ ಕಾರಣದಿಂದ ಅವರಿಗೆ ಶ್ರೇಯಸ್ಸಿಲ್ಲ' ಎಂದು ಹೇಳಿ ಇದ್ದರು.

ಮುಖ್ಯವಾಗಿ ನಾವು ತಿಳಿಯಬೇಕಾದದ್ದು ಏನೆಂದರೆ, ಚಾಂಡಾಲತ್ವವು (ಅಸ್ಪೃಶ್ಯತೆಯು) ಯಾವನೊಬ್ಬ ವ್ಯಕ್ತಿಯ ಜಾತಿಯಲ್ಲಿರದೆ ಆ ವ್ಯಕ್ತಿಯ ಮನೋವೃತ್ತಿಯಲ್ಲಿರುವದೆಂದು ಭಾವಿಸಬೇಕು. ಎಲ್ಲರೂ ಈ ರೀತಿ ಭಾವಿಸಿದರೆ ಅಸ್ಪೃಶ್ಯತೆಯು ಒಂದಲ್ಲ ಒಂದು ದಿನ ತಾನಾಗಿಯೇ ಶಿಥಿಲವಾಗುವುದರಲ್ಲಿ ಸಂಶಯವಿಲ್ಲವಾದ್ದರಿಂದ ಸ್ವಾತಂತ್ರ್ಯ ಪ್ರಿಯರು ಈ ಭೇದವನ್ನು ಕಲ್ಪಿಸದೆ ರಾಷ್ಟ್ರೋದ್ಧಾರದ ಕೆಲಸದಲ್ಲಿ ಬದ್ಧಕಂಕಣರಾಗಬೇಕು. ಸ್ವದೇಶಿ ಪ್ರೇಮಿಗಳೆಲ್ಲರೂ ತಮ್ಮ ತಮ್ಮ ಹೃದಯದಲ್ಲಿ ತಾವೆಲ್ಲರೂ ದೇಶಬಾಂಧವರೆಂಬ ಅಭಿಮಾನದಿಂದ ಆರ್ಯ ಅನಾರ್ಯರೆಂಬ ಭೇದವನ್ನು ಎಣಿಸದೆ ಒಗ್ಗಟ್ಟಿಗೆ ವಿಘ್ನ ತರುವ ಅಂಥ ಕ್ಷುದ್ರ ಭೇದಭಾವವನ್ನು ಅಳಿಯುವಂತೆ ಮಾಡಿ ತಾವೆಲ್ಲರೂ ಭಾರತೀಯರೆಂದೂ, ಭಾರತ ಮಾತೆಯ ಪುತ್ರರೆಂದೂ ಭಾವಿಸಿದರೆ ಅಂದೇ ಹಿಂದೂಸ್ಥಾನದ ಉದ್ಧಾರವಾಗುವುದು. ಮಹಾತ್ಮರ ತಪಸ್ಸು ಸಾರ್ಥಕವಾಗುವುದು. ಅಂತ್ಯಜೋದ್ಧಾರಕ್ಕಾಗಿ ಸ್ವಾರ್ಥ ತ್ಯಾಗ ಮಾಡಿರುವ ಮತ್ತು ತನ್ನ ಜೀವವನ್ನೇ ತೃಣಪ್ರಾಯವನ್ನಾಗಿ ಮಾಡಿದ ಗಾಂಧಿಯವರು ಹಿಂದೂ ಮುಸಲ್ಮಾನರ ಐಕ್ಯವಿಲ್ಲದೆ ಸ್ವರಾಜ್ಯವು ಸ್ವಪ್ನದಲ್ಲೂ ಹೇಗೆ ಸಿಗಲಾರದೋ ಹಾಗೆಯೇ ಹಿಂದೂ ಮತ್ತು ಅಸ್ಪೃಶ್ಯರು ಒಬ್ಬರನ್ನೊಬ್ಬರು ಮಿಳಿತವಾಗದೆ ಹೋದರೆ ಸ್ವಾತಂತ್ರ್ಯವು ಅಸಾಧ್ಯವೆಂದು ಹೇಳಿರುವರು. ಏಕೆಂದರೆ ರಾಷ್ಟ್ರೋದ್ಧಾರಕ ಕೆಲಸದಲ್ಲಿ ಸ್ಪೃಶ್ಯಾಸ್ಪೃಶ್ಯಭೇದ ಭಾವವೆಂಬ ಮನೋವಿಕಾರವನ್ನು ಕಲ್ಪಿಸಿಕೊಂಡರೆ ಹಿಡಿದ ಕಾರ್ಯವು ಎಷ್ಟೋ ಉಳಿದು ಹೋಗಿಬಿಡುವುದಲ್ಲದೆ ಅದರೊಡನೆ ಸ್ವಾತಂತ್ರ್ಯವೂ ಮಣ್ಣುಗೂಡುವುದು. ಅಸ್ಪೃಶ್ಯತೆಯ ಮುಖ್ಯ ಕಾರಣ ಜಾತಿ ವ್ಯಕ್ತಿಗಳ ಭಾವನೆಯೆಂದು ತಿಳಿಯಬೇಕು. ತನಗೆ ಸೇರದ ವಸ್ತುವಿನಿಂದ ದೂರವಾಗಿರುವುದು, ಇಲ್ಲವೇ ಸ್ಪರ್ಶಿಸದಿರುವುದು ಮನುಷ್ಯನ ಸ್ವಭಾವವು. ಇದಲ್ಲದೆ ಅಸ್ಪೃಶ್ಯತೆಯ ವಿಚಾರವು ವ್ಯಕ್ತಿ ದೋಷವನ್ನು ಹೊಂದಿರುವುದಿಲ್ಲ. ಕೇವಲ ಪವಿತ್ರ್ಯಾಚರಣೆಯನ್ನು ಅವಲಂಬಿಸಿದೆ.

ನಾವು ಒಬ್ಬ ಮನುಷ್ಯನ ಕೃತಿಯಿಂದ 'ಆರ್ಯ' 'ಅನಾರ್ಯ' ಎಂಬ ಈ ಭೇದವನ್ನು ತರಬಹುದು. ಅಸ್ಪೃಶ್ಯತೆಯು ಬರಿ ಅಂತ್ಯಜರಲ್ಲಿಯೂ ಅಲ್ಲದೆ ಸ್ಪೃಶ್ಯರೆಂದು ಹೇಳಿಕೊಳ್ಳುವ ಶ್ರೇಷ್ಠರಾದವರಲ್ಲಿಯೂ ಇರಬಹುದು. ಹೇಗೆಂದರೆ ಆತ್ಮಘಾತುಕತನದಿಂದ ಶ್ರೇಷ್ಠನೂ ಅಸ್ಪೃಶ್ಯರಿಗೂ ಅಸ್ಪೃಶ್ಯನಾಗುವನು.

'ಪ್ರಾಯೋಪವೇಶಾ'ಚರಣೆಯ ದಿನ ಮಹಾತ್ಮರು—'ನಾನು ಆರ್ಯ ಕುಲದಲ್ಲಿ ಜನ್ಮವೆತ್ತಿದರೂ ಅನಾರ್ಯನೆಂದೇ ಭಾವಿಸುವೆನಲ್ಲದೆ ಅಸ್ಪೃಶ್ಯರಲ್ಲಿ ಅತ್ಯಂತ ಕೀಳು ತರಗತಿಯವನೆಂದು ತಿಳಿಯುವೆನು. ಅವರ ಉದ್ಧಾರಕ್ಕಾಗಿ ಎಷ್ಟು ಪ್ರಯತ್ನ ಮಾಡಿ ಅದರಿಂದ ನನ್ನ ಪ್ರಾಣ ಹೋಗುವಂತಿದ್ದರೂ ಆ ಕಾರ್ಯ ನೆರವೇರಿಸದಿರೆನು. ಅವರ ಉದ್ಧಾರವು ಹಿಂದೂ ಸುಧಾರಕರ ಕೈಯಲ್ಲಿ ಸೇರಿದೆ. ಪ್ರತ್ಯೇಕ ಚುನಾವಣೆಯು ನಿರ್ಧಾರದಿಂದ ಅವರ ಉದ್ಧಾರವಾಗುವಂತಿಲ್ಲ. ಬದಲು ಇದೇ ಸಮಾಜ ಸುಧಾರಕರ ಕೆಲಸಕ್ಕೆ ಅಟಂಕವಾಗಿರುವುದು. ಈ ಕೋಮುವಾರು ತೀರ್ಮಾನವನ್ನು ರದ್ದು ಮಾಡಿದರೂ ನಾನು ಅಷ್ಟರಲ್ಲೇ ತೃಪ್ತನಾದನೆಂದು ತಿಳಿಯಬಾರದು. ಯಾವಾಗ ಅಸ್ಪೃಶ್ಯತೆಯೆಂಬ ಪಿಶಾಚಿಯು ತೊಲಗಿ ಭಾರತೀಯರೆಲ್ಲರೂ ಸ್ಪೃಶ್ಯಾಸ್ಪೃಶ್ಯ ಭೇದವನ್ನು ಕಲ್ಪಿಸದೆ ಭುಜಕ್ಕೆ ಭುಜಕೊಟ್ಟು ನಿಲ್ಲಲು ಸಿದ್ಧರಾಗುವರೋ ಎಂದು ಅವರನ್ನು ತಮ್ಮ ಸಹೋದರರೆಂಬ ಅಭಿಮಾನದಿಂದ ಕಾಣುವರೋ ಅಂದೇ ನನ್ನ ವ್ರತವು ಸಾರ್ಥಕವಾಗುವುದು. ನಾನು ಕೃತ ಕೃತ್ಯನಾಗುವೆನು" ಎಂದಿರುವರು.

ಆದ್ದರಿಂದ ಪ್ರಿಯ ದೇಶಬಾಂಧವರೇ ಇನ್ನಾದರೂ ಜಾಗ್ರತರಾಗಿ ನಿಮ್ಮ ಆ ಹಿಂದೆ ಬಿದ್ದಿರುವ ಸಹೋದರರನ್ನು ನೋಡಿ ಅವರ ಉದ್ಧಾರಕ್ಕೆ ಪ್ರವೃತ್ತರಾದರೆ ಮಹಾತ್ಮಾಜೀಯವರಿಗೆ ಸಂತೋಷವನ್ನುಂಟುಮಾಡಿದಂತಾಗುವದಲ್ಲವೇ! ಸಾಕ್ಷಾತ್ ಶ್ರೀರಾಮನನ್ನು ಗಂಗಾನದಿಯ ಆಚೆ ದಡಕ್ಕೆ ಕೊಂಡೊಯ್ದವ ಒಬ್ಬ ಅಸ್ಪೃಶ್ಯನಲ್ಲವೇ? ಗಾಂಧಿಯವರಂಥ ಹಿಂದೂ ದೇಶಕ್ಕೇ ಅಲ್ಲ ಪ್ರಪಂಚಕ್ಕೇ ಆಗಬೇಕಾದ ಕೆಲಸಗಳು ಬಹಳ ಇರುವುದರಿಂದ ಅವರ ನಾಶವು ಆಗದೇ ಆಗದಂತೆ ಅಸ್ಪೃಶ್ಯತೆಯನ್ನು ತೊಲಗಿಸಿದ್ದಾದರೆ ಭಾರತ ಮಾತೆಯ ಋಣದಿಂದ ಮುಕ್ತರಾಗುವೆವು. ಅದರಂತೆ ಎಲ್ಲಾ ಕಡೆಯಲ್ಲೂ ದೇವಸ್ಥಾನಗಳ ಪ್ರವೇಶಕ್ಕೆ ಅಟಂಕವಿರದೆ ಅಸ್ಪೃಶ್ಯನೂ ಕೂಡ ದೇವ ದರ್ಶನದಿಂದ ಕೃತಾರ್ಥನಾಗುವನು. ನಮ್ಮ ಚಿಕ್ಕ ದೇಶವಾದ ಕೊಡಗೂ ಅವನನ್ನು ಅನುಸರಿಸಿ ಅಸ್ಪೃಶ್ಯರಿಗೆ ದೇವಾಲಯಗಳ ಪ್ರವೇಶಕ್ಕೆ ಬಿಟ್ಟು ಅಟಂಕವಿರದೆ ಆ ಕ್ಷುದ್ರ ಭೇದಭಾವವನ್ನೇ ಮರೆತು ಅವರೆಲ್ಲರನ್ನೂ ಸಹೋದರ ಭಾವದಿಂದ ನೋಡಬೇಕೆಂದು ಪ್ರಾರ್ಥನೆ.

ಕೊಡಗು ದೇಶದ ಹಿಂದೂ ಮಹನೀಯರಲ್ಲಿ ವಿಜ್ಞಾಪನೆ.

ಮಹಾತ್ಮ ಗಾಂಧಿಯವರು ಹಿಂದೂ ಧರ್ಮವನ್ನನುಸರಿಸುವ ಅಸ್ಪೃಶ್ಯರೆನಿಸಿಕೊಂಡವರನ್ನು ಹಿಂದೂ ಸಮಾಜದಿಂದ ಬೇರ್ಪಡಿಸಬಾರದೆಂಬ ಉದ್ದೇಶಕ್ಕಾಗಿ ಉಪವಾಸವ್ರತದಿಂದ ದೇಹತ್ಯಾಗ ಮಾಡಲು ನಿಶ್ಚೈಸಿ, ಇದೇ ಸೆಪ್ಟೆಂಬರ್ ತಾರೀಖು 20ನೇ ಮಂಗಳವಾರ ಮಧ್ಯಾಹ್ನದಿಂದ ಆಹಾರವನ್ನು ಬಿಟ್ಟಿರುವುದು ನಿಮಗೆಲ್ಲರಿಗೂ ತಿಳಿಯದ್ದಲ್ಲ. ಬ್ರಿಟಿಷ್ ಸರಕಾರವು ಕೌನ್ಸಿಲು ಚುನಾವಣೆಯಲ್ಲಿ ಅಸ್ಪೃಶ್ಯರ ಪ್ರತಿನಿಧಿಗಳ ಚುನಾವಣೆಗೆ ಬೇರೆ ಏರ್ಪಾಡು ಮಾಡಿದ್ದನ್ನು ಬದಲಾಯಿಸಬೇಕೆಂಬ ಕಾರಣಕ್ಕಾಗಿ ತಾನು ಈ ಪ್ರತಿಜ್ಞೆಯನ್ನು ಮಾಡಿರುವುದಾದರೂ ಅವರು ಉಪವಾಸವನ್ನು ಪ್ರಾರಂಭಿಸಿದ ನಂತರ ಹೇಳಿರುವುದೇನೆಂದರೆ:—

"ಅಸ್ಪೃಶ್ಯತೆಯನ್ನು ನಿರ್ಮೂಲ ಮಾಡುವುದೇ ನನ್ನ ಉದ್ದೇಶ; ಅದಕ್ಕಾಗಿಯೇ ನಾನು ಜೀವಿಸುತ್ತಿರುವುದು, ಅದಕ್ಕಾಗಿಯೇ ಸಂತೋಷದಿಂದ ಸಾಯಲು ತಯಾರಾಗಿರುವುದು. ಆದ್ದರಿಂದ ಅಸ್ಪೃಶ್ಯರಿಗೂ ಬೇರೆ ಹಿಂದೂಗಳಿಗೂ ಈಗ ಆಗಬೇಕಾದ ಸ್ನೇಹ ಸಂಬಂಧದ ಫಲವು ದೂರದ ನಾಳೆ ತೋರಿದರೆ ಸಾಲದು. ಇಂದು ಈಗ ಪ್ರತ್ಯಕ್ಷವಾಗಬೇಕು. ಈ ಒಪ್ಪಂದದ ನಿದರ್ಶನವು ಬರೇ ನಾಟಕದ ನೋಟದಂತಾದರೆ ಸಾಲದು. ಅಖಿಲ ಹಿಂದೂಸ್ಥಾನದಲ್ಲಿ ಇವರೊಳಗೆ ಅನ್ಯೋನ್ಯ ಸಹೋದರತ್ವದ ಸಂಮಿಳಿತವಾಗಬೇಕು. ನನ್ನ ಜೀವಮಾನದ ಕಳೆದ ಐವತ್ತು ವರ್ಷಗಳ ಕನಸಿನಂತಿದ್ದ ಈ ಆಶೆಯನ್ನು ಸಾಧಿಸಲಿಕ್ಕಾಗಿಯೇ ನಾನು ಅಗ್ನಿ ಪ್ರವೇಶದಂತಿರುವ ಈ ಪ್ರತಿಜ್ಞೆಯನ್ನು ಪ್ರಾರಂಭಿಸಿರುವುದಾಗಿದೆ."

ಮಹಾತ್ಮರು ಬ್ರಿಟಿಷ್ ಮಂತ್ರಿಯವರಿಗೆ ಬರೆದ ಪತ್ರದಲ್ಲಿ, ಅಸ್ಪೃಶ್ಯರೆನಿಸಿಕೊಂಡವರಿಗೆ ಪ್ರತ್ಯೇಕ ಚುನಾವಣೆಯ ಏರ್ಪಾಡನ್ನು ಇಟ್ಟರೆ, ಅಸ್ಪೃಶ್ಯರನ್ನು ಇತರ ಹಿಂದೂಗಳೊಂದಿಗೆ ಸೇರಿಸಿಕೊಂಡು ಅವರಿಗೆ ಸರಿಸಮಾನದ ಹಕ್ಕುಗಳನ್ನು ಕೊಡಲು ಪ್ರಯತ್ನಿಸುವ ಸುಧಾರಕರ ಕೆಲಸಕ್ಕೆ ಅಡಚಣೆಯಾಗುತ್ತದೆಯೆಂಬ ಮಾತೇ ಬಹಳ ಮಹತ್ವದ್ದೆಂಬುದು ಮನಸ್ಸನ್ನು ಕರಗಿಸುವಂಥ ಮೇಲಿನ ವಾಕ್ಯಗಳಿಂದ ಗೊತ್ತಾಗುತ್ತದೆ. ಹಿಂದೂ ದೇವರುಗಳನ್ನೇ ಪೂಜಿಸುತ್ತಾ ಹಿಂದೂಗಳಾಗಿಯೇ ಇರಲು ಇಚ್ಛಿಸುವ ಈ ಸಮಾಜದವರೊಂದಿಗೆ ಇತರ ಹಿಂದೂಗಳು ಸಹೋದರಭಾವವನ್ನು ತಕ್ಷಣವೇ ತೋರಿಸಿ ಮಹಾತ್ಮರ ಜೀವವನ್ನು ಉಳಿಸಬೇಕಾಗಿದೆ. ಅಸ್ಪೃಶ್ಯರೆನಿಸಿಕೊಂಡಿರುವ ನಮ್ಮ ಈ ಸಹೋದರರಿಗೆ ಹಿಂದೂಗಳ ಎಲ್ಲಾ ದೇವಾಲಯಗಳಲ್ಲೂ ದೇವರ ದರ್ಶನಕ್ಕೆ ಕೂಡಲೇ ಅನುಕೂಲಮಾಡಿ ಕೊಡುವುದು ಏನೂ ಕಷ್ಟವಿಲ್ಲದೆ ಶೀಘ್ರದಲ್ಲೇ ಮಾಡಬಹುದಾದ ಕಾರ್ಯವಾಗಿದೆ. ನಮ್ಮ ದೇಶದಲ್ಲಿ ಅಸ್ಪೃಶ್ಯತೆಯ ಭಾವನೆಯು ದಕ್ಷಿಣ ಹಿಂದೂಸ್ಥಾನದ ಬೇರೆ ಕೆಲವು ಕಡೆಗಳಲ್ಲಿರುವಷ್ಟು ಕಠಿಣವಾಗಿಲ್ಲ. ಈಗ ಪ್ರಪಂಚದ ಅತಿ ಶ್ರೇಷ್ಠರಾದ ಮತ್ತು ಹಿಂದೂಗಳಲ್ಲಿ ಅನೇಕರು ಅವತಾರಪುರುಷನೆಂದೇ ಭಾವಿಸಿರುವ ಮಹಾತ್ಮ ಗಾಂಧಿಯವರ ಜೀವ ಉಳಿಸಲಿಕ್ಕಾಗಿ ನಮ್ಮ ದೇವಸ್ಥಾನಗಳಲ್ಲಿ ದೇವರ ದರ್ಶನಕ್ಕೆ ಈ ವರ್ಗದವರಿಗೆ ಅಡಚಣೆಯಿಲ್ಲದಂತೆ ಕೂಡಲೇ ಮಾಡುವುದು ಅತ್ಯಗತ್ಯವಾಗಿದೆ. ಈಗ ಕೈಕೊಂಡ ಉಪವಾಸವನ್ನು ಅಂತ್ಯಗೊಳಿಸುವಂತೆ ಅಸ್ಪೃಶ್ಯರಿಗೂ ಹಿಂದೂಗಳಿಗೂ ಒಪ್ಪಂದವಾದರೂ ಸಹ ಶೀಘ್ರದಲ್ಲೇ ಹಿಂದೂ ಸಮಾಜವು ಅಸ್ಪೃಶ್ಯತೆಯನ್ನು ನಿರ್ಮೂಲ ಮಾಡುವ ಬಗ್ಗೆ ಅಸ್ಪೃಶ್ಯರಿಗೆ ಇರುವ ಅಡಚಣೆಗಳನ್ನೂ, ಕೊರತೆಗಳನ್ನೂ ತೆಗೆದು ಹಾಕದಿದ್ದರೆ ಉಪವಾಸವನ್ನು ತಾನು ಪುನಃ ಕೈಕೊಳ್ಳಲೇ ಬೇಕಾಗುತ್ತದೆಯೆಂತ ಮಹಾತ್ಮ ಗಾಂಧಿಯವರು ಹೇಳುತ್ತಾರೆ.

ಮಹಾತ್ಮ ಗಾಂಧಿಯವರು ದೇಹತ್ಯಾಗ ಮಾಡಲು ಕೈಕೊಂಡ ಭೀಷ್ಮ ಪ್ರತಿಜ್ಞೆಯು ಪ್ರಕಟವಾದಂದಿನಿಂದ ಹಿಂದೂಸ್ಥಾನದ ಅನೇಕಾನೇಕ ಪ್ರಮುಖ ದೇವಸ್ಥಾನಗಳ ಬಾಗಿಲುಗಳನ್ನು ಅಸ್ಪೃಶ್ಯ ವರ್ಗದವರ ಪ್ರವೇಶಕ್ಕೆ ತೆರೆದುಕೊಟ್ಟಿದ್ದಾರೆ. ಕಲ್ಕತ್ತಾದ ಕಾಳಿಘಟ್ಟದ ಅತಿ ಪ್ರಸಿದ್ಧವಾದ ಕಾಳಿಕಾ ದೇವಸ್ಥಾನವೂ, ಅಲ್ಲಹಾಬಾದಿನ ಅನೇಕ ದೊಡ್ಡ ದೇವಾಲಯಗಳೂ, ಅತಿ ಕಠಿಣ ಸನಾತನಿಯಾದ ಪಂಡಿತ ಮದನಮೋಹನ ಮಾಳವೀಯರ ಸ್ವಂತ ದೇವಸ್ಥಾನವೂ, ಬೊಂಬಾಯಿ, ಮದ್ರಾಸು, ಲಾಹೋರು, ಬೆಂಗಳೂರು, ಕಲ್ಲಿಕೋಟೆ ಮೊದಲಾದ ಪಟ್ಟಣಗಳ ಅನೇಕ ಮುಖ್ಯ ದೇವಾಲಯಗಳೂ ಈ ವಾರದಲ್ಲಿ ಅಸ್ಪೃಶ್ಯರ ಪ್ರವೇಶಕ್ಕೆ ಬಿಡಲ್ಪಟ್ಟಿವೆ.

ಆದುದರಿಂದ ಈ ದೇಶದ ಹಿಂದೂ ಮಹನೀಯರು ಅವರವರ ಊರಿನ ದೇವಸ್ಥಾನಗಳಲ್ಲಿ ಅಸ್ಪೃಶ್ಯರೆನಿಸಿಕೊಂಡವರಿಗೆ ದೇವರ ದರ್ಶನಕ್ಕೆ ಕೂಡಲೇ ಅವಕಾಶಮಾಡಿಕೊಟ್ಟು, ಆ ವರ್ಗದವರನ್ನು ದೇವರ ದರ್ಶನಕ್ಕೆ ಕರೆತಂದು, ಸಾಧ್ಯವಿದ್ದಲ್ಲಿ ಉತ್ಸವಾದಿಗಳನ್ನೂ ಸಹ ನಡೆಸಬೇಕೆಂತ ಅತಿ ವಿನಯದಿಂದ ವಿಜ್ಞಾಪಿಸಿಕೊಳ್ಳುತ್ತೇವೆ.

ಸಿ. ಯನ್. ವೆಂಕಪ್ಪಯ್ಯ,	ಕೇಳಪಂಡ ಅಚ್ಚಯ್ಯ,	ಕೋಡಿಮಣಿಯಂಡ ಸುಬ್ಬಯ್ಯ,
ಪಿ. ಯಂ. ಮಂಜುನಾಥಯ್ಯ,	ಕೋದಂಡ ಉತ್ತಯ್ಯ,	ಪಡೆಬ್ಬಿರ ಸುಬ್ಬಯ್ಯ,
ಹೆಚ್. ಸಿ. ಮಹಾಚಾರ್,	ಆರ್. ಎಸ್. ಸಂಜೀವರಾವ್,	ಹಿರ್ಯಮಲೆ ಸೋಮಣ್ಣ,
ಮಾಚಂಡ ಉಂಗಪ್ಪ,	ಕುಪ್ಪಮಾಡ ಕರುಂಬಯ್ಯ,	ಪುಚ್ಚಿಮಾಡ ನಾಣಯ್ಯ,
ಚೆಪ್ಪುಡಿರ ಮುತ್ತಣ್ಣ,	ಬಿಟ್ಟಿಯಂಡ ಉತ್ತಯ್ಯ,	ಕೆ. ಮಲ್ಲಪ್ಪ,
ಯಂ. ಸಿದ್ದಿಂಗಪ್ಪ,	ಯಸ್. ಬಸಪ್ಪ,	ಕೋದಂಡ ಬಿಯ್ಯಣ್ಣ,
ಬಲ್ಲಚಂಡ ಬೆಳ್ಯಪ್ಪ,	ಎ. ಕೆ. ಕೃಷ್ಣಯ್ಯ,	ಪಳಿಯಂಡ ಕುಶಾಲಪ್ಪ,
ಮನೆಯಪಂಡ ಚಿಣ್ಣಪ್ಪ,	ಅಜ್ಜಿಕುಟ್ಟಿರ ಪೊನ್ನಪ್ಪ,	ಮಾಂಡಂಡ ಸೋಮಪ್ಪ,
ಎ. ಎಸ್. ರಾಮಯ್ಯ,	ಕೆಂಚೆಟ್ಟಿ ಯಸ್. ಕಪನಯ್ಯ,	ಹೆಚ್. ಆರ್. ಕೃಷ್ಣಯ್ಯ,
ಕಾಡ್ಯಮಾಡ ಪೆಮ್ಮಯ್ಯ,	ಕಾಡುಮಂಡ ಮುತ್ತಣ್ಣ,	ಅಜ್ಜಮಾಡ ಮಾದಪ್ಪ,
ಬಿದ್ದಂಡ ಕಾರ್ಯಪ್ಪ,	ಜಮ್ಮಡ ಮಾದಪ್ಪ,	ನೆಲ್ಲಮಕ್ಕಳ ದೇವಯ್ಯ,
ಐನಂಡ ಕಾರ್ಯಪ್ಪ.	ಯಸ್. ಯನ್. ರಾಮಶೆಟ್ಟಿ,	ಕಂಡ್ರತಂಡ ನಂಜಪ್ಪ,
ತಾ. 26—9—1932.		ಪಂದ್ಯಂಡ ಬೆಳ್ಯಪ್ಪ.

ರತಿ ಮನ್ಮಥ ಎಂಬ ಮರ್ಮಶಾಸ್ತ್ರ.

ಕ್ರಯ ರೂ. 1—0—0.

ಕನ್ನಡ ಭಾಷೆಯಲ್ಲಿ ಅಂದವಾಗಿ ಪ್ರಿಂಟಾಗಿದೆ. ಇದರಲ್ಲಿ ಸ್ತ್ರೀ ಪುರುಷರ ಪ್ರೀತಿಯ ರಹಸ್ಯಗಳು, ಪ್ಯಾರಿಸ್ ವೇಶ್ಯ ಸ್ತ್ರೀಯರ ಪ್ರೀತಿಯ ಮರ್ಮಗಳು, ಮಲೇಯರ್, ಜಪಾನ್, ಫ್ರೆಂಚ್ ದೇಶದ ವೇಶ್ಯ ಸ್ತ್ರೀಯರ ಮಲಗುವ ಫೋಟೋಗಳು, ಇನ್ನೂ ಸ್ತ್ರೀ ಪುರುಷ ಅನೇಕ ರಹಸ್ಯಗಳು 22 ಲೇಡಿಗಳ ಫೋಟೋಗಳ ಸಹಿತ ಕೂಡಿದೆ. ಈ ಶೃಂಗಾರವಾದ ಪುಸ್ತಕವನ್ನು ಓದಲು ಆನಂದವಾಗಿರುವುದು. 22 ಫೋಟೋಗಳ ಸಂಗ ಪ್ಯಾರಿಸ್ ದೇಶದ ವ್ಯಭಿಚಾರಿಗಳ ವಿನೋದಗಳು, ಕನ್ಯೆಗಳ ಪ್ರೀತಿ, ಶಯ್ಯಾಗೃಹದ ರಹಸ್ಯಗಳು ಅಡಗಿವೆ. ಕ್ರಯ ಪುಸ್ತಕ 1ಕ್ಕೆ ರೂ. ೧—೦—೦.

ಯಂ. ಲಿಂಗಂ ಬುಕ್ ಡಿಪೋ,
ಪೋಸ್ಟ್ ಬಾಕ್ಸ್ ನಂ 245.
12—1 ಮದರಾಸ್.
M. Lingam Book Depot.

ಶ್ರೀ ಕಾವೇರಿ ತುಲಾ ಸಂಕ್ರಮಣದ ಮುಹೂರ್ತ ಪಟ್ಟಿ.

1932ನೇ ಇಸವಿ ಅಕ್ಟೋಬರ್ ತಾರೀಖು 14ನೇ ಕನ್ಯಾ ಮಾಸ ತೇದಿ 28ನೇ ಶುಕ್ರವಾರ ಬೆಳಿಗ್ಗೆ 9 ಗಂಟೆಗೆ ಚಾಪ್ರಕಾಲ ಹೊಳೆಯಲ್ಲು ಅಕ್ಷಯ ಪಾತ್ರ ಮಡಗುವ ಶುಭ ಮುಹೂರ್ತ.

ಇದೇ ದಿನ ಸಾಯಂಕಾಲ 5 ಗಂಟೆ 30 ಮಿನಿಟಿಗೆ ನಯಾಗಿ ಗುರುಕಾಲ ಹೊಳೆಯಲ್ಲು ಕಾಣಿಕೆ ಡಬ್ಬಿ ಮಡಗುವ ಶುಭ ಮುಹೂರ್ತ.

ಇದೇ ಅಕ್ಟೋಬರ್ ತಾರೀಖು 16ನೇ ಕನ್ಯಾ ಮಾಸ 30ನೇ ಬಿದಿಗೆಯು ರವಿವಾರ ರಾತ್ರಿ 10 ಗಂಟೆ 45 ಮಿನಿಟಿಗೆ ಭರಣಿ ನಕ್ಷತ್ರದಲ್ಲು ಶ್ರೀ ಮೂಲ ಕಾವೇರಮ್ಮನವರ ತುಲಸಂಕ್ರಮಣದ ತೀರ್ಥೋದ್ಭವ ಪುಣ್ಯಕಾಲದ ಶುಭ ಮುಹೂರ್ತ.

ಕೆ. ಚಂಗಪ್ಪ.
ಕೊಡಗು ಮುಜರಾಯಿ ಅಠಾರ. (ಪ್ರಸಿಡೆಂಟ್.)

ಮಹಾತ್ಮ ಗಾಂಧಿಯವರ ಉಪವಾಸ.

ಉಪವಾಸದ ಅರ್ಥ.

ಬೊಂಬಾಯಿ ಗವರ್ನಮೆಂಟಿಗೆ ಮಹಾತ್ಮರು ತಾರೀಖು 15–9–1932ರಲ್ಲಿ ಬರೆದ ಪತ್ರ.

ನಾನು ಶೀಘ್ರದಲ್ಲೇ ಪ್ರಾರಂಭಿಸುವ ಉಪವಾಸವನ್ನು ದೇವರ ಹೆಸರಿನಲ್ಲಿ, ದೇವರ ಕೆಲಸಕ್ಕಾಗಿ, ಹಾಗೆ ಹೇಳಬಹುದಾದರೆ ದೇವರ ಅನುಜ್ಞೆ ಮೇರೆ ಪ್ರಾರಂಭಿಸುವ್ವದಾಗಿದೆ. ಸಮುದಾಯದವರು ಈ ವಿಷಯದಲ್ಲಿ ಸಂಧಾನ ಮಾಡಿಕೊಳ್ಳುವ ಬಗ್ಗೆ ಅವಕಾಶ ದೊರಕುವಂತೆ ಉಪವಾಸವನ್ನು ಮುಂದರಿಸಬೇಕಾಗಿ ಸ್ನೇಹಿತರು ಕೇಳಿಕೊಂಡರು. ಮಂತ್ರಿಯವರಿಗೆ ಬರೆದ ಕಾಗದದಲ್ಲಿ ಸೂಚಿಸಿರುವ ಕಾರಣದಿಂದಲ್ಲದೆ ಬೇರೆ ಕಾರಣದಿಂದ ಉಪವಾಸವನ್ನು ಪ್ರಾರಂಭಿಸುವ ಘಂಟೆಯನ್ನು ಸಹ ಬದಲಾಯಿಸಲು ಸಾಧ್ಯವಿಲ್ಲ.

ನನ್ನಲ್ಲಿ ನಂಬಿಕೆ ಇರುವ ದೇಶೀಯ ಮತ್ತು ಪರದೇಶೀಯರಿಗೆ ಎದುರಾಗಿಯೂ ಮತ್ತು ನನ್ನಲ್ಲಿ ನಂಬಿಕೆ ಇಲ್ಲದವರಿಗಾಗಿಯೂ, ಉಪವಾಸವನ್ನು ನಡಿಸುವುದಾಗಿದೆ. ಅದ್ದರಿಂದ ನನ್ನ ಉಪವಾಸವು ಬ್ರಿಟಿಷ್ ಅಧಿಕಾರಿಗಳಿಗೆ ವಿರೋಧವಾಗಿ ಅಲ್ಲ. ಬ್ರಿಟಿಷ್ ಅಧಿಕಾರಿಗಳ ಬೋಧನೆಯನ್ನು ಗಣಿಸದೆ ನನ್ನಲ್ಲಿಯೂ ನನ್ನ ಧ್ಯೇಯದಲ್ಲೂ ನಂಬಿಕೆ ಇಟ್ಟಿರುವ ಇಂಗ್ಲಿಷ್ ಜನರಿಗೆ ಎದುರಾಗಿ ಈ ಉಪವಾಸವನ್ನು ಕೈಕೊಂಡಿರುವುದಾಗಿದೆ. ಹಾಗೆಯೇ ನನ್ನ ದೇಶೀಯರಲ್ಲೂ ಹಿಂದುವೇ ಆಗಲೀ, ಇತರರೇ ಆಗಲೀ, ನನ್ನಲ್ಲಿ ನಂಬಿಕೆ ಇಲ್ಲದವರಿಗೆ ವಿರೋಧವಾಗಿ ಅಲ್ಲ. ಆದರೆ ನನ್ನ ಬೋಧನೆಯಲ್ಲಿ ನಂಬಿಕೆ ಇರುವ ಅಸಂಖ್ಯ ಹಿಂದೀಯರಿಗೆ ಎದುರಾಗಿ ಉಪವಾಸ ಮಾಡುವುದಾಗಿದೆ. ಹಿಂದೂ ಜನರ ಮನಸಿನಲ್ಲಿ ನಿಜವಾದ ಧಾರ್ಮಿಕ ಕಾರ್ಯಮಾಡಲು ಬುದ್ಧಿ ಹುಟ್ಟುವಂತೆ ಮಾಡಲಿಕ್ಕಾಗಿಯೇ ಮುಖ್ಯವಾಗಿ ಈ ಉಪವಾಸವನ್ನು ಪ್ರಾರಂಭಿಸುವುದಾಗಿದೆ. ಉದ್ದೇಶಿಸಿರುವ ಈ ಉಪವಾಸವು ಬರೇ ಮನಸಿಗೆ ಉತ್ತೇಜನವಾಗುವುದಕ್ಕಾಗಿಯಲ್ಲ. ನನ್ನ ಉಪವಾಸದಿಂದ ನನ್ನಿಂದ ಸಾಧ್ಯವಿರುವಷ್ಟು ಭಾರವಿರುವ ತೂಕವನ್ನು ನ್ಯಾಯದ ಕಡೆಗೆ ಹಾಕುವುದೇ ಉದ್ದೇಶವಾಗಿದೆ. ನನ್ನ ಜೀವವನ್ನು ಉಳಿಸುವ ಬಗ್ಗೆ ಆತುರದ ಗಡಿಬಿಡಿಯೂ ಪ್ರಯೋಜನವಿಲ್ಲ. ದೇವರ ಇಚ್ಛೆ ಇಲ್ಲದೆ ಒಂದು ಹುಲ್ಲುಕಡ್ಡಿಯಾದರೂ ಅಲ್ಲಾಡುವುದಿಲ್ಲವೆಂಬ ಮಾತನ್ನು ನಂಬುವವನಾಗಿದ್ದೇನೆ.

ಈ ದೇಹದಿಂದ ಇನ್ನೂ ಸೇವೆಯಾಗಬೇಕೆಂತಿದ್ದರೆ ದೇವರು ಇದನ್ನು ಉಳಿಸಿಯಾನು. ಆತನ ಇಚ್ಛೆ ಇಲ್ಲದೆ ಯಾರಿಂದಲೂ ಉಳಿಸಲಿಕ್ಕೆ ಸಾಧ್ಯವಿಲ್ಲ. ಮನುಷ್ಯ ಯತ್ನ ನೋಡಿದರೆ ಈ ದೇಹವು ಕೆಲಕಾಲ ತಡೆದೀತೆಂತ ತೋರುತ್ತದೆ. ಪ್ರತ್ಯೇಕ ಚುನಾವಣೆಯ ಏರ್ಪಾಡು ನನ್ನ ಮನಸ್ಸನ್ನು ಕರಗಿಸಲು ತಡೇ ಬಲವಾದ ಕಾರಣವಾಗಿದೆ. ಹಿಂದೂ ಮುಖಂಡರಿಗೂ ಅಸ್ಪೃಶ್ಯ ಮುಖಂಡರಿಗೂ ಸೇವೆಗಳಂಥ ತಾತ್ಕಾಲಿಕ ರಾಜಿಯಿಂದ ಪ್ರಯೋಜನವಿಲ್ಲ. ಒಪ್ಪಂದವು ಪ್ರಯೋಜನಕರವಾಗದೇಕಾದರೆ ನಿಜವಾದದ್ದಾಗಬೇಕು. ಹಿಂದೂ ಸಮಾಜವು ಅಸ್ಪೃಶ್ಯತೆಯನ್ನು ಬೇರುಸಹಿತ ಕಿತ್ತು ಹಾಕಲು ತಯಾರಿಲ್ಲದಿದ್ದರೆ ನನ್ನನ್ನು ಬಲಿಕೊಡಲು ಸ್ವಲ್ಪವೂ ಹಿಂಜರಿಯಬಾರದು.

ಒಗ್ಗಟ್ಟಿನ ಚುನಾವಣೆಗೆ ಒಪ್ಪಿಗೆಯಿಲ್ಲದವರನ್ನು ಬಲಂಪಡಿಸಬಾರದು. ಅವರ ಕಠಿಣ ವಿರೋಧಕ್ಕೆ ಕಾರಣವೇನೆಂತ ತಿಳಿದುಕೊಳ್ಳಲು ನನಗೇನೂ ಕಷ್ಟವಿಲ್ಲ. ನನ್ನನ್ನು ನಂಬದಿರಲು ಅವರಿಗೆ ಸಂಪೂರ್ಣ ಕಾರಣಗಳಿವೆ. ಅಸ್ಪೃಶ್ಯರೆನಿಸಿಕೊಂಡವರನ್ನು ಕ್ರೂರ ರೀತಿಯಾಗಿ ಅರೆದ ಉಚ್ಚ ಜಾತಿಯೆನಿಸಿಕೊಂಡ ಹಿಂದೂ ವರ್ಗಕ್ಕೆ ಸೇರಿದವನಲ್ಲವೇ ನಾನು? ಆದರೂ ಅಸ್ಪೃಶ್ಯರು ಹಿಂದೂ ಸಮಾಜದಲ್ಲಿ ಇದ್ದಾರೆಂಬುದೇ ಆಶ್ಚರ್ಯದ ವಿಷಯ.

ಅಸ್ಪೃಶ್ಯ ಮುಖಂಡರು ಏಕ ಚುನಾವಣೆಗೆ ವಿರೋಧಿಸಲು ಕಾರಣವಿದೆಯೆಂತ ಒಪ್ಪುತ್ತೇನಾದರೂ ಅವರು ತಪ್ಪು ದಾರಿ ಹಿಡಿದಿದ್ದಾರೆಂತ ನಂಬುತ್ತೇನೆ. ಅವರು ಮನಸು ಮಾಡಿದರೆ ಅಸ್ಪೃಶ್ಯರನ್ನು ಹಿಂದುಗಳಿಂದ ಬೇರೆಯೇ ವಿಭಾಗಿಸಿ ಹಿಂದೂ ಸಮಾಜಕ್ಕೆ ಶಾಶ್ವತವಾದ, ಜೀವಯುಕ್ತವಾದ ನಾಚಿಕೆಯನ್ನುಂಟುಮಾಡಬಹುದು. ಅದರಿಂದ ಅವರ ಹಿತಸಾಧನೆಯಾದೀತೆಂತಾದರೆ ನಾನು ಒಪ್ಪಿಯೇನು. ಆದರೆ "ಅಸ್ಪೃಶ್ಯತೆ"ಯ ಎಲ್ಲಾ ಭಾಗಗಳನ್ನು ತಿಳಿದ ನನಗೆ ಹಿಂದೂ ಸಮಾಜದೊಂದಿಗೆ ನಿವಿಡ ಸಂಬಂಧವಿರುವ ಹಿಂದುಗಳಿಗಾಗಿಯೇ ಜೀವಿಸುವ ಇವರನ್ನು ಹಿಂದುಗಳಿಂದ ಬೇರ್ಪಡಿಸಲು ಸಾಧ್ಯವಿಲ್ಲವೆಂತ ನನಗೆ ತೋರುತ್ತದೆ. ಅವರು ಹಿಂದೂ ಸಮಾಜವೆಂಬ ಕುಟುಂಬಕ್ಕೆ ಸೇರಿದವರೇ ಆಗಿದ್ದಾರೆ.

ಹಿಂದೂ ಸಮಾಜದ ಮುಂದೆ ಇರುವ ಸಮಸ್ಯೆ.

ಹಿಂದೂ ಸಮಾಜದ ಮೇಲೆ ಬೇಸರ ಪಟ್ಟು ಹಿಂದೂ ಸಮಾಜವನ್ನು ಬಿಟ್ಟು ಹೋದರೂ ಸಕಾರಣವೆಂತ ತೋರೀತು. ಆದರೆ ಅವರು ಹಾಗೆ ಹೋಗುವವರಲ್ಲ. ಅವರಿಗೆ ಇಷ್ಟವಿಲ್ಲದಿದ್ದರೂ ಹಿಂದೂ ಸಮಾಜದಲ್ಲೇ ಅವರು ಇರುವಂತೆ ಮಾಡುವ ಏನೋ ಒಂದು ಶಕ್ತಿಯು ಹಿಂದೂ ಧರ್ಮದಲ್ಲಿದೆ. ಇದರಿಂದ ನನ್ನಂಥ ಅಸ್ಪೃಶ್ಯತೆಯ ಸಂಪೂರ್ಣ ಅನುಭವ ಇರುವವನಿಗೆ ಅಸ್ಪೃಶ್ಯರನ್ನು ಹಿಂದೂ ಸಮಾಜದಿಂದ ಬೇರ್ಪಡಿಸುವುದನ್ನು ಜೀವಕೊಟ್ಟಾದರೂ ವಿರೋಧಿಸಬೇಕಾದದ್ದು ಅತಿ ಮುಖ್ಯ ಕರ್ತವ್ಯವಾಗಿದೆ.

ಈ ವಿರೋಧದ ಅರ್ಥವು ಮಹತ್ವದ್ದಾಗಿದೆ. ಬೇರ್ಪಡಿಸುವದಕ್ಕೆ ಬದಲಾಗಿ ಹಿಂದೂ ಸಮಾಜದಲ್ಲಿ ಅಸ್ಪೃಶ್ಯರಿಗೆ ಸಂಪೂರ್ಣ ಸ್ವಾತಂತ್ರ್ಯವನ್ನೇ ಕೊಡಬೇಕಾಗಿದೆ. ಈ ತರದ ನಂಬಿಕೆ ಹುಟ್ಟಿಸಿ ಇದಕ್ಕೆ ವಿರೋಧವಾಗಿ ನಡೆದರೆ ನನಗೂ ನನ್ನಂತೆ ಆಲೋಚನೆ ಮಾಡುವವರಿಗೂ ದೇಹಬಿಡುವ ಕಾಲ ಮುಂದುವರಿದಂತಾದೀತಷ್ಟೆ. ಹಿಂದೂ ಸಮಾಜದ ಮುಂದೆ ಬಂದಿರುವ ಸಮಸ್ಯೆ ಯಾವುದೆಂದರೆ ಅಸ್ಪೃಶ್ಯರನ್ನು ಸಾಮಾಜಿಕ ಮತ್ತು ರಾಜಕೀಯ ರೀತಿಗಳಿಂದ ದಬ್ಬಾಳಿಕೆಗೆ ಗುರಿಮಾಡಿದರೆ ನನ್ನಂಥ ಒಬ್ಬನಲ್ಲ ಗುಂಪು ಗುಂಪಾಗಿ ಜನರು ಆಮರಣ ಉಪವಾಸ ನಡಿಸಿ ಸತ್ಯಾಗ್ರಹ ಮಾಡಲು ತಯಾರಾಗಿದ್ದಾರೋ ಎಂಬುದೇ ಆಗಿದೆ. ಈ ರೀತಿ ದೇಹತ್ಯಾಗ ಮಾಡಲು ತಯಾರಾದ ಸುಧಾರಕರು ಹಿಂದೂ ಸಮಾಜದಲ್ಲಿ ತುಂಬಾ ಇದ್ದಾರೆ. ಅಂಥವರು ಹಿಂದೂ ಧರ್ಮದಲ್ಲಿ ಇರುವ ಈ ಮೂಢ ನಂಬಿಕೆಯನ್ನು ಕಿತ್ತೊಗೆದು ಹಿಂದೂ ಧರ್ಮದ ಕಳಂಕವನ್ನು ಹೋಗಲಾಡಿಸಿಯಾರೆಂತ ನಂಬುತ್ತೇನೆ.

ನನ್ನ ಸಂಗಡ ಕೆಲಸ ಮಾಡುತ್ತಿರುವ ಸುಧಾರಕರು ಸಹ ಈ ನನ್ನ ಉಪವಾಸದ ಅರ್ಥವನ್ನು ತಿಳಿದುಕೊಳ್ಳಬೇಕು. ನನ್ನ ನಂಬಿಕೆಯು ಬರೇ ತಪ್ಪು ಕಲ್ಪನೆಯಾದರೆ ಅದಕ್ಕೆ ನಾನು ಪ್ರಾಯಶ್ಚಿತ್ತ ರೂಪದ ತಪಸ್ಸನ್ನಾಚರಿಸಬೇಕು. ಉಪವಾಸವನ್ನು ಶಾಂತವಾಗಿ ಮುಂದರಿಯಲು ಬಿಡಬೇಕು. ಅದರಿಂದ ಹಿಂದೂ ಧರ್ಮದ ಮೇಲಿರುವ ದೊಡ್ಡ ಭಾರವನ್ನು ಇಳಿಸಿದಂತಾದೀತು. ನನ್ನ ನಂಬಿಕೆಯು ನಿಜವಾದದ್ದಾದರೆ ನನ್ನ ಸಂಕಟದಿಂದ ಹಿಂದೂ ಧರ್ಮವು ಶುದ್ಧಿಯಾಗಲಿ. ನನ್ನನ್ನು ಈಗ ನಂಬದೆ ಇರುವವರ ಮನಸು ಸಹ ಕರಗಲಿ.

ನನ್ನ ಉಪವಾಸವನ್ನು ಯಾಕೆ ಉಪಯೋಗಿಸುತ್ತೇನೆಂಬುದನ್ನು ತಿಳಿದುಕೊಳ್ಳುವುದರಲ್ಲಿ ತಪ್ಪು ಅಭಿಪ್ರಾಯ ಹುಟ್ಟಿರುವುದರಿಂದ ಅದನ್ನು ವಿವರಿಸಬೇಕಾಗಿದೆ. ಅಸ್ಪೃಶ್ಯರಿಗೆ ಮಾನ್ಯ ಸರಕಾರವು ಮೇರೆ ಇಟ್ಟಿರುವ ಬೇರೆ ಚುನಾವಣೆ ಏರ್ಪಾಡನ್ನು ವಿರೋಧಿಸಲಿಕ್ಕಾಗಿಯೇ ಕೈಕೊಂಡಿರುವುದಾಗಿದೆ. ಆ ಬೇರ್ಪಡಿಸುವ ಏರ್ಪಾಡನ್ನು ತೆಗೆದ ಕೂಡಲೆ ನನ್ನ ಉಪವಾಸವು ಅಂತ್ಯವಾಗುತ್ತದೆ. ಹಿಂದೂ ಸಮಾಜದ ಚುನಾವಣೆಯಲ್ಲಿ ಅಸ್ಪೃಶ್ಯರಿಗೆ ಸ್ಥಳಗಳನ್ನು ಕಾದಿಡುವ ಸಂದರ್ಭದಲ್ಲೂ, ಅಸ್ಪೃಶ್ಯತಾ ನಿವಾರಣೆಯ ವಿಷಯದಲ್ಲೂ ನನ್ನ ಅಭಿಪ್ರಾಯಗಳು ಬಲವಾಗಿವೆ. ಆದರೆ ಸೆರೆಯಲ್ಲಿರುವ ನಾನು ಈ ಎಲ್ಲಾ ಬಾಬುಗಳಲ್ಲಿ ಅಭಿಪ್ರಾಯ ಕೊಡಲು ಅರ್ಹನಲ್ಲವೆಂತ ಭಾವಿಸುತ್ತೇನೆ. ಹಿಂದೂ ಮತ್ತು ಅಸ್ಪೃಶ್ಯ ಮುಖಂಡರೊಳಗೆ ಆಗುವ ಮತ್ತು ಹಿಂದೂ ಸಮುದಾಯದ ಮಹಾ ಸಭೆಗಳಲ್ಲಿ ಒಪ್ಪಲ್ಪಡುವ ಯಾವುದೇ ತೀರ್ಮಾನವನ್ನು ನಾನು ಒಪ್ಪಿಕೊಳ್ಳುತ್ತೇನೆ.

ಈ ಉಪವಾಸದ ಮಿತಿ.

ಒಂದು ವಿಷಯವನ್ನು ವಿಶದಪಡಿಸಬೇಕಾಗಿದೆ. ಈ ಅಸ್ಪೃಶ್ಯತೆಯ ಸಮಸ್ಯೆಯು ತೃಪ್ತಿಕರವಾಗಿ ಬಿಡಿಸಲ್ಪಟ್ಟರೂ ಕೋಮುವಾರು ಸಮಸ್ಯೆಯ ಸಂಬಂಧವಾಗಿ ಸರ್ಕಾರವು ಮಾಡಿದ ಬೇರೆ ತೀರ್ಮಾನಗಳನ್ನು ನಾನು ಅಂಗೀಕರಿಸುತ್ತೇನೆಂತಲ್ಲ. ಸರ್ಕಾರದ ತೀರ್ಮಾನದಲ್ಲಿ ಎಷ್ಟೋ ಬೇರೆ ಭಾಗಗಳಿಗೆ ನನ್ನ ವಿರೋಧವಿದೆ. ಅಂಥಾ ನಿರ್ಣಯದಿಂದ ಸ್ವತಂತ್ರ ಪ್ರಜಾಸತ್ತಾತ್ಮಕ ಸರ್ಕಾರವನ್ನು ನಡಿಸುವುದು ಅಸಾಧ್ಯವಾದೀತು. ಈ ಸಮಸ್ಯೆಯು ನನಗೆ ತೃಪ್ತಿಕರವಾಗಿಯೇ ತೀರ್ಮಾನವಾದರೂ ತಯಾರಾಗುವ ರಾಜಕೀಯ ರಚನೆಯನ್ನು ನಾನು ಒಪ್ಪಬೇಕೆಂತ ಇಲ್ಲ. ಅವೆಲ್ಲಾ ರಾಜಕೀಯ ವಿಷಯಗಳು. ರಾಷ್ಟ್ರೀಯ ಮಹಾ ಸಭೆಯಿಂದ ತೀರ್ಮಾನಿಸಲ್ಪಡಬೇಕು. ಅವು ನಾನೊಬ್ಬ ವ್ಯಕ್ತಿಯ ಮೇಲೆ ಹೊಂದಿರುವುದಿಲ್ಲ. ಈ ವಿಷಯಗಳ ಕುರಿತು ಕೈದಿಯಾದ ನನ್ನ ಸ್ವಂತ ಅಭಿಪ್ರಾಯವನ್ನೂ ಕೊಡಲು ಸಾಧ್ಯವಿಲ್ಲ. ನನ್ನ ಉಪವಾಸವು ಸ್ವಲ್ಪ ವಿಷಯವನ್ನು ಮಾತ್ರ ಒಳಕೊಂಡಿದೆ.

ಅಸ್ಪೃಶ್ಯತೆ ಸಮಸ್ಯೆಯು ಮತ ಸಮ್ಬಂಧವಾದ್ದರಿಂದಲೂ, ನನ್ನ ಜೀವಮಾನವೆಲ್ಲಾ ಯೋಚಿಸಿದ ವಿಷಯವಾದ್ದರಿಂದಲೂ ಅದನ್ನು ನನ್ನ ಸ್ವಂತ ವಿಷಯವೆಂತ ಎಣಿಸುತ್ತೇನೆ. ಅದು ನನ್ನ ಮೇಲೆ ಹೊಂದಿದ ಧಾರ್ಮಿಕ ಹೊಣೆಯೆಂತ ಭಾವಿಸುತ್ತೇನೆ. ಅದನ್ನು ತಪ್ಪಿಸಿಕೊಳ್ಳಲಾರೆನು. ಆತ್ಮಶುದ್ಧಿಗಾಗಿಯೂ ತಪಸ್ಸಿಗಾಗಿಯೂ ಉಪವಾಸ ಮಾಡುವುದು ಪ್ರಾಚೀನ ಪದ್ಧತಿಯಾಗಿದೆ. ಅದು ಕ್ರೈಸ್ತ ಧರ್ಮದಲ್ಲೂ ಇದೆ, ಇಸ್ಲಾಂ ಧರ್ಮದಲ್ಲೂ ಇದೆ. ಪರಿಶುದ್ಧತೆಗಾಗಿಯೂ ತಪಸ್ಸಿಗಾಗಿಯೂ ಉಪವಾಸ ಮಾಡಿದ್ದು ಹಿಂದೂ ಇತಿಹಾಸದಲ್ಲಿ ತುಂಬಾ ಇದೆ. ಉಪವಾಸ ಮಾಡುವ ಹಕ್ಕು ಎಲ್ಲರಿಗೂ ಇದ್ದರೂ ಅದು ಕರ್ತವ್ಯವೂ ಆಗಿರುತ್ತದೆ. ಅದೂ ಅಲ್ಲದೆ ನಾನು ಉಪವಾಸವನ್ನು ವಿಜ್ಞಾನ ಶಾಸ್ತ್ರದ ಪರಿಶೋಧನೆಯಂತೆ ಪರಿಶೋಧಿಸಿದ್ದೇನೆ.

ಆದ್ದರಿಂದ ಸ್ನೇಹಿತರೂ, ಸಹಾನುಭೂತಿ ಇರುವವರೂ ನನ್ನ ಮೇಲೆ ಪ್ರೀತಿಗಾಗಿಯೆಂತ ತಪ್ಪುಭಾವನೆಯಿಂದ ಉಪವಾಸ ಮಾಡಬಾರದು. ಅಂಥವರೆಲ್ಲರೂ ಅಸ್ಪೃಶ್ಯರಿಗಾಗಿ ಮಾಡುವ ಕಷ್ಟ ಕೆಲಸಗಳಿಂದಲೂ ಸೇವೆಯಿಂದಲೂ ತಯಾರಾದರೆ ಅವರ ಉಪವಾಸಕ್ಕೆ ಸಮಯ ಬಂದಾಗ ಅವರಿಗೆ ತಾನಾಗಿಯೇ ತೋಳೀತು.

ನಾನಾದರೋ ಈ ಉಪವಾಸವನ್ನು ಪರಿಶುದ್ಧ ಉದ್ದೇಶದಿಂದಲೇ ಹೊರತು ಯಾವನೇ ವ್ಯಕ್ತಿಯ ಮೇಲಿನ ದ್ವೇಷದಿಂದಾಗಲೀ ಸಿಟ್ಟಿನಿಂದಾಗಲೀ ಕೈಕೊಳ್ಳುವುದಲ್ಲವೆಂತ ಜಗತ್ತಿನಲ್ಲಿ ತಿಳಿಸಬೇಕಾಗಿದೆ. ನನ್ನ ಭಾಗಕ್ಕೆ ಇದು ಒಂದು ಅಹಿಂಸೆಯ ರೂಪವೇ ಆಗಿದೆ. ಅಹಿಂಸೆಯನ್ನು ಸೀಲು ಮೊಹರು ಹಾಕಿ ಭದ್ರಪಡಿಸಿದಂತೆಯಾಗಿರುತ್ತದೆ. ಈ ಸಂದರ್ಭದಲ್ಲಿ ನನಗಾಗಲೀ ನನ್ನ ಉದ್ದೇಶಕ್ಕಾಗಲೀ ವಿರೋಧವಿರುವವರ ಮೇಲೆ ಯಾರಾದರೂ ಹಿಂಸೆ ನಡಿಸಿದರೆ ನನ್ನ ಮರಣವು ಬೇಗನೇ ಆದೀತು. ಇತರ ಎಲ್ಲಾ ವಿಷಯಗಳಂತೆಯೇ ಮುಖ್ಯವಾಗಿ ಇದರಲ್ಲಿಯೂ ಜಯವಾಗಬೇಕಾದರೆ ಎದುರಿಸುವವರ ಮೇಲೆ ಸಂಪೂರ್ಣ ದಯೆ, ತಾಳ್ಮೆಯನ್ನು ತೋರಿಸುವುದು ಅತ್ಯಗತ್ಯವಾಗಿದೆ.

ಮಹಾತ್ಮಾಜಿಯವರೂ, ಅಸ್ಪೃಶ್ಯತೆಯೂ.

(ಕೆ. ಎ. ಆರ್. ಯಸ್. ರವರಿಂದ)

ಮಹಾತ್ಮ ಗಾಂಧಿಯವರು ಕೋಮುವಾರು ತೀರ್ಮಾನದ ಅತೃಪ್ತಿಯನ್ನು ವ್ಯಕ್ತಗೊಳಿಸಲಿಕ್ಕಾಗಿ ತಾ. 20ರ ಉಪವಾಸವ್ರತವನ್ನು ಕೈಕೊಂಡಿರುವುದು ಎಲ್ಲಾ ಭಾರತೀಯರನ್ನು ತಲ್ಲಣಿಸಿದೆ. ಪ್ರಕೃತದಲ್ಲಿ ಅವರ ದೇಹ ಪ್ರಕೃತಿಯು ಅಷ್ಟೊಂದು ಉತ್ತಮ ಸ್ಥಿತಿಯಲ್ಲಿ ಇರದಿರುವುದರಿಂದ ಉಪವಾಸದ ಒಳಿತಿಯಿಂದ ಆರೋಗ್ಯಕ್ಕೆ ಹಾನಿ ಬರಬಹುದೆಂಬ ಯೋಚನೆಯು ಎಲ್ಲರನ್ನೂ ದಿಗಿಲುಗೊಳಿಸಿದೆ. ಅಸ್ಪೃಶ್ಯರಿಗೆ ಪ್ರತ್ಯೇಕ ಚುನಾವಣೆಯ ಏರ್ಪಾಡು ಮಾಡಿದ್ದರಿಂದ ಅವರಿಗೆ ಅದರಿಂದ ಏನೂ ಪ್ರಯೋಜನವಿಲ್ಲವೆಂದೂ, ಅದನ್ನು ರದ್ದುಪಡಿಸಿ ಸಾರ್ವಜನಿಕ ಚುನಾವಣೆಯಿಂದ ವಿನಹ ಬೇರೊಂದರಿಂದಲೂ ಅವರಿಗೆ ಶ್ರೇಯಸ್ಸಾಗಲಾರದೆಂದೂ ಗಾಂಧಿಯವರು ಕೇಳಿಕೊಂಡ ಕಾರಣ ಈಗಿನ ತೀರ್ಮಾನದಿಂದ ಅತೃಪ್ತಿಗೊಂಡು ಉಪವಾಸವ್ರತವನ್ನಾಚರಿಸುವರು. ಉಪವಾಸವು ಗಾಂಧಿಯವರು ಹೇಳುವಂತೆ, ಯಾರ ಮೇಲಿನ ದ್ವೇಷಾಸೂಯೆಗಳಿಂದಲ್ಲ. ಅದು ಅಹಿಂಸಾ ಧರ್ಮದ ಪರಮಸಾಧನವೆಂದು ಭಾವಿಸಿರುವರು. ಭಗವಂತನ ಆಜ್ಞೆ ಇಲ್ಲದೆ ಒಂದು ತೃಣವೂ ಕದಲದಂತೆ ಈಶ್ವರೇಚ್ಛೆಯ ಪ್ರೇರಣೆಯಿಂದಲೇ ತಾನು ಈ ಕೆಲಸಕ್ಕೆ ಪ್ರವೃತ್ತನಾದ್ದರಿಂದ ಇದರ ಪರಿಣಾಮವನ್ನು ತಡೆಯುವ ಶಕ್ತಿ ತನಗಿರುವುದೆಂದು ಮಹಾತ್ಮರು ಹೇಳಿರುವರು. ಅಲ್ಲದೆ, 'ಅದು ಒಂದು ಧರ್ಮದ ಕಾರ್ಯದಂತಿರುವುದರಿಂದ ಪವಿತ್ರವೆಂದು ತಿಳಿದಿರುವೆನು. ಉಪವಾಸದಿಂದ ಆತ್ಮಶುದ್ಧಿಯಾಗುವುದೆಂದು ಹಿಂದೂ ಮತದಲ್ಲಿ ಹೇಳಿದೆ. ಬಹಿರಂಗಕ್ಕೆ ಕಣ್ಣುಗಳು ಹೇಗೋ, ಉಪವಾಸವು ಅಂತರಂಗಕ್ಕೆ' ಎಂದು ಹೇಳಿರುವರು.

ಹಿಂದೆ ಭಾರತ ಮಾತೆಯ ಉದರದಲ್ಲಿ ಸ್ಪೃಶ್ಯಾಸ್ಪೃಶ್ಯ ಭೇದವನ್ನು ಅಳಿಯುವಂತೆ ಮಾಡಬೇಕೆಂದು, ಜನಿಸಿದ ಅನೇಕ ರತ್ನಗಳು ತಮ್ಮ ಜೀವನವನ್ನೆಲ್ಲಾ ಅದರಲ್ಲೇ ಸವೆದರೂ ಹೆಚ್ಚಿನ ಫಲಕಾರಿಗಳಾಗಲಿಲ್ಲ. ಈಗ ಮಹಾತ್ಮಾಜಿಯವರು ತಮ್ಮ ಉಪವಾಸವೆಂಬ ವ್ರತದಿಂದ ಅದನ್ನು ಸಾಧಿಸಲು ಯತ್ನಿಸಿರುವರು. ಅವರು ಅಂತ್ಯಜೋದ್ಧಾರವೆಂದರೆ ಪರಮ ಪವಿತ್ರವೆಂದು ತಿಳಿದುಕೊಂಡಿರುವರು. ಅದಕ್ಕಾಗಿ ತಮ್ಮ ಪ್ರಾಣವನ್ನು ತೃಣಕ್ಕೆ ಎಣಿಸಿ 'ಪ್ರಾಯೋಪವೇಶನ' ವ್ರತವನ್ನು ಆಚರಿಸುವುದರಿಂದ ಪ್ರತಿಯೊಬ್ಬ ಭಾರತೀಯನೂ ಸ್ಪೃಶ್ಯಾಸ್ಪೃಶ್ಯ ಭೇದವನ್ನು ಕಳ್ಳಿಸದೆ ಅದರ ಬೇರೇ ಇಲ್ಲದಂತೆ ಮಾಡಿ ಮಹಾತ್ಮಾಜಿಯಂತ ಅಮೂಲ್ಯವಾದ ಮತ್ತು ಅಪೂರ್ವ ರತ್ನವನ್ನು ರಕ್ಷಿಸಲು ಬದ್ಧಕಂಕಣರಾಗಬೇಕು. ಅನೇಕ ಶತಮಾನಗಳಿಂದ ಅಸ್ಪೃಶ್ಯರು ಸನಾತನ ಹಿಂದುಗಳ ಕೈಯಲ್ಲಿ ಬಹಳ ಕಷ್ಟಗಳನ್ನು ಅನುಭವಿಸಿದ್ದು, ಹಿಂದುಗಳು ಅವರನ್ನು ಅಷ್ಟು ನಿಕೃಷ್ಟವಾಗಿ ಕಾಣುತ್ತಿದ್ದುದಲ್ಲದೆ ಅವರು ಕೆರೆ ಬಾವಿಗಳನ್ನು ಮುಟ್ಟಬಾರದು, ದೇವಾಲಯ ಮತ್ತು ಶಾಲೆಗಳಿಗೆ ಹತ್ತಬಾರದು ಇತ್ಯಾದಿ ನಿರ್ಬಂಧನೆಗಳನ್ನು ಏರ್ಪಡಿಸಿಯೂ ಮಹಾತ್ಮರ ಅಂತಃಕರಣವನ್ನು ಕರಗಿಸಿದೆ. ಗಾಂಧಿಯವರಿಗೆ ಅಸ್ಪೃಶ್ಯರ ಮೇಲೆ ಅಭಿಮಾನವು ಅವರ ಬಾಲ್ಯದಿಂದಲೇ ಬೆಳೆದಿತ್ತು. ಅವರ ಹನ್ನೆರಡನೆಯ ವರ್ಷದಲ್ಲಿಯೇ ತಾನು 'ಉಕ (ತೋಟಿಯ ಹೆಸರು) ನನ್ನು ಏಕೆ ಮುಟ್ಟಬಾರದೆಂದು' ತಾಯಿಯನ್ನು ಪ್ರಶ್ನಿಸುತ್ತಿದ್ದರಂತೆ! ಒಂದು ವೇಳೆ ಮುಟ್ಟಿದರೂ ತಾಯಿಯ ಮಾತನ್ನು ಉಲ್ಲಂಘಿಸದೆ ಅವಳ ಹೇಳಿಕೆಯಂತೆ 'ಪುಣ್ಯಾರ್ಜನ' ಮಾಡಿಕೊಳ್ಳುತ್ತಿದ್ದರಂತೆ. ಶಾಲೆಯಲ್ಲಿದ್ದರೂ ಅಸ್ಪೃಶ್ಯತೆ ಸಂಗದ ದೋಷವನ್ನು ಯಾರಾದರೊಬ್ಬ ಮುಸಲ್ಮಾನನನ್ನು ಮುಟ್ಟಿ ಕಳೆಯಬೇಕೆಂದು ತಾಯಿಯವರು ಹೇಳಿದ್ದರಿಂದ ತಾಯಿಯ ಮೇಲಿನ ಭಕ್ತಿಯಿಂದ ಮಾತನ್ನು ವಿಚಾರಿಸದೆ ಅದಕ್ಕಾಗಿ ಅನುಸಂಧಾನವನ್ನು ತೀರ್ಮಾನಿಸದೆ ನಡೆಯುತ್ತಿದ್ದೆನೆಂದು ಗಾಂಧಿಯವರು ಹೇಳಿರುವರು.

1920ನೇ ಅಕ್ಟೋಬರ್‌ನಲ್ಲಿ ಗಾಂಧಿಯವರು—'ಹಿಂದೂ ಮತವು ಅಸ್ಪೃಶ್ಯತೆ ಎಂಬ ಭೇದಭಾವದಿಂದ ಬಹಳ ಮಲಿನವಾಗಿರುವುದಲ್ಲದೆ ದುಷ್ಕರವಾದ ಪಾಪವನ್ನು ತಂದಿರುವುದು. ಇದೇ ನಮ್ಮ ಇಂದಿನ ಕೇಡು ಹೀನತೆಗೆ ಕಾರಣ. ನಾವೇ ಕೂಲಿ ಪರಿಯರಾಗಿದ್ದೇವೆ, (Paraiahs of the Empire) ಅಸ್ಪೃಶ್ಯತೆಯನ್ನು ನನ್ನಲ್ಲಿ ಜೀವವಿರುವ ವರೆಗೂ ನಿಶ್ಶಕ್ತ ಪ್ರಯತ್ನ ಮಾಡಿ ತೊಲಗಿಸುವೆನು. ಸನಾತನ ಹಿಂದೂಗಳಿಂದ ಕೆಳಗೆ ತುಳಿಯಲ್ಪಟ್ಟ (Down trodden) ಈ ಅಂತ್ಯಜರ ಉದ್ಧಾರಕ್ಕೆ ಮೂರು ಮಾರ್ಗಗಳಿರುವವು. ಸರ್ಕಾರದ ಸಹಾಯದಿಂದ ಒಂದು. ಆದರೆ ಇದರಿಂದ ಪ್ರಯೋಜನವೇನೂ ಇಲ್ಲ. ಸರ್ಕಾರವು ಸಹಾಯ ಕೊಟ್ಟರೂ ಅದರ ಮೂಲಕವೇ ಇವರ ಬಂಧುವರ್ಗವನ್ನು ಮುರಿಯಲು ಹೊರಡುವುದು. ಮತಾಂತರವನ್ನು ಅವಲಂಬಿಸುವುದು, ಎರಡನೆಯದು

ಕೊಡಗು.

ಸನ್ ೧೯೩೨ನೇ ಇಸವಿ

ಸೆಪ್ಟೆಂಬರ್ ತಾ. ೩೦ನೇ ಶುಕ್ರವಾರ.

ಪ್ರೆಸ್ ಆರ್ಡಿನೇನ್ಸ್

ಜಾರಿಯಲ್ಲಿರುವವರೆಗೆ

ನಾವು

ಅಗ್ರಲೇಖನವನ್ನು

ಪ್ರಕಟಿಸುವುದಿಲ್ಲ.

ಮಹಾತ್ಮರ ಉಪವಾಸ ವ್ರತವು ಸಫಲವಾಯಿತು.

ಹಿಂದೂ ಮತ್ತು ಅಸ್ಪೃಶ್ಯರ ಮುಖಂಡರೊಳಗೆ ಒಪ್ಪಂದ.

ಅಸ್ಪೃಶ್ಯರಿಗೆ ಪ್ರತ್ಯೇಕ ಚುನಾವಣೆ ಇಲ್ಲ.

ಹಿಂದೂ ಮುಖಂಡರ ಒಪ್ಪಂದಕ್ಕೆ ಬ್ರಿಟಿಷ್ ಸರ್ಕಾರದ ಸಮ್ಮತಿ.

ಗಾಂಧೀಜೀಯವರು ತಾ. 26ರಲ್ಲಿ ಸಾಯಂಕಾಲ 5 ಗಂಟೆಗೆ ಆಹಾರವನ್ನು ತೆಗೆದುಕೊಂಡರು.

ದೇವಸ್ಥಾನಗಳಿಗೆ ಅಸ್ಪೃಶ್ಯರ ಪ್ರವೇಶದ ಹಕ್ಕು!

ಮಹಾತ್ಮರೊಂದಿಗೆ ಮುಖಂಡರುಗಳ ಸಂಭಾಷಣೆ.

ತಾ. 23ರಲ್ಲಿ ಡಾ. ಅಂಬೇಡ್ಕರ್, ಯಂ. ಸಿ. ರಾಜ ಮೊದಲಾದ ಅಸ್ಪೃಶ್ಯರ ಮುಂದಾಳುಗಳೂ, ಸಪ್ರು, ಜಯಕರ್, ಪಂಡಿತ ಮಾಳವೀಯ, ರಾಜಗೋಪಾಲಾಚಾರಿ ಮೊದಲಾದ ಹಿಂದೂ ಮುಂದಾಳುಗಳೂ ಮಹಾತ್ಮರೊಂದಿಗೆ ಸಂಭಾಷಣೆ ನಡಿಸಿದರು. ಮಹಾತ್ಮರ ಮುಂದೆ ಡಾ. ಅಂಬೇಡ್ಕರವರು ಪ್ರತ್ಯೇಕ ಚುನಾವಣೆಯ ಹಕ್ಕುಗಳನ್ನು ಒಪ್ಪಿಕೊಂಡು, ಮಿಶ್ರ ಚುನಾವಣೆಯಲ್ಲಿ ಅಸ್ಪೃಶ್ಯರಿಗೆ ಮೆಂಬರುತನಗಳನ್ನು ಕಾದಿಡುವ ವಿಷಯವಿಲ್ಲದ್ದರಿಂದ ತನ್ನ ಪಂಗಡದವರ ಹಕ್ಕುಗಳನ್ನು ಕಾಯಲು ತಾನು ಪ್ರತ್ಯೇಕ ಚುನಾವಣೆಗೆ ಹೋರಾಡುತ್ತಿದ್ದದ್ದು ಎಂದು ಮುಂತಾಗಿ ಹೇಳಿದರು. ಮಹಾತ್ಮರು ಮಿಶ್ರ ಚುನಾವಣೆಯಲ್ಲಿ ಅಸ್ಪೃಶ್ಯರಿಗೆ ಮೆಂಬರುತನಗಳನ್ನು ಕಾಯ್ದಿಡಲು ತನ್ನ ಆಕ್ಷೇಪಣೆ ಇಲ್ಲವೆಂದರು. ಮಹಾತ್ಮರು ಈ ವಿಷಯವನ್ನು ಕುರಿತು ಮುಕ್ಕಾಲು ಗಂಟೆ ಮಾತಾಡಿದರು. ಅವರಿಗೆ ನಿಶ್ಯಕ್ತಿಯಾದುದರಿಂದ ಬಾಕಿ ಸಣ್ಣ ವಿಷಯಗಳನ್ನು ಪೂನಾದಲ್ಲಿರುವ ಮುಂದಾಳುಗಳ ತೀರ್ಮಾನಕ್ಕೆ ಬಿಟ್ಟರು. ಅವರು ಸೇರಿ ಈ ಕೆಳಗಿನ ತೀರ್ಮಾನವನ್ನು ಮಾಡಿದರು.

ಮುಂದಾಳುಗಳ ಒಪ್ಪಂದ.

ಪೂನಾದಲ್ಲಿ ಹಿಂದೂ ಮುಖಂಡರಿಗೂ ಅಸ್ಪೃಶ್ಯ ವರ್ಗದ ಮುಖಂಡರಿಗೂ ಆದ ತೀರ್ಮಾನದ ವಿವರ:—

(1) ಸಮುದಾಯದ ಚುನಾವಣೆಗೆ ಇಟ್ಟ ಸ್ಥಳಗಳಲ್ಲಿ ಅಸ್ಪೃಶ್ಯರಿಗೆ ಪ್ರಾಂತೀಯ ಕೌನ್ಸಿಲುಗಳಲ್ಲಿ ಈ ಕೆಳಗಿನ ಸ್ಥಳಗಳನ್ನು ಕಾದಿಡಬೇಕು. ಮದ್ರಾಸ್ 30, ಬೊಂಬಾಯಿ ಮತ್ತು ಸಿಂಧ್ 15, ಪಂಜಾಬ್ 8, ಬಿಹಾರ್ ಮತ್ತು ಒರಿಸ್ಸಾ 18, ಮಧ್ಯಪ್ರಾಂತ್ಯ 20, ಅಸ್ಸಾಮ್ 7, ಬಂಗಾಳ 30, ಸಂಯುಕ್ತ ಪ್ರಾಂತ್ಯ 20, ಒಟ್ಟು 148. ಮಂತ್ರಿಯವರು ಈ ತೀರ್ಮಾನದಲ್ಲಿ ಸೂಚಿಸಿರುವ ಪ್ರಾಂತೀಯ ಕೌನ್ಸಿಲುಗಳ ಸಂಖ್ಯೆಯನ್ನನುಸರಿಸಿ ಈ ಸಂಖ್ಯೆಗಳನ್ನು ಕೊಟ್ಟಿರುವುದಾಗಿದೆ.

(2) ಈ ಸ್ಥಳಗಳಿಗೆ ಸಂಯುಕ್ತ ಚುನಾವಣೆಯೇ ಆಗತಕ್ಕದ್ದು. ಆದರೆ ಈ ಕೆಳಗಿನ ಶರತ್ತಿಗೆ ಒಳಪಟ್ಟಿರತಕ್ಕದ್ದು. ಅಸ್ಪೃಶ್ಯರಿಗೆ ಇಟ್ಟ ಪ್ರತಿಯೊಂದು ಸ್ಥಳಕ್ಕೂ ಓಟರ ಪಟ್ಟಿಗೆ ಸೇರಿದ ಅಸ್ಪೃಶ್ಯ ವರ್ಗದವರೇ ನಾಲ್ಕು ಜನರನ್ನು ಮುಂದಾಗಿ ಚುನಾಯಿಸಬೇಕು. ಅಂಥಾ ನಾಲ್ಕು ಜನರು ಸಮುದಾಯದ ಚುನಾವಣೆಗೆ ನಿಲ್ಲತಕ್ಕದ್ದು.

(3) ಮಧ್ಯವರ್ತಿ ಕೌನ್ಸಿಲಿಗೂ ಸಹ ಇದೇ ರೀತಿ ಸಂಯುಕ್ತ ಚುನಾವಣೆಯಿಂದ ಅಸ್ಪೃಶ್ಯರು ಚುನಾಯಿತರಾಗಬೇಕು.

(4) ಮಧ್ಯವರ್ತಿ ಕೌನ್ಸಿಲಿಗೆ ಸಮುದಾಯದ ಚುನಾವಣೆಗೆ ಇಡುವ ಸ್ಥಳಗಳ ಪೈಕಿ ನೂರರಲ್ಲಿ 18ರಷ್ಟು ಅಸ್ಪೃಶ್ಯರಿಗೆ ಇರಬೇಕು.

(5) ಅಸ್ಪೃಶ್ಯ ಓಟರುಗಳೇ ಅವರ ಪ್ರತ್ಯೇಕ ಉಮೇದ್ವಾರರನ್ನು ಆರಿಸಿಕೊಳ್ಳುವ ಪದ್ಧತಿಯನ್ನು ಉಭಯತ್ರರ ಒಪ್ಪಂದದಿಂದ ಮುಂದಾಗಿಯೇ ತೆಗೆದು ಹಾಕದಿದ್ದರೆ 10 ವರ್ಷದ ನಂತರ ಜಾರಿಯಲ್ಲಿರಕೂಡದು.

(6) ಅಸ್ಪೃಶ್ಯರಿಗೆ ಸ್ಥಳಗಳನ್ನು ಕಾದಿಡುವ ಪದ್ಧತಿಯನ್ನು ಉಭಯತ್ರರ ಒಪ್ಪಂದದ ಮೇರೆ ರದ್ದಾಗುವ ವರೆಗೆ ಜಾರಿಯಲ್ಲಿಡತಕ್ಕದ್ದು.

(7) ಅಸ್ಪೃಶ್ಯರಿಗೆ ಚುನಾವಣೆಯ ಹಕ್ಕು ಲೋತಿಯನ್ ಕಮಿಟಿ ವರದಿಯಲ್ಲಿದ್ದಂತೆ ಮಾಡಿಕೊಡಬೇಕು.

(8) ಸ್ಥಳೀಯ ಸರಕಾರಿ ಸಂಸ್ಥೆಗಳಿಗಾಗಲೀ ಸರಕಾರಿ ಉದ್ಯೋಗಕ್ಕೆ ಆಗಲೀ ಸೇರಿಕೊಳ್ಳಲು ಅಸ್ಪೃಶ್ಯನೆಂಬ ಕಾರಣದಿಂದ ಅಡೆತಡೆ ಮಾಡಬಾರದು. ಸ್ಥಳೀಯ ಸ್ವರಾಜ್ಯ ಸಂಸ್ಥೆಗಳಲ್ಲಿಯೂ ಸರಕಾರಿ ಉದ್ಯೋಗಗಳಲ್ಲಿಯೂ ಅಸ್ಪೃಶ್ಯರು ತಕ್ಕಷ್ಟು ಜನರು ಇರುವಂತೆ ಸರ್ವ ಪ್ರಯತ್ನ ಮಾಡಬೇಕು. ಸರಕಾರಿ ಉದ್ಯೋಗಕ್ಕೆ ಸೇರಬೇಕಾದರೆ ನಿಯಮಿಸಲ್ಪಡುವಷ್ಟು ವಿದ್ಯೆ ಇರಬೇಕು.

(9) ಪ್ರಾಂತೀಯ ಸರಕಾರದ ಉತ್ಪತ್ತಿಯಿಂದ ತಕ್ಕಷ್ಟು ಹಣವನ್ನು ಅಸ್ಪೃಶ್ಯರ ವಿದ್ಯಾಭ್ಯಾಸಕ್ಕೋಸ್ಕರವೇ ಬೇರೆ ತೆಗೆದು ಇಡಬೇಕು.

ಒಪ್ಪಂದದ ನಂತರ ಮಹಾತ್ಮರ ಹೇಳಿಕೆ.

"ಮಂತ್ರಿಯವರು ರಾಜಿ ಶರತ್ತುಗಳನ್ನು ಪೂರ್ತಿಯಾಗಿ ಅಂಗೀಕರಿಸಿಕೊಂಡರೆ ನಾನು ಉಪವಾಸ ಬಿಡಬೇಕಾಗುತ್ತದೆ. ರಾಜಕೀಯ ದೃಷ್ಟಿಯಿಂದ ನೋಡಿದರೆ ಹಿಂದೂ ಸಮಾಜದಲ್ಲಿ ಆಗಬೇಕಾಗಿರುವ ಸುಧಾರಣೆಗೆ ಅಡ್ಡಿಯಾಗಿದ್ದ ಮಂತ್ರಿ ಮಂಡಲಿಯ ತೀರ್ಮಾನವು ತೆಗೆದು ಹಾಕಲ್ಪಟ್ಟಂತಾಯಿತು. ಆದರೆ ನನ್ನ ನಿಜವಾದ ಹೋರಾಟವು ಮತ್ತೆ ಪ್ರಾರಂಭವಾಗುತ್ತದೆ. ಮಂತ್ರಿ ಮಂಡಲಿಯು ನನ್ನ ಕಾಗದಗಳನ್ನು ಮುಂದಾಗಿಯೇ ಪ್ರಕಟಿಸಿದ್ದರೆ ಜಾತಿ ಹಿಂದೂಗಳೆನಿಸಿಕೊಂಡವರು ಮಾಡಬೇಕಾದ ಕರ್ತವ್ಯವನ್ನು ಮಾಡಿಯೇ ತೀರಬೇಕೆಂಬ ಹಟ ಹಿಡಿಯುತ್ತಿದ್ದೆ. ಜಾತಿ ಹಿಂದುಗಳು ತಮ್ಮ ಕರ್ತವ್ಯವನ್ನು ಮಾಡಲೇ ಬೇಕೆಂಬ ಹಟ ಹಿಡಿಯದಿದ್ದರೆ ನಾನು ವಿಶ್ವಾಸ ಘಾತಕ ಮಾಡಿದಂತಾಗುತ್ತದೆ. ಆದರೆ ನಾನು ಉಪವಾಸ ಮಾಡುತ್ತೇನೆಂಬುದು ಜಾತಿ ಹಿಂದುಗಳಿಗೆ ಮೊದಲಾಗಿ ತಿಳಿದಿರಲಿಲ್ಲವಾದ್ದರಿಂದ ಥಕ್ಕನೆ ಹಿಂದೂ ಮನೋಭಾವವು ಬದಲಾದೀತೆಂತ ನಾನು ಊಹಿಸಲು ಸಾಧ್ಯವಿಲ್ಲ. ಅವರು ಈ ಬಗ್ಗೆ ಕೆಲಸ ಮಾಡಲು ಅವರಿಗೆ ಸಮಯ ಕೊಡಬೇಕು. ಆದ್ದರಿಂದ ಮಂತ್ರಿ ಮಂಡಲಿಯು ರಾಜಿಯನ್ನು ಒಪ್ಪಿಕೊಂಡರೆ ನನ್ನ ಉಪವಾಸ ವ್ರತವನ್ನು ತತ್ಕಾಲಕ್ಕೆ ಬಾಕಿ ಮಾಡುತ್ತೇನೆಂತ ಮಾತ್ರ ನನ್ನ ಜೊತೆ ಕೆಲಸಗಾರರಿಗೆ ತಿಳಿಸಿರುತ್ತೇನೆ. ಇನ್ನು ಮುಂದೆ ಬರುವ ತಿಂಗಳುಗಳಲ್ಲಿ ಜಾತಿ ಹಿಂದುಗಳು ತಮ್ಮ ಕರ್ತವ್ಯವನ್ನು ಸರಿಯಾಗಿ ಮಾಡದಿದ್ದರೆ ಉಪವಾಸವನ್ನು ಪುನಃ ಕೈಕೊಳ್ಳುತ್ತೇನೆಂಬುದು. ಮುಂಡಿತ. ಈಗ ಐದು ದಿನಗಳಲ್ಲಿ ದೇಶದಲ್ಲಿ ಉಂಟಾದ ಜಾಗೃತಿಯಿಂದ ನನಗೆ ತುಂಬಾ ಸಂತೋಷವಾಗಿದೆ. ಹಿಂದೂ ಧರ್ಮದ ಜೀವವನ್ನೇ ನಾಶ ಮಾಡುವ ಈ ಅಸ್ಪೃಶ್ಯತೆಯೆಂಬ ರೋಗವನ್ನು ನಿವಾರಿಸಿಕೊಳ್ಳಬೇಕು."

ಸಂತಸ.

ಮಹಾತ್ಮರ ಒಪ್ಪಿಗೆಯನ್ನು ಪಡೆದ ಮೇಲಿನ ತೀರ್ಮಾನಕ್ಕೆ ಹಿಂದೂಗಳ ಪರವಾಗಿ ಪಂಡಿತ ಮಾಳವೀಯ, ಸಪ್ರು, ಜಯಕರ್, ಸಿ. ರಾಜಗೋಪಾಲಾಚಾರ್ಯ ಮೊದಲಾದವರೂ, ಅಸ್ಪೃಶ್ಯರ ಪರವಾಗಿ ಡಾ. ಅಂಬೇಡ್ಕರ್, ಯಂ. ಸಿ. ರಾಜ, ಶ್ರೀನಿವಾಸನ್ ಮುಂತಾದವರೂ ಪೂನಾದಲ್ಲಿ ಈ ತಾ. 24ರಲ್ಲಿ ಅಪರಾಹ್ನ 3 ಗಂಟೆಗೆ ಸಹಿ ಹಾಕಿದರು. 4 ಗಂಟೆಗೆ ಸಪ್ರುರವರು ಈ ತೀರ್ಮಾನವನ್ನು ಸರಕಾರಕ್ಕೆ ಕಳುಹಿಸಲು ಟೆಲಿಗ್ರಾಫ್ ಮಾಡಿಸಿದರು. ಇದನ್ನು ಕೂಡಲೆ ಇಂಡಿಯಾ ಸರ್ಕಾರಕ್ಕೂ, ಬ್ರಿಟಿಷ್ ಸರ್ಕಾರಕ್ಕೂ ತಂತೀಮೂಲಕ ರವಾನಿಸಲಾಯಿತು. ಇದಕ್ಕೆ ರೂ. 475 ಖರ್ಚು ಹಿಡಿಯಿತು. ಇದರ ನಕಲೊಂದನ್ನು ಸಪ್ರು, ಜುನಿಲಾಲ್ ಮೆಹತಾ ಮತ್ತು ಅಂಬೇಡ್ಕರವರು ಬೊಂಬಾಯಿ ಗವರ್ನರವರಿಗೆ ಖುದ್ದಾಗಿ ಕೊಟ್ಟರು. ತಂತೀ ಇಲಾಖೆಯವರು ಕೆಲವು ಗಂಟೆಯಲ್ಲಿ ಬೇರೆ ಎಲ್ಲಾ ವಾರ್ತೆಗಳನ್ನು ನಿಲ್ಲಿಸಿ ಕೂಡಲೆ ಲಂಡನಿಗೂ, ಸಿಮ್ಲಾಕ್ಕೂ ಈ ತೀರ್ಮಾನದ ವಾರ್ತೆಯನ್ನು ರವಾನಿಸಿದರು.

ಮಂತ್ರಿಯವರ ಸಮ್ಮತಿ.

ಲಂಡನಿಗೆ ತೀರ್ಮಾನದ ವಾರ್ತೆ ತಲಪಿದೊಡನೆ ಪ್ರಧಾನ ಮಂತ್ರಿಯವರು ಇಂಡಿಯಾ ಸೆಕ್ರೆಟರಿಯವರೊಂದಿಗೆ ಟೆಲಿಫೋನ್ ಮೂಲಕ ಸಂಭಾಷಿಸತೊಡಗಿದರು. ಈ ವಿಷಯವನ್ನು ಆಲೋಚಿಸಲು ಮಂತ್ರಿಮಂಡಳಿಯ ಮೀಟಿಂಗು ಈ ತಾ. 28ರಲ್ಲಿ ನಡಿಸಲಾಗುವದೆಂದೂ, ಈ ಮಧ್ಯೆ ಇಂಡಿಯಾದ ಪ್ರಾಂತೀಯ ಸರ್ಕಾರಗಳು ಅಲ್ಲಲ್ಲಿಯ ಮುಖಂಡರ ಮತ್ತು ಪ್ರತಿನಿಧಿಗಳ ಅಭಿಪ್ರಾಯ ತೆಗೆಯಬೇಕಾಗುವದೆಂದೂ, ಮಂತ್ರಿಗಳ ಜವಾಬು ಬರಲು 4 ದಿವಸಗಳ ಸಮಯ ಬೇಕಾಗುವದೆಂದೂ ಸಿಮ್ಲಾದಿಂದ ವರ್ತಮಾನ ಹುಟ್ಟಿತು.

ಹೀಗೆ ತಡವಾದರೆ ಮಹಾತ್ಮರ ಜೀವಕ್ಕೆ ಅಪಾಯ ಉಂಟಾಗುವದೆಂದೂ, ಮಹಾತ್ಮರ ಉಪವಾಸವನ್ನು ನಿಲ್ಲಿಸಿ, ಅವರ ಪ್ರಾಣವನ್ನು ಉಳಿಸಲಿಕ್ಕಾಗಿ ಪ್ರಧಾನ ಮಂತ್ರಿಯವರು ವಾಡಿಕೆಯ ಕ್ರಮಗಳನ್ನು ಈ ವಿಶೇಷ ಸಂದರ್ಭದಲ್ಲಿ ಬಿಟ್ಟು ಪಡನೆ ಮುಂದಾಳುಗಳ ಒಪ್ಪಂದವನ್ನು ಅಂಗೀಕರಿಸಬೇಕೆಂದೂ ಮಾಳವೀಯ, ಸಪ್ರು, ಜಯಕರ್, ಶಾಸ್ತ್ರಿಗಳೇ ಮೊದಲಾದ ಹಲವು ಮುಖಂಡರು ಮಿ. ಮೆಕ್ಡೊನಾಲ್ಡರವರಿಗೆ ತಂತೀ ವಾರ್ತೆ ಕಳುಹಿಸಿದರು. ಇಂಗ್ಲಂಡಿನಲ್ಲಿ ಮಿ. ಆಂಡ್ರೂಸ್‌ರವರು, ಮಿ. ಪೋಲಕ್‌ರವರೇ ಮೊದಲಾದವರೂ ತ್ವರಿತದಲ್ಲಿ ಅಂಗೀಕರಿಸಬೇಕಾದ ಅವಶ್ಯಕತೆಯನ್ನು ಮಂತ್ರಿಯವರಿಗೆ ತಿಳಿಸಿದರು. ತಾ. 26ರಲ್ಲಿ ಬ್ರಿಟಿಷ್ ಸರ್ಕಾರದವರು ಕೋಮುವಾರು ತೀರ್ಮಾನಕ್ಕೆ ಸಂಬಂಧಿಸುವಷ್ಟರ ಮಟ್ಟಿಗೆ ಪೂನಾದ ಒಪ್ಪಂದವನ್ನು ಅಂಗೀಕರಿಸುತ್ತಾರೆಂದು ಎಸೆಂಬ್ಲಿಯಲ್ಲಿಯೂ, ಕೌನ್ಸಿಲ್ ಆಫ್ ಸ್ಟೇಟಿನಲ್ಲಿಯೂ ಸರಕಾರಿ ಮೆಂಬರುಗಳು ತಿಳಿಸಿದರು.

ಉಪವಾಸದ ಅಂತ್ಯ.

ತಾ. 26ರಲ್ಲಿ ಸಾಯಂಕಾಲ 4½ ಗಂಟೆಗೆ ಪ್ರಧಾನಿಯವರ ಜವಾಬಿನ ನಕಲೊಂದು ಗಾಂಧೀಜೀಯವರಿಗೆ ಕೊಡಲಾಯಿತು. ಅವರು ಅದನ್ನು ಮೆಲ್ಲಗೆ ಓದಿದರು. ಪಾಠವನ್ನು ಅಲ್ಲಿದ್ದ ಅವರ ಸ್ನೇಹಿತರಿಗೆ ಕೊಟ್ಟು, ಅದರ ಅರ್ಥವನ್ನು ಹೇಳಬೇಕೆಂದು ಕೇಳಿದರು. ಅವರೆಲ್ಲರೂ ಸೇರಿ ಚರ್ಚಿಸಿ ಅದು ತೃಪ್ತಿಕರವಾಗಿದೆಯೆಂದು ಹೇಳಿದರು. ಅದರಲ್ಲಿ ಹಲವು ಶರತ್ತುಗಳಿವೆಯೆಂದೂ, ಅದನ್ನು ಡಾ. ಅಂಬೇಡ್ಕರ್ ಮತ್ತು ಯಂ. ಸಿ. ರಾಜರವರಿಗೆ ತೋರಿಸುವುದು ಉತ್ತಮವೆಂದೂ ಮಹಾತ್ಮರು ಹೇಳಿದರಂತೆ. ಈ ತೀರ್ಮಾನದಲ್ಲಿ ಅಸ್ಪೃಶ್ಯರಿಗೆ ಸಂಬಂಧಿಸುವ ಬಹು ಮುಖ್ಯ ವಿಷಯ ಇನ್ನೂ ಉಳಿದಿವೆಯಾದ ಕಾರಣ ಇದರಲ್ಲಿ ಹಿತವಿರುವ ಹೊರಗಿನ ಸ್ನೇಹಿತರನ್ನು ಕಾಣುತ್ತಿರುವ ಅವಶ್ಯ ಬೀಳಬಹುದೆಂದು ಮಹಾತ್ಮರು ಜೈಲು ಅಧಿಕಾರಿಯೊಂದಿಗೆ ಹೇಳಿದರೆಂದೂ ಈ ವಿಷಯವನ್ನು ಸರ್ಕಾರಕ್ಕೆ ತಿಳಿಸುತ್ತೇನೆಂದು ಸದರಿ ಅಧಿಕಾರಿಯವರು ಉತ್ತರವಿತ್ತರೆಂದೂ ವರ್ತಮಾನವಿದೆ.

ಮಹಾತ್ಮರು ತಾ. 20ರಲ್ಲಿ ಉಪವಾಸವನ್ನು ಪ್ರಾರಂಭಿಸಿದಾಗ ಒಬ್ಬೇ ಇಬ್ಬರು ಸಂಗಾತಿಗಳು ಮಾತ್ರ ಇದ್ದರು. ಆದರೆ ತಾ. 26ರಲ್ಲಿ ಸಾಯಂಕಾಲ 5 ಗಂಟೆಗೆ ಉಪವಾಸವನ್ನು ನಿಲ್ಲಿಸಿದಾಗ ಸುಮಾರು 100 ಜನರು ಆಪ್ತರೂ, ಸ್ನೇಹಿತರೂ ಹಾಜರಿದ್ದರು. ಅಂಗಳದಲ್ಲಿ ಚಪ್ಪಾಳೆ ಹಾಕಿ ಎಲ್ಲರೂ ಕುಳಿತ್ತಿದ್ದರು. ಮೊದಲು ವಂದನಾ ಪದ್ಯಗಳೂ ಹಾಡಿದ್ದರು. ರವೀಂದ್ರನಾಥ ಟಾಗೂರರವರ 'ಗೀತಾಂಜಲಿ' ಯಿಂದ ಒಂದು ಪದ್ಯವನ್ನು ಹಾಡಿದರು. ಮಹಾತ್ಮರಿಗೆ ಬಹು ಪ್ರಿಯವಾದ 'ವೈಷ್ಣವ' ನನ್ನು ವಿವರಿಸುವ ಪದವನ್ನು ನೆರೆದಿದ್ದವರೆಲ್ಲರೂ ಹಾಡಿದರು. ಮಕ್ಕಳಿಗೆ ಹಣ್ಣುಗಳು ಹಂಚಲ್ಪಟ್ಟವು. ಮಿಸೆಸ್ ಕಮಲ ನೆಹರುರವರು 2 ಸೀ ನಿಂಬೆ ಹಣ್ಣುಗಳನ್ನು ಹಿಂಡಿ ರಸ ತೆಗೆದರು. ಮಹಾತ್ಮರ ಪತ್ನಿಯವರು ಅದನ್ನು ಸ್ವಲ್ಪ ನಡುಗುವ ಕೈಯಿಂದ ಗಾಂಧಿಜಿಯವರಿಗೆ ಕೊಟ್ಟರು. ಮಹಾತ್ಮರು ಅದನ್ನು ನಿಧಾನವಾಗಿ ಕುಡಿದರು. ಆಗ್ಯೆ ಅವರು ಮಂಚದ ಮೇಲೆ ಕುಳಿತುಕೊಂಡು, ಪಟೇಲರು ಮತ್ತು ದೇಸಾಯಿಯವರ ಮೇಲೆ ವರಗಿಕೊಂಡಿದ್ದರು. ಈ ರೀತಿಯಲ್ಲಿ ಮಹಾತ್ಮರ ಲೋಕಪ್ರಸಿದ್ಧವಾದ ಉಪವಾಸವು ಸಫಲವಾಗಿ ಅಂತ್ಯವಾಯಿತು!

Reg. No. M. 1550
If not delivered please return to "KODAGU" OFFICE MERCARA.

ಕೊಡಗು.

ಸತ್ಯೇನ ಧೂತಹೃದಯಾಯ ವಿದ್ಯಾ ಶೀಲ ಪ್ರಯತ್ನಶಾ / ಶಾಶ್ವತುಶ್ಚೇಶ ದೇಶಾನಾಂ ಶುಶ್ರೂಷಾ ರಾಜ್ಯ ಸಂಪದಾ

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೨ | ಮಡಿಕೇರಿ, ಸನ್ ೧೯೩೨ನೇ ಇಸವಿ ಸೆಪ್ಟಂಬರ್ ತಾರೀಕು ೩೦ ನೇ ಶುಕ್ರವಾರ. | ಸಂಚಿಕೆ ೧೮

SARI-PIN.

BRACELETS.

NECKCHAINS.

EAR-RINGS.
(Thodus)

Cut-rubys Rs. 25 to 50
With diamond in centre Rs. 80 to 120

Gold Rs. 10
Set rubys forming any letter Rs. 12

NOSE-RINGS.
Diamond in small size of best quality Rs. 35 & upwards according to size.

MARRIAGE PRESENTATIONS.

Attractive and inexpensive articles ready in stock. Prompt execution. Details on enquiry free with catalogue. Numerous customers in Coorg thoroughly satisfied with reliable service. Testimonials pouring in.
Silver Oulndys, Photo lockets, Dimond nose-screws, cut-ruby ear-rings, etc., etc., etc., in all prices. Very attractive Prices most moderate.

Estimates free on enquiry.

Designs free on enquiry.

Telegrams: 'PRECIOUS.'

Telephone: 3145.

V. Subramaniaier Jeweller,

CATALOGUE ON ENQUIRY.

52—45

Post Box 423, Triplicane, P. O., MADRAS.



26—14

ಜನರಲ್ ಅಷ್ಯೂರೆನ್ಸ್ ಸೊಸೈಟಿ.

ಅಜಮೀರ್.

ನಮ್ಮ ಆಯವ್ಯಯದ ಪಟ್ಟಿಯೇ ನಮ್ಮ ಅಭಿವೃದ್ಧಿಯನ್ನು ವ್ಯಕ್ತಗೊಳಿಸುತ್ತದೆ.

ವರ್ಷ	ಮೇಲ್ಪಟ್ಟ ವಸೂಲಾದಾಯ	ಮೇಲ್ಪಟ್ಟ ಮೂಲಧನ	ಖರ್ಚು ಸಂಪಾದನದ ಶೇಕಡ
1911	46,248	49,442	82.9
1921	2,93,627	6,53,350	43.2
1931	12,30,000	40,00,000	28.2

ಬೋನಸ್ಸು.

ಟರ್ಮ್ ನಫೆ ದೊರಕುವ ಜೀವಾವಧಿ ಪಾಲಿಸಿಗಳ ಮೇಲೆ ವರ್ಷ ಒಂದಕ್ಕೆ ಶೇಕಡ 22½

ಚೆನ್ನಾಗಿ ಕೆಲಸಮಾಡಿ ಅಭಿವೃದ್ಧಿ ಸ್ಥಿತಿಯಲ್ಲಿರುವ ಈ ಸೊಸೈಟಿಯಲ್ಲಿ ವಿಮೆ ಮಾಡಿ ಕಡಿಮೆ ಪ್ರೀಮಿಯಂ ಪಾವತಿ ಮಾಡುವ ಸೌಲಭ್ಯ ಹೊಂದಿ ಅಥವಾ ಈ ಕಂಪೆನಿಯ ಪರವಾಗಿ ಕೆಲಸಮಾಡಿ ಉತ್ತಮ ಕಮಿಶನ್ ದರದ ಪ್ರಯೋಜನ ಹೊಂದಿ.

ಹೆಚ್ಚು ವಿಚಾರಗಳಿಗೆ ಈ ವಿಳಾಸಕ್ಕೆ ಬರೆಯಿರಿ:—

ಎ. ರಾಮಚಂದ್ರರಾವ್,
ಸುಪರಿಂಟೆಂಡೆಂಟ್.

52—23

ಎಂಪೈರ್ ಆಫ್ ಇಂಡಿಯಾ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

(ಸ್ಥಾಪನೆಯಾದದ್ದು 1897.)

ಒಂದೂಸ್ಥಾನದಲ್ಲಿ ಪ್ರಾಮುಖ್ಯವೂ, ಜನಪ್ರಿಯವೂ ಆಗಿರುವ ಈ ಕಂಪೆನಿಯಲ್ಲಿ ನೀವು ಜೀವ ವಿಮೆ ಮಾಡುವುದಕ್ಕೆ ಇದೇ ತಕ್ಕ ಸಮಯ.

ಬೋನಸ್ ವರ್ಷ! ಬೋನಸ್ ವರ್ಷ!!

ಸಾಹಸವಂತರಾದ ಏಜೆಂಟರು ಬೇಕಾಗಿದೆ.

ಹೆಡ್ ಆಫೀಸು:—
ಎಂಪೈರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್,
ಬೊಂಬಾಯಿ.

ಬ್ರಾಂಚ್ ಆಫೀಸು:—
152—3 ಕಮರ್ಷಿಯಲ್ ಸ್ಟ್ರೀಟ್,
ಬೆಂಗಳೂರು.

—52

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರ ಬ್ಯಾಂಕ್,
ಲಿಮಿಟೆಡ್ ಇವರ ಅಕ್ಟೋಬರ್ ಸರ್ಟಿಫಿಕೇಟ್
ಆಫ್ ಪ್ರಕಾರ ಲಿಖಿತಿಯಾಗಿದೆ.
(ಸ್ಥಾಪಿತವಾದದ್ದು 1922ರಲ್ಲು)

		ರೂ.
ಶೇರ್ ಬಂಡವಾಳ	—	27,330—0—0
ವಸೂಲಾದ ಶೇರ್ ಮೊಬಲಗು	—	27,350—0—0
ಜನರಿಂದ ಠೇವಣಾತಿ	—	22,5380—10—7
ವಸೂಲಾದ ಕ್ಷೇಮನಿಧಿ	—	37,914—12—0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ವಾರ್ಷಿಯಾನ ರೂ. 5—0—0 ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ವಾರ್ಷಿಯಾನ 4ರ ಬಡ್ಡಿ ದೊರೆಯುತ್ತೆ.

ಗವರ್ನಮೆಂಟಿನವರ ಕೋಅಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಪರಿಶೋಧಿಸಿ ಸಂತೃಪ್ತರಾಗಿದ್ದಾರೆ.

ಪ್ರೆಸಿಡೆಂಟರು,	ಟ್ರೆಜರರ್
ಪಟ್ಟುವಾಡ ದೇವಯ್ಯನವರು, ರಾವ್ ಬಹದ್ದೂರ್.	ಮನೆಯಪ್ಪಂಡ ಬೆಳ್ಯಪ್ಪನವರು.

ಸೆಕ್ರೆಟರಿ

ಸಿ. ಯಸ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.
ತಾರೀಖು 1—7—1932.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜೆಂಟರುಗಳು.

ಕೊಡಗಿನ ಎಲ್ಲಾ ಭಾಗಗಳಿಗೆ—ಮೆ. ಮುಂಡಂಡ ಯಂ. ಬಿದ್ದಪ್ಪನವರು.

ಉತ್ತರ ಕೊಡಗಿಗೆ ಮೆ. ಬೋರಿರ ಪೂಣ್ಣಯ್ಯನವರು,

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು, (ಖಾದಿಭಂಡಾರ.)
ಸಾಮಪೇಟೆ—ಎಸ್. ಆರ್. ವೆಂಕಪ್ಪಯ್ಯನವರು.
ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುತ್ತಪ್ಪಯ್ಯನವರು,
ಮತ್ತು ಅಡಮಣಮಾಡ ಪಿ ಕಾರ್ಯಪ್ಪನವರು,
ಹುದಿಕೇರಿ ಮತ್ತು ತಿತಿಮತ್ತಿ—ಮೆ. ಜಿ. ಮಾದಪ್ಪಯ್ಯನವರು,
ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಪೂಣ್ಣಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಸಲು ಅತ್ಯವಶ್ಯವಾಗಿರುವ, ಮಾಲ್ಡಿಗನು ಸಾರಿಯಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಖಿರಾರು ಫಾರಮುಗಳೂ, ಬಜೆಟ್ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಕರಾರು ಫಾರಮುಗಳೂ, ಸ್ಟೋರ್ ಕೀಪರ್ ಕರಾರು ಫಾರಮುಗಳೂ, ಓವರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮಾ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಮುದ್ದು ಬೆಲೆಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.
ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.
ಫಂಡವಾಳವು ಹೆಚ್ಚಾಗಿದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,78,322 ಜನರಿಗೆ 38ಕೋಟಿ ರೂ.
ವೆಚ್ಚಗಳ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ರಷ್ಟರೊಳಗೆ ವಿಸ್ತರದ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದಾಗಿದೆ.
ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡೆಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚಿನ ಪ್ರೋತ್ಸಾಹವನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬುದು ಅದರ ಹಿಂದಿನ ವಾರ್ಷಿಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.
ಹೆಚ್ಚಿನ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು ಅಥವಾ ಇನ್ಸ್‌ಪೆಕ್ಟರೇಟ್ ಆಫೀಸು, ಮಡಿಕೇರಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೊಲಾಲಂಪೂರು	ಮೊಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೋ	ಪಾಟ್ನಾ	ಸುಕ್ಕೂರು
ಅಲಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಡೌಲಗಾಂವ್	ಮಂಡಲೆ	ರಾಯಪುರ	ತಿರುವೇಂದ್ರಮ್
ಭೋಪಾಲ್	ಕರಾಚಿ	ಮಡಿಕೇರಿ	ರಾಂಚಿ	ವಿಜಾಗಪಟ್ಟ [52—30

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ. ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
52—37 ಗಿರಿಗಾಂವ, ಮುಂಬಯಿ.

ಕಾರ್ಡು ಬರೆದರೆ ಜಾಬಿನ
ಕ್ಯಾಟಲಾಗು ಮಾಫಿಯಾಗಿ
ಕಳುಹಿಸಲ್ಪಡುವದು.



ಕೋವಿಗಳು, ಕತ್ತಿಗಳು, ಬಟೆಗಳು, ತೋಟೆಗಳು, ಚಾಕುಗಳು, ಮುಂತಾದ ಬೇಟೆಯ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS LTD.,
Larges Importers of Firearms and Ammunition
Cheapest priced firm in India,
26-3 210 Abdul Rehiman Street, BOMBAY.

Printed & published by P. I. Belliappa "Kodagu" Press Mercara for "Kodagu" Ltd

ಕಿಸಲ್ಲಿರುವುದಕ್ಕಿಂತಲೂ ಭದ್ರವಾಗಿದೆ ಎಂಬುವುದರಲ್ಲಿ ಸಂದೇಹವಿಲ್ಲ.

ಇದರ ಭದ್ರತೆಗೆ ಅವಕಾಶ ಕೊಡದಂತೆ ಏರ್ಪಾಡುಗಳು ನೋಡಿಕೊಳ್ಳುವುದಕ್ಕೆ 'ಮನಸೊಂದವ'ರ ಸಹಾಯವು ತುಂಬಾ ಅವಶ್ಯವಾಗಿದೆ. ಅಲ್ಲದೆ ಮನ ನೋಯದವರು ಮೋಸ ಜಾಲಗೆ ಅವಶ್ಯ ಕಂಡಂತೆ ಸೇರಬಹುದು.

ಸರ್ಕಾರದವರು ವಿಶೇಷ ಸಾಮಾನುಗಳ ವಿಕ್ರಯ ಮೊದಲಂತೆಯೂ, ಏಜೆಂಟರುಗಳ ಮೇಲೆ ನ್ಯಾಯವಾದ ಭದ್ರತೆಯು ತೆಗೆದುಕೊಳ್ಳಬೇಕೆಂದೂ ಬರೆದದ್ದು ಸರಿಯಷ್ಟೆ. ಈ 'ಮನಸೊಂದವ'ರ ಅಭಿಪ್ರಾಯವು ನೋಡಿದರೆ ಸರ್ಕಾರದವರು ಇಂಥಾ ಕೆಲಸಕ್ಕೆ ಆಸ್ಪದ ಕೊಡುವವರಿಗೆ ಖಂಡಿತವಾಗಿಯೂ ಶಿಕ್ಷೆ ವಿಧಿಸಲೇ ಬೇಕಾಗಿದೆ. ಗ್ರಾಮಫೋನು ಏಜೆಂಟರ ಭದ್ರತೆ ಏರಡನೇದು ಆಗಿದೆ. ಅದು ಅಂತೆ ಇರಲಿ.

....

....

ಸ್ವದೇಶಿಗೆ ಸಂಬಂಧಪಟ್ಟ 'ಮನಸೊಂದವ'ರು ನಿಜ ಸಂಗತಿಯನ್ನು ತಿಳಿದು ಸಹ ಕೆಟ್ಟ ಅಭಿಪ್ರಾಯ ಪಡುತ್ತಿರುವವರು. ನಮ್ಮ ದೇಶದ ಜನರು ಬಹಳ ಹಿಂದೆ ಇರುವುದು ನೋಡುವಾಗ್ಯೆ ಸ್ವರಾಜ್ಯಕ್ಕೆ ಬಹಳ ಹಿಂದೆ ನಿದ್ದಿರುತ್ತಾರೆ. ಅಲ್ಲದೆ ಗೋಣಿಕೊಪ್ಪಲಿನ ಟೌನಿನಲ್ಲಿ ವಾಸ ಇರುವ ನಿವಾಸಿಗಳು 'ಮನಸೊಂದವ'ರು ಯಾರು ಎಂಬುವುದು ತಿಳಿಯಲು ಬಹಳ ಕುತೂಹಲವುಳ್ಳವರಾಗಿರುತ್ತಾರೆ. ದಯವಿಟ್ಟು ಹೆಸರು ಪ್ರಕಟಣೆ ಮಾಡಬೇಕಾಗಿ ಕೇಳಿಕೊಳ್ಳುತೇನೆ.

ಗ್ರಾಮಫೋನು ಚೀಟಿ ತೆಗೆಯುವ ಏಜೆಂಟರ ಪೈಕಿ ಒಬ್ಬನು ಗೋಣಿಕೊಪ್ಪಲಿನಲ್ಲಿ ಆಸ್ತಿವಂತನಾಗಿರುತ್ತಾನೆ ಈತನು 10 ವರ್ಷದಿಂದ ಹಲವು ನಮೂನೆಯ ಚೀಟಿಗಳನ್ನು ತೆಗೆದು ಇರುತ್ತಾನೆ. ಮೋಸ ಮಾಡಿದವನಲ್ಲ. ಇಂಥದ್ದಕ್ಕೆ ಜನರು ನಿಗ ಇಡುವುದರಿಂದ ಪ್ರಯೋಜನವು ಇಲ್ಲ. ಕೆಲವರು ಈ ದೇಶದಲ್ಲಿ ಜನರನ್ನು ಮೋಸಗೊಳಿಸಿ, ದೇಶವನ್ನು ಬಿಟ್ಟು, ಹಿಂತಿರುಗಿ ಬಂದು, ಪುನಹ ವ್ಯಾಪಾರಸ್ಥರಾಗಿ ಇರುತ್ತಾರೆಂಬುವುದು ಜನರಿಗೆ ಗೊತ್ತಿದೆ. ಅಂಥಾವರನ್ನೆಲ್ಲಾ ನಮ್ಮ ದೇಶದವರು ನಂಬುವುದಿಲ್ಲವೇ ? ಅದರಂತೆ ಆಗಲಿಕ್ಕಿಲ್ಲವೆಂಬುವುದರಲ್ಲಿ ಸಂದೇಹವೇನೂ ಕಂಡು ಬರುವುದಿಲ್ಲ.

ಕೆ. ಕೆ. ಮುತ್ತಣ್ಣ.

[ಈ ಮೇಲಿನ ವಾಕ್ಯಯಲ್ಲಿ ಅರ್ಥವಾಗುವಂತೆ ಕೆಲವು ಶಬ್ದಗಳನ್ನು ಸರಿ ಮಾಡಿರುವುದಲ್ಲದೆ ಇವಾಗಿಗೆ ಸಂಬಂಧಪಡದ ಒಂದು ವಾಕ್ಯವನ್ನು ಬಿಡಲಾಗಿದೆ. ಕೊ. ಸಂ.]

೫೦ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕಿಕಂಪನಿಯವರ

ಜ್ವರದ ಗುಳಿಗೆಗಳು.

ಚಳಿಜ್ವರ, ಚಾತುರ್ಥ ಜ್ವರ, ದಿನಬಿಟ್ಟು ಬರು ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮ ಬಾಣದಂತೆ ಇವೆ. ಬಾಟ್ಲಿಗೆ ರೂ. ೧. ಟಿ. ಪಿ. ೭ ಆ. ಜರೂರು ತರಿಸಿಕೊಳ್ಳಿ.

ಗಿರಗಾಂವ, ಮುಂಬಯಿ,
ಮೆಸರ್ಸ್ ಕರ್ಕಿ ಕಂಪನಿ,
ಗಣೇಶ ರಾಮಚಂದ್ರ ಕರ್ಕಿ,

(52–7)

3 ರೂಪಾಯಿಗೆ 9೦ ಇನಾಮುಗಳುಡನೆ
4 ವಾಚುಗಳು.



"ಅಟೊರೋಸ್" ಎಂಬುದು ಸುಗಂಧಗಳಲ್ಲೆಲ್ಲಾ ಪ್ರಖ್ಯಾತಹೊಂದಿದ್ದು, ಹೂಗಳಿಂದ ತಯಾರಿಸಲ್ಪಟ್ಟು, ಬಹಳ ದಿನಗಳವರೆಗೂ ಪರಿಮಳವನ್ನು ಬೀರುವುದು. ಒಂದು ಸಲ 6 ಬಾಟ್ಲಿ ...ಸಿದವರಿಗೆ ರೂ. 3 ಮಾತ್ರ, ಮತ್ತು ... ರಿಸ್ಟ್ ವಾಚ್, 1 ... ವಾಚ್, 1 ಪಾಕೆಟ್ ..., 1 'B' ಟೈಂಪೀಸ್. ... ವರ್ಷದ ಖಾತರಿ. ಮತ್ತು ... ಟ್ ಭಂಗಾರದ ನಿಬ್ಬಿನ ...ಂಟನ್ ಪೆನ್ ಮತ್ತು 90 ... ಇನಾಮುಗಳು ಮಾಫ಼ಿ ...ಗಿ ಕೊಡಲ್ಪಡುವವು. ... ವೆಚ್ಚ 10 ಆಣೆ.

NATIONAL W... STORE,
1· A· Raja Narain ... ...an Lane.
P. O. Bagh B... Calcutta.

(4–1)

ಇಂಡಿಯಾ ಎಕ್ವಿಟೇಬಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

(ಸ್ಥಾಪಿಸಲ್ಪಟ್ಟದ್ದು 1908.)

ಪೋಲಿಸಿಗಳು ಕಳಕೊಳ್ಳುವಂಥವುಗಳಲ್ಲ.

ಯಾವ ತಡೆಯೂ ಇಲ್ಲದೆ ಪ್ರತಿ ವರ್ಷವೂ ಬೋನಸ್ಸು.

ಹಕ್ಕು ಬಾಧ್ಯಸ್ಥರಿಗೆ ಸರಿಯಾಗಿ ಹಣ ಕೊಡಲ್ಪಡುವದು, ಇಲ್ಲದಿದ್ದರೆ ಬಡ್ಡಿಯು ದೊರಕುವುದು.

ಹೆಡ್ಡ್ ಆಫೀಸು:—

102· ಕ್ಲೈವ್ ಸ್ಟ್ರೀಟ್, ಕಲ್ಕತ್ತಾ.

I. E. . P. S.

12–3

GOVERNMENT SOAP FACTORY,
Bangalore.

ವಿಶ್ವಾಸಾರ್ಹತೆ.

ಅತ್ಯುತ್ತಮವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ ಯಾವ ಗುಣಗಳು ಅವಶ್ಯಕವೆಂದು ನೀವು ತಿಳಿದಿರುತ್ತೀರೋ ಆ ಗುಣಗಳೆಲ್ಲಾ ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.

ನಾವು ನಿಮಗೆ ಭರವಸೆಯನ್ನೀಯುತ್ತೇವೆ.

ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು.

52–3

ಭಗವದ್ಗೀತೆ.

ಭಗವಂತಂಡ ಗೀತೆರ
ಪನ್ನೀರಂಡ್ನೆ ಅಧ್ಯಾಯತ್
ಶ್ರೀಕೃಷ್ಣ ಭಗವಂತ
ಅಂಬ್ ಪಿಲ್ಲಬುರ್‌ಸಂಗ್
ಈ ಬಾಕ್ ಪರಂಜತ್
"ಶತ್ರು ಮಿತ್ರಂಡಲ್ಲಿಯೂ
ಮಾನಾವಮಾನತ್‌ಲೂ
ಉಷ್ಣಣೋ ಕುಳ್‌ರ್‌ಲೂ
ಸುಖತ್‌ಲೂ ದುಃಖತೂ
ಒರೇ ಪೋಲೆ ಇಂಜಿತ್
ಎಲ್ಲಾ ಆಶೆ ಬುಟ್ಟಿತ್
ಪಳಂಜತೋ ಹುದಿಪತೋ
ಒರೇ ಪೋಲೆ ಕಾಣಿತ್
ಮುಂಡತಿಂಜಿ ಕೊಂಡಿತ್
ಕೈಕ್‌ಟ್‌ನ ಬಲನ
ಮದಿಂದ್‌ಣ್ಣ ಕೊಂಡಿತ್
ಮನೆಮಾರ್‌ಂಡೆಣ್ಣುವ
ಆಶೆನೆಲ್ಲ ಬುಟ್ಟಿತ್
ಬುದ್ಧಿ ಸ್ಥಿರ ಇಂಜಂಡ
ಜ್ಞಾನಭಕ್ತನಾನಂತ
ಈ ಲೋಕ ಜನರೆಲ್ಲಾ
ನಾಡ ಪ್ರೀತಿ ಕೊಳಗಾಪ"

ಕೇ. ಬಿ.

ವಿಘ್ನೇಶ್ವರ ಮಹೋತ್ಸವ.

ಇದೇ ತಾರೀಖು 4ನೇ ರವಿವಾರ ಬೆಂಗಳೂರಿನಲ್ಲಿರುವ ಕೊಡವರು ಕ್ಯಾಲ್ ಮುಹೂರ್ತವನ್ನು ಲಾಲ್‌ಬಾಗಿನಲ್ಲಿ ನಡೆಸಿದರು. ಅದೇ ದಿವಸ ಕೊಡಗಿನಿಂದ ಬಂದ ಕೊಡಗೇತರರು ರಾ. ಬ. ಆರ್ಕಾಟ ನಾರಾಯಣಸ್ವಾಮಿ ಶಾಸ್ತ್ರಿಯವರ ಸ್ಟೈಲಿನಲ್ಲಿ ವಿನಾಯಕ ಮಹೋತ್ಸವವನ್ನು ಅತೀ ಭಕ್ತಿಪೂರ್ವಕವಾಗಿ ವಿಜೃಂಭಣೆಯಿಂದ ನಡೆಸಿದರು. ಕೆಲವು ಅತಿಥಿಗಳು ಸಹ ದಯಮಾಡಿಸಿದ್ದರು.

ಈ ಶುಭ ದಿವಸ ಶುಭಗಳಿಗೆಯಲ್ಲಿ ವಿನಾಯಕನು ಸ್ಥಾಪಿಸಲ್ಪಟ್ಟು ಅಭಿಷೇಕ, ಪೂಜೆ ಪುನಸ್ಕಾರಗಳು ಕ್ರಮವಾಗಿ ನಡೆಸಲ್ಪಟ್ಟವು. ಮ. ರಾ. ಶ್ರೀ. ಎ. ಯಸ್. ಪೊಣ್ಣಯ್ಯನವರು ಪ್ರಥಮದಲ್ಲಿ ಗಣಪತಿಸ್ತೋತ್ರವನ್ನು ಭಕ್ತಿಸುಸ್ವರಗಳಿಂದ ಹಾಡಿದರು. ಅನಂತರ ಮ. ರಾ. ಶ್ರೀ. ಹೆಚ್. ಸಿ. ರಾಜಗೋಪಾಲರಾಯರು ತಮ್ಮ ಸುಮಧುರವಾದ ಕಂಠದಿಂದ ಕೂಡಿದ ಗಾನದಿಂದ ನೆರೆದ ಸಭಿಕರ ಮನಸ್ಸು ವಿನಾಯಕನಲ್ಲೇ ನೆಲೆಗೊಳ್ಳುವಂತೆ ಭಜನೆ ಮಾಡಿದರು. ಆ ಮೇಲೆ ಮ. ರಾ. ಶ್ರೀ. ಸಿ. ಯಸ್. ಲಕ್ಷ್ಮೀನಾರಾಯಣರಾವ್, ಯಂ. ಎ. ಇವರು ಚೌತಿ ದಿವಸ ಮಾಡುವ ಗಣಪತಿ ಮಹೋತ್ಸವದ ಉದ್ದೇಶವನ್ನು ಕುರಿತು ಬಹು ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದರು. ಮ. ರಾ. ಶ್ರೀ ಗಳಾವಂಡ ಟಿ. ಯಂ. ಕುಶಾಲಪ್ಪನವರು, ಸಿ. ಯಸ್. ಕೃಷ್ಣಮೂರ್ತಿಯವರು, ಸಿ. ಪಿ. ಗಣಪಯ್ಯನವರೂ ಉತ್ಸವದ ವಿಷಯವಾಗಿ ಇನ್ನು ಕೆಲವು ಸಂಗತಿಗಳನ್ನು ವಿವರಿಸಿದರು. ಆ ಮೇಲೆ ಮ. ರಾ. ಶ್ರೀ. ಎಚ್. ವಿ. ಶಾಂತಿಪತಿಶಾಸ್ತ್ರಿಗಳ ವೇದಮಂತ್ರೋಚ್ಚಾರಣೆಗಳಿಂದಲೂ ಸಭಿಕರ ಭಜನೆಯ ಘೋಷದಿಂದಲೂ ಮಂಗಳಾರತಿಯು ಅನೇಕ ಜ್ಯೋತಿಗಳಿಂದ ಬೆಳಗಿತು. ನೆರೆದವರೆಲ್ಲರೂ ಫಲತಾಂಬೂಲಾದಿ ಪ್ರಸಾದಗಳನ್ನು ಸ್ವೀಕರಿಸಿ, ತಮ್ಮ ತಮ್ಮ ನಿವಾಸಗಳಿಗೆ ತೆರಳಿದರು

ಈ ಉತ್ಸವಕ್ಕೆ ಹಿಂದೂಗಳಲ್ಲದವರೂ ಸಹ ಮತ ವೈಷಮ್ಯವಿಲ್ಲದೆ ದಯಮಾಡಿಸಿ, ಮೇಲಿನ ಉತ್ಸವವು ಸಾಂಗವಾಗಿ ನೇರವೇರುವಂತೆ ಮಾಡಿದ ಸಂಗತಿಯು ಬಹಳ ಶ್ಲಾಘನೀಯವಾಗಿದೆ.

ಹಾಜರಿದ್ದ ಭಕ್ತ.

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಭಕ್ತಿ ಬೇಕಾದಲ್ಲಿ ದಂಭ: ಮಡಿಕೇರಿಯಲ್ಲಿ ಒಂದು ಗೌರಿ ಹಬ್ಬ.

ಅಯ್ಯಾ,

ಕಾಸು ಕಾಣದವರಿಗೆ ಕಾಸು ಸಿಕ್ಕಿದರೆ ಕೈಲಾಸವೆಂಬಂತೆ ಯಾವಾಗಲೂ ಗೌರಿ ಹಬ್ಬ ಮಾಡದವರಿಗೆ ಅದನ್ನು ಮಾಡಿದರೆ ಬಹು ಗದ್ದಲ. ಇದರಂತೆ ನಮ್ಮ 'ಜನ್ಮ ಭೂಮಿ'ಯಲ್ಲಿ ಮಡಿಕೇರಿಯಲ್ಲಿ 'ಗೌರಿ ಹಬ್ಬ' ಎಂಬುದನ್ನು ನೋಡಿ ನನಗೆ ಸ್ವಲ್ಪ ಜ್ಞಾಪಕಕ್ಕೆ ಬಂತು. ಏನೆಂದರೆ, ಯಾವಾಗಲೂ ಗೌರಿಯು ತವರು ಮನೆಗೆ ಬರುವಾಗ್ಯೆ ಸಂತೋಷದ ಸೂಚನೆಯಂತೆ ಗೌರಿಯನ್ನು ತರುವ ಕೆಲವು ದಿನಗಳ ಹಿಂದಿನಿಂದ ಕೆಲವು ದಿನಗಳ ವರೆಗೆ ಮಳೆಯು ನಿಲ್ಲುತಿತ್ತು. ಆದರೆ ಈ ವರ್ಷ ಗೌರಿ ಹಬ್ಬದ ಗೌಜು ಯದ್ವಾ ತದ್ವ ಎಂಬಂತೆ ಗೌರಿಯು ದಿನದಲ್ಲಿ ಪೂರ್ತಿ ಮಳೆ. ಮಳೆ ಎಂದರೆ ಅಷ್ಟಿಷ್ಟಲ್ಲ. ಹಾಗಿರುವಾಗ ಗೌಜನ್ನು ಏನು ಹೇಳಲಿ! ಹಾಗಾದರೆ ಈ ವರ್ಷ ಗೌರಿಗೆ ತವರು ಮನೆಯು ತುಂಬಾ ವ್ಯಸನವಾಗಿ ಕಾಣಿಸಿತಲ್ಲವೇ? ಇಲ್ಲದೆ ಗಂಡನ ಮನೆಗೆ ಹೋಗುವಾಗ ಅಂದರೆ ಗೌರಿಯನ್ನು ಬಿಡುವಾಗ, ಬಿಸಿಲಿದ್ದು ತುಂಬಾ ಹರುಷವಾಗಿತ್ತು. ಹೀಗಿದ್ದು ಗೌರಿಯನ್ನು ತರುವಾಗ ಗೌಜಂತೆ! ಏನು ಮಳೆಯ ಗೌಜಲ್ಲವೇ? ಇದರ ಅಭಿಪ್ರಾಯ ತಿಳಿದು ನಾವುಗಳು ಭಕ್ತಿಯು ಸಾಲದೆಂದು ವ್ಯಸನ ಪಡುವುದು ಬಿಟ್ಟು ಗೌರಿಯನ್ನು ತರುವುದು ಒಂದು ಗೌಜಂತೆ! ಮತ ವಿಚಾರದಲ್ಲಿ ಇಂಥಾ ಸಂಗತಿಗಳು ಒಳ್ಳೆಯ ವಾರ್ತೆಯನ್ನು ಪತ್ರಿಕೆಗಳಲ್ಲಿ ಹರಡುವುದು ಬಿಟ್ಟು ಹೀಗೆ ಗೌಜಿನ ಮಾತಿಪ್ಪಸಿ, ಕೈ ಕೈ ಬಡಿದು ಜನಗಳ ಹುಚ್ಚು ವ ಅಭಿಪ್ರಾಯವು ಗೌರಿಯು ಶ್ರೀಮಂತನ್ನ ಕೇಳುವವರಿಗಿಲ್ಲ. ಆದುದರಿಂದ ಪಟ್ಟಣಿಗರು ಧಾರ್ಮಿಕ ಗೌಜನ್ನು ಮಾಡಿದರೆ ಭಕ್ತನ ಕೆಲಸವಾಯಿತೆಂದು ತಿಳಿದುಕೊಳ್ಳದಿರಲಿ.

ಒರ್ವ ಭಕ್ತ.

ಹಿಂದುಳಿದವರ ಗತಿ.

ಕೊಡಗು ಸರ್ಕಾರವು ಹಿಂದುಳಿದವರನ್ನು ಮುಂದಕ್ಕೆ ತರಲು ಏನೇನು ಮಾಡಿದೆ ಎಂಬುದನ್ನು ಬರೆದರೆ ಒಂದು ಆಶ್ಚರ್ಯವೇ ಆದೀತು. ಅಮ್ಮತ್ತಿ ನಾಡಿನ ಕಣ್ಣಂಗಾಲ ಗ್ರಾಮದಲ್ಲಿ ಅನೇಕ ಒಕ್ಕಲಿಗರ ಕುಟುಂಬಗಳಿವೆ. ಕೇವಲ ವಿದ್ಯಾ ಹೀನರು. ಕೇವಲ ಬಡವರು. ಪಶು ಪಾಲನೆ ಒಂದಲ್ಲದೆ ಏನೂ ತಿಳಿಯರು. ಇಂಥಾ ಒಂದು ಗ್ರಾಮಕ್ಕೆ ಒಂದು ಪ್ರೈಮರಿ ಶಾಲೆಯನ್ನಾದರೂ ಕೊಡಿಸಿಕೊಡಬೇಕೆಂದು ಕಳೆದ ಹತ್ತು ವರ್ಷಗಳಿಂದ ಬೇಡಿದರೂ ಸಿಕ್ಕಲಿಲ್ಲ. ಈಗ್ಗೆ ಎಂಟು ವರ್ಷದ ಹಿಂದೆ ಕೆಲವು ಮಹನೀಯರೂ, ಗ್ರಾಮಸ್ಥರೂ ಸೇರಿ ಚಿಕ್ಕದೊಂದು ಶಾಲೆ ಕಟ್ಟಡ ಕಟ್ಟಿಸಿದರು. ಸರ್ಕಾರದ ಸಹಾಯ ಬೇಡಿದರೂ ಬಾರದು ಬರುವಷ್ಟರಲ್ಲಿ ಕಟ್ಟಿದ ಕಟ್ಟಡವು ಮಳೆಗೆ ನೆಲಸಮವಾಗಿ ಬಿದ್ದು ಹೋಯಿತು. ನಿರ್ಗತಿಕರಾಗಿ ಹಿಂದು ಮುಂದು ಕಾಣದೆ ಒಂದು ಬಾಡಿಗೆ ಮನೆಯಲ್ಲಿ ಸ್ವಂತ ಸ್ಕೂಲನ್ನು ಏರ್ಪಡಿಸಿ, ನಡಿಸುತ್ತ ಬಂದರು. ಐಶ್ವರ್ಯವಂತರ ಮಕ್ಕಳೆಲ್ಲಾ ಕೊಡಗಿನ ಪ್ರೈಮರಿ ಶಾಲೆಗಳಲ್ಲಿ ಫೀಜು ಇಲ್ಲದೆ ಕಲಿಯುತ್ತಿರುವಾಗ್ಯೆ ಇಲ್ಲಿ ಹಿಂದುಳಿದ ಒಕ್ಕಲಿಗರು ಸ್ವಂತ ಮಾಸ್ತರಿಗೆ ಸಂಬಳ ಕೊಟ್ಟು ಕಲಿಯುವರೇ? ಹ್ಯಾಗೂ ಈ ಶಾಲೆಯು ನಡೆಯುತ್ತಿದೆ. ಈ ಮಧ್ಯೆ ಕಳೆದ ವರ್ಷ ನಮ್ಮ ನಾಡಿನ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರಾದ ಶ್ರೀ. ಐ. ಪಿ. ತಿಮ್ಮಯ್ಯನವರು ದಯಮಾಡಿಸಿ ನಮ್ಮ ಸ್ಥಿತಿಯನ್ನು ಕಂಡು ಒಂದೆರಡು ಮೀಟಿಂಗ್ ಮಾಡಿ ಗ್ರಾಮಸ್ಥರಿಂದ ಚಂದಾ ಹಣ ಕೂಡಿ ಹಾಕಲು ತಕ್ಕ ಏರ್ಪಾಡು ಮಾಡಿದರು. ಸ್ಕೂಲು ಕಟ್ಟಡಕ್ಕೆ ಡಿಸ್ಟ್ರಿಕ್ಟ್ ಬೋರ್ಡಿನ ಸಹಾಯವನ್ನು ಕೇಳುವದಾಗಿ ಭಾಷೆ ಕೊಟ್ಟರು. ಅದರಂತೆ ಅವರು ಬೋರ್ಡಿನ ಮೀಟಿಂಗಿನಲ್ಲಿ ಠರಾವು ತಂದರು. ಸ್ಕೂಲ್ ಸೂಪರ್ ವೈಜರು ಮುದ್ದು ಬಂದು ಪರಿಶೋಧಿಸಿ ರಿಪೋರ್ಟ್ ಮಾಡಿದರು. ಹುಜೂರ್ ಕಮಿಶನರ್ ಸಾಹೇಬರು ಕಳೆದ ಬಾರಿ ಬಂದಿಗೆ ಬಂದಿದ್ದಾಗ್ಯೆ ನಮ್ಮ ಗ್ರಾಮದ ಬಡ ಮಕ್ಕಳು ರಸ್ತೆಯಲ್ಲಿ ನಿಂತು ಒಂದು ಶಾಲೆ ಕಟ್ಟಡಕ್ಕೆ ವರದಾನ ಕೇಳುವರೋ ಎಂಬಂತೆ ಬೇಡಿದರು. ಆದರೇನು—ಈ ವರೆಗೆ ಏನೊಂದೂ ಸುದ್ದಿ ಇಲ್ಲ. ಹೆಚ್ಚಿಗೆ ಕೊಡದಿದ್ದರೂ ಈ ಗ್ರಾಮದ ಬಡಪ್ರಜೆಗಳಿಗೆ ಚೈತನ್ಯವಿಲ್ಲ. ಈಗ ಇರುವ ಶಾಲೆಯನ್ನು ನಡಿಸಲೂ ಚೈತನ್ಯವಿಲ್ಲ. ಮುಂದಕ್ಕೆ ನಮ್ಮ ಗತಿಯು ಏನಾಗಬೇಕೆಂಬುದು ನಮ್ಮ ಡಿಸ್ಟ್ರಿಕ್ಟ್ ಬೋರ್ಡ್ ಪ್ರಸಿಡೆಂಟರೂ, ಮೆಂಬರೂ, ದೇಶೀಯರೂ ಆಲೋಚಿಸಲಿ. ಹಿಂದುಳಿದ ವರ್ಗದವರಿಗೆ ಸರ್ಕಾರವು ಎಷ್ಟರ ಮಟ್ಟಿಗೆ ಸಹಾಯ ಮಾಡುತ್ತಿದ್ದಾರೆಂಬುದು ಇದರಿಂದ ವ್ಯಕ್ತವಾಗುತ್ತೆ. ಇನ್ನಾದರೂ ಇವರ ಪ್ರಾರ್ಥನೆಯನ್ನು ಸರ್ಕಾರದವರು ಕೇಳಿಯಾರೋ ಎಂಬುದನ್ನು ಕಾಯಬೇಕಾಗಿದೆ.

'ನಾಡವ'

ನಾಪೋಕ್ಲುನಾಡು ಕೈಲ್ ಪೊಳ್ದು.

ಅಯ್ಯಾ,

ನಾಪೋಕ್ಲಿನಲ್ಲಿ ನಡೆದ ಕೈಲ್ ಪೊಳ್ದನ್ನು ಕುರಿತು 'ಹಾಜರಿದ್ದ'ವರೊಬ್ಬರು ಬರೆದ ಪ್ರಥಮ ಬಾತ್ಮಿಯನ್ನು, ಸಂತರ ನಾಪೋಕ್ಲುನಾಡಿನವರಿಗೆ ಆಯುಧ ಪೂಜೆ ಇಲ್ಲವೆಂದು ಮೊದಲು ಬರೆದದ್ದು ತಪ್ಪೆಂತಲೂ, ಅದಕ್ಕಾಗಿ ಕ್ಷಮಾಪಣೆ ಕೇಳಿದ ಬಾತ್ಮಿಯನ್ನೂ ನೋಡಿದೆನು. ಅವರು ತಮ್ಮ ತಪ್ಪನ್ನು ಒಪ್ಪಿಕೊಂಡದ್ದರಿಂದ ಆ ವಿಷಯ ಹೆಚ್ಚು ಟೀಕಿಸಬೇಕಾದ ಅವಶ್ಯವಿಲ್ಲ; ಆದರೆ ನಾಲ್ಕು ನಾಡಿನಲ್ಲಿ ಕೈಲು ಪೊಳ್ದು ಹೇಗೆ ನಡೆಯುತ್ತದೆ ಎಂಬುದನ್ನು ಸ್ವಲ್ಪ ವಿವರಿಸಬೇಕಾಗಿದೆ.

ನಮ್ಮ ಕೊಡಗು ದೇಶದಲ್ಲು ಕೈಲ್ ಪೊಳ್ದೆಂಬುದನ್ನು ಶ್ರೀಸತ್ಯೋತ್ಸವಾಗಿ ನಡಿಸುವದೇ ನಾಪೋಕ್ಲುನಾಡಿನಲ್ಲಿ. ಹೇಗೆಂದರೆ ಪ್ರತಿ ವರ್ಷ ಬಿಂಡಿಯೂರು ಬಂದರಲ್ಲು ಅಂಮಗೇರಿ ಕರ್ಣಯನು ಪಾಡಿ ಸುಬ್ರಾಯ ದೇವಸ್ಥಾನದಲ್ಲು ಪ್ರಶ್ನೆ ಮಡಗಿ ಬಿಂಡಿಯೂರು 10 ನೇ ಪತ್ತಾಲೋದಿನಲ್ಲು ಪಾಡಿ ಸುಬ್ರಮಣ್ಯ (ಇಗ್ಗುತಪ್ಪ) ದೇವರ ಆರಾಧನೆಯನ್ನು ಸದರಿ ದಿನ ಕಳೆದು ಬರುವ ಯಸು ನಾಳೆಂದ, ಅಶ್ವಿನಿ, ಚಿತ್ರ, ಅನುರಾಧ, ವಿಶಾಖ, ಪೂರ್ವ, ಮೂಲ, ಉತ್ತರಾಷಾಢ, ಉತ್ತರಾಭಾದ್ರ, ಸ್ವಾತಿ, ಮೃಗಶಿರ, ಮತ್ತು ಧನಿಷ್ಠ, ಈ 12 ನಕ್ಷತ್ರಗಳಲ್ಲಿ ಯಾವ ನಕ್ಷತ್ರ ಬರುತ್ತೋ ಆ ದಿನ ಕೊಡವರ ಕೈಲ್ ಪೊಳ್ದು ಹಬ್ಬವೆಂದೂ, ಇಷ್ಟೇ ಗಂಟೆಗೆ ಆಯುಧ ಪೂಜೆ, ಇಷ್ಟು ಗಂಟೆಗೆ ಮಂದಿಗೆ ಇಂಥಾ ತಕ್ಕನವರೇ ಜನರನ್ನು ಸೇರಿಸಬೇಕೆಂದೂ, ಮರುದಿನ ಬೇಟೆಗೆ ಇಂಥವನೇ ಕರೆಯಬೇಕೆಂದೂ ವಗೈರೆ ಈ ಕೆಳಗೆ ಕಂಡ ಮೇರೆ ಈ ವರ್ಷದ ಕೈಲ್ ಪೊಳ್ದನ್ನು ಘೋಷಿಸುತ್ತೇವೆ. ಹೇಗೆಂದರೆ, ಸಿಂಹಮಾಸ 11 ನೇ ಶನಿವಾರ ದಿನ ಹಗಲು 3½ ಗಂಟೆಗೆ ಆಯುಧ ಪೂಜೆ ನಡಿಸಿ. ಸಾಯಂಕಾಲ 6 ಗಂಟೆವರೆಗೆ ಐಯ್ಯಪ್ಪನೆಂಬವರು ಮಂದಿಗೆ ಜನರನ್ನು ಕೂಡಿಸಿ ಗುರಿಹೊಡೆಯುವುದು. ಮಾರನೇ ದಿನ ಬೆಳಿಗ್ಗೆ 5½ ಗಂಟೆಗೆ ಅಚ್ಚಯ್ಯನೆಂಬವರು ನಾಳಂಬು ಹೊಡೆಯುವುದು. ಸದರಿ ದಿನ ಅಪ್ಪಚ್ಚನೆಂಬವನು ಹಗಲು 11 ಗಂಟೆಗೆ ಮಂದಿಗೆ ಜನರನ್ನು ಕೂಡಿಸಿ ಬೇಟೆಯಾಡು ತೆಂಕ ಮತ್ತು ಪಶ್ಚಿಮವಾದ್ದರಿಂದ ಐಯ್ಯಪ್ಪನೆಂಬವನು ಬೇಟೆಗೆ ಜನರನ್ನು ಹೊರಡಿಸುವಂತೆಯೂ, ತೆಂಕ ಕಕ್ಕಲೆಯಾದ್ದರಿಂದ ಅಚ್ಚಯ್ಯನೆಂಬವರು ನಾಯಿ ಕೂಡಿಸಿ ತೆಂಕಕ್ಕೆ ಹೊರಡಿಸುವಂತೆಯೂ ಪಾತಿ ಕುರುಡ, ಕಾವಲುಗಾರ ಕುಂಟ, ಬಾತಿಗೆ ಮರಣ ಉಂಟು. ಬಂಟಿಯುಂಟು, ಅಗವೃತ್ತಿ, ಮನುಷ್ಯರಿಗೆ ಅಪಾಯ, ನೋಕ್ಕಬೇಕು. ಸಿಂಹಮಾಸ 12 ನೇ ಆದಿತ್ಯವಾರ ಸಾದಿಕರಣವಾದುದರಿಂದ ದನಗಳ ಬೀಜ ಒಡೆಯಲು ಒಳ್ಳೇದು. 29ನೇ ದಿನ ಬೆಳಿಗ್ಗೆ 7½ ಗಂಟೆಗೆ ಬೈರಿಮರ ಕಡಿದು ಹೋಯ್ಯಕ್ಕೆ ಕಣಿಮರ ಹಾಕಬೇಕು ಮಾರನೇ ದಿನ ಅಡಿಚಿತ್ತಿರ ಕಡಿಯುವುದುಯೆಂಬ ವಗೈರೆ ಶಾಸ್ತ್ರ ಪ್ರಕಾರ ನಡಿಸಿದ ನಾಪೋಕ್ಲುನಾಡಿನವರ ಕೈಲು ಪೊಳ್ದನ್ನು ಮನಸ್ಸಿನ ಇಚ್ಛೆ 'ಕೊಡಗು' ಪತ್ರಿಕೆಯಲ್ಲು ಪ್ರಕಟಿಸಿದ ಮಹನೀಯರು ನಾಪೋಕ್ಲು ನಾಡಿನ ಕೊಡವನಲ್ಲವೆಂದು ಹೇಳುವವರಲ್ಲು ಯಾವ ಸಂದೇಹವಿಲ್ಲ. ....

ದಯವಿಟ್ಟು ಇನ್ನು ಮುಂದಕ್ಕೆ ಇಂಥಾ ಬಾತ್ಮಿ ಬರೆಯುವುದನ್ನು ಮನ್ನಮಾಡುವರಾಗಿ ನಂಬುತ್ತೇನೆ.

'ನಾಪೋಕ್ಲುನಾಡಿನ ಕೊಡವ'

(ಮೇಲಿನ ಬಾತ್ಮಿಯಲ್ಲು ವ್ಯಕ್ತಿ ಕುರಿತ ಮತ್ತು ಅನಾವಶ್ಯಕ ಕೆಲವು ಭಾಗಗಳನ್ನು ಬಿಡಲಾಗಿದೆ ಸಂ. ಕೊ.)

ಒಡ ರೈತರ ಮಲಿಗೆಯೋ?

ಅಯ್ಯಾ,

ಸೆಪ್ಟೆಂಬರ್ ತಾರೀಖು 9 ರಲ್ಲಿ ಗೋಣಿಕೊಪ್ಪಲು ಪಬ್ಲಿಕ್‌ನವರ ವಿಷಯವಾಗಿ ಮನನೊಂದವರ ಬಾತ್ಮಿಯನ್ನು ನೋಡಿದೆನು. ಅದರಲ್ಲಿ 'ಗೋಣಿಕೊಪ್ಪಲು ಕೊಡಗಿನಲ್ಲಿ ಒಂದು ಚಿಕ್ಕ ಊರು. ಆದರೆ ಬಲು ಸೊಗಸುಗಾರ ಊರು. ಆ ಊರಿನಲ್ಲಿ ಜನರ ಗದ್ದಲವೇ ಗದ್ದಲ, ಅದರಲ್ಲಿಯೂ ಗ್ರಾಮ ಫೋನುಗಳ ಗದ್ದಲದಿಂದ ಊರೇ ಕಿವುಡಾಗಿ ಹೋಗಿರುತ್ತೆ' ಎಂದು ಬರೆದ ಸಂಗತಿಯು ಅತಿ ಆಶ್ಚರ್ಯಕರವೂ, ವ್ಯಸನಕರವೂ ಆದದ್ದಾಗಿದೆ. ಗ್ರಾಮಫೋನುಗಳ ವಿಷಯವೇನೂ ಇರಲಿ; ಊರಿನಲ್ಲಿ ಜನರ ಗದ್ದಲವೇ ಗದ್ದಲವೆನ್ನುವ ಸಂಗತಿಯಲ್ಲಿ ನೋಡಿದರೆ ಹೆಚ್ಚಿನ ದೊಡ್ಡ ಆಶ್ಚರ್ಯಕರವಾದ ಬೇರೆ ಏನೋ ಇರಬಹುದೆಂದು ತೋರುತ್ತದೆ. ಅದು ಯಾವ ಸಂಗತಿ ಎಂಬುವುದು ತಿಳಿದು ಬರಲಿಲ್ಲ. ದಯವಿಟ್ಟು ಆ 'ಮನನೊಂದ' ವರು ಇದರ ವಿಷಯವಾಗಿ ತಪಸೀಲಾಗಿ ಬರೆದು ಪ್ರಕಟಿಸಬೇಕಾಗಿ ಕೇಳಿಕೊಳ್ಳುತ್ತೇನೆ. ಇದರ ಒಳ್ಸಾರ ಗುಟ್ಟು ಅರ್ಥವು ತಿಳಿಯಬೇಕಾದ ಸಂಗತಿಯಾಗಿದೆ. ಇದು, 'ಮನನೊಂದವ'ರಿಗೆ ಎಷ್ಟು ಕಷ್ಟಕರವಾಗಿ ಕಾಣುವಾಗ್ಯೆ, ಪಬ್ಲಿಕ್‌ನವರಿಗೂ ಎಷ್ಟೋ ಬೇಸರಿಕೆಯಾದ ಸಂಗತಿಯೂ ಗಿರಬಹುದು.

ನಮ್ಮ ದೇಶದ 'ಮನನೊಂದವ'ರು ಇಂಥಾ ಚಿಕ್ಕ ಊರಿಗೆ ಎಂದೂ ಪ್ರಯಾಣ ಮಾಡಿ ಬರಲಿಲ್ಲವಾಗಿ ಕಾಣುತ್ತದೆ. ಗೋಣಿಕೊಪ್ಪಲು ಕೊಡಗಿನಲ್ಲಿ, ಬಹಳ ವ್ಯಾಪಾರ ನಡೆಯುವ ಒಂದು ದೊಡ್ಡ ಸ್ಥಳವಲ್ಲವೆಂಬುವುದು ಅವರಿಗೆ ಇಷ್ಟರ ವರೆಗೆ ತಿಳಿದಿರಲಿಲ್ಲವೆಂದು ತೋರುತ್ತೆ. ಕಾರಣವೇನೆಂದರೆ, ಅವರು ಗ್ರಾಮಫೋನುಗಳ ಶಬ್ದವನ್ನು ಎಂದೂ ಕೇಳಿ ಇರಲಿಕ್ಕೇ ಇಲ್ಲ. ವ್ಯಾಪಾರಸ್ಥರ ಮತ್ತು ಅದಕ್ಕೆ ಸಂಬಂಧಪಟ್ಟ ವಿಚಾರಗಳ ಮುಖ್ಯ ಕರ್ತವ್ಯವು ಯಾವದೆಂದು ತಿಳಿಯದ್ದರಿಂದಲೂ, ಆದಿತ್ಯವಾರ ಮತ್ತು ಬಿಡುದಿವಸಗಳಲ್ಲಿ ನಡೆಯುವ ಗಲಾಟೆಯನ್ನು ನೋಡಿ ಬೆದರಿಕೊಂಡದ್ದರಿಂದಲೂ ಇವರ ಮನವು ಇಷ್ಟರ ಮಟ್ಟಿಗೆ ನೋಯಲಿಕ್ಕೆ ಕಾರಣವಾಗಿರಬಹುದು. ಈ 'ಮನನೊಂದವ'ರು ಬೇರೆ ಪ್ರಾಂತ್ಯಗಳ ಪಟ್ಟಣಗಳನ್ನು ನೋಡದವರಾಗಿ ಬೇಕು. ನೋಡಿದವರಾಗಿದ್ದರೆ ಮನವು ನೋಯಲಿಕ್ಕೆ ಕಾರಣವಿಲ್ಲ. ಮನನೊಂದವರ ಮಾಧ್ಯವು ಬಿಡದ್ದರಿಂದ ಗ್ರಾಮಫೋನು ಕಚೇರಿಗಳ ಮುಂದೆ ಇರುವ ಬಡ ಜನ ವೈಕಿ ಒಬ್ಬರಾಗಿ ಇರುತ್ತಾರೆಂದು ನನ್ನ ಭಾವನೆ. ವ್ಯಾಪಾರಸ್ಥರ ಮುಖ್ಯ ಕರ್ತವ್ಯವು ಯಾವದೆಂದರೆ— ಇಂಥಾ ಮುಗ್ಧ ಜನರ ಮುಗ್ಧತ್ವವನ್ನು ಬಿಡಿಸಲಿಕ್ಕಾಗಿ ಗ್ರಾಮಫೋನು ಕಚೇರಿಗಳು ಸುಮನೋಹರ ತಕ್ಕದಾದ ರಾಗಗಳನ್ನು ಹಾಕಿ ಕೆಲವು ಸಂದರ್ಭದಲ್ಲಿ ವೇದವಾಕ್ಯವು ಕಿವಿಗೆ ಬೀಳುವಂತೆ ಮಾಡುವುದಾಗಿದೆ. ಗ್ರಾಮಫೋನುಗಳ ಚೀಟಿಯನ್ನು ರಾಮಬಾಣದಂತೆ ಹೊರಡಿಸಿದ್ದು ಸಮಯಷ್ಟೆ. ಆದರೆ ಕೇಳಲು ಬಹು ಇಂಪಾಗಿದೆಂದು ಜರೆಯುತ್ತಾರೆ. ಇದು ನಿಜವಾದ ಸಂಗತಿಯೇ ಸರಿ. ಆದರೆ ಕಪಿಯಂದ ಕೇಳಿಕೊಂಡು ಚೀಟಿಗೆ ಹಣವು ಕೊಡಲು ಶಕ್ತಿಯಿಲ್ಲದ್ದರಿಂದ ಮನನೊಂದವರಿಗೆ ಮಾತ್ರ ಕಹಿಯಾಗಿ ತೋರಬಹುದು.

ಈ ಟೌನಿನಲ್ಲಿ ಹೊರಡಿಸಿರುವ ಚೀಟಿಗಳು ಅನುಕೂಲವುಳ್ಳವಾಗಿವೆ. ತೆಗೆದುಕೊಳ್ಳುವ ವರೆಗೆ ಒಂದೇ ಗಂಟೆನಿಂದ ಗ್ರಾಮ ಫೋನುಗಳನ್ನು ತೆಗೆಯುವುದು ಅವಶ್ಯವಿಲ್ಲ. ಏಜೆಂಟರ ಭದ್ರತೆಯು 'ಮನನೊಂದ'ವರದ್ದಕ್ಕಿಂತಲೂ ಹೆಚ್ಚಾಗಿದೆ. ಚೀಟಿಗೆ ಸೇರಿದವರ ಹಣವು ಇಂಪೀರಿಯಲ್ ಬ್ಯಾಂ

ತನ್ನ ಉಪವಾಸದ ಕಾರಣವನ್ನು ವಿವರಿಸಿ ಬಹಿರಂಗಪಡಿಸುವುದಕ್ಕಾಗಿ ಮಹಾತ್ಮರು ಬೊಂಬಾಯಿ ಸರಕಾರಕ್ಕೆ ತಾ. 15ರಲ್ಲಿ ಕಳುಹಿಸಿದ ಪ್ರಕಟಣೆಯನ್ನು ಸರಕಾರದವರು ತಾ. 21ರಲ್ಲಿ ಪ್ರಕಟಿಸಿದರು.

ಭಾರತ ಭೂಮಿಯ ಅನೇಕ ಸ್ಥಳಗಳ ಅಸ್ಪೃಶ್ಯರು ಸಭೆ ಸೇರಿ, ಪ್ರತ್ಯೇಕ ಚುನಾವಣೆಯನ್ನು ವಿರೋಧಿಸಿಯೂ, ಮಹಾತ್ಮರ ಮುಂದಾಳುತನದಲ್ಲಿ ವಿಶ್ವಾಸವನ್ನು ಸೂಚಿಸಿಯೂ ಠರಾವುಗಳನ್ನು ಪಾಸುಮಾಡಿದರು.

ಶಾಂತಿ ಮತ್ತು ಸ್ವಾತಂತ್ರ್ಯಕ್ಕಾಗಿ ಸ್ಥಾಪನೆಯಾಗಿರುವ ಅಂತರರಾಷ್ಟ್ರೀಯ ಸ್ತ್ರೀಯರ ಲೀಗಿನವರು ಮಹಾತ್ಮರ ಉಪವಾಸದ ಮರಣದಿಂದ ಉಂಟಾಗಬಹುದಾದ ಕಷ್ಟನಷ್ಟಗಳನ್ನೂ, ದುಃಖವನ್ನೂ ಸೂಚಿಸಿ ಮಿ. ಮೆಕ್ಡೊನಾಲ್ಡರಿಗೆ ಪತ್ರ ಬರೆದಿರುವರು.

ಇಂಗ್ಲೆಂಡಿನಲ್ಲಿರುವ 'ಇಂಡಿಯಾದ ಸ್ನೇಹಿತರು' ಮಹಾತ್ಮರ ವ್ರತಕ್ಕೆ ಸಹಾನುಭೂತಿ ಮತ್ತು ಪಶ್ಚಾತ್ತಾಪದ ಚಿಹ್ನೆಯಾಗಿ ಅಕ್ಟೋಬರು 2ರಲ್ಲಿ ಒಂದು ದಿನ ಉಪವಾಸವನ್ನು ಕೈಕೊಂಡು, ಆ ದಿನದ ಊಟದ ಖರ್ಚು ಉಳಿಯುವುದನ್ನು ಮಹಾತ್ಮರಿಗೆ ಕಳುಹಿಸುವಂತೆ ನಿಶ್ಚಯಿಸಿರುವರು.

ಬೊಂಬಾಯಿಯ ವಾಲ್ಕೇಶ್ವರ ಛತ್ರದಲ್ಲಿ ತಾ. 19ರಲ್ಲಿ ಸುಮಾರು 200 ಜಾತಿ ಹಿಂದೂಗಳೂ, ಅಸ್ಪೃಶ್ಯರೂ ಒಂದಾಗಿ ಸೇರಿ ಔತಣವನ್ನು ಮಾಡಿದರು. ಮಿಸೆಸ್ ಕಮಲಾ ನೆಹರು, ಮಿಸೆಸ್ ಕಸ್ತೂರ್ಬಾ, ಮಿಸೆಸ್ ನಟರಾಜನ್, ಸರ್ದಾರ್ ಸುಲೇಮಾನ್ ಕಾಸಿಂ ಮಿತ್ತಾರವರೇ ಮೊದಲಾದವರು ಭಾಗಿಗಳಾಗಿದ್ದರು.

ಮಹಾತ್ಮರ ಜೀವವನ್ನು ಉಳಿಸುವ ಉದ್ದೇಶ್ಯ ಅಸ್ಪೃಶ್ಯತೆಯನ್ನು ಹೋಗಲಾಡಿಸಲಿಕ್ಕಾಗಿಯೂ, ಪ್ರತ್ಯೇಕ ಚುನಾವಣೆಯನ್ನು ಒದರಾಯಿಸಲಿಕ್ಕಾಗಿಯೂ ಕೂಡಲೆ ಪ್ರಚಾರ ಕೆಲಸ ನಡಸಲು ಕಾಶೀ ವಿಶ್ವವಿದ್ಯಾಲಯದ 65 ಸ್ತ್ರೀಯರು ಮತ್ತು ಹಲವು ಅಸ್ಪೃಶ್ಯರನ್ನೊಳಗೊಂಡು 333 ವಿದ್ಯಾರ್ಥಿಗಳು ಸ್ವಯಂಸೇವಕರ ದಳ ಒಂದನ್ನು ಸ್ಥಾಪಿಸಿರುವರು.

ಸರಕಾರದ ಕೋಮುವಾರು ತೀರ್ಮಾನದಲ್ಲಿ ಅಸ್ಪೃಶ್ಯರಿಗೆ ದೊರೆಕುವದಕ್ಕಿಂತ ಹೆಚ್ಚಿನ ಮೆಂಬರುತನವನ್ನು ಮಿಶ್ರ ಚುನಾವಣೆಯಲ್ಲಿ ಕೊಡಲು ಜಾತಿ ಹಿಂದೂ ಮುಖಂಡರು ಅಸ್ಪೃಶ್ಯರ ಮುಂದಾಳುಗಳಿಗೆ ಭಾಷೆ ಕೊಟ್ಟು, ಅವರಿಂತ ಒಂದು ಒಪ್ಪಂದ ಮಾಡಿಕೊಂಡು ಸರಕಾರಕ್ಕೆ ತಿಳಿಸುವುದು ಉತ್ತಮವೆಂದು ಎಸೆಂಬ್ಲಿಯ ಹಲವು ಹಿಂದೂ ಮೆಂಬರುಗಳು ರುಜು ಮಾಡಿ ಒಂದು ಪ್ರಕಟಣೆಯನ್ನು ಹೊರಡಿಸಿರುವರು.

ಇಂಡಿಯಾ ಲೀಗ್ ಡೆಲಿಗೇಶನಿನ ಮಿಸ್ ವೈಟ್ಲಿಯವರು ಕಲ್ಕತ್ತಾದ ವಿದ್ಯಾರ್ಥಿಗಳ ಒಂದು ಸಭೆಯಲ್ಲಿ, 'ಯೂರೋಪಿಯನರು ಕಾಂಗ್ರೆಸಿನ ಅಥವಾ ಗಾಂಧೀಜಿಯವರ ಚಳವಳಿಯ ಮಹತ್ವವನ್ನು ಅರಿತುಕೊಳ್ಳದೆ ಇರುವದು ವ್ಯಸನಕರ. ಮಹಾತ್ಮರ ತ್ಯಾಗವು ಯೋಗ್ಯಸ್ಥಾನದಲ್ಲಿ ಹೋಗುತ್ತದೆ ಮತ್ತು ಮಹಾತ್ಮರು ಕೈಕೊಂಡಂತೆ ಇಡೀ ಮಾನವ ಜಾತಿಯು ಮೆಚ್ಚಿಗೆಯನ್ನು ಪಡೆಯುವರು' ಎಂದು ಮುಂತಾಗಿ ಭಾಷಣ ಮಾಡಿದರು.

ಬ್ರಾಹ್ಮಣರು, ಕ್ಷತ್ರಿಯರು, ಮತ್ತು ವೈಶ್ಯರು 5,6 ಮತ್ತು 8 ನೇ ವರ್ಷಗಳಲ್ಲಿ ಯಜ್ಞೋಪವೀತವನ್ನು ಧರಿಸತಕ್ಕದೆಂದು ಮನುವು ನಿಶ್ಚಯಿಸಿರುವರು. ಆದರೆ ಶೂದ್ರರ ಮಾತೇ ಇಲ್ಲ. ಇಂಡಿಯಾದ ಈಗಿನ ಪರಿಸ್ಥಿತಿಯು, ಕಿರೀಟ ಧರಿಸದ ರಾಜರೂ ಆದ ಮಹಾತ್ಮರು, ಶೂದ್ರರೂ ಯಜ್ಞೋಪವೀತವನ್ನು ಧರಿಸಬಹುದಾದ ವಯಸ್ಸನ್ನು ನಿಶ್ಚಯಿಸಿದರೆ ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಸುಲಭವಾಗುವದೆಂದು ನಿವೃತ್ತ ಡಾ. ಕೆದರನಾಥರವರು ಮಹಾತ್ಮರಿಗೆ ಅರಿಕೆ ಮಾಡಿಕೊಂಡಿರುವರು.

ಮಹಾತ್ಮರಂತೆಯೇ ಮರಣದ ವರೆಗೆ ಉಪವಾಸ ಮಾಡಲು ಕಲ್ಕತ್ತಾದ ಬಿರಂಚಿ ತ್ರಿಪಾಠಿ, ಅಹ್ಮದಾಬಾದಿನ ಅಂಬಾಲಾಲ್, ಡೆಲ್ಲಿಯ ಕೃಷ್ಣನಾಥ್, ಮದ್ರಾಸಿನ ಪಾಂಡುರಂಗ, ಜೈಲಿನಲ್ಲಿರುವ ಸೇನಾಪತಿ ಬಾಪಟ್, ನವಾಬುಷಾ ಭವಾನಿನಿವಾಸ್, ದುರ್ಗಾಸುಂದರ್ ಪ್ರಸಾದ್, ಲಕ್ಷ್ಮಣ್ ಸಂಗ್ ರವರು ನಿಶ್ಚಯಿಸಿರುವರು. ಅಲ್ಲದೆ, ಕಲ್ಲಿಕೋಟೆಯ ಕೇಳಪ್ಪನಾಯರವರು ಗುರುವಾಯೂರು ದೇವಸ್ಥಾನದ ಬಾಗಿಲನ್ನು ಅಸ್ಪೃಶ್ಯರಿಗೆ ತೆರೆಯುವ ವರೆಗೂ ಉಪವಾಸವಿರಲು ಪ್ರಾರಂಭಿಸಿರುವರು.

ಮಹಾತ್ಮರ ಉಪವಾಸದ ತೀರ್ಮಾನವನ್ನು ಬದಲಾಯಿಸಬೇಕೆಂದೂ, ಇಲ್ಲವಾದರೆ ಕೆಲವು ಕಾಲದ ವರೆಗೆ ಮುಂದರಿಸಬೇಕೆಂದೂ ವಿ. ಜೆ. ಪಟೇಲರವರು ಮತ್ತು ಸಿ. ಯಫ್. ಆಂಡ್ರ್ಯೂಸ್‌ರವರು ಇಂಗ್ಲೆಂಡಿನಿಂದಲೂ, ಬರ್ಲಿನ್, ಸಫ್ರೊ, ಚಾಮರ್ಫಿಲ್ಡ್ ಮೆಹತಾ ಮೊದಲಾದ ಹಿಂದೀ ಮುಖಂಡರೂ, ಅಸ್ಪೃಶ್ಯರ ಕೆಲವು ಮುಂದಾಳುಗಳೂ ಮಹಾತ್ಮರಿಗೆ ತಂತೀ ಮೂಲಕ ಅಪ್ಪೀಲು ಮಾಡಿದ್ದರು. ಅವಕ್ಕೆ ಮಹಾತ್ಮರು, 'ದೇವರ ಹೆಸರಿನಲ್ಲಿ ಆತನ ಇಚ್ಛೆಯಂತೆ ಮಾಡಿದ ಉಪವಾಸದ ಪ್ರತಿಜ್ಞೆಯನ್ನು ಹಿಂತೆಗೆಯಲಾರೆ. ಕಳವಳಕ್ಕೆ ಕಾರಣವಿಲ್ಲ. ಪತಿತರಿಗಾಗಿ ನನ್ನ ಆತ್ಮ ಬಲಿಕೊಡುವ ಶುಭಮುಹೂರ್ತವು ಬಂದಿದೆ! ದೇವರು ಇಚ್ಛಿಸಿದರೆ ತೀರ್ಮಾನದ ವರೆಗೆ ನಾನು ಸಾಯಲಿಕ್ಕಿಲ್ಲ' ಎಂಬರ್ಥದ ಜವಾಬನ್ನು ಕೊಟ್ಟಿರುವರು.

ಮಹಾತ್ಮರ ಉಪವಾಸ ಕುರಿತು ಕೊಡಗಿನ ಸಾರ್ವಜನಿಕ ಸಭೆಗಳು.

ತಾ. ೨೦ರಲ್ಲಿ ಸಾವಿರಗಟ್ಲೆ ಜನರ ಸಹಾನುಭೂತಿ ಉಪವಾಸ.

ಒಳದೇಶ.

ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ಬೋರ್ಡಿಂಗಿನಲ್ಲಿರುವ ಕೆಲವು ವಿದ್ಯಾರ್ಥಿಗಳಿಗೆ ಅಂಗಾಲಿ ಕಜ್ಜಿಯು ಅಂಟಿದೆಯೆಂದು ತಿಳಿಯುತ್ತೇವೆ.

ಕಮಿಷನರವರು ತಾ. 21 ರಲ್ಲಿ ಉಟಕಮಂಡಿಗೆ ಹೋಗಿರುವರೆಂತಲೂ, ತಾ. 25 ರಲ್ಲಿ ವಾಪಸು ಬರುವರೆಂತಲೂ ತಿಳಿದುಬರುತ್ತದೆ.

ಈ ವಾರವೂ ಜಿಲ್ಲೆಯ ಹಲವು ಕಡೆಗಳಲ್ಲಿ ಮಳೆ ಬಿದ್ದಿತು! ಮಡಿಕೇರಿಯಲ್ಲಿ ಈ ತಾ. 16 ರಿಂದ ಇಂದಿನ ವರೆಗೆ 5.4 ಇಂಚು ಮಳೆಯಾಗಿದೆ.

ರಜೆಯಲ್ಲಿದ್ದ ಪಬ್ಲಿಕ್‌ಪ್ರಾಸಿಕ್ಯೂಟರಾದ ಮಿ. ಕೆ. ರಘುನಾಥಯ್ಯನವರು ಈ ತಾ 15 ರಲ್ಲಿ ವಿರಾಜಪೇಟೆಯಲ್ಲಿ ತಮ್ಮ ಉದ್ಯೋಗವನ್ನು ಕೈಕೊಂಡಿರುವರು.

ಸಬ್ ಅಸಿಸ್ಟೆಂಟ್ ಸರ್ಜನರಾದ ಮಿ. ರಾಮಸ್ವಾಮಿ ಅಯ್ಯರವರು ನಿವೃತ್ತರಾದರೆಂತಲೂ, ಮಿ. ಮಾದಿಕುಟ್ಟಿರ ಗಣಪತಿಯವರು ಫ್ರೇಜರ್‌ಪೇಟೆಗೂ ಬರುವ ತಿಂಗಳು 10ರಿಂದ ವರ್ಗಾಯಿಸಲ್ಪಟ್ಟಿರುವರೆಂದು ತಿಳಿಯುತ್ತದೆ.

ಮಡಿಕೇರಿ ವೇದಾಂತ ಸಂಘದ ಆಶ್ರಯದಲ್ಲಿ ನಾಳೆ ದಿನ ಸಾಯಂಕಾಲ 4 ಗಂಟೆಯಿಂದ ಮಿ. ಬಿ. ಕೆ. ಸುಬ್ರಾಯರವರು ನಾಗಮಹಾಶಯರ ಜೀವಚರಿತ್ರೆಯನ್ನು ಕುರಿತು, ಜವಾನಸ್ವಾಮಿರ ಸಂಘದ ಹಾಲ್‌ನಲ್ಲಿ ಪ್ರವಚನ ಮಾಡುತ್ತಾರೆಂದೂ, ಸರ್ವರಿಗೂ ಆಮಂತ್ರಣವಿದೆಯೆಂದೂ ಸದರಿ ಸಂಘದ ಸೆಕ್ರೆಟರಿಯವರು ತಿಳಿಸುತ್ತಾರೆ.

ಸಾರ್ವಜನಿಕ ಮೀಟಿಂಗುಗಳು.

ಅಸ್ಪೃಶ್ಯರಿಗೆ ಪ್ರತ್ಯೇಕ ಚುನಾವಣೆಯನ್ನು ಕೊಟ್ಟಿರುವ ಬ್ರಿಟಿಷ್ ಸರಕಾರದ ತೀರ್ಮಾನವನ್ನು ಬದಲಾಯಿಸುವ ಉದ್ದೇಶ್ಯ ಮಹಾತ್ಮ ಗಾಂಧಿಯವರು ಉಪವಾಸ ಮಾಡಿ ದೇಹತ್ಯಾಗ ಮಾಡಲು ಮಾಡಿದ ತೀರ್ಮಾನಕ್ಕಾಗಿ ಜನರ ವ್ಯಸನವನ್ನು ಸೂಚಿಸಿ, ಮಹಾತ್ಮರ ಜೀವವನ್ನು ಉಳಿಸಲು ದೇವರನ್ನು ಪ್ರಾರ್ಥಿಸುವ ಬಗ್ಗೆ ಈ ಕೆಳಗಿನ ಠರಾವುಗಳನ್ನು ಪಾಸುಮಾಡುವುದಕ್ಕಾಗಿ ಹಿಂದೂದೇಶದ ಎಲ್ಲಾ ಕಡೆಗಳಲ್ಲೂ ತಾ 19ರ ಸಾಯಂಕಾಲ 6 ಗಂಟೆಗೆ ಪಬ್ಲಿಕ್ ಮೀಟಿಂಗುಗಳನ್ನು ನಡಿಸಬೇಕೆಂದೂ, ಮರುದಿನ ಎಲ್ಲರೂ ಉಪವಾಸ ಆಚರಿಸಬೇಕೆಂದೂ ಕಾಂಗ್ರೆಸ್ಸಿನ ಹಂಗಾಮಿ ಅಧ್ಯಕ್ಷರಾದ ಶ್ರೀಯುತ ರಾಜಗೋಪಾಲಾಚಾರ್ಯರು ಮಾಡಿದ ಕೋರಿಕೆಯನ್ನನುಸರಿಸಿ ಕೊಡಗಿನಲ್ಲೂ ಹಾಗೆ ಮಾಡಬೇಕೆಂದು ಮಿ. ಪಿ. ಐ. ಬೆಳ್ಯಪ್ಪನವರು ಕನ್ನಡದಲ್ಲಿ 2000 ಹಸ್ತಪತ್ರಿಕೆಗಳನ್ನು ಅಚ್ಚು ಹಾಕಿಸಿ, ದೇಶದಲ್ಲಿ ಸಂತೆ ನಡಿಯುವ ಎಲ್ಲಾ ಕಡೆಗಳಲ್ಲೂ ಕಳೆದ ಶನಿವಾರ, ಆದಿತ್ಯವಾರ ಮತ್ತು ಸೋಮವಾರ ಹಂಚಿಸಿದರು. ಆದಿತ್ಯವಾರ ಗೋಣಿಕೊಪ್ಪಲಲ್ಲಿ ಈ ಹಸ್ತಪತ್ರಿಕೆಗಳನ್ನು ಸತ್ಯಾಗ್ರಹಿಗಳಲ್ಲದ ಮಿ. ಅಪ್ಪಂಡೆರಂಡ ತಮ್ಮಯ್ಯನವರು ಮತ್ತು ಮಿ. ಕಂಜಿತಂಡ ಮಾದಪ್ಪನವರು ಹಂಚುತ್ತಿದ್ದಾಗ್ಯೂ, ಅರ್ಧ ಹಂಚಿದ ಮೇಲೆ, ಪೋಲೀಸ್ ಸಬ್ ಇನ್‌ಸ್ಪೆಕ್ಟರಾದ ಮಿ. ಮಂಡೇಪಂಡ ಗಣಪತಿಯವರು ಅವರ ಕೈಯಲ್ಲಿದ್ದ ಹಸ್ತಪತ್ರಿಕೆಗಳನ್ನು ಕಿತ್ತುಕೊಂಡು, ಅವರಿಬ್ಬರನ್ನು ಪೋಲೀಸ್ ಸ್ಟೇಶನಿಗೆ ಕರೆದುಕೊಂಡು ಹೋಗಿ ಸದರಿ ಹಸ್ತಪತ್ರಿಕೆಗಳನ್ನು ಹಂಚ ಕೂಡದೆಂದು ಹೆದರಿಸಿದರೆಂದೂ, ಆದರೆ ಅವರು ಹಾಗೆ ಹಂಚಲು ಅಂಜುವದಿಲ್ಲವೆಂದು ಹೇಳಿದರೆಂದೂ ವರ್ತಮಾನ. ಬೇರೆ ಕಡೆಗಳಲ್ಲಿ ಪೋಲೀಸರ ಆಟಂಕವಿರಲಿಲ್ಲ.

ಠರಾವುಗಳು—'ಮಹಾತ್ಮ ಗಾಂಧಿಯವರು ಸರಕಾರಕ್ಕೆ ಬರೆದ ಪತ್ರದಲ್ಲಿ ಪ್ರಕಟಿಸಿರುವ ತಾನು ಉಪವಾಸವಿದ್ದು ದೇಹ ಬಿಡುತ್ತೇನೆಂಬ ತೀರ್ಮಾನದಿಂದ ಸರ್ವರ ಮನಸಿನಲ್ಲಿ ಉಂಟಾದ ವ್ಯಸನವನ್ನೂ, ಗಲಿಬಿಲಿಯನ್ನೂ ಸೂಚಿಸುವುದರಲ್ಲಿ ಒಟ್ಟು ಹಿಂದೂಸ್ಥಾನದೊಂದಿಗೆ.... ....ಊರಿನ ಈ ಸಾರ್ವಜನಿಕ ಸಭೆಯು ಸೇರುತ್ತದೆ. ಆದರೆ ಸರಕಾರವು ತನ್ನ ನೀತಿಯನ್ನು ಬದಲಾಯಿಸುವುದರಿಂದ ಈ ದುರ್ಘಟನೆಯು ಸಂಭವಿಸದಿರಾದಂತ ದೇವರ ಪ್ರಾರ್ಥನೆಯೊಡನೆ ಈ ಸಭೆಯು ಆಶಿಸುತ್ತದೆ.'

'ಮಹಾತ್ಮರು ಅವರ ಉಪವಾಸವನ್ನು ಪ್ರಾರಂಭಿಸಿದರೆ ಸಾರ್ವಜನಿಕರ ಅಭಿಪ್ರಾಯದ ಒತ್ತಾಯದಿಂದ ಅಸ್ಪೃಶ್ಯರನ್ನು ಹಿಂದೂಗಳಿಂದ ಬೇರ್ಪಡಿಸುವ ಸರಕಾರದ ನೀತಿಯನ್ನು ಬಿಡುವುದರ ಮೂಲಕ ಉಪವಾಸವು ಶೀಘ್ರದಲ್ಲೇ ಅಂತ್ಯವಾದೀತೆಂತ ಈ ಸಭೆಯು ಆಶಿಸುತ್ತದೆ.'

'ದೇಶಕ್ಕೆ ಒಂದೊದಗಿರುವ ಈ ಭಯಂಕರ ಆಪತ್ತನ್ನು ದೇವರು ತಪ್ಪಿಸಲಿ ಎಂತ ದೇವರನ್ನು ಈ ಸಭೆಯು ಸುಪೂರ್ಣ ಭಕ್ತಿ ಪೂರ್ವಕವಾಗಿ ಬೇಡಿಕೊಳ್ಳುತ್ತದೆ.'

ಮಡಿಕೇರಿ—ಮಿ. ಸಿ ಯಸ್. ವೆಂಕಪ್ಪಯ್ಯನವರಿಗೋರಿಕೆ ಮೇರೆ ಮೇಲಿನ ಉದ್ದೇಶ್ಯಕ್ಕಾಗಿ ತಾ. 19ರ ಸಾಯಂಕಾಲ 6 ಗಂಟೆಗೆ ಜವಾನಸ್ವಾಮಿರ ಸಂಘದ ಹಾಲ್‌ನಲ್ಲಿ ಸಾರ್ವಜನಿಕ ಸಭೆಯು ಸೇರಿತು. ಸುಮಾರು 60 ಜನರು ಹಾಜರಿದ್ದರು. ರಾ. ಬಾ. ಕೋಡಿಮಣಿಯಂಡ ಸುಬ್ಬಯ್ಯನವರು ಅಧ್ಯಕ್ಷರಾಗಿದ್ದರು. ಅಧ್ಯಕ್ಷರು ಮೀಟಿಂಗಿನ ಉದ್ದೇಶ್ಯವನ್ನು ಕುರಿತು ಕೆಲವು ಮಾತುಗಳನ್ನಾಡಿದ ಮೇಲೆ, ಮೌನವಾಗಿ ಪ್ರಾರ್ಥನೆ ಮಾಡಿ ಮೇಲೆ ಸೂಚಿಸಿದ ಠರಾವುಗಳನ್ನು ಪಾಸು ಮಾಡಲಾಯಿತು.

ವೀರಾಜಪೇಟೆ—ಮೆ. ಗಳಾದ ಸಿ. ಯಸ್. ಉತ್ತಯ್ಯ ಆರ್. ಯಸ್. ಸಂಜೀವರಾವ್ ಮತ್ತು ಮಹ್ಮದ್ ಇಸ್ಮಾಯಿಲ್‌ರವರ ನೋಟೀಸು ಮೇರೆ ರೀಡಿಂಗ್ ರೂಮಿನ ಎದುರುಗಡೆ ಇರುವ ಮೈದಾನದಲ್ಲಿ ಪಬ್ಲಿಕ್ ಮೀಟಿಂಗು ನಡೆಯಿತು. ಸುಮಾರು 200 ಜನರು ನೆರೆದಿದ್ದರು. ಮಿ. ಪಳಿಯಂಡ ಕುಟ್ಟಪ್ಪನವರು ಅಧ್ಯಕ್ಷ ಸ್ಥಾನವನ್ನು ವಹಿಸಿದ್ದರು. ಪ್ರಾರ್ಥನೆ ನಡಿಸಿದನಂತರ ಮೇಲಿನ ಠರಾವುಗಳು ಮಂಜೂರು ಮಾಡಲಾದವು.

ಪೊನ್ನಂಪೇಟೆ—ಈ ಸಂಬಂಧ ಪೊನ್ನಂಪೇಟೆಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಮೆ. ಮಚ್ಚಿಯಂಡ ಸುಬ್ಬಯ್ಯನವರು ಅಧ್ಯಕ್ಷರಾಗಿದ್ದರು. ಮೇಲಿನಂತೆಯೇ ತೀರ್ಮಾನಗಳು ಮಾಡಲ್ಪಟ್ಟವು.

ಸುಂಟಿಕೊಪ್ಪ—ಮೇಲಿನ ಉದ್ದೇಶ್ಯಕ್ಕಾಗಿ ಸುಂಟಿಕೊಪ್ಪಲಲ್ಲಿ ಒಂದು ಪಬ್ಲಿಕ್ ಮೀಟಿಂಗು ನಡೆಯಿತು. ಸುಮಾರು 60 ಜನರು ಹಾಜರಿದ್ದರು. ಬೇರೆ ಕಡೆಗಳಂತೆ ಗೊತ್ತುವಳಿಗಳು ಮಂಜೂರು ಮಾಡಲ್ಪಟ್ಟವು.

ಅಮ್ಮತ್ತಿ—ಈ ಬಗ್ಗೆ ಅಮ್ಮತ್ತಿಯಲ್ಲಿ ನಡೆದ ಸಭೆಯಲ್ಲಿ 80ಕ್ಕಿಂತ ಹೆಚ್ಚು ಜನರು ಸೇರಿದ್ದರು. ಮಿ. ಕಾವೇರಿ ಸುಬ್ರಾಯರು ಅಧ್ಯಕ್ಷರಾಗಿದ್ದರು. ಮಿ. ನೆಲ್ಲಮಕ್ಕಳ ದೇವಯ್ಯನವರು ಉಪವಾಸದ ಕಾರಣವನ್ನು ವಿವರಿಸಿದ ಬಳಿಕ ಪ್ರಾರ್ಥನೆಯೊಂದಿಗೆ ಠರಾವುಗಳು ಮಂಜೂರು ಮಾಡಲ್ಪಟ್ಟವು.

ನಲ್ಕೇರಿ ತಕ್ಕಲು—ಈ ಗ್ರಾಮದಲ್ಲಿ ನಡೆದ ಸಭೆಯಲ್ಲಿ 60ಕ್ಕಿಂತ ಹೆಚ್ಚು ಜನರಿದ್ದರು. ಮಿ. ಮುಕ್ಕಾಟಿರ ಬೆಳ್ಯಪ್ಪನವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು.

ಚೆಂಬೆಬೆಳ್ಯೂರು—ಈ ಗ್ರಾಮದ ಸುಮಾರು 80 ಜನರು ಭದ್ರಕಾಳಿ ದೇವಸ್ಥಾನದಲ್ಲಿ ಸೇರಿ, ಮಿ. ಅಪ್ಪಾರಂಡ ಕರುಂಬಯ್ಯನವರ ಅಧ್ಯಕ್ಷತೆಯಲ್ಲಿ ಮೀಟಿಂಗು ನಡಿಸಿದರು.

ಹುದಿಕೇರಿ—ಹುದಿಕೇರಿಯಲ್ಲಿ ಅನೇಕ ಜನರು ಸೇರಿ ಮಹಾತ್ಮರ ಉಪವಾಸದ ಸಂಬಂಧ ಮೀಟಿಂಗು ನಡಿಸಲು ಯತ್ನಿಸಿದಾಗ ಪೋಲೀಸ್ ಸಬ್ ಇನ್‌ಸ್ಪೆಕ್ಟರಾದ ಮಿ. ಮಂಡೇಪಂಡ ಗಣಪತಿಯವರು ಅವರನ್ನು ಬಲಾತ್ಕಾರದಿಂದ ಚದರಿಸಿಬಿಟ್ಟರೆಂದು ವರ್ತಮಾನ.

ಬಿಳುಗುಂದ ಹೊಲೆಯರ ಸಭೆ—ಮಿ. ಬಲ್ಯಕೋಮಾರಿಯವರ ಮೇಹನತ್ತಿನಿಂದ ಬಿಳುಗುಂದ ಹೊಲಗೇರಿಯಲ್ಲಿ ಅಸ್ಪೃಶ್ಯರ ಸಭೆಯೊಂದು ನಡೆಯಿತು. ಹೆಂಗಸರು, ಗಂಡಸರು, ಮಕ್ಕಳು ಸೇರಿ ಸುಮಾರು 100 ಮಂದಿ ಹಾಜರಿದ್ದರು. ಮಿ. ಚಾಮರರವರು ಅಧ್ಯಕ್ಷರಾಗಿದ್ದರು. ದೇವರನ್ನು ಪ್ರಾರ್ಥಿಸಿದ ಕೂಡಲೆ ಮೇಲಿನ ತೀರ್ಮಾನಗಳನ್ನು ಮಂಜೂರು ಮಾಡಿದರು.

ಕೈಕೇರಿ—ಮಹಾತ್ಮರ ವ್ರತದ ಸಂಬಂಧ ಕೈಕೇರಿ ಗ್ರಾಮದಲ್ಲಿ ನಡೆದ ಮೀಟಿಂಗಿನಲ್ಲಿ ಸೇರಿದ್ದವರಲ್ಲಿ ಅರ್ಧ ಜನರು ಅಸ್ಪೃಶ್ಯರಾಗಿದ್ದರು. ಮಿ. ಬಮ್ಮಚ್ಚ ಮಾದಪ್ಪನವರು ಅಧ್ಯಕ್ಷಸ್ಥಾನದಲ್ಲಿದ್ದರು. ಮೌನವಾಗಿ ಪ್ರಾರ್ಥನೆ ನಡಿಸಿ ಹಸ್ತಪತ್ರಿಕೆಯಲ್ಲಿ ಸೂಚಿಸಿದ ಠರಾವುಗಳನ್ನು ಪಾಸುಮಾಡಲಾಯಿತು.

ಹಳ್ಳಿಗಟ್ಟು—ಈ ಗ್ರಾಮದ ನಾಡು ದೇವಸ್ಥಾನದಲ್ಲಿ ಮಿ. ಮಚ್ಚಿಯಂಡ ಸೋಮಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ಮೀಟಿಂಗಿನಲ್ಲಿ ಗಂಡಸರು, ಹೆಂಗಸರು ಸೇರಿ ಸುಮಾರು 40 ಜನರು ನೆರೆದಿದ್ದರು. ಠರಾವುಗಳನ್ನು ಪಾಸುಮಾಡುವ ಮುಂಚೆ ಪ್ರಾರ್ಥನೆಯೂ ನಡೆಯಿತು.

ಬಿಳುಗುಂದ—ಈ ಸಂಬಂಧ ಬಿಳುಗುಂದದಲ್ಲಿ ನಡೆದ ಮೀಟಿಂಗಿಗೆ 70 ಜನರು ಸೇರಿದ್ದರು. ಮಿ. ಮೂಕೊಂಡ ಅಚ್ಚಯ್ಯನವರು ಅಧ್ಯಕ್ಷರಾಗಿದ್ದರು.

ಶನಿವಾರಸಂತೆ—ತಾ. 20 ರಲ್ಲಿ ಮಿ. ಬಿದರೂರು ಮಾದಯ್ಯನವರ ಮೇಹನತ್ತಿನಿಂದ ಶನಿವಾರಸಂತೆ ಪಟ್ಟಣಿಗರು ಮತ್ತು ನೆರೆ ಹೊರೆ ಗ್ರಾಮದವರು ಶನಿವಾರಸಂತೆಯಲ್ಲಿ ಮಿ. ಜಿ ಯಸ್. ಮುತ್ತಣ್ಣನವರ ಅಧ್ಯಕ್ಷತೆಯಲ್ಲಿ ಸೇರಿ ಮಹಾತ್ಮರ ಪ್ರಾಣವನ್ನು ಕಾಪಾಡುವಂತೆ ಭಗವಂತನಿಗೆ ಪ್ರಾರ್ಥಿಸಿದರು.

ಉಪವಾಸ—ಮಹಾತ್ಮರು ಉಪವಾಸವನ್ನು ಪ್ರಾರಂಭಿಸಿದ ತಾ. 20 ರಲ್ಲಿ ಕೊಡಗಿನ ಅನೇಕ ಕಡೆಗಳ ಪಟ್ಟಣ ಮತ್ತು ಗ್ರಾಮಗಳಲ್ಲಿಯೂ ಸ್ತ್ರೀಯರು, ಪುರುಷರು, ಮಕ್ಕಳು ಸಾವಿರಗಟ್ಲೆಯಲ್ಲಿ ಒಂದು ದಿನ ಉಪವಾಸವನ್ನು ಆಚರಿಸಿದರು.

ನ್ನು ಮನಸ್ಸಿಗೆ ತೆಗೆದುಕೊಂಡು ಪುನಃ ಯೋಚಿಸಿ ಕೊಡಗು ಸರಕಾರದಿಂದ ಮದ್ರಾಸ್ ಸರಕಾರವು ಈ ಹಿಡಲಿಕೆಯನ್ನು ಕೇಳದಂತೆ ಮಾಡಬೇಕು.

ಮೇಲೆ ಬರೆದ (b) ವಿಷಯವಾಗಿ ಹೇಳಬೇಕಾದದ್ದೇನೆಂದರೆ—ಈ ಬಾಬಿನ ಖರ್ಚು ವರ್ಷ ವರ್ಷ ಹೆಚ್ಚುತ್ತಲೇ ಇವೆ. ಯಾಕೆಂದರೆ, ಕೊಡಗಿನಲ್ಲಿ ಕೆಲಸ ಮಾಡಿದ ಆಫೀಸರುಗಳು ರಿಟೈರ್ ಆಗುತ್ತಾ ಬರುತ್ತಾರೆ. ರಜದಲ್ಲಿ ಹೋಗಬಹುದಾದ ಆಫೀಸರುಗಳ ರಜಾ ಸಂಬಳಕ್ಕಾಗಿ ಬರುವ ವರ್ಷ ಕೊಡಬೇಕಾದ ರೂ. 26,500 ಅಲ್ಲದೆ ಪಿಂಚಿಣಿಗಾಗಿ 18000 ರೂ. ಹಣ ಕೊಡಬೇಕಾಗುತ್ತದೆ.

ಮೇಲೆ ಬರೆದ (c) ವಿಷಯ:—1932—33ರ ಬಡ್ಜೆಟ್ಟಿನಲ್ಲಿ ಅರಮನೆಯ ರಿಪೇರಿಗಾಗಿ ರೂ. 72,500 ಇಡಲಾಗಿದೆ. ಅರಮನೆ ರಿಪೇರಿಗಾಗಿ ಇಂಡಿಯಾ ಸರಕಾರದಿಂದ ಹಣ ಕೊಡಬೇಕೆಂತ ಕೇಳಿದ್ದಕ್ಕೆ ಇಂಡಿಯಾ ಸರ್ಕಾರದ ತಾ. 2—9—1926ರ ಕಾಗದದಲ್ಲಿ ಈ ಖರ್ಚು ಪ್ರಾಂತೀಯ ಸರ್ಕಾರದ್ದೇ ಆಗಬೇಕೆಂತ ಬರೆದಿದೆ. ಈ ಖರ್ಚು ಹಿಂದಿನ ಆಡಳಿತದಿಂದ ಕೊಡಗಿನ ಸರ್ಕಾರದ ಮೇಲೆ ಬಿದ್ದದ್ದಾಗಿದೆ. 1920ನೇ ಇಸವಿಗಿಂತ ಮೊದಲೇ ಎಕ್ಸ್‌ಪರ್ಟ್‌ಗಳು ಅರಮನೆಯು ಅಭದ್ರವಾಗಿದೆಯೆಂತ ಸರ್ಟಿಫೈ ಮಾಡಿದ್ದರು. ಆದರೂ 1931ಕ್ಕಿಂತ ಮೊದಲೇ ಈ ರಿಪೇರಿ ಕೆಲಸ ತೊಡಗಲು ಸಾಧ್ಯವಾಗಲಿಲ್ಲ. ಅರಮನೆಯ ಪೂರ್ವ ದಿಕ್ಕಿನ ಭಾಗವು ಬಿದ್ದುಹೋಗಬಹುದೆಂತ ಎಕ್ಸ್‌ಪರ್ಟ್‌ಗಳು ಹೇಳಿದ್ದರಿಂದಲೂ, ಸರಕಾರಿ ಆಫೀಸುಗಳನ್ನು ಇಟ್ಟುಕೊಳ್ಳಲು ಜಾಗವಿಲ್ಲದ್ದರಿಂದಲೂ ಈ ಕೆಲಸವನ್ನು ಕೂಡಲೇ ಪ್ರಾರಂಭಿಸಬೇಕಾದದ್ದು ಅವಶ್ಯವಾಯಿತು. 1931—32ರ ಬಡ್ಜೆಟ್ಟಿನಲ್ಲಿ ಈ ಬಗ್ಗೆ 50,000 ರೂ. ಇಡಲಾಗಿತ್ತು. 1932—33ರ ಬಡ್ಜೆಟ್ಟಿನಲ್ಲಿ 72,500 ಇಡಲಾಗಿದೆ. ಹಣವಿಲ್ಲದ್ದಕ್ಕಾಗಿ ಈ ಬಾಬಿನ ಖರ್ಚನ್ನು ಕೆಲವು ವರ್ಷಗಳೊಳಗೆ ಹಂಚಿಕೊಳ್ಳಬೇಕಾಗಿದೆ.

6. ಕೊಡಗಿನ ಆದಾಯ ವೆಚ್ಚವನ್ನು ಬೇರ್ಪಡಿಸಿದ ಕೂಡಲೇ 1924ರಲ್ಲಿ ಕೊಡಗಿಗೆ ಹಿಂದಿನ ಸಿಲ್ಕು ಕೊಡಬೇಕೆಂಬ ಒಂದು ಠರಾವು ಕೌನ್ಸಿಲಿನಲ್ಲಿ ಚರ್ಚೆಯಾಯಿತು. ಇದೇ ವಿಷಯವು ಪುನಃ 1927, 1929ರಲ್ಲಿ ಸಹ ಚರ್ಚೆಯಾಯಿತು. 1931ನೇ ಇಸವಿ ಅಕ್ಟೋಬರ್ ತಿಂಗಳ ಅಧಿವೇಶನದಲ್ಲಿ ಸಹ ಚರ್ಚೆಯಾಯಿತು. ಈ ಠರಾವನ್ನು ಸರ್ಕಾರವು ಅಂಗೀಕರಿಸಿಕೊಂಡಿತು. ಈ ಠರಾವಿನ ಮೇಲೆ ನಡೆದ ಭಾಷಣಗಳನ್ನು ಇದರ ಸಂಗಡ ಜೋಡಿಸಿರುತ್ತೇನೆ.

1929—30ರಲ್ಲಿ ಕೊಡಗಿನ ಸರ್ಕಾರವು ಮಾಡಿದ ಖರ್ಚನ್ನು ಅಜಮಾಯಿಸಲು ಕೂಡಿದ ಪಬ್ಲಿಕ್ ಎಕೌಂಟ್ಸ್ ಕಮಿಟಿಯು ಕೊಡಗಿನ ಶೋಚನೀಯ ಆರ್ಥಿಕ ಸ್ಥಿತಿಯ ದೆಸೆಯಿಂದ ಇಂಡಿಯಾ ಸರ್ಕಾರದಿಂದ ಸಿಲ್ಕನ್ನು ಪಡೆಯಲು ಕೂಡಲೇ ಪ್ರಯತ್ನಿಸಬೇಕೆಂತ ಅಭಿಪ್ರಾಯಪಟ್ಟಿದೆಯೆಂತ ತಿಳಿಸಬೇಕಾಗಿದೆ. ಕೊಡಗಿನ ಉಳುವರಿಯನ್ನು ಇಡುವ ವಿಷಯದಲ್ಲಿ ಈ ಕೆಳಗಿನ ಅಭಿಪ್ರಾಯ ಸಹ ಕೊಟ್ಟಿದ್ದಾರೆ:—

'ಪಬ್ಲಿಕ್ ಎಕೌಂಟ್ಸ್ ಕಮಿಟಿಯು ಕಳೆದ ವರ್ಷ ಕೊಟ್ಟ ಅಭಿಪ್ರಾಯದ ಮೇರೆ ಕೊಡಗಿನ ಉಳುವರಿಯನ್ನು ಇಂಡಿಯಾ ಸರ್ಕಾರದೊಂದಿಗೆ ಇಟ್ಟು ಬಡ್ಡಿ ಪಡೆಯಬೇಕೆಂಬುದನ್ನು ಕಾರಣ ಚೀಫ್ ಕಮಿಶನರು ಇಂಡಿಯಾ ಸರ್ಕಾರಕ್ಕೆ ಬರೆದರೆಂದೂ, ಸ್ಟೇಟ್ ಸೆಕ್ರೆಟರಿಯವರ ಮಂಜೂರಾತಿಯಿಂದ ಈ ಅಭಿಪ್ರಾಯವನ್ನು ಅಂಗೀಕರಿಸಿಕೊಂಡಿದ್ದಾರೆಂತಲೂ ತಿಳಿಯಿತು.

ಇಂಡಿಯಾ ಸರ್ಕಾರದೊಂದಿಗೆ ಹಣವನ್ನು ಇಡುವುದು ಹೇಗೆ ಎಂಬುದನ್ನೂ ಅದಕ್ಕೆ ಬಡ್ಡಿ ಹೇಗೆ ಬೆಳೆಯುತ್ತದೆಂಬುದನ್ನೂ ಎಕೌಂಟೆಂಟ್ ಜನರಲರು ನಮಗೆ ತಿಳಿಸಿದರು. ಇಂಡಿಯಾ ಸರ್ಕಾರದ ರಿಯಾಯಿತಿಗೆ ನಾವು ಕೃತಜ್ಞರಾದರೂ ಇದನ್ನು ಉಪಯೋಗಿಸಿಕೊಳ್ಳಲು ಕೊಡಗಿನ ಸರ್ಕಾರಕ್ಕೆ ಈಗ ಸಾಧ್ಯವಿಲ್ಲವೆಂಬುದಕ್ಕೆ ವ್ಯಸನಪಡುತ್ತೇವೆ. ಮೊದಲಿದ್ದ ಉಳುವರಿಯೆಲ್ಲಾ ಖರ್ಚಾಗಿ ಹೋಗಿ ಖರ್ಚಿಗೆ ಹಣವಿಲ್ಲದೆ ಹೊಸ ತೆರಿಗೆ ಹಾಕುತ್ತಿರುವುದರಿಂದ ಇಂಡಿಯಾ ಸರಕಾರದಲ್ಲಿ ಇಡಲು ಹಣವಿಲ್ಲ.

7. ಎಷ್ಟು ಖರ್ಚು ಖೋತೆ(?) ಮಾಡಿದರೂ, ಕೆಲವು ಹೊಸ ತೆರಿಗೆಗಳನ್ನು ಹಾಕಿದರೂ ಆಡಳಿತ ನಡಿಸುವುದೇ ಕಷ್ಟವಾಗಿದೆ; ಇವಕ್ಕೂ ಬಹಳ ಹೆಚ್ಚು ಕಡಿಮೆಯಾಗುವ ಭರವಸೆ ಇಲ್ಲದ ರೀತಿಯ ಉತ್ಪತ್ತಿಯನ್ನು ನಂಬಬೇಕಾಗಿದೆ. ಬೇರೆ ದೊಡ್ಡ ಬ್ರಿಟಿಷ್ ಪ್ರಾಂತ್ಯದಲ್ಲಾದರೂ ಎಷ್ಟೋ ಮೊದಲು ಮಾಡಬೇಕಾಗಿದ್ದ ಬಹಳ ಮುಖ್ಯ ಬಂಡವಾಳದ ಖರ್ಚುಗಳು, ಈ ದೇಶದಲ್ಲಿ ಹಣವಿಲ್ಲದೆ ಬಾಕಿಯಾಗಿದೆ. ಆದರೆ ಇವಕ್ಕೆ ಮುಂದುವರಿಸಿ ಇಡಲು ಅಸಾಧ್ಯವಾದ ಒಂದು ಕೆಲಸ, ಅರಮನೆ ರಿಪೇರಿಯನ್ನು ಪ್ರಾರಂಭಿಸಲಾಗಿದೆ. ಇದಕ್ಕೆ ಸುಮಾರು 2½ ಲಕ್ಷ ರೂಪಾಯಿ ತಗಲಬಹುದೆಂತ ಅಂದಾಜು ಮಾಡಲಾಗಿದೆ. ಕೊಡಗಿನ ಈಗಿನ ಆರ್ಥಿಕ ಸ್ಥಿತಿಯಲ್ಲಿ ಇಷ್ಟು ದೊಡ್ಡ ಖರ್ಚಿಗೆ ಹಣ ದೊರಕಿಸುವುದು ಅಸಾಧ್ಯವಾಗಿದೆ. ಅತ್ಯಗತ್ಯವಾದ ರಸ್ತೆಗಳ ರಿಪೇರಿ ಮತ್ತು ಕಟ್ಟಡಗಳ ರಿಪೇರಿಯಂಥ ಬಾಬುಗಳಿಗೆ ಹೆಚ್ಚು ಖರ್ಚು ಮಾಡಬೇಕೆಂಬ ಈ ಕಾಲದಲ್ಲಿ ಅಂಥ ಖರ್ಚುಗಳನ್ನು ನಿಲ್ಲಿಸಿ ಅರಮನೆ ರಿಪೇರಿಗೆ ಹಣ ಕೊಡಬೇಕಾಗಿದೆ.

8. ಇವೂ ಅಲ್ಲದೆ ಮದ್ರಾಸ್ ಸರಕಾರವು ಈ ಕೊಡಗು ಪ್ರಾಂತ್ಯದ ಸರಕಾರದಿಂದ ಬೇರೆ ಬೇರೆ ಬಾಬುಗಳಿಗಾಗಿ ಆಗಿಂದಾಗ್ಗೆ ಹೊಸ ಹೊಸ ಹಣಗಳನ್ನು ಕೇಳುತ್ತಿದ್ದಾರೆ. ಇವು ಯಾವುವೆಂದರೆ—ಗ್ರಾಮ ಮುಖ್ಯಸ್ಥರುಗಳನ್ನು ಟ್ರೈನು ಮಾಡುವ ಖರ್ಚು, ಮಡಿಕೇರಿಯಲ್ಲಿ ನಡಿಸುವ ಸ್ಪೆಶಲ್ ಟೆಸ್ಟು ಪರೀಕ್ಷೆಗಳ ಖರ್ಚು, ಕೊಡಗಿನ ಪೋಸ್ಟಾಫೀಸುಗಳಲ್ಲಿ ಮಾರಾಟವಾದ ಕ್ವಯಿನಾಯಿನಿಗೆ(?) ಕಡಿಮೆ ಕ್ರಯದಿಂದ ಆದ ನಷ್ಟ, ಮತ್ತು ಕೊಡಗಿನ ಆಸ್ಪತ್ರೆಗಳನ್ನು ಸಂದರ್ಶಿಸಲಿಕ್ಕೆ ಬಂದ ಸರ್ಜನ್ ಜನರಲರ ಪ್ರಯಾಣದ ಭತ್ಯ ವಗೈರೆ.

9. ಕೃಷಿ ಸಂಬಂಧವಾಗಿ ನೇಮಕವಾಗಿದ್ದ ರಾಯಲ್ ಕಮಿಶನಿನವರು ಕೊಡಗಿಗೆ ಶಿಫಾರಸು ಮಾಡಿರುವ ಕೆಲಸಗಳನ್ನು ಜಾರಿಮಾಡಲು ಹಣವಿಲ್ಲವೆಂತಲೂ ತಿಳಿಸಬೇಕಾಗಿದೆ. ಕೃಷಿಯ ಮೇಲೆಯೇ ಹೊಂದಿರುವ ಪ್ರಾಂತ್ಯದಲ್ಲಿ ಕೃಷಿಯ ಅಭಿವೃದ್ಧಿಗೆ ಮಾಡಬೇಕಾದ ಖರ್ಚುಗಳನ್ನು ಮಾಡದಿರುವುದು ದೊಡ್ಡ ಕೊರತೆಯಾಗಿದೆ. (ಮಹತ್ವದ ವಿಷಯವಾಗಿದೆ)

10. (1) ಕೊಡಗಿನ ಆದಾಯ ವೆಚ್ಚವನ್ನು ಬೇರ್ಪಡಿಸಿದಾಗ ಇಂಡಿಯಾ ಸರಕಾರದಿಂದ ಸಿಲ್ಕು ಕೊಡಗಿಗೆ ಸಿಕ್ಕಬೇಕಾದದ್ದು ನ್ಯಾಯವೆಂತ ಇಂಡಿಯಾ ಸರಕಾರವು ಈ ಮೊದಲೇ ಒಪ್ಪಿರುತ್ತದೆ. ಆದರೆ ಅಂಥಾ ಹಣ ತತ್ಕಾಲ ಅವಶ್ಯವಿಲ್ಲವೆಂತ ಇಂಡಿಯಾ ಸರಕಾರವು ಕೊಡದೆ ಬಾಕಿ ಉಳಿಯಿತು. ಆದರೆ ಕೊಡಗಿನ ಈಗಿನ ಆರ್ಥಿಕ-ಸ್ಥಿತಿಯಲ್ಲಿ ಅಂಥಾ ಹಣದ ಅವಶ್ಯಕತೆ ಬಹಳವಾಗಿದೆಯೆಂತ ಇಂಡಿಯಾ ಸರಕಾರಕ್ಕೆ ಸ್ಪಷ್ಟವಾಗದೆ ಇರದು, ಎಂತಲೂ ಮತ್ತು

(2) ಕೊಡಗಿನ ಆದಾಯ ವೆಚ್ಚವನ್ನು ಬೇರ್ಪಡಿಸುವ ಮುಂಚೆ ಕೊಡಗಿನಲ್ಲಿ ಕೆಲಸ ಮಾಡಿದ ಆಫೀಸರುಗಳ ರಜಾ ಸಂಬಳವನ್ನು ಇಂಡಿಯಾ ಸರಕಾರವೇ ವಹಿಸಿಕೊಂಡೀತೆಂತಲೂ ಚೀಫ್ ಕಮಿಶನರು ನಂಬುತ್ತಾರೆ.

ಆದ್ದರಿಂದ ಮೇಲ್ಕಂಡ ವಿದ್ಯಮಾನಗಳನ್ನು ನೋಡಿ ಕೊಡಗಿನ ಹಕ್ಕಾದ ಹಿಂದಿನ ಸಿಲ್ಕನ್ನು ಇಂಡಿಯಾ ಸರಕಾರವು ಕೊಡಲು ತಡಮಾಡಲಿಕ್ಕಿಲ್ಲವೆಂತ ಚೀಫ್ ಕಮಿಶನರು ನಂಬುತ್ತಾರೆ. ಇಂಡಿಯಾ ಸರಕಾರದಿಂದ ಸಹಾಯ ದೊರೆಯದಿದ್ದರೆ ಕೊಡಗು ಬಡತನಕ್ಕೆ ಈಡಾಗುತ್ತದೆ. ಅದರಿಂದ ರಸ್ತೆಗಳೆಲ್ಲಾ ಕೆಟ್ಟುಹೋಗುತ್ತವೆ. ಸರಕಾರಿ ಕಟ್ಟಡಗಳೆಲ್ಲಾ ಮುರಿದು ಬೀಳುವಂತಾಗುತ್ತವೆ. ಆಸ್ಪತ್ರೆಗಳೆಲ್ಲಾ ಪುರಾತನ ಕಾಲದವಾಗುತ್ತವೆ. ಇದಕ್ಕಿಂತಲೂ ಮಹತ್ವದ ವಿಷಯವೇನೆಂದರೆ—ಗ್ರಾಮಾಂತರಗಳಲ್ಲಿರುವ ಜನರೆಲ್ಲಾ ಅಸ್ವಸ್ಥರಾಗುತ್ತಾರೆ. ಅಂಥಾ ಸ್ಥಿತಿಯು ಆಗದಂತೆ ನೋಡಿಕೊಳ್ಳುವುದು, ಒಂದೊದಗಿದರೆ ಮುಂದರಿಸದಂತೆ ನೋಡಿಕೊಳ್ಳುವುದೂ ಪ್ರತಿಯೊಂದು ಸರಕಾರದ ಕರ್ತವ್ಯವಾಗಿದೆ.

ಇಂಡಿಯಾ ಸರಕಾರದ ಫೈನಾನ್ಸ್ ಸೆಕ್ರೆಟರಿಯವರಿಂದ ಚೀಫ್ ಕಮಿಶನರಿಗೆ ಬಂದ ತಾ. 9—5—32 ರ ಕಾಗದ.

1. ನಿಮ್ಮ ತಾರೀಕು 27—1—32 ರ ಕಾಗದದಲ್ಲಿ ಕೊಡಗಿಗೆ ಹಿಂದಿನ ಸಿಲ್ಕು ಕೊಡಬೇಕೆಂತಲೂ, ಮದ್ರಾಸಿನಿಂದ ಕೊಡಗಿಗೆ ಕಳುಹಿಸಿದ ಆಫೀಸರುಗಳ ರಜಾ ಸಂಬಳವನ್ನು ಇಂಡಿಯಾ ಸರಕಾರವೇ ವಹಿಸಿಕೊಳ್ಳಬೇಕೆಂತಲೂ ನೀವು ಬರೆದಿದ್ದೀರಿ.

2. ನಿಮ್ಮ ತಾರೀಕು 30—4—32 ರ ಟೆಲಿಗ್ರಾಮಿನಲ್ಲಿ 1931—32 ನೇ ವರ್ಷದ ಅಂತ್ಯದಲ್ಲಿ ಸಿಲ್ಕು ರೂ. 2,06,000 ಮತ್ತು 1932—33 ನೇ ವರ್ಷದ ಅಂತ್ಯದಲ್ಲಿ ಸಿಲ್ಕು ರೂ. 1,96,000 ಆಗಬಹುದೆಂತ ತಿಳಿಸಿದ್ದೀರಿ. ಅಂದರೆ 1931—32 ರಲ್ಲಿ ಉತ್ಪತ್ತಿಗಿಂತ ಖರ್ಚು 76,000 ರೂ. ಹೆಚ್ಚಾಗುತ್ತೆಂತಲೂ, 1932—33 ರಲ್ಲಿ ಉತ್ಪತ್ತಿಗಿಂತ ಖರ್ಚು 100,00 ಹೆಚ್ಚಾಗುತ್ತೆಂತ ಆಯಿತು. ಈ ಕೆಳಗಿನ ಪಟ್ಟಿಯನ್ನು ನೋಡಿ. ದೊಡ್ಡ ಪ್ರಾಂತ್ಯಗಳಿಗೆ ಹೋಲಿಸಿದರೆ ಕೊಡಗು ಉತ್ತಮ ಸ್ಥಿತಿಯಲ್ಲಿದೆ ಎನ್ನಬಹುದು.

ಫೆಮಿನ್ ರಿಲೀಫ್ ಫಂಡಿಗೆ ಇಟ್ಟ ಹಣ ವಿನಹ ಮಿಕ್ಕ ಸಿಲ್ಕು ತಾ. 1—4—1931ರಲ್ಲಿ

ಬೊಂಬಾಯಿ	1,18,000
ಸಂಯುಕ್ತಪ್ರಾಂತ್ಯ	6,000
ಪಂಜಾಬ್	81,000
ಬರ್ಮ	14,000
ಮಧ್ಯಪ್ರಾಂತ್ಯ	1,000
ಅಸ್ಸಾಂ	20,000

ಅಲ್ಲದೆ 1931—32ರ ತಿದ್ದುಪಡಿಯಾದ ಬಜೆಟ್ ಮೇರೆ ಕೆಲವು ಪ್ರಾಂತ್ಯಗಳು ತಮ್ಮ ಖರ್ಚಿಗೆ ಹಣ ಸಾಲದೆ ಇಂಡಿಯಾ ಸರ್ಕಾರದಿಂದ ಹಣ ಪಡೆಯಬೇಕಾಗುತ್ತದೆಯೆಂತ ಅಂದಾಜು ಮಾಡಲಾಗಿದೆ. ಕೊಡಗಿಗೆ ತನ್ನ ಉಳಿವರಿಯನ್ನು ಇಂಡಿಯಾ ಸರ್ಕಾರದೊಂದಿಗೆ ಠೇವಣಿಯಾಗಿ ಇಡಲು ಅನುಕೂಲ ಮಾಡಿ ಕೊಟ್ಟ ಮೇಲೆ ಮದ್ರಾಸ್ ವಿನಾ ಬೇರೆ ಯಾವ ಪ್ರಾಂತ್ಯವೂ ಇಂಡಿಯಾ ಸರ್ಕಾರದೊಂದಿಗೆ ಠೇವಣಿ ಇಡಲಿಲ್ಲ. ಕೊಡಗಿನ ಆರ್ಥಿಕ ದುಃಸ್ಥಿತಿಯು ಬೇರೆ ಪ್ರಾಂತ್ಯಗಳಿಗೆ ಹೋಲಿಸಿದರೆ ಕೊಡಗಿಗೂ ಬೇರೆ ಪ್ರಾಂತ್ಯಗಳಿಗೂ ಒಂದೇ ತರದ ಸಂಕಟ ಬಂದಿರುವುದೆಂತ ಗೊತ್ತಾಗುತ್ತದೆ. ಇದು ಪ್ರಪಂಚದ ಆರ್ಥಿಕ ಸ್ಥಿತಿಯಿಂದ ಉಂಟಾದದ್ದು. ಇಂಥಾ ಕಷ್ಟವನ್ನು ನೀವು ಸೂಚಿಸಿರುವ ರೀತಿಯಿಂದ ಅಂದರೆ ಪ್ರಾಂತ್ಯಕ್ಕೆ ಹಿಂದಿನ ಸಿಲ್ಕು ಕೊಡುವುದರಿಂದ ಪರಿಹರಿಸಲು ಆಗುವುದಿಲ್ಲ.

3. ಮದ್ರಾಸ್ ಗವರ್ನಮೆಂಟಿನವರು ಎತ್ತಿದ ರಜಾ ಸಂಬಳದ ವಿಷಯವಾಗಿ ಇಂಡಿಯಾ ಸರ್ಕಾರದ ತಾ. 2—9—1926 ರ ಕಾಗದವನ್ನು ನೋಡಿ. ಆ ಕಾಗದದಲ್ಲಿ ಹೇಳಿರುವಂತೆ ಆಡಿಟ್ ರೂಲನ್ನು ಯಾವುದೇ ಪ್ರಾಂತ್ಯಕ್ಕೆ ಸಹಾಯವಾಗುವಂತೆ ಬದಲಾಯಿಸಲು ಆಗುವುದಿಲ್ಲ. ಪ್ರಾಂತೀಯ ಸರ್ಕಾರವೇ ವಹಿಸಿಕೊಳ್ಳಬೇಕಾದ ಈ ಖರ್ಚನ್ನು ಇಂಡಿಯಾ ಸರ್ಕಾರವು ವಹಿಸಿಕೊಳ್ಳಲು ಆಗುವುದಿಲ್ಲ. ಕೊಡಗಿನ ಸರ್ಕಾರದಿಂದ ಈ ಹಣವನ್ನು ಸುಲಭ ಕಂತಿನಲ್ಲಿ ತೆಗೆದುಕೊಳ್ಳುವಂತೆ ಮದ್ರಾಸ್ ಸರ್ಕಾರಕ್ಕೆ ತಿಳಿಸಲಾಗಿದೆ. ಮದ್ರಾಸ್ ಸರ್ಕಾರವೂ, ಕೊಡಗು ಸರ್ಕಾರವೂ ಈ ವಿಷಯದಲ್ಲಿ ಇಬ್ಬರಿಗೂ ಅನುಕೂಲವಾಗುವಂತೆ ಒಪ್ಪಂದ ಮಾಡಿಕೊಳ್ಳಬಹುದೆಂತ ಇಂಡಿಯಾ ಸರ್ಕಾರವು ಒಪ್ಪುತ್ತದೆ.

4. ಮೇಲೆ ವಿವರಿಸಿದ ವಿದ್ಯಮಾನಗಳಿಂದ ಈಗಿನ ಅಸಾಧಾರಣ ಸ್ಥಿತಿಯಲ್ಲಿ ಕೊಡಗಿಗೆ ಹಿಂದಿನ ಸಿಲ್ಕು ಕೊಡುವ ಸಂಭವವನ್ನು ಯೋಜಿಸಲು ಸಾಧ್ಯವಿಲ್ಲವೆಂತ ಇಂಡಿಯಾ ಸರ್ಕಾರವು ವಿಷಾದಿಸುತ್ತದೆ.

ಮಹಾತ್ಮರ ಉಪವಾಸ.

(2ನೇ ಪುಟದಿಂದ ಮುಂದುವರಿದದ್ದು)

ತೀರ್ಮಾನದ ಸಂಭವ.

ಮದ್ರಾಸಿನಲ್ಲಿ 30, ಬೊಂಬಾಯಿಯಲ್ಲಿ 16, ಬಂಗಾಳದಲ್ಲಿ 50, ಪಂಜಾಬಿನಲ್ಲಿ 10, ಸಂಯುಕ್ತ ಪ್ರಾಂತ್ಯದಲ್ಲಿ 40, ಬಿಹಾರ್ ಒರಿಸ್ಸಾದಲ್ಲಿ 20, ಮಧ್ಯಪ್ರಾಂತ್ಯದಲ್ಲಿ 20 ಮತ್ತು ಅಸ್ಸಾಮಿನಲ್ಲಿ 11 ಕೌನ್ಸಿಲು ಮೆಂಬರುತನಗಳನ್ನು ಅಸ್ಪೃಶ್ಯರಿಗೆ ಕಾಯ್ದಿಟ್ಟರೆ ತಾನು ಮಿಶ್ರ ಚುನಾವಣೆಗೆ ಒಪ್ಪುತ್ತೇನೆಂದು ತಾ. 21ರಲ್ಲಿ ಡಾ. ಅಂಬೇಡ್ಕರರು ಮುಂದಾಳುಗಳ ಕಾನ್ಫರೆನ್ಸಿನಲ್ಲಿ ಹೇಳಿದರು. ಈ ಸೂಚನೆಯನ್ನು ಸಪ್ರು, ರಾಜಗೋಪಾಲಾಚಾರಿ ಮೊದಲಾದವರು ಮಹಾತ್ಮರ ಭೇಟಿ ಮಾಡಿ ಅವರಿಗೆ ತಿಳಿಸಿರುವರು. ಮಹಾತ್ಮರು ಮರುದಿನ ರಾಜಾ, ಅಂಬೇಡ್ಕರರವರೊಂದಿಗೆ ಮಾತಾಡಿ ಜವಾಬು ಕೊಡುತ್ತೇನೆಂದು ಹೇಳಿರುವರು. ಪ್ರತ್ಯೇಕ ಚುನಾವಣೆಯನ್ನು ಬಿಡಲು ಎಲ್ಲರೂ ಒಪ್ಪಿರುವುದರಿಂದ ತೀರ್ಮಾನಕ್ಕೆ ಬರುವ ಸಂಭವವು ಹೆಚ್ಚಾಗಿದೆಯೆಂದು ಮುಂದಾಳುಗಳ ಅಭಿಪ್ರಾಯ.

ದೇವಾಲಯಗಳಿಗೆ ಅಸ್ಪೃಶ್ಯರ ಪ್ರವೇಶ.

ಮಹಾತ್ಮರ ಉಪವಾಸದ ನಿಮಿತ್ತ ಅಸ್ಪೃಶ್ಯತೆಯನ್ನೇ ಹೋಗಲಾಡಿಸಲು ಪ್ರಯತ್ನಗಳು ಹಲವು ಕಡೆಗಳಲ್ಲಿ ನಡೆಯುತ್ತಿವೆ. 'ಮಹಾತ್ಮರ ಉಪವಾಸ ವ್ರತದಿಂದ ಪ್ರಾಣ ತ್ಯಾಗ ಮಾಡುವ ಸಂಕಲ್ಪವು ನಾಗರೀಕ ಪ್ರಪಂಚವನ್ನೆಲ್ಲಾ ಘಾಬರಿಗೊಳಿಸಿದೆ. ಅಲ್ಲದೆ ಹಿಂದೂ ಸಮಾಜವನ್ನು ಅಗ್ನಿ ಪರೀಕ್ಷೆಗೆ ಗುರಿ ಮಾಡಿರುತ್ತದೆ. ಅಸ್ಪೃಶ್ಯರನ್ನು ಹಿಂದೂಗಳಿಂದ ಪ್ರತ್ಯೇಕಿಸುವ ಪ್ರಧಾನ ಮಂತ್ರಿಯವರ ದುರುದ್ದೇಶದ ವಿಚಾರವನ್ನು ಕೊನೆಗಾಣಿಸಲು ಬಂಗಾಳವು ಮಾರ್ಗದರ್ಶಕವಾಗಬೇಕು. ಆದುದರಿಂದ ಎಲ್ಲಾ ದೇವಾಲಯಗಳಿಗೆ ಅಸ್ಪೃಶ್ಯರು ಪ್ರವೇಶ ಮಾಡಲು ಬಿಡಬೇಕು' ಎಂದು ರಮಾನಂದ ಚಟರ್ಜಿ, ಯನ್. ಬಾಸು, ತುಲಸಿ ಗೋಸ್ವಾಮಿ, ಶ್ರೀ ಸರಲಾದೇವಿ ಚೌಧರಾಣಿ, ಸೇನಗುಪ್ತರ ಪತ್ನಿ ಮೊದಲಾದ 30 ಮಂದಿ ಬಂಗಾಳ ನಾಯಕರು ಜನರಲ್ಲಿ ಬಿನ್ನಹ ಮಾಡಿಕೊಂಡಿರುವರು.

ಮಹಾತ್ಮರು ಉಪವಾಸವನ್ನಾರಂಭಿಸಿದ ಸಮಯಕ್ಕೆ ಸರಿಯಾಗಿ ನಾಗಪುರದ ಒಂದು ಪುರಾತನ ದೇವಾಲಯದೊಳಗೆ ಅಸ್ಪೃಶ್ಯರನ್ನು ಹೋಗಬಿಟ್ಟರು. ಇವರು ಪಂಚಮರು ಅಲ್ಲಿಯ ಬಾವಿಯಿಂದ ನೀರು ಸೇದಿ ಪೂಜೆ ಮಾಡಿದರು. ಜಾತಿ ಹಿಂದೂಗಳೂ ಪೂಜೆಯಲ್ಲಿ ಭಾಗಿಗಳಾದರು. ಕಂಪ್ಲಿ ಮುನ್ಸಿಪಾಲಿಟಿಯ ಬಾವಿ ಮತ್ತು ಧರ್ಮ ಶಾಲೆಗಳನ್ನು ಅಸ್ಪೃಶ್ಯರು ಉಪಯೋಗಿಸಲು ಬಿಟ್ಟಿರುವರು. ಕರಾಚಿಯಲ್ಲಿ ರಾ. ಬ. ಶಿವರಾಮ ಮೋಹತಾರವರು ಸತ್ಯನಾರಾಯಣ ದೇವಸ್ಥಾನವನ್ನು ಪ್ರವೇಶಿಸಲು ಅಸ್ಪೃಶ್ಯರನ್ನು ಬಿಟ್ಟಿರುವರು. ತಾ. 19ರಲ್ಲಿ ಅಲ್ಲಹಾಬಾದಿನ 12 ದೇವಸ್ಥಾನಗಳಿಗೆ ಅಸ್ಪೃಶ್ಯರನ್ನು ಪ್ರವೇಶಿಸಲು ಬಿಟ್ಟರು. ಅವರು ಮಹಾತ್ಮರ ಹೆಸರಿನಲ್ಲಿ ಜಯಘೋಷ ಮಾಡುತ್ತಾ ದೇವಸ್ಥಾನದಿಂದ ದೇವಸ್ಥಾನಕ್ಕೆ ಹೋದರು. ಈ ದೇವಸ್ಥಾನಗಳ ಪೈಕಿ ಪಂಡಿತ ಮಾಳವೀಯರ ಸ್ವಂತ ದೇವಸ್ಥಾನವು ಒಂದಾಗಿದೆ. ಡೆಲ್ಲಿ ಮತ್ತು ಲಾಹೋರ್ ಪಟ್ಟಣಗಳಲ್ಲಿಯೂ ಹಲವು ದೇವಸ್ಥಾನಗಳೊಳಗೆ ಪಂಚಮರನ್ನು ಹೋಗಲು ಬಿಟ್ಟಿರುವರು. ಹೀಗೆಯೇ ಇನ್ನೂ ಹಲವು ಕಡೆಗಳಲ್ಲಿ ಅಸ್ಪೃಶ್ಯರಿಗೆ ದೇವಸ್ಥಾನಗಳ ಬಾಗಿಲುಗಳು ತೆರೆಯಲ್ಪಟ್ಟಿವೆ.

ಮಹಾತ್ಮರ ವ್ರತವನ್ನು ಕುರಿತು ವ್ಯಸನ ಸೂಚಿಸುವ ಠರಾವೊಂದು ಕಲ್ಕತ್ತಾ ಮುನ್ಸಿಪಾಲಿಟಿಯಲ್ಲಿ ಪಾಸಾಯಿತು.

ತಾ. 20ರಲ್ಲಿ ಮಹಾತ್ಮರ ಉಪವಾಸದ ದೆಸೆಯಿಂದ ಹಿಂದೂಸ್ಥಾನದ ಹಲವು ಪಟ್ಟಣಗಳಲ್ಲಿ ಹರತಾಳವು ಆಚರಿಸಲ್ಪಟ್ಟಿತು.

ಉಪವಾಸದ ಸಮಯದಲ್ಲಿ ಮಹಾತ್ಮರೊಂದಿಗೆ ಇರಲು ಅವರ ಮಗ ಮಣಿಲಾಲ್ ಗಾಂಧಿಯವರು ತಾ. 19ರಲ್ಲಿ ಆಫ್ರಿಕದ ಡರ್ಬಾನ್ ಪಟ್ಟಣದಿಂದ ಹೊರಟಿರುವರು.

ನಮುತಾಲ(?) ಎಂಬಲ್ಲಿ ಗಾಂಧಿ ಉಪವಾಸದ ಮೀಟಿಂಗನ್ನು ನಡೆಸಲು ಪೋಲೀಸಿನವರು ಬಿಡಲಿಲ್ಲ. ಮೀಟಿಂಗನ್ನು ಬಿಟ್ಟು ಹೋಗದ್ದರಿಂದ 21 ಜನರು ದಸ್ತಗಿರಿ ಮಾಡಲ್ಪಟ್ಟರು.

"ನೀವು ನನ್ನ ಉಪವಾಸವನ್ನು ಹಬ್ಬವೆಂದು ಎಣಿಸಬೇಕು ಮತ್ತು ನೀವು ನನ್ನೊಂದಿಗೆ ಉಪವಾಸ ಮಾಡಬಾರದು" ಎಂದು ಮಹಾತ್ಮರು ಅವರ ಸಬರಮತಿ ಆಶ್ರಮದವರಿಗೆ ಕಾಗದ ಬರೆದಿರುವರು.

ವೈಸರಾಯರ ಭಾಷಣ.

(ಕಳೆದ 2ನೇ ವಾರದಿಂದ ಮುಂದುವರಿದದ್ದು.)

ಕೋಮುವಾರು ಸಮಸ್ಯೆಯ ತೀರ್ಮಾನ.

ಹೊಸ ರಾಜಕೀಯ ರಚನೆಯಲ್ಲಿ ಪ್ರಾಂತೀಯ ಕೌನ್ಸಿಲುಗಳಲ್ಲಿ ಕೋಮುವಾರು ಪ್ರತಿನಿಧಿತ್ವ ಹೇಗಿರಬೇಕೆಂಬುದನ್ನು ಬ್ರಿಟಿಷ್ ಸರ್ಕಾರವು ಕಳೆದ ತಿಂಗಳಲ್ಲಿ ತೀರ್ಮಾನಿಸಿದೆ. ಆಯಾ ಕೋಮಿನವರೇ ಈ ಸಮಸ್ಯೆಯನ್ನು ತೀರಿಸಿಕೊಳ್ಳಬೇಕೇ ಹೊರತು ತಾವು ಕೈ ಹಾಕುವುದಿಲ್ಲವೆಂತ ಬ್ರಿಟಿಷ್ ಸರ್ಕಾರವು ಹೇಳುತ್ತಿದ್ದರೂ ಅವರೇ ಮನಸಿಲ್ಲದೆ ಈ ತೀರ್ಮಾನ ಕೊಡಬೇಕಾಯಿತು. ರಾಜಕೀಯ ರಚನೆಯ ಕಾರ್ಯವೇ ನಿಂತು ಹೋಗುತ್ತೆಂತ ತೋರಿದ ಸಮಯದಲ್ಲಿ ಸರ್ಕಾರವು ಕೈ ಹಾಕಿದ್ದಾಗಿದೆ. ಎಲ್ಲಾ ಕೋಮಿನವರಿಗೂ ನ್ಯಾಯ ಸರಿಯಾಗಿ ಸಿಕ್ಕಬೇಕೆಂಬ ಉದ್ದೇಶದಿಂದ ಸದರಿ ತೀರ್ಮಾನವನ್ನು ಕೊಟ್ಟಿರುವದಾಗಿದೆ. ತಮ್ಮ ಹಕ್ಕುಗಳನ್ನು ಸ್ವಲ್ಪವೂ ಬಿಡುವುದಿಲ್ಲವೆಂತ ಹೇಳಿದ್ದರಿಂದ ಕೋಮಿನವರೊಳಗೆ ಒಪ್ಪಂದವಾಗದೆ ಇದ್ದಾಗ ಈ ತೀರ್ಮಾನದಿಂದಲೂ ಅಂಥವರಿಗೆ ತೃಪ್ತಿಯಾಗಲಾರದು. ಆದರೆ ಈಗ ಮೂರು ದಾರಿಗಳೇ ಉಳಿದಿರುವುವು. ಸರ್ಕಾರವು ಮಾಡಿದ ತೀರ್ಮಾನವನ್ನು ಅಂಗೀಕರಿಸಿಕೊಂಡು ರಾಜಕೀಯ ರಚನೆಯ ಕಾರ್ಯವನ್ನು ಆದಷ್ಟು ಬೇಗನೆ ಮುಂದರಿಸುವುದು; ಎರಡನೇದು—ಕೋಮುಗಳವರು ತಮ್ಮೊಳಗೆ ತಾವೇ ಬೇರೆ ತರಹದ ಒಪ್ಪಂದ ಮಾಡಿಕೊಳ್ಳುವುದು; ಮೂರನೇದು—ರಾಜಕೀಯ ಸುಧಾರಣೆಯ ಆಲೋಚನೆಯನ್ನೇ ಬಿಡುವುದು. ಮೂರನೇದು ಸಾಧ್ಯವಿಲ್ಲ; ಯಾಕೆಂದರೆ ದೇಶವು ಅನೇಕ ವರ್ಷಗಳಿಂದ ಕೇಳುತ್ತಿರುವ ಅಭಿಲಾಷೆಗಳನ್ನು ಬಿಡುವುದು ಸುಲಭವಲ್ಲ. ಆದ್ದರಿಂದ ಒಂದನೇ ಮತ್ತು ಎರಡನೇ ದಾರಿಗಳಲ್ಲಿ ಯಾವುದಾದರೂ ಒಂದನ್ನು ಹಿಡಿಯಬೇಕು.

ಇಷ್ಟೊಂದು ಬಿರುಸಾಗಿ ನಡೆದ ಈ ಕೋಮುವಾರು ಚರ್ಚೆಯ ಸಮ್ಬಂಧವಾಗಿ ತೀರ್ಮಾನ ಕೊಟ್ಟಾಗ ಅಸಮಾಧಾನಗೊಳ್ಳುವ ಅಂಥಾ ಕೋಮಿನವರು ಒಗ್ಗಟ್ಟಿನಿಂದ ಬೇರೆ ಕೋಮಿನವರಿಗೆ ಕೆಡಕಾಗುವಂತೆಯೇ ವರ್ತಿಸುತ್ತಾರೆಂತ ಊಹಿಸುವುದು ಸ್ವಭಾವಿಕವಾಗಿದೆ. ಸ್ವರಾಜ್ಯ ರಚನೆಯಲ್ಲಿ ಹೀಗಾಗಲಾರದೆಂತ ನಾನು ನಂಬುತ್ತೇನೆ. ಜನರ ಅಭ್ಯುದಯ ಹೇಗಾದೀತು, ಸಂಪತ್ತು ಹೇಗೆ ಬೆಳೆದೀತು ಎಂಬವೇ ಸ್ವರಾಜ್ಯದ ಸಂಸ್ಥೆಗಳು ಯೋಚಿಸುವ ವಿಷಯಗಳಾಗಿವೆ. ಜನರ ಸಾಧಾರಣ ಜೀವನದಲ್ಲಿ ಜನರು ಕೋಮುವಾರಾಗಿ ವಿಂಗಡವಾಗುವುದಿಲ್ಲ. ತಮ್ಮೊಳಗೆ ವಿಧ ವಿಧದ ಸಂಬಂಧಗಳಿರುತ್ತವೆ. ಇಂಥಾ ಸಂಬಂಧದಿಂದ ಕೋಮುವಾರು ಭಾವನೆಗಳು ಮರೆಯಲ್ಪಡುತ್ತವೆ. ಮುಂದಿನ ಹಿಂದೂಸ್ಥಾನದ ಸ್ವರಾಜ್ಯವು ಯಾವುದೇ ಒಂದು ಕೋಮಿನವರ ರಾಜ್ಯವಾಗುತ್ತದೆಯೆಂತ ಯೋಚಿಸುವವರಿಗೆ ನಾನು ಹೇಳುವುದೇನೆಂದರೆ—ಇದು ಕಾರ್ಯರೂಪದಲ್ಲಿ ನಡೆಯುವುದಲ್ಲ, ಸ್ವಾಭಾವಿಕವಲ್ಲ. ನ್ಯಾಯವಿಧಾಯಕ ಸಭೆಗಳಲ್ಲಿ ಆರ್ಥಿಕ ಅಥವಾ ಬೇರೆ ಯಾವುದಾದರೂ ಕೋಮುಗಳಿಗೆ ಸಂಬಂಧಿಸದ ಪಂಗಡಗಳು ಆಗುತ್ತವೆಯೆಂತ ಊಹಿಸಬಹುದು.

ಭವಿಷ್ಯತ್ತು.

ಈ ವರೆಗಿನ ದುಂಡು ಮೇಜಿನ ಕಾರ್ಯದಿಂದ ಆದ ಕೆಲಸಗಳನ್ನು ವಿವರಿಸಿ ವೈಸರಾಯರು ಹೇಳಿದ್ದೇನೆಂದರೆ—ಅಖಿಲ ಹಿಂದೂಸ್ಥಾನದಿಂದ ಕೂಡಿದ ಮಧ್ಯವರ್ತಿ ಫೆಡರೇಶನನ್ನೂ, ಸಾಧ್ಯವಿದ್ದಷ್ಟು ಮಟ್ಟಿಗೆ ಪ್ರಜಾಜವಾಬ್ದಾರಿ ಸರಕಾರ ಪದ್ಧತಿಯನ್ನು ಕೇಂದ್ರದಲ್ಲೂ, ಪ್ರಾಂತ್ಯಗಳಲ್ಲೂ ಸ್ಥಾಪಿಸುವ ರಾಜಕೀಯ ಸುಧಾರಣೆಯನ್ನೂ ಕೊಡಬೇಕೆಂಬುದು ಬರೇ ಬ್ರಿಟಿಷ್ ಸರಕಾರದ ಅಭಿಪ್ರಾಯವಲ್ಲ, ಬ್ರಿಟಿಷ್ ಪಾರ್ಲಿಮೆಂಟಿನ, ಬ್ರಿಟಿಷ್ ಜನಾಂಗದ ಅಭಿಪ್ರಾಯವಾಗಿದೆ. ಇಂಥಾ ರಚನೆಗೆ ಸಂಬಂಧಿಸುವ ವಿಷಯಗಳನ್ನು 3 ಭಾಗ ಮಾಡಬಹುದು. 1ನೇದು ಬ್ರಿಟನಿಗೂ ಇಂಡಿಯಾಕ್ಕೂ ಇರಬೇಕಾದ ಸಂಬಂಧ. ಈ ವಿಷಯವಾಗಿಯೇ ಕಾದಿರುವ ಹಕ್ಕುಗಳ ಚರ್ಚೆಯಾಗಬೇಕಾದದ್ದು. ಎರಡನೇದು, ಬ್ರಿಟಿಷ್ ಹಿಂದೂಸ್ಥಾನಕ್ಕೂ, ದೇಶೀಯ ಸಂಸ್ಥಾನಗಳಿಗೂ ಇರಬೇಕಾದ ಸಂಬಂಧ. ಇದರ ವಿಷಯವಾಗಿ ತೀರ್ಮಾನವಾಗಲಿಕ್ಕಿರುವುದು ಯಾವುವೆಂದರೆ ಫೆಡರಲ್ ಕೌನ್ಸಿಲುಗಳಲ್ಲಿ ದೇಶೀಯ ರಾಜ್ಯಗಳಿಗೆ ಎಷ್ಟು ಸ್ಥಳ ಕೊಡಬೇಕು ಮತ್ತು ದೇಶೀಯ ರಾಜ್ಯಗಳಿಗೂ ಫೆಡರಲ್ ಸರಕಾರಕ್ಕೂ ಇರಬೇಕಾದ ಆರ್ಥಿಕ ಸಂಬಂಧ. ಮೂರನೇದು, ಮಧ್ಯವರ್ತಿ ಸರಕಾರಕ್ಕೂ ಪ್ರಾಂತ್ಯಗಳಿಗೂ ಇರಬೇಕಾದ ಸಂಬಂಧ. ಈ ಮೂರು ಸಂಗತಿಗಳಲ್ಲೂ ಸರಕಾರವು ಆಲೋಚನೆ ಮಾಡುತ್ತಲೇ ಇದೆ. ದುಂಡು ಮೇಜು ಪರಿಷತ್ತಿನಲ್ಲಿ ಈ ವರೆಗೆ ಆದ ಚರ್ಚೆಯಿಂದ ಈ ಬಾಬುಗಳಲ್ಲಿ ಹೆಚ್ಚಿನ ಸಹಾಯ ದೊರೆತಿಲ್ಲ. ಎಷ್ಟೇ ತೊಡಕುಗಳಿದ್ದರೂ ನಮ್ಮ ಧ್ಯೇಯವನ್ನು ಸಾಧಿಸಲು ಅಡ್ಡಿ ಕಾಣುವುದಿಲ್ಲ. ಮುಂದಿನ ಕೆಲಸ ಜಯಪ್ರದವಾಗಿ ಮಾಡಿಕೊಳ್ಳಲು ಅನ್ಯೋನ್ಯ ನಂಬಿಕೆಯೂ, ಸಹಾಯವೂ ಬೇಕಾಗಿದೆಯಷ್ಟೆ. 2ನೇ ದುಂಡು ಮೇಜು ಪರಿಷತ್ತು ನಡೆಯುತ್ತಿರುವಾಗ ಪ್ರಾಂತೀಯ ಸ್ವಾತಂತ್ರ್ಯವನ್ನು ಕೂಡಲೇ ಕೊಟ್ಟು ಮಧ್ಯವರ್ತಿ ಸರಕಾರದ ಸುಧಾರಣೆ ಹಿಂದಿನಿಂದ ಮಾಡಬಹುದು ಎಂತ ಸೂಚಿಸಿದ ಅಭಿಪ್ರಾಯವು ಬಲವಾಗಿ ವಿರೋಧಿಸಲ್ಪಟ್ಟಿತು. ಅನಂತರ ಒಂದೇ ಬಿಲ್ಲಿನಲ್ಲಿ ಎರಡು ಸುಧಾರಣೆಗಳೂ ಸೇರಬೇಕೆಂತ ಸ್ಟೇಟ್ ಸೆಕ್ರೆಟರಿಯವರು ತಿಳಿಸಿರುತ್ತಾರೆ. ಇದರಿಂದ ಈ ದೇಶದ ಹೆಚ್ಚಿನ ಸಮುದಾಯಕ್ಕೆ ತೃಪ್ತಿಯಾಗಿದೆ ಇ.ಇ.

ಮುಂದಿನ ಕಾರ್ಯ.

ಬ್ರಿಟಿಷ್ ಗವರ್ನ್ಮೆಂಟಿನವರು ಕೊಡಬೇಕಾದ ಸುಧಾರಣೆಗಳಿಗೆ ರೂಪಕೊಟ್ಟು ನಂತರ ಉಭಯ ಪಾರ್ಲಿಮೆಂಟಿನ ಕಮಿಟಿಯೊಂದು ಹಿಂದೀ ಪ್ರತಿನಿಧಿಗಳೊಡನೆ ಸೇರಿ ಅವಲೋಕಿಸಬೇಕೆಂತ ಸ್ಟೇಟ್ ಸೆಕ್ರೆಟರಿಯವರು ಹೇಳಿದ್ದರು. ಸುಧಾರಣೆಗಳಿಗೆ ರೂಪಕೊಡುವ ಮುಂಚೆ ಹಿಂದೀಯರೊಂದಿಗೆ ಚರ್ಚಿಸಬೇಕಾದ ಅವಶ್ಯವಿಲ್ಲವೆಂತ, ತ್ವರೆಯನ್ನೇ ಉದ್ದೇಶವಾಗಿಟ್ಟುಕೊಂಡು, ಅವರು ಹೇಳಿದ್ದರು. ಆದರೆ ಕನ್ಸಲ್ಟೇಟಿವ್ ಕಮಿಟಿಯಿಂದ ಸಿಕ್ಕಬೇಕಾದ ಸಹಾಯ ಸಿಕ್ಕದ್ದರಿಂದ ಪುನಃ ಲಂಡನಿನಲ್ಲಿ ಹಿಂದೀಯರನ್ನು ಕರೆಸಿಕೊಂಡು ಆಲೋಚಿಸಬೇಕೆಂತ ತೀರ್ಮಾನವಾಗಿದೆ. ಈ ಬಗ್ಗೆ ನವಂಬರ್ ತಿಂಗಳ ಮಧ್ಯದಲ್ಲಿ ಅಲ್ಪ ಸಂಖ್ಯೆ ಹಿಂದೀಯರನ್ನು ಲಂಡನಿಗೆ ಕರೆಸಿಕೊಳ್ಳುವ ಯೋಚನೆ ಇದೆ. ಇವರ ಸಹಾಯದಿಂದ ಮುಂದಿನ ರಾಜಕೀಯ ರಚನೆಯನ್ನು ಹಿಂದೀಯರ ಒಪ್ಪಿಗೆಯಿಂದ ತಯಾರಿಸಲು ಯೋಚಿಸಲಾಗಿದೆ. ಹಿಂದೀ ಪ್ರತಿನಿಧಿಗಳ ಸಂಖ್ಯೆ ದುಂಡು ಮೇಜು ಪರಿಷತ್ತಿನ ಮೆಂಬರುಗಳದಂತೆಯೇ ಇರುತ್ತದೆ. ಆದರೆ ಚರ್ಚೆಯು ಮೊದಲಿನಂತೆ ಉದ್ದವಾಗಿಯೂ, ಬಹಿರಂಗವಾಗಿಯೂ ಮಾಡಲ್ಪಡುವುದಿಲ್ಲ. ಚರ್ಚಿಸುವ ವಿಷಯಗಳೂ ಸಹ ಮುಂದೆಯೇ ತೀರ್ಮಾನಿಸಲ್ಪಟ್ಟಿರುತ್ತವೆ. ಸಾಧ್ಯವಿದ್ದಷ್ಟು ಸಂಗತಿಗಳಲ್ಲಿ ಒಪ್ಪಿಗೆಗೆ ಬರುವುದೇ ಈ ಕಾರ್ಯಕ್ರಮದ ಉದ್ದೇಶವಾಗಿದೆ. ಅನಂತರ ಜಾಯಿಂಟ್ ಪಾರ್ಲಿಮೆಂಟರಿ ಕಮಿಟಿ ಮುಂದೆ ಈ ಅಭಿಪ್ರಾಯಗಳಿಗೆ ರೂಪಕೊಟ್ಟು ಇಡಲಾಗುತ್ತದೆ.

ಸಹಕಾರಕ್ಕೆ ಅಪ್ಪೀಲು.

ಈ ದೇಶದಲ್ಲಿ ಅನೇಕ ವರ್ಷಗಳ ಕಾಲ ಸುಖದಿಂದ ಇದ್ದು ಈ ದೇಶದ ಅಭ್ಯುದಯಕ್ಕಾಗಿ ಮನಃಪೂರ್ವಕವಾಗಿ ಕೆಲಸ ಮಾಡಿದವನಾದ ನಾನು ಕೆಲವು ನನ್ನ ಸ್ವಂತ ಮಾತುಗಳನ್ನಾಡಬೇಕೆಂತ ಇದ್ದೇನೆ. ಅದೃಷ್ಟ ಅಲ್ಲ, ದೇವರೇ ನಮ್ಮ ಈ ಎರಡು ಜನಾಂಗಗಳು ಬಹಳ ಕಾಲದ ವರೆಗೆ ಸಂಪರ್ಕದಿಂದ ಇರಬೇಕೆಂತ ನಿರ್ದೇಶಿಸಿದ್ದಾನೆ. ನಮ್ಮೊಳಗೆ ಮತಭೇದಗಳಿದ್ದಿರಬಹುದು, ತಪ್ಪುಗಳನ್ನು ಮಾಡಿರಬಹುದು. ಆದರೆ ನಿಷ್ಪಕ್ಷಪಾತದಿಂದ ಈ ವರೆಗಿನ ವಿದ್ಯಮಾನಗಳನ್ನು ನೋಡಿದರೆ ಈ ಸಂಬಂಧದಿಂದ ದೇಶದಲ್ಲಿ ಕಾನೂನಿಗೆ ಒಳಪಟ್ಟು ನಡೆಯುವವರಿಗೆ ರಕ್ಷಣೆಯೂ, ವ್ಯಕ್ತಿಗಳಿಗೆ ಜೀವನ ಸ್ವಾತಂತ್ರ್ಯವೂ ದೊರೆತಿದೆಯೆಂತಲೂ, ದೇಶವು ಅಭಿವೃದ್ಧಿಯಾಗಿದೆಯೆಂತಲೂ, ಜನರು ಸುಖಿಗಳಾಗಿದ್ದಾರೆಂತಲೂ ಹೇಳಬಹುದು. ಆದರೆ ಇನ್ನೂ ತುಂಬಾ ಕೆಲಸ ಮಾಡಲಿಕ್ಕೆ ಇದೆ. ಈಗ ಬಿಕ್ಕಟ್ಟಿನ ಸಂದರ್ಭ ಬಂದಿದೆ. ದೇಶದ ಆಡಳಿತದ ದೊಡ್ಡ ಭಾಗವನ್ನು ದೇಶೀಯರಿಗೆ ಬಿಟ್ಟುಕೊಡುವ ಕಾಲವಾಗಿದೆ.

ಸುಮಾರು 20 ವರ್ಷಗಳ ಕೆಳಗೆ ಬೊಂಬಾಯಿ ಗವರ್ನರಾಗಿ ನಾನು ಇಂಡಿಯಾದಲ್ಲಿ ಕಾಲಿಟ್ಟಾಗ ಜನರ ಸಹಾಯ ಬೇಕೆಂತ ಕೇಳಿದ್ದೆ. 18 ತಿಂಗಳುಗಳ ಕೆಳಗೆ ನಾನು ವೈಸರಾಯ ಆದಾಗಲೂ ಅದೇ ಸಹಕಾರವನ್ನು ಕೇಳಿದೆ. ಈಗಲೂ ಅದನ್ನೇ ಕೇಳುತ್ತೇನೆ. ಈಗ ಹಿಂದುಸ್ಥಾನಕ್ಕೆ ಬ್ರಿಟಿಷ್ ಸರಕಾರವು ಕೊಡಬೇಕೆಂತ ಇರುವ ಸುಧಾರಣೆಗಳು ಬರೇ ಬ್ರಿಟಿಷ್ ಸರ್ಕಾರದಿಂದಲೇ ತಯಾರಿಸಲ್ಪಟ್ಟರೆ ಪ್ರಯೋಜನವಾಗಲಾರದು. ಹಿಂದೂಸ್ಥಾನದ ರಾಜರುಗಳ ಮತ್ತು ಜನರ ಸಂಪೂರ್ಣ ಸಹಕಾರ ಬೇಕಾಗಿದೆ. ಆದ್ದರಿಂದ ಅನ್ಯೋನ್ಯ ಅಪನಂಬಿಕೆಯನ್ನು ಬಿಡೋಣ. ಅನ್ಯೋನ್ಯ ಉದ್ದೇಶಗಳನ್ನು ನಂಬುವ. ಜಾತಿ ಜಗಳಗಳನ್ನು ಬಿಡುವ. ರಾಷ್ಟ್ರೀಯ ಭಾವ ಹುಟ್ಟುವಂತೆ ಒಗ್ಗಟ್ಟಿನಿಂದ ಕೆಲಸ ಮಾಡುವ. ಆ ಭಾವ ಹುಟ್ಟಿದ ವಿನಹ ಜನಾಂಗಗಳ ಕೂಟದಲ್ಲಿ ಹಿಂದುಸ್ಥಾನಕ್ಕೆ ಗೌರವಸ್ಥಾನ ದೊರೆಯದು. ನಿಮ್ಮ ದೇಶದ ಜನರಿಗೆ ಒಳ್ಳೇದಾಗುವಂಥ ದಾರಿಯಲ್ಲಿ ಹೋಗಲಿಕ್ಕೆ ದೇವರು ನಿಮಗೆ ಬುದ್ಧಿ ಕೊಡಲಿ.

ಕೊಡಗಿನ ಹಿಂದಿನ ಶಿಲ್ಕು.

ಕೊಡಗಿಗೆ ಇಂಡಿಯಾ ಸರಕಾರದವರು ಹಿಂದಿನ ಹಣದ ಶಿಲ್ಕು ಕೊಡಬೇಕೆಂಬ ಬಗ್ಗೆ ಚೀಫ್ ಕಮಿಷನರಿಗೂ ಇಂಡಿಯಾ ಸರ್ಕಾರಕ್ಕೂ ನಡೆದ ಪತ್ರವ್ಯವಹಾರ. (ಕೌನ್ಸಿಲಿನಲ್ಲಿ ಹಾಕಿದ ಸವಾಲಿಗೆ ಜವಾಬಾಗಿ ಸರ್ಕಾರದಿಂದ ಕೌನ್ಸಿಲ್ ಮುಂದೆ ಇಡಲ್ಪಟ್ಟದ್ದು.)

ತಾ. 27-1-1932ರಲ್ಲಿ ಚೀಫ್ ಕಮಿಷನರವರ ಸೆಕ್ರೆಟರಿಯವರು ಇಂಡಿಯಾ ಸರ್ಕಾರಕ್ಕೆ ಬರೆದ ಪತ್ರ.

ನಾಮದಾರ್ ಮಿ. ಬರ್ಡನವರ ತಾ 21—7—1928ರ ಕಾಗದದಲ್ಲಿ ತೀರ್ಮಾನಿಸಿರುವ ಸಂಗತಿಯನ್ನು, ಈ ಕೆಳಗಿನ ವಿದ್ಯಮಾನಗಳನ್ನು ನೋಡಿ ಪುನಃ ವಿಮರ್ಶಿಸಬೇಕಾಗಿ ಕೋರುತ್ತೇನೆ.

2 ಈ ಪ್ರಾಂತ್ಯಕ್ಕೆ ಹಿಂದಿನ ಶಿಲ್ಕು ಕೊಡಬೇಕೆಂತ ಇಲ್ಲಿಂದ ಬರೆದ ತಾ 3-3-1925, 28-5-1926, 12-9-1927 ಮತ್ತು 21—3—1928ರ ಪತ್ರಗಳಲ್ಲಿ ಬಲವಾಗಿ ವಾದಿಸಲಾಗಿದೆ. ಆಗ ಕೊಟ್ಟ ಕಾರಣಗಳೇ ಈಗಲೂ ಇನ್ನೂ ಬಲವಾಗಿ ಒಪ್ಪತಕ್ಕದ್ದಾದ್ದರಿಂದ ಅವೇ ವಾದಗಳನ್ನು ಈಗಲೂ ಕೊಡಲಾಗಿದೆ. ಇಂಡಿಯಾ ಸರ್ಕಾರದವರು ತಾ. 21—7—1928ರ ಕಾಗದದಲ್ಲಿ ಹೀಗೆಂತ ಬರೆದಿದ್ದಾರೆ:—

"ಈಗ ಇರುವ ಉಳಿವರಿಯಿಂದ ಸ್ಟೇಟ್ಯುಟರಿ (ಸೈಮನ್) ಕಮಿಷನಿನ ವರದಿ ಬರುವ ವರೆಗಾದರೂ ಅದನ್ನು ನಡಿಸಲು ಕಷ್ಟವಿಲ್ಲವೆಂತಲೂ, ನೀವು ಕೇಳಿದ ಅಥವಾ ಬೇರೆ ಯಾವ ರೀತಿಯಿಂದಲೂ ಇಂಡಿಯಾ ಸರಕಾರದಿಂದ ಸಹಾಯ ಕೊಡಬೇಕಾದದಿಲ್ಲವೆಂತಲೂ, ಈಗಿನ ವಿಷಯಗಳನ್ನು ಇನ್ನೊಂದಾವರ್ತಿ ಇಂಡಿಯಾ ಸರಕಾರಕ್ಕೂ ಕೊಡಗಿಗೂ ಇರುವ ಆರ್ಥಿಕ ಸಂಬಂಧವನ್ನು ಪುನರ್ವಿಮರ್ಶೆ ಮಾಡುವ ವರೆಗೂ ಯೋಚಿಸಬೇಕಾದದ್ದಿಲ್ಲವೆಂತ ಇಂಡಿಯಾ ಸರ್ಕಾರದ ಅಭಿಪ್ರಾಯವಾಗಿದೆ."

3 ಅಂದಿನಿಂದ ಕೊಡಗಿನ ಆರ್ಥಿಕ ಸ್ಥಿತಿಯು ಬಹಳ ಕೆಟ್ಟಿದೆ. ಕೊಡಗಿನಲ್ಲಿ 1930—31ನೇ ಸಂವತ್ಸರದ ಅತಿ ಕಠಿಣ ಆರ್ಥಿಕ ಸಂಕಟವು ಬಾಧಿಸತೊಡಗಿತು. ಖರ್ಚು ಕಡಿಮೆ ಮಾಡುವ ಬಗ್ಗೆ ಒಂದು ಕಮಿಟಿಯು ನೇಮಿಸಲ್ಪಟ್ಟಿತು. ಈ ಕಮಿಟಿಯು ಪ್ರತಿಯೊಂದು ಉತ್ಪತ್ತಿಯ ಮತ್ತು ಖರ್ಚಿನ ಬಾಬನ್ನು ಅವಲೋಕಿಸಿತು. 1922ರಲ್ಲಿ ಮಿ. ಕಾಳ್ಬರ ವರದಿ ಮೇರೆ ಖರ್ಚನ್ನು ತುಂಬಾ ಮಿತಿ ಮಾಡಿದ್ದರೂ ಸಹ ಈಗ ನೇಮಕವಾದ ಕಮಿಟಿಯು ತುಂಬಾ ಖರ್ಚು ಕಡಿಮೆ ಮಾಡುವ ಬಗ್ಗೆ ಮತ್ತು ಹೊಸ ತೆರಿಗೆಗಳನ್ನು ಹಾಕುವ ಬಗ್ಗೆ ಶಿಫಾರಸು ಮಾಡಿತು. ಅವನ್ನು ಸರ್ಕಾರವು ಅಂಗೀಕರಿಸಿಕೊಂಡಿತು. ಈ ರೀತಿ ಖರ್ಚು ಕಡಿಮೆ ಮಾಡಿಯೂ, ಹೊಸ ತೆರಿಗೆಗಳನ್ನು ಹಾಕಿಯೂ ಕೊಡಗಿನ ಸ್ಥಿತಿಯು ಹೀಗಿದೆ:—

ಈಗ ತಯಾರಿಸಿರುವ ಬಜೆಟ್ ಮೇರೆ 1931—32ರ ವರಮಾನವು ರೂ. 12,99,000, ಖರ್ಚು ರೂ. 12,75,000 ಆಗಿ, ರೂ. 24,000 ಉಳಿತಾಯವಾಗುತ್ತದೆ. ಹೊಸ ಬಾಬಿನ ಖರ್ಚುಗಳಿಗಾಗಲೀ, ಅಕಸ್ಮಾತ್ ಬರಬಹುದಾದ ಖರ್ಚುಗಳಿಗಾಗಲೀ ಹಣ ಇಟ್ಟಿಲ್ಲ. ಆದ್ದರಿಂದ ಈ ಅಂದಾಜಿನ ಉಳಿವರಿಯು ಖಚಿತವೆಂತ ಹೇಳಲು ಆಗುವುದಿಲ್ಲ.

4. ಇಲ್ಲಿಂದ ಬರೆದ ತಾ. 18—2—1931ರ ಕಾಗದದಲ್ಲಿ ಹೇಳಿರುವ ಮೇರೆ ಈ ದೇಶವನ್ನು ಇಂಡಿಯಾ ಸರಕಾರದಿಂದ ಬೇರ್ಪಡಿಸಿದ ನಂತರ 1929—30ಕ್ಕೆ ಅಖೈರಾದ ಮೊದಲನೇ ಆರು ವರ್ಷಗಳಲ್ಲಿ ದೇಶದ ಅಭಿವೃದ್ಧಿಗೆ ಬೇಕಾದ ಖರ್ಚುಗಳನ್ನು ಬೇಕೆಂತಲೇ ಮುಂದರಿಸುವುದರ ಅಥವಾ ಕಡಿಮೆ ಮಾಡುವುದರ ಮೂಲಕ ರೂ. 6,40,000 ಉಳಿವರಿಯನ್ನು ಕೂಡಿಹಾಕಲಾಯಿತು. 1930—31ರ ಆಡಳಿತದಲ್ಲಿ ಉತ್ಪತ್ತಿಗಿಂತ ಖರ್ಚು ತುಂಬಾ ಹೆಚ್ಚಾಗಿ ಉಳಿವರಿಯು ರೂ. 2,81,000ಕ್ಕೆ ಇಳಿದು ಬಿಟ್ಟಿತು. 1931—32ರ ಆಡಳಿತದಲ್ಲಿ ಉತ್ಪತ್ತಿಗಿಂತ ಖರ್ಚು ರೂ. 1,36,000 ಹೆಚ್ಚಾಗಬಹುದೆಂತ ಅಂದಾಜು ಮಾಡಲಾಗಿದೆ. ಆಗ್ಗೆ ಉಳಿವರಿಯು 1,45,000ಕ್ಕೆ ಇಳಿಯುತ್ತದೆ. ಗಂಧದ ಮಾರಾಟದ ಉತ್ಪತ್ತಿಯು ನಿರೀಕ್ಷಿಸಿರುವಷ್ಟು ಆಗದಿದ್ದರೆ ಉಳಿವರಿಯು ಇನ್ನೂ ಇಳಿಯುತ್ತದೆ. ಮದ್ರಾಸ್ ಎಕೌಂಟೆಂಟ್ ಜನರಲರು ಹಿಂದಿನ ವರ್ಷದ ಗಂಧದ ಉತ್ಪತ್ತಿಯ ಸರಾಸರಿ ಮೇರೆ ಲೆಕ್ಕ ಹಾಕಿ ನೋಡಿದಲ್ಲಿ ಉಳಿವರಿಯು ಬರೇ 18,000ಕ್ಕೆ ಇಳಿದೀತೆಂತ ಅಂದಾಜು ಮಾಡಿರುವರು. ಈಗಿನ ವಿದ್ಯಮಾನಗಳನ್ನು ನೋಡಿದರೆ ಇನ್ನು ಮುಂದೆ ಈ ಉಳಿವರಿಯಿಂದ ಖರ್ಚು ಮಾಡುವ ರತಿ ಬಿಡಬೇಕೆಂತ ತೋರುತ್ತದೆ. ಈ ಸಂದರ್ಭದಲ್ಲಿ ಯಾವುದೇ ವರ್ಷದಲ್ಲಿ ಉಳಿವರಿಯು ಅಂದಾಜು ರೂ. 50,000ಕ್ಕಿಂತ ಕಡಿಮೆಯಾಗಬಾರದೆಂತ ಇದೆಯೆಂತ ತಿಳಿಸಬೇಕಾಗಿದೆ.

5. ಕೊಡಗಿನ ಉತ್ಪತ್ತಿಯು ಬಹಳ ಕಡಿಮೆಯಾಗಿ ಆರ್ಥಿಕ ಬಿಕ್ಕಟ್ಟು ಬಹಳವಾಗಿರುವಾಗ ಈ ದೇಶದ ಸರಕಾರವು ಈ ಕೆಳಗಿನ ಹೊಸ ಹೊರೆಗಳನ್ನು ಹೊರಬೇಕೆಂತ ಹೇಳಲ್ಪಟ್ಟಿವೆ.—

(a) ಕೊಡಗಿಗೆ ಕೌನ್ಸಿಲು ಕೊಡುವ ಮುಂಚೆ ಕೊಡಗಿಗೆ ಕೊಟ್ಟ ಆಫೀಸರುಗಳ ರಜಾ ಸಂಬಳಕ್ಕಾಗಿ ರೂ. 1,05,678 ಕೊಡಬೇಕೆನ್ನುತ್ತಾರೆ.

(b) ಕೊಡಗಿನಲ್ಲಿ ಕೆಲಸ ಮಾಡಿದ ಆಫೀಸರುಗಳ ಪಿಂಚನ್ ಮತ್ತು ಇಂಡಿಯನ್ ಸಿವಿಲ್ ಸರ್ವಿಸಿನವರಿಗೆ ಕೊಡುವ ಪಾಲಿನೂ ಹವಲಿಕೆಯೂ ಹೆಚ್ಚಿಸಲ್ಪಟ್ಟಿದೆ.

(c) ಅರಮನೆಯ ರಿಪೇರಿಗೆ ಇಟ್ಟ ಖರ್ಚಿಗಾಗಿ ಹೆಚ್ಚಿಗೆ ಹಣ ಕೊಡಬೇಕಾಗಿ ಬಂದದ್ದು.

(d) ಬಾಬಿನ ಹೊಸ ಖರ್ಚನ್ನು ಮದ್ರಾಸ್ ಸರಕಾರವು ಕೊಡಗಿನ ಸರಕಾರದ ಮೇಲೆ ಮುಂದಾಗಿ ಎಚ್ಚರಿಕೆ ಕೊಡದೆ ಏಕಾಏಕಿ ಹೊರಿಸಿದ್ದಾಗಿದೆ. ಈ ಬಾಬಿನಲ್ಲಿ ಇಂಡಿಯಾ ಸರಕಾರವು ಮಾಡಬಹುದಾದ ತೀರ್ಮಾನಕ್ಕೆ ಒಳಪಟ್ಟು ಚೀಫ್ ಕಮಿಶನರು ಈ ಸಾಲವನ್ನು ಅಂಗೀಕರಿಸಿಕೊಂಡಿದ್ದಾರೆ. ಈ ಸಂಬಂಧವಾಗಿ ಮದ್ರಾಸ್ ಸರಕಾರದೊಂದಿಗೆ ನಡೆದ ಪತ್ರವ್ಯವಹಾರದ ನಕಲನ್ನು ಜೋಡಿಸಿರುತ್ತೇನೆ. ಈಗಿನ ವಿದ್ಯಮಾನದಲ್ಲಿ ಉಳಿವರಿಯಿಂದಾಗಲೀ (ಇದು ಏನೂ ಇಲ್ಲ) ಸಾಲಿಯಾನಾ ಉತ್ಪತ್ತಿಯಿಂದಾಗಲೀ ಈ ಹಣವನ್ನು ಒಂದೇ ಕಂತಿನಲ್ಲಿ ಕೊಡುವುದು ಸಾಧ್ಯವಿಲ್ಲದ್ದರಿಂದ 1932-33ರಿಂದ ಪ್ರಾರಂಭಿಸಿ ಇಂಡಿಯಾ ಸರಕಾರದ ಹುಕುಮಿಗೆ ಒಳಪಟ್ಟು 10 ವರ್ಷಗಳಲ್ಲಿ ತೆಗೆದುಕೊಳ್ಳಬೇಕೆಂತ ಮದ್ರಾಸ್ ಸರಕಾರಕ್ಕೆ ಬರೆದುಕೊಳ್ಳಲಾಗಿದೆ. ಈ ಸಾಲವೆಲ್ಲಾ ಕೊಡಗಿಗೆ ಕೌನ್ಸಿಲ್ ಮಂಜೂರಾಗುವ ಮುಂಚಿನದಾದ್ದರಿಂದಲೂ ಮತ್ತು ಕೊಡಗಿಗೆ ಏನೂ ಶಿಲ್ಕು ಕೊಡದ್ದರಿಂದಲೂ ಇಂಡಿಯಾ ಸರಕಾರದ ಶಿಲ್ಕು ಸಿಕ್ಕುವ ವರೆಗೆ ಈ ಸಾಲಕ್ಕೆ ಕೊಡಗನ್ನು ಗುರಿಮಾಡುವುದು ನ್ಯಾಯವಲ್ಲ. ಇಲ್ಲಿಂದ ಬರೆದ ತಾ. 15—4—1925ರ ಕಾಗದದಲ್ಲಿ ಹೇಳಿರುವ ಕಾರಣಗಳ

ಕೊಡಗು.

ಸನ್ ೧೯೩೨ನೇ ಇಸವಿ

ತಾ. ೨೩ನೇ ಸೆಪ್ಟೆಂಬರ್ ಶುಕ್ರವಾರ.

ಪ್ರೆಸ್ ಆರ್ಡಿನೇನ್ಸ್

ಜಾರಿಯಲ್ಲಿರುವವರೆವಿಗೆ

ನಾವು

ಅಗ್ರಲೇಖನ

ವನ್ನು

ಪ್ರಕಟಿಸುವುದಿಲ್ಲ.

ಮಹಾತ್ಮರಿಗೆ ಶುಭಕಾಲ.

ಈ ತಾ. 18ರಿಂದ ಶುಭಕಾಲ ಪ್ರಾರಂಭವಾಗಿದೆ. ಈ ತಾ. 28ಕ್ಕೆ ಶುಭಗ್ರಹಗಳೆಲ್ಲ ಒಟ್ಟಿಗೆ ಸೇರುವುದರಿಂದ ಆ ಲಾಭವಾಯಿತು ಭಾರತದೇಶದಲ್ಲೂ, ಇತರ ದೇಶಗಳಲ್ಲೂ ಮಹಾತ್ಮರ ಅಧಿಕಾರವು ಚೆನ್ನಾಗಿ ಕೆಲಸಮಾಡುವುದು. ಇದವರೆಗೂ ಮಹಾತ್ಮರಿಗೆ ಪ್ರತಿಕೂಲವಾಗಿದ್ದ ಗ್ರಹಗಳೆಲ್ಲ ನಿವಾರಣೆಯಾಗುವುದರಿಂದ ಈ ದೇಶದಲ್ಲಿ ನಡೆಯುತ್ತಿರುವ ಹೋರಾಟವು ಗೌರವದಿಂದ ಪರ್ಯವಸಾನವಾಗುವುದು. ಈಗ ಮಹಾತ್ಮರ ಜಾತಕ ಪ್ರಕಾರ ಬೃಹಸ್ಪತಿಯು ಏಕಾದಶ ಸ್ಥಾನದಲ್ಲಿ ರುತ್ತಾನೆ. ಅಲ್ಲದೆ ಶನಿಯ ಪ್ರಾಬಲ್ಯವು ಬಹಳ ಕಡಿಮೆಯಾಗುವುದು, ಎಂದು ಲಕ್ನೋ ಜೋಯಿಸರಾದ ಡಾಕ್ಟರ್ ಲಕ್ಷ್ಮಣಸಾಹಿಯವರು ಭವಿಷ್ಯವನ್ನು ನುಡಿದಿರುತ್ತಾರೆ.

ಇಂಡಿಯಾ ಲೀಗಿನವರು ಹೋರರವರಿಗೆ ಕೊಟ್ಟ ತಂತಿ.

ಈಗ ಇಂಡಿಯಾದಲ್ಲಿ ಸಂಚರಿಸುತ್ತಿರುವ ಲಂಡನ್ ಇಂಡಿಯಾ ಲೀಗಿನ ಪ್ರತಿನಿಧಿಗಳು ಸದ್ಯದಲ್ಲಿ ಕಲಕತ್ತಾದಲ್ಲಿರುವರು. ಇವರು ಹಿಂದೂದೇಶ ಪರಿಸ್ಥಿತಿಯ ವಿಚಾರವಾಗಿ ಈ ಪ್ರಕಾರ ತಂತಿಯ ಮೂಲಕ ಇಂಡಿಯಾ ಮಂತ್ರಿಗಳಿಗೆ ತಿಳಿಸುವರು :—

ಕಾಂಗ್ರೆಸಿನವರೊಡನೆ ಯಾವ ಅಭ್ಯಂತರವಿಲ್ಲದೆ ಆಲೋಚನೆಯನ್ನೂ, ರಾಜಿಭಾವವನ್ನೂ ನಡಿಸಲಿಕ್ಕಾಗಿ ಮಹಾತ್ಮರೇ ಮೊದಲಾದವರನ್ನೆಲ್ಲಾ ಕೂಡಲೇ ಬಂಧನದಿಂದ ಬಿಡಬೇಕಾಗಿ ಕೇಳುತ್ತೇವೆ. ನಾವು ಗ್ರಾಮಗಳಲ್ಲೂ, ಔದ್ಯೋಗಿಕ ಸ್ಥಳಗಳಲ್ಲೂ, ಅಸ್ಪೃಶ್ಯರು ವಾಸಿಸುವ ಪ್ರದೇಶಗಳಲ್ಲೂ ಸಂಚರಿಸಿ ಸಾಮಾನ್ಯ ಪ್ರಜೆಗಳ ಅಭಿಪ್ರಾಯಗಳನ್ನು ಚೆನ್ನಾಗಿ ವಿಚಾರಿಸಿ ತಿಳಿದುಕೊಂಡಿರುತ್ತೇವೆ. ಅಸ್ಪೃಶ್ಯರೂ, ಮಿಲ್ಲುಗಳಲ್ಲಿ ಕೆಲಸ ಮಾಡುವವರು ಮೊದಲಾಗಿ ಕೈಗಾರಿಕೆಯವರು, ಸಾಮಾನ್ಯ ಪ್ರಜೆಗಳೂ ಮಹಾತ್ಮರ ನಾಯಕತ್ವವನ್ನು ಒಪ್ಪುತ್ತಾರೆ. ಬ್ರಿಟಿಷ್ ದೊರೆತನದವರು ಮಾಡಿದ ತೀರ್ಮಾನದ ಪರಿಣಾಮದಿಂದುಂಟಾಗುವ ಮಹಾ ಪ್ರಮಾದವನ್ನು ತಪ್ಪಿಸುವುದಕ್ಕಾಗಿ ಅವರು ಅದನ್ನು ತತ್‍ಕ್ಷಣವೇ ಸರಿಪಡಿಸಬೇಕು. ಇಲ್ಲವಾದಲ್ಲಿ ಅವರ ಮಹಾತ್ಮರು ಮೃತರಾದರೆ ಅದಕ್ಕೆ ನೀವೂ, ಬ್ರಿಟನ್ ದೊರೆತನದವರೂ ಸಂಪೂರ್ಣವಾಗಿ ಬಾಧ್ಯರಾಗುವಿರಿ. ಭಾರತ ದೇಶೀಯರು ಶಾಂತಿಭಾವವನ್ನೂ, ಬ್ರಿಟಿಷರಲ್ಲಿ ಸ್ನೇಹಭಾವವನ್ನೂ ಹೊಂದಿರುವಂತೆ ಮಾಡಲು ಮಹಾತ್ಮರಿಗಿಂತ ಸಮರ್ಥರಾದವರು ಬೇರೊಬ್ಬರಿಲ್ಲ.

ಮಹಾತ್ಮ ಗಾಂಧಿಯವರ ಉಪವಾಸ ವ್ರತ

ತಾ. 20ನೇ ಮಧ್ಯಾಹ್ನ ಪ್ರಾರಂಭವಾಯಿತು.

ಶರತ್ತುಗಳಿಗೊಳಪಟ್ಟ ಬಿಡುಗಡೆಗೆ ಮಹಾತ್ಮರು ಒಪ್ಪಲಿಲ್ಲ.

ಜೈಲಿನೊಳಗೆ ಮಹಾತ್ಮರಿಗೆ ಸಂಭಾಷಣೆಗಳ ಅನುಕೂಲ.

ತಾ. 19ರಲ್ಲಿ ಹಿಂದೂದೇಶದ ಎಲ್ಲಾ ಕಡೆಗಳಲ್ಲಿ ಪ್ರಾರ್ಥನೆಯ ಮೀಟಿಂಗುಗಳು.

ತಾ. 20ರಲ್ಲಿ ಕೋಟಿಗಟ್ಲೆ ಜನರ ಉಪವಾಸ.

ಅಖಿಲ ಹಿಂದೂ ಮತ್ತು ಅಸ್ಪೃಶ್ಯ ನಾಯಕರ ಪರಿಷತ್ತು.

ಹಿಂದೂ ಧುರೀಣರಿಗೆ ಮಹಾತ್ಮರ ಭೇಟಿ.

ಒಪ್ಪಂದವಾಗುವ ಸಂಭವ.

ಅಸ್ಪೃಶ್ಯರಿಗೆ ದೇವಾಲಯಗಳ ಬಾಗಿಲು ತೆರೆಯೋಣ.

ಮಹಾತ್ಮ ಗಾಂಧಿಯವರು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಿಗೂ, ಬ್ರಿಟನ್ನಿನ ಪ್ರಧಾನ ಮಂತ್ರಿಯವರಿಗೂ ಪತ್ರ ಬರೆದಿದ್ದ ಮೇರೆ ಅಸ್ಪೃಶ್ಯರಿಗೆ ಪ್ರತ್ಯೇಕ ಚುನಾವಣೆಯ ಏರ್ಪಾಡನ್ನು ಸರ್ಕಾರದವರು ಬದಲಾಯಿಸದೆ ಹೋದುದರಿಂದ ಈ ತಾ. 20ನೇ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ಯರವಾಡ ಜೈಲಿನಲ್ಲಿ ಉಪವಾಸವನ್ನು ಪ್ರಾರಂಭಿಸಿದರು. ಸರ್ಕಾರದವರು ತಮ್ಮ ತೀರ್ಮಾನವನ್ನು ಬದಲಾಯಿಸುವ ವರೆಗೆ ಅಥವಾ ತನ್ನ ಮರಣದ ವರೆಗೆ ಉಪವಾಸ ಮಾಡಲು ಮಹಾತ್ಮರ ತೀರ್ಮಾನವಾಗಿದೆ. ಉಪವಾಸವನ್ನು ಶುರುಮಾಡುವ ಮುಂಚೆ ತನ್ನ ಸಂಗಾತಿಗಳಾದ ಶ್ರೀಯುತ ವಲ್ಲಭಭಾಯಿ ಪಟೇಲರು ಮತ್ತು ಶ್ರೀಯುತ ಮಹಾದೇವ ದೇಸಾಯಿಯವರೊಂದಿಗೆ ಪ್ರಾರ್ಥನೆ ಮಾಡುತ್ತಿದ್ದಾಗ್ಯೆ ತಾನು ಉಪವಾಸವನ್ನು ಪ್ರಾರಂಭಿಸುತ್ತೇನೆಂದು ಅವರಿಗೆ ಹೇಳಿದರು. ಅದನ್ನು ಕೇಳಿ ಅವರಿಬ್ಬರಿಗೆ ಉಕ್ಕಿ ಬಂದ ದುಃಖವನ್ನು ತಡೆಯಲಿಕ್ಕೆ ಆಗಲಿಲ್ಲ. ಸ್ವಲ್ಪ ಹೊತ್ತಿಗೆ ಮೊದಲು ಮಹಾತ್ಮರು ಗೋಧಿಯ ರೊಟ್ಟಿ, ನೀರಿನಲ್ಲಿ ಉಣಿಸಿದ ಖರ್ಜೂರದ ಹಣ್ಣು, ಚಪ್ಪರದ ಬದನೆಕಾಯಿ, ಮೊಸರು ಮತ್ತು ಕಿತ್ತಳೆ ಹಣ್ಣುಗಳಿಂದ ಕೂಡಿದ ಊಟವನ್ನು ಉಂಡರು. ಮಹಾದೇವ ದೇಸಾಯಿಯವರು ವಾಡಿಕೆಯ ನಿಂಬೇ ರಸವನ್ನು ನಡುಗುವ ಕೈಯಿಂದ ಮಹಾತ್ಮರಿಗೆ ಕೊಟ್ಟರು.

ಜೈಲಿನಿಂದ ಬಿಡುಗಡೆ ಕುರಿತು.

ಮಹಾತ್ಮರು ಉಪವಾಸವನ್ನು ಪ್ರಾರಂಭಿಸಿದೊಡನೆ ಅವರನ್ನು ಜೈಲಿನಿಂದ ಅನುಕೂಲವಾದ ಒಂದು ಖಾಸಗಿ ಮನೆಗೆ ಸಾಗಿಸಿ, ಅಲ್ಲಿಂದ ಅವರು ಬೇರೆ ಎಲ್ಲಿಗೂ ಹೋಗಕೂಡದೆಂಬ ಆಜ್ಞೆ ಮಾತ್ರ ಇಟ್ಟು, ಉಪವಾಸದ ಕಾರಣವನ್ನು ಕುರಿತು ಬೇರೆಯವರೊಂದಿಗೆ ಸಂಭಾಷಣೆ ನಡಿಸಲು ಅಡ್ಡಿ ಮಾಡುವದಿಲ್ಲವೆಂತ ಸರ್ಕಾರದವರು ನಿಶ್ಚಯಿಸಿದ್ದರು. ಇದನ್ನು ತಿಳಿದ ಮಹಾತ್ಮರು, ಶರತ್ತುಗಳ ಮೇರೆ ಬಿಡುಗಡೆ ಹೊಂದಲು ತನಗೆ ಇಷ್ಟವಿಲ್ಲವೆಂತಲೂ, ಎಲ್ಲಿಗೂ ಹೋಗಕೂಡದೆಂಬ ಆಜ್ಞೆಯನ್ನು ಪಾಲಿಸಲು ತನಗೆ ಸಾಧ್ಯವಿಲ್ಲವೆಂತಲೂ, ಅನಕಾರಣ ಅನಾವಶ್ಯಕದ ತೊಂದರೆ ಮತ್ತು ಪಬ್ಲಿಕ್ ಹಣದ ವೆಚ್ಚವನ್ನು ನಿಲ್ಲಿಸಿ, ತನ್ನನ್ನು ಜೈಲಿನಲ್ಲಿಯೇ ಇರಲು ಬಿಡಬೇಕೆಂದು ಸರ್ಕಾರಕ್ಕೆ ತಿಳಿಸಿದರು. ಸರಕಾರದವರು ಇದಕ್ಕೆ ಒಪ್ಪಿ, ಅವರಿಗೆ ಹೊರಗಿನವರೊಂದಿಗೆ ಸಂಭಾಷಣೆಗೂ, ಪತ್ರವ್ಯವಹಾರಗಳಿಗೂ ಪೂರ್ಣ ಅವಕಾಶ ಕೊಡುವಂತೆ ತೀರ್ಮಾನಿಸಿರುವರು.

ಸಾರ್ವಜನಿಕ ಸಭೆಗಳು ಮತ್ತು ಉಪವಾಸ.

ಕಾಂಗ್ರೆಸ್ಸಿನ ಹಂಗಾಮಿ ಅಧ್ಯಕ್ಷರಾಗಿರುವ ಶ್ರೀಯುತ ರಾಜಗೋಪಾಲಾಚಾರ್ಯರ ಕೋರಿಕೆ ಮೇರೆ, ಹಿಂದೂದೇಶದ ಸರ್ವ ಕಡೆಗಳಲ್ಲೂ ಈ ತಾ 19ನೇ ಸೋಮವಾರ ಸಾಯಂಕಾಲ 6 ಗಂಟೆಗೆ ಸಾರ್ವಜನಿಕ ಸಭೆಗಳು ನಡೆದು, ಮಹಾತ್ಮರ ಪ್ರತಿಜ್ಞೆಯಿಂದ ಸರ್ವರ ಮನಸ್ಸಿನಲ್ಲಿ ಉಂಟಾಗಿರುವ ವ್ಯಸನವನ್ನೂ, ಗಲಿಬಿಲಿಯನ್ನೂ ಸೂಚಿಸಿಯೂ, ಸರ್ಕಾರದವರು ಅಸ್ಪೃಶ್ಯರನ್ನು ಹಿಂದೂಗಳಿಂದ ಬೇರ್ಪಡಿಸುವ ತಮ್ಮ ನೀತಿಯನ್ನು ಬಿಡಬೇಕೆಂತಲೂ, ಭಾರತ ಭೂಮಿಗೆ ಬಂದೊದಗಿರುವ ಈ ಭಯಂಕರ ಆಪತ್ತನ್ನು ದೇವರು ತಪ್ಪಿಸಲಿ ಎಂತಲೂ ಪ್ರಾರ್ಥನೆಯೊಡನೆ ತೀರ್ಮಾನಗಳು ಮಾಡಲ್ಪಟ್ಟವು.

ಅಲ್ಲದೆ ಗಾಂಧಿಯವರು ಉಪವಾಸವನ್ನು ಕೈಕೊಂಡ ತಾ. 20ನೇ ಮಂಗಳವಾರ ಹಿಂದೂದೇಶದ ಉದ್ದಗಲಕ್ಕೂ ಕೋಟಿಗಟ್ಲೆ ಜನರು, ಗಂಡಸರು—ಹೆಂಗಸರ—ಮುದುಕರು, ಬಡವರು—ಬಲ್ಲಿದರೂ, ಸರ್ಕಾರಿ ಉದ್ಯೋಗಸ್ಥರು—ವ್ಯಾಪಾರಿಗಳು—ರೈತರು—ಕೂಲಿಕಸಬಿನವರೂ, ಬ್ರಾಹ್ಮಣರು—ಕ್ಷತ್ರಿಯರು—ವೈಶ್ಯರು—ಶೂದ್ರರೂ, ಕ್ರಿಶ್ಚಿಯನರು—ಪಾರ್ಸಿಗಳು—ಸಿಕ್ಕರೂ, ಎಲ್ಲಾ ತರಹದ ಜನರು ಉಪವಾಸವನ್ನು ಆಚರಿಸಿ ಮಹಾತ್ಮರ ಜೀವವನ್ನು ಉಳಿಸಬೇಕೆಂದು ಭಗವಂತನನ್ನು ಪ್ರಾರ್ಥಿಸಿದರು.

ಮುಂದಾಳುಗಳ ಪರಿಷತ್ತು.

ಉಪವಾಸದ ಮರಣದಿಂದ ಮಹಾತ್ಮರ ಜೀವವನ್ನು ಉಳಿಸುವ ಬಗ್ಗೆ ಉಪವಾಸದ ಕಾರಣವನ್ನು ಅವರಿಗೆ ತೃಪ್ತಿಕರವಾಗಿ ತೀರ್ಮಾನಿಸುವುದಕ್ಕಾಗಿ ಹಿಂದೂ ಮತ್ತು ಅಸ್ಪೃಶ್ಯರ ಮುಖಂಡರು ಡಿಲ್ಲಿಯಲ್ಲಿ ಈ ತಾ. 17 ಮತ್ತು 18ರಲ್ಲಿ ಸಭೆ ಸೇರಬೇಕೆಂದು ಪಂಡಿತ ಮದನಮೋಹನ ಮಾಳವೀಯರು ಕೇಳಿಕೊಂಡರು. ಆದರೆ ಡೆಲ್ಲಿಗಿಂತ ಬೊಂಬಾಯಿಯು ಅನುಕೂಲದ ಸ್ಥಳವಾದುದರಿಂದ ಹಲವಾರ ಜನ ಮೋರೆ ಸನಲ ಸಭೆಯು ಬೊಂಬಾಯಿಯಲ್ಲಿ ತಾ. 19ರಲ್ಲಿ ಸೇರಿತು. ಈ ಸಭೆಗೆ ಹಿಂದೂಸ್ಥಾನದ ಎಲ್ಲಾ ಭಾಗಗಳಿಂದ ಹಿಂದೂ ಮತ್ತು ಅಸ್ಪೃಶ್ಯರ ಸುಮಾರು 100 ಮುಂದಾಳುಗಳು ಬಂದಿದ್ದರು. ಪಂಡಿತ ಮಾಳವೀಯರು ಅಧ್ಯಕ್ಷರಾಗಿದ್ದರು. ಸಿ. ರಾಜಗೋಪಾಲಚಾರ್ಯ, ಸಪ್ರು, ಜಯಕರ್, ಡಾ. ಅಂಬೇಡ್ಕರ್, ರಾಜೇಂದ್ರ ಪ್ರಸಾದ್, ಯಂ. ಸಿ. ರಾಜ, ಡಾ. ಮೂಂಜೆ, ಸರ್ ಚಿಮನ್‌ಲಾಲ್ ಸೆಟಲ್ವಾಡ್, ಕೆ. ನಟರಾಜನ್, ಅಣೆ, ಬಾಲೂ, ಮಿಸೆಸ್ ಹಂಸ ಮೆಹತಾ, ಮಿಸೆಸ್ ಕಮಲ ನೆಹರು, ಪಂಡಿತ ಕುಂಜ್ರು ಮೊದಲಾದ ಪ್ರಮುಖರು ಹಾಜರಿದ್ದರು.

ಅಸ್ಪೃಶ್ಯರಿಗೆ ಪ್ರತ್ಯೇಕ ಚುನಾವಣೆ ಬೇಕೆಂದು 2ನೇ ದುಂಡು ಮೇಜು ಪರಿಷತ್ತಿನಲ್ಲಿ ಹೋರಾಡಿದ ಡಾ. ಅಂಬೇಡ್ಕರವರು, ಮಹಾತ್ಮರ ಉಪವಾಸ ವ್ರತವನ್ನು ತಾನು ಪರ್ವ ಮಾಡುವುದಿಲ್ಲವೆಂತಲೂ, ಪ್ರತ್ಯೇಕ ಚುನಾವಣೆಯ ಅನುಕೂಲವನ್ನು ತಾನು ಬಿಟ್ಟುಕೊಡುವುದಿಲ್ಲವೆಂತಲೂ ಉದ್ಗಾರ ತೆಗೆದಿದ್ದರು. ಅಸ್ಪೃಶ್ಯರ ಪರ ಎಸೆಂಬ್ಲಿಯಲ್ಲಿ ಮೆಂಬರಾಗಿರುವ ಮಿ. ಯಂ. ಸಿ. ರಾಜರೇ ಮೊದಲಾದ ಹಲವು ಅಸ್ಪೃಶ್ಯರ ಮುಂದಾಳುಗಳು ಪ್ರತ್ಯೇಕ ಚುನಾವಣೆ ಬಿಟ್ಟು ಮಹಾತ್ಮರ ಪ್ರಾಣವನ್ನು ಉಳಿಸಬೇಕೆಂದು ಒತ್ತಾಯಪಡಿಸಿದ್ದರಿಂದ ಚುನಾವಣೆಯನ್ನು ಕುರಿತು ಮಹಾತ್ಮರ ರೀತಿಯನ್ನು ತಿಳಿದ ಮೇಲೆ ತಾನು ಅಭಿಪ್ರಾಯ ಕೊಡುವೆನೆಂದು ಅಂಬೇಡ್ಕರವರು ಸೂಚಿಸಿದರು.

ಈ ಮಧ್ಯೆ ಬೊಂಬಾಯಿಯ ಹಿಂದೂ ಮುಖಂಡರು ಸೇರಿ ಒಂದು ಕಮಿಟಿಯನ್ನು ನೇಮಿಸಿ, ಮಹಾತ್ಮರಲ್ಲಿಗೆ ಒಂದು ಡೆಪ್ಯುಟೇಶನು ಕಳುಹಿಸಲು ನಿಶ್ಚೈಸಿದರು. ಹಾಗೆಯೇ ಬೊಂಬಾಯಿ ಗವರ್ನರಿಂದ ಹುಕುಂ ಪಡೆದು, ಮಥುರದಾಸ್ ವಾಸಂಜಿ, ಸರ್ ಪುರುಷೋತ್ತಮದಾಸ್ ಠಾಕೂರ್‌ದಾಸ್, ಸರ್ ಚುನಿಲಾಲ್ ಮೆಹತಾ ಮತ್ತು ಜಿ. ಡಿ. ಬಿರ್ಲಾರವರು ತಾ. 19ರ ಸಾಯಂಕಾಲ ಮಹಾತ್ಮಾಜಿಯವರ ಭೇಟಿ ಮಾಡಿದರು. ಆದರೆ ಆಗ್ಯೆ ಮಹಾತ್ಮರ ಮೌನದ ಸಮಯವಾದುದರಿಂದ ಹೆಚ್ಚಿನ ಸಂಭಾಷಣೆ ನಡಿಸಲು ಆಗಲಿಲ್ಲ. ಪುನಃ ಮರುದಿನ ಮಧ್ಯಾಹ್ನ ಹೋಗಿ ಮಹಾತ್ಮರೊಂದಿಗೆ ಮಾತನಾಡಿದರು. ಈ ಡೆಪ್ಯುಟೇಶನಿನವರು ಮಹಾತ್ಮರ ಅಭಿಪ್ರಾಯವನ್ನು ತಾ. 20ರಲ್ಲಿ ಮುಂದಾಳುಗಳ ಪರಿಷತ್ತಿಗೆ ತಿಳಿಸಿದರು.

ತಾ. 19ರಲ್ಲಿ ಮಹಾತ್ಮರ ಅಭಿಪ್ರಾಯವು ತಿಳಿಯದ್ದರಿಂದ ಮಂದಾಳುಗಳ ಪರಿಷತ್ತಿನಲ್ಲಿ ಮಹಾತ್ಮರ ಪ್ರಾಣವನ್ನುಳಿಸುವ ಆವಶ್ಯಕತೆಯನ್ನು ಮಾತ್ರ ಕುರಿತು ಚರ್ಚಿಸಿ ಮರುದಿನಕ್ಕೆ ಮುಂದರಿಸಲಾಯಿತು. ಸಭೆಯು ಮರುದಿನ ಸೇರಿದಾಗ್ಯೆ, ಅಸ್ಪೃಶ್ಯರಲ್ಲಿ ಪ್ರಾಯ ಬಂದವರಿಗೆಲ್ಲಾ ಓಟಿನ ಹಕ್ಕು ಕೊಟ್ಟು, ಮಿಶ್ರ ಚುನಾವಣೆಯಲ್ಲಿ ಹಿಂದೂ ಮೆಂಬರುಗಳ ಮೂರರಲ್ಲಿ ಒಂದು ಭಾಗ ಅವರಿಗೆ ದೊರೆಯದೆ ಹೋದರೆ ಮೂರರಲ್ಲಿ ಒಂದು ಭಾಗ ದೊರೆಯುವಂತೆ ಹಿಂದೂ ಮೆಂಬರುಗಳು ರಾಜಿನಾಮೆ ಕೊಟ್ಟು ಅವರಿಗೆ ಅವಕಾಶ ಮಾಡಿಕೊಡುವಂತೆ ಒಪ್ಪಂದ ಮಾಡಿಕೊಳ್ಳತಕ್ಕದೆಂಬ ಮಹಾತ್ಮರ ಅಭಿಪ್ರಾಯವನ್ನು ಸರ್ ಚುನಿಲಾಲ್ ಮೆಹತಾರವರು ಹೇಳಿದರು. (ಅಸ್ಪೃಶ್ಯರ ಅಂಬೇಡ್ಕರವರ ಪಂಗಡದೊಂದಿಗೆ ಒಪ್ಪಂದಕ್ಕೆ ಬರಲು ಪ್ರಯತ್ನಿಸಲು ಪರಿಷತ್ತಿನವರಿಗೆ ಮಹಾತ್ಮರು ಪೂರ್ಣ ಸ್ವಾತಂತ್ರ್ಯ ಕೊಟ್ಟಿರುವರಂತೆ.) ಇದಕ್ಕೆ ಡಾ. ಅಂಬೇಡ್ಕರವರು ಒಪ್ಪಲಿಲ್ಲ.

ಪ್ರತ್ಯೇಕ ಚುನಾವಣೆಯನ್ನು ಬಿಟ್ಟು ಒಪ್ಪಂದಕ್ಕೆ ಬರುವ ದಾರಿಯನ್ನು ಸೂಚಿಸಬೇಕೆಂದು ಅಂಬೇಡ್ಕರವರನ್ನು ಕೇಳಿದಾಗ್ಯೆ ಅವರು ತನ್ನ ಸಂಗಾತಿಗಳನ್ನು ಕೇಳಲು ತನಗೆ 15 ದಿವಸ ಪುರಸತ್ತು ಕೊಡಬೇಕೆಂದು ಕೇಳಿದರು. ಕಡೆಗೆ, ಮರುದಿನ ಮೀಟಿಂಗಿನಲ್ಲಿ ಅಂಬೇಡ್ಕರವರ ಮುಂದೆ ಇರಿಸಲು ಒಂದು ಕರಾರನ್ನು ತಯಾರಿಸಲಿಕ್ಕಾಗಿ ಪಂಡಿತ ಮಾಳವೀಯ, ಸಪ್ರು, ಮತ್ತು ರಾಜರವರ ಒಂದು ಕಮಿಟಿಯು ನೇಮಿಸಲಾಯಿತು.

ಈ ಪ್ರಶ್ನೆಯು ಬೇಗನೆ ತೀರ್ಮಾನಿಸಲ್ಪಟ್ಟು ಮಹಾತ್ಮರ ಉಪವಾಸವು ದೀರ್ಘ ಕಾಲ ಮುಂದರಿಸಲು ಬಿಡಲಿಕ್ಕಿಲ್ಲವೆಂದು ಹಲವು ಮುಖಂಡರ ಅಭಿಪ್ರಾಯ. ಡಾ. ಮೂಂಜೆಯವರು ಬರುವ ಆದಿತ್ಯವಾರದೊಳಗೆ ತೀರ್ಮಾನಕ್ಕೆ ಬರುವದೆಂದೂ, ಹಿಂದಿನ ರಾತ್ರಿ ಮಹಾತ್ಮರ ಭೇಟಿಮಾಡಿದ ಮಹಾತ್ಮರ ಮಗ ದೇವಿದಾಸ್ ಗಾಂಧಿಯವರು 2 ದಿವಸಗಳಲ್ಲೇ ಒಪ್ಪಂದಕ್ಕೆ ಬರಬಹುದೆಂದೂ ತಾ. 20ರಲ್ಲಿ ಸೂಚಿಸಿದರು.

(5ನೇ ಪುಟದಲ್ಲಿ ಮುಂದುವರಿದಿದೆ)

Reg. No. M. 1550.
if not delivered please return to
"KODAGU" OFFICE MERCARA.

ಕೊಡಗು.

ಸತ್ಯೇನ ಧೋತಯಮಯಾ ವಿದ್ಯಾ ಶೀಲ ಪ್ರಯುಕ್ತಿತಾ | ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ

ವಾರ್ಷಿಕ ಚಂದಾ ರೂ. ೩—೮—೦.

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೨ | ಮಡಿಕೇರಿ, ಸನ್ ೧೯೩೨ನೇ ಇಸವಿ ಸೆಪ್ಟೆಂಬರ್ ತಾರೀಕು ೨೩ ನೇ ಶುಕ್ರವಾರ. | ಸಂಚಿಕೆ ೧೬

SARI-PIN.

EAR-RINGS. (Thodus)

Cut-rubys Rs. 25 to 50

With diamond in centre Rs. 80 to 120

BRACELETS.

Gold Rs. 10

Set rubys forming any letter Rs. 12

NECKCHAINS.

NOSE-RINGS.

Diamond in small size of best quality Rs. 35 & upwards according to size.

MARRIAGE PRESENTATIONS

Attractive and inexpensive articles ready in stock. Prompt execution. Details on enquiry free with catalogue. Numerous customers in Coorg thoroughly satisfied with reliable service. Testimonials pouring in. Silver Gundys, Photo lockets, Dimond nose-screws, cut-ruby ear-rings, etc., etc., etc., in all prices. Very attractive. Prices most moderate.

Estimates free on enquiry.

Telegrams: 'PRECIOUS.'

CATALOGUE ON ENQUIRY.

V. Subramaniar Jeweller,

Post Box 423, Triplicane, P. O., MADRAS.

Designs free on enquiry.

Telephone: 3145.

52—44

26—13

Empire of India Life Assurance Company, Ltd.

Established 1897.

The New "FAMILY SECURITY" Policy issued by this Company provides

A. In the event of death during an agreed period.

1. The immediate payment to the Widow, Son or legal representative of a part of the sum Assured together with the Bonus accrued.

2. The payment of a guaranteed Yearly Income, payable by monthly instalments, during the balance of the period.

3. The payment of the balance of the sum of assured at the end of the period.

OR

B. In the event of death after the period has expired the payment of the sum assured together with any Bonus that has accrued.

Descriptive Pamphlet on application to—

Head Office:—
EMPIRE OF INDIA LIFE BUILDING,
Bombay

Branch Office:—
152, COMMERCIAL STREET,
Bangalore.

52—31

ಜನರಲ್ ಅಷ್ಯೂರೆನ್ಸ್ ಸೊಸೈಟಿ.

ಅಭಿವೃದ್ಧಿ.

ನಮ್ಮ ಆಯವ್ಯಯದ ಪಟ್ಟಿಯೇ ನಮ್ಮ ಅಭಿವೃದ್ಧಿಯನ್ನು ವ್ಯಕ್ತಗೊಳಿಸುತ್ತದೆ.

ವರ್ಷ	ಮೊಲ್ಬಟ್ಟ ವರಮಾನ	ಮೊಲ್ಬಟ್ಟ ಮೂಲಧನ	ಖರ್ಚಿನ ಪ್ರಮಾಣದ ಶೇಕಡ
1911	46,248	49,442	82.9
1921	2,92,627	6,53,350	43.2
1931	12,30,000	41,00,000	28.2

ಬೋನಸ್ಸು.

ಹುಕುಂ ನಷ್ಟ ಹೊಂದುವ ಜೀವಾವಧಿ ಪಾಲಿಸಿಗಳ ಮೇಲೆ ವರ್ಷ ಒಂದಕ್ಕೆ ಶೇಕಡ 22½

ಚೆನ್ನಾಗಿ ಕೆಲಸಮಾಡಿ ಅಭಿವೃದ್ಧಿ ಸ್ಥಿತಿಯಲ್ಲಿರುವ ಈ ಸೊಸೈಟಿಯಲ್ಲಿ ವಿಮೆ ಮಾಡಿ ಕಡಿಮೆ ಪ್ರೀಮಿಯಂ ವಾಪತಿ ಮಾಡುವ ಸೌಲಭ್ಯ ಹೊಂದಿ ಅಥವಾ ಈ ಕಂಪೆನಿಯ ಪರವಾಗಿ ಕೆಲಸಮಾಡಿ ಉತ್ತಮ ಕಮಿಶನ್ ಬರದ ಪ್ರಯೋಜನ ಹೊಂದಿ.

ಹೆಚ್ಚು ವಿಚಾರಗಳಿಗೆ ಈ ವಿಳಾಸಕ್ಕೆ ಬರೆಯಿರಿ:—

ಎ. ರಾಮಚಂದ್ರರಾವ್,
ಸುಪರಿಂಟೆಂಡೆಂಟ್,
ಎಂಟೋ ಆಫೀಸ್ ಬಳಿ,

52—22

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ [illegible] ಬ್ಯಾಲೆನ್ಸ್ ಶೀಟ್ [illegible]

(ಸ್ಥಾಪಿತವಾದದ್ದು 1922ರಲ್ಲು)

		ರೂ.
ಶೇರ್ ಬಂಡವಾಳ	—	27,350—0—0
ವಸೂಲಾದ ಶೇರ್ ಮೊಬಲಗು	—	27,350—0—0
ಜಮೂಬಂದ ಠೇವಣಾತಿ	—	22,5380—10—7
ವಸೂಲಾದ ಕ್ಷೇಮನಿಧಿ	—	37,914—12—0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೆ ಸಾಲ ಕೊಡಲ್ಪಡುತ್ತದೆ.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5—0—0ರ ದರದಲ್ಲಿ ಬಡ್ಡಿ ದೊರೆಯುತ್ತೆ, ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಡಗಿನ ಆಡಿಟರ್ [illegible] ಲೆಕ್ಕ ಪರಿಶೋಧನೆ ಮಾಡುತ್ತಾರೆ.

ಪ್ರೆಸಿಡೆಂಟರು,	ಟ್ರೆಜರರ್
ಪಟ್ಟವಾಡ ದೇವಯ್ಯನವರು, ರಾವ್ ಬಹದ್ದೂರ್.	ಮನೆಯಪ್ಪಂಡ [illegible] ನವರು.

ಸೆಕ್ರೆಟರಿ

ಸಿ. ಯಸ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಖು 1—7—1932.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಅವಾಬ್ದಾರಿ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿದೆ.

ಏಜೆಂಟರುಗಳು.

ಕೊಡಗಿನ ಎಲ್ಲಾ ಭಾಗಗಳಿಗೆ—ಮೆ. ಮುಂಡಂಡ ಯಂ. ಬಿದ್ದಪ್ಪನವರು

ಉತ್ತರ ಕೊಡಗಿಗೆ ಮೆ. [illegible] ಮಾದಯ್ಯನವರು,

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು, (ಖಾದಿಭಂಡಾರ.)

ನಾಪೋಕ್ಲು—ಎಮ್. ಆರ್. ವೆಂಕಪ್ಪಯ್ಯನವರು.

ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,

ಪೊನ್ನಂಪೇಟೆ—ಮೆ. ಪಿ. ಜಿ. ಮುದ್ದಯ್ಯಯ್ಯನವರು, ಮತ್ತು ಅರಮಣಮಾಡ ಪಿ ಕಾರ್ಯಪ್ಪನವರು.

ಮಡಿಕೇರಿ & ತಿತಿಮತ್ತಿ—ಮೆ. ಜಿ. ಮಾದಯ್ಯಯ್ಯನವರು,

ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾಚಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮ್ಯಾನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿದೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿ ದಿನದ ಕೆಲಸಗಳಲ್ಲಿಯೂ ಉಪಯೋಗವಾದ ಅಮಿತ ಬಾಧ್ಯತಾ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಿಸಲು ಅತ್ಯವಶ್ಯವಾಗಿರುವ, ಗೂಳ್ಳಿಗನು ಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಖರಾರು ಫಾರಮುಗಳೂ, ಜಮ್ಮ ಮಂಜೂರಾತಿ ಫಾರಮುಗಳೂ, ಕುಟುಂಬದ ಒಪ್ಪಿಗೆ ಫಾರಮುಗಳೂ, ಜಾಮೀನು ಖರಾರು ಫಾರಮುಗಳೂ, ಸ್ಟೋರ್ ಕೀಪರ್ ಖರಾರು ಫಾರಮುಗಳೂ, ಓಚರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮಾ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮ್ಯಾನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.

ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.

ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿಸುವ 1,78,322 ಜನರಿಗೆ 38ಕೋಟಿ ರೂ.

ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ಕ್ಕಿಂತ ಮೀರದ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದಾಗಿದೆ.

ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಒತ್ತಾಸೆಯನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬುದು ಅದರ ಹಿಂದಿನ ದಾಖ್ಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್ ಬೆಂಗಳೂರು
ಅಥವಾ ಇನ್ಸ್‌ಪೆಕ್ಟರೇಟ್ ಆಫೀಸು, ಮಡಿಕೇರಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ,	ಕಲ್ಕತ್ತಾ	ಕೌಲಾಲಂಪೂರು	ಮೊಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೋ	ಪಾಟ್ನಾ	ಸುಕ್ಕೂರು
ಅಲಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚನಾಪಳ್ಳಿ
ಬೊಂಬಾಯಿ	ಡೌಲಗಾಂವ್	ಮಂಡಲೆ	ರಾಯಪುರ	ತಿರುವೆಂದ್ರಮ್
ಭೋಪಾಲ್	ಕರಾಚಿ	ಮಡಿಕೇರಿ	ರಾಂಚಿ	ವಿಶಾಖಪಟ್ಣ [52—29

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,

52—36 ಗಿರಿಗಾಂವ, ಮುಂಬಯಿ.

ಕಾಗದ ಬರೆದರೆ ಜಾಗನ ಕ್ಯಾಟಲಾಗು ಮಫತಿಯಾಗಿ ಕಳುಹಿಸಲ್ಪಡುವುದು.



ಕೋವಿಗಳು, ಕತ್ತಿಗಳು, ಬಟೀಗಳು, ಕೋವಿಗಳು, ಕೇತ್ರಗಳು, ಮದ್ದು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS LTD.,

Largest Importers of Firearms and Ammunition

Cheapest priced firm in India,

26—2 **210 Abdul Rehiman Street, BOMBAY.**

Printed & published by P. I. Belliappa at "Kodagu" Press, Mercara for "Kodagu" Ltd.

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ನಾಪೋಕ್ಲು ಕೈಲ್ ಪೊಳ್ದು

ಅಯ್ಯಾ,

ಕಳೆದ ಸಂಚಿಕೆಯಲ್ಲಿ 'ನಾಪೋಕ್ಲು ಕೈಲ್ ಪೊಳ್ದು' ಎಂಬ ಬಾತ್ಮಿಯಲ್ಲಿ 'ನಾಪೋಕ್ಲು ನಾಡಿನವರಿಗೆ ಕೈಲು ಪೊಳ್ದು ಹಬ್ಬದಲ್ಲಿ ಆಯುಧ ಪೂಜೆ ಇಲ್ಲವಂತೆ' ಎಂಬದಾಗಿ ಸಿಕ್ಕಿದ ಅಭಿಪ್ರಾಯವು ಇನ್ನೀಶಗೆ ತಿಳಿದಲ್ಲು ಸರಿಯಲ್ಲ. ಅವರಿಗೆ ಆಯುಧಪೂಜೆಯುಂಟು. ಇದಕ್ಕೆ ನಾನು ತುಂಬಾ ವಿಷಾದಿಸುತ್ತೇನೆ ಮತ್ತು ಕ್ಷಮಾಪಣೆ ಕೇಳಿಕೊಳ್ಳುವವನಾಗಿದ್ದೇನೆ. 'ಹಾಜರಿದ್ದವ.'

ಕೊಡಗಿನ ರಾಜಕೀಯ ಸುಧಾರಣೆಗಳು

ಅಯ್ಯಾ,

ಕೊಡಗಿಗೆ ಈಗಿನ ಹೊಸ ಸುಧಾರಣೆಗಳನ್ನು ಕುರಿತು ದೇಶದಲ್ಲಿ ಪ್ರಬಲವಾದ ಚಳವಳವೂ ತಲೆದೋರಿದೆ. ದೇಶದ ನಾನಾಭಾಗದವರು ನಾನಾತರದ ಭವಿಷ್ಯತ್ತನ್ನು ಕುರಿತು ಜೋತಿಷ್ಯವನ್ನು ಹೇಳಿರುವರು. ಹೇಗೂ ಇದು ಖಂಡನೆಯಾಗಿ ತೀರ್ಮಾನಕ್ಕೆ ಬರಬೇಕಾದ ಸಂಗತಿಯಾಗಿದೆ. ಅಲ್ಲದೆ ಇದು ವಂಶಪಾರಂಪರ್ಯವಾಗಿ ನಡೆಯುವ ಸಂಗತಿಯೂ ಆಗಿರುವುದರಿಂದ ಎಲ್ಲಾ ವಿದ್ಯಾವಂತರಾದ ಮಹನೀಯರು ದೇಶವನ್ನು ಹಿಂದೂದೇಶದ ಯಾವ ಭಾಗಕ್ಕೆ ಸೇರಿಸಬೇಕೆಂದು ಆಲೋಚಿಸಬೇಕಾಗಿದೆ. ಈ ಸಮ್ಮಂಧ ಶ್ರೀಮಾನ್ ಡಿ. ಸಾಕಮ್ಮನವರು ಮೈಸೂರಿಗೆ ಸೇರಿಸಬೇಕೆಂತಲೂ, ಎ. ತಮ್ಮಯ್ಯನವರು ಕರ್ನಾಟಕಕ್ಕೆ ಸೇರಿಸಬೇಕೆಂತಲೂ ಬೆಂಗಳೂರಿನ ಕೊಡಗರು ಮೈಸೂರಿಗೆ ಸೇರಿಸಬೇಕೆಂತಲೂ, ಮಂಗಳೂರು ಕಂಠೀರವ ಮತ್ತು ರಾಷ್ಟ್ರಬಂಧು ಪತ್ರಿಕೆಗಳ ಸಂಪಾದಕರು ಮಂಗಳೂರು ಜಿಲ್ಲೆಯ ಒಂದು ಭಾಗವಾಗಬೇಕೆಂದು ಆಮಂತ್ರಣಗಳನ್ನು ಕಳುಹಿಸಿರುವರು. ಮತ್ತು ಮದ್ರಾಸ್ ಕೊಡಗು ಸಂಘದವರು ಸಹ ತಮ್ಮ ಅಭಿಪ್ರಾಯವನ್ನು ಚರ್ಚಿಸಿ ಪೇಪರಿನಲ್ಲಿ ಸೂಚಿಸಿರುವರು. ಆದರೆ ಇಂಥಾ ಪ್ರಾಮುಖ್ಯ ವಿಷಯದಲ್ಲಿ ಬೊಂಬಾಯಿನಲ್ಲಿಯೂ ಸಹ ಕೊಡಗು ಸಂಘವು ಸಹ ಇರುವುದರಿಂದ ಇವರ ಅಭಿಪ್ರಾಯವನ್ನು ಈ ವರೆಗೂ ಸೂಚಿಸದೆ ಇರುವುದನ್ನು ನೋಡಿದರೆ ಬಹಳ ಆಶ್ಚರ್ಯವೇ ಸರಿ. ಈ ವಿಷಯದಲ್ಲಿ ನಾನು ಸಂಘದ ಸೆಕ್ರೆಟರಿಯವರಲ್ಲಿ ಒಂದೆರಡು ಸಲ ಕಂಡು ಮಾತಾಡಿದಾಗ್ಯೂ ಈ ವಿಷಯಕ್ಕೆ ಇವರು ಗಮನ ಕೊಡದೆ ಇರುವುದರಿಂದ ಈ ಪತ್ರಿಕೆಯಲ್ಲಿ ಬರೆಯಲು ಕಾರಣವಾಯಿತು. ಆದಕಾರಣ ಈ ಸಂಘದ ಸೆಕ್ರೆಟರಿಯವರು ಒಂದು ಸಭೆಯನ್ನು ಜರಗಿಸಿ ಈ ಸಂಗತಿಯನ್ನು ಚರ್ಚೆಗೆ ಇಡಬೇಕಾಗಿ ಇದರಲ್ಲಿ ನಡೆಯುವ ಮೆಂಬರುಗಳ ಅಭಿಪ್ರಾಯವನ್ನು ಕೊಡಗಿನ ಪತ್ರಿಕೆಗೆ ಕಳುಹಿಸಬೇಕಾಗಿ ಸೆಕ್ರೆಟರಿಯವರನ್ನು ಕೇಳಿಕೊಳ್ಳಲಾಗಿದೆ. ಯಸ್. ಯಸ್. ಉತ್ತಯ್ಯ.

ಸುಬ್ರಹ್ಮಣ್ಯ ರಸ್ತೆ.

ಅಯ್ಯಾ,

ತಾ. 9—9—32ನೇ 'ಕೊಡಗು' ಪೇಪರಿನಲ್ಲಿ ಸೋಮವಾರಪೇಟೆ ಕುಂದಳ್ಳಿ ಗ್ರಾಮದಿಂದ ಬಿಸ್ಲೆಘಾಟಿಗೆ ಹೋಗುವ ರಸ್ತೆಯನ್ನು ಕೆಲಸ ಪೂರ್ತಿಯಾಗಿ ಮಾಡಿದನಂತರ ಗಾಡಿ ತಿರುಗಾಡಲು ರಸ್ತೆಯಾದರೆ ಅದಕ್ಕಾದ ಖರ್ಚನ್ನು ಪಾರುಪತ್ಯಗಾರರು ಕಳುಹಿಸಿದ ಎಸ್ಟಿಮೇಟಿನ ಪ್ರಕಾರ ಬೋರ್ಡಿನಿಂದ ಮಂಜೂರು ಮಾಡಿಸಿ ಕೊಡುತ್ತೇವೆಂದು ವಾಗ್ದಾನ ಕೊಟ್ಟದ್ದು ನಿಜವಾಗಿದೆ. ಅದರಂತೆ ಡಿ. ಬೋರ್ಡು ವೈಸ್ ಪ್ರೆಸಿಡೆಂಟರವರು ಖುದ್ದಾಗಿ ಬಂದು ನೋಡಿ ಪಾರುಪತ್ಯಗಾರರಿಂದ ಎಸ್ಟಿಮೇಟ್ ತರಿಸಿಕೊಂಡು ಬೋರ್ಡಿನಲ್ಲಿ ಡಿ. ಬಿ. ಮೆಂಬರಿನ ಠರಾವಿನಂತೆ ಹಣವೂ ಮಂಜೂರಾಗಿದೆ. ಆದರೆ ಆ ರಸ್ತೆಯು ಸ್ವಲ್ಪ ಕೆಲಸ ಬಾಕಿ ಇದೆ. (ಅಂದರೆ ಕಲ್ಲು ಹೊಡೆಯುವುದೂ ಸ್ವಲ್ಪ ಮಣ್ಣು ತೆಗೆಯುವದೂ ಇದೆ.) ಎಂದೂ ಪಾರುಪತ್ಯಗಾರರ ರಿಪೋರ್ಟು ಇದೆ. ಆದರಂತೆ ಕೆಲಸ ಪೂರೈಸಿದನಂತರ ಹಣ ಕೊಡಬೇಕೆಂದು ಬೋರ್ಡಿನಲ್ಲಿ ತೀರ್ಮಾನಿಸಿದೆ ಇದು ಕೆಲಸ ಮಾಡಿದ ಕಂಟ್ರಾಕ್ಟುದಾರರಿಗೆ ತಿಳಿದಿದೆ. ಆದ್ದರಿಂದ ಒಡನೆ ಬಾಕಿಯಾದ ಕೆಲಸ ಪೂರೈಸಿ ಪಾರುಪತ್ಯಗಾರರಿಂದ ರಿಪೋರ್ಟು ಡಿ. ಬೋರ್ಡು ಆಫೀಸಿಗೆ ಕಳುಹಿಸಿ ಹಣವನ್ನು ಹೊಂದಿಕೊಳ್ಳುವ ಭಾರ ಕಂಟ್ರಾಕ್ಟರನಲ್ಲಿದೆ.

ಇಷ್ಟು ಕೆಲಸವನ್ನು ಮಾಡಲಾರದೆ ಗ್ರಾಮಕ್ಕೆ ಸೇರಿದ ಡಿ. ಬಿ. ಮೆಂಬರು ಹಣ ಕೊಡಿಸಿ ಕೊಡಲಿಕ್ಕೆ ತೊಂದರೆ ತೆಗೆದುಕೊಳ್ಳಲಿಲ್ಲವೆಂದು ಬರೆದ ಬಾತ್ಮಿಯನ್ನು ನೋಡಿ ವಿಷಾದಿಸಲೇಬೇಕಾಗಿದೆ.

ಒಡನೆ ಕೆಲಸ ತೀರಿಸಿ ಹಣ ಹೊಂದಿಕೊಳ್ಳುವ ಭಾರ ಕಂಟ್ರಾಕ್ಟುದಾರನ ಕೆಲಸವಾಗಿದೆ. ಹಣವೂ ತಯಾರಿದೆ. ಇದು ಖಜಾನೆಯಲ್ಲಿದೆ ಹೊರತು ಡಿ. ಬಿ. ಮೆಂಬರರಲ್ಲಿ ಯಾ ಡಿ. ಬಿ. ಅಧಿಕಾರಿಗಳ ಕೈಯ್ಯಲ್ಲಿಟ್ಟುಕೊಂಡಿಲ್ಲ. ಕೆಲಸ ತೀರಿದ ರಿಪೋರ್ಟು ಪಾರುಪತ್ಯಗಾರರವರಿಂದ ಬಾರದೆ ಹಣ ಕೊಡಲೂ ಅಧಿಕಾರವಿಲ್ಲ. ಇದನ್ನು ತಿಳಿದುಕೊಳ್ಳದೆ ತೊಂದರೆ ತೆಗೆದುಕೊಂಡ ಡಿ. ಬಿ. ಮೆಂಬರವರ ಮೇಲೆ ಸುಮ್ಮನೆ ದೋಷಣೆ ಹೊರಿಸಿದ ಗ್ರಾಮಸ್ಥನ ಬಾತ್ಮಿಗೆ ವಿಷಾದಪಡಬೇಕಾಗಿದೆ. ಬಾತ್ಮಿ ನೋಡಿದವ.

ಇಂಡಿಯಾ ಎಕ್ವಿಟೇಬಲ್ ಇನ್ಶೂರೆನ್ಸ್
ಕಂಪೆನಿ ಲಿಮಿಟೆಡ್.
(ಸ್ಥಾಪಿಸಲ್ಪಟ್ಟದ್ದು 1908.)

ಪೋಲಿಸಿಗಳು ಕಳಕೊಳ್ಳುವಂಥವುಗಳಲ್ಲ.

ಯಾವ ತಡೆಯೂ ಇಲ್ಲದೆ ಪ್ರತಿ ವರ್ಷವೂ ಬೋನಸ್ಸು.

ಹಕ್ಕು ಬಾಧ್ಯಸ್ಥರಿಗೆ ಸರಿಯಾಗಿ ಹಣ ಕೊಡಲ್ಪಡುವದು, ಇಲ್ಲದಿದ್ದರೆ ಬಡ್ಡಿಯು ದೊರಕುವುದು.

ಹೆಡ್ ಆಫೀಸು:—
102. ಕ್ಲೈವ್ ಸ್ಟ್ರೀಟ್, ಕಲ್ಕತ್ತಾ.

I. E., . P. S. 12–2

GOVERNMENT SOAP FACTORY,
Bangalore.

ವಿಶ್ವಾಸಾರ್ಹತೆ.

ಅತ್ಯುತ್ತಮವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ
ಯಾವ ಗುಣಗಳು ಅವಶ್ಯಕವೆಂದು ನೀವು
ತಿಳಿದಿರುತ್ತೀರೋ ಆ ಗುಣಗಳೆಲ್ಲಾ
ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.

ನಾವು ನಿಮಗೆ ಭರವಸೆಯನ್ನೀಯುತ್ತೇವೆ.

ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
58–2 ಬೆಂಗಳೂರು.

ಕೌನ್ಸಿಲು ಮೀಟಿಂಗು.

(3ನೇ ಪುಟದಿಂದ ಮುಂದುವರಿದದ್ದು)

ನ್ನು ಪ್ರತಿನಿಧಿಗಳ ಮೂಲಕ ನಡಿಸಲು ದೇಶೀಯರಿಗೆ ಶಕ್ತಿ ಇರೆಯೆಂತ ದೇಶೀಯರು ನಂಬುತ್ತಾರೆ. ವಿದ್ಯೆಯಲ್ಲಿ ನೆರೆ ಪ್ರಾಂತ್ಯಕ್ಕಿಂತ ನಾವು ಮುಂದುವರಿದ್ದೇವೆ. ಮದ್ರಾಸಿಗೆ ಸೇರಿ ಪ್ರಜಾ ಜವಾಬ್ದಾರಿ ಸರ್ಕಾರವನ್ನು ಪಡೆಯಬೇಕೆಂತ ಒಂದು ಪಕ್ಷವಿದೆ ಬೇರೆ ಇದ್ದರೂ ಪ್ರಜಾ ಜವಾಬ್ದಾರಿ ಸರ್ಕಾರ ಸಿಕ್ಕಬೇಕೆಂತ ಇನ್ನೊಂದು ಪಕ್ಷ. ಎರಡು ಪಂಗಡದ ಉದ್ದೇಶವೂ ಒಂದೇಯಾಗಿದೆ. ಕೊಡವಸಭೆಯವರು ದೇಶಕ್ಕೆ ಪ್ರಜಾ ಜವಾಬ್ದಾರಿ ಸರ್ಕಾರವನ್ನು ಕೊಟ್ಟೇ ಕೊಡುತ್ತಾರೆ ಎಂತ ನಂಬುತ್ತಾರೆ. ಅದಕ್ಕೆ ಹಣವಿಲ್ಲದಿದ್ದರೆ ಉತ್ಪತ್ತಿಗೆ ತಕ್ಕಂತೆ ಖರ್ಚು ಕಡಿಮೆ ಮಾಡಿಕೊಳ್ಳಬೇಕೆನ್ನುತ್ತಾರೆ. ಇದು ಸಾಧ್ಯವೆಂತ ಜನರು ನಂಬುತ್ತಾರೆ. ಬಟ್ಟೆ ಇದ್ದಂತೆ ಕೋಟು ಮಾಡಿಕೊಳ್ಳಬೇಕೆನ್ನುತ್ತಾರೆ. ಅದರ ಕೋಟು ಬಹಳ ಚಿಕ್ಕದಾದರೆ ಹಾಕಿಕೊಳ್ಳುವುದೇ ಅಸಾಧ್ಯವಾದೀತು. ಖರ್ಚು ಕಡಿಮೆ ಮಾಡುತ್ತಾ ಬಂದರೆ ಕೆನ್ನಾಲ ರಾಮಕೃಷ್ಣನ ಕಥೆ ಪುನಃ ಸಂಭವಿಸೀತು. ಪ್ರಜಾ ಜವಾಬ್ದಾರಿ ಸರ್ಕಾರವು ದೊರೆಯುತ್ತದೆ ಎಂತ ಅಧಿಕಾರಿಗಳೇ ಉತ್ತೇಜನ ಕೊಡುತ್ತಿದ್ದಾರೆ. ಆದುದರಿಂದ ಕೊಡವ ಸಭೆಯು ಪ್ರಜಾ ಜವಾಬ್ದಾರಿ ಸರ್ಕಾರವು ಸಿಕ್ಕುತ್ತದೆಂತ ನಂಬುತ್ತದೆ. ರಾಜಭಕ್ತಿ, ವಿದ್ಯೆ ಮುಂತಾದ್ದರಲ್ಲಿ ಈ ದೇಶದವರು ಮುಂದುವರಿದಿರುವದರಿಂದಲೂ ಪ್ರಜಾ ಜವಾಬ್ದಾರಿ ಸರ್ಕಾರವು ಸಿಕ್ಕಲೇ ಬೇಕೆಂತ ಕೊಡವ ಸಭೆಯು ನಂಬುತ್ತದೆ. ಪೂರ್ತಿ ಜವಾಬ್ದಾರಿ ಸರ್ಕಾರ ಕೊಡದಿದ್ದರೆ ಜನರಿಗೆ ತೃಪ್ತಿಯಾಗುವುದಿಲ್ಲ. ಕೊಡವ ಸಭೆಯು ಮದ್ರಾಸಿಗೆ ಸೇರಬೇಕೋ ಎಂಬ ವಿಷಯವನ್ನು ತೀರ್ಮಾನ ಮಾಡದೆ ಹಾಗೆಯೇ ಬಾಕಿ ಮಾಡಿಕೊಂಡಿದೆ. ಈ ಕೌನ್ಸಿಲು ಮಂಜೂರಾದ ಒಂದು ವರ್ಷದಲ್ಲೇ ದೊಡ್ಡ ಪ್ರಾಂತ್ಯಗಳ ಸುಧಾರಣೆ ಬೇಕೆಂತ ಈ ಕೌನ್ಸಿಲಿನಲ್ಲಿ ಚರ್ಚೆ ನಡೆಯಿತು. ಲೆಫ್ಟಿನೆಂಟ್ ಗವರ್ನರ ಕೌನ್ಸಿಲನ್ನು ಕೊಡಲು ಪ್ರಯತ್ನಿಸಲಾಗುತ್ತದೆಯೆಂತ ಸರ್ ಚಾರ್ಲ್ಸರವರು ಹೇಳಿದರು.

ದೇಶವು ಬೇರೆಯೇ ಇರಬೇಕೋ ಮದರಾಸಿಗೆ ಸೇರಬೇಕೋ ಎಂಬ ವಿಷಯವನ್ನು ತೀರ್ಮಾನ ಮಾಡಲು ಹೊಸ ಚುನಾವಣೆಯೇ ಆಗಬೇಕು. ಮೇಜಿಸ್ಟ್ರೇಟರ ಮತ್ತು ಪೋಲೀಸ್ ಅಧಿಕಾರವು ಬೇರ್ಪಡಬೇಕೆಂಬ ಠರಾವು ಬಹು ವರ್ಷದಿಂದಲೇ ಪಾಸಾಗುತ್ತಿದ್ದರೂ ಸಹ ಅದನ್ನು ಮಂಜೂರು ಮಾಡಿ ಕೊಡಲಿಲ್ಲ. ಹಾಗಿರುವಾಗ ಪೂರ್ತಿ ಪ್ರಜಾ ಜವಾಬ್ದಾರಿ ಸರ್ಕಾರವನ್ನು ಮಂಜೂರು ಮಾಡಿ ಕೊಡುವರೇ? ಇಂಡಿಯಾ ಸರ್ಕಾರದಿಂದ ಹಣ ಸಹಾಯ ಸಿಕ್ಕುವುದಿಲ್ಲವೆಂತಾಯಿತು. ಹಾಗಾದರೆ ಆಡಳಿತ ನಡಿಸಲು ಸಾಧ್ಯವಿಲ್ಲ. ಆದರೂ ಪೂರ್ತಿ ಪ್ರಜಾ ಜವಾಬ್ದಾರಿ ಸರ್ಕಾರವು ಸಿಕ್ಕೇಕೆಂತ ಕೊಡವ ಸಭೆಯು ನಂಬಿದೆ. ಅದನ್ನು ಸರ್ಕಾರವು ಕೊಡದೇ ಬೇಕು.

ಮಿ. ಅಪ್ಪಾರಂಡ ಬಿ. ಚಂಗಪ್ಪನವರು—1834ನೇ ಇಸವಿಯಲ್ಲಿ ನಮ್ಮ ಪೂರ್ವಜರು ಮಧ್ಯವರ್ತಿ ಸರ್ಕಾರಕ್ಕೆ ಸೇರಿಕೊಳ್ಳಬೇಕೆಂದರು. 90 ವರ್ಷಗಳನಂತರ ಅದೇ ಸವಾಲು ಪುನಃ ಜನರ ಮುಂದೆ ಬಂದಿದೆ. ನಮ್ಮ ದೇಶವು ಮೈಸೂರಿಗೆ, ಕರ್ನಾಟಕಕ್ಕೆ, ಮದ್ರಾಸಿಗೆ ಸೇರಬೇಕೆನ್ನುತ್ತಾರೆ. ಎಲ್ಲರಿಗೂ ನಮ್ಮ ದೇಶ ಬೇಕಾಗಿದೆ. ಆದರೆ ಮದ್ರಾಸಿಗೆ ಸೇರಿಸಿದರೆ ಪ್ರಯೋಜನವಿಲ್ಲ. ಮದ್ರಾಸ್ ಯುನಿವರ್ಸಿಟಿಯಲ್ಲಿ ವರ್ಷ ಒಂದಕ್ಕೆ 5000, 6000 ಗ್ರೇಜ್ಯುಯೇಟುಗಳು ತಯಾರಾಗುತ್ತಿರುವಾಗ್ಯೆ ನಮ್ಮ ದೇಶದ ಒಬ್ಬ ಇಬ್ಬರು ಗ್ರಾಜ್ಯುವೇಟರಿಗೆ ಹೇಗೆ ತಾನೇ ಕೆಲಸ ಸಿಕ್ಕೀತು? ಸಿಕ್ಕುವುದಾದರೆ ಈಗ ಇನ್ನೂ ತ ಬೇರೆ ಇದ್ದಾಗಲೇ ಸಿಕ್ಕುತ್ತದೆ. ನಮ್ಮ ದೇಶದಲ್ಲಿ ಏನು ಮೈಲಿಗೆ ಒಂದು ಶಾಲೆ ಇದೆ, ತುಂಬಾ ಆಸ್ಪತ್ರೆಗಳಿವೆ, ನಮ್ಮ ದೇಶದ ಆರೋಗ್ಯ ಒಳ್ಳೇದಾಗಿದೆ, ಹವ ಒಳ್ಳೇದಾಗಿದೆ. ನೀರು ಒಳ್ಳೆದಾಯದಾಗಿದೆ. ಮದ್ರಾಸಿನ ಗ್ರಾಮಗಳ ಸ್ಥಿತಿ ನೋಡಿರಿ. ನಾವು ಬೇರೆ ಇದ್ದರೇ ನಮ್ಮ ಸ್ಥಿತಿಯು ಉತ್ತಮವಾಗಿರುತ್ತದೆ. 250 ಜನರಿರುವ ಮದ್ರಾಸ್ ಕೌನ್ಸಿಲಿನಲ್ಲಿ ನಮ್ಮ ದೇಶಕ್ಕೆ ಸಿಕ್ಕಬಹುದಾದ ಒಬ್ಬ ಅಥವ ಅರ್ಧ ಮೆಂಬರಿನಿಂದ ಏನು ಮಾಡಲು ಸಾಧ್ಯವಾದೀತು? ಮದ್ರಾಸ್ ಸರ್ಕಾರದಿಂದ ಹಣದಲ್ಲಿಯೂ ನಮಗೆ ಸಹಾಯ ದೊರಕಲಾರದು. ನಮ್ಮ ದೇಶದಲ್ಲಿರುವ ಉತ್ತಮ ತರದ ಸ್ಕೂಲುಗಳಿಗೆಲ್ಲಾ ಖರ್ಚು ಕಡಿಮೆ ಮಾಡಿ ಉಳಿವರಿಯನ್ನೆಲ್ಲಾ ಮದ್ರಾಸ್ ಬಂದರಿಗೋ, ಬೇರೆ ಯಾವುದಾದರೂ ಮದ್ರಾಸಿನ ಪ್ರಯೋಜನಕ್ಕೆ ಉಪಯೋಗಿಸಿಕೊಂಡಾರು.

ದೇಶದವರು ಬ್ರಿಟಿಷ್ ಸರಕಾರಕ್ಕೆ ರಾಜಭಕ್ತಿಯುಳ್ಳವರಾಗಿರುತ್ತೇವೆಂತ ಪ್ರಮಾಣಮಾಡಿಕೊಟ್ಟಿದ್ದಾರೆ. ಹಾಗಿರುವಾಗ ಬೇರೆಯೇ ಇರಬೇಕೆಂಬ ದೇಶೀಯರ ಅಭಿಲಾಷೆಯನ್ನು ಸರಕಾರವು ಗೌರವಿಸಬೇಕು. ಅದಕ್ಕಾಗಿ ಇಂಡಿಯಾ ಸರಕಾರವು ವರ್ಷೇ ವರ್ಷೇ ಹಣ ಸಹಾಯಕೊಡಬೇಕು. ಸುಧಾರಣೆ ಕೊಡಲಿ, ಇಲ್ಲವಾದರೆ ಮದ್ರಾಸಿಗೆ ಸೇರಿಸಬೇಕೆಂತ ಕೇಳ ಪ್ರಯೋಜನವಿಲ್ಲ. ಒಳ್ಳೇ ಮಾತಾಡಿ ಪ್ರಯೋಜನವಿಲ್ಲ. ನಮ್ಮ ದೇಶಕ್ಕೆ ಯಾವ ತರದ ಸುಧಾರಣೆ ಬೇಕೆಂಬುದನ್ನು ನಿಶ್ಚೈಸಲು ಒಂದು ಕಮಿಟಿಯು ನೇಮಕವಾಗಬೇಕು.

ಮಿ. ನಿಕಲ್ಸರವರು—ದೇಶವು ಅಭಿವೃದ್ಧಿಯಾಗಬೇಕೆಂಬುದಕ್ಕೆ ಯಾರೇ ವಿರೋಧಿಸಲಾರದು. ನಮ್ಮ ಸಹಾನುಭೂತಿ ಇದೆ. ಆದರೆ ಈಗ ತಂದ ಠರಾವಿನಲ್ಲಿ ಅಡಕವಾದ ವಿಷಯಗಳನ್ನು ನೋಡಿದರೆ ನಾವು ಅದಕ್ಕೆ ವಚನ ಕೊಡಲು ಸಾಧ್ಯವಿಲ್ಲ. ಸ್ಪೆಷಲ್ ಕಮಿಟಿ ವರದಿಯಲ್ಲಿ ಇಲ್ಲಿಂದ ಎಸೆಂಬ್ಲಿಗೆ ಒಬ್ಬ ಮೆಂಬರನನ್ನು ಕಳುಹಿಸಬಹುದೆಂತ ಇದೆ. ಈ ರಿಯಾಯತಿಯಿಂದ ದೇಶವು ತಕ್ಕಾಲ ತೃಪ್ತಿಪಡಬೇಕು. ಮದ್ರಾಸಿಗೆ ಸೇರಬೇಕೆಂತ ಒಬ್ಬನಾದರೂ ಇಲ್ಲಿ ಸೂಚಿಸಲಿಲ್ಲವೆಂತ ನೋಡಿ ನನಗೆ ತುಂಬಾ ಸಂತೋಷವಾಯಿತು.

ಮಿ. ಪುಚ್ಚಿಮಾಡ ಪಾರ್ಶ್ವಯ್ಯನವರು ಹೀಗೆ ಹೇಳಿದರು:— ಕೊಡಗು ಬೇರೆಯೇ ಇರಬೇಕೆನ್ನುವವರೂ, ಮದ್ರಾಸಿಗೆ ಸೇರಬೇಕೆನ್ನುವವರೂ ಸಹ ಪ್ರಜಾಜವಾಬ್ದಾರಿ ಸರಕಾರ ಬೇಕೆಂತಲೇ ಆಶಿಸುವವರಾಗಿದ್ದಾರೆ. ಕೆಲವರಿಗೆ ಸರಕಾರ ನೌಕರಿ ಸಿಕ್ಕೀತೋ ಇಲ್ಲವೋ ಎಂಬುದು ಮುಖ್ಯವಲ್ಲ. ಜನರ ಅಭಿಪ್ರಾಯಕ್ಕೆ ಅನುಗುಣವಾಗಿ ಸರಕಾರವನ್ನು ನಡಿಸಲು ಸಾಧ್ಯವಿದೆಯೋ ಎಂಬುದೇ ಮುಖ್ಯ ಪ್ರಶ್ನೆ.

ಮಿ. ನಿಕಲ್ಸರ ಅಭಿಪ್ರಾಯ ತಿಳಿಯಲು ವ್ಯಸನವಾಯಿತು. ಬೇರೆಯೇ ಇದ್ದು ಪೂರ್ತಿ ಪ್ರಜಾಜವಾಬ್ದಾರಿ ಸರಕಾರವನ್ನು ಪಡೆಯಲು ಸಾಧ್ಯವಿದೆಯೆಂತ ನಂಬಿರುವುದರಿಂದ ಕೊಡವ ಸಭೆಯವರು ಬೇರೆ ಇರಬೇಕೆಂತ ಹೇಳುವದಾಗಿದೆ. ಕೊಡವ ಸಭೆಯು, ಪ್ರಜಾಜವಾಬ್ದಾರಿ ಸರಕಾರವು ಸಿಕ್ಕದಿದ್ದರೆ ಮುಂದೆ ಏನು ಮಾಡಬೇಕೆಂಬದನ್ನು ನಿಶ್ಚೈಸಲು ಹಿಂಬಕ್ಕೆ ಇಟ್ಟುಕೊಂಡಿದೆ. ಪ್ರತ್ಯೇಕ ಇರಬೇಕೆಂಬ ಆಸೆಯನ್ನಾದರೂ ಕಳೆದುಕೊಂಡು ಮದ್ರಾಸಿಗೆ ಸೇರಿಯಾದರೂ ಪ್ರಜಾಜವಾಬ್ದಾರಿಯನ್ನು ಪಡೆಯಬೇಕಾಗುತ್ತದೆ. ಈಗಿನ ಆಡಳಿತದ ಕ್ರಮವು ತಪ್ಪಲೇ ಬೇಕು. ಈಗ ಇರುವ ಕೌನ್ಸಿಲಿನಿಂದ ಏನೂ ಪ್ರಯೋಜನವಿಲ್ಲ. ಬಜೆಟ್ಟನ್ನು ಪಾಸ್ ಮಾಡುವ ಹಕ್ಕನ್ನು ಕೇಳಿ ಸಿಕ್ಕಲಿಲ್ಲ. ಪೋಲೀಸ್ ಮತ್ತು ಮೇಜಿಸ್ಟ್ರೇಟ್ ಅಧಿಕಾರಗಳನ್ನು ಪ್ರತ್ಯೇಕಿಸಬೇಕೆಂದರೆ ಆಗಲಿಲ್ಲ. ಎರಡು ಪಕ್ಷಕ್ಕೂ ಬಲವಾದ ಹಿಂಬಲ ದೇಶದಲ್ಲಿ ಇದೆ. ಓಟರುಗಳಿಗೆ ಈ ಬಾಬಿನಲ್ಲಿ ತಿಳುವಳಿಕೆ ಕೊಟ್ಟದ್ದು ಸಾಕಾಗಿಲ್ಲ. ಈ ವಿಷಯವನ್ನು ಓಟರುಗಳ ಮುಂದಿಟ್ಟೇ ಇನ್ನೊಂದು ಚುನಾವಣೆ ನಡಿಸಬೇಕು.

ಬಿ. ಶ್ರೀಪತಿರಾಯರು ಜವಾಬಿನಲ್ಲಿ ಹೇಳಿದ್ದೇನೆಂದರೆ— ಠರಾವಿನ ಅರ್ಥದಲ್ಲಿ ಸಂಶಯವೇನೂ ಇಲ್ಲ. ಮದ್ರಾಸಿಗೆ ಸಿಕ್ಕುವ ಹಕ್ಕುಗಳು ನಮ್ಮ ದೇಶಕ್ಕೆ ದಾಮಾಶಾಯಿ ಮೇರೆ ಸಿಕ್ಕಬೇಕೆಂದರೆ, ಅಲ್ಲಿ 8 ಮಂತ್ರಿಗಳಿದ್ದರೆ ಇಲ್ಲಿ ಒಬ್ಬ ಸಾಕು ಎಂಬ ಅರ್ಥ. ಮಿ. ನಿಕಲ್ಸರ ಅಭಿಪ್ರಾಯವು ಒಪ್ಪತಕ್ಕದ್ದಲ್ಲ. ಮಧ್ಯವರ್ತಿ ಕೌನ್ಸಿಲುಗಳಲ್ಲಿ ಒಟ್ಟು ಹಿಂದೂಸ್ಥಾನಕ್ಕೆ ಸಂಬಂಧಪಡುವ ವಿಷಯಗಳನ್ನು ಚರ್ಚಿಸುವುದು. ಈ ದೇಶಕ್ಕೆ ಪ್ರಾಂತೀಕ ಕೌನ್ಸಿಲಿನಲ್ಲಿ ಪ್ರಜಾಜವಾಬ್ದಾರಿ ಸಿಕ್ಕದೆ ಅಲ್ಲಿ ಕೌನ್ಸಿಲಿಗೆ ಪ್ರತಿನಿಧಿತ್ವ ಸಿಕ್ಕಿ ಏನೂ ಪ್ರಯೋಜನವಿಲ್ಲ. ನಾವು ಕೇಳುವುದನ್ನು ಅಂದರೆ ಸರಕಾರವು ಜನರ ಅಭಿಪ್ರಾಯಕ್ಕನುಗುಣವಾಗಿ ನಡಿಯಬೇಕೆಂಬ ಕೋರಿಕೆಯನ್ನು ಒಗ್ಗಟ್ಟಿನಿಂದ ಕೇಳುವ. ಆಗುವುದಿಲ್ಲವೆಂತ ಜವಾಬು ಬಂದರೆ ಆಗ ಬೇರೆ ಯೋಚನೆ ಮಾಡಬಹುದು.

ಠರಾವನ್ನು ಓಟಿಗೆ ಹಾಕಿದಾಗ ಮಿ. ಗಳಾದ ಬಿ ಶ್ರೀಪತಿರಾಯರು, ಎ ಬಿ ಚಂಗಪ್ಪನವರು, ಕೊಂಗಂಡ ಗಣಪತಿಯವರು, ತಿಮ್ಮಪ್ಪಯ್ಯನವರು, ಪಾಂಡಂಡ ಚಂಗಪ್ಪನವರು, ಚೌಡ್ಲು ಕಾಳಪ್ಪನವರು ಮಾತ್ರ ಠರಾವಿನ ಪರವಾಗಿ ಓಟು ಮಾಡಿದರು. ಮಿಕ್ಕವರು ಯಾವ ಕಡೆಯೂ ಓಟ್ ಮಾಡಲಿಲ್ಲ. ಆದುದರಿಂದ ಠರಾವು ವಿರೋಧವಿಲ್ಲದೆ ಪಾಸಾಯಿತು.

ಮಿ. ಚೌಡ್ಲು ಕಾಳಪ್ಪನವರು—ಕೊಡಗಿನಲ್ಲಿ ಶೀಘ್ರದಲ್ಲೇ ಒಂದು ಲ್ಯಾಂಡ್ ಮಾರ್ಗೇಜ್ ಬ್ಯಾಂಕನ್ನು ಸ್ಥಾಪಿಸಬೇಕೆಂತಲೂ, ಕೋಆಪರೇಟಿವ್ ಸಾಲಗಳಿಗೆ ಜಮ್ಮ ಉಂಬಳಿ ಜಹಗೀರ್ ಭೂಮಿಗಳನ್ನು ಗಿರ್ವಿಕೊಡಬಾರದೆಂತಲೂ ಕಳುಹಿಸಿದ ಎರಡು ಠರಾವುಗಳನ್ನು ವಾಪಸು ತೆಗೆದುಕೊಂಡರು. ರಾ. ಸಾ. ಶ್ರೀಪತಿರಾಯರು, ಸಬ್ ಅಸಿಸ್ಟೆಂಟ್ ಸ್ಮಾಲ್ ಕಾಸ್ ಪವರನ್ನು 200 ರೂ. ಗೂ, ಮುನ್ಸೀಫರ ಪವರನ್ನು 100 ರೂ. ಗೂ, ಇಳಿಸಬೇಕೆಂತ ಕಳುಹಿಸಿದ ಠರಾವನ್ನು ಚರ್ಚಿಸಲಿಲ್ಲ.

ಮೋಟಾರ ಗಾಡಿಗಳಿಗೆ ಕಂದಾಯ ಹಾಕಲು ಮಾಡಿಕೊಂಡ ಖಾನೂನನ್ನು ರದ್ದುಪಡಿಸಬೇಕೆಂತ ಮಿ. ಅಪ್ಪಾರಂಡ ಚಂಗಪ್ಪನವರು ತಂದ ಠರಾವಿನ ಮೇಲೆ ಚರ್ಚೆ ನಡೆದು, ಆ ಖಾನೂನಿನ ಜಾರಿಯು ಸ್ವಲ್ಪ ಕಾಲವೇ ಆಗಿರುವುದರಿಂದ ಇಷ್ಟು ಬೇಗನೇ ರದ್ದು ಮಾಡಲು ಕಾರಣವಿಲ್ಲವೆಂತ ವಿವರಿಸಲ್ಪಟ್ಟ ಮೇರೆ ಠರಾವನ್ನು ಸೂಚಕರು ವಾಪಸು ತೆಗೆದುಕೊಂಡರು..

ಸ್ವಂತ ಕಾರ್‌ಗಳಿಗೂ, ಲಾರಿಗಳಿಗೂ ಮುನಿಸಿಪಾಲಿಟಿಯಿಂದ ಹೊರಗೆ ಇರುವವುಗಳಿಗೆ ಮೋಟಾರ್ ಕಂದಾಯವನ್ನು ಅರ್ಧಕ್ಕೆ ಇಳಿಸಬೇಕೆಂತ ಮಿ. ಎ. ಬಿ. ಚಂಗಪ್ಪನವರು ತಂದ ಠರಾವಿನ ಮೇಲೆ ಚರ್ಚೆ ನಡೆಯಿತು. ಮಿ. ಪಾಂಡಂಡ ಚಂಗಪ್ಪನವರು ಎಲ್ಲಾ ಮೋಟಾರ್ ಗಾಡಿಗಳಿಗೂ ಹಾಗೆಯೇ ಇಳಿಸಬೇಕೆಂತ ಠರಾವಿನಲ್ಲಿ ತಿದ್ದುಪಡಿತಂದಿದ್ದರು. ಬಸ್‌ಗಳು ವಿನಹ ಇತರ ಎಲ್ಲಾ ಗಾಡಿಗಳಿಗೆ ಅದೇ ರೀತಿ ಕಂದಾಯ ಇಳಿಸಬೇಕೆಂತ ಇನ್ನೊಂದು ತಿದ್ದುಪಡಿಯೂ ಇತ್ತು. ಚರ್ಚೆ ನಡೆದು ಠರಾವೂ, ತಿದ್ದುಪಡಿಗಳೂ ಎಲ್ಲವೂ ನಾಪಾಸಾದವು.

ವೀರರಾಜಪೇಟೆಯಿಂದ ನಾಲ್ಕುನಾಡಿಗೆ ಹೋಗುವ ರಸ್ತೆಯನ್ನು ವರ್ಷದ ಎಲ್ಲಾ ಭಾಗದಲ್ಲೂ ಗಾಡಿಗಳ ಓಡ್ಯಾಟಕ್ಕೆ ಅನುಕೂಲವಾಗಿರುವಂತೆ ಮಾಡಲು ಆ ರಸ್ತೆಯ ಖರ್ಚಿಗೆ 10,000 ರೂ. ಕೊಡಲೇ ಇಡಬೇಕೆಂತ ಮಿ. ಅಪ್ಪಾರಂಡ ಚಂಗಪ್ಪನವರು ಒಂದು ಠರಾವು ತಂದಿದ್ದರು. ಕಮಿಶನರು ಠರಾವಿಗೆ ವಿರೋಧಿಸಿ, ಠರಾವನ್ನು ಅಂಗೀಕರಿಸಿದರೆ ಅದಕ್ಕೆ 1½ ಲಕ್ಷ ರೂ. ಬೇಕಾಗುತ್ತದೆ, 10,000 ರೂ. ಸಾಲದು; ಹಣದ ಅಭಾವದಿಂದ ಇದು ಸಾಧ್ಯವಿಲ್ಲವೆಂತ ಹೇಳಿದರು. ಠರಾವು ಬಹುಮತದಿಂದ ಮಂಜೂರಾಯಿತು.

ಮಡಿಕೇರಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಬೇಕಾದ ಎಲ್ಲಾ ಅನುಕೂಲಗಳನ್ನೂ, ಎಕ್ಸ್‌ರೇ ಯಂತ್ರಗಳನ್ನು ಸಹ ಇರಿಸಬೇಕೆಂತ ಮಿ. ಅಪ್ಪಾರಂಡ ಚಂಗಪ್ಪನವರು ಠರಾವು ತಂದರು. ಚಿಕಿತ್ಸೆಗೆ ಬೇಕಾದ ಎಲ್ಲಾ ಯಂತ್ರಗಳೂ ಈಗಲೇ ಆಸ್ಪತ್ರೆಯಲ್ಲಿ ಇವೆಯೆಂತಲೂ, ಎಕ್ಸ್‌ರೇ ಯಂತ್ರಕ್ಕೆ 35000 ರೂ. ಬೇಕಾಗುತ್ತದೆಯೆಂತಲೂ, ಹಣ ದೊರೆತಾಗ ಆಲೋಚಿಸಬಹುದೆಂತಲೂ ಕಮಿಶನರು ಹೇಳಿದರು. ಸೂಚಕರು ಠರಾವನ್ನು ವಾಪಸು ತೆಗೆದುಕೊಂಡರು.

ಕೊಡಗಿನ ದನಗಳಿಗೆ ಸೀರಂ ಸೈಮಲ್ಟೇನಿಯಸ್ ಕ್ರಮದಿಂದ ಇನಾಕ್ಯುಲೇಶನ್ ಮಾಡುವ ಬಗ್ಗೆ 10,000 ರೂ. ಕೊಡಬೇಕು ಎಂಬ ಠರಾವನ್ನು ಮಿ. ಎ ಬಿ ಚಂಗಪ್ಪನವರು ತಂದರು. 'ಕೊಡಗಿನಲ್ಲಿ 1½ ಲಕ್ಷ ಪಶು ದನಗಳಿವೆ. ಇವುಗಳಲ್ಲಿ ವರ್ಷಕ್ಕೆ 500 ಮಾತ್ರ ದೊಡ್ಡ ರೋಗದಿಂದ ಸಾಯುವುದಾಗಿ ಲೆಕ್ಕ ಸಿಕ್ಕಿದೆ. ಇದಕ್ಕಾಗಿ ದೇಶದ ಎಲ್ಲಾ ದನಗಳಿಗೆ ಇನಾಕ್ಯುಲೇಶನ್ ಮಾಡುವುದು ಅವಶ್ಯವಿಲ್ಲ. ಒಂದು ದನಕ್ಕೆ ಇನಾಕ್ಯುಲೇಶನ್ ಮಾಡಲು 2—4—0 ಖರ್ಚಾಗುತ್ತದೆ. ಆದ್ದರಿಂದ 10000 ರೂ. ಯಿಂದ ಬಹಳ ಸ್ವಲ್ಪ ದನಗಳಿಗೆ ಆಗುತ್ತದಷ್ಟೆ. ಎಲ್ಲಾ ದನಗಳಿಗೆ ಮಾಡಲು ಮೂವತ್ತು ಲಕ್ಷ ಬೇಕಾದೀತು.' ಎಂತ ವಗೈರೆ ಹೇಳಿ ಕಮಿಶನರು ವಿರೋಧಿಸಿದರು. ಮಿ. ಚಂಗಪ್ಪನವರು ಠರಾವನ್ನು ವಾಪಸು ತೆಗೆದುಕೊಂಡರು.

ಕೊಡಗಿನ ರಸ್ತೆಗಳನ್ನು ಅಭಿವೃದ್ಧಿಪಡಿಸಲಿಕ್ಕೆ ಸರ್ಕಾರವು ಒಂದು ಕಮಿಟಿಯನ್ನು ನಡಿಸಬೇಕೆಂತ ಮಿ. ಅಪ್ಪಾರಂಡ ಚಂಗಪ್ಪನವರು ತಂದ ಠರಾವನ್ನು ಅವರು ವಾಪಸು ತೆಗೆದುಕೊಂಡರು.

ಕೊಡಗಿನ ಸಹಕಾರಿ ಸಂಘಗಳ ಕೆಲಸದ ತನಿಖೆ ಮಾಡಿ, ಕೊಡಗಿನ ರೈತರು ಸಾಲ ತೆಗೆದುಕೊಳ್ಳುವ ಸ್ವಭಾವವನ್ನು ನಿಲ್ಲಿಸಲು ಸಲಹೆ ಕೊಡುವ ಬಗ್ಗೆ ಒಂದು ಕಮಿಟಿ ಆಗಬೇಕೆಂತ ಮಿ. ಎ. ಬಿ. ಚಂಗಪ್ಪನವರು ತಂದ ಠರಾವಿನ ಮೇಲೆ, ಕೊಡಗಿನ ಸಹಕಾರಿ ಸಂಘಗಳು ಸಾಲ ಮರುವಸೂಲಾತಿ ವಿಷಯದಲ್ಲಿ ಸರಿಯಾಗಿ ಮಾಡುತ್ತಿಲ್ಲವಾದ್ದರಿಂದ ಏನು ಮಾಡಬೇಕೆಂತ ಇಲಾಖೆಯವರೂ, ಫೈನಾನ್ಸಿನವರೂ ಯೋಚಿಸುತ್ತಿದ್ದಾರೆ, ಮದ್ರಾಸಿನಿಂದಾಗಲೀ, ಮೈಸೂರಿನಿಂದಾಗಲೀ, ಒಬ್ಬ ತಿಳಿದವನನ್ನು ಕರೆಸಿ ತನಿಖೆ ನಡಿಸುವ ಯೋಚನೆ ಇದೆಯೆಂತ ವಗೈರೆ ಕಮಿಶನರು ಜವಾಬು ಕೊಟ್ಟನಂತರ ಠರಾವು ವಾಪಸು ತೆಗೆದುಕೊಳ್ಳಲಾಯಿತು.

ಕೊಡಗಿನ ಎಲ್ಲಾ ಶಾಲೆಗಳನ್ನೂ ಡಾಕ್ಟರುಗಳು ಆಗಿಂದಾಗ್ಗೆ ನೋಡುವ ಏರ್ಪಾಡು ಮಾಡಬೇಕೆಂತ ಠರಾವನ್ನು ಮಿ. ಪಾಂಡಂಡ ಚಂಗಪ್ಪನವರು ತಂದು ಚರ್ಚೆಯಾದನಂತರ ವಾಪಸು ತೆಗೆದುಕೊಂಡರು. ಈ ಬಗ್ಗೆ ಆಗಬೇಕಾದ ಖರ್ಚಿಗೆ ತಕ್ಕಂಥ ಪ್ರಯೋಜನವಿಲ್ಲದ್ದರಿಂದಲೂ, ಈಗ ಹಣವಿಲ್ಲದ್ದರಿಂದಲೂ ಸರ್ಕಾರವು ಹಣ ಕೊಡಲು ವಿರೋಧಿಸುತ್ತದೆಯೆಂತ ಕಮಿಶನರು ತಿಳಿಸಿದರು.

ನೌಕರಿ, ಬಿದಿರು ಮುಂತಾದ್ದನ್ನು ಪೈಸಾರಿಯಿಂದ ತೆಗೆದುಕೊಳ್ಳಲು ಬರಕೊಳ್ಳುವ ಅರ್ಜಿಗೆ 12 ಆಣೆ ಸ್ಟಾಂಪು ಹಾಕಬೇಕೆಂತ ಮಾಡಿದ ಈಗಿನ ರೂಲನ್ನು ತಿದ್ದಿ ಮೊದಲಿನಂತೆಯೇ 0—2—0 ಗೆ ಇಳಿಸಬೇಕೆಂತ ಮಿ. ಚೌಡ್ಲು ಕಾಳಪ್ಪನವರು ತಂದ ಠರಾವನ್ನು ಸರ್ಕಾರದ ಪರವಾಗಿ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ವಿರೋಧಿಸಿದನಂತರ ಠರಾವು ಓಟಿಗೆ ಹಾಕಲಾಗಿ ಬಹುಮತದಿಂದ ಮಂಜೂರಾಯಿತು. ಠರಾವಿಗೆ ವಿರೋಧವಾಗಿ ಸರ್ಕಾರಿ ಮೆಂಬರುಗಳೂ, ರಾ. ಸಾ. ಶ್ರೀಪತಿರಾಯರೂ ಮಾತ್ರ ಓಟು ಮಾಡಿದರು.

ಸೋಮವಾರಪೇಟೆ ನಾಡಿನಲ್ಲಿ ಪೈಸಾರಿಯಲ್ಲಿ ಇಲಾಖೆ ವ್ಯವಸಾಯಕ್ಕೆ ರೈತರಿಗೆ ಕೊಟ್ಟಿರುವ ಸ್ಥಳಗಳನ್ನು ಆಯಾ ಗ್ರಾಮದ ರೈತರಿಗೆ ವಿನಹ ಇತರರಿಗೆ ಮಾರುವ ಸ್ವಾತಂತ್ರ್ಯವಿಲ್ಲದಂತೆ ಮಾಡಬೇಕೆಂತ ಮಿ. ಚೌಡ್ಲು ಕಾಳಪ್ಪನವರು ತಂದ ಠರಾವಿಗೆ ಸರ್ಕಾರದ ಪರವಾಗಿ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಸಹಾನುಭೂತಿ ಸೂಚಿಸಿ ಇನ್ನು ಮೇಲೆ ಮಂಜೂರು ಮಾಡುವ ಸಂದರ್ಭದಲ್ಲಿ ಮಾತ್ರ ಆ ಆಡಚಣೆ ಇರುವಂತೆ ಖಾನೂನು ಮಾಡುವ ಯೋಚನೆ ಮಾಡಬಹುದೆಂತ ಸೂಚಿಸಿದರು. ಠರಾವು ಬಹುಮತದಿಂದ ಮಂಜೂರಾಯಿತು.

ಕೊಡಗು ರೆವಿನ್ಯು ರೆಗ್ಯುಲೇಶನನ್ನು ತಿದ್ದುಪಡಿ ಮಾಡಲು ಒಂದು ಕಮಿಟಿ ನೇಮಕವಾಗಬೇಕೆಂತ ಮಿ. ಬಲ್ಲಚಂಡ ಬೆಳ್ಯಪ್ಪನವರು ತಂದ ಠರಾವು ಬಹುಮತದಿಂದ ಮಂಜೂರಾಯಿತು.

ಕೊಡಗು ಡಿಸ್ಟ್ರಿಕ್ಟ್ ಬೋರ್ಡಿನ ಆಡಳಿತವನ್ನು ಉದ್ಯೋಗಸ್ಥರಲ್ಲದ ಪ್ರೆಸಿಡೆಂಟರು ನಡಿಸುವ ಏರ್ಪಾಡು ಮಾಡಬೇಕೆಂತ ಮಿ. ಬಲ್ಲಚಂಡ ಬೆಳ್ಯಪ್ಪನವರು ತಂದ ಠರಾವಿಗೆ ಸರ್ಕಾರದ ಸಹಾನುಭೂತಿ ಸಿಕ್ಕಿದನಂತರ ಠರಾವು ವಾಪಸು ತೆಗೆದುಕೊಳ್ಳಲಾಯಿತು.

ಮಡಿಕೇರಿ ಮುನ್ಸಿಪಾಲಿಟಿ ಒಳಗೆ ರಿಜಿಸ್ಟರ್ ಫಾರಂನ್ನು ತೆಗೆದುಬಿಡಬೇಕು ಎಂತ ಮಿ. ಬಲ್ಲಚಂಡ ಬೆಳ್ಯಪ್ಪನವರು ಠರಾವು ತಂದು, ಚರ್ಚಿಸಿ ವಾಪಸು ತೆಗೆದುಕೊಂಡರು.

ಕಂದಾಯ, ಟಕಾವಿ ಸಾಲ ವಗೈರೆಗೆ ಜಮ್ಮ ಸ್ಥಳವು ರಾಜಾರಾದಾಗ ಜಮ್ಮ ದಸಲೇ ಕೊಂಡುಕೊಂಡವ ಅಂಥಾ ಸ್ಥಳವನ್ನು ಜಮ್ಮವಾಗಿಯೇ ಇಡಬೇಕು ಎಂಬ ಠರಾವನ್ನು ಮಿ. ಕೇರಿಯಂಡ ಸೋಮಯ್ಯನವರು ತಂದರು. ಸರ್ಕಾರದ ಪರವಾಗಿ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಸಹಾನುಭೂತಿ ತೋರಿದರು. ಯಾರು ತೆಗೆದುಕೊಂಡರೂ ಜಮ್ಮವಾಗಿಯೇ ಇರಬೇಕೆಂಬ ತಿದ್ದುಪಡಿಯನ್ನು ಮಿ. ಪೂಂಜರು ತಂದರು. ಇದನ್ನು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರವರು ವಿರೋಧಿಸಿದರು. ಠರಾವು ವಾಪಸು ತೆಗೆದುಕೊಳ್ಳಲಾಯಿತು.

ಶ್ಯರಿಗೆ ಪ್ರತ್ಯೇಕ ಚುನಾವಣೆಯು ವಿಶಾರ್ದು ಮಾಡಿದ್ದರಿಂದ ಹಿಂದೂ ಮತವು ಹಾಳಾಗುವಂತೆ ಒಂದು ವಿಷವನ್ನು 'ಇಂಜೆಕ್ಷ್' ಮಾಡಿದಂತಾಯಿತೇ ಹೊರತು ಅಸ್ಪೃಶ್ಯರಿಗೆ ಸಹಾಯ ಮಾಡಿದಂತಾಗಲಿಲ್ಲ.

ಇದಕ್ಕೆ ಸಂಬಂಧಪಟ್ಟ ಹಿಂದೂಗಳಿಗೂ, ಅಸ್ಪೃಶ್ಯರಿಗೂ ಬಹಳ ಮುಖ್ಯವಾದ ಈ ಸಂಗತಿಯಲ್ಲಿ ನೀವು ಎಷ್ಟೇ ಸಹಾನುಭೂತಿಯುಳ್ಳವರಾದರೂ ನ್ಯಾಯದ ತೀರ್ಮಾನವನ್ನು ಕೊಡಲು ನಿಮಗೆ ಸಾಧ್ಯವಿಲ್ಲ. ಅಸ್ಪೃಶ್ಯರಿಗೆ ಹೆಚ್ಚಿಗೆ ಪ್ರತಿನಿಧಿತ್ವ ಸಿಕ್ಕಿದರೂ ನನಗೆ ಚಿಂತೆಯಿಲ್ಲ. ಅವರು ಹಿಂದೂ ಸಮಾಜಕ್ಕೆ ಸೇರಿದವರೆಂತ ಒಪ್ಪುವ ವರೆಗೆ ಎಷ್ಟು ಸ್ವಲ್ಪವಾಗಿಯಾದರೂ ಅವರಿಗೆ ಖಾನೂನು ಮೇರೆ ಬೇರೆ ಚುನಾವಣೆಯ ನಿರ್ಧಾರ ಮಾಡುವುದಕ್ಕೆ ನಾನು ವಿರೋಧಿಸುತ್ತೇನೆ.

ನಿಮ್ಮ ತೀರ್ಮಾನವು ಮಂಜೂರಾಗಿ ಸ್ಥಾಪಿಸಿದ ರಾಜಕೀಯ ರಚನೆಯು ಜಾರಿಗೆ ಬಂದರೆ ದಬ್ಬಾಳಿಕೆಗೆ ಗುರಿಯಾದ ಈ ಅಸ್ಪೃಶ್ಯರೆಂದೆನ್ನಿಸಿಕೊಂಡ ಸಹೋದರರ ಉದ್ಧಾರಕ್ಕಾಗಿ ಕೆಲಸ ಮಾಡಲು ಹೊರಟ ಹಿಂದೂ ಸುಧಾರಕರ ಕೆಲಸಕ್ಕೆ ಎಷ್ಟೊಂದು ಅಡಚಣೆಯಾಗುತ್ತದೆಯೆಂತ ನೀವು ಯೋಚಿಸಿದ್ದೀರೋ ?

ನಿಮಗೆ ತಿಳಿಸಿದ ನನ್ನ ಪ್ರತಿಜ್ಞೆಯನ್ನು ನಡಿಸಲೇ ಬೇಕೆಂತ ನಿಶ್ಚಯ ಮಾಡಬೇಕಾಗಿದೆ. ಅಸ್ಪೃಶ್ಯರ ವಿಷಯವನ್ನು ಪ್ರತ್ಯೇಕಿಸಿದ್ದರಿಂದ ನಿಮ್ಮ ತೀರ್ಮಾನದ ಬೇರೆ ಭಾಗಗಳನ್ನು ನಾನು ಅಂಗೀಕರಿಸಿದ್ದೇನೆಂತ ನಿಮ್ಮ ಕಾಗದದಿಂದ ಅರ್ಥವಾಗಬಹುದು. ಹಾಗೆ ನಾನು ಒಪ್ಪಿರುವುದಿಲ್ಲ. ಬೇರೆ ಭಾಗಗಳಲ್ಲಾ ಕೆಲವು, ಬಹಳ ದೊಡ್ಡ ಆಕ್ಷೇಪಣೆಗೆ ಗುರಿಯಾಗತಕ್ಕವಾಗಿವೆ. ಆದರೆ ಅಸ್ಪೃಶ್ಯರ ಸಂಬಂಧವಾಗಿ ನನ್ನ ಮನಸಾಕ್ಷಿಯು ನನಗೆ ಹೇಳುವಂತೆ, ನನ್ನ ದೇಹ ತ್ಯಾಗ ಮಾಡಿ ವಿರೋಧಿಸುವಷ್ಟು ಬಲವಾದ ಆಕ್ಷೇಪಣೆ ಬೇರೆ ಭಾಗಗಳಲ್ಲಿ ಇವೆಯೆಂತ ನಾನು ಭಾವಿಸುವುದಿಲ್ಲ.

ನಿಮ್ಮ ಪ್ರಿಯಸ್ನೇಹಿತ,
ಯಂ. ಕೆ. ಗಾಂಧಿ.

ಹಿಂದೂ ದೇಶ.

ಮಹಾತ್ಮ ಗಾಂಧಿಯವರ ಉಪವಾಸವ್ರತವು ಈ ತಾ. 20 ರಲ್ಲಿ ಪ್ರಾರಂಭಿಸುವುದರಿಂದ ಪಂಜಾಬು ಪ್ರಾಂತ್ಯದಲ್ಲೆಲ್ಲಾ ಆ ದಿನ ಉಪವಾಸವನ್ನು ಕೈಕೊಂಡು ದೇವ ಪ್ರಾರ್ಥನೆಯಲ್ಲಿ ಕಳೆಯಬೇಕೆಂದು ಪಂಜಾಬಿನ ಅಸ್ಪೃಶ್ಯ ಉದ್ಧಾರ ಮಂಡಳಿಯವರು ನಿಶ್ಚಯಿಸಿರುವರು.

ಮಹಾತ್ಮರ ವ್ರತವು ಲಂಡನ್ನಿನಲ್ಲಿರುವ ರಾಷ್ಟ್ರೀಯ ಭಾವದ ಹಿಂದೀಯರನ್ನು ತುರಿಸುಂಪಿಸಿದೆ. ಲಂಡನ್ ಯೂನಿವರ್ಸಿಟಿಯ ವಿದ್ಯಾರ್ಥಿಯಾಗಿರುವ ಮಿ. ಮುಖರ್ಜಿಯವರು, ತಾನು ಯೂ ಮಹಾತ್ಮ ಗಾಂಧಿಯವರು ಸಾಯುವ ವರೆಗೆ ಅಥವಾ ಸರ್ಕಾರದವರು ಬಗ್ಗುವ ವರೆಗೆ ಉಪವಾಸವಿರಲು ಈ ತಾ. 20 ರಲ್ಲಿ ಪ್ರಾರಂಭಿಸುವರಂತೆ.

ಮಹಾತ್ಮರ ಉಪವಾಸದ ತೀರ್ಮಾನವು ಭಾರತ ಭೂಮಿಯನ್ನೇ ಕಲ್ಲಣಗೊಳಿಸಿಬಿಟ್ಟಿದೆ. ಇದನ್ನು ಕುರಿತು ತಾ. 13ರಲ್ಲಿ ಎಸೆಂಬ್ಲಿಯಲ್ಲಿ ಚರ್ಚೆ ನಡೆಯಿತು. ಮಹಾತ್ಮರ ನಿಶ್ಚಯದ ಮೇಲೆ ಯಾರೂ ಸಂಶಯವನ್ನು ಸೂಚಿಸಲಿಲ್ಲ. ಅಲ್ಲಿಯ ಭಾಷಣಗಳು ಗಾಂಧಿಯವರ ತೀರ್ಮಾನದ ಮಹತ್ವವನ್ನು ಪ್ರಕಟಿಸಿರುತ್ತವೆ. 2 ಗಂಟೆ ಚರ್ಚೆ ಮಾಡಿ ಏನೊಂದೂ ತೀರ್ಮಾನಕ್ಕೆ ಬಾರದೆ ಅಂತ್ಯಗೊಳಿಸಲಾಯಿತು. ಆದರೆ ಮಹಾತ್ಮರನ್ನು ಉಪವಾಸ ಪ್ರಾರಂಭಿಸುವಾಗ್ಯೆ ಬಿಡುಗಡೆ ಮಾಡಲಾಗುವದೆಂಬ ಸೂಚನೆಯನ್ನು ಸರ್ಕಾರ ಮೆಂಬರು ಮಾಡಿದರು. ಮಹಾತ್ಮರನ್ನು ಆದಷ್ಟು ಬೇಗನೆ ಬಿಡುಗಡೆ ಮಾಡಿ ಮೇಲ್ಜಾತಿಯ ಹಿಂದೂಗಳ ಮತ್ತು ಅಸ್ಪೃಶ್ಯರ ಮುಖಂಡರು ಕೂಡಲೆ ಸೇರಿ ಒಂದು ತೀರ್ಮಾನಕ್ಕೆ ಬಂದು ಮಹಾತ್ಮರ ಜೀವವನ್ನು ಉಳಿಸಬೇಕೆಂದು ಹಲವು ಧುರೀಣರು ಅಭಿಪ್ರಾಯ ಕೊಟ್ಟಿರುವರು.

ಕೌನ್ಸಿಲು ಮೀಟಿಂಗಿನಲ್ಲಿ ಸಂತಾಪದ ಠರಾವು.

ಈ ತಾ. 9 ರಲ್ಲಿ ನಡೆದ ಕೊಡಗು ಕೌನ್ಸಿಲು ಮೀಟಿಂಗಿನಲ್ಲಿ ಹೊಸ ಮೆಂಬರುಗಳು ರಾಜಭಕ್ತಿಯ ಪ್ರಮಾಣ ಮಾಡಿದ ನಂತರ 'ಕೌನ್ಸಿಲು ಮೆಂಬರಾಗಿದ್ದ ಮಿ. ಗಿರಿಗೌಡರ ನಂಜಪ್ಪಗೌಡರ ಮರಣದಿಂದ ಕೌನ್ಸಿಲಿಗೆ ಉಂಟಾದ ದುಃಖವನ್ನು ಅವರ ಕುಟುಂಬಕ್ಕೆ ತಿಳಿಸಬೇಕೆಂ'ಬ ಸಂತಾಪದ ಠರಾವನ್ನು ಮಿ. ಬಿ. ಶ್ರೀಪತಿರಾಯರು ಸಭೆಯ ಮುಂದಿಟ್ಟ ಮೇಲೆ ಎಲ್ಲರೂ ಎದ್ದು ನಿಂತು ಅದನ್ನು ಮಂಜೂರು ಮಾಡಿದರು. ಇದಾದ ನಂತರ, ಕೌನ್ಸಿಲಿನಲ್ಲಿ ಈ ಮೊದಲು ಪಾಸಾದ ಠರಾವುಗಳ ಮೇಲೆ ಚೀಫ್ ಕಮಿಷನರವರು ಮಾಡಿದ ಹುಕುಮನ್ನು ಕೌನ್ಸಿಲು ಸೆಕ್ರೆಟರಿಯವರು ಸಭೆಯ ಮುಂದಿಟ್ಟರು. ಇದನ್ನು ಬರುವ ವಾರ ಪ್ರಕಟಿಸಲಾಗುವುದು.

ವಿಜ್ಞಾಪನೆ.

ನನ್ನ ಪತಿ ಸುಬ್ಬಯ್ಯನವರ ಮರಣದಿಂದ ನಮ್ಮ ಸಂಸಾರಕ್ಕೂ, ನನಗೂ ಉಂಟಾದ ದುಃಖದಲ್ಲಿ ಸಂತಾಪವನ್ನು ಸೂಚಿಸಿ ನಮ್ಮ ಹಲವು ನೆಂಟರಿಷ್ಟರೂ, ಹಿತಚಿಂತಕರೂ ನನಗೆ ಪತ್ರಗಳನ್ನು ಬರೆದಿರುವರು. ಆದರೆ ಅವರಿಗೆ ಪ್ರತ್ಯೇಕ ಪ್ರತ್ಯೇಕ ವಂದಿಸಲು ನನಗೆ ಸಾಧ್ಯವಿಲ್ಲದ್ದರಿಂದ ಈ ಮೂಲಕ ಅವರೆಲ್ಲರಿಗೂ ನನ್ನ ಕೃತಜ್ಞತೆಯನ್ನು ಅರ್ಪಿಸುತ್ತೇನೆ.

ಮಡಿಕೇರಿ   ಕೊಂಗಂಡ ತಂಗವ್ವ.

ಕೊಡಗಿನಲ್ಲಿ ಖಾನೂನು ಭಂಗ.

ಸುಭೇದಾರರ ಹುಕುಮಿನ ಉಲ್ಲಂಘನೆ.

ಗೋಣಿಕೊಪ್ಪಲಲ್ಲಿ ಭಾಷಣ ಮಾಡಿದಕ್ಕಾಗಿ ದಸ್ತಗಿರಿ.

ಪಿಕೆಟಿಂಗ್ ಆಗಲೀ, ಮೀಟಿಂಗಿಗೆ ಸಂಬಂಧಪಟ್ಟ ಯಾವ ಕಾರ್ಯಗಳನ್ನಾಗಲೀ ನಡಸಕೂಡದೆಂದು ಕ್ರಿ. ಪ್ರೊ. ಕೋ. 144ನೇ ಸೆಕ್ಷನ್ ಮೇರೆ ನೋಟೀಸು ಕೊಡಲ್ಪಟ್ಟಿರುವವರಲ್ಲಿಯೂ, ಕಳೆದ ಸಾರಿ ಸತ್ಯಾಗ್ರಹಕ್ಕಾಗಿ ಜೈಲು ವಾಸಕ್ಕೆ ಗುರಿ ಮಾಡಲ್ಪಟ್ಟವರಲ್ಲಿಯೂ ಒಬ್ಬರಾದ ಶ್ರೀಯುತ ಪುತ್ತಮನೆ ಕಾಳಪ್ಪಯ್ಯನವರು ಈ ತಾ. 11ನೇ ಆದಿತ್ಯವಾರ ಮಧ್ಯಾಹ್ನದ ಮೇಲೆ ಸುಮಾರು 2 ಗಂಟೆಯ ಸಮಯದಲ್ಲಿ ಗೋಣಿಕೊಪ್ಪಲು ಪೋಲೀಸು ಸ್ಟೇಷನಿನ ಎದುರುಗಡೆಯಲ್ಲಿರುವ ದನಗಳ ಸಂತೆ ಮೈದಾನದಲ್ಲಿ 'ವಂದೇ ಮಾತರಂ' ರಾಷ್ಟ್ರಗೀತೆಯನ್ನು ಹಾಡಿ, ಜಯಘೋಷವನ್ನು ಮಾಡಿದಾಗ್ಯೆ ಅಲ್ಲಿ ಜನರು ತುಂಬಾ ನೆರೆದರು. ಕೂಡಲೆ ಅವರು ಸರ್ಕಾರದ ದಬ್ಬಾಳಿಕೆಯನ್ನೂ, ಅದನ್ನನುಸರಿಸಿ ಕೊಡಗಿನ ಅಧಿಕಾರಿಗಳು ಮಾಡಿರುವ ಹುಕುಮನ್ನೂ, ಸ್ವದೇಶೀ ಪ್ರಚಾರವನ್ನು ಕುರಿತು ಭಾಷಣ ಮಾಡತೊಡಗಿದರು. ಭಾಷಣ ಮಾಡುತ್ತಿದ್ದಾಗ್ಯೆ ಪೋಲೀಸಿನವರು ಅಲ್ಲಿಗೆ ಬಂದು ನೆರೆದಿದ್ದ ಜನರನ್ನು ಚದರಿಸಲು ಪ್ರಯತ್ನಿಸಿದರು. ಅದು ಸಾಧ್ಯವಾಗದ್ದರಿಂದ ಸಬ್ ಇನ್ಸ್ಪೆಕ್ಟರರು ಮಿ. ಕಾಳಪ್ಪಯ್ಯನವರನ್ನು ದಸ್ತಗಿರಿ ಮಾಡಿ, ಬಸ್ಸಿನಲ್ಲಿ ವೀರಾಜಪೇಟೆಗೆ ಕರೆದುಕೊಂಡು ಹೋದರು. ಮಿ. ಕಾಳಪ್ಪಯ್ಯನವರು ಕಾಂಗ್ರೆಸು ಚಳವಳಿಕ್ಕೆ ಸೇರುವ ಸ್ವಲ್ಪ ಕಾಲಕ್ಕೆ ಮುಂಚೆ ಶಾಲಾ ಉಪಾಧ್ಯಾಯರ ಉದ್ಯೋಗಕ್ಕೆ ರಾಜಿನಾಮೆ ಕೊಟ್ಟವರಾಗಿರುತ್ತಾರೆಂದು ತಿಳಿಯುತ್ತೇವೆ. ತಾ. 12ರಲ್ಲಿ ಸುಭೇದಾರರ ಕೋರ್ಟಿನಲ್ಲಿ ಅವರ ವಿಚಾರವು ನಡೆದು ಅವರಿಗೆ ನಾಲ್ಕು ತಿಂಗಳು ಕಠಿಣ ಸಜೆಯೂ, 50 ರೂ. ಜುಲುಮಾನೆಯೂ, ಜುಲುಮಾನೆ ಕೊಡದೆ ತಪ್ಪಿದರೆ ಒಂದು ತಿಂಗಳು ಹೆಚ್ಚಿನ ಸಜೆಯೂ ವಿಧಿಸಲಾಯಿತು. ಮರುದಿನ ಅವರನ್ನು ಕಣ್ಣಾನ್ನೂರು ಜೈಲಿಗೆ ಸಾಗಿಸಿದರು.

ಒಳದೇಶ.

ಚೀಫ್ ಕಮಿಷನರವರು ಈ ತಾ. 9 ರಲ್ಲಿ ಕೌನ್ಸಿಲು ಮೀಟಿಂಗನ್ನು ಮುಗಿಸಿಕೊಂಡು ಮರುದಿನ ಬೆಂಗಳೂರಿಗೆ ವಾಪಸು ಹೋದರು.

ಮಡಿಕೇರಿಯ ಕೊಡವ ಮಹನೀಯರು ಕೈಲ್ ಮುಹೂರ್ತ ಹಬ್ಬದ ಆಟೋಟಗಳನ್ನೂ ಔತಣವನ್ನೂ ಕಳೆದ ಆದಿತ್ಯವಾರ ನಡಿಸಿದರು.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗೊಂದು ತಾ. 24—9—32 ನೇ ಶನಿವಾರ ಬೆಳಿಗ್ಯೆ 11 ಗಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ನಡೆಯುತ್ತದೆ.

ಈ ವಾರವೂ ದೇಶದ ಹಲವು ಕಡೆಗಳಲ್ಲಿ ಮಳೆ ಬೀಳುತ್ತಾ ಇತ್ತು. ಮಡಿಕೇರಿಯಲ್ಲಿ ಈ ತಾ. 10 ರಿಂದ ಇಂದಿನ ವರೆಗೆ 4.81 ಇಂಚು ಮಳೆಯಾಗಿದೆ. ಚಳಿಯು ಜೋರಾಗಿದೆ.

ಕೊಡಗಿನ ಮುಂದಿನ ರಾಜಕೀಯ ಸುಧಾರಣೆಯನ್ನು ಕುರಿತು ಅಭಿಪ್ರಾಯ ತೆಗೆದುಕೊಳ್ಳಲು ತಾ. 9ರಲ್ಲಿ ನಡಿಸಿದ ಕೌನ್ಸಿಲು ಮೀಟಿಂಗು ಒಂದೇ ದಿನದಲ್ಲಿ ಮುಗಿದು ಹೋಯಿತು.

ಕೊಡಗು ಕೌನ್ಸಿಲಿನ ಉದ್ಯೋಗಸ್ಥರಲ್ಲದ ಸದಸ್ಯರು ಫೈನಾನ್ಸ್ ಕಮಿಟಿಗೆ ಮಿ. ಗಳ್ಳಿದ ಸ್ವಾಂದಂಡ ಚಂಗಪ್ಪನವರು, ತಿಮ್ಮಪ್ಪಯ್ಯನವರು ಮತ್ತು ಪ್ರವಾರಂಡ ಚಂಗಪ್ಪನವರನ್ನು ಚುನಾಯಿಸಿರುವರಾಗಿ ತಿಳಿಯುತ್ತೇವೆ.

ಉತ್ತರ ಕೊಡಗು ಸುಭೇದಾರರಾದ ಮಿ. ಕರವಂಡ ಚಂಗಪ್ಪನವರ ಮತ್ತು ಸಬ್ ಮೇಜಿಸ್ಟ್ರೇಟರಾದ ಮಿ. ಕೇತಿಯಂಡ ಕಾಳಪ್ಪನವರ ಅನ್ಯೋನ್ಯ ವರ್ಗಾವರ್ಗಿಯನ್ನು ಬರುವ ಡಿಸೆಂಬರು ತಿಂಗಳ ವರೆಗೆ ಬಾಕಿ ಮಾಡಲಾಗಿದೆಯೆಂದು ತಿಳಿಯಬರುತ್ತದೆ.

ಕೌನ್ಸಿಲು ಮೀಟಿಂಗಿಗಾಗಿ ಬೆಂಗಳೂರಿಂದ ಮಡಿಕೇರಿಗೆ ಬಂದಿದ್ದ ಶಾಲಾ ಇನ್ಸ್ಪೆಕ್ಟರಾದ ಮಿ. ಸುಲ್ತಾನ್ ಮಹಿದಿನ್‌ರವರು ಕಳೆದ ಸೋಮವಾರ ವಿರಾಜಪೇಟೆ ಹೈಸ್ಕೂಲನ್ನು, ಮಂಗಳವಾರ ಕಾನ್ವೆಂಟ್ ಹೈಸ್ಕೂಲು ಮತ್ತು ಸೆಂಟ್ರಲ್ ಹೈಸ್ಕೂಲನ್ನು ಸಂದರ್ಶಿಸಿ ಹೋದರೆಂದು ತಿಳಿಯಬರುತ್ತದೆ.

ಈ ತಾ. 12ನೇ ಸೋಮವಾರ ದಿನ ಗೋಣಿಕೊಪ್ಪಲು 'ಯೂನಿಯನ್'ನವರು ಕೈಲ್ ಮುಹೂರ್ತ ಹಬ್ಬವನ್ನು ಗೋಣಿಕೊಪ್ಪಲಲ್ಲಿ ಬಹು ವಿಜೃಂಭಣೆಯಿಂದ ನಡಿಸಿದರೆಂತಲೂ, ಆಟೋಟಗಳಲ್ಲಿ ಗೆದ್ದವರಿಗೆ ಇನಾಮುಗಳು ಹಂಚಲಾದವೆಂತಲೂ, ಆದರೆ ನಿಶಾದೇವಿಗೆ ಆಮಂತ್ರಣವಿರಲಿಲ್ಲವೆಂತಲೂ ಒಂದು ಬಾತ್ಮಿ.

ಮಂಗಳೂರಿನಲ್ಲಿರುವ ಕೊಡವರು ಈ ತಾ. 4 ರಲ್ಲಿ ಕೈಲ್ ಮುಹೂರ್ತ ಹಬ್ಬವನ್ನು ಆಚರಿಸಲು ಸೇರಿದಾಗ ಕೊಡಗಿನ ಭವಿಷ್ಯತ್ತನ್ನು ಕುರಿತು ಚರ್ಚೆ ನಡಿಸಿ, 'ಕೊಡಗನ್ನು ಪ್ರತ್ಯೇಕ ಜಿಲ್ಲೆಯಾಗಿ ಇಟ್ಟುಕೊಳ್ಳುವದಾದರೆ ಮದ್ರಾಸು ಪ್ರಾಂತ್ಯಕ್ಕೆ ಸೇರಿಸುವುದು ಉತ್ತಮ' ವೆಂಬ ತೀರ್ಮಾನವನ್ನು ಮಾಡಿದರೆಂದು ತಿಳಿಯಬರುತ್ತದೆ.

ವೀರಾಜಪೇಟೆ ಪಟ್ಟದೊಳಗೆ ಇರುವ ಜೋಡೆತ್ತಿನ ಗಾಡಿಗೆ ವರ್ಷಕ್ಕೆ 10 ರೂಪಾಯಿಯೂ, ಒಂಟೆತ್ತಿನ ಗಾಡಿಗೆ ವರ್ಷಕ್ಕೆ 5 ರೂಪಾಯಿಯೂ, ಖಾಸಗಿ ಅಥವಾ ಪಬ್ಲಿಕ್ ಗಾಡಿಮೊಳಗಳಲ್ಲಿ ಹೊರಗಿನಿಂದ ಬರುವ ಗಾಡಿಗೆ ದಿನ ಒಂದಕ್ಕೆ ನೆಲ ಬಾಡಿಗೆ ಒಂದಾಣೆಯೂ ತೆರಿಗೆ ಹಾಕಲು ಅಲ್ಲಿಯ ಮುನ್ಸಿಪಲ್ ಕಮಿಟಿಯವರು ಮಾಡಿದ ತೀರ್ಮಾನವನ್ನು ಚೀಫ್ ಕಮಿಷನರವರು ಮಂಜೂರು ಮಾಡಿರುವರು. ಇದು ಬರುವ ಅಕ್ಟೋಬರು 1ರಿಂದ ಜಾರಿಗೆ ಬರುವುದು.

ಬೊಂಬಾಯಿ ಕೊಡಗು ಸಂಘ.

ಬೊಂಬಾಯಿ ಕೊಡಗು ಸಂಘದವರು ಕೈಲ್ ಮುಹೂರ್ತ ಹಬ್ಬವನ್ನು ಈ ತಾ. 4 ನೇ ಆದಿತ್ಯವಾರ ಸಾಯಂಕಾಲ 4 ಗಂಟೆಯಿಂದ ರಾತ್ರಿ 10 ಗಂಟೆಯ ವರೆಗೆ ಮಿ. ಮಾಕಂಡ ಅಯ್ಯಪ್ಪನವರ ಭವನದಲ್ಲಿ ನಡಿಸಿದರು. ಸಂಘದ ಎಲ್ಲಾ ಮೆಂಬರುಗಳು, ಮತ್ತು ಕೆಲವು ಅತಿಥಿಗಳು ಹಾಜರಿದ್ದರು.

ಈ ವರ್ಷ ಮಡಿಕೇರಿ ಕೊಡವ ಮಹನೀಯರು ಕೈಲ್ ಪೊಳುದ ಊಟಕ್ಕೆ ನಿಶಾದೇವಿಗೆ ಆಮಂತ್ರಣವಿತ್ತಿಲ್ಲವೆಂತ್ಯಾರೆಂದು ನಿಮ್ಮ ಕಳೆದ ವಾರದ ಪತ್ರಿಕೆಯಲ್ಲಿ ನೋಡಿದ್ದರಿಂದ ಇದೊಂದು ಮಾತನ್ನು ಇಲ್ಲಿ ಸೂಚಿಸಲಿಚ್ಛಿಸುತ್ತೇನೆ. ನಾವು ಅಮಲು ಪದಾರ್ಥವನ್ನು ದೂರ ಮಾಡಿದ್ದಲ್ಲದೆ, ಈ ಹಬ್ಬದಲ್ಲಿ ಪೂರ್ಣ ಸ್ವದೇಶೀ ಪದಾರ್ಥಗಳನ್ನೇ ಉಪಯೋಗಿಸುವಂತೆ ತೀರ್ಮಾನಿಸಿ, ನಾವು ಆ ದಿನ ಉಪಯೋಗಿಸಿದ ಸಕ್ಕರೆಯೂ ಕೂಡ ಸ್ವದೇಶಿ ಆಗಿತ್ತು. ಮಡಿಕೇರಿಯ ಮಹನೀಯರು ಭಾರತ ಭೂಮಿಯ ಈಗಿನ ವಾತಾವರಣವು ಹೇಗಿದೆಯೆಂಬುದನ್ನು ಅರಿತುಕೊಂಡು, ಇನ್ನಾದರೂ ಕಾಲಕ್ಕನುಗುಣವಾಗಿ ವರ್ತಿಸಲಾರರೇ ?   ಗೌ. ಕಾರ್ಯದರ್ಶಿ.

ನೋಟೀಸು.

ನನ್ನ ತಾಯಿ ಅರಿಯಡ್ಕ ಮಂಜಪ್ಪರೈಗಳ ಸೊಸೆ ಚೆನ್ನಮ್ಮನವರು ಈಗ ಸುಮಾರು 90 ವರುಷ ಮೇಲ್ಪಟ್ಟ ವಯಸ್ಸಾಗಿ ವಯೋವೃದ್ಧೆಯಾಗಿ ಇಂದ್ರಿಯಗಳು ತನ್ನ ಸ್ವಾಧೀನ ಇಲ್ಲದೆ ಕಣ್ಣು, ಕಿವಿ, ನಿತ್ರಾಣ, ಜ್ಞಾನ ಸರಿ ಇಲ್ಲದೆ ಇರುವವರಾಗಿರುತ್ತಾರೆ. ನಾವು ಇರುವ ಎಲ್ಲಾ ಮಕ್ಕಳಿಗೆ ಹಕ್ಕು ಬರುವ ಹಾಗೆ ನಮ್ಮ ಬಾಪ್ತು, ಯಾಲಕ್ಕಿ ತೋಟವನ್ನು ಅವರ ಹೆಸರಿಗೆ ಮಾಡಿಸುತ್ತೇವೆ. ಸದರಿ ತೋಟವನ್ನು ನಾವು ಮಕ್ಕಳು ಎಲ್ಲರೂ ಕೂಡದೆ ಯಾರಾದರೂ ಒಬ್ಬಿಬ್ಬರು ಸ್ವಪ್ರಯೋಜನ ಹೊಂದುವ ಇರಾದೆಯಿಂದ ಅವರಿಂದ ಏನಾದರೂ ಯಾವ ತರದ ಲಿಖಿತವುಗಳು ಈವರೆಗೆ ಮಾಡಿಸಿದ್ದರೂ ಇನ್ನು ಮುಂದೆ ಮಾಡಿದ್ದಾದರೂ ಅದು ಸಿಂಧುವಾಗತಕ್ಕದ್ದಲ್ಲ ಎಂದು ಈ ಮೂಲಕ ಎಚ್ಚರಿಸಿಯದೆ.

B. R. SHESAPPA RAI,
Son of Ramanna Rai,
Bhagamandla.

ಇಸ್ತಿಹಾರ್.

ಮಡಿಕೇರಿ ಚೌಕದ ಬಳಿ ಮಿ. ಕೊಗ್ಗಪ್ಪಯ್ಯನವರ ಎ... ಕಾಯಿ ಅಂಗಡಿ ಸಮೀಪವಿರುವ ಮುಬಾರಕ್ ಕಂಪೆನಿಯೆಂಬ ಹೆಸರಿನಿಂದ ನಡಿಸುತ್ತಿದ್ದ ಅಂಗಡಿಯ ಸಾಮಾನುಗಳನ್ನು ಕೊಡಗು ಸಬಾರ್ಡಿನೇಟ್ ಜಡ್ಜಿಯವರ ಹುಕುಂ ಮೇರೆ ಸದರಿ ಅಂಗಡಿಯಲ್ಲಿ ತಾ. 30—9—32ನೇ ಶುಕ್ರವಾರ ಮಧ್ಯಾಹ್ನ 2 ಗಂಟೆಗೂ, ಮಾರಣೆ ದಿನ ಆದರೆ 1—10—32ನೇ ಶನಿವಾರ ಬೆಳಿಗ್ಯೆ ಹತ್ತು ಗಂಟೆಗೂ ನಾನು ಸದರಿ ಅಂಗಡಿಯಲ್ಲಿ ಪಬ್ಲಿಕ್ ಹರಾಜು ಮಾಡುತ್ತೇನೆ. ಪೆಟ್ರೋಮೇಕ್ಸ್ ದೀಪದ ಸಾಮಾನುಗಳೂ ಬೈಸಿಕಲ್ ಸಾಮಾನುಗಳೂ, ಮೋಟಾರು ಸಾಮಾನುಗಳೂ, ಆಟದ ಸಾಮಾನುಗಳೂ, ಒಂದು ಅಲ್ಮೈರ್ ಕೆಲವು ಶೋ ಕೇಸ್‌ಗಳೂ (Show Cases) ಮತ್ತು ಇತರ ಚಿಲ್ಲರೆ ಸಾಮಾನುಗಳೂ, ಸಹ ವಗೈರಾಟಕ್ಕೆ ಇವೆ. ಕೊಂಡುಕೊಳ್ಳುವವರು ನಗದು ಹಣ ಕೊಟ್ಟು ಕೂಡಲೇ ಸಾಮಾನುಗಳನ್ನು ಸಾಗಿಸಬೇಕು.

ಮಡಿಕೇರಿ,   ಸಿ. ಯಂ. ವೆಂಕಟಯ್ಯ.
ತಾ. 15—9—32.   (ನಾಜರ್)

COORG FOREST DEPARTMENT, SOUTH DIVISION.

TIMBER SALE NOTICE.

Mercara, the 7th September 1932.

It is hereby notified that 3316 C. ft. Teak, 3 [illegible] C. ft Biti, 1695. 7 C ft. Honne lying in the Coorg Timber Depot at Hunsur and about 32 C. ft. Teak, 4086 C. ft. Biti, 236 C. ft Honne, 9998 C. ft Matti, 2790 C ft Nandi, 4323 C ft. Arasintega and 57 C. ft Godda lying in the Depots at Tittumatti, Kalhalla and Nagerhole will be sold by public auction in convenient lots at Hunsur on 22—9—32, commencing at 10 A. M. All the timber is open to inspection.

For further particulars, please apply to the Divisional Forest Officer, South Coorg, Mercara

ಮಹಾತ್ಮರ ಉಪವಾಸ ವ್ರತ.

(2ನೇ ಪುಟದಿಂದ ಮುಂದುವರಿದದ್ದು.)

ಸರ್ ಸ್ಯಾಮುವೆಲರ ಜವಾಬು.

ಮ. ಗಾಂಧಿಯವರಿಗೆ ಸರ್ ಸ್ಯಾಮುವೆಲ್ ಹೋರರು ತಾ. 13—4—1932ರಲ್ಲಿ ಬರೆದ ಪತ್ರ.

ಪ್ರಿಯಗಾಂಧಿಯವರೇ,

ನಿಮ್ಮ 11 ನೇ ಮಾರ್ಚಿನ ಕಾಗದಕ್ಕೆ ಈ ಜವಾಬನ್ನು ಬರೆಯುತ್ತೇನೆ. ಅಸ್ಪೃಶ್ಯರಿಗೆ ಪ್ರತ್ಯೇಕ ಚುನಾವಣೆ ವಿಷಯದಲ್ಲಿ ಎಷ್ಟರ ಮಟ್ಟಿಗೆ ನಿಮ್ಮ ವಿರೋಧವಿದೆಯೆಂಬದನ್ನು ನಾನು ತಿಳಿದುಕೊಂಡಿದ್ದೇನೆಂತ ಕೂಡಲೇ ಹೇಳುತ್ತೇನೆ. ವಿದ್ಯಮಾನಗಳಲ್ಲಿ ಅವಶ್ಯವಿರುವಂಥ ತೀರ್ಮಾನ ಮಾತ್ರ ಕೊಡುತ್ತೇವೆಂತ ಹೇಳಬೇಕಾಗಿದೆ. ಇನ್ನೂ ಲೋಥಿಯನ್ ಕಮಿಟಿ ರಿಪೋರ್ಟು ನಮ್ಮ ಕೈ ಸೇರಲಿಲ್ಲ. ಶೀಘ್ರದಲ್ಲೇ ಅದು ಬರುತ್ತದೆ. ಅದರಲ್ಲಿ ಕೊಡುವ ಅಭಿಪ್ರಾಯಗಳಿಗೂ, ನಿಮ್ಮ ಮತ್ತು ನಿಮ್ಮಂತೆ ಯೋಚಿಸುವವರ ಅಭಿಪ್ರಾಯಗಳಿಗೂ ಗಮನಕೊಟ್ಟೇ ತೀರ್ಮಾನ ಕೊಡುತ್ತೇವೆ. ನೀವು ನಮ್ಮ ಸ್ಥಿತಿಯಲ್ಲಿದ್ದಿದ್ದರೆ ನೀವು ಸಹ, ನಾವು ಕೊಡಲು ಯೋಚಿಸುತ್ತಿರುವ ತೀರ್ಮಾನವನ್ನೇ ಕೊಡುತ್ತಿದ್ದಿರಿ. ಆ ಕಮಿಟಿಯ ರಿಪೋರ್ಟು ಬರುವ ವರೆಗೆ ಕಾದು, ಅದರ ಶಿಫಾರಸ್ಸುಗಳನ್ನು ನೀವು ಚೆನ್ನಾಗಿ ಯೋಚಿಸಿ ಮತ್ತು ಈ ಸಂಬಂಧವಾಗಿ ಎರಡು ಕಡೆಯವರು ಕೊಟ್ಟ ಅಭಿಪ್ರಾಯವನ್ನೂ ಗಣನೆಗೆ ತೆಗೆದುಕೊಂಡು, ಅನಂತರ ಆಖೈರ್ ತೀರ್ಮಾನಮಾಡಿ ಎಂತ ಮಾತ್ರ ಹೇಳಬಲ್ಲೆನಷ್ಟೆ. ಇದಕ್ಕಿಂತ ಹೆಚ್ಚು ಹೇಳಬೇಕೆಂತ ನೀವು ನಿರೀಕ್ಷಿಸಲಿಲ್ಲವೆಂತ ನಾನು ನಂಬುತ್ತೇನೆ.

ಆರ್ಡಿನೆನ್ಸ್‌ಗಳ ವಿಷಯದಲ್ಲಿ ನಾನು ಬಹಿರಂಗವಾಗಿಯೂ, ಖಾಸಗಿಯಾಗಿಯೂ ಹೇಳಿರುವುದನ್ನೇ ಪುನಃ ಹೇಳಬೇಕಾಗಿದೆಯಷ್ಟೆ. ಕ್ರಮವಾಗಿ ನಡೆಯಬೇಕಾದ ಸರಕಾರದ ಅಭಿಪ್ರಾಯಕ್ಕೇನೇ ಬೇಕೆಂತಲೇ ಅಪಾಯವನ್ನುಂಟುಮಾಡುವ ಚಳವಳವನ್ನು ಎದುರಿಸಲು ಇವು ಅವಶ್ಯವಿದೆಯೆಂತ ನಾನು ನಂಬುತ್ತೇನೆ. ಅಲ್ಲದೆ ಮಧ್ಯವರ್ತಿ ಸರಕಾರವೂ, ಪ್ರಾಂತೀಕ ಸರಕಾರಗಳೂ ಅವರವರ ವಿಸ್ತಾರವಾದ ಅಧಿಕಾರಗಳನ್ನು ದುರುಪಯೋಗಪಡಿಸುತ್ತಿಲ್ಲವೆಂತಲೂ, ಅತಿಯಾಗಿಯಾಗಲೀ ಜಿದ್ದು ತೀರಿಸಲಿಕ್ಕಾಗಲೀ ಉಪಯೋಗಿಸದಂತೆ ಜಾಗರೂಕರಾಗಿದ್ದಾರೆಂತಲೂ ನಾನು ನಂಬುತ್ತೇನೆ. ಕಾನೂನು ಮತ್ತು ಶಾಂತಿಯ ಸ್ಥಾಪನೆಗಾಗಿಯೂ, ನಮ್ಮ ಉದ್ಯೋಗಸ್ಥರನ್ನು ಮತ್ತು ಸಮಾಜದ ಇತರರನ್ನು ಸಹ ಕ್ರಾಂತಿಕಾರಿಗಳಿಂದ ಅಪಾಯವಾಗದಂತೆ ಕಾಪಾಡಲಿಕ್ಕೆ ಅವಶ್ಯವಿರುವಷ್ಟು ಕಾಲ ಮಾತ್ರ ಇವುಗಳನ್ನು ಜಾರಿಯಲ್ಲಿಡುತ್ತೇವೆಂತ ಹೇಳಬೇಕಾಗಿದೆ.

ನಿಮ್ಮವನಾದ
ಸ್ಯಾಮುವೆಲ್ ಹೋರ್.

ಮೆಕ್ಡೊನಾಲ್ಡರಿಗೆ ಮಹಾತ್ಮರ ಪತ್ರ.

ಯರವಾಡಾ ಜೈಲಿನಿಂದ ಅಗಸ್ಟ್ 18ರಲ್ಲಿ ಪ್ರಧಾನ ಮಂತ್ರಿಯವರಿಗೆ ಮ. ಗಾಂಧಿಯವರು ಬರೆದ ಪತ್ರ.

ಪ್ರಿಯ ಸ್ನೇಹಿತರೇ,

ಅಸ್ಪೃಶ್ಯರಿಗೆ ಕೌನ್ಸಿಲುಗಳಲ್ಲಿ ಪ್ರತಿನಿಧಿತ್ವ ಕೊಡುವ ವಿಷಯದಲ್ಲಿ ನಾನು ಸರ್ ಸ್ಯಾಮುವೆಲ್ ಹೋರರಿಗೆ ಮಾರ್ಚ 11ರಲ್ಲಿ ಬರೆದ ಪತ್ರವನ್ನು ನಿಮಗೂ, ಮಂತ್ರಿಮಂಡಲಿಗೂ ತೋರಿಸಿರಬಹುದೆಂತ ನಂಬುತ್ತೇನೆ. ಆ ಪತ್ರವನ್ನು ಇದರ ಭಾಗವಾಗಿಯೇ ಓದಿಕೊಳ್ಳಬೇಕು.

ಬ್ರಿಟಿಷ್ ಸರ್ಕಾರವು ಅಲ್ಪ ಸಂಖ್ಯಾಕರ ಪ್ರತಿನಿಧಿತ್ವವನ್ನು ಕುರಿತು ಕೊಟ್ಟ ತೀರ್ಮಾನವನ್ನು ಓದಿ ನೋಡಿದೆ. ನಾನು ಸರ್ ಸ್ಯಾಮುವೆಲ್ ಹೋರರಿಗೆ ಬರೆದ ಪತ್ರದ ಮೇರೆಯೂ ಮತ್ತು ಸೆಂಟ್ ಜೇಮ್ಸ್ ಪೇಲೇಸಿನಲ್ಲಿ ತಾ. 13—11—31ರಲ್ಲಿ ದುಂಡು ಮೇಜು ಪರಿಷತ್ತಿನ ಅಲ್ಪ ಸಂಖ್ಯಾಕರ ವಿಷಯದ ಕಮಿಟಿಯಲ್ಲಿ ನಾನು ಮಾಡಿದ ಭಾಷಣದ ಮೇರೆಯೂ ನಿಮ್ಮ ತೀರ್ಮಾನವನ್ನು ನನ್ನ ಜೀವ ಅಡ್ಡ ಹಾಕಿ ವಿರೋಧಿಸಬೇಕಾಗಿದೆ. ನನ್ನ ಪ್ರತಿಜ್ಞೆಯನ್ನು ಜಾರಿ ಮಾಡಬೇಕಾದರೆ ನಾನು ಅಂತ್ಯದ ವರೆಗೆ ಉಪ್ಪು ಮತ್ತು ಸೋಡ ಸಹಿತ ಅಥವ ವಿನಹ ನೀರು ಮಾತ್ರ ತೆಗೆದುಕೊಂಡು ಬೇರೆ ಯಾವ ಆಹಾರವನ್ನು ತೆಗೆದುಕೊಳ್ಳದೆ ಮರಣವಾಗುವ ಪರ್ಯಂತ ಉಪವಾಸವಿರುವುದು ಒಂದೇ ದಾರಿ. ಈ ಉಪವಾಸವು ಜಾರಿಯಲ್ಲಿರುವಾಗ ಬ್ರಿಟಿಷ್ ಸರ್ಕಾರವು ತಾನಾಗಿಯೇ ಆಗಲೀ, ಸಾರ್ವಜನಿಕ ಅಭಿಪ್ರಾಯದ ಒತ್ತಾಯದಿಂದಾಗಲೀ ಅಸ್ಪೃಶ್ಯರಿಗೆ ಪ್ರತ್ಯೇಕ ಚುನಾವಣೆಯ ಏರ್ಪಾಡನ್ನು ರದ್ದು ಮಾಡಿ, ಅವರ ಪ್ರತಿನಿಧಿಗಳು ಎಷ್ಟು ವಿಸ್ತಾರವಾದದ್ದಾಗಲೀ ಸಾರ್ವಜನಿಕ ಚುನಾವಣೆಯ ಗುಂಪುಗಳಿಂದ ಚುನಾವಣೆಯಾಗುವಂತೆ ತನ್ನ [illegible] ಬದಲಾಯಿಸಿದರೆ ಈ ಉಪವಾಸವು ಅಂತ್ಯವಾಗುವುದು.

ಸೆಪ್ಟಂಬರ್ ತಾರೀಕು 20ನೇ ಮಧ್ಯಾಹ್ನದ ಒಳಗೆ ಸರಕಾರದ ತೀರ್ಮಾನವು ಮೇಲೆ ಸೂಚಿಸಿರುವ ಮೇರೆ ಬದಲಾಗದಿದ್ದರೆ ಆ ಹೊತ್ತಿನಿಂದ ಈ ಉಪವಾಸವು ಪ್ರಾರಂಭವಾಗುವುದು.

ನಿಮಗೆ ಸಾಕಷ್ಟು ನೋಟೀಸು ದೊರೆಯುವಂತೆ ಈ ಉದ್ದೇಶವನ್ನು ನಿಮಗೆ ತಂತಿ ಮೂಲಕ ತಿಳಿಸಬೇಕೆಂತ ಅಧಿಕಾರಿಗಳನ್ನು ಕೇಳಿಕೊಂಡಿದ್ದೇನೆ. ಅದೂ ಅತೀ ನಿಧಾನವಾದ ದಾರಿಯಿಂದಾದರೂ ಈ ಕಾಗದವು ನಿಮಗೆ ತಲಪುವಷ್ಟು ಸಮಯ ಕೊಟ್ಟಿದ್ದೇನೆ.

ಈ ಕಾಗದವನ್ನೂ, ಸರ್ ಸ್ಯಾಮುವೆಲ್ ಹೋರರವರಿಗೆ ನಾನು ಬರೆದ ಮೇಲ್ಕಂಡ ಕಾಗದವನ್ನೂ ಆದಷ್ಟು ಬೇಗನೆ ಪ್ರಕಟಿಸಬೇಕೆಂತ ಕೇಳಿಕೊಳ್ಳುತ್ತೇನೆ. ನಾನು ನನ್ನ ಭಾಗದಿಂದ ಜೈಲ್ ನಿಬಂಧನೆಗಳನ್ನು ಸಂಪೂರ್ಣವಾಗಿ ಪಾಲಿಸಿದ್ದೇನೆ. ನನ್ನ ಜೊತೆಗಾರರಾದ ಸರದಾರ್ ವಲ್ಲಭಭಾಯಿ ಪಟೇಲರಿಗೂ, ಮಹದೇವ ದೇಸಾಯಿಯವರಿಗೂ ಮಾತ್ರ ಈ ಕಾಗದಗಳ ವಿಷಯ ತಿಳಿಸಿದ್ದೇನೇ ಹೊರತು ಬೇರೆಯವರಿಂದ ಗುಟ್ಟಾಗಿ ಇಟ್ಟಿದ್ದೇನೆ. ನೀವು ಪ್ರಕಟ ಮಾಡಲು ಬಿಟ್ಟರೆ ನನ್ನ ಕಾಗದವು ಸಾರ್ವಜನಿಕ ಅಭಿಪ್ರಾಯದ ಮೇಲೆ ಪರಿಣಾಮ ಮಾಡಬೇಕೆಂತ ನನ್ನ ಅಪೇಕ್ಷೆಯಾಗಿದೆ. ಅದಕ್ಕಾಗಿ ಬೇಗನೆ ಪ್ರಕಟಿಸಬೇಕೆಂತ ನಾನು ಕೇಳುವುದಾಗಿದೆ.

ನಾನು ಮಾಡಿದ ತೀರ್ಮಾನಕ್ಕೆ ವಿಷಾದಿಸುತ್ತೇನೆ. ನಾನು ಧರ್ಮವನ್ನನುಸರಿಸುವವನಾಗಿದ್ದೇನಾದ್ದರಿಂದ ನನಗೆ ಬೇರೆ ದಾರಿಯಿಲ್ಲ. ನಾನು ಸರ್ ಸ್ಯಾಮುವೆಲ್ ಹೋರರಿಗೆ ಬರೆದಿರುವ ಮೇರೆ ಬ್ರಿಟಿಷ್ ಸರ್ಕಾರವು ತನ್ನ ತೊಂದರೆಯನ್ನು ತಪ್ಪಿಸಿಕೊಳ್ಳಲಿಕ್ಕಾಗಿ ನನ್ನನ್ನು ಜೈಲಿನಿಂದ ಬಿಟ್ಟರೂ ಉಪವಾಸವು ನಡೆದೇ ನಡೆಯುತ್ತದೆ. ಸರ್ಕಾರದ ಈ ವಿಷಯದ ತೀರ್ಮಾನವನ್ನು ವಿರೋಧಿಸಲು ನನಗೆ ಈಗ ಬೇರೆ ಯಾವ ಉಪಾಯವೂ ತೋರುವುದಿಲ್ಲ. ಗೌರವಯುಕ್ತವಾದ್ದಲ್ಲದ ಯಾವ ರೀತಿಯಿಂದಲೂ ನನ್ನ ಬಿಡುಗಡೆಯನ್ನು ಹೊಂದಲು ನನಗೆ ಲೇಶ ಮಾತ್ರವೂ ಆಶೆ ಇಲ್ಲ.

ಅಸ್ಪೃಶ್ಯರಿಗೆ ಪ್ರತ್ಯೇಕ ಚುನಾವಣೆಯ ಏರ್ಪಾಡು ಕೊಡುವುದರಿಂದ ಅವರಿಗೂ, ಹಿಂದೂ ಮತಕ್ಕೂ ಹಾನಿ ಇದೆಯೆಂಬ ನನ್ನ ಅಭಿಪ್ರಾಯವು ತಪ್ಪಾಗಿರಬಹುದು. ಹಾಗಾದರೆ ಜೀವನದ ಇತರ ತತ್ವಗಳ ಸಂಬಂಧವಾಗಿ ನನ್ನ ಇತರ ಅಭಿಪ್ರಾಯಗಳೂ ತಪ್ಪಾಗಿರಬಹುದು. ಹಾಗಾದರೆ ಉಪವಾಸದಿಂದ ನಾನು ಮರಣ ಹೊಂದಿಕೊಳ್ಳುವುದು ನನ್ನ ತಪ್ಪಿಗೆ ತಪಶ್ಚರ್ಯವಾದೀತು ಮತ್ತು ನನ್ನ ಜ್ಞಾನದಲ್ಲಿ ಮಕ್ಕಳಂತೆ (ಸಂಪೂರ್ಣ) ನಂಬಿಕೆ ಇಟ್ಟಿರುವ ಅಸಂಖ್ಯ ಗಂಡಸರ ಹೆಂಗಸರ ಮೇಲಿನ ಒಂದು ದೊಡ್ಡ ಹೊರೆಯನ್ನು ಇಳಿಸಿದಂತೆಯೂ ಆದೀತು. ನಾನು ನನ್ನ ತೀರ್ಮಾನವು ಸರಿಯಾದದ್ದೆಂತ ನಂಬುತ್ತೇನೆ. ಹಾಗೆ ಸರಿಯಾದದ್ದಾದರೆ ಈಗ ಕಾಲು ಶತಮಾನದ ವರೆಗೆ ಜಯಪ್ರದವಾಗಿ ಜಾರಿಗೆ ತಂದಿರುವ ನನ್ನ ಜೀವನಕ್ರಮದ ಉದ್ದೇಶವು ನೆರವೇರಿದಂತಾಗುತ್ತದೆ.

ನಿಮ್ಮ ಪ್ರಿಯ ಸ್ನೇಹಿತ,
ಎಂ. ಕೆ. ಗಾಂಧಿ.

ಮಿ. ಮೆಕ್ಡೊನಾಲ್ಡರ ಜವಾಬು.

ಮಿ. ರೇಮ್ಸೆ ಮೆಕ್ಡೊನಾಲ್ಡರು ತಾ. 8—9—32 ರಲ್ಲಿ ಡೌನಿಂಗ್ ಸ್ಟ್ರೀಟ್, ಲಂಡನಿನಿಂದ ಬರೆದ ಪತ್ರ.

ಪ್ರಿಯ ಗಾಂಧಿಯವರೇ,

ನಿಮ್ಮ ಕಾಗದವು ಬಹಳ ಆಶ್ಚರ್ಯವನ್ನೂ, ಮನಃಪೂರ್ತಿ ವಿಷಾದವನ್ನೂ ಉಂಟುಮಾಡಿದೆ. ಅಸ್ಪೃಶ್ಯರ ಸಂಬಂಧವಾಗಿ ಬ್ರಿಟಿಷ್ ಸರಕಾರವು ಕೊಟ್ಟ ತೀರ್ಮಾನದ ಅರ್ಥವನ್ನು ನೀವು ಸರಿಯಾಗಿ ತಿಳಿಯದೆ ಬರೆದಿದ್ದೀರಿ ಎಂತ ನಾನು ಯೋಚಿಸಬೇಕಾಗಿದೆ.

ಅಸ್ಪೃಶ್ಯರನ್ನು ಹಿಂದೂ ಸಮಾಜದಿಂದ ಖಾಯಂ ಆಗಿ ದೂರ ಮಾಡಲು ನೀವು ಕಠಿಣ ವಿರೋಧಿಗಳಿದ್ದೀರೆಂತ ನಮಗೆ ಯಾವಾಗಲೂ ತಿಳಿದಿತ್ತು. ಅದನ್ನು ನೀವು ದುಂಡು ಮೇಜು ಪರಿಷತ್ತಿನ ಅಲ್ಪ ಸಂಖ್ಯಾಕರ ಸಂಬಂಧದ ಕಮಿಟಿಯಲ್ಲೂ, ಮಾರ್ಚ 11 ರಲ್ಲಿ ಸರ್ ಸ್ಯಾಮುವೆಲ್ ಹೋರರಿಗೆ ಬರೆದ ಕಾಗದದಲ್ಲೂ ಸ್ಪಷ್ಟಪಡಿಸಿದ್ದೀರಿ. ನಿಮ್ಮ ಅಭಿಪ್ರಾಯದಂತೇ ಹಿಂದೂ ಸಮಾಜದ ದೊಡ್ಡ ಭಾಗದ್ದೂ ಇದೆಯೆಂತ ನಮಗೆ ತಿಳಿದಿತ್ತು. ಅಸ್ಪೃಶ್ಯರಿಗೆ ಪ್ರತಿನಿಧಿತ್ವ ಕೊಡುವುದನ್ನು ತೀರ್ಮಾನಿಸಿದಾಗ ಇದನ್ನೆಲ್ಲಾ ಬಹಳ ಜಾಗರೂಕತೆಯಿಂದ ಯೋಚಿಸಿದ್ದೇವೆ.

ಅಸ್ಪೃಶ್ಯರ ಅನೇಕ ಸಂಸ್ಥೆಗಳಿಂದ ಕೋರಿಕೆ ಬಂದದ್ದರಿಂದಲೂ, ಅವರಿಗೆ ತುಂಬಾ ಅಡಚಣೆಗಳಿವೆಯೆಂಬದನ್ನು ಒಪ್ಪತಕ್ಕಂಥಾದ್ದಾಗಿದ್ದು, ನೀವು ಸಹ ಒಪ್ಪಿರುವುದರಿಂದ, ನ್ಯಾಯವಿಧಾಯಕ ಸಭೆಗಳಲ್ಲಿ ಅವರ ಪ್ರತಿನಿಧಿಗಳಿಗೆ ತಕ್ಕಷ್ಟು ಸ್ಥಾನ ಇಡುವುದು ನ್ಯಾಯವೆಂತ ನಮಗೆ ತೋರಿ ಹಾಗೆ ಇಟ್ಟದ್ದಾಗಿದೆ. ಆದರೂ ಹಿಂದೂ ಸಮಾಜದಿಂದ ಅವರು ಅಲಕ್ಕಾಗದಂತೆ ನೋಡಿಕೊಳ್ಳಲು ಸಹ ಎಚ್ಚರ ತೆಗೆದುಕೊಂಡಿದ್ದೇವೆ. ಅವರಿಗೆ ನ್ಯಾಯವಿಧಾಯಕ ಸಭೆಗಳಲ್ಲಿ ಪ್ರತಿನಿಧಿತ್ವ ಕೊಡಲು ನೀವು ವಿರೋಧವಿಲ್ಲವೆಂತ ನಿಮ್ಮ ಮಾರ್ಚ 11ರ ಕಾಗದದಲ್ಲಿ ಬರೆದಿದ್ದೀರಿ. ಸರಕಾರದ ಏರ್ಪಾಡಿನಲ್ಲಿ ಅಸ್ಪೃಶ್ಯರು ಹಿಂದೂ ಸಮಾಜಕ್ಕೇನೇ ಸೇರಿದವರಾಗಿರುತ್ತಾರೆ. ಹಿಂದೂಗಳೊಂದಿಗೆ ಸಮಸಮಾನತ್ವದಲ್ಲಿ ಓಟುಕೊಡಲು ಹಕ್ಕುಳ್ಳವರಾಗಿರುತ್ತಾರೆ. ಆದರೆ ಮೊದಲನೇ 20 ವರ್ಷಗಳ ವರೆಗೆ ಕನಿಷ್ಟ ಸಂಖ್ಯೆ ಓಟುಕೊಡುವ ಕೂಟಗಳ ಮೂಲಕ ತಮ್ಮ ಹಕ್ಕುಬಾಧ್ಯತೆಗಳನ್ನು ಕಾಪಾಡಿಕೊಳ್ಳುವ ಏರ್ಪಾಡು ಕೊಡಬೇಕಾದದ್ದು ಈಗಿನ ವಿದ್ಯಮಾನದಲ್ಲಿ ಯುಕ್ತವೆಂತ ನಮಗೆ ತೋರಿದ್ದರಿಂದ ಆ ಏರ್ಪಾಡು ಮಾಡಿಕೊಟ್ಟಿರುತ್ತೇವೆ. ಈ ಬೇರೆ ಓಟು ಕೊಡುವ ಕೂಟಗಳನ್ನು ಮಾಡಿಕೊಟ್ಟಲ್ಲಿ ಸಹ ಅವರು ಹಿಂದೂ ಸಮಾಜದಿಂದ ಬೇರಾಗದಂತೆ ಸಮುದಾಯದ ಕೂಟದಲ್ಲಿ ಓಟ್ ಕೊಡುವ ಹಕ್ಕನ್ನು ಕೂಡ ಉಳಿಸಿಕೊಟ್ಟಿರುತ್ತೇವೆ. ಅಸ್ಪೃಶ್ಯರ ಚುನಾವಣೆಗೆ ಅವರದೇ ಬೇರೆ ಕೂಟಗಳನ್ನು ಬೇಕೆಂತಲೇ ಮಾಡದೆ, ಅವರನ್ನು ಸಮುದಾಯದ ಓಟುಗಾರ ಕೂಟದಲ್ಲೇ ಸೇರಿಸಿ, ಜಾತಿ ಹಿಂದೂ ಉಮೇದ್ವಾರರು ಅವರ ಓಟು ಕೇಳುವಂತೆಯೂ, ಅವರ ಉಮೇದ್ವಾರರು ಜಾತಿ ಹಿಂದೂಗಳ ಓಟು ಕೇಳುವಂತೆಯೂ ಏರ್ಪಾಡು ಮಾಡಿದ್ದೇವೆ. ಹೀಗೆ ಎಲ್ಲಾ ರೀತಿಯಿಂದಲೂ ಹಿಂದೂಸಮಾಜದ ಒಗ್ಗಟ್ಟನ್ನು ಉಳಿಸಿದ್ದೇವೆ.

ಪ್ರಜಾಜವಾಬ್ದಾರಿ ಸರಕಾರದ ಪ್ರಾರಂಭದಲ್ಲಿ ಕೌನ್ಸಿಲಿನ ಹೆಚ್ಚಿನ ಬೆಂಬಲವಿರುವ ಪಾರ್ಟಿಗೆ ಅಧಿಕಾರವು ಹೋಗುವಾಗ, ನೀವು ಸರ್ ಸ್ಯಾಮುವೆಲ್ ಹೋರರಿಗೆ ಬರೆದ ಕಾಗದದಲ್ಲಿ ಜಾತಿ ಹಿಂದುಗಳಿಂದ ಅನೇಕ ಶತಮಾನಗಳ ಲಾಗಾಯ್ತು ಹೀನಸ್ಥಿತಿಗೆ ಒಳಪಟ್ಟವರೆಂತ ನೀವೇ ಒಪ್ಪುವ ಅಸ್ಪೃಶ್ಯರಿಗೆ ಒಂಭತ್ತು ಪ್ರಾಂತ್ಯಗಳ ಪೈಕಿ ಏಳರಲ್ಲಿ ಅವರೇ ಕೆಲವು ಮೆಂಬರುಗಳನ್ನು ಪ್ರತ್ಯೇಕ ಚುನಾಯಿಸಿ, ಅವರ ಮೂಲಕ ತಮ್ಮ ಕೊರತೆಗಳನ್ನೂ, ಹಕ್ಕುಗಳನ್ನೂ ಕುರಿತು ಹೇಳಿಕೊಳ್ಳುವ ಅವಕಾಶ ಕೊಡಬೇಕಾದದ್ದು ನ್ಯಾಯಯುಕ್ತವೆಂತ ಯಾವನೇ ಮನುಷ್ಯನಾದರೂ ಒಪ್ಪದೆ ಇರಲಾರನು. ಸಮುದಾಯದ ಕೂಟಗಳ ಮೂಲಕ ಇವರ ಪ್ರತಿನಿಧಿಗಳನ್ನು ಚುನಾಯಿಸಬೇಕೆಂತಾದರೆ ಜಾತಿ ಹಿಂದೂಗಳೇ ಹೆಚ್ಚಾಗಿರುವ ಕೂಟಗಳಲ್ಲಿ ಇವರ ಹಕ್ಕುಗಳನ್ನು ಕಾಪಾಡುವ ಮೆಂಬರುಗಳು ಚುನಾಯಿತರಾದಾರೆಂತ ಹೇಳಲು ಸಾಧ್ಯವಿಲ್ಲ.

ಕೆಲವು ಪ್ರತ್ಯೇಕ ಚುನಾವಣೆ ಕೂಟಗಳಿಂದ ಕೆಲವು ಮೆಂಬರುಗಳನ್ನು ಚುನಾಯಿಸುವ ಏರ್ಪಾಡು ಮಾಡಿದ್ದು ಮುಸಲ್ಮಾನ್ ಮುಂತಾದವರಿಗೆ ಪ್ರತ್ಯೇಕ ಚುನಾವಣೆ ಏರ್ಪಾಡು ಕೊಟ್ಟಂತಲ್ಲ. ಮುಸಲ್ಮಾನ್ ಓಟರೊಬ್ಬನಿಗೆ ಸಮುದಾಯದ ಕೂಟದಲ್ಲಿ ಓಟ್ ಮಾಡುವ ಹಕ್ಕಿಲ್ಲ. ಆದರೆ ಅಸ್ಪೃಶ್ಯ ಓಟರುಗಳು ಸಮುದಾಯದ ಕೂಟದಲ್ಲಿ ಓಟ್ ಮಾಡಲೂ ಬಹುದು, ಚುನಾವಣೆಗೆ ಉಮೇದ್ವಾರನಾಗಿ ನಿಲ್ಲಲೂ ಬಹುದು. ಈ ರೀತಿಯಲ್ಲಿ ಚುನಾವಣೆಯಾಗುವ ಅಸ್ಪೃಶ್ಯರ ಸ್ಥಳಗಳು ಅವರ ಜಾತಿಯವರ ಸಂಖ್ಯೆಗೆ ತಕ್ಕಂತಿಲ್ಲ.

ನೀವು ಉಪವಾಸವಿದ್ದು ಸಾಯಲು ನಿಶ್ಚಯಿಸಿದ್ದು ಅಸ್ಪೃಶ್ಯರಿಗೆ ಹಿಂದೂಗಳೊಂದಿಗೇನೇ ಚುನಾವಣೆಯಾಗಬೇಕು ಎಂಬದಕ್ಕಾಗಿಯಲ್ಲ. ಯಾಕೆಂದರೆ, ಅದಕ್ಕೆ ಆ ಅನುಕೂಲವಿದ್ದೇ ಇದೆ. ಹಿಂದೂ ಸಮಾಜವು ಒಡೆದುಹೋಗುತ್ತದೆ ಎಂಬದಕ್ಕಲ್ಲ. ಯಾಕೆಂದರೆ, ಒಡೆಯುವ ಅವಕಾಶವಿಲ್ಲದಂತೆ ಮಾಡಿದೆ. ಆದರೆ ಈಗ ಹೀನ ತರದ ತೊಂದರೆಗಳಿಗೆ ಒಳಗಾದ ಅಸ್ಪೃಶ್ಯರಿಗೆ ಕೆಲವು ಕನಿಷ್ಟ ಸಂಖ್ಯೆ ಮೆಂಬರುಗಳು ಅವರಿಗಾಗಿ ಮಾತಾಡಲು ಬೇರೆ ಚುನಾವಣೆಯಾಗಬಾರದೆಂಬದಕ್ಕೇನೇ ನೀವು ಉಪವಾಸ ಮಾಡಿ ಸಾಯಲು ನಿಶ್ಚಯಿಸಿದಂತಾಯಿತು. ನಿಮ್ಮ ಕಾರಣವು ನನಗೆ ತಿಳಿಯುವುದಿಲ್ಲ. ನೀವು ತಪ್ಪು ತಿಳುವಳಿಕೆಯಿಂದ ಈ ತೀರ್ಮಾನ ಮಾಡಿದ್ದೀರಿ ಎಂತ ಹೇಳಬೇಕಾಗಿದೆಯಷ್ಟೆ.

ಹಿಂದೀಯರು ತಮ್ಮೊಳಗೆ ಕೋಮುವಾರು ಜಗಳವನ್ನು ತಾವೇ ತೀರಿಸಿಕೊಳ್ಳಲು ಸಾಧ್ಯವಿಲ್ಲದೆ ಸರ್ಕಾರವು ತೀರಿಸಬೇಕೆಂತ ಕೇಳಿದ್ದಕ್ಕಾಗಿ ಮನಸ್ಸಿಲ್ಲದೆ ತೀರ್ಮಾನ ಕೊಡಲು ಒಪ್ಪಿದ್ದಾಗಿದೆ. ಸರ್ಕಾರವು ಕೊಟ್ಟ ತೀರ್ಮಾನದಲ್ಲಿ ಹೇಳಿರುವ ಕಾರಣದಿಂದಲ್ಲದೆ ಬೇರೆ ಕಾರಣದಿಂದ ಆ ತೀರ್ಮಾನದಲ್ಲಿ ವ್ಯತ್ಯಾಸ ಮಾಡಲು ಸಾಧ್ಯವಿಲ್ಲ. ವಿರೋಧ ಪಕ್ಷಗಳಿರುವಾಗ ನ್ಯಾಯ ಮಾಡಬೇಕೆಂತ ಯೋಚಿಸಿ ಮಾಡಿದ ತೀರ್ಮಾನವನ್ನು ಸಂಬಂಧಪಟ್ಟ ಕೋಮಿನವರ ಒಪ್ಪಿಗೆ ವಿನಹ ಬದಲಾಯಿಸಲು ಆಗುವುದಿಲ್ಲವೆಂತ ಜವಾಬು ಕೊಡಬೇಕಾಗಿದೆ.

ಈ ಪತ್ರವ್ಯವಹಾರವನ್ನು ಪ್ರಕಟಿಸಬೇಕೆಂತ ಕೇಳಿಕೊಂಡಿದ್ದೀರಿ. ನೀವು ಬಂಧಿಖಾನೆಯಲ್ಲಿರುವುದರಿಂದ ನೀವು ಉಪವಾಸವಿರಲು ಕಾರಣವೇನೆಂಬುದನ್ನು ಸಮುದಾಯಕ್ಕೆ ತಿಳಿಸಿಕೊಡಲು ಅನುಕೂಲವಾಗುವಂತೆ ಈ ಪತ್ರವ್ಯವಹಾರವನ್ನು ಪ್ರಕಟಿಸಲು ಅಡ್ಡಿ ಇಲ್ಲ. ಪುನಹ ಯೋಚಿಸಿ ನಿಮ್ಮ ತೀರ್ಮಾನವನ್ನು ಬದಲಾಯಿಸುವುದಿಲ್ಲವಾದರೆ ಪ್ರಕಟಿಸುತ್ತೇನೆ. ಸರ್ಕಾರದ ತೀರ್ಮಾನಕ್ಕಾಗಿ ನೀವು ಯೋಚಿಸಿರುವಂತೆ ಮಾಡಬೇಕೋ ಎಂತ ಪುನಹ ಆಲೋಚಿಸಬೇಕೆಂತ ಕೇಳಿಕೊಳ್ಳುತ್ತೇನೆ.

ನಿಮ್ಮವನಾದ,
ಜೆ. ರಾಮ್ಸೆ ಮೆಕ್ಡೊನಾಲ್ಡ್.

ಮಹಾತ್ಮರ ಆಖೈರು ಪತ್ರ.

ಮಿ. ರಾಮ್ಸೆ ಮೆಕ್ಡೊನಾಲ್ಡರಿಗೆ ಮ. ಗಾಂಧಿಯವರು ಯರವಾಡಾ ಜೈಲಿನಿಂದ 9ನೇ ಸೆಪ್ಟಂಬರಿನಲ್ಲಿ ಬರೆದ ಪತ್ರ.

ಪ್ರಿಯ ಸ್ನೇಹಿತರೇ,

ನೀವು ಉದ್ದವಾಗಿ ಮತ್ತು ಮನಸು ಬಿಚ್ಚಿ ಬರೆದ ಕಾಗದವು ತಂತಿ ಮೂಲಕ ಕಳುಹಿಸಿದ್ದು ನನಗೆ ತಲಪಿತು.

ನಾನು ಕೈಕೊಳ್ಳುವ ಕಾರ್ಯಕ್ಕೆ ನೀವು ಎಂದೂ ಯೋಚಿಸದ ಅರ್ಥವನ್ನು ಮಾಡಿದ್ದೀರಿ ಎಂತ ನೋಡಿ ವ್ಯಸನಪಡುತ್ತೇನೆ. ಯಾವ ಪಂಗಡಕ್ಕಾಗಿ ನಾನು ಮಾತಾಡುತ್ತೇನೆಯೋ ಅವರ ಕ್ಷೇಮಕ್ಕೆ ಕೆಡುಕು ಮಾಡಲಿಕ್ಕಾಗಿಯೇ ನಾನು ಉಪವಾಸವಿದ್ದು ಸಾಯುವುದು ಎಂತ ನೀವು ಹೇಳುತ್ತೀರಿ. ಈ ಕೀಳ ಸ್ವಾರ್ಥದ ಉದ್ದೇಶವನ್ನು ಊಹಿಸಲಿಕ್ಕೆ ನಾನು ಮಾಡಿದ ಅಂತ್ಯದ ತೀರ್ಮಾನದಿಂದ ಎಡೆ ಇರಲಿಲ್ಲವೆಂತ ನಾನು ನಂಬುತ್ತೇನೆ. ನಿಮ್ಮನ್ನು ಒಪ್ಪಿಸಲಿಕ್ಕಾಗಿಯಲ್ಲ; ಆದರೆ ಈ ಕಾರ್ಯವು ನನಗೆ ಬರೇ ಧರ್ಮದ ಕಾರ್ಯವಾಗಿದೆಯೆಂತ ದೃಢೀಕರಿಸಿ ಹೇಳುತ್ತೇನೆ. ಅಸ್ಪೃಶ್ಯರಿಗೆ ಎರಡು ಓಟು ಕೊಟ್ಟದ್ದರಿಂದ ಅವರಿಗೆ ಕ್ಷೇಮವಾಗುವುದೂ ಇಲ್ಲ. ಹಿಂದೂ ಸಮಾಜವು ಚದುರಿಸಲ್ಪಡದೆ ಇರುವುದೂ ಇಲ್ಲ. ಅಸ್ಪೃಶ್ಯರಿಗೆ ಪ್ರತ್ಯೇಕ ಚುನಾವಣೆಯ ಏರ್ಪಾಡು ಮಾಡಿದ್ದರಿಂದ ಹಿಂದೂ ಸಮಾಜವು ಚದುರಿಸಲ್ಪಡದೆ ಇರುವುದೂ ಇಲ್ಲ. ಅಸ್ಪೃ

ಕೊಡಗು ಕೌನ್ಸಿಲು ಮೀಟಿಂಗು.

ಕೊಡಗಿನ ಸುಧಾರಣೆಯನ್ನು ಕುರಿತು ಚರ್ಚೆ.

ಕೊಡಗು ಪ್ರತ್ಯೇಕವಾಗಿರಬೇಕೆಂಬ ತೀರ್ಮಾನ.

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ ಮೀಟಿಂಗೊಂದು ತಾ. 9ನೇ ಶುಕ್ರವಾರ ಕೌನ್ಸಿಲ್ ಹಾಲ್‌ನಲ್ಲಿ ನಡೆಯಿತು. ಚೀಫ್ ಕಮಿಶನರವರು ಅಧ್ಯಕ್ಷರಾಗಿದ್ದರು. ಮೆ. ಶ್ರೀಪತಿರಾವ್‌ರವರಿಗೆ ರಾವ್‌ಸಾಹೇಬ್ ಟೈಟ್ಲಿನ ಸನ್ನದು ಕೊಟ್ಟ 3 ಮಿನಿಟಿನ ದರ್ಬಾರು ಮುಗಿದ ಕೂಡಲೆ ಬೆಳಗ್ಗೆ 11 ಘಂಟೆಗೆ ಕೌನ್ಸಿಲು ಮೀಟಿಂಗು ಪ್ರಾರಂಭವಾಯಿತು. ಘಾಟಿ ಪ್ರಸಂಗಿತ ಆಫೀಸರೂ, ಸಂಜರಾಜ ಪಟ್ಣ ತಾಲೋಕಿನ ಮೆಂಬರು ನ್ಯಮಲ್ಲಪ್ಪನವರೂ ಹಾಜರಿರಲಿಲ್ಲ. ಹೊಸ ಸ್ಪೆಶಲ್ ಇನ್ಸ್‌ಪೆಕ್ಟರಾದ ಸುಲ್ತಾನ್ ಮೊಯಿದಿನ್ ಸಾಹೇಬ್ ಮತ್ತು ಕಿಟ್ಟನಾಡು ನಾಗು ಮೆಂಬರು ವೀರಭದ್ರೈಯನವರ ಪ್ರಮಾಣವಾದನಂತರ ಸವಾಲ್ ಜವಾಬುಗಳು ನಡೆದವು.

ಕೊಡಗಿನ ರಾಜಕೀಯ ಭವಿಷ್ಯತ್ತು ಹೇಗೆ ಇರಬೇಕೆಂಬುದನ್ನು ಮೇಲಧಿಕಾರಿಗಳಿಗೆ ತಿಳಿಸುವ ಬಗ್ಗೆ ಕೌನ್ಸಿಲಿನ ಅಭಿಪ್ರಾಯ ತಿಳಿಯಲಿಕ್ಕಾಗಿಯೇ ಈ ಮೀಟಿಂಗನ್ನು ರೂಢಿಗಿಂತ ಎರಡು ತಿಂಗಳು ಮುಂದಾಗಿ ನಡಿಸಿದ್ದಾಗಿದೆ ಎಂತಲೂ, ತ ಅಭಿಪ್ರಾಯದಲ್ಲಿ ದೊಡ್ಡ ಪ್ರಾಂತ್ಯಗಳಿಗೆ ಸುಧಾರಣೆ ದೊರೆತು ಹೇಗೆ ಕೆಲಸ ಮಾಡುತ್ತವೆ ಎಂತ ನೋಡಿದ ನಂತರ ಕೊಡಗಿನ ವಿಷಯ ಯೋಚಿಸಿದರೆ ಸಾಕೆಂತ ಇರುವುದಾದರೂ ಕೌನ್ಸಿಲಿನ ಅಭಿಪ್ರಾಯ ತಿಳಿಯಬೇಕಾಗಿದೆಯೆಂತಲೂ, ಸರಕಾರದ ಉದ್ದೇಶಕ್ಕೆ ತಕ್ಕಂತೆ ರಾವ್ ಸಾಹೇಬ್ ಶ್ರೀಪತಿರಾಯರು ಠರಾವು ಕಳುಹಿಸಿದ್ದಾರೆಂತಲೂ ಚೀಫ್ ಕಮಿಶನರು ಒಂದು ಚಿಕ್ಕ ಭಾಷಣ ಮಾಡಿದರು.

ಆಫೀಸಿನ ಪಕ್ಷಕ್ಕೆ ತಗಲುವ ಕಟ್ಟಡ ಹಳೆಯ ಕಾಟವನ್ನು ಕಪ್ಪ ವಸೂಲಿಕ್ಕೆ ಎಂದು ಸೂಚಿಸಿ ಎಲ್ಲಾ ತರಹದ ಕ್ರಿಮಿಕೀಟಗಳು, ಕ್ರಿಮಿನಾಶ್ಯಾದಿಗಳ ಖಾಯಿಲೆ ಮತ್ತು ಕಜ್ಜಡಗಳ ಹಂಡುವಿಕೆಯನ್ನು ತಡೆಯುವ ಬಗ್ಗೆ ಇರುವ ಕಾನೂನು ಎಂಬ ಹೆಸರಿನಿಂದ ಒಂದು ಕಾನೂನಿನ ಮಸೋದೆಯು ಕೌನ್ಸಿಲಿನ ಮುಂದೆ ಇಡಲ್ಪಟ್ಟು ಅದನ್ನು, ಕಮಿಷನರವರು, ನಿಕಲ್ಸ್‌ರವರು, ಪಿ. ಎ. ಪೂವಪ್ಪನವರು, ಸಿ. ಕಾಳಪ್ಪನವರು, ಪಿ. ಆರ್. ತಿಮ್ಮಪ್ಪಯ್ಯನವರು ಮತ್ತು ಎ. ಬಿ. ಚಂಗಪ್ಪನವರಿಂದ ಕೂಡಿದ ಸಿಲೆಕ್ಟ್ ಕಮಿಟಿಯ ಅವಲೋಕನೆಗೆ ಇಡಲಾಯಿತು. (ಈ ಮಸೂದೆ ಕಾನೂನು ಗಜೆಟಿನಲ್ಲಿ ಪ್ರಕಟವಾಗಿದೆ. ಸಮಯ ದೊರೆತಾಗ ಅದರ ಸಾರವನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.)

ಮೆ. ಶ್ರೀಪತಿರಾಯರು ಕಳುಹಿಸಿದ ಈ ಕೆಳಗಿನ ಠರಾವಿನ ಮೇಲೆ ಚರ್ಚೆಯು ಪ್ರಾರಂಭವಾಯಿತು.

'ಕೊಡಗು ಪ್ರತ್ಯೇಕವಾಗಿಯೇ ಇದ್ದು, ಹಿಂದೂಸ್ಥಾನದ ಬೇರೆ ಪ್ರಾಂತ್ಯಗಳಿಗೆ ಕೊಡಲು ಯೋಚಿಸುವ ಸುಧಾರಣೆಗಳ ಕ್ರಮಾನುಸಾರ ಮೇರೆ ಹೋಗಲುವಂಥ ಮುಂದುವರಿಯುವ ರಾಜಕೀಯ ಸುಧಾರಣೆಗಳು ಕೊಡಗಿಗೆ ಅವಶ್ಯವಿದೆಯೆಂತ ಇಂಡಿಯಾ ಸರಕಾರಕ್ಕೆ ಚೀಫ್ ಕಮಿಶನರು ತಿಳಿಸಬೇಕೆಂತಲೂ, ಸರಕಾರದಿಂದ ನೇಮಕವಾದ ಬೇರೆ ಬೇರೆ ಕಮಿಟಿಗಳೂ, ಕಮಿಶನ್‌ಗಳೂ ಕೊಡಗಿಗೆ ಕೊಟ್ಟಿರುವ ಸ್ಥಿತಿಯನ್ನು ಕೊಡಗು ಅಂಗೀಕರಿಸುವುದಿಲ್ಲವೆಂತ ಮರ್ಯಾದೆಯಿಂದ ತಿಳಿಸುತ್ತದೆ.'

ಈ ಠರಾವಿನ ಮೇಲೆ ರಾ. ಸಾ. ಶ್ರೀಪತಿರಾಯರು ಮಾಡಿದ ಭಾಷಣದ ಸಾರಾಂಶ:—

ಕೊಡಗಿನ ರಾಜಕೀಯ ಭವಿಷ್ಯತ್ತಿನ ವಿಷಯದಲ್ಲಿ (1) ಮೈಸೂರಿಗೆ ಸೇರಬೇಕೆಂತಲೂ (2) ಕರ್ನಾಟಕಕ್ಕೆ ಸೇರಬೇಕೆಂತಲೂ (3) ಮದ್ರಾಸಿಗೆ ಸೇರಬೇಕೆಂತಲೂ (4) ಪ್ರತ್ಯೇಕವಾಗಿಯೇ ಇರಬೇಕೆಂತಲೂ ನಾಲ್ಕು ಮತಗಳಿವೆ. ಮೈಸೂರಿಗೆ ಸೇರಬೇಕೆಂಬುದು ಎಷ್ಟು ಮಾತ್ರಕ್ಕೂ ಅಂಗೀಕರಿಸಲು ಯೋಗ್ಯವಲ್ಲದ್ದಾಗಿದೆ. ಇತ್ತೀಚೆಗೆ ಪತ್ರಿಕೆಗಳಲ್ಲಿ ವಾದ ನಡೆಯುವದರಿಂದ ಈ ವಿಷಯ ಹೇಳಬೇಕಾಯಿತು. ಬ್ರಿಟಿಷ ಸರಕಾರದಲ್ಲಿರುವ ರಾಜ್ಯವನ್ನು, ದೇಶೀ ರಾಜರಿಗೆ ಬಿಟ್ಟುಕೊಡುವಂಥಾದ್ದು ವೈಸರಾಯರ ಕೈಯ್ಯಲ್ಲಿ ಇರುವಂಥಾದ್ದಾಗಿದೆ ಮೈಸೂರು ದೇಶದಲ್ಲಿರುವದು ಗೃಹಗೆ ಪ್ರಯೋಜನಕರವಾಗಿರುವ ಸರಕಾರವಾದರೂ ಅದು ಸಿಂಕುಚಿತ ಸಂಕಾರವಾಗಿದೆ. ಫೆಡರೇಶನ್‌ನಲ್ಲಿ ಒಂದು ಪ್ರತ್ಯೇಕ ವ್ಯಕ್ತಿಯಾಗಿರುವುದು ಯುಕ್ತವೇ ಹೊರತು ದೇಶೀಯ ರಾಜ್ಯದೊಳಗೆ ಸೇರಿಕೊಳ್ಳುವುದು ಒಪ್ಪಿಗೆಯಾಗತಕ್ಕದ್ದಲ್ಲ.

ಕರ್ನಾಟಕ ಪ್ರಾಂತ್ಯದೊಳಗೆ ಸೇರಿಕೊಳ್ಳುವ ಅಭಿಪ್ರಾಯವು ಉತ್ತಮ: ಮಾಂಟ್‌ಫರ್ಡ್ ರಿಪೋರ್ಟಿನಲ್ಲಿ ಭಾಷಾವಾರು ಪ್ರಾಂತ್ಯವಾಗುವುದು ಉತ್ತಮವೆಂತ ಹೇಳಿದೆ. ಸೈಮನ್ ಕಮಿಶನ್ ಸಹ ಇದಕ್ಕೆ ಉತ್ತೇಜನಕೊಟ್ಟಿದೆ. ಇದನ್ನನುಸರಿಸಿಯೇ ಒರಿಸ್ಸಾ, ಸಿಂಧ್ ಪ್ರಾಂತ್ಯಗಳು ಆಗುವುದಿಲ್ಲವೆ. ಒಂದೇ ಭಾಷೆ, ಸಂಸ್ಕೃತಿ ಇರುವವರೆಲ್ಲರೂ ಒಂದೇ ಪ್ರಾಂತ್ಯದಲ್ಲಿ ಸೇರಿ ಒಗ್ಗಟ್ಟಾಗುವುದು ಲೇಸು. ವಿಜಯನಗರ ಸಂಸ್ಥಾನವು ಪ್ರಖ್ಯಾತ ಕರ್ನಾಟಕ ರಾಜ್ಯವಾಗಿತ್ತು. ಹಾಗೆಯೇ ಈಗಲಾದರೂ ಕರ್ನಾಟಕಸ್ಥರೆಲ್ಲರೂ ಒಗ್ಗಟ್ಟಾದರೆ ಒಳ್ಳೇದಾಗಬಹುದು. 1928 ರಲ್ಲಿ ಈ ಕೌನ್ಸಿಲಿನಲ್ಲಿ ಕರ್ನಾಟಕ ಪ್ರಾಂತ್ಯವಾದಾಗ ಕೊಡಗು ಸೇರಿಕೊಳ್ಳಬಹುದೆಂತ ಠರಾವು ಮಂಜೂರಾಗಿದೆ. ಇದು ತತ್ಕಾಲ ಆಗುವ ವಿಷಯವಲ್ಲದ್ದರಿಂದ ಇದನ್ನು ನಮ್ಮ ನಂತರ ಬರುವವರಿಗೆ ಬಿಡಬೇಕಾಗಿದೆ.

ಮದ್ರಾಸಿಗೆ ಸೇರಬೇಕೆಂಬ ಠರಾವು ಈ ಕೌನ್ಸಿಲಿನಲ್ಲಿ ಎಂದೂ ಮಂಜೂರಾಗಿರುವುದಿಲ್ಲ. 1921—22 ರಲ್ಲಿ ಮದ್ರಾಸಿಗೆ ಸೇರಬೇಕೆಂಬ ಚಳವಳವು ನಡೆಯಿತು. ಆದರೆ ಅಗ್ಗೆ ಪ್ರತ್ಯೇಕವಾಗಿರುವ ಕೊಡಗಿಗೇನೇ ಸುಧಾರಣೆ ಕೊಡಬೇಕು, ಇಲ್ಲವಾದರೆ ಮದ್ರಾಸಿಗೆ ಸೇರಿಸಬೇಕೆಂತ ಕೇಳಿದ್ದಾಗಿದೆ. 1923 ರಲ್ಲಿ ಕೌನ್ಸಿಲ್ ಮಂಜೂರಾದ ನಂತರ ಆ ಚಳವಳವು ನಿಂತು ಹೋಯಿತು. ಈ ಅಭಿಪ್ರಾಯವು ಸರ್ವಸಮ್ಮತವಾದದ್ದಲ್ಲ, ಬಹು ಜನರಿಗೆ ಸಹ ಒಪ್ಪಿಗೆಯಾದದ್ದಲ್ಲ. ಮದ್ರಾಸಿಗೆ ಸೇರಿದರೆ ಸಿಕ್ಕುವ ಪ್ರಯೋಜನಗಳೆಂತ ಹೇಳುವವು ಯಾವವೆಂದರೆ—ಹೈಕೋರ್ಟು, ಮೇಲ್ದರ್ಜೆಯ ಅಧಿಕಾರಿಗಳ ವರ್ಗಾವರ್ಗಿ, ಎಕ್ಸ್‌ಪರ್ಟ್‌ಗಳ ಸಹಾಯ, ಆರೋಗ್ಯ ಚಿಕಿತ್ಸೆಗೆ ಹೆಚ್ಚಿನ ಸಹಾಯ, ಹೆಚ್ಚಿಗೆ ಉದ್ಯೋಗ ಸಿಕ್ಕಬಹುದಾದ ಅನುಕೂಲ, ಆಡಳಿತೆಯಲ್ಲಿ ಅಭಿವೃದ್ಧಿ, ಸುಧಾರಿಸಿದ ಆಳ್ವಿಕೆಯ ಕ್ರಮ. ಇವುಗಳಲ್ಲಿ ಹೆಚ್ಚಿನವು ಬಹಳ ಮಟ್ಟಿಗೆ ಸರಿಯಾದುದಲ್ಲ. ಅನುಕೂಲ ದೊರಕುವ ಸಂಭವವೇ ಇಲ್ಲ. ಈ ದೇಶದಲ್ಲಿ ವ್ಯಾಜ್ಯಗಳೇ ಕಡಿಮೆ. ಮದ್ರಾಸ್ ಹೈಕೋರ್ಟಿಗೆ ಹೋಗುವ ಖರ್ಚು ಹೆಚ್ಚು. ಅದಲ್ಲದೆ ಬೇರೆ ಜುಡಿಶಿಯಲ್ ಕಮಿಶನರನ್ನೇ ನೇಮಿಸಿರುವಾಗ ಆ ಮೊದಲು ಇದ್ದ ಅನಾನುಕೂಲವೆಲ್ಲಾ ಹೋಗಿದೆ.

ಮದ್ರಾಸಿನಲ್ಲಿ ಒಳ್ಳೇ ಮೇಲ್ದರ್ಜೆಯ ಅಧಿಕಾರಿಗಳು ಮಾತ್ರ ವರ್ಗವಾಗುತ್ತಾರೆ. ಅವರೂ ಅವಶ್ಯವಿರುವುದಕ್ಕಿಂತ ಬೇಗನೇ ವರ್ಗಾಯಿಸಿಕೊಳ್ಳುತ್ತಾರೆ. ಇಲ್ಲಿಯೂ ಇಬ್ಬರು ವಿಶೇಷ ಇತರರು ಬರಬಹುದಾಗಿದ್ದಾರೆ. ಬೇಗ ಬೇಗ ವರ್ಗಾಯಿಸುವುದು ಒಳ್ಳೇದೋ ಎಂಬುದು ಸಹ ಸಂಶಯವಾಗಿದೆ. ಒಳ್ಳೇದೆಂತಾದರೆ ಮದ್ರಾಸಿನೊಂದಿಗೆ ಒಪ್ಪಂದ ಮಾಡಿಕೊಂಡು ವರ್ಗಾಯಿಸಿಕೊಳ್ಳಬಹುದು.

ಮದ್ರಾಸಿಗೆ ಹೋದರೆ ವಿದ್ಯಾವಂತರಿಗೆ ಉದ್ಯೋಗ ಸಿಕ್ಕುತ್ತದೆಂಬುದು ನಿಜವಲ್ಲ. ಅಲ್ಲಿಯೇ ವಿದ್ಯಾವಂತರೂ ಇದ್ದಾರೆ. ಸರಕಾರಿ ಉದ್ಯೋಗವೇ ವಿದ್ಯಾವಂತರ ಧ್ಯೇಯವಾಗಬಾರದು. ಕೃಷಿ, ವ್ಯಾಪಾರ ಮುಂತಾದ ಕಸುಬುಗಳಲ್ಲಿ ವಿದ್ಯಾವಂತರು ಕೈಹಾಕಬಹುದು. ಎಲ್ಲರಿಗೂ ಉದ್ಯೋಗವನ್ನು ಒದಗಿಸಿಕೊಡುವುದು ಸರಕಾರಕ್ಕೆ ಸಾಧ್ಯವಾಗಲಾರದು. ಮದ್ರಾಸಿನಿಂದ ಈ ಜಿಲ್ಲೆಗೆ ಹಣದ ಸಹಾಯ ಸಿಕ್ಕುವುದು ನಿಜವಲ್ಲ. ಇದನ್ನು ಒಳ್ಳೇ ಒಂದು ಸಬ್ ಡಿಸ್ಟ್ರಿಕ್ಟ್ ಆಗಿ ಮಾಡಿಯಾರು.

ಪ್ರತ್ಯೇಕವಾಗಿರುವುದು ಒಂದು ಗೌರವವಾಗಿದೆ. ಸೈಮನ್ ಕಮಿಶನ್ ರಿಪೋರ್ಟಿನಲ್ಲಿ ಜನರು ಪ್ರತ್ಯೇಕವಾಗಿಯೇ ಇರಲು ಒಪ್ಪುತ್ತಾರೆನ್ನುತ್ತಾರೆ. ಪ್ರತ್ಯೇಕವಾಗಿರುವದರಿಂದ ನಾವು ಇಷ್ಟೆಲ್ಲಾ ಜನರು ಕೌನ್ಸಿಲಿನ ಚರ್ಚೆಯಲ್ಲಿ ಭಾಗತೆಗೆದುಕೊಳ್ಳುತ್ತೇವೆ. ಮದ್ರಾಸಿಗೆ ಸೇರಿದರೆ ಇದೆಲ್ಲ ಹೇಗೆ ಸಾಧ್ಯ?

ಮದ್ರಾಸ್ ಕೌನ್ಸಿಲಿನಲ್ಲಿ ನಮಗೆ ಒಬ್ಬ ಮೆಂಬರು ಸಹ ಸಿಕ್ಕುವುದು ಸಂಶಯ. ಮದ್ರಾಸಿನ ದೊಡ್ಡ ಕೌನ್ಸಿಲಿನಲ್ಲಿ ನಮ್ಮ ಪ್ರತಿನಿಧಿಯ ಮಾತು ಹೇಗೆ ನಡೆದೀತು. ಈಗ ಇರುವಂತೆ ರೈತರಿಗೆ ಪ್ರಯೋಜನಕರವಾದ ಸರಕಾರ ನಡೆಯಲಾರದು. ಫೆಡರೇಶನಿಗೆ ಸೇರಿದ ಪ್ರತ್ಯೇಕ ಪ್ರಾಂತ್ಯವಾಗಿರುವುದು ಉತ್ತಮ. ದೊಡ್ಡ ಪ್ರಾಂತ್ಯದೊಂದಿಗೆ ಕಣ್ಮುಚ್ಚಿ ಸೇರುವುದರಲ್ಲಿ ಅನಾಯಪಡಿಯೆಂತ ಪ್ರೆಸಿಡೆಂಟರಾದ ಚೀಫ್ ಕಮಿಶನರು ಮುಂದೆಯೇ ಹೇಳಿದ್ದಾರೆ. ನಮ್ಮ ಕೋರಿಕೆಯನ್ನು ಒಗ್ಗಟ್ಟಿನಿಂದ ಕೇಳೋಣ. ನಮಗೆ ಬೇಕಾದದ್ದು ಏನು ಎಂದರೆ 'ನಮ್ಮ ಒಂದು ರೂಪಾಯಿಕ್ಕೆ ಒಂದಿಲ್ಲ' ದೊಡ್ಡ ಪ್ರಾಂತ್ಯಕ್ಕೆ ಕೊಡುವ ಸುಧಾರಣೆಯೇ ನಮಗೂ ಬೇಕು ಎಂತ ಕೇಳುವುದಾಗಿದೆ. ಆಡಳಿತವು ಮಂತ್ರಿಗಳ ಕೈಗೆ ಬರಬೇಕು. ಚುನಾಯಿತ ಪ್ರೆಸಿಡೆಂಟರಾಗಬೇಕು. ಕೌನ್ಸಿಲಿನ ಠರಾವುಗಳು ಅವೇ ಪಕ್ಷ ಆರ್ಥಿಕ ಸಂಬಂಧವಾದವಾದರೂ ಸರಕಾರದಿಂದ ಅಂಗೀಕರಿಸಲ್ಪಡಲೇಬೇಕು. ಕೌನ್ಸಿಲಿಗೆ ಕೊಡಬರುವ ಅಧಿಕಾರಗಳು ಚೀಫ್ ಕಮಿಶನರಲ್ಲಿ ಇರಬೇಕು. ಲೋಥಿಯನ್ ಕಮಿಟಿಯಲ್ಲಿ ಹೇಳಿದ ಮೇರೆ ಚುನಾವಣೆಯ ಏರ್ಪಾಡು ಮಾಡಿಕೊಂಡು ಮಧ್ಯವರ್ತಿ ಶಾಸನ ಮಂಡಲಿಗೆ ಪ್ರತಿನಿಧಿಗಳನ್ನು ಕಳುಹಿಸಿ ಪ್ರತ್ಯೇಕವಾಗಿಯೇ ಇರಬೇಕು. ಸುಧಾರಣೆ ಬೇಡವೆನ್ನುವವರು ಯಾರೂ ಇಲ್ಲ.

ಸರಕಾರದ ಖರ್ಚು ನಡೆಯಲು ಹಣ ಸಾಲದೆನ್ನುತ್ತಾರೆ. ಇನ್ನೂ ಖರ್ಚನ್ನು ಕಡಿಮೆ ಮಾಡಲು ಸಾಧ್ಯವಿದೆಯೋ ಎಂತ ನೋಡಬೇಕು. ಮಧ್ಯವರ್ತಿ ಸರಕಾರದಿಂದ ಹಣ ಸಿಲ್ಲ ದೊರಕುವಂತೆ ಕೇಳಬೇಕು. ವಾಯುವ್ಯ ಪ್ರಾಂತ್ಯ, ಸಿಂಧ್‌ಗೆ ಮತ್ತು ಒರಿಸ್ಸಾಕ್ಕೆ ಸಹ ಮಧ್ಯವರ್ತಿ ಸರಕಾರವು ಆರ್ಥಿಕ ಸಹಾಯ ಕೊಡುವಂತೆ ನಮ್ಮ ದೇಶಕ್ಕೂ ಸಾಲಿಯಾನ ಸಹಾಯ ಕೊಡುವಂತೆ ಕೇಳಬೇಕು. 1925 ನೇ ಇಸವಿಯಲ್ಲಿ ಈ ಕೌನ್ಸಿಲಿನಲ್ಲಿ ಕೆಗ್ಗಟ್ಟುನಾಡಿನ ಒಬ್ಬ ಮೆಂಬರು ಖರ್ಚಿಗೆ ಹಣ ಬೇಕಾದರೆ ಹೆಚ್ಚಿಗೆ ಕಂದಾಯ ಸಹ ಕೊಡಲು ತಯಾರಿದ್ದೇವೆ ಎಂತ ಹೇಳಿದ್ದಾರೆ. ವಿದ್ಯೆ, ರಾಜಭಕ್ತಿ, ರಾಜಕೀಯ ವಿಚಾರದಲ್ಲಿ ಭಾಗತೆಗೆದುಕೊಳ್ಳುವುದು ಮುಂತಾದ್ದರಲ್ಲಿ ನಾವು ಬೇರೆ ಪ್ರಾಂತ್ಯದವರಿಗಿಂತ ಮುಂದಿದ್ದೇವೆ. ಸುಧಾರಣೆ ಯಾವ ರೀತಿಯಲ್ಲಿರಬೇಕೆಂಬದನ್ನು ಪ್ರತಿನಿಧಿ ಕಮಿಟಿಯೊಂದು ನೇಮಿಸಿಕೊಂಡು ಯೋಚಿಸಬೇಕು.

ಮೆ. ಪಾಂಡಂಡ ಚಂಗಪ್ಪನವರು ಠರಾವನ್ನು ಅನುಮೋದಿಸುತ್ತಾ ಹೇಳಿದ್ದೇನೆಂದರೆ—

ಕೊಡಗಿನ ಆಡಳಿತದಲ್ಲಿ ತಿದ್ದುಪಡಿ ಮಾಡಿಕೊಳ್ಳಲು ಎಡೆ ಇದ್ದರೂ ಈ ವರೆಗಿನ ಆಡಳಿತದಿಂದ ಎಷ್ಟೋ ಅಭಿವೃದ್ಧಿ ಹೊಂದಿದ್ದೇವೆ ವಿದ್ಯೆಯಲ್ಲಿ ಮುಂದುವರಿದಿದ್ದೇವೆ. ಟಿಪ್ಪು ಸುಲ್ತಾನರ ಕಾಲದಲ್ಲಿ ಕೊಡಗನ್ನು ಮೈಸೂರಿಗೆ ಸೇರಿಸಲು ಪ್ರಯತ್ನಿಸಿದಾಗ ದೇಶೀಯರು ವಿರೋಧಿಸಿ ಅಂದಿನಿಂದಲೂ ಸ್ವತಂತ್ರರಾಗಿಯೇ ಇದ್ದೇವೆ. 1834 ನೇ ಇಸ್ವಿಯಲ್ಲಿ ದೇಶವನ್ನು ಬ್ರಿಟಿಷರಿಗೆ ಬಿಟ್ಟುಕೊಟ್ಟಾಗ ದೇಶವನ್ನು 'ನೇಟಿವ್ ರೂಲ್'ಗೆ ಬಿಟ್ಟುಕೊಡುವುದಿಲ್ಲವೆಂತ ಬ್ರಿಟಿಷರು ವಾಗ್ದಾನ ಮಾಡಿದ್ದಾರೆ. ದೇಶದವರ ಹಕ್ಕುಗಳನ್ನು ಕಾಪಾಡುತ್ತೇವೆ ಅಂದಿದ್ದಾರೆ. ಕೊಡಗನ್ನು ಮೈಸೂರಿಗೋ, ಮದ್ರಾಸಿಗೋ ಸೇರಿಸಬೇಕೆನ್ನುವವರಿಗೆ ದೇಶದ ಹಿತವಿಲ್ಲ. ಮದ್ರಾಸಿಗೂ ಭಾರವಾಗಿ ಹಿಂಗಡವಾಗುವ ಸಂಭವವಿದೆ. ಪ್ರಾಂತವು ಚಿಕ್ಕದಾದಷ್ಟು ಆಡಳಿತವು ಚೆನ್ನಾಗಿ ಆಗುತ್ತದೆ. ದೊಡ್ಡ ಪ್ರಾಂತ್ಯವಾದರೆ ಮೇಲ್ವಿಚಾರ ಕಡಿಮೆಯಾಗುತ್ತದೆ.

ಆಡಳಿತಕ್ಕೆ ಹಣವಿಲ್ಲವೆನ್ನುತ್ತಾರೆ. ಖರ್ಚು ಕಡಿಮೆ ಮಾಡಬೇಕು. ದೇಶದ ಉತ್ಪತ್ತಿಯನ್ನು ಹೆಚ್ಚಿಸಿಕೊಳ್ಳಲು ಅನುಕೂಲವಿದೆ. ಎಕ್ಸೈಸಿನಿಂದ ಉತ್ಪತ್ತಿ ಕಡಿಮೆಯಾಗಬಹುದು; ಆದರೆ ನೇರವಾಗಿ ಹಿಲ್ಲ ಮಾಡಿ ಉತ್ಪತ್ತಿ ಮಾಡಿಕೊಳ್ಳಬಹುದು. ಗಂಧ ಹೆಚ್ಚಾಗಿ ಬೆಳೆಸುವಂತೆ ಜನರಿಗೆ ಉತ್ತೇಜನ ಕೊಡಬೇಕು. ಕಮಿಶನರ್ ಮತ್ತು ಚೀಫ್ ಕಮಿಶನರ ಹುದ್ದೆ ವಿನಹ ಇತರ ಎಲ್ಲಾ ಅಧಿಕಾರಗಳನ್ನು ದೇಶೀಯರಿಗೇ ಕೊಡಬೇಕು. ಇಂಡಿಯಾ ಸರಕಾರದಿಂದ ಹಣ ಸಹಾಯ ತೆಗೆದುಕೊಳ್ಳಬೇಕು. ಅಧಿಕಾರಿಗಳನ್ನು ಮದ್ರಾಸಿನೊಂದಿಗೆ ವರ್ಗಾವರ್ಗಿ ಮಾಡುವ ಏರ್ಪಾಡು ಮಾಡಿಕೊಳ್ಳಬೇಕು. ಕಾಲೇಜುಗಳಿಗೆ ನಮ್ಮ ವಿದ್ಯಾರ್ಥಿಯರನ್ನು ತೆಗೆದುಕೊಳ್ಳುವಂತೆ ಮದ್ರಾಸಿಗೆ ಹಣದ ಹಡಲಿಕೆ ಕೊಡಬೇಕು. ಕೆಲಸದಿಂದ ನಿವೃತ್ತರಾದ ಜನರನ್ನು ಹೈಕೋರ್ಟು ಜಡ್ಜಿಯರನ್ನಾಗಿ ಮಾಡಿಕೊಳ್ಳಬಹುದು. ಮದ್ರಾಸಿಗೆ ಸೇರಿದರೆ ವಿದ್ಯಾವಂತರಿಗೆ ಕೆಲಸ ಸಿಕ್ಕುವ ಸಂಭವ ಇನ್ನೂ ಇಲ್ಲ. ಕಂದಾಯವನ್ನೆಲ್ಲಾ ಮದ್ರಾಸಿನ ದರಕ್ಕೆ ಹೆಚ್ಚಿಸುತ್ತಾರೆ. ಈಗ ಈ ದೇಶದಲ್ಲಿ ಇಲ್ಲದ ಜಾತಿ ಜಗಳಗಳು ಹುಟ್ಟೀತು. ಪ್ರಜಾ ಜವಾಬ್ದಾರಿ ಸರಕಾರ ಸಿಕ್ಕದಿದ್ದರೂ ಅದನ್ನೇ ಪಡೆಯಲು ಹೋರಾಡುತ್ತಲೇ ಇರಬೇಕೇ ಹೊರತು ಬೇರೆ ದೇಶಕ್ಕೆ ಸೇರುವಂತೆ ಕೇಳಬಾರದು.

ಕಮಿಶನರವರು ಹೇಳಿದ್ದೇನೆಂದರೆ—ಸರ್ಕಾರವು ಜನರ ಅಭಿಪ್ರಾಯ ತಿಳಿಯಲು ಕುತೂಹಲವುಳ್ಳದ್ದಾಗಿದೆ. ಕೊಡಗಿನ ಸರ್ಕಾರದಲ್ಲಿ ಸುಧಾರಣೆ ಕೊಡುವ ವಿಷಯದಲ್ಲಿ ಸರ್ಕಾರವು ಎಚ್ಚರ ತಪ್ಪಿಲ್ಲ. ಆದರೆ ದೊಡ್ಡ ಪ್ರಾಂತ್ಯಗಳಿಗೆ ಕೊಡುವ ಸುಧಾರಣೆಯು ಫಲಿತಾಂಶವೇನಾಗುತ್ತದೆಯೆಂತ ನೋಡದೆ ಮುಂದರಿಸುವುದು ಒಳ್ಳೇದಲ್ಲ. ಇಂಡಿಯಾ ಸರ್ಕಾರದಿಂದ ಕಾಗದ ಬಂದ ಮೇಲೆ ದೇಶದ ಮುಖ್ಯರ ಅಭಿಪ್ರಾಯ ತೆಗೆದುಕೊಳ್ಳಲಾಯಿತು. ಅನೇಕ ಡೆಪ್ಯುಟೇಶನ್‌ಗಳು ಬಂದವು, ಪ್ರತ್ಯೇಕ ವ್ಯಕ್ತಿಗಳೂ ಬಂದರು. ಅಭಿಪ್ರಾಯಗಳು ವಿಧ ವಿಧವಾಗಿವೆ. ಸರ್ಕಾರವು ಈ ಬಾಬಿನಲ್ಲಿ ಏನೂ ಅಭಿಪ್ರಾಯ ಕೊಡುವುದಿಲ್ಲ.

ಮೆ. ತಿಮ್ಮಪ್ಪಯ್ಯನವರು—'ಪ್ರಜಾ ಜವಾಬ್ದಾರಿ ಸರ್ಕಾರವನ್ನು ಪಡೆಯಲು ಮದ್ರಾಸಿಗೆ ಸೇರಬೇಕೆನ್ನುವುದಾಗಿದೆ. ಪ್ರಜಾಜವಾಬ್ದಾರಿ ಸರ್ಕಾರದ ಥಳುಕಿನಿಂದ ಮರುಳಾಗಬಾರದು. ಮದ್ರಾಸಿಗೆ ಸೇರಿದರೆ ಏನಾದರೂ ದಯ ತೋರಿಸಿದರೆ ಒಂದು ಸಬ್ ಕಲೆಕ್ಟರೇಟ್ ಮಾಡಿಯಾರಷ್ಟೆ. ರಾಷ್ಟ್ರೀಯ ಭಾವನೆಯಿಂದ ಹಿಂದೂಸ್ಥಾನವೆಲ್ಲಾ ಮುಂದರಿಯಬೇಕೆಂಬುದಕ್ಕಾಗಿ ಮದ್ರಾಸಿಗೆ ಸೇರುವುದು ಒಳ್ಳೇದಾದರೂ ಅರಮನೆಯಲ್ಲಿ ಯಾವ ಲೆಕ್ಕಕ್ಕೂ ಬಾರದವನಾಗಿ ಇರುವುದಕ್ಕಿಂತ ಸಣ್ಣ ಮನೆಯಲ್ಲಿ ಯಜಮಾನನಾಗಿರುವುದು ಮೇಲು.' ಎಂದು ಮುಂತಾಗಿ ಮಾತಾಡಿದರು.

ಮೆ. ಸಿ. ಯಸ್. ಪೂವಯ್ಯನವರು—'ದೇಶದಲ್ಲಿ ಪ್ರಜಾ ಜವಾಬ್ದಾರಿ ಸರ್ಕಾರ ಸ್ಥಾಪನೆಯಾಗಬೇಕೆಂಬ ಆಶೆ ಬಲವಾಗಿದೆ. ಸರ್ಕಾರಿ ಉದ್ಯೋಗಸ್ಥರು ಪ್ರತ್ಯೇಕವಾಗಿದ್ದರೂ ಪ್ರಜಾ ಜವಾಬ್ದಾರಿ ಸರ್ಕಾರವು ಸಿಕ್ಕಿಯೇ ಸಿಕ್ಕುತ್ತೆಂತ ನಂಬಿಕೆ ಹುಟ್ಟಿಸಿದ್ದಾರೆ. ಇದು ಸಿಕ್ಕದಿದ್ದರೆ ಮದ್ರಾಸಿಗೆ ಸೇರಬೇಕೆಂಬ ಚಳವಳವು ಬಲವಾಗಬಹುದು. ನನ್ನನ್ನು ಚುನಾಯಿಸಿದ ಪ್ರಾಂತ್ಯದವರು ಮದ್ರಾಸಿಗೆ ಸೇರಬೇಕೆಂಬ ಅಭಿಪ್ರಾಯದವರಾಗಿದ್ದಾರೆ. ಈಗಿನ ಆಡಳಿತ ಕ್ರಮದಿಂದ ದೇಶದಲ್ಲಿ ತುಂಬಾ ಅತೃಪ್ತಿ ಇದೆ. ರಾ. ಸಾ. ಶ್ರೀಪತಿರಾಯರು ಹೇಳಿದಂತೆ ಒಂದು ಕಮಿಟಿ ಮಾಡಿ ಯಾವ ತರದ ಸುಧಾರಣೆ ಬೇಕೆಂಬದನ್ನು ನಿಶ್ಚೈಸಬೇಕು.' ಎಂದು ಮುಂತಾಗಿ ಹೇಳಿದರು.

ಮೆ. ಬಲ್ಲಚಂಡ ಬೆಳ್ಯಪ್ಪನವರು ಹೇಳಿದ್ದೇನೆಂದರೆ—ಠರಾವಿನ ಅರ್ಥವು ಸ್ಪಷ್ಟವಾಗಿಲ್ಲ. ಅದರಿಂದ ಏನೂ ಅರ್ಥವಾಗಬಹುದು. ಮದ್ರಾಸಿಗೆ ಹೆಚ್ಚಿಗೆ ಸುಧಾರಣೆ ದೊರಕುವಾಗ ಅಲ್ಲಿ ಈಗ ಜಾರಿಯಲ್ಲಿರುವ ಸುಧಾರಣೆ ನಮಗೆ ಸಿಕ್ಕಿದರೆ ಸಾಕೆಂತಲೂ ಅರ್ಥವಾಗಬಹುದು. ಸಂಪೂರ್ಣ ಪ್ರಜಾ ಜವಾಬ್ದಾರಿ ಸರ್ಕಾರವೆಂತಾದರೆ ಅದಕ್ಕೆ ನನ್ನ ಒಪ್ಪಿಗೆ ಇದೆ. ಆಡಳಿತವ

(೬ನೇ ಪುಟದಲ್ಲಿ ಮುಂದುವರಿದಿದೆ)

ಕೊಡಗು.

ಸನ್ ೧೯೩೨ನೇ ಇಸವಿ

ತಾ. ೧೬ನೇ ಸೆಪ್ಟೆಂಬರ್ ಶುಕ್ರವಾರ.

ಪ್ರೆಸ್ ಆರ್ಡಿನೇನ್ಸ್

ಜಾರಿಯಲ್ಲಿರುವ ವರೆವಿಗೆ

ನಾವು

ಅಗ್ರಲೇಖನ

ವನ್ನು

ಪ್ರಕಟಿಸುವುದಿಲ್ಲ.

ಮಹಾತ್ಮರ ಉಪವಾಸ ವ್ರತ.

ಮಹಾತ್ಮ ಗಾಂಧಿಯವರು ಸರ್ ಹೋರರಿಗೆ ಬರೆದ ಪತ್ರ.

ಎರವಾಡ ಸೆಂಟ್ರಲ್ ಜೈಲ್,

ತಾರೀಖು 11—3—'32

ಪ್ರಿಯ ಸರ್ ಸ್ಯಾಮುವೆಲರೇ,

ಅಲ್ಪ ಸಂಖ್ಯಾತರ ಹಕ್ಕುಗಳನ್ನು ದುಂಡು ಮೇಜು ಪರಿಷತ್ತಿಗೆ ಒಪ್ಪಿಸಿದಾಗ ನಾನು ಮಾಡಿದ ಭಾಷಣದ ಅಂತ್ಯದಲ್ಲಿ ಅಸ್ಪೃಶ್ಯರಿಗೆ ಪ್ರತ್ಯೇಕ ಚುನಾವಣೆಯ ಏರ್ಪಾಡನ್ನು ಕೊಟ್ಟರೆ ಅದನ್ನು ನನ್ನ ಜೀವವನ್ನು ಕೊಟ್ಟಾದರೂ ವಿರೋಧಿಸುತ್ತೇನೆಂತ ನಾನು ಹೇಳಿದ್ದು ಬಹುಶಃ ನಿಮಗೆ ಜ್ಞಾಪಕದಲ್ಲಿರಬಹುದು. ಇದನ್ನು ತತ್ಕಾಲದ ಯೋಚನೆಯಿಂದ ವಾಕಿನ ರಭಸದಲ್ಲಿ ಹೇಳಿದ್ದಲ್ಲ. ಅದನ್ನು ಕಾರ್ಯತಃ ನಡೆಸುವ ಉದ್ದೇಶದಿಂದ ಮನಃಪೂರ್ತಿಯಾಗಿಯೇ ಹೇಳಿದ್ದು.

ಆ ಹೇಳಿಕೆಯನ್ನನುಸರಿಸಿ ನಾನು ಹಿಂದೂಸ್ಥಾನಕ್ಕೆ ಹಿಂತಿರುಗಿ ಬಂದ ನಂತರ ಪ್ರತ್ಯೇಕ ಚುನಾವಣೆಯ ಏರ್ಪಾಡನ್ನು ಅಂದರೆ ಅಸ್ಪೃಶ್ಯರ ಪ್ರತ್ಯೇಕ ಚುನಾವಣೆಯ ಏರ್ಪಾಡನ್ನು ಜನರು ವಿರೋಧಿಸುವಂತೆ ಜನರಿಗೆ ತಿಳುವಳಿಕೆ ಕೊಡಬೇಕೆಂದಿದ್ದೆ. ಆದರೆ ಅದನ್ನು ಆಗಗೊಡಲಿಲ್ಲ.

ನಾನು ಓದಲಿಕ್ಕೆ ಬಿಡುವ ವರ್ತಮಾನ ಪತ್ರಿಕೆಗಳಿಂದ ಬ್ರಿಟಿಷ್ ಸರಕಾರದವರು ತಮ್ಮ ತೀರ್ಮಾನವನ್ನು ಯಾವ ನಿಮಿಷದಲ್ಲಾದರೂ ಪ್ರಕಟಿಸಬಹುದೆಂತ ತಿಳಿಯುತ್ತೇನೆ. ತೀರ್ಮಾನದಲ್ಲಿ ಅಸ್ಪೃಶ್ಯರಿಗೆ ಪ್ರತ್ಯೇಕ ಚುನಾವಣೆಯ ಏರ್ಪಾಡನ್ನು ಕೊಟ್ಟರೆ ನನ್ನ ಪ್ರತಿಜ್ಞೆಯನ್ನು ಜಾರಿ ಮಾಡಲು ನಾನು ಮಾಡಬೇಕಾದ ಕೆಲಸವನ್ನು ನಿರ್ಧರಿಸುತ್ತೇನೆಂತ ಮೊದಲಾಗಿ ಯೋಚಿಸಿದೆ. ಆದರೆ ಬ್ರಿಟಿಷ್ ಸರಕಾರಕ್ಕೆ ತಿಳುವಳಿಕೆ ಕೊಡದೆ ನಾನು ಹಾಗೆ ಮಾಡುವುದು ಯುಕ್ತವಲ್ಲವೆಂತ ತೋರಿತು. **ನಾನು ಹೇಳಿದ ಮಾತಿಗೆ ಬ್ರಿಟಿಷ್ ಸರಕಾರದವರು ನಾನು ಕೊಡುವ ತೂಕವನ್ನು ಕೊಡದಿರುವುದು ಸ್ವಭಾವಿಕವೇ.**

ಮರಣದ ವರೆಗೆ ಉಪವಾಸ ಮಾಡಲು ಮಹಾತ್ಮ ಗಾಂಧಿಯವರ ತೀರ್ಮಾನ.

ಕೋಮುವಾರು ತೀರ್ಮಾನದ ಅತೃಪ್ತಿ.

ಅಸ್ಪೃಶ್ಯರಿಗೆ ಪ್ರತ್ಯೇಕ ಚುನಾವಣೆಗೆ ವಿರೋಧ.

ಉಪವಾಸವು ಸೆಪ್ಟೆಂಬರು ೨೦ರಲ್ಲಿ ಪ್ರಾರಂಭ.

ಮಹಾತ್ಮರ ಬಿಡುಗಡೆಯ ಸಂಭವ.

ಮಹಾತ್ಮರಿಗೂ, ಬ್ರಿಟಿಷ್ ಮಂತ್ರಿಗಳಿಗೂ ನಡೆದ ಪತ್ರವ್ಯವಹಾರಗಳ ಪ್ರಕಟಣೆ.

ಅಸ್ಪೃಶ್ಯರಿಗೆ ಪ್ರತ್ಯೇಕ ಚುನಾವಣೆಯ ಏರ್ಪಾಡಿಗೆ ನನ್ನ ಆಕ್ಷೇಪಣೆಗಳೇನೆಂಬುದನ್ನು ನಾನು ಪೂರಾ ಹೇಳಬೇಕಾಗಿಲ್ಲ. ನಾನು ಅವರಲ್ಲಿ ಒಬ್ಬನೆಂದೇ ಭಾವಿಸುತ್ತೇನೆ. ಅವರ ವಿಷಯವು ಬೇರೆಯವರಿಗಿಂತ ವ್ಯತ್ಯಾಸವಾದದ್ದು. ನ್ಯಾಯವಿಧಾಯಕ ಸಭೆಗಳಲ್ಲಿ ಅವರ ಪ್ರತಿನಿಧಿಗಳು ಇರಬಾರದೆಂತ ನಾನು ಹೇಳುವುದಿಲ್ಲ. ಬೇರೆಯವರಿಗೆ ಬಿಟ್ಟುಕೊಡುವ ಹಕ್ಕು ಕೆಲವು ಷರತ್ತುಗಳಿಗೊಳಪಟ್ಟಿರಬೇಕಾದರೂ ಈ ಪಂಗಡದ ಪ್ರತಿಯೊಬ್ಬ ಪ್ರಾಯದ ಗಂಡಸೂ, ಹೆಂಗಸೂ, ಓಟು ಕೊಡುವ ಹಕ್ಕು ಇರಬೇಕಾಗಿದೆಯೆಂತ ಒಪ್ಪುತ್ತೇನೆ. ಪ್ರತ್ಯೇಕ ಚುನಾವಣೆಯ ಏರ್ಪಾಡಿನಿಂದ, ಒಟ್ಟಿನಲ್ಲಿ ಯಾವ ವ್ಯಕ್ತಿಯಿಂದ ಹೇಗೆ, ಏನೂ, ಅವರಿಗೂ ಹಿಂದೂಮತಕ್ಕೂ ಕೇಡು ತರುವುದೆಂತ ನಾನು ಅಭಿಪ್ರಾಯಪಡುತ್ತೇನೆ. ಪ್ರತ್ಯೇಕ ಚುನಾವಣೆಯಿಂದ ಅವರಿಗೆ ಆಗುವ ಕೇಡನ್ನು ತಿಳಿದುಕೊಳ್ಳಬೇಕಾದರೆ ಜಾತಿ ಹಿಂದೂಗಳ ಮಧ್ಯದಲ್ಲಿ ಅವರು ಹೇಗೆ ಹಂಚಲ್ಪಟ್ಟಿದ್ದಾರೆಂದೂ ಮತ್ತು ಜಾತಿ ಹಿಂದೂಗಳಿಗೆ ಅವರು ಎಷ್ಟು ಅಧೀನರಾಗಿದ್ದಾರೆಂದೂ ನೆನಪಿನಲ್ಲಿಡಬೇಕು. ಹಿಂದೂಮತಕ್ಕಾದರೋ ಪ್ರತ್ಯೇಕ ಚುನಾವಣೆಯ ಏರ್ಪಾಡು ಜೀವವಿದ್ದಂತೆ ಕತ್ತರಿಸಿದಂತಾಗುತ್ತದೆ ಮತ್ತು ಚದರಿಸಿದಂತಾಗುತ್ತೆ. ನನಗೆ ಈ ಪಂಗಡದವರ ವಿಷಯವು ಮುಖ್ಯವಾಗಿ ನೈತಿಕ ಮತ್ತು ಧಾರ್ಮಿಕ ವಿಷಯವಾಗಿರುತ್ತದೆ. ಇದರ ರಾಜಕೀಯ ಸಂಬಂಧವು ಮಹತ್ವದ್ದಾಗಿದ್ದರೂ ನೈತಿಕ ಮತ್ತು ಧಾರ್ಮಿಕ ಸಂಬಂಧಕ್ಕೆ ಹೋಲಿಸಿದರೆ ಅಲ್ಪವಾಗುತ್ತದೆ. ಈ ಸಂಬಂಧವಾದ ನನ್ನ ಮನೋಭಾವವನ್ನು ನೀವು ತಿಳಿದುಕೊಳ್ಳಬೇಕಾದರೆ ನನ್ನ ಬಾಲ್ಯಾವಸ್ಥೆಯಿಂದಲೇ ನಾನು ಇವರ ಹಿತಚಿಂತಕನಾಗಿರುತ್ತೇನೆಂದೂ, ಅವರಿಗಾಗಿ ನನ್ನ ಸರ್ವಸ್ವವನ್ನೂ ಒಂದಕ್ಕಿಂತ ಹೆಚ್ಚು ಸಾರಿ ಕಳಕೊಳ್ಳಲು ತಯಾರಾಗಿದ್ದೇನೆಂಬುದನ್ನು ನೆನಪಿನಲ್ಲಿಡಬೇಕು. ಇದನ್ನು ನಾನು ಹೆಮ್ಮೆಯಿಂದ ಹೇಳಿಕೊಳ್ಳುವದಲ್ಲ. ಅಸ್ಪೃಶ್ಯರನ್ನು ಅನೇಕ ಶತಮಾನಗಳಿಂದ ತುಚ್ಛಸ್ಥಿತಿಯಲ್ಲಿ ಇಟ್ಟದ್ದಕ್ಕಾಗಿ ಯಾವ ಕಷ್ಟವನ್ನು ಮಾಡಿದರೂ ಸಾಲದೆಂತ ನನ್ನ ಅಭಿಪ್ರಾಯ. ಅವರು ನರಳುತ್ತಿರುವ ಹೀನಸ್ಥಿತಿಗೆ ಪ್ರತ್ಯೇಕ ಚುನಾವಣೆಯು ಪರಿಹಾರವಾಗಲೀ, ತಪಶ್ಚರ್ಯವಾಗಲೀ ಅಲ್ಲವೆಂತ ನನಗೆ ಗೊತ್ತಿದೆ. ಆದ್ದರಿಂದ ಬ್ರಿಟಿಷ್ ಸರಕಾರವು ಅಸ್ಪೃಶ್ಯರಿಗೆ ಪ್ರತ್ಯೇಕ ಚುನಾವಣೆಯ ಏರ್ಪಾಡನ್ನು ಮಾಡಿಕೊಟ್ಟರೆ ನಾನು ಮರಣ ಹೊಂದುವ ವರೆಗೂ ಉಪವಾಸ ಮಾಡಬೇಕಾಗುತ್ತೆಂತ ಚಕ್ರವರ್ತಿಯವರ ಸರಕಾರಕ್ಕೆ ನಾನು ನಮ್ರತೆಯಿಂದ ತಿಳಿಸುತ್ತೇನೆ.

ನಾನು ಕೈದಿಯಾಗಿರುವಾಗ ಈ ತರಹ ಮಾಡಿದರೆ ಸರಕಾರಕ್ಕೆ ತುಂಬಾ ತೊಂದರೆಯಾಗಬಹುದೆಂತಲೂ, ಅನೇಕರು ಹುಚ್ಚುತನ ಅಥವಾ ಅದಕ್ಕಿಂತಲೂ ಕೀಳೆಂತ ಭಾವಿಸಬಹುದಾದ ಈ ರೀತಿಯನ್ನು ನನ್ನ ಸ್ಥಿತಿಯಲ್ಲಿರುವವನು ರಾಜಕೀಯ ಕ್ಷೇತ್ರದಲ್ಲಿ ಉಪಯೋಗಿಸುವುದು ನ್ಯಾಯವಲ್ಲವೆಂತಲೂ ಅನೇಕರು ನೆನಸಬಹುದೆಂದೂ ನನಗೆ ಗೊತ್ತಿದೆ. ಆದರೆ ಇದು ನಾನು ಅನುಸರಿಸುವ ಹೊಸ ಕಾರ್ಯಕ್ರಮವಲ್ಲ. ನನ್ನ ಜೀವನದ ಒಂದು ಅಂಶವೇ ಆಗಿದೆ ಎಂತ ಮಾತ್ರ ಹೇಳುತ್ತೇನೆ. ನನಗೆ ಬುದ್ಧಿ ಸರಿಯಿದೆ ಎಂದು ನನಗಿರುವ ಜ್ಞಾನವು ಪೋಗಬಹುದಾದರೂ ನನ್ನ ಮನಸ್ಸಾಕ್ಷಿಯು ಹೇಳುವುದನ್ನು ನಾನು ಅನುಸರಿಸದೆ ಇರಲಾರೆನು.

ನನ್ನನ್ನು ಜೈಲಿನಿಂದ ಬಿಟ್ಟರೂ ನಾನು ಉಪವಾಸ ಮಾಡಬೇಕಾದ ಕರ್ತವ್ಯವು ಅವಶ್ಯವಿಲ್ಲದೇ ಹೋಗುವುದಿಲ್ಲವೆಂತ ನನಗೆ ಈಗ ತೋರುತ್ತದೆ.

ನನ್ನ ಭಯಕ್ಕೆ ಕಾರಣವಿಲ್ಲವೆಂದೂ, ಅಸ್ಪೃಶ್ಯರಿಗೆ ಪ್ರತ್ಯೇಕ ಚುನಾವಣೆಯ ಏರ್ಪಾಡನ್ನು ಬ್ರಿಟಿಷ್ ಸರಕಾರವು ಮಾಡಲಾರದೆಂದೂ ನಾನು ಆಶಿಸುತ್ತೇನೆ.

ದಬ್ಬಾಳಿಕೆಯ ಖಂಡನೆ.

ನನ್ನ ಮನಸ್ಸನ್ನು ಕಳವಳಗೊಳಿಸುವ ಇಂಥಾ ಉಪವಾಸ ಮಾಡಲಿಕ್ಕೆ ಕೈಕೊಳ್ಳಬೇಕಾಗಬಹುದಾದ ಇನ್ನೊಂದು ವಿಷಯವನ್ನು ಹೇಳುವುದು ಉತ್ತಮವಿದೆ. ಇದು ದಬ್ಬಾಳಿಕೆ ನಡೆಯುತ್ತಿರುವ ರೀತಿ. ಈ ತ್ಯಾಗವು ಅವಶ್ಯವಾಗುವಂತೆ ನನ್ನ ಮನಸ್ಸಿಗೆ ನೋವು ಯಾವಾಗ ತಟ್ಟುತ್ತದೋ ಎಂತ ತಿಳಿಯುವುದಿಲ್ಲ. ದಬ್ಬಾಳಿಕೆಯು ಯುಕ್ತ ರೀತಿಯ ಹದ್ದನ್ನು ಮೀರಿದೆಯೆಂತ ನನಗೆ ತೋರುತ್ತದೆ. ಸರ್ಕಾರದ ಭೀತಂಕತ್ವವು ಹಿಡಿಸ್ಥಾನದ ಉದ್ಯೋಗಸ್ಥರನ್ನು ಹರಡುತ್ತಲಿದೆ; ಇಂಗ್ಲಿಷ್ ಮತ್ತು ಹಿಂದೂ ಉದ್ಯೋಗಸ್ಥರನ್ನು ಮೃಗಗಳನ್ನಾಗಿ ಮಾಡುತ್ತಿದೆ. ತಮ್ಮ ಜನರಿಗೆ ವಿರೋಧವಾಗಿರುವುದು, ತಮ್ಮ ಸಂಬಂಧಿಕರ ಕಡೆಗೆ ಮನುಷ್ಯ ಸ್ವಭಾವಕ್ಕೆ ವಿರೋಧವಾಗಿ ವರ್ತಿಸುವುದು, ಗೌರವಾರ್ಹವೆಂತ ಸರ್ಕಾರವು ಎಣಿಸುವುದರಿಂದ ಹಿಂದೀ ಅಧಿಕಾರಿಗಳು ತಮ್ಮ ನೈತಿಕ ಬುದ್ಧಿಯನ್ನೇ ಕಳಕೊಳ್ಳುತ್ತಿದ್ದಾರೆ. ಜನರು ಒತ್ತಲ್ಪಟ್ಟಿದ್ದಾರೆ. ಭಾಷಣ ಸ್ವಾತಂತ್ರ್ಯವು ಅಡಗಿಸಲ್ಪಟ್ಟಿದೆ. ಖಾನೂನು ಮತ್ತು ಶಾಂತಿಯ ಹೆಸರಿನಲ್ಲಿ ಪುಂಡುತನವನ್ನು ಚಲಿಸುತ್ತಿದ್ದಾರೆ. ಸಾರ್ವಜನಿಕ ಕೆಲಸಕ್ಕೆ ಹೊರಟ ಮಹಿಳೆಯರು ತಮ್ಮ ಮರ್ಯಾದೆಗೆ ಅಪಾಯ ಬಂದೀತೆಂತ ಭಯಪಡುತ್ತಿದ್ದಾರೆ. ಕಾಂಗ್ರೆಸ್ಸು ಹುಟ್ಟಿಸುತ್ತಿರುವ ಸ್ವಾತಂತ್ರ್ಯ ಪ್ರೀತಿಯನ್ನು ನಿರ್ಮೂಲಿಸಲಿಕ್ಕಾಗಿಯೇ ಹೀಗೆಲ್ಲಾ ನಡೆಯುವುದೆಂತ ನನಗೆ ತೋರುತ್ತದೆ. ಸಾಧಾರಣ ಖಾನೂನಿಗೆ ವಿರೋಧಿಸುವವರನ್ನು ಮಾತ್ರ ಈ ದಬ್ಬಾಳಿಕೆ ಗುರಿಪಡಿಸುವುದಿಲ್ಲ. ಜನರನ್ನು ಬಗ್ಗಿಸಲಿಕ್ಕಾಗಿಯೇ ಹೊರಡಿಸಿದ ಹುಕುಮುಗಳನ್ನು ಉಲ್ಲಂಘಿಸುವಂತೆ ಮಾಡುತ್ತವೆ.

ಈ ಎಲ್ಲಾ ಕಾರ್ಯಗಳಲ್ಲಿ ಪ್ರಜಾ ತಂತ್ರದ ತತ್ವವು ನನಗೇನೂ ಕಂಡು ಬರುವುದಿಲ್ಲ. ನಿಮ್ಮ ಪ್ರಜಾ ತಂತ್ರವು ಮೇಲಿಂದ ಮೇಲೆ ತೋರಬರುವ ನಿರಂಕುಶಾಧಿಪತ್ಯವಾಗಿರುವ ಪ್ರಜಾ ತಂತ್ರವೆಂಬ ನನ್ನ ಅಭಿಪ್ರಾಯವು ನನ್ನ ಇಂಗ್ಲೆಂಡಿನ ಕಡೆ ಪ್ರವಾಸದಿಂದ ದೃಢೀಕರಿಸಲ್ಪಟ್ಟಿದೆ. ಅತಿ ಮಹತ್ವದ ವಿಷಯಗಳಲ್ಲೂ ಕೂಡ ಪಾರ್ಲಿಮೆಂಟನ್ನು ಕೇಳದೆ ವ್ಯಕ್ತಿಗಳು ಅಥವಾ ಗುಂಪುಗಳು ತೀರ್ಮಾನ ಕೊಡುವದಾಗಿದೆ. ಪಾರ್ಲಿಮೆಂಟ್ ಮೆಂಬರುಗಳು ತಾವು ಮಾಡುವುದು ಏನು ಎಂತ ಚೆನ್ನಾಗಿ ತಿಳಿದುಕೊಳ್ಳದೆ ಇಂಥಾ ತೀರ್ಮಾನಗಳಿಗೆ ಒಪ್ಪಿಗೆ ಕೊಡುತ್ತಾರೆ. ಈಜಿಪ್ಟ್ ಸಂಬಂಧವಾಗಿಯೂ, 1914ನೇ ಇಸವಿಯ ಯುದ್ಧದ ಸಂಬಂಧವಾಗಿಯೂ ಹೀಗೆಯೇ ಆದದ್ದು. ಇಂಡಿಯಾದ ಸಂಬಂಧವಾಗಿಯೂ ಹೀಗೆಯೇ ಆಗುತ್ತಲಿರುವುದು. ಮೂವತ್ತು ಕೋಟಿಗಳಿಗಿಂತ ಹೆಚ್ಚಿರುವ ಪುರಾತನ ಜನಾಂಗದ ಭವಿಷ್ಯತ್ತನ್ನು ಒಬ್ಬ ವ್ಯಕ್ತಿಗೆ ತೀರ್ಮಾನಿಸುವ ಹಕ್ಕಿರುವುದು. ಅಂಥಾ ತೀರ್ಮಾನವನ್ನು ಅತಿ ಕ್ರೂರ ತರದ ಹಿಂಸಾ ರೀತಿಗಳನ್ನು ಉಪಯೋಗಿಸಿ ಜಾರಿ ಮಾಡುವುದು ಪ್ರಜಾ ತಂತ್ರದಲ್ಲಿ ಸಾಧ್ಯವೆಂತ ನನಗೆ ಒಪ್ಪಿಗೆಯಾಗುವುದಿಲ್ಲ. ಇದು ಪ್ರಜಾ ತಂತ್ರಕ್ಕೆ ಸಂಪೂರ್ಣ ವಿರೋಧ.

ಎರಡು ಜನಾಂಗಗಳೊಳಗೆ ಈಗಾಗಲೇ ಕಟ್ಟಿರುವ ಮನೋಭಾವವನ್ನು ಇನ್ನಷ್ಟು ಕೆಡಿಸದೆ ಈ ದಬ್ಬಾಳಿಕೆಯು ಮುಂದುವರಿಯಲು ಸಾಧ್ಯವಿಲ್ಲ. ನನ್ನ ಜವಾಬ್ದಾರಿ ಇರುವಷ್ಟು, ನನ್ನಿಂದ ಸಾಧ್ಯವಿದ್ದಷ್ಟು ಈ ಕೃತ್ಯವನ್ನು ಹೇಗೆ ನಿಲ್ಲಿಸಲು ಸಾಧ್ಯ? ಖಾನೂನು ಭಂಗವನ್ನು ನಿಲ್ಲಿಸುವುದರಿಂದಲ್ಲ. ಅದು ನನ್ನ ಧರ್ಮದ ಒಂದಂಶವೇ ಆಗಿದೆ. ಸ್ವಭಾವದಿಂದಲೇ ನಾನು ಪ್ರಜಾ ತಂತ್ರಕ್ಕೆ ಒಳಗಾದವನೆಂತ ನಂಬುತ್ತೇನೆ. ನಾನು ನಂಬುವ ಪ್ರಜಾ ತಂತ್ರವು ತನ್ನ ತೀರ್ಮಾನವನ್ನು ಜಾರಿ ಮಾಡಲು ಶಾರೀರಕ ಹಿಂಸೆಯನ್ನು ಉಪಯೋಗಿಸಕೂಡದು. ಶಾರೀರಕ ಹಿಂಸೆಯು ಎಲ್ಲಿಲ್ಲಿ ಅವಶ್ಯವೋ ಮತ್ತು ನ್ಯಾಯಬದ್ಧವೋ ಅಲ್ಲಲ್ಲ ಖಾನೂನು ಭಂಗವನ್ನು ಉಪಯೋಗಿಸಬಹುದೆಂತ ಯೋಚಿಸಿರುವುದಾಗಿದೆ. ತನಗೆ ತಾವೇ ಕಷ್ಟ ಕೊಟ್ಟುಕೊಳ್ಳುವುದೇ ಇದರ ಕ್ರಮ. ಆವಶ್ಯವಿದ್ದಾಗ ಖಾನೂನುಭಂಗ ನಡೆಸುವವನು ಅಂತ್ಯದ ವರೆಗೆ ಉಪವಾಸವೂ ಇರಬೇಕಾಗುತ್ತದೆ. ನನಗೆ ಆ ಕಾಲವು ಇನ್ನೂ ಬಂದಿರುವುದಿಲ್ಲ. ಅಂಥಾ ಕಾರ್ಯಕ್ಕೆ ನನಗೆ ಒಳಗಿನಿಂದ ಇನ್ನೂ ಅನುಜ್ಞೆ ಬಂದಿಲ್ಲ. ನನ್ನ ಜೀವವನ್ನು ಗಲಿಬಿಲಿಗೊಳಿಸುವಂಥಾ ವರ್ತಮಾನಗಳು ಹೊರಗಿನಿಂದ ಬರುತ್ತಲಿವೆ. ಅಸ್ಪೃಶ್ಯರ ಸಂಬಂಧವಾಗಿ ನಾನು ಉಪವಾಸ ಕೈಕೊಳ್ಳಬೇಕಾಗುತ್ತದೆಯೆಂತ ನಿಮಗೆ ತಿಳಿಸುವಾಗ ಅಂಥಾ ಉಪವಾಸದ ಆವಶ್ಯಕತೆಯು ಬೇರೊಂದು ಕಾರಣದಿಂದ ಅಲ್ಪ ಕಾಲದಲ್ಲೇ ಬೀಳುವ ಸಂಭವವಿದೆಯೆಂತ ನಾನು ನಿಮಗೆ ತಿಳಿಸದೆ ಹೋದರೆ ಸತ್ಯವನ್ನು ನಿಮಗೆ ಹೇಳಿದಂತಾಗುವುದಿಲ್ಲ.

ನನಗೂ ನಿಮಗೂ ನಡೆದ ಪತ್ರ ವ್ಯವಹಾರಗಳು ನನ್ನ ಕಡೆಯಿಂದ ಸಂಪೂರ್ಣವಾಗಿ ಗುಟ್ಟಾಗಿಯೇ ಇಡಲಾಗಿದೆ. ನನ್ನ ಜೊತೆ ಸೇರಲು ಕಳುಹಿಸಲ್ಪಟ್ಟ ಸಂಗಾತಿ ವಲ್ಲಭಭಾಯಿ ಪಟೇಲ್ ಮತ್ತು ಮಹದೇವ ದೇಸಾಯಿ ಇವರಿಗೆ ಮಾತ್ರ ತಿಳಿದಿದೆಯೆಂತ ಹೇಳಬೇಕಾದದ್ದಿಲ್ಲ. ನಿಮಗೆ ಇಷ್ಟವಾದ ರೀತಿಯಲ್ಲಿ ಇದನ್ನು ಉಪಯೋಗಿಸಬಹುದು.

ನಿಮ್ಮ ವಿನೀತ,

ಯಮ್. ಕೆ. ಗಾಂಧಿ.

(4ನೇ ಪುಟದಲ್ಲಿ ಮುಂದುವರಿದಿದೆ)

Reg. No. M. 1550.
if not delivered please return to
"KODAGU" OFFICE MERCARA.

ಕೊಡಗು.

ಸತ್ಯೇನ ಧೂತದಯುಯಾ ವಿದ್ಯಾ ಶೀಲ ಪ್ರಯತ್ನಾ: । ಅಕ್ಷಯಕೀರ್ತಿ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ

ವಾರ್ಷಿಕ ಚಂದಾ ರೂ. ೩—೮—೦.

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೨ | ಮಡಿಕೇರಿ, ಸನ್ ೧೯೩೨ನೇ ಇಸವಿ ಸೆಪ್ಟಂಬರ್ ತಾರೀಕು ೧೬ ನೇ ಶುಕ್ರವಾರ. | ಸಂಚಿಕೆ ೧೬

SARI-PIN·

EAR-RINGS·
(Thodus).
Cut-rubys Rs. 25 to 50
With diamond in centre Rs. 80 to 120

BRACELETS·
Gold Rs. 30
Set rubys forming any letter Rs. 12

NECKCHAINS·

NOSE-RINGS·
Diamond in small size of best quality Rs. 35 & upwards according to size·

MARRIAGE PRESENTATIONS

Attractive and inexpensive articles ready in stock. Prompt execution. Details on enquiry free with catalogue. Numerous customers in Coorg thoroughly satisfied with reliable service. Testimonials pouring in. Silver Guindys, Photo lockets, Dimond nose-screws, cut-ruby ear-rings, etc., etc., etc., in all prices. Very attractive Prices most moderate.

Estimates free on enquiry

Telegrams: 'PRECIOUS.'

CATALOGUE ON ENQUIRY.

V. Subramaniaier Jeweller,

Designs free on enquiry·

Telephone: 3145.

52—43

Post Box 423, Triplicane, P. O., MADRAS.

26—12

ಜನರಲ್ ಅಶ್ಯೂರೆನ್ಸ್ ಸೊಸೈಟಿ.

ಅಜಮೀರ್.

ನಮ್ಮ ಆಯವ್ಯಯದ ಪಟ್ಟಿಯೇ ನಮ್ಮ ಅಭಿವೃದ್ಧಿಯನು ವ್ಯಕ್ತಗೊಳಿಸುತ್ತದೆ.

ವರ್ಷ	ಮೊಬಲಗು ವರ್ಷಾದಾಯ	ಮೊಬಲಗು ಮೂಲಧನ	ಖರ್ಚಿನ ಪ್ರಮಾಣದ ಶೇಕಡ
1911	46,248	49,442	82.9
1921	2,92,627	6,53,350	43 2
1931	12,50,000	40,00,000	28.2

ಬೋನಸ್ಸು.

ಹುಟ್ಟು ನಷ್ಟೆ ದೊರಕುವ ಜೀವಾವಧಿ ಪಾಲಿಸಿಗಳ ಮೇಲೆ ವರ್ಷ ಒಂದಕ್ಕೆ ಶೇಕಡ 22½

ಚೆನ್ನಾಗಿ ಕೆಲಸಮಾಡಿ ಅಭಿವೃದ್ಧಿ ಸ್ಥಿತಿಯಲ್ಲಿರುವ ಈ ಸೊಸೈಟಿಯಲ್ಲಿ ಏನು ಮಾಡಿ ಕಡಿಮೆ ಪ್ರೀಮಿಯಂ ಪಾವತಿ ಮಾಡುವ ಸೌಲಭ್ಯ ಹೊಂದಿ ಅಥವಾ ಈ ಕಂಪೆನಿಯ ಪರವಾಗಿ ಕೆಲಸಮಾಡಿ ಉತ್ತಮ ಕಮಿಶನ್ ದರದ ಪ್ರಯೋಜನ ಹೊಂದಿ.

ಹೆಚ್ಚು ವಿಚಾರಗಳಿಗೆ ಈ ವಿಳಾಸಕ್ಕೆ ಬರೆಯಿರಿ:—

ಎ. ರಾಮಚಂದ್ರರಾವ್,
ಸುಪರಿಂಟೆಂಡೆಂಟ್,
ಮಿಂಟೋ ಆಸ್ಪತ್ರೆ ಬಳಿ,
ಬೆಂಗಳೂರು.

52—21

ಎಂಪೈರ್ ಆಫ್ ಇಂಡಿಯಾ ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

(ಸ್ಥಾಪನೆಯಾದದ್ದು 1897.)

ಹಿಂದೂಸ್ಥಾನದಲ್ಲಿ ಪ್ರಾಮುಖ್ಯವೂ, ಜನಪ್ರಿಯವೂ ಆಗಿರುವ ಈ ಕಂಪೆನಿಯಲ್ಲಿ ನೀವು ಜೀವ ವಿಮೆ ಮಾಡುವುದಕ್ಕೆ ಇದೇ ತಕ್ಕ ಸಮಯ.

ಬೋನಸ್ ವರ್ಷ ! ಬೋನಸ್ ವರ್ಷ !!

ಸಾಹಸವಂತರಾದ ಏಜೆಂಟರು ಬೇಕಾಗಿದೆ.

ಹೆಡ್ ಆಫೀಸು:—
ಎಂಪೈರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್,
ಬೊಂಬಾಯಿ.

ಬ್ರಾಂಚ್ ಆಫೀಸು:—
152—3 ಅವಿನ್ಯೂ ರೋಡ್ ಸ್ಟ್ರೀಟ್,
ಬೆಂಗಳೂರು.

52—30

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲು)

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	27,350
ಜಮೆಬಂದ ಠೇವಣಾತಿ	—	2,25,172
ವಸೂಲಾದ ಕ್ಷೇಮನಿಧಿ	—	37,914

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5–0–0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು, ಪಟ್ಟುವಾಡ ದೇವಯ್ಯನವರು, ರಾವ್ ಬಹದ್ದೂರ್.

ಟ್ರೆಜರರ್ ಮನೆಯಪ್ಪಂಡ ಬೆಳ್ಯಪ್ಪನವರು.

ಸೆಕ್ರೆಟರಿ

ಸಿ. ಯಸ್. ವೆಂಕಟಯ್ಯನವರು, ಬಿ.ಎ., ಬಿ.ಎಲ್

ತಾರೀಖು 1—7—1932.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಕೊಡಗಿನ ಎಲ್ಲಾ ಭಾಗಗಳಿಗೆ—ಮೆ. ಮುಂಡಂಡ ಯಂ. ಬಿದ್ದಪ್ಪನವರು.

ಉತ್ತರ ಕೊಡಗಿಗೆ ಮೆ· ಚೌರಿರ ಮಾದಯ್ಯನವರು,

ಸಬ್ ಏಜೆಂಟರುಗಳು.

ವಿರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು, (ಖಾದಿಭಂಡಾರ.)

ಸೋಮವಾರಪೇಟೆ—ಎಮ್. ಆರ್. ವೆಂಕಟಯ್ಯನವರು.

ಅಮ್ಮತ್ತಿ—ಸಿದ್ದಾಪುರ—ಮೆ. ಬಸೆಂಡ ಮಾದಪ್ಪನವರು,

ಪೊನ್ನಂಪೇಟೆನಾಡು—ಮೆ. ಸಿ. ಜಿ. ಮುದ್ದಯ್ಯನವರು, ಮತ್ತು ಅರಮಣಮಾಡ ಪಿ ಕಾರ್ಯಪ್ಪನವರು,

ಮಡಿಕೇರಿ & ತಿತಿಮತ್ತಿ—ಮೆ. ·ಜಿ. ಪೂದಮ್ಮಯ್ಯನವರು,

ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾದಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಿಸಲು ಅತ್ಯವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಕರಾರು ಫಾರಮುಗಳೂ, ಜಮ್ಮ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಕರಾರು ಫಾರಮುಗಳೂ, ಸ್ಟೋರ್ ಕೀಪರ್ ಕರಾರು ಫಾರಮುಗಳೂ, ಓವರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮಾ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಮುದ್ದು ಬರೆದಲ್ಲಿ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.

ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—9013 ಜನರಿಗೆ 32 ಲಕ್ಷ ರೂ.

ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,78,322 ಜನರಿಗೆ 38ಕೋಟಿ ರೂ.

ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ರಕ್ಕಿಂತ ವಿಪರದ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದಾಗಿದೆ. ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಬೆಂಬಲ ಸಹಾನುಭೂತಿಯನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬುದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು

ಅಥವಾ ಇನ್ಸ್‌ಪೆಕ್ಟರೇಟ್ ಆಫೀಸು, ಮಡಿಕೇರಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ಮೊಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೌ	ಪಾಟ್ನಾ	ಸುಕ್ಕೂರು
ಅಲ್ಲಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಡೌಲಗಾನ್	ಮಂಗಳೂರು	ರಾಯಪುರ	ತಿರುವೆಂದ್ರಮ್
ಭೋಪಾಲ್	ಕರಾಚಿ	ಮಡಿಕೇರಿ	ರಾಂಚಿ	ವಿಶಾಖಪಟ್ಣ [52—28

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತಾರೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,

52—35 ಗಿರಿಗಾಂವ, ಮುಂಬಯಿ.

ಕಾರ್ಡು ಬರೆದರೆ ಆಗನ ಕ್ಯಾಟಲಾಗು ಮಫತಿಯಾಗಿ ಕಳುಹಿಸಲ್ಪಡುವುದು.



ಕೋವಿಗಳು, ಕತ್ತಿಗಳು, ಬಚೆಗಳು, ತೋಟಿಗಳು, ಕೇಪುಗಳು, ಮದ್ದು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS LTD.,

Largest Importers of Firearms and Ammunition

Cheapest priced firm in India,

26-1 **210 Abdul Rehiman Street, BOMBAY.**

Printed & published by P. I. Belliappa at "Kodagu" Press Mercara for "Kodagu" Ltd

ಓ ಹೋ, ಇಷ್ಟರೊಳಗೆ, ಇತ್ತ ಆಲಿಸಿರಿ, ಒಬ್ಬೊಬ್ಬರಲ್ಲಿ ನಿಷಾದೇವಿಯು ಹೊಕ್ಕಿದಳು. 'ಆನೆ ಪೆದ್ದವಸಿಗೆ ಮೂಲಿಯೊಂದು ಬಾಡೋ' ಎಂಬಂತೆ ಅಲ್ಲಲ್ಲಿ ಪಿಸುಪೂತಾಯಿತು. "ಕೈಲ್ ಪೋಳ್ದ'ಕ್ ಕಳ್ಳೀ ಚಾಯಿ" ಎಂದು ಒಬ್ಬರ ಮಾದ. "ತಿಂಬದು ಕುಡಿಪದೀ ಕೈಲ್ ಪೋಳ್ದ" ಎಂದು ಇನ್ನೊಬ್ಬರದು. "ಏ ಹೆ, ನನಕ್ಕ್ ಬೆರೀಂಗಿ ಬೋಂಡುವೆ" ಎಂದು ಮೂರನೆಯವನದು. ಹಾಗೂ ಹೀಗೂ ನಿಷಾದೇವಿಗೆ ಉಚ್ಚಸ್ಥಾನವನ್ನು ಕೊಡುವಂತಾಯಿತು.

ಮೆ. ಪಟ್ಟನೂಡ ಮಂದಪ್ಪನವರು ಅಧ್ಯಕ್ಷಸ್ಥಾನವನ್ನು ವಹಿಸಿದರು. ಅಧ್ಯಕ್ಷರೂ, ಉದಿಯೊಂಡ ಗಣಪತಿಯವರೂ, ಅರೆಯಡ ಸುಬ್ಬಯ್ಯನವರೂ ಕೈಲ್ ಪೋಳ್ದ ದಿನದ ಉದ್ದೇಶ್ಯವನ್ನು ವಿವರಿಸಿದರು. ನಂತರ ಊಟಕ್ಕೆ ಪ್ರಾರಂಭವಾಯಿತು. ಊಟದಲ್ಲಿ ಬಾಟ್ಲಿಗಳ ಹಾರಾಟ, ಟಂಬ್ಲರುಗಳ ಕುಣಿದಾಟ, ಗುಡ್ಡಲಕ್ಕನ ಮೆರೆಯಾಟ, ಕಣ್ಣು ಮುಚ್ಚಾಟ, ನಿಷಾದೇವಿಯ ಹೋರಾಟ, ಇವೆಲ್ಲಾ ಸುರುವಾದವು. ಜೊತೆಗೆ ಅವಳ ನಾಟ್ಯವೂ ಸುರುವಾಯಿತು. ಅಂತು ಇಂತು ಹೊಸ ಆಚರಣೆಯ ಜೊತೆಗೆ ನಿಷಾದೇವಿಯನ್ನು ಕೈಕೊಂಡಂತಾಯಿತು. ಇದು ಕೂಡ ಹೊಸ ಸುಧಾರಣೆಯೋ ಸರಿ! ಊಟ ತೀರಿತು. ಗಾನ ಇತ್ಯಾದಿಗಳು ಮುಗಿದ ನಂತರ ಒಂದೆರಡು ಭಾಷಣಗಳಾದವು. ಕಡೆಗೆ ಈ ಕೂಟವನ್ನು ಏರ್ಪಡಿಸಿದ ಮ. ಬಿ. ಕುಶಾಲಪ್ಪನವರಿಗೂ, ಉ. ಗಣಪತಿಯವರಿಗೂ, ಬೋರ್ಡಿಂಗನ್ನು ವಹಿಸಿಕೊಟ್ಟ ಹೆಡ್ ಮಾಸ್ಟರವರಿಗೂ ಸಭೆಯ ಪರವಾಗಿ ವಂದನೆಗಳು ಸಿಕ್ಕಿದವು. ನಂತರ ಅಧ್ಯಕ್ಷರಿಗೆ ಒಂದನೆಯನ್ನರ್ಪಿಸಿ ತಾಂಬೂಲಾದಿಗಳನ್ನು ಪಡೆದು ಎಲ್ಲರೂ ತಂತಮ್ಮ ಮನೆಗೆ ಸಾಧಾರಣ 11 ಗಂಟೆಯ ಸಮಯಕ್ಕೆ ತೆರಳಿದರು.

ಅಲ್ಲದೆ ಈ ಕೂಟವು ಇನ್ನೊಂದು ಹೊಸ ಸುಧಾರಣೆಯನ್ನು ಎತ್ತಿದೆ. ಅದೇನೆಂದರೆ, ನಾಡು ವಾರಪತ್ರಿಕೆಗಳಂತೇ ಮೊದಲಾದ ಇನ್ನು ಕೆಲವು ಬ್ರಾಹ್ಮಣರು ಕೂಡ ಈ ಕೂಟದಲ್ಲಿ ಭಾಗಿಗಳಾಗಿ ಸಭೆಯು ಮುಕ್ತಾಯವಾಗುವವರೆಗೂ ಮಿಳಿತವಾಗಿದ್ದರು. ಇದೊಂದು ಶ್ಲಾಘನೀಯವಾದ ಸಮಾಚಾರವೇ ಸರಿ. ಹೀಗೆಯೇ ಪರಸ್ಪರ ಹಬ್ಬಗಳಲ್ಲಿ ಅನ್ಯೋನ್ಯ ಭಾಗಿಗಳಾದರೆ ಕೋಮುವಾರು ಕೊರತೆಗಳನ್ನು ನೀಗಿಸುವುದಲ್ಲದೆ, ಪ್ರೀತಿಯೂ ಸ್ನೇಹವೂ ಉಂಟಾಗುವುದೆಂದು ಭಾವಿಸಬಹುದು. ಒಟ್ಟಾರೆ ನಿಷಾದೇವಿಯ ವಿನಹ ಹಬ್ಬವು ವಿಜೃಂಭಣೆಯಿಂದ ನಡೆಯಿತು. ನಿಷಾಪದಾರ್ಥವನ್ನು ಮಾತ್ರ ಬಿಟ್ಟು ಹೀಗೆಯೇ ಪ್ರತಿ ವರ್ಷವೂ ನಡೆಯಲೆಂದು ಆಶಿಸೋಣ.

'ಹಾಜರಿದ್ದವ'

ಕೊಡಗಿನ ಭವಿಷ್ಯತ್ತು.

ಒಂದು ದೇಶದ ಆಡಳಿತವು ಎಷ್ಟೇ ಒಳ್ಳೆಯದಾಗಲಿ, ಆ ದೇಶವು ಬಹು ಕಾಲದ ವರೆಗೆ ಅದೇ ಆಡಳಿತದಿಂದ ತೃಪ್ತಿ ಹೊಂದಲಾರದು. ಕಾಲವು ಬದಲಾದ ಹಾಗೆಲ್ಲಾ ರಾಜಕೀಯ ಆಡಳಿತ ಕ್ರಮವು ಬದಲಾಗಬೇಕಾಗಿದೆ, ಇದಕ್ಕೆ ಹಿಂದೂ ದೇಶದ ಚರಿತ್ರೆಯೇ ಉದಾಹರಣೆ. "Old order changeth yeilding place to new." ಹಾಗೆಯೇ ನಮ್ಮ ಕೊಡಗು ದೇಶವು ತನ್ನ ರಾಜಕೀಯ ಭವಿಷ್ಯತ್ತನ್ನು ನಾನಾ ತರದ ಮಾರ್ಪಾಟುಗಳನ್ನು ನೋಡುತ್ತಿರುವುದು ಒಳ್ಳೇ ಚಿಹ್ನೆ ಆಗಿದೆ.

ಯಾವ ಮಾರ್ಪಾಡೇ (Reforms) ಆಗಲಿ, ಅದು ಮುಂದಿನ ಜನಾಂಗದ ಕ್ಷೇಮವನ್ನೂ, ಕೊಡಗಿನ ಬೆನ್ನೆಲುಬಾಗಿರುವಂಥಾ ರೈತರ ಸುಖ, ಅಭಿವೃದ್ಧಿ, ಭದ್ರತೆ ಸಂಪತ್ತುಗಳನ್ನು ಕಾಪಾಡುವಂಥಾದ್ದಾಗಿರಬೇಕು. ಕೊಡಗು ಅಮಲ್ಗಮೇಟ್ ಆಗದೆ ಪ್ರತ್ಯೇಕವಾಗಿದ್ದರೆ ಮುಖ್ಯವಾಗಿ ನಾಲ್ಕು ಕೊರತೆಗಳಿವೆಯೆಂದು ಮದ್ರಾಸಿನೊಡನೆ ಸೇರಿಸಬೇಕೆಂಬುವರ ವಾದವಾಗಿದೆ. (1) ವಿಶ್ವ ವಿದ್ಯಾಲಯ; ವಿದ್ಯಾಭ್ಯಾಸದ ಅನಾನುಕೂಲತೆ. (2) ವಿದ್ಯಾವಂತರಾದ ಯುವಕರಿಗೆ ಕೊಡಗಿನಲ್ಲಿ ತಕ್ಕಷ್ಟು ಉದ್ಯೋಗವು ಇಲ್ಲದಿರುವುದು. (3) ಕೊಡಗಿನ ಉತ್ಪತ್ತಿಯನ್ನು ಖರ್ಚಿಗೆ ತಕ್ಕ ಹೆಚ್ಚಿಸಿಕೊಳ್ಳಲು ಸಾಧ್ಯವಿಲ್ಲದಿರುವುದು. (4) ಟೆಕ್ನಿಕಲ್ ಇಲಾಖೆಗಳಲ್ಲಿ ಎಕ್ಸ್‌ಪರ್ಟ್‌ಗಳ ಸಹಾಯವಿಲ್ಲದಿರುವುದು.

ಒಂದನೇದು---ವರ್ಷಕ್ಕೆ ಹತ್ತಿಪ್ಪತ್ತು ವಿದ್ಯಾರ್ಥಿಯರು ಪ್ರೊಫೆಷನಲ್ ಪರೀಕ್ಷೆಯಲ್ಲಿ ಪಾಸಾಗುವ ಕೊಡಗಿನಲ್ಲಿ ಮದ್ರಾಸು ಪ್ರಾಂತ್ಯದೊಡನೆ ಸೇರಿದಾಕ್ಷಣ, ಸಾವಿರಾರು ರೂಪಾಯಿ ಖರ್ಚು ಮಾಡಿ ಸುಮ್ಮನೆ ಧರ್ಮಕ್ಕೆ ಮದ್ರಾಸು ಸರ್ಕಾರವು ಒಂದು ಕಾಲೇಜನ್ನು ಏರ್ಪಡಿಸುವುದೇ? ಎಂದೂ ಇಲ್ಲ. ನೆರೆ ಪ್ರಾಂತ್ಯಗಳಿಂದ ವಿದ್ಯಾರ್ಥಿಗಳು ಕೊಡಗು ಕಾಲೇಜಿನಲ್ಲಿ ಉಚ್ಚ ವಿದ್ಯೆಯನ್ನು ಪಡೆಯಲು ಬರುವ ಸಂಭವವೂ ಕಮ್ಮಿ. ಇಂಡಿಯಾ ದೇಶಕ್ಕೆ ಮಧ್ಯವರ್ತಿ ಸರ್ಕಾರ (Federal Government) ಬೇಗನೇ ಸಿಕ್ಕಲಿಕ್ಕೆ ಇದೆ. ಬೇರೆ ಪ್ರಾಂತ್ಯಗಳಲ್ಲಿ ನಮ್ಮ ಯುವಕರು ಪ್ರೌಢ ವಿದ್ಯಾಭ್ಯಾಸವನ್ನು ಪಡೆಯಲು ತಕ್ಕ ಏರ್ಪಾಡುಗಳನ್ನು ಮಧ್ಯವರ್ತಿ ಸರ್ಕಾರದ ಮೂಲಕ ಮಾಡಿಕೊಳ್ಳಬಹುದು. ಕೊಡಗು ದೇಶವೇ ಬಡತನದಲ್ಲಿ ಮುಳುಗಿರುವಾಗ ಪ್ರೌಢ ವಿದ್ಯಾಭ್ಯಾಸವನ್ನು ಪಡೆಯಲು ಹೋಗುವ ಕೈಬೆರಳಿನಲ್ಲಿ ಎಣಿಸಬಹುದಾದ ಸಂಖ್ಯೆಗಾಗಿ, ಕೊಡಗನ್ನು ಮದ್ರಾಸಿಗೆ ಸೇರಿಸಬೇಕೆನ್ನುವ ವಾದವು ಸಕಾರಣವಾಗಿ ತೋರುವುದಿಲ್ಲ.

ಎರಡನೇದು—ಈ ಸಮಯದಲ್ಲಿ ಸಹ ಕೊಡಗಿನ ಅನೇಕ ಉದ್ಯೋಗಗಳು ಪರದೇಶೀಯರ ಕೈಯಲ್ಲಿವೆ. ಬೇರೆ ಪ್ರಾಂತ್ಯಗಳೊಡನೆ ಸೇರಿಸಿದರೆ ನಮ್ಮ ಯುವಕರಿಗೆ ಈಗ ಸಿಕ್ಕುತ್ತಿರುವ ಉದ್ಯೋಗಗಳು ಸಹ ಸಿಕ್ಕದೆ ಹೋದೀತು. ನೆರೆ ಪ್ರಾಂತ್ಯಗಳ ಕೆಲವು ಕಡೆಗಳಲ್ಲಿ ಮೂರು ಕಾಸಿನ ಒಂದು ನಾಣ್ಯವನ್ನು ಮೇಲಕ್ಕೆಸೆದರೆ ಹತ್ತಿಪ್ಪತ್ತು ಗ್ರಾಜ್ಯುಯೇಟುಗಳ ತಲೆಯ ಮೇಲೆ ಬಿದ್ದು ನಂತರ ನೆಲಕ್ಕೆ ಬೀಳುವುದು. ಅಮಲ್ಗಮೇಶನ್ ಆದ ಕೂಡಲೇ ಅಂಥಾ ಕಡೆಗಳಿಂದ ಡಜ್ಜನ್ ಗ್ರಾಜ್ಯುಯೇಟುಗಳು ಸಹ ಬಂದು ನಮ್ಮ ಯುವಕರ ಸ್ಥಳವನ್ನು ಅಪಹರಿಸುವುದರಲ್ಲಿ ಸಂಶಯವಿಲ್ಲ.

ಮೂರನೇದು—ಉತ್ಪತ್ತಿಗೆ ತಕ್ಕ ಖರ್ಚನ್ನು ಸರಿದೂಗಿಸಿಕೊಳ್ಳುವುದು ಪ್ರತಿಯೊಂದು ಸರ್ಕಾರದ ಕರ್ತವ್ಯವಾಗಿದೆ. ಕೊಡಗಿನ ಆರ್ಥಿಕ ಸ್ಥಿತಿಯನ್ನೂ, ಆದಾಯವನ್ನೂ ಹೆಚ್ಚಿಸಲು ನಾನಾ ವಿಧಗಳಿವೆ. ಇದನ್ನು ವೃದ್ಧಿಪಡಿಸುವುದು ದೇಶಸ್ಥರ ಮತ್ತು ಪ್ರಾಂತೀಕ ಸರ್ಕಾರದ ಕರ್ತವ್ಯ. ಕೊಡಗು ಕೊಡಗಿನವರ ಆಡಳಿತದಲ್ಲಿಯೇ ಇದ್ದ ಪಕ್ಷ ಸ್ವಜನಾಭಿಮಾನ, ಸ್ವದೇಶಾಭಿಮಾನದಿಂದ ತುಂಬಿ ತುಳುಕುತ್ತಿರುವ, ಹೆಚ್ಚು ಸಂಬಳವನ್ನು ಪಡೆಯುವ ಉದ್ಯೋಗಸ್ಥರು ತಮ್ಮ ದೇಶದ ಹಿತಕ್ಕೋಸ್ಕರ ತಮ್ಮ ಸಂಬಳವನ್ನು ತಾವಾಗಿಯೇ ಕಮ್ಮಿ ಮಾಡುವುದರಲ್ಲಿ ಸಂಶಯವಿಲ್ಲ.

ನಾಲ್ಕನೇದು—ಕೃಷಿ, ಮಲೇರಿಯಾ, ಮೊದಲಾದ ಇಲಾಖೆಗಳಲ್ಲಿ ಮೈಸೂರು, ಮದರಾಸು, ಸರ್ಕಾರದ ಎಕ್ಸ್‌ಪರ್ಟ್‌ಗಳ ಸಹಾಯವನ್ನು ಈಗ ಪಡೆಯುವಂತೆಯೇ ಪ್ರತ್ಯೇಕವಾಗಿದ್ದಾಗ್ಯೂ ಪಡೆಯಬಹುದು. ಅಮಲ್ಗಮೇಶನಿನಿಂದ ಪಡೆಯುವ ಒಂದೆರಡು ಲಾಭಗಳಿಗಾಗಿ ಕೊಡಗಿನವರ ಹೆಚ್ಚು ಲಾಭಗಳನ್ನು ಕಳಕೊಳ್ಳುವುದು ಉಚಿತವೇ?

ಕೆಲವರು ತಮ್ಮ ವ್ಯಕ್ತಿತ್ವವನ್ನೂ (Individuality) ಹಕ್ಕುಬಾಧ್ಯತೆಗಳನ್ನೂ (Privileges) ಉಳಿಸಿಕೊಳ್ಳಲು ಕೆಲವು ಶರತುಗಳನ್ನು ಹಾಕಿ, ಮದ್ರಾಸು ಪ್ರಾಂತ್ಯದೊಂದಿಗೆ ಸೇರಿಕೊಳ್ಳುವುದು ಉತ್ತಮವೆಂದು ಹೇಳುವರು. (Amalgamation with reservation). ಇದು ದೇಶದ ಅಭಿವೃದ್ಧಿಗೆ ಒಳ್ಳೆಯದೇನೋ ನಿಜ. ಆದರೆ ಒಬ್ಬ ಮಹನೀಯರು ಬರೆದಂತೆ ಬೇರೆ ಪ್ರಾಂತ್ಯವು "ಕರೆಯುವ ಎಮ್ಮೆಯನ್ನು ಕೊಟ್ಟು ಕೋಣನನ್ನು ಕೊಂಡುಕೊಳ್ಳಲು" ಒಪ್ಪುವದೇ? ಎಂದೂ ಇಲ್ಲ. ಆದುದರಿಂದ ಹಿಂದೂಸ್ಥಾನಕ್ಕೆ ಬೇಗನೆ ಸಿಕ್ಕಲಿಕ್ಕಿರುವ ರಾಜಕೀಯ ಸುಧಾರಣೆಯಲ್ಲಿ, ಒಂದು ಶ್ರೇಷ್ಠ ಪ್ರಜಾ ಜವಾಬ್ದಾರಿ ಸರ್ಕಾರ ದೊರಕಿದ್ದರೂ ತಮ್ಮ ದೇಶವಾಸಿಗಳ ಸುಖ ಸಂಪತ್ತುಗಳನ್ನು ಹೆಚ್ಚಿಸುವ ಮಾರ್ಪಾಟುಗಳನ್ನು ಕೇಳಬೇಕಾಗಿದೆ.

ಈ ಚಳವಳದ ಮಧ್ಯೆ ಮೈಸೂರು ಸಂಸ್ಥಾನದಲ್ಲಿರುವ ಕೊಡಗರು, ಕೊಡಗನ್ನು ಮೈಸೂರಿಗೇ ಸೇರಿಸಬೇಕೆಂತಲೂ, ಮದ್ರಾಸು ಪ್ರಾಂತ್ಯದಲ್ಲಿರುವ ಒಬ್ಬಿಬ್ಬರು ಮದ್ರಾಸಿಗೇ ಸೇರಿಸಬೇಕೆಂತಲೂ, ಕರ್ನಾಟಕ ಪ್ರಾಂತ್ಯದಲ್ಲಿರುವವರೊಬ್ಬರು ಕೊಡಗನ್ನು ಕರ್ನಾಟಕ ಪ್ರಾಂತ್ಯಕ್ಕೆ ಸೇರಿಸಬೇಕೆಂತಲೂ ಹೇಳುವುದು ಆಶ್ಚರ್ಯವಾಗಿದೆ. ಇದರಿಂದ ಇವರು ಸ್ವಾರ್ಥಪರರೋ, ಅಥವಾ ಕೊಡಗಿನ ರಾಜಕೀಯ ಆಡಳಿತದ ಸ್ಥಿತಿಯನ್ನೂ, ತಾವು ಇರುವ ಪ್ರಾಂತ್ಯಗಳ ಪ್ರತಿ ಮೂಲೆಯ ಆಡಳಿತದ ಸ್ಥಿತಿಯನ್ನೂ ಹೋಲಿಸಿ ನೋಡಲಿಲ್ಲವೋ ಎಂಬುದು ಸಂಶಯವಾಗುತ್ತದೆ. ಅಮಲ್ಗಮೇಶನ್ ಬೇಕೆಂದೆನ್ನುವವರು 'ದೂರದ ಬೆಟ್ಟ ನುಣ್ಣಗೆ' ಎಂದು ಭಾವಿಸಬಹುದು. ಆದರೆ ಹೊಳೆಯುವ ಪದಾರ್ಥಗಳೆಲ್ಲಾ ಚಿನ್ನವಲ್ಲ (All that glitters is not gold) ಎಂಬುದನ್ನು ಇವರು ಅರಿತುಕೊಳ್ಳಬೇಕಾಗಿದೆ.

ಕೊಡಗು ಮದ್ರಾಸಿನೊಡನೆ ಸೇರಿದರೆ ಕೊಡಗಿನ ಪ್ರಕೃತಿಗನುಸಾರವಾಗಿ ನಮ್ಮ ಪ್ರಾಂತ್ಯವನ್ನು ಮದ್ರಾಸಿನ ಏಜೆನ್ಸಿ ಟ್ರೇಕ್ಟ್ಸ್ (Agency tracts) ಗಳಂತೆ ಎಣಿಸಲ್ಪಡಬಹುದು. ಈ ಏಜೆನ್ಸಿ ಟ್ರೇಕ್ಟ್ಸಿನ ಜನರು ನಮ್ಮ ದೇಶದ ನಾಗರೀಕತೆಯ ಸರಿಸಮಾನಕ್ಕೆ ಬರಲು ಇನ್ನೂ ಎಷ್ಟೊ ವರ್ಷಗಳಾಗಬೇಕು. ಅಂದ ಮೇಲೆ ನಾವು ಮಾರ್ಪಾಟುಗಳನ್ನು ಪಡೆದು ಹಿಂದಕ್ಕೆ ಹೆಜ್ಜೆ ಹಾಕಲು ಪ್ರಯತ್ನಿಸುವುದೇ? ನೆರೆ ಪ್ರಾಂತ್ಯಗಳಲ್ಲಿನ ಹಳ್ಳಿಗಳ ಜನರಿಗಿಂತಲೂ ನಮ್ಮ ಹಳ್ಳಿಯ ಸಹೋದರರು ಹೆಚ್ಚು ಸೌಖ್ಯವನ್ನು ಅನುಭವಿಸುತ್ತಿದ್ದಾರೆ. ನಮ್ಮ ಸರ್ಕಾರದಲ್ಲಿ ನಮ್ಮ ದೇಶದವರೇ ಇದ್ದರೆ ಅವರಿಗೆ ಚಿಕ್ಕಂದಿನಿಂದಲೂ ಪಡೆದ ಅನುಭವದಿಂದ ತಮ್ಮ ಹಳ್ಳಿಗಳ ಕುಂದು ಕೊರತೆಗಳನ್ನು ಹೋಗಲಾಡಿಸಲು ಹೆಚ್ಚು ಶ್ರಮವನ್ನು ತೆಗೆದುಕೊಳ್ಳುತ್ತಾರೆ. ನೆರೆ ಪ್ರಾಂತ್ಯಗಳ ಪಟ್ಟಣಗಳೇನೋ ಸುಂದರವಾದ ಕಟ್ಟಡಗಳಿಂದಲೂ, ವಿದ್ಯುಚ್ಛಕ್ತಿ ದೀಪಗಳಿಂದಲೂ, ಶ್ರೀಮಂತರುಗಳಿಂದಲೂ ಶೋಭಿಸುತ್ತಿರಬಹುದು. ಆದರೆ ಅಲ್ಲಿನ ಹಳ್ಳಿಗಳ ಸ್ಥಿತಿಯನ್ನು ನಾವು ಪರ್ಯಾಲೋಚಿಸಬೇಕಾಗಿದೆ. ಕೊಡಗು, ಜ್ವರಗಡ್ಡೆಯಿಂದ ಪೀಡಿತನಾಗಿ ತನ್ನ ಕಾಲಿನಲ್ಲಿಯೇ ತನಗೆ ನಿಲ್ಲಲಿಕ್ಕಾಗುವುದಿಲ್ಲವೆಂದು ತಿಳಿದು, ಬೇರೆ ಪ್ರಾಂತ್ಯಗಳಿಗೆ ಅದನ್ನು ಎಳೆಯುವುದರ ಬದಲಾಗಿ ತಕ್ಕ ಔಷಧಿಯನ್ನು ಕೊಟ್ಟು ತನ್ನ ಕಾಲಿನಲ್ಲಿಯೇ ನಿಲ್ಲುವಂತೆ ಮಾಡುವುದು ಉತ್ತಮವಲ್ಲವೇ?

ಮ. ಉ. ಕಾಳಪ್ಪ.

---

೪೦ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕಿಕಂಪನಿಯವರ

ಜ್ವರದ ಗುಳಿಗೆಗಳು.

ಚಳಿಜ್ವರ, ಚಾತುರ್ಥ ಜ್ವರ, ದಿನಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮ ಬಾಣದಂತೆ ಇವೆ. ಬಾಟ್ಲಿಗೆ ರೂ. ೧. ಟ. ಖ. ೭ ಆಣೆ. ಜರೂರು ತರಿಸಿಕೊಳ್ಳಿ.

(52—6) ಗಣೇಶ ರಾಮಚಂದ್ರ ಕರ್ಕಿ,
ಮತ್ತು ಕಂಪನಿ,
ಗಿರಗಾಂವ, ಮುಂಬಯಿ,

ಇಂಡಿಯಾ ಎಕ್ವಿಟೇಬಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

(ಸ್ಥಾಪಿಸಲ್ಪಟ್ಟದ್ದು 1908.)

ಪೋಲಿಸಿಗಳು ಕಳಕೊಳ್ಳುವಂಥವುಗಳಲ್ಲ.

ಯಾವ ತಡೆಯೂ ಇಲ್ಲದೆ ಪ್ರತಿ ವರ್ಷವೂ ಬೋನಸ್ಸು.

ಹಕ್ಕು ಬಾಧ್ಯಸ್ಥರಿಗೆ ಸರಿಯಾಗಿ ಹಣ ಕೊಡಲ್ಪಡುವದು, ಇಲ್ಲದಿದ್ದರೆ ಬಡ್ಡಿಯು ದೊರೆಕುವುದು.

ಹೆಡ್ ಆಫೀಸು:—

102· ಕ್ಲೈವ್ ಸ್ಟ್ರೀಟ್, ಕಲ್ಕತ್ತಾ.

I. E., C. P. S. 12—1

ದಿವಂಗತ ಪಾಂಡಂಡ ಮುತ್ತಣ್ಣ

ದೇಶ ಸೇವೆಯೇ ಈಶನ ಸೇವೆಯೆಂದು।
ಕಾಸ ದೇಶವೇ ತನ್ನ ಕೈಲಾಸವೆಂದು।
ಕಾಸ ಜನಸೇವೆ ಲೇಸು ಕೋಶವೆಂದು।
ಲೇಸಾಗಿ ಸಾರಿ ನಡೆದ ಮುತ್ತಣ್ಣನೆಂದು ॥ ೧ ॥

ಮೂರುನಾಡಿನೊಳು ತನ್ನ ಜನ್ಮವನು ಎತ್ತಿ।
ಮೂರು ಲೋಕದ ವಾರ್ತೆ ಈ ಲೋಕದೊಳು ಬಿತ್ತಿ
ಮೂರು ದಿನದ ಸಂಸಾರವೇನೆಂಬುದು ಎತ್ತಿ।
ಸಾರುತ್ತ ನಂದವನು ಸ್ವರ್ಗವನು ಹತ್ತಿ ॥ ೨ ॥

ಮುತ್ತಣ್ಣನೆಂಬ ಮುತ್ತು ನಾಮವನು ಇತ್ತ।
ಹೆತ್ತವರು ಎತ್ತಿ ಕೊರಗಿದ ಉತ್ತಮ ಚಿತ್ತ।
ಇತ್ತನೋ ಜಗದೀಶ ಮುತ್ತಣ್ಣಗೆತ್ತಿ।
ಕಿತ್ತೊಗೆಯುತ ಉತ್ತಮವಲ್ಲದನ್ನೆಲ್ಲೆತ್ತಿ ॥ ೩ ॥

ಮುತ್ತಣ್ಣ ನೀನಿದ್ದೆಯನ್ನ ಸಹಪಾಠಿ।
ಮುತ್ತಂತೆ ಕಳೆದೆವಲ್ಲನೋ ನಮ್ಮ ಭೇಟಿ।
ಬಿಟ್ಟು ಹೋದೆಯೊಯೆನ್ನ ಮುತ್ತು ಸಹಪಾಠಿ।
ಉತ್ತಮದಿ ಬಾಳಣ್ಣ ಸತ್ಯನೊಳುನಾಟಿ ॥ ೪ ॥

ಮರೆಯರು ನಿನ್ನವರು ನಿನ್ನ ಕೈಹಿಡಿ ಯೆಂದು।
ಉರಿವುದು ನಿನ್ನರಿವು ಅರಿವರೊಳು ಒಂದು।
ಹಿರಿಯರೊಳು ನೀ ಹಿರಿಯುರಿತೆ ದೇಶದೊಳು ಎಂದು
ಅರುಹಿಸ ಕುರುಹನ್ನು ಅರಿತು ನಗಿದ ಬಂಧು ॥ ೫ ॥

ಅ. ಬೋ.

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ವಿರಾಜಪೇಟೆ ಡಿಬೇಟ್.

ಅಯ್ಯಾ ಸಂಪಾದಕರೇ,

ನಾನು ವಿರಾಜಪೇಟೆ ಡಿಬೇಟಿನಲ್ಲಿ ಇಂಗ್ಲಿಷಿನಲ್ಲಿ ಭಾಷಣ ಮಾಡಿದೆನು. ಆದರೆ 'ಹಾಜರಿದ್ದವ' ರೊಬ್ಬರು ಕನ್ನಡದಲ್ಲಿ ನನ್ನ ಭಾಷಣದ ಸಾರಾಂಶವನ್ನು ಕಳೆದ 31ನೇ ತಾ. 'ಜನ್ಮ ಭೂಮಿ' ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. ಇದರಲ್ಲಿ ನಾನು ಹೊರಪಡಿಸಿದ ಅಭಿಪ್ರಾಯಗಳೆಲ್ಲವು ಸರಿಯಾಗಿ ಪ್ರಕಟಿಸಲ್ಪಟ್ಟಿರುವುದಿಲ್ಲ. ಅಲ್ಲದೆ ಅರ್ಥ ವ್ಯತ್ಯಾಸವಾಗುವಂತೆಯೂ, ತಪ್ಪಭಿಪ್ರಾಯಕ್ಕೆ ಆಸ್ಪದವಾಗುವಂತೆಯೂ ಪ್ರಕಟಿಸಿದ್ದಾರೆ. ಇವುಗಳಲ್ಲಿ ಮುಖ್ಯವಾದ ಒಂದು ವಿಷಯವನ್ನು ಮಾತ್ರ ನಿಮ್ಮ ಅವಗಾಹನೆಗೆ ತರುತ್ತೇನೆ. ಇದು ಕಂದಾಯದ ವಿಷಯ. ಕಂದಾಯದ ಸರಾಸರಿಯನ್ನು ನೆರೆ ಪ್ರಾಂತ್ಯಗಳ ಕಂದಾಯದೊಡನೆ ಹೋಲಿಸಿದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಕ್ರೆಗೆ 4—12—2 ಪೈ, ಮಲಬಾರಿನಲ್ಲಿ ಎಕ್ರೆಗೆ 3—1—6 ಪೈ ಮತ್ತು ಕೊಡಗಿನಲ್ಲಿ ಎಕ್ರೆಗೆ 3—0—3 ಪೈಯಂತೆಯೂ ಇದೆ" ....ಎಂದು ಮೊದಲಾಗಿ ನಾನು ಹೇಳಿದೆನು. ಈ ರೀತಿ ಆ ಪತ್ರಿಕೆಯಲ್ಲಿ 'ಹಾಜರಿದ್ದವ'ರು ಬರೆದು ಪ್ರಕಟ ಮಾಡದೆ, ಕೇವಲ ವಾದವಿರುದ್ಧವಾಗಿ ಪ್ರಕಟಿಸಿರುವುದು ವಿಷಾದಕರವೇ ಸರಿ.

ಇಷ್ಟೇ ಅಲ್ಲ, ನನ್ನ ಬಾಯಿಂದ ಹೊರಡದ ಕೆಲವು ಅಭಿಪ್ರಾಯಗಳನ್ನು ಅವರು ಬರೆದು ಪ್ರಕಟಿಸಿದ್ದಾರೆ. ಆದುದರಿಂದ ದಯವಿಟ್ಟು ಮೇಲ್ಕಂಡ ವಿಷಯವನ್ನು ನಿಮ್ಮ ಮುಂದಿನ ಪತ್ರಿಕೆಯಲ್ಲಿ ಪ್ರಕಟಿಸಿ ತಪ್ಪಭಿಪ್ರಾಯಕ್ಕೆ ಆಸ್ಪದವಾಗದಂತೆ ಮಾಡಬೇಕಾಗಿ ನನ್ನ ಅತಿ ವಿನಯದ ಕೋರಿಕೆ.

ಮಾಚಿಮಂಡ ನಂಜುಂಡ.

ಗೋಣಿಕೊಪ್ಪಲು ರಾಮಭಕ್ತ ಮಂಡಳಿ.

ಗೋಣಿಕೊಪ್ಪಲು ರಾಮಭಕ್ತ ಮಂಡಳಿಯು 1931ನೇ ಇಸವಿಯಲ್ಲಿ ತೆರೆಯಲ್ಪಟ್ಟಿತು. ಅಂದಿನಿಂದ ಇಲ್ಲಿ ಪ್ರತಿ ಶನಿವಾರವೂ ಭಕ್ತರು ಬಂದು ರಾಮ ಭಜನೆಯನ್ನು ಮಾಡುತ್ತಾ ಇರುವರು;

ಇತ್ತೀಚೆಗೆ ಜನರಿಗೆ ಇದರಲ್ಲಿ ಉತ್ಸಾಹವು ಹೆಚ್ಚುತ್ತಾ ಬರುತ್ತಿದೆ. ಈ ಭಜನೆಯು ಸಂಗೀತಾರ್ಥವಾಗಿ ಮಿಸೆಸ್ ಕೊರವಂಡ ಯಸ್. ಮುತ್ತಣ್ಣನವರು ರಾಮಭಕ್ತ ಮಂಡಲಿಗೆ ಒಂದು ಹಾರ್ಮೋನಿಯಮನ್ನು ತಮ್ಮ ಪೂರ್ತಿ ಭಕ್ತಿಯಿಂದ ಇನಾಮು ಆಗಿ ಅರ್ಪಿಸಿರುವರು. ಇವರಿಗೆ ನಮ್ಮ ತುಂಬಾ ವಂದನೆಗಳು. ಮತ್ತು ಶ್ರೀಮತಿ ಮುರುವಂಡ ಪೊನ್ನವ್ವನವರು ಇದಕ್ಕೆ ತಮ್ಮ ಮನಃಪೂರ್ವಕವಾಗಿ ತುಂಬಾ ಸಹಾಯವನ್ನು ಅಂದಿನಿಂದಲೂ ಮಾಡುತ್ತಾ ಬಂದಿರುವರು. ಅವರಿಗೂ ಸಹ ನಮ್ಮ ವಂದನೆಗಳು. ಭಕ್ತರಾದ ಗೋಪಾಲದಾಸನು ಇಲ್ಲಿ ಪ್ರತಿವಾರವೂ ಹರಿಕಥೆಯನ್ನು ಮಾಡುತ್ತಾ ಜನರಲ್ಲಿ ಭಕ್ತಿ ಮಾರ್ಗವನ್ನು ನಾಟಿಸುತ್ತಿರುವರು. 'ಇನ್ನು ಸ್ವಲ್ಪ ದಿನಗಳಲ್ಲಿ ಮಿ. ಗಳಾದ ಗೋಪಾಲದಾಸರು, ಜೋ. ಆರ್. ಕೃಷ್ಣಯ್ಯನವರು ಕೊಡಗಿನ ಇತರ ಎಲ್ಲಾ ಸ್ಥಳಗಳಲ್ಲೂ ಇಂಥಾ ಭಕ್ತಿ ಮಾರ್ಗದ ಹರಿ ಕಥೆಯನ್ನು ಮಾಡುತ್ತಾ, ಅಲ್ಲಲ್ಲಿ ರಾಮಭಕ್ತ ಮಂಡಲಿಯನ್ನು ಸ್ಥಾಪನೆ ಮಾಡುವ ಏರ್ಪಾಡು ಮಾಡುತ್ತಾ ಹೋಗುವರು. ಇವರಿಗೆ ಅದಷ್ಟು ಉತ್ತೇಜನವನ್ನು ಕೊಡಬೇಕೆಂದು ದೇಶದ ಭಕ್ತರಲ್ಲಿ ವಿನಂತಿ.

ಈ ರಾಮ ಮಂಡಳಿಯ ಇನ್ನೂ ಕೆಲವು ಮಾರ್ಪಾಡುಗಳಿಗೋಸ್ಕರ ಹಣವು ಸಾಲದ್ದರಿಂದ ಇದೇ ತಾ. 3—9—32 ರಲ್ಲು ಒಂದು ಲಾಟ್ರಿಯು ತೆಗೆಯಲಾಯಿತು. ಈ ಲಾಟ್ರಿಯು ಆಗಸ್ಟು ತಿಂಗಳು 28ನೇ ಸೋಮವಾರ ದಿನ ಏರ್ಪಾಡಾಗಿ 5 ದಿವಸದೊಳಗೆ ಅಂದರೆ 3—9—32ರಲ್ಲು ನೂರು ರೂಪಾಯಿಗಳ ಲಾಟ್ರಿಯು ತೆಗೆಯಲಾಯಿತು. ಮಹನೀಯರೇ! ಇದಲ್ಲವೇ ಶ್ರೀರಾಮನ ಪ್ರಭಾವ!! ಈ ನೂರು ರೂಪಾಯಿಗಳ ಪೈಕಿ ಇಪ್ಪತ್ತೈದು ರೂಪಾಯಿಗಳನ್ನು ಲಾಟ್ರಿಯ ಒಗ್ಗೆ ಇನಾಮಾಗಿ ಕೊಡಲಾಯಿತು. ಬಾಕಿ ಎಪ್ಪತ್ತೈದು ರೂ. ಗಳನ್ನು ಮಂಡಳಿಯ ಸಲುವಾಗಿ ಖರ್ಚಿಗೆ ಇಡಲ್ಪಟ್ಟಿತು. ಈ ಕೆಳಗಿನ ಮಹನೀಯರು ಲಾಟ್ರಿಯ ಇನಾಮನ್ನು ಪಡೆದರು.

1ನೇ ಇನಾಂ—ಮಿ. ಸಂಜೀವನ್ ಪೊನ್ನಂಪೇಟೆ, 10 ರೂ., 2ನೇ ಇನಾಂ—ಮಿ. ರಾಮನಾಯರ್, ಗೋಣಿಕೊಪ್ಪ 5 ರೂ., 3ನೇ ಇನಾಂ—ಮಿ. ಸ್. ಬಿದ್ದಂಡ ಕುಶಾಲಪ್ಪ, ಮಡಿಕೇರಿ, 3 ರೂ., ಮತ್ತು ಮಿ. ಗಳಾದ ಕೆ. ಯಸ್. ಅಪ್ಪಯ್ಯ, ಬಿ ಯಸ್. ಚಿಟ್ಟಿಯಣ್ಣ, ಜಿ. ಯಸ್. ತಮ್ಮಯ್ಯ, ಮಾಪಿಳೆ ಮಮ್ಮು, ಕಾಸೀಂ ಸಾಹೇಬ್, ನಾರಾಯಣ ಸಿಂಗ್, ಕೆ. ಪಿ. ಅಜ್ಜಪ್ಪ, ಇವರಿಗೆ ಒಂದೊಂದು ರೂಪಾಯಿ.

ಯಂ. ಯಂ ನಂಜಪ್ಪ.

ಸುಬ್ರಮಣ್ಯ ರಸ್ತೆ.

ಅಯ್ಯಾ,

ಕೊಡಗು ಡಿಸ್ಟ್ರಿಕ್ಟ್ ಬೋರ್ಡ್ ವೈಸ್ ಪ್ರೆಸಿಡೆಂಟರವರು ಮತ್ತು ಸೋಮವಾರಪೇಟೆ ನಾಡಿನ ಮೆಂಬರರು ತಾರೀಕು 17—11—31ರಲ್ಲು ಸೋಮವಾರಪೇಟೆಯಿಂದ ಬಿಕ್ಕಳ್ಳಿಗೆ ಹೋಗುವ ಡಿ ಬೋರ್ಡ್ ರಸ್ತೆ 7 ಮೈಲು 3ನೇ ಫರ್ಲಾಂಗಿನಿಂದ ಕುಂದಳ್ಳಿ ಗ್ರಾಮಕ್ಕಾಗಿ ಬಿಸಿಲೆಘಾಟಿ ರಸ್ತೆಗೆ ಕೂಡಿಸಿ ಒಂದು ಗಾಡಿ ರಸ್ತೆಯನ್ನು ಮಾಡಿಸಲು ಅಜಮಾಯಿಷಿಗೆ ದಯಮಾಡಿಸಿದ್ದು ನಿಜವಷ್ಟೆ.

ರಸ್ತೆಯನ್ನು ಗಾಡಿ ಹೋಗುವ ಹಾಗೆ ಕೊಡಗು ಸರಹದ್ದು ವರೆಗೆ ಮಾಡಿಸಿದಲ್ಲಿ ಖರ್ಚಿನ ಬಿಲ್ಲು ಪ್ರಕಾರ ಹಣವನ್ನು ಕೊಡುವದಾಗಿ ಮೇಲೆ ಸೂಚಿಸಿದ ಮೆಂಬರುಗಳಿಬ್ಬರು ವಾಗ್ದಾನವಿತ್ತ ಮೇರೆ ಸದರಿ ರಸ್ತೆಯ ಕೆಲಸವನ್ನು ತಾರೀಕು 1—12—31ರಲ್ಲು ಸುರುಮಾಡಿ ತಾ. 8—2—32ಕ್ಕೆ ಪೂರೈಸಿ, ರಸ್ತೆಯ ಎಗ್ರಿಮೆಂಟ್ ನಕಲನ್ನು ಮತ್ತು ಬಿಲ್ಲು ಪಟ್ಟಿಯನ್ನು ಸಹ ತಯಾರಿಸಿ ಅವರುಗಳಿಗೆ ಕಳುಹಿಸಿ ಅರಿಕೆ ಮಾಡಿಕೊಂಡದ್ದಾಯಿತು.

ಆದರೆ ರಸ್ತೆಯ ಕೆಲಸವು ಪೂರೈಸಿ 6—7 ತಿಂಗಳಾದಾಗ್ಯೂ ಈ ವರೆಗೂ ಖರ್ಚಿನ ಮೊಬಲಗು 850 ರೂ. ದೊರೆಯದೆ ಇರುವದಕ್ಕೆ ತುಂಬಾ ವ್ಯಸನಪಡಬೇಕಾಗಿದೆ. ಅವರಿಗೆ ಅನೇಕ ಸಾರಿ ಅರಿಕೆ ಮಾಡಿಕೊಂಡಾಗ್ಯೂ ಬಡವರ ಗೋಳು ಘನ ಚಿಕಿತ್ಸೆ ವೇದ್ಯವಾಗಲಿಲ್ಲ. ಹಣವಿನ ಬಡ್ಡಿಯು ದಿನೇ ದಿನೇ ಹೆಚ್ಚುತ್ತಾ ಹೋಗುತ್ತಾ ನಮಗಳ ಪಿತ್ರಾರ್ಜಿತ ಆಸ್ತಿಯು ಪರಾಧೀನವಾಗುವ ಸಂಭವ ಒದಗಿರುತ್ತದೆ. ಘನ ಮೆಂಬರುಗಳ ವಾಗ್ದಾನವನ್ನು ನಂಬಿ ಬಡ ರೈತರು ಕೆಡುವ ಕಾಲವು ಒದಗಿರುತ್ತದೆ.

ಮೆಂಬರುಗಳವರು ಇಂದಲ್ಲ ನಾಳೆ ಹಣವನ್ನು ಕೊಡಿಸಿಕೊಡುವರೆಂದು ಈ ವರೆಗೂ ನೋಡಿದ್ದಾಯಿತು. ಹಣವು ಮಂಜೂರಾಗಿದೆ ಎಂದು ಕೇಳುವದಲ್ಲದೆ, ನಮ್ಮ ಕೈಗೆ ದೊರೆಯುವ ಕಾಲ ಯಾವುದೆಂಬುದನ್ನು ತಿಳಿಯಲು ಕಷ್ಟವಾಗಿರುತ್ತದೆ.

ಗ್ರಾಮಸ್ಥರ ಪ್ರತಿನಿಧಿಗಳೆಂದರೆ, ರೈತರ ಹಿತವನ್ನೇ ಸಾಧಿಸಲು ತಾವು ಡಿ. ಬೋರ್ಡಿನಲ್ಲಿ ರುವೆವೆಂದೂ ಹೇಳಿಕೊಳ್ಳುವ ಮೆಂಬರುಗಳೇ ಹೀಗೆ ಮಾಡಿದರೆ ಗ್ರಾಮಸ್ಥರ ಪಾಡೇನಾಗಬೇಕೆಂದು ಹೇಳಲಾಗುವುದಿಲ್ಲ. ಇವರು ಗ್ರಾಮಸ್ಥರಿಗೆ ಈ ತರಹದ ತೊಂದರೆಗಳನ್ನು ಕೊಟ್ಟರೆ ಇನ್ನು ಮುಂದೆ ಇವರ ಮೇಲೆ ಜನರಿಗೆ ವಿಶ್ವಾಸವು ಹೇಗೆ ಉಳಿದೀತು? ಮತ್ತು ಇವರು ಜನರ ಪ್ರತಿನಿಧಿಗಳಾಗುವುದು ತಾನೇ ಹೇಗೆ?

ಆದುದರಿಂದ ಈ ಮಹನೀಯರು ಪಡಸೆ ಸದರಿ ಮೊಬಲಗನ್ನು ಬೋರ್ಡಿನಿಂದ ಕೊಡಿಸಿಕೊಟ್ಟು ಪಡುವ ಕಷ್ಟವನ್ನು ಪರಿಹರಿಸುವರಾಗಿ ಕೋರುತ್ತೇನೆ. ಅಲ್ಲದೆ ಈ ವಿಷಯ ಇಷ್ಟು ತಡವಾಗಲು ಕಾರಣವೇನೆಂಬುದನ್ನು ಬೋರ್ಡಿನ ಇತರ ಮೆಂಬರುಗಳೂ, ಅಧ್ಯಕ್ಷರೂ ದಯವಿಟ್ಟು ಸ್ವಲ್ಪ ವಿಚಾರಿಸಿ ನಮಗಳ ತೊಂದರೆಯನ್ನು ನೀಗಲು ಸಹಾಯ ಮಾಡುವರಾಗಿ ಆಶಿಸುವ,

"ಗ್ರಾಮಸ್ಥ"

ಬಡರೈತರ ಸುಲಿಗೆ.

ಸ್ವಾಮಿ,

ತಮ್ಮ ಅಮೋಘವಾದ ಪತ್ರಿಕೆಯಲ್ಲಿ ಈ ಮನನೊಂದವನ ಲೇಖನವನ್ನು ಪ್ರಕಟಿಸಿ, ತನ್ಮೂಲಕ ದೇಶದ ನಾನಾ ಕಡೆಗಳಲ್ಲಿ ಅಂಟು ಜಾಡ್ಯದಂತೆ ಹರಡುವ ದುರ್ವ್ಯಸನಗಳ ಮೂಲಕ ಬಡರೈತರ ವರ್ಗಗಳ ಐಶ್ವರ್ಯವು ಹೇಗೆ ಸೂರೆ ಹೋಗುತ್ತಿ ಎಂಬುದನ್ನು ದೇಶದವರ ಅವಗಾಹನೆಗೆ ತರಬೇಕಾಗಿ ಕೇಳಿಕೊಳ್ಳುತ್ತೇನೆ.

ಗೋಣಿಕೊಪ್ಪಲು ಕೊಡಗಿನಲ್ಲಿ ಒಂದು ಚಿಕ್ಕ ಊರು. ಆದರೆ ಬಲು ಸೊಗಸುಗಾರ ಊರು. ಆ ಊರಿನಲ್ಲಿ ಜನರ ಗದ್ದಲವೇ ಗದ್ದಲ. ಅದರಲ್ಲಿಯೂ ಗ್ರಾಮಫೋನುಗಳ ಗದ್ದಲದಿಂದ ಊರೇ ಕಿವುಡು ಆಗಿ ಹೋಗಿರುತ್ತೆ.

ದೊಡ್ಡ ದೊಡ್ಡ ಕಟ್ಟಡಗಳಲ್ಲಿ ಬೀದಿಯಲ್ಲಿ ತಿರುಗುತ್ತಿರುವವರ ಕಣ್ಮನಗಳನ್ನು ಸೆಳೆಯುತ್ತಿರುವ ಹಲವು ವಿಧದ ವಿದೇಶೀ ಸಾಮಾನುಗಳ ಮಧ್ಯದಲ್ಲಿ ಒಂದೆರಡು ಗ್ರಾಮಫೋನು ಪೆಟ್ಟಿಗೆಗಳನ್ನಿಟ್ಟುಕೊಂಡಿರುವುದೇ ಆ ಶ್ರೇಷ್ಠ ಏಜೆಂಟರುಗಳಿಗೆ ಭೂಷಣ. ಪ್ರತಿನಿತ್ಯವೂ ಅದರಲ್ಲಿಯೂ ಭಾನುವಾರ ದಿವಸಗಳಲ್ಲಿ ಈ ಮಹಾಶಯರುಗಳಿಗೆ ಬೇರೇನೂ ವ್ಯಾಪಾರವಿಲ್ಲದಿದ್ದರೂ ಗ್ರಾಮಫೋನಿನ ಸಂಗೀತ ಕಚೇರಿಯು ಬೀದಿಯಲ್ಲಿ ಹೋಗುತ್ತಿರುವ ಬಡ ಜನರ ಮನಸ್ಸನ್ನು ಸೂರೆಗೊಳ್ಳುವುದರಲ್ಲಿ ಯಾವ ಸಂದೇಹವೂ ಇಲ್ಲ. ನಮ್ಮ ದೇಶದ ಜನರು ಮೊದಲೇ ಅತಿ ಬುದ್ಧಿಶಾಲಿಗಳು. ಅಂದ ಬಳಿಕ ಗ್ರಾಮಫೋನು ಕಚೇರಿಯ ಮುಂದೆ ಬಡ ಕುರಿಗಳೇ ಸರಿ. ಏಜೆಂಟರುಗಳು ಈ ಸುಸಮಯವನ್ನು ಸಾಧಿಸಿ ಹೊರಡಿಸಿದರು ಚೀಟಿಗಳನ್ನು, ಒಂದು ಕಡೆ 10 ರೂಪಾಯಿನದು, ಇನ್ನೊಂದು ಕಡೆ 5 ರೂಪಾಯಿನದು, ಮತ್ತೊಂದು ಕಡೆ 3 ರೂಪಾಯಿನದು. ಆ ತರಾ ಊರಲ್ಲಿ ಚೀಟಿಗಳ ಸುಗ್ಗಿಯೋ ಸುಗ್ಗಿ. ಆದರೆ ಈ ಚೀಟಿಗಳು ಎಷ್ಟು ಭಯಂಕರವುಗಳು, ಇವುಗಳ ಪರಿಣಾಮವು ಕೊನೆಯಲ್ಲಿ ಹೇಗಾಗುವುದೆಂಬುದನ್ನು ಒಬ್ಬರಾದರೂ ಯೋಚಿಸಲಾರರು. ಕೊನೆಯಲ್ಲಿ ಈ ತರಹದ ಚೀಟಿಗಳಿಂದ ನ್ಯಾಯವೇನೆಂಬುದನ್ನು ಪ್ರತಿಯೊಬ್ಬನೂ ಯೋಚಿಸಬೇಕಾಗಿದೆ. ಇದಕ್ಕೆ ಏಜೆಂಟರುಗಳ ಸ್ಥಿತಿಗತಿಯು ಎಷ್ಟು ಅಭದ್ರವಾಗಿದ್ದರೂ ಅವರ ಮಾತುಗಳೇ ವೇದವಾಕ್ಯ. ಅವರ ಪೆಟ್ಟಿಗೆಯೇ ಇಂಪೀರಿಯಲ್ ಬ್ಯಾಂಕು. ಮೊನ್ನೆ ತಾನೇ ಈ ಊರಿನ ಏಜೆಂಟರೊಬ್ಬರು 3 ರೂಪಾಯಿನ ಹೊಸ ತರಹ ಚೀಟಿಯೊಂದನ್ನು ರಾಮಬಾಣದಂತೆ ಹೊರಡಿಸಿರುತ್ತಾರೆ. ಕೇಳಲು ಬಲು ಇಂಪು, ತಿಳಿಯಲು ಬಲು ಪೇಚು. ಏಕೆನ್ನುವಿರಿ? ಆ ಏಜೆಂಟರೊಬ್ಬರು 3 ರೂಪಾಯಿಗೊಂದು ಗ್ರಾಮಫೋನು ಮಿಷನು ಎಂದರು. ನುಗ್ಗಿದರು ಜನರು ನಾಮುಂದೆ ತಾಮುಂದೆಂದು. 3 ರೂಪಾಯಿನ 100 ಜನರು 1 ಚೀಟಿಗೆ ಸೇರುವುದು. 1ನೇ ತಿಂಗಳಲ್ಲಿ ಒಬ್ಬನಿಗೆ 50 ರೂಪಾಯಿನ ಮಿಷನು ಕೊಡುವುದು, ಮಿಕ್ಕ ರೂಪಾಯಿಗಳು ಏಜೆಂಟರ ಬೊಕ್ಕಸವನ್ನು ಸೇರುವುದು. ಇನ್ನೊಂದು ತಿಂಗಳಲ್ಲಿ ಮಿಷನು ಸಿಕ್ಕಿದವನು ವಿನಹ ಮಿಕ್ಕವರು 3 ರೂಪಾಯಿಯಂತೆ ಪುನಹ ಹಣವನ್ನು ಕೊಡುವುದು; ಮತ್ತೆ ಒಬ್ಬನಿಗೆ 1 ಮಿಷನು ಕೊಡುವುದು. ಈ ರೀತಿ 30 ತಿಂಗಳ ವರೆಗೂ ಹಣ ಜಮಾಯಿಸುವುದು. ಒಬ್ಬೊಬ್ಬನಿಗೆ ಒಂದೊಂದು ಮಿಷನು ಕೊಡುವುದು. 30ನೇ ತಿಂಗಳಲ್ಲಿ ಬಾಕಿಯುಳ್ಳವರಿಗೂ ಒಂದೊಂದು ಮಿಷನು ಕೊಡುವುದು. ಆದರೆ 30 ತಿಂಗಳಲ್ಲಿ ಏಜೆಂಟರಲ್ಲಿ ಜಮ ಎಷ್ಟು? 6200 ರೂಪಾಯಿಗಳು; ಇದಕ್ಕೆ ಭದ್ರತೆಯೇನು? ಏಜೆಂಟರ ಇಂದ್ರಜಾಲದ ನಟನೆ ಮತ್ತು ಅಂಗಡಿಯ ವಿದೇಶಿಯ ವಸ್ತುಗಳ ಸೊಬಗು. ಕೊನೆಗೆ ಚೀಟಿಯವರಿಗೆ ಏನು? ಏಜೆಂಟರ ಸಂಗಡ ಯುದ್ಧ; ನಂತರ ಮುಖ ತಿರುಗಿಸಿಕೊಂಡು ಹೊರಡುವುದು ತಂತಮ್ಮ ಮನೆಗಳಿಗೆ.

ಆದುದರಿಂದ ಘನ ಸರ್ಕಾರದವರು ಈ ತರಹದ ಅಭದ್ರತೆಯ ಚೀಟಿಗಳ ದೆಸೆಯಿಂದ ಸೂರೆಯಾಗುತ್ತಿರುವ ಬಡ ರೈತರಲ್ಲಿ ಕನಿಕರವಿಟ್ಟು ಅಂಥಾ ಚೀಟಿಗಳಿಗೆ ಅವಕಾಶಕೊಡದಂತೆ ಮಾಡಬೇಕೆಂಬುದೇ ನನ್ನ ವಿನಯದ ವಿಜ್ಞಾಪನೆ.

'ಮನನೊಂದವ.'

ನಾಪೋಕ್ಲು ಕೈಲ್ ಪೊಳುದು.

ವಾಚಕರೇ,

ಇತ್ತ ಲಾಲಿಸಿರಿ! ಹೊಸ ಆಚಾರ, ಹೊಸ ನಡತೆ. ನಾಪೋಕ್ಲು ನಾಡಿನವರಿಗೆ ಕೈಲ್ ಪೊಳುದು ಹಬ್ಬದಲ್ಲಿ ಆಯುಧ ಪೂಜೆ ಇಲ್ಲವಂತೆ. ಮಂದು ಮಾನಿಗೆ ಸೇರುವುದೂ ಇಲ್ಲವಂತೆ. ಅಂದ ಬಳಿಕ ತೆಂಗಿನ ಕಾಯಿಗೆ ಗುರಿ ಹೊಡೆಯುವುದು, ಮಂದಿನಲ್ಲಿ ಸೇರಿ ಆಟ ವಿನೋದಗಳು ಇಲ್ಲವೆಂದಾಯಿತು. ಕೈಲ್ ಪೊಳುದು ಹಬ್ಬವೆಂದರೆ ಹಬ್ಬದ ದಿನ ಅವರವರ ಮನೆಯಲ್ಲೇ ಅವರವರೇ ಹಬ್ಬವನ್ನು ಆಚರಿಸುವರಂತೆ. ಇವರಿಗೆ ಕೈಲ್ ಪೊಳುದೆಂದರೆ ತಮ್ಮ ತಮ್ಮ ಮನೆಯಲ್ಲಿ ಊಟ ತಿಂದು ಸ್ವಸ್ಥವಾಗಿ ಕೂತಿರುವುದೆಂದು ಅರ್ಥ. ಹೀಗಿರುವಲ್ಲಿ ಹಬ್ಬದ ವಿಜೃಂಭಣೆಯೆಲ್ಲಿ?

ಆದರೆ ಈಗ ಕಳೆದ ವರ್ಷ ದಿಂದ ಈ ನಾಪೋಕ್ಲು ಟೌನಿನ ಕೆಲವು ಉದ್ಯೋಗಸ್ಥರು ನೇರ ಹಬ್ಬವನ್ನು ಗುಂಡಿನ ಶಬ್ದದಿಂದಲೂ, ಆಟ ಓಟಗಳ ಸ್ಪರ್ಧೆಯಿಂದಲೂ ಈ ಟೌನಿನ ಸುತ್ತಮುತ್ತಲಿರುವ ಮಹನೀಯರನ್ನು ಎಚ್ಚರಗೊಳಿಸಿರುವರು. ಹೀಗೆ ಎಚ್ಚರಗೊಂಡ ಕೆಲವು ಮಹನೀಯರು ಉದ್ಯೋಗಸ್ಥರಿಗೆ ಬೆಂಬಲವಾಗಿ ನಿಂತು ಈ ವರ್ಷ ಹಬ್ಬವನ್ನು ಅತಿ ವಿಜೃಂಭಣೆಯಿಂದ ನಡೆಸೋಣವೆಂಬುದಾಗಿ ತೀರ್ಮಾನಿಸಿಯಾಯಿತು. ಹಬ್ಬದ ದಿನ 4 ಗಂಟೆಗೆ ನಾಪೋಕ್ಲು ಸ್ಕೂಲಿನ ಬಳಿ ಸೇರುವಂತೆ ಗೊತ್ತಾಯಿತು.. ಅಂತೆಯೇ ಎಲ್ಲರೂ ತಂತಮ್ಮ ಕೋವಿಗಳೊಡನೆ ಬಂದು ನೆರೆದರು. ತೆಂಗಿನ ಕಾಯಿಗೆ ಗುರಿಯಿಟ್ಟು ಹೊಡೆಯುವ ಗುಂಡುಗಳು ಹಾರಿದವು. ಸುತ್ತಮುತ್ತಲಿನ ಜನರು ಎಚ್ಚರಗೊಂಡರು. ಅವರು ಸಹ ಭಾಗಿಗಳಾದರು. ತೆಂಗಿನ ಕಾಯಿಗೆ ಎಸೆಯುವುದೇ ಮೊದಲಾದ ಒಂದೆರಡು ಆಟ ಓಟಗಳ ಸ್ಪರ್ಧೆಯು ಮುಗಿಯಿತು. ಈ ನಾಡಿನ ಪಾರುಪತ್ಯಗಾರರ ಅಧ್ಯಕ್ಷತೆಯಲ್ಲಿ ಇನಾಮುಗಳು ಹಂಚಲ್ಪಟ್ಟವು. ತರುವಾಯ ಎಲ್ಲರೂ ಬೋರ್ಡಿಂಗಿನಲ್ಲಿ ನೆರೆದರು. 1 ಗಂಟೆಯ ಕಾಲವನ್ನು ಇಸ್ಪೇಟು ಆಡುವುದು, ಸಂಗೀತ ಹಾಡುವುದು ಇವುಗಳಲ್ಲಿ ಕಳೆದರು.

ಕೊಡಗಿನಲ್ಲಿ ಸತ್ಯಾಗ್ರಹ.

ಗಡಂಗ ಪಿಕೆಟಿಂಗಿಗಾಗಿ ದಸ್ತಗಿರಿ.

ಗಡಂಗದಲ್ಲಿ ಸಾರಾಯಿ ಖರ್ಚು ಕಡಿಮೆ.

ಸೇಂದಿ ಸಾರಾಯಿ ಅಂಗಡಿ ಮತ್ತು ಗಡಂಗಗಳನ್ನು ಪಿಕೆಟ್ ಮಾಡಕೂಡದೆಂದು ಸುಭೇದಾರರ ಹುಕುಂ.

ವೀರಾಜಪೇಟೆ ಗಡಂಗದಲ್ಲಿ ಕೈಲ್‌ಪೊಳ್ದು ಹಬ್ಬದ ಸಮಯದಲ್ಲಿ ಈ ವರ್ಷ ಕಳೆದ ವರ್ಷಕ್ಕಿಂತ 81 ಗ್ಯಾಲನ್ ಸಾರಾಯಿ ಕಡಿಮೆ ಖರ್ಚಾಗಿದೆಯೆಂದೂ ಗೋಣಿಕೊಪ್ಪಲು ಗಡಂಗದಲ್ಲಿಯೂ ಖರ್ಚು ಬಹಳ ಕಡಿಮೆಯೆಂದೂ ಸುದ್ದಿ.

ನರಿಯಂಡಡ ಗ್ರಾಮದ ಶ್ರೀಯುತ ಚೆಯ್ಯಂಡ ಗಣಪತಿಯವರು ಈ ತಾ. 2ನೇ ಶುಕ್ರವಾರ ಮಧ್ಯಾಹ್ನ ವೀರಾಜಪೇಟೆ ಸಾರಾಯಿ ಗಡಂಗದ ಮುಂದೆ ನಿಂತು ಹಸ್ತಪತ್ರಿಕೆಗಳನ್ನು ಹಂಚುತ್ತಾ ಪಿಕೆಟ್ ಮಾಡುತ್ತಿದ್ದ ಸಮಯದಲ್ಲಿ ಪೊಲೀಸಿನವರು ಬಂದು ಅವರ ಕೈಯ್ಯಲ್ಲಿದ್ದ ಹಸ್ತಪತ್ರಿಕೆಗಳನ್ನು ಕಿತ್ತುಕೊಂಡು, ಅವರನ್ನು ದಸ್ತಗಿರಿಮಾಡಿ ಪೊಲೀಸು ಲಾಕಪಿಗೆ ಕರೆದೊಯ್ದರು. ಒಂದೆರಡು ತಿಂಗಳುಗಳ ಹಿಂದೆ ಆರು ತಿಂಗಳು ಸಜೆ ಅನುಭವಿಸಿ ಬಂದವರ ಪೈಕಿ ಇವರು ಒಬ್ಬರಾಗಿರುವರು. ಅವರ ವಿಚಾರವು ಈ ತಾ. 5ರಲ್ಲಿ ಸುಬೇದಾರರ ಕೋರ್ಟಿನಲ್ಲಿ ನಡೆದು ಅವರಿಗೆ 4 ತಿಂಗಳು ಕಠಿಣ ಸಜೆಯೂ, 50 ರೂ. ಜುಲುಮಾನೆಯೂ, ಜುಲುಮಾನೆ ಕೊಡದೆ ತಪ್ಪಿದರೆ 1 ತಿಂಗಳು ಹೆಚ್ಚಿನ ಸಜೆಯೂ ವಿಧಿಸಲಾಯಿತು. ಮರುದಿನ ಅವರನ್ನು ಕಣ್ಣಾನ್ನೂರು ಜೈಲಿಗೆ ಸಾಗಿಸಿದರು.

ದಕ್ಷಿಣ ಕೊಡಗಿನಲ್ಲಿ ಪಿಕೆಟಿಂಗ್ ಕೆಲಸವು ಪ್ರಾರಂಭವಾಗುವ ಸಂಭವವಿದೆಯೆಂದೂ, ಹಾಗೆ ಪಿಕೆಟ್ ಮಾಡಿದರೆ ಶಾಂತತಾ ಭಂಗವಾಗುವುದೆಂದೂ ಪೊಲೀಸರ ವರದಿಯಾಗಿದೆಯೆಂಬ ಕಾರಣ ತೋರಿಸಿ, ದಕ್ಷಿಣ ಕೊಡಗಿನ ಸುಬೇದಾರರು ಮತ್ತು ಫಸ್ಟ್ ಕ್ಲಾಸ್ ಮೇಜಿಸ್ಟ್ರೇಟರಾದ ಮೆ. ಕೋಡಿರ ಉತ್ತಪ್ಪನವರು, ಕಳೆದ ಆಗೋಸ್ತು ತಾ. 22ರಿಂದ ಒಂದು ತಿಂಗಳ ವರೆಗೆ ಕೆಳಗೆ ಸೂಚಿಸಿದವರೂ ಮತ್ತು ಜನಸಮುದಾಯದವರ್‍ಯಾರೂ ದಕ್ಷಿಣ ಕೊಡಗಿನ ವೀರಾಜಪೇಟೆ, ಗೋಣಿಕೊಪ್ಪಲು, ಪೊನ್ನಂಪೇಟೆ, ಹುದಿಕೇರಿ, ಶ್ರೀಮಂಗಲ, ತಿತಿಮತಿ, ಅಮ್ಮತ್ತಿ ಮತ್ತು ಸಿದ್ಧಾಪುರಗಳಲ್ಲಿ ಸಾರಾಯಿ ಗಡಂಗಗಳನ್ನು ಮತ್ತು ಸೇಂದಿ ಸಾರಾಯಿ ಅಂಗಡಿಗಳನ್ನು ಪಿಕೆಟ್ ಮಾಡುವುದಾಗಲೀ, ಪಿಕೆಟಿಂಗಿಗೆ ಉತ್ತೇಜನ ಯಾ ಸಹಾನುಭೂತಿ ತೋರಿಸುವ ಕೆಲಸಗಳನ್ನು ಮಾಡುವುದಾಗಲೀ ಕೂಡದೆಂದು ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 144ನೇ ಸೆಕ್ಷನ್ ಮೇರೆ ಹುಕುಂ ಮಾಡಿರುವರು. ಈ ಹುಕುಂ ಜಾರಿಯಾಗತಕ್ಕವರ ಹೆಸರುಗಳು—ಶ್ರೀಮತಿಗಳಾದ (1) ಬಾಚ್ಚೆಟ್ಟಂಡ ಮುದ್ದವ್ವ, (2) ಮುಕ್ಕಾಟಿರ ಬೋಜವ್ವ, (3) ಪಂದ್ಯಂಡ ಸೀತವ್ವ (ಬೆಳ್ಯಪ್ಪನವರ ಪತ್ನಿ); ಶ್ರೀಯುತರುಗಳಾದ (4) ಪಂದ್ಯಂಡ ಬೆಳ್ಯಪ್ಪ, (5) ಅಜ್ಜಿಕುಟ್ಟಿರ ಚಿಣ್ಣಪ್ಪ, (6) ಪುತ್ತಮನೆ ಕಾಳಮಯ್ಯ, (7) ಕೊಳ್ಳಿಮಾಡ ಕರುಂಬಯ್ಯ, (8) ಅಜ್ಜಮಾಡ ಮಾದಪ್ಪ, (9) ಐಮ್ಮುಡ ಮಾಗಪ್ಪ, (10) ಪುಟ್ಟಿಚಂಡ ಪೊಣ್ಣಪ್ಪ, (11) ಮನೆಮಂಡ ತಿಮ್ಮಯ್ಯ, (12) ಕುಪ್ಪಂಡ ಮುದ್ದಪ್ಪ, (13) ಒಕ್ಕಲಿಗರ ತಮ್ಮಯ್ಯ, (14) ಹೆಚ್. ಆರ್. ಕೃಷ್ಣಯ್ಯ, (15) ಬಿ. ಜಿ. ಗಣಪಯ್ಯ, (16) ಕೊಂಕಣಪ್ಪರ ಸುಬ್ರಾಯ, (17) ಬಿಪ್ಪಂಡ ಮಾಚಯ್ಯ, (18) ಸೋಮೆಯಂಡ ಅಚ್ಚಪ್ಪ, (19) ಐಸಂಡ ಕಾರ್ಯಪ್ಪ, (20) ನಾಮೆರ ಬೆಳ್ಯಪ್ಪ, (21) ಅಬ್ದುಲ್ ಗಫೂರ್ ಖಾನ್, (22) ಚೆಪ್ಪುಡಿರ ಪೊಣಚ್ಚ ಮತ್ತು (23) ಮಾಚೆಟ್ಟಿರ ಮುದ್ದಪ್ಪನವರು.

ಒಳದೇಶ.

ಕೊಡಗಿನಲ್ಲಿ ಕಳೆದ ಜುಲೈ ತಿಂಗಳಲ್ಲಿ 341 ಜನನಗಳೂ, 300 ಮರಣಗಳೂ ಸಂಭವಿಸಿದವೆಂದು ಸಿವಿಲ್ ಸರ್ಜನರು ಪ್ರಕಟಿಸಿರುವರು.

ಕೊಡಗು ಕೌನ್ಸಿಲು ಮೀಟಿಂಗು ಈ ದಿನ ಬೆಳಗ್ಗೆ 11 ಗಂಟೆಗೆ ಕೌನ್ಸಿಲು ಹಾಲ್‌ನಲ್ಲಿ ಚೀಫ್ ಕಮಿಷನರವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಗಿದೆ.

ಚೀಫ್ ಕಮಿಷನರವರ ಸೆಕ್ರೆಟರಿಯಾದ ಕ್ಯಾಪ್ಟನ್ ಜೆ. ಕರ್ಕ್‌ಬ್ರಯಿಡ್‌ರವರಿಗೆ ಈ ಸೆಪ್ಟೆಂಬರು 10ರಿಂದ 30ರ ವರೆಗೆ 1 ತಿಂಗಳು ರಜೆ ಕೊಡಲಾಗಿದೆ.

ಕೊಡಗು ಮ್ಯೂಚುವಲ್ ಏಯಿಡ್ ಕಂಪೆನಿಯ ಜನರಲ್ ಮೀಟಿಂಗೊಂದು ಈ ತಾ. 18ರಲ್ಲಿ ಫೆಡರೇಶನ್ ಆಫೀಸಿನಲ್ಲಿ ನಡೆಯುವುದಾಗಿ ತಿಳಿಯಬರುತ್ತದೆ.

ಕೊಡಗಿನ ಶಾಲೆಗಳ ಸಬ್ ಅಸಿಸ್ಟೆಂಟ್ ಇನ್‌ಸ್ಪೆಕ್ಟರ್ ಹುದ್ದೆಯ ಹೆಸರನ್ನು ಚೀಫ್ ಕಮಿಷನರವರು ಡೆಪ್ಯುಟಿ ಇನ್‌ಸ್ಪೆಕ್ಟರೆಂಬದಾಗಿ ಬದಲಾಯಿಸಿರುವರಾಗಿ ತಿಳಿಯಬರುತ್ತದೆ.

1931ನೆಯ ಇಸವಿಯ 1ನೇ ಆಕ್ಟಾದ ಕೊಡಗು ತೂಕಗಳೆ ಮತ್ತು ಅಳತೆಯ ಪಾತ್ರಗಳ ಆಕ್ಟು ಈ ಸೆಪ್ಟೆಂಬರು ತಾರೀಕು 10ರಿಂದ ಕೊಡಗಿನಲ್ಲಿ ಜಾರಿಗೆ ಬಂದಿದೆಯೆಂದು ಪ್ರಕಟವಾಗಿದೆ.

ಚೀಫ್ ಕಮಿಷನರವರು ನಿನ್ನೆ ದಿನ ಬೆಂಗಳೂರಿನಿಂದ ಮಡಿಕೇರಿಗೆ ಬಂದಿರುವರು. ಈ ದಿನ ಕೌನ್ಸಿಲು ಮೀಟಿಂಗನ್ನು ಮುಗಿಸಿಕೊಂಡು ಅವರು ನಾಳೆ ಬೆಂಗಳೂರಿಗೆ ವಾಪಸು ಹೋಗುತ್ತಾರೆಂದು ವರ್ತಮಾನ.

ಕೊಡ್ಲಿಪೇಟೆ ನೋಟಿಫೈಡ್ ಏರ್‍ಯದ ಕಮಿಟಿಯಲ್ಲಿ ಮೆ. ಯಂ. ಗಫೂರ್ ಸಾಹೇಬ್‌ರವರ ಮರಣದಿಂದ ಉಂಟಾದ ಖಾಲಿ ಸ್ಥಳಕ್ಕೆ ಮೆ. ಯಂ. ಬಡನ್ ಸಾಹೇಬ್ ಯಾನೆ ಬಾವಾ ಸಾಹೇಬ್‌ರವರು ನೇಮಿಸಲ್ಪಟ್ಟಿರುವರು.

ಈ ದಿನ ಬೆಳಗ್ಗೆ 10.55 ಗಂಟೆಗೆ ಚೀಫ್ ಕಮಿಷನರವರು ಕೌನ್ಸಿಲು ಹಾಲ್‌ನಲ್ಲಿ 5 ಮಿನಿಟಿನ ಒಂದು ದರ್ಬಾರನ್ನು ನಡಿಸಿ ಭಾಗಮಂಡಲದ ಮೆ. ಶ್ರೀಪತಿರಾಯರಿಗೆ ರಾವು ಸಾಹೇಬ್ ಬಿರುದಿನ ಸನ್ನದು ಮತ್ತು ಬಾಹುಲಿಯನ್ನು ಕೊಟ್ಟರು.

ಪೋಲೀಸು ಸಬ್ ಇನ್‌ಸ್ಪೆಕ್ಟರುಗಳಾದ ಮೆ. ಕಲಿಯಂಡ ಮುತ್ತಣ್ಣನವರು ಸುಂಟಿಕೊಪ್ಪದಿಂದ ಸೋಮವಾರಪೇಟೆಗೂ, ಮೆ. ಚೇಂದ್ರಿಮಾಡ ಮುತ್ತಣ್ಣನವರು ಸೋಮವಾರಪೇಟೆಯಿಂದ ಸುಂಟಿಕೊಪ್ಪಕ್ಕೂ ವರ್ಗಾಯಿಸಲ್ಪಟ್ಟಿರುವರು.

ಕೊಡಗಿನ ಸಹಕಾರ ಸಂಘಗಳು ಇಟ್ಟುಕೊಂಡಿರುವ ಕೋಟಾರು ಲಾರಿಗಳ ತೆರಿಗೆಯನ್ನು ಬರುವ ಅಕ್ಟೋಬರು ತಿಂಗಳು 1ರಿಂದ ಅರ್ಧ ಕಡಿಮೆ ಮಾಡಲಾಗಿದೆಯೆಂದೂ, ಆದರೆ ಆ ಲಾರಿಗಳನ್ನು ಬಾಡಿಗೆಗೆ ಕೊಡಕೂಡದೆಂದೂ ಗಜೆಟಿನಲ್ಲಿ ಪ್ರಕಟವಾಗಿದೆ.

ಈ ತಾ. 2ರಿಂದ ಇಂದಿನ ವರೆಗೆ ಮಡಿಕೇರಿಯಲ್ಲಿ 9.03 ಇಂಚು ಮಳೆಯಾಗಿದೆ. ದೇಶದ ಹಲವು ಭಾಗಗಳಿಗೂ ಹೀಗೆಯೇ ಚೆನ್ನಾಗಿ ಮಳೆ ಬಿದ್ದು ಭತ್ತದ ಬೆಳೆಗೆ ಸಹಾಯವಾಗಿದೆ. ಮಡಿಕೇರಿಯಲ್ಲಿ ಜನವರಿ 1ರಿಂದ ಆಗೋಸ್ತು ಆಖೈರಿಗೆ 100.52 ಇಂಚು ಮಳೆಯಾಗಿದೆ.

ಬರುವ ತುಲಾ ಸಂಕ್ರಮಣದ ಸಮಯದಲ್ಲಿ ಭಾಗಮಂಡಲ ಗ್ರಾಮದಲ್ಲಿ ನಡೆಯುವ ತಲಕಾವೇರಿ ಜಾತ್ರೆಗೆ ಬರುವ ಅಕ್ಟೋಬರು ತಾ. 6ರಿಂದ ನವಂಬರು ತಾ. 22ರ ವರೆಗೆ ಪ್ಲೇಗ್ ಯಾ ವಾಂತಿಭೇದಿ ತಗಲಿದ ಪ್ರದೇಶಗಳಿಂದ ಜನರು ಯಾರೂ ಬರಕೂಡದೆಂತಲೂ, ಹಾಗೆ ಬಂದಲ್ಲಿ ಅಂಥವರನ್ನು ಹಿಂದಕ್ಕೆ ಕಳುಹಿಸಲಾಗುವುದೆಂತಲೂ ಮಾದಿನಂತೆ ಚೀಫ್ ಕಮಿಷನರವರು ಪ್ರಕಟಿಸಿರುವರು.

ಓಟರುಗಳ ಪಟ್ಟಿಯಲ್ಲಿರುವ ಲೋಪಗಳ ಮತ್ತು ತಪ್ಪುಗಳ ಮೇಲಿರುವ ಆಕ್ಷೇಪಗಳನ್ನು ರಿವೈಸಿಂಗ್ ಆಫೀಸರು ಈ ತಾ. 26ರಲ್ಲಿ ಬೆಳಗ್ಗೆ 11 ಗಂಟೆಗೆ ಪೊನ್ನಂಪೇಟೆಯಲ್ಲಿಯೂ, ತಾ. 26ರ ಮಧ್ಯಾಹ್ನದ ಮೇಲೆ 3 ಗಂಟೆಗೆ ವೀರಾಜಪೇಟೆಯಲ್ಲಿಯೂ, ತಾ. 27ರಲ್ಲಿ ಬೆಳಗ್ಗೆ 11 ಗಂಟೆಗೆ ಮಡಿಕೇರಿಯಲ್ಲಿಯೂ, ತಾ. 28ರಲ್ಲಿ ಮಧ್ಯಾಹ್ನ 12 ಗಂಟೆಗೆ ಸೋಮವಾರಪೇಟೆಯಲ್ಲಿಯೂ ಕೇಳುವರೆಂದು ತಿಳಿಸಿರುತ್ತಾರೆ.

ಕೊಡಗು ತೂಕಗಳ ಮತ್ತು ಅಳತೆಯ ಪಾತ್ರಗಳ ಆಕ್ಟಿನ 17ನೇಯ ಪ್ರಕರಣದ ಮೇರೆ ರಚಿಸಬೇಕಾದ ನಿಬಂಧನೆಗಳ 'ಕರಡು' ಈ ತಿಂಗಳ ಗಜೆಟಿನಲ್ಲಿ ಇಂಗ್ಲಿಷಿನಲ್ಲಿಯೂ, ಕನ್ನಡದಲ್ಲಿ ಪ್ರಕಟವಾಗಿದೆ. ಇದರ ಮೇಲೆ ಆಕ್ಷೇಪಗಳಾಗಲೀ, ಅಥವಾ ಸಲಹೆಗಳಾಗಲೀ ಇರುವವರು ತಾ. 1—10—'32 ರೊಳಗೆ ಕಳುಹಿಸಿದರೆ ಅವುಗಳನ್ನು ಪರ್ಯಾಲೋಚಿಸಲಾಗುವದೆಂದು ಚೀಫ್ ಕಮಿಷನರವರು ಬಹಿರಂಗಪಡಿಸಿರುವರು.

ಕೆಲವು ದಿವಸಗಳ ಹಿಂದೆ ಶನಿವಾರಸಂತೆ ಇನ್‌ಸ್ಪೆಕ್ಷನ್ ಬಂಗ್ಲೆಯ ಹಿಂದುಗಡೆ ಸರ್ಕಾರಿ ಜಾಗದಲ್ಲಿ ಹೂತ ಹಣವಿದೆಯೆಂದು ಕೆಲವರು ಸೇರಿ ಒಂದು ರಾತ್ರಿ ಮಂತ್ರವಾದಿಯ ಸಮೇತ 'ಅಂಜನ' ಹಾಕಿ ಅಗೆದು ತೆಗೆಯಲು ಪ್ರಯತ್ನಿಸಿದರೆಂದೂ, ಅಡಿಯಲ್ಲಿ ಬಂಡೆಕಲ್ಲು ಸಿಕ್ಕಿದ್ದರಿಂದ ಪ್ರಯತ್ನವು ಸಫಲವಾಗಲಿಲ್ಲವೆಂದೂ, ನಂತರ ಉದ್ಯೋಗಸ್ಥರು ಪೊಲೀಸು ಸಮೇತ ಆ ಕಲ್ಲನ್ನು ಒಡೆಸಿ ನೋಡಿದಲ್ಲಿ ಅಡಿಯಲ್ಲಿ ಕೆಲವು ಕಬ್ಬಿಣದ ತುಂಡುಗಳು ಮಾತ್ರ ಸಿಕ್ಕಿದವೆಂದೂ, ಈಗ ಈ ವಿಷಯವನ್ನು ಪೊಲೀಸಿನವರು ವಿಚಾರಿಸುತ್ತಿದ್ದಾರೆಂದೂ ಸುದ್ದಿ.

ಹಿಂದೂದೇಶ.

ಬಂಗಾಳದಲ್ಲಿ ಕ್ರಾಂತಿಕಾರರ ಚಳವಳವನ್ನು ಅಡಗಿಸಲಿಕ್ಕಿರುವ ಮಸೂದೆಯೊಂದು ಅಲ್ಲಿಯ ಕೌನ್ಸಿಲಿನಲ್ಲಿ ಪಾಸಾಯಿತು.

ಕಲ್ಕತ್ತೆಯಲ್ಲಿ ಕಾಂಗ್ರೆಸ್ಸಿನ ಕೆಲಸಕ್ಕೆ ಸಹಾಯಕೊಟ್ಟ ರೆಂಬ ಕಾರಣ 24 ಜನರಿಗೆ ನಾಲ್ಕು ನಾಲ್ಕು ತಿಂಗಳು ಸಜೆ ವಿಧಿಸಲಾಯಿತು.

ಬೆಳಗಾಮಿನಲ್ಲಿ ಹಸ್ತಪತ್ರಿಕೆ ಹಂಚಿದಕ್ಕಾಗಿ 6 ಸ್ವಯಂಸೇವಕರಿಗೆ ಆರಾರು ತಿಂಗಳು ಕಠಿಣ ಸಜೆಯೂ, 25 ರೂ. ಜುಲುಮಾನೆಯೂ ವಿಧಿಸಲಾಯಿತು.

ಕಳೆದ ಜನವರಿಯಿಂದ ಜೂನ್ ಆಖೈರು ವರೆಗೆ ಮಧ್ಯಪ್ರಾಂತ್ಯದಲ್ಲಿ ಕಾಂಗ್ರೆಸು ಕೈದಿಗಳಿಗೆ ಒಟ್ಟು 83,637 ರೂ. ಜುಲುಮಾನೆ ವಿಧಿಸಲಾಯಿತಂತೆ.

ಈ ತಾ. 5ರಲ್ಲಿ ಕ್ಯಾನ್‌ಪುರದಲ್ಲಿ 'ಗಾಂಧಿ ಕೈದಿಗಳ ದಿನ'ವನ್ನು ಆಚರಿಸುವ ಬಗ್ಗೆ ಹಿಂದೂ ವ್ಯಾಪಾರಗಳೆಲ್ಲಾ ಹರತಾಳವನ್ನು ಆಚರಿಸಿದರು. ಮೆರವಣಿಗೆಯಲ್ಲಿ ಇಬ್ಬರು ಕೈದು ಮಾಡಲ್ಪಟ್ಟರು.

ಮದ್ರಾಸು ಜೈಲಿನಲ್ಲಿ ಕಾಯಿಲೆಯಾಗಿರುವ ಸುಭಾಷ್ ಚಂದ್ರಬೋಸ್‌ರವರನ್ನು ಸಂಯುಕ್ತ ಪ್ರಾಂತ್ಯದ ಭವಾಲಿ ಸ್ಯಾನಿಟೋರಿಯಮಿಗೆ ಕಳುಹಿಸುತ್ತಾರೆಂದು ವರ್ತಮಾನ.

ಮುರದಾಬಾದಿನಲ್ಲಿ ಜಾತಿ ಮುಕ್ತರಾದ ಎಂಬವರ ಪರದೇಶೀ ಬಟ್ಟೆ ಅಂಗಡಿಯನ್ನು ಕಳೆದ ತಾ. 31ರಲ್ಲಿ ಪಿಕೆಟ್ ಮಾಡಿದಾಗ್ಯೆ ಒಬ್ಬರ ನಂತರ ಒಬ್ಬರು ನಿಂತು ಒಂದೇ ದಿನ 67 ಜನರು ಕೈದು ಮಾಡಲ್ಪಟ್ಟರು.

ಕಲ್ಕತ್ತೆಯಲ್ಲಿ ಜೋರಾಬಾಗನ್ ಪೊಲೀಸ್ ಕೋರ್ಟಿನಲ್ಲಿ ರಾಷ್ಟ್ರೀಯ ಧ್ವಜವನ್ನು ಏರಿಸಿ, ಜಯಘೋಷವನ್ನು ಮಾಡಲು ಯತ್ನಿಸಿದ್ದಕ್ಕೆ ಅಜಿತ್ ಕುಮಾರದಾಸ್ ಮತ್ತು ಐವರಿಗೆ ಐದೈದು ತಿಂಗಳ ಸಜೆ ವಿಧಿಸಲಾಯಿತು.

ಮುಂಬಾಯಿನ ಅಜೆಕೋಡಿನ ರಾಜಕೀಯ ಸಮ್ಮೇಳನದ ಅಧ್ಯಕ್ಷರಾದ ಶ್ರೀಮತಿ ಎ. ಪಿ. ಲಕ್ಷ್ಮೀಅಮ್ಮ, ಸ್ವಾಗತ ಕಮಿಟಿಯ ಅಧ್ಯಕ್ಷರು ಮತ್ತು ಸೆಕ್ರೆಟರಿಯವರು ಕಳೆದ ಆದಿತ್ಯವಾರ ಕೈದು ಮಾಡಲ್ಪಟ್ಟರು.

ತಾ. 5ರಲ್ಲಿ ಕರಾಚಿಯ ಜಾಣ ಬಿರುಕುಗಳ ಒಂದು ಅಂಗಡಿಯನ್ನು ಪಿಕೆಟ್ ಮಾಡಿದಕ್ಕಾಗಿ ಇಬ್ಬರು ಸ್ತ್ರೀಯರ ಸಮೇತ 11 ಸ್ವಯಂ ಸೇವಕರು ದಸ್ತಗಿರಿ ಮಾಡಲ್ಪಟ್ಟರು. ಆ ದಿನ ರಾತ್ರಿ ಸ್ತ್ರೀಯರು ಬಿಡುಗಡೆ ಮಾಡಲ್ಪಟ್ಟರು.

ಜಾಲ್‌ಪೈಗುರಿ ಜೈಲಿನಲ್ಲಿರುವ ಸೆನ್‌ಗುಪ್ತರವರ ರಕ್ತದೊತ್ತಾಟವು ಬಹು ಜೋರಾಗಿದೆಯೆಂತಲೂ, ಈಗ ಅವರು ಬಲೇ ದ್ರವ ಆಹಾರದಲ್ಲಿದ್ದಾರೆಂದೂ, ಡಾ. ಯನ್. ಸಿ. ಸೆನ್‌ಗುಪ್ತರವರು ಅವರನ್ನು ನೋಡಲು ಸರ್ಕಾರದವರು ಬಿಟ್ಟಿರುವರೆಂದೂ ವರ್ತಮಾನ.

ಕೆಲವು ತಿಂಗಳ ಹಿಂದೆ ಸತ್ಯಾಗ್ರಹ ಚಳವಳದಲ್ಲಿ 1 ವರ್ಷ ಸಜೆಯೂ, 20,000 ರೂ. ಜುಲುಮಾನೆಯೂ ವಿಧಿಸಲ್ಪಟ್ಟಿದ್ದ ಸೋಲಾಪುರದ ಸೇಟ್ ಗುಲಾಬಚಂದರವರ ಅಪೀಲಿನಲ್ಲಿ 8,000 ರೂ. ಜುಲುಮಾನೆಯು ಮಾತ್ರ ಕಡಿಮೆ ಮಾಡಲಾಯಿತು.

ಮುಂಬಾಯಿಯ ಕಾಂಗ್ರೆಸ್ ಧುರೀಣರಲ್ಲಿ ಒಬ್ಬರಾದ ಮೆ. ವಾಮನ್ ಕಬಾಡಿಯವರು ಜೈಲಿನಿಂದ ಬಿಡುಗಡೆಯಾದರು. ಕೂಡಲೆ ಅವರನ್ನು ದಸ್ತಗಿರಿ ಮಾಡಿ ಒಂದು ವರ್ಷ ಸಜೆ, 50 ರೂ. ಜುಲುಮಾನೆ ವಿಧಿಸಲಾಯಿತು. (ಕಾರಣ ಗೊತ್ತಾಗಿಲ್ಲ.)

ಸ್ವರಾಜ್ಯವು ಬೇಗನೆ ದೊರಿಯಬೇಕೆಂಬ ಭಾರತೀಯರ ಬಯಕೆಯು ಶೀಘ್ರದಲ್ಲಿಯೇ ಸಿದ್ಧಿಸಲಿ ಎಂಬ ಉದ್ದೇಶದಿಂದ ಕಾಠೇವಾಡದ ಸತ್ಯಾಗ್ರಹಿ ಶ್ರೀ ಕೇರಚಂದ ಶಹಾರವರು ಒಂದು ತಿಂಗಳ ಉಪವಾಸವನ್ನು ಕೈಕೊಂಡು 26 ದಿನಗಳಾದರೂ ಅವರ ಪ್ರಕೃತಿಯು ಚೆನ್ನಾಗಿದೆಯಂತೆ.

ಪೂರ್ಣ ಪ್ರಾಂತೀಕ ಸ್ವಾತಂತ್ರ್ಯವೂ, ಮಧ್ಯವರ್ತಿ ಎಸೆಂಬ್ಲಿಯಲ್ಲಿ ಜವಾಬ್ದಾರಿಯೂ ಇರುವಂಥ ಸುಧಾರಣೆಯನ್ನು ಕೂಡಲೇ ಕೊಡಬೇಕೆಂದು ಬಿಹಾರ್ ಕೌನ್ಸಿಲಿನಲ್ಲಿ ಠರಾವು ಪಾಸಾಯಿತು.

ಡಾಕ್ಟರ್ ಮೂಂಜೆಯವರು ಕನ್‌ಸರ್ವೇಟಿವ್ ಕಮಿಟಿಯ ಮೆಂಬರುತನಕ್ಕೆ ರಾಜಿನಾಮೆ ಕೊಟ್ಟಿರುವರು. ಇವರು ತಾ. 5ರಲ್ಲಿ ಇಂಗ್ಲೆಂಡಿನಿಂದ ಇಂಡಿಯಾಕ್ಕೆ ಬಂದು ತಲುಪಿದರು. 'ಕೋಮುವಾರು ತೀರ್ಮಾನವು ಸಂಪೂರ್ಣ ಅತೃಪ್ತಿಕರವೆಂದು ಇವರ ಅಭಿಪ್ರಾಯ.'

ಇಂಡಿಯಾದ ರಾಜಕೀಯ ರಚನೆಯನ್ನು ಕುರಿತು ಹಿಂದೀಯರ ಅಭಿಪ್ರಾಯ ತೆಗೆದುಕೊಳ್ಳುವ ಉದ್ದೇಶ್ಯ ಬರುವ ನವಂಬರು ಮಧ್ಯದಲ್ಲಿ ಕೆಲವು ಬ್ರಿಟಿಷ್ ಇಂಡಿಯಾದ ಪ್ರಮುಖರ, ಸಂಸ್ಥಾನಗಳ ಪ್ರತಿನಿಧಿಗಳ ಮತ್ತು ಬ್ರಿಟಿಷ್ ಪ್ರತಿನಿಧಿಗಳ ಸಣ್ಣ ಕಾನ್‌ಫರೆನ್ಸೊಂದನ್ನು ಲಂಡನಿನಲ್ಲಿ ನಡಿಸಲಾಗುವುದೆಂದು ವೈಸರಾಯರು ಈ ತಾ. 5ರಲ್ಲಿ ಎಸೆಂಬ್ಲಿಯಲ್ಲಿ ಹೇಳಿದರು.

ಕಳೆದ ತಾ. 26ರಲ್ಲಿ ಕರಾಚಿಯಲ್ಲಿ ಕಾಂಗ್ರೆಸ್ ಕಾರ್ಯವನ್ನು ಮಾಡುತ್ತಿದ್ದ ಏಳು ವರ್ಷ ಪ್ರಾಯದ ಒಬ್ಬ ಹುಡುಗಿಯನ್ನು ಒಬ್ಬ ಪೊಲೀಸಿನವನು ಹೊಡೆಯುವದನ್ನು ತಾಕೂರ್‌ದಾಸ್‌ರವರು ಕಂಡು ವಿಚಾರಿಸಿದಾಗ್ಯೆ, ಕಾಂಗ್ರೆಸ್ ಕೆಲಸ ಮಾಡುವವರನ್ನು ಏನು ಬೇಕಾದರೂ ಮಾಡಬಹುದೆಂದು ಮುಂತಾಗಿ ಹೇಳಿದ ಪೊಲೀಸಿನವನ ಮೇಲೆ ತಾಕೂರವರು ಕೇಸು ಕೊಟ್ಟಿರುವರು.

ಟಾರೀಫ್ ಬೋರ್ಡಿನವರ ಸೂಚನೆಯಂತೆ ಬ್ರಿಟನು ಹೊರತು ಉಳಿದ ಎಲ್ಲಾ ದೇಶಗಳಿಂದ ಇಂಡಿಯಾಕ್ಕೆ ಬರುವ ಬಟ್ಟೆಬರೆಗಳ ಮೇಲೆ ಶೇಕಡ 50ರಷ್ಟು (ಮೊದಲು ಇದ್ದದ್ದು 20% ಮಾತ್ರ) ಸುಂಕ ಹಾಕುವಂತೆ ಸರ್ಕಾರವು ತೀರ್ಮಾನಿಸಿದೆ. ಇದು 1933ನೇ ಮಾರ್ಚಿ ಆಖೈರು ವರೆಗೆ ಜಾರಿಯಲ್ಲಿರುವದು.

ಇಂಡಿಯಾದ ನೇಶನಲ್ ಲಿಬರಲ್ ಫೆಡರೇಶನಿನ 14ನೇ ಪರಿಷತ್ತು ಈ ತಾ. 28, 29 ಮತ್ತು 30ರಲ್ಲಿ ಕಲ್ಕತ್ತೆಯಲ್ಲಿ ದಿ. ಬಾ. ಯಂ. ರಾಮಚಂದ್ರರಾವ್‌ರವರ ಅಧ್ಯಕ್ಷತೆಯಲ್ಲಿ ನಡೆಯಲಿಕ್ಕಿದೆ.

ಕಳೆದ ತಾ. 31ರಲ್ಲಿ ಸತಾರದಲ್ಲಿ ಮುಂಬಾಯಿಯ [illegible] ಗವರ್ನರವರು ಕಾರಿನಲ್ಲಿ ಹೋಗುತ್ತಿದ್ದಾಗ್ಯೆ ಒಬ್ಬ ರೈತನು ಕರಿ ಬಾವುಟ ಹಿಡಿದುಕೊಂಡು ಕಾರಿನ ಮುಂದೆ ಅಡ್ಡ ಬಿದ್ದು ಕಾರನ್ನು ನಿಲ್ಲಿಸಿದನೆಂದೂ, ಕಾರು 20 ಅಡಿ ದೂರದಲ್ಲಿದ್ದುದರಿಂದ ಅವನು ಬದುಕಿದನೆಂದೂ ವರ್ತಮಾನ.

ಈ ಕನ್ನಡ ಸಾಹಿತ್ಯದ ಜ್ಞಾನದಿಂದ ನಿಶ್ಚಯಕ್ಕೆ ನಮಗೆ ಇ[illegible]ನ್ನೊಂದು ಅರ್ಥವಿದೆ. ಕನ್ನಡ ಕವಿಗಳಲ್ಲಿ ಜೈನರು, ವೀರಶೈವರು, ಬ್ರಾಹ್ಮಣ ಎಂದು ಪಂಡಿತರು ಹೇಳುವರ ವಿಷಯ[illegible] ... ಎಷ್ಟೋ ಜನ ಧರ್ಮವೆಂದರೆ ಜಾತಿಯಿಂದ ... ರೂ, ವ್ಯವಹಾರದ ಅನುಕೂಲತೆಯಿಂದಲೂ ತಿಳಿದುಕೊಳ್ಳುವ ನ[illegible] ... ಧರ್ಮದ ಕಲ್ಪನೆಯು ತಿಳಿಯುವದಿಲ್ಲ. ... ಆಗಿನವರಿಗೆ ಧರ್ಮವೆಂದರೆ ಸದಾಚಾರ, ವ್ಯವಹಾರಕ್ಕೆ [illegible] ... ಎಂಬ ಕಲ್ಪನೆಯಿದ್ದಿತು. ಅದುದರಿಂದ ಶೈವ ... ಜೈನನಾದ ರನ್ನಕವಿಯು ಆಶ್ರಯದಾತ ... ಮೊದಲಾದವರು ... ಎಂಬ ... ಲಿಂಗಕ್ಕೆ ... ಬಸವರಾಜರು ... ಕನ್ನಡ ಸಾಹಿತ್ಯದಲ್ಲಿ ... ಸಾಹಿತ್ಯದ ಮಹಿಮೆಯು ... ಎನ್ನಲು ಬೇಕಲ್ಲವೆ?

'ಕ. ಟಾ'

ಮೂರ್ನಾಡು [illegible]

ಇದೇ ಸೆಪ್ಟೆಂಬರು ತಿಂಗಳು 3 (ಸಿಂಹ ಮಾಸ 18) ನೇ ಶನಿವಾರ ಮೂರ್ನಾಡು ನಾಡು ಮುಂದಾದ 'ಪಾಂಡಾಣೆಯಲ್ಲಿ' ವರ್ಷಂಪ್ರತಿ ನಡೆದು ಬರುವ ಆಟೋಟಗಳ ಸ್ಪರ್ಧೆಯು ಬಹು ವಿಜೃಂಭಣೆಯಿಂದ ಜರುಗಿತು.

[illegible] ಸುಮಾರವಾಗಿ 1½ ಗಂಟೆಗೆ '[illegible]' ಸ್ಕ್ವೇರ್' [illegible] ವಾದ್ಯಘೋಷದೊಡನೆ ಸಾಧಾರಣ ಮನಸ್ಕರು ಜನರ ಸಂದಣಿಯಿಂದ ಸ್ಪರ್ಧೆ ... (Martial valour) ... ಸ್ಪರ್ಧೆಯು ಪ್ರಾರಂಭವಾಯಿತು. ... ಅವರಲ್ಲಿ ಯಾರೂ ಜಯಶೀಲರಾಗ ... ಅನಂತರ ನೂರು ಗಜದ ... ಅನೇಕ ತರದ ... ಸ್ಪರ್ಧೆಗಳು ನಡೆದುವು. ... ಅನೇಕ ಮಹಿಳೆಯರೂ, ಮಹನೀಯರೂ ದಯಮಾಡಿಸಿ ... ಮಂಡಳಿಯವರ ಮನಸ್ಸಿಗೆ ಆಹ್ಲಾದವನ್ನುಂಟುಮಾಡಿದರಲ್ಲದೆ ಪ್ರೇಕ್ಷಕರಿಗೂ ಆಟೋಟಗಳಲ್ಲಿ ಭಾಗಗಳಾದವರಿಗೂ ... ಸಾಧಾರಣ 6½ ಗಂಟೆಗೆ ಸ್ಪರ್ಧೆಯು ಮುಗಿಯಿತು. ಇಂಥಾ ಮಹತ್ಕಾರ್ಯದ ಉದ್ದೇಶ್ಯವನ್ನು ತಿಳಿಸುವುದಕ್ಕಾಗಿಯೂ, ಜಯಶೀಲರಿಗೆ ಇನಾಮುಗಳನ್ನು ಹಂಚುವುದಕ್ಕಾಗಿಯೂ ಮಿ. [illegible] ವರಿಂದ ಸೂಚಿಸಲ್ಪಟ್ಟು, ಮೂರ್ನಾಡು ಆಸ್ಪತ್ರೆಯಲ್ಲಿ ಸಬ್ ಅಸಿಸ್ಟೆಂಟ್ ಸರ್ಜನರಾಗಿರುವ ಮಿ. ... ಅಧ್ಯಕ್ಷ ಪೀಠವನ್ನು ವಹಿಸಿ, ಇನಾಮುಗಳನ್ನು ಹಂಚಿದರು. ಅನಂತರ ಮೂರ್ನಾಡು ... ಶಾಲೆಯ ಮುಖ್ಯೋಪಾಧ್ಯಾಯರಾದ ಮಿ. ಎ. ... ಅವರು ಆದಿನ ಕಾರ್ಯದ ಉದ್ದೇಶ್ಯವನ್ನು ಕೂಲಂಕಷವಾಗಿ ವಿವರಿಸುತ್ತಾ ... ಮರಣದಿಂದ ... ಆ ನಾಡಿನ ಇತರ ... ಕಾರ್ಯವನ್ನು ... ಧನ್ಯವಾದಗಳನ್ನು ... ವಾಕ್ಯಗಳಿಂದ ವಿವರಿಸಿದರು. ಕಡೆಗೆ ಅಧ್ಯಕ್ಷರಿಗೂ, ... ವಂದನೆಗಳನ್ನು ಅರ್ಪಿಸಿದ ನಂತರ, ಆದಿನ ಕಾರ್ಯವು ಅಂತ್ಯಗೊಳಿಸಲ್ಪಟ್ಟಿತು.

"ಪ್ರೇಕ್ಷಕ"

ವೈಸರಾಯರ ಭಾಷಣ.

(2ನೇ ಪುಟದಿಂದ ಮುಂದುವರಿದದ್ದು.)

ಅಲ್ಲದೆ ಇವರ ಚಳವಳವು ಯಾವ ಉದ್ದೇಶಕ್ಕಾಗಿ ಪ್ರಾರಂಭವಾಯಿತೋ ಆ ಉದ್ದೇಶವು ಮರೆತು ಹೋದ ಮೇಲೆ ಈ ಚಳವಳವು ನಡೆಯುತ್ತಲೇ ಇರುತ್ತದೆ ಎಂಬುದು ಅನುಭವಸಿದ್ಧವಾದ ಮಾತು. ಶಾಸನಕ್ಕೆ ಗೌರವವಿರುವ ಪ್ರತಿಯೊಬ್ಬನೂ ದೇಶಭಕ್ತಿಯ ತಪ್ಪು ಭಾವನೆಯಿಂದ ಇಂಥಾ ಕಾರ್ಯಗಳಿಗೆ ಸಹಾನುಭೂತಿ ತೋರಿಸಬಾರದೆಂತ ಕೇಳಿಕೊಳ್ಳುತ್ತೇನೆ. ಈ ಚಳವಳದಿಂದ ಆ ದೇಶೀಯರಿಗೂ ದೇಶಕ್ಕೂ ತುಂಬಾ ಹಾನಿ ಇದೆಯೆಂಬುದನ್ನು ಮರೆಯಬಾರದು. ಈ ಚಳವಳವನ್ನು ಮುರಿಯಲು ಸರ್ಕಾರವು ತನ್ನಿಂದ ಸಾಧ್ಯವಿದ್ದ ಪ್ರಯತ್ನವನ್ನೆಲ್ಲಾ ಮಾಡುತ್ತಿದೆ. ದೇಶಹಿತವಿರುವ ಸರ್ವರೂ ಸರ್ಕಾರದ ಪ್ರಯತ್ನಕ್ಕೆ ಸಹಾಯಕರಾಗಬೇಕೆಂತ ಕೇಳಿಕೊಳ್ಳುತ್ತೇನೆ. ಬಂಗಾಳ ಕೌನ್ಸಿಲಿನಲ್ಲಿ ಈ ಬಗ್ಗೆ ಒಂದು ಶಾಸನ ಚರ್ಚೆಯಾಗುತ್ತಲಿದೆ. ಅಲ್ಲಿ ಅದು ಮಂಜೂರಾದರೆ ಈ ಕೌನ್ಸಿಲ್ ಮುಂದೆ ಸಹ ಅದೇ ಸಂಬಂಧವಾದ ಒಂದು ಶಾಸನವು ತರಬೇಕಾಗುತ್ತದೆ.

ದುಂಡು ಮೇಜಿನಿಂದ ನೇಮಕವಾದ ಮೂರು ಕಮಿಟಿಗಳ ವರದಿಗಳು ಪ್ರಕಟವಾಗಿದೆಯೆಂತಲೂ ವಾಯವ್ಯ ಪ್ರಾಂತ್ಯದಲ್ಲಿ ಸುಧಾರಿಸಿದ ಕೌನ್ಸಿಲ್ ಸ್ಥಾಪನೆಯಾದ್ದರಿಂದ ಅಲ್ಲಿನ ಜನರಿಗೂ, ಹಿಂದೂಸ್ಥಾನದ ಇತರ ಭಾಗದವರಿಗೂ ತೃಪ್ತಿಯಾಗಿದೆಯೆಂತಲೂ ವಿವರಿಸಿ, ಕನ್ಸಲ್ಟೇಟಿವ್ ಕಮಿಟಿಯ ಕೆಲಸಕ್ಕೆ ತೋರುವ ಸಮಸ್ಯೆಯು ಅಷ್ಟು ಬಿಕ್ಕಟ್ಟಿನ ... ಮುಂದರಿಸಿದ್ದೇನೆಂದರೆ—

(ಮುಂದುವರಿಯುವುದು.)

ರಾಷ್ಟ್ರೀಯ ಮುಸ್ಲಿಂ ಪಾರ್ಟಿಯ ತೀರ್ಮಾನ.

ಅಖಿಲ ಭಾರತ ರಾಷ್ಟ್ರೀಯ ಮುಸ್ಲಿಂ ಪಾರ್ಟಿಯ ಕಾರ್ಯಕಾರಿ ಮಂಡಳಿಯವರು ತಮ್ಮ ತಾ. 7ರಲ್ಲಿ ... ಕೋಮುವಾರು ತೀರ್ಮಾನ ... ಮಂತ್ರಿಯವರನ್ನು ಕೇಳಿಕೊಳ್ಳಲಿಲ್ಲವೆಂತಲೂ, ... ಅಪಾಯಕರವಾದ ತೀರ್ಮಾನವು ಯಾರಿಗೂ ತೃಪ್ತಿಯನ್ನುಂಟು ಮಾಡದೆ ಕೋಮುವಾರು ದ್ವೇಷವನ್ನು ಹೆಚ್ಚಿಸುವುದಲ್ಲದೆ ಯಾವ ರಚನೆಯನ್ನೂ ಸರಾಗವಾಗಿ ನಡೆಸಲು ಅಸಾಧ್ಯ ಮಾಡುವುದರಿಂದ ಅದು ತಮಗೆ ಪೂರ್ಣ ಅಸಮ್ಮತವೆಂತಲೂ, ಪೂರ್ಣ ಕೋಮುವಾರು ತತ್ವದಿಂದಲೂ ಅದು ಅತೃಪ್ತಿಕರವಾದುದೆಂತಲೂ, ಮತ್ತು ಎಲ್ಲಾ ಪಾರ್ಟಿಯವರು ಸೇರಿ ತಮ್ಮೊಳಗೆ ಈ ವಿಷಯ ತೀರ್ಮಾನಿಸಿಕೊಳ್ಳುವುದೇ ಉತ್ತಮವೆಂತಲೂ ಠರಾವುಗಳನ್ನು ಪಾಸು ಮಾಡಿರುವರು.

COORG FOREST DEPARTMENT, SOUTH DIVISION.

NOTICE.

Mercara, the 31st August 1932.

Tenders are invited for the transport of about 53,000 c. ft. of timber from Tittimatti, Kolanger and Nagerhole in South Coorg Eastern Forests to the Depot at Hunsur, during the season 1st October 1932 to 28th February 1933. Tenders will be received up to 19th September 1932.

For further particulars, please apply to the DIVISIONAL FOREST OFFICER, SOUTH COORG, MERCARA.

GOVERNMENT SOAP FACTORY, Bangalore.

ವಿಶ್ವಾಸಾರ್ಹತೆ.

ಅತ್ಯುತ್ತಮವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ ಯಾವ ಗುಣಗಳು ಅವಶ್ಯಕವೆಂದು ನೀವು ತಿಳಿದಿರುತ್ತೀರೋ ಆ ಗುಣಗಳೆಲ್ಲಾ ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.

ನಾವು ನಿಮಗೆ ಭರವಸೆಯನ್ನೀಯುತ್ತೇವೆ.

ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು.

52-1

೫೦ ವರುಷಗಳ ಅನುಭವ ಸಿದ್ಧ ಔಷಧಗಳು.

೧. ಧಾತುಪುಷ್ಟಿ ಲೇಹ—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ಬಾಧೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಉರಿ ... ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು.

ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7—0—0.

೨. ಅಶೋಕಾರಿಷ್ಟ ಮತ್ತು ಮಾತ್ರೆ—ಹೆಂಗಸರ ಮುಟ್ಟಿನ ದೋಷಗಳು, ... ಹೊಟ್ಟೆನೋವು, ಸೊಂಟನೋವು, ಸಂತಾನ ... ಮೂರ್ಛೆ, ಮಲಬದ್ಧತೆ, ಚಳಿಜ್ವರ, ರಕ್ತಹೀನತೆ, ಗರ್ಭಾಶಯದ ಎಲ್ಲಾ ರೋಗಗಳನ್ನೂ ಗುಣಪಡಿಸುವದು. ಬಾಟ್ಲಿ 1ರ 1—4—0; 1 ಡಬ್ಬಿ ಮಾತ್ರೆಗೆ 1—0—0; 3 ಬಾಟ್ಲಿ ಔಷಧಕ್ಕೂ, 3 ಡಬ್ಬಿ ಮಾತ್ರೆಗೂ 6—4—0.

೩. ಚಂದನಾಸವ ಮತ್ತು ಮಾತ್ರೆಗಳು—ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರವು ... ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ... ಮೊದಲಾದ ಹಲವು ಮೂತ್ರಕೋಶದ ರೋಗಗಳನ್ನೂ, ... ಮಲಬದ್ಧತೆ, ಸ್ವಪ್ನಾವಸ್ಥೆ ಇವುಗಳ ಮೇಲೆ ... ಬಾಟ್ಲಿ 1ರ 1-2-0; 1ಡಬ್ಬಿ ಮಾತ್ರೆಗೆ 1-6-0. 2 ಬಾಟ್ಲಿ ಔಷಧಕ್ಕೂ, 2 ಡಬ್ಬಿ ಮಾತ್ರೆಗೂ 4—12—0.

೪. ಬಾಲಾಗ್ರಹ ಗುಟಿಕೆ—ಬಾಲಾಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರು ಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧ. ಬಾಟ್ಲಿ ಒಂದಕ್ಕೆ 0—10—0. 3ಕ್ಕೆ 1—12—0.

೫. ಸುಖಬೇಧಿ ಗುಟಿಕೆ—... ಸುಖವಿರೇಚಕ. ಬಾಟ್ಲಿ 1ರ 0—10—0. 3ಕ್ಕೆ 1—12—0.

೬. ಸ್ಪಂದನ ವಟಿ—ಜ್ವರ ... ಮಲವಿಸರ್ಜನೆ ಆಗುವದು. ಬಾಟ್ಲಿ 1ಕ್ಕೆ 1—0—0.

೭. ಮಲೇರಿಯಾ ನಿವಾರಿಣಿ—ಎಲ್ಲಾ ನಮೂನೆಯ ಜ್ವರಕ್ಕೆ ಬಾಟ್ಲಿಗೆ 1—8—0.

೮. ಮಹಾ ಮದನಕಾಮೇಶ್ವರಿ ಲೇಹ ಡಬ್ಬಿ 1ಕ್ಕೆ 2—0—0.

೯. ದಂತಕಾಂತಿ ಚೂರ್ಣ—ಡಬ್ಬಿ 1ರ 3 ಆಣೆ. 6 ಡಬ್ಬಿಗಳಿಗೆ 1—2—0.

ಯು. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ್ ಫಿಸಿಶಿಯನ್ಸ್,

[illegible], ಮಂಗಳೂರು

52-2

ಸೇವಾಧರ್ಮ.

ಜ್ಞಾನವು ವಿಕಾಸಗೊಳ್ಳದಿದ್ದರೆ ವಿಶಾಲಸಿದ್ಧಾಂತಿಗಳು ಅಸಂಭವವು. ಜ್ಞಾನದಿಂದಲೇ ಭಗವಂತನನ್ನು ಅನಂತವಿಧದಲ್ಲಿ ಗ್ರಹಿಸಬಹುದು. ಅನಂತ ವೈಚಿತ್ರ್ಯಗಳನ್ನು ಒಂದೆಡೆಗೆ ಸಮಾವೇಶಗೊಳಿಸಲು ಬಾರದೆ ಹೋದರೆ ಕ್ಷುದ್ರನಿರ್ಮಾಣವೇ ಪ್ರಾಪ್ತವಾಗುವದು. ಕ್ಷುದ್ರತೆಯು ಭಾಗವತ ಇಚ್ಛೆಯ ಸ್ವಬಲ ವೈರಿಯು. ಅದು ಪ್ರತಿ ಆಘಾತಕ್ಕೆ ಒಡೆದು ಪುಡಿಪುಡಿಯಾಗುವದು. ನೀವು ವಿಶಾಲರಾಗಿರಿ. ಜ್ಞಾನದ ಜ್ಯೋತಿಯನ್ನು ಕೈಯಲ್ಲಿ ಹಿಡಿಯಿರಿ. ಸಮತೆಯು ಜ್ಞಾನವನ್ನೇ ಅವಲಂಬಿಸಿದೆ. ಸಮತೆಯೇ ವಿಶಾಲತನದ ಬೀಜಮಂತ್ರವು.

ಸಾಮಾನ್ಯವಾಗಿ ಯೌವನವು ನಮ್ಮ ಜೀವನದಲ್ಲೊಂದು ಸಂಧಿಕಾಲವಾಗಿರುತ್ತದೆ. ನಾವು ಏಳುವೆವೊ, ಬೀಳುವೆವೊ, ಕರ್ತೃತ್ವಶಾಲಿಗಳಾಗುವೆವೊ, ಕೈಲಾಗದವರಾಗುವೆವೊ ಎಂಬುದನ್ನು ನಿರ್ಧಾರಗೊಳಿಸುವ ಕಾಲವದು. ತರುಣನು ವಿಚಾರಶೀಲನಾಗಿದ್ದರೆ, ಸುತ್ತು ಮುತ್ತಲಿನ ಹೀನ-ದೀನರ ಸ್ಥಿತಿಯಿಂದ ಆತನಲ್ಲಿ ಕಳವಳವು ಹುಟ್ಟಿ, ಜನತಾಸೇವೆಗಾಗಿ ತನ್ನನ್ನು ಮುಡುಪಿಡಲು ಆತನು ಪ್ರೇರಿತನಾಗುತ್ತಾನೆ.

ಪ್ರತಿಯೊಂದು ಮಾನವ ಜೀವಿಗೆ ತನ್ನ ವಿಮುಕ್ತ ವಿಕಾಸವನ್ನು ಮಾಡಿಕೊಳ್ಳುವದಕ್ಕೆ ಅವಸರವು ದೊರೆಯಲೇಬೇಕು. ಉಚ್ಚಧ್ಯೇಯ ಪ್ರೇರಿತರಾಗಿ ಊರ್ಜಿತ ಕರ್ಮದ ಕನಸನ್ನು ಕಾಣುವ ತರುಣರಿಗೆ ಸರಿದಾರಿಯನ್ನು ತೋರಿಸುವ ಹೊಣೆಯು ಸಮಾಜದ ಮೇಲಿದೆ.

ಆದರೆ ನಮ್ಮ ಸಮಾಜದಲ್ಲೇನು ಕಾಣುತ್ತಿದೆ? ಎಲ್ಲಾ ತಿರುವು ಮುರುವು [illegible]. ತರುಣರು ಸಮಾಜಕ್ಕೆ ಕೀರ್ತಿ ಬರುವಂತೆ ಮುನ್ನಡೆಯುವರೋ ಇಲ್ಲವೋ ಎಂಬುದನ್ನು ನೋಡುವದು ಹಿರಿಯರ ಕೆಲಸ. ಹಿರಿಯರು ಮುಂದೊಡ್ಡಿದ ಕೈಯ ಹರಕೆಯನ್ನು ತಲೆಯಲ್ಲಿ ಹೊತ್ತುಕೊಂಡೇ ಕಿರಿಯರು ಮುಂದಡಿಯಿಡಬೇಕು. ಹಿರಿಯರ ಚಾರಿತ್ರ್ಯವು ವಿಶ್ವಧ್ಯೇಯದ ಪಥಿಕರಾದ ಯುವಕರಿಗೊಂದು ದೀಪಸ್ತಂಭವಾಗಬೇಕು. ಆದುದರಿಂದ ಹಿರಿಯರು ಯುಕ್ತಜೀವನದ ದೃಷ್ಟಾಂತವನ್ನು ತರುಣರೆದುರಿನಲ್ಲಿ ಹಿಡಿಯಲಾರರು. ತಮಗೇ ಸತ್ಯದ ಯಥಾರ್ಥದರ್ಶನವಿಲ್ಲದವರಾದ ಅವರು ಸಪ್ರೋತ್ಸಾಹದ ತರುಣರಿಗೆ ಮಾರ್ಗದರ್ಶಕರಾಗಲಾರರು. ಅರ್ಥವಿಲ್ಲದ ಆಚಾರಗಳೆಂಬ ಪಸಿಲ್ಗುದುರೆಯನ್ನು ಬೆಂಬತ್ತಿದರು. ತರುಣರಿಗೆ ಸತ್ಯದ ಆಜ್ಞೆಯನ್ನು ಕೊಡಲಾರರು.

ಹೀಗಾಗಿ ತರುಣರು ಅನಾಯಕರಾಗಿದ್ದಾರೆ. ಯೌವನಸೋಚಿತ ಉತ್ಸಾಹಕ್ಕೆ ದಾರಿಯಂತೂ ದೊರೆಯಲೇಬೇಕು; ಆದರೆ ದಾರಿ ಯಾವುದು—ಎಂಬುದು ಹೊಳೆಯದು. ಈ ವಿಪತ್ತಿನಲ್ಲಿ ತರುಣರ ಶಕ್ತಿಯು ಚೆಲ್ಲಾಪಿಲ್ಲಿಯಾಗಿ ಬೆಳೆಯಬೇಕಾದಷ್ಟು ಹರಿದು ಹೋಗುತ್ತಿದೆ.

ವ್ಯವಸಾಯಾತ್ಮಿಕಾ ಬುದ್ಧಿರೇಕೇಹ ಕುರುನಂದನ, ಬಹುಶಾಖಾ ಹ್ಯನಂತಾಶ್ಚ ಬುದ್ಧಯೋಽವ್ಯವಸಾಯಿನಾಂ|| ಎಂದು ಗೀತೆಯಲ್ಲಿ ಬಹು ಮಾರ್ಮಿಕವಾಗಿ ಹೇಳಿದೆ. ನಿಶ್ಚಯಾತ್ಮಕವಾದ ಬುದ್ಧಿಯು ಒಂದೇ ತೆರನಾಗಿರುತ್ತದೆ. ಒಂದೇ ದಾರಿಯನ್ನು ಹಿಡಿದಿರುತ್ತದೆ. ನಿರ್ಣೀತ ಧ್ಯೇಯವಿಲ್ಲದ ಮಂಗಮನಸ್ಸು ಟೊಂಗೆಯಿಂದ ಟೊಂಗೆಗೆ ಜಿಗಿದಾಡಬೇಕೆನ್ನುತ್ತದೆ. ಇದೆಲ್ಲ ನಿಜ. ಆದರೆ ಆ ನಿಶ್ಚಿತ ಧ್ಯೇಯದ ಗುರುತಿಲ್ಲದೆ ಮುಂದೆ ಸಾಗುವದಾದರೂ ಎಂತು?

ತರುಣರಿಗೆ ದೂರಾಲೋಚನೆಗಿಂತಲೂ ಉತ್ಸಾಹವೇ ಸಹಜ. ಅವರು ತಟ್ಟನೆ ಮುಂದೆ ಬಂದ ನಿಟ್ಟನ್ನು ಹಿಡಿದು ಹೊರಟುಬಿಡುತ್ತಾರೆ. ಒಬ್ಬನು ರಾಜಕೀಯ ಪುಢಾರಿಯಾಗಲು ಹವಣಿಸುತ್ತಾನೆ. ಒಬ್ಬನು ಸುಧಾರಕನಾಗಲು ಬಯಸುತ್ತಾನೆ. ಒಬ್ಬನು ಸಂಪಾದಕನಾಗಲು ಹಾತೊರೆಯುತ್ತಾನೆ. ಒಬ್ಬನು ಪರಿಷತ್ತಿನ ಅಧ್ಯಕ್ಷ ಪದವಿಗಾಗಿ ತನ್ನ ಜೀವನವನ್ನು ನೀಡಿಕೊಳ್ಳುತ್ತಾನೆ...ಅಂತೂ ಮುಂದೆ ಬಂದು ದಕ್ಕಿ ತೆಕ್ಕೆ ಹಾಕುವ ಅದರ ತೆಕ್ಕೆಯಲ್ಲಿ ತಾವು ಸಿಕ್ಕಿಬೀಳುತ್ತಾರೆ. ಅವರ ಜೀವನವು ಆ ರೀತಿಯಾಗಿ ಮಾರ್ಪಟ್ಟು ಹೋಗುತ್ತದೆ. ಶ್ರದ್ಧಾಮಯೋಽಯಂ ಪುರುಷಃ ಯೋ ಯಚ್ಛ್ರದ್ಧಃ ಸ ಏವ ಸಃ|| ಯಾರ ಶ್ರದ್ಧೆಯು ಯಾವ ತೆರನಾಗಿರುವದೋ, ಆ ಶ್ರದ್ಧೆಯು ಅವರಾಗಿ ಬಿಡುತ್ತಾರೆ. ಆ ಶ್ರದ್ಧೆಯಲ್ಲಿಯೆ ಅವರಿಗೆ ಜೀವನವೆಂಬುದೆಲ್ಲ ಒಳಪಟ್ಟಿರುತ್ತದೆ. ಆ ಶ್ರದ್ಧೆಯ ಹೊರಗೂ 'ಜೀವನ' ವೆಂಬ ವಿರಾಟನ ವಿಶ್ವದೇಹವು ಪಸರಿಸಿಕೊಂಡಿರಬಹುದು—ಎಂಬುದು ಅವರಿಗೆ ಹೊಳೆಯುವದಿಲ್ಲ.

ಶ್ರದ್ಧೆಯೇನೋ ಸರಿಯಾದುದು. ಆದರೆ ಶ್ರದ್ಧೆಗೆ ವಿಶಾಲ ಜ್ಞಾನದ ಆಸರವು ದೊರೆಯಬೇಕು. ಆಗ ಅದು ತನ್ನ ಕಣ್ಣಿನಿಂದ ತನ್ನ ದಾರಿಯನ್ನು ಕಾಣುತ್ತ ಸಾಗುವದು. ಇಲ್ಲವಾದರೆ ಕುರುಡನು ಇನ್ನೊಬ್ಬರ ಕೈಯಾಸರವನ್ನು ಹಿಡಿದು ನಡೆದಂತೆ: ಆ ಆಸರ ತಪ್ಪಿದರೆ ತಡವರಿಸಲೇಬೇಕು. ಅವರ ಸಜ್ಞಾನಶ್ರದ್ಧೆಯು ನಿರಾಲಂಬವಾಗಿ ನಡೆಯಬಲ್ಲದು.

ಜನತಾಸೇವೆಗಾಗಿ ಉತ್ಸುಕನಾದವನು ಬುದ್ಧಿಯೋಗವನ್ನು ಅತ್ಯಗತ್ಯವಾಗಿ ಆಚರಿಸಲುಬೇಕು. ಈಗಿನ ಕಾಲವೊ?—ಆ ಯೋಗಮಾರ್ಗದಿಂದ ಪರಾಙ್ಮುಖನನ್ನಾಗಿ ಮಾಡಲು ಎಷ್ಟು ಬೇಕಷ್ಟು ರಂಭೆ ಮೇನಕೆಯರನ್ನೊದಗಿಸುತ್ತದೆ. 'ಕೂರ್ಮೋಂಗಾನೀವ ಸರ್ವಶಃ'—ಆಮೆಯು ತನ್ನ ಅವಯವಗಳನ್ನು ತನ್ನೊಳಕ್ಕೆ ಎಳೆದುಕೊಳ್ಳುವಂತೆ, ತನ್ನ ಪ್ರವೃತ್ತಿಗಳನ್ನು ನಿಗ್ರಹಿಸಿ, ಜ್ಞಾನದ ಉಪಾಸನೆಗೆ ಅವುಗಳನ್ನು ಹೂಡಲು ಪ್ರಯತ್ನಿಸುವದು ಈಗಿನ ಯುಗದಲ್ಲಿ ಅನಾಗರಿಕತೆಯು ಚಿಹ್ನೆಯಾಗಿದೆ. ಇದಕ್ಕೆ ಪ್ರತಿಯಾಗಿ ಆ ಪ್ರವೃತ್ತಿಗಳನ್ನು ತಡೆಯಿಲ್ಲದಂತೆ ಹೊರಕ್ಕೆ ಹರಿಬಿಟ್ಟು ಅವುಗಳ ಹರಿಯುವಿಕೆಯಲ್ಲಿ ತನ್ನನ್ನು ತೂರಿಕೊಂಡು ಬಿಡುವದು, ಅವುಗಳ ಹಸಿವಿಗೆ ಹೊಸ ಹೊಸ ಉರುವಲನ್ನು ತುರುಕುವದು—ಇದು ಆಧುನಿಕನು ಅಭಿಮಾನದಿಂದ ಪ್ರತಿನಿತ್ಯ ಮಾಡುವ ಕೆಲಸವಾಗಿದೆ.

ಇಂತಹ ಮನಸ್ಸಿನ ವ್ಯಗ್ರತೆಗೆ ತುಂಬ ಅನುಕೂಲವಾದ ಈ ಕಾಲದಲ್ಲಿ ಸೇವಾಪೇಕ್ಷಿಯಾದ ತರುಣನು ಕಣ್ಣಿಗೆ ಬಿದ್ದ ಯಾವುದಾದರೊಂದು ಕೆಲಸಕ್ಕೆ ಅಂಟಿಕೊಂಡು ಬಿಡುವನು. ಆತನಿಗೆ ಕಾರ್ಯವೇ ಮಹತ್ವದ್ದಾಗಿ ಬಿಡುತ್ತದಲ್ಲದೆ, ಅದರ ಹಿಂದಿನ ಹೇತು ಪರಾಮರಿಸುವದಿಲ್ಲ. ಆತನಿಗೆ ತನ್ನ ಕಾರ್ಯಕ್ಕೂ ಇತರರ ಅಂಗೀಕೃತಕಾರ್ಯಕ್ಕೂ ಜಾತಿವೈರವು ಕಾಣುತ್ತದೆ. ಕಾರ್ಯಕರ್ತರು ಕರ್ಮವೀರರು ಒಬ್ಬರನ್ನೊಬ್ಬರು ಹಳಿಯುತ್ತಿರುವದನ್ನು ನಾವು ನಿತ್ಯದಲ್ಲಿ ಕಾಣುವದುಂಟು. ಮಾನವಜೀವನವನ್ನು ವಿವಿಧರೀತಿಗಳಿಂದ ಸಮೃದ್ಧವಾಗಿ ಮಾಡಲು ಒದಗಿದೆ—ಮಾಡುವದು ಅಗತ್ಯ, ಎಂಬುದನ್ನು ಅವನು ಅರಿಯನು.

ನಿಜವಾದ ಕಾರ್ಯಸಾಪೇಕ್ಷಿಗೆ ಈ ಏಕಾಂಗವೃತ್ತಿಯು ಉಚಿತವಲ್ಲ. 'ಅನೇಕತ್ವ [illegible]' ಅತ ಕಾಣಬಲ್ಲವನಾಗಬೇಕು. ನೂರೊಂದು ಗಳನ್ನು ಒಂದರಲ್ಲಿ ನೋಡುವದು ಆತನಿಗೆ ಬರಬೇಕು. ಆತನು ಸಮಷ್ಟಿಯನ್ನು ದೃಷ್ಟಿಯಾಗಿರಬೇಕು.

ಹಲವರು 'ಕೆಲಸವೊಂದು ಬೆಳವಣಿಗೆ [illegible]' ಎಂದು ಹಾಡಿಹೊಗಳುತ್ತಿರುತ್ತಾರೆ. ಕಾರ್ಯದ ಗೌರವ ದೊಡ್ಡದಾದಂತೆ ಅವರಿಗೊಂದು ಒಗೆಯ ಮನಸಿಸುತ್ತದೆ. 'ಕಾರ್ಯಕ್ಕಾಗಿ ಕಾರ್ಯ' ಎಂದು ಅವರ ಮಂತ್ರವಾಗುತ್ತದೆ. ಆದರೆ ಗೌರವವು ಪರ್ವತಪ್ರಾಯವಾಗಿ ಬೆಳೆಯುವದರಲ್ಲಿ, ಸೂತ್ರವು ಎಲ್ಲಿಯೋ ತಪ್ಪಿ ಹೋಗಿರುತ್ತದೆ. ಕಾರ್ಯದ ವಿಶಾಲ ವಿಸ್ತಾರದಲ್ಲಿ ತಮ್ಮನ್ನೇ ತಾವು ಕಳೆದುಕೊಳ್ಳುತ್ತಾರೆ. ಇದಕ್ಕಾಗಿಯೇ ಕ್ರಿಸ್ತನು 'ನೀನು ಜಗತ್ತನ್ನು ಗೆದ್ದರಾದರೂ ಏನು—ನಿನ್ನ ಆತ್ಮವನ್ನು ನೀನು ಕಳೆದುಕೊಂಡರೆ?' ಎಂದೆಂದನು.

ಹಾಗಾದರೆ ನಮ್ಮ ಸೇವಾದರ್ಶವು ಏನಾಗಿರಬೇಕು? ಬರೀ ಕಾರ್ಯವಿಸ್ತಾರವು ನಮ್ಮ ಉದ್ದೇಶವಾಗಕೂಡದು. ಮಾನವನ ಬುದ್ಧಿಯನ್ನು ವಿಕಾಸಗೊಳಿಸುವದೇ ನಮ್ಮ ಗುರಿಯಾಗಿರಬೇಕು. ನೀವು ನೂರು ಭವ್ಯವಾದ ವಿದ್ಯಾಲಯಗಳನ್ನು ಕಟ್ಟಿಸಬಹುದು; ನೀವು ನೂರು ಆರೋಗ್ಯಭವನಗಳನ್ನು ನಿರ್ಮಿಸಬಹುದು; ಒಂದು ನವಮತವನ್ನು ಸ್ಥಾಪಿಸಿ ಸಾವಿರಗಟ್ಟಲೆ ಅನುಯಾಯಿಗಳನ್ನು ದೊರಕಿಸಬಹುದು: ಆದರೆ ನೀವು ಒಂದು ಜೀವನವನ್ನಾದರೂ ಕತ್ತಲೆಯ ಮುಷ್ಟಿಗೆಯಿಂದ ಬಿಡಿಸಿ, ಬೆಳಕಿನ ಬೀದಿಗೆ ಕರೆತಂದಿದ್ದರೆ, ನಿಮ್ಮ ಜೀವನವು ಸಾರ್ಥಕವಾಯಿತು.

'ಸೇವಾಧರ್ಮವು ಪರಮಗಹನವು—ಯೋಗಿಗಳಿಗೂ ಅಗಮ್ಯವು' ಎಂದು ನಮ್ಮ ಪೂರ್ವಿಕರು ಹೇಳಿದುದು ತೀರಾ ನಿಜ. ಏಕೆಂದರೆ ಈ ಧರ್ಮದೀಕ್ಷೆಯನ್ನು ಪರರಿಗೆ ಕೊಡಹೋಗುವವರು ಮೊದಲು ತಮಗೇ ಆ ದೀಕ್ಷೆಯನ್ನು ಕೊಟ್ಟುಕೊಳ್ಳಬೇಕಾಗುತ್ತದೆ. ತಮ್ಮ ಮನಸ್ಸನ್ನು ಆದೊಂದು ಒಗೆಯ ವಿಶಾಲ ಔನ್ನತ್ಯಕ್ಕೆ ಒಯ್ಯಬೇಕಾಗುತ್ತದೆ. ಅದೊಂದು ಉದಾರವಾದ—ಸರ್ವಸ್ಥಿತಿಗಳಲ್ಲಿಯೂ ಸಮವಾಗುಳಿಯಬಲ್ಲ ದೃಷ್ಟಿಯನ್ನು ಸಿದ್ಧಿಸಿಕೊಳ್ಳಬೇಕಾಗುತ್ತದೆ. ಬುದ್ಧಿಯ ಪೂರ್ಣತೆಯನ್ನು—ತಿಳುವಳಿಕೆಯನ್ನು—ಶೀಲತನವನ್ನು ಕಲಿತುಕೊಳ್ಳಬೇಕಾಗುತ್ತದೆ.

ಜಡತನ, ಹೊಲೆತನ, ಜಾತ್ರಿ ಮತ್ಸರ ಹೀನಾಯ, ಜಾತಿಮತಗಳ ಸೆಣಸಾಟ—ಈ ಮೊದಲಾದ ನಮ್ಮ ನಾಡಿನ ಮಲವು ದೋಷಗಳನ್ನು ನೀಗಬಲ್ಲವರ ಗುಟ್ಟು ಈ ಬುದ್ಧಿಯೋಗದಲ್ಲಿದೆ—ಈ ಸಾಮ್ಯಸಾಧನೆಯಲ್ಲಿದೆ. ಈ ವಿಶಾಲ ಉದಾರತೆಯೊಂದು ಸಿದ್ಧಿಸಿತಾದರೆ, ನಮ್ಮ ನಮ್ಮ ಗೇಣುದ್ದ ಗುಡಿಸಲಿನಲ್ಲಿಯೂ ಜನತಾರೂಪ ಜನಾರ್ದನನ ಪೂಜೆಯನ್ನು ನಾವು ಮಾಡಬಲ್ಲೆವು. ಮಾನವನ ಬುದ್ಧಿಯನ್ನು ಬಿಡುಗಡೆಗೊಳಿಸಿ, ಒಳಗಿನ ಕಳೆಕೊಳೆಯನ್ನೆಲ್ಲ ಕಿತ್ತು ತೆಗೆದು, ಅಲ್ಲಿ ಹೊಸ ಹೊಸ ಬೆಳೆಯನ್ನು ಬೆಳೆಸುವದು ನಮ್ಮ ಸಾಧನೆಯ ಸೂತ್ರವಾಗಿರಲಿ. ಸಂಪೂರ್ಣ ಮಾನವನೆ ನಮ್ಮ ಸೇವಾಯೋಗದ ಗುರಿಯಾಗಿರಲಿ.

'ಜ. ಕರ್ನಾಟಕ.'

ಕನ್ನಡ ಸಾಹಿತ್ಯದ ಮಹಿಮೆ.

ಶ್ರೀಮುರುಘಾ ಮಠದ ಶ್ರಾವಣೋತ್ಸವದಲ್ಲಿ ರವಿವಾರ ೨೮-೮-೩೩
ನೇ ದಿವಸ ಶ್ರೀ, ಜಹಾಗೀರದಾರರು ಕೊಟ್ಟ
ಉಪನ್ಯಾಸದ ಸಾರಾಂಶ.

ಎಲ್ಲ ಕಡೆಯಲ್ಲಿಯೂ ಕನ್ನಡ ನಾಡು ನುಡಿಗಳ ಅಭಿಮಾನವು ಬೆಳೆಯುತ್ತಲಿರುವ ಈಗಿನ ಕಾಲದಲ್ಲಿ ಕನ್ನಡ ಸಾಹಿತ್ಯವನ್ನು ಯಾಕೆ ಓದಬೇಕು? ಎಂಬ ಪ್ರಶ್ನೆಯು ಎಷ್ಟೋ ಜನರಿಗೆ ಅಪ್ರಾಸಂಗಿಕ ಎನ್ನಿಸಬಹುದು. ಆದರೆ ಬರಿಯ ಅಭಿಮಾನವು ಕಾರ್ಯಸಿದ್ಧಿಯ ವರೆಗೆ ಪೂರೈಸದು. ಇದಲ್ಲದೆ ಕನ್ನಡ ಸಾಹಿತ್ಯದ ಅವಶ್ಯಕತೆಯು ಈಗಿಲ್ಲವೆಂದು ಎಷ್ಟೋ ಜನರು ಅನೇಕ ಪ್ರಮಾಣಗಳಿಂದ ತೋರಿಸಿಕೊಡುವರು; ಆದುದರಿಂದ ಈ ಪ್ರಶ್ನೆಯ ಚರ್ಚೆಯನ್ನು ಇಲ್ಲಿ ಮಾಡಬೇಕಾಗಿದೆ.

೧. ನಮ್ಮ ಪ್ರಾಚೀನ ಸಂಸ್ಕೃತಿಯನ್ನು ಹಾಡಿ ಹೊಗಳುವ ಸಂಸ್ಕೃತ ಸಾಹಿತ್ಯವಿದೆ. ಆಧುನಿಕ ಆರ್ಯ ಸಂಸ್ಕೃತಿಯ ಅಭಿಮಾನ ಹುಟ್ಟಿಸುವಂಥ ಕವಿವರ್ಯ ರವೀಂದ್ರನಾಥ ಮೊದಲಾದವರಿಂದ ಮೆರೆಯುವಂಥಾ ಬಂಗಾಳಿ ಸಾಹಿತ್ಯವಿದೆ. ದಿನೇ ದಿನೇ ಬೆಳೆಯುತ್ತಲಿರುವ ಮರಾಠಿ ಸಾಹಿತ್ಯವು ನಮ್ಮ ನೆರೆಯಲ್ಲಿಯೇ ಇದೆ. ಇದಲ್ಲದೆ ಹೊಸ ವಿಚಾರಗಳು ಯ ಧೋರಣೆಗೆ ತಕ್ಕದೆನಿಸಿದ ಇಂಗ್ಲಿಷ ಸಾಹಿತ್ಯವಿದೆ. ಇವನ್ನೆಲ್ಲ ಬಿಟ್ಟುಕೊಟ್ಟು ಜೀವವಿಲ್ಲದ ಹಳೆಯ ಕನ್ನಡ ಸಾಹಿತ್ಯವನ್ನಾಗಲೀ, ಇದೀಗ ಚೇತನಗೊಳ್ಳುತ್ತಲಿರುವ ಹೊಸ ಕನ್ನಡ ಸಾಹಿತ್ಯವನ್ನಾಗಲೀ ಓದಲೇ ಬೇಕೆನ್ನುವದು ಹುಚ್ಚುತನವಲ್ಲವೇ? ಎಂಬದೊಂದು ಆಕ್ಷೇಪ.

ಹುಚ್ಚುತನವು ಇಂತಹುದಿದ್ದರೆ ಆಕ್ಷೇಪಿಸುವವರಲ್ಲಿ ಕೂಡ ಅದು ಇದೆಯೆಂದು ಹೇಳಬಹುದು. ಇನ್ನೊಂದು ಜನರು ಉಂಡುಟ್ಟು ಸುಖದಿಂದಿರಲು ನಾವೇಕೆ ಅದಕ್ಕಾಗಿ ಹೆಣಗಬೇಕು? ಅಮೇರಿಕೆಯು ಚಿತ್ರಪಟಗಳನ್ನು ತಯಾರಿಸುತ್ತಿರಲು ನಾವೇಕೆ ಆ ಉದ್ಯೋಗವನ್ನು ಕೈಕೊಳ್ಳಬೇಕು? ಎಂದು ಯಾರಾದರೂ ಆಕ್ಷೇಪಗಳನ್ನು ತೆಗೆಯಬಹುದಲ್ಲವೇ? ಉಣ್ಣುವದು ಶರೀರಪೋಷಣೆಗೆ ಅವಶ್ಯ, ಮನರಂಜನೆಯು ಬೆಳವಣಿಗೆಗೆ ಅವಶ್ಯ; ಆದುದರಿಂದ ಅವುಗಳನ್ನು ಕೈಕೊಳ್ಳುವೆವು. ಆದರೆ ಸಾಹಿತ್ಯದಿಂದ ಶರೀರ ಪೋಷಣೆ ಇದೆಯೋ? ಸರ್ವ ಸಾಮಾನ್ಯ ಮನರಂಜನೆ ಇದೆಯೋ? ಎಂಬುದಿನ್ನೊಂದು ಆಕ್ಷೇಪವು ತೋರಬಹುದು.

೨. ಸಾಹಿತ್ಯದಿಂದ ಶರೀರಪೋಷಣೆಯಾಗಲೀ, ಮನರಂಜನೆಯಾಗಲೀ ಇಲ್ಲವೆಂದು ಒಂದು ನಿಮಿಷ ಒಪ್ಪುವ. ಆದರೆ ಈ ಜೀವನದ ಧ್ಯೇಯವು ಶರೀರ ಪೋಷಣೆಯೇ? ಮನರಂಜನೆಯೆ ಜೀವನದ ಉದ್ದಿಷ್ಟವೆ? ಹಾಗಿದ್ದಲ್ಲಿ ಸಮಾಜವು ಸುರಕ್ಷಿತ ಇಲ್ಲವೆ ಸುನಿಯಂತ್ರಿತವಾಗುತ್ತಿರಲಿಲ್ಲ. ಒಬ್ಬನ ಶರೀರವು ಇನ್ನೊಬ್ಬನ ಪೋಷಣೆಗೆ ತುತ್ತಾಗುತ್ತಿತ್ತು. ಒಬ್ಬನ ಮನರಂಜನೆಯು ಇನ್ನೊಬ್ಬನ ಮನಸನ್ನು ಕೆಡಿಸುತಿತ್ತು. ಶರೀರಪೋಷಣೆಯಾಗಲೀ, ಮನರಂಜನೆಯಾಗಲೀ ಜೀವನದ ಸಾಧನಗಳು, ಜೀವನದ ಸಾಧ್ಯಗಳಲ್ಲ. ಜೀವನವು ಒಂದು ಯಂತ್ರ, ಎಂದಿನಿಂದಲೂ ತಾನಾಗಿಯೇ ನಡೆದಿದೆ; ಜೀವವು ಒಂದು ಶಕ್ತಿ. ಕೇವಲ ಶಕ್ತಿ ಇದ್ದಲ್ಲಿ ಸಿದ್ಧಿಯ ಸಂಭವವು ಯಾವಾಗಲೂ ಇದ್ದುದರಿಂದ, ಕೇವಲ ಯಂತ್ರವಿದ್ದಲ್ಲಿ ಸಿದ್ಧಿಯು ಇದ್ದೇ ಇರುವದೆಂಬ ನಿಯಮವಿಲ್ಲದ್ದರಿಂದ ಜೀವನದಕ್ಕಿಂತಲೂ ಜೀವವೇ ಹಿರಿದೆನ್ನಬಹುದು. ಆದುದರಿಂದ ಜೀವದ ಪೋಷಣೆ ಮತ್ತು ರಂಜನೆಯೇ ಮುಖ್ಯವಾದುವುಗಳು. ಜೀವಕ್ಕಾದರೂ ಆಹಾರವಿದೆ, ವಿಹಾರವಿದೆ; ಆಚಾರವೇ ಜೀವದ ಆಹಾರ, ವಿಚಾರವೇ ಜೀವದ ವಿಹಾರ. ಅನ್ನದಿಂದ ಶರೀರಕ್ಕೆ ಒಂದು ಸ್ವರೂಪ ಬರುವಂತೆ, ಆಚಾರದಿಂದ ಜೀವಕ್ಕೆ ಒಂದು ಸ್ವರೂಪ ಬರುವದು. ರಂಜನೆಯಿಂದ ಶರೀರಕ್ಕೆ ಒಂದು ಕಳೆಯೇರುವಂತೆ ವಿಚಾರದಿಂದ ಜೀವಕ್ಕೊಂದು ಕಳೆಯೇರುವದು. ಜೀವದ ಸ್ವರೂಪವೆಂದರೆ ಕುಟುಂಬ, ಸಮಾಜ, ರಾಷ್ಟ್ರ, ಜನಾಂಗ ಮುಂತಾದುವುಗಳು; ಜೀವದ ಕಳೆಯೆಂದರೆ [illegible]. ಸ್ವರ್ಗನಿವಾಸ ಎಂಬವುಗಳು ಸ್ವರೂಪದಿಂದ ಜೀವ ಸುಳಿದಾಡುವದು, ಕಳೆಯಿಂದ ಜೀವ ಬೆಳೆದಾಡುವದು. ಯಾವ ಪ್ರಕಾರ ಚಿತ್ರಕ್ಕೆ ರೇಖೆಗಳಿಂದ ಸ್ವರೂಪ ಮತ್ತು ಬಣ್ಣದಿಂದ ಕಳೆ ತುಂಬುವದೋ, ಯಾವ ಪ್ರಕಾರ ಸಂಗೀತಕ್ಕೆ ವೀಣೆಯಿಂದ ಸ್ವರೂಪ ಮತ್ತು ಸ್ವರಗಳಿಂದ ಕಳೆ ಏರುವದೋ, ಅದೇ ಪ್ರಕಾರ ಜೀವಕ್ಕೆ ಶಬ್ದದಿಂದ, ಸ್ವರೂಪ ಬರುವದು, ಭಾಷೆಯಿಂದ ಕಳೆಯೇರುವದು. ಜೀವ ಮತ್ತು ಜಗತ್ತಿನ ಸಂಬಂಧ ಶಬ್ದದಿಂದ, ಜೀವ ಮತ್ತು ಜೀವದ ಸಂಬಂಧ ಭಾಷೆಯಿಂದ, ಶಬ್ದವಿಲ್ಲದೆ ಹೆಸರು ಇಲ್ಲ, ಹೆಸರು ಇಲ್ಲದ ವಸ್ತು ಇಲ್ಲ, ವಸ್ತುವಿಲ್ಲದೆ ಅದರ ಸಂಬಂಧವಿಲ್ಲ; ಅದರಂತೆಯೆ ಶಬ್ದವಿಲ್ಲದೆ ಭಾಷೆಯಿಲ್ಲ, ಭಾಷೆಯಿಲ್ಲದೆ ವಿಚಾರವಿಲ್ಲ. ಹೀಗಾಗಿ ಜೀವಕ್ಕೂ ಭಾಷೆಗೂ ನಿಕಟ ಸಂಬಂಧವಿದೆ, ತದ್ದ್ವಾರ ಜೀವಕ್ಕೂ ಸಾಹಿತ್ಯಕ್ಕೂ ಸಂಬಂಧವಿದೆ.

೩. ಆ ಸಂಬಂಧವು ವಿಶಿಷ್ಟವಿದೆ. ಜಗತ್ತಿಗೆ ಒಂದೇ ಭಾಷೆಯ ಸಂಬಂಧ—ಅದನ್ನು ಮಾತನಾಡುವ ವ್ಯಕ್ತಿಯೊಬ್ಬನದೇ ಸಂಬಂಧ. ಅದುದರಿಂದ ಕನ್ನಡದಲ್ಲಿ ಹುಟ್ಟಿ ಕನ್ನಡದಲ್ಲಿ ಬೆಳೆದ ಮನುಷ್ಯನ ಸಂಬಂಧವು ಕನ್ನಡದಲ್ಲಿಯೇ ಆಗುವುದಲ್ಲದೆ ಮತ್ತಾವ ಭಾಷೆಯಲ್ಲಿಯೂ ಇಲ್ಲ; ಕನ್ನಡಿಗನಿಗೆ ಒಂದು ವಸ್ತುವಿನ ಜ್ಞಾನವು ಕನ್ನಡ ಶಬ್ದದಿಂದಾಗುವಂತೆ ಮತ್ತಾವ ಭಾಷೆಯ ಶಬ್ದದಿಂದಲೂ ಆಗುವದಿಲ್ಲ. ಆದುದರಿಂದ ನಮಗೆ ಕನ್ನಡ ಸಾಹಿತ್ಯದ ಪರಿಚಯವು ಅವಶ್ಯಕ, ಅದು ನಮ್ಮ ಜೀವದ ಪೋಷಣೆ.

೪. ಹಳೆಗನ್ನಡವೆಂಬ ತಿಳಿಯಲಾರದ ಭಾಷೆಯಲ್ಲಿ ಬರೆದ ಸಾಹಿತ್ಯದಿಂದ ನಮಗೇನು ಲಾಭ ಎಂದು ಯಾರೂ ಅನ್ನುವಂತಿಲ್ಲ. ತಮ್ಮ ಸಮಾಜದಲ್ಲಿ ರೂಢವಾದ ಮತ್ತು ತಿಳಿಯುವಂಥ ಭಾಷೆಯಲ್ಲಿಯೇ ಬರೆದಿದೆ ಎಂದು ಎಷ್ಟೋ ಕವಿಗಳು ಹೇಳಿಕೊಂಡಿರುವರು. ನಮಗೆ ತಿಳಿಯದಿದ್ದರೆ ಅದು ನಮ್ಮ ದೋಷವಲ್ಲದೆ ಸಾಹಿತ್ಯದ ದೋಷವಲ್ಲ. ಅನ್ಯ ಭಾಷೆಗಳನ್ನು ಕಲಿಯುವ ನಮ್ಮಲ್ಲಿ ಅಂಥಾ ಆಕ್ಷೇಪ ಮಾಡುವ ಯೋಗ್ಯತೆ ಇಲ್ಲ. ಅದರಂತೆ ಕನ್ನಡ ಸಾಹಿತ್ಯಕ್ಕೆ ಹೇಳಿಕೊಳ್ಳುವಂಥಾ ಸಂಸ್ಕೃತಿ ಇದೆಯೆ ಎಂದು ಯಾರೂ ಹಳಿಯಕೂಡದು. ಜಗತ್ತಿನ ಇತಿಹಾಸವನ್ನು ನೋಡಿದರೆ ಸಂಸ್ಕೃತಿ ಎಂಬುವುದು ಜನಾಂಗದಿಂದ ಜನಾಂಗಕ್ಕೆ ಹರಡಿದೆಯಲ್ಲದೆ ಪ್ರತಿಯೊಂದು ಜನಾಂಗದಲ್ಲಿ ಬೇರೆ ಬೇರೆಯಾಗಿ ಬೆಳೆದಿಲ್ಲ. ಆರ್ಯ ಸಂಸ್ಕೃತಿಯು ಶ್ರೇಷ್ಠವಾದುದಾದರೆ ಅದನ್ನು ಅರಿತುಕೊಳ್ಳಲು ಅವಶ್ಯ ಇಲ್ಲವೆ ಯೋಗ್ಯತೆ ಇಲ್ಲದವರ ಧನಸಹಿಂದ ಅದನ್ನು ಕನ್ನಡದಲ್ಲಿ ತಿಳಿಸಿಕೊಟ್ಟ ಕವೀಶ್ವರರು ಪಂಡಿತರು.

ಕೊಡಗು.

ಸನ್ ೧೯೩೨ನೇ ಇಸವಿ

ಸೆಪ್ಟಂಬರ್ ತಾ. ೯ನೇ ಶುಕ್ರವಾರ.

ಪ್ರೆಸ್ ಆರ್ಡಿನೇನ್ಸ್

ಜಾರಿಯಲ್ಲಿರುವವರೆಗೆ

ನಾವು

ಅಗ್ರಲೇಖನ

ವನ್ನು

ಪ್ರಕಟಿಸುವುದಿಲ್ಲ.

ವೈಸರಾಯರ ಭಾಷಣ.

ಈ ತಾ. ೫ರಲ್ಲಿ ವೈಸರಾಯರು ಎಸೆಂಬ್ಲಿಯಲ್ಲಿ ಮಾಡಿದ ಭಾಷಣದಲ್ಲಿ ಹಿಂದೂಸ್ಥಾನದ ಈಗಿನ ರಾಜಕೀಯ ಪರಿಸ್ಥಿತಿಗೆ ಸಂಬಂಧಪಟ್ಟ ಭಾಗವನ್ನು ಈ ಕೆಳಗೆ ಕೊಡಲಾಗಿದೆ.

ಕಾನೂನು ಭಂಗ ಚಳವಳ.

ಈಗ ನಾನು ರಾಜಕೀಯ ವಿಚಾರದ ವಿಷಯ ಹೇಳಲಿಚ್ಛಿಸುತ್ತೇನೆ. ಮೊದಲಾಗಿ ಕಾನೂನುಭಂಗದ ಚಳವಳವನ್ನು ಕುರಿತು ಹೇಳಬೇಕಾಗಿದೆ. ಈ ಚಳವಳವು ಹೇಗೆ ಪ್ರಾರಂಭವಾಯಿತೆಂತ ನೆನಸಿಕೊಳ್ಳಬೇಕಾಗಿದೆ. ರಾಜಕೀಯ ವಿಚಾರದಲ್ಲಿ ನೆನಪು ದೀರ್ಘಕಾಲವಿರುವುದಿಲ್ಲ. ತಮ್ಮ ಮುಂದೆ ನಡೆಯುವ ವಿದ್ಯಮಾನಗಳ ಮೇಲೆಯೇ ದೃಷ್ಟಿಯೆಲ್ಲಾ ನೆಟ್ಟಿರುವುದು ಸ್ವಾಭಾವಿಕ. ಮಿ. ಗಾಂಧಿಯವರೇ ಮುಂತಾದ ಪ್ರತಿನಿಧಿಗಳು ದುಂಡುಮೇಜು ಪರಿಷತ್ತಿನಲ್ಲಿ ಹಿಂದೂಸ್ಥಾನದ ರಾಜಕೀಯ ರಚನೆಯ ವಿಷಯದಲ್ಲಿ ಬ್ರಿಟಿಷ್ ಪಾರ್ಲಿಮೆಂಟಿನ ಪ್ರತಿನಿಧಿಗಳ ಕೂಡೆ ಕಲೆತು ಸಾಧ್ಯವಿದ್ದಷ್ಟು ಮಟ್ಟಿಗೆ ಒಗ್ಗಟ್ಟಿಗೆ ಬರಬೇಕೆಂತ ಪ್ರಯತ್ನಿಸುತ್ತಿದ್ದಾಗ್ಯೆ ಅವರ ಹಿಂಬಾಲಕರನ್ನವರು ಎರಡು ಪ್ರಾಂತ್ಯಗಳಲ್ಲಿ ಶಾಂತ ರೀತಿಯ ಸರಕಾರವು ಅಸಾಧ್ಯವಾಗುವಂಥ ಚಳವಳವನ್ನು ಬಲವಾಗಿ ನಡಿಸುತ್ತಿದ್ದರು.

ಸಂಯುಕ್ತ ಪ್ರಾಂತ್ಯದಲ್ಲಿ ಕಂದಾಯ ಮತ್ತು ಗೇಣಿ ಕೊಡಬಾರದೆಂಬ ಚಳವಳವು ಪ್ರಾರಂಭಿಸಲ್ಪಟ್ಟಿತು. ರೈತರು ಅಸಾಧಾರಣವಾದ ಆರ್ಥಿಕ ಸಂಕಟದಲ್ಲಿದ್ದಾಗ ನಮ್ಮ ಆರ್ಥಿಕ ರಚನೆಗೆ ಅಪಾಯವನ್ನುಂಟು ಮಾಡುವಂಥ, ರೈತರಿಗೆ ಕಾನೂನಿನ ಮೇಲೆ ಇದ್ದ ಗೌರವವನ್ನು ಹೋಗಲಾಡಿಸುವಂಥ ಚಳವಳವನ್ನು ಹಬ್ಬಲು ಬಿಟ್ಟಿದ್ದರೆ ಪರಿಣಾಮವು ಬಹಳ ಕಠಿಣತರದ್ದಾಗುತ್ತಿತ್ತು.

ವಾಯವ್ಯ ಸರಹದ್ದಿನ ಪ್ರಾಂತ್ಯದಲ್ಲಿ ಅರ್ಧ ಮಿಲಿಟರಿ ರೀತಿಯಲ್ಲಿ ತರಬೇತು ಹೊಂದಿದ ಸ್ವಯಂ ಸೇವಕರ ಮೂಲಕ ಅಖಿಲ ಹಿಂದೂಸ್ಥಾನಕ್ಕೇನೇ ಇನ್ನೂ ಹೆಚ್ಚಿನ ಅಪಾಯವನ್ನುಂಟು ಮಾಡುವ ಕ್ರಾಂತಿಕಾರಿಯಾದ ಚಳವಳವನ್ನು ಸ್ಥಾಪಿಸಿದ್ದರು. ಇದನ್ನು ಹೆಚ್ಚಿಗೆ ಬೆಳೆಯಲು ಬಿಡಲು ಸಾಧ್ಯವೇ ಇಂಲಿಲ್ಲ. ಈ ಚಳವಳಗಳನ್ನು ನಿಲ್ಲಿಸಲು ನನ್ನ ಸರಕಾರವು ಮಾಡಿದ ಏರ್ಪಾಡಿಗಾಗಿ ಒಟ್ಟು ಹಿಂದೂಸ್ಥಾನದಲ್ಲೆಲ್ಲಾ ಕಾನೂನು ಭಂಗವನ್ನು ಕಾಂಗ್ರೆಸ್ಸಿನವರು ಪ್ರಾರಂಭಿಸಿದರು. 25—1—32ರಲ್ಲಿ ನಾನು ಎಸೆಂಬ್ಲಿ ಮುಂದೆ ಮಾತಾಡಿದಾಗ ಈ ವಿದ್ಯಮಾನಗಳು ನಮಗೆಲ್ಲಾ ಹೊಸದಾಗಿ ಇತ್ತು; ಪರಿಣಾಮವೇನಾಗುತ್ತದೆಂತ ಆಗ್ಯೆ ಗೊತ್ತಿತ್ತಿಲ್ಲ. ಆದರೆ ಈ ವಿಷಯದಲ್ಲಿ ಕಾಂಗ್ರೆಸಿನೊಂದಿಗೆ ರಾಜಿಯಿಲ್ಲವೆಂತಲೂ, ಈ ಚಳವಳವನ್ನು ಮುರಿಯಲು ಸರಕಾರಕ್ಕೆ ಸಾಧ್ಯವಿರುವ ಉಪಾಯಗಳನ್ನೆಲ್ಲಾ ಹೂಡುತ್ತೇವೆಂತಲೂ, ಆವಶ್ಯವಿರುವವರೆಗೂ ಅಂಥಾ ದಾರಿಯನ್ನು ಬಿಡುವುದಿಲ್ಲವಾಗಿಯೂ ಹೇಳಿದ್ದೆನು. ಈಗ ೮ ತಿಂಗಳುಗಳಲ್ಲಿ ಇದೇ ನಮ್ಮ ರಾಜನೀತಿಯಾಗಿದೆ. ಇನ್ನು ಮುಂದೆ ಸಹ ಇದೇ ನೀತಿಯಾಗಿರುತ್ತದೆಯೆಂತ ಸ್ಪಷ್ಟವಾಗಿ ತಿಳಿಸಬೇಕಾಗಿದೆ. ಈ ನೀತಿಯಿಂದ ವಿಶೇಷವಾದ ಜಯವಾಗಿದೆ. ಸಂಯುಕ್ತ ಪ್ರಾಂತ್ಯದ ಕಂದಾಯ ಕೊಡದ ಚಳವಳವು ಸತ್ತೇ ಹೋಯಿತು. ವಾಯುವ್ಯ ಪ್ರಾಂತ್ಯದ 'ಕೆಂಪು ಅಂಗಿ' ಚಳವಳವನ್ನು ಶೀಘ್ರದಲ್ಲೇ ಹತೋಟಿಗೆ ತರಲಾಯಿತು. ಒಟ್ಟು ಹಿಂದೂಸ್ಥಾನದಲ್ಲಿ ಜನ ಸಮುದಾಯಕ್ಕೆ ಕಾನೂನುಭಂಗದಲ್ಲಿ ಏನೂ ಸಂಬಂಧವಿಲ್ಲದ್ದಾಗಿದೆ. ಅಲ್ಲದೆ ಈ ಚಳವಳವನ್ನು ನಿಲ್ಲಿಸಿ, ಶಾಂತಿ ಸಮಾಧಾನವಾಗಿದೆಯೆಂತ ಜನಸಮುದಾಯಕ್ಕೆ ತೃಪ್ತಿಯಾಗಿದೆ. ಮೊದಲನೇ ಎರಡು ತಿಂಗಳಲ್ಲಿ ಸಜೆ ಶಿಕ್ಷೆಯು ಹೆಚ್ಚಾಗಿತ್ತು; 32000ಕ್ಕಿಂತ ಹೆಚ್ಚಾಗಿ ಆಯಿತು. ಅನಂತರ ಕೈದಿಗಳ ಸಂಖ್ಯೆಯು ಕಡಿಮೆಯಾಗಿದೆ. ಮತ್ತು ಈಚೆಗೆ ಅನೇಕರನ್ನು ತಮ್ಮ ಮಾಯಿದೆ ತೀರಿದ ನಂತರ ಅಥವಾ ತಾವು ಈ ಚಳವಳಕ್ಕೆ ಇನ್ನು ಮೇಲೆ ಸೇರುವುದಿಲ್ಲವೆಂಬ ಭರವಸೆ ಕೊಟ್ಟದ್ದಕ್ಕಾಗಿಯೂ ಬಿಡುಗಡೆ ಮಾಡಲಾಗಿದೆ. ಜೈಲಿನಲ್ಲಿರುವವರ ಸಂಖ್ಯೆಯು ಕಡಿಮೆಯಾಗುತ್ತಲಿದೆ. ಜೈಲಿನಲ್ಲಿ ಇದ್ದ ದೊಡ್ಡ ಸಂಖ್ಯೆಯು ಏಪ್ರಿಲ್ ತಿಂಗಳಲ್ಲಿಯಾಗಿದೆ. ಆಗ ಮೂವತ್ತೆರಡೂವರೆ ಸಾವಿರಕ್ಕಿಂತ ಹೆಚ್ಚಾಗಿದ್ದರು. ಜುಲೈ ಆಖೈರಿನಲ್ಲಿ 24000 ಜನರಿದ್ದರು. ೪ ತಿಂಗಳಲ್ಲಿ 5000 ಕೈದಿಯರು ಕಡಿಮೆಯಾದರು.

ಕಾಂಗ್ರೆಸೂ, ಸರಕಾರವೂ.

ಕಾನೂನು ಭಂಗದ ಚಳವಳವು ಮುಗಿಯಿತೆಂತ ನಾನು ಹೇಳುವುದಿಲ್ಲ. ಅದರಿಂದ ಆಗುವ ಅಪಾಯವನ್ನು ತಪ್ಪಿಸುವುದಕ್ಕೆ ಸರಕಾರದ ಭದ್ರತೆಗಳನ್ನು ಕಡಿಮೆ ಮಾಡಲು ಸಾಧ್ಯವಿಲ್ಲ. ಕಾಂಗ್ರೆಸ್ಸು ಒಂದು ವಿಸ್ತಾರವಾಗಿ ಹರಡಿದ ಸಂಸ್ಥೆಯಾಗಿದೆ. ಅದರ ಸದಸ್ಯರಲ್ಲದೆ, ಅದರ ಹೊರಗಿರುವ ವಿದ್ಯಾವಂತರಲ್ಲಿ ಅನೇಕರ ಸಹಾನುಭೂತಿಯು ಕೆಲವು ಮಟ್ಟಿಗೆ ಅದರ ಕಡೆಗಿದೆ. ಕಾನೂನು ಭಂಗವನ್ನು ನಡಿಸುವ ಕಾರ್ಯಕ್ರಮವು ಇದ್ದೇ ಇದೆ. ಹೋರಾಟವನ್ನು ನಡಿಸುತ್ತಲೇ ಇರಲು ಅದರಿಂದ ಸಾಧ್ಯವಿರುವಷ್ಟು ಪ್ರಯತ್ನ ಮಾಡುತ್ತದೇ ಇದೆ. ಕಾಂಗ್ರೆಸ್ ಮುಂದಾಳುಗಳು ಈ ಚಳವಳದಿಂದ ಜಯವಾಗಲಿಲ್ಲವೆಂತ ಯಾವಾಗ ತಿಳಿಯುತ್ತಾರೆ, ಅಥವ ಜಯವಾಗಲಿಲ್ಲವೆಂತ ಯಾವಾಗ ಒಪ್ಪಿಕೊಳ್ಳುತ್ತಾರೆ ಎಂತ ಹೇಳಲು ಸಾಧ್ಯವಿಲ್ಲ. ಸರಕಾರವು ಈಗಿನ ರಾಜನೀತಿಯನ್ನು ಅನುಸರಿಸುವಷ್ಟು ಕಾಲ ಈ ಚಳವಳ ಜಯವಾಗುವುದಿಲ್ಲವೆಂತ ಸರಕಾರದ ಪರವಾಗಿ ನಾವು ಹೇಳಬಹುದಷ್ಟೆ.

ಆರ್ಡಿನೆನ್ಸನ್ನು ಕಾನೂನಾಗಿ ಮಾಡಿಕೊಳ್ಳುವಿಕೆ.

ಈ ಜಯವಾಗಬೇಕಾದರೆ ಸರಕಾರವು ಏನೇನು ಮಾಡಬೇಕೆಂತ ನೆನಸಿಕೊಳ್ಳಬೇಕಾಗಿದೆ. ಕಾಂಗ್ರೆಸು ತನ್ನ ಚಳವಳವನ್ನು ಪ್ರಾರಂಭಿಸಿದ ಕೂಡಲೇ ನಾನು ಸರಕಾರದ ಅನುಮತಿಯೊಡನೆ ಕೆಲವು ಆರ್ಡಿನೇನ್ಸ್‌ಗಳನ್ನು ಹೊರಡಿಸಿದೆ. ಇವುಗಳ ಮಾಯಿದೆಯು ಆರು ತಿಂಗಳುಗಳಲ್ಲಿ ಗತಿಸಿದಾಗ ಕಾನೂನು ಭಂಗವನ್ನು ನಿಲ್ಲಿಸಲು ಉಪಯೋಗಿಸಿದ ಶಸ್ತ್ರಗಳನ್ನು ಬಿಟ್ಟುಕೊಡಲು ಸಾಧ್ಯವಿಲ್ಲವೆಂತ ತೋರಿದ್ದರಿಂದ ಹೊಸ ಆರ್ಡಿನೇನ್ಸ್ ಒಂದನ್ನು ಹೊರಡಿಸಿದೆ. ಆವಶ್ಯವಿಲ್ಲದ ಪ್ರಾಂತ್ಯಗಳಲ್ಲಿ ಆರ್ಡಿನೇನ್ಸ್ ಜಾರಿಯಲ್ಲಿರದಂತೆ ಎಚ್ಚರ ತೆಗೆದುಕೊಳ್ಳಲಾಯಿತು. ಈ ವರ್ಷದ ಆಖೈರಿನಲ್ಲಿ ಈ ಆರ್ಡಿನೇನ್ಸಿನ ಮಾಯಿದೆಯೂ ತೀರುತ್ತದೆ. ಅನಂತರ ಏನು ಮಾಡಬೇಕೆಂತ ನನ್ನ ಸರಕಾರವು ಬಹು ಜಾಗರೂಕತೆಯಿಂದ ಯೋಚಿಸುತ್ತಿದೆ. ಆರ್ಡಿನೇನ್ಸಿನ ಹೆಚ್ಚಿನ ಭಾಗಗಳನ್ನು ಸಾಧಾರಣ ಕಾನೂನಿಗೆನೇ ಸೇರಿಸಬೇಕೆಂತ ನಿಶ್ಚಯಿಸಿದ್ದೇವೆ. ಈಗಿನ ಚಳವಳವನ್ನು ನಿಲ್ಲಿಸಲಿಕ್ಕೆ ಮಾತ್ರವಲ್ಲ, ಮುಂದೆ ಇಂಥಾ ಚಳವಳ ಹೊರಡದಂತೆ ಮಾಡಲು ಸಹ ಇಂಥಾ ಕಾನೂನಿನ ಆವಶ್ಯಕತೆ ಇದೆ. ಅಷ್ಟು ಅಲ್ಲದೆ ಆವಶ್ಯವಿರುವ ಪ್ರಾಂತ್ಯಗಳಲ್ಲಿ ಆರ್ಡಿನೇನ್ಸಿನ ಇತರ ಭಾಗಗಳನ್ನು ಒಳಕೊಂಡ ಪ್ರಾಂತೀಕ ಕಾನೂನುಗಳನ್ನು ಮಾಡಿಕೊಳ್ಳಬೇಕಾಗಿದೆ. ಈ ಚಳವಳವು ಅಡಗಿಸಲ್ಪಡುವಂತೆಯೂ, ಇನ್ನು ಮುಂದೆ ಪುನಃ ಹುಟ್ಟದಂತೆಯೂ ಮಾಡಬೇಕಾದದ್ದು ನಮ್ಮ ಕರ್ತವ್ಯವಾಗಿದೆ.

ಇಂಥಾ ಕಾನೂನು ಮಾಡಿಕೊಳ್ಳಬೇಕೆಂಬುದು ನನ್ನ ಸರಕಾರಕ್ಕೆ ತೃಪ್ತಿಯಿಲ್ಲ. ಆದರೆ ಈಗ ಹರಡಿದ ಅಭಿಪ್ರಾಯಗಳನ್ನೂ, ರೀತಿಗಳನ್ನೂ ಮುರಿಯಲು ಬಲವಾದ ವಿರೋಧವನ್ನೇ ಮಾಡಬೇಕಾಗಿದೆ. ಕಾಂಗ್ರೆಸಿನವರು ಜುಲುಮಿನ ಕಾರ್ಯವನ್ನು ಅಂಗೀಕರಿಸಿದ್ದಾರೆ. ಹಿಂದೂಸ್ಥಾನದಲ್ಲಿ ಸ್ವರಾಜ್ಯ ಸ್ಥಾಪಿಸಬೇಕೆಂಬದೇ ಸರಕಾರದ ತತ್ವವಾಗಿದೆ. ಕಾಂಗ್ರೆಸಿನ ಕಾರ್ಯಕ್ರಮವು ಕಾನೂನು ಮೀರಿ ನಡೆಯುವುದಾದ ಕಾರಣ ಸ್ವರಾಜ್ಯಕ್ಕೆ ವಿರೋಧವಾಗಿದೆ.

ದುಂಡು ಮೇಜು ಪರಿಷತ್ತಿನ ಅಂತ್ಯ ಭಾಗದಲ್ಲಿ ಮಂ. ಪ್ರಧಾನಿಯವರು ಹೇಳಿರುವಂತೆ ನ್ಯಾಯಪದ್ಧತಿಯುತ ಸಭೆಗಳಿಗೆ ಸಾಧ್ಯವಿದ್ದಷ್ಟು ಜವಾಬ್ದಾರಿ ಕೊಡಬೇಕೆಂಬದೇ ಸರಕಾರದ ಧ್ಯೇಯವಾಗಿದೆ; ಅಂದರೆ ವಾದ, ತರ್ಕ ಮತ್ತು ನ್ಯಾಯ ರೀತಿಯಿಂದ ಜನರು ತಿಳಸುವ ಅಭಿಪ್ರಾಯಕ್ಕನುಗುಣವಾಗಿ ಸರಕಾರವು ನಡೆಯಬೇಕೆಂಬದೇ ಸರಕಾರದ ಧ್ಯೇಯ. ಆದರೆ ಕಾಂಗ್ರೆಸಿನ ರೀತಿಯು ಜನರನ್ನು ಒಪ್ಪಿಸುವುದರಿಂದಲ್ಲ, ಜುಲುಂ ಪಡಿಸುವುದರಿಂದಲೇ ತಮ್ಮ ಅಭಿಪ್ರಾಯವು ಜಾರಿಗೆ ಬರಬೇಕೆಂತ ಆಗಿದೆಯೆಂದು ಹೇಳಿದರೆ ನಾನು ಕಾಂಗ್ರೆಸಿಗೆ ಅನ್ಯಾಯ ಮಾಡಿದಂತಾಗುವುದಿಲ್ಲ. ಕಾಂಗ್ರೆಸಿನ ಈಗಿನ ರೀತಿ ಪ್ರಕಾರ ಉಪಯೋಗಿಸುವ ಜುಲುಮು, ಶಾರೀರಿಕ ಜುಲುಮು ಅಲ್ಲವೆಂಬ ಮಾತ್ರದಿಂದ ಕಾಂಗ್ರೆಸಿನ ನೀತಿಯ ಸ್ವಭಾವವನ್ನೂ ಬದಲಾಗುವುದಿಲ್ಲ. ತಮ್ಮ ಅಭಿಪ್ರಾಯವನ್ನು ಅಂಗೀಕರಿಸದವರ ಮೇಲೆ ತಮ್ಮ ಅಭಿಪ್ರಾಯವನ್ನೇ ಜುಲುಂನಿಂದ ಜಾರಿಮಾಡುವುದೇ ಅವರ ಧ್ಯೇಯವಾಗಿದೆ. ಈ ಉದ್ದೇಶವು ಬೊಂಬಾಯಿ ಪಟ್ಟಣದಲ್ಲಿ ಪ್ರತ್ಯಕ್ಷ ನಿದರ್ಶನವಾಯಿತು. ಅದರಿಂದ ವ್ಯಾಪಾರಕ್ಕೆ ಅಡಚಣೆಯಾಯಿತು. ವ್ಯಕ್ತಿ ಸ್ವಾತಂತ್ರ್ಯ ತಪ್ಪಿತು. ಸಮಾಜದ ಕ್ಷೇಮಕ್ಕೇನೇ ಭಂಗಬಂತು. ಇಂಥಾ ಸ್ಥಿತಿಯನ್ನು ಹೋಗಲಾಡಿಸಲು ಸರಕಾರವು ಮಾಡಬೇಕಾದದ್ದನ್ನೆಲ್ಲಾ ಮಾಡಲೇಬೇಕಾಯಿತು.

ಕ್ರಾಂತಿಕಾರಿ ಕೊಲೆಗಳು.

ಈ ಜುಲುಮಿನ ಇನ್ನೊಂದು ರೂಪವು ಬಂಗಾಳದಲ್ಲಿ ತೋರಬಂದಿದೆ. ಅಲ್ಲಿಯೂ ಒಂದು ಕೂಟದವರು ತಮ್ಮ ಅಭಿಪ್ರಾಯವನ್ನು ಸಮುದಾಯದ ಮೇಲೆ ಕೊಲೆ ಮತ್ತು ಹಿಂಸಾಯುಕ್ತವಾದ ಇತರ ಕತ್ತೀರುಗಳ ರೂಪದಿಂದ ಜಾರಿಗೆ ಯುಪಡಿಸಲು ನಿಶ್ಚೈಸಿರುತ್ತಾರೆ. ಈ ಕತ್ತೀರುಗಳ ಪಟ್ಟಿಯು ಉದ್ದವಾಗುತ್ತಲೇ ಇದೆ. ಇತ್ತೀಚೆಗೆ ಕ್ರೂರ್ಯದಿಂದ ಕೊಲೆ ಮಾಡುತ್ತಿದ್ದ ಮಿದ್ನಾಪುರದ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟ್ ಮಿ. ಡಗ್ಲಸ್, ಡಕ್ಕಾದ ಸ್ಪೆಶಲ್ ಮೆಜಿಸ್ಟ್ರೇಟರಾದ ಮಿ. ಕೆ. ಸೆನ್, ಚಿತ್ತಗಾಂಗದ ಪೋಲೀಸ್ ಸುಪರಿಂಟೆಂಡೆಂಟರಾದ ಮಿ. ಅಸಾನುಲ್ಲ ಸನ್ ಎಂಬವರನ್ನು ಕೊಂದದ್ದು ನಿಮಗೆ ತಿಳಿಯದಲ್ಲ. 'ಸ್ಟೇಟ್ಸ್‌ಮನ್' ಪತ್ರಿಕೆಯ ಎಡಿಟರಾದ ಮಿ. ವಾಟ್ಸನನ್ನೂ, ಡಕ್ಕಾದ ಪೋಲೀಸ್ ಸುಪರಿಂಟೆಂಡೆಂಟರಾದ ಗ್ರಾಸ್‌ಬಿ ಎಂಬವರನ್ನು ಕೊಲ್ಲಲೂ ಪ್ರಯತ್ನಿಸಿದರು. ಇದೂ ಅಲ್ಲದೆ ಕ್ರಾಂತಿಕಾರಿ ಘಾತಕರಗಳಿಂದ ಕೂಡಿದ ಅನೇಕ ಘಟನೆಗಳನ್ನು ನಡಿಸಿದ್ದಾರೆ. ಈಗ ಈ ಚಳವಳವನ್ನು ಸರ್ಕಾರಿ ಅಧಿಕಾರಿಗಳ ಮೇಲೂ ಮತ್ತು ಸರ್ಕಾರಕ್ಕೆ ಸಹಾಯ ಕೊಡುವವರ ಮೇಲೂ ಮುಖ್ಯವಾಗಿ ನಡಿಸುತ್ತಿದ್ದಾರೆ. ಆದರೆ ಈ ಸಂಗಡದವರಿಗೆ ಜಯವಾದರೆ ಇವರಿಗೆ ಜಯವನ್ನು ಕೊಟ್ಟ ರೀತಿಯನ್ನು ಇವರಿಗೆ ವಿರೋಧಿಸಿದ ಎಲ್ಲರ ಮೇಲೂ ನಿರ್ದಾಕ್ಷಿಣ್ಯವಾಗಿ ಉಪಯೋಗಿಸುತ್ತಾರೆ. ಈಗ ಕ್ರಮವಾಗಿ ನಡೆಯುವ ಸ್ವರಾಜ್ಯ ಸರ್ಕಾರವೇ ಇಲ್ಲವಾಗುತ್ತದೆ. ನಾಗರೀಕ ಸಮಾಜಕ್ಕೆ ಸತ್ಯವಾದ ಇವರ ಕಾರ್ಯಕ್ರಮದ ಸಹಾಯದಿಂದ ಸಮಾಜದ ಮೇಲೆ ಇವರು ಅಧಿಕಾರ ನಡಿಸಲು ಶಕ್ಯವಾಗುತ್ತದೆ.

(೩ನೇ ಪುಟದಲ್ಲಿ ಮುಂದುವರಿದಿದೆ)

Reg. No. M. 1550.
if not delivered please return to
"KODAGU" OFFICE, MERCARA

ಕೊಡಗು.

ಸತ್ಯೇನ ಧಾರ್ಯತೇ ಪೃಥ್ವೀ ... ಸಂಪದಾ

ವಾರ್ಷಿಕ ಚಂದಾ ರೂ. ೩—೮—೦.

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೨ | ಮಡಿಕೇರಿ, ಸನ್ ೧೯೩೨ನೇ ಇಸವಿ ಸೆಪ್ಟಂಬರ್ ತಾರೀಕು ೯ ನೇ ಶುಕ್ರವಾರ. | ಸಂಚಿಕೆ ೧೫

SARI PIN.

BRACELETS.

NECKCHAINS.

EAR-RINGS.
(Thodus)

Cut-rubys Rs. 25 to 50
With diamond in centre Rs. 80 to 120

Gold Rs. 10
Set rubys forming any letter Rs. 12

NOSE-RINGS.
Diamond in small size of best quality Rs. 35 & upwards according to size.

MARRIAGE PRESENTATIONS

Attractive and inexpensive articles ready in stock. Prompt execution. Details on enquiry free with catalogue. Numerous customers in Coorg thoroughly satisfied with reliable service. Testimonials pouring in.
Silver Guindys, Photo lockets, Dimond nose-screws, cut-ruby ear-rings, etc., etc., etc., in all prices Very attractive Prices most moderate.

Estimates free on enquiry.

Designs free on enquiry.

V. Subramaniaier
Jeweller,

Telegrams: 'PRECIOUS.'

Telephone: 3145.

CATALOGUE ON ENQUIRY.

52—42

Post Box 423, Triplicane, P. O., MADRAS.

26—11

ಜನರಲ್ ಅಷ್ಯೂರೆನ್ಸ್ ಸೊಸೈಟಿ.

ಅಜಮೀರ್.

ನಮ್ಮ ಆಯವ್ಯಯದ ಪಟ್ಟಿಯೇ ನಮ್ಮ ಅಭಿವೃದ್ಧಿಯನ್ನು ವ್ಯಕ್ತಗೊಳಿಸುತ್ತದೆ.

ವರ್ಷ	ಮೊಲ್ಪಟ್ಟ ವರಮಾನ	ಮೊಲ್ಪಟ್ಟ ಜೀವನಿಧಿ	ಖರ್ಚು ವರಮಾನದ ಶೇಕಡ
1911	49,248	49,442	82.9
1921	2,92,627	6,53,350	43.2
1931	12,50,000	4,00,000	28.2

ಬೋನಸ್ಸು.

ಹುಕ್ಕುಂ ನಷ್ಟೆ ದೊರಕುವ ದೀರ್ಘಾವಧಿ ಪಾಲಿಸಿಗಳ ಮೇಲೆ ವರ್ಷ ಒಂದಕ್ಕೆ ಶೇಕಡ 22½

ಚೆನ್ನಾಗಿ ಕೆಲಸಮಾಡಿ ಅಭಿವೃದ್ಧಿ ಸ್ಥಿತಿಯಲ್ಲಿರುವ ಈ ಸೊಸೈಟಿಯಲ್ಲಿ ವಿಮೆ ಮಾಡಿ ಕಡಿಮೆ ಪ್ರೀಮಿಯಂ ಪಾವತಿ ಮಾಡುವ ಸೌಲಭ್ಯ ಹೊಂದಿ ಅಥವಾ ಈ ಕಂಪೆನಿಯ ಪರವಾಗಿ ಕೆಲಸಮಾಡಿ ಉತ್ತಮ ಕಮಿಶನ್ ವರದ ಪ್ರಯೋಜನ ಹೊಂದಿ.

ಹೆಚ್ಚು ವಿಚಾರಗಳಿಗೆ ಈ ವಿಳಾಸಕ್ಕೆ ಬರೆಯಿರಿ:—

ಎ. ರಾಮಚಂದ್ರರಾವ್,
ಸುಪರಿಂಟೆಂಡೆಂಟ್,
ಮಿಂಟೋ ಆಸ್ಪತ್ರೆ ಬಳಿ,
ಬೆಂಗಳೂರು.

52—20

Empire of India Life Assurance Company, Ltd.

Established 1897.

The New "FAMILY SECURITY" Policy issued by this Company provides.

A. In the event of death during an agreed period,

1. The immediate payment to the Widow, Son or legal representative of a part of the sum Assured together with the Bonus accrued.

2. The payment of a guaranteed Yearly Income, payable by monthly instalments, during the balance of the period.

3. The payment of the balance of the sum of assured at the end of the period

OR

B. In the event of death after the period has expired the payment of the sum assured together with any Bonus that has accrued.

Descriptive Pamphlet on application to—

Head Office:—
EMPIRE OF INDIA LIFE BUILDING,
Bombay

Branch Office:—
152, COMMERCIAL STREET,
Bangalore.

52—49

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್— ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್: ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲಿ)

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	27,350
ಜಮೆಯಾದ ಠೇವಣಾತಿ	—	2,25,172
ವಸೂಲಾದ ಕ್ಷೇಮನಿಧಿ	—	37,914

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೋಸ್ಕರ ಹಣ ಸಾಲ ಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5–0–0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ.

ಪ್ರೆಸಿಡೆಂಟರು,	ಟ್ರೆಜರರ್
ಪಟ್ಟುಮಾಡ ದೇವಯ್ಯನವರು, ರಾವ್ ಬಹದ್ದೂರ್.	ಮನೆಯಪ್ಪಂಡ ಬೆಳ್ಯಪ್ಪನವರು.

ಸೆಕ್ರೆಟರಿ

ಸಿ. ಯಮ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್

ತಾರೀಖು 1—7—1932.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಕೊಡಗಿನ ಎಲ್ಲಾ ಭಾಗಗಳಿಗೆ—ಮೆ. ಮುಂಡಂಡ ಯಂ. ಬಿದ್ದಪ್ಪನವರು.

ಉತ್ತರ ಕೊಡಗಿಗೆ ಮೆ: ಚೌರಿರ ಮಾದಯ್ಯನವರು,

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮಂಡೇಪಂಡ ಬೋಪಯ್ಯನವರು, (ಪಾಡಿಭಂಡಾರ.)

ಶಾಂತಳ್ಳಿ—ಎಮ್. ಆರ್. ವೆಂಕಪ್ಪಯ್ಯನವರು.

ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,

ಪೊನ್ನಂಪೇಟೆನಾಡು—ಮೆ. ಸಿ. ಜಿ. ಮುದ್ದಯ್ಯನವರು, ಮತ್ತು ಅರಮಣಮಾಡ ಪಿ ಕಾರ್ಯಪ್ಪನವರು,

ಕುದಿಕೇರಿ & ತಿತಿಮತ್ತಿ—ಮೆ. ಜಿ. ಮಾದಯ್ಯನವರು,

ಸುಂಟಿಕೊಪ್ಪ—ಮೆ. ಅಪ್ಪಚಟ್ಟೋಳಂಡ ಮಾದಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿ ದಿನದ ಕೆಲಸದಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಿಸಲು ಆವಶ್ಯಕವಾಗಿರುವ, ರಿವಾಜಿನ ಪ್ರಕಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಖರಾರು ಫಾರಮುಗಳೂ, ಜಮ್ಮಾ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಕರಾರು ಫಾರಮುಗಳೂ, ಸ್ಟೋರ್ ಕೀಪರ್ ಖರಾರು ಫಾರಮುಗಳೂ, ಓವಚರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮಾ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.
ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.
ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,78,322 ಜನರಿಗೆ 38ಕೋಟಿ ರೂ.
ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ರಕ್ಕಿಂತ ಮಿಾರದ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದಾಗಿದೆ. ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಉತ್ತೇಜನೆಯನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬುದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್ ಬೆಂಗಳೂರು
ಅಥವಾ ಇನ್ಸ್‌ಪೆಕ್ಟರೇಟ್ ಆಫೀಸು, ಮಡಿಕೇರಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ಮೊಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪೂರ	ರಾವಲ್‌ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೌ	ಪಾಟ್ನಾ	ಸುಕ್ಕೂರು
ಅಲಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಡೌಲಗಾಂವ್	ಮಂಡಲೆ	ರಾಯಪೂರ	ತಿರುವೆಂಡ್ರಮ್
ಭೋಪಾಲ್	ಕರಾಚಿ	ಮಡಿಕೇರಿ	ರಾಂಚಿ	ವಿಶಾಖಪಟ್ಟಣ [52—27

ಸಣ್ಣ ಹುಡುಗರ ಸಲುವಾಗಿ

ಡೋಂಗರೆ
ಇವರ
ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
52–34 ಗಿರಿಗಾಂವ, ಮುಂಬಯಿ.

ಕಾರ್ಡು ಬರೆದರೆ ಈಗಿನ ಕ್ಯಾಟಲಾಗು ಮಾಫಿಯಾಗಿ ಕಳುಹಿಸಲ್ಪಡುವುದು.

ಕೋವಿಗಳು, ಕತ್ತಿಗಳು, ಬಚೀಗಳು, ತೋಟೆಗಳು, ಕೇಪುಗಳು, ಮದ್ದು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS LTD.,
Largest Importers of Firearms and Ammunition
Cheapest priced firm in India,

26–26 **210 Abdul Rehiman Street, BOMBAY.**

Printed & published by P. I. Belliappa at "Kodagu" Press Mercara for "Kodagu" Ltd

ಪತ್ರವ್ಯವಹಾರ.

[ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಕೊಡಗಿನ ಭವಿಷ್ಯತ್ತು.

ಮಿ. ಯಚ್. ನ್ಯೂಕಮ್‌ರವರು 'ಮದ್ರಾಸು ಮೈಲ್' ಪತ್ರಿಕೆಗೆ ಕೊಡಗು ಅಮಲ್ಗಮೇಶನ್ ವಿಷಯ ಬರೆದ ಪತ್ರ ತರ್ಜುಮೆಯನ್ನು 'ಕೊಡಗು' ಪತ್ರಿಕೆಯಲ್ಲಿ ಪ್ರಕಟಿಸಿದ್ದನ್ನು ಓದಿದೆನು.

(1) ಕೊಡಗನ್ನು ಮದ್ರಾಸಿಗೆ ಸೇರಿಸಿದರೆ ಹಳೇ ಒಪ್ಪಂದ ತೀರಾಗಬೇಕೆಂದು ಅವರು ಕೇಳಿದ್ದಾರೆ. ಯಾವ ಹಳೇ ಒಪ್ಪಂದ ಈಗ ಬಾಕಿ ಇದೆ? ಜಮ್ಮದ ಭೂಮಿಗೆ ಕಂದಾಯ ಹೆಚ್ಚಿಸಬಾರದೆಂದಿದ್ದದ್ದು ಕಳೆದ ಸೆಟಲ್‌ಮೆಂಟಿನಿಂದ ಅದು ಮಣ್ಣುಗೂಡಿ ಹೋಯಿತು.

(2) ದನಗಳನ್ನು ಕೊಲ್ಲುವದೋ—ಕೊಡಗು ಈಗ ಅದರ ರಂಗಸ್ಥಳವಾಗಿದೆ.

(3) ಕೋವಿ ಲೈಸೆನ್ಸ್—ಕೊಡಗನ್ನು ಮದ್ರಾಸಿಗೆ ಸೇರಿಸಿದರೆ ಕೋವಿ ಹಿಡಿಯಲು ಭಂಗ ಬರುವದು ಹೇಗೆ? ಮದ್ರಾಸು ಯಾರ ಸರ್ಕಾರ? ಜರ್ಮನಿಯವರದೋ, ರಷ್ಯದವರದೋ? ಇವರ ಮತ್ತು ಶ್ರೀಮತಿ ಡಿ. ಸಾಕಮ್ಮನವರ ಹೇಳಿಕೆಯಂತೆ ಮೈಸೂರಿಗೆ ಸೇರಿದರೆ ಬಹುಶಃ ಕೋವಿ ಹೋಗಲೂ ಬಹುದು. ಇವರ ಕೋವಿಗೆ ಭಂಗ ಬರುವುದಿಲ್ಲವೆಂತಾದ ಮೇಲೆ, ಇವರಿಗೇಕೆ ನಮ್ಮ ಕೋವಿ ಮೇಲೆ ಇಷ್ಟೊಂದು ಮಮತೆ. ಮದ್ರಾಸೂ ಬ್ರಿಟಿಷ್ ಸರ್ಕಾರಕ್ಕೊಳಪಟ್ಟದ್ದು ಎಂತಾದ ಮೇಲೆ ಇವರೇಕೆ ಕೊಡಗನ್ನು ಮದ್ರಾಸಿಗೆ ಸೇರಿಸಲು ಇಷ್ಟಪಡುವದಿಲ್ಲ? ಬಹುಶಃ "Dear Mr. so & so. Please see to this & that" ಎಂಬ ಹಳೇ ಸಮಾಚಾರ ಬರೆಯೋಟಕ್ಕೆ ಅನುಕೂಲವಿಲ್ಲದಾಗುವದೆಂಬ ಹೆದರಿಕೆಯೋ? ಅಗಲಿ, ಇವರ ಇರಾದೆಯಂತೆ ಬೇರೇನೇ ಕೊಡಗು ಇರಲಿ ಕೊಡಗಿಗೆ ಹೆಚ್ಚಿನ ಮರ್ಯಾದೆ ಪಡೆಯಲು ಇವರೂ ಈಗಿನ ಧರ್ಮ ಯುದ್ಧದಲ್ಲಿ ಭಾಗಿಯಾಗುವರೋ? ಹಾಗೆ ಭರವಸೆ ಕೊಡಲಿ. ಹಾಗಾದರೆ ಇವರ ಮಾತಿಗೆ ಒಪ್ಪಬಹುದು. ಗ್ರಾಮ ಪಂಚಾಯತಿ ಸಭೆಗೆ ಕಡೆಗಟ್ಟ ಮತ್ತು ಅದರಷ್ಟು ಜವಾಬ್ದಾರಿಕೆಯಿಲ್ಲದ ಈಗಿನ ಟೊಳ್ಳು ಕೌನ್ಸಿಲೇ ಸಾಕೆಂದು ಇವರು ಇವರ ಮನಪೂರ್ವಕವಾಗಿ ಹೇಳುವದೋ ಎಂದು ತಿಳಿಯಬೇಕಾಗಿದೆ.

ಕಟ್ಟ ಕಡೆಗೆ ಇವರು ಶ್ರೀಮತಿ ಡಿ. ಸಾಕಮ್ಮನವರ ಸಲಹೆಯನ್ನು ಎತ್ತಿ ಹಿಡಿದಿದ್ದನ್ನು ನೋಡಿದರೆ ನಗೆ ಬರುತ್ತದೆ. ಯಾಕೆಂದರೆ, ಬ್ರಿಟಿಷರಾದ ಮಿ. ನ್ಯೂಕಮ್‌ರವರಿಗೆ ಬ್ರಿಟಿಷ್ ಪ್ರಭುಗಳ ಆಡಳಿತದಲ್ಲಿ ಭರವಸೆ ಇಲ್ಲದೆ ಹಿಂದೂ ರಾಜ್ಯವಾದ ಮೈಸೂರಿಗೆ ಸೇರುವ ಸಲಹೆ ಹೇಳಿದ ಮೇಲೆ ಇಂಡಿಯನ್ನರಾದ ನಾವು ನಿಜವಾಗಿಯೂ ಬ್ರಿಟಿಷರ ಆಳಿಕೆಯಿಂದ ಹೋಗಬೇಕಾದದ್ದು ಅವಶ್ಯವಲ್ಲವೇ?

ಇವರ ಲೇಖನದ ಉಳಿದ ಭಾಗಗಳಿಗೆ 'ಊರವ' ರೆಂಬುವರು ತಕ್ಕ ಜವಾಬು ಕೊಟ್ಟಿರುವುದರಿಂದ ನಾನು ಪುನಹ ಅವುಗಳಿಗೆ ಜವಾಬು ಬರೆಯಬೇಕಾಗಿ ಕಾಣುವುದಿಲ್ಲ. ಕೊಡಗಿನ ಭವಿಷ್ಯತ್ತಿನ ವಿಷಯ ಮಿ. ನ್ಯೂಕಮ್‌ರವರು ಕೊಡಗಿನಲ್ಲಿ ಅಷ್ಟು ಇದ್ದು ಖಾಯಂ ವಾಸ ಇರುವವರ ತಲೆಗೆಹಾಕಿರುವದರಿಂದ ಈ ವಿಷಯವಾಗಿ ಅವರು ಹೆಚ್ಚಿಗೆ ತೊಂದರೆ ತೆಗೆಯದೆ ಇರುವದೇ ಮೇಲೆಂದು ನಂಬುವ,

'ನಾಡಿನವ'

ಹೈ,

ಮಡಿಕೇರಿ ಕೊಡವರ ಉದಾಹರಣೆ.

ಅಯ್ಯಾ,

ಕೈಲ್ ಮುಹೂರ್ತ ಹಬ್ಬದ ಆಚರಣೆಯನ್ನು ಕುರಿತು ವಿಚಾರ ಮಾಡಲು ಮಡಿಕೇರಿಯ ಕೊಡವ ಮಹನೀಯರು ಕಳೆದ ತಾ. 22ರಲ್ಲಿ ಸಭೆ ಸೇರಿದ್ದರೆಂದೂ, ಅವರು ತೀರ್ಮಾನಿಸಿದ ವಿಷಯಗಳನ್ನೂ ಕಳೆದವಾರ ನಿಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದನ್ನು ಓದಿ ನೋಡಿದೆನು. ನಂತರ ಸದರಿ ಮೀಟಿಂಗಿನಲ್ಲಿ ಹಾಜರಿದ್ದ ಒಬ್ಬಿಬ್ಬ ಮಹನೀಯರನ್ನು ಕಂಡು ಮಾತಾಡಿದಲ್ಲಿ ನೀವು ಪ್ರಕಟಿಸದ ಒಂದು ವಿಶೇಷ ಸಂಗತಿಯು ನನಗೆ ತಿಳಿಯ ಬಂತು. ಅದೇನೆಂದು ನೀವೂ, ನಿಮ್ಮ ಪತ್ರಿಕೆಯ ವಾಚಕರೂ ತಿಳಿಯಲು ಅಪೇಕ್ಷಿಸಬಹುದು. ಹೇಳುವೆನು ಕೇಳಿರಿ,

ಮಡಿಕೇರಿ ಮಹನೀಯರು, ಕೆಲವು ಕಾಲ ದೂರವಾಗಿದ್ದ ನಿಷಾದೇವಿಗೆ ಪುನಹ ಸ್ವಾಗತವನ್ನೀಯಬೇಕೆಂದು ನಿಶ್ಚಯಿಸಿರುವುದೇ ಆ ವಿಶೇಷದ ವಾರ್ತೆಯಾಗಿದೆ. ಮಡಿಕೇರಿ ಕೈಲುಪೊಳುದು ಹಬ್ಬವನ್ನು ಕುರಿತು ಕಳೆದ ಹತ್ತು ವರ್ಷಗಳಿಂದ ನಡೆದ ಸಂಗತಿಗಳನ್ನು ಬರೆಯುವದಾದರೆ ಒಂದು ದೊಡ್ಡ ಚರಿತ್ರೆಯೇ ಆಗುವುದು. ಅದು ತಕ್ಕ ಮಟ್ಟಿಗೆ ಈ ಪತ್ರಿಕೆಯ ವಾಚಕರಿಗೆಲ್ಲಾ ಗೊತ್ತಿರುವುದರಿಂದ ಇಲ್ಲಿ ಪುನಹ ಬರೆಯುವ ಅವಶ್ಯವಿಲ್ಲ. ಹೇಗೂ ಕೈಲುಪೊಳುದು ಹಬ್ಬದ ಊಟಕ್ಕೆ ನಿಷಾಪದಾರ್ಥವನ್ನು ಸೇರಿಸಬಾರದೆಂಬ ಅಭಿಪ್ರಾಯವು ಮುಖ್ಯವಾಗಿ ಯುವಕರಲ್ಲಿ ಪ್ರಬಲವಾಗುತ್ತಾ ಬಂದು ಈಗ ಒಂದೆರಡು ವರ್ಷಗಳಿಂದ ನಿಷಾಸೇವನೆಗೆ ಎಡೆಕೊಡುವ ಊಟವೇ ಬಾಕಿ ಮಾಡಲ್ಪಟ್ಟು ಒಳೇ ಅಚ್ಚುಕಟ್ಟು ಮತ್ತು ಶುಚಿ ತೀರ್ಥಗಳಿಂದ ಹಬ್ಬವು ಬಹು ಸಂತೋಷದಿಂದ ಆಚರಿಸಲ್ಪಡುತ್ತಾ ಬಂದಿದೆ. ಆದರೆ ಈ ವರ್ಷ ಪುನಹ 'ಪಾಂಡೇಶ್ವರ ಪಡಿಕೊರ' ಎಂಬಂತೆ ಸಪ್ಟಂಬರು ತಾ. 11ರಲ್ಲಿ ನಡೆಸುವ ಊಟದಲ್ಲಿ ಅಮಲು ಪದಾರ್ಥವನ್ನು ಸೇರಿಸಬೇಕೆಂದು ತೀರ್ಮಾನಿಸಿದ ವಾರ್ತೆಯು ಇದೇ ದೇಶದವರಿಗೆ ವ್ಯಸನವನ್ನುಂಟು ಮಾಡದೆ ಇರದು.

ನಿಷಾಸೇವನೆಯು ಒಳ್ಳೇದೆಂದು ವಾದಿಸುವ ಕಾಲವಂತೂ ಬಹು ಹಿಂದಾಯಿತು. ಅದನ್ನು ನಿಲ್ಲಿಸಬೇಕೆಂದು ಒಪ್ಪದೆ ಇರುವವರು ಬಹು ವಿರಳ ಅವರಲ್ಲಿ. ಆ ನಿಷಾದೇವಿಯ ಬಲೆಗೆ ಸಿಕ್ಕಿ ಬಿದ್ದಿರುವ ನಮ್ಮ ದೇಶೀಯರನೇಕರನ್ನು ಅದರಿಂದ ತಪ್ಪಿಸಲಿಕ್ಕಾಗಿ, ನಮ್ಮ ಹಲವು ಸಹೋದರ ಸಹೋದರಿಯರು ನಿಷಾ ನಿಷೇಧದ ಕಾರ್ಯವನ್ನು ಕೈಕೊಂಡು ಕಾರಾಗೃಹ ವಾಸವನ್ನು ಮಾಡಿ ಬಂದಿರುವ ಈ ಕಾಲದಲ್ಲಿ, ವಿದ್ಯಾವಂತರು ಬುದ್ಧಿವಂತರು ಅನ್ನಿಸಿಕೊಳ್ಳುವ ಮಡಿಕೇರಿ ಸಹೋದರರು ಆ ನಿಷಾದೇವಿಯನ್ನು ತಮ್ಮ ಊಟದ ಸಮೂಹಕ್ಕೆ ಕರೆಸಿಕೊಳ್ಳಲು ನಿಶ್ಚಯಿಸಿರುವುದನ್ನು ನೋಡಿದರೆ ತಮ್ಮ ಸಹೋದರ ಸಹೋದರಿಯರು ಜೈಲು ವಾಸದಿಂದ ಅನುಭವಿಸಿದ ಕಷ್ಟಗಳಿಂದ ಅವರ ಮನಸ್ಸು ಸ್ವಲ್ಪವೂ ಕರಗಿಲ್ಲವೆಂದೇ ಕಂಡು ಬರುತ್ತದೆ. ಈ ಸಂಬಂಧ ಹಿಂದೆ ನಡೆಯುತ್ತಿರುವ ಕಷ್ಟಗಳನ್ನೂ, ಮಾಡುತ್ತಿರುವ ತ್ಯಾಗಗಳನ್ನೂ ನೋಡಿ ಕೆಲವು ಪ್ರತಿಷ್ಠಿತ ಮನಸ್ಸೇ ಕರಗುವಲ್ಲಿ ನಮ್ಮ ದೇಶೀಯರ, ಜಾತಿಯುತರ್ಕ್ಕೂ, ನೀಟನ್ನು, ರಕ್ತಸಂಬಂಧಿಕರ ಮನಸ್ಸಿನಲ್ಲಿ ಕನಿಕರ ಹುಟ್ಟಲಿಲ್ಲವೆಂಬುದು ಬಹು ಆಶ್ಚರ್ಯವೂ, ದುಃಖಕರವೂ ಆದ ಸಂಗತಿಯಾಗಿದೆ. ಅಂದ ಮೇಲೆ ನಮ್ಮವರ 'ಕಲ್ಲಿನಂಥ' ಹೃದಯವನ್ನು ಕರಗಿಸಲು ನಮ್ಮ ಸಹೋದರ ಸಹೋದರಿಯರು ಕಾರಾಗೃಹದಲ್ಲಿ ಪ್ರಾಣವನ್ನೂ ಬಿಡಬೇಕೇ? ಇದು ತಮ್ಮ ಇಂಗಿತವಾದರೆ, ಅದನ್ನು ತಿಳಿಸಿದ ಪಕ್ಷ, ಹಾಗೆ ಮಾಡಲೂ ಕೂಡ ಸ್ವಾರ್ಥತ್ಯಾಗಿಗಳು ಹಿಂಜರಿಯಲಿಕ್ಕಿಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಹಾ! ಕೊಡಗಿನ ದುರ್ದೈವವೇ, ಇಂಥಾ ಕರ್ಣಕಠೋರವಾದ ವಾರ್ತೆಯನ್ನು ಕೇಳಿದಂದಿನಿಂದಾದರೂ ನಮ್ಮ ಮುಖ್ಯಪಟ್ಟದ ವಿದ್ಯಾಬುದ್ಧಿವಂತರಾದ ಮಹನೀಯರು ನಿಷಾದೇವಿಯನ್ನು ಬಹಿಷ್ಕರಿಸುವರೇ?

60 ವರ್ಷ ದಾಟಿ ಮುದುಕರಾದ, ಲೋಕವಿಖ್ಯಾತರಾಗಿ ಅವತಾರಪುರುಷರೆಂತಿರುವ ಮಹಾತ್ಮ ಗಾಂಧಿಯವರೇ ನಿಷಾನಿಷೇಧದ ಕಾರ್ಯಕ್ರಮವನ್ನು ಭಾರತ ಭೂಮಿಯ ಮುಂದಿಟ್ಟು, ನಮಗೆಲ್ಲರಿಗಾಗಿ ಜೈಲಿನಲ್ಲಿ ಕೊಳೆಯುತ್ತಿರುವಲ್ಲಿ ನಮ್ಮ ಬಳಟ ಮಹನೀಯರಿಗೆ ಹಬ್ಬ ಹುಣ್ಣಿಮೆ, ಮದುವೆ ಮುಂಜಿ, ಸಾರ್ವಜನಿಕ ಕೂಟಗಳಲ್ಲಿಯಾದರೂ ಅಮಲು ಪದಾರ್ಥವನ್ನು ಸೇವಿಸದೆ ಇರಲು ಸಾಧ್ಯವಿಲ್ಲವೇ? ಈಗ ತಪ್ಪವಾಗಿಲ್ಲ; ಇನ್ನಾದರೂ ಈ ಮಹನೀಯರ ದೃಷ್ಟಿಯನ್ನು ಯರವಾಡ ಜೈಲಿನಲ್ಲಿ ಹಬ್ಬ ಹುಣ್ಣಿಮೆಗಳನ್ನೇನೂ ಆಚರಿಸದೆ ಭಾರತ ಭೂಮಿಯ 35 ಕೋಟಿ ಜನರ ಉದ್ಧಾರಕ್ಕಾಗಿ ತನ್ನ ದೇಹವನ್ನು ಸವೆಯಿಸುತ್ತಿರುವ ಮಹಾತ್ಮರ ಕಡೆಗೆ ತಿರುಗಿಸಿ, ನಿಷಾಮಾರಿಯನ್ನು ದೂರಮಾಡುವಂತೆ ಭಗವಂತನು ಅವರಿಗೆ ಮನಸ್ಸು ಕೊಡಲೆಂದು ಹಗಲಿರುಳು ಪ್ರಾರ್ಥಿಸುವ.

"ದೇಶಸೇವಕ."

ಮೋಟಾರುಗಳ ತೆರಿಗೆ.

ಮಹನೀಯರೇ,

ಈಗ ಹೊಸದಾಗಿ ಜಾರಿಗೆ ತರಲ್ಪಟ್ಟಿರುವ ಮೋಟಾರು ತೆರಿಗೆಯ ಪ್ರಭಾವವನ್ನು ಏನೆಂದು ವರ್ಣಿಸಲಿ! ಕಾರು, ಬಸ್ಸು, ಲಾರಿಗಳನ್ನು ಇಟ್ಟುಕೊಂಡಿರುವವರು ಬಾಯಿಬಿಟ್ಟು ಹೋಗಿರುವರು. ಈ ಮೊದಲು ಕಾರುಗಳ ಓಡಾಟವು ಬಹು ಜೋರಾಗಿತ್ತು! ಈಗ ಹಲವು ಶಿಸ್ತಿನೊಳಗಿನಿಂದ ಹೊರಗೆ ದಾಟುವದೇ ಇಲ್ಲ. ದಾಟಿರುವ ಹಲ ಕೆಲವುಗಳಲ್ಲಿ ಪ್ರಯಾಣ ಮಾಡುವವರೇ ಕಡಿಮೆ. ಜನರ ಕೈಯಲ್ಲಿ ದುಡ್ಡು ಕಡಿಮೆಯಾದಂತೆ ಕಾರುಗಳ ಮೇಲೆ ಅವರಿಗೆ ಮಮತೆಯೂ ಕಡಿಮೆಯಾಗುತ್ತಾ ಬರುತ್ತಿದೆ. ಪೆಟ್ರೋಲ್ ಕಂಪೆನಿಯವರಿಗೂ, ಮೋಟಾರು ಕಂಪೆನಿಯವರಿಗೂ ವಿಶ್ರಾಂತಿ ದೊರೆಯುವ ಕಾಲವು ಸಮೀಪಿಸುತ್ತಿದೆ. ಅದು ಹೇಗೂ ಆಗಲಿ; ಅದು ನಮ್ಮ ದೇಶೀಯರಿಗೆ ಸಂಬಂಧಿಸುವದಿಲ್ಲವಷ್ಟೆ.

ಈ ಮೊದಲು ಯಾವ ಮೋಟಾರು ವಾಹನವೇ ಆಗಲಿ ರಿಜಿಸ್ಟರ್ ಮಾಡಿಸುವಾಗ ಮಾತ್ರ ಫೀಜು ಕೊಟ್ಟರೆ ಸಾಕಾಗುತ್ತಿತ್ತು (ಮುನ್ಸಿಪಾಲಿಟಿಯಲ್ಲಿರುವವಕ್ಕೆ ಮಾತ್ರ ವಾರ್ಷಿಕ ಮುನ್ಸಿಪಲ್ ತೆರಿಗೆ ಇತ್ತು.) ಆದರೆ ಅವುಗಳೂ ಟೋಲ್‌ಗೇಟು ದಾಟುವಾಗ್ಯೆ ಸುಂಕ ಕೊಡಬೇಕಾಗಿತ್ತು. ಈಗ ಟೋಲ್ ಗೇಟುಗಳಲ್ಲಿ ಸುಂಕವನ್ನು ತೆಗೆದು ಹಾಕಿ ದೊಡ್ಡ ವಾರ್ಷಿಕ ತೆರಿಗೆಯು ಹಾಕಲ್ಪಟ್ಟಿದೆ. ರಸ್ತೆಗಳ ರಿಪೇರಿ ಬಗ್ಗೆ ಸರ್ಕಾರದ ಉತ್ಪತ್ತಿಯನ್ನು ಹೆಚ್ಚಿಸಿಕೊಳ್ಳುವ ಬಗ್ಗೆ ಈ ಹೊಸ ತೆರಿಗೆ ಹಾಕಿರುವದೆಂದು ಕಂಡು ಬರುತ್ತದೆ; ಆದರೆ ಈ ಹೊಸ ತೆರಿಗೆಯಿಂದ ಉತ್ಪತ್ತಿಯು ಹೆಚ್ಚುವುದರ ಬದಲು ಕಡಿಮೆಯಾಗಿ ಹೋಗುವದೋ ಎಂಬ ಸಂಶಯವು ತೋರುತ್ತದೆ. ಜನರ ಉತ್ಪತ್ತಿಯು ಬಹು ಕಡಿಮೆಯಾಗಿರುವ ಈ ಕಾಲದಲ್ಲಿ ತೆರಲಾರದ ತೆರಿಗೆ ಹಾಕುವುದರಿಂದ ಮೋಟಾರುಗಳ ವ್ಯಾಪಾರವೇ ಕಡಿಮೆಯಾಗಿ ಈ ಬಗ್ಗೆ ಸರಕಾರಿ ಉತ್ಪತ್ತಿಯು ಕಡಿಮೆಯಾಗಬಹುದು. ಇದು ಎಷ್ಟರ ಮಟ್ಟಿಗೆ ಆಗಿದೆಯೆಂಬುದು ಸಂಬಂಧಪಟ್ಟ ಅಧಿಕಾರಿಗಳಿಗೆ ಗೊತ್ತಾಗಿರಬಹುದು.

ಇದಕ್ಕಿಂತ ವಿಶೇಷವಾದ ಕಾರಣವು ಇನ್ನೊಂದು ಇದೆ. ಕೊಡಗಿನಲ್ಲಿ ಖಾಸಗಿ ಕಾರುಗಳ ಪೈಕಿ ಹೆಚ್ಚಿನವು ಯುರೋಪಿಯನ್ ಪ್ಲಾಂಟರುಗಳದ್ದಾಗಿದೆ. ಇವರಿಗೆ ಈ ಹೊಸ ತೆರಿಗೆಯು ವ್ಯಾಪಿಸುವುದೇ ಇಲ್ಲವಂತೆ! ಇಲ್ಲಿಯ ಯುರೋಪಿಯನ್ ಪ್ಲಾಂಟರುಗಳು ಹೆಚ್ಚು ಕಮ್ಮಿ ಎಲ್ಲರೂ 'ಅಗ್ಸಿಲರಿ ಫೋರ್ಸ್'ಗೆ ಸೇರಿರುತ್ತಾರೆ. 'ಅಗ್ಸಿಲರಿ ಫೋರ್ಸ್'ನ ಉಪಯೋಗಕ್ಕಿರುವ ಮೋಟಾರುಗಳಿಗ್ಯಾವಕ್ಕೂ ಇಂಥಾ ತೆರಿಗೆಯನ್ನು ಹಾಕಕೂಡದೆಂಬ ನಿಬಂಧನೆ ಇದೆಯಂತೆ. ಆದುದರಿಂದ 'ಅಗ್ಸಿಲರಿ ಫೋರ್ಸ್'ಗೆ ಸೇರಿರುವ ಪ್ಲಾಂಟರುಗಳ ಕಾರುಗಳೆಲ್ಲಾ ಈ ಹೊಸ ತೆರಿಗೆಯಿಂದ ಬಿಡುಗಡೆಯಾಗಿರುವವೆಂದು ತಿಳಿಯ ಬರುತ್ತದೆ. ಇದೆಂಥಾ ನ್ಯಾಯವೋ ಗೊತ್ತಾಗುವುದಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಈ ನಿಬಂಧನೆಗೆ ಈ ತರದ ಅರ್ಥವನ್ನು ಹೇಗೆ ಹಚ್ಚಿದರೋ ತಿಳಿಯುವುದು ಕಷ್ಟವಾಗಿದೆ.

'ಅಗ್ಸಿಲರಿ ಫೋರ್ಸ್'ನ ಅಧಿಕಾರಿಗಳು ಸದರಿ ಪಟಾಲಮಿಗೆ ಸೇರಿದವರೆಲ್ಲರ ಕಾರುಗಳು ಆ ಪಟಾಲಮಿಗೆ ಸೇರಿದವೆಂದು ಹೇಳಿರುವರೆಂದೂ ವರ್ತಮಾನವಿದೆ. ಅವರು ಹೀಗೆ ಹೇಳಿದ್ದ ಪಕ್ಷದಲ್ಲಿ ಸದರಿ ಪಟಾಲಮಿನ ತರಬೇತಿನ ಕಾಲದಲ್ಲಿ ಅಂದರೆ ವರ್ಷಕ್ಕೆ ಒಂದೆರಡು ತಿಂಗಳು ಮಾತ್ರ ಉಪಯೋಗಿಸಿದರೆ ಅವುಗಳನ್ನು ತೆರಿಗೆಯಿಂದ ಬಿಡುಗಡೆ ಮಾಡಬಹುದು. ಆದರೆ ಅಂಥಾ ಪ್ಲಾಂಟರುಗಳು ಅವರ ಕಾರುಗಳನ್ನು 'ಅಗ್ಸಿಲರಿ ಫೋರ್ಸ್'ನ ತರಬೇತು ಕಾಲದಲ್ಲಿ ಮಾತ್ರವಲ್ಲ, ವರ್ಷ ಇಡೀ ತಮ್ಮ ಸ್ವಂತ ಕೆಲಸಕ್ಕಾಗಿ ಉಪಯೋಗಿಸುತ್ತಿರುತ್ತಾರೆ. ಹಾಗಾದ ಮೇಲೆ ಸದರಿ ಕಾರುಗಳು 'ಅಗ್ಸಿಲರಿ ಫೋರ್ಸ್'ನ ಉಪಯೋಗಕ್ಕೇ ಇರುವವೆಂದು ಹೇಳುವದು ಹಾಗೇ ಹೇಗೆ? ಹಾಗೆ ಹೇಳಿದರೂ ಸರ್ಕಾರಿ ಅಧಿಕಾರಿಗಳು ಒಪ್ಪಿಕೊಳ್ಳುವದಾದರೂ ಹೇಗೆ? ಪ್ಲಾಂಟರುಗಳು ಸದರಿ ಕಾರುಗಳನ್ನು ತಮ್ಮ ಸ್ವಂತ ಕೆಲಸಕ್ಕಾಗಿ ಉಪಯೋಗಿಸುತ್ತಿರುವಾಗ್ಯೆ "ಟ್ರಾಫಿಕ್ ಇನ್‌ಸ್ಪೆಕ್ಟರ"ವರು ಯಾಕೆ ಅವರನ್ನು ಚಾರ್ಜು ಮಾಡಕೂಡದೆಂದು ಗೊತ್ತಾಗುವದಿಲ್ಲ. ಈ ತರದ ರಿಯಾಯಿತಿಯು ಮೋಟಾರು ತೆರಿಗೆ ಜಾರಿಯಲ್ಲಿರುವ ಬೇರೆ ಪ್ರಾಂತ್ಯಗಳಲ್ಲಿ ಅಗ್ಸಿಲರಿ ಪಟಾಲಮಿಗೆ ಸೇರಿದವರಿಗೆಲ್ಲಾ ಇದೇ ವರ್ಷ ಕೊಡಲಾಗಿದೆಯೋ ಎಂದು ಸಮ್ಮಂಧಪಟ್ಟ ಸ್ಥಳೀಯ ಆಫೀಸರುಗಳು ವಿಚಾರಿಸುವರೋ?

ಹೇಗೂ ಇದೊಂದು ದೊಡ್ಡ ಅನ್ಯಾಯವೆಂಬುವುದರಲ್ಲಿ ಸಂಶಯವಿಲ್ಲ. ಈ ತರದ ಪಕ್ಷಪಾತದಿಂದ ಮೋಟಾರುಗಳನ್ನಿಟ್ಟಿರುವ ಹಿಂದೀ ಜನರಿಗೆ ತುಂಬಾ ಅಸಮಾಧಾನವೂ, ಅತೃಪ್ತಿಯೂ ಉಂಟಾಗಿದೆ. ಸರ್ಕಾರದ ಭಾಗಕ್ಕೆ ಇಂಥಾ ಪ್ಲಾಂಟರುಗಳಿಂದ ಟೋಲ್‌ಗೇಟಿನಲ್ಲಿ ಸಿಕ್ಕುತ್ತಿದ್ದ ಸುಂಕವೂ ಇಲ್ಲದಾಯಿತು. ಉತ್ಪತ್ತಿಯನ್ನು ಹೆಚ್ಚಿಸಬೇಕೆಂಬ ಉದ್ದೇಶದಿಂದ ಹಾಕಿದ ಹೊಸ ತೆರಿಗೆಯಿಂದ, ಅದನ್ನು ವಸೂಲಿ ಮಾಡಲು ನ್ಯಾಯವಾದ ರೀತಿಯನ್ನು ಕೈಕೊಳ್ಳದ್ದರಿಂದ, ಮೊದಲಿನ್ನ ಉತ್ಪತ್ತಿಯನ್ನು ಕಳಕೊಳ್ಳುವಂತೆ ಆಗಿದೆ.

ಒಂದು ವೇಳೆ ಯುರೋಪಿಯನ್ ಪ್ಲಾಂಟರುಗಳಿಂದ ಹೊಸ ತೆರಿಗೆಯನ್ನು ವಸೂಲು ಮಾಡಲು ಮಿಲಿಟರಿ ನಿಬಂಧನೆಯು ಬಿಡುವುದಿಲ್ಲವೆಂತಾದರೆ ಆ ಹೊಸ ತೆರಿಗೆಯನ್ನು ವಜಾ ಮಾಡಿ ಮೊದಲಿನಂತೆ ಎಲ್ಲರಿಂದಲೂ ಒಂದೇ ದರದಲ್ಲಿ ಸುಂಕವನ್ನು ವಸೂಲು ಮಾಡುವುದು ನ್ಯಾಯವಲ್ಲವೇ? ಸರ್ಕಾರದವರು ಈ ವಿಷಯಕ್ಕೆ ತಕ್ಕಷ್ಟು ಗಮನ ಕೊಡದೆ ಹೋದರೆ ಈಗಿನ ಆಡಳಿತವು ದಿನೇ ದಿನೇ ಕೆಲವರ ಪ್ರಯೋಜನಕ್ಕಾಗಿ ಮಾತ್ರ ನಡೆಸಲ್ಪಡುತ್ತಿದೆಯೆಂದು ಜನರಲ್ಲಿ ಹುಟ್ಟುತ್ತಿರುವ ಭಾವನೆಯನ್ನು ಸ್ಥಿರಪಡಿಸಲು ಅವಕಾಶವನ್ನುಂಟುಮಾಡಿದಂತಾಗುವುದರಲ್ಲಿ ಸಂದೇಹವಿಲ್ಲ.

'ದೇಶೀಯ'

---

೪೦ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕಕಂಪನಿ

ರವರ

ಜ್ವರದ ಗುಳಿಗೆಗಳು.

ಚಳಿಜ್ವರ, ಚಾತುರ್ಥಿ ಜ್ವರ, ದಿನಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮಬಾಣದಂತೆ ಇವೆ. ಬಾಟ್ಲಿಗೆ ರೂ. ೧. ೮. ೩. ೬ ಆಣೆ ಬರೂರು ತರಿಸಿಕೊಳ್ಳಿ.

(32—5) ಗಣೇಶ ರಾಮಚಂದ್ರ ಕರ್ಕ,
ಮತ್ತು ಕಂಪನಿ,
ಗಿರಗಾಂವ, ಮುಂಬಯಿ.

ರಾ ಮಾ ಯ ಣ.

(ಶ್ರೀರಾಮಕೃಷ್ಣ ಪರಮಹಂಸ—ಬಂಟಿಂ)

ಬಾಲಕಾಂಡ.

ಶ್ರೀರಾಮ ಮಹಿಮೆ ಅರಿಯತಂಕ ಮನುಷ್ಯನುಂಡ ಲೋಕತ್
ಶ್ರೀರಾಮನಾಮ ಪರೆಯತಂಕ ಮನುಷ್ಯನುಂಡ ಲೋಕತ್ || ೧ ||
ಶ್ರೀರಾಮನೆನ್ನಕೆ ಬದುಕಂಡುಂಡ್ ಆಕೆ ಬೆಯಿರಿ ಲೋಕತ್
ಶ್ರೀರಾಮನಾಮ ಎಣ್ಣ್ಯಂಡಿರಿ ಇರ್‌ಲ್ ಪೋಲು ಲೋಕತ್ || ೨ ||
ಅವತಾರಪಂತಂಗೆಲ್ಲ ಮುಂದ್‌ನಂತ ರಾಮುನಾ
ಲವಕುಶಂಗು ಲೋಕ ಜನಕ್ಕ್ ಕಥೆ ಕಳಿಚ ರಾಮುನಾ || ೩ ||
ದಶರಥಂಡ ತಪಕ್ ಮೆಚ್ಚಿ ಪುಟ್ಟ್‌ನಂತ ರಾಮುನಾ
ಋಷಿಯ ದಾಕೆ ಶ್ರೀಪದತಾಯಿ ರೂಪ ಎಡ್‌ತ ರಾಮುನಾ || ೪ ||
ಕೌಶಲ್ಯೆರ ಕೊಡಿಕ್ ಮೆಚ್ಚಿ ಕುಂಞ್‌ಯೊನ ರಾಮುನಾ
ಕೌಸ್ತುಭ ರತ್ನ ಪೋಲೆ ಎರಿಂಡಿಂಜ ರಾಮುನಾ || ೫ ||
ತಾನ್ ಪುಟ್ಟಿ ಲೋಕಕೆಲ್ಲ ಸುಖ ಕೊಡ್‌ತ ರಾಮುನಾ
ಮಾಸಪಂಡ ಮನತ್‌ನ್ನೆಲ್ಲ ಕುಳ್‌ತ ಮಾಡ್‌ನ ರಾಮುನಾ || ೬ ||
ಅಣ್ಣ ತಮ್ಮ ಸೇರಿ ಕಳ್‌ಚಿ ಬೊಳಂದಂಡಿಂಜ ರಾಮುನಾ
ಕಂಣ್‌ಗೊಂಬೆ ಎಲ್ಲದವ ಆಯಿತಿಂಜ ರಾಮುನಾ || ೭ ||
ವಶಿಷ್ಠಗುರು ತಾನೇ ನಿಂಡ ಪಠಪ್‌ಚಿಟ್ಟ ರಾಮುನಾ
ಅಸಾಧ್ಯವಿದ್ಯೆನೆಲ್ಲ ಅಂದೆ ಪಡ್‌ಚಿ ಬೆಚ್ಚ ರಾಮುನಾ || ೮ ||
ಯುಜ್ಞಪಾಲಕಾಯಿತಂಡ್ ಕಾಟೆಯಪೋನ ರಾಮುನಾ
ಸುಬಾಹುನಯೆಲ್ಲ ಒಟ್ಟೆಉದ್ದ ಪಡಿಚ ಪೋನ ರಾಮುನಾ || ೯ ||
ಮಾರೀಚನ ಅರೆ ಜೀವ ಮಾಡಿಬೆಚ್ಚ ರಾಮುನಾ
ಘೋರ ರಾಕ್ಷಸರ ಕೊಲ್ಲುಸುದು ಮಾಡ್ನ ರಾಮುನಾ || ೧೦ ||
ಮಿಂಞ ಕೂಡಿ ಪೋಯಿತಂಡ್ ಸೀತೆ ಕಂಡ ರಾಮುನಾ
ಇಂಞ್ ಮಿಂಞ ಅವಳೆ ನಾಡ ರಾಣಾದರಿಂಜ ರಾಮುನಾ || ೧೧ ||
ವಿಶ್ವಮಿತ್ರ ಅವನ ಕುದ್‌ಚಿ ಜನಕಂಗೆಣ್ಣ ರಾಮುನಾ
ವಿಶ್ವಕ್‌ನೆಲ್ಲ ರಟ್ಟೆ ತಕ್ಕಿಲ್ ತೆಳಕುವ ಪೋಟ ರಾಮುನಾ || ೧೨ ||
ಶಿವಂಡ ಬಿಲ್‌ಕೇರ್ ಕೆಣ್‌ಚಿ ಪೋಳ್‌ಚಿ ಬೆಚ್ಚ ರಾಮುನಾ
ಅವಂಡ ಕೀರ್ತಿ ಲೋಕಕ್ಕೆಲ್ಲ ಕೇಳಿ ಕೇಟ ರಾಮುನಾ || ೧೩ ||
ಅವತಾರ ತಾಂಡಂದೆಣ್ಣ್ ಪರಶು ಒಲಿಚ ರಾಮುನಾ
ಅವನಂತ್ ಪಟ್ಟನೇರ್ನ್ ಧೈರ್ಯಗಾರ ರಾಮುನಾ || ೧೪ ||

ಅಯೋಧ್ಯಾಕಾಂಡ.

ಮನೆಕ್ ಬಂದ್ ಪಟ್ಟ ಕಟ್ಟಂದೆಣ್ಣ್‌ಶಿಂಜ ರಾಮುನಾ
ಘನತ್‌ಲೋಕ ಜನ ಎಲ್ಲ ಕಾತಂಡಿಂಜ ರಾಮುನಾ || ೧೫ ||
ರಾಜನಾಯಿ ಬಾಳಂಡುಂಡ್ ಮನ್‌ಸ್ ಮಾಡ್ನ ರಾಮುನಾ
ಮೂಜಗತ್ತೋ ಕಾಂಡದೆಣ್ಣ ಮಾಡ್ತಿಂಜ ರಾಮುನಾ || ೧೬ ||
ಜಾಡಿ ಕೂಟಿ ಮಂಥರೆ ಆಚ್ ಕೆಡ್‌ತಿ ಬೆಚ್ಚ ರಾಮುನಾ
ಕೇಡ್ ಗೇನ ಮಾಡಿ ಕೈಕೆ ಓಡಿಚಿಟ್ಟ ರಾಮುನಾ || ೧೭ ||
ಅಪ್ಪ ಕೊಡ್‌ತ ಭಾಷೆತಾಯಿ ಕಾಡ್ ಕೂಡ್ನ ರಾಮುನಾ
ತಪ್‌ಕೊಪ್ಪ್‌ಮಾಡ್ವಕಾಯಿ ಕಷ್ಟಪಟ್ಟ ರಾಮುನಾ || ೧೮ ||
ಆನೆವನತ್ ದುಷ್ಟ ನಿಗ್ರಹಕ್ ಪೊಂಟ್‌ಪೋನ ರಾಮುನಾ
ಕಾನನವೇ ಕಾರ್ಯಸಿದ್ಧಿಕ್ ಒಟ್ಟೆಂದರಿಂಜ ರಾಮುನಾ || ೧೯ ||

ಅರಣ್ಯಕಾಂಡ.

ಗುಹಕನಂಡ್ ತಾನೆ ದೋಣಿ ಕೂಟಿ ಕೊಡ್‌ತ ರಾಮುನಾ
ಅಹಲ್ಯದೇವಿ ಕಲ್ ಆಯಿ ಕಾತಂಡಿಂಜ ರಾಮುನಾ || ೨೦ ||
ತಮ್ಮ ಭರತ ತಾನೆ ಬಂದ್ ಕಾಕೆ ಕೂಟ್ನ ರಾಮುನಾ
ದಮ್ಮಯಂಡ್ ಎಣ್ಣಂಗಾಯಿ ಕಡಾವು ಕೊಡ್‌ತ ರಾಮುನಾ || ೨೧ ||
ಕಾಡ್ ಕಳ್‌ಂಚಿ ತಿಂದಂಡಿಂಜ ರಾಜ ಮೋಳದ ರಾಮುನಾ
ಬಾಡಿ ಪೋಕೆ ಕೆಳಚಂಡಿಂಜ ಲಕ್ಷ್ಮಣ ಸೀತೆ ರಾಮುನಾ || ೨೨ ||
ಸೂರ್ಪನಖಿ ಮೂಯತ್ ಒಂದ್ ಕಾಡಿ ದೋಡ್ನ ರಾಮುನಾ
ಕುರುಪಿ ಮಾಡಿತವಳ ಆಯಿಚ ಗುಣ ನಲ್ಲ ರಾಮುನಾ || ೨೩ ||
ಮಾರೀಚಂಡ ಮಾಯಿಕೊಡ್‌ಚಿ ಮೋಸ ಪೋನ ರಾಮುನಾ
ಪೂರಿ ರಾವಣಾಂಡ ದೆಸೆಲ್ ಸೀತೆ ಕಳಂಡ್ ರಾಮುನಾ || ೨೪ ||
ನಾಡ್‌ನೆಲ್ಲ ತೇಡಿ ಪೋಯಿ ಓಡಿ ಕಳಿಚ ರಾಮುನಾ
ಕಾಡ್‌ಲಿಂಜ ಮರಗಿಡಕ್ಕ ಮೊರಟೆಣ್ಣ ರಾಮುನಾ || ೨೫ ||
ಜಟಾಯು ಅಂದ್ ಅರೆಜೀವತ್ ಕಾತಂಡಿಂಜ ರಾಮುನಾ
ಕೇಟನ್ನಕ್ಕ ಸ್ವರ್ಗ ಪದಿ ತೊರಂದ್ ಕೊಡ್‌ತ ರಾಮುನಾ || ೨೬ ||
ಶಬರಿ ಅತ್ತಪಂಕ್ ಪೋಯಿ ಪಣ್ಣ್ ತಿಂದ ರಾಮುನಾ
ಕಬಂಧಪೆಣ್ಣುಳ ರಾಕ್ಷಸನ ಕೆತ್ತಿ ಕೊಂಡ ರಾಮುನಾ || ೨೭ ||

ಕಿಷ್ಕಿಂಧಾಕಾಂಡ.

ಸರಂದ್ ಕೂಡಿ ಅಂದ್ ಪೋಯಿ ಕೋದಂಡ ಕೊಡ್ನ ರಾಮುನಾ
ಒಡಂದ ಸುಗ್ರೀವಂಡ ಮನತ್ ನೊಂದ್ ಪೂತ್ನ ರಾಮುನಾ || ೨೮ ||
ವಾಲಿ ವಾಲಿನಂಡ್ ಮರೆಲ್ ನಿಂದ್ ಕೊಂದ ರಾಮುನಾ
ವಾಲಿಯಕ್ಕೆಲ್ಲ ಅತುರತ ಶಿಕ್ಷೆ ಕೊಡ್‌ತ ರಾಮುನಾ || ೨೯ ||
ಸುಗ್ರೀವಂಡ ಸಹಾಯಕಾಯಿ ರಾತಳಕೆ ರಾಮುನಾ
ಉಗ್ರತವಂಡ ಕಳ್ಳ ಚೊಕ್ಕ ಬುಡ್‌ತಿ ಬೆಚ್ಚ ರಾಮುನಾ || ೩೦ ||
ಹನುಮ ಸೇವೆ ಮನತ್ ಮೆಚ್ಚಿ ಎಡ್‌ತಂಡಿಂಜ ರಾಮುನಾ
ಮನ್‌ಪ ದೋರೆ ಬಂತು ಬೋರೆಂದರಿಯತಿಂಜ ರಾಮುನಾ || ೩೧ ||

ಸುಂದರಕಾಂಡ.

ಲಂಕೆ ರಾವಣಾಂಡ ಬನತ್ ಸೀತೆಂದರಿಂಜ ರಾಮುನಾ
ಮಂರ್ ಅವಂಡ ಬುಡ್‌ತಂಡುಂಡ್ ಪೊಂಟ್‌ಪೋನ ರಾಮುನಾ || ೩೨ ||
ತಾಂಡ ಮೊಯಿರ ಗುರ್‌ತ್‌ಕಾಯಿ ಆಯಿಚ ಕೊಡ್‌ತ ರಾಮುನಾ
ಬೋಂಡತಾಂಗ್ ಸೀತೆ ಇಲ್ಲತೆ ಸುಖತಿಂಜ ರಾಮುನಾ || ೩೩ ||
ಸಮುಸ್ತ ದೇವದೆಣ್ಣ್ ತಾಂಡ್ ಕಡಾವು ಕೊತ್ತ್ ರಾಮುನಾ
ಸಮುದ್ರಕಡ್ಡ ಪಾಲಕಟ್ಟಿದೆಣ್ಣ ಪೊಂಟ ರಾಮುನಾ || ೩೪ ||
ಕೊರಿಯ ಸೇವೆ ಮಾಡ್‌ನಾಂಗ್ ಗುರ್‌ತ್ ಕೊಡ್‌ತ ರಾಮುನಾ
ಮೊರೆಯುವಂತ ಸಮುದ್ರತ್‌ನ ಬಡತ್ ಬೆಚ್ಚ ರಾಮುನಾ || ೩೫ ||
ರಾವಣಾಂಡ ಪತ್ತ್ ಮಂಡೆ ಕೆತ್ತಿಕ್‌ಟ್ಟ ರಾಮುನಾ
ಸೇವೆ ಲೋಕತ್ ಶ್ರೀಪದಂಗಳ ಕೊಲ್ಲದಿಂಜ ರಾಮುನಾ || ೩೬ ||
ತೊಟ್ಟ ಪಾಪ್ಯಳೆಲ್ಲ ಕಟ್ಟಿ ಸ್ವರ್ಗಕಯಿಚ ರಾಮುನಾ
ಪಟ್ಟಕಟ್ಟಿ ವಿಭೀಷಣಾಂಗ್ ಕುಶಿಪಟ್ಟ ರಾಮುನಾ || ೩೭ ||
ಕಷ್ಟ ತಿತ್ ಎದೆಲಿಂಜ ಕಾಟತಿಂಜ ರಾಮುನಾ
ತಿತ್‌ಲಂಡ್ ಶುದ್ಧ ಮಾಡಿ ಸೀತೆನೆಡ್‌ತ ರಾಮುನಾ || ೩೮ ||
ಕಾತ್‌ಲ್ ಪಾರುವ ಪುಷ್ಪಕೇರ್‌ಲ್ ಪಾರಿಪೋನ ರಾಮುನಾ
ತಾತ್ ಲೋಕಕ್ ಶಾಂತಿದೆಣ್ಣ ದೇವ ಕುದಿಚ ರಾಮುನಾ || ೩೯ ||
ಬಾತ್ ಬಾತ್‌ಂದೆಣ್ಣ್‌ತಂಡ್ ಹನುಮನೆಣ್ಣ ರಾಮುನಾ
ಕಾತಂಡಿಂಜ ಭರತಂಗಂಡ್ ಜೀವ ಕೊಡ್‌ತ ರಾಮುನಾ || ೪೦ ||
ಭೀತಿ ಜನಕ್ ಇಲ್ಲತನ್ನೆ ದೇಶ ಬಳ್‌ನ ರಾಮುನಾ
ಸೇತು ಹಿಮಾಚಲ ತ್‌ೀರ ಗೆದ್ದ ಬೆಚ್ಚ ರಾಮುನಾ || ೪೧ ||
ದೀಕ್ಷ ಇದ್ ರಾಜ ಕಾರ್ಯಂದರಂಜೆತಿಂಜ ರಾಮುನಾ
ಭಿಕ್ಷೆಗಾರ ಇಲ್ಲತನ್ನೆ ಸುಭಿಕ್ಷ ಮಾಡ್ನ ರಾಮುನಾ || ೪೨ ||
ಜನಡ ಗುಣಾಕ್ ರಾಜಾದೆಣ್ಣ್ ಅರಿಂಜೆತಿಂಜ ರಾಮುನಾ
ಜನಡ ಕಷ್ಟ ಇರ್‌ಲ್ ಪೋಲು ಅರಿಬಾಂತಿಂಜ ರಾಮುನಾ || ೪೩ ||
ಅರಸೋ ಪರಂದ ತಪ್ಪ್‌ಕಾಯಿ ಸೀತೆ ಬುಟ್ಟ ರಾಮುನಾ
ದೂರಬಾಯಿ ಕೇಟಂಗಾಯಿ ಕಷ್ಟಪಟ್ಟ ರಾಮುನಾ || ೪೪ ||
ಪೊನ್ನ ಸೀತೆ ರೂಪ ಮಾಡಿ ಯಾಗ ಮಾಡ್ನ ರಾಮುನಾ
ಪನ್ನಿಗೇತ ತಾನ್ ಆಯಿ ಯಜ್ಞ ಮಾಡ್ನ ರಾಮುನಾ || ೪೫ ||
ತಂಡ ಮಕ್ಕಡ ಕೂಡೆ ಅಂದ್ ಪಡೆ ಪೊತ್ತ ರಾಮುನಾ
ತಾಂಡಾಪಕ್ ಕೇಡ್ ಮಾಡ್ನಂಗ್ ಫಲ ಪುಂಡ ರಾಮುನಾ || ೪೬ ||
ಕಾಕೆ ಕೂಟಿ ಜನಳ ಅಂದ್ ನಮ್ಮ ಮಾಡ್ನ ರಾಮುನಾ
ಚಾಕಡವ ಸಂಗಳಿಂದು ನೆನತಂಡಿಕ್ಕ ರಾಮುನಾ || ೪೭ ||
ರಾಮರಾಜ್ಯ ಸೌಖ್ಯ ನಿಧಿಂದ್ ಕೇಳಿ ಕೇಟ ರಾಮುನಾ
ಕಾಮ ಕಳೆವ ಪ್ರೇಮ ಕೋಟಿ ಅರಿಂಜೆತಿರ ರಾಮುನಾ || ೪೮ ||
ತಾನ್ ಪುಟ್ಟಿ ಲೋಕ ಕೆಳ್‌ತಿ ಪೊಂಟ್‌ಪೋನ ರಾಮುನಾ
ಮಾನನಂಡ ಕಷ್ಟ ತ್‌ೀಪಕ್ ಪುನಃ ಪುಟ್ಟ ರಾಮುನಾ || ೪೯ ||
ರಾಮ ರಾಮ ರಾಮ ರಾಮ ರಾಮ ರಾಮ ರಾಮುನಾ
ರಾಮ ರಾಮ ರಾಮ ರಾಮ ರಾಮ ರಾಮ ರಾಮುನಾ || ೫೦ ||

ನ. ಚಿ. ಸುಬ್ಬಯ್ಯ.

ಸೆಂಟ್ರಲ್ ಬ್ಯಾಂಕು ಮೀಟಿಂಗು.

ಈ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ತಾರೀಖು 27—8—1932ರಲ್ಲಿ ರಾ. ಬಾ. ಪಟ್ಟಮಾಡ ದೇವಯ್ಯನವರ ಅಧ್ಯಕ್ಷತೆಯಲ್ಲಿ ಬ್ಯಾಂಕಿನ ಆಫೀಸಿನಲ್ಲಿ ನಡೆಯಿತು. ಈ ಕೆಳಗಿನ ಮೆಂಬರುಗಳು ಹಾಜರಿದ್ದರು.

1. ರಾ. ಬಾ. ಪಿ. ದೇವಯ್ಯನವರು (ಪ್ರೆಸಿಡೆಂಟರು) ಮ. ಗಳಾದ 2. ಕೆ. ಎಸ್. ಸುಬ್ರಾಯರು, 3. ಯಂ. ಯಂ. ಚೆಂಗಪ್ಪನವರು (ಟ್ರೆಜರರ್,) 4. ಎ. ಬಿ. ಚಂಗಪ್ಪನವರು, ಯಂ. ಯಲ್. ಸಿ. 5. ಕೋಟೇರ ತಮ್ಮಯ್ಯನವರು, 6. ಬಿ. ಸಿ. ಸುಬ್ಬಯ್ಯನವರು, ಯಂ. ಎ. ಬಿ. ಎಲ್. 7. ಪುಚ್ಚಿಮಾಡ ಮಾದಯ್ಯನವರು, 8 ಪಿ. ಬಿ. ಮುದ್ದಪ್ಪಯ್ಯನವರು, 9 ಯನ್. ಬಿ. ಸೋಮಯ್ಯನವರು, ಯಂ. ಯಲ್. ಸಿ. 10. ಸಿ. ಯನ್. ವೆಂಕಪ್ಪಯ್ಯನವರು, ಬಿ. ಎ., ಬಿ. ಎಲ್. (ಗೌರವ ಕಾರ್ಯದರ್ಶಿ.)

1. ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು.

2. ಜುಲೈ ತಿಂಗಳ ಜಮಾ ಮತ್ತು ಖರ್ಚಿನ ಲೆಕ್ಕ ಓದಿ ಮಂಜೂರು ಮಾಡಲಾಯಿತು.

ಹಿಂದಿನ ತಿಂಗಳ ಶಿಲ್ಕು	ರೂ. 7162 7 11
ಈ ತಿಂಗಳಲ್ಲಿ ಜಮಾ	ರೂ. 42504 12 6
ಜುಮ್ಲ	ರೂ. 49667 4 5
ಈ ತಿಂಗಳಲ್ಲಿ ಖರ್ಚು	ರೂ. 22112 12 9
ಈ ತಿಂಗಳಲ್ಲಿ ಶಿಲ್ಕು	ರೂ. 27554 7 8

3. ಈ ಕೆಳಗಿನ ಸೊಸೈಟಿಗಳಿಗೆ ಸಾಲಗಳು ಮಂಜೂರಾದವು. (1) ಮಡಿಕೇರಿ ಟೌನ್ ಸೊಸೈಟಿಗೆ ರೂ. 1500, (2) ಕಾಫಿ ಪ್ಲಾಂಟರುಗಳ ಸೊಸೈಟಿಯು ರೂ. 5500 ಮತ್ತು ಮಾಯಮುಡಿ ಸೊಸೈಟಿಗೆ ರೂ. 750.

4. ಅಜ್ಜೂರು ಪಯ್ಯಪ್ಪ ಸೊಸೈಟಿಗೆ ಬ್ಯಾಂಕಿಗೆ ಕೊಡಲು ಬಾಕಿ ಇರುವ ವಾಯಿದೆ ಮೀರಿದ ಸಾಲ ಪೂರ್ತಿ ವಾಪತಿ ಮಾಡದ್ದರಿಂದ ಅದಕ್ಕೆ ಸಾಲ ಮಂಜೂರಾಗಲಿಲ್ಲ.

5. ಸಹಕಾರಿ ಮೂಲಕ ಬ್ಯಾಂಕಿಗೆ ಬರುವ ಮೆಂಬರುಗಳ ಡಿಪಾಜಿಟ್ಟು ಮತ್ತು ರಿಜರ್ವ್ ಫಂಡು ಡಿಪಾಜಿಟ್ಟು ವಿನಹ ಹೊರಯುವರಿಂದ ಬರುವ ನಿರಖು ಠೇವಣಾತಿಗಳನ್ನು ಇನ್ನೊಂದು ತೀರ್ಮಾನದ ವರೆಗೆ ತೊಂದಿಕೊಳ್ಳಕೂಡದಾಗಿ ತೀರ್ಮಾನವಾಯಿತು.

6. ಕೊಡಗಿನ ಸಹಕಾರಿ ಸಂಘಗಳ ಸ್ಥಿತಿಯನ್ನು ಕುರಿತು ತನಿಖೆ ಮಾಡಿ ಜನರು ಸಾಲ ತೆಗೆದುಕೊಳ್ಳುವದನ್ನು ಹ್ಯಾಗೆ ಕಡಿಮೆ ಮಾಡಬಹುದು ಎಂಬದಕ್ಕೆ ಸಲಹೆ ಕೊಡಲು ಒಂದು ಕಮಿಟಿ ನೇಮಿಸಬೇಕೆಂತ ಮೆ. ಎ. ಬಿ. ಚಂಗಪ್ಪನವರು ಕೊಡಗು ಕೌನ್ಸಿಲಿಗೆ ಕಳುಹಿಸಿರುವ ಠರಾವಿನ ವಿಷಯದಲ್ಲಿ ಬ್ಯಾಂಕಿನ ಅಭಿಪ್ರಾಯ ಬೇಕೆಂತ ಕೇಳಿದ ರಿಜಿಸ್ಟ್ರಾರವರು ಬ್ಯಾಂಕನ್ನು ಅಂಥಾ ಕಮಿಟಿ ಮಾಡುವ ಅಗತ್ಯವಿರುವುದಾಗಿ ತಿಳಿಸಲು ಬಹುಮತದಿಂದ ಮಂಜೂರಾಯಿತು.

7. ಯುನಿವರ್ಸಲ್ ಮ್ಯೂಚುವಲ್ ಏಯಿಡ್ ಕಂಪೆನಿಯ ಲಿಕ್ವಿಡೇಟರು ಸದರಿ ಕಂಪೆನಿಯ ಬಾಬ್ತು ಬ್ಯಾಂಕಿನಲ್ಲಿರುವ ಡಿಪಾಜಿಟ್ಟು ಹಣವನ್ನು ವಾಪಸು ಕೊಡಬೇಕು ಎಂದಾಗಿ ಬರಕೊಂಡ ಪತ್ರವೂ, ಯೂನಿವರ್ಸಲ್ ಮ್ಯೂಚುವಲ್ ಏಯಿಡ್ ಕಂಪೆನಿಯ ಮೇನೇಜಿಂಗ್ ಡೈರೆಕ್ಟರ್ ಪಿ. ದೇವಯ್ಯನವರೂ ಮತ್ತು ಡೈರೆಕ್ಟರು ಮೆ. ಮಂಡೇಟಿರ ಅಪ್ಪಯ್ಯನವರು ಯೂನಿವರ್ಸಲ್ ಕಂಪೆನಿಯ ಹೆಸರಿನಲ್ಲಿ ಬ್ಯಾಂಕಿನಲ್ಲಿ ಡಿಪಾಜಿಟ್ಟು ಇರುವ ಹಣವನ್ನು ಅವರಿಗೆ ಕೊಡಕೂಡದಾಗಿ ಬರಕೊಂಡ ಪತ್ರವೂ ಓದಲಾಯಿತು. ಈ ಉದ್ದಿಶ್ಯ ಕೂರ್ಗ್ ಮ್ಯೂಚುವಲ್ ಏಯಿಡ್ ಕಂಪೆನಿಯವರು ಮದ್ರಾಸ್ ಹೈ ಕೋರ್ಟಿನಲ್ಲಿ ಕೇಸು ಹೈಲು ಮಾಡಿ ಕೇಸು ನಡೆಯುತ್ತಿರುವುದರಿಂದ ಇದರ ತೀರ್ಮಾನ ಆಗುವ ವರೆಗೆ ಬ್ಯಾಂಕಿನಲ್ಲಿರುವ ಡಿಪಾಜಿಟ್ಟು ಹಣವನ್ನು ಯಾರಿಗೂ ಕೊಡಕೂಡದಾಗಿ ತೀರ್ಮಾನವಾಯಿತು.

ಪಿ. ದೇವಯ್ಯ,
(ಅಧ್ಯಕ್ಷರು.)

ಕೊಡಗಿನಲ್ಲಿ ಸತ್ಯಾಗ್ರಹ ಪುನಃ ಪ್ರಾರಂಭ.

ವೀರರಾಜಪೇಟೆಯಲ್ಲಿ ದಸ್ತಗಿರಿ.

ಕ್ರಿ. ಪ್ರೊ. ಕೋ. 144ನೇ ಸೆಕ್ಷನಿನ ಪ್ರಯೋಗ.

ಕೈಲ್‌ಪೊಳುದು ಹಬ್ಬದ ಸಮಯದಲ್ಲಿ ಗಡಂಗವನ್ನು ಪಿಕೆಟ್ ಮಾಡಲಾಗುವದೆಂದು ಮುಂತಾಗಿ ಬರೆದ ಹಸ್ತಪತ್ರಿಕೆಗಳನ್ನು ಮಗ್ಗುಲದ ಶ್ರೀಯುತ ಪಿ. ತಮ್ಮಯ್ಯನವರು ಕಳೆದ ತಾ. 31ನೇ ಬುಧವಾರ ಮಧ್ಯಾಹ್ನದ ವೇಳೆ ಸುಮಾರು 2 ಗಂಟೆಗೆ ವೀರರಾಜಪೇಟೆ ದೊಡ್ಡಬೀದಿಯಲ್ಲಿ ಹಂಚುತ್ತಾ ಮಾರ್ಕೆಟ್ ಬಳಿ ತಲುಪಿದಾಗ್ಗೆ ಪೋಲೀಸಿನವರು ಬಂದು ಅವರ ಕೈಯಲ್ಲಿ ಉಳಿದಿದ್ದ ಹಸ್ತಪತ್ರಿಕೆಗಳನ್ನು ಕಿತ್ತುಕೊಂಡು, ಅವರನ್ನು ದಸ್ತಗಿರಿ ಮಾಡಿ ಪೋಲೀಸು ಠಾಣೆಗೆ ಕರೆದುಕೊಂಡು ಹೋದರು. ಮಿ. ತಮ್ಮಯ್ಯನವರು ಸತ್ಯಾಗ್ರಹ ಚಳವಳಿ ಸಂಬಂಧ ಆರು ತಿಂಗಳು ಸಜೆ ಅನುಭವಿಸಿ ಬಿಡುಗಡೆಯಾಗಿ ಬಂದು ಒಂದೆರಡು ತಿಂಗಳು ಮಾತ್ರವಾಗಿತ್ತು. ಈ ತಾ. 1ರಲ್ಲಿ ಸುಭೇದಾರರ ಕೋರ್ಟಿನಲ್ಲಿ ಅವರ ವಿಚಾರವು ನಡೆದು ಅವರಿಗೆ ಆರು ತಿಂಗಳು ಕಠಿಣ ಸಜವೂ, ನೂರು ರೂಪಾಯಿ ಜುಲುಮಾನೆಯೂ, ಜುಲುಮಾನೆ ಕೊಡಲು ತಪ್ಪಿದರೆ ಹೆಚ್ಚಿಗೆ ಆರು ವಾರ ಸಜೆಯೂ ವಿಧಿಸಲಾಯಿತು. ಅವರನ್ನು ಕಣ್ಣಾನೂರು ಸೆಂಟ್ರಲ್ ಜೈಲಿಗೆ ಸಾಗಿಸಿದರೆಂದೂ ವರ್ತಮಾನ.

ಅಂದಿನಿಂದ ಈಚೆಗೆ, ಈ ಮೊದಲು ಕಾನೂನು ಭಂಗ ಚಳವಳಿಯಲ್ಲಿ ಕಾರಾಗೃಹವಾಸವನ್ನು ಅನುಭವಿಸಿ ಬಂದಿರುವ ಕೆಲವು ಮಹನೀಯರಿಗೆ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 144ನೇ ಸೆಕ್ಷನ್ ಮೇರೆ ನೋಟೀಸು ಜಾರಿ ಮಾಡಲಾಗಿದೆಯೆಂದು ಸುದ್ದಿ.

ಒಳದೇಶ.

ಮಡಿಕೇರಿಯಲ್ಲಿ ಆಗೋಸ್ಟು ತಾ. 27ರಿಂದ ಸೆಪ್ಟಂಬರ್ 2ನೇ ಶುಕ್ರವಾರದ ವರೆಗೆ 2.51 ಇಂಚು ಮಳೆಯಾಗಿದೆ.

ಈ ತಾ. 10ರಲ್ಲಿ ನಡೆಯಲಿಕ್ಕಿರುವ ಕೊಡಗು ಕೌನ್ಸಿಲು ಮೀಟಿಂಗಿಗಾಗಿ ಚೀಫ್ ಕಮಿಷನರವರು ತಾ. 8-9-32ರಲ್ಲಿ ಬೆಂಗಳೂರಿನಿಂದ ಮಡಿಕೇರಿಗೆ ಬರುವರೆಂದು ಸುದ್ದಿ.

ಬೆಂಗಳೂರಿನ ಕೊಡಗು ಸಂಘದವರು ಕೈಲ್ ಮುಹೂರ್ತ ಹಬ್ಬವನ್ನು ಮತ್ತು ತಮ್ಮ 21ನೇ ವಾರ್ಷಿಕೋತ್ಸವವನ್ನು ತಾ. 4ರಲ್ಲಿ ಲಾಲ್‌ಬಾಗಿನಲ್ಲಿ ನಡಿಸುವರೆಂದು ತಿಳಿಯುತ್ತೇವೆ.

ಈ ವಾರ ಭತ್ತದ ಧಾರಣೆ ಗಾಡಿಯೊಂದಕ್ಕೆ ವೀರರಾಜಪೇಟೆಯಲ್ಲಿ 56 ರೂಪಾಯಿಯೂ, ಅಮ್ಮತ್ತಿ ಮತ್ತು ಗೋಣಿಕೊಪ್ಪಲಲ್ಲಿ 51 ರೂಪಾಯಿಯ ವರೆಗೂ ಇತ್ತೆಂದು ವರ್ತಮಾನ.

ಮಡಿಕೇರಿ ಹುಡುಗಿಯರ ಹೈಸ್ಕೂಲಿನ ಬೋರ್ಡಿಂಗಿನಲ್ಲಿ ಸುಮಾರು 25 ವಿದ್ಯಾರ್ಥಿನಿಯರಿಗೆ ಆಂಗರ ಕಜ್ಜಿ ಅಂಟಿದ್ದರಿಂದ ಸದರಿ ಶಾಲೆಯು ತಾ. 27-8-32ರಿಂದ ತಾ. 11-9-32ರ ವರೆಗೆ ಮುಚ್ಚಲ್ಪಟ್ಟಿದೆಯಾಗಿ ತಿಳಿಯಬರುತ್ತದೆ.

ಸತ್ಯಾಗ್ರಹ ಚಳವಳಿಯಲ್ಲಿ ಭಾಗಿಗಳಾಗಿ ಕಾರಾಗೃಹವಾಸವನ್ನು ಅನುಭವಿಸುತ್ತಿದ್ದ ಶ್ರೀಯುತ ಬೆಳ್ಯಂಗಡ ಬೋಪಯ್ಯನವರು ಕಳೆದ ತಾ. 25ರಲ್ಲಿಯೂ, ಶ್ರೀಯುತ ಮಂಡೇಪಂಡ ಸೋಮಣ್ಣನವರು ಈ ತಾ. 1ರಲ್ಲಿಯೂ ಕಣ್ಣಾನೂರು ಸೆಂಟ್ರಲ್ ಜೈಲಿನಿಂದ ಅವಧಿ ಮುಗಿದು ಬಿಡುಗಡೆ ಮಾಡಲ್ಪಟ್ಟರು.

ಕೆಲವು ದಿವಸಗಳ ಹಿಂದೆ ಗುಂಡಿನ ಪೆಟ್ಟಿನಿಂದ ಗಾಯವಾಗಿದ್ದ ಮಿ. ಅಪ್ಪಂಡೆರಂಡ ಜೋಯಪ್ಪನವರು ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದರೂ ಕೂಡ ಗುಣವಾಗದೆ ಕಳೆದ ತಾ. 24 ರಲ್ಲಿ ಶಿವಾಧೀನರಾದರೆಂದು ತಿಳಿಯುತ್ತೇವೆ.

ಕಳೆದ ವಾರ ಮೂರು-ನಾಲ್ಕು ದಿವಸಗಳಲ್ಲಿ ದಿಸಲಿನ ತಾಪವು ಹೆಚ್ಚಾಗಿ ನೀರು ಕಾದು, ದಕ್ಷಿಣ ಕೊಡಗಿನ ಕೆಲವು ಕಡೆಯ ಗದ್ದೆಗಳಲ್ಲಿ ಮೀನುಗಳು ಸತ್ತು ಹೋಗಿ ರಾಶಿ ರಾಶಿಯಾಗಿ ನೀರಿನ ಮೇಲೆ ತೇಲುತ್ತಿದ್ದವೆಂದೂ, ಇತ್ತಲಾಗಿ ಮಳೆ ಬಿದ್ದಿದೆಯೆಂದೂ ಸುದ್ದಿ.

ಕುಯ್ಯಂಗೇರಿನಾಡು ಬೆಟ್ಟಗೇರಿ ಗ್ರಾಮದ ಕಡ್ಲೆರ ಚಿಣ್ಣಪ್ಪನವರು ಕಳೆದ ತಾ. 28 ರ ಹಗಲು ಅವರ ಮನೆಗೆ ಹೋಗುವ ದಾರಿ ಒಳಗೆ ಗುಂಡು ಹೊಡೆದುಕೊಂಡು ಆತ್ಮಹತ್ಯ ಮಾಡಿಕೊಂಡರೆಂದೂ, ಪೋಲೀಸಿನ ವಿಚಾರದಲ್ಲಿ ಕಾರಣವೇನೆಂದೂ ಇನ್ನೂ ಗೊತ್ತಾಗಿರುವುದಿಲ್ಲವೆಂದೂ ವರ್ತಮಾನ.

ಕೆಲವು ದಿವಸಗಳ ಹಿಂದೆ ಪೊನ್ನಂಪೇಟೆಯಲ್ಲಿ ಮಿ. ಕುಪ್ಪಂಡ ಮಾಚಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಪಬ್ಲಿಕ್ ಮೀಟಿಂಗು ನಡೆದು 'ಇಂಡಿಯಾ ದೇಶದ ದೊಡ್ಡ ಪ್ರಾಂತ್ಯಗಳಿಗೆ ಕೊಡುವ ರಾಜಕೀಯ ಸುಧಾರಣೆಗಳನ್ನು ಕೊಡಗಿಗೂ ಕೊಡಬೇಕು' ಎಂದು ಪಾಸಾದ ಠರಾವನ್ನು ಕಮಿಷನರವರಿಗೆ ಕಳುಹಿಸಲಾಯಿತೆಂದು ಮೀಟಿಂಗಿನ ಅಧ್ಯಕ್ಷರು ತಿಳಿಸಿರುತ್ತಾರೆ.

ಉತ್ತರ ಕೊಡಗು ತಾಲೋಕಿನ ಸುಭೇದಾರರಾಗಿರುವ ಮಿ. ಕರವಂಡ ಚಂಗಪ್ಪನವರನ್ನು ಮಡಿಕೇರಿ-ವೀರರಾಜಪೇಟೆ ಸ್ಟೇಷನರಿ ಮೇಜಿಸ್ಟ್ರೇಟರಾಗಿಯೂ, ಸ್ಟೇಷನರಿ ಮೇಜಿಸ್ಟ್ರೇಟರಾಗಿರುವ ಮಿ. ಕೀತಿಯಂಡ ಕಾಳಪ್ಪನವರನ್ನು ಉತ್ತರ ಕೊಡಗು ತಾಲೋಕು ಸುಭೇದಾರರಾಗಿಯೂ ಈ ತಿಂಗಳು 15ರ ವರ್ಗಾಯಿಸಿರುವರೆಂದು ತಿಳಿಯಬರುತ್ತದೆ.

ಕುಂದ ಗ್ರಾಮದ ಮಿ. ಕೊಡಂದೆರ ಮೋದಪ್ಪನವರಿಗೆ ಸ್ವಲ್ಪ ಹುಚ್ಚು ಹಿಡಿದು ಕಳೆದ ಶನಿವಾರ ಹಾತೂರು ನನ್ನಿಯಲ್ಲಿಯೂ ಮತ್ತು ಆದಿತ್ಯವಾರ ಗೋಣಿಕೊಪ್ಪಲಲ್ಲಿಯೂ ಕೆಲವರಿಗೆ ಹೊಡೆದರೆಂತ ಅವರನ್ನು ಪೋಲೀಸಿನವರು ದಸ್ತಗಿರಿ ಮಾಡಿ ಜಾಮೀನು ಮೇಲೆ ಬಿಟ್ಟಿರುವರೆಂದೂ, ಸ್ವಯಂಸೇವಕರು ಪಿಕೆಟಿಂಗ್ ಕೆಲಸ ಮಾಡುವರೋ ಎಂಬ ಸಂಶಯದ ಮೇರೆ ಗೋಣಿಕೊಪ್ಪಲು ಸಂತೆಗೆ ಹೋಗಿದ್ದ ಪೋಲೀಸು ಪಾರ್ಟಿ ಇದೊಂದು ದಸ್ತಗಿರಿ ದೊರೆಯಿತೆಂದೂ ಸುದ್ದಿ.

ಡಿ. ಪಿ. ಡಬ್ಲ್ಯು. ಇಲಾಖೆಯ ಸಿದ್ದಾಪುರದ ಸೆಕ್ಷನ್ ಆಫೀಸರಾಗಿದ್ದ ಮಿ. ಉಳುವಾರನ ಚಂಗಪ್ಪನವರು ಮೆಡಿಕಲ್ ಸರ್ಟಿಫಿಕೇಟ್ ಮೇರೆ ರಿಟಯರಾದುದರಿಂದ ಮಿ. ಎಂ. ಕನ ಪೂವಯ್ಯನವರು ಸಿದ್ದಾಪುರ ಸೆಕ್ಷನ್ ಆಫೀಸರಾಗಿಯೂ, ವೀರರಾಜಪೇಟೆಯ ಸೆಕ್ಷನ್ ಆಫೀಸರಾದ ಮಿ. ಪಾಲಂದಿರ ಮೊಣ್ಣಪ್ಪನವರು ಎರಡು ತಿಂಗಳು ರಜೆ ತೆಗೆದುಕೊಂಡಿರುವುದರಿಂದ ಅವರ ಬದಲು ಮಿ. ಜಿ. ಸುಬ್ಬಯ್ಯನವರು ವೀರರಾಜಪೇಟೆ ಸೆಕ್ಷನ್ ಆಫೀಸರಾಗಿಯೂ ನೇಮಿಸಲ್ಪಟ್ಟಿರುವರೆಂದು ತಿಳಿಯಬರುತ್ತದೆ.

ಈ ಮೊದಲು ಪ್ರಕಟಿಸಿದಂತೆ ವೀರರಾಜಪೇಟೆ ಹೈಸ್ಕೂಲು ಡಿಬೇಟಿಂಗ್ ಸೊಸೈಟಿಯ ಆಶ್ರಯದಲ್ಲಿ ಕಳೆದ ತಾ. 27 ರಲ್ಲಿ ಕೊಡಗಿನ ಭವಿಷ್ಯತ್ತನ್ನು ಕುರಿತು ಒಂದು ಪಬ್ಲಿಕ್ ಡಿಬೇಟು ನಡೆಯಿತು. ರಿಟಯರ್ಡ್ ಮುನ್ಸಿಫರಾದ ಮಿ. ಕರವಂಡ ಮುತ್ತಣ್ಣನವರು ಅಧ್ಯಕ್ಷರಾಗಿದ್ದರು. ಮುಂದಿನ ರಾಜಕೀಯ ರಚನೆಯಲ್ಲಿ ಕೊಡಗು ಪ್ರತ್ಯೇಕ ಪ್ರಾಂತ್ಯವಾಗಿರಬೇಕೆಂದು ಕೆಲವರೂ, ಕೊಡಗನ್ನು ಮದ್ರಾಸು ಪ್ರಾಂತ್ಯಕ್ಕೆ ಸೇರಿಸಬೇಕೆಂದು ಇನ್ನು ಕೆಲವರೂ ವಾದ ಮಾಡಿದರು. ಮಹಿಳೆಯರು ಸ್ತ್ರೀಪುರುಷ ಚರ್ಚೆಯಲ್ಲಿ ಭಾಗಿಗಳಾಗಿದ್ದರು. ಕೊಡಗನ್ನು ಪ್ರತ್ಯೇಕ ಪ್ರಾಂತ್ಯವಾಗಿಯೇ ಇಡಬೇಕೆಂಬ ಠರಾವನ್ನು ಓಟಿಗೆ ಹಾಕುವ ಮುಂಚೆಯೇ ಸಭಿಕರಲ್ಲಿ ಕೆಲವರು ಎದ್ದು ಹೋಗಿಬಿಟ್ಟರೆಂತಲೂ, ಠರಾವಿನ ಸೂಚಕರ ಅಪೇಕ್ಷೆ ಮೇರೆ ಅದನ್ನು ಓಟಿಗೆ ಹಾಕದೇನೇ ಮೀಟಿಂಗು ಬರಖಾಸ್ತು ಮಾಡಲಾಯಿತೆಂದೂ ವರ್ತಮಾನ.

ಹಿಂದೂದೇಶ.

ಉಡುಪಿಯ ವಿದೇಶಿ ಸಕ್ಕರೆ ಅಂಗಡಿಯನ್ನು ಪಿಕೆಟ್ ಮಾಡಿದುದಕ್ಕಾಗಿ ಹೆಚ್. ಡಿ. ಬಂಡಾರ್‌ಕರ್ ಮತ್ತು ಯಂ. ಆರ್. ರಾವ್‌ರವರೇ ಮೊದಲಾದವರು ದಸ್ತಗಿರಿಯಾಗಿರುವರು.

ಲಕ್ನೋದಲ್ಲಿ ತಾ. 29-8-32 ರಲ್ಲಿ 'ಬಹಿಷ್ಕಾರದ ದಿನ'ವನ್ನು ಆಚರಿಸಿದ್ದಕ್ಕಾಗಿ ಅಲ್ಲಿಯ ಸರ್ವಾಧಿಕಾರಿಯಾದ ಪಂಡಿತ ರಾಮಧಾರ್ ಮಿಶ್ರರವರು ಮತ್ತು 14 ಜನರು ಕೈದು ಮಾಡಲ್ಪಟ್ಟರು.

ನೇಪಾಳ ರಾಜ್ಯದ ಮುಖ್ಯ ಸೇನಾಧಿಪತಿಯೂ, ಅಲ್ಲಿಯ ಎಗ್ಸಿಕ್ಯುಟಿವ್ ಕಮಿಟಿಯ ಒಬ್ಬ ಸದಸ್ಯರೂ ಆಗಿದ್ದ ವೀರ ಧರ್ಮ ಷಂಷೇರು ಜಂಗ ಬಹದ್ದೂರ್‌ರವರು ಕಳೆದ ತಾ. 25 ರಲ್ಲಿ ಕಲ್ಕತ್ತಾದಲ್ಲಿ ಶಿವಾಧೀನರಾದರು.

ಬನಾರಸ್ ಹಿಂದು ಯೂನಿವರ್ಸಿಟಿಯ ಮೆಡಿಕಲ್ ಆಫೀಸರಾದ ಡಾಕ್ಟರ್ ಮಂಗಲ್ ಸಿಂಗ್‌ರವರು ತಮ್ಮ ಉದ್ಯೋಗಕ್ಕೆ ರಾಜಿನಾಮೆಕೊಟ್ಟು ಅಲ್ಲಿಯ ಪ್ರಾಂತೀಕ ಕಾಂಗ್ರೆಸ್ ಕಮಿಟಿಯ ಸರ್ವಾಧಿಕಾರಿ ಪದವಿಯನ್ನು ವಹಿಸಿಕೊಂಡಿರುವರು.

ಕಲ್ಕತ್ತಾದ 'ಲಿಬರ್ಟಿ' ಪತ್ರಿಕೆಯ ಸಂಪಾದಕರಾದ ಮಿ. ಸತ್ಯನಾರಾಯಣ ಬಕ್ಷಿಯವರು ಬಂಗಾಳ ಕ್ರಿಮಿನಲ್ ಲಾನೂನಿನ ಮೇರೆ ಕಳೆದ ವಾರ ದಸ್ತಗಿರಿ ಮಾಡಲ್ಪಟ್ಟರು. ಅವರು ಕೆಲವು ಸಮಯದ ಹಿಂದೆ ರಾಜದ್ರೋಹಕ್ಕಾಗಿ 6 ತಿಂಗಳು ಸಜೆ ಅನುಭವಿಸಿದ್ದರು.

ಕುಂದಾಪುರದಲ್ಲಿ ತಾ. 21ರಲ್ಲಿ ಮಿ. ಕೊಡಗಪ್ಪ ಶೆಟ್ಟಿಯವರ ಮುಂದಾಳುತನದಲ್ಲಿ ಸುಮಾರು ನಲ್ವತ್ತೈವತ್ತು ಜನರು ಸೇರಿ ಫಾರೆಸ್ಟ್ ಸತ್ಯಾಗ್ರಹವನ್ನು ನಡಸಿ, ಅಲ್ಲಿನ ಫಾರೆಸ್ಟಿನಲ್ಲಿ ಕಡಿದ ಮುಂಡ ತೊಲೆಗಳನ್ನು ಮೆರವಣಿಗೆಯ ಮೂಲಕ ತಂದು ಕಾಬಡಕೋನ್ ಮತ್ತು ನಾಗೂರು ಗ್ರಾಮಗಳಲ್ಲಿ ಹರಾಜು ಮಾಡಿದರಂತೆ.

ತಾ. 28 ರಲ್ಲಿ ಮಂಗಳೂರಿನಲ್ಲಿ ವಿಜಯರಾಘವರಾವ ಮತ್ತು ಕೆ. ಪಾಂಡುರಂಗರಾವ್ ಎಂಬವರಿಬ್ಬರು ಸ್ವಯಂಸೇವಕರು ಎಂಟು ಹತ್ತು ಜನರಿಂದ ಕೂಡಿದ ಒಂದು ಮೆರವಣಿಗೆಯನ್ನು ನಡಸುತ್ತಿದ್ದಾಗ ಅಲ್ಲಿನ ಸಬ್ ಇನ್ಸ್‌ಪೆಕ್ಟರಿಂದ ಎಡೆಯಿಸಲ್ಪಟ್ಟು, 9 ಜನರು ದಸ್ತಗಿರಿಯಾಗಿ ಪೋಲೀಸ್ ಸ್ಟೇಶನಿಗೆ ಒಯ್ಯಲ್ಪಟ್ಟರು.

ಉತ್ತರ ಹಿಂದೂಸ್ಥಾನದ ಲಕ್ನೋ, ಅಲ್ಲಹಾಬಾದು, ಅಹ್ಮದಾಬಾದು, ಕರಾಚಿ ಮುಂತಾದ ಕಡೆಗಳಲ್ಲಿಯೂ, ದಕ್ಷಿಣದಲ್ಲಿ ಕಾಸರಗೋಡು, ಕಲ್ಲಿಕೋಟೆ, ಮದುರಾ, ತಿನ್ನವೆಲ್ಲಿ ಮೊದಲಾದ ಸ್ಥಳಗಳಲ್ಲಿಯೂ ಸ್ವಯಂಸೇವಕರು 'ಅನಾಯಕ ಸರಪಣಿ'ಯನ್ನು ಎಳೆದು ಟ್ರೈನನ್ನು ನಡುದಾರಿಯಲ್ಲಿ ನಿಲ್ಲಿಸಿ ದಸ್ತಗಿರಿಗೊಳಗಾದರೆಂಬ ವರ್ತಮಾನವಿದೆ.

ಕಳೆದ ತಾ. 28ರಲ್ಲಿ ಕಾಶೀ ಪಟ್ಟಣದಲ್ಲಿ ಸ್ವಯಂಸೇವಕರು ಗುಂಪು ಗುಂಪಾಗಿ ಹಲವು ಕಡೆಗಳಲ್ಲಿ ರಾಷ್ಟ್ರೀಯ ಧ್ವಜವನ್ನು ಹಾರಿಸಿದರು. ರಸ್ತೆಗಳಲ್ಲಿ ವಿದೇಶೀ ಬಟ್ಟೆಗಳ ರಾಶಿಗಳು ಸುಡಲ್ಪಟ್ಟವು. ಮುಖ್ಯ ಬೀದಿಗಳಲ್ಲಿ ಹೋಗುತ್ತಿದ್ದ ಮೆರವಣಿಗೆಯನ್ನು ಪೋಲೀಸಿನವರು ತಡೆದು ಹಲವರನ್ನು ಕೈದು ಮಾಡಿದರು. ಇವರಲ್ಲಿ ಮಿ. ಠಾಕೂರ್ ದಾಸ್‌ರಂಬೊ ಟ್ಟಿ ಅತ್ಯಕೇಟರೂ ಇರುವರು.

ಮದುರೆಯ ಪ್ರಖ್ಯಾತವಾದ ಮೀನಾಕ್ಷಿ ದೇವಾಲಯವು ಅಲ್ಲಿಯ ಕಾಂಗ್ರೆಸು ಕೆಲಸಗಾರರ ಕೇಂದ್ರಸ್ಥಾನವಾಗಿರುವಂತೆ ಕಾಣುತ್ತದೆ. ಈ ಮೊದಲು ಅಲ್ಲಿ ಕಾಂಗ್ರೆಸಿನವರು ಕಾನ್‌ಫರೆನ್ಸು ನಡಿಸಿದ್ದರು. ಒಂದೆರಡು ಸಾರಿ ಅದರ ಗೋಪುರದ ಮೇಲೆ ಧ್ವಜವನ್ನು ಏರಿಸಿದ್ದರು. ಈಗ ಪುನಃ ಕಳೆದ ವಾರ ಅದರ ಮೇಲೆ ರಾಷ್ಟ್ರೀಯ ಬಾವುಟವು ಹಾರಿಸಲ್ಪಟ್ಟಿತಂತೆ. ಆದರೆ ಪೋಲೀಸಿನವರು ಬಹು ಆತುರದಿಂದ ಅದನ್ನು ತೆಗೆದುಬಿಟ್ಟರು.

ಬರುವ ನವಂಬರು ತಿಂಗಳಲ್ಲಿ 3ನೇ ದುಂಡು ಮೇಜು ಪರಿಷತ್ತು ನಡಿಸಲಾಗುವದೆಂದೂ, ಈ ಸಂಬಂಧ ಸರ್ ಟಿ. ಬಿ. ಸಪ್ರುರವರು ವೈಸರಾಯರನ್ನು ಡೇರಾಡೂನಿನಲ್ಲಿಯೂ, ವೈಸರಾಯರ ಎಗ್ಸಿಕ್ಯುಟಿವ್ ಕೌನ್ಸಿಲಿನ ಮೆಂಬರಾದ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್‌ರವರು ಬೊಂಬಾಯಿಯಲ್ಲಿ ಜಯಕರ್ ಮೊದಲಾದ ಕೆಲವು ಲಿಬರಲ್ ಪಕ್ಷದ ಮುಂದಾಳುಗಳನ್ನು ಭೇಟಿಯಾಗಿ ಸಂಭಾಷಣೆ ನಡಿಸಿದರೆಂತಲೂ ವರ್ತಮಾನ. ಈ ಸಂಭಾಷಣೆಗಳ ಫಲಿತಾಂಶವು ಇನ್ನೂ ಹೊರಬಿದ್ದಿರುವುದಿಲ್ಲ.

ಲಾಹೋರು-ಅಂಬಲಾ ಪ್ರದೇಶಗಳಿಗೆ ಪ್ರವೇಶಿಸ ಕೂಡದೆಂದು ಮಾಡಿದ್ದ ಪೋಲೀಸು ಹುಕುಮನ್ನು ಉಲ್ಲಂಘನೆ ಮಾಡಿದಕ್ಕಾಗಿ ದಸ್ತಗಿರಿ ಮಾಡಲ್ಪಟ್ಟಿದ್ದ ಅಖಿಲಭಾರತ ಕಾಂಗ್ರೆಸ್ ಕಮಿಟಿಯ ಸರ್ವಾಧಿಕಾರಿಯಾದ ಡಾಕ್ಟರ್ ಕಿಚ್ಲೂರವರಿಗೆ 2 ವರ್ಷ ಕಠಿಣ ಸಜೆಯೂ, 250 ರೂ. ಜುಲುಮಾನೆಯೂ, ಜುಲುಮಾನೆ ಕೊಡದೆ ಹೋದರೆ ಪುನಃ 6 ತಿಂಗಳ ಸಜೆಯೂ ವಿಧಿಸಲ್ಪಟ್ಟಿದೆ. ಅವರ ಜೇಬಿನಲ್ಲಿದ್ದ 100 ರೂ.ನೋಟನ್ನು ಕೂಡಲೇ ತೆಗೆದುಕೊಂಡು ಜುಲುಮಾನೆಗೆ ವಜಾ ಮಾಡಿದರು. ಅವರನ್ನು 'ಎ' ತರಗತಿಯಲ್ಲಿಟ್ಟಿರುವರು.

ಜೈಲಿನಲ್ಲಿರುವ ಮಹಾತ್ಮ ಗಾಂಧಿಯವರು ವೈದ್ಯರ ಸಲಹೆಯಂತೆ ಕೆಲವು ಕಾಲ ಆಡಿನ ಹಾಲನ್ನು ತೆಗೆದುಕೊಳ್ಳುವುದನ್ನು ಬಿಟ್ಟಿದ್ದರು. ಆದರಿಂದ ಅವರ ತೂಕವು 94ರಿಂದ 82 ಪೌಂಡುಗಳಿಗೆ ಇಳಿದು ಹೋಯಿತು. ಈಗ ಪುನಃ ಆಡಿನ ಹಾಲನ್ನು ಸೇವಿಸಲು ಸುರು ಮಾಡಿರುವರು. ಅದರೊಂದಿಗೆ ಉಪ್ಪಿಲ್ಲದ ಸಪ್ಪೆ ರೊಟ್ಟಿ, ನೀರಿನಲ್ಲಿ ನೆನೆಯಿಸಿದ ಖರ್ಜೂರ ಮತ್ತು ಅರೆದ ಬಾದಾಮಿಯನ್ನು ಭುಂಜಿಸುತ್ತಿರುವರು. ಈಗ ಅವರ ತೂಕವು ಹೆಚ್ಚಲು ಪ್ರಾರಂಭಿಸಿದೆ. ಅವರು ತನ್ನ ಸಮಯವನ್ನು ಓದುವುದರಲ್ಲಿಯೂ, ಹೊಲಿಯುವ 'ಸಿಂಗರ್' ಯಂತ್ರದ ಮೊದರಿಯಲ್ಲಿರುವ ಹೊಸ ತರದಿಂದ ನೂಲು ತೆಗೆಯುವುದರಲ್ಲಿಯೂ ಕಳೆಯುತ್ತಿರುವರೆಂದೂ, ಅವರಿಗೆ ಅಮೇರಿಕದಿಂದ ವಿಚಿತ್ರ ಪ್ರಶ್ನೆ ಪ್ರವಾಹವೂ ಬರುತ್ತಲೇ ಇವೆಯೆಂದೂ, ಇವುಗಳಿಗೂ, ದೂರ ದೇಶದ ತನ್ನ ಹಲವು ಪ್ರೋತ್ಸಾಹಕರಿಗೂ ಉತ್ತರ ಬರೆಯುವುದರಲ್ಲಿ ಸಂತೋಷವುಳ್ಳವರಾಗಿರುವರೆಂದೂ, ಅವರ ಪತ್ರವ್ಯವಹಾರದ ಪರಿಮಾಣವು ಸ್ವಲ್ಪವೂ ಕಡಿಮೆಯಾಗಿರುವುದಿಲ್ಲವೆಂದೂ ವರ್ತಮಾನ.

ತಾ. 28ರಲ್ಲಿ ಕಲ್ಲಿಕೋಟೆಯಲ್ಲಿ ತಾಲೋಕು ಕಾಂಗ್ರೆಸ್ ಕಾನ್‌ಫರೆನ್ಸನ್ನು ಜರಗಿಸುವ ನಿಮಿತ್ತ ಸಂಬಂಧಪಟ್ಟ ಕಾಗದಪತ್ರಗಳನ್ನು, ಪೋಲೀಸಿನವರು ಇದರ ವಿಷಯದಲ್ಲಿ ಜಾಗರೂಕರಾಗಿದ್ದರೂ ಕೂಡ, ಹಾಜಿ, ಬೆಳಿಗ್ಗೆ 6 ಗಂಟೆಗೆ ಕಾರ್ಪರೇಷನ್ ಹತ್ತಿರದ ಬಯಲಿನಲ್ಲಿ ಸಭೆ ನಡೆಸಲ್ಪಟ್ಟಿತು. ಅಲ್ಲಿಯ ತಾಲೋಕಿನ ಸುಮಾರು 55 ಡೆಲಿಗೇಟರುಗಳು ಹಾಜರಿದ್ದರು. ಧ್ವಜಾರೋಹಣದ ನಂತರ ಸ್ವಾಗತ ಕಮಿಟಿಯ ಚೇರ್‌ಮೇನರಾದ ಪಿ. ಕುಂಞರಾಮನ್‌ರವರು ಮಿ. ಅಹಮದ್ ಕೋಯರವರನ್ನು ಅಧ್ಯಕ್ಷರನ್ನಾಗಿ ನೇಮಿಸಿದರು. ಅಧ್ಯಕ್ಷರು ಡೆಲ್ಲಿ ಕಾನ್‌ಫರೆನ್ಸ್ ಮತ್ತು ಕೇರಳ ಪ್ರಾವಿನ್ಶಿಯಲ್ ಕಾನ್‌ಫರೆನ್ಸಿನ ಠರಾವುಗಳನ್ನು ಓದಿ ಕೇಳಿಸಿದ ನಂತರ ಬಹಿಷ್ಕಾರ ಠರಾವಿನ ಹಸ್ತಪತ್ರಿಕೆಗಳನ್ನು ಹಂಚಿ ಮೆರವಣಿಗೆ ಹೊರಟು ದಾರಿಯಲ್ಲಿ ಪೋಲೀಸಿನವರಿಂದ ಎದುರಿಸಲ್ಪಟ್ಟು ಪಿ. ಅಹಮದ್‌ಕೋಯ ಮತ್ತು ಇಷ್ಟತ್ಸೇವಾ ದೀಕ್ಷಿತರಾದ ಕೆ. ಸಿ. ನಂಬಿಯಾರರೇ ಮೊದಲಾದ 14 ಮಂದಿ ಸ್ವಯಂಸೇವಕರು ದಸ್ತಗಿರಿ ಮಾಡಲ್ಪಟ್ಟರು. ಪುನಃ ಮಧ್ಯಾಹ್ನದ ವರೆಗೆ 13 ಸ್ವಯಂಸೇವಕರನ್ನು ದಸ್ತಗಿರಿ ಮಾಡಿದರು. ಅಂತು ಆ ದಿನ ಒಟ್ಟು 27 ಸ್ವಯಂಸೇವಕರು ದಸ್ತಗಿರಿ ಮಾಡಲ್ಪಟ್ಟಿರುವರು.

ಆಗೋಸ್ಟು ತಾ. 27ರಲ್ಲಿ ಲಂಕಾಶಯರಿನ 200,000 ಗಿರಣಿ ನೇಕಾರರು ತಮ್ಮ ಸಂಬಳವನ್ನು ಕಮ್ಮಿ ಮಾಡಿದ ನಿಮಿತ್ತ ಕೆಲಸಕ್ಕೆ ಹೋಗದೆ ಮುಷ್ಕರ ಹಿಡಿದಿರುವರು. ಮುಷ್ಕರವು ಮುಂದರಿಸಲ್ಪಟ್ಟರೆ ಬ್ರಿಟನಿಗೆ ವಾರಕ್ಕೆ 1 ಮಿಲಿಯ ಪೌಂಡುಗಳ ವ್ಯಾಪಾರದ ಮತ್ತು ಕೆಲಸಗಾರರಿಗೆ ¼ ಮಿಲಿಯ ಪೌಂಡುಗಳ ನಷ್ಟವೂ ಆಗಬಹುದೆಂತ ಊಹಿಸಲಾಗಿದೆ.

ಒಟ್ಟಾವ ಪರಿಷತ್ತು.

(೭ನೇ ಪುಟದಿಂದ ಮುಂದುವರಿದದ್ದು.)

ಬಂಡಿಗಳಿಗೂ ಅದರ ಸಾಮಾನುಗಳಿಗೂ ತೆರಿಗೆ ಒಗ್ಗಿ ರಿಯಾಯಿತಿಯೆಂದು ನಿರ್ಣಯವಾಗಿದೆ. ಇದರ ಒಟ್ಟು ಫಲಿತಾಂಶವೇನೆಂದರೆ—ಹಿಂದೂದೇಶದಿಂದ ಇಂಗ್ಲೆಂಡಿಗೆ ಹೋಗುವ ಸಾಮಾನುಗಳ ಸ್ಥಿತಿ ಈಗಿನಂತೆಯೇ ಇರುವುದು; ಇಂಗ್ಲೆಂಡಿನಿಂದ ಇಲ್ಲಿಗೆ ಬರುವ ಸಾಮಾನುಗಳಲ್ಲಿ ರಿಯಾಯಿತಿ ಹೊಂದಿ ಇನ್ನೂ ಹೆಚ್ಚಾಗಿ ಬರುವುವು. ಈ ರಿಯಾಯಿತಿಯನ್ನು ಎರಡು ವಿಧವಾಗಿ ತೋರಿಸಲಾಗುವುದಂತೆ. ಒಂದೋ ಅವುಗಳ ಮೇಲೆ ಈಗಿರುವ ಸುಂಕವನ್ನು ಶೇಕಡ ೧೦ರಷ್ಟು ತಗ್ಗಿಸುವುದು; ಹೀಗೆ ಮಾಡಲು ಸರ್ಕಾರಕ್ಕೆ ನಷ್ಟವಾದರೆ ಬೇರೆ ಪರದೇಶಗಳಿಂದ ಬರುವ ಆ ಜಾತಿಯ ಸಾಮಾನುಗಳ ಮೇಲೆ ಶೇಕಡ ೧೦ರಷ್ಟು ಸುಂಕ ಏರಿಸುವುದು. ಹೇಗೂ ಅವುಗಳೊಳಗೆ ಶೇಕಡ ೧೦ರಷ್ಟು ಕ್ರಯದಲ್ಲಿ ವ್ಯತ್ಯಾಸವಾಗುವುದು. ಬಟ್ಟೆ ಸಾಮಾನುಗಳನ್ನು ಕೂಡ ಇಂಗ್ಲೆಂಡಿನಿಂದ ರಿಯಾಯಿತಿಯಲ್ಲಿ ತರಿಸಬೇಕೆಂದು ಆಲೋಚನೆ; ಆದರೆ ಹಿಂದೂಸ್ಥಾನದ 'ಟಾರಿಫ್ ಬೋರ್ಡ್' ಎಂಬ ಸುಂಕದ ನೀತಿಬೋಧಕ ಮಂಡಲದ ಅಭಿಪ್ರಾಯವನ್ನು ಕೇಳಿ ತಿಳಿದ ಮೇಲೆ ಏರ್ಪಾಡು ಮಾಡಲಾಗುವುದು—ಎಂದು ಸಿಮ್ಲಾದಿಂದ 'ವಾರ್ತೆ' ಹೊರಬಿದ್ದಿದೆ. ವಸಾಹತುಗಳೊಡನೆ ಮಾಡಿದ ಒಪ್ಪಂದದ ಫಲವಾಗಿ ಹಿಂದೂಸ್ಥಾನದ ಬಟ್ಟೆ, ಚಹಾ, ಕಾಫಿ, ಕಂಬಳಿ ಮೊದಲಾದುವುಗಳಿಗೆ ಅಲ್ಲಿ ರಿಯಾಯಿತಿ ಮಾಡಲಾಗುವುದೆಂದೂ, ಅಲ್ಲಿಂದ ಹಿಂದೂದೇಶಕ್ಕೆ ಬರುವ ತರತರದ ಅಮೂಲ್ಯವಾದ ಮತ್ತು ಅಗ್ಗದ ಎಣ್ಣೆಗಳು, ತೆಂಗಿನಕಾಯಿ—ಎಣ್ಣೆ, ಹಿಂಡಿಗಳು, ಮೀನು, ಹಣ್ಣು, ಸಾಗು, ಮರಗೆಣಸು, ಹೊಗೆಸೊಪ್ಪು—ಇವುಗಳಿಗೆ ಹಿಂದೂಸ್ಥಾನದಲ್ಲಿ ರಿಯಾಯಿತಿ ಮಾಡಲಾಗುವುದೆಂದೂ ನಿಶ್ಚಯವಾಗಿದೆ. ಏನೋ ಪುಣ್ಯದಿಂದ ಅಲ್ಲಿಂದ ಬರುವ ಸಕ್ಕರೆಗೆ ರಿಯಾಯಿತಿ ತೋರಿಸಲಿಲ್ಲ.

ಕೋಮುವಾರು ತೀರ್ಮಾನ.

ಅಖಿಲ ಭಾರತ ಮುಸ್ಲಿಮ್ ಸಭೆ.

ಪ್ರಧಾನ ಮಂತ್ರಿಯವರಾದ ಮಿ ಮೆಕ್ಡನಾಲ್ಡರವರು ಕೊಟ್ಟಿರುವ ಕೋಮುವಾರು ತೀರ್ಪನ್ನು ಕುರಿತು ಚರ್ಚಿಸಲು ಅಖಿಲ ಭಾರತ ಮುಸ್ಲಿಮ್ ಸಭೆಯ ಕಾರ್ಯಕಾರೀ ಮಂಡಳಿಯವರು ತಾ. 20—8—'32ರಲ್ಲಿ ಡಾ. ಇಕ್ಬಾಲರವರ ಅಧ್ಯಕ್ಷತೆಯಲ್ಲಿ ಹೊಸ ದೆಲ್ಲಿಯಲ್ಲಿ ಸೇರಿದ್ದರು. ಅಲ್ಲಿ ಈ ಕೆಳಗಿನ ತೀರ್ಮಾನಗಳಾದವು.

(1) ಅಖಿಲ ಭಾರತ ಮುಸ್ಲಿಂ ಕಾನ್‌ಫರೆನ್ಸಿನವರು ಕೇಳಿದ್ದಕ್ಕಿಂತ ಬಹಳ ಕಡಿಮೆಯಾಗಿ ಕೊಟ್ಟದ್ದು ತುಂಬಾ ಅತೃಪ್ತಿಕರ. ಪಂಜಾಬು ಮತ್ತು ಬಂಗಾಳ ಕೌನ್ಸಿಲುಗಳಲ್ಲಿ ಮುಸಲ್ಮಾನರ ಬಹುಮತ ಸ್ಥಾಪಿತವಾಗಲಿಲ್ಲ; ಸಂಯುಕ್ತ ಪ್ರಾಂತ್ಯ, ಬಿಹಾರ್—ಒರಿಸ್ಸಾ ಮತ್ತು ಮದ್ರಾಸುಗಳಲ್ಲಿ ಮುಸಲ್ಮಾನರಿಗೆ ಸಮತೂಕ ಈಗ ಇರುವುದಕ್ಕಿಂತ ಕಡಿಮೆಯೂ ಆಯಿತು. ವಾಯುವ್ಯ ಗಡಿಪ್ರಾಂತ್ಯದಲ್ಲಿ ಮುಸಲ್ಮಾನರಿಗೆ ಅವರ ಜನ ಸಂಖ್ಯೆಯ ಮೂರರಷ್ಟು ಸಮತೂಕ ಕೊಡಲಾಗಿದೆ. ಬಲೂಚಿಸ್ಥಾನದ ವಿಷಯವೇ ಬರಲಿಲ್ಲ. ಸಿಂಧನ್ನು ಪ್ರತ್ಯೇಕ ಪ್ರಾಂತ್ಯ ಮಾಡುವ ವಿಷಯವು ನಿರ್ಧರಿಸಲ್ಪಟ್ಟಿರುವುದಿಲ್ಲ.

(2) 1929ನೇ ಜನವರಿ ಮತ್ತು 1931ನೇ ಏಪ್ರಿಲ್ ತಿಂಗಳುಗಳಲ್ಲಿ ಮುಸಲ್ಮಾನರು ಕೇಳಿಕೊಂಡಿರುವ ಹಕ್ಕುಗಳನ್ನೆಲ್ಲಾ ಬ್ರಿಟಿಷರು ಕೊಡುವ ವರೆಗೆ ಯಾವ ತರಹದ ರಾಜಕೀಯ ರಚನೆಯೂ ಇಂಡಿಯಾದ ಮುಸಲ್ಮಾನರಿಗೆ ಒಪ್ಪಿಗೆಯಾಗಲಿಕ್ಕಿಲ್ಲ.

(3) ಫೆಡರೇಶನ್ ಸರ್ಕಾರದ ಅಂಗಗಳು ಸ್ವತಂತ್ರವಾಗಿಯೂ, ಪರಿಪೂರ್ಣವಾಗಿಯೂ ಇರಬೇಕು. ಪಾರ್ಲಿಮೆಂಟಿನಿಂದ ಅಧಿಕಾರವು ಪ್ರಾಂತ್ಯಗಳಿಗೆ ಬರಬೇಕಲ್ಲದೆ ಮಧ್ಯವರ್ತಿ ಸರ್ಕಾರಕ್ಕಲ್ಲ.

(4) ಮೇಲಿನ ತತ್ವಗಳನ್ನೊಳಗೊಂಡೇ ಮುಂದಿನ ರಚನೆಯು ತಯಾರಿಸಲ್ಪಡುವುದೆಂದು ಸರ್ಕಾರದವರು ಬೇಗನೆ ಪ್ರಕಟಿಸಬೇಕು.

(5) ಬಂಗಾಳದಲ್ಲಿ ಮುಸಲ್ಮಾನರಿಗೆ ಬಹುಮತ ಪ್ರಾತಿನಿಧ್ಯ ಕೊಡದೆ ಇರುವುದು ದೊಡ್ಡ ಅನ್ಯಾಯವಾಗಿದೆ.

(6) ಸಿಂಧನ್ನು ಬೇಗನೆ ಬೊಂಬಾಯಿ ಪ್ರಾಂತ್ಯದಿಂದ ಪ್ರತ್ಯೇಕಿಸಬೇಕು.

(7) ಈ ತೀರ್ಮಾನದಿಂದ ರಾಜಕೀಯ ವಾತಾವರಣದಲ್ಲಿ ಉಂಟಾಗಿರುವ ಬದಲಾವಣೆ ದೆಸೆಯಿಂದ ಮುಸಲ್ಮಾನರು ಬೇರೆ ಕೋಮಿನವರುಗಳೊಂದಿಗೆ ಸ್ನೇಹಭಾವದಿಂದಿರಬೇಕಲ್ಲದೆ ತಮ್ಮ ಹಕ್ಕು ಬಾಧ್ಯತೆಗಳನ್ನು ಕಾಪಾಡಲು ಪೂರ್ಣ ತಯಾರಾಗಿರಬೇಕು.

ಹಿಂದೂ ಮಹಾ ಸಭೆ.

ಹಿಂದೂ ಮಹಾ ಸಭೆಯ ಕಾರ್ಯಕಾರೀ ಮಂಡಳಿಯವರು ತಾ. 21—8—'32ರಲ್ಲಿ ಹೊಸ ಡೆಲ್ಲಿಯಲ್ಲಿ ಸೇರಿ, ಕೋಮುವಾರು ತೀರ್ಪನ್ನು ಕುರಿತು ಈ ಕೆಳಗಿನ ತೀರ್ಮಾನಗಳನ್ನು ಮಾಡಿದರು.

ಈ ಕೆಳಗಿನ ಕಾರಣಗಳಿಗಾಗಿ ಈ ಮಂಡಳಿಯು ಕೋಮುವಾರು ತೀರ್ಪನ್ನು ಖಂಡಿಸುತ್ತದೆ:—ಈ ತೀರ್ಪು ಒಂದು ಪಂಗಡಕ್ಕೆ ಬಹು ಪಕ್ಷಪಾತವನ್ನು ತೋರಿಸಿದೆ. ಹಿಂದೂದೇಶವನ್ನು ಸ್ವಾತಂತ್ರ್ಯ ಜನಾಂಗವಾಗಲು ಬಿಡದಂತೆ ಇದೊಂದು ಉಪಾಯವಾಗಿದೆ. ಇದು ಹಿಂದುಳಿದ ಪಂಗಡದವರಿಗೆ, ಹೆಂಗಸರಿಗೆ, ಕ್ರಿಶ್ಚಿಯನರಿಗೆ ಮತ್ತು ಆಂಗ್ಲೋ—ಇಂಡಿಯನರಿಗೆ ಪ್ರತ್ಯೇಕ ಚುನಾವಣೆಯನ್ನು ಕಲ್ಪಿಸಿರುತ್ತದೆ. ಪಂಜಾಬು ಮತ್ತು ಬಂಗಾಳದಲ್ಲಿ ಬಹು ಸಂಖ್ಯಾಕ ಜಾತಿಯವರಾದ ಮುಸಲ್ಮಾನರಿಗೆ ಪ್ರತ್ಯೇಕ ಚುನಾವಣೆಯ ಮೂಲಕ ಸ್ಥಳಗಳು ಕಾದಿಡಲ್ಪಟ್ಟು, ಅವರ ಕೋಮುವಾರು ಆಡಳಿತೆಯನ್ನು ಶಾಶ್ವತವಾಗಿ ಮಾಡಿದೆ. ಲಖ್ನೋ—ಮುಂಚಿನ ಒಪ್ಪಂದದ ಮೇರೆ ಬಿಹಾರ್, ಮದ್ರಾಸು, ಬೊಂಬಾಯಿ, ಮಧ್ಯಪ್ರಾಂತ್ಯ ಮತ್ತು ಅಸ್ಸಾಮಿನ ಹಿಂದುಳಿದ ಪಂಗಡದವರಿಗೆ ಸಲ್ಲಬೇಕಾದ ಸಮತೂಕವನ್ನು ಅವರಿಗೆ ಕೊಡುವುದರ ಬದಲು, ಮುಸಲ್ಮಾನರಿಗೆ ಕೊಡಲಾಗಿದೆ. ಮುಸಲ್ಮಾನರು ಕಡಿಮೆ ಸಂಖ್ಯೆಯಲ್ಲಿರುವ ಎಲ್ಲಾ ಪ್ರಾಂತ್ಯಗಳಲ್ಲಿ ಅವರಿಗೆ ಸಮತೂಕ ಕೊಟ್ಟು, ಪಂಜಾಬಿನಲ್ಲಿ ಕಡಿಮೆ ಸಂಖ್ಯೆಯಲ್ಲಿರುವ ಹಿಂದೂಗಳಿಗೆ ಅವರ ಜನಸಂಖ್ಯೆಗಿಂತ ಕಡಿಮೆ ಪ್ರಾತಿನಿಧ್ಯ ಕೊಡಲಾಗಿದೆ. ಪಂಜಾಬಿನಲ್ಲಿ ಸಿಕ್ಕರ ಪ್ರಾಮುಖ್ಯತೆಯನ್ನನುಸರಿಸಿ ಹೆಚ್ಚಲ್ಲದಿದ್ದರೂ, ಮುಸಲ್ಮಾನರಿಗೆ ಬೇರೆ ಪ್ರಾಂತ್ಯಗಳಲ್ಲಿ ಕೊಟ್ಟಿರುವಷ್ಟಾದರೂ ಸಮತೂಕವನ್ನು ಕೊಡದೆ ಇರುವುದು ಬಹು ಅನ್ಯಾಯವಾಗಿದೆ.

ಸಿಂಧನ್ನು ಪ್ರತ್ಯೇಕಿಸುವ ವಿಷಯ ಈ ತೀರ್ಮಾನದಲ್ಲಿ ಸೂಚಿಸಿರುವುದನ್ನು ಈ ಕಮಿಟಿಯು ಪೂರ್ತಿ ನಿಷೇಧಿಸುತ್ತದೆ. ಸಿಂಧನ್ನು ಪ್ರತ್ಯೇಕಿಸುವ ವಿಷಯ ವಿಚಾರಿಸಿದ ದುಂಡು ಮೇಜಿನ ಉಪಕಮಿಟಿಯಲ್ಲಿ ಸಿಂಧಿನ ಹಿಂದೂ ಪ್ರತಿನಿಧಿ ಯಾರೂ ಇರಲಿಲ್ಲ. ಅಲ್ಲದೆ ಸದರಿ ಕಮಿಟಿಯು, ಸಿಂಧಿನ ಉತ್ಪತ್ತಿಯು ಅದರ ಖರ್ಚನ್ನು ತಳ್ಳುವಷ್ಟು ಸಾಕಾಗಿದ್ದರೆ ಮಾತ್ರ ಅದನ್ನು ಪ್ರತ್ಯೇಕಿಸಬಹುದೆಂದು ಶಿಫಾರಸ್ಸು ಮಾಡಿದ್ದಾಗಿದೆ. ಈಗ ಮಧ್ಯ ಸರ್ಕಾರದಿಂದ ಮೊತ್ತ ಹಣವನ್ನು ಕೊಟ್ಟು ಸಿಂಧನ್ನು ಪ್ರತ್ಯೇಕಿಸುವ ಆಲೋಚನೆ ಮಾಡುವುದು ಕಂದಾಯ ತೆರುವವರಿಗೆ ದೊಡ್ಡ ಅನ್ಯಾಯ.

ಈ ತರಹದ ಅಪಮಾನಕರವಾದ ಮತ್ತು ಪಕ್ಷಪಾತದ ತೀರ್ಮಾನವನ್ನು ಪ್ರತಿಭಟಿಸಲಿಕ್ಕೆ ಹಿಂದೂಗಳು ತಮ್ಮ ಸರ್ವಶಕ್ತಿಯನ್ನು ಉಪಯೋಗಿಸಬೇಕೆಂತಲೂ, ತಮ್ಮ ನ್ಯಾಯವಾದ ಹಕ್ಕು ಬಾಧ್ಯತೆಗಳನ್ನು ಕಾಪಾಡಲಿಕ್ಕಾಗಿ ಸರ್ವತ್ಯಾಗ ಮಾಡಲು ಹಿಂದೂಗಳೆಲ್ಲರೂ ತಯಾರಾಗಬೇಕೆಂದೂ ತೀರ್ಮಾನಿಸಲಾಯಿತು.

ಸಿಕ್ ಜನರ ಸಭೆ.

ಸಿಕ್ ಜನರ ಸಭೆಯ ಕಾರ್ಯಕಾರೀ ಮಂಡಳಿಯು ತಾ. 21—8—'32ರಲ್ಲಿ ಅಮೃತಸರದಲ್ಲಿ ಸೇರಿ ಈ ಕೆಳಗಿನ ಗೊತ್ತುವಳಿಗಳನ್ನು ಮಾಡಿದರು.

ಪಂಜಾಬಿನಲ್ಲಿ ಮುಸಲ್ಮಾನರ ಏಕಪಕ್ಷೀಯ ಕೋಮುವಾರು ಪ್ರಭುತ್ವದ ಸ್ಥಾಪನೆಯ ಏರ್ಪಾಡನ್ನು ಈ ಕಮಿಟಿಯು ತೀವ್ರವಾಗಿ ಖಂಡಿಸುತ್ತದೆ. ಪಂಜಾಬಿನ ಅಲ್ಪ ಸಂಖ್ಯಾಕ ಕೋಮಿನವರಿಗೆಲ್ಲಾ ಸಮವಾಗಿ ಸ್ಥಾನಗಳ ಕೊಡತಕ್ಕದ್ದು. ಸಿಕ್ಕ ಜನಾಂಗಕ್ಕೆ ಸಂಪೂರ್ಣ ನ್ಯಾಯ ಸಿಕ್ಕಬೇಕು. ಇಲ್ಲಿಯವರೆಗೆ ಪಂಜಾಬಿನಲ್ಲಿ ಆಡಳಿತವು ಕ್ರಮವಾಗಿ ನಡೆಯಲಾರದು ಮತ್ತು ಹಾಗೆ ನಡೆಯಲು ಸಿಕ್ಕರು ಎಂದಿಗೂ ಬಿಡರು.

ತಾ. 17—9—32 ನೇಯ ದಿನವನ್ನು 'ಪಂತ್ ದಿನ'ವಾಗಿ ಆಚರಿಸಬೇಕು. ಆ ದಿನ ಹಳ್ಳಿಗಳಲ್ಲಿಯೂ, ಪಟ್ಟಣಗಳಲ್ಲಿಯೂ ಇರುವ ಸಿಕ್ಕರೆಲ್ಲರೂ ಸ್ವದೇಶಿ ಉಡುಪಿನಿಂದ, ದುಃಖ ಸೂಚಕ ವಸ್ತ್ರಧಾರಣೆ ಮಾಡಿ ರಾಜಸಭೆಗಳನ್ನು ನಡಿಸಬೇಕು. "ಪಂಜಾಬಿನಲ್ಲಿ ಒಂದು ಕೋಮಿನ ಪ್ರಭುತ್ವ ಮುರಿಯಲು ಬಲ ಕೊಡೆಂದು" ಗ್ರಂಥಸಾಹೇಬರ ಮುಂದೆ ಭಗವಂತನಿಗೆ ಪ್ರಾರ್ಥನೆ ನಡಿಸಬೇಕು.

ಸಿಕ್ಕರ ಎಲ್ಲಾ ಪಕ್ಷಗಳ ಪರಿಷತ್ತೊಂದನ್ನು ತಾ. 29—9—32 ರಲ್ಲಿ ನಡಿಸತಕ್ಕದ್ದು. ಸಿಕ್ ಹಕ್ಕು ಸಂರಕ್ಷಣಾ ನಿಧಿಯೊಂದನ್ನು ಕೂಡಿಸತಕ್ಕದ್ದು.

ಸಿಕ್ಕರಲ್ಲಿ ಯಾರೊಬ್ಬರೂ ಸರ್ಕಾರದೊಂದಿಗಾಗಲೀ, ಮುಸಲ್ಮಾನರೊಂದಿಗಾಗಲೀ ಕೋಮುವಾರು ತತ್ವದ ಮೇಲೆ ಸಂಧಾನ ನಡಿಸಲು ಹೋಗಬಾರದು.

ಯೂರೋಪಿಯನರ ಸಂಘ.

ಯೂರೋಪಿಯನ್ ಸಂಘದ ಎಲ್ಲಾ ಶಾಖೆಗಳ ಅಭಿಪ್ರಾಯವನ್ನು ತೆಗೆದುಕೊಂಡು ಅದರ ಕಾರ್ಯಕಾರಿ ಮಂಡಳಿಯವರು ಒಂದು ಹೇಳಿಕೆಯನ್ನು ಪ್ರಕಟಿಸಿರುವರು. ಇದರಲ್ಲಿ ಯೂರೋಪಿಯನರು ದೊಡ್ಡ ತ್ಯಾಗ ಮಾಡಿ ಹಿಂದುಸ್ಥಾನವನ್ನು ಉದ್ಧಾರ ಮಾಡಿದವರಂತೆಯೂ, ಪರೋಪಕಾರ ಬುದ್ಧಿಯಿಂದ ಪ್ರಧಾನ ಮಂತ್ರಿಯವರ ತೀರ್ಮಾನವನ್ನು ತತ್ಕಾಲ ಅಂಗೀಕಾರ ಮಾಡಿರುವಂತೆಯೂ ತೋರ್ಪಡಿಸಿ, ಈ ಕೆಳಗಿನ ವಿಷಯಗಳನ್ನು ಸೂಚಿಸಿರುವರು. ಕೌನ್ಸಿಲುಗಳಲ್ಲಿ ತಮ್ಮ ಪ್ರತಿನಿಧಿಗಳ ಸಂಖ್ಯೆಯು ಕಡಿಮೆಯಾಗಿದೆ; ಯೂರೋಪಿಯನ್ ವ್ಯಾಪಾರ ಮತ್ತು ಪ್ಲಾಂಟಿಂಗ್ ಕಸಬಿನ ಜೊತೆ ಕೂಡ ಪ್ರಾತಿನಿಧ್ಯವು ಈಗಿರುವುದಕ್ಕಿಂತಲೂ ಕಡಿಮೆಯಾಗಿದೆ. ನ್ಯಾಯವಿಧಾಯಕ ಸಭೆಯ ಮೆಂಬರುಗಳ ಸಂಖ್ಯೆ ಹೆಚ್ಚಿಸಿದ್ದು, ಬಹುಮತದ ಸಂಖ್ಯೆಯನ್ನು ವಿಸ್ತರಿಸಿದ್ದೂ ಸರಿಯಲ್ಲ. ಪ್ರಾಂತ್ಯಗಳಲ್ಲಿ (ಮೇಲಿನ ಮತ್ತು ಕೆಳಗಿನ) ಎರಡೆರಡು ನ್ಯಾಯವಿಧಾಯಕ ಸಭೆಗಳಿರಬೇಕು.

ಇಂಡಿಯನ್ ಕ್ರಿಶ್ಚಿಯನರ ಸಂಘ.

ಅಖಿಲಭಾರತ ಕ್ರಿಶ್ಚಿಯನರ ಸಂಘದ ಕಾರ್ಯಕಾರೀ ಮಂಡಳಿಯವರು ಮೆಕ್ಡನಾಲ್ಡರವರ ತೀರ್ಮಾನದಿಂದ ತಮಗೆ ಸಿಕ್ಕಬೇಕಾದಷ್ಟು ಸ್ಥಳ ದೊರೆತಿರುವುದಿಲ್ಲವೆಂತಲೂ, ಈ ತೀರ್ಪು ಅಸಮಾಧಾನಕರವಾದುದೆಂತಲೂ ವೈಸರಾಯರಿಗೆ ತಂತಿ ಕಳುಹಿಸಿರುವರು. ಅಲ್ಲದೆ ಈ ತೀರ್ಪನ್ನು ಸವಿಸ್ತಾರವಾಗಿ ವಿಮರ್ಶಿಸಲು 7 ಮೆಂಬರುಗಳ ಒಂದು ಕಮಿಟಿಯನ್ನು ನೇಮಿಸಿರುವರು.

---

೫೦ ವರುಷಗಳ ಅನುಭವ ಸಿದ್ಧ ಔಷಧಗಳು.

೧. ಧಾತುಪುಷ್ಟಿ ಲೇಹ—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ಬಾಧೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಬಿಡುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು.

ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7—0—0.

೨. ಅಶೋಕಾರಿಷ್ಟ ಮತ್ತು ಮಾತ್ರೆ—ಹೆಂಗಸರ ಮುಟ್ಟಿನ ದೋಷಗಳು, ಋತುಸ್ರಾವವು ಹೆಚ್ಚು ಕಡಿಮೆಯಾಗುವುದು. ಹೊಟ್ಟೆನೋವು, ಸೊಂಟನೋವು, ಸುಸ್ತು, ನಿಶ್ಶಕ್ತಿ, ಮೂರ್ಛೆ, ಮಲಬದ್ಧತೆ, ಚಳಿಜ್ವರ, ರಕ್ತಹೀನತೆ, ಕೈ ಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಗುಣಪಡಿಸುವದು. ಬಾಟ್ಲಿ 1ರ 1—4—0; 1 ಡಬ್ಬಿ ಮಾತ್ರೆಗೆ 1—0—0; 3 ಬಾಟ್ಲಿ ಔಷಧಕ್ಕೂ, 3 ಡಬ್ಬಿ ಮಾತ್ರೆಗೂ 6—4—0.

೩. ಚಂದನಾಸವ ಮತ್ತು ಮಾತ್ರೆಗಳು—ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರವು ಸರಾಗವಾಗಿ ಬಂದು ಕಡಿಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳನ್ನೂ, ಬಾಯಾರಿಕೆ, ಮಲಬದ್ಧತೆ, ಸ್ವಪ್ನಾವಸ್ಥೆ ಇವುಗಳ ಮೇಲೆ ಸಿದ್ಧೌಷಧ. ಬಾಟ್ಲಿ 1ರ 1—2—0; 1ಡಬ್ಬಿ ಮಾತ್ರೆಗೆ 1—6—0. 2 ಬಾಟ್ಲಿ ಔಷಧಕ್ಕೂ, 2 ಡಬ್ಬಿ ಮಾತ್ರೆಗೂ 4—12—0.

೪. ಬಾಲಗ್ರಹ ಗುಟಿಕೆ—ಬಾಲಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರು ಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧ. ಬಾಟ್ಲಿ ಒಂದಕ್ಕೆ 0—10—0. 3ಕ್ಕೆ 1—12—0.

೫. ಸುಖಬೇಧಿ ಗುಟಿಕೆ—ಆಯಾಸವನ್ನುಂಟುಮಾಡದ ಸುಖವಿರೇಚಕ. ಬಾಟ್ಲಿ 1ರ 0—10—0. 3ಕ್ಕೆ 1—12—0.

೬. ಸ್ಪಂದನ ವಟಿ—ಜ್ವರ ನಿಂತು, ಜ್ವರಗಡ್ಡೆ ಕರಗಿ ಮಲವಿಸರ್ಜನೆ ಆಗುವದು. ಬಾಟ್ಲಿ 1ಕ್ಕೆ 1—0—0;

೭. ಮಲೇರಿಯಾ ನಿವಾರಿಣೆ—ಎಲ್ಲಾ ನಮೂನೆಯ ಜ್ವರಕ್ಕೆ ಬಾಟ್ಲಿಗೆ 1—8—0.

೮. ಮಹಾ ಮದನಕಾಮೇಶ್ವರಿ ಲೇಹ ಡಬ್ಬಿ 1ಕ್ಕೆ 2—0—0.

ಯಂ. ಗಣಪಯ್ಯ ಎಂಡ್ ಸನ್ಸ್,
ಆಯುರ್ವೇದಿಕ್ ಫಿಸಿಶಿಯನ್ಸ್,
ರಥಬೀದಿ, ಮಂಗಳೂರು.

ಬಾಲಾರ್ಕಮಧು.

ಬಾಲಾರ್ಕಮಧು ಮಕ್ಕಳಿಗೆ ಕೊಡುವುದರಿಂದ ಶಕ್ತಿಯೂ ಆರೋಗ್ಯವೂ ಹೆಚ್ಚುವುದು. ಇದು ಮಧುರವಾಗಿದೆ. ಬೆಲೆ ಶೀಸೆ 1ಕ್ಕೆ 0—12—0 ಟ. ಖ. 0—12—0.



(Spleen Lever enlargement) ಎಂಬ ಮಕ್ಕಳ ಭಯಂಕರ ಗಡ್ಡೆರೋಗ—ಪ್ಲೀಹ—ಪಿತ್ತಕೋಶದ ಗಡ್ಡೆಗೆ ಚಕ್ರಬಿಂದು. ಚಕ್ರಕ್ಷಾರ—ಚಕ್ರಚೂರ್ಣ—ಚಕ್ರ ಪ್ರಭಾ—ಈ ನಾಲ್ಕು ಮಹೌಷಧಗಳಿವೆ. ಸಾವಿರಾರು ಮಕ್ಕಳ ಪ್ರಾಣವನ್ನು ಉಳಿಸಿದ; ನಾಲ್ಕು ಔಷಧಗಳು ಸೇರಿ 1 ತಿಂಗಳ ಔಷಧದ ಬೆಲೆ 3—0—0. ಟ. ಖ. 0—8—0. ಏಜೆಂಟರು ಬೇಕಾಗಿರುವರು.

ಪ. ಎ. ಮುನ್. ಶ್ರೀನಿವಾಸರಾವ್,
ವೈ. ಡಿ. ಆಯುರ್ವೇದಭಿಷಕ್,

ಬ್ರಾಂಚ್ ಆಫೀಸ್. ಉಪ್ಪಿ. S. K. } Spleen & Lever ಸ್ಪೆಶಲಿಸ್ಟ್. ಯಂ. ವಿ. ಪ್ರಸಾದಿಕ ಔಷಧಾಲಯ ಶಿವಮೊಗ್ಗ, (ಮೈಸೂರು ಸೀಮೆ)

52-33

ಶ್ರೀ. ವಿ. ಜೆ. ಪಟೇಲರ ಹೇಳಿಕೆ.

ಎಸೆಂಬ್ಲಿಯ ಮಾಜೀ ಅಧ್ಯಕ್ಷರಾದ ಶ್ರೀ. ವಿ. ಜೆ. ಪಟೇಲರು ಆರೋಗ್ಯಲಾಭಕ್ಕಾಗಿ ಇಂಗ್ಲಾಂಡಿಗೆ ಹೋಗಿರುತ್ತಾರಷ್ಟೆ! ಅವರು "ಹಿಂದೂ" ಪತ್ರಿಕೆಯ ಒಬ್ಬ ಪ್ರತಿನಿಧಿಗೆ ಭೇಟಿಯನ್ನು ಕೊಡುತ್ತಾ, ಪ್ರಸ್ತುತದ ರಾಜಕೀಯ ಸ್ಥಿತಿಯನ್ನು ಕುರಿತು ತನ್ನಭಿಪ್ರಾಯವನ್ನು ಕೊಟ್ಟರು. ಆ ಪತ್ರಿಕಾ ಪ್ರತಿನಿಧಿಯವರು ಹೀಗೆ ಬರೆಯುತ್ತಾರೆ "ಶ್ರೀಯುತ ವಿಠ್ಠಲಭಾಯಿ ಪಟೇಲರು ಈಗಿನ ರಾಜಕೀಯ ರಂಗದಲ್ಲಿ ತನ್ನ ಕಾರ್ಯವನ್ನು ಟೊಂಕಕಟ್ಟಿ ನಡಿಸಬೇಕೆಂದು ದೃಢಂಧರತೆಯಿಂದ ಸಿದ್ಧರಾದಂತಿದೆ. ಅಸಹಕಾರವನ್ನು ತೋರಿಸಿ ಹಿಂದೆ ನಿಂತ ಮಂದಪಕ್ಷದವರ ಮೇಲೆ ವಿಶ್ವಲಭಾಯಿಯವರಿಗೆ ಭರವಸೆಯಿಲ್ಲ. ಅವರಿಗೆ ಹಿಂದೂದೇಶದ ಸಂಪೂರ್ಣ ಸ್ವಾತಂತ್ರ್ಯವೇ ಬಾದು. ಕಂಬಲ! ಇನ್ನಿತರ ಎಲ್ಲಾ ಪಂಚಾಯಿತಿಗಳನ್ನು ಅವರು ಗಮನಕ್ಕೆ ತೆಗೆದುಕೊಳ್ಳುವುದೇ ಇಲ್ಲ. ಸಮಯೋಚಿತವಾಗಿ ಮಹಾತ್ಮ ಗಾಂಧಿಯವರು ಕೂಡಾ ಸರಕಾರದೊಡನೆ ರಾಜಿಗೆ ಬರಲು ಸಾಕೆಂದೂ, ಗಾಂಧಿಯವರ ವಿಶ್ವಾಸನೀಯರಾದ ಶ್ರೀ ಸಿ. ರಾಜಗೋಪಾಲಾಚಾರ್ಯರು ಮದ್ರಾಸು ಗವರ್ನರರೊಡನೆ ಭೇಟಿ ನಡೆಸಿದ ಸಂಗತಿಯು ತಪ್ಪಿಂದ ಅಭ್ಯಗಳಿಸಬಹುದಾದ್ದೆಂದರು. ಈಗಿನ ಸ್ಥಿತಿಯಂತೆ, ಸರಕಾರದ ತೀಕ್ಷ್ಣ ಶಾಸನಗಳ ದೆಸೆಯಿಂದ ಕಾಂಗ್ರೆಸು ಧ್ವಂಸವಾಯಿತೆಂಬ ವಿಷಯವನ್ನು ನಾನು ಪಟೇಲರ ಅವಗಾಹನೆಗೆ ತಂದೆನು. ಅದಕ್ಕುತ್ತರವಾಗಿ ಅವರು "ಅಹುದು. ಇಂಗ್ಲಾಂಡಿನಲ್ಲಿ ಅಂತಹ ಭಾವನೆಯೊಂದು ಹರಡಿದೆ. ಕಾರಣವು ತಿಳಿದಿರುವುದೇ? ಇಲ್ಲಿಯ ಪತ್ರಿಕೆಗಳ ವಿಕಾರ. ಅದರಿಂದಾಗಿ ಹಿಂದೂಸ್ಥಾನದಲ್ಲಿನ ಘಟನೆಗಳ ನಿಜವಾರ್ತೆಯು ಇಲ್ಲಿಗೆ ಬರುವುದೇ ಇಲ್ಲ. ಇಲ್ಲಿಯ ಪತ್ರಿಕೆಗಳೂ ಸರಕಾರವೂ ಹಿಂದೂದೇಶದ ನಿಜ ಸ್ಥಿತಿಯು ಬ್ರಿಟಿಷ ಸಾರ್ವಜನಿಕರಿಗೆ ತಿಳಿಯದಂತೆ ಜತನದಿಂದಿದ್ದಾರೆ. ಆರ್ಡಿನೆನ್ಸು, ಸೆನ್ಸರ್‌ಶಿಪ್ ಇವುಗಳಿದ್ದರೂ, ಕಾಂಗ್ರೆಸ್ಸಿನ ಮೇಲೆ ಇಷ್ಟಂತನಕ ಬೀರಲ್ಪಡದ ಸಹಾನುಭೂತಿ ದೃಷ್ಟಿಯು ಬೀರಲ್ಪಟ್ಟಿದೆ" ಎಂದರು.

'ಈ ಪರಿಸ್ಥಿತಿಯು ಎಷ್ಟರ ತನಕ ಮುಂದುವರಿಸಲ್ಪಡಲಿದೆ?' ಎಂದು ನಾನು ಕೇಳಿದೆ. ಅದಕ್ಕವರು—"ಅದು ನನ್ನಿಂದ ಹೇಳಲು ಅಸಾಧ್ಯ, ಕಾಂಗ್ರೆಸ್ಸು ಈ ಸಲ ಮಣ್ಣುಮುಕ್ಕೀತೆಂದು ನಾನೆಣಿಸುವುದಿಲ್ಲ. ಬ್ರಿಟಿಷ ಸರಕಾರವು ಆರ್ಡಿನೆನ್ಸುಗಳ ಮೂಲಕ ರಾಜ್ಯವನ್ನು ತೀವ್ರವಾಗಿ ಆಳಬೇಕು. ರಾಷ್ಟ್ರದ ಪ್ರತಿನಿಧಿಗಳಾದ ಸ್ತ್ರೀಪುರುಷರುಗಳನ್ನು ಸೆರೆಯಲ್ಲಿಡಬೇಕು; ಇಲ್ಲವೇ ಕಾಂಗ್ರೆಸ್ಸಿನ ಕೇಳಿಕೆಗಳನ್ನು ಸಂಪೂರ್ಣವಾಗಿ ಸಲ್ಲಿಸಬೇಕು. ಹಿಂದೂದೇಶಕ್ಕೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಡುವುದೂ, ದೇಶವನ್ನು ದಮನನೀತಿಗೊಳಪಡಿಸಿ ಆಳುವುದೂ, ಎಲ್ಲವೂ ಸರಕಾರದ ಕೈಯಲ್ಲಿ ಸೇರಿಕೊಂಡಿದೆ. ಹಿಂದೂದೇಶದ ಸ್ಥಿತಿಗತಿಯು ಈಗ ಶಾಸನಸ್ಥಿತಿಯಿಂದ ನಿರ್ಮೂಲಸ್ಥಿತಿಯಲ್ಲಿ ನಿಂತಿದೆ; ಮಂದಪಕ್ಷದವರು ಕೂಡಾ ಕನ್ಸಲ್ಟೇಟಿವ್ ಕಮಿಟಿಗೆ ರಾಜಿನಾಮೆಯನ್ನು ಕೊಟ್ಟು ತಮ್ಮ ಅಸಹಕಾರವನ್ನು ವ್ಯಕ್ತಪಡಿಸುವ ಸಂದಿಗ್ಧತೆ ಬೊಡಗಿತು. ಇವರ ಈ ಅಸಹಕಾರವು ಕೊನೆಯತನಕ ಬಾಳುವುದೆಂದಾಶಿಸುವೆನು. ಆದರೂ ಕಾಂಗ್ರೆಸ್ಸು ಮತ್ತು ಬ್ರಿಟಿಷ ಸರಕಾರಗಳೊಳಗೆ ಶಾಂತಿಸ್ಥಾಪನೆಯಾಗಬೇಕಾದರೆ ಸರಕಾರಿಯು ಕಾಂಗ್ರೆಸ್ಸಿನಲ್ಲಾದ ಸಂಪೂರ್ಣ ಸ್ವಾತಂತ್ರ್ಯದಾನವಿಲ್ಲದೆ ಗತ್ಯಂತರವಿಲ್ಲ. ಹಿಂದೂದೇಶದಲ್ಲಿ ಪ್ರತ್ಯೇಕತೆಯ ಅವೊಂದು ಭಾವನೆಯು ಬೇರೂರಿಕೊಂಡಿದೆಯೆಂದು ನನ್ನ ಸಂಕಲ್ಪವಾಗಿರುತ್ತದೆ. ಈ ದಾನವಲ್ಲದೆ ಮತ್ತಾವುದೂ ಜನರನ್ನು ಸಮಾಧಾನಪಡಿಸುವಂತಿಲ್ಲ" ಎಂದರು. "ನಿಮ್ಮಂತೆಯೇ ಎಲ್ಲಾ ಮುಖಂಡರೂ ಈ ಅಭಿಪ್ರಾಯವುಳ್ಳವರೇ?" ಎಂದು ನಾನು ಪ್ರಶ್ನಿಸಿದೆ. ಅದಕ್ಕೆ ಪಟೇಲರು—"ಎಲ್ಲರೂ ಈ ಸಂಕಲ್ಪವುಳ್ಳವರೆಂದು ಹೇಳಲಸಾಧ್ಯ. ಕಾಂಗ್ರೆಸ್ಸಿನ ಕೆಲವು ಮುಖಂಡರು ಸಾಮಂತ ಸ್ವರಾಜ್ಯಕ್ಕಾದರೂ ಒಪ್ಪಬಹುದು. ಆದರೆ ಒಂದು ವಿಧದ ಅಭಿಪ್ರಾಯ ಘೋಷಣೆಯನ್ನು ಮಾಡಿದರೆ ಬಹು ಸಂಖ್ಯಾಕರು ಸಂಪೂರ್ಣ ಸ್ವಾತಂತ್ರ್ಯಕ್ಕಾಗಿಯೇ ಹೆಣಗಾಡದಿರರೆಂದು ನನ್ನ ದೃಢತೆಯಾಗಿರುತ್ತದೆ. ನಾನು ಐರಿಷ್ ಪ್ರಮುಖರೊಡನೆ ಸಂಭಾಷಿಸಿದ ನಂತರ ಇಂಗ್ಲೆಂಡಿನಲ್ಲೂ, ಈಜಿಪ್ಟ್, ಹಿಂದೂದೇಶಗಳಲ್ಲೂ ಶಾಂತಿಯು ನೆಲೆಗೊಳ್ಳಬೇಕಾದರೆ ಈ ರಾಷ್ಟ್ರಗಳು ಸಂಪೂರ್ಣ ಸ್ವಾತಂತ್ರ್ಯವಾಗದೆ ನಿರ್ವಾಹವೇ ಇಲ್ಲ ಎಂದು ನಿಶ್ಚಿತನಾದೆನು. ಈ ವಿಷಯಕವಾಗಿ ಈ ರಾಷ್ಟ್ರಗಳೆಲ್ಲಾ ಯೋಚನೆಯಲ್ಲಿ ಬಿದ್ದಿರುವುವೆಂದು ನನಗೆ ತಿಳಿದಿದೆ.

ಶ್ರೀ. ಪಟೇಲರು ಬೇಗನೇ ಅಮೇರಿಕಕ್ಕೆ ಹೋಗಲಿರುವರು. ಬ್ರಿಟಿಷ್ ವಸ್ತು ಬಹಿಷ್ಕಾರಕ್ಕೆ ಯುನೈಟೆಡ್ ಸ್ಟೇಟ್ಸಿನಲ್ಲಿ ಸಹಾನುಭೂತಿಯಿದೆಯೆಂದೂ, ಅಲ್ಲಿ ಅಂತಹ ಚಳವಳವನ್ನು ತಾನು ಕಲೆದೋರಿಸುವೆನೆಂದೂ ಪಟೇಲರ ಹೇಳಿಕೆ. ಇಂತಹ ಚಳವಳವು ಜನಿತವಾದರೆ ಇದರಲ್ಲಿ ಐರಿಯಗಟ್ಟಳೆ ಐರಿಷರೂ, ಅಮೇರಿಕನರೂ ಸೇರುವರೆಂದೂ ಅವರ ಅಭಿಮತ. ಇಂಗ್ಲಾಂಡು ತನ್ನ ಕೈಕೆಳಗಿನ, ಸ್ವಾತಂತ್ರ್ಯ ಇಲ್ಲದ ರಾಜ್ಯಗಳಿಗೆ ಪ್ರಜಾಪ್ರಭುತ್ವವನ್ನು ಕೊಡಲು ಮನಸ್ಸು ಮಾಡದ ವಿನಹ ಅದು ಅಮೇರಿಕಕ್ಕೆ ಕೊಡಲಿರುವ ಯುದ್ಧದ ಸಾಲವನ್ನು ರದ್ದುಪಡಿಸಲಾಗದಂತೆ ಯೋಚನೆಮಾಡಬಹುದೆಂದೂ ಅವರು ಹೇಳುತ್ತಾರೆ. "ನನ್ನ ತಿಳುವಳಿಕೆಯ ಮಟ್ಟಿಗೆ ಯುದ್ಧದ ಸಾಲಕ್ಕೂ, ಶಸ್ತ್ರಾಸ್ತ್ರಗಳಿಗೂ ಮತ್ತು ಸ್ವಾತಂತ್ರ್ಯಕ್ಕೂ ಮಧ್ಯದೊಳಗೆ ಭಿನ್ನತೆಯೂ ಇಲ್ಲ; ಎಲ್ಲವೂ ಸಂಯೋಜಿತವಾಗಿವೆ. ಪ್ರಪಂಚದ ೧೫೦೦ ಮಿಲಿಯ ಜನಾಂಗದಲ್ಲಿ ೬೦೦ ಮಿಲಿಯ ಜನರು ಮಾತ್ರ ಸ್ವಾತಂತ್ರ್ಯವನ್ನು ಅನುಭವಿಸುವರಾಗಿದ್ದಾರೆ. ಮಿಕ್ಕುಳಿದ ೯೦೦ ಮಿಲಿಯ ಜನರು ಅನ್ಯ ಜನಾಂಗಗಳ ಅಧಿಕಾರದ ಮುಷ್ಟಿಯೊಳಗಿರುತ್ತಾರೆ. ಪ್ರತಿಯೊಂದು ರಾಷ್ಟ್ರವೂ ತನ್ನ ಗೃಹಕೃತ್ಯಗಳನ್ನು ತಾನು ನೋಡಿಕೊಳ್ಳುವಂತಹ ಸ್ವಾತಂತ್ರ್ಯವನ್ನು ಹೊಂದಿಕೊಳ್ಳುವಷ್ಟರ ವರೆಗೆ, ಶಸ್ತ್ರಸನ್ಯಾಸ, ಯುದ್ಧ ಸಾಲ ರದ್ದು, ಶಾಂತಿಸ್ಥಾಪನೆಗಳ ಸುದ್ದಿಯನ್ನು ಕೂಡಾ ಎತ್ತುವುದು ಪರಿಹಾಸ್ಯಕರ ವಿಷಯವಾಗಿರುತ್ತದೆ. ಪ್ರತಿಯೊಂದು ದೇಶದಲ್ಲೂ ರಾಷ್ಟ್ರದೇಳಿಗೆಯ ಕಾಂಕ್ಷಿತರಾಗಿರುವವರೂ, ಭಾವೀ ಸಮಾಜಗಳನ್ನು ತಡೆಹಿಡಿಯುವ ಪ್ರಯತ್ನದಲ್ಲಿರುವವರೂ, ವಿಶ್ವಶಾಂತಿಯ ಧ್ವಜವನ್ನು ನೆಡಬೇಕೆಂಬ ಹುಂಬದಲ್ಲಿರುವ ಗುಂಪುಗಟ್ಟಳೆ ಜನರೂ, ಸಂಘಗಳೂ, ತಂಡಗಳೂ ಇವೆ. ಆದರೆ ಅವುಗಳ ಕಾರ್ಯಕಲಾಪಗಳ ಮೇಲೆ ನನಗೆ ಅಧಿಕವಾದ ಶ್ರದ್ಧೆ ಬರುವುದಿಲ್ಲ, ಎಷ್ಟರ ತನಕ ದೊಡ್ಡ ರಾಷ್ಟ್ರವು ತಲೆಯೆತ್ತಿ ನಿಂತು ಸಣ್ಣ ರಾಷ್ಟ್ರಗಳ ಸ್ವಾತಂತ್ರ್ಯಾಪಹರಣವಾಗುತ್ತಿದೆಯೋ ಅಲ್ಲಿನ ತನಕ ಈ ಶಾಂತಿಸ್ಥಾಪನಾ ಸಂಘಗಳು ವಿಜಯವನ್ನು ಹೊಂದಲಾರವೆಂದು ನನಗನ್ನಿಸುತ್ತದೆ. ಇಂತಹ ನಿರಂಕುಶ ಪ್ರಭುತ್ವವನ್ನು ಹೋಗಲಾಡಿಸಿ ಸಾಂಘಿಕ ಪ್ರಭುತ್ವವನ್ನು ಬಲಪಡಿಸಿಕೊಳ್ಳಲು ಸರ್ವತೋಮುಖವಾದ ಕಾರ್ಯಗಳು ನಡೆಯಬೇಕು.

"ಪ್ರಪಂಚ ಸಮರ ವಿರೋಧ ಮಹಾ ಸಭೆಯೊಂದು ಮಾರ್ಟಿರೋಪ್ಪು ಖಂಡದ ಕೇಂದ್ರಸ್ಥಾನದಲ್ಲಿ ಶೀಘ್ರದಲ್ಲೇ ಜರಗಲಿರುವುದೆಂದೂ, ಅದು ಪ್ರಾಯಶಃ ಪ್ಯಾರಿಸ್ ನಗರದಲ್ಲಿ ಸ್ಥಾಪಿತವಾಗುವುದೆಂದೂ ತಿಳಿಯಲಾಗಿದೆ. ಹೇಗೂ ಇರಲಿ, ಅಂತಹ ಪ್ರತಿಭಾವಂತ ಸಂಸ್ಥೆಯು ಜನನಕ್ಕೆ ಬರಲಿ,—ಒಂದು ದೊಡ್ಡ ಶಕ್ತಿಯುತ ರಾಷ್ಟ್ರವು ಅಶಕ್ತ ಹಿಂಬಲದ ಇನ್ನೊಂದು ಸಣ್ಣ ರಾಷ್ಟ್ರವನ್ನು ನಿರಂಕುಶತೆಯಲ್ಲಿಡುವ ತನಕ ಯಾವುದೂ ಫಲಕಾರಿಯಾಗಲೊಲ್ಲದು." ಎಂದು ಅವರು ಹೇಳಿದರು.

ವಿ. ಜೆ. ಪಟೇಲರು ಐರ್ಲೆಂಡಿನಲ್ಲಿ ಇಂಡಿಯನ್ ಐರಿಷ್ ಇಂಡಿಪೆಂಡೆಂಟ್ ಲೀಗ್ ಎಂಬ ಸ್ವಾತಂತ್ರ್ಯಾಕಾಂಕ್ಷಿತ ಸಂಘವನ್ನೇರ್ಪಡಿಸಿರುವರು. ಇದಕ್ಕೆ ಐರ್ಲೆಂಡಿನ ಅನೇಕ ಸಜ್ಜನರು ಸದಸ್ಯರಾಗಿರುವರು. ಅದರ ಸಂಕ್ಷೇಪ ಧ್ಯೇಯವೇನೆಂದರೆ—"ಹಿಂದೂಸ್ಥಾನ ಮತ್ತು ಐರ್ಲೆಂಡುಗಳಿಗೆ ಸ್ವಾತಂತ್ರ್ಯಲಾಭವಾಗಲು ಸರ್ವತೋಮುಖವಾದ ಕಾರ್ಯಕಲಾಪಗಳನ್ನು ನಡೆಯಿಸಬೇಕು. ಬ್ರಿಟಿಷ ಸಾಮ್ರಾಜ್ಯದ ವಿರೋಧವಾದ ಹೆಣಗಾಟದಲ್ಲಿ ಐರ್ಲೆಂಡು ಇಂಡಿಯಾಗಳು ಪರಸ್ಪರ ಒಗ್ಗಟ್ಟಿನಿಂದ ಮುಂದೊತ್ತಬೇಕು."

ಈ ಸಂಸ್ಥೆಯು ಐರ್ಲೆಂಡಿನಲ್ಲಿ "ಇಂಡಿಯನ್ ಇನ್‌ಫೋರ್ಮೇಶನ್ ಬ್ಯೂರೋ' ಎಂಬುದನ್ನು ಬೇಗನೇ ಸಂಸ್ಥಾಪಿಸಿ, ಹಿಂದೂದೇಶ ಐರ್ಲೆಂಡುಗಳೊಳಗಿನ ವಾಣಿಜ್ಯಕ ಸ್ಥಿತಿಯ ಪುರೋಭಿವೃದ್ಧಿಯನ್ನು ಸಾಧಿಸಬೇಕೆಂದೂ ಪ್ರಯತ್ನಮಾಡುತ್ತಿದೆ. ಮತ್ತು ಇದು ಐರ್ಲೆಂಡು ಮೊದಲಾದ ದೇಶಗಳಲ್ಲಿಯೂ ಬ್ರಿಟಿಷ ವಸ್ತು ಬಹಿಷ್ಕಾರ ಚಳವಳವನ್ನು ನಡೆಸುವುದು; ಹೀಗೆ ದ್ವಿಪಕ್ಷಗಳು ಏಕಮುಖವಾಗಿ ಕಾರ್ಯರಂಗಕ್ಕಿಳಿದರೆ ಹೆಚ್ಚಿನ ಶ್ರೇಯಸ್ಸಿದೆಯೆಂದೂ ಈ ಲೀಗಿನವರ ಭಾವನೆಯಿದೆ. ಹಿಂದೀಯ ಜನಾಂಗದ ಸ್ವಾತಂತ್ರ್ಯ ಸಾಧನೆಯಲ್ಲಿ ತಮ್ಮ ಸಂಪೂರ್ಣ ಸಹಾನುಭೂತಿಯಿದೆಯೆಂದು ವಿ. ಜೆ. ಪಟೇಲರಿಗೆ ಆಶ್ವಾಸನೆಯು ಅನೇಕ ಸದ್ಗೃಹಸ್ಥರಿಂದ ದೊರೆತಿದೆಯೆಂದು ತಿಳಿಯಲಾಗಿದೆ. ಡಬ್ಲಿನ್‌ನಲ್ಲಿ ಜರಗಲಿರುವ ಮಹಾ ಸಭೆಗೆ ಎಲ್ಲಾ ರಾಷ್ಟ್ರಗಳವರೂ, ಪ್ರತಿನಿಧಿಗಳನ್ನು ಕಳುಹಿಸಬೇಕೆಂದು ಅನೇಕರಿಗೆ ಆಮಂತ್ರಣವು ಹೋಗಿದೆ. ಬ್ರಿಟಿಷ್ ವಿರೋಧದ ಚಳವಳವು ಐರ್ಲೆಂಡಿನಲ್ಲಿ ಸರ್ವತ್ರದ ಜಾಹೀರಾತು, ಸಭೆ, ಉಪನ್ಯಾಸ, ಪ್ರಚಾರಗಳ ಮೂಲಕ ನಡೆಯಲಿರುವುದು. ಇದಕ್ಕೆ ಡಿ'ವೆಲಾರವರ ಸಹಾನುಭೂತಿಯೂ ಇದೆಯಂತೆ. ಈ ಸಂಸ್ಥೆಯು ಅಹಿಂಸಾತ್ಮಕವಾಗಿ ವರ್ತಿಸುತ್ತಾ ಬ್ರಿಟನಿನ ಸಾಂಪತ್ತಿಕತೆಯು ಕುಸಿಯಲಿಕ್ಕಾಗಿಯೇ ಗುರಿಯಿಡುವುದು.

ಪಟೇಲರು ಸ್ವಲ್ಪ ನಸುನಗುತ್ತಾ, "ಪ್ರಧಾನಿಯಾದ ರಾಮ್ಸೆ ಮೆಕ್ಡೊನಾಲ್ಡರು ಯುದ್ಧದ ಸಾಲದ ರದ್ದಿನ ವಿಷಯವಾಗಿ ಎಂತಹ ಅಭಿಲಾಷೆಯುಳ್ಳವರೇ ಇರಲಿ; ಎಷ್ಟರ ತನಕ ಅನ್ಯರಾಷ್ಟ್ರಗಳನ್ನು ಅವರು ಸಾಮ್ರಾಜ್ಯತ್ವದ ಬಂಧನದಿಂದ ವಿಮುಕ್ತಗೊಳಿಸಲಾರರೋ, ಅಷ್ಟರ ತನಕ ಅವರು ಸಾಲ ರದ್ದಾಗುವ ಸಂಗತಿಯನ್ನು ಮರೆಯಲಿ!" ಎಂದರು.

ಶ್ರೀ ಪಟೇಲರು ಬ್ರಿಟನಿನ ಬದ್ಧವಿರೋಧಿಯಾದ ಐರ್ಲೆಂಡಿನೊಡನೆ ಸಹಕರಿಸಿ ನಡೆಯುವುದನ್ನು ನೋಡಿ ಅನೇಕ ಆಂಗ್ಲರು ಪಟೇಲರ ಮೇಲೆ ಜಿಗುಪ್ಸೆಯ ದೃಷ್ಟಿಯನ್ನು ಬೀರುವರು. ಅಲ್ಲದೆ ಪಟೇಲರ ಕಾರ್ಯರಂಗವು ಅಲ್ಲಿ ಯಶಸ್ವಿಯಾಗಲಿಕ್ಕಿಲ್ಲವೆಂದೂ ಅವರು ಭಾವಿಸುತ್ತಾರೆ.

'ಸ್ವ. ದೂ.'

ಕಾಗೆಗೂ ಬುದ್ಧಿಯಿದೆ.

ಇಂಗ್ಲೆಂಡಿನಲ್ಲಿ, ಸ್ಕಾರ್ ಎಂಬಾತನ ಹತ್ತಿರ ಒಂದು ಕಾಗೆ ಇತ್ತು. ಅದನ್ನು ಆತನು ಚಿಕ್ಕ ಮರಿಯಾಗಿದ್ದಾಗಿನಿಂದಲೂ ಸಾಕಿದ್ದನು. ಅದಕ್ಕೆ ಆತನ ಮೇಲೆ ಬಹು ಪ್ರೀತಿ. ಆತನಿಗೆ ಅದರ ಮೇಲೆ ಪ್ರಾಣ. ಈ ಕಾಗೆಯು ಹುಡುಗರಂತೆ ಚೇಷ್ಟೆ ಮಾಡುತ್ತಿತ್ತು. ಪ್ರತಿನಿತ್ಯವೂ ಹುಡುಗರು ಸ್ಕೂಲಿಗೆ ಹೋಗುತ್ತಿರುವಾಗ ಅವರಿಗೆ ತಿಳಿಯದೆ, ಅವರ ಟೋಪಿಗಳನ್ನು ಹಾರಿಸಿ ಬಿಡುವುದು ಈ ಕಾಗೆಯ ಪ್ರತಿ ನಿತ್ಯದ ಕೆಲಸ! ಒಂದು ದಿನ ಈ ಕಾಗೆಯು ತಪ್ಪಿಸಿಕೊಂಡು ಹೋಯಿತು. ದಾರಿ ತಿಳಿಯದೆ ಅಲ್ಲಲ್ಲಿ ಸುತ್ತಾಡುತ್ತಿದ್ದು ಒಂದು ಮನೆಯೊಳಗೆ ನುಗ್ಗಿತು. ಆಗತಾನೆ, ಆ ಮನೆಯ ಯಜಮಾನನು ತನ್ನ ಪತ್ನಿಯೊಡನೆ ಊಟಕ್ಕೆ ಕೂತಿದ್ದನು. ಕಾಗೆಯು ಹೋಗುತ್ತಲೆ ನಿರ್ಭಯವಾಗಿ ಒಂದು ಲೋಟ ಟೀಯನ್ನು ಕುಡಿದು ಬಿಟ್ಟಿತು! ಆ ಮೇಲೆ ತನಗೆ ಬೇಕಾದ ಪದಾರ್ಥಗಳನ್ನು ಆರಿಸಿ ಎಂದು, ತಾನೂ ಊಟಕ್ಕೆ ಕೂತುಕೊಂಡಿತು! ದಂಪತಿಗಳು ಆಶ್ಚರ್ಯದಿಂದ ಎಲ್ಲವನ್ನೂ ನೋಡುತ್ತಿದ್ದು ಕೊನೆಗೆ, ಕಾಗೆಯನ್ನು ಹಿಡಿದುಕೊಂಡರು. ವಿಚಾರಿಸಿ ಯಜಮಾನನಿಗೆ ಕಾಗೆಯನ್ನು ಕೊಟ್ಟರು. ಈ ಕಾಗೆಯು ತನ್ನ ಯಜಮಾನನು ಹೇಳಿದ್ದ ಕಾಳುಗಳನ್ನು ಹೇಳಿದ ಕೆಲವು ನಿಮಿಷಗಳಲ್ಲಿ ತಿಂದು ಬಿಡುತ್ತಿತ್ತು. ಈ ಕಾಗೆಗೆ ಮಲಗುವುದಕ್ಕೆ ಒಂದು ಕೋಣೆ! ಆದರೆ ಕಾಗೆ ಯೇನೋ ಆ ಕೋಣೆಯಲ್ಲಿ ಮಲಗುವುದಿಲ್ಲ. ಬಾಗಿಲುಗಳನ್ನು ಮುಚ್ಚಿದರೂ ಹೇಗೋ ಒಂದು ಮನುಷ್ಯನ ಹಾಸಿಗೆಯಲ್ಲಿ ಹಾಸಿಗೆಯಲ್ಲೇ ಮಲಗುವುದು ಆ ಕಾಗೆಯ ಪದ್ಧತಿ. ಯಜಮಾನನು ಆ ಕಾಗೆಯನ್ನು ತನ್ನ ಸ್ವಂತ ಮಗನನ್ನು ಬಯ್ಯುವಂತೆ ಬಯ್ಯುತ್ತಿದ್ದನು; ಕೊಂಡಾಡುವಂತೆ ಕೊಂಡಾಡುತ್ತಿದ್ದನು; ಪ್ರೀತಿಸುವಂತೆ ಪ್ರೀತಿಸುತ್ತಿದ್ದನು! ಈ ಕಾಗೆಯು ತನ್ನ ಯಜಮಾನನ ಮನೆಯಲ್ಲಿ ನಾಲ್ಕು ವರ್ಷಗಳು ಇದ್ದು ಈ ಲೋಕವನ್ನು ಬಿಟ್ಟಿತು.

'ಬಿ. ವಿ.'

ರಾಷ್ಟ್ರೀಯ ಚಳವಳದಲ್ಲಿ ಯೋಗಿಗಳೇಕೆ?

ನಮ್ಮ ರಾಷ್ಟ್ರೀಯ ಚಳವಳವು ಪ್ರಾರಂಭಿಕವಾದುದರಿಂದ ಅದರಲ್ಲಿ ಸಾಧುಸಂತರು, ಸನ್ಯಾಸಿಗಳು, ಮಹಾತ್ಮರು, ಯೋಗಿಗಳು ಏಕೆ ಬೇಕು ಬೇಕೆಂದು ಕೇಳುವವರಿಗೆ "ಪ್ರಬುದ್ಧ ಭಾರತ" ವೆಂಬ ಇಂಗ್ಲಿಷ್ ಮಾಸಪತ್ರಿಕೆಯ ಸಂಪಾದಕರು ಉತ್ತರವಾಗಿ ಒಂದು ಲೇಖನವನ್ನು ಬರೆದಿರುವರು. ಅದರ ಸಾರಾಂಶವಿಂತಿದೆ:—"ಎಂದು ವುದಾದರೊಂದು ಧ್ಯೇಯಸಾಧನೆಯ ಮಾರ್ಗದಲ್ಲಿ ಮೂರು ಬೇರೆ ಮೆಟ್ಟಿಲುಗಳಿರುವವು. ಮೊದಲನೆಯದು ಧ್ಯೇಯದರ್ಶನ. ಆ ಸ್ಥಿತಿಯಲ್ಲಿ ಧ್ಯೇಯದ ಮೋಹಕಸ್ವರೂಪವನ್ನು ನೋಡಿ, ಮನುಷ್ಯರ ಭಾವನಾತರಂಗಗಳು ಉಕ್ಕೇರುವವು; ಮತ್ತು ಮನುಷ್ಯನು ವ್ಯಾವಹಾರಿಕ ಅಡಚಣೆಗಳನ್ನು ಲಕ್ಷ್ಯದಲ್ಲಿಡುವುದಿಲ್ಲ. ಎರಡನೆಯ ಮೆಟ್ಟಿಲು ಧ್ಯೇಯ ಮತ್ತು ವ್ಯಾವಹಾರಿಕ ಮಾರ್ಗಗಳ ಮಧ್ಯದಲ್ಲಿರುವ ದ್ವಂದ್ವದ್ದು. ಭಾವನೆಗಳು ಕ್ಷಣಭಂಗುರ. ಅವು ದುರ್ಬಲವಾಗಿ, ವಸ್ತುಸ್ಥಿತಿಯ ಭಯಂಕರ ಸ್ವರೂಪವು ಕಾಣಿಸಲಾರಂಭಿಸಿದರೆ ರಾಷ್ಟ್ರೀಯ ಚಳವಳಗಾರರ ಕೈಕಾಲುಗಳು ತಣ್ಣಗಾಗಲಾರಂಭಿಸುವವು. ಆಗ ಧ್ಯೇಯದ ಮೋಹಕ್ಕೆ ಬಲಿಬಿದ್ದು ತಾವು ವ್ಯಾವಹಾರಿಕ ನಷ್ಟವನ್ನುಂಟುಮಾಡಿಕೊಂಡಿರುವೆವೆಂದು ಅನೇಕರು ಪಶ್ಚಾತ್ತಾಪಪಡುತ್ತಿರುವರು. ಮತ್ತೆ ನಾನು ಮುಂದೇನು ಮಾಡಬೇಕು? ಎಂದು ಅವರ ಮನಸ್ಸಿನಲ್ಲಿ ಗದ್ದಲವೇಳುವುದು. ದೃಢವಾದ ಆತ್ಮಬಲವುಳ್ಳವರು ಮಾತ್ರ ಆ ಸಮಯದಲ್ಲಿ ಅಚಲರಾಗಿರುವರು. ಉಳಿದವರು ನಿಷ್ಕ್ರಿಯರಾಗಿ ಕುಳಿತುಕೊಳ್ಳುವರು. ಆತ್ಮಬಲದ ಪ್ರಭಾವದಿಂದ ಯಾರು ಧ್ಯೇಯಸಾಧನೆಯ ಕಾರ್ಯವನ್ನು ಮುಂದರಿಸುವರೋ ಅಂತವರು ಮಾತ್ರ ಮೂರನೆಯ ಮೆಟ್ಟಿಲನ್ನು ಹತ್ತುವರು. ಧ್ಯೇಯಪ್ರಾಪ್ತಿಯು ಆ ಮೂರನೆಯ ಮೆಟ್ಟಿಲು. ಏಕಿಕ ಉತ್ಕರ್ಷಸಾಧನೆಯು ಇಂದು ಹಿಂದೂಸ್ಥಾನದ ಧ್ಯೇಯವಾಗಿದೆ. ಅದನ್ನು ಸಾಧಿಸಿ, ಅಂತಹ ಧ್ಯೇಯದ ಕಡೆಗೆ ಮೋಕ್ಷದ ಕಡೆಗೂ ಹೋಗಬೇಕಾಗಿದೆ. ಇಂತಹ ಸಮಯದಲ್ಲಿ ಯಾರಲ್ಲಿ ಅಪಾರವಾದ ಆತ್ಮಬಲವಿದೆಯೋ ಅಂಥಾ ಮಹಾತ್ಮರಿವನಾ, ಯೋಗಿಗಳ ಹೊರತು, ಧ್ಯೇಯ ಮತ್ತು ವ್ಯವಹಾರಗಳ ಮಧ್ಯದಲ್ಲಿರುವ ದ್ವಂದ್ವದಲ್ಲಿ ವಿಜಯಿಗಳಾದವರಲ್ಲದೆ ಮತ್ತಾರು ಜನತೆಯ ಮುಂದಾಳುಗಳಾಗಬಲ್ಲರು? ಎಂದು ಜನರು ವಿಚಾರ ಮಾಡಿ ನೋಡಬೇಕು. ಕರ್ತೃತ್ವಶಾಲಿಗೆ ಪ್ರೇರಣೆಯನ್ನು ಕೊಡುವ ಕೆಲಸವನ್ನು ಇದುವರೆಗೆ ಯೋಗಿಗಳೇ ಮಾಡುತ್ತ ಬಂದಿರುವರೆಂದು ಇತಿಹಾಸವು ತಿಳಿಸುವುದು. ರಾಷ್ಟ್ರವುರುಷರಿಗೆ ಮಾರ್ಗದರ್ಶಕರೂ, ಪ್ರೇರಕರೂ ಆದ ಈ ಗುರುಗಳು ಕಾಲಮಹಿಮೆಯನ್ನರಿತವರೂ, ಕರ್ತೃತ್ವಶಾಲಿಗಳೂ ಆಗಿರಬೇಕು. ಎಲ್ಲಾ ಯೋಗಿಗಳೂ ಹಾಗಿರುವುದಿಲ್ಲ. ಆದರೆ ಹಾಗಿರುವವರು ಮಾತ್ರ ರಾಷ್ಟ್ರೀಯ ಚಳವಳದ ನೊಗವನ್ನು ಹೊರಲು ಯೋಗ್ಯರು. ಯಾರ ಆತ್ಮಬಲವು ಲೋಕಪ್ರಸಿದ್ಧವಾಗಿದೆಯೋ, ಯಾರು ಲೌಕಿಕ ವ್ಯವಹಾರದಲ್ಲಿ ಇಳಿದು ತಮ್ಮ ಕರ್ತೃತ್ವಶಕ್ತಿಯನ್ನು ತೋರಿಸುವರೋ ಅಂಥವರೇ ಏನಾದರೂ ಕೆಲಸವನ್ನು ಮಾಡುವರು. ಆದುದರಿಂದಲೇ ರಾಷ್ಟ್ರೀಯ ಚಳವಳಗಾರರಲ್ಲಿ ಯೋಗಿಗಳ ಸ್ಥಾನವು ಉಚ್ಚವಾಗಿರುವುದು.

ಕೊಡಗು.

ಸನ್ ೧೯೩೨ನೇ ಇಸವಿ

ಸೆಪ್ಟೆಂಬರ್ ತಾ. ೨ನೇ ಶುಕ್ರವಾರ.

ಪ್ರೆಸ್ ಆರ್ಡಿನೇನ್ಸ್

ಜಾರಿಯಲ್ಲಿರುವವರೆಗೆ

ನಾವು

ಅಗ್ರಲೇಖನ

ವನ್ನು

ಪ್ರಕಟಿಸುವುದಿಲ್ಲ.

ಕೋಮುವಾರು ತೀರ್ಮಾನ.

(ಸ್ವತಂತ್ರವಾಣಿಯಿಂದ)

೨.

ಹಿಂದೂದೇಶದ ನ್ಯಾಯವಿಧಾಯಕ ಸಭೆಗಳಲ್ಲಿ ಬೇರೆ ಬೇರೆ ಜಾತಿಯವರ ಪ್ರಾತಿನಿಧ್ಯವನ್ನು ಕುರಿತು ಬ್ರಿಟನ್ನಿನ ಪ್ರಧಾನ ಮಂತ್ರಿಯವರು ಕಳೆದ ತಾ. 17 ರಲ್ಲಿ ಕೊಟ್ಟ ತೀರ್ಪಿಗೆ 'ಕೋಮುವಾರು ತೀರ್ಮಾನ'ವೆಂದು ಹೇಳುವದಾಗಿದೆ. ಈ ಹೆಸರಿನಂತೆ ಈ ತೀರ್ಪು ಅಕ್ಷರಶಃ 'ಕೋಮುವಾರು' ತೀರ್ಪೇ ಆಗಿದೆ. ಯಾಕೆಂದರೆ, ಈ ತೀರ್ಮಾನದಿಂದ ಕೋಮುವಾರು ಭಾವನೆಯೇ ಬಲಪಡಿಸಲ್ಪಟ್ಟಿದೆ; ಮತ್ತು ಇದರಿಂದ ತೀವ್ರ ಕೋಮುವಾರು ತತ್ವವಾದಿಗಳಿಗೆ ಮಾತ್ರ ತೃಪ್ತಿಯುಂಟಾಗಿದೆ.

ಬಂಗಾಳದಲ್ಲಿ ಶೇಕಡ ಅರ್ಧದಷ್ಟು ಜನಸಂಖ್ಯೆ ಇರುವ ಯೂರೋಪಿಯನರಿಗೆ ಅಲ್ಲಿಯ ಕೌನ್ಸಿಲಿನಲ್ಲಿ ಶೇಕಡ ಹತ್ತರಷ್ಟು ಮೆಂಬರುತನವನ್ನು ಕೊಟ್ಟದ್ದರಿಂದ ಯೂರೋಪಿಯನ್ ಸಂಘದವರಿಗೆ ತೃಪ್ತಿಯುಂಟಾಗುದುದರಲ್ಲಿ ಆಶ್ಚರ್ಯವಿಲ್ಲ. ಆದರೆ ಬ್ರಿಟಿಷ್ ಮಂತ್ರಿಗಳು ಇಷ್ಟು ದೊಡ್ಡ ಅನ್ಯಾಯವನ್ನು ಮಾಡಲು ಹೇಗೆ ಧೈರ್ಯ ತಂದುಕೊಂಡರೆಂಬುದೇ ಆಶ್ಚರ್ಯ!

ಪೂನಾ ಮುಂತಾದ ಕೆಲವು ಕಡೆಗಳಲ್ಲಿ ಕೋಮುವಾರು ತತ್ವದ ಮುಸಲ್ಮಾನರು ಈ ತೀರ್ಮಾನಕ್ಕಾಗಿ ತಮ್ಮ ಸಂತೋಷವನ್ನೂ, ಬ್ರಿಟಿಷರಿಗೆ ತಮ್ಮ ಕೃತಜ್ಞತೆಯನ್ನೂ ಸೂಚಿಸಿರುವರು. ಇದು ಸ್ವಭಾವಿಕವಾಗಿದೆ. ಯಾಕಂದರೆ, ಕೋಮುವಾರು ತತ್ವದ ಮುಸಲ್ಮಾನರ ಕೋರಿಕೆಯಂತೆ ಕೋಮುವಾರು ಚುನಾವಣೆಯು ಈ ವರೆಗೆ ಇದ್ದಂತೆ ಒಂದೆರಡು ಮತದವರಿಗೆ ಮಾತ್ರವಲ್ಲ, ಎಲ್ಲಾ ಮತಗಳವರಿಗೂ ಕೊಡಲ್ಪಟ್ಟಿರುವುದಲ್ಲದೆ, ಮುಸಲ್ಮಾನರು ಅಧಿಕರಾಗಿರುವ ಪಂಜಾಬಿನಲ್ಲಿ ಅವರಿಗೆ ಶೇಕಡ 52 ರಷ್ಟು ಕೌನ್ಸಿಲು ಸ್ಥಳಗಳನ್ನು ಕಾದಿಟ್ಟು, ಅಲ್ಲಿ ಮುಸಲ್ಮಾನರ ರಾಜ್ಯವನ್ನು ಸ್ಥಾಪಿಸಿದಂತಾಗಿದೆ; ಮುಸಲ್ಮಾನರು ಕಡಿಮೆ ಸಂಖ್ಯೆಯಲ್ಲಿರುವ ಪ್ರಾಂತ್ಯಗಳಲ್ಲೆಲ್ಲಾ ಅವರಿಗೆ ಅವರ ಜನಸಂಖ್ಯೆ ಮೀರಿ ಸಮತೂಕವು (ವೈಟೇಜ್) ಕೊಡಲಾಗಿದೆ; ಮತ್ತು ಅಂಥಾ ಕೆಲವು ಪ್ರಾಂತ್ಯಗಳಲ್ಲಿ ಅವರಿಗೆ ಈಗ ಇರುವ ಸಮತೂಕವು ಹೆಚ್ಚಿಸಲಾಗಿದೆ. ಇದರಿಂದ ಇದು ಏಕ ಪಕ್ಷೀಯ ತೀರ್ಮಾನ ಅಂದರೆ ಮುಸಲ್ಮಾನರನ್ನು ತೃಪ್ತಿಗೊಳಿಸಲು ಮಾಡಿದ ತೀರ್ಮಾನವೆಂದರೆ ತಪ್ಪಾಗಲಾರದು. ಭಾರತೀಯರು ತಮ್ಮ ಸ್ವಾತಂತ್ರ್ಯಕ್ಕಾಗಿ ಪ್ರಾಣದ ಆಶೆ ಬಿಟ್ಟು ಹೋರಾಡುತ್ತಿರುವಂಥ ಈ ಬಿಕ್ಕಟ್ಟಿನ ಸಮಯದಲ್ಲಿ ಆಳರಸರಿಗೆ ಬೆಂಬಲವಾಗಿ ನಿಂತಿರುವ ಕೋಮುವಾರು ವಾದಿಗಳಾದ ಮುಸಲ್ಮಾನರಿಗೆ ಬ್ರಿಟಿಷ್ ಮಂತ್ರಿಯವರು ಸಹಾಯ ಮಾಡಿಯೇ ಮಾಡಿದರು. ಇನ್ನು ಮುಂದಕ್ಕೂ ಅವರ ಸಹಕಾರವನ್ನು ಭದ್ರಮಾಡಿಕೊಂಡಿರುವರು. ಇದಲ್ಲದೆ ಇನ್ನೊಂದು ಉಪಾಯವನ್ನೂ ಪ್ರಧಾನಿಯವರು ಹೂಡಿರುವರು. ಕೋಮುವಾರು ಪಂಗಡದ ಮುಸಲ್ಮಾನರು ಕೇಳಿರುವ 14 ಶರತ್ತುಗಳಲ್ಲಿ ಈಗ ಒಂದೇ ಮಾತು—ಪ್ರಾಂತ್ಯಗಳನ್ನು ಮಾತ್ರ ತೀರ್ಮಾನಿಸಿರುವರು. ಬಾಕಿಯವುಗಳನ್ನು ಹಾಗೆಯೇ ಇಟ್ಟಿರುವರು. ಇದು ಮುಂದಿನ ಒಕ್ಕಸೆಗಿರುವ ಭದ್ರತೆ. ಹಿಂದೂದೇಶದ ಅಭಿವೃದ್ಧಿಗೆ ಮಹತ್ವದ ಅಡಚಣೆಯಾಗಿರುವ ಪ್ರತ್ಯೇಕ ಚುನಾವಣೆಯನ್ನೇ ದಯಪಾಲಿಸಿರುವ ಬ್ರಿಟಿಷರು ಉಳಿದ ಶರತ್ತುಗಳನ್ನು ಕೊಡದೆ ಇರಲಾರರೆಂಬ ಭರವಸೆಯಿಂದ ಮುಸಲ್ಮಾನರು ಮುಂದಕ್ಕೂ ಒಂದೇ ಸಮನೆ ಸಹಕರಿಸುತ್ತಾ ಇರುವರೆಂಬುದರಲ್ಲಿ ಸಂಶಯವಿಲ್ಲ. ಇದರಿಂದ ಹಿಂದೂ—ಮುಸಲ್ಮಾನ ಮುಂದಾಳುಗಳು ಕೋಮುವಾರು ಸಮಸ್ಯೆಯನ್ನು ಕುರಿತು ಒಪ್ಪಂದಕ್ಕೆ ಬರುವ ಮಾತು ಬಹು ದೂರವಾಯಿತು.

ಹಿಂದೂಗಳ ಮಟ್ಟಿಗೆ ಈ ತೀರ್ಮಾನವು ಬಹು ವಿಶೇಷತರದ್ದಾಗಿದೆ. ಹಿಂದೂದೇಶದಲ್ಲಿ ನೂರಾರು ಮೂರರಲ್ಲಿ ಎರಡು ಭಾಗದಷ್ಟು ಇರುವ ಹಿಂದೂಗಳ ಹೆಸರೇ ಈ ತೀರ್ಪಿನಲ್ಲಿ ಕಂಡು ಬರುವುದಿಲ್ಲ. ಮುಸಲ್ಮಾನರು, ಕ್ರಿಶ್ಚಿಯನರು, ಯೂರೋಪಿಯನರು, ಆಂಗ್ಲೊ—ಇಂಡಿಯನರು, ಸಿಕ್ಖರು, ಮತ್ತು ಹಿಂದುಳಿದ ಪಂಗಡದವರುಗಳನ್ನು ಬಿಟ್ಟು ಬಾಕಿ ಉಳಿದವರೆಲ್ಲರೂ ಸಾರ್ವಜನಿಕ ಗುಂಪಿಗೆ ಸೇರಿಸಲ್ಪಟ್ಟಿರುವರು. ಇದರಲ್ಲಿ ಹಿಂದೂಗಳು, ಜೈನರು, ಪಾರ್ಸಿಗಳು, ಬೌದ್ಧರು, ಮತವಿಲ್ಲದವರು, ಇವರೆಲ್ಲರೂ ಅಡಕವಾಗುವರು. ಇದು ಮಾತ್ರವಲ್ಲ, ಪಂಜಾಬು ಮತ್ತು ಬಂಗಾಳದಲ್ಲಿ ಕಡಿಮೆ ಸಂಖ್ಯೆಯಲ್ಲಿರುವ ಹಿಂದೂಗಳಿಗೆ ಬೇರೆ ಪ್ರಾಂತ್ಯಗಳಲ್ಲಿ ಮುಸಲ್ಮಾನರಿಗೆ ಕೊಟ್ಟಿರುವಂತೆ ಜನಸಂಖ್ಯೆಗಿಂತ ಹೆಚ್ಚಿನ ಸಮತೂಕ ಕೊಡುವುದರ ಬದಲು, ಅವರ ಸಂಖ್ಯೆಗಿಂತ ಕಡಿಮೆಯೇ ಪ್ರಾತಿನಿಧ್ಯವು ಕೊಡಲ್ಪಟ್ಟಿದೆ. ಹಿಂದೂಗಳಿಗೆ ಇದಕ್ಕಿಂತ ದೊಡ್ಡ ಅನ್ಯಾಯವಾಗಲು ಸಾಧ್ಯವಿಲ್ಲ. ದೇಶದಲ್ಲಿ ಒಗ್ಗಟ್ಟನ್ನು ಕಾಪಾಡುವ ಬಗ್ಗೆ ಮಿಶ್ರ ಚುನಾವಣೆ ಇಂಬೇಕೆಂದು ಹೋರಾಡಿದ ಹಿಂದೂಗಳಿಗೆ ಬ್ರಿಟಿಷರು ಕೊಟ್ಟ ಮಹಾ ಪ್ರಸಾದವೇ ಇದು. ಆದುದರಿಂದಲೇ ಹಿಂದೂದೇಶದ ಉದ್ದಗಲಕ್ಕೂ ಹಿಂದೂಗಳು ಈ ತೀರ್ಪನ್ನು ತೀವ್ರವಾಗಿ ಖಂಡಿಸುವದಾಗಿದೆ.

ಪಂಜಾಬಿನಲ್ಲಿ ಮುಸಲ್ಮಾನರಿಗೆ ಶೇಕಡ 52 ರಷ್ಟು ಪ್ರಾತಿನಿಧ್ಯವನ್ನು ಕೊಟ್ಟು ಏಕ ಜಾತೀಯ ಸರ್ಕಾರವನ್ನು ಸ್ಥಾಪಿಸಿದ್ದರಿಂದ ಅಲ್ಲಿಯ ಸಿಕ್ಖರು ಬಹು ಕುಪಿತರಾಗಿರುವರು. ಇಂಥಾ ಸರ್ಕಾರವನ್ನು ಎಂದೂ ನಡೆಸಲು ಬಿಡುವದಿಲ್ಲವೆಂದು ಅವರು ಪ್ರತಿಜ್ಞೆಮಾಡಿ, ಈ ಬಗ್ಗೆ ಒಂದು ಲಕ್ಷ ಸ್ವಯಂಸೇವಕರು ಕೂಡಿಸಲು ಏರ್ಪಾಡು ಮಾಡಿರುವರು.

ಹಿಂದೂದೇಶದ ಎಲ್ಲಾ ಪಂಗಡದ ಸ್ತ್ರೀಯರು ಮಿಶ್ರ ಚುನಾವಣೆಯೇ ಬೇಕೆಂದು ಸೂಚಿಸಿದ್ದರು. ಅವರಲ್ಲಿಯೂ ಕೂಡ ಒಡಕನ್ನು ತಂದು ಹಾಕುವಂಥ ಪ್ರತ್ಯೇಕ ಚುನಾವಣೆಯನ್ನು ಮಹಿಳೆಯರಿಗೂ ವ್ಯಾಪಿಸುವಂತೆ ಮಾಡಿದ್ದು ತುಂಬಾ ನಾಚಿಕೆಗೇಡು. ಇದರಿಂದ ಬ್ರಿಟಿಷರ ಭೇದೋಪಾಯವು ಎಷ್ಟರ ಮಟ್ಟಿಗೆ ಆಳವಾಗಿದೆಯೆಂಬುದು ವಿಶದವಾಗುತ್ತದೆ.

ಈ ತೀರ್ಮಾನದಲ್ಲಿ ಇನ್ನೊಂದು ತಮಾಷೆ ಏನೆಂದರೆ—ಹಿಂದುಳಿದ ಪಂಗಡದವರು ತಮ್ಮ ಪ್ರತಿನಿಧಿಗಳನ್ನು ಪ್ರತ್ಯೇಕ ಆರಿಸಿಕೊಳ್ಳುವುದಲ್ಲದೆ, ಸಾರ್ವಜನಿಕ ಚುನಾವಣೆಯಲ್ಲಿಯೂ ಅವರು ಓಟು ಕೊಡಬಹುದು. ಅವರಿಗೆ ಎರಡು ಓಟುಗಳಿರುತ್ತವೆ. ಇದು ಯಾವ ನ್ಯಾಯವೆಂದು ಗೊತ್ತಾಗುವುದಿಲ್ಲ. ಅವರಿಗೆ ಪ್ರತ್ಯೇಕ ಚುನಾವಣೆ ಇಟ್ಟಿರುವದರಿಂದ ಅವರು ಮೇಲ್ಜಾತಿಯ ಹಿಂದೂಗಳಿಂದ ಅಸ್ಪೃಶ್ಯರಾಗಿ ದೂರವೇ ಇರಲು ಅವಕಾಶ ಕಲ್ಪಿಸಿದಂತಾಯಿತು. ಒಟ್ಟಾರೆ ಈ ತೀರ್ಮಾನದಿಂದ ಇಷ್ಟರ ವರೆಗೆ ಇದ್ದ ಸಾಧಾರಣ ಮಟ್ಟಿಗೆಯ ಒಗ್ಗಟ್ಟನ್ನು ಪೂರ್ಣ ಒಡೆದು ದೇಶದಲ್ಲಿ ಜಾತಿ ವೈಷಮ್ಯವನ್ನೂ, ಜಗಳಗಳನ್ನೂ ಹೆಚ್ಚಿಸಿದಂತಾಗುವುದು.

ಒಟ್ಟಾವ ಪರಿಷತ್ತು.

ಇಂಡೋ—ಬ್ರಿಟಿಷ್ ಒಪ್ಪಂದ.

ಬ್ರಿಟಿಷ್ ಸಾಮ್ರಾಜ್ಯದಲ್ಲಿ ವ್ಯಾಪಾರದ ಅನುಕೂಲತೆಗಳನ್ನು ಹೆಚ್ಚಿಸಿಕೊಳ್ಳಲಿಕ್ಕೂ, ಸಾಮ್ರಾಜ್ಯ ಸಂಬಂಧವನ್ನು ಕಾಪಾಡಲಿಕ್ಕೂ, ಬ್ರಿಟಿಷ್ ಸಾಮ್ರಾಜ್ಯದೊಳಗಿರುವ ಎಲ್ಲಾ ದೇಶಗಳ ಪ್ರತಿನಿಧಿಗಳ ಪರಿಷತ್ತೊಂದು ಕೆನಡಾದ ಒಟ್ಟಾವ ಪಟ್ಟಣದಲ್ಲಿ ನಡೆಯಿತು. ಅಲ್ಲಿಗೆ ಇಂಡಿಯಾದ ಜನ ಚುನಾಯಿತ ಪ್ರತಿನಿಧಿಗಳ್ಯಾರೂ ಹೋಗಿರಲಿಲ್ಲ. ಸರ್ಕಾರದಿಂದ ನೇಮಿತ ಮೆಂಬರುಗಳು ಮಾತ್ರ ಹೋಗಿದ್ದರು. ಬೇರೆ ದೇಶಗಳಿಂದಲೂ ಸರ್ಕಾರಿ ನೇಮಿತ ಮೆಂಬರುಗಳೇ ಬಂದಿದ್ದರೂ, ಆ ದೇಶಗಳ ಸರ್ಕಾರವು ಜನರ ಪ್ರತಿನಿಧಿಗಳಿಂದ ನಡಿಸಲ್ಪಡುವದಾದ ಕಾರಣ ಸದರಿ ಮೆಂಬರುಗಳು ಜನರ ಪ್ರತಿನಿಧಿಗಳೇ ಆದರು. ಆದರೆ ಹಿಂದುಸ್ಥಾನದ ಸ್ಥಿತಿ ಬೇರೆ. ಆದರೂ ಕೂಡ ಬ್ರಿಟಿಷ್ ಪ್ರತಿನಿಧಿಗಳೂ, ಇಂಡಿಯಾದ 'ನೇಮಿತ' ಪ್ರತಿನಿಧಿಗಳೂ ಈ ಕೆಳಗಿನ ಒಪ್ಪಂದಕ್ಕೆ ರುಜು ಮಾಡಿರುವರು. ಈ ಒಪ್ಪಂದವು ಹಿಂದೂದೇಶದ ಜನರನ್ನು ಎಷ್ಟರ ಮಟ್ಟಿಗೆ ಬಂಧಿಸುವದೆಂದು ಮುಂದೆ ನೋಡಬೇಕಷ್ಟೆ.

ಹಿಂದುಸ್ಥಾನದಿಂದ ಇಂಗ್ಲೆಂಡಿಗೆ ಈಗ ಸುಂಕವಿಲ್ಲದೆ ಪ್ರವೇಶಮಾಡುವ ಸಾಮಾನುಗಳಿಗೆಲ್ಲ ಇನ್ನು ಮುಂದೆಯೂ 'ಬಂದ ದಾರಿಗೆ ಸುಂಕವಿಲ್ಲ'. ಅಂಥಾ ಸಾಮಾನುಗಳು ಬೇರೆ ಪರ ದೇಶಗಳಿಂದ ಬರುವುದನ್ನು ತಗ್ಗಿಸುವದಕ್ಕಾಗಿ ಅವುಗಳ ಮೇಲೆ ಶೇಕಡ ೧೦ರ ಸುಂಕವು ವಿಧಿಸಲ್ಪಡುವುದು. ಹೀಗೆ ನಿರ್ಭಾಧವಾಗಿ ಹೋಗಬಹುದಾದ ಹಿಂದೀ ಸಾಮಾನುಗಳಾವುವೆಂದರೆ:—ಬಟ್ಟೆಬರೆ, ಸಕ್ಕರೆ ಉಗಿ, ಜಮಖಾನ, ಕಂಬಳಿ, ಗೋಣಿಚೀಲ, ಹದಮಾಡಿದ ಚರ್ಮ, ಕೆಲವು ಬಗೆ ಎಣ್ಣೆಗಳು, ಗಂಧದ ಎಣ್ಣೆ, ಹಿಂಡಿ, ಅಕ್ಕಿ, ಕಡಲೆಕಾಯಿ, ಧೂಳು, ನೆಲಗಡಲೆ, ಕಾಫಿ, ಚಹಾ, ಹೊಗೆಸೊಪ್ಪು, ಕೃತಕ (ಕುಂಬಳ, ಹಿಪ್ಪರಿ, ಮೆಣಸು), ಶ್ರಿಪಾತಕಗಳು (ಯಾಲಕ್ಕಿ, ದಾಲಚೀನಿಕೆಕ್ಕೆ, ನೊಪ್ಪು) ಹರಳ ಬೀಜ, ತೇಗಿನ ಮರ, ಗೊಬ್ಬರ ಇತ್ಯಾದಿ. (ಇನ್ನು ಹಿಂದುಸ್ಥಾನದ ಹತ್ತಿಯನ್ನು ಲಂಕಾಶಯರಿನಲ್ಲಿ ಹೆಚ್ಚಾಗಿ ಉಪಯೋಗಿಸುವಂತೆಯೂ, ಹಿಂದೂಸ್ಥಾನದಲ್ಲಿ ದೊರೆಯುವ ಕಬ್ಬಿಣದ ಅದುರನ್ನು ಸುಂಕವಿಲ್ಲದೆ ಬಳಮಾಡಿಕೊಳ್ಳುವಂತೆಯೂ ಪಂಚಾಯತಿಕೆ ನಡೆಯಬೇಕಷ್ಟೆ.) ಇಲ್ಲಿ ಒಂದು ವಿಷಯವನ್ನು ತಿಳಿದುಕೊಳ್ಳಬೇಕು; ಈ ಸಾಮಾನುಗಳೆಲ್ಲ ಈ ಮೊದಲೂ ಸುಂಕವಿಲ್ಲದೆ ಹೋಗುತ್ತಿದ್ದುವು. ಈ ಒಪ್ಪಂದದ 'ಲಾಭ'ವಾಗಿ ಇನ್ನು ಮುಂದೆಯೂ ಹಾಗೆ ಹೋಗಬಹುದು. ಹಿಂದುಸ್ಥಾನಕ್ಕೆ ಬರುವ ಕೆಲವು ಸಾಮಾನುಗಳಿಗೆ ಇನ್ನು ಮುಂದೆ ಶೇಕಡ ೧೦, ಇನ್ನು ಕೆಲವಕ್ಕೆ ಶೇಕಡ ೭೦ರ ಸುಂಕದ ರಿಯಾಯಿತಿ ಕೊಡಬೇಕು. ಈ ಸಾಮಾನುಗಳಲ್ಲಿ ಮುಖ್ಯವಾದವು:—ಕಟ್ಟೋಣಗಳಿಗೆ ಬೇಕಾದ ಸಾಮಾನುಗಳು, ಕಬ್ಬಿಣದ ಸಾಮಾನುಗಳು, ಇಂಜಿನುಗಳು, ರಸಾಯನ ಧಾತು ದ್ರವ್ಯಗಳು, ಮದ್ದುಗಳು, ಕೃಷಿ ಸಾಮಾನು, ಮದ್ದುಗುಂಡು, ಆಯುಧ ಸಾಮಗ್ರಿ, ಇಲೆಕ್ಟ್ರಿಕ್, ಸಂಗೀತ, ಫೋಟೋಗ್ರಾಫ್, ವೈದ್ಯಕ ಶಸ್ತ್ರ, ಇತ್ಯಾದಿ ಉಪಕರಣಗಳು, ಚರ್ಮದ ಸಾಮಾನು, ಬೂಟ್ಸ್, ಅಲ್ಯುಮಿನ್, ತಾಮ್ರ, ಸೀಸ, ಜರ್ಮನ್ ಬೆಳ್ಳಿ, ಸತುವು, ಹಿತ್ತಾಳೆ ಮತ್ತು ಇವುಗಳಿಂದ ಮಾಡಿದ ಸಾಮಾನುಗಳು, ಉಣ್ಣೆಯ ಸಾಮಾನು, ಕಾಗದ, ಪೆನ್ಸಿಲು ಇತ್ಯಾದಿ, ರಬ್ಬರಿನ ಸಾಮಾನು, ಬೈಸಿಕಲ್ ಇತ್ಯಾದಿ, ವಾಹನಗಳು, ಬ್ರಷ್, ಅಗಿಗುಬ್ಬಿ, ಹಗ್ಗ ಬೂಚ, ಕಲ್ಲಿನ ಸಾಮಾನು, ಸಾಬೂನು; ಬೊಂಬೆ, ಗೂಡೆ ಮತ್ತು ಕೂಡೆ ಸಾಮಾನು, ಕೋವಿ ತೋಟ, ಮೇಣ ಕಪ್ಪಡ, ಸುಗಂಧ ದ್ರವ್ಯಗಳು,—ಇವುಗಳಿಗೆ ಶೇಕಡ ೧೦ರ ರಿಯಾಯಿತಿ. ಅಲ್ಲದೆ—ಬೀರ್ ಎಂಬ ಹೆಂಡ, ಕೊಕ್ಕೊ, ಚೊಕ್ಕೊಲೇಟ್, ಮೀನು, ಉಪ್ಪಿಯೊಳಗೆ ಹಾಕಿಟ್ಟ ಹಣ್ಣುಗಳು, ಉಪ್ಪಿನಕಾಯಿ, ಗಟ್ಟಿಮಾಡಿದ ಹಾಲು, ಮಿಠಾಯಿ, ಅಮೂಲ್ಯವಾದ ಎಣ್ಣೆಗಳು, ಇಂಜಿನುಗಳಿಗೆ ಹಾಕುವ ಎಣ್ಣೆ, ಏಷೆ ಕೈಲಗಳು—ಇವುಗಳಿಗೂ ಅದೇ ತರದ ರಿಯಾಯಿತಿ. ಮೋಟಾರು

(4ನೇ ಪುಟದಲ್ಲಿ ಮುಂದುವರಿದಿದೆ.)

Reg. No. M. 1550.
If not delivered please return to "KODAGU" OFFICE MERCARA.

ಕೊಡಗು.

ಸತ್ಯೇನ ಧರ್ಮದಯಯಾ ವಿದ್ಯಾ ... ಸಂಯುಕ್ತ ... ರಾಜ್ಯ ಸಂಪದಾ

ವಾರ್ಷಿಕ ಚಂದಾ ರೂ. ೩—೪—೦. ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೨ | ಮಡಿಕೇರಿ, ಸನ್ ೧೯೩೨ನೇ ಇಸವಿ ಸೆಪ್ಟಂಬರ್ ತಾರೀಕು ೨ ನೇ ಶುಕ್ರವಾರ. | ಸಂಚಿಕೆ ೧…

SARI-PIN.

EAR-RINGS.
(Thodus)
Cut-rubys Rs. 25 to 50
With diamond in centre Rs. 80 to 120

BRACELETS.
Gold Rs. 10
Set rubys forming any letter Rs. 12

NECKCHAINS.

NOSE-RINGS.
Diamond in small size of best quality Rs. 35 & upwards according to size.

MARRIAGE PRESENTATIONS

Attractive and inexpensive articles ready in stock. Prompt execution. Details on enquiry free with catalogue. Numerous customers in Coorg thoroughly satisfied with reliable service. Testimonials pouring in.
Silver Guindys, Photo lockets, Dimond nose-screws, cut-ruby ear-rings, etc., etc., etc., in all prices Very attractive Prices most moderate.

Estimates free on enquiry. Designs free on enquiry.

V. Subramaniaier
Jeweller,

Telegrams: 'PRECIOUS.' Telephone: 3145.

CATALOGUE ON ENQUIRY.

52—41 Post Box 428, Triplicane, P. O., MADRAS.

26—10

ಜನರಲ್ ಅಷ್ಯೂರೆನ್ಸ್ ಸೊಸೈಟಿ.

ಅಜಮೀರ್.

ನಮ್ಮ ಆಯವ್ಯಯದ ಪಟ್ಟಿಯೇ ನಮ್ಮ ಅಭಿವೃದ್ಧಿಯನ್ನು ವ್ಯಕ್ತಗೊಳಿಸುತ್ತದೆ.

ವರ್ಷ	ಒಟ್ಟು ವಾರ್ಷಿಕದಾಯ	ಒಟ್ಟು ಮೂಲಧನ	ಖರ್ಚು ಪ್ರಮಾಣದ ಶೇಕಡ
1911	46,248	49,442	82.9
1921	2,92,627	6,53,350	43.2
1931	12,50,000	4 ,00,000	28.2

ಬೋನಸ್ಸು.

ಹಿಂದಿನ ಸಲ ಕೊಡಲ್ಪಟ್ಟ ... ಮೇಲೆ
ವರ್ಷ ಒಂದಕ್ಕೆ ಶೇಕಡ 22½

ಚೆನ್ನಾಗಿ ಕೆಲಸಮಾಡಿ ಅಭಿವೃದ್ಧಿ ಸ್ಥಿತಿಯಲ್ಲಿರುವ ಈ ಸೊಸೈಟಿಯಲ್ಲಿ ವಿಮೆ ಮಾಡಿ ಕಡಿಮೆ ಪ್ರೀಮಿಯಂ ಪಾವತಿ ಮಾಡುವ ಸೌಲಭ್ಯ ಹೊಂದಿ ಅಥವಾ ಈ ಕಂಪೆನಿಯ ಪರವಾಗಿ ಕೆಲಸಮಾಡಿ ಉತ್ತಮ ಕಮಿಶನ್ ದರದ ಪ್ರಯೋಜನ ಹೊಂದಿ.

ಹೆಚ್ಚು ವಿಚಾರಗಳಿಗೆ ಈ ವಿಳಾಸಕ್ಕೆ ಬರೆಯಿರಿ:—

ಎ. ರಾಮಚಂದ್ರರಾವ್,
ಸುಪರಿಂಟೆಂಡೆಂಟ್,
52—19 ಮಿಂಟೋ ಆಸ್ಪತ್ರೆ ಬಳಿ,
ಬೆಂಗಳೂರು.

ಎಂಪೈರ್ ಆಫ್ ಇಂಡಿಯಾ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
(ಸ್ಥಾಪಿಸಲ್ಪಟ್ಟದ್ದು 1897.)

ಹಿಂದೂಸ್ಥಾನದಲ್ಲಿ ಪ್ರಾಮುಖ್ಯವೂ, ಜನಪ್ರಿಯವೂ ಆಗಿರುವ ಈ ಕಂಪೆನಿಯಲ್ಲಿ ನೀವು ಜೀವ ವಿಮೆ ಮಾಡುವುದಕ್ಕೆ ಇದೇ ತಕ್ಕ ಸಮಯ.

ಬೋನಸ್ ವರ್ಷ! ಬೋನಸ್ ವರ್ಷ!!

ಸಾಹಸವಂತರಾದ ಏಜೆಂಟರು ಬೇಕಾಗಿದೆ.

ಹೆಡ್ ಆಫೀಸು:—
ಎಂಪೈರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್,
52—48 ಮುಂಬಾಯಿ.

ಬ್ರಾಂಚ್ ಆಫೀಸು:—
152—3 ಕಮರ್ಶಿಯಲ್ ಸ್ಟ್ರೀಟ್,
ಬೆಂಗಳೂರು.

ಪ್ರಕಟಣೆ.

[illegible]
(ಸ್ಥಾಪಿತವಾದದ್ದು 1922ರಲ್ಲಿ.)

		ರೂ.
ಶೇರ್ ಬಂಡವಾಳ	—	50,000
[illegible] ಶೇರ್ ಮೊಬಲಗು	—	27,350
[illegible]	—	2,25,172
[illegible]	—	37,914

[illegible]

ಪ್ರೆಸಿಡೆಂಟು, ಸೆಕ್ರೆಟರಿ
[illegible] ಮನೆಯಪ್ಪಂಡ [illegible] ನವರು
ರಾವ್ ಬಹದ್ದೂರ್.
[illegible]

[illegible] 1—7—1932.

ನೋಟೀಸು.

[illegible] "ಕೊಡಗು" ಪತ್ರಿಕೆಯ [illegible]

ಏಜೆಂಟರುಗಳು.

[illegible] ಯಂ. [illegible] ಪ್ಪನವರು.
[illegible] ಮಾದಯ್ಯನವರು,

[illegible] ಏಜೆಂಟರುಗಳು.

[illegible] ಸೋಮಯ್ಯನವರು. ([illegible])
[illegible] ಎಮ್. ಆರ್. ವೆಂಕಟ್ಟಯ್ಯನವರು.
[illegible] ಮಾಚಯ್ಯನವರು,
[illegible] ಮುತ್ತಮ್ಮಯ್ಯನವರು,
[illegible] ನವರು,
[illegible] ಮಾದಯ್ಯನವರು,
[illegible] ಮಾದಯ್ಯನವರು,

ಸೂಚನೆ:—[illegible]

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿದೆ.

[illegible]

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ.)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.
ವಿಮೆದಾರರಿಗೆ ಕೊಟ್ಟದ್ದು—3291 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.
ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,78,322 ಜನರಿಗೆ 38 ಕೋಟಿ ರೂ.
ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ರಷ್ಟು ಅತಿ ವಿಪರೀತ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದಾಗಿದೆ.
ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪ್ರಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು, ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಆಕಾಂಕ್ಷೆಯನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬುದು ಅದರ ಹಿಂದಿನ ದಾಖ್ಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು
ಅಥವಾ ಇನ್ಸ್‌ಪೆಕ್ಟರೇಟ್ ಆಫೀಸು, ಮಡಿಕೇರಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ,	ಕಲ್ಕತ್ತಾ,	ಕೊಲಂಬೊ	ಬೆಂಗಳೂರು	ರಂಗೂನು
ಅಹ್ಮದಾಬಾದು,	ಕೊಲಂಬೊ	ಲಾಹೋರ್	ನಾಗಪೂರ	ರಾವಲ್‌ಪಿಂಡಿ
ಅಜ್ಮೀರ್	ಢಾಕ್ಕಾ	ಲಕ್ನೋ	ಪಾಟ್ನಾ	ಸಕ್ಕೂರು
ಅಲ್ಲಾಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಗೌಹಾತಿ	ಮಂಡಲೆ	ರಾಯಪೂರ	ತಿರುವೆಂದ್ರಮ್
ಧೋರಾಬಾದ್	ಕರಾಚಿ	ಮಡಿಕೇರಿ	ರಾಂಚಿ	ವಿಶಾಖಪಟ್ಣ [52—26

ಸಣ್ಣ ಹುಡುಗರ ಸಲುವಾಗಿ

ಡೋಂಗರ ಇವರ ಬಾಲಾಮೃತ

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತಾರೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ. ಟಪ್ಪಾಲು ಖರ್ಚು 9 ಆ.

ಕೆ. ಟಿ. ಡೋಂಗರೆ ಕಂಪೆನಿ,
52—33 ಗಿರಿಗಾಂವ, ಮುಂಬಯಿ.

ಆರ್ಡರು ಬರೆದರೆ ಆಗಸ
ಕ್ಯಾಟಲಾಗು ವಾಫೀಯಾಗಿ
ಕಳುಹಿಸಲ್ಪಡುವುದು.



ಕೋವಿಗಳು, ಕತ್ತಿಗಳು, ಬಾಣಗಳು, ತೋಟೆಗಳು, ಕೇಪುಗಳು, ಮತ್ತು ಮತ್ತಿ ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವುವು.

GOOLAMHUSAIN ALLIBHOY & SONS LTD.,
Largest Importers of Firearms and Ammunition
Cheapest priced firm in India,
26—25 210 Abdul Rehim Street, BOMBAY.

Printed & published by P. I. Belliappa at "Kodagu" Press, Mercara for "Kodagu" Ltd.

ಕೀ ನೇಮಕವಾದರೆ ಅವರು ಪೆನ್ಶನ್ ಪಡೆಯುವ ವರೆಗೆ ಬೇರೆಯವರಿಗೆ ಎಷ್ಟೇ ಶಕ್ತಿ, ಬುದ್ಧಿ ಕುಶಲತೆ ಇದ್ದವರಾದರೂ ಆ ಪದವಿಗಳಿಗೆ ಸಹ ಏರಲು ಅವಕಾಶವಿಲ್ಲವಷ್ಟೆ.

ಕೊಡಗಿನ ಎಲ್ಲಾ ಉದ್ಯೋಗಗಳಿಗೂ ಮದ್ರಾಸಿನವರೇ ಬರುತ್ತಾರೆಂಬ ಇನ್ನೊಂದು ಬೆದರಿಕೆ. ಇದು ಮದ್ರಾಸಿನ ಬೇರೆ ಯಾವ ಜಿಲ್ಲೆಯಲ್ಲಿಯೂ ಜಾರಿಯಲ್ಲಿ ಇಲ್ಲದ ಪದ್ಧತಿ. ಕೆಳಗಿನ ದರ್ಜೆಯ ಎಲ್ಲಾ ಉದ್ಯೋಗಗಳೂ ಆಯಾಯ ಜಿಲ್ಲೆಯವರಿಗೇನೇ ಇರುತ್ತದೆ.

ಅಲ್ಲದೆ ಮೆ ಸ್ಟೋಕನರು ಕೊಡಗಿನಲ್ಲಿ ಕೊಡವ ಜನರು ಮಾತ್ರವೇ ಇರುವುದು ಎಂತ ತಿಳಿದ ಹಾಗೆ ಕಾಣುತ್ತದೆ. ಕೊಡಗಿನ ನಿವಾಸಿಗಳ ಹೆಚ್ಚಿನ ಸಂಖ್ಯೆಯು ಕೊಡಗೇತರರ ವಿಷ ಯೇನು? ಅವರಿಗೆ ಸರಕಾರದ ಉದ್ಯೋಗ ಬೇಡವೇ?

ಸರಕಾರದ ಉತ್ಪತ್ತಿಯು ಖರ್ಚಿಗೆ ಸಾಲದೆಂತಾದರೆ ಬೇರೆ ಪ್ರಾಂತ್ಯ ಮಾಡುವ ಯೋಚನೆ ಮಾಡಬಹುದೆನ್ನುತ್ತಾರೆ. ಕೊಡಗಿಗೆ ಸುಧಾರಿಸಿದ ಸರಕಾರ ಕ್ರಮವನ್ನು ಕೊಡಲು ಹಣ ಸಾಲದೆಂತ ಸೈಮನ್ ಕಮಿಶನ್ ಹೇಳಿದೆ. ಅಲ್ಲದೆ ಕೊಡಗಿನ ರೈತರಿಗೆ ಸಹಾಯವಾಗುವಂಥ ಇಲಾಖೆಗಳನ್ನು ಸಹ ಇಟ್ಟುಕೊಂಡು ಪ್ರತ್ಯೇಕ ಸರಕಾರವನ್ನು ನಡಿಸಲು ಸಾಧ್ಯವಿಲ್ಲವೆಂತ ಸಾಧಾರಣ ಬುದ್ಧಿ ಇರುವವರಿಗೂ ತಿಳಿಯುತ್ತದೆ. ಆದ್ದರಿಂದ ಇನ್ನು ಅಭಿವೃದ್ಧಿಯಿಸಿಕೆಗಾಗಿ ಏನೂ ತಡ ಮಾಡದೆ ಸಾಧ್ಯವಿಲ್ಲದಿರುವ ಮಲಬಾರ್, ಕನ್ನಡ ಜಿಲ್ಲೆ, ಕೊಡಗನ್ನು ಒಟ್ಟುಗೊಂಡ ಪ್ರಾಂತ್ಯವನ್ನು ಮಾಡುವ ಯೋಚನೆ ಮಾಡದೆ ಸಾಧ್ಯವಿರುವ ಮದ್ರಾಸಿಗೆ ಸೇರಿ ಕೊಳ್ಳುವದೇ ಉತ್ತಮವಲ್ಲವೇ

'ಊರವ'

ಹಿಂದೂ ಮುಸಲ್ಮಾನರ ಐಕ್ಯತೆ.

ಅಯ್ಯಾ ಸಂಪಾದಕರೇ,

ನಾನು ಈ ಕೆಳಗಿನ ಲೇಖನವನ್ನು ಬಿಜ್‌ನೂರ್ ಪತ್ರಿಕೆ "ಮದೀನಾ" ಮತ್ತು ಡೆಲ್ಲಿ ಪತ್ರಿಕೆ "ಜಮಿಯತ್‌ಲ್ ಉಲ್ಮಾ" ಯೆಂಬವುಗಳಿಗೆ ಹಿಂದೂಸ್ಥಾನಿಯಲ್ಲಿ ಬರೆದು ಕಳುಹಿಸಿರುತ್ತೇನೆ. ನಿಮಗೆ ಕಳುಹಿಸಿರುವ ಅದರ ತರ್ಜುಮೆಯನ್ನು ತಾವು ತಮ್ಮ ಪತ್ರಿಕೆಯಲ್ಲಿ ಛಾಪಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಜಮೀಯತುಲ್-ಉಲ್ಮಾ, ಮುಸ್ಲಿಂ ಕಾನ್‌ಫರೆನ್ಸ್, ಇಂಡಿಪೆಂಡೆಂಟ್ ಪಾರ್ಟಿ, ನೇಷನಲಿಸ್ಟ್, ಅಹರಾರ್, ಖಿಲಾಫತ್, ಮುಸ್ಲಿಂ ಲೀಗ್ ಮತ್ತು ಕಾಂಗ್ರೆಸ್ ಪಾರ್ಟಿಗಳ ಮುಂದಾಳುಗಳ ಸನ್ನಿಧಾನದಲ್ಲಿ ಕೊಡಗು ಬಿಳಿಗುಂದದ ಅಬ್ದುಲ್ ಗಫೂರ್‌ಖಾನ್‌ನ ಅಪ್ಪೀಲ್.

ಮಹನಿಯರೇ, ನಾನು 2 ವರ್ಷಗಳಿಂದ ಈ ಅಭಿಪ್ರಾಯವನ್ನು ತಮ್ಮ ಪೇಪರುಗಳಿಗೆ ಕಳುಹಿಸಬೇಕೆಂದಿದ್ದೆ. ಆದರೆ ನಾನು ಒಬ್ಬ ಹಳ್ಳಿಯವನಾದ್ದರಿಂದ 'ಸಣ್ಣ ಬಾಯಿ, ದೊಡ್ಡ ಮಾತೆಂದು ಆಗಬಹುದೆಂದು ಭಾವಿಸಿ ಕಳುಹಿಸಲಿಲ್ಲ. ಈಗ್ಯೆ ಕಳುಹಿಸದೆ ನನಗೆ ಸಮಾಧಾನವೂ, ಶಾಂತಿಯೂ ಇಲ್ಲದ್ದರಿಂದ ಕಳುಹಿಸಿರುತ್ತೇನೆ. ಕ್ಷಮಿಸಬೇಕು. ನಾನು ಕಾಂಗ್ರೆಸಿಗೆ ಸೇರಿದವನಾಗಿದ್ದೇನೆ. ಎರಡು ಸಾರಿ ಜೈಲಿಗೆ ಹೋಗಿರುತ್ತೇನೆ. ಕಳೆದ 26 ನೇ ಜುಲೈಯಲ್ಲಿ ಬೆಲ್ಲಾರಿಯಿಂದ ಬಿಡುಗಡೆಯಾಗಿ ಮನೆಗೆ ತಲುಪಿರುತ್ತೇನೆ. ಜೈಲಿನಲ್ಲಿ, ಮದ್ರಾಸ್ ಮುಂದಾಳುಗಳು ಟಿ. ಗಳಾಧ ಪ್ರಕಾಶಂ ಸಿ. ರಾಜಗೋಪಾಲಚಾರಿ, ಪಟ್ಟಾಭಿ ಸೀತಾರಾಮಯ್ಯ, ಸಾಂಬಮೂರ್ತಿ, ಸತ್ಯಮೂರ್ತಿ ವಗೈರೆ ಅನೇಕ ಮುಖ್ಯಸ್ಥರೊಂದಿಗೆ ಮಿಳಿತನಾಗಿದ್ದೆನು. ನಾನು ಒಬ್ಬ ಕಾಂಗ್ರೆಸಿನವನಾಗಿ ಇದನ್ನು ಬರೆಯುವದಲ್ಲ; ನಾನು ಮೊದಲು ಒಬ್ಬ ಮುಸಲ್ಮಾನನಾಗಿ, ಅನಂತರ ಹಿಂದೀಯವನಾಗಿ ಇದನ್ನು ಬರೆಯುವದಾಗಿದೆ. ಅದೂ ಬಹು ಸಂಕ್ಷೇಪವಾಗಿ ಬರೆದಿರುತ್ತೇನೆ.

ಹಿಂದೂ-ಮುಸಲ್ಮಾನರ ಒಗ್ಗಟ್ಟಿನ ವಿಷಯ 5-6 ವರ್ಷಗಳಿಂದ ಚರ್ಚೆಗಳು ನಡೆಯುತ್ತಾ ಇವೆ. ಇನ್ನೂ ತೀರಲಿಲ್ಲ. ಹಿಂದೂ ಜನರಲ್ಲಿ ಬುದ್ಧಿವಂತರೂ ಮುಸಲ್ಮಾನರಲ್ಲಿ ಬುದ್ಧಿವಂತರೂ ಸೇರಿ ಇದನ್ನು ತಮ್ಮೊಳಗೆ ತೀರಿಸಿಕೊಳ್ಳದೆ ಇರುವದು ತುಂಬಾ ನಾಚಿಕೆಗೇಡಲ್ಲವೇ? ಇಂಗ್ಲಿಷನವರ ತೀರ್ಮಾನಕ್ಕೆ ಬಿಟ್ಟದ್ದು ಈ ಎರಡು ಜನಾಂಗಕ್ಕೆ ಅತ್ಯಂತ ಅಪಮಾನವಲ್ಲವೇ? ನಮ್ಮ ಮುಸಲ್ಮಾನರಿಗಂತೂ ದೊಡ್ಡ ಅಪಮಾನವಿದೆ. ಯಾಕೆಂದರೆ, ದೇವರ ಮತ್ತು ನಮ್ಮ ...ರುಗಳ ಬಾಗಿಲನ್ನು ಬಿಟ್ಟು ಇತರ ಬಾಗಿಲಿಗೆ ಹೋಗುವದು ಎಂದೂ ನ್ಯಾಯವಲ್ಲ. ದೇವರ ಅಪ್ಪಣೆಯಾದ "ಇನ್ನಲ್ಲಾಹ ಯಾಮುರುಕುಂ, ಬಿಲ್ ಅದ್‌ಲೆ ವಲ್ ಯಿಹ್ಸಾನ" ಅಂದರೆ ಮಹಾ ದೇವರು ಮುಸಲ್ಮಾನರಿಗೆ ನ್ಯಾಯದ ಮತ್ತು ಪರೋಪಕಾರದ ಅಪ್ಪಣೆಯನ್ನು ಮಾಡುತ್ತಾನೆ, ಮತ್ತು ಇಂಥಾ ಜಗಳದಲ್ಲಿ ಹೀಗೆ ಅಪ್ಪಣೆ ಮಾಡಿರುತ್ತಾನೆ. ...ತಸೆಮು ಬಿ ಹಬ್‌ಲಿಲ್ಲಾಹೆ ಜಮೀಅನ್ ವಲಾ ತಫರ್ರ..." ಅಂದರೆ "ಮುಸಲ್ಮಾನರೇ ಜಗಳಗಳಲ್ಲಿ ನೀವು ದೇವರ ಹಗ್ಗವನ್ನು ಬಹು ಗಟ್ಟಿಯಾಗಿ ಹಿಡಿಯಿರಿ." ಇದೇ ಮಹಾ ದೇವರ ಅಪ್ಪಣೆ. ಇಲ್ಲಿಗಿಂತ ಹೆಚ್ಚು ನ್ಯಾಯದ ತೀರ್ಮಾನ ನಮಗೆ ಎಲ್ಲಿಯೂ ಸಿಕ್ಕುವದಿಲ್ಲ. ಹಿಂದೂಸ್ಥಾನದಲ್ಲಿ ಹಿಂದೂ ಮುಸಲ್ಮಾನರ ಒಗ್ಗಟ್ಟಿನ ವಿಷಯ ಇಲ್ಲಿ ...ಕವ್ಯವಹಾರವೇ ನಡೆಯಲಾರದು. ಮುಸಲ್ಮಾನರಲ್ಲಿ ... ಇಸ್ಲಾಮಿನ ಹುಲಿ ಕ್ರಿಮಾನ್ ಮೌಲಾನ ಶೌಕತ್ ಅಲಿಯವರ ಉಪನ್ಯಾಸಗಳನ್ನು ಮತ್ತು ಹಿಂದೂ ಜನರಲ್ಲಿ ಮುಖ್ಯರಾದ ಡಾಕ್ಟರ್ ಮೂಂಜೆಯವರ ವ್ಯಾಖ್ಯಾನವನ್ನು ಓದಿ ನೋಡಿದರೆ ಮನಸ್ಸಿಗೆ ಬಹು ವ್ಯಸನ ಮತ್ತು ನೋವು ಆಗುತ್ತೆ. ಇವರ ಯೋಚನೆಗಳು ಏನಿರಬಹುದೆಂದರೆ—ಹಿಂದೂ ಮುಸಲ್ಮಾನರು ಜಗಳ ಮಾಡಿಕೊಂಡು, ಒಬ್ಬರ ಮನೆಗೆ ಒಬ್ಬರು ಬೆಂಕಿ ಹಚ್ಚುವದು ಕೋಟ್ಯಾಂತರ ರೂಪಾಯಿಗಳ ನಷ್ಟ ಮಾಡುವದು, ಹೆಂಗಸರು ವಿಧವೆಯರಾಗುವದು, ಮಕ್ಕಳು ಅನಾಥರಾಗುವದು, ಕಡಿದಾಟ ಮಾಡಿ ಒಬ್ಬರನ್ನೊಬ್ಬರು ಕೊಲ್ಲುವದು, ಭಾರಿ ಭಾರಿ ಪಟ್ಟಣಗಳನ್ನು ಹಾಳು ಮಾಡುವದು, ಕಟ್ಟಕಡೆಗೆ ಅನ ಹೆಚ್ಚುವದು, ಆಸ್ಪತ್ರೆಗಳಲ್ಲಿ ಘಾಯಸ್ಥರು ಅತ್ಯಂತ ಗೋಳು ಮತ್ತು ದುಃಖ ಪಡುವದು; ಇವುಗಳನ್ನೆಲ್ಲಾ ನಮ್ಮ ಲೀಡರುಗಳು ಕಣ್ಣುಗಳಿಂದ ನೋಡುವದು! ಹೀಗೆಲ್ಲಾ ಮಾಡುವದು ಯಾತಕ್ಕೆ? ಒಂದೇದು ಸೀಟುಗಳಿಗಾಗಿ. ನಮ್ಮ ಮುಂದಾಳುಗಳು ತಮ್ಮ ಜನಾಂಗಕ್ಕೆ ಸಹಾಯ ಮಾಡುತ್ತೇವೆ, ಹಕ್ಕುಗಳನ್ನು ಪಡೆದುಕೊಡುತ್ತೇವೆ, ಉದ್ಧರಿಸುತ್ತೇವೆ, ಬದುಕಿಸುತ್ತೇವೆ, ಎಂದು ಹೇಳುತ್ತಾರೆ. ಆದರೆ ಭೂಲೋಕದ ಬುದ್ಧಿವಂತರು ಜೀವಿಸುವದು, ಸಾಯುವದು, ಉದ್ಧಾರವಾಗುವದು, ಹಾಳಾಗುವದು ದೇವರ ಕೆಲಸವೆಂದು ನಂಬುತ್ತಾರೆ. ಸೂರ್ಯ, ಚಂದ್ರ, ಭೂಮಿ, ಆಕಾಶ, ಗಾಳಿ, ಮಳೆ, ಎಲ್ಲಾ ದೇವರದ್ದಾಗಿದೆ. ಈ ಮುಂದಾಳುಗಳು ಯಾರಿಗೂ ಒಂದು ಕಾಸೂ ಕೊಡುವವರಲ್ಲ. ಇಂಥಾ ಹೊಗಳಿಕೆ ಬರೇ ಸುಳ್ಳು ಮತ್ತು ಡಂಬಾಚಾರವಾಗಿದೆ.

ಕೌನ್ಸಿಲುಗಳಿಗೆ ಹೋಗಿ, ಮುಸಲ್ಮಾನನಾಗಲೀ, ಹಿಂದುವಾಗಲೀ, ಕ್ರಿಶ್ಚಿಯನಾಗಲೀ, ಸಿಕ್ಖನಾಗಲೀ, ಪಾರ್ಸಿಯನಾಗಲೀ ಮತಭೇದವಿಲ್ಲದೆ ದೇಶಸೇವೆ ಮಾಡಬೇಕಾಗಿದೆ. ಇಡೀ ಜನಾಂಗದ ಭಾರವು ಇವರ ಮೇಲೆ ಇರಬೇಕಾಗಿದೆ. ಆದರೆ ಮತದಲ್ಲಿ ಮಾತ್ರ ಭಿನ್ನಾಭಿಪ್ರಾಯಗಳಿರಬಹುದು. ಮತ್ತು ಸ್ವಾತಂತ್ರ್ಯವೂ ಎಲ್ಲರಿಗೂ ಇರಬೇಕು. ಅಲ್ಲದೆ ಆಯಾಯ ಮತದ ಮುಖ್ಯಸ್ಥರು ಪ್ರತಿನಿಧಿಗಳ ಅನುಮತಿಯಿಲ್ಲದೆ ಮತದ ಯಾವ ಕಾನೂನ್ ಮಾಡಕೂಡದು ಎಂಬ ತತ್ವವನ್ನು ಎಲ್ಲಾ ಮತಗಳ ಮುಖ್ಯಸ್ಥರು ಒಪ್ಪಿರುವರು. ಹೀಗಿರುವಾಗ್ಯೆ ಒಂದು ಮತದವರು ಇನ್ನೊಂದು ಮತದವರನ್ನು ಕಣ್ಣು ತಿರುಗಿಸಿ ಸಹ ನೋಡಲಾರರು. ಪರಮತದವರು ಇಂಡಿಯಾದಲ್ಲಿ ಬಹು ಕಡಿಮೆ ಇದ್ದಾರೆ. ಹಿಂದು ಮುಸಲ್ಮಾನರು ಇವರನ್ನು ಎದುರಿಸಲು ಯತ್ನಿಸುತ್ತಿದ್ದಾರೋ? ಬೆಟ್ಟಯವರು ಮೈನಾರ್ಟಿಯವರನ್ನು ತಿಂದುಬಿಡುತ್ತಾರೆ, ನುಂಗಿಬಿಡುತ್ತಾರೆ, ನಾಶಮಾಡಿಬಿಡುತ್ತಾರೆಂಬ ಕೂಗು ಸರಿಯಾದದ್ದಲ್ಲ, ಅದು ನಾಚಿಕೆಗೇಡಿನ ಕೂಗಾಗಿದೆ. ನಮ್ಮ ಮುಂದಾಳುಗಳು ನಮ್ಮನ್ನು ಹುಚ್ಚರೆಂದು ತಿಳಿದುಕೊಂಡಿದ್ದಾರೆ. ನಮಗೆ ತಿಳುವಳಿಕೆ ಇಲ್ಲವೆಂದು ಯೋಚಿಸಿಕೊಂಡಿದ್ದಾರೆ. ಕೌನ್ಸಿಲುಗಳಿಗೆ ಹೋಗುವವರಿಗೆ ಮತದಾಕ್ಷಿಣ್ಯ ಇರಬಾರದೆಂದು ನಮಗೆ ಚೆನ್ನಾಗಿ ಗೊತ್ತಿದೆ. ಅಲ್ಲಿ ಅವರು ಮತಭೇದವಿಲ್ಲದೆ ದೇಶಸೇವೆ ಮಾಡಬೇಕಾಗಿದೆ. ಮತ ಚರ್ಚೆಗೆ ಮಾತ್ರ ಅವರು ಮತಸ್ಥರಾಗಿರಬೇಕು. ಈಗಿನ ಕಾಲದಲ್ಲಿ ಎಲ್ಲವೂ ಸಂಪೂರ್ಣ ವಿರೋಧವಾಗಿದೆ. ಕೌನ್ಸಿಲು ಮೆಂಬರುಗಳು ದೇಶಸೇವೆಯೂ ಮಾಡುವದಿಲ್ಲ, ಮತಸೇವೆಯೂ ಮಾಡುವದಿಲ್ಲ; ಬರೇ ಇಂಗ್ಲಿಷರ ಸೇವೇ ಮಾಡುತ್ತಾ ಇದ್ದಾರೆ.

ಅಲ್ಲದೆ ಮುಸಲ್ಮಾನರು ಮೈನಾರ್ಟಿಯಾಗಿ ಇದ್ದಾರೆಂದು ನಮ್ಮ ಧುರೀಣರು ಹೇಳುತ್ತಾರೆ. ಅರೇಬಿಯಾ, ತುರ್ಕಿ, ಪರ್ಶಿಯ, ಅಫಘಾನಿಸ್ಥಾನ್, ಈಜಿಪ್ಟ್, ಟ್ಯುನಿಸ್, ಮೊರಾಕೊ, ಟರಿಪೋಲಿ, ರಷ್ಯ ಮತ್ತು ಚೈನಾ ವಗೈರೆ ಭೂಲೋಕದ ಯಾವ ಭಾಗದಲ್ಲಿ ಯಾವ ದೇಶದಲ್ಲಿ ಎಂಟು ಕೋಟಿ ಮುಸಲ್ಮಾನರು ಇದ್ದಾರೆಂದು ಅವರು ಹೇಳ ಕೊಡಲಿ. ಎಂಟು ಕೋಟಿಯು ಸಣ್ಣ ಸಂಖ್ಯೆ ಅಲ್ಲ; ಅದು ಕೆಲವು ಮುಸಲ್ಮಾನರಲ್ಲ. ಖಾಲೀಫರ 3? ವರ್ಷದ ಕಾಲದಲ್ಲಿ ಕೊಂಚ ಮುಸಲ್ಮಾನರು ಭೂಲೋಕವನ್ನೇ ಜೈಸಿಬಿಟ್ಟರು. ಹೀಗಿರುವಾಗ್ಯೆ ಎಂಟು ಕೋಟಿ ಮುಸಲ್ಮಾನರು ಸಣ್ಣ ಶಬ್ದ, ಚಿಕ್ಕ ಮಾತು, ಕೊಂಚ ಸಂಖ್ಯೆಯುಳ್ಳ. ನಮ್ಮ ಮುಂದಾಳುಗಳ ಈ ಕೂಗು ಬಹು ಆಶ್ಚರ್ಯಕರ ಮತ್ತು ವ್ಯಸನಕರವಾದ್ದಾಗಿದೆ.

ಅಲ್ಲದೆ ನಮ್ಮ ಧುರೀಣರು ಹಿಂದೂ ರಾಜ್ಯವಾಗಿ ಹೋದರೆ, ಮುಸಲ್ಮಾನರು ಗುಲಾಮರಾಗಿ ಇರಬೇಕಾಗುತ್ತೆಂಬದಾಗಿ ಹೇಳುತ್ತಾರೆ. ಯಾವಾಗಲಾದರೂ ಹಿಂದೂ ಜನರು ಇಂಡಿಯಾದ ಎಲ್ಲೆಯನ್ನು ದಾಟಿ ಮುಸ್ಲಿಂ ದೇಶಗಳಾದ ಅಫಘಾನಿಸ್ಥಾನ, ಪರ್ಶಿಯ, ತುರ್ಕಿ, ಅರೇಬಿಯ, ಈಜಿಪ್ಟ್, ಮೊರಾಕೊ, ಟರಿಪೋಲಿ, ವಗೈರೆ ವಗೈರೆ ದೇಶಗಳ ಮೇಲೆ ಯುದ್ಧ ಮಾಡಿದ್ದಾರೋ? ಅವುಗಳನ್ನು ನಾಶಮಾಡಿದ್ದಾರೋ? ಇಲ್ಲ. ಇವುಗಳನ್ನು ನಾಶ ಮಾಡಿದವರು ಯಾರು? ಎಲ್ಲಾ ಯೂರೋಪ್ ರಾಜ್ಯದವರು. ಇದು ಹೋಗಲಿ, ಹಿಂದುಸ್ಥಾನದ ಮುಸ್ಲಿಂ ರಾಜ್ಯಗಳಾದ ಡೆಲ್ಲಿ, ಬಂಗಾಳ, ಆಗ್ರ, ಮುರ್ಷಿದಾಬಾದ್, ಬಿಜಾಪುರ್, ಮೈಸೂರು, ಅರ್ಕಾಟ್, ಪಂಜಾಬ್ ಯು. ಪಿ. ಮತ್ತು ಲಕ್ನೋ, ವಗೈರೆ ರಾಜ್ಯಗಳನ್ನು ಹಿಂದು ಜನ ಹಾಳು ಮಾಡಿದರೋ? ಅವು ಅವರ ಕೈಯಲ್ಲಿ ವೆಯೋ? ಹಿಂದುಸ್ಥಾನದಲ್ಲಿ ಮೊದಲು ಯಾರು ಇದ್ದರು? ಮುಸಲ್ಮಾನರೋ? ಹಿಂದು ಜನರೋ? ಮುಸಲ್ಮಾನರು ಭಾರತ ...ತೆಯ ಮೇಲೆ ಯುದ್ಧ ಮಾಡಿ ಹಿಂದು ಜನರನ್ನು ಜೈಸಿ ...ಟುನೂರು ವರ್ಷ ಆಳಲಿಲ್ಲವೋ? ಹೀಗಿರುವಾಗ್ಯೆ ಈಗ್ಯೆ 8 ಕೋಟಿ ಮುಸಲ್ಮಾನರು ಇವರ ಗುಲಾಮರಾಗಿ ಹೋಗುತ್ತಾರೇ? ಇಂಥಾ ಮಾತುಗಳು ದೊಡ್ಡ ಸುಳ್ಳು ಮತ್ತು ಅತ್ಯಂತ ಅಪಹಾಸ್ಯವಾಗಿವೆ. ಏಜ ರಾಗ ... ಯನ್ ರಾಜ್ಯದವರು ಮುಸ್ಲಿಂ ಮತದ, ವ್ಯಾಪಾರದ ರಾಜ್ಯಗಳ, ಮತ್ತು ಕೈಗಾರಿಕೆಯ ಕಠಿಣ ಶತ್ರುಗಳಾಗಿದ್ದಾರೆ. ಹಿಂದೂ ಜನರು ಗೋವು ಮತ್ತು ಪಾಲ್ಗಡ ವಿಷಯದಲ್ಲಿ ಮಾತ್ರ ಶತ್ರುಗಳು. ಇದೀಗ ನಿಜ ಸಂಗತಿ.

ಇದಲ್ಲದೆ ಕಳೆದ ಜುಲಾಯಿ ತಿಂಗಳಲ್ಲಿ ಕಾಂಗ್ರೆಸ್ಸಿನ ರಾಜಕೀಯ ತತ್ವಕ್ಕೆ ಸರಿಯಾಗಿ ಮುಂದಿನ ರಾಜಕೀಯ ರಚನೆಯ ವಿಷಯವಾಗಿ 70 ಉಲ್ಮಾ ಜನರ ದಸ್ಕತ್‌ನೊಡನೆ ಜಮಿಯತುಲ್ ಉಲ್ಮಾ ಕಡೆಯಿಂದ ಒಂದು ಬಹಿರಂಗವಾದ ಪ್ರಕಟನೆಯಾಗಿದೆ. ಇದರಿಂದ ಮುಂದಿನದು ಪ್ರಜಾ ಒಪ್ಪಿಗೆ ಸರಕಾರವೆಂದು ಖಂಡಿತವಾಗಿ ಗೊತ್ತಾಗುತ್ತೆ. ಇದನ್ನು ಕುರಿತು ಯಾರಾದರೂ ಚರ್ಚೆ ಮಾಡಿದರೆ, ಇಲ್ಲವೆ ತಪ್ಪೆಂದರೆ ... ಶೇಕ್ ಸಾದಿಯವರ ಹೇಳಿಕೆಯಂತೆ—"ಬಾವಲಿ ಪಕ್ಷಿಗೆ ಹಗಲು ಕಣ್ಣು ಕಾಣದಿದ್ದರೆ ಸೂರ್ಯನ ತಪ್ಪು ಏನಿದೆ" ಎಂದು ಮಾತ್ರ ಸೂಚಿಸಿದರೆ ಸಾಕಾಗುವದು.

ಆದ್ದರಿಂದಲ್ಲ, ಎಲ್ಲಾ ಅಂಜುಮನ್‌ಗಳ, ಸೊಸೈಟಿಗಳ, ಜಮಿಯತುಲ್-ಉಲ್ಮಾ ಅಂಜುಮನಿನ ಮುಖ್ಯಸ್ಥರಿಗೆ ಅತ್ಯಂತ ವಿನಯದಿಂದ ಅರಿಕೆ ಮಾಡಿಕೊಳ್ಳುವದೇನೆಂದರೆ—ಮಹಾ ದೇವರ ಹೆಸರಿನಲ್ಲಿ ಹಿಂದುಮುಸಲ್ಮಾನರ ಸಮಸ್ಯೆಯನ್ನು ತೀರ್ಮಾನ ಮಾಡಿರಿ. ಈ ತೀರ್ಮಾನ ಮಾಡುವ ಯಜಮಾನಿಕೆ ಪಕ್ಕ ಜಮಿಯತುಲ್ ಉಲ್ಮಾಗೆ ಇದೆ. ಯಾತಕ್ಕೆಂದರೆ—ದೇವರ ಅಪ್ಪಣೆ—"ಅತಿಯುಲ್ಲಾ ಹು ವ ಅತಿಯು ರಸೂಲ ವ ಊಲಿಲ್ ಅಮ್ರೆ ಮಿನ್‌ಕುಂ." ಅಂದರೆ—"ದೇವರಿಗೆ ವಿಧೇಯರಾಗಿರಿ, ರಸೂಲರಿಗೆ (ನಬಿ) ವಿಧೇಯರಾಗಿರಿ; ಮತ್ತು ಇವರ ಅಪ್ಪಣೆಯ ಮೇರೆ ನಡೆಯುವವರಿಗೆ ವಿಧೇಯರಾಗಿರಿ" ಯೆಂದಿದೆ. ಆದ್ದರಿಂದ ಮುಸಲ್ಮಾನರ ಪಕ್ಕ ಜಮಿಯತುಲ್ ಉಲ್ಮಾಗೆ ಮಾತ್ರ ಇರತಕ್ಕದ್ದು. ಇವರು ಖಂಡಿತವಾಗಿ ದೇವರ ಮತ್ತು ಗುರುಗಳ ಅಪ್ಪಣೆಗೆ ಅನುಸಾರವಾಗಿ ತೀರ್ಮಾನ ಮಾಡುವರು. ದೇವರು ಜುಲುಂ, ಜಬರ್‌ದಸ್ತಿ, ಪೊಲಿಟಿಕಲ್ ಡಿಪ್ಲೊಮೆಸಿ, ಪಾಲಿಸಿ ವಗೈರೆ ತೋರಿಸುವದಕ್ಕೆ ಹೇಳುವದಿಲ್ಲ. ಸತ್ಯ, ನ್ಯಾಯ, ಧರ್ಮ ಮತ್ತು ಪರೋಪಕಾರ ನಡೆಸುವುದಕ್ಕೆ ಅಪ್ಪಣೆ ಮಾಡುತ್ತಾನೆ. ರಿಜರ್ವ್‌ಡ್ ಸೀಟುಗಳಿಂದ ಕೂಡಿದ ಜಾಯಿಂಟ್ ಇಲೆಕ್ಷನ್ ರೀತಿಯೇ ಈಗಿನ ಹಿಂದೂಸ್ಥಾನಕ್ಕೆ ಉತ್ತಮವಾದ ಮತ್ತು ನ್ಯಾಯವಾದ ಕ್ರಮವಾಗಿದೆ. ಯಾವ ಪ್ರಾಂತ್ಯಗಳಲ್ಲಿ ಮುಸಲ್ಮಾನರು ಹೆಚ್ಚಿದ್ದಾರೋ ಅಲ್ಲಿ ಅವರ ಬಹುಮತವನ್ನು ಹಿಂದೂಗಳು ಒಪ್ಪಿಕೊಳ್ಳಬೇಕು. ಯಾವ ಪ್ರಾಂತ್ಯಗಳಲ್ಲಿ ಹಿಂದೂ ಜನರು ಹೆಚ್ಚಿದ್ದಾರೋ ಅಲ್ಲಿ ಅವರ ಬಹುಮತವನ್ನು ಮುಸಲ್ಮಾನರು ಒಪ್ಪಿಕೊಳ್ಳಬೇಕು. ಹಿಂದೂಸ್ಥಾನದ ಒಗ್ಗಟ್ಟು ಮತ್ತು ಶಾಂತಿಯು ಇದರಲ್ಲೇ ಇದೆ. ಸತ್ಯಕ್ಕೆ ಮತ್ತು ನ್ಯಾಯಕ್ಕೆ ಎಲ್ಲಾ ಮತದವರು ಸಂತೋಷದಿಂದ ಒಪ್ಪಿಕೊಳ್ಳಬಹುದೆಂದು ನಾನು ನಂಬುತ್ತೇನೆ. ಅಲ್ಲದೆ ಎಲ್ಲರೂ ಒಗ್ಗಟ್ಟಾಗಿ ಸೇರಿ ಇನ್ನು ಮುಂದಕ್ಕೆ ಯಾವ ಪತ್ರಿಕೆಯವರಾಗಲೀ ಮತ್ತು ಯಾವ ಭಾಷಣಕಾರರಾಗಲೀ ಹಿಂದೂಮುಸಲ್ಮಾನರಿಗೆ ಜಗಳ ಉಂಟಾಗುವಂಥ ಲೇಖನ ಬರೆಯಲೂ, ಇಲ್ಲವೆ ಭಾಷಣ ಮಾಡಲೂ ಕೂಡದೆಂದು ಇಸ್ತಿಹಾರ್ ಮಾಡಬೇಕು. ದೇವರ ಮೇಲೆ ಭರವಸ ಇಟ್ಟು ಆತನ ಮಕ್ಕಳ ಮೇಲೆ ಕರುಣೆಯಿಟ್ಟು ಕೂಡಲೆ ಹಿಂದು ಮುಸಲ್ಮಾನರ ಸಮಸ್ಯೆಯನ್ನು ತೀರ್ಮಾನಿಸಿ ಮುಸಲ್ಮಾನ್ ರಾಜ್ಯಗಳ ಸ್ವತಂತ್ರವು ಹಿಂದುಸ್ಥಾನದ ಸ್ವಾತಂತ್ರ್ಯದಲ್ಲಿ ಇದೆ. ಹಿಂದೂಸ್ಥಾನದ ಸ್ವಾತಂತ್ರ್ಯವು ಹಿಂದು ಮುಸಲ್ಮಾನರ ಒಗ್ಗಟ್ಟಿನಲ್ಲಿ ಇದೆ ಎಂಬದನ್ನು ತಾವು ಯಾರೂ ಮರೆಯ ಬಾರದು. ಮಹಾ ದೇವರು ತಮಗೆಲ್ಲರಿಗೂ ಒಳ್ಳೇ ಬುದ್ಧಿಯನ್ನು ದಯಪಾಲಿಸಿ, ಕೂಡಲೇ ಹಿಂದು ಮುಸ್ಲಿಂ ಒಗ್ಗಟ್ಟು ಮಾಡಿಸಬೇಕಾಗಿ ಅತ್ಯಂತ ವಿನಯದಿಂದ ಪ್ರಾರ್ಥಿಸುವ,

ಅಮ್ಮತ್ತಿ. ಅಬ್ದುಲ್ ಗಫೂರ್ ಖಾನ್.

---

೪೦ ವರ್ಷಗಳಿಂದ ಅನುಭವಸಿದ್ಧ ಪ್ರಖ್ಯಾತಿ ಹೊಂದಿದ

ಕರ್ಕಕಂಪನಿಯ

ಜ್ವರದ ಗುಳಿಗೆಗಳು.

ಚಳಿಜ್ವರ, ಚಾತುರ್ಥಿ ಜ್ವರ, ದಿನಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮಬಾಣದಂತೆ ಇವೆ. ಬಾಟ್ಲಿಗೆ ರೂ. ೧. ಟ. ಖ. ೭ ಆಣೆ ಜಾಸ್ತಿ. ತರಿಸಿಕೊಳ್ಳಿ.

(52-4)

ಗಣೇಶ ರಾಮಚಂದ್ರ ಕರ್ಕ,
ಮತ್ತು ಕಂಪನಿ,
ಗಿರಗಾಂವ, ಮುಂಬಯಿ.

ಪತ್ರವ್ಯವಹಾರ.

[ಬಾತ್ಮಿದಾರರು ಬರೆವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಕೊಡಗು ಕರ್ನಾಟಕಕ್ಕೆ.

ಬಂಧುಗಳೇ,

ಈ ನಮ್ಮ ಕುಲವತ್ತಾದ ಪುಟ್ಟ ದೇಶವನ್ನು ಮೈಸೂರಿನೊಂದಿಗೆ ಸೇರಿಸಬೇಕೋ? ಮದ್ರಾಸಿನೊಂದಿಗೆ ಸೇರಿಸಬೇಕೋ? ಅಥವ ಕರ್ನಾಟಕದೊಂದಿಗೆ ಸೇರಿಸಬೇಕೋ? ಎಂಬುದೊಂದು ವಿಷಯವನ್ನು ಎಲ್ಲರೂ ಬಹಳವಾಗಿ ಯೋಚಿಸಲೂ, ಚರ್ಚಿಸಲೂ ತೊಡಗಿದ್ದಾರೆ.

ಈ ವಿಷಯದಲ್ಲಿ ನಾವು ಚರ್ಚಿಸತಕ್ಕ ಅಗತ್ಯವೇನಿದೆ? ಮೊದಲಿನ ಕಾಲದಲ್ಲಿ ಇಂಗ್ಲಿಷರ ಪದವಿ, ನಡವಳಿಕೆಯನ್ನು ನೋಡಿ ತಮ್ಮ ದೇಶವನ್ನು ಕರೆದುಕೊಟ್ಟಂತೆ ಈ ಸಾರಿಯೂ, ಮೈಸೂರು ಅಥವ ಮದ್ರಾಸ್ ಸರಕಾರದ ಕೈಗೆ ಕೊಡಬೇಕೆಂಬ ಅಭಿಪ್ರಾಯ ಅನೇಕ ಜನರಲ್ಲಿ ಹುಟ್ಟಿದೆ. ಆಗಿನ ಕಾಲದಲ್ಲಾದರೋ ಸಂದೇಹ ತಿಳುಗದ ಜನರಾಗಿದ್ದರು. ಈಗೇನಾದರೂ ಹಾಗಿದೆಯೇ? ಇಲ್ಲ.

ಶ್ರೀಮತಿ ಸಾಕಮ್ಮನವರು 'ಹಿಂದು' ಪತ್ರಿಕೆಯಲ್ಲಿ ಕೊಟ್ಟ ಲೇಖನದ ಪ್ರಕಾರ ಕೊಡಗನ್ನು ಮೈಸೂರಿಗೆ ಸೇರಿಸುವುದರಿಂದ ಕೊಡಗಿಗೆ ಬಹಳ ಅನುಕೂಲತೆಗಳು ಒದಗುತ್ತವೆ, ಕಾಲೇಜುಗಳೂ, ಆಸ್ಪತ್ರೆಗಳೂ, ರೈಲು ರಸ್ತೆಗಳು ನಮಗೆ ಅನುಕೂಲವಾಗಿ ಒದಗುತ್ತವೆ ಎಂಬದಾಗಿ ಮೈಸೂರು ಸೀಮೆಯ ಪಟ್ಟಣಗಳನ್ನೂ, ಅಲ್ಲಿಯ ಇಲೆಕ್ಟ್ರಿಕ್ ಸಿಟಿಯ ವ್ಯವಸ್ಥೆಯನ್ನೂ, ಕಾರು ಹಾಕಿದ ರಸ್ತೆಗಳನ್ನೂ ನೋಡಿ ಮರುಳಾಗಬೇಡಿ. ಆ ಸೀಮೆಯ ಹಳ್ಳಿಗಳಲ್ಲಿ ತಿರುಗಿ, ಆ ಜನರಲ್ಲಿ ಜೀವನೋಪಾಯವನ್ನು ಕಳೆಯಲಿಕ್ಕಿರುವ ತೊಂದರೆಗಳನ್ನೂ, ಕಾಲಕ್ಕೆ ಸರಿಯಾಗಿ ಊಟಕ್ಕೆ ಇಲ್ಲದಿರುವ ಜನ ಸಂಖ್ಯೆಯನ್ನೂ ನೋಡಿರಿ. ಕೊಡಗಿನಲ್ಲಿ ಊಟಕ್ಕಿಲ್ಲದೆ ಇರುವಂತ ಜನರ ಸಂಖ್ಯೆಯನ್ನೂ, ಮೈಸೂರು ಸೀಮೆ ಅಥವ ಇತರ ಸೀಮೆಯಲ್ಲಿ ಊಟಕ್ಕಿಲ್ಲದೆ ಇರುವಂಥವರ ಸಂಖ್ಯೆಯನ್ನೂ ಹೋಲಿಸಿ, ಕೊಡಗಿನಲ್ಲಿ ಶೇಕಡ ಊಟಕ್ಕಿಲ್ಲದವರು ಎಷ್ಟಿದ್ದಾರೆ, ಇತರ ಸ್ಥಳಗಳಲ್ಲಿ ಎಷ್ಟಿದ್ದಾರೆ ಎಂಬುದನ್ನು ಮನಸಿಗೆ ತನ್ನಿರಿ. ಈ ವಿಷಯದ ಬಗ್ಗೆ ಹೆಚ್ಚು ವಿವರಿಸಬೇಕಾದದ್ದು ಅವಶ್ಯವಿಲ್ಲ. ಕೊಡಗಿನ ಜನರಿಗೆ ಉದ್ಯೋಗವಿಲ್ಲದೆ ಮೈಸೂರು ಅಥವ ಇತರ ದೇಶಗಳಿಗೆ ಹೊಟ್ಟೆಗೆ ಹೋಗುತ್ತಾರೋ? ಇತರ ದೇಶದವರು ನಮ್ಮಲ್ಲಿಗೆ ಬರುತ್ತಾರೋ? ಎಂಬುದನ್ನು ನೋಡಿರಿ. ಕೊಡಗಿನಿಂದ ಎಷ್ಟೋ ವಿದ್ಯಾವಂತರು ಇತರ ದೇಶಗಳಿಗೆ ಉದ್ಯೋಗಕ್ಕೆ ಹೋಗಿರಬಹುದು, ಆದರೆ ಬೇರೆ ಪ್ರಾಂತ್ಯಗಳಂತೆ ಉಪವಾಸ ಬಿದ್ದು ಹೋದವರಲ್ಲ ಎಂಬುದು ಖಾತ್ರಿ.

ಕಾವೇರಿ ಮಾತೆಯ ದಯದಿಂದ ನಮ್ಮ ದೇಶದಲ್ಲಿ ಅಂಗಹೀನರು ಜನಿಸುವುದೇ ಅಪರೂಪವಾಗಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ಇಂದ ಮೇಲೆ ಹಿಂದೂಸ್ಥಾನದಲ್ಲಿ 3—4 ಕೋಟಿ ಅಂಗಹೀನರೆಲ್ಲ ಎಲ್ಲಿ ಜನಿಸಿದರು? ಇತರ ದೇಶಗಳಲ್ಲಿ; ಹಾಗೆಂದ ಮೇಲೆ ಕೊಡಗಿಗೆ ಬರುವ ಅಂಗಹೀನ ಭಿಕ್ಷುಕರೆಲ್ಲರೂ ಕೊಡಗಿಗೆ ಪರದೇಶಿಗಳು ಎಂಬುದು ಸ್ಪಷ್ಟವು.

ಕಾಲೇಜು ಮತ್ತು ಆಸ್ಪತ್ರೆ—ಕೊಡಗಿನಲ್ಲಿ ಕಾಲೇಜು ತೆರೆಯುವುದರ ಬಗ್ಗೆ ಸಾಕಷ್ಟು ತೊಂದರೆಯನ್ನು ಕಾನ್ಫರೆನ್ಸಿನವರು ತೆಗೆದುಕೊಂಡರೆ ಸರಕಾರವು ಮಾಡಿಯೇ ಮಾಡುವುದು. ಅದರಂತೆಯೇ ಆಸ್ಪತ್ರೆಗಳೂ ಸಹ. ಕೊಡಗಿನಲ್ಲಿ ಕಾಲೇಜು ತೆರೆದರೆ, ಸಂದೇಹದ ಸ್ಥಿತಿಗತಿಗಳೂ, ನಾಗರಿಕತೆಯೂ ನಮ್ಮ ವಿದ್ಯಾರ್ಥಿಗಳಿಗೆ ಬರುವುದು ಸ್ವಲ್ಪ ಅಸಾಧ್ಯವಾಗುತ್ತದೆ ಎಂಬದಾಗಿ ಕೆಲವರ ಮತಿದೆ. ಆದುದರಿಂದ ಹೆಚ್ಚಿನ ವಿದ್ಯೆಗೆ ವಿದ್ಯಾರ್ಥಿಗಳನ್ನು ಹೊರಗೆ ಕಳುಹಿಸಲೇಬೇಕು. ಕೊಡಗಿನಲ್ಲಿ ಕಾಲೇಜು ಆದರೆ ಇದು ಬಾಕಿಯಾಗುತ್ತದೆ ಎಂಬದಾಗಿ ಕೊಡಗಿನಿಂದ ಹೊರಗೆ ಹೋಗುವ ಐಶ್ವರ್ಯವಂತರ ಮಕ್ಕಳು ಹೋಗಿಯೇ ಹೋಗುತ್ತಾರೆ. ನಮ್ಮಂತ ಬಡ ರೈತರ ಮಕ್ಕಳಿಗೆ ಹೆಚ್ಚಿನ ವಿದ್ಯೆಯನ್ನು ಕೊಡಲಿಕ್ಕಾಗಿ ಕೊಡಗಿನಲ್ಲಿ ಕಾಲೇಜು ಬೇಕಾಗಿದೆ. ರೈಲುಗಾಡಿ—ಪ್ಪ, ಪ್ಪ, ಎಷ್ಟೋ ಬಡ ರೈತರ ಮನೆಮಾರುಗಳನ್ನೂ, ಹೊಲಗದ್ದೆಗಳನ್ನೂ, ತೋಟಗಳನ್ನೂ ನಷ್ಟಪಡಿಸಿಕೊಂಡು ಕೊಡಗಿಗೆ ರೈಲು ದಾರಿ ಬೇಕಾಗಿ ಬಂದ ಅಗತ್ಯವೇನಿದೆ? ಸದ್ಯಕ್ಕೆ ಓಡಾಡುತ್ತಿರುವ ಮೋಟಾರು ಬಸ್ಸುಗಳಿಗೆ ಪ್ರಯಾಣಿಕರಿಲ್ಲದೆ ಬಾಯಿಬಿಡುತ್ತಿದ್ದಾರೆ. ಸದ್ಯದ ಚಾರ್ಜು ಏನು ವಿಶೇಷ ಹೆಚ್ಚಿನದಲ್ಲ; ದಿನ ಹೋದ ಹಾಗೆ ಇನ್ನೂ ಕಡಿಮೆಯಾಗುತ್ತಾ ಹೋಗುವುದು. 163 ಸಾವಿರ ಜನಗಳಿಗೆ ಬೇಕಾದ ವ್ಯಾಪಾರವನ್ನು ನಡೆಸಲಿಕ್ಕೆ ಎಷ್ಟೋ ಮೋಟಾರ್ ಲಾರಿಗಳೂ, ಎತ್ತಿನ ಗಾಡಿಗಳೂ ಇವೆ. ರೈಲುಗಾಡಿ ಬಂದರೆ ಇದನ್ನಿಟ್ಟ ಬಡವರ ಹೊಟ್ಟೆಗೆ ಕಲ್ಲಾಗಿ ಸರಕಾರಕ್ಕೆ ಸಮ್ಮಂಧಪಟ್ಟ ಕಂಪನಿಗಳು ಲಾಭ ಪಡೆಯುವವು. ಆದುದರಿಂದ ರೈಲು ಕೊಡಗಿಗೆ ಅಗತ್ಯವಿಲ್ಲ.

ಇತ್ಯಾದ್ಯನೇಕ ಕಾರ್ಯಕ್ಕಾಗಿ ಕೊಡಗನ್ನು ಮೈಸೂರು ಅಥವಾ ಮದ್ರಾಸಿಗೆ ಸೇರಿಸಬೇಕಾದ ಅಗತ್ಯ ಕಾಣಿಸುವುದಿಲ್ಲ. ಬ್ರಿಟಿಷ್ ಜನರು ನಮ್ಮ ಹಿಂದೂದೇಶವನ್ನು ಸ್ವಮತ ಮಾಡಿದಂತೆ, ಅವರು ಪ್ರಾಂತ್ಯಗಳಾಗಿ ವಿಂಗಡಿಸಿದ್ದಾರೆ. ಅವರ ವಿಂಗಡಿಸಿದುದಲ್ಲಿ ಕನ್ನಡ ಭಾಷೆಯಾಡುವ ಅರ್ಧ ಪ್ರಾಂತ್ಯವು ಮತ್ತೊಂದು ಭಾಷೆಯಾಡುವ ಪ್ರಾಂತ್ಯದ ಕೆಲವು ಭಾಗವು ಮಿಶ್ರವಾಗಿದೆ. ಇದೊಂದೇ ಕಡೆಯಲ್ಲಿಯಲ್ಲ, ಇಡೀ ಹಿಂದುಸ್ಥಾನವನ್ನೇ ಈ ರೀತಿಯಾಗಿ ವಿಂಗಡಿಸಿದ್ದಾರೆ.

ಇದು ಸರಿಯಲ್ಲ ಎಂಬ ಕಾರಣದಿಂದ ಹಿಂದೂಸ್ಥಾನದ ಏಳಿಗೆಗಾಗಿ ಹೋರಾಡುತ್ತಿರುವ ನಮ್ಮ ರಾಷ್ಟ್ರೀಯ ಸಭೆಯವರು (Congress) ಭಾಷಾ ಸುವಾರು ವಿಂಗಡಿಸಿದ್ದಾರೆ. ಅದರಲ್ಲಿ ನಮ್ಮ ದೇಶವು ಕರ್ನಾಟಕಕ್ಕೆ ಸೇರುತ್ತದೆ. ಆದರಿಂದ ಕರ್ನಾಟಕವು ಕೊಡಗನ್ನೊಳಗೊಂಡಿತು ಎಂದಮೇಲೆ ಕೊಡಗು ಕರ್ನಾಟಕದಲ್ಲಿ ಬೇಕೆಂದು ನನ್ನ ಅಭಿಪ್ರಾಯ.

ಹಾಗಾದರೆ ಮತ್ತೊಂದು ಪ್ರಶ್ನೆ ಹುಟ್ಟುವುದು. ಮೈಸೂರು ಕರ್ನಾಟಕವಲ್ಲವೇ ಎಂಬುದು. ಮೈಸೂರು ಕರ್ನಾಟಕ ಹೌದು, ಆದರೆ ಈಗ ಕೊಡಗನ್ನು ಮೈಸೂರಿಗೆ ಸೇರಿಸಿದರೆ ಹಿಂದೂಸ್ಥಾನವು ಸ್ವತಂತ್ರವಾದಾಗ ಕೊಡಗು ಮೈಸೂರು ಸಂಸ್ಥಾನ ರಾಜನ ಕೈಯಲ್ಲಿ ಉಳಿಯಬೇಕಾಗುವುದು.

ಆದುದರಿಂದ ಬಾಂಧವರೇ, ಕೊಡಗನ್ನು ಕರ್ನಾಟಕಕ್ಕೆ ಸೇರಿಸಲು ತಮ್ಮ ಮತವನ್ನು ಕೊಡಿ.

ಅ. ನೊ. ತಮ್ಮಯ್ಯ.

ಕೊಡಗು ಮದ್ರಾಸಿಗೆ ಸೇರಬಾರದೋ?

ಅಯ್ಯಾ,

ಮಿ. ಯಲ್. ನ್ಯೂಕಮರು ಕೊಡಗು ಮದ್ರಾಸಿಗೆ ಸೇರಬಾರದೆಂಬುದಕ್ಕೆ ಕೆಲವು ಕಾರಣಗಳನ್ನು ಕೊಟ್ಟು "ಮದ್ರಾಸ್ ಮೆಯಿಲ್" ಪತ್ರಿಕೆಗೆ ಬರೆದ ಪತ್ರವನ್ನು ಓದಿ ನೋಡಿದೆನು. ಅವರು ಬರೆದ ಕಾರಣಗಳನ್ನು ವಿಮರ್ಶಿಸಿ ನೋಡಬೇಕಾಗಿದೆ. ಅವರ ಪತ್ರದ ತರ್ಜುಮೆಯನ್ನು ಸಹ ಇದರೊಂದಿಗೆ ಕಳುಹಿಸ್ತೇನೆ. (ಅದನ್ನು 3 ನೇ ಪುಟದಲ್ಲಿ ಪ್ರಕಟಿಸಲಾಗಿದೆ.)

ಕೊಡಗು ಮದ್ರಾಸಿಗೆ ಸೇರಬಾರದೆಂತ ದೇಶದ ಜನರಲ್ಲಿ ಶೇಕಡ 90 ರಷ್ಟು ವಿರೋಧಿಸುತ್ತಾರೆನ್ನುತ್ತಾರೆ. ಇದು ಯಾವ ಆಧಾರದ ಮೇಲೆ ಹೇಳಿದರೆಂದು ತಿಳಿಯದು. ದೇಶದ ಜನರಲ್ಲಿ ಬಹುಮತದ ಬೆಂಬಲವಿರುವ ಜಮಾನ್‌ದಾರರ ಸಂಘವು ದೇಶಕ್ಕೆ ಪ್ರಜಾಪ್ರಭುತ್ವ ಸರಕಾರ ಕೊಡಲು ಸಾಧ್ಯವಿಲ್ಲದಿದ್ದರೆ ಮದ್ರಾಸಿಗೆ ಸೇರಿಸಬೇಕೆಂತ ತೀರ್ಮಾನಿಸಿರುತ್ತಾರೆ. ಪ್ರಜಾಪ್ರಭುತ್ವ ಸರಕಾರ ಪದ್ಧತಿಯನ್ನು ನಡಿಸಲು ಸಾಧ್ಯವೇ ಇಲ್ಲವೆಂತ ಸ್ಟೆಮನ್ ಕಮಿಷನ್ ಹೇಳಿದ ಮೇಲೂ ಸಹ ಜಮಾನ್‌ದಾರರ ಸಂಘವು ಮದ್ರಾಸಿಗೆ ಸೇರಿಯಾದರೂ ಪ್ರಜಾಪ್ರಭುತ್ವ ಸರಕಾರವನ್ನು ಪಡೆಯಬೇಕೆಂತ ತೀರ್ಮಾನಿಸಿರುತ್ತಾರೆ. ಕೋಮುವಾರು ಸಭೆಗಳಾದ ಕೊಡಗೇತರರ ಸಂಘ, ಗೌಡ ಸಂಘ, ಲಿಂಗಾಯತರ ಸಂಘ ಸಹ ಏನೂ ಶರತ್ತಿಲ್ಲದೆ ಮದ್ರಾಸಿಗೆ ಸೇರಬೇಕೆಂತ ಕೇಳಿದ್ದಾರೆ. ಮುಸಲ್ಮಾನ ಸಹೋದರರು ಜಮಾನ್‌ದಾರರ ಸಂಘದ ಕೋರಿಕೆಯನ್ನೇ ಅನುಸರಿಸಿರುತ್ತಾರೆ. ಹೀಗಿರುತ್ತಾ ಮಿ. ನ್ಯೂಕಮರು ದೇಶದ ಜನರಲ್ಲಿ ಶೇಕಡ 90 ರಷ್ಟು ಮದ್ರಾಸಿಗೆ ಸೇರಲು ವಿರೋಧವಿದ್ದಾರೆಂತ ಹೇಳಿದ್ದು ಬಹಳ ಸಾಹಸ ಕಾರ್ಯವೇ ಸರಿ.

ಕಾಂಗ್ರೆಸಿಗೆ ಸೇರಿದವರು ಬೇರೆ ಪ್ರಾಂತ್ಯಗಳಲ್ಲಿ ರಕ್ತಪಾತವನ್ನೂ ಕೋಮುವಾರು ಜಗಳಗಳನ್ನೂ ಉಂಟುಮಾಡಿದ್ದಾರೆಂಬುದು ಸರಕಾರದ ಅಭಿಪ್ರಾಯವಿರಬಹುದು. ದೇಶದ ಜನರಲ್ಲಿ ಯಾರೂ ಈ ಹೇಳಿಕೆಯನ್ನು ಒಪ್ಪುವುದಿಲ್ಲ. ಒಗ್ಗಟ್ಟಿಗೂ, ಶಾಂತಿಗೂ ಕಾಂಗ್ರೆಸಿನವರು ಪ್ರಯತ್ನಿಸುವಷ್ಟು ಬೇರೆ ಯಾರೂ ಪ್ರಯತ್ನಿಸುತ್ತಿಲ್ಲವೆಂಬುದು ವಾಚಕರಿಗೆ ತಿಳಿದೇ ಇದೆ. ಹಿಂದೂ ಮುಸಲ್ಮಾನರೊಳಗೆ ಆಗುತ್ತಿರುವ ಕಲಹಗಳನ್ನು ನೋಡಿ ಸಹಿಸಲಾರದೆ ಇವರೊಳಗೆ ಸಹೋದರ ಭಾವವೂ, ಶಾಂತಿಯೂ ಹಬ್ಬುವಂತೆ ಮಾಡಬೇಕೆಂತ ಇಪ್ಪತ್ತೊಂದು ದಿವಸ ಉಪವಾಸವಿದ್ದು ದೇವರನ್ನು ಬೇಡಿಕೊಂಡ ಮಹಾತ್ಮ ಗಾಂಧಿಯವರೇ ಕಾಂಗ್ರೆಸಿನ ಚಾಲಕರಾಗಿರುವಾಗ ಕಾಂಗ್ರೆಸಿನ ಮೇಲೆ ಮತದ್ವೇಷವನ್ನು ಹೊರಿಸುವ ಆರೋಪ ಮಾಡಿದ್ದು ತಪ್ಪೇ ಸರಿ. ಹೇಗೂ ಕಾಂಗ್ರೆಸ್ ಅನುಯಾಯಿಗಳು ಸ್ವರಾಜ್ಯ ಪಡೆಯುವುದಕ್ಕಾಗಿ ಹೋರಾಡುತ್ತಿದ್ದಾರೆಯೇ ಹೊರತು, ಕೊಡಗನ್ನು ಮದ್ರಾಸಿಗೆ ಸೇರಿಸುವ ವಿಷಯದಲ್ಲಿ ಪ್ರತ್ಯೇಕ ಹೋರಾಡುವುದಿಲ್ಲ.

ದೇಶಕ್ಕೆ ಅನುಕೂಲವಾಗುವ ವಿಷಯವಾದರೆ ರಾಯರುಗಳು ಕೇಳುತ್ತಾರೆಂಬ ಕಾರಣದಿಂದ ತಿರಸ್ಕರಿಸಬೇಕಾದದ್ದಿಲ್ಲ. ಅಲ್ಲದೆ ರಾಯರುಗಳು ಮಾತ್ರ ಈ ಹೋರಾಟ ನಡಿಸುವುದೆಂಬುದು ನಿಜವಲ್ಲ. ಮದ್ರಾಸಿಗೆ ಸೇರುವ ಚಳವಳಿಯು ದೇಶಕ್ಕೆ ತಿಳಿದಂತೆ 1917 ರಲ್ಲಿ ಮ. ರಾ. ಶ್ರೀ. ಪನೆಯಪ್ಪಂಡ ಮ. ತಿಮ್ಮಯ್ಯನವರೇ ಮುಂದಾಳಾಗಿ ನಡೆಸಿದ್ದು. ಇವರು ರಾಯರಲ್ಲ.

ಕೊಡಗು ಇಂಡಿಯಾ ಸರಕಾರದ ಆಡಳಿತದಲ್ಲಿದ್ದಾಗ ಕೊಡಗಿನ ಉತ್ಪತ್ತಿಯಲ್ಲಿ ಲಕ್ಷಾಂತರ ರೂಪಾಯಿ ಉಳಿತಾಯ ಆಗಿದ್ದಿದ್ದು ನಿಜ. ಆದರೆ ಅಂಥಾ ಹಣವು ಕೊಡಗಿನ ಸರಕಾರದ ಲೆಕ್ಕಕ್ಕೆ ಸೇರಿಸಲ್ಪಟ್ಟಿದ್ದಿಲ್ಲ. ಒಟ್ಟು ಇಂಡಿಯಾ ಸರಕಾರದ ಖರ್ಚಿಗೆ ಉಪಯೋಗವಾಗಿದೆ. ಅಂಥಾ ಉಳಿತಾಯವನ್ನು ಇಂಡಿಯಾ ಸರಕಾರವು ಕೊಡಲು ತಿರಸ್ಕರಿಸಿರುವಾಗ ವಿಷಯವನ್ನು ಪುನಃ ಎತ್ತಿ ಪ್ರಯೋಜನವಿಲ್ಲ. ಆ ಹಣವನ್ನು ವಾಪಸು ಪಡೆಯಲು ಕೊಡಗಿನ ಸರಕಾರವು ಇಂಡಿಯಾ ಸರಕಾರದ ಮೇಲೆ ಚಳವಳಿ ನಡಿಸಲು ಸಾಧ್ಯವಿದೆಯೇ? ಅಥವಾ ವಿಷೇಶಗೂ ಇಂಡಿಯಾ ಸರಕಾರವು ಹಣ ಕೊಡಬೇಕಿತ್ತು. ಕೊಡದೆ ಇರುವಾಗ ಮಾಡತಕ್ಕದ್ದೇನು? ಒಂದೆರಡು ಲಕ್ಷ ಸಿಕ್ಕಿದರೂ ಕೊಡಗು ಸರಕಾರದ ಆರ್ಥಿಕ ಪ್ರಶ್ನೆಗೆ ಸಹಾಯವಾಗಲಾರದು. ಮರಕತ್ತು ಗಂಧಕತ್ತು ಕ್ರಯವನ್ನು ಹೆಚ್ಚಿಸಲು ಕೊಡಗಿನವರಿಂದ ಸಾಧ್ಯವಿದೆಯೇ? ಅವಕ್ಕೆ ಕ್ರಯ ಬಂದೀತೆಂತ ಹೇಗೆ ಭರವಸೆ? ಇದರ ಸಂಗಡ ಅಬ್ಕಾರಿ ಇಲಾಖೆಯ ಉತ್ಪತ್ತಿಯು ಕಡಿಮೆಯಾಗಲೇಬೇಕೆಂಬುದನ್ನು ಮಿ. ನ್ಯೂಕಮರು ಮರೆತಿದ್ದಾರೆ.

ಮದ್ರಾಸಿಗೆ ಸೇರಿದ ಒಡನೆ ಬ್ರಿಟಿಷ್ ಗವರ್ನಮೆಂಟಿನವರು ಕೊಟ್ಟ ಭರವಸೆಗಳೆಲ್ಲಾ ನೀರು ಪಾಲಾಗುವವು ಎಂತ ಮಿ. ನ್ಯೂಕಮರು ಹೇಳಲು ಆಧಾರವೇನೆಂತ ತಿಳಿಸಲಿಲ್ಲ. ಮದ್ರಾಸ್ ಪ್ರಾಂತ್ಯವು ಬ್ರಿಟಿಷ್ ಸರಕಾರವಲ್ಲವೇ? ಕೋವಿ ಕತ್ತಿ ಹಿಡಿಯಲು ಇರುವ ರಿಯಾಯ್ತಿಯನ್ನು ಕೊಡಗು ಸರಕಾರವು ಮಾಡಿಕೊಂಡದ್ದಲ್ಲ. ಇಂಡಿಯಾ ಸರಕಾರವು ಮಾಡಿದ ಶಾಸನದಲ್ಲಿ ನಮೂದಿಸಲ್ಪಟ್ಟ ರಿಯಾಯ್ತಿಯಾಗಿದೆ. ಇಂಡಿಯಾ ಸರಕಾರವು ಮಂಜೂರು ಮಾಡಿದ ಶಾಸನವನ್ನು ಪ್ರಾಂತೀಯ ಸರಕಾರಗಳು ಗೌರವಿಸಲೇಬೇಕು—ಅಲ್ಲದೆ ಬ್ರಿಟಿಷ್ ಸರಕಾರವು ಕೊಡುವುದಾಗಿ ಹೇಳುವ ರಾಜಕೀಯ ಸುಧಾರಣೆಗಳು ನಿಜವಾದ ಸುಧಾರಣೆಗಳಾದರೆ ಕೋವಿ ಹಿಡಿಯುವ ಹಕ್ಕು ಬ್ರಿಟನಿನಲ್ಲಿ ಬ್ರಿಟಿಷರಿಗೆ ಇರುವಂತೆ ಹಿಂದೂಸ್ಥಾನದಲ್ಲಿ ಹಿಂದೀಯರಿಗೆ ಇದ್ದೇ ಇರಬೇಕು. ಆಗ ಈ ರಿಯಾಯ್ತಿಯು ಕೊಡಗರಿಗೆ ಮಾತ್ರ ಉಳಿಯುವುದಲ್ಲ.

ಕೊಡಗು ಮದ್ರಾಸಿಗೆ ಸೇರಿದರೆ ಗೋಹತ್ಯೆ ಮಾಡಬಾರದೆಂತ ಇದ್ದ ರಿವಾಜುಕಟ್ಟಳೆಯು ಹೊರಟುಹೋಗಲು ಕಾರಣವೇನೋ ತಿಳಿಯಲಿಲ್ಲ. ಮದ್ರಾಸಿನ ಸರ್ಕಾರವು ದೇಶೀಯರಿಂದಲೇ ನಡಿಸಲ್ಪಡುವದಾಗಿದೆ. ಮದ್ರಾಸಿನ ಬಹು ಸಂಖ್ಯಾತರಾದ ಹಿಂದೂಗಳ ಪ್ರತಿನಿಧಿಗಳು ಕೊಡಗಿನಲ್ಲೂ ಗೋಹತ್ಯೆ ಮಾಡದಿರುವುದು ತಪ್ಪು, ಮಾಡಲೇ ಬೇಕು ಎಂತ ಹೇಳಿಯಾರೇ? ಇಂಥಾ ವಿಷಯದಲ್ಲಿ ದೇಶದ ಜನರ ಮನಸಿಗೆ ನೋವಾಗುವಂತೆ ಮದ್ರಾಸ್ ಸರ್ಕಾರವು ಎಂದೂ ವರ್ತಿಸಲಿಕ್ಕಿಲ್ಲ.

ಜಮ್ಮ ಹಿಡುವಳಿದಾರರಿಗೆ ಇರುವ ಹಕ್ಕುಗಳನ್ನು ಮದ್ರಾಸ್ ಸರಕಾರವು ತೆಗೆದು ಹಾಕಲು ಕಾರಣವಿಲ್ಲ. ಮದ್ರಾಸ್ ಅಧಿಪತ್ಯದಲ್ಲಿ ಅನೇಕ ತರದ ಭೂಮಿ ಹಿಡುವಳಿಗಳಿವೆ. ಮಲಬಾರಿನ ಜಮ್ಮುಗಳೂ, ತಮಿಳು, ಆಂಧ್ರ ಪ್ರಾಂತ್ಯಗಳಲ್ಲಿರುವ ಜಮೀನುದಾರರುಗಳೂ ಇದಕ್ಕೆ ಸಾಕ್ಷಿ. ಇವರ ಹಕ್ಕುಗಳನ್ನು ಮದ್ರಾಸ್ ಸರ್ಕಾರವು ಈ ವರೆಗೆ ಮನ್ನಿಸಿದೆ. ಇನ್ನು ಮೇಲೆ ಮನ್ನಿಸುವುದಿಲ್ಲವೆಂತ ಹೇಳಲು ಏನೂ ಕಾರಣವಿಲ್ಲ.

ಮದ್ರಾಸ್ ಅಧಿಪತ್ಯದ ಪ್ರತಿಯೊಂದು ಪಟ್ಟಣದಲ್ಲೂ, ಗ್ರಾಮದಲ್ಲೂ ಆಸ್ಪತ್ರೆಗಳಿಲ್ಲ. ಅದೇ ಮದ್ರಾಸ್ ಪಟ್ಟಣದಲ್ಲಿ ಮಾತ್ರ ಇರುವದಾಗಿದೆ. ಮದ್ರಾಸ್ ಟ್ರಾಮ್ ಗಾಡಿಗಳು ಕೊಡಗನ್ನು ಮದ್ರಾಸಿಗೆ ಸೇರಿಸಿದ ಕೂಡಲೇ ಕೊಡಗಿನ ರಸ್ತೆಗಳಲ್ಲಿ ಓಡ್ಯಾಡಲು ಪ್ರಾರಂಭಿಸುತ್ತವೆಯೆಂತ ನಂಬುವ ಹುಚ್ಚರು ಕೊಡಗಿನಲ್ಲಿ ಯಾರೂ ಇಲ್ಲ. ಮುನ್ಸಿಪಾಲಿಟಿಗಳಲ್ಲಿ ತೋಟಿಗಳ ಕಸಬು ಮದ್ರಾಸಿಗೆ ಕೊಡಗು ಸೇರಿದ್ದೇನೇ ಕೊಡಗಿನಲ್ಲಿ ಇವೆ. ಇವನ್ನು ನವನಾಗರೀಕತೆಯ ಕುರುಹುಗಳಾಗಿ ಕೊಟ್ಟಿರಬಹುದು. ಮದ್ರಾಸಿಗೆ ಸೇರಿಸಿದರೆ ನವನಾಗರೀಕತೆ ಬರುತ್ತದೆಯೆಂತ ಯಾರೂ ಹೇಳುವುದಲ್ಲ. ಪ್ರಜಾ ಜನರಿಂದ ನಡಿಸುವ ಸರ್ಕಾರ ಬೇಕೆಂತ ಆಶಿಸುವುದು ಪ್ರತಿಯೊಬ್ಬ ಮನುಷ್ಯನ ಕರ್ತವ್ಯವಾಗಿದೆಯೆಂತ ಬ್ರಿಟಿಷರು ನಂಬಿರುವಾಗ ಹಿಂದೀಯರು ನಂಬಿದರೆ ಯಾಕೆ ತಪ್ಪಾಗಬೇಕು.

ಕೊಡಗಿನ ರಸ್ತೆಗಳು ಮದ್ರಾಸ್ ರಸ್ತೆಗಳಿಗಿಂತ ಉತ್ತಮ ಸ್ಥಿತಿಯಲ್ಲಿದೆಯೆಂತ ಕೆಲವು ವರ್ಷಗಳ ಕೆಳಗೆ ಹೇಳಬಹುದಾಗಿದ್ದರೂ ಈಗ ಹೇಳಲು ಸಾಧ್ಯವಿಲ್ಲವೆಂತ ಮಲಬಾರಿನ ದಕ್ಷಿಣ ಕನ್ನಡ ಜಿಲ್ಲೆಯ ರಸ್ತೆಗಳನ್ನು ಈಗ ನೋಡಿದವರು ಒಪ್ಪದಿರಲಾರರು. ಮದ್ರಾಸ್ ಪ್ರಾಂತ್ಯಗಳಲ್ಲಿ ಗಾಡಿಗಳ, ಮೋಟಾರುಗಳ ಸಂಚಾರ ತುಂಬಾ ಇದ್ದರೂ ಸಹ ರಸ್ತೆಗಳು ಚೆನ್ನಾಗಿಯೇ ಇವೆ.

ವಿದ್ಯಾಭ್ಯಾಸವು ಕೊಡಗಿನಲ್ಲಿ ತುಂಬಾ ಅಭಿವೃದ್ಧಿಯಾಗಿದೆಯೆಂತ ಇನ್ನೊಂದು ಕಾರಣ. ಕೊಡಗಿನ ಒಟ್ಟು ಜನಸಂಖ್ಯೆಯ ಮಾನ ದಾನದಲ್ಲಿಯೂ ಅಕ್ಷರ ತಿಳಿದದ್ದಾಗಿದೆಯೆಂತ ಹೋಲಿಸಿದರೆ ಕೊಡಗು ಮದ್ರಾಸಿಗಿಂತ ಬಹಳ ಮುಂದಿಲ್ಲ. ಕೊಡವ ಜನಾಂಗದವರು ಸ್ವಾಭಾವಿಕವಾಗಿ ವಿದ್ಯಾಪ್ರಿಯರಾದ್ದರಿಂದಲೂ, ಬೇರೆ ಕಾರಣಗಳಿಂದಲೂ "ಕೊಡವ" ಜನಾಂಗದಲ್ಲಿ ವಿದ್ಯಾ ಕಲಿತವರು ಹೆಚ್ಚು. ಮದ್ರಾಸ್ ಸ್ವರಾಜ್ಯ ಆಡಳಿತದಲ್ಲಿ ಕೊಡಗಿಗೆ ಇರುವ ವಿದ್ಯಾ ಅನುಕೂಲತೆಗಳನ್ನು ಖಂಡಿತವಾಗಿಯೂ ತೆಗೆದುಹಾಕುವುದಿಲ್ಲ.

ಕೊಡಗಿನ ಪ್ರಖ್ಯಾತ ಪುರುಷರು ಬೇರೆ ಪ್ರಾಂತ್ಯಗಳಲ್ಲಿ ಕೆಲವು ಇಲಾಖೆಗಳಲ್ಲಿ ಖ್ಯಾತಿ ಪಡೆದಿದ್ದಾರೆನ್ನುತ್ತಾರೆ. ಇದು ಮದ್ರಾಸಿಗೆ ಸೇರಲು ವಿರೋಧ ಕಾರಣವಲ್ಲ. ಸಹಾಯಕವಾಗಿದೆ. ಯಾಕೆಂದರೆ—ಕೊಡಗು ಪ್ರತ್ಯೇಕವಾಗಿ ಇದ್ದಾಗಲೇ ಖ್ಯಾತಿ ಪಡೆಯುವ ಅರ್ಹತೆಯು ಕೊಡಗಿನವರಿಗೆ ಇರುವಾಗ ಮದ್ರಾಸಿನವರೊಂದಿಗೆ ಕಲೆತು ಜೀವನದ ಹೋರಾಟದಲ್ಲಿ ಕೊಡಗಿನವರು ತಮ್ಮ ಶಕ್ತಿಯನ್ನು ಹೆಚ್ಚಿಗೆ ಪ್ರದರ್ಶಿಸಲು ಅವಕಾಶವಿದೆ. ಅಲ್ಲದೆ ಪ್ರತ್ಯೇಕವಾಗಿರುವಾಗ ಮದ್ರಾಸಿನವರ ದಯೆಯಿಂದ ಅಲ್ಪ ಸ್ವಲ್ಪ ಜನರು ಮದ್ರಾಸಿನಲ್ಲಿ ಮೇಲಿನ ಪದವಿಗೆ ಬಂದಿರಬಹುದು. ಆದರೆ ಕೊಡಗು ಮದ್ರಾಸಿನ ಭಾಗವಾದನಂತರ ಕೊಡಗಿನವರಿಗೆ ಮದ್ರಾಸ್ ಗವರ್ನರ್ ಹೈಕೋರ್ಟ್ ಜಡ್ಜಿಗಳೂ ಸಹ ಆಗಬಹುದಲ್ಲವೇ? ಈಗ ಕೊಡಗಿನವರಿಗೆ ಕೊಡಗಿನಲ್ಲಿ ಇರುವ ಅತ್ಯುನ್ನತ ಪದವಿಯು ಯಾವುದು? ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರ ಪದವಿಯಲ್ಲವೇ? ಮದ್ರಾಸಿಗೆ ಸೇರಿದರೆ ತಕ್ಕ ಯುಕ್ತ ಕೊಡಗಿನ ಪುತ್ರರಿಗೆ ಹೆಚ್ಚಿನ ಪದವಿಯನ್ನು ಪಡೆಯಬಹುದಲ್ಲವೇ? ಅಲ್ಲದೆ ಕೊಡಗಿನಲ್ಲಿ ನೂರು ರೂಪಾಯಿಗಿಂತ ಹೆಚ್ಚಿನ ಸಂಬಳವಿರುವ ಉದ್ಯೋಗಗಳೆಷ್ಟು? ಅವುಗಳಲ್ಲಿರುವ ಅಧಿಕಾರಿಗಳು ಬಂದಾಪ

ವರ್ತಮಾನ ಸಂಗ್ರಹ.

ಒಳದೇಶ.

ಫ್ರೇಜರ್‌ಪೇಟೆಯ ಕಣಿವೆ ಪ್ರದೇಶದಲ್ಲಿ ಪ್ಲೇಗಿನಿಂದ ಇಲಿಗಳು ಸಾಯುತ್ತಿವೆಯೆಂದು ತಿಳಿಯಬರುತ್ತದೆ.

ಮಡಿಕೇರಿ ಕಾನ್ವೆಂಟು ಹೈಸ್ಕೂಲಿನ 6 ವಿದ್ಯಾರ್ಥಿನಿಯರಿಗೆ ಆಂಗರೆ ಕಜ್ಜಿಯು ಅಂಟಿದೆಯಾಗಿ ವರ್ತಮಾನ.

ಈ ತಾ. 14ರಲ್ಲಿ ಬೆಂಗಳೂರಿಗೆ ಹೋಗಿದ್ದ ಕಮಿಷನರವರು ಈ ತಾ. 19ರಲ್ಲಿ ಮಡಿಕೇರಿಗೆ ಹಿಂತಿರುಗಿ ಬಂದಿರುವರು.

ಬೊಂಬಾಯಿಯ ಕೊಡಗು ಸಂಘದವರು ಕೈಲ್ ಮುಹೂರ್ತ ಹಬ್ಬವನ್ನು ಸೆಪ್ಟೆಂಬರು ತಾ. 4 ರಲ್ಲಿ ಆಚರಿಸುವರಾಗಿ ತಿಳಿಯಬರುತ್ತದೆ.

ಮಳೆಯು ಕಡಿಮೆಯಾಗಿ ಬಿಸಿಲು ಕಾಯಲು ತೊಡಗಿರುವುದರಿಂದ ಈ ತಾ. 19ರಂದು ಇಂದಿನ ವರೆಗೆ ಮಡಿಕೇರಿಯಲ್ಲಿ 1.88 ಇಂಚು ಮಾತ್ರ ಮಳೆಯಾಗಿದೆ.

ಮೈಸೂರಿನ ಚೀಫ್ ಇಲೆಕ್ಟ್ರಿಕಲ್ ಇಂಜಿನೀಯರಾದ ಮಿ. ಕೋದಂಡ ಯಂ. ಕಾರ್ಯಪ್ಪನವರು ಮಿ. ಎ. ಆರ್. ಕಾಸಿಕರ್‌ರವರ ಬದಲು ಮೈಸೂರು ಲೆಜಿಸ್ಲೇಟಿವ್ ಕೌನ್ಸಿಲಿನ ಮೆಂಬರಾಗಿ ನೇಮಿಸಲ್ಪಟ್ಟಿರುವರು.

ಎಕ್ಸೈಸ್ ಸಬ್ ಇನ್ಸ್ಪೆಕ್ಟರುಗಳಾದ ಮಿ. ಕೋದಂಡ ನಾಣಯ್ಯನವರು ಪೊನ್ನಂಪೇಟೆಯಿಂದ ನಾಪೋಕ್ಲಿಗೂ, ಮಿ. ಪಟ್ಟಮಾಡ ಮಂದಪ್ಪನವರು ನಾಪೋಕ್ಲಿನಿಂದ ಪೊನ್ನಂಪೇಟೆಗೂ ವರ್ಗಾಯಿಸಲ್ಪಟ್ಟಿರುವರೆಂದು ತಿಳಿಯುತ್ತೇವೆ.

ಸತ್ಯಾಗ್ರಹ ಚಳವಳದಲ್ಲಿ ಭಾಗ ವಹಿಸಿದ್ದರಿಂದ ಆರಾರು ತಿಂಗಳು ಕಾರಾಗೃಹವಾಸಕ್ಕೆ ಗುರಿ ಮಾಡಲ್ಪಟ್ಟಿದ್ದ ಮಿ. ಮಾಚೆಟ್ಟಿರ ಗುದ್ದಪ್ಪನವರು ಈ ತಾ. 6ರಲ್ಲಿಯೂ, ಮಿ. ಮುಚ್ಚಿರ ಚಿಟ್ಯಪ್ಪನವರು ತಾ. 18ರಲ್ಲಿಯೂ ಅವಧಿ ಮುಗಿದು ಕಣ್ಣಾನೂರು ಜೈಲಿನಿಂದ ಬಿಡುಗಡೆ ಮಾಡಲ್ಪಟ್ಟರೆಂದು ತಿಳಿಯಬರುತ್ತದೆ.

ಕಳೆದ ವಾರ ಪ್ರಕಟಿಸಿದಂತೆ ಹಣದ ಲೆಕ್ಕಾಚಾರಗಳಲ್ಲಿ ಹೆಚ್ಚು ಕಡಿಮೆ ಕಂಡು ಬಂದ ಕಾರಣ ಮಡಿಕೇರಿ ನಾಡುಕಚ್ಚೇರಿ ಕ್ಲಾರ್ಕರಾದ ಮಿ. ಕೊಡಂದ ಅರ್ಜುನನವರು ಈ ತಾ. 20 ರಲ್ಲಿಯೂ, ಮಡಿಕೇರಿ ಮುನ್ಸಿಪಲ್ ಕ್ಲಾರ್ಕರಾದ ಮಿ. ಅಚ್ಚಾಂಡ ಮಾದಪ್ಪನವರು ತಾ. 22 ರಲ್ಲೂ ದಸ್ತಗಿರಿ ಮಾಡಲ್ಪಟ್ಟರೆಂದೂ, ಮಿ. ಮಾದಪ್ಪನವರು ಮರುದಿನ ಜಾಮೀನಿನ ಮೇಲೆ ಬಿಡುಗಡೆ ಮಾಡಲ್ಪಟ್ಟರೆಂದೂ ತಿಳಿಯುತ್ತೇವೆ.

ಬರುವ ಕೈಲ್ ಮುಹೂರ್ತ ಹಬ್ಬದ ಏರ್ಪಾಡನ್ನು ಕುರಿತು ಆಲೋಚಿಸಲು ಮಡಿಕೇರಿ ಕೊಡವರ ಮೀಟಿಂಗೊಂದು ಈ ತಾ. 22ರಲ್ಲಿ ಶಾಕ್ ಕವನ್ ಹಾಲ್‌ನಲ್ಲಿ ಪಟ್ಟಮಾಡ ದೇವಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತೆಂದೂ, ಸುಮಾರು 25 ಜನರು ಹಾಜರಿದ್ದರೆಂದೂ, ರಾ. ಬಾ. ಕೋದಂಡ ಅಪ್ಪಯ್ಯನವರ ಮತ್ತು ಕೊಂಗಂಡ ಸುಬ್ಬಯ್ಯನವರ ಮರಣಗಳನ್ನು ಕುರಿತು ವ್ಯಸನ ಸೂಚಕ ಠರಾವನ್ನು ಪಾಸು ಮಾಡಿದನಂತರ ಕೈಲ್ ಪೊಳ್ದ್ ದಿನ ತೆಂಗಿನಕಾಯಿಗೆ ಗುಂಡು ಹೊಡೆಯುವುದು ಮತ್ತು ಆಟೋಟಗಳನ್ನು ಸಪ್ಟೆಂಬರು 3ರಲ್ಲಿಯೂ, ಔತಣವನ್ನು ಸೆಪ್ಟೆಂಬರ್ 11ರಲ್ಲಿಯೂ ನಡೆಸುವಂತೆ ತೀರ್ಮಾನಿಸಿರುವರೆಂದು ವರ್ತಮಾನ.

ಮಹಮ್ಮದ್ ಪೈಗಂಬರರ ಜನ್ಮ ದಿನ ಉತ್ಸವವು ಈ ತಾ. 21ರಲ್ಲಿ ಸಾಯಂಕಾಲ 3 ಗಂಟೆಗೆ ಮಡಿಕೇರಿ ಸೀರತ್ ಕಮಿಟಿಯವರ ಆಶ್ರಯದಲ್ಲಿ ಸೆಂಟ್ರಲ್ ಹೈಸ್ಕೂಲು ಹಾಲ್‌ನಲ್ಲಿ ನಡೆಸಲ್ಪಟ್ಟಿತು. ಮೈಸೂರಿನ ಲಾಯರಾದ ಮಿ. ಅಬ್ದುಲ್ಲಾ ಖಾನ್ ಬಿ. ಎ. ಬಿ. ಯಲ್‌ರವರು ಅಧ್ಯಕ್ಷರಾಗಿದ್ದರು. ಮುಸಲ್ಮಾನರೂ, ಹಿಂದೂಗಳೂ ತುಂಬಾ ನೆರೆದಿದ್ದರು. ಖುರಾನಿನಿಂದಲೂ, ಮಹಮ್ಮದರ ಜೀವನಚರಿತ್ರೆಯಿಂದಲೂ ಕೆಲವು ಭಾಗಗಳನ್ನು ಓದಲಾಗಿ, ಸ್ವಾಗತ ಕಮಿಟಿಯ ಅಧ್ಯಕ್ಷರು ತಮ್ಮ ಭಾಷಣವನ್ನು ಮುಗಿಸಿದ ಮೇಲೆ, ಮೌಲ್ವಿ ಸಯ್ಯದ್ ಹಾಸಿಂ ಸಾಹೆಬ್ ದೀನ್‌ದಾರ್‌ರವರು ಮಹಮ್ಮದ್ ಪೈಗಂಬರರವರನ್ನು ಕುರಿತು ಕನ್ನಡದಲ್ಲಿ ಬಹು ಸ್ವಾರಸ್ಯವಾಗಿ ಭಾಷಣ ಮಾಡುತ್ತಾ, ಎಲ್ಲಾ ಜಾತಿ ಮತದವರೂ ದ್ವೇಷ ಭಾವವನ್ನು ಬಿಟ್ಟು ಸ್ನೇಹ ಭಾವದಿಂದ ವರ್ತಿಸಬೇಕೆಂದು ಮುಂತಾಗಿ ಹೇಳಿದರು. ಮೀಟಿಂಗಿನ ಅಧ್ಯಕ್ಷರು, ಎಲ್ಲರೂ ಮನುಷ್ಯ ವರ್ಗಕ್ಕೆ ಸೇರಿದವರೆಂಬ ಉಚ್ಚ ಭಾವನೆಯಿಂದ ದೇವರಲ್ಲಿ ಭಕ್ತಿ ಇಟ್ಟು ನಡೆಯುವುದೇ ಉತ್ತಮ ದಾರಿಯೆಂದು ಮೊದಲಾಗಿ ಭಾಷಣ ಮಾಡಿದ ಮೇಲೆ ಪಾನ್‌ಸುಪಾರಿ ಹಂಚಲಾಯಿತು.

ಹಿಂದೂದೇಶ.

ಕಲ್ಕತ್ತಾದ ಕ್ಲೈವ್ ಬೀದಿಯಲ್ಲಿ ಪಿಕೆಟ್ ಮಾಡುತ್ತಿದ್ದ 14 ಸ್ವಯಂ ಸೇವಕರನ್ನು ಪೋಲೀಸಿನವರು ಈ ತಾ. 23ರಲ್ಲಿ ಕೈದು ಮಾಡಿದರು.

ಮೈಸೂರು ಪ್ರಾಂತ್ಯದ ಕೊತ್ತನೂರು ಎಂಬ ಹಳ್ಳಿಯಲ್ಲಿ ಒಂದು ಹಸುವು ಕಳೆದ ತಿಂಗಳಲ್ಲಿ ಮೂರು ಹೋರಿ ಕರುಗಳನ್ನು ಹಾಕಿದೆಯೆಂದು ವರ್ತಮಾನ.

ಕಾಸರಗೋಡಿನಲ್ಲಿ ಮೂವರು ಕಾಂಗ್ರೆಸಿನವರು ಮೆಯಿಲ್ ಟ್ರೈನನ್ನು ನಿಲ್ಲಿಸಿದಕ್ಕಾಗಿ ದಸ್ತಗಿರಿ ಮಾಡಲ್ಪಟ್ಟು, ಸ್ವಲ್ಪ ಸಮಯದ ಮೇಲೆ ಬಿಡುಗಡೆ ಮಾಡಲ್ಪಟ್ಟರು.

ಬೊಂಬಾಯಿಯಲ್ಲಿ ಸರ್ಕಾರಿ 'ಸೆಕ್ರೇಟೇರಿಯಟ್' ಆಫೀಸನ್ನು ಪ್ರವೇಶಿಸಲು ಯತ್ನಿಸಿದಕ್ಕಾಗಿ 21 ಸ್ವಯಂಸೇವಕರಿಗೆ ಆರಾರು ತಿಂಗಳೂ ಕಠಿಣ ಸಜೆಯೂ, 50 ರೂ. ಜುಲುಮಾನೆಯೂ ವಿಧಿಸಲಾಗಿದೆ.

ತಾ. 17ರಲ್ಲಿ ತಿರುವಲ್ಲೂರಿನಲ್ಲಿ ಟ್ರೈನನ್ನು ನಿಲ್ಲಿಸಿ ಹಸ್ತಪತ್ರಿಕೆಗಳನ್ನು ಹಂಚಿದಕ್ಕಾಗಿ 6 ಸ್ವಯಂ ಸೇವಕರಿಗೆ ಆರಾರು ತಿಂಗಳು ಸಜೆಯೂ, 25 ರೂ. ಜುಲುಮಾನೆಯೂ ವಿಧಿಸಲಾಯಿತು.

ಮಂಗಳೂರು ಸೇಂಟ್ ಎಲೋಸಿಯಸ್ ಕಾಲೇಜಿನ ಪ್ರೊಫೆಸರಾದ ಮಿ. ಯಂ. ಯಂ. ರಾಮರಾವುರವರಿಗೆ ಪಿಕೆಟ್ ಮಾಡಿದರೆಂಬ ಕಾರಣ ಆರು ತಿಂಗಳು ಕಠಿಣ ಸಜೆ ವಿಧಿಸಲಾಗಿದೆ.

ಸರ್ ಚಾರ್ಲ್ಸ್ ಅಲೆಕ್ಸಾಂಡರ್ ಇನ್ಸ್‌ರವರು ಬರ್ಮಾದ ಗವರ್ನರ್ ಪದವಿಯಿಂದ ನಿವೃತ್ತರಾಗುವಾಗ್ಯೆ ಸದರಿ ಪದವಿಗೆ ಸರ್ ಹ್ಯೂ ಲ್ಯಾನ್ಸ್‌ಡೌನ್ ಸ್ಟೀಫನ್‌ಸನ್‌ರವರು ನೇಮಿಸಲ್ಪಟ್ಟಿರುವರು.

ಕೋಮುವಾರು ತೀರ್ಮಾನವನ್ನು ಕುರಿತು ಬಂಗಾಳ ಕೌನ್ಸಿಲಿನಲ್ಲಿ ಈ ತಾ. 23 ರಲ್ಲಿ ಚರ್ಚೆ ನಡೆಯಿತು. ಎರಡು ಗಂಟೆಗಳ ವರೆಗೆ ಚರ್ಚೆ ನಡೆದ ನಂತರ ಯಾವೊಂದೂ ತೀರ್ಮಾನಕ್ಕೆ ಬರದೆ ಚರ್ಚೆಯು ಅಂತ್ಯವಾಯಿತು.

ಪಿಕೆಟಿಂಗಿಗೆ ಸ್ವಯಂಸೇವಕರನ್ನು ಕಳುಹಿಸಿದರೆಂಬ ತಕ್ಸೀರಿಗಾಗಿ ಕಲ್ಕತ್ತಾದ ಮಿ. ಬದ್ರಿ ಪ್ರಸಾದ್ ತ್ರಿಪತಿ ಮತ್ತು ಮಿ. ಶಂಕರಲಾಲ್ ಶರ್ಮರವರಿಗೆ ತಾ. 22 ರಲ್ಲಿ ಒಂದು ವರ್ಷ ಮತ್ತು 6 ತಿಂಗಳು ಕಠಿಣ ಸಜೆ ವಿಧಿಸಲಾಗಿದೆ.

ಇಂಡಿಯಾ ಸರ್ಕಾರದವರು 25 ಕೋಟಿ ರೂಪಾಯಿ ಸಾಲ ಬೇಕೆಂದೂ, ಇದನ್ನು ಜಮಾಯಿಸಲು ತಾ. 17ರಲ್ಲಿ ಪ್ರಾರಂಭವಾಗುವದೆಂದೂ ಪ್ರಕಟಿಸಿದ್ದರು. ಅದು ತಾ. 17 ರಲ್ಲಿ 3½ ಗಂಟೆಯೊಳಗೆ ಜಮೆಯಾಗಿ ಹೋಯಿತು!

ತಾ. 18 ರಲ್ಲಿ ಬೆಜವಾಡದಲ್ಲಿ ಟ್ರೈನ್ ನಿಲ್ಲಿಸಿದಕ್ಕೂ ಮತ್ತು ಕಾಂಗ್ರೆಸಿನ ಹಸ್ತಪತ್ರಿಕೆಗಳನ್ನು ಹಂಚಿದಕ್ಕೂ ದಸ್ತಗಿರಿ ಮಾಡಲ್ಪಟ್ಟ ಮೂರು ಕಾಂಗ್ರೆಸ್ ಕೆಲಸಗಾರರಿಗೆ 7½ ತಿಂಗಳು ಸಜೆಯೂ, 100 ರೂ. ಜುಲುಮಾನೆಯೂ ವಿಧಿಸಲಾಯಿತು.

ಕಲ್ಲಿಕೋಟೆಯಲ್ಲಿ ಪಿಕೆಟಿಂಗ್ ಕೆಲಸವನ್ನು ಕಾಂಗ್ರೆಸಿನವರು ನಡೆಸುತ್ತಾ ಇದ್ದಾರೆ. ತಾ. 23 ರಲ್ಲಿ ಪರದೇಶೀ ಬಟ್ಟೆ ಅಂಗಡಿಗಳನ್ನು ಪಿಕೆಟ್ ಮಾಡಿದ ನಾಲ್ಕು ಸ್ವಯಂಸೇವಕರು ದಸ್ತಗಿರಿ ಮಾಡಲ್ಪಟ್ಟು ಆದಿನವೇ ಸಾಯಂಕಾಲ ಬಿಡುಗಡೆ ಮಾಡಲ್ಪಟ್ಟರು.

ಪೋಲೀಸು ಕಮಿಷನರವರ ಹುಕುಮನ್ನು ಉಲ್ಲಂಘನೆ ಮಾಡಿ ಬೊಂಬಾಯಿ ಪಟ್ಟಣಕ್ಕೆ ಹೋದ ತಕ್ಸೀರಿಗಾಗಿ ದಸ್ತಗಿರಿ ಮಾಡಲ್ಪಟ್ಟ ಶ್ರೀಮತಿ ವಿಮಲಾ ಬೆನ್‌ರವರಿಗೆ ಒಂದು ವರ್ಷ ಸಾದಾ ಸಜೆಯು ವಿಧಿಸಲಾಗಿದೆ. ಇವರಿಗೆ 'ಎ' ಕ್ಲಾಸು ಕೊಡಲಾಯಿತು.

3 ನೇ ದುಂಡು ಮೇಜು ಪರಿಷತ್ತು ನಡೆಸಲಾಗುವದೆಂದು ಈ ಮೊದಲು ಪತ್ರಿಕೆಗಳಲ್ಲಿ ಹೊರಟಿದ್ದ ಸುದ್ಧಿಯು ನಿಜವಲ್ಲವೆಂತಲೂ, ಆದರೂ ಹೇಗಾದರೂ ಮಾಡಿ ಲಿಬರಲ್ ಪಕ್ಷದವರ ಸಹಕಾರವನ್ನು ಪಡೆಯಲು ಯತ್ನಗಳು ನಡೆಸಲ್ಪಡುವವೆಂತಲೂ ಸಿಮ್ಲಾದ ವರ್ತಮಾನ.

ಇದೇ ವರ್ಷ ಡಿಸೆಂಬರು ತಿಂಗಳಲ್ಲಿ ವೀರಶೈವ ಮಹಾಸಭೆಯು ಧಾರವಾಡದಲ್ಲಿ ನಡೆಯುವುದೆಂದೂ, ಈ ಸಭೆಯಲ್ಲಿ ಚರ್ಚಿಸಲು ವಿಷಯಗಳಿದ್ದವರು ಸೆಪ್ಟಂಬರು 15ರೊಳಗೆ ಮಿ. ಎಸ್. ಎಸ್. ಬಸವನಾಳ, ಗೌರವ ಕಾರ್ಯದರ್ಶಿಯವರಿಗೆ ಕಳುಹಿಸಿಕೊಡತಕ್ಕದೆಂದು ಅವರು ತಿಳಿಸಿರುತ್ತಾರೆ.

ಜಬಲಪುರ ಸಿಟಿ ಕಾಂಗ್ರೆಸ್ಸಿನ 57ನೇ 'ಸರ್ವಾಧಿಕಾರಿ'ಯಾದ ಠಾಕೂರ್ ಟೀಕಾರಾಮ್ ಸಿಂಗ್‌ರವರು ಮತ್ತು ಒಬ್ಬ ಸ್ವಯಂ ಸೇವಕನು ಟ್ರೈನಿನ 'ಅಪಾಯ ಸರಪಳಿ'ಯನ್ನು ಎಳೆದು ಟ್ರೈನನ್ನು ನಿಲ್ಲಿಸಿದಕ್ಕಾಗಿ ಆರಾರು ತಿಂಗಳು ಕಠಿಣ ಸಜೆಗೂ, 20 ರೂ. ಜುಲುಮಾನೆಗೂ ಗುರಿಮಾಡಲ್ಪಟ್ಟಿರುವರು.

ಅಸ್ಪೃಶ್ಯರ ಪ್ರಾಮುಖ್ಯ ಮುಂದಾಳುಗಳಾದ ಮಿ. ಯಂ. ಸಿ. ರಾಜರವರು ಮತ್ತು ಡಾ. ಅಂಬೇಡ್ಕರವರು ಕೋಮುವಾರು ತೀರ್ಮಾನದಿಂದ ಅಸ್ಪೃಶ್ಯರಿಗೆ ತುಂಬಾ ನಷ್ಟವುಂಟಾಗಿದೆಯೆಂದೂ, ಅದು ತಮ್ಮ ಕೋಮಿನವರಿಗೆ ಎಂದೂ ತೃಪ್ತಿಯನ್ನುಂಟುಮಾಡಲಾರದೆಂದೂ ಅಭಿಪ್ರಾಯ ಕೊಟ್ಟಿರುವರು.

ಸತ್ಯಾಗ್ರಹ ಚಳವಳದಲ್ಲಿ ಕಾರಾಗೃಹ ವಾಸವನ್ನು ಅನುಭವಿಸುತ್ತಿದ್ದ ಬೊಂಬಾಯಿಯ ಒಬ್ಬ ಕಾಂಗ್ರೆಸ್ ಮುಂದಾಳಾದ ಮಿ. ಜಮ್ನಾದಾಸ್ ದ್ವಾರಕದಾಸ್‌ರವರ ತಾಯಿಯವರಿಗೆ ಕಾಯಿಲೆಯು ಜೋರಾಗಿರುವದರಿಂದ, ದ್ವಾರಕದಾಸರವರನ್ನು 15 ದಿವಸಗಳ ವರೆಗೆ 'ಪೆರೋಲ್'ನಲ್ಲಿ ಬಿಡುಗಡೆ ಮಾಡಿರುವರು.

ಈ ತಾ. 23 ರಲ್ಲಿ ತಿರುಮಂಗಳಮಿನಲ್ಲಿ ನಡೆದ ಸೇಂದಿ ಗುತ್ತಿಗೆ ಹರಾಜನ್ನು ಕಾಂಗ್ರೆಸು ಸ್ವಯಂಸೇವಕರು ಪಿಕೆಟ್ ಮಾಡಿದರು. ಅಲ್ಲಿಯ 'ಸರ್ವಾಧಿಕಾರಿ'ಯ ಸಮೇತ 5 ಜನರು ಕೈದು ಮಾಡಲ್ಪಟ್ಟರು. ಹರಾಜಿನ ಮೊಬಲಗು ಕಳೆದ ವರ್ಷಕ್ಕಿಂತ ಕಡಿಮೆಯಾದದ್ದಲ್ಲದೆ ಕೆಲವು ಅಂಗಡಿಗಳನ್ನು ಕೂಗುವವರೇ ಇಲ್ಲದೆ ಆಯಿತು.

ಲಂಡನಿನಿಂದ ಇಂಡಿಯಾಕ್ಕೆ ಬಂದಿರುವ ಇಂಡಿಯನ್ ಲೀಗಿನ ಡೆಲಿಗೇಶನಿನವರು ತಾ. 23 ರಲ್ಲಿ ಬೊಂಬಾಯಿಯ ಗವರ್ನರವರನ್ನು ಪೂನಾದಲ್ಲಿ ಭೇಟಿಮಾಡಿ ಒಂದು ಗಂಟೆಕಾಲ ಸಂಭಾಷಣೆ ನಡೆಸಿದರು. ಅಲ್ಲದೆ ಇವರು ಮಿ. ಆರ್. ಮಿ. ಕೆಳ್ಕಾರ್, ಮಿ. ಬಿ. ಜಾಧವ ಮೊದಲಾದ ಮುಖಂಡರೊಂದಿಗೂ ಮಾತುಕತೆಗಳನ್ನು ನಡೆಸಿದರು.

ಪ್ರಧಾನ ಮಂತ್ರಿಯವರ ಕೋಮುವಾರು ಸಮಸ್ಯೆಯ ತೀರ್ಮಾನದಿಂದ ಪಂಜಾಬು ಮತ್ತು ಬಂಗಾಳದಲ್ಲಿ ಉಂಟಾಗಿರುವ ದೊಡ್ಡ ಅಸಮಾಧಾನವನ್ನು ಹೋಗಲಾಡಿಸಲು ಪಂಜಾಬಿನ ಹಿಂದೂ, ಮುಸಲ್ಮಾನ್ ಮತ್ತು ಸಿಖ್ ಮುಂದಾಳುಗಳೂ, ಬಂಗಾಳದಲ್ಲಿ ಹಿಂದೂ-ಮುಸಲ್ಮಾನ ಧುರೀಣರೂ ಸೇರಿ ತಮ್ಮ ತಮ್ಮೊಳಗೆ ರಾಜಿ ತೀರ್ಮಾನಕ್ಕೆ ಬರಲು ಪ್ರಯತ್ನಗಳು ನಡೆಸಲ್ಪಡುವವೆಂದು ಸುದ್ಧಿ.

ಬ್ರಿಟಿಷ್ ಮಂತ್ರಿಯವರ ಕೋಮುವಾರು ತೀರ್ಮಾನದಿಂದ ಅತೃಪ್ತಿಗೊಂಡು, ದುಂಡು ಮೇಜು ಪರಿಷತ್ತಿನ ಡೆಲಿಗೇಟರುಗಳಾದ ಪಂಜಾಬಿನ ಸರ್ದಾರ್ ಉಜ್ವಲ್ ಸಿಂಗ್‌ರವರು, ಸರ್ದಾರ್ ಸಂಪೂರನ್ ಸಿಂಗ್‌ರವರು ಮತ್ತು ರಾಜಾ ನರೇಂದ್ರನಾಥ್‌ರವರು ಇನ್ನು ಮುಂದೆ ರಾಜಕೀಯ ರಚನೆಯನ್ನು ತಯಾರಿಸುವುದರಲ್ಲಿ ತಾವು ಭಾಗಿಗಳಾಗುವುದಿಲ್ಲವೆಂದು ವೈಸರಾಯರಿಗೆ ಪತ್ರ ಬರೆದಿರುವರು.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ತಾತ್ಕಾಲಿಕ ಅಧ್ಯಕ್ಷರಾಗಿದ್ದ ಡಾ. ಕಿಚ್ಲೂರವರು ಈ ತಾ. 23ರಲ್ಲಿ ಲಿಯಲ್ಪುರದ ರಾಜಕೀಯ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಲಾಹೋರು ಮತ್ತು ಅಂಬಲ ಪ್ರದೇಶಗಳಿಗೆ ಬರಕೂಡದೆಂದು ಮಾಡಿದ ಹುಕುಮನ್ನು ಉಲ್ಲಂಘಿಸಿದರೆಂಬ ಕಾರಣದಿಂದ ಇವರನ್ನು ಪೋಲೀಸಿನವರು ಅದೇ ದಿನ ರಾತ್ರಿ ದಸ್ತಗಿರಿ ಮಾಡಿ 5 ದಿನಗಳ ವರೆಗೆ ರಿಮಾಂಡಿನಲ್ಲಿಟ್ಟಿರುವರು.

ಕಾಸರಗೋಡು ತಾಲೋಕಿನ ಎರಡು ಸ್ಥಳಗಳಲ್ಲಿ ಸ್ವಯಂ ಸೇವಕರು ಫಾರೆಸ್ಟು ಸತ್ಯಾಗ್ರಹ ನಡೆಸುತ್ತಿದ್ದಾರೆ. ಪಾಡ್ರೆ ಎಂಬ ಊರಿನಲ್ಲಿ ಸತ್ಯಾಗ್ರಹಿಗಳು ರಿಜರ್ವ್ ಫಾರೆಸ್ಟಿನಲ್ಲಿ ಹಲವು ಗಂಧದ ಮರಗಳನ್ನು ಕಡಿದು ಹಾಕಿರುವರಂತೆ. ಕಳೆದ ಶುಕ್ರವಾರ ಅಲ್ಲಿ 5 ಜನರು ಕೈದು ಮಾಡಲ್ಪಟ್ಟು, ಕಾಸರಗೋಡಿಗೆ ಒಯ್ಯಲ್ಪಟ್ಟರು. ಅಲ್ಲಿ ಬಿಡುಗಡೆಯಾದರು. ಬೇರೆ ಕೆಲವರು ಆ ಊರಿನ ಫಾರೆಸ್ಟು ಬಂಗ್ಲೆಯಲ್ಲಿ ರಾಷ್ಟ್ರೀಯ ಧ್ವಜವನ್ನು ಹಾರಿಸಿದರು ಕೂಡಲೆ ಗಾರ್ಡ್ ಬಂದು ವಾಲಂಟಿಯರುಗಳನ್ನು ಓಡಿಸಿ, ಧ್ವಜವನ್ನು ತೆಗೆದು ಬಿಟ್ಟನಂತೆ.

''ಸಿ'' ಕ್ಲಾಸು ರಾಜಕೀಯ ಕೈದಿಗಳ ಉಪಚಾರವನ್ನು ಉತ್ತಮಗೊಳಿಸಬೇಕೆಂಬ ಉದ್ದೇಶಕ್ಕಾಗಿ ಕಣ್ಣಾನೂರು ಸೆಂಟ್ರಲ್ ಜೈಲಿನಲ್ಲಿ ತಾ. 11 ರಿಂದ ಉಪವಾಸ ವ್ರತವನ್ನು ಕೈಕೊಂಡಿದ್ದವರಲ್ಲಿ 6 ಜನ ಕೈದಿಗಳು ತಾ. 23 ರಲ್ಲಿ ತಮ್ಮ ವ್ರತವನ್ನು ಅಂತ್ಯಗೊಳಿಸಿದರು. ಅವರಲ್ಲಿ 5 ಜನರು ಜೈಲು ಆಸ್ಪತ್ರೆಗೆ ಒಯ್ಯಲ್ಪಟ್ಟರು. ಮಲಬಾರಿನ ಪ್ರಾಮುಖ್ಯ ಕಾಂಗ್ರೆಸು ಮುಂದಾಳಾದ ಮಿ. ಕೇಳಪ್ಪನಾಯರವರ ಕೋರಿಕೆ ಮೇರೆ ಉಪವಾಸವು ಅಂತ್ಯವಾದದ್ದಾಗಿದೆ. 'ಸಿ' ಕ್ಲಾಸಿನವರ ಕಷ್ಟಸ್ಥಿತಿಯ ಕಡೆಗೆ ಸರ್ಕಾರದವರ ಮತ್ತು ಪಬ್ಲಿಕಿನವರ ಗಮನವನ್ನು ಎಳೆಯುವುದೇ ಉಪವಾಸದ ಉದ್ದೇಶವೆಂದು ಮಿ. ಕೇಳಪ್ಪನಾಯರವರು ಹೇಳಿದರು.

ಜಬ್ಬಲಪುರದ ಸೇಟ್ ಗೋವಿಂದ ದಾಸರವರು ಧನಾಢ್ಯ ದಿ. ಬಾ. ಜೀವನ ದಾಸರವರ ಪುತ್ರ. ಇವರು ಒಮ್ಮೆ ಕೌನ್ಸಿಲ್ ಆಫ್ ಸ್ಟೇಟಿನ ಮೆಂಬರರಾಗಿದ್ದರು. ಇವರು ಕಾಂಗ್ರೆಸ್ಸಿನ ಸತ್ಯಾಗ್ರಹಕ್ಕೆ ಸೇರಿ ಜೈಲು ವಾಸವನ್ನು ಅನುಭವಿಸಿದರು. ಜೈಲಿನಿಂದ ಹೊರಗೆ ಬಂದ ಕೂಡಲೆ ಅವರ ತಂದೆಯವರು, ಅವರು ಕಾಂಗ್ರೆಸ್ಸಿಗೆ ಸೇರಿದ್ದರಿಂದ ತನಗೆ ತುಂಬಾ ನಷ್ಟವುಂಟಾಯಿತೆಂದೂ, ಇನ್ನಾದರೂ ಸೇರಬಾರದೆಂದೂ ಅವರಿಗೆ ಪತ್ರ ಬರೆದರು. ಅದಕ್ಕೆ ಗೋವಿಂದ ದಾಸರವರು, ತಾನು ಸ್ವಾತಂತ್ರ್ಯ ಹೋರಾಟವನ್ನು ಬಿಡಲಾರೆನೆಂದೂ, ತನಗೆ ತಂದೆಯವರ ಒಂದು ಕೋಟಿ ರೂ. ಬೆಲೆಯ ಆಸ್ತಿಯಲ್ಲಿ ಹಕ್ಕೇ ಬೇಡವೆಂದೂ ರಿಜಿಸ್ಟರ್ ಲಿಖಾವಟ್ಟು ಮೂಲಕ ಒಪ್ಪಿಗೆ ಕೊಟ್ಟರು. ಇದೆಂಥಾ ತ್ಯಾಗ!

ಬಂಗಾಳದ ಢಕ್ಕಾದಲ್ಲಿ ಎಡಿಶನಲ್ ಪೋಲೀಸು ಸೂಪರಿಂಟೆಂಡೆಂಟರಾಗಿರುವ ಮಿ. ಸಿ. ಜೆ. ಗ್ರಾಸ್ಬಿಯವರು ಈ ತಾ. 22 ರಲ್ಲಿ ಆಫೀಸಿನಿಂದ ಮನೆಗೆ ಮೋಟಾರು ಕಾರಿನಲ್ಲಿ ತನ್ನ ಗಾರ್ಡಿನ ಸಮೇತವೂ, ಹಿಂದೆ ಒಬ್ಬ ಸಾರ್ಜೆಂಟನು ಮೋಟಾರ ಸೈಕಲಿನಲ್ಲಿ [illegible] ಗಾರ್ಡನೊಂದಿಗೂ ಹೋಗುತ್ತಿದ್ದಾಗ್ಯೆ ರಸ್ತೆಯಲ್ಲಿ ಒಬ್ಬ ಯುವಕನು ಅವರಿಗೆ ಹಲವು ಗುಂಡುಗಳನ್ನು ಹಾರಿಸಿದನು. ಆದರೆ ಒಂದು ಮಾತ್ರ ಅವರ ಗದ್ದಕ್ಕೆ ತಗಲಿ ಗಾಯವಾಯಿತು. ಅವರು ಸಾರ್ಜೆಂಟರೊಂದಿಗೆ ಕೂಡಲೆ ಆ ಯುವಕನನ್ನು ಬೆನ್ನಟ್ಟಿ ಗುಂಡು ಹೊಡೆದರು. ಯುವಕನು ಗುಂಡು ತಗಲಿ ಬಿದ್ದು ಹೋದನು. ಗಾಯವಾದ ಇಬ್ಬರೂ ಆಸ್ಪತ್ರೆಗೆ ಸಾಗಿಸಲ್ಪಟ್ಟರು. ಗ್ರಾಸ್ಬಿಯವರಿಗೆ ಹೆಚ್ಚಿನ ಗಾಯವೇನೂ ಆಗಿರುವದಿಲ್ಲವೆಂತಲೂ, ಆ ಯುವಕನು ಅಪಾಯಸ್ಥಿತಿಯಲ್ಲಿರುವನೆಂತಲೂ ವರ್ತಮಾನ.

ಲಂಡನಿನಲ್ಲಿ ಒಬ್ಬ ಆಂಗ್ಲೇಯನು 14 ವರ್ಷಗಳ ವರೆಗೆ ಕಷ್ಟಪಟ್ಟು ಒಂದು ವಿಚಿತ್ರ ಪ್ರತಿಮೆಯನ್ನು ತಯಾರಿಸಿರುವನು. ಒಬ್ಬ ಸಿಪಾಯಿಯ ಆಕೃತಿಯಲ್ಲಿರುವ ಈ ಪ್ರತಿಮೆಯು ಮಾತನಾಡುವ, ಪತ್ರಿಕೆಯನ್ನು ಓದುವ ಮತ್ತು ತುಪಾಕಿ ಹಾರಿಸುವ ಕೆಲಸವನ್ನು ಮಾಡುತ್ತದಂತೆ!

ಬ್ರಿಟಿಷ್ ಸಾಮ್ರಾಜ್ಯದ ಎಲ್ಲಾ ದೇಶಗಳ ಪ್ರತಿನಿಧಿಗಳು ಕೂಡಿದ್ದ ಒಟ್ಟಾವ ಕಾನ್‌ಫರೆನ್ಸಿನಲ್ಲಿ ಇಂಗ್ಲೆಂಡಿನ ಸಾಮಾನುಗಳಿಗೆ ಇಂಡಿಯಾದವರು ಶೇಕಡ 7½ ಯಷ್ಟೂ, ಇಂಡಿಯಾದ ಸರಕುಗಳಿಗೆ ಇಂಗ್ಲಿಷರು ಶೇಕಡ 10 ರಷ್ಟೂ ರಿಯಾಯಿತಿ ತೋರಿಸಬೇಕೆಂದು ತೀರ್ಮಾನವಾಗಿದೆಯೆಂದು ತಿಳಿದುಬರುತ್ತದೆ. ಈ ಸಭೆಯಲ್ಲಿ ಇಂಡಿಯಾದ ಚುನಾಯಿತ ಪ್ರತಿನಿಧಿಗಳು ಯಾರೂ ಇಲ್ಲ. ಎಲ್ಲರೂ ಸರ್ಕಾರದ ನೇಮಿತರು.

ಕೋಮುವಾರು ತೀರ್ಮಾನ.

ಡಾ. ಮೂಂಜೆಯವರ ಅಭಿಪ್ರಾಯ.

ಹಿಂದೂ ಮಹಾ ಸಭಾದ ಕಾರ್ಯಕಾರಿ ಅಧ್ಯಕ್ಷರಾಗಿರುವ ಡಾಕ್ಟರ್ ಬಿ. ಯಸ್. ಮೂಂಜೆಯವರು ಇಂಗ್ಲೆಂಡಿನಿಂದ ತಮ್ಮ ಈ ಕೆಳಗಿನ ಅಭಿಪ್ರಾಯವನ್ನು ಸಭಾದ ಕಾರ್ಯಕಾರಿ ಮಂಡಳಿಗೆ ಕಳುಹಿಸಿರುವರು.

'ಎಲ್ಲಾ ಕಡೆಗಳಲ್ಲಿಯೂ ಸಾಧಾರಣವಾಗಿ ಮುಸಲ್ಮಾನರ ಸ್ಥಿತಿಯು ಬಲಪಡಿಸಲಾಗಿದೆ. ಪಂಜಾಬಿನಲ್ಲಿ ಮುಸಲ್ಮಾನರ ರಾಜ್ಯವೂ, ಬಂಗಾಳದಲ್ಲಿ ಆಂಗ್ಲೋ—ಮುಸ್ಲಿಂ ರಾಜ್ಯವೂ ಶಾಸನದಿಂದ ಸ್ಥಾಪಿಸಲ್ಪಟ್ಟಿದೆ. ಹಿಂದೂಗಳ ಒಗ್ಗಟ್ಟನ್ನು ರಾಜಾ—ಮೂಂಜೆ ಒಪ್ಪಂದವು ಬಲಪಡಿಸಿದ್ದರೂ ಕೂಡ ಹಿಂದುಳಿದ ಪಂಗಡಗಳಿಗೆ ಪ್ರತ್ಯೇಕ ಚುನಾವಣೆ ಕೊಟ್ಟು ಹಿಂದೂಗಳೊಳಗೂ ಒಡಕು ತಂದು ಹಾಕಲಾಗಿದೆ. ತೀರ್ಮಾನವು ನಿರೀಕ್ಷಿಸಲ್ಪಡತಕ್ಕದ್ದಾಗಿದೆ.'

ವಿ. ಜೆ. ಪಟೇಲರವರ ಅಭಿಪ್ರಾಯ.

'ಭರತಖಂಡದ ವಿವಿಧ ಕೋಮುಗಳನ್ನು ಪ್ರತ್ಯೇಕಿಸಿ ಅವುಗಳು ಒಂದರೊಡನೊಂದು ಕಾದಾಡುತ್ತಿರುವಂತೆ ಮಾಡಿಟ್ಟು ಭೇದೋಪಾಯದಿಂದ ಭಾರತ ಚಕ್ರಾಧಿಪತ್ಯವನ್ನು ತಮ್ಮ ಕೈಯ್ಯಲ್ಲಿ ಇರಿಸಿಕೊಳ್ಳಲು ಬ್ರಿಟಿಷ್ ಸರ್ಕಾರವು ಹೂಡುತ್ತಿರುವ ಮಾಟವು ಈ ತೀರ್ಪಿನ ಪ್ರತಿ ವಾಕ್ಯದಲ್ಲಿಯೂ ಪ್ರತಿಬಿಂಬಿಸುತ್ತಿದೆ. ಭಾರತ ವರ್ಷದಲ್ಲಿ ಯಾದವೀ ಕಲಹವನ್ನು ಹುಟ್ಟಿಸಿ ಅವಕಾಂಶವನ್ನೆಬ್ಬಿಸಬೇಕೆನ್ನುವುದೇ ಈ ತೀರ್ಪಿನ ಮುಖ್ಯ ಉದ್ದೇಶ್ಯವಾಗಿದೆ. ಭಾರತ ದೇಶವು ಕಲಹಗಳಿಂದ ಛಿನ್ನಭಿನ್ನವಾಗಿ ಹೋಗಿದೆಯೆಂದೂ, ಸಾರ್ವಜನಿಕ ಸಂಸ್ಥೆಯೆಂದು ಪ್ರಸಿದ್ಧವಾಗಿರುವ ಕಾಂಗ್ರೆಸ್ಸಿನ ಮೂಲಕವೂ, ಅದು ಕೋಮುವಾರು ಕಲಹಗಳನ್ನು ತೀರ್ಪು ಮಾಡಿಕೊಳ್ಳುವುದಿಲ್ಲವೆಂದೂ ವಿಶಾಲ ಜಗತ್ತಿಗೆ ತೋರಿಸುವದಕ್ಕಾಗಿ ಬ್ರಿಟಿಷರು ಈ ಉಪಾಯವನ್ನು ಹೂಡಿದ್ದಾರೆ.'

ಸಿ. ರಾಜಗೋಪಾಲಾಚಾರ್ಯರ ಅಭಿಪ್ರಾಯ.

ವಿದೇಶಿ ಸರ್ಕಾರದ ಹಿಡಿತದಿಂದ ತಪ್ಪಿಸಿಕೊಂಡು ಸ್ವತಂತ್ರರಾಗಬೇಕೆಂದು ಅನೇಕ ವಿಧವಾದ ಕಷ್ಟಗಳನ್ನು ಅನುಭವಿಸುತ್ತಿರುವ ಈ ಕಾಲದಲ್ಲಿ ಕೋಮುವಾರು ಸಮಸ್ಯೆಯ ತೀರ್ಪನ್ನು ಪ್ರಕಟಿಸಿರುವುದು—ಹೊಟ್ಟೆ ಹಸಿದು ಪ್ರಾಣ ಹೋಗುತ್ತಿರುವಾಗ ಮುಂದೆ ಸಿಗಲಿರುವ ಊಟದಲ್ಲಿ ಉಪ್ಪಿನ ಭಾಗ ಎಷ್ಟು, ಖಾರ ಎಷ್ಟು, ಹುಳಿ ಎಷ್ಟು ಎಂಬ ವಿಚಾರದ ಚರ್ಚೆ ನಡೆಸಿದಂತಿದೆ.

ಬ್ರಿಟಿಷರು ಭಾರತೀಯರಿಗೆ ಕೊಡಬೇಕಾದ ಸ್ವಾತಂತ್ರ್ಯದ ವಿಚಾರ ಸಂಪೂರ್ಣವಾಗಿ ನಿರ್ಣಯವಾಗಲಿ. ಆ ಮೇಲೆ ಕೋಮುವಾರು ಮಾತು.

ಭಾರತ ದೇಶದಲ್ಲಿ ಯಾದವೀ ಕಲಹವನ್ನುಂಟು ಮಾಡಿ ತಮ್ಮ ಸ್ಥಾನವನ್ನು ಬಲಪಡಿಸಿಕೊಳ್ಳಲು ಬ್ರಿಟಿಷರು ಮಾಡಿದ ಉಪಾಯವಿದೆಂದು ನನಗೆ ತೋರುತ್ತದೆ.

ನೀವು ಹುಟ್ಟಿದ್ದು ಯಾವ ತಿಂಗಳಲ್ಲಿ?

ಜೂನ್ ತಿಂಗಳಲ್ಲೋ?

ಹಾಗಾದರೆ ನಿಮಗೆ ಚಂಚಲತೆ ಬಹಳ; ವ್ಯಾಕುಲತೆ ಹೆಚ್ಚು; ತೃಪ್ತಿ ಇಲ್ಲವೇ ಇಲ್ಲ. ಆದರೆ ನೀವು ಕರನ್ಸಿಯನ್ನು ನಿಮ್ಮಲ್ಲಿದ್ದುದನ್ನೆಲ್ಲಾ ಖರ್ಚು ಮಾಡಿಬಿಡುವುದಿಲ್ಲ. ಹೂವಿನ ಮೇಲೆ ನಿಮಗೆ ಬಹು ಪ್ರೀತಿ. ಯಾವುದಾದರೊಂದು ವಿಷಯದ ಅಂತರಂಗವನ್ನರಿಯದೆ ಅದರ ಬಹಿರಂಗದಿಂದ ನೀವು ಮೋಸ ಹೋಗುವುದು ಹೆಚ್ಚು. ಕೆಟ್ಟದಾಗಲೀ, ಒಳ್ಳೆಯದಾಗಲೀ ವಿಪರೀತ ವರ್ತನೆಯು. ಆದರೆ ನಿಮ್ಮ ಆದರ್ಶವನ್ನು ಸಾಧಿಸಿಯೇ ತೀರುವಿರಿ. ನಿಮಗೆ ಸ್ವಾಭಿಮಾನ ಹೆಚ್ಚು; ನಿಮ್ಮ ಮಾತು, ಮಾರ್ಗವೇ ನಿಮಗೆ; ನೀವು ಬೇರೊಬ್ಬರ ಮಾತನ್ನು ಕೇಳತಕ್ಕವರಲ್ಲ. ನಿಮ್ಮನ್ನು ಮರುಳುಗೊಳಿಸುವುದು ಸುಲಭವಲ್ಲ.

ಹಣ ಕೂಡಿಸಬೇಕೆಂಬ ಆಸೆ ನಿಮಗಿಲ್ಲ; ಅದನ್ನು ಖರ್ಚು ಮಾಡುವ ಅಭ್ಯಾಸವೇ ಹೆಚ್ಚು.

ಸಾಹಿತ್ಯ ಕಲೆಗಳಲ್ಲಿ ನಿಮಗೆ ಅಭಿಮಾನ ಹೆಚ್ಚು. ನೀವು ಕೀರ್ತಿವಂತರಾಗುವಿರಿ. ಅನೇಕರು ನಿಮ್ಮಲ್ಲಿ ಅಭಿಮಾನವನ್ನಿಟ್ಟಿರುವರು. ಅಲ್ಲದೆ ಅವರ ಅಭಿಮಾನವು ಸ್ಥಿರವಾಗಿರುವುದು.

ಪ್ರತಿ ತಿಂಗಳ ೫ನೇ ತಾರೀಕಿನ ದಿನ ನೀವು ಎಚ್ಚರಿಕೆಯಿಂದಿರಬೇಕು.

ಗಂಟಲಿನ ಮತ್ತು ಶ್ವಾಸಕೋಶದ ರೋಗಗಳು ನಿಮ್ಮನ್ನು ಪೀಡಿಸುವವು. ಆದುದರಿಂದ ನೀವು ವ್ಯಾಯಾಮವನ್ನು ತೆಗೆದುಕೊಳ್ಳುವುದು ಒಳ್ಳೆಯದು.

ಶುಕ್ರವಾರವು ನಿಮ್ಮ ಶುಭ ದಿವಸ, ಆಕಾಶ ನೀಲವು ನಿಮ್ಮ ಶುಭ ವರ್ಣ, ೫ ಮತ್ತು ೧೨ ನಿಮ್ಮ ಶುಭ ಸಂಖ್ಯೆಗಳು. ನೀವು ಜೂನ್ ಅಥವಾ ನವಂಬರ್ ತಿಂಗಳಲ್ಲಿ ಹುಟ್ಟಿದವರನ್ನು ಮದುವೆ ಮಾಡಿಕೊಳ್ಳುವುದು ಒಳ್ಳೆಯದು.

ಜುಲೈ ತಿಂಗಳಲ್ಲೋ?

ಹಾಗಾದರೆ ನೀವು ಗೃಹಾಭಿಮಾನಿಗಳು; ಸುಖವಾಗಿ ಸಂಸಾರ ನಡಿಸಿಕೊಂಡಿರುವುದರಲ್ಲಿ ನಿಮಗೆ ಬಹು ಆಸಕ್ತಿ. ನಿಮ್ಮ ದಾಂಪತ್ಯ ಸುಖ ಚೆನ್ನ.

ಸುಂದರವೂ, ಕಲಾಪೂರ್ಣವೂ ಆದ ವಸ್ತುಗಳ ಮೇಲೆ ನಿಮಗೆ ವಿಶೇಷ ಅಭಿಮಾನ, ಒಳ್ಳೆಯ ಬಟ್ಟೆ ಬರೆಗಳನ್ನು ಹಾಕಿಕೊಂಡು ಅಲಂಕಾರ ಮಾಡಬೇಕೆಂಬ ಆಸೆ ಹೆಚ್ಚು, ಬಹಳ ಬೆಲೆ ಬಾಳುವ ಬಟ್ಟೆಗಳಿಗೆ ದುಡ್ಡು ಹಾಕುವುದುಂಟು.

'ಛಲಬಿಟ್ಟ' ಅಂದರೆ ಮಣ್ಣು ಮುಕ್ಕುವ ಸ್ವಭಾವ ನಿಮ್ಮದು. ಹೊಗಳು ಭಟ್ಟರ ಬಲೆಗೆ ಬಹುಬೇಗ ಬಿದ್ದು ಬಿಡುವಿರಿ. ಆದುದರಿಂದ ಹೊಗಳಿಕೆಯ ಮಾತಿಗೆ ಬೆಲೆ ಕೊಡದೆ ನಿಮ್ಮ ಬುದ್ಧಿಯನ್ನನುಸರಿಸಿ ನಡೆಯುವುದೇ ನಿಮಗೆ ಸುಖವನ್ನು ತರುವುದು.

ನಿಮ್ಮ ಮನಸ್ಸು ಬಹು ಮೃದು. ಆದುದರಿಂದ ನೀವು ಯಾವಾಗಲೂ ಯೋಗ್ಯರಾದವರ ಸಹವಾಸದಲ್ಲೇ ಇರಬೇಕು. ನಿಮ್ಮ ವ್ಯವಹಾರವೆಲ್ಲಾ ಯೋಗ್ಯರ ಸಂಗಾತವೇ ಇರಬೇಕು; ಇಲ್ಲದಿದ್ದರೆ ನೀವು ಮನಸ್ಸಿಗೆ ಅತ್ಯಧಿಕವಾದ ಚಿಂತೆಯನ್ನು ಹಚ್ಚಿಕೊಂಡು ಕೊರಗುವಿರಿ. ಸುಖ ಸಂತೋಷ ಪ್ರದವಾದ ವಾತಾವರಣದಲ್ಲೇ ನೀವಿರುವುದೇ ಹಿತಕರವು.

ನೀವು ಭಾವನಾಶಾಲಿಗಳು; ಬುದ್ಧಿವಂತರು. ನೀವು ಉತ್ತಮ ವರ್ಗದ ವಾಗ್ಮಿಗಳೂ, ಲೇಖಕರೂ ಆಗಲು ಸಾಧ್ಯ. ನೀವು ಸ್ನೇಹಪರರು; ಇತರರ ಕಷ್ಟಕ್ಕಾಗಿ ಮರುಗತಕ್ಕಂತವರು. ಸಾಮಾನ್ಯವಾಗಿ ಜುಲೈ ತಿಂಗಳಲ್ಲಿ ಹುಟ್ಟಿದವರಲ್ಲನೇಕರು ಸಮಾಜ ಸೇವಕರಾಗಿ ದುಡಿದು ಲೋಕೋದ್ಧಾರ ಮಾಡಿದ್ದಾರೆ.

ನೀವು ಪ್ರತಿ ತಿಂಗಳ ೩ ಮತ್ತು ೧೩ನೇ ತಾರೀಖಿನ ದಿನ ಜಾಗ್ರತೆಯಿಂದಿರಬೇಕು. ಯಾಕೆಂದರೆ, ಆ ದಿನಗಳಲ್ಲಿ ನೀವು ಅಶುಭ ಫಲ ಕೊಡುವಂಥ ಕಾರ್ಯಗಳನ್ನು ಮಾಡಬಹುದು.

ನಿಮಗೆ ಅಜೀರ್ಣ, ಹೊಟ್ಟೆನೋವಿನ ಬಾಧೆ ಹೆಚ್ಚು; ಸೋಮವಾರ ನಿಮ್ಮ ಶುಭ ದಿವಸ, ೩ ಮತ್ತು ೭ನೇ ಸಂಖ್ಯೆಗಳು ನಿಮ್ಮ ಶುಭ ಸಂಖ್ಯೆಗಳು. ಪಚ್ಚೆಯು ನಿಮ್ಮ ಶುಭ ರತ್ನ. ನೀವು ಜನವರಿ, ಮಾರ್ಚ್ ಅಥವಾ ನವಂಬರ್ ತಿಂಗಳಲ್ಲಿ ಜನ್ಮಿಸಿದವರನ್ನು ವಿವಾಹವಾಗುವುದು ಒಳ್ಳೆಯದು.

ಆಗೊಸ್ಟು ತಿಂಗಳಲ್ಲೋ?

ಹಾಗಾದರೆ ನೀವು ಸ್ವತಂತ್ರ ಆಲೋಚಕರು ಮತ್ತು ಉತ್ತಮವಾದ ಬುದ್ಧಿ ಶಕ್ತಿಯುಳ್ಳವರು. ನೀವು ನಿಮ್ಮ ಅಂತಃಪ್ರೇರಣೆಯನ್ನನುಸರಿಸಿ ನಡೆಯುವಿರಿ. ಅಲ್ಲದೆ ಆ ಪ್ರೇರಣೆಯು ನಿಮಗೆ ಯಾವಾಗಲೂ ಶುಭವನ್ನುಂಟುಮಾಡುವುದು. ಧಾರ್ಮಿಕ ಕ್ಷೇತ್ರದಲ್ಲಿ ನೀವು ಉತ್ಕೃಷ್ಟ ಸಾಧನೆಯನ್ನು ಮಾಡುವಿರಿ. ನಿಮ್ಮ ಬುದ್ಧಿಗೆ ತೋರಿದಂತೆ ನೀವು ನಡೆಯುತ್ತಿದ್ದಲ್ಲಿ ನಿಮಗೆ ಶುಭವಾಗುವುದು.

ಸಂತೋಷಶೀಲರಾಗಿರುವುದೇ ನಿಮ್ಮ ಸ್ವಭಾವ. ನಿಮ್ಮ ಆಶೆ ಒಳ್ಳೆಯ ವಸ್ತುಗಳ ಮೇಲೆ ಹರಿಯುವುದಲ್ಲದೆ, ಹೀನ ವಸ್ತುವಿನ ಕಡೆಗೆ ಹೋಗದು.

ನಿಮಗೆ ಕೋಪ ಬಹು ಹೆಚ್ಚು; ನೀವು ಕೋಪಿಸಿಕೊಳ್ಳುವುದೂ ಬೇಗ ಶಮಿಸುವುದೂ ಬೇಗ. ನೀವು ಶಾಂತರಾಗಿರಲು ಯತ್ನಿಸತಕ್ಕದ್ದು ನಿಮ್ಮ ಪ್ರಥಮ ಕರ್ತವ್ಯ.

ನಿಮ್ಮ ಧ್ಯೇಯಗಳೂ, ಭಾವನೆಗಳೂ ಶ್ರೇಷ್ಠವೂ ಉದಾತ್ತವೂ ಆದವು. ಪ್ರತಿ ತಿಂಗಳ ೯ ಮತ್ತು ೧೮ನೇ ತಾರೀಕಿನ ದಿವಸ ನೀವು ಎಚ್ಚರಿಕೆಯಿಂದಿರತಕ್ಕದ್ದು.

ಭಾನುವಾರವು ನಿಮ್ಮ ಶುಭ ದಿವಸ, ಕೆಂಪುಗಳೂ ವಜ್ರಗಳೂ ನಿಮಗೆ ಶುಭ ರತ್ನಗಳು, ೫ ಮತ್ತು ೭ ಇವು ನಿಮ್ಮ ಶುಭ ಸಂಖ್ಯೆಗಳು. ನೀವು ಸೆಪ್ಟೆಂಬರ್ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ ಹುಟ್ಟಿದವರನ್ನು ಮದುವೆಯಾಗುವುದು ಒಳ್ಳೆಯದು.

'ಪ್ರ. ಮ.'

ನೋಟೀಸ್.

ಕೊಡಗು ಸಬ್ ಜಡ್ಜಿಯವರ ಕೋರ್ಟ್ ದಾವೆ ನಂಬರು 565/1932ರ ಮುಕ್ಕಾಂ ಮೇರೆ ತಾರೀಖು 29—8—'32ರಲ್ಲಿ ಹರಾಜಿಗೆ ಇಟ್ಟಿರುವ ಆಸ್ತಿಗಳನ್ನು ಸದರಿ ದಿನ ಹರಾಜು ಮಾಡುವುದಿಲ್ಲವೆಂಬ ಸಂಗತಿ ಈ ಮೂಲಕ ಸಕಲರಿಗೂ ತಿಳಿಸಲಾಗಿದೆ.

ಕೊಡಗು ಸಬ್ ಜಡ್ಜಿಯವರ ಕೋರ್ಟ್, ಮಡಿಕೇರಿ, ತಾರೀಖು 27—8—32.

P. Medapa.
Sub-Judge.

COORG FOREST DEPARTMENT, SOUTH DIVISION.

NOTICE.

Mercara, the 23rd August 1932.

Tenders are invited for the lease of the following building situated at Virajpet for a period of 7 months with effect from 1st September 1932. Tenders should reach the office of the Divisional Forest Officer, South Coorg, on or before 26—8—1932.

Extra Assistant Conservator's (Veterinary Assistant Surgeon's) quarters, kitchen, servants' quarter and motor shed or stable.

For further particulars, please apply to the DIVISIONAL FOREST OFFICER, SOUTH COORG, MERCARA.

Wanted.

A lady teacher proficient in English and Kanarese to educate at home in Madura three childern aged 8, 6 and 5 years. Pay according to qualifications with free boarding and lodging.

Apply to— 'X'
C/o. "Kodagu" Ltd. Mercara.

ಬಾಲಾರ್ಕಮಧು.

ಬಾಲಾರ್ಕಮಧು ಮಕ್ಕಳಿಗೆ ಕೊಡುವುದರಿಂದ ಶಕ್ತಿಯೂ ಆರೋಗ್ಯವೂ ಹೆಚ್ಚುವುದು. ಇದು ಮಧುರವಾಗಿದೆ. ಬೆಲೆ ಶೀಸೆ 1ಕ್ಕೆ 0—12—0 ಟಿ. ಖ. 0—12—0.



(Spleen Lever enlargement) ಎಂಬ ಮಕ್ಕಳ ಭಯಂಕರ ಗಡ್ಡೆ ರೋಗ—ಪ್ಲೀಹ—ಪಿತ್ತಕೋಶದ ಗಡ್ಡೆಗೆ ಚಕ್ರದಿಂದು. ಚಕ್ರ ಚಾಕ್ರ—ಚಕ್ರಚೂರ್ಣ—ಚಕ್ರ, ದ್ರಾವ—ಈ ನಾಲ್ಕು ಮಹೌಷಧಗಳಿವೆ. ಸಾವಿರಾರು ಮಕ್ಕಳ ಪ್ರಾಣವನ್ನು ಉಳಿಸಿವೆ; ನಾಲ್ಕು ಔಷಧಗಳು ಸೇರಿ 1 ತಿಂಗಳ ಔಷಧದ ಬೆಲೆ 3—0—0. ಟಿ. ಖ. 0—8—0. ಏಜೆಂಟರು ಬೇಕಾಗಿರುವರು.

ಪ. ಎ. ಮುನ್. ಶ್ರೀನಿವಾಸರಾವ್,
ವೈ. ವಿ. ಆಯುರ್ವೇದಭಿಷಕ್,
Spleen & Lever ಸ್ಪೆಶಲಿಸ್ಟ್.
ಯಂ. ವಿ. ಪ್ರಸಾದಿಕ ಔಷಧಾಲಯ
ಶಿವಮೊಗ್ಗ, (ಮೈಸೂರು ಸೀಮೆ)

ಬ್ರಾಂಚ್ ಆಫೀಸ್, ಉಡುಪಿ. S. K.
52-32

ಸಣ್ಣ ಖರ್ಚಿನಿಂದ ದೊಡ್ಡ ಲಾಭಗಳು.

ನಮ್ಮ, ಮದುವೆಯ ಸ್ತ್ರೀಧನ, ಹಣಗಳ, ಜೀವನಾರಂಭ ಮತ್ತು ಬೋನಸ್ ಆರ್ಡರ್‌ಗಳು ಮದುವೆ, ಮಕ್ಕಳ ಹುಟ್ಟುವಿಕೆ ಮುಂತಾದ ಕಾಲಗಳಲ್ಲಿ ನಿಮಗೂ, ನಿಮ್ಮ ಮಕ್ಕಳಿಗೂ ಬಹು ಸ್ವಲ್ಪ ಖರ್ಚಿನಿಂದ ದೊಡ್ಡ ಲಾಭಗಳನ್ನು ತರುವವು.

ಬಹು ಅಪರೂಪದ ಅವಕಾಶ.

ನಮ್ಮ ಕ್ಯಾಷ್ ಮತ್ತು ಕ್ರೆಡಿಟ್ ಸರ್ಟಿಫಿಕೇಟುಗಳು ನಿಮ್ಮ ಅವಶ್ಯಕತೆಗಳಿಗೆ ಬೇಕಾದ ಸಾಲಗಳನ್ನು ಒದಗಿಸಿ ಕೊಡುವವು.

ಬೇಕಾಗಿದೆ.

ಒಳ್ಳೇ ಸಂಬಳ ಮತ್ತು ಕಮಿಷನಿನ ಮೇಲೆ ಕೆಲವು ಸ್ತ್ರೀಯರು ಮತ್ತು ಗಂಡಸರು ಏಜೆಂಟರುಗಳಾಗಿ ಬೇಕಾಗಿದ್ದಾರೆ.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಎಂ. ಟಿ. ಜಿ. ಬ್ರೌನ್,
ಆರ್ಗನೈಸಿಂಗ್ ಮೇನೇಜರ್,
ದಿ ಕಲ್ಕತ್ತಾ ಫೈನಾನ್ಸ್ ಏಜೆನ್ಸಿ
ಅಂಡ್ ಸಿಂಡಿಕೇಟ್ ಲಿಮಿಟೆಡ್,
ಮಡಿಕೇರಿ.

ಅಥವಾ

ದಿ ಬ್ರಾಂಚ್ ಸೆಕ್ರೆಟರಿ,
ದಿ ಕಲ್ಕತ್ತಾ ಫೈನಾನ್ಸ್ ಏಜೆನ್ಸಿ ಅಂಡ್
ಸಿಂಡಿಕೇಟ್ ಲಿಮಿಟೆಡ್,
179 ನರಸಿಂಹ ರಾಜ ರೋಡ್,
ಬೆಂಗಳೂರು ಸಿಟಿ.

(4-4)

ಕೋಮುವಾರು ಚುನಾವಣೆಯ ಹಂಚಿಕೆ.

ಮಧ್ಯ ಪ್ರಾಂತ್ಯದ ಬದಲಿ ಗವರ್ನರಾಗಿದ್ದ ಮಿ. ಯಸ್. ಟಾಂಬೆಯವರು ಕೊಟ್ಟ ಅಭಿಪ್ರಾಯ.

ನಾನು ಯಾವಾಗಲೂ ಕೋಮುವಾರು ಚುನಾವಣೆಗೆ ವಿರೋಧವಾಗಿದ್ದೇನೆ. ಈ ತೀರ್ಮಾನವು ಸಂಪೂರ್ಣ ಅತೃಪ್ತಿಯಾಗಿದೆ. ಇದರಲ್ಲಿ ಕೋಮುವಾರು ಪ್ರತ್ಯೇಕವಲ್ಲದೆ ಪಂಗಡವಾರು ಭೇದ ಸಹ ಮಾಡಲಾಗಿದೆ. ತೀರ್ಮಾನವನ್ನೂ, ಮಂತ್ರಿಯವರ ವಿವರಣೆಯನ್ನೂ ಓದಿದರೆ ಸರಕಾರವು ತನ್ನ ಅಭಿಪ್ರಾಯಕ್ಕೆ ಸರಿಯಾಗಿ ನಡೆಯಲು ಧೈರ್ಯವಿಲ್ಲದ್ದಾಗಿದೆ, ಅಥವಾ ಬೇರೆ ಏನೋ ವಿಷಯವು ಗುಪ್ತವಾಗಿ ಕೆಲಸ ಮಾಡುತ್ತಿದೆಯೆಂತ ತೋರುತ್ತದೆ. ಅಸ್ಪೃಶ್ಯರ ಸಂಬಂಧವೊಂದು ವಿನಹ ಬೇರೆ ಎಲ್ಲಾ ಬಾಬುಗಳಲ್ಲೂ ಕಡಿಮೆ ಸಂಖ್ಯೆ ಕೋಮಿನವರು ಲಂಡನಿನಲ್ಲಿ ಮಾಡಿಕೊಂಡ ಒಪ್ಪಂದವನ್ನು ಅನುಸರಿಸಿದೆ. ಲೀಗ್ ಆಫ್ ನೇಶನ್ಸ್‌ನಲ್ಲಿ ಕಡಿಮೆ ಸಂಖ್ಯೆ ಕೋಮಿನವರಿಗೆ ಇಟ್ಟಿರುವ ಭದ್ರತೆಯನ್ನೇ ಅನುಸರಿಸಿದ್ದರೆ ಸಾಕಿತ್ತು. ಸರಕಾರವು ಈ ತೀರ್ಮಾನವನ್ನು ಕೊಡಲು ಒಪ್ಪಬೇಕಿತ್ತಿಲ್ಲ. ತೀರ್ಮಾನ ಮಾಡಲು ಒಪ್ಪಿದರೂ ಸಹ ಕಡಿಮೆ ಸಂಖ್ಯೆಯ ಕೋಮಿನವರು ತಮಗೆ ಬೇಕೆಂತ ಕೇಳಿದ ಹಕ್ಕುಗಳನ್ನು ಕೊಡಬೇಕೆಂತಿತ್ತಿಲ್ಲ. ಒಟ್ಟು ಹಿಂದೂಸ್ಥಾನದ ಕ್ಷೇಮಕ್ಕೆ ಯಾವ ಏರ್ಪಾಡು ಉತ್ತಮವೆಂದು ಯೋಚಿಸಿ ಅಂಥಾ ಏರ್ಪಾಡಿಗೆ ವಿರೋಧವಿಲ್ಲದಂತೆ ಕಡಿಮೆ ಸಂಖ್ಯೆಯ ಕೋಮಿನವರಿಗೆ ಭದ್ರತೆಗಳನ್ನು ಕಲ್ಪಿಸಿಕೊಡಬೇಕಿತ್ತು. ಕಡಿಮೆ ಸಂಖ್ಯೆಯ ಕೋಮಿನವರು ತಮ್ಮ ಕ್ಷೇಮಕ್ಕೆ ಅತ್ಯವಶ್ಯವೆಂತ ಹೇಳುವ ಭದ್ರತೆಗಳನ್ನು ಕೊಡಲೇಬೇಕೆಂತ ಸರಕಾರವು ತೀರ್ಮಾನಿಸುವುದಾದರೆ ಪಂಜಾಬಿನಲ್ಲಿ ಕಡಿಮೆ ಸಂಖ್ಯೆಯಲ್ಲಿರುವ ಹಿಂದುಗಳೂ, ಸಿಕ್ಖರೂ, ಮತ್ತು ಬಂಗಾಳ, ವಾಯುವ್ಯ ಪ್ರಾಂತ್ಯಗಳಲ್ಲಿ ಕಡಿಮೆ ಸಂಖ್ಯೆಯವರಾಗಿರುವ ಹಿಂದುಗಳು ಕೇಳುವ ಭದ್ರತೆಯಾದ ಒಟ್ಟುಗೂಡಿ ನಡೆಯುವ ಚುನಾವಣೆಯ ಏರ್ಪಾಡನ್ನು ಯಾಕೆ ಮಂಜೂರು ಮಾಡಲಿಲ್ಲ? ಪ್ರತ್ಯೇಕ ಚುನಾವಣೆ ಬೇಡವೆಂತ ಕಡಿಮೆ ಸಂಖ್ಯೆಯವರು ಹೇಳಿದಾಗ ಬಲಾತ್ಕಾರದಿಂದ ಪ್ರತ್ಯೇಕ ಚುನಾವಣೆ ಕೊಡದಿರುವ ಹಿಂದಿನ ಉದಾಹರಣೆಗಳನ್ನು ಈಗ ಯಾಕೆ ಜಾರಿಗೆ ತರಲಿಲ್ಲ? ಬೊಂಬಾಯಿಯಲ್ಲೂ ಅಸ್ಸಾಮಿನಲ್ಲೂ ಬಹು ಸಂಖ್ಯಾತರಾದ ಹಿಂದುಗಳು ಕಡಿಮೆ ಸಂಖ್ಯೆಯ ದರ್ಜೆಗೆ ಇಳಿಸಲ್ಪಟ್ಟಿದ್ದಾರೆ. ಚುನಾವಣೆಯ ಸ್ಥಳಗಳ ಹಂಚಿಕೆಯಿಂದ ಇದು ಸ್ಪಷ್ಟವಾಗುತ್ತದೆ.

ಸಾರ್ವಜನಿಕ ಚುನಾವಣೆಯೆಂತ ಹೇಳುವ ಗುಂಪಿನಲ್ಲಿ ಹಿಂದುಗಳು ಮಾತ್ರವಲ್ಲ, ಮುಸಲ್ಮಾನ್, ಯೂರೋಪಿಯನ್, ಮತ್ತು ಆಂಗ್ಲೋ ಇಂಡಿಯನ್ ವಿನಹ ಇತರ ಎಲ್ಲರೂ ಓಟು ಮಾಡಬಹುದು. ಪಂಜಾಬಿನಲ್ಲಿ ಬೇರೆ ಕೋಮಿನವರಿಗೆ ಹಿಂದುಗಳ ಸ್ಥಳಗಳಿಂದ ಹೆಚ್ಚಿಗೆ ಸ್ಥಳಗಳನ್ನು ಹಂಚಿಕೊಟ್ಟಿದ್ದಾರೆ. ಅದರಿಂದ ಹಿಂದುಗಳಿಗೆ ತಮ್ಮ ಜನ ಸಂಖ್ಯೆಗೆ ತಕ್ಕಷ್ಟು ಸ್ಥಳ ಸಹ ದೊರಕಲಿಲ್ಲ. ಈ ತೀರ್ಮಾನದಿಂದ ರಾಜಕೀಯ ಕ್ಷೇತ್ರದಲ್ಲಿ ಹಿಂದುಗಳ ಗಣನೆಯೇ ಆಷ್ಟು ಕಡಿಮೆ ಮಾಡಿದಂತಾಗಿದೆ.

ಹೆಂಗಸರಿಗೆ ತಮ್ಮ ಅಪೇಕ್ಷೆಗೆ ವಿರೋಧವಾಗಿ ಕೋಮುವಾರು ಚುನಾವಣೆ ಕೊಡಲಾಗಿದೆ. ಹೆಂಗಸರು ತಮ್ಮ ಪ್ರತಿನಿಧಿಗಳು ಕೋಮುವಾರು ಚುನಾವಣೆಯಿಂದ ಬರಬೇಕೆಂತ ಕೇಳಲೇ ಇಲ್ಲ. ಕೋಮುವಾರು ಚುನಾವಣೆ ಕೊಡುವುದಕ್ಕಿಂತ ಹೆಂಗಸರಿಗೆ ಸ್ಥಳ ಕೊಡದೆ ಇದ್ದರೆ ಮೇಲೆಂತ ಅವರು ಹೇಳಿದ್ದರು. ಹೆಂಗಸರ ಸ್ಥಳಗಳನ್ನು ಎಲ್ಲಾ ಕೋಮಿಗೂ ಹಂಚಲಾಗಿದೆ. ಬಂಗಾಳದಲ್ಲಿ ಆಂಗ್ಲೋ ಇಂಡಿಯನರಿಗೆ ಕೊಟ್ಟ ನಾಲ್ಕು ಸ್ಥಳಗಳಲ್ಲಿ ಒಂದನ್ನು ಹೆಂಗಸರಿಗೆ ಕೊಟ್ಟಿರುವಾಗ ಯೂರೋಪಿಯನರಿಗೆ ಕೊಟ್ಟ 11 ಸ್ಥಳಗಳಲ್ಲಿ ಹೆಂಗಸರಿಗೆ ಯಾಕೆ ಎಡೆಕೊಡಲಿಲ್ಲ? ಆಂಗ್ಲೋ ಇಂಡಿಯನರಲ್ಲಿ ಹೆಂಗಸರ ಸ್ಥಿತಿಯು ಬೇರೆಯಾಗಿದೆಯೇನು? ಒಂದು ತತ್ವವನ್ನೇ ಎಲ್ಲಾ ಬಾಬುಗಳಲ್ಲೂ ಹಿಂಬಾಲಿಸಿದಂತೆ ಕಾಣುವುದಿಲ್ಲ. ಮಧ್ಯ ಪ್ರಾಂತ್ಯದಲ್ಲಿ ಕೆಲವು ನೂರು ಸಂಖ್ಯೆ ಮಾತ್ರ ಇರುವ ಯೂರೋಪಿಯನರಿಗೂ ಆಂಗ್ಲೋ ಇಂಡಿಯನರಿಗೂ ಒಂದೊಂದು ಸೀಟು ಕೊಟ್ಟಿರುವಾಗ ಸಂಖ್ಯೆಯಲ್ಲಿ ಸಾವಿರಾರು ಇರುವ ಕ್ರಿಶ್ಚಿಯನರಿಗೆ ಯಾಕೆ ಬೇರೆ ಸ್ಥಳ ಕೊಡಲಿಲ್ಲ? ಈಗಿನ ಪ್ರಾಂತೀಕ ಕೌನ್ಸಿಲುಗಳಲ್ಲಿ ಒಂದು ಡಜನ್ ತರದ ಚುನಾವಣೆಯ ಭಾಗಗಳು ಇರುತ್ತವೆ. ಒಹ ಕೇಲ ಅಷ್ಟೇ ಸಂಖ್ಯೆಯ ಗುಂಪುಗಳೂ ಚುನಾಯಿತ ಸಭೆಯಲ್ಲಿ ಆಗಬಹುದು.

ದಿವಾನ್ ಬಹದೂರ್ ಟಿ. ರಂಗಚಾರಿಯವರ ಅಭಿಪ್ರಾಯ.

ನಮ್ಮೊಳಗೆ ಇರುವ ವ್ಯತ್ಯಾಸಗಳನ್ನು ನಾವೇ ತೀರಿಸಿಕೊಳ್ಳಲು ಸಾಧ್ಯವಾಗದ್ದಕ್ಕೆ ನಾವೇ ಜವಾಬ್ದಾರರಾಗಿದ್ದರೂ ಒಂದು ದೊಡ್ಡ ಮತ್ತು ರಕ್ಷಕ ಜನಾಂಗವಾದ ಬ್ರಿಟಿಷರು ರಾಷ್ಟ್ರೀಯತ್ವವನ್ನು ನಾಶ ಮಾಡುವ ಕೋಮುವಾರು ಚುನಾವಣೆಯನ್ನು ಮುಂದರಿಸುವುದು ಮಾತ್ರವಲ್ಲ, ಹೆಚ್ಚಿಸಿ ವಿಸ್ತರಿಸಿದ್ದಕ್ಕೆ ಸಬಬು ಇಲ್ಲ. ಬ್ರಿಟಿಷ್ ರಾಜಪುರುಷರಿಂದ ಉತ್ತಮ ತೀರ್ಮಾನವನ್ನು ನಿರೀಕ್ಷಿಸಿದ್ದೆ. ಈ ಕಠಿಣ ಸಮಸ್ಯೆಯನ್ನು ಬಿಡಿಸುವುದರಲ್ಲಿ ಬ್ರಿಟಿಷ್ ಸರ್ಕಾರವು ಧೈರ್ಯವನ್ನು ಪ್ರದರ್ಶಿಸಲಿಲ್ಲ. ಮಂತ್ರಿಯವರು ಕ್ಷಮೆ ಬೇಡಿಕೊಂಡ…

…ಮುವಾರು ಚುನಾವಣೆಯು ಕೆಟ್ಟದಾದರೂ ಅದನ್ನು ಇಟ್ಟುಕೊಂಡದ್ದೆಂತ ಗೊತ್ತಾಗುತ್ತದೆ. ಹಿಂದೂಸ್ಥಾನಕ್ಕೆ ಜನಾಂಗಗಳ ಕೂಟದಲ್ಲಿ ಹೊಸ ಸ್ಥಾನ ಕೊಡುವುದೇ ಸರ್ಕಾರದ ಉದ್ದೇಶವೆಂತ ಮೆಕ್ಡೊನಾಲ್ಡರು ಸುರಿಸುವ ಕಣ್ಣೀರು ನಿಜವಾದದ್ದಲ್ಲ. ಹೊಸ ಸ್ಥಾನವೇನೋ ಹೌದು, ಅಂದರೆ ಅನ್ಯೋನ್ಯ ಕಚ್ಚಾಡಿಕೊಳ್ಳುವ ಗದ್ದಲವೆಬ್ಬಿಸುವ ಸ್ಥಾನವಾಗಿದೆ. ಕೋಮುವಾರು ಬೇಧವನ್ನು ಹೆಚ್ಚಿಸಿ ಸುಲಭವಾಗಿಯೇ ಜನಾಂಗವನ್ನು ನಾಶ ಮಾಡುವ ಶಕ್ತಿ ಕೋಮುವಾರು ವಿಷಕ್ಕೆ ಕೊಟ್ಟಂತಾಗಿದೆ. ಈಗಾಗಲೇ ಸಮಾಜದಲ್ಲಿ ಇರುವ ಬಿರುಕುಗಳು ಇನ್ನೂ ಅಗಲವಾಗುವಂತೆ ಕೀಲುಗಳನ್ನು ಹೊಡೆದಂತಾಗಿದೆ. ಕೋಮುಗಳೇ ತಮ್ಮ ವ್ಯತ್ಯಾಸಗಳನ್ನು ತೀರಿಸಿಕೊಂಡಾದ ಮೇಲೆ ಸೂಚಿಸಿದ ಏರ್ಪಾಡು ಪ್ರಮಾಣವೆಂತ ಕಾಣಿದ್ದಲ್ಲ. ಒಂದೇ ಪಾರ್ಟಿಗೆ ಸಹಾಯವಾಗುವ, ಅಪೀಲಿಲ್ಲದ, ಬದಲು ಮಾಡಲಾಗದ ತೀರ್ಪನ್ನು ಬಿಟ್ಟಿಯು ಕೊಟ್ಟ ನಂತರ ಯಾವ ಪಾರ್ಟಿಗಳು ರಾಜಿ ಮಾಡಿಕೊಂಡಾರು? ಒಂದು ನಿಯಮಿತ ಕಾಲದನಂತರ ಈ ಕೋಮುವಾರು ವಿಷವು ತಾನಾಗಿಯೇ ಹೊರಟು ಹೋಗುವಂತಾದರೂ ಮಾಡಿದ್ದರೆ ರಾಜಿಗೆ ಎಡೆಯಿತ್ತು. ಆದರೆ ಅದನ್ನು ಅಸಾಧ್ಯವಾಗಿ ಮಾಡಿಬಿಟ್ಟಿದ್ದಾರೆ. ಹತ್ತು ವರ್ಷಗಳಲ್ಲಿ ದೇಶದಲ್ಲಿ ಇದ್ದ ರಾಷ್ಟ್ರೀಯತ್ವವೆಲ್ಲವೂ ಹೊರಟು ಹೋಗುತ್ತದೆ.

ಇನ್ನು ಮುಂದೇನು? ಇಂಥಾ ಸುಗಳಾದ ಕೋಮಿನ ಹೊಸ ಜನಾಂಗವೇನಾದರೂ ಹುಟ್ಟಿದರಾಯಿತು. ಇಲ್ಲವಾದರೆ ರಾಷ್ಟ್ರೀಯತ್ವವು ಬೆಳೆಯುವ ಎಡೆಯೇ ಇಲ್ಲ. ಬ್ರಿಟಿಷ್ ಜನಾಂಗಗಳ ಕೂಟದಲ್ಲಿ ಹಿಂದೂಸ್ಥಾನಕ್ಕೆ ಗೌರವದ ಸ್ಥಾನ ದೊರಕುವುದೇ ಇಲ್ಲ. ಬ್ರಿಟಿಷ್ ರಾಜಮಂತ್ರಿಗಳು ಹಿಂದೂಸ್ಥಾನವನ್ನು ಕ್ರಾಂತಿಗೆ ತಯಾರಿಸುವಂತೆ ಕಾಣುತ್ತದೆ.

ಈಗ ಮುಸಲ್ಮಾನರಿಗೆ ಜಯವೆಂತ ತೋರಬಹುದು. ಅದಲ್ಲ. ಇಲ್ಲಿ ಅಧಿಕಾರ ನಡೆಸುವವರಿಗೆ ಜಯವಾಯಿತು. ಅವರ ಬಾಲ ಹಿಡಿದುಕೊಂಡೇ ಮುಸಲ್ಮಾನರು ಇರಬೇಕಾಗಿದೆ.

ರವೀಂದ್ರನಾಥ ಠಾಕೂರರ ಅಭಿಪ್ರಾಯ

ನಮ್ಮ ಸ್ವಭಾವದ ದೃಢ ನಿಶ್ಚಯವನ್ನೂ, ನಮ್ಮ ಅಭಿಲಾಷೆಯನ್ನೂ ಅರಿಯುವಾಗ ಸರ್ಕಾರದ ವರ್ತನೆಗಳಿಗೆ ಆಕ್ಷೇಪಿಸುವುದೇ ಪ್ರಯೋಜನವಿಲ್ಲವೆನ್ನುವ ಸ್ಥಿತಿ ಬಂದಿದೆ. ತನ್ನ ಸ್ವಾರ್ಥಕ್ಕಾಗಿ ನಮ್ಮ ಜನರೊಳಗೆ ಇರುವ ಮನಸ್ತಾಪಗಳನ್ನು ಶಾಶ್ವತಗೊಳಿಸುವ ಅಧಿಕಾರಿಗಳಿಂದ ನಮ್ಮ ದೇಶಕ್ಕೆ ನ್ಯಾಯ ಹೇಗೆ ದೊರಕೀತು? ಈ ಧಾರ್ಷ್ಟ್ಯ ವರ್ತನೆಯಿಂದ ಆಗುವ ದುಷ್ಪರಿಣಾಮವೇನಾದೀತೆಂತ ಸಹ ಯೋಚಿಸುವುದಿಲ್ಲ. ಇದರಿಂದ ತಮ್ಮ ದೇಶಕ್ಕೆ ಸಹ ಕೆಡುಕಿದೆ. ಕಾರಣ ದುಃಖವಾದ ನಮ್ಮ ಆಕ್ಷೇಪಗಳಿಗೆ ಕಿವಿಗೊಡದಿರುವಾಗ ಮೌನವಾಗಿರುವುದೇ ಮೇಲೆಂತ ನಾನು ನಂಬುತ್ತೇನೆ. ಒಂದು ಆಕ್ಷೇಪಣೆಯಿಂದ ಪ್ರಯೋಜನವಾದೀತೆಂತ ನೀವು ನಂಬುವಂತೆ ಕಾಣುತ್ತದೆ. ಆದರೆ ನನಗೆ ಅಂಥ ನಂಬಿಕೆಯೇನೂ ಇಲ್ಲ. ನಮಗೆ ತೋರಿದ ಕೆಲಸಗಳನ್ನು ನಡೆಸಲು ನಮಗೆ ಸ್ವಾತಂತ್ರ್ಯವಿರುವಷ್ಟು ಮಟ್ಟಿಗೆ ನಮ್ಮ ಸಮಾಜವು ಪ್ರಯತ್ನಿಸಬೇಕೆಂತ ಮಾತ್ರ ಹೇಳುತ್ತೇನೆ. ನಮ್ಮ ಸಮಾಜವನ್ನು ಒಡೆದು ನಾಶಪಡಿಸುವ ಈ ಪ್ರಯತ್ನವು ಸಫಲವಾಗದಂತೆ ಏನು ಮಾಡಬೇಕೆಂಬುದನ್ನು ಅನುಭವವಿರುವ ನಮ್ಮ ರಾಜಕೀಯ ಮುಂದಾಳುಗಳು ತೀರ್ಮಾನಿಸಬೇಕಷ್ಟೆ.

(ಇದು ಮಿ. ಸಿ. ವೈ. ಚಿಂತಾಮಣಿಯವರಿಗೆ ಕೊಟ್ಟ ತಂತಿ ವರ್ತಮಾನ.)

ಕೊಡಗಿನ ಭವಿಷ್ಯತ್ತು.

(ಕೊಡಗನ್ನು ಮೈಸೂರಿಗೆ ಸೇರಿಸಬೇಕೆನ್ನುವ ಶ್ರೀಮತಿ ಡಿ. ಸಾಕಮ್ಮನವರ ಬರೆದಿದ್ದ ಲೇಖನಕ್ಕೆ ಉತ್ತರವಾಗಿ ಕೊಡಗು ಮತ್ತು ಮೈಸೂರಿನಲ್ಲಿ ಕಾಫಿ ತೋಟಗಳಿರುವ ಮಿ. ಎಲ್. ನ್ಯೂಕಮ್ ಎಂಬ ಯೂರೋಪಿಯನ್ ಪ್ಲಾಂಟರು "ಮದ್ರಾಸ್ ಮೆಯಿಲ್" ಪತ್ರಿಕೆಗೆ ಬರೆದ ಲೇಖನದ ತರ್ಜುಮೆ.)

ಕೊಡಗಿನ ನಿವಾಸಿಗಳಲ್ಲಿ ದೇಶದಲ್ಲಿ ಆಸ್ತಿಯಿರುವವರೆಲ್ಲರನ್ನೂ ಒಳಕೊಂಡ ದೇಶದ ತೊಂಭತ್ತೆಂಟು ಭಾಗವು ಕೊಡಗು ಮದ್ರಾಸಿಗೆ ಸೇರುವ ಬಗೆಯಲ್ಲಿ ಸಂಪೂರ್ಣ ವಿರೋಧಿಗಳಿದ್ದಾರೆ. ಉಳಿದ ಚಿಕ್ಕ ಭಾಗವು ಮದ್ರಾಸ್ ಹೈಕೋರ್ಟಿಗೆ ಸುಲಭವಾಗಿ ಹೋಗಲು ಅನುಕೂಲ ದೊರೆಕೆಂಬ ಆಶೆ ಇರುವ ಅಲ್ಪ ಸ್ವಲ್ಪ ಲಾಯರುಗಳಿಂದಲೂ, ಕಾಂಗ್ರೆಸ್ಸಿನಿಂದ ಹುಟ್ಟಿದ ಹಿಂದುಸ್ಥಾನದ ಬೇರೆ ಪ್ರಾಂತ್ಯಗಳಲ್ಲಿ ಜಾತಿಮತ ದ್ವೇಷಗಳೂ ಹೆಚ್ಚಿ ರಾಜಕೀಯ ದಂಗೆಗಳೂ, ರಕ್ತಪಾತವೂ ಅಶಾಂತಿಯುತವಾದ, ಸುಖದಿಂದ ತಡಿದ, ಈ ಚಿಕ್ಕ ದೇಶದಲ್ಲೂ ಹುಟ್ಟುವಂತೆ ಮಾಡಬೇಕೆಂದಿರುವ ಅಲ್ಪ ಸಂಖ್ಯೆಯ ಕಾಂಗ್ರೆಸಿಗೆ ಸೇರಿದವರಿಂದಲೂ ಮುಖ್ಯವಾಗಿ ಕೂಡಿದ್ದಾಗಿದೆ.

ಕೊಡಗಿಗೆ ನ್ಯಾಯ ಕೊಟ್ಟರೆ ಆರ್ಥಿಕ ಸ್ಥಿತಿಯಲ್ಲಿ ಕೊಡಗು ಪ್ರತ್ಯೇಕವಾಗಿ ಇರಲು ಸಾಧ್ಯವಿಲ್ಲವೆಂತ ಇನ್ನೂ ರುಜುವಾತಾಗಿಲ್ಲ. ಇದಕ್ಕೆ ಇರುವ ಕೆಲವು ಅಡ್ಡಿಗಳು ಯಾವುವೆಂದರೆ—ಕೊಡಗಿಗೆ ಕೌನ್ಸಿಲನ್ನು ಕೊಡುವಾಗ್ಯ ಇಂಡಿಯಾ ಸರಕಾರವು—

(1) ಕೊಡಗಿನ ಉತ್ಪತ್ತಿಯಲ್ಲಿ ಇದ್ದ ಸಿಲ್ಕನ್ನು ಲಕ್ಕಗಟಿಯಲ್ಲಿ …

(2) ಕೊಡಗಿನಲ್ಲಿ ಉದ್ಯೋಗ ಮಾಡಿದರೆಂದೆನ್ನುವ ಅಧಿಕಾರಿಗಳ ಪೆನ್ಶನಿನ ದಾವೂ ಕಾಯಿ ಹೊರೆಯನ್ನು ಕೊಡಬೇಕೆಂತ ಮಾಡಿದ್ದಾರೆ. (ಕೊಡಗಿನಲ್ಲಿ ಅಧಿಕಾರ ಮಾಡಿದವರು ಸ್ವಲ್ಪ ಕಾಲ ಇದ್ದು ಅನಂತರದ ಕೆಲಸಗಳಲ್ಲಿ ಮಹತ್ವದ ಪದವಿಗಳನ್ನು ಪಡೆದವರಿದ್ದಾರೆ. ಅಂಥವರಿಗೆ ಅದಕ್ಕೆ ಸರಿಯಾದ ದೊಡ್ಡ ದೊಡ್ಡ ಪೆನ್ಶನ್‌ಗಳೇ ನಿಶ್ಚಿತವೆಯೆಂತ ನಿರೀಕ್ಷಿಸೋಣ.)

(3) ಪೂರ್ವದ ಕೊಡಗು ರಾಜರುಗಳ ಅರಮನೆಯನ್ನು ಪ್ರಾಚೀನ ಕಟ್ಟಡವೆಂತ ಅಂಗೀಕರಿಸಿಕೊಂಡು, ಅದನ್ನು ಬಿಟ್ಟು ರಿಪೇರಿ ಖರ್ಚನ್ನು ಇಂಡಿಯಾ ಸರಕಾರವು ವಹಿಸಿಕೊಳ್ಳದಿದೆ. (ಸರಕಾರದ ಎಲ್ಲಾ ಇಲಾಖೆಗಳಿಗೂ ಈ ಅರಮನೆಯಲ್ಲೇ ಆಫೀಸು ಇರಬೇಕಾದ್ದರಿಂದಲೂ, ಸರಕಾರಿ ಆಫೀಸುಗಳಿಗಾಗಿ ಬೇರೆ ಹೊಸ ಕಟ್ಟಡಗಳನ್ನು ಕಟ್ಟಲು ಇನ್ನೂ ಹೆಚ್ಚು ಖರ್ಚು ತಗಲಬಹುದಾದ್ದರಿಂದಲೂ, ಕೆಲವು ಲಕ್ಷ ಖರ್ಚು ಮಾಡುವ ಈ ಕೆಲಸವನ್ನು ಕೊಡಗು ಸರಕಾರವೇ ಕೈಕೊಳ್ಳಬೇಕಾಗಿದೆ. ಸ್ವಲ್ಪ ಸ್ವಲ್ಪವಾಗಿ ಮಾಡುತ್ತಿದ್ದಾರೆ)

(4) ಕೊಡಗಿನ ಸರಕಾರದ ಉತ್ಪತ್ತಿಯ ಮುಖ್ಯ ಭಾಗವಾದ ಮರ ಮತ್ತು ಗಂಧದ ಕ್ರಯವು ಬಹಳವಾಗಿ ಬಿದ್ದು ಹೋಗಿರುವುದು.

ಹಳೇ ಒಪ್ಪಂದಗಳೇನಾಗ ಬೇಕು?

ಕೊಡಗು ಮದ್ರಾಸಿಗೆ ಸೇರಿದರೆ ಕೊಡಗು ಬ್ರಿಟಿಷ್ ಸರಕಾರದೊಂದಿಗೆ ಮಾಡಿಕೊಂಡ ಹಳೇ ಒಪ್ಪಂದಗಳೆಲ್ಲಾ ಸಮುದ್ರಕ್ಕೆ ಎಸೆಯಲ್ಪಟ್ಟೀತು. ಇವುಗಳಲ್ಲಿ ಈ ಕೆಳಗಿನ ಮುಖ್ಯಾಂಶಗಳು ಅಡಕವಾಗಿವೆ

(1) ಕೊಡಗರು ಲೈಸನ್ಸು ಇಲ್ಲದೆ ಕೋವಿ ಹಿಡಿಯಬಹುದೆಂಬುದು.

(2) ಕೊಡಗಿನಲ್ಲಿ ದನಗಳನ್ನು ಎಷ್ಟು ಮಾತ್ರಕ್ಕೂ ಕೊಲ್ಲಬಾರದೆಂಬುದು.

(3) ಜಮ್ಮಾ ರೈತರಿಗೆ ಇರುವ ವಿಶೇಷವಾದ ಹಕ್ಕುಗಳು ಮುಂತಾದವು.

ಕಡಿಮೆ ಪಕ್ಷದವರು ಮದ್ರಾಸಿನಲ್ಲೆಲ್ಲಾ ಕೊಡಗಿನವರಿಗೆ ಉದ್ಯೋಗ ಸಿಕ್ಕಲು ಅನುಕೂಲವಾಗುತ್ತೆಂತಲೂ "ಹಿಂದುಳಿದ ಭಾಗ"ವೆಂತ ಅವರು ಕರೆಯುವ ಈ ದೇಶವು ಪ್ರಪಂಚದೊಂದಿಗೆ ಬಹಿರಂಗಕ್ಕೆ ಬರುತ್ತೆಂತಲೂ ನಂಬುತ್ತಾರೆ. ರಸ್ತೆಯಲ್ಲಿ ಟ್ರಾಮ್‌ಗಳ ಮತ್ತು ಮುನ್ಸಿಪಾಲಿಟಿ ತೋಟ ಕೆಲಸದ ಹೊಲಸುಗಳು ಇಲ್ಲದ ಭಾಗಗಳು ಪ್ರಪಂಚದ ಹೊರಗೆ ಇವೆಯೆಂತ ಅವರು ಭಾವಿಸುತ್ತಾರೆಂತ ತೋರುತ್ತದೆ. ಇದು ಇಲ್ಲದ ದೋಷಾರೋಪಣೆ ಮತ್ತು ಅಸತ್ಯ. ಮುಖ್ಯ ವಿಷಯಗಳಾದ ವಿದ್ಯೆ ಅದರಲ್ಲೂ ಸ್ತ್ರೀ ವಿದ್ಯೆ, ರಸ್ತೆ ಈ ಬಾಬುಗಳಲ್ಲಿ ಕೊಡಗು ಮದ್ರಾಸಿನ ಹೆಚ್ಚಿನ ಭಾಗಗಳಿಂದ ಎಷ್ಟೋ ಮೈಲು ಮುಂದೆ ಇದೆ. ಮತ್ತು ಕೊಡಗಿನಲ್ಲಿ ಹುಟ್ಟಿದ ಪ್ರಖ್ಯಾತ ಪುರುಷರನ್ನು ಬೇರೆ ಪ್ರಾಂತ್ಯಗಳಿಗೆ ಮುಖ್ಯವಾಗಿ ಮೆಡಿಕಲ್, ಫಾರೆಸ್ಟ್ ಮತ್ತು ಪೋಲೀಸ್ ಇಲಾಖೆಗಳಿಗೆ ಕೊಡಗು ಕಳುಹಿಸಿ ಕೊಟ್ಟಿದೆ. ಈಗ ಡಿಪ್ಯುಟಿ ಮೇಜಿಸ್ಟ್ರೇಟರಿಂದ ಹಿಡಿದು ಪೋಲೀಸ್ ಕಾನ್‌ಸ್ಟೇಬಲ್, ಗಾರ್ಡ್ ಮತ್ತು ಪಿಯೋನ್ ವರೆಗಿನ ಉದ್ಯೋಗಗಳಲ್ಲಿ ಬಹು ದೊಡ್ಡ ಭಾಗ ಕೊಡಗರೇ ಆಗಿದ್ದಾರೆ. ದೊಡ್ಡ ಮದ್ರಾಸ್ ಪ್ರಾಂತ್ಯದಿಂದ ಹಸಿವಿನಿಂದ ಕೂಡಿದ ದುರ್ಭಿಕ್ಷದಾರರಾಗಿ ಬರುವವರ ಮುಂದೆ ಇವರಿಗೆ ಏನು ಅವಕಾಶ ಉಳಿದೀತು? ಹೇಗೂ ಎಷ್ಟು ಪ್ರಯತ್ನಿಸಿದರೂ ಕೊಡಗಿಗೆ ಉತ್ಪತ್ತಿಯು ಕಾಲದ ದೆಸೆಯಿಂದ ಬೇರೆ ಇರಲು ಸಾಧ್ಯವಾಗದಂತಾದರೆ ಆಗ ಶ್ರೀಮತಿ ಡಿ. ಸಾಕಮ್ಮನವರ ಸಲಹೆಗೆ ಗಮನಕ್ಕೆ ತೆಗೆದುಕೊಳ್ಳಲು ಯೋಗ್ಯವಾಗಿದೆ. ಕೊಡಗು, ಮಲಬಾರ್ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳನ್ನು ಸೇರಿಸಿ ಮಾಡುವ ಒಂದು ಪ್ರಾಂತ್ಯವೇ ಮೊದಲಾದ ಬೇರೆ ಉಪಾಯಗಳು ಇವೆಯೋ ಎಂಬುದೂ ಆಲೋಚಿಸಬಹುದು.

ಈಶ್ವರ ಮುತ್ತಪ್ಪದೇವರ ನೆಲೆ.

ಕೊಡಗಿನ ಭಕ್ತ ಜನರಿಗೆ ವಿನಂತಿ.

ಮಹಾಶಯರೇ,

ಈಶ್ವರ ಮುತ್ತಪ್ಪದೇವರ ಸ್ಥಾನವು ಮಲೆಯಾಳದಲ್ಲಿಯಲ್ಲದೆ ಕೊಡಗಿನ ಕೆಲವು ಕಡೆಗಳಲ್ಲಿ ನೆಲೆಯಾಗಿ ಹರಕೆ ವಗ್ಗರೆ ಕೊಡುತ್ತಾ ಇದ್ದಾರೆ. ಆದರೆ ಕೊಡಗಿಗೆ ಮುಖ್ಯ ಪಟ್ಟವಾದ ಮಡಿಕೇರಿಯಲ್ಲಿ ಈ ದೇವರ ನೆಲೆಯು ಇಲ್ಲದೆ ಜನಗಳಿಗೆ ಹರಕೆ ವಗ್ಗರೆ ಕೊಡಲು ತೊಂದರೆಯಾದ ಸಂಗತಿ ಎಲ್ಲರಿಗೂ ವೇದ್ಯವಿದೆ. ಆದುದರಿಂದ ಈಗ ಕೆಲವು ಜನರು ಸೇರಿ ಮಡಿಕೇರಿನಲ್ಲಿ, ಕೆಳಕೇರಿ ನಿವಾಸಿಗಳು ಗಣಪತಿ ... ಅಂದರೆ ಪೋಲೀಸ್ ಟ್ರೇನಿಂಗ್ ಸ್ಕೂಲ್ ಬಳಿ ಇರುವ ಶ್ರೀಮತಿ ನಾಣಿಯಮ್ಮನವರ ಗದ್ದೆ ಬಳಿ ದೇವಸ್ಥಾನವನ್ನು ಕಟ್ಟಲು ಏರ್ಪಾಡು ಮಾಡುತ್ತೇವೆ. ಆ ಸ್ಥಳದಲ್ಲಿ ಈಗಲೇ ವೈಂಗುತ್ತಿ ವಗ್ಗರೆ ಹರಕೆಗಳು ಕೊಟ್ಟು ಬರುತ್ತಾ ಇವೆ. ಎಷ್ಟೋ ಜನರು ಹೊರಗಿನಿಂದ ಬರುತ್ತಾ ಇದೆ. ಈ ದೇವಸ್ಥಾನವನ್ನು ಕಟ್ಟಲು ಈ ಮಳೆ ಕಳೆದ ನಂತರ ಚಂದಾ ವಸೂಲಿಗೆ ಮ. ರಾ. ಶ್ರೀ. ಚಂದುನಾಯರು ಮತ್ತು ತೀಯರ ಅಂಬಾಡಿಯೂ ಹೊರಡುತ್ತಾರೆ. ಆದ್ದರಿಂದ ಭಕ್ತ ಜನರು ದೇವರ ಮೇಲೆ ಕೃಪೆಯಿಟ್ಟು ಯಥಾಶಕ್ತಿ …

ಕೊಡಗು.

ಸನ್ ೧೯೩೨ನೇ ಇಸವಿ

ಅಗೋಸ್ತು ತಾ. ೨೬ನೇ ಶುಕ್ರವಾರ.

ಪ್ರೆಸ್ ಆರ್ಡಿನೇನ್ಸ್ ಜಾರಿಯಲ್ಲಿರುವವರೆಗೆ ನಾವು ಅಗ್ರಲೇಖನವನ್ನು ಪ್ರಕಟಿಸುವುದಿಲ್ಲ.

ಕೋಮುವಾರು ತೀರ್ಮಾನ.

(ಸ್ವತಂತ್ರಬಾಯಿಂದ)

ಹಿಂದೀಯರು ದೀರ್ಘಕಾಲದಿಂದ ಕಾಯುತ್ತಿದ್ದ ಕೋಮುವಾರು ಸಮಸ್ಯೆಯ ತೀರ್ಮಾನವು ಕಳೆದ ವಾರ ಹೊರಬಿತ್ತು. ಹಿಂದೂದೇಶದ ಮುಂದಿನ ರಾಜಕೀಯ ಸುಧಾರಣೆಯನ್ನು ಮುಂದೆ ಮುಂದಕ್ಕೆ ನೂಕುವ ಉದ್ದೇಶದಿಂದ ಬ್ರಿಟಿಷ್ ಸರ್ಕಾರದವರು ಈ ತೀರ್ಮಾನವನ್ನು ಕೊಡಲು ಇಷ್ಟರ ವರೆಗೆ ದಿನ ತಳ್ಳುತ್ತಾ ಬಂದರೂ ಜನರ ಅಸಮಾಧಾನವನ್ನು ನೋಡಿ ಈ ತಾ. 17ರಲ್ಲಿ ತಮ್ಮ ತೀರ್ಮಾನವನ್ನು ಪ್ರಕಟಿಸಲೇ ಬೇಕಾಯಿತು. ಇದು ಉರಿಯುವ ಬೆಂಕಿಗೆ ಎಣ್ಣೆ ಹೊಯ್ದಂತೆ ಆಗಿದೆ. ಈ ಸಮಸ್ಯೆಯನ್ನು ತಮ್ಮೊಳಗೆ ತೀರ್ಮಾನಿಸಿಕೊಳ್ಳಲು ಹಿಂದೂ-ಮುಸಲ್ಮಾನ ಮುಖ್ಯಸ್ಥರು ಕೆಲವು ವರ್ಷಗಳಿಂದ ಪ್ರಯತ್ನಿಸುತ್ತಾ ಬಂದು ಜಯಶೀಲರಾಗದೆ ಹೋಗಿದ್ದರೂ, ಒಪ್ಪಂದವಾಗಲು ಒಂದೆರಡು ವಿಷಯಗಳು ಮಾತ್ರ ಉಳಿದಿದ್ದುವು. ಇನ್ನು ಸ್ವಲ್ಪ ಹೆಚ್ಚು ಪ್ರಯತ್ನಗಳು ನಡೆಸಲ್ಪಟ್ಟಿದ್ದರೆ ತೀರ್ಮಾನವು ಆಗುತ್ತಿತ್ತು. ಆದರೆ ಬ್ರಿಟಿಷರು ಇಂಥಾ ಒಪ್ಪಂದಕ್ಕೆ ಒಳಗಿಂದೊಳಗೆ ಅಡ್ಡಿ ತರುತ್ತಿದ್ದರೆಂಬ ಆಕ್ಷೇಪವನ್ನು ಈ ಮೊದಲು ಹಲವು ಧುರೀಣರು ಅವರ ಮೇಲೆ ಹೊರಿಸಿದ್ದರು. ಈ ಆಕ್ಷೇಪವು ಪ್ರಧಾನ ಮಂತ್ರಿಯವರು ಕಳೆದ ವಾರ ಪ್ರಕಟಿಸಿದ ತೀರ್ಮಾನದಿಂದ ರುಜುವಾತುಮಾಡಲ್ಪಟ್ಟಿಲ್ಲವೋ ಎಂಬುದನ್ನು ವಾಚಕರು ತಿಳಿದುಕೊಳ್ಳಬಹುದು. ಒಲ ಕುಂದುತ್ತಾ ಬಂದು ಸ್ವಲ್ಪ ಕಾಲದಲ್ಲಿಯೇ ನಾಶ ಹೊಂದಬಹುದಾಗಿದ್ದ ಕೋಮುವಾರು ತತ್ವದ ವಿಷವೃಕ್ಷವನ್ನು ಮೆಕ್ಡೊನಾಲ್ಡರವರು ತಮ್ಮ ಬಹು ಚಮತ್ಕಾರದ ತೀರ್ಮಾನದಿಂದ ಇಮ್ಮಡಿ ಶಕ್ತಿಯನ್ನು ಕೊಟ್ಟು, ಹಿಂದೂದೇಶದಲ್ಲಿ ದೀರ್ಘಕಾಲ ಬಾಳುವಂತೆ ಮಾಡಿರುವರು.

ರಾಷ್ಟ್ರದ ಏಳಿಗೆಗೆ ಸಹಾಯಕರವಾದ ವಿಷಯವೊಂದೂ ಈ ತೀರ್ಮಾನದಲ್ಲಿ ಕಂಡುಬರುವುದಿಲ್ಲವೆಂದರೆ ಆಶ್ಚರ್ಯವಾಗಲಾರದು. ಹಲವು ಜಾತಿ ಮತ ಭೇದಗಳಿರುವ ಹಿಂದೂದೇಶದ ಅಭಿವೃದ್ಧಿಗೆ ಬೇಕಾದದ್ದೇ ಮುಖ್ಯವಾಗಿ ಒಗ್ಗಟ್ಟು. ಈ ತೀರ್ಮಾನವು ಅಂಥಾ ಒಗ್ಗಟ್ಟಿನ ಬೇರಿಗೇನೇ ಕತ್ತಿ ಹಾಕಿಬಿಟ್ಟಿದೆ. ಇದು ಮುಖ್ಯವಾಗಿ ಹಿಂದೂ-ಮುಸಲ್ಮಾನರೊಳಗೆ ಇದ್ದಂಥ ಸ್ವಲ್ಪ ಭಿನ್ನಭಾವವನ್ನು ದೊಡ್ಡದು ಮಾಡಿರುವುದಲ್ಲದೆ, ಬೇರೆ ಚಿಕ್ಕ ಕೋಮುಗಳಲ್ಲಿಯೂ ಭೇದಭಾವದ ಬೀಜವನ್ನು ಬಿತ್ತಿದೆ. ಪ್ರಜಾತಂತ್ರ ಸರ್ಕಾರದ ತತ್ವವನ್ನು ಅರಿತಿರುವ ಮತ್ತು ಅದರಲ್ಲಿ ಪೂರ್ತಿ ನಂಬಿಗೆ ಇರುವ ಪ್ರಧಾನ ಮಂತ್ರಿಯವರು ತನ್ನ ಸದರಿ ತತ್ವಕ್ಕೆ ಸಂಪೂರ್ಣ ವಿರೋಧವಿರುವ ಕೋಮುವಾರು ಚುನಾವಣೆಯ ತೀರ್ಮಾನವನ್ನು ಕೊಡುವರೆಂದು ಸ್ವಾರ್ಥಪರರಲ್ಲದೆ ಬೇರೆ ಯಾರೂ ಯೋಚಿಸಿರಲಿಲ್ಲ. ಒಂದನೇ ದುಂಡು ಮೇಜು ಪರಿಷತ್ತಿನ ಅಧ್ಯಕ್ಷನಲ್ಲಿ 'ಇಂಡಿಯಾದಲ್ಲಿ ಎಷ್ಟು ಜಾತಿ ಮತಭೇದಗಳಿದ್ದರೂ ಎಲ್ಲರೂ ಒಗ್ಗಟ್ಟಾಗಿ ವರ್ತಿಸಬೇಕೆಂಬ ಇಂಡಿಯಾದ ಹಿತದ ದೃಷ್ಟಿಯಿಂದಲೇ ನಾವು ಪ್ರಯತ್ನಿಸುತ್ತಿರುವೆವೆಂತಲೂ, ಹಿಂದೀಯರ ಭಿನ್ನಭೇದಗಳನ್ನು ತಮ್ಮ ಸ್ವಪ್ರಯೋಜನಕ್ಕೆ ಎಂದಿಗೂ ಉಪಯೋಗಿಸಲಾರೆವೆಂತಲೂ' ಹೇಳಿದಂಥ ಮೆಕ್ಡೊನಾಲ್ಡರವರು ಈಗ ಮಾಡಿರುವದಾದರೂ ಏನು? ತಾನು ಇಂಡಿಯಾದ ಸ್ನೇಹಿತನೆಂದು ಇಷ್ಟರ ವರೆಗೆ ಇವರು ಹೇಳುತ್ತಿದ್ದದ್ದೆಲ್ಲಾ ಬರೀ ನಟನೆಯೆಂದು ಈಗ ಯಾರಿಗೆತಾನೇ ಗೊತ್ತಾಗದೆ ಹೋಗುವದು?

ಹಿಂದೂದೇಶದ ಮುಂದಿನ ಸುಧಾರಣೆಯನ್ನು ಕುರಿತು ಬ್ರಿಟಿಷ್ ಸರ್ಕಾರದವರ ಅಭಿಪ್ರಾಯವು ಏನಿದೆಯೆಂಬುದು ಒಂದೊಂದಾಗಿ ಹೊರಬೀಳುತ್ತಿದೆ. ತಮ್ಮ ಗುಟ್ಟಿನ ಯೋಚನೆಗಳನ್ನು ಇಷ್ಟರ ವರೆಗೆ ಬಚ್ಚಿಟ್ಟುಕೊಂಡು ಹಲವು ಹಿಂದೀಯರನ್ನು ತಮ್ಮ ಮಾತಿನ ಚಮತ್ಕಾರದಿಂದ ಮರುಳು ಮಾಡುತ್ತಿದ್ದರು. ಅದು ಇನ್ನು ಮುಂದೆ ಸಾಧ್ಯವಿಲ್ಲವೆಂದರೆ ತಪ್ಪಾಗಲಾರದು. ಯಾಕೆಂದರೆ, ಕಳೆದ ತಿಂಗಳಲ್ಲಿ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಇಂಡಿಯಾದ ಭವಿಷ್ಯತ್ತನ್ನು ಕುರಿತು ಬ್ರಿಟಿಷರೂ, ಹಿಂದೀಯರೂ ಸರಿಸಮಾನತ್ವದಲ್ಲಿ ಕಲೆತು ಆಲೋಚಿಸುತ್ತಿದ್ದ ದುಂಡು ಮೇಜು ಪರಿಷತ್ತನ್ನು ಬದ್ದು ಮಗುಚಿ ಹಾಕಿ, ತಮ್ಮದೊಂದು ಅಧಿಕಾರದ ರೀತಿಯನ್ನು ಸ್ವೀಕರಿಸಿಕೊಳ್ಳಲಾಗುವದೆಂದು ಪ್ರಕಟಿಸಿದರು. ಇದರಿಂದ ಹಿಂದೀಯರು ತಾವು ಹೇಳಿದನ್ನು ಕೇಳಿಕೊಂಡಿರಬೇಕೆಂದೂ, ಕೊಟ್ಟದ್ದನ್ನು ತೆಗೆದುಕೊಳ್ಳಬೇಕೆಂದೂ ಬ್ರಿಟಿಷರ ದೃಢ ನಿಶ್ಚಯವೆಂದು ಕಂಡು ಬಂತು. ಇದಕ್ಕಾಗಿ ಇಡೀ ಭಾರತ ಭೂಮಿಯಲ್ಲಿ ಅತೃಪ್ತಿಯು ಸೂಚಿಸಲ್ಪಡುತ್ತಿದ್ದಂತೆಯೇ ಪ್ರಧಾನ ಮಂತ್ರಿಯವರು ಇನ್ನೊಂದು ಕಲಹದ ಬೀಜವನ್ನು ಹಿಂದೀಯರ ಮಧ್ಯಕ್ಕೆ ಎಸೆದಿರುವರು. ಇದರಿಂದ ಬ್ರಿಟಿಷರು ಹಿಂದೂದೇಶವನ್ನು ಹೇಗೆ ಕೈವಶದಲ್ಲಿ ಇಟ್ಟುಕೊಳ್ಳಲು ನಿಶ್ಚಯಿಸಿರುವರೆಂದು ವಿಶದವಾಗುತ್ತದೆ.

ಹಿಂದೀಯರು ಈ ಸಮಸ್ಯೆಯನ್ನು ತಮ್ಮೊಳಗೆ ತೀರಿಸಿಕೊಳ್ಳಲಾರದೆ ಹೋದುದರಿಂದ ಬ್ರಿಟಿಷ್ ಮಂತ್ರಿ ಮಂಡಳಿಯವರು ಕೊಟ್ಟಿರುವ ತೀರ್ಮಾನವನ್ನು ಎಲ್ಲಾ ಜಾತಿ ಮತದವರು ಒಪ್ಪಿಕೊಳ್ಳಬೇಕೆಂದು ಕೆಲವರು ವಾದಿಸುತ್ತಿದ್ದಾರೆ. ಇದು ಸರಿಯಲ್ಲ. ದುಂಡು ಮೇಜು ಪರಿಷತ್ತಿನಲ್ಲಿ ಹಿಂದೀಯ ಮುಖಂಡರು ಈ ವಿಷಯವನ್ನು ಕುರಿತು ಒಪ್ಪಂದಕ್ಕೆ ಬಾರದೆ ಹೋದದ್ದೇನೋ ನಿಜ. ಆಗ್ಯೆ ತೀರ್ಮಾನವನ್ನು ತಾವೇ ಕೊಡಬೇಕಾಗುವದೆಂದು ಪ್ರಧಾನ ಮಂತ್ರಿಯವರು ಸೂಚಿಸಿದರು. ಅಲ್ಲಿಂದ ಈ ಪ್ರಶ್ನೆಯು ಕನ್‌ಸಲ್ಟೇಟಿವ್ ಕಮಿಟಿಯ ಆಲೋಚನೆಗೆ ಬಿಡಲಾಗಿತ್ತು. ಕನ್‌ಸಲ್ಟೇಟಿವ್ ಕಮಿಟಿಯವರು ಸ್ವಲ್ಪ ಪ್ರಯತ್ನಿಸಿ ಸಾಧ್ಯವಿಲ್ಲವೆಂದರು. ನಂತರ ಮಂತ್ರಿಯವರು ತೀರ್ಮಾನಿಸುವ ಜವಾಬ್ದಾರಿಯನ್ನು ತಾವೇ ವಹಿಸಿಕೊಂಡರು. ಆದರೆ ಕನ್‌ಸಲ್ಟೇಟಿವ್ ಕಮಿಟಿಯವರು ಮಂತ್ರಿಯವರು ಕೊಡುವ ತೀರ್ಮಾನಕ್ಕೆ ಸಮ್ಮತಿಸುತ್ತೇವೆಂದು ಬಹುಮತದಿಂದ ಒಪ್ಪಿಗೆಯನ್ನು ಕೊಟ್ಟಿರುವುದಿಲ್ಲ. ಒಂದುವೇಳೆ ಹಾಗೆ ಒಪ್ಪಿಗೆ ಕೊಟ್ಟಿದ್ದರೂ ಕನ್‌ಸಲ್ಟೇಟಿವ್ ಕಮಿಟಿಯ ಸದಸ್ಯರು ಜನರ ಪ್ರತಿನಿಧಿಗಳಲ್ಲ; ಅವರು ಸರ್ಕಾರದಿಂದ ನೇಮಿಸಲ್ಪಟ್ಟವರು ಮಾತ್ರವಲ್ಲ, ಭಾರತ ಭೂಮಿಯ ನಿಜವಾದ ಪ್ರತಿನಿಧಿ ಸಭೆಯಾಗಿರುವ ಕಾಂಗ್ರೆಸ್ಸಿನವರ್‍ಯಾರೂ ಸದರಿ ಕನ್‌ಸಲ್ಟೇಟಿವ್ ಕಮಿಟಿಯಲ್ಲಿರಲಿಲ್ಲ. ಆದುದರಿಂದ ಬ್ರಿಟಿಷ್ ಮಂತ್ರಿಗಳ ತೀರ್ಮಾನವನ್ನು ಎಲ್ಲರೂ ಒಪ್ಪಿಕೊಳ್ಳಲೇಬೇಕೆಂಬ ನೀತಿಯ ನಿರ್ಬಂಧವೂ ಕೂಡ ಇಲ್ಲ. ತೀರ್ಮಾನವನ್ನು ಒಪ್ಪಿಕೊಳ್ಳುವದೂ, ಬಿಡುವದೂ ಅದರ ಯೋಗ್ಯತೆಯನ್ನನುಸರಿಸಿ ಇದೆ.

ಈ ತೀರ್ಮಾನವು ದೇಶದ ಹಿತವನ್ನೇ ಮುಂದಾಗಿ ಇಟ್ಟುಕೊಂಡಿರುವ ರಾಷ್ಟ್ರೀಯ ಪಕ್ಷದವರಿಗೆ ತುಂಬಾ ಅತೃಪ್ತಿಯನ್ನುಂಟುಮಾಡಿದೆ. ಕಾಂಗ್ರೆಸ್ಸಿನ ತಾತ್ಕಾಲಿಕ ಅಧ್ಯಕ್ಷರಾಗಿದ್ದ ಡಾಕ್ಟರ್ ಕಿಚ್ಲೂರವರು—'ಈ ತೀರ್ಮಾನವು ರಾಷ್ಟ್ರೀಯತ್ವದ ಮೂಲಕ್ಕೇ ವಿರೋಧವಾದದೆಂತಲೂ, ಕಾಂಗ್ರೆಸ್ಸು ಹೋರಾಡುತ್ತಿರುವ ಧ್ಯೇಯದ ಬೇರಿಗೇ ಹೊಡೆದಿದೆಯೆಂತಲೂ, ನೇರು ತೀರಿಸಿಕೊಳ್ಳುವಂತೆ ಪ್ರತ್ಯೇಕ ಚುನಾವಣೆಯನ್ನು ಕೊಟ್ಟು ಹಿಂದೀ ಜನಾಂಗದಲ್ಲಿ ಸಾಧ್ಯವಾದಷ್ಟು ಪಂಗಡಗಳನ್ನು ಹುಟ್ಟಿಸಿದೆಯೆಂತಲೂ' ಹೇಳಿರುವರು. ಹಾಗೆಯೇ ರಾಷ್ಟ್ರೀಯ ಪಕ್ಷದ ಮುಂದಾಳುಗಳೆಲ್ಲರೂ ಈ ತೀರ್ಮಾನವನ್ನು ಸಂಪೂರ್ಣ ಖಂಡಿಸಿರುವರು. ಪಂಜಾಬಿನ ಸಿಕ್ಕರು ಮತ್ತು ಹಿಂದುಗಳಿಗೂ, ಬಂಗಾಳದ ಹಿಂದುಗಳಿಗೂ ತುಂಬಾ ಅಸಮಾಧಾನವುಂಟಾಗಿದೆ. ಹಿಂದೂ ಮಹಾಸಭೆಯ ಕಮಿಟಿಯವರು ಈ ತೀರ್ಮಾನವನ್ನು ಕುರಿತು ನಿಷೇಧಿಸಿ ಠರಾವು ಪಾಸುಮಾಡಿರುವರು. ಹೆಚ್ಚು ಕಮ್ಮಿ ಹಿಂದೂ ಸಮಾಜದ ಮುಖ್ಯಸ್ಥರೆಲ್ಲರೂ ಇದನ್ನು ವಿರೋಧಿಸಿ ಅಭಿಪ್ರಾಯ ಕೊಟ್ಟಿರುವರು. ಹಿಂದುಳಿದ ಪಂಗಡದವರು ಮತ್ತು ಇಂಡಿಯನ್ ಕ್ರಿಶ್ಚಿಯನರೂ ಕೂಡ ತಮ್ಮ ಅಸಮ್ಮತಿಯನ್ನು ಸೂಚಿಸಿರುವರು. ಈ ತೀರ್ಮಾನದಿಂದ ತೃಪ್ತರಾಗಿರುವವರು ಕೋಮುವಾರು ತತ್ವದ ಕೆಲವು ಮುಸಲ್ಮಾನರು ಮತ್ತು ಯೂರೋಪಿಯನರು ಮಾತ್ರವಾಗಿದೆ. ಇಷ್ಟು ದೊಡ್ಡ ಮತ್ತು ವಿಶಾಲವಾದ ಅತೃಪ್ತಿಗೆ ಕಾರಣವೇನೆಂಬುದನ್ನು ಅವಕಾಶ ದೊರಕಿದರೆ ಇನ್ನೊಂದು ಲೇಖನದಲ್ಲಿ ಬರೆಯುವೆನು.

ಕೋಮುವಾರು ಸಮಸ್ಯೆಯ ತೀರ್ಮಾನವನ್ನು ಕುರಿತು
ಮಿ. ಜಯಕರವರ ಅಭಿಪ್ರಾಯ.

ಈ ತೀರ್ಮಾನದಲ್ಲಿ ಪ್ರಧಾನ ಮಂತ್ರಿಯವರು 'ಟೋರಿ' ಒತ್ತಾಯಕ್ಕೆ ಒಳಗಾಗಿರುವರೆಂದು ಪ್ರತ್ಯಕ್ಷವಾಗುತ್ತೆ. ಇದು ಕೋಮುವಾರು ಸಂಚನ್ನು ಬಲಪಡಿಸುತ್ತದೆ; ಮತ್ತು ಅದು ಇಲ್ಲದ ಇಕ್ಕಟ್ಟುಗಳಿಗೂ ಹರಡಿದೆ. ಕೋಮುವಾರು ತತ್ವದ ಮುಸಲ್ಮಾನರಿಗೂ ಕೂಡ ತೃಪ್ತಿಕರವಲ್ಲದ ಕೆಲವು ಕರಾರುಗಳು ಅದರಲ್ಲಿವೆ; ಅವು, ಈ ತರಹದ ತೀರ್ಮಾನಕ್ಕಾಗಿ ತಾವು ಬಹುಮತ ಕೋಮಿನವರಿಂದ ಸಂಪೂರ್ಣ ದೂರವಾಗಿ ಬ್ರಿಟಿಷರ ಕಡೆ ನಿಂತದ್ದು ಲಾಭಕರವಾಯಿತೇ ಎಂದು ಅವರಲ್ಲಿ ಕೆಲವರನ್ನು ಆಶ್ಚರ್ಯಗೊಳಿಸುವಂತಹವಾಗಿವೆ.

ಈ ತೀರ್ಮಾನದಿಂದ ಹೆಚ್ಚಾಗಿ ಲಾಭ ಹೊಂದಿರುವವರು ಯೂರೋಪಿಯನರು. ಅವರು ಬಂಗಾಳದಲ್ಲಿ ಶೇಕಡ ½ ದಷ್ಟು ಮಾತ್ರ ಇದ್ದರೂ ಅವರಿಗೆ ಕೌನ್ಸಿಲಿನಲ್ಲಿ 11 ಪ್ರತಿನಿಧಿಗಳಿರುವ ಅದ್ಭುತ ಕಾರ್ಯವಾಗಿರುವದಲ್ಲದೆ, ವ್ಯಾಪಾರ ಸಂಘದಿಂದ ಅವರಿಗೆ 14 ಮೆಂಬರುಗಳ ಸ್ಥಳವು ಕೊಡಲ್ಪಟ್ಟು, ಅಲ್ಲಿ 'ತಕ್ಕಡಿಯನ್ನು ಹಿಡಿಯುವ ಅಧಿಕಾರವನ್ನು' ಪಡೆದಿರುವರು.

ಆಕೆಸ್ನ ಒಪ್ಪಂದವು ಇಂಡಿಯಾವನ್ನು ಹಿಂದು ಮತ್ತು ಮುಸ್ಲಿಂ ಎಂಬ ಎರಡು ಭಾಗ ಮಾಡಿತ್ತು. ಈ ತೀರ್ಮಾನವು ಮುಂದರಿಸಿ, ಹಿಂದೂ ಸ್ತ್ರೀಯರನ್ನು ಮುಸಲ್ಮಾನ ಸ್ತ್ರೀಯರಿಂದಲೂ, ಯೂರೋಪಿಯನರನ್ನು ಆಂಗ್ಲೋ ಇಂಡಿಯನರಿಂದಲೂ, ಬಿಳೀ ಕ್ರಿಶ್ಚಿಯನರನ್ನು ಕಪ್ಪಾದ ಕ್ರಿಶ್ಚಿಯನರಿಂದಲೂ, ಮೇಲ್ಮಟ್ಟದ ಹಿಂದುಗಳನ್ನು ಹಿಂದುಳಿದ ಹಿಂದುಗಳಿಂದಲೂ ಮತ್ತು ಸ್ವಲ್ಪ ಉತ್ತರ ಭಾರತೀಯರನ್ನು ದಕ್ಷಿಣ ಭಾರತೀಯರಿಂದಲೂ ಪ್ರತ್ಯೇಕಿಸುತ್ತದೆ. ಇದು ತತ್ಕಾಲ ಬಹುಮತ ಕೋಮಿನವರಿಗೆ ತುಂಬಾ ನಷ್ಟವುಂಟುಮಾಡುವುದು; ಆದರೆ ಅವರು ಈ ಪೆಟ್ಟಿನಿಂದ ಬೇಗನೆ ಚೇತರಿಸಿಕೊಂಡಾರೆಂದು ನನಗೆ ನಂಬಿಗೆ ಇದೆ; ಮಧ್ಯವರ್ತಿ ಸರ್ಕಾರದ ರಚನೆಯು ಬುದ್ಧಿವಂತಿಕೆಯಿಂದ ಮಾಡಲ್ಪಟ್ಟರೆ ಇದು ಸುಲಭವಾಗುವುದು. ಆದರೆ ಈ ಕೆಟ್ಟ ಸ್ವಭಾವದ ತೀರ್ಮಾನದಿಂದ ಹುಟ್ಟಿನ ಆಶೆಗೆ ಎಡೆ ಇಲ್ಲ. ಇಷ್ಟರ ವರೆಗೆ ಕೋಮುವಾರು ವಿಷದಿಂದ ದೂರವಾಗಿದ್ದ ಸಂಸ್ಥಾನಗಳಿಗೂ ಕೂಡ, ಫೆಡರಲ್ ಸರ್ಕಾರದ ರಚನೆಯು ಮಾಡಲ್ಪಟ್ಟಾಗ, ಅದರ ಹಾವಳಿಯು ತಟ್ಟದಂತೆ ಸಂಸ್ಥಾನದ ರಾಜರುಗಳು ಜಾಗರೂಕರಾಗಿರಬೇಕೆಂದು ಈ ತೀರ್ಮಾನವು ಅವರನ್ನು ಎಚ್ಚರಿಸುತ್ತದೆ.

Reg. No. M. 1556.
If not delivered please return to "KODAGU" OFFICE MERCARA.

ಕೊಡಗು.

ವಾರ್ಷಿಕ ಚಂದಾ ರೂ. ೩—೮—೦.

ಸಂಪಾದಕ— ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವುದು

ಸಂಪುಟ ೧೨ | ಮಡಿಕೇರಿ, ಸನ್ ೧೯೩೨ನೇ ಇಸವಿ ಆಗೊಸ್ಟು ತಾರೀಕು ೨೬ ನೇ ಶುಕ್ರವಾರ. | ಸಂಚಿಕೆ ೧೩

SAREE PINS

EAR-RINGS (Thodus)
Cut-rubys Rs. 25 to 50
With diamond in centre Rs. 80 to 150

BRACELETS
Gold Rs. 10
Set rubys forming any letter Rs. 12

NECKCHAINS

NOSE-RINGS
Diamond in small size of best quality Rs. 75
& upwards according to size

MARRIAGE PRESENTATIONS

Attractive and inexpensive articles ready in stock. Prompt execution. Details on enquiry free with catalogue. Numerous customers in Coorg thoroughly satisfied with reliable service. Testimonials pouring in. Silver Guindys, Photo lockets, Dimond nose-screws, cut-ruby ear-rings etc., etc., etc., in all prices. Very attractive. Prices most moderate.

Estimates free on enquiry.

Designs free on enquiry.

Telegrams: 'PRECIOUS.'

Teleph ne 3145.

CATALOGUE ON ENQUIRY.

V. Subramaniar Jeweller,

Post Box 423, Triplicane, P. O., MADRAS.

52—40

52—0

Empire of India Life Assurance Company, Ltd.

Established 1897.

The New "FAMILY SECURITY" Policy issued by this Company provides.

A. In the event of death during an agreed period,

1. The immediate payment to the Widow, Son or legal representative of a part of the sum Assured together with the Bonus accrued

2. The payment of a guaranteed Yearly Income, payable by monthly instalments during the balance of the period.

3. The payment of the balance of the sum of assured at the end of the period

OR

B. In the event of death after the period has expired the payment of the sum assured together with any Bonus that has accrued.

Descriptive Pamphlet on application to—

Head Office:—
EMPIRE OF INDIA LIFE BUILDING,
Bombay

Branch Office:—
152, COMMERCIAL STREET,
Bangalore.

52—47

ಜನರಲ್ ಅಷ್ಯೂರೆನ್ಸ್ ಸೊಸೈಟಿ.

ಅಜಮೀರ್.

ನಮ್ಮ ಠಯಸ್ಸಿನ ಪಟ್ಟಿಯೇ ನಮ್ಮ ಅಭಿವೃದ್ಧಿಯನು ವ್ಯಕ್ತಗೊಳಿಸುತ್ತದೆ.

[illegible]	[illegible]	[illegible] ಮೂಲಧನ	[illegible] ಶೇಕಡ
[illegible]	[illegible]	49,442	82.9
[illegible]	2,02,627	6,53,350	43.2
[illegible]	[illegible]	4,00,000	28.2

ಬೋನಸ್ಸು.

ಹೋಲ್ ಸಫೆ ದೊರಕುವ ಜೀವಾವಧಿ ಪಾಲಿಸಿಗಳ ಮೇಲೆ ವರ್ಷ ಒಂದಕ್ಕೆ ಶೇಕಡ 22½

ಚೆನ್ನಾಗಿ ಕೆಲಸಮಾಡಿ ಅಭಿವೃದ್ಧಿ ಸ್ಥಿತಿಯಲ್ಲಿರುವ ಈ ಸೊಸೈಟಿಯಲ್ಲಿ ವಿಮೆ ಮಾಡಿ ಕಡಿಮೆ ಪ್ರೀಮಿಯಂ ಪಾವತಿ ಮಾಡುವ ಸೌಲಭ್ಯ ಹೊಂದಿ ಅಥವಾ ಈ ಕಂಪೆನಿಯ ಏಜಂಟರಾಗಿ ಕೆಲಸಮಾಡಿ ಉತ್ತಮ ಕಮಿಶನ್ ದರದ ಪ್ರಯೋಜನ ಹೊಂದಿ.

ಹೆಚ್ಚು ವಿಚಾರಣೆಗೆ ಈ ವಿಳಾಸಕ್ಕೆ ಬರೆಯಿರಿ:—

ಎ. ರಾಮಚಂದ್ರರಾವ್,
ಸುಪರಿಂಟೆಂಡೆಂಟ್,
ಮಿಂಟೋ ಆಸ್ಪತ್ರೆ ಬಳಿ,

52—18

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ 2 ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲಿ)

		ರೂ.
ಷೇರ್ ಬಂಡವಾಳ	—	80,000
ವಸೂಲಾದ ಷೇರ್ ಮೊಬಲಗು	—	27,350
ಜಮೆಯಾದ ಠೇವಣಾತಿ	—	2,25,172
ವಸೂಲಾದ ಕ್ಷೇಮನಿಧಿ	—	37,914

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಸಿ ಮಾಡುತ್ತಾರೆ.

ಪ್ರೆಸಿಡೆಂಟರು, ನೆಲ್ಲಮಕ್ಕಡ ದೇವಯ್ಯನವರು, ರಾವ್ ಬಹದ್ದೂರ್.

ಟ್ರೆಜರರ್, ಮನೆಯಪ್ಪಂಡ ಬೆಳ್ಯಪ್ಪನವರು.

ಸೆಕ್ರೆಟರಿ

ಸಿ. ಯಮ್. ವೆಂಕಟಯ್ಯನವರು, ಬಿ.ಎ., ಬಿ.ಎಲ್

ತಾರೀಖು 1—7—1932.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ದಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಕೊಡಗಿನ ಎಲ್ಲಾ ಭಾಗಗಳಿಗೆ—ಮೆ. ಮುಂಡಂಡ ಯಂ. ಬೆಳ್ಳಪ್ಪನವರು.

ಉತ್ತರ ಕೊಡಗಿಗೆ ಮೆ. ಚೌರಿರ ಮಾದಯ್ಯನವರು,

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು, (ಖಾದಿಭಂಡಾರ.)

ನಾಪೋಕ್ಲು—ಎಮ್. ಆರ್. ವೆಂಕಪ್ಪಯ್ಯನವರು.

ಅಮ್ಮತ್ತಿ—ಸಿದ್ದಾಪುರ—ಮೆ. ಬಿಸಂಡ ಮಾದಪ್ಪನವರು,

ಪೊನ್ನಂಪೇಟೆನಾಡು—ಮೆ. ಪಿ. ಜೆ. ಮುತ್ತಮ್ಮಯ್ಯನವರು, ಮತ್ತು ಅರಮಣಮಾಡ ಪಿ ಕಾರ್ಯಪ್ಪನವರು,

ಕುದಿಕೇರಿ & ತಿತಿಮತ್ತಿ—ಮೆ. ಬಿ. ಮಾದಮ್ಮಯ್ಯನವರು,

ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮೊಣ್ಣಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಿಸಲು ಅತ್ಯವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಕರಾರು ಫಾರಮುಗಳೂ, ಜಮ್ಮ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಕರಾರು ಫಾರಮುಗಳೂ, ಸ್ಟೋರ್ ಕೀಪರ್ ಕರಾರು ಫಾರಮುಗಳೂ, ಓವರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮಾ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.

ವಿಮೆದಾರರಿಗೆ ಕೊಟ್ಟದ್ದು—3231 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.

ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,73,322 ಜನರಿಗೆ 38ಕೋಟಿ ರೂ. ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ರಕ್ಕಿಂತ ಮೀರದ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದಾಗಿದೆ.

ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚಿನಷ್ಟು ಒತ್ತಾಸೆಯನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು ಅಥವಾ ಇನ್ಸ್‌ಪೆಕ್ಟರೇಟ್ ಆಫೀಸು, ಮಡಿಕೇರಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ಮೊಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೋ	ಪಾಟ್ನಾ	ಸುಕ್ಕೂರು
ಅಲ್ಲಾಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಢೌಲಗಾವ್	ಮಂಡಲೆ	ರಾಯಪುರ	ತಿರುವೆಂಡ್ರಮ್
ಭೋಪಾಲ್	ಕರಾಚಿ	ಮಡಿಕೇರಿ	ರಾಂಚಿ	ವಿಶಾಖಪಟ್ಣ [52—25

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ. ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,

52—32 ಗಿರಿಗಾಂವ, ಮುಂಬಯಿ.

ಕಾರ್ಡು ಬರೆದರೆ ಈಗಿನ ಕ್ಯಾಟಲಾಗು ಮಾಫಿಯಾಗಿ ಕಳುಹಿಸಲ್ಪಡುವುದು.

ಕೋವಿಗಳು, ಕತ್ತಿಗಳು, ಬರ್ಚಿಗಳು, ತೋಟೆಗಳು, ಕೇಪುಗಳು, ಮದ್ದು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS LTD.,
Largest Importers of Firearms and Ammunition
Cheapest priced firm in India,

24—24 **210 Abdul Rehim u Street, BOMBAY.**

Printed & published by P. I. Belliappa at "Kodagu" Press Mercara

6. ಹಳ್ಳಿಯವರು ಪ್ರತ್ಯೇಕಿಸಲ್ಪಟ್ಟಾಗೂ ಯಾರೂ ದೇವರು ನಮ್ಮನ್ನು ಆಳುತ್ತಾರೆಂದು ಜವಾಬಿತ್ತರೆಂದು ಗಾಂಧಿಜಿಯವರು ತಮ್ಮ ಪ್ರಸಿದ್ಧ ಭಾಷಣದಲ್ಲಿ ತಿಳಿಸಿರುವರೆಂದು ಮಿ. ಕರುಂಬೈಯ್ಯನವರು ತಿಳಿಸಿದ್ದಾರಷ್ಟೆ. ವಸ್ತುತಃ ಇದು ತಪ್ಪು ತಿಳುವಳಿಕೆ. ಗಾಂಧಿಜಿಯವರ ವಾಕ್ಯಗಳನ್ನು ಅವರು ಸರಿಯಾಗಿ ಅರ್ಥಮಾಡಿಕೊಂಡಿಲ್ಲ. "ನಾವಿಷ್ಣುಃ ನೃಪತಿಃ" ಎಂಬ ವೇದವಾಕ್ಯವನ್ನು ಹಳ್ಳಿಯವರು ತಿಳಿಸಿದರೇ ವಿನಹ ತಮ್ಮನ್ನಾಳುವ ಸರ್ಕಾರದ ಅಧಿಕಾರಿಗಳ ಹೆಸರುಗಳೇ ಆಗಲಿ, ಮತ್ಯಾವ ವಿಷಯಗಳೇ ಆಗಲಿ ತಮಗೆ ತಿಳಿಯದು ಎಂದು ಅವರು ಹೇಳಲಿಲ್ಲ. ಮಿ. ಕರುಂಬೈಯ್ಯನವರು ಮೈಸೂರು ಪ್ರಾಂತ್ಯ ಹಳ್ಳಿಗಳಲ್ಲಿ ಸಂಚಾರಮಾಡಿ ತಮ್ಮ ಅಜ್ಞಾನವನ್ನು ಕಳೆದುಕೊಳ್ಳಬಹುದು.

ಒಟ್ಟಿನಲ್ಲಿ ಮಿ. ಕರುಂಬೈಯ್ಯನವರ ಲೇಖನವು ಅಸಮ್ಮತವಾಗಿದೆ.

ಶ್ರೀಮತಿ ನಾಣಮ್ಮನವರ ಹೇಳಿಕೆಯಲ್ಲಿ ಕಾಣಬರುವ ಸುಧಾರಣೆಗಳನ್ನೀಗ ನೋಡೋಣ. ಶ್ರೀಮತಿಯವರು:—

1. ಕೊಡಗು ಯಾವುದಕ್ಕೂ ಸೇರದೆ ಪ್ರತ್ಯೇಕವಾಗಿರುವುದು ಚೆನ್ನಾಗಿ ತೋರುವುದಿಲ್ಲ. ಅಲ್ಲಿನ ಹುಟ್ಟುವಳಿಯು ಸ್ವತಂತ್ರ್ಯ ರಾಜ್ಯಭಾರ ಮಾಡಲು ಸಾಕಾಗುವುದಿಲ್ಲ.

2. ಕೊಡಗು ಮೈಸೂರಿಗೆ ಸೇರಬೇಕಾದ ಕಾರಣಗಳು ಯಾವುವೆಂದರೆ:—

(1) ಬ್ರಿಟಿಷರು ಮೈಸೂರನ್ನಾಳುತ್ತಿದ್ದಾಗ ಕೊಡಗನ್ನೂ ತಮ್ಮ ಅಧೀನದಲ್ಲಿಟ್ಟುಕೊಂಡಿದ್ದರು. ಈಗಲೂ ಮೈಸೂರಿನ ರೆಸಿಡೆಂಟರೇ ಕೊಡಗಿನ ಚೀಫ್ ಕಮಿಷನರು.

2. ಹಿಂದೆ ಕೊಡಗು ಮದರಾಸಿಗೆ ಸೇರಬೇಕೆಂದು ಚಳವಳವೆದ್ದಾಗ ಅನೇಕರು ಮೈಸೂರಿಗೇ ಸೇರಬೇಕೆಂದು ಅಭಿಪ್ರಾಯಪಟ್ಟರು.

3. ಇದಿಪತ್ಯಗಳಿಗೆ ಸ್ಥಳೀಯ ಸ್ವಾತಂತ್ರ್ಯವು ಬಂದಾಗ ಅವುಗಳು ಸಹ ದೇಶೀಯ ಸಂಸ್ಥಾನಗಳಂತೇ ಆಗುವುವು. ಆದರೆ ಕೊಡಗು ಮದರಾಸಿಗೆ ಸೇರಿದರೆ ಎಷ್ಟು ಸರಾಗವೋ ಮೈಸೂರಿಗೆ ಸೇರಿದರೂ ಅಷ್ಟೇ ಸರಾಗ.

4. ಕೊಡಗಿನ ಪೂರ್ವ ದಿಕ್ಕಿನ ಎಲ್ಲೆಯೆಲ್ಲವೂ ಮೈಸೂರು ಸಂಸ್ಥಾನದ ಎಲ್ಲೆಗೆ ಕಟ್ಟಿಕೊಂಡಿದೆ. ಅಲ್ಲದೆ ಉತ್ತರ ಎಲ್ಲೆಯ ಬಹುಭಾಗವನ್ನು ಮೈಸೂರು ಎಲ್ಲೆಯು ಸುತ್ತಿಕೊಂಡು "ಇಕ್ಕೆರಿಗೆನಾಡು" ಎಂದು ಕರೆಯಲ್ಪಟ್ಟಿದೆ.

5. ವ್ಯಾಪಾರದಲ್ಲಿ ಕೊಡಗೂ ಮೈಸೂರೂ ಹತ್ತಿರ ಎದೆ.

6. ವಿದ್ಯಾಭ್ಯಾಸಕ್ಕಾಗಿ ಬಹುಮಂದಿ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಮೈಸೂರು ದೇಶಕ್ಕೇ ಬರುತ್ತಿದ್ದಾರೆ.

7. ವೈದ್ಯಸಹಾಯಕ್ಕಾಗಿ ಅನೇಕ ಕೊಡಗರು ಮೈಸೂರಿಗೆ ಬರುತ್ತಿದ್ದಾರೆ.

8. ವ್ಯವಸಾಯ ಇಲಾಖೆಯ ಅಭಿವೃದ್ಧಿಗಾಗಿ ಮೈಸೂರು ದೇಶದ ಅಧಿಕಾರಿಗಳೇ ಸಲಹೆಗಳನ್ನು ಕೊಡುತ್ತಿದ್ದಾರೆ.

9. ಕೊಡಗಿನ ಮತ್ತು ಮೈಸೂರು ಭಾಷೆಯು ಕನ್ನಡ ಮುಂದೆ ಕನ್ನಡ ಸೀಮೆಯನ್ನೇ ಒಂದಾಗಿ ಮಾಡಬೇಕೆಂದಾಗ ಇದರಿಂದ ಅನುಕೂಲವಿದೆ.

10. ಕೊಡಗು ಮದರಾಸಿಗೆ ಸೇರಿದರೆ ಅದನ್ನು ಪ್ರತ್ಯೇಕ ಜಿಲ್ಲೆಯಾಗಿಡುವುದೇ ಗೊತ್ತಿಲ್ಲ. ನೀಲಗಿರಿಯನ್ನು ಕೊಯಮತ್ತೂರು ಜಿಲ್ಲೆಗೆ ಸೇರಿಸಿದಂತೆ ಇದನ್ನು ಇನ್ನೊಂದು ಜಿಲ್ಲೆಗೆ ಸೇರಿಸಿಬಿಡಬಹುದು. ಮೈಸೂರು ದೇಶದಲ್ಲಿ ಮಲೆನಾಡು ಪ್ರಾಂತ್ಯಗಳನ್ನು ಇದಕ್ಕೆ ಸೇರಿಸಿ ಇದೊಂದು ದೊಡ್ಡ ಜಿಲ್ಲೆಯಾಗಿ ಮಾಡಲು ಸಾಧ್ಯವಿದೆ ಮತ್ತು ಚೆನ್ನಾಗಿದೆ.

11. ರೈಲು ಮಾರ್ಗವು ಮೈಸೂರು ದೇಶದಿಂದ ಸುಲಭವಾಗಿ ಕೊಡಗಿಗೆ ಬರಲು ಸಾಧ್ಯವಿದೆ.

12. ನೀರಾವರಿ ಅಣೆಕಟ್ಟುಗಳನ್ನು ಮೈಸೂರು ದೇಶದವರು ಶೀಘ್ರವಾಗಿ ಕಟ್ಟಬಹುದು. ವಿಕಂಡದ ಹಾರಂಗಿ ಅಣೆಕಟ್ಟಿನಿಂದ ಮೈಸೂರಿಗೂ ಪ್ರಯೋಜನವುಂಟು.

13. ಮದರಾಸಿಗೆ ಸೇರಿದರೆ ಬೇಗನೆ ಸ್ವತಂತ್ರಾಧಿಕಾರವು ಬರುವುದೆಂದು ಅನೇಕರು ಆತುರಪಡಬಹುದು. ಮೈಸೂರು ದೇಶದಂತಹ ಮಾದರಿ ಸರ್ಕಾರದಲ್ಲಿ ಕೆಲವು ಕಾಲ ಇದ್ದರೆ ಮುಂದೆ ಸ್ವತಂತ್ರಾಧಿಕಾರದ ರುಚಿಯನ್ನು ನೋಡಬಹುದು" ಎಂದು ಹೇಳಿದ್ದಾರೆ.

ಶ್ರೀಮತಿಯವರ ಹೇಳಿಕೆಯನ್ನೂ ಮ. ರಾ. ಶ್ರೀ. ಕರುಂಬೈಯ್ಯನವರ ಲೇಖನವನ್ನೂ ಹೋಲಿಸಿ ನೋಡಿದರೆ ಶ್ರೀಮತಿಯವರ ಪಕ್ಷ ನ್ಯಾಯ ಮತ್ತು ತರ್ಕ, ಇವುಗಳಿವೆ. ಮ. ರಾ. ಶ್ರೀ. ಕರುಂಬೈಯ್ಯನವರಾದರೋ ತಮ್ಮ ಉತ್ಸಾಹಶೀಲದಲ್ಲಿ ಎಲ್ಲವನ್ನೂ ಮರೆತುಬಿಟ್ಟು ತಮಗೆ ತೋಚಿಬಂದ ಕೆಲವು ಅಂಶಗಳನ್ನು ಪರಾಮರ್ಶೆಯಿಲ್ಲದೆ ಬರೆದುಬಿಟ್ಟಿದ್ದಾರೆ.

ನಿಷ್ಪಕ್ಷಪಾತದಿಂದ ನೋಡಿದ್ದೇ ಆದರೆ ಶ್ರೀಮತಿ ನಾಣಮ್ಮನವರ ಅಭಿಪ್ರಾಯಗಳಿಗೆ ಬಹುಜನ ಸಮ್ಮತವು ದೊರೆಯುವುದರಲ್ಲಿ ಸಂದೇಹವೇ ಇಲ್ಲ. ಬರಿಯ ವಿತಂಡವಾದದಿಂದ ಪ್ರಯೋಜನವಾಗುವುದಷ್ಟೇ ಇದೆ. ಕೊಡಗು ಮತ್ತು ಕೊಡಗಿನ ಜನಾಂಗದವರು ಅಭಿವೃದ್ಧಿಗೆ ಬರಬೇಕೆಂಬುದೇ ಎಲ್ಲರ ಆಕಾಂಕ್ಷೆ.

ನಿಷ್ಪಕ್ಷಪಾತಿ.

ಕೊಡಗಿನ ಗುಡುಗುಡುಗಳೋ? ಬಡಲಿನ ಅವಘಡಗಳೋ?

ಇದೇನು? ಕಂಪಿಸುವ ಚಳಿಜ್ವರವೇ? ಮಲೇರಿಯಾ ಜ್ವರಕ್ಕೂ ಹೊಟ್ಟೆಯಲ್ಲಿ ಬೆಳೆದಿದ್ದ ಗೆಡ್ಡೆ ರೋಗಕ್ಕೂ ಬಲಿ ಬಿದ್ದು ನರಳುತ್ತಿರುವ ಬಂಧುಗಳೇ! ಹೆದರದೇಡಿ!! ಮರುಕ ಇನ್ನು ಏಕೆ!!! ಶಕ್ತಿ ಮದ್ದುಂಟು. ನೋಡಿ ಡಾಕ್ಟರ್ ವಾಸುದೇವರ ರಾಜ ಮದ್ದು ಮಲೇರಿಯೋನವನ್ನು ಒಂದು ಸರ್ತಿ ಕುಡಿದು ನೋಡಿ! ಮೂರೇ ಗುಟುಕುಗಳಿಂದ ಜ್ವರ ಬಿಟ್ಟೇ ಹೋಗುತ್ತದೆ ಜಾಡಿ! ಏಳೇ ಗುಟುಕುಗಳಿಂದ ಗೆಡ್ಡೆ ಕರಗುತ್ತದೆ ನೋಡಿ! ಈ ರಾಜ ಮದ್ದು ಮಲೇರಿಯೋನ 1890ನೇ ಇಸವಿಯಿಂದ ಪ್ರಪಂಚದ ನಾಲ್ಕು ದಿಕ್ಕುಗಳಲ್ಲಿ ಸರಾಸರಿ ಲಕ್ಷಗಟ್ಟಲೆಯಿಂದ ಸಂಚರಿಸಿ ಯಮರಾಯನ ಬಲೆಯಲ್ಲಿ ಸಿಕ್ಕಿ ನರಳಿಕೊಂಡಿದ್ದ ಮಲೇರಿಯ ರೋಗಿಗಳನ್ನು ಎಳೆದುಕೊಂಡು ಬಂದಿರುವ ಪ್ರಾಣಗಳ ಸಿಫಾರಸು ಪತ್ರಗಳು ಇಂದಿನ ವರೆಗಾದರೂ ಕೊಂಡಾಡುತ್ತಲಿರುವವಲ್ಲಾ? ರಾಜ ಮದ್ದು ಮಲೇರಿಯೋನದ ಮಹತ್ವ ತಿಳಿಯಬೇಕೆಂಬ ಮನಸ್ಸೇ ಪರೀಕ್ಷಾರ್ಥ ಒಂದೇ ಒಂದು ಬಾಟ್ಲಿ ತರಿಸಿ ಗುಟುಕಿಸ್ಕೊಂಡು ಕುಡಿಯಿರಿ. ಆವಾಗ ಮಲೇರಿಯಾ ಜ್ವರದ ದೀಟ ಎಲ್ಲಿ? ಮುಕ್ತಿ ನೋಡಿ! 16 ಗುಟುಕುಗಳ 4 ಔನ್ಸಿನ ಸೀಸೆಗೆ ಬರೇ ಆಣೆ 14 32 ಗುಟುಕುಗಳ 8 ಔನ್ಸಿನ ಸೀಸೆಗೆ ಬರೇ ರೂ. 1—8—0. 1 ಡಜನಿಗೆ ರೂ. 9—12—0. 2 ಡಜನಿಗೆ ರೂ 16—8—0.

ಎದೆಯ ಸುಡು ಸುಡು.

ಇದು ಯಾತರಿಂದ? ಪಿತ್ತ ಉದ್ರೇಕದಿಂದ ಶರೀರದಲ್ಲಿ ಸದಾ ಆಸ್ತಿ, ಜ್ವರ, ಕೈಕಾಲು ಬಚ್ಚಲು, ರಕ್ತ ಛಾಯೆ ಇಲ್ಲದೆ ದೇಹ ಬಿಳುಪೇರೋಣ, ರುಚಿ ಕೆಡುವಿಕೆ, ನಾಲಗೆ ಕಹೀ. ಮಲಬದ್ಧತೆ. ತಲೆ ತಿರುಗುವದು, ಪಿತ್ತ ಕಾರಾಟ, ತಲೆ ಸಿಡಿತ. ಮೂತ್ರಕ್ಕೆ ಉರಿ ಮತ್ತು ಕಡು ಕೆಂಪು, ನಿದ್ರಾಭಂಗ, ದೇಹಕ್ಕೆ ಆಯಾಸ ಇತ್ಯಾದಿಗಳ ರೋಗಿಯು ಕೆಂಪೌಂಡ್ ಸಿರಪ್ ಕಾರ್ಡಸ್ ಎಂಬದನ್ನು ಸೇವಿಸಿಕೊಂಡಲ್ಲಿ ಪಿತ್ತ ರೋಗಗಳೆಲ್ಲಾ ಹರ, ದೇಹಕ್ಕೆ ಶಕ್ತಿ, ಬಲ ಖಂಡಿತ. 8 ಔನ್ಸಿಗೆ ರೂ. 3—8—0.

ಗಂಡಿಗೆಯ ಗುಡು ಗುಡು.

ಯಾತರ ಕೆಡಕಿನಿಂದಿದು? ಕ್ಷೀಣತೆ ಚಾಪ್ಲ್ಯಯಾಗಿ ಕುರೂಪವಾದ ನಿಸ್ತೇಜನ ಮುಖ, ರಕ್ತ ಕೊರತೆಯ ಶರೀರ, ನರನಾಡಿ ಬಲವಿಲ್ಲದ ದೇಹ, ಸಮಾಧಾನವಿಲ್ಲದ ಮನಸು, ಬಿಸಿ ಏರಿಕೆಯಿಂದ ಮೆದುಳು ತಡಿಯಲಾರದ ಮುಂಗೋಪ, ಜೀರ್ಣವಿಲ್ಲದ ಕೋಶ, ಧೈರ್ಯವಿಲ್ಲದ ಎದೆ ಇವು ಯಾವ ಯುವಕನಲ್ಲಿ ಪ್ರಜ್ವಲಿಸುವದೋ? ಆ ಯುವಕನು ಶಕ್ತಿನ ಕೆಂಪೌಂಡು ಸಿರಪ್ ಸಾಲಸವನನೆಂಬ ಅಮೃತವನ್ನು ಸೇವಿಸಿಕೊಂಡಲ್ಲಿ ಅವಲಕ್ಷಣದ ಕೊರತೆಗಳೆಲ್ಲಾ ಹೀಗಿ, ಮುಖಲಕ್ಷಣ ಹೊಳಪು, ಶರೀರ ಪುಷ್ಟಿಯಾಗಿ, ರೂಪವಂತ, ಬಲವಂತ ಎಂದೆನಿಸಲ್ಪಡುವನು ಇದು ಖಂಡಿತ. 8 ಔನ್ಸಿಗೆ ರೂ. 3—8—0.

ಮುಖದ ಸುಡು ಸುಡು.

ಇದು ಅವಲಕ್ಷಣವಲ್ಲದೆ ಮತ್ತೇನು? ಕೋಮಲಾಂಗಿಗಳ ಮೈಸೊರಗಿ, ಕೆನ್ನೆ ಚಟ್ಟೆ ಬಿದ್ದು, ಮುಖ ಕಳೆಗುಂದಿ, ಆಯಾಸವುಳ್ಳ ಎದೆ, ಹಾರಾಡುವ ಗುಂಡಿಗೆ, ಬಲ, ಶಕ್ತಿ ಇಲ್ಲದ ಸೊಂಟ, ರುಚಿ ಕೆಟ್ಟ ನಾಲಿಗೆ, ತಲೆನೋವು ಸಿಡಿತ, ತಡಿಯಲಾರದ ಹೊಟ್ಟೆ ಶೂಲೆ, ಕೈಕಾಲು ಬಚ್ಚಲು, ಯಾವ ಯುವತಿಯಲ್ಲಿ ಖಾತ್ರಿಯೋ? ಅಂಥವಳು ಕೆಂಪೌಂಡು ಸಿರಪ್ ಸೇಟಿನಾ ಸೀಡಿಯ ಎಂಬ ಅಮೃತವನ್ನು ಸಂಶಯವಿಲ್ಲದೆ ಸೇವಿಸಿದಲ್ಲಿ ದೇಹದ ಎಲ್ಲಾ ಅವಸ್ಥೆಗಳು ಕ್ಷಣ ಸಮಯವಾಗಿ ಚಂದವಾದ ರೂಪ, ಪುಷ್ಟಿ ಕಟ್ಟಿನ ಶರೀರ ಖಂಡಿತ ಉಂಟಾಗುತ್ತೆ. 8 ಔನ್ಸಿನ ಬಾಟ್ಲಿಗೆ ರೂ. 3—8—0.

ಗರ್ಭ ಕೋಶದ ಗುಡು ಗುಡು.

ಸುಖತರವಲ್ಲದ ಕೋಶವೇ? ಇಗೋ! ಮುಟ್ಟು ಕಟ್ಟಳೆ ವಿಲ್ಲಿ ವಿವಿಧ ತರದ ಕೆಡಕು, ಸೂತಕ ವಾಯು, ಕೋಶ ಕೆಳಗಿಳಿಯೋಣ, ಕೈಕಾಲುಗಳ ಸೆಳೆತ, ಗರ್ಭ ಉತ್ಪನ್ನಕ್ಕೆ ಅಡ್ಡಿಂತ್ಯ, ಗರ್ಭ ನಾಶ, ಇತ್ಯಾದಿ ದುಃಖಕರವಾದ ರೋಗಗಳು ಯಾವ ಹೆಂಗಸಿನಲ್ಲಿ ನಿಜವಾದದ್ದೋ? ಅಂಥಾ ಹೆಂಗಸಿಗೆ ಕೆಂಪೌಂಡ್ ಸಿರಪ್ ವಿಬುರ್ನೋಮ ಎಂಬ ಅಮೃತವು ಕೋಶಕ್ಕೆ ನೈಸರ್ಗಿಕ ಸುಖವನ್ನು ಕೊಟ್ಟು ಗರ್ಭದ ಫಲವನ್ನು ರಕ್ಷಿಸುವದು. 8 ಔನ್ಸಿನ ಬಾಟ್ಲಿಗೆ ರೂ. 3—8—0.

ಕೂಸುಗಳ ಸುಡು ಸುಡು.

ಅಂದರೇನು? ಕೂಸುಗಳು ದೇಹದಲ್ಲಿ ಸೊರಗಿ, ಅಜೀರ್ಣತೆ ರೋಗಕ್ಕೆ ಆಹುತಿ ಬಿದ್ದು, ಎಲುಬು ಚರ್ಮಗಳ ರೂಪವೆತ್ತಿ, ರಕ್ತ ಛಾಯೆ ಪೂರಾ ಕಳೆದು ಕ್ಷಣ ಕ್ಷಣ ತೆಳ್ಳಗಾದ ಮಲ ಹೊರಪಟ್ಟು, ಮೂತ್ರದಲ್ಲಿ ಬಿಳೇ ಪುಡಿ ದ್ರಾವಕ, ಹಲ್ಲುಗಳಲ್ಲಿ ಹೊಂದ ಬೀಳೋಣ, ಕಫ, ಕೆಮ್ಮು, ಜ್ವರ. ಸೊಂಟಕ್ಕೆ ಬಲವಿಲ್ಲದೆ ಕೈಕಾಲು ಕ್ಷೀಣತೆ ಹೊಂದಿ ಹಟ ಗರ್ವ ತಂದು ಬೆಳೆಯೋಣಕ್ಕೂ, ಬದುಕುವದಕ್ಕೂ ಕಷ್ಟವಾದ ದಿನಗಳೆಂದು ಕಂಡಾಕ್ಷಣ ಬೇಬಿ ಟೋನ ಎಂಬ ಮಕ್ಕಳ ಅಮೃತವನ್ನು ಹೆತ್ತವರು ಭೀತಿ ಇಲ್ಲದೆ ಕುಡಿಸಿದಲ್ಲಿ ಅಂಥಾ ಕೂಸುಗಳು ತೀಡನೆ ರೋಗದಿಂದ ವಿಮುಕ್ತರಾಗಿ ಗುಲಾಬಿ ಪುಷ್ಪಗಳಂತೆ ಮಂದಿರವನ್ನು ಬೆಳಗಿಸಿ, ಹೆತ್ತವರ ನೋಟಕ್ಕೆ ಚಂದ ರೂಪವೆತ್ತುವರು. ಕೂಸುಗಳ ಇಂಥಾ ರೂಪ ಕಾಣ ಮನಸಿದ್ದಲ್ಲಿ ಬಿಲ್ಲಿ ಬೇಬಿಟೋನ್ ಕುಡಿಸಿ. 1 ಔನ್ಸಿಗೆ ರೂ. 1—4—0.

ನರಗಳ ಗುಡು ಗುಡು.

ವಾತ ರೋಗದಿಂದಾಗುತ್ತದೆಯೋ? ಸಂದು ಸಂದುಗಳಲ್ಲಿ ಗುದ್ದಿಟ್ಟ ನೋವು, ಗಂಟು ಗಂಟುಗಳ ಬೀಗು, ನರಗಳ ಕುತ್ತಾಟ, ಮೊಣ ಖಂಡಗಳಲ್ಲಿ ಸಿಡಿತ, ನೋವು, ಕೈಕಾಲುಗಳ ಎಳೆದಾಟ, ಕೀಲು ಕೀಲುಗಳ ಜೋಲಾಟ, ಕಂಡ ಒಡನೆ ರ್ಹ್ಯುಮಟೋನ್ ಎಂಬ ನರಗಳ ಅಮೃತವನ್ನು ಸೇವಿಸಿಕೊಂಡಲ್ಲಿ ಅವಸ್ಥೆಯ ರೋಗಗಳೆಲ್ಲಾ ಶಮನತೆ ಹೊಂದಿ ನರನಾಡಿಗಳಿಗೆ ಶಕ್ತಿ ಕೊಟ್ಟು ರಕ್ತವನ್ನು ಸರಿಯಾಗಿ ಚಲನೆಗೆ ಅನುಕೂಲಿಸಿ ಎಂಥಾ ವಾತ ರೋಗವನ್ನಾದರೂ ಗುಣ ಪಡಿಸುವದು. 8 ಔನ್ಸಿಗೆ ರೂ. 3—8—0.

ಟಿಕ್ಚ್ಯ ಮತ್ತು ಹೋಮಿಯೋಪಥಿಕ್ ಮದ್ದುಗಳು ನಮ್ಮಲ್ಲಿ ಸಿಕ್ಕುತ್ತವೆ.

ಪರೀಕ್ಷಿಸಿ ಕೊಡುವ ಪ್ರಶಸ್ತಿ ಪತ್ರಗಳೂ, ಕನ್ನಡಕಗಳೂ ನಮ್ಮಲ್ಲಿ ಇರುತ್ತವೆ.

"ಆರೋಗ್ಯಭಾಗ್ಯದ ನೀತಿ ಸೂತ್ರ"ವೆಂಬ ಪುಸ್ತಕವು ಧರ್ಮಾರ್ಥ ಕಳುಹಿಸಲ್ಪಡುವದು. ಪರವೂರಿನ ರೋಗಿಗಳು ಇದರ VIII—X ಪಾನಿನಲ್ಲಿರುವ ರೋಗ ಲಕ್ಷಣಗಳನ್ನು ಒಂದೂಕಾಗದಾಣೆ ಸ್ಟಾಂಪು ಸಹಿತ ಬರೆದು ಕಳುಹಿಸಿದರೆ ರೋಗನಿವಾರಣೆಗೆ ಚಿಕಿತ್ಸಾ ಸೂಚನೆಗಳನ್ನು ಉಚಿತವಾಗಿ ಬರೆದು ಕಳುಹಿಸುವೆವು.

ಏಜಂಟರನ್ನು ಎಲ್ಲಾ ಕಡೆಗಳಲ್ಲಿ ನೇಮಿಸಲಾದೀತು.

ವಿಳಾಸ:— ಮಲೇರಿಯೋನ ಕಂಪೆನಿ,
(14 ಹಂಪನಕಟ್ಟೆ)
ಮಂಗಳೂರು.

The Malariana Company.
(14) Mangalore, S. K.

ಕೊಡಗಿನ ರೈತ.

೧.

ಸಾಹಿಸೋಳ್ ಮಳೆಯುದುರಿ ಬೆಳೆಯುಗದ ಸಮಯ ಬರೆ
ಪಡೆವನಾನಂದವನು ಕೃತಿಯುಂತೆ ಮನದೊಳರೆ
ಬೇಡುತಲಿ ಧನಧಾನ್ಯ ಸಂಪದವ ಹಾಡುತಿರೆ
ಕೊಡಗು ರೈತನು ಜನರ ಸುಖಗಳನು ನೆನೆಯುತಿರೆ
ಬೇಡುವನು ನೇಗಿಲನ. ಬಿಳಿಯ ಕಥನನು ನೋಡಿ.

೨.

ಕೋಳಿ ಕೂಗಲು ಎದ್ದು ತೊಳೆದು ಮುಖವನ್ನು
ಎತ್ತುಗಳ ಹೆಗಲೊಳೇರಿಸಿ ನೊಗಗಳನ್ನು
ಸಾಲಾಗಿ ಹೂಡುವನು ಬಂದು ನೆಲವನ್ನು
ಎತ್ತುಗಳ ಎಳೆಯುತಿರೆ ಆ ನೇಗಿಲನ್ನು
ಆಳಾಗಿ ದುಡಿಯುವನು ನೋಡಿ ಜನರನ್ನು.

೩.

ಅವನರಸಿ ಹಿಟ್ಟಕೆದು ಸುಟ್ಟು ರೊಟ್ಟಿಯನು
ಅವಗಾಗಿ ಕೊಂಡೊಯ್ದು ಅಲ್ಲಿ ತಿಂಬುವನು
ಅವರೊಡನೆ ದುಡಿಯುತಿಹ ಎರಡೆತ್ತುಗಳನು
ಅವಳಾಗ ಕೊಡುತಿಹಳು ಹುಲ್ಲುನೀರ್ಗಳನು
ಬುವಿಯನ್ನು ಉಳುತಿರುವ ದುಗಿನು ಕೂಟವನು.

೪.

ದವಿಪ್ಪೋಗೆ ತಲೆಯ ಮೇಲ್ ನಿಲ್ಲಿಸುತ ಕೆಲಸವನು
ಹಣಿವ ನೀರಿಡೆಗೈದ ಎತ್ತುಗಳ ತೊಳೆಯುವನು
ಅವುಗಳನು ಮೈಗಳಚಿ ಮೇಯಲ್ಕೆ ನೂಕುವನು
ತರುಣಾಯಿತೆ ಗೈತಂದು ಮೈಕೈಯ ತೊಳೆಯುವನು
ಸವಿಯುವನು ಸುಖದಿಂದ ಉಣಿಸುಗಳ ನಾರಿಗನು.

೫.

ಪರಿಕಿಸುವ ಸಂಜೆಯೊಳು ತಾಂ ಗೈದ ಕೆಲಸ
ಸಂಗೈದು ಹೂಡುವನು ಗದ್ದೆ ಮರುದಿವಸ
ಇರುಳು ಹಗಲುಗಳನ್ನು ಕಳೆಯದೆಯೆ ಸರಸ
ಧರಣಿಯೊಳ್ ಬೆಳೆಯುವನು ಉತ್ತಮದ ದವಸ
ಸ್ವರಚಿತ್ತನಾಗಿರುತ ಲಾಭವನು ಬಯಸ.

೬.

ಮನದೊಳೊಂದೇ ಬಯಕೆ ಬಡಜನರ ಸುಖವು
ಜನಜೀವನವೆ ತನ್ನ ಸುಖದ ನಸುನಗುವು.
ಜನದೇವತೆಯು ತುಷ್ಟಿಪಡೆಯೆ ಸಾರ್ಥಕವು
ಜನಕಾಗಿ ಹುಟ್ಟಿದನು ತಾನೆಂಬ ನೆನವು
ಮಿನುಗುತಿರೆ ಮನದೊಳಗೆ ತೃಪ್ತನನುದಿನವು.

೭.

ಮಳೆಯೊಯ್ಯು ಬೆಳೆಯೊಯ್ಯು ಕೈಕೊಂಡು ಕೇಳಿಯನು
ಬೇಸಗೆಯ ಬಿಸಿಲನೊಳು ಹುಡುಕುತ್ತ ಬೇಟೆಯನು
ಸುಳಿದಾಡು ತೋರಿಸುತ ನಿಜ ದೇಹ ಸಾಮ್ಯಗಳನು
ನೂಕುವನು ಕಾಡೊಳಗೆ ಕ್ರೂರತರ ಮೃಗಗಳನು
ಮರೆವಾಡ ಕೊಡಗು ರೈತನು ತನುವ ದೂಂತವನು.

೮.

ಬಡಪಾಡಿಗಳ ಕಾಡಿ ಹರುಷದಿಂದಿರುತಿಹನು
ಬಡವರನು ಹರಸುವನು ಅವರೊಡನೆ ಬೆರೆಯುವನು
ಕೊಡಗಿನಿಯ ಕೊಡಗನಿವ ಸುಡಿವ ಸವಿನುಡಿಗಳನು
ಬಡಧರ್ತಿ ಇವನೊಳಗೆ ಮೂಡಿರಲು ಬೇಡುವನು
ಪಡೆದಿಟ್ಟು ಬಹು ಫಲವ ಒದಗಿಸುತ್ತಾನೆಯನು.

ಅನಂತ.

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ.]

ಅಂಗರೆ ಕಜ್ಜಿ.

ಅಂಗರೆಕಜ್ಜಿ (ದದಾರ) ಯ ಉಪದ್ರವು ದೇಶದಲ್ಲೆಲ್ಲಾ ಬಹು ಪ್ರಬಲವಾಗಿದೆ. ಹೆಚ್ಚು ಕಮ್ಮಿ ದೇಶದ ಎಲ್ಲಾ ಭಾಗಗಳಲ್ಲೂ ಪ್ರತಿ ಮನೆಯಲ್ಲೂ ತುಂಬಿದೆ. ಅನೇಕ ಮಕ್ಕಳು ಇದರ ಬಾಧೆಗೆ ತುತ್ತಾದವು ಎಂಬದನ್ನು ವಿಷಾದದಿಂದ ತಿಳಿಸಬೇಕಾಗಿದೆ. ಈ ರೋಗವು ಈ ಕೆಲಸದ ಸಮಯದಲ್ಲಿ ಒದಗಿರುವದರಿಂದ ತಂದೆ ತಾಯಿಗಳಿಗೆ ಈ ರೋಗದಲ್ಲಿ ಬಳಲುತ್ತಿರುವ ಮಕ್ಕಳ ಆರೈಕೆಗೆ ಗಮನಕೊಡಲು ಅವಕಾಶವು ಬಹಳ ಕಮ್ಮಿ ಎಂದೇ ಹೇಳಬೇಕಾಗಿದೆ. ಬೇಸಗೆಯಲ್ಲಿ ಕೊಡುತ್ತಿದ್ದ ತೀಕ್ಷ್ಣ ತರದ ನಾಡು ಔಷಧಿಯನ್ನು ಈ ರೋಗಕ್ಕೆ ಈ ಮಳೆಗಾಲದಲ್ಲಿ ಕೊಡುವದರಿಂದ ಮಕ್ಕಳಿಗೆ ಕೆಮ್ಮಲು, ಗಂಟಲು ಕಟ್ಟಿಕೊಳ್ಳುವದು, ವೆಕ್ಕಿ ಊದಿಕೊಳ್ಳುವದು ಮತ್ತೆ ರೋಗವು ಉಲ್ಬಣಿಸುವದು. ಮಾತ್ರವಲ್ಲ ಸ್ವಲ್ಪ ಎಚ್ಚರಿಕೆ ತಪ್ಪಿದರೆ ಸನ್ನಿಪಾತವೂ, ಅಮಶಂಕೆ ಸಹ ಆಗಿ ಬಹಳ ಗಂಡಾಂತರಕ್ಕೆ ಮಕ್ಕಳು ಒಳಗಾಗುವರು. ಈ ರೋಗಕ್ಕೆ ಬೇರೊಂದು ತಿಳಿಕಟ್ಟುವ ಉಪಾಯವಿಲ್ಲದ್ದರಿಂದ ಈ ರೋಗ ಒಂದು ಶಾಪವಾಗಿಯೇ ಹೋಗುವ ವರೆಗೆ ತಂದೆ ತಾಯಿಗಳಿಗೂ ಮಕ್ಕಳಿಗೂ ಬಹಳ ಕಷ್ಟ ಕಾಲವೆಂದೇ ಹೇಳಬೇಕಾಗಿದೆ.

ಈ ಕಳೆದ ವಾರದಲ್ಲಿ ಅಮ್ಮತ್ತಿನಾಡು ಕಾವಾಡಿ ಗ್ರಾಮದ ಕಾವಾಡಿಚಂಡ ಮನೆಯಲ್ಲಿ ಒಂದೇ ದಿನ ಎರಡು ಮಕ್ಕಳೂ ಬಿಳುಗುಂದ ಗ್ರಾಮದ ಮಂಡೇಪಂಡ ಮನೆಯಲ್ಲಿ ಒಬ್ಬ ಮಗುವೂ ಇದಕ್ಕೆ ತುತ್ತಾದವು.

ಈ ರೋಗವು ಕಾಣಿಸಿಕೊಂಡ ಕೂಡಲೇ ಅಕ್ಕಪಕ್ಕ [illegible] ಬಹಳ ಮಟ್ಟಿಗೆ ಶಾಂತಿಗೆ ಬರುವದಲ್ಲದೆ ಕಜ್ಜಿಯೂ ಬೇಗನೆ ಹೊರಟೋಗುವದು ಮತ್ತು ಮಕ್ಕಳನ್ನು ಕಕ್ಕ ಪಕ್ಕದಲ್ಲಿ ಇಟ್ಟುಕೊಳ್ಳುವದರಿಂದ ಬಹಳ ಮಟ್ಟಿಗೆ ಪ್ರಯೋಜನವಾಗುವುದು.

ಬಿ. ಪಿ. ಪೂದಪ್ಪ.

ದಿವಂಗತ ಶ್ರೀಮಾನ್ ಪಾಂಡಂಡ ಮುತ್ತಣ್ಣನವರು.

ಅಯ್ಯಾ ಸಂಪಾದಕರೇ,

ತಮ್ಮ 'ಕೊಡಗು' ಪತ್ರಿಕೆಯ ಜುಲೈ ತಾರೀಖು 1೮ ನಂಚಿಕೆಯಲ್ಲು ಈ ಮೇಲಿನ ಮಹಾನುಭಾವರ ಅಕಾಲ ಮರಣ ವಾರ್ತೆಯನ್ನು ತಿಳಿದು ಅತ್ಯಂತ ದುಃಖ ಉಂಟಾಯಿತು.

ಈ ದಿವ್ಯ ಪುರುಷರ ಪರಿಚಯವನ್ನು ನಾನು ಇದೇ 1932 ನೇ ಇಸವಿಯ ಆದಿಯಲ್ಲಿ ಪತ್ರವ್ಯವಹಾರಗಳ ಮೂಲಕ ನಮ್ಮ ಈ ಪೂರ್ವ ಆಫ್ರಿಕೆಯ ಕೊಡವರ ಸಂಘದ ಪರವಾಗಿ ಪ್ರಾರಂಭಿಸಿದ್ದಾದರೂ ಇವರನ್ನು ಪ್ರತ್ಯಕ್ಷ ಎದುರುಗೊಳ್ಳುವ ಸೌಭಾಗ್ಯ ದೈವೇಚ್ಛೆಯು ಬೇರೆಯಾದುದರಿಂದ ಅತ್ಯಂತ ವಿಷಾದಿಸುತ್ತೇನೆ.

ಇವರು ತನ್ನ ತನುಮನ ಧನವನ್ನರ್ಪಿಸಿ, ತನ್ನ ಕುಲ ವೃತ್ತಿಗೆ ಅಪಮಾನವನ್ನು ತಂದುಕೊಳ್ಳದೆ ವಿನಯ, ದಯ, ದಾಕ್ಷಿಣ್ಯ ಮುಂತಾದ ಗುಣಗಳಿಂದಲೂ, ವಿದ್ಯೆಯಿಂದಲೂ ಹೆಚ್ಚು ಶ್ರಾಶಸ್ತ್ಯ ಮೊಹುಗಳನ್ನಾ ಪಡೆ, ಧರ್ಮ ಮಾರ್ಗದಲ್ಲಿ ನಡೆಯುವ ಸತ್ಪುರುಷನ ಹಾಗೆ ವಿಶ್ರಾಂತಿ ಸ್ವಾನಕ್ಕೆ ಚ್ಯುತಿಯನ್ನು ಮಾಡದೆ, ಅತಿ ಸಹಾಸದಿಂದ ಕೈಕೊಂಡಂಥ ಕಾರ್ಯಗಳನ್ನು ಪೂರ್ತಿಗೊಳಿಸಿ ರಚಿಸಿದಂಥ 'ಕೊಡಗು ಮತ್ತು ಕೊಡವರು'. 'ಕೊಡವರ ಕೈಪಿಡಿ,' "ಕುಲವೃದ್ಧಿ ಸ್ವರ್ಗದಾಗಮನ," "ನಾಗರೀಕತೆಯ ಪರಿಣಾಮ" ಮತ್ತು ಸಂಗಡವೇ ಇವರ ಒಂದು ಛಾಯ ಚಿತ್ರವನ್ನು ಸಹ ನಮ್ಮ ಸಂಘದ ಪ್ರಯುಕ್ತ ಕಳಿಸಿ ಒದಗಿಸಿಕೊಂಡವರಿಂದ ಇಲ್ಲಿರುವ ಕೊಡವರೆಲ್ಲರೂ ಧನ್ಯರೇ ಎಂದು ಹೇಳಬೇಕಾಗಿದೆ.

ಯಾರಾದರೂ ಸರಿಯೆ, ಯಾವ ಯಾವ ತರದ ಪ್ರಕಟಣೆಗಳನ್ನು ಪ್ರಕಟಿಸಿದರೂ ಅಥವಾ ಲಿಖಿತ ರೂಪದಲ್ಲಿ ದೇಶ ಸೇವೆ ಮಾಡಿದರೂ, ಅದು ಗುಣಜ್ಞರಾದವರಿಗೆ ಹಿತವಾಗಿಯೂ, ದುರ್ಜನರಿಗೆ ಅಹಿತವಾಗಿಯೂ ಕಂಡು ಬರುವುದು ಸ್ವಾಭಾವಿಕವಾದರೂ, ಇವರ ಲಿಖಿತ ಸೇವೆಯು ಮನೋಹ್ಲಾದಕವಾಗಿಯೂ, ಅವಲೋಕನಾರ್ಥವಾಗಿಯೂ, ನನಗೆ ಕಂಡು ಬಂದಿದೆಯೆಂದು ಇಲ್ಲಿ ಒತ್ತಿ ಹೇಳಬಲ್ಲೆನು. ಇಂಥಹ ಪುರುಷರ ನಿಧನವು ಶೋಕವನ್ನುಂಟು ಮಾಡದಿರದು. ಇವರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಪ್ರಾರ್ಥಿಸುವ ಮತ್ತು ಇವರ ಕುಟುಂಬಕ್ಕೆ ಸಹಾನುಭೂತಿಯನ್ನು ಸೂಚಿಸುವ,

ಪಿ. ಬಿ. ತಿಮ್ಮಯ್ಯ,
(ಆಫ್ರಿಕ.)

ಸಹಕಾರಿ ಫೆಡರೇಶನ್.

ಅಯ್ಯಾ,

ಅರ್ಥವನ್ನು ಅನರ್ಥವಾಗಿ ಮಾಡಿಕೊಂಡ ಸಹಕಾರಿಯೇ, ಆಚೆ ವಾರದ ಪತ್ರಿಕೆಯಲ್ಲಿ ನಿಮ್ಮ 'ಕೊಡಗು ಸಹಕಾರಿ ಫೆಡರೇಶನ್' ಎಂಬ ಹೆಸರಿನ ಬಾತ್ಮಿಯನ್ನು ನೋಡಿ ಚೋದ್ಯವಾಯಿತು. ನಿಮ್ಮ ಬಾತ್ಮಿಯನ್ನು ಓದಿದರೆ ನಿಜವಾಗಿಯೂ ನೀವು ಸಹಕಾರದೊಳಗೆ ಇದ್ದು ಅಸಹಕಾರವನ್ನು ಕೈಕೊಂಡ ಮಹನೀಯರಂತೆ ಕಾಣುತ್ತೀರಿ. ಯಾವ ಸಹಕಾರಿಯೂ ಫೆಡರೇಶನನ್ನು ಎಂದೂ ದೂರಲಾರನು. ಫೆಡರೇಶನ್ನನ್ನು ನಡೆಯಿಸುವದರಲ್ಲಿ ತಪ್ಪಿದ್ದರೂ ಇರಬಹುದು. ಆ ಮಾತ್ರಕ್ಕೆ ಫೆಡರೇಶನ್ ಈ ಚಿಕ್ಕ ದೇಶಕ್ಕೆ ಬೇಡ ಎಂದು ಸಹಕಾರಿಯಾಗಿ ಹೇಳುವ ನಿಮ್ಮ ತಿಳಿಗೇಡಿತನಕ್ಕೆ ನಾನು ವ್ಯಸನಪಡುತ್ತೇನೆ. ಸಹಕಾರ ಸಂಸ್ಥೆಗಳು ಸರಕಾರಿ ಸಂಸ್ಥೆಗಳೆಂಬುದನ್ನು ಮರೆತುಬಿಡಿ. ರಿಜಿಸ್ಟ್ರಾರರವರು ಆ ಸಂಸ್ಥೆಗಳ ಯಜಮಾನರೆಂಬದನ್ನು ಮರೆತುಬಿಡಿ. ಸಹಕಾರ ಸಂಸ್ಥೆಗಳಲ್ಲಿ ಅಧಿಕಾರ ಬಲ ತೋರಿಸುವದನ್ನು ಮರೆತುಬಿಡಿ. ಸರಕಾರವೇ ರೈತರು ರೈತರೇ ಸರಕಾರ ಎಂಬದನ್ನು ನೆನಪಿನಲ್ಲಿಡಿ. ಸಹಕಾರ ಸಂಸ್ಥೆಗಳು ಶುದ್ಧ ರೈತರ ಸಂಘಗಳೆಂದೂ ಆ ಸಂಸ್ಥೆಗಳನ್ನು ಸರಿಯಾಗಿ ನಡೆಯಿಸಲು ತಕ್ಕ ಸಲಹೆಗಳನ್ನು ಕೊಟ್ಟು ಬರಾರ ತಪ್ಪದೆ ಸರಿಯಾಗಿ ಸಂಘಗಳನ್ನು ನಡಿಸುವ ಶಕ್ತಿಯನ್ನು ರೈತರಲ್ಲಿ ಹುಟ್ಟಿಸುವದೇ ರಿಜಿಸ್ಟ್ರಾರವರ ಕರ್ತವ್ಯವೆಂಬುದನ್ನು ನೆನಪಿನಲ್ಲಿಡಿ. ಮೊದಲು ಸಹಕಾರ ಸಂಘಗಳು ಹುಟ್ಟಿದಾಗ್ಯೆ ರಿಜಿಸ್ಟ್ರಾರು ಮಾತ್ರವೇ ಅಲ್ಲ ಹುಟ್ಟಿದ 8—10 ವರ್ಷಗಳ ವರೆಗೆ ಆಯಾಯನಾಡು ಪಾರುಪತ್ಯಗಾರರುಗಳೂ ಸುಭೆದಾರರೂ ಸಹಕಾರ ಸಂಘಗಳ ಎಚ್ಚರಿಕೆ ವಹಿಸ್ತಿ ತಿಗಿದ್ದು ಕೊಂಡು ರೈತರಲ್ಲಿ ಸಹಕಾರ ತಿಳುವಳಿಕೆಯನ್ನು ಹರಡಲು ಸಹಾಯಕೊಟ್ಟದ್ದೂ ರೈತರಲ್ಲಿ ಸಂಘಗಳನ್ನು ನಡಿಸುವ ಶಕ್ತಿ ಹುಟ್ಟಿದ ನಂತರ ಅವರ ಬೆಂಬಲವನ್ನು ಬಿಟ್ಟದ್ದೂ 'ಸಹಕಾರ' ಎಂದು ಹೆಸರು ಇಟ್ಟುಕೊಂಡ ತಮಗೆ ಗೊತ್ತಿಲ್ಲವೇ? ಅದೇ ಮೇರೆ ರೈತರು ಸಂಘಗಳನ್ನು ತಾವೇ ಸ್ವತಂತ್ರವಾಗಿ ಚೆನ್ನಾಗಿ ನಡೆಯಿಸುವ ಶಕ್ತಿ ಹುಟ್ಟಿತೆಂದು ತಿಳಿದ ಕೂಡಲೆ ರಿಜಿಸ್ಟ್ರಾರವರ ಈಗ ಇರುವ ಮೇಲು ಎಚ್ಚರಿಕೆಯೂ ಕೂಡಾ ಸ್ವಭಾವಿಕವಾಗಿ ನೀವು ಈಗ ಅಲ್ಲಗಳೆಯಲು ಹೊರಟ ಯೂನಿಯನ್ ಮತ್ತು ಫೆಡರೇಶನಿಗೆ ಬರತಕ್ಕದೆಂಬುದು ಸಹಕಾರಿಗಳಾದ ನಮಗೂ ತಿಳಿದ ಸಂಗತಿಯಾದಾಗ್ಯು ತಮ್ಮ ಅವಗಾಹನೆಗೆ ಬಾರದಿರುವುದು ಚೋದ್ಯವು. ಫೆಡರೇಶನ್ ಎಂಬ ಈ ಸಂಸ್ಥೆಯು ಕೊಡಗಿಗೆ ಪ್ರಥಮ ಜನನವೆಂದು ಹೇಳುವಿರಿ. ಅದರ ಜನಿಸಿದ ಈ ಸಂಸ್ಥೆಯನ್ನು ಹೀಯಾಳಿಸುವ ಪ್ರಥಮ ಜನನವು ನಿಮ್ಮದೇ. ಗ್ರಾಮ ಸಂಘಗಳ ಪ್ರತಿನಿಧಿಗಳ ಸಭೆಯೇ ಕೂಟವಾಗಿದೆ. ಈ ಕೂಟಗಳ ಮತ್ತು ಗ್ರಾಮ ಸಂಘಗಳ ಪ್ರತಿನಿಧಿಗಳ ಸಭೆಯೇ ಈಗ ನೀವು ಹೀಯಾಳಿಸುವ ಫೆಡರೇಶನ್ ಆಗಿದೆ. ಹೀಗಿರುವಾಗ್ಯೆ ನೀವು ಸಹಕಾರಿ ಎಂದು ಕರೆದುಕೊಂಡು ಫೆಡರೇಶನನ್ನು ಹೀಯಾಳಿಸಿದರೆ ನೀವು ಕೂಟ (ಯೂನಿಯನ್) ಗಳನ್ನೂ ಗ್ರಾಮ ಸಂಘಗಳನ್ನೂ ಹೀಯಾಳಿಸಿದ ಹಾಗಾಗಲಿಲ್ಲವೇ? ಹಾಗಾದರೆ ನೀವು ನಿಮ್ಮನ್ನು ಹೀಯಾಳಿಸಿಕೊಂಡಂತಲ್ಲವೇ? ಇದೇ ನಿಮ್ಮ ಲೇಖನದ ಸಾರಾಂಶವೆಂದು ಊಹಿಸಬೇಕಾಗಿದೆ. ನಿಮ್ಮ ಲೇಖನವನ್ನು ನೋಡಿದರೆ ಸಹಕಾರ ಸಂಸ್ಥೆಗಳ ತಿದ್ದುಪಡಿಗಲ್ಲ, ನೀವು ಹೊರಟದ್ದು ಯಾರನ್ನೋ ಮೆಚ್ಚಿಸಲಿಕ್ಕೆ, ಯಾರನ್ನೋ ಪ್ರೀತಿಗೆ ಪಾತ್ರರಾಗಲು ತಮಗೆ ಆಶೆ ಇದೆ ("ಇಷ್ಟ ಕರಿಯಾ ಅಮ್ಮ ದಕ ನುಂಡತಿ") ಎಂಬದನ್ನು ತಿಳಿಯಲಾರದವರು ಕೊಡಗು ಪತ್ರಿಕೆಗೆ ಚಂದದಾರರಾಗಲಿಕ್ಕಿಲ್ಲ. ಕಲ್ಪವೃಂದಿಯರು ಸರ್ವ ಅಧಿಕಾರವನ್ನು ಗೂಡಸ್ಥಂದಿಯರಿಗೆ ಕೊಟ್ಟು ಗ್ರಾಮವಾಸಿಗಳಾದ ಪಣಸಪ್ಪಂದಿಯರ ಸ್ವತಂತ್ರವನ್ನು ಹಾಳುಮಾಡಲು ಹೊರಟಿರುವಿರಾ ಅಯ್ಯೋ ನಿಮ್ಮ ಸಹವಾಸವೇ.

'ಸ್ವತಂತ್ರ.'

ಕೊಡಗಿನ ಭವಿಷ್ಯ.

ಅಯ್ಯಾ,

ಕಳೆದ ಜುಲೈ ತಿಂಗಳ ೨೯ ನೇ ತಾರೀಖಿನ "ಕೊಡಗು" ಪತ್ರಿಕೆಯಲ್ಲಿ ಮ. ರಾ. ಶ್ರೀ. ಬಿದ್ದಂಡ ಕರುಂಬಯ್ಯ ಎಂಬುವರು ಮೇಲ್ಕಂಡ ವಿಚಾರವಾಗಿ ದೀರ್ಘವಾದ ಲೇಖನವೊಂದನ್ನು ಬರೆದಿರುವರು. ಸದರಿ ಲೇಖನದಲ್ಲಿ ಶ್ರೀಮತಿ ಡಿ. ಸಾಕಮ್ಮನವರು ಕೊಡಗನ್ನು ಮೈಸೂರಿಗೆ ಸೇರಿಸುವುದರ ಔಚಿತ್ಯವನ್ನು ಕುರಿತು ಕಳೆದ ಜುಲೈ ೧೮ ನೇ ತಾರೀಖು "ಹಿಂದೂ" ಪತ್ರಿಕೆಯಲ್ಲಿ ಪ್ರಕಟಿಸಿದ್ದ ಹೇಳಿಕೆಯ ಮೇಲೆ ಟೀಕೆ ಮಾಡುತ್ತಾ:—

1. "ಈ ದೇಶದಲ್ಲಿ ಹಿತ ಕಡಿಮೆಯುಳ್ಳಂಥಾ ಕೆಲವರು ಹೇಗಾದರೂ ಮಾಡಿ ಇದರ ಪ್ರತ್ಯೇಕ ಇರುವಿಕೆಯನ್ನು ಅಂತ್ಯಗೊಳಿಸಬೇಕೆಂದಿರುತ್ತಾರೆಂದು ಇದರಿಂದ ಗೊತ್ತಾಗುತ್ತದೆ. ಅದರ ವ್ಯಕ್ತಿತ್ವವನ್ನು ಉಳಿಸಿಕೊಳ್ಳುವುದನ್ನು ನೋಡಲು ಅವರಿಗೆ ಇಷ್ಟವಿಲ್ಲ" ಎಂದು ಹೇಳಿದ್ದಾರೆ. ದೂರದರ್ಶಿಗಳಾದ ಕೊಡಗಿನ ರಾಜಕೀಯ ಮುಖಂಡರು ಈ ವಾಕ್ಯವನ್ನು ಎಂದೂ ಒಪ್ಪುವುದಿಲ್ಲ. ಈ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿರಬಹುದೇ ವಿನಹ ಶ್ರೀಮತಿ ಸಾಕಮ್ಮನವರು ದುರುದ್ದೇಶದಿಂದ ಈ ಚಳವಳಿಯನ್ನು ಹೂಡಿದರೆಂದು ಯಾವ ವ್ಯಕ್ತಿಯೂ ಎಣಿಸಲಾಗಲಾರದು. ಮೈಸೂರಿಗೆ ಕೊಡಗು ಸೇರಿದಾಕ್ಷಣ ಅದರ ವ್ಯಕ್ತಿತ್ವಕ್ಕೆ ಹಾನಿಯುಂಟೇ? ಎಂದೂ ಇಲ್ಲ.

2. "ಮೈಸೂರು ಪ್ರಾಂತ್ಯದ ಗ್ರಾಮನಿವಾಸಿಗಳ ಬಡತನವೂ, ತಿಳಿಗೇಡಿತನವೂ ಸಾಕ್ಷಿಯಾಗಿದೆ." ಎಂದು ಮ. ರಾ. ಶ್ರೀ. ಕರುಂಬಯ್ಯನವರು ಹೇಳಿದ್ದಾರೆ. ಇದು ಸ್ಥಳೀಯ ವಿದ್ಯಮಾನಗಳನ್ನು ಕುಲಂಕಶವಾಗಿ ಪರಿಶೀಲಿಸಿ ಅವುಗಳನ್ನು ಅರ್ಥಮಾಡಿಕೊಂಡವರು ಬರೆಯುವಂಥದ್ದಲ್ಲ. ಮೈಸೂರಿನ ಪ್ರಜೆಗಳು ತಮ್ಮ ಬುದ್ಧಿ, ಸಾಹಸ, ಐಶ್ವರ್ಯ ಇವುಗಳಲ್ಲಿ ಮುಚ್ಚಿವ ಪ್ರಾಂತ್ಯಗಳೊಡನೆಯಾದರೂ ಪಂಥಕ್ಕೆ ನಿಲ್ಲತಕ್ಕವರು.

3. ಕೊಡಗಿನ ವಿಶ್ವವಿದ್ಯಾಲಯದ ವಿದ್ಯಾಭ್ಯಾಸದ ಅನಾನುಕೂಲತೆ, ಗಜೆಟೆಡ್ ಉದ್ಯೋಗಸ್ಥರ ವರ್ಗಾವರ್ಗಿಯ ಸಮಸ್ಯೆ, ಅಪ್ಪೀಲಿಗೆ ಹೈಕೋರ್ಟಿಲ್ಲದಿರುವಿಕೆ ಇವುಗಳ ಪರಿಹಾರಕ್ಕಾಗಿ ಮ. ರಾ. ಶ್ರೀ. ಕರುಂಬಯ್ಯನವರು ತಿಳಿಸಿರುವ ಸೂಚನೆಗಳು ಸಮಂಜಸವಾಗಿಲ್ಲ. ಈ ಸುಧಾರಣೆಗಳು ಲಿಖಿತ ಸಾಧ್ಯತೇ ವಿನಹ ವಸ್ತುತಃ ಮತ್ತು ಕಾರ್ಯತಃ ಸಾಧ್ಯವಿಲ್ಲ.

4. ಕಂದಾಯದ ದರವು ಮೈಸೂರಲ್ಲಿ ಕೊಡಗಿಗಿಂತ ಅಧಿಕವೆಂದು ಸದರಿ ಲೇಖಕರು ತಿಳಿಸುತ್ತಾರೆ. ಇವರ ಈ ವಿಷಯವನ್ನು ಸ್ವಲ್ಪ ಚರ್ಚಿಸೋಣ. ಮೈಸೂರಿನಲ್ಲಿ ನೀರಾವರಿ ಜಮೀನುಗಾರರಿಗಳ ಪ್ರಯುಕ್ತ, ಲಾಭಕರವಾದ ಕಬ್ಬು, ಭತ್ತ ಇವುಗಳ ವ್ಯವಸಾಯವು ಬಹಳ ಹೆಚ್ಚಾಗಿದೆ. ಕೊಡಗಿನಲ್ಲಾದರೋ ರೈತರು ಮಳೆಯ ಮೇಲೆ ಅಧೀನರಾಗಿರುವರು, ಮಳೆಯಿಲ್ಲದಿದ್ದರೆ ಬೆಳೆಯೇ ಇಲ್ಲ. ಆದ್ದರಿಂದ ಕಂದಾಯದ ದರವು ಕಡಿಮೆಯಾಗಿರುವುದು ನ್ಯಾಯವೇ. ಕಾಫಿ ವ್ಯವಸಾಯದಲ್ಲಿ ಮೈಸೂರಿಗಿಂತ ಕೊಡಗಿನಲ್ಲೇ ಕಂದಾಯವು ಅಧಿಕ.

5. "ಮೈಸೂರು ಸರಕಾರದ ಕಾನೂನುಗಳು ಕಠಿಣವಾಗಿವೆ, ರೈತರ ಅಭಿವೃದ್ಧಿಗೆ ಅವಕಾಶವಿಲ್ಲ" ಎಂದು ಅವರು ಹೇಳಿರುವುದು ಶುದ್ಧ ಅನ್ಯಾಯ. ಮೈಸೂರು ಸರ್ಕಾರದ ಕಾರುಬಾರುಗಳನ್ನು ಅವರು ನಿಷ್ಪಕ್ಷಪಾತದಿಂದ ವಿಮರ್ಶಿಸಿರುವರೇ? ಮೈಸೂರು ಸರ್ಕಾರದವರು ಹಳ್ಳಿಯ ಜನರಿಗೆ ಕಲ್ಪಿಸಿಕೊಟ್ಟಿರುವಷ್ಟು ಸೌಕರ್ಯಗಳು ಬೇರೆ ದೇಶಗಳಲ್ಲಿ ಕಂಡು ಬರುವುದಿಲ್ಲ. ಗ್ರಾಮ ಪಂಚಾಯತಿಗಳೇನು? ವಿದ್ಯುಚ್ಛಕ್ತಿಯನ್ನು ಒದಗಿಸಿರುವುದೇನು? ಕ್ಷಾಮಕಾಲದಲ್ಲಿ ರೈತರಿಗೆ ಕಂದಾಯದಲ್ಲಿ ರಿಯಾಯಿತಿ ತೋರಿಸುವುದೇನು? ಹಳ್ಳಿ ವಿದ್ಯಾಭ್ಯಾಸದ ಶಾಸನವೇನ? ಇನ್ನೂ ಮುಂತಾದ ಸೌಕರ್ಯಗಳು ಹಳ್ಳಿಯವರಿಗೆ ಪಟ್ಟಣದಲ್ಲಿರುವವರಿಗಿಂತಲೂ ಅಧಿಕವಾಗಿದೆ ಎಂಬುವ ವಿಷಯಗಳು ಮ. ರಾ. ಶ್ರೀ. ಕರುಂಬಯ್ಯನವರಿಗೆ ಗೊತ್ತೇ ಇಲ್ಲ ಎಂದು ಅವರ ಲೇಖನದಿಂದ ತಿಳಿಯುತ್ತದೆ.

ವರ್ತಮಾನ ಸಂಗ್ರಹ.

ಒಳ ದೇಶ.

ವೀರಾಜಪೇಟೆ ಹೈಸ್ಕೂಲು ಮಳೆಗಾಲದ ರಜೆ ಮುಗಿದು ಈ ತಾ. 22 ರಲ್ಲಿ ತೆರೆಯಲ್ಪಡುವದು.

ಸಬ್‌ಜಡ್ಜರು ಈ ತಾ. 22ರಿಂದ ಐದು ವಾರ ದಕ್ಷಿಣ ಕೊಡಗಿಗೆ ಇನ್‌ಸ್ಪೆಕ್ಷನ್ ಬಗ್ಗೆ ಸರ್ಕೀಟು ಹೋಗುತ್ತಾರೆಂದು ತಿಳಿಯಬರುತ್ತದೆ.

ಸೆಂಟ್ರಲ್ ಸಹಕಾರಿ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗೊಂದು ತಾ. 27—8—32ನೇ ಶನಿವಾರ ಬೆಳಿಗ್ಗೆ 11 ಗಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ನಡೆಯಲಿಕ್ಕಿದೆ.

ಪ್ರೊಬೇಶನರಿ ಪೋಲೀಸು ಇನ್‌ಸ್ಪೆಕ್ಟರಾಗಿದ್ದ ಮೆ. ಕೋದಂಡ ಸುಬ್ಬಯ್ಯನವರಿಗೆ ಈ ತಾ. 1 ರಿಂದ ಸದರಿ ಕೆಲಸವು ಖಾಯಂ ಮಾಡಲ್ಪಟ್ಟಿದೆಯಾಗಿ ತಿಳಿಯಬರುತ್ತದೆ.

ಈ ತಾ. 3 ರಲ್ಲಿ ಸೋಮವಾರಪೇಟೆ ನಾಡು ಹುಲುಕೋಡು ಗ್ರಾಮದ ದೊಡ್ಡಬಾರಿ ಎಂಬವನು ಅದೇ ಗ್ರಾಮದ ಮಂಬೆ ಎಂಬ ಹೆಂಗಸನ್ನು ಕತ್ತಿಗೆ ಹಿಸುಕಿ ಕೊಂದಿರುವನೆಂತಲೂ, ಪೋಲೀಸರು ತನಿಖೆ ಮಾಡುತ್ತಿರುವರೆಂತಲೂ ಸುದ್ದಿ.

ಮದ್ರಾಸಿನಲ್ಲಿ ತರಬೇತು ಹೊಂದುತ್ತಿದ್ದ ಅತ್ತೂರುನಾಡು ನಲ್ಲೂರು ಕ್ರಾಕ್ಸ್ ಗ್ರಾಮದ ಮೆ. ಮಂಡೇಡ ಯಂ. ದೇವಯ್ಯನವರಿಗೆ ಲೈಸೆನ್ಸ್‌ಯಿಯೇಟ್ ಮೆಕೇನಿಕಲ್ ಇಂಜಿನೀಯರಿಂಗ್ (ಯಲ್. ಯಂ. ಇ.) ಡಿಪ್ಲೋಮವು ದೊರಕಿದೆಯೆಂದು ತಿಳಿದು ಸಂತೋಷಪಡುತ್ತೇವೆ.

ಕಡಿಯತ್ತನಾಡು ಬೇತ್ರಿ ಗ್ರಾಮದಲ್ಲಿರುವ ಕೆ. ಯಂ. ಅಪ್ಪಣ್ಣಗೌಡರವರು ಈ ತಾ. 15ರಲ್ಲಿ ಒಂದು ದೊಡ್ಡ ಹುಲಿಯನ್ನು ಗುಂಡು ಹೊಡೆದು ಕೊಂದರೆಂತಲೂ, ಇದರಿಂದ ಸುತ್ತಮುತ್ತಲಿನ ಜನ ದನಕರುಗಳಿಗೆ ತುಂಬಾ ಸಹಾಯ ಮಾಡಿದಂತಾಯಿತೆಂತಲೂ ವರ್ತಮಾನ.

ವೀರಾಜಪೇಟೆ ನಾಡು ಬಾಡಗ ಗ್ರಾಮದ ಅಪ್ಪಂಡೆರಂಡ ಬೋಯಪ್ಪನವರು ಹೊಟ್ಟೆನೋವು ಸಹಿಸಲಾರದೆ ಈ ತಾ. 8 ರಲ್ಲಿ ತಾನೇ ತನಗೆ ಗುಂಡು ಹೊಡೆದುಕೊಂಡರೆಂತಲೂ, ಗುಂಡಿನ ಪೆಟ್ಟಿನಿಂದ ಗಾಯವಾದ ಅವರು ಈಗ ಮೈಸೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರೆಂದೂ ಸುದ್ದಿ.

ಮಡಿಕೇರಿ ಹೈಸ್ಕೂಲು ಬಳಿ ಇರುವ ಮೆ. ಕೊಕ್ಕೇಂಗಡ ಬೆಳ್ಯಪ್ಪನವರ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಮಡಿಕೇರಿನಾಡಿನ ಬಡಗೇರಿ ಗ್ರಾಮದ ತಂಬುಕುತ್ತಿರ ಚಿಟ್ಟಿ ಎಂಬ ಸುಮಾರು 12 ವರ್ಷ ಪ್ರಾಯದ ಹುಡುಗಿಯು ಈ ತಾ. 16 ನೇ ಬೆಳಿಗ್ಗೆ ನೀರು ತೆಗೆಯಲು ಹೋದಾಗ್ಯೆ ಆಕಸ್ಮಾತಾಗಿ ಬಾವಿಗೆ ಬಿದ್ದು ಮೃತಳಾದಳು.

ಕೊಡಗಿನ ಭವಿಷ್ಯತ್ತನ್ನು ಕುರಿತು ಈ ತಾ. 27ರಲ್ಲಿ ವೀರಾಜಪೇಟೆ ಹೈಸ್ಕೂಲಿನಲ್ಲಿ ನಡೆಯುವ ಪಬ್ಲಿಕ್ ಚರ್ಚೆಯಲ್ಲಿ ಇಚ್ಛಿಸುವವರು ಕನ್ನಡದಲ್ಲಿಯೂ ಮಾತಾಡಬಹುದೆಂತಲೂ, ಅದಕ್ಕೆ ಎಲ್ಲರಿಗೂ ಅವಕಾಶವಿದೆಯೆಂತಲೂ, ಮಾತಾಡಲು ಇಚ್ಛಿಸುವವರು ಮೊದಲೇ ತಿಳಿಸಬೇಕೆಂತಲೂ ಸೆಕ್ರೇಟರಿಗೆ ತಿಳಿಯಬರುತ್ತದೆ.

ಮಡಿಕೇರಿನಾಡು ಕಚೇರಿ ಕಾರ್ಯಕರ್ತರಾಗಿದ್ದ ಮೆ. ಕಟ್ಟಂಡ ಅರ್ಜುನನವರು ಲೆಕ್ಕಾಚಾರ ಇಡುತ್ತಿದ್ದ ಕಳೆದ ಸಾಲಗಳ ಬಾಪ್ತು ವಸೂಲಾದ ಮೊಬಲಗಿನಲ್ಲಿ ಒಂದು ಸಾವಿರ ಚಿಲ್ಲರೆ ರೂಪಾಯಿಗಳು ಸರ್ಕಾರಿ ಖಜಾನೆಗೆ ಜಮಾ ಬಂದಿರುವದಿಲ್ಲವೆಂತ ಕಂಡು ಬಂದಿದೆಯಾಗಿಯೂ, ಈ ವಿಷಯ ತನಿಖೆ ನಡೆಯುತ್ತಿದೆಯಾಗಿಯೂ ವರ್ತಮಾನ.

ಮೆ. ಗಿಂಗೌಡನ ಸುಬ್ಬಪ್ಪನವರ ಮರಣದಿಂದ ಕಿಗ್ಗಟ್ಟುನಾಡಿನ ಸಾಗಿನ ಸರ ಕೌನ್ಸಿಲಿನಲ್ಲಿ ಉಂಟಾದ ಖಾಲಿ ಸ್ಥಳದ ಚುನಾವಣೆಗೆ ಧನುಗಾಲ ಗ್ರಾಮದ (ಬಪದ ಕಟ್ಟೆ ಮಠದ ಮೆ. ಗಂಗಾಧರಯ್ಯನವರ ಅಳಿಯ) ಮೆ. ಶಿವಾಚಾರದ ಬಸವಯ್ಯ ವೀರಭದ್ರಯ್ಯನವರೊಬ್ಬರೇ ಉಮೇದುವಾರರಾಗಿ ಅರ್ಜಿ ಹಾಕಿದುದರಿಂದ ಓಟು ತೆಗೆಯದೇನೇ ಅವರು ಆರಿಸಲ್ಪಟ್ಟಿರುವರು.

ಮಡಿಕೇರಿ ಮುನ್ಸಿಪಾಲಿಟಿಯ ಲೆಖ್ಖಗಳನ್ನು ಮದ್ರಾಸಿನ ಎಕೌಂಟೆಂಟ್ ಜನರಲ್‌ರವರ ಆಫೀಸಿನವರು ಬಂದು ಆಡಿಟು ಮಾಡುಸಿದಲ್ಲಿ ಆರುನೂರು ಚಿಲ್ಲರೆ ರೂಪಾಯಿಗಳು ಕಡಿಮೆಯಾಗಿತ್ತೆಂತಲೂ, ಈ ಸಂಬಂಧ ಕಾರ್ಯಕರ್ತರಾಗಿದ್ದ ಮೆ. ಅಜ್ಜಾರಂಡ ಪೂಡಪ್ಪನವರು ಸಸ್ಪೆಂಡ್ ಮಾಡಲ್ಪಟ್ಟಿರುವರೆಂತಲೂ, ಸದರಿ ಮೊಬಲಗನ್ನು ಪೂಡಪ್ಪನವರು ಇತ್ತಲಾಗಿ ಭರ್ತಿ ಮಾಡಿರುವರೆಂತಲೂ ತಿಳಿಯಬರುತ್ತದೆ.

ಈ ವಾರ ಕೊಡಗಿನಲ್ಲೂ ಹಾಗೂ ಮಡಿಕೇರಿಯಲ್ಲೂ ಮಳೆ ಕಡಿಮೆ. ಬಿಸಿಲು ಚೆನ್ನಾಗಿ ಕಾಯುತ್ತಿದೆ ಆದರೆ ಮಧ್ಯೆ ಮಧ್ಯೆ ಅಲ್ಪ ಮಳೆಯು ಬೀಳುತ್ತಿದೆ. ಇಷ್ಟರ ವರೆಗೆ ಮಳೆಗಾಲವು ಕ್ರಮವಾಗಿ ನಡೆದು ವ್ಯವಸಾಯಕ್ಕೆ ಅನುಕೂಲವಾಗಿದೆ.

ಪೋಸ್ಟ್ ಮತ್ತು ಟೆಲಿಗ್ರಾಫ್ ಇಲಾಖೆಯ ಸುಪೀರಿಯರ್ ಟೆಲಿಗ್ರಾಫ್ ಮತ್ತು ವಯರ್‌ಲೆಸ್ ಇಂಜಿನೀಯರಿಂಗ್ ಶಾಖೆಗಳಲ್ಲಿ ಇರುವ 2 ಖಾಲಿ ಸ್ಥಳಗಳಿಗೆ ಯೋಗ್ಯರಾದವರನ್ನು ಆರಿಸಲು ಡೆಲ್ಲಿಯಲ್ಲಿ ಬರುವ ಡಿಸೆಂಬರು 15 ರಲ್ಲಿ ಸ್ಪರ್ಧೆಯ ಪರೀಕ್ಷೆಯು ಪ್ರಾರಂಭವಾಗುವದೆಂತಲೂ, ಸದರಿ ಪರೀಕ್ಷೆಗೆ ಹೋಗಲು ಇಚ್ಛಿಸುವವರು ತಮ್ಮ ಅಪ್ಲಿಕೇಶನನ್ನು ಈ ತಿಂಗಳು 31 ರೊಳಗೆ ಪಬ್ಲಿಕ್ ಸರ್ವೀಸ್ ಕಮಿಷನರಿಗೆ ತಲಪುವಂತೆ ಕಳುಹಿಸತಕ್ಕದೆಂತಲೂ, ಈ ವಿಷಯ ಹೆಚ್ಚಿನ ಮಾಹಿತಿ ಬೇಕಾದವರು ಕಮಿಷನರವರ ಆಫೀಸಿನ ಮೇನೇಜರವರಿಂದ ಖುದ್ದು ಹೋಗಿ ಪಡಕೊಳ್ಳಬಹುದೆಂತಲೂ ಅವರು ತಿಳಿಸಿರುತ್ತಾರೆ.

ಕೊಡಗಿನಲ್ಲಿ ಇಷ್ಟರ ವರೆಗೆ ಲೈಸೆನ್ಸು ಪಡೆಯದೆ ಯಾ ರಿಜಿಸ್ಟರ್ ಮಾಡಿಸಿಕೊಳ್ಳದೆ ಇರುವ ಪಿಸ್ತೂಲ್ ಮತ್ತು ರಿವಾಲ್ವರುಗಳು ಇರುವಂಥವರು ಬರುವ ಸೆಪ್ಟಂಬರು 17 ರೊಳಗೆ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಿಗೆ ಬರೆದು ತಿಳಿಸಬೇಕೆಂತಲೂ, ಹಾಗೆ ಮಾಡಿದರೆ (1) ಅವರ ಮೇಲೆ ಪ್ರಾಸಿಕ್ಯೂಶನ್ ನಡಿಸಲಾಗುವುದಿಲ್ಲವೆಂತಲೂ, (2) ಅರ್ಜಿದಾರರಿಗೆ ಲೈಸೆನ್ಸ್ ಕೊಡಲಾಗುವುದು ಯಾ ರಿಜಿಸ್ಟರ್ ಮಾಡಲಾಗುವುದೆಂತಲೂ (3) ಹಾಗೆ ಮಾಡದೆ ಹೋದರೆ ನಂತರ ಅಂಥಾ ಆಯುಧಗಳು ಇರುವವರ ಮೇಲೆ ಪ್ರಾಸಿಕ್ಯೂಶನ್ ನಡಿಸಲಾಗುವದೆಂತಲೂ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಪಬ್ಲಿಕಿನವರಿಗೆ ಅಪ್ಪೀಲು ಮಾಡಿರುವರು.

ವೀರಾಜಪೇಟೆ ಸರ್ಕಲಿನ ಸಹಕಾರಿ ಇನ್‌ಸ್ಪೆಕ್ಟರಾಗಿದ್ದ ಮೆ. ಪಂದಿಕುತ್ತಿರ ಚಂಗಪ್ಪನವರು ಬರುವ ಸೆಪ್ಟಂಬರು 1ರಿಂದ ಒಂದು ವರ್ಷದ ರಜೆಯಲ್ಲಿ ಸಹಕಾರದಲ್ಲಿ ಹೆಚ್ಚಿನ ಶಿಕ್ಷಣ ಹೊಂದಲಿಕ್ಕಾಗಿ ತಾ. 5—9—'32ರಲ್ಲಿ ಕೊಡಗಿನಿಂದ ಇಂಗ್ಲೆಂಡಿಗೆ ಹೋಗುವರೆಂತಲೂ, ಇವರ ಗ್ರೇಡಿಗೆ ನೇಮಿಸಲ್ಪಟ್ಟಿರುವ ಮೆ. ಶೇಷಗಿರಿರಾಯರು ಮಡಿಕೇರಿ ಸರ್ಕಲಿನ ಇನ್‌ಸ್ಪೆಕ್ಟರಾಗಿಯೇ ಇರುವರೆಂತಲೂ, ಮೆ. ಶೇಷಗಿರಿರಾಯರ ಗ್ರೇಡಿಗೆ ನೇಮಿಸಲ್ಪಟ್ಟಿರುವ ಮೆ. ಮುಂಡಂಡ ಪೊನ್ನಪ್ಪನವರು ಪೊನ್ನಂಪೇಟೆ ಸರ್ಕಲಿನ ಇನ್‌ಸ್ಪೆಕ್ಟರಾಗಿಯೂ, ಮೆ. ಬೊಳ್ಳಚೆಟ್ಟಿರ ಚಂಗಪ್ಪನವರು ವೀರಾಜಪೇಟೆ ಸರ್ಕಲಿನ ಇನ್‌ಸ್ಪೆಕ್ಟರಾಗಿಯೂ ತಾ. 1—9—'32 ರಿಂದ ವರ್ಗಾಯಿಸಲ್ಪಟ್ಟಿರುವರೆಂದು ಇತ್ತಲಾಗಿ ತಿಳಿಯ ಬರುತ್ತದೆ.

ಕಳೆದ ಮಂಗಳವಾರ ವೀರಾಜಪೇಟೆಯಿಂದ ಟಪ್ಪಾಲಿಗೆ ಹಾಕಿ ಮಡಿಕೇರಿ ಸಬ್ ಪೋಸ್ಟ್ ಮಾಸ್ಟರವರ ವಿಳಾಸಕ್ಕೆ ಬಂದಿದ್ದ ಒಂದು ಕವರಿನೊಳಗೆ ಸ್ವಲ್ಪ ಹತ್ತಿಯೂ, ಅದರೊಳಗೆ ಕೋವಿಮದ್ದು ಮತ್ತು, ಅದರ ಮೇಲೆ ಮುಚ್ಚಳ ಬಿಟ್ಟ ಪಿಟಾಕಿ ಕೋವಿಯ ಮದ್ದಿನ ಚಿಕ್ಕ ಪೊಟ್ಟಣಗಳೂ ಇಡಲ್ಪಟ್ಟಿದ್ದವೆಂತಲೂ, ಇನ್ನು ಮುಂದೆ ಸರಕಾರಿ ಉದ್ಯೋಗಸ್ಥರೂ ಕೂಡ ಪರದೇಶೀ ಸಾಮಾನುಗಳನ್ನು ಬಿಟ್ಟು ಸ್ವದೇಶೀ ಸಾಮಾನುಗಳನ್ನೇ ಕೊಂಡುಕೊಳ್ಳಬೇಕೆಂದು ಎಚ್ಚರಿಸಲು ಈ ತರಹ ಕವರು ಕಳುಹಿಸಿರುವದಲ್ಲದೆ, ಇದಕ್ಕೆ ಗಮನಿಸದೆ ಹೋದರೆ ಇದಕ್ಕಿಂತ ಕಠಿಣ ತರದ ಪ್ಯಾಕೆಟ್‌ಗಳು ಕಳುಹಿಸಲ್ಪಡುವವೆಂತ ಅದರಲ್ಲಿ ಬರೆಯಲ್ಪಟ್ಟಿತ್ತೆಂತಲೂ, ಶೀತದಿಂದ ನೀಲು ಹೊಡೆಯುವಾಗ್ಯೆ ಅದು ಬೆಂಕಿಹಿಡಿಯಲಿಲ್ಲವೆಂತಲೂ ವರ್ತಮಾನ.

ಹಿಂದೂ ದೇಶ.

ತಾ. 15ರಲ್ಲಿ ಲಾಹೋರಿನಲ್ಲಿ ಕಾನೂನು ಭಂಗ ಚಳವಳಿಕ್ಕೆ ಪಿಕೆಟಿಂಗು ಮಾಡುತ್ತಿದ್ದ 6 ಜನ ಸ್ವಯಂ ಸೇವಕರು ಕೈದು ಮಾಡಲ್ಪಟ್ಟರು.

ಮಂಗಳೂರು ಮತ್ತು ಉಡುಪಿ ಪಟ್ಟಣಗಳಲ್ಲಿಯೂ ಅಂಗಡಿ ಪಿಕೆಟಿಂಗ್ ಕೆಲಸವು ನಡೆಯುತ್ತಾ ಇದೆ. ಆದರೆ ದಸ್ತಗಿರಿ ಮಾಡಲ್ಪಟ್ಟವರು ಸ್ವಲ್ಪ ಗಂಟೆಗಳ ನಂತರ ಬಿಡುಗಡೆ ಮಾಡಲ್ಪಡುತ್ತಿದ್ದಾರೆ.

ಕಣ್ಣನೂರು ಸೆಂಟ್ರಲ್ ಜೈಲಿನಲ್ಲಿ 13 ಜನ ರಾಜಕೀಯ ಕೈದಿಗಳು ತಾ. 11 ರಿಂದ ಕಾರಣಾಂತರದಿಂದ ಉಪವಾಸ ಮಾಡುತ್ತಿರುವರೆಂದೂ, ಕೆಲವರು ಬಹಳ ನಿಶ್ಶಕ್ತರಾಗಿರುವರೆಂದೂ ತಾ. 16 ರ ವರ್ತಮಾನ.

ಕ್ಯಾನ್‌ಪೂರು ಪೋಲೀಸಿನವರು ಈ ತಾ. 15ರಲ್ಲಿ 16 ಜನ ಕ್ರಾಂತಿಕಾರರನ್ನು ದಸ್ತಗಿರಿ ಮಾಡಿ ಅವರಲ್ಲಿದ್ದ 1 ಕೋವಿ, 6 ಪಿಸ್ತೂಲುಗಳು, 1 ದೊಡ್ಡ ಬರ್ಚಿ, 390 ತೋಟೆ ಮುಂತಾದವುಗಳನ್ನು ಸ್ವಾಧೀನ ಪಡಿಸಿಕೊಂಡಿರುವರು.

ಢಬನಾಪುರದ ಬಳಿ ಇರುವ ಒಂದು ಹಳ್ಳಿಯಲ್ಲಿ 21 ತಿಂಗಳು ಗರ್ಭಿಣಿಯಾದ ಒಬ್ಬ ಸ್ತ್ರೀ ಇರುವಳು. ಮಗುವು ಹೊಟ್ಟೆಯೊಳಗೆ ಸಂಚರಿಸುವುದಲ್ಲದೆ ತಾಯಿಯು ತಿರುಗಾಡುವಾಗ್ಯೆ ಶಬ್ದ ಗುಟ್ಟುತ್ತದೆ. ಈ ಶಬ್ದವು ಹತ್ತಿರವಿದ್ದವರಿಗೆ ಲ್ಲಾ ಸ್ಪಷ್ಟವಾಗಿ ಕೇಳಿಸುತ್ತದೆಂದು ವರ್ತಮಾನ.

ಬಂಗಾಳದ ಸಾಲ್ಕಿ ಎಂಬಲ್ಲಿ ಸ್ವಯಂ ಸೇವಕರು ಮೆರವಣಿಗೆ ಹೋಗುತ್ತಿದ್ದಾಗ್ಯೆ ಪೋಲೀಸರು ಚದರಲು ಹುಕುಂ ಮಾಡಿದರು. ಅವರೆಲ್ಲರೂ ನೆಲದ ಮೇಲೆ ಮಲಗಿಕೊಂಡರು. ಅವರಲ್ಲಿ 15 ಮಂದಿಯರನ್ನು ದಸ್ತಗಿರಿ ಮಾಡಿ ನಾಲ್ಕು ನಾಲ್ಕು ತಿಂಗಳು ಕಠಿಣ ಸಜೆಯು ವಿಧಿಸಲಾಯಿತು.

ಮಹಾತ್ಮ ಗಾಂಧಿಯವರ ಶಿಷ್ಯಳಾದ ಶ್ರೀಮತಿ ಮೀರಾಬೆನ್‌ರವರು ಬೊಂಬಾಯಿಗೆ ಬರಕೂಡದೆಂಬ ಪೋಲೀಸರ ಹುಕುಮನ್ನು ಉಲ್ಲಂಘನೆ ಮಾಡಿದ್ದರಿಂದ ಈ ತಾ. 17 ರಲ್ಲಿ ಬೊಂಬಾಯಿಯಲ್ಲಿ ಕೈದುಮಾಡಲ್ಪಟ್ಟರು. ಈ ಮೊದಲೆ ಮ್ಮೆ ಇವರು ಈ ಕಾರಣದಿಂದಲೇ 3 ತಿಂಗಳು ಸಜೆ ಅನುಭವಿಸಿದ್ದರು.

ಅಂಕೋಲಾ ತಾಲೋಕು ಕಾಂಗ್ರೆಸ್ ಆಫೀಸು ಗದುಡಾ ಪೂರೆ ಎಂಬ ಅಡವಿಯಲ್ಲಿ ಬಹು ಸೋಗಸಾಗಿ ಕಟ್ಟಲ್ಪಟ್ಟಿತಂತೆ. ಪೋಲೀಸಿನವರು ಇದರ ಪತ್ತೆಯನ್ನು ಹೇಗೋ ಹಿಡಿದು ಅದನ್ನು ಮುತ್ತಿಗೆ ಹಾಕಿ ಇದ್ದರು ಸ್ವಯಂ ಸೇವಕರನ್ನು ದಸ್ತಗಿರಿಮಾಡಿ, ಅಲ್ಲಿಯ ಸಾಮಾನುಗಳನ್ನು ಕೈವಶ ಮಾಡಿಕೊಂಡರಂತೆ.

ಕಲ್ಲಿಕೋಟೆಯಲ್ಲಿ ಎಂದಿನಂತೆ ಕಾಂಗ್ರೆಸ್ ಸ್ವಯಂ ಸೇವಕರು ಪಿಕೆಟಿಂಗ್ ಕೆಲಸವನ್ನು ನಡಿಸುತ್ತಾ ಇದ್ದಾರೆ. ಪೋಲೀಸಿನವರು ಕಾಯುತ್ತಾ ಇದ್ದು ಅತಿ ಸಹಾಸದಿಂದ ಅವರನ್ನು ದಸ್ತಗಿರಿ ಮಾಡಿ ಪೋಲೀಸು ಠಾಣೆಯಲ್ಲಿ ಇಟ್ಟು ರಾತ್ರಿಯೇ, ಯಾ ಮರು ದಿನವೋ ಬಿಡುಗಡೆ ಮಾಡುತ್ತಿರುವುದು ಅಲ್ಲಿ ಒಂದು ಆಟದಂತೆ ಆಗಿ ಹೋಗಿದೆಯಂತೆ!

ಸರದಾರ ವಲ್ಲಭಭಾಯಿ ಪಟೇಲರವರ ಪುತ್ರಿ, ಮಣಿಬಾಯಿ ಪಟೇಲರು ಗುಜರಾತು ಕಾಂಗ್ರೆಸ್ ಕಮಿಟಿಯ 23 ನೇ ಡಿಕ್ಟೇಟರಾಗಿ ನೇಮಿಸಲ್ಪಟ್ಟು, ಈ ತಾ. 12 ರಲ್ಲಿ 'ದಾರೂ ದಿನ' ವನ್ನು ಆಚರಿಸುತ್ತಾ, ಪರದೇಶಿ ಬಟ್ಟೆ ಅಂಗಡಿಗಳನ್ನು ಪಿಕೆಟ್ ಮಾಡುತ್ತಿದ್ದಾಗ್ಯೆ 7 ಸ್ತ್ರೀಯರೊಂದಿಗೆ ಕೈದು ಮಾಡಲ್ಪಟ್ಟರು. ಈ ಸಂಬಂಧ ಇತರ ಹಲವು ಸ್ವಯಂಸೇವಕರೂ ದಸ್ತಗಿರಿ ಮಾಡಲ್ಪಟ್ಟರು.

ನಾಗಪುರದ ಪಟವರ್ಧನ್ ಹೈಸ್ಕೂಲಿನ ಹೆಡ್ ಮಾಸ್ತರಾಗಿದ್ದ ಮೆ. ಎಸ್. ಕೆ. ಬಿಹಾರೆಯವರು ಕೆಲವು ದಿವಸಗಳ ಹಿಂದೆ 'ಸಪ್ತರ್ಷಿ' ಎಂಬ ಒಂದು ಪದ್ಯವನ್ನು ಬರೆದು ಪೂನದ ಒಂದು ವಾರಪತ್ರಿಕೆಯಲ್ಲಿ ಪ್ರಕಟಿಸಿದ್ದರು. ಆ ಪದ್ಯವು ರಾಜದ್ರೋಹವೆಂದು ಸದರಿ ಪತ್ರಿಕೆಯನ್ನು ಅಲ್ಲಿಯ ಸರ್ಕಾರದವರು ನಿಷಿದ್ಧ ಮಾಡಿದರು. ಹೆಡ್ ಮಾಸ್ತರರಿಗೆ 'ಡಿಸ್‌ಮಿಸ್' ಹುಕುಂ ಬಂತು.

ಈ ತಾ. 11ರಲ್ಲಿ ಕಾಶೀ ಪಟ್ಟಣದಲ್ಲಿ ಕಾಂಗ್ರೆಸು ಮುಂದಾಳುಗಳಾದ ಪಂಡಿತ ಮಾಳವೀಯ, ಮೌಲಾನ ಅಬುಲ್ ಕಲಂ ಅಜಾದ್, ಡಾ. ಕಿಚ್ಲು, ಮಿಸ್ ವಿಜಾರಾಣಿ, ಸಿ. ರಾಜಗೋಪಾಲಾಚಾರಿ, ರಾಜೇಂದ್ರ ಪ್ರಸಾದ್, ಡಾ. ಸಯದ್ ಮಹ್ಮದ್, ಶಿವಪ್ರಸಾದ ಗುಪ್ತ ಮೊದಲಾದವರು ಸೇರಿ ಈಗಿನ ರಾಜಕೀಯ ಪರಿಸ್ಥಿತಿಯನ್ನು ಕುರಿತು ಪರ್ಯಾಲೋಚನೆ ಮಾಡಿದರೆಂದು ವರ್ತಮಾನವಿದೆ.

ತಿನ್ನಾಲಿ ತಾಲೋಕು ರಾಜಕೀಯ ಕಾನ್‌ಫರೆನ್ಸು ಈ ತಾ. 16 ರಲ್ಲಿ ಕುಂಟ್ಲಾಪುರ ಎಂಬ ಗ್ರಾಮದಲ್ಲಿ ಶ್ರೀಮತಿ ಕಾಂಭಂಪತಿ ಮಾಣಿಕ್ಯಂಬಾರವರ ಅಧ್ಯಕ್ಷತೆಯಲ್ಲಿ ನಡೆಯಿತು. 50 ಪ್ರತಿನಿಧಿಗಳೂ 400 ಪ್ರೇಕ್ಷಕರೂ ಹಾಜರಿದ್ದರು. ಠರಾವುಗಳನ್ನು ಪಾಸುಮಾಡಿ ನಂತರ ಮೆರವಣಿಗೆ ಹೋಗುತ್ತಿದ್ದಾಗ್ಯೆ ಪೋಲೀಸಿನವರು ಲಾಠಿ ಪೆಟ್ಟಿನಿಂದ ಅವರನ್ನು ಚದರಿಸಿದರು. ಅಧ್ಯಕ್ಷರು ಮತ್ತು ಮೂವರು ಪ್ರಮುಖರನ್ನು ದಸ್ತಗಿರಿ ಮಾಡಿದರು.

ಮೂರು ವಾರಗಳ ಹಿಂದೆ ದಕ್ಷಿಣ ಹಿಂದೂಸ್ಥಾನದಿಂದ ಹೋಗಿದ್ದ ಇಬ್ಬರು ಯುವಕರನ್ನು ಲಾಹೋರು ರೈಲ್ವೆ ಸ್ಟೇಶನಿನಲ್ಲಿ ಪೋಲೀಸಿನವರು ದಸ್ತಗಿರಿ ಮಾಡಿ, ಅವರು ನಿರುದ್ಯೋಗಿಗಳಾಗಿರುವದರಿಂದ ನೀಚಕೃತ್ಯಗಳನ್ನೇ ನಡಿಸಬಹುದೆಂದು ಅವರ ಮೇಲೆ ಕೇಸು ನಡಿಸಲಾಗಿ ಮೇಜಿಸ್ಟ್ರೇಟರು 1000 ರೂಪಾಯಿಯ ಜಾಮೀನು ಕೊಡಲು ಅವರನ್ನು ಕೇಳಿದರು. ಅವರು ಜಾಮೀನು ಕೊಡದ್ದರಿಂದ ಒಂದೊಂದು ವರ್ಷ ಸಜೆಯು ವಿಧಿಸಲಾಯಿತು. ಹೀಗಾದರೆ ನಿರುದ್ಯೋಗಿಗಳೆಲ್ಲಾ ಕಾರಾಗೃಹಕ್ಕೆ ಕಳುಹಿಸಲ್ಪಡಬೇಕಲ್ಲವೇ?

ವಿಜ್ಞಾಪನೆ.

ನನ್ನ ಪತಿ ಮುತ್ತಣ್ಣನವರ ಮರಣದಿಂದ ನನಗುಂಟಾದ ದುಃಖವನ್ನು ಶಮನ ಪಡಿಸಲು ನನ್ನ ನೆಂಟರು, ಹಿತಚಿಂತಕರು ಹಲವರು ನನಗೆ ಪತ್ರವನ್ನು ಬರೆದಿರುವರು. ಅವರೆಲ್ಲರಿಗೂ ಪ್ರತ್ಯೇಕ ಪ್ರತ್ಯೇಕ ವಂದಿಸಲು ನನಗೆ ಸಾಧ್ಯವಿಲ್ಲದ್ದರಿಂದ ಅವರಿಗೆ ನನ್ನ ಕೃತಜ್ಞತೆಯನ್ನು ಈ ಮೂಲಕ ಅರ್ಪಿಸುತ್ತೇನೆ.

ದೇವನಗೇರಿ. ಮುಕ್ಕಾಟಿರ ಗಂಗವ್ವ.

COORG FOREST DEPARTMENT.

SOUTH DIVISION.

NOTICE.

Mercara, the 16th August 1932.

The right to cut, remove and dispose of bamboos in and from Block III area, lying between Bimanare and Bettada fire lines in the Makal and Devamachi Reserves of the Tittimatti Range, approximate area 4,830 acres, during the period from 1—9—1932 to 31st August 1933 will be sold by a public auction by the Divisional Forest officer, South Coorg, at Hunsur on 25—8—1932 at 2 P. M. For Futher Particulars, please apply to the Divisional Forest Officer, South Coorg, Mercara.

1—1.

ಳು ಹೆಚ್ಚು ಸ್ಪರ್ಧೆ ಇತ್ಯಕ್ಕೆ ಮುಖ್ಯ ಕಾರಣವು ಮಲೇರಿಯೂ ವೆಂದಾಗಲೀ ಸರಕಾರದ ಅಸಂಧಕಿಯಿಂದಾಗಲೀ ಹೇಳಲಾಗುವುದಿಲ್ಲ. ಜನರ ಬಡತನವೇ ನಿಜವಾದ ಕಾರಣವಾಗಿದೆ. ಆ ಕಾರಣವನ್ನು ಅಮೊಲ್ಗಮೇಶನ್ ಹೇಗೂ ಹೋಗಲಾಡಿಸಲಾರದು" ಎಂದರು.

ಆ ಮೇಲೆ ಅಧ್ಯಕ್ಷರಿಗೂ ಅತಿಥಿಗಳಿಗೂ ವಂದಿಸಿ ಸಭೆಯು 7½ ಗಂಟೆಗೆ ಬರಖಾಸ್ತಾಯಿತು.

ಪಿ. ಜಿ. ಐಯ್ಯಪ್ಪ,
(ಗೌರವ ಕಾರ್ಯದರ್ಶಿ.)

ಕೋಮುವಾರು ಸಮಸ್ಯೆ.

(2ನೇ ಪುಟದಿಂದ ಮುಂದುವರಿದದ್ದು)

(18) ಚುನಾವಣೆ ವಿಷಯದಲ್ಲಿ ತೀರ್ಮಾನಕ್ಕೂ ಬೇಕಾದರೆ ಕೆಲವು ಮಟ್ಟಿಗೆ ಕಪಶೀಲಾಗಿ ವಿವರಿಸಬೇಕಾಯಿತು. ಚುನಾವಣೆಮಾಡುವ ಇನ್ನೂ ಪಶೀಲ್ ವಿಚಾರವನ್ನು ಹಿಂದೂಸ್ಥಾನದಲ್ಲಿ ಬೇಗನೇ ನಿರ್ಣಯಿಸಿಕೊಳ್ಳಬೇಕು. ಚುನಾವಣೆ ಮಾಡುವ ಸರಹದ್ದುಗಳನ್ನು ನಿರ್ಣಯಿಸುವಾಗ ಈಗ ಕೊಟ್ಟಿರುವ ಸಂಖ್ಯೆಗಳನ್ನು ಕೋಮುವಾರು ತೂಕ ವ್ಯತ್ಯಾಸವಾಗದಂತೆ ಸ್ವಲ್ಪ ವ್ಯತ್ಯಾಸಮಾಡಿಕೊಂಡರೆ ಅನುಕೂಲವಾಗಬಹುದು. ಆದರೆ ಬಂಗಾಳ ಮತ್ತು ಪಂಜಾಬಿನಲ್ಲಿ ಮಾತ್ರ ವ್ಯತ್ಯಾಸಮಾಡಲಾಗುವುದಿಲ್ಲ.

(19) ಪ್ರಾಂತ್ಯಗಳ ನ್ಯಾಯವಿಧಾಯಕ ಸಭೆಗಳಲ್ಲಿ ಎರಡನೇ ಸಭೆಯನ್ನು ಏರ್ಪಡಿಸುವ ವಿಷಯ ಇನ್ನೂ ಚೆನ್ನಾಗಿ ಆಲೋಚಿಸಲ್ಪಟ್ಟಿಲ್ಲ. ಯಾವ್ಯಾವ ಪ್ರಾಂತ್ಯಗಳಿಗೆ ಎರಡನೇ ಸಭೆ ಬೇಕೆಂಬುದನ್ನು ಇನ್ನು ಮೇಲೆ ನಿರ್ಣಯಿಸಿಕೊಳ್ಳಬೇಕಷ್ಟೆ. 2ನೇ ಸಭೆಯನ್ನು ಏರ್ಪಡಿಸಿದರೂ ಸಹ ಕೆಳಗಿನ ಸಭೆಗಳಿಗೆ ಕೊಟ್ಟಿರುವ ಕೋಮುವಾರು ಚುನಾವಣೆಯಿಂದ ದೊರಕುವ ಕೋಮುವಾರು ತೂಕವು ಬದಲಾಗದಂತೆ ನೋಡಿಕೊಳ್ಳಬೇಕು.

(20) ಮಧ್ಯವರ್ತಿ ನ್ಯಾಯವಿಧಾಯಕ ಸಭೆಯನ್ನು ಕುರಿತು ಈಗ ಏನೂ ತೀರ್ಮಾನ ಮಾಡುವುದಿಲ್ಲ. ಸಂಸ್ಥಾನಗಳ ಪ್ರತಿನಿಧಿಗಳೂ ಇದರಲ್ಲಿ ಸೇರಬೇಕಾಗಿರುವುದರಿಂದಲೂ, ಆ ವಿಷಯದಲ್ಲಿ ಇನ್ನೂ ತನಿಖೆ ಆಗಬೇಕಾಗಿರುವುದರಿಂದಲೂ ಮಧ್ಯವರ್ತಿ ಶಾಸನ ಮಂಡಲಿಯ ಗಾತ್ರ ಮತ್ತು ಮೆಂಬರುಗಳ ಕುರಿತು ಈಗ ತೀರ್ಮಾನಿಸುವುದಿಲ್ಲ. ಆದರೆ ಅದರಲ್ಲಿಯೂ ಎಲ್ಲಾ ಕೋಮಿನವರಿಗೂ ತಕ್ಕಂತೆ ಪ್ರತಿನಿಧಿತ್ವ ದೊರಕುವಂತೆ ಏರ್ಪಾಡು ಮಾಡಲಾಗುತ್ತದೆ.

(21) ಸಿಂಧು ಪ್ರಾಂತ್ಯವು ಬೇರೆಯಾಗಬೇಕೆಂಬ ತತ್ವಕ್ಕೆ ಸರಕಾರವು ಒಪ್ಪಿದೆ. ಆದರೆ ಆ ಪ್ರಾಂತ್ಯದ ಆರ್ಥಿಕ ಸ್ಥಿತಿಯನ್ನು ಕುರಿತು ಇನ್ನೂ ತನಿಖೆ ಆಗಲಿಕ್ಕಿರುವುದರಿಂದ ಈಗ ಇರುವ ಬೊಂಬಾಯಿ ಪ್ರಾಂತ್ಯಕ್ಕೂ, ಬೇರ್ಪಟ್ಟ ಬೊಂಬಾಯಿ ಮತ್ತು ಸಿಂಧು ಪ್ರಾಂತ್ಯಗಳಿಗೂ ಬೇರೆ ಬೇರೆ ಸಂಖ್ಯೆಗಳನ್ನು ಕೊಡಲಾಗಿದೆ.

(22) ಬಿಹಾರ ಮತ್ತು ಒರಿಸಾ ಪ್ರಾಂತ್ಯಕ್ಕೆ ಈಗ ಇರುವಂತೆ ಸಂಖ್ಯೆಗಳನ್ನು ಕೊಡಲಾಗಿದೆ. ಒರಿಸಾ ಪ್ರಾಂತ್ಯವನ್ನು ಬೇರ್ಪಡಿಸುವ ವಿಷಯ ಇನ್ನೂ ತನಿಖೆ ಮುಗಿದಿಯಷ್ಟೆ.

(23) ಮಧ್ಯ ಪ್ರಾಂತ್ಯದೊಂದಿಗೆ ಬಿರಾರನ್ನು ಸೇರಿಸಿಕೊಂಡಿದ್ದರಿಂದ ಬಿರಾರಿನ ಭವಿಷ್ಯತ್ತು ನಿರ್ಣಯಿಸಲ್ಪಟ್ಟಿದೆಯೆಂತ ಯೋಚಿಸಬಾರದು. ಅದರ ವಿಷಯ ಇನ್ನೂ ತನಿಖೆ ನಡೆಯುತ್ತಿದೆ.

(24) ಈ ಕೆಳಗಿನ ಮೇರೆ ಪ್ರಾಂತೀಯ ಕೆಳಗಿನ ನ್ಯಾಯವಿಧಾಯಕ ಸಭೆಗಳಿಗೆ ಮೆಂಬರುಗಳನ್ನು ನಿರ್ಣಯಿಸಲ್ಪಡುತ್ತದೆ.

ಮದ್ರಾಸ್:—ಒಟ್ಟು ಸಾರ್ವಜನಿಕ ಸ್ಥಳ 134 (6 ಸ್ತ್ರೀ ಮೆಂಬರುಗಳು ಸಹಿತ), ಹಿಂದುಳಿದವರಿಗೆ18, ಹಿಂದುಳಿದ ಪ್ರಾಂತ್ಯಗಳಿಗೆ 1, ಮುಸಲ್ಮಾನರಿಗೆ (ಒಬ್ಬ ಸ್ತ್ರೀ ಸಹಿತ) 29, ಹಿಂದೀ ಕ್ರಿಶ್ಚಿಯನರು 9 (ಒಬ್ಬ ಸ್ತ್ರೀ ಸಹಿತ), ಎಂಗ್ಲೊ ಇಂಡಿಯನರಿಗೆ 2, ಯೂರೋಪಿಯನರಿಗೆ 3, ವ್ಯಾಪಾರ, ಕೈಗಾರಿಕೆ, ಖನಿ ಮತ್ತು ತೋಟಗಾರರಿಗೆ 6, ಜಮೀನ್‌ದಾರರಿಗೆ 6, ಯೂನಿವರ್ಸಿಟಿಗೆ 1, ಕೂಲಿಗಾರರಿಗೆ 6. ಅಂತು ಜುಮ್ಲಾ 215.

ಬೊಂಬಾಯಿ (ಸಿಂಧ್ ಸಹಿತ):—ಸಾರ್ವಜನಿಕ 97 (ಐದು ಸ್ತ್ರೀಯರು ಸಹಿತ), ಹಿಂದುಳಿದ ಪ್ರಾಂತ್ಯ 1, ಮುಸಲ್ಮಾನರು 63 (ಒಬ್ಬಳು ಸ್ತ್ರೀ ಸಹಿತ), ಹಿಂದೀ ಕ್ರೈಸ್ತರು 3, ಎಂಗ್ಲೊ ಇಂಡಿಯನ್ 2, ಯೂರೋಪಿಯನ್ 4, ವ್ಯಾಪಾರ ವಗೈರೆ 8, ಜಮೀನ್ದಾರರು 3, ಯುನಿವರ್ಸಿಟಿ 1. ಕೂಲಿ 8, ಜುಮ್ಲಾ 200.

ಬಂಗಾಳ—ಸಾರ್ವಜನಿಕ 80 (ಇಬ್ಬರು ಸ್ತ್ರೀಯರು ಸಹಿತ), ಮುಸಲ್ಮಾನರು 119 (ಇಬ್ಬರು ಸ್ತ್ರೀಯರು ಸಹಿತ), ಹಿಂದೀ ಕ್ರೈಸ್ತರು 2, ಎಂಗ್ಲೊ ಇಂಡಿಯನ್ 4 (ಒಬ್ಬ ಸ್ತ್ರೀ ಸಹಿತ), ಯೂರೋಪಿಯನ್ 11, ವ್ಯಾಪಾರ ವಗೈರೆ 19, ಜಮೀನ್ದಾರರು 5, ಯೂನಿವರ್ಸಿಟಿ 2, ಕೂಲಿ 8, ಒಟ್ಟು ಜುಮ್ಲಾ 250.

ಸಂಯುಕ್ತ ಪ್ರಾಂತ್ಯ:—ಸಾರ್ವಜನಿಕ 132; (4 ಸ್ತ್ರೀಯರು ಸಹಿತ) ಹಿಂದುಳಿದವರು 12, ಮುಸಲ್ಮಾನರು 66, (ಇಬ್ಬರು ಸ್ತ್ರೀಯರು ಸಹಿತ), ದೇಶೀಯ ಕ್ರೈಸ್ತರು 2, ಎಂಗ್ಲೊ ಇಂಡಿಯನ್ 1, ಯೂರೋಪಿಯನ್ 2, ವ್ಯಾಪಾರ ವಗೈರೆ 3, ಜಮೀನ್ದಾರರು 6, ಯೂನಿವರ್ಸಿಟಿ 1. ಕೂಲಿ 3, ಒಟ್ಟು 228

ಪಂಜಾಬ್:—ಸಾರ್ವಜನಿಕ 43 (ಒಬ್ಬ ಸ್ತ್ರೀ ಸಹಿತ), ಹಿಂದುಳಿದವರು ಇಲ್ಲ, ಸಿಕ್ಕರು 32 (ಒಬ್ಬ ಸ್ತ್ರೀ ಸಹಿತ) ಮುಸಲ್ಮಾನರು 86 (ಇಬ್ಬರು ಸ್ತ್ರೀಯರು ಸಹಿತ) ದೇಶೀ ಕ್ರೈ... ...ಇಂಡಿಯನ್ 1, ಯೂರೋಪಿಯನ್ 1, ವ್ಯಾಪಾರ ವಗೈರೆ 1. ಜಮೀನ್‌ದಾರರು 5, ಯೂನಿವರ್ಸಿಟಿ 1, ಕೂಲಿಕಾರರು 3, ಜುಮ್ಲಾ 175.

ಬಿಹಾರ್ ಮತ್ತು ಒರಿಸಾ—ಸಾರ್ವಜನಿಕ 99 (ಮೂವರು ಸ್ತ್ರೀಯರು ಸಹಿತ), ಹಿಂದುಳಿದವರು 7, ಹಿಂದುಳಿದ ಪ್ರಾಂತ್ಯ 8, ಮುಸಲ್ಮಾನರು 42 (ಒಬ್ಬ ಸ್ತ್ರೀ ಸಹಿತ), ದೇಶೀ ಕ್ರೈಸ್ತರು 2, ಎಂಗ್ಲೊ ಇಂಡಿಯನ್ 1, ಯೂರೋಪಿಯನ್ 2, ವ್ಯಾಪಾರ ವಗೈರೆ 4, ಜಮೀನ್‌ದಾರರು 5, ಯೂನಿವರ್ಸಿಟಿ 1, ಕೂಲಿಕಾರರು 4, ಒಟ್ಟು ಜುಮ್ಲಾ 175.

ಮಧ್ಯ ಪ್ರಾಂತ್ಯ (ಬಿರಾರ್ ಸಹಿತ)—ಸಾರ್ವಜನಿಕ 77 (ಮೂವರು ಸ್ತ್ರೀಯರು ಸಹಿತ), ಹಿಂದುಳಿದವರು 10, ಹಿಂದುಳಿದ ಪ್ರಾಂತ್ಯ 1, ಮುಸಲ್ಮಾನರು 14, ಎಂಗ್ಲೊ ಇಂಡಿಯನ್ 1, ಯೂರೋಪಿಯನ್ 1, ವ್ಯಾಪಾರ ವಗೈರೆ 2, ಜಮೀನ್‌ದಾರರು 3, ಯೂನಿವರ್ಸಿಟಿ 1, ಕೂಲಿಕಾರರು 2, ಒಟ್ಟು ಜುಮ್ಲಾ 112.

ಆಸ್ಸಾಮ್—ಸಾರ್ವಜನಿಕ 44 (ಒಬ್ಬ ಸ್ತ್ರೀ ಸಹಿತ) ಹಿಂದುಳಿದವರು 4, ಹಿಂದುಳಿದ ಪ್ರಾಂತ್ಯ 9, ಮುಸಲ್ಮಾನರು 34, ದೇಶೀ ಕ್ರೈಸ್ತರು 1, ಯೂರೋಪಿಯನ್ 1, ವ್ಯಾಪಾರ ವಗೈರೆ 11, ಜಮೀನ್‌ದಾರರು ಇಲ್ಲ, ಯೂನಿವರ್ಸಿಟಿ ಇಲ್ಲ, ಕೂಲಿಕಾರರು 4, ಜುಮ್ಲಾ 108.

ವಾಯುವ್ಯ ಸರಹದ್ದಿನ ಪ್ರಾಂತ್ಯ—ಸಾರ್ವಜನಿಕ 9, ಹಿಂದುಳಿದವರು ಇಲ್ಲ, ಹಿಂದುಳಿದ ಪ್ರಾಂತ್ಯ ಇಲ್ಲ, ಸಿಕ್ಕರು 3 ಮುಸಲ್ಮಾನರು 36, ದೇಶೀ ಕ್ರೈಸ್ತ ಇಲ್ಲ, ಯೂರೋಪಿಯನ್ ಇಲ್ಲ, ವ್ಯಾಪಾರ ವಗೈರೆ ಇಲ್ಲ. ಜಮೀನ್‌ದಾರರು 2, ಯೂನಿವರ್ಸಿಟಿ ಇಲ್ಲ. ಕೂಲಿ ಇಲ್ಲ. ಜುಮ್ಲಾ 50.

ಬೊಂಬಾಯಿ (ಸಿಂಧ್ ವಿನಾಯಿಸಿ)—ಸಾರ್ವಜನಿಕ 109 (5 ಸ್ತ್ರೀಯರು ಸಹಿತ) ಹಿಂದುಳಿದವರು 10, ಹಿಂದುಳಿದ ಪ್ರಾಂತ್ಯ 1, ಮುಸಲ್ಮಾನರು 30 (ಒಬ್ಬ ಸ್ತ್ರೀ ಸಹಿತ) ದೇಶೀ ಕ್ರೈಸ್ತರು 3, ಎಂಗ್ಲೊ ಇಂಡಿಯನ್ 2, ಯೂರೋಪಿಯನ್ 3, ವ್ಯಾಪಾರ ವಗೈರೆ 7, ಜಮೀನ್‌ದಾರರು 2, ಯೂನಿವರ್ಸಿಟಿ 1, ಕೂಲಿ 7, ಜುಮ್ಲಾ 175.

ಸಿಂಧ್—ಸಾರ್ವಜನಿಕ 19, (ಒಬ್ಬ ಸ್ತ್ರೀ ಸಹಿತ) ಹಿಂದುಳಿದವರು ಇಲ್ಲ, ಹಿಂದುಳಿದ ಪ್ರಾಂತ್ಯ ಇಲ್ಲ, ಮುಸಲ್ಮಾನರು 34 (ಒಬ್ಬ ಸ್ತ್ರೀ ಸಹಿತ), ದೇಶೀ ಕ್ರೈಸ್ತ ಇಲ್ಲ, ಎಂಗ್ಲೊ ಇಂಡಿಯನ್ ಇಲ್ಲ, ಯೂರೋಪಿಯನ್ 2, ವ್ಯಾಪಾರ ವಗೈರೆ 2, ಜಮೀನ್ದಾರರು 2, ಕೂಲಿಕಾರರು 1, ಒಟ್ಟು ಜುಮ್ಲಾ 60.

ವ್ಯಾಪಾರ, ಕೈಗಾರಿಕೆ, ಗನಿ ಮತ್ತು ತೋಟ—ಇವುಗಳನ್ನು ಆರಿಸುವ ಸಂಸ್ಥೆಗಳು ಯೂರೋಪಿಯನರೇ ಹೆಚ್ಚಿರುವುದು ಯಾ ಹಿಂದೀಯರೇ ಹೆಚ್ಚಿರುವುದು ಇರಬಹುದಾದರೂ, ಈ ಸಂಸ್ಥೆಗಳ ಸಂಖ್ಯೆಯನ್ನು ಖಚಿತವಾಗಿ ಹೇಳಿ ನಿರ್ಣಯಿಸಲಾಗುವುದಿಲ್ಲ. ಆದರೂ ಪ್ರಾರಂಭದಲ್ಲಿ ಈ ಕೆಳಗಿನ ಸಂಖ್ಯೆ ಆಗಬಹುದೆಂತ ನಿರೀಕ್ಷಿಸಲಾಗಿದೆ. ಮದ್ರಾಸ್—4 ಯೂರೋಪಿಯನರು, ಇಬ್ಬರು ಇಂಡಿಯನರು. ಬೊಂಬಾಯಿ—(ಸಿಂಧ್ ಸಮೇತ) 5 ಯೂರೋಪಿಯನ್, 3 ಇಂಡಿಯನ್. ಬಂಗಾಳ—14 ಯೂರೋಪಿಯನ್, 5 ಇಂಡಿಯನ್. ಸಂಯುಕ್ತ ಪ್ರಾಂತ್ಯ—2 ಯೂರೋಪಿಯನ್, 1 ಇಂಡಿಯನ್. ಪಂಜಾಬ್—1 ಇಂಡಿಯನ್. ಬಿಹಾರ ಮತ್ತು ಒರಿಸಾ—2 ಯೂರೋಪಿಯನ್, 2 ಇಂಡಿಯನ್. ಮಧ್ಯಪ್ರಾಂತ್ಯ—1 ಯೂರೋಪಿಯನ್, 1 ಇಂಡಿಯನ್. ಆಸ್ಸಾಂ—8 ಯೂರೋಪಿಯನ್, 3 ಇಂಡಿಯನ್. ಬೊಂಬಾಯಿ (ಸಿಂಧ್ ವಿನಾಯಿಸಿ)— 4 ಯೂರೋಪಿಯನ್, 3 ಇಂಡಿಯನ್. ಸಿಂಧ್—1 ಯೂರೋಪಿಯನ್, 1 ಇಂಡಿಯನ್.

ಬೊಂಬಾಯಿಯಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ 7 ಮರಾಠರಿಗೆ ಇಡಲಾಗುತ್ತದೆ. ಮೇಲೆ ವಿವರಿಸಿದಂತೆ ಬಂಗಾಳದಲ್ಲಿ ಹಿಂದುಳಿದವರ ಸಂಖ್ಯೆ ನಿರ್ಣಯಿಸಲಿಲ್ಲ. ಹೀಗೆ ನಿರ್ಣಯಿಸುವ ಸಂಖ್ಯೆ 10ಕ್ಕೆ ಏರುವುದಿಲ್ಲ. ಸಾರ್ವಜನಿಕ ಸಂಖ್ಯೆ 80 ರಿಂದ ಈ ಹಿಂದುಳಿದವರ ಸಂಖ್ಯೆಯು ವಜ ಮಾಡಲಾಗುತ್ತದೆ. ಪಂಜಾಬಿನ ಜಮೀನ್ದಾರರಿಗೆ ಇರುವ 5 ಸೀಟುಗಳಲ್ಲಿ 1 ತಮಾನ್‌ದಾರರಿಗೆ ಹೋಗುತ್ತದೆ. ಉಳಿದ 4 ಸೀಟುಗಳನ್ನು ಹಂಚುವುದರಲ್ಲಿ ಒಬ್ಬ ಹಿಂದೂ, ಒಬ್ಬ ಸಿಕ್ ಮತ್ತು ಇಬ್ಬರು ಮುಸಲ್ಮಾನರು ಬರಬಹುದೆಂತ ನಿರೀಕ್ಷಿಸಲಾಗಿದೆ. ಆಸ್ಸಾಮಿನ ಸಾರ್ವಜನಿಕ ಚುನಾವಣೆಗೆ ಕೊಟ್ಟ ಒಬ್ಬ ಸ್ತ್ರೀಯ ಚುನಾವಣೆಯು ಶಿಲ್ಲಾಂಗಿನಲ್ಲಿ ಜಾತಿಭೇದವಿಲ್ಲದ ಚುನಾವಣೆಯು ಏರ್ಪಾಡಿತಾದ ನಡೆಯುತ್ತದೆ.

ಕೈಲ್ ಪೊಳುದು ಹಬ್ಬ.

ಪ್ರಪಂಚದ ಎಲ್ಲಿ ನೋಡಿದರೂ ಎಲ್ಲಾ ಮತಸ್ಥರು ಆ ವರವರ ಹಬ್ಬಗಳನ್ನು ಒಂದೇ ದಿನ ನಡಿಸುತ್ತಿರುವರು. ಇದು ಆಯಾಯ ಮತಸ್ಥರ ಒಗ್ಗಟ್ಟನ್ನು ತೋರಿಸುತ್ತದೆ. ಹಾಗೆಯೇ ಕೊಡಗಿನವರೂ ಕೈಲ್ ಪೊಳುದು ಮತ್ತು ಹುತ್ರಿ ಹಬ್ಬಗಳನ್ನು ಒಂದೇ ದಿನ ನಡಿಸಬೇಕೆಂದು ಹಲವು ವರ್ಷಗಳಿಂದ ಪ್ರಯತ್ನಗಳು ನಡೆಯುತ್ತಿದ್ದರೂ ಸಫಲವಾಗಿರುವುದಿಲ್ಲ. ಈ ವರ್ಷವಾದರೂ ಮಹನೀಯರೆಲ್ಲರೂ ಒಮ್ಮನಸ್ಸು ಮಾಡಿ ಕೊಡಗಿನ ಎಲ್ಲಾ ಭಾಗಗಳಲ್ಲಿಯೂ ಕೈಲ್ ಪೊಳುದು ಹಬ್ಬವನ್ನು ಬರುವ ಸೆಪ್ಟೆಂಬರು ತಾ॥ 3 ನೇ ಶನಿವಾರ ಆಚರಿಸಬೇಕಾಗಿ 'ಮಂತಹಿತೈಷಿ'ಯರೊಬ್ಬರ ಕೋರಿಕೆಯಾಗಿದೆ.

ಈಶ್ವರ ಮುತ್ತಪ್ಪದೇವರ ನೆಲೆ.

ಕೊಡಗು ಭಕ್ತ ಜನರಿಗೆ ವಿನಂತಿ.

ಮಹನೀಯರೇ,

ಈಶ್ವರ ಮುತ್ತಪ್ಪದೇವರ ಸ್ಥಾನವು ಮಲೆಯಾಳದಲ್ಲಿಯು ಲ್ಲದೆ ಕೊಡಗಿನ ಕೆಲವು ಕಡೆಗಳಲ್ಲು ನೆಲೆಯಾಗಿ ಹರಕೆ ವಗೈರೆ ಕೊಡುತ್ತಾ ಇದ್ದಾರೆ. ಅವರ ಕೊಡಗಿಗೆ ಮುಖ್ಯ ಪಟ್ಟಣದ ಮಡಿಕೇರಿಯಲ್ಲು ಈ ದೇವರ ನೆಲೆಯು ಇಲ್ಲದೆ ಜನಗಳಿಗೆ ಹರಕೆ ವಗೈರೆ ಕೊಡಲು ತೊಂದರೆಯಾದ ಸಂಗತಿ ಎಲ್ಲರಿಗೂ ವೇದ್ಯವಿದೆ. ಅದರಿಂದ ಈಗ ಕೆಲವು ಜನರು ಸೇರಿ ಮಡಿಕೇರಿನಾಡು ಕಚೇರಿ ನಿಡುಗಣೆ ಗ್ರಾಮದ ಅಂದರೆ ಪೊಲೀಸ್ ಟ್ರೈನಿಂಗ್ ಸ್ಕೂಲ್ ಬಳಿ ಇರುವ ಶ್ರೀಮತಿ ಸಾಂತವ್ವನವರ ಗದ್ದೆ ಬಳಿ ದೇವಸ್ಥಾನವನ್ನು ಕಟ್ಟಲು ವಿಚಾರ ಮಾಡುತ್ತೇವೆ. ಆ ಸ್ಥಳದಲ್ಲಿ ಈಗಲೇ ಸ್ವಂಗುತ್ತಿ ವಗೈರೆ ಹರಕೆಗಳು ಕೊಟ್ಟು ಬರುತ್ತಾ ಇವೆ. ಎಷ್ಟೋ ಜನರ ಹರಕೆ ಸಹ ಹೆಚ್ಚಾಗಿರುವುದು ಬರುತ್ತಾ ಇದೆ. ಈ ದೇವಸ್ಥಾನವನ್ನು ಕಟ್ಟಲು ಈ ಮಳೆ ಕಳೆದ ನಂತರ ಚಂದ ವಸೂಲಿಗೆ ಮ. ರಾ. ಶ್ರೀ. ಚಂಮುನಾಯರು ಮತ್ತು ತೀಯರ ಅಂಬಾಡಿಯು ಹೊರಡುತ್ತಾರೆ. ಅದ್ದರಿಂದ ಭಕ್ತ ಜನರು ದೇವರ ಮೇಲೆ ಕೃಪೆಯಿಟ್ಟು ಯಥಾನುಶಕ್ತಿ ಸಹಾಯ ಮಾಡಬೇಕಾಗಿ ವಿನಂತಿ.

2—1 ದೇವ ಭಕ್ತ.

೪೦ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕಕಂಪನಿ ಯವರ

ಜ್ವರದ ಗುಳಿಗೆಗಳು.

ಚಳಿಜ್ವರ, ಚಾತುರ್ಥಿ ಜ್ವರ, ದಿನಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮ ಬಾಣದಂತೆ ಇವೆ. ಬಾಟ್ಲಿಗೆ ರೂ. ೧. ಟ. ಖ. ೭ ಆಣೆ. ಜರೂರು ತರಿಸಿಕೊಳ್ಳಿ.

(52—3) ಗಣೇಶ ರಾಮಚಂದ್ರ ಕರ್ಕ,
ಮತ್ತು ಕಂಪನಿ, ಗಿರಗಾಂವ, ಮುಂಬಯಿ,

ಸಣ್ಣ ಖರ್ಚಿನಿಂದ ದೊಡ್ಡ ಲಾಭಗಳು.

ನಮ್ಮ, ಮದುವೆಯ ಸ್ತ್ರೀಧನ, ಹೆಂಗೆ, ಜೀವನಾರಂಭ ಮತ್ತು ಬೋನಸ್ ಕಾರ್ಡುಗಳು ಮದುವೆ, ಮಕ್ಕಳ ಹುಟ್ಟುವಿಕೆ ಮುಂತಾದ ಕಾಲಗಳಲ್ಲಿ ನಿಮಗೂ, ನಿಮ್ಮ ಮಕ್ಕಳಿಗೂ ಬಹು ಸ್ವಲ್ಪ ಖರ್ಚಿನಿಂದ ದೊಡ್ಡ ಹಣಗಳನ್ನು ತರುವವು.

ಬಹು ಅಪರೂಪದ ಅವಕಾಶ.

ನಮ್ಮ ಕ್ಯಾಷ್ ಮತ್ತು ಕ್ರೆಡಿಟ್ ಸರ್ಟಿಫಿಕೇಟುಗಳು ನಿಮ್ಮ ಅವಶ್ಯಕತೆಗಳಿಗೆ ಬೇಕಾದ ಸಾಲಗಳನ್ನು ಒದಗಿಸಿ ಕೊಡುವವು.

ಬೇಕಾಗಿದೆ.

ಒಳ್ಳೇ ಸಂಬಳ ಮತ್ತು ಕಮಿಷನಿನ ಮೇಲೆ ಕೆಲವು ಸ್ತ್ರೀಯರು ಮತ್ತು ಗಂಡಸರು ಏಜೆಂಟರುಗಳಾಗಿ ಬೇಕಾಗಿದ್ದಾರೆ.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಎಂ. ಟಿ. ಜೆ. ಬ್ರೌನ್,		ದಿ ಬ್ರಾಂಚ್ ಸೆಕ್ರೆಟರಿ,
ಆರ್ಗನೈಜಿಂಗ್ ಮೇನೇಜರ್,		ದಿ ಕಲ್ಕತ್ತಾ ಫೈನಾನ್ಸ್ ಏಜೆನ್ಸಿ ಅಂಡ್
ದಿ ಕಲ್ಕತ್ತಾ ಫೈನಾನ್ಸ್ ಏಜೆನ್ಸಿ	ಅಥವಾ	ಸಿಂಡಿಕೇಟ್ ಲಿಮಿಟೆಡ್,
ಅಂಡ್ ಸಿಂಡಿಕೇಟ್ ಲಿಮಿಟೆಡ್,		179 ನರಸಿಂಹ ರಾಜ ರೋಡ್,
(4—3) ಮಡಿಕೇರಿ.		ಬೆಂಗಳೂರು ಸಿಟಿ.

ಮದ್ರಾಸು ಕೊಡಗರ ಸಂಘ.

ಕೊಡಗಿನ ಭವಿಷ್ಯತ್ತು.

ಈ ಸಂಘದ ಮೀಟಿಂಗೊಂದು ಲಾ ಕಾಲೇಜಿನ ಕಾಮನ್ ರೂಮಿನಲ್ಲಿ ಆಗೊಸ್ತು 7ನೇ ತಾರೀಕಿನಲ್ಲಿ ಸಂಘದ ಅಧ್ಯಕ್ಷರಾದ ಬಿದ್ದಂಡ ಕುಟ್ಟಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಮೀಟಿಂಗಿನ ಕಾಲಕ್ರಮಪಟ್ಟಿಗನುಸಾರವಾಗಿ ಪ್ರಥಮತಃ ದಿವಂಗತರಾದ ಮ. ರಾ. ಶ್ರೀ. ರಾಯಬಹದ್ದೂರ್ ಕೋದಂಡ ಅಪ್ಪಯ್ಯನವರ, ಮುಕ್ಕಾಟಿರ ಮುತ್ತಣ್ಣನವರ ಮತ್ತು ಪಾಂಡಂಡ ಮುತ್ತಣ್ಣನವರ ಮರಣವನ್ನು ಕುರಿತು ವ್ಯಸನ ಸೂಚಕವಾದ ಠರಾವುಗಳನ್ನು ಒಮ್ಮತದಿಂದ ಪಾಸು ಮಾಡಿ ಈ ಠರಾವುಗಳನ್ನು ಮೃತರ ಕುಟುಂಬಸ್ಥರಿಗೆ ತಿಳಿಸುವಂತೆ ಸಂಘದ ಸೆಕ್ರೆಟರಿಯವರನ್ನು ಕೇಳಿಕೊಂಡರು. ಆ ಮೇಲೆ ಫಲಾಹಾರವಾಯಿತು. ತಿಂಡಿ ತೀರ್ಥಗಳಾದನಂತರ ಮ. ರಾ. ಶ್ರೀ. ಕೆ. ಯಸ್. ಗಣಪತಿ ಬಾರ್.ಎಟ್-ಲಾರವರು ಈ ವರ್ಷ ಸಂಘದ ಹೊಸ ಮೆಂಬರುಗಳಿಗೂ, ಕಳೆದ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೂ ಸಂಘದ ಪರವಾಗಿ ಸ್ವಾಗತವನ್ನಿತ್ತು ಅವರನ್ನು ಆಶೀರ್ವದಿಸಿದರು. ಆ ಮೇಲೆ ಮನೆಯಪಂಡ ಪೊನ್ನಪ್ಪನವರು ಅಥಿತಿಗಳ ಪರವಾಗಿ ಮರು ನುಡಿ ಇತ್ತರು.

ಅಸೋಸಿಯೇಶನಿನ ರೂಲ್ಸುಗಳನ್ನು ತಿದ್ದುಪಡಿ ಮಾಡುವ ಬಗ್ಗೆ ಒಂದು ಕಮಿಟಿಯನ್ನು ಏರ್ಪಡಿಸಬೇಕೆಂದು ಸಂಘದ ಕಳೆದ ಮೀಟಿಂಗಿನಲ್ಲಿ ಸೆಕ್ರೆಟರಿಯವರು ತಂದಿದ್ದ ಠರಾವಿಗನುಸಾರವಾಗಿ ಏಳು ಜನರಿಂದ ಕೂಡಿದ ಒಂದು ಕಮಿಟಿಯು ರಚಿಸಲಾಯಿತು. ಇದಾದ ಮೇಲೆ ಮೆ. ಬಿದ್ದಂಡ ಕುಟ್ಟಪ್ಪ ಯಂ. ಎ. ರವರು "ಕೊಡಗು ದೇಶವು ಪ್ರತ್ಯೇಕ ಪ್ರಾಂತ್ಯವಾಗಿರಬೇಕು' ಎಂಬ ವಿಷಯವನ್ನು ಕುರಿತು ಭಾಷಣ ಮಾಡಿದರು. ಆ ಸಮಯದಲ್ಲಿ ಮ. ರಾ. ಶ್ರೀ. ಕೆ. ಯಸ್. ಗಣಪತಿಯವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು.

ಮ. ರಾ. ಶ್ರೀ. ಕುಟ್ಟಪ್ಪನವರು ಹೇಳಿದ್ದೇನೆಂದರೆ—'ಈಗ ನಾವು ಚರ್ಚಿಸಲಿಕ್ಕಿರುವ ಸಂಗತಿಯು ಈಗ ಬಹು ಪ್ರಾಮುಖ್ಯತೆಯನ್ನು ಪಡೆದ ವಿಷಯವಾಗಿದೆ. ಈಗಾಗಲೇ ಇತರ ದೊಡ್ಡ ಪ್ರಾಂತ್ಯಗಳಿಗೆ ಕೊಡಬಹುದಾದ ಪ್ರಾಂತೀಯ ಸ್ವಾತಂತ್ರ್ಯವು ನಮ್ಮ ಚಿಕ್ಕ ಪ್ರಾಂತ್ಯಕ್ಕೆ ಸಿಕ್ಕಲಾರದಾದುದರಿಂದ ಈ ವಿಷಯದಲ್ಲಿ ನಾವು ಬಹಳವಾಗಿ ಗಮನಿಸಬೇಕಾಗಿದೆ. ನಮಗೆ ಬೇರೆ ದೊಡ್ಡ ಪ್ರಾಂತ್ಯಗಳಿಗೆ ಕೊಡುವಂಥ ಪ್ರಾಂತೀಯ ಸ್ವಾತಂತ್ರ್ಯವು ಸಿಕ್ಕುವುದಿಲ್ಲ. ಅಂದ ಮೇಲೆ ಇಲ್ಲವೇ ಕೊಡಗು ತನಗೆ ಸಮೀಪವಾದ ಮದ್ರಾಸು ಪ್ರಾಂತ್ಯದೊಡನೆ ಬೆರೆತು ಅದಕ್ಕೆ ಸಲ್ಲಬಹುದಾದ ಸ್ವಾತಂತ್ರ್ಯದಲ್ಲಿ ಭಾಗಿಯಾಗಬೇಕು. ಇಲ್ಲವೇ ಪ್ರತ್ಯೇಕವಿದ್ದು ತನಗೆ ಸಿಕ್ಕಬಹುದಾದ ಅಲ್ಪಸ್ವಲ್ಪ ಬದಲಾವಣೆಯಲ್ಲಿ ತಾತ್ಕಾಲಕ್ಕೆ ಸಂತೃಪ್ತಿ ಹೊಂದಬೇಕು. ಯಾವ ತರಹದ ಬದಲಾವಣೆಯೇ ಆಗಲೀ ಅದು ದೇಶದಲ್ಲಿ ಭೂಮಾಲೀಕರೆಂದೆನ್ನಿಸಿಕೊಳ್ಳುವ ನಿವಾಸಿಗಳಿಗೆ ಲಗಾವಾಗುವಷ್ಟು ಇತರರಿಗೆ ಆಗಲಾರದು. ಆದುದರಿಂದ ನಾವು ಕೇಳುವ ಬದಲಾವಣೆಯಾಗಲೀ ಅಥವಾ ಸರ್ಕಾರದವರು ಕೊಡುವ ಪ್ರೊವಿಜನಾಗಲೀ ದೇಶದಲ್ಲಿ ಸಜೀವರಾದ ನಿವಾಸಿಗಳ ಸುಖ, ಭದ್ರತೆ, ಸಂಪತ್ತುಗಳನ್ನು ಹೆಚ್ಚಿಸುವಂಥವುಗಳಾಗಿರಬೇಕು.

ಪೂರ್ವದಿಂದಲೂ ದೇಶದ ಪ್ರಾಮುಖ್ಯ ನಿವಾಸಿಗಳೂ ಭೂಮಾಲೀಕರೂ ಆಗಿರುವ ಕೊಡವರು ಹೊರಗಿನವರ ಆಳಿಕೆಗೆ ಒಳಪಟ್ಟಿರುವದಿಲ್ಲ. ಕಡೆಗೆ 1834ನೇ ಇಸವಿಯಲ್ಲಿ ಸ್ವೇಚ್ಛೆಯಿಂದ ತಾವು ಕುಂಪಣಿ ಸರ್ಕಾರದ ಆಡಳಿತೆಗೆ ತಮ್ಮ ದೇಶವನ್ನು ಒಪ್ಪಿ ಬಿಟ್ಟು ಕೊಡುವ ವರೆಗೆ ತಾವು ತಮ್ಮ ಸ್ವಾತಂತ್ರ್ಯವನ್ನು, ಏಕತ್ವವನ್ನು ಕಳಕೊಂಡಿರಲಿಲ್ಲ. ಬ್ರಿಟಿಷರ ಕೈಕೆಳಗೆ ಬಿಡುವಾಗಲೂ ಸಹ ಅವರು ನಮಗೆ ಈ ರೀತಿಯ ವಾಗ್ದಾನವನ್ನು ಕೊಟ್ಟಿರುವರು. "They will not again be subjected to native rule; that their civil rights and Religious usages will be respected and that the greatest desire will invariably be shown by British Government to augment their security, comfort and happiness" ಅದೇ ರೀತಿಯಲ್ಲಿ ಈಗಿನ ರಾಜಕೀಯ ಬದಲಾವಣೆಯನ್ನು ಕುರಿತು ಕೊಡಗಿಗೆ ಕೊಡಬೇಕಾದ ಮಾರ್ಪಾಟುಗಳನ್ನು ಇಂಡಿಯಾ ಸರ್ಕಾರಕ್ಕೆ ನಮ್ಮ ಚೀಫ್ ಕಮಿಶನರ್ ಸಾಹೇಬರು ಬರೆದ ಕಾಗದದಲ್ಲಿ ಹೀಗಿರುವುದು "The Coorgs have remained unswervingly loyal .... and on the ground of history .... we are bound in honour to do all that is possible to give the Coorgs the representative for which they ask."

ಆದುದರಿಂದ ಕೊಡಗು ಪ್ರತ್ಯೇಕವಾಗಿರಬೇಕೋ ಅಲ್ಲ ಮದ್ರಾಸಿನೊಡನೆ ಅಮಾಲ್ಗಮೇಟ್ ಆಗಬೇಕೋ ಎಂಬ ಪ್ರಶ್ನೆಗೆ ಸರಿಯಾದ ಉತ್ತರವು ಕೊಡಗು ಪ್ರತ್ಯೇಕವಾಗಿರದೆ ಮದ್ರಾಸಿನೊಡನೆ ಬೆರೆತರೆ ಸಿಕ್ಕಬಹುದಾದ ಲಾಭಾಲಾಭಗಳು, ಅದು ಪ್ರತ್ಯೇಕವಾಗಿ ನಿಂತರೆ ಸಿಕ್ಕಬಹುದಾದ ಲಾಭಕ್ಕಿಂತ ಹೆಚ್ಚಾಗಿರುವುದೇ ಎಂಬುದರ ಮೇಲೆ ನಿಂತಿದೆ. ಆ ರೀತಿ ಹೆಚ್ಚಿನ ಸುಖ, ಭದ್ರತೆ ಸಂಪತ್ತುಗಳನ್ನು ಕೊಡಬಹುದಾದ (Positive advantages) ದಾರಿಗಳನ್ನು ಯಾರೂ ಇಂದಿನ ವರೆಗೆ ತೋರಿಸಿರುವುದಿಲ್ಲ.

ಅಮಾಲ್ಗಮೇಶನ್ ಆಗದೇಕೆಂದು ಹೇಳುವವರು ಈ ಕೆಳಗಿನ ಕಾರಣಗಳನ್ನು ಕೊಡುವರು. (1) ಕೊಡಗಿನ ಉತ್ಪತ್ತಿಯು ಪ್ರಾಂತೀಯ ಪ್ರಜಾ ಜವಾಬ್ದಾರಿ ಸರ್ಕಾರವನ್ನು ನಡಿಸಲು ಸಾಲದುದರಿಂದ ಮದ್ರಾಸಿಗೆ ಸೇರುವುದು ಉತ್ತಮ ಈ ವಾದವು ಅಷ್ಟೊಂದು ಮಹತ್ವರವಾದವಲ್ಲ. ನಮ್ಮ ಈಗಿನ ಸರ್ಕಾರವು ಅನಾವಶ್ಯಕವಾದ ತಲೆಭಾರದ ಸರ್ಕಾರವಾಗಿದೆ ಕೆಲವು ಉದ್ಯೋಗಗಳನ್ನು ತೆಗೆದು ಹಾಕಿ, ಬಾಕಿ ಇರುವ ಇಂಪೀರಿಯಲ್ ಸರ್ವಿಸ್‌ಗಳನ್ನು ಇಂಡಿಯಾ ಸ್ವಿಸ್ ಮಾಡಿದಲ್ಲಿ ಸುಮಾರು ಒಂದು ಲಕ್ಷದ ವರೆಗೆ ಉಳಿತಾಯವನ್ನು ತೋರಿಸಬಹುದು. ಅಲ್ಲದೆ ದೇಶದ ಇನ್ನಿತರ ಉತ್ಪತ್ತಿಯ ದಾರಿಗಳನ್ನು ನಮ್ಮ ಈಗಿನ ಸರ್ಕಾರವು ಕಂಡು ಹಿಡಿದಿರುವುದಿಲ್ಲ. ದೇಶದ ಸ್ವಾಭಾವಿಕ ಉತ್ಪನ್ನಗಳನ್ನು (natural resources) ಗಳನ್ನು ವೃದ್ಧಿಪಡಿಸಿ (develop) ದೇಶದ ಆದಾಯವನ್ನು, ಆರ್ಥಿಕ ಸ್ಥಿತಿಯನ್ನೂ ಹೆಚ್ಚಿಸಲು ನಾನಾ ರೀತಿಗಳಿವೆ. ಅಲ್ಲದೆ ಪ್ರಾಂತೀಯ ಸರ್ಕಾರವನ್ನು ಪ್ರಥಮದಲ್ಲಿ ನಡಿಸಲು ಸಾಕಷ್ಟು ಮೊತ್ತವನ್ನು (opening balance) ಮಧ್ಯವರ್ತಿ ಸರ್ಕಾರದಿಂದ ಕೇಳಬಹುದು. ಈಗ ನಾರ್ತ್‌ವೆಸ್ಟ್ ಪ್ರಾಂಟಿಯರ್ ಪ್ರಾವಿನ್ಸಿಗೆ ಕಾಲಿಯಾಸ ಮೂರು ಕೋಟಿ ರುಪಾಯಿ ಸಬ್‌ವೆನ್ಶನ್ (subvention) ಕೊಡವುದಾಗಿ ಇಂಡಿಯಾ ಸರ್ಕಾರವು ಒಪ್ಪಿರುವಾಗ ನಮಗೇತಕ್ಕೆ ಕೊಡಬಾರದು? ಅದರಲ್ಲೂ ನಮಗೆ ಕೌನ್ಸಿಲ್ ಸಿಕ್ಕುವ ವರೆಗೆ ತಮ್ಮ ಪ್ರಾಂತ್ಯದಿಂದ ಇಂಡಿಯಾ ಸರ್ಕಾರವು ಸುಮಾರು ಒಂದು ಕೋಟಿ ರೂಪಾಯಿಗಳನ್ನು ಕೊಂಡು ಹೋಗಿರುವಾಗ್ಯೆ ನಮಗೇತಕ್ಕೆ ತಕ್ಕ ಸಬ್‌ವೆನ್ಶನ್ ಕೊಡಬಾರದು. ಈ ಹಣವು ಸಿಕ್ಕಿದರೆ ನಮ್ಮ ಪ್ರಾಂತೀಯ ಸರ್ಕಾರವನ್ನು ನಡಿಸಲು ಏನೊಂದೂ ತೊಡಕೂ ಇರಲಾರದು. ಆದ್ದರಿಂದ ಹಣಕ್ಕೋಸ್ಕರ ಹೆದರಿ ನಮ್ಮ ಏಕತ್ವವನ್ನು ಕಳಕೊಳ್ಳುವ ಕಾರಣವಿರುವುದಿಲ್ಲ.

(2) ಎರಡನೇ ಕಾರಣವೇನೆಂದರೆ—ಕೊಡಗಿನ ಅಭಿವೃದ್ಧಿಗೆ ಬೇಕಾದ ಸಹಾಯವನ್ನು ಕೊಡತಕ್ಕ ಪರದೇಶದಲ್ಲಿ ಇಂಥ ಕಲೆಗಳಲ್ಲಿ ತರಬೇತು ಹೊಂದಿದ ತಜ್ಞರುಗಳ ಅಭಿಪ್ರಾಯವನ್ನು ಪಡೆಯಲು ಆಗುವುದಿಲ್ಲ; ಮದ್ರಾಸ್ ಸರ್ಕಾರದವರು ಇನ್ನು ಮುಂದಕ್ಕೆ ಅವರ ಎಕ್ಸ್‌ಪರ್ಟ್‌ಗಳನ್ನು ನಮ್ಮ ಪ್ರಯೋಜನಾರ್ಥವಾಗಿ ಕಳುಹಿಸಿ ಕೊಡುವರೆಂಬ ಧರವಸೆ ಇರದಾಗುವುದಿಲ್ಲ ಎಂಬುವುದು. ಈ ಸಹಾಯಗಳನ್ನು ನಾವು ಈಗ ಮಲೇರಿಯಾ ಮತ್ತು ಗಂಧದ ಹುಳಗಳ ಶೋಧನೆಯಲ್ಲಿ ಪಡೆದಿರುವಂತೆ ಮಧ್ಯವರ್ತಿ ಸರ್ಕಾರದವರು ನೇಮಕ ಮಾಡುವ ಉದ್ಯೋಗಸ್ಥರಿಂದ ಪಡೆಯಬಹುದು.

(3) ಅಮಾಲ್ಗಮೇಶನ್ ಬೇಕೆನ್ನುವವರು ಕೊಡುವ ಮೂರನೇ ಕಾರಣವು ಕೊಡಗು ದೇಶದ ವಿದ್ಯಾರ್ಥಿಗಳ ಪ್ರೌಢ ವಿದ್ಯಾಭ್ಯಾಸವನ್ನು ಕುರಿತಾಗಿದೆ. ಇವಕ್ಕೆ ತಕ್ಕ ಏರ್ಪಾಡುಗಳನ್ನು ಮಧ್ಯವರ್ತಿ ಸರ್ಕಾರದ ಮೂಲಕ ನಮ್ಮ ಎಲ್ಲಾ ಪ್ರಾಂತ್ಯಗಳೊಡನೆ ಏರ್ಪಾಡು ಮಾಡಿಕೊಳ್ಳಬಹುದು. ನಮ್ಮ ಯೋಗ್ಯತೆಗೂ ಉತ್ಪತ್ತಿಗೂ ತಕ್ಕ (contribution) ಕಾಣಿಕೆಯನ್ನು ಕೊಟ್ಟು ಈಗ ಅನ್ಯ ರಾಜ್ಯಗಳು ಮಾಡಿಕೊಂಡಿರುವಂತೆ ಎಲ್ಲಾ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್‌ಗಳಲ್ಲಿ ಒಂದೆರಡು ಸ್ಥಳಗಳನ್ನು ಇರಿಸಿಕೊಳ್ಳಬಹುದು. ಅಷ್ಟಲ್ಲದೆ ಎಷ್ಟೋ ಸ್ವಂತ ಕಾಲೇಜುಗಳು ಇವೆ. ಅವರೇನು ಅಂಥಾ ನಿರ್ಬಂಧವನ್ನು ಮಾಡಿರುವುದಿಲ್ಲ. 4ನೇ—ನಮ್ಮ ವಿದ್ಯಾವಂತರಾದ ಯುವಕರಿಗೆ ತಕ್ಕಷ್ಟು ಸ್ಥಳವನ್ನು ನಮ್ಮ ಚಿಕ್ಕ ಸರ್ಕಾರವು ಕೊಡಲಾರದು ಎಂಬುವುದು ಮತ್ತೊಂದು ಕಾರಣ. ಇದು ಸಹ ಕೇವಲ ಸಕಾರಣವಾದ ವಾದವೆನ್ನಲಾಗುವುದಿಲ್ಲ. ಈಗಲೇ ಕೊಡಗಿನಲ್ಲಿರುವ ಅನೇಕ ಉದ್ಯೋಗಗಳು ಹೊರದೇಶೀಯರ ಕೈಯಲ್ಲಿವೆ. ಚೀಫ್ ಕಮಿಶನರ ಆಫೀಸಿನಲ್ಲಿ ಒಬ್ಬನಾದರೂ ಕೊಡಗಿನವರಿಲ್ಲ. ಮದ್ರಾಸಿಗೆ ಸೇರಿದ ನಮ್ಮ ಸರ್ಕಾರದ ಒಂದು ಶಾಖೆಯಾದ ಡಿ. ಪಿ. ಡಬ್ಲ್ಯು ಇಲಾಖೆಯಲ್ಲಿ ಎಲ್ಲಾ ಮುಖ್ಯ ಉದ್ಯೋಗಗಳೂ ಹೊರಗಿನವರ ಕೈಯ್ಯಲ್ಲಿದೆ. ಕೊಡಗನ್ನು ಮದ್ರಾಸಿಗೆ ಸೇರಿಸಿದ್ದಾದರೆ ಈ ಕೊರತೆಯನ್ನು ಹೇಗೆ ಹೋಗಲಾಡಿಸಿದಂತಾಗುವುದೋ ನನಗೆ ತಿಳಿಯುವುದಿಲ್ಲ. ಅಲ್ಲಿರುವ ಉದ್ಯೋಗಗಳಿಗೆ ಎಷ್ಟೋ ಅಲ್ಲಿಯ ವಿದ್ಯಾವಂತರೇ ಇರುವರು. ಅಲ್ಲದೆ ಅಮಾಲ್ಗಮೇಶನ್ ಆದ ಮೇಲೆ ನಮ್ಮ ಯುವಕರಿಗೆ ಅಲ್ಲಿ ಉದ್ಯೋಗ ಸಿಕ್ಕುವುದರ ಬದಲು ಈಗ ಬೇರೆ ಇರುವುದರಿಂದ ನಮ್ಮ ದೇಶದಲ್ಲಾದರೂ ಸಿಕ್ಕುತ್ತಿರುವ ಉದ್ಯೋಗಗಳು ಸಹ ಸಿಕ್ಕದೆ ಹೋದೀತು.

(5) ಈಗ ನಮಗಿರುವ ಕೌನ್ಸಿಲಿನಿಂದ ಏನೊಂದು ಪ್ರಯೋಜನವಿಲ್ಲ. ಅದು ವರ್ಷಕ್ಕೆ 6—7 ದಿವಸ ಮಾತ್ರ ಕೆಲಸ ಮಾಡುತ್ತೆ. ಮದ್ರಾಸಿಗೆ ಸೇರಿದರೆ ಈ ಖರ್ಚು ಉಳಿತಾಯವಾಗುತ್ತೆ ಎಂಬದೊಂದು ಕಾರಣವನ್ನೂ ಕೆಲವರು ಕೊಡುವರು ಆದರೆ ಮದ್ರಾಸು ಕೌನ್ಸಿಲಿನ ಕೆಲಸವು ಇದರಿಂದ ಹೆಚ್ಚಾಗಿ ತಿಳಿಯದು. ಮದ್ರಾಸ್ ಕೌನ್ಸಿಲಿನಲ್ಲಿ ಡಿಸ್ಟ್ರಿಕ್ಟುಗಳಿಗೆ ಸಮ್ಮಂಧಪಟ್ಟ ಠರಾವುಗಳು ಮಂಜೂರಾಗಬೇಕಾದರೆ ಕೆಲವು ವಿಷಯಗಳಲ್ಲಿ ಅನೇಕ ವರ್ಷಗಳು ಬೇಕಾಗುತ್ತವೆ. ಉದಾ: ಮಲಬಾರ್ ಟೆನೆನ್ಸಿ ಆಕ್ಟ್ (Malabar Tenancy Act) ಹಿಂದೂ ರಿಲಿಜಿಯಸ್ ಎಂಡೋಮೆಂಟ್ ಬಿಲ್ (Hindoo Religious Endowment Bill) ಕೊಡಗು ಮದ್ರಾಸಿಗೆ ಸೇರಿದುದಾದರೆ ಕೊಡಗಿಗೆ ಸಮ್ಮಂಧಪಟ್ಟ ಕಾನೂನುಗಳಿಗೆ ತಕ್ಕ ವಿಗ ಸಿಕ್ಕಲಿಕ್ಕಿಲ್ಲ. ಈಗಾಗಲೇ ಮದ್ರಾಸ್ ಕೌನ್ಸಿಲಿನಲ್ಲಿ ಪ್ರಾಂತ್ಯದ ಬೇರೆ ಬೇರೆ ಡಿಸ್ಟ್ರಿಕ್ಟುಗಳಿಗೆ ಸಮ್ಮಂಧಪಟ್ಟ ಕೆಲಸಗಳು ಸಮಯಕ್ಕೆ ಸರಿಯಾಗಿ ಜರಗದುದರಿಂದ ಒರಿಸಾ, ಆಂಧ್ರ, ಕರ್ನಾಟಕ ಮೊದಲಾದ ಪ್ರಾಂತ್ಯಗಳಿಗೆ ಸಮ್ಮಂಧಪಟ್ಟ ವಿಷಯಗಳನ್ನು ಚರ್ಚಿಸಲು ಬೇರೆ ಬೇರೆ ಸಭೆಗಳನ್ನು ಮಾಡಬೇಕೆಂಬ ಅಭಿಪ್ರಾಯಗಳು ತಲೆದೋರಿವೆ. ನಮ್ಮ ದೇಶಕ್ಕೆ ಸಮ್ಮಂಧಪಟ್ಟ ಕಾನೂನು ಕಾಯಿದೆಗಳನ್ನು ಶರಡಾತಿನಿಂದ ಚರ್ಚಿಸಬೇಕಾದರೆ ನಮಗೆ ಸ್ವಂತ ಕೌನ್ಸಿಲ್ ಇದ್ದೇ ತೀರಬೇಕು. ಅಲ್ಲದೆ ಈಗ ಸಿಂದ್, ಒರಿಸಾ, ಆಂಧ್ರ ಮೊದಲಾದ ಪ್ರಾಂತ್ಯಗಳು ತಮ್ಮನ್ನು ದೊಡ್ಡ ಪ್ರಾಂತ್ಯಗಳಿಂದ ವಿಂಗಡಿಸಿ ಪ್ರತ್ಯೇಕ ಇಡಬೇಕೆಂದು ಬೊಬ್ಬೆ ಇಡುತ್ತಿರುವಾಗ್ಯೆ, ಕೊಡಗಿನವರು ಮದ್ರಾಸಿನೊಡನೆ ಸೇರಬೇಕೆಂದು ಹೇಳುವುದರ ಅರ್ಥವು ನನಗೆ ಸರಿಯಾಗಿ ತಿಳಿಯುವುದಿಲ್ಲ."

ಕೊಡಗು ಮದ್ರಾಸಿಗೆ ಸೇರುವುದೇ ಒಳ್ಳೆಯದಾದರೂ ಈ ಸಮಯದಲ್ಲಿ ಸೇರುವುದು ಯುಕ್ತವಲ್ಲ. ದೇಶವೆಲ್ಲಾ ಪ್ರಾಂತೀಯ ಮತ್ತು ಕೋಮುವಾರು ಗಲಭೆಗಳ ವಾತಾವರಣದಲ್ಲಿ ಅಲ್ಲೋಲಕಲ್ಲೋಲವಾಗಿ ಅಶಾಂತಿಯಿಂದ ನಿಬಿಡವಾಗಿರುವಾಗ್ಯೆ ನಾವು ನಮ್ಮ ಮುಂದಿನ ಸ್ಥಿತಿಗತಿಗಳನ್ನು ಪರ್ಯಾಲೋಚಿಸದೆ ಮುಂದಡಿ ಇಡುವುದು ಎಂದೂ ಬುದ್ಧಿವಂತಿಕೆಯಲ್ಲ. ಒಮ್ಮೆ ಮದ್ರಾಸಿಗೆ ಸೇರಿದೆವೆಂದರೆ ಆ ಮೇಲೆ ಹಿಂದೆ ಬರಲು ಸಾಧ್ಯವಿಲ್ಲ. ಆದುದರಿಂದ ಈಗ ಕೊಡಗಿನ ಪ್ರಾಮುಖ್ಯ ಸಭೆಯೂ, ಕೊಡಗಿನ ಉನ್ನತಿಗೆ ಆಧೋಗತಿಗಳಲ್ಲಿ ಮುಖ್ಯ ಭಾಗಿಯೂ ಆಗಿರುವ ಕೊಡಗು ಸಭೆಯ ಅಭಿಪ್ರಾಯದಂತೆಯೂ ಪ್ಲಾಂಟರ್ಸ್ ಅಸೋಸಿಯೇಶನಿನವರ ಅಭಿಪ್ರಾಯದಂತೆಯೂ ಕೊಡಗು ಪ್ರತ್ಯೇಕವಾಗಿರುವುದೇ ಮೇಲು. ದೇಶದ ಅಶಾಂತತೆಯೂ ನಿಂತ ಮೇಲೆ ಮದ್ರಾಸಿಗೆ ಸೇರುವ ಅಭಿಪ್ರಾಯವನ್ನು ಮಾಡಬಹುದು."

ಆ ಮೇಲೆ ಮ. ರಾ. ಶ್ರೀ. ಕೆ. ಟಿ. ಅಚ್ಚಯ್ಯನವರು ಎದ್ದು "ನಾನು ಕುಟ್ಟಪ್ಪನವರ ಅಭಿಪ್ರಾಯಗಳಿಗೆ ಸಮ್ಮತಿಸಲಾರೆ. ಈಗಿನ ನಮ್ಮ ಸರ್ಕಾರವು ಒಂದು ನೂರು ವರ್ಷಗಳ ವರೆಗೆ ನಮ್ಮನ್ನು ಆಳುತ್ತಿದ್ದರೂ ಸ್ಥಳೀಕ ವರ್ತಮಾನ ಪತ್ರಿಕೆಗಳಲ್ಲಿ ಆಗಾಗ್ಯೆ ನಾವು ಕಾಣುವುದೇನು? ಜನಸಂಖ್ಯೆಯಲ್ಲೂ ಮರಣವೇ ಹೆಚ್ಚುತ್ತಿರುವುದು. ಸ್ಥಳೀಕ ಸರ್ಕಾರಕ್ಕೆ ದೇಶದಲ್ಲಿ ಜಾಡಿ ರತಕ್ಕ ಕಾಯಿಲೆಗಳನ್ನು ಹೋಗಲಾಡಿಸಲು ಸಾಕಷ್ಟು ಎಕ್ಸ್‌ಪರ್ಟ್ ಅಭಿಪ್ರಾಯಗಳನ್ನು ಒದಗಿಸಲು ಆಗುವುದಿಲ್ಲ. ಹೀಗೆ ನಡೆದುದಾದರೆ ಇನ್ನು ಕೆಲವು ವರ್ಷಗಳಲ್ಲಿ ನಮ್ಮ ದೇಶವೇ ನಿರ್ಜನ ಪ್ರದೇಶವಾದೀತು. ಆದುದರಿಂದ ನಾವು ಒಡನೆ ಮದ್ರಾಸಿನೊಡನೆ ಕಲೆತು ನ್ಯಾಯವಾದ ಆರೋಗ್ಯದ ಸೌಕರ್ಯಗಳನ್ನು ಪಡೆಯುವುದು ಉತ್ತಮ"ವೆಂದರು.

ಆ ಮೇಲೆ ಕೋದಂಡ ಮಾಸ್ಟರ್ ಕಾರ್ಯಪ್ಪನವರು "ಕೊಡಗು ಪ್ರತ್ಯೇಕವಾಗಬೇಕೆಂದರು."

ಪಿ. ಜಿ. ವಯ್ಯಪ್ಪನವರು—'ಕೊಡಗು ದೇಶದ ಜನಸಂಖ್ಯೆಯು ಕಡಿಮೆಯಾಗಿರುವುದು ಮರಣವು ಹೆಚ್ಚಿರುವುದರಿಂದಲ್ಲ. ಕಳೆದ ಖಾನೇಸುಮಾರಿ ಲೆಕ್ಕವು ಘಟ್ಟದಲ್ಲಿ ತೆಗೆಯುವಾಗ್ಯೆ ಕಾಫಿ ತೋಟದ ಕೆಲಸಗಾರರಲ್ಲಿ ಅನೇಕರು ವಾಪಾಸು ತಮ್ಮ ದೇಶಕ್ಕೆ ಹೋಗಿಬಿಟ್ಟಿದ್ದರು. ಅಲ್ಲದೆ ದೇಶದಲ್ಲಿ ಸದಾ ಇರುವವರ ಸಂಖ್ಯೆಯು ಹೆಚ್ಚಾಗಿರುವುದಲ್ಲದೆ ಕಡಿಮೆಯಾಗಿಲ್ಲ. ನಮ್ಮ ಸರ್ಕಾರದವರು ಮದ್ರಾಸು ಪ್ರಾಂತ್ಯದ ಹಳ್ಳಿಗಳಲ್ಲಿ ತೆಗೆಯುವುದಕ್ಕಿಂತಲೂ ಎಷ್ಟೋ ಹೆಚ್ಚಿನ ನೀರ ತೆಗೆಯುತ್ತಿದ್ದಾರೆ. ಮಲೇರಿಯಾ ಆಫೀಸರ ಕೆಲಸವು ರೋಗವನ್ನು ಎಷ್ಟೋ ಮಟ್ಟಿಗೆ ಅಡಗಿಸಿದೆ. ಮದ್ರಾಸಿನ ಹಳ್ಳಿಗಳಿಗಿಂತಲೂ ಹೆಚ್ಚಿನ ಸೌಕರ್ಯಗಳನ್ನು ನಮ್ಮ ಹಳ್ಳಿಗಳು ಅನುಭವಿಸುತ್ತಿರುವವು. ನಮ್ಮ ದೇಶದವರು ಕೊಡುವ ಕಂದಾಯವು ಈಗ ಕಡಮೆ. ಮದ್ರಾಸಿಗೆ ಸೇರಿದರೆ ಕಂದಾಯವು ತೆತ್ತಾಗುವ ಬಾಬು ಖಾಯಿಶಾ ಇದೆ. ಜನರೆಲ್ಲಾ ಬಡತನದಲ್ಲಿ ಮುಳುಗಿ ಹೋಗಿರುತ್ತಾರೆ. ಈಗಿನ ಅಧಿಕಾರಿಗಳಿಗೆ ಅವರ ಸ್ಥಿತಿ ಗೊತ್ತಿರುವುದರಿಂದ ಅವರು ಖಾನೂನನ್ನೇ ಅನುಸರಿಸದೆ ಹೆಚ್ಚಾಗಿ ನಾಮೂಲನ್ನು ಹಿಂಬಾಲಿಸಿ ಬಡವರನ್ನು ಸಾಲಗಾರರ ಕೈಗೆ ತುತ್ತಾಗದಂತೆ ನಡೆಯುತ್ತಿದ್ದಾರೆ. ಮದ್ರಾಸಿಗೆ ಸೇರಿದುದಾದರೆ ಇಲ್ಲಿನ ಅಧಿಕಾರಿಗಳು ಮಾಮೂಲನ್ನೇನೂ ಗಣಿಸದೆ ಖಾನೂನನ್ನೇ ಜರುಗಿಸಿ ನಮ್ಮ ಬಡ ರೈತರು ಆಸ್ತಿಗಳನ್ನು ಸಹ ಕಳಕೊಳ್ಳುವ ಸಂಭವ ಬರಬಹುದು. ನಾವು ದೇಶದ ರಾಜಕೀಯ ಮಾರ್ಪಾಟುಗಳನ್ನು ಆಲೋಚಿಸುವಾಗ್ಯೆ ಮುಖ್ಯವಾಗಿ ದೇಶದ ಆದಾಯವಾಗಿರುವ ವ್ಯವಸಾಯಗಾರರ ಸ್ಥಿತಿಗತಿಗಳನ್ನು ಮನಸಿನಲ್ಲಿಟ್ಟು ಮಾತಾಡಬೇಕು. ಮದ್ರಾಸಿಗೆ ಸೇರುವುದರಿಂದ ಈ ಬಡ ರೈತರ ಸ್ಥಿತಿಯು ಬಹು ಶೋಚನೀಯಾವಸ್ಥೆಯನ್ನು ಹೊಂದುವುದು."

ಸರ್ಕಾರದ ಈಗಿರುವ ಬಂದೋಬಸ್ತು ಹೀನವಾಗುವುದರಲ್ಲಿ ಸಂಶಯವಿಲ್ಲ. ನಾನಾ ತರದ ಅನಾಚಾರಗಳು ತಲೆದೋರುವುವು. ಬಡ ವ್ಯವಸಾಯಗಾರರ ಗೋಳನ್ನು ಈಗಿರುವಷ್ಟು ಸುಲಭವಾಗಿ ಅಧಿಕಾರಿಗಳ ಮುಂದಿಡಲು ಆಗುವುದಿಲ್ಲ.

ಕೊಡಗಿನ ಆರ್ಥಿಕ ಸ್ಥಿತಿಯನ್ನು ಹೆಚ್ಚಿಸಲು ನಾನಾ ದಾರಿಗಳಿವೆ. ವರ್ಷಕ್ಕೆ ಎರಡು ಪೈರುಗಳನ್ನು ಮಾಡಬಹುದು. ಆದುದರಿಂದ ಕೊಡಗು ಪ್ರತ್ಯೇಕ ಪ್ರಾಂತ್ಯವಾಗಿಯೇ ಇದ್ದು ತನ್ನ ಸ್ಥಿತಿಯನ್ನು ಮುಂದುವರಿಸಲು ನೋಡಬೇಕಲ್ಲದೆ ಮದ್ರಾಸಿನೊಡನೆ ಸೇರಿದರೆ ಯಾವುದೊಂದು ತರದ ಲಾಭವನ್ನೂ ಹೊಂದಲಾರದು.

ಸಭೆಯ ಅಧ್ಯಕ್ಷರಾಗಿದ್ದ ಮ. ರಾ. ಶ್ರೀ. ಕೆ. ಯಸ್. ಗಣಪತಿಯವರು ಮ. ರಾ. ಶ್ರೀ. ಕುಟ್ಟಪ್ಪನವರ ಅಭಿಪ್ರಾಯಗಳಿಗೆ [illegible] ಮರಣಗೆ

ಕೊಡಗು.

ಸನ್ ೧೯೩೨ನೇ ಇಸವಿ

ಆಗೊಸ್ತು ತಾ. ೧೯ನೇ ಶುಕ್ರವಾರ.

ಪ್ರೆಸ್ ಆರ್ಡಿನೇನ್ಸ್

ಜಾರಿಯಲ್ಲಿರುವವರೆಗೆ

ನಾವು

ಅಗ್ರಲೇಖನ

ವನ್ನು

ಪ್ರಕಟಿಸುವುದಿಲ್ಲ.

ಕೋಮುವಾರು ಸಮಸ್ಯೆ.

ಪ್ರಧಾನ ಮಂತ್ರಿಯವರ ತೀರ್ಮಾನ.

ಹತ್ತು ವರ್ಷಗಳ ವರೆಗೆ ಪ್ರತ್ಯೇಕ ಚುನಾವಣೆ.

ಪಂಜಾಬಿನಲ್ಲಿ ಮುಸಲ್ಮಾನರಿಗೆ ಬಹುಮತ.

ಅಸ್ಪೃಶ್ಯರಿಗೆ ವಿಶೇಷ ರಿಯಾಯಿತಿ.

ಮಧ್ಯವರ್ತಿ ಕೌನ್ಸಿಲಿನ ವಿಷಯ ತೀರ್ಮಾನವಿಲ್ಲ.

ಮಧ್ಯವರ್ತಿ ಶಾಸನ ಸಭೆಯಲ್ಲಿ ಹೆಂಗಸರಿಗೂ ಕೋಮುವಾರು ತಕ್ಕದ ಮೇರೆ ಸ್ಥಳಗಳು ಕಾಯ್ದಿಡಲ್ಪಡುವವು.

ಹೆಂಗಸರಿಗೂ ಕೋಮುವಾರು ತಕ್ಕದ ಮೇರೆ ಸ್ಥಳಗಳು ಕಾಯ್ದಿಡಲ್ಪಡುವವು.

(1) ದುಂಡು ಮೇಜು ಪರಿಷತ್ತಿನ 2ನೇ ಅಧಿವೇಶನದ ಅಂತ್ಯದಲ್ಲಿ ಕಳೆದ ಡಿಸೆಂಬರು 1ರಲ್ಲಿ ಮಂತ್ರಿಯವರು ಮಾಡಿದ ಭಾಷಣದಲ್ಲಿ, ಹಿಂದೂಸ್ಥಾನದ ಬೇರೆ ಬೇರೆ ಕೋಮಿನವರು ತಮ್ಮ ತಮ್ಮ ಹಕ್ಕುಗಳ ಕುರಿತು ಇರುವ ವ್ಯತ್ಯಾಸಗಳನ್ನು ತಾವಾಗಿಯೇ ತೀರಿಸಿಕೊಂಡು ಹೊಸ ರಾಜಕೀಯ ರಚನೆಯನ್ನು ತಯಾರಿಸಲು ಕೋಮುವಾರು ಸಮಸ್ಯೆಯೇ ಅಡ್ಡಿ ಬರದಂತೆ ಬ್ರಿಟಿಷ್ ಸರ್ಕಾರವೇ ಒಂದು ತೀರ್ಮಾನವನ್ನು ಕೊಟ್ಟು ಅದನ್ನು ಜಾರಿಗೆ ತರಲು ನಿಶ್ಚೈಸಿರುವದೆಂತ ಹೇಳಿದ್ದರು.

(2) ಕಳೆದ ಮಾರ್ಚಿ ತಾರೀಖು 19ರಲ್ಲು ಕೋಮುವಾರು ಸಮಸ್ಯೆಯನ್ನು ತೀರಿಸಲು ಹಿಂದೂಸ್ಥಾನದ ಕೋಮುವಾರು ಜನರಿಗೆ ಸಾಧ್ಯವಾಗಲಿಲ್ಲವೆಂತ ತಿಳಿದನಂತರ ಈ ಕಠಿಣವಾದ ಸಮಸ್ಯೆಯನ್ನು ಬ್ರಿಟಿಷ್ ಸರ್ಕಾರವೇ ವಿಮರ್ಶಿಸಿ ಈ ಅಲ್ಪ ಸಂಖ್ಯಾತ ಕೋಮಿನವರ ಸಮಸ್ಯೆಯನ್ನು ನಿಡಿಸಿದ ವಿನಹ ರಾಜಕೀಯ ರಚನೆಯ ಕಾರ್ಯವನ್ನು ಮುಂದರಿಸಲು ಸಾಧ್ಯವಿಲ್ಲವೆಂತ ಬ್ರಿಟಿಷ್ ಸರ್ಕಾರಕ್ಕೆ ತಿಳಿಯಿತು.

(3) ಈ ಕೆಳಗೆ ಬರೆದ ಸಲಹೆಗಳನ್ನು ಮುಂದೆ ಪಾರ್ಲಿಮೆಂಟಿನ ಮಂಜುರಾತಿಗೆ ಇರುವ ರಾಜಕೀಯ ರಚನೆಯಲ್ಲಿ ಸೇರಿಸಲು ಸರ್ಕಾರವು ನಿಶ್ಚೈಸಿದೆ. ಕೆಳಗೆ 20ನೇ ಪೇರಾದಲ್ಲಿ ಕೊಡುವ ಕಾರಣದ ದೆಸೆಯಿಂದ ಈ ತೀರ್ಮಾನವು ಮಧ್ಯವರ್ತಿ ಕೌನ್ಸಿಲನ್ನು ಬಿಟ್ಟು ಬರೇ ಪ್ರಾಂತೀಕ ಲೆಜಿಸ್ಲೇಟಿವ್ ಕೌನ್ಸಿಲುಗಳಿಗೆ ಚುನಾವಣೆಯ ಸಂಬಂಧವಾಗಿ ಮಾತ್ರಕೊಡಲಾಗಿದೆ. ಕೋಮುವಾರು ಸಮಸ್ಯೆಯ ಬೇರೆ ಭಾಗಗಳು ಅಲ್ಪಸಂಖ್ಯಾತ ಕೋಮಿನವರಿಗೆ ತುಂಬಾ ಪ್ರಾಮುಖ್ಯವಾದವುಗಳಾಗಿರುವವಾದರೂ ಅವುಗಳನ್ನು ಈ ತೀರ್ಮಾನದಲ್ಲಿ ಸೇರಿಸಿರುವುದಿಲ್ಲ. ಏಕೆಂದರೆ, ಈಗ ಕೊಟ್ಟ ತೀರ್ಮಾನವನ್ನು ನೋಡಿ ಬೇರೆ ವ್ಯತ್ಯಾಸಗಳನ್ನು ಕೋಮಿನವರೇ ತೀರಿಸಿಕೊಳ್ಳಲು ಸಾಧ್ಯವಾದೀತು ಎಂಬ ನಿರೀಕ್ಷಣೆಯಿಂದ ಬಾಕಿ ಇಡಲಾಗಿದೆ. ಮತ್ತು ಅವುಗಳ ಕುರಿತು ಇನ್ನೂ ಹೆಚ್ಚಿನ ಆಜಮಾಯಿಸಿ ನಡಿಸಬೇಕಾಗಿದೆ.

(4) ಈ ತೀರ್ಮಾನವನ್ನು ವ್ಯತ್ಯಾಸ ಮಾಡಲು ಸರ್ಕಾರವು ಯಾವ ತರದ ಪ್ರಯತ್ನವನ್ನು ಮಾಡುವುದಿಲ್ಲವೆಂತಲೂ ಮತ್ತು ಸಂಬಂಧಪಟ್ಟ ಎಲ್ಲಾ ಕೋಮಿನವರು ಒಪ್ಪಿದ ವಿನಹ ಅವುಗಳನ್ನು ವ್ಯತ್ಯಾಸ ಮಾಡುವುದೂ ಇಲ್ಲವೆಂತಲೂ ಸ್ಪಷ್ಟವಾಗಿ ತಿಳಿಸಬೇಕಾಗಿದೆ. ಆದರೆ ಎಲ್ಲರೂ ಒಪ್ಪಿ ಮಾಡಿಕೊಳ್ಳುವ ತೀರ್ಮಾನವನ್ನು ಅಂಗೀಕರಿಸಲು ಅಡ್ಡಿ ಇಲ್ಲ. ಹೊಸ ರಾಜಕೀಯ ರಚನೆಯು ಜಾರಿಯಾಗುವ ಮುಂಚೆ ರಾಜಿ ತೀರ್ಮಾನವೇನಾದರೂ ಆದರೆ ಅದನ್ನು ಅಂಗೀಕರಿಸಬಹುದೆಂತ ಪಾರ್ಲಿಮೆಂಟಿಗೆ ಶಿಫಾರಸು ಮಾಡಬಹುದು.

(5) ಗವರ್ನರ ಪ್ರಾಂತ್ಯಗಳಲ್ಲಿ ಮೇಲಿನ ಸಭೆಯೊಂದು ಇರ ಬೇಕಾದರೆ ಕೆಳಗಿನ ಸಭೆಗೆ 24ನೇ ಪೇರಾದಲ್ಲಿ ಹೇಳುವ ಮೇರೆ ಮೆಂಬರುಗಳನ್ನು ಚುನಾಯಿಸಬೇಕು.

(6) ಮಹಮ್ಮದೀ, ಯೂರೋಪಿಯನ್ ಮತ್ತು ಸಿಖ್ಖ ಜನರ ಚುನಾವಣೆಯು ಒಟ್ಟು ಪ್ರಾಂತ್ಯವನ್ನು ಹೊಂದಿ ಕೋಮುವಾರು ಓಟರುಗಳಿಂದ ಆಗತಕ್ಕದ್ದು. ರಾಜಕೀಯ ರಚನೆಯಲ್ಲೇ ಈ ಚುನಾವಣೆಯ ಏರ್ಪಾಡನ್ನು ಸಂಬಂಧಪಟ್ಟ ಕೋಮಿನ ಒಪ್ಪಿಗೆಯಿಂದ 10 ವರ್ಷಗಳ ನಂತರ ಬದಲಾಯಿಸಿಕೊಳ್ಳಬಹುದೆಂತಲೂ, ಅಂಥಾ ಒಪ್ಪಿಗೆಯನ್ನು ಯಾವ ರೀತಿಯಿಂದ ಪಡೆಯಬಹುದೆಂತಲೂ ನಮೂದಿಸಲ್ಪಡುತ್ತದೆ.

(7) ಮಹಮ್ಮದೀ, ಸಿಖ್, ಇಂಡಿಯನ್ ಕ್ರಿಶ್ಚಿಯನ್ ಮತ್ತು ಯೂರೋಪಿಯನ್ ಓಟರುಗಳಿಗಾಗಿ ನಡಿಸಲ್ಪಡುವ ಕೋಮುವಾರು ಚುನಾವಣೆಯಲ್ಲಿ ಓಟು ಕೊಡವಿರುವವರು ಜನರಲ್ ಕಾನ್‌ಸ್ಟಿಟ್ಯುವೆನ್ಸಿನಲ್ಲಿ (ಅಂದರೆ ಇತರರಿಂದ ಕೂಡಿದ ಸಾರ್ವಜನಿಕ ಚುನಾವಣೆಯಲ್ಲಿ) ಓಟ್ ಕೊಡಬಹುದು

(8) ಬೊಂಬಾಯಿಯಲ್ಲಿ ಒಂದಕ್ಕಿಂತ ಹೆಚ್ಚು ಮೆಂಬರುಗಳನ್ನು ಚುನಾಯಿಸಬೇಕಾದ ಕೆಲವು ಸ್ಥಳಗಳಲ್ಲಿ ಮಹಾರಾಷ್ಟ್ರರಿಗೆ ಏಳು ಸ್ಥಳಗಳು ಪ್ರತ್ಯೇಕ ಕಾದಿಡಲ್ಪಡುತ್ತವೆ.

(9) ಹಿಂದುಳಿದ ಪಂಗಡದಲ್ಲಿ ಓಟ್ ಕೊಡಲು ಹಕ್ಕಿರುವವರು ಸಾರ್ವಜನಿಕ ಚುನಾವಣೆಯಲ್ಲಿ ಓಟ್ ಕೊಡುವರು ಆದರೆ ಈ ಕೂಟಕ್ಕೆ ಸೇರಿದ ಜನರಲ್ಲಿ ಬಹು ಕಾಲದ ವರೆಗೆ ಸಾಕಷ್ಟು ಪ್ರತಿನಿಧಿಗಳು ಆರಿಸಲ್ಪಡಲಾರರಾದ್ದರಿಂದ 24ನೇ ಪ್ಯಾರಾದಲ್ಲಿ ಹೇಳಿರುವ ಮೇರೆ ಇವರಿಗೆ ಪ್ರತ್ಯೇಕ ಸ್ಥಳಗಳು ಕೊಡಲಾಗಿವೆ. ಹಿಂದುಳಿದ ಪಂಗಡದವರಲ್ಲೇ ಓಟು ಕೊಡಲು ಹಕ್ಕಿರುವವರಿಂದ ಈ ಸ್ಥಳಗಳಿಗೆ ಚುನಾವಣೆಯಾಗತಕ್ಕದ್ದು. ಅಂಥಾ ಪ್ರತ್ಯೇಕ ಚುನಾವಣೆಯಲ್ಲಿ ಭಾಗ ತೆಗೆದುಕೊಳ್ಳುವವರೂ ಸಾರ್ವಜನಿಕ ಚುನಾವಣೆಯಲ್ಲೂ ಓಟು ಕೊಡಬಹುದು. ಈ ಪ್ರತ್ಯೇಕ ಚುನಾವಣೆಯ ಏರ್ಪಾಡು ಮದ್ರಾಸಿನಲ್ಲಿ ವಿನಹ ಬೇರೆ ಕಡೆಗಳಲ್ಲಿ ಈ ಜನರು ಹೆಚ್ಚಾಗಿ ಎಲ್ಲಿರುತ್ತಾರೋ ಅಲ್ಲಿಗೆ ಮಾತ್ರ ವ್ಯಾಪಿಸತಕ್ಕದ್ದು: ಒಟ್ಟು ಪ್ರಾಂತ್ಯವನ್ನೇ ವ್ಯಾಪಿಸತಕ್ಕದ್ದಲ್ಲ.

ಬಂಗಾಳದಲ್ಲಿ ಕೆಲವು ಸ್ಥಳಗಳಲ್ಲಿ ಹಿಂದುಳಿದವರೇ ಹೆಚ್ಚಿನ ಸಂಖ್ಯೆಯವರಾದ್ದರಿಂದ ಆ ಪ್ರಾಂತ್ಯದಲ್ಲಿ ಪ್ರತ್ಯೇಕ ಚುನಾವಣೆಯಿಂದ ಎಷ್ಟು ಜನರು ಚುನಾಯಿಸಲ್ಪಡಬೇಕೆಂತ ಇನ್ನೂ ನಿಶ್ಚೈಸಲಿಲ್ಲ. ಅದರ ವಿಷಯ ಇನ್ನೂ ತನಿಖೆಯಾಗಬೇಕು. ಹೇಗೂ ಬಂಗಾಳದ ಕೌನ್ಸಿಲಿನಲ್ಲಿ 10 ಮಂದಿಯಾದರೂ ಹಿಂದುಳಿದ ಪಂಗಡದ ಪ್ರತಿನಿಧಿಗಳಿರಬೇಕು.

ಈ ಪ್ರತ್ಯೇಕ ಚುನಾವಣೆಯಲ್ಲಿ ಯಾರ್‍ಯಾರು "ಹಿಂದುಳಿದವರು" ಎನ್ನಿಸಿಕೊಳ್ಳುತ್ತಾರೆ ಎಂಬದು ಇನ್ನೂ ತೀರ್ಮಾನವಾಗಲಿಲ್ಲ. ಹೆಚ್ಚು ಕಡಿಮೆ ಫ್ರಾಂಚೈಸ್ ಕಮಿಟಿಯ ವರದಿಯಲ್ಲಿ ಹೇಳಿದ ಮೇರೆ ಆಗಬಹುದು. ಉತ್ತರ ಹಿಂದೂಸ್ಥಾನದ ಕೆಲವು ಪ್ರಾಂತ್ಯಗಳಲ್ಲಿ ಅಸ್ಪೃಶ್ಯತೆಯನ್ನೇ ಕುರುಹಾಗಿ ಇಟ್ಟುಕೊಳ್ಳಲು ಸಾಧ್ಯವಾಗಲಾರದು.

ಹಿಂದುಳಿದವರಿಗೆ ಈ ಪ್ರತ್ಯೇಕ ಚುನಾವಣೆಯು ಕೆಲವು ಕಾಲದ ವರೆಗೆ ಮಾತ್ರ ಬೇಕಾಗಬಹುದು. 6ನೇ ಪ್ಯಾರಾದಲ್ಲಿ ಹೇಳಿರುವ ಮೇರೆ ಮುಂದಾಗಿಯೇ ಇದು ಅಂತ್ಯವಾಗದಿದ್ದರೆ 20 ವರ್ಷಗಳನಂತರ ಈ ಪ್ರತ್ಯೇಕ ಚುನಾವಣೆಯು ಜಾರಿಯಲ್ಲಿರತಕ್ಕದ್ದಲ್ಲವೆಂತ ರಾಜಕೀಯ ರಚನೆಯಲ್ಲೇ ನಮೂದಿಸಲ್ಪಡುತ್ತದೆ.

(10) ಹಿಂದೀ ಕ್ರಿಶ್ಚಿಯನರು ಪ್ರತ್ಯೇಕ ಕೋಮಿನ ಚುನಾವಣೆ ಏರ್ಪಾಡಿನಿಂದಲೇ ಆರಿಸಲ್ಪಡತಕ್ಕದ್ದು. ಒಟ್ಟು ಪ್ರಾಂತ್ಯವನ್ನೇ ಆವರಿಸುವ ಪ್ರತ್ಯೇಕ ಚುನಾವಣೆ ಬೇಕಾಗಿಲ್ಲ. ಪ್ರಾಂತ್ಯದ ಒಂದೆರಡು ಆರಿಸಿದ ಸ್ಥಳಗಳಲ್ಲಿ ಪ್ರತ್ಯೇಕ ಚುನಾವಣೆಗೆ ಏರ್ಪಡಿಸಲಾಗುವುದು. ಅಂಥಾ ಏರ್ಪಾಡು ಇಲ್ಲದಲ್ಲಿ ಹಿಂದೀ ಕ್ರಿಶ್ಚಿಯನರು ಸಮುದಾಯದಲ್ಲೇ ಓಟು ಮಾಡತಕ್ಕದ್ದು. ಬಿಹಾರ್ ಮತ್ತು ಒರಿಸ್ಸಾ ಪ್ರಾಂತ್ಯದಲ್ಲಿ ಹಿಂದೀ ಕ್ರಿಶ್ಚಿಯನರು ಅನೇಕರು ದೇಶದ ಮೂಲನಿವಾಸಿಗಳಾದ್ದರಿಂದ ಅಲ್ಲಿ ಇವರ ಚುನಾವಣೆಯ ಏರ್ಪಾಡು ಪ್ರತ್ಯೇಕವಾಗಿಯೇ ಮಾಡಲಾಗುತ್ತದೆ.

(11) ಆಂಗ್ಲೋ ಇಂಡಿಯನರು ಪ್ರತ್ಯೇಕ ಕೋಮಿನ ಚುನಾವಣೆಯಿಂದಲೇ ಆರಿಸಲ್ಪಡತಕ್ಕದ್ದು. ಇವರ ಚುನಾವಣೆಯು ಒಟ್ಟು ಪ್ರಾಂತ್ಯಕ್ಕೇ ವ್ಯಾಪಕವಾಗಿದ್ದು ಟಪ್ಪಾಲು ಮೂಲಕ ಓಟು ಕೊಟ್ಟು ಚುನಾಯಿಸಲ್ಪಡತಕ್ಕದ್ದು. ಇದು ಆಖೈರ್ ತೀರ್ಮಾನವಲ್ಲ; ಇನ್ನೂ ತನಿಖೆ ನಡಿಸಲ್ಪಟ್ಟು ವ್ಯತ್ಯಾಸವಾಗಲೂ ಬಹುದು.

(12) ಹಿಂದುಳಿದ ಪ್ರದೇಶಗಳಿಗೆ ಇಟ್ಟ ಸ್ಥಳಗಳಿಗೆ ಹೇಗೆ ಚುನಾವಣೆ ನಡಿಸಬೇಕೆಂತ ಇನ್ನೂ ನಿಶ್ಚೈಸಿಲ್ಲ. ಈ ಪ್ರದೇಶಗಳಿಗೆ ಯಾವ ತರದ ಸುಧಾರಣೆ ಕೊಡಲಾಗುತ್ತದೆಯೆಂತ ನಿಶ್ಚಯವಾದ ನಂತರ ಇವುಗಳಿಗೆ ಇಟ್ಟ ಸ್ಥಳಗಳ ಸಂಖ್ಯೆಯು ಬದಲಾಗಬಹುದು.

(13) ಹೊಸ ರಾಜಕೀಯ ರಚನೆಯಲ್ಲಿ ಕೆಲವು ಸ್ತ್ರೀ ಮೆಂಬರುಗಳಾದರೂ ಇರುವುದು ಮುಖ್ಯವೆಂತ ಸರಕಾರವು ನಂಬುತ್ತದೆ. ಸ್ತ್ರೀಯರಿಗೇನೇ ಕೆಲವು ಸ್ಥಳಗಳನ್ನು ಕಾದಿಟ್ಟ ವಿನಹ ಇದು ಸಾಧ್ಯವಿಲ್ಲವೆಂತ ತೋರುತ್ತದೆ. ಆದರೆ ಅಂಥಾ ಸ್ತ್ರೀ ಮೆಂಬರುಗಳು ಹೆಚ್ಚಾಗಿ ಒಂದೇ ಕೋಮಿನಿಂದ ಆರಿಸಲ್ಪಡಬಾರದೆಂತಲೂ ಇದೆ. ಇದು ಸಾಧ್ಯವಾಗಬೇಕಾದರೆ 24ನೇ ಪೇರಾದಲ್ಲಿ ಹೇಳಿರುವ ವಿನಾಯಿತಿ ಬಿಟ್ಟು ಸ್ತ್ರೀಯರಿಗೂ ಕೋಮುವಾರು ಚುನಾವಣೆಯೇ ಆಗಬೇಕಾಗಿದೆ. ಇದರ ವಿಭಾಗವು 24 ನೇ ಪೇರಾದಲ್ಲಿ ಕೊಟ್ಟಿದೆ. ಚುನಾವಣೆಯ ರೀತಿಯ ತಪಶೀಲನ್ನು ಇನ್ನು ಮೇಲೆ ಮಾಡಬೇಕಷ್ಟೆ.

(14) ಕೂಲಿಕಾರರಿಗೆ ಕೋಮುವಾರು ಚುನಾವಣೆಯು ಇಲ್ಲ. ಹೇಗೆ ಚುನಾವಣೆಯಾಗಬೇಕೆಂತ ಇನ್ನು ನಿರ್ಣಯಿಸಲ್ಪಡಬೇಕಷ್ಟೆ. ಆದರೆ ಫ್ರಾಂಚೈಸ್ ಕಮಿಟಿಯು ಹೇಳಿದ ಮೇರೆ ಮುಖ್ಯವಾಗಿ ಟ್ರೇಡ್ ಯೂನಿಯನ್‌ಗಳು ಎಂಬ ಕಟ್ಟುಗಳಿಂದಲೂ, ವಿಶೇಷ ಕಾನ್‌ಸ್ಟಿಟ್ಯುವೆನ್ಸಿಗಳಿಂದಲೂ ಆರಿಸಲಾಗಬಹುದು.

(15) ವ್ಯಾಪಾರ, ಕೈಗಾರಿಕೆ, ಗಣಿಗಳ ಕಸಬುದಾರರಿಗೆ, ತೋಟದ ಕಸಬುದಾರರಿಗೆ ಸಹ ಇರುವ ಸ್ಥಳಗಳನ್ನು ವ್ಯಾಪಾರಿಗಳ ಕೂಟ ಮುಂತಾದ ಸಂಸ್ಥೆಗಳ ಮೂಲಕ ಚುನಾಯಿಸಲಾಗುವುದು. ಚುನಾವಣೆಯ ಏರ್ಪಾಡಿನ ತಪಶೀಲ್ ಹಿಂದಿನಿಂದ ನಿರ್ಣಯಿಸಲಾಗುತ್ತದೆ.

(16) ಜಮೀನ್‌ದಾರರಿಗೆ ಇರುವ ಸ್ಥಳಗಳಿಗೆ ಜಮೀನ್‌ದಾರ್ ಓಟುಗಳಿಂದಲೇ ಚುನಾಯಿಸಲಾಗುವುದು.

(17) ಯೂನಿವರ್ಸಿಟಿಗೆ ಇರುವ ಸ್ಥಳಗಳಿಗೆ ಹೇಗೆ ಚುನಾವಣೆಯಾಗಬೇಕೆಂಬದು ಹಿಂದಿನಿಂದ ನಿರ್ಣಯಿಸಲಾಗುವದು.

(4ನೇ ಪುಟದಲ್ಲಿ ಮುಂದುವರಿದಿದೆ)

Reg. No. M. 1550.
If not delivered please return to
"KODAGU" OFFICE MERCARA

ಕೊಡಗು.

ಸತ್ಯೇನ ಧಾರ್ಯತೇ ಪೃಥ್ವೀ ಸತ್ಯೇನ ತಪತೇ ರವಿಃ ಸತ್ಯೇನ ವಾತಿ ವಾಯುಶ್ಚ ಸರ್ವಂ ಸತ್ಯೇ ಪ್ರತಿಷ್ಠಿತಂ

ವಾರ್ಷಿಕ ಚಂದಾ ರೂ. ೩—೮—೦.

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೨ | ಮಡಿಕೇರಿ, ಸನ್ ೧೯೩೨ನೇ ಇಸವಿ ಆಗೊಸ್ತು ತಾರೀಕು ೧೯ ನೇ ಶುಕ್ರವಾರ. | ಸಂಚಿಕೆ ೧೩

SARI-PIN.

BRACELETS

NECKCHAINS.

EAR-RINGS.
(Thodus)

Cut-rubys Rs. 25 to 50
With diamond in centre Rs. 80 to 120

Gold Rs. 10
Set rubys forming any letter Rs. 12

NOSE-RINGS.
Diamond in small size of best quality Rs. 35 & upwards according to size.

MARRIAGE PRESENTATIONS

Attractive and inexpensive articles ready in stock. Prompt execution. Details on enquiry free with catalogue. Numerous customers in Coorg thoroughly satisfied with reliable service. Testimonials pouring in. Silver Guindys, Photo lockets, Dimond nose-screws, cut-ruby ear-rings, etc., etc., etc., in all prices. Very attractive. Prices most moderate.

Estimates free on enquiry.

Designs free on enquiry.

Telegrams: 'PRECIOUS.'

Telephone: 8145.

V. Subramaniaiyer Jeweller,

CATALOGUE ON ENQUIRY.

52—39

Post Box 423, Triplicane, P. O., MADRAS.

26—8

ಜನರಲ್ ಅಷ್ಯೂರೆನ್ಸ್ ಸೊಸೈಟಿ.

ಅಜಮೀರ್.

ನಮ್ಮ ಆಯವ್ಯಯದ ಪಟ್ಟಿಯೇ ನಮ್ಮ ಅಭಿವೃದ್ಧಿಯನ್ನು ವ್ಯಕ್ತಗೊಳಿಸುತ್ತದೆ.

ವರ್ಷ	ಮೇಲ್ಪಟ್ಟ ವರ್ಷಾದಾಯ	ಮೇಲ್ಪಟ್ಟ ಮೂಲಧನ	ಖರ್ಚು ಪರಮಾವಧಿ ಶೇಕಡ
1911	46,248	49,442	82.9
1921	2,92,627	6,53,350	43.2
1931	12,50,000	40,00,000	28.2

ಬೋನಸ್ಸು.

ಹುರ್ಜು ನಫೆ ದೊರಕುವ ಜೀವಾವಧಿ ಪಾಲಿಸಿಗಳ ಮೇಲೆ ವರ್ಷ ಒಂದಕ್ಕೆ ಶೇಕಡ 22½

ಚೆನ್ನಾಗಿ ಕೆಲಸಮಾಡಿ ಅಭಿವೃದ್ಧಿ ಸ್ಥಿತಿಯಲ್ಲಿರುವ ಈ ಸೊಸೈಟಿಯಲ್ಲಿ ವಿಮೆ ಮಾಡಿ ಕಡಿಮೆ ಪ್ರೀಮಿಯಂ ತಾವತಿ ಮಾಡುವ ಸೌಲಭ್ಯ ಹೊಂದಿ ಅಥವಾ ಈ ಕಂಪೆನಿಯ ಏಜಂಟರಾಗಿ ಕೆಲಸಮಾಡಿ ಉತ್ತಮ ಕಮಿಶನ್ ದರದ ಪ್ರಯೋಜನ ಹೊಂದಿ.

ಹೆಚ್ಚು ವಿಚಾರಗಳಿಗೆ ಈ ವಿಳಾಸಕ್ಕೆ ಬರೆಯಿರಿ:—

ಎ. ರಾಮಚಂದ್ರರಾವ್,
ಸುಪರಿಂಟೆಂಡೆಂಟ್,
ಮಿಂಟೋ ಆಸ್ಪತ್ರೆ ಬಳಿ,
ಬೆಂಗಳೂರು.

52—17

ಎಂಪೈರ್ ಆಫ್ ಇಂಡಿಯಾ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

(ಸ್ಥಾಪನೆಯಾದದ್ದು 1897.)

ಹಿಂದೂಸ್ಥಾನದಲ್ಲಿ ಪ್ರಾಮುಖ್ಯವೂ, ಜನಪ್ರಿಯವೂ ಆಗಿರುವ ಈ ಕಂಪೆನಿಯಲ್ಲಿ ನೀವು ಜೀವ ವಿಮೆ ಮಾಡುವುದಕ್ಕೆ ಇದೇ ತಕ್ಕ ಸಮಯ.

ಬೋನಸ್ ವರ್ಷ! ಬೋನಸ್ ವರ್ಷ!!

ಸಾಹಸವಂತರಾದ ಏಜೆಂಟರು ಬೇಕಾಗಿದೆ.

ಹೆಡ್ ಆಫೀಸು:—
ಎಂಪೈರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್,
ಬೊಂಬಾಯಿ.

ಬ್ರಾಂಚ್ ಆಫೀಸು:—
152—3 ಕಮರ್ಷಿಯಲ್ ಸ್ಟ್ರೀಟ್,
ಬೆಂಗಳೂರು.

52—46

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲು)

		ರೂ.
ಶೇರ್ ಬಂಡವಾಳ್ಳ	—	50,000
ವಸೂಲಾದ ಶೇರ್ ಮೊಬಲಗು	—	27,350
ಜಮೂಬಂದ ಠೇವಣಾತಿ	—	2,25,172
ವಸೂಲಾದ ಕ್ಷೇಮನಿಧಿ	—	37,914

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ನಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ನಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟು ಮಾಡುತ್ತಾರೆ.

ಪ್ರೆಸಿಡೆಂಟರು,	ಟ್ರೆಜರರ್.
ಪಟ್ಟುವಾಡ ದೇವಯ್ಯನವರು,	ಮನೆಯಪ್ಪಂಡ ಬೆಳ್ಯಪ್ಪ
ರಾವ್ ಬಹದ್ದೂರ್.	ನವರು.

ಸೆಕ್ರೆಟರಿ

ಸಿ. ಯಸ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಖು 1-7-1932.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜೆಂಟರುಗಳು.

ಕೊಡಗಿನ ಎಲ್ಲಾ ಭಾಗಗಳಿಗೆ—ಮೆ. ಮುಂಡಂಡ ಯಂ. ಬಿದ್ದಪ್ಪನವರು.

ಉತ್ತರ ಕೊಡಗಿಗೆ ಮೆ. ಚಾರಿ ಮೊದ್ದಯ್ಯನವರು,

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು, (ಖಾದಿಭಂಡಾರ.)

ನಾಪೋಕ್ಲು—ಎಮ್ ಆರ್. ವೆಂಕಪ್ಪಯ್ಯನವರು,

ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮೊಣ್ಣಪ್ಪನವರು,

ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದವ್ವಯ್ಯನವರು, ಮತ್ತು, ಅಡಮುಣಾಮಾಡ ಪಿ. ಕಾರ್ಯಪ್ಪನವರು,

ಹುದಿಕೇರಿ & ತಿತಿಮತ್ತಿ—ಮೆ. ಪಿ. ಮಾದಯ್ಯನವರು,

ಸುಂಟಿಕೊಪ್ಪ—ಮೆ. ಅಪ್ಪಚಟ್ಟೋಳಂಡ ಮಾಚಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮ್ಯಾನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿ ದಿನ್ನು ಕೆಲಸದಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡೆಸಲು ಅತ್ಯವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಖರಾರು ಫಾರಮುಗಳೂ, ಜಮ್ಮ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಖರಾರು ಫಾರಮುಗಳೂ, ಸ್ಟೋರ್ ಕೀಪರ್ ಖರಾರು ಫಾರಮುಗಳೂ, ಓವರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮಾ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಬೇಕಾದ್ದು ಬರಲಿಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮ್ಯಾನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.
ವಿಮೆದಾರರಿಗೆ ಕೊಟ್ಟದ್ದು—3291 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.
ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,78,322 ಜನರಿಗೆ 38ಕೋಟಿ ರೂ.
ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ಕ್ಕಿಂತ ವಿಪರೀತ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿವೆ.
ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಬೆಂಬಲವನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಇಂಬುದು ಇದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್ ಬೆಂಗಳೂರು
ಅಥವಾ ಇನ್ಸ್‌ಪೆಕ್ಟರೇಟ್ ಆಫೀಸು, ಮಡಿಕೇರಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ಮೊಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೋ	ಪಾಟ್ನಾ	ಸುಕ್ಕೂರು
ಅಲಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಡೌಲಗಾನ್	ಮಂಡಲೆ	ರಾಯಿಪುರ	ತಿರುವೆಂಡ್ರಮ್
ಭೋಪಾಲ್	ಕರಾಚಿ	ಮಡಿಕೇರಿ	ರಾಂಚಿ	ವಿಶಾಖಪಟ್ಣ [52—24

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
52—31 ಗಿರಿಗಾಂವ, ಮುಂಬಯಿ.

ಕಾಡು ಬರೆದರೆ ಇವರ ಕ್ಯಾಟಲಾಗು ಮುಫತ್ತಾಗಿ ಕಳುಹಿಸಲ್ಪಡುವುದು.



ಕೋವಿಗಳು, ಕತ್ತಿಗಳು, ಬಚೀಗಳು, ತೋಟೆಗಳು, ಕೇಪುಗಳು, ಮದ್ದು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS LTD.,
Largest Importers of Firearms and Ammunition
Cheapest priced firm in India,
24—23 **210 Abdul Rehiman Street, BOMBAY.**

Printed & published by P. I. Belliappa at "Kodagu" Press Mercara for "Kodagu" Ltd.

ಯೇಸು ಕ್ರಿಸ್ತ.

ಅಯ್ಯಾ,

ಕೊಡಗು ಪತ್ರಿಕೆಯ ಅಗೋಸ್ತು 3 ತಾರೀಖಿನ ಸಂಚಿಕೆಯಲ್ಲಿ ಪ್ರಕಟವಾದ "ಏಸುಕ್ರಿಸ್ತ" ಎಂಬ ಲೇಖನದಲ್ಲಿ ಯೇಸುಕ್ರಿಸ್ತನೇ ಇರಲಿಲ್ಲ ಮತ್ತು ಕೃಷ್ಣನೂ, ಯೇಸುಕ್ರಿಸ್ತನೂ ಇಬ್ಬರೂ ಒಂದೇ ಎಂಬ ಕವೀಶ್ವರ ಕೃಷ್ಣಪ್ಪನವರ ವಾದಗಳನ್ನು ದೃಢೀಕರಿಸುವುದಕ್ಕೆ ನಿಜವಾದ ಮತ್ತು ಯೋಗ್ಯವಾದ ದೃಷ್ಟಾಂತಗಳು ಇಲ್ಲವಾದ್ದರಿಂದ, ಅವು ನಂಬಲಿಕ್ಕೆ ಎಷ್ಟು ಮಾತ್ರಕ್ಕೂ ಯೋಗ್ಯವಾಗಿರುವುದಿಲ್ಲ.

ಯೇಸುಕ್ರಿಸ್ತನೇ ಇರಲಿಲ್ಲವೆಂತ ಹೇಳಿ ಇವರು ತನ್ನ ಲೇಖನವನ್ನು ಆರಂಭಿಸಿ ಮರುಕ್ಷಣದಲ್ಲಿಯೇ ಆತನು ಒಬ್ಬ ಗೂನುಳ್ಳ ಸಣ್ಣ ಹುಟ್ಟಿನ ಮನುಷ್ಯನೆಂದೂ, 4 ಅಡಿ 9 ಇಂಚು ಮಾತ್ರ ಎತ್ತರವಿದ್ದನೆಂದೂ, ಡಾ॥ ರೋಬರ್ಟ್ ಈಸ್ಲರರವರ ಗ್ರಂಥದಲ್ಲಿ ತಿಳಿಸಿದೆಯೆಂದು ಹೇಳಿರುತ್ತಾರೆ. ಇದು ಹ್ಯಾಗೆ ಸರಿಹೋದೀತು ? ಇಲ್ಲವೇ ಇದ್ದಂಥ ಒಬ್ಬ ಮನುಷ್ಯನು ಗೂನುಳ್ಳವನಾಗಿರುವುದೂ, ಹುಟ್ಟದೇ ಇದ್ದಂಥ ಒಬ್ಬ ಮನುಷ್ಯನ ವಿಷಯದಲ್ಲಿ ಆತನು ಸಣ್ಣ ಹುಟ್ಟಿನ ಮನುಷ್ಯನಾಗಿದ್ದನೆನ್ನುವುದೂ, ಆತನ ಉದ್ದವು 4 ಅಡಿ 9 ಇಂಚು ಎಂತ ಹೇಳುವುದೂ, ಹ್ಯಾಗೆ ತಾನೇ ಸಾಧ್ಯವಾದೀತು ? ಇದು ಒಂದು ವಿಚಿತ್ರವಾದ ಸಂಗತಿಯಲ್ಲವೇ ? ಇದರಿಂದ ಕವೀಶ್ವರ ಕೃಷ್ಣಪ್ಪನವರು ತನ್ನ ಮಾತನ್ನು ತಾನೇ ಸುಳ್ಳಾಗಿ ಮಾಡಿದಂತಾಗಲಿಲ್ಲವೇ ? ಯಶೋದಾ ಕೃಷ್ಣನೇ ಯೇಸುಕ್ರಿಸ್ತನೆಂದು ಹೇಳಿರುವರು. ಇವರ ಮಾತನ್ನೇ ಒಪ್ಪುವುದಾದ ಪಕ್ಷಕ್ಕೆ ಕೃಷ್ಣನು ಒಬ್ಬ ಗೂನುಳ್ಳ ಸಣ್ಣ ಹುಟ್ಟಿನ ಮನುಷ್ಯನಾಗಿದ್ದನೆಂದೂ ಬರೇ 4 ಅಡಿ 9 ಇಂಚು ಎತ್ತರವಾಗಿದ್ದನೆಂದೂ ಆಯಿತಲ್ಲವೇ ? ಪ್ರೊಫೆಸರ್ ಡರ್ಕ್ ಹಾರಿರವರು ಯೇಸುವು ಇರಲಿಲ್ಲ ಎಂಬ ಮಾತನ್ನು ನಿರೋಧಿಸಿ ವಿಫಲರಾಗಿರುವರೆಂಬುದು ಕೃಷ್ಣಪ್ಪನವರ ಬರೇ ಅಭಿಪ್ರಾಯವಷ್ಟೆ. ಇದಕ್ಕೆ ತಕ್ಕ ರುಜುವಾತುಗಳನ್ನು ಕೊಟ್ಟಿರುವುದಿಲ್ಲ.

"ಬೌದ್ಧಮತ ಪ್ರಚಾರಕರು ಅಲೆಗ್ಸಾಂಡ್ರಿಯದಲ್ಲಿ ತಮ್ಮ ಮತಪ್ರಚಾರವನ್ನು ಮಾಡಲಿಕ್ಕೆ ಹೋದ ಕಾಲದಲ್ಲಿ ಕೃಷ್ಣನ ಚರಿತ್ರೆಯೂ ಅಲ್ಲಿಯವರಿಗೆ ತಿಳಿದು ಬಂದು, ಆತನ ದೋಧೆಗಳಲ್ಲಿ ಕೆಲವು ಅಂಗೀಕರಿಸಲ್ಪಟ್ಟವೆಂದೂ, ಅವರ ಕ್ರಿಸ್ತನೇ ನಮ್ಮ ಕೃಷ್ಣನೆಂದೂ ಕೆಲವರು ಹೇಳುವರು" ಎಂದು ಬರೆದಿರುತ್ತಾರೆ. ಹಲ ಕೆಲವರ ಹೇಳಿಕೆಯ ಮೇಲೆ ಆಧಾರಗೊಂಡಿರುವ ಕೃಷ್ಣಪ್ಪನವರ ತೀರ್ಮಾನಗಳು ಎಷ್ಟರ ಮಟ್ಟಿಗೆ ಗೌರವಾರ್ಹವಾಗಿರಬಹುದು ? ಬೌದ್ಧಮತ ಪ್ರಚಾರಕರು ಬೌದ್ಧಮತವನ್ನು ಪ್ರಚಾರಿಸಲಿಕ್ಕೆಂದು ಅಷ್ಟುದೂರ ನಡಕೊಂಡು ಹೋಗಿ ಕಡೇಗೆ ಅದನ್ನು ಬಿಟ್ಟು ಕೃಷ್ಣನ ಚರಿತ್ರೆಯನ್ನು ಪ್ರಚಾರಪಡಿಸಿದರೆಂಬುದನ್ನು ಆಲೋಚಿಸುವಾಗ ನಂಬುವುದಕ್ಕೆ ಕಷ್ಟವಾಗಿದೆ. "......ಆ ಬ್ರಾಹ್ಮಣನಿಗೆ ಚಿತ್ಪಾವನ ಬ್ರಾಹ್ಮಣರೆಂದು ಹೆಸರು ಬಂದಿದೆಯೆಂದು ಭಾವಿಸಲ್ಪಟ್ಟಿದೆ" ಎಂದು ಬರೆಯುತ್ತಾರೆ. ಇದು ಒಂದು ಬರೇ ಭಾವನೆಯೇ ಹೊರ್ತು ರುಜುವಾತಲ್ಲವಷ್ಟೆ ?

ಕ್ರಿಸ್ತೋಸ್ ಎಂದರೆ ಕೃಷ್ಣನೆಂದೂ, ಕ್ರಿಸ್ತೋಸ್‌ನಿಂದಲೇ ಕ್ರಿಸ್ತನೆಂಬ ಹೆಸರು ಬಂದಿತೆಂದೂ ಬರೆಯುತ್ತಾರೆ. ಯಶೋಧೆಯೇ ಜಸೋದ, ಅಥವಾ ಜೇಸಸ್ ಎಂದೂ ಹೇಳಿರುತ್ತಾರೆ. ಅಕ್ಷರಗಳಲ್ಲಿಯೂ ಉಚ್ಚರಣೆಯಲ್ಲಿಯೂ ಸ್ವಲ್ಪ ಮಟ್ಟಿಗೆ ಹೋಲಿಕೆಯಿದ್ದ ಮಾತ್ರಕ್ಕೆ ಎರಡು ಶಬ್ದಗಳು ಒಂದೇ ಆಗುತ್ತವೆಯೋ ? ಅರ್ಥವೂ ಒಂದೇ ಆಗಬೇಡವೇ ? ಎಪ್ಸಮ್ ಸಾಲ್ಟ್ (Epsom salt) ಎಂಬ ಬೇಧಿಯ ಉಪ್ಪು ಸಕ್ಕರೆಯ ಹಾಗೆ ಕಂಡ ಮಾತ್ರಕ್ಕೆ ಅದು ಸಕ್ಕರೆಯಾದೀತೆ ? ರುಚಿ ನೋಡಿದರಲ್ಲವೇ ತಿಳಿಯುವುದು ? ಯೇಸು ಕ್ರಿಸ್ತ ಮತ್ತು ಕೃಷ್ಣ ಎಂಬ ಶಬ್ದಗಳ ಅರ್ಥವನ್ನು ಪರೀಕ್ಷಿಸುವುದಾದರೆ, ಅವೆರಡಕ್ಕೆ ಏನೇನೂ ಸಂಬಂಧವಿರುವುದಿಲ್ಲ. ಯೇಸು (Jesus) ಎಂಬುದು ಗ್ರೀಕ್ ಭಾಷೆಯ ಶಬ್ದ. ಯೆಹೋವ ತನ್ನ ರಕ್ಷಣೆ, ಅಥವ ರಕ್ಷಕ ಎಂಬ ಅರ್ಥವುಳ್ಳದ್ದಾಗಿರುತ್ತದೆ. ಕ್ರಿಸ್ತ (Christ) ಎಂಬ ಗ್ರೀಕ್ ಭಾಷೆಯ ಶಬ್ದವೂ, ಮೆಸ್ಸೀಯ ಎಂಬ ಹೀಬ್ರು ಭಾಷೆಯ ಶಬ್ದವೂ ಒಂದೇ. ಕ್ರಿಸ್ತವೆಂದರೆ ಅಭಿಷೇಕ ಹೊಂದಿದವನು ಎಂದರ್ಥ. ಆದರೆ, ಕೃಷ್ಣಕಾಕ, ಕೃಷ್ಣಪಕ್ಷ, ಕೃಷ್ಣ ವರ್ಣ, ಕೃಷ್ಣಸರ್ಪ, ಕೃಷ್ಣಾಗರು ಎಂಬಿವೇ ಮೊದಲಾದ ಶಬ್ದಗಳಲ್ಲಿ ಕೃಷ್ಣ ಎಂದರೆ ಕಪ್ಪು ಎಂದು ಅರ್ಥವಾಗುತ್ತದೆ. ಕೃಷ್ಣಕ ಅಥವಾ ಕೃಷ್ಣತ್ವ ಎಂದರೆ ಕಪಟ, ವೇಷಧಾರಣೆ, ಮೋಸ ಎಂದರ್ಥ. ಕೃಷ್ಣ ಕರ್ಮ ಎಂದರೆ ಕೇಡು ಎಂದರ್ಥ. ಕೃಷ್ಣ ಹೃದಯ ಎಂದರೆ ದುಷ್ಟ ಮನಸ್ಸು ಎಂದರ್ಥ. ಇದನ್ನೆಲ್ಲಾ ನೋಡುವಾಗ ಯೇಸುಕ್ರಿಸ್ತ ಮತ್ತು ಕೃಷ್ಣ ಎಂಬ ಶಬ್ದಗಳಿಗೆ ಎಳ್ಳಷ್ಟಾದರೂ ಸಂಬಂಧವಿಲ್ಲದೇ ಇರುವುದು ಮಾತ್ರವಲ್ಲ ಅಜಗಜಾಂತರ ವ್ಯತ್ಯಾಸವಿದೆ. ಉಚ್ಚರಣೆಯಲ್ಲಿ ಹೋಲಿಕೆ ಇದ್ದರೂ ಅರ್ಥದಲ್ಲಿ ಹೆಚ್ಚು ಕಡಿಮೆ ಇರುವ ಎನ್ನೋ ಶಬ್ದಗಳಿವೆ. ಹಾಗೆಯೇ ಒಂದೇ ಅರ್ಥವುಳ್ಳ ಅನೇಕ ಶಬ್ದಗಳು ಉಚ್ಚರಣೆಯಲ್ಲಿ ಬಹಳ ತಾರತಮ್ಯವುಳ್ಳದ್ದಾಗಿರಬಹುದು; ಮಡಿಕೇರಿ—ಮರ್ಕರಾ, ಕೊಡಗು—ಕೂರ್ಗ್ ಮತ್ತು ಹಿಂದೂದೇಶ—ಇಂಡಿಯ ಎಂಬಿವೇ ಶಬ್ದಗಳು ಒಂದೇ ಆಗಿರುತ್ತವೆಂಬುದನ್ನು ಪರಸ್ಪರ ಸಂಬಂಧವುಳ್ಳದೆಂದೂ, ಉಚ್ಚರಣೆಯ ಮೂಲಕ, ಯಾವನಾದರೊಬ್ಬ ತಿಳಿಯದ ಪರರಾಜ್ಯದವನು ಹೇಳಬಲ್ಲನೇ ? ಅಷ್ಟೇ ಅಲ್ಲ ಕೃಷ್ಣನು ದುಷ್ಟರನ್ನು ನಿಗ್ರಹಿಸುವುದಕ್ಕೂ ಶಿಷ್ಟರನ್ನು ಪಾಲಿಸುವುದಕ್ಕೂ ಬಂದನೆಂದು ಹೇಳಲ್ಪಟ್ಟಿದೆ. ಆದರೆ ಯೇಸುಕ್ರಿಸ್ತನು ದುಷ್ಟರನ್ನೂ ಶಿಷ್ಟರನ್ನಾಗಿ ಮಾಡಿ ಎಲ್ಲರಿಗೂ ಮೋಕ್ಷ ಮಾರ್ಗವನ್ನ ಕಲ್ಪಿಸಿಕೊಟ್ಟಿರುತ್ತಾನೆ.

ಚರಿತ್ರೆಯ ಮೂಲಕ ಸಿದ್ಧಾಂತವಾಗಿರುವ ಪ್ರಕಾರ, ಕುರೇನ್ಯನು (Cyrenius) ಸಿರಿಯಕ್ಕೆ (Syria) ಅಧಿಪತಿ (Governor) ಆಗಿದ್ದ ಕಾಲದಲ್ಲಿ, ಕೈಸರನಾದ ಅಗುಸ್ತ (Ceasar Augustus) ನಿಂದ ರೋಮ್ ರಾಜ್ಯದಲ್ಲೆಲ್ಲಾ ಜಾನಸುಮಾರಿ ಲೆಖ್ಖ (Census) ತೆಗೆಯಬೇಕೆಂದು ರಾಜಾಜ್ಞೆಯು ಹೊರಟಿತು. ಆ ಸಮಯದಲ್ಲಿ ಯೇಸುಕ್ರಿಸ್ತನು ಏಸ್ಯಖಂಡದ ಉತ್ತರ—ಪಶ್ಚಿಮ ದಿಕ್ಕಿನಲ್ಲಿ ಟರ್ಕಿ (Turkey in Asia) ದೇಶದಲ್ಲಿರುವ ಪಲೆಸ್ತೀನ (Palestine) ಕ್ಕೆ ಸೇರಿದ ಯುದಾಯ (Judaea) ಸೀಮೆಯಲ್ಲಿರುವ ಬೆತ್ಲೆಹೇಮಿನಲ್ಲಿ ಹುಟ್ಟಿದನು. ಯುದಾಯದ ಮುಖ್ಯ ಪಟ್ಟಣವಾದ ಜೆರೂಸಲೇಮಿನಿಂದ (Jerusalem) ಬೆತ್ಲೆಹೇಮು ದಕ್ಷಿಣ ಕಡೆ ಆರುಮೈಲು ದೂರದಲ್ಲಿದೆ. ಯೇಸುಕ್ರಿಸ್ತನು ಇಡೀ ಪಲೆಸ್ತೀನದಲ್ಲಿ ಕೆಲಸನಡಿಸಿದನು. ಹಿಂದೂದೇಶಕ್ಕೆ ಆತನು ಎಂದಾದರೂ ಬಂದದ್ದಿಲ್ಲ. ಆತನ ಪ್ರಖ್ಯಾತಿಯನ್ನು ಕೇಳಿ ಭೂಲೋಕದ ಬೇರೆ ಬೇರೆ ಭಾಗಗಳಿಂದ ಅನೇಕ ಜನರು ಆತನ ಬಳಿಗೆ ಬರುತ್ತಿದ್ದರು.

ಕವೀಶ್ವರ ಕೃಷ್ಣಪ್ಪನವರು 'ಯೇಸು' ಎಂಬದಕ್ಕೆ 'ಏಸು' ಎಂದು ಯಕಾರಕ್ಕೆ ಬದಲಾಗಿ ಎಕಾರವನ್ನು ಪ್ರಯೋಗಿಸಿರುತ್ತಾರೆ. ಯೇಸುಕ್ರಿಸ್ತನನ್ನು ಕ್ರೂಜೆಗೆ ಹಾಕಿದ್ದು, ಶೂಲಕ್ಕೇರಿಸಿದ್ದಲ್ಲ. ಇವರಿಗೆ ಕ್ರೂಜೆ ಮತ್ತು ಶೂಲ ಎರಡೂ ಒಂದೇ. ಶೂಲವೆಂದರೆ ಕ್ರೂಜೆಯೆಂದು ಅರ್ಥವಾಗುತ್ತದೆಯೇ ? ಕ್ರಿಸ್ತನೆಂದು ಹೇಳುವುದಕ್ಕೆ ಒಂದೊಂದು ಕಡೆ ಕೃಷ್ಣನೆಂದು ಹೇಳಿರುತ್ತಾರೆ. ಕ್ರಿಸ್ತನೂ ಕೃಷ್ಣನೂ ಎರಡೂ ಒಂದೆಯೇ ? 'ಜಾಡು' ಎಂಬ ಮಂತವೇ ಇರಲಿಲ್ಲ. ಮತಸ್ಥರೆನ್ನುವುದಕ್ಕೆ ಪಟ್ಟೀಯರೆಂದು ಹೇಳಿರುತ್ತಾರೆ. ಹೀಗೊಂದು ಶಬ್ದವುಂಟೇ ? ಯಹೋದರೆಂಬ ಒಂದು ಮತ ಉಂಟೇ ? ಸಾಮೂಚಿಕರಿಗೆ ಸಮೂಜೀಯರೆಂದು ಹೇಳಿರುತ್ತಾರೆ. 'ಕ್ರಿಸ್ತರು ಏಸುಕ್ರಿಸ್ತನನ್ನು ಶೂಲಕ್ಕೆ ಏರಿಸಿದರೆಂದು.' ಎಂಬ ಒಂದು ವಾಕ್ಯವನ್ನು ಬರೆದಿರುತ್ತಾರೆ. ಈ ವಾಕ್ಯದಲ್ಲಿ ಆಖ್ಯಾತವು ಲೋಪವಾಗಿದೆ. ಸಂಪೂರ್ಣ ಅರ್ಥವನ್ನು ಕೊಡದೆ ಇರುವ ಶಬ್ದಗಳ ಸಮುದಾಯಕ್ಕೆ ವಾಕ್ಯವೆಂದು ಹೇಳುತ್ತಾರೆಯೇ ? ಒಟ್ಟಾರೆ ನೋಡುವುದಾದರೆ, ವ್ಯಾಕರಣ ಶುದ್ಧವಾಗಿ ತಪ್ಪಿಲ್ಲದ ಭಾಷೆಯಲ್ಲಿ, ತಕ್ಕದಾದ ಮತ್ತು ಸರಿಯಾದ ಶಬ್ದಗಳನ್ನು ಉಪಯೋಗಿಸಿ, ತನ್ನ ಲೇಖನವನ್ನು ಅಚ್ಚುಕಟ್ಟಾಗಿಯೂ, ಕುಂದುಕೊರತೆಗಳಿಲ್ಲದಾಗಿಯೂ, ಓದುವವರು ಒಪ್ಪತಕ್ಕದಾಗಿಯೂ ಮಾಡಲು ಏನೂ ತೊಂದರೆ ತೆಗೆದುಕೊಳ್ಳದ ಕವೀಶ್ವರ ಕೃಷ್ಣಪ್ಪನವರು, ತಾನು ಬರೆದಿರುವ ಸಂಗತಿಯ ಸತ್ಯಾಸತ್ಯವನ್ನು ವಿಮರ್ಶಿಸುವುದಕ್ಕೂ, ಅದರ ಗೂಢಾರ್ಥವನ್ನು ಕಂಡು ಹಿಡಿಯುವುದಕ್ಕೂ ಏನೂ ಪರಿಶ್ರಮವನ್ನೂ, ಪ್ರಯತ್ನವನ್ನೂ ತೆಗೆದುಕೊಂಡಿರುವುದಿಲ್ಲವೆಂಬದು ಸ್ಪಷ್ಟವಾಗುತ್ತದಲ್ಲವೇ ?

"ಅ. ಎ. ಎ."

ಶೃಂಗಾರವಾದ ಪುಸ್ತಕ! ಬೇಗನೆ ಬರೆಯಿರಿ!

ರತಿಮನ್ಮಥರಹಸ್ಯ ಎಂಬ ಮರ್ಮಶಾಸ್ತ್ರ.

ಕ್ರಯ ರೂ. ೧—೦—೦.

ಕನ್ನಡ ಭಾಷೆಯಲ್ಲಿ ಅಂದವಾಗಿ ಪ್ರಿಂಟಾಗಿದೆ. ಇದರಲ್ಲಿ ಸ್ತ್ರೀ ಪುರುಷರ ಪ್ರೀತಿಯ ರಹಸ್ಯಗಳು. ಪ್ಯಾರಿಸ್ ವೇಶ್ಯ ಸ್ತ್ರೀಯರ ಪ್ರೀತಿಯ ಮರ್ಮಗಳು, ಮಲಿಯಾಳ, ಜಪಾನ್, ಫ್ರೆಂಚ್ ದೇಶದ ವೇಶ್ಯ ಸ್ತ್ರೀಯರ ಮಲಗುವ ಫೋಟೋಗಳು, ಇನ್ನೂ ಸ್ತ್ರೀಪುರುಷರ ಅನೇಕ ರಹಸ್ಯಗಳು 22 ಲೇಡಿಗಳ ಫೋಟೋ ಸಹಿತ ಕೂಡಿದೆ. ಈ ಶೃಂಗಾರವಾದ ಪುಸ್ತಕವನ್ನು ಓದಲು ಆನಂದವಾಗಿರುವುದು. 22 ಫೋಟೋಗಳ ಸಹಿತ ಪ್ಯಾರಿಸ್ ದೇಶದ ವ್ಯಭಿಚಾರಿಗಳ ವಿನೋದಗಳು, ಕನ್ಯೆಗಳ ಪ್ರೀತಿ, ಶಯ್ಯಾಗೃಹದ ರಹಸ್ಯಗಳು ಅಡಗಿರುತ್ತ—ಕ್ರಯ ಪುಸ್ತಕ ರೂ. ೧—೦—೦.

ವಿಳಾಸ:—ಟಿ. ವಿ. ದೇವಕರ್ ಅಂಡ್ ಕೋ,
73. ಅಣ್ಣಾಪಿಳ್ಳೆ ಬೀದಿ, ಜಿ. ಟಿ. ಮದರಾಸು

೪೦ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕಿಕಂಪನಿ ರವರ

ಜ್ವರದ ಗುಳಿಗೆಗಳು.

ಚಳಿಜ್ವರ, ಚಾತುರ್ಥಿ ಜ್ವರ, ದಿನಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮ ಬಾಣದಂತೆ ಇವೆ. ಬಾಟ್ಲಿಗೆ ರೂ. ೧. ಟ. ಖ. ೭ ಆಣೆ. ಬರೂರು ತರಿಸಿಕೊಳ್ಳಿ.

(32–2) ಗಣೇಶ ರಾಮಚಂದ್ರ ಕರ್ಕಿ,
ಮತ್ತು ಕಂಪೆನಿ, ಗಿರಗಾಂವ, ಮುಂಬಯಿ,

ಬಾಲಾರ್ಕಮಧು.

ಬಾಲಾರ್ಕಮಧು ಮಕ್ಕಳಿಗೆ ಕೊಡುವುದರಿಂದ ಶಕ್ತಿಯೂ ಆರೋಗ್ಯವೂ ಹೆಚ್ಚುವುದು. ಇದು ಮಧುರವಾಗಿದೆ. ಬೆಲೆ ಶೀಸೆ 1ಕ್ಕೆ 0—12—0 ಟ. ಖ. 0—12—0.



(Spleen Lever enlargement) ಎಂಬ ಮಕ್ಕಳ ಭಯಂಕರ ಗಡ್ಡೆರೋಗ—ಪ್ಲೀಹ—ಪಿತ್ತಕೋಶದ ಗಡ್ಡೆಗೆ ಚಕ್ರದಂಡು. ಚಕ್ರಕ್ಷಾರ—ಚಕ್ರಚೂರ್ಣ—ಚಕ್ರ ಪ್ರಭಾ—ಈ ನಾಲ್ಕು ಮಹೌಷಧಗಳಿವೆ. ಸಾವಿರಾರು ಮಕ್ಕಳ ಪ್ರಾಣವನ್ನು ಉಳಿಸಿದೆ; ನಾಲ್ಕು ಔಷಧಗಳು ಸೇರಿ 1 ತಿಂಗಳ ಔಷಧದ ಬೆಲೆ 3—0—0. ಟ. ಖ. 0—8—0. ಏಜೆಂಟರು ಬೇಕಾಗಿರುವರು.

ಪ. ಎ. ಮನ್. ಶ್ರೀನಿವಾಸರಾವ್,
ವೈ. ವಿ. ಆಯುರ್ವೇದಭೂಷಣ್,

ಬ್ರಾಂಚ್ ಆಫೀಸ್, ಉಡುಪಿ. S. K. 32–31 | Spleen & Lever ಸ್ಪೆಶಲಿಸ್ಟ್, ಯಂ. ವಿ. ಪ್ರಸಾದಿಕ ಔಷಧಾಲಯ ಶಿಮೊಗಾ, (ಮೈಸೂರು ಸೀಮೆ)

ಸಣ್ಣ ಖರ್ಚಿನಿಂದ ದೊಡ್ಡ ಲಾಭಗಳು.

ನಮ್ಮ, ಮದುವೆಯ ಸ್ತ್ರೀಧನ, ಹುಂಡಿ, ಜೀವನಾರಂಭ ಮತ್ತು ಬೋನಸ್ ಕಾರ್ಯಗಳು ಮದುವೆ, ಮಕ್ಕಳ ಹುಟ್ಟುವಿಕೆ ಮುಂತಾದ ಕಾಲಗಳಲ್ಲಿ ನಿಮಗೂ, ನಿಮ್ಮ ಮಕ್ಕಳಿಗೂ ಬಹು ಸ್ವಲ್ಪ ಖರ್ಚಿನಿಂದ ದೊಡ್ಡ ಲಾಭಗಳನ್ನು ತರುವವು.

ಬಹು ಅಪರೂಪದ ಅವಕಾಶ.

ನಮ್ಮ ಕ್ಯಾಷ್ ಮತ್ತು ಕ್ರಡಿಟ್ ಸರ್ಟಿಫಿಕೇಟುಗಳು ನಿಮ್ಮ ಅವಶ್ಯಕತೆಗಳಿಗೆ ಬೇಕಾದ ಸಾಲಗಳನ್ನು ಒದಗಿಸಿ ಕೊಡುವವು.

ಬೇಕಾಗಿದೆ.

ಒಳ್ಳೇ ಸಂಬಳ ಮತ್ತು ಕಮಿಷನಿನ ಮೇಲೆ ಕೆಲವು ಸ್ತ್ರೀಯರು ಮತ್ತು ಗಂಡಸರು ಏಜೆಂಟರುಗಳಾಗಿ ಬೇಕಾಗಿದ್ದಾರೆ.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಮಿ. ಟಿ. ಜೆ. ಬ್ರೌನ್,
ಆರ್ಗನೈಜಿಂಗ್ ಮೇನೇಜರ್,
ದಿ ಕಲ್ಕತ್ತಾ ಫೈನಾನ್ಸ್ ಏಜೆನ್ಸಿ
ಅಂಡ್ ಸಿಂಡಿಕೇಟ್ ಲಿಮಿಟೆಡ್,
ಮಡಿಕೇರಿ.

ಅಥವಾ

ದಿ ಬ್ರಾಂಚ್ ಸೆಕ್ರಟರಿ,
ದಿ ಕಲ್ಕತ್ತಾ ಫೈನಾನ್ಸ್ ಏಜೆನ್ಸಿ ಅಂಡ್
ಸಿಂಡಿಕೇಟ್ ಲಿಮಿಟೆಡ್,
179 ನರಸಿಂಹ ರಾಜ ರೋಡ್,
ಬೆಂಗಳೂರು ಸಿಟಿ.

(4–2)

ಭಿಕ್ಷುಕಿ.

೧.

ತಾಯಿ ಭಿಕ್ಷವ ನೀಡೆ ಎಂಬಳಾರಿವಳು !
ಮೈಯ ಮೇಲರಿವಿಲ್ಲ ಕೈನೀಡಿ ಬಹಳು
ತಾಯಿ ತಾ ಎನ್ನುತಲಿ ದೇಡಿ ದೈನ್ಯದೊಳು
ವಿಷಯದೊಳು ಮುಖವನ್ನು ಮರೆಸಿಕೊಂಡಿಹಳು
ಯಾಯಿವಾರವ ಬಯಸಿ ಓಡಿ ಬಂದಿಹಳು

೨.

ಸ್ನೇಹವಂ ಸೂಸುತಿಹ ಕಣ್ಣುಗಳ ಕೆರೆದು
ದೂಷಣವ ಮರೆಯಿಸುವ ಕೇಶಗಳ ಕೆರೆದು
ಮಾನ್ಯರಿಂ ದೂರಾಗಿ ದೇಹವನು ಮರೆದು
ಮಾನಿನಿಯು ಬಂದಿಹಳು ಸಿಂಗರವ ಹರಿದು
ಧಾನ್ಯವಂ ಕೇಳುವಳು ಸುಖಕೆ ನೀರೆರೆದು

೩.

ಕೊಡುವವರ ಮನದೊಳಗೆ ಹೊಕ್ಕಿರುವಳಿವಳು
ಕೊಡದವರ ಕಣ್ಣೊಳಗೆ ಕಂಬನಿಯ ತಹಳು
ಬಿಡದೆ ಸರ್ವಾಂಗದೊಳು ದೈನ್ಯವನು ಇಹಳು
ಧಡಪಡಿಸಿ ತೋರಿಸುತ ಮರುಕಗೊಳಿಸುವಳು
ಒಡವೆರೆದ ಜಡವೆಂಬುದನು ತೋರ್ಪಳಿವಳು

೪.

ಒಮ್ಮೆ ಭಿಕ್ಷವು ಸಿಗಲು ಇವಳ ಬಾಯ ಸವಿಯು
ನೆಮ್ಮುವಳು ಅಂತರಂಗದ ಸುಖದ ಸವಿ ಯ
ಸುಮ್ಮಾನದಿಂ ಹರುಷ ಜಲಧಿಯೊಳು ತೇಲೆಯು
ತಿಮ್ಮ ಡಿಸು ತೋಷದಿಂದಿಹಳು ಭಿಕ್ಷುಕಿಯು
ಒಮ್ಮನದಿ ನೆನೆಯುವಳು ಮೊಳೆಯುತಿರೆ ನಗೆಯು

ಅನಂತ.

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ.]

ಪೋಲೀಸಿನವರ ತಗಾದೆ.

ಕೊಡಗು ಪ. ಮು. ಸಾಹೇಬರವರಲ್ಲಿ ವಿನಂತಿ.

ಅಯ್ಯಾ,

ಸಾಪೋಕ್ಲು ಪಟ್ಟದಲ್ಲಿ ದನಕರುಗಳನ್ನು ಸಾಕುವ ಬಡ ಜನ ಮತ್ತು ಪೋಲೀಸಿನವರು ಕೊಡುತ್ತಿರುವ ತೊಂದರೆಗಳನ್ನು ಸರ್ಕಾರಿ ಪೂರ್ವಸ ಬರಾರೆನು. ರೈತರಿಗೂ, ಚಿಕ್ಕ ಪಟ್ಟವಾಸಿಗೂ ಒಂದನೇಯ ಮೂಲಧನವು ಗೋವುಗಳನ್ನು ಸಾಕುವುದೇ ಆಗಿದೆ. 'ಕುರು ಕರು ಇಲ್ಲದ ಊರು ನರಕಕ್ಕೆ ಸಮಾನ' ಎಂಬ ಮಾತು ನಮ್ಮ ಕೊಡಗಿನಲ್ಲಿ ಅನುಭವಸಿದ್ಧವಾದದ್ದಾಗಿದೆ. ಬಡ ಜನರ ಮಕ್ಕಳಿಗೆ ತಮ್ಮ ಕೊಟ್ಟಿಗೆಯಲ್ಲಿರುವ ದನ ಕರುಗಳಿಂದ ದೊರೆಯುವ ಹಾಲು ಮಜ್ಜಿಗೆಯೇ ಆಧಾರ. ಪಟ್ಟವಾಸಿಯೇ ಆಗಲೀ ರೈತನೇ ಆಗಲೀ ಹಣದ ಅಭಾವದಿಂದ ಪಡುವ ಕಷ್ಟವು ಅಷ್ಟಿಷ್ಟೆಂದು ಹೇಳಲಾಗದು. ಈ ಮಧ್ಯ ಟೌನಿನಲ್ಲಿ ದನಗಳನ್ನು ಸಾಕುವವರಿಗೆ ಅವರವರ ಹಿತ್ತಲುಗಳಲ್ಲಿ ದನಗಳನ್ನು ಮೇಯಿಸಲು ಹೊಡೆಯಲಿಕ್ಕೆ ಜಾಗವಿಲ್ಲದಿರುವುದರಿಂದ ದನಕರುಗಳನ್ನು ರಸ್ತೆಯ ಮಧ್ಯಕ್ಕಾಗಿಯೇ ಬೇರೆ ಜನರ ಜಾಗಗಳಿಗಾಗಲೀ ಇಲ್ಲವೇ ಸೈಸಾರಿ ಜಾಗಕ್ಕಾಗಲೀ ಮೇಯಲು ಹೊಡೆಯಬೇಕಾಗಿರುತ್ತೆ. ಇದರಲ್ಲೂ ದನಗಳು ಹೋಗಲು ಬರಲು ಮುಖ್ಯ ದಾರಿಯೇ ಸರ್ಕಾರಿ ರಸ್ತೆಯಾಗಿರುತ್ತೆ.

ದನಗಳು ಈ ರಸ್ತೆಯಲ್ಲಿ ಬಾಣೆಯಿಂದ ಹುಲ್ಲನ್ನು ಮೇಯಿದು ಕೊಂಡು ಹಿಂತಿರುಗಿ ಅವರವರ ಮನೆಗೆ ಬರುವಾಗಲೇ ಪೋಲೀಸಿನವರು ರಸ್ತೆಯ ಮೇಲಿಂದ ದನಗಳನ್ನು ಹಿಡಿದು ದೊಡ್ಡಿಗೆ ಸೇರಿಸಿ ಟೌನಿನವರು ದೊಡ್ಡಿ ಫೀಜನ್ನು ಕೊಟ್ಟು ದನಗಳನ್ನು ಬಿಡಿಸಿಕೊಳ್ಳುವುದು ಸಹ ಅಲ್ಲದೆ ತಿರುಗಿ ಆ ದನದ ಮಾಲೀಕನ ಮೇಲೆ ಪೋಲೀಸರು ಚಾರ್ಜು ಮಾಡಿ ಬೆಂಚ ಮೇಜಿಸ್ಟ್ರೇಟರವರ ಮುಂದೆ ಹಾಜರು ಪಡಿಸಿ ಅಲ್ಲಿ ಅವನಿಗೆ ನಾಲ್ಕೈದು ರೂಪಾಯಿ ಜುಲುಮಾನೆ ಸಹ ವಿಧಿಸಿ ದಂಡ ತೆರಿಸುವುದು ಯಾವ ನ್ಯಾಯವೆಂದು ಗೊತ್ತಾಗುವುದಿಲ್ಲ.

ಹೀಗೆ ಆಗಾಗ್ಯೆ ದನಗಳನ್ನು ದೊಡ್ಡಿಗೆ ಸೇರಿಸಿ ಜನರನ್ನು ನಷ್ಟಪಡಿಸುತ್ತಲಿದ್ದರೆ ದನಗಳನ್ನು ಸಾಕುವವರ ಪಾಡೇನಾಗಬೇಕೆಂತ ಘನ ಸರ್ಕಾರವೇ ಯೋಚಿಸತಕ್ಕದ್ದಾಗಿದೆ. ಉತ್ಪತ್ತಿಯು ಕಡಿಮೆಯಾಗಿರುವ ಮತ್ತು ಅಂಡಮಾನ್ ದ್ವೀಪದಂತಿರುವ ಈ ಪಟ್ಟವಾಸಿಗಳ ಕಷ್ಟವನ್ನು ಹೇಳಿದಷ್ಟೂ ಮುಗಿಯದು. ಈ ಮಧ್ಯೆ ಜನರಲ್ಲಿ ಊಟಕ್ಕೂ ಕೂಡ ಹಣವಿಲ್ಲದಿರುವಾಗ್ಯೆ ಒಂದೆರಡು ದನಕರುಗಳನ್ನು ಸಾಕಿಕೊಂಡು ಜೀವನವನ್ನು ಕಳೆಯುತ್ತಿರುವಾಗ ಪೋಲೀಸಿನವರು ಈ ತರದ ಅನಾವಶ್ಯಕವಾದ ತೊಂದರೆಯನ್ನು ಕೊಟ್ಟರೆ ಅವರು ಮುಂದೆ ಅಭಿವೃದ್ಧಿಯನ್ನು ಹೇಗೆ ಹೊಂದುವರೆಂಬದನ್ನು ಹೇಳಲಾಗುವುದಿಲ್ಲ.

ಆದ್ದರಿಂದ ಘನ ಸರ್ಕಾರದವರು ರಾತ್ರಿ ವೇಳೆಯಲ್ಲಿ ದನಗಳನ್ನು ಕಟ್ಟದೆ ತಿರುಗಾಡಲು ಬಿಡುವ ದನಗಳನ್ನು ದೊಡ್ಡಿಗೆ ಹಾಕಬೇಕಲ್ಲದೆ ಹಗಲಿನಲ್ಲಿ ಬಾಣೆಯಿಂದ ಮನೆಗೆ ಬರುವ ದನ ಕರುಗಳನ್ನು ಚಾರ್ಜು ಮಾಡುವ ರೂಲನ್ನು ರದ್ದು ಮಾಡಿ ಬಡ ಪಟ್ಟವಾಸಿಗಳನ್ನು ಕಾಪಾಡುವರಾಗಿ ಕೋರುವ,

ಪಟ್ಟವಾಸಿ.

ವೀರರಾಜಪೇಟೆ ಮತ್ತು ಅಮ್ಮತ್ತಿ ನಾಡುಗಳ ರೈತರ ಗೋಳು.

ಕಮಿಷನರವರಲ್ಲಿ ವಿನಂತಿ.

ಅಯ್ಯಾ,

ವೀರರಾಜೇಂದ್ರಪೇಟೆ ಸಬ್ ರಿಜಿಸ್ಟ್ರಾರನ್ನು ವಜಾ ಮಾಡಿ ತಾಲೋಕು ಶಿರಸ್ತೆದಾರರವರಿಗೆ ಈ ಕೆಲಸವನ್ನು ವಹಿಸಿದಂದಿನಿಂದ ರೈತರಿಗೆ ರಿಜಿಸ್ಟ್ರೇಶನ್ ಬಗ್ಗೆ ಅತ್ಯಂತ ಕಷ್ಟವೂ, ನಷ್ಟವೂ ಇದೆಯಾಗಿ ಕಮಿಷನರ್ ಸಾಹೇಬರವರಿಗೆ 2ನೇ ವರ್ಷದಲ್ಲಿ ಅರ್ಜಿ ಮಾಡಿಕೊಂಡೆವು: ನಮ್ಮ ಅರ್ಜಿ ಕೌನ್ಸಿಲ್ ವರೆಗೆ ಹೋಗಿ ಅಲ್ಲಿ ರೈತರ ಫಿರ್ಯಾದು ನ್ಯಾಯವಾದದೆಂದು ತಿಳಿದು ಶಿರಸ್ತೆದಾರರಿಂದ ಈ ಕೆಲಸ ನ್ಯಾಯವಾಗಿ ಆಗುವುದಿಲ್ಲವೆಂದು ಸರ್ಕಾರಕ್ಕೆ ಮುಂದಟ್ಟಾಗಿ, ಆ ಸಮಯದಲ್ಲಿ ಸಬ್ ಮೇಜಿಸ್ಟ್ರೇಟ್ ಕೆಲಸ ನೇಮಕವಾದುದರಿಂದ ತತ್ಕಾಲಕ್ಕೆ ಈ ಕೆಲಸವನ್ನು ಅವರಿಗೆ ವಹಿಸಿದರು. ಈ ಕೆಲಸವನ್ನು ಇವರಿಗೆ ಕೊಟ್ಟೂ ಸಹ ಕ್ರಿಮಿನಲ್ ಕೇಸು ತೀರುವ ವರೆಗೆ ರಿಜಿಸ್ತರಿಗೆ ಒಂದರಿಂದ ಮಧ್ಯಾಹ್ನದಿಂದ ಸಾಯಂಕಾಲದ ವರೆಗೆ ಕಾದು ಸಾಕಾಗುತ್ತಿತ್ತು.

ಈವಾಗ ಇದನ್ನು ಪುನಹ ಶಿರಸ್ತೆದಾರರಿಗೆ ಕೊಡಲಾಗಿದೆ. ಈ ತಾಲೋಕು ಬಜಾನೆ ಕೊಡಗಿನಲ್ಲಿ ಇರುವ ಬಜಾನೆಗಳ ಎಲ್ಲದಕ್ಕಿಂತ ಹೆಚ್ಚು ಕೆಲಸ ಇರುವಂತಾದೆ. ಈ ಮೊದಲೇ ಈ ಏರ್ಪಾಡಿನಿಂದ ರೈತರಿಗೆ ಅತ್ಯಂತ ಕಷ್ಟವೂ, ನಷ್ಟವೂ ಇದೆಯೆಂದು ಸರ್ಕಾರಕ್ಕೆ ತಿಳಿದಿದ್ದರೂ ಕೂಡ ಪುನಹ ಇವರಿಗೇ ಆ ಕೆಲಸ ಕೊಟ್ಟದ್ದಕ್ಕೆ ಏನೊಂದೂ ಅರ್ಥ ಇರುವುದಿಲ್ಲ.

ಸರ್ಕಾರವು ಈ ಬಾಬಿನಲ್ಲಿ ರೈತರ ಗೋಳನ್ನು ಸ್ವಲ್ಪವೂ ಗಮನಕ್ಕೆ ತೆಗೆದುಕೊಂಡಂತೆ ಕಾಣುವುದಿಲ್ಲ. ರೈತರ ಈ ತರದ ಕಷ್ಟವನ್ನು ಅನುಮೋದಿಸಿ ಇದಕ್ಕೆ ತಕ್ಕ ಪರಿಹಾರ ಮಾಡುವುದು ಸರ್ಕಾರದ ಕರ್ತವ್ಯವಾಗಿದೆ. ಇಲ್ಲಿಗಿಂತ ಕಷ್ಟ ಕಮ್ಮಿ ಇರುವ ಪೊನ್ನಂಪೇಟೆಗೆ ಸಬ್ ರಿಜಿಸ್ಟ್ರಾರನ್ನು ಕೊಟ್ಟು ಇಲ್ಲಿಗೆ ಕೊಡದೆ ಇರುವುದು ಆಶ್ಚರ್ಯವಲ್ಲವೇ?

ಖರಾರು ರಿಜಿಸ್ತರು ಮಾಡುವುದು ಸರ್ಕಾರದ ಕೆಲಸಗಳ ಪೈಕಿ ಒಂದು ಮುಖ್ಯವಾದ ಕೆಲಸವಾಗಿದೆ. ಇಲ್ಲಿ ಇದನ್ನು ಚೆನ್ನಾಗಿ ಪರಿಶೀಲಿಸಿದರೆ ಸಿವಿಲ್ ಕೋರ್ಟಿನಲ್ಲು ಉಂಟಾಗುವ ವೆಚ್ಚದ ನಷ್ಟ, ಕಷ್ಟವೂ ಬಾಕಿಯಾಗುತ್ತೆ. ಇಂಥ ಈ ಬಾಬಿನಲ್ಲಿ ಸರ್ಕಾರವು ತುಂಬಾ ನಿಗ ತೆಗೆದುಕೊಳ್ಳಬೇಕಾಗಿದೆ.

ಖರಾರುಗಳನ್ನು ತೆಗೆದುಕೊಂಡು ಹೋದರೆ ಶಿರಸ್ತೆದಾರರು ಆಫೀಸು ಕೋಣೆಯಲ್ಲಿ ನನ್ನ ಮುನ್ಷಿಯವರು ಇದ್ದಾರೆ, ಅವರಿಗೆ ಕೊಡಿ ಎಂದು ಹುಕುಂ. ಅವರು ಅದನ್ನು ಸ್ವಲ್ಪ ಹಾಳೆ ಮಗುಚಿ, ಪುನಹ ಎಲ್ಲಾ ನೋಡಿ ಆಯಿತು, ಶಿರಸ್ತೆದಾರರನ್ನು ಕೇಳಿ ಎಂದು 2ನೇ ಹುಕುಂ. ಅದರಲ್ಲಿ ಶಿರಸ್ತೆದಾರರಿಗೆ ಹಣದ ತುಂಬಾ ಗಲಾಟೆ. ಇದಲ್ಲವೇ ರೈತರ ಪಾಡು!

ಈ ವಿಷಯ ಸಂಬಂಧಪಟ್ಟ ಅಧಿಕಾರಿಗಳು ಅಂದರೆ ಡಿಸ್ಟ್ರಿಕ್ಟ್ ರಿಜಿಸ್ಟ್ರಾರವರು ರೈತರ ಈ ಗೋಳನ್ನು ಕಮಿಷನರವರಿಗೆ ಅರಿಕೆ ಮಾಡಿ ವೀರರಾಜಪೇಟೆಯಲ್ಲಿ ಒಬ್ಬ ಪ್ರತ್ಯೇಕ ಸಬ್ ರಿಜಿಸ್ಟ್ರಾರನ್ನು ಇಡುವ ಏರ್ಪಾಡು ಮಾಡಿಸುವರಾಗಿ ನಂಬುತ್ತೇನೆ.

ಇದಲ್ಲದೆ ನಮ್ಮ ಕೌನ್ಸಿಲ್ ಮೆಂಬರುಗಳು ಈ ಮೊದಲು ತೆಗೆದುಕೊಂಡ ತೊಂದರೆಯನ್ನು ಸರ್ಕಾರವು ಅಲ್ಲಗಳೆದ ಸಂಗತಿಯಲ್ಲು ಪುನಹ ಹೋರಾಡಿ ವೀರರಾಜೇಂದ್ರಪೇಟೆಗೆ ಪ್ರತ್ಯೇಕ ಸಬ್ ರಿಜಿಸ್ಟ್ರಾರನ್ನು ನೇಮಿಸಿದರೆ, ಅದಲ್ಲವೇ ದೇಶ ಸೇವೆ, ಅದಲ್ಲವೇ ರೈತರು ಓಟು ಕೊಟ್ಟದರ ಪ್ರತಿಫಲ ಆಗುವುದು.

"ಬಡ ರೈತ"

ಕೊಡಗಿನ ರಾಜಕೀಯ ಭವಿಷ್ಯತ್ತು.

ಮಹನೀಯರೇ,

ಶ್ರೀಮುತ ಡಿ. ನಾಕಪ್ಪನವರು 'ಹಿಂದೂ' ಪತ್ರಿಕೆಗೆ ಕೊಟ್ಟ ಅಭಿಪ್ರಾಯವನ್ನು ನಾನು ಓದಿ ನೋಡಿದೆನು. ತಾವೆಲ್ಲರೂ ತಾ. 22—7—32ರ 'ಕೊಡಗು' ಪತ್ರಿಕೆಯಲ್ಲಿ ಓದಿ ನೋಡಿರಬಹುದು.

ಇವುಗಳನ್ನೆಲ್ಲಾ ಓದಿ ಚೆನ್ನಾಗಿ ಅರ್ಥ ಮಾಡಿ ನೋಡದೆ ತಮಗಳಿಗೆ ಅರ್ಥವಾಗುವುದರಲ್ಲಿ ಯಾವ ಸಂದೇಹವೂ ಇಲ್ಲವೆಂದು ನಾನು ಹೇಳಬೇಕಾಗಿರುವುದಿಲ್ಲ. ಯಾಕಂದರೆ, ಈಗಿನ ನವನಾಗರೀಕತೆಯಿಂದಲೂ, ಬ್ರಿಟಿಷ್ ಸರ್ಕಾರದವರ ಆಡಳಿತದಿಂದಲೂ, ಕೊಡವರ ಚಟುವಟಿಕೆಯಿಂದಲೂ, ಹಿಂದೂ ದೇಶದಲ್ಲಿ ವಿದ್ಯೆಯಲ್ಲು ಕೊಡಗು ಶೇಕಡ 90ರಷ್ಟು ಬಾಲ ಬಾಲಕಿಯರು ಮುಂದುವರಿದಿರುವ ಸಂಗತಿ ತಮಗಳಿಗೆ ವೇದ್ಯ ಇಲ್ಲದಲ್ಲ. ....

ಈ ಲೇಖಕನು ಈ ಮೊದಲು, ಕೊಡಗಿನ ಒಂದು ಸಣ್ಣ ಗಣನೆಗೆ ತರಲಾಗದ ಪಂಗಡವು. ಕೊಡಗನ್ನು ಕರ್ನಾಟಕ ಏಕೀಕರಣಕ್ಕೆ ಸೇರಿಸುವುದು ಭಾಷಾನುಸಾರದ ದೇಶವಾಗದೇ ಕೆಂದು ಅನೇಕ ಪತ್ರವ್ಯವಹಾರಗಳನ್ನು ಪ್ರಕಟಿಸಿದ್ದಾಗ್ಯೆ ಕೊಡಗು ಮದ್ರಾಸು ಪ್ರಾಂತ್ಯಕ್ಕಾಗಲೀ, ಕರ್ನಾಟಕ ಏಕೀಕರಣಕ್ಕಾಗಲೀ ಸೇರುವುದು ಬೇಡವೆಂದು ಶ್ರೀಯುತ ಡಿ. ನಾಕಪ್ಪನವರ ಲೇಖನದಂತೆ ಕೊಡಗಿಗೂ, ಮೈಸೂರಿಗೂ ಇರುವ ಬಂಧುತ್ವವನ್ನು ವಿವರಿಸಿ ಕೊಡಗನ್ನು ಮೈಸೂರಿಗೆ ಸೇರಿಸಿದರೆ ಒಳ್ಳೆದೆಂದು ಬರೆದ ನನ್ನ ಪತ್ರಕ್ಕೆ ಮೈಸೂರಿನ ಪತ್ರಿಕೆ ಒಂದರಲ್ಲಿ 'ಕರಿಯುವ ಎಮ್ಮೆಯನ್ನು ಕೊಟ್ಟು ಕೊಸಿಯುವ ಕೋಣನನ್ನು ಕೊಂಡುಕೊಳ್ಳಬೇಕೋ' ಎಂಬ ಜವಾಬು ಹೊಂದಿರುತ್ತೇನೆ.

ಈಗಲಾದರೋ ನಮ್ಮ ಬ್ರಿಟಿಷ್ ಸರ್ಕಾರದವರು ನಮ್ಮ ಕೊಡಗಿನ ಸಂಗತಿಯಾಗಿ 1831ನೇ ಇಸವಿಯಿಂದಲೇ ಅವರಿಗೂ ನಮಗೂ ಇರುವ ರಾಜನೀತಿ ಮತ್ತು ರಾಜಭಕ್ತಿಯನ್ನು ಚೆನ್ನಾಗಿ ಪರ್ಯಾಲೋಚಿಸಿ ಸೈಮನ್ ಕಮಿಶನ್ ಬುಕ್ಕಿನ 329—330ನೇ ಪುಟಗಳಲ್ಲು ನಮ್ಮ ಈ ಕೊಡಗಿನ 'ಕೊಡವರ' ಸಂಗತಿಯಾಗಿ ಎಷ್ಟರ ಮಟ್ಟಿಗೆ ಹೇಳಿರುವರೆಂಬದನ್ನು ತಾವೆಲ್ಲರೂ ಚೆನ್ನಾಗಿ ಪರ್ಯಾಲೋಚಿಸಿ ನಮ್ಮ ಸ್ವಭಾಷೆ, ಸ್ವಜಾತಿ, ಸ್ವನಡತೆ, ಸ್ವ-ಉಡಿಗೆ ತೊಡಿಗೆ, ನಮ್ಮ ಜನ್ಮಭೂಮಿ ಸಂಬಂಧನೆ ಯೆಂಬ ಮಗ್ಗುರೆಯಾಗಿ ಹೊಗಳಿ ಬರೆದಿರುವ ಸಂಗತಿಯನ್ನು ಯೋಚಿಸಿದರೆ ಬ್ರಿಟಿಷ್ ಸರ್ಕಾರದವರು ಕೊಡವರನ್ನು ಸ್ವಲ್ಪ ಮಟ್ಟಿಗಾದರೂ ಹಿಂಜರಿಯಲಿಲ್ಲವೆಂಬದು ಪರಿಷ್ಕಾರವಾಗುತ್ತೆ.

ಇದರ ಮೂಡತಕ್ಕದ್ದೇನು? ಕಿಂಚಿತ ಯೋಗ್ಯ ಕಿಂಚಿತ ಆದಾಯವಾಗಿರುವುದರಿಂದ ಇವರು ಪ್ರತ್ಯೇಕ ಪ್ರಾಂತ್ಯವಾಗಿ ಇರಲಿಕ್ಕೆ ಇವರಿಗೆ ಸಾಧ್ಯವೋ? ಸಾಧ್ಯವಿಲ್ಲವೆಂದು ಹೇಳುತ್ತಾರೆ. ಇದು ಅವರ ತಪ್ಪಭಿಪ್ರಾಯವೆಂದು ನಾನು ಖಂಡಿತವಾಗಿ ಹೇಳುವೆನು. ಇದಕ್ಕೆ ೧—೬—32ರ 'ರಾಷ್ಟ್ರಬಂಧು' ಪತ್ರಿಕೆಯಲ್ಲಿ ಬರೆದ ಕೊಡಗಿನ ಭವಿಷ್ಯತ್ತಿಂಬ ಟೀಕೆಯೇ ಸಾಕ್ಷಿಯಾಗಿದೆ.

ನಮ್ಮ ಕೊಡಗಿನಲ್ಲು ಆದಿಯಿಂದಲೂ ಅಂದರೆ ಪುರಾತನದಿಂದಲೂ ಸ್ವರಾಜ್ಯವಿದ್ದು, ಈ ದೇಶವನ್ನು ಯಾರೊಬ್ಬರ ಕೈವಶ ಬಿಡದೆ ಪ್ರತ್ಯೇಕವಾಗಿದ್ದ ನಮ್ಮ ದೇಶವನ್ನು ಎಂದಿಗೂ ಮೈಸೂರಿನೊಂದಿಗೆ ಆಗಲೀ, ಮದ್ರಾಸಿನೊಂದಿಗೆ ಆಗಲೀ, ಕರ್ನಾಟಕದೊಂದಿಗಾಗಲೀ ಸೇರಿಸಲು ಮನ ಇಡಬಾರದು. ನಾವು ನಮ್ಮ ಆಳಿಸಲು ಮನಸೋ ಇಚ್ಛೆ ನಡಿಯಬೇಕು. ಪರರ ಹೇಳಿಕೆಗೆ ಒಳಗಾಗಬಾರದು.

ಶ್ರೀಮುತ ನಾಕಪ್ಪನವರು ಅವರ 5ನೇ ವ್ಯಾಖ್ಯಾನದಲ್ಲಿ ಹೇಳುವಂತೆ ಪುರಾತನದಲ್ಲು ಕೊಡಗಿಗೂ, ಮೈಸೂರಿಗೂ ಕಂಡಾಯ ಕೊಡುತ್ತಲಿದ್ದ ಇತ್ತೀಚೆಗೆ ಸೀಮೆಯಾದ ಮಂಜರಾಬಾದನ್ನು ಇದರ ನೆರೆ ಪ್ರಾಂತ್ಯವನ್ನೂ, ಈ ಮೊದಲು ಇದೇ ಮೇರೆ ಕೊಡಗಿಗೆ ಸೇರಿ ಇದ್ದ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೋಕನ್ನೂ, ವಯನಾಡನ್ನೂ ಬ್ರಿಟಿಷ್ ಸರ್ಕಾರದವರು ಈಗ ಅವರ ಅಧೀನದಲ್ಲಿ ಇರುವ ಪ್ರದೇಶಗಳಿಗೆಲ್ಲ ಸ್ವರಾಜ್ಯ ಕೊಡುವಾಗ್ಯೆ ಆದಿಯಲ್ಲು ಇದ್ದ ಈ ಕೊಡಗಿನ ಬಿಟ್ಟು ಹೋದ ಪ್ರದೇಶಗಳನ್ನು ನಮಗೇನೇ ಬಿಟ್ಟು ಕೊಡುವಂತೆಯೂ ಸೇರಿಸುವಂತೆ ಈಗ ನಡಿಯುತ್ತಿರುವ ರಾಜಕೀಯ ರಚನೆಯಲ್ಲು ಸೇರಿಸುವುದರಲ್ಲಿ ಯಾವ ಅಭ್ಯಂತರವೂ ಇರುವುದಿಲ್ಲ.

ಈಗಲೂ, ಇಂದು ನಾಳೆ ಮಂಜರಾಬಾದ್‌ನವರು ನಮ್ಮ ಕೊಡಗು ಸೋಮವಾರಪೇಟೆಯೇ ಇವರ ಮುಖ್ಯ ಪೇಟೆಯಾಗಿ ಅವರ ಆಮದ್ ರಫ್ತು ನಡಿಯುವದಾಗಿದೆ. ಪುತ್ತೂರಿನ ಹಲವರೂ ಕೊಡಗಿಗೆ ಬರುತ್ತಿದ್ದಾರೆ. ವಯನಾಡಿನವರ ಭಾಷೆ ಬೇರೆಯಾದುದರಿಂದ ನಾನು ಹೆಚ್ಚಾಗಿ ಒತ್ತಿ ಬರೆಯಲಾರೆ. ಮೇಲ್ಕಂಡ ಮೇರೆ ಇತ್ತೀಚೆಗೆ ಸೀಮೆಗಳಾಗಿದ್ದ ಮಂಜರಾಬಾದ್ ಮತ್ತು ಪುತ್ತೂರು ತಾಲೋಕು ಎರಡರ ಭಾಷೆಯು ಕನ್ನಡವಾಗಿರುವುದರಿಂದಲೂ, ಇವು ಪೂರ್ವ ಕೊಡಗಿಗೆ ಸೇರಿದವುಗಳಾಗಿದ್ದದರಿಂದಲೂ, ಈಗಿನ ರಾಜಕೀಯ ರಚನೆಯಲ್ಲಿ ಕೊಡಗಿಗೆ ಸೇರಿಸಿ ಕೊಡುವಂತೆಯೇ ನಮ್ಮ ಇದು ವರೆಗಿನ ಕೋರಿಕೆಯಾಗಿದೆ.

ನಮ್ಮ ಪುಟ್ಟ ದೇಶದಿಂದ ಬ್ರಿಟಿಷಿನವರು ಇದು ವರೆಗೆ ಅಂದಾಜು 82 ಲಕ್ಷ ರೂಪಾಯಿ ಉಳುವರಿ ಹೇಗೆ ಕೊಂಡು ಹೋದರು? ಅದಲ್ಲದೆ ಈಗ ತಲೆಭಾರದ ಸರ್ಕಾರಿ ನೌಕರರನ್ನು ಇಟ್ಟಿರುತ್ತಾರೆ. ಇದೆಲ್ಲ ನಮಗೇನೇ ನಮ್ಮ ದೇಶವನ್ನು ಬಿಟ್ಟು ಕೊಟ್ಟನಂತರ ಕಾಲೇಜ್, ಯುನಿವರ್ಸಿಟಿ ಇದೆಲ್ಲ ನಮ್ಮ ಕರ್ನಾಟಕ ಏಕೀಕರಣದವರು ಹೇಳುವಂತೆಯೂ, ಶ್ರೀಮುತ ನಾಕಪ್ಪನವರು ಹೇಳುವಂತೆ ಮೈಸೂರು ಸೀಮೆಯು ನಮ್ಮ ಕೊಡಗಿನ ಶ್ರೀ ಮೂಲ ಕಾವೇರಮ್ಮನಿಂದಲೇ ಉದ್ಧಾರವಾಗಿರುವುದರಿಂದಲೂ, ಇನ್ನೂ ಆಗುವುದರಿಂದ ಅವರಿಗೂ ನಮಗೂ ಈಗಿನ ಆಮದ್, ರಫ್ತು, ಆಸ್ಪತ್ರೆ, ಕಾಲೇಜ್, ಯೂನಿವರ್ಸಿಟಿ, ವಗೈರೆ ನಮ್ಮ ಈ ದೇಶಕ್ಕೆ ದ್ರೋಹ ಇಲ್ಲದೆ ಅವರಂತೆಯೇ ನಮ್ಮನ್ನು ಕಾಯುತ್ತಾರೆಂಬದರಲ್ಲು ಶ್ರೀ ಕಾವೇರಮ್ಮನವರ ದಯೆಯಿಂದ ನಮ್ಮ ಈ ಕೊಡಗಿನವರಿಗೆ ಪೂರಾ ಭರವಸೆ ಇದೆ ಎಂಬುವುದರಲ್ಲಿ ಯಾವ ಸಂದೇಹವೂ ಇರುವುದಿಲ್ಲ.

ಈ ಮೇಲ್ಕಂಡ ಕಾರಣಗಳನ್ನೆಲ್ಲ ನಮ್ಮ ದೇಶದ ಮಹನೀಯರು ಮತ್ತು ಮಹಿಳೆಯರು ಚೆನ್ನಾಗಿ ಪರ್ಯಾಲೋಚಿಸಿ ನಾವು ನಾವಾಗಿ ನಮ್ಮ ಪೂರ್ವ ರೀತಿಯಂತೆ ನಮ್ಮ ರಾಜ್ಯವನ್ನು ನಡಿಸಲು ನಾವು ಪ್ರಯತ್ನಪಡಬೇಕೇ ಶಿವಾಯಿ ಇತರ ರಾಜ್ಯದೊಂದಿಗೆ ಸೇರಲು ಕಬೂಲಿಸಬಾರದೆಂದು ಕೊಡಗಿನ ಮೂಲೆ ಮುಟ್ಟನ್ನು ಉದ್ಯೋಗ ಧರ್ಮದಿಂದಲೂ, ಸಹಕಾರ ತತ್ವಗಳಿಂದಲೂ ತಿಳಿದು ನೋಡಿದ ನನ್ನ ಬಿನ್ನಹವಾಗುತ್ತೆ.

ಉದಿಯಂಡ ಮಾದಯ್ಯ.

ವರ್ತಮಾನ ಸಂಗ್ರಹ.

ಒಳದೇಶ.

ಮಡಿಕೇರಿಯ ಸೆಂಟ್ರಲ್ ಹೈಸ್ಕೂಲು ರಜ ಮುಗಿದು ಇದೇ ತಾ. 17 ನೇ ಬುಧವಾರ ತೆರೆಯಲ್ಪಡುವುದು.

ಕೊಡಗು ನ್ಯಾಯವಿಧಾಯಕ ಸಭೆಯ ಮೀಟಿಂಗೊಂದು ಬರುವ ಸೆಪ್ಟೆಂಬರು ತಾ. 9 ರಲ್ಲಿ ಮಡಿಕೇರಿಯಲ್ಲಿ ನಡೆಯುವುದು.

ಈ ತಾ. 6 ರಿಂದ ಇಂದಿನ ವರೆಗೆ ಮಡಿಕೇರಿಯಲ್ಲಿ 5.14 ಇಂಚು ಮಳೆಯಾಗಿದೆ. ಈಗ ಮೂರು ದಿವಸಗಳಿಂದ ಮಳೆಯು ಕಡಿಮೆಯಾಗಿ ಆಗಾಗ್ಯೆ ಬಿಸಿಲು ಕಾಣುತ್ತಿದೆ.

ಮೈಸೂರು ಮಹಾರಾಜ ಹೈಸ್ಕೂಲಿನಲ್ಲಿ ಓದುತ್ತಿದ್ದ ಕುಂಞಾಳಿಯಂಡ ಪಿ. ಮಾದಪ್ಪನವರು ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರೆಂದು ತಿಳಿಯಬರುತ್ತದೆ.

ಕಳೆದ ವಾರ ಫ್ರೇಜರ್‌ಪೇಟೆ ಬಳಿ ಫಾರೆಸ್ಟಿನಲ್ಲಿ ಚೀಫ್ ಫಾರೆಸ್ಟ್ ಆಫೀಸರವರು ಗುಂಡು ಹೊಡೆದು ಕೊಂದ (ರೋಗ್) ಕಳ್ಳ ಆನೆಯ ದಂತವು 26 ಪೌಂಡು ತೂಕವಿತ್ತೆಂದು ಸುದ್ದಿ.

ಕಳೆದ ಬಿ. ಎಲ್. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಮಿ. ಸಿ. ಯಸ್. ನಾರಾಯಣನವರಿಗೂ, ಮಿ. ಮೇರಿಯಂಡ ಮಾದಪ್ಪನವರಿಗೂ ಲಾಯರು ಕೆಲಸದ ಸನ್ನದುಗಳು ಬಂದಿವೆಯೆಂದು ತಿಳಿಯುತ್ತೇವೆ.

ಕೊಡಗನ್ನು ಪ್ರತ್ಯೇಕ ಇಡಬೇಕೋ ಅಥವಾ ದೊಡ್ಡ ಪ್ರಾಂತ್ಯದೊಂದಿಗೆ ಸೇರಿಸಬೇಕೋ ಎಂಬ ವಿಷಯವನ್ನು ಕುರಿತು ಪಬ್ಲಿಕ್ ಚರ್ಚೆಯು ಈ ತಾ. 27 ರಲ್ಲಿ ವೀರರಾಜಪೇಟೆ ಹೈಸ್ಕೂಲ್ ಹಾಲ್‌ನಲ್ಲಿ ನಡೆಯುವದೆಂದು ತಿಳಿಯುತ್ತೇವೆ.

ಕೆಲವು ದಿವಸಗಳ ಹಿಂದೆ ಕೊಟ್ಟಿಲಲ್ಲಿದ್ದ ಮಗುವು ಬಿಂದು ಗಾಯವಾದ ದೆಸೆಯಿಂದ ಕಾಣದೆಯಾಗಿದ್ದ ಯವಕಪಾಡಿ ಗ್ರಾಮದ ಅಂಜಪರವಂಡ ಚಂಗಪ್ಪನವರ ಪತ್ನಿಯ ಹೆಣವು ಅವರ ಮನೆ ಬಳಿ ಇರುವ ಹೊಳೆಯಲ್ಲಿ ಇತ್ತೀಚೆಗೆ ಕಾಣಬಂತೆಂದು ವರ್ತಮಾನ.

ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರವರು ಈ ತಾ. 10 ರಲ್ಲಿ ಬೆಂಗಳೂರಿಗೆ ಹೋಗಿರುವರು. ಕಮಿಷನರವರು ತಾ. 14 ರಲ್ಲಿ ಹೋಗಲಿರುವರು. ಇವರು ಕೊಡಗಿನ ಮುಂದಿನ ರಾಜಕೀಯ ವಿಚಾರವನ್ನು ಕುರಿತು ಚೀಫ್ ಕಮಿಷನರೊಂದಿಗೆ ಚರ್ಚಿಸಲು ಹೋಗುವದಾಗಿದೆಯೆಂದು ಸುದ್ದಿ.

ಮಿ. ಮಲ್ಲೇಂಗಡ ಮುತ್ತಣ್ಣನವರು ರಜೆ ಮುಗಿಸಿಕೊಂಡು ಬರುವ ವರೆಗೆ ಈಗ ಪ್ರಾಸಿಕ್ಯೂಟಿಂಗ್ ಪೋಲೀಸು ಇನ್‌ಸ್ಪೆಕ್ಟರು ಕೆಲಸವನ್ನು ಹಂಗಾಮಿಯಾಗಿ ಮಾಡುತ್ತಿರುವ ಮಿ. ಕೋಡಿಮಣಿಯಂಡ ಬೆಳ್ಯಪ್ಪನವರಿಗೆ ತಾ. 1-12-31 ರಿಂದ ಆಕ್ಟಿಂಗ್ ಎಲೋವೆನ್ಸ್ ಕೊಡಲು ಮಂಜೂರಾಗಿದೆಯೆಂದು ತಿಳಿಯುತ್ತೇವೆ.

ಪ್ಲಾನುಗಳ ನಕಲುಗಳು ಬೇಕಾದವರು ಆಫೀಸು ಇರುವ ಸಮಯದಲ್ಲಿ ತಮ್ಮ ಅಪ್ಲಿಕೇಶನುಗಳನ್ನು ಅಸಿಸ್ಟೆಂಟ್ ಕಮಿಶನರವರ ಆಫೀಸಿನ ಶಿರಸ್ತೇದಾರರಿಗಾಗಲೀ, ಲ್ಯಾಂಡ್ ರಿಕಾರ್ಡ್ ಆಫೀಸಿನ ಹೆಡ್ ಕ್ಲಾರ್ಕರಿಗಾಗಲೀ, ತಾಲೋಕು ಆಫೀಸ ಶಿರಸ್ತೆದಾರರಿಗಾಗಲೀ, ನಾಡು ಆಫೀಸಿನ ಪಾರುಪತ್ಯಗಾರರಿಗಾಗಲೀ ಕೊಡಬಹುದೆಂದು ಕಮಿಷನರವರ ಪ್ರಕಟಣೆಯಾಗಿದೆ.

ಕೊಡಗು ದೇವಸ್ಥಾನಗಳ ಆಡಳಿತ ಕಮಿಟಿಯಲ್ಲಿ ಎಡೆನಾಲ್ಕುನಾಡು ಮತ್ತು ಕಿಗ್ಗಟ್ಟುನಾಡು ತಾಲೋಕುಗಳ ಸದಸ್ಯರಾಗಿದ್ದ ಮಿ. ಗಿರಿಗೌಡನ ಸಂಜಪ್ಪಗೌಡರ ಮರಣದಿಂದುಂಟಾದ ಖಾಲಿ ಸ್ಥಳಕ್ಕೆ ಒಬ್ಬರನ್ನು ಆರಿಸುವ ಬಗ್ಯೆ ಬರುವ ಸೆಪ್ಟೆಂಬರು ತಾ. 7 ರಲ್ಲಿ ವೀರರಾಜಪೇಟೆ ಮಿ. ಅಡಿಕೆ ಸಂಜಪ್ಪನವರ ಛತ್ರದಲ್ಲಿ ಓಟುಗಳು ತೆಗೆದುಕೊಳ್ಳಲ್ಪಡುವವೆಂದು ಪ್ರಕಟವಾಗಿದೆ.

ಕಾಫಿ ಬೆಳೆಯುವವರ ಸಂಘ, 'ಉಪಾಸಿ' ಸಂಘ ಮತ್ತು ಕಾಫಿಸೆಸ್ ಮೊದಲಾದ ಸಂಗತಿಗಳನ್ನು ಕುರಿತು ಚರ್ಚಿಸುವುದಕ್ಕಾಗಿ ಕೊಡಗಿನ ಮತ್ತು ಮೈಸೂರಿನ ಕಾಫಿ ಬೆಳೆಯುವ ಒಕ್ಕಲುಮಣಸು, ಸಿಂಕೋನಾ ಮುಂತಾದವುಗಳ ಬೆಳವಣಿಗೆಯಲ್ಲಿ ಆಸಕ್ತಿಯುಳ್ಳಂಥ ಕಂಪೆನಿಗಳ, ಸಂಘಗಳ ಮತ್ತು ಪ್ಲಾಂಟರುಗಳ ಮೀಟಿಂಗೊಂದು ಈ ತಾ. 15 ರಲ್ಲಿ ಬೆಂಗಳೂರಿನ ಡೇಲಿಯೋ ಹಾಲ್‌ನಲ್ಲಿ ನಡೆಯುವುದು.

ಬೆಂಗಳೂರಿನ ಕೊಡವರು ತಾ. 19—6—32 ಮತ್ತು 10—7—32 ರಲ್ಲಿ ಸಭೆ ಸೇರಿ ಕೊಡಗಿನ ರಾಜಕೀಯ ಭವಿಷ್ಯತ್ತನ್ನು ಕುರಿತು ಚರ್ಚೆ ನಡಿಸಿ, ಕೊಡಗನ್ನು ನೆರೆ ಪ್ರಾಂತ್ಯಕ್ಕೆ ಸೇರಿಸುವುದು ಉತ್ತಮವೆಂತಲೂ, ಅದರಲ್ಲೂ ಮೈಸೂರಿಗೆ ಸೇರಿಸುವುದು ಎಲ್ಲಾ ವಿಷಯಗಳಲ್ಲಿಯೂ ದೇಶದ ಅಭಿವೃದ್ಧಿಗೆ ಸಹಕಾರಿಯಾಗುವದೆಂದೂ ಅಭಿಪ್ರಾಯಪಟ್ಟರೆಂದು ಅಲ್ಲಿಯ ಕೊಡಗು ಸಂಘದ ಸೆಕ್ರೆಟರಿಯವರು ತಿಳಿಸಿರುತ್ತಾರೆ.

ವೀರರಾಜಪೇಟೆ ಸರ್ಕಲಿನ ಸಹಕಾರಿ ಇನ್‌ಸ್ಪೆಕ್ಟರಾಗಿರುವ ಮಿ. ಪಂದಿಕುತ್ತಿರ ಚಂಗಪ್ಪನವರು ಸಹಕಾರದಲ್ಲಿ ಹೆಚ್ಚಿನ ಶಿಕ್ಷಣ ಬಗ್ಯೆ ಇಂಗ್ಲೆಂಡಿಗೆ ಬರುವ ಸೆಪ್ಟೆಂಬರು ತಿಂಗಳಲ್ಲಿ ಹೋಗಲಿರುವರೆಂತಲೂ, ಇವರ ಬದಲಿಗೆ ಮಿ. ಯಸ್. ಶೇಷಗಿರಿರಾಯರು ವೀರರಾಜಪೇಟೆ ಸರ್ಕಲಿನ ಇನ್‌ಸ್ಪೆಕ್ಟರಾಗಿಯೂ, ಮಿ. ಮಂಡೆಪಂಡ ಪೊನ್ನಪ್ಪನವರು ಶೇಷಗಿರಿರಾಯರ ಬದಲಿಗೆ ಮಡಿಕೇರಿ ಸರ್ಕಲಿನ ಇನ್‌ಸ್ಪೆಕ್ಟರಾಗಿಯೂ ನೇಮಿಸಲ್ಪಟ್ಟಿರುವರೆಂದು ತಿಳಿಯ ಬರುತ್ತದೆ.

ಮದ್ರಾಸು ಪ್ರಾಂತದಲ್ಲಿ ಫಾರೆಸ್ಟರುಗಳಾಗಿದ್ದ ಮಿ. ಗಳಾದ 1. ಚೆಂಡ ಮಕ್ಕಣ್ಣನವರು, 2. ಮೋಕೇರಿರ ನಂಜಪ್ಪನವರು, ಕಂಬೇರಂಡ ಮುದ್ದಯ್ಯನವರು, 4. ಮಲ್ಲೇಂಗಡ ಮೈನವರು, 5. ಕಾಳಿಮಾಡ ಅಚ್ಚಯ್ಯನವರು, 6. ಮನೆಯಪಂಡ ಉತ್ತಯ್ಯನವರು, 7. ಕಂಡೇಯಂಡ ಮುತ್ತಣ್ಣನವರು, 8. ಚಪ್ಪುಮಣಿಯಂಡ ಮಾದಪ್ಪನವರು ರೇಂಜರುಗಳಾಗಿ ಬಡ್ತಿ ಹೊಂದಿ ಕೊಯಂಬುತ್ತೂರು ಫಾರೆಸ್ಟು ಕಾಲೇಜಿಗೆ ಕಳುಹಿಸಲ್ಪಟ್ಟಿರುವರಾಗಿ ತಿಳಿಯುತ್ತೇವೆ.

ಮದ್ರಾಸಿ ಕೊಡಗು ಸಂಘದವರು ತಾ. 7 ರಲ್ಲಿ ಸೇರಿ ಕೊಡಗಿನ ಮುಂದಿನ ರಾಜಕೀಯ ಭವಿಷ್ಯತ್ತನ್ನು ಕುರಿತು ಚರ್ಚಿಸಿದರು. ...ವೇರಂಡ ಬಟ್ಟಪ್ಪನವರು ಕೊಡಗನ್ನು ಪ್ರತ್ಯೇಕ ಇಡಬೇಕೆಂತಲೂ, ಕೊಂಗಂಡ ಬಿ. ಅಚ್ಚಯ್ಯನವರು ಕೊಡಗನ್ನು ಮದ್ರಾಸು ದೊಡ್ಡ ಪ್ರಾಂತ್ಯಕ್ಕೆ ಸೇರಿಸುವುದು ಉತ್ತಮವೆಂತಲೂ ವಾದಿಸಿದರು. ಮಿ. ಪುಲಿಯಂಡ ಐಯ್ಯಪ್ಪನವರು ಮಿ. ಅಚ್ಚಯ್ಯನವರ ಅಭಿಪ್ರಾಯವನ್ನು ವಿರೋಧಿಸಿದರು. ಅಧ್ಯಕ್ಷರಾದ ಮಿ. ಕಂಬೀರಂಡ ಯನ್. ಗಣಪತಿಯವರು ಕೊಡಗು ಪ್ರತ್ಯೇಕ ಪ್ರಾಂತ್ಯವಾಗಿ ಇಡುವುದೇ ಒಳ್ಳೆಯದೆಂದು ಅಭಿಪ್ರಾಯ ಕೊಟ್ಟರು.

ಹೊರದೇಶ.

ತಾ. 8 ರಲ್ಲಿ ನಾಡದಲ್ಲಿ ಸೇಂದಿ ಗುತ್ತಿಗೆಗಳ ಹರಾಜನ್ನು ಪಿಕೆಟ್ ಮಾಡಿದ ನಾಲ್ಕು ಸ್ವಯಂಸೇವಕರು ಕೈದು ಮಾಡಲ್ಪಟ್ಟು ಆಮೇಲೆ ಬಿಡಲ್ಪಟ್ಟರು.

ತಾ. 4 ರಲ್ಲಿ ...ರಿನಲ್ಲಿ 'ಗಾಂಧಿ ದಿನ'ವನ್ನು ಆಚರಿಸಿದಕ್ಕಾಗಿ ನಾಲ್ಕು ಸ್ವಯಂಸೇವಕರಿಗೆ ಆರಾರು ತಿಂಗಳು ಸಜೆಯೂ, 25 ರೂ. ಜುಲ್ಮಾನೆಯೂ ವಿಧಿಸಲಾಯಿತು.

ಕೋಮುವಾರು ಮಸ್ಲೆಯನ್ನು ಕುರಿತು ಪ್ರಧಾನ ಮಂತ್ರಿಯವರ ತೀರ್ಪು ಈ ತಾ. 17 ರಲ್ಲಿ ಇಂಗ್ಲೆಂಡಿನಲ್ಲಿಯೂ, ಇಂಡಿಯದಲ್ಲಿಯೂ ಪ್ರಕಟವಾಗುವದೆಂದು ವರ್ತಮಾನ.

ತಾ. 10 ರಲ್ಲಿ ...ನಲ್ಲಿ ಪೋಲೀಸ್ ಸ್ವಾಧೀನವಿರುವ ಕಾಂಗ್ರೆಸ್ ಮಂದಿರ ಪ್ರವೇಶಿಸಲು ಯತ್ನಿಸಿದಾಗ 6 ಸ್ವಯಂಸೇವಕರೂ, ಇ ಸ್ವಯಂಸೇವಕಿಯರೂ ಕೈದು ಮಾಡಲ್ಪಟ್ಟರು.

ತಾ. 9 ರಲ್ಲಿ ...ದಲ್ಲಿ ವಿದೇಶೀ ಬಟ್ಟೆ ಅಂಗಡಿಯನ್ನು ಪಿಕೆಟ್ ಮಾಡುತ್ತಿದ್ದ 8 ಸ್ತ್ರೀಯರು ದಸ್ತಗಿರಿ ಮಾಡಲ್ಪಟ್ಟರು. ಅವರಲ್ಲಿ ಅಲ್ಲಿಯ 13 ನೇ ಡಿಕ್ಟೇಟರೂ ಇರುವರು.

ತಮಿಳು ನಾಡಿನ ಕಾಂಗ್ರೆಸ್ ಮುಂದಾಳಾದ ಶ್ರೀ ರಾಜಗೋಪಾಲಾಚಾರಿಯವರೊಂದಿಗೆ ಮದ್ರಾಸಿನ ಗವರ್ನರವರು ಈಗಿನ ರಾಜಕೀಯ ಸ್ಥಿತಿಯನ್ನು ಕುರಿತು 50 ಮಿನಿಟುಗಳ ವರೆಗೆ ಸಂಭಾಷಣೆ ನಡಿಸಿದರು.

ಅಲಹಾಬಾದಿನಲ್ಲಿ 'ಸ್ವರಾಜ್ಯ ಭವನ'ವನ್ನು ಪುನಃ ಸ್ವಾಧೀನಪಡಿಸಿಕೊಳ್ಳಲು, ಮಧುರಾ ಮುಂತಾದ ಕಡೆಗಳಿಂದ ಸ್ವಯಂಸೇವಕರಿದ್ದರು. ಅವರ ಪ್ರಯತ್ನದಲ್ಲಿ 41 ಮಂದಿ ಕೈದು ಮಾಡಲ್ಪಟ್ಟರು.

ಲಕ್ನೋದಲ್ಲಿ ಜೈಲಿನಿಂದ ಈಗ ತಾನೇ ಹೊರಗೆ ಬಂದಿರುವ ಸ್ವಯಂಸೇವಕರು ಪಿಕೆಟಿಂಗ್ ಕೆಲಸವನ್ನು ಉತ್ಸಾಹದಿಂದ ನಡಿಸುತ್ತಿರುವರು. ವಿದೇಶೀ ಬಟ್ಟೆ ವ್ಯಾಪಾರವು ಶೇಕಡ 60 ರಷ್ಟು ಕಡಿಮೆಯಾಯಿತು.

ಅಹಮ್ಮದಾಬಾದಿನ ಕ್ರಿಸು ಆಫೀಸನ್ನು ಪೋಲೀಸರಿಂದ ಸ್ವಾಧೀನಪಡಿಸಿಕೊಳ್ಳಲು ಕಾಂಗ್ರೆಸ್ಸಿನವರು 2 ನೇ ಸಾರಿ ದಾಳಿ ಇಟ್ಟರು. ಇದಕ್ಕಾಗಿ ಸಿದ್ಧರಾಗಿದ್ದ ಪೋಲೀಸಿನವರು ಅಲ್ಲಿಗೆ ಬಂದಿದ್ದ 50 ಜನರನ್ನು ದಸ್ತಗಿರಿ ಮಾಡಿದರು.

ಬಿಹಾರ್ ಪ್ರಾಂತ್ಯದ ... ಹಾರಿ ಎಂಬಲ್ಲಿ ಸ್ವಯಂಸೇವಕರು ಪೋಲೀಸರ ಸಹರೆಯುತ ಕಾಂಗ್ರೆಸ್ ಮಂದಿರವನ್ನು ನುಗ್ಗಲು ಹೋದಾಗ್ಯೆ ದಸ್ತಗಿರಿಗೊಳಗಾದವರು, ಅದರ 7 ಜನರಿಗೆ ಮಾತ್ರ ಸಜೆ ... 10 ಸ್ತ್ರೀಯರೂ ಇದ್ದರು.

ಡಾಕ್ಟರ್ ಮುಂಜೆಯವರೊಂದೂ ಮಹಾಸಭೆಯ ವರ್ಕಿಂಗ್ ಕಮಿಟಿಯ ಅಧ್ಯಕ್ಷತೆಗೆ ರಾಜಿನಾಮೆ ಕಳುಹಿಸಿರುವರು. ಆದರೆ ಆ ಕಮಿಟಿಯ ರಾಜಿನಾಮೆಯನ್ನು ಈಗ ಅಂಗೀಕರಿಸದೆ ಅವರು ಇಂಗ್ಲೆಂಡಿನಿಂದ ವಾಪಸು ಬಂದ ಮೇಲೆ ಆಲೋಚಿಸುವರಂತೆ.

ಕಳೆದ ತಾ. 26 ರಲ್ಲಿ ಸೈಕಲಿನ ಮೇಲೆ ಹೋಗುತ್ತಿದ್ದಾಗ್ಯೆ ಯಾರಿಂದಲೋ ಗುಂಡು ಹೊಡೆಯಲ್ಪಟ್ಟು, ಹೊಟ್ಟೆಯೊಳಗೆ ಗುಂಡು ನುಗ್ಗಿದ್ದ ಬಂಗಾಳ ಕೊಮಿಲ್ಲಾದಲ್ಲಿಯ ಪೋಲೀಸ್ ಎಡಿಶನಲ್ ಸುಪರಿಂಟೆಂಡೆಂಟಾದ ಮಿ. ಇ. ಬಿ. ಎಲ್ಲಿಸನ್‌ರವರು ಆಸ್ಪತ್ರೆಯಲ್ಲಿ ಮೃತರು.

ಡಿಲ್ಲಿ ಮುನ್ಸಿಪಾಲಿಟಿಯ ಒಬ್ಬ ಮೆಂಬರಾದ ಶ್ರೀ. ಜುಗಲ್ ಕಿಶೋರರವರು ಸತ್ಯಾಗ್ರಹ ಚಳವಳಿ ಸೇರಿ 6 ತಿಂಗಳು ಸಜೆ ಅನುಭವಿಸಿ ಮರಳಿ ಬಂದರು. ...ಇವರು ಶಾಸನ ಭಂಗ ಮಾಡಿದರೆಂದು ಅಲ್ಲಿಯ ಚೀಫ್ ಕಮಿಶನರು ಅವರ ಮುನ್ಸಿಪಲ್ ಮೆಂಬರುತನವನ್ನು ರದ್ದು ಮಾಡುವರು.

ಬ್ರಿಟಿಷ್ ಇಂಡಿಯಾದ 20 ಪ್ರತಿನಿಧಿಗಳಿಂದಲೂ, ಸಂಸ್ಥಾನಗಳ 10 ಪ್ರತಿನಿಧಿಗಳಿಂದಲೂ ಕೂಡಿದ ಸಣ್ಣದಾದ 3ನೇ ದುಂಡುಮೇಜು ಪರಿಷತ್ತು ಬರುವ ನವೆಂಬರು ಮಧ್ಯದಲ್ಲಿ ಲಂಡನಿನಲ್ಲಿ ನಡಿಸಲ್ಪಡುವದೆಂದು ಲಂಡನಿನ ವರ್ತಮಾನ ಬಂದಿದೆಯಾಗಿ 'ಪಯನಿಯರ್' ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಆರ್ಡಿನೇನ್ಸುಗಳನ್ನು ರದ್ದು ಮಾಡಬೇಕೆಂದು ಮಿ. ಜಿ. ಹಾರಕರೆಯವರು ಕಳೆದ ವಾರ ಬೊಂಬಾಯಿ ಹೈಕೋರ್ಟಿಗೆ ಬರಕೊಂಡಿದ್ದ ಅರ್ಜಿಯು, ಆರ್ಡಿನೇನ್ಸುಗಳು ಶಾಸನಕ್ಕೆ ವಿರೋಧವಾಗುವದಿಲ್ಲವೆಂದು ಈ ವಿಷಯವೇ ಪ್ರೈವಿಕೌನ್ಸಿಲಿನಲ್ಲಿ ತೀರ್ಮಾನವಾಗಿದೆಯೆಂದು ಹೈಕೋರ್ಟಿನಲ್ಲಿ ತಳ್ಳಿ ಹಾಕಲ್ಪಟ್ಟಿತು.

"ಸಿ" ಕ್ಲಾಸು ರಾಜಕೀಯ ಕೈದಿಗಳಿಗೆ ದಕ್ಷಿಣ ಹಿಂದೂಸ್ಥಾನದಲ್ಲಿ ಅತ್ಯಗತ್ಯವಾಗಿರುವ ಮಜ್ಜಿಗೆ ಕೊಡದಿರುವುದು ಅನ್ಯಾಯವೆಂತಲೂ, ಅದನ್ನು ಕೊಡುವ ಏರ್ಪಾಡನ್ನು ಸರ್ಕಾರದವರು ಕೂಡಲೆ ಮಾಡಬೇಕೆಂದೂ ಅಖಿಲಭಾರತ ಮಹಿಳೆಯರ ಸಂಘದ ಕಮಿಟಿಯವರು ಠರಾವು ಪಾಸುಮಾಡಿ, ಸರ್ಕಾರಕ್ಕೆ ಕಳುಹಿಸಿರುವರು.

ದುಂಡು ಮೇಜು ಪರಿಷತ್ತಿನ ರೀತಿಯನ್ನು ಪುನಃ ಕೈಕೊಳ್ಳುವ ವರೆಗೆ ಹಿಂದೀಯರ್ಯಾರೂ ರಾಜಕೀಯ ರಚನೆಯ ತಯಾರಿಸುವಿಕೆಯ ವಿಷಯದಲ್ಲಿ ಸರ್ಕಾರದೊಂದಿಗೆ ಸಹಕರಿಸಬಾರದೆಂದು ಸಪ್ರೂ, ಜಯಕರ್, ಶಾಸ್ತ್ರಿ ಮೊದಲಾದ ಹಲವು ಲಿಬರಲ್ ಮುಂದಾಳುಗಳು ರುಜುಮಾಡಿ ಜನರಿಗೆ ಒಂದು ಅಪ್ಪೀಲನ್ನು ಪ್ರಕಟಿಸಿರುವರು.

ತಾ. 9 ರಲ್ಲಿ ಮಧುರೆಯ ನಾಲ್ಕು ನಾಲ್ಕು ಸ್ವಯಂಸೇವಕರ ಎರಡು ಸಂಗಡಗಳು ಓಡುತ್ತಿದ್ದ ಬಸ್ಸುಗಳನ್ನು ಅವಾಯದ ಸರಪಳಿಯನ್ನು ಎಳೆದು ನಿಲ್ಲಿಸಿದರು. ಬಸ್ಸು ನಿಂತ ಕೂಡಲೇ ಜಯಘೋಷ ಮಾಡುತ್ತಾ ಕಾಂಗ್ರೆಸ್ಸಿನ ಹಸ್ತ ಪತ್ರಿಕೆಗಳನ್ನು ಪ್ರಯಾಣಿಕರಿಗೆ ಹಂಚಿದರು. ಅವರು 8 ಮಂದಿಯೂ ಕೂಡಲೆ ಕೈದು ಮಾಡಲ್ಪಟ್ಟರು.

ಡಾಕ್ಟರ್ ಅನ್ಸಾರಿಯವರು ಯೂರೋಪಿಗೆ ಹೋಗುವ ಉದ್ದೇಶ್ಯ ತಾ. 10 ರಲ್ಲಿ ಬೊಂಬಾಯಿಗೆ ಹೋದರು. ಅವರು ತನ್ನ ಕಾಯಿಲೆಯ ಚಿಕಿತ್ಸೆಗಾಗಿ ಜರ್ಮನಿ ಮತ್ತು ಆಸ್ಟ್ರೀಯಾ ದೇಶಗಳಲ್ಲಿ ಸುಮಾರು ಆರು ತಿಂಗಳು ಇರಬಹುದೆಂದೂ ಇಂಗ್ಲೆಂಡಿಗೆ ಹೋಗುವ ಕೆಲಸವಿಲ್ಲವೆಂದೂ ಹೇಳಿದರು. ಅವರಿಗೆ ಮಹಾತ್ಮ ಗಾಂಧಿಯವರೊಂದಿಗೆ ಸಂಭಾಷಣೆಗೆ ಅಧಿಕಾರಿಗಳು ಅವಕಾಶ ಕೊಡಲಿಲ್ಲ.

ಬ್ರಿಟಿಷ್ ಸರ್ಕಾರದ ಈಗಿನ ನೀತಿಯು ಸರಿಯಲ್ಲದ್ದರಿಂದ ಅದನ್ನು ಕೌನ್ಸಿಲಿನಲ್ಲಿ ಚರ್ಚಿಸಬೇಕೆಂದು ಮದ್ರಾಸು ಕೌನ್ಸಿಲಿನ ನೇಶನಲಿಸ್ಟ್ ಮೆಂಬರೊಬ್ಬರು ಠರಾವು ಕಳುಹಿಸಿದ್ದರು. ಪ್ರಕೃತದ ರಾಜಕೀಯ ಪರಿಸ್ಥಿತಿಯನ್ನು ಚರ್ಚಿಸುವ ಅಧಿಕಾರವು ಇಂಡಿಯಾ ಸರ್ಕಾರಕ್ಕಿರುವುದಲ್ಲದೆ ಪ್ರಾಂತೀಕ ಕೌನ್ಸಿಲಿಗೆ ಇಲ್ಲವೆಂತಲೂ, ಇಂಥಾ ಚರ್ಚೆಯಿಂದ ಮುಂದಿನ ರಾಜಿ ಸಂಧಾನಗಳಿಗೆ ವಿಘ್ನ ಉಂಟಾಗಬಹುದೆಂತಲೂ ಹೇಳಿ ಅಲ್ಲಿಯ ಗವರ್ನರು ಸದರಿ ಠರಾವನ್ನು ಕೌನ್ಸಿಲಿನಲ್ಲಿ ಚರ್ಚಿಸಲು ಬಿಡಲಿಲ್ಲ.

ಕೆಲವು ದಿವಸಗಳಿಂದ ಸುಲೂರು ಪೇಟೆಯ ಸಮುದ್ರ ತೀರದಲ್ಲಿ ರಾಶಿಯಾಗಿ ಬಿದ್ದಿರುವ ಉಪ್ಪನ್ನು ಸುತ್ತ ಮುತ್ತಲಿನ ಜನರು ಹೊತ್ತುಕೊಂಡು ಹೋಗುತ್ತಿದ್ದರು. ಎಕ್ಸೈಸ್ ಆಫೀಸರು ಅವರನ್ನು ಕೈದು ಮಾಡಲು ಯತ್ನಿಸಿದಾಗ ಸಾಧಿಸಲಿಲ್ಲ. ಪೋಲೀಸರ ದಂಡು ಬಂದು ಉಪ್ಪು ತೆಗೆಯುತ್ತಿದ್ದ ಸುಮಾರು 3000 ಜನರ ಪೈಕಿ 187 ಮಂದಿಯನ್ನು ಕೈದು ಮಾಡಿದರು. ಇಷ್ಟರ ವರೆಗೆ ಸುಮಾರು ಹತ್ತು ಸಾವಿರ ಮಣ ಉಪ್ಪು ಸಾಗಿಸಲ್ಪಟ್ಟಿರಬಹುದೆಂದು ಅಂದಾಜು. ದಸ್ತಗಿರಿಯಾದವರಲ್ಲಿ 7 ಜನರು ಸ್ತ್ರೀಯರು. ಎಲ್ಲರನ್ನೂ ಜಾಮೀನು ಮೇಲೆ ಬಿಡುಗಡೆ ಮಾಡಿರುವರು. ಈಗ ಅಲ್ಲಿ ಪೋಲೀಸು ಕಾವಲು ಇದೆ.

ಕಾಂಗ್ರಾ ಜಿಲ್ಲೆಯಲ್ಲಿರುವ ನಡೌನ್ ಹಳ್ಳಿಯಲ್ಲಿ ಒಬ್ಬ ವಿಧವೆಯು ತಪಸ್ಸಿಗೆ ಪ್ರಾರಂಭಿಸಿರುವಳು. ಸುಮಾರು ಒಂದೂವರೆ ತಿಂಗಳ ಹಿಂದೆ ಅವಳ ಗಂಡನು ಮೃತನಾದನು. ಬರೇ 18 ವರ್ಷ ಪ್ರಾಯದ ಸತಿಯು ಈ ದುಃಖವನ್ನು ಸಹಿಸಲಾರದೆ ಗಂಡನು ಹೋದ ಮೇಲೆ ತಾನು ಬದುಕಿರಬಾರದೆಂದು ನಿಶ್ಚಯಿಸಿ, ಊರ ಬಳಿ ಇರುವ ಒಂದು ಬೈಲಿನಲ್ಲಿ ಅಲ್ಲಾಡದೆ ಒಂದೇ ಸಮನೆ ನಿಂತಿದ್ದಾಳೆ. ಕದಲುವುದೇ ಇಲ್ಲ. ಯಾರು ಬಂದು ಏನು ಹೇಳಿದರೂ ಕೇಳಲಿಲ್ಲ. ಬಿಸಿಲಿನ ತಾಪದಿಂದಲೂ, ಸೊಳ್ಳೆಗಳ ಕಡಿತದಿಂದಲೂ ಅವಳ ಅಂಗಾಂಗಗಳು ಬಾತುಕೊಳ್ಳುತ್ತಿವೆಯಂತೆ. ಆದರೂ ಅವಳು ಅನ್ನ ಆಹಾರಗಳನ್ನು ಬಿಟ್ಟು ತಪಸ್ಸು ಮಾಡುತ್ತಿರುವಳೆಂದು ವರ್ತಮಾನ.

ಬೊಂಬಾಯಿಯ ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರಾದ ಮಿ. ದಸ್ತೂರವರು ವಕೀಲರುಗಳೆಲ್ಲರೂ ತನ್ನ ಕೋರ್ಟಿಗೆ ಕಪ್ಪು ಅಂಗಿಯನ್ನೇ ಹಾಕಿಕೊಂಡು ಬರಬೇಕೆಂದು ಹೇಳಿದರು. ಆದರೆ ಕಳೆದ ತಿಂಗಳ ಕಡಲ್ಲಿ ಮಿ. ಅಮೃತಲಾಲ್ ದೇಸಾಯಿಯವರು ಬಿಳೀ ಖಾದಿ ಅಂಗಿಯನ್ನೂ, ಗಾಂಧಿ ಟೊಪ್ಪಿಯನ್ನೂ ಧರಿಸಿಕೊಂಡು ಸದರಿ ಕೋರ್ಟಿಗೆ ಹೋದಾಗ್ಯೆ ಕರಿ ಅಂಗಿಯನ್ನೇ ಧರಿಸಿಕೊಂಡು ಬರಬೇಕೆಂದರು. ತಾನು ಬಿಳೀ ಉಡುಪಿನಿಂದಲೇ ಹೈಕೋರ್ಟಿಗೂ ಕೂಡ ಹೋಗುತ್ತೇನಾದುದರಿಂದ, ಈ ಕೋರ್ಟಿಗೆ ಹಾಗೆ ಬರಕೂಡದಾಗಿ ಬರವಣಿಗೆಯ ಮೂಲಕ ಹುಕುಂ ಕೊಡಬೇಕೆಂದು ಅಮೃತಲಾಲರು ಅರ್ಜಿ ಬರೆದರು. ಇನ್ನೊಂದಾವರ್ತಿ ಅಮೃತಲಾಲರು ಹೋದಾಗ್ಯೆ ಬಿಳೀ ಅಂಗಿಯನ್ನು ಹಾಕಿಕೊಂಡು ಬರಬಹುದೆಂದು ಮೇಜಿಸ್ಟ್ರೇಟರು ಹೇಳಿದರು. ಬಿಳೀ ಜನರ ತಾಬೆಯಲ್ಲಿರುವ ಕಪ್ಪು ಮೇಜಿಸ್ಟ್ರೇಟರಿಗೆ ಬಿಳೀ ಉಡುಪಿನ ಮೇಲೆ ದ್ವೇಷವೋ ಯಾ ಖಾದಿಯ ಮೇಲೋ!

ಗಿದ್ದಿತು. ಅವರ ಮಾರ್ಗವು ಜಗನ್ಮಾತೆಯನ್ನು "ತಾಯಿ" ಯೆಂದು ಸಂಬೋಧಿಸುವ 'ಭಕ್ತಿ' ಮಾರ್ಗ. ಪರಮಹಂಸರ ವಿವೇಕವು ಸನ್ಯಾಸವಾಗಿರಲಿಲ್ಲ. ಆದೇಶವೂ ಭೋಗಾಸಕ್ತಿಯಾಗಲೀ ನಿರಾಕಾರವಾಗಲೀ ಅಲ್ಲ. ಅವರ ಆಕಾರವು ಯಾವತ್ತು ಜೀವಿಯ ರೂಪವೇ ಆಗಿರುವುದು. ಆದರೆ ಪಂಚಭೂತಗಳ ಸೆರೆಯಲ್ಲ. ಚರ್ಮಚಕ್ಷುಗಳಿಗೆ ಅಗೋಚರವಾದ ಆತ್ಮಸ್ವರೂಪ. ಮನುಷ್ಯನೂ ದೇವರೂ ಎರಡೂ ಒಂದೇ ಎಂಬುವ ನಿತ್ಯ ವಿಭೂತಿರೂಪ.

ಆತ್ಮ ಪ್ರತಿಭೆಯನ್ನು ತಿಳಿಯಲು ಸಹಾಯಮಾಡುವುದೇ ಪಾರಮಾರ್ಥಿಕ ಸಮಾಜಗಳ ಉದ್ದೇಶವು. ಆಧುನಿಕ ಪ್ರಪಂಚಕ್ಕೆ ವಿವೇಕಾನಂದರು ಸಾರಿದ ಗುರುವಿನ ಸಂದೇಶವು-"ನಾನೇ ದೇವರು. ನಾನು ಬೇರೆ ಯಾರೂ ಅಲ್ಲ. ದುಃಖಗಳಿಗಾಗಲೀ, ಕಷ್ಟಗಳಿಗಾಗಲೀ ನಾನು ಒಳಪಟ್ಟವನಲ್ಲ. ನಾನೇ ಸತ್ಯಸ್ವರೂಪನು; ಆತ್ಮನು; ಅಚ್ಯುತನು. ಸ್ವಾಭಾವಿಕವಾಗಿಯೇ ನಾನು ಸ್ವತಂತ್ರನು."

ಸ್ವಾತಂತ್ರ್ಯವು ಆಕಸ್ಮಿಕವಾದುದಲ್ಲವಾದರೂ ಅನರ್ಥವಾಗಿದ್ದು ಸಂಪೂರ್ಣವಾಗಿ ಬಿಡಿಸಲಾಗದ ಗೂಢತರ ಸಮಸ್ಯೆಯು. ಸ್ವಾತಂತ್ರ್ಯವೆಂದರೆ ಹೊರಗಿನ ಎಲ್ಲಾ ಬಂಧನಗಳಿಂದ ಬಿಡುಗಡೆಹೊಂದುವುದು. ಆದರೆ ನಮ್ಮ ತತ್ಕಾಲಿಕ ರೀತಿಯಲ್ಲಿ ಸ್ವಾಭಾವಿಕ ಸಂಪರ್ಕದಿಂದಲೋ ಅಥವಾ ಸಾಮಾಜಿಕ ಸಹವಾಸದಿಂದಲೋ ಈ ಬಾಹ್ಯ ಸಂಬಂಧಗಳನ್ನು ಕಡಿದು ಹಾಕಲು ನಮ್ಮಿಂದ ಸಾಧ್ಯವಾಗಲಾರದು. ಅಂತಹ ಹೋರಾಟವು ಮಾನಸಿಕ ಮತ್ತು ಆತ್ಮಿಕ ಇವುಗಳ ನಾಶಕ್ಕೆ ಹೇತುವು. ಆದುದರಿಂದ ಜೀವನದ ನಿಯಮವು ಒಂಟಿಯಾಗಿರುವುದಲ್ಲ; ಹೊಂದಿಕೊಂಡಿರುವುದು: ಅನುಕಾರವಲ್ಲ—ಸಹಕಾರವು. ನಿಜವಾದ ಸ್ವಾತಂತ್ರ್ಯವು ಶಾಂತಿಯಿಂದಲ್ಲದೆ ಯುದ್ಧದಿಂದ ದೊರೆಯಲಾರದು. ಯುದ್ಧ, ಪರಿತ್ಯಾಗ, ಮತ್ತು ವಿಕಸ್ತ ಇವುಗಳು ಜೀವನ ಕ್ರಮದಲ್ಲಿ ಒದಗಿ ಬಂದರೂ ಸ್ವಲ್ಪ ಕಾಲ ಮಾತ್ರ; ಆಕಸ್ಮಿಕವಾದರೂ ಯಾವುದೋ ಒಂದು ಗುರಿಯನ್ನು ಪಡೆಯಲು ಜೀವನದ ಬಂಧನಗಳನ್ನು ಕಡಿದು ಹಾಕಲು ಸಾಧಕವಾದ ಒಂದೊಂದು ಉಪಾಯಗಳು. ಸ್ವಾತಂತ್ರ್ಯವೆಂದರೆ ವಿಕಸ್ತವು. ನಮ್ಮ ಆಶಯಗಳ ಪ್ರಥುತ್ವದಲ್ಲಿ ನಮ್ಮ ಮನೋವಾಂಛಿತವನ್ನು ತಿಳಿಯಲು ಸ್ವಾತಂತ್ರ್ಯವೇ ಪ್ರಥಮ ಸೋಪಾನವು. ಸಹೋದರ ಭಾವವು ಎರಡನೆಯದು. ಮುಂದಿನ ಯಾವ ಆಧಾರದಿಂದಾದರೂ ಉಂಟಾದ ಸ್ವಾತಂತ್ರ್ಯ ಫಲವು ಮುಂದಿನ ಸೋಪಾನವು. ಈ ಪ್ರಕಾರವಾಗಿ ಸಾಮಾಜಿಕ ಸ್ವಾತಂತ್ರ್ಯ ಮತ್ತು ರಾಜಕೀಯ ಸ್ವಾತಂತ್ರ್ಯಗಳ ಮೂಲಕ ದೊರೆಯುವ ಆತ್ಮ ಸ್ವಾತಂತ್ರ್ಯದಿಂದ ಮನುಷ್ಯನು ನಿಜವಾದ ಸ್ವಾತಂತ್ರ್ಯವನ್ನು ಪಡೆಯಬೇಕು. ಇದನ್ನು ಅನುಭವದಿಂದ ತಿಳಿದ ನಂತರ ಮನುಷ್ಯನು "ತಾನೂ ತನ್ನ ದೇವನೊಬ್ಬನೇ" ಎಂಬುದನ್ನು ತಿಳಿಯುವನು.

"ಪ್ರಬುದ್ಧ ಭಾರತ"

ಬೆಟ್ಟತ್ತೂರು ಗ್ರಾಮಸ್ಥರ ಮೀಟಿಂಗ್.

(ಒಬ್ಬ ಬಾತ್ಮೀದಾರರಿಂದ.)

ಕೊಡಗಿನ ಮುಂದಿನ ರಾಜಕೀಯ ಸುಧಾರಣೆಯನ್ನು ಕುರಿತು ಚರ್ಚಿಸಲು ಬೆಟ್ಟತ್ತೂರು ಗ್ರಾಮಸ್ಥರ ಮೀಟಿಂಗೊಂದು ತಾ. 11—7—32ರಲ್ಲಿ ಅವರ ಊರಂಬಲದಲ್ಲಿ ನಡೆಯಿತು. ಮಿ. ಅಪ್ಪಾಡಂಡ ಗಣಪತ್ತಿಯವರು ಅಧ್ಯಕ್ಷರಾಗಿದ್ದರು.

ಮಿ. ಗಳಾದ ಚೆರಿಯಮನೆ ಅಚ್ಚಯ್ಯನವರು, ಕೂಪದಿರ ಕಾಳಪ್ಪನವರು, ಅಪ್ಪಾಡಂಡ ಬೋಪಯ್ಯನವರು ಗೇಣ್ ಮಲೆಗಳ ಗೇಣಿಯನ್ನು ಕಟ್ಟಲು ರೈತರಿಗೆ ಉಂಟಾಗುವ ತೊಂದರೆಗಳನ್ನೂ, ಸರ್ಕಾರದವರು ಈ ಬಾಬಿನಲ್ಲಿ ಜನರ ಕಷ್ಟಗಳನ್ನು ಎಷ್ಟು ಹೇಳಿಕೊಂಡರೂ ಕೇಳದೆ ಇರುವದನ್ನೂ ವಿವರಿಸಿ, ಇದನ್ನೆಲ್ಲಾ ಹೋಗಲಾಡಿಸಿಕೊಳ್ಳಲು ಕೊಡಗಿಗೆ ಸಂಪೂರ್ಣ ಪ್ರಾಂತೀಕ ಸ್ವಾತಂತ್ರ್ಯ ಸರ್ಕಾರ ಪಡೆಯಬೇಕೆಂದು ಹೇಳಿದರು. ಇದಕ್ಕೆ ಇನ್ನೂ ಕೆಲವರು ಒತ್ತಾಸೆಯಾಗಿ ಮಾತಾಡಿದರು.

ಮಿ. ಗಳಾದ ಚೆರಿಯಮನೆ ಐಯ್ಯಣ್ಣನವರು, ಮು. ಸುಬ್ಬಯ್ಯನವರು, ಅಪ್ಪಾಡಂಡ ಮೊಣ್ಣಪ್ಪನವರು ಡಿಸ್ಟ್ರಿಕ್ಟ್ ಬೋರ್ಡಿಗೆ ಕಂದಾಯದ ರೂಪಾಯಿಗೆ 2 ಆಣೆಯಂತೆ ಸೆಸ್ಸ್ ತೆರುತ್ತಿರುವದಾದರೂ ಈ ಗ್ರಾಮಸ್ಥರಿಗೆ ಶಾಲೆ, ರಸ್ತೆ, ಆಸ್ಪತ್ರೆಯ ವಿಷಯದಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನಿಂದ ಯಾವದೊಂದು ಪ್ರಯೋಜನವೂ ದೊರೆತಿರುವುದಿಲ್ಲವೆಂದೂ, ಡಿ. ಬೋರ್ಡ್ ಸೆಸ್ಸು 2 ಆಣೆ ಇದ್ದದ್ದು ಈ 2 ಆಣೆ ಏರಿದೆಯೆಂದೂ, ಮದ್ರಾಸಿಗೆ ಸೇರಿದರೆ ಇದು ಇನ್ನಷ್ಟು ಹೆಚ್ಚಬಹುದೆಂದೂ, ಆದ ಕಾರಣ ನಮಗೆ ಪ್ರತ್ಯೇಕ ಸ್ವಾತಂತ್ರ್ಯ ಸರ್ಕಾರವೇ ಇಂದೇ ಬೇಕೆಂದೂ ಮುಂತಾಗಿ ಮಾತಾಡಿದರು. ಇದಕ್ಕೆ ಒತ್ತಾಸೆಯಾಗಿ ಇನ್ನೂ ಕೆಲವರು ಭಾಷಣ ಮಾಡಿದರು.

ನಂತರ ಅಧ್ಯಕ್ಷರು—ಸಂಬಂಧಪಟ್ಟ ಅಧಿಕಾರಿಗಳು ಖುದ್ದು ಬಂದು ನೋಡಿದರೆ ಗೇಣ್ ಮಲೆ ಪಡೆದುಕೊಂಡವರ ಕಷ್ಟವನ್ನು ತಿಳಿದು, ಅದನ್ನು ಪರಿಹರಿಸ್ಯಾರಲ್ಲದೆ ಅನ್ಯಥಾ ಆಗುವುದಿಲ್ಲ; ನಮಗೆ ಇಂಗ್ಲಿಷು ಭಾಷೆ ಗೊತ್ತಿಲ್ಲದೆ ಇರುವುದರಿಂದ ತಮ್ಮ ಅರ್ಜಿಗಳನ್ನು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಮೂಲಕ ಕಳುಹಿಸುವುದು ಉತ್ತಮ. ಮದ್ರಾಸಿಗೆ ಸೇರಿದರೆ ಪಟ್ಟಭ್ಯಾಸಕ್ಕೆ ಅನುಕೂಲವಾಗಬಹುದು. ಆದರಿಂದ ಹಳ್ಳಿಯವರ ಸ್ಥಿತಿ ಉತ್ತಮವಾಗಲಿಕ್ಕಿಲ್ಲ. ರಾಜು ಇದಲು ಐಶ್ವರ್ಯವಂತರು ಮನಸ್ಸು ಮಾಡಿದರೆ ಆದು. ಗಜೆಟೆಡ್ ಉದ್ಯೋಗಸ್ಥರ ವರ್ಗಾವರ್ಗಿ ಮುಂತಾದ ಕೆಲವು ವಿಷಯಗಳು ಅಷ್ಟರಿಂದು ದೊಡ್ಡ ತೊಂದರೆ. ಕೊಡಗಿನಲ್ಲಿ ಪ್ರತ್ಯೇಕ ಸ್ವಾತಂತ್ರ್ಯ ಸರ್ಕಾರ ಸಾಧ್ಯಗುವುದಿಲ್ಲವೆಂದು ಕೆಲವರು ಹೇಳುವದು ಸರಿಯಲ್ಲ; ಮುಂತಾಗಿ ಹೇಳಿ ಕೊಡಗಿನ ಕೆಲವು ದೇಶೀಯ ದೊಡ್ಡದ್ಯೋಗಸ್ಥರ ಕಾರ್ಯತತ್ಪರತೆಯನ್ನು ವಿವರಿಸಿ, ಪ್ರತ್ಯೇಕ ಸರ್ಕಾರ ನಡೆಸಲು ನಮ್ಮಲ್ಲಿ ಶಕ್ತಿ ಇರುವದರಿಂದ್ದಾದ ಎಲ್ಲ ರೂ ಸ್ವಾತಂತ್ರ್ಯ ಪ್ರಾಂತೀಕ ಸರ್ಕಾರಕ್ಕೇನೇ ರಾಜಬೇಕೆಂದೂ ಭಾಷಣ ಮಾಡಿದರು. ಈ ಅಭಿಪ್ರಾಯಕ್ಕೆ ಅಲ್ಲಿ ನೆರೆದಿದ್ದ 30 ಜನರೂ ಸಮ್ಮತಿಸಿದಾಗಿ ಏಕಾಭಿಪ್ರಾಯವಾಯಿತು.

ವೃತ್ತಪತ್ರಗಳ ಸಾಮ್ರಾಜ್ಯ

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ವೃತ್ತಪತ್ರಗಳ ಬಹಳ ಮರ್ಯಾದೆ ಉಂಟು. ವೃತ್ತ ಪತ್ರವು ರಾಷ್ಟ್ರನೀಯ ಆಧಾರಸ್ತಂಭವೆಂದು ಅವರು ತಿಳಿಯುತ್ತಾರೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಪತ್ರಿಕೆಗಳಿಗೆ ಇಷ್ಟರಿಂದ ಮಾನ್ಯ; ಪಾಶ್ಚಾತ್ಯ ರಾಷ್ಟ್ರಗಳ ಪ್ರತಿಯೊಂದು ಪಟ್ಟಣದಲ್ಲಿ ಪ್ರತಿ (ಲೆಕ್ಕವಿಲ್ಲದಷ್ಟು ಪತ್ರಗಳು ಹೊರಡುತ್ತವೆ! ಲೋಕಸ್ವಾತಂತ್ರ್ಯಗಳು ದಿನಕ್ಕೆ ನಾಲ್ಕೈದಾವೃತ್ತಿ ಪ್ರಕಟವಾಗುವವು. ಜನರು ಬಡವರು, ಬಲ್ಲಿದವರು, ಸಣ್ಣವರು, ದೊಡ್ಡವರು, ಹೆಂಗಸರು ಗಂಡಸರು ಕಷ್ಟದ ವೃತ್ತಪತ್ರಿಕೆಗಳನ್ನೋದುತ್ತಾರೆ. ಅದರದೊಂದು ಚಟವೇ ಬಿದ್ದು ಹೋಗಿದೆ. ಮುಂಜಾನೆಯಿಂದಲುಗುವ ವರೆಗೆ ಪ್ರತಿಯೊಬ್ಬನ ಕೈಯಲ್ಲಿ ಒಂದೊಂದು ಪತ್ರಿಕೆಯು ಇದ್ದೇ ತೀರಬೇಕು. ಜರ್ಮನಿಯ ರಾಜಧಾನಿಯಾದ ಬರ್ಲಿನ್ ಪಟ್ಟಣ ಒಂದರಲ್ಲಿಯೇ ಪ್ರತಿ ದಿವಸ ಬರಾಗುವ ೮೦ ಪತ್ರಗಳಿರುವವು! ಅವುಗಳಲ್ಲಿ ೧೧ ಪತ್ರ ದಿನಕ್ಕೆ ಎರಡು ಸಲ ಪ್ರಕಟವಾಗುವವು!! ಲೋಕಕ್ಕೆ ಪಾಕ್ರವಾದ ಒಂದೆರಡು ಪತ್ರಗಳು ಪ್ರತಿ ದಿನಸ ಮೂರು ಸಲ ಪ್ರಕಟವಾಗುವುವು!!! ಈ ಎಂಥತ್ತು ಪತ್ರಿಕೆಗಳು ಆಂಗ್ಲ ಭಾಷೆಯವು. ೧ ರಶಿಯನ್ ಭಾಷೆಯಲ್ಲಿರುವದು ಇನ್ನುಳಿದವೆಲ್ಲ ಪೋಲಿಷ್ (ಪೋಲಂಭಾಷೆ) ಭಾಷೆಯಲ್ಲಿ ಹೊರಡುವವು. ಪ್ರತಿ ದಿವಸ ಇವೆಪತ್ರಗಳ ಪ್ರತಿಗಳು ೩೫ ಲಕ್ಷಕ್ಕೆ ಏರಿ ಖರ್ಚಾಗುತ್ತವೆ-ಎಂದರೆ ಬರ್ಲಿನ್‌ನಲ್ಲಿಯೇ ವಾರಪತ್ರಗಳ ಪ್ರತಿಗಳು ೨೦ ಲಕ್ಷ ವಿಕ್ರಯವಾಗುತ್ತವೆ!! ಕೇವಲ ಕ್ರೈಸ್ತಧರ್ಮದ ಮಗಳಸ್ಕ್ರೀ ಚರ್ಚಿಸುವ ಪತ್ರಗಳ ೧೧ ಲಕ್ಷ ಪ್ರತಿಗಳು ಖರ್ಚಾಗುವವು!! ಇಷ್ಟರ ಮೇಲಿಂದ ಪಾಶ್ಚಾತ್ಯ ರಾಷ್ಟ್ರಗಳಲ್ಲಿಯ ನಾಗರಿಕತೆಯೂ, ಶಿಕ್ಷಣ ಪ್ರಸಾರವೂ ಎಷ್ಟರ ಮಟ್ಟಿಗಿರಬಹುದೆಂಬ ಊಹಿಸಬಹುದು.

" ಕ. ಟ

ಅದ್ಭುತ ಸ್ತ್ರೀ.

'ಅಮೇರಿಕದ ಅದ್ಭುತಕರ ಸ್ತ್ರೀ' ಎಂದು ಪ್ರಖ್ಯಾತಿ ಹೊಂದಿದ ಮಿಸ್ ಹೆಲೆನ್ ಕೆಲ್ಲರ್ ಎಂಬವಳಿಗೆ ಮೊನ್ನೆ ಗ್ಲಾಸ್ಗೊ ವಿಶ್ವವಿದ್ಯಾಲಯದ ಎಲ್. ಎಲ್. ಡಿ ಪದವಿಯು ಕೊಡಲಾಯಿತು. ಹೆಲೆನಳು ತನ್ನ ಒಂಭತ್ತನೇ ತಿಂಗಳ ಪ್ರಾಯದಲ್ಲಿ ಕುರುಡಿಯೂ ಕಿವುಡಿಯೂ ಆದಳು. ಈಗ ಅವಳಿಗೆ ೫೩ ವಯಸ್ಸಾಯ. ಮುಂಚಿನಂತೆ ಕುರುಡಿ ಮತ್ತು ಕಿವುಡಿ—ಆದರೆ ಹಾಗಿಲ್ಲದಿದ್ದರೂ ಲೋಕವ್ಯವಹಾರಗಳನ್ನು ನೋಡುತ್ತಾ, ಸೃಷ್ಟಿ ಸೌಂದರ್ಯವನ್ನು ಸೌಮ್ಯವಾಗಿ ಬಣ್ಣಿಸುತ್ತಾ ಕಿವುಡಿಯಾದರೂ ಹಾರ್ಮೋನಿಯಂ ಬಾರಿಸುತ್ತಾಳೆ. ಪಿಯನೋ ರಾಗವು ಸುಮಧುರಸುಮಧುರವೆನ್ನುತ್ತಾಳೆ. ಪುಷ್ಪಗಳನ್ನು ಕಂಡು ಸುಂದರವಾಗಿದೆಯೆನ್ನುವಳು. ಹೆಲೆನಳು ಎಲ್ಲವುಗಳನ್ನೂ ಅರಿತುಕೊಳ್ಳುವಳು. ಹೆಲೆನಳ ಮಿತ್ರಳಾಗಿ ಮಿಸ್ ಮೇರಿ ತೊಂಪ್ಸನ್ ಎಂಬವಳು ಬಾಲ್ಯದಿಂದಲೇ ಇರುವಳು. ಈ ತೊಂಪ್ಸನಳ ಮೂಲಕವೇ ಹೆಲೆನಳು ಎಲ್ಲವುಗಳನ್ನೂ ಅರಿತುಕೊಳ್ಳುವಳು. ಹೆಲೆನಳೊಡನೆ ಯಾರಾದರೂ ಮಾತನಾಡಲು ಬಂದರೆ ತೊಂಪ್ಸನಳು ಆ ಸಂಗತಿಯನ್ನು ಅವಳಿಗೆ ತಿಳಿಸುವಳು. ಬಂದವನ ಅಭಿಪ್ರಾಯಗಳನ್ನು ತೊಂಪ್ಸನಳು ಹೇಳುವಾಗ ಹೆಲೆನಳು ತನ್ನ ಕೈಬೆರಳುಗಳನ್ನು ಅವಳ ತುಟಿಯ ಮೇಲಿಡುವಳು. ಹಾಗೆ ಅವಳ ತುಟಿಯ ಮೇಲಿಟ್ಟ ಬೆರಳಿನಿಂದಲಾಗಿ ಅವಳಿಗೆ ಸಕಲ ಮಾತುಗಳು ಮುಂದಟ್ಟಾಗುವವು. ಹೆಲೆನಳು ವಸ್ತುಗಳ ಸೌಂದರ್ಯವನ್ನು ಬೆರಳಿನ ಸ್ಪರ್ಶದಿಂದಲೇ ಅಳೆಯುವಳು. ಕಣ್ಣಿದ್ದು ನೋಡುವವರಿಗಿಂತಲೂ ವಿವರ ಸಂಗತಿಗಳನ್ನು ಅವಳು ವಸ್ತು ಸ್ಪರ್ಶದಿಂದಾಗಿ ಹೇಳುವಳು. ಅವಳು ಅನೇಕ ಗ್ರಂಥಗಳನ್ನು ಬರೆದಿರುವಳು. ಎಲ್ಲವೂ ಎಲ್ಲರಿಂದಲೂ ಶ್ಲಾಘಿಸಲ್ಪಟ್ಟಿವೆ. ಅನಂತರವೂ ಜ್ಞಾನ ಸಂಪಾದನೆಯ ಇಚ್ಛಾನೆಯಲ್ಲಿರುವುದರಿಂದಾಗಿ ಅವಳು ಇಷ್ಟರಿಂದು ತೀಕ್ಷ್ಣ ಬುದ್ಧಿಯುಳ್ಳವಳಾದಳೆಂದು ತಿಳಿದು ಬರುತ್ತದೆ.

'ಸ್ವ. ಅ.'

ಆನೆ ಹರಾಜು.

ಕೊಡಗು ಸಬ್‌ಜಡ್ಜಿಯವರ ಕೋರ್ಟು 1932ನೇ ಇಸವಿ ಜಾರಿ ನಂಬರು 565ರಲ್ಲಿ ಜಪ್ತಾದ ಮೂರು ಆನೆಗಳನ್ನು ಕೋರ್ಟು ಹುಕುಂ ಮೇರೆ ತಾರೀಕು 29—8—32ನೇ ದಿನ ಹಗಲು 12ಗಂಟೆಗೆ ಮಾಕುಟ್ ಟೋಲ್‌ಗೇಟು ಬಳಿ (ವೀರರಾಜಪೇಟೆ ತಲಚೇರಿ ರೋಡು) ಹರಾಜು ಮಾಡಲ್ಪಡುತ್ತೆ. ಹರಾಜಿನಲ್ಲಿ ಪಡಕೊಂಡವರು ಪೂರ್ತಿ ಬೆಲೆಗಳನ್ನು ಕೂಡಲೇ ಪಾವತಿ ಮಾಡತಕ್ಕದ್ದು.

ಸಬ್‌ಜಡ್ಜಿ ಕೋರ್ಟು, ಮಡಿಕೇರಿ, 6—8—1932.

ಪಿ. ಬಿ. ಮೇದಪ್ಪ, (ಸಬ್‌ಜಡ್ಜಿ.)

ವಿ ದೇ ಶ ವ ರ್ತ ಮಾ ನ.

ಇಷ್ಟರ ವರೆಗೆ ಚೀನಾ ಸರ್ಕಾರಕ್ಕೆ ದೊರೆಯುತ್ತಿದ್ದ ಮಂಚೂರಿಯಾದ ಸುಂಕ ಸಾರಿಗೆಗಳನ್ನು ಜಪಾನಿನವರು ಮುದ್ದು ಮಾಡಿ ನಿಲ್ಲಿಸಿಬಿಟ್ಟಿರುವುದರಿಂದ ಚೀನಾದವರು ಜಪಾನಿಗೆ ಕೊಡಬೇಕಾದ 'ಬಾಕ್ಸರ್' ಯುದ್ಧ ಪರಿಹಾರ ದ್ರವ್ಯ'ವನ್ನು ಕೊಡುವುದಿಲ್ಲವೆಂದು ಹೇಳಿರುವರು. ಈ ವಿಷಯ ಜನಾಂಗಗಳ ಕೂಟಕ್ಕೂ ತಿಳಿಸಲಾಗಿದೆ. ಇದರಿಂದ ಮುಂದೆ ದೊಡ್ಡ ಗಲಾಟೆಯಾಗಬಹುದೆಂದು ತೋರುತ್ತದೆ.

ಪ್ರಪಂಚದಲ್ಲಿರುವ ಸರ್ವ ಮತಗಳ ಪ್ರತಿನಿಧಿಗಳ ಪರಿಷತ್ತನ್ನು 1933 ನೇ ಇಸವಿಯಲ್ಲಿ ಅಮೇರಿಕದ ಚಿಕಾಗೊ ಪಟ್ಟಣದಲ್ಲಿ ನಡೆಸುವಂತೆ ನಿಶ್ಚಯವಾಗಿದೆಯೆಂದೂ, ಹಿಂದೂಮತದ ಪರವಾಗಿ ಸಾಧು ವಾಸ್ವಾನಿಯವರು ಆಹ್ವಾನಿಸಲ್ಪಟ್ಟಿರುವರೆಂದೂ ವರ್ತಮಾನವಿದೆ. ಕಳೆದ ಸಾರಿ ಇದೇ ಪಟ್ಟಣದಲ್ಲಿ ನಡೆದ ಇಂಥಾ ಪಂಕ್ತಿಗೆ ಹಿಂದೂದೇಶದಿಂದ ಸ್ವಾಮಿ ವಿವೇಕಾನಂದರವರು ಹೋಗಿದ್ದರು.

ಕಳೆದ ತಾ. 31 ರಲ್ಲಿ ಜರ್ಮನಿಯಲ್ಲಿ ಜನರಲ್ ಚುನಾವಣೆಯು ನಡೆಯಿತು. ಬೇರೆ ಬೇರೆ ಪಂಗಡಗಳವರಿಗೆ ಹಲವು ಕಡೆಗಳಲ್ಲಿ ಜಗಳವುಂಟಾಯಿತು. ಕೆಲವು ಕಡೆ ಪೋಲೀಸರು ಗುಂಡು ಹಾರಿಸಬೇಕಾಯಿತು. ಇದರ ಫಲವಾಗಿ 10 ಜನರು ಸತ್ತರು; 85 ಜನರಿಗೆ ಗಾಯಗಳಾದವು; 60 ಮಂದಿ ದಸ್ತಗಿರಿಯಾದ್ದರು. 609 ಮೆಂಬರುಗಳಿರುವ 'ರೀಕ್' ನಲ್ಲಿ 230 ನಾಜಿ ಪಕ್ಷದವರಿಗೆ ಸಿಕ್ಕಿದರೂ, ಅವರಿಗೆ ಸರ್ಕಾರ ನಡೆಸುವಷ್ಟು ಬಲದೊರೆಯಲಿಲ್ಲ.

ಲಂಡನಿನಲ್ಲಿರುವ ಇಂಡಿಯಾ ಲೀಗಿನ ಮೆಂಬರುಗಳಾದ ಮಿಸ್ ವಿಲ್ಕಿನ್‌ಸನ್, ಮಿಸ್ ಮೊನಿಕಾ ವ್ಹೇಟ್ಲಿ, ಮಿ. ಲಿಯೋನಾರ್ಡ್ ಮ್ಯಾಟರ್ಸ್ ಮತ್ತು ಸೆಕ್ರೆಟರಿಯಾದ ಮಿ. ಕೃಷ್ಣ ಮೆನನ್‌ರವರು ಭಾರತದ ಈಗಿನ ಪರಿಸ್ಥಿತಿಯನ್ನು ನೋಡಿಕೊಂಡು ಹೋಗಲು ಲಂಡನಿನಿಂದ ಹೊರಟಿರುವರು. ಇವರಲ್ಲಿ ಕೆಲವರು ಮೊದಲು ಪಾರ್ಲಿಮೆಂಟಿನ ಸದಸ್ಯರಾಗಿದ್ದರು. ಇವರು ಈ ತಾ. 17 ರಲ್ಲಿ ಬೊಂಬಾಯಿಗೆ ತಲಪುವರು. ಇವರು ಇಂಡಿಯಾದಲ್ಲಿ ಪ್ರಚಾರ ಕೆಲಸವೇನೂ ನಡೆಸುವಂತಿಲ್ಲ.

'ಇಂಡೊ—ಐರಿಷ್ ಇಂಡಿಪೆಂಡೆನ್ಸ್ ಲೀಗ್' ನವರು ಈ ತಿಂಗಳ ಅಂತ್ಯದಲ್ಲಿ ಐರ್ಲೆಂಡಿನ ಡಬ್ಲಿನ್ ಪಟ್ಟಣದಲ್ಲಿ ಭಾರತೀಯ—ಐರಿಷ್ ರಾಷ್ಟ್ರೀಯ ಪರಿಷತ್ತನ್ನು ನಡೆಸಲು ಏರ್ಪಾಡು ಮಾಡುತ್ತಿದ್ದಾರೆ. ಈ ಪರಿಷತ್ತಿಗೆ ಈಗ ಲಂಡನಿನಲ್ಲಿರುವ ಶ್ರೀಯುತ ವಿ. ಜೆ. ಪಟೇಲರವರು ಅಲ್ಲಿರುವ ಬೇರೆ ಕೆಲವು ಹಿಂದೀಯರೊಡನೆ ಡಬ್ಲಿನ್ನಿಗೆ ಹೋಗುವರು. ಹಿಂದೀಯರ ಮತ್ತು ಐರಿಷ್ ಸ್ನೇಹಭಾವವನ್ನು ಬೆಳೆಸಿ ಆಂಗ್ಲೇಯರ ನಾಗೂ ವಿರುದ್ಧವಾದ ಸಮುಜ್ಜಭಾವವನ್ನು ಎದುರಿಸುವುದೇ ಈ ಪರಿಷತ್ತಿನ ಉದ್ದೇಶ.

ದಕ್ಷಿಣ ಅಮೇರಿಕಾದಲ್ಲಿ ನಾನಾ ಸಂಸ್ಥಾನಗಳಿವೆ. ಅವುಗಳಲ್ಲಿ ಸ್ವತಂತ್ರ 'ರಿಪಬ್ಲಿಕ್' ಗಳು. ಅವುಗಳಲ್ಲಿ ಬೊಲಿವಿಯಾ ಮತ್ತು ಪಾರಗ್ವೆಗಳಿಗೆ ಗಡಿಪ್ರಾಂತ್ಯಗಳ ವಿಚಾರದಲ್ಲಿ ಕೈ ಕೈ ಹತ್ತಿಕೊಂಡಿದೆ. ಬೊಲಿವಿಯದವರು 5000 ಸೈನಿಕರೂ, ವಿಮಾನಗಳೂ ಫಿರಂಗಿಗಳೊಂದಿಗೆ ಪಾರಗ್ವೇ ಗಡಿಗೆ ಬಂದು ಒಂದೆರಡು ಕೋಟೆಗಳನ್ನು ವಶಪಡಿಸಿಕೊಂಡಿದ್ದಾರೆ. ಪಾರಗ್ವೆ ಅಧ್ಯಕ್ಷರೂ ಸನ್ನದ್ಧರಾಗಿದ್ದಾರೆ. ಅವರು 'ಲೀಗ್-ಆಫ್ ನೇಷನ್ಸ್' ಗೆ ಬೊಲಿವಿಯಾದ ನಡತೆಯ ವಿಚಾರ ಬರೆದಿದ್ದಾರೆ. ಅರ್ಜೆಂಟೈನ್, ಚಿಲಿ, ಪೆರು, ಬ್ರೆಜಿಲ್ ಸಂಸ್ಥಾನಗಳು ಬೊಲಿವಿಯಾ ಪಾರಗ್ವೆಗಳಿಗೆ 'ಕಾದಾಡಬೇಡಿ' ರೆಂದು ಪಂಚಾಯತಿ ಮಾಡುತ್ತಿವೆ.

ಕಳೆದ ತಿಂಗಳ ಹಿಂದೆ ಮದ್ರಾಸಿನಲ್ಲಿ ಪೋಲೀಸಿನವರು ಹೊಡೆದು ಪ್ರದ್ದಿಗೆ ತಂದ ಡಾ. ಪೀಟರ್ಸ್‌ರವರು ಲಂಡನಿನಲ್ಲಿ ತಾ. 9ರಲ್ಲಿ ಭಾಷಣ ಮಾಡುವಾಗ್ಯೆ—'ಬ್ರಿಟಿಷರು ತಾವು ಉನ್ನತ ದೂರ ನಿಂತು ಹಿಂದೂಸ್ಥಾನದೊಂದಿಗೆ ಸಮಾನತ್ವದಲ್ಲಿ ವ್ಯವಹರಿಸಬೇಕಾಗದ ಇರುವುದೇ ಈಗಿನ ವಿಷಮ ಸ್ಥಿತಿಗೆ ಕಾರಣ. ಹಿಂದೀಯರು ತಮ್ಮ ದೇಶ ಮತ್ತು ಸ್ವಭಾವಕ್ಕನುಗುಣವಾದ ರಾಜಕೀಯ ರಚನೆಯನ್ನು ಕೇಳುತ್ತಿರುವದಲ್ಲದೆ ಬ್ರಿಟಿಷ್ ಪಾರ್ಲಿಮೆಂಟು ಕೊಡಲೆತ್ನಿಸುವುದನ್ನಲ್ಲ. ಆರ್ಡಿನೆನ್ಸ್ ಆಡಳಿತದಿಂದ ಬ್ರಿಟಿಷ್ ಸರ್ಕಾರವು ಪಬ್ಲಿಕ್ ಸಹಾನುಭೂತಿಯನ್ನು ಸಂಪೂರ್ಣ ಕಳೆದುಕೊಂಡಿದೆ. ಗಾಂಧಿಯವರು ಹಿಂದೂಗಳ ಚಳವಳವನ್ನು ತಡೆದು ನಿಲ್ಲಿಸಿರುವರು. ಗಾಂಧಿಯವರೊಂದಿಗೆ ಬ್ರಿಟಿಷರು ರಾಜಿ ಮಾಡಿಕೊಂಡರೆ ಹಿಂದೀಯರ ವಿಶ್ವಾಸವನ್ನೂ, ಆರ್ಥಿಕ ಸಹಕಾರವನ್ನೂ ಪಡೆಯಬಹುದು' ಎಂದು ಮುಂತಾಗಿ ಹೇಳಿದರು.

ಪಂಡಿತ ಮೋತಿಲಾಲರ ಸ್ಮಾರಕ.

ಅಲ್ಲಹಾಬಾದ್ ಯೂನಿವರ್ಸಿಟಿಯ ಹಿಂದೂ ಬೋರ್ಡಿಂಗಿನ ಸದಸ್ಯರು ಏರ್ಪಡಿಸಿದ ಪಂಡಿತ ಮೋತಿಲಾಲ್ ನೆಹರೂರವರ ಪ್ರತಿಮೆಯ ಸ್ಥಾಪನೆಯ ಸಮಾರಂಭದಲ್ಲಿ ಪಂಡಿತ ಕುಂಜ್ರೂರವರು ಮಾಡಿದ ಭಾಷಣದ ಸಾರಾಂಶ:—

ಪಂಡಿತ ಮೋತಿಲಾಲ್ ನೆಹರೂರವರು ಮೃತರಾಗಿ ಇಷ್ಟೊಂದು ಕಾಲವಾದರೂ ಅವರು ರಾಷ್ಟ್ರೀಯ ಕಾರ್ಯದಲ್ಲಿ ವಹಿಸಿದ ದೊಡ್ಡ ಭಾಗದ ದೆಸೆಯಿಂದ ಅವರು ಮೃತರಾಗಿದ್ದಾರೆಂತ ಈಗಲೂ ನಂಬಿಕೆಯಾಗುವುದಿಲ್ಲ. ಅವರು ಮೃತರಾದಾಗ ದೇಶವು ಸೂಚಿಸಿದ ಅತ್ಯಧಿಕ ವ್ಯಸನದಿಂದಲೇ ಅವರ ಮಹತ್ವವು ಎಷ್ಟಿತ್ತೆಂಬುದು ಗೊತ್ತಾಗುತ್ತದೆ.

ಪಂಡಿತ ಮೋತಿಲಾಲರು ಜನರ ಪ್ರೀತಿಯನ್ನು ಇಷ್ಟೊಂದು ಹೇಗೆ ಸಂಪಾದಿಸಿದರು? ಅವರ ಮಹತ್ವವು ಅವರಿಗೆ ಹೇಗೆ ಬಂತು? ಅವರ ದೊಡ್ಡ ತ್ಯಾಗದಿಂದ ಅವರು ಜನರ ಮನಸ್ಸನ್ನು ಆಕರ್ಷಿಸಿದರು. ಪಂಡಿತ ನೆಹರೂರವರು, ಸಿ. ಆರ್. ದಾಸರು, ಇಂಥವರನ್ನೂ ಸಹ ತನ್ನ ಕಡೆಗೆ ಆಕರ್ಷಿಸಿಕೊಂಡು, ಇವರನ್ನು ಕಾಂಗ್ರೆಸಿನ ಆಧಾರ ಸ್ತಂಭಗಳಾಗಿ ಮಾಡಿಕೊಂಡದ್ದು ಮಹಾತ್ಮ ಗಾಂಧಿಯವರ ಆತ್ಮ ಶಕ್ತಿಯನ್ನು ಪ್ರದರ್ಶಿಸುತ್ತದೆ. ಪಂಡಿತ ಮೋತಿಲಾಲರು ತನಗೆ ತುಂಬಾ ಉತ್ಪತ್ತಿಯನ್ನು ಕೊಡುತ್ತಿದ್ದ ಲಾಯರ್ ಕೆಲಸವನ್ನೂ ಬಿಟ್ಟದ್ದಲ್ಲದೆ ತನ್ನ ಸುಖ ಜೀವನವನ್ನೂ ಸಹ ಬಿಟ್ಟದ್ದರಿಂದ ಜನರಿಗೆ ಮೋತಿಲಾಲರ ಮೇಲೆ ಪ್ರೀತಿ ಹುಟ್ಟಿದ್ದೂ ಅಲ್ಲದೆ ಸ್ವರಾಜ್ಯ ಸಾಧನೆಯ ಕೆಲಸವು ಎಷ್ಟೊಂದು ಮಹತ್ವದ್ದು ಎಂತ ಸಹ ಜನರಿಗೆ ತಿಳಿಯಿತು.

ಪಂಡಿತ ಮೋತಿಲಾಲ್ ನೆಹರೂರವರ ಬಲವಾದ ಬುದ್ಧಿಶಕ್ತಿಯೂ ತಾನು ಹಿಡಿದ ಕಾರ್ಯಕ್ಕಾಗಿ ಮಾಡುವ ವಿಶೇಷ ಸಾಧನೆಯೂ ಅವರ ಜೀವನದಲ್ಲಿ ಮುಖ್ಯ ಗುಣಗಳಾಗಿದ್ದುವು. ಅವರೂ, ಸಿ. ಆರ್. ದಾಸರೂ ಸೇರಿ ತಮ್ಮ ಕೆಲಸದ ಪ್ರಭಾವದಿಂದ ದೇಶದ ಆಲೋಚನೆಗೆ ಹೊಸ ದಾರಿಯನ್ನು ಕಲ್ಪಿಸಿಕೊಟ್ಟದ್ದು ಅಲ್ಲದೆ ಕಾಂಗ್ರೆಸಿನ ಶಕ್ತಿಗೆ ಹೊಸ ಜೀವ ಕೊಟ್ಟರು. ಅವರು ದೊಡ್ಡ ತ್ಯಾಗ ಮಾಡಿದ್ದರಿಂದ ಅವರು ಅಂಜುಬುರುಕರು ಎಂತ ಯಾರೂ ಹೇಳಲು ಸಾಧ್ಯವಿಲ್ಲ. ಅವರು ಸ್ವಾಭಾವಿಕವಾಗಿ ಜನರ ಮುಖಂಡರಾಗಿದ್ದರು. ಹೊಸ ಹೊಸ ದಾರಿಗಳನ್ನು ಕಂಡು ಹಿಡಿಯಲು ಶಕ್ತಿಯುಳ್ಳವರಾಗಿದ್ದರು.

ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ಪಂಡಿತ ಮೋತಿಲಾಲರ ಬುದ್ಧಿ ಶಕ್ತಿಯೂ, ಮತ್ತು ಮುಖಂಡನಾಗಲು ಇದ್ದ ಗುಣಗಳೂ ಪ್ರಕಟವಾಗುತ್ತಿದ್ದುವು. ಎಸೆಂಬ್ಲಿಯಲ್ಲಿಯೂ, ಕೌನ್ಸಿಲುಗಳಲ್ಲಿಯೂ ಪಾರ್ಟಿ ತತ್ವವನ್ನು (ಯೂರೋಪಿಯನ್ ರಾಜಕೀಯ ಕಾರ್ಯದ ಅರ್ಥದಲ್ಲಿ) ಹೊರಡಿಸಿದ್ದೇ ಪಂಡಿತ ಮೋತಿಲಾಲರೂ ಮತ್ತು ಸಿ. ಆರ್. ದಾಸರೂ. ಪಾರ್ಟಿ ಸಂಸ್ಥೆಯನ್ನು ಸ್ಥಾಪಿಸಿ, ನಡಿಸಿದ ಕಾರ್ಯವು ಮೋತಿಲಾಲರಿಂದಲೇ ಆಯಿತು. ಬಿಕ್ಕಟ್ಟಿನ ಸಂದುಗಳಲ್ಲಿ ಪಾರ್ಟಿಗಳನ್ನು ಮರೆತು ದೇಶದ ಉದ್ಧಾರಕ್ಕಾಗಿ ದೇಶೀಯರೆಲ್ಲರೂ, ಬೇರೆ ವಿಷಯಗಳಲ್ಲಿ ಮತಭೇದವಿದ್ದರೂ, ಹೇಗೆ ಒಂದಾಗಬೇಕೆಂತ ಅವರಿಗೆ ಗೊತ್ತಿತ್ತು.

ಪಾರ್ಟಿ ಸಂಸ್ಥೆಯೊಳಗೆ ಮತಭೇದ ಬಂದಾಗ ಅವರ ಬುದ್ಧಿಯು ಕುಶಲತೆಯಿಂದಲೂ, ತಾಳ್ಮೆಯಿಂದಲೂ ಒಗ್ಗಟ್ಟು ಒಡೆದು ಹೋಗುತ್ತಿರಲಿಲ್ಲ. ಸ್ನೇಹವನ್ನು ಉಳಿಸಿಕೊಂಡು ಜನರನ್ನು ಹೇಗೆ ತನ್ನ ಅಭಿಪ್ರಾಯದ ಕಡೆಗೆ ತಿರುಗಿಸಿಕೊಳ್ಳಬೇಕೆಂತ ಅವರಿಗೆ ಗೊತ್ತಿತ್ತು.

ಮೋತಿಲಾಲರು ಬಹಳ ಸಮಾಧಾನ ಪಕ್ಷದವರಾಗಿದ್ದರು. ಎಸೆಂಬ್ಲಿಯಲ್ಲಿಯೂ ಕಾಂಗ್ರೆಸಿನಲ್ಲಿಯೂ, ಅವರು ನಡಿಸಿದ ಕಾರ್ಯಗಳಿಂದ ದೇಶದಲ್ಲಿ ಹುಟ್ಟಿದ ಉತ್ಸಾಹವನ್ನು ಯಾವ ರೀತಿಯಲ್ಲಿ ಉಪಯೋಗಿಸಿಕೊಳ್ಳಬೇಕೆಂತ ಅವರಿಗೆ ತಿಳಿದಿತ್ತು ಎಂಬುದು ಸ್ಪಷ್ಟವಾಗುತ್ತದೆ. ಒಂದು ವಿದ್ಯಮಾನದಲ್ಲಿ ಹೀಗೆಯೇ ಕಾರ್ಯವನ್ನು ನಡಿಸಬೇಕೆಂತ ಅವರಿಗೆ ಮಂದಟ್ಟಾದಾಗ ಅವರ ಅಭಿಪ್ರಾಯವನ್ನು ತನ್ನ ಜೊತೆಗಾರರಿಗೆ ಚೆನ್ನಾಗಿ ತಿಳಿಸಿ ಕೊಡುತ್ತಿದ್ದರು ಅಲ್ಲದೆ ಆ ಅಭಿಪ್ರಾಯಕ್ಕಾಗಿ ತನ್ನಿಂದ ಸಾಧ್ಯವಿದ್ದಷ್ಟು ಹೋರಾಡುತ್ತಿದ್ದರು. ಅವರ ಸಮಾಧಾನ ಪಕ್ಷದ ಶಕ್ತಿಯಿಂದಲೇ ಅವರು ಎಸೆಂಬ್ಲಿ ಚರ್ಚೆಗಳಲ್ಲಿ ಅಷ್ಟೊಂದು ಜಯವನ್ನು ಹೊಂದುತ್ತಿದ್ದರು. ಅವರ ಎದುರಿಯಲ್ಲಿ ಇರುವ ಲೋಪಗಳನ್ನು ತಿಳಿದುಕೊಂಡು ಅದರ ಮೇಲೆ ಚೆನ್ನಾಗಿ ಹೊಡೆದು ಎದುರಿಯನ್ನು ಸೋಲಿಸುತ್ತಿದ್ದರು. ದೇಶಕ್ಕೆ ಬಂದೊದಗಿದ ಇಂಥಾ ಬಿಕ್ಕಟ್ಟಿನ ಸಮಯದಲ್ಲಿ ಪಂಡಿತ ಮೋತಿಲಾಲ್ ನೆಹರೂರವರಂಥ ಮುಖಂಡರನ್ನು ಕಳಕೊಂಡದ್ದು ದೇಶದ ದುರ್ಭಾಗ್ಯವೇ ಸರಿ.

ಪ್ರಪಂಚದ ವಾಣಿಜ್ಯ ವಿನಾಶಕ್ಕೆ ಅಶಾಂತಿಯೇ ಮೂಲ.

ಪುಷ್ಕಳವಾದ ಬೆಳೆ—ಹಿಟ್ಟಿಲ್ಲದ ಹೊಟ್ಟೆ.

ಇಂದಿನ ಮಾನವ ಸಮಾಜದ ಅಡಿಗಲ್ಲು ಅಲ್ಲಾಡಿ ಹೋಗಿದೆ. ಒಂದು ಭಾಗದಲ್ಲಿ ಮಾತ್ರ ಹೀಗೆ ಎನ್ನುವಂತಿಲ್ಲ; ಇಡೀ ಪ್ರಪಂಚವೆಲ್ಲ ಅದೇ ರೀತಿ ಪದಕ್ಕೆ ಬರಲು ಇರುವುದು ಒಂದೇ ಹಾದಿ. ಜಗತ್ತೆಲ್ಲ ಸಂತೋಷಗಬೇಕು.

ದಿನ ದಿನಕ್ಕೆ ಘಂಟೆಳವು ಏರುತ್ತಿದೆ; ಚಲಾವಣೆಗೆ ಬೇರೆ ಅಡ್ಡಿಗಳು. ಕಂಡ ಆಷ್ಟು ಕೆಡುತ್ತಾಗುತ್ತಿದೆ.

ಈ ಕೊರತೆಗೆ ಕಾರಣವೇನೆಂದರೆ—ಪ್ರಪಂಚದ ವ್ಯಾಪಾರವು ನಿಂತಿಗಿದೆ. ಕೋಟಿಗಟ್ಟಳೆ ಟನ್ನುಗಳ ಸರಕು ಹಡಗಿಗೆ ಹಾದಿಯಿಲ್ಲದೆ ಬಿದ್ದಿದೆ. ಕೋಟಿಗಟ್ಟಳೆ ನಿರುದ್ಯೋಗಿಗಳು ಬೀದಿ ಬೀದಿಗಳಲ್ಲಿ ಅಲೆಯುತ್ತಿದ್ದಾರೆ. ರಾಷ್ಟ್ರೀಯಸ್ವತ್ವವಾದ ಅಂತರ ರಾಷ್ಟ್ರೀಯ ವ್ಯಾಪಾರವು ಹೀಗಿದೆ.

ಈಗ ಆಲಿಯೂ ಇದೆ. ಅದು ಎಂದಿನಂತೆ ತನ್ನ ಗೋಧಿ—ಉಣ್ಣೆ ರಫ್ತು ಮಾಡಲು ದಾರಿಯಿಲ್ಲ. ಅದರಿಂದ ಅದು ಕೆಯರ್ ಮತ್ತು ದರ್ಶಕರುಗಳ ಬಟ್ಟೆಗಳನ್ನೂ ಕೊಳ್ಳಲಾರದು. ಲಕ್ಷಾಂತರ ಟನ್ನು ಬ್ರೆಜಿಲ್ ದೇಶದ ಬೀಜವನ್ನು ಒಲೆಗೂ, ಸಮುದ್ರಕ್ಕೂ ಸುರಿಯುತ್ತಿದೆ ಯಾಕೆ? ಜರ್ಮನಿ ಮುಂತಾದ ಇತರ ರಾಷ್ಟ್ರಗಳು ಅದನ್ನು ಬೆಳೆಯಲು ತಗಲಿದಷ್ಟು ಬೆಲೆಯನ್ನು ಕೊಟ್ಟು ಕೊಳ್ಳಲಾರವು.

ದಕ್ಷಿಣ ರಾಷ್ಟ್ರಗಳಲ್ಲಿ ಬೆಳೆ ಬಿಡುತ್ತಿರುವ ಹತ್ತಿಯ ಗಿಡಗಳನ್ನೇ ಹಾಕುತ್ತಿದ್ದಾರೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಹೊಗೆ ರೇಥಿಯನ್ನು ಸುಟ್ಟು ಹಾಕುತ್ತಿದ್ದಾರೆ. ರಬ್ಬರಿನ ವ್ಯಾಪಾರವಂತೂ ಮಲಗಿ ಹೋಗಿದೆ. ಗ್ರೀಸುದೇಶವು ಕೊಡಬೇಕಾದ ಸಾಲ ಕೊಡದೆ ತಪ್ಪಿಹೋಗಿದೆ ಯಾಕೆ? ಅದರ ಒಣಹಣ್ಣುಗಳಿಗೆ ಗಿರಾಕಿಯೇ ಇಲ್ಲ. ಚೀಲಿದೇಶವು ದಿವಾಳಿಯಾಗಿದೆ, ಯಾಕೆಂದರೆ ಅದರ ನೈಟ್ರೇಟ್ ಮುಂತಾದ ಗೊಬ್ಬರವನ್ನು ಯಾರೂ ಕೊಂಡುಕೊಳ್ಳಲಿಲ್ಲ. ಇಂಡಿಯಾ, ಜಪಾನು, ಅರ್ಜೆಂಟೈನಾ—ಇವೆಲ್ಲ ಎಷ್ಟೋ ಕಷ್ಟದಲ್ಲಿವೆ. ಕಾರಣ? ಅವುಗಳ ಸರಕುಗಳಿಗೆ ಬೆಲೆ ಬಾರದು.

ಈ ಪ್ರಪಂಚದ ವ್ಯಾಪಾರವೆ ಬಿದ್ದು ಹೋಗಿರಲು ಕಾರಣನೇ ಇದ್ದ ಜನರೆಲ್ಲ ಮಾಯವಾಗದೆ ಹಾಗೆಯೆ ಇದ್ದಾರೆ; ಆ ಆ ಸರಕುಗಳ ಮೇಲಿದ್ದ ಆಸೆಯೂ ತಪ್ಪಿಹೋಗಿಲ್ಲ. ಜನರು ಹಿಂದೆ ಇದ್ದುದಕ್ಕಿಂತಲೂ ಹೆಚ್ಚಾಗಿಯೇ ಇದ್ದ ಪ್ರಪಂಚದಲ್ಲಿ ಸರಕುಗಳನ್ನು ಖರ್ಚುಮಾಡುವ ಶಕ್ತಿ ಹೆಚ್ಚಾಗಿದೆ. ಅದೇ ರೀತಿ, ಜಗತ್ತಿನಲ್ಲಿ ಇಂದಿರುವ ಸರಕುಗಳು ಹಿಂದೆಂದೂ ಇರಲಿಲ್ಲ.

ಆದಾಗಿರುವುದು ನಿಜ, ಜನರಿಗೂ ಸರಕಿಗೂ ಅಂತರವು ಹೆಚ್ಚಿದೆ. ವ್ಯಾಪಾರವಿಲ್ಲದೇ ಈ ಅಂತರ. ಮಾರ್ಗ ತೆರೆದಾಗಿ ಈ ವ್ಯಾಪಾರವಿಲ್ಲ.

ಈ ಮಾರ್ಗ ಹೀಗಾಗುವುದಕ್ಕೆ ಕಾರಣಗಳು ಅನೇಕವಾಗಿವೆ; ಕಾರಣಗಳ ಮೂಲವನ್ನು ಹುಡುಕುತ್ತಾ ಹೋದರೆ ಅವು ಯುದ್ಧದಲ್ಲಿಯೂ ಈ ಯುದ್ಧದನಂತರದ ಹಾಳು ಮಾಡಿದ ರೀತಿಯಲ್ಲಿಯೂ ಅಡಗಿವೆ. ಅಶಾಂತಿಯೇ ಹೆಚ್ಚು ಹಾವ ಕಾರಣ.

ಸ್ಥೂಲವಾಗಿ ಹೇಳುವುದೆಂದರೆ, ಚಿನ್ನದ ಮಂತ್ರಶಕ್ತಿ ಕುಗ್ಗಿತು.

ಚಿನ್ನದ ಹೆಚ್ಚು ಇರುವುದು ಎರಡು ರಾಷ್ಟ್ರಗಳಿಗೆ ಮಾತ್ರ, ಅದರಿಂದ ಪ್ರಪಂಚದ ಇತರ ರಾಷ್ಟ್ರಗಳ ಚಲಾವಣೆಯೇ ಸಿಕ್ಕಿಬಿದ್ದಂತಾಗಿ ಹೋಗಿದೆ. ಆ ಚಲಾವಣೆಯು ಪ್ರಥಮಕರ್ತವ್ಯವಾದ ವ್ಯಾಪಾರದ ತಿಳುವನ್ನು ತೋರಿಸಲು ಅದಕ್ಕೆ ಆಗಲಿಲ್ಲ. ಕೊನೆಗೆ ವ್ಯಾಪಾರ ಸಹ ಸುಗಮವಾಗಿ ನಡೆಯು ಸಾಧ್ಯವಿಲ್ಲ.

ಚಿನ್ನವನ್ನು ಕೂಡಿಸುವ ರಹದಾರಿಯೂ ಬಂದು, ಚಿನ್ನಕ್ಕೆ ಕ್ಷಯ ಏರಿಹೋಯಿತು. ಸರಕುಗಳಿಗೆ ಧಾರಣೆಯು ಇಳಿ ಹೋಯಿತು. ಚಿನ್ನದ ಬೆಲೆ ಮುಗಿಲುಮುಟ್ಟಿದರೆ ಸರಕಿನ ಬೆಲೆ ಅಗಾಧವಾದ ಆಳಕ್ಕೆ ಇಳಿಯಿತು.

ಪ್ರಪಂಚದಲ್ಲಿ ಎಲ್ಲೆಲ್ಲೂ ಬೆಳೆಯುವವರು ಹಾಳಾಗಿ ಹೋಗಿದ್ದಾರೆ. ಅವರು ಲಾಭಕ್ಕೆ ಮಾರಲಾರದೆ ಕೊಂಡು ಕೊಳ್ಳಲಾರರು.

ಆಸ್ಟ್ರೇಲಿಯಾದಲ್ಲಿನ ಬಡತನ ನಿರುದ್ಯೋಗಿಗಳು ಯೂರೋಪಿನಲ್ಲಿನ ಬಡತನ ನಿರುದ್ಯೋಗಿಗಳಾಗಿ ಪ್ರತಿಫಲಿತವಾಗಿವೆ. ಧಾರಣವಾಸಿಗಳಿಗೆ ಬೆಲೆಯಾಗಿ ಬೆಳೆಯುವುದರಿಂದ ದುಃಖಿಸುವ ತನಕ ವ್ಯಾಪಾರವು ಚೇತರಿಸಿಕೊಳ್ಳುವ ಹಾಗೂ ಇಲ್ಲ, ಪ್ರಪಂಚದ ಕಷ್ಟವು ಹೋಗುವಂತೆಯೂ ಇಲ್ಲ.

'ಪ್ರ. ಮ.'

ರಾಮಕೃಷ್ಣರೂ, ವಿವೇಕಾನಂದರೂ:

(ಲೇಖಕರು—ಬಿಪಿನ್ ಚಂದ್ರಪಾಲ್.)

೧.

ವಿವೇಕಾನಂದರು ಅವರ ಗುರುವಾದ ಪರಮಹಂಸ ರಾಮಕೃಷ್ಣರ ಹೃದಯದಲ್ಲಿ ಲೀನವಾಗಿ ಹೋಗಿರುವರು. ಹಿಂದೂ ದೇಶದಲ್ಲಿನ ಯಾವತ್ತು ಜೀವಿಗೆ ಮಾತ್ರವಲ್ಲ, ಇಡೀ ಪ್ರಪಂಚದ ಕಲ್ಯಾಣಕ್ಕಾಗಿ ಅವರಿಬ್ಬರೂ ಒಬ್ಬರೊಡನೊಬ್ಬರು ಬಂಧಿಸಲ್ಪಟ್ಟಿರುವರು. ಆಧುನಿಕ ಮನುಷ್ಯನು ಪರಮಹಂಸರನ್ನು ವಿವೇಕಾನಂದರ ಹೃದಯ ಪ್ರಕಾಶದ ಮುಖಾಂತರ ಅರಿತುಕೊಳ್ಳಬೇಕು; ಹಾಗೆಯೇ ವಿವೇಕಾನಂದರನ್ನೂ ಅವರ ಗುರುವಿನ ಜೀವನ ಪ್ರಕಾಶದಲ್ಲಿ ಕಂಡುಕೊಳ್ಳಬೇಕು. ಆ ಗುರುವು ಒಂದು ದೊಡ್ಡ ದೇವತಾ ಶಕ್ತಿ, ಭಾವನಾ ಪ್ರಪಂಚವು ಸಾಮಾನ್ಯವಾದುದಲ್ಲ. ಅದು ದೃಗ್ಗೋಚರವಲ್ಲದಿದ್ದರೂ, ಇಂದ್ರಿಯ ಮತ್ತು ಬುದ್ಧಿ ಶಕ್ತಿ ಇವುಗಳಿಗಿಂತಲೂ ಎತ್ತರವಾದ ವಿವೇಕದ ಪರಾಕಾಷ್ಠೆ ದೆಸೆಯು. ರಾಮಕೃಷ್ಣರು ಭಾವನಾ ಪ್ರಪಂಚಕ್ಕೆ ದೂರರು. ಅವರು ಅದಕ್ಕೊಂದು ರಹಸ್ಯ ಸ್ವರೂಪರಾಗಿರುವರು. ಈಗಿನ ಜನಾಂಗಕ್ಕೆ ತಿಳಿಯುವ ರೀತಿಯಲ್ಲಿ ಪರಮಹಂಸ ರಾಮಕೃಷ್ಣರ ಆತ್ಮವೃದ್ಧಿಯನ್ನು ಪರಿಚಯಗೊಳಿಸಲು ವಿವೇಕಾನಂದರು ಆಜ್ಞಪ್ತರಾಗಿದ್ದರು.

ರಾಮಕೃಷ್ಣ ಪರಮಹಂಸರು ಯಾವುದೊಂದು ಜನಾಂಗಕ್ಕಾಗಲೀ ಮತಕ್ಕಾಗಲೀ ಸೇರಿದವರಲ್ಲ. ಆದರೆ ಅವರು ಹಿಂದೂ ಮತ್ತು ಇತರ ಎಲ್ಲಾ ಜನಾಂಗದವರಿಗೂ ಸಂಬಂಧಪಟ್ಟವರಾಗಿದ್ದರು. ಅವರು ಅಭೇದ್ಯವಾದ ಸತ್ಯ ಪ್ರಪಂಚ ವ್ಯಾಪಕರಾಗಿದ್ದರು. ವಿಶ್ವಧರ್ಮ ಜ್ಞಾನವನ್ನು ಪಡೆಯುವ ಸಲುವಾಗಿ ಅವರು ಇತರ ಧರ್ಮಗಳ ಹೇಳಿಕೆಗಳನ್ನು ಅಲ್ಲಗಳೆಯಲಿಲ್ಲ. ಬಿಸಿಲು ನೆರಳುಗಳೋಪಾದಿಯಲ್ಲಿ ವಿಶ್ವವೂ, ಧರ್ಮಗಳೂ ಅವರಲ್ಲಿ ಒಂದರೊಡನೊಂದು ಹೊಂದಿಕೊಂಡಿದ್ದುವು. ಅದುದರಿಂದ ನಿತ್ಯವಾದ ಜೀವನಧರ್ಮ ಮತ್ತು ಆಲೋಚನಾಶಕ್ತಿ ಇವುಗಳ ಮೂಲಕ ಅವರು ವಿಶ್ವದ ನಿಜತ್ವವನ್ನು ತಿಳಿದುಕೊಂಡರು.

ರಾಮಕೃಷ್ಣ ಪರಮಹಂಸರ ದೈವವು ತರ್ಕ ಅಥವಾ ತತ್ವದರ್ಶನಕ್ಕೆ ಒಳಪಟ್ಟುದಲ್ಲ. ಅಂತರಂಗದ ಅನುಭವದ "ತಾನೇತಾನೆ"ಂಬ ನಿಜವಾದ ವಸ್ತುವಾಗಿದ್ದಿತು. ತನ್ನ ದೈವವನ್ನು ಪೂರ್ವದ ಪುರಾಣೇತಿಹಾಸಾದಿ ಆಧಾರಗಳ ಬಲದಿಂದಾಗಲೀ ಅಥವಾ ಯಾವನೊಬ್ಬ ಗುರುವಿನ ಹೇಳಿಕೆಯ ಅನುಭವದಿಂದಾಗಲೀ ನಂಬಿದವರಲ್ಲ. ಅವನನ್ನು ತನ್ನ ಆತ್ಮ ಸಾಕ್ಷಾತ್ಕಾರದ ಫಲವಾಗಿ ಅನುಭವದಿಂದ ಅರಿತುಕೊಂಡಿದ್ದರು. ಶೈಶವಾಭ್ಯಾಸದಿಂದಲೂ ಅವರ ಮನೋದೈವವು 'ಶಕ್ತಿ'ಯು ಅದುದರಿಂದ ಅವರು ವೇದಾಂತಿಗಳಾಗಿದ್ದರು. ಆದರೆ ಅವರು ತತ್ವಶಾಸ್ತ್ರಜ್ಞರಲ್ಲ, ಪ್ರಾಚೀನ ಅಥವ ಆಧುನಿಕ ತರಗತಿಯ ಪಂಡಿತರೂ ಅಲ್ಲ. ತರ್ಕಶಾಸ್ತ್ರವೇತ್ತರೂ ಅಲ್ಲ. ಅವರು ಕೇವಲ ಭಾವಾವಿಷ್ಟರು. ತಾವು ಸ್ವತಃ ಅನುಭವಿಸಿದುದನ್ನು ಸಂಪೂರ್ಣ ನಂಬುವವರು.

ಭಾವಾವಿಷ್ಟರು ಯಾವಾಗಲೂ ತಿಳಿಯಲ್ಪಡಲಾರದವರು; ರಾಮಕೃಷ್ಣ ಪರಮಹಂಸರೂ ಹಾಗಿದ್ದರು. ಯಾವುದೊಂದು ಜನಾಂಗವೂ ಅವರ ಇರುವಿಕೆಯನ್ನು ಅರಿತುಕೊಳ್ಳಲಾರವು. ಆದರೂ ಎಲ್ಲಾ ತತ್ವ ಶಾಸ್ತ್ರಗಳೂ, ಯಾವ ವಸ್ತುವನ್ನು ಕುರಿತು ಹೇಳುತ್ತಿರುವುವೋ ಆ ವಸ್ತುವನ್ನು ಆ ಮಹಾಪುರುಷರು ಪ್ರಕಟಗೊಳಿಸಿದರು. ಪರಮಹಂಸರಿಗಾದರೂ ತನ್ನ ಸಂದೇಶವನ್ನು ಪ್ರಪಂಚಕ್ಕೆ ತಿಳುಹಿಸಲು ಒಬ್ಬ ಮಹಾಪುರುಷನು ಬೇಕಾಗಿದ್ದನು. ಅಂತಹವನೊಬ್ಬನನ್ನು ಅವರು ವಿವೇಕಾನಂದರಲ್ಲಿ ಕಂಡುಕೊಂಡರು.

೨.

ವಿವೇಕಾನಂದರು ಈಶ್ವರವಾದಿಯಂತೆ ತೋರಿಸಿಕೊಂಡರೂ ಅವರು ಬುದ್ಧಿ ಪ್ರಮಾಣಿಕರೂ, ನಿರಾಕ್ಷೇಪವಾದಿಯೂ ಆಗಿದ್ದರು. ಅವರ ಪ್ರಥಮ ಧರ್ಮಸಹವಾಸವು ಬ್ರಹ್ಮಸಮಾಜದಲ್ಲಿ. ಸಾಧುಗಳಲ್ಲಿಯೂ, ಭಾವಾವಿಷ್ಟರಲ್ಲಿಯೂ ನಂಬಿಕೆಯನ್ನು ಹುಟ್ಟಿಸಲು ಅವು ಸಾಧಕಗಳಾಗಿರಲಿಲ್ಲ. ರಾಮಕೃಷ್ಣ ಪರಮಹಂಸರು ತಮ್ಮ ಅದ್ಭುತ ಶಕ್ತಿಯ ಮಹಿಮೆಯಿಂದಲೂ, ಮುಖ್ಯವಾಗಿ ದೇವರಲ್ಲಿನ ನಿಗೂಢ ಪ್ರೇಮದ ಹುಚ್ಚಿನ ಫಲದಿಂದಲೂ ಬ್ರಹ್ಮಸಮಾಜದ ಅನುಯಾಯಿಗಳನ್ನೂ ಸಹ ಆಕರ್ಷಿಸುತ್ತಿದ್ದರು. ಆದರೆ ಅವರು ಪರಮಹಂಸರ ಜ್ಞಾನದ ಅರಿಯುವಿಕೆಯ ಸಮಸ್ಯೆಯನ್ನು ಒಡೆಯಲಾರದವರಾಗಿದ್ದರು. ಅವರು ಪರಮಹಂಸರನ್ನು ಬುದ್ಧಿವಂತಿಕೆಯೆಂಬ ಭೂತಕನ್ನಡಿಯ ಮುಖಾಂತರ ನೋಡುವವರಾದರು.

ಪರಮಹಂಸ ರಾಮಕೃಷ್ಣರು ವಿವೇಕಾನಂದರ ಹೃದಯಾಂತರಾಳವನ್ನು ಹೊಕ್ಕು ನಿಜತ್ವ ಕೇಂದ್ರವನ್ನು ತಿಳಿದು ಇವನೇ ತನ್ನ ಜೀವನದ ಸಂದೇಶಗಳನ್ನು ಪ್ರಪಂಚಕ್ಕೆ ಹರಡಲು ತಕ್ಕ ಸಾಧನವೆಂದು ಕಂಡುಕೊಂಡರು. ಇದೇ ವಿವೇಕಾನಂದರ ಹೃದಯಪರಿವರ್ತನೆಗೆ ನಿಜವಾದ ಕಾರಣವು. ವಿವೇಕಾನಂದರಿಗೆ ತಿಳಿಯಲಾಗದ ಯಾವುದೋ ಒಂದು ಶಕ್ತಿಯು ಅವನನ್ನು ಗುರುವಿನ ಕಡೆಗೆ ಸೆಳೆಯುತ್ತಿದ್ದಂತೆ ಅವರಿಗೆ ಭಾಸವಾಯಿತು. ಅದು ಆತ್ಮಶಕ್ತಿಯ ಕ್ರಿಯೆಯು. ಎರಡು ಆತ್ಮಗಳೂ ಒಂದರೊಡನೊಂದು ಸಮ್ಮಿಳನವಾದಾಗ ಅವೆರಡೂ ಕಲೆತು, ಏಕತ್ವವಾಗಿ ಪರಿಣಮಿಸಿ, ಇವರಿಬ್ಬರೂ ಸರ್ವಾತ್ಮಲೀಲೆಯಲ್ಲಿ ಏಕತ್ವವನ್ನು ಪಡೆದರು. ಶಿಷ್ಯನ ಒಳಗೂ, ಅವನ ಮುಖಾಂತರವೂ ಗುರುವು ಕೆಲಸ ಮಾಡುತ್ತಿರಲು ಶಿಷ್ಯನು ತನಗೆ ತಿಳಿಯದಂತೆಯೇ ಗುರುವಿನ ಕೃತಿಗೆ ತಕ್ಕಂತೆ ನರ್ತನ ಮಾಡುತ್ತಿರುವನು. ಇದನ್ನೇ ತನ್ಮಯತೆಯೆಂದು ಹೇಳುವರು.

೩.

ವಿವೇಕಾನಂದರ ಸಂದೇಶವು ಪ್ರಖ್ಯಾತ ವೇದಾಂತ ವಿಷಯಗಳಿಂದ ಉಲ್ಲೇಖಿಸಲ್ಪಟ್ಟಿದ್ದರೂ ನಿಜವಾಗಿ ಅವೆಲ್ಲವೂ ಆಧುನಿಕ ಜೀವಿಗೆ ಅವರ ಗುರುವಿನ ಸಂದೇಶವೇ ಆಗಿತ್ತು. 'ನೀವು ಮನುಷ್ಯರಾಗಿರಿ' ಇದೇ ಅವರು ಕೊಟ್ಟ ಸಂದೇಶದ ವಿಷಯವಾಗಿತ್ತು. ಇಂಡಿಯಾದಲ್ಲಿ ಧರ್ಮಪ್ರಪಂಚದ ಮನುಷ್ಯನು ಇನ್ನೂ ಮಧ್ಯಮ ತರಗತಿಯಲ್ಲಿರುವನು. ಅವನ ದೃಷ್ಟಿಯೆಲ್ಲವೂ ಪರಲೋಕಗತವಾಗಿರುವುವು. ಪ್ರಪಂಚ ವ್ಯಾಪಾರವನ್ನು ತ್ಯಾಗಮಾಡಿ, ಶಾರೀರಕ ಮತ್ತು ಸಾಮಾಜಿಕ ಕಾರ್ಯಗಳನ್ನು ಅಲಕ್ಷಿಸುವುದೇ ಆ ಧರ್ಮದ ನಿಯಮವು. ಆದರೆ ಪರಮಹಂಸರ ಸಂದೇಶದ ನಿಜತ್ವವು ಅದಲ್ಲ. ಅವರು ಎಷ್ಟರ ಮಟ್ಟಿಗೆ ವೈಷ್ಣವರಾಗಿದ್ದರೋ ಅಷ್ಟೇ ವೇದಾಂತಿಯೂ ಆಗಿದ್ದರು. ಈ ಎರಡು ಹಿಂದೂ ವಿರೋಧ ಸಂಸ್ಥೆಗಳನ್ನು ಸಂಯೋಜಿಸುವ ಧರ್ಮಸೂತ್ರವೇ ಅವರ ಕ್ರಮವಾ

ಕೊಡಗು.

ಸನ್ ೧೯೩೨ನೇ ಇಸವಿ

ಆಗೊಸ್ಟು ತಾ. ೨೬ನೇ ಶುಕ್ರವಾರ.

ಪ್ರೆಸ್ ಆರ್ಡಿನೇನ್ಸ್ ಜಾರಿಯಲ್ಲಿರುವ ವರೆವಿಗೆ ನಾವು ಅಗ್ರಲೇಖನ ವನ್ನು ಪ್ರಕಟಿಸುವುದಿಲ್ಲ.

ಕೋಮುವಾರು ಸಮಸ್ಯೆ.

(ರಾಷ್ಟ್ರಕರ್ತನಿಂದ.)

ಹಿಂದೂದೇಶದ ನಿವಾಸಿಗಳೊಳಗೆ ಇರುವ ರಾಜಕೀಯ ಸಮಸ್ಯೆಗಳಲ್ಲಿ ನ್ಯಾಯವಿಧಾಯಕ ಸಭೆಗಳಲ್ಲಿ ಕೋಮುವಾರು ಪ್ರತಿನಿಧಿತ್ವದ ಸಮಸ್ಯೆಯು ಅತಿ ಕಠಿಣದೆಂಬುದರಲ್ಲಿ ಸಂದೇಹವಿಲ್ಲ. ಇಂಡಿಯಾದಲ್ಲಿ ಕೋಮುವಾರು ಸಮಸ್ಯೆ ಎಂದರೆ ಮುಖ್ಯವಾಗಿ ಹಿಂದೂ ಮುಸಲ್ಮಾನರ ಪ್ರಾತಿನಿಧ್ಯದ ಪ್ರಶ್ನೆಯಾಗಿದೆ. ಇವೆರಡು ಮತಸ್ಥರು ಈ ವಿಷಯದಲ್ಲಿ ಒಂದು ತೀರ್ಮಾನಕ್ಕೆ ಬಂದರೇ ಆಯಿತು ಬಾಕಿ ಸಣ್ಣ ಸಂಖ್ಯೆಯ ಕೋಮಿನವರ ಮಾತು ಸುಲಭದಲ್ಲಿಯೇ ತೀರುತ್ತದೆ. ಕೆಲವು ವರ್ಷಗಳ ಹಿಂದೆ ಈ ಸಂಗತಿಯನ್ನು ಕುರಿತು ಹಿಂದೂ ಮುಸಲ್ಮಾನರಿಗೆ ಲಕ್ನೋದಲ್ಲಿ ಒಂದು ಒಪ್ಪಂದವು ಆಗಿತ್ತು. ಇದರ ಪ್ರಕಾರ ಮುಸಲ್ಮಾನರಿಗೆ ಕೌನ್ಸಿಲುಗಳಲ್ಲಿ ಮೆಂಬರುತನಗಳನ್ನು ಕಾದಿಡುವದಲ್ಲದೆ ಪ್ರತ್ಯೇಕ ಚುನಾವಣೆಯೂ ಇರಬೇಕೆಂದಿತ್ತು. ಅಂದಿನಿಂದ ಜಾರಿಗೆ ಬಂದ ಪ್ರತ್ಯೇಕ ಚುನಾವಣೆಯ ಅನುಭವದಿಂದ, ಪ್ರಜಾತಂತ್ರ ಸರ್ಕಾರದ ಕಡೆಗೆ ಜನರು ಮುಂದರಿಯುತ್ತಾ ಬಂದ ಹಾಗೆ ಈ ತರಹದ ಚುನಾವಣೆಯು ದೇಶದ ಏಳಿಗೆಗೆ ಮಾತ್ರವಲ್ಲ ಆ ಕೋಮಿನವರ ಅಭಿವೃದ್ಧಿಗೂ ಸಹಕಾರಿಯಾದುದಲ್ಲವೆಂದು ಅವರಿಗೆ ಗೊತ್ತಾಗುತ್ತಾ ಬಂತು. ಆದುದರಿಂದ ಪ್ರತ್ಯೇಕ ಚುನಾವಣೆಯನ್ನು ಹೋಗಲಾಡಿಸಿ ಮಿಶ್ರ ಚುನಾವಣೆ ಪದ್ಧತಿಯನ್ನೇ ಇಟ್ಟುಕೊಳ್ಳಬೇಕೆಂಬ ಹೋರಾಟವು ಜೋರಾಗುತ್ತಾ ಬಂದಿದೆ.

ಹಿಂದೂಗಳು, ಸಿಖ್ಖರು, ಕ್ರೈಸ್ತರು ಮತ್ತು ಪಾರ್ಸಿಗಳು ಮಿಶ್ರ ಚುನಾವಣೆಗೆ ಒಪ್ಪುತ್ತಾರೆ. ಮುಸಲ್ಮಾನರಲ್ಲಿ ರಾಷ್ಟ್ರೀಯ ಪಕ್ಷದವರೂ ಇದಕ್ಕೆ ಸಮ್ಮತಿಸುತ್ತಾರೆ. ಆದರೆ ಕೋಮುವಾರು ತತ್ವದ ಮುಷ್ಟಿಯವರು ಮಾತ್ರ ಪ್ರತ್ಯೇಕ ಚುನಾವಣೆಯೇ ಬೇಕೆಂದು ಹಟಹಿಡಿಯುತ್ತಿದ್ದಾರೆ. ಹಿಂದೂ ಮುಸಲ್ಮಾನರು ಈ ವಿಷಯವನ್ನು ತಮ್ಮೊಳಗೆ ತೀರ್ಮಾನಿಸಿಕೊಳ್ಳದೆ ಹೋದರೆ ಇಂಡಿಯಾದ ಮುಂದಿನ ರಾಜಕೀಯ ರಚನೆಯನ್ನು ತಯಾರಿಸಲು ಅಸಾಧ್ಯವಾಗುವದೆಂದು ಬ್ರಿಟಿಷರು ಹೇಳ ಹತ್ತಿದರು. ಇದ ಕಾರಣ 1928 ರಲ್ಲಿ ಸರ್ವ ಪಕ್ಷ ಪರಿಷತ್ತನ್ನು ನಡಿಸಿ ಎಷ್ಟು ಪ್ರಯತ್ನಗಳನ್ನು ಮಾಡಿದರೂ ಕೂಡ ಕೋಮುವಾರು ತತ್ವವಾದಿಗಳಾದ ಮುಸಲ್ಮಾನರು ಮಿಶ್ರ ಚುನಾವಣೆಗೆ ಒಪ್ಪಲಿಲ್ಲ. ಸದರಿ ಪರಿಷತ್ತಿನ ಫಲಿತಾಂಶವಾಗಿ ನೇಮಿಸಲ್ಪಟ್ಟ ನೆಹರು ಕಮಿಟಿಯವರು ತಯಾರಿಸಿದ ರಚನೆಯಲ್ಲಿ ಮಿಶ್ರ ಚುನಾವಣೆಯೇ ಇರಬೇಕೆಂದು ನಮೂದಿಸಲಾಯಿತು.

ನೆಹರು ಕಮಿಟಿಯ ರಚನೆಯಲ್ಲಿಯ ಸೂಚನೆಯನ್ನು ಕೆಲವು ಮುಸಲ್ಮಾನರು ವಿರೋಧಿಸುತ್ತಾ ಬಂದದ್ದರಿಂದ 1929 ರಲ್ಲಿ ನಡೆದ ಲಾಹೋರು ಕಾಂಗ್ರೆಸ್ಸಿನಂತರ ಕಾಂಗ್ರೆಸ್ಸಿನ ಪರವಾಗಿ ಮಹಾತ್ಮ ಗಾಂಧಿಯವರು ಈ ಸಮಸ್ಯೆಯನ್ನು ತೀರ್ಮಾನಿಸಲು ಪ್ರಯತ್ನ ನಡಿಸಿದರು. ಮುಸಲ್ಮಾನರ ಪರವಾಗಿ ಮ. ಯಂ. ಎ. ಜಿನ್ನಾರವರು ತಯಾರಿಸಿ ಅಖಿಲ ಮುಸ್ಲಿಮ್ ಲೀಗಿನಿಂದ ಒಪ್ಪಲ್ಪಟ್ಟ ಹದಿನಾಲ್ಕು ಶರತುಗಳಲ್ಲಿ ಹೆಚ್ಚುಕಮ್ಮಿ 13 ಶರತುಗಳಿಗೆ ಮಹಾತ್ಮರು ಸಮ್ಮತಿಸಿದರು. ಆದರೆ ದೇಶದ ಒಗ್ಗಟ್ಟಿಗೆ ಹಾನಿಯನ್ನುಂಟುಮಾಡುವಂಥ ಪ್ರತ್ಯೇಕ ಚುನಾವಣೆಗೆ ಮಾತ್ರ ಅವರು ಒಪ್ಪಿಗೆಯನ್ನೀಯಲಾರದೆ ಹೋದರು. ಕಾಂಗ್ರೆಸ್ಸಿನವರು 13 ಶರತುಗಳಿಗೆ ಒಪ್ಪಿದರೂ ಕೂಡ ಉಳಿದ ಒಂದನ್ನು ಬಿಟ್ಟು ಕೊಡಲು ಅಖಿಲ ಮುಸ್ಲಿಮ್ ಪಾರ್ಟಿಯವರು ಉದಾರ ಮನಸ್ಸು ಮಾಡಲಿಲ್ಲ.

ಲಂಡನಿನಲ್ಲಿ ನಡೆದ ದುಂಡು ಮೇಜು ಪರಿಷತ್ತುಗಳಲ್ಲಿಯೂ ಹಲವು ತರಹ ಪ್ರಯತ್ನಗಳು ನಡೆದು ವಿಫಲವಾದುವು. ಪಕ್ಷಪಾತವಿಲ್ಲದ ಬೇರೆ ಜನಾಂಗಗಳ ಮೆಂಬರುಗಳಿಂದ ಕೂಡಿದ ಪಂಚಾಯಿತರು ಈ ವಿಷಯದಲ್ಲಿ ಮಾಡುವ ತೀರ್ಮಾನಕ್ಕೆ ಒಪ್ಪುತ್ತೇವೆಂದು ಕಾಂಗ್ರೆಸ್ಸಿನವರೂ, ಹಿಂದೂಗಳೂ ಹೇಳಿದರು. ಆದರೆ ಮುಸ್ಲಿಂ ಪಾರ್ಟಿಯವರು ಅದಕ್ಕೆ ಸಮ್ಮತಿಸಲಿಲ್ಲ. ಈ ಸಮಸ್ಯೆಯನ್ನು ಒಡೆಯದೆ ಇಂಡಿಯಾದ ಮುಂದಿನ ಆಡಳಿತ ರಚನೆಯನ್ನು ತಯಾರಿಸಲು ಸಾಧ್ಯವಿಲ್ಲವೆಂದು ಇಂಗ್ಲೆಂಡಿನ ಪ್ರಧಾನ ಮಂತ್ರಿಯವರು ಕನ್‌ಸಲ್ಟೇಟಿವ್ ಕಮಿಟಿಯ ಕೆಲ ಮೆಂಬರುಗಳ ಸೂಚನೆ ಮೇರೆ ಇದನ್ನು ಕುರಿತು ತಾನೊಂದು ತಾತ್ಕಾಲಿಕ ತೀರ್ಮಾನವನ್ನು ಕೊಡುತ್ತೇನೆಂದು ಈ ವರ್ಷದ ಪ್ರಾರಂಭದಲ್ಲಿ ಒಪ್ಪಿಕೊಂಡರು.

ಹಿಂದೂ ಮುಸಲ್ಮಾನರು ಈ ವಿಷಯದಲ್ಲಿ ಒಗ್ಗಟ್ಟಾಗಿ ಬಿಟ್ಟರೆ ಬ್ರಿಟನಿಗೆ ಇಂಡಿಯಾವನ್ನು ಗುಲಾಮಗಿರಿಯಲ್ಲಿ ಇಟ್ಟುಕೊಳ್ಳಲು ಸಾಧ್ಯವಿಲ್ಲವೆಂದು ಬ್ರಿಟಿಷ್ ರಾಜಕೀಯ ಪಟುಗಳೇ ಹೇಳುತ್ತಾರೆ. ಹಿಂದೂದೇಶಕ್ಕೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಡಲು ಬ್ರಿಟಿಷ್ ಸರ್ಕಾರದವರಿಗೆ ಮನಸ್ಸಿಲ್ಲವೆಂಬುದೂ ಎಲ್ಲರಿಗೂ ಗೊತ್ತಿರುವ ಸಂಗತಿಯಾಗಿದೆ. ಆದುದರಿಂದ ಪ್ರಧಾನ ಮಂತ್ರಿಯವರು ಈ ಪ್ರಶ್ನೆಯನ್ನು ತೀರ್ಮಾನಿಸಲು ದಿನ ತಳ್ಳುತ್ತಾ ಬಂದರು. ಅವರು ತೀರ್ಮಾನಿಸಲು ಒಪ್ಪಿಕೊಂಡು ಆರೇ ತಿಂಗಳುಗಳು ಕಳೆದು ಹೋದುವು! ಆದರೂ ಏನೊಂದೂ ಹೊರಬೀಳಲಿಲ್ಲ. ಈ ತಿಂಗಳ ಅಂತ್ಯದಲ್ಲಿ ಅವರ ತೀರ್ಮಾನವನ್ನು ಪ್ರಕಟಿಸುವರೆಂದು ಈಗಿನ ಸುದ್ದಿ.

ಆದರೆ ಈ ಮಧ್ಯೆ ಬೊಂಬಾಯಿಯ ಪತ್ರಿಕೆಯೊಂದು ಪ್ರಧಾನ ಮಂತ್ರಿಯವರ ತೀರ್ಮಾನದ ಊಹೆಯೊಂದನ್ನು ಕೆಲವು ದಿವಸಗಳ ಹಿಂದೆ ಪ್ರಕಟಿಸಿತು. ಇದರಲ್ಲಿ ಮುಸಲ್ಮಾನರು ಕೇಳುತ್ತಿರುವ ಹದಿನಾಲ್ಕು ಶರತುಗಳಲ್ಲಿ ಏಳನ್ನು ಮಾತ್ರ ಮಂತ್ರಿಯವರು ಒಪ್ಪಿರುವರೆಂದೂ, ಆದರೆ ಅವುಗಳಲ್ಲಿ ಮುಖ್ಯ ಶರತ್ತಾದ ಪ್ರತ್ಯೇಕ ಚುನಾವಣೆಯನ್ನು ಹತ್ತು ವರ್ಷಗಳ ವರೆಗೆ ಇಡಲು ಸಮ್ಮತಿಸಿರುವರೆಂದೂ ಇತ್ತು. ಈ ಸುದ್ದಿಯು ಹಲವರಲ್ಲಿ ಗಲಿಬಿಲಿಯನ್ನುಂಟುಮಾಡಿದೆ. ತಮ್ಮ ಹದಿನಾಲ್ಕು ಶರತುಗಳನ್ನೆಲ್ಲಾ ಮಂಜೂರು ಮಾಡಿಸಿಕೊಳ್ಳಬೇಕೆಂಬ ಉದ್ದೇಶದಿಂದ ದೇಶದ ಸ್ವಾತಂತ್ರ್ಯ ಹೋರಾಟವನ್ನು ವಿರೋಧಿಸಿ ಸರ್ಕಾರದೊಂದಿಗೆ ಎಲ್ಲಾ ವಿಧಗಳಲ್ಲಿಯೂ ಸಹಕರಿಸಿದಂಥ ಕೋಮುವಾರು ತತ್ವವಾದಿಗಳಾದ ಮುಸಲ್ಮಾನರಿಗೆ ಇದರಿಂದ ನಿರಾಶೆಯುಂಟಾಗುತ್ತಿದೆ.

ಪಂಜಾಬು ಕೌನ್ಸಿಲಿನಲ್ಲಿ ಮುಸಲ್ಮಾನರಿಗೆ ಶೇಕಡ 50 ಕ್ಕಿಂತ ಹೆಚ್ಚು ಮೆಂಬರುತನಗಳನ್ನು ಕೊಟ್ಟುಬಿಟ್ಟು ಮುಸಲ್ಮಾನ್ ರಾಜ್ಯಕ್ಕೆ ಅವಕಾಶಮಾಡಿ ಕೊಡುತ್ತಾರೆಂಬ ಸುದ್ದಿಯಿಂದ ಸಿಖ್ಖ ಜನರು ರೇಗಿಬಿದ್ದಿದ್ದಾರೆ. ಪಂಜಾಬಿನಲ್ಲಿ ಯಾವದೊಂದು ಮತದವರಿಗೆ ಬೇರೆ ಎಲ್ಲಾ ಮತಗಳವರಿಗಿಂತ ಹೆಚ್ಚಿನ ಬಹುಮತ ದೊರೆಯದಂತೆ ಹೋರಾಟ ನಡಿಸಲಿಕ್ಕಾಗಿ ಸಿಖ್ಖ ಮುಖಂಡರು ಒಂದು ಲಕ್ಷ ಸ್ವಯಂಸೇವಕರನ್ನು ಸೇರಿಸಲು ನಿಶ್ಚಯಿಸಿರುವರು. ಇದು ಅಲ್ಲದೆ ಸರ್ಕಾರದವರನ್ನು ಎಚ್ಚರಗೊಳಿಸಿ ಮುಸಲ್ಮಾನ್ ಸಿಖ್ಖರೊಳಗೆ ಒಪ್ಪಂದತರುವ ಐಕ್ಯ ಪ್ರಯತ್ನಗಳು ಮಾಡಲ್ಪಟ್ಟವು. ಆದರೆ ಅವು ಇಷ್ಟರ ವರೆಗೆ ಜಯಪ್ರದವಾದಂತೆ ಕಾಣುವುದಿಲ್ಲ.

ಬಂಗಾಳದಲ್ಲಿಯೂ ಮುಸಲ್ಮಾನರಿಗೆ ಶೇಕಡ 50 ಕ್ಕಿಂತ ಹೆಚ್ಚಿನ ಮೆಂಬರುತನಗಳನ್ನು ಕಾದಿಡುವರೆಂಬ ಊಹೆಯು ಅಲ್ಲಿಯ ಹಿಂದೂಗಳನ್ನು ಅಸಮಾಧಾನಗೊಳಿಸಿದೆ. ಅವರು ಪ್ರತ್ಯೇಕ ಚುನಾವಣೆಯನ್ನು ಖಂಡಿಸಿ ತಮ್ಮ ಅತೃಪ್ತಿಯನ್ನು ಸೂಚಿಸಿರುವರು. ಇದು ಮಾತ್ರವಲ್ಲ ಅಲ್ಲಿಯ ನ್ಯಾಯವಿಧಾಯಕ ಸಭೆಯಲ್ಲಿ ಮುಸಲ್ಮಾನ ಮೆಂಬರರಿಂದಲೇ ಸೂಚಿಸಲ್ಪಟ್ಟು ಹಲವು ಮುಸಲ್ಮಾನ ಮೆಂಬರುಗಳ ಒತ್ತಾಸೆಯಿಂದಲೇ ಮುಂದಿನ ರಾಜಕೀಯ ರಚನೆಯಲ್ಲಿ ಪ್ರತ್ಯೇಕ ಚುನಾವಣೆಯ ಬದಲು ಮಿಶ್ರ ಚುನಾವಣೆಯನ್ನು ಜಾರಿಗೆ ತರಬೇಕೆಂಬ ಠರಾವು ಬಹುಮತದಿಂದ ಪಾಸುಮಾಡಿರುವರು. ಇದು ಸ್ತುತ್ಯಾರ್ಹವಾದ ಸಂಗತಿಯಾಗಿದೆ. ಅಲ್ಲಿಯ ಮುಸಲ್ಮಾನ ಮಹನೀಯರು ಬೇರೆ ಪ್ರಾಂತ್ಯಗಳಲ್ಲಿರುವ ತಮ್ಮ ಸಹೋದರರಿಗೆ ಒಂದು ಉದಾಹರಣೆಯನ್ನು ಹಾಕಿರುವರು. ಪ್ರತ್ಯೇಕ ಚುನಾವಣೆ ಪದ್ಧತಿಯು ಪಾಪಕರವಾದ ಸಂಗತಿಯಾಗಿದೆ. ಅದರಿಂದ ದೇಶದಲ್ಲಿರುವ ಹಲವು ಕೋಮುಗಳೊಳಗೆ ಎಲ್ಲಾ ಸಂಸ್ಥೆಗಳಲ್ಲಿಯೂ ಜಾತಿದ್ವೇಷಗಳು ಹೆಚ್ಚಾಗುತ್ತದೆ. ಈ ಜಾತಿದ್ವೇಷದ ವಿಷದಿಂದುಂಟಾಗುವ ಅನರ್ಥಗಳನ್ನು ವಿವರಿ[ಸಿ] ಪೂರೈಸಲಾಗುವುದಿಲ್ಲ. ಮಿಶ್ರ ಚುನಾವಣೆಯಿಂದ ಸಹೋದ[ರ] ಭಾವವು ಹೆಚ್ಚುತ್ತದೆ. ಜಾತಿ ವೈಷಮ್ಯದ ಭೂತವು ದೂರ ಓ[ಡಿ] ಹೋಗುವುದು. ಜಾತಿಮತ ಭೇದವೆಣಿಸದೆ ಹೆಚ್ಚಿನ ಜನರ [ವಿ]ಶ್ವಾಸಕ್ಕೆ ಪಾತ್ರರಾದವರು ಜನರ ಪ್ರತಿನಿಧಿಗಳಾಗಿ ಆರಿಸಲ್ಪಡುವರು. ಇದರಿಂದ ದೇಶದ ಹಾಗೂ ಪ್ರತಿಯೊಂದು ಕೋಮಿನ ಜನರ ಕಲ್ಯಾಣವಾಗುವುದೆಂಬುದರಲ್ಲಿ ಸಂಶಯವಿಲ್ಲ.

ಪ್ರಜಾತಂತ್ರ ಸರ್ಕಾರವಿರುವ ಯಾವ ದೇಶದಲ್ಲೂ ಪ್ರತ್ಯೇಕ ಚುನಾವಣೆ ಇರುವುದಿಲ್ಲ. ಈ ತರಹದ ಚುನಾವಣೆಯಿಂದ ಪ್ರಜಾಪ್ರಭುತ್ವ ಸರ್ಕಾರವನ್ನು ನಡಿಸಲು ತುಂಬಾ ಕಷ್ಟವಾಗುತ್ತದೆಂದು ಪ್ರಧಾನ ಮಂತ್ರಿಯವರೇ ಈ ಮೊದಲು ಸೂಚಿಸಿರುವರು. ಅಂಥಾ ಅಭಿಪ್ರಾಯವಿರುವ ಮಂತ್ರಿಯವರು ಈಗ ಯಾವ ತರಹದ ತೀರ್ಮಾನವನ್ನು ಕೊಡುತ್ತಾರೆಂದು ನೋಡಬೇಕಾಗಿದೆ. ಎಲ್ಲಾ ವಿಧಗಳಲ್ಲಿ ಬ್ರಿಟಿಷ್ ಸರ್ಕಾರಕ್ಕೆ ಒತ್ತಾಸೆ ಕೊಡುತ್ತಾ ಬಂದಿರುವ ಕೋಮುವಾರು ತತ್ವವಾದಿಗಳಾದ ಮುಸಲ್ಮಾನರನ್ನು ತೃಪ್ತಿಗೊಳಿಸಲಿಕ್ಕಾಗಿ ಈಗ ಊಹಿಸಲ್ಪಟ್ಟಿರುವಂತೆ ಪ್ರತ್ಯೇಕ ಚುನಾವಣೆ[ಗೆ] ಅವರು ಒಪ್ಪಿಗೆ ಕೊಟ್ಟದ್ದೇ ಆದರೆ ಇಂಡಿಯಾದಲ್ಲಿ ಕಲಹ[ದ] ಗಿಡವನ್ನು ನೀರು ಹಾಕಿ ಬೆಳೆಸಿದಂತಾಗುವುದು ಮತ್ತು 'ಬ್ರಿಟಿಷರು ವಿಭಾಗಿಸಿ ಆಳುತ್ತಾರೆ' ಎಂಬ ಅಪವಾದವನ್ನು ಗುಜ[ರಾ]ವಾತು ಮಾಡಿದಂತಾಗುವುದು.

ಪ್ರಧಾನ ಮಂತ್ರಿಯವರ ತೀರ್ಮಾನಕ್ಕೆ ಎಲ್ಲಾ ಪ[ಕ್ಷ]ದವರೂ ಸಮ್ಮತಿಸುವರೆಂಬ ನಿಶ್ಚಯವೇನೂ ಈ ಕೊಡಲಾಗಿರುವುದಿಲ್ಲ. ಅಲ್ಲದೆ ಅವರ ತೀರ್ಮಾನವು ಒಂದು ಪಾ[ರ್ಟಿ]ಗೆ ತೃಪ್ತಿಯನ್ನುಂಟುಮಾಡಿದರೆ ಇನ್ನೊಂದು ಪಾರ್ಟಿಗೆ ಅಸಮಾಧಾನವನ್ನುಂಟುಮಾಡದೆ ಇರದು. ಇಂಥಾ ವಿಷಯ[ವನ್ನು] ಪಾರ್ಟಿ ಮುಂದಾಳುಗಳು ತಮ್ಮೊಳಗೆ ಒಪ್ಪಿ ತೀರ್ಮಾನಿಸಿ[ಕೊ]ಳ್ಳುವುದೇ ಉತ್ತಮ. 'ಇದು ಸಾಧ್ಯವಿಲ್ಲವೆಂತಾದಾಗ ಸ[ಂಬಂ]ಧಪಟ್ಟ ಜಾತಿಗಳ ಮುಂದಾಳುಗಳ ಒಪ್ಪಿಗೆಯಿಂದ ಪ[ಂಚಾ]ಯಿತರನ್ನು ನೇಮಿಸಿ ಅವರಿಂದ ತೀರ್ಮಾನಿಸುವುದು ಒಳ್ಳೆಯದಾಗಿತ್ತು. ಇದನ್ನೆಲ್ಲಾ ಬಿಟ್ಟು ಮಂತ್ರಿಯವರು ತಾ[ವು] ವಹಿಸಿಕೊಂಡಿರುವ ಜವಾಬ್ದಾರಿಯನ್ನು ಹಿಂದೂ ದೇ[ಶದ] ಕಲ್ಯಾಣದ ದೃಷ್ಟಿಯಿಂದಲೂ; ಪ್ರಪಂಚದ ಜನಾಂಗಗ[ಳ] ನ್ಯಾಯವೆಂದೆನ್ನಿಸಿಕೊಳ್ಳುವಂತೆಯೂ ನಿರ್ವಹಿಸುವರೋ [ಎಂ]ದು ಎದುರು ನೋಡುವ.

Reg. No. M. 1550.
If not delivered please return to "KODAGU" OFFICE MERCARA.

ಕೊಡಗು.

ಸತ್ಯೇನ ಧೂತದಯಯಾ ವಿದ್ಯಾ ಶೀಲ ಪ್ರಯುಕ್ತಕಾಃ । ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾಃ ॥

ವಾರ್ಷಿಕ ಚಂದಾ ರೂ. ೩—೮—೦.

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೨	ಮಡಿಕೇರಿ, ಸನ್ ೧೯೩೨ನೇ ಇಸವಿ ಆಗೊಸ್ತು ತಾರೀಕು ೧೨ ನೇ ಶುಕ್ರವಾರ.	ಸಂಚಿಕೆ ೧೧

SARI-PIN.

EAR-RINGS. (Thodus)
Cut-rubys Rs. 25 to 50
With diamond in centre Rs. 80 to 120

BRACE LETS
Gold Rs. 10
Set rubys forming any letter Rs. 12

NECKCHAINS.

NOSE-RINGS.
Diamond in small size of best quality Rs. 35 & upwards according to size.

MARRIAGE PRESENTATIONS

Attractive and inexpensive articles ready in stock. Prompt execution. Details on enquiry free with catalogue. Numerous customers in Coorg thoroughly satisfied with reliable service. Testimonials pouring in. Silver Guindys, Photo lockets, Dimond nose-screws, cut-ruby ear-rings, etc., etc., etc., in all prices. Very attractive. Prices most moderate.

Estimates free on enquiry.

Designs free on enquiry.

V. Subramaniaier
Jeweller,

Telegrams: 'PRECIOUS.'

Telephone: 8145.

CATALOGUE ON ENQUIRY.

52—38

Post Box 423, Triplicane, P. O., MADRAS.

USE ESANOFELE FOR MALARIA

ಮಲೇರಿಯಾಕ್ಕೆ ರಾಮಬಾಣ. ಶೀಘ್ರವೂ ನಿಶ್ಚಿತವೂ ಆದ ಗುಣಕಾರಿ. ಅನು ಷಂಗಿಕ ತೊಂದರೆ ಕೊಡುವದಿಲ್ಲ.

ಉಷ್ಣವಲಯಕ್ಕೆ ವಿಶೇಷ ಸವರಣೆ. ನಮ್ಮ ಈ ಉಪ್ಪು 'Special Formual for India' ಎಂಬ ಅರಗಿನ ಚೀಟಿಯಿದೆ.

SOLE AGENTS
GORIO LTD.
P.O. BOX 159, BOMBAY

AVAILABLE AT ALL CHEMISTS

26—7

Empire of India Life Assurance Company, Ltd.

Established 1897.

The New "FAMILY SECURITY" Policy issued by this Company provides.

A In the event of death during an agreed period.

1. The immediate payment to the Widow, or legal representative of a part of the Sum Assured together with the Bonus accrued.

2. The payment of a guaranteed Yearly Income, payable by monthly instalments, during the balance of the period.

3. The payment of the balance of the sum of assured at the end of the period.

OR

B In the event of death after the period has expired the payment of the sum assured together with any Bonus that has accrued.

Descriptive Pamphlet on application to—

Head Office:—
Empire of India Life Building,
Bombay

Branch Office:—
152, Commercial Street,
Bangalore.

52—45

ಜನರಲ್ ಅಷ್ಯೂರೆನ್ಸ್ ಸೊಸೈಟಿ.

ಅ ಜ ಮೀ ರ್.

ನಮ್ಮ ಆಯವ್ಯಯದ ಪಟ್ಟಿಯೇ ನಮ್ಮ ಅಭಿವೃದ್ಧಿಯನ್ನು ವ್ಯಕ್ತಗೊಳಿಸುತ್ತದೆ.

ವರ್ಷ	ಹುಟ್ಟಿದ ವರ್ಷಾದಾಯ	ಮುಟ್ಟಿದ ಮೂಲಧನ	ಖರ್ಚಿನ ಪರಮಾಣದ ಶೇಕಡ
1911	46,248	49 44.[illegible]	8..9
1921	2,9?,627	6,5?,350	43 2
1931	12,?0,000	4?,00,000	28.2

ಬೋನಸ್ಸು.

ಸುತ್ತರ ಸಲ ದೊರಕುವ ಜೀವಾವಧಿ ಪಾಲಿಸಿಗಳ ಮೇಲೆ ವರ್ಷ ಒಂದಕ್ಕೆ ಶೇಕಡ 22½

ಚೆನ್ನಾಗಿ ಕೆಲಸಮಾಡಿ ಅಭಿವೃದ್ಧಿ ಸ್ಥಿತಿಯಲ್ಲಿರುವ ಈ ಸೊಸೈಟಿಯಲ್ಲಿ ವಿಮೆ ಮಾಡಿ ಕಡಿಮೆ ಪ್ರೀಮಿಯಂ ಪಾವತಿ ಮಾಡುವ ಸೌಲಭ್ಯ ಹೊಂದಿ ಅಥವಾ ಈ ಕಂಪೆನಿಯ ಪರ ವಾಗಿ ಕೆಲಸಮಾಡಿ ಉತ್ತಮ ಕಮಿಶನ್ ದರದ ಪ್ರಯೋಜನ ಹೊಂದಿ.

ಹೆಚ್ಚು ವಿಚಾರಗಳಿಗೆ ಈ ವಿಳಾಸಕ್ಕೆ ಬರೆಯಿರಿ:—

ಎ. ರಾಮಚಂದ್ರರಾವ್,
ಸುಪರಿಂಟೆಂಡೆಂಟ್,
ಮಿಂಟೋ ಆಸ್ಪತ್ರೆ ಬಳಿ,

52—16

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲು)

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	27,350
ಜಮಾಬಂದ ಠೇವಣಾತಿ	—	2,25,172
ವಸೂಲಾದ ಕ್ಷೇಮನಿಧಿ	—	37,914

ಈ ಬ್ಯಾಂಕಿನಿಂದ ಕೊಡಗು ಜಿಲ್ಲೆಯ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು, ಪಟ್ಟಮಾಡ ದೇವಯ್ಯನವರು, ರಾವ್ ಬಹದ್ದೂರ್.

ಟ್ರೆಜರರ್ ಮನೆಯಪ್ಪಂಡ ಬೆಳ್ಯಪ್ಪನವರು.

ಸೆಕ್ರೆಟರಿ

ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್

ತಾರೀಖು 1—7—1932.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ನಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜೆಂಟರುಗಳು.

ಉತ್ತರ ಕೊಡಗಿಗೆ ಮು॥ ಚೌರಿರ ಮಾದಯ್ಯನವರು,

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ॥ ಮುಂಡೇಪಂಡ ಸೋಮಯ್ಯನವರು (ಪಾದಿಭಂಡಾರ.)

ನಾಪೋಕ್ಲು—ಎಮ್. ಆರ್. ವೆಂಕಪ್ಪಯ್ಯನವರು.

ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,

ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಯ್ಯನವರು.

ಮತ್ತು ಅರಮಣಮಾಡ ಪಿ ಕಾರ್ಯಪ್ಪನವರು,

ಹುದಿಕೇರಿ ಟಿ. ಶೆಟ್ಟಿಗೇರಿ—ಮೆ. ಜಿ. ಮಾದಯ್ಯನವರು,

ಕುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಪೊಣ್ಣಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿ ಒಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡೆಸಲು ಅತ್ಯವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ಬಾಬಾ ಫಾರಮುಗಳೂ, ಖರಾರು ಫಾರಮುಗಳೂ, ಜಮ್ಮ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಖರಾರು ಫಾರಮುಗಳೂ, ಸ್ಟೋರ್ ಕೀಪರ್ ಖರಾರು ಫಾರಮುಗಳೂ, ಓವರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮಾ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 16,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲ ರೂ.

ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 51 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 33 ಲ ರೂ.

ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,78,322 ಜನರಿಗೆ 38ಕೋಟಿ ರೂ. ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ರಷ್ಟರ ಕಡಿಮೆ ಖರ್ಚಿನಲ್ಲಿಯೇ ನಡೆಸಲ್ಪಟ್ಟಿವೆ.

ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಆ ಸಂಖ್ಯೆಗಳಿಂದಲೂ, ಇದರ ಕೆಲಸ ಕಟ್ಟಿನ ಮತ್ತು ಉತ್ತಮವಾದ ನಡೆಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಬೆಂಬಲವನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬದು ಅದರ ಹಿಂದಿನ ದಾಖ್ಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು,

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ಮೊಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಢಾಕ್ಕಾ	ಲಕ್ನೋ	ಪಾಟ್ನಾ	ಸುಕ್ಕೂರು
ಅಲ್ಲಾಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಡೌಲಗಾನ್	ಮಂಡಲೆ	ರಾಯಪುರ	ತಿರುವೆಂಡ್ರಮ್
ಭೋಪಾಲ್	ಕರಾಚಿ	ಮಂಗಳೂರು	ರಾಂಚಿ	ವಿಶಾಖಪಟ್ನ [52—

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,

52—30 ಗಿರಿಗಾಂವ, ಮುಂಬಯಿ.

ಕಾರ್ಡು ಬರೆದರೆ ಇನಾಮು ಕ್ಯಾಟಲಾಗು ಮಾಫಿಯಾಗಿ ಕಳುಹಿಸಲ್ಪಡುವುದು.



ಕೋವಿಗಳು, ಕತ್ತಿಗಳು, ಬಟೀಗಳು, ತೋಟೆಗಳು, ಕೇಪುಗಳು, ಮದ್ದು ಮತ್ತು ಬೇಟೆಯ ಎಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS LTD.,

Largest Importers of Firearms and Ammunition

Cheapest priced firm in India,

24—22 **210 Abdul Rehiman Street, BOMBAY.**

Printed & published by P. I. Belliappa at "Kodagu" Press Mercara for "Kodagu" Ltd.

ಪತ್ರವ್ಯವಹಾರ.

[ಬರೆಯುವವರು ಪಡುವ ಅಭಿಪ್ರಾಯ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ.]

ವೀರರಾಜಪೇಟೆಯಲ್ಲಿ ನೀರು !

ಅಯ್ಯಾ,

ವೀರರಾಜೇಂದ್ರಪೇಟೆಯಲ್ಲಿ ಸಬ್‌ಜಡ್ಜಾಗಿದ್ದ ಮ. ರಾ. ಶ್ರೀ ವಾಸಯ್ಯ ನಾಯುಡುರವರು ಈತ ಬೆಂಗಳೂರಿನಲ್ಲಿ ಅವರು ತಾವು ಕೆಲವುಕಾಲ ವೀರರಾಜೇಂದ್ರಪೇಟೆಯಲ್ಲಿ ಕೆಲಸ ಮಾಡುತ್ತಿದ್ದು ಅಲ್ಲಿನ ಜನಗಳಿಗೆ ಕಾಲದಲ್ಲಿ ನೀರಿಗಾಗಿ ಪಡುವ ಕಷ್ಟಗಳನ್ನು ಅನುಭವಿಸಿ ಕಂಡಿರುವ ಕಾರಣ ಈಗ ಸುಮಾರು ನಾಲ್ಕು ವರ್ಷ ಕೆಳಗೆ ವೀರರಾಜಪೇಟೆಗೆ ಬಂದಿದ್ದು ಅಲ್ಲಿನ ಮುನ್ಸಿಪಲ್ ಪ್ರೆಸಿಡೆಂಟರು ಮತ್ತು ಮ್ಯಾಜಿಸ್ಟ್ರೇಟರೊಡನೆ ವೀರರಾಜೇಂದ್ರಪೇಟೆ ನೀರಿನ ನಲ್ಲಿಗಳು ಹಾಕಿಸುವುದಕ್ಕಾಗುವ ಸಹಾಯವನ್ನು ಮಾಡುವೆನೆಂದು ಹೇಳಿದ್ದ ಮಡಿಕೇರಿಯಲ್ಲಿ ಇರುವ ನೀರಿಗಾಗಿ ಕಟ್ಟಿಸಿರುವಂತೆ ಒಂದು ಕೆರೆನ್ನು ವೀರರಾಜೇಂದ್ರಪೇಟೆಯಲ್ಲಿ ಅಲ್ಲಿಂದ ನಲ್ಲಿಗಳ ಮೂಲಕ ನೀರು ಕಳುಹಿಸುವ ಪಕ್ಷದಲ್ಲಿ ಈ ಕೆಲಸವನ್ನು ಮುಗಿಸುವುದಕ್ಕೆ ಗವರ್ನಮೆಂಟಿನವರಾಗಲಿ ಜವಾಬ್ದಾರಿ ತೆಗೆದುಕೊಂಡ ಪಕ್ಷದಲ್ಲಿ ಮಹಾ ಸಾಹುಕಾರ್ ವಾಸಯ್ಯ ನಾಯುಡುರವರು ತಮ್ಮ ಭಾಗದ (2000—0—0) ಇಪ್ಪತ್ತೈದು ಸಾವಿರ ರೂಪಾಯಿ ಕೊಡುತ್ತೇನೆ, ಈ ಕೆಲಸ ಪೂರೈಸುವದಕ್ಕಾಗುವ ಮಿಕ್ಕ ಹಣವನ್ನು ಗವರ್ನಮೆಂಟಿನವರಾಗಲೀ, ವೀರರಾಜೇಂದ್ರಪೇಟೆ ಮುನ್ಸಿಪಾಲಿಟಿಯವರಾಗಲೀ ಕೊಡಬೇಕು ಎರಡು ಕಾಲದ ಒಳಗಾಗಿ ಮುಗಿಸಬೇಕೆಂದು ಕೃಪೆಮಾಡಿ ಇದ್ದರು.

ಈ ವರ್ಷ ಫೆಬ್ರವರಿ ತಿಂಗಳಿನಲ್ಲಿಯೂ ಈ ಪ್ರಸ್ತಾಪವನ್ನು ಕುರಿತು ಕೊಡಗು ಚೀಫ್ ಕಮಿಷನರವರಿಗೆ ಅವರ ಸೆಕ್ರೆಟರಿ ಮೂಲಕ ಒಂದು ಪತ್ರವನ್ನಿದ್ದರು.

ಈ ಮಧ್ಯೆ ವೀರರಾಜಪೇಟೆ ಮುನ್ಸಿಪಲ್ ಪ್ರೆಸಿಡೆಂಟರವರಿಂದ ಈ ಕೆಲಸಕ್ಕಾಗಿ ಅಂದಾಜು ಮಾಡುವ ಬಗ್ಗೆ (2,000—0—0) ಎರಡು ಸಾವಿರ ರೂಪಾಯಿಗಳು ಮುನ್ಸಿಪಾಲಿಟಿಯವರು ಶ್ಯಾಂಕ್ಷನ್ ಮಾಡಿದುದು ತಿಳಿಯಬಂತೇ ಹೊರತು ಇದು ವರೆವಿಗೂ ಅವರು ಏನು ಮಾಡುತ್ತಿದ್ದಾರೆಂಬುವದು ತಿಳಿಯಲಿಲ್ಲ. ಈ ವೀರರಾಜೇಂದ್ರಪೇಟೆ ಜನಗಳಿಗೆ ಮಾತ್ರವಲ್ಲ, ಅಲ್ಲಿಗೆ ನಿತ್ಯವೂ ಬರುವ ಜನಗಳಿಗೂ ಮತ್ತು ದನಕರ ಮುಂತಾದ ಪಕ್ಷಿಗಳಿಗೂ ಸಹ ಉಪಯೋಗವಾಗುವದರಿಂದ ತಾವು ಪತ್ರದ ಮೂಲಕ ಆಗಿಂದಾಗ್ಯೆ ವಿಚಾರಣೆ ಮಾಡುವ ನನ್ನ ಪ್ರಾರ್ಥನೆ.

'ಧರ್ಮ ಕಾರ್ಯ ನೆರವೇರಿಸಬೇಕೆಂಬ ಇಚ್ಛೆ ಉಳ್ಳವನು.'

ಕೊಡಗಿನ ರಾಜಕೀಯ ಸುಧಾರಣೆ.

ಮಹನೀಯರೇ,

ಕೊಡಗಿನ ಭವಿಷ್ಯತ್ತನ್ನು ಕುರಿತು ಶ್ರೀಮತಿ ನಾಕವ್ವನವರು 'ಹಿಂದೂ' ಪತ್ರಿಕೆಯ ಪ್ರತಿನಿಧಿಗೆ ಕೊಟ್ಟ ಅಭಿಪ್ರಾಯವನ್ನು ಈ ಪತ್ರಿಕೆಯಲ್ಲಿ ಶ್ರದ್ಧೆಯಿಂದ ಕೊಡಗಿನ ಹುಡುಗರು ಅದನ್ನು ಓದಿರಬಹುದಾಗಿ ಭಾವಿಸುತ್ತೇನೆ. ಅವರ ಅಭಿಪ್ರಾಯದಲ್ಲಿ ಕೊಡಗನ್ನು ಮೈಸೂರಿಗೆ ಸೇರಿಸುವುದೇ ಇಲ್ಲಿನ ಜನರಿಗೆ ಕಲ್ಯಾಣವೆಂದಾಗಿದೆ. ಮೈಸೂರು ಪ್ರಾಂತ್ಯದ ಎಸೆಂಬ್ಲಿಯಲ್ಲಿ ಒಬ್ಬ ಮೆಂಬರರಾಗಿರುವರು, ಆ ಪ್ರಾಂತ್ಯದಲ್ಲಿಯೇ ಹೆಚ್ಚಿನ ಹಿತವುಳ್ಳವರಾಗಿರುವ ಮತಿಯವರು ಈ ಅಭಿಪ್ರಾಯ ಕೊಟ್ಟಿದ್ದರಲ್ಲಿ ಆಶ್ಚರ್ಯವೂ ಇಲ್ಲ. ಆದರೆ ದೇಶದ ಹೆಚ್ಚಿನ ಜನರ ಹಿತದ ದೃಷ್ಟಿಯಿಂದ ಈ ಅಭಿಪ್ರಾಯವು ಸರಿಯಾದದ್ದಲ್ಲವೆಂದು ಹೇಳಲೇಬೇಕು.

ಸರ್ಕಾರದವರು ಅಭಿಪ್ರಾಯ ಕೇಳಿದ 7 ಸಂಘಗಳ ಪೈಕಿ 5 ಅಮಲ್ಗಮೇಷನ ಪರವೂ, 2 ಮಾತ್ರ ಪ್ರತ್ಯೇಕ ಇರುವಂತೆಯೂ ಸಲಹೆ ಕೊಡುವವೆಂದು ಶ್ರೀ. ನಾಕವ್ವನವರ ಹೇಳಿಕೆಯಾಗಿದೆ. 13 ಸಂಘಗಳು ಅಮಲ್ಗಮೇಷನಿಗೆ ಪರವಾಗಿಯೂ, 2 ಈಗ ಇರುವಂತೆಯೂ, ಇನ್ನೆರಡು ಪ್ರಾಂತೀಕ ಸ್ವಾತಂತ್ರ್ಯ ಸರ್ಕಾರ ಕೊಡಬೇಕೆಂತಲೂ, ಹಾಗೆ ಕೊಡಲು ಸಾಧ್ಯವಿಲ್ಲದಿದ್ದರೆ ದೊಡ್ಡ ಪ್ರಾಂತ್ಯಕ್ಕೆ ಸೇರಿಸಬೇಕೆಂತಲೂ ಅಭಿಪ್ರಾಯ ಕೊಟ್ಟವೆಯೆಂದು ನಾನು ಕೇಳಿದ ವರ್ತಮಾನವಾಗಿ ಜನ ಸಮುದಾಯದ ತಿಳುವಳಿಕೆ ಬಗ್ಗೆ ಇದನ್ನು ಚೆನ್ನಾಗಿ ತಿಳಿದ ಮಹನೀಯರಾಗಲೀ, ಆಯಾ ಸಂಘಗಳ ಸೆಕ್ರೆಟರಿಗಳಾಗಲೀ, ಅಥವಾ ಸರ್ಕಾರದವರಾಗಲೀ ಪ್ರಕಟಿಸುವ

ಸಂಸ್ಥಾನಗಳ ಪ್ರಜೆಗಳಿಗಿನ ಕಷ್ಟ ಸ್ಥಿತಿಯನ್ನು ಅರಿತವರ್‍ಯಾರೂ ಬ್ರಿಟಿಷ್ ಪ್ರಾಂತ್ಯವಾಗಿರುವ ಕೊಡಗನ್ನು ಮೈಸೂರು ಸಂಸ್ಥಾನಕ್ಕೆ ಸೇರಿಸಬೇಕೆಂದು ಹೇಳಲಾರರು. ಇಡೀ ಹಿಂದೂಸ್ಥಾನದ ಹೊರತೇ ಪ್ರಜಾಜವಾಬ್ದಾರಿ ಸರ್ಕಾರಕ್ಕಾಗಿ ಅಂದಮೇಲೆ ಹೆ ರಾಜಕೀಯ ಸುಧಾರಣೆಹೊಂದುವ ಮತ್ತು ಇನ್ನು ಬೇಗನೆ ಹೊಂದಲಿಕ್ಕಿರುವ ಬ್ರಿಟಿಷ್ ಪ್ರಾಂತ್ಯವು ಜವಾಬ್ದಾರಿ ಸರ್ಕಾರದ ಪದ್ಧತಿಯಲ್ಲಿ ಇಂದೆ ಬದ್ಧರುವ ಸಂಸ್ಥಾನದೊಂದಿಗೆ ಸೇರಿಕೊಳ್ಳುವುದು ಬುದ್ಧಿವಂತಿಕೆಯೋ?

ಅಭಿಪ್ರಾಯ ಕೊಟ್ಟಿರುವ ಸಂಘಗಳ ಸಂಖ್ಯೆಯನ್ನು ಮಾತ್ರ ಎಣಿಸಿಕೊಂಡರೆ ಸಾಲದು. ನಿನ್ನೆ ಮೊನ್ನೆಯ ಮಳೆಗೆ ಹುಟ್ಟಿದ ಹಣಬೆಯಂಥ ಸಂಘಗಳನ್ನೂ, ದೀರ್ಘಕಾಲದಿಂದ ದೇಶದ ಏಳಿಗೆಗಾಗಿ ಕೆಲಸ ಮಾಡುತ್ತಿರುವ ಮತ್ತು ಹೆಚ್ಚಿನ ಜನರ ಅಭಿಪ್ರಾಯಗಳನ್ನು ಒಳಕೊಂಡಿರು ಸಂಘಗಳಿಗೆ ಸರಿ ಹೋಲಿಸುವುದರಲ್ಲಿ ಅರ್ಥವಿಲ್ಲ. ಸರ್ಕಾರದವರಿಗೆ ದೇಶದ ಜನರ ನಿಜವಾದ ಅಭಿಪ್ರಾಯ ಬೇಕೆಂತಾದರೆ ಎಲ್ಲಾ ಕಡೆಗಳಲ್ಲಿ ಪಬ್ಲಿಕ್ ಮೀಟಿಂಗುಗಳನ್ನು ನಡಿಸಿಯಾಗಲೀ, ಅಥವಾ ಬರ್ಮಾದಲ್ಲಿ ಮಾಡುವಂತೆ 'ರೆಫರೆಂಡಮ್' ಮೂಲಕ ಓಟರುಗಳ ಇರಾದೆಯನ್ನು ತೆಗೆದುಕೊಳ್ಳುವದರಿಂದಾಗಲೀ ಬಹುಮತ ಜನಗ ಅಭಿಲಾಷೆಯನ್ನು ತಿಳಕೊಳ್ಳಬಹುದು.

ಜಮೀನ್ದಾರರ ಸಂಘವು ಈ ಮೊದಲು ತೀರ್ಮಾನಿಸಿದ್ದ ಮೇರೆ ನಾವೆಲ್ಲರೂ ಪ್ರಾಂತೀಕ ಸ್ವಾತಂತ್ರ್ಯ ಸರ್ಕಾರವನ್ನು ಪಡೆಯಲು ಈಗ ಸೊಂಟಗಟ್ಟಿ, ಅದನ್ನು ನಡಿಸಲು ನಮಗೆ ಸಾಧ್ಯವಿಲ್ಲವೆಂದು ಕಂಡು ಬಂದರೆ ಕೆಲವು ವರ್ಷಗಳಲ್ಲಿಯೇ ನಿರ್ಮಾಣವಾಗಬಹುದಾದ ಕರ್ನಾಟಕ ಪ್ರಾಂತ್ಯಕ್ಕೆ ಸೇರಿಕೊಳ್ಳುವುದೇ ಉತ್ತಮವೆಂದು ನನ್ನ ಅಭಿಪ್ರಾಯ.

ಸಿ. ಕೆ. ಟಿ.

ಕೊಡಗು ಸಹಕಾರಿ ಫೆಡರೇಶನ್.

ಫೆಡರೇಶನ್ ಎಂಬ ಈ ಸಂಸ್ಥೆಯು ಕೊಡಗಿಗೆ ಇದೇ ಪ್ರಥಮ ಜನನ. ಈ ಸಂಸ್ಥೆಯೆಂದರೇನು? ಇದನ್ನು ಹೇಗೆ ನಡಿಸಿಕೊಂಡು ಹೋಗಬೇಕೆಂಬದನ್ನು ಇದರ ಕಾರ್ಯನಿರ್ವಾಹಕ ಸಭೆಯವರು ಇಂತಪ್ಪ ಸಂಸ್ಥೆಯಲ್ಲಿ ಸೇರಿ, ಪೂರ್ಣ ಮಾಹಿತಿಯಿಂದ ಅರಿತಿರಬಹುದೆಂದು ನಂಬಬಹುದೇ ಎಂದೊಂದು ಪ್ರಶ್ನೆ: ಈ ಸಂಸ್ಥೆಯು ಸರಕಾರಕ್ಕಿಂತ ದೊಡ್ಡದೇ ಎಂದೊಂದು ಪ್ರಶ್ನೆ! ಈ ಸಂಸ್ಥೆಯಿಂದ ಏನಾದರು ಪ್ರಯೋಜನಯಿದೆಯೇ ಎಂದೊಂದು ಪ್ರಶ್ನೆಯಾಗಿರುತ್ತೆ.

ಈ ಮೂರು ಪ್ರಶ್ನೆಗಳನ್ನು ಚರ್ಚಿಸಿ ನೋಡದುದರಿಂದಲೇ ಫೆಡರೇಶನ್ ಕೂಟದವರ ದಬ್ಬಾಳಿಕೆ. ದಬ್ಬಾಳಿಕೆ ಅಂದರೇನು? ನಾನು ಮಾಡಿದಂತೆ ನೀನು ಮಾಡಲಾಗದು. ನಾನು ಹೇಳಿದಂತೆ ನೀನು ಮಾಡು, ಎಂಬದು ದಬ್ಬಾಳಿಕೆಯೆಂದು ನಂಬಬೇಕಾಗಿದೆ.

ಫೆಡರೇಶನ್‌ನವರು ಸರಕಾರಿ ಸಹಕಾರಿ ರಿಜಿಸ್ಟ್ರಾರವರಿಗೆ ಅಧೀನರಲ್ಲವಂತೆ, ಸಮಸಮಾನರಂತೆ; ಸಹಕಾರಿ ಯೂನಿಯನ್ ಕೂಟಗಳಿಗೆ ಮೇಲಧಿಕಾರಿಗಳ ಈ ಮೇಲಧಿಕಾರಿ ಕೀಳಧಿಕಾರಿ ಎಂಬದು ಸಹಕಾರ ತತ್ವದಲ್ಲಿದೆಯೋ? ಸಹಕಾರಿಯೆಂದರೇನು? "ಇತ್ತೆಕ್ಕರ ಮತ್ ಅನ್ಯೆಕ್ಕರ ಮುಂಡಾ" ಎಂಬ ನಮ್ಮ ಪೂರ್ವೀಕರ ನಾಣ್ಣುಡಿಯಂತೆ ಇದು ನೋಡುವಾಗ್ಯೆ ಒಂದನೆ ಪ್ರಶ್ನೆ ಮುಂದೆ ವಿಳಿತದಿಂದ ಅರಿತಿರಲಿಕ್ಕಿಲ್ಲವೆಂದೇ ನಂಬಬೇಕಾಗಿದೆ.

ಫೆಡರೇಶನ್ ಎಂಬ ಸಂಸ್ಥೆಯನ್ನು ಸರಕಾರಿ ರಿಜಿಸ್ಟ್ರಾರವರು ರಿಜಿಸ್ಟ್ರರ್ ಮಾಡದಿದ್ದರೆ ಈ ಸಂಸ್ಥೆಯು ಜೀವದಲ್ಲಿರುತಿತೋ? ಇಲ್ಲ ಇದರ ಸುಳಿವೇ ಇರುತ್ತಿರಲಿಲ್ಲ. ಈಗಲೂ ಈ ಸಂಸ್ಥೆಯಿಂದ ಪ್ರಯೋಜನವಿಲ್ಲವೆಂದು ಮುಚ್ಚಲು ಹುಕುಂ ಮಾಡಲು ಅವರಿಗೆ ಅಧಿಕಾರವಿದೆಯಾಗಿ ನಂಬುತ್ತೇನೆ. ಹೀಗಿರುತ್ತ ಈ ಸಂಸ್ಥೆಯು ಎಂದೂ ರಿಜಿಸ್ಟ್ರಾರವರಿಗೆ ಮೇಲಧಿಕಾರಿಗಳಲ್ಲವೆಂದು ನಂಬಬೇಕಾಗಿದೆ.

ಗ್ರಾಮಾಂತರಗಳಲ್ಲಿ ಇರುವ ಸಹಕಾರಿ ಸಂಘಗಳೆಲ್ಲ ಕೂಡಿ ಒಂದು ಯೂನಿಯನ್ ಕೂಟವನ್ನು ಮಾಡಿಕೊಂಡು, ಸದರಿ ಕೂಟದವರು ಸಂಯೋಜಿತ ಸಂಘಗಳಿಗೆ ಹೋಗಿ ಆಗಿಂದಾಗ್ಯೆ ಸಹಕಾರಿ ತತ್ವಗಳನ್ನ ಬೋಧಿಸಿ ಸಂಘಗಳನ್ನು ಉನ್ನತ ಸ್ಥಿತಿಗೆ ತಂದು ಬಡ ರೈತರಿಗೆ ಸಹಾಯ ಮಾಡುತ್ತಲೂ, ರಿಜಿಸ್ಟ್ರಾರವರ ಕಡೆ ಇನ್ಸ್‌ಪೆಕ್ಟರವರೂ, ಯೂನಿಯನ್ ಕೂಟದವರ ಕಡೆ ಸುಪರ್‌ವೈಜರವರೂ ಇರುವಾಗ್ಯೆ ಈ ಫೆಡರೇಶನ್ ಎಂಬ ಸಂಸ್ಥೆಯ ಯಾವತೊಂದು ಸಂಗತಿಯು ಅವರು ವಿಮೋಚನೆ ರಿಜಿಸ್ಟ್ರಾರವರಿಂದ ಆಗಿರುವಾಗ್ಯೆ ಫೆಡರೇಶನಿಂದ ಒಂದು ಸರ್ಕ್ಯುಲಾರ್, ರಿಜಿಸ್ಟ್ರಾರವರಿಂದ ಒಂದು ಸರ್ಕ್ಯುಲಾರ್, ಯಾವ ಸರ್ಕ್ಯುಲಾರುಗಳಿಗೆಲ್ಲಾ ಯೂನಿಯನ್ ಕೂಟದವರು ಗಮನಕೊಡಬೇಕೆಂಬದು ಗೊತ್ತಾಗುವದಿಲ್ಲ. "ಕಲ್ಲಪ್ಪ ಗುಂಡಪ್ಪ ಕೂಡಿ ಮೋಸಪ್ಪ ಹುಟ್ಟಿ" ಎಂಬಂತೆ ರಿಜರ್ವ್ ಫಂಡ್, ಸುಪರ್‌ವಿಜನ್ ಫಂಡು, ಯೂನಿಯನ್ ಸಂಯೋಜಿತ ಹಾಸಲು, ಫೆಡರೇಶನ್ ಸಂಯೋಜಿತ ಹಾಸಲು, ತ್ರೈಮಾಸಿಕ ಚಂದ, ಆ ಚಂದ, ಈ ಚಂದ ಎಂದು ಗ್ರಾಮ ಸಂಘಗಳು ಬಡ!

ಈ ಕಾರಣಗಳಿಂದ ಫೆಡರೇಶನ್ ಸಂಸ್ಥೆ ಈ ಚಿಕ್ಕ ಪ್ರಾಂತ್ಯಕ್ಕೆ ಯಾವ ಪ್ರಯೋಜನವೂ ತಂದುಬರುವದಿಲ್ಲ.

ಈಗಾಗಲೆ 2—3 ಬೈಲಾಗಳು ಪ್ರಿಂಟಾದವು ಪುನಹ ಫೆಡರೇಶನ್‌ನವರು ಅವರ ಮನಸಿಗೆ ಬಂದಂತೆ ಎಲ್ಲ ಅಧಿಕಾರ ಅಂದರೆ ಸುಪರ್‌ವೈಜರುಗಳ ನೇಮಕ, ಬದ್ಲಿ, ದಂಡನೆ, ವಜಾ ವಗೈರೆ ಮಾಡುವ ಅಧಿಕಾರ ಫೆಡರೇಶನಿಗೆ ಇರುವಂತೆ ಮಾಡಿ ಇನ್ನೊಂದು ಬೈಲಾ ಮಾಡಲು ಒಂದು ಸಬ್ ಕಮಿಟಿಯಂತೆ! (ಸುಪರ್‌ವೈಜರುಗಳು ಗ್ರಾಮಾಂತರದಲ್ಲಿ ಮಾಡುವ ಕೆಲಸದ ಹಿಡಿತ ಫೆಡರೇಶನವರಿಗೆ ಯಾವ ಪಂಚಾಯಿ?) ಇದಕ್ಕೆ ಯೂನಿಯನ್ ಕೂಟದವರು ಯಾವ ತಿದ್ದುಪಡಿ ಮತ್ತು ಏನೇನು ಹೊಸ ಸಂಗತಿ ಸೇರಿಸಬೇಕು ಎಂಬದಕ್ಕೆ ಈ ಬುಲ್ಲೆ ವಾರಿಹೆ ಆಫೀಸರ್ ಬಳಿಗೆ ಅವರ ಇರಾದೆ ಕಳುಹಿಸಿದ್ದಲ್ಲ ನಂತರ ಅವರ ಯಾರ ಪುಕಾರವನ್ನು ಅಂಗೀಕರಿಸಲಿಕ್ಕಿಲ್ಲವೆ! ಗ್ರಾಮಾಂತರ ಸಂಘಗಳು ಅವರವರ ನಾಡು ಗ್ರಾಮದ ಆಚಾರಕ್ಕನುಗುಣವಾಗಿ ಬೈಲಾ ಮಾಡಿಕೊಂಡು ರಿಜಿಸ್ಟ್ರಾರವರಿಂದ ರಜಿಸ್ಟ್ರರ್ ಮಾಡಿಸಿಕೊಂಡಿರುವದಾಗಿದೆ, ಯೂನಿಯನ್ ಅಂದರೆ ಪ್ರತಿ ಸಂಘದಿಂದಲೂ ಕೂಡಿದ ಕೂಟವಲ್ಲ. 10—12 ಸಂಘಗಳಿಂದ ಆರಿಸಿದ 8—9 ಜನರಿಂದ ಕೂಡಿದ ಕೂಟವಾಗಿರುತ್ತೆ. ಮಹಾಸಭೆಯವರಲ್ಲದೆ ಕಾರ್ಯನಿರ್ವಾಹಕ ಸಭೆಯವರಿಗೆ ಬೈಲಾ ತಿದ್ದುಪಡಿಮಾಡುವ ಅಧಿಕಾರ ಇರುವದಿಲ್ಲ, ಹೀಗಿರುತ್ತ ಫೆಡರೇಶನ್‌ನವರು ಮಾಡಿದ ಬೈಲಾದಂತೆ ನಡಿಯಬೇಕೆಂಬದು ದಬ್ಬಾಳಿಕೆಯಲ್ಲವೋ?

ಹೀಗೆಲ್ಲ ಅರ್ಥ ಅನರ್ಥವಾಗಿ ಮುಂದಕ್ಕೆ ಏನಾಗುತ್ತೋ ಎಂಬ ಭಯ!

"ಸಹಕಾರಿ."

ಶೃಂಗಾರವಾದ ಪುಸ್ತಕ! ಬೇಗನೆ ಬರೆಯಿರಿ!

ರತಿಮನ್ಮಥರಹಸ್ಯ ಎಂಬ ಮರ್ಮಶಾಸ್ತ್ರ.

ಕ್ರಯ ರೂ. ೧—೦—೦.

ಕನ್ನಡ ಭಾಷೆಯಲ್ಲಿ ಅಚ್ಚಾಗಿ ಪ್ರಿಂಟಾಗಿದೆ. ಇದರಲ್ಲಿ ಸ್ತ್ರೀ ಪುರುಷರ ಪ್ರೀತಿಯ ರಹಸ್ಯಗಳು, ಪ್ಯಾರಿಸ್ ವೇಶ್ಯ ಸ್ತ್ರೀಯರ ಪ್ರೀತಿಯ ಮರ್ಮಗಳು, ಮಲೆಯಾಳ, ಜಪಾನ್, ಫ್ರೆಂಚ್ ದೇಶದ ವೇಶ್ಯ ಸ್ತ್ರೀಯರ ಮನೋಹರ ಫೋಟಗಳು, ಇನ್ನೂ ಸ್ತ್ರೀಪುರುಷರ ಅನೇಕ ರಹಸ್ಯಗಳು 22 ಬ್ಲಾಕುಗಳ ಫೋಟೋ ಸಹಿತ ಕೂಡಿದೆ. ಈ ಶೃಂಗಾರವಾದ ಪುಸ್ತಕವನ್ನು ಓದಲು ಆನಂದವಾಗಿರುವುದು. 22 ಫೋಟೋಗಳ ಸಹಿತ ಪ್ಯಾರಿಸ್ ದೇಶದ ವ್ಯಭಿಚಾರಿಗಳ ವಿನೋದಗಳು, ಕನ್ಯೆಗಳ ಪ್ರೀತಿ, ಶಯ್ಯಾಗೃಹದ ರಹಸ್ಯಗಳು ಅಡಗಿರುತ್ತೆ.—ಕ್ರಯ ಪುಸ್ತಕ ರೂ. ೧—೦—೦.

ವಿಳಾಸ:— ಟಿ. ವಿ. ದೇವರ್‌ ಅಂಡ್ ಕೋ,
73. ಅಣ್ಣಾಪಿಳ್ಳೆ ಬೀದಿ, ಜಿ. ಟಿ. ಮದರಾಸು.

ಸಣ್ಣ ಖರ್ಚಿನಿಂದ ದೊಡ್ಡ ಲಾಭಗಳು.

ನಮ್ಮ, ಮದುವೆಯ ಸ್ತ್ರೀಧನ, ಹೆರಿಗೆ, ಜೀವನಾರಂಭ ಮತ್ತು ಬೋನಸ್ ಕಾರ್ಡುಗಳು ಮದುವೆ, ಮಕ್ಕಳ ಹುಟ್ಟುವಿಕೆ ಮುಂತಾದ ಕಾಲಗಳಲ್ಲಿ ನಿಮಗೂ, ನಿಮ್ಮ ಮಕ್ಕಳಿಗೂ ಬಹು ಸ್ವಲ್ಪ ಖರ್ಚಿನಿಂದ ದೊಡ್ಡ ಲಾಭಗಳನ್ನು ತರುವವು.

ಬಹು ಅಪರೂಪದ ಅವಕಾಶ.

ನಮ್ಮ ಕ್ಯಾಷ್ ಮತ್ತು ಕ್ರೆಡಿಟ್ ಸರ್ಟಿಫಿಕೇಟುಗಳು ನಿಮ್ಮ ಅವಶ್ಯಕತೆಗಳಿಗೆ ಬೇಕಾದ ಸಾಲಗಳನ್ನು ಒದಗಿಸಿ ಕೊಡುವವು.

ಬೇಕಾಗಿದೆ.

ಒಳ್ಳೇ ಸಂಬಳ ಮತ್ತು ಕಮಿಷನಿನ ಮೇಲೆ ಕೆಲವು ಸ್ತ್ರೀಯರು ಮತ್ತು ಗಂಡಸರು ಏಜೆಂಟರುಗಳಾಗಿ ಬೇಕಾಗಿದ್ದಾರೆ.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಮಿ. ಟಿ. ಜಿ. ಬ್ರೌನ್,		ದಿ ಬ್ರಾಂಚ್ ಸೆಕ್ರೆಟರಿ,
ಆರ್ಗನೈಜಿಂಗ್ ಮೇನೇಜರ್,		ದಿ ಕಲ್ಕತ್ತಾ ಫೈನಾನ್ಸ್ ಏಜೆನ್ಸಿ ಅಂಡ್
ದಿ ಕಲ್ಕತ್ತಾ ಫೈನಾನ್ಸ್ ಏಜೆನ್ಸಿ	ಅಥವಾ	ಸಿಂಡಿಕೇಟ್ ಲಿಮಿಟೆಡ್,
ಸಿಂಡಿಕೇಟ್ ಲಿಮಿಟೆಡ್,		179 ನರಸಿಂಹ ರಾಜ ರೋಡ್,
ಮಡಿಕೇರಿ:		ಬೆಂಗಳೂರು ಸಿಟಿ.

(4—1)

ಮದ್ಯಪಾನದ ದುಷ್ಪರಿಣಾಮ.

(ಭಾಮಿನಿ ಷಟ್ಪದಿ)

ದೇವ ನಿನ್ನಯ ಕರುಣವಿರಲೆಮ|
ಗಾವ ಚಿಂತೆಯು ಇಲ್ಲದೇವನೆ |
ಆವರಿಲ್ಲವು ನಿನ್ನ ಬಿಟ್ಟರೆ ಪಂಚ ಲಿಂಗೇಶ ||
ದೇವ ಕೃಷ್ಣನೆ ನಿನ್ನ ದಯದೊಳು |
ನಾವಕಾಶದಿ ಪೇಳುತಿರುವೆನು |
ಸಾವುದಲ್ಲದೆ ಮತಿಯ ನೀವುದು ಸುರೆಯ ಭಕುತನಿಗೆ ||೧||

ಮದ್ಯಪಾನದಿ ಕಲೆಯು ಕೆಡುವುದು |
ಮದ್ಯಪಾನದಿ ಹಣವು ಪೋಪುದು |
ಮದ್ಯಪಾನದಿ ಹಿತ ಬಿಡುವನು ನಮ್ಮ ಕರಗಳನೂ ||
ಮದ್ಯಪಾನಸೇವಿಸುವ ಮನುಜನ |
"ಮದ್ಯ ಕುಡಿದರೆ ಚುರುಕು ಬಪ್ಪುದು |
ಮದ್ಯವದು ಶಕ ಸುಧೆಯು" ಯೆನ್ನುವನಿತರ ಮನುಜರಿಗೆ ||೨||

ಸುರೆಯ ಪಾನವು ಕ್ಷಣಿಕ ಸುಖವದು |
ಧರೆಯ ಮೇಲಿನ ಗಾಡಿ ಎತ್ತಿಗೆ |
ಕೊಂಡೆಯೊಳು ಹೊಡೆದಂತೆ ಪೋಪುದು ಪೆಟ್ಟಿನುರಿಗಾಗಿ ||
ಮರೆಯದಿರಿ ನೀವಿಗಲೆಕ್ಕದು |
ಚುರುಕಿನಿಂದಲಿ ಪೋಪುದಿಲ್ಲವು |
ಸುರೆಯ ಪಾನವು ಹೀಗೆಯಪ್ಪುದು ಕುತುಕ ಕೇಳೀಗ ||೩||

ಹೆಂಡದಿಂದಲೆ ಜಗಳ ಬಪ್ಪುದು |
ಹೆಂಡದಿಂದಲೆ ಹೊಂಬಿಯಪ್ಪುದು |
ಹೆಂಡದಿಂದಲೆ ಗಂಡ ಬಿಡುವನು ಹೆಂಡತಿಯ ಕೊನೆಗೆ ||
ಗಂಡ ಹೆಂಡತಿ ಮಗನು ಮೈದುನ |
ತಂಡ ತಂಡದಿ ಒದುಕಲಿಪ್ಪರು |
ತುಂಡು ಗುಡಿಗೆಯ ಸಹಿತ ಬಪ್ಪರು ಬೇಗ ಗುತ್ತಿಗೆಗೆ ||೪||

ಹಣವು ಕೈಯ್ಯಲಿ ಇಪ್ಪ ಕಾಲದಿ |
ಗಣನೆ ಇಲ್ಲದೆ ಪೋಪ ಕುಡಿಯಲು |
ಹಣವು ಮುಗಿಯಲು ಒಳಿಕ ಪೋಪನು ಸಾಲ ಬೇಡಲಿಕೆ ||
ಹಣವು ಸಿಕ್ಕದ ಪರಿಯ ನೋಡುತ |
ಇಣಿಕಿ ನೋಡುತ ತನ್ನ ಮನೆಯನು |
ಮಣಿಯ ಸರಗಳ ತೆಗೆದು ಕೊಡುವನು ಬೇಗ ಗುತ್ತಿಗೆಗೆ||೫||

ಸರವು ಹೋಯಿತು ಮಣಿಯು ಹೋಯಿತು |
ಕರವ ಕಚ್ಚಿದ ಪರಿಯು ಆಯಿತು |
ಭರದಿ ಪೋಗುತ ಸೆಳೆದು ತೆಗೆವನು ಸತಿಯು ವಾಲೆಯನೂ ||
ಕೊರಗುತಿರುವಾ ಸತಿಯ ನೋಡುತ |
ಮರುಗಬೇಡಲೆ ಕಳ್ಳು ತರುವೆನು |
ತಿರುಗಿ ತರುಗೀ ಕೂಗ ಬೇಡೆಂದೆನುತ ಪೊರಟಾಗ ||೬||

ಕಳ್ಳು ಕುಡಿಯುತ ಬರುವನಾಕ್ಷಣ |
ವಾಲ ಪೋದರು ಚಿಂತೆ ಇಲ್ಲೆಲೆ |
ಬಳೆಯ ನೀಡೆಂದೆನುತ ಪೇಳ್ವನಾ ಸತಿಯ ಕೂಡೆ ||
ಬಳೆಯು ಹೋದರು, ತಾಳಿ ಹೋದರು |
ಬಳಿಯೊಳಿಹ ನಗವೆಲ್ಲ ಹೋದರು |
ಕಳ್ಳು ಬಿಡಲಿಕೆ ಮನವು ಬಾರದು ಸುರೆಯ ಭಕುತನಿಗೆ ||೭||

ಕಳ್ಳು ಕುಡಿಯಲು ಬೇಡ ಮನುಜನೆ |
ಸುಳ್ಳು ನುಡಿಯಲು ಬೇಡ ಮಿತ್ರನೆ |
ಕಳ್ಳತನವನು ಮಾಡದಿರು ನೀ ನೋಡು ಕಡೆಗದರಾ ||
ಕಳ್ಳಿನಿಂದಲೆ ಸುಳ್ಳು ಬಪ್ಪುದು |
ಸುಳ್ಳಿನಿಂದಲೆ ಕಳವು ಅಪ್ಪುದು |
ಕಳವಿನಿಂದಲೆ ನರಕ ದೊರೆವುದು ಸಖನೆ ಕೇಳೀಗ ||೮||

ಸುರೆಯ ಭಕುತರೆ ಕೇಳಿರೀಗಲು |
ಸುರೆಯ ಪಾನವು ಕೆಡುಕು ಅಲ್ಲವೆ |
ಸುರೆಯು ಸುರೆಯು, ಮೂರಿಗೂ ಹೌದಮುದು ಸರ್ವರಿಗೇ||
ಸುರೆಯ ಕುಡಿಯಲು ಬಿಡಲು ಬೇಡಿರಿ |
ಧರೆಯ ತಾಳೆಯ ಕೊಡಲು ಬೇಡಿರಿ |
ಮರೆಯುತಿದರನು ಕೊಡಲುಬೇಡಿರಿ ತೆಂಗು ಸಹ ಕಟ್ಟಲಿಕೆ ||೯||

ತರುವ ತಾಳೆಯ ಕೊಡಲು ಬೇಡಿರಿ |
ಮರವ ಸೀಳಲು ಬಿಡಲು ಬೇಡಿರಿ |
ನೆರೆಯಬೇಡಿರಿ ಹೆಂಡದಾಸೆಗೆ ಗುತ್ತಿಗೆಯ ಒಳಿಯೂ ||
ಮರವ ಕೊಟ್ಟರೆ ಕಟ್ಟಲೋಸುಗ |
ಸುರೆಯ ಹೆಚ್ಚಿಸಿದಂತೆಯಪ್ಪುದು |
ಕರವ ಮುಗಿವೆನು ಕೊಡಲು ಬೇಡಿರಿ ಮರವ ಕಟ್ಟಲ್ಕೆ ||೧೦||

ಇನಿತು ತಪ್ಪುಗಳಿರಲು ಇದರೊಳು |
ಮನವ ಮಾಡಿರಿಯದರ ತೆಗೆಯಲು |
ಮಣಿದು ಬೇಡುವೆ ನಿಮಗೆ ತೆಗೆಯಲು ಇದರ ತಪ್ಪುಗಳಾ ||
ವನದ ನಡುವಿನೊಳಿರ್ದ ದೇವನೆ |
ವನಿತೆ ಸಹ ಕೂಡಿರುವ ನಾಥನೆ |
ಘನದ ನಾಮದಿ ಬರೆದು ಪೇಳಿದೆ ಬಾಲ ದುರ್ಗಾಂಬೆ ||೧೧||

"ಬಾಲಕ"

ಏಸು ಕ್ರಿಸ್ತ.

1. "ಏಸು ಕ್ರಿಸ್ತನೆಂಬುವವನೇ ಇರಲಿಲ್ಲ." ಚರಿತ್ರೆಗಳ ಆಧಾರದಿಂದ ಇದನ್ನು ಕಂಡುಹಿಡಿದಿರುವರು. ಥಾಕೂರ್ ಕಾಹಿನ್ ಚಂದ್ರಬೆವರ್ತಿಯವರು, ಈ ವಿಷಯವನ್ನು ಅವರ ಗ್ರಂಥದಲ್ಲಿ ಸ್ಥಾಪಿಸಿರುವರು. ಕಲ್ಕತ್ತೆಯ ಪ್ರೊಫೆಸರ್ ಫರ್ಕಹಾರ್‌ರವರು ಇವರನ್ನು ನಿರೋಧಿಸಿ ವಿಫಲರಾಗಿರುವರು.

2. ಡಾ. ರಾಬರ್ಟ್ ಈಸ್ಲರ್‌ರವರ ಗ್ರಂಥದಲ್ಲಿ ಏಸು ಕ್ರಿಸ್ತನು ಬಿಟ್ಟ ಗೂನುಳ್ಳ ಸಣ್ಣ ಹುಟ್ಟಿನ ಮನುಷ್ಯನೆಂದು ತಿಳಿಸಿದೆ. ಆತನಳು ದ್ದವು 4 ಅಡಿ 9 ಅಂಗುಲ ಮಾತ್ರವಾಗಿತ್ತಂತೆ.

3. ಬೌದ್ಧ ಮತ ಪ್ರಚಾರಕರು ಅಲೆಗ್ಜಾಂಡ್ರಿಯಾದಲ್ಲಿ ತಮ್ಮ ಮತ ಪ್ರಚಾರವನ್ನು ಮಾಡಲಿಕ್ಕೆ ಹೋದ ಕಾಲದಲ್ಲಿ ಶ್ರೀ ಕೃಷ್ಣನ ಚರಿತ್ರೆಯೂ ಅಲ್ಲಿಯವರಿಗೆ ತಿಳಿದು ಬಂದು ಆತನ ಬೋಧೆಗಳಲ್ಲಿ ಕೆಲವು ವ್ಯತ್ಯಾಸ ಮಾಡಲ್ಪಟ್ಟು ಅಂಗೀಕರಿಸಲ್ಪಟ್ಟವೆಂದೂ, ಅವರ ಕ್ರಿಸ್ತನೇ ನಮ್ಮ ಕೃಷ್ಣನೆಂದೂ ಕೆಲವರು ಹೇಳುವರು.

4. ಬ್ರಾಹ್ಮಣರಲ್ಲಿ ಚಿತ್ಪಾವನ ಬ್ರಾಹ್ಮಣರು ಪಾತಕಿಗಳು. ಅಗ್ನಿಯಿಂದ ಶುದ್ಧರಾದುದರಿಂದ ಚಿತ್ಪಾವನರೆಂದು ಅವರಿಗೆ ಹೆಸರು. ಇವರು ಈಜಿಪ್ಟ್ ದೇಶಕ್ಕೆ ಹೋಗಿ ಅಲ್ಲಿ ತಮ್ಮ ಮತವನ್ನು ಪ್ರಚಾರ ಮಾಡಿದರೆಂದೂ ಅದರಿಂದಲೇ ಕ್ರೈಸ್ತ ಮತವು ಅಲ್ಲಿ ಪ್ರಚಾರಕ್ಕೆ ಬಂದಿತೆಂದೂ ಮತ್ತೆ ಕೆಲವರು ಭಾವಿಸುವರು. ಆ ದೇಶಕ್ಕೆ ಹೋಗಿ ಬಂದವರು ಪ್ರಾಯಶ್ಚಿತ್ತ ಮಾಡಿಕೊಂಡ ನಂತರ ಬ್ರಾಹ್ಮಣರೊಂದಿಗೆ ಸೇರಿಸಿಕೊಳ್ಳಲ್ಪಟ್ಟದ್ದರಿಂದ ಆ ಬ್ರಾಹ್ಮಣರಿಗೆ ಚಿತ್ಪಾವನರೆಂದು ಹೆಸರು ಬಂದಿತೆಂದು ಭಾವಿಸಲ್ಪಟ್ಟಿದೆ.

5. ಕೃಷ್ಣನಿಗೆ ಪಾಲೀ ಭಾಷೆಯಲ್ಲಿ ಕ್ರಿಸ್ಟೋಸ್ ಎಂದು ಹೆಸರು. ಕ್ರಿಸ್ಟೋಸ್‌ನಿಂದಲೇ ಕ್ರೈಸ್ತನೆಂಬ ಹೆಸರು ಬಂದಿರುವದು.

6. ಕೃಷ್ಣನ ತಾಯಿಯು ಯಶೋದೆಯು. ಯಶೋದೆ ಅಥವಾ ಜಸೋದೆ ಅಥವಾ ಜೋಸೆಫ್. ಯಶೋದೆಯ ಏಸು. ಆದುದರಿಂದ ಯಶೋದಾ ಕೃಷ್ಣನೇ ಏಸು ಕ್ರಿಸ್ತನು.

7. ಬೈಬಲ್ಲಿನ ಪ್ರಕಾರ ಕ್ರಿಸ್ತನು ಹುಟ್ಟಿದ್ದು ಜುಡಾವಂಶದಲ್ಲಿ. ಅದೇ ಶ್ರೀ ಕೃಷ್ಣನು ಜನ್ಮಿಸಿದ ಯದುವಂಶವು.

8. ಕೃಷ್ಣನು ಒಂದು ಬಾಣದಿಂದ ಮಡಿದನು, ಅಂದರೆ ಬಿಲ್ಲಿನ ಹೊಡೆತದಿಂದ. ಕ್ರೈಸ್ತರು ಏಸು ಕ್ರಿಸ್ತನನ್ನು ಶೂಲಕ್ಕೆ ಏರಿಸಿದರೆಂದು. ಹಿಂದೂಗಳ ಬಿಲ್ಲಿನಂತೆಯೇ ಕ್ರಿಸ್ತರ 'ಕ್ರಾಸ್' ಇರುತ್ತದೆ.

9. ಮದ್ರಾಸಿನಲ್ಲಿ ಸುಮಾರು 5 ವರ್ಷಗಳ ಹಿಂದೆ ಕ್ರೈಸ್ತನು ಹಿಂದೂ ದೇಶೀಯನೇ ಎಂದು ಪತ್ರಿಕೆಗಳಲ್ಲಿ ಪ್ರಸಿದ್ಧಪಡಿಸಿದ್ದರು.

10 ಪೂರ್ವ ಕಾಲದಲ್ಲಿ ಪ್ರಪಂಚದಲ್ಲಿ ಹೆಚ್ಚು ಸಂಖ್ಯಾಕರು ಹಿಂದೂಗಳೇ ಆಗಿದ್ದು, ಈಚೆಗೆ ಅವರ ಸಂಖ್ಯೆಯು ಕ್ರಮೇಣ ತಗ್ಗುತ್ತಿರುವುದಕ್ಕೆ ಕಾರಣವನ್ನು ವಿಚಾರಿಸಿದರೂ, ಈಗ ಅನೇಕ ಮತಗಳನ್ನು ಅವಲಂಬಿಸಿರುವವರಲ್ಲಿ ಅನೇಕರು ಹಿಂದೂಗಳೇ ಆಗಿದ್ದರೆಂಬ ವಿಷಯವು ಸ್ಪಷ್ಟವಾಗುವುದು. ಈಗಿನ ಕ್ರಿಶ್ಚಿಯನರು ನಿಶ್ಚಯವಾಗಿಯೂ ಹಿಂದೂಗಳೇ. ಕ್ರಿಸ್ತನೇ ಇಲ್ಲದಿರುವಾಗ ಕ್ರೈಸ್ತ ಮತವೆಲ್ಲಿದ್ದೀತು? ಯಶೋದಾ ಕೃಷ್ಣನ ಉಪಾಸಕರೆಂದರೆ ಹಿಂದೂಗಳೇ ಆದರು. ಆದರೆ ಆ ಕಾರ ವ್ಯವಹಾರಗಳಲ್ಲಿ ವ್ಯತ್ಯಾಸಗಳು ಏಕೆ ಕಾಣಬರುವವೆಂದರೆ—ಆ ದೇಶೀಯರ ಪೂರ್ವವ್ಯವಹಾರಗಳೇ ಆ ಮತೀಯರಿಂದ ಆಚರಿಸಿಕೊಂಡು ಬರುತ್ತಲಿವೆ.

11. ಎಲ್ಲಾ ಮತಗಳಲ್ಲಿಯೂ ಪ್ರಾಚೀನವಾದದ್ದು ಹಿಂದೂ ಮತ. ಅದರ ನಂತರ ಬುದ್ಧ ಮತ, ಪಾರ್ಶೀಯರ ಮತ, ಯಹೂದರ ಮತಗಳು ಪ್ರಚಾರಕ್ಕೆ ಬಂದವು. ಈಚೇಚೆಗೆ ಪ್ರಚಾರಕ್ಕೆ ಬಂದದ್ದು ಮಹಮ್ಮದೀಯ ಮತ.

12. ಕ್ರೈಸ್ತ ಮತವನ್ನು ತಮ್ಮ ಪೂರ್ವದ ರೀತಿಯಲ್ಲೇ ಆಚರಿಸಿಕೊಂಡು ಬರುತ್ತಿರುವ ರೋಮನ್ ಕ್ಯಾಥೋಲಿಕ್ಕರಿಗೆ ಸಗುಣಾರಾಧನೆಯುಂಟು. ಆದರೆ ಈಚೆಗೆ ಪ್ರಾಬಲ್ಯಕ್ಕೆ ಬಂದಿರುವ ಪ್ರಾಟೆಸ್ಟೆಂಟ್ ಸಂಗಡದವರು ನಮ್ಮ ಆರ್ಯ ಸಮಾಜೀಯರಂತೆ ನಿರ್ಗುಣಾರಾಧನೆಯನ್ನೇ ಪ್ರತಿಪಾದಿಸುವರು.

'ಸತ್ಯವಾದಿ' (ಕವೀಶ್ವರ ಕೃಷ್ಣಪ್ಪ.)

ಅಪವಿತ್ರ ವಾತಾವರಣದಿಂದ ಶಾಲೆಗಳನ್ನು ಉದ್ಧಾರ ಮಾಡಿರಿ!

ಅಲಹಾಬಾದಿನ ಮಿಶನರಿ ಪಾಠಶಾಲಾಧ್ಯಾಪಕರಾದ ಮಿ. ಡಂಕನ್ ಗ್ರೀನ್‌ಲೆಸ್ ಎಂಬುವರು ಭಾರತಪ್ರೇಮಿ. ಖಾದಿಯನ್ನು ಧರಿಸುತ್ತಾರೆ. ಕಾಂಗ್ರೆಸ್ ಚಳವಳಿಕ್ಕೆ ಸಂಬಂಧಿಸಿದ ಹಸ್ತಪತ್ರಿಕೆಗಳನ್ನು ಹಂಚಿದರೆಂದು ಅವರಿಗೆ ಕೆಲವು ದಿವಸಗಳ ಹಿಂದೆ ಆರು ತಿಂಗಳು ಸಜೆ ವಿಧಿಸಲಾಯಿತು. ಅವರು ಕೋರ್ಟಿನಲ್ಲಿ ಹೀಗೆ ಹೇಳಿದರು:—

'ನಾನೊಬ್ಬ ಉಪಾಧ್ಯಾಯ; ಅದೇ ನನ್ನ ವೃತ್ತಿ. ಬಾಲಕರ ಮಧ್ಯೆ ಇದ್ದುಕೊಂಡು, ಅವರ ಆಶೆ ಆಶಗಳಲ್ಲಿ ನಾನು ಭಾಗಿಯಾಗಿರುವುದೇ ನನ್ನ ಭಾಗ್ಯ. ಅವರ ಅಂತರಾತ್ಮಗಳಲ್ಲಿ ಐಕ್ಯವಾಗುವುದೇ ನನ್ನ ಪುರುಷಾರ್ಥ. ಇದಕ್ಕಿಂತ ಪವಿತ್ರ ಭಾಂಧವ್ಯವಿಲ್ಲ. ಹೀಗಿರಲು ಕಳೆದ ಫೆಬ್ರವರಿ ತಿಂಗಳಲ್ಲಿ ಕಲೆಕ್ಟರಿಂದ ನನಗೊಂದು ಆಜ್ಞೆ ಬಂತು. ಅದೇನು? ನನ್ನ ಪವಿತ್ರವಾದ ಬಳಗದ ವಿದ್ಯಾರ್ಥಿಗಳ ಮೇಲೆ ನಾನು ಸದಾ ಗೂಢಚಾರನಂತೆ (ಸಿ. ಐ. ಡಿ.) ಕಣ್ಣಿಟ್ಟಿರಬೇಕಂತೆ. ಅವರಲ್ಲಿ ಯಾರಾದರೂ ಕಾಂಗ್ರೆಸ್ ಸಭೆಗಳಿಗೆ ಹೋದರೆ ತಕ್ಷಣ ನಾನದನ್ನು ಪೋಲೀಸಿಗೆ ತಿಳಿಸಬೇಕಂತೆ. ಇದಕ್ಕಿಂತ ಇನ್ನು ಹೀನ ಕೆಲಸವುಂಟೆ? ನನ್ನ ಪಾಲನೆಗೊಳಗಾದ ಬಾಲಕರು ಅಪಾಯಕ್ಕೊಳಗಾದರೆ ಅವರನ್ನು ರಕ್ಷಿಸುವುದು, ಅಂಥಾ ಅಪಾಯಕ್ಕೆ ಅವರು ಒಳಗಾಗದಂತೆ ನೋಡಿಕೊಳ್ಳುವುದು ನನ್ನ ಕರ್ತವ್ಯ. ಆದರೆ ಕಲೆಕ್ಟರ ಅನ್ಯಾಯವಾದ ಆಜ್ಞೆಯನ್ನು ನೆರವೇರಿಸಲು ನಾನು ಒಪ್ಪಲಿಲ್ಲ. ನನ್ನ ದಸ್ತಗಿರಿಯಾಗುವುದೇ ನಂಬಿದ್ದೆ. ಅದರೆ ಹಾಗಾಗಲಿಲ್ಲ. ಸರಿ; ಶಿಕ್ಷೆಯು ಸುಳ್ಳಾಯಿತು. ಆದರೆ ನನ್ನಂಥವರು ಮತ್ತೆ ಪದ್ಯಕ್ಕೆ ಅಂಥಾ ಆಜ್ಞೆಗಳ ಮತ್ತೆ ಕಳುಹಿಸಲಿಲ್ಲ. ಆ ಹೆಡ್ಮಾಸ್ಟರುಗಳೆಲ್ಲ 'ಶಿವ ಶಿವಾ' ಅನ್ನದೆ ಆ ಆಜ್ಞೆಯನ್ನು ಶಿರಸಾ ವಹಿಸಿದರೆಂದು ಹೇಳಲು ನನಗೆ ನಾಚಿಕೆಯಾಗುತ್ತದೆ. ಭರತ ಖಂಡದಲ್ಲಿರುವ ಶಿಸ್ತಿನಿಂದಿರುವ ಪವಿತ್ರ ಬಂಧನವನ್ನು ಹೀಗೆ ತುಳಿದು ನಾಶ ಮಾಡಲು ಪೋಲೀಸಧಿಕಾರಿಗೆ ಬಲಕೊಟ್ಟಿರುವುದು ಸ್ಪಷ್ಟವಾಗಿದೆ. ಈ ಬಗೆ ಆಜ್ಞೆಗಳು ಉಪಾಧ್ಯಾಯರ ತಾವಾಗಿಯೇ ರಾಜಕಾರ್ಯಕ್ಕೆ ತಳ್ಳಿದಂತಾಗುತ್ತದೆ.

ಸರಕಾರದಿಂದನುಗ್ರಹಿಸಲ್ಪಟ್ಟು ನಡೆಯುವ ಶಾಲೆಗಳ ವಾತಾವರಣ ವಿಷಪೂರಿತವಾಗಿದೆ. ಸ್ವತಂತ್ರ ವಿಚಾರವನ್ನು ಸಹಿಸಲಾಗದು. ದೇಶದ ಸುಳಿವಿನ ದೂರ ವಾರ್ತೆ ಇರುವ ಹಾಡುಗಳು ಕೂಡ ಶಾಲೆಗಳ ಗೋಡೆಗಳನ್ನು ಒಳಗೊಡಿಸುದಿಲ್ಲ. ಆ ಸರಕಾರೀ ಅಧಿಕಾರಿಯಾಗಿ ಬೀಳುತ್ತದೊ ಎಂಬ ಭಯ. ಶಾಲೆಗಳಲ್ಲಿ ಹುಡುಗರಿಷ್ಟುಳ್ಳ, ಮೋಸ, ಸುಳ್ಳು ಕಲಿವುದನ್ನು ಗುಪ್ತವಾಗಿಯೇ ಕಲಿಸುವುದಕ್ಕಾರಂಭವು.

ಶಿಕ್ಷಣ ಶಾಸನವಿಧಿಗಳ (ಎಜುಕೇಷನಲ್ ಕೋಡ್) ಬಹಳ ಅನ್ಯಾಯವಾದವು. ನನ್ನ ಪಾಠಶಾಲೆಯ ಈಗಿನ ಚರಿತ್ರೆಯಿಂದಲೇ ಅನುಭವವಾಯಿತು. ಸರಕಾರದೂತರುಗಳನ್ನು ನಂಬಿ ಮೋಸಹೋದೆನು. ಸರಕಾರದ ಫರಮಾನಗಳ ಆಸನ ವಿಧಿಗಳು ಅನ್ಯಾಯವನ್ನು ಅನ್ಯಾಯಗೊಳಿಸುವುದಿಲ್ಲ. ತಮ್ಮ ದೇಶವನ್ನು ಯಾರಾದರೂ ಪ್ರೇಮಿಸುವರೋ ಅಂಥವರನ್ನು ಈ 'ಕೋಡ್'ಗಳು ತುಳಿದು ಹಾಕುವವು. ಬಾಲ್ಯದಲ್ಲೇ ಮಾಸ್ತರ ಕಡೆಗೆ ಮುಖಮಾಡಿ ಅಕ್ಷರಕ್ಕಾಗಿ ಹಣಗಾಡುವ ಮಕ್ಕಳನ್ನು ತುಳಿದು ಹಾಕುತ್ತೆ.

'ತನ್ನ ದೇಶದ ಸ್ವಾತಂತ್ರ್ಯಕ್ಕಾಗಿ ಯಾವನಾದರೂ ಉಪಾಧ್ಯಾಯನಾಗಲಿ, ವಿದ್ಯಾರ್ಥಿಯಾಗಲಿ ಹೋರಾಡುವ ಬಳಗದಲ್ಲಿ ಸೇರಿದ್ದನೆಂದು ತಿಳಿದುಬಂದರೆ ಅಂಥವನನ್ನು ಶಾಲೆಗೆ ಸೇರಿಸಬೇಡಿ'

ಎಂದು ರಹಸ್ಯವಾಗಿ ಆಜ್ಞೆಗಳನ್ನು ಕಳುಹಿಸುತ್ತಾರೆ. ಇಂಗ್ಲೆಂಡಿನಲ್ಲಾದರೂ ಅಂಥ ದೇಶಭಕ್ತನಾದ ಉಪಾಧ್ಯಾಯ, ಅಥವಾ ವಿದ್ಯಾರ್ಥಿಯು ತನ್ನ ಸುವರ್ಣಾಕ್ಷರಗಳಿಂದ ಶಾಲಾ ಮಂಟಪದಲ್ಲಿ ಕೆತ್ತಿ ಇರಿಸುತ್ತಾರೆ.

ಇನ್ನು ಓದುವ ವಿಷಯಗಳು. ನಿಜವಾದ ಶಿಕ್ಷಣಕ್ಕೆ ಕಾಲವೇ ಇಲ್ಲ. ಮೋಸಗಾರರೂ, ಷಂಡರೂ ಆದ ಗುಮಾಸ್ತೆಗಳನ್ನು ಪರದೇಶೀ ಸರಕಾರ 'ರಾಜಭಕ್ತಿ ಶಿರೋಮಣಿ'ಗಳನ್ನು ತಯಾರು ಮಾಡುವ ಕಾರ್ಖಾನೆಗಳವು. ಈ ಬಗೆಯ ಅಪವಿತ್ರ ವಾತಾವರಣದಿಂದ, ವಾಸನೆಯಿಂದ ಶಾಲೆಗಳನ್ನು ಉದ್ಧಾರ ಮಾಡಬೇಕು. ಉದ್ಧಾರ ಕಾರ್ಯವು ಅಲ್ಲ, ಕರ್ತವ್ಯವು ಉಪಾಧ್ಯಾಯನಿಗೆ ಸೇರಿದ್ದು. ಹಾಗೆ ಮಾಡಲು ಸಂಕಲ್ಪ ಮಾಡಿ ಕರ್ತವ್ಯಪರರಾಗುವವರಿಗೆ ಬರುವ ಬಹುಮಾನವೇನು? ಬಹುತರ ಸೆರೆಮನೆ ಪ್ರವೇಶ. ಈ ಕಾಣಿಕೆಯನ್ನು ಪ್ರಪಂಚದಲ್ಲಿ ಎಲ್ಲೂ ಎಲ್ಲರೂ ತೆತ್ತಿರುವರು. ಸಂತೋಷದಿಂದ ತೆತ್ತಿರುವರು!

'ಪಿ. ಕ.'

ಹೊಸ ರಾಜಕೀಯ ಧಾನವನ್ನು ಕುರಿತು ಲಾರ್ಡ್ ಇರ್ವಿನರ ಅಭಿಪ್ರಾಯ.

ಲಾರ್ಡ್ ಇರ್ವಿನ್ನರವರು ಸರಕಾರದಲ್ಲಿ ಮಂತ್ರಿತ್ವವನ್ನು ಅಂಗೀಕರಿಸುವುದಕ್ಕೆ ಮುಂಚೆ ಮುಕ್ತೊ ನಾಲ್ಕರಿಂದ "ನಾವು ಭಾರತೀಯ ರಾಜಾಂಗ ಪಾನದಲ್ಲಿ ಕೊಟ್ಟಿರುವ ಭರವಸೆಗಳೆಲ್ಲವನ್ನು ನಡೆಸುತ್ತೇವೆ. ಮಾಡಿರುವ ಬದಲಾವಣೆಗಳು ಕಾರ್ಯಕ್ರಮದಲ್ಲಿಯೇ ವಿನಃ ಚಕ್ರಗೋಷ್ಠಿಯಲ್ಲಿ ಒಪ್ಪಿದ ಪ್ರಧಾನ ನೀತಿ ರೀತಿಗಳಲ್ಲಲ್ಲ. ಜಾಗ್ರತೆಯಾಗಿ ಕೆಲಸ ಕಾರ್ಯಗಳನ್ನು ಮುಂದುವರಿಸಲು ಈ ರೀತಿಯನ್ನು ಅನುಸರಿಸಬೇಕಾಯಿತು." ಎಂಬ ಭರವಸೆಯನ್ನು ಪಡೆದಿದ್ದಾರೆಂದು ಲಂಡನಿನ ವರ್ತಮಾನ.

ಭಾರತ ದೇಶದಲ್ಲಿ ಫೆಡರೇಶನ್ ಏರ್ಪಡಿಸುವುದಕ್ಕೂ ಭಾರತ ದೇಶದ ಪರಿಪಾಲನವನ್ನು ಭಾರತೀಯರೇ ನೆರವೇರಿಸುವುದಕ್ಕೆ ಅವರಿಗೆ ಬಾಧ್ಯತೆಯನ್ನುಂಟುಮಾಡುವುದಕ್ಕೂ ತಾತ್ಕಾಲಿಕ ನೆಲೆಯಲ್ಲಿ ಮಾತ್ರ ಭಾರತ ದೇಶದ ಹಿತಾರ್ಥಕ್ಕಾಗಿ ರಕ್ಷಣಾಬಂಧಗಳನ್ನು ಏರ್ಪಡಿಸಲು ಬ್ರಿಟಿಷ್ ಸರಕಾರದವರೂ ಪಾರ್ಲಿಮೆಂಟಿನವರೂ ಬಾಧ್ಯರಾಗಿದ್ದಾರೆ. ಇದು ಬಹಳ ಒಳ್ಳೆಯ ಪದ್ಧತಿಯೆಂದು ನಾನು ನಂಬುತ್ತೇನೆ.

'ದೊರೆತನದವರು ಸದುದ್ದೇಶಯುತರಾಗಿದ್ದಾರೆಂದು ನನಗೆ ನಂಬಿಕೆ ಹುಟ್ಟದಿದ್ದಲ್ಲಿ ನಾನೀಗ ಮಂತ್ರಿ ವರ್ಗಕ್ಕೆ ಸೇರುತ್ತಲೇ ಇರಲಿಲ್ಲ. ಇಂಥಾ ಸಮಯದಲ್ಲಿ ಮಿತವಾದಿಗಳು ರಾಜೀನಾಮೆ ಕೊಟ್ಟಿದ್ದಕ್ಕಾಗಿ ಭಾರತ ದೇಶದ ಹಿತಕಾಂಕ್ಷಿಗಳಲ್ಲಿಯೂ ಬಹಳ ವಿಚಾರಪರರಾಗದೆ ಇಲ್ಲ. ಮಿತವಾದ ನಾಯಕರು ಹೇಳಿರುವ ಭಾವವನ್ನು ಸರಿಯಾಗಿ ಗ್ರಹಿಸಿಲ್ಲ. 'ಸರಕಾರದವರು ಚಕ್ರಗೋಷ್ಠಿ ಪದ್ಧತಿಯನ್ನು ಬಿಟ್ಟರು. ಇದರ ವಿಚಾರವಾಗಿ ಭಾರತೀಯರ ಅಭಿಪ್ರಾಯದ ನಿಮಿತ್ತವಿಲ್ಲದೆಯೇ ಸರಕಾರದವರು ತಮಗೆ ಇಷ್ಟ ಬಂದ ರಾಜ್ಯಾಂಗ ವಿಧಾನವನ್ನು ರಚಿಸುವರು' ಎಂದು ಮಿತವಾದ ಮುಂದಾಳುಗಳು ಅಭಿಪ್ರಾಯಪಟ್ಟು ರಾಜೀನಾಮೆಗಳನ್ನು ಕೊಟ್ಟರು' ಎಂಬುದಾಗಿ ಲಾರ್ಡ್ ಇರ್ವಿನ್‌ರವರು ಥರ್ಸ್ಕ ಎಂಬಲ್ಲಿ ನುಡಿದರು.

ವರ್ತಮಾನಸಂಗ್ರಹ.

ಒಳ ದೇಶ.

ಮಡಿಕೇರಿ ಕಾನ್ವೆಂಟ್ ಸ್ಕೂಲು ಮಳೆಗಾಲದ ರಜೆ ಮುಗಿದು ತಾ. 1 ರಲ್ಲಿ ತೆರೆಯಲ್ಪಟ್ಟಿದೆ.

ಕಳೆದ ಜೂನ್ ತಿಂಗಳಲ್ಲಿ ಕೊಡಗು ಪ್ರಾಂತ್ಯದಲ್ಲಿ 370 ಮರಣಗಳೂ, 359 ಜನನಗಳೂ ಆದವೆಂದು ಗಜೆಟಿನ ವರ್ತಮಾನ.

ಕೊಡಗು ರಿಜಿಸ್ಟ್ರೇಶನ್ಸ್ ಪರೀಕ್ಷೆಯು ಈ ತಾ. 22ರಿಂದ 24ರ ವರೆಗೆ ಮಡಿಕೇರಿಯಲ್ಲಿ ನಡಿಸಲ್ಪಡುವದೆಂದು ಪ್ರಕಟವಾಗಿದೆ.

ಲೇಟ್ ರಾ|| ಬಾ|| ...ದಂಡ ಅಪ್ಪಯ್ಯನವರ ಸ್ಥಳಕ್ಕೆ ಮೆ. ಮಂಡೇಪಂಡ ಪೊಣ್ಣನವರನ್ನು ವ್ಯಾಕ್ಸಿನೇಶನ್ ಫಂಡಿನ ಕಮಿಟಿ ಮೆಂಬರ್ ನೇಮಿಸಿರುತ್ತಾರೆ.

ಗತಿಸಿದ ಮೆ. ಗಿರಿಗೌಡನಂಜಪ್ಪನವರ ಸ್ಥಳದಲ್ಲಿ ಮೆ. ...ಗೌಡನ ತಿಮ್ಮಯ್ಯನವರು ಪೊನ್ನಂಪೇಟೆಯ ಒಬ್ಬ ಬೆಂಚ್ ಮೇಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿರುವರು.

ಮೋಟಾರು ವಾಹನ ರಿಜಿಸ್ಟ್ರೇಶನ್, ಮೋಟಾರು ನಡಿಸುವ ಲೈಸನ್ಸ್, ಪರ್ಮಿಟ್, ಕಂಡಕ್ಟರ ಪಾಸ್‌ಬುಕ್ ಮತ್ತು ಡ್ರೈವಿಂಗ್ ಬ್ಯಾಜ್‌ಗಳಿಗಾಗಿ ಕೊಡುವ ಅಪ್ಲಿಕೇಶನುಗಳಿಗೆ ಇನ್ನು ಮುಂದೆ ಎಂಟಾಣೆ ಸ್ಟಾಂಪು ಹಚ್ಚಬೇಕೆಂದು ಗಜೆಟಿನಲ್ಲಿ ಪ್ರಕಟಿಸಲಾಗಿದೆ.

ಹಾಜಿ ಯಂ. ಗಫೂರಸಾಬಿಯವರ ಮರಣದಿಂದುಂಟಾದ ಖಾಲಿ ಸ್ಥಳಕ್ಕೆ ಕೊಡ್ಲಿಪೇಟೆಯ ಪಟೇಲ್ ಕಟ್ಟಿಸಾಹೇಬರವರು ಶನಿವಾರಸಂತೆ ಶೇಖರ ಮತ್ತು ಕೊಡ್ಲಿಪೇಟೆ ನೋಟಿಫೈಡ್ ಏರಿಯಾದ ಬೆಂಚ್ ಮೇಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿರುವರು.

ಕಳೆದ ಜನವರಿ ತಿಂಗಳು ಮುಗ್ಗುಲ ಗ್ರಾಮದ ಚೆನೀರಂಡ ಐಯ್ಯಪ್ಪನವರನ್ನು ದರಿ ಮನೆ ಬೋಪಯ್ಯನವರು ಗುಂಡು ಹೊಡೆದು ಕೊಂದುದಾಗಿ ಕೇಸಿನಲ್ಲಿ ಬೋಪಯ್ಯನವರಿಗೆ ಸೆಶ್ಶನ್ ಜಡ್ಜರಿಂದ ಜೀವಾವಧಿ ಶಿಕ್ಷೆಯು ವಿಧಿಸಲ್ಪಟ್ಟಿದ್ದು, ಬೆಂಗಳೂರು ಜುಡಿಶಿಯಲ್ ಕಮಿಷನರವರ ಕೋರ್ಟಿನಲ್ಲಿ ಅಪ್ಪೀಲು ಮಾಡಲಾಗಿ ಸೆಶ್ ಜಡ್ಜರ ತೀರ್ಮಾನವೇ ಖಾಯಂ ಮಾಡಲ್ಪಟ್ಟಿತೆಂದು ತಿಳಿಯಬರುತ್ತದೆ.

ಕೊಡಗು ಸ್ಪೆಶಲ್ ಸ್ಟಾಫ್ ಪರೀಕ್ಷೆಯಲ್ಲಿ, ಭಾಗಮಂಡಲ ನಾಡು ಕ್ಲಾರ್ಕರಾದ ಮೆ. ಯಂ. ಬೆಳ್ಯಪ್ಪನವರು, ಲ್ಯಾಂಡ್ ರಿಕಾರ್ಡ್ಸ್ ಆಫೀಸಿನ ಕ್ಲಾರ್ಕರಾದ ಮೆ. ಬಿ. ಯಂ. ಕಾರ್ಯಪ್ಪನವರು, ಕಮಿಷನರ ಇಂಗ್ಲಿಷ್ ಆಫೀಸಿನ ಕ್ಲಾರ್ಕರಾದ ಮೆ. ಕೆ. ಯನ್. ಸೀತಾರಾಮರವರು, ಪೊನ್ನಂಪೇಟೆ ನಾಡು ಕ್ಲಾರ್ಕರಾದ ಮೆ. ಯು. ಕೆ. ಸುಬ್ಬರಾಮಯ್ಯನವರು, ಮತ್ತು ಕಮಿಷನರ ರೆವೆನ್ಯು ಆಫೀಸಿನ ಹೆಡ್ ಕ್ಲಾರ್ಕರಾದ ಮೆ. ಕೆ. ಎ. ಐಯ್ಯಣ್ಣನವರು 2 ತರಗತಿಯಲ್ಲಿ ತೇರ್ಗಡೆಯಾಗಿರುವರು.

ಮೆ. ಗಿರಿಗೌಡನಂಜಪ್ಪ ಗೌಡನವರ ಮರಣದಿಂದ ಉಂಟಾಗಿರುವ ಪೊನ್ನಂಪೇಟೆ—ಶ್ರೀಮಂಗಲ ನಾಡುಗಳ ಸಾಗಿನ ಪರ ಕೌನ್ಸಿಲು ಮೆಂಬರುತನದ ಖಾಲಿ ಸ್ಥಳಕ್ಕೆ ಒಬ್ಬ ಪ್ರತಿನಿಧಿಯನ್ನು ಚುನಾಯಿಸುವ ಬಗ್ಗೆ ಈ ತಾ. 10ರೊಳಗೆ ಉಮೇದುವಾರರುಗಳ ನೇಮಪತ್ರಗಳನ್ನು ಕೊಡಬೇಕೆಂದೂ, ತಾ. 11ರಲ್ಲಿ ಸದರಿ ಪತ್ರಗಳ ಜಮಾಯಿಸಿಕೆ ನಡೆಯುವದೆಂದೂ, ಉಮೇದುವಾರರುಗಳ ಹೆಸರು ಪಟ್ಟಿಯು ತಾ. 15ರಲ್ಲಿ ಪ್ರಕಟಿಸಲ್ಪಡುವದೆಂದೂ ಸೆಪ್ಟೆಂಬರು 15ರಲ್ಲಿ ಆ ಬಗ್ಗೆ ಓಟುಗಳು ತೆಗೆದುಕೊಳ್ಳಲ್ಪಡುವದೆಂದೂ ಚೀಫ್ ಕಮಿಷನರವರು ಪ್ರಕಟಿಸಿರುವರು.

ಕಾಂಗ್ರೆಸ್ಸಿನ ಶಾಸನಭಂಗ ಚಳವಳಿಯಲ್ಲಿ ಭಾಗಿಗಳಾಗಿ ಜೈಲುವಾಸಕ್ಕೆ ಗುರಿಮಾಡಲ್ಪಟ್ಟಿದ್ದ ಶ್ರೀಯುತ ಬಿಳುಗುಂದ ಅಬ್ದುಲ್ ಗಫೂರಸಾಬ್ ಸೈಕ್ಲಿಯವರು ಐದು ತಿಂಗಳು ಸಜೆ ಮುಗಿಸಿ ತಾ. 5—7—32ರಲ್ಲಿ ಬೆಳ್ಳಾರಿ ಜೈಲಿನಿಂದಲೂ, ಆರಾರು ತಿಂಗಳು ಸಜೆ ಮುಗಿಸಿ ಈ ತಾ. 1ರಲ್ಲಿ ಶ್ರೀಯುತರುಗಳಾದ ಮಚೆರ ಪೂವಯ್ಯನವರು ಬೆಳ್ಳಾರಿ ಜೈಲಿನಿಂದಲೂ, ಮನೆಪಂಡ ತಿಮ್ಮಯ್ಯನವರು, ಮತ್ರಂಡ ಪೊನ್ನಪ್ಪನವರು ಮತ್ತು ಅಜ್ಜಿಯಂಡ ಐಯ್ಯಪ್ಪನವರು ಕಣ್ಣಾನೂರು ಜೈಲಿನಿಂದಲೂ ಬಿಡುಗಡೆ ಹೊಂದಿ ಕೊಡಗಿಗೆ ವಾಪಸು ಬಂದಿರುವರೆಂದು ತಿಳಿಯುತ್ತೇವೆ.

ಕೊಡಗು ಸರ್ಕಾರದ ಖಜಾನೆಗೆ ದೊಡ್ಡ ಹಣ ಕೊಡುವ ಪಬ್ಲಿಕಿನವರ ಅನುಕೂಲಕ್ಕಾಗಿ ಇನ್ನು ಮುಂದೆ ಚೆಕ್ಕು ಮೂಲಕ ಸಲ್ಲಿಸಬಹುದೆಂದೂ, ಈ ಅನುಕೂಲವನ್ನು ಉಪಯೋಗಿಸಲು ಇಚ್ಛಿಸುವವರು ತಮ್ಮ ಕಂದಾಯ ಯಾ ಬೇರೆ ಬಾಕಿಯ ಹಣಕ್ಕೆ ಸರಿಯಾಗಿ ಕಮಿಷನರವರ (ಸ್ವಂತ ಹೆಸರಿಗಲ್ಲ, ಆಫೀಸಿಗೆ) ಹೆಸರಿಗೆ ಚೆಕ್ ಬರೆದು ಅದರೊಂದಿಗೆ ಸರ್ಕಾರಕ್ಕೆ ಕೊಡಬೇಕಾದ ನೂರು ರೂಪಾಯಿಗೆ ಎಂಟಾಣೆ ದರದಲ್ಲಿ ಕಮಿಶನ್ನು ಮತ್ತು ಬ್ಯಾಂಕಿನ ಚಾರ್ಜುಗಳನ್ನು ಸೇರಿಸಿ ಕಂದಾಯ ಯಾ ಬೇರೆ ಬಾಕಿಯ ನೋಟೀಸಿನೊಂದಿಗೆ ಕೊಡಗಿನ ಟ್ರೆಜರಿ ಆಫೀಸರಿಗೆ ಕಳುಹಿಸಬಹುದೆಂತಲೂ, ಚೆಕ್ಕಿನ ರೀತಿಯನ್ನು ಉಪಯೋಗಿಸಲು ಇಷ್ಟವಿಲ್ಲದವರು ಈ ಮೊದಲಿನಂತೆ ನಾಣ್ಯಗಳನ್ನು ಯಾ ಕರೆನ್ಸಿ ನೋಟುಗಳನ್ನು ಕೊಡಬಹುದೆಂತಲೂ ಕಮಿಷನರವರು ಪ್ರಕಟಿಸಿರುವರು.

ವ್ಯಾಕ್ಸಿನೇಶನ್ ಫಂಡಿನ ಮೀಟಿಂಗೊಂದು ತಾ. 2-8-32ರಲ್ಲು ಮಡಿಕೇರಿಯಲ್ಲಿ ನಡೆದು ಈ ಕೆಳಗಿನ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್‌ಗಳು ಮಂಜೂರು ಮಾಡಲ್ಪಟ್ಟಿವೆ. ಮೆ. ಗಳಾದ ಮಾಚಿಮನೆ ಯಂ. ಕುಶಾಲಪ್ಪನವರಿಗೆ 25 ರೂ., ಮೂಡೆರ ಐಯ್ಯಪ್ಪನವರಿಗೆ ರೂ. 20 ಮಿಸ್. ನಡಿಕೇರಿಯಂಡ ಯಸ್. ಬೋಳ್ಳಮ್ಮನವರಿಗೆ ರೂ. 15, ಪಾಲೇಕಂಡ ಎ. ಗಣಪತಿಯವರಿಗೆ ರೂ. 15, ಮೆ. ಪಟ್ಟಮಾಡ ಸೋಮಣ್ಣನವರಿಗೆ ರೂ. 15. 5 ರೂ. ಗಳ ಸ್ಕಾಲರ್‌ಶಿಪ್‌ಗಳು ಮೆ. ಗಳಾದ ಮನೆಯಪಂಡ ಬೆಳ್ಯಪ್ಪ, ಕೇತಿಯಂಡ ಬಿ ಮಾದಯ್ಯ, ಕೊಂಗೆಟ್ಟಿರ ಬಿ. ಪೊನ್ನಪ್ಪ, ಬಿದ್ದಂಡ ಟಿ. ಮಂದಣ್ಣ, ಬಿದ್ದಂಡ ನಾಗಪ್ಪ, ನಿಡುಮಂಡ ಯನ್. ಕುಶಾಲಪ್ಪ, ಕೆ. ಯಂ. ಮುತ್ತಣ್ಣ, ಮಿಸ್ ಬಟ್ಟಿಯಂಡ ಕೆ. ಚೋಂದಮ್ಮ ಮತ್ತು ಪಟ್ಟಮಾಡ ಯಂ. ದೇವಮ್ಮನವರುಗಳಿಗೆ ಮಂಜೂರಾಗಿದೆ. ಮೆ. ಗಳಾದ ಕೊರವಂಡ ಅಚ್ಚಯ್ಯನವರಿಗೆ ರೂ. 200, ಕೊಳುವಂಡ ಟಿ ಮಾದಪ್ಪನವರಿಗೆ ರೂ. 150, ಚೇಂದ್ರಿಮಾಡ ಐಯ್ಯಣ್ಣನವರಿಗೆ ರೂ. 250 ಸಾಲ ಮಂಜೂರಾಗಿದೆ.

ಮಡಿಕೇರಿಯಲ್ಲಿ ಜುಲೈ ತಾ. 30ರಿಂದ ಆಗೊಸ್ಟು ತಾ. 5ರ ವರೆಗೆ 9. 81 ಇಂಚು ಮಳೆಯಾಗಿದೆ. ಜೂನ್ 1ರಿಂದ ಜುಲೈ ಆಖೈರು ವರೆಗೆ 61. 71 ಇಂಚು ಮಳೆ ಬಿದ್ದಿದೆ. ಜುಲೈ ಒಂದೇ ತಿಂಗಳಲ್ಲಿ ಮಡಿಕೇರಿಯಲ್ಲಿ 46. 89 ಇಂಚು ಮಳೆ ಆಗಿದೆ.

ಕಳೆದ ವಾರದಿಂದ ಶ್ರೀ ಸತ್ಯನಾರಾಯಣ ಭಗವತಿ ವಿಲಾಸ ಮೋಟಾರು ಸರ್ವಿಸ್ ಲಿಮಿಟೆಡಿನ ಬಾಬ್ತು ಒಂದು ಬಸ್ಸು ಸರ್ವೀಸು ಬೆಳಿಗ್ಗೆ 7 ಗಂಟೆಗೆ ವಿರಾಜಪೇಟೆಯಿಂದ ಹೊರಟು ಫ್ರೇಜರ್‌ಪೇಟೆಗೆ ತಲುಪಿ ಅಲ್ಲಿಂದ ಪುನಹ ಸಾಯಂಕಾಲ ನಾಲ್ಕು ಗಂಟೆಗೆ ಹೊರಟು ವಿರಾಜಪೇಟೆಗೆ 6½ ಗಂಟೆಗೆ ತಲುಪುವುದು. ಇದರಿಂದ ಪ್ರಯಾಣಿಕರಿಗೆ ಇನ್ನಷ್ಟು ಅನುಕೂಲ.

ಮೈಸೂರಿನ 'ಆಂತ್ರೊಪಾಲಜಿ' (ಮನುಷ್ಯವರ್ಗ ಶಾಸ್ತ್ರ) ಇಲಾಖೆಯ ಚಾರ್ಜಿನಲ್ಲಿರುವ ಮೆ. ಅನಂತಕೃಷ್ಣ ಅಯ್ಯರವರು ಸುಮಾರು 2 ತಿಂಗಳ ಹಿಂದೆ ಕಮಿಷನರವರ ಮೂಲಕ ಕೊಡಗಿನ ನಿವಾಸಿಗಳ ಚರಿತ್ರೆ, ಪದ್ಧತಿ ವಗೈರೆಯನ್ನು ಕುರಿತ ಒಂದು ಪ್ರಶ್ನೆ ಮಾಲೆಯನ್ನು ಕೊಡಗಿನ ಕೆಲವು ಮುಖ್ಯಸ್ಥರಿಗೆ ಕಳುಹಿಸಿದ್ದರಂತೆ. ಅವರು ಮಡಿಕೇರಿಗೆ ಬಂದು ಕಳೆದ ತಾ. 30 ರಲ್ಲಿ ಇಲ್ಲಿಯ ಕೆಲವು ಮುಖ್ಯಸ್ಥರನ್ನು ಭೇಟಿಮಾಡಿ ಸದರಿ ಪ್ರಶ್ನೆ ಮಾಲೆಗೆ ಉತ್ತರ ಕೊಡುವ ವಿಧಾನವನ್ನು ವಿವರಿಸಿಕೊಟ್ಟು ಹೋದರು. ಅವರು ಪುನಹ ಅಕ್ಟೋಬರು ತಿಂಗಳಲ್ಲಿ ಬರುವರಂತೆ. ಕೊಡಗಿನ ಜನರ ಚರಿತ್ರೆ ಬರೆಯುವುದೇ ಇವರ ಉದ್ದೇಶ.

ಹಿಂದೂ ದೇಶ.

ಧೂಲಿಯ ಜೈಲಿನಲ್ಲಿರುವ ಸೇಠ್ ಜಮುನಾಲಾಲ್ ಬಜಾಜ್‌ರವರ ತೂಕವು 36 ಪೌಂಡು ಕಡಿಮೆಯಾಗಿದೆಯಂತೆ.

ಉತ್ತರ ಕಲ್ಕತ್ತಾದಲ್ಲಿ ಕಾಂಗ್ರೆಸ್ ಶಿಬಿರವನ್ನು ಮರಳಿ ಕೈವಶಮಾಡುವ ಪ್ರಯತ್ನದಲ್ಲಿ ತಾ. 2 ರಲ್ಲಿ 8 ಸ್ವಯಂಸೇವಕರು ಕೈದುಮಾಡಲ್ಪಟ್ಟರು.

ಬೊಂಬಾಯಿ ಕಾರ್ಪೋರೇಶನಿನ ಸದಸ್ಯಳಾದ ಕುಮಾರಿ ಮಣಿ ಬಾಯಿ ಕಾರರವರು ರಾಜದ್ರೋಹದ ಭಾಷಣ ಮಾಡಿದರೆಂದು ಅವರ ಮೇಲೆ ಕೇಸು ನಡೆಯುತ್ತಿದೆ.

ಕಳೆದ ತಾ. 31 ರಲ್ಲಿ ಬೆಜವಾಡದ ಕಾಂಗ್ರೆಸು ಕೆಲಸಗಾರರು ಪೋಲೀಸರ ಸ್ವಾಧೀನವಿದ್ದ ಕಾಂಗ್ರೆಸ್ ಆಫೀಸಿನೊಳಗೆ ಪ್ರವೇಶ ಮಾಡಲು ಹೋದಾಗ 25 ಜನರು ದಸ್ತಗಿರಿಮಾಡಲ್ಪಟ್ಟರು.

ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಅಧ್ಯಕ್ಷರಾದ ನಾಗಪುರದ ಮೆ. ರುಯಿಕರರವರು ರಾಜದ್ರೋಹದ ಭಾಷಣ ಮಾಡಿದರೆಂದು ಅವರಿಗೆ 2 ವರ್ಷ ಕಠಿಣ ಸಜೆಯು ವಿಧಿಸಲಾಯಿತು.

'ಮುಂದಿನ ರಾಜಕೀಯ ರಚನೆಯಲ್ಲಿ ಪ್ರತ್ಯೇಕ ಚುನಾವಣೆಯ ಬದಲು ಮಿಶ್ರ ಚುನಾವಣೆಯು ಇರಬೇಕು' ಎಂಬ ಠರಾವು ಬಂಗಾಳ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ 15 ಓಟುಗಳ ಬಹುಮತದಿಂದ ಪಾಸಾಯಿತು.

'ಸಿ' ಕ್ಲಾಸಿನ ರಾಜಕೀಯ ಕೈದಿಗಳಿಗೆ ಮಜ್ಜಿಗೆ ಕೊಡುವ ಏರ್ಪಾಡು ಮಾಡಲಾಗುವದೋ ಎಂಬ ಮದ್ರಾಸು ಕೌನ್ಸಿಲಿನ ಒಬ್ಬ ಮೆಂಬರರ ಪ್ರಶ್ನೆಗೆ 'ಲಾ' ಮೆಂಬರವರು ಆಗುವುದಿಲ್ಲವೆಂದು ಜವಾಬು ಕೊಟ್ಟರು.

"ಕತ್ತಲೆಯಲ್ಲಿ ಸ್ವರಾಜ್ಯವನ್ನು ಹುಡುಕುತ್ತಿದ್ದೇವೆ" ಎಂದು ಕೂಗುತ್ತಾ 'ಟಾರ್ಚ್ ಲೈಟ್' ಹಿಡಿದುಕೊಂಡು ರಾತ್ರಿ ಅಹ್ಮದಾಬಾದಿನ ಬೀದಿಯಲ್ಲಿ ಸುತ್ತುತ್ತಿದ್ದ 3 ಸ್ವಯಂಸೇವಕರು ತಾ. 3 ರಲ್ಲಿ ಕೈದುಮಾಡಲ್ಪಟ್ಟರು.

ಮಹಾತ್ಮ ಗಾಂಧಿಯವರ ಮಗ ಮೆ. ದೇವಿದಾಸ್ ಗಾಂಧಿಯವರು ಕಾಯಿಲೆಯ ದೆಸೆಯಿಂದ ಅವಧಿ ತೀರುವ ಮುಂಚೆಯೇ ಗೋರಖಪುರ ಜೈಲಿನಿಂದ ಬಿಡುಗಡೆಮಾಡಲ್ಪಟ್ಟರು. ಅವರು ಚಿಕಿತ್ಸೆ ಬಗ್ಗೆ ಬೆನಾರೇಸಿಗೆ ಹೋಗಿರುವರು.

ಬೊಂಬಾಯಿಯ ಒಬ್ಬ ಅಡ್ವಕೇಟ್ ಜನರಲಾಗಿದ್ದು, ಈಗ ಪ್ರಮುಖ ಲಾಯರಾಗಿರುವ ಶ್ರೀ. ಬಾಬುಭಾಯಿ ದೇಸಾಯಿಯವರು ಎಮರ್ಜನ್ಸಿ ಆರ್ಡಿನೇನ್ಸ್ ಮೇರೆ ದಸ್ತಗಿರಿ ಮಾಡಲ್ಪಟ್ಟಿರುವರು. ಅಲ್ಲದೆ ಅಲ್ಲಿ ಧ್ವಜಾಭಿವಂದನೆ ಮಾಡುವಾಗ್ಯೆ ತಾ 1ರಲ್ಲಿ 38 ಜನರು ಕೈದು ಮಾಡಲ್ಪಟ್ಟರು.

ಕಳೆದ ತಾ. 22 ರಲ್ಲಿ ಪೇಶಾವರದ ಲೇಡಿ ರೀಡಿಂಗ್ ಪ್ರಾಂತೀಕ ಆಸ್ಪತ್ರೆಯಲ್ಲಿ ಪಠಾಣರವನೊಬ್ಬನಿಂದ ಕತ್ತಿಗೆ ಚೂರಿ ಹಾಕಲ್ಪಟ್ಟಿದ್ದ ಅಲ್ಲಿಯ ಸಿವಿಲ್ ಸರ್ಜನರಾದ ಕ್ಯಾಪ್ಟನ್ ಡಬ್ಲ್ಯು. ಜೆ. ಕೋಲ್ಡ್‌ಸ್ಟ್ರೀಮ್‌ರವರು ತಾ. 2 ರಲ್ಲಿ ಮೃತರಾದರು.

ಈ ತಾ. 1ರಲ್ಲಿ ಬನಾರಿಸ್‌ನಲ್ಲಿ ರಾಷ್ಟ್ರಧ್ವಜಾಭಿವಂದನೆ ಮಾಡುವಾಗ್ಯೆ 14 ಜನರು ಕೈದು ಮಾಡಲ್ಪಟ್ಟರು. ಅವರ ಪೈಕಿ 13 ಜನರನ್ನು 22 ಮೈಲು ದೂರದಲ್ಲಿರುವ ಗ್ರಾಮಕ್ಕೆ ತೆಗೆದುಕೊಂಡು ಹೋಗಿ ಬಿಟ್ಟು ಉಳಿದ ಒಬ್ಬನನ್ನು ಮಾತ್ರ ಜೈಲಿಗೆ ಕಳುಹಿಸಿದರು. ನಂತರ 13 ಜನರು ಪಟ್ಟಣಕ್ಕೆ ವಾಪಸು ಬಂದರು.

ಖಾದಿ ಬಟ್ಟೆಯ ಕ್ರಯವು ಈ ತಾ. 1ರಿಂದ ತಕ್ಕ ಮಟ್ಟಿಗೆ ಕಡಿಮೆ ಮಾಡಲಾಗಿದೆಯೆಂದೂ, ಕಡಿಮೆ ಸನ್ನದ ಬಟ್ಟೆಗೆ ಶೇಕಡ 20ರಷ್ಟೂ, ದೊರಗು ಖಾದಿಗೆ ಶೇಕಡ 12½ ಯಷ್ಟೂ ಕ್ರಯ ಕಡಿಮೆ ಮಾಡಲಾಗಿದೆಯೆಂದೂ ಅಖಿಲ ಭಾರತ ನೂಲುವವರ ಸಂಘದ ತಮಿಳು ನಾಡು ಶಾಖೆಯ ಸೆಕ್ರೆಟರಿಯವರು ಪ್ರಕಟಿಸಿರುವರು.

ಅಹಮದಾಬಾದಿನಲ್ಲಿ ಮೇಜಿಸ್ಟ್ರೇಟರೊಬ್ಬರು ಒಬ್ಬ ಕಳ್ಳನಿಗೆ 3½ ವರ್ಷ ಸಜೆ ವಿಧಿಸಿದ್ದೇನೆಂದು ಹೇಳಿದರು. ಕೂಡಲೆ ಆ ಕಳ್ಳನು ತನ್ನ ಒಂದು ಜೋಡನ್ನು ಮೇಜಿಸ್ಟ್ರೇಟರಿಗೆ ಎಸೆದನು. ಅದು ತಗಲಲಿಲ್ಲವಾದ ಕಾರಣ ಇನ್ನೊಂದನ್ನು ಎಸೆಯಲು ಪ್ರಯತ್ನಿಸುವಷ್ಟರಲ್ಲಿ ಅವನನ್ನು ಪೋಲೀಸಿನವರು ಹಿಡಿದುಕೊಂಡರು.

ಈ ತಾ. 21 ರಲ್ಲಿ ಕಲ್ಲಿಕೋಟೆ ಯಲ್ಲಿ ಒಬ್ಬ ತೀಯ ಹುಡುಗನು ರಾತ್ರಿ ಮನೆಗೆ ಬರುವಾಗ್ಯೆ ದಾರಿಯಲ್ಲಿ ಕಾಣದೆ ಒಂದು ಸರ್ಪವನ್ನು ತುಳಿದುಬಿಟ್ಟನು. ಅದು ಕಚ್ಚಲಿಕ್ಕೆ ಯತ್ನಿಸಿದಾಗ ತಪ್ಪಿಸಿಕೊಂಡು ಮನೆಗೆ ಬಂದು ನಿದ್ರೆ ಮಾಡುತ್ತಿದ್ದ ವೇಳೆಯಲ್ಲಿ ಆ ಸರ್ಪವೂ ಮನೆಗೆ ಬಂದು ಅವನನ್ನು ಕಚ್ಚಿಕೊಂದಿತೆಂದು ವರ್ತಮಾನ.

ಮಲಬಾರಿನ ಗುರುವಾಯೂರು ದೇವಸ್ಥಾನದ ಮುಂದೆ ಸತ್ಯಾಗ್ರಹ ನಡಿಸುತ್ತಿರುವ ಸ್ವಯಂಸೇವಕರು ತಾ. 3 ರಲ್ಲಿ ಭಜನೆ ಮಾಡುತ್ತಿರುವಾಗ್ಯೆ ದೇವಸ್ಥಾನದೊಳಗಿನಿಂದ ಯಾರೋ ಒಂದು ದೊಡ್ಡ ಕಲ್ಲನ್ನು ಎಸೆದರೆಂದೂ, ಅದು ತಗಲಿ ಒಬ್ಬ ಸ್ವಯಂಸೇವಕನ ತಲೆಗೆ ಘೋರಾ ಜಖಂ ಆಗಿ ಆಸ್ಪತ್ರೆಗೆ ಒಯ್ಯಲ್ಪಟ್ಟನೆಂದೂ ವರ್ತಮಾನ.

ನಾಗಪುರದ ಪ್ರಾಮುಖ್ಯ ಕಾಂಗ್ರೆಸ್ ಕೆಲಸಗಾರರೂ, ಕಾಂಗ್ರೆಸ್ಸಿನ ವರ್ಕಿಂಗ್ ಕಮಿಟಿ ಒಬ್ಬ ಮೆಂಬರೂ ಆದ ಶ್ರೀಯುತ ಅಣೆಯವರು ತಮ್ಮ ಜೈಲು ವಾಸವನ್ನು ಮುಗಿಸಿಕೊಂಡು ಹೊರಗೆ ಬಂದರು. ಅವರು ಕಾಂಗ್ರೆಸು ಮೆಂಬರೆಂಬ ಕಾರಣ ಅವರು ಇನ್ನು ಮುಂದೆ ಲಾಯರು ಕೆಲಸವನ್ನು ಮಾಡಕೂಡದೆಂದು ಸರ್ಕಾರದ ಹುಕುಂ ಆಗಿದೆ।

ಕರಾಚಿಯಲ್ಲಿರುವ ಇಂಡಿಯನ್ ಸೆಂಟ್ರಲ್ ಕಾಟನ್ ಕಮಿಟಿಯ ಒಬ್ಬ ಸದಸ್ಯರಾದ ಶ್ರೀ. ಜಿ. ಜಿ. ಕೋಟಕರರವರು ಶಾಸನ ಭಂಗ ಚಳವಳಿಗೆ ಗುಟ್ಟಾಗಿ ಸಹಾಯ ಮಾಡುತ್ತಿದ್ದಾರೆಂಬ ಸಂಶಯದಿಂದ, ಅವರು ಕರಾಚಿಯಿಂದ ಹೊರಗೆ ಹೋಗಕೂಡದೆಂಬ ಹುಕುಂ ಆಯಿತು. ಅವರು ಹುಕುಮನ್ನು ಉಲ್ಲಂಘನೆ ಮಾಡಲು ಕೈದುಮಾಡಲ್ಪಟ್ಟರು.

ಅಂಡಮಾನ ದ್ವೀಪಕ್ಕೆ ಕಳುಹಿಸುವುದಕ್ಕಾಗಿ ಸರ್ಕಾರದವರು ಚಿಟ್ಟಗಾಂಗ್ ಆರ್ಮರಿ ರೈಡ್, ಮೆಚುವ ಬಜಾರ್ ಮತ್ತು ಡಾಲ್ ಹೌಸಿ ಸ್ಕ್ವೇರ್ ಬಾಂಬು ಕೇಸುಗಳು, ಬಂಗಾಳದ ರಾಜಕೀಯ ದರೋಡೆ, ಸಂಯುಕ್ತ ಪ್ರಾಂತ್ಯದ ಮತ್ತು ಪಂಜಾಬಿನ 'ಕಾನ್ಸ್ಪಿರೆಸಿ' ಕೇಸುಗಳಿಗೆ ಸಂಬಂಧಪಟ್ಟ 100 ಜನ ಕೈದಿಗಳ ಪಟ್ಟಿಯನ್ನು ತಯಾರಿಸಿರುವರೆಂದು ವರ್ತಮಾನ.

ಬೊಂಬಾಯಿಯ 'ಫ್ರೀ ಪ್ರೆಸ್' ಪತ್ರಿಕೆಯಲ್ಲಿ ಸರ್ಕಾರಕ್ಕೆ ಆಕ್ಷೇಪಕರವಾದ ಲೇಖನವೊಂದು ಪ್ರಕಟವಾಯಿತೆಂದು ಅದರ ಮಾಲೀಕರು ಸರ್ಕಾರದಲ್ಲಿ ಡಿಪಾಜಿಟ್ಟು ಇಟ್ಟಿದ್ದ ಹೊಣೆ ಹಣ 6000 ರೂ. ಯನ್ನು ಅಧಿಕಾರಿಗಳು ಮುಟ್ಟುಗೋಲು ಹಾಕಿಬಿಟ್ಟರು. ಈಗ ಪುನಹ 10000 ರೂ. ಹೊಣೆ ಹಣವನ್ನು ಡಿಪಾಜಿಟ್ಟು ಇಡಬೇಕೆಂದು ಹುಕುಂ ಮಾಡಿರುವರು. ಕಂದಾಯ ಕೊಡದ ಚಳವಳಿ ನಡೆಯುತ್ತಿರುವಾಗ್ಯೆ ಸರ್ಕಾರಕ್ಕೆ ಉತ್ಪತ್ತಿಗೆ ಇದೊಂದು ಸುಲಭ ದಾರಿ!

ಐರ್ಲೆಂಡಿನವರು ಇಂಗ್ಲೆಂಡಿಗೆ ಕೊಡಲಿಕ್ಕಿರುವ ಭೂಕಪ್ಪದ ವಿಷಯ ತೀರ್ಮಾನಕ್ಕೆ ಪಂಚಾಯಿತರನ್ನು ಇಂಗ್ಲೆಂಡಿನವರು ಬೇಗನೆ ನೇಮಿಸತಕ್ಕದೆಂತಲೂ, ಕಾಲವಿಳಂಬ ಮಾಡಿದರೆ ತಾವು ಒಪ್ಪಲಿಕ್ಕಿಲ್ಲವಾಗಿಯೂ ಡಿ ವೇಲರವರು ಇಂಗ್ಲೆಂಡಿನ ಪ್ರಧಾನ ಮಂತ್ರಿಯವರಿಗೆ ಬರೆಯುವರಂತೂ, ಈ ಮಧ್ಯೆ ಇಂಗ್ಲೆಂಡಿನ ಸಂಬಂಧವನ್ನು ಕಡಿದು ಹಾಕಿ ಪೂರ್ಣ ಸ್ವಾತಂತ್ರ್ಯವನ್ನು ಸ್ಥಾಪಿಸಬೇಕೆಂದು ಐರ್ಲೆಂಡಿನ ರಿಪಬ್ಲಿಕನ್ ಸೈನ್ಯದವರು ಡಿ ವೇಲರವರನ್ನು ಒತ್ತಾಯಪಡಿಸುತ್ತಿರುವರೆಂದೂ ವರ್ತಮಾನ.

ಇಂಡಿಯಾದ ವೈಸರಾಯರು ಆರ್ಡಿನೆನ್ಸುಗಳನ್ನು ಜಾರಿಗೆ ತಂದದ್ದು 1858ರ ರಾಣಿಯವರ ಪ್ರಕಟಣೆಗೆ ವಿರೋಧವೆಂತಲೂ, ಇದರಿಂದ ಸಿಂಹಾಸನಕ್ಕೆ ದೊಡ್ಡ ಕುಚ್ಛೇಕಾರವುಂಟಾಗಿದೆಯೆಂತಲೂ, ಆದಕಾರಣ 1931ರಿಂದ ಇಂದಿನ ವರೆಗೆ ಜಾರಿಗೆ ತಂದಿರುವ ಆರ್ಡಿನೇನ್ಸುಗಳನ್ನೆಲ್ಲಾ ವಜಾ ಮಾಡಿ, ಬೊಂಬಾಯಿಯಲ್ಲಿ ಈ ಆರ್ಡಿನೇನ್ಸುಗಳ ಮೇರೆ ಕೈದು ಮಾಡಲ್ಪಟ್ಟಿರುವವರನ್ನೆಲ್ಲಾ ಬಿಡುಗಡೆ ಮಾಡುವಂತೆ ಹುಕುಂ ಮಾಡಬೇಕೆಂದು ಮೆ. ಜಿ. ಕೆ. ಮಾರ್ಕಾರೆಯವರು ಬೊಂಬಾಯಿ ಹೈಕೋರ್ಟಿಗೆ ಅರ್ಜಿ ಹಾಕಿರುವರು.

"ಕೊಡಗು" ಕಂಪೆನಿಯ ಡೈರೆಕ್ಟರುಗಳ ಮೀಟಿಂಗು.

"ಕೊಡಗು" ಕಂಪೆನಿಯ ಡೈರೆಕ್ಟರುಗಳ ಮೀಟಿಂಗೊಂದು ಈ ತಾ॥ 1 ರಲ್ಲಿ ಕಂಪೆನಿಯ ಆಫೀಸಿನಲ್ಲಿ ನಡೆಯಿತು. ಮೆ. ಗಳಾದ ಸಿ. ಯನ್. ವೆಂಕಪಯ್ಯನವರು, ಮನೆಯಪಂಡ ಚಿಣ್ಣಪ್ಪನವರು, ಬಿ. ಯಂ. ಮಂಜುನಾಥಯ್ಯನವರು, ಐನಂಡ ಕಾರ್ಯಪ್ಪನವರು, ಯಂ. ಸಿದ್ದಲಿಂಗಪ್ಪನವರು, ಐಚೆಟ್ಟಿರ ಸಿ. ಸುಬ್ಬಯ್ಯನವರು ಮತ್ತು ಕೋಟೆರ ಚಿಣ್ಣಪ್ಪನವರು ಹಾಜರಿದ್ದರು. ಕಂಪೆನಿಯ ಕಾರ್ಯಾಧ್ಯಕ್ಷರಾದ ಮೆ. ವೆಂಕಪಯ್ಯನವರು ಅಧ್ಯಕ್ಷಸ್ಥಾನದಲ್ಲಿದ್ದರು.

1. ಮೆ. ಕೋಟೆರ ಚಿಣ್ಣಪ್ಪನವರು ಕಂಪೆನಿಯ ಡೈರೆಕ್ಟರುತನಕ್ಕೆ ಕೊಟ್ಟಿದ್ದ ರಾಜೀನಾಮೆಯನ್ನು ವಾಪಸು ತೆಗೆದುಕೊಂಡದ್ದರಿಂದ, ಸದರಿ ರಾಜೀನಾಮೆ ಪತ್ರವು ಚರ್ಚಿಸಲ್ಪಡಲಿಲ್ಲ.

2. ಫೆಬ್ರವರಿ, ಮಾರ್ಚಿ, ಏಪ್ರಿಲ್, ಮೇ ಮತ್ತು ಜೂನ್ ತಿಂಗಳುಗಳ ಲೆಕ್ಕವು ಓದಲ್ಪಟ್ಟು ಒಪ್ಪಲಾಯಿತು.

3. ಕಂಪೋಜಿಟರಾದ ಮುಂಡಂಡ ಬಿದ್ದಪ್ಪನು ಪತ್ರಿಕೆಯ ಚಂದಾ ವಸೂಲಾತಿಗಾಗಿಯೂ, ಹೊಸ ಚಂದಾದಾರರನ್ನು ಸೇರಿಸುವುದಕ್ಕಾಗಿಯೂ ಏಜೆಂಟಾಗಿ ನೇಮಿಸಲ್ಪಟ್ಟನು. ಅವನಿಗೆ ಈಗ ದೊರೆಯುವ ಸಂಬಳದ ಮೇಲೆ ಅವನು ವಸೂಲು ಮಾಡುವ ಹಣದ ಮೇರೆ 5 ರಷ್ಟು ಕಮಿಷನು ಕೊಡತಕ್ಕದ್ದು. ಅವನಿಗೆ ಒಂದು ಬೈಸಿಕಲ್ ತೆಗೆದುಕೊಳ್ಳುವ ಉದ್ದೇಶ್ಯ 50 ರೂ. ಅಡ್ವಾನ್ಸ್ ಕೊಟ್ಟು, ಅದನ್ನು ಅವನ ಸಂಬಳದಿಂದ ತಿಂಗಳಿಗೆ 10 ರೂ. ಯಂತೆ 5 ತಿಂಗಳು ಜಮೆ ಹಿಡಿಯತಕ್ಕದ್ದು. ಅವನು 200 ರೂಪಾಯಿಯ ಜಾಮೀನು ಕರಾರು ಬರೆದು ಕೊಡುವುದಲ್ಲದೆ 200 ರೂಪಾಯಿಗೆ ಬೇರೊಬ್ಬರನ್ನು ಜಾಮೀನು ಕೊಡಬೇಕು.

4. ಕಳೆದ ವರ್ಷ ತಮ್ಮ ಸಂಬಳವನ್ನು ಕಡಿಮೆ ಮಾಡಿದ್ದನ್ನು ಸಂಪಾದಿಸಿಕೊಡಬೇಕೆಂದು ಪ್ರೆಸ್ಸಿನ ಕೆಲಸಗಾರರು ಬರೆಕೊಂಡ ಅರ್ಜಿ ಓದಲಾಯಿತು. ಕಂಪೆನಿಯ ಆರ್ಥಿಕ ಸ್ಥಿತಿಯು ಅಭಿವೃದ್ಧಿಯಾಗದೆ ಇರುವದರಿಂದ ಸದರಿ ಅರ್ಜಿಯನ್ನು ಕುರಿತು ಆಲೋಚಿಸಲಾಗುವುದಿಲ್ಲವೆಂದು ತೀರ್ಮಾನಿಸಲಾಯಿತು.

5. 1931—32 ನೇ ವರ್ಷದ ಲೆಕ್ಕವನ್ನು ಆಡಿಟ್ ಮಾಡುವ ಬಗ್ಗೆ ಆಡಿಟರ್ ಮೆ. ಶ್ಯಾಮಣ್ಣನವರಿಗೆ ಕೊಡುವಂತೆ ತೀರ್ಮಾನಿಸಲಾಯಿತು.

6 ಏಜೆಂಟ್ ಅಲ್ಲಾರಂಡ ಮೇದಪ್ಪನ ವಿಷಯ ಪೊಲೀಸಿಗೆ ರಿಪೋರ್ಟು ಮಾಡುವಂತೆ ನಿಶ್ಚಯಿಸಲಾಯಿತು.

7. ತನ್ನ ಶೇರುಗಳ ಹಣವನ್ನು ವಾಪಸು ಕೊಡಬೇಕೆಂದು ಮೆ. ಪಟ್ಟಮಾಡ ಕುಶಾಲಪ್ಪನವರು ಬರೆದ ಪತ್ರವು ಓದಲಾಯಿತು. ಕಂಪೆನಿಯ ನಿಬಂಧನೆಗಳು ಶೇರು ಮೊಬಲಗನ್ನು ವಾಪಸು ಕೊಡಲು ಬಿಡುವದಿಲ್ಲವೆಂಬ ಸಂಗತಿಯನ್ನು ಅವರಿಗೆ ತಿಳಿಸುವಂತೆ ತೀರ್ಮಾನಿಸಲಾಯಿತು.

ಸಿ. ಯನ್. ವೆಂಕಪಯ್ಯ,
(ಅಧ್ಯಕ್ಷ.)

ಸೆಂಟ್ರಲ್ ಬ್ಯಾಂಕ್ ಮೀಟಿಂಗು.

ಈ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ತಾ. 30ರಲ್ಲು ಬ್ಯಾಂಕಿನ ಆಫೀಸಿನಲ್ಲಿ ನಡೆಯಿತು. ಈ ಕೆಳಗಿನ ಡೈರೆಕ್ಟರುಗಳು ಹಾಜರಿದ್ದರು. ಮೆ. ಗಳಾದ (1) ಕೆ. ಯನ್. ಸುಬ್ರಾಯರು (ರಿಟಯರ್ಡ್ ರಿಜಿಸ್ಟ್ರಾರವರು) (2) ಪಾಂಡಂಡ ಬೋಗಪ್ಪ ಯಂ. ಯಲ್. ಸಿ. ಯವರು, (3) ಪಿ. ಜಿ. ಮುದ್ದಪ್ಪಯ್ಯನವರು, (4) ಯಂ. ಯಂ. ಬೆಳ್ಯಪ್ಪನವರು (ಬ್ರಿಜರ್) (5) ಕೊಂಗಂಡ ಗಣಪತಿ ಯಂ. ಯಲ್. ಸಿ. ಯವರು, (6) ಯಸ್ ಯನ್. ರಾಮಶೆಟ್ಟಿಯವರು, (7) ಕೃಚ್ಚಮಾಡ ಮಾದಯ್ಯನವರು, (8) ಕೋಡಿರ ತಮ್ಮಯ್ಯನವರು ಮತ್ತು (9) ಸಿ. ಯನ್. ವೆಂಕಪ್ಪಯ್ಯ ಬಿ. ಎ ಬಿ. ಯಲ್. ರವರು (ಗೌರವ ಕಾರ್ಯದರ್ಶಿ) ಅಲ್ಲದೆ ಕೋಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರರಾದ ಮೆ. ಯಂ. ಯಸ್. ಮಂದಣ್ಣನವರು ಸಹ ಹಾಜರಿದ್ದರು.

ಬ್ಯಾಂಕಿನ ಅಧ್ಯಕ್ಷರಾದ ರಾವ್ ಬಹದ್ದೂರ್ ಪಟ್ಟಮಾಡ ಸೋಮಯ್ಯನವರು ಮದ್ರಾಸಿಗೆ ಹೋಗಿ ಗೈರುಹಾಜರು ಇದ್ದುದರಿಂದ ಈ ದಿನದ ಮೀಟಿಂಗಿಗೆ ಮೆ. ಕೆ. ಯನ್. ಸುಬ್ರಾಯರನ್ನು ಅಧ್ಯಕ್ಷರನ್ನಾಗಿ ಆರಿಸಲಾಯಿತು.

1. ಕಳೆದ ಮೀಟಿಂಗಿನ ಪ್ರೊಸಿಡಿಂಗ್ಸ್ ಓದಿ ಒಪ್ಪಲಾಯಿತು.

2. ಕಳೆದ ಜೂನ್ ತಿಂಗಳ ಲೆಕ್ಕ ಓದಿ ಮಂಜೂರು ಮಾಡಲಾಯಿತು.

ಹಿಂದಿನ ತಿಂಗಳ ಸಿಲ್ಕು ರೂ.	30463— 4— 3
ಈ ತಿಂಗಳ ವಸೂಲಿ ರೂ.	23380— 2— 8
ಜುಮ್ಲ ರೂ.	53843— 6—11
ಈ ತಿಂಗಳಿನ ಖರ್ಚು ರೂ.	46680—15— 0
ಈ ತಿಂಗಳಿನ ಸಿಲ್ಕು ರೂ.	7162— 7—11

3. ಈ ಕೆಳಗಿನ ಸೊಸೈಟಿಗಳಿಗೆ ಸಾಲಗಳು ಮಂಜೂರಾದವು.

(1) ಬೇಲಾವರ ಸೊಸೈಟಿಗೆ ರೂ. 750, (2) ಶನಿವಾರಸಂತೆ ಸೊಸೈಟಿಗೆ ರೂ. 2000, (3) ಹುಬ್ಬಳಿ ಪಂಚವು ಸೊಸೈಟಿಗೆ ರೂ. 300, (4) ಕಣಗಾಲು ಸೊಸೈಟಿಗೆ ರೂ. 1000 (5) ಗೋಣಿಕೊಪ್ಪಲು ಟೌನ್ ಸೊಸೈಟಿಗೆ ರೂ. 1500 (6) ನೇಗಳೆ ಕರ್ಕಳ್ಳಿ ಸೊಸೈಟಿಗೆ ರೂ. 500, (7) ಕಿರುಂದಾಡು ನಾಡು ಸೊಸೈಟಿಗೆ ರೂ. 1300, (8) ಅಮ್ಮತ್ತಿ ಟೌನ್ ಸೊಸೈಟಿಗೆ ರೂ 400 ಮತ್ತು (9) ಪೊನ್ನಂಪೇಟೆ ಟೌನ್ ಸೊಸೈಟಿಗೆ ರೂ. 2000.

4. ಮಡಿಕೇರಿ ಟೌನ್ ಸೊಸೈಟಿಗೆ, ಹಾನಗಲ್ಲು ಸೊಸೈಟಿಗೆ ಮತ್ತು ಈಚೂರು ಐಯ್ಯಪ್ಪ ಸೊಸೈಟಿಗೆ ಕಾರಣಾಂತರಗಳಿಂದ ಸಾಲಗಳು ಮಂಜೂರಾಗಿರುವುದಿಲ್ಲ.

5. ಮೆ. ಕೃಚ್ಚಮಾಡ ಮಾದಯ್ಯನವರು ಸೆಂಟ್ರಲ್ ಬ್ಯಾಂಕಿನ ಮೀಟಿಂಗ್ ಪ್ರೊಸಿಡಿಂಗ್ಸ್‌ಗಳನ್ನು ಸ್ಥಳೀಯ 2 ಪತ್ರಿಕೆಗಳಲ್ಲಿ ಪ್ರಕಟಿಸಬೇಕಾಗಿ ತಂದ ಠರಾವನ್ನು ಯಾರೂ ಅನುಮೋದಿಸದ್ದರಿಂದ ಠರಾವು ಚರ್ಚೆಗೆ ಬರದೆ ಬಿದ್ದುಹೋಯಿತು.

6. ಸೆಂಟ್ರಲ್ ಬ್ಯಾಂಕು ಮೀಟಿಂಗಿನ ಪ್ರೊಸಿಡಿಂಗ್ಸ್ ಪೂರ್ತಿಯನ್ನು ಇನ್ನು ಮುಂದೆ 'ಕೊಡಗು' ಪತ್ರಿಕೆಯಲ್ಲಿ ಪ್ರಕಟಿಸಬೇಕಾಗಿ ತೀರ್ಮಾನವಾಯಿತು.

7. ಕಾಫಿ ಪ್ಲಾಂಟರುಗಳ ಸೊಸೈಟಿಯ ಪ್ರೆಸಿಡೆಂಟರು ಬ್ಯಾಂಕಿನ ಆಫೀಸು ಇರುವ ರೂಮಿನಲ್ಲಿ ಅವರ ಆಫೀಸು ಇಟ್ಟುಕೊಳ್ಳಲು ಸ್ವಲ್ಪ ಜಾಗ ಕೊಡಬೇಕಾಗಿ ಬರೆಕೊಂಡ ಕಾಗದದ ಮೇರೆ ತಿಂಗಳಿಗೆ ಒಂದು ರೂಪಾಯಿ ಬಾಡಿಗೆಯಲ್ಲಿ ಕೊಡಬಹುದಾಗಿ ತೀರ್ಮಾನವಾಯಿತು.

8. ಪೊನ್ನಂಪೇಟೆ ನಲ್ಲೂರು ಮತ್ತು ಮರೆನಾಡು ಸೊಸೈಟಿಯವರು ತಮ್ಮ ಬಾಬ್ತು ವಾಯಿದೆ ಮೀರಿದ ಸಾಲಕ್ಕೆ ಬರುವ ವರ್ಷದ ವರೆಗೆ ವಾಯಿದೆ ಕೊಡಬೇಕಾಗಿ ಬರೆಕೊಂಡ ಮೇರೆ ಕಳೆದ ಫೆಬ್ರವರಿ ತಿಂಗಳಲ್ಲಿ ನಡೆದ ಡೈರೆಕ್ಟರುಗಳ ಮೀಟಿಂಗಿನಲ್ಲಿ ನಂಬರು 1591 ಮತ್ತು 1592ರ ಠರಾವಿನಲ್ಲಿ ತೀರ್ಮಾನಿಸಿದ ಮೇರೆ ವಾಯಿದೆ ಮೀರಿದ ಹಣದ ಅರ್ಧಾಂಶವನ್ನು ಪಾವತಿ ಮಾಡಿದ್ದರಿಂದ ಬಾಕಿ ಇರುವ ವಾಯಿದೆ ಮೀರಿದ ಹಣಕ್ಕೆ ವಾಯಿದೆ ಕೊಡಬಹುದೆಂದು ತೀರ್ಮಾನವಾಯಿತು.

9. ಕುರ್ಗ್ ಮ್ಯೂಚುವಲ್ ಏಯಿಡ್ ಕಂಪೆನಿಯ ಮೇನೇಜಿಂಗ್ ಡೈರೆಕ್ಟರಾದ ರಾ. ಬ. ಪಟ್ಟಮಾಡ ಸೋಮಯ್ಯನವರು ಮತ್ತು ಡೈರೆಕ್ಟರಾದ ಮೆ. ಮಂಡೇಟಿರ ಅಪ್ಪಯ್ಯನವರು ಸಹ ಯುನಿವರ್ಸಲ್ ಮ್ಯೂಚುವಲ್ ಏಯಿಡ್ ಕಂಪೆನಿಯ ಹೆಸರಿನಲ್ಲಿ ಬ್ಯಾಂಕಿನಲ್ಲಿರುವ ಹಣವನ್ನು ತಮ್ಮ ಕಂಪೆನಿಗೆ ವರ್ಗಾಯಿಸಲು ಆ ಕಂಪೆನಿಯವರು ಒಪ್ಪಿರುವುದರಿಂದ ಈಚೆಗೆ ಸದರಿ ಕಂಪೆನಿಯ ಲಿಕ್ವಿಡೇಟರು ಬ್ಯಾಂಕಿನಲ್ಲಿರುವ ಆ ಹಣವನ್ನು ಕಳುಹಿಸಬೇಕೆಂತ ಬ್ಯಾಂಕಿಗೆ ಬರೆಕೊಂಡರೆ ಕೊಡತಕ್ಕದಾಗಿ ಬರೆಕೊಂಡ ಕಾಗದಗಳನ್ನೂ, ಲಿಕ್ವಿಡೇಟರು ಬರೆದ ಕಾಗದವನ್ನೂ ಓದಿ ಡಿಪಾಜಿಟ್ ಹಣದ ವಾಯಿದೆ ಬಂದಾಗ ಡೈರೆಕ್ಟರುಗಳ ತೀರ್ಮಾನಕ್ಕೆ ಇಡಲಾಗುತ್ತದೆಯೆಂತ ಲಿಕ್ವಿಡೇಟರಿಗೆ ತಿಳಿಸಬೇಕಾಗಿ ತೀರ್ಮಾನವಾಯಿತು.

10. ಮೆ. ಮಡಿಕೇರಿಯಂಡ ಸಿ. ಸುಬ್ಬಯ್ಯನವರು ತನ್ನ ತಂದೆ ಚಿಣ್ಣಪ್ಪನವರ ಬಾಬ್ತು ಸೆಂಟ್ರಲ್ ಬ್ಯಾಂಕಿನಲ್ಲಿರುವ 1 ಶೇರನ್ನು ತನ್ನ ತಾಯಿ ಶ್ರೀಮತಿ ನಂಜಮ್ಮನವರ ಹೆಸರಿಗೆ ವರ್ಗಾಯಿಸಬೇಕಾಗಿ ಬರೆಕೊಂಡ ಕಾಗದದ ಮೇರೆ ವರ್ಗಾಯಿಸಬಹುದಾಗಿ ತೀರ್ಮಾನವಾಯಿತು.

11. ಕೈಕೇರಿ ಮತ್ತು ಅವಂದೂರು ಸೊಸೈಟಿಯವರು ತಮ್ಮ ಬಾಬ್ತು ವಾಯಿದೆ ಮೀರಿದ ಸಾಲದ ಮೊಬಲಗು ಪಾವತಿ ಮಾಡಲು ಕೇವಲ ಅಸಾನುಕೂಲವಾದ್ದರಿಂದ ಬರುವ ವರ್ಷದ ವರೆಗೆ ವಾಯಿದೆ ಕೊಡಬೇಕಾಗಿ ಬರೆಕೊಂಡ ಅರ್ಜಿಯನ್ನು ಚರ್ಚಿಸಲಾಗಿ ವಾಯಿದೆ ಕೊಡಲು ಆಗುವುದಿಲ್ಲವಾಗಿಯೂ, ಒಡನೆ ವಾಯಿದೆ ಮೀರಿದ ಹಣ ಪಾವತಿ ಮಾಡದಿದ್ದ ಪಕ್ಷ ವಸೂಲಾತಿಗೆ ತಕ್ಕ ಕ್ರಮ ತೆಗೆದುಕೊಳ್ಳಬೇಕಾಗಿಯೂ ತೀರ್ಮಾನವಾಯಿತು.

12. ಬ್ಯಾಂಕಿನ ಗುಮಾಸ್ತರಾದ ಮೆ. ಬಲ್ಯಂಡ ಪೂವಯ್ಯನವರಿಗೆ 1931ನೇ ಇಸವಿ ಏಪ್ರಿಲ್ ತಿಂಗಳು 25ರಲ್ಲು ನಡೆದ ಡೈರೆಕ್ಟರುಗಳ ಮೀಟಿಂಗಿನಲ್ಲಿ ಆದ ನಂಬರು 1433ರ ಠರಾವು ಮೇರೆ ತೀರ್ಮಾನವಾದ ಗ್ರೇಡನ್ನು ಕಳೆದ ಮೇ ತಿಂಗಳಿಂದ ಹೊಂದಿಕೊಳ್ಳುವಂತೆ ಮಂಜೂರು ಮಾಡಬಹುದೆಂತ ತೀರ್ಮಾನವಾಯಿತು.

13. ಬ್ಯಾಂಕಿನ ಗೌರವ ಸೆಕ್ರೆಟರಿಯವರಾದ ಮೆ. ಸಿ. ಯನ್. ವೆಂಕಪ್ಪಯ್ಯನವರು ನೇಶನಲ್ ಬ್ಯಾಂಕ್ ಮತ್ತು ಮರ್ಕೆಂಟೈಲ್ ಬ್ಯಾಂಕಿನಲ್ಲಿ ತಮ್ಮ ಅಧೀನಕ್ಕೆ ಡಿಪಾಜಿಟ್ ಇಟ್ಟ ಹಣವನ್ನು ವಾಪಸು ಹೊಂದಿಕೊಳ್ಳಲು ಮೇಲ್ಕಂಡ ಬ್ಯಾಂಕುಗಳಿಗೆ ಬರೆದು ನೇಶನಲ್ ಬ್ಯಾಂಕಿನಿಂದ ಬರತಕ್ಕ ಹಣದ ಪೈಕಿ ರೂ. 9997—8—0ಕ್ಕೆ ಪೋಸ್ಟಾಫೀಸಿಂದ ಅನ್ನ ಹೆಸರಿಗೆ 5 ವರ್ಷದ 13330 ರೂಪಾಯಿಗೆ ಕ್ಯಾಶ್ ಸರ್ಟಿಫಿಕೇಟ್‌ಗಳನ್ನು ಪಡೆದಿರುತ್ತೇನೆಂತ ಡೈರೆಕ್ಟರುಗಳ ನೋಟೀಸಿಗೆ ತಂದ ಮೇರೆ ಮಂಜೂರು ಮಾಡಲಾಯಿತು.

14. ಮೈಸೂರು ಬ್ಯಾಂಕ್ ಮತ್ತು ಮದ್ರಾಸ್ ಅರ್ಬನ್ ಬ್ಯಾಂಕಿನಲ್ಲಿ ಡಿಪಾಜಿಟ್ ಇಟ್ಟ ಹಣದ ವಾಯಿದೆ ಗತಿಸಿದರಿಂದ ಆ ಡಿಪಾಜಿಟ್ಟುಗಳನ್ನು ಪುನಹ ಒಂದು ವರ್ಷದ ವರೆಗೆ ಮುಂದರಿಸಲು ಈ ಮೊದಲೇ ಸದರಿ ಬ್ಯಾಂಕುಗಳಿಗೆ ಕಾಗದ ಬರೆದ ಮೇರೆ ಮಂಜೂರಾತ್ಮಕವಾಯಿತು.

15. ನ್ಯಾಶನಲ್ ಬ್ಯಾಂಕಿನಿಂದ ಬರುವ ಹಣದ ಪೈಕಿ 20000 ರೂ. ಹಣವನ್ನು ಮೈಸೂರು ಬ್ಯಾಂಕಿನಲ್ಲಿ 1 ವರ್ಷಕ್ಕೆ ಇಡಬೇಕಾಗಿ ತೀರ್ಮಾನವಾಯಿತು.

ಮಡಿಕೇರಿ. ಕೆ. ಯನ್. ಸುಬ್ರಾಯ,
ತಾ. 30—7—32. (ಮೀಟಿಂಗಿನ ಅಧ್ಯಕ್ಷರು)

ಸತ್ಯಾಗ್ರಹ ಸಮಾಚಾರ.

ಜಬ್ಬಲ್ ಪುರದಲ್ಲಿ 'ನೇಷನಲ್ ಬಾಯಿಕಾಟ್' ದಳವು ಪರಿಷತ್ತನ್ನು ನಡಿಸಿದಾಗ 12 ಜನರು ದಸ್ತಗಿರಿ ಮಾಡಲ್ಪಟ್ಟರು.

ಮದ್ರಾಸಿನಲ್ಲಿ ಲಾರ್ಡ್ ವೆಲ್ಲಿಂಗ್ಡನ್ (ಈಗಿನ ವೈಸರಾಯರ) ರವರ ಪ್ರತಿಮೆಗೆ ಸಗಣಿ ಹಚ್ಚಿ ಅಪಮಾನಗೊಳಿಸುತ್ತಿದ್ದರೆಂದು ಇಬ್ಬರು ಸ್ವಯಂ ಸೇವಕರು ಸೆರೆಹಿಡಿಯಲ್ಪಟ್ಟರು.

ಲಕ್ನೋದಲ್ಲಿ ಪರದೇಶೀ ಜವಳಿಯ ಅಂಗಡಿಗಳನ್ನು ಸ್ತ್ರೀಯರು ಬಹು ಉತ್ಸಾಹದಿಂದ ಪಿಕೆಟ್ ಮಾಡುತ್ತಿರುವರು. ಒಂದು ವಾರದಲ್ಲಿ 16 ಪಿಕೆಟರುಗಳು ದಸ್ತಗಿರಿ ಮಾಡಲ್ಪಟ್ಟಿರುವರು.

ಮಧ್ಯ ಪ್ರಾಂತ್ಯದ ಕೆಲಂಕೇರಿ ಗಾರ್ಡನ್ಸ್ ಎಂಬಲ್ಲಿ ಫಾರೆಸ್ಟ್ ಸತ್ಯಾಗ್ರಹ ಮಾಡಲು ಕೊಡಲಿ ಮತ್ತು ರಾಷ್ಟ್ರೀಯ ಧ್ವಜವನ್ನು ಹಿಡಿದುಕೊಂಡು ರಿಜರ್ವ್ ಫಾರೆಸ್ಟಿಗೆ ಹೋದ 34 ಸ್ವಯಂಸೇವಕರು ತಾ. 1 ರಲ್ಲಿ ಕೈದು ಮಾಡಲ್ಪಟ್ಟರು.

ದಿಂಡಿಗಲ್ಲಿನಲ್ಲಿ ಇಬ್ಬರು ವಾಲಂಟಿಯರುಗಳು ಸ್ಟೇಶನ ರಿ ಮೇಜಿಸ್ಟ್ರೇಟರ ಕೋರ್ಟಿಗೆ ನುಗ್ಗಿ 'ಮಹಾತ್ಮ ಗಾಂಧಿ ಕೀ ಜೈ,' 'ವಂದೇಮಾತರಂ' ಎಂಬ ಜಯಘೋಷಗಳನ್ನು ಮಾಡಿದ್ದಕ್ಕೆ ಅವರಿಗೆ 25 ರೂ. ಜುಲ್ಮಾನೆ ವಿಧಿಸಲಾಯಿತು. ಜುಲ್ಮಾನೆ ಕೊಡುವುದಿಲ್ಲವೆಂದಾಗ ಅವರಿಗೆ ಒಂದೊಂದು ತಿಂಗಳು ಸಜೆಯು ಕೊಡಲಾಯಿತು.

ಸಹಾರನಪುರದ ತಾಶಿಲ್‌ದಾರರ ಕೋರ್ಟಿನೊಳಗೆ ಪ್ರವೇಶಿಸಿ, ಅವರ ಪೀಠದಲ್ಲಿ ಕುಳಿತುಕೊಂಡು ರಾಷ್ಟ್ರೀಯ ಗೀತೆಗಳನ್ನು ಹಾಡಿದರೆಂಬ ಅಪರಾಧಕ್ಕಾಗಿ ಮಿಸೆಸ್ ಸತ್ಯವತಿ ರಾತ್, ಮಿಸೆಸ್ ಶ್ಯಾಮಲಾಲ್ ಮತ್ತು ಅವರ ಪತಿ—ಈ ಮೂವರಿಗೆ ಒಂಭೊಂಭತ್ತು ತಿಂಗಳು ಕಠಿಣ ಸಜೆಯೂ, 40 ರೂ. ಜುಲುಮಾನೆಯೂ ವಿಧಿಸಲಾಯಿತು.

೪೦ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕಕಂಪನಿ ರವರ

ಜ್ವರದ ಗುಳಿಗೆಗಳು.

ಚಳಿಜ್ವರ, ಚಾತುರ್ಥಿ ಜ್ವರ, ದಿನಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮಬಾಣದಂತೆ ಇವೆ. ಬಾಟ್ಲಿಗೆ ರೂ. ೧ ಟ. ಖ. ೭ ಆಣೆ. ಬರೂರು ತರಿಸಿಕೊಳ್ಳಿ.

ಗಣೇಶ ರಾಮಚಂದ್ರ ಕರ್ಕ,
ಮತ್ತು ಕಂಪನಿ, ಗಿರಗಾಂವ, ಮುಂಬಯಿ,

ಬಾಲಾರ್ಕಮಧು.

ಬಾಲಾರ್ಕಮಧು ಮಕ್ಕಳಿಗೆ ಕೊಡುವುದರಿಂದ ಶಕ್ತಿಯೂ ಆರೋಗ್ಯವೂ ಹೆಚ್ಚುವುದು. ಇದು ಮಧುರವಾಗಿದೆ. ಬೆಲೆ ಶೀಸೆ 1ಕ್ಕೆ 0—12—0 ಟ. ಖ. 0—12—0.



(Spleen Lever enlargement) ಎಂಬ ಮಕ್ಕಳ ಭಯಂಕರ ಗಡ್ಡೆರೋಗ—ಪ್ಲೀಹ—ಪಿತ್ತಕೋಶದ ಗಡ್ಡೆಗೆ ಚಕ್ರಬಿಂದು ಚಕ್ರಕ್ಷಾರ—ಚಕ್ರಚೂರ್ಣ—ಚಕ್ರ ಪ್ರಭಾ—ಈ ನಾಲ್ಕು ಔಷಧಗಳಿವೆ. ಸಾವಿರಾರು ಮಕ್ಕಳ ಪ್ರಾಣವನ್ನುಳಿಸಿದೆ; ನಾಲ್ಕು ಔಷಧಗಳು ಸೇರಿ 1 ತಿಂಗಳ ಔಷಧದ 3—0—0. ಟ ಖ. 0—8—0. ಏಜೆಂಟರು ಬೇಕಾಗಿರು:

ಪ. ಎ. ಯನ್. ಶ್ರೀನಿವಾಸರಾವ್,
ವೈ. ವಿ. ಆಯುರ್ವೇದಭಿಷಕ್,

ಬ್ರಾಂಚ್ ಆಫೀಸ್, ಉಡ್ಪಿ. S. K. | Spleen & Lever ಸ್ಪೆಶಲಿ ಯಂ. ವಿ. ಪ್ರಸಾದಿಕ ಔಷಧಾಲಯ
52-30 ಶಿಮೊಗಾ, (ಮೈಸೂರು ಸೀಮೆ)

ಕೊಡಗಿನಲ್ಲಿ ದೊಡ್ಡ ರೋಗ.

ಪೀಠಿಕೆ.

ಇಂಗ್ಲಿಷಿನಲ್ಲಿ "ರಿಂಡರ್ ಪೆಸ್ಟ್" ಎಂಬ ಕಾಯಿಲೆಗೆ ಈ ದೇಶದಲ್ಲಿ ದೊಡ್ಡರೋಗವೆನ್ನುತ್ತಾರೆ. ಹಾಗಂದರೆ ದೊಡ್ಡದಾದ ಕಾಯಿಲೆವೆಂದರ್ಥ. ಅದರ ಬರೇ ಹೆಸರಿನಿಂದಲೇ ಈ ರೋಗದ ಭಯಂಕರ ಸ್ವಭಾವವನ್ನು ತಿಳಿದುಕೊಳ್ಳಬಹುದು. ಜಾನುವಾರುಗಳು ರೈತನ ಸರ್ವಸ್ವವಾಗಿರುತ್ತವೆ. ಸಂಸಾರದ ಜನರಲ್ಲಿ ನಷ್ಟ ಬಂದರೂ ಜಾನುವಾರುಗಳು ಸತ್ತು ಹೋಗಬಾರದೆಂದು ಅನೇಕ ರೈತರು ಹೇಳುವುದನ್ನು ನಾನು ಕಿವಿಯಾರೆ ಕೇಳಿರುತ್ತೇನೆ. ಹೀಗಿರುವಾಗ ತನ್ನ ಗ್ರಾಮದಲ್ಲಿ ಈ ದೊಡ್ಡ ರೋಗವು ತಲೆದೋರಿತೆಂದರೆ ರೈತನು ಸ್ತಬ್ಧನಾಗಿ ಬಾಯಿಂದ ಮಾತುಗಳೇ ಹೊರಡದಂತವನಾಗುತ್ತಾನೆ ಎಂದು ಹೇಳುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಹೀಗೆ ದಿಗ್ಭ್ರಮೆಹೊಂದಿದ ರೈತನು ತನ್ನ ಜಾನುವಾರುಗಳನ್ನು ಉಳಿಸಿ ತನ್ನನ್ನು ಉದ್ಧಾರ ಮಾಡುಯೆಂದು ದೇವರನ್ನು ಪ್ರಾರ್ಥಿಸುವನು.

ಚರಿತ್ರೆ.

ದೊಡ್ಡ ರೋಗದ ವಿಷಯವಾಗಿ ಪೂರ್ವಕಾಲದ ದಾಖಲೆಗಳು ಏನೂ ದೊರೆಯದ ಕಾರಣ ಈ ರೋಗವು ಕೊಡಗು ದೇಶದಲ್ಲಿ ಎಂದಿನಿಂದ ಇದೆ, ಎಲ್ಲಿಂದ ಬಂದಿತು, ಇವೇ ಮೊದಲಾದ ಸಂಗತಿಗಳನ್ನು ನಿಶ್ಚಿತವಾಗಿ ಹೇಳುವುದು ಅಸಾಧ್ಯ. ಆದರೆ 30 ವರ್ಷಗಳಿಂದೀಚೆಗೆ ದನಗಳಲ್ಲಿ ಇದು ಹೆಚ್ಚು ಅನಾಹುತ ಉಂಟುಮಾಡಿ ಪ್ರತಿ ವರ್ಷವೂ ಅನೇಕ ದನಗಳನ್ನು ಬಲಿ ತೆಗೆದುಕೊಳ್ಳುತ್ತದೆಂಬ ಸಂಗತಿ ಎಲ್ಲರಿಗೂ ಮನವರಿಕೆಯಾದ ವಿಷಯವಾಗಿದೆ. ಇತ್ತೀಚೆಗೆ ನಮ್ಮ ದೇಶೀಯರು ಬೇರೆ ಪ್ರಾಂತ್ಯಗಳ ಜಾನುವಾರುಗಳನ್ನು ಕೊಳ್ಳುವ ಪದ್ಧತಿಯು ಬಹಳ ಮಟ್ಟಿಗೆ ಹೆಚ್ಚಿರುವುದರಿಂದ ಈ ರೋಗವು ಪದೇ ಪದೇ ಕಾಣಿಸಿಕೊಳ್ಳಲು ಅವಕಾಶವಾಯಿತು ಎಂದು ಖಂಡಿತವಾಗಿ ಹೇಳಬಹುದು.

ಗಂಟಲು ಕಟ್ಟುವ ರೋಗ, ಬಾಯಿಜ್ವರ, ಕಾಲುಜ್ವರ ಇವು ಸಾಮಾನ್ಯವಾಗಿ ಜಾನುವಾರುಗಳಿಗೆ ಆಗಿಂದಾಗ್ಗೆ ತಗಲುವ ಇತರ ಅಂಟು ರೋಗಗಳಾಗಿವೆ.

ದೊಡ್ಡ ರೋಗವು ಜಾನುವಾರುಗಳಿಗೆ ಮಾತ್ರವಲ್ಲದೆ ದ್ವಿಶ (ಗೊರಸು ಸೀಳಾಗಿರುವ ಜಂತುಗಳು) ವರ್ಗದ ಪ್ರಾಣಿಗಳು ಅಂದರೆ, ಕುರಿ, ಆಡು, ಜಿಂಕೆ, ಒಂಟೆ ಮೊದಲಾದ ಮೆಲುಕು ಹಾಕುವ ಪ್ರಾಣಿಗಳಿಗೂ ತಗಲುವಂಥ ಅಂಟು ರೋಗವಾಗಿದೆ. ಕುದುರೆಗಳಿಗೂ, ನಾಯಿಗಳಿಗೂ, ಮನುಷ್ಯರಿಗೂ ಅಂಟುವುದಿಲ್ಲ. ಈ ರೋಗ ತಗಲಿದ ಜಾನುವಾರಿನ ಸಗಣಿ, ಗಂಜಲ ಮತ್ತು ಎಂಜಲಿನಲ್ಲಿ ನಂಜು ಇರುತ್ತದೆ. ದನಗಳನ್ನು ಸ್ಥಳದಿಂದ ಸ್ಥಳಕ್ಕೆ ವ್ಯಾಪಾರ ಮಾಡುವುದರಿಂದಲೂ, ಜಾನುವಾರುಗಳ ಜಾತ್ರೆ ಮೂಲಕವಾಗಿಯೂ ಈ ರೋಗವು ಪ್ರಸರಿಸುತ್ತದೆ. ಗುಳ್ಳೆನರಿಗಳು, ರಣಹದ್ದುಗಳು, ನಾಯಿಗಳು ವಾಡಿಕೆಯಾಗಿ ಕಶ್ಮಲಗಳನ್ನು ಹೋಗಲಾಡಿಸತಕ್ಕಂಥವುಗಳಾದರೂ ಕೆಲವು ಮಟ್ಟಿಗೆ ಈ ರೋಗದ ಹರಡುವಿಕೆಗೆ ಅವುಗಳು ಕಾರಣಗಳಾಗಿವೆ. ಹಸಿ ಚರ್ಮ ವ್ಯಾಪಾರವು ಸಹ ಒಂದು ಮುಖ್ಯ ಕಾರಣವೆಂದು ಹೇಳಬಹುದು

ಸಂಕ್ಷೇಪ.

ನಾನು ಈ ಭಯಂಕರ ರೋಗದ ಮುಖ್ಯ ಚಿಹ್ನೆಗಳನ್ನು ವಿವರಿಸುವೆನು. ಈ ಮೊದಲು ಇದೊಂದು ಅಂಟು ರೋಗವೆಂದೆನು. ಹಾಗಂದರೆ ಈ ರೋಗದ ನಂಜು ಗಾಳಿಯಲ್ಲಿ ಬೆರೆತುಕೊಂಡು ಒಂದು ಜಾನುವಾರಿನಿಂದ ಸಮೀಪವಿರುವ ಇನ್ನೊಂದಕ್ಕೆ ದಾಟುತ್ತದೆ. ಉದಾಹರಣೆ, ರೋಗ ತಗಲಿದ ಒಂದು ಜಾನುವಾರಿನ ಉಸಿರು ತಾಗಿ ಅದೇ ಕೊಟ್ಟಿಗೆಯಲ್ಲಿರುವ ಇನ್ನೊಂದಕ್ಕೂ ಈ ರೋಗವು ತಗಲಬಹುದು. ಅದಲ್ಲದೆ ಹುಲ್ಲು ಮೊದಲಾದ ಮೇವಿನ ಮೇಲೆ ಸಗಣಿ, ಗಂಜಳ, ಜೊಲ್ಲು ಮೊದಲಾದವುಗಳು ಬಿದ್ದು ಅದನ್ನು ತಿನ್ನುವುದರಿಂದಲೂ ಅಂಟಿಕೊಳ್ಳುತ್ತದೆ. ಕಾಯಿಲೆಯು ಮುಖ್ಯವಾಗಿ ಅನ್ನಕೋಶವನ್ನು ಮುತ್ತಿಗೆ ಹಾಕುವುದು. ಈ ರೋಗದ ನಂಜು ರಕ್ತಕ್ಕೆ ಸೇರಿ ರೋಗದ ಚಿಹ್ನೆಗಳು ಹೊರಬೀಳಬೇಕಾದರೆ ಸಾಧಾರಣವಾಗಿ 3 ರಿಂದ 7 ದಿವಸಗಳಾಗುತ್ತದೆ.

"ಇನ್‌ಕ್ಯುಬೇಶನ್ ಪೀರ್ಯಡ್" ಎಂದರೆ ಯಾವ ಅಂಟು ರೋಗವೇ ಆಗಲಿ ಅದರ ನಂಜು ಶರೀರಕ್ಕೆ ಸೇರಿ ಅಲ್ಲಿ ರೋಗದ ಕ್ರಿಮಿಗಳು ವೃದ್ಧಿ ಹೊಂದಿ ರೋಗದ ಚಿಹ್ನೆಗಳು ಕಾಣಿಸಿಕೊಳ್ಳಲಿಕ್ಕೆ ಬೇಕಾದ ಅವಧಿ. ಈ ಅವಧಿಯೊಳಗೆ ಜಾನುವಾರು ಏನೂ ಕಾಯಿಲೆ ಇಲ್ಲದಂತೆ ಎಂದಿನಂತೆಯೇ ತೋರ್ಪಡಿಸಿಕೊಳ್ಳುತ್ತದೆ.

ಪ್ರಥಮ ಚಿಹ್ನೆಯು ಮೈ ಬಿಸಿಯಾಗುವುದು, ಅಂದರೆ ಜ್ವರ. ಸ್ವಾಭಾವಿಕವಾಗಿ ದನಗಳ ಮೈಶಾಖವು 100 ಡಿಗ್ರಿ (F) ಯಷ್ಟಿರಬಹುದು. ಇದು ದೊಡ್ಡ ರೋಗದಲ್ಲಿ 105 ಡಿಗ್ರಿಯ ವರೆಗೆ ಹತ್ತುವುದಲ್ಲದೆ ಅದರ ಮೇಲೆಯೂ ಸಹ ಕೆಲವು ಸಾರಿ ಹತ್ತುವುದುಂಟು. ಜಾನುವಾರುಗಳ ಜ್ವರ ನೋಡಲು ಒಂದು ಉಷ್ಣಮಾಪಕ ಯಂತ್ರವನ್ನು ಅದರ ಆಸನದಲ್ಲಿಟ್ಟು ತೆಗೆದುಕೊಳ್ಳಬಹುದು. ಈ ರೋಗದ ಚಿಹ್ನೆಗಳಲ್ಲಿ ಮೂರು ಅವಸ್ಥೆಗಳಿವೆ.

1. ಜ್ವರ. 2. ಹುಣ್ಣು. 3. ಭೇದಿ.

1 ಒಂದನೆಯ ಅವಸ್ಥೆ—ಜ್ವರ.—ಇದರಲ್ಲಿ ದೊಡ್ಡ ಜ್ವರ, ಸೋಮಾರಿತನ, ನಡುಗು, ಮೈ ರೋಮಾಂಚನವಾಗುವುದು, ಕಿವಿ ಜೋಲಾಡುವುದು, ಮಲಬದ್ಧತೆ, ಬಾಯಾರಿಕೆ, ನಿಧಾನವಾಗಿ ಮೆಲಕು ಹಾಕುವುದು, ಬೆನ್ನು ಮತ್ತು ಸೊಂಟಗಳಲ್ಲಿ ನೋವು ಕಾಣಿಸುವುದು

2. ಎರಡನೆಯ ಅವಸ್ಥೆ—ಹುಣ್ಣು—ನಾಲಗೆಯ ಕೆಳಗೂ, ವಸಡಿನಲ್ಲಿಯೂ (ಊನು) ಮತ್ತು ತುಟಿಗಳ ಒಳಗೂ ಸಣ್ಣ ಹುಣ್ಣುಗಳೇಳುವವು. ಮೆಲ್ಲ ಮೆಲ್ಲಗೆ ಈ ಹುಣ್ಣುಗಳು ಬೆಳೆದು ಒಂದಕ್ಕೊಂದು ಸೇರಿ ಒಡೆದು ಕೆಂಪಾಗಿ ತೋರುವುದು. ಶ್ವಾಸನಿಶ್ವಾಸಗಳು ಜೋರಾಗುವವು. ಕಣ್ಣುಗಳಿಂದ ನೀರು ಸುರಿಯುವುದು, ಸಗಣಿ ಗಟ್ಟಿಯಾಗಿ, ಕೀವೂ ಮತ್ತು ರಕ್ತದಿಂದ ಕೂಡಿರುವುದು. ಹಾಲು ಬತ್ತಿ ಹೋಗುವುದು. ಈ ಸಮಯದಲ್ಲಿ ಆ ಜಾನುವಾರುವು ತನ್ನ ತಲೆಯನ್ನು ಪಕ್ಕೆಯ ಕಡೆ ಇಟ್ಟುಕೊಂಡು ಮಲಗಿ ನರಳುತ್ತಿರುವುದು.

3 ಮೂರನೆಯ ಅವಸ್ಥೆ—ಭೇದಿ.—ಇದರಲ್ಲಿ ಮಂದವಾದ ಅರ್ಧ ಬಿಳುಪಿನ ಕೀವಿನಂತಿರುವ ದ್ರವವು ಕಣ್ಣುಗಳಿಂದಲೂ, ಮೂಗಿನಿಂದಲೂ ಮತ್ತು ಬಾಯಿಯಿಂದಲೂ ಸುರಿಯುವುದು. ಉಛ್ವಾಸವು ದುರ್ವಾಸನೆಯಿಂದ ಕೂಡಿರುವುದು. ಭೇದಿ ಪ್ರಾರಂಭಿಸಿ ಸಗಣಿಯಲ್ಲಿ ರಕ್ತ ಮತ್ತು ಕೀವು ಮಿಶ್ರವಾಗಿರುವುದು. ಕಡೆ ಕಡೆಗೆ ಭೇದಿಯು ನೀರೋಪಾದಿಯಲ್ಲಿದ್ದು ಒಂದು ತರದ ದುರ್ವಾಸನೆಯು ಪ್ರಾರಂಭವಾಗುವುದು. ಕೊನೆಗೆ ಪಿಚಕಾರಿ ಹೊಡೆದಂತೆ ಭೇದಿಯಾಗಿ ಬಲಹೀನತ್ವ, ಬಾಯಾರಿಕೆ, ಮೈ ತಣ್ಣಗಾಗುವಿಕೆ ಮೊದಲಾದುವುಗಳು ತಲೆದೋರುವುವು. ರೋಗದ ಸ್ಥಿತಿಗನುಸಾರವಾಗಿ 10 ದಿವಸಗಳೊಳಗೆ ಮರಣ ಸಂಭವಿಸುವುದು.

ಮಾಫಿ ಯಾ ಬಿಡುಗಡೆ.

ಮಾಫಿ ಎಂದರೆ, ಹೆಚ್ಚು ಕಡಮೆ, ರೋಗದಿಂದ ಬಿಡುಗಡೆಯಾಗಿರುವುದು (immunity). ಈ ರೋಗ ತಗಲಿ ಗುಣವಾದ ಜಾನುವಾರಿಗೆ ಇನ್ನು ಮುಂದೆ ದೊಡ್ಡ ರೋಗವು ತಗಲುವುದಿಲ್ಲವೆಂದು ಹೇಳುತ್ತಾರೆ. ಪದೇ ಪದೇ ದೊಡ್ಡ ರೋಗ ಬರುವ ಪ್ರಾಂತ್ಯಗಳಲ್ಲಿ ದನಗಳು ತಕ್ಕ ಮಟ್ಟಿಗೆ ಈ ಮಾಫಿಯನ್ನು ಹೊಂದಿರುತ್ತವೆ. ಹೊರಗಿನ ಜನಗಳ ಮತ್ತು ದನಗಳ ಸಂಚಾರ ಕಡಿಮೆಯಾದ ಪ್ರಾಂತ್ಯಗಳಲ್ಲಿ ಮತ್ತು ಜಾನುವಾರು ವ್ಯಾಪಾರ ಕಡಿಮೆಯಾದ ಪ್ರಾಂತ್ಯಗಳಲ್ಲಿ ದೊಡ್ಡ ರೋಗದ ಸುಳಿವು ಬಹಳ ಮಟ್ಟಿಗೆ ಕಡಿಮೆಯಾಗಿರುವುದರಿಂದ ಈ 'ಮಾಫಿಯು' ಪೂರ್ತಿ ಕಮ್ಮಿಯಾಗಿರುತ್ತೆ. ಇಂಥ ಸ್ಥಳಗಳಲ್ಲಿ ದನಗಳಿಗೆ ರೋಗವು ತೀವ್ರವಾಗಿ ತಗಲುವುದು. ಕೊಡಗು ದೇಶದ ದನಗಳು ಬೇಗನೆ ಈ ರೋಗಕ್ಕೆ ತುತ್ತಾಗುವುವು ಎಂಬುದು ಅನುಭವದಿಂದ ಕಂಡು ಬಂದಿದೆ.

ನಿವಾರಣಾಕ್ರಮ

ವರ್ಷಂಪ್ರತಿ ಈ ದಾರುಣವಾದ ಜಾಡ್ಯವು ಜಾನುವಾರುಗಳನ್ನು ಬಲಿ ತೆಗೆದುಕೊಂಡು ಬಡ ರೈತನಿಗೆ ಚೇತರಿಸಿಕೊಳ್ಳಲಾರದ ನಷ್ಟವನ್ನುಂಟುಮಾಡುತ್ತಿರುವುದು, ನಮ್ಮ ದಯಾಳು ಸರ್ಕಾರದ ಅವಗಾಹನೆಗೆ ಬರಲು 1909 ರಲ್ಲಿ ಒಬ್ಬ ಡಾಕ್ಟರಿಂದೊಡಗೂಡಿದ ಪಶು ವೈದ್ಯ ಇಲಾಖೆಯನ್ನು ತೆರೆದರು. ಈ ಇಲಾಖೆಯ ಕೆಲಸವು ಜನರ ಪ್ರೀತಿಗೆ ಪಾತ್ರವಾದ್ದನ್ನು ಸರ್ಕಾರವು ಚಿತ್ತಕ್ಕೆ ತಂದು ಇದರ ಆವಶ್ಯಕತೆಯನ್ನು ಗ್ರಹಿಸಿ ಮೂರು ಡಾಕ್ಟರುಗಳೊಡಗೂಡಿದ ಇಲಾಖೆಯನ್ನು ಡೆಪ್ಯುಟಿ ಡೈರೆಕ್ಟರರ ಅಧೀನದಲ್ಲಿ ಇಟ್ಟಿರುತ್ತಾರೆ. ದನಗಳು ದೊಡ್ಡ ರೋಗ ಮತ್ತು ಬೇರೆ ಅಂಟು ರೋಗಗಳಿಂದ ಸತ್ತು, ದೇಶಕ್ಕೆ ಸಂಭವಿಸುವ ನಷ್ಟಗಳನ್ನು ಕಂಡು ಹಿಡಿಯಲಿಕ್ಕೆ ಈಗ ತಕ್ಕ ಮಟ್ಟಿಗೆ ಸಾಧ್ಯವಾಗಿದೆ. ಈ ನಷ್ಟವು ವಿಪರೀತವಾದದ್ದಾಗಿದೆ.

ಸೀರಂ ಒಂದೇ ಡಾಕು ಹಾಕುತ್ತಿದ್ದ ಪದ್ಧತಿ.

ಗತ ವರ್ಷದ ಅಂತ್ಯದ ವರೆಗೆ ಈ ಮಾರಿ ರೋಗಕ್ಕೆ ತಡೆಯಾಗಿ ಸೀರಂ ಒಂದೇ ಡಾಕು ಹಾಕುವ ಪದ್ಧತಿಯನ್ನು ಅನುಸರಿಸಿದ್ದಾಯಿತು. ಇದಕ್ಕೆ ಕೆಲವು ದಿನಗಳು ಮಾತ್ರ ರೋಗ ತಗಲದಂತೆ ತಡೆಯುವ ಶಕ್ತಿ ಇತ್ತಾದ ಕಾರಣ, ದೊಡ್ಡ ರೋಗವು ಒಂದು ಕಡೆ ಹೆಚ್ಚು ದಿನ ಇದ್ದಲ್ಲಿ ಪುನಃ ದನಗಳಿಗೆ ಡಾಕು ಹಾಕುವುದರಲ್ಲಿ ಎಷ್ಟೋ ನಷ್ಟವಾಗುತ್ತಿತ್ತು.

ಹಾಲಿ ವರ್ಷದ ಆದಿಯಿಂದ ಸೀರಂ ಮತ್ತು ನಂಜು ಏಕ ಸಮಯದಲ್ಲಿ ಡಾಕು ಹಾಕುವ ಹೊಸ ಪದ್ಧತಿಯನ್ನು ಕುಶಾಲನಗರದಲ್ಲಿ ಸ್ವತಃ ಪರೀಕ್ಷೆ ಮಾಡಿ ಸಮರ್ಪಕವಾದ ಫಲಿತಾಂಶ ಕಂಡು ಬಂದ ನಂತರ ಜಾರಿಗೆ ತಂದದ್ದಾಗಿದೆ.

ಕುಶಾಲನಗರದಲ್ಲಿ ಸೀರಂ ಮತ್ತು ನಂಜು ಮಿಶ್ರದ ಡಾಕಿನ ಪರೀಕ್ಷಾರ್ಥದ ಫಲಿತಾಂಶ.

ಏಕ ಕಾಲದಲ್ಲಿ ಸೀರಂ ಮತ್ತು ನಂಜು ಡಾಕು ಹಾಕುವ ಪದ್ಧತಿಯನ್ನು 1931 ನೇ ಇಸವಿ ನವಂಬರು ತಾರೀಕು 14 ರಲ್ಲಿ ಪರೀಕ್ಷಾರ್ಥವಾಗಿ ಜಾರಿಗೆ ತಂದದ್ದಾಯಿತು. ಇದಕ್ಕಾಗಿ ನಾಲ್ಕು ಕೋಣಗಳನ್ನೂ, ಮೂರು ಹೋರಿಗಳನ್ನೂ, ಒಂದು ಹಸುವನ್ನೂ ಕೊಳ್ಳಲಾಯಿತು. ಇವುಗಳನ್ನು ಬೇರೆ ಬೇರೆ ನಾಡಿನಿಂದ ಕೊಂಡುಕೊಳ್ಳಲಾಯಿತು, ಮರೆನಾಡಿನಿಂದ ಎರಡು; ನಾಲ್ಕು ನಾಡಿನಿಂದ ಎರಡು; ಮಡಿಕೇರಿನಾಡಿನಿಂದ ಎರಡು ಮತ್ತು ಸುಂಟಿಕೊಪ್ಪನಾಡಿನಿಂದ ಎರಡು. ಏಕ ಸಮಯದಲ್ಲಿ ಸೀರಂ ಮತ್ತು ನಂಜನ್ನು ಡಾಕು ಹಾಕುವದರ ಪರಿಣಾಮವನ್ನು ಬೆಟ್ಟ ಗುಡ್ಡ ದೇಶಗಳ ದನಗಳಲ್ಲಿ ಹೇಗಾಗುವುದೆಂಬುದನ್ನು ಕಂಡು ಹಿಡಿಯಲಿಕ್ಕೆ ಮಾಡಿದ ಪರೀಕ್ಷೆಯಾಗಿದೆ. ಬೆಟ್ಟ ಪ್ರಾಂತ್ಯದ ದನಗಳು ಬಯಲು ಪ್ರಾಂತ್ಯದ ದನಗಳಿಗಿಂತ ಈ ರೋಗಕ್ಕೆ ಹೆಚ್ಚು ತುತ್ತಾಗುವುದೆಂಬುದನ್ನು ಗಣನೆಗೆ ತಂದುಕೊಳ್ಳಬೇಕಾಗಿದೆ. ಬೆಟ್ಟ ಪ್ರಾಂತ್ಯದ ದನಗಳಿಗೆ ಬಯಲು ಪ್ರಾಂತ್ಯದ ದನಗಳಿಗಿಂತ ಹೆಚ್ಚು ಸೀರಂ ಡಾಕು ಹಾಕಲು ಬೇಕಾಗುತ್ತೆ. ದೊಡ್ಡ ರೋಗವು ತಗಲುವಾಗ ಮೈಯೊಳಗಿರುವ ಇತರ ರೋಗಗಳು ಹೊರಬೀಳುವುದು. ಅಂಥಾ ರೋಗಗಳಲ್ಲಿ "ರಕ್ತ ಮೂತ್ರ" ಮತ್ತು ಕಾಕ್ಸಿಡಿಯೋಸಿಸ್" (Pyroplasmosis and Coccidiosis) ಎಂಬೆರಡು ಮುಖ್ಯವಾದುವುಗಳಾಗಿವೆ. ರಕ್ತ ಮೂತ್ರವು (Red water) ರೈತರಿಗೆ ವಾಡಿಕೆಯಾಗಿ ಗೊತ್ತಿದೆ. ಕಾಕ್ಸಿಡಿಯೋಸಿಸ್ ರೋಗವು ಒಂದು ತರದ ಭೇದಿ ರೋಗವಾಗಿದ್ದು ದೊಡ್ಡ ರೋಗವನ್ನೇ ಹೋಲುತ್ತೆ. ಈ ಎರಡು ರೋಗಗಳು ಹೊರ ಬಿದ್ದು ಗಲಾಟೆ ತಂದು ಹಾಕುವವೋ ಎಂಬುದನ್ನು ಪರೀಕ್ಷಿಸಲಿಕ್ಕೆ ಬೇರೆ ಬೇರೆ ನಾಡುಗಳಿಂದ ದನಗಳನ್ನು ತೆಗೆದುಕೊಂಡು ಪರೀಕ್ಷಿಸಿದ್ದಾಗಿದೆ. ಈ ಸಂಬಂಧವಾಗಿ ಕುಶಾಲನಗರದ ಒಳ ಬೆಳ್ಳೂರು ಎಂಬಲ್ಲಿ ಒಂದು ಠಾಣ್ಯ ಮಾಡಲಾಯಿತು.

1931ನೇ ಇಸವಿ ನವಂಬರ್ ತಾ. 14ರಲ್ಲಿ ಹುಜೂರ್ ಚೀಫ್ ಕಮಿಷನರ್ ಸಾಹೇಬರವರ, ಕೊಡಗು ಕಮಿಷನರ್ ಸಾಹೇಬರವರ, ಡೆಪ್ಯುಟಿ ಡೈರೆಕ್ಟರ್ ಸಾಹೇಬರವರ ಮತ್ತು ಕೊಡಗಿನ ಎಲ್ಲಾ ಸಿವಿಲ್ ಡಾಕ್ಟರುಗಳ ಸಮಕ್ಷಮ ಈ ಹೊಸ ಕ್ರಮವನ್ನು ಪ್ರಾರಂಭಿಸಲಾಯಿತು. ಇದಕ್ಕೆ ಬೇಕಾದ ಸೀರಂ ಮತ್ತು ನಂಜನ್ನು ಮೈಸೂರು ದೇಶದ ಸೀರಂ ಇನ್ಸ್ಟಿಟ್ಯೂಟಿನಿಂದ ತರಿಸಿದ್ದಾಯಿತು. ಡಾಕು ಹಾಕಿದ ದನಗಳ ದೇಹ ಸ್ಥಿತಿಯಲ್ಲಿ ಆದ ಬದಲಾವಣೆಗಳನ್ನು ಅತೀ ಜಾಗರೂಕತೆಯಿಂದ ಪರೀಕ್ಷಿಸಿದ್ದಾಯಿತು. ಈ ಎಂಟು ದನಗಳು ಶಾಂತ ರೀತಿಯಿಂದ ಹೆಚ್ಚು ಕಡಿಮೆ ದೊಡ್ಡ ರೋಗ ತಗಲಿದ ಚಿಹ್ನೆಯನ್ನು ತೋರಿಸಿದವು. ಆದರೂ ಇವು ಎಂದಿನಂತೆ ಚೆನ್ನಾಗಿ ತಿಂದು ತಿನ್ನುತ್ತಾ 15 ದಿನಗಳೊಳಗೆ ಪೂರಾ ಹುಷಾರಾಗಿ ಯಥಾಸ್ಥಿತಿಗೆ ಬಂದವು. ಈ ರೀತಿ ಮಾಡಿದ ಪ್ರತಿಬಂಧಕವು ಮರಣಾಂತರ ಹಾಗೂ ಬಹು ಕಾಲದ ವರೆಗೆ ದೊಡ್ಡ ರೋಗವನ್ನು ತಡೆಯುತ್ತದೆ ಎಂದು ಹೇಳಬಹುದು. ಬರೇ ಸೀರಂ ಡಾಕು ಹಾಕುವುದರಲ್ಲಿ ಕೆಲವು ದಿನಗಳ ವರೆಗೆ ಮಾತ್ರ ಈ ರೋಗವನ್ನು ತಡೆಯಬಹುದು. ಆದಕಾರಣ ರೋಗ ತಲೆದೋರಿದ ಹಾಗೆಲ್ಲಾ ಡಾಕು ಹಾಕುವುದು ಹೆಚ್ಚು ಖರ್ಚು ತಗಲುವ ಬಾಬಿನದಾಗಿದೆ.

ನಂಜು ಮತ್ತು ಸೀರಂ ಏಕ ಕಾಲದಲ್ಲಿ ಡಾಕು ಹಾಕುವುದರಿಂದ ದನಗಳು ದೊಡ್ಡ ರೋಗವನ್ನು ಶಾಂತ ರೀತಿಯಲ್ಲಿ ಅನುಭವಿಸುವುದರಿಂದ ಡಾಕು ಹಾಕದ ದನಗಳು ಇವುಗಳ ಸಮೀಪಕ್ಕೆ ಬಾರದಂತೆ ನೋಡಿಕೊಳ್ಳಬೇಕು. ಡಾಕು ಹಾಕಿದ ದನಗಳಿಗೆ ಸುಲಭವಾಗಿ ಸಗಣಿ ಆಗುವುದಕ್ಕೆ ಸಹಾಯ ಮಾಡುವಂಥ ಆಹಾರಗಳನ್ನು ಕೊಡುತ್ತಾ ಬರಬೇಕು. ಹಸಿ ಹುಲ್ಲು, ಸ್ವಲ್ಪ ಉಪ್ಪು ಬೆರಸಿದ ರಾಗಿಯ ಗಂಜಿ ಮತ್ತು ಕುಡಿಯಲಿಕ್ಕೆ ತಿಳಿ ನೀರು ಮುಖ್ಯವಾಗಿ ಕೊಡಬೇಕು. 15 ದಿನಗಳೊಳಗೆ ಯಾವ ಸಂದರ್ಭದಲ್ಲೂ ಕೆಲಸ ಮಾಡಿಸಲೇ ಕೂಡದು.

ಇನ್ನೂ ಮುಂದೆ ಈ ರೋಗವು ತಲೆದೋರಿದ ಸಂದರ್ಭದಲ್ಲಿ ಏಕ ಕಾಲ ಸೀರಂ ಮತ್ತು ನಂಜನ್ನು ಡಾಕು ಹಾಕುವುದನ್ನೇ ಜಾರಿಯಲ್ಲಿಡುವದಾಗಿದೆ. ರೋಗ ಇಲ್ಲದ ಕಾಲದಲ್ಲಿ ಮುಂದೆ ತನ್ನ ದನಗಳಿಗೆ ರೋಗವು ಅಂಟದ ಹಾಗೆ ಮುಂದಾಗಿಯೇ ತಕ್ಕ ಬಂದೋಬಸ್ತು ಮಾಡಬೇಕೆಂದು ಇರಾದೆ ಪಡುವ ಗೋಪಾಲಕರು ತನ್ನ ಅಪೇಕ್ಷೆಯನ್ನು ಡೆಪ್ಯುಟಿ ಡೈರೆಕ್ಟರ್ ಸಾಹೇಬರವರಿಗೆ ತಿಳಿಸಿದರೆ ಅವರು ಅದನ್ನು ನೆರವೇರಿಸಲು ಸಂತೋಷದಿಂದ ತಕ್ಕ ವ್ಯವಸ್ಥೆ ಮಾಡುವರು.

ಮದ್ರಾಸು ಮತ್ತು ಮೈಸೂರು ದೇಶಗಳಲ್ಲಿ ಮೇಲಿನ ಪದ್ಧತಿಯ ಡಾಕನ್ನೇ ಇತ್ತೀಚೆಗೆ ಜಾರಿಗೆ ತಂದದ್ದಾಗಿದೆ. ರಾಸುಗಳಿಗೆ ಈ ರೋಗವು ತಗಲದಂತಾಗುವುದರಿಂದ ಈ ಡಾಕು ಹಾಕಿಸಲು ಹಿಂಜರಿಯ ಬಾರದು. ಅದಕ್ಕೆ ತಗಲುವ ಖರ್ಚಾದರೋ ಬಹು ಕಡಿಮೆ ಎಂದೇ ಹೇಳ ಬಹುದು. ಈ ದೇಶದ ಗಿಡ್ಡ ಜಾತಿ ರಾಸು ಒಂದಕ್ಕೆ ಈ ಡಾಕು ಹಾಕುವ ಖರ್ಚು ಸರಾಸರಿ ರೂ. 2—4—0 ಆಗುವುದು. ಮಿಶ್ರ ಜಾತಿಯ ದನಗಳಿಗೂ ಮತ್ತು ಯೂರೋಪಿನಿಂದ ತಂದ ದನಗಳಿಗೂ ಆ ಖರ್ಚು ಐದು ಪಾಲಿನಿಂದ ಎಂಟು ಪಾಲಿನ ವರೆಗೂ ಹೆಚ್ಚಾಗುವುದು.

ಎಲ್ಲಾ ಮಾಲೀಕರು ಮತ್ತು ರೆವಿನ್ಯು ಹುದ್ದೆದಾರರು ಸಹ ಮನಃಪೂರ್ವಕವಾಗಿ ಜಾನುವಾರುಗಳ ಉದ್ಧಾರ ಬಗ್ಗೆ ಸಹಕರಿಸಿ ದೊಡ್ಡ ರೋಗ ತಲೆದೋರಿದೊಡನೆ ಪಶು ವೈದ್ಯ ಇಲಾಖೆಗೆ ತಿಳಿಸಬೇಕಾಗಿ ಕೋರಲಾಗಿದೆ.

ಸಿ. ಬಿ. ಸೋಮಣ್ಣ,
ಮಡಿಕೇರಿ. (ವೆಟರಿನರಿ ಇನ್ಸ್‌ಪೆಕ್ಟರ್.)

ಕೊಡಗು.

ಸನ್ ೧೯೩೧ನೇ ಇಸವಿ

ಆಗೊಸ್ಟ್ ತಾ. ೭ನೇ ಶುಕ್ರವಾರ.

ಪ್ರೆಸ್ ಆರ್ಡಿನೇನ್ಸ್

ಜಾರಿಯಲ್ಲಿರುವವರೆವಿಗೆ

ನಾವು

ಅಗ್ರಲೇಖನ

ವನ್ನು

ಪ್ರಕಟಿಸುವುದಿಲ್ಲ.

ಸರ್ ಹೋರರವು ಕೆಳಗಿಳಿಯುವರೇ ?

(ರಾಜಕೀಯ ವಿದ್ಯಾರ್ಥಿಯಿಂದ.)

ಇಂಡಿಯಾದ ಮುಂದಿನ ರಾಜಕೀಯ ಗತಿಯನ್ನು ನಿಶ್ಚಯಿಸುವ ಅಧಿಕಾರವು ಬ್ರಿಟಿಷ್ ಸರ್ಕಾರದ ಕೈಯಲ್ಲಿದೆಯಲ್ಲದೆ ಹಿಂದೀಯರಿಗಿಲ್ಲವೆಂದು ಸರ್ ಸ್ಯಾಮುವೆಲ್ ಹೋರ್‌ರವರು ಸ್ಪಷ್ಟವಾಗಿ ಹೇಳಿಬಿಟ್ಟಿರುವರು. 'ಅಂಗೈ ಹುಣ್ಣಿಗೆ ಕನ್ನಡಿಯೇಕೆ' ಎಂಬಂತೆ ಹೋರ್‌ರವರ ವಿಶದವಾದ ಭಾಷಣಕ್ಕೆ ವಿವರಗಳ ಅವಶ್ಯಕತೆಯೇನೂ ಇಲ್ಲ. ಆದರೂ ಕೂಡ ಅವರ ಈ ಹೇಳಿಕೆಯನ್ನು ಹಿಂದೂದೇಶದ ಮಧ್ಯಪಕ್ಷ ಮುಂದಾಳುಗಳು ತಪ್ಪರ್ಥ ಮಾಡಿಕೊಂಡಿರುವರೆಂದು ಹೋರ್‌ರವರೇ ಎರಡು ಭಾಷಣಗಳನ್ನು ಮಾಡಿ ತಮ್ಮ ಅರ್ಥವನ್ನು ವಿವರಿಸಿದರು. ಅದರಿಂದ ಸಪ್ರು-ಜಯಕರಂಥ ಮುಖಂಡರು ಮಾಡಿದ್ದ ಅರ್ಥವು ಎಷ್ಟರ ಮಟ್ಟಿಗೆ ಸರಿಯಾದದ್ದೆಂದು ಗೊತ್ತಾಯಿತು. ಅದರ ಮೇಲೂ, ಒಮ್ಮೆ ಹಿಂದೂದೇಶದ ಹಿತಚಿಂತಕ ವೈಸರಾಯರೆನ್ನಿಸಿಕೊಂಡಿದ್ದ ಲಾರ್ಡ್ ಇರ್ವಿನ್‌ರವರೂ, ಸರ್ ಮಾಲ್ಕಂ ಹೈಲಿಯವರಂಥ ಪ್ರಾಂತೀಕ ಗವರ್ನರುಗಳೂ, ಮಿ. ಗೇವಿನ್ ಜೋನ್ಸ್‌ರವರಂಥ ಸರ್ಕಾರದ ಆಂಗ್ಲೋ-ಇಂಡಿಯನ್ ಸ್ನೇಹಿತರೂ ಹೋರ್‌ರವರ ಹೇಳಿಕೆಯನ್ನು ವಿವರಿಸಿ, ಲಿಬರಲ್ ಮುಂದಾಳುಗಳಿಗೆ ಅರ್ಥಬಿಡಿಸಿ ಹೇಳಿಕೊಡುವ ಜವಾಬ್ದಾರಿಯ ಕೆಲಸವನ್ನು ವಹಿಸಿಕೊಂಡಂತೆ ತೋರುತ್ತದೆ. ಯಾರು ಹೇಗೆ ವಿವರಿಸಿದರೂ ವಿಷಯವು ಅಸ್ಪಷ್ಟವಾಗಲಾರದಷ್ಟೆ. ಸರ್ಕಾರದೊಂದಿಗೆ ಸಹಕರಿಸುವುದಿಲ್ಲವೆಂದು ನಿಶ್ಚಯಿಸಿರುವ ಮಧ್ಯಪಕ್ಷದ ಧುರೀಣರು ಈ ಹೊಸ ಜವಾಬ್ದಾರಿಯನ್ನು ವಹಿಸಿಕೊಂಡಿರುವವರಿಗಿಂತ ಹೆಚ್ಚಲ್ಲದಿದ್ದರೂ ಅವರಷ್ಟೇ ತಿಳಿದಂಥ ರಾಜಕೀಯ ಪಟುಗಳು ಎಂಬುದನ್ನು ಈ ಮಹನೀಯರು ಸ್ಮರಿಸಿಕೊಂಡರೆ ಅವರು ಈ ಅನಾವಶ್ಯಕದ ಕೆಲಸದಲ್ಲಿ ಸಮಯವನ್ನು ಕಳೆಯಲಿಕ್ಕಿಲ್ಲ.

ಈ ಮಹನೀಯರುಗಳ ಪ್ರಯತ್ನಗಳು ನಿಷ್ಪ್ರಯೋಜನವಾದವೆಂಬುದಕ್ಕೆ ದಿನೇ ದಿನೇ ಹೆಚ್ಚು ಹೆಚ್ಚು ನಿದರ್ಶನಗಳು ದೊರೆಯುತ್ತಿವೆ. ಮಿತವಾದ ಪಕ್ಷದವರು ಸರ್ಕಾರದೊಂದಿಗೆ ಅಸಹಕಾರವನ್ನು ನಿಶ್ಚಯಿಸಿ ಸುಮ್ಮನೆ ಕುಳಿತಿರುವುದಿಲ್ಲ. ದೇಶದವರ ಅತೃಪ್ತಿಯನ್ನೂ, ಅಸಮಾಧಾನವನ್ನೂ ಬಹಿರಂಗಪಡಿಸಲು ಸಾರ್ವಜನಿಕ ಸಭೆಗಳನ್ನು ನಡೆಸುತ್ತಿರುವರು. ಈಗಾಗಲೇ ಡೆಲ್ಲಿ, ಲಾಹೋರ್, ಬೆನಾರೀಸ್, ಕರಾಚಿ, ಅಲಹಾಬಾದು ಮುಂತಾದ ಪ್ರಾಮುಖ್ಯ ಪಟ್ಟಣಗಳಲ್ಲಿ ಪಬ್ಲಿಕ್ ಮೀಟಿಂಗುಗಳು ಸೇರಿಸಲ್ಪಟ್ಟವು. ಇವು ವಿರೋಧಪಕ್ಷದವರಾದ ಕಾಂಗ್ರೆಸಿನವರಿಂದ ಏರ್ಪಡಿಸಲ್ಪಟ್ಟವಲ್ಲ. ತಮ್ಮ ಸಹೋದರ ಸಹೋದರಿಯರು ದೇಶದ ಸ್ವಾತಂತ್ರ್ಯಕ್ಕಾಗಿ ಹಲವು ತರದ ಕಷ್ಟನಷ್ಟಗಳನ್ನು ಅನುಭವಿಸುತ್ತಾ, ಸಾವಿರ ಗಟ್ಟಲೆಯಲ್ಲಿ ಕಾರಾಗೃಹಗಳಲ್ಲಿ ಕೊಳೆಯುತ್ತಿದ್ದರೂ ಕೂಡ ಇಷ್ಟರ ವರೆಗೆ ಬ್ರಿಟಿಷರ ಮಾತುಗಳಲ್ಲಿ ವಿಶ್ವಾಸವಿಟ್ಟು, ಅವರೊಂದಿಗೆ ಸಹಕರಿಸುತ್ತಿದ್ದ ಲಿಬರಲ್, ಇಂಡಿಪೆಂಡೆಂಟ್ ಮೊದಲಾದ ಪಕ್ಷದವರೇ ಈ ಮಹಾಸಭೆಗಳನ್ನು ಕೂಡಿಸಿದ್ದಾಗಿದೆ. ಈ ಕೂಟಗಳಲ್ಲಿ ಬ್ರಿಟಿಷ್ ಮಂತ್ರಿಗಳ ಮತ್ತು ವೈಸರಾಯರುಗಳ ಭಾಷೆಯ ಟೊಳ್ಳು ಸ್ವಭಾವವನ್ನು ಹೊರಗೆಡಹಿ, ಸರ್ ಹೋರ್‌ರವರ ನವೀನ ರೀತಿಯನ್ನು ಖಂಡಿಸಿ, ಈಗ ಪುನಹ ಜಾರಿಗೆ ತಂದಿರುವ 'ಆರ್ಡಿನೇನ್ಸಿ'ನ ದಬ್ಬಾಳಿಕೆಯನ್ನು ಸಂಪೂರ್ಣ ವಿರೋಧಿಸಿ ಠರಾವುಗಳನ್ನು ಪಾಸುಮಾಡಿದರು. ಇದರಿಂದ, ತಾವು ಹೇಳಿದ್ದು ಮಾಡಿದ್ದಕ್ಕೆಲ್ಲಾ ಹಿಂದೀಯರು ಒಪ್ಪಿಕೊಳ್ಳಬೇಕೆಂಬ ಬ್ರಿಟಿಷರ ತತ್ವದಿಂದ ಎಲ್ಲಾ ಪಂಗಡಗಳ ಹಿಂದೀಯರ ಮನಸ್ಸಿನಲ್ಲಿ ಅತೃಪ್ತಿಯು ಎಷ್ಟರ ಮಟ್ಟಿಗೆ ಆಳವಾಗಿ ನಾಟಿದೆಯೆಂಬುದು ಗೊತ್ತಾಗುತ್ತದೆ. ಸಂಪೂರ್ಣ ಅಸಮಾಧಾನಗೊಂಡ ಜನಾಂಗವನ್ನು ಎಷ್ಟು ಕಠಿಣ ತರಹದ ದಬ್ಬಾಳಿಕೆಯಿಂದಾದರೂ ಆಳಲು ಸಾಧ್ಯವಿಲ್ಲವೆಂಬುದನ್ನು ಬ್ರಿಟಿಷರು ಮರೆತಿರುವರೇ ?

ಬಹು ರಾಜಭಕ್ತರಾಗಿದ್ದುಕೊಂಡು ಎಲ್ಲಾ ಸಮಯಗಳಲ್ಲೂ ಸರ್ಕಾರದೊಂದಿಗೆ ಸಹಕರಿಸುತ್ತಿದ್ದ ಹಿಂದೀಯರು ಅತೃಪ್ತಿಗೊಳ್ಳದೆ ತಾನೇ ಹೇಗೆ ಇರುವರು ? ಕಾಂಗ್ರೆಸ್ಸಿನವರ ಶಾಸನ ಭಂಗ ಚಳವಳಿಯನ್ನು ಆರ್ಡಿನೇನ್ಸುಗಳ ಸಹಾಯದಿಂದ ಸಂಪೂರ್ಣ ನಿಲ್ಲಿಸಿಬಿಟ್ಟು ಕಾಂಗ್ರೆಸನ್ನು ಭೂಮಿಯೊಳಗೆ ಹೂಳಿಬಿಟ್ಟಿದ್ದೇವೆಯೆಂದು ಸರ್ ಹೋರ್‌ರವರು ಪಾರ್ಲಿಮೆಂಟಿನಲ್ಲಿ ಬಡಾಯಿ ಕೊಚ್ಚಿಕೊಂಡರೂ ಕೂಡ ಆರು ತಿಂಗಳ ಮೇಲೆ ಮತ್ತೆ ಪುನಹ ಆರ್ಡಿನೇನ್ಸು ಆಡಳಿತವನ್ನು ಕೈಕೊಂಡಿರುವರು! ಕಾಂಗ್ರೆಸು ಹೂಳಲ್ಪಟ್ಟಿದ್ದರೆ ಮತ್ತೆ ಪುನಹ ಆರ್ಡಿನೇನ್ಸಿನ ಆವಶ್ಯಕತೆ ಏನು ? ಆರ್ಡಿನೇನ್ಸುಗಳಿಂದ ಬಾಧಕ ಯಾರಿಗೆಂದು ವಿಚಾರಿಸಿದರೆ, ಕಾಂಗ್ರೆಸಿನವರಿಗಲ್ಲವೆಂದು ಗೊತ್ತಾಗುವುದು. ಕಾಂಗ್ರೆಸಿನವರು ಸರ್ಕಾರದವರ ಸಾಧಾರಣವಾದ ಶಾಸನಗಳನ್ನು ಮುರಿದು ಜೈಲಿಗೆ ಹೋಗಲು ತಯಾರಿರುವರು. ಆದಕಾರಣ ಅವರನ್ನು ಆರ್ಡಿನೇನ್ಸಿಲ್ಲದೇನೇ ಬಂಧೀಖಾನೆಯಲ್ಲಿ ಸೇರಿಸಬಹುದು. ಆದರೆ ಕಾಂಗ್ರೆಸ್ಸಿಗೆ ಸೇರದೆ ಇರುವ ಮಹನೀಯರಿಗೇ ಆರ್ಡಿನೇನ್ಸಿನ ಪೆಟ್ಟು ತಗಲುವದಾಗಿದೆ. ತಮ್ಮ ದೇಶಕ್ಕೆ ಸ್ವಾತಂತ್ರ್ಯಬೇಕೆಂದು ಆಶಿಸದೆ ಇರುವ ಹಿಂದೀಯರು ಯಾರೂ ಇರಲಿಕ್ಕಿಲ್ಲ; ಆದ ಮೇಲೆ ಅಂಥಾ ಸ್ವಾತಂತ್ರ್ಯಕ್ಕಾಗಿ ತಮ್ಮ ಸರ್ವಸ್ವವನ್ನೂ ಕಳಕೊಂಡು ಜೀವದ ಆಶೆಯನ್ನು ಬಿಟ್ಟು ಜೈಲಿನ ವಾಸವನ್ನು ಅನುಭವಿಸುವವರ ಮೇಲೆ ಕಾಂಗ್ರೆಸ್ಸಿನ ಹೋರಾಟದ ವಿಧಾನವನ್ನು ಒಪ್ಪದವರಿಗೂ ಕೂಡ ಕನಿಕರವು ಹುಟ್ಟದಿರುವುದು ತಾನೇ ಹೇಗೆ? ಮನುಷ್ಯ ಸ್ವಭಾವವನ್ನು ವಿರೋಧಿಸಲು ಸಾಧ್ಯವೇ ? ಹೀಗಿರುವುದರಿಂದ ಆರ್ಡಿನೇನ್ಸ್ ಆಡಳಿತವು ಕಾಂಗ್ರೆಸ್ಸಿಗೆ ಸೇರದೆಯೂ, ಶಾಸನಗಳನ್ನು ಮುರಿದು ಅದರಿಂದುಂಟಾಗುವ ಕಷ್ಟಗಳನ್ನು ಅನುಭವಿಸಲು ತಯಾರಾಗದೆಯೂ ಇರುವಂಥವರನ್ನೇ ಹೆಚ್ಚಾಗಿ ಬಾಧಿಸುವುದು. ಇದರಿಂದ ಮನಸಿಲ್ಲದವರನ್ನೂ ಕೂಡ ಕಾಂಗ್ರೆಸ್ಸಿಗೆ ಸೇರಲು ಬಲತ್ಕರಿಸಿದಂತಾಗುವುದು. ಉದಾಹರಣೆಗಾಗಿ ಹೇಳುವದಾದರೆ—ಸತ್ಯಾಗ್ರಹ ಮಾಡುವವರಿಗೆ ಶಾಸನ ಮೀರಿ ನಡೆದುದಕ್ಕೆ ಸಜೆಯನ್ನೂ, ಜುಲ್ಮಾನೆಯನ್ನೂ ವಿಧಿಸುವುದು ನ್ಯಾಯವೆ; ಮತ್ತು ಅವನು ಜುಲ್ಮಾನೆಯನ್ನು ಕೊಡದೆ ಹೋದರೆ ಅದರ ಬದಲು ಹೆಚ್ಚಿನ ಸಜೆಯನ್ನು ಅನುಭವಿಸಬೇಕಾದುದೂ ಸರಿಯೆ. ಆದರೆ ಈಗಿನ ದಬ್ಬಾಳಿಕೆಯಲ್ಲಿ ತಪ್ಪಿತಸ್ಥನು ಜುಲ್ಮಾನೆ ಕೊಡದೆ ಹೋದರೆ ಅವನ ಆಸ್ತಿಯನ್ನು ಜಪ್ತಿ, ಹರಾಜು ಮಾಡುವ ಹೊಸ ರೀತಿಯನ್ನು ಕೈಕೊಂಡಿರುವರು. ಅಷ್ಟರಲ್ಲಿಯೂ ತೃಪ್ತರಾಗದೆ, ಅವನಿಗೆ ಆಸ್ತಿ ಇಲ್ಲದೆ ಹೋದರೆ ಅವನ ಕುಟುಂಬಸ್ಥರ ಆಸ್ತಿಯನ್ನು ಹರಾಜು ಮಾಡುತ್ತಿರುವರು. ಇದರ ಫಲಿತಾಂಶವೇನೆಂದು ನೋಡಿದರೆ, ತಪ್ಪಿತಸ್ಥನಿಗೆ ಶಿಕ್ಷೆ ಕೊಡುವುದರ ಬದಲು ಅವನ ಕುಟುಂಬಸ್ಥರಿಗೆ ಶಿಕ್ಷೆ ಕೊಟ್ಟಂತಾಯಿತು; ಮತ್ತು ಸರ್ಕಾರದ ಇಂಥಾ ಅನ್ಯಾಯದ ವರ್ತನೆಯನ್ನು ಹಾಗೆ ತಪ್ಪು ಮಾಡದೆಯೂ ಶಿಕ್ಷಿಸಲ್ಪಟ್ಟವರು, ಸಹಿಸಲಾರದೆ ಕಾಂಗ್ರೆಸಿನವರೊಂದಿಗೆ ಸೇರುವರು. ಇಂಥಾ ಉದಾಹರಣೆಗಳು ಹಲವು ಇವೆ. ಆದುದರಿಂದ ಆರ್ಡಿನೇನ್ಸ್ ರಾಜ್ಯಭಾರವು ಕಾಂಗ್ರೆಸನ್ನು ಅಡಗಿಸುವುದರ ಬದಲು ಕಾಂಗ್ರೆಸ್ಸಿಗೆ ಸೇರದವರಿಗೆ ಹೆಚ್ಚಿನ ತೊಂದರೆಯನ್ನುಂಟುಮಾಡಿ, ಕಾಂಗ್ರೆಸ್ಸಿನ ಬಲವನ್ನು ಹೆಚ್ಚಿಸುತ್ತಿದೆ ಎಂಬುವುದರಲ್ಲಿ ಸಂಶಯವಿಲ್ಲ. ಜನರಲ್ಲಿ ಆರ್ಡಿನೇನ್ಸಿನ ದಬ್ಬಾಳಿಕೆಯಿಂದಲೂ, ಸರ್ ಹೋರರವರ ಹೊಸ ರೀತಿಯಿಂದಲೂ ಉಂಟಾಗಿರುವ ಅಗಾಧವಾದ ಅತೃಪ್ತಿಯ ಕೂಗಿಗೆ ಸರ್ಕಾರದವರು ಈಗ ಕಿವಿಗೊಡದೆ ಹೋದರೆ ಹಿಂದಕ್ಕೆ ತಮ್ಮನ್ನು ತಾವೇ ದೂರಿಕೊಳ್ಳಬೇಕಾಗಿ ಬರುವುದು.

ಇಂಗ್ಲೆಂಡಿನಲ್ಲಿಯೂ ಕೂಡ ಟೋರಿ ಪಕ್ಷ ಒಂದನ್ನು ಬಿಟ್ಟು ಬಾಕಿ ಎಲ್ಲಾ ರಾಜಕೀಯ ಪಂಗಡಗಳವರಲ್ಲಿ ಇದೇ ತರಹದ ಅಭಿಪ್ರಾಯವು ಕಂಡು ಬರುತ್ತದೆ. ಈಗಿನ ದಬ್ಬಾಳಿಕೆಯ ಆಡಳಿತವನ್ನು ಎಡನೆ ನಿಲ್ಲಿಸಿ, ಮಹಾತ್ಮ ಗಾಂಧಿಯವರನ್ನು ಬಿಡುಗಡೆ ಮಾಡಿ, ಅವರ ಮೂಲಕ ಕಾಂಗ್ರೆಸಿನೊಂದಿಗೆ ರಾಜಿ ಒಪ್ಪಂದಕ್ಕೆ ಬಂದು, ಕಾಂಗ್ರೆಸಿನ ಸಹಕಾರದೊಂದಿಗೆ ದುಂಡು ಮೇಜು ಪರಿಷತ್ತನ್ನು ಮುಂದರಿಸುವುದೇ ಉತ್ತಮ ದಾರಿಯೆಂದು ಮಿ. ಸಿ. ಎಫ್. ಆಂಡ್ರ್ಯೂಸ್‌ರವರು, ಪಾರ್ಲಿಮೆಂಟಿನ ಮೆಂಬರುಗಳಾದ ಮಿ. ಲ್ಯಾನ್ಸ್‌ಬರಿ, ಮಿ. ಮಾರ್ಗನ್ ಜೋನ್ಸ್ ಮುಂತಾದವರು ಭಾಷಣಗಳಲ್ಲಿಯೂ, ಪತ್ರಿಕೆಗಳ ಮೂಲಕವೂ ತಮ್ಮ ಅಭಿಪ್ರಾಯಗಳನ್ನು ಸೂಚಿಸುತ್ತಾರೆ. ಹಿಂದೀಯ ಮತ್ತು ಇಂಗ್ಲೀಯ ಮಹನೀಯರಿಂದ ಕೂಡಿದ 'ಇಂಡಿಯಾದ ಸ್ನೇಹಿತರ' ಸಂಘವು ಮೇಲಿನ ಅಭಿಪ್ರಾಯವನ್ನು ಜನಸಮುದಾಯದಲ್ಲಿ ಪ್ರಚಾರಗೊಳಿಸಲು ಇಂಗ್ಲೆಂಡಿನ ಗ್ರಾಮಾಂತರಗಳಲ್ಲಿ ಮೀಟಿಂಗು ಮಾಡುತ್ತಾ ಸುತ್ತುತ್ತಿದ್ದಾರೆ. ಸರ್ಕಾರದವರು ಕಾಂಗ್ರೆಸಿನವರೊಂದಿಗೆ ರಾಜಿ ಮಾಡಬೇಕೆಂಬ ಅಭಿಪ್ರಾಯವು ಇಂಡಿಯಾಕ್ಕಿಂತ ಇಂಗ್ಲೆಂಡಿನಲ್ಲಿ ಹೆಚ್ಚಾಗಿರುವಂತೆ ಕಂಡು ಬರುತ್ತದೆ. ಆದರೂ ಕೂಡ ಸರ್ ಹೋರ್‌ರವರು ಕಣ್ಣು ಮುಚ್ಚಿಕೊಂಡು ತಾನು ಹಿಡಿದ ಮೊಲಕ್ಕೆ ಮೂರೇ ಕಾಲು ಎಂಬಂತೆ ತನ್ನ ಹೊಸ ರೀತಿಯೇ ಸರಿಯಾದದ್ದೆಂದು ಘೋಷಿಸುತ್ತಿರುವರಲ್ಲವೇ ?

ಕಾಂಗ್ರೆಸಿನವರನ್ನು ಬಿಟ್ಟಂತೆ ಇಂಡಿಯಾದ ಲಿಬರಲ್ ಪಕ್ಷದವರನ್ನೂ ಬಿಟ್ಟುಬಿಟ್ಟರೆ ತಮ್ಮ ಮುಂದಿನ ಕಾರ್ಯವು ಸಾಗಲಾರದೆಂದು ಅರಿತ ಕೆಲವು ಬ್ರಿಟಿಷರು ಹೇಗಾದರೂ ಮಾಡಿ ಮಧ್ಯಪಕ್ಷದ ಮುಂದಾಳುಗಳ ಸಹಕಾರವನ್ನು ಪಡೆಯಲು ಹೊಸ ಸೂಚನೆಗಳನ್ನು ಮಾಡುತ್ತಿದ್ದಾರೆ. ಇಂಡಿಯಾದ ರಚನೆಯನ್ನು ಕುರಿತು, ಕೆಲವು ಪ್ರಾಮುಖ್ಯ ಹಿಂದೀಯರನ್ನು ಕರೆಯಿಸಿ ಇಂಗ್ಲೆಂಡಿನಲ್ಲಿ ಗುಂಪು ಗುಂಪಾಗಿ ಚರ್ಚೆ ನಡೆಸಿದರೆ ಆಗಬಹುದೆಂತಲೂ, 'ಕನ್‌ಸಲ್ಟೇಟಿವ್' ಕಮಿಟಿಯನ್ನು ವಜವಂತ 'ಫೆಡರಲ್ ಸ್ಟ್ರಕ್ಚರ್' ಕಮಿಟಿಯನ್ನೇ ಮುಂದರಿಸಿದರೆ ಎಲ್ಲವೂ ಸರಿಯಾಗುವುದೆಂದೂ, 'ಜಾಯಿಂಟ್ ಪಾರ್ಲಿಮೆಂಟರಿ ಕಮಿಟಿ'ಯ ಬದಲು 'ಜಾಯಿಂಟ್ ಕಮಿಟಿ' ಮಾಡಿ ಅದಕ್ಕೆ ಕೆಲವು ಪ್ರಾಮುಖ್ಯ ಹಿಂದೀಯರನ್ನು ನೇಮಿಸಿದರೆ ಜನರಿಗೆ ತೃಪ್ತಿಯಾಗಬಹುದೆಂದೂ ಸೂಚನೆಗಳು ಹೊರಬಿದ್ದಿವೆ. ಕಾಂಗ್ರೆಸ್ಸಿನ ಸಹಕಾರವನ್ನು ಪಡೆಯದೆ ಹೋದರೆ ಈ ಯಾವ ಸೂಚನೆಗಳನ್ನು ಜಾರಿಗೆ ತಂದರೂ ಪ್ರಯೋಜನವಾಗಲಿಕ್ಕಿಲ್ಲವೆಂಬುದರಲ್ಲಿ ಸಂದೇಹವಿಲ್ಲ. ಲಿಬರಲ್ ಪಕ್ಷದವರು ಈ ಗಾಳಗಳ ಪೈಕಿ ಯಾವದಕ್ಕೆ ಸಿಕ್ಕಿ ಬೀಳುವರೋ ಎಂದು ಹೇಳಲು ಈಗ ಸಾಧ್ಯವಿಲ್ಲ. ಆದರೆ ಅವರು ಈಗ ತೆರೆದಿರುವ ಕಣ್ಣನ್ನು ಮುಚ್ಚಲಿಕ್ಕಿಲ್ಲವಾಗಿ ಆಶಿಸಬಹುದಲ್ಲವೇ ? ಪ್ರಥಮದಲ್ಲಿ ಸರ್ ಹೋರ್‌ರವರು ಮೇಲಿನ ಸೂಚನೆಗಳಿಗೆ ಒಪ್ಪುವರೋ ಎಂದು ನೋಡಬೇಕಾಗಿದೆ. ಇವುಗಳಿಗೆ ಒಪ್ಪುವದೆಂದರೆ ತಮ್ಮ ನವೀನ ರೀತಿಯನ್ನು ಬದಲಾಯಿಸಿದಂತಾಗುವುದು. ಸರ್ ಹೋರ್‌ರವರು ತಮ್ಮ ಉಚ್ಚ ಪದವಿಯಿಂದ ಇಷ್ಟರ ಮಟ್ಟಿಗೆ ಕೆಳಗಿಳಿಯುವರೋ ಎಂಬುದು ಸಂಶಯಾಸ್ಪದವಾಗಿದೆ.

Reg. No. M. 1550.
If not delivered please return to
"KODAGU" OFFICE MERCARA

ಕೊಡಗು.

ಸತ್ಯೇನ ಧೂಪದಯುಯಾ ವಿದ್ಯಾ ಶೀಲ ಕೋಯತ್ನತಾಃ / ಐಕ್ಯಮತ್ಯೇನ ಜೀಪಾಹಾಂ ಸುಸ್ಥಿರಾ ರಾಜ್ಯ ಸಂಪದಾ

ವಾರ್ಷಿಕ ಚಂದಾ ರೂ. ೩—೮—೦.

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೨ | ಮಡಿಕೇರಿ, ಸನ್ ೧೯೩೨ನೇ ಇಸವಿ ಆಗೊಸ್ತು ತಾರೀಕು ೫ ನೇ ಶುಕ್ರವಾರ. | ಸಂಚಿಕೆ ೧೦

SARI-PIN·

BRACELETS·

NECKCHAINS·

EAR-RINGS·
(Thodus)
Cut-rubys Rs. 25 to 50
With diamond in centre Rs. 60 to 120

Gold Rs. 10
Set rubys forming any letter Rs. 12

NOSE-RINGS·
Diamond in small size of best quality Rs. 35
& upwards according to size·

MARRIAGE PRESENTATIONS

Attractive and inexpensive articles ready in stock. Prompt execution. Details on enquiry free with catalogue. Numerous customers in Coorg thoroughly satisfied with reliable service. Testimonials pouring in. Silver Guindys, Photo lockets, Dimond nose-screws, cut-ruby ear-rings, etc., etc., etc., in all prices Very attractive Prices most moderate.

Estimates free on enquiry

Designs free on enquiry·

Telegrams: 'PRECIOUS.'

Telephone: 3145·

V. Subramaniaier Jeweller,

CATALOGUE ON ENQUIRY.

52—37

Post Box 423, Triplicane, P. O., MADRAS.

26—6

ಜನರಲ್ ಅಷ್ಯೂರೆನ್ಸ್ ಸೊಸೈಟಿ.

ಅ ಜ ಮೀ ರ್.

ನಮ್ಮ ಆಯವ್ಯಯದ ಪಟ್ಟಿಯೇ ನಮ್ಮ ಅಭಿವೃದ್ಧಿಯನ್ನು ವ್ಯಕ್ತಗೊಳಿಸುತ್ತದೆ.

ವರ್ಷ	ಮೇಲ್ಪಟ್ಟ ವರ್ಷಾದಾಯ	ಮೇಲ್ಪಟ್ಟ ಮೂಲಧನ	ಖರ್ಚಿನ ಪ್ರಮಾಣದ ಶೇಕಡ
1911	46,248	49,442	82.9
1921	2,92,627	6,53,350	43 2
1931	12,50,000	40,00 000	28.2

ಬೋ ನ ಸ್ಸ್.

ಹುರ್ಜು ನಫೆ ದೊರಕುವ ಜೀವಾವಧಿ ಪಾಲಿಸಿಗಳ ಮೇಲೆ ವರ್ಷ ಒಂದಕ್ಕೆ ಶೇಕಡ 22½

ಚೆನ್ನಾಗಿ ಕೆಲಸಮಾಡಿ ಅಭಿವೃದ್ಧಿ ಸ್ಥಿತಿಯಲ್ಲಿರುವ ಈ ಸೊಸೈಟಿಯಲ್ಲಿ ವಿಮೆ ಮಾಡಿ ಕಡಿಮೆ ಪ್ರೀಮಿಯಂ ಪಾವತಿ ಮಾಡುವ ಸೌಲಭ್ಯ ಹೊಂದಿ ಅಥವಾ ಈ ಕಂಪೆನಿಯ ಪರವಾಗಿ ಕೆಲಸಮಾಡಿ ಉತ್ತಮ ಕಮಿಶನ್ ದರದ ಪ್ರಯೋಜನ ಹೊಂದಿ.

ಹೆಚ್ಚು ವಿಚಾರಗಳಿಗೆ ಈ ವಿಳಾಸಕ್ಕೆ ಬರೆಯಿರಿ:—

ಎ. ರಾಮಚಂದ್ರರಾವ್,
ಸುಪರಿಂಟೆಂಡೆಂಟ್,
ಮಿಂಟೋ ಆಸ್ಪತ್ರೆ ಬಳಿ,
ಬೆಂಗಳೂರು.

52—15

ಎಂಪೈರ್ ಆಫ್ ಇಂಡಿಯಾ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

(ಸ್ಥಾಪನೆಯಾದದ್ದು 1897.)

ಹಿಂದೂಸ್ಥಾನದಲ್ಲಿ ಪ್ರಾಮುಖ್ಯವೂ, ಜನಪ್ರಿಯವೂ ಆಗಿರುವ ಈ ಕಂಪೆನಿಯಲ್ಲಿ ನೀವು ಜೀವ ವಿಮೆ ಮಾಡುವುದಕ್ಕೆ ಇದೇ ತಕ್ಕ ಸಮಯ.

ಬೋನಸ್ ವರ್ಷ! ಬೋನಸ್ ವರ್ಷ!!

ಸಾಹಸವಂತರಾದ ಏಜೆಂಟರು ಬೇಕಾಗಿದೆ.

ಹೆಡ್ ಆಫೀಸು:—
ಎಂಪೈರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್,
ಬೊಂಬಾಯಿ.

ಬ್ರಾಂಚ್ ಆಫೀಸು:—
152—3 ಕಮರ್ಷಲ್ ಸ್ಟ್ರೀಟ್,
ಬೆಂಗಳೂರು.

52—43

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್ ಕೊ ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.
(ಸ್ಥಾಪಿತವಾದದ್ದು 1922ರಲ್ಲಿ)

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	27,350
ಜಮಾಬಂದ ಠೇವಣಾತಿ	—	2,25,172
ವಸೂಲಾದ ಕ್ಷೇಮನಿಧಿ	—	37,914

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿ ಮಾಡುತ್ತಾರೆ.

ಪ್ರೆಸಿಡೆಂಟರು, ಪಟ್ಟಮಾಡ ದೇವಯ್ಯನವರು, ರಾವ್ ಬಹದ್ದೂರ್.
ಟ್ರೆಜರರ್, ಮನೆಯಪ್ಪಂಡ ಬೆಳ್ಯಪ್ಪನವರು.

ಸೆಕ್ರೆಟರಿ
ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ, ಬಿ.ಎಲ್.
ತಾರೀಖು 1—7—1932.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟಾದವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜೆಂಟರುಗಳು,
ಉತ್ತರ ಕೊಡಗಿಗೆ ಮೆ| ಚಾರಿರ ಮಾದಯ್ಯನವರು,

ಸಬ್ ಏಜೆಂಟರುಗಳು.
ವೀರರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು, (ಖಾದಿಭಂಡಾರ.)
ನಾಪೋಕ್ಲು—ಎಮ್. ಆರ್. ವೆಂಕಪ್ಪಯ್ಯನವರು.
ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಯ್ಯನವರು, ಮತ್ತು ಅರಮಣಮಾಡ ಪಿ ಕಾರ್ಯಪ್ಪನವರು,
ಹುದಿಕೇರಿ & ತಿತಿಮತ್ತಿ—ಮೆ. ಜಿ. ಮಾದಯ್ಯನವರು,
ಸುಂಟಿಕೊಪ್ಪ—ಮೆ. ಅಪ್ಪಚಟ್ಟೋಳಂಡ ಮಾಚಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನ್ನಿಯೂ ಇರಬೇಕಾದ ಅಮಿತ ಜವಾಬ್ದಾರಿ ಪದ್ಧತಿ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಿಸಲು ಅವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಖರಾರು ಫಾರಮುಗಳೂ, ಟಪ್ಪಾ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಖರಾರು ಫಾರಮುಗಳೂ, ಸ್ಟೋರ್ ಕೀಪರ್ ಖರಾರು ಫಾರಮುಗಳೂ, ಜನರಲ್ ಪುಸ್ತಕಗಳೂ; ರಶೀತಿ ಪುಸ್ತಕಗಳೂ, ಜಮಾ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಬುದ್ದು ಖರೀದಿಗೆ ಬೇಕಾದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.
ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.
ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.
ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,78,322 ಜನರಿಗೆ 38ಕೋಟಿ ರೂ.
ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ಕ್ಕಿಂತ ಮೀರದ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದಾಗಿದೆ.
ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.
ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಉತ್ಸಾಹವನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬುದು ಅದರ ಹಿಂದಿನ ದಾಖಲೆಗಳಿಂದಲೂ, ಮುಂಗಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು,

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ಮೊಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೋ	ಪಾಟ್ನಾ	ಸುಕ್ಕೂರು
ಅಲ್ಲಾಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಡೌಲಗಾನ್	ಮಂಡಲೆ	ರಾಯಿಪುರ	ತಿರುವೆಂಡ್ರಮ್
ಭೋಪಾಲ್	ಕರಾಚಿ	ಮಂಗಳೂರು	ರಾಂಚಿ	ವಿಶಾಖಪಟ್ಣ [52—22

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
52—29 **ಗಿರಿಗಾಂವ, ಮುಂಬಯಿ.**

ಕಾಗದ ಬರೆದರೆ ಈಗಿನ ಕ್ಯಾಟಲಾಗು ಮಫತಿಯಾಗಿ ಕಳುಹಿಸಲ್ಪಡುವುದು.



ಕೋವಿಗಳು, ಕತ್ತಿಗಳು, ಬಚೆಗಳು, ತೋಟಿಗಳು, ಛತ್ರಿಗಳು, ಮದ್ದು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS LTD.,
Largest Importers of Firearms and Ammunition
Cheapest priced firm in India,
24—21 **210 Abdul Rehiman Street, BOMBAY.**

Printed & published by P. I. Belliappa at "Kodagu" Press, Mercara for "Kodagu" Ltd.

ಕೆಂದಿದ್ದಾರೆಂದು ಇದರಿಂದ ಗೊತ್ತಾಗುತ್ತದೆ. ಈ ಪ್ರಾಂತ್ಯವು ಪ್ರತ್ಯೇಕ ಸರ್ಕಾರವುಳ್ಳದ್ದಾಗಿದ್ದುಕೊಂಡು, ಅದರ ವ್ಯಕ್ತಿತ್ವವನ್ನು ಉಳಿಸಿಕೊಳ್ಳುವದನ್ನು ನೋಡಲು ಅವರಿಗೆ ಇಷ್ಟವಿಲ್ಲ. ಕೊಡಗಿನ ನಿವಾಸಿಗಳಿಗೆ ಅಭಿವೃದ್ಧಿ, ತೃಪ್ತಿ ಮತ್ತು ಸುಖವಿರಬೇಕಾದರೆ ಕೊಡಗು ಪ್ರತ್ಯೇಕವಾಗಿದ್ದುಕೊಂಡು, ಅದರ ವ್ಯಕ್ತಿತ್ವವನ್ನು ಇಟ್ಟುಕೊಳ್ಳಬೇಕು. ದೊಡ್ಡ ಪ್ರಾಂತ್ಯಗಳನ್ನು ಸಣ್ಣ ಸಣ್ಣವುಗಳಾಗಿ ವಿಂಗಡಿಸಬೇಕೆಂಬ ಅಭಿಪ್ರಾಯವು ಇಂಡಿಯಾದಲ್ಲೆಲ್ಲಾ ಇದೆ. ಮುಖ್ಯವಾಗಿ ದಕ್ಷಿಣದಲ್ಲಿ, ತೆಲುಗು, ತಮಿಳು, ಮಲೆಯಾಳ ಮತ್ತು ಕನ್ನಡ ಭಾಷೆಗಳನ್ನಾಡುವವರು ಮದ್ರಾಸು ಪ್ರಾಂತ್ಯದಿಂದ ವಿಂಗಡವಾಗಿ ಪ್ರತ್ಯೇಕ ಪ್ರತ್ಯೇಕ ಪ್ರಾಂತ್ಯಗಳಾಗಿ ಏರ್ಪಡಿಸಿಕೊಳ್ಳಬೇಕೆಂದು ಚಳವಳ ನಡಿಸುತ್ತಿದ್ದಾರೆ. ತಮ್ಮ ಪ್ರಾಂತ್ಯವನ್ನು ಪ್ರತ್ಯೇಕಿಸಿಕೊಂಡು ಆಡಳಿತ ಕ್ರಮವನ್ನು ಉತ್ತಮ ಸ್ಥಿತಿಗೆ ತರಬೇಕೆಂಬುದೇ ಈ ಚಳವಳದ ಉದ್ದೇಶ. ಸಣ್ಣ ಪ್ರಾಂತ್ಯದಲ್ಲಿ ಆಡಳಿತವನ್ನು ಉತ್ತಮ ಸ್ಥಿತಿಗೆ ತರಲು ಅನುಕೂಲವಿರುವುದಲ್ಲದೆ, ಅದನ್ನು ಸುಲಭವಾಗಿಯೂ ನಡಿಸಬಹುದು; ಮತ್ತು ಅಲ್ಲಿಯ ನಿವಾಸಿಗಳಿಗೆ ತಮ್ಮ ಪ್ರಾಂತ್ಯದ ಆಡಳಿತದಲ್ಲಿ ಭಾಗವಹಿಸಲು ಅಂದರೆ ಸರ್ಕಾರದ ವರ್ತನೆಯನ್ನು ನೋಡುತ್ತಾ ಇದ್ದು, ಅದು ತಮ್ಮ ಹಿತವನ್ನೇ ಸಾಧಿಸುವಂತೆ ನೋಡಲು ಹೆಚ್ಚಿನ ಅನುಕೂಲವಿದೆ. ವಿಶಾಲವಾದ ಪ್ರದೇಶವು ಒಂದೇ ಆಡಳಿತದಲ್ಲಿ ಇರುವದರಿಂದ ಅಲ್ಲಿಯ ರಾಜ್ಯಭಾರ ಕ್ರಮವು ಚೆನ್ನಾಗಿರುವುದಿಲ್ಲ ಮತ್ತು ಮೇಲುಸ್ತುವಾರಿಯು ಬಹಳ ಕಡಿಮೆಯಾಗುತ್ತದೆಂಬುವುದಕ್ಕೆ ಮದ್ರಾಸು ಮತ್ತು ಮೈಸೂರು ಪ್ರಾಂತ್ಯಗಳ ಗ್ರಾಮನಿವಾಸಿಗಳ ಬಡತನವೂ, ತಿಳಿಗೇಡಿತನವೂ ಸಾಕ್ಷಿಯಾಗಿದೆ. ಪ್ರಜಾ ಜವಾಬ್ದಾರಿ ಸರ್ಕಾರಬೇಕೆಂಬುದೇ ಇಡೀ ಹಿಂದೂದೇಶದ ಈಗಿನ ಹೋರಾಟವಾಗಿದೆ. ಇದರಿಂದ ಮುಂದಿನ ಸರ್ಕಾರ ಪದ್ಧತಿಯು ಹೆಚ್ಚಿನ ಖರ್ಚಿನದಾಗುವದೆಂದು ಊಹಿಸಲಾಗದು. ಪ್ರಜಾತಂತ್ರ ಯಾ ಸ್ವರಾಜ್ಯ ಸರ್ಕಾರ ಬರುವಾಗ್ಯೆ ಅದರ ಜವಾಬ್ದಾರಿಯು ಹೆಚ್ಚಾಗುವ ಕಾರಣ ಅದರ ಖರ್ಚು ಹೆಚ್ಚಾಗುವದೆಂದೂ, ಕೊಡಗಿನ ಚಿಕ್ಕ ಉತ್ಪತ್ತಿಯಿಂದ ಅಂಥಾ ಪ್ರತ್ಯೇಕ ಪ್ರಾಂತೀಕ ಸರ್ಕಾರವನ್ನು ನಡಿಸಲು ಸಾಧ್ಯವಾಗುವುದಿಲ್ಲವೆಂದೂ ಹೇಳುವುದರಲ್ಲಿ ನ್ಯಾಯವಿಲ್ಲ. ಯಾವ ಸರ್ಕಾರವೇ ಆಗಲೀ ಪ್ರಜೆಗಳ ಸೇವೆಮಾಡಲಿಕ್ಕಿರುವುದಲ್ಲದೆ, ಅವರನ್ನು ದಿವಾಳಿ ಎಬ್ಬಿಸಲಿಕ್ಕಲ್ಲ. ಉತ್ಪತ್ತಿಯನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಿಲ್ಲದಿದ್ದರೆ ಸರ್ಕಾರವು ತನ್ನ ಖರ್ಚನ್ನು ಕಡಿಮೆ ಮಾಡಿಕೊಳ್ಳಬೇಕಾಗುತ್ತದೆ. ಉದ್ಯೋಗಸ್ಥರ ದೊಡ್ಡ ಸಂಬಳಕ್ಕೆ ಸಾಕಷ್ಟು ಹಣವಿಲ್ಲವೆಂಬ ಕಾರಣದಿಂದ ಜನರಿಗೆ ಪ್ರಜಾತಂತ್ರ ಸರ್ಕಾರ ಕೊಡಲಿಕ್ಕಾಗುವುದಿಲ್ಲವೆಂಬುದರಲ್ಲಿ ಅರ್ಥವಿಲ್ಲ. ಹಿಂದೂ ದೇಶದಲ್ಲಿ ಈಗಿರುವ ಸರ್ಕಾರ ಪದ್ಧತಿಯಷ್ಟು ದುಂದುಗಾರಿಕೆಯ ಪದ್ಧತಿಯು ಪ್ರಪಂಚದ ಬೇರೆ ಎಲ್ಲೂ ಇಲ್ಲ. ಜಪಾನ್, ಜರ್ಮನಿ, ಅಮೇರಿಕಾ ಮುಂತಾದ ಪ್ರಾಮುಖ್ಯ ದೇಶಗಳಲ್ಲಿ ಮಂತ್ರಿಗಳೇ ಮೊದಲಾದ ಉದ್ಯೋಗಸ್ಥರಿಗೆ ಹಿಂದೂದೇಶದ ಉದ್ಯೋಗಸ್ಥರಿಗೆ ದೊರೆಯುವ ಸಂಬಳದ ನಾಲ್ಕರಲ್ಲಿ ಒಂದು ಭಾಗವೂ ಸಹ ದೊರೆಯುವುದಿಲ್ಲ. ಇವರ ಉದಾಹರಣೆಯನ್ನು ನಾವು ಹಿಂಬಾಲಿಸಬಾರದೇಕೆ? ಹಿಂದೂದೇಶದ ಪ್ರಜಾತಂತ್ರ ಸರ್ಕಾರದಲ್ಲಿ ಉದ್ಯೋಗಸ್ಥರಿಗೆ 500 ರೂಪಾಯಿಗಿಂತ ಹೆಚ್ಚಿನ ಸಂಬಳವಿರಕೂಡದೆಂದು ಕಾಂಗ್ರೆಸ್ಸಿನವರೂ ಅಭಿಪ್ರಾಯಪಟ್ಟಿರುವರು. ಆದುದರಿಂದ ಮುಂದಿನ ಸರ್ಕಾರದ ಖರ್ಚು ಅರ್ಧಕರ್ಧ ಇಳಿಯುವುದೆಂಬುದರಲ್ಲಿ ಸಂಶಯವಿಲ್ಲ. ಆಗ್ಯೆ ಕೊಡಗಿನ ಉತ್ಪತ್ತಿಯ ಅಭಾವವು ಪ್ರಜಾಜವಾಬ್ದಾರಿ ಸರ್ಕಾರಕ್ಕೆ ಅಡಚಣೆಯಾಗಿ ನಿಲ್ಲಲಾರದು.

ಕೊಡಗಿನ ಈಗಿನ ಸ್ಥಿತಿಯಲ್ಲಿ ಮೂರು ಕೊರತೆಗಳಿವೆ. 1. ವಿಶ್ವವಿದ್ಯಾಲಯ ವಿದ್ಯಾಭ್ಯಾಸದ ಅನಾನುಕೂಲತೆ 2. ಗಜೆಟೆಡ್ ಉದ್ಯೋಗಸ್ಥರ ವರ್ಗಾವರ್ಗಿಯ ಸಮಸ್ಯೆ. 3. ಅಪ್ಪೀಲಿಗೆ ಹೈಕೋರ್ಟು ಇಲ್ಲದಿರುವಿಕೆ. ಮದ್ರಾಸು ಸರ್ಕಾರದೊಂದಿಗೆ ತಕ್ಕ ಏರ್ಪಾಡುಗಳನ್ನು ಮಾಡಿಕೊಂಡು ಈ ಕೊರತೆಗಳನ್ನು ಸುಲಭವಾಗಿ ಹೋಗಲಾಡಿಸಿಕೊಳ್ಳಬಹುದು. ಮದ್ರಾಸು ಯುನಿವರ್ಸಿಟಿಗೆ ಮತ್ತು ಕಾಲೇಜುಗಳಿಗೆ ವಂತಿಗೆ ಕೊಟ್ಟು ಉಚ್ಚ ವಿದ್ಯಾಭ್ಯಾಸದ ಅನಾನುಕೂಲತೆಯನ್ನು ನಿವಾರಿಸಿಕೊಳ್ಳಬಹುದು. 2 ನೇದು—ಮದ್ರಾಸು ಸರ್ಕಾರದ ಗಜೆಟೆಡ್ ಉದ್ಯೋಗಸ್ಥರ ಸಂಖ್ಯೆಯನ್ನು ನಮಗೆ ಬೇಕಾಗುವಷ್ಟು ಉದ್ಯೋಗಸ್ಥರ ಸಂಖ್ಯೆಯಿಂದ ಹೆಚ್ಚಿಸಿಕೊಂಡು ನಂತರ ಮದ್ರಾಸು ಮತ್ತು ಕೊಡಗಿನ ಗಜೆಟೆಡ್ ಉದ್ಯೋಗಸ್ಥರನ್ನು ಅತ್ತಿತ್ತ ವರ್ಗಾಯಿಸುವಂತೆಯೂ ಏರ್ಪಾಡು ಮಾಡಿಕೊಳ್ಳಬಹುದು. 3 ನೇದು—ರಿಟಯರ್ಡ್ ಜಡ್ಜಿಗಳನ್ನಾಗಲೀ, ರಿಟಯರ್ಡ್ ಲಾಯರುಗಳನ್ನಾಗಲೀ ವರ್ಷದಲ್ಲಿ ಅವಶ್ಯವಿರುವಷ್ಟು ತಿಂಗಳು ಮಾತ್ರ ಕೆಲಸ ಮಾಡುವಂತೆ ಹೈಕೋರ್ಟು ಜಡ್ಜಿಗಳಾಗಿ ನೇಮಿಸಿಕೊಳ್ಳಬಹುದು.

ದೊಡ್ಡ ಪ್ರಾಂತ್ಯದೊಂದಿಗೆ ಸೇರಿಕೊಂಡರೆ ಕಾರ್ಯಕ್ಷೇತ್ರವು ವಿಶಾಲವಾಗುವುದೇನೋ ನಿಜ. ವಿದ್ಯಾವಂತರಾದ ಯುವಕರಿಗೆ ಕೆಲವು ಹೆಚ್ಚಿನ ಸರ್ಕಾರಿ ಉದ್ಯೋಗವನ್ನು ಪಡೆಯಲು ಮಾತ್ರವಲ್ಲದೆ ಈ ವಿಶಾಲತೆಯಿಂದ ಪ್ರಯೋಜನವೇನು? ಪ್ರತಿಯೊಂದು ಜನಾಂಗದ ಮುಖ್ಯ ಉದ್ದೇಶವು ತನ್ನ ವ್ಯಾಪಾರ, ಕೃಷಿ ಮತ್ತು ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವದಾಗಿರಬೇಕಲ್ಲದೆ ಸರ್ಕಾರದಲ್ಲಿ ಗುಮಾಸ್ತರು ಮತ್ತು ಜವಾನರಾಗಿ ಕೆಲಸ ಮಾಡುವದಾಗಿರಬಾರದು. ಕೊಡಗು ಶೇಕಡ 99ರಷ್ಟು ವ್ಯವಸಾಯದ ಪ್ರಾಂತ್ಯವಾಗಿದೆ ಮತ್ತು ಅದರ ಹುಟ್ಟುವಳಿಯ ಮೂಲಗಳು ಮುಟ್ಟಲ್ಪಟ್ಟಿರುವುದಿಲ್ಲ. ಎಲ್ಲೆಲ್ಲೂ ಜನರ ಬಡತನವು ದಿನೇ ದಿನೇ ಹೆಚ್ಚುತ್ತಾ ಬರುತ್ತಿದೆ. ಈ ಸ್ಥಿತಿಯಲ್ಲಿ ಮದ್ರಾಸಿಗಾಗಲೀ, ಮೈಸೂರಿಗಾಗಲೀ ಸೇರಿಸಲ್ಪಟ್ಟರೆ ಅಲ್ಲಿಯ ದರದಂತೆ ನಮ್ಮ ಕಂದಾಯವೂ ಹೆಚ್ಚಿಸಲ್ಪಟ್ಟು ನಮ್ಮ ರೈತರ ಪಾಡು ಮತ್ತಷ್ಟು ಹೀನ ಸ್ಥಿತಿಯನ್ನು ಹೊಂದುವದು.

ಬಡತನವು ರೈತರನ್ನು ಪೀಡಿಸುತ್ತಿರುವಾಗ್ಯೆ ತಮ್ಮ ಮಕ್ಕಳನ್ನು ಮೈಸೂರಿಗಾಗಲೀ, ಮದ್ರಾಸಿಗಾಗಲೀ ಉಚ್ಚ ವಿದ್ಯಾಭ್ಯಾಸಕ್ಕಾಗಿ ಕಳುಹಿಸಲು ಯಾರು ಆಲೋಚಿಸುವರು? ನಾವು ಮುಖ್ಯವಾಗಿ ನೋಡಬೇಕಾದದ್ದು ಬಹು ಸಂಖ್ಯಾಕರಾದ ರೈತರ ತೃಪ್ತಿ ಮತ್ತು ಶಾಂತತೆಯನ್ನು. ದೊಡ್ಡ ಪ್ರಾಂತ್ಯದಲ್ಲಿ ದೊರೆಯಬಹುದಾದ ಕೆಲವು ಸರ್ಕಾರಿ ಉದ್ಯೋಗಗಳಿಗಾಗಿಯೂ, ಕೆಲವರಿಗೆ ಉಚ್ಚ ವಿದ್ಯಾಭ್ಯಾಸದ ಅನುಕೂಲತೆಗಾಗಿಯೂ ನಾವು ಶೇಕಡ 99ರಷ್ಟಾಗಿರುವ ರೈತರ ಹಿತವನ್ನು ಬಿಟ್ಟುಕೊಡಬಾರದು.

ಶ್ರೀಮತಿ ನಾಕಮ್ಮನವರು ಹೇಳುವುದೇನೆಂದರೆ—"ಕೊಡಗನ್ನು ಮದ್ರಾಸಿಗೆ ಸೇರಿಸಿದರೆ ಕೊಡಗಿಗೆ ವಿಶೇಷ ರಿಯಾಯಿತಿಗಳು ದೊರಕದೆ ಹೋಗುವ ಭಯವಿದೆ. ಮೈಸೂರು ಸರ್ಕಾರದವರಾದರೋ ಕೊಡಗಿಗೆ ವಿಶೇಷ ನಿಗವಿಡುತ್ತಾರೆಂಬುವುದರಲ್ಲಿ ಸಂಶಯವಿಲ್ಲ.... .... ಕೊಡಗು ಮದ್ರಾಸಿಗೆ ಸೇರಿಕೊಂಡರೆ ಪ್ರಜಾ ತಂತ್ರ ಸರ್ಕಾರ ಕ್ರಮದ ಪ್ರಯೋಜನವು ಕೊಡಗಿಗೆ ಶೀಘ್ರದಲ್ಲೇ ದೊರಕಲಾರದು. ('ಹಿಂದೂ' ಪತ್ರಿಕೆಯಲ್ಲಿ ಹೀಗೆ ಇದೆ) ಆದರೆ ಮೈಸೂರಿನ ಆಡಳಿತವೂ ಸಹ ಶೀಘ್ರದಲ್ಲೇ ಜನಪ್ರಿಯ (ಪಾಪ್ಯುಲರ್) ವಾಗುವುದೆಂದು ನಾನು ನಂಬುತ್ತೇನೆ" ಈ ಹೇಳಿಕೆಯು ಗಲಿಬಿಲಿಯನ್ನುಂಟುಮಾಡುವಂಥಾದ್ದಾಗಿದೆ ಮತ್ತು ನನಗೆ ಅವರ ವಾದದ ಅರ್ಥವೇ ಗೊತ್ತಾಗುವುದಿಲ್ಲ. ಮದ್ರಾಸಿಗೆ ಸೇರುವುದರಿಂದ ಕೊಡಗಿಗೆ ವಿಶೇಷ ರಿಯಾಯಿತಿ ದೊರಕುವುದಿಲ್ಲವಾದರೆ ಮೈಸೂರಿಗೆ ಸೇರಿದರೆ ದೊರಕುವದೆಂಬ ಭರವಸೆ ಏನು? ಹೀಗೆ ವಿಶೇಷ ರಿಯಾಯಿತಿಗಳು ಸಿಕ್ಕುವುದಿಲ್ಲವೆಂತಾದರೆ ನಾವು ದುಃಖಸಾಗರದಲ್ಲಿ ಬೀಳುವುದೇತಕ್ಕೆ? ಯಾಕೆಂದರೆ—ಮದ್ರಾಸು ಮತ್ತು ಮೈಸೂರು ಪ್ರಾಂತ್ಯಗಳ ಕಾರುಬಾರುಗಳು ಸಾಕಷ್ಟು ಹಾಳಾಗಿವೆ. ಅವನ್ನು ನಮ್ಮ ಸುಂದರವಾದ ಬೆಟ್ಟಗಳ ಮೇಲಿಂದ ನೋಡಿದರೆ ಗೊತ್ತಾಗುವುದಿಲ್ಲ. ಅವಿದ್ಯೆ ಮತ್ತು ಬಡತನವು ಕೆಳ ತರಗತಿಯ ಜನರನ್ನು ಅಪ್ಪಿಕೊಂಡಿದೆ. ಒಳ್ಳೆಯ ಜನಪ್ರಿಯವಾದ ಸರ್ಕಾರವಿದ್ದರೆ ಅದರಿಂದ ಮೇಲು ತರಗತಿಯ ಮತ್ತು ಮಧ್ಯತರಗತಿಯ ಜನರಿಗೆ ಮಾತ್ರ ಪ್ರಯೋಜನವಾಗುತ್ತದೆ. ಆದರೆ ಕೆಳ ತರಗತಿಯವರನ್ನು ಯಾರೂ ಗಮನಿಸುವುದಿಲ್ಲ. ಒಳ್ಳೇ ಯಾ ಜನಪ್ರಿಯವಾದ ಸರ್ಕಾರವು ಪ್ರಜಾ ಜವಾಬ್ದಾರಿ ಸರ್ಕಾರಕ್ಕೆ ಸಮಾನ ಆಗಲಾರದು; ಮತ್ತು ಮೈಸೂರಿನ ಸರ್ಕಾರವು ಒಬ್ಬನ ಅಧೀನವಾಗಿದೆಯಲ್ಲವೇ? ನನಗೆ ತಿಳಿದ ಮಟ್ಟಿಗೆ ಹಿಂದೂ ದೇಶದಲ್ಲಿ ಬ್ರಿಟಿಷ್ ದೊಡ್ಡ ಪ್ರಾಂತ್ಯಗಳ ಆಡಳಿತದಷ್ಟು ಚೆನ್ನಾಗಿರುವ ಸಂಸ್ಥಾನ ಆಡಳಿತವು ಯಾವುದೂ ಇಲ್ಲ. ಮೈಸೂರು ಕೌನ್ಸಿಲು ನಮ್ಮ ಕೌನ್ಸಿಲಿನಷ್ಟೇ ಅಧಿಕಾರವಿಲ್ಲದ್ದಾಗಿದೆ. ಮೈಸೂರಿನಲ್ಲಿ ಪಟ್ಟಣಗಳಿಂದ ದೂರವಾಗಿರುವ ಗ್ರಾಮಗಳಲ್ಲಿಯ ಜನರಿಗೆ ತಮ್ಮನ್ನು ಆಳುವುದು ಯಾರೆಂದು ಗೊತ್ತೇ ಇಲ್ಲ. "ಯಾರೋ ದೇವರು ತಮ್ಮನ್ನು ಆಳುತ್ತಾರೆಂದು ಅವರು ಹೇಳುತ್ತಾರೆ" ಈ ಮಾತು ಮಹಾತ್ಮ ಗಾಂಧಿಯವರ ಪ್ರಪಂಚ ಪ್ರಸಿದ್ಧ ಭಾಷಣದಲ್ಲಿರುವದಾಗಿದೆ. ಇವೇ ಸಂಸ್ಥಾನದಲ್ಲಿಯ ಜನಪ್ರಿಯವಾದ ಆಡಳಿತೆಯ ಸೊಗಸುಗಳು!

ಈ ಮೇಲೆ ಸೂಚಿಸಿದ ಮತ್ತು ಸ್ಥಳ ಸಂಕೋಚದಿಂದ ಸೂಚಿಸದೆ ಬಾಕಿ ಮಾಡಿರುವ ಕಾರಣಗಳಿಂದ, ಈ ಪ್ರಾಂತ್ಯದ ಬೆನ್ನೆಲುಬಿನಂತಿರುವ ಕೃಷಿಗಾರರ ಹಿತದ ದೃಷ್ಟಿಯಿಂದ ಕೊಡಗನ್ನು ಮದ್ರಾಸಿಗಾಗಲೀ, ಮೈಸೂರಿಗಾಗಲೀ ಸೇರಿಸಬಾರದೆಂದು ನನ್ನ ಅಭಿಪ್ರಾಯವಾಗಿದೆ. ಉಚ್ಚ ವಿದ್ಯಾಭ್ಯಾಸವೇ ದೇಶದ ಏಳಿಗೆಯನ್ನು ಸಾಧಿಸಲಾರದು. ಪ್ರಥಮದಲ್ಲಿ ರೈತನ ಸ್ಥಿತಿಯನ್ನು ಅಭಿವೃದ್ಧಿಗೊಳಿಸಬೇಕು. ಅದರೊಂದಿಗೆ ದೇಶದ ವ್ಯಾಪಾರವನ್ನು ಹೆಚ್ಚಿಸಿ, ಕೈಗಾರಿಕೆಗಳನ್ನು ಏರ್ಪಡಿಸಬೇಕು. ಉತ್ಪತ್ತಿಯ ಮೂಲಗಳನ್ನೆಲ್ಲಾ ತಟ್ಟಿ ನೋಡಬೇಕು. ಆಗ್ಯೆ, ಪ್ರಜಾತಂತ್ರ ಯಾ ಸ್ವರಾಜ್ಯ ಸರ್ಕಾರದಲ್ಲಿ ಪ್ರತ್ಯೇಕ ಪ್ರಾಂತ್ಯವಾಗಿ ಆಡಳಿತ ನಡಿಸುವ ಕೊಡಗಿನ ಸುದಿನವನ್ನು ನಾವು ನೋಡಲಾರೆವೇ?

ಮದ್ರಾಸು ಯಾ ಮೈಸೂರು ಆಮಲ್ಲ ಪೋಷಣೆಯಿಂದ ಕೊಡಗಿನ ಜನರ ಕಲ್ಯಾಣವಾಗಲಾರದು; ಅದರಿಂದ ಜನರ ಸ್ಥಿತಿಯು ಮತ್ತಷ್ಟು ಹಾಳಾಗಬಹುದು. ಈಗ ಇರುವಂಥ ಕೆಲವು ಪುಟ್ಟ ಕೊರತೆಗಳನ್ನು ಹೋಗಲಾಡಿಸುವ ಉದ್ದಿಶ್ಯದಿಂದ ಇಡೀ ದೇಶವೇ ದುಃಖಸಾಗರದಲ್ಲಿ ಮುಳುಗಿಸಲ್ಪಡದೆ ಇರಲಿ. ಕೊಡಗು ಮದ್ರಾಸಿಗಾಗಲೀ, ಮೈಸೂರಿಗಾಗಲೀ ಸೇರಿಕೊಳ್ಳುವದರಿಂದ ವಿಶೇಷ ರಿಯಾಯಿತಿಯೇನೂ ಪಡೆಯಲಾರದು ಮತ್ತು ಉತ್ತಮ ತರದ ಆಡಳಿತ ಕ್ರಮವನ್ನೂ ಅರಿಸಲಾರದು. ಇಂದಿಲ್ಲದಿದ್ದರೆ ನಾಳೆ ಹಿಂದೂದೇಶಕ್ಕೆ ಸ್ವರಾಜ್ಯ ಸಿಕ್ಕಿಯೇ ಸಿಕ್ಕುತ್ತದೆ. ಆಗ್ಯೆ ಕೊಡಗು ಪ್ರತ್ಯೇಕ ಇರುವದರಿಂದ ಅದಕ್ಕೆ ಪ್ರಜಾತಂತ್ರ ಸರ್ಕಾರ ದೊರೆಯಲಿಕ್ಕಿಲ್ಲವೆಂಬ ಸಂಶಯ ಯಾರಿಗೂ ಉಂಟಾಗಲಾರದು. ಆಗ್ಯೆ ಕೊಡಗು ಮದ್ರಾಸಿನೊಂದಾಗಲೀ, ಮೈಸೂರಿನೊಂದಾಗಲೀ ಸೇರಿಕೊಳ್ಳಲಿಲ್ಲವೆಂಬ ಕಾರಣದಿಂದ ಇಂಡಿಯಾದ ಮಧ್ಯದಿಂದ ಹೊರಗೆ ತಳ್ಳಿ ಹಾಕಲ್ಪಡುವುದೋ? ಖಂಡಿತ ಇಲ್ಲ.

ತಾ. 25-7-32 ಬಿದ್ದಂಡ ಕರುಂಬಯ್ಯ.

ಶೃಂಗಾರವಾದ ಪುಸ್ತಕ! ಬೇಗನೆ ಬರೆಯಿರಿ

ರತಿಮನ್ಮಥರಹಸ್ಯ ಎಂಬ ಮರ್ಮಶಾಸ್ತ್ರ.

ಕ್ರಯ ರೂ. ೧—೦—೦.

ಕನ್ನಡ ಭಾಷೆಯಲ್ಲಿ ಅಂದವಾಗಿ ಪ್ರಿಂಟಾಗಿದೆ. ಇದರಲ್ಲಿ ಸ್ತ್ರೀ ಪುರುಷರ ಪ್ರೀತಿಯ ರಹಸ್ಯಗಳು, ಪ್ಯಾರಿಸ್ ವೇಶ್ಯ ಸ್ತ್ರೀಯರ ಪ್ರೀತಿಯ ಮರ್ಮಗಳು, ಮಲೆಯಾಳ, ಜಪಾನ್, ಫ್ರೆಂಚ್ ದೇಶದ ವೇಶ್ಯ ಸ್ತ್ರೀಯರ ಮಲಗುವ ಫೋಟಗಳು, ಇನ್ನೂ ಸ್ತ್ರೀಪುರುಷರ ಅನೇಕ ರಹಸ್ಯಗಳು 22 ಬ್ಲೇಡುಗಳ ಫೋಟೋ ಸಹಿತ ಕೂಡಿದೆ. ಈ ಶೃಂಗಾರವಾದ ಪುಸ್ತಕವನ್ನು ಓದಲು ಆನಂದವಾಗಿರುವುದು. 22 ಫೋಟೋಗಳ ಸಹಿತ ಪ್ಯಾರಿಸ್ ದೇಶದ ವ್ಯಭಿಚಾರಿಗಳ ವಿನೋದಗಳು, ಕನ್ಯೆಗಳ ಪ್ರೀತಿ, ಶಯ್ಯಾಗೃಹದ ರಹಸ್ಯಗಳು ಅಡಗಿರುತ್ತೆ—ಕ್ರಯ ಪುಸ್ತಕ ರೂ. ೧—೦—೦.

ವಿಳಾಸ:— ಟಿ. ವಿ. ದೇವಕರ್ ಅಂಡ್ ಕೋ,
73. ಅಣ್ಣಾಪಿಳ್ಳೆ ಬೀದಿ, ಜಿ. ಟಿ. ಮದರಾಸು



20—5

Empire of India Life Assurance Company, Ltd.

Established 1897.

The New "FAMILY SECURITY" Policy issued by this Company provides.

A. In the event of death during an agreed period,

1. The immediate payment to the Widow, Son or legal representative of a part of the sum Assured together with the Bonus accrued.

2. The payment of a guaranteed Yearly Income, payable by monthly instalments, during the balance of the period.

3. The payment of the balance of the sum of assured at the end of the period.

OR

B. In the event of death after the period has expired the payment of the sum assured together with any Bonus that has accrued

Descriptive Pamphlet on application to—

Head Office:—
EMPIRE OF INDIA LIFE BUILDING,
Bombay.

Branch Office:—
152, COMMERCIAL STREET,
Bangalore.

52—43

ಆರುನೂರು ವರ್ಷಗಳ ಹಿಂದಿನ ಗಾಂಧಿ.

ಹಿಂದೂ ಮುಸಲ್ಮಾನರಲ್ಲಿ ಐಕಮತ್ಯ.

ಈಗ ಮಹಾತ್ಮ ಗಾಂಧಿಯವರು ಹೇಗೆ ಅತ್ಯಂತ ಶಕ್ತಿಯಿಂದ ಪ್ರಪಂಚದ ಕ್ಷೇಮಕ್ಕಾಗಿ ವಿಶೇಷತಃ ಹಿಂದೂಸ್ಥಾನದ ಕಲ್ಯಾಣಕ್ಕಾಗಿ ಪ್ರಯತ್ನಿಸುತ್ತಿದ್ದಾರೆಯೋ ಹಾಗೆಯೇ 14ನೆಯ ಶತಮಾನದಲ್ಲಿ ಕಬೀರನೆಂಬ ಮಹಾ ಸಾಧು ಪುರುಷನು ಪಂಜಾಬು ಪ್ರಾಂತ್ಯದ ಜನರಲ್ಲಿ ಪರಸ್ಪರ ಪ್ರೇಮಾದರಗಳುಂಟಾಗುವುದಕ್ಕೋಸ್ಕರ ವಿಶೇಷವಾಗಿ ಪ್ರಯತ್ನಿಸಿದನು.

ಈಗ ಗಾಂಧಿಜೀಯವರು ಹಿಂದುಮುಸಲ್ಮಾನರ ಐಕಮತ್ಯಕ್ಕೂ, ಉಭಯ ಧರ್ಮದಲ್ಲಿ ಪರಸ್ಪರ ಪ್ರೇಮಾದರಗಳುಂಟಾಗುವುದಕ್ಕೂ ವಿಶ್ವ ಪ್ರಯತ್ನವನ್ನು ಮಾಡುತ್ತಾ ಇಲ್ಲವೇ? ಈ ಮಹತ್ತ್ವ ಕಾರ್ಯಕ್ಕಾಗಿಯೇ ೨೧ ದಿನಗಳ ಉಪವಾಸ ವ್ರತವನ್ನು ಕೂಡಾ ಆಚರಿಸಲಿಲ್ಲವೇ? ಇಷ್ಟೆಲ್ಲಾ ಮಾಡಿದರೂ ಅನೇಕ ಹಿಂದೂ ಮುಸಲ್ಮಾನರು ಕ್ರೂರ ಪಶುಗಳಂತೆ ಬಿಚ್ಚಿ ರಸ್ತೆಗಳ ಬೊಂಬಾಯಿಯಲ್ಲಿ ಕೊಲ್ಲುತ್ತಿರುವುದು ಮನುಷ್ಯ ಜಾತಿಗೇನೇ ಕಳಂಕವನ್ನುಂಟುಮಾಡತಕ್ಕದ್ದಲ್ಲವೇ?

ಈಗ ಹಿಂದೂ ಮುಸಲ್ಮಾನರ ಐಕಮತ್ಯವು ಗಾಂಧಿಜೀಯವರಿಗೆ ಎಷ್ಟು ಅಗತ್ಯವಾಗಿ ತೋರುತ್ತಿದೆಯೋ ಇದಕ್ಕಿಂತಲೂ ಆಗಲೇ ಕಬೀರದಾಸರಿಗೆ ಹೆಚ್ಚು ಅವಶ್ಯಕವಾಗಿ ತೋರಿತ್ತು. ಕಬೀರದಾಸರು ಕ್ರಿ. ಶ. ೧೪೬೬ರಲ್ಲಿ ಜನ್ಮವೆತ್ತಿರಬಹುದೆಂದು ಪಂಡಿತರು ಊಹಿಸಿದ್ದಾರೆ. ಆಗ ಡಿಲ್ಲಿಯಲ್ಲಿ ಸಿಕಂದರ್ ಲೋಡಿ ಎಂಬ ರಾಜನು ರಾಜ್ಯವಾಳುತ್ತಿದ್ದನು. ಈತನು ಕಬೀರದಾಸರನ್ನು ಕೊಲ್ಲಿಸಬೇಕೆಂದು ಪ್ರಯತ್ನಿಸಿದನು.

ಹಿಂದು ಕಹತ ಹೈ ರಾಮ, ಹಮಾರಾ ಮುಸಲ್ಮಾನ್ ರಹಿಮಾನಾ! ಆಪಸಮೇ ದೋಉ ಲಡೆ ಮರತಹೈ ದುವಿಧಾಮೆ ಲಪಟಾನಾ!

ಎಂದು ಕಬೀರದಾಸರು ಐದು ನೂರು ವರುಷಗಳ ಹಿಂದೆ ಹೇಳಿದುದನ್ನು ಜನರು ಕೇಳಿ ಆಚರಿಸಿದ್ದರೆ ಈಗ ಈ ದುರವಸ್ಥೆ ಬರುತ್ತಿದ್ದಿಲ್ಲ. ಈಗ ಗಾಂಧಿಜೀಯವರು ಹೇಳುತ್ತಿರುವಂತೆ ಆಚರಿಸಿದರೆ ಮುಂದೆ ಬರುವ ವಿಪತ್ತುಗಳುಂಟಾಗುವುದಿಲ್ಲ. ಈ ಮಹಾ ಆತ್ಮವೀರರು ೧೫೧೮ರಲ್ಲಿ ದೇಹವನ್ನು ಬಿಟ್ಟರು. ಆಗ ಇವರಿಗೆ ೧೨೦ ವರ್ಷಗಳಾಗಿದ್ದವು. ಇವರು ೮೦ ವರ್ಷ ಹಿಂದೂ ಮುಸಲ್ಮಾನರ ಐಕ್ಯಕ್ಕೋಸ್ಕರ ಅವಿಶ್ರಾಂತ ಶ್ರಮವಹಿಸಿದರು. ಇಷ್ಟಾದರೂ ಆಗಲೇ ಕಾರ್ಯದಷ್ಟು ಪ್ರಯೋಜನವು ಕಾಣಿಸಲಿಲ್ಲ. ಆದುದರಿಂದ ಪೂರ್ವ ಪಶ್ಚಿಮ ಕೂಡುವುದು ಹೇಗೆ ಶಕ್ಯವಿಲ್ಲವೋ ಹಾಗೆಯೇ ಹಿಂದೂ ಮುಸಲ್ಮಾನ ಸಮಾಜಗಳೆರಡೂ ಪ್ರೇಮಾದರಗಳಿಂದ ಕೂಡಿರುವುದು ಶಕ್ಯವಿಲ್ಲವೆಂದೇ ಅನೇಕರು ಹೇಳುತ್ತಿದ್ದಾರೆ.

ಹಿಂದೂ ಮುಸಲ್ಮಾನರಲ್ಲಿ ಐಕ್ಯತೆಯುಂಟಾಗದಿದ್ದ ಮಾತ್ರದಲ್ಲಿ ಕಬೀರರ ಮಹತ್ವವೇನೂ ಕಡಿಮೆಯಾಗಲಿಲ್ಲ. ಮತ್ತು ಅವರ ಉಪದೇಶವೇನೂ ಅಯುಕ್ತವಾಗಲಿಲ್ಲ. ಕವಿತಿಲಕ ರವೀಂದ್ರನಾಥ ಟಾಗೋರರವರು "ಕಬೀರದಾಸರ ಪದಗಳನ್ನು ಸರ್ವತ್ರ ಹಾಡುವ ಸುಪ್ರಸಂಗವು ಮುಂದೆ ಬರುವುದಿದೆ. ಅವರ ಪದ್ಯದಲ್ಲಿರತಕ್ಕ ರಹಸ್ಯಮಯ ಅಗಾಧತ್ವವೇ ಕಬೀರರನ್ನು ಅಮರರನ್ನಾಗಿ ಮಾಡುವುದು." ಎಂಬುದಾಗಿ ಹೇಳಿರುವುದನ್ನು ನೋಡಿದರೆ ಮಹಾತ್ಮ ಕಬೀರರ ಶ್ರೇಷ್ಠತ್ವವು ಇನ್ನು ಮುಂದೆಯೇ ಪ್ರಕಟವಾಗುವುದೆಂದು ತೋರುತ್ತದೆ.

ಹಿಂದಿನ ಗಾಂಧಿಗಳಾದ ಕಬೀರರ ಉಪದೇಶಕ್ಕೆ ಕಿವಿಗೊಡದೆ ಕಷ್ಟಕ್ಕೀಡಾಗಿರುವ ಹಿಂದೂ ಮುಸಲ್ಮಾನರು ಇಂದಿನ ಗಾಂಧಿಗಳ ಉಪದೇಶಕ್ಕಾದರೂ ಕಿವಿಗೊಟ್ಟು ಪರಸ್ಪರ ಪ್ರೇಮಾದರಗಳಿಂದಿರಬಾರದೇ?

ಬಿ. ಪ.

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ದೋಣಿ ಕಂಟ್ರಾಕ್ಟರುಗಳ ಅಜಾಗ್ರತೆ.

ಅಯ್ಯಾ ಸಂಪಾದಕರೇ,

ತಾ. 24 ನೇ ಆದಿತ್ಯವಾರ ಬೆಳಗ್ಗೆ 9 ಗಂಟೆ ಸಮಯಕ್ಕೆ ಮೆ. ಚೌರಿರ ಅಪ್ಪಯ್ಯನವರು (ಜೂನಿಯರ್) ಒಲಮುರಿ ಹೊಳೆ ದೋಣಿಯಲ್ಲಿ ದಾಟುವಂತ ಸಮಯದಲ್ಲಿ ದೋಣಿ ನಡಿಸುತ್ತಿದ್ದ ಮಾಪಿಳ್ಳೆ ಹುಡುಗನು ಎಚ್ಚರವಿಲ್ಲದೆ ತಿರುಗುಂಡಿನ ಹತ್ತಿರವಿರುವ ಚೇಣಿಯ ಮಧ್ಯಕ್ಕೆ ನುಗ್ಗಿಸಲು ದೋಣಿಯವನು ಕೊಂಬೆಗಳ ಹೊಡೆತದಿಂದ ಹೊಳೆಗೆ ಬಿದ್ದನು.

ದೈವವಶಾತ್ ಅವನು ಕೊಂಬೆಯನ್ನು ತಕ್ಷಣ ಹಿಡಿದುಕೊಂಡನು. ಆ ಕೂಡಲೆ ಅಪ್ಪಯ್ಯನವರು ಮಾಪಿಳ್ಳೆ ಹುಡುಗನನ್ನು ಎತ್ತಿ ಸಹಾಯಕೊಟ್ಟು ದೋಣಿಗೆ ಏರಿಸಿದರು. ಇವರು ತಮ್ಮ ಪ್ರಾಣಾಪಾಯಕ್ಕೂ ಸಹ ಹೆದರಲಿಲ್ಲ. ಆದುದರಿಂದ ಇಂಥಾ ಸಂದರ್ಭದಲ್ಲಿ ಧೈರ್ಯವೇ ಮುಖ್ಯವೆಂದು ವೇದ್ಯವಾಗುತ್ತದೆ. ಅಷ್ಟರಲ್ಲಿ ಮುಸ್ಕಾಣಿಯು ತೇಲುತ್ತಾ ಹೋಗಿ ಸ್ವಲ್ಪ ದೂರದಲ್ಲಿ ಸಿಕ್ಕಿಕೊಂಡಿತು. ಕಡೇಗೆ ದೋಣಿಯನ್ನು ಮುಸ್ಕಾಣಿ ಇರುವ ಸ್ಥಳಕ್ಕೆ ಉಪಾಯಾಂತರದಿಂದ ತೆಗೆದುಕೊಂಡು ಹೋಗಿ ಮೆಲ್ಲಗೆ ಮುಸ್ಕಾಣಿಯ ತೆಗೆದುಕೊಂಡು ತೊಂದರೆ ಇಲ್ಲದೆ ದಡ ಸೇರಿದರು. ಇದೇ (Presence of Mind) ಅಂದರೆ ಮನಶ್ಶಾಂತತೆಯೆಂದು ಕರೆಯಲ್ಪಡುವುದು.

ಕಡೆಗೆ ವಿಚಾರಿಸಿದಲ್ಲಿ ಆ ಹುಡುಗನು ದೋಣಿಯ ಮಾಲಿಕನು ಅಲ್ಲವೆಂದು ತಿಳಿಯಬಂತು. ಹೀಗೆ ಅನುಭವವಿಲ್ಲದ ಹುಡುಗರನ್ನು ಇಂಥಾ ಮಹಾ ಕಾರ್ಯಕ್ಕೆ ಅದರಲ್ಲೂ ಈ ಘೋರ ಮಳೆಗಾಲದಲ್ಲಿ ಹೊಳೆಯು ತುಂಬಿ ದಡಗಳು ಒಂದೇ ಸಮವಾಗಿರುವಂತ ಸಮಯದಲ್ಲಿ ಈ ಕಂಟ್ರಾಕ್ಟುದಾರರುಗಳು ನಿಗವಿಡದೆ ಬಿಡುವುದು ಶೋಚನೀಯವೇ ಸರಿ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ತಕ್ಕ ನಿಗವಿಡುವರೆಂದು ಭಾವಿಸುವೆವು. ಸ್ವಲ್ಪ ಹೆಚ್ಚು ಕಡಿಮೆಯಾಗಿದ್ದರೆ ಆ ಮಾಪಿಳ್ಳೆ ಹುಡುಗನು ನೀರು ಪಾಲಾಗುತ್ತಿದ್ದನು. ಅವನ ಜೊತೆಗೆ ಅಪ್ಪಯ್ಯನವರು ಸಹ ನೀರುಪಾಲಾಗಬೇಕಿತ್ತು. ಆ ಸಮಯದಲ್ಲಿ ಬೇರೇ ಹೆಂಗಸರು ಮಕ್ಕಳು ಇದ್ದಿದ್ದರೆ ಅವರ ಪಾಡೇನಾಗಬೇಕಾಗಿತ್ತು? ಎಂಬುದನ್ನು ತಾವೇ ಸ್ವಲ್ಪ ಆಲೋಚಿಸಿ. ಇಂಥಾ ಬಿಕ್ಕಟ್ಟಿನಲ್ಲಿ ಆ ಮಾಪಿಳ್ಳೆ ಹುಡುಗನನ್ನು ಹಿಡಿಯುವವರು ಯಾರಾಗಿದ್ದರು? ಅಥವಾ ಆ ಹುಡುಗನು ಮುಳುಗಿ ಹೋಗಿದ್ದರೆ ಆ ಹೆಂಗಸು ಮಕ್ಕಳ ಪಾಡೇನಾಗುತ್ತಿತ್ತು? ಇದೆಲ್ಲಕ್ಕೂ ಅಜಾಗ್ರತೆಯೇ ಮೂಲ ಕಾರಣ. ಆದುದರಿಂದ ಇನ್ನಾದರೂ ಘನ ಸರಕಾರದವರು ದೋಣಿ ಮಾಲಿಕನಲ್ಲದೆ ಬೇರೆ ಯಾರೂ ದೋಣಿ ನಡಿಸಕೂಡದು ಎಂಬುದಾಗಿ ಹುಕುಂ ಮಾಡುವರೆಂದು ನಂಬುವೆವು.

'ಪ್ರಯಾಣಿಕ.'

ಮೆ. ದಿವಂಗತ ಪಾಂಡಂಡ ಮುತ್ತಣ್ಣನವರ ಮರಣ ಮತ್ತು ಅನಂತರ.

ದಿವಂಗತ ಮೆ. ಪಾಂಡಂಡ ಮುತ್ತಣ್ಣನವರ ಗುಣ ಕಥನಗಳನ್ನು ಕುರಿತ ಒಂದೆರಡು ಬಾತ್ಮಿಗಳು ಇದಕ್ಕೆ ಮುಂದೆ ಈ ಪತ್ರಿಕಾ ವಾಚಕರ ಅವಗಾಹನೆಗೆ ಬಂದಿರಬಹುದಾದರೂ ಈ ಬಾತ್ಮಿಯನ್ನು ಚರ್ವಿತ ಚರ್ವಣವೆಂದು ಭಾವಿಸದೆ ಮನಗೊಟ್ಟು ಓದಬೇಕಾಗಿ ಕೋರಿಕೆ.

ಈ ಬಾತ್ಮಿಯು ಅವರು ಮೂರ್ನಾಡು ಶಾಲೆಯ ಏಳಿಗೆಗಾಗಿ ಮಾಡಿದ ಪ್ರಯತ್ನವನ್ನು ವರ್ಣಿಸುವದಾಗಿದೆ. ಕೆಲವು ವರ್ಷಗಳಿಗೆ ಹಿಂದೆ ಈ ಶಾಲೆಯು ಬಹಳ ಜನಸ್ತೋಮವಿರುವ ಮತ್ತು ಅನುಕೂಲಸ್ಥರು ಇರುವ ಊರುಗಳ ಮಧ್ಯೆ ಇದ್ದರೂ ಸಹ ಬಹಳ ಶೋಚನೀಯ ಸ್ಥಿತಿಯಲ್ಲಿತ್ತು. ಇಂಥ ಬಡ ಶಾಲೆಯ ಸ್ಥಿತಿಯನ್ನು ಊರ್ಜಿತಪಡಿಸಲಿಕ್ಕಾಗಿ ಮೆ. ಮುತ್ತಣ್ಣನವರು ವಹಿಸಿದ ಕ್ರಮವು ಸ್ತೋತ್ರಾರ್ಹವಾಗಿದೆ; ಸಕಲರಿಗೂ ಮಾರ್ಗದರ್ಶಕವಾಗಿದೆ. ದಿವಂಗತರು ಡಿ. ಬೊ. ಮೆಂಬರರ ಮೂಲಕ ಸಂಸ್ಕಾರದವರೊಡನೆ ಸದರಿ ಶಾಲೆಯಲ್ಲಿ ಹೊಸದೊಂದು ಕಟ್ಟಡವನ್ನೇರ್ಪಡಿಸಬೇಕೆಂದು, ಹೈಯ್ಯರ್ ಎಲಿಮೆಂಟರಿ ಶಾಲೆಯನ್ನಾಗಿ ಮಾಡಬೇಕೆಂದು ಬಹಳವಾಗಿ ಹೋರಾಡಿದರು. ಇದನ್ನರಿತ ಶಾಲಾ ಹೆಡ್ ಮಾಸ್ಟರವರು ಕಳೆದ ಶಾಲಾ ವಾರ್ಷಿಕ ಉತ್ಸವದಲ್ಲಿ ಇವರನ್ನು ಸಭಿಕರ ಎದುರಿನಲ್ಲಿ ಬಹಿರಂಗವಾಗಿ ಹೊಗಳಿದರು. ಇವರ ಪ್ರಯತ್ನದ ಪ್ರಥಮ ಫಲಗಳು ಈ ವರ್ಷ ಮೇಲ್ಕಂಡ ಶಾಲೆಯಲ್ಲಿ 6ನೇ ತರಗತಿ ತೆರೆಯಲ್ಪಟ್ಟದ್ದೂ, ಟೌನಿನಲ್ಲಿ ಸಣ್ಣದೊಂದು ಕಟ್ಟಡವು ಕ್ಲಾಸಿಡುವುದಕ್ಕಾಗಿ ಏರ್ಪಡಿಸಲ್ಪಟ್ಟದ್ದೂ ಆಗಿವೆ. ಇಷ್ಟೇ ಅಲ್ಲದೆ ಹೊಸದೊಂದು ಕಟ್ಟಡ ನಿರ್ಮಾಣಕ್ಕಾಗಿ ಇವರು ಮೂರ್ನಾಡಿನ ಸುತ್ತು ಮುತ್ತಲು ಇರತಕ್ಕ ಕೆಲವು ಐಶ್ವರ್ಯವಂತರೂ, ಗುಣಾಢ್ಯರೂ, ವಿದ್ಯಾವಂತರೂ ಆದ ಕೆಲವು ಮಹನೀಯರುಗಳಲ್ಲಿ ಪ್ರಸ್ತಾಪಿಸಿ ಒಂದು ಜನರಲ್ ವಿಂಟಿಂಗು ಮಾಡಲು ಧನಿಕರೂ, ಗುಣಾಢ್ಯರೂ, ಆದ ಮ. ರಾ. ಪಳಂಗಂಡ ಚಂಗಪ್ಪ, ರಿಟಯರ್ಡ್ ರೇಂಜರವರು 1000 ರೂ. ಗಳನ್ನು ವಿದ್ಯಾದಾನಕ್ಕಾಗಿ ಕೊಟ್ಟರು. ಇದರ ಜೊತೆಗೆ ಕೋ-ಆಪರೇಟಿವ್ ಸೊಸೈಟಿಗಳ ಡಿವಿಡೆಂಡ್ ರೂ. 500 ಶೇಖರಿಸಲ್ಪಟ್ಟಿದೆ. ಇಷ್ಟು ಹಣವನ್ನು ಶೇಖರಿಸಲು ಮುತ್ತಣ್ಣನವರು ತೆಗೆದುಕೊಂಡ ಕ್ರಮವು ಹೊಗಳತಕ್ಕದ್ದಾಗಿದೆ. ಆದ್ದರಿಂದ ಇವರಲ್ಲಿದ್ದ ಉದಾರ ಬುದ್ಧಿಯೂ, ವಿದ್ಯದ ಮೇಲಿದ್ದ ಮಮತೆಯೂ ಮೆ. ಚಂಗಪ್ಪನವರು ಮತ್ತು ಕೋ-ಆಪರೇಟಿವ್ ಸಂಘಗಳ ಸದಸ್ಯರು ಎಷ್ಟು ಸ್ತೋತ್ರಾರ್ಹರೋ ಅಷ್ಟೇ ಸ್ತೋತ್ರಾರ್ಹವಾಗಿವೆ ಎಂದರೆ ಅದು ಅತಿಶಯೋಕ್ತಿಯಾಗಲಾರದು.

ಇವರ ಅಕಾಲ ಮರಣದಿಂದ ಶಾಲೆಯ ಕಲ್ಯಾಣಕ್ಕೆ ತಿಡಿಲು ಬಡಿದಂತಾಯಿತು. ವಿಧಿಯು ವಿಲಾಸದಿಂದ ತನ್ನ ಕಾರ್ಯವನ್ನು ತುರಿತದಿಂದ ಜರುಗಿಸಿ ಮೆ. ಮುತ್ತಣ್ಣನವರನ್ನು ನಮ್ಮೆಲ್ಲರ ಮಧ್ಯದಿಂದ ಸೆಳೆದುಕೊಂಡು ಹೋಯಿತು. ಮಿತಿಮೀರಿದ ಕಾರ್ಯಕ್ಕೆ ಕೊರಗಿ ಫಲವಿಲ್ಲ. ಅವರ ಆತ್ಮಕ್ಕೂ, ಕುಟುಂಬಕ್ಕೂ ಶಾಂತಿಯನ್ನು ದೇವರು ಅನುಗ್ರಹಿಸಲಿ.

ಪ್ರಕೃತದಲ್ಲಿ ಮುಂದಿನ ಕಾರ್ಯಕಲಾಪಗಳನ್ನು ಕುರಿತು ಯೋಚಿಸಬೇಕಾದ ಸಂದರ್ಭ ಒದಗಿ ಹೋಗಿದೆ. ಮೆ. ಮುತ್ತಣ್ಣನವರ ಧ್ಯೇಯವನ್ನು ಕೈಕೊಂಡು ಶಾಲಾ ಅಭ್ಯುದಯಕ್ಕಾಗಿ ಮನೋವಾಕ್ಕಾಯದಿಂದ ಮುಂದು ಬರುವವರಾರೆಂದೂ ಮತ್ತು ಮೆ. ಮುತ್ತಣ್ಣನವರ ವಾರೀಸುದಾರರು ಅವರ ಸ್ಮಾರಕಾರ್ಥವಾಗಿ ದ್ರವ್ಯರೂಪದಲ್ಲಿ ಏನಾದರೂ ಸಹಾಯ ಮಾಡುವರೋ ಎಂದೂ, ನಾವು ಆಶಿಸುತ್ತೇವೆ. ನಾವು ಕೇಳಿದ ಮಟ್ಟಿಗೆ ಅವರು 5000 ರೂಪಾಯಿಗಳು ಇನ್ಶೂರ್ ಮಾಡಿರತಕ್ಕ ಹಣದಲ್ಲಿ ಸದ್ಯಕ್ಕೆ 500 ರೂಪಾಯಿಗಳನ್ನು ಕೊಟ್ಟು ಮೆ. ಮುತ್ತಣ್ಣನವರ ಹೆಸರನ್ನು ಶಾಲೆಯಲ್ಲಿ ಎಂದೆಂದಿಗೂ ಇರುವಂತೆ ಮಾಡಿಯಾರಾಗಿ ನಂಬುವ,

'ವಿದ್ಯಾಭಿಮಾನಿ.'

ಕಕ್ಕಬೆ ಮತ್ತು ಕೊಟ್ಟೂರು ಶಾಲೆಗಳು.

'ಜನ್ಮಭೂಮಿ' ಸಂಪುಟ ೧ ಸಂಚಿಕೆ 12 ಪುಟ 4ರಲ್ಲಿ ಕಂಡ ಮೆ. ಅಳಮಂಡ ಪೊನ್ನಪ್ಪನವರ ಬಾತ್ಮಿಗೆ ಜವಾಬ್:—

ಅಯ್ಯಾ ಪೊನ್ನಪ್ಪನವರೇ, ನಾಲ್ಕುನಾಡು ರೈತರ ಅಸೂಯೆಯೂ ಮತ್ತು ಅವರ ಸಿಡಿಲು ತಮಗೆ ಹ್ಯಾಗೆ ಬಡಿಯಿತೆಂಬುದು ಗೊತ್ತಾಗಲಿಲ್ಲ. ಹಿಂದೂ ಮುಸಲ್ಮಾನರಂತೆ ಅನ್ನುವುದರ ವಿವಾಜು ಕೊಡವ ಕೊಡಗೇತರರೆಂದು ತಾವು ಅಂದಿದ್ದರೆ ನಾನು ಬಹು ಸಂತೋಷಪಡುತ್ತಿದ್ದೆನು. ನಾನು ತಮ್ಮ ಕೊಟ್ಟೂರು ಶಾಲೆಯ ಬಾಬಿನಲ್ಲಿ ಅಸೂಯೆ ಪಡಲಿಲ್ಲ. ಇಂದ್ರನ ಸಿಡಿಲಿನಿಂದ ಘೋರವಾದ ಮಳೆ ಸುರಿಸಲಿಲ್ಲ. (ನಾನು ನೀನು ಜೋಡು, ಕತ್ತೆ ಕಟ್ಟಿಕೊಂಡು ನೀ ನೋಡು) ಎಂಬ ನಾಣ್ಣುಡಿಯಂತೆ ನಾನು, ನೀವು ಸರಿ ಸಮಾನತ್ವದಲ್ಲಿರಬೇಕೆಂಬದು ನನ್ನ ಭಾವನೆ. ತಮ್ಮ ಕೊಟ್ಟೂರು ಶಾಲೆಗೆ VI ನೇ ತರಗತಿಯನ್ನು ಡಿ. ಬೋರ್ಡಿನವರು ಮಂಜೂರು ಮಾಡಿದರೆ ವಿದ್ಯಾ ಇಲಾಖೆ ರೂಲ್ ಮೀರಿ VII ಮತ್ತು VIII ನೇ ತರಗತಿ ತೆರೆಯಬೇಕೆಂಬದನ್ನು ಅರಿತು ಬೋರ್ಡಿನವರು ತಮ್ಮ ಕೊಟ್ಟೂರು ಶಾಲೆಗೆ VI ನೇ ತರಗತಿ ಕಳೆದ ವರ್ಷ ಮಂಜೂರು ಮಾಡದ ಸಂಗತಿ ತಮಗೆ ಚೆನ್ನಾಗಿ ಗೊತ್ತಿರಬಹುದು. ತಮ್ಮ ಬಾತ್ಮಿಯಂತೆ ಡಿ. ಬೋರ್ಡಿನವರ ಸಹಾಯ ಇಲ್ಲದೇನೇ ತಾವು VIನೇ ತರಗತಿಯನ್ನು ಮುಂದರಿಸಿ ಈ ವರ್ಷ ಪಾಸಾದ ಯುವಕರೆಷ್ಟು? ಕಕ್ಕಬೆ ಸ್ಕೂಲಿನಲ್ಲಿ VIನೇ ತರಗತಿಯಲ್ಲಿ ಪಾಸಾದ ಯುವಕರೆಷ್ಟು?

ತಮ್ಮಂತೆ ಕಕ್ಕಬೆ ಸ್ಕೂಲಿಗೆ ಕಳೆದ ವರ್ಷ VII ತರಗತಿ ಮಂಜೂರು ಮಾಡದಿರುವುದರಿಂದ ನಾವು, ಬಡ ನಾಡಾದ ನಾಲ್ಕುನಾಡಿನವರು ಸರ್ಕಾರಿ ವೇತನ ಇಲ್ಲದೆ ನಡಿಸಿ 12 ಯುವಕರು VII ತರಗತಿಯಲ್ಲಿ ಈ ವರ್ಷ ಪಾಸಾದವರಿಗೆ VIII ನೇ ತರಗತಿ ತೆರೆದು ಇಂದೂ ಮಾಹೆಯಾನ ಸ್ವಂತ ಕಲಬಿನಿಂದ VII ನೇ ತರಗತಿಗೆ ಒರ್ವನನ್ನೂ, VIII ನೇ ತರಗತಿಗೆ ಒರ್ವನನ್ನೂ ಮಾಸ್ಟರುಗಳಾಗಿ ನೇಮಿಸಿಕೊಂಡು ಅಮುದಾಂಫ್ಸಿಗೆ ಸಂಯೋಗ ರಸ್ತೆಯಿಲ್ಲದ ಈ ಪ್ರದೇಶದವರು ನಡಿಸಿಕೊಂಡು ಬಂದಾಗ್ಯೂ ಮತ್ತು 1500 ರೂ. ಬಿಕ್ಷಾಟನೆಯಿಂದ ಕಟ್ಟಡ ಕಟ್ಟಿಕೊಟ್ಟು ಕಕ್ಕಬೆ ಶಾಲೆಗೆ 2 ಉಪಾಧ್ಯಾಯರನ್ನು ಮಂಜೂರು ಮಾಡದ ಡಿ. ಬೋರ್ಡಿನವರ ಸಂಗತಿಯಾಗಿ ನಾಲ್ಕುನಾಡಿನ ರೈತನು ಬರೆದ ಸಂಗತಿ ಅಸೂಯೆಯೋ, ಸಿಡಿಲೋ ಎಂದು ಯೋಚಿಸದೆಯೂ, ತಾವು ಈ ಪ್ರಾಂತ್ಯಕ್ಕೆ ದಯಮಾಡಿಸಿ, ಕಕ್ಕಬೆ ಸ್ಕೂಲ್ ನೋಡಿದ್ದರೆ ಈ ಬರವಣಿಗೆಗೆ ಕೈ ಹಾಕುತ್ತಿರಲಿಲ್ಲ.

ತಾವು ಈ ಪ್ರಾಂತ್ಯಕ್ಕೆ ದಯಮಾಡಿಸುವದೆಂದರೆ ತಮ್ಮ ಕಾರ್ ಬರಲು ಕೊಟ್ಟಂಬಾಡಿ ಹೊಳೆಗೂ—ಕಕ್ಕಬೆ ಹೊಳೆಗೂ ಸೇತುವೆ ಇಲ್ಲ. ತಮ್ಮ ರಸ್ತೆ ಅಪ್ಪಂಗಳ ಹೊಳೆ ಸೇತುವೆ ಸ್ವಲ್ಪ ಮಟ್ಟಿಗೆ ಅಭದ್ರವೆಂದ ಮಟ್ಟಿಗೆ ವಡನೆ ರಿಪೇರಿ ಹೋಗಲಾಗಿ ಪಕ್ಕ ಸೇತುವೆ ಮಾಡಿದಾಯಿತು. ನಮ್ಮ ಕೊಟ್ಟಂಬಾಡಿ ಮತ್ತು ಕಕ್ಕಬೆಗೆ ಸೇತುವೆ ಇಲ್ಲದರ ದೆಸೆಯಿಂದಲೇ ತಮ್ಮ ಸವಾರಿ ನಮ್ಮ ಕಡೆ ಇಲ್ಲ. ಅದರಂತೆ ಕೊಡಗು ದೇಶವನ್ನಾಳುವ ದೊರೆಗಳ ಮತ್ತು ಡಿ. ಬೋರ್ಡು ಪ್ರೆಸಿಡೆಂಟರೂ ಯೂ ವೈಸ್ ಪ್ರೆಸಿಡೆಂಟರು ಯೂ ಇತರ ಡಿ. ಬೋರ್ಡು ಮೆಂಬರುಗಳ ಸವಾರಿ ಇಲ್ಲದೆ ದೇಹದ ಒಂದು ಭಾಗಕ್ಕೆ ಪಾರ್ಶ್ವವಾಯು ಆದಂತೆ ದೇಶದ ಈ ನಮ್ಮ ಪಾಡಿನಾಲ್ಕುನಾಡಿಗೆ ವಾಯು ಹಿಡಿದಿರುವ ಸಂಗತಿ ತಾವು ನಮ್ಮ ಮೇಲೆ ಸ್ವಲ್ಪವಾದರೂ ಕರುಣೆ ಇಡದೆ, ದೇಶದ ಕಲ್ಯಾಣಕ್ಕೆ ನಿಗ ಇಡದೆ ಬರೆದ ತಮ್ಮ ಲೇಖನಕ್ಕೆ ನಾವು ಎಷ್ಟು ವ್ಯಸನ ಪಟ್ಟರೂ ಅತಿ ಅಲ್ಪವೆಂದುಬಯಿರಿ.

ಇನ್ನಾದರೂ ತಮಗೆ VIನೇ ತರಗತಿಗೆ ಮಂಜೂರಾತಿ ಕೊಟ್ಟಂತೆ ನಮ್ಮ ಕಕ್ಕಬೆ ಸ್ಕೂಲಿನಲ್ಲಿ ಹಾಲಿ ತೆರೆದಿರುವ VII ಮತ್ತು VIIIನೇ ತರಗತಿಗಳಿಗೆ ಎರಡು ಮಾಸ್ಟರುಗಳನ್ನು ಮಂಜೂರು ಮಾಡಿಸಿ ಕೊಡುವಂತೆ ತಾವು ತಮ್ಮ ಪಿರ್ಕಿಯ ಡಿ. ಬೋರ್ಡು ಮೆಂಬರರಿಗೂ ಮತ್ತು ವೈಸ್ ಪ್ರೆಸಿಡೆಂಟರಿಗೂ ಅರಹು ಕೊಟ್ಟು ಮಂಜೂರು ಮಾಡಿಸಿ ಕೊಡಲು ನಮಗೆ ಒತ್ತಾಸೆಯಾಗಿರಬೇಕಾಗಿ ಈ ಮೂಲಕ ಕೇಳಿಕೊಳ್ಳುವ.

ಉದಿಯಂಡ ಮಾಚಯ್ಯ.

ಕೊಡಗಿನ ಭವಿಷ್ಯತ್ತು.

ಮಹನೀಯರೇ,

ಶ್ರೀಮತಿ ಡಿ. ನಾಗಮ್ಮನವರು 'ಕೊಡಗಿನ ಭವಿಷತ್ತನ್ನು ಕುರಿತು ಈ ತಾ. 18 ರ 'ಹಿಂದೂ' ಪತ್ರಿಕೆಯಲ್ಲಿ ಪ್ರಕಟಿಸಿದ (ಈ ಪತ್ರಿಕೆಯಲ್ಲಿ ಕಳೆದ ವಾರ ಪ್ರಕಟಿಸಲ್ಪಟ್ಟ) ಅಭಿಪ್ರಾಯವು ಅಮಲ್ಗಮೇಶನ್ ಪ್ರಶ್ನೆಯನ್ನು ಸಂಪೂರ್ಣ ಇನ್ನೊಂದು ಕಡೆ ತಿರುಗಿಸಿದೆ. ಇಷ್ಟರ ವರೆಗೆ ಈ ಪ್ರಾಂತ್ಯವನ್ನು ಮದ್ರಾಸು ಪ್ರಾಂತ್ಯಕ್ಕೆ ಸೇರಿಸಬೇಕೆಂದು ಜನಸಮುದಾಯದ ಒಂದು ಭಾಗದವರು ಕೇಳಿಕೊಳ್ಳುತ್ತಿದ್ದರು, ಆದರೆ ಈಗ ಮೈಸೂರಿಗೆ ಸೇರಿಸುವ ಕೂಗು ಹೊರಟಿದೆ. ಈ ದೇಶದಲ್ಲಿ ಹಿತ ಕಡಿಮೆಯುಳ್ಳಂಥ ಕೆಲವರು ಹೇಗಾದರೂ ಮಾಡಿ ಇದರ ಪ್ರತ್ಯೇಕ ಇರುವಿಕೆಯನ್ನು ಅಂತ್ಯಗೊಳಿಸಬೇ

ವರ್ತಮಾನ ಸಂಗ್ರಹ.

ಒಳದೇಶ.

ಈ ತಾರೀಖು 23 ರಿಂದ ಇಂದಿನ ವರೆಗೆ ಮಡಿಕೇರಿಯಲ್ಲಿ 11.46 ಇಂಚು ಮಳೆಯಾಗಿದೆ.

ಕೊಡಗಿನಲ್ಲಿ ಪೀಯರ್‌ಲೆಸ್ಸ್ ಕಂಪೆನಿಯ ಏಜೆಂಟರಾಗಿ ಮೆ. ಅಜ್ಜಮಾಡ ಚಂಗಪ್ಪನವರು ನೇಮಿಸಲ್ಪಟ್ಟಿರುವರೆಂದು ವರ್ತಮಾನ.

ಮಡಿಕೇರಿಯಲ್ಲಿ ಫಾರೆಸ್ಟರಾಗಿದ್ದ ಮೆ. ಕಾಡ್ಯಮಾಡ ಐಯ್ಯಪ್ಪನವರು ರೇಂಜರ್ ತರಬೇತಿಗಾಗಿ ಈ ತಾ. 27 ರಲ್ಲಿ ಕೊಯಂಬುತ್ತೂರಿಗೆ ಕಳುಹಿಸಲ್ಪಟ್ಟಿರುವರು.

ಬೊಂಬಾಯಿ ಪ್ರಾಂತ್ಯದಲ್ಲಿ ಕಾಂಗ್ರೆಸ್ ಕೆಲಸ ಮಾಡುತ್ತಿದ್ದು ಆರು ತಿಂಗಳು ಸಜೆಗೆ ಗುರಿಮಾಡಲ್ಪಟ್ಟಿದ್ದ ಶ್ರೀಯುತ ಅಜ್ಜಿಕುಟ್ಟಿರ ತಮ್ಮಯ್ಯನವರು ಈ ತಾ. 8 ರಲ್ಲಿ ವಿಸಾಪುರ ಹಂಗಾಮಿ ಜೈಲಿನಿಂದ ಅವಧಿ ತೀರಿ ಬಿಡುಗಡೆಮಾಡಲ್ಪಟ್ಟರು.

ಕಳೆದ ನವಂಬರು ತಿಂಗಳಲ್ಲಿ ಕುಂಜಿಲ ಗ್ರಾಮದಲ್ಲಿ ಒಬ್ಬ ಪಾಲಿ ಮತ್ತು ಪಾಂಚಿಯನ್ನು ಗುಂಡು ಹೊಡೆದು ಕೊಂದ ಖೂನಿ ಕೇಸಿನಲ್ಲಿ ಉದಿಯಾಂಡ ಸೋಮಯ್ಯನಿಗೆ ಸೆಶ್ಶನ್ಸ್ ಜಡ್ಜರು ಜೀವಾಂತ್ಯದ ಸಜೆಯು ವಿಧಿಸಿದ್ದರಷ್ಟೆ. ಅದು ಮೇಲೆ ಬೆಂಗಳೂರಲ್ಲಿ ಅಪ್ಪೀಲ್ ನಡೆಯುದರಲ್ಲಿ ಸೆಶ್ಶನ್ಸ್ ಕೋರ್ಟಿನ ತೀರ್ಮಾನವೇ ಖಾಯಂ ಮಾಡಲಾಯಿತು.

ಈ ತಾ. 21ರಲ್ಲಿ ಯವಕಪಾಡಿ ಗ್ರಾಮದ ಮೆ. ಅಂಜಪರವಂಡ ಚಂಗಪ್ಪನವರ ಪತ್ನಿಯು ತನ್ನ ಮಗುವನ್ನು ತೊಟ್ಟಿಲಲ್ಲಿ ಮಲಗಿಸಿ ತೊಟ್ಟಿಲ ಅಡಿಯಲ್ಲಿ ಅಗ್ಗಿಷ್ಟಿಕೆಯಲ್ಲಿ ಬೆಂಕಿ ಇಟ್ಟಿದ್ದಳೆಂದೂ, ತೊಟ್ಟಿಲ ಹಗ್ಗವು ತುಂಡಾಗಿ ಮಗು ಬೆಂಕಿಗೆ ಬಿದ್ದು ಅದರ ಕೆಲವು ಭಾಗ ಬೆಂದು ಗಾಯವಾಯಿತೆಂತಲೂ, ಈ ಕಾರಣದಿಂದ ಅವಳ ಗಂಡನು ಬೈದ ಹಾಗೂ, ಅವನು ಅಂದಿನಿಂದ ಕಾಣದೆ ಆಗಿರುವಳೆಂದೂ ಸುದ್ದಿ.

ಶಾಸನ ಭಂಗ ಚಳವಳದಲ್ಲಿ ಭಾಗಿಗಳಾಗಿ ಆರಾರು ತಿಂಗಳು ಕಾರಾಗೃಹ ವಾಸವನ್ನು ಮುಗಿಸಿಕೊಂಡು ಈ ಕೆಳಗಿನ ಸುಜನೀಯರು ಕೊಡಗಿಗೆ ವಾಪಸು ಬಂದಿರುವರೆಂದು ತಿಳಿಯಬರುತ್ತದೆ. ಈ ತಾ. 18 ರಲ್ಲಿ ಶ್ರೀಯುತರುಗಳಾದ ಐನಂಡ ಕಾರ್ಯಪ್ಪನವರು ವೆಲ್ಲೂರು ಜೈಲಿನಿಂದಲೂ, ಕೊಳ್ಳಿಮಾಡ ಐಯ್ಯಮ್ಮನವರು ಕಲ್ಲಿಕೋಟೆ ಸಬ್ ಜೈಲಿನಿಂದಲೂ, ಚೆಂಗಾಂಡ ಮಾದಪ್ಪನವರು, ಕೈಬಿಲಿರ ಅಪ್ಪಣ್ಣನವರು, ಮೂಕಂಡ ಕುಶಾಲಪ್ಪನವರು, ಚೋಕಿರ ಮಾದಪ್ಪನವರು ತಿರುಚಿನಾಪಳ್ಳಿ ಜೈಲಿನಿಂದಲೂ, ಚೊಕ್ಕಂಡ ಮಾಚಯ್ಯನವರು, ಕುಂಜಿಲಂಡ ಕಾವೇರಪ್ಪನವರು, ಕಾಳಿಮಾಡ ಮಾಚಯ್ಯನವರು (ಕಳೆದ ವಾರ ಪ್ರಕಟವಾದಂತೆ ಕೈಬಿಲಿರ ಮಾಚಯ್ಯನವರಲ್ಲ) ಮತ್ತು ತಾ. 26 ರಲ್ಲಿ ಮಳವಂಡ ಐಯ್ಯಪ್ಪನವರು ಕಣ್ಣಾನೂರು ಸೆಂಟ್ರಲ್ ಜೈಲಿನಿಂದಲೂ ಬಿಡುಗಡೆಮಾಡಲ್ಪಟ್ಟರು.

ಹಿಂದೂದೇಶ.

ಗುಂಟಕಲ್ಲಿನಲ್ಲಿ ತಾ. 24ರಲ್ಲಿ ಇಬ್ಬರೂ, ತಾ. 26ರಲ್ಲಿ ಮೂವರೂ ಕಾಂಗ್ರೆಸ್ ಕೆಲಸಗಾರರು ಪಿಕೆಟಿಂಗ್ ಕೆಲಸ ಮಾಡುತ್ತಿದ್ದಾಗ್ಯೆ ಸೆರೆಹಿಡಿಯಲ್ಪಟ್ಟರು.

ಕಳೆದ ವಾರದಲ್ಲಿ ಲಾಹೋರಿನಲ್ಲಿ ಪೊಲೀಸಿನವರು ಮನೆ ಜಡ್ತಿ ಮಾಡಿಯೂ, ಸಂಶಯದ ಮೇಲೂ 31 ಕಾಂಗ್ರೆಸಿನವರನ್ನು ದಸ್ತಗಿರಿ ಮಾಡಿದರು.

ತಾ. 23ರಲ್ಲಿ ನೆಲ್ಲೂರಿನ ಡಿಸ್ಟ್ರಿಕ್ಟ್ ರಾಜಕೀಯ ಸಭೆಯ ಸಂಬಂಧ ಹತ್ತು ಜನರು ದಸ್ತಗಿರಿ ಮಾಡಲ್ಪಟ್ಟರು. ಅವರ ಪೈಕಿ ಒಬ್ಬರು ಜಾಮೀನು ಮೇಲೆ ಬಿಡುಗಡೆ ಮಾಡಲ್ಪಟ್ಟಿರುವರು.

ಡೆಲ್ಲಿಯ ಸೆಂಟ್ರಲ್ ಜೈಲಿನ 60 ರಾಜಕೀಯ ಕೈದಿಗಳು ಹೊರಗೆ ನಾಲ ಎಂಬಲ್ಲಿ ಕೆಲಸ ಮಾಡುತ್ತಿದ್ದಾಗ್ಯೆ ಒಬ್ಬನಿಗೆ ಒಂದು ಸರ್ಪವು ಕಚ್ಚಿತೆಂದೂ, ಅವನು ಸಿವಿಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವನೆಂದೂ ವರ್ತಮಾನ.

ಲಕ್ನೋದಲ್ಲಿ ಪರದೇಶೀ ಬಟ್ಟೆ ಅಂಗಡಿಗಳ ಪಿಕೆಟಿಂಗ್ ಕೆಲಸವು ನಡೆಯುತ್ತಿದೆ. ಕಳೆದ ವಾರ ಈ ಕಾರ್ಯಕ್ಕಿಳಿದ ಇಬ್ಬರು ಸ್ವದೇಶೀ ಜವಳಿ ಸಾಹುಕಾರರು ದಸ್ತಗಿರಿ ಮಾಡಲ್ಪಟ್ಟದ್ದಲ್ಲದೆ 8 ಸ್ತ್ರೀಯರೂ ಸೆರೆಹಿಡಿಯಲ್ಪಟ್ಟರು.

ಕಾಶಿಯಲ್ಲಿ ಪಿಕೆಟಿಂಗ್ ಕೆಲಸವು ನಿಶ್ಯವೂ ನಡೆಯುವಂತಾಗಿದೆ. ತಾ. 26ರಲ್ಲಿ ಪಿಕೆಟ್ ಮಾಡುತ್ತಿದ್ದ 5 ಗಂಡಸರು ದಸ್ತಗಿರಿ ಮಾಡಲ್ಪಟ್ಟರು. ನಂತರ ಪಿಕೆಟ್ ಮಾಡಲು ಬಂದ 3 ಸ್ತ್ರೀಯರು ಸೆರೆ ಹಿಡಿಯಲ್ಪಟ್ಟು ರಾತ್ರಿ ಬಿಡುಗಡೆ ಮಾಡಲ್ಪಟ್ಟರು.

ಹಿಂದೂಸ್ಥಾನ ಸೇವಾದಳದ ಸೆಕ್ರೆಟರಿಯಾದ ಡಾಕ್ಟರ್ ಎನ್. ಎಸ್. ಹರ್ಡೀಕರರವರು ಮತ್ತು ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯಾದ ಆರ್. ಎಸ್. ಹುಕ್ಕೇರಿಕರರನ್ನು ಬೆಳಗಾವಿಯಿಂದ ಹಿಂಡಲಗಿ ಜೈಲಿಗೆ ವರ್ಗಾಯಿಸಿರುವರು.

ನರಸಾಪುರ ತಾಲೋಕು ರಾಜಕೀಯ ಪರಿಷತ್ತು ಶ್ರೀಯುತ ಬುದ್ಧರಾಜು ಲಿಂಗರಯ್ಯ ಎಂಬವರ ಅಧ್ಯಕ್ಷತೆಯಲ್ಲಿ ನಡೆಯಿತು. ಠರಾವುಗಳೆಲ್ಲವೂ ಪಾಸುಮಾಡಲಾದವು. ನಂತರ ಪೊಲೀಸಿನವರು ಬಂದು ನೆರೆದಿದ್ದ ಜನರನ್ನು ಚದರಿಸಿದರು. ಆದರೆ ದಸ್ತಗಿರಿಗಳಾಗಲಿಲ್ಲ.

ಮಂಗಳೂರಿನಲ್ಲಿ ಹಂಪನಕಟ್ಟೆ, ಕೇಡಿಗುಡ್ಡೆ, ಕುದ್ರೋಳಿ ಮುಂತಾದ ಸೇಂದಿ ಅಂಗಡಿಗಳ ಪಿಕೆಟಿಂಗು ಸದಾ ನಡೆಯುತ್ತಿದೆ. ದಸ್ತಗಿರಿ ಮಾಡಲ್ಪಟ್ಟವರು ಅದೇ ದಿನ ಸಾಯಂಕಾಲ ಬಿಡಲ್ಪಡುತ್ತಿದ್ದಾರೆ. ಮೆ. ಮಾರಪ್ಪ ಪಕ್ಕಾಲರವರಿಗೆ 4 ತಿಂಗಳು ಕಠಿಣ ಸಜೆ ಕೊಡಲಾಗಿದೆ. ತಾ. 25ರಲ್ಲಿ ಮೆರವಣಿಗೆ ಮತ್ತು ಪಿಕೆಟಿಂಗಿಗಾಗಿ 23 ಜನರು ದಸ್ತಗಿರಿ ಮಾಡಲ್ಪಟ್ಟರು.

ಕಲ್ಲಿಕೋಟೆಯಲ್ಲಿ ಪರದೇಶೀ ಜವಳಿ ಅಂಗಡಿಗಳ ಪಿಕೆಟಿಂಗೂ, ಕೆಲವು ಸಾರಿ ಮೆರವಣಿಗೆಗಳೂ ನಡೆಯುತ್ತಲೇ ಇವೆ. ಬೆಳಿಗ್ಯೆ ದಸ್ತಗಿರಿ ಮಾಡಲ್ಪಟ್ಟ ಸ್ವಯಂಸೇವಕರು ರಾತ್ರಿ ಬಿಡುಗಡೆ ಮಾಡಲ್ಪಡುತ್ತಾರೆ. ಕೇರಳದ 20ನೇ ಡಿಕ್ಟೇಟರಾದ ಮೆ. ಕೆ. ಸಿ. ನಂಬಿಯಾರ್‌ರವರು ತಾ. 25ರಲ್ಲಿ ದಸ್ತಗಿರಿ ಮಾಡಲ್ಪಟ್ಟರು.

ಮದ್ರಾಸು ಪೆನಿಟೆನ್ಶ್ಯರಿ ಜೈಲಿನಲ್ಲಿ ಒಬ್ಬ ಕಾನ್‌ವಿಕ್ಟ್ ವಾರ್ಡರು ಕಾಂಗ್ರೆಸು ಕೈದಿಗೆ ಹೊಡೆದನೆಂಬ ಕಾರಣದಿಂದ ಅಲ್ಲಿಯ 25 ರಾಜಕೀಯ ಕೈದಿಗಳು ಮೂರು ದಿವಸಗಳಿಂದ ಉಪವಾಸ ಮಾಡುತ್ತಿರುವರೆಂದು ತಾ. 26ರ ಸುದ್ದಿ. ಸುಪರಿಂಟೆಂಡೆಂಟರು ವಿಚಾರಿಸಿದಲ್ಲಿ ಹೊಡೆದದ್ದು ನಿಜವಲ್ಲವೆಂದು ಕಂಡು ಬಂದಿದೆಯೆಂದು ಹೇಳಿದರಂತೆ.

ಸ್ಟೇಟ್ ಸೆಕ್ರೆಟರಿಯವರ ಹೇಳಿಕೆಯನ್ನು ಕುರಿತು, ಬಹಿಷ್ಕರಿಸುವುದಿಲ್ಲವೆಂದು ದುಂಡು ಮೇಜು ಪರಿಷತ್ತಿನ ಲಿಬರಲ್ ಮೆಂಬರುಗಳು ಈ ತಾ. 9ರಲ್ಲಿ ಬೊಂಬಾಯಿಯಲ್ಲಿ ಮಾಡಿದ ತೀರ್ಮಾನಕ್ಕೆ ಹಿಂದೂದೇಶದ ಎಲ್ಲಾ ಕಡೆಗಳಲ್ಲಿ ಎಲ್ಲಾ ಪಾರ್ಟಿಗಳ ಮುಖಂಡರ ರುಜು ತೆಗೆದುಕೊಳ್ಳುವ ಕೆಲಸವನ್ನು ನಡಿಸುವಂತೆ ಲಿಬರಲ್ ಪಕ್ಷದವರು ತೀರ್ಮಾನಿಸಿರುವರು.

ಎರಡನೇ ದುಂಡು ಮೇಜು ಪರಿಷತ್ತಿನ ನಂತರ ನೇಮಿಸಲ್ಪಟ್ಟ 3 ಕಮಿಟಿಗಳ ಪೈಕಿ ಒಂದಾದ ಇಂಡಿಯ ಸ್ಟೇಟ್ ಇನ್‌ಕ್ವಯರಿ ಕಮಿಟಿಯ (ಫೈನಾನ್ಶ್ಯಲ್) ವರದಿಯು ಏಕಸಮಯದಲ್ಲಿ ಇಂಗ್ಲೆಂಡಿನಲ್ಲಿಯೂ, ಇಂಡಿಯಾದಲ್ಲಿಯೂ ಪ್ರಕಟಿಸಲ್ಪಟ್ಟಿದೆ. ಇದರ ಮೆಂಬರುಗಳೆಲ್ಲರೂ ಇಂಗ್ಲಿಷ್ ಜನರೇ. ವರದಿಯು ಸರ್ವ ಸಮ್ಮತದಿಂದ ರುಜು ಮಾಡಲ್ಪಟ್ಟಿದೆ.

ಸಡಿಯಾದದಲ್ಲಿ 31 ಜನ ಕಾಂಗ್ರೆಸ್ ವಾಲಂಟೀಯರುಗಳು ಸೇರಿ ಪೊಲೀಸರು ಬೀಗ ಮಾಡಿ ಇಟ್ಟಿದ್ದ ಕಾಂಗ್ರೆಸ್ ಆಫೀಸನ್ನು ವಶಪಡಿಸಿಕೊಳ್ಳುವ ಉದ್ದೇಶ್ಯ ಅದರ ಸುತ್ತು ಇದ್ದ ಮುಳ್ಳು ತಂತಿಯ ಬೇಲಿಯನ್ನು ಮುರಿದು, ಪೊಲೀಸರ ಮುದ್ರೆಯನ್ನು ಒಡೆದು ಕಟ್ಟಡದ ಒಳಗೆ ನುಗ್ಗಿದಷ್ಟರಲ್ಲಿ ಪೊಲೀಸಿನವರು ಬಂದು 12 ಜನರನ್ನು ದಸ್ತಗಿರಿ ಮಾಡಿದರು. ಬಾಕಿಯವರನ್ನು ಚದರಿಸಿದರು.

ಕಾಶಿನಪುರದ ಒಬ್ಬ ಪ್ರಮುಖ್ಯ ಕಾಂಗ್ರೆಸ್ ಕೆಲಸಗಾರರಾದ ಮೆ. ಜೋಗ್‌ರವರು ಸೆರೆಮನೆಯಿಂದ ಬಿಡುಗಡೆಯಾಗಿ 15 ದಿವಸಗಳೊಳಗೆ ತವರು ಪಟ್ಟಣವನ್ನು ಬಿಟ್ಟು ಹೊರಗೆ ಹೋಗಬೇಕೆಂದು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಹುಕುಂ ಮಾಡಿದರು. ಈ ಹುಕುಮನ್ನು ಉಲ್ಲಂಘಿಸುವುದಾಗಿ ನಾಡುತ್ತೇನೆಂದು ಅವರು ತಾ. 26ರಲ್ಲಿ ಡಿ. ಮೇಜಿಸ್ಟ್ರೇಟರಿಗೆ ಒಂದು ಪತ್ರ ಬರೆದು ಅರ್ಧ ಗಂಟೆಯೊಳಗೆ ದಸ್ತಗಿರಿ ಮಾಡಲ್ಪಟ್ಟರು.

ಬೊಂಬಾಯಿಯಲ್ಲಿರುವ ಪ್ರಾಂತ್ಯೀಯ ಕಾಂಗ್ರೆಸ್ ಆಫೀಸನ್ನು ಪೊಲೀಸರು ಸ್ವಾಧೀನಪಡಿಸಿಕೊಂಡಿರುವರು. ಅದನ್ನು ಅವರಿಂದ ಬಿಡಿಸಿ ಪುನಃ ತಮ್ಮ ಸ್ವಾಧೀನ ತೆಗೆದುಕೊಳ್ಳಲು ಕೆಲವು ಸ್ವಯಂಸೇವಕರು ಯತ್ನಿಸಿದರು. ಕೈಯಲ್ಲಿ ಮಗುವನ್ನು ಎತ್ತಿಕೊಂಡಿದ್ದ ಸ್ತ್ರೀಯು ಅವರ ಪೈಕಿ ಒಬ್ಬಳಾಗಿದ್ದಳು. ಪೊಲೀಸಿನವರು ಸಂಪೂರ್ಣ ಜನರನ್ನು ಓಡಿಸಿ ಬಿಟ್ಟು ಕೆಲವು ವಾಲಂಟಿಯರನ್ನು ಮಾತ್ರ ಕೈದು ಮಾಡಿದರು.

ಕೆಲವು ದಿವಸಗಳ ಹಿಂದೆ ತಲಚೆರಿ ಬಳಿ ಮೇಲಸ್ಸೇರಿ ಎಂಬಲ್ಲಿ ನಡೆದ ಕಾನ್‌ಫರೆನ್ಸಿನ ಮತ್ತು ಮೆರವಣಿಗೆಯ ಸಂಬಂಧವಾಗಿ ಅಧ್ಯಕ್ಷರಾಗಿದ್ದ ಶ್ರೀಮತಿ ಪಿ. ಯಂ. ಕುಂಞ್ಞಾರುತರವರು ಮತ್ತು ಮೆ. ಗಳಾದ ಎಂ. ನಾರಾಯಣ ಪಿಷಾರೊಡಿ, ಎ. ಕೃಷ್ಣನ್, ಜೆ. ಯಂ. ಕುಂಞ್ಞಿಕಣ್ಣನ್ ನಂಬಿಯಾರ್‌ರವರುಗಳಿಗೆ ಒಂದೊಂದು ವರ್ಷ ಕಠಿಣ ಸಜೆಯೂ 25 ರೂಪಾಯಿ ಜುಲ್ಮಾನೆಯೂ, ತಪ್ಪಿದರೆ 1 ತಿಂಗಳ ಸಜೆಯೂ ವಿಧಿಸಲಾಗಿದೆ.

ಭೀಮವರಂ ತಾಲೋಕು ಕಾನ್‌ಫರೆನ್ಸು ತಾ. 25ರಲ್ಲಿ ಪ್ರಾತಃಕಾಲ ಗುಣುಪೂಡಿ ಶ್ರೀ ಸೋಮೇಶ್ವರ ಸ್ವಾಮಿವಾರಿ ದೇವಸ್ಥಾನದಲ್ಲಿ ಮೆ. ಟಿ. ಪ್ರಕಾಶಂ ಪಂತುಲುರವರ ಅಧ್ಯಕ್ಷತೆಯಲ್ಲಿ ನಡೆದು ಡೆಲ್ಲಿ ಕಾಂಗ್ರೆಸ್ಸಿನ ಠರಾವುಗಳು ಪಾಸು ಮಾಡಿದ ಮೇಲೆ 20 ಡೆಲಿಗೇಟರುಗಳು ಮೆರವಣಿಗೆ ಹೋದಾಗ್ಯೆ ಪೊಲೀಸರು ಲಾಠಿ ಚಾರ್ಜು ಮಾಡಿದಲ್ಲದೆ ಅಧ್ಯಕ್ಷರೇ ಮೊದಲಾದ ಕೆಲವರಿಗೆ ಬಲವಾದ ಪೆಟ್ಟಾಯಿತೆಂದೂ, ಅಧ್ಯಕ್ಷರೊಬ್ಬರು ಮಾತ್ರ ದಸ್ತಗಿರಿ ಮಾಡಲ್ಪಟ್ಟರೆಂದೂ ಸುದ್ದಿ.

ಈ ತಾ. 24ರ ಬೆಳಿಗ್ಯೆ ಟಾನುಕು ಎಂಬಲ್ಲಿ 14 ಸ್ವಯಂಸೇವಕರು, ಆ ದಿನ ಬೆಳಿಗ್ಯೆ ಅಲ್ಲಿ ಡಿಸ್ಟ್ರಿಕ್ಟ್ ಕಾನ್‌ಫರೆನ್ಸು ನಡಿಸಲ್ಪಟ್ಟಿತ್ತೆಂದು ಹೇಳುತ್ತಾ, ಅದರ ಅಧ್ಯಕ್ಷರ ಭಾಷಣದ ಮತ್ತು ಬೇರೆ ಮಹನೀಯರ ಭಾಷಣಗಳ ಪ್ರತಿಗಳನ್ನು ಹಂಚುತ್ತಾ ಮೆರವಣಿಗೆ ಹೋಗುತ್ತಿದ್ದಾಗ್ಯೆ ಪೊಲೀಸಿನವರು ಅವರನ್ನು ಚದುರಿಸಲು ಲಾಠಿ ಪ್ರಯೋಗ ಮಾಡಿದರೆಂದೂ, ಮೀಟಿಂಗಿನ ಅಧ್ಯಕ್ಷರಾಗಿದ್ದ ಮೆ. ಟಿ. ನಾರಾಯಣ ಮೂರ್ತಿಯವರೊಬ್ಬರು ದಸ್ತಗಿರಿ ಮಾಡಲ್ಪಟ್ಟರೆಂದೂ ವರ್ತಮಾನ.

ಡೆಲ್ಲಿಯಲ್ಲಿ ಪೊಲೀಸಿನವರು ಸ್ವಾಧೀನಪಡಿಸಿಕೊಂಡು ವಹಿಸಿರುವ ಕಾಂಗ್ರೆಸ್ ಶಿಬಿರಗಳನ್ನು ವಶಪಡಿಸಿಕೊಳ್ಳಲು ಕಳೆದ ವಾರ ಕಾಂಗ್ರೆಸ್ ಸ್ವಯಂಸೇವಕರು ಪ್ರಯತ್ನಿಸಿದರು. ಅವರು ಇದಕ್ಕಾಗಿ ಹೋಗುತ್ತಿರಲು ಜನಸ್ತೋಮವು ಅವರನ್ನು ಹಿಂಬಾಲಿಸಿತು. ಕಾವಲಿದ್ದ ಪೊಲೀಸರನ್ನು ಹೊರಡೂಡಿ ಸ್ವಯಂಸೇವಕರು ಶಿಬಿರದ ಒಳಗೆ ನುಗ್ಗಿದರು. ಕೂಡಲೆ ಸ್ಟೇಶನಿನಿಂದ ಪೊಲೀಸು ದಳ ಒಂದು ಬಂದು ನೆರೆದಿದ್ದವರನ್ನು ಚದರಿಸಿ, ಕೆಲವರನ್ನು ದಸ್ತಗಿರಿ ಮಾಡಿದರೆಂದು ವರ್ತಮಾನ.

ಗಾಂಧಿಯವರನ್ನು ಬಿಡುಗಡೆ ಮಾಡಲು ಸಂಭಾಷನೆಗಳು ನಡಿಸಲ್ಪಡುತ್ತಿವೆಯೆಂದು ಹೊರಟಿರುವ ವರ್ತಮಾನವು ನಿಜವಲ್ಲವೆಂತಲೂ, ಸರ್ ಹೋರ್‌ರವರು ಲಾರ್ಡ್ ಇರ್ವಿನರಂತೆ ಗಾಂಧಿಯವರೊಂದಿಗೆ ರಾಜಿಗೆ ಸಮ್ಮತಿಸುವರಾದರೂ ಪಾರ್ಲಿಮೆಂಟ್ (ಕಾಮನ್ಸ್) ಸಭೆಯಲ್ಲಿ ಬಹುಮತದವರಾದ ಕನ್‌ಸರ್ವೇಟಿವ್ ಪಕ್ಷದವರು ಎಂದೂ ಒಪ್ಪಲಿಕ್ಕಿಲ್ಲವೆಂತಲೂ ಲಂಡನಿನ "ದಿ ನ್ಯೂಸ್ ಕ್ರಾನಿಕಲ್" ಪತ್ರಿಕೆಯು ಪ್ರಕಟಿಸಿದೆ.

ತಾ. 26ರಲ್ಲಿ ಅಲ್ಲಹಾಬಾದಿನಲ್ಲಿ ಪೊಲೀಸರ ಸ್ವಾಧೀನದಲ್ಲಿರುವ 'ಸ್ವರಾಜ್ಯ ಭವನ'ವನ್ನು ಪುನಹ ಸ್ವಾಧೀನ ಮಾಡಿಕೊಳ್ಳಲು ಸುಮಾರು 100 ಜನ ಕಾಂಗ್ರೆಸ್ಸಿನವರು ರಾಷ್ಟ್ರೀಯ ಬಾವುಟಗಳೊಂದಿಗೆ ಹೊರಟರು. ಪೊಲೀಸಿನವರು ಅವರನ್ನು ಅಷ್ಟಗಟ್ಟಿ ತಡೆದು ಹಾಕಿದರು. ಒಂಬತ್ತು ಗಂಟೆಯ ವರೆಗೆ ಅವರೆಲ್ಲರೂ ರಸ್ತೆಯಲ್ಲಿ ಕುಳಿತಿದ್ದರು. ನಂತರ ಒಬ್ಬ ಸ್ತ್ರೀಯು ಸಮೇತ 17 ಜನ ಮುಖ್ಯಸ್ಥರನ್ನು ದಸ್ತಗಿರಿ ಮಾಡಿದರು. ಜೋರಾದ ಮಳೆ ಬಿದ್ದದರಿಂದ ನೆರೆದಿದ್ದ ಬಾಕಿಯವರು ಅಲ್ಲಿಂದ ಹೊರಟು ಹೋದರು.

ಏನೊಂದೂ ಅಧಿಕಾರವಿಲ್ಲದ ದುಂಡು ಮೇಜು ಪರಿಷತ್ತನ್ನು ಏರ್ಪಡಿಸಿದ ರೀತಿಯು ಸರಿಯಲ್ಲವಾದ ಕಾರಣ, ಸದರಿ ಪರಿಷತ್ತಿನಲ್ಲಿ ತಮಗೆ ವಿಶ್ವಾಸವಿದ್ದಿಲ್ಲವಾದುದರಿಂದ ಅದನ್ನು ನಿಲ್ಲಿಸಿದ್ದು ತಮಗೇನೂ ಬಾಧಕ ಉಂಟು ಮಾಡಿರುವುದಿಲ್ಲವೆಂತಲೂ, ಆರ್ಡಿನೇನ್ಸ್ ಆಡಳಿತವು ಇಂಡಿಯಾ ಸರಕಾರದ ಶಕ್ತಿನ ತತ್ವಕ್ಕೆ ವಿರೋಧವಾದದ್ದೆಂತಲೂ, ಅದು ಸ್ವಾಭಿಮಾನವುಳ್ಳ ಹಿಂದೀಯರು ಸರಕಾರದೊಂದಿಗೆ ಸಹಕರಿಸಲು ಅಶಕ್ತಮಾಡುತ್ತಿದೆಯೆಂದೂ, ಮತ್ತು ಮುಂದಿನ ರಚನೆಯು ಪ್ರಾಯ ಬಂದವರಿಗೆ ಓಟಿನ ಹಕ್ಕು ಮತ್ತು ಮಿಶ್ರ ಚುನಾವಣೆ ಉಳ್ಳದ್ದಾಗಿರಬೇಕೆಂದೂ ಮುಂತಾಗಿ ಬಂಗಾಳ ಮುಸ್ಲಿಂ ಲೀಗ್ ಕೌನ್ಸಿಲಿನವರು ತಾ. 26ರಲ್ಲಿ ಠರಾವು ಪಾಸು ಮಾಡಿರುವರು.

ಸರಕಾರದವರ ಲೆಕ್ಕದ ಮೇರೆ ಸತ್ಯಾಗ್ರಹ ಚಳವಳದ ಸಂಬಂಧವಾಗಿ ಮದ್ರಾಸು ಪ್ರಾಂತ್ಯವನ್ನು ಬಿಟ್ಟು ಬಾಕಿ ಹಿಂದೂಸ್ಥಾನದಲ್ಲೆಲ್ಲಾ ಜೂನ್ ತಿಂಗಳ ಅಖೈರಿನಲ್ಲಿ 26,560 ಜನರು ಜೈಲಿನಲ್ಲಿದ್ದರು. (ಮೇ ತಿಂಗಳ ಅಖೈರಿನಲ್ಲಿ 29,227 ಜನರೂ, ಏಪ್ರಿಲ್ ತಿಂಗಳ ಅಂತ್ಯದಲ್ಲಿ 30,674 ಜನರೂ ಕಾರಾಗೃಹದಲ್ಲಿದ್ದರು.) ಬೊಂಬಾಯಿಯಲ್ಲಿ 211 ಮತ್ತು ಅಸ್ಸಾಮಿನಲ್ಲಿ 22 ಹೆಚ್ಚಿದ್ದಲ್ಲದೆ ಬಾಕಿ ಎಲ್ಲಾ ಕಡೆಗಳಲ್ಲಿ ಕೈದಿಗಳ ಸಂಖ್ಯೆಯು ಕಡಿಮೆಯಾಗಿದೆ. ಬಂಗಾಳದಲ್ಲಿ 4835 ರಿಂದ 4544 ಕ್ಕೂ, ಸಂಯುಕ್ತ ಪ್ರಾಂತ್ಯದಲ್ಲಿ 6150 ರಿಂದ 5863 ಕ್ಕೂ, ವಾಯುವ್ಯ ಗಡಿ ಪ್ರಾಂತ್ಯದಲ್ಲಿ 3864 ರಿಂದ 3313 ಕ್ಕೂ ಮತ್ತು ಬಿಹಾರ್-ಒರಿಸ್ಸಾಗಳಲ್ಲಿ 3251 ರಿಂದ 2670 ಕ್ಕೂ ಇಳಿದಿದೆ. ಜೂನ್ ತಿಂಗಳಂತ್ಯದ ವರೆಗೆ ಕ್ಷಮಾಪಣೆ ಬೇಡಿ ಬಿಡುಗಡೆ ಹೊಂದಿದವರು 5846 (ಸಂಯುಕ್ತ ಪ್ರಾಂತ್ಯದಲ್ಲಿ 2561 ಮತ್ತು ವಾಯುವ್ಯ ಗಡಿ ಪ್ರಾಂತ್ಯದಲ್ಲಿ 2174.)

ಡಾಕ್ಟರ್ ಅನ್ಸಾರಿಯವರು ಆಗೋಸ್ತು ತಾ. 7ರಲ್ಲಿ ಯೂರೋಪಿಗೆ ಹೊರಟು ಹೋಗುವರು. ಹೋಗುವ ಮುಂಚೆ ಮಹಾತ್ಮ ಗಾಂಧಿಯವರನ್ನು ಜೈಲಿನಲ್ಲಿ ಕಂಡು ಮಾತಾಡಲು ಬಿಡುವಂತೆ ಸರಕಾರದವರನ್ನು ಕೇಳಿರುವರು. ಈ ಮಧ್ಯೆ ಪಂಡಿತ ಜವಾಹಿರ್‌ಲಾಲರವರ ಭೇಟಿಗೆ ಡೇರಾಡನ್ನಿಗೆ ಹೋಗಿರುವರು. ಲಂಡನಿನಿಂದ ಒಬ್ಬ ಸ್ನೇಹಿತರು ಈಗಿನ ಸ್ಥಿತಿಯನ್ನು ಕುರಿತು ಮಹಾತ್ಮರ ಅಭಿಪ್ರಾಯ ಕೇಳಿದಕ್ಕೆ, "ತನಗೆ ಈಗಿನ ರಾಜಕೀಯ ನಿಜ ಸ್ಥಿತಿ ಗೊತ್ತಿಲ್ಲವೆಂತಲೂ, ಪತ್ರಿಕೆಗಳಲ್ಲಿ ಕಾಣುವಷ್ಟು ಮಾತ್ರ ಗೊತ್ತಿದೆಯೆಂದೂ," ಅವರು ಉತ್ತರ ಕೊಟ್ಟಿರುವರೆಂತಲೂ, ನಿಜ ಸ್ಥಿತಿಯನ್ನು ತಿಳಿಸಲಿಕ್ಕಾಗಿಯೇ ಡಾ. ಅನ್ಸಾರಿಯವರು ಅವರ ಭೇಟಿಗೆ ಹೋಗುವದಾಗಿರಬೇಕೆಂದೂ, ಕಳೆದ ಸಾಲ ಗಾಂಧಿ–ಇರ್ವಿನ್ ಒಪ್ಪಂದಕ್ಕೆ ಅನ್ಸಾರಿಯವರೇ ಮುಖ್ಯ ಕಾರಣರೆಂತಲೂ, ಇದು ಲಾರ್ಡ್ ಇರ್ವಿನರವರ ಮತ್ತು ಅನ್ಸಾರಿಯವರ ಸ್ನೇಹಿತರೊಬ್ಬರ ಮೂಲಕ ನಡಿಸಲಾಯಿತೆಂದೂ, ಈಗಲೂ ಅಂಥಾ ಸ್ನೇಹಿತರೊಬ್ಬರು ಲಂಡನಿನಲ್ಲಿರುವರೆಂತಲೂ, ಇದರಿಂದ ಮುಂದೆ ಏನಾಗಬಹುದೆಂದು ವಾಚಕರು ಊಹಿಸಿಕೊಳ್ಳಬಹುದೆಂದೂ ಸಿಮ್ಲಾದ ಪತ್ರಿಕಾ ಪ್ರತಿನಿಧಿಯೊಬ್ಬನು 'ಹಿಂದೂ' ಪತ್ರಿಕೆಗೆ ಬರೆದಿರುವನು.

ಬೇಕಾಗಿದೆ.

ಕೊಡಗಿನ ಎಲ್ಲಾ ಮುಖ್ಯ ಪಟ್ಟಣಗಳಿಗೆ ಒಬ್ಬೊಬ್ಬ ಏಜೆಂಟರು ಬೇಕಾಗಿದೆ. ಏಜೆಂಟರುಗಳು ಸದ್ಗೃಹಸ್ಥರೂ, ಪ್ರತಿಷ್ಠೆಯುಳ್ಳವರೂ ಆಗಿರಬೇಕು. ಮಾಹೆಯಾನ ಸಂಬಳ ರೂ. 30 ಮತ್ತು ಕಮಿಷನ್. ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮೇನೇಜರ್,
ದಿ ಕಲ್ಕತ್ತಾ ಫೈನಾನ್ಸ್ ಮತ್ತು
ಏಜೆನ್ಸಿ ಸಿಂಡಿಕೇಟ್ ಲಿಮಿಟೆಡ್,
4—2 ಮಡಿಕೇರಿ.

ಸ್ತ್ರೀ ಶಿಕ್ಷಣವು ಹೇಗಿರಬೇಕು?

ಕಲ್ಕತ್ತೆಯ 'ಮೋಡರ್ನ ರಿವ್ಯು' ಪತ್ರಿಕೆಯ ಸಂಪಾದಕರೂ ಘನ ವಿದ್ವಾಂಸರೂ ಆದ ಶ್ರೀ ರಾಮಾನಂದ ಚಟರ್ಜಿಯವರು ಕರ್ವೆ ಮಹಿಳಾ ವಿದ್ಯಾ ಪೀಠದ ಪದವೀದಾನ ಸಮಾರಂಭದ ಕಾಲಕ್ಕೆ ಮಾಡಿದ ಭಾಷಣದ ಕೆಲವು ಮುಖ್ಯ ಮಾತುಗಳನ್ನು ಈ ಕೆಳಗೆ ಕೊಡುತ್ತೇವೆ.

ರಾಷ್ಟ್ರೀಯ ಕಾರ್ಯವನ್ನು ಮಾಡುವಾಗ ಸ್ತ್ರೀಪುರುಷರಿಬ್ಬರೂ ಒಂದೇ ಕಾರ್ಯ ಕ್ಷೇತ್ರದಲ್ಲಿ ಕೆಲಸ ಮಾಡಬೇಕಾಗುವುದು. ಇದಲ್ಲದೆ ಗೃಹಕೃತ್ಯದಲ್ಲಿ ಈ ಇಬ್ಬರ ಕ್ಷೇತ್ರವು ಒಂದೇ. ಆದುದರಿಂದ ಸ್ತ್ರೀಯರಿಗೆ ಗೃಹ ಶಿಕ್ಷಣ ಕೊಡಲೇ ಬೇಕು. ಅವರ ಕಾರ್ಯದ ಮರ್ಯಾದೆಯು ಮನೆಯ ಪೂರ್ತಿ ಇರಬೇಕೆಂತಲ್ಲ. ತಮ್ಮ ಸಲುವಾಗಿ ಹಾಗೂ ದೇಶ್ಯದ ಕರುಣಾರ ಸಲುವಾಗಿ ಸ್ತ್ರೀಯರು ದುಡಿಯಬೇಕಾಗುವುದು. ಈ ಕರ್ತವ್ಯವನ್ನು ಪಾಲುಗೊಳಿಸುವುದಕ್ಕಾಗಿ ಅವಶ್ಯವಾದ ಶಿಕ್ಷಣವನ್ನೂ ಸ್ತ್ರೀಯರಿಗೆ ಕೊಡಬೇಕು. ಅಂತಹ ವಿಷಯಗಳ ಸಮಾವೇಶವು ಹಿಂದೀ ಮಹಿಳಾ ವಿದ್ಯಾಪೀಠದ ಅಭ್ಯಾಸ ಕ್ರಮದಲ್ಲಿ ಆಗಿದೆ. ಪ್ರಮುಖ ಶಿಕ್ಷಣ ಕ್ರಮದಲ್ಲಿ ಗಾಯನ, ಚಿತ್ರಕಲೆ, ಗೃಹಶಾಸ್ತ್ರ ಇವುಗಳ ಸಮಾವೇಶವಾಗಬೇಕು. ಅದರಂತೆ ಸ್ತ್ರೀಯರಿಗೆ ಶಿಲ್ಪ ಕಲೆಯ ಶಿಕ್ಷಣ ಕೊಡಬೇಕು.

ಅರ್ಥಶಾಸ್ತ್ರ ಇತಿಹಾಸ ಈ ಎರಡು ವಿಷಯಗಳನ್ನು ಸ್ತ್ರೀಪುರುಷರಿಬ್ಬರಿಗೂ ಕಲಿಸಿದರೂ ಅದನ್ನು ಕಲಿಸುವಾಗ ಬೇರೆ ಬೇರೆ ದೃಷ್ಟಿಯನ್ನಿಡಬೇಕು. ರವೀಂದ್ರನಾಥ ಠಾಕೂರರು ಅನ್ನುವಂತೆ ಸ್ತ್ರೀಯರಿಗೆ ತಮ್ಮ ಮಕ್ಕಳಿಗೆ ಸುಲಭವಾದ ಭಾಷೆಯಲ್ಲಿ ಗೃಹ ಶಿಕ್ಷಣ ಕೊಡುವಂತೆ ಶಿಕ್ಷಣ ಕೊಡಬೇಕು. ರವೀಂದ್ರನಾಥರ ವಿದ್ಯಾಲಯದಲ್ಲಿ ಸ್ತ್ರೀ ಪುರುಷರಿಬ್ಬರಿಗೂ ಒಟ್ಟಿಗೆ ಶಿಕ್ಷಣ ಕೊಡಲ್ಪಡುತ್ತಿದೆ. ಹಾಗೂ ಸ್ತ್ರೀಯರಿಗೆ ಯುಕ್ತವಾದ ಶಿಕ್ಷಣ ಕೊಡುವಂತೆ ಲಕ್ಷ್ಯವು ಪೂರೈಸಲ್ಪಡುತ್ತದೆ.

ಶಿಕ್ಷಣ ಮತ್ತು ಔಷಧೋಪಚಾರದ ಈ ಎರಡು ವ್ಯವಸಾಯಗಳನ್ನು ಸ್ತ್ರೀಯರು ಮಾಡುವಂತೆ ಹಿಂದೀ ಮಹಿಳಾ ವಿದ್ಯಾಪೀಠವು ಶಿಕ್ಷಣ ಕೊಡಬೇಕು. ಈ ಹೇತುವನ್ನು ಕೊನೆಗೆ ಮುಟ್ಟಿಸುವುದಕ್ಕಾಗಿ ಸರ್ಕಾರವು ಆ ಸಂಸ್ಥೆಗೆ ಮಾನ್ಯತೆ ಕೊಡಬೇಕು.

ರಾಜಕೀಯ ದಾಸ್ಯದ ಮೂಲಕ ನಾವು ಇಂಗ್ಲಿಷ್ ಭಾಷೆಯನ್ನು ಕಲಿಯಬೇಕಾಗುತ್ತದೆ. ಹಿಂದಿಯು ಇಡೀ ದೇಶದಲ್ಲಿ ಏಕ ಭಾಷೆಯಾಗಬೇಕೆಂದು ಹಿಂದೀ ಮಹಿಳಾ ವಿದ್ಯಾಪೀಠದವರು ಆ ಭಾಷೆಯನ್ನೂ ಕಲಿಸುವರು.

ಇಂಗ್ಲಿಷ್ ಭಾಷೆಯ ಜ್ಞಾನವು ಮಹಿಳೆಯರಿಗೆ ಬೇಡವೇ ಬೇಡವೆಂದು ನಾನು ಹೇಳುವುದಿಲ್ಲ. ಸ್ತ್ರೀಯರು ಸರ್ಕಾರದ ಕಡೆಗೆ ಇಲ್ಲವೇ ವ್ಯಾಪಾರಿಗಳ ಕಡೆಗೆ ನೌಕರಿ ಕೊಡಿರೆಂದು ಬೇಡುವುದಕ್ಕೆ ಹೋಗಬೇಕಾಗಿಲ್ಲ. ಆದರಿಂದ ಸ್ತ್ರೀಯರಿಗೆ ಪುರುಷರಷ್ಟು ಇಂಗ್ಲಿಷು ಬರಬೇಕಾದ ಅವಶ್ಯಕತೆ ಇಲ್ಲ. ಹಿಂದೀ ಮಹಿಳಾ ವಿದ್ಯಾ ಪೀಠದವರು ಎರಡನೆಯ ಭಾಷೆಯಾಗಿ ಇಂಗ್ಲಿಷಿಗೆ ಮಹತ್ವವನ್ನು ಕೊಟ್ಟಿದ್ದಾರೆ. ವಿಚಾರ ವಿನಿಮಯ ಮಾಡುವ ಬಗ್ಗೆ ಆ ಭಾಷೆಯ ಉಪಯೋಗವು ಸ್ತ್ರೀಯರಿಗೆ ಇರುವುದು.

ವಾಚನ, ಲೇಖನ, ಅಂಕ ಗಣಿತ, ಇತಿಹಾಸ, ಭೂಗೋಲ ಈ ವಿಷಯಗಳನ್ನು ಮಾತೃಭಾಷೆಯಿಂದಲೇ ಕಲಿಸಬೇಕು.

ಕಳೆದ ೧೫೦ ವರ್ಷಗಳಿಂದ ಇಂಗ್ಲಿಷ್ ಭಾಷೆಯ ಪ್ರಸಾರವಾಗ ಹತ್ತಿದ್ದರೂ ಈ ಅವಧಿಯಲ್ಲಿ ೩೧ ಕೋಟಿ ಹಿಂದೀ ಪ್ರಜೆಗಳಲ್ಲಿ ಇಂಗ್ಲಿಷು ಬಲ್ಲವರ ಸಂಖ್ಯೆ ೧೯೩೧ರಲ್ಲಿ ೨೫ ಲಕ್ಷ ಮಾತ್ರ ಇತ್ತು. ಈ ಭಾಷೆಯು ಹಿಂದೂಸ್ಥಾನದ ಎಲ್ಲ ಜನರಿಗೆ ತಿಳಿಯುವಂತೆ ಆಗಲಿಕ್ಕೆ ಮೇಲಿನ ದರದಿಂದ ೨೧ ಸಾವಿರ ವರ್ಷಗಳು ಬೇಕಾಗಬಹುದು.

ಕೇವಲ ಮಾತೃಭಾಷೆಯು ಸಾರ್ವತ್ರಿಕ ಪ್ರಸಾರವಾಗುವುದಕ್ಕೇ ಎಷ್ಟೋ ಕಾಲ ಹಿಡಿಯಬಹುದು. ಇಂಗ್ಲಿಷ್ ಭಾಷೆಯ ಪ್ರಸಾರಕ್ಕಿಂತ ಮಾತೃಭಾಷೆಯ ಪ್ರಸಾರವು ಸಹಜವಾಗಿ ಬೇಗನೆ ಆಗಬಹುದು.

ಕಾಲೇಜುಗಳಲ್ಲಿ ಉಚ್ಚ ಶಿಕ್ಷಣವನ್ನು ದೇಶೀ ಭಾಷೆಯಲ್ಲೇ ಕೊಡುವ ವ್ಯವಸ್ಥೆಯಾಗಬೇಕು. ಪ್ರತ್ಯೇಕಕ್ಕೆ ಪಾರಿಭಾಷಿಕ ಶಬ್ದಗಳನ್ನು ತಯಾರಿಸುವ ಪ್ರಯತ್ನವು ನಡೆದೇ ಇರುವುದು. ಕಾಲೇಜಿನಲ್ಲಿ ಉಪಯೋಗಿಸುವ ಬೇರೆ ಬೇರೆ ವಿಷಯಗಳ ಪಠ್ಯ ಪುಸ್ತಕಗಳು ಈ ವರೆಗೂ ತಯಾರಾಗದಿದ್ದರೂ ಅಧ್ಯಾಪಕರು ಇಂಗ್ಲಿಷ್ ಗ್ರಂಥಗಳ ಆಧಾರದಿಂದ ದೇಶೀ ಭಾಷೆಗಳಲ್ಲಿ ಟಿಪ್ಪಣಿಗಳನ್ನು ತಯಾರಿಸಬೇಕು. ಆಗ ಅವು ಪುಸ್ತಕದಲ್ಲಿ ರೂಪಾಂತರ ಹೊಂದಬಹುದು. ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ ಈ ದೇಶಗಳಲ್ಲಿ ದೇಶೀ ಭಾಷೆಯಲ್ಲಿ ಈ ಕ್ರಮದಿಂದಲೇ ಪುಸ್ತಕಗಳು ಬೆಳೆದುವು.

೧೯೩೧ರಲ್ಲಿ ಗುಜರಾಥೀ ಭಾಷೆ ಮಾತಾಡುವವರ ಸಂಖ್ಯೆ ೯೬ ಲಕ್ಷವಿತ್ತು. ಯೂರೋಪಿನೊಳಗಣ ಕೆಲವು ದೇಶಗಳ ಸಂಖ್ಯೆ ಈ ಕೆಳಗಿನಂತೆ ಇದೆ.

ಡೆನ್ಮಾರ್ಕ	೩.೫೪ ಲಕ್ಷ
ಗ್ರೀಸ್	೭೦ ,,
ಹಂಗರಿ	೮೦ ,,
ಹಾಲಂಡ್	೭೫ ,,
ನಾರ್ವೆ	೨೮ ,,
ಪೋರ್ತುಗಾಲ್	೬೪ ,,
ಸ್ವೀಡನ್	೬೧ ,,

ಈ ದೇಶಗಳಲ್ಲಿ ಪ್ರಾಥಮಿಕ ಶಿಕ್ಷಣದಿಂದಾರಂಭಿಸಿ ವಿಶ್ವ ವಿದ್ಯಾಲಯದ ವರೆಗಿನ ಎಲ್ಲ ಪಠ್ಯಪುಸ್ತಕಗಳೂ ಆಯಾ ರಾಷ್ಟ್ರದ ದೇಶಭಾಷೆಯಲ್ಲೇ ತಯಾರಿಸಲ್ಪಟ್ಟಿವೆ. ಕೆಲವು ಕಠಿಣ ವಿಷಯಗಳ ಜ್ಞಾನವಾಗುವುದಕ್ಕೆ ಇತರ ಭಾಷೆಗಳು ಉಪಯೋಗಿಸಲ್ಪಡುತ್ತವೆ. ಅದರಂತೆ ಇಂಗ್ಲಿಷರೂ ಇತರ ಭಾಷೆಗಳನ್ನು ಉಪಯೋಗಿಸುತ್ತಾರೆ.

ಕಾಲೇಜುಗಳಲ್ಲಿ ಮಾತೃಭಾಷೆಯ ಉಪಯೋಗವಾಗತುತ್ತೆಂದರೆ ಶಾಸ್ತ್ರ, ಇತಿಹಾಸ, ತತ್ವಜ್ಞಾನ ಮುಂತಾದ ವಿಷಯಗಳಲ್ಲಿ ಆ ಭಾಷೆಯಲ್ಲಿ ಹೊಸ ಗ್ರಂಥಗಳ ರಚನೆಯಾಗಿ ಭಾಷೆಯು ಅಭಿವೃದ್ಧಿ ಹೊಂದುವುದು. ಶಾಸ್ತ್ರ, ಗಣಿತ ಮುಂತಾದ ವಿಷಯಗಳನ್ನು ಬಿ. ಎ. ಯವರೂ ಬಂಗಾಲಿಯಲ್ಲೇ ಕಲಿಸುವ ಉಪಕ್ರಮವು ಪ್ರಾರಂಭವಾಗಿದೆ. ಮಾತೃ ಭಾಷೆಯನ್ನೇ ಮಾಧ್ಯಮ (ಮೀಡಿಯಂ ಆಫ್ ಇನ್‌ಸ್ಟ್ರಕ್ಷನ್—ಶಿಕ್ಷಣ ಕೊಡುವ ಭಾಷೆ)ವಾಗಿ ಮಾಡಿದರೆ ಅದು ಸಿರಸ್ಕರ ವರ್ಗದ ವರೆಗೆ ಸಹಜವಾಗಿ ಪ್ರಸಾರವಾಗಬಹುದು.

ಇಂಗ್ಲಿಷ್ ಭಾಷೆಯ ಪ್ರಸಾರದಿಂದ ಸುಶಿಕ್ಷಿತ ಮತ್ತು ಸಾಮಾನ್ಯ ಜನ ವರ್ಗ, ಇವರಲ್ಲಿ ಸಂಬಂಧವೇ ಇಲ್ಲದಂತಾಗಿದೆ. ಆದರಿಂದ ಸಮಾಜದಲ್ಲಿ ಏಕರಸವುಂಟಾಗಲು ವಿಘ್ನವಾಗುತ್ತದೆ. ನಮ್ಮ ಎಲ್ಲ ವ್ಯವಹಾರವೂ ಮಾತೃ ಭಾಷೆಯಲ್ಲಿ ನಡೆದರೆ ತೀರ ಕಡಿಮೆ ವರ್ಗದ ಜನರು ಅದನ್ನು ಗ್ರಹಣ ಮಾಡಲು ಶಕ್ಯವಾಗುವುದು. ಇಂಗ್ಲಿಷ್ ಭಾಷೆಯನ್ನು ಮಾತಾಡುವುದಕ್ಕೂ ಓದುವುದಕ್ಕೂ ಕಲಿಯಲು ಬಹು ಕಾಲ ಮತ್ತು ಉತ್ಸಾಹದ ಅಪವ್ಯಯವಾಗಬಾರದು. ಕೇವಲ ವ್ಯವಹಾರಕ್ಕೆ ಪೂರ್ತಿ ಆ ಭಾಷೆಯ ಜ್ಞಾನವಿದ್ದರೆ ಸಾಕು. ಆದರಿಂದ ಇಂಗ್ಲಿಷನ್ನು ಎರಡನೆಯ ಭಾಷೆಯನ್ನಾಗಿ ಕಲಿಸಬೇಕು.

ಸರ್ಕಾರವು ನೇಮಿಸಿದ ಬೇರೆ ಬೇರೆ ಕಲ್ಜಾರು ಇಂಗ್ಲಿಷನ್ನು ಉಪಯೋಗಿಸುತ್ತಿದ್ದರೂ ಅವರು ತಮ್ಮ ಶಿಕ್ಷಣವನ್ನು ದೇಶೀ ಭಾಷೆಯಲ್ಲೇ ಹೊಂದಿದವರಿರುತ್ತಾರೆ. ಆದಕ್ಕಾಗಿ ಅವರ ದರ್ಜೆಯು ಕಡಿಮೆ ತರಗತಿಯದೆಂದು ಯಾರೂ ತಿಳಿಯುವುದಿಲ್ಲ. ಇದೇ ಉಪಕ್ರಮವು ನಮ್ಮ ದೇಶದಲ್ಲೂ ನಡೆಯಬೇಕು. ಯಾವುದೇ ವಿಷಯದ ಜ್ಞಾನವು ದೇಶೀ ಭಾಷೆಯಲ್ಲೇ ಬೇಗನೆ ದೊರೆಯುವುದು. ಹಾಗೂ ಅದು ಚೆನ್ನಾಗಿ ಬಿಂಬಿಸುತ್ತದೆ.

ನಾನು ನನ್ನ ೧೧ನೆಯ ವರ್ಷದಲ್ಲಿ ಮುಲ್ಕೀ (ವರ್ನಾಕ್ಯುಲರ ಫೈನಲ್) ಪರೀಕ್ಷೆಯಲ್ಲಿ ಪಾಸಾದೆನು. ಆದರಿಂದ ನಾನು ಭೂಮಿತಿ, ಭೂಗೋಲ, ಅಂಕಗಣಿತ, ರಸಾಯನ ಶಾಸ್ತ್ರ, ಆರೋಗ್ಯ, ಇತಿಹಾಸ ಮುಂತಾದ ವಿಷಯಗಳನ್ನು ದೇಶ ಭಾಷೆಯಲ್ಲೇ ಕಲಿಯಬೇಕಾಯಿತು. ಆದರಿಂದ ೮ ವರ್ಷದ ಬದಲು ನಾಲ್ಕೇ ವರ್ಷಗಳಲ್ಲಿ ಮೆಟ್ರಿಕ್ಯುಲೇಶನ್ನಿನ ತಯಾರಿಯಾಯಿತು.

ಹಿಂದೀ ಮಹಿಳಾ ವಿದ್ಯಾಪೀಠದಲ್ಲಿ ಮರಾಠಿ, ಗುಜರಾಥಿ, ಸಿಂಧಿ, ತೆಲಗು ಈ ಮಾತೃಭಾಷೆಯುಳ್ಳ ವಿದ್ಯಾರ್ಥಿನಿಯರಿದ್ದು, ಇಬ್ಬರು ಬಂಗಾಲಿಗಳೂ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ. ಕೇವಲ ಮೆಟ್ರಿಕ್ಯುಲೇಶನ್ ವರೆಗಲ್ಲ, ಎಮ್. ಎ. ಪರೀಕ್ಷೆಗೂ ಸಹ ಕಲ್ಕತ್ತಾ ವಿಶ್ವ ವಿದ್ಯಾಲಯವು ದೇಶೀ ಭಾಷೆಗೆ ಮಾನ್ಯತೆ ಕೊಟ್ಟಿದೆ.

'ರಾ. ಬ.'

ಶ್ರೀ. ವಿ. ಜೆ. ಪಟೇಲರು ಐರ್ಲ್ಯಾಂಡಿನಲ್ಲಿ ಕೊಟ್ಟ ಅಭಿಪ್ರಾಯ.

('ಐರಿಷ್ ನ್ಯೂಸ್' ನಿಂದ 'ಸ್ವರಾಜ್ಯ' ಪತ್ರಿಕೆಯು ಎತ್ತಿದರ ತರ್ಜುಮೆ.)

'ಇಂಡಿಯಾದ ಹೆಚ್ಚಿನ ಕೈದಿಗಳನ್ನು ಬಹಳ ಕಠಿಣತರದಿಂದ ಇಡುತ್ತಾರೆ. ಜೈಲುಗಳೆಲ್ಲಾ ಭರ್ತಿಯಾಗಿ, ರಾಜಕೀಯ ಕೈದಿಗಳಿಗೆ ಜಾಗ ಮಾಡಲಿಕ್ಕಾಗಿ ಇತರ ತಕ್ಸೀರ್ ಮಾಡಿದ ಕೈದಿಗಳನ್ನು ಅವಧಿಗೆ ಮುಂದಾಗಿ ಬಿಡುಗಡೆ ಮಾಡುತ್ತಾರೆ. ಕೆಲವು ಮುಖಂಡರನ್ನು—ನಾನು ಸಹಿತ—ಮಾತ್ರ ಚನ್ನಾಗಿ ನೋಡುತ್ತಾರೆ. ಇದರಿಂದ ನಮಗೆಲ್ಲರಿಗೂ ಸಿಟ್ಟೇರುತ್ತದೆ. ಎಲ್ಲರನ್ನೂ ಒಂದೇ ತರಹವಾಗಿ ನೋಡಬೇಕೆಂತ ಕೇಳುತ್ತೇವೆ.

ಜನವರಿಯಿಂದೀಚೆಗೆ ಒಂದು ಲಕ್ಷಕ್ಕಿಂತ ಹೆಚ್ಚು ಜನನ್ನು ದಸ್ತಗಿರಿಮಾಡಿದ್ದಾರೆ. ಒಂದು ವಾರದಲ್ಲಿ ಒಂದು ಗ್ರಾಮದ ಮೀಟಿಂಗಿನಲ್ಲಿ 700 ಜನರಿಗಿಂತ ಹೆಚ್ಚಾಗಿ ದಸ್ತಗಿರಿ ಮಾಡಿದರು. ಒಟ್ಟು ಹಿಂದುಸ್ಥಾನವೇ ಎದ್ದಿದೆ. ಸಮಾಧಾನ ತಾಳಿದ್ದಾರೆ. ಎದುರು ನಿಲ್ಲುವುದಿಲ್ಲ. ಆದರೆ ಶರಣಾಗತರಾಗುವುದಿಲ್ಲ.

ಎಲ್ಲಾ ಚಳವಳಿಯನ್ನೂ ಅಣಗಿಸಿದ್ದಾರೆ. ಆದರೆ ಎಲ್ಲ ಪೂ ಮೀಟಿಂಗುಗಳೂ, ಪಿಕೆಟಿಂಗೂ, ಕಾಂಗ್ರೆಸ್ ಕೆಲಸಗಳೂ, ಪತ್ರಿಕೆಗಳೂ ನಡೆಯುತ್ತಲೇ ಇವೆ. ಕಬ್ಬಿಣಕಟ್ಟು ಹಾಕಿದ ಬದುರು ದೊಣ್ಣೆಯಿಂದ ಗಂಡಸು, ಹೆಂಗಸು, ಮಕ್ಕಳನ್ನು ಪೋಲೀಸಿನವರು ಹೊಡೆಯುತ್ತಾರೆ. ಗಾಯ ಪಟ್ಟವರಿಗೆ ಚಿಕಿತ್ಸೆ ಮಾಡಲು ನಮ್ಮ ಕಾಂಗ್ರೆಸ್ ಆಸ್ಪತ್ರೆಗಳಿವೆ.

ಸರಕಾರದ ಹಕ್ಕಾದ ಸಾರಾಯಿ ಅಂಗಡಿಗಳ ಮುಂದೆ ಗಂಡಸರು ಹೆಂಗಸರು ಪಿಕೆಟ್ ಮಾಡುತ್ತಾರೆ. ಬ್ರಿಟಿಷ್ ವಸ್ತು ಬಹಿಷ್ಕಾರ ಮಾಡಬೇಕೆನ್ನುತ್ತಾರೆ. ರಾಶಿರಾಶಿ ಪರದೇಶೀ ಬಟ್ಟೆಯನ್ನು ಬಹಿರಂಗವಾಗಿ ಸುಡುತ್ತಾರೆ.

ಹಿಂದೂ ಮುಸಲ್ಮಾನರ ಜಗಳವು ಸ್ವಾತಂತ್ರ್ಯ ಸಿಕ್ಕಿದ ಮರನೇ ಇಲ್ಲವಾಗುತ್ತದೆ. ದೊಡ್ಡ ಪಟ್ಟಣಗಳಲ್ಲಿ ಇಂಥಾ ಜಗಳಗಳನ್ನು ಹುಟ್ಟಿಸುತ್ತಾರೆ. ಆದರೆ ಅದರಲ್ಲಿ ವಿಶೇಷವೇನೂ ಇಲ್ಲ. ಇಂಡಿಯಾವು ಕಷ್ಟವನ್ನು ಸಹಿಸಿಯೇ ಸ್ವಾತಂತ್ರ್ಯವನ್ನು ಪಡೆಯುತ್ತದೆ. ಐರ್‌ಲ್ಯಾಂಡು ಶತಮಾನಗಳ ವರೆಗೆ ಕಷ್ಟ ಅನುಭವಿಸಬೇಕಾಯಿತು.

ಏಸೆಂಬ್ಲಿ ಅಧ್ಯಕ್ಷಸ್ಥಾನವನ್ನು ಬಿಟ್ಟುಕೊಡಲು ನಿಮಗೆ ವ್ಯಸನವಾಯಿತೋ ಎಂತ ಕೇಳಿದ್ದಕ್ಕೆ—ನಾವೇನು ಮಾಡಲಿ? ನನ್ನ ದೇಶೀಯರನ್ನು ಜೈಲಿಗೆ ಹಾಕಲು ಪ್ರಾರಂಭಿಸಿದರು. ನಾನು ಬಿಡಬೇಕಾಯಿತು. ಕಾಂಗ್ರೆಸಿನವರು ಬಿಡಬೇಕೆಂದರು. ನಾನು 1930 ರಲ್ಲಿ ಬಿಟ್ಟೆನು. ರಾಷ್ಟ್ರೀಯ ಚಳವಳಿಯವರು ನಾನು ಈ ಪದವಿಯನ್ನು ತೆಗೆದುಕೊಳ್ಳಬೇಕೆಂದರು; ತೆಗೆದುಕೊಂಡೆ.

ಮುಂದೇನಾಗುವಂತಿದೆ ಎಂತ ಕೇಳಿದ್ದಕ್ಕೆ—"ಕಷ್ಟಪಡುವುದು, ಜಯಶಾಲಿಗಳಾಗುವುದು"—ಎಂದರು. "ನಮ್ಮ ಸಂಖ್ಯೆಯು ಬಹಳ ದೊಡ್ಡದು. ನಮ್ಮೊಡನೆ ಹೋರಾಡಲು ಬ್ರಿಟಿಷರಿಗೆ ಸಾಧ್ಯವಿಲ್ಲ. ನಮ್ಮ ಹತ್ತು ಲಕ್ಷ ಜನರು ಬಿದ್ದಿದ್ದಾರೆ. ಅವರು ಗಾಡಿಗೆ ಎರಡು ಪಡೆಯನ್ನು ಉಪಯೋಗಿಸುತ್ತಾರೆ. ಆದರೆ ಹಿಂದೂಸ್ಥಾನದ ಜನಸಮುದಾಯವನ್ನು ಅಣಗಿಸಲು ಅವರಿಂದ ಸಾಧ್ಯವಿಲ್ಲ.

ಆದರೆ ಈ ಮಧ್ಯೆ ಅವರಿಗೆ ಇಂಡಿಯಾದಲ್ಲಿ ಇದ್ದ ವ್ಯಾಪಾರವು ನಿಂತು ಹೋಗಿದೆ. ಹಿಂದುಸ್ಥಾನವನ್ನು ಬಿಡುವುದಕ್ಕಿಂತ ಇಟ್ಟುಕೊಳ್ಳುವುದೇ ಅವರಿಗೆ ನಷ್ಟವನ್ನುಂಟುಮಾಡುತ್ತದೆ. ಹತ್ತು ವರ್ಷಗಳೊಳಗೆ ಇಂಡಿಯಾದಿಂದ ಬ್ರಿಟಿಷು ಹೊರಟು ಹೋಗುತ್ತದೆ. ಇಂಡಿಯಾಕ್ಕೆ ಸ್ವಾತಂತ್ರ್ಯ ದೊರಕುತ್ತದೆ.

ಆ ವರೆಗೆ ನಾವು ಕಷ್ಟವನ್ನನುಭವಿಸುತ್ತಲೇ ಇರುತ್ತೇವೆ. ಆ ದಾರಿಯಿಂದಲೇ ನಾನು ಗೆಲುವನ್ನು ಪಡೆಯಬೇಕಾಗಿದೆ.

ಸೃಷ್ಟಿಯ ವಿಚಿತ್ರಗಳು.

(1) ಲಾಹೋರಿನ ಜನನಾ ಆಸ್ಪತ್ರೆಯಲ್ಲಿ 7 ವರ್ಷದ ಹುಡುಗಿಯೊಬ್ಬಳು ಹೆತ್ತಿರುವಳು! ಜನನ ಮರಣದ ರಜಿಸ್ಟರಿನ ಪ್ರಕಾರ ಇವಳ ಜನನ 1925ರಲ್ಲಿ. ಈಕೆಯು ನ್ಯೂನತೆ ವಿಲ್ಲ. ಬಹಿಷ್ಟೆಯಾಗಿಯೂ ಇರಲಿಲ್ಲ. ಡಾಕ್ಟರುಗಳು ಇದನ್ನು ಪರೀಕ್ಷಿಸುತ್ತಿರುವರು. (2) ಮೀನುಗಳು ಸಾಮಾನ್ಯವಾಗಿ ಮೊಟ್ಟೆ ಇಟ್ಟು ಮರಿಮಾಡುವುದಾಗಿದೆ. ಆದರೆ ಜಪಾನಿನಲ್ಲಿರುವ ಡೈಟೆಪೂ ಎಂಬ ಒಂದು ವಿಶೇಷ ಜಾತಿಯ ಮೀನು ಮರಿಗಳನ್ನೇ ಹಾಕುತ್ತದೆ. (3) ಈಗ್ಗೆ 15—16 ವರ್ಷಗಳ ಹಿಂದೆ ಇಂಗ್ಲೆಂಡಿನಲ್ಲಿ ಒಬ್ಬನು ಒಂದು ಬೆಕ್ಕನ್ನು ಮುದ್ದಾಗಿ ಸಾಕಿಕೊಂಡಿದ್ದನು. ಆ ಬೆಕ್ಕು ಒಂದು ಇಲಿಯನ್ನು ಸಾಕಿಕೊಂಡು ಅದರ ಸಂಗಡ ಸರಸವಾಡುತ್ತಿತ್ತು. ಆ ಇಲಿಯು ಬೆಕ್ಕಿನ ಮೈಮೇಲೆಲ್ಲಾ ಓಡಾಡಿಕೊಂಡು ಆಟವಾಡುತ್ತಿದ್ದಿತು. (4) ಯೂರೋಪಿನ ಮಹಾಸಂಗ್ರಾಮದಲ್ಲಿ ಒಬ್ಬ ಸೋಲ್ಜರನ ಹಣೆಗೆ ಗುಂಡು ತಗಲಿ ಒಂದು ರಂಧ್ರ ಬಿದ್ದಿರುವುದು. ಆ ಸೋಲ್ಜರನು ಆ ರಂಧ್ರದಲ್ಲಿ ಸಿಗರೇಟನ್ನಿಟ್ಟುಕೊಂಡು ಸೇದುತ್ತ ಅದರ ಹೊಗೆಯನ್ನು ಬಾಯಿಯಲ್ಲಿ ಬಿಡುವನು. (5) ಸಾಮಾನ್ಯವಾಗಿ ನೀರಿನಲ್ಲಿ ಮೀನುಗಳು ಗಾಳಗಳ ಮೂಲಕ ಹಿಡಿಯಲ್ಪಡುವವಷ್ಟೆ. ವೈಜಿಲ್ ದೇಶಕ್ಕೆ ಸೇರಿದ ಎಲ್‌ಗ್ರಾನ್ ಎಂಬ ಊರಿನಲ್ಲಿ ಭೂಮಿಯನ್ನಗೆದು ಮೀನನ್ನು ಹಿಡಿಯುವರು. (6) ಫ್ರಾನ್ಸ್ ದೇಶದಲ್ಲಿ ಒಬ್ಬ ರೈತನಿಗೆ ಜನನಾರಭ್ಯ ಎರಡು ಮೂಗುಗಳಿರುತ್ತವೆ. (7) ಫ್ರಾನ್ಸಿಗೆ ಸೇರಿದ ಫ್ರಾನ್ಸೋ ಪೋರ್ಟ ಎಂಬಲ್ಲಿ ಒಬ್ಬ ಸ್ತ್ರೀಗೆ 2 ನಾಲಿಗೆಗಳಿರುತ್ತವೆ, ಆದರೆ ಮಾತನಾಡಲಿಕ್ಕೆ ಮಾತ್ರ ಆಗುವುದಿಲ್ಲ!

ಜನರಲ್ ಅಷ್ಯೂರೆನ್ಸ್ ಸೊಸೈಟಿ.

ಅ ಜ ಮಿ ರ್.

ನಮ್ಮ ಆಯವ್ಯಯದ ಪಟ್ಟಿಯೇ ನಮ್ಮ ಅಭಿವೃದ್ಧಿಯನ್ನು ವ್ಯಕ್ತಗೊಳಿಸುತ್ತದೆ.

ವರ್ಷ	ಮೇಲ್ಪಟ್ಟ ವರ್ಷಾದಾಯ	ಮೇಲ್ಪಟ್ಟ ಮೂಲಧನ	ಖರ್ಚು ಪ್ರಮಾಣದ ಶೇಕಡ
1911	46,248	49,442	82.9
1921	2,92,627	6,54,350	43.2
1931	12,50,000	44,00,000	28.2

ಬೋನಸ್ಸು.

ಪೂರ್ತಿ ನಫೆ ದೊರಕುವ ಜೀವಾವಧಿ ಪಾಲಿಸಿಗಳ ಮೇಲೆ ವರ್ಷ ಒಂದಕ್ಕೆ ಶೇಕಡ 22½

ಚೆನ್ನಾಗಿ ಕೆಲಸಮಾಡಿ ಅಭಿವೃದ್ಧಿ ಸ್ಥಿತಿಯಲ್ಲಿರುವ ಈ ಸೊಸೈಟಿಯಲ್ಲಿ ವಿಮೆ ಮಾಡಿ ಕಡಿಮೆ ಪ್ರೀಮಿಯಂ ಪಾವತಿ ಮಾಡುವ ಸೌಲಭ್ಯ ಯಿಂದ ಅಥವಾ ಈ ಕಂಪೆನಿಯ ಪರವಾಗಿ ಕೆಲಸಮಾಡಿ ಉತ್ತಮ ಕಮಿಶನ್ ದರದ ಪ್ರಯೋಜನ ಹೊಂದಿ.

ಹೆಚ್ಚು ವಿಚಾರಗಳಿಗೆ ಈ ವಿಳಾಸಕ್ಕೆ ಬರೆಯಿರಿ:—

ಎ. ರಾಮಚಂದ್ರರಾವ್,
ಸುಪರಿಂಟೆಂಡೆಂಟ್,
ಮಿಂಟೋ ಆಸ್ಪತ್ರೆ ಬಳಿ,
ಬೆಂಗಳೂರು.

52—14

ಸರ್ ಹೋರ್‌ರವರ ಭಾಷಣದ ಮೇಲೆ ಸರ್ ತೇಜ್‌ಬಹದ್ದೂರ್ ಸಪ್ರೂರವರ ಅಭಿಪ್ರಾಯ.

ಪಾರ್ಲಿಮೆಂಟಿನಲ್ಲಿ ಸರ್ ಸ್ಯಾಮ್ಯುವೆಲ್ ಹೋರರು ಮಾಡಿದ ಭಾಷಣವನ್ನು ಓದಿದೆನು. ಈಗ ಹದಿನೈದು ದಿನಗಳೊಳಗೆ ಅವರು ಮೂರು ಭಾಷಣ ಮಾಡಿದರು. ಅವರು ಕೈಕೊಂಡಿರುವ ಹೊಸ ರೀತಿಯನ್ನು ಅವಶ್ಯವೆಂತ ತೋರಿಸಲು ಅವರು ಎಷ್ಟೆಷ್ಟು ಪ್ರಯತ್ನಿಸಿದರೂ ಸಫಲವಾಗಲಿಲ್ಲ. ಅವರು ಅನುಸರಿಸಲು ನಿಶ್ಚಯಿಸಿರುವ ಹೊಸ ದಾರಿಯಿಂದ ರಾಜಕೀಯ ಸುಧಾರಣೆಯು ಜಾಗ್ರತೆ ಸಾಧ್ಯವಾದೀತೆಂತ ನಮ್ಮನ್ನು ಅವರನ್ನು ಒಪ್ಪಿಸಲು ಅವರಿಗೆ ಸಾಧ್ಯವಿಲ್ಲ. ಸರ್ ಸ್ಯಾಮ್ಯುವೆಲ್ ಹೋರರು ವಿಶೇಷ ಶಕ್ತಿ ಇರುವ ಸ್ಟೇಟ್ ಸೆಕ್ರೆಟರಿಯೂ ಅಲ್ಲ. ಸರ್ಕಾರದ ಅಭಿಪ್ರಾಯಕ್ಕೆ ಹಿಂದೂಸ್ಥಾನದ ಜನಾಂಗದ ದೊಡ್ಡ ಭಾಗದ ಬಲವಿದೆಯೆಂತ ಹೇಳುವ ಸ್ಟೇಟ್ ಸೆಕ್ರೆಟರಿಯವರು ಇವರು ಮೊದಲನೆಯವರಲ್ಲ. ಸೈಮನ್ ಕಮಿಶನನ್ನು ನೇಮಿಸಿದಾಗ ಲಾರ್ಡ್ ಬರ್ಕನ್ ಹೆಡ್ಡರೂ ಹೀಗೆಯೇ ಹೇಳಿದ್ದರು. ಆದರೆ ದೇಶದ ಈ ದೊಡ್ಡ ಭಾಗದವರಿಗೆ ಸೈಮನ್ ಕಮಿಶನನ್ನು ದೇಶಕ್ಕೆ ಒಪ್ಪಿಗೆಯಾಗುವಂತೆ ಮಾಡಲು ಸಾಧ್ಯವಾಗಲಿಲ್ಲ. ಸೈಮನ್ ಕಮಿಶನನ್ನು ನೇಮಿಸಿದ್ದು ತಪ್ಪಾಯಿತೆಂತ ಲೇಬರ್ ಸರ್ಕಾರವೂ, ಲಾರ್ಡ್ ಇರ್ವಿನರೂ ಒಪ್ಪಬೇಕಾಯಿತು. ಅದನ್ನು ಸರಿಪಡಿಸಿಕೊಳ್ಳಲು 1929ರಲ್ಲಿ ಪ್ರಾರಂಭಿಸಿದರು.

ತನ್ನ ರಾಜನೀತಿಗೆ ಹಿಂದೂಸ್ಥಾನದ ಬೆಂಬಲವಿದೆಯೆಂತ ಅವರು ಹೇಳಿದ್ದರಿಂದ ಅವರು ಹಿಂದೂಸ್ಥಾನದವರಿಗೆ ಶರಾರತ್ತು ತೋರಿಸಿದ್ದಾರೆ. ಸ್ಟೇಟ್ ಸೆಕ್ರೆಟರಿಯವರು ಹೇಳುವ ಮಾತು ಕೊಳ್ಳೆಂಬುದು ಮುಂದೆ ಆಗಲಿಕ್ಕಿರುವ ವಿದ್ಯಮಾನಗಳಿಂದಲೇ ತಿಳಿಯುತ್ತದೆ. ಅವರು ಕೊಡಲಿಕ್ಕಿರುವ ಸುಧಾರಣೆಯನ್ನು ಜಯಪ್ರದವಾಗಿ ಉಪಯೋಗಿಸಲು ಯಾರನ್ನು ನಂಬಿದ್ದಾರೆಂಬುದೇ ನನಗೆ ಹೊಳೆಯುವ ಪ್ರಶ್ನೆಯಾಗಿದೆ. ಈ ಹೊಸ ರೀತಿಯನ್ನು ಒಪ್ಪುವ ಮತ್ತು ಅವರ ರಾಜಕೀಯ ಸುಧಾರಣೆಗೆ ಒಪ್ಪುವ ಕೆಲವು ಜನರನ್ನೇನೋ ಅವರು ಜೋಡಿಸಿಕೊಳ್ಳಬಹುದು. ಆದರೆ ರಾಜಕೀಯ ಸುಧಾರಣೆಯು ಮಂಜೂರಾದ ಮೇಲೆ ನಿಜವಾದ ಪ್ರಶ್ನೆಯು ಹುಟ್ಟುವಂಥಾದ್ದು. ವಾಗ್ದಾನಕ್ಕೆ ವಿರೋಧವಾಗಿ ವರ್ತಿಸಿದರೆಂಬ ಅಪವಾದವನ್ನು ಅವರೇನೋ ಒಪ್ಪಿಕೊಳ್ಳುವುದಿಲ್ಲ. ದುಂಡು ಮೇಜಿನಿಂದ ನೇಮಿಸಲ್ಪಟ್ಟ ಕಮಿಟಿಗಳ ಕೆಲಸವನ್ನು ವಿಮರ್ಶಿಸಲು ದುಂಡು ಮೇಜು ಪುನಃ ಕೂಡುತ್ತದೆಯೆಂತ ಮುಖ್ಯಮಂತ್ರಿಯವರೂ, ಲಾರ್ಡ್ ಲೋಥಿಯನರೂ ಹೇಳಿದ ಸ್ಪಷ್ಟವಾದ ಮಾತುಗಳ ಮೇಲೆ ಇವರ ಟೀಕೆಯೇ ಇಲ್ಲ. ನನಗೆ ತಿಳಿದ ಮಟ್ಟಿಗೆ ಮಂತ್ರಿಯವರಾಗಲೀ, ಸರಕಾರವಾಗಲೀ ದುಂಡು ಮೇಜು ಕೆಲಸವನ್ನು ನಿಲ್ಲಿಸಲಾಗುತ್ತದೆಯೆಂತ ಎಂದೂ ಸೂಚಿಸಿರಲಿಲ್ಲ. ಹಿಂದೂಸ್ಥಾನದ ಸಹಕಾರವನ್ನು ಸರಕಾರವು ನಿರೀಕ್ಷಿಸುತ್ತದೆಯೆಂತ ಹೇಳಿದ್ದರಿಂದ ಮಾತ್ರ ಏನೂ ಪ್ರಯೋಜನವಿಲ್ಲ. ಬರೇ ಸಹಕಾರವೆಂತ ಹೇಳಿದರೆ ಪ್ರಯೋಜನವಿಲ್ಲ: ದುಂಡು ಮೇಜು ಪರಿಷತ್ತಿನಲ್ಲಿ ಇಂಗ್ಲೀಷರೂ, ಹಿಂದೀಯರೂ ಕಲೆತು ಆದ ತೀರ್ಮಾನಗಳನ್ನು ಪಾರ್ಲಿಮೆಂಟಿನ ಮುಂದೆ ತರುವುದರಲ್ಲಿ ಇರುವ ಸಹಕಾರವೆಂಥಾದ್ದು? ಸರಕಾರದವರೇ ತಯಾರಿಸುವ ಸಲಹೆಗಳನ್ನು ಉಭಯ ಪಾರ್ಲಿಮೆಂಟುಗಳ ಕಮಿಟಿ ಮುಂದೆ ಇರಿಸಿದಾಗ್ಯೆ ಹಿಂದೀಯರು ಅಭಿಪ್ರಾಯ ಕೊಡುವುದರ ಸಹಕಾರವೆಂಥಾದ್ದು?

ಸರಕಾರದ ಸಲಹೆಗಳನ್ನೇ ದುಂಡು ಮೇಜು ಪರಿಷತ್ತಿನ ಮುಂದೆ ಯಾಕೆ ಇಡಬಾರದು? ಸರ್ಕಾರದ ಯಾವ ಸಲಹೆಗಳನ್ನೇ ಆಗಲೀ ಅಂತ್ಯದಲ್ಲಿ ಪಾರ್ಲಿಮೆಂಟು ಅಂಗೀಕರಿಸಬೇಕೆಂಬುದನ್ನು ಹೋರರು ನಮಗೆ ತಿಳಿಸಿ ಕೊಡಬೇಕಾಗಿಲ್ಲ. ನಾವು ಯಾರೂ ಈ ಹಕ್ಕನ್ನು ಇಲ್ಲವೆನ್ನಲಿಲ್ಲ. ಸರಕಾರದ ಸಲಹೆಗಳನ್ನು ಪಾರ್ಲಿಮೆಂಟು ತಿರಸ್ಕರಿಸುವುದು ಬೇರೆ, ಹಿಂದೀ ಪ್ರತಿನಿಧಿಗಳು ಸಹ ಸೇರಿ ಮಾಡಿಕೊಂಡ ಒಪ್ಪಂದಗಳನ್ನು ಸರಕಾರವು ಪಾರ್ಲಿಮೆಂಟಿನ ಮುಂದೆ ಇಡುವುದು ಬೇರೆ. ಈ ಎರಡನೇ ರೀತಿಯನ್ನು ಹೋರರು ಈಗ ಬಿಟ್ಟಿದ್ದಾರೆಂಬುದೇ ಅವರ ಮೇಲೆ ಇರುವ ಆಕ್ಷೇಪಣೆಯಾಗಿದೆ. ಇದು ಬಹಳ ಮುಖ್ಯವಾದ ಮಾರ್ಪಾಡಾಗಿದೆ.

ಹಿಂದೂಸ್ಥಾನದ ರಾಜಕೀಯ ರಚನೆಯನ್ನು ಮಾಡುವ ಕೆಲಸದಲ್ಲಿ ಹಿಂದೀಯರನ್ನು ಸೇರಿಸಿಕೊಳ್ಳಲು ಯೋಚಿಸಿದ್ದು ತಪ್ಪೆಂತ ಕನ್ಸರ್ವೇಟಿವ್ ಪಾರ್ಟಿಯವರು ಮೊದಲಿನಿಂದಲೇ ಹೇಳುತ್ತಿದ್ದರು. ಮಿ. ಚರ್ಚಿಲ್ಲರು ಮೊನ್ನೆ ಪಾರ್ಲಿಮೆಂಟಿನಲ್ಲಿ ಮಾಡಿದ ಭಾಷಣದಿಂದ ಇದು ಸ್ಪಷ್ಟವಾಗಿದೆ.

ಕನ್ಸಲ್ಟೇಟಿವ್ ಕಮಿಟಿಯ ಕೆಲಸವು ಸೆಪ್ಟೆಂಬರ್ ತಿಂಗಳಿಗಿಂತ ಮುಂದೆ ತೀರುವುದಿಲ್ಲ. ಅನಂತರ ಇಂಡಿಯಾದಿಂದ ಹೋಗಬೇಕಾದ ಕೆಲವರು ಇಂಗ್ಲೆಂಡಿಗೆ ತಲಪಿ ಉಭಯ ಪಾರ್ಲಿಮೆಂಟ್ ಕಮಿಟಿಯೊಂದಿಗೆ ಕೆಲಸ ಪ್ರಾರಂಭಿಸಲು ಸ್ವಲ್ಪ ಸಮಯ ಬೇಕು. ಈ ಸಮಯದೊಳಗೇನೇ ಈ ಕೆಲಸವನ್ನಲ್ಲಾ ಚಿಕ್ಕದೊಂದು ದುಂಡು ಮೇಜು ಪರಿಷತ್ತಿನಿಂದ ಮಾಡಿಕೊಳ್ಳಲು ಸಾಧ್ಯವಿಲ್ಲವೇ? ಈಗ ಸರ್ಕಾರದ ಮಸಲತ್ತುಗಳು ತಯಾರಿರುವಾಗ ಇದು ಸುಲಭ ಸಾಧ್ಯ. ಕಷ್ಟವಾಗಬಾರದೆಂತ ನಾವೂ ಒಪ್ಪುತ್ತೇವೆ. ಆದರೆ ದುಂಡು ಮೇಜು ಪರಿಷತ್ತಿನ ಕೆಲಸದಿಂದ ಇಂಡಿಯಾದವರಿಗೆ ದೊರಕಿದ್ದ ಹಕ್ಕುಗಳನ್ನು ಕಳಕೊಂಡು ತ್ವರೆಯನ್ನು ಸಾಧಿಸಿದರೆ ಅದೇಕೋ? ತ್ವರೆಯಿಂದ ದೊರಕುವುದಾದರೂ ಏನು? ಬರೇ ಪ್ರಾಂತೀಕ ಸ್ವಾತಂತ್ರ್ಯ. ನಾನು ಇಂಗ್ಲೆಂಡಿನಲ್ಲಿದ್ದಾಗ ಕನ್ಸರ್ವೇಟಿವ್ ಪಾರ್ಟಿಯವರೂ ಮಧ್ಯವರ್ತಿ ಸರ್ಕಾರದಲ್ಲಿ ಮಾರ್ಪಾಡನ್ನು 1935 ಯಾ 1936ಕ್ಕೆ ಮುಂಚೆ ಮಾಡಲು ಬಿಡುವುದಿಲ್ಲವೆಂತ ನಿಶ್ಚಯಿಸಿದ್ದರಾಗಿ ತಿಳಿದೆ. ಬಂಗಾಳದ ವ್ಯಾಪಾರಿಗಳ ಕೂಟವು ಏನು ತೀರ್ಮಾನಿಸಿಕೊಂಡರೆಂಬುದು ನಿನ್ನೆಯ ಪತ್ರಿಕೆಗಳಿಂದ ತಿಳಿದಿದೆ. ಅವರೂ ಸಹ 1935 ಯಾ 1936ರಲ್ಲಿ ಮಧ್ಯವರ್ತಿ ಸರ್ಕಾರವು ಫೆಡರೇಶನ್ ರೂಪ ತಾಳಿತೆಂತ ಅಭಿಪ್ರಾಯಪಟ್ಟಿದ್ದಾರೆ. ಬೇರೆಯವರಿಗೆ ತಿಳಿಯಲು ಸಾಧ್ಯವಿರುವುದಕ್ಕಿಂತ ಹೆಚ್ಚು ಈ ಕಲ್ಕತ್ತಾ ವ್ಯಾಪಾರಿ ಕೂಟಗಳಿಗೆ ತಿಳಿದಿದೆ.

ದುಂಡು ಮೇಜು ಪರಿಷತ್ತನ್ನು ಬಿಡಲು ಎರಡು ಕಾರಣಗಳು ಕೊಡಲ್ಪಟ್ಟಿವೆ. ಒಂದನೇದು-ದುಂಡು ಮೇಜಿನಲ್ಲಿ ಕೋಮುವಾರು ಸಮಸ್ಯೆಯನ್ನು ಬಿಡಿಸಲು ಸಾಧ್ಯವಾಗದೆ ಇದ್ದದ್ದು. ಎರಡನೇದು-ಮಿ. ಗಾಂಧಿಯವರು ಪರಿಷತ್ತಿನೊಂದಿಗೆ ಸಹಕರಿಸದಿರುವುದು. ಮೊದಲನೇ ಕಾರಣದ ವಿಷಯ ಹೇಳಬೇಕಾದದ್ದೇನೆಂದರೆ—ಕಳೆದ ನವಂಬರ್ ತಿಂಗಳ ಪ್ರಾರಂಭದಲ್ಲೇ ಕೋಮುವಾರು ಚರ್ಚೆಗಳನ್ನು ತೀರಿಸಲು ಸಾಧ್ಯವಿಲ್ಲವೆಂತ ಸರಕಾರಕ್ಕೆ ತಿಳಿಯಿತು. ಮಂತ್ರಿಯವರೇ ಈ ವಿಷಯದ ತೀರ್ಮಾನ ಕೊಡಬೇಕೆಂತ ಒಪ್ಪಿಕೊಳ್ಳಲಾಯಿತು.

ಗಾಂಧಿಯವರ ಮತ್ತು ಕಾಂಗ್ರೆಸಿನ ಸಹಕಾರದ ವಿಷಯವಾಗಿ ಸರ್ ಹೋರರು ಹೇಳುವುದು ನನಗೆ ಅರ್ಥವಾಗುವುದಿಲ್ಲ. ಅವರಿಗೆ ಮಿ. ಗಾಂಧಿಯವರ ಸಹಕಾರ ಬೇಕೊ, ಬೇಡವೋ? ಬೇಕಾದರೆ ಅವರ ಸಹಕಾರ ದೊರೆಯಲು ಇವರು ಯಾವ ಏರ್ಪಾಡು ಮಾಡುತ್ತಿದ್ದಾರೆ? ಬೇಡವಾದರೆ ತಮ್ಮ ನೀತಿಯನ್ನು ಬದಲಾಯಿಸಲು ಕಾರಣವೇನಿದೆ? ಸಹಕರಿಸಲು ತಯಾರಿರುವ ಮತ್ತು ದುಂಡು ಮೇಜಿನಲ್ಲಿ ಕೆಲಸ ಮಾಡಿ ಮಧ್ಯಮ ತರದ ಕಾಂಗ್ರೆಸಿನವರಿಗಾದರೂ ತೃಪ್ತಿಯಾಗುವ ರಾಜಕೀಯ ಸುಧಾರಣೆಯನ್ನು ಪಡೆಯಬಹುದೆಂಬ ನಂಬಿಕೆ ಇರುವವರ ಸಹಕಾರವನ್ನು ತಿರಸ್ಕರಿಸುವುದು ಯಾಕೆ?

ರಾಜಕೀಯ ಪಟುಗಳು ಆರ್ಥಿಕ ಮತ್ತು ವ್ಯಾಪಾರೀಕ ಸಂಬಂಧವಾದ ಭದ್ರತೆಗಳನ್ನು ಚರ್ಚಿಸಲೇ ಕೂಡದೆಂತ ಸರ್ ಸ್ಯಾಮ್ಯುವೆಲ್ ಹೋರರು ಹೇಳಿದ್ದಾರೆ. ನಾನು ಅರ್ಥಶಾಸ್ತ್ರ ಪಟುವಲ್ಲ. ಆದರೂ ಬರೇ ವ್ಯಾಪಾರಿಗಳು ಕೂಡಿ ಈ ಸಂಬಂಧವಾಗಿ ಮಾಡಿಕೊಳ್ಳುವ ತೀರ್ಮಾನಗಳಿಗೆ ನ್ಯಾಯವಿಧಾಯಕ ಸಭೆಗೆ ಸ್ವಾತಂತ್ರ್ಯ ಕೊಡದ ಏರ್ಪಾಡಿಗೆ ನಾನು ಎಂದೂ ಒಪ್ಪಲಾರೆನು. ಈ ಸಂಬಂಧವಾಗಿ ಅಟವಾದಲ್ಲಿ ಮಾಡಿದ ಏರ್ಪಾಡು ಇಂಡಿಯಾಕ್ಕೆ ಎಂದೂ ಒಪ್ಪಿಗೆಯಾಗಲಾರದು. ಆ ಏರ್ಪಾಡಿನಿಂದ ಇಂಡಿಯಾ ಸರಕಾರದ ಆರ್ಥಿಕ ಮಂತ್ರಿಗೆ ಏನೂ ಸ್ವತಂತ್ರವಿರುವುದಿಲ್ಲ. ಲಂಡನಿನಲ್ಲಿ ನೇಮಕವಾಗುವ ಆರ್ಥಿಕ ಪಟುವಿನ ಕೈಯಲ್ಲಿ ಸರ್ವ ಸ್ವಾತಂತ್ರ್ಯವೂ ಅಡಕವಾಗುತ್ತದೆ. ಇಂಥಾ ಏರ್ಪಾಡನ್ನು ವ್ಯಾಪಾರಿಗಳು ಒಪ್ಪಿದರೂ ಸಹ ಇಂಡಿಯಾಕ್ಕೆ ಒಪ್ಪಿಗೆಯಾಗಲಾರದು. ವ್ಯಾಪಾರಿಗಳನ್ನು ಆಲೋಚನೆ ಕೇಳಬಹುದು. ಆದರೆ ರಾಜಕೀಯ ಪಟುಗಳು ಅದನ್ನು ಚರ್ಚಿಸಲೇ ಕೂಡದೆಂತ ಮಾಡಿದ ತೀರ್ಮಾನವು ಬಹಳ ಅಸಮಾಧಾನವುಂಟುಮಾಡುವಂಥಾದ್ದಾಗಿದೆ.

ಕೇರಳದಲ್ಲಿ ಹೊಸ ರಾಮಕೃಷ್ಣಾಶ್ರಮವನ್ನು ಸ್ವಾಮಿ ನಿರ್ಮಲಾನಂದಜಿಯವರು ತೆರೆದ ಸಮಾರಂಭ.

(ಬೆಂಗಳೂರು 'ಮೇಲ್' ಪತ್ರಿಕೆಯಿಂದ ಭಾಷಾಂತರ.)

ಹಿಂದೂ ದೇಶದ ನಾಗರೀಕ ಯುವಕರೂ ಸಹ ಅಸ್ಪೃಶ್ಯರ ನೆಪದಿಂದ ಹಿಂದೂ ಮತವನ್ನೇ ದೂಷಿಸುತ್ತಿರುವುದು ಶೋಚನೀಯವು. ಅಸ್ಪೃಶ್ಯರ ದೂರೀಕರಣದ ತಪ್ಪು ಮತದ ಅನುಬಂಧಗಳನ್ನನುಸರಿಸಲಿರುವ ಜನರದೆಂಬುದನ್ನು ಮರೆತು ಮತದ ಮೇಲೆ ಆರೋಪಿಸುವರು. ಬುದ್ಧನೇ ಮೊದಲಾದವರಿಂದ ಈ ವಿಷಯವು ಆಗಾಗ್ಗೆ ನಿರೂಪಿಸಲ್ಪಟ್ಟಿದೆ. ಶ್ರೀರಾಮಕೃಷ್ಣರು ಜಗತ್ತಿನ ಜೀವಿಗಳೆಲ್ಲವನ್ನೂ ಸಮಾನ ದೃಷ್ಟಿಯಿಂದ ನೋಡುತ್ತಿದ್ದರು. ಅವರ ಅನುಯಾಯಿಗಳೂ ಇದೇ ತತ್ವವನ್ನು ಅಲ್ಲಲ್ಲಿ ಸಾರುತ್ತಿರುವರು. ಈ ಹೊತ್ತಿಗೆ ಕೇರಳದಲ್ಲಿ ಇಪ್ಪತ್ತು ರಾಮಕೃಷ್ಣ ಆಶ್ರಮಗಳು ಜೀವಿಸಿದ್ದು ಇದರ ನಿಜತ್ವವನ್ನು ಯಾವತ್ತು ಜನರ ಮನಸ್ಸಿಗೆ ತರುತ್ತಿರುವರು. ಕೊಚ್ಚಿನ್ ಸಂಸ್ಥಾನದ ಪುದುಕಾಡ್ ಎಂಬಲ್ಲಿ ಈಗ ತೆರೆದ ಆಶ್ರಮದ ಪ್ರಾರಂಭೋತ್ಸವದ ಕಾಲದಲ್ಲಿ ಸಕಲ ಮತದವರೂ ಸಹೋದರ ಭಾವದಿಂದ ವರ್ತಿಸಿದುದೇ ಇದಕ್ಕೆ ದೊಡ್ಡ ನಿದರ್ಶನವಾಗಿದೆ.

ಅಸ್ಪೃಶ್ಯರ ವರ್ಗದವರು ಸ್ವಾಮಿ ನಿರ್ಮಲಾನಂದಜಿಯವರಿಗೆ ಒಪ್ಪಿಸಿದ ಅಭಿವಂದನ ಪತ್ರಿಕೆಯ ಸಾರಾಂಶ.

ನಮ್ಮ ದೇಶದ ರಾಜಕೀಯ ಉನ್ನತಿಗೆ ಹಿಂದುಳಿದ ಮತೀಯರ ಉದ್ಧಾರವೇ ಮೂಲವೆಂಬುದನ್ನು ಸರ್ವರೂ ಒಪ್ಪುವರು. ಆದರೆ ವೈದೀಕ ಧರ್ಮ ಪ್ರಾಚುರ್ಯ ಬಲದಿಂದ ಮಲಬಾರಿನಲ್ಲಿ ಈ ಕಾರ್ಯಕ್ಕೆ ಕೈ ಹಚ್ಚಲು ಈವರೆಗೆ ಸುಲಭವಾಗಲಿಲ್ಲ.

ಭಗವಾನ್ ಶ್ರೀ ರಾಮಕೃಷ್ಣದೇವರ ಉಪದೇಶಾಮೃತದಿಂದ ಹಿಂದುಳಿದವರ ಮತ್ತು ಅಸ್ಪೃಶ್ಯರ ಪ್ರಶ್ನೆಯು ಮುಂದೆ ಬಂದು ಶಮನವಾಗಿರುವುದು. ಹೀನ ಕುಲದವಳಾದ ಧನಿ ಎಂಬವಳಿಂದ ಪರಮಹಂಸರು ಭಿಕ್ಷೆ ಸ್ವೀಕರಿಸಿದುದೇ ಅವರ ಪ್ರಥಮ ಉದ್ಧಾರಣ ಕ್ರಮವು. ಸಾಧನಾಕಾಲದಲ್ಲಿ ಪಂಚಮತ ಗುಹಾರಗಳನ್ನು ಶುದ್ಧ ಮಾಡಿದುದರಿಂದ ಅವರ ಪರಿಯು ಉತ್ತಮಗೊಂಡಿತು. 'ದರಿದ್ರ ದೇವೋಭವ; ಮೂರ್ಖ ದೇವೋಭವ' ಎಂದು ಸಾರಿರುವ ಸ್ವಾಮಿ ವಿವೇಕಾನಂದಜೀಯವರು ಇದೇ ಉತ್ತಮ ಕಾರ್ಯವನ್ನು ಕೈಕೊಂಡು ಸಕಲ ಜೀವಿಗಳನ್ನು ಸಮತ್ವ ತತ್ವ ದೃಷ್ಟಿಯಿಂದ ಸಲಹಿದರು.

ಆಶ್ರಮದವರು ಒಪ್ಪಿಸಿದ ಅಭಿನಂದನ ಪತ್ರಿಕೆಯ ಸಾರಾಂಶ.

ಇತಿಹಾಸ ಪ್ರಸಿದ್ಧವಾದ ಈ ಮಲಬಾರಿನಲ್ಲಿ ಈ ಆಶ್ರಮದ ಪ್ರಾರಂಭೋತ್ಸವವನ್ನು ಜರುಗಿಸಲು ತಾವು ಇಲ್ಲಿಗೆ ದಯಮಾಡಿಸಿದುದು ಹೆಮ್ಮೆಯ ವಿಷಯವು. ಶ್ರೀ ಶಂಕರರು ಅದ್ವೈತ ಮತವನ್ನು ಸ್ಥಾಪಿಸಿದರೂ ಅದನ್ನು ಪ್ರಪಂಚ ವ್ಯಾಪಕವನ್ನಾಗಿ ಮಾಡಿದವರು ಶ್ರೀ ರಾಮಕೃಷ್ಣರು. ಶ್ರೀ ರಾಮಕೃಷ್ಣರ ನಿಜ ಶಿಷ್ಯರಾದ ನೀವು ಇತರರಂತೆಯೇ ಅಸ್ಪೃಶ್ಯರ ಮತ್ತು ಇತರ ಜನಾಂಗದ ಏಳಿಗೆಗೆ ಪ್ರಯತ್ನಿಸುತ್ತಿರುವಿರಿ.

ಆತ್ಮ ಸಂಯಮನದಿಂದ ನೀವೂ, ನಿಮ್ಮ ಶಿಷ್ಯ ವರ್ಗದವರೂ ಅಜ್ಞಾನಿಗಳಿಗೆ ಬೆಳಕನ್ನು ಕೊಡುವ ಉದ್ದೇಶ್ಯವಾಗಿ ಪ್ರಯತ್ನಿಸುತ್ತಿರುವುದನ್ನು ನಾವು ಆಗಾಗ್ಗೆ ನೆನೆಸುತ್ತಿರಬೇಕು. ನಿಮ್ಮ ಅಮೋಘ ಆಶೀರ್ವಾದ ವರ್ಷವನ್ನು ಈ ಆಶ್ರಮದ ಮೇಲೆ ಸುರಿಸಿ ನಿಮ್ಮ ಅದ್ಭುತ ಶಕ್ತಿಯ ಮಹಿಮೆಯಿಂದ ಇದಕ್ಕೆ ಅನಂತ ವರ್ಷ ಆಯುಷ್ಯವನ್ನು ಕೊಡಬೇಕೆಂದು ಕೋರಿದೆ.

ಸ್ವಾಮಿಜೀಯವರ ಆದರ್ಶ ಉತ್ತರ.

ಮಹಿಳೆಯರೇ ಮತ್ತು ಮಹನೀಯರೇ,

ಈ ಪ್ರದೇಶದಲ್ಲಿ ಶ್ರೀ ರಾಮಕೃಷ್ಣ ಆಶ್ರಮವನ್ನು ಸ್ಥಾಪಿಸಲು ಪ್ರಯತ್ನಪಟ್ಟ ನಿಮ್ಮ ಆಶಯವು ಜಯಪ್ರದವಾಗಿ ಸಾಗಿದುದಕ್ಕೆ ನಾನು ಮನಃಪೂರ್ವಕವಾಗಿ ನಿಮ್ಮೆಲ್ಲರನ್ನು ಅಭಿನಂದಿಸಿ ನೀವು ನನ್ನನ್ನು ಇಲ್ಲಿಗೆ ಬರಮಾಡಿ ಮರ್ಯಾದೆಯನ್ನಿತ್ತುದಕ್ಕಾಗಿ ತುಂಬಾ ಸಂತೋಷಿಸುವೆನು. ಅನಾದಿಕಾಲದಿಂದಲೂ ನಿಮಗೆ ಉಂಟಾಗಿರುವ ಅಸ್ಪೃಶ್ಯರೆಂಬ ಹೀನತ್ವವನ್ನು ತೊಳೆಯುವ ಒಂದು ಅಭಯ ಸಂದೇಶವನ್ನು ಈಗ ನಾನು ಹೇಳುವೆನು. ನಿಮ್ಮ ಉತ್ತಮ ಕಾಲವು ಸಮೀಪಿಸಿರುವುದು. ಇನ್ನು ನೀವು ಹಿಂದುಳಿದ ಪಂಗಡದವರಾಗಿರಲಾರಿರಿ. ಸಹೋದರರೇ, ನೀವು ಹುರುಪುಗೊಂಡು ಆ ಸೆರೆಯನ್ನು ಕಡಿದೊಗೆಯಿರಿ. ಪ್ರಪಂಚದ ಸರ್ವ ವ್ಯಾಸಂಗದಲ್ಲಿಯೂ ಇದೊಂದು ಕೊರತೆಯಿರುವುದಾದುದರಿಂದ ನೀವು ಮುಂದೆ ಬಂದು ನಿಮ್ಮ ಸ್ಥಾನವನ್ನು ನೀವು ಪಡೆಯಿರಿ. ಉತ್ತಮ ವರ್ಣದವರಿಗಿರುವಂತೆಯೇ ನೀವೂ ಪರಮಾತ್ಮನ ಮಕ್ಕಳಾದುದರಿಂದ ನಿಮಗೂ ಒಂದು ಸ್ಥಾನವು ಕಲ್ಪಿಸಲ್ಪಟ್ಟು ನಿಮ್ಮ ಹಿರಿಯರು ನೀವೂ ಪರಮಾತ್ಮ ಸ್ವರೂಪರೆಂದು ಹೇಳಿರುವರು. ನಿಮ್ಮ ಇತಿಹಾಸಗಳೂ ಸರ್ವವ್ಯಾಪಕನಾದ ದೇವರನ್ನು "ವಿರಾಟ್ಪುರುಷ"ನೆಂದು ಸಾರುತ್ತಿರುವುವು. ಅವನು ಎಲ್ಲರಲ್ಲಿಯೂ ಇರುವನು. ಬ್ರಾಹ್ಮಣನು ದೇವರ ಮುಖದಿಂದ ಜನ್ಮ ಉಂಟಾಗಿದ್ದರೆ ಶೂದ್ರನು ದೇವರ ಪಾದಗಳಿಂದ ಉತ್ಪತ್ತಿಯಾದವನು ಶೂದ್ರನು. ಇವೆರಡೂ ಅಂಗಗಳು ಒಂದೇ ದೇವರ ಒಂದೊಂದು ಅಂಗ ಭಾಗಗಳು. ಅವನನ್ನು ಎಲ್ಲೆಲ್ಲಿಯೂ ಕಾಣಬಹುದೆಂದು ನಮಗೆ ಹೇಳಿಕೊಟ್ಟಿದೆ. ಬ್ರಾಹ್ಮಣನಲ್ಲಿ ಮಾತ್ರವಲ್ಲದೆ ಶೂದ್ರನಲ್ಲಿಯೂ, ಪಶುವಿನಲ್ಲಿಯೂ, ಆನೆಯಲ್ಲಿಯೂ, ನಾಯಿಯಲ್ಲಿಯೂ ಕೂಡ ಅವನೇ ಇರುವನು.

ಮುಂದಿನ ಬೆಳಕು.

ಹಿಂದೂ ಧರ್ಮದ ಒಂದು ಶಾಖೆಯು ಅದೇ ಪರಮಾತ್ಮ ವಸ್ತುವನ್ನು ಪೂಜಿಸುವುದರ ಬದಲು ಅವನನ್ನು ವಿಭಾಗಿಸಿ ಪೂಜಿಸುವರು. ತಮ್ಮ ಸಮರ್ಥನೆಗೆ ತಕ್ಕಂತೆ ಅವನ ಅಂಗ ವಿಶೇಷಗಳನ್ನು ಪ್ರತ್ಯೇಕಿಸಿ ಹೆಸರುಗಳನ್ನು ವಿಸುತ್ತಿರುವರು. ಆದುದರಿಂದ ವೇದಾಂತ ಪುರುಷನನ್ನು ಅವರು ಪೂಜಿಸದೆ ಅವರವರಿಗೆ ಇಷ್ಟ ಬಂದ ದೈವವನ್ನು ಭಜಿಸುವರು. ಶ್ರೀರಾಮಕೃಷ್ಣರು ಆ ವಿರಾಟ್ಪುರುಷನನ್ನು ನಮಗೆ ತೋರಿಸಲು ಮುಂಬಂದರು. ಹಿಂದೂ ದೇಶಕ್ಕೆ ಮಾತ್ರವಲ್ಲ ಇಡೀ ಪ್ರಪಂಚದ ಉತ್ತಮ ರ ಮತ್ತು ನೀಚರ ಸಕಲರ—ಹಿತಾರ್ಥವಾಗಿ ಅವರು ಪ್ರಪಂಚಕ್ಕೆ ಕಾಲಿಟ್ಟರು. ನಾಲ್ಕು ಆವರಣಗಳುಳ್ಳ ಆಶ್ರಮದಲ್ಲಿ, ದೇವಸ್ಥಾನದಲ್ಲಿ, ಚರ್ಚಿನಲ್ಲಿ ಮಾತ್ರವಲ್ಲದೆ ಸರ್ವರ ಹೃದಯದಲ್ಲಿಯೂ ಭಗವಂತನು ವಾಸಿಸುವನೆಂಬ ನಿಜ ತತ್ವವನ್ನು ಅವರು ನಿಮಗೆಲ್ಲರಿಗೂ ತೋರಿಸುವರು. ಸ್ವಾಮಿ ವಿವೇಕಾನಂದರವರು ಮಲಬಾರಿಗೆ ಬಂದಿದ್ದಾಗ ಒಬ್ಬ ನಂಬೂದರಿ ಬ್ರಾಹ್ಮಣನು ಅವರಿಗೆ ಪ್ರಥಮ ಭಿಕ್ಷೆಯನ್ನಿತ್ತಿದ್ದರೂ—ನಂಬೂದರಿ ಬ್ರಾಹ್ಮಣರು ಕೇರಳದ ಸಹಾಯಕ್ಕೆ ಎಂದು ಬರುವುದಿಲ್ಲವೆಂಬುದು ನನ್ನನ್ನು ಆಶ್ಚರ್ಯ ಚಕಿತನನ್ನಾಗಿ ಮಾಡಿತು. ಆದರೆ ಆ ದಿನದ ಭಿಕ್ಷೆಯು ವ್ಯರ್ಥ ಹೋಗಲಿಲ್ಲವಷ್ಟೆ! ಬಟ್ಟಪಲ್ಲಿಯ್ಯನ ಆಶ್ರಮದ ದಳವು ಒಬ್ಬ ನಂಬೂದರಿಗೆ ಸೇರಿದುದು. ಪುದುಕಾಡಿನ ಈ ಆಶ್ರಮವು ಮತ್ತೊಬ್ಬ ನಂಬೂದರಿಯ ಉದಾರದಿಂದಾದುದು. ಆದುದರಿಂದ ಕೇರಳದ ಭವಿಷ್ಯವು ಪ್ರಕಾಶವಾಗಿರುವುದು.

ನೀವು ನನ್ನ ವಿಷಯದಲ್ಲಿ ಹೇಳಿದ ಉತ್ತಮ ವಚನಗಳಿಗಾಗಿ ನಾನು ಕೃತಜ್ಞನು. ಆದರೆ ನನ್ನಿಂದ ಆದ ಕಾರ್ಯಕ್ಕಾಗಿ ನಾನು ಗರ್ವಪಡುವವನಲ್ಲ. ನನ್ನಲ್ಲಿ ಅಂತಹ ಮಹಿಮೆಯಿಲ್ಲ. ಅದು ನನ್ನ ಹಿಂದೆ ನಿಂತು ಕೆಲಸ ಮಾಡುವ ಆ ಶಕ್ತಿಯದು. ಆ ಶಕ್ತಿಯು ನಿಮ್ಮೆಲ್ಲರನ್ನೂ ಉದ್ಧರಿಸಲಿ.

ಕೊಡಗು.

ಸನ್ ೧೯೩೨ನೇ ಇಸವಿ

ಜುಲೈ ತಾ ೨೯ನೇ ಶುಕ್ರವಾರ.

ಪ್ರೆಸ್ ಆರ್ಡಿನೇನ್ಸ್

ಜಾರಿಯಲ್ಲಿರುವವರೆವಿಗೆ

ನಾವು

ಅಗ್ರಲೇಖನ

ವನ್ನು

ಪ್ರಕಟಿಸುವುದಿಲ್ಲ.

ರಾಜಿಯೋ, ಸೋಲುವಿಕೆಯೋ?

(ಬರೆದು ಬಂದದ್ದು.)

ಸರ್ ಸ್ಯಾಮುವೆಲ್ ಹೋರ್‌ರವರ ಪ್ರಸಿದ್ಧ ಹೇಳಿಕೆಯನ್ನೂ, ನಂತರ ಅದರ ಅರ್ಥವನ್ನು ವಿವರಿಸಲು ಅವರು ಮಾಡಿದ ಎರಡು ಭಾಷಣಗಳನ್ನೂ ಓದಿದರೆ ಒಂದು ವಿಷಯ ಎಲ್ಲದಕ್ಕಿಂತಲೂ ಪ್ರಾಮುಖ್ಯವಾಗಿ ಕಂಡು ಬರುತ್ತದೆ. ಅದೇ ಸರ್ ಹೋರ್‌ರವರ ನಿಷ್ಕಾಪಟ್ಯ. ಹಿಂದೀಯರ ಮಟ್ಟಿಗೆ ಅದು ಕ್ರೂರವಾದ ನಿಷ್ಕಾಪಟ್ಯವಾಗಿ ತೋರಬಹುದು. ಆದರೆ ಈ ಕ್ರೂರತನದಿಂದ ಹಿಂದೂ ದೇಶದ ಕಲ್ಯಾಣವಾಗುವುದೆಂಬುದನ್ನು ಜನರು ಮರೆಯಬಾರದು. ಹೋರ್‌ರವರ ಈ ನಿಷ್ಕಾಪಟ್ಯವು ಬ್ರಿಟಿಷರು ಹಿಂದೂ ದೇಶಕ್ಕೆ ಎಷ್ಟು ಮಟ್ಟಿಗೆ ಸುಧಾರಣೆಗಳನ್ನು ಕೊಡಲು ತಯಾರಾಗಿರುವರೆಂಬುದನ್ನು ವಿಶದವಾಗಿ ಹೇಳುತ್ತದೆ. ಅಂದರೆ, ಪ್ರಥಮದಲ್ಲಿ ಪ್ರಾಂತ್ಯಗಳಿಗೆ (ಅದರಲ್ಲೂ ಕೋಮುವಾರು ಸಮಸ್ಯೆಯು ತೀರ್ಮಾನದ ಊಹೆಯ ಮೇರೆ ನಾಲ್ಕು ಪ್ರಾಂತ್ಯಗಳಿಗಿಲ್ಲ) ಸ್ವಾತಂತ್ರ್ಯ ಸರ್ಕಾರವು ಕೊಡಲ್ಪಡುವುದು. ನಂತರ ಫೆಡರಲ್ ಸರ್ಕಾರವನ್ನು ಏರ್ಪಡಿಸುವ ಪ್ರಯತ್ನ ಮಾಡಬಹುದು. ಇದಕ್ಕಿಂತ ಹೆಚ್ಚಿಗೆ ಸಿಕ್ಕುವದೆಂದು ಕೆಲವು ಹಿಂದೀಯರು ನಂಬಿಕೊಂಡಿದ್ದರೆ ಅದು ಅವರ ತಪ್ಪು; ಇನ್ನಾದರೂ ಈ ತಪ್ಪು ತಿಳುವಳಿಕೆಯನ್ನು ಬಿಟ್ಟು ಬಿಡಿರಿ ಎಂದು ಹೋರ್‌ರವರ ನಿಷ್ಕಾಪಟ್ಯವು ನಮಗೆ ಘಂಟಾಘೋಷವಾಗಿ ಹೇಳುತ್ತಿದೆ. ಕಿವಿ ಇರುವವರಿಗೆಲ್ಲಾ ಇದು ಕೇಳಿದೆ. ಜ್ಞಾನವಿರುವವರೆಲ್ಲರೂ ಇದರ ಅರ್ಥವನ್ನು ತಿಳಕೊಂಡಿದ್ದಾರೆ. ಆದರೂ ಕೆಲವರು ಕೇಳಿಯೂ ಕೂಡ ಕೇಳದವರ ಹಾಗೆ ತೋರಿಸಿಕೊಂಡು, ಅರ್ಥಕ್ಕೆ ಬದಲು ಅನರ್ಥಮಾಡಿಕೊಂಡು ದೇಶಹಿತೈಷಿಗಳಂತೆ ನಟಿಸುತ್ತಿರುವುದು ನಾಚಿಕೆಗೇಡು ಮತ್ತು ವ್ಯಸನಕರ.

ತಾನು ಸೂಚಿಸಿರುವ ಹೊಸ ರೀತಿಯು ಸರಿಯಾದದ್ದೆಂತಲೂ, ಅದನ್ನು ನಡಿಸಲು ಸರ್ಕಾರದೊಂದಿಗೆ ಸಹಕರಿಸುತ್ತಿದ್ದವರಲ್ಲಿ ದುಂಡು ಮೇಜು ಪರಿಷತ್ತಿನ ಮುಖ್ಯ ಕಂಭಗಳಾಗಿದ್ದ ಸಪ್ರು ಜಯಕರವರಂಥವರು ಸಹ ಅಸಹಕಾರ ವ್ರತವನ್ನು ಕೈಕೊಂಡರೂ ಕೂಡ ತಾನು ಪರ್ವಾಹ ಮಾಡುವುದಿಲ್ಲವೆಂತಲೂ, ದುಂಡು ಮೇಜು ಪರಿಷತ್ತಿನ ಬೇಚಾರು ಹಿಡಿಯುವಂಥ ದೀರ್ಘ ಮೀಟಿಂಗುಗಳ ಅಡಚಣೆಯನ್ನು ನೀಗಿಬಿಟ್ಟು ಹಿಂದೂದೇಶದ ಮುಂದಿನ ರಾಜಕೀಯ ರಚನೆಯನ್ನು ತಯಾರಿಸುವ ದಾರಿಯನ್ನು ಸುಲಭ ಮಾಡಿಕೊಂಡಿರುವೆನೆಂತಲೂ ಸರ್ ಹೋರ್‌ರವರು ಸಂತೃಪ್ತರಾಗಿ ಕೂತಿರುವರು. ಆದರೆ ಸಹಕಾರಿಗಳಾಗಿದ್ದ ಹಿಂದೀಯರ ದೃಷ್ಟಿಯಿಂದ ಹೋರ್‌ರವರು ದೊಡ್ಡ ತಪ್ಪನ್ನು ಮಾಡಿರುವರೆಂದೂ, ಹೊಸ ರೀತಿಯನ್ನು ಬಿಟ್ಟು ಪರಿಷತ್ತು ರೀತಿಗೆ ಹಿಂತಿರುಗದಿದ್ದರೆ ಸ್ವಾಭಿಮಾನದಿಂದ ಸರ್ಕಾರದೊಂದಿಗೆ ಸಹಕರಿಸಲು ತಮಗೆ ಸಾಧ್ಯವಿಲ್ಲವೆಂದೂ ತೋರಿದೆ. ಆದುದರಿಂದ ಸಹಕರಿಸುವದಿಲ್ಲವೆಂದು ನಿಶ್ಚಯಿಸಿರುವ ಲಿಬರಲ್ ಪಕ್ಷದವರನ್ನು ಪುನಹ ಬ್ರಿಟಿಷರ ನಯನುಡಿಗಳ ಬಲೆಯೊಳಗೆ ಬೀಳುವಂತೆ ಮಾಡುವ ಸೂಚನೆಗಳು ಕೆಲವು ಹಿಂದೀಯರಿಂದಲೇ ಹೊರಬೀಳುತ್ತಿವೆ. ಇದು ದೇಶದ ದುರಾದೃಷ್ಟವೆಂದೇ ಹೇಳಬೇಕು. ಸ್ಟೇಟ್ ಸೆಕ್ರೆಟರಿಯವರು ಸೂಚಿಸಿರುವ ಬದಲಾವಣೆಯು ಬರೇ ರೀತಿಯಲ್ಲಲ್ಲ, ತತ್ವದಲ್ಲಿಯೂ ಕೂಡ ಇವೆ ಎಂಬದನ್ನು ಅಂಥವರು ತಿಳಕೊಂಡಂತೆ ಕಾಣುವುದಿಲ್ಲ. ಪರಿಷತ್ತಿನ ರೀತಿಯಲ್ಲಿ ಹಿಂದೀಯರು ಬ್ರಿಟಿಷರೊಂದಿಗೆ ಸರಿಸಮಾನದಲ್ಲಿ ಸೇರಿ, ಹಿಂದೂದೇಶಕ್ಕಿರುವ ರಚನೆಯನ್ನು ತಯಾರಿಸಿ ಬ್ರಿಟಿಷ್ ಪಾರ್ಲಿಮೆಂಟಿನ ಮುಂದೆ ಮಂಜೂರಾತಿಗೆ ಇಡುವದಾಗಿದೆ; ಮತ್ತು ಇಂಥಾ ಸಂದರ್ಭಗಳಲ್ಲಿ ಪಾರ್ಲಿಮೆಂಟಿನ ಮಂಜೂರಾತಿಯು ದೊರೆಯುವುದು ವಾಡಿಕೆಯಾಗಿದೆ. ಹೊಸ ರೀತಿಯ ಪ್ರಕಾರ ಇಂಡಿಯಾಕ್ಕೆ ಇರುವ ರಚನೆಯನ್ನು ಬ್ರಿಟಿಷ್ ಸರ್ಕಾರದವರು ತಯಾರಿಸಿ, ಅದನ್ನು ಸೆಲೆಕ್ಟ್ ಜಾಯಿಂಟ್ ಕಮಿಟಿಯ ಮುಂದೆ ಚರ್ಚಿಸುವಾಗ ಹಿಂದೀಯರು ಕೆಲವರ ಸಲಹೆಗಳನ್ನು ಸಾಕ್ಷಿಗಳಂತೆ ತೆಗೆದುಕೊಂಡು ನಂತರ ಪಾರ್ಲಿಮೆಂಟಿನ ಮುಂದೆ ಇಡುವದಾಗಿದೆ. ಇವೆರಡು ರೀತಿಯ ತತ್ವಗಳಲ್ಲಿ ದೊಡ್ಡ ವ್ಯತ್ಯಾಸವಿದೆ. 2 ನೇ ರೀತಿಯ ತತ್ವವನ್ನು ಸಾಧಿಸಲು ಹೋರ್‌ರವರು ದೃಢನಿಶ್ಚಯ ಮಾಡಿರುವರು. ಆದುದರಿಂದ ಹೋರ್‌ರವರ ಈ ತತ್ವವನ್ನು ಬಾರಿಗೆ ತರಲು ಲಿಬರಲ್ ಪಕ್ಷದವರ ಸಹಕಾರವನ್ನು ಪಡೆಯಲಿಕ್ಕಾಗಿ ಹೊಸ ರೀತಿಯಲ್ಲಿ ಅಲ್ಪ ಸ್ವಲ್ಪ ಬದಲಾವಣೆಗಳನ್ನು ಮಾಡಲು ಕೋರುತ್ತಿರುವ ಸೂಚನೆಗಳಿಗೆ ಮಧ್ಯಪಕ್ಷದ ಮುಂದಾಳುಗಳು ಮರುಳಾಗಬಾರದಾಗಿ ನಂಬುತ್ತೇನೆ. ಹಾಗೆ ಅವರು ಒಲಿದಿದ್ದರೆ ಅದು ಅವರಿಗೆ ಸೋಲಿಕೆಯಂತಾಗುವುದಲ್ಲದೆ ರಾಜಿಯಾಗಲಾರದು; ಮತ್ತು ಅವರ ಈಗಿನ ತೀರ್ಮಾನದಿಂದ ಜನರಿಗೆ ಅವರ ಮೇಲೆ ಹುಟ್ಟಿರುವ ವಿಶ್ವಾಸವನ್ನು ಅವರು ಕಳಕೊಳ್ಳುವದರಲ್ಲಿ ಸಂಶಯವಿಲ್ಲ.

ಈ ಬಿಕ್ಕಟ್ಟಿನ ಸಂದರ್ಭವನ್ನು ದೇಶದ ಕಲ್ಯಾಣಕ್ಕಾಗಿ ಉಪಯೋಗಿಸಿಕೊಳ್ಳುವುದೂ, ಬಿಡುವುದೂ ಲಿಬರಲ್ ಪಕ್ಷದವರ ಕೈಯಲ್ಲಿದೆ. ಸೈಮನ್ ಕಮಿಷನನ್ನು ನೇಮಿಸಿದಾಗ್ಯೂ ಶಾಂತಪಕ್ಷದವರು ವೀರಪಕ್ಷದವರೊಂದಿಗೆ ಸೇರಿ ಅದನ್ನು ಬಹಿಷ್ಕರಿಸಿದ್ದರಿಂದಲೇ ಪರಿಷತ್ತಿನ ರೀತಿಯನ್ನು ಬ್ರಿಟಿಷರು ಕೈಕೊಂಡದ್ದಾಗಿದೆ. 1931ರಲ್ಲಿ ಮಧ್ಯಗಾಮಿಗಳ ಒತ್ತಾಯದಿಂದಲೇ ಸರ್ಕಾರದವರು ದುಂಡು ಮೇಜು ಪರಿಷತ್ತಿಗೆ ಕಾಂಗ್ರೆಸ್ಸಿನವರ ಸಹಕಾರವನ್ನು ಪಡೆದದ್ದಾಗಿದೆ. ಇವೆರಡು ವಿಷಯಗಳನ್ನೂ ಬ್ರಿಟಿಷ್ ಸರ್ಕಾರದವರು ಪುನಹ ಕೈಕೊಳ್ಳುವಂತೆ ಮಾಡುವಂಥ ಅವಕಾಶವು ಮಧ್ಯಪಕ್ಷದವರಿಗೆ ಈಗೊಮ್ಮೆ ದೊರೆತಿದೆ. ಆರ್ಡಿನೇನ್ಸ್ ಆಡಳಿತೆಯಲ್ಲಿ ಇಂಡಿಯಾದ ರಚನೆಯನ್ನು ತಯಾರಿಸಲು ಸಾಧ್ಯವಿಲ್ಲ, ಕಾಂಗ್ರೆಸ್ಸಿನವರ ಸಹಕಾರವಿಲ್ಲದೆ ತಯಾರಿಸಿದ ರಚನೆಯಿಂದ ಪ್ರಯೋಜನವಿಲ್ಲ ಮತ್ತು ಹಿಂದೀಯರೂ, ಬ್ರಿಟಿಷರೂ ಸರಿಸಮಾನತ್ವದಲ್ಲಿ ಸೇರಿ ಮಾಡದ ರಚನೆಯು ಯಾರಿಗೂ ಒಪ್ಪಿಗೆಯಾಗಲಿಕ್ಕಿಲ್ಲವೆಂಬ ದೃಢ ನಿಶ್ಚಯವನ್ನು ಮಾಡಿ ಅದನ್ನು ಆಖೈರು ವರೆಗೂ ಪಾಲಿಸುವಂತೆ ಶಾಂತಪಕ್ಷದವರಿಗೂ, ಬೇರೆ ಎಲ್ಲಾ ಸಹಕಾರಿಗಳಿಗೂ ಸ್ವಾಭಿಮಾನವೂ, ಧೈರ್ಯವೂ ಉಂಟಾಗಲೆಂದು ಆಶಿಸುವ.

ಹಿಂದೀ ಮಹಿಳೆಯರು.

ಸ್ವಿಜರ್‌ಲೇಂಡಿನ ಮಹಿಳೆಯೊಬ್ಬಳು ಹಿಂದೂ ನಾರಂಗೆ ಧರ ಧಾಸ್ ಎಂಬವರನ್ನು ಮದುವೆ ಮಾಡಿಕೊಂಡವಳು ಹಿಂದೀ ಮಹಿಳೆಯರ ವಿಷಯವಾಗಿ ಅವಳದೊಂದು ಪುಸ್ತಕದಲ್ಲಿ ಹೀಗೆ ಬರೆದಿದ್ದಾಳೆ:--

ಹಿಂದೂ ಮಹಿಳೆಯರ ಕ್ಷೇಮಕ್ಕೂ, ಅಭಿವೃದ್ಧಿಗೂ ಹಾನಿಯನ್ನು ತಂದ ಒಂದು ಮುಖ್ಯಕಾರಣವು ಮುಸಲ್ಮಾನ್ ಧರ್ಮವಾಗಿದೆ. ಆದರೂ ಮುಸಲ್ಮಾನರ ಆಳ್ವಿಕೆ, ಧರ್ಮ, ಸಮಾಜ ಮಾತ್ರ ಈ ಅವನತಿಗೆ ಕಾರಣವೆಂತ ಹೇಳಲಿಕ್ಕಾಗುವುದಿಲ್ಲ. ಮುಸಲ್ಮಾನರಲ್ಲಿ ಹೆಂಗಸರ ಸಂಬಂಧವಾಗಿ ಇದ್ದ ಕೆಟ್ಟ ಪದ್ಧತಿಗಳನ್ನು ಮಾತ್ರ ಅನುಸರಿಸಿ ಉತ್ತಮವಾದದ್ದನ್ನು ಹಿಂದೂ ಗಂಡಸರು ತಿರಸ್ಕರಿಸಿದ್ದಾರೆ.

ಮುಸಲ್ಮಾನ್ ಧರ್ಮದ ಪ್ರಕಾರ ಮದುವೆಯಾದ ಹೆಂಗಸನ್ನು ಗುಲಾಮಗಿತ್ತಿಯಾಗಿಯಾಗಲೀ, ಸೂಳೆಗಾರಿಕೆಗಾಗಿಯಾಗಲೀ ಉಪಯೋಗಿಸಬಾರದೆಂತ ಇದೆಯೆಂತ ಹಿಂದೂಗಳಿಗೆ ತಿಳಿದ ಕೂಡಲೇ ಚಿಕ್ಕ ಮಕ್ಕಳನ್ನು ಮದುವೆ ಮಾಡಿಕೊಡಲು ಪ್ರಾರಂಭಿಸಿದರು. ಮುಸಲ್ಮಾನರಿಗೆ ಮದುವೆಯಾಗದ ಹಿಂದೂ ಹೆಂಗಸರು ಸಿಕ್ಕುವುದು ಕಷ್ಟವಾದ್ದರಿಂದ ಮದುವೆಯಾದವರನ್ನು ಸಹ ತೆಗೆದುಕೊಂಡು ಹೋಗಲು ಪ್ರಾರಂಭಿಸಿದರು. ಆಗ ಹಿಂದೂಗಳು ಹೆಂಗಸರ ವಿಷಯದಲ್ಲಿ ಇನ್ನೂ ಹೆಚ್ಚಿನ ಬಂದೋಬಸ್ತು ಮಾಡಬೇಕಾಯಿತು. ಇದಕ್ಕೆ ಮುಂಚೆ ಬಹಳ ಐಶ್ವರ್ಯವಂತರ ಮನೆಗಳಲ್ಲಿ ಮಾತ್ರ ಹೆಂಗಸರು ಹೊರಗೆ ಬರುತ್ತಿದ್ದಿಲ್ಲ. ಈ ಮುಸಲ್ಮಾನ್ ಹಾವಳಿಗಾಗಿ ಉತ್ತಮ ಜಾತಿಯವರೆಲ್ಲರೂ ಬಡವರು, ಬಲ್ಲಿದರು ಎಂಬ ಭೇದವಿಲ್ಲದೆ ಘೋರ ಪದ್ಧತಿಯನ್ನು ಆಚರಿಸಲು ಪ್ರಾರಂಭಿಸಿದರು.

ಈಗ ಕೆಲವು ವರ್ಷಗಳಿಂದ ಮಹಿಳೆಯರು ನಿರ್ಬಂಧಗಳನ್ನು ಬಹಳ ಮಟ್ಟಿಗೆ ಕಿತ್ತು ಹಾಕಿದ್ದಾರೆ. ಹಿಂದೀ ಮಹಿಳೆಯರು ತಮ್ಮ ಮುಖಂಡರ ಮೂಲಕ ಜಾತಿ, ಮತ ಭೇದಗಳನ್ನು ವಿರೋಧಿಸುತ್ತಿದ್ದಾರೆ. ಒಂದಕ್ಕಿಂತ ಹೆಚ್ಚು ಹೆಂಡತಿಯರನ್ನು ಲಗ್ನ ಮಾಡಿಕೊಳ್ಳುವುದನ್ನು ಖಂಡಿಸಿದ್ದಾರೆ. ಪರದಾ, ಬಾಲವಿವಾಹವನ್ನು ವಿರೋಧಿಸಿದ್ದಾರೆ. ಕಡ್ಡಾಯವಾಗಿ ಪ್ರಥಮ ವಿದ್ಯೆ ಕೊಡುವುದರಲ್ಲಿ ಗಂಡು ಹೆಣ್ಣು ಎಂಬ ಭೇದವಿರಕೂಡದೆಂದಿದ್ದಾರೆ. ಸೊತ್ತಿಗೆ ಹಕ್ಕು ಸರಿಸಮಾನವಾಗಿರಬೇಕೆಂತಲೂ, ಗಂಡನನ್ನು ಬಿಡುವ ಸ್ವತಂತ್ರವಿರಬೇಕೆಂತಲೂ ವಾದಿಸುತ್ತಿದ್ದಾರೆ.

ಹೆಂಗಸರಲ್ಲಿ ಶೇಕಡ ಮೂರರಷ್ಟು ಸಹ ಓದು ಬರಹ ತಿಳಿಯದಿರುವಲ್ಲಿ ಹೆಂಗಸರ ಹಕ್ಕುಗಳು ಸ್ಥಾಪನೆಯಾಗಬೇಕಾದರೆ ಇನ್ನೂ ತುಂಬಾ ಕಷ್ಟವಿದೆ ಎಂಬದೇನೋ ನಿಜ. ಆದರೆ ಬಹಳ ಕಾಲದಿಂದ ಕಷ್ಟವನ್ನು ಅನುಭವಿಸಿದ್ದರಿಂದಲೂ, ಬಲವುಳ್ಳ ಎದುರಿಯ ಮೇಲೆ ಹೋರಾಡಿದ್ದರಿಂದಲೂ ಒಂದು ಬಲವಿರುವುದರಿಂದ ಹಿಂದೀ ಮಹಿಳೆಯರು ತಮ್ಮ ಉದ್ಧಾರಕ್ಕಾಗಿ ಕೈಕೊಂಡ ಪ್ರಯತ್ನಗಳು ಜಯವನ್ನು ಹೊಂದದೆ ಇರಲಾರದು.

ಗಾಂಧಿಯವರ ರಾಷ್ಟ್ರೀಯ ಚಳವಳಿವು ಹೆಂಗಸರ ಸ್ವಾತಂತ್ರ್ಯ ಸಾಧನೆಗೆ ತುಂಬಾ ಸಹಾಯವಾಗಿದೆ. ಈ ಚಳವಳಿವು ಧಾರ್ಮಿಕ ಚಳವಳಿವಾಗಿದೆ. ಜನಾಂಗದ ಒಂದು ಗುಂಪಿನವರು ಮಾತ್ರ ನಡಿಸುವ ಚಳವಳಿವಲ್ಲ. ಸಮಸ್ತ ಸಮಾಜವೂ ನಡಿಸುವ ಚಳವಳಿವಾಗಿದೆ. ಆದ್ದರಿಂದ ಜಾತಿ ಪಂಗಡಗಳನ್ನು ಮೀರುವ ಚಳವಳಿವಾಗಿದೆ.

ಪರದಾ ಮತ್ತು ಜಾತಿ ಕಟ್ಟುಗಳಿಗೆ ವಿರೋಧವಾಗಿ ನಡೆಯುವುದು ತಪ್ಪೆಂತ ಭಾವಿಸಲ್ಪಡುವುದಿಲ್ಲ. ಮಾತೃ ಭೂಮಿಯ ಸೇವೆ ಮಾಡುವ, ಶ್ರೇಯಸ್ಸನ್ನು ಪಡೆಯುವ ಕೆಲಸಗಳಾದವು. ಮಹಿಳೆಯರು ಎಚ್ಚೆತ್ತು, ಈ ಚಳವಳಿಯಲ್ಲಿ ಸೇರಿದ್ದರಿಂದ ಪರದೇಶೀ ಆಳರಸರಿಗೆ ಎಷ್ಟು ಬೇಸರವೆನಿಸಿತೋ ಅಷ್ಟೇ ಅನುಕೂಲವು ಹಿಂದೀ ಮಹಿಳೆಯರಿಗೆ ತಮ್ಮ ಉದ್ಧಾರಕ್ಕೆ ದೊರಕಿತು. ಈ ಚಳವಳಿಯ ದೆಸೆಯಿಂದ ಯುಗಾಂತರದಿಂದ ಬಂದ ಆಕ್ಷೇಪಗಳನ್ನು ಮೀರಲು ಅನುಕೂಲವಾಯಿತು. ಅವರ ಈ ನಡತೆಯಿಂದ ತಂದೆ, ಸಹೋದರ, ಗಂಡನಿಗೆ ಸಹ ಭಯವನ್ನುಂಟುಮಾಡುವ ಅವಶ್ಯವೇನಿಸಲಿಲ್ಲ. ಅವರು ತಮ್ಮ ಗೌರವವನ್ನೂ, ಆಸ್ತಿಗಳನ್ನೂ, ಆಶ್ರಯಗಳನ್ನೂ ಮಾತೃಭೂಮಿಯ ನಾಮದಲ್ಲಿ ಅರ್ಪಿಸುತ್ತಿದ್ದರು. ಇದರಿಂದ ಆಕ್ಷೇಪಣೆ ಬರುವ ಬದಲು ಖ್ಯಾತಿಯೇ ಬಂತು. ದಬ್ಬಾಳಿಕೆಗೆ ಒಳಗಾಗಿದ್ದ ಕೋಟ್ಯಂತರ ಮಹಿಳೆಯರು ಈ ಅನುಕೂಲವನ್ನು ಉಪಯೋಗಿಸುವುದರಲ್ಲಿ ಆಶ್ಚರ್ಯವಿದೆಯೇ? ತಮ್ಮ ಸಮಾಜದ ಕೆಟ್ಟ ಪದ್ಧತಿಗಳನ್ನು ವಿರೋಧಿಸುವುದು ಕಷ್ಟವಾಗಿದ್ದರೂ ಪರದೇಶೀ ಸರ್ಕಾರದ ಮೇಲೆ ಬಹಿರಂಗವಾಗಿ ಹೋರಾಡುವುದು ಸುಲಭವಾಯಿತು. ಪೂರ್ವ ಪದ್ಧತಿಯನ್ನು ನಂಬಿರುವ ಬ್ರಾಹ್ಮಣತ್ವವನ್ನು ರಾಷ್ಟ್ರೀಯ ಚಳವಳಿವು ಸುಲಭವಾಗಿ ಮುರಿಯಿತು. ಸಾವಿರಾರು ವರ್ಷಗಳಿಂದ ಕಟ್ಟಿಕೊಂಡಿದ್ದ ಗೋಡೆಯು ಒಡೆದು ಹೋಯಿತು. ಪುನಃ ಅದನ್ನು ಕಟ್ಟಿಕೊಳ್ಳಲು ಸಾಧ್ಯವಿಲ್ಲ. ಆತ್ಮವಿಚಾರದಲ್ಲಾಗಲೀ, ಧಾರ್ಮಿಕ ತಿಳುವಳಿಕೆಯಲ್ಲಾಗಲೀ ಹೆಂಗಸರಿಗೆ ಸ್ವತಂತ್ರವಿಲ್ಲವೆಂತ ಹೇಳಲು ಇನ್ನು ಸಾಧ್ಯವಿಲ್ಲ.

ಗಾಂಧಿ ಚಳವಳಿದಿಂದ ಹೆಂಗಸರ ಉದ್ಧಾರವಾಯಿತು. ಗಾಂಧಿಯವರನ್ನು ಸೆರೆಹಿಡಿದದ್ದನ್ನು ಖಂಡಿಸಲಿಕ್ಕಾಗಿ ಒಂದು ರಾತ್ರಿಯಲ್ಲಿ 500 ಮಹಿಳೆಯರು ಪರದೆಯಿಂದ ಹೊರಗೆ ಬಂದರು. ಪುನಹ ಪರದೆಯ ಹಿಂದೆ ಹೋಗರು. ಬಂದೇ ಕಲ್ಲಿನಿಂದ ಎರಡು ಹಕ್ಕಿ ಬಿದ್ದಂತಾಯಿತು.

Reg. No. M. 1550.

If not delivered please return to "KODAGU" OFFICE MERCARA.

ಕೊಡಗು.

ಸತ್ಯೇನ ಭೂತದಯಯಾ ವಿದ್ಯಾ ಶೀಲ ಶೌಯ್ಯಯುಕ್ತಾಃ । ಏಕಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೨	ಮಡಿಕೇರಿ, ಸನ್ ೧೯೩೨ನೇ ಇಸವಿ ಜುಲೈ ತಾರೀಕು ೨೯ ನೇ ಶುಕ್ರವಾರ.	ಸಂಚಿಕೆ ೯

SARI-PIN.

EAR-RINGS.
(Thodus)
Cut-rubys Rs. 25 to 50
With diamond in centre Rs. 80 to 120

BRACELETS.

Gold Rs. 10
Set rubys forming any letter Rs. 12

NECKCHAINS.

NOSE-RINGS.
Diamond in small size of best quality Rs. 35 & upwards according to size.

MARRIAGE PRESENTATIONS

Attractive and inexpensive articles ready in stock. Prompt execution. Details on enquiry free with catalogue. Numerous customers in Coorg thoroughly satisfied with reliable service. Testimonials pouring in.
Silver Guindys, Photo lockets, Dimond nose-screws, cut-ruby ear-rings, etc., etc., etc., in all prices. Very attractive Prices most moderate.

Estimates free on enquiry

Designs free on enquiry.

V. Subramaniaier Jeweller,

Telegrams: 'PRECIOUS.'

Telephone: 3145.

CATALOGUE ON ENQUIRY.

52—36

Post Box 423, Triplicane, P. O., MADRAS.

ಇಂಡಿಯಾ ಎಕ್ವಿಟೇಬಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

(ಸ್ಥಾಪಿಸಲ್ಪಟ್ಟದ್ದು 1906.)

ಪೋಲಿಸಿಗಳು ಕಳಕೊಳ್ಳುವಂಥವುಗಳಲ್ಲ.

ಜೀವ ತಡೆಯೂ ಇಲ್ಲದೆ ಪ್ರತಿ ವರ್ಷವು ಬೋನಸ್ಸು.

ಹಕ್ಕು ಬಾಧ್ಯಸ್ಥರಿಗೆ ಸರಿಯಾಗಿ ಹಣ ಕೊಡಲ್ಪಡುವದು ಇಲ್ಲದಿದ್ದರೆ ಬಡ್ಡಿಯು ದೊರಕುವುದು.

ಹೆಡ್ಡ ಆಫೀಸು:—

102. ಕ್ಲೈವ್ ಸ್ಟ್ರೀಟ್, ಕಲ್ಕತ್ತಾ.

I. E., C. P. S. 12—10

ಬಾಲಾರ್ಕಮಧು.

ಬಾಲಾರ್ಕಮಧು ಮಕ್ಕಳಿಗೆ ಕೊಡುವುದರಿಂದ ಶಕ್ತಿಯೂ ಆರೋಗ್ಯವೂ ಹೆಚ್ಚುವುದು. ಇದು ಮಧುರವಾಗಿದೆ. ಬೆಲೆ ಶೀಸೆ 1ಕ್ಕೆ 0—12—0 ಟ. ಖ. 0—12—0.



(Spleen Lever enlargement) ಎಂಬ ಮಕ್ಕಳ ಭಯಂಕರ ಗಡ್ಡೆರೋಗ—ಪ್ಲೀಹ—ಪಿತ್ತಕೋಶದ ಗಡ್ಡೆಗೆ ಚಕ್ರಬಿಂದು. ಚಕ್ರಕ್ಷಾರ—ಚಕ್ರಚೂರ್ಣ—ಚಕ್ರ ಪ್ರಭಾ—ಈ ನಾಲ್ಕು ಮಹೌಷಧಗಳಿವೆ. ಸಾವಿರಾರು ಮಕ್ಕಳ ಪ್ರಾಣವನ್ನು ಉಳಿಸಿದೆ. ನಾಲ್ಕು ಔಷಧಗಳು ಸೇರಿ 1 ತಿಂಗಳ ಔಷಧದ ಬೆಲೆ 3—0—0. ಟ. ಖ. 0—8—0. ಏಜೆಂಟರು ಬೇಕಾಗಿರುವರು.

ಪ. ಎ. ಮುನ್. ಶ್ರೀನಿವಾಸರಾವ್,

ವೈ. ವಿ. ಆಯುರ್ವೇದಭಿಷಕ್,

ಬ್ರಾಂಚ್ ಆಫೀಸ್, ಉಡ್ಪಿ. S. K. | Spleen & Lever ಸ್ಪೆಶಲಿಸ್ಟ್. ಯಂ. ವಿ. ಪ್ರಸಾದಿಕ ಔಷಧಾಲಯ ಶಿಮೊಗ್ಗ. (ಮೈಸೂರು ಸೀಮೆ)

52—28

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್ ಕೋ ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.
(ಸ್ಥಾಪಿತವಾದದ್ದು 1922ರಲ್ಲು)

		ರೂ.
ಶೇರ್ ಬಂಡವಾಳ	—	10,000
ವಸೂಲಾದ ಶೇರ್ ಮೊಬಲಗು	—	27,350
ಜನರಿಂದ ಠೇವಣಾತಿ	—	2,25,172
ವಸೂಲಾದ ಕ್ಷೇಮನಿಧಿ	—	37,914

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೆ ನೇರ ಹಣ ಸಾಲಕೊಡತಕ್ಕದ್ದು.

ಒಂದು ವರ್ಷ ಗಡುವಿನ ಅಥವ ಹೆಚ್ಚಿನ ಗಡುವಿನ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. ೬-೦-೦ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ಗಡುವಿನ ಠೇವಣಾತಿಗಳಿಗೆ ಶೇಕಡ ಸಾಲಿಯಾನ ೪ರ ಬಡ್ಡಿ ದೊರೆಯುತ್ತೆ.

ವರ್ತಕರಿಗೆ ಸಾಲ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ತನಿಖೆ ಮಾಡುತ್ತಾರೆ.

ಪ್ರೆಸಿಡೆಂಟರು,	ಟ್ರೆಜರರ್,
ಪಟ್ಟುವಾಡ ದೇವಯ್ಯನವರು, ರಾವ್ ಬಹದ್ದೂರ್.	ಮನೆಯಪ್ಪಂಡ ಬೆಳ್ಯಪ್ಪನವರು.

ಸೆಕ್ರೆಟರಿ

ಸಿ. ಯಸ್. ವೆಂಕಟಯ್ಯನವರು, ಬಿ.ಎ., ಬಿ.ಎಲ್.
ತಾರೀಖು 1—7—1932.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ [illegible] ಪುಸ್ತಕದಲ್ಲಿ [illegible] ಮುದ್ರಿತ ರಶೀತಿ ಪಡೆಯಬೇಕಾಗಿ [illegible]

ಏಜೆಂಟರುಗಳು.

ಉತ್ತರ ಕೊಡಗಿಗೆ ಟಿ. ಚಾರಿತ ಮಾಚಯ್ಯನವರು,

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು, (ಖಾದಿಭಂಡಾರ.)
ನಾಪೋಕ್ಲು—ಎಮ್. ಆರ್. ವೆಂಕಟಯ್ಯನವರು.
ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮೊಣ್ಣಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜೆ. ಮುತ್ತಣ್ಣಯ್ಯನವರು, ಮತ್ತು ಆಪಮಣಮಾಡ ಪಿ ಕಾರ್ಯಪ್ಪನವರು,
ಕುದಿಕೇರಿ & ತಿತಿಮತ್ತಿ—ಮೆ. ಜಿ. ಮಾದಯ್ಯನವರು,
ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಪೊನ್ನಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಿಸಲು ಅತ್ಯವಶ್ಯವಾಗಿರುವ, ರೂಲ್ಸಿನ ಪ್ರಕಾರವಾಗಿ ತಯಾರಿಸಲ್ಪಟ್ಟಿರುವ ದರಖಾಸ್ತು ಫಾರಮುಗಳೂ, ಕರಾರು ಫಾರಮುಗಳೂ, ಜಮ್ಮಾ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಕರಾರು ಫಾರಮುಗಳೂ, ಸ್ಟೋರ್ ಕೀಪರ್ ಕರಾರು ಫಾರಮುಗಳೂ, ಓವರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮಾ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಬುಕ್ಕು ಬರಲಿಕ್ಕೆ ಆಗಬೇಕಾದ ಖರ್ಚು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ!

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.
ವಿಮೆದಾರರಿಗೆ ಕೊಟ್ಟದ್ದು—3231 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.
ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,78,322 ಜನರಿಗೆ 38ಕೋಟಿ ರೂ.
ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ರಕ್ಕಿಂತ ಕಡಿಮೆ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದಾಗಿದೆ.
ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.
ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಬೆಂಬಲವನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬುದು ಆದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಫರೇಡ್ ಬೆಂಗಳೂರು,

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ಮೊಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೋ	ಪಾಟ್ನಾ	ಸುಕ್ಕೂರು
ಅಲ್ಲಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಡಾರ್ಲಿಂಗ್‌ಟನ್	ಮಂಡಲೆ	ರಾಯಪುರ	ತಿರುವೆಂಡ್ರಮ್
ಭೋಪಾಲ್	ಕರಾಚಿ	ಮಂಗಳೂರು	ರಾಂಚಿ	ವಿಶಾಖಪಟ್ಟ [52—21

ಚಿಕ್ಕ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
52—28 ಗಿರಿಗಾಂವ, ಮುಂಬಯಿ.

[illegible]
[illegible]
ಕಳುಹಿಸಲ್ಪಡುವುವು.

ಕೋವಿಗಳು, ಕತ್ತಿಗಳು, ಬಚೀಗಳು, ತೋಟೆಗಳು, ಕೇಪುಗಳು, ಮದ್ದು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS LTD.,
Largest Importers of Firearms and Ammunition
Cheapest priced firm in India,
24—20 **210 Abdul Rehiman Street, BOMBAY.**

Printed & published by P. I. Belliappa at "Kodagu" Press Merca for "Kodagu" Ltd.

ಗಳ್ಳು ಇನ್ನೂ ಬಾಲ್ಯಾವಸ್ಥೆಯಲ್ಲಿಯೇ ಇರುತ್ತದೆಂಬುದನ್ನು ತಿಳಿಸಲು ತುಂಬಾ ವಿಷಾದವಾಗುತ್ತದೆ.

ಈ ಕೆಳಗೆ ಕಾಣಿಸಿರುವ ಸಂಘದ ಜಮಾ ಖರ್ಚಿನ ಪಟ್ಟಿಯಿಂದ ಸಂಘವು ಎಷ್ಟು ಮಟ್ಟಿಗೆ ಮುಂದುವರಿದಿರುತ್ತದೆ ಎಂಬುದನ್ನು ಕೊಡಗು ಮಹನೀಯರೆಲ್ಲರೂ ಯೋಚಿಸತಕ್ಕದ್ದಾಗಿದೆ.

ವರದಿ ವರ್ಷದ ಲೇಣ.

ಸಂಘದಿಂದ ವೇತನ, ಸಾಲ, ವಗೈರೆ ಹೊಂದಿಕೊಂಡವರಿಂದ ಬರಬೇಕಾದ ಮೊಬಲಗು	13765— 8—0
ಸರಕಾರಿ ಪ್ರಾಂಸರಿ ನೋಟಿನ ಮೇಲೆ ಬರಬೇಕಾಗಿರುವ ಮೊಬಲಗು	5300— 0—0
ವರ್ಷದಂತ್ಯದಲ್ಲಿ ಕೈಯಲ್ಲಿರುವ ನಗದು ಹಣ	1499—10—1
ಜುಮ್ಲ	20565— 2—1

ವರದಿ ವರ್ಷದ ಜಮ ಪಟ್ಟಿ.

ಸಾಲ ಮತ್ತು ವೇತನಹೊಂದಿದವರಿಂದ ವಸೂಲಾದ ಮೊಬಲಗು	990— 0—0
ಸರಕಾರಿ ಪ್ರಾಂಸರಿ ನೋಟಿನ ಮೇಲೆ ಬಡ್ಡಿ ಜಮ	80— 5—0
ಸೇವಿಂಗ್ಸ್ ಬ್ಯಾಂಕಿನಲ್ಲಿರುವ ಹಣದ ಮೇಲೆ ಬಡ್ಡಿ ಜಮ	30—13—4
ಧರ್ಮಾರ್ಥ ಸಿಕ್ಕಿದ್ದು	5— 0—0
ಚಂದದಿಂದ ದೊರೆತ ಹಣ	159— 5—0
ಜುಮ್ಲ.	1265— 7—4
ವರ್ಷದ ಆದಿಯಲ್ಲಿದ್ದ ಮೂಲಧನ.	1242—14—9
ಜುಮ್ಲ.	2508— 6—1

ವರದಿ ವರ್ಷದ ಖರ್ಚಿನ ಪಟ್ಟಿ.

ವೇತನ ಕೊಟ್ಟದ್ದು.	960	0	0
ಇತರ ಖರ್ಚು.	48	12	0
ಜುಮ್ಲ.	1008	12	0
ಬಾಕಿ ಹಣ.	1499	10	1

ವರದಿ ವರ್ಷದಲ್ಲಿ ಪ್ರತಿಯೊಬ್ಬನಿಗೆ ತಿಂಗಳೊಂದರ 10—0—0 ರೂ. ನಂತೆ 11 ಜನ ವಿದ್ಯಾರ್ಥಿಗಳಿಗೆ ವೇತನ ಕೊಡಲ್ಪಟ್ಟಿತು. ಪುಲಿಯಂಡ ಅಪ್ಪಯ್ಯನವರಿಗೆ 180—0—0 ರೂಪಾಯಿ ವೇತನ ಕೊಡಲ್ಪಟ್ಟು ಅವರು ಮಂಗಳೂರಿನಲ್ಲಿ ತೀರಿಹೋದ ನಿಮಿತ್ಯ ಸದರಿ ಹಣವನ್ನು ಮುಪ್ಪತ್ತು ಬಿಡಲಾಯಿತು.

ಮಿ. ಕೊಡಂದೇರ ದೇವಯ್ಯನವರು, ಮಿ. ಕಾಳಿಪ್ಪಂಡ ದೇವಯ್ಯನವರು ಮತ್ತು ಮುಕ್ಕಾಟಿರ ಅಪ್ಪಣ್ಣನವರ ತಲೆ ಒಂದರ 5—0—0 ರೂ ನಂತೆ ಸಂಘಕ್ಕೆ ಧರ್ಮಾರ್ಥವಾಗಿ ಕೊಟ್ಟ 15 ರೂ. ಯನ್ನು ಸ್ವೀಕರಿಸಲಾಯಿತು. ಸಂಘದ ಸಾಲ ಹೊಂದಿಕೊಂಡವರಲ್ಲಿ ಮಿ. ಬೊಳ್ಳೇರಿಯಂಡ ಕೃಷ್ಣನವರು ಮತ್ತು ಮಿ. ಮಾದಂಡ ಗಣಪತಿಯವರು ಇವರ ಹಣ ಪೂರ್ತಿ ಸಂದಾಯ ಮಾಡಿರುತ್ತಾರೆ. ಇದೇ ರೀತಿ ಇತರ ಮಹನೀಯರು ಅವರವರ ಸಾಲಗಳನ್ನು ಆದಷ್ಟು ತೀವ್ರ ತೀರಿಸಿದಲ್ಲಿ ಸಂಘದ ಏಳಿಗೆಗೆ ಬಹಳ ಮಟ್ಟಿಗೆ ಪ್ರಾಮುಖ್ಯತೆಯನ್ನು ಕೊಟ್ಟಂತಾಗುವುದಲ್ಲವೇ ?

ಸಂಘದಿಂದ ವೇತನ, ಸಾಲ ವಗೈರೆ ಹೊಂದಿಕೊಂಡ 62 ಜನರ ಪೈಕಿ 27 ಜನರು ಮಾತ್ರ ಸಂಪಾದನೆ ಮಾರ್ಗದಲ್ಲಿದ್ದಾರೆ. ಮಿಕ್ಕುಳಿದ 35 ಜನರೂ ಸಹ ಆ ಮಾರ್ಗವನ್ನು ಅವಲಂಬಿಸಿ ಸಂಘದ ಸಾಲವನ್ನು ತೀರಿಸಬೇಕಾಗಿದೆ. ಸಂಘದ ಸಹಾಯ ಹೊಂದಿದವರು ಮತ್ತು ಕಮಿಟಿ ಮೆಂಬರರು ಸಹ ಒಬ್ಬೊಬ್ಬರು ಹತ್ತು ಜನರಂತೆ ಸಂಘಕ್ಕೆ ಮೆಂಬರುಗಳನ್ನಾಗಿ ಮಾಡಿದರೆ 1000 ಮೆಂಬರರಾಗುವುದಲ್ಲದೆ ಒಬ್ಬೊಬ್ಬ ಮೆಂಬರು ಕನಿಷ್ಠ ಪಕ್ಷ ಒಂದು ರೂಪಾಯಿಯಂತೆ ಕೊಡುವ ಚಂದಾ ಮೊಬಲಗು ಒಂದು ಸಾವಿರ ರೂಪಾಯಿಗಳು ಆಗುತ್ತವೆ. ಈ ಸಂಘಕ್ಕೆ ಚಂದಾ ವಸೂಲುಮಾಡತಕ್ಕ ಬಗ್ಗೆ ತೊಂದರೆ ತೆಗೆದುಕೊಂಡ ಮಿ. ಗಳಂಡ ಎಂ. ಎಸ್. ಮುಂದಣ್ಣನವರಿಗೂ, ಕೆ. ಟಿ. ಉತ್ತಪ್ಪನವರಿಗೂ, ಎಸ್. ಸಿ. ಸುಬ್ಬಯ್ಯನವರಿಗೂ, ಕೋಳೇರ ಕುಟ್ಟಪ್ಪನವರಿಗೂ ಮತ್ತು ಕೀತಿಯಂಡ ಬೆಳ್ಯಪ್ಪನವರಿಗೂ ಅನೇಕ ಧನ್ಯವಾದಗಳಿವೆ.

ಸಂಘದ ವೇತನವನ್ನು ಯಾ ಸಾಲವನ್ನು ಹೊಂದಲಪೇಕ್ಷಿಸುವ ವಿದ್ಯಾರ್ಥಿಯರ ತಾಯಿ ತಂದೆಗಳು ಇಲ್ಲವೆ ಗಾರ್ಡಿಯನ್ನರು ತಮ್ಮ ಮಕ್ಕಳಿಗೆ ವೇತನವು ದೊರೆಯುವುದೆಂಬ ಉದ್ದೇಶದಿಂದ ಆ ಸಮಯದಲ್ಲಿ ಮಾತ್ರ ಮೆಂಬರರಾಗಿ ಮಿಕ್ಕ ಕಾಲದಲ್ಲಿ ಸಂಘವನ್ನು ದೂರೀಕರಿಸುವುದು ಶೋಚನೀಯ ಸಂಗತಿಯಾಗಿದೆ. ಇದು ಬಿಟ್ಟು ಪ್ರತಿಯೊಬ್ಬ ಕೊಡಗು ಮಹನೀಯನೂ ಆತನ ಹಿತಕ್ಕಾಗಿಯೇ, ಆತನ ಮಕ್ಕಳ ಏಳಿಗೆಗಾಗಿಯೇ, ಆತನ ಕುಟುಂಬದ ರಕ್ಷಣೆಗಾಗಿಯೇ, ಆತನ ದೇಶದ ಅಭಿವೃದ್ಧಿಗಾಗಿಯೇ ಏರ್ಪಡಿಸಿರುವ ಈ ಸಂಘವನ್ನು ತನ್ನ ಶಕ್ತ್ಯಾನುಸಾರ ದ್ರವ್ಯ ಸಹಾಯದಿಂದ ಮುಂದಕ್ಕೆ ತರಬೇಕಾಗಿ ಅರಿಸುವ,

ಮಡಿಕೇರಿ,
15—7—32

ಕೆ. ಯಂ. ಬೆಳ್ಯಪ್ಪ,
(ಗೌರವ ಸೆಕ್ರೆಟರಿ.)

ಎಂಪೈರ್ ಆಫ್ ಇಂಡಿಯಾ ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

(ಸ್ಥಾಪಿಸಲಾದದ್ದು 1897.)

ಹಿಂದೂಸ್ಥಾನದಲ್ಲಿ ಪ್ರಾಮುಖ್ಯವೂ, ಜನಪ್ರಿಯವೂ ಆಗಿರುವ ಈ ಕಂಪೆನಿಯಲ್ಲಿ ನೀವು ಜೀವ ವಿಮೆ ಮಾಡುವುದಕ್ಕೆ ಇದೇ ತಕ್ಕ ಸಮಯ.

ಬೋನಸ್ ವರ್ಷ! ಬೋನಸ್ ವರ್ಷ!!

ಸಾಹಸವಂತರಾದ ಏಜೆಂಟರು ಬೇಕಾಗಿದೆ.

ಹೆಡ್ ಆಫೀಸು:—
ಎಂಪೈರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್,
ಬೊಂಬಾಯಿ.

ಬ್ರಾಂಚ್ ಆಫೀಸು:—
152—3 ಕಮರ್ಷಿಯಲ್ ಸ್ಟ್ರೀಟ್,
ಬೆಂಗಳೂರು.

52—42

26—4

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

1. ಉತ್ತಮ ತರಹ ಒಂದು ಸೆಟ್ ಜರ್ಮನ್ ರೀಡ್ಸ್ ಹಾಕಿರುವ ಸಿಂಗಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 20—0—0
   „ ಮತ್ತು 22—8—0
2. ಡಿಟೋ ಉತ್ತಮ ತರಹ ಹಾರ್ಮೋನಿಯಂ „ 1ಕ್ಕೆ ರೂ. 25—0—0
   ಮತ್ತು 27—8—0
3. ಡಿಟೋ ಉತ್ತಮ ತರಹದ್ದು, ದೂಳು ಬೀಳದಂತೆ ಕೇಸಿನ ಮೇಲೆ ಪೂರ್ತಿ ಮುಚ್ಚಳವುಳ್ಳ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ ರೂ. 27—8—0
4. ಬಾಳಿಕೆಯೂ, ಬಂದೋಬಸ್ತೂ, ಸುಸ್ವರವುಳ್ಳದ್ದೂ, ಅನೇಕ ವರ್ಷಗಳ ವರುವಿಗೆ ಬಾಳಿಕೆ ಬರತಕ್ಕದ್ದೂ ಆದ ಹೊಸದಾಗಿ ಸಪ್ಲೈ ಆಗಿರುವ ಫ್ರೆಂಚ್ ರೀಡ್ಸ್ ನಮೂನೆ ಇರುವ ನಮ್ಮ ಹೆಸರಿನ ರೀಡ್ಸ್ ಹಾಕಿರುವ "ಸಿದ್ಧಪ್ಪಾಸ್ ಫ್ಲೂಟ್" ಸಿಂಗಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 42—8—0
5. ಉತ್ತಮ ತರಹ 2 ಸೆಟ್ ಜರ್ಮನ್ ರೀಡ್ಸ್ ಹಾಕಿರುವ, ದೂಳು ಬೀಳದಂತೆ ಕೇಸಿನ ಮೇಲೆ ಪೂರ್ತಿ ಮುಚ್ಚಳವುಳ್ಳ ಡಬ್ಬಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ ರೂ. 32—8—0
   ಉತ್ತಮ ತರಹ 2 ಸೆಟ್ ಜರ್ಮನ್ ಮೇಕ್ ರೀಡ್ಸ್ ಹಾಕಿರುವ, ಕೈನಿಂದಾಗಲೀ ಅಥವಾ ಕಾಲಿನಿಂದಾಗಲೀ ಬಾರಿಸಲು ಅನುಕೂಲಿಸುವಂತೆ ತಯಾರಿಸಿರುವ "ಸ್ಪೆಷಲ್ ಫ್ಲೂಟ್" ಡಬ್ಬಲ್ ರೀಡ್ಸ್ ಹ್ಯಾಂಡ್ ಲೆಗ್ ಹಾರ್ಮೋನಿಯಂ 1ಕ್ಕೆ ರೂ. 79—8—0

ನಮ್ಮ ಟಿಂಬರ್ ಡಿಪೋನಲ್ಲಿ ಕಟ್ಟಡಗಳಿಗೂ, ಫರ್ನಿಚರ್ ತಯಾರಿಸಲೂ ಬೇಕಾದ ಎಲ್ಲಾ ನಮೂನೆ ನಾಟಾಗಳನ್ನು ಸುಲಭ ದರದಿಂದ ಬಿಕರಿಗಿಟ್ಟಿರುವುದಲ್ಲದೇ, ಗಿರಾಕಿಗಳು ಅಪೇಕ್ಷಿಸುವ ಸೈಜಿಗೆ ಕುಯಿಸಿಯೂ ರಿಯಾಯಿತಿ ದರದಿಂದ ಸಪ್ಲೈ ಮಾಡುತ್ತೇವೆ. ಹೆಚ್ಚಿಗೆ ವಿಷಯಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಳಾಸ:— ಯಂ. ಎಸ್. ಶಿದ್ದಪ್ಪ ಬ್ರದರ್ಸ್,
ಹಾರ್ಮೋನಿಯಂ ಮತ್ತು ಟಿಂಬರ್ ವ್ಯಾಪಾರಿಗಳು,
ವಾಣೀವಿಲಾಸ ಮಾರ್ಕೆಟ್, ಮೈಸೂರು.
52—4

ಒಂದು ಹಳೇ ಕಥೆಯನ್ನು ನೆನಪಿಸಿಕೊಂಡದ್ದು.

ಕಾಳಿ ದೇವಾಲಯದ ಭಕ್ತನೊಬ್ಬನು ದೇವಿಗೆ ಕೊಬ್ಬಿದ ಒಂದು ಕೋಣವನ್ನು ಒಪ್ಪಿಸಲು ಹರಿಕೆ ಹೇಳಿಕೊಂಡನು. ಹರಿಕೆಯನ್ನು ಸಲ್ಲಿಸದೆ ಇದ್ದದ್ದರಿಂದ ಕೋಣನ ಬದಲಿಗೆ ಕುರಿಯನ್ನು ಕೊಡಲು ಅನುಮತಿ ಬೇಡಿದನು. ಆದರೆ ಅವನ ಉತ್ಕೃಷ್ಟವಾದ ಕುರಿಮಂದೆಯಲ್ಲಿ ಕುಂಟೋ, ಕುರುಡೋ, ಅನಾಚಾರವಾದದ್ದೋ ಇರಲಿಲ್ಲವಾದ್ದರಿಂದ ಒಂದು ಕುರಿಮರಿಯನ್ನು ಒಪ್ಪಿಸುತ್ತೇನೆಂತ ಹೇಳಿದನು. ಆದರೆ ಕುರಿಮರಿ ಸಹ ಹೆಚ್ಚಾಯಿತೆಂತ ಅವನಿಗೆ ತೋರಿತು. ಅದ್ದರಿಂದ ಒಂದು ಮಿಡಿತೆಯನ್ನು ಇದರ ಬದಲಿಗೆ ಅಂಗೀಕರಿಸಬೇಕೆಂತ ದೇವಿಯನ್ನು ಬೇಡಿಕೊಂಡನು. ದೇವಿಯು ಬೇಸರದಿಂದಲೂ, ನೋವಿನಿಂದಲೂ ಅಗಲಬಹುದೆಂತ ಒಪ್ಪಿದಾಗ ಅವನು—'ದೇವಿ, ಒಂದು ಮಿಡಿತೆಯನ್ನು ನಿಮಗಾಗಿ ಹಿಡಿಯಬೇಕಾದರೆ ನನಗೆ ತೊಂದರೆ ಮತ್ತು ಸಮಯ ಬೇಕಾಗುತ್ತದೆ, ಅದ್ದರಿಂದ ನೀವೇ ನಿಮ್ಮ ಕೈಯನ್ನು ಚಾಚಿ ಆಚೆ ಹೊಲದಿಂದ ಹಿಡಿದುಕೊಳ್ಳಿ' ಎಂಬದಾಗಿ ಹೇಳಿಕೊಂಡನು.

ಈ ಕವಿತ್ವವನ್ನು ಮಾಡಿದ ಕವಿಶಿರೋ ಕುಮಾರ ಘೋಷರು ಮುಂದೆ ಹೇಳಿರುವುದೇನೆಂದರೆ—'ಹಿಂದೂಸ್ಥಾನವೇ, ನಿನ್ನ ಪ್ರಾರ್ಥನೆಗೆ ಜಬ್ಬೈಸಲ್ಪಾದರೂ ತಪಿಕೊಟ್ಟು ಕೋಣ, ಕುರಿ, ಕುರಿಮರಿ ಯಾವುದನ್ನೂ ಕೊಡದೆ ಜತೇ ಮಿಡಿತೆಯನ್ನು ಕಳುಹಿಸಿದ್ದಾರೆ ಎಂತ ಕವಿತ್ವವನ್ನು ಮುಗಿಸಿದ್ದಾರೆ.

ಬ್ರಿಟಿಷ್ ಜನಾಂಗದ ಪ್ರತಿನಿಧಿಯಾದ ಸರ್ ಸ್ಯಾಮ್ಯುವೆಲ್ ಹೋರರು ಆಟ್ಸಿರಿನಲ್ಲಿ ನಮಗೆ ಮಿಡಿತೆಗಳನ್ನು ಕೊಡುತ್ತೇನೆಂತ ಹೇಳುತ್ತಾರೆ, ಆದರೆ ಅವುಗಳನ್ನು 'ಆಚೆ ಹೊಲದಿಂದ ನೀವೇ ಹಿಡಿದುಕೊಳ್ಳಿ' ಎಂತ ಹೇಳಿದ್ದಾರೆ.

ದುಂಡು ಮೇಜು ರೀತಿಯನ್ನು ಬಿಟ್ಟು ಈಗ ಕೈಕೊಂಡ ಆಲೋಚನೆ ಕೇಳುವ ರೀತಿಯನ್ನು ಅನುಸರಿಸಿದ್ದರಿಂದ ಹಿಂದೂಸ್ಥಾನದ ರಾಜಕೀಯ ಭವಿಷ್ಯತ್ತನ್ನು ನಿರ್ಣಯಿಸುವ ಹಕ್ಕನ್ನು ಹಿಂದೂಸ್ಥಾನಕ್ಕೆ ಅಲ್ಲಗಳೆದಿದ್ದಾರೆ ಎಂತ ಮೋಡರೇಟ್ ಪಕ್ಷದ ಸ್ನೇಹಿತರು ಹೇಳುತ್ತಾರೆ. ಹಿಂದೂಸ್ಥಾನದ ರಾಜಕೀಯ ಭವಿಷ್ಯತ್ತನ್ನು ನಿರ್ಣಯಿಸುವ ಹಕ್ಕು ಹಿಂದೂಸ್ಥಾನಕ್ಕೆ ಇರುವುದು, ಕೊಬ್ಬಿದ ಕೋಣದಂತೆ. ಅದನ್ನು ಈಗ ಕೊಡುವುದಿಲ್ಲವಾಗಿ ಹೇಳಿದ್ದು ಅದನಲ್ಲ, ಮೆಕ್ಡೋನಾಲ್ಡರು ಕೊಡುವುದಾಗಿ ವಾಗ್ದಾನ ಮಾಡಿದ ಕುರಿಮರಿಯನ್ನು ಗಾಂಧಿ—ಇರ್ವಿನ್ ಒಪ್ಪಂದದಲ್ಲಿ ಹಿಂದೀ ರಾಜರುಗಳಿಗೆ ತುಂಬಾ ಹಕ್ಕಿರುವ ಫೆಡರೇಶನಿಗೆ ಗಾಂಧಿಜೀಯವರ ಒಪ್ಪಿಗೆಯನ್ನು ಪಡೆದಿದ್ದರು. ಹಿಂದೂಸ್ಥಾನದ ಭವಿಷ್ಯತ್ತನ್ನು ನಿರ್ಣಯಿಸುವ ಹಕ್ಕನ್ನು ಬ್ರಿಟಿಷರು ಎಂದೂ ಒಪ್ಪಿರಲಿಲ್ಲ, ಕೊಟ್ಟಿರಲಿಲ್ಲ. ಈ ಬಾಬಿನಲ್ಲಿ ನಮ್ಮ ಸ್ಥಿತಿಯು ಇತರ ಸಾಮಂತ ರಾಜ್ಯಗಳಂತಿರಲಿಲ್ಲ. ಇತರ ಸಾಮಂತ ರಾಜ್ಯಗಳಾದರೋ ತಮ್ಮ ಭವಿಷ್ಯತ್ತನ್ನು ತಾವೇ ನಿರ್ಣಯಿಸಿಕೊಂಡದ್ದನ್ನು ಬ್ರಿಟಿಷ್ ಪಾರ್ಲಿಮೆಂಟು ಅಂಗೀಕರಿಸಿಕೊಂಡಿತಷ್ಟೆ. ಹಿಂದೂಸ್ಥಾನಕ್ಕಾದರೋ ಹಿಂದೂಸ್ಥಾನದ ರಾಜಕೀಯ ಸ್ವರೂಪವನ್ನು ಬ್ರಿಟಿಷರೇ ಮೊದಲಿನಿಂದಲೂ ನಿರ್ಣಯಿಸಿಕೊಂಡಿದ್ದಾರೆ. ನಿರಂಕುಶ ಪ್ರಭುತ್ವ ನಡಿಸುತ್ತಿರುವ ರಾಜರುಗಳಿಂದಲೂ ಕೂಡಿದ ಫೆಡರೇಶನನ್ನು ನೀವು ಅಂಗೀಕರಿಸುತ್ತೀರೋ ಎಂತ ಹಿಂದೀಯರನ್ನು ಕೇಳಲಿಲ್ಲ. ಮಧ್ಯವರ್ತಿ ಸರಕಾರದಲ್ಲಿ ಪ್ರಜಾ ಜವಾಬ್ದಾರಿ ಪದ್ಧತಿಯನ್ನು ಕೊಡಬೇಕಾದರೆ ರಾಜರುಗಳನ್ನು ಸೇರಿಸಲೇ ಬೇಕೆಂತ ಬ್ರಿಟಿಷರು ಹೇಳಿದರು. ಇದಕ್ಕೆ ಬದಲಾಗಿ ಬೇರೆ ಯಾವ ಸಲಹೆಯನ್ನೂ ಅಂಗೀಕರಿಸುವುದಿಲ್ಲವೆಂದರು.

ಅಲ್ಲದೆ ಈ ಅಖಿಲ ಹಿಂದೂಸ್ಥಾನದ ಫೆಡರೇಶನನ್ನು ರೂಪಕ್ಕೆ ತರುವ ಕೆಲಸವನ್ನು ಸಹ ಹಿಂದೀಯರಿಗೆ ಬಿಡಲಿಲ್ಲ. ಹಿಂದೀಯರೊಂದಿಗೆ ಬ್ರಿಟಿಷ್ ರಾಜಕೀಯ ಪಂಗಡಗಳ ಪ್ರತಿನಿಧಿಗಳೂ ಸೇರಬೇಕೆಂದರು.

ಇಷ್ಟೂ ಅಲ್ಲದೆ ಬ್ರಿಟಿಷ್ ಜನರು ಮೊದಲೇ ನಿರ್ಣಯಿಸಿಕೊಂಡಿದ್ದ ರಾಜಕೀಯ ರಚನೆಯ ತಪಶೀಲನ್ನು ನಿರ್ಣಯಿಸಲು ಹಿಂದುಸ್ಥಾನದ ಪ್ರತಿನಿಧಿಗಳನ್ನು ಆರಿಸುವ ಹಕ್ಕು ಹಿಂದೀಯರಿಗೆ ಕೊಡಲಿಲ್ಲ. ಈ 'ಪ್ರತಿನಿಧಿ' ಗಳನ್ನು ಬ್ರಿಟಿಷರೇ ಆರಿಸಿಕೊಳ್ಳುತ್ತೇವೆಂದರು.

ಹಿಂದೀಯರಿಗೆ ವ್ಯತ್ಯಾಸ ಮಾಡಲು ಅನುಕೂಲವಿಲ್ಲದ ಇತರ ಷರತುಗಳನ್ನೂ ಇಟ್ಟರು. ಈ ಏರ್ಪಾಡಿನಿಂದ ಹಿಂದೀ ರಾಜಕೀಯ ರಚನೆಯನ್ನು ನಿರ್ಣಯಿಸುವ ಹಕ್ಕು ಹಿಂದೀಯರಿಗೆ ಕೊಟ್ಟಂತಾಯಿತೇ? ಇಂಥಾದ್ದೇನೂ ಅಲ್ಲ. ಮೊದಲೇ ನಿರ್ಣಯಿಸಲ್ಪಟ್ಟಿದ್ದ ರಾಜಕೀಯ ರಚನೆಯ ತಪಶೀಲನ್ನು ತೀರ್ಮಾನಿಸಿಕೊಳ್ಳುವ ಬಗ್ಗೆ ಹಿಂದೀಯರ ಸಂಗಡ ಒಂದೇ ಮೇಜಿನ ಸುತ್ತ ಕೂರಲು ಬಿಟ್ಟು, ಹಿಂದೀಯರು ತಮ್ಮ ಅಭಿಪ್ರಾಯವನ್ನು ಕೊಡಬಹುದೆಂತ ಒಪ್ಪಿದ್ದೇ ನಮಗೆ ತೋರಿಸಿದ ರಿಯಾಯಿತಿ. ಈ ರೀತಿ ಮೊದಲೇ ಅಡಚಣೆಗಳಿಗೆ ಒಳಗುಮಾಡಲ್ಪಟ್ಟಿದ್ದ ರಾಜಕೀಯ ರಚನೆಯು ಸರಿಯಾಗಿ ನಡಿಯಲಿಕ್ಕಿಲ್ಲವೆಂತಲೂ ಮಧ್ಯವರ್ತಿ ಸರಕಾರದಲ್ಲಿ ಕೊಡುವ ಜವಾಬ್ದಾರಿ ಪದ್ಧತಿಯು ಪ್ರಜಾ ಸತ್ತಾತ್ಮಕ ಸರಕಾರದ ತತ್ವವನ್ನು ಅನುಸರಿಸುವಂಥಾದ್ದಲ್ಲವೆಂತಲೂ ತಿಳಿಯಲು ಹೆಚ್ಚಿಗೆ ಬುದ್ಧಿ ಸಾಮರ್ಥ್ಯ ಬೇಕಾಗಿಲ್ಲ. ಆತ್ಮಗೌರವಕ್ಕೆ ಹಾನಿ ತರುವ ಈ ಸ್ಥಿತಿಯನ್ನು ಕಾಂಗ್ರೆಸ್ ಎಂದೂ ಅಂಗೀಕರಿಸುತ್ತಿಲ್ಲ. ಈ ತಂತ್ರಗಳನ್ನು ಬಿಡಿಸಿ ಕಾಲವಾಗಿಯೇ ಈ ಅಡಚಣೆಗಳೆಲ್ಲಾ ಹೊರಟು ಹೋಗುವ ರಚನೆಯನ್ನು ಪಡೆಯಬೇಕೆಂತ ಮಹಾತ್ಮ ಗಾಂಧಿಯವರಿಗೆ ಕಾಂಗ್ರೆಸು ಅಧಿಕಾರ ಕೊಟ್ಟಿತು. ಈ ರಾಜಿಗೆ ಅವರು ಬಹಳವಾಗಿ ಪ್ರಯತ್ನಪಟ್ಟರು. ಅವರು ಹೇಗೆ ಜಯಶೀಲರಾಗಲಿಲ್ಲವೆಂಬದನ್ನೂ ಈ 'ಕುರಿಮರಿ'ಯನ್ನು ಅಂಗೀಕರಿಸುವಂತೆ ಸರ್ ತೇಜ್ ಬಹದ್ದೂರು ಸಪ್ರು ಮುಂತಾದವರು ಹೇಗೆ ಒತ್ತಾಯಪಡಿಸಿದರೆಂಬದನ್ನು ಇಲ್ಲಿ ವಿವರಿಸಬೇಕಾಗಿಲ್ಲ.

ಸರ್ ಸ್ಯಾಮುವೆಲ್ ಹೋರರು ಮಾಡಿರುವುದೇನೆಂದರೆ ಮೆಕ್ಡೊನಾಲ್ಡರನ್ನೂ ಅವರ ವಾಗ್ದಾನಗಳನ್ನೂ ಮೂಲೆಗೆ ಒತ್ತಿ, ಅವರು ಆರಿಸುವ ಕೆಲವು ಹಿಂದೀಯರು ಉಭಯ ಪಾರ್ಲಿಮೆಂಟರಿ ಕಮಿಟಿ ಮುಂದೆ ತಮ್ಮ ಅಭಿಪ್ರಾಯ ಕೊಡಬಹುದೆಂತ ಹೇಳಿದ್ದಾರೆ. ಆದರೆ ರಾಜಕೀಯ ರಚನೆಯನ್ನು ನಿರ್ಣಯಿಸುವ ಹಕ್ಕು ಪಾರ್ಲಿಮೆಂಟಿಗೇ ಇರತಕ್ಕದ್ದೆಂತ ಹೇಳಿದ್ದಾರೆ. ಈ ಮಿಡಿತೆಯನ್ನು ಹೊಲದ ಕೊಚ್ಚೆಕಾಡಿನಲ್ಲಿ ಹಿಡಿದುಕೊಳ್ಳಬೇಕೆಂತ ಸರ್ ಹೋರರು ಹೇಳಿರುವವರಾಗಿದೆ.

ಈ ಮಿಡಿತೆಗಳನ್ನು ಹಿಡಿಯಲು ಲಂಡನಿಗೆ ಹೋಗಬೇಕೋ ಎಂತ ಯೋಚಿಸಲು ಲಿಬರಲ್ ಪಾರ್ಟಿಯವರು ಯೋಚಿಸುತ್ತಿದ್ದಾರೆ. ದುಂಡು ಮೇಜು ಪರಿಷತ್ತಿನ ಗೌರವ ಕಾರ್ಯಕ್ಕೆ ಅರ್ಹರೆನಿಸಿಕೊಳ್ಳದಿದ್ದ ಸರ್ ಅಬ್ದುಲ್ ರಹೀಮರಂಥವರು ಈಗ ಲಂಡನಿಗೆ ಈ ಮಿಡಿತೆಗಳನ್ನು ಹಿಡಿಯಲು ಹೋಗಲು ತಯಾರಾದವರು ಇದ್ದಾರೆ. ಸರ್ ಸ್ಯಾಮುವಲ್ ಹೋರರು ಮಾಡಿದ ಏರ್ಪಾಡುಗಳಿಗೆ ಇವರುಗಳು ಒಳಗಾಗುವದಾದರೆ ಅವರು ಹಾಗೆ ಮಾಡಬಹುದು. ಆದರೆ ಹಿಂದೂಸ್ಥಾನದ ಭವಿಷ್ಯತ್ತನ್ನು ಹಿಂದೂಸ್ಥಾನವೇ ನಿರ್ಣಯಿಸಿಕೊಂಡಿತೆಂತಾಗಲೀ ಆಗಿಂದಾಗ್ಯೆ ಮಾಡಿದ ವಾಗ್ದಾನಗಳನ್ನು ಸ್ವಲ್ಪ ಮಟ್ಟಿಗಾದರೂ ನಡಿಸಿ ಕೊಟ್ಟರೆಂತಾಗಲೀ ಪ್ರಪಂಚವನ್ನು ನಂಬಿಸಲು ಸರ್ ಹೋರರಿಗೆ ಸಾಧ್ಯವಿಲ್ಲ. ಆದರೆ ಅವರು ಪಶು ಬಲವನ್ನು ನಂಬಿದ್ದಾರೆ. ಆದರೆ ಪಶು ಬಲವು ಪ್ರಪಂಚದ ಬೇರೆ ಕಡೆಗಳಲ್ಲಿ ಈಗ ಸಾಮಂತ ರಾಜ್ಯಗಳೆನ್ನಿಸಿಕೊಂಡಿರುವಲ್ಲಿ ಸಹ ನಡೆದಿಲ್ಲ. ಇಂಡಿಯಾದಲ್ಲಿ ಸಹ ಅದು ನಡಿಯಲಾರದೆಂತ ಅವರ ತಿಳುವಳಿಕೆಗೆ ಬರಲು ಇನ್ನೂ ಬಹು ಕಾಲವಿಲ್ಲ.

ಕೊಡಗು ದೇಶದ ವ್ಯವಸಾಯ ಮತ್ತು ಕೈಗಾರಿಕೆ.

(ಮಿ. ಸಿ. ಯಂ. ಬಿದ್ದಯ್ಯನವರಿಂದ)

ಕೊಡಗು ದೇಶದ ಹವಗುಣವು ಅಲ್ಲಿಯ ವ್ಯವಸಾಯ ಮತ್ತು ಕೈಗಾರಿಕೆಗಳಿಗೆ ತಕ್ಕ ಮಟ್ಟಿಗೆ ಅನುಕೂಲವಾಗಿರುವುದು ಎಲ್ಲರಿಗೂ ತಿಳಿದ ಸಂಗತಿಯಾಗಿರುವುದು. ಆದರೆ ಅಲ್ಲಿಯ ಜನರಿಗೆ ದೇವರು ಕೊಟ್ಟಿರುವ ಈ ಅನುಕೂಲಗಳನ್ನು ನ್ಯಾಯವಾಗಿ ಉಪಯೋಗಿಸಿಕೊಳ್ಳುವಂತೆ ಕಾಣುವುದಿಲ್ಲ. ಕೊಡಗಿನ ಮುಖ್ಯ ವ್ಯವಸಾಯಗಳಾದ ಕಾಫಿ, ಭತ್ತ, ಏಲಕ್ಕಿ, ಕಿತ್ತಳೆ, ಒಳ್ಳೆ ಮೆಣಸು ಮೊದಲಾದವುಗಳನ್ನು ನೆಡುವ ಮತ್ತು ಕಟಾವು ಮಾಡುವ ಸಮಯಗಳು ಕಳೆದ ನಂತರ ಅವರಿಗೆ ಸಿಕ್ಕುವ ವಿರಾಮ ಕಾಲಗಳಲ್ಲಿ ಬೇರೆ ಲಾಭ ಬರುವಂತ ಬೆಳೆಗಳನ್ನು ಬೆಳೆಸುವ ನಿಯಮಗಳನ್ನು ಅಲ್ಲಿಯವರು ಪ್ರಯತ್ನಪಟ್ಟು ವೃದ್ಧಿಗೊಳಿಸಿ ಅದರಿಂದ ಹೆಚ್ಚಾದ ಲಾಭಗಳನ್ನು ಹೊಂದುವಂತೆ ಕಾಣುವುದಿಲ್ಲ. ಆದುದರಿಂದ ಅವರು ಪ್ರತಿ ದಿನವೂ ಉಪಯೋಗಿಸುವ ನಾನಾತರದ ಪದಾರ್ಥಗಳಿಗೆ ಹೊರಗಿನ ದೇಶದವರನ್ನು ನಂಬಿಕೊಂಡಿರುವಂತೆ ಕಾಣುತ್ತೆ. ಈ ಕಾರಣದಿಂದ ಕೊಡಗಿನಲ್ಲಿ ಅವರಿಗೆ ಅನುಕೂಲವಾಗಿರುವ ಅನೇಕ ಜಮೀನುಗಳು ಅಂತಾನ ಪಾಳಾಗಿ ಹೋಗಿರುವುದು.

ಕೊಡಗಿನಲ್ಲಿ ಈ ಮೇಲೆ ಹೇಳಿದ ಬೆಳೆಗಳಲ್ಲದೆ ಇನ್ನು ನಾನಾತರದ ಕುಷ್ಕಿ ಮತ್ತು ತರಿ ಜಮೀನಿನ ಪೈರುಗಳನ್ನು ಬೇರೆ ದೇಶದವರಂತೆ ಚೆನ್ನಾಗಿ ಬೆಳೆಸಬಹುದು. ಹೀಗೆ ಬೆಳೆಸಬಹುದಾದ ಪೈರುಗಳಲ್ಲಿ ಕೆಲವನ್ನು ಈ ಕೆಳಗೆ ತೋರಿಸಲಾಗಿದೆ.

ಕಬ್ಬು, ಕಿತ್ತಳೆ, ನಿಂಬೆ ಹಣ್ಣು, ಮಾವಿನ ಹಣ್ಣು, ಗೆಣಸು, ಬೆಲ್ಲದ ಗೆಣಸು, ಮರಗೆಣಸು (Cassava) ಅಡಿಕೆ, ತೆಂಗು, ಮೆಣಸು, ಅರಸಿನ, ಸುಂಠಿ, ಹೊಗೆ ಸೊಪ್ಪು, ರಾಗಿ, ಜೋಳ ಮತ್ತು ನಾನಾತರದ ಕಾಯಿಪಲ್ಯಗಳು; ಇವಲ್ಲದೆ ರಬ್ಬರ್, ಬೂತಾಳೆ (Aieal fiber) ದಾಸವಾಳನಾರು, ಟೀ, ಇವೇ ಮೊದಲಾದವುಗಳನ್ನು ಸಹ ಅಲ್ಲಿಯ ನಿವಾಸಿಗಳ ಪೈಕಿ ಹಣಗಾರರು ಸಹ ವಿಸ್ತೀರ್ಣವಾಗಿ ಬೆಳೆಸಬಹುದು.

ಬೂತಾಳೆ—ಕೊಡಗಿನಲ್ಲಿ ಬೂತಾಳೆ ನಾರಿನ ವ್ಯವಸಾಯವನ್ನು ಸುಲಭ ಖರ್ಚಿನಿಂದ ಹೆಚ್ಚಾಗಿ ಬೆಳೆಸಬಹುದು. ಸಧ್ಯಕ್ಕೆ ಒಳ್ಳೇ ಬೆಲೆಯು ದೊರೆಯುವುದಿಲ್ಲವಾದರೂ ಕ್ರಮೇಣ ಒಳ್ಳೇ ಬೆಲೆ ದೊರೆಯಬಹುದು. ಇದರ ನಾರಿನಿಂದ ನಾಜೂಕಾದ ಬಟ್ಟೆಗಳು ತಯಾರಾಗುವುದಲ್ಲದೆ ಹಡಗುಗಳಲ್ಲಿ ಹಗ್ಗ ಮೊದಲಾದ ಕೆಲಸಗಳಿಗೆ ಹೆಚ್ಚಾಗಿ ಉಪಯೋಗಿಸಲ್ಪಡುತ್ತದೆ.

ಕಬ್ಬು—ಇದನ್ನು ಅನೇಕ ಸ್ಥಳಗಳಲ್ಲಿ ಬಹಳ ಚೆನ್ನಾಗಿ ಬೆಳೆಸಬಹುದು. ಈಗ್ಗೆ ಹತ್ತು ಹದಿನೈದು ವರ್ಷಗಳ ಹಿಂದೆ ಕೊಡಗಿನಲ್ಲಿ ಅನೇಕರು ಈ ಬೆಳೆಯನ್ನು ಬೆಳೆಸಲಿಕ್ಕೆ ಪ್ರಯತ್ನಪಟ್ಟು ಇದರಿಂದ ಲಾಭ ಹೊಂದುತ್ತಿದ್ದರು. ಈಚೆಗೆ ಒಂದು ಕಾಲದಲ್ಲಿ ಭತ್ತಕ್ಕೆ ಕ್ರಯವು ಏರಿದರಿಂದ ಕಬ್ಬು ಬೆಳೆಸುತ್ತಿದ್ದ ಜಮೀನುಗಳನ್ನೆಲ್ಲಾ ಭತ್ತದ ಗದ್ದೆಗಳನ್ನಾಗಿ ಮಾಡಿರುವರು. ಕಬ್ಬಿನ ಬೆಳೆ ಭತ್ತದ ಬೆಳೆಗಿಂತ ಎಂದರೆ ಭತ್ತಕಿಂತ ಎರಡು ಅಥವಾ ಮೂರು ಪಾಲು ಹೆಚ್ಚು ಲಾಭಕರವಾದದ್ದು. ಒಳ್ಳೇ ಬೆಳೆಯಾದರೆ ಎಕರೆ ಒಂದಕ್ಕೆ 30 ಟನ್ ಕಬ್ಬು ಬೆಳೆಯುವುದು. ಇದಕ್ಕೆ 25 ಟನ್ನಿನಷ್ಟು ಕಬ್ಬಿನ ನೀರು ದೊರೆಯುವುದು. ಈ ನೀರನ್ನು ಕಾಯಿಸಿದರೆ ಸುಮಾರು ಪಕ್ಕ 5000 ಪೌಂಡು ಬೆಲ್ಲವಾಗುವುದು. ಇದಕ್ಕೆ ಬಹಳ ಕಮ್ಮಿ ಎಂದರೆ ರೂ. 500 ರಾದರೂ ದೊರೆಯದಿರಲಾರದು. ಭತ್ತದ ಗದ್ದೆಯಿಂದಲಾದರೋ ಇಷ್ಟು ಲಾಭ ಎಂದಿಗೂ ದೊರೆಯಲಾರದು.

ಈ ಬೆಳೆಯನ್ನು ಬೆಳೆಸುವವರು ಮುಖ್ಯವಾಗಿ ಒಳ್ಳೇ ಜಾತಿ ಬೀಜ ದೊರೆಯುವಂತೆ ಪ್ರಯತ್ನಪಡಬೇಕು. ಕೆಟ್ಟ ಬೀಜಗಳನ್ನು ಉಪಯೋಗಿಸಿದರೆ ಇದರಿಂದ ನಷ್ಟವಾಗುವುದಲ್ಲದೆ ಆ ಬೀಜದಿಂದ ಬೆಳೆದ ಕಬ್ಬಿನ ದೀಜವನ್ನು ಬೇರೆಯವರು ಕೊಂಡುಕೊಂಡು ನೆಟ್ಟರೆ ಅವರು ಸಹ ನಷ್ಟಪಡಬೇಕಲ್ಲದೆ ದೇಶದಲ್ಲಿ ಕಬ್ಬಿನ ವ್ಯವಸಾಯವನ್ನು ಹಾಳುಮಾಡಿದಂತಾಗುವುದು.

ಹೊಗೆಸೊಪ್ಪು—ಇದು ಸಹ ಕೊಡಗಿನಲ್ಲಿ ಚೆನ್ನಾಗಿ ಬೆಳೆಯಬಹುದು. ಆದರೆ ಇದನ್ನು ಪರೀಕ್ಷಿಸಿ ಬೆಳೆಸಬೇಕು. ಇದು ಸಹ ಲಾಭಕರವಾದ ಬೆಳೆಯಲ್ಲಿ ಒಂದಾಗಿರುವುದು.

ರಾಗಿ— ಇದು ಕೊಡಗಿನಲ್ಲಿ ಬಹಳ ಚೆನ್ನಾಗಿ ಬೆಳೆಯುತ್ತದೆ. ಆದರೆ ಇದನ್ನು ಬೆಳೆಸುವವರು ಬಹಳ ಕಮ್ಮಿ.

ಮೆಣಸು—ಇದಕ್ಕೆ ಕೊಡಗಿನಲ್ಲಿ ಯಾವ ತರದ ಪರೀಕ್ಷೆಯು ಅವಶ್ಯವಿರುವುದಿಲ್ಲ. ಸರ್ವಸಾಧಾರಣವಾಗಿ ಎಲ್ಲಾ ಕಡೆಗಳಲ್ಲಿಯೂ ಬಹಳ ಚೆನ್ನಾಗಿ ಬೆಳೆಸಬಹುದು. ಇದು ಸಹ ಲಾಭಕರವಾದ ಪೈರು.

ಮರಗೆಣಸು—(Cassava) ಇದನ್ನು ಕೊಡಗಿನಲ್ಲಿ ಬೆಳೆಸಲಿಕ್ಕೆ ಸ್ವಲ್ಪವೂ ಕಷ್ಟವಿರುವುದಿಲ್ಲ. ಇದರ ಗೆಣಸನ್ನು ಹಸಿಯದಾಗಿಯಾಗಲಿ, ಒಣಗಿಸಿಯಾಗಲಿ ಉಪಯೋಗಿಸಬಹುದು. ಇದು ಬಹಳ ಪುಷ್ಟಿಕರವಾದ ಆಹಾರವಾಗಿರುವುದು.

ಜಾತಿಗೆಣಸು ಮತ್ತು ಬೆಲ್ಲದ ಗೆಣಸು—ಇವುಗಳನ್ನು ಯಾವ ಕಷ್ಟವಿಲ್ಲದೆ ಬಹಳ ಚೆನ್ನಾಗಿ ಬೆಳೆಸಬಹುದು.

ಹತ್ತಿ—ಇದನ್ನು ಪರೀಕ್ಷಿಸಿ ಮಳೆ ಕಮ್ಮಿಯಾದ ತಗ್ಗು ಪ್ರದೇಶಗಳಲ್ಲಿ ಚೆನ್ನಾಗಿ ಬೆಳೆಸಬಹುದು.

ಕೊಡಗಿನಲ್ಲಿ ವ್ಯವಸಾಯಕ್ಕೆ ಅತಿ ಅವಶ್ಯವಾದ ಪ್ರಾಣಿಯಾಗಿರುವ ದನಕರುಗಳ ವಿಷಯ ಸ್ವಲ್ಪ ಬರೆಯಬೇಕಾಗಿರುವುದು. ದನಕರುಗಳಿಗೆ ತಗಲುವ ರೋಗಗಳನ್ನು ಹೇಳಿ ಪೂರೈಸಲಿಕ್ಕಾಗುವುದಿಲ್ಲ. ಇಷ್ಟೇ ಅಲ್ಲದೆ ಮೊದಲು ಹುಲ್ಲುಗಾವಲುಗಳಾಗಿದ್ದ ಬಾಣೆ ಜಾರಿಕೆಗಳು ಇತ್ತೀಚೆಗೆ ಲಂತಾನವು ತುಂಬಿ ಅಂಥಾ ಸ್ಥಳಗಳು ಹುಲಿ ಮೊದಲಾದ ಕಾಡು ಪ್ರಾಣಿಗಳಿಗೆ ವಾಸಮಾಡುವುದಕ್ಕೆ ಅನುಕೂಲವಾಗಿರುವುದು. ಅಲ್ಲಿಯ ಜನರು ಮತ್ತು ಸರಕಾರದವರು ಇದನ್ನು ತಿಳಿದು ತಿಳಿಯದ ಹಾಗೆ ನಟಿಸಿಕೊಂಡು ಬರುವುದನ್ನು ನೋಡಿದರೆ ಬಹಳ ಶೋಚನೀಯವಾಗಿ ಕಾಣುವುದು. ಈ ಮೇಲೆ ಹೇಳಿದ ರೋಗವನ್ನು ಮತ್ತು ಲಂತಾನವನ್ನು ಸಹ ಹೋಗಲಾಡಿಸಲಿಕ್ಕೆ ತಕ್ಕ ಏರ್ಪಾಡನ್ನು ಮಾಡದಿದ್ದರೆ ರೈತರ ಪಾಡು ಕ್ರಮೇಣ ಇನ್ನಷ್ಟು ಹೀನ ಸ್ಥಿತಿಗೆ ಇಳಿದು ಬಹಳ ಕಷ್ಟಕ್ಕೆ ಗುರಿಯಾಗುವುದು.

ಕೊಡಗಿನಲ್ಲಿ ವ್ಯಾಪಾರಸ್ಥ, ವ್ಯವಸಾಯಗಾರ, ನೆಯಿಗೆ ಕೆಲಸಗಾರ, ಕುರುಬ, ಬಡಗಿ, ಅಕ್ಕಸಾಲಿಗ ಮೊದಲಾದ ಕಸಬಿನವರು ಮಾಡುವ ಕೆಲಸಗಳನ್ನು ಆಯಾಯ ಪಂಗಡದವರೇ ಮಾಡುವ ನಿಯಮವನ್ನು ಹೆಚ್ಚಾಗಿ ರೂಢಿಗೆ ತಂದಿರುವರು. ಈ ಕೆಲಸಗಳನ್ನು ಬೇರೆ ಪಂಗಡದವರು ಮಾಡುವುದೆಂದರೆ ಅವರ ಯೋಗ್ಯತೆಗೆ ಕಮ್ಮಿ ಎಂದು ಸಹ ಅನೇಕರು ನಂಬಿಕೊಂಡಿರುತ್ತಾರೆ. ಇದು ಶುದ್ಧ ತಪ್ಪು. ಬೇರೆ ದೇಶಗಳಲ್ಲಿಯಾದಗೋ ಈ ನಿಯಮವನ್ನು ಬಾಧಿಸಿದಂತೆ ಕಾಣುತ್ತದೆ. ದೇವರು ಇವರನ್ನು ಸಹ ಬೇರೆ ದೇಶದವರಂತೇ ಉಂಟುಮಾಡಿ ತಕ್ಕ ಅನುಕೂಲಗಳನ್ನು ದಯಪಾಲಿಸಿರುವಾಗ ಇವರು ಸಹ ಬೇರೆ ದೇಶದವರಂತೇ ಅನೇಕ ತರದ ಕಸಬನ್ನು ಬಿನ್ನಬೇಧವಿಲ್ಲದೆ ನಡಿಸಿಕೊಂಡು ಬರಬಹುದು. ಇದರಿಂದ ಇವರು ತಮ್ಮ ಸ್ಥಿತಿಯನ್ನು ವೃದ್ಧಿಪಡಿಸಿಕೊಳ್ಳುವುದಲ್ಲದೆ ಇಡೀ ಹಿಂದೂದೇಶಕ್ಕೂ ಸಹ ಸಹಾಯಮಾಡಿದಂತಾಗುವುದು.

ಕೊಡಗಿನಲ್ಲಿ ಅನೇಕ ಬುದ್ಧಿವಂತರಾದ ಐಶ್ವರ್ಯವಂತರಿರುತ್ತಾರೆ. ಇವರು ತಮ್ಮ ತಮ್ಮ ಗ್ರಾಮಗಳಲ್ಲಿ ಒಂದೊಂದು ಸಂಘವನ್ನು ಏರ್ಪಡಿಸಿಕೊಂಡು ತಮ್ಮ ವಿರಾಮ ಕಾಲದಲ್ಲಿ ಲಾಭಕರವಾದ ಕೈಗಾರಿಕೆ ಮೊದಲಾದ ಎಲ್ಲಾ ತರದ ಕಸಬಿನಲ್ಲಿ ಕಾಲ ಕಳೆದರೆ ಕ್ರಮೇಣ ಇದರ ಲಾಭಗಳನ್ನು ಹೊಂದಬಹುದಲ್ಲದೆ ಅನೇಕರು ಒಂದೊಂದು ತರದ ಕಸಬನ್ನು ಸಹ ಕಲಿತಂತೆ ಆಗುವುದು.

ಕೊಡಗಿನಲ್ಲಿ ನೀರಿನ ಸಹಾಯದಿಂದ ಅನೇಕ ತರದ ಸುಲಭ ಖರ್ಚಿನ ಯಂತ್ರಗಳನ್ನು ತಿಳಿದವರ ಸಹಾಯದಿಂದ ಏರ್ಪಡಿಸಿಕೊಂಡು ಅದರಿಂದಲೂ ಸಹ ಅನೇಕ ಕೆಲಸಗಳನ್ನು ನಡಿಸಬಹುದು.

ಕೊಡಗು ವಿದ್ಯಾಭಿವೃದ್ಧಿ ಸಂಘದ 1931—32 ನೇ ಸಂವತ್ಸರದ ವಾರ್ಷಿಕ ವರದಿ.

ಈ ಸಂಘದ ಜನರಲ್ ಮೀಟಿಂಗು ಇದೇ ತಾ. 12ನೇ ಮಂಗಳವಾರ ಸಾಯಂಕಾಲ 5 ಗಂಟೆ ಸಮಯದಲ್ಲಿ ಓಂಕಾರೇಶ್ವರ ದೇವಸ್ಥಾನದ ಹಾಲ್‌ನಲ್ಲಿ ಸಂಘದ ಪ್ರೆಸಿಡೆಂಟರಾದ ರಾವ್ ಬಹದ್ದೂರ್ ಕೆ. ಚಂಗಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಈ ಸಂಘದ ಮೆಂಬರುಗಳ ಸಂಖ್ಯೆಯು ಕಳೆದ ವರ್ಷಕ್ಕಿಂತ ಈ ವರ್ಷ ಸ್ವಲ್ಪ ಹೆಚ್ಚಾಗಿದೆ. ಆದರೂ ಮೆಂಬರುಗಳನೇಕರು ಈ ಸಂಘಕ್ಕೆ ತಕ್ಕಷ್ಟು ಉತ್ತೇಜನವನ್ನು ಕೊಡದಿರುವ ಪ್ರಯುಕ್ತ ಸಂಘವು ಸಾಗಿಸಲು, 15 ವರ್ಷಗಳಾದಾ

ವರ್ತಮಾನ ಸಂಗ್ರಹ.

ಒ ಳ ದೇ ಶ.

ಮಡಿಕೇರಿ ಟೌನಿನಲ್ಲಿ ಟೈಫಾಯಿಡ್ ಎಂಬ ಅಂಟು ಜ್ವರವು ಕೆಲದೋರಿ ಕೆಲವರಿಗೆ ಅಂಟಿದೆ.

ವೀರಾಜಪೇಟೆ ಹೈಸ್ಕೂಲು ಸಹ ಅಂಗೆರೆ ಕಜ್ಜಿ ಮತ್ತು ಮಳೆಯ ದೆಸೆಯಿಂದ ಜುಲೈ ತಾ. 15 ರಿಂದ ಮುಚ್ಚಲ್ಪಟ್ಟು ಆಗಸ್ಟ್ ತಾ. 22 ರಲ್ಲಿ ತೆರೆಯಲ್ಪಡುವುದು.

"ಕೊಡಗು" ಕಂಪೆನಿಯ ಡೈರೆಕ್ಟರುಗಳ ಮಿಟಿಂಗೊಂದು ಬರುವ ಆಗೋಸ್ಟು ತಾ. 1 ನೇ ಸೋಮವಾರ ಸಾಯಂಕಾಲ 5 ಗಂಟೆಗೆ ಕಂಪೆನಿಯ ಆಫೀಸಿನಲ್ಲಿ ನಡೆಯುವುದು.

ಕಳೆದ ಸ್ಕೂಲ್ ಫೈನಲ್ ಪರೀಕ್ಷೆಗೆ ಪ್ರೈವೇಟಾಗಿ ಹೋಗಿ ಮೆ. ಮಾಳೇಟಿರ ಯಂ. ಚಿಟ್ಯಣ್ಣನವರು ತೇರ್ಗಡೆಯಾಗಿರುತ್ತಾರೆಂದು ಇತ್ತೀಚೆಗೆ ತಿಳಿದು ಸಂತೋಷಪಡುತ್ತೇವೆ.

ಈ ದಿನ ಸಾಯಂಕಾಲ 4½ ಗಂಟೆಗೆ ವೀರಾಜಪೇಟೆ ಮುಸಲ್ಮಾನರು ಮಹಮ್ಮದ್ ಪೈಗಂಬರರವರ ಜನ್ಮೋತ್ಸವವನ್ನು ಅಲ್ಲಿಯ ಅಂಜುಮಾನ್ ಹಾಲ್‌ನಲ್ಲಿ ಆಚರಿಸುವರೆಂದು ತಿಳಿಯುತ್ತೇವೆ.

ಪೆನ್ಷನ್ಡ್ ಕರ್ಣೀಕರಾಗಿದ್ದ ಮೆ. ಕೊಂಗಂಡ ಸುಬ್ಬಯ್ಯನವರು ಕಳೆದ ಶನಿವಾರ ನ್ಯುಮೋನಿಯ ಕಾಯಿಲೆಯಿಂದ ಅವರ ಮಡಿಕೇರಿ ಮನೆಯಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಈ ತಾ. 16 ರಿಂದ ಇಂದಿನ ವರೆಗೆ ಮಡಿಕೇರಿಯಲ್ಲಿ 8.22 ಇಂಚು ಮಳೆಯಾಗಿದೆ. ದೇಶದ ಎಲ್ಲಾ ಕಡೆಗಳಲ್ಲೂ ಮಳೆಯು ಸರಿಯಾಗಿ ನಡೆಯುತ್ತಿವೆಯೆಂದೂ, ಹಲವು ಕಡೆಗಳಲ್ಲಿ ನಾಟಿ ಕೆಲಸಕ್ಕೆ ಪ್ರಾರಂಭವಾಗಿದೆಯೆಂದೂ ವರ್ತಮಾನ.

ದೇವಣಗೇರಿ ಗ್ರಾಮದ ಮೆ. ಮುಕ್ಕಾಟಿರ ಲೇಟ್ ಐಯ್ಯಪ್ಪನವರ ಮಗ ಮೆ. ಮುತ್ತಣ್ಣನವರು ಕಾಣುವಂಥ ಕಾಯಿಲೆ ಏನೂ ಇಲ್ಲದೆ ಥಕ್ಕನೆ ಈ ತಾ. 18ರಲ್ಲಿ ಶಿವಾಧೀನರಾದರೆಂದು ತಿಳಿಯಲು ವ್ಯಸನಪಡುತ್ತೇವೆ.

ಸುಮಾರು ಒಂದು ವರ್ಷದಿಂದ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ ನಡೆಯುತ್ತಿದ್ದ ಕಾವೇರಿ ಬಸ್ಸ್ ಸರ್ವಿಸಿನ ಪಾಲುದಾರರುಗಳೊಳಗಿನ ಸಿವಿಲ್ ಕೇಸಿನ ವಿಚಾರವು ಮುಗಿದು ಈ ತಾ. 15, 16 ಮತ್ತು 18 ರಲ್ಲಿ ಆರ್ಗ್ಯುಮೆಂಟುಗಳು ಆದವು. ಜಡ್ಜ್‌ಮೆಂಟು ಕೊಡಲ್ಪಟ್ಟಿರುವುದಿಲ್ಲ.

ಊರುಪರಂಬು ಎಸ್ಟೇಟಿನ ರೈಟರಾದ ಮೆ. ಬಲ್ಲಾರಂಡ ಈರಪ್ಪನವರು ತಾ. 18ರಲ್ಲಿ ಕುರಳಿಬಳಮುಡಿ ಗ್ರಾಮದ ತನ್ನ ಮನೆಗೆ ರಾತ್ರಿ 8 ಗಂಟೆಗೆ ಬಂದು ಮಲಗಿಕೊಂಡಿದ್ದವರು ಸುಮಾರು ಮಧ್ಯ ರಾತ್ರಿಯಲ್ಲಿ ತನ್ನ ಕುತ್ತಿಗೆಯನ್ನು ಚೂರಿಯಿಂದ ಕತ್ತರಿಸಿಕೊಂಡು ಆತ್ಮ ಹತ್ಯೆ ಮಾಡಿಕೊಂಡಿರುವರೆಂದೂ, ಪೋಲೀಸಿನವರು ತನಿಖೆ ನಡಿಸುತ್ತಲಿದ್ದಾರೆಂದೂ ತಿಳಿಯ ಬರುತ್ತದೆ.

ಶ್ರೀಮಂಗಲನಾಡು ಪಾರುಪತ್ಯಗಾರರಾಗಿರುವ ಮೆ. ಯಂ. ಯನ್. ಗುಂಡುರಾವ್‌ರವರು ಜಾನೆಸುಮಾರಿ ವರದಿ ತಯಾರಿಸಲು ಮಡಿಕೇರಿಗೂ, ಪೊನ್ನಂಪೇಟೆ ಅಸಿಸ್ಟೆಂಟ್ ಪಾರುಪತ್ಯಗಾರರಾಗಿರುವ ಮೆ. ಪಟ್ಟಡ ನಂಜಪ್ಪನವರನ್ನು ಶ್ರೀಮಂಗಲನಾಡು ಪಾರುಪತ್ಯಗಾರರಾಗಿಯೂ, ಪೊನ್ನಂಪೇಟೆ ನಾಡುಕಾರ್ಕೂನರಾದ ಮೆ. ಸುಬ್ರಾಯರವರನ್ನು ಅಲ್ಲಿಯ ಅಸಿಸ್ಟೆಂಟ್ ಪಾರುಪತ್ಯಗಾರರಾಗಿಯೂ ಆಗೋಸ್ಟು 1ರಿಂದ ವರ್ಗಾಯಿಸುವಂತೆ ಹುಕುಂ ಆಗಿದೆಯಾಗಿ ತಿಳಿಯ ಬರುತ್ತದೆ.

ಈ ಕೆಳಗಿನ ಮಹನೀಯರು ಸತ್ಯಾಗ್ರಹ ಚಳವಳದಲ್ಲಿ ದಸ್ತಗಿರಿ ಮಾಡಲ್ಪಟ್ಟು, ಕೆಲವರು ಐದ್ಹೈದು, ಕೆಲವರು ಆರಾರು ತಿಂಗಳು ಸಜೆಯನ್ನು ಅನುಭವಿಸಿ, ಕಾರಾಗೃಹದಿಂದ ಬಿಡುಗಡೆ ಹೊಂದಿ ಕೊಡಗಿಗೆ ವಾಪಸು ಬಂದಿರುವರೆಂದು ತಿಳಿಯುತ್ತೇವೆ. ಈ ತಾ. 9ರಲ್ಲಿ ಶ್ರೀಯುತರುಗಳಾದ ಚೇಂದಿರ ಬಿದ್ದಪ್ಪನವರೂ, ತಾ. 18ರಲ್ಲಿ ಪಾರ್ವಂಗಡ ಟಿ. ಗಣಪತಿಯವರು, ನಾಯಡ ಬೆಳ್ಯಪ್ಪನವರು, ಕೈಬಲಿರ ಮಾಚಯ್ಯನವರು, ಅಜ್ಜಿಕುಟ್ಟಿರ ಸಂಜಪ್ಪನವರು, ಅಮ್ಮತ್ತಿರ ರಾಮಯ್ಯನವರು, ಕಾಟಮಾಡ ಮಾದಪ್ಪನವರು, ಮಲ್ಲಂಡ ಮಾದಯ್ಯನವರು ಕಣ್ಣಾನೂರು ಸೆಂಟ್ರಲ್ ಜೈಲಿನಿಂದ ಬಿಡುಗಡೆ ಮಾಡಲ್ಪಟ್ಟರು.

ಬರುವ ಕೌನ್ಸಿಲು ಚುನಾವಣೆಯ ಬಗ್ಗೆ ಕೊಡಗು ಚುನಾವಣೆ ರೂಲ್ಸುಗಳನ್ನನುಸರಿಸಿ, ರಿಟರ್ನಿಂಗ್ ಆಫೀಸರುಗಳು (ಸುಬೇದಾರರುಗಳು) ಬರುವ ಆಗೋಸ್ಟು ತಿಂಗಳಲ್ಲಿ ಓಟರುಗಳ ಕರಡು ಪಟ್ಟಿಯನ್ನು ತಯಾರಿಸಿ ಪ್ರಕಟಿಸತಕ್ಕದೆಂತಲೂ, ಸದರಿ ಪಟ್ಟಿಯಲ್ಲಿ ತಪ್ಪುಗಳಿದ್ದರೆ, ಯಾ ಹೆಸರುಗಳು ಬಿಟ್ಟು ಹೋಗಿದ್ದರೆ ಅಂಥಾ ಆಕ್ಷೇಪಗಳನ್ನು ಜನರು ರಿವೈಸಿಂಗ್ ಆಫೀಸರಿಗೆ (ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಿಗೆ) ಸೆಪ್ಟೆಂಬರು 20 ರೊಳಗೆ ಬರೆದು ತಿಳಿಸತಕ್ಕದೆಂತಲೂ, ಇಂಥಾ ಆಕ್ಷೇಪಗಳನ್ನು ವಿಚಾರಿಸುವ ಬಗ್ಗೆ ರಿವೈಸಿಂಗ್ ಆಫೀಸರು ಸೆಪ್ಟೆಂಬರು 30 ರೊಳಗೆ ಯಾವದಾದರೊಂದು ದಿನವನ್ನು ನಿಶ್ಚಯಿಸತಕ್ಕದೆಂತಲೂ, ಅಕ್ಟೋಬರು 10 ರಲ್ಲಿ ಹಾಗೆ ತಿದ್ದುಪಡಿಮಾಡಿದ ಪಟ್ಟಿಯನ್ನು ರಿವೈಸಿಂಗ್ ಆಫೀಸರು ರಿಟರ್ನಿಂಗ್ ಆಫೀಸರುಗಳಿಗೆ ಕಳುಹಿಸತಕ್ಕದೆಂತಲೂ, ರಿಟರ್ನಿಂಗ್ ಆಫೀಸರುಗಳು ತಿದ್ದುಪಡಿಯಾದ ಆ ಪಟ್ಟಿಗಳನ್ನು ಡಿಸೆಂಬರು 15 ರೊಳಗೆ ಪುನಹ ಪ್ರಕಟಿಸತಕ್ಕದೆಂತಲೂ ಚೀಫ್‌ಕಮಿಷನರವರು ಗೆಜೆಟ್ಟಿನಲ್ಲಿ ಪ್ರಕಟಿಸಿರುವರು.

ತಿದ್ದುಪಡಿ:—ಈ ಸಂಚಿಕೆಯ 6ನೇ ಪುಟದಲ್ಲಿ ಪ್ರಿಂಟಾಗಿರುವ "ಒಂದು ಹಳೇ ಕಥೆಯನ್ನು ನೆನಪಿಸಿಕೊಂಡದ್ದು" ಎಂಬ ಲೇಖನವು "ಅಮೃತ ಬಜಾರ್ ಪತ್ರಿಕೆ"ಯ ಒಂದು ಲೇಖನದ ತರ್ಜುಮೆಯಾಗಿದೆ.

ಹಿಂ ದೂ ದೇ ಶ.

ಸುಭಾಸ್ ಚಂದ್ರಬೋಸ್‌ರವರನ್ನು ಚಿಕಿತ್ಸೆಗಾಗಿ ಜಬಲಪುರ ಜೈಲಿನಿಂದ ಮದ್ರಾಸು ಜೈಲಿಗೆ ತಂದಿರುವರು.

ಕಾವಾರ್ ಪಲ್ಲಿಯ ರಾಜಕೀಯ ಸಮ್ಮೇಳನವು ಅಂಕೋಲೆಯಲ್ಲಿ ನಡಿಯಿತು. ಪೋಲೀಸಿನವರು 40 ಜನರನ್ನು ದಸ್ತಗಿರಿಮಾಡಿ, ಸಭೆಯನ್ನು ನಡಿಸಲು ಅಡ್ಡಿಮಾಡಿದರು.

ಡೆಲ್ಲಿಯಲ್ಲಿ ಜಮಯತ್ ಉಲ್ ಉಲೆಮಾ ಸಂಘದ 5 ನೇ ಡಿಕ್ಟೇಟರಾದ ಮೆ. ಅಬ್ದುಲ್ ಹಾಲಿಮ್‌ರವರಿಗೆ ಆರ್ಡಿನೇನ್ಸ್ ಕಾನೂನು ಮೇರೆ ಎರಡು ವರ್ಷ ಕಠಿಣ ಸಜೆ ವಿಧಿಸಲಾಗಿದೆ.

ಮದ್ರಾಸಿನ ಸ್ವರಾಜ್ಯ ಪತ್ರಿಕೆಯ ಸಂಪಾದಕರಾದ ಮತ್ತು ಆಂಧ್ರದ ಒಬ್ಬ ಪ್ರಾಮುಖ್ಯ ಮುಂದಾಳಾದ ಮೆ. ಟಿ. ಪ್ರಕಾಶಂರವರು ಈ ತಾ. 18ರಲ್ಲಿ ವೆಲ್ಲೂರು ಜೈಲಿನಿಂದ ಬಿಡುಗಡೆ ಮಾಡಲ್ಪಟ್ಟರು.

ಜೈಲಿನಲ್ಲಿರುವ ಡಾ. ಆಲಂರವರು ಅಸ್ವಸ್ಥರಾಗಿರುವರೆಂದೂ, ಅವರ ತೂಕವು 50 ಪೌಂಡು ಕಡಿಮೆಯಾಗಿದೆಯೆಂದೂ ಸುದ್ದಿ.

ತಾ. 19 ರಲ್ಲಿ ಕರಾಚಿಯಲ್ಲಿ ಫ್ರೀರ್ ಹಾಲ್‌ನ ಹಿಂದುಗಡೆ ಇರುವ ವಿಕ್ಟೋರಿಯ ಪ್ರತಿಮೆಯ ಮೇಲೆ ರಾಷ್ಟ್ರೀಯ ಬಾವುಟವು ಹಾರಾಡುತ್ತಿದ್ದನ್ನು ಕಂಡು ಪೋಲೀಸಿನವರು ತೆಗೆದು ಹಾಕಿದರು.

ಕಟಕದಲ್ಲಿ 8 ಸ್ವಯಂ ಸೇವಕರು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರ ಕೋರ್ಟಿಗೆ ಹೋಗಿ, ಕೋರ್ಟನ್ನು ಬಿಟ್ಟು ಕೊಡುವಂತೆ ಮೇಜಿಸ್ಟ್ರೇಟರನ್ನು ಕೇಳಿದರಂತೆ! ಕೂಡಲೆ ಅವರು ದಸ್ತಗಿರಿ ಮಾಡಲ್ಪಟ್ಟರು.

ತೆನಾಲಿಯಲ್ಲಿ ನಡೆದ ಗುಂಟೂರು ಜಿಲ್ಲಾ ಪರಿಷತ್ತಿನ ಸಂಬಂಧ ದಸ್ತಗಿರಿ ಮಾಡಲ್ಪಟ್ಟಿದ್ದ 41 ಜನರ ಪೈಕಿ 10 ಮಂದಿಗೆ ನಾನಾ ಅವಧಿಗಳ ಸಜೆ ವಿಧಿಸಲ್ಪಟ್ಟಿತು. ಬಾಕಿಯವರು ಬಿಡುಗಡೆ ಮಾಡಲ್ಪಟ್ಟರು.

ಹೊಸ ಆರ್ಡಿನೇನ್ಸಿನ ಮೇರೆ ಸಿಖ್ಖರ ಮುಖ್ಯಸ್ಥರಾದ ಮಾಸ್ಟರ್ ತಾರಾಸಿಂಗರವರು ಲಾಹೋರು, ಅಮೃತಸರ, ಲೈಲಾಪುರ ಜಿಲ್ಲೆಗಳನ್ನು ಬಿಟ್ಟು 8 ಗಂಟೆಯೊಳಗೆ ಹೊರಗೆ ಹೋಗಬೇಕೆಂದು ಹುಕುಂ ಆಗಿದೆ.

ತಿನ್ನವೆಲ್ಲಿ ಜಿಲ್ಲಾ ರಾಜಕೀಯ ಸಭೆಯನ್ನು ಏರ್ಪಡಿಸಲು ವಿಶೇಷ ಭಾಗ ವಹಿಸಿದರೆಂದು ರಾಮಸ್ವಾಮಿ ಅಯ್ಯಂಗಾರ್, ಮತ್ತು ಪೆರುಮಾಳ ಪಿಳ್ಳೆಯವರಿಬ್ಬರಿಗೆ 6 ತಿಂಗಳ ಕಠಿಣ ಸಜೆ ಕೊಡ[illegible].

ತಾ. 17ರಲ್ಲಿ ಮಂಗಳೂರಿನಲ್ಲಿ ಸೇಂದಿ ಅಂಗಡಿ ಪಿಕೆಟಿಂಗಿಗಾಗಿ 12 ಸ್ವಯಂ ಸೇವಕರೂ, ಉಡುಪಿಯಲ್ಲಿ ಪರದೇಶೀ ಬಟ್ಟೆ ಅಂಗಡಿ ಪಿಕೆಟಿಂಗಿಗಾಗಿ 4 ಸ್ವಯಂಸೇವಕರೂ, ಒಬ್ಬ ಸ್ತ್ರೀಯೂ ದಸ್ತಗಿರಿ ಮಾಡಲ್ಪಟ್ಟರು.

ತಾ. 19 ರಲ್ಲಿ ಪಾಟ್ನಾದ ಸದಾಕತ್ ಆಶ್ರಮವನ್ನು ಕೈವಶ ಮಾಡಿಕೊಳ್ಳಲು ಪ್ರಯತ್ನಿಸಿದಾಗ 49 ಕಾಂಗ್ರೆಸ್ ಸ್ವಯಂ ಸೇವಕರು ದಸ್ತಗಿರಿ ಮಾಡಲ್ಪಟ್ಟರು. ಈ ಸಂಬಂಧ ಈ ವರೆಗೆ 114 ದಸ್ತಗಿರಿಗಳು ಆಗಿವೆ.

ಮದ್ರಾಸು, ಕಲ್ಲಿಕೋಟೆ, ಮಧುರ ಮತ್ತು ಕಣ್ಣಾನೂರುಗಳಲ್ಲಿ ಆಗಾಗ್ಯೆ ಸ್ವಯಂಸೇವಕರು ಪಿಕೆಟ್ ಮಾಡುತ್ತಿದ್ದಾರೆ. ಅವರನ್ನು ಹಗಲು ದಸ್ತಗಿರಿಮಾಡಿ ಮಾದಿನಂತೆ ರಾತ್ರಿ ಬಿಡುಗಡೆ ಮಾಡುತ್ತಿದ್ದಾರೆಂದ. ವರ್ತಮಾನ.

ತಾ. 19 ರಲ್ಲಿ ಬೊಂಬಾಯಿ ಕಾಂಗ್ರೆಸ್ ಕಮಿಟಿಯ 32 ನೇ ಡಿಕ್ಟೇಟರರೂ, ಹತ್ತು ಜನ ಸ್ವಯಂ ಸೇವಕರೂ ದಸ್ತಗಿರಿ ಮಾಡಲ್ಪಟ್ಟು, ಆರಾರು ತಿಂಗಳು ಕಠಿಣ ಸಜೆಗೂ, ಇಪ್ಪತ್ತೈವತ್ತು ರೂ ಜುಲುಮಾನೆಗೂ ಗುರಿಮಾಡಲ್ಪಟ್ಟರು.

ಬಟ್ಟಪಳಿಯಿನಲ್ಲಿ ತಾ. 17ರಲ್ಲಿ ನಡಿಸಲು ಏರ್ಪಡಿಸಿದ್ದ ದಕ್ಷಿಣ ಮಲಬಾರು ಜಿಲ್ಲಾ ಕಾನ್‌ಫರೆನ್ಸಿನ ಸಂಬಂಧ ಅಲ್ಲಿಯ ಪ್ರಾಮುಖ್ಯ ಕಾಂಗ್ರೆಸ್ ಕೆಲಸಗಾರರಿಗೆಲ್ಲಾ 144 ನೇ ಸೆಕ್ಷನ್ ಮೇರೆ ನೋಟೀಸು ಕೊಟ್ಟು, ಬಲವಾದ ಪೋಲೀಸು ಬಂದೋಬಸ್ತು ಮಾಡಿಯೂ, ಮೀಟಿಂಗನ್ನು ಆ ದಿನ ನಡಿಸಲು ಬಿಡಲಿಲ್ಲವೆಂದು ಸುದ್ದಿ.

ಡಿಲ್ಲಿಯ ಕ್ಯಾಂಪ್ ಜೈಲಿನಲ್ಲಿ ರಾಜಕೀಯ ಕೈದಿಗಳ ಮತ್ತು ರಿಮಾಂಡ್ ಕೈದಿಗಳ ಬ್ಯಾರಕುಗಳ ಮಧ್ಯ ಇದ್ದ ಕಬ್ಬಿಣದ ಬೇಲಿಯನ್ನು ಮುರಿಯಲು ರಾಜಕೀಯ ಕೈದಿಗಳು ಯತ್ನಿಸಿದರೆಂದೂ, ಅಗ್ಗೆ ವಾರ್ಡರುಗಳಿಗೂ ಸದರಿ ಕೈದಿಗಳಿಗೂ ಹೊಡೆದಾಟವಾಯಿತೆಂದೂ, 9 ಜನ 'ಸಿ' ಕ್ಲಾಸು ಕೈದಿಗಳಿಗೂ, 11 ಜನ ವಾರ್ಡರುಗಳಿಗೂ ಘಾಯಗಳಾದವೆಂದೂ ಸುದ್ದಿ.

ಕಣ್ಣಾನೂರು ಜೈಲಿನ ರಾಜಕೀಯ ಕೈದಿಗಳು ಉಟ್ಟುಕೊಂಡಿದ್ದ ಬಟ್ಟೆಯು ಹರಿದು ಹೋಗಿದ್ದ ಕಾರಣ ಹೊಸ ಉಡುಪನ್ನು ಕೇಳಿದಾಗ್ಯೆ ಸುಪರಿಂಟೆಂಡೆಂಟರು ತಿರಸ್ಕರಿಸಿದ್ದರಿಂದ ರಾಜಕೀಯ ಕೈದಿಗಳೆಲ್ಲರೂ ತಾ. 9ರಿಂದ 11ರ ವರೆಗೆ 2 ದಿವಸ ಉಪವಾಸ ವ್ರತವನ್ನು ಕೈಕೊಂಡರು. ತಾರೀಕು 11ರಲ್ಲಿ ಹೊಸ ಉಡುಪು ದೊರೆತದ್ದರಿಂದ ಉಪವಾಸವನ್ನು ಬಿಟ್ಟರು.

ಬೊಂಬಾಯಿಯಿಂದ ಗಡೀಪಾರು ಹುಕುಂ ಸಿಕ್ಕಿರುವ ನಿಮಿರಾ ಬೆನ್‌ರವರು ಅಸ್ವಸ್ಥರಾಗಿರುವ ರಾಜೇಂದ್ರ ಪ್ರಸಾದರವರನ್ನು ನೋಡುವುದಕ್ಕಾಗಿ ತಾ. 14ರಲ್ಲಿ ಪಟ್ನಾಕ್ಕೆ ಹೋದರು. ಕರಣ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು—ಅಲ್ಲಿಂದ 12 ಗಂಟೆಯೊಳಗೆ ಹೊರಗೆ ಹೋಗಬೇಕೆಂತಲೂ, ಮರಳಿ 1 ತಿಂಗಳೊಳಗೆ ಅಲ್ಲಿಗೆ ಬರಕೂಡದೆಂತಲೂ ಅವರಿಗೆ ಇನ್ನೊಂದು ಹುಕುಂ ಕೊಟ್ಟರು. ಅವರು ಈಗ ಕಾಶಿಯಲ್ಲಿ ಜ್ವರ ಪೀಡಿತರಾಗಿರುವರು.

ಪಂಜಾಬಿನ ಗವರ್ನರಾದ ಸರ್ ಜಿಯೊಫ್ರಿ ಡಿ ಮೋಂಟ್ ಮೊರೆನ್ಸಿಯವರು ಕಾಯಿಲದ ದೆಸೆಯಿಂದ 2 ತಿಂಗಳು ರಜೆ ತೆಗೆದುಕೊಂಡದ್ದರಿಂದ ಅಲ್ಲಿಯ ಎಗ್ಸಿಕ್ಯುಟಿವ್ ಕೌನ್ಸಿಲಿನಲ್ಲಿ ಎಲ್ಲರಿಗಿಂತಲೂ ಸೀನಿಯರ್ ಮೆಂಬರಾಗಿದ್ದ ಕ್ಯಾಪ್ಟನ್ ಸಿಕಂದರ್ ಹಯತ್ ಖಾನ್‌ರವರು ಹಂಗಾಮಿ ಗವರ್ನರಾಗಿ ನೇಮಿಸಲ್ಪಟ್ಟಿರುವರು. ಈ ಪ್ರಾಂತ್ಯದಲ್ಲಿ ಹಿಂದೀಯರು ಗವರ್ನರಾದದ್ದು ಇದೇ ಪ್ರಥಮ.

ಕಲ್ಕತ್ತಾದ ಸಮೀಪ ಬಾಗ್‌ಮಾರಿ ಎಂಬಲ್ಲಿ ಕೇಶ್‌ಡೋಮ ಎಂಬೊಬ್ಬ ಗಿರಣಿ ಕೆಲಸಗಾರನು ತಲೆ ಸರಿ ಇಲ್ಲದ ಸಮಯದಲ್ಲಿ ತಾ. 19ರ ಬೆಳಗಿನ ಜಾವದಲ್ಲಿ ತನ್ನ ಹೆಂಡತಿ ಮತ್ತು ಇಬ್ಬರು ಗಂಡು, ಒಂದು ಹೆಣ್ಣು ಮಕ್ಕಳು ಮಲಗಿದ್ದ ಹಾಸಿಗೆಗೆ ಬೆಂಕಿ ಕೊಟ್ಟು ಅವಕ್ಕೆ ಸೀಮೆಎಣ್ಣೆ ಹೊಯ್ದು ಓಡಿ ಹೋಗುತ್ತಿದ್ದನಂತೆ! ಅವನು ಕೂಡಲೇ ದಸ್ತಗಿರಿ ಮಾಡಲ್ಪಟ್ಟನು. ಮೂರು ಮಕ್ಕಳೂ ಸತ್ತು ಹೋದವು. ಹೆಂಡತಿ ಪ್ರಾಣಾಪಾಯ ಸ್ಥಿತಿಯಲ್ಲಿ ಆಸ್ಪತ್ರೆಯಲ್ಲಿರುವಳು.

ಕೊಪ್ಪೂರಿನಲ್ಲಿರುವ ಒಬ್ಬ ಮಾಜಿ ವಕೀಲರು ತಾನು ಕಳೆದ ಜನವರಿಯಲ್ಲಿ ರಾಜಮಹೇಂದ್ರಿಯ ಮಾರ್ಕೆಟ್ಟಿಗೆ ಹೋದಾಗ್ಯೆ ಒಬ್ಬ ಹೆಡ್ ಕಾನ್‌ಸ್ಟೇಬಲನು ತನ್ನ ತಲೆಯಲ್ಲಿದ್ದ ಗಾಂಧಿ ಟೋಪಿಯನ್ನು ಕಿತ್ತು ಬಿಸಾಡಿದನೆಂದು ಪೋಲೀಸು ಅಧಿಕಾರಿಗಳಿಗೂ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಿಗೂ ಫಿರ್ಯಾದು ಹೇಳಿದ್ದಕ್ಕೆ ಅವರೇನೂ ಗಮನಿಸಲಿಲ್ಲ. ಈಗ ಟೋಪಿಯ ಕ್ರಯ 1—0—0, ಅದನ್ನು ಪಬ್ಲಿಕಿನಲ್ಲಿ ಕಿತ್ತು ಬಿಸಾಡಿ ಅಪಮಾನ ಪಡಿಸಿದಕ್ಕೆ 50—0—0 ಪರಿಹಾರ ಕೊಡಿಸಬೇಕೆಂದು ಸದರಿ ಹೆ. ಕಾನ್‌ಸ್ಟೇಬಲನ ಮೇಲೆ ಮುನ್ಸಿಫ್ ಕೋರ್ಟಿನಲ್ಲಿ ಅವರು ದಾವ ಮಾಡಿರುವರಂತೆ.

ವಿ ದೇ ಶ.

ನಿರುದ್ಯೋಗವನ್ನು ನಿವಾರಿಸಲು ಅಮೇರಿಕದ ಸಂಯುಕ್ತ ಸಂಸ್ಥಾನದ ಸರಕಾರದ ಅಧ್ಯಕ್ಷರಾದ ಮೆ. ಹೂವರವರು ತನ್ನ ವಾರ್ಷಿಕ ಸಂಬಳವನ್ನು 75 ಸಾವಿರ ಡಾಲರಿನಿಂದ 60 ಸಾವಿರಕ್ಕೆ ಇಳಿಸಿಕೊಂಡು ಒಳ್ಳೇ ಉದಾಹರಣೆಯನ್ನು ಹಾಕಿರುವರು. ಮಂತ್ರಿಗಳು 15,000 ಡಾಲರುಗಳನ್ನು 12,750 ಕ್ಕೆ ಕಡಿಮೆ ಮಾಡಿಕೊಂಡಿರುವರು.

ಇಂಡಿಯಾದ ಪ್ರಸಿದ್ಧ ಮಾಜಿ ವೈಸರಾಯರಾದ ಲಾರ್ಡ್ ಇರ್ವಿನ್‌ರವರು ಬ್ರಿಟನಿನ ವಿದ್ಯಾ ಇಲಾಖೆಯ ಮಂತ್ರಿಯಾಗಿ ನೇಮಿಸಲ್ಪಟ್ಟಿರುವರು. ಇಂಡಿಯಾದ ಭವಿಷ್ಯತ್ತನ್ನು ಕುರಿತು ಪ್ರಧಾನ ಮಂತ್ರಿಗಳವರು ಈ ಮೊದಲು ಕೊಟ್ಟ ಭಾಷೆಯನ್ನು ಈಡೇರಿಸುವರೆಂಬ ಭಾವನೆಯನ್ನು ಮೆ. ಮೆಕ್ಡೊನಾಲ್ಡರಿಂದ ತೆಗೆದುಕೊಂಡು ಅವರು ಈ ಮಂತ್ರಿ ಪದವಿಯನ್ನು ಒಪ್ಪಿಕೊಂಡಿರುವರಂತೆ.

ಐರ್ಲೇಂಡಿಗೂ—ಬ್ರಿಟನ್ನಿಗೂ ಭೂ ಕಪ್ಪದ ವಿಷಯ ಉಂಟಾಗಿರುವ ವಿವಾದವು ಅಂತ್ಯಗೊಂಡಿರುವುದಿಲ್ಲ. ಇದನ್ನು ರಾಜಿಯಿಂದ ತೀರ್ಮಾನಿಸಲು ಕಳೆದ ವಾರ ಐರ್ಲೇಂಡಿನ ಅಧ್ಯಕ್ಷರಾದ ಡಿವೇಲೆರವರು ಲಂಡನಿಗೆ ಆಹ್ವಾನಿಸಲ್ಪಟ್ಟಿದ್ದರು. ಅವರಿಗೂ, ಬ್ರಿಟಿಷ್ ಪ್ರಧಾನ ಮಂತ್ರಿಯವರಿಗೂ ನಡೆದ ಸಂಭಾಷಣೆಯಿಂದ ರಾಜಿಯಾಗಲಿಲ್ಲ. ಬ್ರಿಟನ್ನು ಐರಿಷ್ ಸಾಮಾನುಗಳ ಮೇಲೆ ಹೇರಿಸಿರುವ ಶೇಕಡ 100 ರಷ್ಟು ಸುಂಕವನ್ನು ಪ್ರತಿಭಟಿಸಲು ಬ್ರಿಟಿಷ್ ಸಾಮಾನುಗಳ ಮೇಲೆ ಸುಂಕ ಏರಿಸುವ ಠರಾವು ಐರಿಷ್ ಪಾರ್ಲಿಮೆಂಟಿನಲ್ಲಿ ಪಾಸಾಗಿದೆ. 3 ವಾರಗಳಲ್ಲಿ ಅದು ಜಾರಿಗೆ ತರಲ್ಪಡುವದು. ಈಗಾಗಲೇ ಡಬ್ಲಿನಿನಲ್ಲಿ 'ಬ್ರಿಟಿಷ್' ಸಾಮಾನುಗಳನ್ನು ಬಹಿಷ್ಕರಿಸಿರಿ' ಎಂಬ ಹಸ್ತ ಪತ್ರಿಕೆಗಳು ಹಾರಾಡುತ್ತಿವೆ. ಈ ದ್ವೇಷದ ಕಾರಣ ಇಂಗ್ಲೆಂಡಿನ ಒಂದೆರಡು ಪಟ್ಟಣಗಳಲ್ಲಿ ಕೆಥೋಲಿಕರಿಗೂ, ಪ್ರೊಟೆಸ್ಟೆಂಟರಿಗೂ ಜನಸಮುದಾಯದಲ್ಲಿ ಜಗಳಗಳು ಉಂಟಾಗಿವೆ

ಬೇಕಾಗಿದೆ.

ಕೊಡಗಿನ ಎಲ್ಲಾ ಮುಖ್ಯ ಪಟ್ಟಣಗಳಿಗೆ ಒಬ್ಬೊಬ್ಬ ಏಜೆಂಟರು ಬೇಕಾಗಿದೆ. ಏಜೆಂಟರುಗಳು ಸದ್ಗೃಹಸ್ಥರೂ ಪ್ರತಿಷ್ಠೆಯುಳ್ಳವರೂ ಆಗಿರಬೇಕು. ಮಾಹೆಯಾನ ಸಂಬಳ ರೂ. 30 ಮತ್ತು ಕಮಿಷನ್. ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮೇನೇಜರ್,
ದಿ ಕಲ್ಕತ್ತಾ ಫೈನಾನ್ಸ್ ಮತ್ತು
ಏಜೆನ್ಸಿ ಸಿಂಡಿಕೇಟ್ ಲಿಮಿಟೆಡ್,
4—1 ಮಡಿಕೇರಿ.

ಪುಷ್ಪಾಂಜಲಿ.

ಅರಿಸ್ನ ಮನದೊಳಗೆ ನಗುತಿರುವನು
ಅರಿವನು ತಿಳಿಯದೆಯೆ ಕುಳಿತಿರುವನು ‖ ಪ ‖

೧

ಐದು ಗುಣವನು ಮುರಿದು ನಿಜದ ನೆಲೆಯನು ಸೇರಿದು
ಆರೆರಡು ಕರ್ಮಗಳ ಒಳಕೆ ಸೆಳೆದು
ಹೃದಯ ಕಮಲದಿ ಮೂಡಿ ಕಣ್ಣು ಸರಳಿಸಿ ತೋರ್ಪ
ಚತುರ ಗುರುವಿವನು ಶ್ರೀರಾಮ ಕೃಷ್ಣ.

೨

ಮಠದೊಳಿಹ ಮರ್ಕಟನ ನಗಿಸಿದಂತಹ ಧೀರ
ಸೆರಸಿ ಜಾತ್ಯಗುರುಗಳನ್ನು ಮರುಳುಗೊಳಿಸಿ
ಕಂಕಿರದ ಮಾರ್ಗದಲಿ ನಲಿದಾಡಿ ಹೊಕ್ಕಿರುವ
ಪರಮಹಂಸನು ಇವನೆ ರಾಮ ಕೃಷ್ಣ.

೩

ಹಲವು ಯೋಜನ ಜಲಧಿಯನು ಹಾರಿ ಘೋಷಿಸಿದ
ಬಲಯುತ ವಿವೇಕನಂದ ಗುರುವಿವನು
ಬ್ರಹ್ಮಾಂಡ ಮಯ ರೂಪ ಸಚ್ಚಿದಾನಂದ ಮಯ
ಬ್ರಹ್ಮನನು ನೋಡು ಹೃತ್ಕಮಲದೊಳಗೆ.

II

ಕಲಿಯುಗದ ಕಲ್ಯಾಣ ಬಯಸಿ ಬಂದ
ಕಲಿಧರ್ಮವನು ಸೀಳಿ ಉದ್ಧರಿಸಿ ನಿಂದ ‖ ಪ ‖

೧

ಬ್ರಹ್ಮ ತೇಜವನುಳಿಸಿ ಬ್ರಹ್ಮಾಂಡ ಮಯನೆನಿಸಿ
ಬ್ರಹ್ಮನಂ ತೋರಿಸಿದ ಮಹಾಮಹಿಮ
ಬ್ರಹ್ಮಕಾಸೆಂಬುದನು ಸರ್ವರಲಿ ಕಾಣಿಸಿದ
ಬ್ರಹ್ಮ ಬಂದನು ಭರತ ಭೂಮಿಗೀಗ.

೨

ಜಗದ ಮೋಹಿಯ ಕಳೆದು ಹಲವು ಸುಡಿಗಳ ನುಡಿದು
ಮಗುವಾಗಿ ತೊಡೆಯ ಮೇಲ್ನಲಿದಾಡಿದ
ಯುಗಧರ್ಮವನು ಸಾರಿ ನಿಜತತ್ವವನು ಬೀರಿ
ಸಗುಣ ನಿರ್ಗುಣ ಭೇದಗಳನೀಗಿಸಿ.

೩

ಜಾತಿ ಮತಗಳ ಹರಿದು ವೇದಾಂತ ಪಥಕೆಳೆದು
ನೀತಿಗಾಗಿರುತಿರುವ ಹಲವು ಪಥವ
ಮೂಕ ತೋರಿತಲೆಂದು ಸಕಲ ಮತಗಳನೆಂದು
ಶಾಂತಿಸಿ ತೋರಿಸಿಗೊಂಡೆ ನಿಜದ ನೆಲೆಯ.

ಅನಂತ.

ಕೊಡಗಿನ ರಾಜಕೀಯ ಭವಿಷ್ಯತ್ತನ್ನು ಕುರಿತು ಶ್ರೀಮತಿ ಡಿ ಸಾಕಮ್ಮನವರು 'ಹಿಂದೂ' ಪತ್ರಿಕೆಗೆ ಕೊಟ್ಟ ಅಭಿಪ್ರಾಯ.

(ಕಿನೇ ಪುಟದಿಂದ ಮುಂದುವರಿದದ್ದು.)

ಪ್ರಶ್ನೆಯು ಹೊಸದಲ್ಲ. ಕೆಲವು ವರ್ಷಗಳ ಹಿಂದೆ ಮದ್ರಾಸಿಗೆ ಸೇರಿಸಬೇಕೆಂಬ ಚಳವಳವು ಇದ್ದಾಗ ಮೈಸೂರಿಗೆ ಸೇರಿಸಬೇಕೆಂಬ ಅಭಿಪ್ರಾಯವಿರುವ ಒಂದು ಸಂಗಡವೂ ಇತ್ತು. ಈಗ ಈ ಸವಾಲನ್ನು ಬೇರೆ ಯಾರೂ ಎತ್ತದಿದ್ದರೂ ಕೊಡಗಿನ ಜನರು ಪುನಃ ಚೆನ್ನಾಗಿ ಯೋಚಿಸಬೇಕಾದ ಸಂಗತಿಯಾಗಿದೆ.

ತಪಶೀಲುಗಳನ್ನು ನಿರ್ಣಯಿಸಿಕೊಳ್ಳುವುದರಲ್ಲಿ ಮತಭೇದವಿದ್ದರೂ ದೇಶೀ ರಾಜ್ಯಗಳೂ ಸಹ ಸೇರುವ ಮಧ್ಯವರ್ತಿ ಫೆಡರಲ್ ಸರ್ಕಾರವಾಗಬೇಕೆಂತ ಎಲ್ಲರೂ ಒಪ್ಪಿರುವುದರಿಂದ ಕೊಡಗನ್ನು ಮೈಸೂರಿಗೆ ಸೇರಿಸುವ ಪ್ರಶ್ನೆಯು ವಿಶೇಷವಾಗಿಯಾಗಲೀ, ಅಸಾಧ್ಯವಾಗಿಯಾಗಲೀ ಕಾಣಲಾರದು. ಕೊಡಗನ್ನು ಮೈಸೂರಿಗೆ ಸೇರಿಸುವುದು ಅಸಾಧ್ಯವೆಂತ ಭಾವಿಸಿ ಜನರು ಈ ವಿಷಯಕ್ಕೆ ಸಾಕಷ್ಟು ಮನಸು ಕೊಟ್ಟಿಲ್ಲವಾದರು. ಕೊಡಗಿನ ಜನರಿಗೆ ಒಪ್ಪಿಗೆಯಾದರೆ ಬ್ರಿಟಿಷ್ ಸರ್ಕಾರವು ಅಡ್ಡಿಬರಲಾರದೆಂತ ನಂಬುತ್ತೇನೆ. ದೊಡ್ಡ ಪ್ರಾಂತ್ಯಗಳಿಗೆ ಸಂಪೂರ್ಣ ಪ್ರಾಂತೀಕ ಸ್ವಾತಂತ್ರ್ಯವು ಸಿಕ್ಕುವುದು ಖಂಡಿತವಾದ್ದರಿಂದ ಕೊಡಗು ಮದ್ರಾಸಿಗೆ ಸೇರಿದರೂ, ಮೈಸೂರಿಗೆ ಸೇರಿದರೂ, ಪ್ರತ್ಯೇಕವಾಗಿದ್ದರೂ (ಇಂಡಿಯಾ ಸರ್ಕಾರದ ಭಾಗಕ್ಕೆ) ಎಲ್ಲವೂ ಒಂದೇ ಆಗುತ್ತದೆ. ದೇಶದೊಳಗಿನ ಆಡಳಿತದಲ್ಲಿ ಪ್ರತಿಯೊಂದು ಪ್ರಾಂತ್ಯವೂ ದೇಶೀಯ ರಾಜರುಗಳ ಅಧೀನದಲ್ಲಿರುವಂತೆಯೇ ಆಗುತ್ತದೆ. ಈ ಏರ್ಪಾಡಿಗೆ ಒಪ್ಪಂದ ಕೊಡಬೇಕಾದ ಇನ್ನೊಂದು ಪಾರ್ಟಿಯು ಮೈಸೂರು ಸರ್ಕಾರ. ಮೈಸೂರು ಸರ್ಕಾರಕ್ಕೆ ಕೊಡಗನ್ನು ಸೇರಿಸಿಕೊಳ್ಳಲು ಉತ್ಸಾಹವಿಲ್ಲದಿದ್ದರೂ ಇಂಡಿಯಾ ಸರ್ಕಾರವೂ ಕೊಡಗಿನ ಜನರೂ ಮೈಸೂರು ಸರ್ಕಾರವನ್ನು ಈ ಏರ್ಪಾಡಿಗೆ ಒಪ್ಪಿಸಬೇಕು.

ಕೊಡಗಿನ ಪೂರ್ವ ಗಡಿಯುದ್ದಕ್ಕೂ ಮೈಸೂರು ನುಗ್ಗಿದೆ. ಕೊಡಗಿನ ಉತ್ತರ ಭಾಗವು ಮೂರು ಕಡೆಗಳಿಂದಲೂ ಮೈಸೂರು ಸೀಮೆಯಿಂದ ಆವರಿಸಲ್ಪಟ್ಟಿದೆ. ಈ ಭಾಗವು 'ಇತ್ತಿರಿಗೆ ಸೀಮೆ' ಎಂಬ ಹೆಸರುಳ್ಳದಾಗಿತ್ತು. ಅಂದರೆ ಎರಡು ತೆರಿಗೆ (ಕಂದಾಯ) ಕೊಡುವಂಥ ಸೀಮೆ ಎಂಬ ಅರ್ಥ. ಈ ಹೆಸರು ಅಕ್ಷರಶಃ ನಿಜವಾಗಿತ್ತೆಂತ ಕೇಳಿದ್ದೇನೆ. ಕೊಡಗಿನ ಈ ಭಾಗದ ಜನರಿಂದ ಕೊಡಗಿನ ಮತ್ತು ಮೈಸೂರು ಸರ್ಕಾರಗಳು ತೆರಿಗೆ ವಸೂಲು ಮಾಡುತ್ತಿದ್ದವಂತೆ. ಈ ಭಾಗವು ಮೈಸೂರಿನೊಂದಿಗೆ ಎಷ್ಟು ಸಂಬಂಧವುಳ್ಳದಾಗಿತ್ತೆಂಬದನ್ನು ತೋರಿಸಲು ಮಾತ್ರ ಈ ವಿಷಯವನ್ನು ಹೇಳಿದ್ದಾಗಿದೆ.

ಕೊಡಗಿಗೂ, ಮೈಸೂರಿಗೂ ವ್ಯಾಪಾರ ಸಂಬಂಧವಿದೆ. ಮೈಸೂರು ಯುನಿವರ್ಸಿಟಿ ಆಗುವ ಮುಂಚೆ ಕೊಡಗಿನ ವಿದ್ಯಾರ್ಥಿಗಳ ದೊಡ್ಡ ಭಾಗವು ಮೈಸೂರು ಸಂಸ್ಥಾನದಲ್ಲಿ ತಮ್ಮ ಕಾಲೇಜು ವಿದ್ಯಾಭ್ಯಾಸವನ್ನು ಪಡೆಯುತ್ತಿತ್ತು. ಈಗಲೂ ಕೊಡಗಿನ ತಕ್ಕಷ್ಟು ದೊಡ್ಡ ಸಂಖ್ಯೆಯ ವಿದ್ಯಾರ್ಥಿಗಳು ಮೈಸೂರು ಕಾಲೇಜುಗಳಲ್ಲಿ ಓದುತ್ತಿದ್ದಾರೆ.

ಕಠಿಣ ತರದ ಕಾಯಿಲೆ ಚಿಕಿತ್ಸೆಗಳಿಗೆ ಕೊಡಗಿನವರು ಈಗಲೂ ಮೈಸೂರು ಬೆಂಗಳೂರು ಆಸ್ಪತ್ರೆಗಳನ್ನು ನಂಬಿದ್ದಾರೆ ಮೈಸೂರು ಆಸ್ಪತ್ರೆಯಲ್ಲಿ ಕೊಡಗಿನ ಕಾಯಿಲಸ್ಥರು ಇಲ್ಲದ ದಿನವಿರಲಾರದು. ಕೃಷಿ ಇಲಾಖೆಯಲ್ಲಿ ಎಕ್ಸ್‌ಪರ್ಟ್‌ಗಳ ಸಹಾಯವನ್ನು ಕೊಡಗಿನ ಸರ್ಕಾರವು ಮೈಸೂರು ಸರ್ಕಾರದಿಂದ ಪಡೆಯುತ್ತಲಿದೆ. ಮೈಸೂರು ಸರ್ಕಾರವು ನಡಿಸುವ ಕಾಫೀ ಪರೀಕ್ಷಾ ಕ್ಷೇತ್ರಕ್ಕೆ ಪ್ಲಾಂಟರ್ಸ್ ಎಸೋಸಿಯೇಶನಿನಿಂದ ಧನ ಸಹಾಯ ಹೊಂದುತ್ತಿದೆ. ಪ್ಲಾಂಟರ್ಸ್ ಎಸೋಸಿಯೇಶನಿಗೆ ಈ ಬಗ್ಗೆ ಕೊಡಗಿನ ಸರ್ಕಾರವು ಹಣ ಕೊಡುತ್ತದೆ. ಈ ಎಲ್ಲಾ ಸಂಘಗಳಿಂದ ಮೈಸೂರಿಗೂ ಕೊಡಗಿಗೂ ಇರುವ ಸಮೀಪ ಸಂಬಂಧವು ತಿಳಿಯುತ್ತದೆ.

ಕೊಡಗನ್ನು ಮೈಸೂರು ಸಂಸ್ಥಾನದ ಒಂದು ಜಿಲ್ಲೆಯಾಗಿ ಮಾಡುವುದರಿಂದ ಕೊಡಗಿನವರಿಗೆ ದೊಡ್ಡ ಕ್ಷೇತ್ರವು ದೊರೆಯುತ್ತದೆ. ಆದರೆ ಮದ್ರಾಸಿನಷ್ಟು ದೊಡ್ಡದಲ್ಲ. ಅಲ್ಲದೆ ತಾವು ಒಡನಾಡಬೇಕಾದ ಮೈಸೂರಿನ ಜನರು ಕೊಡಗಿನವರಿಗೆ ಅಪರಿಚಿತರಲ್ಲ. ಅಲ್ಲದೆ ಭಾಷಾ ಸಂಬಂಧವೂ ಇದೆ.

ಸಂಯುಕ್ತ ಕರ್ನಾಟಕ ಪ್ರಾಂತ್ಯವಾಗುವಂತೆ ಸಮಸ್ತ ಕನ್ನಡಿಗರೂ ಪ್ರಯತ್ನಿಸಬೇಕೆಂತ ಒಪ್ಪುತ್ತೇನೆ. ಆದರೆ ಬೊಂಬಾಯಿ ಕರ್ನಾಟಕಕ್ಕೂ ಬಳ್ಳಾರಿಗೂ ಕೊಡಗಿಗೂ ಮಧ್ಯೆ ಮೈಸೂರು ಸಂಸ್ಥಾನವಿರುವುದರಿಂದ ಬೊಂಬಾಯಿ ಕರ್ನಾಟಕದೊಂದಿಗೆ ಸೇರಿಕೊಳ್ಳಲಿ ಎಂಬ ಮಾತು ಮೊದಲು ಕೊಡಗಿನವರಿಗೆ ಕಷ್ಟವಾಗಿದೆ. ಕರ್ನಾಟಕ ಏಕೀಕರಣಕ್ಕೆ ಕೆಲಸ ಮಾಡುವವರೂ ಸಹ ಮೈಸೂರು ಯುನಿವರ್ಸಿಟಿಯೇ ಕರ್ನಾಟಕ ಪ್ರಾಂತ್ಯದ ಯುನಿವರ್ಸಿಟಿಯಾಗಿರಬೇಕೆಂತ ಒಪ್ಪುತ್ತಾರೆ. ಹೇಗೂ ಮದ್ರಾಸಿನೊಂದಿಗೆ ಸೇರಿಕೊಳ್ಳುವ ಬದಲು ಸಂಪೂರ್ಣವಾಗಿ ಕನ್ನಡವೇ ಭಾಷೆಯಾಗಿ ಉಳ್ಳ ಸಂಸ್ಥಾನವನ್ನು ಸೇರಿಕೊಳ್ಳುವುದು ಉತ್ತಮ.

ಕೊಡಗು ಮದ್ರಾಸಿನೊಂದಿಗೆ ಸೇರಿಕೊಂಡರೆ ಕೊಡಗನ್ನು ಪ್ರತ್ಯೇಕ ಜಿಲ್ಲೆಯಾಗಿ ಇಟ್ಟುಕೊಂಡಾರೋ ಎಂಬ ಸಂಶಯವಿದೆ. ನೀಲಗಿರಿಯಂಥಾ ಮುಖ್ಯ ಜಿಲ್ಲೆಯನ್ನು ಸಹ ಕೊಯಮುತ್ತೂರಿನೊಂದಿಗೆ ಸೇರಿಸಲು ನಿಶ್ಚೈಸಿರುತ್ತಾರೆ. ಆದರೆ ಕೊಡಗು ಮೈಸೂರಿಗೆ ಸೇರಿದರೆ ಈ ಭೀತಿಯನ್ನಿಟ್ಟುಕೊಳ್ಳಬೇಕಾಗಿಲ್ಲ. ಮೈಸೂರಿನವರು ಕೊಡಗಿಗೆ ಪ್ರಾಮುಖ್ಯತೆ ಕೊಟ್ಟು ಪ್ರತ್ಯೇಕವಾಗಿಯೇ ಇಟ್ಟು, ಮಡಿಕೇರಿಯ ಹವಗುಣವನ್ನು ಉಪಯೋಗಿಸಿಕೊಂಡು ಜಿಲ್ಲೆಯ ಮುಖ್ಯ ಪಟ್ಟಣವಾಗಿಯೇ ಮುಂದರಿಸುತ್ತಾರೆಂಬದರಲ್ಲಿ ಸಂಶಯವಿಲ್ಲ. ಅವಶ್ಯವಿದ್ದರೆ ಮಂಜರಾಬಾದು ಮತ್ತು ನೆರೆ ಪ್ರಾಂತ್ಯಗಳನ್ನು ಕೊಡಗಿಗೆ ಸೇರಿಸಿ ಜಿಲ್ಲೆಯನ್ನು ದೊಡ್ಡದಾಗಿ ಮಾಡಬಹುದು.

ಮೈಸೂರಿನ ಆರ್ಟ್ಸ್ ಮತ್ತು ಟೆಕ್ನಿಕಲ್ ಕಾಲೇಜುಗಳು ಕೊಡಗಿಗೆ ಸಮೀಪವಾಗಿವೆ. ಮತ್ತು ಹೈಕೋರ್ಟು ಸಹ ಕೊಡಗಿಗೆ ಸಮೀಪದಲ್ಲೇ ಇರುತ್ತದೆ.

ಕೊಡಗನ್ನು ಮದ್ರಾಸಿಗೆ ಸೇರಿಸಿದರೆ ಕೊಡಗಿಗೆ ವಿಶೇಷ ರಿಯಾಯಿತಿಗಳು ದೊರಕದೆ ಹೋಗುವ ಭಯವಿದೆ. ಮೈಸೂರು ಸರಕಾರವಾದರೋ ಕೊಡಗಿಗೆ ವಿಶೇಷ ನಿಗವಿಡುತ್ತಾರೆಂಬದರಲ್ಲಿ ಸಂಶಯವಿಲ್ಲ. ಮೈಸೂರಿನ ಮಲೆನಾಡು ಅಭಿವೃದ್ಧಿಯ ಏರ್ಪಾಡುಗಳು ಈಗಾಗಲೇ ಇವೆ. ಕೊಡಗಿನ ಭೂಸ್ಥಿತಿಯು ಮೈಸೂರು ಮಲೆನಾಡಿನ ಭೂಸ್ಥಿತಿಯನ್ನೇ ಹೋಲುತ್ತದೆ. ಮೈಸೂರಿನ ಸರಕಾರಕ್ಕೂ ಜನರಿಗೂ ತುಂಬಾ ಸಂಪತ್ತನ್ನು ಒದಗಿಸಿಕೊಡುತ್ತಿರುವ ಕಾವೇರಿಯ ಉದ್ಭವಸ್ಥಾನವು ಕೊಡಗಿನಲ್ಲಿದೆ. ಆದ್ದರಿಂದ ಕೊಡಗಿಗೆ ಯಾವುದಾದರೂ ವಿಶೇಷ ರಿಯಾಯಿತಿ ಕೊಡಬೇಕೆಂತ ಕೇಳಿದರೆ ಖಂಡಿತವಾಗಿಯೂ ಮೈಸೂರು ಸರಕಾರವೂ, ಮೈಸೂರಿನ ಜನರೂ ಒಪ್ಪಿಯಾರೆಂತ ಊಹಿಸಬಹುದು.

ಕೊಡಗಿಗೆ ರೈಲ್ ಬರಬೇಕೆಂಬ ಬಹು ಕಾಲದ ಕೋರಿಕೆಯು ಮೈಸೂರಿಗೆ ಕೊಡಗನ್ನು ಸೇರಿಸಿದರೆ ಸುಲಭವಾಗಿ ನೆರವೇರುತ್ತದೆ. ಮೈಸೂರಿಗೂ ಕೊಡಗಿಗೂ ರಾಜಕೀಯ ಸಂಬಂಧವಿಲ್ಲದೆ ಇರುವಾಗಲೇ ಈ ಮೊದಲೇ ಸಿದ್ದಾಪುರಕ್ಕೆ ರೈಲ್ ಹಾಕಿಸುವ ಯೋಜನೆಯಿಂದ ಮೈಸೂರು ಸರಕಾರವು ಸರ್ವೆ ಮಾಡಿಸಿತು. ಕೊಡಗೂ ಮೈಸೂರು ಸಂಸ್ಥಾನಕ್ಕೆ ಸೇರಿಕೊಂಡರೆ ರೈಲ್ ಕೊಡಗಿಗೆ ಖಂಡಿತವಾಗಿ ಬರುತ್ತೆ ಎಂಬದರಲ್ಲಿ ಸಂಶಯವಿಲ್ಲ.

ನೀರಾವರಿ ಕಾಮಗಾರಿಯಲ್ಲಿ ಮೈಸೂರು ಸರಕಾರದಿಂದ ಕೊಡಗಿಗೆ ತುಂಬಾ ಸಹಾಯ ದೊರೆತೀತು. ಹಾರಂಗಿ ನಾಲೆಯು ಹಣದ ಅಭಾವದಿಂದ ಮೂಲೆಗೆ ಹಾಕಲ್ಪಟ್ಟದ್ದು, ಆಗ ಹೋದೀತು. ಹಾರಂಗಿ ನಾಲೆಯಿಂದ ಮೈಸೂರಿನ ದೊಡ್ಡ ಪ್ರಾಂತ್ಯಕ್ಕೆ ಸಹ ನೀರು ಸರಬರಾಯಿ ಮಾಡುತ್ತದೆ

ಕೊಡಗು ಮದ್ರಾಸಿಗೆ ಸೇರಿಕೊಂಡರೆ ಪ್ರಜಾತಂತ್ರ ಸರಕಾರ ಕ್ರಮದ ಪ್ರಯೋಜನವು ಕೊಡಗಿಗೆ ಶೀಘ್ರದಲ್ಲೇ ದೊರೆತೀತು ಎಂಬದೇನೋ ನಿಜ. ಆದರೆ ಮೈಸೂರಿನ ಆಡಳಿತವೂ ಸಹ ಜನರ ಅನುಮತಿಯಿಂದಲೇ ನಡೆಯುವ ಕ್ರಮವು ಶೀಘ್ರದಲ್ಲೇ ಬಂದೀತೆಂತ ನಾನು ನಂಬುತ್ತೇನೆ. ಮದ್ರಾಸಿಗೆ ಸೇರಿಕೊಂಡ ವಿನಹ ಪ್ರಜಾತಂತ್ರ ಸರಕಾರವು ಕೊಡಗಿಗೆ ದೊರಕುವುದು ಅಸಂಭವವೇ ಸರಿ. ಪ್ರಜಾಜನರ ಕ್ಷೇಮವನ್ನು ಹೆಚ್ಚಿಚ್ಚಾಗಿ ಕಾಪಾಡುತ್ತಿರುವ ಮೈಸೂರು ಸರಕಾರದಂಥ ಸರಕಾರದ ಅಧೀನಕ್ಕೆ ಬಂದರೆ ಪ್ರಜಾತಂತ್ರ ಸರಕಾರವು ಸ್ಥಾಪನೆಯಾಗಲು ಸ್ವಲ್ಪ ತಡವಾದರೂ ಕೊಡಗಿನ ಜನರಿಗೆ ಬೇಸರವಾಗಲಾರದು.

PROPERTY FOR SALE.

MERCARA, COORG—"The Lodge" bungalow, and about nine acres of land. Central situation, independent water supply—

Apply to:-

J. B. Reid,
Suntikoppa,
Coorg.

2—2

ಓರಿಯಂಟಲ್ ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಅಸ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ನಮ್ಮಲ್ಲಿ ಮೆ. ಚೇನಂಡ ಬೋಪಯ್ಯನವರ ನಂಬರು 1971700 ಪಾಲಿಸಿ ಹಾಳಾಗಿ ಹೋಗಿರುವದೆಂಬ ಸಮಾಚಾರವು ನಮಗೆ ತಿಳಿದು ಬಂದಿರುವುದರಿಂದ ಇದಕ್ಕೆ ಬದಲು ಹೊಸ ಪಾಲಿಸಿಯು ಒಂದು ತಿಂಗಳೊಳಗೆ ಯಾವ ತಕರಾರೂ ಯಾರಿಂದಲಾದರೂ ಬಾರದೆ ಹೋದಲ್ಲಿ ಕೊಡಲಾಗುವುದು.

ಬೊಂಬಾಯಿ. (Sd.) ಎಚ್. ಇ. ಜೋನ್ಸ್.
ತಾ. 8—7—1932. (ಮೇನೇಜರ್.)
2—2

ಶೃಂಗಾರವಾದ ಪುಸ್ತಕ! ಬೇಗನೆ ಬರೆಯಿರಿ

ರತಿಮನ್ಮಥರಹಸ್ಯ ಎಂಬ ಮರ್ಮಶಾಸ್ತ್ರ.

ಕ್ರಯ ರೂ. ೧—೨—೦.

ಕನ್ನಡ ಭಾಷೆಯಲ್ಲಿ ಅಂದವಾಗಿ ಪ್ರಿಂಟಾಗಿದೆ. ಇದರಲ್ಲಿ ಸ್ತ್ರೀ ಪುರುಷರ ಪ್ರೀತಿಯ ರಹಸ್ಯಗಳು. ಪ್ಯಾರಿಸ್ ವೇಶ್ಯ ಸ್ತ್ರೀಯರ ಪ್ರೀತಿಯ ಮರ್ಮಗಳು,

ಮಲೆಯಾಳ, ಜಪಾನ್, ಫ್ರೆಂಚ್ ದೇಶದ ವೇಶ್ಯ ಸ್ತ್ರೀಯರ ಮಲಗುವ ಫೋಟೆಗಳು, ಇನ್ನೂ ಸ್ತ್ರೀಪುರುಷರ ಅನೇಕ ರಹಸ್ಯಗಳು 22 ಲೇಡಿಗಳ ಫೋಟೋ ಸಹಿತ ಕೂಡಿದೆ. ಈ ಶೃಂಗಾರವಾದ ಪುಸ್ತಕವನ್ನು ಓದಲು ಆನಂದವಾಗಿರುವುದು. 22 ಫೋಟೋಗಳ ಸಹಿತ ಪ್ಯಾರಿಸ್ ದೇಶದ ವ್ಯಭಿಚಾರಿಗಳ ವಿನೋದಗಳು, ಕನ್ಯೆಗಳ ಪ್ರೀತಿ, ಶಯ್ಯಾಗೃಹದ ರಹಸ್ಯಗಳು ಅಡಗಿರುತ್ತೆ—ಕ್ರಯ ಪುಸ್ತಕ ರೂ. ೧—೨—೦.

ವಿಳಾಸ:—

ಟಿ. ವಿ. ದೇವಕರ್ ಅಂಡ್ ಕೋ,
73, ಅಣ್ಣಾಪಿಳ್ಳೆ ಬೀದಿ,
ಜಿ. ಟಿ. ಮದರಾಸು.

ಜನರಲ್ ಅಷ್ಯೂರೆನ್ಸ್ ಸೊಸೈಟಿ.

ಅಜಮೀರ್.

ನಮ್ಮ ಆಯವ್ಯಯದ ಪಟ್ಟಿಯೇ ನಮ್ಮ ಅಭಿವೃದ್ಧಿಯನ್ನು ವ್ಯಕ್ತಗೊಳಿಸುತ್ತದೆ.

ವರ್ಷ	ಮೇಲ್ಪಟ್ಟ ವರಮಾನದಾಯ	ಮೇಲ್ಪಟ್ಟ ಮೂಲಧನ	ಖರ್ಚು ವರಮಾನದ ಶೇಕಡ
1911	46,248	49,442	82.9
1921	2,92,627	6,53,350	43 2
1931	12,50,000	40,00 000	28.2

ಬೋನಸ್ಸು.

ಖರ್ಚು ನಫೆ ದೊರಕುವ ಜೀವಾವಧಿ ಪಾಲಿಸಿಗಳ ಮೇಲೆ ವರ್ಷ ಒಂದಕ್ಕೆ ಶೇಕಡ 22½

ಚೆನ್ನಾಗಿ ಕೆಲಸಮಾಡಿ ಅಭಿವೃದ್ಧಿ ಸ್ಥಿತಿಯಲ್ಲಿರುವ ಈ ಸೊಸೈಟಿಯಲ್ಲಿ ವಿಮೆ ಮಾಡಿ ಕಡಿಮೆ ಪ್ರೀಮಿಯಂ ಪಾವತಿ ಮಾಡುವ ಸೌಲಭ್ಯ ಹೊಂದಿ ಅಥವಾ ಈ ಕಂಪೆನಿಯ ಏಜಂಟರಾಗಿ ಕೆಲಸಮಾಡಿ ಉತ್ತಮ ಕಮಿಶನ್ ದರದ ಪ್ರಯೋಜನ ಹೊಂದಿ.

ಹೆಚ್ಚು ವಿಚಾರಗಳಿಗೆ ಈ ವಿಳಾಸಕ್ಕೆ ಬರೆಯಿರಿ:—

ಎ. ರಾಮಚಂದ್ರರಾವ್,
ಸುಪರಿಂಟೆಂಡೆಂಟ್,
52—13 ವಿಂಟೋ ಆಸ್ಪತ್ರೆ ಬಳಿ,
ಬೆಂಗಳೂರು.

ಸರ್ ಸ್ಯಾಮುವೆಲ್ ಹೋರ್‌ರವರ ವಿವರದ ಭಾಷಣ.

ಈ ತಾ. 13ರಲ್ಲಿ ಪಾರ್ಲಿಮೆಂಟ್ (ಕಾಮನ್ಸ್) ಸಭೆಯಲ್ಲಿ ಲೇಬರ್ ಮೆಂಬರಾದ ಮಿ॥ ಮೋರ್ಗನ್ ಜೋನ್ಸ್‌ರವರು- 'ಇಂಡಿಯಾದ ರಾಜಕೀಯ ರಚನೆಯನ್ನು ಚರ್ಚಿಸಿ ತೀರ್ಮಾನಿಸುವ ರೀತಿಯಲ್ಲಿ ದೊಡ್ಡ ಬದಲಾವಣೆಯು ಮಾಡಲಾಗಿದೆ. ಇಂಡಿಯಾದ ಆರ್ಥಿಕ ಭದ್ರತೆಯನ್ನು ಕುರಿತು ಸ್ಟೇಟ್ ಸೆಕ್ರೆಟರಿಯವರು ಮತ್ತು ಕೆಲವು ವ್ಯಕ್ತಿಗಳು (ಅವರು ಎಷ್ಟು ದೊಡ್ಡವರೇ ಆಗಲೀ) ಚರ್ಚಿಸುವದಾದರೆ, ಅದು ದುಂಡು ಮೇಜು ಪರಿಷತ್ತಿನ ರೀತಿಗಿಂತ ಪೂರ್ಣ ಬೇರೆಯಾಗಿದ್ದಾಗಿದೆ; ಜಾಯಿಂಟ್ ಸಿಲೆಕ್ಟ್ ಕಮಿಟಿಗೆ ಹಿಂದೂದೇಶದ ಎಲ್ಲಾ ಪಂಗಡಗಳ ಅಭಿಪ್ರಾಯವನ್ನು ಕೊಡಲು ಸಾಧ್ಯವಿದೆಯೋ?' ಎಂದು ಮುಂತಾಗಿ ಹೇಳಿ ಸರ್ಕಾರದವರು ಪರಿಷತ್ತು ರೀತಿಯನ್ನು ಬಿಟ್ಟಿರುವುದರಿಂದ ಇನ್ನು ಈ ವಿಷಯವನ್ನು ಕುರಿತು ಲೇಬರ್ ಪಕ್ಷದವರು ತಮ್ಮ ಸ್ವಂತ ರೀತಿಯನ್ನು ಅನುಸರಿಸಲು ಸ್ವತಂತ್ರವುಳ್ಳವರಾಗಿರುವರೆಂದು ಸೂಚಿಸಿದರು.

ಇದಕ್ಕೆ ಉತ್ತರವಾಗಿ ಇಂಡಿಯಾದ ಸ್ಟೇಟ್ ಸೆಕ್ರೆಟರಿಯಾದ ಸರ್ ಸ್ಯಾಮುವೆಲ್ ಹೋರ್‌ರವರು ಮಾಡಿದ ಭಾಷಣದ ಸಾರಾಂಶವೇನೆಂದರೆ—

'ರೀತಿಗಳನ್ನು ಕುರಿತು ಹಲವು ಸಾರಿ ತಪ್ಪು ತಿಳುವಳಿಕೆಗಳುಂಟಾಗುತ್ತವೆ. ಸ್ವಲ್ಪದರಲ್ಲಿಯೇ ನಮ್ಮೊಳಗೇನೇ ತಪ್ಪು ತಿಳುವಳಿಕೆಗಳುಂಟಾಗಿವೆಯೆಂದು ತೋರಿಸುತ್ತೇನೆ. ಇಷ್ಟು ಸಮೀಪವಿರುವ ನಮ್ಮೊಳಗೇನೇ ತಪ್ಪು ತಿಳುವಳಿಕೆ ಉಂಟಾಗಿರುವಾಗ್ಯೆ 6000 ಮೈಲು ದೂರದಲ್ಲಿರುವ ಹಿಂದೀಯರಿಗೂ, ಬ್ರಿಟಿಷರಿಗೂ ತಪ್ಪು ತಿಳುವಳಿಕೆಯುಂಟಾಗಿರುವದು ಬಹು ಸುಲಭ. ಈಗಿನ ಗಲಾಟೆಯೆಲ್ಲವೂ ಈ ತಪ್ಪು ತಿಳುವಳಿಕೆಯ ಫಲಿತಾಂಶ.

ನಿಜ ಸ್ಥಿತಿಯನ್ನು ನೋಡುವ. ಪ್ರಾಮುಖ್ಯ ಹಿಂದೀ ಮುಂದಾಳುಗಳು ನಾನು 10 ದಿವಸಗಳ ಹಿಂದೆ ಪ್ರಕಟಿಸಿದ ರೀತಿಯನ್ನು ಕುರಿತು ಕುತೂಹಲರಾಗಿದ್ದಾರೆಂದು ಮಿ. ಜೋನ್ಸ್‌ರವರು ಹೇಳಿದ್ದು ನ್ಯಾಯ. ಅವರಲ್ಲಿ ಮೂವರು, ಸರ್ ತೇಜ್ ಬಹದೂರ್ ಸಪ್ರು, ಮಿ. ಜಯಕರ್, ಮತ್ತು ಮಿ. ಜೋಶಿಯವರು ಕನ್‌ಸಲ್ಟೇಟಿವ್ ಕಮಿಟಿಗೆ ರಾಜಿನಾಮೆ ಕೊಟ್ಟಿರುತ್ತಾರೆ. ಅವರು ಮತ್ತು ಬೇರೆ 10 ಜನರು ಬೊಂಬಾಯಿಯಲ್ಲಿ ಸೇರಿ ನಮ್ಮ ರೀತಿಯನ್ನು ನಿಷೇಧಿಸಿ ನನಗೂ, ಪ್ರಧಾನ ಮಂತ್ರಿಯವರಿಗೂ ತಂತೀ ವಾರ್ತೆ ಕಳುಹಿಸಿರುತ್ತಾರೆ. ಅದೇ ಸಮಯದಲ್ಲಿ ಹಿಂದೂ ದೇಶದಲ್ಲಿ ಬೇರೆ ಕೆಲವು ಪ್ರಮುಖ ಪ್ರತಿನಿಧಿಗಳು ನಮ್ಮ ರೀತಿಗೆ ಒಪ್ಪಿಗೆಯನ್ನಿತ್ತಿರುವುದನ್ನು ಈ ಸಭೆಯು ತಿಳಿಯತಕ್ಕದ್ದು. ಸಪ್ರು ಪಾರ್ಟಿಯವರ ರಾಜಿನಾಮೆಯಿಂದ ನನಗುಂಟಾಗಿರುವ ನಿರಾಶೆಯನ್ನು ಅಲ್ಲಗಳೆಯಲು ನಾನು ಹೀಗೆ ಹೇಳುವದಲ್ಲ; ಆದರೆ ಇಂಡಿಯಾದಲ್ಲಿ ಈ ವಿಷಯವನ್ನು ಕುರಿತು ಬಲವಾದ ಪಕ್ಷದವರು ಸರ್ಕಾರದ ಬೆಂಬಲವಾಗಿರುವರೆಂದು ತೋರಿಸಲಿಕ್ಕೆ ಹೇಳಿದ್ದಾಗಿದೆ.

ಸಪ್ರು ಮತ್ತು ಸ್ನೇಹಿತರು ರಚನೆ ತಯಾರಿಸುವಿಕೆಯ ಅಂತ್ಯಕಾಲದಲ್ಲಿ ನಮ್ಮೊಡನೆ ಸಹಕರಿಸದೆ ಹೋದರೆ ಉಂಟಾಗುವ ನಷ್ಟವನ್ನು ನಾನು ಕಡಮೆ ಎಂದು ಹೇಳಲಾರೆ. ಕಳೆದ ಎರಡು ಸಾರಿ ನಾನು ಅವರೊಂದಿಗೆ ಕೆಲಸ ಮಾಡಿರುತ್ತೇನೆ. ಅವರ ರಾಜಕೀಯ ಅನುಭವ, ಬುದ್ಧಿ ಶಕ್ತಿ, ಮತ್ತು ಜ್ಞಾನ ಅಪಾರವಾದದ್ದಾಗಿದೆ. ಇದನ್ನು ದುಂಡು ಮೇಜು ಪರಿಷತ್ತಿನ ಪ್ರತಿಯೊಬ್ಬ ಮೆಂಬರನೂ ಒಪ್ಪಿಕೊಳ್ಳುತ್ತಾನೆ. ಈಗ ಅವರ ಸಹಕಾರ ದೊರೆಯದಿದ್ದರೆ, ಅದರಲ್ಲೂ ಹೋಗಲಾಡಿಸಿಕೊಳ್ಳಬಹುದಾದ ತಪ್ಪು ತಿಳುವಳಿಕೆಯಿಂದಾದರೆ, ನಾನು ತುಂಬಾ ವ್ಯಸನಪಡುತ್ತೇನೆ.

ಕಳೆದ ಡಿಸೆಂಬರಿನಿಂದ ನಮಗೆ 'ಇಲ್ಲಿಯಾಗಲೀ, ಇಂಡಿಯಾದಲ್ಲಾಗಲೀ ಆರಾಮ' ಕಾಲವಾಗಿರಲಿಲ್ಲ. ಹಿಂದಿನ ರೀತಿಯಿಂದ ಆಡಳಿತ ರಚನೆಯನ್ನು ತಯಾರಿಸಲು ಹೊರಟವರಿಗೆ ಕಾಂಗ್ರೆಸ್ಸಿನ ಅಸಹಕಾರ ಚಳವಳಿಯು ತುಂಬಾ ಕಷ್ಟವನ್ನುಂಟುಮಾಡಿತು. ನಮ್ಮ ಹಾಗೆಯೇ ಇಂಡಿಯನ್ ಲಿಬರಲರಿಗೂ ಕಷ್ಟವಾಗಿರಬೇಕು. ಕಳೆದ ಆರು ತಿಂಗಳಲ್ಲಾದ ಕಷ್ಟವನ್ನು ಸ್ವಲ್ಪ ವಿವರಿಸುತ್ತೇನೆ.

ಕಳೆದ ಹಲವು ವರ್ಷಗಳಲ್ಲಿ ಇಂಡಿಯಾದಲ್ಲಿ ಅನೇಕ ವಿಚಾರಣೆಗಳನ್ನು ನಡಿಸಿರುತ್ತೇವೆ. ಇವು ಅವಶ್ಯವಾಗಿದ್ದರೂ ಇಂಡಿಯಾದ ರಾಜಕೀಯ ಜೀವನದಲ್ಲಿ ಎಡರುಗಳಾಗಿದ್ದವು ಮುಂದೆ ಏನಾಗುತ್ತದೆಂದು ಯಾರಿಗೂ ಗೊತ್ತಿಲ್ಲ. ಬ್ರಿಟಿಷ್ ಸರ್ಕಾರದ ಅಭಿಪ್ರಾಯ (?) ತಕ್ಕದ್ದೇನಾಗುವದೆಂದು ಇಂಡಿಯಾ ಸರ್ಕಾರಿ ಉದ್ಯೋಗಸ್ಥರು ಸಂಶಯದಲ್ಲಿದ್ದರು. ಹಿಂದೀಯರು ಕಾಂಗ್ರೆಸ್ಸಿನವರೇ ಆಗಲೀ, ಲಿಬರಲ್ ಪಕ್ಷದವರೇ ಆಗಲೀ, ಅಥವಾ ಆ ಕೋಮಿನವರೇ ಆಗಲೀ ತಿಂಗಳನಂತರ ತಿಂಗಳು ಏನಾಗುವದೆಂದು ತಿಳಿದಿರಲಿಲ್ಲ. ಇದರಿಂದ ರಾಜಕೀಯಕ್ಕೆ ಮಾತ್ರವಲ್ಲ, ಆರ್ಥಿಕ ಸ್ಥಿತಿಗೂ ಕೆಟ್ಟ ಪರಿಣಾಮವಾಯಿತು. ಇಂಥಾ ದೀರ್ಘಕಾಲದ ಸಂಶಯದಿಂದ ವ್ಯಾಪಾರಕ್ಕೆ ತುಂಬಾ ಕೆಡುಕುಂಟಾಗಿದೆ.

ಈ ಕಾರಣದಿಂದ 'ನಾವು ಎಲ್ಲಿ ಇದ್ದೇವೆಂದು ತಿಳಿಸಿ; ಬ್ರಿಟಿಷ್ ಸರ್ಕಾರದವರು ತಮ್ಮ ಅಭಿಪ್ರಾಯಗಳನ್ನು ಸೂಚಿಸಲಿ ಮತ್ತು ದೀರ್ಘಕಾಲದ ಸಂಶಯದ ಸ್ಥಿತಿಯನ್ನು ಅಂತ್ಯಗೊಳಿಸಲಿ' ಎಂದು ಹಲವು ಹಿಂದೀಯರು ನನ್ನನ್ನು ಬರಹ ಮೂಲಕವೂ, ಮಾತಿನ ಮೂಲಕವೂ ಕೇಳಿಕೊಂಡರು. ಇದರಿಂದ ಹಿಂದೀಯರಿಗೆ ಭವಿಷ್ಯತ್ತಿನಲ್ಲಿ ವಿಶ್ವಾಸ ಉಳಿಸಲಿಕ್ಕಾಗಿಯೂ, ರಚನೆಯನ್ನು ಎರಡರ ಬದಲು ಒಂದೇ ಮಸೂದೆಯಲ್ಲಿ ತೀರಿಸಲಿಕ್ಕಾಗಿಯೂ ಸರ್ಕಾರವು ತ್ವರೆ ಮಾಡಬೇಕಾಯಿತು.

ಈ ಸಭೆಯ ಹಲವರ ಇರಾದೆಯಂತೆ ಪ್ರಾಂತೀಯ ಸ್ವಾತಂತ್ರ್ಯಕ್ಕೆ ಒಂದು ಮಸೂದೆ, ನಂತರ ಫೆಡರಲ್ ಸರ್ಕಾರದ ಮಸೂದೆಯನ್ನು ಜಾರಿಗೆ ತಂದಿದ್ದರೆ ದೀರ್ಘ ಕಾಲ ಚರ್ಚೆಯ ಪರಿಷತ್ತುಗಳ ಅವಶ್ಯಕತೆ ಇರುತ್ತಿರಲಿಲ್ಲ. ಆದರೆ ಹಲವು ಹಿಂದೀಯರ ಮುಖ್ಯವಾಗಿ ಸಪ್ರು, ಜಯಕರಂಥವರ ಇರಾದೆಯು ಎರಡನ್ನೂ ಸೇರಿಸಿ ಒಂದು ಮಸೂದೆ ಮಾಡಬೇಕೆಂದಿತ್ತು.

ಒಂದೇ ಮಸೂದೆಯನ್ನು ತಯಾರಿಸಬೇಕಾದರೆ ದೀರ್ಘಕಾಲದ ಮೀಟಿಂಗುಗಳನ್ನು ಮಾಡಲು ಸಾಧ್ಯವಿಲ್ಲ. ಇದರಲ್ಲಿ ಸರ್ಕಾರದ ಒಳಗುಟ್ಟೇನೂ ಇಲ್ಲ. ಎಲ್ಲವನ್ನೂ ತ್ವರೆ ಮಾಡಲಿಕ್ಕಾಗಿ ಈ ಹೊಸ ರೀತಿಯನ್ನು ಸೂಚಿಸಿದ್ದಾಗಿದೆ. ಎರಡು ಮುಖ್ಯ ಕಾರಣಗಳಿಂದ ಈ ರೀತಿಯನ್ನು ಅನುಸರಿಸುವದಾಗಿದೆ. ಒಂದು ಕಾಲವಿಳಂಬವಾಗದಂತೆ ತ್ವರೆ ಮಾಡಲಿಕ್ಕೆ; 2ನೇದು ಸರ್ಕಾರದ ಯಾವ ಅಭಿಪ್ರಾಯಗಳ ಮೇಲಾದರೂ ಆಖೈರು ತೀರ್ಮಾನವನ್ನು ಪಾರ್ಲಿಮೆಂಟು ಕೊಡಬೇಕಾಗಿದೆ. ಈ ವಿಷಯವು ದುಂಡು ಮೇಜು ಪರಿಷತ್ತಿನ ಪ್ರಾರಂಭದಿಂದಲೇ ವಿಶದಪಡಿಸಲಾಗಿದೆ. ಮೇಲಿನ ಎರಡು ಕಾರಣಗಳನ್ನು ಅನುಸರಿಸುವ ಮತ್ತು ಈ ಮುಂದೆ ಬಹು ಪ್ರಯೋಜನಕರವಾಗಿರುವ ಹಿಂದೀಯರ ಸಹಕಾರವನ್ನು ಇಟ್ಟುಕೊಳ್ಳುವಂಥ ರೀತಿಯನ್ನು ಕೈಕೊಳ್ಳಬೇಕಾಗಿದೆ. ನಾವು ನಮ್ಮ ಭಾಷೆಯನ್ನು ಕದ್ದಿದ್ದೇವೆಂದು ಕೆಲವು ಹಿಂದೀ ಸ್ನೇಹಿತರು ಹೇಳುತ್ತಾರೆ. ಇದು ನಿಜವಲ್ಲ. ಪ್ರಧಾನ ಮಂತ್ರಿಯವರು ಬುದ್ಧಿವಂತಿಗೆಯಿಂದ ಮುಂದಿನ ಸಹಕಾರದ ರೀತಿಯನ್ನು ನಿರ್ಧರಿಸದೆ ಹಾಗೆಯೇ ಬಿಟ್ಟಿದ್ದರು. ಏಕೆಂದರೆ ಮುಂದೆ ಏನಾಗುವದೆಂದು ಯಾರಿಗೂ ಗೊತ್ತಿರಲಿಲ್ಲ.

ಎರಡು ಹೊಸ ಸಂಗತಿಗಳು ನಡೆದಿವೆ. ನಾವು ಯೋಚಿಸಿದ್ದಕ್ಕೆ ವಿರೋಧವಾಗಿ, ಇಂಡಿಯಾದ ಕೋಮುವಾರು ಸಮಸ್ಯೆಯನ್ನು ಅವರೇ ತೀರ್ಮಾನಿಸಿಕೊಳ್ಳದ್ದರಿಂದ, ನಾವು ಒಂದು ತೀರ್ಮಾನವನ್ನು ಕೊಡಲು ಒಪ್ಪಿಕೊಳ್ಳಬೇಕಾಯಿತು. ಮತ್ತು ಆ ತೀರ್ಮಾನವನ್ನು ಈ ಬೇಸಿಗೆಯಲ್ಲಿ ಕೊಡುತ್ತೇವೆ. 2ನೇದು—ಕಳೆದ ಡಿಸೆಂಬರಿನಲ್ಲಿ ಮಿ. ಗಾಂಧಿಯವರ ಮತ್ತು ಸಂಗಾತಿಗಳ ಸಹಕಾರವನ್ನು ಉಳಿಸಿಕೊಳ್ಳುವೆವೆಂದು ಭಾವಿಸಿದ್ದೆವು.

ದುರಾದೃಷ್ಟದಿಂದ ಈ ಹೊಸ ಸಂಗತಿಗಳು ಸಂಭವಿಸಿದವು; ಇವುಗಳನ್ನು ನೋಡಿದಾಗ್ಯೆ ಪ್ರಧಾನ ಮಂತ್ರಿಯವರು ನಿಶ್ಚಿತ ಭಾಷೆಯ ಬದಲು ಜನರಲ್ ಭಾಷೆ ಕೊಟ್ಟದ್ದು ಅವರ ಬುದ್ಧಿವಂತಿಕೆಯನ್ನು ತೋರಿಸುತ್ತದೆ. ಹೇಗೂ ಇಂಥಾ ಭಾಷೆಗಳಲ್ಲಿ ಅವುಗಳ ಭಾವಾರ್ಥವೇ ಮುಖ್ಯ ಮತ್ತು ನಾವು ಅದನ್ನು ಸಹಕಾರದ ಭಾವಾರ್ಥದಿಂದಲೇ ಜಾರಿಗೆ ತರಲು ಯತ್ನಿಸುವೆವು.

ಕನ್‌ಸಲ್ಟೇಟಿವ್ ಕಮಿಟಿಯ ಮೂಲಕ ಹಿಂದೀಯರ ಸಹಕಾರವನ್ನು ಪಡೆಯಲು ಕುತೂಹಲವುಳ್ಳವರಾಗಿದ್ದೇವೆ. ಈ ಕಮಿಟಿಯನ್ನು ನೇಮಿಸಿದಾಗ ಅದರಲ್ಲಿ ಎಲ್ಲಾ ಪಂಗಡಗಳ ಪ್ರತಿನಿಧಿಯನ್ನು ನೇಮಿಸಿ ಅದನ್ನು ದುಂಡು ಮೇಜು ಪರಿಷತ್ತಿನ ಪಿಂಡಾಂಡವಾಗಿ ಮಾಡಲು ಬಯಸಿದೆವು. ಬೇರೆ ಕಮಿಟಿಗಳ ವರದಿಗಳನ್ನು ಅದರ ವಿಮರ್ಶೆಗೆ ಕೊಡುತ್ತೇವೆಂದು ಹೇಳಿದ್ದೆವು. ಈ ಎಲ್ಲಾ ವಿಷಯಗಳಲ್ಲಿ ಅವರ ಸಹಾಯವನ್ನು ಪಡೆದು ರಚನೆಯ ಮಸೂದೆಯನ್ನು ಆಗುವಷ್ಟು ಬೇಗನೆ ತಯಾರಿಸಲು ಯೋಚಿಸಿದ್ದೆವು. ಇನ್ನೂ ಕೂಡ ಹಿಂದೀಯರ ಸಹಕಾರದಿಂದ ಈ ಕಮಿಟಿಯು ನಮಗೆ ಸಹಾಯ ಮಾಡೀತೆಂದು ಭಾವಿಸುತ್ತೇನೆ.

ಕೋಮುವಾರು ಸಮಸ್ಯೆಯ ತೀರ್ಮಾನವಾಗಿ, ಅವರ ಕೋರಿಕೆಗಳು ಕೊಡಲ್ಪಡುವ ವರೆಗೆ ಮುಸಲ್ಮಾನರು ಈ ಕಮಿಟಿಯ ಚರ್ಚೆಯಲ್ಲಿ ಭಾಗ ವಹಿಸುವುದಿಲ್ಲವೆಂದು ಹೇಳಿದ್ದರು. ಆದುದರಿಂದ ನನ್ನ ಈ ಮೊದಲಿನ ಹೇಳಿಕೆಯಲ್ಲಿ ಮುಸಲ್ಮಾನರ ಸಹಕಾರಕ್ಕೆ ಇರುವ ಅಡಚಣೆಗಳನ್ನು ನೀಗಿದ ಕೂಡಲೆ ಕನ್‌ಸಲ್ಟೇಟಿವ್ ಕಮಿಟಿಯ ಮೀಟಿಂಗು ನಡಿಸಲ್ಪಡುವದೆಂದು ಸೂಚಿಸಿದ್ದಾಗಿದೆ. ಈ ಕಮಿಟಿಯು ಸಭೆ ಸೇರಿ, ಪ್ರಾಮುಖ್ಯ ಹಿಂದೀಯರ ಸಹಕಾರವು ದೊರೆಯುವುದೆಂದು ಈಗಲೂ ಆಶಿಸುತ್ತೇನೆ.

ಬರುವ ಬೇಸಿಗೆಯಲ್ಲಿ ಸಲಹೆ ಕೇಳುವುದು ಕೆಲವು ಹಿಂದೀಯ ವ್ಯಕ್ತಿಗಳೊಂದಿಗೆಯಾಗಿದೆ; ಇವರು ಪ್ರತಿನಿಧಿಗಳಾಗುವುದಿಲ್ಲವೆಂದು ಮಿ. ಜೋನ್ಸ್‌ರವರು ಸೂಚಿಸಿದರು. ದುಂಡು ಮೇಜು ಪರಿಷತ್ತಿನ ಮೆಂಬರುಗಳು ಎಷ್ಟರ ಮಟ್ಟಿಗೆ ಪ್ರತಿನಿಧಿಗಳಾಗುವುದಿಲ್ಲವೋ ಅಷ್ಟರ ಮಟ್ಟಿಗೆ ಇವರೂ ಆಗುವುದಿಲ್ಲ. ಇಷ್ಟರ ವರೆಗಿನಂತೆಯೇ ಇನ್ನು ಮುಂದೆಯೂ ಪ್ರಾಮುಖ್ಯ ವ್ಯಕ್ತಿಗಳನ್ನೇ ನಾವು ಅಭಿಪ್ರಾಯ ಕೇಳುವದಾಗಿದೆ. ಆರ್ಥಿಕ ಭದ್ರತೆಗಳ ವಿಷಯ ಮಿ. ಜೋನ್ಸ್‌ರವರು ಸೂಚಿಸಿದರು. ಆರ್ಥಿಕ ವಿಷಯವು ಮುಖ್ಯವಾಗಿ ವ್ಯಾಪಾರಸ್ಥರು, ಸಾಹುಕಾರರು ಮೊದಲಾದವರಿಗೆ ಮಾತ್ರ ಸಂಬಂಧಿಸುವುದರಿಂದ ಅದನ್ನು ಕುರಿತು ಕೆಲವು ವ್ಯಕ್ತಿಗಳೊಳಗೆ ಖಾಸಗಿಯಾಗಿ ಚರ್ಚಿಸುವುದು ಉತ್ತಮವೆಂತ ಹಲವು ಹಿಂದೀಯರು ಕಳೆದ ವರ್ಷ ಹೇಳಿದರು. ಇದು ಉತ್ತಮ ದಾರಿಯೆಂದು ನಮಗೆ ತೋರಿತು.

ನಮ್ಮದು ಈ ಮೊದಲು ಎಂದೂ ನಡಿಸಿದಂಥ ಒಂದು ರೀತಿಯಾಗಿದೆ. ಪಾರ್ಲಿಮೆಂಟ್ ಸಭೆಯು ಆಖೈರು ತೀರ್ಮಾನಕ್ಕೆ ಬರುವ ಮುಂಚೆ ಜಾಯಿಂಟ್ ಸಿಲೆಕ್ಟ್ ಕಮಿಟಿಯಿಂದಿಗೆ ಹಿಂದೀಯರ ಸಹಕಾರ ಮತ್ತು ಅಭಿಪ್ರಾಯ ಪಡೆಯಲು ತುಂಬಾ ಕುತೂಹಲವುಳ್ಳವರಾಗಿದ್ದೇವೆ; ಮತ್ತು ಅವರ ಸಹಕಾರ ಆಗುವಷ್ಟು ಪರಿಣಾಮಕರವಾಗುವಂತೆ ಮಾಡುವಂತೆ ನಿಶ್ಚೈಸಿದ್ದೇವೆ. ಜಾಯಿಂಟ್ ಕಮಿಟಿಯು ದುಂಡು ಮೇಜು ಪರಿಷತ್ತಿನ ಭಾವಾರ್ಥವನ್ನು ನಡಿಸುವುದೆಂತಲೂ, ಈಗಿನ ಸ್ಥಿತಿಗೆ ಇದೇ ಒಳ್ಳೇ ದಾರಿಯೆಂತಲೂ ನಾವು ನಂಬುತ್ತೇವೆ. ಅಲ್ಲದೆ ಇದರಿಂದ ಹಿಂದೀಯರಿಗೆ ಸರ್ಕಾರದ ಸೂಚನೆಗಳ ಮೇಲೆ ಚರ್ಚಿಸುವ ದೊಡ್ಡ ಅನುಕೂಲ ಸಿಕ್ಕುತ್ತದೆ. ಸರ್ಕಾರದವರು ತಮ್ಮ ಸೂಚನೆಗಳನ್ನು ತಯಾರಿಸಿ ಎರಡು ಪಾರ್ಲಿಮೆಂಟ್ ಸಭೆಗಳ ಜಾಯಿಂಟ್ ಸಿಲೆಕ್ಟ್ ಕಮಿಟಿಯ ಮತ್ತು ಹಿಂದೀಯ ಮೆಂಬರುಗಳ ಮುಂದೆ ಇಡುವರು. ಸರ್ಕಾರದವರ ಸೂಚನೆಗಳು ಮುಂದೆ ಬಾರದೆ ಇರುವ ದೊಡ್ಡ ದುಂಡು ಮೇಜು ಪರಿಷತ್ತಿನ ಚರ್ಚೆಗಿಂತ ಹಿಂದೀಯರಿಗೆ ಈ ಜಾಯಿಂಟ್ ಕಮಿಟಿಯ ಚರ್ಚೆಯೇ ಲಾಭದಾಯಕವಾಗುವುದು. ಯಾಕೆಂದರೆ ಸರ್ಕಾರದವರು ತಮ್ಮ ಸೂಚನೆಗಳನ್ನು ಪಾರ್ಲಿಮೆಂಟಿನ ಮುಂದೆ ಮಾತ್ರ ಇಡಲಾರರು.

ಹಿಂದೀಯರ ಸಹಕಾರವನ್ನು ಪಡೆಯಲು ನಾವು ಬಹು ಆತುರರಾಗಿದ್ದೇವೆಂದು ತೋರಿಸಲು ನಾನು ಸಾಕಷ್ಟು ಹೇಳಿದ್ದೇನೆಂದು ನಂಬುತ್ತೇನೆ. ರೀತಿಯನ್ನು ಬದಲಾಯಿಸಿದ್ದು ತ್ವರೆಮಾಡಲಿಕ್ಕಾಗಿ ಮಾತ್ರ ಎಂದು ತೋರಿಸಲು ನಾನು ಸಾಕಷ್ಟು ಹೇಳಿದ್ದೇನೆಂದು ನಂಬುತ್ತೇನೆ. ತುರ್ತದಲ್ಲಿ ಆಗಬೇಕು, ಬ್ರಿಟಿಷ್ ಮತ್ತು ಹಿಂದೀಯ ಪ್ರತಿನಿಧಿಗಳ ಸಹಕಾರವಿರಬೇಕು ಮತ್ತು ಎಲ್ಲದಕ್ಕಿಂತಲೂ ಮುಖ್ಯವಾದದ್ದು, ಆಖೈರು ತೀರ್ಮಾನವು ಪಾರ್ಲಿಮೆಂಟಿನದ್ದಾಗಿರಬೇಕು; ಈ ಮೂರು ತತ್ವಗಳನ್ನೊಳಕೊಳ್ಳುವಂತೆ ಸರ್ಕಾರದವರು ಈಗ ಸೂಚಿಸಿರುವ ರೀತಿಗಿಂತ ಉತ್ತಮವಾದ ರೀತಿಯನ್ನು ಬೇರೆ ಯಾರೂ ಸೂಚಿಸಿರುವುದಿಲ್ಲ. ಇದಕ್ಕಿಂತ ಉತ್ತಮ ದಾರಿಯನ್ನು ಯಾರಾದರೂ ಸೂಚಿಸಿದರೆ ಸಂತೋಷದಿಂದ ಕೇಳುತ್ತೇನೆ.

ಪಂಡಿತ ಮಾಳವೀಯರ ಅಭಿಪ್ರಾಯ.

ಸರ್ ಹೋರರ ಘೋಷಣ ಓದಿ ಪಂಡಿತ ಮದನಮೋಹನ ಮಾಲವೀಯರ ಸಾತ್ವಿಕ ಹೃದಯವು ಕದಡಿ ಹೋಗಿ ಪರಮ ಪರಿಣಾಮಕಾರಕವಾದ ಉತ್ತರವಿತ್ತು ಹೀಗೆ ಹೇಳಿದರು:—

" ಪ್ರಜೆಗಳ ಹಕ್ಕಿಗೆ ಧಕ್ಕೆ ಬಂದಾಗ ದೌರ್ಜನ್ಯರಹಿತವಾದ ಸತ್ಯಾಗ್ರಹವನ್ನು ಮಾಡಿ ಬಂದದ್ದನ್ನೆಲ್ಲಾ ಅನುಭವಿಸುವುದು ಮಾನವ ಜನ್ಮದ ಹಕ್ಕೆಂಬ ಸಂದೇಶವನ್ನು ಬೀರಿ ಮಹಾತ್ಮ ಗಾಂಧಿಯವರು ಲೋಕೋಪಕಾರ ಮಾಡಿದ್ದಾರೆ. ಕೋಟ್ಯಾವಧಿ ಭಾರತೀಯರು ಈ ಸಂದೇಶವನ್ನು ಅಂಗೀಕರಿಸಿದ್ದಾರೆ. ಭಾರತೀಯರು ನಿಶ್ಶಸ್ತ್ರರು, ಪರಾಧೀನರು; ಅವರನ್ನು ಮೆಟ್ಟಬಹುದೆಂದು ಸರ್ ಹೋರರು ತಿಳಿದದ್ದು ಶುದ್ಧ ತಪ್ಪು. ಭಾರತೀಯರು ಸ್ವಾತಂತ್ರ್ಯದಾಹದಿಂದ ತಪಿಸುತ್ತಿದ್ದಾರೆ. ಸಹಕಾರಕ್ಕೆ ಮೊದಲು ಅವರು ಧರಿಸಿರುವ ದೌರ್ಜನ್ಯರಹಿತ ಅಸಹಕಾರ ಕವಚವನ್ನು ಬಿಚ್ಚಿಬಿಸಾಡಬೇಕೆಂದು ಸರ್ ಹೋರರು ಕೇಳಿದರೆ ಕಿವಿಗೊಡುವವರು ಯಾರು? ಅವೇನು ಪಾತಕ ಕೃತ್ಯವೇನು? ದಿಟದಿ ಒಪ್ಪಂದ ಮುರಿದವರು ಸರ್ ಹೋರರು, ಅವರ ಹಿಂಬಾಲಕರು. ನಿರಂಕುಶ, ಕಠೋರ ಬಾಣಪ್ರಯೋಗ ಮಾಡಿದವರು ಅವರು. ಈ ಬಾಣಪ್ರಯೋಗವನ್ನೆದುರಿಸಲು ಸತ್ಯಾಗ್ರಹವನ್ನು ಆಶ್ರಯಿಸಿರುವುದಾಗಿದೆ."

ಮಿ. ಲ್ಯಾನ್ಸ್‌ಬರಿಯವರ ಅಪೀಲ್.

ಗಾಂಧಿಯವರ ಭೇಟಿ ಮಾಡಿ.

ಸರ್ ಸ್ಯಾಮುವೆಲ್ ಹೋರ್‌ರವರು ತಾ. 13ರಲ್ಲಿ ಪಾರ್ಲಿಮೆಂಟಿನಲ್ಲಿ ಭಾಷಣ ಮಾಡಿದ ನಂತರ ಲೇಬರ್ ಪಕ್ಷದ ಮುಂದಾಳಾದ ಮಿ ಲ್ಯಾನ್ಸ್‌ಬರಿಯವರು ಪತ್ರಿಕಾ ಪ್ರತಿನಿಧಿಯವರೊಡನೆ ಹೀಗೆಂದು ಹೇಳಿದರು—

ಈಗಿನ ರೀತಿಯನ್ನು ನಡಿಸುವ ವರೆಗೆ ಲೇಬರ್ ಪಾರ್ಟಿಯವರು ಈ ವಿಷಯದಲ್ಲಿ ಸರ್ಕಾರದೊಂದಿಗೆ ಸಹಕರಿಸುವುದಿಲ್ಲ. ಹಿಂದೂದೇಶದಲ್ಲಿ ಕೆಲಸ ಮಾಡಿದ ಗವರ್ನರುಗಳ ಪೈಕಿ ಬಹು ಉದಾರ ಭಾವವಿದ್ದವರಲ್ಲಿ ಒಬ್ಬರೆಂದು ಹೇಳಿಸಿಕೊಂಡಿದ್ದ ಈಗಿನ ವೈಸರಾಯರು ಈ ಕಠೋರ ಕಾಲದಲ್ಲಾದರೂ ಮತ್ತು ಸ್ಟೇಟ್ ಸೆಕ್ರೆಟರಿಯವರ ಹೇಳಿಕೆಯು ಪ್ರಕಟಿಸಲ್ಪಟ್ಟಿದ್ದರೂ ಕೂಡ, ಮಿ. ಗಾಂಧಿಯವರನ್ನು ಮತ್ತು ಅವರ ಸಂಗಾತಿಗಳನ್ನು ಕಂಡು ಪೂರ್ಣ ಸ್ಥಿತಿಯನ್ನು ಅವರೊಡನೆ ಚರ್ಚಿಸಲು ಏರ್ಪಡಿಸಿ, ಈಗಿನ ಬಿಕ್ಕಟ್ಟಿನ ಅವಸ್ಥೆಯನ್ನು ನೀಗಲು ಯತ್ನಿಸುವರಾಗಿ ಆಶಿಸುತ್ತೇನೆಂದು ಹೇಳಿದರು.

ಕೊಡಗು.

ಸನ್ ೧೯೩೦ನೇ ಇಸವಿ

ಜುಲೈ ತಾ. ೨೫ನೇ ಶುಕ್ರವಾರ.

ಪ್ರೆಸ್ ಆರ್ಡಿನೇನ್ಸ್

ಜಾರಿಯಲ್ಲಿರುವವರಿವಿಗೆ

ನಾವು

ಅಗ್ರಲೇಖನ

ವನ್ನು

ಪ್ರಕಟಿಸುವುದಿಲ್ಲ.

ಮುಂದೆ ಏನಾಗುವುದು?

(ಬರೆದು ಬಂದದ್ದು.)

ಕಳೆದ ಮೂರು ವಾರಗಳಲ್ಲಿ ಅಂದರೆ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಪ್ರಸಿದ್ಧ ಹೇಳಿಕೆಯ ನಂತರ ಹಿಂದೂದೇಶದ ರಾಜಕೀಯ ಸ್ಥಿತಿಯು ವಿಶೇಷ ತರಹದ ಪರಿಣಾಮವನ್ನೈದಿದೆ. ಈ ಪರಿಣಾಮವು ಹಿಂದೂದೇಶದ ಹಿತಕ್ಕೆ ವಿರೋಧವಾದದ್ದೆಂದು ಕೆಲವರಿಗೆ ತೋರಬಹುದು. ಆದರೆ ಚೆನ್ನಾಗಿ ಆಲೋಚಿಸಿದರೆ ಇದರಿಂದ ಹಿಂದೂದೇಶದ ಸ್ವಾತಂತ್ರ್ಯ ಹೋರಾಟವು ಬಲವಾಗುತ್ತಿದೆಯೆಂದು ಕಂಡುಬರುವದು.

ಎಷ್ಟು ಕಠಿಣ ತರಹದ ಆರ್ಡಿನೇನ್ಸ್‌ಗಳನ್ನು ಜಾರಿಗೆ ತಂದು, ಜೈಲಿನ ಹೊರಗೂ, ಒಳಗೂ ಲಾಠಿ ಪ್ರಹಾರಗಳನ್ನು ಉಪಯೋಗಿಸಿ ಕೈಕಾಲುಗಳನ್ನು ಮುರಿದು, ತಲೆಗಳನ್ನು ಒಡೆದರೂ, ತಿರಸ್ಕಾರದಷ್ಟು ಜುಲುಮೆಯನ್ನು ತೋರಿಸಿದರೂ, ಹೆಂಗಸರು ಮಕ್ಕಳೆನ್ನದೆ ಪಕ್ಷಿಸ್ತ್ರೀರಿಗೂ, ಶಿಕ್ಷೆಗೂ ಏನೊಂದೂ ಹೋಲಿಕೆ ಇಲ್ಲದಷ್ಟು ದೀರ್ಘಕಾಲ ಕಠಿಣ ಸಜೆ ಕೊಟ್ಟರೂ ಕೂಡ ಬಗ್ಗದೆ ಇರುವ ಸರ್ಕಾರದ ಬಹಿರಂಗ ಶತ್ರುಗಳಾದ ಕಾಂಗ್ರೆಸ್ಸಿನ ಮುಂದಾಳುಗಳೆಲ್ಲರನ್ನೂ ಈಗ ಜೈಲಿನಲ್ಲಿ ಮುಚ್ಚಿಟ್ಟಿರುವೆವು; ಇನ್ನು ನಯನುಡಿಗಳಿಗೆ ಮರುಳಾಗುವಂಥ ಲಿಬರಲ್ ಪಕ್ಷದವರು, ಇಂಡಿಪೆಂಡೆಂಟ್ ಪಾರ್ಟಿಯವರು ಮತ್ತು ಹೇಗೆ ಒದ್ದರೂ ಕೂಡ ಸಹಕರಿಸದೆ ಇರಲಾರದಂಥ ಕೆಲವು ಕೋಮುವಾರು ಶತ್ರುವಾದಿಗಳು ಮಾತ್ರ ಹೊರಗಿರುವುದರಿಂದ ತಿಂದು ಅವರನ್ನು ಹೇಗೆ ಬೇಕಾದರೂ ಕುಣಿಸಬಹುದೆಂದು ಎಣಿಸಿ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಬಲವಾಗಿರುವ ಕನ್‌ಸರ್ವೇಟಿವ್ ಪಾರ್ಟಿಯ ಬೆಂಬಲದಿಂದ ರಚನೆ ತಯಾರಿಸುವಿಕೆಯ ರೀತಿಯನ್ನು ಸಂಪೂರ್ಣ ಬದಲಾಯಿಸಿಯೇ ಬಿಟ್ಟರು. 'ಸಹಿಸಲಾರದೆ ಆಗುವಾಗ್ಯೆ ಹುಳವೂ ಕೂಡ ಕಚ್ಚಲಿಕ್ಕೆ ತಿರುಗುತ್ತೆ' ಎಂಬದನ್ನು ಸರ್ ಹೋರ್‌ರವರು ಮರೆತಂತೆ ಕಾಣುತ್ತೆ. ಬಹು ಶಾಂತಪ್ರಿಯರೆಂದೂ, ಸಮಾಧಾನಿಗಳೆಂದೂ ಸರ್ಕಾರದಿಂದ ತಿಳಿಯಲ್ಪಟ್ಟಿದ್ದ ಲಿಬರಲ್, ಇಂಡಿಪೆಂಡೆಂಟ್ ಪಕ್ಷದವರೂ ಕೂಡ ಹೋರ್‌ರವರ ಆಗವನ್ನು ಸಹಿಸಲಾರದೆ ಹೋದರು. ಯಾಕೆ, ಅವರಿಗೆ ಸ್ವಲ್ಪವಾದರೂ ಸ್ವಾಭಿಮಾನವಿಲ್ಲವೇ? ಬ್ರಿಟಿಷರ ಒಳಗುಟ್ಟಿನ ತತ್ವವನ್ನು ಮೊದಲೇ ಅರಿತುಕೊಂಡು ಅಸಹಕಾರವನ್ನು ಕೈಕೊಂಡಿದ್ದ ವೀರಪಕ್ಷದವರಂತೆ ಅವರೂ ಸರ್ಕಾರದೊಂದಿಗೆ ಸಹಕರಿಸುವುದಿಲ್ಲವೆಂದು ನಿರ್ಧರಿಸಿಯೇ ಬಿಟ್ಟರು. ಇವರನ್ನು ಹೇಗಾದರೂ ಮಾಡಿ ಪುನಹ ತಮ್ಮ ಕಡೆಗೆ ತಿರುಗಿಸಿಕೊಳ್ಳಬೇಕೆಂದು ಸ್ಟೇಟ್ ಸೆಕ್ರೆಟರಿಯವರು ತನ್ನ ಹೇಳಿಕೆಯನ್ನು ಕುರಿತು ಈಗಾಗಲೇ ಎರಡು ವಾರಗಳಲ್ಲಿ ವಿವರದ ಎರಡು ಭಾಷಣಗಳನ್ನು ಮಾಡಿದರು. ಈ ಭಾಷಣಗಳು ಬಹು ನಯನುಡಿಗಳಿಂದ ಕೂಡಿದ್ದಾದರೂ, ಈ ಸಾರಿ ಅವು ಮಧ್ಯಪಕ್ಷದವರನ್ನು ಮರುಳುಗೊಳಿಸಲಾರದೆ ಹೋದವು. ಲಿಬರಲ್ ಮುಂದಾಳುಗಳಾದ ಸರ್ ತೇಜ್ ಬಹದ್ದೂರ್ ಸಪ್ರು, ವಿ. ಶ್ರೀನಿವಾಸ ಶಾಸ್ತ್ರಿ, ಮಿ. ಸಿ. ಚಿಂತಾಮಣಿ, ಸರ ಚಿಮನ್‌ಲಾಲ್ ಸೆಟಲ್ವಾಡ್, ಸರ್ ಪಿ. ಸೇಠ್ನ, ಇಂಡಿಪೆಂಡೆಂಟ್ ಪಕ್ಷದವರಾದ ಮಿ. ಜಯಕರ್, ಸರ್ ಅಬ್ದುರ್ ರಹೀಮ್, ಸರ್ ಪಿ. ಠಾಕೂರ್‌ದಾಸ್ ರವರೇ ಮೊದಲಾದವರು ಸರ್ ಹೋರ್‌ರವರ ೨ನೇ ವಿವರವನ್ನು ಕೇಳಿಯೂ ಕೂಡ ಸ್ವಲ್ಪವೂ ಸಮಾಧಾನಗೊಂಡಿರುವುದಿಲ್ಲ.

ಇವರು ಇಷ್ಟರಲ್ಲಿ ಸುಮ್ಮನಾಗಿರುವುದಿಲ್ಲ. ಸಪ್ರು, ಜಯಕರಂಥವರು ಕನ್‌ಸರ್ವೇಟಿವ್ ಕಮಿಟಿಗೆ ರಾಜೀನಾಮೆ ಕೊಟ್ಟರೂ, ಸರ್ಕಾರದ ಹೊಸ ರೀತಿಗೆ ಬಹಿಷ್ಕಾರ ಕೊಡುವಂಥ ಬಲವಾದ ಪಕ್ಷವು ಇಂಡಿಯಾದಲ್ಲಿ ಇದೆ ಎಂದು ಸರ್ ಹೋರ್‌ರವರು ತಮ್ಮ ತಾ. 13ರ ಭಾಷಣದಲ್ಲಿ ಹೇಳಿದನ್ನು ಸುಳ್ಳು ಮಾಡಲಿಕ್ಕಾಗಿ ಮಧ್ಯ ಪಕ್ಷದವರು ಪಬ್ಲಿಕ್ ಮೀಟಿಂಗುಗಳನ್ನು ನಡಿಸಿ ಆರ್ಡಿನೇನ್ಸ್ ಆಳಿಕೆಯನ್ನೂ, ಹೋರ್‌ರವರ ಹೇಳಿಕೆಯನ್ನೂ ನಿಷೇಧಿಸಲು ಪ್ರಾರಂಭಿಸಿರುವರು. ಇದು ದೇಶದ ಒಗ್ಗಟ್ಟಿಗೆ ಶುಭ ಚಿಹ್ನೆಯಾಗಿದೆ. ಹಿಂದೂದೇಶದ ಆತ್ಮಗೌರವವನ್ನು ಕೃಣೀಕರಿಸಿ ಸೈಮನ್ ಕಮಿಶನನ್ನು ನೇಮಿಸಿದಾಗ ಹೇಗೆಯೋ ಎಲ್ಲಾ ಪಾರ್ಟಿಗಳ ಮುಖಂಡರು ಸೇರಿ ನಿಷೇಧ ಮೀಟಿಂಗುಗಳನ್ನು ನಡಿಸಿದರು. ಒಗ್ಗಟ್ಟಿನ ಕೆಲಸದ ಒಳ್ಳೇ ಪರಿಣಾಮವು ಎಲ್ಲರಿಗೂ ತಿಳಿದೇ ಇದೆ. ಹಾಗೆಯೇ ಈಗಲೂ ಎಲ್ಲರೂ ಐಕ್ಯಮತ್ಯದಿಂದ ಕೆಲಸ ಮಾಡಿದರೆ ಉತ್ತಮ ಫಲವು ದೊರೆಯದೆ ಇರದು. ಒಗ್ಗಟ್ಟಾಗಿ ವರ್ತಿಸಲು ಎಲ್ಲಾ ಪಾರ್ಟಿಗಳ ಒಂದು ಕಾನ್‌ಫರೆನ್ಸನ್ನು ಮಾಡುವುದು ಉಚಿತವೆಂದು ಕೆಲವು ಧುರೀಣರು ಸೂಚಿಸಿರುವರು. ಈ ಸೂಚನೆಯನ್ನು ಆಗುವಷ್ಟು ಬೇಗನೆ ಜಾರಿಗೆ ತರುವುದು ಉತ್ತಮ.

ಹೀಗೆ ಎಲ್ಲಾ ಪಕ್ಷದವರೂ ಒಗ್ಗಟ್ಟಾಗಿ ಸಭೆ ಸೇರಿ, ದುಂಡು ಮೇಜು ಪರಿಷತ್ತಿನ ರೀತಿಯನ್ನೇ ನುಂದರಿಸಬೇಕೆಂತಲೂ, ಸದರಿ ಪರಿಷತ್ತಿನಲ್ಲಿ ಕಾಂಗ್ರೆಸ್ ಪಕ್ಷದವರು ಸಹಕರಿಸುವಂತೆ ತಕ್ಕ ಏರ್ಪಾಡುಗಳನ್ನು ಸರ್ಕಾರದವರು ಮಾಡಬೇಕೆಂತಲೂ, (ಅಂದರೆ ಆರ್ಡಿನೇನ್ಸ್ ಆಳಿಕೆಯನ್ನು ರದ್ದುಪಡಿಸಿ ರಾಜಕೀಯ ಕೈದಿಗಳನ್ನೆಲ್ಲಾ ಬಿಡುಗಡೆ ಮಾಡಿದರೆ ಕಾಂಗ್ರೆಸಿನವರು ಸತ್ಯಾಗ್ರಹವನ್ನು ನಿಲ್ಲಿಸುವಂತೆಯೂ,) ಕಾಂಗ್ರೆಸಿನವರು ಸೇರಿ ನಡಿಸುವ ದುಂಡು ಮೇಜು ಪರಿಷತ್ತಿನ ತೀರ್ಮಾನಗಳನ್ನು ಬ್ರಿಟಿಷ್ ಪಾರ್ಲಿಮೆಂಟಿನವರು ಪಾಸುಮಾಡುವಂತೆಯೂ ಬ್ರಿಟಿಷ್ ಸರ್ಕಾರವನ್ನು ಕೇಳಿಕೊಂಡು, ಇಷ್ಟಕ್ಕೆ ಸರ್ಕಾರದವರು ಒಪ್ಪದಿದ್ದರೆ ತಾವು ಯಾರೂ ಸರ್ಕಾರದೊಂದಿಗೆ ಸಹಕರಿಸುವುದಿಲ್ಲವೆಂದು ನಿರ್ಧರಿಸಿದರೆ ಹಿಂದೂದೇಶಕ್ಕೆ ಕಲ್ಯಾಣವಾಗಬಹುದು. ಲಿಬರಲ್ ಪಕ್ಷದವರು ಇಷ್ಟು ಮುಂದಕ್ಕೆ ಬರುವರೇ?

ಸಹಕಾರಿಗಳಲ್ಲಿಯೂ ಕೂಡ ಅನೇಕರು ಅಸಹಕಾರವನ್ನು ಕೈಕೊಂಡರೂ ಹೋರ್‌ರವರು ತನ್ನ ಹೊಸ ರೀತಿಯನ್ನು ನಡಿಸುವರೋ ಎಂದು ನೋಡಬೇಕಾಗಿದೆ. ಒಂದು ವೇಳೆ ಅವರು ನಡಿಸಿಬಿಟ್ಟರೂ ಕೂಡ, ಅವರು ತಯಾರಿಸುವ ರಚನೆಯು ಯಾರಿಗಾಗಿರುವದು, ಅದನ್ನು ಒಪ್ಪಿಕೊಂಡು ಜಾರಿಗೆ ತರುವವರಾದರೂ ಯಾರು? ಅಂಥಾ ರಚನೆಯು ಜಾರಿಗೆ ಬರುವಾಗ್ಯೆ ಹಿಂದೂದೇಶದಲ್ಲಿ ಮತ್ತಷ್ಟು ಉತ್ತಮ ತರಹದ ಒಗ್ಗಟ್ಟಿಗೆ ಎಡೆ ದೊರೆಯುವುದು.

ಮುಂದೆ ಏನಾಗುವವೆಂದು ತಿಳಿಯಲು ಎಲ್ಲರೂ ಕುತೂಹಲಪೂರ್ಣರಾಗಿದ್ದಾರೆ. ಒಂದು ಕಡೆ ಇಂಡಿಯಾ ಮಂತ್ರಿಯವರು ಯಾವ ರೀತಿಯನ್ನನುಸರಿಸುವರೆಂದೂ, ಇನ್ನೊಂದು ಕಡೆ ಲಿಬರಲ್-ಇಂಡಿಪೆಂಡೆಂಟ್ ಪಕ್ಷಗಳವರು ಹೇಗೆ ವರ್ತಿಸುವರೆಂದೂ ಜನರು ಎದುರು ನೋಡುತ್ತಿದ್ದಾರೆ. ಇಂಡಿಯಾದ ಪ್ರಾಮುಖ್ಯ ಪಾರ್ಟಿಗಳೆಲ್ಲಾ ಮಾತ್ರವಲ್ಲ, ಯೂರೋಪಿಯನ್ ಸಂಘದವರೂ ಕೂಡ ಸ್ಟೇಟ್ ಸೆಕ್ರೆಟರಿಯವರು ಸೂಚಿಸಿದ ಬದಲಾವಣೆಯು ಸರಿಯಲ್ಲವೆಂದು ಹೇಳಿರುವಾಗ್ಯೆ ಸರ್ ಹೋರ್‌ರವರು ತನ್ನ ತಪ್ಪನ್ನು ತಿದ್ದಿಕೊಂಡು ಶಾಂತ ಪಕ್ಷದವರ ಮಾತ್ರವಲ್ಲ, ಕಾಂಗ್ರೆಸ್ಸಿನ ಸಹಕಾರವನ್ನೂ ಕೂಡ ಪಡೆಯಲು ದೊರೆತಿರುವ ಈ ಸಂದರ್ಭವನ್ನು ಉಪಯೋಗಿಸಿ ದೇಶದಲ್ಲಿ ಶಾಂತಿಯನ್ನು ಸ್ಥಾಪಿಸುವರೋ ಎಂದು ನೋಡಬೇಕಾಗಿದೆ. ಇತ್ತ ಕಡೆ, ಇಂಥಾ ಶಾಂತಿಯನ್ನು ಸ್ಥಾಪಿಸಲು ಇಂಡಿಯಾ ಮಂತ್ರಿಯವರನ್ನು ಬಲತ್ಕರಿಸುವಷ್ಟು ಧೈರ್ಯವನ್ನು ಶಾಂತಪಕ್ಷದವರು ತಾಳುವರೇ?

ಕೊಡಗಿನ ರಾಜಕೀಯ ಭವಿಷ್ಯತ್ತನ್ನು ಕುರಿತು ಶ್ರೀಮತಿ ಡಿ. ಸಾಕಮ್ಮನವರು "ಹಿಂದೂ" ಪತ್ರಿಕೆಗೆ ಕೊಟ್ಟ ಅಭಿಪ್ರಾಯ.

ಕೊಡಗಿನ ರಾಜಕೀಯ ಭವಿಷ್ಯತ್ತು ಹೇಗಿರಬೇಕೆಂಬದನ್ನು ಕುರಿತು ಈ ದೇಶದ ಜನರು ಕೆಲವು ಕಾಲದಿಂದಲೇ ಯೋಚಿಸುತ್ತಿದ್ದಾರೆ. ಆದರೆ ಈ ಬಾಬಿನಲ್ಲಿ ಸ್ಥಳೀಯ ಸರಕಾರದ ಅಭಿಪ್ರಾಯವನ್ನು ಇಂಡಿಯಾ ಸರಕಾರವು ಈಗ ಕೇಳಿರುವುದರಿಂದ ಜನರೆಲ್ಲರೂ ಈ ವಿಷಯವಾಗಿ ಕೂಡಲೇ ಆಲೋಚಿಸಿ ತೀರ್ಮಾನಿಸಿಕೊಳ್ಳತಕ್ಕ ವಿಷಯವಾಗಿದೆ. ತಮ್ಮ ಅಭಿಪ್ರಾಯಗಳನ್ನು ಕೊಡಬೇಕೆಂತ ಕೇಳಲ್ಪಟ್ಟ ಏಳು ಸಾರ್ವಜನಿಕ ಸಂಘಗಳ ಪೈಕಿ—ಐದು, ಮದ್ರಾಸಿಗೆ ಸೇರಿಸಬೇಕೆಂತ ಕೇಳಿವೆಯೆಂತಲೂ, ಈ ಐವರಲ್ಲಿ ಒಂದು ಸಭಾ, ಸಮಾಜದ ಪ್ರತಿಯೊಬ್ಬನಿಗೂ ಚುನಾವಣೆಯ ಹಕ್ಕು ಕೊಟ್ಟು ಸಂಪೂರ್ಣ ಪ್ರಜಾಜವಾಬ್ದಾರಿ ಸರಕಾರ ಪದ್ಧತಿಯನ್ನು ಕೊಟ್ಟರೆ ಕೊಡಗು ಪ್ರತ್ಯೇಕವಾಗಿಯೇ ಇರಬಹುದೆಂದೂ, ಇದು ಅಧಿಕಾರಿಗಳಿಗೆ ಒಪ್ಪಿಗೆಯಾಗದಿದ್ದರೆ ಮದ್ರಾಸಿಗೆ ಸೇರಿಸಿದರೂ ಪ್ರಜಾತಂತ್ರ (ಅಂದರೆ ಮೈಸೂರಿಗಿಂತಲೂ ಉತ್ತಮವಾದ) ಸರಕಾರ ಪದ್ಧತಿಯನ್ನು ಪಡೆಯಬೇಕೆಂದೂ ಅಭಿಪ್ರಾಯ ಕೊಟ್ಟಿರುವುದಾಗಿ ತಿಳಿಯುತ್ತೇನೆ. ಮದ್ರಾಸಿಗೆ ಸೇರಬೇಕೆಂತ ಕೇಳದೆ ಇರುವ ಎರಡು ಸಭೆಗಳ ಪೈಕಿ ಒಂದು ಯೂರೋಪಿಯನ್ ಪ್ಲಾಂಟರುಗಳ ಸಂಘವಾಗಿದೆ.

ಕೊಡಗು ಪ್ರತ್ಯೇಕವಾಗಿರುವುದು ಸಾಧ್ಯವಿಲ್ಲವೆಂದೂ ಮತ್ತು ಕೊಡಗಿನ ಮುಂದಿನ ಜನಾಂಗದ ಕ್ಷೇಮವನ್ನೆಣಿಸಿದರೂ ಕೊಡಗು ಪ್ರತ್ಯೇಕವಾಗಿರುವುದು ಒಳ್ಳೇದಲ್ಲವೆಂದೂ ನನ್ನ ಅಭಿಪ್ರಾಯವಾಗಿದೆ. ಕೊಡಗು ಪ್ರತ್ಯೇಕವಾಗಿರುವುದು ಯಾಕೆ ಸಾಧ್ಯವಿಲ್ಲ ಮತ್ತು ಯಾಕೆ ಆಗಬಾರದೆಂಬುದನ್ನು ಕುರಿತು ತಪಶೀಲ್ ವಿವರವನ್ನು ಇಲ್ಲಿ ಕೊಡಬೇಕಾಗಿಲ್ಲ. ಕೊಡಗಿನ ಸರಕಾರದ ಆದಾಯವನ್ನು ನೋಡಿದರೆ ಪ್ರಜಾತಂತ್ರ ಸರಕಾರ ಪದ್ಧತಿಯನ್ನು ನಡಿಸಲು ಸಾಧ್ಯವಿಲ್ಲ. ಕೊಡಗಿನ ಸರಕಾರದ ಉತ್ಪತ್ತಿಗಳಲ್ಲಿ ಮುಖ್ಯವಾದದ್ದು ಎಂದರೆ ಗಂಧ ಮತ್ತು ಸಾಮಾನುಪದಾರ್ಥಗಳ ಉತ್ಪತ್ತಿ. ಇವೆರಡು ಕ್ರಮೇಣ ಕಡಿಮೆಯಾಗುತ್ತಲೇ ಬರುವಲ್ಲಿ ಸಂಶಯವಿಲ್ಲ. ಆ ದೇಶೋನ್ನತಿಗೆ ಬೇಕಾದ ಇಲಾಖೆಗಳನ್ನು ಹೊಸತಾಗಿ ಪ್ರಾರಂಭಿಸುವುದಾಗಲೀ, ನಡಿಸುವದಾಗಲೀ ಹಾಗಿರಲಿ, ದಿನಚರಿಯ ಆಡಳಿತವನ್ನು ನಡಿಸಲಿಕ್ಕೆ ಬೇಕಾದ ಹಣವೇ ಇಲ್ಲವಾಗುತ್ತದೆ. ಟೆಕ್ನಿಕಲ್ ಇಲಾಖೆಗಳಲ್ಲಿ ಎಕ್ಸ್‌ಪರ್ಟ್‌ಗಳ ಸಹಾಯವಿಲ್ಲದೆ ಎಷ್ಟು ಕಾಲ ಕಳೆಯಬಹುದು? ಮದ್ರಾಸಿನ ಟೆಕ್ನಿಕಲ್ ಮತ್ತು ಆರ್ಟ್ಸ್ ಕಾಲೇಜುಗಳಿಗೆ ಕೊಡಗಿನ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಬೇಕಾದರೆ ಏನೇನು ಕರಾರುಗಳನ್ನು ಇಟ್ಟಾರು ಎಂಬದು ಇನ್ನೂ ತಿಳಿಯದು. ಕೊಡಗು ಪ್ರತ್ಯೇಕವಾಗಿರುವವರೆಗೆ ಗಜೆಟೆಡ್ ಉದ್ಯೋಗಸ್ಥರನ್ನು ತಯಾರಿಸುವ ಏರ್ಪಾಡು ಮಾಡಲಾಗುವುದೇ ಇಲ್ಲ.

ಕೊಡಗನ್ನು ಮದ್ರಾಸಿನೊಂದಿಗಲ್ಲ, ಮೈಸೂರಿನೊಂದಿಗೆ ಸೇರಿಸಬೇಕೆಂತ ನನ್ನ ಅಭಿಪ್ರಾಯವಾಗಿದೆ. ಮೈಸೂರು ಬ್ರಿಟಿಷರ ಅಧಿಕಾರದಲ್ಲಿರುವಾಗ ಕೊಡಗೂ ಮೈಸೂರು ಒಂದೇ ಆಡಳಿತಕ್ಕೆ ಒಳಪಟ್ಟಿತ್ತು. ಈಗಲೂ ಮೈಸೂರು ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರೇ ಕೊಡಗಿನ ಚೀಫ್ ಕಮಿಶನರಾಗಿರುವುದರಿಂದ ಪೂರ್ವದ ಸಂಬಂಧವೂ ಈಗಲೂ ಇದೆಯೆನ್ನಬಹುದು. ಕೊಡಗನ್ನು ಮೈಸೂರಿಗೆ ಸೇರಿಸಬೇಕೆಂ

(೪ನೇ ಪುಟದಲ್ಲಿ ಮುಂದುವರಿದಿದೆ)

Reg. No. M. 1550.
If not delivered please return
"KODAGU" OFFICE MERCARA

ಕೊಡಗು.

ಸತ್ಯೇನ ಧೂತದಯುಯಾ ವಿದ್ಯಾ ಶೀಲಿ ತಯುಕ್ತಕಾಃ ಏಕಮುಕ್ತೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ

ವಾರ್ಷಿಕ ಚಂದಾ ರೂ. ೩—೮—೦.

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೨ | ಮಡಿಕೇರಿ, ಸನ್ ೧೯೩೨ನೇ ಇಸವಿ ಜುಲೈ ತಾರೀಕು ೨೨ ನೇ ಶುಕ್ರವಾರ. | ಸಂಚಿಕೆ ೮

SARI·PIN·

BRACELETS·

EAR·RINGS·
(Thodus)
Cut-rubys Rs. 25 to 50
With diamond in centre Rs. 80 to 120

Gold Rs. 10
Set rubys forming any letter Rs. 12

NECKCHAINS·

NOSE-RINGS·
Diamond in small size of best quality Rs. 35 & upwards according to size·

MARRIAGE PRESENTATIONS

Attractive and inexpensive articles ready in stock. Prompt execution. Details on enquiry free with catalogue. Numerous customers in Coorg thoroughly satisfied with reliable service. Testimonials pouring in. Silver Guindys, Photo lockets, Dimond nose-screws, cut-ruby ear-rings, etc., etc., etc., in all prices. Very attractive Prices most moderate.

Estimates free on enquiry

Designs free on enquiry·

V. Subramaniajer Jeweller,

Telegrams: 'PRECIOUS.'

Telephone: 3145.

CATALOGUE ON ENQUIRY.

52–35

Post Box 423, Triplicane, P. O., MADRAS.

ಇಂಡಿಯಾ ಎಕ್ವಿಟೇಬಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

(ಸ್ಥಾಪಿಸಲ್ಪಟ್ಟದ್ದು 1908)

ಪೋಲಿಸಿಗಳು ಕಳಕೊಳ್ಳುವಂತಹವುಗಳಲ್ಲ.

ಯಾವ ತಡೆಯೂ ಇಲ್ಲದೆ ಪ್ರತಿ ವರ್ಷವು ಬೋನಸ್ಸು.

ಹಕ್ಕು ಬಾಧ್ಯಸ್ಥರಿಗೆ ಸರಿಯಾಗಿ ಹಣ ಕೊಡಲ್ಪಡುವದು ಇಲ್ಲದಿದ್ದರೆ ಬಡ್ಡಿಯೂ ದೊರಕುವುದು.

ಹೆಡ್ ಆಫೀಸು:—

102· ಕ್ಲೈವ್ ಸ್ಟ್ರೀಟ್, ಕಲ್ಕತ್ತಾ.

I. E., C. P. S. 12–9

ಬಾಲಾರ್ಕಮಧು.

ಬಾಲಾರ್ಕಮಧು ಮಕ್ಕಳಿಗೆ ಕೊಡುವುದರಿಂದ ಶಕ್ತಿಯೂ ಆರೋಗ್ಯವೂ ಹೆಚ್ಚುವುದು. ಇದು ಮಧುರವಾಗಿದೆ. ಬೆಲೆ ಶೀಸೆ 1ಕ್ಕೆ 0–12–0 ಟ. ಖ. 0–12–0.



(Spleen Lever enlargement) ಎಂಬ ಮಕ್ಕಳ ಭಯಂಕರ ಗಡ್ಡೆರೋಗ—ಪ್ಲೀಹ—ಪಿತ್ತಕೋಶದ ಗಡ್ಡೆಗೆ ಚಕ್ರಬಿಂದು, ಚಕ್ರಕ್ಷಾರ—ಚಕ್ರಚೂರ್ಣ—ಚಕ್ರ ಪ್ರಭಾ—ಈ ನಾಲ್ಕು ಮಹೌಷಧಗಳಿವೆ. ಸಾವಿರಾರು ಮಕ್ಕಳ ಪ್ರಾಣವನ್ನು ಉಳಿಸಿದೆ; ನಾಲ್ಕು ಔಷಧಗಳು ಸೇರಿ 1 ತಿಂಗಳ ಔಷಧದ ಬೆಲೆ 3–0–0. ಟ. ಖ. 0–8–0. ಏಜೆಂಟರು ಬೇಕಾಗಿರುವರು.

ಪ. ಎ. ಯಮ್. ಶ್ರೀನಿವಾಸರಾವ್,

ವೈ. ವಿ. ಆಯುರ್ವೇದಭಿಷಕ್,

ಬ್ರಾಂಚ್ ಆಫೀಸ್, ಉಡ್ಪಿ. S· K. | Spleen & Lever ಸ್ಪೆಶಲಿಸ್ಟ್. ಯಂ· ವಿ. ಪ್ರಸಾದಿಕ ಔಷಧಾಲಯ

52–77

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದ್ದು 1922ರಲ್ಲಿ)

		ರೂ.
ಷೇರ್ ಬಂಡವಾಳ	—	50,000
ವಸೂಲಾದ ಷೇರ್ ಮೊಬಲಗು	—	27,350
ಜಮೊಬಂದ ಠೇವಣಾತಿ	—	2,25,172
ವಸೂಲಾದ ಕ್ಷೇಮನಿಧಿ	—	37,914

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೆ ಬೇಕಾಗಿ ಸಾಲಕೊಡುತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಷಿ ಮಾಡುತ್ತಾರೆ.

ಪ್ರೆಸಿಡೆಂಟರು, ಪಟ್ಟುವಂಡ ದೇವಯ್ಯನವರು, ರಾವ್ ಬಹದ್ದೂರ್.

ಟ್ರೆಜರರ್, ಮನೆಯಪ್ಪಂಡ ಬೆಳ್ಯಪ್ಪನವರು.

ಸೆಕ್ರೆಟರಿ

ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಖು 1—7—1932.

ನೋಟೀಸು.

ಈ ಕೆಳಗಿನ ಮಹಶಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜೆಂಟರುಗಳು.

ಉತ್ತರ ಕೊಡಗಿಗೆ ಶ್ರೀ [illegible] ಮುತ್ತಯ್ಯನವರು,

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು, (ಕಾಡಿಯಂಡಾರ.)
ಶಾಪೋಕ್ಲು—ಎಮ್. ಆರ್. ವೆಂಕಪ್ಪಯ್ಯನವರು.
ಅಮ್ಮತ್ತಿ—ಸಿದ್ದಾಪುರ—ಮೆ. ಬಿಸಂಡ ಬೋಪಪ್ಪನವರು,
ಪೊನ್ನಂಪೇಟೆವಾಡು—ಮೆ. ಪಿ. ಬಿ. ಮುತ್ತಪ್ಪಯ್ಯನವರು,
ಮತ್ತು ಅಕಮಣಮಾಡ ಪಿ ಕಾರ್ಯಪ್ಪನವರು,
ಹುದಿಕೇರಿ & ತಿತಿಮತ್ತಿ—ಮೆ. ಕೆ. ಮಾಚಪ್ಪಯ್ಯನವರು,
ಸುಂಟಿಕೊಪ್ಪ—ಮೆ. ಅಪ್ಪಚಟ್ಟೋಳಂಡ ಮಾಚಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮ್ಯಾನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು [illegible] ರೂಲ್ಸುಗಳು [illegible] ಫಾರಂಗಳೂ. [illegible] ಫಾರಂಗಳೂ, ಜಮ್ಮ ಮಂಜೂರಾತಿ ಫಾರಮು [illegible], ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಕರಾರು ಫಾರಮುಗಳೂ, ಸ್ಟೋರ್ ಕೀಪರ್ ಕರಾರು ಫಾರಮುಗಳೂ, ಓವರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮಾ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮ್ಯಾನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.
ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.
ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಚಾಲಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,78,322 ಜನರಿಗೆ 78ಕೋಟಿ ರೂ.
ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ರಕ್ಕಿಂತ ವಿಶೇಷ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದಾಗಿದೆ.
ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.
ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಒತ್ತಾಸೆಯನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬುದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್ ಬೆಂಗಳೂರು,

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ಮೊಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೌ	ಪಾಟ್ನಾ	ಸುಕ್ಕೂರು
ಅಲ್ಲಾಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಡೌಲಗಾನ್	ಮಂಡಲೆ	ರಾಯಪುರ	ತಿರುವೆಂಡ್ರಮ್
ಭೋಪಾಲ್	ಕರಾಚಿ	ಮಂಗಳೂರು	ರಾಂಚಿ	ವಿಶಾಖಪಟ್ಣ

[52—20

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತಾರೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,

52-27 ಗಿರಿಗಾಂವ, ಮುಂಬಯಿ.



ಆರ್ಡರ್ ಬರೆದರೆ [illegible]
[illegible]
ಕಳುಹಿಸಲ್ಪಡುವುದು.

ಕೋವಿಗಳು, ಕತ್ತಿಗಳು, ಬಟಾಗಳು, ತೋಟೆಗಳು, [illegible], ಆಟ ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS LTD.,
Largest Importers of Firearms and Ammunition
Cheapest priced firm in India,

24-19 **210 Abdul Rehiman Street, BOMBAY.**

Printed & published by P. I. Belliappa at "Kodagu" Press Mercara for "Kodagu" Ltd.

ಬೆಟ್ಟತ್ತೂರು ಶಾಲೆಯ ಕಟ್ಟಡ.

ಬೆಟ್ಟತ್ತೂರಿನಲ್ಲಿ ಇಷ್ಟರ ವರೆಗೆ ಮಕ್ಕಳಿಗೆ ಪ್ರಾಥಮಿಕ ವಿದ್ಯೆ ಕೊಡಲೂ ಕೂಡ ಶಾಲೆ ಎನನೂ ಇಲ್ಲದ ಕೊರತೆಯನ್ನು ನೋಡಿ ಸದರಿ ಗ್ರಾಮಸ್ಥರು ಕಳೆದ ವರ್ಷ ಚಂದಾ ಎತ್ತಿ ಒಂದು ಶಾಲೆಯನ್ನು ಕಟ್ಟಿಸಿದರು. ಈ ಹಣದ ಪೈಕಿ ಗ್ರಾಮಸ್ಥರಿಂದ 159—11—9 ಮತ್ತು ಪರ ಗ್ರಾಮದ ಮಹನೀಯರಿಂದ 33—8—0 ಜಮೆಯಾದದ್ದಾಗಿದೆ. ಇದು ಸಾಲದ್ದರಿಂದ ಈ ಕೆಳಗಿನ ಮಹನೀಯರಿಂದ 288—12—0 ರೂ. ಸಾಲ ತೆಗೆದುಕೊಳ್ಳಬೇಕಾಯಿತು.

1. ಮೆ. ಅಪಾರಂಡ ಗಣಪತಿಯವರಿಂದ 119—12—0, 2. ವಿಷ್ಣುಮೂರ್ತಿದೇವರ ಭಂಡಾರದಿಂದ 54—4—0. 3. ಮೆ. ಕಡ್ಯದ ಗಣಪತಿಯವರಿಂದ 53—4—0, 4. ಮೆ. ಅಪಾರಂಡ ಕಾವೇರಪ್ಪನವರಿಂದ 25—0—0, 5. ಮೆ. ಅಪಾರಂಡ ಮುದ್ದಯ್ಯನವರಿಂದ 24—0—0, 6. ದೇವರ ಕಾಣಿಕೆಹಣ 7—0—0, 7. ಚೆರಿಯಮನೆ ಅಯ್ಯಣ್ಣನವರಿಂದ 5—8—0.

ಡಿ. ಬೋರ್ಡಿನ ಮೆಂಬರುಗಳಲ್ಲಿ ವಿನಂತಿ.

ನಮ್ಮ ಬೆಟ್ಟತ್ತೂರು ಶಾಲೆಯನ್ನು ಕಟ್ಟಿಸಲಿಕ್ಕೆ ರೂ. 481—15—8 ಖರ್ಚು. ರೂ. 193—3—8 ಜಮೆ. ರೂ. 288—12—0 ಸಾಲ ಆಗಿರುತ್ತದೆ. 12—8—0 ರೂ. ಕೂಲಿ ಚಂದ ಕೊಟ್ಟವರಿಗೂ ಮತ್ತು ಮರ ಕೊಟ್ಟವರಿಗೂ ಬಹುಮಾನವಾಗಿ ಅವರ 4 ದೊಡ್ಡ ಫೋಟೋಗಳನ್ನು ಕೊಡುವಂತೆ ಸರ್ವ ಸಮ್ಮತದಿಂದ ಒಪ್ಪಿ ತೀರ್ಮಾನಿಸಲಾಗಿದೆ. ಸದರಿ ಫೋಟೋಗಳ ಖರ್ಚು ಅಂದಾಜು 40 ರೂ. ಸಹ ಆಗಬೇಕು. ಮೇಲ್ಕಂಡ ಸಾಲಗಳ ತೀರ್ಮಾನಕ್ಕಾಗಿ ಡಿ. ಬೋರ್ಡು ಪ್ರೆಸಿಡೆಂಟರವರಿಗೆ ಅರ್ಜಿ ಬರಕೊಂಡೆವು. ಅರ್ಜಿ ಮೇರೆ ಶಾಲೆಗಳ ಸುಪರ್‌ವೈಜರವರು ಬಂದು ಕಟ್ಟಡವನ್ನು ನೋಡಿ ಹೋದನಂತರ ರೂ. 150 ಬೋರ್ಡಿನಿಂದ ಮಂಜೂರಾಗಿದೆ; ಈ ರೂ. ತೊಂದಿಕೊಂಡು ಶಾಲೆಯನ್ನು ಬೋರ್ಡಿಗೆ ವೈಸಿ ಕೊಡುತ್ತೀರೋ' ಎಂತ ಶಾಲೆಗಳ ಸ. ಅ. ಇನ್ಸ್‌ಪೆಕ್ಟರವರಿಂದ ಹುಕುಂ ಬಂದ ಮೇರೆ ನಾವು ಒಪ್ಪಿಗೆ ಕೊಟ್ಟೆವು. ಇತ್ಯಲಾಗಿ ಈವಾಗ ಹಣ ಸಿಕ್ಕುವುದಿಲ್ಲ, ಶಾಲೆಯನ್ನು ಗ್ರ್ಯಾಂಟು ಶಾಲೆಯಾಗಿ ಮಾಡಿದ್ದೇವೆ. ಹಣಕ್ಕೆ ಮುಂದೆ ಆಲೋಚನೆ ಮಾಡುತ್ತೇವೆ ವಗ್ಯೆರೆ ಹುಕುಂ ಬಂದಿರುತ್ತೆ!

ಈ ನಮ್ಮ ಬಡ ಗ್ರಾಮ ಹುಟ್ಟಿದ ಲಾಗಾಯಿತು ನಾವು ಕೊಡುವ ಡಿಸ್ಟ್ರಿಕ್ಟ್ ಫಂಡ್ ಸೆಸ್ಸಿನಲ್ಲಿ 1 ಪೈ ಸಹ ನಮಗೆ ಮೊನ್ನೆ ವರೆಗೆ ಯಾವ ಕಾರ್ಯಕ್ಕೂ ದೊರೆತಿರುವುದಿಲ್ಲ.

ನಮ್ಮ ಕಾಡು ಊರಾದ ಲಾಗಾಯಿತು ಈ ವರೆಗೆ ಶಾಲೆ ಇಲ್ಲದೆ ಇದ್ದದನ್ನು ಸರ್ಕಾರದವರು ಗಣನೆಗೆ ತೆಗೆದುಕೊಂಡು ಯೋಚನೆ ಮಾಡಿದರೆ ಇಲ್ಲಿಯಣ ಜನರ ಅನುಕೂಲಯೂ ಹೇಗಿರಬಹುದೆಂತ ಚೆನ್ನಾಗಿ ವೇದ್ಯವಾದೀತು.

ಈವಾಗ ಐನೋರ ಗರೀಬ ರೈತರು ಒಗ್ಗಟ್ಟಿನಿಂದ ಎಲ್ಲೋ ಚಂದ ಎತ್ತಿ ಹೇಗೇಗೋ ಸಾಲ ಮಾಡಿ ಶಾಲೆ ಕಟ್ಟಿದ್ದಾಗಿದೆ. ಘನ ಸರ್ಕಾರದವರು ಬಡ ರೈತರ ಮೇರೆ ಕರುಣೆ ಇಟ್ಟು ಸದ್ಯ ನಾವು ಸಾಲ ಮಾಡಿಕೊಂಡ 288—12—0 ರೂ. ಗಳನ್ನು ಬೋರ್ಡಿನಿಂದ ಈ ವರ್ಷವೇ ಕೊಡಿಸ್ಸಿ ಕೊಟ್ಟು ನಮಗಳನ್ನು ಉದ್ಧಾರ ಮಾಡಬೇಕಾಗಿಯೂ, ನಮ್ಮ ಬಡ ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ವಿದ್ಯ ಕಲಿಯಲು ಕುಂಟಾ ಸಹಾಯ ಮಾಡಬೇಕಾಗಿಯೂ, ಮತ್ತು ನಮ್ಮ ಶಾಲೆಯನ್ನು ಆದಷ್ಟು ಬೇಗನೆ ಬೋರ್ಡು ಶಾಲೆಯಾಗಿ ಮಾಡಿಸಿಕೊಡಬೇಕಾಗಿ ಸಹ ಬೇಡುತ್ತೇವೆ.

ಅಪಾರಂಡ ಗಣಪತಿ.
(ಪ್ರೆಸಿಡೆಂಟ್.)

ಜನರಲ್ ಅಷ್ಯೂರೆನ್ಸ್ ಸೊಸೈಟಿ.

ಅ ಜ ಮೀ ರ್.

ನಮ್ಮ ಆಯವ್ಯಯದ ಪಟ್ಟಿಯೇ ನಮ್ಮ ಅಭಿವೃದ್ಧಿಯನ್ನು ವ್ಯಕ್ತಗೊಳಿಸುತ್ತದೆ.

ವರ್ಷ	ಮೇಲ್ಪಟ್ಟ ವರ್ಷಾದಾಯ	ಮೇಲ್ಪಟ್ಟ ಮೂಲಧನ	ಖರ್ಚು ಪರವಾನದ ಶೇಕಡ
1911	46,248	49,442	82.9
1921	2,92,627	6,53,350	43 2
1931	12,50,000	40,00 000	28.2

ಬೋ ನ ಸ್ಸ್ .

ಕುರ್ಚು ನಫೆ ದೊರಕುವ ಜೀವಾವಧಿ ಪಾಲಿಸಿಗಳ ಮೇಲೆ ವರ್ಷ ಒಂದಕ್ಕೆ ಶೇಕಡ 22½

ಚೆನ್ನಾಗಿ ಕೆಲಸಮಾಡಿ ಅಭಿವೃದ್ಧಿ ಸ್ಥಿತಿಯಲ್ಲಿ[illegible] ಸೊಸೈಟಿಯಲ್ಲಿ ವಿಮೆ ಮಾಡಿ ಕಾವೆ. ಪ್ರೀಮಿಯಂ ಪಾವತಿ ಮಾಡುವ ಸೌಲಭ್ಯ ಹೊಂದಿ ಅಥವಾ ಈ ಕಂಪೆನಿ[illegible] ವಾಗಿ ಕೆಲಸಮಾಡಿ ಉತ್ತಮ ಕಮಿಶನ್ ದಿಂದ ಪ್ರಯೋಜನ ಹೊಂದಿ.

ಹೆಚ್ಚು ವಿವರಗಳಿಗೆ ಈ ವಿಳಾಸಕ್ಕೆ ಬರೆಯಿರಿ:—

ವಿ. ರಾಮಚಂದ್ರರಾವ್,
ಸ. ಸೂಪರಿಂಟೆಂಡೆಂಟ್,
52—12 ಪಿಂಟೋ ರಸ್ತೆ, ಬೆ.
ಬೆಂಗಳೂರು.

Empire of India Life Assurance Company, Ltd.

Established 1897.

The New "FAMILY SECURITY" Policy issued by this Company provides·

A. In the event of death during an agreed period,

1. The immediate payment to the Widow, Son or legal representative of a part of the sum Assured together with the Bonus accrued.

2. The payment of a guaranteed Yearly Income, payable by monthly instalments, during the balance of the period.

3. The payment of the balance of the sum of assured at the end of the period·

OR

B In the event of death after the period has expired the payment of the sum assured together with any Bonus that has accrued.

Descriptive Pamphlet on application to—

Head Office:— EMPIRE OF INDIA LIFE BUILDING Bombay.

Branch Office:— 152, COMMERCIAL STREET, Bangalore.

52—41

26—3

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

1. ಉತ್ತಮ ತರಹ ಒಂದು ಸೆಟ್ ಜರ್ಮನ್ ರೀಡ್ಸ್ ಹಾಕಿರುವ ಸಿಂಗಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 20—0—0
   " ಮತ್ತು 22—8—0
2. ಡಿಟೋ ಉತ್ತಮ ತರಹ ಹಾರ್ಮೋನಿಯಂ " 1ಕ್ಕೆ ರೂ. 25—0—0
   " ಮತ್ತು 27—8—0
3. ಡಿಟೋ ಉತ್ತಮ ತರಹದ್ದು, ದೂಳು ಬೀಳದಂತೆ ಕೇಸಿನ ಮೇಲೆ ಪೂರ್ತಿ ಮುಚ್ಚಳವುಳ್ಳ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ ರೂ. 27—8—0
4. ಶಾಶ್ವತಿಯೂ, ಬಂದೋಬಸ್ತೂ, ಸುಸ್ವರವುಳ್ಳದ್ದೂ, ಅನೇಕ ವರ್ಷಗಳ ವರೆಗೆ ಬಾಳಿಕೆ ಬರತಕ್ಕದ್ದೂ ಆದ ಹೊಸದಾಗಿ ಸೃಷ್ಟಿ ಆಗಿರುವ ಫ್ರೆಂಚ್ ರೀಡ್ಸ್ ನಮೂನೆ ಇರುವ ನಮ್ಮ ಹೆಸರಿನ ರೀಡ್ಸ್ ಹಾಕಿರುವ "ಸಿದ್ದಪ್ಪಾಸ್ ಫ್ಲೂಟ್" ಸಿಂಗಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 42—8—0
5. ಉತ್ತಮ ತರಹ 2 ಸೆಟ್ ಜರ್ಮನ್ ರೀಡ್ಸ್ ಹಾಕಿರುವ, ದೂಳು ಬೀಳದಂತೆ ಕೇಸಿನ ಮೇಲೆ ಪೂರ್ತಿ ಮುಚ್ಚಳವುಳ್ಳ ಡಬ್ಬಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ ರೂ. 32—8—
   ಉತ್ತಮ ತರಹ 2 ಸೆಟ್ ಜರ್ಮನ್ ಮೇಕ್ ರೀಡ್ಸ್ ಹಾಕಿರುವ, ಕೈನಿಂದಾಗಲೀ ಅಥವಾ ಕಾಲಿನಿಂದಾಗಲೀ ಬಾರಿಸಲು ಅನುಕೂಲಿಸುವಂತೆ ತಯಾರಿಸಿರುವ "ಸ್ಪೆಷಲ್ ಫ್ಲೂಟ್" ಡಬ್ಬಲ್ ರೀಡ್ಸ್ ಹ್ಯಾಂಡ್ ಲೆಗ್ ಹಾರ್ಮೋನಿಯಂ 1ಕ್ಕೆ ರೂ. 78—8—

ನಮ್ಮ ಟಿಂಬರ್ ಡಿಪೋನಲ್ಲಿ ಕಟ್ಟಡಗಳಿಗೂ, ಫರ್ನಿಚರ್ ತಯಾರಿಸಲೂ ಬೇಕಾದ ಎಲ್ಲಾ ನಮೋನೆ ನಾಟಾಗಳನ್ನು ಸುಲಭ ದರದಿಂದ ವಿಕರಿಸುತ್ತಿರುವುದಲ್ಲದೇ, ಗಿರಾಕಿಗಳು ಅಪೇಕ್ಷಿಸುವ ಸೈಜಿಗೆ ಕುಯಿಸಿಯೂ ರಿಯಾಯಿತಿ ದರದಿಂದ ಸಪ್ಲೈ ಮಾಡುತ್ತೇವೆ. ಹೆಚ್ಚಿಗೆ ವಿಷಯಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಳಾಸ—ಯಂ. ಎಸ್. ಶಿದ್ದಪ್ಪ ಬ್ರದರ್ಸ್,
ಹಾರ್ಮೋನಿಯಂ ಮತ್ತು ಚಾಬೀನ ವ್ಯಾಪಾರಿಗಳು
ವಾಣೀವಿಲಾಸ ಮಾರ್ಕೆಟ್, ಮೈಸೂರು.
52—3

ಬಂದೆ.

೧.

ಮೇದಿನಿಯ ಮೇಲಿಂದು ಬಂದೆ ನೀ ಕಳುಹೆ
ಸಾಧುಗಳನರಸುತ್ತ ಹೋಗೆಂದು ತಿಳುಹೆ
ವೇದಗಳ ವಿಶದವ ನೀನೆಂಬುದರಿಯೆ
ವಾದಿಗಳ ವಾದದೊಳು ಹುಡುಕುತ್ತ ಕರೆಯೆ.

೨.

ಮನದ ಬಯಕೆಗಳನ್ನ ನಿನ್ನೆದೆಗೆ ತಂದು
ನನಿಯದೊಳ್ ಕಣ್ತೆರೆದು ನಿಂತು ನೋಡೆಂದು
ಮನದ ಬಯಕೆಗಳೆಲ್ಲ ನಿನಗೆ ನೈವೇದ್ಯ
ನಿನಗಿತ್ತ ಮನವನ್ನ ನಿನಗೆಲ್ಲ ವೇದ್ಯ.

೩.

ಎಲ್ಲಿ ಹೋಗುವೆ ತಂದೆ ನೀನೆನ್ನ ಬಿಟ್ಟು
ಅಲ್ಲಿ ಬರುವೆನು ನಾನು ನೋಡು ಕಣ್ಣಿಟ್ಟು
ನಾನೆಲ್ಲಿ ಚರಿಸಿದರೆ ನೀ ಒಂದು ಕರೆವೆ
ನೀನೆಲ್ಲಿ ನಲಿಯುತಿರೆ ಅಲ್ಲಿರಲು ಬರುವೆ.

ಅನಂತ.

ಗಾಂಧಿಜಿಯನ್ನು ದೂಷಿಸಿದ್ದು ಸರಿಯಲ್ಲ.

ಅತಿಥಿಗಳು ಹೊರಟು ಹೋದರು.

ಲಂಡನಿನಲ್ಲಿ ವರ್ಷೇ ವರ್ಷೇ 'ಬೊಂಬಾಯಿ ಡಿನ್ನರ್' ಎಂಬ ಔತಣ ನಡೆಯುತ್ತಿದೆ. ಅದರಲ್ಲಿ ಭಾಗ ವಹಿಸುವರು ಹಿಂದೆ ಇದ್ದ ಅಥವ ಈಗ ಇರುವ 'ಇಂಡಿಯನ್ ಸಿವಿಲ್ ಸರ್ವಿಸ್' ಅಧಿಕಾರಿಗಳು ಮತ್ತು ಬೊಂಬಾಯಿಯ ವರ್ತಕರು.

ಈ ವರ್ಷದ ಔತಣವು ಈಗ್ಗೆ ಕೆಲವು ದಿನಗಳ ಹಿಂದೆ ನಡೆಯಿತು. ಬಹು ಮಂದಿ ಅತಿಥಿಗಳು ನೆರೆದಿದ್ದರು. ಅವರ ಪೈಕಿ ಹಿಂದೆ ಬೊಂಬಾಯಿ ಗವರ್ನರುಗಳಾಗಿದ್ದ ಲಾರ್ಡ್ ಲಾಯಿಡ್, ಲಾರ್ಡ್ ಲ್ಯಾಮಿಂಗ್‌ಟನ್, ಸರ್ ಎರ್ನೆಸ್ಟ್ ಹಾಟ್ಸನ್ನಾರವರೂ, ಸರ್ ಚಾರ್ಲಿಸ್ ಟಿಗಾರ್ಟ್‌ರವರೂ ಬಂದಿದ್ದರು.

ಈ ವರ್ಷ ಆ ಸಭೆಗೆ ಸರ್ ಹೆನ್ರಿ ಲಾರೆನ್ಸ್‌ರವರು ಅಧ್ಯಕ್ಷರು. ಇವರು ೧೯೨೬ರಲ್ಲಿ ಬೊಂಬಾಯಿಯ ಹಂಗಾಮಿ ಗವರ್ನರಾಗಿದ್ದರು.

ಔತಣ ಕಾಲದಲ್ಲಿ ಭಾಷಣ ಮಾಡುವದು ವಾಡಿಕೆ. ಇದೇ ರೀತಿ ಸರ್ ಹೆನ್ರಿ ಲಾರೆನ್ಸರವರು ಭಾಷಣ ಮಾಡಿದರು. ಭಾಷಣ ಮಾಡುತ್ತಾ ' ಈ ವರ್ಷ ಮೇ ತಿಂಗಳಲ್ಲಿ ಬೊಂಬಾಯಿಯಲ್ಲಿ ಹಿಂದೂ ಮುಸ್ಲಿಂ ಗಲಭೆಗಳಾದವಲ್ಲ, ಅದಕ್ಕೆ ಗಾಂಧಿಜೀವರೇ ಪ್ರಧಾನ ಕಾರಣಭೂತರು. ಗಾಂಧಿಯವರೂ ಅವರ ಅನುಯಾಯಿಗಳೂ ಕೋಮುವಾರು ದ್ವೇಷವನ್ನು ಹೆಚ್ಚಿಸಿ ಸಮಾಜದ ಕಳಹದಿಯನ್ನೇ ಉಡಾಯಿಸಿಬಿಟ್ಟಿದ್ದಾರೆ ....' ಎಂಬುದಾಗಿ ಏನೇನೋ ಹೇಳುತ್ತಾ ಗಾಂಧಿಜೀಯವರನ್ನು ಬಹಳ ಉದ್ರೇಕದಿಂದ ದೂಷಿಸುತ್ತಾ ತಪ್ಪನ್ನು ಗಾಂಧಿಯವರ ಮೇಲೆ ಹೊರಿಸಲು ಹೊರಟರು.

ಅದು ಇಬ್ಬರು ಅತಿಥಿಗಳಿಗೆ ಸರಿಹೋಗಲಿಲ್ಲ. ಬೊಂಬಾಯಿಯ ಸುಪ್ರಸಿದ್ಧ ವರ್ತಕರಾದ ಮಿ॥ ಇ. ಯಫ್. ಆಡಮ್ಸ್ (ಅಲ್ಲಮ್?)ರವರು ಎದ್ದು ನಿಂತು ಅವರ ಭಾಷಣ ಮಧ್ಯದಲ್ಲಿ ತಲೆ ಹಾಕಿ ನಿಲ್ಲಿಸಿ 'ಸ್ವಾಮಿ, ಅಧ್ಯಕ್ಷರೆ, ನಾನು ಈ ಕೂಟವನ್ನು ಒಂದು ಸಾಮಾಜಿಕ ಸಂಬಂಧವಾದ ಸಂತೋಷ ಕೂಟವೆಂದಿದ್ದೆ, ನಿಮ್ಮ ಭಾಷಣವು ಕೇವಲ ರಾಜಕೀಯವಾಗಿದೆ' ಎನ್ನುತ್ತಾ ತೆರಳಿ ಹೋದರು.

ಒಂದು ನಿಮಿಷವಾಗಿರಬಹುದು. ಬೊಂಬಾಯಿಯ ಪ್ರಸಿದ್ಧ ಆಂಗ್ಲೇಯ ಪತ್ರಿಕೆಯಾದ 'ಟೈಮ್ಸ್ ಆಫ್ ಇಂಡಿಯಾ'ದ ಮಾಜಿ ಸಂಪಾದಕರಾಗಿದ್ದ ಸರ್ ಸ್ಟ್ಯಾನ್ಲಿ ರೀಡ್‌ರವರೂ ಆ ಭಾಷಣವನ್ನು ಖಂಡಿಸಲು ಎದ್ದು ಔತಣ ಶಾಲೆಯಿಂದ ಹೊರಟೇ ಹೋದರು.

ಇದೀಗ ಕನ್‌ಸರ್ವೇಟಿವ್ ಪಕ್ಷದವರ ನೀತಿ! ಸಮಯ ಸಿಕ್ಕಿದಾಗಲೆಲ್ಲ—ಶಾಲಾಶಾಲಾ ವ್ಯಾಖ್ಯಾನಗಳಲ್ಲೆಲ್ಲಾ ಸದಾ—ಗಾಂಧಿಜಿಯವರನ್ನೂ, ಅವರ ಅನುಯಾಯಿಗಳನ್ನೂ ದೂಷಿಸುವುದು! ಅವರಲ್ಲೂ ಕೆಲವರಿಗೆ ಸರಿಬೀಳದು ಈ ತೆರನಾದ ರೀತಿ.

'ಪ್ರಜಾ ಮತ'

ಕರದಿ ಕಯಸೆ.

ತಿರುವಾಂಕೂರು ಸಂಸ್ಥಾನದಲ್ಲಿ ಕಾರುಣಾಗಪಳ್ಳಿ ಎಂಬದೊಂದು ಗ್ರಾಮ. ಬದಿಯಲ್ಲಿಯೇ ಸಮುದ್ರ. ಇಲ್ಲಿ ಹದಿನಾರು ವರ್ಷದ ಯೋಗಿಯೋರ್ವನು ಟಿಕ್ಕಲೆಯಾಗಿ ನೀರಿನ ಮೇಲೆ ಮಲಗಿಕೊಂಡಿದ್ದನಂತೆ! ಬಹು ಜನರು ಆ ಯೋಗಿಯನ್ನು ನೀರಿನಿಂದ ಹೊರಕ್ಕೆ ತೆಗೆಯಬೇಕೆಂದು ಎಷ್ಟು ಯತ್ನಮಾಡಿದರೂ ಉಪಯೋಗವಾಗಲಿಲ್ಲ. ಕಳೆದ ತಿಂಗಳ ತಾರೀಕು 24 ನೇ ದಿವಸ ಸಮುದ್ರದಲ್ಲಿ ನಾವೆಯನ್ನು ನಡೆಸುತ್ತಿದ್ದ ನಾವಾಡಿಗರು ಅಕಸ್ಮಾತ್ ಈ ನಾಗರ ಹಾಯಿಯನ್ನು ಕಂಡು ಅವನನ್ನೆತ್ತಿ ತಮ್ಮ ನಾವೆಯಲ್ಲಿರಿಸಿಕೊಂಡು ದಂಡೆಗೆ ತಂದರಂತೆ. ದಂಡೆಗೆ ಬರುತ್ತಲೇ ನನ್ನ ಕರದಿ ಕಯನನು ಚೆನ್ನಾಗಿ ಮಾತಾಡಿದನಂತೆ! ಕೊಟ್ಟ ಫಲಾಹಾರವನ್ನು ಸೇವಿಸಿದನಂತೆ!! ಬಹು ಜನರು ಬಂದು ಈ ಆಶ್ಚರ್ಯವನ್ನು ನೋಡಿ ಹೋದರು. ಕೊನೆಗೆ ಅಧಿಕಾರಿಗಳು ಇವನನ್ನು ಮೋಟಾರಿನಲ್ಲಿ ಕುಳ್ಳಿರಿಸಿಕೊಂಡು … ಎಂಬ ಆತನ ಜನ್ಮ ಸ್ಥಳಕ್ಕೆ ಕರೆದುಕೊಂಡು ಹೋ… ಬಂದರಂತೆ. ಹಿಂದಕೊಬ್ಬ ಯೋಗಿಯು ಇದೇ ಊರಿನ ಹತ್ತಿರ ಹೀಗೆಯೇ ನೀರಿನ ಮೇಲೆ ಮಲಗಿಕೊಂಡಿರುತ್ತಿದ್ದನಂತೆ.

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಸ್ಟೀಮ್ ರೋಲರ್.

ಅಯ್ಯಾ,

ರಸ್ತೆ ರಿಪೇರಿ ಮಾಡುತ್ತಲಿರುವ ಸ್ಟೀಮ್ ರೋಲರು ಇರುವ ಸ್ಥಳದಲ್ಲಿ ಹಗಲು ಅದರ ಹಿಂದು ಮುಂದುಗಡೆ ಸುಮಾರು 1 ಫರ್ಲಾಂಗು ದೂರದಲ್ಲಿ ಅಪಾಯ ಸೂಚಿಸಲು ಒಂದೊಂದು ಕೆಂಪು ಬಾವುಟವನ್ನೂ, ಡೇಂಜರ್ ಬೋರ್ಡ್‌ನ್ನೂ ಇರಿಸಿ ವಾಹನಗಳಲ್ಲಿ ತಿರುಗುವವರನ್ನು ಎಚ್ಚರಿಸುತ್ತಿರುವರು. ಆದರೆ ಅದೇ ರೋಲರನ್ನು ರಾತ್ರಿ ಒಂದು ದೀಪವನ್ನೂ ಸಹ ಇಡದೆ ರಸ್ತೆ ಬದಿಯಲ್ಲಿ ಬಿಡುವರು. ಅಲ್ಲದೆ ಇದಕ್ಕೆ 8—10 ಮಾರು ದೂರದಲ್ಲಿ ರಸ್ತೆಯನ್ನು ಉಳುತ್ತಿರುವ ಚಿಕ್ಕ ಯಂತ್ರವನ್ನೂ ಇನ್ನೊಂದು ಸ್ಥಳದಲ್ಲಿ ಬಿಡುವರು. ಅನೇಕ ಸಲ ಈ ಯಂತ್ರದ ಕಬ್ಬಿಣದ ತಂತಿ ಹಗ್ಗವು ರಸ್ತೆಗೆ ಅಡ್ಡವಾಗಿ ಸುರುಳಿ ಸುತ್ತಿಬಿದ್ದಿರುತ್ತದೆ. ತಾ. 26—6—32ನೇ ಆದಿತ್ಯವಾರ ದಿನ ರಾತ್ರಿ ಒಬ್ಬ ಪ್ರಯಾಣಿಕನು ಈ ಹಗ್ಗಕ್ಕೆ ತಡವರಿಸಿ ಬಿದ್ದು ಕೈಕಾಲುಗಳಲ್ಲಿ ಗಾಯಗೊಂಡಿರುವನು.

ಇಲಾಖಾ ಅಧಿಕಾರಿಗಳು ಒಡನೆ ರೋಲರನ್ನು ನಿಲ್ಲಿಸುವ ಕಡೆಯಲ್ಲಿ ಸದ್ಯಕ್ಕೆ ಒಂದು ಮೇಣದ ಬತ್ತಿಯ ಬೆಳಕನ್ನಾದರೂ ಇಡಿಸುವಂತೆ ಕೋರುವ.

ಅಮ್ಮತ್ತಿ. ಐ. ಪಿ. ಮಾದಪ್ಪ.

ತಾ. 26—6—32ರ ಗೋಣಿಕೊಪ್ಪಲು ಮೀಟಿಂಗು.

ಅಯ್ಯಾ,

ಮೇಲ್ಕಂಡ ಮೀಟಿಂಗಿನ ಠರಾವುಗಳು ಜುಲೈ ತಾ 1ನೇ 'ಕೊಡಗು' ಪತ್ರಿಕೆಯಲ್ಲಿ ಪ್ರಕಟವಾದವು. ಈ ಠರಾವುಗಳು ಕೊಡಗಿನ ಮುಂದಿನ ಮಾರ್ಪಾಟುಗಳ ವಿಷಯ ವಾಗಿರುವದಾಗಿದೆ. ಆದರೆ ಗೋಣಿಕೊಪ್ಪಲು ಅಮಲ್ಗಮೇಶನ್ ಮೀಟಿಂಗು ಎಂಬದಾಗಿ ಪ್ರಕಟಿಸಿರುವದು ತಪ್ಪು. ಅಮಲ್ಗಮೇಶನ್ ಪ್ರಶ್ನೆಯು ಈ ಮೀಟಿಂಗಿನಲ್ಲಿ ಚರ್ಚಿಸಲ್ಪಟ್ಟಿರುವುದಿಲ್ಲ. ಮುಂದಕ್ಕೆ ಕೊಡಗಿಗೆ ಯಾವ ತರದ ಮಾರ್ಪಾಟುಗಳು ಬೇಕೆಂಬುದಕ್ಕೆ ದೇಶದವರ ಅಭಿಪ್ರಾಯವನ್ನು ಈ ಮೀಟಿಂಗಿನಲ್ಲಿ ಹೊರಪಡಿಸಿದ್ದಾಗಿದೆ. ಅಮಲ್ಗಮೇಶನ್ ಪ್ರಶ್ನೆಯನ್ನು ಚರ್ಚಿಸಿದ್ದರೆ ದೇಶದವರ ಅಭಿಪ್ರಾಯವು ಬೇರೆಯಾಗಬಹುದಿತ್ತು.

ಆದ್ದರಿಂದ ಪ್ರಚುರಪಡಿಸಿದವರು ದಯವಿಟ್ಟು ಅಮಲ್ಗಮೇಶನ್ ಮೀಟಿಂಗು ಎಂಬದರ ಬದಲು, ಮುಂದಿನ ಮಾರ್ಪಾಟುಗಳ ಮೀಟಿಂಗು ಎಂಬದಾಗಿ ತಿದ್ದುಪಡಿ ಮಾಡಬೇಕಾಗಿ ಕೋರಿಕೆ.

ಸಿ. ಯಂ. ಪೂಣಚ್ಚ.

ಅಂಗರೆ ಕಜ್ಜಿ.

ಅಂಗರೆ ಕಜ್ಜಿ ಎಂಬ ಕಾಯಿಲೆಯು ಹೆಚ್ಚು ಕಮ್ಮಿ ದೇಶದ ಎಲ್ಲಾ ಭಾಗಗಳಲ್ಲಿಯೂ … ಹರಡಿ ಹೋಗಿ ಅನೇಕ ಮರಣಗಳೂ ಆಗಿ ಹೋದವು. ಆದರೆ … ಇದು ಅಂಗರೆ ಕಜ್ಜಿಯೇ ಅಥವಾ ಇನ್ಫ್ಲುಯೆನ್ಜಾ … ಹೊಸ ಸಮೂನೆಯ ಕಾಯಿಲೆಯಂತೆ ಇದು ಒಂದು ಹೊಸ ಸಮೂನೆಯ ಕಾಯಿಲೆಯೋ ಎಂದು ಸಂಶಯಪಡಬೇಕಾಗಿದೆ. ಅಂಗರೆ ಕಜ್ಜಿಯೇ ಎಂದರೂ ಈ ರೀತಿಯಾಗಿ ಇಷ್ಟು ಬೇಗನೆ ದೇಶದಲ್ಲೆಲ್ಲಾ ಹರಡಿದ್ದು ಕಂಡು ಕೇಳಿಲ್ಲವೆಂದ ಮೇಲೆ ಈ ಕಾಯಿಲೆಯ ವಿಷಯ ಸ್ವಲ್ಪ ಯೋಚಿಸಬೇಕಾಗಿದೆ.

ಶಾಲೆಗಳೆಲ್ಲಾ ಒಂದರ ಹಿಂದೆ ಒಂದಾಗಿ ಮುಚ್ಚುತ್ತಲಿದೆ. ಯಾವ ಕಡೆ ಕೇಳಿದರೂ ಇದರ ಪ್ರಭಾವವನ್ನೇ ಹೇಳುತ್ತಿರುವರು ಮತ್ತು ಇದು ಬಹು ಬೇಗನೆ ಹರಡುತ್ತಿರುವದು. ಆದ್ದರಿಂದ ವೈದ್ಯ ಇಲಾಖೆಯವರು ಒಡನೆ ಈ ಕಾಯಿಲೆಯು ನಿಜವಾಗಿಯೂ ಅಂಗರೆ ಕಜ್ಜಿಯೋ ಎಂಬದನ್ನು ಅಜಮಾಯಿಸುವದಲ್ಲದೆ ಇದು ಊರಿಂದ ಊರಿಗೆ ಹರಡದಂತೆ ತಕ್ಕ ಏರ್ಪಾಡುಗಳನ್ನು ಮಾಡುವಂತೆ ಆಯಾ ಸ್ಥಳದ ಡಾಕ್ಟರುಗಳಿಗೂ, ಸೇನಿಟರಿ ಇನ್ಸ್‌ಪೆಕ್ಟರುಗಳು ಏರ್ಪಾಡು ಮಾಡಬೇಕಾಗಿ ಸರ್ಕಾರವನ್ನು ಕೇಳಿಕೊಳ್ಳುವ.

'ಮಕ್ಕಳ ತಂದೆ'

… ಮುತ್ತಣ್ಣನವರು.

ಬಂಧುಗಳೇ,

" ಕಲಿಪಾರ್ಥನಂತೆ ಮಹಾವೀರನಾಗಿ |
ಕಲಿಕರ್ಣನಂತೆ ಮಹಾತ್ಯಾಗಿಯಾಗಿ ||
ಇಳೆಯೊಳ್ಮ ಜನಕ ಸನ್ನಿಭ ರಾಜಯೋಗಿ |
ನಲಿದೆ ಪ್ರತಾಪ ಕಂಠೀರವನಾಗಿ ॥ ೧ ॥

ವಿದ್ಯಾ ಸಾಗರನಂತೆ ವಿದ್ವಾಂಸನಾಗಿ |
ಬುದ್ಧ ಸಾಧುವಿನಂತೆ ಭೋಗವಿರಾಗಿ ||
ಇದ್ದುದೆಲ್ಲವ ದಾನಮಾಡುತ ನಡೆದೆ |
ಶುದ್ಧ ಹರಿಶ್ಚಂದ್ರನಂತೆ ರಾಜಿಸಿದೆ " ॥ ೨ ॥

ಮ. ರಾ. ಶ್ರೀ. ಪಾಂಡಂಡ ಮುತ್ತಣ್ಣನವರು ತಾ. 30 ನೇ ಗುರುವಾರ ಪರಲೋಕವನ್ನೈದಿದ ಸಂಗತಿ ನಿಮಗೆಲ್ಲರಿಗೂ ತಿಳಿದಿದೆಯಷ್ಟೆ.

ಈ ಮಹಾಪುರುಷರು 1884 ನೇ ಇಸವಿಯಲ್ಲಿ ಜನಿಸಿದವರಾಗಿದ್ದರು. ಕೇವಲ ಚಿಕ್ಕ ಪ್ರಾಯದವರೂ, ಇವರು ಕಾಲನ ಅಪ್ಪಣೆಗೆ ಒಳಗಾದದ್ದು ಪರಮ ಆಶ್ಚರ್ಯವೇ ಸರಿ. ಸಮಸ್ತ ಜನರಿಂದಲೂ ಸನ್ಮಾನಿಸಲ್ಪಟ್ಟವರಾಗಿಯೂ, ಪ್ರೀತಿಸಲ್ಪಟ್ಟವರಾಗಿಯೂ, ಇದ್ದು ಇಷ್ಟು ಬೇಗ ನಮ್ಮ ಮಧ್ಯದಿಂದ ಗಾಳಿಯಿಂದ ಒಂದು ದೀಪವು ನಂದಿಹೋಗುವ ಹಾಗೆ ಇವರು ಪಾರಾದರು.

' Whom the Gods love die young ' ಪರಮಾತ್ಮನಿಂದ ಪ್ರೀತಿಸಲ್ಪಟ್ಟವರು ಚಿಕ್ಕಂದಿನಲ್ಲಿ ಸಾಯುವರು ಎಂಬ ನಾಣ್ಣುಡಿಗೆ ಇವರ ಮರಣವು ಸರಿಯಾಯಿತು. ಇವರ ಸ್ವದೇಶಾಭಿಮಾನ, ಸ್ವಜನಾಭಿಮಾನ, ಸ್ವಧರ್ಮಾಭಿಮಾನ ಸ್ವತಂತ್ರ ಸಮವಾಗಿದ್ದುವು. ಇವುಗಳನ್ನು ಇವರು ಬರೆದಿರುವ ಶ್ರೇಷ್ಠವಾದ ಪುಸ್ತಕಗಳಿಂದ ನಾವು ಗುರ್ತು ಹಚ್ಚಬಹುದು. ಇತರ ಜನರಂತೆ ನಾನು, ನನ್ನದು ಎಂಬ ಅಹಂಕಾರ ಮಮಕಾರಗಳನ್ನು ತೋರಿಸದೆ ಇವರ ಹೃದಯವನ್ನು ಇಡೀ ಹಿಂದೂದೇಶಕ್ಕೆ ಅಲ್ಲ, ಇಡೀ ಪ್ರಪಂಚಕ್ಕೆ (?) ಎಂದರೆ—ಅತಿಶಯೋಕ್ತಿಯಾಗಲಾರದು—ಹರಡಿದರು. ಬಹುಜಗ್ಗದ ಸಡಿಲಿಸದ ತಮ್ಮ ಸಪ್ನಗಳನ್ನು ಹೋಗಲಾಡಿಸುವ ಬಗ್ಗೆ ಪ್ರತಿ ದಿನವೂ ಯೋಚಿಸುತ್ತಿದ್ದರು. ಹೆಚ್ಚು … ಬೇರೆ ಇಲ್ಲವೆಂಬ ಹಾಗೆ ನಾವು ಕೊಡಗಿನವರು ಇವರನ್ನು ಹೆಚ್ಚು ಸನ್ಮಾನಿಸಲಿಲ್ಲ. ಕೊಡಗಿನಲ್ಲಿ ಹೀಗೆ ಮಾಡುವುದು ಬಹಳ ಸಾಧಾರಣವಾದ ಸಂಗತಿಯಾಗಿದೆ. ಆದರೆ ಇವರು ಬರೆದ ಪುಸ್ತಕಗಳ ಹೊಗಳಿಕೆಯನ್ನು ನಾವು ಹಿಂದು ಪತ್ರಿಕೆಯಲ್ಲು, ಹಿಂದೂಸ್ಥಾನ ಟೈಂಸಿನಲ್ಲು ಓದಿ ಕೇಳಿದೆವು. ದೇವರು ಇವರನ್ನು ಇನ್ನು ಕೆಲವು ವರ್ಷಗಳ ತನಕ ಇಟ್ಟಿದ್ದರೆ ತಮಗೆ ಅಲ್ಲ ಇಡೀ ಕೊಡಗು ದೇಶಕ್ಕೇ ದೊಡ್ಡ ಹೆಸರನ್ನು ತರುತ್ತಿದ್ದರೆಂಬುದಕ್ಕೆ ಯಾವ ಅಡ್ಡಿಯೂ ಇರುತ್ತಿರಲಿಲ್ಲ.

ಕೊಡಗಿನಲ್ಲಿ ಅನೇಕ ಭಾಗವಿಭಾಗಗಳಾಗಿ ಒಂದನ್ನೊಂದನ್ನು ನುಂಗುವ ಸಂದರ್ಭದಲ್ಲಿ ಇದ್ದರೂ ಇವರು ಎಲ್ಲರಿಗೂ ಮಧ್ಯಸ್ಥರಾಗಿದ್ದುಕೊಂಡು ತಮ್ಮ ಬುದ್ಧಿ ಚಾತುರ್ಯಗಳನ್ನು ವಿನಿಯೋಗಿಸಿ ಒಕ್ಕಟ್ಟಿನಲ್ಲಿ ಬಲವಿದೆ ಎಂಬ … ದೆಗೆ ಸರಿಯಾಗಿ ವರ್ತಿಸುವಂತೆ ಮಾಡುತಿದ್ದರು. ಆದರೆ ಸ್ವಾರ್ಥಪರರಾದ ಕೆಲವು ಮುಖಂಡರು ಇವರ ಅಭಿಪ್ರಾಯಗಳಿಗೆ ಸಮ್ಮತವನ್ನು ಇಡುತ್ತಿರಲಿಲ್ಲ. ಆದರೂ ತನ್ನ ತನುಮನ ಧನಗಳನ್ನರ್ಪಿಸಿ ದೇಶದಲ್ಲಿ ಒಗ್ಗಟ್ಟನ್ನು ಸ್ಥಾಪಿಸಿ ಮತವೈಮನಸ್ಯವನ್ನು ದೂರ ಓಡಿಸಬೇಕೆಂದು ಪ್ರಯತ್ನಪಟ್ಟರು. ಸ್ವಾರ್ಥಪರರಾದ ಇವರಿಗೆ ಬೇರೆಯವರಂತೆ ವರ್ತಿಸಲು ಅಸಾಧ್ಯವಾಯಿತು. ಆದುದರಿಂದ ತಮ್ಮ ಶಕ್ತಿಯುಕ್ತಿಗಳನ್ನೂ, ಬುದ್ಧಿಕೌಶಲ್ಯಗಳನ್ನೂ ಜನರಿಗೆ ತೋರಿಸಿಕೊಟ್ಟರು. ಇವರಂತೆ ವಿದ್ಯೆ ಕಲಿತು ಇಷ್ಟು ಕೀರ್ತಿಯನ್ನು ಸಂಪಾದಿಸಿದವರು ಕೊಡಗಿನಲ್ಲಿ ಇಲ್ಲವೇ ಇಲ್ಲವೆಂದು ಹೇಳಬಹುದು. ಇವರ ಮರಣದಿಂದ ಒಬ್ಬ ಶ್ರೇಷ್ಠ ತರದ ವಿದ್ಯಾಪ್ರವೀಣರೊಬ್ಬರನ್ನು ಕಳೆದುಕೊಂಡೆವು.

ಬಡ ಮೊನಾರ್ಡು ಒಂದು ಕಣ್ಣನ್ನು ಕಳೆದುಕೊಂಡಿತು. ಆ ಕಮರ್ಷಿಯಲ್ ಸ್ಟೋರ್ ಎಲ್ಲಿ ! ಆ ಕೋ-ಆಪರೇಟ್ ಯೂನಿಯನ್ ಎಲ್ಲಿ ! ಅವರು ಬಿಷ್ಟು ಮುತುವರ್ಜಿಯ ಕೆಲಸ ಮಾಡುವುದು ಎಲ್ಲಿ ! ಆ ಕ್ಯಾಶ್ ಮುಹೂರ್ತವು ಎಲ್ಲಿ ! ಅಲ್ಲಿ ಇವರ ಓಡಾಟವು ಎಲ್ಲಿ ! ಆ ಭಾಷಾಜ್ಞಾನವು ಎಲ್ಲಿ ! ಆ ಕಾಲಾಕಟ್ಟಡವು ಎಲ್ಲಿ ! ಆ ! ದುರ್ಭಾಗ್ಯ ಸಂಘಗಳೇ ! ಎಲ್ಲವೂ ಮಾಯವಾಗುವುವು ! ಎಲ್ಲವೂ ನಿರ್ಜೀವಿಗಳಾಗುವುವು ! ಎಲ್ಲವೂ ಇವರ ಹಾಗೆ ಕಾಲನ ಅಪ್ಪಣೆಗೆ ಗುರಿಯಾಗುವುವು !

ಸಜ್ಜನರೇ ! ಅಂದು ನಿಮಗೆ ಲೋಕದ ವಿಚಾರವನ್ನು ಹೇಳಿಕೊಡುತ್ತಿದ್ದ ಆ ಮಹಾಪುರುಷರು ಎಲ್ಲಿ ! ಅಂದು ನಿಮಗೆ ಮಹಾತ್ಮ ಗಾಂಧಿಯ ತತ್ವವನ್ನು ಹೇಳಿಕೊಡುತಿದ್ದ ಪಂಡಿತರು ಎಲ್ಲಿ ! ಅಂದು ನಿಮ್ಮ ಕೋಲಾಹಲವನ್ನು ಮಾತ್ರದಲ್ಲಿ ಮುರಿದು ಒಮ್ಮನಸ್ಸನ್ನು ಬರಿಸುತಿದ್ದ ಆ ಮಹಾಧೀರನು ಎಲ್ಲಿ ! ಹಾ ! ಕಾಲನೇ ! ನೀನು ಕೊಂಡುಹೋದ ರತ್ನ ! ನಮಗೆ ಎಂದು ಸಿಕ್ಕುವನು !

ಎಂದೂ ಸಿಕ್ಕಲಿಲ್ಲ. ಎಂದೂ ಸಿಕ್ಕುವುದಿಲ್ಲ. ನಾವು ಇವರ ತತ್ವವನ್ನು ಅವಲಂಬಿಸಿ ಇವರು ತೋರಿಸಿಕೊಟ್ಟ ಹಾದಿಯನ್ನು ಹಿಡಿದು ಕಾರ್ಯಸಾಧನೆ ಮಾಡಿದರೆ ಸಾಕು. ಪರಮಾತ್ಮನು ಇವರ ಆತ್ಮಕ್ಕೆ ಶಾಂತಿಯನ್ನೀಯಲಿ.

ಶಾಂತಿ, ಶಾಂತಿ, ಶಾಂತಿ.

" ಓರ್ವ ಚಾರಿದ…

ವರ್ತಮಾನ ಸಂಗ್ರಹ.

ಒಳ ದೇಶ.

ಈ ವಾರ ಹೆಬ್ಬಾಲೆಯಲ್ಲಿ ಇಬ್ಬರಿಗೆ ಪ್ಲೇಗು ಅಂಟಿದೆಯೆಂದಾಗಿ ತಿಳಿದು ಬರುತ್ತದೆ.

ಕಮಿಷನರವರು ಬೆಂಗಳೂರಿನಿಂದ ತಾ. 10ರಲ್ಲಿ ಮಡಿಕೇರಿಗೆ ವಾಪಸು ಬಂದಿರುವರು.

ಮಡಿಕೇರಿಯಲ್ಲಿ ತಾ. 8ರಿಂದ ತಾರೀಕು 15ರ ವರೆಗೆ 21.19 ಇಂಚು ಮಳೆಯಾಗಿದೆ. ತಾ. 10ರಲ್ಲಿ 5.42 ಇಂಚು ಮಳೆ ಬಿತ್ತು.

ಶ್ರೀಯುತ ಪಿ. ಐ. ಬೆಳ್ಯಪ್ಪನವರು ಜೈಲಿನಿಂದ ಬಿಡುಗಡೆಯಾಗಿ ಬಂದು ಪುನಹ "ಕೊಡಗು" ಪತ್ರಿಕೆಯ ಸಂಪಾದಕತ್ವವನ್ನು ವಹಿಸಿಕೊಂಡಿರುವರು.

ಸಹಕಾರಿ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ತಾ. 30—7—32 ನೇ ಶನಿವಾರ ಬೆಳಿಗ್ಗೆ 11 ಗಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ನಡೆಯುವುದಾಗಿ ತಿಳಿಯಬರುತ್ತದೆ.

ವೀರಾಜಪೇಟೆ ಹುಡುಗಿಯರ ಶಾಲೆ ಮತ್ತು ಹುಡುಗರ ಪ್ರೈಮರಿ ಶಾಲೆ ಅಂಗರಿ ಕಜ್ಜಿಯ ದೆಸೆಯಿಂದಲು ಮತ್ತು ಮಳೆಗಾಲದ ರಜಕ್ಕಾಗಿಯೂ ಏಳು ವಾರಗಳವರೆಗೆ ಮುಚ್ಚಲ್ಪಟ್ಟಿವೆ.

ಕಳೆದ ಯಸ್. ಯಸ್. ಯಲ್. ಸಿ. ಪರೀಕ್ಷೆಯ ಫಲಿತಾಂಶವು ಈಗ ಪುನಹ ಎರಡನೆಯ ಲಿಸ್ಟಿನ ಮೂಲಕ ಹೊರಬಿದ್ದಿದೆ. ಇದರ ಪ್ರಕಾರ ಸೆಂಟ್ರಲ್ ಹೈಸ್ಕೂಲಿನಿಂದ ಮೆ. ಪಾಲೇಕಂಡ ಎ. ಗಣಪತಿಯವರೂ ಮತ್ತು ಹುಡುಗಿಯರ ಹೈಸ್ಕೂಲಿನಿಂದ ಶ್ರೀಮತಿಗಳಾದ ಕೊರವಂಡ ಯು. ಚಿಣ್ಣಮ್ಮನವರೂ ಮತ್ತು ಮೂಸೆಕ್ ಫಾತ್ಯಿಮ್ಮಯವರೂ ತೇರ್ಗಡೆ ಹೊಂದಿರುವರೆಂದು ತಿಳಿಸಲು ಸಂತೋಷ ಪಡುತ್ತೇವೆ.

ಇಂಡಿಯನ್ ಸಿವಿಲ್ ಸರ್ವಿಸಿನ ಉದ್ಯೋಗಕ್ಕಾಗಿ ಸ್ಪರ್ಧೆಯ ಪರೀಕ್ಷೆಯು ಬರುವ ಜನವರಿ 4 ರಲ್ಲಿ ಡೆಲ್ಲಿ ಮತ್ತು ರಂಗೂನಿನಲ್ಲಿ ನಡೆಯುವದೆಂದೂ, ಆ ಪರೀಕ್ಷೆಗೆ ಹೋಗಲು ಇಚ್ಛಿಸುವ ಕೊಡಗಿನ ಉಮೇದುವಾರರು ಆಗೋಸ್ಟು 1 ರೊಳಗೆ ಕಮಿಷನರವರ ಮೂಲಕ ಅಪ್ಲಿಕೇಶನ್ ಕಳುಹಿಸತಕ್ಕದೆಂದೂ ಗಜೆಟಿನಲ್ಲಿ ಪ್ರಕಟವಾಗಿದೆ. ಇದಕ್ಕೆ ಸಂಬಂಧಪಟ್ಟ ರೂಲ್ಸುಗಳ ಒಂದು ಪ್ರತಿಯು ನಮ್ಮ ಆಫೀಸಿನಲ್ಲಿದೆ.

ಮಡಿಕೇರಿ ಟೌನಿನಲ್ಲಿ ದನಗಳ ಕಾಯಿಲೆಯು ತಲೆದೋರಿ ಅನೇಕ ದನಕರುಗಳ ಮರಣವೂ ಆಗಿವೆ. ಚಿಕಿತ್ಸೆ ಮಾಡುತ್ತಾ ಇದ್ದಾರೆ. ಇದರ ಜೊತೆಗೆ ಕುದುರೆಗಳಿಗೆ "ಸರಾ" ಎಂಬ ಒಂದು ತರಹದ ಕಾಯಿಲೆಯೂ ಸಹ ಪ್ರಾರಂಭವಾಗಿದೆಯಂತೆ. ಈ ಕಾಯಿಲೆಯು ಅಂಟು ರೋಗವಾದುದರಿಂದ ಇದು ಮನುಷ್ಯರಿಗೂ ವ್ಯಾಪಿಸಿ ಮರಣವು ಸಂಭವಿಸಬಹುದಾದ್ದರಿಂದ ಅಂಥ ಜಾಡ್ಯ ಅಂಟಿದ ಕುದುರೆಯನ್ನು ತಕ್ಷಣವೇ ಗುಂಡು ಹೊಡೆದು ಕೊಲ್ಲಲು ಸಂಬಂಧಪಟ್ಟ ಇಲಾಖೆಯವರು ತಕ್ಕ ಏರ್ಪಾಡುಗಳನ್ನು ಮಾಡಿರುವರಂತೆ.

ತಾ. 12ರಲ್ಲಿ ಮಡಿಕೇರಿಯಲ್ಲಿ ನಡೆದ ಕೊಡವ ವಿದ್ಯಾಭಿವೃದ್ಧಿ ಫಂಡಿನ ಕಮಿಟಿ ಮೀಟಿಂಗಿನಲ್ಲಿ ಮೆ. ಗಳಾದ ಪಾಲೇಕಂಡ ಸಂಜಪ್ಪ, ಪಟ್ಟಮಾಡ ಅಪ್ಪಣ್ಣ, ಸೋಮಣ್ಣ ಮತ್ತು ಕೊಂಗಂಡ ಅಯ್ಯಪ್ಪನವರುಗಳಿಗೆ ಕಳೆದ ವರ್ಷ ಕೊಡುತ್ತಿದ್ದ 10 ರೂ.ಯ ಸ್ಕಾಲರ್‌ಶಿಪ್‌ಗಳನ್ನು ಮುಂದರಿಸುವಂತೆಯೂ, ಶ್ರೀಮತಿ ಚೇಂದಂಡ ಪೊನ್ನಮ್ಮ, ಮೆ. ಗಳಾದ ಚೇನಂಡ ಗಣಪತಿ, ಕೆಕ್ಕಡ ಗಣಪತಿ, ಕೋಟೆರ ಅಪ್ಪಣ್ಣ, ಮತ್ತು ಪುಲಿಯಂಡ ಮುತ್ತಪ್ಪನವರುಗಳಿಗೆ ಹೊಸ ಸ್ಕಾಲರ್‌ಶಿಪ್‌ಗಳನ್ನು ಕೊಡುವಂತೆಯೂ ತೀರ್ಮಾನಿಸಿ, ಮೆ. ಗಳಾದ ಕೂತಂಡ ಚಂಗಪ್ಪ ಮತ್ತು ಚೆರಮಂಡಂಡ ಗಣಪತಿಯವರುಗಳಿಗೆ ನೂರೈವತ್ತು ರೂಪಾಯಿಗಳ ಸಾಲ ಮಂಜೂರು ಮಾಡಿರುವರು.

ಮದ್ರಾಸಿನ 'ಯುನಿವರ್ಸಲ್ ಮ್ಯೂಚುವಲ್ ಏಯಿಡ್ ಅಂಡ್ ಪೂವರ್ ಹೌಸಸ್ ಎಸೋಸಿಯೇಶನ್' ಸಂಘವು ಲಿಕ್ವಿಡೇಶನಿಗೆ ಬಂದು, ಅದರ ವಿಷಯವು ಈ ತಾ. 29 ರಲ್ಲಿ ಮದ್ರಾಸು ಹೈಕೋರ್ಟಿನಲ್ಲಿ ವಿಚಾರ ನಡೆಯಲಿಕ್ಕಿರುವದರಿಂದ, ಆ ಸಂಘದಿಂದ ಪ್ರತ್ಯೇಕಿಸಲ್ಪಟ್ಟಿರುವ 'ದಿ ಕೂರ್ಗ್ ಮ್ಯೂಚುವಲ್ ಎಯಿಡ್ ಎಸೋಸಿಯೇಶನ್' ಸಂಘದ ಹಣಕ್ಕೂ ಮದ್ರಾಸಿನ ಸಂಘಕ್ಕೂ ಏನೊಂದೂ ಸಂಬಂಧವಿಲ್ಲವೆಂದು ವಾದಿಸಲು ಏರ್ಪಡಿಸುವ ಬಗ್ಗೆ ಕೊಡಗಿನ ಸಂಘದ ಪ್ರತಿನಿಧಿಯೊಬ್ಬನನ್ನು ಮದ್ರಾಸಿಗೆ ಕಳುಹಿಸುವ ವಿಷಯ ನಿಶ್ಚಯಿಸಲು ಸಬಗಿ ಸಂಘದ ಜನರಲ್ ಮೀಟಿಂಗೊಂದು ಈ ತಾ. 20 ರಲ್ಲಿ ಮಡಿಕೇರಿ ಫೆಡರೇಶನ್ ಆಫೀಸಿನಲ್ಲಿ ನಡಿಸಲ್ಪಡುವದೆಂದು ತಿಳಿಯಬರುತ್ತದೆ.

ಸತ್ಯಾಗ್ರಹ ಚಳವಳದಲ್ಲಿ ಭಾಗಿಗಳಾಗಿ ಆರಾರು ತಿಂಗಳು ಸಜೆಗೆ ಗುರಿಮಾಡಲ್ಪಟ್ಟಿದ್ದ ಈ ಕೆಳಗಿನ ಮಹನೀಯರು ಅವಧಿ ತೀರಿ ಜೈಲಿನಿಂದ ಬಿಡುಗಡೆ ಹೊಂದಿ ಕೊಡಗಿಗೆ ವಾಪಸು ಬಂದಿರುವರೆಂದು ತಿಳಿಯುತ್ತೇವೆ. ಈ ತಾ. 6 ರಲ್ಲಿ ಶ್ರೀಯುತರುಗಳಾದ ಹೆಚ್. ಬಿ. ತಮ್ಮಯ್ಯನವರು ತಿರುಚಿನಾಪಳ್ಳಿ ಜೈಲಿನಿಂದಲೂ, ಚೇಂದಂಡ ಚಂಗಪ್ಪನವರು ಕಣ್ಣನೂರು ಜೈಲಿನಿಂದಲೂ, ತಾ. 7 ರಲ್ಲಿ ಚೆಟ್ಟಿಕಾಳಂಡ ಅಪ್ಪಣ್ಣನವರು ಮತ್ತು ಚರಿಯಪಂಡ ಕುಶಾಲಪ್ಪನವರು ತಿರುಚಿನಾಪಳ್ಳಿ ಜೈಲಿನಿಂದಲೂ, ತಾ. 8 ರಲ್ಲಿ ಜಮ್ಮಡ ನಾಣಪ್ಪನವರು ವೆಲ್ಲೂರು ಜೈಲಿನಿಂದಲೂ, ಮತ್ತು ಹೆಚ್. ಆರ್. ಕೃಷ್ಣಯ್ಯನವರು ಕೊಯಮುತ್ತೂರು ಜೈಲಿನಿಂದಲೂ ಬಿಡುಗಡೆ ಮಾಡಲ್ಪಟ್ಟಿರುವರು.

ಹಿಂದೂ ದೇಶ.

ತಾ. 7 ರಲ್ಲಿ ಪ್ರೊಫೆಸರ್ ಕೃಪಾಲಾನಿಯವರು ಕಾಶಿಯಲ್ಲಿ ದಸ್ತಗಿರಿ ಮಾಡಲ್ಪಟ್ಟರು.

ತಾ. 12 ರಲ್ಲಿ ಬೊಂಬಾಯಿಯಲ್ಲಿ ರಾಷ್ಟ್ರೀಯ ಧ್ವಜಾಭಿವಂದನೆಯು ನಡೆದಾಗ ಐದು ಜನರು ದಸ್ತಗಿರಿ ಮಾಡಲ್ಪಟ್ಟರು.

ಅಹ್ಮದಾಬಾದಿನಲ್ಲಿ ಕಾಂಗ್ರೆಸಿನವರು ತಾ. 7 ರಲ್ಲಿ ರಾಷ್ಟ್ರೀಯ ಧ್ವಜಾಭಿವಂದನೆಯನ್ನು ಮಾಡಲು ಯತ್ನಿಸಿದಾಗ 10 ಜನರು ಸೆರೆಹಿಡಿಯಲ್ಪಟ್ಟರು.

ಬೊಂಬಾಯಿಯಲ್ಲಿ ನಾಲ್ಕು ದಿವಸಗಳು ಏನೊಂದು ಗಲಾಟೆಯಿಲ್ಲದೆ ದಾಟಿದರೂ ತಾ. 12 ರಲ್ಲಿ ಇಬ್ಬರು ಮುಸಲ್ಮಾನರು ಮನೆ ಮನೆ ಬಳಿ ಮಲಗುತ್ತಿದ್ದವರ ಮೇಲೆ ಕೆಲವು ಹಿಂದೂ ಪುಂಡರು ಬಿದ್ದು ಹೊಡೆದು ಘಾಯಮಾಡಿದರಂತೆ.

ಬೀರಾರಿನ ಕಾಂಗ್ರೆಸ್ ಮುಂದಾಳಾದ ಮತ್ತು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಒಬ್ಬ ಮೆಂಬರಾದ ಶ್ರೀಯುತ ಅಣೆಯವರು 6 ತಿಂಗಳು ಜೈಲು ವಾಸವನ್ನು ಮುಗಿಸಿ ಈ ತಾ. 12 ರಲ್ಲಿ ನಾಗಪುರ ಸೆಂಟ್ರಲ್ ಜೈಲಿನಿಂದ ಬಿಡುಗಡೆ ಹೊಂದಿದರು.

ಲಿಬರಲ್ ಪಕ್ಷದ ಮುಂದಾಳಾದ ಸರ್ ತೇಜ್‌ಬಹದ್ದೂರು ಸಪ್ರುರವರೂ, ಮೆ. ಜಯಕರ್‌ರವರೂ ಮತ್ತು ಲೇಬರ್ ಪಕ್ಷದ ಮೆ. ಜೋಶಿಯವರೂ ದುಂಡು ಮೇಜು ಪರಿಷತ್ತಿನ ಕಾರ್ಯಕಾರಿ ಮಂಡಳಿಯ ಮೆಂಬರುತನಕ್ಕೆ ರಾಜಿನಾಮೆ ಕೊಟ್ಟಿರುವರು.

ಮೊದಲು ಪ್ರಕಟಿಸಿದಂತೆ ಯಫ್. ಯಲ್. ಮತ್ತು ಬಿ. ಯಲ್. ಪರೀಕ್ಷೆಗಳು ಅಕ್ಟೋಬರ್ ತಾ. 3ರಲ್ಲಿ ನಡಿಯುವುದಿಲ್ಲವಾಗಿಯೂ, ಅದೇ ಪರೀಕ್ಷೆಯು ಸೆಪ್ಟಂಬರ್ ತಾ. 25 ರಿಂದ ಪ್ರಾರಂಭವಾಗುವುದಾಗಿಯೂ ಮದ್ರಾಸ್ ಯುನಿವರ್ಸಿಟಿಯ ರಿಜಿಸ್ಟ್ರಾರರು ಪ್ರಕಟಿಸಿರುತ್ತಾರೆ.

ಮದ್ರಾಸಿನ ಸಿಟಿ ಕಾಂಗ್ರೆಸ್ ಕಮಿಟಿಯ 15ನೇ ಡಿಕ್ಟೇಟರಾದ ಮೆ. ಶಿವಕೋಟಿ ರೆಡ್ಡಿಯವರ ವಿಚಾರಣೆಯು ನಡೆದು ಒಂದು ವರ್ಷ ಕಠಿಣ ಸಜೆಗೂ, 500 ರೂ. ದಂಡಕ್ಕೂ, ತಪ್ಪಿದರೆ ಪುನಹ 6 ತಿಂಗಳು ಹೆಚ್ಚಿನ ಕಾರಾಗೃಹವಾಸಕ್ಕೂ ಅವರು ಗುರಿಮಾಡಲ್ಪಟ್ಟಿರುವರು. ಅವರು 'ಎ' ಕ್ಲಾಸಿನಲ್ಲಿಡಲ್ಪಟ್ಟಿರುವರು.

ಸರ್ ಸ್ಯಾಮುವೆಲ್ ಹೋರ್‌ರವರ ಹೇಳಿಕೆಯ ನಂತರ ಇಂಡಿಯಾದವರು ಒಗ್ಗಟ್ಟಾಗಿ ಹೇಗೆ ವರ್ತಿಸಬೇಕೆಂಬದನ್ನು ನಿಶ್ಚಯಿಸಲು ಇಂಡಿಯನ್ ಲಿಬರಲ್ ಫೆಡರೇಶನಿನವರು ಸರ್ವ ಪಕ್ಷೀಯ ಕಾನ್‌ಫರೆನ್ಸೊಂದನ್ನು ಏರ್ಪಡಿಸುವದು ಉತ್ತಮವೆಂದು ಅಲ್ಲಹಾಬಾದಿನ ಕೆಲವು ಲಿಬರಲ್ ಮುಖ್ಯಸ್ಥರು ಸೂಚಿಸಿರುವರು.

ಉದಯಪುರ ಸಂಸ್ಥಾನದ ದರ್ಬಾರಿನವರು ಹೆಚ್ಚಿನ ಕಂದಾಯ ಹಾಕಿದನ್ನು ರದ್ದು ಮಾಡಬೇಕೆಂದು ಸುಮಾರು 500 ಜನ ಪ್ರಜೆಗಳು ಅರಮನೆಗೆ ಹೋಗಿ ರಾಜರನ್ನು ಕಾಣಲು ಯತ್ನಿಸಿದಾಗ ಜನರಿಗೂ ಪೋಲೀಸರಿಗೂ ಜಗಳವುಂಟಾಗಿ ಪೋಲೀಸಿನವರು ಗುಂಡು ಹಾರಿಸಿದರ ಫಲಿತಾಂಶವಾಗಿ ಸುಮಾರು 80 ಜನರಿಗೆ ಜಖಂ ಉಂಟಾಗಿದೆಯಂತೆ.

ಕಲ್ಲಿಕೋಟೆ, ಮಂಗಳೂರು, ಮಧುರ, ಮದ್ರಾಸು ಮೊದಲಾದ ಸ್ಥಳಗಳಲ್ಲಿ ಯಾವಾಗಲೂ ಕಾಂಗ್ರೆಸು ವಾಲಂಟಿಯರುಗಳು ಪಿಕೆಟಿಂಗ್, ಮೆರವಣಿಗೆ ಕೆಲಸಗಳನ್ನು ನಡಿಸುತ್ತಾ ಇದ್ದಾರೆಂದೂ, ಪೋಲೀಸಿನವರು ಅವರನ್ನು ಕೆಲವು ವೇಳೆ ಬೆತ್ತದಿಂದ ಹೊಡೆದು ಓಡಿಸುತ್ತಾರೆಂದೂ, ಹಲವು ಸಾರಿ ಅವರನ್ನು ಬೆಳಿಗ್ಗೆ ದಸ್ತಗಿರಿಮಾಡಿ ರಾತ್ರಿ ಬಿಡುಗಡೆ ಮಾಡುತ್ತಿದ್ದಾರೆಂದೂ ವರ್ತಮಾನ.

ಅಲಹಾಬಾದಿನ ಹಿಂದಿ ಎನಾರ್ಕಿಸ್ಟ್ ಲೀಗಿನ ಪ್ರೆಸಿಡೆಂಟರಾದ ಖಾನ್ ಸಾಹೇಬ್ ಸೈಯ್ಯದ್ ಅಫ್ಜಲ್ ಹುಸೇನ್‌ರವರಿಗೆ ತಾ. 13ರಲ್ಲಿ ತನ್ನ ಆಫೀಸಿನ ಮುಂಭಾಗದಲ್ಲಿ ಕೂತಿದ್ದಾಗ ಯಾರೋ ಲಾಠಿಯಿಂದ ತಲೆಗೆ ಬಲವಾಗಿ ಹೊಡೆದು ಬುರುಡೆಯೊಡೆದು ಬಂದು ಆಸ್ಪತ್ರೆಯಲ್ಲಿರುವರಂತೆ. ಇವರಿಗೆ, ಕಾಂಗ್ರೆಸಿಗೆ ವಿರೋಧವಾಗಿ ಕೆಲಸ ಮಾಡಕೂಡದೆಂದು ಅನೇಕ ಸಹಿ ಇಲ್ಲದ ಪತ್ರಗಳು ಬಂದಿದ್ದವಂತೆ.

ಅಖಿಲ ಭಾರತ ನೇಶನಲ್ ಲಿಬರಲ್ ಫೆಡರೇಶನಿನ ಕೌನ್ಸಿಲು ಈ ತಾ. 10 ರಲ್ಲಿ ಬೊಂಬಾಯಿಯಲ್ಲಿ ಸೇರಿ, ಇಂಡಿಯಾ ಮಂತ್ರಿಯವರ ಪ್ರಕಟಣೆಯನ್ನು ಕುರಿತು ಆಲೋಚಿಸಿ, ಈಗಿನ ಹೊಸ ರೀತಿಯು ಪೂರ್ಣ ಅತೃಪ್ತಿಕರವಾದುದೆಂದೂ, ಇದು ಲಾರ್ಡ್ ಇರ್ವಿನರ ಮತ್ತು ಮುಖ್ಯ ಮಂತ್ರಿಯವರ ವಾಗ್ದಾನಗಳಿಗೆ ಪೂರ್ಣ ವಿರೋಧವಾದುದೆಂತಲೂ, ದುಂಡು ಮೇಜು ಪರಿಷತ್ತಿನ ರೀತಿಯನ್ನು ಕೈಕೊಳ್ಳುವ ವರೆಗೆ ತಾವು ಸಹಕರಿಸುವುದಿಲ್ಲವೆಂತಲೂ ಠರಾವು ಮಂಜೂರು ಮಾಡಿದರು.

ಬೊಂಬಾಯಿ ಪಟ್ಟವನ್ನು 24 ಗಂಟೆಗಳೊಳಗೆ ಬಿಟ್ಟು ಹೊರಗೆ ಹೋಗಬೇಕೆಂದು ಶ್ರೀಮತಿ ಮೀರಾ ಬೆನ್‌ರವರಿಗೆ ತಾ. 9ರಲ್ಲಿ ಪೋಲೀಸು ಅಧಿಕಾರಿಗಳು ಹುಕುಂ ಮಾಡಿರುವರು. 'ತಾನು ಪ್ರಾಂತ್ಯದಲ್ಲಿ ಸಂಚಾರ ಮಾಡಲು ಹೊರಡುವ ಸಮಯದಲ್ಲಿ ತನಗೆ ಈ ಹುಕುಂ ಸಿಕ್ಕಿದ್ದು ಆಶ್ಚರ್ಯ. ಸದರಿ ಪ್ರವಾಸವನ್ನು ಮುಗಿಸಿಕೊಂಡು ತಾನು ಬೊಂಬಾಯಿಗೆ ವಾಪಸು ಬರುವೆನು' ಎಂದು ಮೀರಾಬೆನ್‌ರವರು ಪ್ರಕಟಿಸಿರುವರು. ಇದೇ ತರಹದ ಹುಕುಮನ್ನು ಉಲ್ಲಂಘನೆ ಮಾಡಿ ಇವರು ಈ ಮೊದಲು ಒನ್ನೆ ಜೈಲಿಗೆ ಹೋಗಿದ್ದರು.

ಕಾಸರಗೋಡು ತಾಲೋಕು ಕಾನ್‌ಫರೆನ್ಸು ತಾ. 9ರಲ್ಲಿ ಪ್ರಾತಃಕಾಲ 6½ ಗಂಟೆಗೆ ಕಾಸರಗೋಡಿನಲ್ಲಿ ನಡೆಯಿತು. ಮಂಗಳೂರಿನ ಕಲಬೇರಿಕರ್ ರಂಗರಾವ್ ಬಿ. ಎ. ಎಲ್. ಎಲ್. ಬಿ. ಯವರ ಪತ್ನಿ ಶ್ರೀಮತಿ ಕಮಲಾಬಾಯಿಯವರು ಅಧ್ಯಕ್ಷರಾಗಿದ್ದರು. ಅಧ್ಯಕ್ಷರ ಚಿಕ್ಕ ಭಾಷಣದನಂತರ 3 ಠರಾವುಗಳು ಪಾಸು ಮಾಡಲಾದವು. ಎಲ್ಲವನ್ನೂ 10 ನಿಮಿಷಗಳಲ್ಲಿ ಮುಗಿಸಿ ಅಲ್ಲಿ ನೆರೆದಿದ್ದ ಸುಮಾರು 40 ಡೆಲಿಗೇಟರುಗಳು ಪಟ್ಟದಲ್ಲಿ ಮೆರವಣಿಗೆ ಹೊರಟರು. ಸ್ವಲ್ಪ ದೂರ ಹೋದ ಮೇಲೆ ಪೋಲೀಸಿನವರು ಅಧ್ಯಕ್ಷರೇ ಮೊದಲಾದ 5 ಜನರನ್ನು ದಸ್ತಗಿರಿಮಾಡಿ ಬಾಕಿಯವರನ್ನು ಬೆತ್ತದಿಂದ ಹೊಡೆದು ಚದರಿಸಿದರು. ದಸ್ತಗಿರಿ ಮಾಡಲ್ಪಟ್ಟವರ ಪೈಕಿ ಮೂವರು ಬಿಡುಗಡೆ ಮಾಡಲ್ಪಟ್ಟು ಅಧ್ಯಕ್ಷರು ಮತ್ತು ಸ್ವಾಗತ ಅಧ್ಯಕ್ಷರ ಮೇಲೆ ಮಾತ್ರ ಕೇಸು ನಡಿಸುತ್ತಿದ್ದಾರಂತೆ.

ದುಂಡು ಮೇಜು ಪರಿಷತ್ತಿನ ಮೆಂಬರುಗಳ ಮೀಟಿಂಗೊಂದು ಈ ತಾ. 10 ರಲ್ಲಿ ಬೊಂಬಾಯಿಯಲ್ಲಿ ನಡೆಯಿತು. 14 ಮೆಂಬರುಗಳು ಹಾಜರಿದ್ದರು. ಅವರು ಸರ್ ಸ್ಯಾಮುವೆಲ್ ಹೋರ್‌ರವರ ಹೇಳಿಕೆಯನ್ನು ಕುರಿತು ದೀರ್ಘ ಚರ್ಚೆಮಾಡಿ, ಅವರಲ್ಲಿ ಸೂಚಿಸಿರುವ ಹೊಸ ರೀತಿಯು 1929—30 ರಲ್ಲಿ ಲಾರ್ಡ್ ಇರ್ವಿನ್‌ರವರೂ, 1931 ರಲ್ಲಿ ಪ್ರಧಾನ ಮಂತ್ರಿಯವರೂ ಪ್ರಕಟಿಸಿದ ಪರಿಷತ್ತು ರೀತಿಗಿಂತ ತತ್ವದಲ್ಲಿ ಪೂರ್ಣ ಬದಲಾಗಿದೆಯೆಂತಲೂ, ಪರಿಷತ್ತು ರೀತಿಯಲ್ಲಿ ತಯಾರಿಸಬಹುದಾದಷ್ಟು ತೃಪ್ತಿಕರವಾದ ವಿಧಾನವನ್ನು ಈ ಹೊಸ ರೀತಿಯಲ್ಲಿ ತಯಾರಿಸಲಾಗುವುದಿಲ್ಲವೆಂತಲೂ, ಅದರಿಂದ ಇಂಡಿಯಾದ ಈಗಿನ ಸ್ಥಿತಿಯ ಕೆಡಕುಗಳನ್ನು ಹೆಚ್ಚಿಸಿದಂತಾಗುವುದೆಂತಲೂ, ಪರಿಷತ್ತು ರೀತಿಯೇ ತಮ್ಮ ಸಹಕಾರದ ಮುಖ್ಯ ಶರತು ಎಂತಲೂ ಠರಾವು ಒಮ್ಮತದಿಂದ ಪಾಸುಮಾಡಿದರು.

ವಿ ದೇ ಶ.

ಹಿಂದೂದೇಶದ ಜೈಲುಗಳ ತಪ್ಪಿನ ಹಿತ ದೃಷ್ಟಿಯಿಂದ 100 'ಜಬರದಸ್ತು' ತರದ ರಾಜಕೀಯ ಕೈದಿಗಳನ್ನು ಅಂಡಮಾನ ದ್ವೀಪಕ್ಕೆ ಕಳುಹಿಸಲು ಮಂಜೂರಾಗಿದೆಯೆಂದು 'ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಪಾರ್ಲಿಮೆಂಟಿನಲ್ಲಿ ಹೇಳಿದರು.

ಬರ್ಕ್‌ಷೈರಿನಲ್ಲಿ ವಾದ್ರಿಗಳು ಅನೇಕರ ಒಂದು ಕೂಟದಲ್ಲಿ, ಕಾಂಗ್ರೆಸಿಗೂ, ಸರ್ಕಾರಕ್ಕೂ ರಾಜಿ ಮಾಡಲು ರಾಗೂರು—ಗಾಂಧಿ ಪತ್ರವ್ಯವಹಾರದ ಅವಕಾಶವನ್ನು ಕಳಕೊಂಡದ್ದಕ್ಕಾಗಿಯೂ, ಆರ್ಡಿನೇನ್ಸುಗಳನ್ನು ಪುನಹ ಜಾರಿಗೆ ತಂದದ್ದಕ್ಕಾಗಿಯೂ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಕೃತ್ಯವನ್ನು ಖಂಡಿಸಿ ಠರಾವು ಪಾಸುಮಾಡಲಾಯಿತು.

ವೆಸ್ಟ್ ಲಂಡನಿನ ಒಂದು ಆಸ್ಪತ್ರೆಯಲ್ಲಿ 21 ವರ್ಷದ ಒಬ್ಬ ಹುಡುಗಿಯು ಚಿಕಿತ್ಸೆ ಹೊಂದುತ್ತಿದ್ದಳು. ಅವಳ ತಂದೆಯು ಅವಳನ್ನು ನೋಡುವುದಕ್ಕೆ ನಿತ್ಯವೂ ಬರುತ್ತಿದ್ದು ಒಂದು ದಿನ ಫಕ್ಕನೆ ರಿವಾಲ್ವರನ್ನು ತೆಗೆದು ಅವಳನ್ನು ಗುಂಡು ಹೊಡೆದು ಕೊಂದು ತಾನೂ ಗುಂಡು ಹೊಡೆದುಕೊಂಡು ಅಪಾಯಸ್ಥಿತಿಯಲ್ಲಿರುವನು. ಅಲ್ಲಿನ ನರ್ಸು ಅಡ್ಡ ಬಂದರೂ ಕೂಡ ಏನೂ ಪ್ರಯೋಜನವಾಗಲಿಲ್ಲ.

ಶ್ರೀ. ವಿ. ಜೆ. ಪಟೇಲರವರು ಐರ್ಲೆಂಡಿನಿಂದ ಲಂಡನಿಗೆ ವಾಪಸು ಬಂದಿರುವರು. ಹಿಂದೂದೇಶದ ಈಗಿನ ರಾಜಕೀಯ ಪರಿಸ್ಥಿತಿಯ ಮತ್ತು ಆರ್ಡಿನೇನ್ಸ್ ಆಡಳಿತದ ನಿಜ ಸಂಗತಿಯನ್ನು ಕುರಿತು ಸ್ನೇಹಭಾವದಲ್ಲಿರುವ ಒಂದು ಯೂರೋಪಿಯನ್ ಜನಾಂಗದ ಮುಖ್ಯ ಅಧಿಕಾರಿಗೆ ಅಂದರೆ ಐರ್ಲೆಂಡಿನ ಅಧ್ಯಕ್ಷರಾದ ಡಿ ವೇಲರವರಿಗೆ ತಿಳಿಸಲು ಹೋಗಿದ್ದನೆಂದು ಪಟೇಲರವರು ತನ್ನ ಪ್ರವಾಸದ ಉದ್ದೇಶವನ್ನು ಕುರಿತು ಹೇಳಿದರು.

PROPERTY FOR SALE.

MERCARA, COORG—"The Lodge" bungalow, and about nine acres of land. Central situation, independent water supply—

Apply to:—

J. B. Reid,
Suntikoppa,
2—1 Coorg.

ಓರಿಯಂಟಲ್ ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಅಸ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ನಮ್ಮಲ್ಲಿ ಮೆ. ಚೇನಂಡ ಬೋಪಯ್ಯನವರ ನಂಬರು 197170ರ ಪಾಲಿಸಿ ಹಾಳಾಗಿ ಹೋಗಿರುವದೆಂಬ ಸಮಾಚಾರವು ನಮಗೆ ತಿಳಿದು ಬಂದಿರುವುದರಿಂದ ಇದಕ್ಕೆ ಬದಲು ಹೊಸ ಪಾಲಿಸಿಯು ಒಂದು ತಿಂಗಳೊಳಗೆ ಯಾವ ತಕರಾರೂ ಯಾರಿಂದಲಾದರೂ ಬಾರದೆ ಹೋದಲ್ಲಿ ಕೊಡಲಾಗುವುದು.

ಬೊಂಬಾಯಿ, (Sd.) ಎಚ್. ಇ. ಜೋನ್ಸ್.
ತಾ. 9—7—1933. (ಮ್ಯಾನೇಜರ್.)
1—1

...ಈಗ ರಂಗರಾಯನ ವಿಷಯ ಪ್ರಸ್ತಾಪಿಸುವ. ಶ್ಯಾಮರಾಯರು ಬೆಳಿಗ್ಗೆ ಎದ್ದರು. ಅವನಿಲ್ಲಿಯೂದರೂ ರಾತ್ರಿ ಇಲ್ಲಿ ಬಂದು ತನಗಿಂತ ಮೊದಲೇ ಎದ್ದು ಹೋದನೇ ಎಂದು ಯೋಚಿಸಿದರು. ಎಲ್ಲರೂ ಅವನು ಬರಲೇ ಇಲ್ಲ ಎಂದರು. ೦ ತಾಸಾದರೂ ರಂಗರಾಯನು ಬರಲಿಲ್ಲ. ಮತ್ತೆ ಅವರು ಚಿಂತೆಗೊಳಗಾದರು. ಅದುದರಿಂದ ಅವರು ನೆರೆಯಲ್ಲಿದ್ದ ಪಟ್ಟಣದ ಕೊತ್ವಾಲನಲ್ಲಿಗೆ ಹೋಗಿ ತನ್ನ ಮಗನು ಕಾಣದ ವಿಷಯವನ್ನು ಅರುಹಿದರು. ಅಷ್ಟರಲ್ಲಿ ಒಬ್ಬಳು ಮುದುಕಿಯು ಅಲ್ಲಿಗೆ ಬಂದು ತಾನು ಮೊರ್ಕೆಟಿನ ಬಾವಿಯಿಂದ ನೀರು ತರಲು ಹೋದಾಗ ಬಾವಿಯಲ್ಲಿ ಕಂಡ ಶವದ ಗುರುತು ಮೈಕಟ್ಟುಗಳನ್ನು ವಿವರಿಸಿ ಹೇಳತೊಡಗಿದಳು. ಶ್ಯಾಮರಾಯರು ಒಮ್ಮೆಗೆ ಹಾ! ಎಂದು ಬಾಯಿಬಿಟ್ಟು ಮೂರ್ಛಿತರಾದರು.

ಸ್ವಲ್ಪ ಹೊತ್ತಿನಲ್ಲಿಯೇ ಅವರು ಸ್ಮೃತಿ ತಿಳಿದು ಸ್ವಲ್ಪ ನೀರು ಬೇಕೆಂದರು; ಕೊತ್ವಾಲನು ಅವರನ್ನು ಸಮಾಧಾನಿಸಿ ವ್ಯಸನಪಡಲು ಕಾರಣವಿಲ್ಲೆಂದರು. ಎಷ್ಟಾದರೂ ತಂದೆಯ ಕರುಳಲ್ಲವೇ! ಅವರು ಹಿಲ್ಲಮಿಲ್ಲನೆ ಮೊರ್ಕೆಟಿನ ಬಾವಿಗೆ ಹೋದರು. ಕೊತ್ವಾಲನ ಅನುಮತಿಯಿಂದ ಬಾವಿಯಿಂದ ತೆಗೆದ ಶವವನ್ನು ಒಂದು ಚಾಪೆಯಲ್ಲಿ ಮಲಗಿಸಿದರು. ತುಂಬಾ ಜನರು ನೆರೆದಿದ್ದರು. ಒಂದೆಡೆಯಲ್ಲಿ ಒಬ್ಬ ಅಧಿಕಾರಿಯು ಶವದ ವಿಷಯ ಜನರನ್ನು ಕೇಳಿ, ಕೇಳಿ ಬರೆದುಕೊಳ್ಳುತ್ತಿದ್ದನು. ಶ್ಯಾಮರಾಯರು ಜನರನ್ನು ನೂಕುತ್ತಾ ಒಬ್ಬ ಕಷ್ಟಪಟ್ಟು ಶವದ ಮುಖವನ್ನು ನೋಡಿದರು. ಅದು ರಂಗರಾಯನ ಈಗ ಕಾಂತಿಹೀನವಾದ ಮುಖವಾಗಿತ್ತು. ಶ್ಯಾಮರಾಯರು ಮೂರ್ಛೆಹೊಂದಿ ಜನರ ಮೇಲೆ ಬಿದ್ದರು.

೫ ನೇ ಭಾಗ.

ಪರಿಸಮಾಪ್ತಿ.

ಆ ಮೇಲೆ ರಂಗರಾಯನ ಶವಕ್ಕೆ ಯೋಗ್ಯ ಸಂಸ್ಕಾರಗಳು ಆದವು. ಶ್ಯಾಮರಾಯರು ದಾದರಕ್ಕೆ ಹಿಂತಿರುಗಿದರು. ಆದರೆ ಹಿಂದೆ ಹೇಳಲು ಮರೆತ ರಂಗರಾಯನ ಅಂಗಿಯ ಕಿಸೆಯಲ್ಲಿದ್ದ ಪತ್ರದ ವಿಷಯ ಹೇಳಿ ಈ ಕಾದಂಬರಿಯನ್ನು ಮುಗಿಸುವೆನು.

ಮುಂಬಯಿ,
ತಾ. 12—6—1931.

ಪ್ರೀಯ ನಾಗೇಶ,

ಅದೃಷ್ಟವು ಬಹು ದುಷ್ಟವಾದುದು. ಎಂತವನನ್ನಾದರೂ ಬಹು ಶೋಚನೀಯವಾದ ಸ್ಥಿತಿಗೆ ಎಳೆದು ತರಬಲ್ಲುದು. ಇದಕ್ಕಾಗಿ ಜನರನ್ನು ನಾವು ದೂಷಿಸುವುದು ಒಳ್ಳೆಯದಲ್ಲ. ನನಗೆ ಜೀವದ ಮೇಲೆ ಬಹಳ ಬೇಸಾರ ಉಂಟಾಗಿದೆ. ಒಂದೊಂದು ಘಳಿಗೆ ಒಂದೊಂದು ಯುಗದಂತೆ ಕಾಣುತ್ತದೆ. ಇನ್ನೂ ಬದುಕಿರುವೆನೇ! ಈ ಪತ್ರವು ಬರೆಯುವುದರಲ್ಲಿ ... ... ಎಂದು ಏನೇನೋ ಬರೆಯಲ್ಪಟ್ಟಿತ್ತು.

ಜಯಕರ ಸಪ್ರುರವರ ಪ್ರಕಟನೆ.

ಭಾರತ ಮಂತ್ರಿಗಳು ಮೊದಲು ಪ್ರಕಟಿಸಿದಂತೆ ತಮ್ಮ ಪ್ರಕಟಣೆಯನ್ನು ಹೊರಡಿಸಿದ ಬಳಿಕ ಸಪ್ರು ಜಯಕರ, ಇವರು ಆದರ ಬಗ್ಗೆ ತಮ್ಮ ಅಭಿಪ್ರಾಯದರ್ಶಕ ಪ್ರಕಟಣೆಯನ್ನು ಹೊರಡಿಸಿರುವರು. ಇದರಲ್ಲಿ ಅವರು ಭಾರತ ಮಂತ್ರಿಗಳ ಕಾರ್ಯಪದ್ಧತಿಯನ್ನು ಪೂರ್ಣವಾಗಿ ನಿಷೇಧಿಸಿರುವರು. ಅವರು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಹಿಂದೂಸ್ಥಾನದಲ್ಲಿಯ ಎಲ್ಲಾ ಪಕ್ಷದವರು ಸಮರ್ಥಿಸಿರುತ್ತಾರೆ. ಅವರ ಪ್ರಕಟಣೆಯ ಮುಖ್ಯ ಭಾವವು ಏನೆಂದರೆ—

ಭಾರತ ಮಂತ್ರಿಗಳು ಹೊರಗೆಡವಿದ ಈಗಿನ ಕಾರ್ಯಪದ್ಧತಿಯು ಮುಖ್ಯ ಮಂತ್ರಿಯವರು ಅನೇಕ ಸಾರೆ ಪ್ರಕಟಪಡಿಸಿದಂತೆ ಇರುವದಿಲ್ಲ. ಇದರಲ್ಲಿ ತೀರ ಬದಲಾವಣೆಗಳು ಆಗಿರುತ್ತವೆ. ಈ ಬದಲಾವಣೆಗಳ ಮೂಲಕ ಸರಕಾರದವರು ವಚನಭಂಗವನ್ನು ಮಾಡಿರುತ್ತಾರೆ. ಮಂತ್ರಿ ಮಂಡಲದವರು ದುಂಡು ಮೇಜು ಪರಿಷತ್ತಿನ ಸಭಾಸದರದೊಂದು ಕಾರ್ಯಕಾರೀ ಕಮಿಟಿಯನ್ನು ಏರ್ಪಡಿಸತಕ್ಕದ್ದು ಮತ್ತು ಕಟ್ಟಕಡೆಗೆ ದುಂಡು ಮೇಜು ಪರಿಷತ್ತನ್ನು ಸೇರಿಸಿ ಅಲ್ಲಿ ಎಲ್ಲ ವಿಷಯಗಳನ್ನು ಸಮಾಲೋಚಿಸಬೇಕು ಎಂದು ಹೇಳಿದ್ದು ಆ ಪ್ರಕಾರ ಮಾಡುವದನ್ನು ಈಗ ಸರಕಾರದವರು ಪೂರ್ಣವಾಗಿ ಬಿಟ್ಟುಕೊಟ್ಟಿರುತ್ತಾರೆ.

ಸರಕಾರದವರು ಎಲ್ಲ ಅಂಗಗಳನ್ನು ಕೂಡಿಕೊಂಡು ಹಿಂದೇ ಒಂದು ಕಾಯದೆಯನ್ನು ಮಾಡಬೇಕೆಂದು ನಿರ್ಧರಿಸಿದ್ದು ಮಹತ್ವವಾದದ್ದು. ಆದರೆ ಅವರು ಮೊದಲು ಪ್ರಾಂತಿಕ ಆಡಳಿತೆಗಳನ್ನು ಏರ್ಪಡಿಸಬೇಕು. ಆ ಮೇಲೆ ಅವುಗಳನ್ನು ಒಳಕೊಂಡು ಸಂಯುಕ್ತ ರಾಜ್ಯ ಆಡಳಿತೆಯನ್ನು ಅನುಲಿಸಲ್ಲಿ ತರಬೇಕು ಎಂದು ಪ್ರಸಿದ್ಧಿಸಿರುವರು. ಆದರೆ ಈ ತರದ ಮಧ್ಯವರ್ತಿ ರಾಜ್ಯಯೋಜನೆಯನ್ನು ಅಮಲಿನಲ್ಲಿ ತೀವ್ರವಾಗಿ ತರತಕ್ಕದ್ದು. ಇದಕ್ಕೆ ಕಾಲವಿಳಂಬವಾದರೆ ನಾವು ಈ ಯೋಜನೆಗೆ ಒಪ್ಪಲಾರೆವು.

ಅದೇ ಪ್ರಕಾರ ಭಾರತ ಮಂತ್ರಿಗಳು ಪ್ರಾಂತಿಕ ಆಡಳಿತೆಗಳನ್ನು ಮೊದಲಿಗೆ ಪೂರ್ಣವಾಗಿ ಏರ್ಪಡಿಸಿ ಆ ಮೇಲೆ ಸಂಪೂರ್ಣ ಸಂಯುಕ್ತ ರಾಜ್ಯಯೋಜನೆಯನ್ನು ಅಮಲಿನಲ್ಲಿ ತ ರುವೆವೆಂದು ಪ್ರಕಟಪಡಿಸಿರುವರು. ಈ ಪದ್ಧತಿಯನ್ನು ನಾವು ಸಮ್ಮತಿಸಲಾರೆವು.

ರಾಜ್ಯ ಯೋಜನೆಯ ಬಗ್ಗೆ ಕಡೆಯ ನಿರ್ಣಯವನ್ನು ಮಾಡುವ ಪೂರ್ವದಲ್ಲಿ ವರ್ತುಲ ಪರಿಷತ್ತು ೧೪,—೧೫ ಸಭಾಸದರನ್ನು ಮತ್ತು ಸಂಸ್ಥಾನದ ಪತಿಯಿಂದ ೯ ಜನರನ್ನು ಬರಮಾಡಿಕೊಂಡು ಆಲೋಚನೆ ನಡಿಸಿದ್ದಾದರೆ ಏನೂ ಕಾಲವಿಳಂಬವಾಗಲಾರದು.

ಈ ಇಂಗ್ಲೆಂಡದ ರಾಜ್ಯ ಕಾರಭಾರದಲ್ಲಿ ಹೊಸ ಪಕ್ಷವು ಬಂದದ್ದರಿಂದ ಅದರ ಬಲುಮೆಗೆ ಒಳಗಾಗಿ ಈ ತರದ ಹೊಸ ಒಪಲಾಪಣೆಗಳು ಆಗಿರಬಹುದೆಂದು ನಾವು ಊಹಿಸುತ್ತೇವೆ.

ಮೇಲ್ಕಂಡ ಅಭಿಪ್ರಾಯಗಳನ್ನು ಸಪ್ರು, ಜಯಕರ ಇವರು ಪ್ರಕಟಪಡಿಸಿದ್ದು ಇವುಗಳಿಗೆ ನಾಮದಾರ ಶಾಸ್ತ್ರಿ ಜ್ಯೋತ್ಸ್ನೇತರ ಪಕ್ಷದ ಪ್ರಮುಖರಾದ ಮಿ. ಜಾಧವ ಇವರು ಒಪ್ಪಿಗೆಕೊಟ್ಟಿರುವರು.

"ಪ. ಕ"

ಅಖಿಲ ಭಾರತ ಅಸ್ಪೃಶ್ಯರ ಮಹಾಸಭೆ.

ಅಖಿಲ ಭಾರತ ಅಸ್ಪೃಶ್ಯರ ಕಾನ್‌ಫರೆನ್ಸಿನ 10 ನೇ ಸಮ್ಮೇಳನವು ಈ ತಾ. 10 ರಲ್ಲಿ ಬೊಂಬಾಯಿಯಲ್ಲಿ ನಡೆಯಿತು. ರಾ. ಬಾ. ಯಂ. ಸಿ. ರಾಜರವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಹಿಂದೂಸ್ಥಾನದ ಎಲ್ಲಾ ಭಾಗಗಳಿಂದಲೂ ಸುಮಾರು 200 ಕ್ಕಿಂತ ಹೆಚ್ಚು ಪ್ರತಿನಿಧಿಗಳು ಬಂದು ಸೇರಿದ್ದರು. ಸರ್ ಚುನಿಲಾಲ್ ಮೆಹತ, ಮಿ. ಬಾಲುಬಾಯಿ ದೇಸಾಯಿ, ಏರೂಬೆನ್ ನುಂತಾದ ಪ್ರಮುಖರು ಹಾಜರಿದ್ದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ, ಡಾಕ್ಟರ್ ಅಂಬೇಡ್ಕರವರ ಪಾರ್ಟಿಯವರ ಅಸ್ಪೃಶ್ಯರಿಗೆ ಪ್ರತ್ಯೇಕ ಕೋಮುವಾರು ಪ್ರತಿನಿಧಿತ್ವ ಮತ್ತು ಚುನಾವಣೆ ಬೇಕೆನ್ನುವ ಅಭಿಪ್ರಾಯವನ್ನು ತಕ್ಕ ಕಾರಣಗಳನ್ನು ಕೊಟ್ಟು ಖಂಡಿಸಿದ ನಂತರ ಹೀಗೆಂದರು—'ನಮ್ಮ ಜನರು ಮಿಶ್ರ ಚುನಾವಣೆಯಲ್ಲಿ ಒಂದಲ್ಲ ಒಂದು ಪಾರ್ಟಿ ತತ್ವವನ್ನನುಸರಿಸಿ ಕೌನ್ಸಿಲಿಗೆ ಪ್ರತಿನಿಧಿಗಳಾಗಿ ಆರಿಸಲ್ಪಟ್ಟರೇನೇ ಅವರು ಸರ್ಕಾರದ ಮೆಂಬರುಗಳಾಗಲು ಯೋಗ್ಯರಾಗುವರು. ಹಿಂದೂ ಮಹಾಸಭಾದವರು ಅಸ್ಪೃಶ್ಯರನ್ನು ತಮ್ಮ ಜೊತೆಯಲ್ಲಿ ಕೆಲಸ ಮಾಡಲು ಆಹ್ವಾನಿಸಿರುವುದು ಜಾತಿ ಹಿಂದುಗಳು ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಮನಃಪೂರ್ವಕವಾಗಿ ಮಾಡುತ್ತಿರುವ ಯತ್ನವಾಗಿದೆ. ಎಲ್ಲಾ ಹೇಳಿದ ಮತ್ತು ಮಾಡಿದ ಮೇಲೆ ಅಧಿಕಾರದ ಲಗಾಮನ್ನು ಹಿಡಿದಿರುವಂಥ ದೊಡ್ಡ ಕೋಮಿನವರ ಜೊತೆ ಸೇರುವುದೇ ಉತ್ತಮವೆಂಬುದು ನನ್ನ ದೀರ್ಘಾಲೋಚನೆ ಫಲಿತಾಂಶವಾಗಿದೆ. ಅವರೊಂದಿಗೆ ನಾವು ಸೇಲುತ್ತೇವೆ ಅಥವಾ ಮುಳುಗುತ್ತೇವೆ; ನಮ್ಮ ಭವಿಷ್ಯತ್ತು ಅವರಲ್ಲಿ ಮಿಳಿತವಾಗುವುದರಲ್ಲಿಯೇ ಇದೆ.' ಅಸ್ಪೃಶ್ಯರ ಮಟ್ಟಿಗೆ ಲೋಥಿಯನ್ (ಫ್ರಾಂಚೈಸ್) ಕಮಿಟಿಯ ವರದಿಯು ತನಗೆ ತೃಪ್ತಿಕರವಾಗಿದೆಯೆಂತಲೂ, ಮತ್ತು ಸರ್ಕಾರದವರು ಆದನ್ನು ಆದಷ್ಟು ಬೇಗನೆ ಜಾರಿಗೆ ತರಬೇಕೆಂದು ತನ್ನ ಅಭಿಪ್ರಾಯವೆಂತಲೂ ಮಿ. ರಾಜರವರು ಹೇಳಿದರು.

ಮಂಜೂರಾದ ಠರಾವುಗಳು.

1 ನೇ ಠರಾವಿನಲ್ಲಿ, ರಾಜಕೀಯ ಆಡಳಿತದ ಮಟ್ಟಿಗೆ ತಮ್ಮ ಜನ ಸಂಖ್ಯೆಗನುಸಾರವಾಗಿ ಕೌನ್ಸಿಲುಗಳಲ್ಲಿ ಪ್ರತಿನಿಧಿಗಳ ಸಂಖ್ಯೆಯನ್ನು ಕಾಯ್ದಿಟ್ಟು, ಮಿಶ್ರ ಚುನಾವಣೆಯನ್ನು ಅಂಗೀಕರಿಸುವುದೇ ತಮ್ಮ ಕೋಮಿನ ಜನರ ಹಿತವನ್ನು ಸಾಧಿಸಲು ಉತ್ತಮ ದಾರಿಯೆಂತಲೂ, ಆದ ಕಾರಣ ಈ ತತ್ವವನ್ನೊಳಗೊಂಡಿರುವ ರಾಜ— ಮುಂಜೆ ಒಪ್ಪಂದಕ್ಕೆ ಸಮ್ಮತಿಯನ್ನಿತ್ತರು.

ಲಂಡನ್ನಿನಲ್ಲಿ ಡಾ. ಅಂಬೇಡ್ಕರ್ ಮೊದಲಾದವರು ಮಾಡಿಕೊಂಡ ಮೈನಾರಿಟಿ (ಕಮ್ಮಿ ಪಕ್ಷದವರ ಒಪ್ಪಂದ) ವಾಕ್ಯಗಳನ್ನು ತಿರಸ್ಕರಿಸಿಯೂ, ಅಸ್ಪೃಶ್ಯ ಕೋಮುಗಳೊಳಗೆ ಒಗ್ಗಟ್ಟನ್ನು ಸಾಧಿಸಲು ಎಲ್ಲರೂ ಯತ್ನಿಸಬೇಕೆಂದೂ, ಓಟಿನ ಹಕ್ಕಿಗೆ ಆಸ್ತಿ ಮತ್ತು ವಿದ್ಯೆಯ ಅರ್ಹತೆಯ ಬದಲು ಪ್ರಾಯದ ಮಿತಿಯ ಯೋಗ್ಯತೆಯನ್ನಿಡಬೇಕೆಂತಲೂ, ಸರ್ಕಾರದವರು ಅಸ್ಪೃಶ್ಯರ ಖಾನೇಸುಮಾರಿ ಲೆಕ್ಕವನ್ನು ಪುನಹ ತೆಗೆಯಬೇಕೆಂತಲೂ, ಅಸ್ಪೃಶ್ಯರ ಪರವಾಗಿ ನ್ಯಾಯವಾದ ಪಬ್ಲಿಕ್ ಅಭಿಪ್ರಾಯವನ್ನುಂಟುಮಾಡಲು ಮಿ. ಯಂ. ಸಿ. ರಾಜರವರು ತಮ್ಮ ಪರವಾಗಿ ಇಂಗ್ಲೆಂಡಿಗೆ ಹೋಗಬೇಕೆಂತಲೂ ಬೇರೆ ಬೇರೆ ಠರಾವುಗಳು ಮಂಜೂರು ಮಾಡಲ್ಪಟ್ಟವು. ಕಡೆಗೆ ರಾಜಭಕ್ತಿಯ ಠರಾವು ಪಾಸಾಯಿತು.

ಈ ಮೇಲಿನ ಕಾನ್‌ಫರೆನ್ಸಿನ ಸಂಬಂಧ ಅಸ್ಪೃಶ್ಯರಲ್ಲಿ ರಾಷ್ಟ್ರೀಯ ಪಕ್ಷದವರಿಗೂ, ಪ್ರತ್ಯೇಕ ಚುನಾವಣೆ ಪಕ್ಷದವರಿಗೂ ಜಗಳ ಉಂಟಾಗಿ 50 ಜನರಿಗೆ ಘಾಯಗಳುಂಟಾದವು; ಅವರಲ್ಲಿ 12 ಜನರಿಗೆ ಹೆಚ್ಚು ಜಖಂ ಆಗಿದೆ. ಸದರಿ ದಿನ ಮಧ್ಯಾಹ್ನ ಮೀಟಿಂಗಿಗೆ ಮೊದಲು ಪ್ರತ್ಯೇಕ ಚುನಾವಣೆಯ ಪಕ್ಷದ ಸುಮಾರು 200 ಜನರು ಬಂದು ಮೀಟಿಂಗಿನ ಹಾಲ್‌ನ್ನ ಪ್ರವೇಶಿಸಲು ಯತ್ನಿಸಿದರಂತೆ. ಟಿಕೇಟು ಮೂಲಕ ಪ್ರವೇಶವಾದುದರಿಂದ ಅವರನ್ನು ಬಿಡಲಿಲ್ಲ. ಕಾನ್‌ಫರೆನ್ಸಿನ ವಾಲಂಟೀಯರುಗಳಿಗೂ ಇವರಿಗೂ ಕೈ ಕೈ ಕೂಡಿದವು. ಕಲ್ಲುಗಳೂ, ಕೋಲುಗಳೂ ಸರಾಗವಾಗಿ ಉಪಯೋಗಿಸಲ್ಪಟ್ಟವು. ಅಷ್ಟರಲ್ಲಿ ಪೋಲೀಸಿನವರು ಬಂದು ಪುಂಡುಗಾರರನ್ನು ಲಾಠಿ ಚಾರ್ಜ್ ಮಾಡಿ ಓಡಿಸಿ, ಕೆಲವರನ್ನು ದಸ್ತಗಿರಿ ಮಾಡಿದರು. ಇದಲ್ಲದೆ ಅಧ್ಯಕ್ಷರು ಬೊಂಬಾಯಿಗೆ ಬಂದಿಳಿಯುವ ಸಮಯದಲ್ಲಿ ಪ್ರತ್ಯೇಕ ಚುನಾವಣೆ ಪಕ್ಷದ ಕೆಲವರು ಕಪ್ಪು ಬಾವುಟಗಳೊಂದಿಗೆ ವಿಕ್ಟೋರಿಯಾ ಟರ್ಮಿನಸಿಗೆ ಹೋಗಿದ್ದರಂತೆ. ಆದರೆ ಕಾನ್‌ಫರೆನ್ಸನ್ನು ಏರ್ಪಡಿಸಿದವರು ಅದನ್ನು ಮೊದಲೇ ಅರಿತು, ಅಧ್ಯಕ್ಷರನ್ನು ಒಂದು ಸ್ಟೇಷನ್ ಮುಂದೆಯೇ ಇಳಿಸಿ ಮೋಟಾರಿನಲ್ಲಿ ಬೊಂಬಾಯಿಗೆ ಕರೆ ತಂದರು.

ಸಪ್ರೂ—ಜಯಕರ—ಜೋಶಿಯವರ ರಾಜಿನಾಮೆ.

ಭಾರತರಾಜ್ಯಾಂಗರಚನಾಕಾರ್ಯವು ರೌಂಡುಟೇಬಲು ಸಭೆಯ ಮೂಲಕ ಜಾಗ್ರತೆಯಲ್ಲಿ ನಿರ್ಧರವಾಗುವುದಿಲ್ಲವಾದುದರಿಂದ ಜಾಯಿಂಟ್ ಕಮಿಟಿಯದ್ವಾರ ಇತ್ಯರ್ಥಗೊಳಿಸಲು ನಿರ್ಧರಿಸಿರುವುದಾಗಿ ಇಂಡಿಯಾ ಮಂತ್ರಿಯವರು ಪ್ರಕಟಿಸಿರುವರಷ್ಟೆ. ಈ ಪ್ರಕಟನೆಯಿಂದ ಸಪ್ರೂ, ಜಯಕರ್, ಜೋಶಿಗಳು ಅಸಮಾಧಾನಗೊಂಡು, 'ಹೊಸ ಕಾರ್ಯಕ್ರಮದಲ್ಲಿ ನನಗೆ ಅಷ್ಟು ನಂಬಿಕೆಯಿಲ್ಲವಾದುದರಿಂದ ನಾನು ಸಲಹೆ ಸಂಘದಲ್ಲಿದ್ದುಕೊಂಡು ಏನನ್ನೂ ಮಾಡಲಾರೆನು. ಈ ಸಂಘವು ರೌಂಡು ಟೇಬಲು ಸಭೆಗೆ ಕಾರ್ಯಸಂಘವಾಗಿರುವುದರ ಬದಲು ಸ್ವತಂತ್ರ ಸಂಘವಾಗಿರುವುದರಿಂದ ಇದರ ಮೆಂಬರುತನಕ್ಕೆ ರಾಜಿನಾಮೆ ಕೊಟ್ಟಿರುತ್ತೇನೆ" ಎಂದು ಡಾ॥ ಸಪ್ರೂರವರೂ; "ಇದುವರೆಗೆ ಅವಲಂಬಿಸಿದ ಪದ್ಧತಿಯಲ್ಲಿ ನನಗೆ ಇನ್ನೂ ವಿಶ್ವಾಸವಿರುವುದರಿಂದ ನೂತನ ಕಾರ್ಯಕ್ರಮದಲ್ಲಿ ನನಗೆ ವಿಶ್ವಾಸವಿಲ್ಲವು. ಆದುದರಿಂದ ಸಲಹ ಸಂಘದಲ್ಲಿ ನಾನಿದ್ದುಕೊಂಡು ನಾನು ಯಾವ ಕಾರ್ಯವನ್ನೂ ಮಾಡಲಾರೆನೆಂದು ಭಾವಿಸಿರುತ್ತೇನೆ. ಈ ಸಂಘವು ರೌಂಡುಟೇಬಲು ಕಮಿಟಿಯವರ ಕಾರ್ಯಸಂಘವಾಗಿರುವುದಿಲ್ಲ, ಏಕೆಂದರೆ ಈ ಸಂಘದ ನಿರ್ಧಾರಗಳನ್ನು ವಿಚಾರಿಸಲು ಪುನಃ ರೌಂಡುಟೇಬಲು ಸಭೆಯು ಕೂಡುವುದಿಲ್ಲ" ಎಂದು ಜಯಕರವರೂ; "ಈಗಿನ ಹೊಸ ರೀತಿಗೂ, ಹಳೇದಕ್ಕೂ ದೊಡ್ಡ ವ್ಯತ್ಯಾಸವಿದೆಯೆಂದೂ, ಇಂಡಿಯಾದ ರಚನೆಯನ್ನು ನಿಶ್ಚಯಿಸುವ ಹೊಸ ರೀತಿಯಲ್ಲಿ ಹಳೇ ರೀತಿಯ ತತ್ವವೇ ಬದಲಾಯಿಸಲ್ಪಟ್ಟಿದೆಯೆಂದೂ, ಆದುದರಿಂದ ನಾನ. ಸದರಿ ಕಮಿಟಿಯಲ್ಲಿ ಪ್ರಯೋಜನಕರವಾದ ಕೆಲಸವೇನೂ ಮಾಡಲಾರೆನೆಂದು" ಜೋಶಿಯವರೂ ಸೂಚಿಸಿ ಕನ್‌ಸಲ್ಟೇಟಿವ್ ಕಮಿಟಿಯ ಮೆಂಬರುತನಕ್ಕೆ ರಾಜಿನಾಮೆ ಕೊಟ್ಟಿರುವರು.

Coorg Commissioner's Office,
Dated 11th July 1932.

NOTICE.

A competitive examination for three vacancies in the Engineering Branch and one in the Executive Branch of the Royal Indian Marine will be held concurrently with the Indian Military Academy Examination beginning on the 24th October 1932, at Metcalfe House, Delhi. Further particulars and forms can be obtained from the Secretary, Public Service Commission, Simla. Applications must reach him by the 15th August 1932. Any further information can be had from this office in person during office hours on working days.

K. Narayana Rao,
for Commissioner.

1—1

ಶೃಂಗಾರವಾದ ಪುಸ್ತಕ! ಬೇಗನೆ ಬರೆಯಿ

ರತಿಮನ್ಮಥರಹಸ್ಯ ಎಂಬ ಮರ್ಮಶಾಸ್ತ್ರ

ಕ್ರಯ ರೂ. ೧—೦—೦.

ಕನ್ನಡ ಭಾಷೆಯಲ್ಲಿ ಅಂದವಾಗಿ ಪ್ರಿಂಟಾಗಿದೆ. ...ರಲ್ಲಿ ಸ್ತ್ರೀ ಪುರುಷರ ಪ್ರೀತಿಯ ರಹಸ್ಯಗಳು. ಪ್ಯಾರಿಸ್ ...ಶ್ಯ ಸ್ತ್ರೀಯರ ಪ್ರೀತಿಯ ಮರ್ಮಗಳು, ...ಯಾಳ, ಜಪಾನ್, ಫ್ರೆಂಚ್ ದೇಶದ ವೇ... ಸ್ತ್ರೀಯರ ಮಲಗುವ ಫೋಟೋಗಳು, ಇ... ಸ್ತ್ರೀಪುರುಷರ ಅನೇಕ ರಹಸ್ಯಗಳು 22 ... ಗಳ ಫೋಟೋ ಸಹಿತ ಕೂಡಿದೆ. ಈ ... ಗಾರವಾದ ಪುಸ್ತಕವನ್ನು ಓದಲು ಆನಂ...

...ಗಿರುವುದು. 22 ಫೋಟೋಗಳ ಸಹಿತ ಪ್ಯಾರಿಸ್ ... ವ್ಯಭಿಚಾರಿಗಳ ವಿನೋದಗಳು, ಕನ್ಯೆಗಳ ಪ್ರೀತಿ, ಶಯ್ಯಾ... ದ ರಹಸ್ಯಗಳು ಅಡಗಿರುತ್ತ—ಕ್ರಯ ಪುಸ್ತಕ ರೂ. ೧—೦...

ವಿಳಾಸ:—

ಟಿ. ವಿ. ದೇವಕರ್ ಅಂಡ್ ಕೋ,
73, ಅಣ್ಣಾಪಿಳ್ಳೆ ಬೀದಿ,
ಜಿ. ಟಿ. ಮದರಾಸ

ಜೀವನ್ಮುಕ್ತ ಮಹಾತ್ಮ ಗಾಂಧಿ.

('ಸ್ಪೆಕ್ಟೇಟರ್' ಎಂಬ ಪತ್ರಿಕೆಯಲ್ಲಿ ಅಮೇರಿಕದಲ್ಲಿರುವ ಶ್ರೀ. ಬಿ. ಕೆ. ರೋಯ್ ಎಂಬವರು ಬರೆದ ಒಂದು ಲೇಖನವಿದು. ಇದರಲ್ಲಿ ಮಹಾತ್ಮ ಗಾಂಧಿಯವರ ಕುರಿತಾಗಿ ಠಾಕೂರರವರ ಅಭಿಪ್ರಾಯವು ಅಡಕವಾಗಿದೆ.)

(ಕಳೆದ ವಾರದಿಂದ ಮುಂದುವರಿದದ್ದು.)

'ಗಾಂಧಿಯವರ ಜೀವನ ಕ್ರಮದ ಸರಳತೆಯು ತುಂಬ ಸಮ್ಮೋಹನವಾದುದು; ಅವರ ಸತ್ಯಪಾಲನ ಕ್ರಮವು ನಿಷ್ಕಳಂಕವಾದುದು. ಅವರಿಗೆ ಮಾನವ ವರ್ಗದ ಮೇಲಿರುವ ಪ್ರೇಮವು ಅಗಾಧವಾದುದು—ಅಮೋಘವಾದುದು. ಅವರಲ್ಲಿ 'ಕ್ರಿಸ್ತ ಶಕ್ತಿ' ಎಂಬುದು ಮೂರ್ತಿಮತ್ತಾಗಿದೆ. ಅವರೊಡನೆ ನಾನು ಎಷ್ಟು ಕಾಲವಿರುತ್ತೇನೋ ಅಷ್ಟು ಸಂತೋಷದಿಂದ ಅವರನ್ನು ಪ್ರೀತಿಸುತ್ತೇನೆ. ಹಿಂದೂದೇಶದ ಈ ವಿಭೂತಿ ಪುರುಷರಾಗಿರುವ ಇವರು ಪ್ರಪಂಚದ ಭಾವೀ ಮಾರ್ಗನಿರ್ಮಾಣ ಕಾರ್ಯದಲ್ಲಿ ಒಂದು ವಿಶೇಷ ಭಾಗವನ್ನು ಧರಿಸಲು ಜನ್ಮವೆತ್ತಿದಂತಿದೆ.'

ಅಮೇರಿಕಕ್ಕೂ ಯೂರೋಪಿಗೂ ಮಹಾತ್ಮ ಗಾಂಧಿಯವರ ಕುರಿತು ವಿಶೇಷ ತಿಳಿಯದಿದ್ದ ಸಮಯದಲ್ಲಿ ಹೀಗಿತ್ತು. ಪ್ರವಹ ಸಮ್ರಾಟ ಕವಿ ತಿಲಕರುಗಳೊಡನೆ ನಾನು ಕೇಳಿದೆ.

'ಹಾಗಾದರೆ ಇಂಥಾ ಮಹಾ ವ್ಯಕ್ತಿಯ ಅಸ್ತಿತ್ವದ ಕುರಿತು ಧರೆಗೆ ಸಾರ್ವತ್ರಿಕವಾಗಿ ತಿಳಿಯಪಡಿಸಬೇಡವೇ? ನೀವು ಈ ಕಾರ್ಯವನ್ನೇಕೆ ವಹಿಸಬಾರದು? ನೀವೂ ಸರ್ವ ಪ್ರಪಂಚ ಪ್ರಖ್ಯಾತರಾದವರು.'

ಠಾಗೂರರೆಂದರು—'ಅವರನ್ನು ನಾನು ಹೇಗೆ ಪ್ರಚುರಗೊಳಿಸಲಿ? ದಿವ್ಯ ಮೂರ್ತಿಯಂತಹ ಅವರೆದುರು ನನ್ನನ್ನು ತುಲನೆ ಮಾಡಿದರೆ ನಾನು ತೃಣ ಮಾತ್ರನೇ ಸರಿ. ಘನ ವ್ಯಕ್ತಿಗಳನ್ನು ಘನತೆಗೇರಿಸುವ ಅಗತ್ಯವಿರುವುದಿಲ್ಲ. ಇಂಥಾ ಮನುಷ್ಯರು ತಮ್ಮ ಸ್ವಯಂ ಸ್ಫೂರ್ತಿ ಮತ್ತು ಪ್ರತಿಭೆಗಳಿಂದಲೇ ಘನ ವ್ಯಕ್ತಿಗಳಾಗುವರು. ಸತ್ಯವು ಸಿದ್ಧತೆಯ ಮೇಲ್ಪದವನ್ನು ಹತ್ತುತ್ತಲೇ ಇಂಥಾ ವಿಭೂತಿ ಪುರುಷರ ಅಂತರಿಕ ಚೇತನವು ಎದ್ದುಕೊಂಡು ತನ್ನ ಮಹಾತ್ಮ್ಯವನ್ನು ಪ್ರಕಾಶಿಸುವುದು. ಮುಂದಿನ ಸನ್ನಿವೇಶಗಳ ಸಮಾಗಮವು ಬರುತ್ತ ಬಂದ ಹಾಗೆ ಪ್ರಪಂಚಕ್ಕೆ ಪ್ರೇಮ, ಸತ್ಯ, ಮತ್ತು ಐಕ್ಯದ ಸಂದೇಶಗಳು ಬೇಕಾಗುವುವು."

ಪೌರ್ವಾತ್ಯದೇಶದಲ್ಲಿ ಜನಿಸಿದ ಇವರು ಯೋಗ್ಯ ವ್ಯಕ್ತಿಗಳೇ ಸರಿ. ಮಾನವನು ನೈತಿಕ ಬಲಪ್ರದಾಯಕನೆಂದು ಗಾಂಧಿಯವರು ಸ್ಪಷ್ಟೀಕರಿಸುತ್ತಿರುವರು. ಮಾನವ ಸ್ವಭಾವವು ಧಾರ್ಮಿಕ ಮತ್ತು ನೈತಿಕ ಮಾರ್ಗ ಕ್ರಮಣದಲ್ಲಿ ಶುಭ್ರ ಶ್ರೇಷ್ಠಸ್ಥಿಯಾಗಿ ಬೆಳಗಲರ್ಹನೆಂದು ಗಾಂಧಿಯವರು ಪ್ರಕಟಿಸುತ್ತಾರೆ. ದ್ವೇಷ, ಅಸೂಯೆ ಸಮುದ್ಭಾವನೆಗಳಿಂದಾಗಿ ಮನುಷ್ಯನು ತನ್ನ ದೈಹಿಕ ಮತ್ತು ಆತ್ಮಿಕ ಶಕ್ತಿಗಳನ್ನು ಕಳೆದುಕೊಂಡು ಸಂಪೂರ್ಣ ನಾಶ ಹೊಂದುತ್ತಾನೆಂಬುದನ್ನು ಅವರು ಈಗ ಲೋಕ ಲೋಕ ಸಾರುತ್ತಿರುವರು."

ನಾನು ಹೇಳಿದೆ—'ನೀವು ಇಂದಿನ ದಿನದಲ್ಲಿ ಒಬ್ಬ ಮಹದ್ವ್ಯಕ್ತಿ ಸ್ವರೂಪರೇ. ಪ್ರಖ್ಯಾತಿಗೊಂಡಿದ್ದೀರಿ. ಮಹಾತ್ಮ ಗಾಂಧಿಯವರ ಯಶಸ್ಸನ್ನು ಕುರಿತು ನೀವೂ ನಿಮ್ಮ ಬಾಯಿಂದ ಉದುರುವ ಈ ಮಾತುಗಳು ಹರ್ಷಜನಕವೇ ಸರಿ. ಆದರೆ ಹಿಂದೂ ದೇಶದಲ್ಲಿನ ಅವರ ಅಸಹಕಾರ ಚಳವಳದ ಕುರಿತು ನಿಮ್ಮ ಅಭಿಮತವೇನು?'

ನಗುತ್ತಾ ಠಾಗೂರರೆಂದರು—'ಸರಿ. ಇದು ಬಂದು ಪ್ರತ್ಯೇಕ ಸಂಗತಿ. ನಾನು ಒಂದು ದಿನ ಹಿಂದೂ ದೇಶದ ಮಿತ್ರರೊಬ್ಬರಿಗೆ ಟಪಾಲು ದ್ವಾರಾ ರವಾನಿಸಬೇಕೆಂದಿದ್ದ ಒಂದು ಪತ್ರವನ್ನು ನಿಮಗೆ ತೋರಿಸಿದ ಸಂಗತಿಯು ನಿಮ್ಮ ನೆನಪಿನಲ್ಲಿರಬಹುದು. ಮಹಾತ್ಮ ಗಾಂಧಿಯವರ ಅಸಹಕಾರ ಚಳವಳದ ಕುರಿತು ನಾನು ಅದರಲ್ಲಿ ವಿವರಿಸಿದ್ದೆ. ವಾಸ್ತವಿಕವಾದ ಸಂಗತಿಗಳನ್ನೆಲ್ಲ ನಾನು ಬಿಡಬೇಕೆಂದು ಮಹಾತ್ಮ ಗಾಂಧಿಯವರು ನನಗೆಂದರೆ, ನಾನು ಅವುಗಳನ್ನು ಬಿಡಲೊಲ್ಲೆ. ಸಿ. ಯಫ್. ಎಂಡ್ರ್ಯೂಸರು ಇಂಗ್ಲೆಂಡಿನವರಾಗಿರುವುದರಿಂದ ಅವರನ್ನು ನಾನು ಪರಿತ್ಯಜಿಸಬೇಕೆಂದರೆ, ಅದು ನನ್ನಿಂದಾಗಲಾರದು. ನಮ್ಮ ಜನ್ಮಭೂಮಿ ಪುನರುಜ್ಜೀವನಕ್ಕೆ ಸಹಾಯಕರವಾದ ಪಾಶ್ಚಿಮಾತ್ಯ ರಸಾಯನ ಶಾಸ್ತ್ರಗಳನ್ನು ನಾನು ದೂರೀಕರಿಸಬೇಕೆಂದು ಹೇಳಿದರೆ ಅದು ನನ್ನಿಂದಾಗದು. ಮಹಾತ್ಮ ಗಾಂಧಿಯವರ ಅಭಿಪ್ರಾಯವು ಹೇಗೂ ಇರಲಿ; ಪಶ್ಚಿಮ ದೇಶವು ನಮಗೆ ಯಾವುದನ್ನು ಅತ್ಯುತ್ತಮವೆಂದು ಕೊಡುತ್ತದೋ ಅದನ್ನು ನಾವು ಅಭಾರಿಗಳಾಗಿ ಸ್ವೀಕರಿಸಬೇಕು. ನಮ್ಮಲ್ಲಿ ಯಾವುದು ಅತ್ಯುತ್ಕೃಷ್ಟವೆಂದಿದೆಯೋ ಅದನ್ನು ನಾವು ಪಶ್ಚಿಮ ದೇಶಗಳಿಗೆ ಕೊಡಬೇಕು. ಹೀಗಾದರೆ ಪ್ರಪಂಚದ ಮಾನವ ಕುಟುಂಬಗಳೆಲ್ಲ ನೈತಿಕ ಮತ್ತು ಭೌತಿಕ ವಿಚಾರ ದೃಷ್ಟಿಯ ಊರ್ಜಿತಾವಸ್ಥೆಯನ್ನು ಹೊಂದುವುದು ನಿಜ. ಭಿನ್ನ ಭಿನ್ನವಾಗಿರುವುದು ಅಪಾಯಕರವು. ಪಾಶ್ಚಿಮಾತ್ಯವಾದ ಎಲ್ಲವುಗಳನ್ನೂ ಬಹಿಷ್ಕರಿಸುವ ಮಹಾತ್ಮ ಗಾಂಧಿಯವರ ಧೋರಣೆಯು ಹಿಂದೂದೇಶಕ್ಕೆ ಸ್ವಪ್ರಾಣ ಹರಣ ಸಂಗತಿಯಾಗಿ ಪರಿಣಮಿಸುವುದು."

'ಪೂರ್ವಕಾಲದ ಸಂತರನ್ನು ಮಹಾತ್ಮ ಗಾಂಧಿಯವರನ್ನು ತುಲನಾತ್ಮಕ ದೃಷ್ಟಿಯಿಂದ ನೀವು ತೂಗುವರೆ ಹೇಗೆ?' ಎಂದು ನಾನು ಪ್ರಶ್ನಿಸಿದೆ.

ಠಾಗೂರರ ಉತ್ತರವಾಯಿತು 'ಸಂತಶ್ರೇಷ್ಠರಾದ ಬುದ್ಧ, ಯೇಸು ಕ್ರಿಸ್ತ, ಬಹಾ—ಉಲ್ಲಾ ಮೊದಲಾದವರ ಉಪದೇಶಾಮೃತವನ್ನು ಮಹಾತ್ಮ ಗಾಂಧಿಯವರು ಇಂದಿನ ದಿನದಲ್ಲಿ ಅತೀ ವಿಶಾಲ ದೃಷ್ಟಿಯಿಂದ ಪ್ರಪಂಚದ ಮೇಲೆ ಧಾರೆ ಎರೆಯುತ್ತಿರುವರು. ಅವರು ಧರಣೀತಲದ ಮೇಲೆ ಇಂದು ಪಸರಿಸಲು ಬಿಟ್ಟಿರುವ ಅಪ್ರತಿಹತವಾದ ನೈತಿಕ ಶಕ್ತಿಯ ಪ್ರಭೆಯನ್ನರಿಯಲು ನಾವು ಅವರು ಹೇಳಿದ, ಅವರು ಮಾಡುವ ಎಲ್ಲಾ ವಿಷಯಗಳಿಗೂ ಒಪ್ಪುವ ಅಗತ್ಯವಿಲ್ಲ. ಅವರು ಇಂದಿನ ದಿನದಲ್ಲಿ ಸರ್ವಶ್ರೇಷ್ಠರಾದ ಘನ ಮೂರ್ತಿಯಾಗಿರುತ್ತಾರೆ. ಅವರ ಅಂತರಾತ್ಮದಲ್ಲಿ ಅತ್ಯಮೂಲ್ಯವಾದ ಗುಣ ಭಂಡಾರವೇ ಅಡಗಿಕೊಂಡಿರುತ್ತದೆ.

ಮಹಾತ್ಮ ಗಾಂಧಿಯವರು ತನಗೆ ಗೋಚರವಾಗುವ ವಿಷಯಗಳ ಪರಿಶೋಧನೆಗೆ ತೊಡಗಿರುವರೆಂಬ ಸಂಗತಿಯು ನಿಮಗೆ ತಿಳಿದಿರಲಿ. ಅವರು ಹೂಡಿರುವ ಪ್ರಯೋಗ ಕಾರ್ಯದಿಂದ ಮುಂದಕ್ಕೆ ಏನೆಲ್ಲ ಪರಿಣಾಮಗಳುತ್ಪನ್ನವಾಗುವುವೆಂದು ಅಪರಿಪಕ್ವವಾದ ಈ ಸಮಯದಲ್ಲಿ ಹೇಳಲಸಾಧ್ಯ.'

ಬೋಲ್ಪುರದಲ್ಲಿ ನಡೆದ ಗಾಂಧೀ ಜಯಂತಿಯ ದಿನ ಠಾಗೂರರು ಹೀಗೆಂದರು—'ನಮ್ಮ ಧೈರ್ಯರಹಿತ ನಿಶ್ಚೇತನಾಮಯ ಮನೋಭಾವದ ಅಸ್ವಾರದ ಮೇಲೆ ವಿದೇಶೀಯ ವರ್ತಕ ಮಂಡಳಿಯು ವ್ಯಾಪಾರ ವಾಣಿಜ್ಯಗಳನ್ನು ಸ್ಥಾಪಿಸಿ, ತನ್ನ ಅಮೋಘ ಮಂದಿರವನ್ನು ಉಜ್ವಲವಾಗಿ ಕಟ್ಟಿಬಿಟ್ಟಿತು. ನಮ್ಮ ನಿರ್ಬಲತೆಯೊಂದಲ್ಲದಿದ್ದರೆ, ಸೈನ್ಯಗಳೂ ಶಸ್ತ್ರಗಳೂ ಕೂಡ ಈ ಕೆಲಸವನ್ನು ಸಾಧಿಸಲು ಸಾಧ್ಯವಾದ ಸಂಗತಿಯಾಗಿದ್ದಿಲ್ಲ. ಇಷ್ಟು ಕಾಲದಿಂದಲೂ ನಾವು ನಮ್ಮೊಳಗಿನ ಅಂತರಾತ್ಮವನ್ನು ಅಪಜಯದ ದುರ್ಮಾರ್ಗದಲ್ಲಿ ನಡೆಸಿಕೊಂಡು ಹೋದೆವು. ಅಂಥಾ ದುರ್ಮಾರ್ಗದಿಂದ ಇಂದು ಮಹಾತ್ಮ ಗಾಂಧಿಯವರು ನಮ್ಮನ್ನು ರಕ್ಷಿಸಲು ಬಯಸುತ್ತಾರೆ. ಅವರು ಇಂದು ಭಾರತ ಜನಾಂಗದ ಸುಧೃಢ ಜ್ಞಾನ ಸಾಗರವು [illegible] ದು ನಮ್ಮಲ್ಲಿ ಅದು ತುಂಬಿಕೊಂಡಿದೆ. ಅದರಿಂದಾಗಿ ಪ್ರಪಂಚ ಸಮಾಜದಲ್ಲಿ ನಾವಿಂದು ನಮ್ಮ ಯೋಗ್ಯ ಸ್ಥಾನವನ್ನು ನಮ್ಮದಕ್ಕಾಗಿ ಕೇಳುತ್ತಿದ್ದೇವೆ.'

'ಗಾಂಧಿಯವರು ತನ್ನ ತಪ್ಪುಗಳನ್ನು ಒಪ್ಪುತ್ತಿದ್ದಾರೆ. ಸಮಯವು ಬದಲಾದ ಹಾಗೆ ತನ್ನ ಅಭಿಪ್ರಾಯಗಳನ್ನು [illegible] ಹೇಳುತ್ತಾರೆ. ಇಂಥಾ ಬದಲಾವಣೆಗಳನ್ನು ಮಾಡಿದರೂ ಅವರು ತನ್ನ ಸತ್ಯ ಸಂಶೋಧನೆಯೊಂದನ್ನು ರವಷ್ಟಾದರೂ ಪರಿವರ್ತಿತಗೊಳಿಸಲಿಲ್ಲ. ಈ ವಿಷಯದಲ್ಲಿ ಅವರು ನಿಷ್ಕಳಂಕವಾದ ತಪಸ್ಸಿನ ಮೇಲೆ ಕಾಲೂರಿ ನಿಂತಿರುವರು. ಈ ಸುದೃಢತೆಯು ಅವರಲ್ಲಿ ಅಜನ್ಮವಾಗಿ ಬಂತು. ಕರ್ಮದ ಕವಚವೆಂಬಂತೆ ಅದು ಅವರಿಗೆ ತಗಲಿಕೊಂಡಿದೆ. ಅವರ ಈ ಅನಿರ್ವಚನೀಯ ಶಕ್ತಿ ಪ್ರತಿಷ್ಠೆಯು ಮಾನವನ ಚರಿತ್ರೆಯಲ್ಲಿ ನಾಶರಹಿತ ವಿಷಯವಾಗಿ ನಿಂತೀತು. ಪ್ರಪಂಚದಲ್ಲಿ ಸಂಭವಿಸುತ್ತಿರುವ ಅಗತ್ಯ ಸಂಭವಗಳಿಗನುಸಾರವಾಗಿ ಬದಲಾವಣೆಯು ಸರ್ವದಾ ಆಗುತ್ತಿದೆ. ಆದರೂ ಇಂಥಾ ಮಾರ್ಪಾಟುಗಳಿಗೆ ತುತ್ತಾಗದೆ ಜಾಜ್ವಲ್ಯಮಾನವಾಗಿ ಪ್ರವರ್ತಿಸುತ್ತಿರುವ ಮಹಾತ್ಮರ ಜೀವನ ಬೆಳಕು ಒಂದರಿಂದ ನೈಜವಾದ ಶ್ರೇಷ್ಠತೆಯು ಹೊರಸೂಸುತ್ತಿದೆ.'

ಮಹಾತ್ಮ ಗಾಂಧಿಯವರು ತನ್ನೆದುರು ಯಾವ ವಿಘ್ನಗಳೂ, ತೊಂದರೆಗಳೂ ನಿಲ್ಲುವಂತೆ ಎಡೆಗೊಡಲಿಲ್ಲ. ತಾನು ತಪ್ಪು ಹೋಗಿದ್ದರೂ ಅವರು ಆ ತಪ್ಪಿನಿಂದಾಗಿ ಧ್ಯೇಯಚ್ಯುತರಾಗಲಿಲ್ಲ. ಎಂತಹ ಆವೇಶದ, ಉದ್ರೇಕದ ಸಂಧಿಯಲ್ಲಿ ಅವರ ಮನೋವಿಶಾಲತೆ ಸಮಾಧಾನವು ತನ್ನ ಶಕ್ತಿಯನ್ನು ಕಳೆದುಕೊಳ್ಳಲಿಲ್ಲ. ತನ್ನ ಆಲೋಚನಾಶಕ್ತಿಯನ್ನು ಬಿಟ್ಟುಕೊಡಲಿಲ್ಲ. ಇಂತಹ ಅಮೋಘ ಗುಣಾಢ್ಯರಾದ ದಿವ್ಯ ಪುರುಷಮಣಿಯ ಜಯಂತಿಗಾಗಿ ನಾವಿಂದು ಮಣಿಯುವೆವು."

ರವೀಂದ್ರರ ಮನೋಭಾವ.

ರವೀಂದ್ರನಾಥ ಠಾಗೂರರು ಪ್ರಪಂಚದ ಪ್ರಖ್ಯಾತ ಕವಿಪುಂಗವರೆಂದೂ, ಅಲ್ಲದೆ ಅವರು ಭಾರತೀಯರಲ್ಲೊಬ್ಬರೆಂದೂ ನಾವು ಅಭಿಮಾನ ಹೊಂದಬೇಕಾಗಿದೆ. ಇವರು ಮಹಾತ್ಮ ಗಾಂಧಿಯವರ ಕುರಿತು ಮೇಲೆ ಬರೆದ ರೀತಿಯಿಂದ ಪ್ರಶಂಸನೀಯವಾಗಿ ನುಡಿದಿರುವರಾದರೂ, ಇವರು ಮಹಾತ್ಮ ಗಾಂಧಿಯವರಂತೆ ದೇಶರಚನಾ ಕೆಲಸ (Constitution Building) ದಲ್ಲಿ ವಹಿಸಿದ ಭಾಗವು ಬಹಳ ಕಡಿಮೆಯೆಂದು ಹೇಳಬಹುದು. ರವೀಂದ್ರರು ಮೊನ್ನೆ ಪರ್ಷ್ಯಾ ದೇಶಕ್ಕೆ ವಿಮಾನದ ಮೂಲಕ ಹೋಗಿದ್ದರು. ಅವರನ್ನು ಅಲ್ಲಿಯ ಕವಿವರ್ಯರು ಭೇಟಿಯಾಗಿ, "ನೀವು ಮಹಾತ್ಮ ಗಾಂಧಿಯವರ ಆದರ್ಶವನ್ನು ಕುರಿತು ಪ್ರಶಂಸನೀಯವಾಗಿ ಮಾತನಾಡುತ್ತೀರಷ್ಟೆ. ನೀವು ಶುದ್ಧ ಖಾದಿಯನ್ನೇಕೆ ಧರಿಸಿಕೊಳ್ಳುವುದಿಲ್ಲ? ಎಂದು ಪ್ರಶ್ನೆ ಮಾಡಿದರು. ರವೀಂದ್ರನಾಥ ಠಾಗೂರರಿಗೆ ಭಾರತ ಭೂಮಿಯ ಮೇಲೂ ಭಾರತೀಯರ ಮೇಲೂ ಸಹಾನುಭೂತಿಯಿದೆಯಾದರೂ, ಅವರು ತನ್ನ ವಿಶಾಲದೃಷ್ಟಿಯ ನೆನಪಿಂದೆಂಬಂತೆಯೋ ಏನೋ, ಖಾದಿ ಪುರಸ್ಕರ್ತರಾಗಿಲ್ಲ. ಹಿಂದೂದೇಶವು ತೀವ್ರವಾದ ರಾಜಕೀಯ ಚಳವಳದಲ್ಲಿ ಈಡಾಡುತ್ತಿರುವಾಗಲೂ, ಠಾಗೂರರು ಒಂದು ಸಲವಾದರೂ ತಮ್ಮ ರಕ್ಷಣೆಗಾಗಿ ಬರಲಿಲ್ಲವೇಕೋ ತಿಳಿಯದೆಂದು ಅನೇಕ ದೇಶಧುರೀಣರ ಪ್ರಶ್ನೆಯಿದೆ. ಮಹಾತ್ಮ ಗಾಂಧಿಯವರೂ ಕೂಡಾ ರವೀಂದ್ರರಿಗೊಮ್ಮೆ ಹೀಗೆಂದಿದ್ದರಂತೆ. "ರವೀಂದ್ರರೇ, ಇದು ಪದ ಹೇಳುವ ದಿನವಲ್ಲ. ಹೊಟ್ಟೆಯ ಪದವನ್ನು ಹಾಡುವ ದಿನ. ಹೊಟ್ಟೆಗೆ ಅನ್ನ ದೊರೆತ ಮೇಲೆ ಆ ಸಂಗೀತಕ್ಕೆ ಮನಸ್ಸು ಕೊಡಬಹುದು." ಇದರಿಂದಾಗಿ, ಮಹಾತ್ಮ ಗಾಂಧಿಯವರೂ ಕೂಡಾ ಪ್ರತಿಯೊಬ್ಬನೂ ನವೀನ ಭಾರತ ರಚನೆಗೆ ತಲೆಯೊಡ್ಡಬೇಕೆಂದು ಹೇಳಿದ ಅರ್ಥವಾಗುತ್ತದೆ.

ರವೀಂದ್ರನಾಥ ಠಾಗೂರರಿಗೆ ದೇಶವಿದೇಶಗಳಲ್ಲೆಲ್ಲ ಮಹಾ ಪ್ರತಿಭಾಶಾಲಿಗಳ ಪರಿಚಯವಿದೆ. ತಾನು ಒಂದು ವೇಳೆ ಭಾರತದ ಪ್ರಕೃತದ ಸ್ವಾತಂತ್ರ್ಯ ಹೋರಾಟಕ್ಕೆ ಮನಸ್ಸುಗೊಟ್ಟರೆ ಕಾಟಸ್ಥ್ಯದಿಂದ ಕುಳಿತುಕೊಂಡ ಆ ಮಿತ್ರರು ನನ್ನನ್ನು ನೋಯುವುದೋ ಎಂಬ ಭಾವನೆಯಿಂದ ರವೀಂದ್ರರು ರಾಜಕೀಯ ಕೆಲಸಕ್ಕೆ ಕೈಯಿಕ್ಕುವುದಿಲ್ಲ ಎಂದು ಬಂದು ಪತ್ರಿಕೆಯೆಂದಿದೆ. ಹೇಗೂ ಇರಲಿ. ರವೀಂದ್ರರು ಭಾರತೀಯರೇ.

ಬಹಿರ್ದೇಶಗಳನ್ನು ಬಹಿಷ್ಕರಿಸುವ ವಿಚಾರದಲ್ಲಿ ಠಾಗೂರರ ಸಮ್ಮತಿಯಿಲ್ಲ. "ಹೊರ ಮತ್ತು ಒಳದೇಶಗಳು ಪರಸ್ಪರ ಅನ್ಯೋನ್ಯತೆಯಿಂದ ವ್ಯಾಪಾರ ವಹಿವಾಟುಗಳನ್ನು ನಡೆಸಿದರೇನೆ ಮಾನವ ವರ್ಗಕ್ಕೆ ಸುಖವುಂಟು" ಎಂಬ ಇವರ ಈ ಮಾತಿನಿಂದಲೇ ಇದು ತಿಳಿದುಬರುತ್ತದೆ. ಇವರಿಗೆ ಸ್ವದೇಶಿಯ ಮೇಲೆ ಮಮತೆಯಿದೆ. ಆದರೂ ಇವರು ವಿದೇಶಿಯನ್ನು ಬಹಿಷ್ಕರಿಸುವವರಲ್ಲ. ಠಾಗೂರರ ಈ ರೀತಿಯ ಮನೋಭಾವವನ್ನು ಕಂಡ ಅನೇಕರು ಈಗಲೂ ಆಶ್ಚರ್ಯಗೊಳ್ಳುತ್ತಿರುವರು. ಇದರ ಅರ್ಥವೇನೆಂದು ವಿಚಾರಿಸುತ್ತಿರುವರು. ಮಹಾತ್ಮ ಗಾಂಧಿಯವರಲ್ಲೆಷ್ಟು ಆತ್ಮಶಕ್ತಿಯಿದೆಯೋ ಅಷ್ಟೇ ಆತ್ಮಶಕ್ತಿ ರವೀಂದ್ರರಲ್ಲೂ ಇದೆ. ಆದರೆ ಮಹಾತ್ಮರ ಆತ್ಮಶಕ್ತಿಯು ಹಿಂದೂದೇಶದ ಜನತೆಯ ಮೇಲಿದೆ. ಠಾಗೂರರ ಆತ್ಮಶಕ್ತಿ [illegible] ಇಡೀ ವಿಶ್ವಜನಾಂಗದ ಮೇಲಿದೆ. [illegible]

ನಿರ್ಭಾಗ್ಯ ಶಿಕ್ಷೆ.

(ಲೇಖಕ.—ಶ್ರೀಯುತ ಆರ್. ಎಸ್. ಭಾರದ್ವಾಜ [illegible])

೪ ನೇ ಭಾಗ.

(ಕಳೆದ ವಾರದಿಂದ ಮುಂದುವರಿದದ್ದು.)

ರಂಗರಾಯನ ನಿರಂತರ ದುಃಖ, ಉದ್ಯೋಗಾನ್ವೇಷಣ, ಅಪಜಯ ಮತ್ತು ಆತ್ಮಹ[illegible].

ಈ ಕೊನೆಯ ಭಾಗವು ರಂಗರಾಯನ ದುಃಖಮಯ [illegible] ದಾಗಿದೆ. ರಂಗರಾಯನಿಗೆ ನಿರಂತರವೂ ನಾಗೇಂದ್ರರ ಕೊನೆಯ ಭಯಂಕರ ಚಿತ್ರವು ಮನಸ್ಸಿನಲ್ಲಿ ಹೊಳೆಯುತ್ತಿದ್ದಿತು. ಅವನ ವೇತನವು ದೊರೆಯದಕ್ಕಾಗಿ ಸದಾ ಚಿಂತಿಸುತ್ತಿದ್ದನು. ಮತ್ತೊಮ್ಮೆ 'ಜನರಲ್ ಏಜೆನ್ಸಿ' ಆಫೀಸಿಗೆ ಹೋದನು. ಅಲ್ಲಿ ಅವನಿಗೆ ಉದ್ಯೋಗವು ದೊರೆಯಲಿಲ್ಲ. ದಾದರಕ್ಕೆ ಹೋಗಲವನ ಮನಸ್ಸು ಒಪ್ಪದು. ಖರ್ಚಿಗೆ ಹಣವಿಲ್ಲ. ಚಿಂತೆಯು ದಿನೇ ದಿನೇ ಅಧಿಕವಾಗ ಹತ್ತಿತು, ದಾರಿ ತೋರದಾಯಿತು. ದಿಙ್ಮೂಢನಾದನು. ರಾತ್ರಿಯೆಲ್ಲಾ ನಿದ್ರೆ ಬಾರದೆ ಎಚ್ಚರದಿಂದ ಇರಬೇಕಾಗಿತ್ತು. ಇದರಿಂದ ಅವನ ದೇಹವು ಕೃಷವಾಯಿತು. ಆಶೆಗಳನ್ನು ತೊರೆದನು, ಜೀವದ ಮೇಲಣ ಹಂಬಲನ್ನು ಬಿಟ್ಟನು.

ಹೀಗೆ ರಂಗರಾಯನು ಕಡು ಶೋಚನೀಯವಾದ ಸ್ಥಿತಿಯಲ್ಲಿದ್ದನು. ಮಿತ್ರರಾದರೋ ಎಂದೋ ಅವನನ್ನು ಅಗಲಿದ್ದರು. ಈ ಸಂಗತಿಯು ರಂಗರಾಯನ ತಂದೆತಾಯಿಗಳಿಗೆ ತಿಳಿಯಿತು. ಆದುದರಿಂದ ರಂಗರಾಯನ ತಂದೆ ಶ್ಯಾಮರಾಯರು [illegible] ರಂಗರಾಯನಿದ್ದ 'ಅನ್ನಪೂರ್ಣ ಲಾಡ್ಜಿಗೆ' [illegible] ಅವನ ಆಗಮನವನ್ನೇ ಇದಿರು ನೋಡುತ್ತಲಿದ್ದರು. 6 ಗಂಟೆಯಾಯಿತು, 7 ತಾಸೂ ಕಳೆಯಿತು. 'ಕ್ರಿಸ್ತ ಚರ್ಚಿ'ನಿಂದ ಘಂಟೆಯನಾದವು ಕೇಳಿಸುತ್ತಿತ್ತು. ಮನೆಗಳೆಲ್ಲವೂ ದೀಪಗಳ ಬೆಳಕಿನಿಂದ ವಿರಾಜಮಾನವಾಗಿ ಶೋಭಿಸುತ್ತಿದ್ದುವು. 'ಟ್ರಾಮ್' ಬಂಡಿಗಳಲ್ಲಿ ಗಿರಣಿಗಳಿಂದಲೂ, ಆಫೀಸುಗಳಿಂದಲೂ ಜನರು ಮನೆಗೆ ಹಿಂದಿರುಗುತ್ತಿದ್ದರು. ಈಗ 8 ತಾಸಾಯಿತು. ರಂಗರಾಯನು ಬರಲಿಲ್ಲ. ಜನರೆಲ್ಲರೂ ಊಟ ಮಾಡಿ ಮಲಗತೊಡಗಿದರು. ಆದರೆ ಗಿರಣಿಗಳ ಶಬ್ದವು ನಿಂತಿರಲಿಲ್ಲ. 10 ತಾಸು ಕಳೆದರೂ ಮತ್ತೆ ರಂಗರಾಯನು ಬರಲೇ ಇಲ್ಲ. ಶ್ಯಾಮರಾಯರು ಊಟ ಮಾಡಿ, ರಂಗರಾಯನು ಬಂದಾನೆಂಬ ನಿರೀಕ್ಷೆಯಿಂದ ಬಾಗಿಲ ಅಗಣಿಯನ್ನು ಹಾಕದೆ ಮಲಗಿದರು.

ಶ್ಯಾಮರಾಯರಿಗೆ ಮಲಗಿದರೆ ನಿದ್ರೆ ಹತ್ತದು. ನಿದ್ರಾದೇವಿಯು ಬರುವಳೂ ಅಲ್ಲ. ಬಾರದರೆ ಸರಿ, [illegible] ಜನರ ಪಾಡೇನು? ಮುಂಜಾವಿನಲ್ಲಿ (ಬೆಳಗಿನ ಜಾವದಲ್ಲಿ) ಸ್ವಲ್ಪ ನಿದ್ರೆ ಬಂದಂತಾಯಿತು. ಶ್ಯಾಮರಾಯರಿಗೊಂದು ಕನಸು ಬಿತ್ತು. ಆ ಕನಸಿನಲ್ಲಿ ರಂಗರಾಯನು ಮಾರ್ಕೆಟಿನ ಬಳಿಯಲ್ಲಿರುವ ಬಾವಿಗೆ ಹಾರಿ ಪ್ರಾಣ ಕಳೆದುಕೊಂಡುದ ಕಂಡರು. ಅವರಿಗೆ ಬಹಳ ಖೇದವಾಗತೊಡಗಿತು. ಆದರೂ ಸ್ವಪ್ನದ ಸಂಗತಿಯಲ್ಲವೇ ಎಂದು ಸಮಾಧಾನವನ್ನು ತಾಳಿದರು. ಆದರೆ ಬೆಳಗಿನ ಜಾವದ ಕನಸು ಸುಳ್ಳಾಗುವುದಿಲ್ಲ. ಶ್ಯಾಮರಾಯರು ಮಗನ ಮೇಲಿನ ಚಿಂತೆಯ ಭರದಲ್ಲಿದ್ದುದರಿಂದ ಇಂದು ಅದು ಅವರ ಮನಸ್ಸಿಗೆ ಹೊಳೆದರೂ ಅವರು ನಂಬಲೇ ಇಲ್ಲ.

ಕೊಡಗು.

ಸನ್ ೧೯೩೩ನೇ ಇಸವಿ

ಜುಲೈ ತಾ. ೧೪ನೇ ಶುಕ್ರವಾರ.

ಪ್ರೆಸ್ ಆರ್ಡಿನೇನ್ಸ್

ಜಾರಿಯಲ್ಲಿರುವವರೆವಿಗೆ

ನಾವು

ಅಗ್ರಲೇಖನ

ವನ್ನು

ಪ್ರಕಟಿಸುವುದಿಲ್ಲ.

ಇಂಡಿಯಾ ಮಂತ್ರಿಯವರ ಹೇಳಿಕೆ ಮತ್ತು ತರುವಾಯ.

(ಬರೆದು ಬಂದದ್ದು.)

ಕಳೆದ ತಿಂಗಳ ಅಂತ್ಯದಲ್ಲಿ ಇಂಡಿಯಾದ ಸ್ಟೇಟ್ ಸೆಕ್ರೆಟರಿಯವರಾದ ಸರ್ ಸ್ಯಾಮ್ಯುವೆಲ್ ಹೋರ್‌ರವರು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಹಿಂದೂದೇಶದ ಮುಂದಿನ ರಾಜಕೀಯ ರಚನೆಯನ್ನು ಕುರಿತು ಮಾಡಿದ ಮುಖ್ಯ ಭಾಷಣವನ್ನು ವೈಸರಾಯರು ಇಂಡಿಯಾದಲ್ಲೂ ಅದೇ ಸಮಯದಲ್ಲಿ ಪ್ರಕಟಿಸಿದ್ದು ವಾಚಕರಿಗೆಲ್ಲಾ ತಿಳಿದ ವಿಷಯವಾಗಿದೆ. ಇಂಡಿಯಾ ಮಂತ್ರಿಯವರ ಈ ಹೇಳಿಕೆಯ ಮೇರೆ ದುಂಡು ಮೇಜು ಪರಿಷತ್ತಿನ ವಿಟಿಂಗುಗಳು ಇನ್ನು ನಡಿಸಲ್ಪಡುವುದಿಲ್ಲ. ಆದರೆ ಸದರಿ ಪರಿಷತ್ತಿನ ಕಾರ್ಯಕಾರಿ ಮಂಡಳಿಯಾಗಿ ನೇಮಿಸಲ್ಪಟ್ಟ 'ಕನ್‌ಸಲ್ಟೇಟಿವ್' ಕಮಿಟಿಯ ವಿಟಿಂಗನ್ನು ಕೆಲವು ತಿಂಗಳುಗಳಲ್ಲಿ ಅಂದರೆ ಬ್ರಿಟಿಷ್ ಸರ್ಕಾರದವರು ಕೋಮುವಾರು ಸಮಸ್ಯೆಯ ವಿಷಯ ತಮ್ಮ ತೀರ್ಮಾನವನ್ನು ಪ್ರಕಟಿಸಿದ ಮೇಲೆ, ನಡಿಸಿ ಅದರಲ್ಲಿ ತೀರ್ಮಾನಿಸಲ್ಪಡುವ ಮತ್ತು ತೀರ್ಮಾನವಾಗದ ವಿಷಯಗಳನ್ನು ಸರ್ಕಾರದವರು ವಿಮರ್ಶಿಸಿ, ಅವರ ಅಭಿಪ್ರಾಯಗಳನ್ನು ಎರಡು ಪಾರ್ಲಿಮೆಂಟುಗಳ 'ಜಾಯಿಂಟ್ ಸಿಲೆಕ್ಟ್' ಕಮಿಟಿಯ ಆಲೋಚನೆಗೆ ಬಿಡುವರು. ಈ ಕಮಿಟಿಯವರು ಕೆಲವು ಹಿಂದೀಯರನ್ನು ಇಂಗ್ಲೆಂಡಿಗೆ ಕರೆಸಿಕೊಂಡು ಅವರ ಅಭಿಪ್ರಾಯಗಳನ್ನು ಕೇಳುವರು. ನಂತರ ಈ ಸಿಲೆಕ್ಟ್ ಕಮಿಟಿಯವರು ಒಂದು ಮಸೂದೆಯನ್ನು ತಯಾರಿಸಿ ಪಾರ್ಲಿಮೆಂಟಿನ ಮುಂದೆ ಇಡುವರು. ಈ ಮಸೂದೆಯಲ್ಲಿ ಇಂಡಿಯಾದ ಪ್ರಾಂತ್ಯಗಳಿಗೆ ಸ್ವಾತಂತ್ರ್ಯ ಸರ್ಕಾರ ಕೊಡುವ ವಿಷಯವೂ, ನಂತರ ಕೆಲವು ಸಮಯದ ಮೇಲೆ ಫೆಡರಲ್ ಸರ್ಕಾರವನ್ನು ಜಾರಿಗೆ ತಂದು ಅದರಲ್ಲಿ ಜನರ ಪ್ರತಿನಿಧಿಗಳಿಗೆ ಜವಾಬ್ದಾರಿಯನ್ನು ಕೊಡುವ ವಿಷಯವೂ ಅಡಕವಾಗಿರುವುದಂತೆ.

ಈಗ ಎರಡು ವರ್ಷಗಳಿಂದ ಅಲ್ಲ ಗಟ್ಟಲೆ ರೂಪಾಯಿ ಖರ್ಚು ಮಾಡುತ್ತಾ, ಬ್ರಿಟಿಷ್ ರಾಜಕೀಯ ಪಟುಗಳೂ, ಇಂಡಿಯಾದ ಕೆಲವು ಧುರೀಣರೂ ಬಹು ಶ್ರಮ ವಹಿಸಿ ಹಿಂದೂಸ್ಥಾನದ ಮುಂದಿನ ಆಡಳಿತ ರಚನೆಯನು ಚರ್ಚಿಸುತ್ತಾ ಬಂದು ನೀರೆರೆದದ್ದು ನೋಡಿದರೆ ಯಾರಿಗೆ ತಾನೇ ಆಶ್ಚರ್ಯವೂ, ಅತೃಪ್ತಿಯೂ ಉಂಟಾಗದೆ ಇರುವುದು. ಪರಿಷತ್ತಿನ ಮೂಲಕ ರಚನೆಯ ಕಾರ್ಯವನ್ನು ಸಾಧಿಸುವುದು ಬಹು ವಿಳಂಬವಾಗುತ್ತದೆಂಬ ಕಾರಣದಿಂದ ದುಂಡು ಮೇಜು ಪರಿಷತ್ತನ್ನು ಅಂತ್ಯಗೊಳಿಸಿ ಸರ್ಕಾರದವರೇ ರಚನೆಯನ್ನು ತಯಾರಿಸುವ ಕಾರ್ಯವನ್ನು ಕೈಕೊಳ್ಳುವರಂತೆ. ಇದು ಹೊಟ್ಟೆ ಹಸಿವೆಯಿಂದ ಅನ್ನ ಕೇಳುತ್ತಿರುವವನಿಗೆ ಅನ್ನ ಬೇಯಿಸಲು ಹೊತ್ತಾಗುತ್ತದಾದ ಕಾರಣ ಭಕ್ಷ್ಯವನ್ನೇ ದೊರೆಯುವ ಕಲ್ಲನ್ನು ಕೊಡುವಂತಾಯಿತಲ್ಲವೇ? ಹಿಂದೀಯರು ತಮ್ಮ ದೇಶಕ್ಕೆ ಬೇಕಾದ ರಾಜಕೀಯ ಸುಧಾರಣೆಗಳನ್ನು ತಮ್ಮ ಮುಂದಾಳುಗಳ ಸಹಕಾರದಿಂದ ರಚಿಸಬೇಕೆಂದು ಹಗಲಿರಳು ಒಮ್ಮತದಿಂದ ಕೇಳಿಕೊಳ್ಳುತ್ತಿರುವಾಗ್ಯೂ, ಹಾಗೆ ಹಿಂದೀಯರನ್ನು ಸೇರಿಸಿಕೊಂಡು ಪರಿಷತ್ತು ನಡಿಸಲು ಕಾಲವಿಳಂಬವಾಗುವುದರಿಂದ, ಅದರಲ್ಲೂ ಈ ರೀತಿಯಲ್ಲಿ 2 ವರ್ಷ ಕಾಲ ಕಳೆದ ನಂತರ ತಾನೇ ತಮಗೆ ಉಚಿತವೆಂದು ತೋರುವ ರಚನೆಯನ್ನು ತಯಾರಿಸಿ ಬೇಗನೆ ಕೊಡುತ್ತೇವೆಂದು ಬ್ರಿಟಿಷ್ ಮಂತ್ರಿಗಳ ಹೇಳಿಕೆಯಾಗಿದೆ. ಬ್ರಿಟಿಷ್ ಸರ್ಕಾರದವರು ಕೊಡುವ ಸುಧಾರಣೆಯು ಹಸಿದವನಿಗೆ ಕಲ್ಲಿನಂತಾಗುವದೆಂಬುದನ್ನು ಹಿಂದೀಯರು ಈ ಮೊದಲೇ ಚೆನ್ನಾಗಿ ತಿಳಿದುಕೊಂಡಿರುವರು. ಆದುದರಿಂದಲೇ ಇಂಡಿಯಾದ ಸುಧಾರಣೆಯನ್ನು ಕುರಿತು ಆಲೋಚಿಸಲು 5 ವರ್ಷಗಳ ಹಿಂದೆ ಬರೀ ಬಿಳೀ ಜನರಿಂದ ಕೂಡಿದ ಸೈಮನ್ ಕಮಿಷನನ್ನು ನೇಮಿಸಿದಾಗ್ಯೂ ತೀವ್ರಪಕ್ಷದವರಾದ ಕಾಂಗ್ರೆಸ್ಸಿನವರು ಮಾತ್ರವಲ್ಲ, ಮಧ್ಯಪಕ್ಷದವರೂ, ಸಹಕಾರಿಗಳೂ ಸದರಿ ಕಮಿಷನನ್ನು ಬಹಿಷ್ಕರಿಸಿದ್ದಾಗಿದೆ. ಸದರಿ ಬಹಿಷ್ಕಾರ ಚಳವಳಿಯು ಬಹು ಚೆನ್ನಾಗಿ ನಡೆದದ್ದರಿಂದಲೇ ಬ್ರಿಟಿಷ್ ಮಂತ್ರಿಗಳು ಆಗಿನ ವೈಸರಾಯರಾಗಿದ್ದ ಲಾರ್ಡ್ ಇರ್ವಿನ್‌ರವರ ಆಲೋಚನೆಯೊಂದಿಗೆ ದುಂಡು ಮೇಜು ಪರಿಷತ್ತನ್ನು ಏರ್ಪಡಿಸಿದ್ದಾಗಿದೆ.

1930–31 ರಲ್ಲಿ ನಡೆದ ಒಂದನೇ ದುಂಡು ಮೇಜು ಪರಿಷತ್ತಿನಲ್ಲಿ ಕಾಂಗ್ರೆಸ್ ಪಕ್ಷದವರು ಭಾಗ ತೆಗೆದುಕೊಳ್ಳಲಿಲ್ಲ. ಆಗ್ಯೆ ಸತ್ಯಾಗ್ರಹ ಚಳವಳದಲ್ಲಿ ಕಾರಾಗೃಹ ವಾಸವನ್ನು ಕೈಕೊಂಡಿದ್ದ ಕಾಂಗ್ರೆಸು ಮುಂದಾಳುಗಳೊಂದಿಗೆ ಸಪ್ರು ಜಯಕರವರ ಮೂಲಕ ರಾಜಿ ಸಂಧಾನಗಳು ನಡಿಸಲ್ಪಟ್ಟಲ್ಲಿ ಕಾಂಗ್ರೆಸ್ಸಿನವರ ಶರತ್ತುಗಳಿಗೆ ಸರ್ಕಾರದವರು ಒಪ್ಪದ್ದರಿಂದ ಕಾಂಗ್ರೆಸ್ ಪಕ್ಷದವರು ದುಂಡು ಮೇಜು ಪರಿಷತ್ತಿಗಾಗಿ ಲಂಡನಿಗೆ ಹೋಗುವುದರ ಬದಲು ಜೈಲುಗಳಲ್ಲಿ ಕೊಳೆಯಬೇಕಾಯಿತು. ಸದರಿ ಪರಿಷತ್ತಿನ ಅಂತ್ಯದಲ್ಲಿ ಕೈಕೊಂಡ ಕಾರ್ಯವು ಮುಗಿಯದೆ ಹೋದರೂ ಕೂಡ ಅದು ಬಹು ಜಯಪ್ರದವಾಗಿಯೇ ನಡೆಯಿತೆಂದು ಬ್ರಿಟಿಷ್ ಧುರೀಣರು ಅಭಿಪ್ರಾಯವನ್ನಿತ್ತರು. ಎಷ್ಟಾದರೂ ಅತಿ ಪ್ರಾಮುಖ್ಯ ಸಂಸ್ಥೆಯಾದ ಕಾಂಗ್ರೆಸ್ಸಿನವರನ್ನು ಬಿಟ್ಟು ಹಿಂದೂದೇಶದ ಆಡಳಿತ ರಚನೆಯನ್ನು ತಯಾರಿಸಲು ಸಾಧ್ಯವಿಲ್ಲವೆಂಬುದನ್ನು ಅರಿತು, ರಾಜಿಗೆ ಬೇಕಾದ ಏರ್ಪಾಡುಗಳನ್ನು ನಡಿಸಿ ಗಾಂಧಿ–ಇರ್ವಿನ್ ಒಪ್ಪಂದವಾಯಿತು.

ಗಾಂಧಿ–ಇರ್ವಿನ್ ಒಪ್ಪಂದವಾದ ಕೂಡಲೇ ಕಾಂಗ್ರೆಸ್ಸಿನವರು ಶಾಸನಭಂಗ ಚಳವಳವನ್ನು ನಿಲ್ಲಿಸಿದರು. ಕರಾಚಿ ಕಾಂಗ್ರೆಸ್ಸಿನ ತೀರ್ಮಾನದಂತೆ ಮಹಾತ್ಮ ಗಾಂಧಿಯವರು ಕಳೆದ ವರ್ಷ ಲಂಡನಿನಲ್ಲಿ ನಡೆದ 2 ನೇ ದುಂಡು ಮೇಜು ಪರಿಷತ್ತಿನಲ್ಲಿ ಕಾಂಗ್ರೆಸ್ಸಿನ ಪ್ರತಿನಿಧಿಯಾಗಿ ಭಾಗ ತೆಗೆದುಕೊಂಡರು. ಈ ಪರಿಷತ್ತಿನಲ್ಲಿ ಹಲವು ಮುಖ್ಯ ಸಂಗತಿಗಳು ಚರ್ಚಿಸಲ್ಪಟ್ಟರೂ ರಚನೆಯ ವಿಷಯ ಯಾವದೊಂದು ಅಖೈರು ತೀರ್ಮಾನಕ್ಕೆ ಬರಲಾಗಲಿಲ್ಲ. ಸದರಿ ಕಾನ್‌ಫರೆನ್ಸನ್ನು ತಾತ್ಕಾಲಿಕ ನಿಲ್ಲಿಸಿ, ಅದರ ಕೆಲಸವನ್ನು ಇಂಡಿಯಾದಲ್ಲಿ ಮುಂದರಿಸಲು ಮೂರು ಉಪಕಮಿಟಿಗಳನ್ನೂ, ಒಂದು ಕಾರ್ಯಕಾರೀ ಕಮಿಟಿಯನ್ನೂ ನೇಮಿಸಿದರು. ಗಾಂಧಿಜೀಯವರು ಲಂಡನಿನಿಂದ ಇಂಡಿಯಾಕ್ಕೆ ಬಂದು ತಲಪುವುದರೊಳಗೆ ವೈಸರಾಯರು ಕೆಲವು ಆರ್ಡಿನೇನ್ಸ್‌ಗಳನ್ನು ಜಾರಿಗೆ ತಂದು ಬಿಟ್ಟರು ಮತ್ತು ಮಹಾತ್ಮರ ಕೋರಿಕೆ ಮೇರೆ ವೈಸರಾಯರು ತಮ್ಮೊಂದಿಗೆ ಭೇಟಿಗೆ ಅವಕಾಶವನ್ನೂ ಸಹ ಕೊಡಲಿಲ್ಲವೆಂಬುದೂ, ಅದಕಾರಣ ಕಾಂಗ್ರೆಸ್ಸಿನವರು ಪುನಹ ಸತ್ಯಾಗ್ರಹವನ್ನು ಹೂಡಬೇಕಾಗಿ ಬಂತೆಂಬುದೂ, ಅದರ ಫಲಿತಾಂಶವಾಗಿ ಬರೇ ಆರು ತಿಂಗಳ ಕಾಲದಲ್ಲಿ ಎಂಭತ್ತು ಸಾವಿರಕ್ಕಿಂತ ಹೆಚ್ಚು ಜನರು ಜೈಲು ವಾಸವನ್ನು ಅನುಭವಿಸಬೇಕಾಯಿತೆಂಬುದೂ ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಮೂರು ಉಪಕಮಿಟಿಗಳ ಕೆಲಸವು ಮುಗಿಯುತ್ತಾ ಬಂದು ಅವುಗಳ ವರದಿಗಳನ್ನು ವರ್ಕಿಂಗ್ ಕಮಿಟಿಯು ಚರ್ಚಿಸುವ ಮೊದಲೇ ಸ್ಟೇಟ್ ಸೆಕ್ರೆಟರಿಯವರು ದುಂಡು ಮೇಜು ಪರಿಷತ್ತನ್ನೇ ಅಂತ್ಯಗೊಳಿಸುವ ನಿಶ್ಚಯವನ್ನು ಮಾಡಿದ್ದು ಎಷ್ಟು ದೊಡ್ಡ ವಿಶ್ವಾಸಘಾತಕದ ಕೆಲಸವೆಂಬುದನ್ನು ವಾಚಕರೇ ಊಹಿಸಿಕೊಳ್ಳಬಹುದು. ಇದರಿಂದ ಈಗ ಪುನಹ ಸೈಮನ್ ಕಮಿಷನಿನ ರೀತಿಯನ್ನೇ ಕೈಕೊಳ್ಳುವಂತೆ ತೀರ್ಮಾನಿಸಿದಂತಾಗಿದೆ. ಹಿಂದೂದೇಶದ ಆಡಳಿತಕ್ಕೆ ಬೇಕಾದ ರಚನೆಯನ್ನು ಬ್ರಿಟಿಷ್ ಸರ್ಕಾರದವರೇ ನಿಶ್ಚಯಿಸುವರು; ಅದನ್ನು ಸಿಲೆಕ್ಟ್ ಜಾಯಿಂಟ್ ಪಾರ್ಲಿಮೆಂಟರಿ ಕಮಿಟಿಯವರು ಚರ್ಚಿಸುವಾಗ್ಯೆ ಕೆಲವು ಹಿಂದೀಯರು ಸದರಿ ಕಮಿಟಿಯ ಮೆಂಬರುಗಳಾಗಿರದೆ, ಸಾಕ್ಷಿಗಳಂತೆ ಮಾತ್ರ ತಮ್ಮ ಸಲಹೆಗಳನ್ನು ಕೊಡುವ ಏರ್ಪಾಡು ಮಾಡಲಾಗುವದಂತೆ. ಹಿಂದೂದೇಶದ ಜನ ಗೌರವಕ್ಕೆ ಇದೆಂಥಾ

ತಮ್ಮ ದೇಶದ ಭಾಗ್ಯಭಾರ ಕ್ರಮವನ್ನು ನಿಶ್ಚಯಿಸುವುದರಲ್ಲಿ ಬ್ರಿಟಿಷ್ ಮೆಂಬರುಗಳೊಂದಿಗೆ ತಮಗೆ ಸಂಸಮಾನದ ಹಕ್ಕು ಕೊಡಲಿಲ್ಲವೆಂಬ ಕಾರಣದಿಂದಲೇ ಸೈಮನ್ ಕಮಿಷನನ್ನು ಈ ಮೊದಲು ಇಡೀ ಹಿಂದೂಸ್ಥಾನವು ಬಹಿಷ್ಕರಿಸಿದ್ದಾಗಿದೆ. ಈಗ ಪುನಹ ಅದೇ ರೀತಿಯನ್ನು ಅವಲಂಬಿಸಿದರೆ ಲಿಬರಲ್ ಪಾರ್ಟಿಯವರೇ ಆಗಲೀ, ಸಹಕಾರಿಗಳೇ ಆಗಲೀ ತಮ್ಮ ಮತ್ತು ತಮ್ಮ ದೇಶದ ಆತ್ಮ ಗೌರವವನ್ನು ಅನುಸರಿಸಿ ಹೇಗೆ ತಾನೇ ಬ್ರಿಟಿಷ್ ಸರ್ಕಾರದೊಂದಿಗೆ ಸಹಕರಿಸಿಯಾರು? ಸೈಮನ್ ಕಮಿಷನನ್ನು ಹಿಂದೀಯರು ಒಗ್ಗಟ್ಟಾಗಿ ಬಹಿಷ್ಕರಿಸಿದಾಗ್ಯೆ ಅವರು ಆತ್ಮ ಗೌರವವನ್ನು ಕಾಪಾಡಲು ತಯಾರಿರುವರೆಂಬುದನ್ನು ಅರಿತುಕೊಂಡು ಬ್ರಿಟಿಷ್ ಮಂತ್ರಿಗಳು ಎರಡು ಕಡೆಯವರೂ ಸಂಸಮಾನತ್ವದಲ್ಲಿ ಬೆರೆತು ಚರ್ಚಿಸಬಹುದಾದ ಪರಿಷತ್ತಿನ ರೀತಿಯನ್ನು ಕೈಕೊಂಡರು. ದುಂಡು ಮೇಜು ಪರಿಷತ್ತಿನ ಕಾರ್ಯಗಳು ಮುಂದರಿಯುತ್ತಾ ಬಂದಂತೆ ತಾವು ಇಂಡಿಯಾಕ್ಕೆ ಕೊಡಬೇಕೆಂದು ನಿಶ್ಚೈಸಿಕೊಂಡಿರುವುದಕ್ಕಿಂತ ಹೆಚ್ಚಿನ ಸುಧಾರಣೆಗಳನ್ನು ಕೊಡಬೇಕೆಂದು ಸದರಿ ಪರಿಷತ್ತಿನ ತೀರ್ಮಾನವಾಗಿ ಬಿಡಬಹುದೆಂದು ತೋರಿದ್ದರಿಂದ ಈ ರೀತಿ ಬದಲಾವಣೆಗೆ ಕಾರಣವಾಗಿರಬಹುದೇ? ಇದು ನಿಜವಾದರೆ ಸರ್ ಹೋರ್‌ರವರ ಹೇಳಿಕೆಯಿಂದ ಬ್ರಿಟಿಷರ ನಿಜವಾದ ಉದ್ದೇಶವು ಬಹಿರಂಗವಾದಂತಾಯಿತಲ್ಲವೇ? ಬ್ರಿಟಿಷ್ ಸರ್ಕಾರದ ಈ ತರಹದ ಉದ್ದೇಶಕ್ಕೆ ಹಿಂದೀಯರು ಮುಖ್ಯವಾಗಿ ಮಧ್ಯಪಕ್ಷದವರು ಮತ್ತು ಸಹಕಾರಿಗಳು ಇನ್ನಾದರೂ ಕಣ್ಣು ತೆರೆಯಲಾರರೆ!

ಪರಿಷತ್ತಿನ ರೀತಿಯು ತಡವಾಗುವದಾದರೆ, ತುರ್ತದಲ್ಲಿ ಬ್ರಿಟಿಷ್ ಮಂತ್ರಿಗಳು ಇಂಡಿಯಾಕ್ಕೆ ಕೊಡುವದಾದರೂ ಏನು? ಕೂಡಲೇ ಅಂದರೆ ಒಂದೆರಡು ವರ್ಷಗಳಲ್ಲಿ ಪ್ರಾಂತೀಕ ಸ್ವಾತಂತ್ರ್ಯ (ಪ್ರೊವಿನ್ಶಿಯಲ್ ಅಟಾನಮಿ) ಸರ್ಕಾರ; ಕೆಲವು ವರ್ಷಗಳ ನಂತರ ಅಂದರೆ ಸಂಯುಕ್ತ ಸರ್ಕಾರದ ಭಾಗಗಳು ತಯಾರಾದ ಮೇಲೆ ಫೆಡರಲ್ ಸರ್ಕಾರ ಮತ್ತು ಅದರಲ್ಲಿ ಜನರ ಪ್ರತಿನಿಧಿಗಳಿಗೆ ಅಧಿಕಾರ. ಯಾವ ತರಹದ ಪ್ರಾಂತೀಕ ಸ್ವಾತಂತ್ರ್ಯ ಸರ್ಕಾರ ಕೊಡುವರೆಂದು ಈಗ ಯಾರಿಗೂ ಹೇಳಲಿಕ್ಕೆ ಸಾಧ್ಯವಿಲ್ಲ. ಒಂದು ವೇಳೆ ಪ್ರಾಂತೀಕ ಸರ್ಕಾರಗಳಲ್ಲಿ ಜನರ ಪ್ರತಿನಿಧಿಗಳಿಗೆ ಸಂಪೂರ್ಣ ಅಧಿಕಾರ ಕೊಡುವರೆಂದು ಊಹಿಸಿದರೂ ಮುಖ್ಯ ವಿಷಯಗಳನ್ನೊಳಗೊಂಡಿರುವ ಮಧ್ಯವರ್ತಿ ಸರ್ಕಾರದಲ್ಲಿ ಪ್ರತಿನಿಧಿಗಳಿಗೆ ಅಧಿಕಾರ ದೊರೆಯದ ವಿನಹ ಪ್ರಾಂತೀಕ ಸ್ವಾತಂತ್ರ್ಯದಿಂದ ಹೆಚ್ಚಿನ ಪ್ರಯೋಜನವಾಗಲಾರದೆಂದೂ, ಈ ತರಹದ ಸುಧಾರಣೆ ತಮಗೆ ಬೇಡವೆಂದೂ ತೀವ್ರಪಕ್ಷದವರು ಮಾತ್ರವಲ್ಲ, ದುಂಡು ಮೇಜು ಪರಿಷತ್ತಿನ ಹಲವು ಶಾಂತಪಕ್ಷದ ಮೆಂಬರುಗಳೂ ಸಾರಿ ಸಾರಿ ಹೇಳಿರುವರು. ಕೆಲವು ಮುಸಲ್ಮಾನರಿಗೆ ವಿನಹ ಬೇರೆ ಯಾರಿಗೂ ಬೇಡವಾದ ಈ ಸುಧಾರಣೆಯನ್ನು ಬೇಗನೆ ಕೊಟ್ಟರೇನು, ಬಿಟ್ಟರೇನು? ಇದರಿಂದ ಆಲೋಚನಾಪರರಾದ ಮುಂದಾಳುಗಳ ಕಣ್ಣಿಗೆ ಮಣ್ಣು ಎರಚಲು ಸಾಧ್ಯವಿಲ್ಲ.

ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಹೇಳಿಕೆಯು ನ್ಯಾಯವಾಗಿ ಹಿಂದೂದೇಶದ ಬಹು ಹೆಚ್ಚು ಜನರ ಅತೃಪ್ತಿಯನ್ನು ಸಂಪಾದಿಸಿದೆ; ಮತ್ತು ಕಾಂಗ್ರೆಸ್ ಪಕ್ಷದವರ ಶಕ್ತಿಯನ್ನು ದ್ವಿಗುಣ ಮಾಡಿದೆ ಎಂಬುದರಲ್ಲಿ ಸಂಶಯವಿಲ್ಲ. ಈ ಸಮಯದಲ್ಲಿ ಎಲ್ಲರ ದೃಷ್ಟಿಯೂ ಲಿಬರಲ್ ಪಕ್ಷದವರ ಕಡೆಗೆ ತಿರುಗಿತ್ತು. ದುಂಡು ಮೇಜು ಪರಿಷತ್ತಿನಲ್ಲಿ ಹೆಚ್ಚಾಗಿ ಭಾಗ ತೆಗೆದುಕೊಂಡ ಈ ಪಕ್ಷದ ಮುಂದಾಳುಗಳು ಮುಂದೇನು ಮಾಡುವರೆಂದು ಎಲ್ಲರೂ ನೋಡುತ್ತಿದ್ದರು. ಅವರು ತಮ್ಮ ಮತ್ತು ತಮ್ಮ ಮಾತೃ ಭೂಮಿಯ ಮರ್ಯಾದೆಯನ್ನು ಕಾಪಾಡುವಂಥ ತೀರ್ಮಾನಕ್ಕೆ ಬಂದದ್ದು ಸಂತೋಷದ ವಿಷಯವಾಗಿದೆ. ಈ ಹೇಳಿಕೆಯು ಹೊರಬಿದ್ದ ಕೂಡಲೇ ಹಲವು ಮುಂದಾಳುಗಳು ತಮ್ಮ ಅತೃಪ್ತಿಯನ್ನು ಸೂಚಿಸಿ ಅಭಿಪ್ರಾಯಗಳನ್ನು ಪ್ರಕಟಿಸಿದ್ದರು. ನಂತರ ಈ ತಾ. 10ರಲ್ಲಿ ದುಂಡು ಮೇಜು ಪರಿಷತ್ತಿನ 14 ಮೆಂಬರುಗಳು ಬೊಂಬಾಯಿಯಲ್ಲಿ ಸೇರಿ, ಪರಿಷತ್ತು ರೀತಿಯನ್ನು ಬಿಟ್ಟರೆ ತಾವು ಸರ್ಕಾರದೊಂದಿಗೆ ಸಹಕರಿಸುವುದಿಲ್ಲವೆಂಬ ತೀರ್ಮಾನವನ್ನು ಮಾಡಿರುವರು. ಇಷ್ಟು ಮಾತ್ರವಲ್ಲದೆ ಸರ್ ತೇಜ್ ಬಹದ್ದೂರ್ ಸಪ್ರುರವರು, ಮಿ. ಜಯಕರರವರು ಮತ್ತು ಲೇಬರ್ ಪಕ್ಷದ ಮಿ. ಜೋಶಿಯವರು ಕನ್‌ಸಲ್ಟೇಟಿವ್ ಕಮಿಟಿಯ ಮೆಂಬರುತನಕ್ಕೆ ರಾಜೀನಾಮೆ ಕೊಟ್ಟಿರುವರು. ಇದರಿಂದ ಮಧ್ಯಪಕ್ಷದವರೂ ಕೂಡ ಹಿಂದೂದೇಶದ ಕಷ್ಟ ಸ್ಥಿತಿಯನ್ನು ಅರಿತುಕೊಂಡು ಬ್ರಿಟಿಷರ ನಯ ಮಾತುಗಳಿಗೆ ಮರುಳಾಗುತ್ತಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಈ ತೀರ್ಮಾನದಿಂದ ಬ್ರಿಟಿಷರ ಹೊಸ ರೀತಿಗೆ ಹಿಂದೂಗಳ ಸಹಕಾರ ದೊರೆಯುವುದಿಲ್ಲವೆಂದಾಯಿತು. ಇನ್ನು ಕೆಲವು ಮುಸಲ್ಮಾನ ಧುರೀಣರು ಮಾತ್ರ ಸಹಕರಿಸಬಹುದಷ್ಟೆ. ಈ ಸ್ಥಿತಿಯಲ್ಲಿ ಬ್ರಿಟಿಷ್ ಸರ್ಕಾರದವರು ಏನು ಮಾಡುವರೆಂದು ನೋಡಬೇಕಾಗಿದೆ. ಕನ್‌ಸರ್ವೇಟಿವ್ ಪಕ್ಷದ ಬಲದಿಂದ ನಡೆಯುತ್ತಿರುವ ಈಗಿನ ಬ್ರಿಟಿಷ್ ಸರ್ಕಾರವು ಹಿಂದು ಮುಂದು ನೋಡದೆ ಇಂಡಿಯಾದಲ್ಲಿ ಆರ್ಡಿನೇನ್ಸನ್ನು ಪುನಹ ಜಾರಿಗೆ ತಂದಿರುವಂತೆಯೋ, ತಮ್ಮ ಹೊಸ ರೀತಿಯನ್ನೇ ನಡಿಸಿ ಬಿಡುವರೋ ಏನೋ ನೋಡುವ. ಹೀಗೆ ಮಾಡುವುದೂ ಹಿಂದೂದೇಶದ ಕಲ್ಯಾಣಕ್ಕಾಗಿಯೇ ಪರಿಣಮಿಸಬಹುದು!

Reg. No. M. 1550.
If not delivered please return to
"KODAGU" OFFICE MERCARA

ಕೊಡಗು.

ಸತ್ಯೇನ ಧೋಕವಯುಯಾ ವಿದ್ಯಾ ಶೀಲ ಪಯಸ್ಕರಾ ಐಕಮತ್ಯೇನ ದೇಶಾನಾಂ ಪುಷ್ಕಿರಾ ರಾಜ್ಯ ಸಂಪದಾ

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೨ | ಮಡಿಕೇರಿ, ಸನ್ ೧೯೩೨ನೇ ಇಸವಿ ಜುಲೈ ತಾರೀಕು ೧೫ ನೇ ಶುಕ್ರವಾರ. | ಸಂಚಿಕೆ

SARI-PIN.

BRACELETS.

NECKCHAINS.

EAR-RINGS.
(Thodus)
Cut-rubys Rs. 25 to 50
With diamond in centre Rs. 80 to 120

Gold Rs. 10
Set rubys forming any letter Rs. 12

NOSE-RINGS.
Diamond in small size of best quality Rs. 35 & upwards according to size.

MARRIAGE PRESENTATIONS

Attractive and inexpensive articles ready in stock. Prompt execution. Details on enquiry free with catalogue. Numerous customers in Coorg thoroughly satisfied with reliable service. Testimonials pouring in.
Silver Guindys, Photo lockets, Dimond nose-screws, cut-ruby ear-rings, etc., etc., etc., in all prices. Very attractive. Prices most moderate.

Estimates free on enquiry

Designs free on enquiry.

V. Subramaniaier Jeweller,

Telegrams: 'PRECIOUS.'

Telephone: 3145.

CATALOGUE ON ENQUIRY.

52–34

Post Box 423, Triplicane, P. O., MADRAS.

ಇಂಡಿಯಾ ಎಕ್ವಿಟೇಬಲ್ ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್.

(ಸ್ಥಾಪಿಸಲ್ಪಟ್ಟದ್ದು 1908)

ಪೋಲಿಸಿಗಳು ಕಳಕೊಳ್ಳುವಂತ ವುಗಳಲ್ಲ.

ಜೀವ ತಡೆಯೂ ಇಲ್ಲದೆ ಪ್ರತಿ ವರ್ಷವು ಬೋನಸ್ಸು.

ಹಕ್ಕು ಬಾಧ್ಯಸ್ಥರಿಗೆ ಸರಿಯಾಗಿ ಹಣ ಕೊಡಲ್ಪಡುವದು ಇಲ್ಲದಿದ್ದರೆ ಬಡಿಯು ದೊರಕುವುದು.

ಹೆಡ್ ಆಫೀಸು:—

102. ಕ್ಲೈವ್ ಸ್ಟ್ರೀಟ್, ಕಲ್ಕತ್ತಾ.

I. E., C. P. S. 12–8

ಬಾಲಾರ್ಕಮಧು.

ಬಾಲಾರ್ಕಮಧು ಮಕ್ಕಳಿಗೆ ಕೊಡುವುದರಿಂದ ಶಕ್ತಿಯೂ ಆರೋಗ್ಯವೂ ಹೆಚ್ಚುವುದು. ಇದು ಮಧುರವಾಗಿದೆ. ಬೆಲೆ ಶೀಸೆ 1ಕ್ಕೆ 0–12–0 ಟಿ. ಖ. 0–12–0.



(Spleen Lever enlargement) ಎಂಬ ಮಕ್ಕಳ ಭಯಂಕರ ಗಡ್ಡೆ ರೋಗ—ಪ್ಲೀಹ—ಪಿತ್ತಕೋಶದ ಗಡ್ಡೆಗೆ ಜ್ವರದಿಂದು. ಜ್ವರಕ್ಕಾರ—ಜ್ವರಚೂರ್ಣ—ಜ್ವರ, ಪ್ರಭಾ—ಈ ನಾಲ್ಕು ಮಹೌಷಧಗಳಿವೆ. ಸಾವಿರಾರು ಮಕ್ಕಳ ಪ್ರಾಣವನ್ನು ಉಳಿಸಿದೆ. ನಾಲ್ಕು ಔಷಧಗಳು ಸೇರಿ 1 ತಿಂಗಳ ಔಷಧದ ಬೆಲೆ 3–0–0. ಟಿ. ಖ. 0–8–0. ಏಜೆಂಟರು ಬೇಕಾಗಿರುವರು.

ಪ. ಎ. ಯೆನ್. ಶ್ರೀನಿವಾಸರಾವ್,
ವೈ. ವಿ. ಆಯುರ್ವೇದಶಿಷಕ್,

ಬ್ರಾಂಚ್ ಆಫೀಸ್, | Spleen & Lever ಸ್ಪೆಶಲಿಸ್ಟ್,
ಊಟಿ. S. K. |

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್ ಕೋ ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.
(ಸ್ಥಾಪಿತವಾದದ್ದು 1922ರಲ್ಲು)

		ರೂ.
ಷೇರ್ ಬಂಡವಾಳ	—	50,000
ವಸೂಲಾದ ಷೇರ್ ಮೊಬಲಗು	—	26,800
ಜಮಾಬಂದ ಠೇವಣಾತಿ	—	2,50,301

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟರು,	ಟ್ರೆಜರರ್
ಪಟ್ಟಮಾಡ ದೇವಯ್ಯನವರು, ರಾವ್ ಬಹದ್ದೂರ್.	ಮನೆಯಪ್ಪಂಡ ಬೆಳ್ಯಪ್ಪನವರು.

ಸೆಕ್ರೆಟರಿ

ಸಿ. ಯಸ್. ವೆಂಕಟಸ್ವಯ್ಯನವರು, ಬಿ.ಎ., ಬಿ.ಎಲ್.

ತಾರೀಕು 1—7—1932.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ [illegible]

ಏಜೆಂಟರುಗಳು.

ಉತ್ತರ ಕೊಡಗಿಗೆ ಮಿ॥ ಚೌರಿರ ಮಾದೈಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮಿ. ಮಂಡೇಪಂಡ ಕೆ. ಸೋಮಯ್ಯನವರು. (ಶಾಂತಿಭಂಡಾರ.)

ನಾಪೋಕ್ಲು—ಎಮ್. ಆರ್. ವೆಂಕಪ್ಪಯ್ಯನವರು.

ಅಮ್ಮತ್ತಿ—ಸಿದ್ದಾಪುರ—ಮಿ. ಐನಂಡ ಮಾದಪ್ಪನವರು,

ಪೊನ್ನಂಪೇಟೆನಾಡು—ಮಿ. ಪಿ. ಜಿ. ಮುದ್ದಯ್ಯನವರು, ಮತ್ತು ಆರಮಣಮಾಡ ಪಿ. ಕಾರ್ಯಪ್ಪನವರು,

ಹುದಿಕೇರಿ & ತಿತಿಮತ್ತಿ—ಮಿ. ಜಿ. ಮಾದಯ್ಯನವರು,

ಸುಂಟಿಕೊಪ್ಪ—ಮಿ. ಅಪ್ಪಚೆಟ್ಟೋಳಂಡ ಪೂಜ್ಯಯ್ಯನವರು.

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ,

ಫಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಿಸಲು ಅತ್ಯವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಖರಾರು ಫಾರಮುಗಳೂ, ಜಮ್ಮ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಖರಾರು ಫಾರಮುಗಳೂ, ಸ್ಟೋರ್ ಲೇಜರ್ ಖರಾರು ಫಾರಮುಗಳೂ, ಓಚರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮಾ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,431 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.

ವಿಮೆದಾರರಿಗೆ ಕೊಟ್ಟದ್ದು—3231 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.

ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,78,323 ಜನರಿಗೆ 38ಕೋಟಿ ರೂ.
ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ರಷ್ಟು ವಿವರದ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದಾಗಿದೆ. ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಸಹಾಯವನ್ನು ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬುದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು.—

ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್‌ಪರೇಡ್ ಬೆಂಗಳೂರು,

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರಾ	ಕಲ್ಕತ್ತಾ	ಕೊಯಂಬತ್ತೂರು	[illegible]	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಢಾಕಾ	ಲಕ್ನೋ	ಪಾಟ್ನಾ	ಸಿಕಂದ್ರಾಬಾದು
ಅಲಹಾಬಾದು	ಡೆಲ್ಲಿ	ಮದ್ರಾಸ್	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಡಾರ್ಜಿಲಿಂಗ್	ಮಂಡಲೆ	ರಾಯಪುರ	ತ್ರಿವೇಂಡ್ರಮ್
ಭೋಪಾಲ್	ಕರಾಚಿ	ಮಂಗಳೂರು	ರಾಂಚಿ	ವಿಶಾಖಪಟ್ಟಣ

52—19

ಸಣ್ಣ ಹುಡುಗರ ಸಲುವಾಗಿ

ಡೋಂಗರೆ
ಇವರ
ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತಾರೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,

52—26 ಗಿರಿಗಾಂವ, ಮುಂಬಯಿ.

ಇಂಡಿಯನ್ ಇನ್ಶೂರೆನ್ಸ್ ಕಂಪೆನಿಗಳಿಗೇನೇ ಜೀವ ವಿಮೆ ಮಾಡಿರಿ.

ದಿ ಬೆಂಗಾಲ್ ಇನ್ಶೂರೆನ್ಸ್ ಎಂಡ್ ರಿಯಲ್ ಪ್ರಾಪರ್ಟಿ ಕಂಪೆನಿ ಲಿಮಿಟೆಡ್, ಹೆಡ್ ಆಫೀಸ:—8 ಡಾಲ್‌ಹೌಸಿ, ಸ್ಕ್ವೇರ್ (ಈಸ್ಟ್) ಕಲ್ಕತ್ತ, ಸಂಸ್ಥಾಪನೆ 1919

ನವಸಂಸ್ಕೃತಿಯು ಬೆಳೆದಷ್ಟಕ್ಕೆ ಅದರೊಡನೆ ಅದಕ್ಕೆ ಸಂಬಂಧಪಟ್ಟಿರುವ ಆರ್ಥಿಕ ಪರಿಸ್ಥಿತಿಯು ಬೆಳೆಯುತ್ತದೆ. ಇಂಥ ಸಮಯದಲ್ಲಿ ಜೀವವಿಮೆ ನಿಯಮವು ಒಂದು ವಿಷಮವೆನಿಸಲ್ಪಟ್ಟಿದೆಯಲ್ಲದೆ, ಅದು ಸಮಾಜದಲ್ಲಿ ಜನರಿಗೊಂದು ಅತ್ಯಗತ್ಯ ವಿಷಯವೆಂದೂ ತಿಳಿದು ಬಂದಿದೆ. ಅದನ್ನು ಈಗೀಗ ಗಣಿತಶಾಸ್ತ್ರ ಪ್ರಕಾರವಾಗಿಯೇ ಒತನದಿಂದ ಪರಿಪಾಲಿಸಿಕೊಂಡೇ ಬರುವಂತಾಗಿದೆ.

ಈ ಕಂಪೆನಿಯು ಸರಕಾರದಲ್ಲಿ ಕಂಪೆನಿಯ ಭದ್ರತೆಗೋಸ್ಕರ 2 ಲಕ್ಷ ರೂಪಾಯಿ ಠೇವಣಾತಿಯನ್ನು ಇಟ್ಟಿದೆ. ಇದು ಇನ್ಶೂರೆನ್ಸ್ ಕೆಲಸದಲ್ಲಿ ಬಳ್ಳಿ ಗುರುತಿರುವ ಸದ್‌ಗೃಹಸ್ಥರ ಮುಂದಾಳುತನದಿಂದಲೇ ನಡೆಯುತ್ತದೆ. ಈ ಕಂಪೆನಿಯು ಆಕರ್ಷಣೀಯವಾದ ಕೆಲವು ಸೂತ್ರಗಳ ಮೇರೆಗೆ ಅತೀ ಸುಲಭ ಪ್ರೀಮಿಯಮ್ ದರದಿಂದ ಪೋಲಿಸಿಗಳನ್ನು ಕೊಡುತ್ತದೆ. ಇದರ ಶರ್ತಗಳು, ನಿಯಮಗಳು ಸುಲಭಗ್ರಾಹ್ಯವಾಗಿವೆ; ಅನುಕೂಲದ್ದಾಗಿವೆ. ಅಲ್ಲದೆ ಬಹು ಉದಾತ್ತವೂ ಆಗಿವೆ. ಹೆಚ್ಚಿನ ಮಾಹಿತಿಗೆ ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಿರಿ.

ಯಂ. ಯಸ್. ಐಯ್ಯಪ್ಪ,
ಆರ್ಗನೈಸರ್,
ಸ್ಕೂಲ್‌ರೋಡ್, ಮಡಿಕೇರಿ.
ಅಥವಾ
ಆರ್. ಸಿ. ಸೆನ್‌ಗುಪ್ತ,
ಬ್ರಾಂಚ್ ಸೆಕ್ರೆಟರಿ,
28, ಅಂಗಪ್ಪನಾಯಕ್ ಸ್ಟ್ರೀಟ್
ಜಿ. ಟಿ. ಮದರಾಸ್.

12—12

Wanted agents in every Taluk of Coorg on very liberal terms.

Printed & published by M. M Ganapathy at "Kodagu" Press Merca[illegible] or "Kodagu" Ltd.

ದದ ಉದ್ದೇಶವೆಂದು ವಿಶದಪಡಿಸಿದರು. (Gazette Extra ordinary issued on 31st Otober 1929) ಒಡನೆಯೇ ಕೆಲವರು (Moderates) ಇದರಲ್ಲಿ ಅತ್ಯಧಿಕ ಭರವಸೆಯನ್ನಿಟ್ಟರು. ಕೆಲವರು ಸಂಶಯಪಟ್ಟು ಸರ್ಕಾರವು ನಿರ್ಘಂಟಾಗಿ ತನ್ನ ಉದ್ದೇಶವನ್ನು ತಿಳಿಸಬೇಕು. ರೌಂಡ್ ಟೇಬಲ್ ಕಾನ್ಫರೆನ್ಸಿನಲ್ಲಿ ಪೂರ್ಣ ಜವಾಬ್ದಾರಿಕೆಯ ವಿಷಯ ಮಾರ್ಪಾಟುಗಳನ್ನು ಕೊಡುವದೇ ಉದ್ದೇಶವೆಂಬದನ್ನು ನಿರ್ಧರಿಸಬೇಕೆಂದು ವೈಸರಾಯರನ್ನು ಗಾಂಧಿಯವರೇ ಮೊದಲಾದ ಮುಖಂಡರು ಕೂಡಿದ ಒಂದು ಡೆಪ್ಯುಟೇಶನ್ 23ನೇ ನವಂಬರಿನಲ್ಲಿ ಕೇಳಲು ವೈಸರಾಯರವರು (ಒವ್ಮ ಗಜೆಟಿನಲ್ಲಿ ವಿಶದ ಪಡಿಸಿದವರ.) ನಿರ್ಘಂಟಾದ ಉತ್ತರ ಕೊಡಲಾಗುವುದಿಲ್ಲವೆಂದರು. ಇದರ ಅಭಿಪ್ರಾಯವೇನು? ನಮಗೆ ಪೂರ್ಣ ಜವಾಬ್ದಾರಿಕೆ ಕೊಡುವ ಉದ್ದೇಶವಿದ್ದರೆ ಏತಕ್ಕೆ ವೈಸರಾಯರು ಹಿಂಜರಿದರು? ಇದರಲ್ಲಿ ಏನು ತಿಳಿಯುವುದೆಂತೆ ಆಗಲೇ ಇಂಡಿಯಾ ಸರ್ಕಾರವು ಸೈಮನ್ ರಿಪೋರ್ಟಿನಲ್ಲಿರುವ ಸುಧಾರಣೆಯನ್ನು ಕೊಡಲು ಮಾತ್ರ ನಿರ್ಧರಿಸಿತ್ತು. ಈಗಲೂ ಅದೇ ಅಲ್ಲದೆ ಬೇರೆ ಹೆಚ್ಚಿನವು ಸಿಕ್ಕಲಾರದು. ಇದರಲ್ಲಿ ಭರವಸೆ ಇರುವವರು ನಿರಾಶರಾಗುವುದರಲ್ಲಿ ಸಂಶಯವಿಲ್ಲ. ಮತ್ತೊಂದು ಉದಾಹರಣೆ ಏನೆಂದರೆ—

ಅರ್ಥಗಳನ್ನು ತಿಳಿಯದೆ ಕೆಲವರು ತಪ್ಪು ಅಭಿಪ್ರಾಯಪಟ್ಟಿರುತ್ತಾರೆ. ವಾಗ್ದಾನದಲ್ಲಿ ಪೂರ್ಣ ಜವಾಬ್ದಾರಿಕೆಗೆ ಹೆಚ್ಚು ಪ್ರಾಮುಖ್ಯತೆ ಕೊಟ್ಟಿರುವುದಿಲ್ಲವೆಂದು ಹೇಳಿರುತ್ತಾರೆ. ಇದರಿಂದೇನು ತಿಳಿಯಬರುತ್ತೆ? ಹಿಂದುಸ್ಥಾನಕ್ಕೆ ಕೇಂದ್ರದಲ್ಲಿ ಸ್ವಾತಂತ್ರ್ಯವಿಲ್ಲದ ಪ್ರಾಂತೀಕ ಜವಾಬ್ದಾರಿ ಆಡಳಿತವಲ್ಲದೆ ಬೇರೆ ಸಿಗುವ ಹಾಗಿಲ್ಲ. ಅಂದರೆ ಸೈಮನ್ ರಿಪೋರ್ಟಿನಲ್ಲಿರುವದಲ್ಲದೆ ಬೇರೆ ಸಿಗಲಿಕ್ಕಿಲ್ಲ. ಆದ್ದರಿಂದ ನಮ್ಮ ಮುಂದಿನ ಅಭಿಪ್ರಾಯಗಳು ಸೈಮನ್ ರಿಪೋರ್ಟಿನ ಮಾರ್ಪಾಟುಗಳ ವಿಷಯ ಇರಬೇಕೇ ಹೊರತು ಪೂರ್ಣ ಸ್ವಾತಂತ್ರ್ಯ ಕೊಡುತ್ತಾರೆ. ಅದರ ವಿಷಯ ಬೇಕಾದ ಅಭಿಪ್ರಾಯ ಪಡೆವೆವೆಂದು ನಿಸ್ಸಾರವಾದ ಊಹನೆಯಾಗಿದೆ. ಸರ್ಕಾರವು ಸೈಮನ್ ರಿಪೋರ್ಟಿಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟಿರುತ್ತಾರೆ. ಇದು ಸಹಜ.

ಆದ್ದರಿಂದ ಮುಂದಕ್ಕೆ ಸಿಕ್ಕುವದು ಸೈಮನ್ ಮಾರ್ಪಾಟುಗಳೇ. ಹಾಗಾದರೆ ಈ ಸೈಮನ್ನನು ಕೊಡಗಿನ ವಿಷಯ ಏನು ಹೇಳಿರುತ್ತಾನೆ? ಕೊಡಗಿನ ನಿಜವಾದ ಸಂಗತಿ ಈ ಕಮಿಶನಿಗೆ ತಿಳಿದಿರುವುದಿಲ್ಲ. ಹೇಗೂ ಅದರಲ್ಲಿ ಹೇಳಿರುವುದೇನೆಂದರೆ—"ಕೊಡಗು ಚಿಕ್ಕ ಪ್ರಾಂತ್ಯವಾದ್ದರಿಂದ ಇಲ್ಲಿ ಪ್ರಾಂತೀಕ ಜವಾಬ್ದಾರಿ ಆಡಳಿತವನ್ನು ನಡಿಸುವುದು ಕಷ್ಟವಾಗುತ್ತೆ. ಆದ್ದರಿಂದ ಸದ್ಯಕ್ಕೆ ಕೊಡಗು ಈಗಿರುವ ಹಾಗೆ ಇರಬೇಕು. ಕೊಡಗಿಗೆ ಮಾರ್ಪಾಟುಗಳು ಬೇಕೆಂದಿದ್ದರೆ ಪ್ರಾಂತೀಕ ಜವಾಬ್ದಾರಿ ಇರುವ ಪ್ರಾಂತ್ಯಕ್ಕೆ ಸೇರಿಕೊಳ್ಳಲಿ" ಆದ್ದರಿಂದ ಈಗ ಸರ್ಕಾರವು "ಈಗ ಕೊಡಗು ಇರುವ ಹಾಗೆ ಇರುವದೋ ಇಲ್ಲವೇ ಬೇರೆ ಪ್ರಾಂತ್ಯಕ್ಕೆ ಸೇರಿಕೊಳ್ಳುವದೋ?" ಎಂಬದಾಗಿ ಕೇಳುತ್ತಿರುವದು. ಆದರೆ ಈ ಪ್ರಶ್ನೆಯು ಗೋಣಿಕೊಪ್ಪಲಲ್ಲಿ ಯಾವ ವಿಧವಾದ ಆಡಳಿತ ಕ್ರಮವು ಬೇಕೆಂದು ಎಂಬ ರೂಪದಿಂದ ಹೊರಬಿತ್ತು. ಇದು ನನಗೆ ಆಶ್ಚರ್ಯಕರವಾಗಿ ತೋರಿತು. ಕೆಲವು ದಿನಗಳ ಹಿಂದೆ ಬೊಂಬಾಯಿ ಕ್ರಾನಿಕಲ್ ಪತ್ರಿಕೆಯಲ್ಲಿ ಧಾರವಾಡ ನಗರದ ನಿವಾಸಿಗಳು ಮಿ. ಕೆ. ಪಿ. ಅಪ್ಪನವರ ಅಧ್ಯಕ್ಷತೆಯಲ್ಲಿ ಬ್ರಿಟಿಷ್ ಕರ್ನಾಟಕ ಸಂಘದ ಹೆಸರಿನಲ್ಲಿ ಕೆಲವು ಠರಾವುಗಳನ್ನು ಪಾಸು ಮಾಡಿರುತ್ತಾರೆ. ಸರ್ಕಾರವು ಇತರ ಪ್ರಾಂತ್ಯಗಳಿಗೆ ಈ ಪ್ರಕಾರ ಪ್ರಶ್ನೆ ಹಾಕಿ ನನಗೆ ಮಾತ್ರ ಕೊಡಗಿಗೆ ಯಾವ ತರದ ಆಡಳಿತ ಬೇಕೆಂದು ಕೇಳುವದೋ? ಇದು ಸಹಜವಾಗಿರಲಾರದು. ಇದರಲ್ಲಿ ಒಂದು ಪ್ರಮಾದವು ನಡೆಯುತ್ತಿರುವುದು ಒಂದು ಶಕ್ಯವು ಕೊಡಗ. ನಿವಾಸಿಗಳಿಂದ ಒಮ್ಮತವಾಗಿ 'ನಾವು ಪ್ರತ್ಯೇಕವಾಗಿರುವೆವು' ಎಂಬ ಸಮ್ಮತಿಯನ್ನು ತೆಗೆಯಲು ಸೊಂಟಕಟ್ಟಿ ಹೊರಟಿದೆ. ಇದನ್ನು ಅರಿಯದೆ ಕೆಲವರು ಪ್ರಶ್ನೆಗನುಸಾರವಾಗಿ ನನಗೆ ಪೂರ್ಣ ಸ್ವಾತಂತ್ರ್ಯತೆ ಬೇಕೆನ್ನುವರು. ಇದು ಸದ್ಯಕ್ಕೆ ಸಿಗುವದಲ್ಲ. ಆದರೆ ಪೂರ್ಣ ಸ್ವಾತಂತ್ರ್ಯತೆಯನ್ನು ಕೇಳುವಾಗ ನಾವು ಪ್ರತ್ಯೇಕವಾಗಿರುವೆವೆಂಬದನ್ನು ತಿಳಿಯದೆ ಪ್ರಚುರಪಡಿಸುತ್ತಿದ್ದಾರೆ. ಇದಾದರೋ ಸರ್ಕಾರವು ಬಯಸಿದ ರೀತಿಯೇ ಆಗುತ್ತೆ—ಬಯಸಿದ್ದು ಹಿಗ್ಗಾಟ—ಇದರ ವಿಷಯ ನ್ಯಾಯವಾದ ಸಂಗತಿಯನ್ನು ಹೊರಪಡಿಸಿ ಸಂಶಯದಲ್ಲಿರುವವರಿಗೆ ಸಮಾಧಾನವನ್ನೀಯುವದಾಗಿ ನನ್ನ ಭಾವನೆ.

ಪೂಣಚ್ಚ.

ಜನರಲ್ ಅಷ್ಯೂರೆನ್ಸ್ ಸೊಸೈಟಿ.

ಅಜಮೀರ್.

ನಮ್ಮ ಆಯವ್ಯಯದ ಪಟ್ಟಿಯೇ ನಮ್ಮ ಅಭಿವೃದ್ಧಿಯನ್ನು ವ್ಯಕ್ತಗೊಳಿಸುತ್ತದೆ.

ವರ್ಷ	ಮೊಲ್ಪಟ್ಟ ವರ್ಷಾದಾಯ	ಮೊಲ್ಪಟ್ಟ ಮೂಲಧನ	ಖರ್ಚು ವರಮಾನದ ಶೇಕಡ
1911	46,248	49,442	82.9
1921	2,92,627	6,53,350	43 2
1931	12,50,000	40,00,000	28.2

ಬೋನಸ್ಸು.

ಹುಕುಂ ನಫೆ ದೊರಕುವ ಜೀವಾವಧಿ ಪಾಲಿಸಿಗಳ ಮೇಲೆ ವರ್ಷ ಒಂದಕ್ಕೆ ಶೇಕಡ 22½

ಚೆನ್ನಾಗಿ ಕೆಲಸಮಾಡಿ ಅಭಿವೃದ್ಧಿ ಸ್ಥಿತಿಯಲ್ಲಿರುವ ಈ ಸೊಸೈಟಿಯಲ್ಲಿ ವಿಮೆ ಮಾಡಿ ಕಡಿಮೆ ಪ್ರೀಮಿಯಂ ಪಾವತಿ ಮಾಡುವ ಸೌಲಭ್ಯ ಹೊಂದಿ ಅಥವಾ ಈ ಕಂಪೆನಿಗೆ ಏಜಂಟರಾಗಿ ಕೆಲಸಮಾಡಿ ಉತ್ತಮ ಕಮಿಶನ್ ದಿಂದ ಪ್ರಯೋಜನ ಹೊಂದಿ.

ಹೆಚ್ಚು ವಿಚಾರಗಳಿಗೆ ಈ ವಿಳಾಸಕ್ಕೆ ಬರೆಯಿರಿ:—

ಎ. ರಾಮಚಂದ್ರರಾವ್,
ಸುಪರಿಂಟೆಂಡೆಂಟ್,
ಮಿಂಟೋ ಆಸ್ಪತ್ರೆ ಬಳಿ,
ಬೆಂಗಳೂರು.

52—11



ಕೋವಿಗಳು, ಕತ್ತಿಗಳು, ಬಂದೂಕುಗಳು, ತೋಟೆಗಳು, ಶಸ್ತ್ರಗಳು, ... ಮತ್ತು ಬೇಟೆಯ ಎಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS LTD.,
Largest Importers of Firearms and Ammunition
Cheapest priced firm in India,
310 A ... BOMBAY.

24—18

... ಸಿದ್ದೆ ಈಗನ
... ...
... ಸಲ್ಪಡುವುವು.

20—2

ಎಂ. ಎಸ್. ಶಿದ್ದಪ್ಪ ಬ್ರದರ್ಸ್

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

1. ಉತ್ತಮ ತರಹ ಒಂದು ಸೆಟ್ ಜರ್ಮನ್ ರೀಡ್ಸ್ ಹಾಕಿರುವ ಸಿಂಗಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 20—0—0
   " ಮತ್ತು 22—8—0
2. ಡಿಟೋ ಉತ್ತಮ ತರಹ ಹಾರ್ಮೋನಿಯಂ " 1ಕ್ಕೆ ರೂ. 25—0—0
   ಮತ್ತು 27—8—0
3. ಡಿಟೋ ಉತ್ತಮ ತರಹದ್ದು, ದೂಳು ಬೀಳದಂತೆ ಕೇಸಿನ ಮೇಲೆ ಪೂರ್ತಿ ಮುಚ್ಚಳವುಳ್ಳ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ ರೂ. 27—8—0
4. ಶಾಶ್ವತಿಯೂ, ಬಂದೋಬಸ್ತೂ, ಸುಸ್ವರವುಳ್ಳದ್ದೂ, ಅನೇಕ ವರ್ಷಗಳ ವರೆವಿಗೆ ಬಾಳಿಕೆ ಬರತಕ್ಕದ್ದೂ ಆದ ಹೊಸದಾಗಿ ಸಪ್ಲೈ ಆಗಿರುವ ಫ್ರೆಂಚ್ ರೀಡ್ಸ್ ನಮೂನೆ ಇರುವ ನಮ್ಮ ಹೆಸರಿನ ರೀಡ್ಸ್ ಹಾಕಿರುವ "ಸಿದ್ದಪ್ಪಾಸ್ ಫ್ಲೂಟ್" ಸಿಂಗಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 42—8—0
5. ಉತ್ತಮ ತರಹ 2 ಸೆಟ್ ಜರ್ಮನ್ ರೀಡ್ಸ್ ಹಾಕಿರುವ, ದೂಳು ಬೀಳದಂತೆ ಕೇಸಿನ ಮೇಲೆ ಪೂರ್ತಿ ಮುಚ್ಚಳವುಳ್ಳ ಡಬ್ಬಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ ರೂ. 32—8—0
   ಉತ್ತಮ ತರಹ 2 ಸೆಟ್ ಜರ್ಮನ್ ಮೋಟ ರೀಡ್ಸ್ ಹಾಕಿರುವ, ಕೈನಿಂದಾಗಲೀ ಅಥವಾ ಕಾಲಿನಿಂದಾಗಲೀ ಬಾರಿಸಲು ಅನುಕೂಲಿಸುವಂತೆ ತಯಾರಿಸಿರುವ "ಸ್ಪೆಷಲ್ ಫ್ಲೂಟ್" ಡಬ್ಬಲ್ ರೀಡ್ಸ್ ಹ್ಯಾಂಡ್ ಲೆಗ್ ಹಾರ್ಮೋನಿಯಂ 1ಕ್ಕೆ ರೂ. 78—8—0

ನಮ್ಮ ಟಿಂಬರ್ ಡಿಪೋನಲ್ಲಿ ಕಟ್ಟಡಗಳಿಗೂ, ಫರ್ನಿಚರ್ ತಯಾರಿಸಲೂ ಬೇಕಾದ ಎಲ್ಲಾ ನಮೂನೆ ನಾಟಾಗಳನ್ನು ಸುಲಭ ದರದಿಂದ ವಿಕರಿಗಟ್ಟಿಗುವುದಲ್ಲದೇ, ಗಿರಾಕಿಗಳು ಅಪೇಕ್ಷಿಸುವ ಸೈಜಿಗೆ ಕುಯಿಸಿಯೂ ನಿಯಮಿತ ದರದಿಂದ ಸಪ್ಲೈ ಮಾಡುತ್ತೇವೆ. ಹೆಚ್ಚಿಗೆ ವಿಷಯಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಳಾಸ:— ಯಂ. ಎಸ್. ಶಿದ್ದಪ್ಪ ಬ್ರದರ್ಸ್,
ಹಾರ್ಮೋನಿಯಂ ಮತ್ತು ಟಿಂಬರ್ ವ್ಯಾಪಾರಿಗಳು,
ವಾಣಿವಿಲಾಸ ಮಾರ್ಕೆಟ್, ಮೈಸೂರು.

52—2

ಮೂರ್ನಾಡಿನ ಪಬ್ಲಿಕ್ ಮೀಟಿಂಗು.

ತಾ. 4—7—'32ರಲ್ಲು ಹಗಲು 10 ಗಂಟೆಗೆ ಮೂರ್ನಾಡು ಕೋ-ಆಪರೇಟಿವ್ ಯೂನಿಯನ್ ಆಫೀಸಿನಲ್ಲಿ ಸದರಿ ನಾಡು ಕೋ. ಯೂನಿಯನ್ ಪ್ರೆಸಿಡೆಂಟರಾಗಿದ್ದ ಮೆ. ಪಾಂಡಂಡ ಮುತ್ತಣ್ಣನವರ ಅಕಾಲ ಮರಣದ ವ್ಯಸನಸೂಚಕವಾದ ಒಂದು ಪಬ್ಲಿಕ್ ಮೀಟಿಂಗು ಮಾಡಲಾಯಿತು.

ಈ ಮೀಟಿಂಗಿಗೆ 100 ಜನರು ಹಾಜರಿದ್ದರು. ಈ ಸಭೆಗೆ ಮೆ. ಚಾರೀರ ಅಪ್ಪಯ್ಯನವರನ್ನು ಸರ್ವ ಸಮ್ಮತದಿಂದ ಅಧ್ಯಕ್ಷರನ್ನಾಗಿ ಚುನಾಯಿಸಿದ ಮೇಲೆ ಮೆ. ಅಪ್ಪಯ್ಯನವರು ಸಭಿಕರಿಗೆ ವಂದಿಸಿ ಅಧ್ಯಕ್ಷಸ್ಥಾನವನ್ನು ವಹಿಸಿದರು. ಈ ಮೀಟಿಂಗಿನ ಉದ್ದೇಶವನ್ನು ಸಭೆಯು ಮುಂದಿಡಲು ಅಧ್ಯಕ್ಷರು ಮೆ. ಬಿದ್ದಂಡ ಜಿ. ಮುತ್ತಣ್ಣನವರನ್ನು ಕೇಳಿಕೊಂಡ ಮೇರೆಗೆ ಮುತ್ತಣ್ಣನವರು ದಿವಂಗತ ಪಿ. ಮುತ್ತಣ್ಣನವರ ಜೀವನ ಚರಿತ್ರೆಯನ್ನೂ, ಅವರು ಮೂರ್ನಾಡಿನಲ್ಲಿರುವ ಆಸ್ಪತ್ರೆಯನ್ನು ಸ್ಥಾಪಿಸಲು ತೆಗೆದುಕೊಂಡ ತೊಂದರೆಯನ್ನೂ, ಅಲ್ಲದೆ ಎಲ್ಲಾ ಸಾರ್ವಜನಿಕ ಕೆಲಸಗಳಲ್ಲಿ ತೆಗೆದುಕೊಳ್ಳುತ್ತಿದ್ದ ಭಾಗವನ್ನೂ ವಿವರಿಸಿ ಇಂಥಾ ಮುಖಂಡನ ಮರಣದಿಂದ ಮೂರ್ನಾಡಿಗೆ ಉಂಟಾದ ದೊಡ್ಡ ನಷ್ಟವನ್ನೂ ಸ್ವಾರಸ್ಯವಾಗಿಯೂ, ವ್ಯಸನಯುಕ್ತವಾಗಿಯೂ ಕಥನ ಮಾಡಿದರು.

ಮೆ. ಚೇನಂಡ ಮಾಚೈಯ್ಯನವರು ದಿವಂಗತ ಪಾಂಡಂಡ ಮುತ್ತಣ್ಣನವರು ಇದೇ ಟೌನಿನಲ್ಲಿ ಹೊಸದಾಗಿ ವಿಸ್ತಾರವಾದ ಶಾಲಾ ಕಟ್ಟಡದ ವಿಷಯಕ್ಕೆ ತೆಗೆದುಕೊಂಡ ತೊಂದರೆಯನ್ನೂ, ಬಡ ರೈತರ ಮಕ್ಕಳ ವಿದ್ಯಾಭ್ಯಾಸಕ್ಕೆ ಕೊಡುತ್ತಿದ್ದ ಪ್ರೋತ್ಸಾಹವನ್ನೂ ಸಾಂಗವಾಗಿ ವಿವರಿಸಿ ಇವರ ಸ್ವರ್ಗಾರೋಹಣದಿಂದ ವಿದ್ಯಾಭ್ಯಾಸದ ಕಡೆಗೆ ಒದಗಿದ ಕಷ್ಟ ನಷ್ಟಗಳನ್ನೂ ವಿವರಿಸಿದರು.

ಈ ನಾಡಿನ ಕೋ-ಆಪರೇಟಿವ್ ಸುಪರ್‌ವೈಜರಾಗಿರುವ ಮೆ. ಪೊಣ್ಣಂಡ ಬಿ. ಅಪ್ಪಯ್ಯನವರು ದಿವಂಗತ ಮುತ್ತಣ್ಣನವರು ಈ ಯೂನಿಯನ್ನಿನ ಪ್ರೆಸಿಡೆಂಟರಾಗಿಯೂ, ಮೂರ್ನಾಡು ಟೌನ್ ಸಂಘದ ಪ್ರೆಸಿಡೆಂಟರಾಗಿಯೂ ಇದ್ದುಕೊಂಡು ತಮ್ಮ ಅಮೂಲ್ಯವಾದ ಸಮಯವನ್ನೆಲ್ಲಾ ಸಹಕಾರ ಸಂಘಗಳ ಏಳಿಗೆಗೋಸ್ಕರ ವಿನಿಯೋಗಿಸುತ್ತಾ, ಜನರಲ್ಲಿ ಪರಸ್ಪರ ಸಹಾಯವನ್ನೂ, ಒಗ್ಗಟ್ಟನ್ನೂ ಸ್ಥಾಪಿಸಲು ತೆಗೆದುಕೊಳ್ಳುತ್ತಿದ್ದ ತೊಂದರೆಯನ್ನೂ, ಇವರು ಪ್ರತಿ ಸಂಘಗಳ ಜನರಲ್ ಮೀಟಿಂಗುಗಳಲ್ಲಿ ಹಾಜರಾಗಿ ಜನರಿಗೆ ಕೊಡುತ್ತಿದ್ದ ಹಿತೋಪದೇಶಗಳನ್ನೂ ವಿವರಿಸಿ ಅನಂತರ ಇವರ ಕವಿತಾ ಸಾಮರ್ಥ್ಯವನ್ನು ವರ್ಣಿಸಿ ಇವರ ಶಿವಾಧೀನದಿಂದ ಸಹಕಾರದ ಕಡೆಗೂ ಒಂದು ದೊಡ್ಡ ನಷ್ಟವೆಂದು ಭಾಷಣ ಮಾಡಿದರು.

ಆದರಂತೆ ಮೆ. ಪಳಂಗಂಡ ಚಂಗಪ್ಪನವರು, ಪಿ. ಮುತ್ತಣ್ಣನವರ ಗುಣ ಕಥನ ಮಾಡಿ ಅವರಿಗೆ ಸಾರ್ವಜನಿಕ ಕೆಲಸಗಳಲ್ಲಿ ಮುತುವರ್ಜಿ ಹೆಚ್ಚೆಂದೂ, ಅಲ್ಲದೆ ಅವರಿಗೆ ಎಂದೂ ಭೇದ ಬುದ್ಧಿ ಇರಲಿಲ್ಲವೆಂದೂ, ಮೂರ್ನಾಡಿನಲ್ಲಿ ಕೈಲ್ ಮೂಹೂರ್ತ ಹಬ್ಬಕ್ಕೆ ಆಗುವ ಆಟ ಓಟಗಳ ಪ್ರದರ್ಶನಕ್ಕೆ ಇವರೇ ಕಾರಣ ಕರ್ತರೆಂದೂ ವಿವರಿಸಿ ಇವರ ನಷ್ಟದಿಂದ ಇಡೀ ಮೂರ್ನಾಡಿಗೆ ಪ್ರತಿವಿಧದಲ್ಲಿಯೂ ಸಂಭವಿಸಿದ ಕಷ್ಟಗಳನ್ನೂ ವರ್ಣಿಸಿದರು.

ಅನಂತರ ಅಧ್ಯಕ್ಷರು ಸಾಂಗವಾಗಿಯೂ, ವ್ಯಸನಯುಕ್ತವಾಗಿಯೂ ಮೆ. ಮುತ್ತಣ್ಣನವರ ಗುಣವನ್ನೂ, ಜೀವನ ಚರಿತ್ರೆಯನ್ನೂ ವರ್ಣಿಸಿ ಸ್ವರ್ಗವಾಸಿಯಾದ ಮೂರ್ನಾಡಿನ ಮುಂದಾಳುವಿನ ಆತ್ಮಕ್ಕೆ ಶಾಂತಿಯುಂಟಾಗುವಂತೆ ಎಲ್ಲರೂ ಎದ್ದು ನಿಂತು 2 ನಿಮಿಷಗಳ ವರೆಗೆ ದೇವರನ್ನು ಧ್ಯಾನಿಸುವಂತೆ ಹೇಳಿದ ಮೇರೆ ಎಲ್ಲರೂ ಎದ್ದುನಿಂತು ದೇವರನ್ನು ಧ್ಯಾನಿಸಿದರು.

ಮೆ. ಬಿದ್ದಂಡ ಮುತ್ತಣ್ಣನವರು ಸಭೆಯ ಮುಂದೆ ದಿವಂಗತ ಮುತ್ತಣ್ಣನವರು ಸಾರ್ವಜನಿಕ ಕೆಲಸಗಳಲ್ಲಿ ಅತಿ ಮುತುವರ್ಜಿ ತೆಗೆದುಕೊಳ್ಳುತ್ತಿದ್ದುದ್ದಕ್ಕೆ ಇವರ ಸ್ಮಾರಕವಾಗಿ ಇವರ ಭಾವಚಿತ್ರ ಒಂದನ್ನು ಶಾಲಾ ಮೂಲದಿಂದ ಒಳಗೆ ಮಡಗುವಂತೆಯೂ, ಈ ವಿಷಯಕ್ಕೆ ಶಾಲಾಧಿಕಾರಿಗಳೊಡನೆ ಪತ್ರವ್ಯವಹಾರ ನಡೆಸುವಂತೆಯೂ, ಇನ್ನೊಂದು ಭಾವಚಿತ್ರವನ್ನು ಕೋ-ಆಪರೇಟಿವ್ ಯೂನಿಯನ್ ಆಫೀಸಿನಲ್ಲಿಡುವಂತೆಯೂ ಸಭೆಯವರನ್ನು ಕೇಳಿಕೊಂಡ ಮೇರೆ ಸರ್ವ ಸಮ್ಮತದಿಂದ ಒಪ್ಪಲಾಯಿತು. ಈ ವಿಷಯದ ತೀರ್ಮಾನ ಬಗ್ಗೆ ಈ ಕೆಳಗಿನ 7 ಜನರಿರುವ ಒಂದು ಕಮಿಟಿಯನ್ನು ಚುನಾಯಿಸಲಾಯಿತು..

ಮೆ. ಗಳಾದ 1, ಪಳಂಗಂಡ ಚಂಗಪ್ಪನವರು, 2. ಚಾರೀರ ಅಪ್ಪಯ್ಯನವರು, 3. ಬಡುವಂಡ ಗಣಪತಿಯವರು, 4. ಬಿದ್ದಂಡ ಜಿ. ಮುತ್ತಣ್ಣನವರು, 5. ಮಡೆಯಂಡ ದೇವೈಯ್ಯನವರು, 6. ಆಪರೆಮಾಡಂಡ ಮುದ್ದಯ್ಯನವರು ಮತ್ತು 7. ಚೇನಂಡ ಮಾಚೈಯ್ಯನವರು.

ಮೃತರ ಮರಣದ ವಿಷಯ ಸಂತಾಪವನ್ನು ಬರಹ ಮೂಲಕ ಅವರ ಕುಟುಂಬಕ್ಕೆ ತಿಳಿಸುವಂತೆ ತೀರ್ಮಾನಿಸಲಾಯಿತು.

ಅಧ್ಯಕ್ಷರಿಗೆ ವಂದನಾದಿಗಳಿಂದ ಮೀಟಿಂಗು ಬರಕಾಸ್ತು ಮಾಡಲಾಯಿತು.

ಸಿ. ಅಪ್ಪಯ್ಯ,
(ಅಧ್ಯಕ್ಷರು.)

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಎ. ಕುರ್ಗ್ ಮ್ಯೂಚುಯಲ್ ಏಡ್ ಎಸೋಸಿಯೇಶನ್ ಲಿಮಿಟೆಡ್.

ಈ ಮೇಲ್ಕಂಡ ಕಂಪೆನಿಯ ಹೆಡ್ ಆಫೀಸು ಮದ್ರಾಸಿನಲ್ಲಿದ್ದುದನ್ನು ಕೊಡಗು ಮಡಿಕೇರಿಯಲ್ಲಿ ಮಾಡಬೇಕೆಂಬುದಾಗಿಯೂ, ಕೊಡಗಿನವರೇ ಆದಾಯದವರಾಗಬೇಕೆಂಬುದಾಗಿಯೂ, ಇದರ ಕೊಡಗಿನ ಮೇನೇಜಿಂಗ್ ಡೈರೆಕ್ಟರವರು ಅತಿ ಶಕ್ತ ಪ್ರಯತ್ನಪಟ್ಟು ಅವಶ್ಯಕವಾಗಿರುವಂತೆ ನೂತನ ಕಂಪೆನಿಯನ್ನು ರಜಿಷ್ಟರು ಮಾಡಿಸಿ ಕುರ್ಗ್ ಮ್ಯೂಚುಯಲ್ ಎಸೋಸಿಯೇಶನ್ ಎಂಬುದಾಗಿ ಮಾಡಿದ್ದು ಸಂಯುಕ್ತ. ಇದಕ್ಕೆ ಒಬ್ಬೊಬ್ಬರು ಕಮಿಶನ್ ಏಜೆಂಟರಾಗಿದ್ದು ಹಲವು ಗರೀಬರನ್ನು ಇಲ್ಲದ ಸಲ್ಲದ ದುರ್ಬೋಧನೆಗಳನ್ನು ಹೇಳಿ ಸದರಿ ಕಂಪೆನಿಗೆ ಸೇರಿಸಿ ಕಾಲು, ಅರ್ಧ ಹಣ ವಸೂಲು ಮಾಡಿಸಿಕೊಂಡು ಈಗ ಏನೂ ಕೆಲಸ ನಡೆಸದೆಯೂ, ಸರ್ಟಿಫಿಕೇಟು ಹೋಲ್ಡರುಗಳ ಪ್ರೀಮಿಯಂ ವಸೂಲು ಮಾಡದೆಯೂ, ಇದರ ಮೇನೇಜಿಂಗ್ ಡೈರೆಕ್ಟರವರಿಗೆ ಈ ಸಂಗತಿ ಬರೆದರೆ ಯಾವ ಜವಾಬು ದೊರೆಯದೆಯೂ ಏಜೆಂಟರುಗಳನ್ನು ಕೇಳಿದರೆ ನಿಮ್ಮ ಹಣ ಎಲ್ಲಿಗೂ ಹೋಗುವುದಿಲ್ಲ ಬಹಳ ಕೆಲಸ ನಡೆಸಲು ಸುರು ಮಾಡುತ್ತೇವೆ ಪತ್ತೆದಿವಸವಾಗಿ ಹೇಳುತ್ತಾ ಹೆಚ್ಚು ಕಮ್ಮಿ ಎರಡು ವರ್ಷವಾಯಿತು. ಯಾವ ವಿಷಯವೂ ಸರಿಯಾಗಿ ತಿಳಿಯದುದರಿಂದ ಇದಕ್ಕೆ ಸಂಬಂಧಪಟ್ಟ ಮೇನೇಜಿಂಗ್ ಡೈರೆಕ್ಟರವರು ಇಲ್ಲವೇ ಇತರ ಡೈರೆಕ್ಟರುಗಳು ಅಥವಾ ಏಜೆಂಟರುಗಳು ದಯವಿಟ್ಟು ಕೊಡಗಿನ ಪತ್ರಿಕೆಗಳ ಮೂಲಕ ಪ್ರಕಟಿಸಿ ತಿಳಿಸಬೇಕಾಗಿಯೂ, ಇಲ್ಲವೇ ನಮಗೆ ಸಲ್ಲಬೇಕಾದ ಹಣವನ್ನು ವಾಪಸು ಕೊಟ್ಟು ನಮ್ಮನ್ನು ಸದರಿ ಕಂಪೆನಿಯಿಂದ ಬಿಡುಗಡೆ ಮಾಡಬೇಕಾಗಿಯೂ ಈ ಮೂಲಕ ಕೇಳಿಕೊಳ್ಳುತ್ತೇವೆ.

ಸಿ. ಕೆ. ಟಿ.

ಬೀಳಗೇರಿ ಗ್ರಾಮದ ರೈತರ ಗೋಳು.

ಕೊಡಗು ಹಜೂರ್ ಕಮಿಶನರ್ ಸಾಹೇಬರವರಲ್ಲಿ ಅಡ್ಡಬಿದ್ದು ಬೇಡಿಕೊಳ್ಳುವದೇನೆಂದರೆ—ಸೋಮವಾರಪೇಟೆ ನಾಡು ಬೀಳಗೇರಿ ಗ್ರಾಮದಲ್ಲು 1923 ನೇ ಇಸವಿಯಲ್ಲು ಒಂದು ದೊಡ್ಡ ಬರೆ ಜರಿದು ಹೋಗಿ ಸುಮಾರು 400/500 ಬಟ್ಟಿ ಭೂಮಿಯು ಮಣ್ಣು ಮುಚ್ಚಿ ಹೋದದ್ದನ್ನು ಆಗಿನ ಕಮಿಶನ್ ಸಾಹೇಬರವರಾದ ಮೆ ಟಾಸ್ಕರ್ ಸಾಹೇಬರವರು ಕುದ್ದು ಬಂದು ಅಜಮಾಯಿಸಿ ಬಹಳ ಕನಿಕರಪಟ್ಟು ಮಣ್ಣು ಮುಚ್ಚಲ್ಪಟ್ಟ ಭೂಮಿಗಳಿಗೆ ಕಂದಾಯ ಮಾಫಿ ಬಿಟ್ಟದ್ದಲ್ಲದೆ ಈ ಕಷ್ಟಕ್ಕೆ ಈಡಾದ ಗರೀಬರಿಗೆ ಕೆಲವು ಮಟ್ಟಿಗೆ ದ್ರವ್ಯ ಸಹಾಯ ಸಹ ಮಾಡಿದರು. ಸದರಿ ಬರೆ ಜರಿದ ದೆಸೆಯಿಂದ ಒಂದು ನೀರು ಬರುವ ಕೊಲ್ಲಿಯು, (ತೋಡಿನ) ನೀರು ಬರುವ ದಾರಿ ತುಂಡಾಗಿ ಸುಮಾರು 200 ಬಟ್ಟಿ ಭೂಮಿ ಪಾಳು ಬಿದ್ದಿದೆ. ಅಂತೂ ಅಂದಾಜು 600—700 ಬಟ್ಟಿ ಭೂಮಿ ಪಾಳುಬಿದ್ದ ನಷ್ಟವನ್ನು ಹೇಳಲೇ ತೀರದು. ಅದರ ಜೊತೆಗೆ ಇದೇ ಗ್ರಾಮದಲ್ಲು ದೊಡ್ಡ ಕಾಫಿತೋಟವನ್ನು ಮಾಡಿಕೊಂಡಿರುವ ಸೋಮವಾರಪೇಟೆ ಸಾಹುಕಾರರು ಮೆ. ಡಿ. ನಾರಾಯಣ ಶೆಟ್ಟಿ ಈ ಗ್ರಾಮದ ಸುಮಾರು 1000 ಬಟ್ಟಿ ಭೂಮಿಗೆ ನೀರು ಹೋಗುವ (ಕೊಲ್ಲಿ) ತೋಡು ಹುಟ್ಟಿರುವ ನೀರಿನ ವಸತಿಯ ಜಲದ ಕಣ್ಣು ಇರುವ ಸ. ನಂ. ರ ಪೈಸಾರಿ ಜಾಗವನ್ನು ಯಾಲಕ್ಕಿ ವ್ಯವಸಾಯಕ್ಕಾಗಿ ದರಖಾಸ್ತ್ ಮಾಡಿದ್ದಾರೆ. ಈ ಜಾಗದ ವಿಷಯದಲ್ಲಿ ಗ್ರಾಮಸ್ಥರು ನಾಡು ಕಚೇರಿಯಲ್ಲು ಜಾಗವನ್ನು ಸಾಗುವಳಿಗೆ ಕೊಡಬಾರದಾಗಿ ವಾಂಗ್ಮೂಲ ಕೊಟ್ಟೆವು. ಈ ಜಾಗವು ಪೂರ್ವದಿಂದಲೂ ನೀರಿನ ಹನಾಲಾಗಿ ಸರ್ಕಾರದವರು ಅವಾಸತ್ತು ಪೈಸಾರಿಯಾಗಿ ಬಿಟ್ಟಿದ್ದರು. ಆದಾಗ್ಯೂ ಪಾರುಪತ್ಯಗಾರರು ಮತ್ತು ತಾಲೋಕು ಸುಬೇದಾರರವರು ಸಹ ಜಾಗವನ್ನು ಅಜಮಾಯಿಸುವಾಗ್ಯೆ ಗ್ರಾಮಸ್ಥರಿಗೆ ತಿಳಿಸದೆ ಬಂದು ಅಜಮಾಯಿಸಿ ರೈತರ ಮವಾಲನ್ನು ತೆಗೆದುಕೊಳ್ಳದೆ ಸದರಿ ಜಾಗವನ್ನು ಮಂಜೂರ್ ಮಾಡುವುದಾಗಿ ಹೇಳುತ್ತಾರೆ. ಈಗ ದರಖಾಸ್ತ್ ಮಾಡಿರುವ (ಕೊಲ್ಲಿ) ತೋಡಿಗೆ ಮೆ. ನಾರಾಯಣ ಶೆಟ್ಟಿ ತೋಟದಿಂದ ಇನ್ನೊಂದು ನೀರು ಕೊಲ್ಲಿ ಬಂದು ಸೇರುತ್ತದೆ. ಇದರ ಬುಡದಲ್ಲಿ ಸದರಿ ಸಾಹುಕಾರರವರು ಕಾಫಿ ಹಣ್ಣು ರೈಟಿಗಾಗಿ ಒಂದು ದೊಡ್ಡ ಕೆರೆ ಕಟ್ಟಿಸಿದ್ದರಿಂದ ಆ ನೀರು ಅಕ್ಟೋಬರ್ ತಿಂಗಳ್ನಲ್ಲೇ ನಿಂತು ಹೋಗಿ ಕೆಳಗಣ 1000 ಬಟ್ಟಿ ಭೂಮಿಗೆಲ್ಲ ನೀರು ತಪ್ಪಿ ಹೋಗುತ್ತೆ. ಅದರ ಜೊತೆಗೆ ಆ ಜಾಗವನ್ನು ಸಾಗುವಳಿಗೆ ಕೊಟ್ಟರೆ ನೀರಿನ ಹನಾಲನ್ನು ಯಾಲಕ್ಕಿ ನಡಲಿಕ್ಕಾಗಿ ತೋಡು ತೆಗೆಯುವ ಕಾರಣ ಜಲದ ಕಣ್ಣು ಆರಿ ಹೋಗಿ ಭೂಮಿಗಳಿಗೆ ನೀರಿಲ್ಲದೆ ಗ್ರಾಮಸ್ಥರು ಊರು ಬಿಟ್ಟು ಹೋಗಬೇಕಾಗಿ ಬರುತ್ತದೆ. ಯಾಲಕ್ಕಿ ಬೆಳೆಯುವ ಜಾಗದಿಂದ ನೀರು ಕೆಳಗಣ ಭೂಮಿಗೆ ಹೋದರೆ ಯಾಲಕ್ಕಿಯ ಉಷ್ಣದಿಂದ ಭೂಮಿಯು ಬೆಳೆಯು ಕೆಟ್ಟು ಹೋಗುತ್ತೆಂದಾಗಿ ಅನೇಕ ಅನುಭವಸ್ಥರು ಹೇಳುತ್ತಾರೆ. ಆದ್ದರಿಂದ ಗರೀಬ ರೈತರ ಮೇಲೆ ಕರುಣೆಯಿಟ್ಟು ಕಮಿಶನರ್ ಸಾಹೇಬರವರು ಮೇಲ್ಕಂಡ ಜಾಗವನ್ನು ಮತ್ತು ಭೂಮಿಗಳನ್ನು ಸಹ ಖುದ್ದು ಅಜಮಾಯಿಸಿಕೆಯಿಂದ ಸದರಿ ಜಾಗವನ್ನು ವ್ಯವಸಾಯಕ್ಕೆ ಕೊಡದೆ ಮೊದಲಿನಂತೆ ಪೈಸಾರಿಯಾಗಿ ಅವಾಸತ್ತು ನೀರಿನ ಹನಾಲಿಕೆಗಾಗಿ ಬಿಟ್ಟು ಗರೀಬ ರೈತರನ್ನು ಉದ್ಧಾರ ಮಾಡಬೇಕಾಗಿ ಅಡ್ಡಬಿದ್ದು ಬೇಡುತ್ತೇವೆ.

ಗ್ರಾಮಸ್ಥ.

ಗೋಣಿಕೊಪ್ಪಲು ಮೀಟಿಂಗಿನ ಮೇಲೆ ಟೀಕೆ.

ಸೈಮನ್ ರಿಪೋರ್ಟು ಮುಂದಿನ ಸುಧಾರಣೆ

ಕೊಡಗಿನ ಸರ್ಕಾರವು ಕೊಡಗಿಗೆ ಮುಂದಕ್ಕೆ ಯಾವ ತರದ ಮಾರ್ಪಾಟುಗಳು ಬೇಕೆಂಬುದನ್ನು ತಿಳಿಸಲಿಕ್ಕೆ ಕೊಡಗಿನಲ್ಲಿರುವ ಕೋಮುಗಳನ್ನು ಕೇಳಿರುವರು. ಇದೇ ಪ್ರಕಾರ ಕಿಗ್ಗಟ್ಟು ನಾಡಿನವರು ತಮ್ಮ ಅಭಿಪ್ರಾಯವನ್ನು ಗೋಣಿಕೊಪ್ಪಲಲ್ಲಿ ಸಭೆ ನಡೆಯಿಸಿ ಠರಾವುಗಳ ಮೂಲಕ ತಿಳಿಸಿರುವರು. ಆದರೆ ಸಭಿಕರಿಗೆ (ಅನೇಕರಿಗೆ) ಯಾವದರ ವಿಷಯ ಅಭಿಪ್ರಾಯ ಕೊಡಬೇಕೆಂಬುದೇ ತಿಳಿದಿರಲಿಲ್ಲ. ಕೆಲವರು ಏಕೀಕರಣದ ವಿಷಯ ಚರ್ಚಿಸುತ್ತಿದ್ದರು, ಕೆಲವರು ಈಗಿನ ಪ್ರಶ್ನೆ ಅದಲ್ಲ, ಕೊಡಗಿಗೆ ಯಾವ ವಿಧದ ಮಾರ್ಪಾಡು ಬೇಕೆಂಬುದು ಈಗ ಚರ್ಚಿಸಲಿರುವ ಪ್ರಶ್ನೆ. ಆದ್ದರಿಂದ ಇದರ ವಿಷಯ ಮಾತ್ರ ಅಭಿಪ್ರಾಯ ಕೊಡಬೇಕೆಂದರು. ಅದೇ ಮೇರೆ ಒಬ್ಬರ ನಂತರ ಒಬ್ಬರು ಕೊಡಗಿಗೆ ಪೂರ್ತಿ ಸ್ವರಾಜ್ಯ ಬೇಕೆಂದರು. ಕೆಲವರು ಪೂರ್ತಿ ಜವಾಬ್ದಾರಿಕೆ ಬೇಕು, ಅಲ್ಲದಿದ್ದರೆ ಜವಾಬ್ದಾರಿಕೆ ಇರುವ ಪ್ರಾಂತ್ಯಗಳಿಗೆ ಸೇರಿಸಬೇಕೆಂದರು. ಹಾಗೂ ಹೀಗೂ ಠರಾವುಗಳು ಪಾಸಾದವು. ಕೆಲವರಿಗೆ ಸಂತೆ ಗಲಾಟೆ, ಕೆಲವರಿಗೆ ಅವಿವೇಕದ ಓಡಾಟ. ಈ ಪ್ರಕಾರ ಕೊಡಗಿಗೆ ಇತರ ಪ್ರಾಂತ್ಯಗಳಿಗೆ ದೊರೆಯುವ ಮಾರ್ಪಾಟುಗಳು ಸಿಕ್ಕಬೇಕೆಂಬ ಠರಾವು ಒಮ್ಮತದಿಂದ ಪಾಸಾಯಿತು. ಇದರ ವಿಷಯ ನಮಗೆ ಕೆಲವು ಅಭಿಪ್ರಾಯಗಳು ತೋಚಿವೆ.

1919ನೇ ಇಸವಿಯ 'ಇಂಡಿಯಾ ಆಕ್ಟ್'ನಲ್ಲಿ ನಮೂದಿಸಿದ ಮೇರೆ ಹಿಂದೂಸ್ಥಾನದ ಆಡಳಿತ ಕ್ರಮವನ್ನು ಪರೀಕ್ಷಿಸಿ ಹೆಚ್ಚಿನ ಮಾರ್ಪಾಡುಗಳನ್ನು ಕೊಡಲು ಒಂದು ಕೂಟವನ್ನು ಏರ್ಪಡಿಸಬೇಕೆಂದು ಹಿಂದೂಸ್ಥಾನದ ವೈಸರಾಯರಾದ ಲಾರ್ಡ್ ಇರ್ವಿನ್‌ರವರ, ಇಂಡಿಯಾ ಸರ್ಕಾರಕ್ಕೆ 1927ನೇ ಇಸವಿ ನವಂಬರ 9ರಲ್ಲಿ ಸೂಚಿಸಿದರು. ತನ್ನ ರೀತಿ ಸೈಮನ್ ಕಮಿಶನ್ ಎಂಬುದೊಂದು ಕೂಟವು ಹಿಂದೂಸ್ಥಾನದ ಆಡಳಿತ ಕ್ರಮ ಪರಿಶೋಧನೆಗೆ ಆರಂಭಿಸಿತು. ಆದರೆ ಹಿಂದೂಸ್ಥಾನದ ಅನೇಕ ಸಂಸ್ಥೆಗಳು ಈ ಕೂಟವು ಬರೀ ಪರದೇಶೀಯರಿಂದ ಕೂಡಿದ್ದು. ಇದು ಹಿಂದೂಸ್ಥಾನದ ನಿಜವಾದ ಸ್ಥಿತಿಯನ್ನು ತಿಳಿಯ ಸಮರ್ಥವಾದುದಲ್ಲ. ಇದರಲ್ಲಿ ಕೆಲವು ಹಿಂದೂದೇಶೀಯರೂ ಅಡಗಿದ್ದಿದ್ದರೆ ಒಪ್ಪಬಹುದಿತ್ತೆಂದು ಆ ಕೂಟದೊಡನೆ ಅಸಹಕಾರ ಮಾಡಿ ತಮ್ಮ ಅತೃಪ್ತಿಯನ್ನು ಬಹಿರಂಗಪಡಿಸಿದರು. ಆದರೆ ಈ ಅಸಹಕಾರ ಚಳವಳವು ಗಮನಿಸಲ್ಪಡಲಿಲ್ಲ. ಹಾಗೂ ಹೀಗೂ ಕೂಟವು ತಮ್ಮ ಕೆಲಸವನ್ನು ಪೂರೈಸಿ ಹಿಂತಿರುಗಿ ಸೈಮನ್ ರಿಪೋರ್ಟನ್ನು ಹೊರಪಡಿಸಿತು. ಇದರಲ್ಲಿ ಹಿಂದೂಸ್ಥಾನಕ್ಕೆ ಪ್ರಾಂತೀಕ ಜವಾಬ್ದಾರಿಕೆ ಕೊಡಬೇಕೆಂದು ಮತ್ತು ಕೇಂದ್ರದಲ್ಲಿ ಮಾತ್ರ ಸ್ವಾತಂತ್ರ್ಯವನ್ನು ಸದ್ಯಕ್ಕೆ ಕೊಡಬಾರದಾಗಿಯೂ, ಕೆಲವು ಬ್ರಿಟಿಷರ ಹಿತದೃಷ್ಟಿಯಿಂದ ಹಿತಪಾಲನೆಗಳಿಡಬೇಕೆಂದು ಆಲೋಚಿಸಲ್ಪಟ್ಟಿತ್ತು.

ಕೂಡಲೇ ಈ ಪ್ರಾಂತೀಕ ಜವಾಬ್ದಾರಿ ಆಡಳಿತವು ಹೇಗಿರಬೇಕೆಂದು ತೀರ್ಮಾನಿಸಲಿಕ್ಕೆ ಆರಿಸಲ್ಪಟ್ಟ ಕೆಲವು ಮುಖಂಡರಿಂದ ಕೂಡಿದ ಒಂದು ರೌಂಡ್ ಟೇಬಲ್ ನಡೆಯಿತು. ಈಗ ಕೆಲವರು ಈ ಸೈಮನ್ ಕಮಿಶನೆಂಬುದು ಬರೇ ಹಿಂದೂದೇಶದ ಈಗಿನ ಸ್ಥಿತಿಯ ವಿಷಯ ರೌಂಡ್ ಟೇಬಲ್ ಕಾನ್‌ಫರೆನ್ಸಿಗೆ ತಿಳಿಯಪಡಿಸಲಿಕ್ಕೆ ಏರ್ಪಡಿಸಿದ ಸಂಸ್ಥೆ. ಆ ಪ್ರಕಾರ ಅದು ಅದರ ಕೆಲಸವನ್ನು ಮುಗಿಸಿದೆ. ಆದ್ದರಿಂದ ಇನ್ನು ಅವರು ಕಾಣಿಸಿರುವ ವಿಷಯಗಳಿಗೆ ಬೆಲೆ ಇಲ್ಲ. ಇದು ಕಾನ್‌ಫರೆನ್ಸಿಗೆ ತಿಳಿಯಪಡಿಸಲಿಕ್ಕೆ ಬೇಕಾದ ಸಾಹಿತ್ಯಗಳನ್ನು ಹೊಂದಿಸಲಿಕ್ಕೋಸ್ಕರ ಏರ್ಪಡಿಸಿದುದು ಆದ್ದರಿಂದ ಇದಕ್ಕೆ ಇನ್ನು ಪ್ರಾಮುಖ್ಯತೆಯನ್ನು ಕೊಡಬೇಕೆಂಬ ಅವಶ್ಯವಿಲ್ಲವೆಂದು ಕೆಲವರು ಮೇಲ್ಕಂಡ ಮೀಟಿಂಗಿನಲ್ಲಿ ಸೂಚಿಸಿದರು. ಇದು ಬರೇ ತಪ್ಪು ಅಭಿಪ್ರಾಯ. ಹಿಂದೂಸ್ಥಾನದ ಸ್ಥಿತಿಗತಿಗಳನ್ನು ಮುಂದಕ್ಕೆ ಬೇಕಾದ ಸುಧಾರಣೆಗಳನ್ನು ನಿರ್ಣಯಿಸಲು ಈ ಕೂಟವನ್ನು ಕಳುಹಿಸಿದ್ದು. ಅದೇ ಪ್ರಕಾರ ಈ ಕೂಟವು ಅದರ ಕರ್ತವ್ಯವನ್ನು ಮಾಡಿದೆ. ಈ ಸೈಮನ್ ರಿಪೋರ್ಟನ್ನು ಆಧಾರವಾಗಿಟ್ಟುಕೊಂಡು ಇದರ ವಿಷಯ ಒಪ್ಪಿಗೆಯನ್ನು ತೆಗೆಯುವುದಕ್ಕೋಸ್ಕರ ಮತ್ತು ಬೇಕಾದ ತಿದ್ದುಪಡಿಗಳನ್ನು ಮಾಡಲು ಈ ಕಾನ್‌ಫರೆನ್ಸ್ ಜರಗಿತಲ್ಲದೆ ಸೈಮನ್ ರಿಪೋರ್ಟನ್ನು ಬರೀ ಒಂದು ಶಿಫಾರಸ್ಸಿನ ಸಂಸ್ಥೆಯಂತೆ ತೆಗೆದುಕೊಂಡು ಹೊಸ ಮಾರ್ಪಾಡುಗಳನ್ನು ಯಾ ಮಾರ್ಪಾಟುಗಳನ್ನು ತರಲಿಕ್ಕೆ ಆ ಈ ರಿಪೋರ್ಟಿಗೆ ಇಂಡಿಯಾ ಸರಕಾರ ಹೆಚ್ಚಿನ ಬೆಲೆ ಕೊಟ್ಟಿರುತ್ತೆ. ಈ ವಿಷಯ ಗಾಂಧೀಜಿಯವರು ಕಾನ್‌ಫರೆನ್ಸಿನ ... ಪ್ರೆಶ್ನೆಯನ್ನು ತಿಳಿಸಬೇಕು. ಇದು ಹಿಂದೂಸ್ಥಾನಕ್ಕೆ ಪೂರ್ಣ ಜವಾಬ್ದಾರಿ ಕೊಡಲಿಕ್ಕಿರುವದೋ ಇಲ್ಲವೇ ಬ... ಅಭಿಪ್ರಾಯವನ್ನು ತೆಗೆಯಲಿಕ್ಕಿರುವದೋ ಎಂಬುದನ್ನು ನಿಷ್ಕಪಟವಾಗಿ ತಿಳಿಸಬೇಕೆನ್ನಲು ಸರ್ಕಾರವು ಪ್ರಕಾರದ ಉತ್ತರ ಕೊಡಲಿಲ್ಲವು. ಅಲ್ಲದೆ ಲೇಬರ್ ಸರ್ಕಾರವು ಇಂಗ್ಲೆಂಡಿನ ಕೂನೆಗೊಂಡೊಡನೆ ಇರ್ವಿನ್ ವೈಸರಾಯರು ಇಂಗ್ಲೆಂಡಿಗೆ ಹೋಗಿ ಅಲ್ಲಿಯ ಈಗಿನ ಸೆಕ್ರೆಟರಿ ಆಫ್ ಸ್ಟೇಟರೊಡನೆ ಮ ವೆಡ್ಜ್‌ವುಡ್ ಬೆನ್‌ರವರೊಡನೆಯೂ ಹಿಂದೂಸ್ಥಾನದ ಮಾರ್ಪಾಟುಗಳ ವಿಷಯ ಅಭಿಪ್ರಾಯಪಟ್ಟು ಹಿಂದಿರುಗಿದ ನೆಯೇ ಹಿಂದೂಸ್ಥಾನಕ್ಕೆ 'ಡೊಮಿನಿಯನ್ ಸ್ಟೇಟಸ್' ಅಂ... ಪೂರ್ಣ ಜವಾಬ್ದಾರಿಕೆಯನ್ನು ಕೊಡುವದೇ ಇಂಡಿಯಾ ಸ...

ವರ್ತಮಾನ ಸಂಗ್ರಹ.

ಒಳದೇಶ.

ಮಡಿಕೇರಿ ಸೆಂಟ್ರಲ್ ಹೈಸ್ಕೂಲು ಮಳೆಗಾಲದ ನಿಮಿತ್ತ ಈ ತಾ. 23ರಿಂದ 3 ವಾರಗಳ ವರೆಗೆ ಮುಚ್ಚಲ್ಪಡುವುದು.

ಹೆಬ್ಬಾಲೆಯಲ್ಲಿ ಇನ್ನೂ ಪ್ಲೇಗಿನ ಕಾಯಿಲೆಯು ನಿವಾರಣೆಯಾಗಿರುವುದಿಲ್ಲ. ಕಳೆದ ವಾರ ಪುನಹ ಒಬ್ಬನಿಗೆ ಪ್ಲೇಗು ಅಂಟಿದೆಯಾಗಿ ತಿಳಿಯಬರುತ್ತದೆ.

ಮಡಿಕೇರಿಯಲ್ಲಿ ತಾ. 1ರಿಂದ ಮಳೆಯು ಪ್ರಾರಂಭವಾಗಿ ಮಳೆಗಾಲವು ಸುರುವಾದಂತೆ ತೋರುವುದು. ಈ ವಾರ ಮಡಿಕೇರಿಯಲ್ಲಿ 6.85 ಇಂಚು ಮಳೆಯಾಗಿದೆ.

ಮೆ. ಕಂಡ್ರತಂಡ ಪೊನ್ನಪ್ಪನವರು ಆಡಿಟಿಂಗ್ ಮತ್ತು ಕೊಪರೇಶನ್‌ನಲ್ಲಿಯೂ ಮತ್ತು ಕಲಿಯಂಡ ಸೋಮಯ್ಯನವರು ಅಡಿಟಿಂಗಿನಲ್ಲಿಯೂ ಸೆಕೆಂಡ್ ಕ್ಲಾಸಿನಲ್ಲಿ ತೇರ್ಗಡೆಯಾಗಿರುವರೆಂದು ತಿಳಿಸಲು ಸಂತೋಷಪಡುತ್ತೇವೆ.

ಅಂಗರೆ ಕಡೆಯ ದೇಶದ ಹಲವು ಭಾಗಗಳಲ್ಲಿ ಕಲದೋರಿದೆ. ಅದು ಒಂದು ಕಡೆಯಿಂದ ಇನ್ನೊಂದು ಕಡೆಗೆ ಬಹು ಶೀಘ್ರವಾಗಿ ಹರಡುತ್ತಲಿದೆ. ಶಾಲೆಗಳು ಮುಚ್ಚಲ್ಪಡುತ್ತಿವೆ. ಅಲ್ಲಲ್ಲಿ ಮಕ್ಕಳ ಮರಣಗಳು ಸಂಭವಿಸುತ್ತಿವೆಂದು ವರ್ತಮಾನ.

ಮಡಿಕೇರಿಯಲ್ಲಿ ಈಗ್ಗೆ ಕೆಲವು ದಿನಗಳಿಂದ ದನಗಳ ಕಾಯಿಲೆಯು ಪ್ರಾರಂಭವಾಗಿದೆ. ಅನೇಕ ಕಡೆಗಳಲ್ಲಿ ದನಗಳು ಸಾಯುತ್ತಲಿವೆ. ಆದರೇನು? ವೆಟರ್ನರಿ ಆಸ್ಪತ್ರೆಯಲ್ಲಿ ಬೇಕಾದ ಸೀರಂ ಇಲ್ಲದೆ ಎಣ್ಣೆ ಬರುವವಾಗ ಗಾಣ ಮುರಿಯಿತೆಂಬಂತಾಗಿದೆಯಂತೆ.

ಯಂ. ಸಿ. ಯಸ್. ಎಂಬ ಒಂದು ಹೊಸ ಮೋಟಾರು ಸರ್ವೀಸು ಮಡಿಕೇರಿಯಿಂದ ಬೆಳಗ್ಗೆ ಒಂಬತ್ತು ಗಂಟೆಗೆ ಹೊರಟು ಫ್ರೇಜರ್‌ಪೇಟೆಗಾಗಿ ಮೈಸೂರಿಗೆ ತಲಪಿ, ಪುನಹ ಮೈಸೂರಿಂದ ಮಡಿಕೇರಿಗೆ ಸಾಯಂಕಾಲ 5 ಗಂಟೆಗೆ ಹಿಂತಿರುಗುವದು. ದರವೂ ಸುಲಭ. ಅದ್ದರಿಂದ ಪ್ರಯಾಣಿಕರಿಗೆ ಬಹಳ ಅನುಕೂಲವಾಗಿದೆ

ಸತ್ಯಾಗ್ರಹ ಚಳವಳದಲ್ಲಿ ದಸ್ತಗಿರಿ ಮಾಡಲ್ಪಟ್ಟು ಆರಾರು ತಿಂಗಳು ಜೈಲುವಾಸವನ್ನು ಅನುಭವಿಸುತ್ತಿದ್ದ ಈ ಕೆಳಗಿನ ಮಹನೀಯರು ಅವಧಿ ತೀರಿ ಬಿಡುಗಡೆ ಮಾಡಲ್ಪಟ್ಟು ಕೊಡಗಿಗೆ ವಾಪಸು ಬಂದಿರುವರೆಂದು ತಿಳಿಯುತ್ತೇವೆ. ತಾ. 28—6—32ರಲ್ಲಿ ಶ್ರೀಯುತರುಗಳಾದ ಅಜ್ಜಮಾಡ ಮಾದಪ್ಪನವರು ಮತ್ತು ಪಿ. ಎ. ಬೆಳ್ಯಪ್ಪನವರು ಕಡಲೂರು ಡಿಸ್ಟ್ರಿಕ್ಟ ಜೈಲಿನಿಂದಲೂ, ಅಜ್ಜಿಕುಟ್ಟೀರ ಚಿಣ್ಣಪ್ಪನವರು, ಕಡೇಮಾಡ ನಂಜಪ್ಪನವರು ಮತ್ತು ಕಡೇಮಾಡ ಅಯ್ಯಣ್ಣನವರು ಮಧುರ ಡಿಸ್ಟ್ರಿಕ್ಟ ಜೈಲಿನಿಂದಲೂ, ಪೊನ್ನಿಮಾಡ ಮಾಚಯ್ಯನವರು ಮತ್ತು ಕಡಿಯಂಗಡ ಸುಬ್ಬಯ್ಯನವರು ಬಳ್ಳಾರಿ ಜೈಲಿನಿಂದಲೂ, ಮಳಾಂಡ ಚಂಗಪ್ಪನವರು, ಅಪ್ಪಂಡೆರಂಡ ಬಿದ್ದಪ್ಪನವರು ಮತ್ತು ಕೋದೇಂಗಡ ಕಾರ್ಯಪ್ಪನವರು ತಿರುಚಿನಾಪಳ್ಳಿ ಸೆಂಟ್ರಲ್ ಜೈಲಿನಿಂದಲೂ, ತಾ. 30—6—32ರಲ್ಲಿ ಚೆಕ್ಕೇರ ಮಾಣ್ಯಯ್ಯನವರು, ಚೆಟ್ಟಂಗಳ ಗಣಪತಿಯವರು ಮತ್ತು ಕೀತಿರ ಕುಟ್ಟಪ್ಪನವರು ಕಣ್ಣಾನೂರು ಸೆಂಟ್ರಲ್ ಜೈಲಿನಿಂದಲೂ, ತಾರೀಖು 1—7—32ರಲ್ಲಿ ಸನ್ನಸಿಕ ಈಶ್ವರಯ್ಯನವರು ತಿರುಚಿನಾಪಳ್ಳಿ ಸೆಂಟ್ರಲ್ ಜೈಲಿನಿಂದಲೂ, ಪುಲಿಯಂಡ ಸುಬ್ಬಯ್ಯನವರು, ಪುಟ್ಟಿಚಂಡ ಮೊಣ್ಣಪ್ಪನವರು, ಮಲ್ಲೆಂಗಡ ಚಂಗಪ್ಪನವರು, ಕೀಕಿರ ಸುಬ್ಬಯ್ಯನವರು, ಪೊನ್ನಚ್ಚೀರ ಅಪ್ಪಯ್ಯನವರು ಮತ್ತು ಮಲ್ಲೆಂಗಡ ಮುದಯ್ಯನವರು ಕಣ್ಣಾನೂರು ಸೆಂಟ್ರಲ್ ಜೈಲಿನಿಂದಲೂ, ತಾ. 4—7—32ರಲ್ಲಿ ಕಾಳೇಂಗಡ ಚಿಣ್ಣಪ್ಪನವರು, ಸೋಮೆಯಂಡ ಅಚ್ಚಯ್ಯನವರು, ಬಿ. ಜಿ. ಗಣಪಯ್ಯನವರು, ಸಣ್ಣುವಂಡ ನಂಜಪ್ಪನವರು ಮತ್ತು ತಾತಪಂಡ ಪೂವಯ್ಯನವರು ಕಣ್ಣಾನೂರು ಸೆಂಟ್ರಲ್ ಜೈಲಿನಿಂದಲೂ ಬಿಡುಗಡೆ ಮಾಡಲ್ಪಟ್ಟಿರುವರು.

ಹಿಂದೂದೇಶ.

ಈ ತಾ. 2ರ ಪ್ರಾತಃಕಾಲದಲ್ಲಿ ಕಲಕೇರಿಯಲ್ಲಿ ನಡೆದ ಕೊಟ್ಟಾಯಮ್ ತಾಲೋಕು ಕಾನ್ಫರೆನ್ಸಿನಲ್ಲಿ 48 ಜನರು ದಸ್ತಗಿರಿ ಮಾಡಲ್ಪಟ್ಟರೂ ಮಧ್ಯಾಹ್ನದಲ್ಲಿ ಅವರ ಪೈಕಿ 40 ಜನರು ಬಿಡುಗಡೆ ಮಾಡಲ್ಪಟ್ಟರು.

ಕಲ್ಲಿಕೋಟೆಯಲ್ಲಿ ಸ್ವಯಂಸೇವಕರು ಪಿಕೆಟಿಂಗ್ ಕೆಲಸವನ್ನು ನಡೆಸುತ್ತಲೇ ಇದ್ದಾರೆ. ಪೋಲೀಸಿನವರು ಕೆಲವನ್ನು ಬೆಳಿಗ್ಗೆ ದಸ್ತಗಿರಿ ಮಾಡಿ ರಾತ್ರಿ ಬಿಡುಗಡೆ ಮಾಡುತ್ತಲಿದ್ದಾರೆ. ಸಜೆಗೆ ಗುರಿ ಮಾಡುವುದು ಬಹು ಕಡಿಮೆಯಾಗಿದೆ.

ದಕ್ಷಿಣ ಕನ್ನಡದ ಮಂಗಳೂರಿನಲ್ಲಿ ಪಿಕೆಟಿಂಗ್ ಕೆಲಸವೂ, ಕುಂದಾಪುರ ಮೊದಲಾದ ಕೆಲವು ಕಡೆಗಳಲ್ಲಿ ಫಾರೆಸ್ಟ್ ಸತ್ಯಾಗ್ರಹವೂ ನಡೆಯುತ್ತಾ ಇವೆ. ದಸ್ತಗಿರಿ ಮಾಡಲ್ಪಟ್ಟವರಲ್ಲಿ ಹೆಚ್ಚಿನವರು ಸ್ವಲ್ಪ ಸಮಯದ ನಂತರ ಬಿಡುಗಡೆ ಮಾಡಲ್ಪಟ್ಟಿರುವರು.

ತಾ. 9ನೇ ಶನಿವಾರ ಬೊಂಬಾಯಿಯ ಮೆ. ಚಿಮನ್‌ಲಾಲ್ ಸೆತಲ್‌ವಾಡರ ಬಂಗ್ಲೆಯಲ್ಲಿ ದುಂಡು ಮೇಜು ಪರಿಷತ್ತಿನ ಡೆಲಿಗೇಟರುಗಳ ಮೀಟಿಂಗೊಂದು ಜರಗಲಿಕ್ಕಿರುವುದು. ಆದರೆ ಪಂಡಿತ ಮಾಳವೀಯ ಮತ್ತು ಮೆ. ಬಿರ್ಲಾರವರನ್ನು ಈ ಪರಿಷತ್ತಿಗೆ ಆಮಂತ್ರಿಸಿರುವುದಿಲ್ಲ.

ರಾಜಕೀಯ ಕೈದಿಯಾಗಿ ಮೆ. ಯಂ. ಎ. ಅನ್ಸಾರಿಯವರು ತಮ್ಮ ಆರು ತಿಂಗಳ ಕಾರಾಗೃಹವಾಸವನ್ನು ಮುಗಿಸಿ ಈಗ ಬಂಧಮುಕ್ತರಾಗಿರುವರು. ಅವರ ಕಾಯಿಲೆಯು ಇನ್ನೂ ಗುಣವಾಗಿರುವುದಿಲ್ಲ. ಚಿಕಿತ್ಸೆ ಹೊಂದುವುದಕ್ಕಾಗಿ ಆಗಷ್ಟ ತಾ. 1ರಲ್ಲಿ ಯೂರೋಪಿಗೆ ತೆರಳುವರಂತೆ.

ಈ ತಾ. 30ರಲ್ಲಿ ನಾಡಿಯಾಡದಲ್ಲಿ ನಡೆಯಲಿಕ್ಕಿದ್ದ ಕೈರ ಡಿಸ್ಟ್ರಿಕ್ಟ ರಾಜಕೀಯ ಕಾನ್ಫರೆನ್ಸಿನ ಸಂಬಂಧ 1000 ಜನರು ದಸ್ತಗಿರಿ ಮಾಡಲ್ಪಟ್ಟರು. ಅವರ ಪೈಕಿ 300 ಸ್ತ್ರೀಯರು. ಮೆರವಣಿಗೆ ಮತ್ತು ಮೀಟಿಂಗು ಮಾಡಲು ಯತ್ನಿಸಿದಾಗ ಲಾಠಿ ಚಾರ್ಜು ಮಾಡಿ, ದಸ್ತಗಿರಿ ಮಾಡಿದ್ದಾಗಿದೆಯೆಂದು ಸುದ್ದಿ.

ಮೆ. ಸುಭಾಸ್ ಚಂದ್ರಬೋಸರವರ ಆರೋಗ್ಯವು ನೆಟ್ಟಗಿಲ್ಲವೆಂದು ತಿಳಿಸಿರುತ್ತಾರೆ. ಪ್ರತಿ ದಿನವೂ ಸ್ವಲ್ಪ ಜ್ವರ ಬರುತ್ತದಂತೆ. ಭಾರದಲ್ಲಿ 42 ಪೌಂಡು ಕಮ್ಮಿಯಾಗಿದೆಯಂತೆ. ಜೈಲಿಗೆ ಸೇರುವಾಗ ಇವರ ಭಾರವು 182 ಪೌಂಡು ಆಗಿತ್ತು. ಈಗ ಬರೆ 140 ಪೌಂಡು ಮಾತ್ರ. ಇದು ಅಲ್ಲಿ ಕೊಡುವ ಆಹಾರದ ದೆಸೆಯಿಂದ ಎಂದು ತಿಳಿಸಿರುತ್ತಾರೆ.

ತಾ. 4ರಲ್ಲಿ ಲಕ್ನೋದಲ್ಲಿ ಒಂದು ದೊಡ್ಡ ಪಬ್ಲಿಕ್ ಸಭೆ ಸೇರಿ, ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಜಾಹೀರ್‌ನಾಮೆಯು ಹಿಂದೀಯರ ಆತ್ಮಗೌರವಕ್ಕೆ ತುಂಬಾ ಕೊರತೆಯುಳ್ಳದ್ದಾಗಿರುವುದಲ್ಲದೆ ಅದು ಬ್ರಿಟಿಷರ ವಿಶ್ವಾಸಘಾತಕತನವನ್ನು ಸೂಚಿಸುತ್ತದೆಂದೂ, ಆರ್ಡಿನೇನ್ಸ್ ಪುನಹ ಜಾರಿಗೆ ತಂದದನ್ನು ಖಂಡಿಸಿಯೂ ಠರಾವುಗಳನ್ನು ಪಾಸು ಮಾಡಿದರು.

ಬನಾರಿಸಿನ ರಂಗ ನಾರಾಯಣರವರನ್ನು (ಮಾಜಿ ಯಂ. ಯಲ್. ಸಿ.) ಅಲ್ಲಿನ ಡಿಸ್ಟ್ರಿಕ್ಟ ಪೊಲಿಟಿಕಲ್ ಕಾನ್ಫರೆನ್ಸಿನ ಪ್ರೆಸಿಡೆಂಟರೆಂದು ತಿಳಿದು ಬಂದು ತಾ. 5ರಲ್ಲಿ ದಸ್ತಗಿರಿ ಮಾಡಿ ಮೂರು ತಿಂಗಳ ಕಠಿಣ ಸಜೆಗೂ, 50 ರೂ. ದಂಡಕ್ಕೂ ಗುರಿ ಮಾಡಿರುವರು. ಅದೇ ದಿನ ಪರದೇಶಿ ವಸ್ತ್ರದಂಗಡಿಗಳನ್ನು ಪಿಕೆಟ್ ಮಾಡಿದುದಕ್ಕಾಗಿ 10 ಮಂದಿ ಸ್ವಯಂ ಸೇವಕರನ್ನು ದಸ್ತಗಿರಿ ಮಾಡಿರುವರು.

ಸರ್ ಸಿ. ಪಿ. ರಾಮಸ್ವಾಮಿ ಅಯ್ಯರವರು ಇಂಡಿಯನ್ ಲೆಜಿಸ್ಲೇಟಿವ್ ಎಸೆಂಬ್ಲಿಯ 'ಲೀಡರ್' ಆಗಿ ವೈಸರಾಯರಿಂದ ನೇಮಿಸಲ್ಪಟ್ಟಿರುವರು. ವೈಸರಾಯರ ಎಕ್ಸಿಕ್ಯೂಟಿವ್ ಕೌನ್ಸಿಲಿನ 'ಲಾ' ಮೆಂಬರಾದ ಸರ್ ಬಿ. ಎಲ್. ಮಿತ್ತರ್‌ರವರು ಕೌನ್ಸಿಲ್ ಆಫ್ ಸ್ಟೇಟಿನ 'ಲೀಡರ್' ಆಗಿರುವರು. ಈ ಎರಡು ನ್ಯಾಯವಿಧಾಯಕ ಸಭೆಗಳಿಗೆ ಹಿಂದೀಯರು 'ಲೀಡರ್'ಗಳಾದದ್ದು ಇದೇ ಪ್ರಥಮವಾಗಿದೆ.

ಕಳೆದ ಜನವರಿ ತಿಂಗಳಲ್ಲಿ ಹೊರಡಿಸಿದ್ದ ಆರ್ಡಿನೇನ್ಸುಗಳ (ತುರ್ತಿನ ಕಾನೂನುಗಳು) ಆರು ತಿಂಗಳ ಅವಧಿ ಮುಗಿದದ್ದರಿಂದ ವೈಸರಾಯರು ಕಾನೂನುಭಂಗ ಚಳವಳವನ್ನು ಅಡಗಿಸಲಿಕ್ಕಾಗಿ ಹಳೇ ಎಲ್ಲಾ ಆರ್ಡಿನೇನ್ಸುಗಳನ್ನು ಒಳಗೊಂಡು ಸ್ವಲ್ಪ ಬದಲಾವಣೆಯಿಂದ ಹೊಸ ಒಂದೇ ಆರ್ಡಿನೇನ್ಸನ್ನು ಈ ತಾ. 3ರಲ್ಲಿ ಪ್ರಕಟಿಸಿರುವರು. ಈ ಹೊಸ ಆರ್ಡಿನೇನ್ಸನ್ನು ಈಗಾಗಲೇ ಹಲವು ಪ್ರಾಂತ್ಯಗಳು ಜಾರಿಗೆ ತಂದಿರುವರು.

ಚಿರಕ್ಕಲ್ ತಾಲೂಕು ಕಾನ್ಫರೆನ್ಸು ಕಳೆದ ತಾ. 30ರಲ್ಲಿ ಬಲಿಯಪಟಂ ನದಿಯ ತೀರದಲ್ಲಿ ಕಾರ್ಯಲ್ ದೇಶಮಿನಲ್ಲಿ ಶ್ರೀಮತಿ ಸುಂದರೀ ಬಾಯಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಮೀಟಿಂಗಿನ ನಂತರ ಸಭೆಯವರು ಮೆರವಣಿಗೆ ಹೋಗುತ್ತಿದ್ದಾಗ 50 ಜನರು ದಸ್ತಗಿರಿ ಮಾಡಲ್ಪಟ್ಟರು. ಆದರೆ ಅವರ ಪೈಕಿ 42 ಜನರು ಸ್ವಲ್ಪ ಸಮಯದ ನಂತರ ಪೋಲೀಸು ಸ್ಟೇಶನಿನಿಂದ ಬಿಡುಗಡೆ ಮಾಡಲ್ಪಟ್ಟರು. ಮೀಟಿಂಗಿನ ಅಧ್ಯಕ್ಷರು ಮತ್ತು ಸ್ವಾಗತ ಅಧ್ಯಕ್ಷರಾಗಿದ್ದ ಇಬ್ಬರು ಮಹಿಳೆಯರಿಗೆ ಒಂದೊಂದು ವರ್ಷ ಕಠಿಣ ಸಜೆ ವಿಧಿಸಲಾಗಿದೆ.

ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಜಾಹೀರ್ ಪತ್ರವು ಹಿಂದೀಯರಿಗೆ ತುಂಬಾ ಅತೃಪ್ತಿಯನ್ನುಂಟುಮಾಡಿದೆಯೆಂದೂ, ಮುಂದಿನ ರಚನೆಯ ವಿಷಯದಲ್ಲಿ ಇಷ್ಟರ ವರೆಗೆ ನ್ಯಾಯವಿಧಾಯಕ ಸಭೆಗಳ ಅಭಿಪ್ರಾಯವನ್ನು ತೆಗೆದುಕೊಳ್ಳದೆ ಹೋದದ್ದು ಅನ್ಯಾಯಕರವೆಂತಲೂ, ಇನ್ನಾದರೂ ಸರ್ಕಾರದವರು ಮಧ್ಯ ಮತ್ತು ಪ್ರಾಂತೀಕ ಕೌನ್ಸಿಲುಗಳ ಮೆಂಬರುಗಳ ಒಂದು ಕಮಿಟಿಯನ್ನು ಮಾಡಿ, ಅದರ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕೆಂತಲೂ ಎಸೆಂಬ್ಲಿಯ ಇಂಡಿಪೆಂಡೆಂಟ್ ಪಾರ್ಟಿಯ ಮುಂದಾಳಾದ ಸರ್ ಅಬ್ದುರ್ ರಹೀಮ್‌ರವರು ಅಭಿಪ್ರಾಯ ಸೂಚಿಸಿರುವರು.

ತಾ. 5ರಲ್ಲಿ ಮದ್ರಾಸಿನಲ್ಲಿ ಅಖಿಲ ಭಾರತ ಕೈದಿಗಳ ದಿನವು ಆಚರಿಸಲ್ಪಟ್ಟಿತು. ಮೆ: ವಿಶ್ವನಾಥನೆಂಬವರು 12 ಸ್ವಯಂ ಸೇವಕರ ಸಮೇತ ಮೆರವಣಿಗೆ ಹೊರಟಾಗ ಪೋಲೀಸಿನವರಿಂದ ದಸ್ತಗಿರಿ ಮಾಡಲ್ಪಟ್ಟರು. ಆದರೆ ಸಾಯಂಕಾಲ ವಿಶ್ವನಾಥರವರೊಬ್ಬರಲ್ಲದೆ ಬಾಕಿ ಎಲ್ಲರೂ ಬಿಡುಗಡೆ ಮಾಡಲ್ಪಟ್ಟರು. ಹಾಗೆಯೇ ಟ್ರಿಪ್ಲಿಕೇನಿನಲ್ಲಿ 6 ವಾಲಂಟೀಯರುಗಳು ಮೆರವಣಿಗೆ ಹೋಗುತ್ತಿದ್ದಾಗ್ಯೆ ದಸ್ತಗಿರಿ ಮಾಡಲ್ಪಟ್ಟು ನಂತರ ಬಿಡುಗಡೆ ಮಾಡಲ್ಪಟ್ಟರು. ಹಾಗೆಯೇ ರೋಯಪುರಮಿನಲ್ಲಿ 2 ಸ್ವಯಂ ಸೇವಕರೂ, ಇನ್ನೊಂದು ಕಡೆ ಪಿಕೆಟ್ ಮಾಡುತ್ತಿದ್ದ 4 ಸ್ತ್ರೀಯರೂ ಕೈದು ಮಾಡಲ್ಪಟ್ಟು, ರಾತ್ರಿ ಬಿಡಲ್ಪಟ್ಟರು.

ಬೊಂಬಾಯಿಯಲ್ಲಿ ಹಿಂದೂ ಮುಸಲ್ಮಾನರ ಕೋಮುವಾರು ಹೊಡೆದಾಟವು ಪುನಹ ಪ್ರಾರಂಭವಾಗಿದ್ದೆ. ಕೆಲವು ಮುಸಲ್ಮಾನರು ಪೋಲೀಸು ಹುಕುಮಿಗೆ ವಿರೋಧವಾಗಿ ಒಂದು ಶವದ ಮೆರವಣಿಗೆಯನ್ನು ಹಿಂದೂಗಳ ಬೀದಿಗಾಗಿ ತೆಗೆದುಕೊಂಡು ಹೋದದ್ದೇ ಈ ಗಲಾಟೆಯು ಪುನಹ ಸುರುವಾಗಲು ಕಾರಣ. ಪೋಲೀಸಿನವರು ಹಲವು ಸಾರಿ ಬೇರೆ ಬೇರೆ ಕಡೆಗಳಲ್ಲಿ ಗುಂಡು ಹಾರಿಸಬೇಕಾಗಿ ಬಂತು. ಒಂದು ವಾರದಲ್ಲಿ ಸುಮಾರು 20 ಜನರು ಮೃತರಾಗಿರುವರೆಂದೂ, ಸುಮಾರು 200 ಜನರಿಗೆ ಘಾಯವಾಗಿದೆಯೆಂದೂ ವರ್ತಮಾನ. ತಾ. 5ರಲ್ಲಿ ಮಳೆಯು ಬಿದ್ದ ಕಾರಣ ಈ ಗಲಾಟೆಯು ಸ್ವಲ್ಪ ಕಡಿಮೆಯಾಗಿದೆಯಂತೆ.

ಅಖಿಲ ಭಾರತ ಮುಸ್ಲಿಮ್ ಕಾನ್ಫರೆನ್ಸಿನ ಎಕ್ಸಿಕ್ಯುಟಿವ್ ಬೋರ್ಡಿನ ಮೀಟಿಂಗನ್ನು ಮೊದಲು ನಿಶ್ಚಯಿಸಿದಂತೆ ಈ ತಾ. 3ರಲ್ಲಿ ನಡೆಸದೆ ಮುಂದರಿಸಿಟ್ಟದ್ದಕ್ಕೆ ಅತೃಪ್ತಿಯನ್ನು ಸೂಚಿಸಲು ಕೆಲವು ಪ್ರಮುಖ್ಯ ಮುಸಲ್ಮಾನ್ ಮುಂದಾಳುಗಳು ಹಜರತ್ ಮೋಹನಿಯವರ ಅಧ್ಯಕ್ಷತೆಯಲ್ಲಿ ತಾ. 4ರಲ್ಲಿ ಅಲ್ಲಾಹಾಬಾದಿನಲ್ಲಿ ಸಭೆ ಸೇರಿದ್ದರು. ಇನ್ನು 15 ದಿವಸಗಳೊಳಗೆ ಸದರಿ ಬೋರ್ಡಿನ ಮೀಟಿಂಗನ್ನು ನಡಿಸದೆ ಹೋದರೆ ಒಂದು ಹೊಸ ಇಂಡಿಪೆಂಡೆಂಟ್ ಮುಸ್ಲಿಮ್ ಪಾರ್ಟಿಯನ್ನು ಏರ್ಪಡಿಸುವಂತೆಯೂ ನಿಶ್ಚೈಸಿ ಅದರ ಅಧ್ಯಕ್ಷ, ಕಮಿಟಿ ಮೆಂಬರುಗಳನ್ನು ಆರಿಸಿದರು. ಮೇಲಿನ ಕಾರಣದಿಂದಲೇ ಮೌಲಾನ ಶಾಫಿ ದಾವೂದಿಯವರು ಮುಸ್ಲಿಮ್ ಕಾನ್ಫರೆನ್ಸಿನ ಸೆಕ್ರೆಟರಿ ಪದವಿಗೆ ರಾಜಿನಾಮೆ ಕೊಟ್ಟಿರುವರು.

ಬೊಂಬಾಯಿಯಲ್ಲಿ ನಡೆಯಲಿಕ್ಕಿರುವ ದುಂಡು ಮೇಜು ಪರಿಷತ್ತಿನ ಡೆಲಿಗೇಟರುಗಳ ಮೀಟಿಂಗಿನಲ್ಲಿ, ಆರ್ಡಿನೇನ್ಸುಗಳನ್ನು ವಜಾ ಮಾಡುವಂತೆಯೂ, ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡುವಂತೆಯೂ, ಮಹಾತ್ಮ ಗಾಂಧಿಯವರು ಸರ್ಕಾರದೊಂದಿಗೆ ಮುಂದಿನ ರಾಜಕೀಯ ರಚನೆಯನ್ನು ಕುರಿತು ಪತ್ರವ್ಯವಹಾರ ನಡಿಸಲು ಅನುಕೂಲ ಕೊಡುವಂತೆಯೂ ಸರ್ಕಾರವನ್ನು ಕೇಳಬೇಕೆಂತಲೂ, ಹೀಗೆ ಮಾಡಲು ಸರ್ಕಾರದವರು ತಿರಸ್ಕರಿಸಿದರೆ ಲಿಬರಲ್ ಪಕ್ಷದ ಮುಂದಾಳುಗಳಾದ ಮೆ. ಗಳಾದ ಜಯಕರ್ ಸಪ್ರು, ಶಾಸ್ತ್ರಿ ಮೊದಲಾದವರು ಸರ್ಕಾರದೊಂದಿಗೆ ಸಹಕರಿಸಲು ತಿರಸ್ಕರಿಸಬೇಕೆಂತಲೂ ದುಂಡು ಮೇಜು ಪರಿಷತ್ತಿನ ಮೆಂಬರುಗಳಲ್ಲಿ ಒಬ್ಬರಾದ ಮಿ. ಗಿರಿಯವರು ಸರ್ ಚಿಮನ್‌ಲಾಲ್ ಸೆಟಲ್ವಾಡ್‌ರವರಿಗೆ ಬರೆದಿರುವರು.

ವಿದೇಶ.

ಇಂಡಿಯಾದ ರಾಜಕೀಯ ರಚನೆಯನ್ನು ಚರ್ಚಿಸಲು ಪಾರ್ಲಿಮೆಂಟರಿ ಜಾಯಿಂಟ್ ಸಿಲೆಕ್ಟ ಕಮಿಟಿಯನ್ನು ನೇಮಿಸುವ ತಾರೀಕನ್ನು ಈಗ ನಿಶ್ಚಯಿಸಲಿಕ್ಕಾಗುವುದಿಲ್ಲವೆಂದು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಪಾರ್ಲಿಮೆಂಟಿನಲ್ಲಿ ಹೇಳಿದರು.

ಎಸೆಂಬ್ಲಿಯ ಮಾಜಿ ಅಧ್ಯಕ್ಷರಾದ ವಿ. ಜೆ. ಪಟೇಲರವರು ತಾ. 4ರಲ್ಲಿ ಇಂಗ್ಲೆಂಡಿನಿಂದ ಐರ್ಲೇಂಡಿಗೆ ಹೋದರು. ಡಬ್ಲಿನ್ ಪಟ್ಟಣದಲ್ಲಿ ಐರ್ಲೇಂಡಿನ ಸರ್ಕಾರದ ಅಧ್ಯಕ್ಷರಾದ ಮೆ. ಡಿ. ವೇಲೆರರವರು ದೊಡ್ಡ ಸಭೆಯಲ್ಲಿ ಅವರಿಗೆ ಸ್ವಾಗತವನ್ನೀಡಿದರು.

ಐರ್ಲೇಂಡಿನವರು ಇಂಗ್ಲೆಂಡು ಸರ್ಕಾರಕ್ಕೆ ಕೊಡಬೇಕಾಗಿರುವ ಭೂಮಿಯ ವಾಷಿಕ ವಂತಿಗೆಯನ್ನು ಕೊಡಲು ತಿರಸ್ಕರಿಸುತ್ತಿರುವುದರಿಂದ ಐರ್ಲೇಂಡಿನಿಂದ ಇಂಗ್ಲೆಂಡಿಗೆ ಬರುತ್ತಿರುವ ಸಾಮಾನುಗಳಿಗೆಲ್ಲಾ ಶೇಕಡ ನೂರರಷ್ಟು ಸುಂಕ ಹಾಕಬೇಕೆಂಬ ವಿಷಯವು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಚರ್ಚಿಸಲ್ಪಡುತ್ತಿದೆ.

'ಸರ್ ಸ್ಯಾಮುವೆಲ್ ಹೋರ್'ರವರ ಜಾಹೀರ್‌ನಾಮೆಯು ಸರ್ಕಾರದ ತತ್ವವನ್ನು ವಿಶದಪಡಿಸಿದೆ. ಇದರಿಂದ ಜನರಿಗೆ ಕಾಂಗ್ರೆಸ್ಸಿನ ಮೇಲಿರುವ ಸಹಾನುಭೂತಿಯು ಕಡಿಮೆಯಾಗುವುದರ ಬದಲು ತಮ್ಮ ಸ್ನೇಹಿತರು ತಮ್ಮ ರಾಜಕೀಯ ಅಭಿಪ್ರಾಯಕ್ಕಾಗಿ ಹೊಡಿಸಿಕೊಳ್ಳುತ್ತಲೂ, ಸಜೆ ಅನುಭವಿಸುತ್ತಲೂ ಇರುವಾಗಲೂ ಕೂಡ ಬ್ರಿಟಿಷರ ನಿಷ್ಕಪಟತನದಲ್ಲಿ ವಿಶ್ವಾಸವಿಟ್ಟಿದ್ದವರ ನಂಬಿಕೆಗೆ ದೊಡ್ಡ ಪೆಟ್ಟುಬಿದ್ದಂತಾಗಿದೆ. ಹೋರ್‌ರವರು ತನ್ನ ಮನಸು ಬಂದಂತೆ ನಡೆಯಲು ಬಿಡುವುದರಿಂದ ಇಂಗ್ಲೆಂಡಿಗೆ ಇಂಡಿಯಾದಲ್ಲಿ ಸ್ನೇಹಿತರೊಬ್ಬರೂ ಇಲ್ಲದಂತಾಗುತ್ತದೆ" ಎಂದು ಮುಂತಾಗಿ ಇಂಗ್ಲೆಂಡಿನ "ನ್ಯೂ ಸ್ಟೇಟ್ಸ್‌ಮನ್" ಪತ್ರಿಕೆಯ ಅಭಿಪ್ರಾಯವಾಗಿದೆ.

ಯಾರು ಕೂಗಿದರು.

(ಯಂ. ಯಸ್. ಅನಂತ ಪದ್ಮನಾಭರಾವ್.)

ಆರು ಕೂಗಿದರೆನ್ನ ಕದವ ತೆರೆಯೆಂದು?
ಆವ ಕಾಣೆನು ನಾನು ಬಂದವರು ಆರೆಂದು।
ಇರುಳಿನೊಳು ಮಲಗಿರಲು ಬಾಗಿಲನು ಬಂಧಿಸುತ
ಮರಳು ಮಾಡಿದ ನೆನ್ನ ಕರೆದವನ ಬರುತ
ಇರುಳು ಮರುಳನು ಮಾಡಿ ಮರುಳು ಇರುಳನು ಹೂಡಿ
ಕರೆದವನ ಕಾಣಿಸಿತು ಹೃದಯದೊಳು ಮೂಡಿ।
ಎಡಬಿಡದೆ ಡವ ಡವನೆ ಎದೆಯೊಳಗೆ ಬಡಿಯುತಿರೆ
ಎಡವಿದೆನು ತಡವಿದೆನು ನಾನು ಹುಡುಕುತಿರೆ।
ದಿಡುವಿಲ್ಲವೆಂದರಾಗಂತು ಕನು ಬಿಡನೆನ್ನ
ತಡಮಾಡಬೇಡೆಂದು ಕರೆದರಾರೆನ್ನ?
ನಿದ್ದೆ ಹೋದುದು ನನಗೆ ತೊಡ್ಡಿಗೆಯನೆಳೆದಾಗ
ಎದ್ದು ಕಣ್ದೆರೆಯುತಲಿ ಹುಡುಕಿದಾಗ
ಕದ್ದೊಯ್ದ ನೆನ್ನ ಮನ—ಬಂದವನು ಕಾಣದ
ಬಿದ್ದು ಕೊಂಡೆನು ನಾನು ನೆನೆದವನನಾದ।

ನಿರ್ಭಾಗ್ಯ ಶಿಕ್ಷಕ.

(ಲೇಖಕ—ಶ್ರೀಯುತ ಆರ್. ಎಸ್. ಭಾರದ್ವಾಜ, ಕೊಡಗು.)

೧ ನೇ ಭಾಗ.

ಮುಂದಿನ ದಿನದ ಕನಸು.

ಕ್ರಿಸ್ತಸ್ವಾಮಿಯು ಹುಟ್ಟಿ ಸುಮಾರು 1900 ವರ್ಷಗಳ ಮೇಲಾಗಿರಬಹುದು. ಎಲ್ಲೆಲ್ಲಿಯೂ ಕಲಿತ ಶಾಲೆಗಳೂ, ಪ್ರಾಥಮಿಕ ಶಾಲೆಗಳೂ ಇದ್ದವು. ಇದರಿಂದ ವಿದ್ಯೆಯು ಎಲ್ಲರಲ್ಲಿಯೂ ಪಸರಿಸಿ ಎಲ್ಲರೂ ವಿದ್ಯಾವಂತರಾಗಿದ್ದರು. ದೇಶದಲ್ಲಿ ಅಜ್ಞಾನಿಗಳಿಲ್ಲದಿದ್ದರೂ ದಿನ ಹೋದಂತೆ ಉದ್ಯೋಗ ದೊರೆಯದೆ ಅಲೆದಾಡುವವರ ಸಂಖ್ಯೆಯು ಮಾತ್ರ ಹೆಚ್ಚಾಗುತ್ತಲಿದ್ದಿತು.

ದೇಶವು ಇಂಥಾ ಸ್ಥಿತಿಯಲ್ಲಿರುವಾಗಲೇ ರಂಗರಾಯನೆಂಬೊಬ್ಬ ವಿದ್ಯಾರ್ಥಿಯು 'ಮೆಟ್ರಿಕ್ಯುಲೇಶನ್' ಪರೀಕ್ಷೆಯ ಬಂತೆಂದು ಎನ್ನುತ್ತಾ ಬಹಳ ಶ್ರದ್ಧೆಯಿಂದ ತನ್ನ ಪಾಠವನ್ನು ಕಲಿಯುತ್ತಾ ಇದ್ದನು. ಮಾರ್ಚ 24ನೇ ಸೋಮವಾರ ಪರೀಕ್ಷೆಯು ಪ್ರಾರಂಭವಾಗಿ 26ನೇ ಬುಧವಾರ ಕೊನೆಗಂಡಿತು. ರಂಗರಾಯನು ಬುದ್ಧಿವಂತನೂ, ಚಟುವಟಿಕೆಯುಳ್ಳವನೂ ಆಗಿದ್ದರೂ ಪರೀಕ್ಷೆಯ ಫಲಿತಾಂಶದ ವಿಷಯ ಸದಾ ಚಿಂತಿಸುತ್ತಿದ್ದನು. ಎಷ್ಟಾದರೂ ಈಗಿನ ಕಾಲದ ಪರೀಕ್ಷೆಯಲ್ಲವೇ ? ಪರೀಕ್ಷೆಯೆಂದರೆ ಸಾಕು ಎಂಥವನಾದರೂ ಒಮ್ಮೆ 'ಹಾ' ಎಂದು ಬೆಚ್ಚಿ ಬೀಳುವನು. ರಂಗರಾಯನು ಇಂಥ ಹುಡುಗನೇ ಇದ್ದನು. ಆದುದರಿಂದ ಅವನು ಹಾಗೆ ಚಿಂತಿಸಿದುದರಲ್ಲಿ ತಪ್ಪಿಲ್ಲ.

ಚಿಂತೆಯ ದಿನಗಳು ಬಹು ನಿಧಾನವಾಗಿ ಹೊರಳುವುವು. ರಂಗರಾಯನಿಗಂತೂ ದಿನಗಳು, ತಿಂಗಳುಗಳು ಬಹು ಆಯಾಸದಿಂದ ಹೊರಳುವುವೋ! ನನ್ನಲ್ಲಿ ಅವಕ್ಕೂ ಉದಾಸೀನವೇ ಎಂಬಂತೆ ತೋರಿತು. ಪ್ರಾತಃಕಾಲ್ವಮ್ಮೆ ರಂಗರಾಯನು ದಾದರದಿಂದ ಮುಂಬೈ 'ಜನರಲ್ ಏಜೆನ್ಸಿ' ಆಫೀಸಿಗೆ ಬೆಳಗಿನ ಬೋಟಿನಲ್ಲಿ ಹೋಗಿ ತನ್ನ ಕೆಲಸಗಳಾದ ಮೇಲೆ ಅದೇ ಬೋಟಿನಲ್ಲಿ ಸಂಜೆಗೆ ಮನೆಗೆ ಬರುತ್ತಿದ್ದನು. 'ಜನರಲ್ ಏಜೆನ್ಸಿ' ಆಫೀಸಿನಲ್ಲಿ 'ಮೆಟ್ರಿಕ್ಯುಲೇಶನ್' ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಉದ್ಯೋಗವು ದೊರೆಯುತ್ತದೆಂದೂ, ಅಂಥವರು ಆ ಆಫೀಸಿಗೆ ಅರ್ಜಿ ಬರೆದುಕೊಳ್ಳಬಹುದೆಂದೂ 'ಬೊಂಬೆ ಕ್ರಾನಿಕಲ್'ನಲ್ಲಿದ್ದುದನ್ನು ರಂಗರಾಯನು ಓದಿ ತಿಳಿದುಕೊಂಡಿದ್ದನು. ಅವನು ಪಾಸಾಗಿರದಿದ್ದರೂ ಅರ್ಜಿಯನ್ನು ಬರೆದು ಆಫೀಸಿಗೆ ಕೊಟ್ಟನು. ಮತ್ತು ಅಲ್ಲಿಯ ಆಫೀಸರುಗಳ ದಯೆಯನ್ನು ಸಂಪಾದಿಸಿ ಎಲ್ಲಿಯಾದರೂ ಒಂದು ಉದ್ಯೋಗವನ್ನು ಪಡೆಯಬೇಕೆಂದು ಆಶಿಸುತ್ತಿದ್ದನು. ಅದಕ್ಕಾಗಿಯೇ ಅವನು ಮೇಲೆ ಹೇಳಿದಂತೆ ಪ್ರಾತಃಕಾಲ್ವಮ್ಮೆ ದಾದರದಿಂದ ಮುಂಬೈಗೆ ಹೋಗುತ್ತಿದ್ದುದು. ಪರೀಕ್ಷೆಯು ಕಳೆದು ಒಂದು ತಿಂಗಳಾಯಿತು. ಆದರೂ ಪರೀಕ್ಷೆಯ ಫಲಿತಾಂಶವು ಪತ್ರಿಕೆಗಳಲ್ಲಿ ಪ್ರಕಟವಾಗಲಿಲ್ಲ. ಜೂನ್ ತಿಂಗಳ 15ನೇ ಶನಿವಾರ ಎಲ್ಲವೂ ತಿಳಿಯುವುದೆಂದು ಅವನ ಉಪಾಧ್ಯಾಯರು ಹೇಳಿದ್ದರು. ಆದುದರಿಂದ ಆ ದಿನ ರಂಗರಾಯನು ಹೊತ್ತಿನಂತೆ ಎದ್ದು ಸ್ನಾನಾದಿಗಳನ್ನು ಮಾಡಿ ದಾದರದ ಅಂಚೆ ಕಟ್ಟೆಗೆ ತೆರಳಿದ್ದನು. 8 ತಾಸು ಆಗುತ್ತಲೇ ಅಲ್ಲಿಗೆ ದೇರ ಅನೇಕ ವಿದ್ಯಾರ್ಥಿಗಳು ಬಂದರು. ಇವರೆದ್ದಲ್ಲಿಗೆ 'ಪೋಸ್ಟ್ ಮೇನ್' ಬಂದು ಉದ್ದವಾಗಿಯೂ, ಅಗಲಕಿರಿದಾಗಿಯೂ ತುಂಬಾ ಸ್ತಂಭಗಳುಳ್ಳದಾಗಿಯೂ ಇರುವ ಒಂದು ಪುಸ್ತಕವನ್ನು ಕೊಟ್ಟನು. ಅದು 'ಬೊಂಬೆ ಗಜೆಟ್' ಆಗಿದ್ದಿತು. ಅದರಲ್ಲಿ ತೇರ್ಗಡೆ ಹೊಂದಿದವರ ಹೆಸರುಗಳು ಮೊದಲು ಪ್ರಕಟವಾಗುತ್ತವೆಂದೂ, ಆ ಮೇಲೆ ಪತ್ರಿಕೆಗಳಲ್ಲಿ ಅವು ಪ್ರಕಟವಾಗುತ್ತವೆಂಬ ವಿಷಯವು ಹುಡುಗರಿಗೆ ತಿಳಿದುದರಿಂದಲೇ ಅವರು ಅಲ್ಲಿಗೆ ಆ ದಿನ ಬಂದಿದ್ದರು. ಅವಸರವಸರದಿಂದ ಪುಸ್ತಕವನ್ನು ತೆರೆದು ನೋಡಿದರು. ರಂಗರಾಯ, ನಾಗೇಶ, ರಂಗಸ್ವಾಮಿ ಮೊದಲಾದವರ ಹೆಸರುಗಳಿದ್ದವು. ಈಗ ರಂಗರಾಯನಿಗೆ ಹಿಡಿಯಲಾರದಷ್ಟು ಸಂತೋಷವಾಯಿತು. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದುದಲ್ಲವೇ! ಉದ್ಯೋಗವು ಸಿಕ್ಕೀತೆಂಬ ಭರವಸೆಯು ಅವನಿಗಾಯಿತು. ಆದುದರಿಂದ ಅವನು ಆ ದಿನ ಬೆಳಗ್ಗೆ ಎದ್ದು 6 ತಾಸಿನ ಬೋಟಿನಲ್ಲಿ ಮುಂಬಯಿಗೆ ಹೋದನು. ಮತ್ತೂ ಅಲ್ಲೇ ಇದ್ದು ಕೆಲವು ಕಾಲವನ್ನು ಕಳೆಯುವುದು ಒಳಿತೆಂದೂ, ಅಷ್ಟರಲ್ಲಿ ಎಲ್ಲಿಯಾದರೂ ಒಂದು ಉದ್ಯೋಗವು ಲಭಿಸೀತೆಂದೂ ರಂಗರಾಯನು ತನ್ನಲ್ಲೇ ಆಲೋಚಿಸಿಕೊಂಡನು. 'ಕನಸು ಇನಿಸೂ ಸತ್ಯವಲ್ಲವು' ಎಂಬುದನ್ನು ಬಲ್ಲವರಾರು!

೨ ನೇಯ ಭಾಗ.

ನರೇಂದ್ರದತ್ತ ಬಾಬುವು ಉದಾರಿಯೋ?

ಮುಂಬಯಿಯಂಥ ದೊಡ್ಡ ಪಟ್ಟಣದಲ್ಲಿ ಕಾಲ ಕಳೆಯುವುದೆಂದರೆ ಕಷ್ಟ ಸಾಧ್ಯವು. ಏನಿಲ್ಲೆಂದರೂ ತಿಂಗಳಿಗೆ 30 ರೂಪಾಯಿಗಳು ಬೇಕಾಗುತ್ತಲಿದ್ದುವು. ಈಗ ರಂಗರಾಯನು 30 ರೂಪಾಯಿಯನ್ನು ಹೇಗೆ ಸಂಪಾದಿಸೇನು ಎಂಬ ಚಿಂತೆಯಲ್ಲಿ ಮುಳುಗಿದನು. ಇವನು ಈ ಚಿಂತೆಯಲ್ಲಿರುವಾಗ ಇವನ ಮಿತ್ರನಾದ ದಾಮೋದರನು ಬಂದು 'ರಂಗರಾಯ! ನರೇಂದ್ರದತ್ತ ಬಾಬುಗಳ ಹುಡುಗರಿಗೆ ಪಾಠ ಕಲಿಸುವೆಯಾ? ಅವರು ಹುಡುಗರಿಗೆ ಪಾಠ ಹೇಳಿದುದಕ್ಕಾಗಿ ತಿಂಗಳಿಗೆ 30 ರೂಪಾಯಿಯ ವೇತನವನ್ನು ಕೊಟ್ಟಾರು. ಅವರಾದರೂ ದೊಡ್ಡ ಶ್ರೀಮಂತರೂ ಸರಳ ಸ್ವಭಾವದವರೂ ಉದಾರಿಗಳೂ ಇರುತ್ತಾರೆ. ಆದುದರಿಂದ ನೀನು ಅವರ ಹುಡುಗರಿಗೆ ಪಾಠ ಹೇಳಿ ಅವರ ದಯೆಯನ್ನು ಸಂಪಾದಿಸಿದರೆ ಎರಡೊಂದು ವರ್ಷದೊಳಗೆ ಅವರು ನಿನಗೆ ಎಲ್ಲಿಯಾದರೂ ಒಂದು ಉದ್ಯೋಗವನ್ನು ಕೊಡಿಸಬಹುದು. ನೀನು 'ಒಪ್ಪಿದೆ' ಎಂದರೆ ನಾನು ಇಂದೇ ಅವರಲ್ಲಿಗೆ ಹೋಗಿ ನಿನ್ನ ಎಲ್ಲಾ ವಿಷಯಗಳನ್ನು ತಿಳಿಸುವೆನು. ನನ್ನಲ್ಲಿಯಾದರೋ ಅವರಿಗೆ ತುಂಬಾ ನಂಬಿಕೆ. ಆ ಮೇಲೆ ನೀನು ನಾಳೆಯಿಂದ ಅವರ ಹುಡುಗರಿಗೆ ಪಾಠ ಹೇಳುವಿಯಂತೆ. ನಾಳೆ ತಾರೀಖು ಬಂದಿರುತ್ತದೆ'

ರಂಗರಾಯನು ಮೇಲಿನ, ತನ್ನ ಮಿತ್ರನ, ಮಾತಿಗೆ ಒಪ್ಪಿ "ಆಗಲಿ" ಎಂದು ಕೃತಜ್ಞತಾಪೂರ್ವಕವಾಗಿ ನುಡಿದನು. ರಂಗರಾಯನು ಬಹು ಬುದ್ಧಿವಂತನಾದುದರಿಂದ ಕೆಲವು ದಿನಗಳಲ್ಲೇ ಹುಡುಗರು ಬುದ್ಧಿವಂತರಾಗಿ ಶಾಲೆಯಲ್ಲಿ ಉಪಾಧ್ಯಾಯರ ಮೆಚ್ಚಿಗೆಯನ್ನು ಪಡೆದರು. ಆ ತಿಂಗಳು ಕಳೆಯಿತು. ಹೊಸ ತಿಂಗಳು ಪ್ರಾರಂಭವಾಗಿ 8, 9 ದಿನಗಳು ಸಂದವು. ಆದರೂ ನರೇಂದ್ರರು ತಮ್ಮ "ಟ್ಯೂಟರಿಗೆ" ವೇತನವನ್ನು ಕೊಡಲಿಲ್ಲ. ಮತ್ತೂ 5, 6 ದಿನಗಳು ಕಳೆದವು. ಮತ್ತು ನರೇಂದ್ರರು ಮೌನವಾಗಿಯೇ ಇದ್ದರು. ಕಡೆಗೆ ರಂಗರಾಯನೇ ವೇತನ ಕೊಡಿರೆಂದು ಕೇಳಬೇಕಾಯಿತು. 30 ರೂಪಾಯಿಗಳು ಸಿಗುತ್ತವೆಂದು ಅವನು ಸಂತೋಷದಿಂದ ಹಿಗ್ಗಿದನು, ಹಿರಿನಾದನು. ಆದರೆ ದೂರದ ಬೆಟ್ಟವು ಎಷ್ಟರ ಮಟ್ಟಿಗೆ ನುಣ್ಣಗೋ ಅಷ್ಟರ ಮಟ್ಟಿಗೆ ಹೆಸರುವಾಸಿಯನ್ನು ಹೊಂದಿದ ಮನುಷ್ಯರು ಒಳ್ಳೆಯವರಿರುತ್ತಾರೆಂಬುದನ್ನು ಯಾರು ಬಲ್ಲರು? ರಂಗರಾಯನಂಥ ಬಡ ವಿದ್ಯಾರ್ಥಿಗಳು. ನರೇಂದ್ರರು ಇಪ್ಪತ್ತು ರೂಪಾಯಿಗಳನ್ನು ಕೊಟ್ಟರು. ಆ ವೇಳೆ ರಂಗರಾಯನು ಬಹು ಬಲವಂತ ನಡೆಸಿದ್ದರಿಂದ ಮತ್ತೆ ಐದು ರೂಪಾಯಿಗಳನ್ನು ಕೊಟ್ಟರು.

ಇದರಿಂದ ನಿಮಗೆ ನರೇಂದ್ರರ ಉದಾರ ಬುದ್ಧಿಯು ಮನವರಿಕೆಯಾಗಬಹುದು. ಏಕೆಂದರೆ ರಂಗರಾಯನು ಎರಡು ಮೈಲು ದೂರದಿಂದ ಬೆಳಗ್ಗೆ ಎದ್ದು ನರೇಂದ್ರರಲ್ಲಿಗೆ ನಡೆದೇ ಹೋಗಬೇಕಿತ್ತು. ಅಲ್ಲದೆ ಇಬ್ಬರು ವಿದ್ಯಾರ್ಥಿಗಳಿಗೆ ಎರಡೂವರೆ ತಾಸು ಪಾಠ ಹೇಳಬೇಕಾಗಿತ್ತು. ಆದರೂ ರಂಗರಾಯನು ಹುಡುಗರಿಗೆ ಪಾಠ ಹೇಳುತ್ತಲೇ ಇದ್ದನು. ಆ ತಿಂಗಳು ಡಿಸೆಂಬರು ತಿಂಗಳಾಗಿತ್ತು. ವಿದ್ಯಾರ್ಥಿಗಳ ಪರೀಕ್ಷೆಯ ಸಮಯ. ಪರೀಕ್ಷೆಯಾಯಿತು. ನರೇಂದ್ರರ ಹುಡುಗರು ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಇಪ್ಪತ್ತೊಂದನೇ ತಾರೀಕಿಗೆ ಅವರು ತಮ್ಮ ಅಜ್ಜನ ಮನೆಗೆ ಹೋದರು. ಇಷ್ಟರಲ್ಲಿ ನರೇಂದ್ರರಿಗೆ ಮುಂಬಯಿಯಿಂದ ಕಾಥೇವಾಡಕ್ಕೆ ವರ್ಗವಾಗುತ್ತದೆಂಬ ವರ್ತಮಾನವಿತ್ತು. ರಂಗರಾಯನು ವೇತನದ ವಿಷಯ ಸಂಶಯಪಡುವದಕ್ಕೆ ಪ್ರಾರಂಭಿಸಿದನು. ಏಕೆಂದರೆ ಕಳೆದ ತಿಂಗಳಲ್ಲಿ ಮೂವತ್ತು ರೂಪಾಯಿಗಳ ಬದಲು ಇಪ್ಪತ್ತೈದು ರೂಪಾಯಿಗಳನ್ನೇ ಕೊಟ್ಟಿದ್ದರು. ತಿಂಗಳಂತ್ಯದಲ್ಲಿ ನರೇಂದ್ರರು ಮೂವತ್ತು ರೂಪಾಯಿಗಳನ್ನು ಕೊಟ್ಟರು. ಸರಳ ಸ್ವಭಾವದವರೂ, ಉದಾರ ಬುದ್ಧಿಯವರೂ ಆದ ನರೇಂದ್ರರನ್ನು ರಂಗರಾಯನು ಅಂಗಲಾಚಿ ಬೇಡಿಕೊಂಡ ಬಳಿಕ ಮತ್ತೆ ಅವರು ನಾಲ್ಕು ರೂಪಾಯಿಗಳನ್ನು ಸಾಲವಾಗಿ ಕೊಟ್ಟರು. ಮತ್ತು "ರಂಗರಾಯರೇ, ಈ ಹಣವನ್ನು ನನ್ನ ಮಿತ್ರರಾದ ನಾಗೇಂದ್ರರಲ್ಲಿ ನಿಮಗೆ ಹಣದನುಕೂಲವಾದಾಗ ಕೊಡಿರಿ"ಎಂದರು.

೩ ನೇಯ ಭಾಗ.

(ಕೃಪಣನಾದ ನಾಗೇಂದ್ರನು ವಂಚಕನೂ ಆಗಿರುವನೇ.)

ಆ ಮೇಲೆ ರಂಗರಾಯನು ಉದ್ಯೋಗವೆಲ್ಲಿ ದೊರಕೀತೆಂದು 'ಜನರಲ್ ಏಜನ್ಸಿ' ಆಫೀಸಿಗೂ, ಬಂದರದಲ್ಲಿರುವ ದೊಡ್ಡ ಶೇಟುಗಳಲ್ಲಿಗೂ ಆಗಾಗ ಹೋಗುತ್ತಿದ್ದನು. ಎಲ್ಲಿಯೂ ರಂಗರಾಯನಿಗೆ ಉದ್ಯೋಗವು ದೊರೆಯಲಿಲ್ಲ; ಅಲ್ಲದೆ ಮೇಲಿಂದ ಮೇಲೆ "ನಾನು ಎಂದು ನಾಗೇಂದ್ರರಿಗೆ ಹಣ ಸಲ್ಲಿಸೇನು" ಎಂಬ ಚಿಂತೆಯು ಅವನ ಮನಸ್ಸಿನಲ್ಲಿ ಕಲೆಯುತ್ತಿತ್ತು.

ಇಂಥ ಸ್ಥಿತಿಯಲ್ಲಿರುವಾಗ ನಾಗೇಂದ್ರರು ತಾವಾಗಿಯೇ ರಂಗರಾಯರ ಮನೆಯನ್ನು ಗೊತ್ತು ಹಚ್ಚಿ, ತಮ್ಮ ಮನೆಗೆ ಕರೆದುಕೊಂಡು ಹೋದರು. ಈ ಸಮಯದಲ್ಲಿ ನರೇಂದ್ರರು ತಮ್ಮ ಹುಡುಗರನ್ನು ತಮ್ಮ ಮಿತ್ರರಲ್ಲಿ ಬಿಟ್ಟಿದ್ದರು. ಅವರಿಗೆ ಪಾಠ ಹೇಳಲು ಒಬ್ಬ ಉಪಾಧ್ಯಾಯನ ಅವಶ್ಯಕತೆಯಿತ್ತು. ಅಲ್ಲದೆ ರಂಗರಾಯನು ಇನ್ನೂ ನಾಗೇಂದ್ರರಿಗೆ ಹಣಕೊಡದಿದ್ದುದರಿಂದ ನರೇಂದ್ರರ ಮಾತಿನಂತೆ ರಂಗರಾಯನನ್ನೇ ಗೊತ್ತುಹಚ್ಚಿ ಉಪಾಯದಿಂದ ಅವರ ಹುಡುಗರಿಗೆ ಪಾಠ ಹೇಳಿಸಿ ವೇತನವನ್ನು ಕೊಡದೆ ಬಲಾತ್ಕಾರದಿಂದ ರಂಗರಾಯನಂಥಾ ಬಡ ವಿದ್ಯಾರ್ಥಿಗಳಿಂದ ಹಣ ವಸೂಲು ಮಾಡಬೇಕೆಂಬ ಆಲೋಚನೆ ಮಾಡಿದ್ದರು. ಆದರೂ ಗೋಮುಖ ವ್ಯಾಘ್ರನಂತೆ ನಯವಾದ ಮಾತುಗಳನ್ನಾಡಿ ಹುಡುಗರಿಗೆ ಪಾಠ ಹೇಳಿರೆಂದನು. ಈಗ ರಂಗರಾಯನು ಚಿಂತೆಗೊಳಗಾದನು. ನಾಗೇಂದ್ರರಿಗೆ ಹಣ ಕೊಡುವದು ಹೊರತು ಅವರಲ್ಲಿ ಪಾಠ ಹೇಳುವದಕ್ಕೆ ಅವನ ಮನಸ್ಸು ಒಪ್ಪದಾಯಿತು. ಇದು ನಾಗೇಂದ್ರರಿಗೆ ತಿಳಿಯಿತು. ಇದಕ್ಕೆ ಅವರು, "ನೀವು ಬೆದರಬೇಡಿರಿ ಅವರು ಹಣದ ವಿಷಯ ಮರೆತಿರುವರು. ಮತ್ತು ಅವರಿಗೆ ಬರೇ ನಾಲ್ಕು ರೂಪಾಯಿಗಳಿಂದಾದರೂ ಆಗಬೇಕಾದ್ದೇನು" ಎಂದರು. ರಂಗರಾಯನು ಅವರ ಮಾತಿಗೆ ಮರುಳಾಗಿ ಅವರು ಹೇಳಿದ ಇಪ್ಪತ್ತು ರೂಪಾಯಿ ವೇತನಕ್ಕೊಪ್ಪಿ ಪಾಠ ಹೇಳಲು ಪ್ರಾರಂಭಿಸಿದನು.

ಮೊದಲಿನಂತೆ ಕ್ರಮವಾಗಿ ಪಾಠವು ಸಾಗುತ್ತಲಿದ್ದಿತ್ತು. ತಿಂಗಳಂತ್ಯವಾದರೂ ವೇತನವು ದೊರೆಯಲಿಲ್ಲ. ರಂಗರಾಯನು ಮತ್ತೆ ಚಿಂತೆಗೊಳಗಾದನು. ತಿಂಗಳು ಕಳೆದು ಆರೇಳು ದಿನಗಳು ಆದ ನಂತರ ನಾಗೇಂದ್ರರು ನಗುತ್ತಾ, ನಮ್ರಸ್ವಭಾವದಿಂದ "ನಿಮಗೆ ಈ ತಿಂಗಳ ವೇತನವಿಲ್ಲವು. ನರೇಂದ್ರರ ಪತ್ರದಂತೆ ಈ ತಿಂಗಳು ವೇತನವನ್ನು ಕೊಡುವುದಕ್ಕಾಗುವದಿಲ್ಲ. ರಾಯರೇ, ಬರುವ ತಿಂಗಳಿನಿಂದ ಇಪ್ಪತ್ತು ರೂಪಾಯಿಯಂತೆ ವೇತನ ಕೊಡಬಹುದು" ಎಂದರು. ಆ ಮಾತಿಗೆ ರಂಗರಾಯನು ಸಾಧುತನದಿಂದ "ಧಾವಾಜಿಯವರೇ! ಸಂಬಿಗೆಯು ಜನರನ್ನು ಕಟ್ಟುವದು. ನಿಮ್ಮಲ್ಲಿ ವಂಚನೆ ಇರುವದರಿಂದ ನೀವು ಬೇರೆಯವರನ್ನು ನಂಬಲಾರಿರಿ. ನನಗೆ ವೇತನವನ್ನು ಕೊಟ್ಟು ಆಗ ನಾನು ಹಣ ಕೊಡದಿದ್ದರೆ ನಿಮ್ಮ ಈ ಸಂಶಯವು ನ್ಯಾಯವಾದದ್ದಾಗುತ್ತಿತ್ತು. ಆಗಲಿ, ನೀವು ಬಹಳ ಬುದ್ಧಿವಂತರು. ನಾನು ಅಷ್ಟೇ ದೊಡ್ಡ ಬಂತುವಿರುತ್ತೇನೆ. ಆದುದರಿಂದ ನಾನು ಇನ್ನು ನಿಮ್ಮಲ್ಲಿ ಪಾಠ ಹೇಳಲಾರೆನು" ಎಂದವನೇ ಅಲ್ಲಿಂದ ತಟ್ಟನೆ ಎದ್ದು ಹೋದವನು ಮತ್ತೆ ಒಂದು ವಾರದ ವರೆಗೆ ನಾಗೇಂದ್ರರಲ್ಲಿಗೆ ಹೋಗಲಿಲ್ಲ.

ನಾಗೇಂದ್ರರು ಒಬ್ಬ ದೊಡ್ಡ ಅಧಿಕಾರಿಯ ಮಗನಿದ್ದು ಬಹು ಶ್ರೀಮಂತರಾಗಿದ್ದರು. ಜನರನ್ನು ಮಾತಿನಲ್ಲಿ ಕಟ್ಟಿ ಗೌರವಸ್ಥನೆಂದು ಹೆಸರುವಾಸಿಯನ್ನು ಪಡೆದಿದ್ದರು. ಆದುದರಿಂದ ಈಗ ಅವರಿಗೆ ರಂಗರಾಯನೊಡನೆ ದ್ವೇಷವನ್ನು ಬೆಳೆಸಿದರೆ ಅವನಿಂದ ತನ್ನ ಘನತೆಗೆ ಕುಂದುಕವು ಬರಬಹುದೆಂದು ಬೆದರಿದನು. ಬೆದರಿಕೆಗಿಂತಲೂ ರಂಗರಾಯನ ಅವಶ್ಯಕತೆಯು ಹೆಚ್ಚಾಗಿದ್ದಿತು. ಅದು ಹೇಗೂ ಇರಲಿ. ಮತ್ತೊಮ್ಮೆ ರಂಗರಾಯನ ಮನೆಗೆ ಹೋಗಿ ಅವನನ್ನು ಸ್ತುತಿಸಿ ಮಾತಿನ ಚಮತ್ಕಾರದಿಂದಲೂ, 'ರಾಯರೇ" ಎಂಬ ದೈನ್ಯ ಶಬ್ದಗಳ ಮಳೆಯಿಂದಲೂ ಮರುಳು ಮಾಡಿ ಮತ್ತೊಮ್ಮೆ ತಮ್ಮಲ್ಲಿರುವ ಹುಡುಗರಿಗೆ ರಂಗರಾಯನು ಪಾಠ ಹೇಳುವಂತೆ ವ್ಯೂಹವನ್ನು ರಚಿಸಿದರು. ವ್ಯಾಘ್ರಕ್ಕೆ ಕುರಿಯು ಬೆದರೀತು. ಆದರೆ ಗೋಮುಖ ವ್ಯಾಘ್ರಕ್ಕೆ ಬೆದರೀತೆ? ಅದರೊಡನೆ ಸಖ್ಯವನ್ನು ಬೆಳೆಸುತ್ತದೆ. ಆ ಮೇಲೆ ವ್ಯಾಘ್ರನು ಕುರಿಯ ಕತ್ತನ್ನು ಹಿಸುಕುವಾಗಲೇ ಅವನ ವಂಚನೆಯು ಬೈಲಿಗೆ ಬೀಳುವದು. ಆ ಸಮಯದಲ್ಲಿಯಾದರೂ ಬಡ ಕುರಿ ಏನು ಮಾಡೀತು. ಹೀಗೆಯೇ ರಂಗರಾಯನ ಸ್ಥಿತಿಯಾದರೂ ಆಯಿತು. ಅದು ಮುಂದೆ ನಿಮಗೆ ತಿಳಿದೀತು.

ರಂಗರಾಯನು ನಾಗೇಂದ್ರರಲ್ಲಿ ಐದು ತಿಂಗಳು ಪಾಠ ಹೇಳಿದನು. ನಾಗೇಂದ್ರರು ಕ್ರಮವಾಗಿ ವೇತನವನ್ನು ಕೊಡುತ್ತಾ ಮೃದುವಚನಗಳನ್ನಾಡುತ್ತಾ ಮಂದಸ್ಮಿತ ಆಹ್ಲಾದದಿಂದಲೇ ಇದ್ದರು. ಕುರಿಯನ್ನು ಒಳಿತಾಗಿ ನಂಬಿಸಿದ ಮೇಲಲ್ಲವೇ ಅದರ ಮೇಲೆ ದುಮುಕಬೇಕಾದುದು; ಐದು ತಿಂಗಳುಗಳು ಕಳೆದ ಮೇಲೆ "ಕ್ರಿಸ್‌ಮಸ್" ರಜವು ಬಂತು. ಚಂದ್ರಶೇಖರನು ಕಾಥೇವಾಡಕ್ಕೆ ಹೋದನು. ರಮೆಯೊಬ್ಬಳೇ ಉಳಿದಳು. ನಾಗೇಂದ್ರರು ಇಷ್ಟು ಐಶ್ವರ್ಯವಂತರಾದುದು ತಮ್ಮ ಮಾತಿನ ಅಂದ ಚಂದದಿಂದಲೂ ಗೋಮುಖ ವ್ಯಾಘ್ರತನದಿಂದಲೂ, ಆದುದರಿಂದ ಅವರು ಲಾಭದ ಹಂಚಿಕೆಯನ್ನು ಬಯಸಿ ರಮೆಯೊಡನೆ ತಮ್ಮ ಮೂವರು ಬಾಲಕರಿಗೂ ಪಾಠ ಹೇಳಿರೆಂದರು. ವೇತನದೊಡನೆ ವೇತನವನ್ನು ಮಾತ್ರ ಸೇರಿಸಲಿಲ್ಲ. ಹಾಗೆ ಮಾಡಿದ್ದರೆ ಅವರು ಬುದ್ಧಿವಂತರಾಗುತ್ತಿರಲಿಲ್ಲ. ಮತ್ತೆ ಮೂರು ತಿಂಗಳುಗಳು ಕಳೆದುವು ಆಗ ವೇತನವು ಇಪ್ಪತ್ತೈದು ರೂಪಾಯಿಯ ಪರಮಾವಧಿಯನ್ನು ಏರಿತು. ಈಗ ಚಂದ್ರಶೇಖರ, ರಮೆ, ಮತ್ತು ನಾಗೇಂದ್ರರ ಮೂವರು ಮಕ್ಕಳುಗಳಿಗೆ ನಿತ್ಯವೂ ನಾಲ್ಕು ತಾಸು ಪಾಠ ಹೇಳಿದುದಕ್ಕೆ ಇಪ್ಪತ್ತೈದು ರೂಪಾಯಿಯು ಪರಮಾವಧಿಯ ವೇತನವಲ್ಲವೇ! ಸ್ವಲ್ಪ ದಿವಸಗಳು ಕಳೆಯಲು ವರ್ಷಾವಧಿ ಪರೀಕ್ಷೆಯು ಬಂತು. ಈಗ ನಾಗೇಂದ್ರರು ಬಹಳ ನಮ್ರಭಾವವನ್ನು ಪ್ರಕಟಿಸತೊಡಗಿದರು. ಪರೀಕ್ಷೆಯು ಕಳೆಯಿತು. ಹುಡುಗರೆಲ್ಲರೂ ತೇರ್ಗಡೆ ಹೊಂದಿದರು. ಆಗ ನಾಗೇಂದ್ರರು ಎರಡು ತಿಂಗಳು ಕಳೆದು ಮತ್ತೆ ಬನ್ನಿರೆಂದರು. ವೇತನವನ್ನು ಕೊಡಲಿಲ್ಲ. ವೇತನವನ್ನು ಕೊಟ್ಟರೆ ರಂಗರಾಯನು ನಾಗೇಂದ್ರರ ಕೈಯಿಂದ ಪಾರಾದಂತೆಯೇ ಸರಿ. ಇವನನ್ನು ಬೋನಿನಲ್ಲಿಡುವುದು ಒಳ್ಳೆಯದೆಂದು ಅವರು ಬಯಸಿದರು. ರಂಗರಾಯನಿಗೆ 21 ದಿನಗಳ ವೇತನವು ಸಲ್ಲಬೇಕಾಗಿತ್ತು.

ರಂಗರಾಯನು 2 ತಿಂಗಳ ಅವಧಿಯು ಮುಗಿದ ನಂತರ ಮತ್ತೆ ನಾಗೇಂದ್ರರಲ್ಲಿಗೆ ಹೋದನು. ನಾಗೇಂದ್ರರು ವೇತನವನ್ನು ಕೊಡದೆ ತನ್ನ ಹುಡುಗರಿಗೆ ಪಾಠ ಹೇಳಿರೆಂದರು. ರಂಗರಾಯನು ಹೆಚ್ಚು ವೇತನವು ಲಭಿಸುವುದಾದರೆ ಹೇಳುತ್ತೇನೆಂದನು. ಇದು ನಾಗೇಂದ್ರರಿಗೆ ಸಹನವಾಗಲಿಲ್ಲ. ಇದಲ್ಲದೆ ಅವರದನ್ನು ತೋರಗೊಡದೆ ಬರೇ 10 ರೂಪಾಯಿಗಳನ್ನು ಕೊಟ್ಟು ನಾಳೆ ಉಳಿದ ಬಾಕಿ ಹಣ ಕೊಟ್ಟೇನೆಂದರು. ನಾಳೆಗಳು ಅನೇಕ ಕಳೆದವು. ಕಡೆಗವು ಕಳೆಯುವಂತೆ ತೋರಲಿಲ್ಲ. ಈಗ ರಂಗರಾಯನು ನಿರಾಶನಾದನು. ನಾಗೇಂದ್ರರನ್ನು ಸದಾರ್ಕ್ಷಿಣ್ಯವಾಗಿ ಬಾಕಿ ಹಣ ಕೊಡಿರೆಂದು ಕೇಳಿದನು. ಗೋಮುಖವು ಹರಿದು ಬಿದ್ದಿತು. ಮುಂದೆ ನಿಂತದ್ದೇನು? ವ್ಯಾಘ್ರ! ಕುರಿಯು ಬೆಚ್ಚಿ ಬೆದರಿತು ಈಗ ಮಾಡುವುದೇನು? ಸಮಯವು ಮೀರಿ ಹೋಯಿತು. ಕುರಿಯು ವ್ಯಾಘ್ರನ ಬಾಯಿಗೆ ತುತ್ತಾಯಿತು. ನಾಗೇಂದ್ರರು ಹಣ ಕೊಡಲೇ ಇಲ್ಲ. ಆಗ ರಂಗರಾಯನ ಬಾಯಿಯಿಂದ "ನೀವು ನನ್ನ ಮನಸ್ಸನ್ನು ನೋಯಿಸುವಿರಾ! ನನ್ನಾಶೆಯು ನಿರಾಶೆಯಾಯಿತೆ"ಂಬ ಉದ್ಗಾರದ ಮಾತುಗಳು ಹೊರಟವು.

(ಮುಂದುವರಿಯುವುದು.)

ಜೀವನ್ಮುಕ್ತ ಮಹಾತ್ಮ ಗಾಂಧಿ.

('ಸ್ಪೆಕ್ಟೇಟರ್' ಎಂಬ ಪತ್ರಿಕೆಯಲ್ಲಿ ಅಮೇರಿಕದಲ್ಲಿರುವ ಶ್ರೀ. ಬಿ. ಕೆ. ರಾಯ್ ಎಂಬವರು ಬರೆದ ಒಂದು ಲೇಖನವಿದು. ಇದರಲ್ಲಿ ಮಹಾತ್ಮ ಗಾಂಧಿಯವರ ಕುರಿತಾಗಿ ಉತ್ಕೃಷ್ಟವಾದ ಅಭಿಪ್ರಾಯವು ಅಡಕವಾಗಿದೆ.)

ರವೀಂದ್ರನಾಥ ಠಾಗೂರರ ಪರಿಚಯವು ನನಗೆ ಇಪ್ಪತ್ತು ವರ್ಷಗಳಿಂದಲೂ ಇದೆ. ಅಮೇರಿಕಕ್ಕೆ ಠಾಗೂರರ ವಿಷಯವಾಗಿ ಏನೂ ತಿಳಿಯದಿದ್ದ ಆ ಕಾಲದಲ್ಲಿ ನಾನು ಅವರ ಕುರಿತು ಇಲ್ಲಿ ಬರೆದಿದ್ದೆನು. ಅದು 1913ನೇ ನವೆಂಬರಿನಲ್ಲಿ ಅವರು ತನ್ನ ಸಾಹಿತ್ಯಕ್ಕಾಗಿ ನೊಬೆಲ್ ಬಹುಮಾನವನ್ನು ಪಡೆಯುವ ಮೊದಲು ನಾನು ಅವರೊಡನೆ ಅನೇಕ ವಿಷಯಗಳ ಕುರಿತು ತರ್ಕಿಸಿದ್ದೆ. ಅನೇಕ ದೇಶ ಧುರೀಣರ ಆದರ್ಶದ ಕುರಿತು ನಾನು ಅವರೊಡನೆ ಚರ್ಚಿಸಿದ್ದೆ. 1920ನೇ ವರ್ಷದ ಮೊದಲು ನಾನು ರವೀಂದ್ರರೊಡನೆ ಮಹಾತ್ಮ ಗಾಂಧಿಯವರ ಕುರಿತು ಚರ್ಚಿಸಿಯೇ ಇಲ್ಲ. ಬಾಲಗಂಗಾಧರ ತಿಲಕ ಮಹಾಶಯರ ನಿಧನದ ನಂತರ ಮಹಾತ್ಮರು ಮುಂದಾಳಾಗಿ ಬಂದುದು ಇದೇ ವರ್ಷದಲ್ಲಿಯೇ.

1920ರ ಮೊದಲ್ಗೊಂಡು ಮಹಾತ್ಮರ ಕುರಿತು ನಾನು ಅನೇಕ ಮಾತುಕತೆಗಳನ್ನು ಠಾಗೂರರೊಡನೆ ನಡೆಸಿದ್ದೆನು. ಪ್ರತಿಯೊಂದು ಸಲವೂ, ಕವೀಶ್ವರರಾದ ಠಾಗೂರರು ಮಹಾತ್ಮ ಗಾಂಧಿಯವರ ವ್ಯಕ್ತಿತ್ವದ ಕುರಿತು ಅಮೋಘರೀತಿಯಿಂದ ಮಾತನಾಡಿದ್ದರು. ಕಾಲತಪ್ಪಿ, ವರ್ಷಗಳು ಕಳೆದು ವಾತಾವರಣವು ಮಾರ್ಪಾಟು ಹೊಂದಿದ ಸಮಯದಲ್ಲಿ ನಾನು ಠಾಗೂರರೊಡನೆ ಗಾಂಧಿಯವರ ಕುರಿತು ಮಾತನಾಡಿದ್ದೆ. ಪ್ರತಿಯೊಂದು ಸಲವೂ ಕವಿಪುಂಗವರು ಮಹಾತ್ಮರ ಕುರಿತು ಏಕರೀತಿಯ ಸರಸವಾಣಿಯಿಂದ ನುಡಿದಿದ್ದರು. ಪುಟ್ಟ ದೇಹದ ಉಜ್ವಲ ಆತ್ಮದ ಮಹಾತ್ಮರನ್ನು ಪ್ರಶಂಸಿಸಿದ್ದರು.

"ಗಾಂಧಿಯವರ ಕುರಿತು ನಿಮ್ಮ ನಿಜವಾದ ಅಭಿಪ್ರಾಯವೇನು? ಅವರು 'ಮಹಾತ್ಮ'ರೆಂದು ಸಂಬೋಧಿಸಲ್ಪಡಲು ಅರ್ಹರೇ?" ಎಂದು ನಾನು 1920ರಲ್ಲಿ ಠಾಗೂರರೊಡನೆ ಕೇಳಿದ್ದೆ. ಅದಕ್ಕವರು ಕೂಡಲೇ ಮುಖವನ್ನರಳಿಸಿ, ಅಧರಗಳನ್ನು ಸಡಿಲಿಸಿ 'ಮಹಾತ್ಮ ಗಾಂಧಿಯವರು ಇಂದಿನ ದಿನದಲ್ಲಿ ಪ್ರಪಂಚದಲ್ಲೇ ಅಪ್ರತಿಮ ಮತ್ತು ಅಸಾಧಾರಣವಾದ ಘನವ್ಯಕ್ತಿಯೆಂದು ನಾನು ಖಚಿತವಾಗಿ ತಿಳಿದುಕೊಂಡಿದ್ದೇನೆ' ಎಂದುಬಿಟ್ಟರು.

'ನೀವು ಇಷ್ಟು ದೊಡ್ಡ ಕವಿವರ್ಯರಿರುವಿರಿ, ನೀವು ಹೀಗೆ ಹೇಳುತ್ತಿರುವುದು ನಿಮ್ಮ ನೈಸರ್ಗಿಕವಾದ ಬುದ್ಧಿಚಾತುರ್ಯದ ಉತ್ಪ್ರೇಕ್ಷೆಯ ಗುಣದಿಂದಾಗಿ' ಎಂದು ನಾನು ಸಂಶಯವಿಹ್ವಲನಾಗಿ ಉತ್ತರವಿತ್ತೆ.

"ಛೆ, ಛೆ, ಅಲ್ಲ. ನಿಜವಾಗಿಯೂ ಅಲ್ಲ" ಎಂದು ಠಾಗೂರರು ಒತ್ತಿ ಒತ್ತಿ ಹೇಳುತ್ತಾ ತನ್ನ ಉದ್ದವಾದ ಗಡ್ಡದ ಮೇಲೆ ಬೆರಳನ್ನು ಸವರಿ ಪುನಃ 'ನೀವು ಮಹಾತ್ಮರನ್ನು ಇನ್ನೂ ಕಂಡಿಲ್ಲ, ಅವರ ಪರಿಚಯವು ನಿಮಗೆ ಆಗುತ್ತಿದ್ದರೆ ನೀವು ನನ್ನೀ ಹೇಳಿಕೆಯಲ್ಲಿ ಇಂದಿಷ್ಟು ಸಂದೇಹವನ್ನಿಡುತ್ತಿದ್ದಿಲ್ಲ. ಮಹಾತ್ಮರ ಪರಿಚಯವು ನನಗೆ ಅತ್ಯಂತವಾಗಿ ನಡೆದು ಅನೇಕ ವರ್ಷಗಳಾಗಿದ್ದುವು. ಅವರು ದಕ್ಷಿಣಾಫ್ರಿಕದಿಂದ ಹಿಂತಿರುಗಿ ಬಂದಾಗ ನಮ್ಮ ಶಾಲೆಯಲ್ಲಿ ಕೆಲವು ಸಮಯ ಉಳಕೊಂಡಿದ್ದರು.'

'ಅವರು ಎಷ್ಟು ಮಹಾಪುರುಷರೆಂದರೆ ಅವರ ಮಹತ್ವಿಕೆಯು ಕವೋಲ ಕಲ್ಪನೆಗೆ ನಿಲುಕದು. ಅದನ್ನು ವಿವರಿಸಿ ಆಲೋಚಿಸಲು ಅಸಾಧ್ಯ! ಮಹಾತ್ಮರ ಅಂತರಂಗ ಉಜ್ವಲ ಗುಣ, ನಡತೆ, ಆದರ್ಶಮಯ ತೇಜೋಮಯ ಸ್ವಭಾವವನ್ನರಿಯಬೇಕಾದರೆ ಕಡಿಮೆ ಎಂದರೆ ಒಂದು ವಾರದ ಅವಧಿಯಾದರೂ ಅವರೊಡನಿರಬೇಕು' ಎಂದರು.

'ನೀವು ಬೋಲ್‌ಪುರದಲ್ಲಿದ್ದಾಗ ಮಹಾತ್ಮರು ನಿಮ್ಮೊಡನೆ ಉಳಕೊಂಡಿದ್ದರಷ್ಟೆ. ಅವರ ಯಾವ ಗುಣಗಳು ನಿಮ್ಮ ಮನವನ್ನು ಆಕರ್ಷಗೊಳಿಸಿದುವು?' ಎಂದು ನಾನು ಪ್ರಶ್ನಿಸಿದೆ. ಠಾಗೂರರೆಂದರು—'ನನ್ನಿಂದ ಹಲವು ವರ್ಷಗಳ ಪ್ರಯತ್ನದಿಂದ ಆಗದಿದ್ದ ವಿಷಯಗಳನ್ನು ಅವರು ಕೆಲವು ದಿನಗಳಲ್ಲೇ ಸಾಧಿಸಿದರು—ನನ್ನ ಆ ಶಾಲೆಯ ಹುಡುಗರು ತಮ್ಮ ತಮ್ಮ ಶಾಲಾ ಕೋಣೆಗಳನ್ನು ತಾವು ತಾವೇ ಗುಡಿಸಿಕೊಳ್ಳಬೇಕು. ತಮ್ಮ ತಮ್ಮ ಹಾಸಿಗೆಗಳನ್ನು ತಾವು ತಾವೇ ಸರಿಪಡಿಸಿಕೊಳ್ಳಬೇಕು. ತಮಗೆ ಬೇಕಾದ ಆಹಾರವನ್ನು ತಾವೇ ಸಿದ್ಧಪಡಿಸಬೇಕು. ತಮ್ಮ ಪಾತ್ರೆಯನ್ನು ತಾವೇ ತೊಳೆಯಬೇಕು. ಎಂದು ನನ್ನ ಆಸೆಯಿತ್ತು. ಆದರೆ ಆ ಹುಡುಗರೆಲ್ಲರೂ ದೊಡ್ಡ ದೊಡ್ಡ ಕುಟುಂಬಕ್ಕೆ ಸೇರಿದವರಾಗಿದ್ದುದರಿಂದ ನನಗೆ ನನ್ನ ಈ ಇಚ್ಛೆಯನ್ನು ಕಾರ್ಯತಃ ನೆರವೇರಿಸಲಾಗಲಿಲ್ಲ, ಕಾರಣವೇನೆಂದರೆ—ಸ್ವತಃ ನಾನು ಕೂಡ ನನ್ನ ಕೋಣೆಯನ್ನು ಸ್ವಹಸ್ತದಿಂದ ಗುಡಿಸುತ್ತಿದ್ದಿಲ್ಲ, ನನ್ನ ಹಾಸಿಗೆಯನ್ನು ನಾನು ಹಾಸುತ್ತಿದ್ದಿಲ್ಲ, ನನ್ನ ಪಾತ್ರೆಗಳನ್ನು ನಾನು ಶುದ್ಧಪಡಿಸುತ್ತಿದ್ದಿಲ್ಲ. ಇದು ದೊಡ್ಡ ತೊಂದರೆಯಾಗಿ ನಿಂತಿತು. ಇದರಿಂದಾಗಿ ಹುಡುಗರೂ ಕೂಡ ಅವುಗಳಿಗೆ ವಿಶೇಷವಾದ ಗಮನವನ್ನೀಯಲಿಲ್ಲ. ನಾನು ಸುಮ್ಮನೆ ಉಪನ್ಯಾಸವನ್ನೀಯುತ್ತಿದ್ದೆ. ಅವರು ಕಿವಿಗೊಟ್ಟು ಕೇಳುತ್ತಿದ್ದರು. ಅಷ್ಟೆ.'

ಆದರೆ ಗಾಂಧಿಯವರು ನಮ್ಮ ಶಾಲೆಯನ್ನು ಹೊಕ್ಕೊಡನೆ ಹುಡುಗರ ಹೃದಯಗಳನ್ನು ಜೈಸಿಕೊಂಡರು. ಅವರು, ಅವರೊಡನೆ ಸೇರಿಕೊಂಡು ಅವರಲ್ಲಿಬ್ಬರಂತಾಚರಿಸಿದರು. ತಾವು ಮಾಡುವ ಕೆಲಸಗಳಿಗಾಗಿ ಸೇವಕರನ್ನಿಟ್ಟುಕೊಳ್ಳುವುದು ಅಸಂಬದ್ಧವೆಂದು ಗಾಂಧಿಯವರು ಹುಡುಗರಿಗೆ ಬೋಧಿಸಲುಪಕ್ರಮಿಸಿದರು—ಅವರು ತಮ್ಮ ಕೋಣೆಯನ್ನು ತಾನೇ ಗುಡಿಸಿದರು, ತನ್ನ ಹಾಸಿಗೆಯನ್ನು ತಾನೇ ಸಜ್ಜುಗೊಳಿಸಿದರು, ತನ್ನ ಪಾತ್ರೆಗಳನ್ನು ತಾನೇ ತೊಳೆದುಕೊಂಡರು. ಅಲ್ಲದೆ ಅವರು ತನ್ನ ವಸ್ತ್ರಗಳನ್ನೂ ತಾನೇ ಒಗೆದುಕೊಂಡರು. ಇದನ್ನೆಲ್ಲಾ ಕಂಡು ಹುಡುಗರು ನಾಚಿಕೆಗೊಂಡರು. ಒಡನೆ ಅವರು ಗಾಂಧಿಯವರಂತೆ ತಮ್ಮ ತಮ್ಮ ಕೆಲಸಗಳನ್ನು ತಾವು ತಾವೇ ಸ್ಫೂರ್ತಿಯಿಂದಲೂ, ಉಲ್ಲಾಸದಿಂದಲೂ ಮಾಡಲಾರಂಭಿಸಿದರು. ಗಾಂಧಿಯವರು ತನ್ನ ಹುಡುಗರ ಹೃದಯಗಳನ್ನು ಹೇಗೆ ವಶೀಕರಿಸಿಕೊಂಡರೆಂದು ನನಗೆ ಆಗ ಭಾಸವಾಯಿತು.'

ಇಷ್ಟಾದರೂ ಗಾಂಧಿಯವರು ಹೊಲಸು ತೆಗೆಯುವ 'ತೋಟಿ'ಗಳನ್ನು ಕರೆದು ಅವರು ಕೆಲವು ದಿನಗಳ ತನಕ ತಮ್ಮ ಕೆಲಸಕ್ಕೆ ಬರುವುದು ಬೇಡವೆಂದರು. ಅಸ್ಪೃಶ್ಯನಾದ ತೋಟಿಯ ಕೆಲಸವನ್ನು ಸತ್ಕುಲೋತ್ಪನ್ನರಾದ ನನ್ನ ಹುಡುಗರು ಮಾಡಲು ಮುಂಬರುವುದು ಅಸ್ವಾಭಾವಿಕವೆಂದು ನಾನು ನೆನಸಿದ್ದೆ, ಒಂದೆರಡು ದಿನಗಳಲ್ಲಿ ವಠಾರವೆಲ್ಲಾ ದುರ್ವಾಸನೆಯಿಂದಾವೃತವಾಗಿ ಕಾಲಾ ದಿನಗಳನ್ನು ಕಳೆಯುವುದೂ ಕೂಡ ಅಸಾಧ್ಯವೆನಿಸಿತು.

'ಒಂದು ದಿನ ಬೆಳಿಗ್ಗೆ ತೋಟಿಯು ಹೊರುತ್ತಿದ್ದ ಹೊಲಸು ಪಾತ್ರೆಯನ್ನು ಗಾಂಧಿಯವರು ತನ್ನ ತಲೆಯ ಮೇಲಿಟ್ಟುಕೊಂಡು ಅದನ್ನು ದೂರದ ಒಂದು ಬಯಲಿಗೊಯ್ದರು. ಅದರ ಹೊಲಸನ್ನು ನೆಲದಲ್ಲಿ ಹೂಣಿಟ್ಟು—ಹಿಂತಿರುಗಿದರು. ಈ ಮಹಾತ್ಕಾರ್ಯದ ಪರಿಣಾಮವು ಒಂದೆರಡು ದಿನಗಳಲ್ಲೇ ನನ್ನ ಹುಡುಗರೊಳಗೆ ಅಂಟುರೋಗದಂತೆ ಹಬ್ಬಿತು. ಒಡನೆ ಕುಲಭೂಷಿತರೂ, ಸತ್ಕುಟುಂಬಿಕರೂ, ಉತ್ತಮ ಜಾತಿಯವರೂ ಆದ ಎಲ್ಲಾ ಹುಡುಗರೂ ತೋಟಿಯ ಕೆಲಸದಲ್ಲಿ ಭಾಗವಹಿಸಿ, ಅದನ್ನು ನೆರವೇರಿಸಿಬಿಡುವುದರಲ್ಲಿ ಒಂದು ಗೌರವ ಉಂಟೆಂದು ತಿಳಿದುಕೊಂಡರು. ದಿನಾಲೂ ಆ ಕೆಲಸವನ್ನು ಮಾಡುತ್ತಿದ್ದರು.'

'ಮುಂಬಾಯಿಯ ಈ ವ್ಯಕ್ತಿಯ ಕಾರ್ಯವನ್ನು ನೋಡಿ ನಾನು ಸ್ತಬ್ಧನಾದೆ. ನನ್ನ ಬಾಯಿಂದ ಒಂದು ಮಾತೂ ಹೊರಡಲಿಲ್ಲ. ನಾನು ಗಾಂಧಿಯವರೆದುರು ಅತ್ಯಂತ ವಿನೀತನಾಗಿ, ನಮ್ರನಾಗಿ ಬಗ್ಗಿಕೊಂಡೆ. ನನ್ನ ಆತ್ಮವನ್ನು ಅವರೆದುರು ಅರ್ಪಿಸಿದೆ. ಆಗ ಅವರಲ್ಲಡಗಿದ್ದ ಮಹಾನ್ ಶಕ್ತಿಯ ಅತ್ಯುತ್ತಮತೆಯು ನನಗೆ ಭಾಸವಾಯಿತು.

ಮಹಾತ್ಮ ಗಾಂಧಿಯವರಲ್ಲಿ ನಾನು ಅತ್ಯದ್ಭುತಪೂರ್ಣ ಚೇತನಾ ಶಕ್ತಿಯ ನೆಲೆಯನ್ನು ಕಂಡೆನು. ಈಗಿನ ಅಖಿಳ ಭಾರತವು ಅವರನ್ನು 'ಮಹಾತ್ಮ' (ಮಹಾ ಆತ್ಮವುಳ್ಳವರು) ಎಂದು ಸಂಬೋಧಿಸುವುದನ್ನು ನೋಡಿ ಅತ್ಯಾನಂದಕುಂದಿಲನಾಗಿರುವೆನು. ಈ ಬಿರುದನ್ನು ಪಡೆಯಲು ಯಾರಾದರೂ ಅರ್ಹರಾಗಿರುವರೆಂದರೆ—ಅವರು ಮಹಾತ್ಮ ಗಾಂಧಿಯರೇ! ನಮ್ಮ ದೇಶಿಗರು ತಮ್ಮ ಹೃದಯದಿಂದ ಗಾಂಧಿಯವರಿಗೆ ಪ್ರತ್ಯುಪಕಾರವಾಗಿ ಕೊಡುತ್ತಿರುವುದೆಂದರೆ 'ಇದೊಂದೇ ದಾನವನ್ನು' ಎಂದು ಸುಮ್ಮಗಾದರು.

ನಾನು ನಿಮ್ಮ ನಾಲಿಗೆಯಿಂದ ಈ ಆನಂದಜನಕ ನುಡಿಗಳು ಬೀಳುವುದನ್ನು ನೋಡಿ ಸಂತುಷ್ಟನಾದೆನು. ಭಾರತವರ್ಷದ ಮಿಲಿಯಾದಿ ಜನರ ಮೇಲೆ ಮಹಾತ್ಮ ಗಾಂಧಿಯವರು ಒಂದು ಅಪ್ರತಿಹತ ಶಕ್ತಿಯನ್ನಿಟ್ಟಿದ್ದಾರೆ. ಅವರ ಅಂತಹ ದಿವ್ಯಸ್ವರೂಪಶಕ್ತಿಗೆ ಕಾರಣಭೂತವಾದ ರಹಸ್ಯವಾದರೂ ಅದೇನು? ಎಂದು ಕೇಳಿದೆನು.

ಠಾಗೂರರೆಂದರು—'ಅವರ ವಿಜಯಮಯ ಶಕ್ತಿಯ ನಿಜವಾದ ರಹಸ್ಯವು ಅವರ ನೈತಿಕ ಮತ್ತು ಪಾರಮಾರ್ಥಿಕ ವಿಚಾರಗಳ ಸಾಫಲ್ಯದಲ್ಲಡಗಿಕೊಂಡಿದೆ. ಅವರ ಸಂಪೂರ್ಣ ನಿಸ್ವಾರ್ಥ ಮತ್ತು ತ್ಯಾಗದಲ್ಲಡಗಿಕೊಂಡಿದೆ. ಅನೇಕ ಸಾರ್ವಜನಿಕ ದೇಶಧುರೀಣರಿದ್ದಾರೆ. ಅವರು ಒಂದು ವಿಧದ ಗೋಚರವಾದ ಸ್ವಾರ್ಥಮಯ ಇಚ್ಛೆಯಿಂದಾಗಿ, ತ್ಯಾಗಕಾರ್ಯವನ್ನು ಕೈಗೊಳ್ಳುತ್ತಾರೆ. ಅಂತಹ ದೃಷ್ಟಿಗೋಚರ ಸ್ವಾರ್ಥಪರ ನಿಸ್ವಾರ್ಥತೆಯು ಒಂದು ರೀತಿಯ ಕೇವಲಾತಿಯಂತೆ—ಅದರಿಂದ ದೊರೆಯುವ ಪಾಲುಭಂಡವಾಳದಂತೆ. ಆದರೆ ನಮ್ಮ ಮಹಾತ್ಮರು ಹಾಗಲ್ಲ. ಅವರು ಸಂಪೂರ್ಣ ವ್ಯತಿರಿಕ್ತ ವ್ಯಕ್ತಿ! ಶ್ರೇಷ್ಠತೆಯಲ್ಲಿ ಅವರು ಅತೀ ಶ್ರೇಷ್ಠರು. ಅವರ ಜೀವನ ಸರ್ವಸ್ವವು ನಿಸ್ವಾರ್ಥಪರತೆಯ ತ್ಯಾಗಭೂಮಿಯಲ್ಲಿ ಅನಿರ್ವಚನೀಯ, ಅವರ್ಣನೀಯ ಶಕ್ತಿಯಾಗಿದೆ. ಅವರು ತ್ಯಾಗಿಗಳು, ಬಲಿದಾನವೇ ಅವರು. ಅವರು ನಿಸ್ವಾರ್ಥಪರತೆಯ ಉಜ್ವಲ ತೇಜೋಮೂರ್ತಿ. ಅವರು ಅಧಿಕಾರವನ್ನು ಕಾಂಕ್ಷಿಸುವುದಿಲ್ಲ; ಅವರು ಬಲವನ್ನಾಶಿಸುವುದಿಲ್ಲ. ಅವರು ಐಶ್ವರ್ಯವನ್ನು ಇಚ್ಛಿಸುವುದಿಲ್ಲ. ಅವರಿಗೆ ಹೆಸರು ಬೇಡ, ಕೀರ್ತಿ ಬೇಡ, ಮಾನಮರ್ಯಾದೆ ಬೇಡ, ಅವರಿಗೆ ಅಖಿಲ ಭಾರತದ ಸಿಂಹಾಸನವನ್ನು ಕೊಡಿರಿ; ಅವರದರಲ್ಲಿ ಕುಳಿತುಕೊಳ್ಳಲು ಸಮ್ಮತಿಸಲಾರರು. ಒಂದು ವೇಳೆ ಪಟ್ಟವನ್ನೂ, ಕಿರೀಟವನ್ನೂ ಅವರು ಸ್ವೀಕರಿಸಿದರೆಂದರೆ, ಮತ್ತೆ ಅವುಗಳ ಭಂಗಾರವೇ ಮೊದಲಾದ ಐಶ್ವರ್ಯವನ್ನು ಮಾರಿ, ಹಾಗೆ ಲಭಿಸಿದ ಹಣವನ್ನು ದೀನ ಜನರಿಗೆ ನಿಸ್ಸಂದೇಹವಾಗಿ ಹಂಚಿಬಿಡುವರು. ಅಮೇರಿಕದ ಅತುಲೈಶ್ವರ್ಯವನ್ನು ಅವರಿಗೆ ಕೊಡಿರಿ; ಅವರದನ್ನು ಖಂಡಿತವಾಗಿಯೂ ಸ್ವೀಕರಿಸಲೊಪ್ಪಲಾರರು. ಹಾಗೆ ಪಡೆದುಕೊಂಡರೂ ಮಾನವ ಕುಟುಂಬದುದ್ಧಾರಕ್ಕಾಗಿ ಅದನ್ನು ವಿನಿಯೋಗಿಸುವರು. ಅವರ ಅಂತರಾತ್ಮವು ಪರರಿಗೆ ಕೈಯೀರಿ ಕೊಡಲು ತುಂಬಲಿಸುತ್ತಿದೆ—ತವಕಪಡುತ್ತಿದೆ. ಆದರೆ ಅದು ಬಹುಮಾನವಾಗಿ ಇನ್ನೊಂದು ವಸ್ತುವನ್ನು ಪಡೆಯಲು ಸರ್ವಥಾ ಮುಂದೆ ಬರಲಾರದು. ಏಕೆ, ಅದಕ್ಕೆ ಒಂದು ಉಪಕಾರ ಸ್ಮರಣೆಯ ಮಾತು ಕೂಡ ಬೇಡ; ಇದು ಉತ್ಪ್ರೇಕ್ಷಿತ ನುಡಿಗಳಲ್ಲ,—ಕಾರಣ, ಅವರ ಸ್ವಭಾವಗುಣದ ಕುರಿತು ನಾನು ಸಂಪೂರ್ಣ ಗೋಚರನಿದ್ದೇನೆ.

ನಿರ್ಭೀತಿಯೆಂಬುದು ಅವರಲ್ಲಿ ಪ್ರಾಧಾನ್ಯವನ್ನು ಹೊಂದಿಕೊಂಡಿರುವುದರಿಂದ ಅವರ ತ್ಯಾಗವು ಅಧಿಕವಾಗುತ್ತಿದೆ. ಸಾಮ್ರಾಜ್ಯಾಧಿಪತಿಗಳು, ಮಹಾರಾಜರು, ತುಪಾಕಿಗಳು, ಗುಂಡುಗಳು, ಸೈದುಗಳು, ಧಾರುಣತರ, ಕಷ್ಟಪರಂಪರೆಗಳು, ಅತ್ಯಾಚಾರಗಳು, ನೋವು ಸಂಕಷ್ಟಗಳು—ಏಕೆ, ಮೃತ್ಯುವು ಕೂಡ ಮಹಾತ್ಮ ಗಾಂಧಿಯವರ ನಿಶ್ಚಲ ಶಕ್ತಿಪ್ರಭೆಯನ್ನು ಅಲುಗಾಡಿಸಲಾರವು.

ಒಂದು ಮಾತಿನಲ್ಲಿ ಹೇಳುವುದಾದರೆ ಅವರು ಜೀವನ್ಮುಕ್ತರು. ಪಂಚಭೂತ ಶಕ್ತಿಯ ದೇಹಜ್ಯೋತಿಯಿಂದಲೇ ಅವರು ಅಮರತ್ವವನ್ನು ಹೊಂದಿರುವರು. ನೀವು ನನ್ನನ್ನು ವಧಿಸಲೆತ್ನಿಸಿದರೆ, ನಾನು ಸ್ವಪ್ರಾಣರಕ್ಷಣಾರ್ಥವಾಗಿ ಬೊಬ್ಬಿಡುವೆನು. ಆದರೆ ನೀವು ಗಾಂಧಿಯವರನ್ನು ಕೊಲ್ಲಲೆತ್ನಿಸಿದರೆ, ಅವರು ಬೊಬ್ಬಿಡುವುದಂತಿರಲಿ; ನಿಂತಲ್ಲಿಂದ ಒಂದಂಗುಲವಷ್ಟು ಕೂಡ ಅಲುಗಾಡಲಾರರು. ಬದಲಿಗೆ—ಅವರು ನಿಮ್ಮನ್ನು ಕಂಡು ಬಾಯಿತುಂಬ ನಕ್ಕು ಬಿಡುವರು. ಒಂದು ವೇಳೆ ಅವರಿಗೆ ಸಾಯುವ ಕಾಲವು ನಿಜವಾಗಿ ಸನ್ನಿಹಿತವಾಗಿರುವುದಾದರೆ ಅವರು ಹಸನ್ಮುಖರಾಗಿ, ಹರ್ಷಚಿತ್ತದಿಂದಲೇ ಸಾಯುವರು. ಹಾಗೆಂದು ಅವರನ್ನು ಹಿಂಸಿಸಿದ ನಿಮ್ಮನ್ನು ಅವರು ಎಳ್ಳಷ್ಟು ಕೂಡ ದ್ವೇಷಿಸರು.

ಸ್ವ. ಪೂ.

(ಮುಂದುವರಿಯುವುದು)

ಸರ್. ಸ್ಯಾಮ್ಯುಯಲ್ ಹೋರ್‌ರವರ ಹೇಳಿಕೆ.

ಮಿ. ಚಿಂತಾಮಣಿಯವರ ಅಭಿಪ್ರಾಯ.

ಪ್ರಧಾನಾಮಾತ್ಯರು ಕಳೆದ ಡಿಶಂಬರಿನಲ್ಲಿ ಚಕ್ರಗೋಷ್ಠಿಯ ಉಪಸಂಹಾರ ಕಾಲದಲ್ಲಿ ಪಾರ್ಲಿಮೆಂಟಿನ ಉಭಯ ಭವನಗಳ ಒಪ್ಪಿಗೆ ಪಡೆದು ಹೇಳಿದ್ದ ಮಾತೇ ಒಂದು. ಈಗ ಸರ್ ಸ್ಯಾಮ್ಯುಯಲ್ ಹೋರ್‌ರವರು ಹೇಳಿರುವುದೇ ಒಂದು. ಒಟ್ಟಿನಲ್ಲಿ ಚಕ್ರಗೋಷ್ಠಿಯನ್ನೇ ಕೊಂದುಬಿಟ್ಟಿದ್ದಾರೆ. ಆಶ್ಚರ್ಯಕರವಾದ ಪರಿಣಾಮವಿದು.

"ಹಿಂದೆ ಸೈಮನ್ ಕಮಿಷನ್ನಿನವರು—ಈಗ ಸರಕಾರದವರು ಕೊಡಬೇಕೆಂದಿರುವುದನ್ನು ಆಗಲೆ ಕೊಡುತ್ತೇವೆಂದಿದ್ದರು. ಭಾರತೀಯರು ಅದನ್ನು ಬೇಡವೆಂದು ಹೇಳಿದ್ದುದಕ್ಕಷ್ಟೆ ಚಕ್ರಗೋಷ್ಠಿಯ ರಚನೆಯಾದದ್ದು? ಭಾರತೀಯರೂ ಆಂಗ್ಲೇಯರೂ ಸಮಾನಭಾವದಲ್ಲಿ ಕುಳಿತು ಚರ್ಚಿಸಿ ನಿರ್ಧಾರಣೆಗಳಿಗೆ ಬರಲೋಸುಗ?

ಈಗ ನೋಡಿ ಏನಾಗಿದೆ? ಹಿಂದೆ ಡಿಶಂಬರಿನಲ್ಲಿ ಪ್ರಧಾನಾಮಾತ್ಯರು ಚಕ್ರಗೋಷ್ಠಿಯಲ್ಲಿ, ಪಾರ್ಲಿಮೆಂಟಿನಲ್ಲೂ ಭರವಸೆ ಕೊಟ್ಟಿದ್ದರು. ಹಿಂದಿನ ವೈಸರಾಯಿಯರೂ ಆಶ್ವಾಸನೆಗಳನ್ನು ಉಂಟುಮಾಡಿದ್ದರು. ಹೀಗಿದ್ದಾಗ್ಯೂ ಈಗ ಚಕ್ರಗೋಷ್ಠಿಯ ಕೆಲಸ ಕಾರ್ಯಗಳು ಮುಗಿಯುವುದಕ್ಕೆ ಮುಂಚಿತವಾಗಿಯೇ ಈ ರೀತಿ ಹೇಳಿದ್ದಾರೆ. ಅವರು ಕೊಟ್ಟಿದ್ದ ಭಾಷೆಯನ್ನೂ ಈಗ ಹೇಳಿರುವುದನ್ನೂ ಯೋಚಿಸಿದರೆ ಒಂದಕ್ಕೊಂದು ಬಹಳ ಅಂತರ.

"ನನ್ನ ಊಹೆಯ ತಪ್ಪೇನು ಘಟಿತಾಂಶಗಳಿಂದ ಸ್ಥಿರಪಡುವಂತಿಲ್ಲ. ಭಾರತೀಯ ದೃಷ್ಟಿಕೋಣದಿಂದ ಈ ನೂತನ ವಿಧಾನವು ಫಲಕಾರಿಯಾಗುವುದೆಂದು ಊಹಿಸಲಾರೆ.

ಹಿಂದೂ ಪತ್ರಿಕೆಯ ಅಭಿಪ್ರಾಯ.

"ಸರ್ ಸ್ಯಾಮ್ಯುಯಲ್ ಹೋರ್‌ರವರ ಹೇಳಿಕೆ ನೋಡಿದರೆ ಎರಡು ವಿಷಯಗಳು ಮೇಲಕ್ಕೆ ಕಂಡುಬರುವುದು: ಮೊದಲನೆಯದು ವಾಸ್ತವವಾಗಿ ಭಾರತೀಯ ಅಭಿಪ್ರಾಯವುಳ್ಳವರ ಮನಸ್ಸಿಗೆ ಸಂಪೂರ್ಣ ಸಹಾನುಭೂತಿಯನ್ನು ತೋರಲು ಇರುವ ಅಡಚಣೆಗಳನ್ನು ನಿವಾರಿಸಲು ಪ್ರಯತ್ನಪಟ್ಟಂತಿಲ್ಲ. ಎರಡನೆಯದು, ಚಕ್ರಗೋಷ್ಠಿಯ ಫಲಿತಾಂಶವಾಗಿ ಪರಸ್ಪರ ಸಮಾಧಾನವಾಗುವುದು ಸರಕಾರದವರ ಅಭಿಪ್ರಾಯವಾಗಿದ್ದಂತಿಲ್ಲ. ಅವರು ಎಲ್ಲವನ್ನು ಹಿಂದಕ್ಕೆ ತಳ್ಳಿ ಹಾಕಿದ್ದಾರೆ. ಕಾಲಯಾಪನೆಯಾಗುವ ಸಮ್ಮೇಳನಗಳಲ್ಲಿ ನಮಗೆ ಅಭಿರುಚಿಯಿಲ್ಲ. ಭಾರತೀಯ ಸಮಸ್ಯೆಯನ್ನು ಜಾಗ್ರತೆ ಬಿಡಿಸುವ ಪ್ರಯತ್ನಗಳೇ ನಮಗಿದೇಕಾಗಿರುವುದು ಇದು ಯಾವ ರೀತಿಯಾಗಬೇಕೆಂದರೆ ಭಾರತೀಯರ ಪರವಾಗಿ ಅವರ ಸಮಸ್ಯೆಗಳನ್ನು ಬಿಡಿಸಬಲ್ಲವರೊಡನೆ ತೃಪ್ತಿಕರವಾಗಿ ವರ್ತಿಸುವದರಿಂದ, ಸಮಾಧಾನಗಳಿಂದ ಮುಕ್ತ ಸಂಧಿಗಳಿಂದ. ಈ ವಿಧಾನಗಳಿಂದಲ್ಲದೆ ಕನ್‌ಸರ್‌ವೇಟೀವ್ ಪಕ್ಷದವರ ಆಜ್ಞೆಯಿಂದಲ್ಲ'

'ಪ್ರಜಾಮತ'

ಕೊಡಗು.

ಸನ್ ೧೯೩೨ನೇ ಇಸವಿ

ಜುಲೈ ತಾ. ೧೫ನೇ ಶುಕ್ರವಾರ.

ಪ್ರೆಸ್ ಆರ್ಡಿನೇನ್ಸ್

ಜಾರಿಯಲ್ಲಿರುವ ವರಿವಿಗೆ

ನಾವು

ಅಗ್ರ ಲೇಖನ

ನನ್ನು

ಪ್ರಕಟಿಸುವುದಿಲ್ಲ.

ಸರ್ ಸ್ಯಾಮ್ಯುವೆಲ್ ಹೋರರ ಹೇಳಿಕೆಯ ಮೇಲೆ ಎಸೆಂಬ್ಲಿ ಮೆಂಬರಾದ

ಡಾ|| ಗಯಾಪ್ರಸಾದಸಿಂಗರ ಅಭಿಪ್ರಾಯ.

ಬಹು ಕಾಲದಿಂದ ನಿರೀಕ್ಷಿಸಿದ್ದ ಸ್ಟೇಟ್ ಸೆಕ್ರೆಟರಿಯವರ ಹೇಳಿಕೆಯು ಹೊರಬಿತ್ತು. ಅದರಿಂದ ನನ್ನ ಮನೋಭಾವವು ಏನೂ ಬದಲಾಗಲಿಲ್ಲ. ಮೊದಲಿದ್ದಂತೆಯೇ ಇದೆ 'ಬೆಟ್ಟದ ಪ್ರಸವವೇದನೆಯಿಂದ ಇಲಿ ಹುಟ್ಟಿತು' ಎಂಬ ಗಾದೆಯನ್ನು ನೆನಸಿಕೊಳ್ಳಬೇಕಾಗಿದೆಯಷ್ಟೆ. ಇದನ್ನು ಪ್ರಕಟಿಸುವ ಮುಂಚೆ ಭಯ ಸೂಚನೆಗಳು ಯಾಕೆ? ಒಡ್ಯಾಟಗಳು ಯಾಕೆ? ಲಾಡಸ್ಸಿಗೂ, ಸಿಮ್ಲಾಕ್ಕೂ ತಂತೀ ವರ್ತಮಾನಗಳ ಓಡ್ಯಾಟವೇಕೆ? ವೈಸರಾಯರ ಪ್ರವಾಸವು ಬಾಕಿಯಾದದ್ದು ಯಾಕೆ? ಸಪ್ರೂ, ಜಯಕರರು ಸಿಮ್ಲಾದ ವೈಸರಾಯರ ಅರಮನೆಗೆ ಓಟವೇಕೆ? ಸ್ಟೇಟ್ ಸೆಕ್ರೆಟರಿಯವರ ಹೇಳಿಕೆಯಿಂದ ಏನೋ ಮಹತ್ವದ ವಿಷಯವು ಸಂಭವಿಸುತ್ತದೆ ಎಂತ ನಿರೀಕ್ಷಿಸುತ್ತಿದ್ದವರು ಇರಬಹುದು. ಅಂಥವರಿಗೆ ಆಶಾಭಂಗವಾಗಬಹುದು. ಆದರೆ ಹೀಗೆಯೇ ಆದೀತೆಂತ ಮುಂದಾಲೋಚನೆ ಮಾಡಲು ಶಕ್ತಿ ಇರುವವರಿಗೆ ಆತೆ ಏನೂ ಇರಲಿಲ್ಲ. ದುಂಡು ಮೇಜು ಪರಿಷತ್ತು ಆಗುವುದಿಲ್ಲವೆಂತ ಸೂಚಿಸಿದ್ದಕ್ಕೆ ನನಗೇನೂ ಬೇಸರವಿಲ್ಲ. ತುಂಬಾ ಖರ್ಚಿಗೆ ಎಡೆಕೊಡುವ ಈ ಕೂಟದ ಅಧಿವೇಶನವು ಎಳೆದು ನಡೆಯಿತು. ಈ ಕೂಟಕ್ಕೆ ಹಿಂದೂಸ್ಥಾನದಿಂದ ಮನಸೋಯಿಚ್ಛೆ ಯಾರ್ಯಾರನ್ನೋ ಕರೆಸಿಕೊಂಡಾಗಲೇ ಇದರ ಫಲಿತಾಂಶ ಹೀಗೆಯೇ ಆದೀತೆಂತ ತಿಳಿದಿತ್ತು. ಪ್ರಾಂತ್ಯಗಳಿಗೆ ಸ್ವಾತಂತ್ರ್ಯವನ್ನು ಕೊಡದೇ ಕೊಟ್ಟು ಅವುಗಳು ಹೇಗೆ ಕೆಲಸ ಮಾಡುತ್ತವೆ ಎಂತ ನೋಡಿ ಅನಂತರ ಮಧ್ಯವರ್ತಿ ಸರ್ಕಾರದಲ್ಲಿ ಪ್ರಜಾಜವಾಬ್ದಾರಿ ಪದ್ಧತಿಯನ್ನೂ ಕೊಡುವುದು ಎಂಬುವುದರಿಂದ ಮಧ್ಯವರ್ತಿ ಸರ್ಕಾರದಲ್ಲಿ ಪ್ರಜಾ ಸ್ವಾತಂತ್ರ್ಯವನ್ನು ತೀಘ್ರದಲ್ಲೇ ಕೊಡುವುದಿಲ್ಲವೆಂತಾಯಿತು.

ಸರ್ಕಾರದವರಿಂದ ಮೋಡರೇಟರುಗಳಿಗೆ ಈ ರೀತಿ ಆವ ಮರ್ಯಾದೆಯಾದರೂ ಸಿಕ್ಕ ಇನ್ನಾದರೂ ಯಾವ ಅಭಿಪ್ರಾಯ ಪಡುತ್ತಾರೆಂತ ನೋಡಲು ಕುತೂಹಲವುಳ್ಳವನಾಗಿದ್ದೇನೆ. ಮೋಡರೇಟ್‌ಗಳ ಮೂರು ಕೋರಿಕೆಗಳಾದ (1) ಆರ್ಡಿನೇನ್ಸ್ ರಾಜ್ಯವಿಲ್ಲಬೇಕೆಂದು. (2) ಮಧ್ಯವರ್ತಿ ಮತ್ತು ಪ್ರಾಂತೀಕ ಸರ್ಕಾರಗಳಲ್ಲಿ ಪ್ರಜಾ ಸ್ವಾತಂತ್ರ್ಯವು ಏಕ ಕಾಲದಲ್ಲಿ ಸಿಕ್ಕಬೇಕೆಂಬುದು ಮತ್ತು (3) ದುಂಡು ಮೇಜು ಪರಿಷತ್ತನ್ನು ಮೂರನೇ ಸಾರಿ ಕೂಡಿಸದೇಕೆನ್ನುವುದು ಸಹ ಪ್ರತಿಯೊಂದೂ ತಿರಸ್ಕರಿಸಲ್ಪಟ್ಟಿದೆ. ಹೊಸ ಆರ್ಡಿನೇನ್ಸ್ ಜಾರಿಗೆ ಬರುವಲ್ಲಿದೆ. ಬಂದರಿನ ಕಾಂಗ್ರೆಸ್ ಕೆಲಸಗಾರರಿಗೆ ಅಭಿನಂದನೆ ಕೊಡಬೇಕು. ಯಾಕೆಂದರೆ—ಕಾಂಗ್ರೆಸ್ಸಿನ ಉದ್ದೇಶದಲ್ಲಿ ಒಂದಾದ ಈ ಸರಘೀಯ ಆಡಳಿತದ ನಿಜಸ್ವರೂಪವನ್ನೂ, ಅಳರಸರ ಮಾಸಾಸಿನ ನಿರಾಕರಣೆಯನ್ನೂ ಬಹಿರಂಗಪಡಿಸುವುದು. ಸಾಧಿಸಲ್ಪಟ್ಟಂತಾಯಿತು—ಆದರೆ ಮುಚ್ಚಿದ ಕತ್ತಲೆಯಲ್ಲಿ ಬೆಳಕಿನ ರಶ್ಮಿಯು ಯಾವುದಾದರೂ ಮೋಡರೇಟ್‌ಗಳಿಗೆ ತೋರಿಬರಬಹುದು. ಮೊದಲು ಯೋಚಿಸಿದ ಮತಲಪ್ಪು, ಜಯಕರ್ ಸಪ್ರೂ ಪ್ರಯತ್ನದಿಂದ ಕೆಲವು ಮಟ್ಟಿಗೆ ಬದಲಾಯಿತಂತೆ! ಬಿಲ್ಲನ್ನು ಪಾರ್ಲಿಮೆಂಟ್ ಮುಂದೆ ಇಡುವ ಮುಂಚೆ ಎರಡು ಪಾರ್ಲಿಮೆಂಟುಗಳ ಕಮಿಟಿಯ ಮುಂದೆ ಹಿಂದೀಯರು ಅಭಿಪ್ರಾಯ ಕೊಡುವ ಅನುಕೂಲವು ಇವರ ಪ್ರಯತ್ನದಿಂದ ದೊರಕಿತಂತೆ! ಜನರನ್ನು ಮೋಸಗೊಳಿಸಲು ಒಡ್ಡಿದ ಇದೊಂದು ಹೊಸ ಬೋನು ಆಗಿದೆ. ಅನೇಕರು ತಿಳಿದೂ ತಿಳಿದೂ ಈ ಬೋನಿನೊಳಗೆ ಸಿಕ್ಕಿ ಬೀಳುತ್ತದೆ. ಈ ಕಮಿಟಿ ಮುಂದೆ ಹೋಗಲು ನಾಮುಂದೆ, ನಾಮುಂದೆ ಎಂತ ಹೋರಾಟವು ಪ್ರಾರಂಭವಾಗಬಹುದು. ಸಭೆಗಳಲ್ಲಿ ಎಷ್ಟೋ ಗಟ್ಟಿಯಾಗಿ ಗರ್ಜಿಸಿದರೂ ನಮ್ಮ ಮೋಡರೇಟ್ ಸಹೋದರರೂ, 'ಜೋಹುಕುಂ' ಜನರೂ ಕೋಮುವಾರು ಮೈಗಳಾಗಿ ಸ್ಟೇಟ್ ಸೆಕ್ರೆಟರಿಯವರ ವಿಚಾರವನ್ನು ಅಂಗೀಕರಿಸಿ ಸಹಕರಿಸುವುದರಲ್ಲಿ ಸಂಶಯವಿಲ್ಲ. ಇವರ ಸಹಕಾರವು ಎಂಥಾದ್ದೆಂದರೆ—ಫೂಟ್‌ಬಾಲಿಗೂ, ಬೂಟ್ಸನ್ನು ಧರಿಸಿರುವ ಕಾಲಿಗೂ ಇರುವ ಸಹಕಾರವೇ! ಫೂಟ್ ಬಾಲ್ (ಕಾಲಿನಿಂದ ಒದೆಯುವ ಚೆಂಡು) ಎಷ್ಟು ಸಾರಿ ಕಾಲಿನ ಹತ್ತರ ಬರುತ್ತದೋ ಅಷ್ಟು ಸಾರಿ ಬಲವಾಗಿ ಕಾಲಿನಿಂದ ಒದೆಯಲ್ಪಡುತ್ತದೆ. ಹಿಂದೂಸ್ಥಾನದಿಂದ ದುಂಡು ಮೇಜು ಪರಿಷತ್ತಿಗೆ ಹೋದ ಪ್ರತಿನಿಧಿಗಳೆನ್ನುವವರು—ಕೆಲವರು ವಿನಹ—ಸರ್ಕಾರದಿಂದ ಆರಿಸಲ್ಪಟ್ಟವರು. ಕೋಮುವಾರು ಹಕ್ಕುಗಳಿಗಾಗಿ ಹೋರಾಡುವವರು, ಇನ್ನೂ ಕೆಲವರು ಬೆನ್ನೆಲುಬು ಇಲ್ಲದ ಯಜಮಾನನ ಮಾತನ್ನು ಒದರಿಸುವ ಪ್ರಾಣಿಗಳು. ಇಂಥವರನ್ನೆಲ್ಲಾ ಆಕಸ್ಮಾತ್ತಾಗಿ ಚುನಾಯಿಸಿದ್ದಲ್ಲ. ಬೇಕೆಂತಲೇ ಚುನಾಯಿಸಿದ್ದು. ಉಭಯ ಪಾರ್ಲಿಮೆಂಟಿನ ಮುಂದೆ ಹೋಗುವ ಪ್ರತಿನಿಧಿಗಳೂ ಹೀಗೆಯೇ ಆರಿಸಲ್ಪಡುವುದು. ಆದರೆ ಹಿಂದೂಸ್ಥಾನದ ನಿಜವಾದ ಪ್ರತಿನಿಧಿಗಳು ಅರಿದ ಮಾತನ್ನು ನಡಿಸಲು ಶಕ್ತಿ ಇರುವವರು ತಮ್ಮ ದೇಶಭಕ್ತಿಯನ್ನು ಕಷ್ಟ ಸಹನೆಯವರೆಂಬಲ್ಲಿ ಅಪಮಾಯಿಸಲ್ಪಟ್ಟವರು ಈಗ ಬಂಧಿಖಾನೆಗಳೊಳಗೆ ಮುಚ್ಚಲ್ಪಟ್ಟಿದ್ದಾರೆ. ಇದು ಸರ್ಕಾರಕ್ಕೆ ತಿಳಿದಿದೆ—ಹೇಳುವುದಿಲ್ಲವಷ್ಟೆ—ಇತರ ಕೆಲವರನ್ನು ಸರ್ಕಾರವು ಈಗ ಉಪಯೋಗಿಸಿಕೊಳ್ಳುತ್ತದೆ. ಅವರ ಉಪಯೋಗತೀರಿದನಂತರ, ರಸವನ್ನು ಹಿಂಡಿಕೊಂಡಾದನಂತರ ನಿಂದೆ ಹಣ್ಣಿನ ತಿಪ್ಪೆಯನ್ನು ಬಿಸಾಡಿಬಿಡುವಂತೆ ಬಿಸಾಡುತ್ತಾರೆ. ಈ ಮೊದಲು ಸೈಮನ್ ಕಮಿಶನಿನೊಂದಿಗೆ ಸಹಕರಿಸಿದವರನ್ನು ಸರ್ಕಾರವು ಹಾಗೆಯೇ ಮಾಡಿತಲ್ಲವೇ? ಈಗಿನ ಸರ್ಕಾರದ ತೀರ್ಮಾನದ ಫಲಿತಾಂಶವು ಹೀಗೆಯೇ ಆದೀತೆಂತ ಎಲ್ಲರಿಗೂ ಸುಲಭವಾಗಿ ತಿಳಿಯುತ್ತದೆ.

ತಾ 23—6—32 ರಲ್ಲಿ ಮಡಿಕೇರಿ ವೇದಾಂತ ಸಂಘದ ಕಾರ್ಯದರ್ಶಿಯವರು ಓದಿದ ವಾರ್ಷಿಕ ವರದಿ.

ಮಾನ್ಯ ಅಧ್ಯಕ್ಷರೇ ಮತ್ತು ಸಹೋದರರೇ:—

ನಮ್ಮ ಸಂಘವು ಹದಿನಾರನೆಯ ವರ್ಷವನ್ನು ಕಳೆದು ನಮ್ಮೆಲ್ಲರ ಪ್ರಯತ್ನ ಫಲದಿಂದ ಈ ದಿವಸ ಎಲ್ಲರಿಗೂ ತೋರಿಬರುವಂತೆ ಈ ಸಂಘವು ಈಗ ಶೈಶವಾವಸ್ಥೆಯನ್ನು ಕಳೆದು ಹದಿನೇಳನೆಯ ವರ್ಷಕ್ಕೆ ಕಾಲಿಟ್ಟಿದೆ; ಮತ್ತು ಅದರ ಕರ್ತವ್ಯ ಭಾರವೂ ಹೆಚ್ಚುತ್ತಿದೆ. ಭಗವತ್ಕೃಪೆಯಿಂದ ಸಂಘವು ಈ ನೂತನ ಕರ್ತವ್ಯ ಭಾರಗಳನ್ನು ವಹಿಸಿ ಸಂತೋಷವಾಗಿ ಪೂರ್ಣಗೊಳಿಸಬಲ್ಲುದೆಂದು ನನಗೆ ಭರವಸೆಯಿದೆ. ಈ ಲೋಕದಲ್ಲಿ ಈ ಸಂಘವು ತನ್ನ ಕರ್ತವ್ಯವನ್ನೂ, ಜನತಾ ಸೇವೆಯನ್ನೂ ಮಾಡಬೇಕಾಗಿರುವುದು.

ಎಂದಿನಂತೆ ಸಂಘದ ಮೇಲ್ವಿಚಾರಣೆಯು ಅಧ್ಯಕ್ಷರು, ಕಾರ್ಯದರ್ಶಿ ಮತ್ತು ಕಾರ್ಯಕಾರಿ ಮಂಡಳಿಯವರ ಹಸ್ತದಲ್ಲಿದ್ದು ಸುರಕ್ಷಿತವಾಗಿರುವುದು. ನಮ್ಮ ಅಧ್ಯಕ್ಷರಾದ ಮ. ರಾ. ಶ್ರೀ. ಸಿ. ಯಂ. ಕುಶಾಲಪ್ಪನವರು ಪರವೂರಿಗೆ ವರ್ಗವಾಗಿ ಹೋದುದರಿಂದ ಮ. ರಾ. ಶ್ರೀ. ಪಟ್ಟಮಾಡ ಚಿಣ್ಣಪ್ಪನವರನ್ನು ಅಧ್ಯಕ್ಷರನ್ನಾಗಿ ಆರಿಸಲಾಗಿದೆ. ಸಂಘದಲ್ಲಿ ಒಟ್ಟು ೩೯ ಪ್ರತ್ಯೇಕ ಜನ ಸದಸ್ಯರಿರುತ್ತಾರೆ. ಈ ವರ್ಷಾವಧಿಯಲ್ಲಿ ಆರು ಕಾರ್ಯಕಾರಿ ಮಂಡಳಿಯ ಸಭೆಗಳು ನಡೆದಿವೆ.

ವರ್ಷಾರಂಭದಲ್ಲಿ ಶಿಲ್ಕು ರೂ 27—11—8 ಹೊಸತ ಚಂದಾ ವಸೂಲಿಯಿಂದಲೂ, ಪುಸ್ತಕ, ಚಿತ್ರ ಪಟಗಳ ಮಾರಾಟದಿಂದಲೂ, ಸಾಲದ ಮೇಲಿನ ಬಡ್ಡಿ, ಉಚಿತ ರೀತಿ ಮುಂತಾದ ಮಾರ್ಗಾಂತರಗಳಿಂದ ಈ ವರ್ಷಾವಧಿಯಲ್ಲಿ ವಸೂಲಾದ ಹಣ ರೂ 181—13—3, ಖರ್ಚು ರೂ. 195—1—6 ವರ್ಷಾಂತ್ಯದಲ್ಲಿ ಶಿಲ್ಕು 14—7—5.

ಸಂಘವು ಇಂಗ್ಲೀಷಿನಲ್ಲಿ ಪ್ರಬುದ್ಧ ಭಾರತ, ವೇದಾಂತ ಕೇಸರಿ, ಮಾರ್ನಿಂಗ್ ಸ್ಟಾರ್, ಮೆಸೇಜ್ ಆಫ್ ದಿ ಈಸ್ಟ್, ಮತ್ತು ಕನ್ನಡದಲ್ಲಿ ಸುಬೋಧ, ಸುಬೋಧ ಕುಸುಮಾಂಜಲಿ, ಕರ್ಣಾಟಕ ಹರಿದಾಸ, ಕೀರ್ತನ ತರಂಗಿಣೀ ಮತ್ತು ಸದ್ಬೋಧ ಚಂದ್ರಿಕೆ. ಈ ಮಾಸ ಪತ್ರಿಕೆಗಳನ್ನು ತರಿಸಿಕೊಳ್ಳುತ್ತಿರುವದು.

ಸಂಘದ ಪುಸ್ತಕ ಭಂಡಾರದಲ್ಲಿ ಪೌರ್ವಾತ್ಯ ಮತ್ತು ಪಾಶ್ಚಾತ್ಯ ಗ್ರಂಥಕರ್ತರುಗಳು ಬರೆದ ಉತ್ತಮ ಪಾರಮಾರ್ಥಿಕ ಮತ್ತು ಮತಸಂಬಂಧವಾದ 500 ಪುಸ್ತಕಗಳಿವೆ. ಇನ್ನೂ ಪುಸ್ತಕಗಳೂ ಅವುಗಳನ್ನಿರಿಸಲು ಉತ್ತಮ ತರದ ಪೆಟ್ಟಿಗೆಗಳೂ ಅವಶ್ಯಕವಾಗಿವೆ. ಇವುಗಳು ದೊರೆತನಂತರ ಈಗಿರುವುದಕ್ಕಿಂತಲೂ ಅಧಿಕವಾಗಿ ಪುಸ್ತಕ ಭಂಡಾರವು ಉಪಯೋಗವಾಗುವುದರಲ್ಲಿ ಸಂದೇಹವಿಲ್ಲ.

ಪ್ರತಿ ಶನಿವಾರ ಭಜನೆಯೂ, ಭಾನುವಾರ ಸ್ವಾಮಿ ವಿವೇಕಾನಂದಜೀಯವರ ಹಿತೋಪದೇಶಗಳನ್ನೂ ಓದುವದೂ ಸಂಘದ ಮುಖ್ಯ ಕರ್ತವ್ಯಗಳಾಗಿವೆ. ಶ್ರೀರಾಮಕೃಷ್ಣ ದೇವ, ಶ್ರೀ. ಮದ್ವಿವೇಕಾನಂದಜಿ, ಶಿವಾನಂದಜಿ ಮತ್ತು ಶಾರದಾಮಣೀ ದೇವಿಯವರ ಜನ್ಮ ದಿನಗಳು ಎಲ್ಲಾ ಸದಸ್ಯರುಗಳಿಂದ ಆಚರಿಸಲ್ಪಟ್ಟವಲ್ಲದೆ ಇತರ ಸಿಕ್ಕಿಮಿಗಳೂ ಸಂಘದ ಈ ಅಸಾಧಾರಣ ಕರ್ತವ್ಯಗಳಲ್ಲಿ ಭಾಗಿಗಳಾಗಿರುವರು.

ಭಕ್ತಿಯೋಗ, ವೇದಾಂತ ಯೋಗ, ವೇದಾಂತ ಶ್ರೀ ಮಧ್ವಾಚಾರ್ಯರು, ಸರಸ್ವತೀ ಪೂಜೆ, ಸ್ವಾಮಿ ವಿವೇಕಾನಂದ, ಶ್ರೀರಾಮಕೃಷ್ಣ, ಶ್ರೀಕೃಷ್ಣ, ಬುದ್ಧ, ದೇವಿ ಪೂಜೆ, ಬುದ್ಧನ ಸೂಕ್ತಿಗಳು, ದೇವಿಮಹಾತ್ಮ್ಯ, ಶ್ರೀರಾಮನವಮಿ (ಶ್ರೀಮತಿ ಗೌಂಡರವರು ಶ್ರೀರಾಮನವಮಿ ಪೂಜೋತ್ಸವ ನಡೆಯಿಸಿದ ಕಾಲದಲ್ಲಿ) ಕೃಷ್ಣನ ಉಪದೇಶ, ಮತ್ತು ಶ್ರೀಶಂಕರಾಚಾರ್ಯ—ಈ ವಿಷಯಗಳಲ್ಲಿ ಉಪನ್ಯಾಸಗಳು ನಡೆದಿವೆ. ಸಂಘದ ಸದಸ್ಯರು ಈ ಉಪನ್ಯಾಸಗಳಲ್ಲಿ ಭಾಗವಹಿಸಿರುತ್ತಾರೆ.

ಸ್ವಾಮಿ ವಿವೇಕಾನಂದಜಿಯವರ ಉಪನ್ಯಾಸಗಳನ್ನು ಪ್ರತಿ ಆದಿತ್ಯವಾರವೂ ಓದಿ ಸರ್ವರಿಗೂ ಬೋಧಪ್ರದವಾಗಿರಲು ಕನ್ನಡದಲ್ಲಿ ವಿವರಿಸುವದರಲ್ಲಿ ಮ. ರಾ. ಶ್ರೀ. ಶಂಕರನಾರಾಯಣರಾವ ಬಹು ಬಹು ಶ್ರಮವಹಿಸಿರುತ್ತಾರೆ. ಮ. ರಾ. ಶ್ರೀ. ಬಿ. ವಿ. ಗಣಪತ್ತಿಯವರು ಆಗಾಗ್ಗೆ ವೇದಾಂತ ಸಂಬಂಧವಾದ ಉಪದೇಶಗಳನ್ನು ಘಂಟಾಘೋಷವಾಗಿ ಉದ್ಗಾರವೆತ್ತಿರುತ್ತಾರೆ. ಇವಿಷ್ಟೂ ಅರಿಯದವರ ಮನ ಹೊಕ್ಕು ಕಳೆ ತುಂಬಿರುವದೆಂದರೆ ಅತಿಶಯೋಕ್ತಿಯಾಗಲಾರದು. ನಮ್ಮ ಹರಿದಾಸರಾದ ಮ. ರಾ. ಶ್ರೀ. ಬಿ. ಕೆ. ಸುಬ್ಬರಾಯರು ಶ್ರೀಕೃಷ್ಣ, ಸುಧಾಮ, ಪುರಂದರದಾಸ, ಶ್ರೀರಾಮಕೃಷ್ಣ, ನಾಗಮಹಾಶಯ ಮತ್ತು ಶ್ರೀಮತಿ ಚೇಂದ್ರಿಮಾಡ ಬೊಳ್ಳಪ್ಪನವರು ಶ್ರೀರಾಮನಾಮ ಮಹೋತ್ಸವವನ್ನು ನೆರವೇರಿಸಿದ ಕಾಲದಲ್ಲಿ ಶ್ರೀರಾಮನಾಮದ ಮಹಿಮೆ ಮುಂತಾದ ಭೋಧಪ್ರದವಾದ ಹರಿಕಥೆಗಳನ್ನು ಮಾಡಿರುತ್ತಾರೆ. ಗೀತಾಜಯಂತಿಯು ಸಕಲ ಜನ ಹಿತಾರ್ಥವಾಗಿ ಜರುಗುವದಾರದ ಸಂಘದ ಹಾಲಿನಲ್ಲಿ ಶ್ರೀಮಾನ್ ಆತ್ಮಾರಾಮಶಾಸ್ತ್ರಿಗಳವರ ಅಧ್ಯಕ್ಷತೆಯಲ್ಲಿ ನಡೆಯಿತು; ಮ. ರಾ. ಶ್ರೀ. ಡಿ. ಯಂ. ಸಿದ್ಧಲಿಂಗಯ್ಯನವರು ಗೀತಾಸಂಬಂಧವಾದ ಉಪನ್ಯಾಸವನ್ನು ಮಾಡಿದರು.

ನಮ್ಮ ಅಧ್ಯಕ್ಷರ ಉದಾರ ಸದ್ಗುಣಗಳ ಸಂಪರ್ಕ ಪ್ರಭಾವದಿಂದಲೂ, ಮ. ರಾ. ಶ್ರೀ. ಸಿ. ಯಂ. ದೇವಯ್ಯನವರ ಉದಾರ ಸಹಾಯದಿಂದಲೂ ಮ. ರಾ. ಶ್ರೀ. ಮಾತಂಡ ಅಪ್ಪಚ್ಚನವರಿಗೆ ಸೇರಿದ ಮನೆದಳವನ್ನು ನಾವು ಕೃತಜ್ಞತೆಯುತ್ತ ಹೊಂದಿಕೊಂಡಿರುತ್ತೇವೆ. ಮ. ರಾ. ಶ್ರೀ. ದೇವಯ್ಯನವರು 125 ರೂಪಾಯಿಗಳನ್ನು ಸಾಲದ ರೂಪದಲ್ಲಿಯೂ ಅಷ್ಟೇ ದ್ರವ್ಯವನ್ನು ಉಚಿತವಾಗಿಯೂ ಕೊಟ್ಟಿರುವರು. ಮ. ರಾ. ಶ್ರೀ. ಆರ್. ಯಂ. ಕಪನಯ್ಯನವರು ಅವರ ತಂದೆಯವರ ಸ್ಮಾರಕವಾಗಿ 300 ರೂಪಾಯಿಗಳನ್ನೂ ಮನೆದಳ ಕೊಳ್ಳುವ ಉದ್ದೇಶ್ಯವಾಗಿ ಉಚಿತವಾಗಿ ಕೊಡುವವರಾಗಿರುತ್ತಾರೆ. ಮ. ರಾ. ಶ್ರೀ. ಕೆ. ಯಂ. ಚೆಂಗಪ್ಪನವರು ಹಿತ್ತಾಳೆಯ ಸಿಲುದೀಪಗಳನ್ನು ಉಚಿತವಾಗಿ ನೀಡಿರುತ್ತಾರೆ. ಇವರುಗಳಿಗೆಲ್ಲಾ ನಾವು ತುಂಬಾ ಕೃತಜ್ಞರಾಗಿರುತ್ತೇವೆ.

ಭಗವಂತನ ಕೃಪೆಯಿಂದ ಮುಂದೆ ಸಂಘದ ಕಟ್ಟಡವನ್ನು ಕಟ್ಟಿಸುವ ಅಭಿಲಾಷೆ ಇದೆ. ಇದಕ್ಕಾಗಿ "ಬಿಲ್ಡಿಂಗ್ ಕಮಿಟಿಯ" ಯೋಚನೆಯಾಗಬೇಕಾಗಿದೆ. ಇದರಿಂದ ನಾವು ಭಗವಂತನ ಅತ್ಯಂತ ಭಕ್ತರೆಂಬುವುದನ್ನು ಕಾರ್ಯತಃ ಮಾಡಿ ತೋರಿಸಬೇಕಾದ ಸುಸಂದರ್ಭ ಒದಗಿದೆ. ಅದಕ್ಕಾಗಿ ಉದಾರಮನಸ್ಸಿನಿಂದ ಧನಸಹಾಯ ಮಾಡುವದಲ್ಲದೆ ಇತರರಿಂದಲೂ ಚಂದಾ ಎತ್ತಿ ಪ್ರತಿಯೊಬ್ಬನೂ ಸಹಾಯ ಮಾಡಬೇಕಾಗಿದೆ. ಈಗಿನ ಮಸ್ತು ಸ್ಥಿತಿಯಿಂದ ಈ ಸಣ್ಣ ಪ್ರಯತ್ನವು ಈಗಿನ ಮತ್ತು ಮುಂದಿನ ಜನಾಂಗದ ಹಿತವನ್ನೂ ಮತ್ತು ಅವರಲ್ಲಿ ಭಗವತ್ ಶ್ರದ್ಧೆಯನ್ನೂ ಉಂಟುಮಾಡುವದೆಂದು ನಾವು ನಂಬಿರುತ್ತೇವೆ.

ಸಂಘದ ಎಲ್ಲಾ ಕಾರ್ಯಗಳಲ್ಲೂ ಭಾಗಿಗಳಾಗಿ ಸಹಾಯಮಾಡಿರುವ ಸಕಲ ಸದಸ್ಯರಿಗೂ ನಾವು ಕೃತಜ್ಞರಾಗಿರುತ್ತೇವೆ. ದಿವಂಗತ ಬೇನ್‌ಸಿಂಗ್‌ರವರ ಮಕ್ಕಳು ತಮ್ಮ ಮನೆಯನ್ನು ಸಂಘದ ಉಪಯೋಗಕ್ಕಾಗಿ ಉಚಿತವಾಗಿ ಒದಗಿಸಿಕೊಟ್ಟಿರುವದು ಸ್ತುತ್ಯಾರ್ಹವಾಗಿದೆ. ಅವರಿಗೆ ನಾವು ಚಿರಕೃತಜ್ಞರು.

Reg. No. M. 1550.
If not delivered please return to
"KODAGU" OFFICE MERCARA.

ಕೊಡಗು.

ಸತ್ಯೇನ ಧೂತದಯಯಾ ವಿದ್ಯಾ ಶೀತಿ ಪಯುಕ್ತತಾ ಬಲಮುಕ್ತೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಮೂಚಿಮಂಡ ಯಂ. ಗಣಪತಿ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೨ | ಮಡಿಕೇರಿ, ಸನ್ ೧೯೩೨ನೇ ಇಸವಿ ಜುಲೈ ತಾರೀಕು ೮ ನೇ ಶುಕ್ರವಾರ. | ಸಂಚಿಕೆ ೩

SARI-PIN.

EAR-RINGS.
(Thodus)
Cut-rubys Rs. 25 to 50
With diamond in centre Rs. 80 to 120

BRACELETS.

Gold Rs. 10
Set rubys forming any letter Rs. 12

NECKCHAINS.

NOSE-RINGS.
Diamond in small size of best quality Rs. 35
& upwards according to size.

MARRIAGE PRESENTATIONS

Attractive and inexpensive articles ready in stock. Prompt execution. Details on enquiry free with catalogue. Numerous customers in Coorg thoroughly satisfied with reliable service. Testimonials pouring in.
Silver Guindys, Photo lockets, Dimond nose-screws, cut-ruby ear-rings etc., etc., etc., in all prices. Very attractive. Prices most moderate.

Estimates free on enquiry | Designs free on enquiry.

Telegrams: 'PRECIOUS.' | Telephone: 3145.

V. Subramaniaier
Jeweller,

CATALOGUE ON ENQUIRY.

52–33

Post Box 423, Triplicane, P. O., MADRAS.

ಇಂಡಿಯಾ ಎಕ್ವಿಟೇಬಲ್ ಇನ್ಶೂರೆನ್ಸ್
ಕಂಪೆನಿ ಲಿಮಿಟೆಡ್.

(ಸ್ಥಾಪಿಸಲ್ಪಟ್ಟದ್ದು 1908)

ಪೋಲಿಸಿಗಳು ಕಳಕೊಳ್ಳುವಂಥವುಗಳಲ್ಲ.

ಜೂನ ತಡೆಯೂ ಇಲ್ಲದೆ ಪ್ರತಿ ವರ್ಷವು ಬೋನಸ್ಸು.

ಹಕ್ಕು ಬಾಧ್ಯಸ್ಥರಿಗೆ ಸರಿಯಾಗಿ ಹಣ ಕೊಡಲ್ಪಡುವದು ಇಲ್ಲದಿದ್ದರೆ ಬಡಿಯು ದೊರಕುವುದು.

ಹೆಡ್ಡು ಆಫೀಸು:—

102. ಕ್ಲೈವ್ ಸ್ಟ್ರೀಟ್, ಕಲ್ಕತ್ತಾ.

I. E., C. P. S. 13–7

ಬಾಲಾರ್ಕಮಧು.

ಬಾಲಾರ್ಕಮಧು ಮಕ್ಕಳಿಗೆ ಕೊಡುವುದರಿಂದ ಶಕ್ತಿಯೂ ಆರೋಗ್ಯವೂ ಹೆಚ್ಚುವುದು. ಇದು ಮಧುರವಾಗಿದೆ. ಬೆಲೆ ಶೀಸೆ 1ಕ್ಕೆ 0–12–0 ಟಿ. ಖ. 0–12–0.



(Spleen Lever enlargement) ಎಂಬ ಮಕ್ಕಳ ಭಯಂಕರ ಗಡ್ಡೆ ರೋಗ—ಪ್ಲೀಹ—ಪಿತ್ತಕೋಶದ ಗಡ್ಡೆಗೆ ಚಕ್ರಬಿಂದು. ಚಕ್ರಕ್ಷಾರ—ಚಕ್ರಚೂರ್ಣ—ಚಕ್ರ ಪ್ರಭಾ—ಈ ನಾಲ್ಕು ಮಹೌಷಧಗಳಿವೆ. ಸಾವಿರಾರು ಮಕ್ಕಳ ಪ್ರಾಣವನ್ನು ಉಳಿಸಿದೆ; ನಾಲ್ಕು ಔಷಧಗಳು ಸೇರಿ 1 ತಿಂಗಳ ಔಷಧದ ಬೆಲೆ 3–0–0. ಟಿ. ಖ. 0–8–0. ಏಜೆಂಟರು ಬೇಕಾಗಿರುವರು.

ಪ. ಎ. ಮನ್. ಶ್ರೀನಿವಾಸರಾವ್,
ವೈ: ವಿ. ಆಯುರ್ವೇದಭಿಷಕ್,
ಬ್ರಾಂಚ್ ಆಫೀಸ್, ಉಡ್ಪಿ. S. K. | Spleen & Lever ಸ್ಪೆಶಲಿಸ್ಟ್, ಯಂ: ವಿ. ಪ್ರಸಾದಿಕ ಔಷಧಾಲಯ

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲಿ)

	ರೂ.
ಶೇರ್ ಬಂಡವಾಳ —	50,000
ವಸೂಲಾದ ಶೇರ್ ಮೊಬಲಗು —	26,800
ಜಮೂಬಂದ ಠೇವಣಾತಿ —	2,50,301

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟರು,	ಟ್ರೆಜರರ್
ಪಟ್ಟಮಾಡ ದೇವಯ್ಯನವರು, ರಾವ್ ಬಹದ್ದೂರ್.	ಮನೆಯಪ್ಪಂಡ ಬೆಳ್ಯಪ್ಪನವರು.

ಸೆಕ್ರೆಟರಿ

ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಖು 1—7—1932.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜೆಂಟರುಗಳು.

ಉತ್ತರ ಕೊಡಗಿಗೆ ಮಿ॥ ಚೌರಿರ ಮಾಚಯ್ಯನವರು,

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮಿ॥ ಮುಂಡೇಪಂಡ ಸೋಮಯ್ಯನವರು. (ಖಾದಿಭಂಡಾರ.)

ನಾಪೋಕ್ಲು—ಎಮ್. ಆರ್. ವೆಂಕಪ್ಪಯ್ಯನವರು.

ಅಮ್ಮತ್ತಿ—ಸಿದ್ದಾಪುರ—ಮಿ॥ ಬಿನಂಡ ಮಾದಪ್ಪನವರು.

ಪೊನ್ನಂಪೇಟೆನಾಡು—ಮಿ॥ ಪಿ. ಜಿ. ಮುದ್ದಯ್ಯನವರು. ಮತ್ತು, ಅರಮಣಮಾಡ ಪಿ ಕಾರ್ಯಪ್ಪನವರು,

ಮಡಿಕೇರಿ & ತಿತಿಮತ್ತಿ—ಮಿ॥ ಜಿ. ಮಾದಯ್ಯನವರು.

ಸುಂಟಿಕೊಪ್ಪ—ಮಿ॥ ಅಪ್ಪಚಟ್ಟೋಳಂಡ ನಾಣಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮ್ಯಾನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅನುಕ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಿಸಲು ಆವಶ್ಯವಾಗಿರುವ, ಇಂಗ್ಲಿಷಿನ ಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಪಿರ್ಯಾದು ಫಾರಮುಗಳೂ, ಜಮ್ಮ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಕರಾರು ಫಾರಮುಗಳೂ, ಸ್ಟೋರ್ ಕೀಪರ್ ಕರಾರು ಫಾರಮುಗಳೂ, ಓವರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮಾ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು ... ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಮುದ್ದು ಬರಲಿಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮ್ಯಾನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.

ವಿಮೆದಾರರಿಗೆ ಕೊಟ್ಟದ್ದು—3231 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.

ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,78,322 ಜನರಿಗೆ 38ಕೋಟಿ ರೂ.

ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ಕ್ಕಿಂತ ವಿಾರದ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದಾಗಿದೆ.

ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಬತ್ತಾಸೆಯನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು,

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರಾ	ಕಲ್ಕತ್ತಾ	ಕೌಲಾಲಂಪೂರು	ಮೊಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪೂರ	ರಾವಲ್‌ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೋ	ಪಾಟ್ನಾ	ಸಕ್ಕೂರು
ಅಲಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಡೌಲಗಾನ್	ಮಂಡಲೆ	ರಾಯಪುರ	ತಿರುವೆಂಡ್ರಮ್
ಭೋಪಾಲ್	ಕರಾಚಿ	ಮಂಗಳೂರು	ರಾಂಚಿ	ವಿಶಾಖಪಟ್ಣ [52—18

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,

52—25 ಗಿರಿಗಾಂವ, ಮುಂಬಯಿ.

ಇಂಡಿಯನ್ ಇನ್ಶೂರೆನ್ಸ್ ಕಂಪೆನಿಗಳಿಗೇನೇ ಜೀವ ವಿಮೆ ಮಾಡಿರಿ.

ದಿ ಬೆಂಗಾಲ್ ಇನ್ಶೂರೆನ್ಸ್ ಎಂಡ್ ರಿಯಲ್ ಪ್ರಾಪರ್ಟಿ ಕಂಪೆನಿ ಲಿಮಿಟೆಡ್, ಹೆಡ್ ಆಫೀಸು:—8 ಡಾಲ್ ಹೌಸಿ, ಸ್ಕ್ವೇರ್ (ಈಸ್ಟ್) ಕಲ್ಕತ್ತ, ಸಂಸ್ಥಾಪನೆ 1919

ನವಸಂಸ್ಕೃತಿಯು ಬೆಳೆದಷ್ಟಕ್ಕೆ ಅದರೊಡನೆ ಅದಕ್ಕೆ ಸಂಬಂಧಪಟ್ಟಿರುವ ಆರ್ಥಿಕ ಪರಿಸ್ಥಿತಿಯು ಬೆಳೆಯುತ್ತದೆ. ಇಂಥಹ ಸಮಯದಲ್ಲಿ ಜೀವವಿಮೆ ನಿಯಮವು ಒಂದು ವರವೆಂದೆಣಿಸಲ್ಪಟ್ಟಿದೆಯಲ್ಲದೆ, ಅದು ಸಮಾಜರಂಗದಲ್ಲಿ ಜನರಿಗೊಂದು ಅತ್ಯಗತ್ಯ ವಿಷಯವೆಂದೂ ತಿಳಿದು ಬಂದಿದೆ. ಅದನ್ನು ಈಗೀಗ ಗಣಿತಶಾಸ್ತ್ರ ಪ್ರಕಾರವಾಗಿಯೇ ಜತನದಿಂದ ಪರಿಪಾಲಿಸಿಕೊಂಡೇ ಬರುವಂತಾಗಿದೆ.

ಈ ಕಂಪೆನಿಯು ಸರಕಾರದಲ್ಲಿ ಕಂಪೆನಿಯ ಭದ್ರತೆಗೋಸ್ಕರ 2 ಲಕ್ಷ ರೂಪಾಯಿ ಠೇವಣಾತಿಯನ್ನು ಇಟ್ಟಿದೆ. ಇದು ಇನ್ಶೂರೆನ್ಸ್ ಕೆಲಸದಲ್ಲಿ ಒಳ್ಳೆ ಗುರುತಿರುವ ಸದ್ಗೃಹಸ್ಥರ ಮುಂದಾಳುತನದಿಂದಲೇ ನಡೆಯುತ್ತದೆ. ಈ ಕಂಪೆನಿಯು ಆಕರ್ಷಣಮಯವಾದ ಕೆಲವು ಸೂತ್ರಗಳ ಮೇರೆಗೆ ಅತೀ ಸುಲಭ ಪ್ರೀಮಿಯಮ್ ದರದಿಂದ ಪೋಲಿಸಿಗಳನ್ನು ಕೊಡುತ್ತದೆ. ಇದರ ಶರ್ತಗಳು, ನಿಯಮಗಳು ಸುಲಭಗ್ರಾಹ್ಯವಾಗಿವೆ; ಅನುಕೂಲದ್ದಾಗಿವೆ. ಅಲ್ಲದೆ ಬಹು ಉದಾತ್ತವೂ ಆಗಿವೆ. ಹೆಚ್ಚಿನ ಮಾಹಿತಿಗೆ ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಿರಿ.

ಯಂ. ಯಸ್. ಐಯ್ಯಪ್ಪ,
ಆರ್ಗನೈಸರ್,
ಸ್ಕೂಲ್‌ರೋಡ್, ಮಡಿಕೇರಿ.

ಅಥವಾ

ಆರ್. ಸಿ. ಸೆನ್‌ಗುಪ್ತ,
ಬ್ರಾಂಚ್ ಸೆಕ್ರೆಟರಿ,
28, ಅಂಗಪ್ಪನಾಯಕ್ ಸ್ಟ್ರೀಟ್,
ಜಿ. ಟಿ. ಮದರಾಸ್.

12—11

Wanted agents in every Taluk of Coorg on very liberal terms.

Printed & published by M. M Ganapathy at "Kodagu" Press Mercara or "Kodagu" Ltd.

ಸ್ತ್ರೀಯರಿಗೆ ರಾಜಕೀಯ ಚಳವಳಿವು ಬೋಧಿಸಾಗಲು ಮುಂದಿನ ವ್ಯಾಖ್ಯಾನದ ವೇಳೆ 1929 ರಲ್ಲಿ ಸೈಮನ್ ಕಮಿಶನ್ ಬಂದಿತು ಇದರ ರಿಪೋರ್ಟಿನಲ್ಲಿರುವದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಈ ರಿಪೋರ್ಟಿನಲ್ಲಿರುವ ರಿಯಾಯಿತಿಗಳಲ್ಲದೆ ಲೇಶ ಮಾತ್ರವೂ ಹೆಚ್ಚಿಗೆ ದೊರೆಯದು. ಕೆಲವರು ಇಂಗ್ಲೆಂಡಿನಲ್ಲಿ ರಾವ್ಸ್ ಮೆಕ್ಡೊನಾಲ್ಡರು ಆಡಿದ ವ್ಯಾಖ್ಯಾನದ ಮೇಲೆ ಭರವಸೆ ಇಡುವರು. ಆದರೆ ಇಂಥಹ ವ್ಯಾಖ್ಯಾನಗಳು ಎಷ್ಟೋ ಆಗಿವೆ ಇವು ನಮಗೆ ಕೊಟ್ಟದ್ದು ತಿಳಿದದ್ದಾಗಿದೆ. ಇಷ್ಟರ ವರೆಗೆ ನಮಗೆ ಸಿಕ್ಕಿದು ಬರೇ ಮುನಿಸಿಪಾಲಿಟಿ ಆಡಳಿತ, ಪಂಚಾಯಿತ ಕೋರ್ಟು ಮತ್ತು ಡಿಸ್ಟ್ರಿಕ್ಟ ಬೋರ್ಡು (ಇದರಲ್ಲಿಯೂ ಹೆಚ್ಚಿನ ಸ್ವಾತಂತ್ರ್ಯ ಇಲ್ಲ)ಗಳು ಇವು ನಮಗೆ ಸ್ವಾತಂತ್ರ್ಯಗಳೋ? ಎಂದಿಗೂ ಅಲ್ಲ. ಇದು ಬ್ರಿಟಿಷರು ಹೇಳುವ ಮೇರೆ ಸ್ವಾತಂತ್ರ್ಯವನ್ನು ಪಡೆಯುವ ಹಾದಿಯು ಸಹ ಅಲ್ಲ. ಇವರು ನಮ್ಮನ್ನು ಸ್ವಾತಂತ್ರ್ಯವಾಗಿ ಆಳುವದಕ್ಕೆ ತರಬೇತು ಮಾಡುವದೆಂಬುದು ಬರೇ ಹುಚ್ಚು! ಇವು ನಮ್ಮನ್ನು ಸದಾ ಆಳುವ ಮಾಯೋಪಾಯಗಳು. ಇದು ಒಬ್ಬನನ್ನು ನೀರಿಗೆ ಬಿಡದೆ ಈಜು ಕಲಿಸಿದ ಹಾಗೆ ನಮಗೆ ಜವಾಬ್ದಾರಿಯನ್ನು ಕೊಡದೆ ಸ್ವತಂತ್ರರಾಗಿರಲು ಕಲಿಸಿಕೊಡುವದು!

ಆದರೆ ಕೆಲವರು ಇದೆಲ್ಲ ಬರೇ ನಿಸ್ಸಾರವಾದ ಆರೋಪಣೆಗಳೆಂದು ಉಲ್ಲಂಘಿಸಬಹುದು. ಆದರೆ ಸತ್ಯವು ಸುಳ್ಳಾಗಲಿಕ್ಕಿಲ್ಲ. ಲೋಕವು ಸತ್ಯಾಸತ್ಯಗಳನ್ನು ಆಗಲೇ ತಿಳಿದಿದೆ. ಇದರ ವಿಷಯ ಹೆಚ್ಚಿನ ವಿವರಣೆ ಬೇಡ. ಆದರೆ ಕೆಲವರು 'ಕೊಂಚವು ಏನೂ ಇಲ್ಲದಕ್ಕಿಂತ ಮೇಲು' (Something is better than nothing) ಎಂಬದಾಗಿ ವಾದಿಸುವರು. ಲೊತಿಯನ ಕಮಿಟಿಯು ಚುನಾಯಿಸುವ ಹಕ್ಕನ್ನು ವಿಸ್ತರಿಸಿದೆ. ಪ್ರಾಂತ್ಯಗಳಲ್ಲಿ ಜವಾಬ್ದಾರಿಕೆಯೂ ಇದೆ. ಈ ಸುಸಮಯವನ್ನು ಕಳಕೊಂಡರೆ ಇದ್ದದ್ದೂ ಇಲ್ಲದಾಗುವದು. ಎಂದು ಸಹ ತರ್ಕಿಸುತ್ತಿರುವರು. ಇವರಿಗೆ ವಿಚಾರವಿಹೀನರೆಂದಲ್ಲದೆ ಮತ್ತೇನು ಹೇಳಲಾಗುವದಿಲ್ಲ. ಪ್ರಾಂತ್ಯಗಳು ಅಡಗಿರುವ ಕೇಂದ್ರದಲ್ಲಿ ಒಬ್ಬನ ಕೈಯ್ಯಲ್ಲಿ ಇಡೀ ದೇಶವನ್ನು ಧಿಕ್ಕರಿಸುವ ಅಧಿಕಾರವಿದೆ. ಸಾರ್ವತ್ರಿಕ ಚುನಾವಣೆಯನ್ನು ಕೊಡದೆ ದೇಶದಲ್ಲಿ ಪಂಗಡದ್ವೇಷವನ್ನು ಹೆಚ್ಚಿಸುವ ಕೋಮುವಾರು ಚುನಾವಣೆಯನ್ನು ಕೊಡಲು ಸಿದ್ಧರಾಗಿದ್ದಾರೆ (ಇದರ ವಿಷಯ ಇನ್ನೂ ತೀರ್ಮಾನವಾಗಲಿಲ್ಲ ಆದರೆ ಕೋಮುವಾರು ಚುನಾವಣೆಯೇ ಸಿಕ್ಕುವದೆಂಬುವದು ನಿರ್ಧಾರ) ಈ ಪ್ರಕಾರ ನಮ್ಮಲ್ಲಿ ಐಕಮತ್ಯವೇ ಇಲ್ಲದಿರುವಾಗ ಸ್ವಾತಂತ್ರ್ಯವೆಲ್ಲಿಯದು. ಈ ರಿಯಾಯಿತಿಗಳ ವಿಷಯ ಇಷ್ಟರ ವರೆಗೆ ಸಹಾಕಾರ ತತ್ವದಲ್ಲಿದ್ದ ಲಿಬರಲ್‌ಗಳು ಸಹ ನಿರಾಶರಾಗಿ ಈ ರಿಯಾಯಿತಿಗಳು ಹಿಂದೂದೇಶಕ್ಕೆ ಸಮಾಧಾನವನ್ನು ತರುವದಿಲ್ಲವೆಂದು ಬಹಿರಂಗವಾಗಿ ತಮ್ಮ ಅಭಿಪ್ರಾಯಗಳನ್ನು ಉತ್ಸಾಹದಿಂದ ತೋರಬಿಡಿಸುತ್ತಿರುವರು. ಈ ರೀತಿಯಲ್ಲಿರುವಾಗ ಅಲ್ಲಲ್ಲಿ ಇನ್ನೂ ಈ ಪೊಳ್ಳು ಭರವಸೆಯನ್ನಿಟ್ಟು ತರ್ಕಿಸುತ್ತಿರುವವರು ಮೋಡರೇಟುಗಳೋ? ಲಿಬರಲ್‌ಗಳೋ? ಸದ್ಯಕ್ಕೆ ಇವೆಂಥೂ ಅಲ್ಲ! ಅಂತು ಇಂತು ಶಾಂತಿ ಮಕ್ಕಳಿಗೆ ರಾಜ್ಯವಿಲ್ಲ! ಆದ್ದರಿಂದ ಪೂರ್ಣ ಜವಾಬ್ದಾರಿಕೆಯೇ ಆಗಕ್ಕೆ ಪ್ರಯತ್ನವನ್ನು ಸಾಧಿಸುವದೇ ಕರ್ತವ್ಯ.

ಪೊಣಚ್ಚ.

ಇಂಡಿಯಾ ಎಕ್ವಿಟೇಬಲ್ ಕಂಪೆನಿ ಲಿಮಿಟೆಡ್

(ಸ್ಥಾಪಿಸಲ್ಪಟ್ಟದ್ದು 1908.)

ಪೋಲಿಸಿಗಳು ಕಳಕೊಳ್ಳುವಂಥವುಗಳಲ್ಲ

ಯಾವ ತಡೆಯೂ ಇಲ್ಲದೆ ಪ್ರತಿ ವರ್ಷವು ಬೋನಸ್ಸು.

ಹಕ್ಕು ಬಾಧ್ಯಸ್ಥರಿಗೆ ಸರಿಯಾಗಿ ಹಣ ಕೊಡಲ್ಪಡುವದು ಇಲ್ಲದಿದ್ದರೆ ಬಡಿಯು ದೊರಕುವುದು.

ಹೆಡ್ಡ ಆಫೀಸು:—

102. ಕ್ಲೈವ್ ಸ್ಟ್ರೀಟ್, ಕಲ್ಕತ್ತಾ.

I. E., C. P. S. 12—6

ಕರಸಲೊಪ್ಪಲಾದ
ಕುಟುಂಬದುದ್ಧರ
'ರ ಅಂತರಾತ್ಮ
ದೇಶವಕ ಪ
ವನ್ನೊಂದು ವ
ರದು. ಎ
ಕೊಡ ಬೇ
ತವರ ಸ್ಟ್
ನೆ.



ಕಾರ್ಡು ಬರೆದರೆ ಈಗಿನ ಕ್ಯಾಟಲಾಗು ಪುಕ್ಕಟೆಯಾಗಿ ಕಳುಹಿಸಲ್ಪಡುವುದು.

ಕೋವಿಗಳು, ಕತ್ತಿಗಳು, ಬಚೀಗಳು, ಕೋಟೆಗಳು, ಕೀಪ್ಪುಗಳು, ಮದ್ದು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS,

Largest Importers of Firearms and Ammunition

Cheapest priced firm in India,

24—17 210 Abdul Rehiman Street, BOMBAY.

ಎಂ. ಎಸ್. ಶಿದ್ದಪ್ಪ ಬ್ರದರ್ಸ್

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

1. ಉತ್ತಮ ತರಹ ಒಂದು ಸೆಟ್ ಜರ್ಮನ್ ರೀಡ್ಸ್ ಹಾಕಿರುವ ಸಿಂಗಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 20—0—0
   „ ಮತ್ತು 22—8—0
2. ಡಿಟ್ಟೋ ಉತ್ತಮ ತರಹ ಹಾರ್ಮೋನಿಯಂ
   „ 1ಕ್ಕೆ ರೂ. 25—0—0
   „ ಮತ್ತು 27—8—0
3. ಡಿಟ್ಟೋ ಉತ್ತಮ ತರಹದ್ದು, ದೂಳು ಬೀಳದಂತೆ ಕೇಸಿನ ಮೇಲೆ ಪೂರ್ತಿ ಮುಚ್ಚಳವುಳ್ಳ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ ರೂ. 27—8—0
4. ಬಾಳಿಕೆಯೂ, ಬಂದೋಬಸ್ತೂ, ಸುಸ್ವರವುಳ್ಳದ್ದೂ, ಅನೇಕ ವರ್ಷಗಳ ವರೆಗೆ ಬಾಳಿಕೆ ಬರತಕ್ಕದ್ದೂ ಆದ ಹೊಸದಾಗಿ ಸೃಷ್ಟಿ ಆಗಿರುವ ಫ್ರೆಂಚ್ ರೀಡ್ಸ್ ನಮೂನೆ ಇರುವ ನಮ್ಮ ಹೆಸರಿನ ರೀಡ್ಸ್ ಹಾಕಿರುವ "ಸಿದ್ದಪ್ಪಾಸ್ ಫ್ಲೂಟ್" ಸಿಂಗಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 42—8—0
5. ಉತ್ತಮ ತರಹ 2 ಸೆಟ್ ಜರ್ಮನ್ ರೀಡ್ಸ್ ಹಾಕಿರುವ, ದೂಳು ಬೀಳದಂತೆ ಕೇಸಿನ ಮೇಲೆ ಪೂರ್ತಿ ಮುಚ್ಚಳವುಳ್ಳ ಡಬ್ಬಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ ರೂ. 37—8—0
   ಉತ್ತಮ ತರಹ 2 ಸೆಟ್ ಜರ್ಮನ್ ಮೇಕ್ ರೀಡ್ಸ್ ಹಾಕಿರುವ, ಕೈನಿಂದಾಗಲೀ ಅಥವಾ ಕಾಲಿನಿಂದಾಗಲೀ ಬಾರಿಸಲು ಅನುಕೂಲಿಸುವಂತೆ ತಯಾರಿಸಿರುವ "ಸ್ಪೆಶಲ್ ಫ್ಲೂಟ್" ಡಬ್ಬಲ್ ರೀಡ್ಸ್ ಹ್ಯಾಂಡ್ ಲೆಗ್ ಹಾರ್ಮೋನಿಯಂ 1ಕ್ಕೆ ರೂ. 73—8—

ನಮ್ಮ ಟಿಂಬರ್ ಡಿಪೋನಲ್ಲಿ ಕಟ್ಟಡಗಳಿಗೂ, ಫರ್ನಿಚರ್ ತಯಾರಿಸಲೂ ಬೇಕಾದ ಎಲ್ಲಾ ನಮೂನೆ ನಾಟಾಗಳನ್ನು ಸುಲಭ ದರದಿಂದ ಬಿಕರಿಗಿಟ್ಟಿರುವುದಲ್ಲದೇ, ಗಿರಾಕಿಗಳು ಅಪೇಕ್ಷಿಸುವ ಸೈಜಿಗೆ ಕುಯಿಸಿಯೂ ರಿಯಾಯಿತಿ ದರದಿಂದ ಸಪ್ಲೈ ಮಾಡುತ್ತೇವೆ. ಹೆಚ್ಚಿಗೆ ವಿಷಯಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಳಾಸ:—ಎಂ. ಎಸ್. ಶಿದ್ದಪ್ಪ ಬ್ರದರ್ಸ್,

ಹಾರ್ಮೋನಿಯಂ ಮತ್ತು ಟಿಂಬರ್ ವ್ಯಾಪಾರಿಗಳು,

ವಾಣಿವಿಲಾಸ ಮಾರ್ಕೆಟ್, ಮೈಸೂರು.

22—1

ಮೀಟಿಂಗಿನ ಪ್ರಾರಂಭದಲ್ಲಿ ಅಧ್ಯಕ್ಷರು ಮೀಟಿಂಗಿನ ಉದ್ದೇಶ್ಯ ವಿವರಿಸಿ ಹೇಳಿದರು. ಮೆ. ಪಟ್ಟಮಾಡ ಕಾಂಞಪ್ಪನವರು—ಕೊಡಗು ಕೊಡಗಿನ ಮೂಲ ನಿವಾಸಿಗಳ ಇರಾದೆ ಮೀರಿ ಆಡಳಿತ ನಡಿಸಬೇಕೆಂತ ಇಂಗ್ಲಿಷ್ ಸರ್ಕಾರಕ್ಕೆ ಬಿಟ್ಟದೆಂತಲೂ, ಇದನ್ನು ಈಗ ಮದ್ರಾಸಿಗೆ ಸೇರಿಸಿದರೆ ಮೂಲ ನಿವಾಸಿಗಳ ಅಭಿವೃದ್ಧಿಗೂ ಮತ್ತು ದೇಶದ ಹೆಸರಿಗೂ ಕುಂದಕ ಬರುವದೆಂತಲೂ, ಮದ್ರಾಸಿಗೆ ಸೇರಿಸಿದರೆ ಕೆಲವು ಮಟ್ಟಿಗೆ ಅಭಿವೃದ್ಧಿ ಕಾಣಬಹುದೆಂತಲೂ, ಆದರೆ ತೆರಿಗೆಯ ಕಂದಾಯ ಮಾತ್ರ ರೈತರ ಮೇಲೆ ಹಾಕಲ್ಪಡುವದೆಂತಲೂ, ಈ ಮೊದಲು ಇದ್ದ ಹಕ್ಕು ಬಾಧ್ಯತೆಗಳು ಎಲ್ಲವೂ ಒಂದೊಂದಾಗಿ ನಾವು ಈ ಒಂದು ಶತಮಾನದಲ್ಲಿ ಕಳಕೊಂಡಿದ್ದೇವೆಯೆಂತಲೂ, ಇನ್ನು ಮುಂದೆ ಸೇರಿದರೆ ನಮ್ಮ ಹಕ್ಕು ಬಾಧ್ಯತೆಗಳು ಉಳಿಯಲಾರವೆಂತಲೂ ನಮ್ಮ ದೇಶದ ಹವಗುಣ ಮತ್ತು ಆಚಾರ ಪದ್ಧತಿ ವಗೈರೆಗೆ ಕುಂದುಕ ಬರುವದೆಂತಲೂ, ಈ ಮೊದಲೇ ವಿಚಾರಿಸಿ ನಮ್ಮ ಪೂರ್ವಿಕರು ದೇಶವು ಪ್ರತ್ಯೇಕವಾಗಿರಬೇಕೆಂತ ಮಾಡಿದ್ದಾಗಿದೆಯೆಂತಲೂ, ಉಳಿಕೆ ಹಣವನ್ನು ಸರ್ಕಾರವು ಇಟ್ಟುಕೊಂಡು ಇದರ ಯಾವ ಹಕ್ಕು ಪ್ರಜೆಗಳಿಗೆ ಇಲ್ಲದ ಕಾರಣ ಹೆಚ್ಚಿನ ಸುಧಾರಣೆ ಮತ್ತು ಅಭಿವೃದ್ಧಿ ಮದ್ರಾಸಿಗೆ ಸೇರಿಸಿದರೆ ಆಗಬೇಕೆಂತ ಮಾತ್ರ ಈ ಮೊದಲಿನ ಚಳವಳದಲ್ಲು ಕೇಳಿದಲ್ಲದೆ ಖಂಡಿತವಾಗಿಯೂ ಸೇರಬೇಕೆಂತ ಚಳವಳ ಎಬ್ಬಿಸಿದಲ್ಲವೆಂತಲೂ, ಆದರ ಪ್ರತಿಫಲವಾಗಿ ಒಂದು ನಿಪ ಮತ್ತಕ್ಕೆ ಕಾರುವ ಕೌನ್ಸಿಲ್ ಕೊಟ್ಟದಾಗಿದೆಯೆಂತಲೂ, ಅಂಥಾ ಕೌನ್ಸಿಲಿನಲ್ಲಿ ದರೂ ನಮ್ಮ ಮೆಂಬರುಗಳು ನ್ಯಾಯವಾಗಿ ಕೆಲಸ ಮಾಡಿದರೂ ದೇಶಕ್ಕೆ ಹಿತಕರವಾಗಿ ಸರ್ಕಾರವು ರಿಯಾಯಿತಿ ಕೊಡುವುದಿಲ್ಲವಾಗಿಯೂ ಪೂರ್ಣ ಜವಾಬ್ದಾರಿ ಸರ್ಕಾರ ದೊರೆತರೆ ನಮ್ಮ ದೇಶದ ಉತ್ಪತ್ತಿಗೆ ಸರಿಯಾಗಿ ಸರ್ಕಾರ ನಡಿಸಲು ಸಾಧ್ಯವಿದೆಂತಲೂ, ಕೊಡದಿದ್ದರೆ ಮದ್ರಾಸಿಗೆ ಒಂದು ಶೆಡ್ಯೂಲ್ ಜಿಲ್ಲೆಯಾಗಿ ಸೇರಿಸಬೇಕೆಂತಲೂ ಹೇಳಿದರು.

ಮೆ. ಮಂಜರಾಂಡಿರ ದೇವಯ್ಯನವರು—1834ನೇ ಇಸವಿಯಲ್ಲಿ ದೇಶೀಯರ ಸ್ವ ಇಚ್ಛೆಗೆ ಸರಿಯಾಗಿ ಸರ್ಕಾರ ನಡಿಸಬೇಕೆಂತ ಕಂಪನಿ ಸರ್ಕಾರಕ್ಕೆ ದೇಶದ ಆಡಳಿತವನ್ನು ಬಿಟ್ಟದಾಗಿದೆಯಾಗಿಯೂ, ಅದಕ್ಕೆ ಕಂಪನಿ ಸರ್ಕಾರವು ಒಪ್ಪಿದೆಯಾಗಿಯೂ ಇಂದಿನ ದಿನ ಮೂಲ ನಿವಾಸಿಗಳ ಇರಾದೆ ಮಾತ್ರ ಕೇಳದೆ ಕೋಯಮುತ್ತೂರು ಇರಾದೆ ಕೇಳುವದು ಸರ್ಕಾರದ ಬಾಬಿನಲ್ಲಿ ಸರಿ ಇಲ್ಲವೆಂತಲೂ, ದೇಶೀಯರ ಹಕ್ಕು ಬಾಧ್ಯತೆಗಳು ಅವರಲ್ಲೇ ಉಳಿದಿದೆಯಲ್ಲದೆ ಅಂಥಾ ಹಕ್ಕು ಬಾಧ್ಯತೆಗಳನ್ನು ಈಚೆಗೆ ಬಂದ ನಿವಾಸಿಗಳಿಗೆ ಕೊಡಲಿಲ್ಲವೆಂತಲೂ, ಕೊಟ್ಟ ಹಕ್ಕು ಬಾಧ್ಯತೆಯು ಪಾರಂಪರ್ಯವಾಗಿರಬೇಕೆಂತ ಇದ್ದಲ್ಲಿ ದೇಶವು ಪ್ರತ್ಯೇಕವಾಗಿರಬೇಕೆಂತ ಅರ್ಥವಾಗುವುದಾಗಿಯೂ, ವಿದ್ಯೆ, ವ್ಯಾಪಾರ ಮತ್ತು ಸರ್ಕಾರ ನೌಕರಿಯಲ್ಲಿ ದೇಶವು ಮುಂದಕ್ಕೆ ಬರಬಹುದಾಗಿ ಕೆಲವರ ಅಭಿಪ್ರಾಯ ಇರಬಹುದಾಗಿಯೂ, ಆದರೆ ನಮ್ಮ ದೇಶದಲ್ಲು ಮಾತ್ರ ವಿದ್ಯಾವಂತರು, ಬೇರೆ ದೇಶದಲ್ಲು ಇಲ್ಲವೆಂತ ಭಾವಿಸುವದು ತಪ್ಪೆಂತಲೂ, ವಿದ್ಯೆಯು ನೌಕರಿಗಾಗಿ ಮಾತ್ರ ಸರ್ಕಾರವು ಕಲಿಸುವದೆಂತ ತಪ್ಪು ಅಭಿಪ್ರಾಯ ಜನರು ಮಾಡಿಕೊಳ್ಳುವದು ಪೂರಾ ತಪ್ಪೆಂತಲೂ, ಬೆಳೆದ ದವಸ ಧಾನ್ಯಗಳು ಗಾಡಿಯಲ್ಲು ಸಹಾ ಸಾಗಿಸಲಿಕ್ಕಿಲ್ಲದ ಈ ದೇಶಕ್ಕೆ ರೈಲ್ ಬಂದು ವ್ಯಾಪಾರ ಹೆಚ್ಚಾಗಬಹುದೆಂಬುದು ಸಹ ತಪ್ಪು ಅಭಿಪ್ರಾಯವೆಂತಲೂ, ಅದರ ಫಲಿಗೆ ಕಾಡಿನ ಮರಗಳು ಕಡಿಮೆಯಾಗಿ ವ್ಯವಸಾಯಕ್ಕೆ ಕುಂದುಕ. ಜನರ ಆಚಾರ ವಿಚಾರಗಳಿಗೆ ಕುಂದುಕ ಬರಬಹುದೆಂತಲೂ, ಕೊಡಗಿನಲ್ಲಿ ಹೊಟ್ಟೆಗೆ ಅನ್ನವಿಲ್ಲದೆ ಸತ್ತವರು ಯಾರೂ ಇರಲಿಕ್ಕಿಲ್ಲವೆಂತಲೂ, ಇತರ ದೇಶಗಳಲ್ಲು ಲಕ್ಷ ಕೋಟಿ ಧನಿಕರು ಮಾತ್ರ ಇರಬಹುದಾಗಿಯೂ, ಇಲ್ಲಿ ಜಮ್ಮ ಸಾಗುವಳಿದಾರರಾದರೂ ತಕ್ಕ ಮಟ್ಟಿಗೆ ಸ್ವತಂತ್ರರಾಗಿದ್ದಾರೆಂತಲೂ ಮತ್ತು ಇತರ ದೇಶಕ್ಕಿಂತ ಅನ್ಯೋನ್ಯ ವಿಶ್ವಾಸದಲ್ಲು ಇದ್ದಾರೆಂತಲೂ, ಕೋರ್ಟು ಕಾನೂನುಗಳು ಸಹ ದೇಶಕ್ಕೆ ಹಿತವಾಗಿ ಸಾಲಗಾರರ ಕುಳವು ಹಳದ ರೀತಿಯಲ್ಲಿ ಇದೆಯೆಂತಲೂ, ಅಂಥಾ ವಗೈರೆ ಅನಾಚಾರಗಳು ಇತರ ದೇಶಕ್ಕೆ ಹೋಲಿಸಿದರೆ ಇಲ್ಲವೆಂತಲೂ, ಆದ್ದರಿಂದ ದೇಶವು ಪ್ರತ್ಯೇಕವಾಗಿರಬೇಕೆಂತಲೂ, ಎಲ್ಲಾ ಪ್ರಾಂತ್ಯಗಳಿಗೆ ಸಿಕ್ಕುವ ಮಾರ್ಪಾಡುಗಳು ಸಿಕ್ಕಿದರೆ ಇರುವ ಹುಟ್ಟುವಳಿಯಿಂದ ಸರ್ಕಾರ ನಡಿಸಲು ಸಾಧ್ಯವಿದೆಯೆಂತಲೂ, ಸುಧಾರಣೆ ಕೊಡದೆ ಇದ್ದಲ್ಲಿ ಮದ್ರಾಸಿನ ಒಂದು ಶೆಡ್ಯೂಲ್ ಜಿಲ್ಲೆಯಾಗಿ ಇರಬೇಕೆಂತಲೂ ಮಾತಾಡಿದರು.

ಮೆ. ಅಳುಮಂಡ ಪೊನ್ನಪ್ಪನವರು ಇಲ್ಲಿಯ ಕೌನ್ಸಿಲಿನಿಂದ ಯಾವ ಪ್ರಯೋಜನವೂ ಇಲ್ಲವೆಂತಲೂ, ರೈತರಿಗೆ ಕೃಷಿಯ ಸುಧಾರಣೆ ಸಿಕ್ಕುವದಿಲ್ಲವಾಗಿಯೂ, ಉದ್ಯೋಗಸ್ಥರು ಒಂದೇ ಕಡೆಯಲ್ಲಿ ಇರಬೇಕಾಗಿಯೂ ಈಗ ತಾನೇ ನಮ್ಮ ಅನೇಕ ಯುವಕರು ಬೇರೆ ದೇಶಗಳಿಗೆ ಹೋಗಿ ಕೆಲಸ ಮಾಡುತ್ತಾರಾಗಿಯೂ ಆದ್ದರಿಂದ ಮದ್ರಾಸಿಗೆ ಸೇರಿದರೆ ನಮ್ಮ ಅನೇಕ ಯುವಕರಿಗೆ ಉದ್ಯೋಗ ಸಿಕ್ಕಬಹುದಾಗಿಯೂ, ಮತ್ತು ವಿದ್ಯೆ ವ್ಯಾಪಾರ ಹೆಚ್ಚಾಗಬಹುದೆಂತಲೂ ಮಾತಾಡಿದರು

ಮೆ. ಬಿದ್ದಂಡ ಉತ್ತಯ್ಯನವರು—ಸರ್ಕಾರಿ ನೌಕರಿಗಾಗಿ ದೇಶವನ್ನು ಮದ್ರಾಸಿಗೆ ಕೂಡಿಸುವದು ಪೂರಾ ತಪ್ಪೆಂತಲೂ ಒಂದು ಶತಮಾನದ ನಾಗರೀಕತೆಯುಳ್ಳ ಇಂದು ಯಾವತ್ತೂ ಇಲ್ಲದ ಒಡೆಯನ ಜನರಿಗೆ ಬಂದಿದೆಯೆಂತಲೂ ನೌಕರಿಗೋಸ್ಕರ ವಿದ್ಯೆ ಕಲಿಯುವದು ಅಲ್ಲ, ಅದಕ್ಕಾಗಿ ಇಲ್ಲಿ ಕಾಲೇಜು ಇಡಬೇಕೆಂತ ಕೇಳುವದು ತಪ್ಪು ಎಂತಲೂ, ವರ್ಷಕ್ಕೆ ಹತ್ತು ಮಂದಿ ಉಚ್ಚ ವಿದ್ಯೆಯಲ್ಲು ತೇರ್ಗಡೆ ಹೊಂದಬಹುದು. ಆದರೆ ಅವರಿಗಾಗಿ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಕಾಲೇಜು ಮಾಡುವುದಾದರೆ ಮದ್ರಾಸು ಸರ್ಕಾರವು ಸುಮ್ಮನೆ ಧರ್ಮಕ್ಕೆ ಹಣ ಕೊಡಲಾರದೆಂತಲೂ, ರೈತರು ತೆರಬೇಕೆಂತಲೂ, ಈಗಿನ ದೇಶದ ಸರ್ಕಾರದ ಹುಟ್ಟುವಳಿಯಲ್ಲು ಸೆ ಧಾರಣೆ ಸಿಕ್ಕಿದರೆ ಸರ್ಕಾರ ನಡಿಸಬಹುದೆಂತಲೂ, ಕೊಡಗು ಪ್ರತ್ಯೇಕವಾಗಿರಬೇಕೆಂತಲೂ ಮಾತಾಡಿದರು. ಇನ್ನು ಕೆಲವು ಮೆಂಬರುಗಳು ಮಾತಾಡಿದನಂತರ ಒಟಿಗೆ ಹಾಕಲಾಗಿ, ಕೊಡಗು ಪ್ರತ್ಯೇಕವಾಗಿರಬೇಕೆಂತಲೂ, ಪೂರ್ಣ ಜವಾಬ್ದಾರಿ ಸರ್ಕಾರದಿಂದ ಆಡಳಿತ ನಡಿಸಲು ಸಾಧ್ಯವಿದೆಯೆಂತಲೂ ಸೆ ಧಾರಣೆ ಕೊಡದಿದ್ದಾಗ ಮದ್ರಾಸಿಗೆ ಶೆಡ್ಯೂಲ್ ಜಿಲ್ಲೆಯಾಗಿ ಮಾಡಬೇಕೆಂತಲೂ ಬಹುಮತದಿಂದ ತೀರ್ಮಾನ ಮಾಡಲಾಯಿತು. ಮತ್ತು ಇದರ ಸಾರಾಂಶವನ್ನು ಒಂದು ಕೊಡಗು ಕಮಿಶನರಿಗೆ ಸಕ್ಕೊಂದು ಕೊಡವ ಸಭೆಗೆ ಕಳುಹಿಸಬೇಕೆಂತಲೂ ಸಹ ತೀರ್ಮಾನ ಮಾಡಲಾಯಿತು.

ಕೆ. ಮಾದಪ್ಪ,
(ಜೇರ್‌ಮ್ಯಾನ್)

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಮುಂದಿನ ರಿಯಾಯಿತಿಗಳು.

ಅಯ್ಯಾ,

ಹಿಂದೂಸ್ಥಾನಕ್ಕೆ ಈಗ ಸದ್ಯಕ್ಕೆ ಸಿಕ್ಕಲಿಕ್ಕಿರುವ ಮಾರ್ಪಾಟುಗಳ (Reforms) ವಿಷಯ ಅಲ್ಲಲ್ಲಿ ಅನೇಕ ತರದ ಅಭಿಪ್ರಾಯಗಳು ಹೊರಬಿದ್ದಿವೆ. ಕೆಲವರು (ರಾ. ಬಾ. ಪಟ್ಟಮಾಡ ದೇವಯ್ಯನವರು ನಾವೋಕ್ತನಲ್ಲಿ ಅಭಿಪ್ರಾಯ ಪಟ್ಟಮೇರೆ ಒಂದೇ ಸಾರಿ ಆಕಾಶಕ್ಕೆ ಹಾರಲು ಪ್ರಯತ್ನಿಸಬಾರದು ಮೆಲ್ಲ ಮೆಲ್ಲನೆ ಮೆಟ್ಟಲು ಹತ್ತಿಕೊಂಡು ಹೋಗಬೇಕು.) ಕ್ರಮ ಕ್ರಮವಾಗಿ ಸಿಕ್ಕುವುದನ್ನು ತೆಗೆದುಕೊಂಡು ಅದರ ಮುಖಾಂತರ ಮುಂದಿನ ಜವಾಬ್ದಾರಿ ಆಡಳಿತಕ್ಕೆ ಹೋರಾಡಬೇಕೆಂದು ಅಭಿಪ್ರಾಯ ಪಡುವರು. ಆದರೆ ಇನ್ನು ಕೆಲವರು ಪೂರ್ಣ ಜವಾಬ್ದಾರಿಕೆಯು ಸಿಕ್ಕದೆ ಬೇರೆ ಯಾವ ತರಹದ ಮಾರ್ಪಾಟುಗಳನ್ನು ಸ್ವೀಕರಿಸುವುದಿಲ್ಲವೆಂದು ವಾದಿಸುತ್ತಲಿರುವರು. ಮಿಕ್ಕುಳಿದ ಕೆಲವರು ಸಮಯೋಚಿತವಾದ ಅಭಿಪ್ರಾಯಗಳನ್ನೀಯುವರು. ಯಾವದಕ್ಕೂ ನಮಗೆ ಈ ವರೆಗೆ ಸಿಕ್ಕಿದ ಮಾರ್ಪಾಟುಗಳನ್ನು ಪರಿಶೀಲಿಸಿದರೆ ಮುಂದಕ್ಕಿರುವದು ಹ್ಯಾಗಿರುವದೆಂಬದನ್ನು ಸಾಧಾರಣವಾಗಿ ತಿಳಿಯಬಹುದು.

1858ನೇ ಇಸವಿಯಿಂದ ಅಂದರೆ ಸಿಪಾಯಿ ದಂಗೆಯೂ ದಂದಿನಿಂದ ಇಂದಿನ ವರೆಗೆ ಹಿಂದೂಸ್ಥಾನಕ್ಕೆ ಅನೇಕಾ ವೃತ್ತಿ ಮಾರ್ಪಾಟುಗಳನ್ನು ಕೊಡುತ್ತೇವೆಂದು ಅನೇಕ ಕಮಿಷನ್‌ಗಳೂ, ಕಮಿಟಿಗಳೂ ಬಂದು ಇಲ್ಲಿಯ ಸ್ಥಿತಿಗತಿಗಳನ್ನು ವಿಚಾರಿಸಿ ಹಿಂತಿರುಗಿದವು. ಆದರೆ ಅವಶ್ಯಕವಾದ ಇಲ್ಲವೇ ಪ್ರಯೋಜನಕಾರಿಯಾದ ಯಾವದೊಂದು ಮಾರ್ಪಾಟುಗಳು ನಮಗೆ ಸಿಕ್ಕಲಿಲ್ಲವು.

ಇವುಗಳಲ್ಲಿ ಮುಖ್ಯವಾದ ಮಾರ್ಪಾಟುಗಳ ಸ್ಮೃತಿ 1909 ನೇ ಇಸವಿಯ ಮಿಂಟೋ ಮೊರ್ಲೆ ಮಾರ್ಪಾಟುಗಳು. ಬಂಗಾಳ ಪ್ರತ್ಯೇಕವಾದಂದಿನಿಂದ (1905) ಬಂಗಾಳದಲ್ಲಿ ಕೊಂಚ ಅಸಮಾಧಾನವಿತ್ತು. ರಾಜಕೀಯ ಚಳವಳವು ಮೆಲ್ಲನೆ ಹೊರಬಂದುವು. ಈ ಚಳವಳವು ಕ್ರಮವಾಗಿ ಉತ್ತರ ಹಿಂದೂಸ್ಥಾನದಲ್ಲಿ ಹಬ್ಬಿ ಅನೇಕ ಸಂಸ್ಥೆಗಳು ಮೆಲ್ಲನೆ ಸ್ವಾತಂತ್ರ್ಯತೆಯನ್ನು ಕೇಳತೊಡಗಿದರು. ಈ ಚಳವಳವು ಬಂಗಾಳದಲ್ಲಲ್ಲದೆ ಇತರ ಪ್ರಾಂತ್ಯಗಳಲ್ಲಿ ಸಾಧಾರಣ ತರಹದ್ದಾದರೂ ಇಡೀ ಹಿಂದೂಸ್ಥಾನವನ್ನೇ ಆವರಿಸುವ ಚಿಹ್ನೆಗಳು ತೋರಿಬಂದವು. ಕೂಡಲೇ 1907ರಲ್ಲಿ ಹಿಂದೂಸ್ಥಾನದ ಸೆಕ್ರೆಟರಿ ಆಫ್ ಸ್ಟೇಟರಾದ ಲಾರ್ಡ್ ಮಿಂಟೋರವರು ಪಾರ್ಲಿಮೆಂಟಿನಲ್ಲಿ ಹಿಂದೂಸ್ಥಾನಕ್ಕೆ ಕೆಲವು ಮಾರ್ಪಾಟುಗಳನ್ನು ಕೊಡುವಂತೆ ವಾಗ್ದಾನ ಮಾಡಿ ಅವರು ಹಿಂದೂಸ್ಥಾನದ ಆಗಿನ ವೈಸರಾಯರಾದ ಲಾರ್ಡ್ ಮೊರ್ಲೆಯವರೊಡನೆ ಹಿಂದೂಸ್ಥಾನದಲ್ಲಿಯ ಆಗಿನ ಸ್ಥಿತಿಗತಿಗಳನ್ನು ಪರಿಶೀಲಿಸಿ 1909ರಲ್ಲಿ ಆ ಮಾರ್ಪಾಟುಗಳನ್ನು ಇಲ್ಲಿಗೆ ತಂದರು.

ಇದರಲ್ಲಿ ಅಡಗಿದ ಮುಖ್ಯ ಅಂಶಗಳ್ಯಾವವೆಂದರೆ.—ಹಿಂದೂಸ್ಥಾನಕ್ಕೆ ಪ್ರಾಂತೀಕ ಕೌನ್ಸಿಲುಗಳು ಮತ್ತು ಕೇಂದ್ರದಲ್ಲಿ ಎಸೆಂಬ್ಲಿಗಳೂ ಕೊಡಲ್ಪಟ್ಟವು. ಈ ಪ್ರಕಾರ ಅವರು ಹೇಳುವ ಮೇರೆ ನಮಗೆ ಜವಾಬ್ದಾರಿ ಆಡಳಿತ (Parlimentary Rule) ವನ್ನು ಕೊಟ್ಟರು. ಆದರೆ ಇವುಗಳಲ್ಲಿ ಯಾವ ವಿಧವಾದ ಜವಾಬ್ದಾರಿಕೆಯೂ ಇರಲಿಲ್ಲ. ಇವು ಒಟ್ಟು ಬ್ರಿಟಿಷ್ ಪಾರ್ಲಿಮೆಂಟಿನ ಮುಖಂಡರು ಹೇಳಿದ ಮೇರೆ ಒರೇ ಪ್ರೊಳಸ್ಯಾಗಿದ್ದುವು. (Mock Parliments) ಇದರಿಂದ ಆಶಾಭಂಗರಾದ ಹಿಂದೂದೇಶೀಯರು ನಿರಾಶರಾದರು. ಕೆಲವರು ಈ ವರ್ತನೆಯನ್ನು ಖಂಡಿಸಿದರು ಪತ್ರಿಕೆಗಳು ಇದನ್ನು ಎತ್ತಿ ವಾದಿಸಿದವು. ಕೂಡಲೇ ಹಿಂದೂಸ್ಥಾನದಲ್ಲಿ ಅಸಮಾಧಾನದ ಚಿಹ್ನೆಗಳು ತೋರಬಂದವು. ಒಡನೆ ಇದನ್ನು ಅಡಗಿಸಲು ಅಮೋಘವಾದ ವೈದ್ಯಗಳು ತಯಾರಾದವು. 1910ರಲ್ಲಿ ಪ್ರೆಸ್ ಆಕ್ಟು ಪತ್ರಿಕೆಗಳ ಬಾಯಿ ಮುಚ್ಚಿಸಿದವು. 1911ರಲ್ಲಿ ರಾಜದ್ರೋಹ ಕೂಟದ ಆಕ್ಟು (Seditious Medings Act) ಎಂಬವು ಎಲ್ಲಾ ಬಗೆಯ ಕೂಟಗಳ (ನ್ಯಾಯವಾದವುಗಳ ಸಹ) ಏರ್ಪಾಡಿಗೆ ಅಟಂಕವಿತ್ತಿತು 1912ರಲ್ಲಿ ಕ್ರಿಮಿನಲ್ ಲಾ ಎಮೆಂಡ್‌ಮೆಂಟ್ ಆಕ್ಟ್ ಎಂಬುದು ಪ್ರತಿ ಒಬ್ಬನನ್ನೂ ಭಯದಲ್ಲಿರಿಸಿತು. ಈ ಪ್ರಕಾರ ಪ್ರಜೆಗಳನ್ನು ಪತಗಳಂತೆ ಈ ಆಕ್ಟುಗಳು ಕಾಪಾಡತೊಡಗಿದವು ಈ ಪ್ರಕಾರ 1909ನೆಯ ಮಾರ್ಪಾಟುಗಳು ಜನರಲ್ಲಿ ಭಯವನ್ನೂ, ಅತೃಪ್ತಿಯನ್ನುಂಟು ಮಾಡಿತೇ ಹೊರತು ಯಾವ ವಿಧದ ಸ್ವಾತಂತ್ರ್ಯತೆಯನ್ನು ಕೊಡಲಿಲ್ಲ. ಈ ಸಮಯದಲ್ಲಿ ಕೆಲವರು ಸರ್ಕಾರದೊಡನೆ ಸಹಕಾರ ಬೆಳಸಿಯಾದರೂ ಸ್ವಲ್ಪ ಬದಲಾವಣೆಯನ್ನು ತರಲಿಕ್ಕೆ ನೋಡಿದರು ಆದರೆ ಅವರ ಸಹಕಾರವು ಬ್ರಿಟಿಷರ ಆಳಿಕೆಯನ್ನು ಬಲಪಡಿಸಿದರೇ ಹೊರತು ಇನ್ನಾವ ತರಹದ ಬದಲಾವಣೆಗಳನ್ನು ತರಲಿಲ್ಲ.

ಈಚೆಗೆ 1914 ರಲ್ಲಿ ಉತ್ತರ ಅಮೇರಿಕದ ದೇಶದಲ್ಲಿ (Asiatic emigration Rules) ಏರ್ಪಾಡಾದ ನಿವಾಸಿಗಳ ಮೇಲೆ ಕೆಲವು ರೂಲುಗಳು ಹೊರಬಿದ್ದು ಅನೇಕ ಏಷ್ಯಾದವರನ್ನು ತಮ್ಮ ಸ್ವಂತ ದೇಶಕ್ಕೆ ಹಿಂತಿರುಗಿಸಿದವು. ಈ ಪ್ರಕಾರ ಹಿಂದೂದೇಶಕ್ಕೆ 8000 ಮಂದಿ ಪಂಜಾಬಿನವರು ಮತ್ತು ಸಿಕ್ಕ್ ಮತದವರು (ಕೆನಾಡದಲ್ಲಿದ್ದವರು) ತಮ್ಮ ಊರನ್ನು ಬಂದು ಸೇರಿದರು. ಈ ಸಮಯದಲ್ಲೇ ಯೂರೋಪಿನಲ್ಲಿ ಘೋರ ಯುದ್ಧವು ಪ್ರಾರಂಭವಾಯಿತು. ಆಗ ಇಂಗ್ಲಿಷು ದೇಶಕ್ಕೆ ಹಿಂದೂಸ್ಥಾನದ ಸಹಾಯವು ಅವಶ್ಯಕವಾಯಿತು. ಇಷ್ಟರಲ್ಲಿ ಪರದೇಶದಿಂದ ಹಿಂತಿರುಗಿದ ಉತ್ತರ ದೇಶೀಯರು ಮೆಲ್ಲನೆ ಸ್ವಾತಂತ್ರ್ಯ ಚಳವಳವನ್ನೆಬ್ಬಿಸಿದರು 191… ರಲ್ಲಿ ಹೋಮ್‌ರೂಲು ಸಂಸ್ಥೆಯು ಏರ್ಪಾಡಾಗಿ 1916ರಲ್ಲಿ ಮದ್ರಾಸಿನಲ್ಲಿ ಮಾರ್ಪಾಟುಗಳನ್ನು ಕೇಳಲು 19 ಮಂದಿ ಸದಸ್ಯರಿಂದ ಕೂಡಿದ ಒಂದು ಕಮಿಟಿಯು ನೇಮಕವಾಯಿತು. ಈ ಸಮಯದಲ್ಲಿ ಮುಸಲ್ಮಾನರ ಸಂಸ್ಥೆಯೊಂದು ಜನ್ಮವೆತ್ತಿ ಲಕ್ನೋದಲ್ಲಿ ಹೋಮ್‌ರೂಲ್ ಸಂಸ್ಥೆಯೊಡನೆ ರಾಜಕೀಯ ಚಳವಳದಲ್ಲಿ ಸಹಕಾರ ಮಾಡಲು ನಿರ್ಧರಿಸಿತು. ಈ ಸಮಯದಲ್ಲಿ ಇಂಗ್ಲೆಂಡಿಗೆ ಎರಡು ಕಡೆಯಲ್ಲಿಯೂ ಆಪತ್ತುಗಳಾದುವೆಂತವು. ಕೂಡಲೇ 1917ನೇ ಇಸವಿ ಅಗಸ್ಟ 20ರಲ್ಲಿ ಆಗಿನ ಸೆಕ್ರೆಟರಿ ಆಫ್ ಸ್ಟೇಟರಾದ ಮಾಂಟೆಗ್ಯುರವರು ಯುದ್ಧವಾಗಿಡೊಡನೆ ಇಂಡಿಯಾಕ್ಕೆ ಅವಶ್ಯಕವಾದ ಮಾರ್ಪಾಟುಗಳನ್ನು ಕೊಡುವೆವೆಂದು ಪಾರ್ಲಿಮೆಂಟಿನಲ್ಲಿ ವಾಗ್ದಾನ ಮಾಡಿ ಯುದ್ಧದಲ್ಲಿ ಸಹಾಯ ಕೋರಿದರು. ಹಿಂದೂಸ್ಥಾನವಾದರೋ ಧರ್ಮಕ್ಕನುಸಾರವಾಗಿ ಮರೆ ಹೊಕ್ಕವನಿಗೆ, ಕಷ್ಟದಲ್ಲಿರುವವನಿಗೆ ಸಹಾಯ ಮಾಡಬೇಕೆಂದು ರೀತ್ಯಲ್ಲಿ ಕಾಣಬರದಂಥ ಶ್ಲಾಘನೀಯವಾದ ರಾಜಭಕ್ತಿಯನ್ನು ತೋರಿ ತನ್ನ ಸಾವಿರಾರು ಮಂದಿ ಸೈನಿಕರನ್ನೂ, ಕೋಟ್ಯಾನು ರೂಪಾಯಿಗಳನ್ನೂ ಅವರ ಸಹಾಯಾರ್ಥವಾಗಿ ಕಳುಹಿಸಿತು. ಕೂಡಲೇ ಯುದ್ಧವು ಮುಕ್ತಾಯವಾಯಿತು. ಜಯವು ಬ್ರಿಟಿಷರ ಕಡೆಗೆ ದೊರೆಯಿತು. ಕಷ್ಟವು ನೀಗಿ ಹಿಂದೂಸ್ಥಾನಕ್ಕೆ ಉಪಕಾರದ ಪ್ರತ್ಯುಪಕಾರ ಮಾಡುವ ಸಮಯವು ಬಂದಿತು. ಹಿಂದೂಸ್ಥಾನವಾದರೋ ತನ್ನ ರಾಜಭಕ್ತಿಗೆ ಪ್ರತ್ಯುಪಕಾರವಾಗಿ ಸ್ವಾತಂತ್ರ್ಯತೆಯೂ, ಹೆಚ್ಚಿನ ಸ್ವಕರ್ಮವೂ ದೊರೆಯುವುದೆಂದು ಕುತೂಹಲದಲ್ಲಿತ್ತು. 19…ರಲ್ಲಿ ಮಾಂಟೆಗ್ಯು ಚೇಮ್ಸ್‌ಫರ್ಡ್ ಮಾರ್ಪಾಟುಗಳು ಬಂದವು. ಹಿಂದೂಸ್ಥಾನದ ಆಶೆಯು ನಿರಾಶೆಯಾಯಿತು. …ದು ಕೊಂಚ ಅವಶ್ಯಕವಾದ ಮಾರ್ಪಾಟುಗಳನ್ನು ಕೊಡಬೇಕೆಂದು ಅಭಿಪ್ರಾಯ ಪಟ್ಟಿತು. ಆದರೆ ಪಕ್ಕದಿರುವದನ್ನೆಲ್ಲ ಬಿಸುಟು ಕ್ರೂರವಾದ ರಾವ್‌ಲಟ್ ಆಕ್ಟ್ ಎಂಬಂತಾದ ಶಸ್ತ್ರದಿಂದ ಕೂಡಿ ಹಿಂದೂಸ್ಥಾನಕ್ಕೆ ದಯಮಾಡಿಸಿತು. ಇಂತ ಸಲಹೆಗಳನ್ನು ಮೂಲೆಗೊತ್ತಿ ರಾವಲಟ್ ಆಕ್ಟುಗಳೇ ರಾಜಭಕ್ತಿ ಸಹಾಯದ ಪರಿಣಾಮಗಳಾದವು. ಇದರಲ್ಲಿದ್ದ ಮುಖ್ಯ ಮಾರ್ಪಾಟುಗಳ್ಯಾವವೆಂದರೆ—ಕೌನ್ಸಿಲುಗಳಲ್ಲಿ ಕೊಂಚ ಹೆಚ್ಚು ಸೀಟುಗಳು ಮತ್ತು ಕೆಲವು ಇಲಾಖೆಗಳ ಜವಾಬ್ದಾರಿ (Transferred subjects) ವಿದ್ಯಾ ಇಲಾಖೆ, ವೈದ್ಯ ಇಲಾಖೆ ಮುಂತಾದವು. ಇವುಗಳ ವಿಷಯ ಯಾವುದಾದರೂ ಒಂದು ರಿಯಾಯಿತಿಗಳನ್ನು ಕೌನ್ಸಿಲುಗಳಲ್ಲಿ ಕೇಳಿದರೆ ಹಣವಿಲ್ಲವೆಂಬ ಒಂದು ಉತ್ತರವಲ್ಲದೆ ಬೇರೆ ಇಲ್ಲ. ಇದರ ಮೇಲೂ ಸರ್ವಾಧಿಕಾರವೂ ಅಧ್ಯಕ್ಷನ ಕೈಯಲ್ಲಿ. ಯಾವ ಕಾರಣಕ್ಕೂ ಆಗಲಿ ಬಹುಮತದಿಂದ ಪಾಸುಮಾಡಿದ್ದನ್ನು ಧಿಕ್ಕರಿಸುವ ಸ್ವಾತಂತ್ರ್ಯತೆಯನ್ನು ಒಬ್ಬನ ಕೈಯಲ್ಲಿಟ್ಟಿತ — ರಿಂದ ಏನೊಂದು ಪ್ರಯೋಜನಗಳು ದೊರಕಲಿಲ್ಲ.

ಇದರ ವಿಷಯ ತಿಳಿಯದವರೇ ಇಲ್ಲ. ಆದ್ದರಿಂದ ಹೆಚ್ಚು ಬರೆಯುವ ಅವಶ್ಯವಿಲ್ಲ. ಆದರೆ ಈ ಸಂದರ್ಭಗಳು ಕೆಲವರು ಈ ಮಾರ್ಪಾಟುಗಳನ್ನು ತಾರೀಫು ಮಾಡಿ ಪೂಜಿಸುತ್ತಿರುವರು. ಇದರ ವಿಷಯ ಗೊತ್ತಿಲ್ಲದವರೇ ಇವು ಈ ಮಾರ್ಪಾಟುಗಳು ಪ್ರಜೆಗಳಿಗೆ ಯಾವ ತರದ ಸ್ವಾತಂತ್ರ್ಯತೆಯನ್ನು ಕೊಡಲಿಲ್ಲ. ಇವು ಪ್ರಜೆಗಳಿಗೆ ಕ್ರಮ ಮತ್ತು ಸಮಾಧಾನಗಳನ್ನು (Order and Peace) ಕೊಡುವದರ ಬದಲು ಅಸಮಾಧಾನ ಅಕ್ರಮಗಳನ್ನು ಬೆಳೆಯಿಸಿದವು. ಈ ಕಾರಣ ನಮ್ಮನ್ನು ಸ್ವಾತಂತ್ರ್ಯ ಹೋರಾಟದಿಂದ ತಪ್ಪಿಸುವುದಕ್ಕಾಗಿ ಈ ಮಾರ್ಪಾಟುಗಳೆಂಬ ಮಂಕು ಬೂದಿಯನ್ನು ಹಾಕುತ್ತಿರುವರು. ಕೆಲವರು ಇದನ್ನು ಆಲಿಂಗಿಸಿದರು, ಬಹುಮತವು ಬಹಿಷ್ಕರಿಸಿತು. ಈ ರೀತಿ ನಮ್ಮ ನಡುವೆ ಭೇದವು ಬೆಳೆದು ಪರದೇಶ ಆಳಿಕೆಯನ್ನು ಬಲಪಡಿಸಿತು

ದಿವಂಗತ ಪಾಂಡಂಡ ಮುತ್ತಣ್ಣನವರು.

ಮ. ರಾ. ಶ್ರಿ ಪಾಂಡಂಡ ಮುತ್ತಣ್ಣನವರು ತಾರೀಖು 29—6—32ರಲ್ಲು ಮೃತರಾದರೆಂತ ತಿಳಿಸಲು ತುಂಬಾ ವ್ಯಸನ ಪಡುತ್ತೇವೆ. 11 ಗಂಟೆ ರಾತ್ರಿ ವರೆಗೆ ಮೂರ್ನಾಡಿನಲ್ಲಿ ಆರೋಗ್ಯವಾಗಿದ್ದವರು ಮನೆಗೆ ಹೋಗಿ ಪತ್ರಿಕೆ ಓದುತ್ತಿದ್ದವರು ಥಟ್ಟನೆ ಶಿವಾಧೀನರಾದರೆಂತ ವರ್ತಮಾನ. ಇವರು ಸಾರ್ವಜನಿಕಕಾರ್ಯಗಳಲ್ಲಿ ಕೆಲವು ಮಟ್ಟಿಗೆ ಭಾಗ ತೆಗೆದುಕೊಳ್ಳುತ್ತಿದ್ದರು. ಇವರು ಪ್ರಮಾಣಿಕತ್ವ, ಕಾರ್ಯದಕ್ಷತೆ ಮುಂತಾದ ಗುಣ ತುಂಬಾ ಉಳ್ಳವರಾಗಿದ್ದರು, ರಾಷ್ಟ್ರೀಯ ಭಾವವಿದ್ದವರು. ಸ್ವಜನ ಪ್ರೀತಿ, ಸ್ವಜಾತಿ ಗೌರವದಲ್ಲಿ ತುಂಬಾ ನಂಬಿಕೆ ಇದ್ದವರು. ಇವರು "ಕೊಡಗಿನ ಕ್ಷೆಪಿಟ" "ಕುಲವೃದ್ಧಿ ಸ್ವರ್ಗದಾಗಮನ" "ನಾಗರಿಕತೆಯ ಪರಿಣಾಮ" ಎಂಬ ಕನ್ನಡದ ಪುಸ್ತಕಗಳನ್ನೂ, "ಕೊಡಗೂ, ಕೊಡಗರೂ" ಎಂಬ ಇಂಗ್ಲಿಷ್ ಪುಸ್ತಕವನ್ನೂ ಸಹ ಬರೆದು ಪ್ರಕಟಿಸಿದ ಇವರ ಹೆಸರನ್ನು ಕೇಳದವರು ಕೊಡಗಿನಲ್ಲಿ ಅಪರೂಪವಿರಬಹುದು. ಇವರಿಗೆ ಕಿವಿಯ ಶಕ್ತಿ ಕಡಮೆ ಇಲ್ಲದೆ ಇದ್ದಿದ್ದರೆ ಇವರ ಸಾರ್ವಜನಿಕ ಕೆಲಸವು ಇನ್ನೂ ಹೆಚ್ಚಾಗಿರುತ್ತಿತ್ತು. ಇವರ ಜೀವಾತ್ಮಕ್ಕೆ ಶಾಂತಿಯನ್ನೀಯಲಿ ಎಂತ ಪ್ರಾರ್ಥಿಸಿ ಅವರ ಕುಟುಂಬದವರಿಗೆ ನಮ್ಮ ಸಹಾನುಭೂತಿಯನ್ನು ಸೂಚಿಸುತ್ತೇವೆ.

ವರ್ತಮಾನ ಸಂಗ್ರಹ.

ಒಳದೇಶ.

ಕಮಿಶನರವರು ಬೆಂಗಳೂರಿಗೆ ತಾ. 28—6—32ರಲ್ಲು ಹೋಗಿರುವರು. ಇವರು ತಾ. 10—7—32ರಲ್ಲು ವಾಪಸು ಬರುವರು.

ಮಡಿಕೇರಿ ಹುಡುಗಿಯರ ಹೈಸ್ಕೂಲ್ ಜೂನ್ ತಾ. 29 ರಿಂದ ಮಳೆಗಾಲದ ರಜವಾಗಿ ಒಂದು ತಿಂಗಳ ವರೆಗೆ ಮುಚ್ಚಲ್ಪಟ್ಟಿದೆಯೆಂದಾಗಿ ತಿಳಿಯುತ್ತೇವೆ.

ಮಡಿಕೇರಿ ಟ್ರೆಜರಿಯ ಆಫೀಸರಾದ ಮ. ಸುಬ್ಬಯ್ಯನವರು ಎರಡು ತಿಂಗಳ ರಜೆಯಲ್ಲಿ ಹೋಗಿರುವುದರಿಂದ ಅವರ ಬದಲಿಗೆ ಮುಕ್ಕಾಟಿರ ಮೇದಪ್ಪಯ್ಯನವರನ್ನು ನೇಮಿಸಿರುವರು.

ಸೋಮವಾರಪೇಟೆ ಸಬ್ ಅಸಿಸ್ಟೆಂಟ್ ಸರ್ಜನರಾದ ಮ. ಕೋದಂಡ ಮೇದಪ್ಪನವರು ಒಂದು ತಿಂಗಳ ರಜೆಯಲ್ಲಿರುವದರಿಂದ ಅವರ ಬದಲು ಮ. ಹೆಚ್. ರುದ್ರಪ್ಪನವರನ್ನು ನೇಮಿಸಲಾಗಿದೆ.

ಪಾಲೆ ಕರಿಯನೆಂಬ ಕೇದಿಯು ಎರಡು ವರ್ಷಗಳ ಹಿಂದೆ ಜೇಲಿನಿಂದ ತಪ್ಪಿಸಿಕೊಂಡು ಓಡಿ ಹೋದವನನ್ನು ಸಬ್ ಇನ್ಸ್‌ಪೆಕ್ಟರಾದ ಮ. ಕೋದಂಡ ಮುದ್ದಪ್ಪನವರು ದಸ್ತಗಿರಿ ಮಾಡಿರುವರು.

ಕೊಡಗಿನ ರಾಜಕೀಯ ಭವಿಷ್ಯತ್ತನ್ನು ಕುರಿತು ಗೋಣಿಕೊಪ್ಪಲಲ್ಲಿ ತಾ. 26—6—32ರಲ್ಲಿ ಒಂದು ಮೀಟಿಂಗ್ ನಡೆಯಿತು. ಸುಭೇದಾರರೇ ಮೊದಲಾದ ಕಲವು ಸರ್ಕಾರಿ ಉದ್ಯೋಗಸ್ಥರು ಹಾಜರಿದ್ದರು.

ಮಡಿಕೇರಿಯ ಕಾರೊನೇಶನ್ ಗಾರ್ಡನ್ ಹಿಂದುಗಡೆಯ ಮೈದಾನದಲ್ಲಿ ಒಂದು ಮಾಂಸದ ಅಂಗಡಿಯು ಹೊಸದಾಗಿ ತೆರೆದಿರುವರು. ಇದರಿಂದ ಮಡಿಕೇರಿಯವರಿಗೆ ಮಾಂಸ ಸಿಕ್ಕದೆ ಇರುವ ಅಭಾವವು ತಪ್ಪಿ ಹೋದೀತು.

ದಿವಂಗತರಾದ ರಾ. ಬಾ. ಕೆ. ಅಪ್ಪಯ್ಯನವರ ಬದಲಿಗೆ ಕೊಡಗು ಸೆಂಟ್ರಲ್ ಬ್ಯಾಂಕಿನ ಅಧ್ಯಕ್ಷರಾಗಿ ರಾ: ಬಾ. ಪಿ ದೇವಯ್ಯನವರನ್ನು ತಾ. 25—6—32ರ ಡೈರೆಕ್ಟರುಗಳ ಮೀಟಿಂಗಿನಲ್ಲಿ ಆರಿಸಲಾಗಿದೆ. ಇದರ ವಿವರವು ಇನ್ನೊಂದು ಕಡೆ ಪ್ರಕಟವಾಗಿದೆ.

ಬೈರಂಬಡ ಗ್ರಾಮದ ಮ. ಜೇಂದಂಡ ಮುತ್ತಣ್ಣನವರು ನೆರೆಕರೆಯಲ್ಲಿ ಉಪದ್ರ ಕೊಡುತ್ತಿದ್ದ 2 ಹೆಬ್ಬುಲಿಗಳಿಗೆ ಗುಂಡು ಹೊಡೆದುದರಲ್ಲಿ ಒಂದು ಮೃತಪಟ್ಟಿತೆಂತಲೂ, ಇನ್ನೊಂದು ಘಾಯಗೊಂಡು ಇನ್ನೂ ಹೆಚ್ಚಾಗಿ ಕಂಟಕಮಾಡುತ್ತಲಿದೆ ಎಂದೂ ಇದರಿಂದ ಪ್ರಾಣಿಗಳಿಗೂ, ಮನುಷ್ಯರಿಗೂ ಭಯವೆಂತಲೂ ತಿಳಿಯುತ್ತೇವೆ.

ಕೇಶನೆಂಬ ಪಾಲೆಯು ತನ್ನ ಹೆಂಡತಿಯನ್ನು ತಿವಿದು ಕೊಂದನೆಂಬ ಕೇಸು ವಿಚಾರವಾಗಿ ಅವನು ತನ್ನ ಹೆಂಡತಿಯನ್ನು ಕೊಲ್ಲುವಾಗ ಬುದ್ಧಿಯು ಸರಿಯಾಗಿರಲಿಲ್ಲವೆಂದೂ, ಆ ಕೆಲಸವನ್ನು ಮಾಡಿದ್ದು ಅವನಿಗೆ ಗೊತ್ತೇ ಇಲ್ಲವೆಂದೂ ತೀರ್ಮಾನಿಸಿ ಅವನನ್ನು ಇಲ್ಲಿಯ ಜೈಲಿನಲ್ಲಿಡದೆ, ಲೋಕಲ್ ಗವರ್ನ್‌ಮೆಂಟಿನ ಅಪ್ಪಣೆಪ್ರಕಾರ ಜನರ ಭದ್ರತೆಗೋಸ್ಕರ ಅವರ ಅಪ್ಪಣೆಯನ್ನು ಅನುಸರಿಸಿ ಕೆಲಸ ಮುಂದರಿಸಬೇಕಾಗಿ ತೀರ್ಮಾನಿಸಲಾಗಿರುವುದು.

ಸತ್ಯಾಗ್ರಹದ ಸಂಬಂಧ ಆರಾರು ತಿಂಗಳು ಸಜೆಯಲ್ಲಿ ಕಣ್ಣಾನೂರು ಜೈಲಿನಲ್ಲಿದ್ದ ಕೊಡಗಿನ ಸತ್ಯಾಗ್ರಹಿಗಳಾದ ಮ. ಗಳಾದ ಕೆ. ಯಂ. ಸುಬ್ಬಯ್ಯ, ಪಿ ಯಂ. ಕಾಳಪ್ಪಯ್ಯ, ಹೆಚ್. ಎ. ಕುಶಾಲಪ್ಪ, ಸಿ. ಯಸ್. ಮುದ್ದಪ್ಪ, ಎ. ಆರ್. ತಮ್ಮಯ್ಯ ಮತ್ತು ಸಿ. ಹೆಚ್. ಗಣಪತಿಯವರು ತಾ. 26 ರಲ್ಲೂ, ಮ. ಕೊಳ್ಳಿಮಾಡ ಕರುಂಬಯ್ಯನವರು ತಾ. 28ರಲ್ಲಿ ವೆಲ್ಲೂರು ಜೈಲಿನಿಂದಲೂ ಬಿಡುಗಡೆಯಾಗಿ ಕೊಡಗಿಗೆ ಬಂದಿರುವರು.

ಹಿಂದೂದೇಶ.

ಕಲ್ಕತ್ತಾದ ಅಮೃತಬಜಾರ್ ಪತ್ರಿಕೆಯವರಿಂದ ಸರ್ಕಾರದವರು 6000 ರೂ. ಜಾಮೀನನ್ನು ಕೇಳಿರುವರು.

ಜೂನ್ ತಾ. 21ರಲ್ಲು ಮೀರತ್ತಿನ ಡಿಸ್ಟ್ರಿಕ್ಟ್ ಕಾನ್‌ಫರೆನ್ಸಿನಲ್ಲಿ 100 ಜನರನ್ನು ದಸ್ತಗಿರಿ ಮಾಡಿರುವರು. ಇವರಲ್ಲಿ 35 ಜನರನ್ನು ಬಿಡುಗಡೆ ಮಾಡಿರುತ್ತಾರೆ.

ಬರುವ ಜುಲೈ ತಾ. 4 ರಲ್ಲಿ ಕೊನೆಗಾಣುವ ಆರ್ಡಿನೆನ್ಸುಗಳನ್ನೆಲ್ಲ ಒಟ್ಟು ಗೂಡಿಸಿ ಕೆಲವು ಬದಲಾವಣೆಯಿಂದ ವೈಸರಾಯರು ಒಂದು ಹೊಸ ಆರ್ಡಿನೆನ್ಸನ್ನು ಪ್ರಯೋಗಿಸುವರೆಂದು ವರ್ತಮಾನವಿದೆ.

ಬಂಗಾಳ ಪ್ರಾಂತ್ಯದ ಜೈಲುಗಳಲ್ಲಿ ಕಳೆದ 3 ವರ್ಷಗಳಲ್ಲಿ ಕೈದಿಗಳ ಸಂಖ್ಯೆ ಹೀಗಿದೆ:—1929ರಲ್ಲಿ 27 ಸಾವಿರ, 1930 ರಲ್ಲಿ ಈ ಸಂಖ್ಯೆ 66 ಸಾವಿರಕ್ಕೆ ಮುಟ್ಟಿತು; 1931ರಲ್ಲಿ ಪ್ರತ್ಯೇಕವಾಗಿ 50,900 ಕೂಡಿರುವುದು.

ಭಗತಸಿಂಘನ ಚಿತ್ರವಿರುವ ಬೆಂಕಿಪೆಟ್ಟಿಗೆಗಳು ಮಧ್ಯಪ್ರಾಂತ್ಯದಲ್ಲಿ ಪ್ರಚಾರಕ್ಕೆ ಬಂದಿರುವವುಗಳನ್ನು ಅಲ್ಲಿಯ ಸರ್ಕಾರವು ಮುಟ್ಟುಗೋಲು ಹಾಕಿ, ಮುಂದೆ ಯಾರೂ ಅಂತವುಗಳನ್ನು ಮಾರಾಟ ಮಾಡಬಾರದಾಗಿ ಪ್ರಕಟಣೆ ಕೊಟ್ಟಿದೆ.

ಕಳೆದ ಏಪ್ರಿಲ್ ತಾ. 30 ರಲ್ಲಿ ಮಿಡ್ನಾಪುರದ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ಡಗ್ಲಾಸರವರನ್ನು ಕೊಂದು ಪ್ರತ್ಯೇಕ ಪಿಸ್ತೂಲಿಗಳ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದ ಪ್ರದ್ಯೋತ ಕುಮಾರ ಭಟ್ಟಾಚಾರ್ಜಿ ಎಂಬವನಿಗೆ ಮರಣ ದಂಡನೆ ವಿಧಿಸಲ್ಪಟ್ಟಿತು.

ಬೇಗಾವಿನ ಗಂಗಾಧರರಾವ್ ದೇಶಪಾಂಡೆಯವರು ಪಿಕೆಟಿಂಗ್ ಆರ್ಡರಿಗೆ ವಿರೋಧವಾಗಿ ನಡೆದುದರಿಂದ ಎಮರ್ಜೆನ್ಸಿ ಆರ್ಡಿನೇನ್ಸ್ ಮೇರೆ ದಸ್ತಗಿರಿ ಮಾಡಿ ಒಂದು ವರ್ಷ ಸಕ್ತ ಸಜೆಗೂ, 300 ರೂ. ದಂಡಕ್ಕೂ ತಪ್ಪಿದರೆ 3 ತಿಂಗಳ ಹೆಚ್ಚಿನ ಜೈಲುವಾಸಕ್ಕೂ ಗುರಿಪಡಿಸಿರುವರು.

ದಿವಾನ್ ಬಹದೂರ್ ಆರೋಗ್ಯಸ್ವಾಮಿ ಮೊದಲಿಯಾರರೇ ಮೊದಲಾಗಿ ಹಲವು ಪ್ರಮುಖರು ಸಹಿ ಮಾಡಿಕೊಂಡು ವಿನಂತಿ ಪತ್ರವು ವೈಸರಾಯರಿಗೆ ಕಳುಹಿಸಲಾಗಿದೆ. ಆರ್ಡಿನೆನ್ಸ್ ರಾಜ್ಯಭಾರವನ್ನು ನಿಲ್ಲಿಸಬೇಕೆಂಬುದೇ ಅಭಿಪ್ರಾಯ. ಇನ್ನಾದರೂ ಸರ್ಕಾರಕ್ಕೆ ಯೋಗ್ಯವಾಗಲಿ!

ಗೋರಕಪುರ (ಗೋರಕ್ಷಣಪುರ)ದ ಕಾರಾಗೃಹದಲ್ಲಿರುವ ಮಹಾತ್ಮಾ ಗಾಂಧಿಯವರ ಕುಮಾರರಾದ ದೇವದಾಸ ಗಾಂಧಿಯವರಿಗೆ ಕಳೆದ 13 ದಿನಗಳಿಂದಲೂ ಜ್ವರಬರುತ್ತಿರುವುದಾದರೂ ಅದು ಗಂಭೀರವಿಲ್ಲವೆಂದೂ, ಕಾರಾಗೃಹಕ್ಕೆ ಹೋಗಿ ದೇವದಾಸರ ಉಪಚಾರ ಮಾಡಬೇಕೆಂದು ಗೋರಕಪುರವಾಸಿಯಾದ ಮನ್‌ಮೋಹನ್ ಪ್ರಸಾದ ಪೊದ್ದಾರ್‌ರವರಿಗೆ ಮಹಾತ್ಮರಿಂದ ತಂತಿ ಬಂದಿರುವುದಾದರೂ ಜೈಲಿನ ಅಧಿಕಾರಿಗಳು ಪೊದ್ದಾರರವರನ್ನು ಜೈಲಿನೊಳಕ್ಕೆ ಬಿಡಲಿಲ್ಲವೆಂದೂ ಆಜದ್ ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಲಾಹೋರು ಮೆಜೆಸ್ಟಿಕ್ ಚಲನ ಚಿತ್ರ ಪ್ರದರ್ಶನ ಶಾಲೆಯಲ್ಲಿ ಬಿಲ್ವ ಮಂಗಲ ಅಥವಾ ಚಿಂತಾಮಣಿ ಎಂಬ ನಾಟಕವು ಪ್ರದರ್ಶಿಸಲ್ಪಡುತ್ತಿರುವಾಗ್ಗೆ ಶ್ರೀಕೃಷ್ಣನ ಪಾತ್ರವನ್ನು ಮಹಮ್ಮದೀಯನು ವಹಿಸಿ ಅಭಿನಯಿಸಿದನೆಂದು ಪ್ರೇಕ್ಷಕರಲ್ಲೊಬ್ಬ ಹಿಂದು ವಿದ್ಯಾರ್ಥಿಯು ತಿಳಿದು ಕೋಪಾವಿಷ್ಟನಾಗಿ ಸಿನೆಮಾ ಛಾಯಾಚಿತ್ರ ಬೀಳುತ್ತಿದ್ದ ತೆರೆಯನ್ನು ಹರಿದು ಹಾಕಿಬಿಟ್ಟನು. ಇದಕ್ಕಾಗಿ ಅವನ ಮೇಲೆ ಕಂಪೆನಿಯವರು ಮೇಜಿಸ್ಟ್ರೇಟ್ ಕೋರ್ಟಿನಲ್ಲಿ ವಿವಾದವನ್ನು ಹೂಡಿರಲು ಅವನಿಗೆ 200 ರೂ ದಂಡವೂ, 6 ತಿಂಗಳ ಕಠಿಣ ಕಾರಾಗೃಹವಾಸ ಶಿಕ್ಷೆಯೂ ವಿಧಿಸಲ್ಪಟ್ಟವು.

ಬೊಂಬಾಯಿಯ ಪೋಯರಂ ದಾಗೆಯ ಸಂಬಂಧವಾಗಿ ದಸ್ತಗಿರಿ ಮಾಡಲ್ಪಟ್ಟ 70 ಮಂದಿ ಮುಸ್ಲಿಮರನ್ನು ಹಿಂದೂದೇಶದಿಂದ ಗಡೀಪಾರು ಮಾಡಲು ಪೊಲೀಸ್ ಕಮಿಷನರರು ಅಪ್ಪಣೆ ಕೊಟ್ಟಂತೆ ತಿಳಿದು ಬರುತ್ತದೆ. ಇವರು 'ಪಠಾಣ ಗುಂಡ' ರಂತೆ; ಮನೆಮಠ ಇಲ್ಲದವರು; ಹಿಂದೆ ಎಷ್ಟೋ ಪುಂಡಾಟಿಕೆಗಳನ್ನು ನಡೆಸಿದವರು; ಜೀವನೋದ್ದೇಶವೆಂಬುದಿಲ್ಲದೆ, ವೃತ್ತಿಯೂ ಇಲ್ಲದೆ ಭೂಭಾರವಾಗಿರುವವರೆಂದೇ ತಿಳಿದು ಬಂದಿದೆ. ಈಗ ಶಾಂತಿ ಮೂಡಿದೆಯಾದರೂ, ಮುಸ್ಲಿಮನೊಬ್ಬನನ್ನು ಹಿಂದುಗಳು ಲಾಠಿ ಚಾರ್ಜು ಮಾಡಿ ಕೊಂದಂತೆ ವಾರ್ತೆ ಇದೆ. ಮೂರು ಗಿರಣಿಗಳು ವ್ಯಾಪಾರ ಮಂದತೆಯ ದೆಸೆಯಿಂದ ಮುಚ್ಚಲ್ಪಡುವ ಲಕ್ಷಣವೂ ಇದೆ; ಇದರಿಂದ ನಿರುದ್ಯೋಗಿಗಳ ಸಾಗರಕ್ಕೆ 6000ದ ಚಿಕ್ಕ ಅರ್ಪಣೆಯಾಗಲಿದೆ.

ಧಿಲ್ಲಿಯ ಮೋಹನ್ ಬ್ರದರ್ಸ್ ಎಂಬ ಪ್ರಮುಖ ವಿದೇಶೀ ಜವಳಿ ವ್ಯಾಪಾರಿಗಳ ಅಂಗಡಿಯಲ್ಲಿ ಕಳೆದ ತಾ. 20ನೇ ರಾತ್ರಿ ಬೆಂಕಿ! ರೇಶ್ಮೆ ವಸ್ತ್ರಗಳು ಭಸ್ಮವಾಗಿ ಅರ್ಧ ಲಕ್ಷ ರೂ. ನಷ್ಟ! ಅಂಗಡಿಯನ್ನು ಮುಚ್ಚುವ ಹೊತ್ತಿಗೆ ಇಬ್ಬರು ಬಂಗಾಳಿಗಳು ಬಂದು ವಸ್ತ್ರವನ್ನು ನೋಡಿ ತೆರಳಿದ್ದರಾದ ಕಾರಣ, ಇವರು ವಸ್ತ್ರವನ್ನು ನೋಡುವ ನೆಪದಲ್ಲಿ ವಸ್ತ್ರದ ನಡುವೆ ಗಂಧಕವರ್ತಿಯ ಒಂದು ಧಾತನ್ನು ಇಟ್ಟುಹೋಗಿರಬೇಕೆಂದೂಹಿಸಲಾಗಿದೆ. ಎರಡು ವರ್ಷಗಳಿಂದ ಇಲ್ಲಿ ಪಿಕೆಟಿಂಗ್ ನಡೆಯುತ್ತಿತ್ತು. ವಿದೇಶೀ ಅರಿವೆಯ ವ್ಯಾಪಾರವನ್ನು ಬಿಟ್ಟು ಕೊಡುವಂತೆ ಆಗಾಗ್ಯೆ ಎಚ್ಚರಿಸಿ ಈ ವ್ಯಾಪಾರಸ್ಥರಿಗೆ ಬೆದರಿಕೆಯ ಪತ್ರಗಳು ತಲುಪುತ್ತಿದ್ದುವು. ಇನ್ನಿದು—ಅದೇ—ಬೆಂಕಿ!

ವಿದೇಶ.

ಸಯಾಮ್ ರಾಜ್ಯದಲ್ಲಿ ಜನರು ಸರಕಾರಕ್ಕೆದುರಾಗಿ ದಂಗೆ ಎದ್ದಿರುವರೆಂದೂ, ಮಿಲಿಟರಿಯವರೂ ದಂಗೆಗಾರರನ್ನು ಕೂಡಿರುವರೆಂದೂ ವಾರ್ತೆ ಬಂದಿದೆ. ರಾಜಕುಟುಂಬದವರನ್ನೆಲ್ಲ ದಂಗೆಖೋರರು ಸೆರೆಯಲ್ಲಿರಿಸಿರುವರು. ರಾಜನು ಆ ದಾವುದೋ ಸಮಾರಂಭಕ್ಕಾಗಿ ಮತ್ತೊಂದು ನಗರಕ್ಕೆ ತೆರಳಿದ ಕಾರಣ ಕೊಲೆಗಡುಕರ ಕೈಗೆ ಸಿಲುಕಲಿಲ್ಲ. ಸೇನಾನಾಯಕನು ದಂಗೆಗೊಪ್ಪದೆ ಎದುರಿಸಿದನೆಂದು ಆತನನ್ನು ಕೊಂದೇ ಬಿಟ್ಟರು. ಜರ್ಮನಿಯ ವೈಮಾನಿಕ ಸ್ತ್ರೀಯೊಬ್ಬಳು ಅತ್ತಕಡೆಯಿಂದ ಜರ್ಮನಿಗೆ ಹಾರಿ ಈ ವದಂತಿಯನ್ನು ಮೊದಲಾಗಿ ಅಲ್ಲಿ ಕೊಟ್ಟಳು. ವಾರ್ತಾದಾರರು ಸುಕುಳಲಾರದಂತಹ ರಣರಂಗ. ಹೊಸ ರಾಜ್ಯಾಂಗ ರಚನೆಯಾಗಬೇಕೆಂದೇ ಕ್ರಾಂತಿಕಾರರ ಉದ್ದೇಶವಂತೆ. (ಸಯಾಮ್ ರಾಜ್ಯವು ೨೦೦,೨೩೪ ಚದರ ಮೈಲು ವಿಸ್ತೀರ್ಣ ಉಳ್ಳದು. ೧೯೩೦ನೇ ಇಸವಿಯ ಜನೇಸು ಮೊರಿಯಂತೆ ಇಲ್ಲಿಯ ಜನಸಂಖ್ಯೆ ೧೧,೫೦೬,೨೦೭; ಈ ಸೈತ ಹಿಂದೀಯರೂ ಮಲಯಾನಿವಾಸಿಗಳೂ ಒಟ್ಟು ೩ ಲಕ್ಷಕ್ಕೂ ಮಿಕ್ಕಿ ಇರುವರು; ೪ ಲಕ್ಷ ಚೀನೀಯರೂ, ೧೯೩೦ ಮಂದಿ ಯೂರೋಪೀಯನರೂ ಇರುವರು. ಅರಸರೇ ಮುಖ್ಯಾಧಿಪತಿಗಳಾಗಿ ೧೦ ಸದಸ್ಯರಿರುವ ಮಂತ್ರಿಮಂಡಲದ ಸಹಾಯದಿಂದಲೂ, ಒಂದು ಕೌನ್ಸಿಲಿನ ಸಹಾಯದಿಂದಲೂ ರಾಜ್ಯವಾಳುತ್ತಿದ್ದಾರೆ. ಕೌನ್ಸಿಲಿನಲ್ಲಿ ಹೆಚ್ಚಿನವರು ರಾಜಕುಟುಂಬದವರು. ಸೈನ್ಯ ಬಲವು ಸುಮಾರು ೨೦೦೦೦, ನೌಕಾಬಲ—೩ ಯುದ್ಧನಾವೆಗಳು, ೪ ಟೊರ್ಪೆಡೊ ಸ್ಟೀಮರುಗಳು, ೨೦೦೦ ನೌಕಾ ಸೈನ್ಯ.) ಅಷ್ಟರಲ್ಲೇ ಹೊಸ ರಾಜ್ಯ ಸೂತ್ರಗಳು ರಚನೆಯಾಗಿವೆಯೆಂದೂ, ಅರಸರು ಮರಳಿ ಬಂದು ಅನುಸ್ಠಪ್ಪಿರುವರೆಂದೂ, ಕ್ರಾಂತಿಯಲ್ಲಿ ರಕ್ತಪಾತವಾದುದಿಲ್ಲವೆಂದೂ ವಾರ್ತೆ ಬಂದಿದೆ.

KODANDA BHAVAN,
MERCARA.

We wish to express our grateful thanks to our innumerable relatives and friends who have sympathised with us in our great bereavement. As we find it impossible to reply individually we request them to accept these lines as an answer.

Mrs' K. C. APPAYYA.

WANTED.

Wanted a manual training instructor to teach rattan work to high school students under '3' group subjects.

Scale of pay Rs. 30—2—40 (temporary establishment) S. S. L. C holders who have undergone the requisite trainig need only apply to the Headmaster, Central High School, Mercara.

ಕೊಡಗು ವಿದ್ಯಾಭಿವೃದ್ಧಿ ಸಂಘ,
ಮಡಿಕೇರಿ,

ಪ್ರಕಟಣೆ.

ಮೇಲಣ ಸಂಘದ ಜನರಲ್ ಮೀಟಿಂಗು ತಾರೀಖು 12—7—32ನೇ ಮಂಗಳವಾರ ಮಡಿಕೇರಿ ಓಂಕಾರೇಶ್ವರ ದೇವಸ್ಥಾನದ ಪಾತ್ ಕನೂನ್ ಮಹಡಿಯಲ್ಲಿ ಸಾಯಂಕಾಲ 5—10 ಗಂಟೆಗೆ ನಡಿಸಲ್ಪಡುತ್ತೆ. ಎಲ್ಲಾ ಮೆಂಬರುಗಳು ದಯವಿಟ್ಟು ಮೀಟಿಂಗಿಗೆ ಹಾಜರಾಗಬೇಕಾಗಿ ಕೇಳಿಕೊಳ್ಳೋಣಾಗಿದೆ

ಚರ್ಚಿಸತಕ್ಕ ವಿಷಯಗಳು.

1. ಸೆಕ್ರೆಟರಿಯವರ ರಿಪೋರ್ಟು ಓದುವುದು
2. ಆಡಿಟ್ ರಿಪೋರ್ಟು ಓದುವುದು.
3. ಲೆಕ್ಕ ಆಜಮಾಯಿಸಲು ಆಡಿಟರುಗಳನ್ನು ಚುನಾಯಿಸುವುದು.
3. ಮುಂದಿನ ಎರಡು ವರ್ಷಗಳಿಗೆ ಕಮಿಟಿ ಮೆಂಬರುಗಳನ್ನು ಆರಿಸುವಿಕೆ.
5. ಬೇರೆ ಏನಾದರೂ ವಿಷಯ ಪ್ರೆಸಿಡೆಂಟರವರ ಅಪ್ಪಣೆ ತೆಗೆದುಕೊಂಡು ಚರ್ಚಿಸುವುದು.

(ಕಳೆದ 12 ತಿಂಗಳಿಂದ ಚಂದಾ ಬಾಕಲಗು ಪಾವತಿ ಮಾಡದೆ ಇರುವವರು ಪಾವತಿ ಮಾಡಿ ಮೆಂಬರಾಗಬೇಕಾಗಿ ಸಹ ಕೋರಿಕೆ)

ಕೆ. ಯಂ. ಬೆಳ್ಳಪ್ಪ,
(ಗೌರವ ಕಾರ್ಯದರ್ಶಿ)

ಬೇಂಗುನಾಡು ಕುಯ್ಯಂಗೇರಿನಾಡು ಮೀಟಿಂಗು.

ಕೊಡಗು ಪ್ರತ್ಯೇಕವಾಗಿರಬೇಕೋ ಅಥವಾ ಮದ್ರಾಸಿಗೆ ಸೇರಿಸಬೇಕೋ ಎಂಬ ವಿಷಯವನ್ನು ಕುರಿತು ತಾರೀಖು 13—6—32ರಲ್ಲಿ ಕಾರುಗುಂದ ಕಚೇರಿ ಬಳಿ ಮ. ಕುಟ್ಟೇಟಿರ ಮಾದಪ್ಪನವರ ಅಧ್ಯಕ್ಷತೆಯಲ್ಲಿ ಬಂದ. ಮೀಟಿಂಗು ನಡಿಸಲಾಯಿತು.

ಕೊಡಗರು ಗೌಡರು ಮತ್ತು ಹೆಗ್ಗಡೆಯರು ಸೇರಿ ಸುಮಾರು 100 ಜನರಿಗಿಂತ ಹೆಚ್ಚಾಗಿದ್ದರು.

ಹೊಂದಿದರೆ ಮುಂದಿನ ಸುಧಾರಣೆಯು ಕುರಿತು ಸರ್ಕಾರದ ಸೂಚನೆಯೇನನ್ನಾದರೂ ಜನತೆಯು ಉದಾರ ಸದ್ಭಾವದಿಂದ ಸಂಗೀಕರಿಸುವಂತಾಗುವದೆಂದು ಭಾವಿಸಲಾಗಿದೆ. ಈಗ ಕಾಂಗ್ರೆಸಿನಲ್ಲಿಯೇ ಒಡಕುಂಟಾಗಿ ಈಗ ಅದರೊಂದಿಗಿರುವ ಹಲವರು ಮುಂದಿನ ಸುಧಾರಣೆಯಲ್ಲಿ ಸರ್ಕಾರದೊಡನೆ ಸಹಕರಿಸಬಹುದೆಂದೇ ಅಧಿಕಾರಿಗಳ ನಿರೀಕ್ಷೆ. ಈ ಸಮಾಚಾರವು ಆಧಾರರಹಿತವಾದುದೆಂದು ಹೇಳಲಾಗುವುದಿಲ್ಲ.

'ನವಯುಗ'

ಸೆಂಟ್ರಲ್ ಬ್ಯಾಂಕ್ ಮೀಟಿಂಗು.

ಈ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ತಾ. 25ರಲ್ಲು ಬ್ಯಾಂಕಿನ ಆಫೀಸಿನಲ್ಲಿ ನಡೆಯಿತು. 11 ಡೈರೆಕ್ಟರುಗಳು ಹಾಜರಿದ್ದರಲ್ಲದೆ ಕೋ-ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರವರಾದ ಮೆ. ಯಂ. ಎನ್. ಮಂದಣ್ಣನವರೂ ಸಹ ಹಾಜರಿದ್ದರು.

ಬ್ಯಾಂಕಿನ ಖಾಯಂ ಅಧ್ಯಕ್ಷರಾದ ರಾವ್ ಬಹದ್ದೂರ್ ಕೋದಂಡ ಅಪ್ಪಯ್ಯನವರು ಮರಣಪಟ್ಟದ್ದರ ದೆಸೆಯಿಂದಲೂ, ಹಂಗಾಮಿ ಅಧ್ಯಕ್ಷರಾದ ರಾವ್ ಬಹದ್ದೂರ್ ಪಿ. ದೇವಯ್ಯನವರು ಕಾಯಿಲೆಯ ದೆಸೆಯಿಂದ ಮೀಟಿಂಗಿಗೆ ಹಾಜರಾಗದ್ದರಿಂದಲೂ ಈ ದಿನದ ಮೀಟಿಂಗಿಗೆ ಮೆ. ಅಪ್ಪಾರಂಡ ಚಂಗಪ್ಪ ಯಂ. ಎಲ್. ಸಿ. ಯವರನ್ನು ಅಧ್ಯಕ್ಷರನ್ನಾಗಿ ಚುನಾಯಿಸಲಾಯಿತು.

ಅಧ್ಯಕ್ಷರಾದ ಚಂಗಪ್ಪನವರು ರಾ. ಬಾ. ಅಪ್ಪಯ್ಯನವರು 1927ನೇ ಇಸವಿ ಆರಂಭದಿಂದ ಬ್ಯಾಂಕಿನ ಪ್ರೆಸಿಡೆಂಟರಾಗಿ ತೃಪ್ತಿಕರವಾಗಿ ಕೆಲಸ ಮಾಡಿ ಈಗ ಮೃತರಾದದ್ದಕ್ಕೆ ಬ್ಯಾಂಕಿನ ವ್ಯಸನವನ್ನು ಸೂಚಿಸಿ ಅವರ ಕುಟುಂಬಕ್ಕೆ ಸಹಾನುಭೂತಿ ಪತ್ರ ಬರೆಯಬೇಕೆಂಬ ಠರಾವನ್ನು ಸೂಚಿಸಿದರು. ಡೈರೆಕ್ಟರುಗಳೆಲ್ಲರೂ ಎದ್ದು ನಿಂತು ಠರಾವು ಮಂಜೂರ್ ಮಾಡಲಾಯಿತು.

ರಾ. ಬಾ. ಕೆ. ಅಪ್ಪಯ್ಯನವರು ಕಳೆದ 5 ವರ್ಷಗಳಿಂದಲೂ ಬ್ಯಾಂಕಿನ ಚುನಾಯಿತ ಪ್ರೆಸಿಡೆಂಟರಾಗಿದ್ದು ಮಾಡಿದ ಒಳ್ಳೆ ಕೆಲಸಗಳನ್ನು ಬ್ಯಾಂಕು ಅಂಗೀಕರ ಮಾಡುತ್ತದೆ ಎಂಬ ಠರಾವನ್ನು ಮಂಜೂರು ಮಾಡಬೇಕೆಂತ ಮೆ. ಸಿ. ಎನ್. ಪಂಕಪ್ಪಯ್ಯನವರು ಸೂಚಿಸಿದರು. ಸರ್ವ ಸಮ್ಮತದಿಂದ ಮಂಜೂರಾಯಿತು.

1. ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು.

2. ಕಳೆದ ಮೇ ತಿಂಗಳ ಜಮು ಮತ್ತು ಖರ್ಚಿನ ಲೆಕ್ಕ ಓದಿ ಮಂಜೂರು ಮಾಡಲಾಯಿತು.

3. ಈ ಕೆಳಗಿನ ಸೊಸೈಟಿಗಳಿಗೆ ಸಾಲಗಳು ಮಂಜೂರಾದುವು. (1) ಕುಂಜಿಲ್ಗೇರಿ ಸೊಸೈಟಿಗೆ ರೂ. 700, (2) ಬಲಮುರಿ ಸೊಸೈಟಿಗೆ ರೂ. 300, (3) ಮುತ್ತೂರು ಸೊಸೈಟಿಗೆ ರೂ. 2000, (4) ಕಿಗ್ಗಟ್ಟುನಾಡು ಸ್ಟೋರಿಗೆ ರೂ. 1000 (5) ಹುಂಡಿ ಸೊಸೈಟಿಗೆ ರೂ. 350, (6) ಕಾಟಕೇರಿ ಸೊಸೈಟಿಗೆ ರೂ. 500, (7) ನಿಡತ ಸೊಸೈಟಿಗೆ ರೂ. 200, (8) ಕಣಗಾಲು ಸೊಸೈಟಿಗೆ ರೂ. 300, (9) ಕೊಡ್ಲೂರು ಸೊಸೈಟಿಗೆ ರೂ. 2000, (10) ವಾಲ್ನೂರು ಸೊಸೈಟಿಗೆ ರೂ. 1250, (11) ಹೆಬ್ಬಾಲೆ ಸೊಸೈಟಿಗೆ ರೂ. 1000, ಮತ್ತು (12) ಶಾಲೂರು ಸೊಸೈಟಿಗೆ ರೂ. 110.

4. ಹೆಬ್ಬಾಲೆ ಪಂಚಮ ಸೊಸೈಟಿಗೆ, ವಾಲ್ನೂರುತ್ಯಾಗತ್ತೂರು ಸೊಸೈಟಿಗೆ ಮತ್ತು ಶನಿವಾರಸಂತೆ ಟೌನ್ ಸೊಸೈಟಿಗೆ ಕಾರಣಾಂತರದಿಂದ ಸಾಲ ಮಂಜೂರಾಗಲಿಲ್ಲ.

5. ದಿವಂಗತರಾದ ರಾ. ಬಾ. ಕೋದಂಡ ಅಪ್ಪಯ್ಯನವರ ಜಾಗೆಗೆ ಡೈರೆಕ್ಟರನ್ನಾಗಿ ರಿಟಯರ್ಡ್ ರಿಜಿಸ್ಟ್ರಾರವರಾದ ಮೆ. ಕೆ. ಎನ್. ಸುಬ್ರಾಯರವರನ್ನು ಆರಿಸಲಾಯಿತು.

6. ಖಾಯಂ ಅಧ್ಯಕ್ಷರಾಗಿ ಮೃತ ಹೊಂದಿದ ರಾ. ಬಾ. ಕೋದಂಡ ಅಪ್ಪಯ್ಯನವರ ಬದಲಿಗೆ ರಾ. ಬಾ. ಪಟ್ಟಮಾಡ ದೇವಯ್ಯನವರನ್ನು ಪ್ರೆಸಿಡೆಂಟರನ್ನಾಗಿ ಚುನಾಯಿಸಲಾಯಿತು. ಮೆ. ಅಪ್ಪಾರಂಡ ಚಂಗಪ್ಪ ಯಂ. ಎಲ್. ಸಿ. ಯವರ ಹೆಸರು ಸೂಚಿಸಲಾಯಿತು. ಆದರೆ ತಾನು ಮಡಿಕೇರಿಯಲ್ಲಿ ರುವವನಲ್ಲವಾದ್ದರಿಂದ ಬ್ಯಾಂಕಿನ ಪ್ರೆಸಿಡೆಂಟರು ಮಡಿಕೇರಿಯಲ್ಲೇ ಇರುವವರಾದರೆ ಅನುಕೂಲವೆಂತ ಮೆ. ಎ. ಬಿ. ಚಂಗಪ್ಪನವರು ಸೂಚಿಸಿದರು. ಅನಂತರ ರಾ. ಬಾ. ಪಟ್ಟಮಾಡ ದೇವಯ್ಯನವರೇ ಚುನಾವಣೆಯಾದರು.

7. 'ಕೊಡಗು' ಪ್ರೆಸ್ಸಿಗೆ 1931—32ನೇ ಸಂವತ್ಸರಕ್ಕೆ ಕೊಡಬೇಕಾದ ಪ್ರಕಟಣೆ ಚಾರ್ಜು 75 ರೂ. ಕೊಡಬಹುದೆಂತಲೂ, 1932—33ನೇ ಸಂವತ್ಸರದಲ್ಲೂ ಸಹ ಇದೇ ದರದಲ್ಲು ಕೊಡಬಹುದೆಂತಲೂ ತೀರ್ಮಾನವಾಯಿತು.

8. ಸೋಮವಾರಪೇಟೆ ಟೌನ್ ಸೊಸೈಟಿಯವರು ತಾವು ಕಳೆದ ತಿಂಗಳಲ್ಲು ಹೊಂದಿಕೊಂಡ 4000 ರೂ. ಸಾಲಗಳಿಗೆ ಕೊಟ್ಟ 6 ತಿಂಗಳ ಕಂತನ್ನು ವಜಾಮಾಡಿ ವರ್ಷದ ಕಂತು ಕೊಡಬೇಕಾಗಿ ಬರಕೊಂಡ ಅರ್ಜಿ ಓದಲಾಯಿತು.

ಅವರ ಅರ್ಜಿ ಮೇರೆ 3 ವರ್ಷದ ಕಂತುಗಳನ್ನು ಕೊಡಬಹುದೆಂತ ತೀರ್ಮಾನವಾಯಿತು.

9. ಕಿತ್ತೂರು ಸೊಸೈಟಿ, ಹುದೂರು ಸೊಸೈಟಿ, ಕುಂಜಿಲಗೇರಿ ಸೊಸೈಟಿ ಮತ್ತು ಹುದಿಕೇರಿ ಟೌನ್ ಸೊಸೈಟಿಯವರು ತಮ್ಮ ಬಾಕ್ಸು ಬ್ಯಾಂಕಿಗೆ ಮರುಪಾವತಿ ಮಾಡಲಿಕ್ಕೆ ಇರುವ ವಾಯಿದೆ ಮೀರಿದ ಸಾಲಗಳಿಗೆ ಹೆಚ್ಚಿನ ಕಂತು ಕೊಡಬೇಕಾಗಿ ಬರಕೊಂಡ ಅರ್ಜಿ ಓದಲಾಯಿತು.

ಮೇಲ್ಕಂಡವರ ಅರ್ಜಿ ಮೇರೆ ಹೆಚ್ಚಿನ ಕಂತು ಕೊಡಲು ಆಗುವುದಿಲ್ಲವೆಂತಲೂ, ಪಡನೆ ವಾಯಿದೆ ಮೀರಿದ ಸಾಲ ಮರುಪಾವತಿ ಮಾಡದಿದ್ದ ಪಕ್ಷ ವಸೂಲಾತಿಗೆ ತಕ್ಕ ಕ್ರಮ ತೆಗೆದುಕೊಳ್ಳಲಾದೀತಾಗಿಯೂ ತೀರ್ಮಾನವಾಯಿತು.

10. ವೀರಾಜಪೇಟೆ ಸ್ಟೋರ್ ಫೆಡರೇಶನ್ ಮತ್ತು ಯೂನಿಯನ್‌ಗಳಿಗೆ ಸೇರದ ಬಾಬಿನಲ್ಲಿ ಫೆಡರೇಶನ್ ಪ್ರೆಸಿಡೆಂಟರಿಂದ ಬಂದ ಪತ್ರ ಓದಲಾಯಿತು.

11. ರಿಜರ್ವ್ ಫಂಡ್ ಡಿಪಾಜಿಟ್ಟನ್ನು ಒಂದು ವರ್ಷದ ಬದಲು ಹೆಚ್ಚಿನ ಅವಧಿಗೆ ಡಿಪಾಜಿಟ್ಟು ಮಾಡುವ ವಿಷಯ ಚರ್ಚಿಸಿ ಈ ವಿಷಯ ಫೆಡರೇಶನವರು ಸೊಸೈಟಿಗಳಿಗೆ ತಿಳಿಸುವಂತೆ ಕೇಳಿಕೊಳ್ಳಬೇಕೆಂತ ತೀರ್ಮಾನವಾಯಿತು.

12. ಸೋಮವಾರಪೇಟೆ ಸ್ಟೋರಿನ ರಿಜಿಸ್ಟ್ರೇಶನನ್ನು ವಜಾ ಮಾಡಿದ ಉದ್ದೇಶ್ಯ ರಿಜಿಸ್ಟ್ರಾರವರಿಂದ ಬಂದ ಆರ್ಡರ್ ಓದಲಾಯಿತು.

ಬ್ಯಾಂಕುಗಳಲ್ಲಿ ಡಿಪಾಜಿಟ್ ಮಾಡಿದ ಹಣದ ಸ್ಪೆಕಿ ನೇಶನಲ್ ಬ್ಯಾಂಕಿನಲ್ಲಿ ಡಿಪಾಜಿಟ್ ಇರುವ ಹಣವನ್ನು ಪುನಃ 3 ಅಥವಾ 6 ತಿಂಗಳ ಅವಧಿಗೆ ಯಾವ ದರದಲ್ಲಿ ಡಿಪಾಜಿಟ್ ತೆಗೆದುಕೊಳ್ಳಲಾಗುವುದೋ ಎಂತ ಬರೆದು ಕೇಳಬೇಕೆಂತ ತೀರ್ಮಾನವಾಯಿತು.

ಮರ್ಕಂಟೈಲ್ ಬ್ಯಾಂಕಿನಲ್ಲಿರುವ 15,000 ರೂಪಾಯಿಗಳ ಡಿಪಾಜಿಟ್ಟನ್ನು ವಾಪಸು ತರಿಸಿಕೊಂಡು ಅದರಲ್ಲಿ 10,000 ರೂಪಾಯಿಗಳನ್ನು ಪೋಸ್ಟಾಫೀಸಿನಲ್ಲಿ ಕ್ಯಾಶ್ ಸರ್ಟಿಫಿಕೇಟ್ ತೆಗೆದುಕೊಳ್ಳಬೇಕೆಂತ ತೀರ್ಮಾನವಾಯಿತು.

ಎ. ಬಿ. ಚಂಗಪ್ಪ.
(ಅಧ್ಯಕ್ಷರು.)

ಜನರಲ್ ಅಷ್ಯೂರೆನ್ಸ್ ಸೊಸೈಟಿ.

ಅಜಮೀರ್.

ನಮ್ಮ ಆಯವ್ಯಯದ ಪಟ್ಟಿಯೇ ನಮ್ಮ ಅಭಿವೃದ್ಧಿಯನ್ನು ವ್ಯಕ್ತಗೊಳಿಸುತ್ತದೆ.

ವರ್ಷ	ಮೇಲ್ಪಟ್ಟ ವರಮಾನ	ಮೇಲ್ಪಟ್ಟ ಮೂಲಧನ	ಖರ್ಚು ವರಮಾನದ ಶೇಕಡ
1911	46,248	49,442	82.9
1921	2,92,627	6,53,350	43 2
1931	12,50,000	40,00 000	28.2

ಬೋನಸ್ಸು.

ಖರ್ಚು ನಫೆ ದೊರಕುವ ಜೀವಾವಧಿ ಪಾಲಿಸಿಗಳ ಮೇಲೆ ವರ್ಷ ಒಂದಕ್ಕೆ ಶೇಕಡ 22½

ಚೆನ್ನಾಗಿ ಕೆಲಸಮಾಡಿ ಅಭಿವೃದ್ಧಿ ಸ್ಥಿತಿಯಲ್ಲಿರುವ ಈ ಸೊಸೈಟಿಯಲ್ಲಿ ವಿಮೆ ಮಾಡಿ ಕಡಿಮೆ ಪ್ರೀಮಿಯಂ ಪಾವತಿ ಮಾಡುವ ಸೌಲಭ್ಯ ಹೊಂದಿ ಅಥವಾ ಈ ಕಂಪೆನಿಯ ಪರವಾಗಿ ಕೆಲಸಮಾಡಿ ಉತ್ತಮ ಕಮಿಶನ್ ದರದ ಪ್ರಯೋಜನ ಹೊಂದಿ.

ಹೆಚ್ಚು ವಿಚಾರಗಳಿಗೆ ಈ ವಿಳಾಸಕ್ಕೆ ಬರೆಯಿರಿ:—

ಎ. ರಾಮಚಂದ್ರರಾವ್,
ಸುಪರಿಂಟೆಂಡೆಂಟ್,
ಮಿಂಟೋ ಆಸ್ಪತ್ರೆ ಬಳಿ,
ಬೆಂಗಳೂರು.

52—10

ಗೋಣಿಕೊಪ್ಪಲು ಏಮಾಲ್ಗಮೇಶನ್ ಮೀಟಿಂಗ್.

ತಾರೀಖು 26—6—32 ರಲ್ಲು ಗೋಣಿಕೊಪ್ಪಲಿನಲ್ಲು ಮ. ಶ್ರಿ. ಮನೆಯಪಂಡ ಪೂವಯ್ಯನವರ ಅಧ್ಯಕ್ಷತೆಯಲ್ಲು ನಡೆದ ಕಿಗ್ಗಟ್ಟುನಾಡು ಪಬ್ಲಿಕಿನವರ ಮೀಟಿಂಗಿನ ತಪಶೀಲ್:—

ರಾವುಬಹದ್ದೂರ್ ಕೋದಂಡ ಅಪ್ಪಯ್ಯನವರ ಮತ್ತು ಕಿಗ್ಗಟ್ಟುನಾಡು ಪಾಗುವರ ಕೌನ್ಸಿಲ್ ಮೆಂಬರಾದ ಚಿ. ಎ. ನಂಜಪ್ಪ ಗೌಡರ ಅಕಾಲ ಮರಣಕ್ಕೆ ಈ ಸಭೆಯು ವ್ಯಸನ ಸೂಚಿಸುತ್ತೇವೆಂದು ಮ. ರಾ. ಶ್ರಿ. ಚೇಮಿರ ಕುಟ್ಟಪ್ಪನವರು ತಂದ ಠರಾವು ಬಹುಮತದಲ್ಲು ಪಾಸಾಯಿತು.

ನಮ್ಮ ಕೊಡಗು ದೇಶಕ್ಕೆ ನೆರೆ ಪ್ರಾಂತ್ಯಕ್ಕೆ ಸಿಕ್ಕುವಂತ ಪೂರ್ಣ ಜವಾಬ್ದಾರಿ ಸರ್ಕಾರವನ್ನು ಕೊಡಬೇಕು ಎಂಬ ಠರಾವು ಬಹುಮತದಿಂದ ಪಾಸಾಯಿತು.

ಯಂ. ಜಿ. ಪೂವಯ್ಯ,
ಅಧ್ಯಕ್ಷರು.

ಬಾಲಾರ್ಕಮಧು.

ಬಾಲಾರ್ಕಮಧು ಮಕ್ಕಳಿಗೆ ಕೊಡುವುದರಿಂದ ಶಕ್ತಿಯೂ ಆರೋಗ್ಯವೂ ಹೆಚ್ಚುವುದು. ಇದು ಮಧುರವಾಗಿದೆ. ಬೆಲೆ ಶೀಸೆ 1ಕ್ಕೆ 0—12—0 ಟ. ಖ. 0—12—0.



(Spleen Lever enlargement) ಎಂಬ ಮಕ್ಕಳ ಭಯಂಕರ ಗಡ್ಡೆರೋಗ—ಪ್ಲೀಹ—ಪಿತ್ತಕೋಶದ ಗಡ್ಡೆಗೆ ಚಕ್ರಬಿಂದು. ಚಕ್ರಕ್ಷಾರ—ಚಕ್ರಚೂರ್ಣ—ಚಕ್ರ ಪ್ರಭಾ—ಈ ನಾಲ್ಕು ಮಹೌಷಧಗಳಿವೆ. ಸಾವಿರಾರು ಮಕ್ಕಳ ಪ್ರಾಣವನ್ನು ಉಳಿಸಿದ, ನಾಲ್ಕು ಔಷಧಗಳು ಸೇರಿ 1 ತಿಂಗಳ ಔಷಧದ ಬೆಲೆ 3—0—0. ಟ ಖ. 0—8—0. ಏಜೆಂಟರು ಬೇಕಾಗಿರುವರು.

ಪ. ಎ. ಮುನ್. ಶ್ರೀನಿವಾಸರಾವ್,
ವೈ. ವಿ. ಆಯುರ್ವೇದಭಿಷಕ್,

ಬ್ರಾಂಚ್ ಆಫೀಸ್, ಉಡ್ಪಿ. S. K. } Spleen & Lever ಸ್ಪೆಶಲಿಸ್ಟ್. ಯಂ. ವಿ. ಪ್ರಸಾದಿಕ ಔಷಧಾಲಯ,

52-24 ಶಿಮೊಗಾ, (ಮೈಸೂರು ಸೀಮೆ)

ಎಂಪೈರ್ ಆಫ್ ಇಂಡಿಯಾ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

(ಸ್ಥಾಪನೆಯಾದದ್ದು 1897.)

ಹಿಂದೂಸ್ಥಾನದಲ್ಲಿ ಪ್ರಾಮುಖ್ಯವೂ, ಜನಪ್ರಿಯವೂ ಆಗಿರುವ ಈ ಕಂಪೆನಿಯಲ್ಲಿ ನೀವು ಜೀವ ವಿಮೆ ಮಾಡುವುದಕ್ಕೆ ಇದೇ ತಕ್ಕ ಸಮಯ.

ಬೋನಸ್ ವರ್ಷ! ಬೋನಸ್ ವರ್ಷ!!

ಸಾಹಸವಂತರಾದ ಏಜೆಂಟರು ಬೇಕಾಗಿದೆ.

ಹೆಡ್ ಆಫೀಸು:— ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ.

ಬ್ರಾಂಚ್ ಆಫೀಸು:— 152—3 ಕಮರ್ಷಿಯಲ್ ಸ್ಟ್ರೀಟ್, ಬೆಂಗಳೂರು.

52—40



26—1

ದಕ್ಷಿಣ ಆಫ್ರಿಕಾದಲ್ಲಿನ ಸತ್ಯಾಗ್ರಹ.

(ಮಹಾತ್ಮ ಗಾಂಧಿಯವರ ಲೇಖನಿಯಿಂದ)

ಸುಮಾರು ನಾನೂರು ವರ್ಷಗಳ ಹಿಂದೆ ಡಚ್ಚರು ಈ ದೊಡ್ಡ ದೇಶದಲ್ಲಿ ಒಂದು ವಸಾಹತು (ಹೊಸದಾಗಿ ನಿವಾಸವನ್ನು ಏರ್ಪಡಿಸಿಕೊಂಡ ಸ್ಥಳ) ವನ್ನು ಸ್ಥಾಪಿಸಿದರು. ಆಗ ಆ ಪ್ರದೇಶದಲ್ಲಿ ಸಾಮಾನ್ಯರೂ, ಸಿಷ್ಟಪಟಿಗಳೂ ಆದ ಜನರು ವಾಸಿಸುತ್ತಿದ್ದರು. ಅವರು ಗುಲಾಮರನ್ನು ಕೆಲಸಗಳಿಗೆ ಇಟ್ಟುಕೊಂಡಿದ್ದರು. ಕೆಲವು ಜಾವಾದಿಂದ ಬಂದ ಡಚ್ಚರು ತಮ್ಮ ಮಲಯ ದೇಶದ ಗುಲಾಮರನ್ನು ಕರೆತಂದು,—ನಾವು ಈಗ ಕೇಪ್ ಕಾಲೊನಿ ಎಂಬುದಾಗಿ ಕರೆಯುತ್ತಿರುವ ಪ್ರದೇಶದಲ್ಲಿ ನೆಲಮನೆಗಳನ್ನು ಮಾಡಿದರು. ಈ ಮಲಯರು ಮುಸಲ್ಮಾನರು. ಇವರ ಧಮನಿಗಳಲ್ಲಿ ಡಚ್ಚರ ರಕ್ತವು ಪ್ರವಹಿಸುತ್ತಿರುವುದಲ್ಲದೆ ಕೆಲವು ಡಚ್ಚರ ಗುಣಗಳೂ ಅವರಲ್ಲಿ ಕಂಡುಬರುತ್ತವೆ. ಇವರು ದಕ್ಷಿಣ ಆಫ್ರಿಕಾದಲ್ಲಿ ಎಲ್ಲೆಡೆಗಳಲ್ಲೂ ಚದುರಿರುವರಾದರೂ ಕೇಪ್‌ಟೌನೇ ಇವರ ಮುಖ್ಯ ವಾಸಸ್ಥಾನ—(ಅಲ್ಲಿ ಇವರು ಬಹು ಸಂಖ್ಯಾಕರು.) ಇಂದು ಇವರಲ್ಲಿ ಅನೇಕರು ಯೂರೋಪಿಯನ್ನರ ಬಳಿ ಚಾಕರರಾಗಿದ್ದಾರೆ; ಮತ್ತೆ ಕೆಲವರ ಸ್ವತಂತ್ರ ವೃತ್ತಿಗಳಲ್ಲಿ ನಿರತರಾಗಿದ್ದಾರೆ. ಮಲಯ ಸ್ತ್ರೀಯರು ಬಹಳ ಪರಿಶ್ರಮಿಗಳು. ಬುದ್ಧಿವಂತರು. ಸಾಮಾನ್ಯವಾಗಿ ಇವರದು ಶುಚಿವಂತ ಜೀವನ ವಿಧಾನ. ಸ್ವಚ್ಛತೆ ಹೆಚ್ಚು. ಇವರು ಹೊಲಿಗೆಯ ಕೆಲಸದಲ್ಲಿಯೂ, ಬಟ್ಟೆಗಳನ್ನು ಒಗೆದು ಇಸ್ತ್ರಿ ಮಾಡುವುದರಲ್ಲಿಯೂ ನಿಪುಣರು. ಗಂಡಸರು ಚಿಕ್ಕ ಪುಟ್ಟ ವ್ಯಾಪಾರಗಳನ್ನು ಮಾಡುತ್ತಾರೆ. ಬಹುಮಂದಿ ಕುದುರೆ ಗಾಡಿಗಳನ್ನು ಹೊಡೆಯುತ್ತಾರೆ. ಕೆಲವರು ಆಂಗ್ಲ ಭಾಷೆಯಲ್ಲಿ ಪ್ರೌಢಭಾಷಾ ಶಿಕ್ಷೆಯನ್ನೂ ಪಡೆದಿದ್ದಾರೆ. ಇವರಲ್ಲೊಬ್ಬರಾದ ಮಿ. ಅಬ್ದುಲ್ ರಹಮಾನ್ ಎಂಬುವರು ಕೇಪ್‌ಟೌನಿನಲ್ಲಿ ಹೆಸರುವಾಸಿಯಾದ ಡಾಕ್ಟರು. ಇವರು ಕೇಪ್‌ಟೌನಿನಲ್ಲಿನ ಹಳೆಯ ಕಲೋನಿಯಲ್ ಶಾಸನ ಸಭಾ ಸದಸ್ಯರಾಗಿಯೂ ಇದ್ದರು. ಹೊಸ ರಾಜಕೀಯ ವಿಧಾನದ ಪ್ರಕಾರ ಈ ಪಾರ್ಲಿಮೆಂಟ್ ಪ್ರವೇಶವನ್ನು ತಪ್ಪಿಸಿದ್ದಾರೆ.

ಈ ಡಚ್ಚರ ವಿವರಣೆಯನ್ನು ಹೇಳುತ್ತಾ ಆಕಸ್ಮಿಕವಾಗಿ ಮಲಯರ ವಿಚಾರವನ್ನೂ ಸ್ವಲ್ಪ ಹೇಳಿದೆ. ಡಚ್ಚರು ಯಾವ ರೀತಿ ಮುಂದುವರಿದರೆಂಬುದನ್ನು ನೋಡೋಣ. ಡಚ್ಚರು ಧೈರ್ಯಶಾಲಿಗಳಾದ ಸೈನಿಕರಾಗಿರುವಂತೆಯೇ ನಿಪುಣರಾದ ಭೂವ್ಯವಸಾಯಿಗಳೂ ಆಗಿದ್ದಾರೆ. ತಾವಿದ್ದ ಪ್ರದೇಶವು ವ್ಯವಸಾಯಕ್ಕೆ ಬಹಳ ಉತ್ಕೃಷ್ಟವಾದುದೆಂದು ಅವರು ಗೊತ್ತು ಹಚ್ಚಿದರು. ಮತ್ತು ಅಲ್ಲಿನ ನೇಟೀವ್ ಜನರು ವರ್ಷದಲ್ಲಿ ಎಲ್ಲೋ ಕೊಂಚ ಕಾಲ ಮಾತ್ರ ಕೆಲಸ ಮಾಡಿ ತಮ್ಮ ಜೀವನ ಮಾಡಿಕೊಳ್ಳುತ್ತಿದ್ದುದನ್ನು ನೋಡಿದರು. ಇನ್ನು ಅವರನ್ನು ತಮಗಾಗಿ ದುಡಿಯುವಂತೆ ಯಾಕೆ ಬಲಾತ್ಕರಿಸಬಾರದು? ಡಚ್ಚರ ಬಳಿ ಫಿರಂಗಿಗಳಿದ್ದವು. ಅವರು ಸ್ವಾತಂತ್ರ್ಯ ವಿಷಯವನ್ನು ಬಲ್ಲವರು. ಇತರ ಪ್ರಾಣಿಗಳನ್ನೂ, ಸಾಧು ಮಾಡುವಂತೆಯೇ ಮಾನವ ಜೀವಿಗಳನ್ನೂ ಹತೋಟಿಯಲ್ಲಿಟ್ಟುಕೊಳ್ಳುವುದನ್ನು ಬಲ್ಲವರು ಹೀಗೆ ಮಾಡುವುದರಲ್ಲಿ ಅವರ ಮತವು ಅಡ್ಡಿಯಾಗಬಾರದೆಂದು ಅವರು ನಂಬಿದರು. ಈ ರೀತಿ ತಾವು ಮಾಡುತ್ತಿದ್ದ ಕೆಲಸದ ಸದಾಚಾರದಲ್ಲಿ ಕಿಂಚಿತ್ತಾದರೂ ಅನುಮಾನಿಸದೆ ದಕ್ಷಿಣ ಆಫ್ರಿಕಾ ನಿವಾಸಿ (ನೇಟಿವ್) ಕೈಯಲ್ಲಿ ದುಡಿಸುತ್ತಾ ಬೇಸಾಯವನ್ನು ಪ್ರಾರಂಭ ಮಾಡಿದರು.

ಹೀಗೆ ತಮ್ಮ ಸ್ವಾಸ್ಥ್ಯವಿಸ್ತಾರಕ್ಕೆ ಡಚ್ಚರು ಒಳ್ಳೆಯ ಪ್ರದೇಶಗಳನ್ನು ಹುಡುಕುತ್ತಿದ್ದಂತೆಯೇ, ಕ್ರಮೇಣ ಅಲ್ಲಿಗೆ ಹೋದ ಆಂಗ್ಲೇಯರೂ ಹುಡುಕಲು ಮೊದಲು ಮಾಡಿದರು: ವಾಸ್ತವವಾಗಿ ಆಂಗ್ಲೇಯರೂ, ಡಚ್ಚರೂ ದಾಯಾದಿಗಳು. ಅವರ ಸ್ವಭಾವಗಳೂ ಆಕಾಂಕ್ಷೆಗಳೂ ಒಂದೇ ಬಗೆ. ಒಂದೇ ಅಡಿಗೆಯಲ್ಲಿ ತಯಾರಾದ ಮಡಿಕೆಗಳೂ ಅನೇಕ ಬಾರಿ ಒಂದಕ್ಕೊಂದಕ್ಕೆ ತಗುಲುವುದಿಲ್ಲವೆ? ಹಾಗೆಯೇ ಈ ರಾಷ್ಟ್ರಗಳೂ ಸಹ ತಮ್ಮ ತಮ್ಮ ಸ್ವಂತ ಆಸ್ತಿಪಾಸ್ತಿಗಳನ್ನು ಕ್ರಮೇಣ ವೃದ್ಧಿಗೊಳಿಸುತ್ತಾ, ನಿಗ್ರೋ ಜನರನ್ನು ಹತೋಟಿಗೆ ತಂದುಕೊಳ್ಳುವಾಗ ಒಂದಕ್ಕೊಂದಕ್ಕೆ ತಿಕ್ಕಾಟವಾರಂಭವಾಯಿತು. ಅವರವರಿಗೆ ಜಗಳಗಳಾದವು. ಯುದ್ಧಗಳೂ ನಡೆದವು. ಮಾಜುಬಾ ಬೆಟ್ಟದ ಬಳಿ ಆಂಗ್ಲೇಯರಿಗೆ ಸೋಲುಂಟಾಯಿತು. ಈ ಮಾಜುಬಾ ಪ್ರಕರಣದ ಘಾಯವು ಮಾಯದೆ ಹಾಗೆಯೇ ಇದ್ದು ಅನಂತರ ೧೮೯೯ ರಿಂದ ೧೯೦೨ ರವರೆಗೆ ನಡೆದ ಬೋಯರ್ ಯುದ್ಧ ಕಾಲದಲ್ಲಿ ಮಹಾವ್ರಣವಾಗಿ ಪರಿಣಮಿಸಿ ಬಾಯಿ ಕೂಡ ಕಾಣಿಸಿಕೊಂಡಿತು. ಜನರಲ್ ಕ್ರೋಂಜೆಯು ಶರಣಾಗತನಾಗಲು ಲಾರ್ಡ್ ರಾಬರ್ಟ್ಸ್‌ನು ವಿಕ್ಟೋರಿಯಾ ಮಹಾರಾಜ್ಞಿಯವರಿಗೆ ಮಾಜುಬಾ ಹಗೆಯ ಸೇಡನ್ನು ತೀರಿಸಿಕೊಂಡಂತಾಯಿತೆಂದು ವರ್ತಮಾನ ಕಳುಹಿಸಲು ಸಾಧ್ಯವಾಯಿತು.

ಆದರೆ ಈ ಎರಡು ರಾಷ್ಟ್ರಗಳಿಗೂ ಬೋಯರ್ ಯುದ್ಧಕ್ಕೆ ಮೊದಲೇ ಈ ಮೊದಲನೆಯ ತಿಕ್ಕಾಟವು ನಡೆದು, ಡಚ್ಚರಲ್ಲಿ ಅನೇಕರಿಗೆ ಆಂಗ್ಲೇಯರ ನಾಮ ಮಾತ್ರ ಅಧಿಕಾರಕ್ಕೂ ಒಳಪಡಲು ಇಷ್ಟವಿಲ್ಲದೆ ಹೋಗಲು, ದಕ್ಷಿಣ ಆಫ್ರಿಕಾ ದೇಶದಲ್ಲಿ ಇನ್ನೂ ಗೊತ್ತಿಲ್ಲದಿದ್ದ ಅಂತರ್ಭಾಗಗಳಿಗೆ ವಲಸೆ ಹೋದರು. ಇದೇ ಟ್ರಾನ್ಸ್‌ವಾಲ್ ಮತ್ತು ಆರೆಂಜ್ ಫ್ರೀ ಸ್ಟೇಟುಗಳ ಉತ್ಪತ್ತಿಗೆ ಕಾರಣ.

ಈ ಡಚ್ಚರಿಗೆ ದಕ್ಷಿಣ ಆಫ್ರಿಕಾದಲ್ಲಿ ಬೋಯರುಗಳು ಎಂಬುದಾಗಿ ಹೆಸರುಂಟಾಯಿತು. ಮಗುವು ತಾಯನ್ನು ಬಿಡದಿರುವಂತೆ ಇವರು ತಮ್ಮ ಭಾಷೆಯನ್ನು ಬಿಡದೆ ಕಾಪಾಡಿಕೊಂಡು ಬಂದಿದ್ದಾರೆ. ತಮ್ಮ ಭಾಷೆ ಮತ್ತು ತಮ್ಮ ಸ್ವಾತಂತ್ರ್ಯಗಳಿಗಿರುವ ಸಮೀಪ ಸಂಬಂಧವನ್ನು ಇವರು ಬಹಳ ಚೆನ್ನಾಗಿ ಬಲ್ಲರು. ಇವರು ಅನೇಕ ದಂಡಯಾತ್ರೆಗಳಿಗೆ ಸಿಕ್ಕಿದ್ದರೂ ತಮ್ಮ ಮಾತೃಭಾಷೆಯನ್ನು ಕೆಡಿಸದೆ ಕಾಪಾಡಿಕೊಂಡು ಬಂದಿದ್ದಾರೆ. ಬೋಯರರ ಬುದ್ಧಿಶಕ್ತಿಗನುಗುಣವಾಗಿ ಭಾಷೆಯೂ ಹೊಸರೂಪವನ್ನು ತಾಳಿತು. ಇವರು ಹಾಲೆಂಡಿನೊಂದಿಗೆ ವ್ಯವಹಾರ ಸಾಮೀಪ್ಯಗಳನ್ನು ಇಟ್ಟುಕೊಳ್ಳಲು ಅಸಾಧ್ಯವಾಯಿತು. ಇದ ಕಾರಣ, ಸಂಸ್ಕೃತದಿಂದ ಪ್ರಾಕೃತಭಾಷೆಯು ಹುಟ್ಟಿದಂತೆ ಡಚ್ಚ ಭಾಷೆಯಿಂದ ಹುಟ್ಟಿದ ಭಾಷೆಯೊಂದರಲ್ಲಿ ಮಾತನಾಡಲಾರಂಭಿಸಿದರು. ತಮ್ಮ ಪೀಳಿಗೆಯವರ ಮೇಲೆ ಅನಾವಶ್ಯಕವಾದ ತೊಂದರೆಯನ್ನು ಹೊರಿಸಲು ಮನಸ್ಸಿಲ್ಲದೆ ಅವರು ತಮ್ಮ ಈ ನೂತನ ಭಾಷಾಪ್ರಭೇದಕ್ಕೆ ಒಂದು ಹೊಸದಾದ ಶಾಶ್ವತವಾದ ರೂಪುಗೊಟ್ಟು ಅದನ್ನು "ಟಾಲ್" ಎಂದು ಕರೆದರು. ಅವರ ಪುಸ್ತಕಗಳು ಈ ಟಾಲ್ ಭಾಷೆಯಲ್ಲಿವೆ. ಅವರ ಮಕ್ಕಳು ಈ ಭಾಷೆಯ ಮೂಲಕ ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ. ಸಂಯುಕ್ತ ಪಾರ್ಲಿಮೆಂಟಿನ ಬೋಯರ್ ಸದಸ್ಯರು ಆ ಭಾಷೆಯಲ್ಲಿಯೇ ಭಾಷಣಗಳನ್ನು ಮಾಡಬೇಕೆಂದು ನಿರ್ಧರಿಸಿದ್ದಾರೆ. 'ಯೂನಿಯನ್' ರಚನಾನಂತರ, ಟಾಲ್ ಅಥವಾ ಡಚ್ ಮತ್ತು ಇಂಗ್ಲೀಷ್ ಭಾಷೆಗಳೆರಡೂ ದಕ್ಷಿಣ ಆಫ್ರಿಕಾದಲ್ಲೆಲ್ಲಾ ಸಮಸಮಾನವೆಂದು ಗೊತ್ತುಮಾಡಲಾಗಿದೆ. ಆದಕಾರಣದಿಂದಲೇ ಸರಕಾರದಿಂದ ಪ್ರಕಟವಾಗುವ ಗೆಜೆಟ್ಟುಗಳೂ, ಪಾರ್ಲಿಮೆಂಟಿನ ಕಾಗದ ಪತ್ರಗಳೂ ಎರಡು ಭಾಷೆಗಳಲ್ಲಿಯೂ ಇರಬೇಕಾಗಿವೆ.

ಈ ಬೋಯರರು ಸರಳ ಮನೋವೃತ್ತಿಯುಳ್ಳವರು, ಸಿಷ್ಟಪಟಿಗಳು. ಮತಶ್ರದ್ಧೆಯುಳ್ಳವರು. ಅವರು ಅಪಾರ ವಿಸ್ತಾರವಾದ ವ್ಯವಸಾಯ ಕ್ಷೇತ್ರಗಳ ಮಧ್ಯೆ ನೆಲಸಿದ್ದಾರೆ. ಈ ಕ್ಷೇತ್ರಗಳ ವಿಸ್ತೀರ್ಣವೆಷ್ಟೆಂಬ ಊಹೆಯೂ ನಮಗಿಲ್ಲ. ನಮ್ಮಲ್ಲಿ ಕ್ಷೇತ್ರ (ಫಾರಂ) ವೆಂದರೆ ಸಾಮಾನ್ಯವಾಗಿ ಒಂದೋ ಎರಡೋ ಎಕರೆಗಳೆಂದರ್ಥ. ಕೆಲವು ವೇಳೆ ಅದೂ ಇಲ್ಲ. ದಕ್ಷಿಣ ಆಫ್ರಿಕಾದಲ್ಲಿ ಪ್ರತಿಯೊಬ್ಬ ರೈತನಿಗೂ ನೂರಾರು ಎಕರೆ ಜಮೀನಿರುತ್ತದೆ. ಅದೆಲ್ಲ ಒಂದೇ ಬಾರಿ ಫಲಿಸಬೇಕೆಂದು ಅವನು ಆತುರಪಡುವುದಿಲ್ಲ. ಯಾವನಾದರೂ ಅವನೊಡನೆ ಚರ್ಚೆ ಮಾಡಿದ್ದೇ ಆದರೆ 'ಅದು ಬೀಳುಬಿದ್ದಿರಲಿ. ಹಾಗೆ ಬೀಳುಬಿದ್ದಿರುವುದನ್ನು ನಮ್ಮ ಮಕ್ಕಳು ಕ್ರಮೇಣ ಸಾಗುವಳಿಗೆ ತರುತ್ತಾರೆ' ಎಂದು ಹೇಳುವನು.

ಪ್ರತಿಯೊಬ್ಬ ಬೋಯರನೂ ಒಳ್ಳೆಯ ಸೈನಿಕ. ಬೋಯರುಗಳು ತಮ್ಮ ತಮ್ಮಲ್ಲಿ ಎಷ್ಟೇ ಕಾದಾಡಿಕೊಳ್ಳಲಿ, ತಮ್ಮ ಪ್ರಿಯ ಸ್ವಾತಂತ್ರ್ಯಕ್ಕೆ ಹಾನಿ ಬರುತ್ತದೆಂದು ತಿಳಿದ ಕೂಡಲೆ, ಎಲ್ಲರೂ ಸಿದ್ಧರಾಗಿ ಒಟ್ಟು ಮನುಷ್ಯನಂತೆ ಹೋರಾಡುತ್ತಾರೆ. ಸೈನಿಕ ವೃತ್ತಿಯು ಅವರ ಇಡೀ ರಾಷ್ಟ್ರದ ಸ್ವಭಾವ ಸಹಜವಾದ ಗುಣವಾದ ಕಾರಣ ಅವರಿಗೆ ಅಷ್ಟಾಗಿ ಕವಾಯತು ಬೇಕಾಗಿಲ್ಲ. ಜನರಲ್ ಸ್ಮಟ್ಸ್, ಜನರಲ್ ಡಿವೆಟ್ ಮತ್ತು ಜನರಲ್ ಹರ್ಟ್‌ಜೋಗ್ ಮುಂತಾದವರು ಎಂತಹ ಭಾರಿ ವಕೀಲರೂ, ರೈತರೂ ಆಗಿದ್ದರೋ ಹಾಗೆಯೇ ಭಾರಿ ಸೇನಾನಿಗಳೂ ಆಗಿದ್ದರು. ಜನರಲ್ ಬೋಥಾವಿಗೆ ಒಂಭತ್ತು ಸಾವಿರ ಎಕರೆಗಳುಳ್ಳ ಒಂದು ವ್ಯವಸಾಯ ಕ್ಷೇತ್ರವಿತ್ತು. ಆತನಿಗೆ ವ್ಯವಸಾಯದ ಎಲ್ಲಾ ಸಿಕ್ಕುಪಕ್ಕಗಳೂ ಕರತಲಾಮಲಕವಾಗಿದ್ದವು. ಸಂಧಿಪ್ರಸ್ತಾಪಗಳ ವಿಚಾರವಾಗಿ ರಾಯಭಾರ ನಡೆಸಲು ಆತನು ಯೂರೋಪಿಗೆ ಹೋಗಿದ್ದಾಗ, ಅವನಷ್ಟು ಚೆನ್ನಾಗಿ ಕುರಿಯ ವಿದ್ಯೆಯನ್ನು ಬಲ್ಲವನು ಯೂರೋಪಿನೊಳಗಾಗಿ ಮತ್ತೊಬ್ಬನಿಲ್ಲವೆಂದು ಎಲ್ಲರೂ ಆಡಿದರಂತೆ. ಜನರಲ್ ಬೋಥಾನು ಪ್ರೆಸಿಡೆಂಟ್ ಕ್ರೂಜರಿನ ಮೇಲೆ ಆ ಪದವಿಗೆ ಬಂದನು. ಆತನಿಗೆ ಇಂಗ್ಲೀಷಿನಲ್ಲಿ ಮಹಾ ಪರಿಶ್ರಮವಿತ್ತು. ಆದರೂ ಆತನು ಇಂಗ್ಲೆಂಡಿನಲ್ಲಿ ದೊರೆಯನ್ನೂ, ಮಂತ್ರಿ ಮಂಡಲದವರನ್ನೂ ಭೇಟಿ ಮಾಡಿದಾಗ ತನ್ನ ಮಾತೃಭಾಷೆಯಲ್ಲಿಯೇ ಮಾತನಾಡಿದನು. ಅದು ಸರಿಯಾದುದಲ್ಲವೆಂದು ಯಾರು ಹೇಳುತ್ತಾರೆ? ಆಂಗ್ಲೇಯ ಭಾಷಾ ಪ್ರವೀಣತೆಯನ್ನು ತೋರುವುದಕ್ಕೆ ಹೋಗಿ ತಪ್ಪುಗಿಪ್ಪು ಮಾಡುವಂತಹ ಕೆಲಸದಲ್ಲಿ ಯಾಕೆ ದುಡುಕಬೇಕು? ಅವನು ಏನನ್ನೋ ಯೋಚನೆ ಮಾಡುತ್ತಿರುವಾಗ ಆ ಘಂಟೆಯನ್ನು ಸರಿಯಾದ ಪದವನ್ನು ಹುಡುಕುತ್ತಾ—ಯಾಕೆ ಕೆಡಿಸಿಕೊಳ್ಳಬೇಕು? ಆಂಗ್ಲೇಯ ಮಂತ್ರಿಗಳು ಅನಿಚ್ಛಾಪೂರ್ವಕವಾಗಿಯೇ ಒಂದು ಬಳಕೆಯಲ್ಲಿಲ್ಲದ ಭಾಷಾ ಸಂಪ್ರದಾಯವನ್ನು (Idiom) ಉಪಯೋಗಿಸಬಹುದು. ಅವರು ಏನು ಹೇಳಿದರೆಂಬುದು ಆತನಿಗೆ ಗೊತ್ತಾಗದೆ ಹೋಗಬಹುದು. ತಪ್ಪುತಪ್ಪಾಗಿ ಉತ್ತರ ಕೊಟ್ಟು ತಕ್ಕರಿಬಿಕ್ಕರಿಯಾಗಬಹುದು. ಈ ರೀತಿ ಅವನ ಮುಖ್ಯಾಶಯವೇ ಕೆಟ್ಟುಹೋಗಬಹುದು. ಆತನು ಅಂತಹ ಮಹಾ ತಪ್ಪನ್ನು ಯಾತಕ್ಕಾಗಿ ಮಾಡಬೇಕು?

ಸಂಧಾನದ ಸಂಭವವಿದೆಯೋ?

ಕವಿ ರವೀಂದ್ರರ ಸಂದೇಶಕ್ಕನುಗುಣವಾಗಿ ಮಿ. ಸಿ. ಯಫ್. ಎಂಡ್ರೂಸರೇ ಮೊದಲಾದ ಹಿಂದೀ ಮಿತ್ರಪಕ್ಷದವರು ಸಂಧಾನಕ್ಕಾಗಿ ಬ್ರಿಟಿಷ್ ಮಂತ್ರಿ ಮಂಡಳಿಯೊಡನೆ ಪ್ರಯತ್ನಿಸುತ್ತಿರುವರು. ಇದು ಇಷ್ಟರ ವರೆಗೆ ಅದರಿಂದ ಯಾವ ಪ್ರಯೋಜನವೂ ಆಗಿರುವಂತಿಲ್ಲ. ಹಿಂದೀ ಮಿತ್ರ ಪಕ್ಷೀಯರು ಸಂಧಾನದ ವಿಷಯದಲ್ಲಿ ಗಾಂಧಿಯವರ ಅಭಿಮತವನ್ನು ಕೇಳಿ ಪತ್ರ ಬರೆದಿದ್ದರು. ಬಹಳ ವಿಳಂಬದ ನಂತರ ಅದಕ್ಕೆ ಅವರಿಂದ ಪ್ರತ್ಯುತ್ತರ ಬಂದಿರುವುದೆಂದು ತಿಳಿದು ಬರುತ್ತದೆ. ಅದರಲ್ಲವರು ಸರ್ವ ಸಾಧಾರಣವಾಗಿ ಕವಿ ರವೀಂದ್ರರ ಸಂದೇಶವನ್ನು ಅನುಮೋದಿಸಿ ತನ್ನ ಕಾಂಗ್ರೆಸ್ ಸಹಕಾರ್ಯಕರ್ತರುಗಳ ಅಭಿಪ್ರಾಯ ಕೇಳದೆ ತನಗೆ ಯಾವ ಸೂಚನೆಯನ್ನೀಯಲೂ ಸಾಧ್ಯವಿಲ್ಲವೆಂದು ಬರೆದಿರುವರಂತೆ. ರವೀಂದ್ರರ ಸಂದೇಶದಿಂದ ಸಂಧಾನದದ್ವಾರವು ತೆರೆಯಲ್ಪಡುವುದಾದರೂ ಪಾರ್ಲಿಮೆಂಟಿನ ಸ್ವಕೃತದ ರಚನೆಯಲ್ಲಿ ಯಾವ ಸಂಧಿಪ್ರಸ್ತಾಪಕ್ಕಾದರೂ ಆಸ್ಪದ ದೊರೆಯುವ ಆಶೆಯು ಹುಟ್ಟಿರುವುದಿಲ್ಲ. "ಹಿಂದೂದೇಶದೊಡನೆ ನಮ್ಮ ಸಂಬಂಧದಲ್ಲಿ ನಿಜವಾಗಿಯೂ ಇದೀಗ ಅತ್ಯಂತ ಸಂದಿಗ್ಧ ಸಮಯವೆಂದು ನನ್ನ ಭಾವನೆ" ಎಂದು ದೀನಬಂಧು ಎಂಡ್ರೂಸರವರು ಪ್ರಧಾನ ಮಂತ್ರಿಗಳೊಡನೆ ಸ್ಪಷ್ಟವಾಗಿ ಹೇಳಿರುವರೆಂದು ತಿಳಿಯಬರುತ್ತದೆ. ಆರ್ಡಿನೇನ್ಸುಗಳ ರದ್ದತಿಯು ಮತ್ತು ರಾಜಕೀಯ ಸುಧಾರಣೆಯನ್ನೀಯುವುದರಲ್ಲಿ ಬ್ರಿಟಿಷ್ ಸರ್ಕಾರವು ವಿಳಂಬ ಮಾಡಿದರೆ ಹಿಂದೂದೇಶದಲ್ಲಿ ಹಿಂಸಾವಾದಿಗಳ ಹಸ್ತವು ಬಲವಾಗಿ ರಾಜಿಯಿಂದ ಮುಂದಿನ ಹಿಂದೀ ರಾಜಕೀಯ ಸೂತ್ರವನ್ನು ರೂಪಿಸುವ ಸಂದರ್ಭವನ್ನೇ ಕಳಕೊಂಡಂತಾಗುವುದೆಂದು ಮಿ. ಎಂಡ್ರೂಸರ ಭೀತಿ. ಅವರು ಜೂನ್ ತಿಂಗಳ ಅಂತ್ಯಕ್ಕೆ ಆರ್ಡಿನೇನ್ಸುಗಳು ಅಂತ್ಯವಾದಾಗ ಸಂಧಾನ ಯತ್ನಕ್ಕೆ ಅತ್ಯನುಕೂಲ ಸಮಯವೆಂದೂ, ಅದನ್ನು ಬ್ರಿಟಿಷ್ ಸರ್ಕಾರವು ಕಳಕೊಳ್ಳಬಾರದೆಂದೂ ಪ್ರಧಾನ ಮಂತ್ರಿಗಳಿಗೆ ಮನಗಾಣಿಸಿ ತನ್ನ ಹಳೆಯ ಮಿತ್ರರಾದ ಅವರೊಡನೆ ಬಂದು ಇಡೀ ದಿನವಿದ್ದು ಪರಿಸ್ಥಿತಿಯನ್ನೆಲ್ಲಾ ಚರ್ಚಿಸಿರುವರು. ಇದು ಹೊರಂತು ಭಾಷಣ ಲೇಖನಗಳಿಂದ ಬ್ರಿಟಿಷ್ ಜನರಲ್ಲಿಯೂ ತನ್ನ ಅಭಿಮತವನ್ನು ಪ್ರಚಾರ ಮಾಡುವರು. ಆದರೆ ದೀನಬಂಧುಗಳ ಸದುಪದೇಶಕ್ಕೆ ಕನ್ಸರ್ವೇಟಿವ್ ಕೂಪಮಂಡೂಕಗಳು ಎಷ್ಟರ ಮಟ್ಟಿಗೆ ಕಿವಿಗೊಡುವರೆಂದು ಹೇಳಬರುವುದಿಲ್ಲ.

ಸಂಧಿ ಪ್ರಸ್ತಾಪದ ಸುದ್ದಿ.

ಪ್ರಸಿದ್ಧ ಸಂಧಾನಕಾರರಾದ ಸರ್. ತೇಜಬಹದ್ದೂರು ಸಪ್ರೂ ಮತ್ತು ಶ್ರೀ. ಆರ್ ಜಯಕರರು ಸಿಮ್ಲೆಕ್ಕೆ ಹೋಗಿ ಇದೇ ತಾ. 17ರಲ್ಲು ವೈಸರಾಯರೊಡನೆಯೂ, ಅವರ ಸಚಿವರೊಡನೆಯೂ ಮಾತಾಡಿರುವರೆಂಬುವುದರಿಂದ ಅವರು ಪುನಃ ಸಂಧಿ ಪ್ರಸ್ತಾಪದ ಮಧ್ಯಸ್ಥಿಕೆಯನ್ನು ವಹಿಸಿರುವರೇ ಎಂಬ ವಿಷಯದಲ್ಲಿ ನಾನಾ ಊಹನೆಗಳುಂಟಾಗಿವೆ. ಆದರೆ ಅವರು ಪ್ರಕೃತದ ಬಿಕ್ಕಟ್ಟನ್ನು ನಿವಾರಿಸಿ ಶಾಂತಿಯನ್ನುಂಟುಮಾಡುವ ಕುರಿತು ತಮ್ಮ ಸೂಚನೆಗಳನ್ನಿತ್ತಿರುವುದಾದರೂ, ಅವರ ಮಾತುಕತೆಯ ಮುಖ್ಯೋದ್ದೇಶವು, ಜಾತೀಯ ಪ್ರಶ್ನೆ ಮತ್ತು ರಾಜ್ಯಾಂಗರಚನೆಯ ವಿಷಯದಲ್ಲಿ ಮುಂದಿನ ಕಾರ್ಯದ ಕುರಿತು ನಮ್ಮ ಸಲಹೆಯನ್ನೀಯುವುದಾಗಿದೆಯೆಂದು ತಿಳಿದು ಬರುತ್ತದೆ. ಮೊದಲಿನ ಕಾರ್ಯಕ್ರಮದಂತೆ ಇನ್ನೊಮ್ಮೆ ರೌಂಡ್ ಟೇಬಲ್ ಮತ್ತು ಫೆಡರಲ್ ಸ್ಟ್ರಕ್ಚರ್ ಕಮಿಟಿಯನ್ನು ಕರೆಯಬೇಕೇ? ಅಥವಾ ಕಾರ್ಯಕ್ರಮವನ್ನೇ ಬದಲಾಯಿಸಬೇಕೇ? ಹಾಗೆ ಮಾಡಿದರೆ ಎಲ್ಲಾ ಪಕ್ಷೀಯರಿಗೂ ತೃಪ್ತಿಯಾದೀತೇ? ಎಂಬುವುದೇ ಈ ಮಾತುಕತೆಯ ಮುಖ್ಯ ವಿಷಯವಾಗಿದ್ದಿತಂತೆ. ಮುಂದಿನ ಧೋರಣೆಯ ಕುರಿತು ಇಂಡಿಯಾ ಸರಕಾರದವರು ತಮ್ಮ ಅಭಿಮತವನ್ನು ಇಂಡಿಯಾ ಸರಕಾರಕ್ಕೆ ಒಪ್ಪಿಸಬೇಕಾದುದರಿಂದ ಕಳೆದ ವಾರದ ಮಾತುಕತೆಯು ಮಹತ್ವದ ಪರಿಣಾಮವುಳ್ಳದ್ದಾಗಿದೆಯೆಂದು ತಿಳಿದು ಬರುತ್ತದೆ. ಸಪ್ರೂ ಜಯಕರರು ಸಿಮ್ಲೆಯಿಂದ ಹೊರಟು ಹೋಗಿರುತ್ತಾರೆ.

ರಾಜಕೀಯ ಕೈದಿಗಳು ಬಿಡಲ್ಪಡುವರೇ?

ಸರಕಾರದ ಮುಂದಿನ ಧೋರಣೆಯ ವಿಷಯದಲ್ಲಿ ಫ್ರೀಪ್ರೆಸ್ ವಾರ್ತಾ ಪ್ರಸಾರಕ ಪ್ರತಿನಿಧಿಯು ಈ ಕೆಳಗಿನ ಸಮಾಚಾರವನ್ನು ಪ್ರಕಟಿಸಿರುವರು. ಜುಲೈ ತಾ. 4ಕ್ಕೆ ಈಗಿನ ಆರ್ಡಿನೇನ್ಸುಗಳು ಮುಕ್ತಾಯವಾದಾಗ ಸರಕಾರವೇನು ಮಾಡುವದೆಂಬ ಕುರಿತು ನಾನಾ ಸುದ್ದಿಗಳು ಸುಳಿದಾಡುತ್ತಿವೆ. ಒಳ್ಳೇ ತಿಳಿದವರ ಅಭಿಪ್ರಾಯದಂತೆ ಸರಕಾರವು ಆರ್ಡಿನೇನ್ಸುಗಳನ್ನು ಹಾಗೆಯೇ ಕೊನೆಗೊಳ್ಳಬಿಡುವ ಮತ್ತು ಹಿಂಸಾತ್ಮಕ ಕ್ರಾಂತಿಕಾರಕ ಕೈದಿಗಳ ಹೊರತು ಇತರ ಕಾಯಿದೆ ಭಂಗದ ಕೈದಿಗಳನ್ನೆಲ್ಲಾ ಬಿಟ್ಟು ಬಿಡುವ ಕುರಿತು ಗಾಢ ವಿಚಾರ ಮಾಡುತ್ತಿರುವುದಂತೆ. ಗಾಂಧಿಯವರು ಸರಕಾರದ ಯಾವ ನಿರೂಪಣೆಗೂ ಗಮನ ಕೊಡಲಾರರಾದರೂ ಕಾಯಿದೆ ಭಂಗವನ್ನು ಪುನಃ ಪ್ರಬಲವಾಗಿ ಆರಂಭಿಸಲಾರರೆಂಬ ಅಭಿಪ್ರಾಯವೇ ಈ ವಿಚಾರದ ಕಾರಣವಾಗಿದೆ. ಆರ್ಡಿನೇನ್ಸುಗಳನ್ನು ಪುನರುಜ್ಜೀವಿಸದೆ ಅಹಿಂಸಾತ್ಮಕ ಕೈದಿಗಳನ್ನೆಲ್ಲಾ ಬಿಟ್ಟುಬಿಟ್ಟರೆ ಕಾಂಗ್ರೆಸು ಪುನಃ ಕಾಯಿದೆಭಂಗ ಹೂಡುವಂತೆ ಗಾಂಧಿಯವರು ಸೂಚಿಸಲಾರರೆಂಬ ಅಧಿಕೃತ ಅಭಿಮತವಿದೆ. ಸರಕಾರವು ಈ ಧೋರಣೆಯನ್ನನುಸರಿಸಿದರೆ ಕಾಂಗ್ರೆಸಿಗೂ, ಅದಕ್ಕೂ ಯಾವ ಒಡಂಬಡಿಕೆಯೂ ಇರಲಾರದು. ಇಕ್ಕಡೆಯವರು ಮುಂದೆ ತಮಗೆ ತೋರಿದ ಧೋರಣೆಯನ್ನನುಸರಿಸಲು ಸಂಪೂರ್ಣ ಸ್ವತಂತ್ರರಾಗಿರುವರು. ಕಾಂಗ್ರೆಸಿನವರು ಯಾವಾಗಲೂ ಕಾಯಿದೆಭಂಗವನ್ನು ಪ್ರಬಲವಾಗಿ ಆರಂಭಿಸಬಹುದು. ಸರಕಾರವು ಆರ್ಡಿನೇನ್ಸುಗಳನ್ನು ಪುನಃ ಜಾರಿಗೆ ತರಬಹುದು. ಮುಂದಿನ ರಾಜ್ಯಾಂಗ ರಚನೆಯ ಕುರಿತು ಸರಕಾರವು ಕೈಕೊಳ್ಳುವ ಧೋರಣೆಯ ಪರಿಣಾಮದ ಮೇಲೆ ಎಲ್ಲವೂ ಅವಲಂಬಿಸಿರುತ್ತದೆ. ಒಂದೊಮ್ಮೆ ಆರ್ಡಿನೇನ್ಸು ರಾಜ್ಯವು ಕೊನೆಗೊಂಡು ಅಹಿಂಸಾತ್ಮಕ ರಾಜಕೀಯ ಕೈದಿಗಳೆಲ್ಲಾ ಬಿಡುಗಡೆ

ಕೊಡಗು.

ಸನ್ ೧೯೩೨ನೇ ಇಸವಿ

ಜುಲೈ ತಾ. ೧ನೇ ಶುಕ್ರವಾರ.

ಪ್ರೆಸ್ ಆರ್ಡಿನೇನ್ಸ್

ಜಾರಿಯಲ್ಲಿರುವ ವರೆವಿಗೆ

ನಾವು

ಅಗ್ರಲೇಖನ

ವನ್ನು

ಪ್ರಕಟಿಸುವುದಿಲ್ಲ.

ಹಿಂದೂಸ್ಥಾನದ ತಿದ್ದುಪಾಟು.

ವೈಸರಾಯರ ಪ್ರಕಟನೆ.

ಇಂಡಿಯಾ ಸೆಕ್ರೆಟರಿ ಆಫ್ ಸ್ಟೇಟ್‌ರವರು ಹೌಸ್ ಆಫ್ ಕಾಮನ್ಸ್‌ನಲ್ಲಿ ಮಾಡಿದ ಪ್ರಕಟನೆಯನ್ನು ವೈಸರಾಯರು ಈ ಕೆಳಗೆ ಹೇಳಿದಂತೆ ಪ್ರಚುರಪಡಿಸಿರುತ್ತಾರೆ.

ಚಕ್ರವರ್ತಿಯವರ ರಾಜನೀತಿಯನ್ನು ದುಂಡು ಮೇಜು ಸಭೆಗೆ ಪ್ರಕಟಿಸಿ, ಪಾರ್ಲಿಮೆಂಟಿನಿಂದ ಸಹಾಯ ಪಡೆದನಂತರ ಚಕ್ರವರ್ತಿಯವರು ಅದನ್ನು ಕಾಯಿದೆಯ ರೂಪವಾಗಿ ಗನೆ ಅನುಸರಿಸುವ ಹಾಗೆ ಮಾಡುವುದಾಗಿತ್ತು. ಕಾನ್‌ಸ್ಟಿಟ್ಯೂಷನ್ನು ಕೂಡಿಸುವುದಕ್ಕೆ ನೋಡಲು ಇಂಡಿಯಾದಿಂದ ಹಿಂತಿರುಗಿದ ಮೂರು ಕಮಿಟಿಗಳನ್ನು ವಿಚಾರಿಸುವುದಾಗಿತ್ತು. ಇದರಲ್ಲಿ ಎರಡು ಕಮಿಟಿಗಳ ರಿಪೋರ್ಟು ಈಗಾಗಲೆ ಸಾರ್ವಭೌಮಮಂತ್ರಾಲೋಚನ ಸಭೆಗೆ ಸೇರಿಸಿದೆ. ಮೂರನೆಯ ಕಮಿಟಿಯ ರಿಪೋರ್ಟು ಕೈಸೇರಿದ ಕೂಡಲೆ ಮುಂದಿನ ಹಂಚಿಕೆಯನ್ನು ಮುಂದರಿಸುವುದಾಗಿದೆ.

ಸಿಂಗ್ಲ್ ಬಿಲ್.

ಮೊದಲನೆಯದಾಗಿ ತಮ್ಮ ರಾಜನೀತಿಯನ್ನು ಸಫಲಗೊಳಿಸುವುದಕ್ಕಾಗಿ ಸಂಯುಕ್ತ ಪ್ರಾಂತ್ಯಗಳಿಗೆ ಸ್ವಾತಂತ್ರ್ಯವನ್ನು ಕೊಡತಕ್ಕ ಸಿಂಗ್ಲ್ ಬಿಲ್ಲನ್ನು ಪಾಸ್ ಮಾಡುವುದು. ಇದು ಪ್ರಾಂತೀಯ ಸ್ವಾತಂತ್ರ್ಯ ಸುಧಾರಣೆ ಮಾಡುವುದರಿಂದ ಸಂಯುಕ್ತ ಸಂಸ್ಥಾನ ಸ್ವಾತಂತ್ರ್ಯದ ಸ್ಥಾಪನೆಯು ಪೂರ್ಣತೆಯನ್ನು ಎದುರು ನೋಡುವುದು ಅವಶ್ಯವಿಲ್ಲ. ಇದು ಗವರ್ನ್‌ಮೆಂಟಿನ ಮುಖ್ಯ ಮುಖಭಾವವಾಗಿರುವುದರಿಂದ ಇಡೀ ಹಿಂದೂಸ್ಥಾನವು ಸಂಯುಕ್ತ ಸಂಸ್ಥಾನಗಳಾಗುವುವು. ಆದ್ದರಿಂದ ಇದರ ಏಕಕಾಲಕ್ಕೆ ಬೇಕಾದ ಎಲ್ಲಾ ತರದ ಸಂಗತಿಗಳು, ಪಾರ್ಲಿಮೆಂಟಿನ ಮುಂದೆ ಇಡಬೇಕಾದರೆ, ಸಂಯುಕ್ತ ಸಂಸ್ಥಾನಕ್ಕೆ ಅತಿ ಅವಶ್ಯವಾಗಿರಬೇಕು. ಇದಲ್ಲದೆ ಖಜಾನೆಯೇ ಮೊದಲಾದವುಗಳ ರಚನೆಯು ಪ್ರಾಂತ್ಯಗಳಿಗೂ, ಸಂಸ್ಥಾನಗಳಿಗೂ, ಸಂಯುಕ್ತ ರಾಜ್ಯಾಧಿಕಾರಕ್ಕೂ, ಪಾರ್ಲಿಮೆಂಟಿಗೂ ಸಹ ಅವರವರ ಬೇರೆ ಬೇರೆ ಕೆಲಸಕ್ಕೆ ಬಹು ಅನುಕೂಲವಾಗಿರುವಂತೆಯೂ ಮತ್ತು ಅದರ ರಕ್ಷಣೆಗೂ ನ್ಯಾಯವಾದ ಖಾತರಿಯನ್ನು ಕೊಡುವುದು.

ದುಂಡು ಮೇಜು ಪರಿಷತ್ತು ಕೂಡುವುದಿಲ್ಲ.

ಈ ಎಡೆತಡೆಗಳನ್ನು ಸುಲಭೋಪಾಯದಲ್ಲಿ ಗೆದ್ದು ದುಂಡು ಮೇಜು ಪರಿಷತ್ತು ಕೂಡದಿದ್ದರೂ ಕೂಡ ಇಂಡಿಯಾದ ಅಭಿಪ್ರಾಯವನ್ನು ಅರಿಯುವಂತೆ ಏರ್ಪಾಡು ಮಾಡಲಾಗಿದೆ. ಈಗಿನ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ವಿಚಾರಿಸಿ ಈಗಿನ ಸಮಯವು ದುಂಡು ಮೇಜು ಪರಿಷತ್ತನ್ನು ಕೂಡಿಸತಕ್ಕ ಸಮಯವಲ್ಲ. ಮುಂದೆ ಚರ್ಚೆಯಾಗದೆ ಇರುವ ವಿಷಯಗಳೂ ಇನ್ನೂ ಇರುವುದರಿಂದ ಅದನ್ನು ಫೆಡರಲ್ ಸ್ಟ್ರಕ್ಚರ್ ಕಮಿಟಿಯಲ್ಲಾಗಲೀ, ದುಂಡು ಮೇಜು ಪರಿಷತ್ತಿನಲ್ಲಾಗಲೀ ಚರ್ಚಿಸುವುದಕ್ಕೆ ಪ್ರಾರಂಭಿಸಿದರೆ ಸುಮ್ಮನೇ ಸಮಯವು ಹಾಳಾಗುವುದು. ಆದ್ದರಿಂದ ಅದನ್ನು ಬೇರೊಂದು ರೀತಿಯಲ್ಲಿ ಮೊದಲಿನಂತೆಯೇ ತೀರ್ಮಾನಿಸಲು ಏರ್ಪಡಿಸಿರುತ್ತಾರೆ.

ಮೊದಲನೆಯದಾಗಿ ಈ ಅಡ್ಡಿಗಳನ್ನೆಲ್ಲಾ ನೀಗಿ ಕೋಮುವಾರು ಸಮಸ್ಯೆಯನ್ನು ಕುರಿತು ಚರ್ಚಿಸಿದ ಫಲಿತಾಂಶವನ್ನು ಬರುವ ಬೇಸಿಗೆಯೊಳಗಾಗಿ ತಿಳಿಸುವುದು. ಇದನ್ನು ತೀರ್ಮಾನಿಸಿದ ಮೇಲೆ ಕನ್ಸಲ್‌ಟೇಟಿವ್ ಕಮಿಟಿಯು ಪುನಃ ಸಭೆ ಸೇರಿ ಅಗತ್ಯವಿರುವ ಮುಖ್ಯ ಮುಖ್ಯ ವಿಷಯಗಳನ್ನು ಚರ್ಚಿಸಿ ತೀರ್ಮಾನಿಸುವುದು. ಇವುಗಳಲ್ಲಿ ಕಳೆದ ಲಂಡನ್ ಕಾನ್‌ಫರೆನ್ಸಿನಲ್ಲಿ ತೀರ್ಮಾನವಾಗದವುಗಳು ಹೆಚ್ಚು. ಕನ್ಸಲ್‌ಟೇಟಿವ್ ಕಮಿಟಿಯ ತೀರ್ಮಾನದ ಮೇರೆ ಬ್ರಿಟಿಷ್ ಇಂಡಿಯಾಕ್ಕೂ, ಹಿಂದೂ ಸಂಸ್ಥಾನಗಳಿಗೂ ಅಪಕ್ಷ್ಯನ್ನುಂಟುಮಾಡುವ ಸಂಗತಿಗಳನ್ನು ಗವರ್ನ್‌ಮೆಂಟು ಪುನಃ ವಿಚಾರಿಸಿ ನಿವಾರಣೆ ಮಾಡುವುದು. ಇಂಥಾ ಅಭಿವೃದ್ಧಿಯು ಕನ್ಸಲ್‌ಟೇಟಿವ್ ಕಮಿಟಿಯಿಂದಲೇ ಆಗಬಹುದೆಂಬುದಾಗಿ ಊಹಿಸಲಾಗಿದೆ.

ಇಂಡಿಯಾದ ಅಭಿಪ್ರಾಯವನ್ನು ಆಲೋಚಿಸುವುದಕ್ಕೆ ಎರಡು ರಾಜಸಭೆಗಳನ್ನು ಕೂಡಿಸಿ ಅಂದರೆ ಜಾಯಿಂಟ್ ಸಿಲೆಕ್ಟ್ ಕಮಿಟಿಯನ್ನೇರ್ಪಡಿಸಿ, ರಾಜ್ಯಾಡಳಿತದ ಬದಲಾವಣೆಯನ್ನು ಕುರಿತು ತಕ್ಕದಾದ ಸೂಚನೆಯನ್ನು ಕೊಡುವುದು ಮತ್ತು ಇಂಡಿಯಾದ ಪ್ರತಿನಿಧಿಗಳ ಅಭಿಪ್ರಾಯಗಳನ್ನು, ಒಂದು ಕಾಲನ್ನು ಮಾಡುವ ಮೊದಲೇ ವಿಚಾರಿಸಿ ತಿಳಿಯುವುದು. ಇದರಿಂದ ಈ ಮುಖ್ಯ ಸಂಗತಿಯು ಖಂಡಿತವಾಗಿ ತೀರ್ಮಾನವಾಗುವುದಾಗಿಯೂ ಮತ್ತು ಈ ತೀರ್ಮಾನವು ಜುರುಕಾಗಿ ಮುಂದುವರಿಸಲ್ಪಡುವುದಾಗಿಯೂ, ಇಂಗ್ಲೆಂಡು ಮತ್ತು ಇಂಡಿಯಾದ ಪ್ರತಿನಿಧಿಗಳು ಸಹಕರಿಸಿಯೂ, ಇನ್ನೊಂದು ಕಡೆ ಇಂಗ್ಲೆಂಡಿನ ಮೂರು ಪಾರ್ಟಿಗಳು ಒಟ್ಟುಗೂಡಿಯೂ ಈ ಕಾರ್ಯವನ್ನು ಕೈಗೂಡಿಸಿ ಜಯಪ್ರದವಾಗಿ ಮಾಡುವಂತೆ ನಂಬಲಾಗಿದೆ. ಇದನ್ನು ಜಯಪ್ರದವಾಗಿ ಮಾಡುವಂತ ಭಾರವು ಅವರ ಮೇಲೆಯೇ ಬಿದ್ದಿದೆ.

ಸರ್. ಇ. ಹೋಟ್ಸನರ ಅಭಿಮತ.

ಬೊಂಬಾಯಿಯ ಹೋಮ್ ಮೆಂಬರರೂ, ಕೆಲ ಸಮಯದ ವರೆಗೆ ಆಕ್ಟಿಂಗ್ ಗವರ್ನರರೂ ಆಗಿದ್ದ ಸರ್. ಅರ್ನೆಸ್ಟ್ ಹೋಟ್ಸನರು ಅಧಿಕಾರದಲ್ಲಿದ್ದಾಗ ಕಾಂಗ್ರೆಸಿನ ಉಗ್ರ ವಿರೋಧಕರಿದ್ದರು. ಬೊಂಬಾಯಿಗೆ ಅವರ ಹೆಸರೆಂದರೆ ಭಯಂಕರವೆನಿಸುತ್ತಿತ್ತು. ಆದರೆ ಅಧಿಕಾರ ನಿವೃತ್ತಿಯೂ, ಇಂಗ್ಲೆಂಡಿನ ತಂಪು ಹವಾಗುಣವೂ ಅವರ ಮನೋವೃತ್ತಿಯನ್ನು ಒದಲಾಯಿಸಿರುವಂತಿದೆ. ಅವರು ಬೊಂಬಾಯಿಯ ಪರಿಸ್ಥಿತಿಯ ಮತ್ತು ಕಾಂಗ್ರೆಸಿನ ಕುರಿತು ಕೊಟ್ಟಿರುವ ಅಭಿಪ್ರಾಯವು ಹೀಗಿರುತ್ತದೆ. "ಧಾರ್ಮಿಕ ಅಥವಾ ಪರೋಪಕಾರ ಕಾರ್ಯಕ್ಕಾಗಿ ಬನ್ಯ ಜನರು ನೀರಿನಂತೆ ಹಣ ವ್ಯಯಿಸುವರೆಂಬುದು ನಮಗೆಲ್ಲಾ ಗೊತ್ತಿದೆ. ಆದರೆ ಅದೊಂದು ಆದರ್ಶಕ್ಕಾಗಿ ಅವರು ಕೈಬಿಟ್ಟು ಎಡೆಬಿಡದೆ ಸಹಾಯಮಾಡುತ್ತಾ ಹೋಗುವರೆಂದು ನಮ್ಮಲ್ಲಿ ಹೆಚ್ಚಿನವರು ಭಾವಿಸಲಿಲ್ಲ. ಆದರೆ ಅದನ್ನೇ ನಾವೀಗ ಪ್ರತ್ಯಕ್ಷ ನೋಡುತ್ತಿರುವೆವು. ಬೊಂಬಾಯಿಯು ವ್ಯಾಪಾರಿಕ ಆತ್ಮಘಾತವನ್ನು ಮಾಡುತ್ತಿದೆ. ಯಾಕೆ? ಹಿಂದೂದೇಶದ ಬಂಧವಿಮೋಚನೆಗೆ; ಮುಂದಿನ ಕಾಲ್ಪನಿಕ ರಾಮರಾಜ್ಯ ಸಾಧನೆಗೆ. ಆದರ ವ್ಯಾಪಾರವು ಬೇರೆ ಕಡೆಗೆ ಹೋಗಿ ಅದಕ್ಕೆ ಅಪಾರ ಧನ ನಷ್ಟವಾಗಿರುವುದು. ಬೊಂಬಾಯಿಯಲ್ಲಿ ಇಂದು ಯಾರು ದಿವಾಳಿ, ಯಾರಲ್ಲವೆನ್ನಲಾಗುವುದಿಲ್ಲ; ಮುಂದೆ ಎಂತಹ ರಾಜಕೀಯ ಅಭಿವೃದ್ಧಿಯುಂಟಾದರೂ ಬೊಂಬಾಯಿಯು ತಾನು ಕಳಕೊಂಡ ಹಣವನ್ನಾಗಲಿ, ವ್ಯಾಪಾರವನ್ನಾಗಲಿ ಪುನಃ ಪಡೆಯುವುದೆಂದು ನಂಬಲು ಕಾರಣವಿಲ್ಲ. ಈ ಮನೋವೃತ್ತಿಯೇ ಈಗ ನಡೆಯುತ್ತಿರುವ ಆಂದೋಲನಾ ಪ್ರವಾಹದ ಉಗಮ ಬುಗ್ಗೆಗಳಲ್ಲೊಂದು. ಬೊಂಬಾಯಿ ವ್ಯಾಪಾರಿಗಳಿಗೆ ಬ್ರಿಟಿಷ್ ವ್ಯಾಪಾರಿಗಳ ಕುರಿತು ದ್ವೇಷಾಸೂಯೆಗಳು ಇರುವುದಿಲ್ಲ. ಮರೆಯಲ್ಲಿದ್ದು ಸೂತ್ರಚಾಲನೆ ಮಾಡುವ ಇತರ ಚತುರ ತಂತ್ರಗಾರರಿಗೆ ಅವರು ತಮ್ಮ ವಿವೇಚನೆಯನ್ನು ಬಿಟ್ಟುಕೊಟ್ಟಿರುವರು. ಈ ತಂತ್ರಗಾರರು ಗಾಂಧಿಯವರ ಹೆಸರಿನ, ಅವರ ಮಹಾತ್ಮಿಕೆಯ ಉಪಯೋಗ ಮಾಡುತ್ತಾರಾದರೂ ಅವರ ಹತೋಟಿಯೊಳಗಿರುವುದಿಲ್ಲ. 1930ರಲ್ಲಿ ಪ್ರಾಯಶಃ ಬಹು ಪಕ್ಷೀಯರನ್ನು ಸಂತೃಪ್ತಿಪಡಿಸುವಂಥಾದ್ದು ಆಗ ಯಾರನ್ನೂ ತೃಪ್ತಿಗೊಳಿಸದು. ಬೊಂಬಾಯಿಯಲ್ಲಿ ಶಾಂತಿ ಸಾಮರಸ್ಯವನ್ನುಂಟುಮಾಡಬೇಕಾದರೆ, ಕಾಲ್ಪನಿಕ ಮತ್ತು ಉದ್ರೇಕಕರ ಭದ್ರತೆಗಳನ್ನು ಗಣಿಸದೆ ಹಿಂದೀಯರ ಆರ್ಥಿಕ ಆಕಾಂಕ್ಷೆಗಳ ಕುರಿತು ಸಹಾನುಭೂತಿ ತೋರಿಸಬೇಕೆಂದೇ ನನ್ನ ಅಭಿಮತ. ಈಗಿನ ಚಳವಳದ ಗುಣವೊಂದರೆ, ಬನ್ಯನಲ್ಲಿ ಧನಲೋಭಕ್ಕಿಂತಲೂ ಹೆಚ್ಚಿನದಾಗಿರುವ ಸ್ವಾತಂತ್ರ್ಯ ನಿಷ್ಠೆ; ಬಾಹ್ಯರಂಗಕ್ಕಿಳಿದು ಸ್ವದೇಶಕ್ಕಾಗಿ ಹೋರಾಡುವಂತಾಗಿರುವ ಸ್ತ್ರೀಯರ ಸುಧಾರಿತ ಸ್ಥಾನ; ಮುಸಲ್ಮಾನರಾಗಲಿ, ಕಷ್ಟಕ್ಕಾಗಲಿ ನಾವೆಲ್ಲ ಒಂದಾಗಿ ನಡೆಯಬೇಕೆಂಬ ಹಲವು ಜಾತಿ ಮತಗಳವರು ಒಟ್ಟಾಗಿರುವ ಸಾರ್ವಜನಿಕ ಸೇವೆ ಮತ್ತು ಸಹಕಾರದ ಸ್ಫೂರ್ತಿ: ಕಾಂಗ್ರೆಸ್ ಸ್ವಯಂಸೇವಕರಲ್ಲಿ ದೃಢವಾಗಿರುವ ಶಿಸ್ತು. ಕಾಂಗ್ರೆಸಿನ ಅತ್ಯಾಚಾರಗಳನ್ನು ನಿಷೇಧಿಸುವಾಗ ನಾವು ಅದರ ಈ ಗುಣಗಳನ್ನು ಮರೆಯಬಾರದು."

ನವಯುಗ,

ಮರ್ಯಾದೆಯುಳ್ಳ ಶಾಂತಿ.

ಕಾಂಗ್ರೆಸ್ ಸತ್ಯಾಗ್ರಹವನ್ನು ತಡೆಯುವ ನಿಮಿತ್ತದಿಂದ ಕೆಲವು ಕಾಲದಿಂದಲೂ ವಿಪರೀತವಾದ ಕಠಿಣ ಶಾಸನಗಳನ್ನು ಇಂಡಿಯಾ ಸರ್ಕಾರವು ದೇಶದ ಮೇಲೆ ನಡೆಸಿದ ಮೇರೆ ಈಗ ತಾನೇ ಶ್ರೀಮಾನ್ಯರಾದ ಟಾಗೋರ್, ಆಂಡ್ರೂಸ್, ಸಪ್ರು, ಜಯಕರ್ ಮುಂತಾದ ದೇಶಭಕ್ತರು ಮರ್ಯಾದೆಯುಳ್ಳ ಶಾಂತಿಗಾಗಿ ಬ್ರಿಟಿಷ್ ಸರ್ಕಾರದೊಡನೆ ಸನ್ನಾಹವನ್ನು ನಡೆಸುತ್ತಿರುವರು. ಸರ್ಕಾರಕ್ಕೂ, ಕಾಂಗ್ರೆಸಿಗೂ ಇರುವ ಭೇದಭಾವಗಳನ್ನು ಹೋಗಲಾಡಿಸುತ್ತಿರುವರು.

ಎರವಾಡಾ ಜೈಲಿನಲ್ಲಿರುವ ಮಹಾತ್ಮ ಗಾಂಧಿಜೀಯವರೂ ಸಹ ಲಂಡನಿನಲ್ಲಿರುವ ತಮ್ಮ ಬ್ರಿಟಿಷ್ ಸ್ನೇಹಿತರಿಗೆ ಬರೆದ ಕಾಗದದಲ್ಲಿ ತಮಗೆ ಇಂಡಿಯಾದೇಶದ ಶಾಂತಿ ಸಮಾಧಾನಗಳಿಗೆ ಇರುವ ಕುತೂಹಲವನ್ನು ತೋರಿಸಿರುವರು. ಇಂಡಿಯಾದೇಶದ ಗೌರವಕ್ಕೆ ಹಾನಿಬಾರದಂತೆ ಯಾವ ವಿಧವಾಗಿ ಶಾಂತಿ ಸಮಾಧಾನಕ್ಕಾಗಲೀ ಇವರು ಒಪ್ಪುವರಾಗಿರುವರು. ಇದಕ್ಕೆ ತಾವು ಅಡ್ಡಬರಲಾರೆವೆಂದು ಹೇಳಿರುವರು.

ಆರ್ಚ್ ಬಿಷಪ್ ಆಫ್ ಯಾರ್ಕರವರೂ, ಮಿ. ಎ. ಡಿ. ಲಿಂಡ್ಸೆಯವರೂ, ಪ್ರೊಫೆಸರ್ ಗಿಲ್ಬರ್ಟ್ ಮರ್ರೆಯವರೂ, ಸರ್ ಫ್ರಾನ್ಸಿಸ್ ಯಂಗ್ ಹಸ್‌ಬೆಂಡ್‌ರವರೂ ಬ್ರಿಟಿಷ್ ಸರ್ಕಾರದೊಡನೆ ಇದೇ ರೀತಿ ಶಾಂತಿ ಸನ್ನಾಹಕ್ಕಾಗಿ ನಿಂತಿರುವರು. ಆದರೆ ಇಂಡಿಯಾದ ಸ್ಟೇಟ್ ಸೆಕ್ರೆಟರಿಯವರಾದ ಸರ್ ಸ್ಯಾಮ್ಯುಯಲ್ ಹೋರ್‌ರವರು ಈ ವಿಚಾರದಲ್ಲಿ ಸ್ವಲ್ಪವಾದರೂ ನಂಬಿಕೆಯನ್ನು ತೋರಿಸಿಲ್ಲ.

ಕಾಂಗ್ರೆಸಿನ ಗಲಭೆಯನ್ನು ತಡೆಯಲು ಹುಟ್ಟಿದ ಕಠಿಣ ಶಾಸನಗಳು ಈ ತಿಂಗಳಿಗೆ ಕೊನೆಗಾಣುವುವು. ಅವುಗಳನ್ನು ಇನ್ನೂ 6 ತಿಂಗಳು ಮುಂದುವರಿಸುವರೇ ಅಥವಾ ಬೇರೆ ಮಾರ್ಗವನ್ನು ಹಿಡಿಯುವರೇ ಎಂಬ ವಿಷಯವನ್ನು ನೋಡಬೇಕಾಗಿದೆ. ಇಂಡಿಯಾದೇಶದ ಹಿತಚಿಂತಕರೆಲ್ಲರೂ ಈ ಕಠಿಣ ಶಾಸನಗಳು ಇರಕೂಡದೆಂದು ಹೇಳಿದ್ದಾರೆ. ಇಂಡಿಯಾದೇಶದ ಪ್ರಜೆಗಳ ನಂಬಿಕೆಯನ್ನು ಉಳಿಸಬೇಕೆಂದು ತಿಳಿಸಿದ್ದಾರೆ.

ಜುಲೈ ತಿಂಗಳಲ್ಲಿ ಕೊನೆಗಾಣುವ ಪಾರ್ಲಿಮೆಂಟಿನಲ್ಲಿ ಇಂಡಿಯಾದೇಶದ ವಿಷಯದಲ್ಲಿ ಯಾವುದಾದರೊಂದು ವರ್ತಮಾನವು ಹೊರಡುವುದೆಂದು ನಿರೀಕ್ಷಿಸಲಾಗಿದೆ. ಮದರಾಸು ಅಧಿಪತ್ಯದ ಪ್ರಮುಖ್ಯ ಪ್ರಜೆಗಳು ವೈಸರಾಯರಿಗೆ ಅಪೀಲು ಅರ್ಜಿ ಕೊಟ್ಟಿದ್ದಾರೆ. ಅದರಲ್ಲಿ ಇಂಡಿಯಾದೇಶಕ್ಕೆಲ್ಲಾ ಪ್ರಾಮುಖ್ಯವಾದ ಕಾಂಗ್ರೆಸನ್ನು ಬಿಟ್ಟು ಯಾವ ಕಾರ್ಯವನ್ನು ನಡೆಸಲಾಗುವುದಿಲ್ಲವೆಂದು ಹೇಳಿದ್ದಾರೆ. ಕೋಮುವಾರು ವಿಷಯದಲ್ಲಿ ಯಾವ ತೀರ್ಮಾನವನ್ನೂ ಹೇಳದೆ ಬೊಂಬಾಯಿ ಗಲಭೆಯಲ್ಲಿ ಕಾಲಹರಣ ಮಾಡಿದರೆ ಇಂಡಿಯಾದೇಶದ ಜನರಿಗೆ ಬ್ರಿಟಿಷ್ ಸರ್ಕಾರದ ವಿಷಯದಲ್ಲಿ ಅಪನಂಬಿಕೆ ಹುಟ್ಟುವುದು. ಇಂಡಿಯಾ ಸರ್ಕಾರವು ಕೂಡಲೇ ಪ್ರಜೆಗಳ ನಂಬಿಕೆಯನ್ನು ಉಳಿಸಿಕೊಂಡು ಶಾಂತಿಯನ್ನು ಸ್ಥಾಪಿಸುವರೆಂದು ನಂಬಿದ್ದೇವೆ.

'ಜ. ಪತ್ರಿಕೆ'

Reg. No. M. 1550.
If not delivered please return to "KODAGU" OFFICE MERCARA.

ಕೊಡಗು.

[illegible]
ವಾರ್ಷಿಕ ಚಂದಾ ರೂ. ೩—೮—೦.
ಸಂಪಾದಕ—ಮೂಚಿಮಂಡ ಯಂ. ಗಣಪತಿ.
ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.
ಸಂಪುಟ ೧೨ | ಮಡಿಕೇರಿ, ಸನ್ ೧೯೩೨ನೇ ಇಸವಿ ಜುಲಾಯಿ ತಾರೀಕು ೧ ನೇ ಶುಕ್ರವಾರ. | ಸಂಚಿಕೆ ೫

SARI-PIN.

BRACELETS.

NECKCHAINS.

EAR-RINGS.
(Thodus)
Cut-rubys Rs. 25 to 50
With diamond in centre Rs. 80 to 120

Gold Rs. 10
Set rubys forming any letter Rs. 12

NOSE-RINGS.
Diamond in small size of best quality Rs. 35 & upwards according to size.

MARRIAGE PRESENTATIONS!

Attractive and inexpensive articles ready in stock. Prompt execution. Details on enquiry free with catalogue. Numerous customers in Coorg thoroughly satisfied with reliable service. Testimonials pouring in.

Telegrams: 'PRECIOUS.'

V. Subramaniaier Jeweller,

Telephone: 3145.

CATALOGUE ON ENQUIRY.

Post Box 423, Triplicane, P. O., MADRAS.

MARRIAGE PRESENTATIONS.

Estimates free on enquiry

Silver Guindys, Photo lockets, Dimond nose. screws. cut-ruby ear-rings. etc., etc., etc., in all prices. Very attractive. Prices most moderate.

Designs free on enquiry.


Pendant.


Tumblers with stand


Fancy plate.

52-32

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲಿ)

		ರೂ
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	26,800
ಜಮಾಬಂದ ಠೇವಣಾತಿ	—	2,50,391

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ಪರದಲ್ಲಿ ಬಡ್ಡಿ ದೊರೆಯುತ್ತೆ, ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡಿಸುತ್ತಾರೆ.

ಪ್ರೆಸಿಡೆಂಟರು,	ಮೆಂಬರರ್
ಕೋದಂಡ ಅಪ್ಪಯ್ಯನವರು,	ಮನೆಯಪ್ಪಂಡ ಬೆಳ್ಯಪ್ಪ
ರಾವ್ ಬಹದ್ದೂರ್.	ನವರು.

ಸೆಕ್ರೆಟರಿ

ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಖು 1—7—1931.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಉತ್ತರ ಕೊಡಗಿಗೆ ಮೆ. ಚಾರಿಂರ ಮಾದೈಯ್ಯನವರು,

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮುಂಡೇಪಂಡ ಸೋಮಯ್ಯನವರು, (ಪಾದಿಭಂಡಾರ.)

ನಾಪೋಕ್ಲು—ಎಮ್. ಆರ್. ವೆಂಕಪ್ಪಯ್ಯನವರು.

ಅಮ್ಮತ್ತಿ—ಸಿದ್ದಾಪುರ—ಮೆ. ಬಿಸಂಡ ಮಾದಪ್ಪನವರು,

ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಯ್ಯನವರ ಮತ್ತು ಅರಮಣಮಾಡ ಪಿ ಕಾರ್ಯಪ್ಪನವರು,

ಕುದಿಕೇರಿ & ತಿತಿಮತ್ತಿ—ಮೆ. ಜಿ. ಮಾದಯ್ಯನವರು.

ಸುಂಟಿಕೊಪ್ಪ—ಮೆ. ಅಪ್ಪಚಟ್ಟೋಳಂಡ ಪೂಣಚ್ಚಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಿಸಲು ಆವಶ್ಯಕವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಖರಾರು ಫಾರಮುಗಳೂ, ಜಮ್ಮ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಖರಾರು ಫಾರಮುಗಳೂ, ಸ್ಟೋರ್ ಕೀಪರ್ ಖರಾರು ಫಾರಮುಗಳೂ, ಓಚರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮಾ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—344 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.

ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.

ಭಂಡವಾಳವು ಹೆಚ್ಚಾದದ್ದು—ಸುಮಾರು 16½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,78,322 ಜನರಿಗೆ 38 ಕೋಟಿ ರೂ.

ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ಕ್ಕಿಂತ ವಿಪರೀತ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟದ್ದಾಗಿದೆ.

ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಬೆಂಬಲ ಪ್ರೋತ್ಸಾಹವನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬುದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್ ಬೆಂಗಳೂರು,

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ಮೊಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೋ	ಪಾಟ್ನಾ	ಸಿಂಗಪ್ಪೂರು
ಅಲಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಹಾಂಗ್‌ಕಾಂಗ್	ಮಂಡಲೆ	ರಾಯಪುರ	ತಿರುವೆಂಡ್ರಮ್
ಭೋಪಾಲ್	ಕರಾಚಿ	ಮಂಗಳೂರು	ರಾಂಚಿ	ವಿಶಾಖಪಟ್ಣ [52—17

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಕೆ. ಬಾಲಾಮೃತವನ್ನು ... ವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿ ರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ. ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,

52—24 ಗಿರಿಗಾಂವ, ಮುಂಬಯಿ.

ಇಂಡಿಯನ್ ಇನ್ಶೂರೆನ್ಸ್ ಕಂಪೆನಿಗಳಿಗೇನೇ ಜೀವ ವಿಮೆ ಮಾಡಿರಿ.

ದಿ ಬೆಂಗಾಲ್ ಇನ್ಶೂರೆನ್ಸ್ ಎಂಡ್ ರಿಯಲ್ ಪ್ರಾಪರ್ಟಿ ಕಂಪೆನಿ ಲಿಮಿಟೆಡ್, ಹೆಡ್ ಆಫೀಸ್:—8 ಡಾಲ್‌ಹೌಸಿ, ಸ್ಕ್ವೇರ್ (ಈಸ್ಟ್) ಕಲ್ಕತ್ತ, ಸಂಸ್ಥಾಪನೆ 1919

ನವಸಂಸ್ಕೃತಿಯು ಬೆಳೆದಷ್ಟಕ್ಕೆ ಅದರೊಡನೆ ಅದಕ್ಕೆ ಸಂಬಂಧಪಟ್ಟಿರುವ ಆರ್ಥಿಕ ಪರಿಸ್ಥಿತಿಯು ಬೆಳೆಯುತ್ತದೆ. ಇಂಥಹ ಸಮಯದಲ್ಲಿ ಜೀವವಿಮೆ ನಿಯಮವು ಒಂದು ವಂಚನೆ ಎಣಿಸಲ್ಪಟ್ಟದೆಯಲ್ಲದೆ, ಅದು ಸಮಾಜಂಗದಲ್ಲಿ ಜನರಿಗೊಂದು ಅತ್ಯಗತ್ಯ ವಿಷಯವೆಂದೂ ತಿಳಿದು ಬಂದಿದೆ. ಅದನ್ನು ಈಗೀಗ ಗಣಿತಶಾಸ್ತ್ರ ಪ್ರಕಾರವಾಗಿಯೇ ಜಕನದಿಂದ ಪರಿಪಾಲಿಸಿಕೊಂಡೇ ಬರುವಂತಾಗಿದೆ.

ಈ ಕಂಪೆನಿಯು ಸರಕಾರದಲ್ಲಿ ಕಂಪೆನಿಯ ಭದ್ರತೆಗೋಸ್ಕರ 2 ಲಕ್ಷ ರೂಪಾಯಿ ಠೇವಣಾತಿಯನ್ನು ಇಟ್ಟಿದೆ. ಇದು ಇನ್ಶೂರೆನ್ಸ್ ಕೆಲಸದಲ್ಲಿ ಒಳ್ಳೆ ಗುರುತಿರುವ ಸದ್‌ಗೃಹಸ್ಥರ ಮುಂದಾಳುತನದಿಂದಲೇ ನಡೆಯುತ್ತದೆ. ಈ ಕಂಪೆನಿಯು ಆಕರ್ಷಣೀಯವಾದ ಕೆಲವು ಷರತ್ತುಗಳ ಮೇರೆಗೆ ಅತೀ ಸುಲಭ ಪ್ರೀಮಿಯಮ್ ದರದಿಂದ ಪೋಲಿಸಿಗಳನ್ನು ಕೊಡುತ್ತದೆ. ಇದರ ಶರ್ತಗಳು, ನಿಯಮಗಳು ಸುಲಭಗ್ರಾಹ್ಯವಾಗಿವೆ; ಅನುಕೂಲವಿದ್ದಾಗಿವೆ ಅಲ್ಲದೆ ಬಹು ಉದಾತ್ತವೂ ಆಗಿವೆ. ಹೆಚ್ಚಿನ ಮಾಹಿತಿಗೆ ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಿರಿ.

ಯಂ. ಯಸ್. ಐಯ್ಯಪ್ಪ,
ಆರ್ಗನೈಸರ್,
ಸ್ಕೂಲ್‌ರೋಡ್, ಮಡಿಕೇರಿ.
ಅಥವಾ
ಆರ್. ಸಿ. ಸೆನ್‌ಗುಪ್ತ,
ಬ್ರಾಂಚ್ ಸೆಕ್ರೆಟರಿ,
12—10 28, ಅಂಗಪ್ಪನಾಯಕ್ ಸ್ಟ್ರೀಟ್,
ಜಿ. ಟಿ. ಮದರಾಸ್.

Wanted agents in every Taluk of Coorg on very liberal terms.

Printed & published by M. M Ganapathy at "Kodagu" Press Mercara for "Kodagu" Ltd.

ಜನರಲ್ ಅಷ್ಯೂರೆನ್ಸ್ ಸೊಸೈಟಿ.

ಅಜಮೀರ್.

ನಮ್ಮ ಆಯವ್ಯಯದ ಪಟ್ಟಿಯೇ ನಮ್ಮ ಅಭಿವೃದ್ಧಿಯನ್ನು ವ್ಯಕ್ತಗೊಳಿಸುತ್ತದೆ.

ವರ್ಷ	ಮೇಲ್ಪಟ್ಟ ವರ್ಷಾದಾಯ	ಮೇಲ್ಪಟ್ಟ ಮೂಲಧನ	ಖರ್ಚು ವರಮಾನದ ಶೇಕಡ
1911	46,248	49,442	82.9
1921	2,92,627	6,53,350	43 2
1931	12,50,000	40,00.000	28.2

ಬೋನಸ್ಸು.

ಖರ್ಚು ನಫೆ ದೊರಕುವ ಜೀವಾವಧಿ ಪಾಲಿಸಿಗಳ ಮೇಲೆ ವರ್ಷ ಒಂದಕ್ಕೆ ಶೇಕಡ 22½

ಚೆನ್ನಾಗಿ ಕೆಲಸಮಾಡಿ ಅಭಿವೃದ್ಧಿ ಸ್ಥಿತಿಯಲ್ಲಿರುವ ಈ ಸೊಸೈಟಿಯಲ್ಲಿ ವಿಮೆ ಮಾಡಿ ಕಡಿಮೆ ಪ್ರೀಮಿಯಂ ಪಾವತಿ ಮಾಡುವ ಸೌಲಭ್ಯ ಹೊಂದಿ ಅಥವಾ ಈ ಕಂಪೆನಿಯ ಪರವಾಗಿ ಕೆಲಸಮಾಡಿ ಉತ್ತಮ ಕಮಿಶನ್ ದರದ ಪ್ರಯೋಜನ ಹೊಂದಿ.

ಹೆಚ್ಚು ವಿಚಾರಗಳಿಗೆ ಈ ವಿಳಾಸಕ್ಕೆ ಬರೆಯಿರಿ:—

ಎ. ರಾಮಚಂದ್ರರಾವ್,
ಸುಪರಿಂಟೆಂಡೆಂಟ್,

52—9 ಮಿಂಟೋ ರಸ್ತೆ, ಬಿ.ಸಿ.
ಬೆಂಗಳೂರು

ಇಂಡಿಯಾ ಎಕ್ವಿಟೇಬಲ್ ಇನ್ಷೂರೆನ್ಸ್ ಕಂಪೆನಿ ಲಿಮಿಟೆಡ್.

(ಸ್ಥಾಪಿಸಲ್ಪಟ್ಟದ್ದು 1908)

ಪೋಲಿಸಿಗಳು ಕಳೆದುಕೊಳ್ಳುವಂತವುಗಳಲ್ಲ.

ಯಾವ ತಡೆಯೂ ಇಲ್ಲದೆ ಪ್ರತಿ ವರ್ಷವು ಬೋನಸ್ಸು.

ಹಕ್ಕು ಬಾಧ್ಯಸ್ಥರಿಗೆ ಸರಿಯಾಗಿ ಹಣ ಕೊಡಲ್ಪಡುವದು ಇಲ್ಲದಿದ್ದರೆ ಬಡಿಯು ದೊರಕುವುದು.

ಹೆಡ್ ಆಫೀಸು:—

102. ಕ್ಲೈವ್ ಸ್ಟ್ರೀಟ್, ಕಲ್ಕತ್ತಾ.

I. E., C. P. S. 17—5

ಗಮನಿಸಿರಿ! ಪರೀಕ್ಷಿಸಿರಿ!

ಅಂದವಾಗಿ ಫೋಟೋ ತೆಗೆಯುತ್ತಾರೆ.

ಧೀರ್ಘ ಕಾಲ ಬಾಳಿಕೆ ಬರುತ್ತೆ.

ಹದಿನಾಲ್ಕು ವರ್ಷಗಳಿಂದ ಮೈಸೂರಿನಲ್ಲಿ ಹೆಸರುವಾಸಿಯಾದ ಮೆಸರ್ಸ್. ಶಂಕರ್ & ಕಂಪೆನಿಯವರು ಕೊಡಗು ದೇಶದ ಭಗಿನಿ ಬಾಂಧವರ ಸಲುವಾಗಿ ಮಡಿಕೇರಿಯಲ್ಲಿ ಬ್ರ್ಯಾಂಚ್ ಓಪನ್ ಮಾಡಿರುತ್ತಾರೆ.

ಇಲ್ಲಿ ದೀರ್ಘಕಾಲ ಬಾಳಿಕೆ ಬರುವಂತೆ ಬೇಕಾದ ಸಮೂನೆಯಲ್ಲಿ ಫೋಟೋ ತೆಗೆಯುವುದು. ಫೋಟೋ ಎನ್‌ಲಾರ್ಜ್ ಮಾಡುವುದು. ಆಯಿಲ್ ಪೈಂಟಿಂಗ್ ಕೆಲಸಗಳು. ರಬ್ಬರ್ ಮೊಹರುಗಳ ಕೆಲಸಗಳು ಸದಾ ನಡೆಯುತ್ತವೆ. ಕ್ಯಾಮರಾ ಮೊದಲಾದ ಫೋಟೋ ಕೆಲಸದ ಎಲ್ಲಾ ಸಾಮಾನುಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ. ಅಮೆಚ್ಯೂರ್ಸ್ ಕೆಲಸಗಳು ಅಂದವಾಗಿ ತಯಾರಿಸಿ ಸಕಾಲಕ್ಕೆ ದೊರೆಯುತ್ತವೆ.

ದರಗಳ ಬಗ್ಗೆ ವಿಚಾರಿಸಿರಿ. ಒಂದಾವರ್ತಿ ಪರೀಕ್ಷಿಸಬೇಕಾಗಿ ವಿನಂತಿ

ಶಂಕರ್ & ಕಂಪನಿ
ಕಾರೊನೇಶನ್ ಪಾರ್ಕ್,
12.—12. ಮಡಿಕೇರಿ.



ಕಾಗದ ಬರೆದರೆ ಆಗನ
ಕ್ಯಾಟಲಾಗ್ ಮಪ್ತಿಯ
ಕಳುಹಿಸಲ್ಪಡುವುದು.

ಕೋವಿಗಳು, ಕತ್ತಿಗಳು, ಬಟನ್‌ಗಳು, ತೋಟಗಳು, ಕೇಪುಗಳು, ಮದ್ದು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS,
Largest Importers of Firearms and Ammunition
Cheapest priced firm in India,
24—16 210 Abdul Rehiman Street, BOMBAY.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

1. ಉತ್ತಮ ತರಹ ಒಂದು ಸೆಟ್ ಜರ್ಮನ್ ರೀಡ್ಸ್ ಹಾಕಿರುವ ಸಿಂಗಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 20—0—0
   „ ಮತ್ತು 22—8—0
2. ಡಿಟೋ ಉತ್ತಮ ತರಹ ಹಾರ್ಮೋನಿಯಂ „ 1ಕ್ಕೆ ರೂ. 25—0—0
   ಮತ್ತು 27—8—0
3. ಡಿಟೋ ಉತ್ತಮ ತರಹದ್ದು, ದೂಳು ಬೀಳದಂತೆ ಕೇಸಿನ ಮೇಲೆ ಪೂರ್ತಿ ಮುಚ್ಚಳವುಳ್ಳ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ ರೂ. 27—8—0
4. ಪಾಶ್ಚಿಯಾ, ಬಂದೋಬಸ್ತು, ಸುಸ್ವರವುಳ್ಳದ್ದೂ, ಅನೇಕ ವರ್ಷಗಳ ವರೆಗೆ ಬಾಳಿಕೆ ಬರತಕ್ಕದ್ದೂ ಆದ ಹೊಸದಾಗಿ ಸಪ್ಲೈ ಆಗಿರುವ ಫ್ರೆಂಚ್ ರೀಡ್ಸ್ ಸಮಾನೆ ಇರುವ ನಮ್ಮ ಹೆಸರಿನ ರೀಡ್ಸ್ ಹಾಕಿರುವ "ಸಿದ್ದಪ್ಪಾಸ್ ಫ್ಲೂಟ್" ಸಿಂಗಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 42—8—0
5. ಉತ್ತಮ ತರಹ 2 ಸೆಟ್ ಜರ್ಮನ್ ರೀಡ್ಸ್ ಹಾಕಿರುವ, ದೂಳು ಬೀಳದಂತೆ ಕೇಸಿನ ಮೇಲೆ ಪೂರ್ತಿ ಮುಚ್ಚಳವುಳ್ಳ ಡಬ್ಬಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ ರೂ. 32—8—0
   ಉತ್ತಮ ತರಹ 2 ಸೆಟ್ ಜರ್ಮನ್ ಮೇಕ್ ರೀಡ್ಸ್ ಹಾಕಿರುವ, ಕೈನಿಂದಾಗಲೀ ಅಥವಾ ಕಾಲಿನಿಂದಾಗಲೀ ಬಾರಿಸಲು ಅನುಕೂಲಿಸುವಂತೆ ತಯಾರಿಸಿರುವ "ಸ್ಪೆಶಲ್ ಫ್ಲೂಟ್" ಡಬ್ಬಲ್ ರೀಡ್ಸ್ ಹ್ಯಾಂಡ್ ಲೆಗ್ ಹಾರ್ಮೋನಿಯಂ 1ಕ್ಕೆ ರೂ. 75—8—0

ನಮ್ಮ ಟಿಂಬರ್ ಡಿಪೋನಲ್ಲಿ ಕಟ್ಟಡಗಳಿಗೂ, ಫರ್ನಿಚರ್ ತಯಾರಿಕೆಗೂ ಬೇಕಾದ ಎಲ್ಲಾ ನಮೋನೆ ನಾಟಾಗಳನ್ನು ಸುಲಭ ದರದಿಂದ ಬೀರಿಗಿಟ್ಟಿರುವುದಲ್ಲದೇ, ಗಿರಾಕಿಗಳು ಅಪೇಕ್ಷಿಸುವ ಸೈಜಿಗೆ ಕೊಯಿಸಿಯೂ ರಿಯಾಯಿತಿ ದರದಿಂದ ಸಪ್ಲೈ ಮಾಡುತ್ತೇವೆ. ಹೆಚ್ಚಿಗೆ ವಿಷಯಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಳಾಸ—ಯಂ. ಎಸ್. ಶಿದ್ದಪ್ಪ ಬ್ರದರ್ಸ್,
ಹಾರ್ಮೋನಿಯಂ ಮತ್ತು ಟಿಂಬರ್ ವ್ಯಾಪಾರಿಗಳು,
ವಾಣಿವಿಲಾಸ ಮಾರ್ಕೆಟ್, ಮೈಸೂರು.
52—52

ಪೂರ್ವ ಆಫ್ರಿಕದ ಕೊಡಗರ ಸಂಘ.

ಎರಡನೇ ವಾರ್ಷಿಕ ವರದಿ 1931.

ಈ ಮೇಲಿನ ಸಂಘದ ಎರಡನೇ ವಾರ್ಷಿಕ ವರದಿಯನ್ನು ವಾಚಕ ಮಹಾಶಯರ ಮುಂದಿಟ್ಟಲ್ಲಿ ಅದರಲ್ಲಿ ಕಂಡು ಬರುವಂಥ ಕುಂದು ಕೊರತೆಗಳನ್ನು ತಿದ್ದುಪಡಿ ಮಾಡಿಕೊಂಡು ಈ ಸಂಘವನ್ನು ಪ್ರೋತ್ಸಾಹಿಸಬೇಕಾಗಿ ಅತಿ ವಿನಯದಿಂದ ಈ ಮೂಲಕ ಅರ್ಪಿಸುತ್ತೇನೆ.

ಸಂಘದ ಕೂಟ ಮತ್ತು ಚಳವಳ.—ಕಳೆದ ಹನ್ನೆರಡು ತಿಂಗಳುಗಳಲ್ಲಿ 1931ನೇ ಡಿಸೆಂಬರ್ ತಾರೀಕು 20ರಲ್ಲಿ ನಡೆದ ವಾರ್ಷಿಕ ಕೂಟವನ್ನು ಬಿಟ್ಟರೆ ಹದಿಮೂರು ಸಾಧಾರಣ ತರದ ಮೀಟಿಂಗುಗಳೂ, ಒಂದು ವಿಶೇಷ ತರದ ಮೀಟಿಂಗೂ ಸಹ ನಡೆದಿರುವವು. ಈ ಸಂಘದ ಮುಂದುವರಿಕೆಯು ಮೊದಲಿನ ವರ್ಷಕ್ಕಿಂತ ಎರಡು ಪಾಲಷ್ಟು ಉನ್ನತ ಸ್ಥಿತಿಯಲ್ಲಿ ನಡೆಯುತ್ತಿದ್ದರೂ, 'ಇದರ ಮುಖ್ಯ ಉದ್ದೇಶವು ಸಿಕ್ಕಿದಷ್ಟು ಮೆಂಬರುಗಳನ್ನು ಸೇರಿಸುವದೂ, ಸಾಧ್ಯವಾದನ್ನು ಚಂದ ತೆಂಗಿಗಳನ್ನು ಸ್ವೀಕರಿಸುವದೂ ಅಲ್ಲದೆ ಹೆಚ್ಚಿನ ಅವಶ್ಯವಾದ ಕಾರ್ಯಗಳನ್ನು ಕೈಕೊಳ್ಳಲು ಸುಸಮಯವೂ ಅನುಕೂಲತೆಯೂ ದೊರಕದಿದ್ದುದಕ್ಕೆ ವಿಷಾದಿಸುತ್ತೇವೆ.

ಆರ್ಥಿಕ ವ್ಯವಸ್ಥೆ:—ವರ್ಷದ ಆದಿಯಲ್ಲಿ ಸಂಘದ ಭಂಡವಾಳವು ಎಲ್ಲಾ ಖರ್ಚು ವೆಚ್ಚ ಕಳೆದು ಶಿಲಿಂಗು 410 ಸೆಂಟು 80 ಇದ್ದರೂ, ಅಂತ್ಯದಲ್ಲಿ ದಾಖಲಾತಿ ಫೀಜೂ, ಚಂದಾ ಹಣವೂ, (Donation) ಸೇರಿ ಶಿಲಿಂಗು 753 ಸೆಂಟು 80 ಇದರ ಮೇಲೆ ಶಿಲಿಂಗು 210 ಸೆಂಟು 77 ಒಟ್ಟಿಯೂ, ಅಂತು ಒಟ್ಟಾರೆ ಶಿಲಿಂಗು 964 ಸೆಂಟು 57 ಶೇಖರಿಸಲಾಗಿದೆ. ಅಲ್ಲದೆ ಚಂದಾ ಹಣವು ಬಾಬತಿ ಒಗ್ಗೆ ಎಲ್ಲ ಮೆಂಬರುಗಳಿಂದ ಶಿಲಿಂಗು 51 ಇನ್ನೂ ವಸೂಲಾಗಲಿಕ್ಕಿದೆ. ಇದೇ ರೀತಿ ನಡೆಯುತ್ತಾ, ಬಂದರೆ 1932ನೇ ವರ್ಷದ ಅಂತ್ಯದಲ್ಲಿ ಈ ಸಂಘದ ಬಂಡವಾಳವು ಹೆಚ್ಚು ಕಮ್ಮಿ ಶಿಲಿಂಗು 1500 ಆಗಬಹುದೆಂದು ದೃಢೀಕರಿಸಬಹುದು.

ಖರ್ಚು ವೆಚ್ಚ:—ಈ ಸಂಘದ ಧನದಿಂದ ಕಳೆದ ಹನ್ನೆರಡು ತಿಂಗಳುಗಳಲ್ಲಿ ಸ್ಟಾಂಪುಗಳ ಮತ್ತು ಇತರ ಅವಶ್ಯವಿರುವ ಸೌಕರ್ಯಗಳ ಒಗ್ಗೆ ಶಿಲಿಂಗು 10 ಸೆಂಟು 85 ಒಟ್ಟಿದೆ ಟೈಪ್ ರೈಟರ್ ದುರುಸ್ತು ಮಾಡುವ ಒಗ್ಗೆ ಶಿಲಿಂಗು 17. ಅಂತು ಒಟ್ಟಾರೆ ಶಿಲಿಂಗು 27 ಸೆಂಟು 85 ಖರ್ಚು ಮಾಡಿದ್ದಲ್ಲದೆ ಬೇರೆ ವಿಧದಲ್ಲಿ ಯಾವ ಅನಾವಶ್ಯವಾದ ಖರ್ಚು ಮಾಡಿರುವುದಿಲ್ಲ.

ಬಾತ್ಮಿಗಳು.—ವರ್ಷದ ಮಧ್ಯದಲ್ಲಿ 'ಕೊಡಗು' ಪತ್ರಿಕೆಯಲ್ಲಿ ಕಳೆದ ವರ್ಷದ ವಾರ್ಷಿಕ ವರದಿಯನ್ನು ಪ್ರಕಟಿಸಿದ್ದಲ್ಲದೆ ಬೇರೆ ಯಾವ ತರದ ಪ್ರಕಟನೆಯನ್ನೂ ಈ ಸಂಘವು ಪ್ರಕಟಿಸಿರುವುದಿಲ್ಲ.

ಲಗ್ನ ಪತ್ರಿಕೆ:—ಈ ಸಂಘವು ಸ್ಥಾಪಿತವಾದಂದಿನಿಂದ ಪ್ರಥಮದ ಮಿ. ಪಳೆಯಂಡ ಕುಶಾಲಪ್ಪನವರ ಲಗ್ನ ಪತ್ರಿಕೆಯು ಕಳೆದ ಮೇ ತಿಂಗಳಲ್ಲಿ ಈ ಸಂಘದ ವಿಳಾಸಕ್ಕೆ ಬಂದು ಸೇರಿದ್ದರಿಂದ ಅದನ್ನು ವಂದನಾಪೂರ್ವಕವಾಗಿ ಸ್ವೀಕರಿಸಿದ ಸಂಗತಿಯನ್ನು ಅವರಿಗೆ ತಿಳಿಸಲಾಯಿತು.

ವ್ಯಸನ ಸೂಚಕ ಠರಾವು:—ಈ ಸಂಘದ ಮುಖ್ಯ ಮೆಂಬರಾಗಿದ್ದ ಮಿ. ಪುಟ್ಟಿಚಂಡ ಅಯ್ಯಣ್ಣನವರ ಅಕಾಲ ಮರಣ ವಾರ್ತೆಯನ್ನು ಕಳೆದ ಜುಲೈ ತಿಂಗಳ 'ಕೊಡಗು' ಪತ್ರಿಕೆಯಲ್ಲಿ ನೋಡಿದೊಡನೆ ಈ ಸಂಘವು ಒಂದು ವ್ಯಸನ ಸೂಚಕ ಮೀಟಿಂಗನ್ನು ಜರಗಿಸಿ ಅದರ ಠರಾವನ್ನು 'ಕೊಡಗು' ಪತ್ರಿಕೆಯಲ್ಲಿ ಪ್ರಕಟಿಸಿದ್ದಲ್ಲದೆ ಅವರ ತಂದೆ ಮತ್ತು ಧರ್ಮ ಪತ್ನಿಯವರಿಗೂ ಕಳುಹಿಸಲಾಯಿತು. ಈ ಸಂಘದ ಅಭಿವೃದ್ಧಿಗೋಸುಗ ಅತಿ ಮುತುವರ್ಜಿಯಿಂದ ಕೆಲಸವನ್ನು ಕೈಕೊಳ್ಳುತ್ತಿದ್ದ ನಮ್ಮ ಸಹೋದರನ ಅಕಾಲ ಮರಣವು ನಮ್ಮ ಈ ಸಂಘವನ್ನು ದುಃಖಸಾಗರದಲ್ಲಿ ಮುಳುಗಿಸಿದಕ್ಕೋಸ್ಕರ ಇವರ ನಿಧನವು ಶೋಕವನ್ನುಂಟುಮಾಡಿದಿರದು.

ವರ್ಷದ ಆದಿಯಲ್ಲಿ ನಮ್ಮ ಸಹೋದರರಾದ ಮಿ. ಕಳ್ಳಿರ ಜೋಯಪ್ಪ ಮತ್ತು ಪಟ್ಟಡ ಪೆಮ್ಮಯ್ಯನವರು ನವೀನ ಉದ್ಯೋಗವನ್ನು ಕೈಕೊಳ್ಳುವ ಅಭಿಲಾಷೆಯಿಂದ ಇಲ್ಲಿಗೆ ಬಂದು ಅತ್ಯಂತ ಸಾಹಸಪಟ್ಟರೂ ಈಗಿನ ಲೋಕವ್ಯವಹಾರದ ಆರ್ಥಿಕ ವ್ಯವಸ್ಥೆಯು ಹೀನಸ್ಥಿತಿಗೋಸುಗ ಅದರ ಅಪೇಕ್ಷೆಯು ನೆರವೇರದೆ ಹಿಂತಿರುಗಬೇಕಾಯಿತೆಂಬದಕ್ಕೆ ನಮ್ಮ ಸಂಘವು ಅತ್ಯಂತ ವ್ಯಸನಪಡುತ್ತದೆ.

ಉಪಕಾರ:—ಈ ಸಂಘದ ಮೆಂಬರಾದ ಮಿ. ಮು. ಕ್ಕಾಟಿರ ಮಂದಪ್ಪನವರು ಸಂಘದ ಅವಶ್ಯಕತೆಯನ್ನು ತಿಳಿದು ಉಚಿತವಾಗಿ ಸಾಧಾರಣ ನೂರು ಶಿಲಿಂಗ್ ಬೆಲೆ ಬಾಳುವ ಒಂದು ಟೈಪ್‌ರೈಟರನ್ನು ಒಪ್ಪೂಪಿಸಿದ್ದನ್ನು ವಂದನಾಪೂರ್ವಕವಾಗಿ ಸಂಘವು ಸ್ವೀಕರಿಸಲಾಯಿತು.

Donation:—ಈ ಸಂಘದ ಮೆಂಬರರಾದ ಮಿ. ಚೋಂಡಿರ ಬಿದ್ದಯ್ಯನವರು ಮೂವತ್ತು ಶಿಲಿಂಗ್‌ಗಳೂ, ಮಿ. ಸೋಮೆಯಂಡ ಕಾಳಪ್ಪನವರು ಇಪ್ಪತ್ತು ಶಿಲಿಂಗುಗಳೂ ಮತ್ತು ಬಟ್ಟಿಯಂಡ ಐಯ್ಯಪ್ಪನವರು ಹತ್ತು ಶಿಲಿಂಗುಗಳೂ ಈ ಸಂಘಕ್ಕೆ ದಯಪಾಲಿಸಿದ್ದನ್ನು ಸ್ವೀಕರಿಸಲಾಗಿದೆ.

ಯಸ್. ಯಂ. ಕಾಳಪ್ಪ,
(ಗೌರವ ಕಾರ್ಯದರ್ಶಿ)

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಕೊಡಗು ಅಮಲ್ಗಮೇಶನ್.

ಕೊಡಗಿನ ಅಮಲ್ಗಮೇಶನ್ ಪ್ರಶ್ನೆಯು ಈಗ ಕೊಡಗಿನ ಮುಖ್ಯ ರಾಜಕೀಯ ಸಮಸ್ಯೆಯಾಗಿ ಹೋಗಿಬಿಟ್ಟಿದೆ. ಈಗಾಗಲೇ ಅನೇಕ ಮೀಟಿಂಗುಗಳು ಜರಗಿ ಅನೇಕ ಅಭಿಪ್ರಾಯಗಳು ಹೊರಬಿದ್ದಿವೆ. ಆದರೆ ಅವು ವಿಶೇಷ ಚರ್ಚಾಸ್ಪದವಾದ ಸಂಗತಿಯಾಗಿರುವುದಿಲ್ಲ. ಇದಕ್ಕೋಸ್ಕರ ಬಹಳ ಶ್ರಮ ಪಡಬೇಕಾದ ಅವಶ್ಯಕತೆಯಿಲ್ಲ. ಈಗಿನ ವರೆಗೆ ನಡೆದಿರುವ ನಮ್ಮ ದೇಶದ ಚರಿತ್ರೆಯನ್ನು ವಿಶದವಾಗಿ ಅರಿತು ನೋಡಿದಲ್ಲಿ ಇದರಲ್ಲಿ ವಿಶೇಷ ಚರ್ಚಾಸ್ಪದವಾದ ಗುಣಗಳು ಕಾಣಬರುವುದಿಲ್ಲ. ಆದರೆ ದುರ್ದೈವದಿಂದ ಪತ್ರಿಕೆಗಳಲ್ಲಿಯೂ ಮತ್ತು ಕೆಲವು ಸಂಗಡಿಗರಲ್ಲಿಯೂ ಕಂಡು ಬರುವ ಭಿನ್ನಾಭಿಪ್ರಾಯಗಳು ಅವಶ್ಯವಿಲ್ಲದ ಚರ್ಚೆಗಳಿಗಿಂಬು ಕೊಡುತ್ತಿವೆ.

ಈ ಮೊದಲು 'ಕೊಡಗು' ಪತ್ರಿಕೆಯಲ್ಲಿ 'ಕೊಡಗಿನ ಭವಿಷ್ಯ' ವೆಂಬ ಲೇಖನವನ್ನೋದಿದೊಡನೆ ನನ್ನಲ್ಲಿರುವ ಕೆಲವು ಅಭಿಪ್ರಾಯಗಳು ಹೊರಗೀಳಬೇಕಾಯಿತು. ಲೇಖಕರು ಚರಿತ್ರಾ ವಿಶಾರದರಾಗಿ ಕಂಡು ಬಂದರೂ ಕೂಡ ಕೆಲವು ತಪ್ಪು ಅಭಿಪ್ರಾಯಗಳನ್ನು ಎತ್ತಿ ಹಿಡಿಯುವಂತೆ ಕಾಣುತ್ತೆ. ಕೊಡಗು 1834ರ ವರೆಗೆ ತನ್ನ ಸ್ವಾತಂತ್ರ್ಯವನ್ನು ಕಾಪಾಡಿಕೊಂಡಿತ್ತು ಎತ್ತಿ ಹಿಡಿದದ್ದು ಸಹಜವು. ವೀರ ಶಿವಾಜಿಗಳ ಕೀರ್ತಿ ಧರ್ಮವಿಶಾಲರೂ ಪರಾಕ್ರಮಶಾಲಿಗಳೂ ಆಗಿದ್ದ ನಮ್ಮ ಪೂರ್ವಿಕರು ತಮ್ಮ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಅನೇಕ ಶತ್ರುಗಳೊಂದಿಗೆ ಆಗಿಂದಾಗ್ಯೆ ಕಾದಿ ವೀರಸ್ವರ್ಗವನ್ನು ಸೇರಿದರು. ಆದರೆ ಹೀಗಿದ್ದೂ, ಕಪಟಿಗಳೂ, ದೇಶದ್ರೋಹಿಗಳೂ ಆದ ಕೆಲವರು ತಮ್ಮ ದೇಶಾಭಿಮಾನ ಸ್ವಾರ್ಥವನ್ನು ಇತರರ ಕೈಯಲ್ಲಿ ಕೊಟ್ಟರು. ಇದು ಭಾರತ ಭೂಮಿಯ ಆಧಾರ ಈ ಪುಟ್ಟ ನಾಡಾದ ಕೊಡಗು ದಾಸತ್ವದಲ್ಲಿರಲು ಕಾರಣರಾದರೆಂದರೆ ಆ ಕಪಟ ದೇಶ ದ್ರೋಹಿಗಳ ಸಂತತಿ ಯವರಾದ ನಾವೇ. ಸ್ವಕಾರ್ಯ ದುರಂಧರರಾದ ನಾವು ನಮ್ಮ ಸ್ವಪ್ರಯೋಜನಕ್ಕಾಗಿ ಇಂದು ಸಾವಿರಗಟ್ಟಲೆ ಪ್ರಜೆಗಳ ಪ್ರಾಣವನ್ನು ವಿಕ್ರಯಿಸಲು ದಳ್ಳಾಳಿಗಳಾಗಿ ನಿಂತು ಆ ವೀರನಂತೆ ಕಾದುವವನ್ನು ದಾಸುವುದರಲ್ಲಿ ನಿಪುಣರಾಗಿ ಕೊಬ್ಬಿರುವೆವು. ಹೀಗಿರಲಲ್ಲಿ ಲೇಖಕರು—ಈಗ ಕೊಡಗನ್ನು ಮದರಾಸಿನ ಜಿಲ್ಲೆಗಳೊಡನೆ ಸೇರಿಸುವದೆಂದರೆ ಕೊಡಗರ ಹಿರಿಯರು ಮೊದಲ ವರ ಬಗ್ಗೆ ಯುದ್ಧದಲ್ಲಿ ಹೋರಾಡಿ ರಕ್ತ ಚೆಲ್ಲಿ ಉಳಿಸಿಕೊಂಡರೋ ಆ ಸ್ವಾತಂತ್ರ್ಯವನ್ನು ಈಗ ಸಮಾಧಾನ ಕಾಲದಲ್ಲಿ ಅವರ ಮಕ್ಕಳು ಬಿಟ್ಟುಕೊಟ್ಟು ಸೋಲಿಸಲ್ಪಟ್ಟ ಜನಾಂಗಗಳಾದ ನಮ್ಮ ಸಾಲಿಗೆ ಸೇರಿಕೊಂಡಂತಾಗುತ್ತದೆ.' ಬರೆದಿರುವ ಅರ್ಥಕ್ಕೂ ಮತ್ತು ನಮ್ಮ ಈಗಿನ ಸಮಸ್ಯೆಗೂ ಯಾವದೊಂದು ಸಂಬಂಧವಿರುವುದಿಲ್ಲ. ಲೇಖಕರಿಗೆ ಸೋಲೆಂಬುದು ಯುದ್ಧದಲ್ಲಿ ಸೋತರೆ ಮಾತ್ರವೆಂದು ತಿಳಿದಿರುವಂತೆ ಕಾಣುತ್ತೆ. ಹಣಕ್ಕಾಗಿ ತಮ್ಮ ಪುರುಷತ್ವವನ್ನು ವಿಕ್ರಯಿಸಿ (ಕ್ಷತ್ರಿಯ ಧರ್ಮ ವಿರುದ್ಧವಾಗಿ) ಪರದೇಶೀಯರ ಮರೆ ಹೊಕ್ಕಿರುವುದಕ್ಕಿಂತ ಹೇಯವಾದ ಅಪಜಯವಾವುದಿರುವುದು? ಈಗಿನ ನಮ್ಮ ನಾಡು ಸ್ವಾತಂತ್ರ್ಯವನ್ನುಳಿಸಿಕೊಂಡಿದೆಂಬುದು ನಾವು ಪ್ರತ್ಯೇಕವಾಗಿರುವುದು ಕಾರಣವೊ? ಇಂದು ನಾವು ನಮ್ಮ ಪೂರ್ವಿಕರು ಯಾವುದರ ಬಗ್ಗೆ ಹೋರಾಡಿದರು ಕ್ಕ ಸೋಲಿಸಿದರೆಂಬುದನ್ನು ಅರಿತಿದ್ದವರಾಗಿದ್ದರೆ ಈ ಸಂದರ್ಭದಲ್ಲಿ ಇಂದಿನ ವರೆಗೆ ಇರುತ್ತಿದ್ದಿಲ್ಲ. ಈಗಿನ ಈ ಅಲ್ಪವಾದ ಸಂಗತಿಗೂ ಚಿನ್ನದ ಅಕ್ಷರದಲ್ಲಿ ಕೆತ್ತಲ್ಪಡಬೇಕಾದ ಆ ವೀರರ ಪರಾಕ್ರಮಕ್ಕೂ ಸಂಬಂಧವನ್ನುಂಟು ಮಾಡಿದಕ್ಕೆ ಚಿಂತಿಸುತ್ತೇನೆ. ಅವರ ಪರಾಕ್ರಮವನ್ನು ತಿಳಿಯದಿರುವದೇ ನಮ್ಮ ಇಂದಿನ ಸ್ಥಿತಿಗೆ ಕಾರಣವು. ಮದರಾಸಿನಲ್ಲಿ ಸೇರಿದ ಮಾತ್ರಕ್ಕೆ ಇಲ್ಲವೇ ಪ್ರತ್ಯೇಕವಾಗಿದ್ದ ಮಾತ್ರಕ್ಕೆ ನಮ್ಮ ಸ್ವಾತಂತ್ರ್ಯ ಹೆಚ್ಚುಯಾ ಕಡಿಮೆಯಾಗುವ ಸಂಭವವಿಲ್ಲಿಯದು? ನಿಜವಾದ ಸ್ವಾತಂತ್ರ್ಯವೂ, ಪುರುಷತ್ವವು (Manhood) 1834ರಲ್ಲಿ ವಿಕ್ರಯಿಸಲ್ಪಟ್ಟು ಹೋಗಿದೆಂಬುದನ್ನು ಲೇಖಕರು ಮರೆತುಬಿಟ್ಟು ತಿಳಿಯತಕ್ಕದ್ದು.

ಲೇಖಕರು ಸೂಚಿಸಿದ ಮುಂದಿನ ಕೊಡಗಿನ ರಾಜ್ಯಾಡಳಿತ ಕ್ರಮವು ಶ್ಲಾಘನೀಯವಾದದ್ದೇ ಸರಿ. ಆದರೆ ಲೇಖಕರು ನಮಗೆ ಸಿಕ್ಕಲಿಕ್ಕಿರುವ ಪ್ರಾಂತೀಕ ಜವಾಬ್ದಾರಿಕೆ (Provincial Autonomy) ಯಲ್ಲಿ ಬಹಳವಾಗಿ ಭರವಸೆ ಇಟ್ಟಂತೆ ಕಾಣುತ್ತೆ. ಇದು ಒಂದು ಹುಚ್ಚು. ಸದ್ಯಕ್ಕೆ ಬರಲಿಕ್ಕಿರುವ ಮಾರ್ಪಾಟುಗಳು ನಮ್ಮ ನನ್ನೆಗಳಿಗೆ ಕಲಹನನ್ನು ಬೆಳೆಸಿ ಈಗಿನ ಆಳಿಕೆಯನ್ನು ಬಲಪಡಿಸುವದೆಂಬದಕ್ಕೆ ಸರ್ ಸ್ಯಾಮ್ಯುವೆಲ್ ಹೋರರವರು ಪಾರ್ಲಿಮೆಂಟಿನಲ್ಲಿ (The coming constitution in India will be a firmer one than the present) ಹೇಳಿದ್ದರಿಂದಲೇ ತಿಳಿಯುವದು. ಈ ಪ್ರಕಾರ ಮುಂದಕ್ಕೆ ಬರುವ ಮಾರ್ಪಾಟುಗಳು ನಮಗೆ ಯಾವ ತರಹದ ಸ್ವಾತಂತ್ರ್ಯತೆಯನ್ನು ಕೊಡುವ ಹಾಗಿಲ್ಲ. ಇಷ್ಟಕ್ಕೆ ನಾವು ಪ್ರತ್ಯೇಕವಾಗಿದ್ದ ಮಾತ್ರಕ್ಕೆ ಇಲ್ಲದಂಥಾ ಸ್ವಾತಂತ್ರ್ಯತೆಯು ಎಲ್ಲಿಂದ ಬಂದು ಬಿದ್ದೀತೋ? ಅಥವಾ ಹಿರಿಯರ ಅಭಿಮಾನವು ಹೇಗೆ ಉಳಿಯುವದೋ ಎಂಬುವುದು ನನಗೆ ತೋಚುವುದಿಲ್ಲ.

ಲೇಖಕರು ಸೂಚಿಸಿದಂತೆ ನಮಗೆ ಪ್ರಾಂತೀಕ ಪೂರ್ಣ ಜವಾಬ್ದಾರಿಕೆಯೂ (Provincial Autonomy) ಸಾರ್ವತ್ರಿಕ ಚುನಾವಣೆಯೂ (Joint electorates) ಮತ್ತು ಕೊಡಗಿನ ಹಿತ ದೃಷ್ಟಿಯಿಂದ ಹಿತಪಾಲನೆ (Safegaurds in the interest of Coorg) ಇವು ಇನ್ನು ಬರಲಿಕ್ಕಿರುವ ಮಾರ್ಪಾಟುಗಳಲ್ಲಿ ದೊರಕುವದೆಂಬ ಭರವಸೆ ಕೊಟ್ಟರೆ ಇಂದು ನಾವು (ಕೊಡಗಿನವರು) ಪ್ರತ್ಯೇಕವಾಗಿರಲು ಒಪ್ಪುವೆವು. ಇವು ಬರೇ ಭ್ರಾಂತು. ಇವು ಆಡಳಿತ ಕ್ರಮವನ್ನು ಬಲಪಡಿಸುವದಲ್ಲದೆ ಸ್ವಾತಂತ್ರ್ಯ ದೊರಕುವ ಮಾರ್ಪಾಟುಗಳಲ್ಲವು. ಅಲ್ಲದೆ ಇನ್ನು ಹತ್ತು ವರ್ಷಗಳವರೆಗೂ ನಮ್ಮ ಈಗಿನ ಸ್ಥಿತಿಗನುಗುಣವಾಗಿ ನಮಗೆ ಸ್ವಾತಂತ್ರ್ಯತೆಯು ದೊರಕಲಾರದು. ಆದ್ದರಿಂದ ಮುಂದಿನ ಮಾರ್ಪಾಟುಗಳಲ್ಲಿ ಹೆಚ್ಚು ಭರವಸೆ ಇಟ್ಟಿರುವುದು ವ್ಯರ್ಥ.

ಕೊಡಗನ್ನು ಏತಕ್ಕೆ ಇತರ ಪ್ರಾಂತ್ಯಗಳೊಂದಿಗೆ ಸೇರಿಸಬೇಕೆಂಬದನ್ನು ಲೇಖಕರೇ ಅವರ ಲೇಖನದ ಕಡೆಯ ಭಾಗದಲ್ಲಿ ವಿವರಿಸಿರುವರು. ಈ ಪುಟ್ಟ ನಾಡಾದ ಕೊಡಗು (ವಿಸ್ತೀರ್ಣ 1582 ಚ. ಮೈಲು, ಜನಸಂಖ್ಯೆ 163327, ಇದರಲ್ಲಿ ಒಂದು ಲಕ್ಷ ಮಾತ್ರ ಖಾಯಂ ವಾಸಿಸುವವರು. ಮಿಕ್ಕವರು ಹೊರಗಿನಿಂದ ಬಂದು ಕೆಲವು ಸಮಯವಿದ್ದು ಹೋಗುವವರು. (Floating) 2 ಪಟ್ಟಣ, 377 ಗ್ರಾಮ, ಉತ್ಪತ್ತಿ 13 ಲಕ್ಷ, ಒಂದು ತಾಲೋಕಿನ ಸಮವಿಸ್ತಾರವುಳ್ಳ) ದೇಶದ ಉತ್ಪತ್ತಿ ಜನಸಂಖ್ಯೆ ಮತ್ತು ವಿಸ್ತೀರ್ಣ ಇವೆಲ್ಲವೂ ಒಂದು ಪ್ರಾಂತ್ಯವೆನಿಸುವಷ್ಟಿರುವುದಿಲ್ಲ ಮತ್ತು ನಿಜವಾಗಿಯೂ ಒಂದು ಪ್ರಾಂತ್ಯಕ್ಕೆ ಬೇಕಾದ ಆಡಳಿತ ಕ್ರಮವನ್ನು ಹೊರಲು ಸಾಧ್ಯವಾದದ್ದಲ್ಲ. ಹಿಂದಿನ ರಾಜರ ರಾಜಾಡಳಿತ ಕ್ರಮವನ್ನು ಈಗಿನದಕ್ಕೆ ಹೋಲಿಸಿದರೆ ಮಾಡತಕ್ಕವಾಗಿಯೂ ಅನೇಕ ವ್ಯತ್ಯಾಸಗಳು ಕಾಣಬರುತ್ತವೆ. ನಮಗೆ ನಿಜವಾದ ಚರಿತ್ರೆಯು ತಿಳಿಯದಿರುವದೇ ಈ ವ್ಯತ್ಯಾಸಗಳನ್ನರಿಯಲು ಅಸಮರ್ಥರಲ್ಲದಕ್ಕೆ ಕಾರಣ. ಇದಕ್ಕನುಗುಣವಾಗಿ ಚರಿತ್ರಾ ಕರ್ತರು (ಕೆಲವರು) ತಮ್ಮ ಸ್ವಕಾರ್ಯಕ್ಕೋಸ್ಕರ ಇಲ್ಲದ್ದನ್ನು ಬರೆದು ಹೊಟ್ಟೆಗೆಯನ್ನು ಪಡೆಯುತ್ತಿರುವರು. ನಿಜವಾದ ಚರಿತ್ರೆಯನ್ನರಿಯದಿರುವದೇ ಈಗಿನ ಸ್ಥಿತಿಗೆ ಕಾರಣವು ಮತ್ತು ಈ ಧಾರಾಳ ದುಂದುಗಾರಿಕೆಯೇ ಈಗಿನ ಮತ್ತು ಹಳೆ ರಾಜ್ಯಭಾರದ ಮುಖ್ಯ ವ್ಯತ್ಯಾಸ. ಇದಕ್ಕೆ ವೈದ್ಯವಾವುದು?............ ಹೀಗಿರುವದರಿಂದ ಈ ದುಂದುಗಾರಿಕೆಯನ್ನು ಕೊಡಗು ಸೈಸಲಾರದು. ಕೊಡಗಿನ ಆರ್ಥಿಕ ಸ್ಥಿತಿಯನ್ನುದ್ಧರಿಸಬೇಕಾದರೆ ಕೊಡಗು ಮದ್ರಾಸಿಗೆ ಸೇರಿ ಬಂದ ಉಳಿತಾಯದಿಂದ ಮಲೇರಿಯ ಮತ್ತು ಅಂತಹ ನಿವಾರಣೆಗೂ ಮತ್ತು ವಿದ್ಯಾಭ್ಯಾಸವ್ಯವಸಾಯಕ್ಕೂ ಸಹಾಯ ಕೊಡುತ್ತಾ ಬಂದರೆ ಕೊಡಗು ಕೆಲವು ವರ್ಷಗಳೊಳಗೆ ಒಳ್ಳೇ ಸ್ಥಿತಿಯನ್ನು ಹೊಂದುವದೆಂಬದನ್ನು ದೃಢವಾಗಿ ಹೇಳಬಲ್ಲೆನು.

ಈ ವಿಷಯದಲ್ಲಿ ಕೆಲವರಿಗೆ ನಮ್ಮ ಪಕ್ಷದ ಬಾತ್ಮಿಗಳು ಹೋಗಿರುವುದರಿಂದ ಒಂದೊಂದು ಅಸಮಾಧಾನಯು ಹುಟ್ಟಿದೆ. ಆದರೆ ನಮ್ಮ ಪೂರ್ವದ ಪಕ್ಷ (ಕೋಪಿ ಲೈಸೆನ್ಸು, ಜಮ್ಮ ಜಹಗೀರ್) ಬಾಧ್ಯತೆಗಳಿಗೆ ಏನೊಂದೂ ನ್ಯೂನತೆಯು ಬರುವುದಿಲ್ಲ; ಇದು ಬರೇ ಕಪ್ಪಭಿಪ್ರಾಯವು.

ಈ ಪ್ರಕಾರವಿರುವುದರಿಂದ ಇದರಲ್ಲಿ ಚರ್ಚಾಸ್ಪದವಾದ ಸಂಗತಿಗಳು ಇಲ್ಲದೆ ಇಲ್ಲ. ಶ್ರೀಯುತ ಕೆ. ಯಂ. ಪೂವಯ್ಯನವರ ಸೂಚನೆ ಪ್ರಕಾರ ಸರ್ಕಾರವು ಈಗ ಆ ವಸರದಲ್ಲಿರುವ ಅವಶ್ಯಕತೆ ಇಲ್ಲ. ಅವರ ಅಭಿಪ್ರಾಯದ ಮೇರೆ ಸರ್ಕಾರವು ದೇಶದ ನಿವಾಸಿಗಳ ಅಭಿಪ್ರಾಯವನ್ನು ಅರಿಯಲು ತಕ್ಕ ವಿಚಾರ ಮಾಡಿಯಾರಾಗಿ ನಂಬುತ್ತೇನೆ. ಇಲ್ಲವಾದರೆ ಪೂರ್ವ್ವಾಯನರು ಸೂಚಿಸಿದಂತೆ ಸರ್ಕಾರವು ಒಂದು ಇಲ್ಲವೇ ಇನ್ನೊಂದು ಕಡೆಯ ಸ್ವಕಾರ್ಯ ದುರಂಧರರ ಬಲೆಗೆ ಬೀಳುವದು ನಿಶ್ಚಯ.

ಪೂಣಚ್ಚ.

ಜಯಕರ್ನಾಟಕ ಗ್ರಂಥಮಾಲೆಯ ೩ ನೆಯ ವರ್ಷದ ಯೋಜನೆ.

ಮನೋರಂಜಕವಾದರೂ, ಗಂಭೀರತ್ತೆಯ ಗ್ರಂಥಗಳ ಸುಗ್ಗಿ !!	
ಚಂದಾ ಹಣವನ್ನು ಕಡಿಮೆ ಮಾಡಿದೆ	ವರ್ಷದಲ್ಲಿ ೬ ಪುಸ್ತಕಗಳು
ವಾರ್ಷಿಕ ಚಂದಾ (ಅ. ವೆ. ಸೇರಿ)	ಜಯಕರ್ನಾಟಕ ಚಂದಾದಾರರಿಗೆ
೩—೮—೦ ಮಾತ್ರ !!	೩—೦—೦ ಮಾತ್ರ !

ಮೊದಲನೆಯ ಗ್ರಂಥವಾಗಿ ಶ್ರೀ. ಆನಂದಕಂದರ ಸಣ್ಣ ಕತೆಗಳ ಸಂಗ್ರಹವು. ಅಕ್ಷಯ್ಯ ತೃತೀಯೆಯ ದಿನ ಹೊರ ಬರುವದು.

ಅ ನಂತರ ಶ್ರೀ ಯುತರಾದ, 'ಶ್ರೀನಿವಾಸ' ರೆಂದೆ. ಬೇಗನೆ ಮಂ. ಹಳಿ, ಚೆನ್ನಮಲ್ಲ ಮೊದಲಾದ ಸುರ್ಕ ಬರೆಹಗಾರ ನಾಟಕ, ಕಾದಂಬರಿ, ಕಥೆಗಳೂ ಶ್ರೀ ಅರವಿಂದ ಯೋಗಿಗಳ ("mother") ಗ್ರಂಥದ ಅನುವಾದವೂ, ಚಾವಣಗಳ ಸಂಗ್ರಹವೂ ಹೆಂತ್ಕಿಗೆ ಸಮಯಾಗಿ ಹೊರಡುವವು.

ನಿಮ್ಮ ಮಿತವಾಗಿಯೇ ಪ್ರತಿಗಳನ್ನು ತೆಗೆಯುವದರಿಂದ ಚಂದಾದಾರರಾಗಲು ಬಯಸುವವರು ಈಗಲೇ ಪತ್ರ ಬರೆಯಬೇಕು.

ಎಲ್ಲ ಕಡೆಗೂ ಏಜಂಟರು ಬೇಕಾಗಿದ್ದಾರೆ.
ಪತ್ರವ್ಯವಹಾರ ಮಾಡಬೇಕು.

ವ್ಯವಸ್ಥಾಪಕ
ಜಯಕರ್ನಾಟಕ ಕಾರ್ಯಾಲಯ,
ಸಾಧನಕೇರಿ, ಧಾರವಾಡ.

ಬಂದಿಗಳಾಗಿರುವ ಮಹಾತ್ಮರು.

ವರ್ತಮಾನ ಸಂಗ್ರಹ.

ಒಳದೇಶ.

ಮ. ರಾ. ಶ್ರೀ. ಕೋಡಿಮಣಿಯಂಡ ಸುಬ್ಬಯ್ಯನವರ ಅಧ್ಯಕ್ಷತೆಯಲ್ಲು ಕಳೆದ ಆದಿತ್ಯವಾರ, ವೀರಾಜಪೇಟೆಯಲ್ಲು ಕೊಡವ ಸಭೆಯ ವಾರ್ಷಿಕ ಮೀಟಿಂಗೊಂದು ಜರುಗಿತಾಗಿ ತಿಳಿಯುತ್ತೇವೆ.

ಕೈಕೇರಿ ಗ್ರಾಮದ ಮೆ. ಪಡಿಕಲ್ಲು ಪಿ. ಉತ್ತಯ್ಯನವರು ತಮ್ಮ ಸೆರೆಕರೆಯ ದನಕರುಗಳನ್ನು ಹಾವಳಿ ಮಾಡುತಿದ್ದ ಒಂದು ಹುಲಿಯನ್ನು ಗುಂಡು ಹೊಡೆದು ಕೊಂದಿರುವರೆಂದು ಸುದ್ದಿ.

ಮಡಿಕೇರಿ ವೆಟರ್‌ನರಿ ಸರ್ಜನರಾದ ಮೆ. ಅಜ್ಜಮಾಡ ಬೋಪಯ್ಯನವರು ಜೂನ್‌ನಿಂದ ನಾಲ್ಕು ತಿಂಗಳ ರಜೆಯಲ್ಲಿ ಹೋಗಿರುವದರಿಂದ ಅವರ ಬದಲಿಗೆ ಮೆ. ಕೇಚಮಾಡ ಸಿ. ಬೆಳ್ಯಪ್ಪನವರು ನೇಮಿಸಲ್ಪಟ್ಟಿದ್ದಾರೆ.

ಪೊನ್ನಂಪೇಟೆಯ "ಕ್ರೇಗ್‌ಮೋರ್" ಎಸ್ಟೇಟಿನ ಕುರುಬರ ಕೇತನೆಂಬ ಆಳು ತನ್ನ ಹೆಂಡತಿಯನ್ನು ತಾ. 22—3—32 ರಲ್ಲು ತಿವಿದುಕೊಂದನೆಂಬ ಕೇಸು ಈಗ ಮಡಿಕೇರಿ ಸೆಷನ್ ಕೋರ್ಟಿನಲ್ಲಿ ತಾ. 21—6—'32 ರಿಂದ ವಿಚಾರಕ್ಕೆ ಪ್ರಾರಂಭವಾಗಿದೆ.

ಸೋಮವಾರಪೇಟೆ ಕೋ-ಆಪರೇಟಿವ್ ಸ್ಟೋರಿನ ಕೆಲಸವು ತೃಪ್ತಿಕರವಾಗಿ ನಡಿಯುವುದಿಲ್ಲವಾದ್ದರಿಂದ ಆ ಸ್ಟೋರಿನ ರಿಜಿಸ್ಟ್ರೇಶನನ್ನು ರದ್ದುಮಾಡಿ ಉತ್ತರ ಕೊಡಗು ತಾಲೋಕು ಕೋ-ಆಪರೇಟಿವ್ ಇನ್ಸ್‌ಪೆಕ್ಟರ್ ಮೆ. ಪಟ್ಟಮಾಡ ಪೊನ್ನಪ್ಪನವರನ್ನು ಲಿಕ್ವಿಡೇಟರಾಗಿ ನೇಮಿಸಲಾಗಿದೆ.

ಈ ಮೊದಲೇ ಮಡಿಕೇರಿಯಲ್ಲಿ ಒಬ್ಬ ಹೆಂಗಸಿಗೆ ಸಿಡುಬಾಗಿತ್ತೆಂದು ತಿಳಿಸಿದ್ದೆವು. ಆದರೆ ಈಗ ಆಕೆಯು ಗುಣವಾಗಿದ್ದಾಳೆ. ಆದರೆ ಪುನಃ ಮುಕಾಪರಿ ಬಂಗ್ಲೆಯ ಒಬ್ಬ ಒಟ್ಲರಿಗೆ ಸಿಡುಬು ಅಂಟಿದೆಯೆಂದು ತಿಳಿದು ಬರುತ್ತದೆ. ಆದ್ದರಿಂದ ಮಡಿಕೇರಿಯಲ್ಲಿ ಸಿಡುಬು ಪ್ರಬಲವಾಗುವುದೋ ಎಂಬ ಭಯವು ತಲೆದೋರಿದೆ.

ಮಡಿಕೇರಿಯಲ್ಲಿ ಸಿದ್ಧರಸ ವೈದ್ಯಶಾಲೆಯ ಶಾಖೆಯು, ಮ. ರಾ. ಶ್ರೀ ಕಂಜಟ್ಟಿ ಕಪನೈಯ್ಯನವರ ಛತ್ರದಲ್ಲಿ ತೆರೆದು ಧರ್ಮಾರ್ಥವಾಗಿ ಔಷಧಿಯನ್ನು ಕೊಡುವುದು ಸರ್ವರಿಗೂ ತಿಳಿದ ವಿಷಯವೆ. ತೆರೆದಾದಿನಿಂದ ದಿನೇ ದಿನೇ ರೋಗಿಗಳ ಸಂಖ್ಯೆಯು ಜಾಸ್ತಿಯಾಗುತ್ತಾ ಕಳೆದ 25 ರಿಂದ ಈ ತಿಂಗಳು 22 ರ ವರೆಗೆ 240 ರೋಗಿಗಳು ಚಿಕಿತ್ಸೆ ಹೊಂದಿರುತ್ತಾರೆ. ಇನ್ನು ಮುಂದಕ್ಕೂ ಇದೇ ರೀತಿಯಾಗಿ ನಡಿಯುವಂತೆ ಜನರು ಉತ್ತೇಜನಕೊಡುವರಾಗಿ ನಂಬುತ್ತೇವೆ.

ಇದನ್ನು ಸ್ಥಾಪನೆ ಮಾಡಿದ ಶಂಭು ಶಾಸ್ತ್ರಿಗಳಿಗೂ, ಇಲ್ಲಿ ಚಿಕಿತ್ಸೆ ಮಾಡುವ ಯಂ. ನಾರಾಯಣ ಶಾಸ್ತ್ರಿ (ಪದಕ ಇಸ್ಸಾಯ) ಗಳಿಗೂ ನಮಗೆ ಉದಾರಾಶ್ರಯವನ್ನು ಕೊಟ್ಟ ಕಪನೈಯ್ಯ ಶೆಟ್ರರವರಿಗೂ ದೇವರು ಆಯುರಾರೋಗ್ಯವನ್ನು ಕೊಡಲೆಂಬದಾಗಿ ನಾವು ಸರ್ವರೂ ಹಾರೈಸುತ್ತೇವೆ.

ಹಿಂದೂದೇಶ.

ಮಧ್ಯ ಪ್ರಾಂತ್ಯದ ಗವರ್ನರರು ರಜೆಯ ಮೇಲೆ ಹೋಗುವರು. ಸರ್ ಅರ್ಥರ್ ನೆಲ್ಸನ್ ಎಂಬ ಆಂಗ್ಲ ಮಹನೀಯರೊಬ್ಬರೇ ಗವರ್ನರರಾಗುವರಂತೆ.

ಆಗ್ರದ ರಾಜಕೀಯ ಕಾನ್‌ಫರೆನ್ಸಿಗೆ ಡೆಲಿಗೇಟರುಗಳಾಗಿ ಹೋಗುತ್ತಿದ್ದ ಅನೇಕರನ್ನು ಅಲಹಬಾದ್ ಪೋಲೀಸಿನವರು ಅಲ್ಲಿಯೇ ತಡೆದು ಹಾಕಿರುವರು.

ತಾ. ೨೫ ರಲ್ಲಿ ಇಂಡಿಯಾ ಸೆಕ್ರಟರಿಗಳು, ೧೯೩೦ನೇ ಇಸವಿಯಲ್ಲಿತ್ತಿದ ೬ ಮಿಲ್ಲಿಯ ಪೌಂಡಿನ ಸಾಲವನ್ನು ಸಂದಾಯಮಾಡಿದರು. ಹೊಸ ಸಾಲವಂತೂ, ಪರಿಮಿತಿಯಿಲ್ಲದೆ ಎತ್ತಲಾಗಿದೆಯಮ್ಮ.

ಬಾರ್ಡೋಲಿ ತಾಲೋಕಿನ ವಾಲೋಡ ಎಂಬ ಗ್ರಾಮದಲ್ಲಿ ರಾಟೆಯ ಮೇಲೆ ನೂಲು ತೆಗೆಯುವುದಕ್ಕೂ ನಿರ್ಬಂಧವಿದೆಯೆಂಬ ವದಂತಿಯಿದೆ. ನೂಲುವುದೂ ಶಾಸನಭಂಗ ಚಳವಳಕ್ಕೊಂದು ಸಹಾಯವೆಂಬರ್ಥದಲ್ಲಿ ಈ ನಿರ್ಬಂಧವಂತೆ.

ಮದ್ರಾಸಿನಲ್ಲಿ ಸ್ವಯಂಸೇವಕರಿಗೆ ಸಹಾಯ ಮಾಡುತ್ತಾರೆಂಬ ಆರೋಪಣೆಯಿಂದ ಕೈದು ಮಾಡಲ್ಪಟ್ಟ ಶ್ರೀ ಶರ್ಮ ಮತ್ತು ಶ್ರೀ ವಿಶ್ವನಾಥನ್ ಎಂಬಿಬ್ಬರಿಗೆ ಆರಾರು ತಿಂಗಳ ಶಿಕ್ಷೆಯೂ ೧೦೦ ರೂ. ಗಳಂತೆ ಜುಲುಮಾನೆಯೂ ವಿಧಿಸಲ್ಪಟ್ಟಿತು.

ತಿನ್ನವೆಲ್ಲಿಯಲ್ಲಿ ರಥೋತ್ಸವದ ಸಮಯದಲ್ಲಿ ರಥವು ಜನರ ಗುಂಪಿನ ಮೇಲೆಯೇ ಎಳೆಯಲ್ಪಟ್ಟು ಅನೇಕರ ಕೈಕಾಲುಗಳು ನುಚ್ಚುಗುಜ್ಜಾಗಿ ಆಸ್ಪತ್ರೆ ಸೇರುವಂತಾಗಿದೆ. ಗಡಿಬಿಡಿಯಲ್ಲಿ ಒಂದು ದೀಪದ ಕಂಬವು ಮುರಿದು ಬಿದ್ದು ಒಬ್ಬನ ಮರಣವೂ ಆಯಿತು.

ಢಕ್ಕದಲ್ಲಿ ಜಿಲ್ಲಾಪರಿಷತ್ತಿನ ಸಂಬಂಧವಾಗಿ ಶ್ರೀ. ಗಳಾದ ಮದನ ಮೋಹನ ಭೌಮಿಕ, ಮನೋರಂಜನ ಬೆನರ್ಜಿ ಎಂಬಿಬ್ಬರು ಕೈದುಮಾಡಲ್ಪಟ್ಟಿದ್ದಾರೆ. ಅಧ್ಯಕ್ಷರಾಗುವ ಶ್ರೀಮತಿ ನಾಗೇಂದ್ರಬಾಲ ಸೇನ ಎಂಬವರಿಗೆ ಪೋಲೀಸರ ನೋಟೀಸು ಹೋಗಿದೆ.

ವಾರ್ಧಾದಲ್ಲಿ ಹೊಸದಾಗಿ ಮೆಜಿಸ್ಟ್ರೇಟರೊಬ್ಬರು ಓರ್ವ ಮಹಾರ ಬಾಲಿಕೆಯನ್ನು ಆಕೆಯ ಮನೆಯಿಂದ ತೂಗಿಸೆಳೆದು ತಂದು ಹೊಡೆದರೆಂಬ ಅಪರಾಧಕ್ಕೆ ಅಲ್ಲಿಯ 1 ಕ್ಲಾಸ್ ಮೆಜಿಸ್ಟ್ರೇಟರಾದ ಶ್ರೀ. ಹುಂಡಿ ವಿಷ್ಣುಕಾಮತರವರು ನಾಲ್ಕು ತಿಂಗಳ ಸಕ್ತಮ ಸಜೆ ವಿಧಿಸಿರುವರು.

ವ್ಯಾಪಾರದ ದುಸ್ಥಿತಿಯಿಂದ, ಬೊಂಬಾಯಿಯ ಸೆಸೂನ್ ಗ್ರೂಪಿಗೆ ಸೇರಿದ ಮೂರು ಮಿಲ್ಲುಗಳು ಈ ಜುಲೈ ತಾರೀಕು 1 ರಿಂದ ಮುಚ್ಚಲ್ಪಡುವುದಂತೆ. ಹೀಗಾದರೆ ಅಲ್ಲಿಯ ಸುಮಾರು 6000 ಕೆಲಸಗಾರರು ನಿರುದ್ಯೋಗಿಗಳಾಗಿ ಅಲ್ಲಿನ ನಿರುದ್ಯೋಗಿಗಳ ಸಂಖ್ಯೆಯನ್ನು ಹೆಚ್ಚಿಸುವರು.

ಮದ್ರಾಸಿನಲ್ಲಿ ಸ್ಥಳೀಯ ಡಿಕ್ಟೇಟರಾದ ಶ್ರೀಮತಿ ಸರಸ್ವತಿ ಪಾಂಡು ರಂಗಂ ಎಂಬವರು ಸತ್ಯಾಗ್ರಹ ಕರಪತ್ರಗಳನ್ನು ಹಂಚುತಿದ್ದಾಗ ಕೈದು ಮಾಡಲ್ಪಟ್ಟಿದ್ದಾರೆ. ವಿಚಾರಣೆಯು ನಡೆದು ಚಾರ್ಜಿಯಾಗಿದೆ. ಮತ್ತೊಂದು ಮೆರವಣಿಯಲ್ಲಿ ಮೂವರು ಕೈದು ಮಾಡಲ್ಪಟ್ಟಿದ್ದಾರೆ. ಪಿಕೆಟಿಂಗು ನಡೆಯುತ್ತಿದೆ.

ಕಾಶಿಯಲ್ಲಿ ಅಲ್ಲಿಯ ಕಾಂ. ಕಮಿಟಿಯ ಡಿಕ್ಟೇಟರರಾದ ಶ್ರೀ. ಸತ್ಯನಾರಾಯಣ ಮಿತ್ರ ಎಂಬವರಿಗೆ ಒಂದು ವರ್ಷದ ಕಠಿಣ ಶಿಕ್ಷೆ ಮತ್ತು ೫೦ ರೂಪಾಯಿಗಳ ಜುಲುಮಾನೆ ಅಥವಾ ಆರು ವಾರಗಳ ಹೆಚ್ಚಿಗೆ ಶಿಕ್ಷೆಯು ವಿಧಿಸಲ್ಪಟ್ಟಿತು. ಬೇರೆ ೮ ಮಂದಿ ಸ್ವಯಂಸೇವಕರಿಗೂ ಶಿಕ್ಷೆಯಾಯಿತು.

ಸಂಯುಕ್ತ ಪ್ರಾಂತ್ಯದ ಜೈಲುಗಳಲ್ಲಿ ರಾಜಕೀಯ ಕೈದಿಗಳಿಗೆ ಅಧಿಕಾರಿಗಳು ಕಷ್ಟಕೊಡುವ ವಿಷಯದಲ್ಲಿ ವಿಚಾರಣೆಯನ್ನು ಮಾಡುವುದಕ್ಕಾಗಿ ಪಂಡಿತ ಮಾಲವೀಯರು ಒಂದು ಕಮಿಟಿಯನ್ನು ನೇಮಿಸಿದ್ದಾರೆ. ಹಿಂದೂ ಮುಸಲ್ಮಾನರಿಂಗ ವಿಶಿಷ್ಟವಾದ ಅದರ ಹನ್ನೊಂದು ಮಂದಿ ಸದಸ್ಯರಲ್ಲಿ ಒಂಬತ್ತು ಮಂದಿ ಪ್ರಸಿದ್ಧ ವಾಯರುಗಳಿದ್ದಾರೆ.

ಘಂದ್ ಪುರದ ಸಮೀಪ ರಾಜಬಾರಿಯೆಂಬ ಸ್ಟೇಶನಿನಲ್ಲಿ ಅಲ್ಲಿಯ ಜಿಲ್ಲಾ ಮೆಜಿಸ್ಟ್ರೇಟರೂ ಪೋಲೀಸು ಸುಪರಿಂಟೆಂಡೆಂಟರೂ ರೈಲಿನಿಂದಿಳಿಯುವಾಗ ಅವರ ಮೇಲೆ ಬಾಂಬು ಎಸೆಯಲ್ಪಟ್ಟಿತು. ಆದರೆ ಅದು ಗುರಿ ತಪ್ಪಿ ಅವರಿಗೆ ತಾಗದೆ ರೈಲಿನ ಖಾಲಿಯಾದ ಗಾಡಿಯೊಂದಕ್ಕೆ ಬಿದ್ದು ಒಡೆಯಿತು. ಯಾರಿಗೂ ಗಾಯವಾಗಲಿಲ್ಲ. ಎಸೆದವರ ಪತ್ತೆಯೂ ಆಗಲಿಲ್ಲ. ಸಂಶಯದ ಮೇಲೆ ಎಂಟು ಮಂದಿ ಕೈದು ಮಾಡಲ್ಪಟ್ಟಿದ್ದಾರೆ.

ಓರ್ಡಿನೇನ್ಸುಗಳ ಅವಧಿಯು ಇನ್ನು ಕೆಲವೇ ದಿನಗಳಲ್ಲಿ ಮುಗಿಯುವುದು. ಪುನಹ ಜಾರಿಗೆ ತರುವರೇ ಎಂದು ಪ್ರಶ್ನೆ. 'ಓರ್ಡಿನೇನ್ಸುಗಳನ್ನು ಪುನಃ ಮತ್ತೆ ತಲೆಯೆತ್ತದಂತೆ ಹೂಳಿಟ್ಟು ಇಂಡಿಯಾವನ್ನು ಮರ್ಯಾದೆಯಿಂದ ಕಂಡು ಡೊಮಿನಿಯನ್ ಸ್ಟೇಟಿಗೆ ಕರೆದೊಯ್ಯಸಿಪಿದ ಸುಧಾರಣೆಗಳನ್ನು ಕೊಟ್ಟಲ್ಲದೆ ಹಿಂದೂ ಸುಖವಿಲ್ಲ' ಎಂದು ಬಹದ್ದೂರ್ ಸಪ್ರುಗಳೆಂದು ಪತ್ರ ಸ್ಪೆಕ್ಟೇಟರ್ ಪತ್ರಿಕೆಯಲ್ಲಿದೆ.

ಚಿತ್ತಗಾಂಗಿನ ನೆರೆ ಕರೆಯ ಒಂದು ಹಳ್ಳಿಯಲ್ಲಿ ಕ್ರಾಂತಿಕಾರಿ ಪಕ್ಷದವರೆಂಬವರ ಮೇಲೆ ಮಿಲಿಟರಿಯವರು ದಾಳಿ ಮುಟ್ಟು ಇತ್ತಂಡಗಳೊಳಗೂ ರಿವಾಲ್ವರ್ ಯುದ್ಧವಾಗಿ ಮಿಲಿಟರಿ ಪಕ್ಷದಲ್ಲಿ ಕೆಪ್ಟನ್ ಕೆಮರನ್ ಎಂಬವರೂ, ಕ್ರಾಂತಿಕಾರರ ಪಕ್ಷದಲ್ಲಿ ನಿರ್ಮಲಚಂದ್ರಸೇನ ಎಂಬವರೂ ಮಡಿದು ಯೋಗ್ಯತೆಗೆ ತಕ್ಕಂತೆ ಶವಸಂಸ್ಕಾರಗಳಾದವು. ಮಿಲಿಟರಿಯವರಲ್ಲಿ ಕೆಪ್ಟನನಿಂದ ಮೊದಲಾಗಿ ಮೇಲಿನ ಅಧಿಕಾರಿಗಳಿಗೆಲ್ಲ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಷ್ಟೇ ಅಧಿಕಾರ ಕೊಡಲಾಗಿದೆ.

ವಿಮಾನವೇರಿ ಕಾಣೆಯಾದ ಬೊಂಬಾಯಿಯ ಪಾರ್ಸಿ ವೀರ (ಜೇಜಿಬಾಯಿಸ) ಪತ್ತೆ ಇಲ್ಲ. ಕೆಲವು ಮೈಲು ದೂರದ ಒಂದು ಹಳ್ಳಿಯಿಂದೊಬ್ಬ ಮಹಮ್ಮದೀಯನು ಬಂದು ಜೇಜಿಬಾಯಿಯು ಒಂದು ಕಾಡಿನಲ್ಲಿ ನಿಶ್ಚೇಷ್ಟಿತನಾಗಿ ಬಿದ್ದಿದ್ದನೆಂದು ನುಡಿದನು. ಅದು ವಿಚಾರಿಸಿದಲ್ಲಿ ಸುಳ್ಳೆಂದು ತಿಳಿಯಿತು. 'ಜುಹೂ' ವಿಮಾನ ನಿರ್ಮಾಣದಿಂದ ಆಂಗ್ಲ ವೈಮಾನಿಕರೊಬ್ಬರು ಕೆಲವಂತರಕ್ಕೆ ಹಾರಾಡಿ ಹುಡುಕಿದರು. ಜೇಜಿಭಾಯಿಯು ಮೇಲಕ್ಕೇರಿ ಮೋಡಗಳ ನಡುವೆ ಬಲವಾದ ಗಾಳಿಗೆ ಸಿಲುಕಿ ಯಂತ್ರದ ಅಸ್ವಮುದಿಂದಲೋ ಹವೆಯ ದೆಸೆಯಿಂದಲೋ ವಿಮಾನ ಸಮೇತ ಸಮುದ್ರಕ್ಕೆ ಅಪ್ಪಳಿಸಲ್ಪಟ್ಟಿರಬೇಕೆಂದು ವಿಚಾರವಂತರ ಊಹೆ ಇದೆ.

ಅಹಮದಾಬಾದಿನ ಒಬ್ಬ ಮಿಲ್ ಏಜೆಂಟರಾದ ಮೆ. ಸೆತ್ ರಾನ್ ಚಾಂದ್ ಲಾಲ್ ಎಂಬವರು ಡೆಲ್ಲಿಯ ಕಾಂಗ್ರೆಸಿನಲ್ಲಿ ಭಾಷಣ ಮಾಡಿದ ಕಾರಣ ಅವರ ಮೇಲೆ 5000 ರೂ. ದಂಡವನ್ನು ವಿಧಿಸಿದ್ದರು. ಅದನ್ನು ಕೊಡದ ಕಾರಣ ಪೋಲೀಸರು ಅಲ್ಲಿಗೆ ಹೋಗಿ 5000 ರೂ. ಗಳ ಕರೆನ್ಸಿ ನೋಟುಗಳನ್ನು ವಸೂಲು ಮಾಡಿದರು. ಅಲ್ಲಿನ ಇನ್ನೊಬ್ಬ ಏಜೆಂಟನಾದ ಶೆತ್ ಗಿರಿಧಾರ್ ಲಾಲ್ ಎಂಬಾತನು ಮೊದಲಿನ ರಾನ್ ಚಾಂದ ಲಾಲರಿಗೆ ಯಾವ ಆಸ್ತಿಯೂ ಇಲ್ಲ ಎಲ್ಲವೂ ತನ್ನದು, ಆದ್ದರಿಂದ ಮಿಲ್ಲಿನ ಯಾವ ಆಸ್ತಿಯನ್ನಾದರೂ ವಶ ಮಾಡಿಕೊಂಡರೆ ಅವರ ಮೇಲೆ ಖಾನೂನು ಜಾರಿ ಮಾಡಲಾದೀತೆಂಬದಾಗಿ ಬರಕೊಂಡಿರುತ್ತಾರೆ.

ಮದಕಾಸಿರವೆಂಬ ಗ್ರಾಮದಲ್ಲಿ ಇತ್ತೀಚೆಗೆ ಒಂದು ಅದ್ಭುತ ಸಂಗತಿ ನಡೆಯಿತು. ಅದೇನೆಂದರೆ ಅಲ್ಲಿಯ ಜುವ್ವೆ ಎಂಬ ಒಂದುತರದ ಮರವು ಬಿದ್ದು ಹೋಗಿದ್ದುದನ್ನು ರವಿನ್ಯು ಡಿಪಾರ್ಟ್‌ಮೆಂಟಿನವರು ಹರಾಜು ಮಾಡಿದರು. ಅದನ್ನು ಕೊಂಡುಕೊಂಡಾತನು ಅದರ ಕೊಂಬೆಗಳನ್ನು ಕಡಿದು ಅದನ್ನು ಒಣಗಲೆಂದು ಬಿಟ್ಟಿದ್ದನು. ಒಂದು ದಿನ ಕೆಲವು ಗೋಪಾಲಕರು ಅವರ ಹತ್ತಿರ ದನಗಳನ್ನು ಮೇಯಿಸುತ್ತಿರುವಲ್ಲಿ ಆ ಮರವು ಒಂದು ತರದ ಬಲವಾದ ಶಬ್ಧವನ್ನು ಮಾಡಿ ಮೊದಲಿನಂತೆ ಎದ್ದು ನಿಂತಿತು. ಇದನ್ನು ಕಂಡ ಆ ಹುಡುಗರು ಗ್ರಾಮದ ಜನರಿಗೆ ತಿಳಿಸಲು ಅವರು ಬಂದು ನೋಡಿ ಏನೋ ದೇವರ ಸ್ಥಾನವೆಂದು ಹಣ್ಣು ಕಾಯಿಗಳನ್ನು ಅರ್ಪಿಸಿ ಪತ್ತಿ ಈಗ ಒಂದು ದೊಡ್ಡ ಕ್ಷೇತ್ರವಾಗಿದ. ಇದರಲ್ಲಿ ಮೊಲು ಒಂದು ಸರ್ಪವು ವಾಸಿಸುತಿತ್ತಂತೆ. ಆದ್ದರಿಂದ ಮರವನ್ನು ಬೀಳಿಸಿದ ಕಾರಣ ತನ್ನ ವಾಸಸ್ಥಾನವನ್ನು ಮರಳಿ ಪಡೆಯಲು ಹೀಗೆ ಮಾಡಿತೋ ಏನೋ? ಎಲ್ಲವೂ ವಿಚಿತ್ರ! ಹೀಗಾದರೆ ಸತ್ತ ಮನುಷ್ಯನು ಜೀವಂತನಾಗುವ ಸಂಭವವೂ ಇದೆ.

'ಕುಮಾರಿ' ಎಂಬ ಸ್ಟೀಮರು ಕರಾಚಿ ಬಂದರಿನಿಂದ ಧಾನ್ಯಾದಿಗಳನ್ನು ಹೇರಿಕೊಂಡು ತಾ. 12ರಲ್ಲಿ ಮದರಾಸಿಗೆ ಹೊರಟು ಬರುತ್ತಿದ್ದಾಗ ದ್ವಾರಕೆಯ ಸಮೀಪ ಕೆಳಗಿನ ಪಾರ್ಶ್ವದಲ್ಲಿ ತೂತು ಉಂಟಾಗಿ ನೀರು ತುಂಬಿ ಮುಳುಗಿ ಹೋಯಿತು. ನೀರು ತುಂಬಿಕೊಳ್ಳುತ್ತಿರುವಾಗ ಅದನ್ನು ತಡೆಯುವ ಪ್ರಯತ್ನಗಳೆಲ್ಲವೂ ನಿಷ್ಫಲವಾದುವು. ನೀರು ಯಂತ್ರವಿರುವ ಕೋಟ್ಟಡಿಗೆ ಮುಟ್ಟಿದ ಕೂಡಲೆ ಚಲನೆಯು ನಿಂತಿತು; ಚಿಕ್ಕ ದೋಣಿಗಳನ್ನು ಇಳಿಸಿ ಪ್ರಯಾಣಿಕರಲ್ಲಿ ೨೩ ಮಂದಿಯನ್ನು ಅದರಲ್ಲಿ ತುಂಬಿ ಹತ್ತು ಮೈಲು ದೂರದ (ಇದೇ ಸಮೀಪದ್ದು) ಬಂದರಕ್ಕೆ ಕಳುಹಿದರು. ರಾತ್ರೆ ಸಮಯ; ತಂತಿಯಿಲ್ಲದ 'ವೈರ್‌ಲೆಸ್' ಉಪಕರಣಗಳು ಇಲ್ಲವಾದ ಕಾರಣ, ಎಲ್ಲಿಂದಲೂ ಸಹಾಯ ದೊರಕುವುದು ಅಸಾಧ್ಯವಾಯಿತು. ೧೩ ಮಂದಿಗಳು ಕಾಣೆಯಾಗಿರುವರು, (೬ ಮಂದಿ ಪ್ರಯಾಣಿಕರು; ಉಳಿದವರು ಸ್ಟೀಮರಿನವರು) ಕೆಪ್ಟನನ ಶವವು ದ್ವಾರಕಾ ತೀರಕ್ಕೆ ಬಂದು ಬಿದ್ದುದು ದೊರೆತಿದೆ. ಈ ಸ್ಟೀಮರು ೧೯೧೯ನೇ ಇಸವಿಯಲ್ಲಿ ಜಪಾನಿನ ಒಂದು ಕಂಪೆನಿಯಿಂದ ಕಟ್ಟಲ್ಪಟ್ಟುದು. ಮೂರು ಸ್ಟೀಮರ್ ಕಂಪೆನಿಗಳು ಕೈ ಬದಲಾಯಿಸಿ ಇದೀಗ ನಾಲ್ಕನೇ ಬಾರಿ ನೇಶನಲ್ ಸ್ಟೀಮ್‌ಶಿಪ್ ಕಂಪೆನಿಯವರು ಕೊಂಡುಕೊಂಡಿದ್ದರು. ಸ್ಟೀಮರಿಗೂ ಸರಕುಗಳಿಗೂ ವಿಮೆ ತೆಗೆಯಲ್ಪಟ್ಟಿದೆ.

ವಿದೇಶ.

ಜಗತ್ತಿನ ಮಹಾಪುರುಷರಲ್ಲಿ ಅಗ್ರಗಣ್ಯನೆಂದು ಗಣಿಸಿ ಅಮೇರಿಕದ ಕಮ್ಯೂನಿಟಿ ಚರ್ಚಿನವರು, ಆ ಬಗ್ಗೆ ಇರಿಸಿದ ಬಹುಮಾನ ಪದಕವನ್ನು ಮಹಾತ್ಮ ಗಾಂಧಿಯವರಿಗರ್ಪಿಸಲು ನಿಶ್ಚಯಿಸಿರುವಂತೆ ತಿಳಿದುಬರುತ್ತದೆ.

ಹಿಂದೀ ಕ್ರಿಕೆಟ್ ಆಟಗಾರರು ಇಂಗ್ಲೆಂಡಿನಲ್ಲಿ, ವಿರಾಮವಿಲ್ಲದೆ ಆಡುತ್ತಿದ್ದಾರೆ, ಇವರ 'ರನ್ನು'ಗಳ ಸಂಖ್ಯೆ ಮನ್ನೋದಿದವರೆಲ್ಲರೂ ತಲೆದೂಗುವಂತಿದೆ. 'ಆಡುವರ ಮಕ್ಕಳು ಆಡಬೇಕು.........' ಎಂದರೆ ಹೀಗೆಯೆ.

ಅರ್ಜೆಂಟೈನಿನಲ್ಲಿ ಜ್ವಾಲಾಮುಖಿ ಬೇಳುವ ಲಕ್ಷಣಗಳು ಕಂಡುಬರುತ್ತಿವೆ. ಪರ್ವತದೊಳಗಿಂದ ಗರ್ಜನೆ ಕೇಳಿ ಬರುತ್ತಿರುವುದು. 'ಅರ್ಜೆಂಟ್' ಆಗಿ ಬರಬಹುದಂತೆ. ನೀರಿನ ೫೦ ಅಡಿ ಎತ್ತರವನ್ನು ಕಡಿದುಮಾಡಿ, ಬ್ರಿಟಿಷ್ 'ವಿಸ್ಕಿ'ಯು ಅತ್ತ ಹೊರಟಿದೆ. ಜ್ವಾಲೆಗಳು ಆರದಿರುವು!

ವೈಮಾನಿಕನೊಬ್ಬನು, ಯಂತ್ರ ಮುರಿದು ವಿಮಾನವು ಸಮುದ್ರಕ್ಕೆ ಬೀಳಲು, ಅದರಲ್ಲಿ ಎಂಟು ದಿನಗಳಿಂದ ಅನ್ನಾಹಾರಗಳಿಲ್ಲದೆ ಮೃತ್ಯುವನ್ನು ಆಯುಷ್ಯ ಕೊನೆಗೆ 'ಪರ್ಶನ್ ಶಿಪ್' ಎಂಬ ಸ್ಟೀಮರಿನವರು ಅತ್ತ ಒಂದು ದೈವವಶಾತ್ ಇವನನ್ನು ಕಂಡುದರಿಂದ ಬದುಕಿಸಲ್ಪಟ್ಟ ವಾರ್ತೆಯೊಂದು ಬಂದಿದೆ.

ಅಬಿಸೀನಿಯದ ಮಾಜಿ ಅರಸರಾದ ಲಿಜ್ಯಾಸುರವರು ಸೆರೆಮನೆಯಿಂದ ತಪ್ಪಿಸಿಕೊಂಡವರು ಗೋಜ್ಜಾಮ್ ಎಂಬಲ್ಲಿ ಅಡಗಿರುವರೆಂದು ಊಹೆ. ೧೫೦೦೦ ಸೈನಿಕರು ಗೋಜ್ಜಾಮಿನ ಸುತ್ತಲೂ ಸುಸಜ್ಜಾಗಿ ನಿಂತು, ಲಿಜ್ಯಾಸುವು ಹೊರಗೆ ಬಾರದಂತೆಯೂ, ಬೇರೆ ಸೈನಿಕರು ಆತನನ್ನು ಒಳಗೆ ಕೂಡದಂತೆಯೂ ಪಹರೆಮಾಡುತ್ತಿದ್ದಾರೆ.

ಪ್ರಪಂಚದ ಪ್ರಮುಖ ರಾಷ್ಟ್ರಗಳ ನಿರುದ್ಯೋಗಿಗಳ ಸಂಖ್ಯೆ ಈ ರೀತಿಯಲ್ಲಿದೆ:—

ಸಂಯುಕ್ತ ಅಮೇರಿಕ	೮,೦೦೦,೦೦೦
ಜರ್ಮನಿ	೫,೦೦೦,೦೦೦
ಫ್ರಾನ್ಸ್	೨,೮೦೦,೦೦೦
ಬ್ರಿಟೈನ್	೨,೬೦೦,೦೦೦
ರಷ್ಯ	೦

ಹಿಂದೂದೇಶದ ಲೆಕ್ಕವಿಲ್ಲ; ಲೆಕ್ಕವಿಲ್ಲದಷ್ಟು ನಿರುದ್ಯೋಗಿಗಳಿರುವ ದೇಶದ ಸಂಖ್ಯೆಯನ್ನೆಷ್ಟೆಂದು ತಿಳಿಸಲಿ?

Nangala,
21—6—32.

" Many friends and relatives have expressed their concern at my father's death by writing very kind letters of condolence. I hereby acknowledge them all and offer thanks on behalf of other members of the family and myself for the kind sympathy conveyed to us in the hour of our sad bereavement and for the loving thoughts expressed for the place and happiness of the dear departed soul. I hereby apologise also for my inability at this juncture to write back individually to each friend or relative and request every one to accept this in lieu of a personal letter."

C. M. KUSHALAPPA.

ಇನ್ನಷ್ಟು ಅಗಲವಾಗುತ್ತದೆ. ಪುನಃ ಸ್ನೇಹಸ್ಥಾಪನೆಯಾಗುವುದು ಬಹಳ ಕಷ್ಟವಾದೀತು. ಈ ಮನಸ್ಲೇಶದಿಂದ ತುಂಬಾ ಅಪಾಯಗಳಿವೆ.

ಸರ್ ಸ್ಯಾಮ್ಯುವೆಲ್ ಹೋರರಿಗೆ ನಿಜವಾದ ಸ್ಥಿತಿಯು ತಿಳಿದಿಲ್ಲವೆಂತ ವ್ಯಸನದಿಂದ ಹೇಳಬೇಕಾಗಿದೆ. ಹಿಂದೂಸ್ಥಾನದ ಪರಿಸ್ಥಿತಿಯು ಉತ್ತಮವಾಗುತ್ತಲಿದೆಯೆಂತ ಭಾವಿಸುತ್ತಾರೆ. ಎಂಥ ಅಜ್ಞಾನ! ಚರಿತ್ರೆಯ ಪಾಠವನ್ನು ಯಾಕೆ ಮರೆಯುತ್ತಾರೆ. ದಬ್ಬಾಳಿಕೆಯು ಯಾವ ರಾಷ್ಟ್ರೀಯ ಚಳವಳವನ್ನು ಮುರಿದಿದೆ? ದಬ್ಬಾಳಿಕೆಯಿಂದ ರಾಷ್ಟ್ರೀಯ ಜಾಗೃತಿಗೆ ಇನ್ನಷ್ಟು ಸಹಾಯವಾಗುತ್ತದೆಯೆಂತ ನನ್ನ ಅಭಿಪ್ರಾಯ. ಇಂಗ್ಲೆಂಡಿನ ಶತ್ರುಗಳಿಗೆ ಸರಕಾರದ ಈಗಿನ ರಾಜನೀತಿಯು ಬದಲಾಗಬಾರದೆಂತ ಇದೆಯೆಂಬುದು ನಿಮಗೆ ತಿಳಿದಿದೆಯೆ? ಈಗ ಇರುವ ಮನಸ್ಲೇಶವೇ ತಮ್ಮ ಕೈಗೆ ದೊರಕಿರುವ ದೊಡ್ಡ ಆಯುಧವೆಂತ ಅವರು ಭಾವಿಸುತ್ತಾರೆ.

ನಿನ್ನೆ ತಾನೇ ನಾನು ಅಲ್ಲಹಾಬಾದಿನ ಕ್ವಾರ್ಟೋರವಿನ ಬದಿಗಾಗಿ ಹೋಗುತ್ತಿರುವಾಗ ಪೋಲೀಸಿನವರ ಎದುರಿನಲ್ಲೇ ರಾಷ್ಟ್ರೀಯ ಬಾವುಟೆಯನ್ನು ಏರಿಸುತ್ತಿದ್ದುದನ್ನು ನಾನು ಕಂಡೆ. ಈ ತರದ ಬಹಿರಂಗವಾದ ಕೆಲಸದಿಂದ ಕಾಂಗ್ರೆಸು ಮುರಿಯಲ್ಪಟ್ಟಿದೆಯೆಂತ ಅರ್ಥವಾಗುತ್ತದೋ? ಈಗ ತಾತ್ಕಾಲಿಕ ಮೊದಲಿನಷ್ಟು ಕಾಂಗ್ರೆಸ್ ಚಳವಳವು ಕಾಣದಿರಬಹುದು. ಆದರೆ ಆರ್ಡಿನೆನ್ಸ್‌ಗಳು ರದ್ದಾದ ಮೇಲೆ ಈಗ ಜೈಲಿನಲ್ಲಿರುವವರು ಹೊರಗೆ ಬಂದ ಮೇಲೆ ಸ್ಥಿತಿಯು ಹೇಗಿದ್ದೀತೆಂತ ಯೋಚಿಸಿ ನೋಡಿ. ಆದರೆ ನೀವು ದೂರ ದೃಷ್ಟಿಯಿಂದ ನೋಡಿದರೆ ಹೊರಗಿನ ಕಾರ್ಯಗಳು ಮುಖ್ಯವಲ್ಲ. ಮನಸ್ಸಿನ ದೃಢತೆಯೇ ಮುಖ್ಯವೆಂಬುದನ್ನು ಒಪ್ಪಬೇಕು. ಕಾಂಗ್ರೆಸಿನ ಮನೋಭಾವವನ್ನು ಈ ದಬ್ಬಾಳಿಕೆಯು ಮುರಿದೀತೆಂತ ಭಾವಿಸುತ್ತೀರೋ? ಬುದ್ಧಿವಂತನಾದವನು ನಿಜವಾದ ಒಳಗಿನ ಬೇನೆಗೆ ಚಿಕಿತ್ಸೆ ಮಾಡುತ್ತಾನೆಯೇ ಹೊರತು ಹೊರಗಿನ ಕುರುಹುಗಳಿಗಲ್ಲ.

ನಾನು ಇಂಗ್ಲಿಷ್ ಮನುಷ್ಯನಾಗಿದ್ದರೆ ಈಗಿನ ದಬ್ಬಾಳಿಕೆಯನ್ನು ನಿಲ್ಲಿಸುವ ವರೆಗೆ ನಾನು ವಿಶ್ರಾಂತಿ ತೆಗೆದುಕೊಳ್ಳುತ್ತಿರಲಿಲ್ಲ. ಇಂಗ್ಲೆಂಡಿನ ಗೌರವವು ಈಗಿನ ಜನರ ಮತ್ತು ಮುಂದಿನ ಜನಾಂಗಗಳ ಮುಂದೆ ಸಹ ಹೆಚ್ಚುವಂತೆ ಮಾಡುವುದೇ ನನ್ನ ಉದ್ದೇಶವಾಗಿರುತ್ತಿತ್ತು. ಇಂಗ್ಲೆಂಡಿಗೆ ಇಂಡಿಯಾದ ವ್ಯಾಪಾರವನ್ನು ಉಳಿಸಿಕೊಳ್ಳುವುದು ಪ್ರಯೋಜನಕರ. ಇಂಗ್ಲೆಂಡೂ, ಇಂಡಿಯಾವೂ ಸ್ನೇಹದಲ್ಲಿರುವುದು ಈ ಎರಡು ರಾಜ್ಯಗಳಿಗೆ ಮಾತ್ರವಲ್ಲ ಒಟ್ಟು ಪ್ರಪಂಚಕ್ಕೇ ಅವಶ್ಯವಿದೆ. ನಾನು ಇಂಗ್ಲಿಷ್ ಮನುಷ್ಯನಾಗಿದ್ದರೆ ಈಗಿನ ರಾಜನೀತಿಯನ್ನು ಬದಲಾಯಿಸಲು ನನ್ನಿಂದ ಸಾಧ್ಯವಿದ್ದಷ್ಟು ಹೋರಾಡುತ್ತಿದ್ದೆ. ಯಾಕೆಂದರೆ ಇದರಿಂದ ಸ್ನೇಹವು ಅಸಾಧ್ಯವಾಗುತ್ತಲಿದೆ.

ಜನಾಂಗಗಳೊಳಗೆ ಸ್ನೇಹ ಬೆಳೆಸುವುದೇ ನನ್ನ ಉದ್ದೇಶ. ಸೇವೆಯೇ ನನ್ನ ರಾಷ್ಟ್ರೀಯತ್ವದ ಗುಟ್ಟು.

ಸರಕಾರದ ಅಭಿಪ್ರಾಯವೇನು?

(೭ನೇ ಪುಟದಿಂದ ಮುಂದುವರಿದದ್ದು)

ಗ್ರೋಪಾಯಗಳನ್ನು ೬ ತಿಂಗಳುಗಳಿಗಿಂತ ಹೆಚ್ಚಿಗೆ ಬಳಕೆಯಲ್ಲಿಡುವುದರಿಂದ ಪ್ರಜರಲ್ಲಿ ಸರಕಾರದ ಬಗ್ಗೆ ಪ್ರೀತಿಯು ಬದಲು ಭೀತಿಯುತ್ಪನ್ನವಾಗದಿರದು. ಭೀತಿಯ ಆಳಿಕೆಗಿಂತ ಪ್ರೀತಿಯ ಆಳಿಕೆಯೇ ಶ್ರೇಷ್ಠವಾದದ್ದೂ ಬಹು ದಿವಸ ಬಾಳುವಂಥಾದ್ದೂ ಎಂಬ ಸರ್ವ ಸಾಮಾನ್ಯ ಸಿದ್ಧಾಂತವನ್ನು ನಾವು ಪುನಹ ಉಚ್ಚರಿಸುವ ಅವಶ್ಯಕತೆಯಿಲ್ಲ.

ಸರಕಾರದವರು ಕೇವಲ ಕಾಯಿದೆ ಭಂಗ ಚಳವಳಿಯನ್ನು ತುಳಿದು ಹಿಡಿಯುವುದಕ್ಕಾಗಿಯೇ ಇಂದಿನ ಆರ್ಡಿನೇನ್ಸುಗಳನ್ನು ಉಪಯೋಗಿಸುತ್ತಾ ಬಂದಿದ್ದಾರೆ. ಇದರ ಪರಿಣಾಮವೇನು? ವೃತ್ತ ಪತ್ರಿಕೆಗಳಲ್ಲಿ ಪ್ರಕಟವಾಗುವ ವರ್ತಮಾನದಿಂದಲೂ ಸರಕಾರ ಸಮಾಚಾರ ಖಾತೆಯವರು ಪ್ರಕಟಿಸುವ ಸಮಾಚಾರಗಳ ಮೇಲಿಂದಲೂ ನೋಡಿದರೆ ಕಾಯಿದೆಭಂಗ ಚಳವಳಿಯು ಕೊನೆಗೊಂಡಿತೆಂದು ಅನಿಸುತ್ತದೆ. ಕಾಯಿದೆಭಂಗ ಚಳವಳಿಯು ಘಂಡಲ್ಲಿದ್ದ ಭಾಗಗಳಲ್ಲಿಯೇ ಇಂದು ರಾಜನಿಷ್ಠ ಸಭೆಗಳಾಗುತ್ತಿವೆ. ಪ್ರತಿಯೊಂದು ರಾಜನಿಷ್ಠ ಸಭೆಗೆ ತಂಡೋಪತಂಡವಾಗಿ ಜನರು ಬರುತ್ತಿರುವರು. ಕರನಿರಾಕರಣೆಯ ಚಳವಳಿಯ ಉಗಮಸ್ಥಾನವಾದ ಬಾರ್ಡೋಲಿಯ ರೈತರು ಮುಕ್ತವಾಗಿ ಕಂದಾಯವನ್ನು ಸಲ್ಲಿಸುತ್ತಲಿದ್ದಾರೆ. ರಾಜನಿಷ್ಠ ಸಭೆಗಳನ್ನು ಮಾಡಿ ಜನರು ಆ ಸಭೆಯಲ್ಲಿ ಅವಿಶ್ವಾಸವನ್ನೂ ಸರಕಾರದ ಬಗ್ಗೆ ರಾಜನಿಷ್ಠೆಯನ್ನೂ ಪ್ರಕಟಿಸುತ್ತಲಿದ್ದಾರೆ. ಇಷ್ಟೆಲ್ಲ ಲಕ್ಷಣಗಳ ಮೇಲಿಂದ ನೋಡಿದರೆ, ಕಾಯಿದೆ ಭಂಗ ಚಳವಳಿಯು ಕಳೆಗುಂದಿತೆಂದು ಹೇಳಲಿಕ್ಕೆ ಯಾವ ಅಭ್ಯಂತರವೂ ಇಲ್ಲ. ಅಂದ ಮೇಲೆ ಆರ್ಡಿನೇನ್ಸುಗಳ ಉದ್ದೇಶವು ಸಫಲವಾದ ಮೇಲೆ ಅವುಗಳನ್ನು ಅಸ್ತಿತ್ವದಲ್ಲಿಡುವ ಕಾರಣವೇನು?

ಒಂದು ಪಕ್ಷ, ಕಾಯಿದೆಭಂಗ ಚಳವಳಿಯ ಇನ್ನೂ ನಿಂದಿರುವುದಿಲ್ಲವೆಂದು ಹೇಳಿದರೂ, ಆರ್ಡಿನೇನ್ಸುಗಳ ಅವಧಿಯನ್ನು ಹೆಚ್ಚಿಸುವದು ಯೋಗ್ಯವೆನಿಸಲಾರದು. ಬಾಲಗ್ರಹವು ಕಠೋರ ರೋಗವಾದುದರಿಂದ ಅದಕ್ಕೆ ಬರಿಯಂಥ ಉಗ್ರೋಪಾಯವನ್ನು ಯೋಚಿಸಬೇಕಾಗುವದೆಂಬ ಮಾತಿಗೆ ನಮ್ಮ ಸಂಪೂರ್ಣ ಒಪ್ಪಿಗೆಯುಂಟು. ಆದರೆ ಬರಿಕೊಟ್ಟ ಮೇಲೂ ಆ ರೋಗವು ಹೋಗದಿದ್ದಲ್ಲಿ ಆ ರೋಗಗ್ರಸ್ತನಾದ ಎಳೆಯ ಬಾಲಕನ ಮೇಲೆ ಪುನಃ ಪುನಃ ಬರಿಯೆಳೆಯುವದು ಯುಕ್ತವೆನಿಸಬಹುದೆ? ಜಾಣರಾದವರು ಬೇರೆ ಉಪಾಯಗಳನ್ನು ಯೋಚಿಸುವರು. ಅದೇ ಮೇರೆಗೆ ಈ ವರ್ತದಂಥಾ ಉಗ್ರ ಆರ್ಡಿನೇನ್ಸುಗಳನ್ನು ೬ ತಿಂಗಳ ವರೆಗೆ ಉಪಯೋಗಿಸಿದರೂ ಕಾಯಿದೆಭಂಗ ಚಳವಳಿಯು ನೊಂದದಿದ್ದರೆ ಈ ಉಪಾಯಗಳಿಂದ ಅದನ್ನು ಮುರಿಯುವದು ಸಾಧ್ಯವಿಲ್ಲವೆಂತಾಗುತ್ತದೆ. ಆದುದರಿಂದ ಸರ್ಕಾರದವರು ಅವುಗಳನ್ನು ಬದಿಗಿಟ್ಟು ಬೇರೆ ಉಪಾಯಗಳನ್ನು ಕಲ್ಪಿಸಬೇಕಾಗುತ್ತದೆ. ಈ ಪ್ರಕಾರ ಯಾವ ರೀತಿಯಿಂದ ವಿಚಾರಿಸಿದರೂ ಸರ್ಕಾರದವರು ಆರ್ಡಿನೇನ್ಸುಗಳ ಅವಧಿಯನ್ನು ಹೆಚ್ಚಿಸದೆ ಅವುಗಳನ್ನು ತೆಗೆದು ಹಾಕುವುದು ಯೋಗ್ಯವೆಂದು ತೋರುತ್ತದೆ.

ಈ ಆರ್ಡಿನೇನ್ಸುಗಳಿಂದ ಶಾಂತತಾ ಪ್ರಿಯ ಪ್ರಜರ ನಿತ್ಯದ ವ್ಯವಹಾರಗಳಿಗೂ ಆತಂಕ ಉಂಟಾಗುವದೇನೋ ನಿಜವೆಂದು ಸ್ವತಃ ಭಾರತ ಮಂತ್ರಿಗಳೇ ಒಪ್ಪಿರುವರು. ಆದರೆ ದೇಶದ ಹಿತ ದೃಷ್ಟಿಯಿಂದ ಪ್ರಜರು ಕೆಲಕಾಲ ಅದನ್ನು ಸಹಿಸಬೇಕಾಗುತ್ತಿದೆಯೆಂದು ಸರ್ಕಾರದವರು ಹೇಳಿದಂತೆ ಅವರಾದರೂ ಹಾಗೆ ಮಾಡಿದರು. ಆದರೆ ಇನ್ನು ಮುಂದೆಯೂ ಹಾಗೆ ಮಾಡ ಹಚ್ಚುವರು ಯುಕ್ತವೆನಿಸಲಾರದು. ರಾಜಕೀಯ ವಿಚಾರವನ್ನು ಬದಿಗಿಟ್ಟು ವ್ಯವಹಾರಿಕ ದೃಷ್ಟಿಯಿಂದ ಯೋಚಿಸಿದರೂ ಆರ್ಡಿನೇನ್ಸುಗಳ ಅವಧಿಯನ್ನು ಬೆಳಸಕೂಡದೆಂದು ಅನಿಸುತ್ತದೆ.

ಸರ್ಕಾರದವರೂ, ಆರ್ಡಿನೇನ್ಸುಗಳ ಅವಧಿಯನ್ನು ಬೆಳಸಲಿಚ್ಛಿಸುವರೆಂದು ನಾವು ತಿಳಿಯಲಾರೆವು. ಆದರೆ ಈ ಬಗ್ಗೆ ಜನತೆಯನ್ನು ಸಂಶಯದಲ್ಲಿಡದೆ ತಮ್ಮ ಅಭಿಪ್ರಾಯವೇನೆಂಬುದನ್ನು ತೀವ್ರವೇ ಪ್ರಕಟಗೊಳಿಸುವದು ಯುಕ್ತವು. ಕಾಯಿದೆ ಭಂಗ ಚಳವಳಿಯೂ, ಆರ್ಡಿನೇನ್ಸಿನ ಆಳಿಕೆಯೂ ಬೇಗನೆ ಕೊನೆಗೊಂಡು ದೇಶದ ಉದ್ಯೋಗ ವ್ಯವಹಾರಗಳು ಅಭಿವೃದ್ಧಿಯಾಗಿ, ಭರತ ಖಂಡದ ಅಭೀಷ್ಟವು ಕೈಗೂಡುವಂತೆ ಆಗಲೆಂದು ಪರಮೇಶ್ವರನನ್ನು ಪ್ರಾರ್ಥಿಸಿ ವಿರಮಿಸುತ್ತೇವೆ.

'ಕ. ಟಾಯಿಮ್ಸ್'

ಜಾನುವಾರುಗಳ ವ್ಯಾಧಿ ಮತ್ತು ಚಿಕಿತ್ಸೆ.

ಬಾಯಿಹುಣ್ಣು.

ಕಲ್ಲು ಮುಳ್ಳುಗಳು ಸೇರಿದ ನಿಸ್ಸಾರವಾದ ಆಹಾರವನ್ನು ತಿನ್ನುವದರಿಂದಲೂ, ಅಜೀರ್ಣದಿಂದಲೂ ಬಾಯಿ ಮತ್ತು ನಾಲಿಗೆಯ ಮೇಲೆ ಸಣ್ಣ-ಸಣ್ಣ ಗುಳ್ಳೆಗಳೆದ್ದು, ಕೀವುಗೊಳ್ಳುವವು. ಅವು ಒಂದೆರಡು ದಿವಸಗಳಲ್ಲಿಯೇ ಒಡೆದು ಹುಣ್ಣಾಗುವವು. ಇನ್ನು ಕೆಲವು ವೇಳೆಗಳಲ್ಲಿ ಹುಣ್ಣುಗಳೆಲ್ಲಾ ಕೂಡಿಕೊಂಡು ಕಲೆತು ಒಂದೇ ಒಂದು ಘಾಯವಾಗಿ ಕಾಣಿಸುವವು.

ಲಕ್ಷಣ—ಬಾಯಿಯು ಸುತ್ತಲೂ ಊದು ಕಾಣಿಸುವದು. ಬಾಯಿಯ ಒಳಭಾಗವು ಕೆಂಪಾಗಿಯೂ, ಕಾವುಳ್ಳದ್ದಾಗಿಯೂ ಇರುವದು. ಜೊಲ್ಲು ಸುರಿಯುವದು. ನೋವಿನಿಂದ ಆಹಾರವನ್ನು ಅಗೆಯದು.

ಚಿಕಿತ್ಸೆ—ಒಂದು ಸೇರು ಬಿಸಿ ನೀರಿನಲ್ಲಿ ೧ ತೊಲೆ ಬಿಳೇ ಬಳಿಗಾರ ಮತ್ತು ೧ ತೊಲೆ ಸ್ಪಟಿಕವನ್ನು ಪುಡಿಮಾಡಿ ಹಾಕಿ, ಅದರಿಂದ ದಿನಕ್ಕೆ ೧೦—೨೦ ಸರತಿಯಂತೆ ೬—೮ ದಿನ ಬಾಯೊಳಗೆ ನೀರು ಹೋಗುವಂತೆ ತೊಳೆಯುತ್ತಿರಬೇಕು. ಸುಲಭವಾಗಿ ಜೀರ್ಣಿಸತಕ್ಕ ಸಾಧಾರಣ ಬಿಸಿಯಿರುವ ಅಕ್ಕಿಗಂಜಿ ಯಾ ಅಂಬಲಿ, ಕವ್ವಡು, ಗರಿಕೆಯ ಹುಲ್ಲು ಮುಂತಾದ ಆಹಾರ ಮತ್ತು ಕುಡಿಯಲಿಕ್ಕೆ ಶಕ್ಯವಾಗುವ ರೀತಿಯ ಶುದ್ಧ ಬಿಸಿ ನೀರು ಕೊಡಬೇಕು.

ನಾಲಿಗೆ ಊದಿಕೊಳ್ಳುವ ರೋಗ.

ಮುಳ್ಳು ಕಡ್ಡಿ ಮುಂತಾದವುಗಳನ್ನು ತಿನ್ನುವದರಿಂದಲೂ, ನಾಲಿಗೆಗೆ ಪೆಟ್ಟಾಗುವುದರಿಂದಲೂ, ಹುಳುಗಳು ಕಡಿಯುವದರಿಂದಲೂ, ದ್ರಾವಕ ಮುಂತಾದ ಔಷಧಿಗಳ ಸಂಪರ್ಕದಿಂದಲೂ ಈ ರೋಗವಾಗುತ್ತದೆ.

ಲಕ್ಷಣ—ಜ್ವರ ಬರುವುದು; ನಾಲಿಗೆ ಬಹಳವಾಗಿ ಊದಿ ಬಾಯಿಯ ಹೊರಗೆ ಜೋಲಾಡುತ್ತಿರುವದು; ಬಾಯಿಯಿಂದ ನೀರು ಸುರಿಯುತ್ತಿರುತ್ತದೆ; ಬಾಯಿ ದುರ್ವಾಸನೆಯುಳ್ಳದ್ದಾಗಿರುವದು. ಆಹಾರ ನುಂಗಲಿಕ್ಕೆ ಕಷ್ಟವಾಗುವದು. ೧—೨ ದಿವಸಗಳಲ್ಲಿಯೇ ನಾಲಿಗೆಯ ಕೆಳಗೆ ಕೆಳಭಾಗದಲ್ಲಿ ಹುಣ್ಣುಗಳಾಗಿ ಕೀವುಗೊಂಡು ನಾಲಿಗೆಯು ಕೊಳೆತು ಬಿದ್ದು ಹೋಗುವದು.

ಚಿಕಿತ್ಸೆ—೧ ಸೇರು ಬಿಸಿ ನೀರಿನಲ್ಲಿ ೧ ತೊಲೆ ಬಿಳಿಗಾರ ಮತ್ತು ೧ ತೊಲೆ ಸ್ಪಟಿಕವನ್ನು ಪುಡಿಮಾಡಿ ಹಾಕಿದ ನೀರಿನಿಂದ ಬಾಯಿ ಮತ್ತು ನಾಲಿಗೆಯನ್ನು ದಿನ ೧ಕ್ಕೆ ೨೦—೩೦ ಸರತಿಯಂತೆ ೯—೧೦ ದಿವಸ ತೊಳೆಯುತ್ತಿರಬೇಕು. ಹಾಗು ೧ ತೊಲೆ ಬಳಿಗಾರ ಮತ್ತು ೫ ತೊಲೆ ಕೊಬ್ಬರಿಯೆಣ್ಣೆಯನ್ನು ಕೂಡಿಸಿ, ಆ ಎಣ್ಣೆಯನ್ನು ನಾಲಿಗೆಯ ಕೆಳಗಿನ ಘಾಯಗಳಿಗೆ ಸವರಬೇಕು. ಈ ಎಣ್ಣೆ ದಿನ ೧ಕ್ಕೆ ೨—೩ ಆವೃತ್ತಿ ಹಚ್ಚುವದರಿಂದ ಆ ಹುಣ್ಣುಗಳು ಒಣಗುವವು. ಕುಡಿಯಲಿಕ್ಕೆ ನಿರ್ಮಲವಾದ ಬಿಸಿಯ ನೀರನ್ನು ಬೇಕಾದಷ್ಟು ಕೊಡಬಹುದಲ್ಲದೆ, ಸುಲಭವಾಗಿ ಜೀರ್ಣಿಸತಕ್ಕ ಅಕ್ಕಿಯ ಬಿಸಿ ಗಂಜಿ ಯಾ ಅಂಬಲಿಯನ್ನು ಸಾಕಾಗುವಷ್ಟು ಕೊಡಬಹುದು.

ಬಿ. ವಿ.

ಬಾಲಾರ್ಕಮಧು.

ಬಾಲಾರ್ಕಮಧು ಮಕ್ಕಳಿಗೆ ಕೊಡುವುದರಿಂದ ಶಕ್ತಿಯೂ ಆರೋಗ್ಯವೂ ಹೆಚ್ಚುವುದು. ಇದು ಮಧುರವಾಗಿದೆ. ಬೆಲೆ ಶೀಸೆ 1ಕ್ಕೆ 0—12—0 ಟ. ಖ. 0—12—0.

(Spleen Lever enlargement) ಎಂಬ ಮಕ್ಕಳ ... ಕರ ಗಡ್ಡೆರೋಗ—ಪ್ಲೀಹ—ಪಿತ್ತಕೋಶದ ಗಡ್ಡೆಗೆ ಚಕ್ರ... ಚಕ್ರಕ್ಷಾರ—ಚಕ್ರಚೂರ್ಣ—ಚಕ್ರ ಪ್ರಭಾ—ಈ ನಾಲ್ಕು ಔಷಧಗಳಿವೆ. ಸಾವಿರಾರು ಮಕ್ಕಳ ಪ್ರಾಣವನ್ನು ಉಳಿಸಿದೆ. ನಾಲ್ಕು ಔಷಧಗಳು ಸೇರಿ 1 ತಿಂಗಳ ಔಷಧದ 3—0—0. ಟ. ಖ. 0—8—0. ಏಜೆಂಟರು ಬೇಕಾಗಿ...

ಪ. ಎ. ಮೆನ್. ಶ್ರೀನಿವಾಸರಾವ್
ವೈ. ವಿ. ಆಯುರ್ವೇದಭಿಷಕ್,

ಬ್ರಾಂಚ್ ಆಫೀಸ್, ಉಡುಪಿ. S. K. } Spleen & Lever ಸ್ಪೆಶಲಿ... ಯಂ. ವಿ. ಪ್ರಸಾದಿಕ ಔಷಧಾ...

52-23 ಶಿವಮೊಗ್ಗಾ, (ಮೈಸೂರು ಸಂ...

Empire of India Life Assurance Company, Ltd.

Established 1897.

The New "FAMILY SECURITY" Policy issued by this Company provides-

A In the event of death during an agreed period,

1. The immediate payment to the Widow, Son or legal representative of a part of the sum Assured together with the Bonus accrued.

2. The payment of a guaranteed Yearly Income, payable by monthly instalments, during the balance of the period.

3. The payment of the balance of the sum of assured at the end of the period

OR

B In the event of death after the period has expired the payment of the sum assured together with any Bonus that has accrued.

Descriptive Pamphlet on application to—

Head Office:— EMPIRE OF INDIA LIFE BUILDING Bombay.

32—40

Branch Office:— 152, COMMERCIAL STREET, Bangalore.

ದಕ್ಷಿಣ ಆಫ್ರಿಕಾದಲ್ಲಿನ ಸತ್ಯಾಗ್ರಹ.

(ಮಹಾತ್ಮಗಾಂಧಿಯವರ ಲೇಖನಿಯಿಂದ)

ಮೊದಲನೆಯ ಪರಿಚ್ಛೇದದಲ್ಲಿ ಸ್ಥೂಲವಾಗಿ ಹೇಳಿರುವ ಭೂವಿವರಣಾ ವಿಭಾಗಗಳು ಪುರಾತನ ಕಾಲದವು ಅಲ್ಲವೇ ಅಲ್ಲ. ದಕ್ಷಿಣ ಆಫ್ರಿಕಾದ ಆದ್ಯನಿವಾಸಿಗಳು ಯಾರೆಂಬುದನ್ನು ನಿರ್ಧರಿಸಿ ಹೇಳಲು ಸಾಧ್ಯವಿಲ್ಲ. ಯೂರೋಪಿಯನ್ನರು ಅಲ್ಲಿಗೆ ಹೋಗಿ ನೆಲೆಸಿದಾಗ ನೀಗ್ರೋಜನರೆ ಅಲ್ಲಿದ್ದವರು. ಈ ನೀಗ್ರೋಜನರು, ಹಿಂದೆ ಅಮೇರಿಕಾ ದೇಶದಲ್ಲಿ ಗುಲಾಮರಾಗಿದ್ದು ತಮ್ಮ ಕ್ರೂರವಾದ ಗುಲಾಮಗಿರಿಯಿಂದ ತಪ್ಪಿಸಿಕೊಳ್ಳಲು ಓಡಿ ಬಂದು ಆಫ್ರಿಕಾದಲ್ಲಿ ನೆಲೆಸಿದ ಕೆಲವು ಗುಲಾಮರ ಸಂತತಿಯವರೆಂದು ಊಹಿಸಲಾಗಿದೆ. ಅದರಲ್ಲಿ ಜೂಲೂಗಳು, ಸ್ವಾಜಿಗಳು, ಬಾಸುಟೋಗಳು, ಬೆಚ್ವಾನರು ಮುಂತಾದ ಅನೇಕ ಪಂಗಡಗಳಿವೆ. ಅವರ ಭಾಷೆಯಲ್ಲಿಯೂ ಅನೇಕ ಒಳಭೇದಗಳುಂಟು. ಈ ನೀಗ್ರೋಜನರೇ ದಕ್ಷಿಣ ಆಫ್ರಿಕಾದೇಶದ ಆದ್ಯ ನಿವಾಸಿಗಳೆಂದು ಹೇಳಬೇಕು. ಆದರೆ ದಕ್ಷಿಣ ಆಫ್ರಿಕಾ ದೇಶವು ಈಗಿನ ನೀಗ್ರೋ ಪ್ರಜಾಸಂಖ್ಯೆಯ ಇಪ್ಪತ್ತು ಮೂವತ್ತರಷ್ಟನ್ನಾದರೂ ರಕ್ಷಿಸಬಲ್ಲುದು. ಅದರ ವಿಸ್ತೀರ್ಣವಂತಹುದು.

ಕೇಪ್ ಟೌನಿನಿಂದ ಡರ್ಬಾನಿಗೆ ರೈಲು ಮೂಲಕ ಸಾವಿರದ ಎಂಟುನೂರು ಮೈಲಿ ದೂರವಿದೆ; ಸಮುದ್ರದ ಕಡೆಯಿಂದ ಹೋದರೂ ಸಾವಿರ ಮೈಲಿಗಳಿಗೇನೂ ಕಡಿಮೆಯಾಗುವುದಿಲ್ಲ. ಈ ನಾಲ್ಕು ವಸಾಹತು (ಕಾಲೊನಿ)ಗಳ ಒಟ್ಟು ವಿಸ್ತೀರ್ಣವು ೪,೭೩,೦೦೦ ಚದರ ಮೈಲಿಗಳು. ಇಂತಹ ದೊಡ್ಡ ಪ್ರದೇಶದಲ್ಲಿದ್ದ ನೀಗ್ರೋ ಜನರ ಪ್ರಜಾಸಂಖ್ಯೆಯು (೧೯೧೪ ರಲ್ಲಿ) ಸುಮಾರು ಐವತ್ತು ಲಕ್ಷ ಮಾತ್ರ; ಆದರೆ ಯೂರೋಪಿಯನ್ನರು ಸುಮಾರು ಹನ್ನೆರಡೂವರೆ ಲಕ್ಷ ಮಂದಿ ಇದ್ದರು.

ನೀಗ್ರೋ ಜನರ ಪೈಕಿ ಅತ್ಯಂತ ಲಕ್ಷಣವಾಗಿರುವವರು ದೀರ್ಘದೇಹಿಗಳಾದ ಜೂಲೂಗಳು. ನಾನು ಈ ನೀಗ್ರೋ ಜನರಿಗೆ 'ಲಕ್ಷಣವಾಗಿರುವವರು' ಎಂಬ ವಿಶೇಷಣವನ್ನು ಬಹಳ ಯೋಚಿಸಿ ಉಪಯೋಗಿಸಿದ್ದೇನೆ. ನಮ್ಮ ರೀತ್ಯಾ ಸೌಂದರ್ಯದ ಆದರ್ಶಗಳು ಬಿಳಿಯ ದೇಹಕಾಂತಿ ಮತ್ತು ನೀಳವಾದ ನಾಸಿಕ. ನಾವು ಈ ಬರಿಯ ಭ್ರಾಂತಿಯನ್ನು ಕೊಂಚಕಾಲ ತ್ಯಜಿಸಿದ್ದೆ ಆದರೆ, ನಿರ್ಮಾಣಕರ್ತನು ಈ ಜೂಲೂ ಮನುಷ್ಯನನ್ನು ಸಂಪೂರ್ಣನನ್ನಾಗಿ ಮಾಡಲು ಕೊಂಚವೂ ಹಿಂಜರಿಯಲಿಲ್ಲವೆಂದು ಹೇಳಬಲ್ಲೆವು. ಗಂಡಸರು ಹೆಂಗಸರು ಇಬ್ಬರೂ ಎತ್ತರವಾಗಿರುವರು; ವಿಶಾಲವಾದ ವೃಕ್ಷಸ್ಥಲ; ಎತ್ತರಕ್ಕೆ ತಕ್ಕ ದೇಹ ಅವರ ನರಗಳು ಬಲವಾಗಿರುವುವಲ್ಲದೆ ಸರಿಯಾದ ಪ್ರಮಾಣಗಳಲ್ಲಿವೆ. ಕಾಲುಗಳ ಮೀನಖಂಡಗಳೂ, ಬಾಹುಗಳೂ ಘಟ್ಟಿಯಾಗಿರುವುವಲ್ಲದೆ ಯಾವಾಗಲೂ ದುಂಡಗಿರುತ್ತವೆ. ಬಗ್ಗಿಕೊಂಡು ಓಡಾಡುವ ಅಥವಾ ಬಾಗಿದ ಬೆನ್ನುಳ್ಳ ಗಂಡಸನ್ನೇ ಆಗಲಿ ಹೆಂಗಸನ್ನೇ ಆಗಲಿ ನೀವು ಕಾಣಲಾರಿರಿ. ತುಟಿಗಳೇನೋ ವಾಸ್ತವವಾಗಿಯೂ ದೊಡ್ಡವು; ದಪ್ಪವೂ ಹೌದು.

ಆದರೆ ಅವು ಅಂಗಸೌಷ್ಠವಕ್ಕೆ ಅನುಗುಣವಾಗಿ ಇರುವುವು. ನಾನೇನೋ ಅವುಗಳು ವಿಕಾರವಾಗಿವೆಯೆನ್ನುವುದಿಲ್ಲ. ಅವರ ಕಣ್ಣುಗಳು ಗುಂಡಗೆ ಅಗಲವಾಗಿದ್ದು ಕಾಂತಿಪೂರ್ಣವಾಗಿರುವುವು. ಆ ವಿಶಾಲವಾದ ಮುಖಕ್ಕೆ ತಕ್ಕಹಾಗೆ ಚಪ್ಪಟೆಯೂ ದೊಡ್ಡದೂ ಆದ ಮೂಗು ಕರಿಯ ಮರದಂತೆ ತಪ್ಪಗೆ ಹೊಳೆಯುತ್ತಿರುವ ಜೂಲೂವಿನ ಮೈಗೆ ಆವನ ತಲೆಯ ಗುಂಗುರುಕೂದಲು ಎಷ್ಟೊ ಲಕ್ಷಣ. ನಾವು ಯಾವನ್ನಾದರೂ ಜೂಲೂ ಮನುಷ್ಯನನ್ನು ಕರೆದು, 'ದಕ್ಷಿಣ ಆಫ್ರಿಕಾದಲ್ಲಿ ವಾಸಿಸುತ್ತಿರುವ ಯಾವ ಪಂಗಡದವರಿಗೆ ಸೌಂದರ್ಯ ಪುರಸ್ಕಾರವನ್ನು ಮಾಡುತ್ತೀಯೆ?' ಎಂಬುದಾಗಿ ಕೇಳಿದರೆ ಅವನು ತಡೆಯಿಲ್ಲದೆ ತಮ್ಮ ಪಂಗಡದವರಿಗೆಯೇ ಎಂಬುದಾಗಿ ತೀರ್ಮಾನಿಸುತ್ತಾನೆ. ಈ ರೀತಿಯಾಗಿ ಅವನು ತೀರ್ಪುಕೊಡುವುದರಲ್ಲಿ ಅವನಿಗೆ ಯುಕ್ತಾಯುಕ್ತ ವಿವೇಚನೆಯಿಲ್ಲವೆಂದು ಹೇಳಲಾಗದು. ಜೂಲೂವಿನ ಮೈಕಟ್ಟು ಬಲುದೃಢವಾದುದು; ಯೂರೋಪಿನಲ್ಲಿನ ಸ್ಯಾಂಡೋ ಮುಂತಾದವರು ತಮ್ಮ ನರಗಳ ಶಕ್ತಿಯನ್ನು ಬಲಪಡಿಸಿಕೊಳ್ಳಲು ಮಾಡುವಂತಹ ಪ್ರಯತ್ನಗಳೊಂದೂ ಇಲ್ಲದೆಯೇ ಪ್ರಕೃತಿಯಿಂದಲೇ ಸೊಗಸಾದ ದೇಹವನ್ನು ಪಡೆದಿರುವವನು ಅವನು ಭೂಮಧ್ಯ ರೇಖೆಯ ಸಮೀಪದಲ್ಲಿ ವಾಸಿಸುವವನ ಮೈಬಣ್ಣವು ಕಪ್ಪಾಗಿರಬೇಕೆನ್ನುವುದು ಸ್ವಭಾವಧರ್ಮ. ಪ್ರಕೃತಿಯು ರಚಿಸಿದ ಪ್ರತಿಯೊಂದರಲ್ಲೂ ಸೌಂದರ್ಯವಿದ್ದೇ ಇರಬೇಕು ಎಂಬುದಾಗಿ ಹೇಳುವುದಾದರೆ, ನಾವು ಸೌಂದರ್ಯದ ವಿಷಯದಲ್ಲಿ ಇಟ್ಟಿರುವ ಎಲ್ಲಾ ಸಂಕುಚಿತ ಭಾವಗಳನ್ನೂ, ಏಕಪಕ್ಷ ಅಭಿಪ್ರಾಯಗಳನ್ನು ತೊರೆಯುವೆವು, ಮತ್ತು ನಾವು ಇಂಡಿಯಾದಲ್ಲಿ ನಮ್ಮ ಸ್ವಂತ ಮೈಬಣ್ಣವೇ ಚೆನ್ನಾಗಿಲ್ಲದಿದ್ದರೆ ಅನುಚಿತವಾದ ನಾಚಿಕೆಯನ್ನ ಅಸಹ್ಯವನ್ನು ಪಟ್ಟುಕೊಳ್ಳುವೆವಲ್ಲ ಅವೆಲ್ಲ ಹೋಗುವುದು.

ಈ ನೀಗ್ರೋಜನರು ವರ್ತುಲಾಕಾರವಾದ ಗುಡಿಸಲುಗಳಲ್ಲಿ ವಾಸಿಸುತ್ತಾರೆ. ಅವುಗಳನ್ನು ಬೆತ್ತದಿಂದ ಕಟ್ಟುವರಲ್ಲದೆ ಅವುಗಳಿಗೆ ಯದ್ವಾತದ್ವ ಬಣ್ಣ ಬಳಿದಿರುತ್ತಾರೆ. ಗುಡಿಸಲಿಗೆಲ್ಲಾ ವರ್ತುಲಾಕಾರವಾಗಿರುವ ಒಂದೇ ಒಂದು ಗೋಡೆ; ಹುಲ್ಲಿನ ಮೇಲ್ಛಾವಣಿ, ಒಳಭಾಗದಲ್ಲಿ ಒಂದು ಕಂಭವೇ ಮೇಲ್ಛಾವಣಿಗೆ ಆಧಾರ; ಕೆಳಭಾಗದಲ್ಲಿ ಒಬ್ಬನು ಬಗ್ಗಿಕೊಂಡು ಮಾತ್ರ ಒಳಕ್ಕೆ ಹೋಗಬಲ್ಲ ಕಿಂಡಿಯೊಂದೇ ಗಾಳಿಯಾಡಲು ಮಾರ್ಗ. ಈ ದ್ವಾರಿಗೆ ಬಾಗಿಲಿರುವುದೇ ಬಹಳ ಅಪರೂಪ. ನಮ್ಮಂತೆಯೇ ಈ ನೀಗ್ರೋಜನರು ಸಹಾ ಗೋಡೆಗೂ ನೆಲಕ್ಕೂ ಹಚ್ಚುವುದಕ್ಕೆ ಮಣ್ಣನ್ನೂ ಸಗಣಿಯನ್ನೂ ಉಪಯೋಗಿಸುತ್ತಾರೆ. ನೀಗ್ರೋಜನರಿಗೆ ಚಚ್ಚೌಕಾಕೃತಿಯ ಯಾವುದನ್ನೂ ಮಾಡಲು ಬಾರದೆನ್ನುತ್ತಾರೆ. ಅವರು ವರ್ತುಲಾಕಾರದ ಪದಾರ್ಥಗಳನ್ನು ಮಾತ್ರ ನೋಡುವುದಕ್ಕೂ ಮಾಡುವುದಕ್ಕೂ ತಮ್ಮ ಕಣ್ಣುಗಳನ್ನು ತರಬೇತು ಮಾಡಿಕೊಂಡಿರುತ್ತಾರೆ. ಪ್ರಕೃತಿಯೂ ಅಷ್ಟೆ; ಸರಳರೇಖೆಗಳನ್ನಾಗಲಿ ಆಯತವೇ ಮುಂತಾದ ಸರಳರೇಖಾಕೃತಿಗಳನ್ನು ಬರೆಯುವುದನ್ನು ನಾವು ಕಂಡಿಲ್ಲ. ಈ ಏನೂ ಅರಿಯದ ಪ್ರಕೃತಿ ಪುತ್ರರೂ ಅವಳಿಂದಲೇ ತಮ್ಮ ಸಮಸ್ತ ಅನುಭವ ಜ್ಞಾನಾದಿಗಳನ್ನು ಕಲಿತಿದ್ದಾರೆ.

ಗುಡಿಸಲು ಎಷ್ಟು ಸಾಮಾನ್ಯವಾದುದೊ ಅದರಲ್ಲಿನ ಗೃಹೋಪಕರಣಗಳೂ ಅಷ್ಟೆ. ಅಲ್ಲಿ ಮೇಜು, ಕುರ್ಚಿ, ಪೆಟ್ಟಿಗೆ ಮುಂತಾದ ಸಾಮಾನುಗಳಿಗೆ ಸ್ಥಳವೂ ಇಲ್ಲ; ಅವುಗಳು ಇನ್ನೂ ಅಲ್ಲಿಗೆ ಹೋಗಿಯೂ ಇಲ್ಲ.

ಯೂರೋಪಿಯನ್ ನಾಗರಿಕತೆಯು ಪ್ರವೇಶವಾಗುವುದಕ್ಕೆ ಮೊದಲು ನೀಗ್ರೋಜನರು ಪ್ರಾಣಿಗಳ ಚರ್ಮಗಳನ್ನೇ ಉಡುತ್ತಿದ್ದರು. ಅವರ ಜಮಖಾನಗಳೂ, ಹಾಸಿಗೆಗಳೂ ಹೊದಿಕೆಗಳೂ ಎಲ್ಲವೂ ಅವೇಯೆ. ಈಗೀಗ ಕಂಬಳಿಗಳು ಬಳಕೆಗೆ ಬರುತ್ತಿವೆ. ಆಂಗ್ಲೇಯ ಪ್ರಭುತ್ವಕ್ಕೆ ಹಿಂದೆ ಗಂಡಸರು ಹೆಂಗಸರು ತಮ್ಮ ನೈಸರ್ಗಿಕಾವಸ್ಥೆಯಲ್ಲಿಯೆ ಹೆಚ್ಚಾಗಿ ಓಡಾಡುತ್ತಿದ್ದರು. ಆ ದೇಶದಲ್ಲಿ ಈಗಲೂ ಎಷ್ಟೊ ಜನರು ಹಾಗೆಯೇ ಇದ್ದಾರೆ. ತಮ್ಮ ಮಾನಗಳನ್ನು ಮಾತ್ರ ಚರ್ಮದಿಂದ ಮುಚ್ಚಿಕೊಂಡಿರುತ್ತಾರೆ. ಕೆಲವರು ಅದನ್ನೂ ಮಾಡುವುದಿಲ್ಲ. ಆದರೆ ಈ ತೆರನಾದ ವರ್ತನದಿಂದ ಆ ಜನರು ತಮ್ಮ ಇಂದ್ರಿಯಗಳನ್ನು ಸ್ವಾಧೀನದಲ್ಲಿ ಇಟ್ಟುಕೊಂಡಿರಲಾರರೆಂದು ಯಾರೂ ಭಾವಿಸಕೂಡದು. ಎಲ್ಲಿ ಒಂದು ದೊಡ್ಡ ಸಮಾಜವೇ ಒಂದು ಪದ್ಧತಿಯನ್ನು ವಿಶೇಷವಾಗಿ ಆಚರಿಸುವದೋ, ಆ ಪದ್ಧತಿಯು ಇತರ ಸಮಾಜಗಳಿಗೆ ವೈಪರೀತ್ಯವಾಗಿ ಕಂಡು ಬಂದರೂ, ಅಲ್ಲಿ ಮಾತ್ರ ಅದು ಎಷ್ಟು ಮಾತ್ರವೂ ಹಾನಿಯನ್ನುಂಟುಮಾಡಲಾರದು. ಈ ನೀಗ್ರೋಜನರು ಇತರರ ಕಡೆ ನೋಡುವುದಕ್ಕೂ ಹೊತ್ತಿರುವುದಿಲ್ಲ. ಭಾಗವತ ಕರ್ತೃವು ಈ ರೀತಿ ಹೇಳಿಲ್ಲವೆ?—ಶುಕದೇವನು ಹೆಂಗಸರು ಬಟ್ಟೆ ಬರೆಗಳನ್ನು ತೆಗೆದಿಟ್ಟು ಸ್ನಾನಮಾಡುವಾಗ ಮಗ್ಗುಲಲ್ಲಿ ಹೋದರೂ ಆತನಿಗೆ ಕೊಂಚವೂ ಮನೋವಿಕಾರವಾಗಲಿಲ್ಲವಂತೆ; ಆ ಹೆಂಗಸರಿಗೆ ಸಹಾ ಸ್ವಲ್ಪವೂ ಮನಸ್ಸಿನಲ್ಲಿ ಕಳವಳವೇ ಆಗಲಿ ನಾಚಿಕೆಯೇ ಆಗಲಿ ಹುಟ್ಟಲಿಲ್ಲವಂತೆ. ಈ ವಿಚಾರದಲ್ಲಿ ಅಂತಹ ಅದ್ಭುತವೇನನ್ನೂ ಕಾಣೆ. ಇಂದು, ಇಂಡಿಯಾದೇಶದಲ್ಲಿ, ಅಂತಹ ಸಂದರ್ಭದಲ್ಲಿ ಅಂತಹ ಮನೋನೈರ್ಮಲ್ಯವನ್ನು ಪಡೆಯುವಾತನು ಯಾರೂ ಇಲ್ಲದಿದ್ದಲ್ಲಿ ಮನೋನೈರ್ಮಲ್ಯವನ್ನು ಪಡೆಯುವುದಕ್ಕೂ ಒಂದು ಮೇರೆಯುಂಟು ಎಂದು ಹೇಳಲಾಗದು; ಅದು, ನಾವು ಎಷ್ಟರ ಮಟ್ಟಿಗೆ ಸ್ಥಾನಭ್ರಷ್ಟರಾಗಿದ್ದೇವೆ ಎಂಬುದನ್ನು ತೋರಿಸುತ್ತದೆ. ನೀಗ್ರೋಜನರನ್ನು ಕಾಡುಜನರೆಂದು ನಾವು ಕರೆಯುವುದಕ್ಕೆ ನಮ್ಮ ಗರ್ವವೆ ಕಾರಣ. ಅವರು ನಾವು ಊಹಿಸುವಂತೆ ಅಸಭ್ಯರಲ್ಲವೇ ಅಲ್ಲ.

ನೀಗ್ರೋ ಹೆಂಗಸರು ನಗರಗಳಿಗೆ ಹೋಗುವಾಗ ತಮ್ಮ ಎದೆಯಿಂದ ಮೊಣಕಾಲುಗಳ ವರೆಗೆ ಮುಚ್ಚಿಕೊಂಡಿರಬೇಕೆಂಬುದಾಗಿ ಕಾನೂನು ವಿಧಿಸಿರುತ್ತದೆ. ಆದುದರಿಂದ ಅವರು ತಮ್ಮ ಮೈಸುತ್ತಲೂ ಒಂದು ಅರಿವೆಯ ತುಂಡನ್ನು ಸುತ್ತಿಕೊಂಡಿರಬೇಕಾಗಿ ಬಂದಿದೆ. ಈ ಕಾರಣದಿಂದ ಆ ಉದ್ದಳತೆಗಳ ಬಟ್ಟೆಯ ತುಂಡುಗಳಿಗೆ ದಕ್ಷಿಣ ಆಫ್ರಿಕಾದಲ್ಲಿ ಬಹಳ ವ್ಯಾಪಾರ. ಯೂರೋಪಿನಿಂದ ಪ್ರತಿ ವರ್ಷವೂ ಅಂತಹ ಕಂಬಳಿಗಳೂ ಬಟ್ಟೆಗಳೂ ಅಲ್ಲಿಗೆ ರಫ್ತಾಗುತ್ತವೆ. ಅದೇ ರೀತಿಯಾಗಿ ಗಂಡಸರೂ ಸೊಂಟದಿಂದ ಮೊಣಕಾಲುಗಳ ವರೆಗೆ ಮುಚ್ಚಿಕೊಂಡಿರಬೇಕು. ಈ ಕಾರಣದಿಂದ ಅವರು ಯೂರೋಪ್ ದೇಶಗಳಿಂದ ಬರುವ ಹಳೆಯ ಬಟ್ಟೆ ಬರೆಗಳನ್ನು ತೊಡುವುದನ್ನು ಅಭ್ಯಸಿಸುತ್ತಿದ್ದಾರೆ. ಇತರರು ಒಂದು ದಾರ ಹಾಕಿದ ಚಡ್ಡಿಯನ್ನು ಉಪಯೋಗಿಸುತ್ತಾರೆ. ಈ ಬಟ್ಟೆಗಳೆಲ್ಲವೂ ಯೂರೋಪಿನಿಂದ ಬರುತ್ತವೆ.

ಹಿಂದೂಸ್ಥಾನದ ಪರಿಸ್ಥಿತಿ.

(ಈ ವಿಷಯವಾಗಿ ಒಬ್ಬ ಹಿಂದೀ ರಾಜಭಕ್ತನು ಇಂಗ್ಲಿಷ್ ಸ್ನೇಹಿತನೊಬ್ಬನಿಗೆ ಬರೆದ ಪತ್ರ.)

ಇಲ್ಲಿನ (ಹಿಂದೂಸ್ಥಾನದ) ಪರಿಸ್ಥಿತಿಯ ಕುರಿತು ನಿಮಗೆ ತಿಳಿಸುತ್ತಿರಬೇಕಾಗಿ ನೀವು ನನಗೆ ಹೇಳಿದ್ದಿರಿ—ಆದ್ದರಿಂದ ಇಲ್ಲಿನ ನಿಜವಾದ ಸಂಗತಿಗಳನ್ನು ವಿಶದವಾಗಿ ಕೊಟ್ಟಿರುತ್ತೇನೆ. ಇಂಗ್ಲೆಂಡಿಗೆ ಏನು ಬೇಕಾಗಿದೆಯೆಂಬುದೇ ಮೊದಲನೇ ಪ್ರಶ್ನೆಯಾಗಿದೆ. ಇಂಗ್ಲೆಂಡು ಈ ಬಾಬಿನಲ್ಲಿ ತನ್ನ ಮನಸ್ಸನ್ನು ನಿರ್ಧರಿಸಿಕೊಳ್ಳಬೇಕು. ಹಿಂದೂಸ್ಥಾನವನ್ನು ಇಂಗ್ಲೆಂಡು ಬಹುಕಾಲದ ವರೆಗೆ ತಾಬೆಯಲ್ಲಿ ಇಟ್ಟುಕೊಳ್ಳಲು ಸಾಧ್ಯವಿಲ್ಲ. ಹಿಂದೂಸ್ಥಾನವು ಅಧೀನ ಸ್ಥಾನವನ್ನು ಬಹುಕಾಲ ಸಹಿಸಲಾರದು. ಈ ಸಂಗತಿಯನ್ನು ಅಧಿಕಾರಿಗಳಿಗೆ ತಾವು ತಿಳಿಸಿಕೊಡಬೇಕು. ನೈತಿಕ ಕಾರಣಗಳಿಂದ ಈ ಅಭಿಪ್ರಾಯ ಕೊಡುವಷ್ಟು ದೊಡ್ಡ ಹುಚ್ಚನಲ್ಲ. ಇಂಗ್ಲೆಂಡಿಗೂ ಇಂಡಿಯಾಕ್ಕೂ ಇರುವ ದೂರದಿಂದಲೂ, ಹಿಂದೂಸ್ಥಾನದ ವಿಸ್ತೀರ್ಣ ಮತ್ತು ಜನ ಸಂಖ್ಯೆಯಿಂದಲೂ, ನ[illegible]ವದಿಂದಲೂ ಮತ್ತು ಪ್ರಪಂಚದಲ್ಲಿ ದಿನೇ ದಿನೇ ಬೆಳೆಯುತ್ತಿರುವ ಅಭಿಪ್ರಾಯದಿಂದಲೂ ಮತ್ತು ಬೇರೆ ಕಾರಣಗಳಿಂದಲೂ ಹಿಂದೂಸ್ಥಾನವನ್ನು ತಾಬೆಯಲ್ಲಿ ಇಟ್ಟುಕೊಳ್ಳಲು ಪ್ರಯತ್ನಿಸಿದರೆ ತೊಂದರೆ, ಗಲಿಬಿಲಿಗಳೂ ಉಂಟಾಗುವುದಲ್ಲದೆ ಅಂತ್ಯದಲ್ಲಿ ನಿಷ್ಫಲವಾಗುವುದು ಖಂಡಿತ. ತಮ್ಮ ಸ್ವಂತ ಪ್ರಯೋಜನಕ್ಕಾಗಿ ಇಂಗ್ಲಿಷ್ ಜನರಿಗೆ ಖುಷಿಯಾಗುವಂಥಾ ಮಾತುಗಳನ್ನೇ ಆಡುವವರಿಗೆ ಕಿವಿಗೊಡಬಾರದೆಂತ ಹೇಳಿ. ಇಲ್ಲಿ ಮೊದಲಲ್ಲ, ಇಂಗ್ಲೆಂಡಿನಲ್ಲೂ ಇರುವ ಈ ಗುಂಪಿನವರು ಇಂಗ್ಲಿಷ್ ಅಧಿಕಾರಿಗಳಿಗೆ ಸುಳ್ಳು ವರ್ತಮಾನಗಳನ್ನೇ ಕೊಡುತ್ತಾರೆ. ಸ್ಥಳದಲ್ಲಿ ಇರುವ ಅಧಿಕಾರಿಯನ್ನು ನಿಜವಲ್ಲದ ಮಾತುಗಳಿಂದ ನಂಬಿಸಿರುತ್ತಾರೆ. ಇಂಥಾ ಅಧಿಕಾರಿಗಳು ಇಂಗ್ಲೆಂಡಿನ ಅಧಿಕಾರಿಗಳಿಗೆ ಬೇಕೆಂತಲೇ ಅಲ್ಲವಾದರೂ ತಪ್ಪು ತಿಳುವಳಿಕೆ ಕೊಡುತ್ತಾರೆ. ಹಿಂದೂಸ್ಥಾನಕ್ಕೆ ಅಲ್ಪಸ್ವಲ್ಪ ಸುಧಾರಣೆ ಮಾತ್ರ ಬೇಕಾಗಿದೆಯೆಂತಲೂ ಪ್ರಾದೇಶಿಕ ಸ್ವಾತಂತ್ರ್ಯ ಕೊಟ್ಟರೆ ತೃಪ್ತಿಯಾಗುತ್ತದೆಯೆಂತಲೂ ಹೇಳುವುದು ಸ್ಥಳೀಯ ಅಧಿಕಾರಿಗಳ ಪ್ರಯೋಜನಕ್ಕೆ ಆಗದೆ ಆದರೆ ಇಂಥಾ ಅಭಿಪ್ರಾಯಗಳು ಬಹಳ ಕೇಡನ್ನುಂಟುಮಾಡುವ ಹುಚ್ಚುತನದ ಮಾತು.

ಯಾವ ರೂಪದ ಸುಧಾರಣೆಯೆಂಬುದು ಮುಖ್ಯವಲ್ಲ. ಸ್ವಾತಂತ್ರ್ಯದ ತಿರುಳು ಸಿಕ್ಕುವಂಥಾದ್ದೇ ಮುಖ್ಯ. ಪ್ರಪಂಚದ ಬೇರೆ ಸ್ವಾತಂತ್ರ್ಯ ರಾಜ್ಯಗಳಿಗೆ ತಾನು ಸರಿಸಮಾನಳಾಗಿದ್ದೇನೆಂತ ಹಿಂದುಸ್ಥಾನಕ್ಕೆ ಭಾವನೆ ಹುಟ್ಟುವಂತೆ ಮಾಡದ ಯಾವ ಸುಧಾರಣೆಗೂ ಹಿಂದುಸ್ಥಾನವು ಒಪ್ಪುವುದಿಲ್ಲ. ಈ ಸಮಸ್ಯೆಯು ಹೆಚ್ಚಾಗಿ ಮನಸ್ಸಿನಲ್ಲಿ ಪರಿಣಮಿಸುವಂಥಾದ್ದಾಗಿದೆಯೇ ಹೊರತು, ರಾಜಕೀಯವಾದುದಲ್ಲ. ಪೌರಾತ್ಯ ಜನರ ಮನೋಭಾವವನ್ನ ತಿಳಿಯಲು ಆಗದವರಿಗೆ ಹಿಂದೂಸ್ಥಾನದ ಈಗಿನ ಸ್ಥಿತಿಯ ಮಹತ್ವವು ತಿಳಿಯಲಾರದು. ಇಜ್ಜತ್ತು (ಗೌರವ) ಗಾಗಿ ಹಿಂದೀಯರು ಬಹಳ ತ್ಯಾಗ ಮಾಡಲು ತಯಾರಿದ್ದಾರೆಂತ ನಿಮಗೂ ತಿಳಿದಿದೆ; ನನಗೂ ತಿಳಿದಿದೆ. ಈಗಿನ ಪರಿಸ್ಥಿತಿಯಿಂದ ಮನಸು ಎಷ್ಟೇ ಕೆಟ್ಟಿದ್ದರೂ ಹಿಂದೂಸ್ಥಾನದ ಹೆಚ್ಚಿನ ಜನರು ಇಂಗ್ಲೆಂಡಿನ ಸ್ನೇಹವನ್ನು ಬಯಸುತ್ತಾರೆಂತ ನನ್ನ ಬಲವಾದ ಅಭಿಪ್ರಾಯವಾಗಿದೆ. ಇಂಗ್ಲೆಂಡಿಗೂ, ಇಂಡಿಯಾಕ್ಕೂ ಸರಿಸಮಾನತ್ವವಿರುವಂಥಾ ಯಾವ ಏರ್ಪಾಡನ್ನಾದರೂ ಹಿಂದೂಸ್ಥಾನದ ಹೆಚ್ಚಿನ ಜನರು ಅಂಗೀಕರಿಸಿಕೊಳ್ಳುತ್ತಾರೆ. ಆದರೆ ಈಗ ಸಾಧ್ಯವಾಗುವುದು ಸ್ವಲ್ಪ ದಿನ ಕಳೆದರೆ ಸಾಧ್ಯವಾಗದೆ ಹೋಗಬಹುದು. ಕಾಲವು ಬಹಳ ತ್ವರೆಯಾಗಿ ಮುಂದುವರಿಯುತ್ತಿದೆ.

ಇಂಗ್ಲೆಂಡಿಗೆ ಗಾಂಧಿಯವರಿಗಿಂತ ದೊಡ್ಡ ಸ್ನೇಹಿತನಿಲ್ಲ. ಬಹಳ ಜನರು ಊಹಿಸುವುದಕ್ಕಿಂತ ಹೆಚ್ಚಾಗಿ, ಕಾ[illegible] ಬದ್ಧರಾಗುವವರಾಗಿದ್ದಾರೆ. ಅವರನ್ನು ದ[illegible]ರಿಸಲು ಸಾಧ್ಯವಿಲ್ಲ. ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯದ ತಿರುಳನ್ನು ಕೊಡಲು ಇಂಗ್ಲೆಂಡು ಒಪ್ಪುತ್ತದೆಯೆಂತ ಅವರಿಗೆ ದೃಢಪಡಿಸಿಕೊಟ್ಟರೆ ಇತರ ರಾಜಕೀಯ ಪಕ್ಷಗಳು ಒಪ್ಪದ ಅನೇಕ ಒಡಂಬಡಿಕೆಗಳಿಗೆ ಅವರು ಒಪ್ಪುತ್ತಾರೆ. ಅವರು ದ್ವೇಷವನ್ನಿಟ್ಟುಕೊಳ್ಳುವವರಲ್ಲ. ಅವರ ಬಂಧೀವಾಸದಿಂದ ಇಂಗ್ಲೆಂಡಿನೊಂದಿಗೆ ರಾಜಿಮಾಡಿಕೊಳ್ಳಲೇ ಬಾರದು. ಅವರ ವಿಷಯ ಜನರು ಏನೇನೋ ಹೇಳುತ್ತಾರೆ. ಅವರು ದೇಶದ ಒಂದು ಪಂಗಡದ ಮುಖಂಡರು ಮಾತ್ರ ಆಗಿದ್ದಾರೆಂತ ಜನರು ನಂಬುತ್ತಾರೆ. ಅದು ಅತ್ಯಘಾತಕವಾದ ತಪ್ಪಾಗಿದೆ. ಅವರೊಂದಿಗೇನೇ ರಾಜಿಮಾಡಿಕೊಳ್ಳಬೇಕಾದದ್ದಾಗಿದೆ. ಅವರ ಮಾತೇ ಹಿಂದೂಸ್ಥಾನಕ್ಕೆ ಸ್ವೀಕೃತವಾಗುತ್ತದೆ. ಅವರಲ್ಲದೆ ಬೇರೆ ಇಲ್ಲ. ದುಂಡುಮೇಜಿನಲ್ಲಿ ದೊಡ್ಡದಾಗಿ ತೋರಿದ ಇತರ ಪಂಗಡಗಳು ನಿಮಗೆ ತಿಳಿದಿವೆ. ಇಂಗ್ಲಿಷ್ ಜನರು ಬೇರೆ ಪಂಗಡಗಳಿಗೆ ಬಹಳ ಇಲ್ಲದ ಮಹತ್ವ ಕೊಟ್ಟಿದ್ದಾರೆ. ಹಿಂದೂಸ್ಥಾನದಲ್ಲಿ ಬಹಳ ರಾಜಕೀಯ ಪಕ್ಷಗಳಿರಬಹುದು. ಆದರೆ ಗಾಂಧಿ ಇರುವುದು ಒಬ್ಬರೇ. ಇವರು ಜನರ ಮೂರ್ತಿಯಾಗಿದ್ದಾರೆ.

ಈಗಿನ ದಬ್ಬಾಳಿಕೆಯ ಅಧಿಕತರದಿಂದ ಗಾಂಧಿಯವರ ಬಲ ಕಡಿಮೆಯಾಗುತ್ತಲಿದೆ. ನಾನು ಇಂಗ್ಲೆಂಡಿನ ಶತ್ರುವಾಗಿದ್ದರೆ—ಇದು ನಾನಲ್ಲವೆಂತ ನಿಮಗೆ ತಿಳಿದಿದೆ. ಸರಕಾರದ ಈಗಿನ ದಬ್ಬಾಳಿಕೆಯ ನೀತಿಗೆ ನಾನು ಹಿಗ್ಗುತ್ತಿದ್ದೆ. ಕ್ರಾಂತಿಕಾರರು ಗಾಂಧಿಯ ಕಡೆಗೆ ತುಚ್ಛೀಕಾರದ ಬೆಟ್ಟು ತೋರಿಸುತ್ತಾರೆ. ಗಾಂಧಿಯವರ ಅಹಿಂಸಾತತ್ವವು ಸೋತಿತೆಂತಲೂ ತಮ್ಮ ಹಿಂಸೆಯ ಬಲವಾದ ದಾರಿಯಿಂದಲೇ ಜಯವಾಗಬೇಕೆಂತಲೂ ಅನ್ನುತ್ತಾರೆ. ಗಾಂಧಿಯವರು ನಿರ್ಬಂಧಕ್ಕೊಳಗಾಗಿ ಅವರ ಬೋಧನೆಯು ನಡೆಯದೆ ಇರುವಾಗ ಕ್ರಾಂತಿಕಾರರು ತಮ್ಮ ಕೈಯನ್ನು ತೋರಿಸಲು ಪ್ರಾರಂಭಿಸಿದ್ದಾರೆ. ನಿರ್ದಾಕ್ಷಿಣ್ಯದ ಎಡೆಬಿಡದ ದಬ್ಬಾಳಿಕೆಯು ಅವರನ್ನು ಮುಟ್ಟಲೇ ಇಲ್ಲ. ಒಂದು ಬಹಿರಂಗವಾದ ಭಾಷಣದಲ್ಲಿ ಲಾರ್ಡ್ ಲೋಥಿಯನರು ಹಿಂದೂಸ್ಥಾನದಲ್ಲಿ ಈಗ ಇರುವಷ್ಟು ಮನೋಮಾಲಿನ್ಯವು ಬೇರೆ ಎಂದೂ ಇರಲಿಲ್ಲವೆಂತ ಹೇಳಿದ್ದಾರೆ. ಸ್ವಾರ್ಥಪರರು ಇದನ್ನು ನಿರಾಕರಿಸಬಹುದು. ಆದರೆ ಲಾರ್ಡ್ ಲೋಥಿಯನರು ಹೇಳಿರುವ ಈಗಾಗಲೇ ಆಗಿರುವ ಮನೋಮಾಲಿನ್ಯವು ಇನ್ನೂ ಹೆಚ್ಚಾಗುವುದರಲ್ಲಿ ಸಂಶಯವಿಲ್ಲ. ಈ ಮನಸ್ಕ್ಲೇಶವು ಭಯಂಕರವಾದದ್ದು...ಇದರಿಂದ ಇಂಗ್ಲೆಂಡಿಗೂ, ಇಂಡಿಯಾಕ್ಕು ಮಧ್ಯೆ ಇರುವ ಜಲಸಂಧು

ಕೊಡಗು.

ಸನ್ ೧೯೪೩ನೇ ಇಸವಿ

ಜೂನ್ ತಾ. ೨೫ನೇ ಶುಕ್ರವಾರ.

ಪ್ರೆಸ್ ಆರ್ಡಿನೇನ್ಸ್

ಜಾರಿಯಲ್ಲಿರುವವರಿವಿಗೆ

ನಾವು

ಅಗ್ರಲೇಖನ

ವನ್ನು

ಪ್ರಕಟಿಸುವುದಿಲ್ಲ.

ಕೊಡಗೂ ಕರ್ಣಾಟಕವೂ.

ಕೊಡಗು ದೇಶದ ಮುಂದಣ ಸ್ಥಿತಿಗತಿಗಳೇನು? ಎಂಬ ಪ್ರಶ್ನೆಯು ಹೊರಟಂದಿನಿಂದ, ಕರ್ಣಾಟಕದಲ್ಲಿ ಹಲವು ಬಗೆಯ ಅಭಿಪ್ರಾಯಗಳು ಉಂಟಾಗುತ್ತಾ ಬರುತ್ತವೆ. ಅಭಿಪ್ರಾಯಗಳು ಒಂದಕ್ಕೊಂದು ವಿರೋಧಿಯಾಗಿದ್ದರೂ, ಇಲ್ಲಿ ನಮಗೊಂದು ಸಂತೋಷ ಸ್ಥಾನವಿದೆ. ಭಾರತೀಯರು "ಅತಿಥಿ ದೇವೋಭವ!" ಎಂಬ ವೈದಿಕೋಕ್ತಿಯನ್ನು ನಿತ್ಯ ವ್ಯವಹಾರದಲ್ಲಿ ಆಚರಣೆಗೆ ತರುವವರಲ್ಲವೆ? ನಮ್ಮ ಕನ್ನಡಿಗರು—ಭಾರತೀಯರ ಈ ಸಹಜ ಗುಣವನ್ನು ಬಿಟ್ಟಿಲ್ಲ. ಕನ್ನಡನಾಡು ಅನೇಕರಿಗೆ ಉದಾರಾಶ್ರಯವನ್ನು ಕೊಟ್ಟಿವೆ. ಆದರಂತೆ—ಇಂದು ಕೊಡಗನ್ನು ಯಾವ ಪ್ರಾಂತ್ಯದೊಡನೆ ಸಂಯೋಜಿಸಬೇಕು? ಎಂಬುದರ ವಿಚಾರವು ಬಂದಾಗ, ಆಯಾ ಪ್ರಾಂತದ ಪತ್ರಿಕೆಗಳೂ, ಕರ್ಣಾಟಕಾಭಿಮಾನಿಗಳೂ, ಏಕೀಕರಣ ಭಕ್ತರೂ, ತಂತಮ್ಮಲ್ಲಿಗೆ ಕೊಡಗನ್ನು ಆಮಂತ್ರಿಸುವುದು ನಮ್ಮ ಮೇಲಿನ ವಾಕ್ಯಕ್ಕೆ ಪ್ರಮಾಣ ಭೂತವಾಗಿದೆ. ಉತ್ತರ ಕರ್ಣಾಟಕದ ಕೆಲ ಪತ್ರಿಕೆಗಳಿಗೆ ಕೊಡಗು ಬೊಂಬಾಯಿ ಸಂಸ್ಥಾನವನ್ನು ಸೇರಿಸಿಕೊಳ್ಳಬೇಕೆಂಬ ಪ್ರಬಲಾಶಯವಿದೆ. ಕಾರಣವಿಲ್ಲದೆ ಕಾರ್ಯವುಂಟೆ? 'ಬೊಂಬಾಯಿಯಲ್ಲಿ ಇಂದಿನ ಕರ್ಣಾಟಕದ ಬಹು ಭಾಗಗಳು ಸಮಾವಿಷ್ಟವಾಗಿರುವುದರಿಂದ, ಏಕೀಕರಣ ಕಾರ್ಯದ ದೃಷ್ಟಿಯಿಂದ ಕೊಡಗು ಆ ಪ್ರಾಂತದ ಆಶ್ರಯದಲ್ಲಿರಬೇಕು!' ಉತ್ತರ ಕನ್ನಡದ ಒಂದು ಪತ್ರಿಕೆಗೆ ಕೊಡಗು ಉತ್ತರ ಪ್ರಾಂತಕ್ಕೆ ಬಹು ಸಮೀಪವರ್ತಿಯಾಗಿ ಕಾಣುತ್ತದೆ ಹೃದಯ ಸಮೀಪವರ್ತಿಯಾಗಿರಬಹುದು; ಹಾಗಿದ್ದರೆ ನಮಗದರಲ್ಲಿ ಅಭಿಮಾನವೇ ಸರಿ; ಆದರೆ 'ಉತ್ತರ ಕರ್ಣಾಟಕಕ್ಕೂ ಮೈಸೂರಿಗೂ ಅಧಿಕಾಧಿಕವಾಗಿ ಸಂಪರ್ಕವುಂಟಾಗುತ್ತಿರುವುದರಿಂದ, ಅಲ್ಲಿಂದಲ್ಲಿಗೆ ಊಗಿಬಂಡಿಯೇ ಮೊದಲಾದ ವಾಹನ ಸೌಕರ್ಯವಿರುವುದರಿಂದ, ಮೈಸೂರಿನ ಸೀಮೆ ಕೊಡಗು ಸೀಮೆ ಇವೆರಡು ನಿಕಟವಾಗಿರುವುದರಿಂದ, ಉತ್ತರ ಕರ್ಣಾಟಕಕ್ಕೆ ಕೊಡಗು ಸಮೀಪ ಅದನ್ನೇ ಅದು ಹಾಗೆ ಸೇರುವುದು ಸುಖಕರ—ಎಂಬ ಮಾತು ಅತಿ ವಿಚಿತ್ರ ಭೌಗೋಲಿಕ ಸಿದ್ಧಾಂತವನ್ನು ಅವಲಂಬಿಸಿದೆ. ಈ ಸಂಬಂಧವು ಬಾದರಾಯಣ ಸಂಬಂಧವೂ ಅಲ್ಲ. ಕೊಡಗಿನಿಂದ ಮೈಸೂರಿಗೆ ಎಷ್ಟು ದೂರವೋ ಅಷ್ಟೆ ದೂರದಲ್ಲಿ ಇನ್ನೊಂದು ಕರ್ಣಾಟಕ ದೇಶವಿದೆ; ಮೈಸೂರಿನ ಒಂದು ಮೂಲೆಗೆ ತಾಗಿಕೊಂಡಿದ್ದ ಕನ್ನಡ ಪ್ರಾಂತವು ಇನ್ನೊಂದು ಸೀಮೆಗೆ ನೆರೆಯಲ್ಲಿರುವ ಕೊಡಗನ್ನು ತನ್ನ ಗೃಹಕೃತ್ಯಕ್ಕೆ ಸೇರಿಸಿಕೊಳ್ಳುವುದು, ವ್ಯವಹಾರ, ನ್ಯಾಯ, ಎನ್ನುವಾಗ ಕೊಡಗಿನ ತಪ್ಪಲಿನಲ್ಲೇ ಇರುವ—ಆದುದರಿಂದ ಆ ನಾಡಿಗಿಂತ ಎಷ್ಟೋ ಸಮೀಪದಲ್ಲಿಯೇ ಇರುವ—ಇನ್ನೊಂದು ಸೋದರ ಪ್ರಾಂತ್ಯವನ್ನು ಈ ಪತ್ರಿಕೆಯು ಮರೆತುದು ಸೋಜಿಗವೆ ಸರಿ. ಇನ್ನು ಪ್ರಯಾಣ—ವಾಹನಗಳ ಸೌಕರ್ಯದ ವಿಷಯವಾಗಿ ಆಡುವುದೇನು? ಊಗಿಬಂಡಿಗಳ ಅನುಕೂಲತೆ ಮೈಸೂರಿಗೆ ಇದೆ. ಅಲ್ಲಿಂದಿತ್ತ ಕೊಡಗಿಗೆ ಬರಬೇಕಾದರೆ 'ಸೌಕರ್ಯ' ಎನ್ನುವಂತಹ ವ್ಯವಸ್ಥೆಯೇನೂ ಇಲ್ಲ. ಮೈಸೂರಿನಿಂದ ಕೊಡಗಿಗೆ ಎಷ್ಟು ದೂರವೊ ಅಷ್ಟೆ ಕೊಡಗಿನಿಂದ ಮಂಗಳೂರಿಗೆ. ಮಂಗಳೂರಿನ ಸಂಬಂಧದಿಂದ ಕೊಡಗಿಗೆ ದೊರೆಯಬಹುದಾದ ಇನ್ನೊಂದು ಪ್ರಯೋಜನವೆಂದರೆ ಸಮುದ್ರಯಾನ ಸೌಕರ್ಯ. ಅದು ಮೈಸೂರಿಗಿಲ್ಲ; ಉತ್ತರ ಕರ್ಣಾಟಕಕ್ಕಿಲ್ಲ. ಹೀಗಿರುವಾಗ ವಾಹನ ಸೌಕರ್ಯಗಳು ಎಲ್ಲಿ ಹೆಚ್ಚಿವೆ ಎಂಬ ವಿಷಯವು ಸ್ವಯಂಸಿದ್ಧವಾಗುತ್ತದೆ. ಕೊಡಗನ್ನು ದಕ್ಷಿಣ ಕನ್ನಡದೊಡನೆ ಸಂಯೋಜಿಸಬೇಕೆಂದು ಇಲ್ಲಿಯ ಪತ್ರಿಕೆಗಳಲ್ಲಿ 'ಚಳವಳ' ನಡೆಯುತ್ತಿದ್ದರೆ—ಅದು ಇಂತಹ ಭೌಗೋಲಿಕ ಕಾರಣಗಳಿಂದ ಪರಿಪುಷ್ಟವಾಗಿಲ್ಲ. ಮನಸ್ಸಿರುವವನು ಯಾರೂ ಬಂದು ನೋಡಬಹುದು; ಇಲ್ಲವೆ ಭೂಚಿತ್ರವನ್ನಾದರೂ ನೋಡಬಹುದು. ಅಸಲೂ, ಕೊಡಗಿಗೆ ಮಂಗಳೂರಿಗಿಂತಲೂ ಉತ್ತರ ಕರ್ಣಾಟಕವೇ ಸಮೀಪವಾಗಿದೆ ಎಂದು ಕಂಡು ಬಂದರೆ ಅವೆರಡರ ಸಂಯೋಜನೆಯನ್ನು ನಾವೇನೂ ವಿರೋಧಿಸುವುದಿಲ್ಲ. ಆದರೆ ಈ ಎಲ್ಲ ವಿಚಾರಗಳನ್ನು ಮಾಡದೆ ಬೊಂಬಾಯಿ ಸಂಸ್ಥಾನದ ಕರ್ಣಾಟಕ ಸಂಘದವರೂ ಕೊಡಗನ್ನು ತಮ್ಮ ಕಡೆಗೆ ಆಕರ್ಷಿಸಬೇಕೆಂದುದು—ಅವರ ಅತಿಥಿ ಪೂಜಾಬುದ್ಧಿಯನ್ನು ತೋರಿಸುವುದಾದರೂ—ಇದರಲ್ಲಿ ವಿಚಾರಪರಿಪಕ್ವತೆಯಾಗಲಿ, ನ್ಯಾಯವಾದಿತ್ವವಾಗಲಿ ನಮಗಂತೂ ಕಾಣುವುದಿಲ್ಲ.

ಕೊಡಗು ದಕ್ಷಿಣ ಕನ್ನಡಕ್ಕೆ ಸೇರಬೇಕೆಂದು ಮಂಗಳೂರಿನ ಪತ್ರಿಕೆಗಳು ಹಲವರಲ್ಲಿ ಸಕಾರಣವಾದ ಅಭಿಪ್ರಾಯಗಳು ಬಂದಿವೆ. ಅವು ನಮಗೂ ಸಮ್ಮತ; ನಮಗೂ ಸಂತೋಷಕರ. ಆದರೆ ಭೂದಾನ ಗೋದಾನಗಳನ್ನು ಮಾಡುವಂತೆ—ಆ ದೇಶವನ್ನು ಮೂಲಕವಾಗಿದ್ದು ಅದರ ಸಮ್ಮತಿ ಏನೆಂದು ತಿಳಿಯದೆ—ಕೊಳ್ಳುವ ಕೊಡುವ ವ್ಯವಹಾರವು ಮಾನ್ಯವಾಗದೆಯೆಂದು ನಮಗೆ ತೋರದು. ಕೊಡಗಿನ ಕಮಿಶನರರು ಈ ವಿಷಯಲ್ಲಿ ಅಭಿಪ್ರಾಯಗಳನ್ನು ಆಹ್ವಾನಿಸಿದ್ದಾರೆ. ಕೊಡಗಿನ ಧುರೀಣರು ತಮ್ಮ ಆಶಯಗಳನ್ನು ಸ್ಪಷ್ಟವಾಗಿ ಕೊಟ್ಟಿರಬಹುದೆಂದು ನಾವು ಭಾವಿಸಿರುತ್ತೇವೆ. ಇದು ದಬ್ಬಾಳಿಕೆಯ ಯುಗವಲ್ಲ; ಒತ್ತಾಯದ ಯುಗವಲ್ಲ; ವಕೀಲಿಯ ಯುಗವಲ್ಲ; ತಂತಮ್ಮ ಅಭಿಪ್ರಾಯಗಳನ್ನು ನಿಷ್ಪಕ್ಷಪಾತವಾಗಿ ಎಲ್ಲರೂ ಹೇಳಬೇಕು. ಕೇವಲ ನಿರ್ಲಿಪ್ತದೃಷ್ಟಿಯಿಂದ ಅವಲೋಕಿಸಿದಲ್ಲಿ—ಕೊಡಗು ಕನ್ನಡದ ಯಾವ ಪ್ರದೇಶಕ್ಕೆ ಸೇರಿದರೂ ಸೇರದೆ ಸ್ವತಂತ್ರವಾಗಿದ್ದರೂ ಸರಿಯೆ. ಆದರೆ ಜನಮತವೆಂಬುದೊಂದು ಇದೆಯಲ್ಲ? ಅದನ್ನು ಸ್ವಪಕ್ಷಪ್ರೀತಿಯಿಂದ ಹೇಳದಿದ್ದರೆ ಕರ್ತವ್ಯವನ್ನು ಪಾಲಿಸಿದಂತಾಗುವುದೆ? ದಕ್ಷಿಣ ಕನ್ನಡಕ್ಕೂ ಕೊಡಗಿಗೂ ಶತಮಾನ ಪೂರ್ವದ ಸಂಬಂಧವಿದೆ. ಅಲ್ಲಿಯ ಭೂಸಂಪತ್ತಿನ ಅಭಿವೃದ್ಧಿಗೆ ದಕ್ಷಿಣ ಕನ್ನಡಿಗರೆಷ್ಟೋ ಕಾರಣವಾಗಿದ್ದಾರೆ. ಬೇರೆಲ್ಲ ವಿಷಯಗಳಲ್ಲಿ ಕೊಡಗಿಗೆ ಕರ್ಣಾಟಕದ ಪ್ರಾಂತ್ಯಗಳೆಲ್ಲ ಒಂದೆ ಎಂದು ಭಾವಿಸಿದರೂ ಸಾಮೀಪ್ಯದಲ್ಲಿಯೂ, ಸಂಪರ್ಕಸಂಬಂಧಗಳಲ್ಲಿಯೂ ಅದೇ ಸೂತ್ರವನ್ನು ಅನ್ವಯಿಸಲು ಸಾಧ್ಯವಿಲ್ಲ. ಕರ್ಣಾಟಕದ ಭೂಚಿತ್ರದಲ್ಲಿ ಮಂಗಳೂರು ಜಿಲ್ಲೆಯ ಒಂದು ಅಂಚಿನಲ್ಲಿ ಕೊಡಗು ಅಂಟಿಸಲ್ಪಟ್ಟಿರುವುದು ಮಾತ್ರವಲ್ಲ. ಅನಾದಿಕಾಲದಿಂದ ಪರಿಪೋಷಿತವಾಗಿ, ಜನರ ಆಗಮನನಿರ್ಗಮನಗಳಿಂದ, ವಸತಿಯಿಂದ, ವ್ಯಾಪಾರದಿಂದ, ಉದ್ಯೋಗ ಸಹಕಾರದಿಂದ ಪ್ರವೃದ್ಧವಾಗಿ ಬರುತ್ತಿರುವ ಹಾರ್ದಿಕಸಂಬಂಧದಿಂದಾಗಿ, ಅದು ದಕ್ಷಿಣ ಕನ್ನಡಿಗರ ಹೃದಯದೊಳಗೆ ಸೇರಿರುವುದು. ಇಂತಹ ಸಹಜ ಸಂಬಂಧಕ್ಕೆ ನೀರೆರೆದು ಬೆಳೆಯಿಸುವುದರಲ್ಲಿ ಉತ್ತರ ಕರ್ಣಾಟಕದ ಪತ್ರಿಕೆಗಳೂ ಧುರೀಣರೂ ಸಂಘಗಳೂ ಪ್ರವೃತ್ತಿಸಬೇಕಾದುದು, ಕರ್ಣಾಟಕ ಸಹಜ ಸಂಘಟನೆಗೆ ಅತ್ಯವಶ್ಯವೆಂದು ನಮಗೆ ತೋರುತ್ತದೆ.

ರಾ. ಬಿ.

ಸರ್ಕಾರದ ಅಭಿಪ್ರಾಯವೇನು?

ಸರ್ಕಾರದ ಹಾಗೂ ರಾಷ್ಟ್ರೀಯ ಸಭೆ (ಕಾಂಗ್ರೆಸ್)ಯ ನಡುವೆ ಕಿತ್ತಾಟ ನಡೆದು, ಆರ್ಡಿನೇನ್ಸುಗಳ ಆಳಿಕೆಯು ಪ್ರಾರಂಭವಾಗಿ ಇಂದಿಗೆ ೬ ತಿಂಗಳುಗಳಾಗುತ್ತ ಬಂದವು. ನಾ. ವೈಸರಾಯರು ಕಾಯಿದೆಭಂಗ ಚಳವಳಿಯನ್ನು ಎದುರಿಸಲು ತೆಗೆದ ಆರ್ಡಿನೇನ್ಸುಗಳು ಎಷ್ಟೊಂದು ಉಗ್ರವಾಗಿರುವುವೆಂಬುದನ್ನು ಸ್ವತಃ ಭಾರತ ಮಂತ್ರಿಗಳೇ ಒಪ್ಪಿಕೊಂಡಿದ್ದಾರೆ. ಆದರೆ 'ರೋಗಕ್ಕೆ ತಕ್ಕ ಉಪಾಯಗಳನ್ನು ಯೋಚಿಸಬೇಕಾಗಿದೆ' ಯೆಂಬ ಕಾರಣ ತೋರಿಸಿ ಆರ್ಡಿನೇನ್ಸುಗಳ ಆವಶ್ಯಕತೆಯನ್ನು ಸಮರ್ಥಿಸುತ್ತ ಬಂದರು.

ಈ ತಿಂಗಳೊಳಗೆ ಬಹು ತರ ಎಲ್ಲ ಆರ್ಡಿನೇನ್ಸುಗಳ ಅವಧಿಯು ಮುಗಿಯುವುದು. ಸರ್ಕಾರದವರು ಆರ್ಡಿನೇನ್ಸುಗಳ ಅವಧಿಯನ್ನು ಪುನಹ ಬೆಳೆಯಿಸುವರೋ ಅಥವಾ ಅವುಗಳನ್ನು ತೆಗೆದು ಹಾಕುವರೋ ಎಂಬ ಬಗ್ಗೆ ಇನ್ನೂ ನಿಶ್ಚಿತವಾಗಿ ತಿಳಿದಿರುವುದಿಲ್ಲ. ಸರ್ಕಾರದವರೂ ಈ ವಿಷಯವಾಗಿ ಸ್ಪಷ್ಟವಾಗಿ ಏನನ್ನೂ ಹೇಳಿರುವುದಿಲ್ಲ. ಕಾಮನ್ಸ್ ಸಭೆಯಲ್ಲಿ ಈಗ ತಿಂಗಳೆರಡು ತಿಂಗಳ ಹಿಂದೆ—ಆರ್ಡಿನೇನ್ಸುಗಳನ್ನು ತೆಗೆದು ಹಾಕಬೇಕೋ ಅಥವಾ ಅವುಗಳ ಅವಧಿಯನ್ನು ಬೆಳೆಸಬೇಕೋ ಎಂಬ ಬಗ್ಗೆ ಇಂದೇ ನಿಶ್ಚಿತವಾಗಿ ಹೇಳಲಾಗುವುದಿಲ್ಲ. ಅವುಗಳ ಅವಧಿಯು ಮುಗಿಯುವ ಸಮಯದಲ್ಲಿ ದೇಶದಲ್ಲಿ ಹಬ್ಬಿದ ವಾತಾವರಣವನ್ನು ನೋಡಿ ಹೇಳಲಾಗುತ್ತದೆಯೆಂದು ಹೇಳಿದ್ದರು. ಆ ಮೇಲೆ ಸರ್ಕಾರದಿಂದ ಈ ಬಗ್ಗೆ ಇನ್ನೂ ಏನೂ ಹೊರಬಿದ್ದಿರುವುದಿಲ್ಲ.

ಇತ್ತಿತ್ತಲಾಗಿ ನಾ. ವೈಸರಾಯರು ಆರ್ಡಿನೇನ್ಸುಗಳ ಅವಧಿಯನ್ನು ಈ ವರ್ಷದ ಕೊನೆಯ ವರೆಗೆ ಬೆಳೆಸುವರೆಂದೂ, ರಾ. ಸಭೆಯ ಮುಖಂಡರನ್ನು ಬಂಧ ಮುಕ್ತ ಮಾಡಿ ಸಂಧಾನದ ಪ್ರಯತ್ನ ನಡೆಸುವರೆಂದೂ ಹಾರ ಸುದ್ದಿಗಳು ಎದ್ದಿವೆ. ಅವುಗಳಲ್ಲಿ ಸತ್ಯಾಂಶವೆಷ್ಟರ ಮಟ್ಟಿಗಿದೆಯೆಂಬದನ್ನು ಇಂದೇ ನಿರ್ಧರಿಸುವದು ಕಠಿಣ ಕಾರ್ಯವೇ ಸರಿ.

ಇಂದು ಭಾರತಖಂಡದ ವಿಚಾರಸ್ಥ ಹಾಗೂ ಸಮತೋಲ ಬುದ್ಧಿಯ ಪ್ರತಿಷ್ಠಿತ ಸಂಘ ಸಂಸ್ಥೆ ಹಾಗೂ ಸದ್ಗೃಹಸ್ಥರ ಅಭಿಪ್ರಾಯವನ್ನು ವಿಚಾರಿಸಿದರೆ ಸರ್ಕಾರದವರು ಆರ್ಡಿನೇನ್ಸುಗಳನ್ನು ತಿರುಗಿ ತೆಗೆದುಕೊಂಡು ಸಾಮೋಪಾಯಗಳನ್ನು ಕೈಕೊಳ್ಳಬೇಕೆಂದ ಧ್ವನಿತವಾಗುತ್ತದೆ. ವ್ಯಾಗತಿಕ ಪಕ್ಷದ ಅಗ್ರೇಸರರೂ, ಸರ್ಕಾರದ ವಿಶ್ವಾಸಕ್ಕೆ ಪಾತ್ರರೂ ಆದ ಸರ್ ಚಿಮನಲಾಲ ಸೆತಲವಾಡ, ಸರ್. ಫಿರೋಜ ಸೇಟ್ನಾ, ಮಿ. ಸಿ. ವಾಯ್, ಚಿಂತಾಮಣಿ ನಾ. ಶ್ರೀನಿವಾಸ ಶಾಸ್ತ್ರಿ, ಸರ್. ತೇಜಬಹದ್ದೂರ್ ಸಪ್ರೂ ಮುಂತಾದವರು ಭಾರತಖಂಡದಲ್ಲಿ ಶಾಂತತೆಯು ನೆಲೆಗೊಳ್ಳಬೇಕಾದರೆ ಬೇರೊಂದು ಬಗೆಯ ಉಪಾಯವನ್ನು ಕೈಕೊಳ್ಳಬೇಕೆಂದು ಸ್ಪಷ್ಟವಾಗಿ ಸೂಚಿಸಿದ್ದಾರೆ. ದುಂ. ಮೋ. ಪರಿಷತ್ತಿನ ಕೊನೆಗೆ ಮಿ. ಮೆಕ್ಡೊನಾಲ್ಡರು ಕೊಟ್ಟ ವಚನವನ್ನು ಅಕ್ಷರಶಃ ಪಾಲಿಸಿ ಪ್ರಾಂತೀಕ ಸ್ವಾಯತ್ತತೆಯೊಂದಿಗೆ ಮಧ್ಯವರ್ತಿ ಸರ್ಕಾರದಲ್ಲಿ ಜವಾಬ್ದಾರಿಕೆಯನ್ನು ಕೊಡದ ಹೊರತು ಸದ್ಯದ ಅಸಂತೋಷವು ನಿರ್ಮೂಲವಾಗುವದೆಂದು ಹೇಳುತ್ತಲಿದ್ದಾರೆ. ಮದ್ರಾಸ ಪ್ರಾಂತ್ಯದ ಪ್ರಮುಖರು ನಾ. ವೈಸರಾಯರಿಗೆ ಕಳುಹಿಸಲಿರುವ ವಿನಂತಿ ಪತ್ರದ ಸಾರವನ್ನು ಬೇರೊಂದೆಡೆಗೆ ಪ್ರಸಿದ್ಧಿಸಿದ್ದೇವೆ. ಅವರಾದರೂ ನಿಂತ ಕಾಲ ಮೇಲೆ ಆರ್ಡಿನೇನ್ಸುಗಳನ್ನು ತೆಗೆದು ಬೇರೆ ಸಾಮೋಪಾಯವನ್ನು ಕೈಕೊಳ್ಳಬೇಕೆಂದು ಅತ್ಯಾಗ್ರಹದಿಂದ ಸೂಚಿಸಿದ್ದಾರೆ. ಅರ್ಜಂಟ್ ಆರ್ಡಿನೇನ್ಸ್‌ಗಳನ್ನು ಬೆಳೆಸುವ ಬಗ್ಗೆ ಭಾರತಖಂಡದೊಳಗಿನ ಯಾವ ಜಬಾಬ್ದಾರಿಯ ಪಕ್ಷವೂ ಅನುಮತಿಯನ್ನು ಕೊಡಲಾರದೆಂದು ಹೇಳಬಹುದು.

'ಆರ್ಡಿನೇನ್ಸು'ಗಳೆಂದರೆ ದೇಶದಲ್ಲಿ ಭೀಕರ ಪರಿಸ್ಥಿತಿಯಿದ್ದಾಗ ಅದನ್ನು ಎದುರಿಸಲು ತಾತ್ಕಾಲಿಕವಾಗಿ ಕೈಕೊಳ್ಳುವ ಉಗ್ರೋಪಾಯಗಳು. ಅದಕ್ಕಾಗಿಯೇ ಅವುಗಳ ಅವಧಿಯನ್ನು ಆರೇ ತಿಂಗಳ ಮಟ್ಟಿಗೆ ಇಟ್ಟಿದ್ದಾರೆ. ಇಂಥಾ ಉ

(4ನೇ ಪುಟದಲ್ಲಿ ಮುಂದುವರಿದಿದೆ.)

Reg. No. M. 1550.
If not delivered please return to "KODAGU" OFFICE MERCARA.

ಕೊಡಗು.

ಸತ್ಯೇನ ಧೂತದಯಯಾ ವಿದ್ಯಾ ಶೀಲಿ ಪ್ರಯತ್ನತಾ ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ

ವಾರ್ಷಿಕ ಚಂದಾ ರೂ. ೩—೮—೦.

ಸಂಪಾದಕ—ಮಾಚಿಮಂಡ ಯಂ. ಗಣಪತಿ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೨ | ಮಡಿಕೇರಿ, ಸನ್ ೧೯೩೨ನೇ ಇಸವಿ ಜೂನ್ ತಾರೀಕು ೨೪ ನೇ ಶುಕ್ರವಾರ. | ಸಂಚಿಕೆ ೪

SARI-PIN.

BRACELETS.

NECKCHAINS.

EAR-RINGS.
(Thodus)
Cut-rubys Rs. 25 to 50
With diamond in centre Rs. 80 to 120

Gold Rs. 10
Set rubys forming any letter Rs. 12

NOSE-RINGS.
Diamond in small size of best quality Rs. 35 & upwards according to size.

MARRIAGE PRESENTATIONS.

Attractive and inexpensive articles ready in stock. Prompt execution. Details on enquiry free with catalogue. Numerous customers in Coorg thoroughly satisfied with reliable service. Testimonials pouring in.

Telegrams: 'PRECIOUS.'

V. Subramaniaier
Jeweller,

Telephone: 3145.

CATALOGUE ON ENQUIRY.

Post Box 423, Triplicane, P. O., MADRAS.

MARRIAGE PRESENTATIONS.

Estimates free on enquiry

Silver Gundys, Photo lockets, Dimond nose-screws, cut-ruby ear-rings, etc., etc., etc., in all prices Very attractive. Prices most moderate.

Designs free on enquiry.

Pendant.



Tumblers with stand



Fancy plate.

52—31

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬಾಂಕ್, ಲಿಮಿಟೆಡ್ ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲು)

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	26,800
ಜಮೊಬಂದ ಠೇವಣಾತಿ	—	2,50,301

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟು ಮಾಡುತ್ತಾರೆ.

ಪ್ರೆಸಿಡೆಂಟರು,	ಟ್ರೆಜರರ್
ಕೋದಂಡ ಅಪ್ಪಯ್ಯನವರು, ರಾವ್ ಬಹದ್ದೂರ್.	ಮನೆಯಪ್ಪಂಡ ಬೆಳ್ಯಪ್ಪನವರು.

ಸೆಕ್ರೆಟರಿ

ಸಿ. ಯಸ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಕು 1—7—1931.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು,

ಉತ್ತರ ಕೊಡಗಿಗೆ ಮೆ. ಚಾಂದಿರ ಮಾದೈಯ್ಯನವರು,

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮಂಡೇಪಂಡ ಸೋಮೈಯ್ಯನವರು, (ಖಾದಿಭಂಡಾರ.)

ನಾಪೋಕ್ಲು—ಎಮ್. ಆರ್. ವೆಂಕಪ್ಪಯ್ಯನವರು,

ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,

ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಯ್ಯನವರು, ಮತ್ತು ಆರಮಣಮಾಡ ಪಿ ಕಾರ್ಯಪ್ಪನವರು,

ಹುದಿಕೇರಿ & ತಿತಿಮತ್ತಿ—ಮೆ. ಜಿ. ಮಾದಯ್ಯನವರ

ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮೊಣ್ಣಯ್ಯನವರು.

ಸೂಚನೆ:—ಪ್ರಿಂಟ್ ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮ್ಯಾನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಿಸಲು ಅತ್ಯವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಖರಾರು ಫಾರಮುಗಳೂ, ಜಮ್ಮ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಖರಾರು ಫಾರಮುಗಳೂ, ಸ್ಟೋರ್ ಕೀಪರ್ ಖರಾರು ಫಾರಮುಗಳೂ, ಓವರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮಾ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಮುದ್ದು ಬರಲಿಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮ್ಯಾನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.

ವಿಮೆದಾರರಿಗೆ ಕೊಟ್ಟದ್ದು—3221 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.

ಫಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,78,322 ಜನರಿಗೆ 38ಕೋಟಿ ರೂ.

ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ಕ್ಕಿಂತ ವಿಪರೀತ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದಾಗಿದೆ.

ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಿಂದ ಹಿಂದೀಯರ ಹೆಚ್ಚೆಚ್ಚು ಉತ್ತೇಜನವನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬುದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು,

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ಮೊಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪೂರ	ರಾವಲ್‌ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೋ	ಪಾಟ್ನಾ	ಸಿಕಂದರಾಬಾದು
ಅಲ್ಲಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಜಲಗಾಂವ್	ಮಂಡಲೆ	ರಾಯಪುರ	ತಿರುವೆಂಡ್ರಮ್
ಫೀರೋಜಪುರ	ಕರಾಚಿ	ಮಂಗಳೂರು	ರಾಂಚಿ	ವಿಶಾಖಪಟ್ಟಣ 52—16

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,

52–23 ಗಿರಿಗಾಂವ, ಮುಂಬಯಿ.

ಇಂಡಿಯನ್ ಇನ್ಶ್ಯೂರೆನ್ಸ್ ಕಂಪೆನಿಗಳಿಗೇನೇ ಜೀವ ವಿಮೆ ಮಾಡಿರಿ.

ದಿ ಬೆಂಗಾಲ್ ಇನ್ಶ್ಯೂರೆನ್ಸ್ ಎಂಡ್ ರಿಯಲ್ ಪ್ರಾಪರ್ಟಿ ಕಂಪೆನಿ ಲಿಮಿಟೆಡ್, ಹೆಡ್ ಆಫೀಸು:—8 ಡಾಲ್ ಹೌಸಿ, ಸ್ಕ್ವೇರ್ (ಈಸ್ಟ್) ಕಲ್ಕತ್ತಾ, ಸಂಸ್ಥಾಪನೆ 1919

ನವಸಂಸ್ಕೃತಿಯು ಬೆಳೆದಷ್ಟಕ್ಕೆ ಅದರೊಡನೆ ಅದಕ್ಕೆ ಸಂಬಂಧಪಟ್ಟಿರುವ ಆರ್ಥಿಕ ಪರಿಸ್ಥಿತಿಯು ಬೆಳೆಯುತ್ತದೆ. ಇಂಥಹ ಸಮಯದಲ್ಲಿ ಜೀವವಿಮೆ ನಿಯಮವು ಒಂದು ವರವೆಂದೆಣಿಸಲ್ಪಟ್ಟಿದೆಯಲ್ಲದೆ, ಅದು ಸಮಾಜರಂಗದಲ್ಲಿ ಜನರಿಗೊಂದು ಅತ್ಯಗತ್ಯ ವಿಷಯವೆಂದೂ ತಿಳಿದು ಬಂದಿದೆ. ಅದನ್ನು ಈಗೀಗ ಗಣಿತಶಾಸ್ತ್ರ ಪ್ರಕಾರವಾಗಿಯೇ ಜತನದಿಂದ ಪರಿಪಾಲಿಸಿಕೊಂಡೇ ಬರುವಂತಾಗಿದೆ.

ಈ ಕಂಪೆನಿಯು ಸರಕಾರದಲ್ಲಿ ಕಂಪೆನಿಯ ಭದ್ರತೆಗೋಸ್ಕರ 2 ಲಕ್ಷ ರೂಪಾಯಿ ಠೇವಣಾತಿಯನ್ನು ಇಟ್ಟಿದೆ. ಇದು ಇನ್ಶ್ಯೂರೆನ್ಸ್ ಕೆಲಸದಲ್ಲಿ ಒಳ್ಳೆ ಗುರುತಿರುವ ಸದ್‌ಗೃಹಸ್ಥರ ಮುಂದಾಳುತನದಿಂದಲೇ ನಡೆಯುತ್ತದೆ. ಈ ಕಂಪೆನಿಯು ಆಕರ್ಷಣೀಯವಾದ ಕೆಲವು ಸೂತ್ರಗಳ ಮೇರೆಗೆ ಅತೀ ಸುಲಭ ಪ್ರೀಮಿಯಮ್ ದರದಿಂದ ಪೋಲಿಸಿಗಳನ್ನು ಕೊಡುತ್ತದೆ. ಇದರ ಶರ್ತಗಳು, ನಿಯಮಗಳು ಸುಲಭಗ್ರಾಹ್ಯವಾಗಿವೆ; ಅನುಕೂಲದ್ದಾಗಿವೆ. ಅಲ್ಲದೆ ಬಹು ಉದಾತ್ತವೂ ಆಗಿವೆ. ಹೆಚ್ಚಿನ ಮಾಹಿತಿಗೆ ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಿರಿ.

ಯಂ. ಯಸ್. ಐಯ್ಯಪ್ಪ,
ಆರ್ಗನೈಸರ್,
ಸ್ಕೂಲ್‌ರೋಡ್, ಮಡಿಕೇರಿ.

ಅಥವಾ

ಆರ್. ಸಿ. ಸೆನ್‌ಗುಪ್ತ,
ಬ್ರಾಂಚ್ ಸೆಕ್ರೆಟರಿ,
12—9 28, ಅಂಗಪ್ಪನಾಯಕ್ ಸ್ಟ್ರೀಟ್,
ಜಿ. ಟಿ. ಮದರಾಸ್.

Wanted agents in every Taluk of Coorg on very liberal terms.

Printed & published by M. M. Ganapathy at "Kodagu" Press Mercara for "Kodagu" Ltd.

ಜನರಲ್ ಅಷ್ಯೂರೆನ್ಸ್ ಸೊಸೈಟಿ.

ಅಜಮೀರ್.

ನಮ್ಮ ಆಯವ್ಯಯದ ಪಟ್ಟಿಯೇ ನಮ್ಮ ಅಭಿವೃದ್ಧಿಯನ್ನು ವ್ಯಕ್ತಗೊಳಿಸುತ್ತದೆ.

ವರ್ಷ	ಮೇಲ್ಪಟ್ಟ ವರ್ತಾದಾಯ	ಮೇಲ್ಪಟ್ಟ ಮೂಲಧನ	ಖರ್ಚು ವರವರಾವಿಸ್ ಶೇಕಡ
1911	46,248	49,442	82.9
1921	2,92,627	6,53,350	43 2
1931	12,50,000	40,00.000	28 2

ಬೋನಸ್ಸು.

ಖರ್ಚು ನಫೆ ದೊರಕುವ ಜೀವಾವಧಿ ಪಾಲಿಸಿಗಳ ಮೇಲೆ ವರ್ಷ ಒಂದಕ್ಕೆ ಶೇಕಡ 22½

ಚೆನ್ನಾಗಿ ಕೆಲಸಮಾಡಿ ಅಭಿವೃದ್ಧಿ ಸ್ಥಿತಿಯಲ್ಲಿರುವ ಈ ಸೊಸೈಟಿಯಲ್ಲಿ ವಿಮೆ ಮಾಡಿ ಕಡಿಮೆ ಪ್ರೀಮಿಯಂ ಪಾವತಿ ಮಾಡುವ ಸೌಲಭ್ಯ ಹೊಂದಿ ಅಥವಾ ಈ ಕಂಪೆನಿಯ ಪರ ವಾಗಿ ಕೆಲಸಮಾಡಿ ಉತ್ತಮ ಕಮಿಶನ್ ದರದ ಪ್ರಯೋಜನ ಹೊಂದಿ.

ಹೆಚ್ಚು ವಿಚಾರಗಳಿಗೆ ಈ ವಿಳಾಸಕ್ಕೆ ಬರೆಯಿರಿ:–

ಎ. ರಾಮಚಂದ್ರರಾವ್,
ಸುಪರಿಂಟೆಂಡೆಂಟ್,
32—8 ಮಿಂಟೋ ಆಸ್ಪತ್ರೆ ಬಳಿ,
ಬೆಂಗಳೂರು.

ಇಂಡಿಯಾ ಎಕ್ವಿಟೇಬಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

(ಸ್ಥಾಪಿಸಲ್ಪಟ್ಟದ್ದು 1908.)

ಪೋಲಿಸಿಗಳು ಕಳಕೊಳ್ಳುವಂತವುಗಳಲ್ಲ.

ಯಾವ ತಡೆಯೂ ಇಲ್ಲದೆ ಪ್ರತಿ ವರ್ಷವು ಬೋನಸ್ಸು.

ಹಕ್ಕು ಬಾಧ್ಯಸ್ಥರಿಗೆ ಸರಿಯಾಗಿ ಹಣ ಕೊಡಲ್ಪಡುವದು ಇಲ್ಲದಿದ್ದರೆ ಬಡಿಯು ದೊರಕುವುದು.

ಹೆಡ್ಡ್ ಆಫೀಸು:—

102. ಕ್ಲೈವ್ ಸ್ಟ್ರೀಟ್, ಕಲ್ಕತ್ತಾ.

I. E., C. P. S. 17—4

ಗಮನಿಸಿರಿ! ಪರೀಕ್ಷಿಸಿರಿ!

ಅಂದವಾಗಿ ಫೋಟೋ ತೆಗೆಯುತ್ತಾರೆ.

ದೀರ್ಘ ಕಾಲ ಬಾಳಿಕೆ ಬರುತ್ತೆ.

ಹದಿನಾಲ್ಕು ವರ್ಷಗಳಿಂದ ಮೈಸೂರಿನಲ್ಲಿ ಹೆಸರುವಾಸಿಯಾದ ಮೆಸರ್ಸ್. ಶಂಕರ್ & ಕಂಪೆನಿಯವರು ಕೊಡಗು ದೇಶದ ಭಗಿನಿ ಬಾಂಧವರ ಸಲುವಾಗಿ ಮಡಿಕೇರಿಯಲ್ಲಿ ಬ್ರ್ಯಾಂಚ್ ಓಪನ್ ಮಾಡಿರುತ್ತಾರೆ.

ಇಲ್ಲಿ ದೀರ್ಘಕಾಲ ಬಾಳಿಕೆ ಬರುವಂತೆ ಬೇಕಾದ ನಮೂನೆಯಲ್ಲಿ ಫೋಟೋ ತೆಗೆಯುವುದು. ಫೋಟೋ ಎನ್‌ಲಾರ್ಜ್ ಮಾಡುವುದು. ಆಯಿಲ್ ಪೆಯಿಂಟಿಂಗ್ ಕೆಲಸಗಳು. ರಬ್ಬರ್ ಮೊಹರುಗಳ ಕೆಲಸಗಳು ಸದಾ ನಡೆಯುತ್ತವೆ. ಕ್ಯಾಮರಾ ಮೊದಲಾದ ಫೋಟೋ ಕೆಲಸದ ಎಲ್ಲಾ ಸಾಮಾನುಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ. ಆನೆಗ್ರ್ಯಾರ್ಫ್ ಕೆಲಸಗಳು ಅಂದವಾಗಿ ತಯಾರಿಸಿ ಸಕಾಲಕ್ಕೆ ದೊರೆಯುತ್ತವೆ.

ದರಗಳ ಬಗ್ಗೆ ವಿಚಾರಿಸಿರಿ. ಒಂದಾವರ್ತಿ ಪರೀಕ್ಷಿಸಬೇಕಾಗಿ ವಿನಂತಿ

ಶಂಕರ್ & ಕಂಪೆನಿ
ಕಾರೊನೇಶನ್ ಪಾರ್ಕ್,
12—11. ಮಡಿಕೇರಿ.



ಕೋವಿಗಳು, ಕತ್ತಿಗಳು, ಬಚೀಗಳು, ಕೋಟೆಗಳು, ಕೇಪುಗಳು, ಮದ್ದು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS,
Largest Importers of Firearms and Ammunition
Cheapest priced firm in India,
24—15 **210, Abdul Rehman Street, BOMBAY.**

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

1. ಉತ್ತಮ ತರಹ ಒಂದು ಸೆಟ್ ಜರ್ಮನ್ ರೀಡ್ಸ್ ಹಾಕಿರುವ ಸಿಂಗಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 20—0—0
   „ ಮತ್ತು 22—8—0
2. ಡಿಟೋ ಉತ್ತಮ ತರಹ ಹಾರ್ಮೋನಿಯಂ „ 1ಕ್ಕೆ ರೂ. 25—0—0
   „ ಮತ್ತು 27—8—0
3. ಡಿಟೋ ಉತ್ತಮ ತರಹದ್ದು, ದೂಳು ಬೀಳದಂತೆ ಕೇಸಿನ ಮೇಲೆ ಪೂರ್ತಿ ಮುಚ್ಚಳವುಳ್ಳ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ ರೂ. 27—8—0
4. ಖಾತ್ರಿಯೂ, ಬಂದೋಬಸ್ತೂ, ಸುಸ್ವರವುಳ್ಳದ್ದೂ, ಅನೇಕ ವರ್ಷಗಳ ವರೆಗೆ ಬಾಳಿಕೆ ಬರತಕ್ಕದ್ದೂ ಆದ ಹೊಸದಾಗಿ ಸಪ್ಲೈ ಆಗಿರುವ ಫ್ರೆಂಚ್ ರೀಡ್ಸ್ ನಮೂನೆ ಇರುವ ನಮ್ಮ ಹೆಸರಿನ ರೀಡ್ಸ್ ಹಾಕಿರುವ "ಸಿದ್ದಪ್ಪನ್ ಫ್ಲೂಟ್" ಸಿಂಗಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 42—8—0
5. ಉತ್ತಮ ತರಹ 2 ಸೆಟ್ ಜರ್ಮನ್ ರೀಡ್ಸ್ ಹಾಕಿರುವ, ದೂಳು ಬೀಳದಂತೆ ಕೇಸಿನ ಮೇಲೆ ಪೂರ್ತಿ ಮುಚ್ಚಳವುಳ್ಳ ಡಬ್ಬಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ ರೂ. 32—8—0
   ಉತ್ತಮ ತರಹ 2 ಸೆಟ್ ಜರ್ಮನ್ ಮೇಕ್ ರೀಡ್ಸ್ ಹಾಕಿರುವ, ಕೈನಿಂದಾಗಲೀ ಅಥವಾ ಕಾಲಿನಿಂದಾಗಲೀ ಬಾರಿಸಲು ಅನುಕೂಲಿಸುವಂತೆ ತಯಾರಿಸಿರುವ "ಸ್ಪೆಷಲ್ ಫ್ಲೂಟ್" ಡಬ್ಬಲ್ ರೀಡ್ಸ್ ಹ್ಯಾಂಡ್ ಲೆಗ್ ಹಾರ್ಮೋನಿಯಂ 1ಕ್ಕೆ ರೂ. 78—8—0

ನಮ್ಮ ಟಿಂಬರ್ ಡಿಪೋನಲ್ಲಿ ಕಟ್ಟಡಗಳಿಗೂ, ಫರ್ನಿಚರ್ ತಯಾರಿಸಲೂ ಬೇಕಾದ ಎಲ್ಲಾ ನಮೂನೆ ನಾಟಾಗಳನ್ನು ಸುಲಭ ದರದಿಂದ ವಿಕಲಿಗಿಟ್ಟಿರುವುದಲ್ಲದೇ, ಗಿರಾಕಿಗಳು ಅಪೇಕ್ಷಿಸುವ ಸೈಜಿಗೆ ಕುಯಿಸಿಯೂ ರಿಯಾಯಿತಿ ದರದಿಂದ ಸಪ್ಲೈ ಮಾಡುತ್ತೇವೆ. ಹೆಚ್ಚಿಗೆ ವಿಷಯಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಳಾಸ:—ಯಂ. ಎಸ್. ಶಿದ್ದಪ್ಪ ಬ್ರದರ್ಸ್,
ಹಾರ್ಮೋನಿಯಂ ಮತ್ತು ಟಿಂಬರ್ ವ್ಯಾಪಾರಿಗಳು.
ವಾಣಿವಿಲಾಸ ಮಾರ್ಕೆಟ್, ಮೈಸೂರು.

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಬೇಡ್‌ಮಿಂಟನ್ ಕಪ್.

ಅಯ್ಯಾ,

ಅಮ್ಮತ್ತಿ ಕ್ರಿಸೆಂಟ್ ಕ್ಲಬ್ಬಿನವರು ಬೇಡ್‌ಮಿಂಟನ್ ಆಟದ ಸ್ಪರ್ಧೆಗಾಗಿ ಒಂದು ಕಪ್ಪನ್ನು 'ಪ್ರೆಸೆಂಟ್' ಮಾಡಿದ್ದರು. ಸ್ಪರ್ಧೆಗೆ ಪೊಳ್ಳಿಬೆಟ್ಟ, ಮನೆಯಪಂಡ, ಕ್ರಿಸೆಂಟ್, ವೀರಾಜಪೇಟೆ, ಅಮ್ಮತ್ತಿ ಎ. ಮತ್ತು ಬಿ. ಟೀಮುಗಳೂ ಆಟವಾಡಿದರು. ಕಡೆಗೆ ಪೊಳ್ಳಿಬೆಟ್ಟ ಮತ್ತು ಅಮ್ಮತ್ತಿ ಎ. ಟೀಮಿನವರು ತಾ. 30—5—32ರಲ್ಲಿ ಆಡಿದರು. ಮೊದಮೊದಲು ಪೊಳ್ಳಿಬೆಟ್ಟ ಟೀಮಿನವರೇ ಗೆಲ್ಲುವಂತೆ ತೋರಿಬಂದರೂ ಕಡೆಗೆ ಜಯವು ಅಮ್ಮತ್ತಿ ಎ. ಟೀಮಿನವರ ಪಾಲಿಗಾಯಿತು. ಸಂಬಂಧಪಟ್ಟ ಮೇ. ಕುಟ್ಟಂಡ ಬಿ. ಮುತ್ತಣ್ಣನವರೂ, ಪ್ರಾಂಟಿನಲ್ಲಿ ಮೇ. ಅಬ್ದುಲ್ ಹಮೀದ್‌ಖಾನ್‌ರವರೂ ಜನಮೆಚ್ಚುವ ರೀತಿಯಿಂದ ಆಡಿದರು. ಸುಮಾರು 200 ಜನರು ಆಟ ನೋಡಲು ಉತ್ಸಾಹದಿಂದ ನೆರೆದಿದ್ದರು. ಗೆದ್ದ ಟೀಮಿನವರಿಗೆ ಮೇ. ಕೊಂಗಂಡ ಮುದ್ದಪ್ಪನವರು ಸ್ವಾರಸ್ಯವಾದ ಭಾಷಣದಿಂದ ಕಪ್ಪನ್ನು ಕೊಟ್ಟರು.

ಅನಂತರ ನೆರೆದವರಿಗೆ ಟೀ ಮತ್ತು ತಾಂಬೂಲದಿಂದ ಸತ್ಕಾರವಾಯಿತು.

'ಹಾಜರಿದ್ದವ'

ಬೆಟ್ಟತ್ತೂರು ರಸ್ತೆ.

ಅಯ್ಯಾ,

ನಮ್ಮ ಬೆಟ್ಟ ಪ್ರದೇಶವಾದ ಈ ಗ್ರಾಮಕ್ಕೆ ಗಾಡಿ ವಗೈರೆ ಬರಲು ಅತ್ಯಂತ ತೊಂದರೆಯಾಗಿತ್ತು. ಈ ಅಡಚಣೆಯನ್ನು ಸರಿಗಮಾಡಲು ನಮ್ಮ ಗ್ರಾಮದ ಮುಂದಾಳಾದ ಪಾಡಂಡ ಪಿ. ಗಣಪತಿಯವರು ಅನೇಕ ವರ್ಷಗಳ ಲಾಗಾಯಿತು ವರ್ಷಾವರ್ಷ ಅರ್ಜಿ ಬರೆಯುವದು, ಮುಖ್ಯ ಮುಖ್ಯ ಅಧಿಕಾರಿಗಳಲ್ಲಿ ನಮ್ಮ ಊರಿನ ಗಂಭೀರ ಹವಾಲುಗಳನ್ನು ಹೇಳಿಕೊಳ್ಳುವದು ವಗೈರೆ ಪದೇ ಪದೆ ತೊಂದರೆ ತೆಗೆದುಕೊಂಡದಕ್ಕೆ ಈ ವರ್ಷ ಡಿ. ಬೋರ್ಡು ಮೆಂಬರುಗಳು 300/ರೂಪಾಯಿ ಬೇಕಾಗುವ ರಸ್ತೆಗೆ 163/ ರೂಪಾಯಿ ಮಂಜೂರುಮಾಡಿದ್ದು ತುಂಬಾ ಸಂತೋಷಕರವೇ ಸರಿ.

ಪಾಡಂಡ ಗಣಪತಿಯವರು ಗ್ರಾಮಸ್ಥರನ್ನು ಒಗ್ಗಟ್ಟುಮಾಡಿಕೊಂಡು ಮಂಜೂರಾದ ಹಣಕ್ಕಿಂತ ದಪ್ಪಲಾಗಿ ರಸ್ತೆ ಕೆಲಸ ಮಾಡಿಸಿದುದರಿಂದ ಈ ವರ್ಷ ನಮ್ಮ ಗ್ರಾಮದಲ್ಲಿ ಬೆಳೆದ ಏಲಕ್ಕಿ, ಕೊಯಿನ ಚಕ್ಕೆ, ಬತ್ತ ವಗೈರೆ ಗಾಡಿ ಬಂದು ಸಾಗಿಸಿಕೊಂಡು ಹೋದದ್ದಲ್ಲದೆ ಈಗ ಕಳೆದ ಮೇ ತಾರೀಕು 19—20 ರಲ್ಲು ಜೋರಾದ ಮಳೆಯಲ್ಲು ಸಹ ಕಾರು ಟ್ಯಾಕ್ಸಿ ಸಹ ತಂದು ಮದುವೆ ಹೆಣ್ಣನ್ನು ಕರಕೊಂಡು ಹೋದ್ದಲ್ಲದೆ ರಸ್ತೆಯ ಅನುಕೂಲತೆಯಿಂದ ಜೂನ್ ತಾ. 18, 19 (ಆದ್ರ ತಿಂಗಳು 3, 4) ಕ್ಕೆ ಸಹ ಲಗ್ನ ನಿಶ್ಚಯಮಾಡಿಕೊಂಡಿದ್ದಾರೆ.

ಈ ರಸ್ತೆಗೆ ಪ್ರಯತ್ನ ತೆಗೆದುಕೊಂಡ ಬೋರ್ಡಿನ ಎಲ್ಲಾ ಮೆಂಬರುಗಳಿಗೂ ನಮ್ಮ ಅಭಿವಂದನೆಗಳನ್ನು ಅರ್ಪಿಸುತ್ತೇನೆ.

ಡಿ. ಬೋರ್ಡಿನ ಮೆಂಬರುಗಳು ನಮ್ಮ ಮೇಲೆ ಕರುಣವಿಟ್ಟು ಮುಂದೆ ಸಹ 200 ರೂಪಾಯಿ ಮಂಜೂರು ಮಾಡಿಸಿ ಕೊಡಬೇಕಾಗಿ ಬೇಡುತ್ತೇನೆ.

ಪಿ. ಜಿ. ಎ.

ಕೊಡಗನ್ನು ಮೈಸೂರಿಗೆ ಯಾಕೆ ಸಂಯೋಜಿಸಬಾರದು?

ದೇಶಾಭಿಮಾನಿಗಳೇ,

'ಕೊಡಗು' ಮತ್ತು 'ಜನ್ಮಭೂಮಿ' ಪತ್ರಿಕೆಗಳಲ್ಲಿ ಕೊಡಗನ್ನು ಮದ್ರಾಸು ಪ್ರಾಂತ್ಯಕ್ಕೆ ಸೇರಿಸುವ ವಿಷಯದಲ್ಲಿ ಒಂದೆರಡು ಬಾತ್ಮಿಗಳು ಈಗ ತಾನೇ ಹೊರಡಲಾಗಿ ಸರ್ಕಾರದವರು ಇದರ ಸಂಗತಿಯನ್ನು ಕೇಳಲು ಹೊರಟಿರುತ್ತಾರೆಂದು ತಿಳಿಯಬಂತು. ಇದು ಆತುರದ ಪ್ರಶ್ನೆಯಲ್ಲವೆಂದು ನಂಬಲು ಕಾರಣವಿದೆ. ಅಲ್ಲದೆ ಬರೇ ಸರ್ಕಾರಿ ನೌಕರರನ್ನು ಮತ್ತು ಕೌನ್ಸಿಲ್ ಮೆಂಬರುಗಳನ್ನೇ ಕೇಳಿ ತೀರ್ಮಾನಿಸುವ ಸಂಗತಿಯೂ ಅಲ್ಲ. ಇದು ದೇಶಕ್ಕೆಲ್ಲಾ ಅನ್ವಯಿಸುವ ಸಂಗತಿಯಾಗಿದೆ. ಆದ್ದರಿಂದ ಸರ್ಕಾರಿ ನೌಕರರನ್ನೂ, ರೈತರನ್ನೂ, ಪ್ಲಾಂಟರುಗಳನ್ನೂ, ವ್ಯಾಪಾರಸ್ಥರನ್ನೂ ಸಹ ಒಟ್ಟುಗೂಡಿಸಿ ಅಭಿಪ್ರಾಯ ಕೇಳಿ ಆ ಮೇಲೆ ತೀರ್ಮಾನಿಸತಕ್ಕದ್ದಾಗಿದೆ. ಇದಕ್ಕೆ ಸರ್ಕಾರದವರು ಪಂಡಿತಾ ಗಮನ ಕೊಡುವಂತೆ ಕೊಡಗು ದೇಶಕ್ಕೆ ಮುಖ್ಯಾಧಿಕಾರಿ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಮತ್ತು ಅಸಿಸ್ಟೆಂಟ್ ಕಮಿಷನರ್ ಆಗಿರು ರಾ. ಬಾ. ಜಂಗಪ್ಪನವರು ಗಮನ ಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

ಇದರಲ್ಲಿ ನನ್ನದೊಂದು ಸಣ್ಣ ಅಭಿಪ್ರಾಯ—ಕೊಡಗನ್ನು ಪ್ರತ್ಯೇಕವಾಗಿಟ್ಟರೆ ಹಣದ ಅಭಾವದಿಂದ ಮುಂದುವರಿಯಲು ಬಹಳ ಕಷ್ಟ. ವಿದ್ಯೆ, ವೈದ್ಯ ವಗೈರೆಗೆ ಪೂರಾ ಕೊಂಡರೆ ಸಣ್ಣ ಕಾಲುವೆ ಮಾಡಬೇಕಾದರೂ ಕೊಡಗಿನಲ್ಲಿ ಹಣವಿಲ್ಲ. ... ಹೊಂದಿ ಸರಾಸರಿ ಉತ್ಪತ್ತಿ ಕಡಿಮೆಯಾಗುತ್ತಾ ಬರುತ್ತಿದೆ. ಅದೂ ನಿಂತುಹೋಗಿಬಿಟ್ಟರೆ ಕೊಡಗಿನಲ್ಲಿ ತಿರುಗಾಡಲು ರಸ್ತೆ ಸಹ ಇಲ್ಲದಾಗುತ್ತೆ.

ಮದ್ರಾಸಿಗೆ ಸೇರಿಸಿಬಿಟ್ಟರೆ ಮದ್ರಾಸಿನವರು ಕೊಡಗು ದೇಶದ ಉತ್ಪತ್ತಿ ಬಹಳ ಕಡಿಮೆಯಾಗಿರುವುದರಿಂದ ಹೆಚ್ಚಿನ ಅನುಕೂಲತೆ ಕೊಡಲು ಹಣ ಇರುವುದಿಲ್ಲವೆಂದು ಪ್ರತಿಯೊಂದು ಸಂಗತಿಯನ್ನು ತಿರಸ್ಕರಿಸಿಯಾರು. ಇಲ್ಲಿಂದ ಒಂದೆರಡು ಕೌನ್ಸಿಲ್ ಮೆಂಬರುಗಳನ್ನು ಕಳುಹಿಸಿದರೆ ಅಲ್ಲಿರುವ 98 ಯಾ 99 ಮೆಂಬರುಗಳಲ್ಲಿ ಇಲ್ಲಿಯ ಒಂದೆರಡು ಮೆಂಬರುಗಳ ಮಾತಿಗೂ ಬೆಲೆ ಸಿಕ್ಕಲಾರದು. ಹೇಗೆಲ್ಲಾ ಕೊಡಗು ಬಹಳ ಕಷ್ಟಕ್ಕೆ ಗುರಿಯಾಗಬೇಕಾಗುವುದೆಂದು ನನ್ನ ಊಹನೆ.

ಇದರ ಬದಲು ಈ ಪ್ರಾಂತ್ಯವನ್ನು ನೆರೆ ಪ್ರಾಂತ್ಯವಾದ ಮೈಸೂರು ದೇಶಕ್ಕೆ ಸೇರಿಸಲು ಪ್ರಯತ್ನಪಡುವದು ಉತ್ತಮವೆಂದು ನನ್ನ ಪೂರಾ ಅಭಿಲಾಷೆ. ಇದನ್ನು ನಮ್ಮ ದೇಶಸ್ಥರು ಚೆನ್ನಾಗಿ ಆಲೋಚಿಸಿ ಉತ್ತಮವಾದ ಪಕ್ಷ ಮೈಸೂರಿಗೆ ಸೇರಿಸಲು ಚಳವಳವೆಬ್ಬಿಸುವದು ಉತ್ತಮವಾಗಿ ಕಾಣುತ್ತೆ. ನಮ್ಮ ದೇಶದಲ್ಲಿ ಕನ್ನಡ ಭಾಷೆ. ಮೈಸೂರು ದೇಶದಲ್ಲಿಯು ಕನ್ನಡ ಭಾಷೆ. ಇಲ್ಲಿಯ ಕಾಯಿಲಸ್ಥರು ಗುಣವಾಗದಿದ್ದರೆ ಓಡುವದೇ ಮೈಸೂರಿಗೆಂಬುದನ್ನು ಬೇರೆ ವಿವರಿಸಬೇಕಾಗಿಲ್ಲ. ವಿದ್ಯೆಕ್ಕೆ ಬಹಳ ಅನುಕೂಲ ಮತ್ತು ಸುಲಭ ಖರ್ಚಿನಲ್ಲಿ ಪೂರೈಸಬಹುದು. ಅರ್ಹರಿಗೆ ಉದ್ಯೋಗಕ್ಕೂ ತೊಂದರೆ ಇಲ್ಲ. ರೈಲ್ವೆ, ಎಲೆಕ್ಟ್ರಿಕ್, ಕಾಲುವೆ ವಗೈರೆ ವಿಷಯ ಅಲಾಯಿದವಾಗಿ ವರ್ಣಿಸಬೇಕಾಗಿಲ್ಲ. ಇದನ್ನು ಕೊಡಗಿಗೂ ತರಬಹುದು. ಹೀಗಿರುವದರಿಂದ ದೇಶವನ್ನು ಮೈಸೂರಿಗೆ ಸೇರಿಸಿಬಿಟ್ಟರೆ ಪ್ರತಿ ಬಾಬಿನಲ್ಲಿಯೂ ಅನುಕೂಲವಾಗುವದಲ್ಲಿ ಸಂಶಯವಿಲ್ಲ. ಮದ್ರಾಸಿಗೆ ಒಂದಾವರ್ತಿ ಸೇರಿಸಿಬಿಟ್ಟರೆ ಮರಳಿ ಬಿಡಿಸಲು ಅಸಾಧ್ಯ. ಆದ್ದರಿಂದ ದೀರ್ಘಾಲೋಚನೆಯಿಂದ ಈಗಲೇ ತೀರ್ಮಾನಿಸಿಕೊಳ್ಳುವದು ಉತ್ತಮವಾಗಿದೆಯೆಂಬ ಈ ಬಾತ್ಮಿಯ ಉದ್ದೇಶ.

ದೇಶಸ್ಥರೇ, ಪ್ರತಿ ಗ್ರಾಮಗಳಲ್ಲಿಯೂ ಮೀಟಿಂಗು ಮಾಡಿ ಅವರವರ ಅಭಿಪ್ರಾಯವನ್ನು ಕಮಿಷನರ್ ಸಾಹೇಬರವರಿಗೆ ಬರೆಯುವುದಲ್ಲದೆ ಪತ್ರಿಕೆಗಳ ಮೂಲಕವೂ ಅಭಿಪ್ರಾಯ ಕೊಡಬೇಕಾಗಿ ವಿನಂತಿ.

ಕರ್ನಾಟಕ ಕನ್ಯಾ.

ನಾಶ.

ನಾಶ ಎಂಬ ಶಬ್ದವು ಪ್ರತಿ ಭಾಷೆಯಲ್ಲಿಯೂ ಬಹುಚಿಕ್ಕದಾದ ಶಬ್ದವಾಗಿರುತ್ತದೆ. ಆ ಚಿಕ್ಕ ಶಬ್ದದ ಅರ್ಥವನ್ನು ತಿಳಿಯುದವರೇ ವಿರಳ. ಒಂದು ಕೂಸುವಾದರೂ ಕೂಡ ಈ ಶಬ್ದವನ್ನೇ ಮೊದಲಾಗಿ ತಿಳಿದುಕೊಂಡು ಅದರಲ್ಲಿ ಅಡಗಿರುವ ಅರ್ಥವನ್ನೂ ಕೂಡ ಸ್ವಾಭಾವಿಕವಾಗಿಯೇ ತನ್ನ ಅಂತಃಕರಣದಲ್ಲಿ ನೆಟ್ಟು ಅಂಕುರಿಸಲ್ಪಟ್ಟ ಆ ಬೀಜವು ನಿಸ್ಸಹಾಯಕವಾದ ಒಂದು ಕೂಸಿನ ನಡತೆಯನ್ನು ಸಹ ಬದಲಾಯಿಸಬಹುದಾಗಿದೆ. ಈ ಪುಟ್ಟ ಶಬ್ದದ ಅರ್ಥವು ಕಾಲಾಂತರಗಳಿಂದ ಮನುಷ್ಯನ ಹೃದಯದಲ್ಲಿ ಬೇರೂರಿ, ಸ್ವಾಭಾವಿಕವಾಗಿ ಮನುಷ್ಯನು ಮಾಡುವ ಪ್ರತಿ ಒಂದು ಕಾರ್ಯಕ್ಕೂ ಮನುಷ್ಯನ ಮನಸಾಕ್ಷಿಯಲ್ಲಿಯೇ ವಾಸಿಸತೊಡಗಿರುವ ಈ ಶಬ್ದದ ಮನೋಭಾವನೆಯು ಬೆಂಬಲವಾಗಿದೆ. ಹೀಗೆ, ವಿಷಗಾಳಿ ಮುಂತಾದವುಗಳಿಂದ ಯುದ್ಧದ ಕಾಲದಲ್ಲಿ ಉಪಯೋಗಿಸಿ ಶತ್ರುಗಳನ್ನು ನಿರ್ಮೂಲ ಮಾಡಲು ಪ್ರಯತ್ನಿಸುವರು. ಇಂಥಾ ನಾಶಕರವಾದ ಅಸ್ತ್ರ ಶಸ್ತ್ರಗಳನ್ನು ಉಪಯೋಗಿಸುವರು ಮನುಷ್ಯ ಜನ್ಮದ ಶತ್ರುಗಳಾದವರೇ. ಆದರೆ, 'ನಾಶ' ಎಂಬ ಮನೋಭಾವನೆಯನ್ನು ಮಾನವ ಹೃದಯದಲ್ಲಿ ಬೇರೂರಿಸಲು ಪ್ರಯತ್ನಪಟ್ಟ ಮನುಷ್ಯನೇ ಕಾಲಾಂತರಕ್ಕೂ ಮನುಷ್ಯ ಜನ್ಮದ ಸುಖವನ್ನು ನಾಶಗೊಳಿಸಿ ಎಲ್ಲಾ ಕಾಲಕ್ಕೂ ಮನುಷ್ಯ ಜನ್ಮದ ದೊಡ್ಡ ಶತ್ರುವಾಗಿರುವನು.

ವಿಧ ವಿಧದ ಶಾಸ್ತ್ರಜ್ಞರ ಪ್ರಕಾರ ಭೂಲೋಕವು ಜನಿಸಿ ಕೋಟ್ಯಾಂತರ ವರ್ಷಗಳಾಗಿವೆ. ಈ ಕೋಟ್ಯಾಂತರ ವರ್ಷಗಳಲ್ಲಿ ಮನುಷ್ಯನು ನಾಗರೀಕತೆಯಲ್ಲಿ ದಿನದಿನವು ಮುಂದರಿಯುತ್ತಲೇ ಬಂದಿರುತ್ತಾನೆ. ಹೀಗೆ ಕಾಲಾಂತರಗಳ ಪ್ರಯತ್ನದಿಂದ ಮನುಷ್ಯನು ಇಂದು ಶೋಭಾಯಮಾನವಾದ ಶಿಖರ ಶ್ರೇಣಿಯ ಒಂದೆಡೆಯಲ್ಲಿ ನಿಂತಿರುವನು. ಆದರೇನು ಮನುಷ್ಯನು ಸುಖಿಯಾಗಿರುವನೇ? ಇಲ್ಲ. ಮನುಷ್ಯನು ತನನ್ನು ಪ್ರಯತ್ನಿಸಿ ತಾನು ಮಾಡಿದ ಕಷ್ಟಗಳಿಂದ ಕಲಿತು ಅಂತ್ಯದಲ್ಲಿರುವ ಆ 'ಕೈಲಾಸ' ಶ್ರೇಣಿಯನ್ನು ತಲಪಿ ಮನುಷ್ಯನು ಎಲ್ಲಾ ವಿಧದಲ್ಲಿಯೂ ಸುಖಿಯಾಗಿರುವುದೇ—ಎಂದರೆ ಸಂಪೂರ್ಣ ಆತ್ಮ ಸಂತೋಷವನ್ನು ಅನುಭವಿಸುವುದೇ ನಾಗರೀಕತೆಯ ಅಂತ್ಯವಾಗಿರಬೇಕು!

ಆದರೆ ಅಂಥಾ ಸುಖವು ಮನುಷ್ಯನು ಈಗ ಅನುಭವಿಸುವುದಿಲ್ಲವೇ ಎಂಬುದು ಒಂದು ನ್ಯಾಯವಾದ ಪ್ರಶ್ನೆಯಾಗಬಹುದು. ಎಂದೂ ಇಲ್ಲ. ಮನುಷ್ಯನು ತನ್ನ ಹಿತವನ್ನೇ ಮುಂದಾಗಿ ನೋಡಿಕೊಂಡು 'ನಾಶ' ಎಂಬ ಶಬ್ದದಲ್ಲಿ ಅಡಗಿರುವ ಸ್ವಾರ್ಥಭಾವನೆಯ ಬಲೆಗೆ ಸಿಕ್ಕಿ ಬಿದ್ದ ಕ್ಷಣದಲ್ಲಿ ಮನುಷ್ಯನು ಕಾಲಾಂತರ ಕಾಲಕ್ಕೂ ಮನುಷ್ಯ ಜನ್ಮದ ಸುಖವನ್ನು ಸ್ವದೇವತೆಯ ಪಾದಕ್ಕರ್ಪಿಸಿದನು. 'ನಾಶ' ಎಂಬುವುದರ ಪ್ರಾಮುಖ್ಯತೆಯನ್ನು ಕೊಂಚವೂ ತಿಳಿಯದೆ ಕಿರಾತನೆಂದೆನಿಸಿಕೊಂಡು, ಬರೇ ಬಿಲ್ಲು ಬಾಣವನ್ನು ಹಿಡಿದುಕೊಂಡು ಆ ಹೊತ್ತಿಗೆ ಬೇಕಷ್ಟು ಆಹಾರವನ್ನು ಮಾತ್ರ ಕೂಡಿಟ್ಟುಕೊಂಡು ನಾಳೆ ಎಂಬುದರ ಯೋಚನೆ ಇಲ್ಲದೆ ಕಾಡು ಗುಡ್ಡ ಬೆಟ್ಟಗಳಲ್ಲಿ ಸಂಚರಿಸಿಕೊಂಡು ಜೀವಿಸುತ್ತಿದ್ದ ಕಾಲದಲ್ಲಿ ಮನುಷ್ಯರು ತಮ್ಮತಮ್ಮೊಳಗೆ ಯಾವುದೊಂದೂ ಭಿನ್ನ ಭೇದವಿಲ್ಲದೆ ಸೃಷ್ಟಿಕರ್ತನ ಆಟದ ಗೊಂಬೆಗಳೊ ಎಂಬಂತೆ ಎಲ್ಲೆಲ್ಲಿಯೂ ಸಂತುಷ್ಟರಾಗಿ ಅಸಮಾನತ್ವವೇನೆಂದು ತಿಳಿಯದೆ ಸುಖವಾಗಿ ಜೀವಿಸುತ್ತಿದ್ದರು.

ಆದರೆ ಕಾಲವು ಕಳೆದ ಹಾಗೆ ಕೆಲವು ಬುದ್ಧಿವಂತರೆನ್ನಿಸಿಕೊಂಡವರು ಅಂದಿನ ಅವಶ್ಯಕತೆಗಳನ್ನು ದಾಟಿ ನಾಳೆಯ ಅವಶ್ಯಕತೆಗೂ ಸಹ ಕೂಡಿಡಲು ಯೋಚಿಸತೊಡಗಿದರು. ಈ ಯೋಚನೆಯನ್ನು ಕಾರ್ಯಾರ್ಥಗೊಳಿಸಲು ಇನೊಬ್ಬನನ್ನು ತನ್ನ ಸೇವಕನಾಗಿ ಉಪಯೋಗಿಸಬೇಕಾಯಿತು. ಹೀಗೆ ಮುಂದರಿಯಲು ಜನರು ಪ್ರಕೃತದಲ್ಲಿ ಪಂಗಡ ಪಂಗಡಗಳಾಗಿ ಕೆಲಸ ಮಾಡುವುದು ಲಾಭಕರವೆಂದು ಯೋಚಿಸಿ, ಹಾಗೆಯೇ ಕೆಲಸ ಮಾಡಲು ತೊಡಗಿದರೂ ಕೂಡಲೇ 'ನಾಶ' ಎಂಬುವುದರ ಪ್ರಾಮುಖ್ಯತೆಯು ಪಂಗಡಗಳನ್ನು ಸಹ ಕೂಡಲೇ ಮುರಿಯಿತು. ಹೀಗಾಗಿ ಯಾವುದಾದರೊಂದು ಕೆಲಸದಲ್ಲಿ ಗಟ್ಟಿಗನೆನಿಸಿಕೊಂಡವನು ಬಾಕಿಯವರನ್ನು ತನ್ನ ಸೇವಕನನ್ನಾಗಿ ಮಾಡಿಕೊಂಡು ಅಸಮಾನತ್ವದ ಬೀಜವನ್ನು ಬಿತ್ತಿ ಅತೃಪ್ತಿಯ ಹಂಬಲನ್ನು ತನ್ನ ಮನಸಿನಲ್ಲಿಯೇ ನೆಡಲಾಗಿ 'ನಾಶ' ಎಂಬ ಆಶೆಯು ಎಂದೆದೂ ಹೆಚ್ಚಿ ಕಿರಾತನೆಂದೆನಿಸಿಕೊಂಡಿದ್ದರೂ ಕೂಡ ಆ ಉತ್ಕೃಷ್ಟ ಕಿರಾತನ ಶ್ರೇಷ್ಠ ಗುಣಗಳನ್ನೆಲ್ಲಾ ಕಳೆದುಕೊಂಡು ಮತ್ಸರ, ದ್ವೇಷಬುದ್ಧಿ, ಆತ್ಮಹತ್ಯೆ, ಹೊಟ್ಟೆಕಿಚ್ಚು, ಮುಂತಾದ ಅನೇಕ ಕೆಟ್ಟ ಮತ್ತು ಮನುಷ್ಯನ ಆತ್ಮ ಶಾಂತಿಯನ್ನು ಕೆಡಿಸುವ ನೀಚ ಸ್ವಭಾವಗಳಿಗೆ ತುತ್ತಾದನು. ಅಲ್ಲಿಂದಲೂ ಮುಂದರಿದು ಮುಂದಿನ ಅವಶ್ಯಕತೆಗಳನ್ನು ಕೂಡಿಡಲು ಸ್ವಂತ ಶಕ್ತಿಯೇ ಸುಲಭ ದಾರಿಯೆಂದು ಕಂಡು, ಹಿಡಿದು ಭೂಲೋಕದಲ್ಲಿಯು ಅಸಮಾನತ ಬಾಗಿಲನ್ನು ಸಂಪೂರ್ಣ ತೆರೆದನು. ಈ ಹೊಸ ಅಭಿಪ್ರಾಯವನ್ನು ಹುಟ್ಟಿಸಿದ್ದ ಸಮಯದಲ್ಲಿ ಧೈರ್ಯದಿಂದ ಅಂಥವನನ್ನು ಯಾರಾದರೂ 'ನೀನು ನೀಚ ಮನುಷ್ಯ ಜನ್ಮಕ್ಕೆ ದ್ರೋಹಿ, ಸೃಷ್ಟಿಕರ್ತನ ಮಕ್ಕಳೆಲ್ಲರೂ ಏಕ ಸಮಾನದಲ್ಲಿರುವರು' ಎಂಬುದಾಗಿ ಆ ಮನುಷ್ಯನನ್ನು ಮಾಳಿಗೊತ್ತಿದ್ದರೆ ಅಂಥವನು ಕಾಲಾಂತರ ಕಾಲಕ್ಕೂ ಮನುಷ್ಯ ಜನ್ಮದ ರಕ್ಷಕನಾಗಿ ಅಂದಿನಿಂದ ನಾಗರೀಕತೆಯನ್ನು ಕಾಪಾಡುವ ನೆಪದಲ್ಲಿ ಶತಮಾನಗಳಿಂದ ನಡೆದ ಯುದ್ಧಗಳನ್ನೂ ಕೊಲೆಗಳನ್ನು ಭೂಲೋಕದಲ್ಲಿ ಬಾಕಿಮಾಡದಂತವನಾಗುತ್ತಿದ್ದನು. ಬದಲಾಗಿ ಆ ಅಭಿಪ್ರಾಯವು ಮನುಷ್ಯನನ್ನು 'ನಾಗರೀಕತೆ' ತಂದು ಮನುಷ್ಯಜನ್ಮವನ್ನು ಎಂದೆಂದಿಗೂ ಕೆಡಿಸಿಬಿಟ್ಟಿತು.

ನಾವು ಭೂಲೋಕದಲ್ಲಿಯ ಇಂದಿನ ಸ್ಥಿತಿಯನ್ನು ಪರೀಕ್ಷಿಸಿ ನೋಡಿದರೆ ಎಲ್ಲೆಲ್ಲಿಯೂ ಅತೃಪ್ತಿಯೂ ಅಸಮಾಧಾನವೇ ಕಂಡು ಬರುತ್ತೆ. ಬಲಾಢ್ಯರು ಬಲಹೀನರನ್ನೂ, ಐಶ್ವರ್ಯವಂತರು ಬಡವರನ್ನೂ ಎಲ್ಲೆಲ್ಲಿಯೂ ತಮ್ಮ ಸೇವಕರಾಗಿ ಮಾಡಿಕೊಳ್ಳಲು ಪ್ರಯತ್ನಿಸುತ್ತಾರೆ. ಭೂಲೋಕದಲ್ಲಿಯ ಸಕಲವನ್ನೂ ತ್ಯಜಿಸಿ 'ನಾಶ' ಎಂಬುವುದಕ್ಕೆ ತೃಣ ಮಾತ್ರವೂ ಬೆಲೆ ಕೊಡದ ಕೆಲವು ಮಹಾತ್ಮರಲ್ಲದೆ ಭೂಲೋಕದಲ್ಲಿ ಯಾರೂ ಸುಖಿಗಳಾಗಿರುವುದಿಲ್ಲ. ಇಡೀ ಭೂಲೋಕವನ್ನೇ 'ನನಗೆ' ಕೊಟ್ಟರೂ ತೃಪ್ತಿಪಡಲಾಗದ 'ನಾಶ' ನನ್ನಂತೆಯೇ ಕಾದಾಡುತ್ತಿರುವ ಕೋಟ್ಯಾಂತರ 'ನಾಶ' ಎಂಬ ಜನರ ಮಧ್ಯೆ ತೃಪ್ತಿಯಾಗಿರುವುದು ಸಾಧ್ಯವೇ? ಬದಲಾಗಿ ನಾಶ ಎಂಬುವುದು 'ನಾವು' ನಾವು ಎಂಬುವುದು 'ನಾವೆಲ್ಲರು' ಎಂದಾದರೆ ಭೂಲೋಕದಲ್ಲಿಯ ಸಕಲವೂ ಎಷ್ಟು ಬದಲಾದ ನೋಟವನ್ನು ತೆಗೆದುಕೊಳ್ಳುತಿತ್ತು. ನಾಗರೀಕತೆಯ ಹೆಸರನ್ನೂ, ತನ್ನ ದೇಶದ ಜನಾಂಗದ ಹೆಸರನ್ನು ಮುಂದಿಟ್ಟುಕೊಂಡು ಸ್ವಕೀರ್ತಿ, ಸ್ವಪ್ರಯೋಜನಕ್ಕೆ ಕಾದಾಡಲು ಸ್ಥಳವೆಲ್ಲಿರುತಿತ್ತು?

ಕೆ. ಯಂ. ಪೂವಯ್ಯ.

ಜಯಕರ್ನಾಟಕ ಗ್ರಂಥಮಾಲೆಯ ೨ನೆಯ ವರ್ಷದ ಯೋಜನೆ.

ಮನೋರಂಜಕವಾದರೂ, ಗಂಭೀರತ್ವಲಿಯ ಗ್ರಂಥಗಳ ಸುಗ್ಗಿ!!
ಚಂದಾ ಹಣವನ್ನು ಕಡಿಮೆ ಮಾಡಿದೆ! ವರ್ಷದಲ್ಲಿ ೬ ಪುಸ್ತಕಗಳು!!
ವಾರ್ಷಿಕ ಚಂದಾ (ಅ. ವೆ. ಸೇರಿ) ಜಯಕರ್ನಾಟಕ ಚಂದಾದಾರರಿಗೆ
೩—೪—೦ ಮಾತ್ರ!! ೩—೦—೦ ಮಾತ್ರ!!

ಮೊದಲನೆ ೩ ಗ್ರಂಥವಾಗಿ ಶ್ರೀ. ಆನಂದಕಂದರ ಸಣ್ಣ ಕತೆಗಳ ಸಂಗ್ರಹವು ಅಕ್ಟೋಬರ ತಿಂಗಳು ದಿನ ಹೊರಡುವದು

ಅಲ್ಲದೆ ಶ್ರೀ ಮುತಾಲಿಕ 'ಶ್ರೀನಿವಾಸ' ಬೇಂದ್ರೆ, ಟೇಗನ ಮುಂಗೆ, ಚೆನ್ನಮಲ್ಲ ಮೊದಲಾದ ಸಂತ ಬರಹಗಾರರ ನಾಟಕ, ಕಾದಂಬರಿ, ಕಥೆಗಳೂ ಶ್ರೀ ಅರವಿಂದ ಯೋಗಿಗಳ ("mother") ಗ್ರಂಥದ ಅನುವಾದವೂ, ಲಾವಣಿಗಳ ಸಂಗ್ರಹವೂ ಹೊತ್ತಿಗೆ ಸರಿಯಾಗಿ ಹೊರಡುವವು.

ನಿಯಮಿತವಾಗಿಯೇ ಪ್ರತಿಗಳನ್ನು ತೆಗೆಯುವದರಿಂದ ಚಂದಾದಾರರಾಗಲು ಬಯಸುವವರು ಈಗಲೇ ಪತ್ರ ಬರೆಯಬೇಕು.

ಎಲ್ಲ ಕಡೆಗಳು ಏಜಂಟರು ಬೇಕಾಗಿದ್ದಾರೆ.
ಪತ್ರವ್ಯವಹಾರ ಮಾಡಬೇಕು.

ವ್ಯವಸ್ಥಾಪಕ
ಜಯಕರ್ನಾಟಕ ಕಾರ್ಯಾಲಯ,
ಸಾಧನಕೇರಿ, ಧಾರವಾಡ.

ವರ್ತಮಾನ ಸಂಗ್ರಹ.

ಒಳ ದೇ ಶ.

ಮೈಸೂರು ಮಿಲಿಟರಿಯಲ್ಲಿ ಮೆ. ಚಿಂಡಮಾಡ ಸಿ. ಮೊಣ್ಣಪ್ಪನವರಿಗೆ ಕಮಿಷನ್ ದೊರೆತಿರುವದಾಗಿ ತಿಳಿಸಲು ಸಂತೋಷಪಡುತ್ತೇವೆ.

ಮೆ. ಗಿಂಗಾಂಡನ ಸಂಜಪ್ಪ ಯಂ. ಯಲ್. ಸಿ. ಯವರು ನ್ಯುಮೋನಿಯಾ ಕಾಯಿಲೆಯಿಂದ ಮೃತರಾದರೆಂದು ತಿಳಿಯಲು ವಿಷಾದಿಸುತ್ತೇವೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗೊಂದು ತಾ. 25 ನೇ ಶನಿವಾರ ಬೆಳಿಗ್ಗೆ 11 ಗಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ನಡೆಯುತ್ತದೆ.

ಕೊಡಗಿನ ರಿಟಯರ್ಡ್ ಅಸಿಸ್ಟೆಂಟ್ ಕಮಿಷನರಾದ ರಾ. [illegible]ದಂಡ ಅಪ್ಪಯ್ಯನವರು ತಾ. 16 ರಲ್ಲಿ ಮೃತರಾದುದು ತಿಳಿಯಲು ವ್ಯಸನಪಡುತ್ತೇವೆ ಮತ್ತು ಮೃತರ ಆತ್ಮಕ್ಕೆ ಶಾಂತಿ ದೊರಲೆಂಬದಾಗಿ ಪ್ರಾರ್ಥಿಸುತ್ತೇವೆ.

ತಾ. 26—6—32 ನೇ ಶನಿವಾರ ಮಧ್ಯಾಹ್ನದ ಮೇಲೆ ಗಂಟೆಗೆ ಕೊಡಗು ಸಹಕಾರಿ ಫೆಡರೇಶನ್ನಿನ ಮೇನೇಜಿಂಗ್ ಕಮಿಟಿ ಮೀಟಿಂಗೊಂದು ಮಡಿಕೇರಿ ಫೆಡರೇಶನ್ ಆಫೀಸಿನಲ್ಲಿ ನಡೆಯುತ್ತೆ.

ಈ ವರ್ಷದ ಬಿ. ಯಲ್. ಪರೀಕ್ಷೆಯಲ್ಲಿ ಮೆ. ಗಳಾದ ಸಿ. [illegible]. ನಾರಾಯಣರವರು, ಎಸ್. ಎಸ್. ರಾಮಮೂರ್ತಿಯವರು ಮತ್ತು ಮೇರಿಯಂಡ ಬಿ. ಮಾದಪ್ಪನವರೂ ಮತ್ತು ಎಫ್. ಯಲ್. ಪರೀಕ್ಷೆಯಲ್ಲಿ ಪುಲಿಯಂಡ ಜೆ. ಐಯಪ್ಪನವರೂ ತೇರ್ಗಡೆಯಾಗಿರುತ್ತಾರೆ. ಇವರಿಗೆ ನಮ್ಮ ಅಭಿನಂದನೆಗಳು.

ಮುಂದಿನ ರಾಜಕೀಯ ಆಡಳಿತದ ಕುರಿತು ನಾಪೋಕ್ಲು ನಾಡಿನವರ ಮೀಟಿಂಗೊಂದು, ತಾ. 11ರಲ್ಲಿ ನಡೆದು, ಸಂಪೂರ್ಣ ಪ್ರಾಂತೀಕ ಸ್ವರಾಜ್ಯ ಕೊಡಬೇಕೆಂದು ಕೇಳುವ[illegible] ಕಾರಿದವರಲ್ಲಿ ಹೆಚ್ಚಿನವರ ಅಭಿಪ್ರಾಯವೆಂತಲೂ, ಆದರೆ [illegible]ವ ಸಂಗತಿಯೂ ಓಟಿಗೆ ಹಾಕಲಿಲ್ಲವೆಂತಲೂ ತಿಳಿಯುತ್ತೇನೆ. ಇದರ ವಿವರವು ಇನ್ನೊಂದು ಕಡೆ ಪ್ರಕಟವಾಗಿದೆ.

ಕೊಡಗಿಗೆ ಇನ್ನು ಮುಂದಕ್ಕೆ ಬೇಕಾಗುವ ಪೂರ್ವಾರ್ಥಿ ವಿಷಯ ಕಿಗ್ಗಟ್ಟುನಾಡಿನ ಪರವಾಗಿ ಸರ್ಕಾರಕ್ಕೆ ಜವಾಬು ಕೊಡಲು ಒಂದು ಪಬ್ಲಿಕ್ ಮೀಟಿಂಗು ಈ ತಾ. 26ನೇ ಆದಿತ್ಯವಾರ ದಿನ 2 ಗಂಟೆಗೆ ಗೋಣಿಕೊಪ್ಪಲು ಟೌನ್ ಹಾಲ್‌ನಲ್ಲಿ ಏರ್ಪಡಿಸಿರುತ್ತೆ. ಈ ತಾಲೋಕಿನ ಎಲ್ಲಾ ಮುಖಂಡರುಗಳು ಸದರಿ ದಿನ ಸಮಯಕ್ಕೆ ಸರಿಯಾಗಿ ಹಾಜರಾಗಿ ತಮ್ಮ ತಮ್ಮ ಇರಾದೆಯನ್ನು ಕೊಡಬೇಕಾಗಿ ಮೆ. ಕೊಂಗಂಡ ಗಣಪತಿ ಯಂ. ಯಲ್. ಸಿ. ಯವರು ತಿಳಿಸಿರುತ್ತಾರೆ.

ಕಳೆದ ಯಸ್. ಯಸ್. ಯಲ್. ಸಿ. ಪರೀಕ್ಷೆಯಲ್ಲಿ ಮಡಿಕೇರಿ ಹೈಸ್ಕೂಲಿನಿಂದ ಮೆ. ಗಳಾದ ಕಳ್ಳಿಚಂಡ ಎ. ನಾಣಪ್ಪನವರು, ಕೋದಂಡ ಎ. ಸೋಮಯ್ಯನವರು, [illegible] ಣ್ಣಯಂಡ ಯಸ್. ಮುತ್ತಣ್ಣನವರು, ಮನ್ನಕಮನೆ ನಾಣಯ್ಯನವರು, ಅಪ್ಪಾರಂಡ ಯಂ. ಮಾದಪ್ಪನವರು, [illegible] ಯಸ್. ಅಪ್ಪಯ್ಯನವರು, ಯಸ್. ರಾಮಮೂರ್ತಿಯವರು ಪಿ. ಸುಬ್ರಹ್ಮಣ್ಯಂರವರು, ಸಿ. ಯಸ್. ಕೃಷ್ಣಮೂರ್ತಿಯವರು ಮತ್ತು ತೆಕ್ಕಡ ಕೆ. ಗಣಪತಿಯವರು ಪಾಸಾಗಿರುತ್ತಾರೆ.

ವೀರಾಜಪೇಟೆ ಹೈಸ್ಕೂಲಿನಿಂದ ಮಿಸ್. ಕೆ. ಆರ್. ಗಿರಿಜಾಬಾಯಿಯವರೂ, ಮಿಸ್. ಕುಂ[illegible]ರ ಕಾವೇರಿಯಮ್ಮನವರೂ ಮತ್ತು ಮೆ. ಗಳಾದ ಪುಲಿಯಂಡ ಮುತ್ತಣ್ಣನವರು ಚೇನಂಡ ಗಣಪತಿಯವರು, ಮುಕ್ಕೊಳಮಾಡ ಮುದ್ದಪ್ಪನವರು, ಕೊಳುವಂಡ ಉತ್ತಯ್ಯನವರು, ಯಂ. ಇಸ್ಮೈಲ್‌ರವರು ಮತ್ತು ಕೆ. ಆರ್. ಗಣಪಯ್ಯನವರು ತೇರ್ಗಡೆ ಹೊಂದಿರುತ್ತಾರೆ.

ಮಡಿಕೇರಿ ಹುಡುಗಿಯರ ಹೈಸ್ಕೂಲಿನಿಂದ ಮಿಸ್. ಚೇರಂಡ ಎ. ಕಾಮವ್ವನವರು, ಕೊಡಂದೇರ ಟಿ. ತಂಗಮ್ಮನವರು, ನಡಿಕೇರಿಯಂಡ ಸಿ. ಮಾಚಮ್ಮನವರು, ಚೇ[illegible]ಂಡ ಯು. ಪೊನ್ನಮ್ಮನವರು, ಕಲಿಯಂಡ ಯಂ. ಪೊಳ್ಳಮ್ಮನವರು, ಮುಪ್ಪಬಿದ್ದಂಡ ಎ. ಸೀತಮ್ಮನವರೂ ತೇರ್ಗಡೆ ಹೊಂದಿರುತ್ತಾರೆ.

ಪ್ರೈವೇಟಾಗಿ ಪರೀಕ್ಷೆಗೆ ಕೂತವರ ಪೈಕಿ ಮೆ. ಪಾಲೇಕಂಡ ಯಂ. ಸುಬ್ಬಪ್ಪನವರು ಮತ್ತು ಬಿ. ಕೆ. ನಾರಾಯಣರವರು ಪಾಸಾಗಿರುತ್ತಾರೆ.

ಮಂಗಳೂರಿನಲ್ಲಿ ಪರೀಕ್ಷೆಯಲ್ಲಿ ಮೆ. ನಡಿಕೇರಿಯಂಡ ಸಿ. ಪೂವಯ್ಯನವರೂ ಮತ್ತು ಮದರಾಸಿನಲ್ಲಿ ಮಿಸ್. ಕೊಂಗಂಡ ಕಮಲ ಅಚ್ಚಯ್ಯನವರೂ ತೇರ್ಗಡೆಯಾಗಿರುತ್ತಾರೆ. ಇವರೆಲ್ಲರಿಗೂ ನಮ್ಮ ಅಭಿವಂದನೆಗಳವೆ.

ಹಿಂ ದೂ ದೇ ಶ.

ಗಾಂಧಿಜಿಯವರು ಕಾರಾಗೃಹದಲ್ಲಿ ಕುರಿತು ತಮ್ಮ ಸತ್ಯಾಗ್ರಹ ಆಶ್ರಮದ ಚರಿತ್ರೆ ಬರೆಯುತ್ತಿರುವರೆಂದು ತಿಳಿದು ಬರುತ್ತದೆ.

ಇನ್ನು ಮುಂದೆ ಯಾವ ರಾಜಕೀಯ ಚಳವಳದಲ್ಲೂ ಕೈ ಹಾಕುವುದಿಲ್ಲವೆಂದು ಬರೆದುಕೊಟ್ಟೇ ಗಡೀನಾಡಿನ ಜೈಲಿನಿಂದ ಒಟ್ಟು ಕೈದಿಗಳು ಹೊರಬಿದ್ದರೆಂದು ಸರ್ಕಾರದ ಪ್ರಕಟನೆ ...

'ಆರ್ಡಿನೇನ್ಸು ರಾಜ್ಯಭಾರದಿಂದ ಪರಿಣಾಮವು ಒಳ್ಳೆಯದಾಗದೆ'ಂದು ಲಂಡನಿನಲ್ಲಿ ಸಿ. ಯಫ್. ಆಂಡ್ರೂಸರವರ ಭಾಷಣ ಗಂಟೆಗೆ ಬಂದೇ ಸ್ವರ! ಒಳ್ಳೆಯ ಪರಿಣಾಮಗಳಾಗುವವರೆಗೆ ಆರ್ಡಿನೇನ್ಸ್ ಮುಗಿಯದು.

ಕವಿ ರವೀಂದ್ರನಾಥ್ ಠಾಕೂರರಿಗೆ ಕೆಲವು ದಿನ ಇನ್‌ಫ್ಲುಯೆಂಜ ಜ್ವರವು ಬಂದು ಈಗ ಬಿಟ್ಟಿದೆ. ಅವರೀಗ ಕಲ್ಕತ್ತಾದಲ್ಲಿದ್ದಾರೆ. ಇನ್ನು ಕೆಲವು ಸಮಯ ಅಲ್ಲಿಯೇ ವಿಶ್ರಾಂತಿ ತೆಗೆದುಕೊಳ್ಳುತ್ತಾರಂತೆ.

ನಾಗಪುರದಲ್ಲಿ ಕಾಂಗ್ರೆಸ್ ಸತ್ಯಾಗ್ರಹಕ್ಕೆ ಸೇರಿ ಸೆರೆಸಿಕ್ಕಿದ್ದ ೨೭ ಮಂದಿ ಸತ್ಯಾಗ್ರಹಿಗಳಿಗೆ ಬಿಡುಗಡೆಯಾಗಿದೆ. ಇವರಲ್ಲಿ ಅನೇಕರು ವಿದ್ಯಾರ್ಥಿಗಳಾದ್ದರಿಂದ ಪೂರ್ತಿ ಸಜಾ ಮುಗಿಯುವುದರೊಳಗಾಗಿ ಬಿಡುಗಡೆಮಾಡಿದ್ದಾರೆ.

ವಿಠಲಬಾಯಿ ಪಟೇಲರವರು ಈಗ ಲಂಡನ್ ಪಟ್ಟಣಕ್ಕೆ ಬಂದಿರುತ್ತಾರೆ. ಇವರು ಕೆಲವು ವಾರಗಳ ವರೆಗೆ ಅಲ್ಲಿದ್ದು ಕಾಂಗ್ರೆಸ್ ಉಪ ಸಂಘವನ್ನು ಪುನರುಜ್ಜೀವನಗೊಳಿಸಿ ಅನಂತರ ಅಮೇರಿಕಕ್ಕೆ ಪ್ರಯಾಣಮಾಡುವವರಾಗಿರುವರು.

ಗುಂಟೂರಿನಲ್ಲಿ ಆಂಧ್ರ ದೇಶದ [illegible]ನೆಯ ಕಾನ್ಫರೆನ್ಸು ಜೂನ್ [illegible] ರಲ್ಲಿ ನಡೆಯಬೇಕಾಗಿತ್ತು. ಇಲ್ಲಿ ರಾಜದ್ರೋಹದ ಠರಾವುಗಳಾಗುವುವೆಂದು ತಿಳಿದು ಸರ್ಕಾರದವರು ಕಾನ್ಫರೆನ್ಸ್ ನಡೆಸಲು ಆಸ್ಪದ ಕೊಡಲಿಲ್ಲ. ೨೫೦ ಮಂದಿಯನ್ನು ಸೆರೆಹಿಡಿದಿದ್ದಾರೆ.

ಜಾಫರಲಿಯವರ ಪತ್ನಿ ಸಾವಿತ್ರಿದೇವಿ ಎಂಬ ವಿಧವೆ ಸ್ತ್ರೀಯು ಮದ್ದು ಗುಂಡು ಹಾಕಿ ಸಿದ್ಧವಾಗಿದ್ದ ಎರಡು ಬಂದೂಕಗಳನ್ನೂ, ಮದ್ದು ಗುಂಡುಗಳನ್ನೂ ಲೈಸೆನ್ಸು ಇಲ್ಲದೆ ಇಟ್ಟುಕೊಂಡಿದ್ದಳೆಂಬ ಅಪರಾಧಕ್ಕಾಗಿ ಈ. ಸೆಷನ್ ಜಡ್ಜಿಯವರ ವಿಚಾರಣೆಗೆ ಗುರಿಪಡಿಸಲ್ಪಟ್ಟಿರುತ್ತಾಳೆ.

ಆಪ್ಘೇನಿಯದ ಮೂಜಿ ಚಕ್ರವರ್ತಿಯು ಸ್ತ್ರೀ ವೇಷಧರಿಸಿ, ಕಾರಾಗೃಹದಿಂದ ಪಲಾಯನಮಾಗಿದ್ದಾನೆ. ಸರ್ಕಾರದ ಕೆಲವು ಸೈನಿಕರೂ ಆತನನ್ನು ಹುಡುಕುತ್ತಿರುವರೆಂದು ಸುದ್ದಿ. ಬೇಟೆ ನಾಯಿಗಳೂ, ಪೋಲೀಸರೂ ಊರು ಸುತ್ತ ಬೇಟೆಗಾರರಂತೆ ಭಿಸಿದ್ದಾರೆ. ಅದೇನು ಸಜೀವ ನಾಟಕವೇ!

ರೈಲ್ವೆಗಳಲ್ಲಿ ಲಕ್ಷ ಲಕ್ಷ ರೂ. ಉತ್ಪತ್ತಿ ಕಡಿಮೆಯಾದ ಕಾರಣ [illegible] ಕೊಡಲಿ ಎತ್ತಿದ ತನಕ ಪ್ರಯೋಗವಾಗಿರುವುದೆ[illegible] ಒಂದು [illegible] ಸೇಮನಕವಾಲ್ಲಿ ಸುಮಾರು ೮೦೦೦ ವರೆಗೆ ಕೆಲಸ [illegible]ನ್ನು [illegible] ತಿಳಿದು ಬರುತ್ತದೆ.

ಅಲ್ಲಹಾಬಾದಿನ ಒಂದು ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ 'ಮಿ. ಶಂಕರ್ ಗ್ರೀನ ಲೆಸ್' ಎಂಬ ಬಿಳಿಯ ಮನುಷ್ಯರು ಕಾಂಗ್ರೆಸಿಗೆ ಸಹಾಯ ಮಾಡುತ್ತಾರೆ ಎಂಬ ಆಪಾದನೆಯಿಂದ ಕೈದುಮಾಡಲ್ಪಟ್ಟಿದ್ದಾರೆ. ಕಾಂಗ್ರೆಸ್ ಕರಪತ್ರಗಳನ್ನು ಕೆಲವು ಸಮಯಗಳಿಂದ ಅವರು ಪ್ರಕಟಿಸುತ್ತಿದ್ದರಂತೆ.

ಬೊಂಬಾಯಿಯಿಂದ ಪೂನಾ ಪಟ್ಟಣಕ್ಕೆ ಹೋಗಿಬರುವೆನೆಂದು ಜೂನ್ ೮ ರಲ್ಲಿ ವಿಮಾನದಲ್ಲಿ ಹೊರಟ ಒಬ್ಬ ಶಾಶಿ[illegible] [illegible] ಎಲ್ಲಿಗೆ ಹೋದನೆಂಬುದೇ ಪತ್ತೆ ಇಲ್ಲ. ಈತನಿಗೆ ಬಹಳ ದೂರ ಹೋಗಬೇಕೆಂಬ ಆಶೆಯಿತ್ತಂತೆ. ಬಹುಶಃ ಯಾರಿಗೂ ತಿಳಿಸದೆ ತನ್ನ ಆಸೆಯನ್ನು ನೆರವೇರಿಸುತ್ತಿರುವನೋ ಎಂದು ಊಹಿಸುತ್ತಿದ್ದಾರೆ.

ಮದ್ರಾಸಿನ ಪರಿಸ್ಥಿತಿಯು ಅಸಮಾಧಾನಕರವಾಗಿದೆ ಮತ್ತು ಅಪಾಯಕರವೆಂದು ತೋರುತ್ತದೆ; ಆದುದರಿಂದ ಇನ್ನು ಒಂದು ವರ್ಷದ ವರೆಗೆ ಅಲ್ಲಿಯ ಮುನ್ಸಿಪಾಲಿಟಿಯ ಗಡಿಯೊಳಗೆ ಜನರ ಖರ್ಚಿನಿಂದಲೇ ಪೋಲೀಸರ ಸಂಖ್ಯೆಯನ್ನು ಕೆಲವು ಮಟ್ಟಿಗೆ ಹೆಚ್ಚಿಸಬೇಕೆಂದು ಬಂಗಾಳದ ಗವರ್ನರು ಅಭಿಪ್ರಾಯ ಪಟ್ಟಿದ್ದಾರಂತೆ.

ಮುಂಬಯಿಯ ಈಗಿನ ಪ್ರಮುಖ ಧುರೀಣರಾದ ಶ್ರೀಮಂತ ಉಮಾಶಂಕರ ದೀಕ್ಷಿತರ ಮನೆಯು ಪೋಲೀಸರಿಂದ ಜಪ್ತಿ ಮಾಡಲ್ಪಟ್ಟಿತು. ಅವರೂ, ಬೇರೆ ನಾಲ್ಕು ಮಂದಿಯೂ ಕೈದುಮಾಡಲ್ಪಟ್ಟರು. ಅವರು ರಿಮಾಂಡಿನಲ್ಲಿರುವಾಗ ಅವರನ್ನು ನೋಡುವುದಕ್ಕೆ ಹೋದ ಕಾಶೀ ಕಾಲೇಜಿನ [illegible] ಮುಗನೂ ಕೈದು ಮಾಡಲ್ಪಟ್ಟಿದ್ದಾರೆ.

ಗಲಭೆ—ಬೊಂಬಾಯಿಯಲ್ಲಿ ಗಲಭೆಯು ಇನ್ನೂ ನಿಂತಿಲ್ಲ. ಅಲ್ಲಲ್ಲಿ ತುಂಟರು ಜನರ ಮೇಲೆ ಬೀಳುತ್ತಿರುವರು. ಮರಣಗಳೂ, ಗಾಯಗಳೂ ಆಗುತ್ತಲೇ ಇವೆ. ಪೋಲೀಸರೂ, ಸಿಪಾಯಿಗಳೂ ಪಟ್ಟಣದಲ್ಲಿ ಗಸ್ತು ಹಾಕುತ್ತಿರುವರು. ವ್ಯಾಪಾರದ ಅಂಗಡಿಗಳು ತೆರೆಯಲ್ಪಟ್ಟಿವೆ. ಕಾಂಗ್ರೆಸ್ ವಾಲಂಟಿಯರುಗಳು ಪಿಕೆಟ್ ಮಾಡುತ್ತಿದ್ದಾರೆ.

ಬ್ರಿಟಿಷ್ ವಸ್ತು ಬಹಿಷ್ಕಾರವನ್ನು ನಿಲ್ಲಿಸಲು ಉಪಾಯಗಳಾವವೋ ಅದನ್ನು ಆಲೋಚಿಸಲು ಕೆಲವು ಹಿಂದೀಯರೂ ಇಂಗ್ಲೀಷರೂ ಕೂಡಿ ಒಂದು ಪರಿಷತ್ತನ್ನು ನೆರಗಿಸುವರಂತೆ. ಮುಖ್ಯವೆಂದರೆ—ಹಿಂದೀ ಸಾಹುಕಾರರು ಕಾಂಗ್ರೆಸ್ಸಿಗೆ ಸಹಾನುಭೂತಿ ತೋರುವುದಿದ್ದರೆ ಅದನ್ನು ತಡೆಯಬೇಕು ಎಂಬುದು ಈ ಪರಿಷತ್ತಿಗೆ ಮೂಲದಲ್ಲೇ ಬಹಿಷ್ಕಾರವಿದ್ದೀತೇ?

ಗಾಂಧಿಯ ಶಿಷ್ಯರಾದ ಫಾದರ್ ಎಲ್ವಿನ್ನರು ಲಂಡನಿಗೆ ಹೋಗಿ ಹಿಂದೂಸ್ಥಾನದ ನಿಜಸ್ಥಿತಿಯನ್ನು ಸ್ವಲ್ಪ ಮಟ್ಟಿಗೆ ಅಲ್ಲಿಯೂ ತಿಳಿಸಿ ಹಿಂದೂಸ್ಥಾನಕ್ಕೆ ಹಿಂತಿರುಗಬೇಕೆಂದು ಯೋಚಿಸಿದ್ದರಂತೆ ಆದರೆ ಅವರಿಗೆ ಲಂಡನಿನಿಂದ ಹಿಂತಿರುಗಿ ಬರುವುದಕ್ಕೆ ಪಾಸುಪೋರ್ಟಿನಲ್ಲಿ ಅವಧಿ ಇಲ್ಲದಿರುವುದರಿಂದ ಅವರು ಲಂಡನಿಗೆ ಹೋಗುವ ಯೋಚನೆಯನ್ನೇ ನಿಲ್ಲಿಸಿದ್ದಾರೆ.

ಕಾಶಿನಾಥಸಿಂಗ್ ಎಂಬ ಒಬ್ಬ ಬ್ರಾಹ್ಮಣ ಯುವಕನು ತಾನು ತೋಡಾ ದೇಶದ ಮಹಾರಾಜ ಕುಮಾರನೆಂದು ಹೇಳಿಕೊಳ್ಳುತ್ತ ಮಂಡಾ ದೇಶದ ರಾಜನ ಮನೆಯಲ್ಲಿ ಅತಿಥಿಯಾಗಿ ನಿಂತನು. ನಿಜಾಂಶವು ತಿಳಿದು ಈತನನ್ನು ಪೋಲೀಸರ ವಶಕ್ಕೆ ಕೊಟ್ಟರು. ಮೇಜಿಸ್ಟ್ರೇಟರು ಈತನಿಗೆ 200 ರೂಪಾಯಿ ಜುಲ್ಮಾನೆ, ತಪ್ಪಿದರೆ ಒಂದು ವರ್ಷದ ಕಠಿಣ ಸಜಾ ವಿಧಿಸಿದ್ದಾರೆ.

ಫತೆಪೂರಿನ ಡಿಸ್ಟ್ರಿಕ್ಟ್ ಜೈಲಿನಲ್ಲಿರುವ ಕೈದಿಗಳ ಪೈಕಿ ಕೆಲವರು ತಾ. [illegible]ರಲ್ಲಿ ದಂಗೆ ಎದ್ದು ಕಾವಲುಗಾರರ ಮೇಲೆ ಬಿದ್ದು ಗಲಭೆ ಮಾಡಿದರು. ಅವರನ್ನು ಅಡಗಿಸಲು ಸಿಪಾಯಿಗಳು ಗುಂಡು ಹಾರಿಸಬೇಕಾದ ಸಮಯವು ಒದಗಿತು. ಗುಂಡಿನ ಏಟು ಒಬ್ಬ ಕೈದಿಗೆ ಬಡೆದು ಸತ್ತು ಹೋದನು; ಅನೇಕರಿಗೆ ಗಾಯಗಳಾದುವು. ಕೈದಿಗಳು ಈ ರೀತಿ ದಂಗೆ ಎದ್ದುದಕ್ಕೆ ಕಾರಣವೇನೆಂಬುವುದು ಇನ್ನೂ ನಿರ್ಧರಪಟ್ಟಿಲ್ಲ.

ಜಿ. ನ್ಯಾಥನಿಯಲ್ ಎಂಬ ೫೦ ವರ್ಷದ ಕ್ರಿಶ್ಚಿಯನ್ ಮನುಷ್ಯನು ಪಠಾಣನಂತೆ ವೇಷಹಾಕಿಕೊಂಡು ತಾನು ಲಕ್ನೋ ಪಟ್ಟಣದಲ್ಲಿರುವ ಒಬ್ಬ ವರ್ತಕನೆಂದು ಹೇಳಿ ಮಿಸ್. ಎಚ್. ಎಸ್. ಸೆನ್ ಎಂಬ ಕ್ರಿಶ್ಚಿಯನ್ ನರ್ಸ್ ಮನೆಯಲ್ಲಿ ರಾತ್ರಿ ಇದ್ದನು. ಆತನಲ್ಲಿ ಪಿಸ್ತೂಲಿತ್ತು. ಇದನ್ನು ತಿಳಿದು ಗಾಬರಿಪಟ್ಟು ಆಕೆಯು ಪೋಲೀಸಿಗೆ ತಿಳಿಸಿದಳು. ಪೋಲೀಸರು ಆತನನ್ನು ಸೆರೆಹಿಡಿದು ವಿಚಾರಣೆಗೆ ಗುರಿಪಡಿಸಿದ್ದಾರೆ.

ದಕ್ಷಿಣ ದೇಶಕ್ಕೆ ಸೇರಿದ ಹೈದರಾಬಾದ್ ನಗರದ ಹಿಂದೂ ದೇವಾಲಯದಲ್ಲಿರುವ ಕೆಲವು ವಿಗ್ರಹಗಳನ್ನು ಯಾರೋ ಒಡೆದು ಹಾಕಿಬಿಟ್ಟಿದ್ದರು. ಇದರಿಂದ ಹಿಂದುಗಳಿಗೆ ಬಹಳ ಕ್ಲೇಶವೂ ಕೋಪ ತಾಪಗಳೂ ಉಂಟಾದವು. ಈ ವಿಷಯವನ್ನು ಸರ್ಕಾರದವರಲ್ಲಿ ಅರಿಕೆ ಮಾಡಿಕೊಂಡದ್ದರ ಮೇಲೆ ಅವರು ವಿಗ್ರಹಗಳನ್ನು ರಿಪೇರಿ ಮಾಡಿಸಿಕೊಡುವುದಾಗಿ ಒಪ್ಪಿಕೆ[illegible] ಇದ[illegible] ಹಿಂದೂಗಳಿಗೆ ತೃಪ್ತಿ: ಸಮಾಧಾನಗಳುಂಟಾದವು. ಪೋಲೀಸರು ವಿಗ್ರಹ ಭೇದಕರನ್ನು ಪತ್ತೆ ಮಾಡುವ ತಂದಾಬಸ್ತಿನಲ್ಲಿರುತ್ತಾರೆ.

ಪೋಲೀಸ್ ಇಲಾಖೆಯಲ್ಲಿ ಬುದ್ಧಿ ಕುಶಲತೆಯಿಂದ ನಮ್ರಕವಾಗಿ ಕೆಲಸಮಾಡಿ ಸಮರ್ಥರೆನಿಸಿರುವಂಥಾ ಪೋಲೀಸ್ ಅಧಿಕಾರಿಗಳಿಗೆ ಮೆಡಲುಗಳನ್ನು ದಯಪಾಲಿಸುವುದಾಗಿ ಬ್ರಿಟಿಷ್ ಚಕ್ರವರ್ತಿ ಸಾರ್ವಭೌಮರವರು ಉದ್ದೇಶಪಟ್ಟು ಅವಶ್ಯವಾದ ಏರ್ಪಾಡು ಮಾಡುವವರಾಗಿರುತ್ತಾರೆ ಮೆಡಲುಗಳ ಸಂಖ್ಯೆಯು ಒಂದು ವರ್ಷದಲ್ಲಿ 200ಕ್ಕಿಂತಲೂ ಹೆಚ್ಚಾಗಿರಕೂಡದೆಂದು ನಿಯಮಿಸಿವೆ. ಹಿಂದೂಸ್ಥಾನದ ಸಂಸ್ಥಾನಗಳ ಪೋಲೀಸ್ ಅಧಿಕಾರಿಗಳಿಗೂ ಸಹ ಮೇಹನತ್ತಿನಿಂದ ಕೆಲಸ ಮಾಡಿ ಮೆಡಲು [illegible] ಪಡೆಯಲು ಅವಕಾಶ ಉಂಟೆಂಬದಾಗಿ ತಿಳಿದುಬಂದಿದೆ.

[illegible] ಕಾರಾಗೃಹದಲ್ಲಿ ಬಂದಿಗಳಾಗಿರುವ ಮಹಾತ್ಮರ ದರ್ಶನ ಮಾಡಲಿಚ್ಛಿಸುವವರಿಗೆ ವಾರಕ್ಕೊಮ್ಮೆ ಅವಕಾಶ ಕೊಡಲ್ಪಟ್ಟಿರುವುದಷ್ಟೆ. ಮಹಾತ್ಮರ ಪರಮ ಶಿಷ್ಯೆಯಾದ ಮೀರಾಬೆನ್‌ರವರಿಗೆ ಮಹಾತ್ಮರ ದರ್ಶನಕ್ಕೆ ಅವಕಾಶ ಕೊಡಲಿಲ್ಲವಾದುದರಿಂದ ತಮ್ಮನ್ನು ನೋಡಲು ಕಲ್ಪಿಸಿರುವ ಅವಕಾಶವನ್ನು ತಪ್ಪಿಸಬೇಕೆಂದು ಪ್ರಭುತ್ವದವರಿಗೆ ಲೇಖನವನ್ನು ಬರೆದಿರುವರಂತಲೂ, ತಮ್ಮ ಸತ್ಯಾಗ್ರಹಾಶ್ರಮದ ಚರಿತ್ರೆಯನ್ನು ಬರೆಯುತ್ತಿರುವರೆಂತಲೂ, ಕೂಡಲೇ ತಮ್ಮ ಬಾಧವಿಮೋಚನವಾಗುವುದೆಂಬ ಭವಿಷ್ಯವು ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟವಾಗಿರುವುದನ್ನು ಬಹು ನಕ್ಕರೆಂತಲೂ ತಿಳಿಯ ಬರುತ್ತದೆ. ಈ ವಿಚಾರದಲ್ಲಿ ಅವರು ಬಹಳ ತಾತ್ಸಾರವಾಗಿರುತ್ತಾರಂತೆ.

ವಿ ದೇ ಶ.

ಮೆಕ್ಸಿಕೋ ದೇಶದಲ್ಲಿ ಪ್ರಚಂಡವಾದ ಭೂಕಂಪವುಂಟಾಗಿ ಭೀಮ[illegible] ೩೦೦ ಜನರು ಮೃತಪಟ್ಟಿದ್ದಾರೆ. [illegible] ಮಂದಿಗೆ ಗಾಯಗಳಾಗಿವೆ ಸಮುದ್ರತೀರದ ಊರುಗಳಿಗೆ ಸಮುದ್ರ[illegible] ನುಗ್ಗಿದೆ ಸತ್ತಮೀನುಗಳು ದಡದಲ್ಲಿ ರಾಶಿ ಬಿದ್ದಿವೆ.

ಸ್ಪೈನ್ ದೇಶದ 'ಟೈಡ' ಎಂಬ ಸ್ಟೀಮರು ಒಂದು ದ್ವೀಪದಲ್ಲಿ ಒಡೆಯಿತು. ೮೦೦೦ ಮಂದಿ ಪ್ರಯಾಣಿಕರು ದೋಣಿಗಳಿಗಿಳಿದು ಪಾರಾದರು. ಈ ಸಂವತ್ಸರದಲ್ಲಿ ಸುದ್ದಿ ಕೊಟ್ಟ ಸ್ಟೀಮರು ಹ್ಯಾವೂ ಸುಖವಿಲ್ಲ. ಎರಡು ತಿಂಗಳುಗಳಲ್ಲಿ ಮೂರು ಸ್ಟೀಮರುಗಳು ಹಠಯೋಗದಿಂದ ಸಮುದ್ರದ ಒಳಗಿಳಿದವು

ಸೀನಿಯರ್ ಮುಸ್ಸೋಲಿನಿ ಎಂಬ ಇಟಲಿದೇಶದ ಡಿಕ್ಟೇಟರ್ ಎಂಬ ಮುಖ್ಯ ಮಂತ್ರಿಯನ್ನು ಕೊಲ್ಲಬೇಕೆಂದು ಅನೇಕ ವೇಳೆ ಪ್ರಯತ್ನಗಳು ನಡೆದು ನಿಷ್ಫಲವಾಗಿವೆ. ಈ ಸಾರಿ ಪಾಲಾಜಿ ವೆನಿಜಿಯೂ ಎಂಬಾತನು ಈ ಕಾರ್ಯಕ್ಕೆ ಕೈಹಾಕುವನೆಂದು ತಿಳಿದು ಆತನು ಸೆರೆಹಿಡಿಯಲ್ಪಟ್ಟಿದ್ದಾನೆ. ಈತನು ತನ್ನ ತಪ್ಪನ್ನು ಒಪ್ಪಿಕೊಂಡಿದ್ದಾನೆ.

ಪ್ರತಿಯೊಂದು ದೇಶದಲ್ಲೂ ಇರುವಂತೆಯೇ ತುರ್ಕಿಸ್ಥಾನದಲ್ಲೂ ಹಲವು ಪರದೇಶೀಯರು ಸೇರಿ ಜೀವನಕ್ಕಾಗಿ ನಾನಾ ಕಸಬುಗಳನ್ನು ಹಿಡಿದಿರುವುದುಂಟಷ್ಟೆ. ಆದರೆ, ಇನ್ನು ಮುಂದೆ ತುರ್ಕಿಸ್ಥಾನದಲ್ಲಿ ತುರ್ಕಿಗಳಲ್ಲದೆ ಇನ್ನಾರೂ ಇರಕೂಡದೆಂದೂ ಅಪ್ಪಣೆಯಾಗಿದೆ. ಅಗಸರು, ನಾಯಿಂದರು, ಸಂಗೀತಗಾರರು, ನರ್ತಕಿಯರು ಎಲ್ಲಾ ಕಸುಬಿನವರೂ ತುರ್ಕಿಯರೇ ಆಗಬೇಕೆಂದು ಸರ್ಕಾರದ ಉದ್ದೇಶ. ಸಾವಿರಾರು ಪರದೇಶೀಯರು ಆಗಲೇ ತುರ್ಕಿದೇಶವನ್ನು ಬಿಟ್ಟು ಹೋಗುತ್ತಿರುವರು.

ಸುಳ್ಳಿನ ಪರಾಕ್ರಮಿ—ಪರಾಕ್ರಮಿಯ ಸುಳ್ಳು.

ಡೈಲಿ ಎಕ್ಸ್‌ಪ್ರೆಸ್ (ಲಂಡನ್) ಪತ್ರಿಕೆಗೂ ಒಬ್ಬ ವಾರ್ತಾಕಾರನು ಮುಂಬಯಿಂದ ಲಂಡನಿಗೆ ಒಂದಿದ್ದು ವಾರ್ತೆ ಬರೆಯುವವನು. ಕಳೆದ ಮೇ ೧೫ರಲ್ಲಿ ಇವನು ಬೊಂಬಾಯಿಯಲ್ಲಾದ ಗಲಭೆಯ ವೃತ್ತಾಂತವನ್ನು ಬರೆದಿರುವನು. ಇದಕ್ಕೆ ಸಮಾನವಾದ ಕಥೆಯು ಯಾವ ನೋವೆಲಿನಲ್ಲಿಯೂ ಸಿಗುವುದು ಅಪೂರ್ವ. ಸುಳ್ಳಿಗೆ ಮಿತಿ ಇರಬೇಕೆಂದು, ಸುಳ್ಳು ಸುತಿಯಬಹುದಾಗಿರುವ ಸಂದರ್ಭಗಳನ್ನು ಸೂಚಿಸಿದ ಹಿಂದಣ ತಜ್ಞರು ನಿಘಂಟು ಮಾಡಿರುವರು. ಅದರ ನಿಘಂಟಿಗೂ ನಿಲುಕಲಾರದ ಘಟನೆಗಳು ಇವರ ವಾರ್ತೆಯಲ್ಲಿವೆ. ಅವನ್ನು ತಿಳಿಸುವುದೂ ಒಂದು ಶಾಪವಾಗಬಹುದು. ಮಾಡಿದವನ ಪಾಪ ಆಡಿದವನ ಮೇಲೆ ಎಂದಿರುವಾಗ ಬರೆದವನ ಪಾಪವು ಓದುವವನಿಗೂ ತಪ್ಪದಿರದು. ಸತ್ಯಸ್ಥಿತಿ ಬರೆಯುವುದೇ ಪತ್ರಿಕೆಗಳ ನಿಜಧರ್ಮ ಎಂದು ಮೈಸೂರು ದಿವಾನರು ಪತ್ರಿಕಾ ಕರ್ತರಿಗೆ ಬೋಧಿಸಿದರು. ಸತ್ಯ ಸ್ಥಿತಿಯಲ್ಲೂ ಆಕ್ಷೇಪವನ್ನು ಕಾಣುವ ಸೆನ್ಸರರಿರುವರು. ಪರಂತು, ಸುಳ್ಳನ್ನು ಹರಡಿಸುವ ವಾರ್ತೆಗಳಿಗೆ ಸೆನ್ಸರೇ ಇಲ್ಲ'; ಯಾವ ಶಾಸನದ ದಂಡನೆಯೂ ಇಲ್ಲವೇಕೆಂದು ಕೇಳಿದರೆ ಉತ್ತರವೂ ಇಲ್ಲ. ಮೂಲವೀಯತ, ಘಮೆನರ ,ಎಲ್ವಿನರ ವಾರ್ತೆಗಳು ಇಂಗ್ಲೆಂಡಿಗೆ ತಲಪದಂತೆ ತಂತಿ ಆಫೀಸುಗಳು ಮಡಿಯೂದುವು. ಈ ಪುರ.ಸೋತ್ಸವನ್ನು ಆದರಿಸಿ ಕೃತಾರ್ಥವಾದುವು. ಹಿಂದೂ—ಮುಸ್ಲಿಮ್ ಇತಿಹಾಸಗಳಲ್ಲಿ ಇಂಥಾ ಸುಳ್ಳು ಕೇಳಿದವನು ಸಿಗುವುದಿಲ್ಲ, ಬೈಬಲಿನಲ್ಲೂ ಸಿಗುವದೇನು ಎಂದರೆ ಇಲ್ಲ. ಇವನಿಗಾಗಿ ಹೊಸದೊಂದು ಹಳೇ ಇತಿಹಾಸವನ್ನು ಶೋಧಿಸಬೇಕಾಗಿದೆ.

ಅವನ ಪಾರೀಷು ನೋಡಬಾರದೇ?

'ಭೀಕರ ರಾತ್ರಿ! ಕಾಂಗ್ರೆಸ್ಸಿನ ಪೀಕಟಿಂಗದಿಂದ ಪೋಲೀಸರು ಅತ್ತ ಸರಿದಿದ್ದರು. ಜನಗಳ ಹಿಂದೂಗಳು (!) ಮಾಡಾಲಡಲ್ಲಿನ ಉಪ್ಪಿನ ಕೋಠಿಯ ಮೇಲೆ ಧಾಳಿ ನಡಿಸಲು ಅನುಕೂಲರಾಗಿ ವರ್ತಿಸಿದರು; ಮಾತ್ರವೆ—ಕೊಲೆಯ ತಾಂಡವನ್ನೇ ಪ್ರಾರಂಭಿಸಿದರು, ಮಾರಿ ಪೂಜೆಯಾಯಿತು. ....ನಾಸು ಕಂಡ ಒಡನೆ ಹಿಂದುಗಳನ್ನು ಕೊಲ್ಲುತ್ತಿದ್ದ ಮುಸ್ಲಿಮನ ಕೈಯಿಂದ ೨೦ ಹಿಂದೂ ಸ್ತ್ರೀಯರನ್ನು ಕಾಪಾಡಿದೆನು! ...ಹೆಂಗಸರು ಮಕ್ಕಳು ತುಂಬಿದ ಕಟ್ಟಡಗಳಿಗೆ ಬೆಂಕಿ ಹಚ್ಚಿದರು; ಕೆಳಗೆ ಹಾರಿ ಮುಸ್ಲಿಮರ ಕೈಗೆ ಬೀಳುವ ಬದಲಾಗಿ ಉರಿದು ಸಾಯುವುದುತ್ತಮವೆಂದು ಅವರು ಭಸ್ಮವಾದರು. ....ಒಂದು ಇಡೀ ರಸ್ತೆಯಲ್ಲೆಲ್ಲ ಬೆಂಕಿ ಹತ್ತಿಕೊಂಡು ಉರಿಯುತ್ತಿತ್ತು! ....ಮೋಟಾರು ಗಾಡಿಗಳು ಹೆಣಗಳನ್ನೂ, ಗಾಯಗೊಂಡವರನ್ನೂ ಹೊತ್ತುಕೊಂಡು ಓಡಾಡುತ್ತಿದ್ದವು....'ಇತ್ಯಾದಿ. ಇವ ಹುಕೆಸಿಟ್ಟ ಅಂಕೆ ಸಂಖ್ಯೆಗಳು ಸರ್ಕಾರದ ಪತ್ರಕದಲ್ಲಾಗಲೀ, ಡೈಲಿ ಪತ್ರಿಕೆಯಲ್ಲಾಗಲಿ ಇಲ್ಲ. ಪೇಪರಿನಲ್ಲಿ ಕಾಯಿ ಮಾಗಿಯುವ ಪರಿಗೆ ಈ ಅಂಕೆಗಳನ್ನು ಬರೆದಿರುವನು. ಮುಂಬಾಯಿಯಲ್ಲಿ ಜನಗಳೇ ಇಲ್ಲದ ಆ ಜಾಗುವಾರುಗಳೇ ತುಂಬಿವೆ ಎಂದು ಇವನ ಲೇಖನದಿಂದ ಇಂಗ್ಲಿಷ್ ವಾಚಕರು ಲಂಡನಿನಲ್ಲಿ ಅಭಿಪ್ರಾಯಪಟ್ಟಿರಬಹುದು; ಪುಣ್ಯವಂತನೆ—ಚಿರಂಜೀವಿಯಾಗಿರು! ಆಗ ಜೀವನದ ಕೊನೆಗೆ ಒಂದು ನಿಮಿಷ ಇಂಥಾ ಕಾರೀಷು ಬರೆದುದಕ್ಕೆ ಪಶ್ಚಾತ್ತಾಪ ಪಡಲು ಅವಕಾಶ ಸಿಗಬಹುದು.

'ಕಂಟೀರವ'

ಮಹಾರಾಜರೊಬ್ಬರ ಮೇಲೆ ಹಗೆಸಾಧನೆ.

ಮಾಂಚೆಸ್ಟರಿನ ಡ್ಯೂಕರವರು 'ನನ್ನ ಯಥಾರ್ಥ ನೆನವುಗಳು (My Candid Recollections) ಎಂಬ ಪುಸ್ತಕ ಒಂದನ್ನು ಪ್ರಕಟಿಸಿರುವರು. ಅದರಲ್ಲಿ ಪಾಟಿಯಾಲಾ ಮಹಾರಾಜರಿಗೆ ಸಂಬಂಧಿಸಿದ ಆಶ್ಚರ್ಯಕರವಾದ ಕಥೆಯೊಂದಿದೆ. ಅದು ಅವರ ಮೇಲಿನ ದ್ವೇಷ ಸಾಧನೆಗಾಗಿ ನಡೆಯುತ್ತಿರುವ ಮಸಲತ್ತು.

ಇಪ್ಪತ್ತು ವರ್ಷಗಳ ಹಿಂದಿನ ವಿಚಾರವದು. ಒಬ್ಬ ಮಹಾರಾಜರು ತಾವು ಜರ್ಮನಿಯವರಿಂದ ಲಂಚ ತೆಗೆದುಕೊಳ್ಳುತ್ತಿದ್ದರೆಂದು ಅಧಿಕಾರಿಗಳಿಗೆ ತಿಳಿಸಿದವರು ಪಾಟಿಯಾಲಾ ಮಹಾರಾಜರು ಎಂಬುವುದಾಗಿ ಅನುಮಾನ ಹುಟ್ಟಲು ಹೇಗಾದರೂ ಮಾಡಿ ಆ ಸೇಡು ತೀರಿಸಿಕೊಳ್ಳಬೇಕೆಂದು ಶಪಥ ಮಾಡಿದ್ದಾರಂತೆ.

ಈ ಸೇಡಿನ ಶಪಥ ಇನ್ನೂ ಪೂರ್ಣವಾಗಿಲ್ಲವಂತೆ. ಅದನ್ನು ತೀರಿಸುವೆವೆಂದು ಪ್ರಮಾಣ ಮಾಡಿರುವವರು ಆ ಮಹಾರಾಜರ ಸಿಕ್ ಅನುಯಾಯಿಗಳು.

ಪಾಟಿಯಾಲಾ ಮಹಾರಾಜರವರು ಚಕ್ರಗೋಷ್ಠಿಗೆ ಹೋಗಿದ್ದರಲ್ಲ. ಆಗ ಆ ಮಹಾರಾಜರ ಕಡೆಯವರಿಗೆ 'ಈಗೇನಾದರೂ ಆ ಶತ್ರುಗಳು ಹಗೆ ತೀರಿಸಿಕೊಳ್ಳುವಸಂದರ್ಭವೇನಾದರೂ ಒದಗಿ ಬಿಟ್ಟೀತೋ ಏನೋ' ಎಂಬದಾಗಿ ದಿಗಿಲು ಹುಟ್ಟಿತ್ತು.

ಆ ದಿಗಿಲೇನೆಂದರೆ ಮಹಾರಾಜರ ಅಂಗಹೀನ ಮಾಡುವುದು. ಮಹಾರಾಜರ ಜಾತಿಯ ಪ್ರಕಾರ ಅಂಗಹೀನನು ಸ್ವರ್ಗದಿಂದ ಬಹಿಷ್ಕೃತನಂತೆ.

ಪಾಟಿಯಾಲಾ ಮಹಾರಾಜರ ಸೆಲ್ಯೂನು ಡೋವರಿಗೆ ಹೋಗುತ್ತಲೇ ಎರಡು ಭಾಗಗಳಾಗಿ ಮುಂದಿನ ಪ್ರಯಾಣ ಮಾಡಿದರಂತೆ. ಒಂದು ಪಂಗಡವು ರೈಲಿನಲ್ಲಿಯೂ ಮಹಾರಾಜರಿದ್ದ ಮತ್ತೊಂದು ಮೋಟಾರಿನಲ್ಲಿಯೂ ಲಂಡನನ್ನು ತಲಪಿದವು.

ಕೇಳಿದವರಿಗೆಲ್ಲಾ ಹೋಟೇಲಿನವರು 'ಇನ್ನೂ ಪಾಟಿಯಾಲ ಮಹಾರಾಜರು ಬಂದಿಲ್ಲ'ವೆಂದು ಹೇಳುತ್ತಿದ್ದರಂತೆ. ಆದರೆ ಅವರು ಮಾತ್ರ ಮಹಡಿಯ ಮೇಲಿನ ತಮ್ಮ ಕೊಠಡಿಯಲ್ಲಿ ಸುರಕ್ಷಿತವಾಗಿದ್ದರಂತೆ.

ಬಾಲಾರ್ಕಮಧು.

ಬಾಲಾರ್ಕಮಧುವ ಸ್ಸೇವನೆ ಕೊಡುವುದರಿಂದ ಶಕ್ತಿಯೂ ಆರೋಗ್ಯವೂ ಹೆಚ್ಚುವುದು. ಇದು ಮಧುರವಾಗಿದೆ. ಬೆಲೆ ಸೀಸೆ 1ಕ್ಕೆ 0–12–0 ಟ. ಖ. 0–12–0.

(Spleen Lever enlargement) ಎಂಬ ಮಕ್ಕಳ ಭಯಂಕರ ಗಡ್ಡೆರೋಗ—ಪ್ಲೀಹ—ಪಿತ್ತಕೋಶದ ಗಡ್ಡೆಗೆ ಚಕ್ರಬಿಂದು ಚಕ್ರಕ್ಷಾರ—ಚಕ್ರಚೂರ್ಣ—ಚಕ್ರಪ್ರಭಾ—ಈ ನಾಲ್ಕು ಮಹೌಷಧಗಳಿವೆ. ಸಾವಿರಾರು ಮಕ್ಕಳ ಪ್ರಾಣವನ್ನು ಉಳಿಸಿದೆ. ನಾಲ್ಕು ಔಷಧಗಳು ಸೇರಿ 1 ತಿಂಗಳ ಔಷಧದ ಬೆಲೆ 3–0–0. ಟ. ಖ. 0–8–0. ಏಜೆಂಟರು ಬೇಕಾಗಿರುವರು.

ಪ. ಎ. ಮುನ್. ಶ್ರೀನಿವಾಸರಾವ್,
ವೈ. ವಿ. ಆಯುರ್ವೇದಭಿಷಕ್,

ಬ್ರಾಂಚ್ ಆಫೀಸ್, ಉಡ್ಪಿ. S. K. | Spleen & Lever ಸ್ಪೆಶಲಿಸ್ಟ್, ಯಂ. ವಿ. ಪ್ರಸಾದಿಕ ಔಷಧಾಲಯ, ಶಿಮೊಗಾ. (ಮೈಸೂರು ಸೀಮೆ)

52–22

Empire of India Life Assurance Company, Ltd.

Established 1897.

The New "FAMILY SECURITY" Policy issued by this Company provides

A In the event of death during an agreed period,

1. The immediate payment to the Widow, Son or legal representative of a part of the sum Assured together with the Bonus accrued

2. The payment of a guaranteed Yearly Income, payable by monthly instalments, during the balance of the period.

3. The payment of the balance of the sum of assured at the end of the period

OR

B In the event of death after the period has expired the payment of the sum assured together with any Bonus that has accrued.

Descriptive Pamphlet on application to—

Head Office:— EMPIRE OF INDIA LIFE BUILDING Bombay.

Branch Office:— 152, COMMERCIAL STREET, Bangalore.

52—39

ದಿವಂಗತ ರಾವ್ ಬಹದೂರ್ ಕೋದಾಂಡ ಅಪ್ಪಯ್ಯನವರು.

ರಾವ್ ಬಹದ್ದೂರ್ ಕೋದಂಡ ಅಪ್ಪಯ್ಯನವರು ಸುಮಾರು 3 ತಿಂಗಳುಗಳಿಂದ ಖಾಯಿಲೆಯಲ್ಲಿದ್ದು ಚಿಕಿತ್ಸೆಗಾಗಿ ಮೈಸೂರಿಗೆ ಹೋಗಿದ್ದವರು ತಾ. 16–6–32ರಲ್ಲಿ ಸ್ವರ್ಗಸ್ಥರಾಗಿ ಮೃತರಾದರೆಂತ ತಿಳಿಸಲು ತುಂಬಾ ವ್ಯಸನಪಡುತ್ತೇವೆ. ಇವರ ಜೀವಾತ್ಮಕ್ಕೆ ಶಾಂತಿ ಇರಲಿ.

ಇವರಿಗೆ ಈಗ 73ನೇ ವರ್ಷ ಪ್ರಾಯವಿತ್ತೆಂತ ತಿಳಿಯುತ್ತೇವೆ. ಇವರು ಕೊಡಗಿನ ಸರ್ಕಾರದಲ್ಲಿ ಕೆಳಗಿನ ದರ್ಜೆಗಳಿಂದಲೇ ಅಧಿಕಾರ ಮಾಡುತ್ತಾ ಬಂದು ಅಸಿಸ್ಟೆಂಟ್ ಕಮಿಷನರಾಗಿದ್ದು 1916ರಲ್ಲಿ ಪೆನ್ಶನ್ ಪಡೆದರು. ಇವರು ಕೆಲಸದಲ್ಲಿರುವಾಗಲೇ ಇವರಿಗೆ ಸರ್ಕಾರದವರು ರಾವ್ ಬಹದ್ದೂರ್ ಎಂಬ ಹೆಸರನ್ನು ಕೊಟ್ಟು ಗೌರವಿಸಿದರು ಅಧಿಕಾರದಿಂದ ಬಿಡುಗಡೆಯಾದನಂತರ ಸಾರ್ವಜನಿಕ ಕಾರ್ಯಗಳಲ್ಲಿ ಭಾಗ ತೆಗೆದುಕೊಳ್ಳುತ್ತಿದ್ದರು. 1924ರಿಂದ 1927ರ ವರೆಗೆ ಜಮಾ ಸ್ವಾರರ ಸಂಘದ ಮತ್ತು 'ಕೊಡಗು' ಕಂಪೆನಿಯ ಅಧ್ಯಕ್ಷರಾಗಿದ್ದರು. ಇತ್ತೀಚೆಗೆ ರಾಜಕೀಯ ಚಳವಳವನ್ನು ಸಂಪೂರ್ಣವಾಗಿ ಬಿಟ್ಟರೂ ಸಹ 1927ರಿಂದ ಈ ವರೆಗೂ ಸೆಂಟ್ರಲ್ ಬ್ಯಾಂಕಿನ ಅಧ್ಯಕ್ಷರಾಗಿದ್ದರು. ವಿಶ್ರಾಂತಿ ತೆಗೆದುಕೊಳ್ಳಬೇಕಾದ ಇವರ ವೃದ್ಧಾಪ್ಯದ ಕಾಲದಲ್ಲಿ ಈ ರೀತಿ ಸಾರ್ವಜನಿಕ ಕಾರ್ಯಗಳಲ್ಲಿ ಪ್ರಮುಖ ಭಾಗ ತೆಗೆದುಕೊಂಡದ್ದು ಸ್ತುತ್ಯಾರ್ಹವಾಗಿದೆ.

Mercara, the 31st May 1932.

NOTICE.

It is hereby notified for general information that the following old survey appliances etc., will be *sold in public auction* by the Head Clerk Coorg Land Records Office, at 2 P. M on the 24th June 1932, in the Fort Premises.

The articles will be knocked down to the highest bidder unless the selling officer decides otherwise for the reasons to be recorded by him. The purchaser or purchasers are required to pay on the spot the purchase money, failing which the articles will be resold at the risk of the defaulting purchaser, who shall *not* be entitled to any amount realised in excess of the original bid.

The appliances etc., may be inspected in the Land Records Office.

M. S. MANDANNA,
31–5–1932,
Deputy Director, L. R. & A.

1.	Plane tables with stands	65,
2.	Sight vanes	57,
3.	Cross staves	39,
4	Parallel rulers	55,
5.	Plotting compass	55,
6.	Drawing pens	75,
7.	Wooden scales	36,
8.	,, Bits	59,
9.	Magnetic compass	9,
10.	Bow pens	6,
11.	Surveying compass	2,
12.	Prismatic compass	2,
13.	Computation scales with boxes	10,
14.	Telescope	2,
15.	Conical shoes (Iron)	759,
16	Protractor wooden	4,
17.	Letter scales	1,
18	Brass badges	12,
19	Tent	1.

ಪ್ರಕಟಣೆ.

ಶನಿವಾರಸಂತೆ ಸಹಕಾರಿ ಸ್ಟೋರಿನಲ್ಲಿರುವ ಸಮಸ್ತ ಸಾಮಾನುಗಳೂ ಮತ್ತು ಕಟ್ಟಡ ಸಹ ಇದೇ ತಾ. 25ನೇ ಶನಿವಾರ ದಿನ ಹಗಲು 12 ಗಂಟೆಗೆ ಸ್ಟೋರು ಬಳಿ ಹರಾಜು ಮಾಡಲಾಗುವುದು ಎಂದು ಈ ಮೂಲಕ ತಿಳಿಯಪಡಿಸಲಾಗಿದೆ. ಖರೀದಿಸುವವರು ಅರ್ಧ ಮೊಬಲಗು ಡಿಪಾಜಿಟ್ಟು ಮಾಡಬೇಕಾಗುವದು. ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳುವದು.

ಪಿ. ಯಂ. ಪೊನ್ನಪ್ಪ.
ಕ್ಯಾಂಪ್ ಶನಿವಾರಸಂತೆ. (ಲಿಕ್ವಿಡೇಟರ್.)

ದಕ್ಷಿಣ ಆಫ್ರಿಕಾದಲ್ಲಿನ ಸತ್ಯಾಗ್ರಹ.

(ಮಹಾತ್ಮಗಾಂಧಿಯವರ ಲೇಖನಿಯಿಂದ)

ಪ್ರಪಂಚದ ಅತ್ಯಂತ ದೊಡ್ಡ ಖಂಡಗಳಲ್ಲಿ ಆಫ್ರಿಕಾಖಂಡವೂ ಒಂದು. ಈಗ ಇಂಡಿಯೆಯನ್ನು ದೇಶವೆನ್ನುವುದಿಲ್ಲ. ಒಂದು ಖಂಡವೆನ್ನುತ್ತಾರೆ. ಆದರೆ ಒಟ್ಟು ಭೂವಿಸ್ತಾರವನ್ನೇ ಪರಿಗಣಿಸುವುದಾದರೆ ಆಫ್ರಿಕಾದಲ್ಲಿ ನಾಲ್ಕೈದು ಇಂಡಿಯಾಗಳನ್ನು ಕತ್ತರಿಸಬಹುದು. ಆಫ್ರಿಕಾವೂ, ಇಂಡಿಯಾದಂತೆಯೇ ಒಂದು ಪರ್ಯಾಯದ್ವೀಪ. ಈ ರೀತಿಯಾಗಿ ದಕ್ಷಿಣ ಆಫ್ರಿಕಾ ಪ್ರದೇಶವನ್ನು ಬಹುಮಟ್ಟಿಗೆ ಸುತ್ತ ಸಮುದ್ರವಿದೆ. ಆಫ್ರಿಕಾ ಎಂದರೆ ಪ್ರಪಂಚದ ಅತ್ಯುಷ್ಣ ಪ್ರದೇಶ ಎಂಬುದಾಗಿ ಸಾಧಾರಣವಾಗಿ ಎಲ್ಲರೂ ಹೇಳುವರು. ಒಂದು ಪರಿಯಾಗಿ ಅದು ನಿಜ. ಭೂಮಧ್ಯ ರೇಖೆಯು ಮಧ್ಯ ಆಫ್ರಿಕಾದಲ್ಲಿ ಹಾಯುವುದು. ಇಂಡಿಯಾದಲ್ಲಿ ವಾಸಿಸುವ ಜನರಿಗೆ ಆ ರೇಖೆಯ ಅಕ್ಕಪಕ್ಕಗಳಲ್ಲಿರುವ ದೇಶಗಳಲ್ಲಿನ ಶಖೆಯು ಎಷ್ಟರ ಮಟ್ಟಿಗಿದೆಯೆಂಬುದು ಗೊತ್ತಾಗುವ ಹಾಗಿಲ್ಲ. ನಾವು ದಕ್ಷಿಣ ಇಂಡಿಯಾದ ತುತ್ತತುದಿಯಲ್ಲಿ ಕಾಣುವ ಶಖೆಯು ಭೂಮಧ್ಯ ರೇಖೆಯ ಬಳಿಯ ಶಖೆಯನ್ನು ನಮಗೆ ಸ್ವಲ್ಪ ಅನುಭವ ಮಾಡಿಕೊಡುವುದು. ಆದರೆ ದಕ್ಷಿಣ ಆಫ್ರಿಕಾದಲ್ಲಿ ಅಂತಹುದೇನೂ ಇಲ್ಲ. ಯಾಕೆಂದರೆ ಅದು ವಿಷುವದ್ರೇಖೆಯಿಂದ ಬಹುದೂರದಲ್ಲಿದೆ. ಅಲ್ಲಿನ ಅನೇಕ ಭಾಗಗಳಲ್ಲಿ ವಾಯುಗುಣವು ಆರೋಗ್ಯಕರವಾಗಿಯೂ, ಹಿತಕರವಾಗಿಯೂ ಇದೆ. ಯೂರೋಪಿಯನ್ನರು ಅಲ್ಲಿ ಸೌಖ್ಯವಾಗಿ ನೆಲೆಸಬಹುದು. ಆದರೆ ಇದೇ ಇಂಡಿಯಾದಲ್ಲಿ ಅವರು ನೆಲೆಸಲು ಸ್ವಲ್ಪ ಅಸಾಧ್ಯ. ಅಲ್ಲದೆ, ದಕ್ಷಿಣ ಆಫ್ರಿಕಾದಲ್ಲಿ ಟಿಬೆಟ್ ಅಥವಾ ಕಾಶ್ಮೀರಗಳಲ್ಲಿರುವಂತೆ ಬಹಳ ಎತ್ತರವಾಗಿರುವ ಪ್ರದೇಶಗಳೂ ಇವೆ. ಆದರೆ ಅವು ಟಿಬೆಟ್ಟಿನಲ್ಲಿರುವಂತೆ ಹತ್ತು ಹದಿನಾಲ್ಕು ಸಾವಿರ ಅಡಿ ಎತ್ತರವಾಗಿಲ್ಲ. ಆದಕಾರಣ ಅಲ್ಲಿನ ವಾಯುಗುಣವು ಉಷ್ಣ ಶೀತಗಳ ಸಮ್ಮಿಶ್ರವಾದ್ದು ಅನುಕೂಲವಾಗಿದೆ. ದಕ್ಷಿಣ ಆಫ್ರಿಕಾದಲ್ಲಿನ ಕೆಲವು ಸ್ಥಳಗಳಂತೂ ಕ್ಷಯವೇ ಮುಂತಾದ ರೋಗಪರಿಹಾರಕ ಸ್ಥಳಗಳೆಂದು ಹೆಸರುಗೊಂಡಿವೆ. ಜೊಹಾನ್ಸ್‌ಬರ್ಗ್ ಅಂತಹವುಗಳಲ್ಲೊಂದು. ಅದು ದಕ್ಷಿಣ ಆಫ್ರಿಕಾದ ಸುವರ್ಣನಗರ. ಈ ನಗರವು ಎಲ್ಲಿ ಎದ್ದಿದೆಯೋ ಆ ಭೂಭಾಗವು ಐವತ್ತು ವರ್ಷಗಳ ಹಿಂದೆ ಸಂಪೂರ್ಣವಾಗಿ ನಿರ್ಜನವಾದ ಹುಲ್ಲುಗಾವಲಾಗಿದ್ದಿತು. ಆದರೆ ಚಿನ್ನದ ಗಣಿಗಳು ಸಿಕ್ಕಿದ ಮೇಲೆ ಒಂದರ ಹಿಂದೆ ಒಂದಾಗಿ ಮನೆಗಳನ್ನು ಕಟ್ಟಲಾರಂಭಿಸಿದರು. ಇಂದು ಅಲ್ಲಿ ಯಕ್ಷಗಂಧರ್ವರದೋ ಎನ್ನುವಂತೆ ಚಿತ್ತಾಕರ್ಷಕವಾದ ಮಹಾ ಸೌಧಗಳನ್ನು ಕಾಣಬಹುದು. ಅಲ್ಲಿನ ಐಶ್ವರ್ಯವಂತರು ದಕ್ಷಿಣ ಆಫ್ರಿಕಾದ ಫಲವತ್ತಾದ ಪ್ರದೇಶಗಳಿಂದಲೂ, ಯೂರೋಪಿನಿಂದಲೂ, ಒಂದೊಂದು ಬಾರಿ ಒಂದೊಂದು ಗಿಡಕ್ಕೆ ಒಂದೊಂದು ಗಿನಿ (ಈಗಿನ ನಮ್ಮ ನಾಣ್ಯ ರೀತ್ಯಾ ಸುಮಾರು ಹದಿನಾರು ರೂಪಾಯಿಗಳು) ಯಂತೆ ಕೊಟ್ಟು ತರಿಸಿ ಅಲ್ಲಿ ನೆಡಿಸಿರುವರು. ಹಿಂದಿನ ಚರಿತ್ರೆಯನ್ನು ತಿಳಿಯದ ಪ್ರಯಾಣಿಕನು ಆ ಗಿಡಗಳು ಮೊದಲಿಂದಲೂ ಅಲ್ಲಿದ್ದವು ಎಂಬುದಾಗಿ ಊಹಿಸಬಹುದು.

ದಕ್ಷಿಣ ಆಫ್ರಿಕಾದಲ್ಲಿನ ಎಲ್ಲಾ ಭಾಗಗಳನ್ನೂ ಬಣ್ಣಿಸುತ್ತಾ ಹೋಗಲು ನನಗೆ ಇಷ್ಟವಿಲ್ಲ. ನಮ್ಮ ವಿಷಯಕ್ಕೆ ಸಂಬಂಧಿಸಿರುವ ಭಾಗಗಳನ್ನು ಮಾತ್ರ ನಾನಿಲ್ಲಿ ಹೇಳುತ್ತೇನೆ. ದಕ್ಷಿಣ ಆಫ್ರಿಕಾದ ಒಂದು ಭಾಗವು ಪೋರ್ಚುಗೀಸರ ಕೈಕೆಳಗಿದೆ. ಮಿಕ್ಕದ್ದೆಲ್ಲವೂ ಬ್ರಿಟಿಷರಿಗೇ ಸೇರಿದ್ದು. ಪೋರ್ಚುಗೀಸರ ಕೈಕೆಳಗಿರುವ ಭಾಗಕ್ಕೆ ಡೆಲಗೋವಾಬೆ ಎಂಬುದಾಗಿ ಹೆಸರು. ಇಂಡಿಯಾದಿಂದ ಬರುವ ಹಡಗುಗಳಿಗೆ ಸಿಕ್ಕುವ ಮೊದಲನೆಯ ರೇವು ಅದೇಯೆ. ಅಲ್ಲಿಂದ ಮುಂದೆ ದಕ್ಷಿಣಕ್ಕೆ ಹೋದರೆ ಬ್ರಿಟಿಷರ ಮೊದಲನೆ ಸ್ವಾಸ್ಥ್ಯ (ಕಾಲೋನಿ) ವಾದ ನೇಟಾಲಿಗೆ ಹೋಗುತ್ತೇವೆ. ಅದರ ಮುಖ್ಯ ರೇವು ಪಟ್ಟಣವು ಪೋರ್ಟ್ ನೇಟಾಲ್. ಆದರೆ ಅದನ್ನು ದಕ್ಷಿಣ ಆಫ್ರಿಕಾದಲ್ಲೆಲ್ಲಾ ಕರೆಯುವಂತೆ ಡರ್ಬಾನ್ ಎಂಬ ಹೆಸರೇ ನಮಗೂ ಒಳಿತು.

ಡರ್ಬಾನು ನೇಟಾಲಿನಲ್ಲೆಲ್ಲಾ ಅತ್ಯಂತ ದೊಡ್ಡ ಪಟ್ಟಣ. ಅದರ ರಾಜಧಾನಿಯು ಪೀಟರ್ ಮೇರಿಟ್ಸ್ ಬರ್ಗ್. ಅದು ಒಳದೇಶದಲ್ಲಿ ಡರ್ಬಾನಿನಿಂದ ಅರವತ್ತು ಮೈಲಿ ದೂರದಲ್ಲಿ ಸಮುದ್ರಮಟ್ಟಕ್ಕಿಂತ ಎರಡು ಸಾವಿರ ಅಡಿ ಎತ್ತರದಲ್ಲಿದೆ. ಅಲ್ಲಿನ ವಾಯುಗುಣವು ಸ್ವಲ್ಪ ಛಳಿಯಾಗಿದ್ದರೂ ಬೆಂಗಳೂರಿನಲ್ಲಿರುವಂತೆ ಇರುತ್ತದೆ.

ಒಳದೇಶದಲ್ಲಿ ನೇಟಾಲನ್ನು ದಾಟಿ ಇನ್ನೂ ಮುಂದಕ್ಕೆ ಹೋದರೆ ಟ್ರಾನ್ಸ್‌ವಾಲಿಗೆ ಹೋಗುತ್ತೇವೆ. ಅಲ್ಲಿನ ಗಣಿಗಳಲ್ಲಿ ಸಿಕ್ಕುತ್ತಿರುವಷ್ಟು ಚಿನ್ನವು ಪ್ರಪಂಚದಲ್ಲಿ ಮತ್ತೆಲ್ಲಿಯೂ ಸಿಕ್ಕುತ್ತಿಲ್ಲ. ಕೆಲವು ವರ್ಷಗಳ ಹಿಂದೆ ವಜ್ರದ ಗಣಿಯೂ ಅಲ್ಲಿ ದೊರೆಕವು. ಪ್ರಪಂಚದಲ್ಲೆಲ್ಲಾ ದೊಡ್ಡದಾದ ವಜ್ರವು ದೊರೆತದ್ದು ಅಲ್ಲಿಯೇ. ಆ ಕಲ್ಲಿನಾನ್—ಗಣಿಯ ಮಾಲಿಕನ ಹೆಸರು ಅದು—ವಜ್ರದ ತೂಕವು ಮೂರು ಸಾವಿರ ಕ್ಯಾರಟ್ಟುಗಳು ಅಂದರೆ ಒಂದೂಮುಕ್ಕಾಲು ಪೌಂಡ್. (ಅವೋಯಿರ್‌ಡಾಯಸ್) ಕೋಹಿನೂರ್ ವಜ್ರದ ತೂಕ ಈಗ ಸುಮಾರು ಒಂದು ನೂರು ಕ್ಯಾರೆಟ್ಟುಗಳು. ರಷ್ಯಾದೇಶದ ಚಕ್ರವರ್ತಿ ಮನೆತನದ ಓರ್ಲಾಫ್ ವಜ್ರವೂ ಇನ್ನೂರು ಕ್ಯಾರೆಟ್ಟು ಮಾತ್ರ ತೂಗುತ್ತಿತ್ತು.

ಜೊಹಾನ್ಸ್‌ಬರ್ಗ್ ಚಿನ್ನವನ್ನು ಗಣಿಯಿಂದ ತೆಗೆಯುವ ಕೇಂದ್ರಸ್ಥಾನವಾಗಿದೆ. ಅದರ ಮಗ್ಗುಲಲ್ಲಿಯೇ ವಜ್ರದ ಗಣಿಗಳಿವೆ. ಇಷ್ಟಾದರೂ ಟ್ರಾನ್ಸ್‌ವಾಲಿನ ರಾಜಧಾನಿಯು ಅದು ಅಲ್ಲ. ರಾಜಧಾನಿಯು ಜೊಹಾನ್ಸ್‌ಬರ್ಗಿನಿಂದ ಸುಮಾರು ಮುವತ್ತಾರು ಮೈಲಿ ದೂರದಲ್ಲಿರುವ ಪ್ರಿಟೋರಿಯಾ. ಪ್ರಿಟೋರಿಯಾದಲ್ಲಿ ಮುಖ್ಯವಾಗಿ ಕಾಣಬರುವವರು ಹುದ್ದೇದಾರರು, ರಾಜನೀತಿಜ್ಞರು ಮತ್ತು ಅವರ ಅನುಯಾಯಿ ಪ್ರಜೆಗಳು. ಆದುದರಿಂದ ತಾರತಮ್ಯ ನೋಡಿದ್ದೇ ಆದರೆ ಪ್ರಿಟೋರಿಯಾದಲ್ಲಿ ಸದ್ದು ಗದ್ದಲಗಳೇ ಇಲ್ಲ. ಆದೇ ಜೊಹಾನ್ಸ್‌ಬರ್ಗೆಲ್ಲಾ ಗಜಿಬಿಜಿ. ಸದಾ ಶಾಂತವಾಗಿರುವ ಹಳ್ಳಿಯಿಂದ ಯಾವನಾದರೊಬ್ಬನು ಅಥವಾ ಇಂಡಿಯಾದಲ್ಲಿನ ಚಿಕ್ಕ ಊರಿನವನಾದರೂ ಸರಿಯೆ, ಬೊಂಬಾಯಿಗೆ ಹೋದರೆ ಅಲ್ಲಿನ ಶಬ್ದ ಬೊಬ್ಬೆಗಳಿಂದ ಅವನಿಗೆ ದಿಗ್ಭ್ರಮೆ ಹಿಡಿಯುವಂತೆಯೇ ಪ್ರಿಟೋರಿಯಾದಿಂದ ಜೊಹಾನ್ಸ್‌ಬರ್ಗಿಗೆ ಹೋಗುವವನಿಗೂ ಆಗುವುದು. ಜೊಹಾನ್ಸ್‌ಬರ್ಗಿನಲ್ಲಿರುವ ಜನರು ನಡೆಯುವುದಿಲ್ಲ, ಓಡುವಂತೆ ಕಾಣುತ್ತೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಯಾರಿಗೂ ಮತ್ತೊಬ್ಬನ ಕಡೆ ನೋಡುವುದಕ್ಕೆ ಪುರಸತ್ತಿಲ್ಲ. ಪ್ರತಿಯೊಬ್ಬನೂ ತಾನು ಎಷ್ಟು ಬೇಗ ಕುಬೇರನಾಗಬಹುದು ಎಂಬುದನ್ನು ಯೋಚಿಸುವುದರಲ್ಲಿ ಮಗ್ನನಾಗಿರುವ ರೀತಿ ಕಂಡು ಬರುವದು.

ಟ್ರಾನ್ಸ್‌ವಾಲನ್ನು ಬಿಟ್ಟು ಒಳದೇಶದಲ್ಲಿ ಇನ್ನೂ ಪಶ್ಚಿಮಕ್ಕೆ ಹೋದರೆ ಆರೆಂಜ್ ಫ್ರೀಸ್ಟೇಟ್ ಅಥವಾ ಆರೆಂಜಿಯಾ ಎಂಬ ಸಂಸ್ಥಾನಕ್ಕೆ ಹೋಗುವೆವು. ಸದ್ದು ಗದ್ದಲಗಳಿಲ್ಲದ ಚಿಕ್ಕ ಊರಾದ ಬ್ಲೂಮ್ ಫಾಂಟೀನ್ ಎಂಬುದೇ ಅದರ ರಾಜಧಾನಿ. ಆರೆಂಜಿಯಾದಲ್ಲಿ ಟ್ರಾನ್ಸ್‌ವಾಲಿನಲ್ಲಿರುವಂತೆ ಗಣಿಗಳಾವುವೂ ಇಲ್ಲ. ಇಲ್ಲಿಂದ ಕೆಲವು ಘಂಟೆಗಳ ರೈಲ್ವೆ ಪ್ರಯಾಣಮಾಡಿದರೆ ಸಾಕು, ದಕ್ಷಿಣ ಆಫ್ರಿಕಾದಲ್ಲಿನ ಕಾಲೊನಿಗಳಲ್ಲೆಲ್ಲಾ ದೊಡ್ಡದಾದ ಕೇಪ್ ಕಾಲೊನಿಯ ಎಲ್ಲೆಕಟ್ಟಿಗೆ ಹೋಗುವೆವು. ಅಲ್ಲಿಗೆ ಅತ್ಯಂತ ದೊಡ್ಡ ರೇವುಪಟ್ಟಣವಾಗಿರುವ ಕೇಪ್ ಟೌನೇ ಅದರ ರಾಜಧಾನಿ. ಅದು ಗುಡ್ ಹೋಪ್ ಭೂಶಿರದಲ್ಲಿದೆ. ಗುಡ್ ಹೋಪ್—ಒಳ್ಳೆಯ ಆಶಾಪೂರ್ಣವಾದ ನಂಬಿಗೆ—ಎಂದು ಅದಕ್ಕೆ ಹೆಸರು ಬರಲು ಕಾರಣವಿದೆ. ಪೋರ್ಚುಗಲ್ಲಿನ ದೊರೆಯಾದ ಕಿಂಗ್ ಜಾನ್ ಎಂಬುವನು ತನ್ನ ನಾವಿಕರು ಅದನ್ನು (ಗುಡ್ ಹೋಪ್) ಕಂಡು ಹಿಡಿಯಲು ಅಲ್ಲಿಂದಾಚೆಗೆ ಆ ಕಾಲದಲ್ಲಿ ನಾವಿಕರೂಂದ ಯಾತ್ರೆಗಳ ಪರಮೋದ್ದೇಶವಾಗಿದ್ದ ಇಂಡಿಯಾ ದೇಶವನ್ನು ತಲುಪುವುದಕ್ಕೆ ಒಂದು ಹೊಸದೂ, ಸುಲಭವೂ ಆದ ದಾರಿಯನ್ನು ಕಂಡುಹಿಡಿಯಲಾಪರು ಎಂಬುದಾಗಿ ಯೋಚಿಸಿ ಆ ಭೂಶಿರಕ್ಕೆ ಕೇಪ್ ಆಫ್ ಗುಡ್ ಹೋಪ್ ಎಂದು ಹೆಸರಿಟ್ಟನು.

ಈ ನಾಲ್ಕು ಮುಖ್ಯವಾದ ಬ್ರಿಟಿಷ್ ಕಾಲೋನಿಗಳಲ್ಲದೆ, ಆ ರಂಗಕ್ಕೆ ಯೂರೋಪಿಯನರು ಬರುವುದಕ್ಕೆ ಮುಂಚಿತವಾಗಿಯೇ ಅಲ್ಲಿಗೆ ವಲಸೆಹೋಗಿ ನೆಲಸಿದ್ದ ಜನರು ವಾಸಿಸುತ್ತಿರುವ ಅನೇಕ ರಾಷ್ಟ್ರಗಳು ಆಂಗ್ಲೇಯರ ರಕ್ಷಣೆಯಲ್ಲಿವೆ.

ದಕ್ಷಿಣ ಆಫ್ರಿಕದ ಪ್ರಧಾನೋದ್ಯೋಗವು ಕೃಷಿ; ಯಾಕೆಂದರೆ—ಅಲ್ಲಿ ವ್ಯವಸಾಯಕ್ಕೆ ಅನುಕೂಲಗಳು ಬಲು ಚೆನ್ನಾಗಿವೆ. ಕೆಲವು ಪ್ರದೇಶಗಳಂತೂ ಮನೋಹರವಾಗಿಯೂ, ಫಲವತ್ತಾಗಿಯೂ ಇವೆ. ಮುಖ್ಯವಾದ ಧಾನ್ಯವು ಮುಸುಕಿನ ಜೋಳ. ಅದು ಅಲ್ಲಿ ಅತಿ ಶ್ರಮವಿಲ್ಲದೆ ಬೆಳೆಯುವುದಲ್ಲದೆ ದಕ್ಷಿಣ ಆಫ್ರಿಕ ನಿವಾಸಿಗಳಾದ ನೀಗ್ರೊ ಜನರ ಮುಖ್ಯ ಆಹಾರವೂ ಅದೇಯೆ. ಕೆಲವು ಭಾಗಗಳಲ್ಲಿ ಗೋಧಿಯನ್ನೂ ಬೆಳೆಯುತ್ತಾರೆ. ದಕ್ಷಿಣ ಆಫ್ರಿಕವು ಅದರ ಹಣ್ಣುಗಳಿಗೆ ಬಹಳ ಪ್ರಸಿದ್ಧ. ನೇಟಾಲಿನಲ್ಲಿ ಅನೇಕ ಜಾತಿಯ ಹಣ್ಣುಗಳನ್ನೂ, ಬಾಳೆ ಹಣ್ಣುಗಳನ್ನೂ, ಅನಾನಸು ಹಣ್ಣುಗಳನ್ನೂ ಬೆಳೆಯುತ್ತಾರೆ. ಅವರ ಬೆಳೆಯು ಎಷ್ಟು ಹೆಚ್ಚಾಗಿದೆಯೆಂದರೆ ಬಡವನಲ್ಲಿ ಅತಿ ಬಡವನಾದವನು ಸಹ ಅವುಗಳನ್ನು ಉಪಯೋಗಿಸಬಹುದು.

ನೇಟಾಲಿನಲ್ಲಿಯೂ ಇತರ ಕಾಲೊನಿಗಳಲ್ಲಿಯೂ ಕಿತ್ತಳೆ ಹಣ್ಣುಗಳೂ, ಪೀಚಸ್ ಎಂಬ ಹಣ್ಣುಗಳೂ ಎಷ್ಟು ಹೇರಳವಾಗಿ ಬೆಳೆಯುತ್ತವೆಯೆಂದರೆ ಅವುಗಳನ್ನು ಕಾಡಿ ಹಾಕುವ ನಾವಿರಾರು ಕೂಲಿಯವರಿಗೆ ಅವುಗಳನ್ನೇ ಕೊಡುತ್ತಾರೆ. ಕೇಪ್ ಕಾಲೋನಿಯೆಂದರೆ ದ್ರಾಕ್ಷಿ ಮತ್ತು ದ್ವೀಪ ದ್ರಾಕ್ಷಿಗಳ ದೇಶ. ಮತ್ತಾವ ದೇಶದಲ್ಲಿಯೂ ಅಷ್ಟು ಸೊಗಸಾದ ದ್ರಾಕ್ಷಿಯು ಬೆಳೆಯುವುದಿಲ್ಲ. ಅದರ ಸುಗ್ಗಿಯ ಕಾಲದಲ್ಲಿ ಬಡವರೂ ಅವರಿಗೆ ಬೇಕಾಗುವಷ್ಟು ಅವುಗಳನ್ನು ತಿನ್ನಬಹುದು. ಇಂಡಿಯನ್ನರು ವಾಸಿಸುವ ಸ್ಥಳಗಳಲ್ಲಿ ಮಾವಿನ ಹಣ್ಣುಗಳು ಇಲ್ಲದೆ ಇರುವುದಕ್ಕೆ ಅಸಾಧ್ಯ. ಇಂಡಿಯನ್ನರು ದಕ್ಷಿಣ ಆಫ್ರಿಕದಲ್ಲಿ ಮಾವಿನ ಗಿಡಗಳನ್ನು ನೆಟ್ಟರು. ಅದರ ಫಲರೂಪವಾಗಿ ಮಾವಿನ ಹಣ್ಣುಗಳು ಈಗ ಬೇಕಾದಷ್ಟು ಸಿಕ್ಕುತ್ತವೆ. ಕೆಲವಂತೂ ಬೊಂಬಾಯಿಯಲ್ಲಿ ದೊರೆಯುವ ಸರ್ವೋತ್ಕೃಷ್ಟವಾದ ಹಣ್ಣುಗಳೊಡನೆ ಸ್ಪರ್ಧಿಸಬಲ್ಲವು. ಫಲವತ್ತಾದ ಭೂಪ್ರದೇಶಗಳಲ್ಲಿ ತರಕಾರಿಗಳು ವಿಶೇಷವಾಗಿ ಬೆಳೆಯುತ್ತವೆ. ಇಂಡಿಯನ್ನರು; ತಮ್ಮ ದೇಶೀಯ ಆಹಾರಗಳನ್ನು ಮಾಡಲು ಅನುಕೂಲವಾಗುವಂತೆ ಇಂಡಿಯಾದಲ್ಲಿ ಬೆಳೆಯುವ ಎಲ್ಲಾ ಜಾತಿಯ ತರಕಾರಿಗಳನ್ನೂ ಅಲ್ಲಿ ಬೆಳೆಯುತ್ತಾರೆ.

ದನಕರುಗಳನ್ನು ಅಸಂಖ್ಯಾತವಾಗಿ ಸಾಕುತ್ತಾರೆ. ಅಲ್ಲಿನ ದನಗಳೂ, ಎತ್ತುಗಳೂ ಇಂಡಿಯಾದಲ್ಲಿರುವುದಕ್ಕಿಂತಲೂ ಬಲವಾಗಿರುವುದಲ್ಲದೆ ಒಳ್ಳೆಯ ದೇಹ ಪುಷ್ಟಿಯುಳ್ಳವು. ಗೋರಕ್ಷಣ ಭಾರವನ್ನು ವಹಿಸುವುದಾಗಿ ಹೇಳುವ ಇಂಡಿಯಾದಲ್ಲಿರುವ ಅನೇಕ ಹಸುಗಳೂ, ಎತ್ತುಗಳೂ ಅಲ್ಲಿನ ಪ್ರಜೆಗಳಂತೆಯೇ ಕೃಶವಾಗಿರುವುದನ್ನು ನೋಡಿದರೆ ನನಗೆ ನಾಚಿಕೆಯಾಗುವುದಲ್ಲದೆ ನನ್ನೆದೆಯಿಂದ ರಕ್ತ ಉಕ್ಕಿ ಹರಿಯುವುದು. ದಕ್ಷಿಣ ಆಫ್ರಿಕದಲ್ಲೆಲ್ಲಾ ಚೆನ್ನಾಗಿ ದೃಷ್ಟಿ ಇಟ್ಟು ಪ್ರಯಾಣ ಮಾಡಿ ನೋಡಿದಾಗ್ಯೂ ಕೃಶವಾಗಿದ್ದ ಒಂದು ಹಸುವನ್ನಾಗಲೀ, ಎತ್ತನ್ನಾಗಲೀ ನೋಡಿದಂತೆ ನನಗೆ ಜ್ಞಾಪಕವಿಲ್ಲ.

ಪ್ರಕೃತಿಯು ಈ ದೇಶದ ಮೇಲೆ ತನ್ನ ಎಲ್ಲಾ ವರಗಳನ್ನೂ ವರ್ಷಿಸಿರುವುದೊಂದೇ ಅಲ್ಲ, ದೇಶದಲ್ಲಿನ ಪ್ರದೇಶಗಳನ್ನೆಲ್ಲ ರಮಣೀಯವನ್ನಾಗಿ ಮಾಡಿದ್ದಾಳೆ.

ಡರ್ಬಾನಿನ ದೃಶ್ಯವು ಅತಿ ಸೊಗಸಾದುದೆಂದು ಹೆಸರುಗೊಂಡಿದೆ. ಆದರೆ ಕೇಪ್ ಟೌನಿನದು ಅದನ್ನೂ ಮೀರಿಸುತ್ತದೆ. ಕೇಪ್ ಟೌನ್ ನಗರವು ಟೇಬಲ್ ಪರ್ವತದ ಬುಡದಲ್ಲಿದೆ. ಆ ಪರ್ವತವು ಅಷ್ಟು ಎತ್ತರವಾಗಿಯೂ ಇಲ್ಲ, ಅಷ್ಟು ಕುಳ್ಳಾಗಿಯೂ ಇಲ್ಲ. ದಕ್ಷಿಣ ಆಫ್ರಿಕವೆಂದರೆ ಹುಚ್ಚು ಪ್ರೇಮವನ್ನಿಟ್ಟುಕೊಂಡಿರುವ ಒಬ್ಬ ಮರಕವಿಯತ್ರಿಯು ಆ ಪರ್ವತವನ್ನು ಕುರಿತು ಈ ಟೇಬಲ್ ಪರ್ವತವು ತೋರಿದಷ್ಟು ಅದ್ವಿತೀಯತೆಯನ್ನು ಮತ್ತಾವ ಪರ್ವತವೂ ತೋರಿಲ್ಲವೆಂದು ಒಂದು ಕವನದಲ್ಲಿ ಬರೆದಿದ್ದಾಳೆ. ಇದರಲ್ಲಿ ಉತ್ಪ್ರೇಕ್ಷೆಯಿದ್ದರೂ ಇರಬಹುದು. ಇದರ ಮೇಲೆ ಇಂಗ್ಲೆಂಡ್ ನನ್ನ ಭಾವನೆ. ಆದರೆ ಅವಳು ಹೇಳಿದ ಒಂದು ಅಂಶವು ಮಾತ್ರ ನಿಜವೆನಿಸಿತು. ಕೇಪ್ ಟೌನಿನ ನಗರವಾಸಿಗಳಿಗೆ ಟೇಬಲ್ ಪರ್ವತವು ಮಿತ್ರನಂತೆ ಸದಾ ಜೊತೆಯಲ್ಲಿದೆ ಎಂದು ಹೇಳಿದ್ದಾಳೆ. ಅತ್ಯುನ್ನತವಾಗಿಲ್ಲವಾದ ಕಾರಣ ಮನಸ್ಸಿನಲ್ಲಿ ಭಕ್ತಿಪೂರಿತ ಭಯವನ್ನೇನೂ ಹುಟ್ಟಿಸುವುದಿಲ್ಲ. ದೂರದಿಂದ ಜನರು ಅದನ್ನು ಪೂಜಿಸಬೇಕೆಂಬ ಅಗತ್ಯವೇನೂ ಇಲ್ಲ. ಬದಲಾಗಿ ಅದರ ಮೇಲೆ ಮನೆಗಳನ್ನು ಕಟ್ಟಿಕೊಂಡು ವಾಸಿಸುತ್ತಾರೆ. ಅದು ಸಮುದ್ರದ ದಡದಲ್ಲಿ ಇರುವ ಕಾರಣ ಸಮುದ್ರವು ಅದರ ಕಾಲನ್ನು ಸದಾ ತನ್ನ ಶುಭ್ರವಾದ ನೀರಿನಿಂದ ತೊಳೆಯುತ್ತಿರುತ್ತದೆ. ಹುಡುಗರು ಮುದುಕರನ್ನದೆ, ಗಂಡಸರು ಹೆಂಗಸರೆನ್ನದೆ ಎಲ್ಲರೂ ಪರ್ವತದಲ್ಲೆಲ್ಲಾ ಭಯವಿಲ್ಲದೆ ಓಡಿಯಾಡುತ್ತಾ ಸಹಸ್ರಾರು ಧ್ವನಿಗಳು ಅಲ್ಲಿ ಪ್ರತಿಧ್ವನಿತವಾಗುವಂತೆ ಹಾಡುತ್ತಾರೆ. ಅದರ ಸಮುನ್ನತ ವೃಕ್ಷಗಳೂ, ಸೌರಭಯುತ ಪುಷ್ಪಗಳೂ, ವಿವಿಧ ಬಣ್ಣಗಳೂ ಪರ್ವತಕ್ಕೊಂದು ಅನಿರ್ವಾಚ್ಯ ಸೊಬಗನ್ನು ಉಂಟುಮಾಡುವವು. ಆದಕಾರಣ ಯಾರಿಗೂ ಅದನ್ನು ಹೆಚ್ಚಾಗಿ ನೋಡಿಯಾಗಲೀ ಅಲ್ಲಿ ಓಡ್ಯಾಡಿಯಾಗಲೀ ಬೇಜಾರಾಗುವುದಿಲ್ಲ.

ಇಂಡಿಯಾದಲ್ಲಿರುವ ಗಂಗಾ ಅಥವಾ ಸಿಂಧೂ ನದಿಗಳಂತೆ ಮಹಾ ನದಿಗಳ್ಯಾವವೂ ದಕ್ಷಿಣ ಆಫ್ರಿಕದಲ್ಲಿಲ್ಲ. ಇರುವ ಕೆಲವು ನದಿ ಎಷ್ಟೋ ಚಿಕ್ಕವು. ದೇಶದಲ್ಲಿನ ಎಷ್ಟೋ ಸ್ಥಳಗಳಿಗೆ ನದಿಗಳ ನೀರು ಹೋಗುವಂತೆಯೇ ಇಲ್ಲ. ಎತ್ತರ ಪ್ರದೇಶಗಳಿಗೆ ಕಾಲುವೆಗಳನ್ನು ತೆಗೆದುಕೊಂಡು ಹೋಗುವಂತಿಲ್ಲ. ಅದೂ ಅಲ್ಲದೆ ಭಾರೀ ನದಿಗಳೇ ಇಲ್ಲದಿರುವಾಗ ಕಾಲುವೆಗಳನ್ನು ಹ್ಯಾಗೆ ತಾನೇ ಹೊಂದಿಯಾರು? ದಕ್ಷಿಣ ಆಫ್ರಿಕದಲ್ಲಿ ಎಲ್ಲೆಲ್ಲಿ ಮೇಲ್ಭಾಗದಲ್ಲಿ ನೀರು ಕಡಿಮೆಯಾಗಿರುವುದೋ ಅಲ್ಲೆಲ್ಲಾ ಬಾವಿಗಳನ್ನು ತೋಡಿದ್ದಾರೆ. ವ್ಯವಸಾಯ ಕ್ಷೇತ್ರಗಳಿಗೆ ಬೇಕಾಗುವ ನೀರನ್ನು ವಿಂಡ್ ಮಿಲ್ಲು (Wind mill) ಗಳಿಂದಲೂ, ಹಬೆಯ ಯಂತ್ರಗಳಿಂದಲೂ ಬಾವಿಗಳಿಂದ ಮೇಲಕ್ಕೆ ಎತ್ತುತ್ತಾರೆ. ಅಲ್ಲಿನ ಸರ್ಕಾರದವರು ವ್ಯವಸಾಯಕ್ಕೆ ಬಹಳ ಉತ್ತೇಜನವನ್ನು ಕೊಡುತ್ತಾರೆ. ಸರ್ಕಾರದವರು ವ್ಯವಸಾಯದಲ್ಲಿ ನುರಿತವರನ್ನು ರೈತರಿಗೆ ಬುದ್ಧಿ ಹೇಳಲು ಕಳುಹಿಸುತ್ತಾರೆ. ಎಲ್ಲೆಲ್ಲಿ ಅವರಿಗೆ ಸಹಾಯವಾಗುವುದೆಂದು ತೋರಬರುತ್ತದೆಯೋ ಅಲ್ಲೆಲ್ಲಾ ಮಾದರಿ ವ್ಯವಸಾಯ ಕ್ಷೇತ್ರಗಳನ್ನು ತೆರೆದು, ಪರೀಕ್ಷೆಗಳನ್ನು ಮಾಡಿ ತೋರಿಸುತ್ತಾರೆ; ಅವರಿಗೆ ಬೇಸಾಯಕ್ಕೆ ಬೇಕಾಗುವ ದನಕರುಗಳನ್ನೂ, ಬೀಜದ ಕಾಳುಗಳನ್ನೂ ಒದಗಿಸುತ್ತಾರೆ; ಸುಲಭ ಖರ್ಚಿನಲ್ಲಿ ಬಾವಿಗಳನ್ನು ತೋಡಿ ಕೊಡುತ್ತಾರೆ; ಈ ಕೆಲಸಗಳಿಗೆ ತಗಲಿದ ವೆಚ್ಚವನ್ನು ಸುಲಭ ಕಂತುಗಳಲ್ಲಿ ಪಾವತಿ ಮಾಡಲು ಅವಕಾಶ ಕೊಡುತ್ತಾರೆ. ಅದೇ ರೀತಿಯಾಗಿ ಅವರ ಜಮೀನುಗಳನ್ನು ರಕ್ಷಿಸಲು ಸುತ್ತಲೂ ಕಾಂತಿಯ ಮುಳ್ಳು ಬೇಲಿಯನ್ನು ಹಾಕಿಕೊಡುತ್ತಾರೆ.

ವಿಷುವದ್ರೇಖೆಗೆ ದಕ್ಷಿಣದಲ್ಲಿ ದಕ್ಷಿಣ ಆಫ್ರಿಕವೂ, ಉತ್ತರದಲ್ಲಿ ಇಂಡಿಯಾ ದೇಶವೂ ಇರುವುದರಿಂದ ಅಲ್ಲಿನ ವಾಯುಗುಣಾದಿಗಳು ಇಲ್ಲಿರುವುದಕ್ಕಿಂತ ಸಂಪೂರ್ಣವಾಗಿ ವ್ಯತಿರೇಕವಾಗಿದೆ. ಋತುಗಳು ಸಹ ಹಿಂದು ಮುಂದು. ಉದಾಹರಣೆಗಾಗಿ ನಮಗೆ ಇಲ್ಲಿ ಬೇಸಿಗೆಯಾಗಿರುವಾಗ ಅಲ್ಲಿ ಛಳಿಗಾಲ. ಅಲ್ಲಿ ಮಳೆಯನ್ನು ನಂಬುವುದಕ್ಕಾಗದು; ಬಂದರೆ ಬಂತು ಇಲ್ಲವಾದರೆ ಇಲ್ಲ. ಅತಿವೃಷ್ಟಿ ಅನಾವೃಷ್ಟಿ ಅದೂ ಯಾವಾಗಲೊ. ವರ್ಷಕ್ಕೆ ಸರಾಸರಿ ಇಷ್ಟು ಅಂಗುಲ ಮಳೆ. ಯಾವಾಗಲೂ ಇದನ್ನು ಮೀರುವುದಿಲ್ಲ.

ಕೊಡಗು.

ಸನ್ ೧೯೩೨ನೇ ಇಸವಿ

ಜೂನ್ ತಾ. ೧೭ನೇ ಶುಕ್ರವಾರ.

ಪ್ರೆಸ್ ಆರ್ಡಿನೇನ್ಸ್ ಜಾರಿಯಲ್ಲಿರುವವರೆಗೆ ನಾವು ಅಗ್ರಲೇಖನವನ್ನು ಪ್ರಕಟಿಸುವುದಿಲ್ಲ.

ವ್ಯಾಪಾರದ ದುರವಸ್ಥೆ ಮತ್ತು ಅದರ ಫಲಿತಾಂಶವೇನಾದೀತು?

ಈಗ ಪ್ರತಿಯೊಬ್ಬನ ಬಾಯಿಯಲ್ಲಿಯೂ ವ್ಯಾಪಾರದ ದುರವಸ್ಥೆಯ ಮಾತೇ ಕೇಳಬರುತ್ತದೆ. ಕೃಷಿಯಿಂದ ಜೀವನಮಾಡುವವರ ಗೋಳು ಅತಿ ಕಠಿಣವಾಗಿದೆ. ಕೃಷಿಕನು ಬೆಳೆಸಿದ ಉತ್ಪತ್ತಿಗೆ ಸಿಕ್ಕುವ ಹಣವು ಅತಿ ಸ್ವಲ್ಪ, ಆದರೆ ಅವನು ಹಣದ ರೂಪದಲ್ಲಿ ಕಂದಾಯಕ್ಕಾಗಿಯೂ, ತನಗೆ ಬೇಕಾದ ಇತರ ಸಾಮಾನುಗಳಿಗಾಗಿಯೂ ಕೊಡಬೇಕಾದದ್ದು ಹೆಚ್ಚಾಗಿಯೇ ಇದೆ. ಮುಖ್ಯ ಕಷ್ಟವೇನೆಂದರೆ:—ಕೃಷಿ ಉತ್ಪತ್ತಿಯ ಕ್ರಯವು ಬಿದ್ದಷ್ಟು ಕೈಗಾರಿಕೆ ಉತ್ಪತ್ತಿಗೆ ಬಿದ್ದಿರುವುದಿಲ್ಲ. 1929 ಕ್ಕೆ ಹೋಲಿಸಿದರೆ ಕೃಷಿ ಉತ್ಪತ್ತಿಯು 100 ಕ್ಕೆ 61 ರಷ್ಟು ಬಿದ್ದಿದೆಯಾಗಿಯೂ ಕೈಗಾರಿಕೆ ಉತ್ಪತ್ತಿಯ ಕ್ರಯವು ಬರೇ 100 ಕ್ಕೆ 30 ರಷ್ಟು ಮಾತ್ರ ಬಿದ್ದಿದೆಯೆಂತಲೂ ಲೆಖ್ಖಗಳಿಂದ ತಿಳಿಯಬರುತ್ತದೆ. ಅಂದರೆ 1929 ರಲ್ಲಿ ರೈತನಿಗೆ 100 ರೂ. ಸಿಕ್ಕುತ್ತಿದ್ದ ಮಾಲಿಗೆ ಈಗ ಬರೇ 39 ರೂ. ಮಾತ್ರ ಸಿಕ್ಕುತ್ತದೆಯೆಂತಲೂ, ಕೈಗಾರಿಕೆಯಿಂದ ತಯಾರಾದ ಸಾಮಾನುಗಳಿಗೆ 1929 ರಲ್ಲಿ 100 ರೂ. ಕೊಡುತ್ತಿದ್ದದ್ದಕ್ಕೆ ಈಗ 70 ರೂ. ಕೊಡಬೇಕಾಗಿದೆಯೆಂತಲೂ ಆಯಿತು. ಕಂದಾಯವಾದರೋ ಸರಕಾರದಿಂದ ಹೆಚ್ಚು ಸಲ್ಪಡದೆ ಇದ್ದಲ್ಲಿ ಮೊದಲಿನಷ್ಟೇ ಈಗಲೂ ಕೊಡಬೇಕಾಗಿದೆ.

ಈ ದುರವಸ್ಥೆಗೆ ಕಾರಣಗಳು ಅನೇಕ ಇವೆ. ಅವುಗಳಲ್ಲಿ ಮುಖ್ಯವಾದವು ಯಾವವೆಂದರೆ—

1. ಚಿನ್ನವು ಅಸಮಾನವಾಗಿ ಹಂಚಲ್ಪಟ್ಟಿರುವುದು, ಅದರಿಂದ ಸಾಲದ ಅನುಕೂಲತೆ ಕಡಿಮೆಯಾದದ್ದು—

2. ವ್ಯಾಪಾರಕ್ಕೆ ದೊಡ್ಡ ಸುಂಕ ವಗೈರೆಯ ಅಡಚಣೆಗಳು.

3 ಹೆಚ್ಚು ಉತ್ಪನ್ನವಾಗುತ್ತಿರುವುದು.

4 ತುಂಬಾ ಯುದ್ಧದ ಸಾಲಗಳು ಮತ್ತು ಯುದ್ಧದ ನಷ್ಟಕ್ಕಾಗಿ ಕೊಡಬೇಕಾದ ಹಣ—ಇದು ಮುಖ್ಯವಾಗಿ ಜರ್ಮನಿಗೆ ಸಂಬಂಧಪಡುತ್ತದೆ.

5. ಯುದ್ಧದ ಸಾಮಗ್ರಿಗಳಿಗಾಗಿ ತುಂಬಾ ಖರ್ಚು ಮಾಡುತ್ತಿರುವುದು. ಅದರಿಂದ ತೆರಿಗೆ ಕೊಡುವವನ ಮೇಲೆ ಬೀಳುವ ಹೆಚ್ಚಿನ ಹೊರೆ

ಈ ಎಲ್ಲಾ ಕೆಡಕುಗಳನ್ನು ಹೋಗಲಾಡಿಸಲು ವಿವಿಧ ವಿಧದ ಪ್ರಯತ್ನಗಳು ನಡೆಯುತ್ತಲಿವೆ. ಯುದ್ಧದ ಸಾಲ ಒಂದು ವರ್ಷದ ವರೆಗೆ ಕೊಡಬೇಕಾದದ್ದಿಲ್ಲವೆಂತ ಕಳೆದ ವರ್ಷ ಹೂವರ್ ನಿಸಿ ನೋಡಿದರು. ಆದರೆ ಅದರಿಂದ ಏನೂ ಪ್ರಯೋಜನವಾಗಲಿಲ್ಲವೆಂತ ಈಗ ತಿಳಿದಿದೆ. 1931 ನೇ ಇಸವಿ ಸೆಪ್ಟೆಂಬರಿನ ವರೆಗೆ ಹೋಲಿಸಿದರೆ ಇನ್ನೂ ಬಿದ್ದಿದೆ. ಪ್ರಪಂಚವು ಇನ್ನೂ ಕಷ್ಟದೊಳಗೇ ಸಿಕ್ಕಿಕೊಂಡಿದೆ. ತಪ್ಪಿಸಿಕೊಳ್ಳುವ ದಾರಿ ತೋರುವುದಿಲ್ಲ. ಈಗ ಜನಾಂಗಗಳ ಕೂಟ, ಸಾಮ್ರಾಜ್ಯ ಪ್ರಾಂತ್ಯಗಳ ಕೂಟ ಮುಂತಾದ್ದನ್ನು ಸೇರಿಸಿ ಪ್ರ[illegible] ಲಾಸೇನ್, ಜಿನೇವಾ, ಒಟ್ಟಾವಾ ಮುಂತಾದ ಕೂಟಗಳೇ ಇವೆ. ಈ ಕೂಟಗಳ ಮುಖ್ಯ ಉದ್ದೇಶಗಳು ಯಾವವೆಂದರೆ— ವ್ಯಾಪಾರಕ್ಕೆ ಅಡಚಣೆಗಳಾದ ಸುಂಕಗಳನ್ನು ತೆಗೆಯುವುದು, ಯುದ್ಧ ಸಾಮಗ್ರಿಗಳನ್ನು ತಯಾರಿಸುವುದು ಕಡಿಮೆ ಮಾಡುವುದು, ಆ ಮೂಲಕ ತೆರಿಗೆಗಳ ಹೊರೆ ಕಡಿಮೆ ಮಾಡುವುದು, ಯುದ್ಧದ ಸಾಲಗಳನ್ನು ಬಿಟ್ಟು ಬಿಟ್ಟು ಜನಾಂಗಗಳೊಳಗೆ ಸಾಲದ ಅಸಲ್ ಬಡ್ಡಿಯನ್ನು ಕೊಡುವ ಹೊರೆಯನ್ನು ತಪ್ಪಿಸುವಿಕೆ, ಈ ಕೂಟಗಳಿಂದ ಜನಾಂಗಗಳೊಳಗೆ ಅನ್ಯೋನ್ಯತೆ ಬೆಳೆದು ಈ ಕೆಡಕುಗಳೆಲ್ಲಾ ನಾಶವಾದಾವೋ ಎಂಬದನ್ನು ಆದ ಮೇಲೆ ಹೇಳಬಹುದಷ್ಟೆ. ಅರ್ಥಶಾಸ್ತ್ರ ತಿಳಿದವರೆಲ್ಲರೂ ಈ ಕೇಡುಗಳನ್ನು ಹೋಗಲಾಡಿಸದ ವಿನಹ ಪ್ರಪಂಚವೂ, ನಾಗರೀಕತೆಯೂ ನಾಶವಾಗುವುದೇ ಸರಿಯೆಂತ ಎಚ್ಚರ ಕೊಟ್ಟಿದ್ದಾರೆ.

ಈ ಬುದ್ಧಿವಾದಕ್ಕೆ ಎಷ್ಟರ ಮಟ್ಟಿಗೆ ಕಿವಿಗೊಟ್ಟಾರು ಎಂಬದನ್ನು ನೋಡಬೇಕಷ್ಟೆ. ಈ ಕತ್ತಲು ಮುಚ್ಚಿದ ಆಕಾಶದಲ್ಲಿ ಒಂದು ಬೆಳಕಿನ ರಶ್ಮಿ ಮಾತ್ರ ಕಾಣುತ್ತದೆ. ಅದು ಯಾವದೆಂದರೆ:—ಪ್ರಪಂಚದ ಮುಖ್ಯ ಬ್ಯಾಂಕುಗಳೆಲ್ಲಾ ಒಟ್ಟು [illegible] ಬ್ಯಾಂಕ್ ಆಫ್ ಇಂಗ್ಲೆಂಡ್ [illegible] ವು ಕಳೆದ ಸೆಪ್ಟೆಂಬರಿನಲ್ಲಿ ಶೇಕಡ 6 ರಷ್ಟು ಇದ್ದದ್ದು ಈಗ ಶೇಕಡ 2½ ಗೆ ಇಳಿಸಲ್ಪಟ್ಟಿದೆ. ಅಮೇರಿಕಾದ ಫೆಡರಲ್ ರಿಜರ್ವ್ ಬ್ಯಾಂಕ್ ಸಹ ಹಾಗೆಯೇ ಮಾಡಿದೆ. ಬೇರೆ ಬ್ಯಾಂಕುಗಳೂ ಹಾಗೆಯೇ ಮಾಡಿವೆ. ಇದರಿಂದ ಪತ್ತು ಸುಲಭವಾಗಿ ದೊರೆತು ವ್ಯಾಪಾರವು ಬೆಳೆಯಬೇಕು. ಅದರಿಂದ ಬೆಲೆಯೂ ಉತ್ತಮವಾಗಬೇಕು. ರಾಷ್ಟ್ರ ಕೂಟಗಳು ಕೆಡಕುಗಳನ್ನು ಹೋಗಲಾಡಿಸಿದರೆ ವ್ಯಾಪಾರವು ಪುನಃ ಉತ್ತಮಸ್ಥಿತಿಗೆ ಬಂದೀತು. ಕೃಷಿ ಉತ್ಪತ್ತಿಗಳಿಗೆ ಬೆಲೆ ಹೆಚ್ಚೀತು. ಕೂಟಗಳಲ್ಲಿ ಪ್ರಯೋಜನವಾಗದಿದ್ದರೆ ಬ್ಯಾಂಕುಗಳು ಬಡ್ಡಿ ಇಳಿಸಿದ್ದರಿಂದ ಹೆಚ್ಚಿಗೆ ಪ್ರಯೋಜನವಾಗಲಾರದು. ಪ್ರಪಂಚವು ಭಾರದ ಹೊರೆಯಿಂದ ನರಳುತ್ತಿರಲೇ ಬೇಕಾಗುತ್ತದೆ. ಆರ್ಥಿಕ ಮತ್ತು ರಾಜಕೀಯ ಗಲಭೆಗಳೂ, ಕ್ರಾಂತಿಗಳೂ, ದೇಶದೊಳಗಿನ ಯುದ್ಧಗಳೂ ಪ್ರಾರಂಭವಾಗಿ ಕಮ್ಯೂನಿಸ್ಟ್ ಮತ್ತು ಬೋಲ್ಶೆವಿಸ್ಟ್ ಸಂಗಡಗಳಿಗೆ ಅನುಕೂಲವಾದೀತು. ಮುಂದೇನಾದೀತೋ ನೋಡಬೇಕಷ್ಟೆ.

ಮ.ರಾಕಾ.

ನಾಪೋಕ್ಲು ಮೀಟಿಂಗು.

ಕೊಡಗಿನ ಮುಂದಿನ ರಾಜಕೀಯ ಆಡಳಿತ ಕ್ರಮವು ಹೇಗಿರಬೇಕೆಂಬದನ್ನು ಚರ್ಚಿಸಲು ನಾಪೋಕ್ಲು ನಾಡಿನವರ ಮೀಟಿಗೊಂದು ಈ ತಾ. 11ರಲ್ಲು ನಾಪೋಕ್ಲು ಸ್ಕೂಲಿನಲ್ಲಿ ರಾ. ಬಾ. ಕೋಡಿಮಣಿಯಂಡ ಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಸುಮಾರು 60 ಜನರು ಹಾಜರಿದ್ದರು.

ಅಧ್ಯಕ್ಷರು ಸಭಿಕರನ್ನು ವಂದಿಸಿ ಕೊಡಗಿನ ಮುಂದಿನ ಆಡಳಿತ ಕ್ರಮವು ಹೇಗಿರಬೇಕೆಂಬದನ್ನು ಚರ್ಚಿಸಿ ಅಭಿಪ್ರಾಯ ಕೊಡುವುದೇ ಈ ದಿನದ ಮೀಟಿಂಗಿನ ಉದ್ದೇಶವಾಗಿದೆ ಎಂದು ಹೇಳಿದರು.

ಮ. ಅರೆಯಡ ಸುಬ್ಬಯ್ಯನವರು ನಮ್ಮ ದೇಶಕ್ಕೆ ಸಂಪೂರ್ಣ ಪ್ರಾಂತೀಕ ಸ್ವರಾಜ್ಯ ಕೊಡುವಂತೆ ಕೇಳಬೇಕೆಂದು ಹೇಳಿದರು. ಮ. ಮಾದಂಡ ಮಂದಣ್ಣನವರು ಪ್ರಾಂತೀಕ ಸ್ವರಾಜ್ಯ ನಡಿಸಲು ಹಣವಿಲ್ಲವೆಂದು ಹೇಳುತ್ತಾರೆ. ಈಗ ಉದ್ಯೋಗಸ್ಥರ ಸಂಬಳ ಬಹಳ ಹೆಚ್ಚಾಗಿದೆ. ಎರಡು ಸಾವಿರ ರೂಪಾಯಿ ಸಂಬಳದ ಕಮಿಷನರು ಅವಶ್ಯವಿಲ್ಲ. ಇತರ ಉದ್ಯೋಗಸ್ಥರಿಗೆ ಇಷ್ಟು ದೊಡ್ಡ ಸಂಬಳ ಕೊಡುವುದು ಅವಶ್ಯವಿಲ್ಲ. ಪೂರ್ವದಲ್ಲಿ ಸುಭೇದಾರರು 50 ರೂ. ಒಳಗೆ ಸಂಬಳದಲ್ಲಿ ಕೆಲಸ ಮಾಡುತ್ತಿದ್ದರು. ನಮಗೆ ಸಂಪೂರ್ಣ ಪ್ರಾಂತೀಕ ಸ್ವರಾಜ್ಯ ಕೊಡಲಿ, ನಮ್ಮ ಕೆಲಸವನ್ನು ನಾವು ಮಾಡುತ್ತೇವೆಂದು ಹೇಳಿದರು. ಮ ಗಳಾದ ಮಂಡೇಟಿರ ಅಪ್ಪಯ್ಯನವರು. ಮತ್ತು ನಾಪನೆರವಂಡ ಪೊಣ್ಣಪ್ಪನವರು ಮ. ಮಂದಣ್ಣನವರ ಮಾತಿಗೆ ಒತ್ತಾಸೆಯಾಗಿ ಮಾತಾಡಿದರು.

ಮ. ಬಿದ್ದಂಡ ಬೋಪ್ಪಯ್ಯನವರು ಕೊಡಗೇತರರು, ಲಿಂಗಾಯಿತರು, ಗೌಡುಗಳು ಕೊಡಗನ್ನು ಮದ್ರಾಸಿಗೆ ಸೇರಿಸಬೇಕೆಂದೂ, ಇಲ್ಲದಿದ್ದರೆ ಮೈಸೂರಿಗೆ ಬೇಡವೆಂದೂ ಸರಕಾರಕ್ಕೆ ಜವಾಬು ಕೊಟ್ಟಿರುತ್ತಾರೆ. ನಾವು ಅರ್ಧ ಪಾಲು ಜನರು ಪ್ರಾಂತೀಕ ಸ್ವರಾಜ್ಯ ಕೊಡಬೇಕೆಂದೂ, ಅರ್ಧ ಪಾಲು ಜನರು ಮದ್ರಾಸಿಗೆ ಸೇರಿಸಬೇಕೆಂದೂ ಕೇಳಿದರೆ ಸರ್ಕಾರದವರು ಯಾವುದನ್ನೂ ಕೊಡುವುದಿಲ್ಲ. ನಾವೆಲ್ಲರೂ ಪರಸ್ಪರ ಚರ್ಚಿಸಿ ಒಗ್ಗಟ್ಟಿನಿಂದ ಒಂದು ಅಭಿಪ್ರಾಯ ಕೊಡಬೇಕು. ಸ್ಲೈಮನ್ ಕಮಿಷನರು ಕೊಡಗಿನ ಈಗಿನ ಆಡಳಿತ ಕ್ರಮವನ್ನು ಬದಲಾಯಿಸಲು ಕಾರಣವಿಲ್ಲವೆಂದು ರಿಪೋರ್ಟು ಬರೆದಿರುವರು. ಈ ರಿಪೋರ್ಟಿಗೆ ಸರ್ಕಾರದವರು ಬೆಲೆ ಕೊಡುತ್ತಾರೆಯೇ ಹೊರತು ನಮ್ಮ ಮಾತು ಕೇಳುವುದಿಲ್ಲ. ಹೀಗಿರುವಾಗ ನಾವೆಲ್ಲರೂ ಇತರ ಕೋಮಿನವರೊಡನೆ ಒಗ್ಗಟ್ಟಾಗಿ ಕೇಳಿದರೆ ಸರ್ಕಾರದವರು ಏನಾದರೂ ಕೊಟ್ಟಾರು. ಹಣದ ಅಡಚಣೆಯಿಂದ ಸಂಪೂರ್ಣ ಪ್ರಾಂತೀಕ ಸರ್ಕಾರ ನಡಿಸಲು ಆಗುವುದಿಲ್ಲವೆಂದು ಸ್ಲೈಮನ್ ರಿಪೋರ್ಟು ಇದೆ. ನಮ್ಮ ವ್ಯಕ್ತಿತ್ವವನ್ನು ಕಳಕೊಳ್ಳದಂತೆ ನಮ್ಮನ್ನು ಸಿಂದು ಮತ್ತು ಬಿರಾರಿನಂತೆ ಮದ್ರಾಸಿನ ಒಂದು ಡಿಸ್ಟ್ರಿಕ್ಟ್ [illegible] ಮಾಡುವಂತೆ ಕೇಳಬೇಕೆಂದರು.

ಮ. ಪರವಂಡ ಗಣಪಯ್ಯನವರು [illegible]

[illegible] ದೇಶವನ್ನು ನಾವು ಆಳಿಕೊಳ್ಳುತ್ತೇವೆಂದು ಹೇಳಿದರು.

ಮ. ಉದಿಯಂಡ ಮಾಚೈಯ್ಯನವರು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ತನ್ನ ಅಭಿಪ್ರಾಯವನ್ನು ಮೀಟಿಂಗಿನಲ್ಲಿ ತಿಳಿಸುತ್ತೇನೆಂದು ಕಾಗದ ಬರೆದಿರುತ್ತಾರೆ. ಅವರ ಅಭಿಪ್ರಾಯವನ್ನು ಹೇಳಬೇಕೆಂದು ಕೇಳಿದರು.

ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ನಾನು ಹೇಳಬೇಕೆಂದು ಇದ್ದಿದ್ದನ್ನೆಲ್ಲಾ ನೀವು ಹೇಳಿದ್ದೀರಿ. ಹೆಚ್ಚಿಗೆ ಹೇಳಲಿಕ್ಕೆ ನನಗೇನೂ ಇಲ್ಲ. ಈಗ ಚರ್ಚೆ ನಡೆದುದರಲ್ಲಿ ಯಾವ ಅಂಶವೂ ಸ್ಪಷ್ಟವಾಗಿ ಕಾಣುವುದಿಲ್ಲ. ಕೊಡಗು ಪ್ರತ್ಯೇಕವಾಗಿದ್ದರೆ ನಷ್ಟವೇನು? ಇಲ್ಲದಿದ್ದರೆ ಲಾಭವೇನು? ಎಂಬುವುದನ್ನು ಯಾರಾದರೂ ಹೇಳಿದರೆ ಅದಕ್ಕೆ ನಾನು ಜವಾಬು ಕೊಡುತ್ತೇನೆ. ಪ್ರಾಂತೀಕ ಸ್ವರಾಜ್ಯ ಹೇಗೆ ನಡೆಸಬೇಕೆಂದು ನನ್ನಿಂದ ಅಭಿಪ್ರಾಯ ಕೊಡಲಿಕ್ಕೆ ಆಗುವುದಿಲ್ಲವೆಂದು ಹೇಳಿದರು.

ಮ. ಪಟ್ಟಮಾಡ [illegible] ನಮಗೆ ಸಂಪೂರ್ಣ ಪ್ರಾಂತೀಕ ಸ್ವರಾಜ್ಯ ಕೊಡಬೇಕು, [illegible] ಸೇರಿಸುವಂತೆ ಕೇಳಬೇಕೆಂದು ಹೇಳಿದರು.

ರಾ. ಬಾ. ಪಟ್ಟಮಾಡ ದೇವಯ್ಯನವರು ನಾವು ಪ್ರತ್ಯೇಕವಾಗಿದ್ದು ಮೆಲ್ಲ ಮೆಲ್ಲಗೆ ಮೆಟ್ಟಲು ಹತ್ತಿಕೊಂಡು ಹೋಗಬೇಕು, ಒಂದೇ ಸಾರಿ [illegible] ಸರ್ಕಾರದವರು ನಮಗೆ ಅವರವರ ಯೋಗ್ಯತಾನುಸಾರ ಉದ್ಯೋಗ ಕೊಡುತ್ತಾರೆ. ನಾವು ಪ್ರತ್ಯೇಕವಾಗಿರಬೇಕೆಂದು ಹೇಳಿದರು.

ಬಿದ್ದಂಡ ಬೋಪ್ಪಯ್ಯನವರು ಹಿಂದೆ ಹೇಳಿದವರು ಪೂರ್ಣ ಸ್ವರಾಜ್ಯಕ್ಕೆ ಚಳವಳ ನಡಿಸಿ ಹಾರುತ್ತಾ ಹೋಗುವಾಗ ನಾವು ಮೆಲ್ಲ ಮೆಲ್ಲನೆ ಮೆಟ್ಟಲು ಹತ್ತಬೇಕೆಂದು ಹೇಳುವುದು ಬಹಳ ವ್ಯಸನಕರದ ಮಾತು. ಈಗಿನ ಆಡಳಿತವು ಬದಲಾಗಬೇಕು. ಎಲ್ಲರೂ ಏಕೋಭಾವದಿಂದ ಕೇಳಿದರೆ ಪ್ರಯೋಜನವಾಗುತ್ತದೆಯೇ ಹೊರತು ಇಲ್ಲದಿದ್ದರೆ ನಮಗೆ ಏನೂ ಸಿಕ್ಕುವುದಿಲ್ಲ ಎಂದು ಹೇಳಿದರು.

ಪೂರ್ಣ ಪ್ರಾಂತೀಕ ಸ್ವರಾಜ್ಯ ಕೇಳಬೇಕು, ತಪ್ಪಿದರೆ ಮದ್ರಾಸಿಗೆ ಸೇರಿಸಬೇಕೆಂಬ ಮ. ಪಟ್ಟಮಾಡ ಕುಂಞಪ್ಪನವರ ಅಭಿಪ್ರಾಯವನ್ನು ಪ್ರಾಂತೀಕ ಸ್ವರಾಜ್ಯ ಕೊಡದಿದ್ದರೆ ಆ ಮೇಲೆ ಕೇಳಬಹುದೆಂದು ತತ್ಕಾಲಕ್ಕೆ ಬಾಕಿ ಮಾಡಿ, ಕೊಡಗಿಗೆ ಸಂಪೂರ್ಣ ಪ್ರಾಂತೀಕ ಸ್ವರಾಜ್ಯ ಕೊಡಬೇಕೆಂದು ಕೇಳುವಂತೆ ಮಾತಾಡಿದವರಲ್ಲಿ ಹೆಚ್ಚಿನವರ ಅಭಿಪ್ರಾಯವಾಗಿತ್ತು. ಯಾವ ಸಂಗತಿಯನ್ನು ಓಟಿಗೆ ಹಾಕಲಿಲ್ಲ. ಅಧ್ಯಕ್ಷರಿಗೆ ವಂದನೆಯನ್ನರ್ಪಿಸಿ ಮೀಟಿಂಗು ಬರಕಾಸ್ತಾಯಿತು.

'ಜನ್ಮ ಭೂಮಿ'

Reg. No. M. 1550.
if not delivered please return to
"KODAGU" OFFICE MERCARA.

ಕೊಡಗು.

ಸತ್ಯೇನ ಭೂಷಯತಯಶ_ವಿದ್ಯಾ ಶೀಲ ಪ್ರಯತ್ನಕಾರ್ಯ ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಮೂಚಿಮಂಡ ಯಂ. ಗಣಪತಿ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೨ | ಮಡಿಕೇರಿ, ಸನ್ ೧೯೩೨ನೇ ಇಸವಿ ಜೂನ್ ತಾರೀಕು ೧೭ ನೇ ಶುಕ್ರವಾರ. | ಸಂಚಿಕೆ ೩

SARI PIN.

BRACELETS.

NECKCHAINS.

EAR-RINGS.
(Thodus)
Cut-rubys Rs. 25 to 50
With diamond in centre Rs. 80 to 120

Gold Rs. 10
Set rubys forming any letter Rs. 12



NOSE-RINGS.
Diamond in small size of best quality Rs. 35 & upwards according to size.

MARRIAGE PRESENTATIONS!

Attractive and inexpensive articles ready in stock. Prompt execution. Details on enquiry free with catalogue. Numerous customers in Coorg thoroughly satisfied with reliable service. Testimonials pouring in.

Telegrams: 'PRECIOUS.'

V. Subramaniaier
Jeweller,

Telephone: 3145.

CATALOGUE ON ENQUIRY.

Post Box 423, Triplicane, P. O., MADRAS.

MARRIAGE PRESENTATIONS.

Estimates free on enquiry.

Silver Guindys, Photo lockets, Dimond nose. screws, cut-ruby ear-rings. etc., etc., etc., in all prices. Very attractive. Prices most moderate.

Designs free on enquiry.

Pendant.



Tumblers with stand



Fancy plate!

52—30

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್ (ಕೋ ಅಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.
(ಸ್ಥಾಪಿತವಾದದ್ದು 1922ರಲ್ಲು)

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	26,800
ಜಮೂಬಂದ ಠೇವಣಾತಿ	—	2,50,301

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರ ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು,	ಟ್ರೆಜರರ್
ಕೋದಂಡ ಅಪ್ಪಯ್ಯನವರು	ಮನೆಯಪ್ಪಂಡ ಚೆಂಗಪ್ಪ
ರಾವ್ ಬಹದ್ದೂರ್.	ನವರು.

ಸೆಕ್ರೆಟರಿ
ಸಿ. ಯಸ್. ವೆಂಕಪ್ಪಯ್ಯನವರು, ಬ.ಎ, ಬ.ಎಲ್
ತಾರೀಖು 1—7—1931.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.
ಉತ್ತರ ಕೊಡಗಿಗೆ ಶ್ರೀ ಚಾರಿಂದ ಮಾದಯ್ಯನವರು,

ಸಬ್ ಏಜೆಂಟರುಗಳು.
ವೀರರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು, (ಪಾದಿಭಂಡಾರ.)
ಸಾಪ್ಫೋಕ್ಲು ಎಮ್. ಆರ್. ವೆಂಕಪ್ಪಯ್ಯನವರು.
ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಸಿ. ಜಿ. ಮುದ್ದಪ್ಪಯ್ಯನವರು.
ಮತ್ತು ಅರಮಣಮಾಡ ಪಿ ಕಾರ್ಯಪ್ಪನವರು,
ಹುದಿಕೇರಿ & ತಿತಿಮತ್ತಿ—ಮೆ. ಜಿ. ಮಾದಪ್ಪಯ್ಯನವರು.
ಸುಂಟಿಕೊಪ್ಪ—ಮೆ. ಅಪ್ಪಚಟ್ಟೋಳಂಡ ಮಾಚಯ್ಯನವರು.

ಸೂಚನೆ.—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಿಸಲು ಅತ್ಯವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಬರಾದು ಫಾರಮುಗಳೂ, ಜಮ್ಮ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಬರಾದು ಫಾರಮುಗಳೂ, ಸ್ಟೋರ್ ಕೀಪರ್ ಬರಾದು ಫಾರಮುಗಳೂ, ಓನರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮಾ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.
ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.
ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,78,322 ಜನರಿಗೆ 58 ಕೋಟಿ ರೂ.
ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ರಷ್ಟಂಶ ಮೀರದ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದಾಗಿದೆ.
ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.
ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಬೆಂಬಲ ಪ್ರೋತ್ಸಾಹವನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬುದು ಅದರ ಹಿಂದಿನ ದಾಖ್ಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು,

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ಮೊಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಢಕ್ಕಾ	ಲಖ್ನೋ	ಪಾಟ್ನಾ	ಸುಕ್ಕೂರು
ಅಲಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಡಾರ್ಜಿಲಿಂಗ್	ಮಂಡಲೆ	ರಾಯಪುರ	ತಿರುವೆಂಡ್ರಮ್
ಫಿರೋಜಾಬಾದ್	ಕರಾಚಿ	ಮಂಗಳೂರು	ರಾಂಚಿ	ವಿಶಾಖಪಟ್ಣ

[52—15

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ. ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
52—22 ಗಿರಿಗಾಂವ, ಮುಂಬಯಿ.

ಇಂಡಿಯನ್ ಇನ್ಶ್ಯೂರೆನ್ಸ್ ಕಂಪೆನಿಗಳಿಗೇನೇ ಜೀವ ವಿಮೆ ಮಾಡಿರಿ.

ದಿ ಬೆಂಗಾಲ್ ಇನ್ಶ್ಯೂರೆನ್ಸ್ ಎಂಡ್ ರಿಯಲ್ ಪ್ರಾಪರ್ಟೀ ಕಂಪೆನಿ ಲಿಮಿಟೆಡ್, ಹೆಡ್ ಆಫೀಸ :—8 ಡಾಲ್ ಹೌಸಿ ಸ್ಕ್ವೇರ್ (ಈಸ್ಟ್) ಕಲ್ಕತ್ತ, ಸಂಸ್ಥಾಪನೆ 1919

ನವಸಂಸ್ಕೃತಿಯು ಬೆಳೆದಷ್ಟಕ್ಕೆ ಅದರೊಡನೆ ಅದಕ್ಕೆ ಸಂಬಂಧಪಟ್ಟಿರುವ ಆರ್ಥಿಕ ಪರಿಸ್ಥಿತಿಯು ಬೆಳೆಯುತ್ತದೆ. ಇಂಥಹ ಸಮಯದಲ್ಲಿ ಜೀವವಿಮೆ ನಿಯಮವು ಒಂದು ವರವೆಂದೆಣಿಸಲ್ಪಟ್ಟಿದೆಯಲ್ಲದೆ, ಅದು ಸಮಾಜರಂಗದಲ್ಲಿ ಜನರಿಗೊಂದು ಅತ್ಯಗತ್ಯ ವಿಷಯವೆಂದೂ ತಿಳಿದು ಬಂದಿದೆ. ಅದನ್ನು ಈಗೀಗ ಗಣಿತಶಾಸ್ತ್ರ ಪ್ರಕಾರವಾಗಿಯೇ ಜತನದಿಂದ ಪರಿಪಾಲಿಸಿಕೊಂಡೇ ಬರುವಂತಾಗಿದೆ.

ಈ ಕಂಪೆನಿಯು ಸರಕಾರದಲ್ಲಿ ಕಂಪೆನಿಯ ಭದ್ರತೆಗೋಸ್ಕರ 2 ಲಕ್ಷ ರೂಪಾಯಿ ಠೇವಣಾತಿಯನ್ನು ಇಟ್ಟಿದೆ. ಇದು ಇನ್ಶ್ಯೂರೆನ್ಸ್ ಕೆಲಸದಲ್ಲಿ ಒಳ್ಳೆ ಗುರುತಿರುವ ಸದ್‌ಗೃಹಸ್ಥರ ಮುಂದಾಳುತನದಿಂದಲೇ ನಡೆಯುತ್ತದೆ. ಈ ಕಂಪೆನಿಯು ಆಕರ್ಷಣೀಯವಾದ ಕೆಲವು ಸೂತ್ರಗಳ ಮೇರೆಗೆ ಅತೀ ಸುಲಭ ಪ್ರೀಮಿಯಮ್ ದರದಿಂದ ಪೋಲಿಸಿಗಳನ್ನು ಕೊಡುತ್ತದೆ. ಇದರ ಶರ್ತಗಳು, ನಿಯಮಗಳು ಸುಲಭ ಗ್ರಾಹ್ಯವಾಗಿವೆ; ಅನುಕೂಲದ್ದಾಗಿವೆ. ಅಲ್ಲದೆ ಬಹು ಉದಾತ್ತವೂ ಆಗಿವೆ. ಹೆಚ್ಚಿನ ಮಾಹಿತಿಗೆ ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಿರಿ.

ಯಂ. ಯಸ್. ಐಯ್ಯಪ್ಪ,
ಆರ್ಗನೈಸರ್,
ಸ್ಕೂಲ್‌ರೋಡ್, ಮಡಿಕೇರಿ.
ಅಥವಾ
ಆರ್. ಸಿ. ಸೆನ್‌ಗುಪ್ತ,
ಬ್ರಾಂಚ್ ಸೆಕ್ರೆಟರಿ,
12—8 28, ಅಂಗಪ್ಪನಾಯಕ್ ಸ್ಟ್ರೀಟ್,
ಜಿ. ಟಿ. ಮದರಾಸ್.

Wanted agents in every Taluk of Coorg on very liberal terms.

Printed & published by M. M. Ganapathy at "Kodagu" Press Mercara for "Kodagu" Ltd.

ಜನರಲ್ ಅಷ್ಶೂರೆನ್ಸ್ ಸೊಸೈಟಿ.

ಅಜಮೀರ್.

ನಮ್ಮ ಆಯವ್ಯಯದ ಪಟ್ಟಿಯೇ ನಮ್ಮ ಅಭಿವೃದ್ಧಿಯನ್ನು ವ್ಯಕ್ತಗೊಳಿಸುತ್ತದೆ.

ವರ್ಷ	ಮೇಲ್ಪಟ್ಟ ವರ್ಷಾದಾಯ	ಮೇಲ್ಪಟ್ಟ ಮೂಲಧನ	ಖರ್ಚು ವರಮಾನದ ಶೇಕಡ
1911	46,248	49,442	82.9
1921	2,92,627	6,53,350	43 2
1931	12,50,000	40,00 000	28.2

ಬೋನಸ್ಸು.

ಹುಕುಂ ನಫೆ ದೊರಕುವ ಜೀವಾವಧಿ ಪಾಲಿಸಿಗಳ ಮೇಲೆ ವರ್ಷ ಒಂದಕ್ಕೆ ಶೇಕಡ 22½

ಚೆನ್ನಾಗಿ ಕೆಲಸಮಾಡಿ ಅಭಿವೃದ್ಧಿ ಸ್ಥಿತಿಯಲ್ಲಿರುವ ಈ ಸೊಸೈಟಿಯಲ್ಲಿ ವಿಮೆ ಮಾಡಿ ಕಡಿಮೆ ಪ್ರೀಮಿಯಂ ಪಾವತಿ ಮಾಡುವ ಸೌಲಭ್ಯ ಹೊಂದಿ ಅಥವಾ ಈ ಕಂಪೆನಿಯ ಏಜಂಟರಾಗಿ ಕೆಲಸಮಾಡಿ ಉತ್ತಮ ಕಮಿಶನ್ ದರದ ಪ್ರಯೋಜನ ಹೊಂದಿ.

ಹೆಚ್ಚು ವಿಚಾರಗಳಿಗೆ ಈ ವಿಳಾಸಕ್ಕೆ ಬರೆಯಿರಿ:—

ಎ. ರಾಮಚಂದ್ರರಾವ್,
ಸುಪರಿಂಟೆಂಡೆಂಟ್,
ಮಿಂಟೋ ಆಸ್ಪತ್ರೆ ಬಳಿ,
ಬೆಂಗಳೂರು.

52—7

ಇಂಡಿಯಾ ಎಕ್ವಿಟೇಬಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

(ಸ್ಥಾಪಿಸಲ್ಪಟ್ಟದ್ದು 1908.)

ಪೋಲಿಸಿಗಳು ಕಳಕೊಳ್ಳುವಂತವುಗಳಲ್ಲ.

ಯಾವ ತಡೆಯೂ ಇಲ್ಲದೆ ಪ್ರತಿ ವರ್ಷವು ಬೋನಸ್ಸು.

ಹಕ್ಕು ಬಾಧ್ಯಸ್ಥರಿಗೆ ಸರಿಯಾಗಿ ಹಣ ಕೊಡಲ್ಪಡುವದು ಇಲ್ಲದಿದ್ದರೆ ಬಡ್ಡಿಯು ದೊರಕುವುದು.

ಹೆಡ್ಡ್ ಆಫೀಸು:—

102· ಕ್ಲೈವ್ ಸ್ಟ್ರೀಟ್, ಕಲ್ಕತ್ತಾ.

I. E., C. P. S. 12—3

ಗಮನಿಸಿರಿ! ಪರೀಕ್ಷಿಸಿರಿ!

ಅಂದವಾಗಿ ಫೋಟೋ ತೆಗೆಯುತ್ತಾರೆ.

ಧೀರ್ಘ ಕಾಲ ಬಾಳಿಕೆ ಬರುತ್ತೆ.

ಹದಿನಾಲ್ಕು ವರ್ಷಗಳಿಂದ ಮೈಸೂರಿನಲ್ಲಿ ಹೆಸರುವಾಸಿಯಾದ ಮೆಸರ್ಸ್. ಶಂಕರ್ & ಕಂಪೆನಿಯವರು ಕೊಡಗು ದೇಶದ ಭಗಿನಿ ಬಾಂಧವರ ಸಲುವಾಗಿ ಮಡಿಕೇರಿಯಲ್ಲಿ ಬ್ರ್ಯಾಂಚ್ ಓಪನ್ ಮಾಡಿರುತ್ತಾರೆ.

ಇಲ್ಲಿ ದೀರ್ಘಕಾಲ ಬಾಳಿಕೆ ಬರುವಂತೆ ಬೇಕಾದ ನಮೂನೆಯಲ್ಲಿ ಫೋಟೋ ತೆಗೆಯುವುದು. ಫೋಟೋ ಎನ್‌ಲಾರ್ಜ್ ಮಾಡುವುದು. ಆಯಿಲ್ ಪೇಂಟಿಂಗ್ ಕೆಲಸಗಳು. ರಬ್ಬರ್ ಮೊಹರುಗಳ ಕೆಲಸಗಳು ಸದಾ ನಡೆಯುತ್ತವೆ. ಕ್ಯಾಮರಾ ಮೊದಲಾದ ಫೋಟೋ ಕೆಲಸದ ಎಲ್ಲಾ ಸಾಮಾನುಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ. ಅಮೆಚ್ಯೂರ್ಸ್ ಕೆಲಸಗಳು ಅಂದವಾಗಿ ತಯಾರಿಸಿ ಸಕಾಲಕ್ಕೆ ದೊರೆಯುತ್ತವೆ.

ದರಗಳ ಬಗ್ಗೆ ವಿಚಾರಿಸಿರಿ. ಒಂದಾವರ್ತಿ ಪರೀಕ್ಷಿಸಬೇಕಾಗಿ ವಿನಂತಿ.

ಶಂಕರ್ & ಕಂಪನಿ
ಕಾರೊನೇಶನ್ ವಾರ್ಡ್,
ಮಡಿಕೇರಿ.

12—10.



ಕೋವಿಗಳು, ಕತ್ತಿಗಳು, ಚರ್ಚಿಗಳು, ತೋಟಗಳು, ಕೇಪುಗಳು, ಮದ್ದು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS.

Largest Importers of Firearms and Ammunition

Cheapest priced firm in India,

210 Abdul Rehiman Street, BOMBAY.

24—14

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

1. ಉತ್ತಮ ತರಹ ಒಂದು ಸೆಟ್ ಜರ್ಮನ್ ರೀಡ್ಸ್ ಹಾಕಿರುವ ಸಿಂಗಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 20—0—0
   " ಮತ್ತು 22—8—0
2. ಡಿಟೋ ಉತ್ತಮ ತರಹ ಹಾರ್ಮೋನಿಯಂ
   " 1ಕ್ಕೆ ರೂ. 25—0—0
   " ಮತ್ತು 27—8—0
3. ಡಿಟೋ ಉತ್ತಮ ತರಹದ್ದು, ದೂಳು ಬೀಳದಂತೆ ಕೇಸಿನ ಮೇಲೆ ಪೂರ್ತಿ ಮುಚ್ಚಳವುಳ್ಳ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ ರೂ. 27—8—0
4. ಶಾಶ್ವತವೂ, ಬಂದೋಬಸ್ತೂ, ಸುಸ್ವರವುಳ್ಳದ್ದೂ, ಅನೇಕ ವರ್ಷಗಳ ವರೆಗೆ ಬಾಳಿಕೆ ಬರತಕ್ಕದ್ದೂ ಆದ ಹೊಸದಾಗಿ ಸಪ್ಲೈ ಆಗಿರುವ ಫ್ರೆಂಚ್ ರೀಡ್ಸ್ ನಮೂನೆ ಇರುವ ನಮ್ಮ ಹೆಸರಿನ ರೀಡ್ಸ್ ಹಾಕಿರುವ "ಸಿದ್ಧಪ್ಪಾಸ್ ಫ್ಲೂಟ್" ಸಿಂಗಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 42—8—0
5. ಉತ್ತಮ ತರಹ 2 ಸೆಟ್ ಜರ್ಮನ್ ರೀಡ್ಸ್ ಹಾಕಿರುವ, ದೂಳು ಬೀಳದಂತೆ ಕೇಸಿನ ಮೇಲೆ ಪೂರ್ತಿ ಮುಚ್ಚಳವುಳ್ಳ ಡಬ್ಬಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ ರೂ. 37—8—0
   ಉತ್ತಮ ತರಹ 2 ಸೆಟ್ ಜರ್ಮನ್ ಮೇಕ್ ರೀಡ್ಸ್ ಹಾಕಿರುವ, ಕೈನಿಂದಾಗಲೀ ಅಥವಾ ಕಾಲಿನಿಂದಾಗಲೀ ಬಾರಿಸಲು ಅನುಕೂಲಿಸುವಂತೆ ತಯಾರಿಸಿರುವ "ಸ್ಪೆಷಲ್ ಫ್ಲೂಟ್" ಡಬ್ಬಲ್ ರೀಡ್ಸ್ ಹ್ಯಾಂಡ್ ಲೆಗ್ ಹಾರ್ಮೋನಿಯಂ 1ಕ್ಕೆ ರೂ. 78—8—0

ನಮ್ಮ ಟಿಂಬರ್ ಡಿಪೋನಲ್ಲಿ ಕಟ್ಟಡಗಳಿಗೂ, ಫರ್ನಿಚರ್ ತಯಾರಿಸಲೂ ಬೇಕಾದ ಎಲ್ಲಾ ನಮೋನೆ ನಾಟಾಗಳನ್ನು ಸುಲಭ ದರದಿಂದ ಬಿಕರಿಗಿಟ್ಟಿರುವುದಲ್ಲದೇ, ಗಿರಾಕಿಗಳು ಅಪೇಕ್ಷಿಸುವ ಸೈಜಿಗೆ ಕುಯಿಸಿಯೂ ರಿಯಾಯಿತಿ ದರದಿಂದ ಸಪ್ಲೈ ಮಾಡುತ್ತೇವೆ. ಹೆಚ್ಚಿಗೆ ವಿಷಯಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಳಾಸ:—ಯೆಂ. ಎಸ್. ಶಿದ್ಧಪ್ಪ ಬ್ರದರ್ಸ್,
ಹಾರ್ಮೋನಿಯಂ ಮತ್ತು ಟಿಂಬರ್ ವ್ಯಾಪಾರಿಗಳು
ವಾಣೀವಿಲಾಸ ಮಾರ್ಕೆಟ್, ಮೈಸೂರು.

52—30

ಹರಿಕಥೆ ಮುಂತಾದ ಭಕ್ತಿ ಪುರಸ್ಸರವಾಗಿ ಪೂಜೆ ಮಾಡಿಸಿ, ಅಲ್ಲಿ ನೆರೆದ ಭಕ್ತ ಮಂಡಲಿಯವರಿಗೆಲ್ಲಾ ಪ್ರಸಾದ ವಿನಿಯೋಗ ಮಾಡಿಸಿ ಜನರನ್ನು ತೃಪ್ತಿಪಡಿಸಿದಲ್ಲದೆ ನೆರೆದ ಜನರಿಗೆ ದೇವರ ಮೇಲೆ ಭಕ್ತಿ ಹುಟ್ಟಿಸಿದರೆಂದು ನಂಬುತ್ತೇನೆ. ಇಂಥಾ ಸತ್ಕಾರ್ಯವನ್ನು ಮಾಡಿದ ಬೊಳ್ಳಮ್ಮನವರಿಗೂ ಮತ್ತು ಅಲ್ಲಿ ನೆರೆದ ಇತರರಿಗೂ ಸಹ ಶ್ರೀರಾಮನ ಅನುಗ್ರಹವು ಸಂಪೂರ್ಣವಾಗಿ ಆಗಿರಬಹುದೆಂದು ಬರೆದರೆ ಅದು ಎಂದೂ ತಪ್ಪಾಗಲಿಕ್ಕಿಲ್ಲ.

ಇಂಥಾ ಮಹತ್ಕಾರ್ಯಗಳನ್ನು ನಮ್ಮ ಈ ದೇಶದ ಜನರು ಮಾಡುತ್ತಲೇ ಇದ್ದರೆ ದೇಶಕ್ಕೆ ಶುಭೋದಯವೂ, ತನ್ನ ತನ್ನ ಜನ್ಮಕ್ಕೆ ಸಾರ್ಥಕ್ಯವೂ ಆಗುವುದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ ಇಂಥಾ ರಾಮಾಮೃತ ಪಾನಮಾಡಿಯವರೆಲ್ಲರು ಧನ್ಯರಾಗಿದ್ದಾರೆಂದು ತಿಳಿಸುವುದು ಅವಶ್ಯವಿಲ್ಲವಾದರೂ ಇದರಲ್ಲಿ ಕೆಲವು ಮಟ್ಟಿಗೆ ನನಗೆ ಗೊತ್ತಿದ್ದದನ್ನು ಬರೆಯುತ್ತೇನೆ. ಲಕ್ಷ್ಮಣ, ಭರತ, ಆಂಜನೇಯ, ವಿಭೀಷಣ, ಅಹಲ್ಯ ಮೊದಲಾದ ಇನ್ನೂ ಅನೇಕರು ಧನ್ಯರಾದದ್ದು ತಮಗೆ ಗೊತ್ತಿರಬಹುದು; ಈ ಸಂಗತಿ ನಾನು ತಿಳಿಸಬೇಕೆಂದಿಲ್ಲ. ಮುಖ್ಯವಾಗಿ ನಾವು ಮಾನವ ಜನ್ಮವನ್ನು ಎತ್ತಿದ್ದಕ್ಕೆ ಸಾಧ್ಯವಾದ ಮಟ್ಟಿಗಾದರೂ ಧೈರ್ಯವನ್ನು ಬಿಡದೆ ದೈವಿಕ ದೃಷ್ಟಿಯಿಂದ ಮೇಲೆ ಸೂಚಿಸಿದವರಂತೆ ಶಕ್ತ ಮಟ್ಟಿಗಾದರೂ ಸತ್ಕಾರ್ಯಗಳನ್ನು ಮಾಡುತ್ತಾ ಪರಮಾತ್ಮನ ಪ್ರೀತಿಗೆ ಪಾತ್ರರಾಗಿ, ಇಂಥಾ ಉತ್ಸವಗಳಿಗೆ ಕೂಡಿದ ಜನರಿಗೂ ಸಹ ಪುಣ್ಯವಾಪ್ತಿ ಮಾಡಬೇಕೆಂದೇ ನಾನು ಬೇಡುತ್ತೇನೆ. ಶ್ರೀಮಂತರೂ ವೃದ್ಧರಾದರೂ ಇನ್ನುಳಿದ ಬಾಲಕ, ಬಾಲಕಿಯರಿಗೂ ಸಹ ಉತ್ಸವ ಕಟ್ಟುವಂತ ಕೆಲಸವನ್ನು ಮಾಡಿದಕ್ಕೆ ಅವರಿಗೆ ಶ್ರೀರಾಮಚಂದ್ರನು ಪೂರ್ಣ ಅನುಗ್ರಹವನ್ನು ತೋರಿಸಲೆಂದು ಹೀಗೆಯೇ ದೇಶದಲ್ಲಿ ಅನೇಕ ಪುಣ್ಯ ಕಾರ್ಯಗಳನ್ನು ಮಾಡಲು ರಾಮಚಂದ್ರನು ಜನರಿಗೆ ಮನಸ್ಸುಕೊಟ್ಟು ಕಾಪಾಡಲೆಂದೂ ಬೇಡುವ.

ಪ್ರೇಕ್ಷಕ.

ಕೊಡಗು ಕಮಿಶನರ್ ಸಾಹೇಬರವರಲ್ಲಿ ವಿನಂತಿ.

ಮಹಾ ಪ್ರಭುಗಳೇ ಇತ್ತ ಸ್ವಲ್ಪ ಲಾಲಿಸಬೇಕು. ನಾಪೋಕ್ಲು ನಾಡಿನವರು ಯಾವ ಬಾಬಿನಲ್ಲು ಈ ಕೊಡಗು ದೇಶದಲ್ಲು ಹಿಂದುಳಿದಿದ್ದಾರೆಯೆಂದು ನೋಡುವ ಮುಂದಾಗಿ ತೊಳೆಗಳಲ್ಲವದಕ್ಕ ನೇತುವೆ ಇರುವದಿಲ್ಲ—ನೇತುವೆ ಇರುತ್ತಿದ್ದರೆ ಖಂಡಿತವಾಗಿ ನಮ್ಮ ಜ್ಯೂನಿಯರ್ ಚೀಫ್ ಕಮಿಶನರ್ ಸಾಹೇಬರವರು ನಾಗರ ಹೊಳೆ ಪ್ರಾಂತ್ಯದಲ್ಲಿಲ್ಲದೆ ಈ ಪ್ರಾಂತ್ಯದಲ್ಲೆ ಇರುತ್ತಿದ್ದರು. ಅಲ್ಲದೆ ನಮ್ಮ ಶಾಲೆಗಳನ್ನು ನೋಡಿ ನಮ್ಮ ನಾಪೋಕ್ಲು ಸ್ಕೂಲಿಗೆ IX ನೇ ತರಗತಿ ಬಗ್ಗೆ ಒಬ್ಬ ಮಾಸ್ಟರನ್ನು ಕೇಳಿಕೊಂಡದನ್ನು ಕೊಡುತ್ತಿದ್ದರು. ಕಕ್ಕಬೆ ಸ್ಕೂಲಿಗೆ VIII ನೇ ತರಗತಿ ತೆಂದುದಕ್ಕೆ ಕಮಿಶನರ್ ಸಾಹೇಬರಾದ ತಾವು ಒಬ್ಬ ಮಾಸ್ಟರನ್ನು ಕೊಡದೆ ಇರುತಿಲಿಲ್ಲ—ನಮ್ಮ ನಾಡಿನವರ ಇನ್ನೊಂದು ಹವಾಲ್ ಏನಂದರೆ—ಕೊಡಗಿನ ಎಲ್ಲಾ ಪ್ರಾಂತ್ಯಕ್ಕೂ ಒಬ್ಬೊಬ್ಬ ವೆಟರ್ನರಿಯನ್ನು ನೇಮಕಮಾಡಿರುತ್ತಾರೆ. ನಮ್ಮ ನಾಡಿಗಾದರೋ ಅವರ ಸುಳಿಯೇ ಇಲ್ಲ. ದನ ಕರಗಳೇ ಆರಂಬಗಾರನ ಜೀವವೆಂಬುದು ಸರಕಾರದವರಿಗೆ ತಿಳಿಯದಲ್ಲ. ಅಂಥದರಲ್ಲು ನಮ್ಮ ನಾಡಿಗೆ ವೆಟರ್ನರಿಯೂ ಇಲ್ಲ.

ಜನರ ಆರೋಗ್ಯವೇ ಮುಖ್ಯ. ಜನರು ಆರೋಗ್ಯದಲ್ಲು ಇದ್ದರೆ ವ್ಯವಸಾಯ ಚೆನ್ನಾಗಿ ನಡಸಿ ಸರಕಾರ ತೀರ್ವೆ ಕಾಲಕ್ಕೆ ಸರಿಯಾಗಿ ಕಟ್ಟುವರೆಂದು ಹೇಳಬೇಕಾದಿಲ್ಲ. ಹೀಗಿರುತ್ತ ನಮ್ಮ ಈ ಪ್ರಾಂತ್ಯಕ್ಕೆ ರಾಯಲನ್ನರು ಉಳಕೊಳ್ಳಲು ಒಂದು ಮನೆ (ವಾರ್ಡ್) ಸಹ ಇಲ್ಲ. ಯಾವದನ್ನು ಕೇಳಿದರೂ ದುಡ್ಡಿಲ್ಲ, ದುಡ್ಡಿಲ್ಲವೆಂಬದೇ ಇವರ ಬಾಯಿಯಲ್ಲು ಬಾಯಿ ಪಾಠವಾಗಿರುತ್ತೆ. ಹಣ ಪಡೆದ ಕೂಡಲೆ ಮಾಡಲಾಗುವದೆಂಬ ಭರವಸೆ ಮಾತ್ರ ನಮಗೆ ದೊರೆಯುತ್ತೆ.

ತಾರೀಕು 23 ರಲ್ಲು ಕಕ್ಕಬೆ ಸ್ಕೂಲಿನ ಬಾಬಿನಲ್ಲು ಹೊಸದ ಇನ್ಸ್ಪೆಕ್ಟರಿಗೆ ಏನೋ VIII ತರಗತಿ ಈಗ ಇರುವ ಮಾಸ್ಟರುಗಳಿಂದ ನಡೆಸಿಕೊಂಡು ಬರಲಿ ಇನ್ನೊಂದು ಮಾಸ್ಟರಿಗೆ ಮಂಜೂರ್ ಮಾಡುತ್ತೇವೆಯೆಂದು ಒಂದು ಭರವಸೆಯನ್ನು ಕೊಟ್ಟಿರುತ್ತಾರೆ. ಅದಕ್ಕೆ ಇನ್ನೇನು ಮಾಡುತ್ತೇವೆ ಸುಮ್ಮನಿರಬೇಕು. ಶಾಲಾ ಸಬ್ ಇನ್ಸ್ಪೆಕ್ಟರು ಕಕ್ಕಬೆ ಸ್ಕೂಲಿಗೆ ಒಬ್ಬ ಮಾಸ್ಟರ್ ಮಂಜೂರ್ ಮಾಡಬೇಕಾಗಿ ಬರೆದರ ಕೊಟ್ಟರು ನ ಕೂಲಿಗೆ ಮಂಜೂರ್ ಮಾಡದೆಂದು ಹುಕುಂ ಯಾವ ಕಾರಣವೆಂದು ನೋಡಿದರೆ ಸದರಿ ಸ್ಕೂಲ್ ಉತ್ತರ ಕೊಡಗು. ನಮ್ಮ ಸ್ಕೂಲ್ ದಕ್ಷಿಣ ಕೊಡಗು ಉತ್ತರ ಕೊಡಗಿನವರೇ ಉದ್ಯೋಗಸ್ಥರು. ದೈವದಿಂದ ಒಬ್ಬ ದೊರೆಯುಬೇಕಾದರೆ ಉತ್ತರ ಕೊಡಗಿನವರೇ ಬೇಕಾದುದರಿಂದ ಅವರಿಗೇನೆ ಮಿತಿಮೀರಿದ ಸಹಾಯ ಕೊಡಬೇಕಾದದ್ದು ನ್ಯಾಯವಲ್ಲವೇ?

ಈಗ ಎರಡು ಜನ ಯುವಕರು ವೆಟ್ಟರ್ನರಿ ಪರೀಕ್ಷೆಯಲ್ಲು ಪಾಸಾಗಿ ಬಂದಿರುತ್ತಾರೆ. ಅದರಲ್ಲು ಒಬ್ಬರು ಇದೇ ನಾಡಿನವರಾಗಿರುತ್ತಾರೆ. ಇವರಿಗೆ ಈಗ ಇರುವವರಿಗೆ ಕೊಡುತ್ತಿರುವ ಸಂಬಳದ ಅರ್ಧ ಭಾಗ ಕೊಟ್ಟರೂ ಕೂಡ ಕೆಲಸವನ್ನು ಕೈಗೊಳ್ಳುವರಾಗಿ ನಂಬುತ್ತೇನೆ. ಈಗ ಇವರನ್ನು ಬಿಟ್ಟರೆ ಇವರು ಪರದೇಶದಲ್ಲು ಕೆಲಸಕ್ಕೆ ಹೋದರೆ ನಮಗೆ ಬೇಕಾಗುವಾಗ್ಗೆ ಎಲ್ಲಿಂದ ತರುವದು? ಆದುದರಿಂದ ಈ ನಾಡಿನವರಾಗಿಯೂ ಸರಕಾರದವರ ಕೃಪೆಗೆ ಪಾತ್ರರಾಗಿ ಕೆಲಸ ದೊರೆ

ಯುವದೆಂಬ ಭರವಸೆಯಲ್ಲು ಹೋಗಿ ಖರ್ಚು ಮುಟ್ಟಿಸಿ ಪಾಸಾಗಿ ಬಂದವರನ್ನೇ ಸಹುವೈದ್ಯರಾಗಿ ನಾಪೋಕ್ಲು ಹೆಡ್ ಕ್ವಾರ್ಟರಾಗಿ ನೇಮಿಸಿದರಿಂದ ಈ ನಾಡಿನ ಗರೀಬ ರೈತರ ದನಕರಗಳ ಪರಿಪಾಲನೆ ಮಾಡುವದಾಗಿ ಕೋರುತ್ತೇನೆ.

ನಾಲ್ಕುನಾಡಿನ ರೈತ.

ಸ್ವದೇಶೀ ಪ್ರೇಮ.

ಸರಸ್ವತಿ ಲಕ್ಷ್ಮಿಯರ ಪ್ರತಿಜ್ಞೆಯು ಈಗ ಪ್ರಪಂಚವನ್ನೇ ಆವರಿಸುವಂತಿದೆ. ಸಂಸ್ಕೃತಿಯಾದರೋ ತನ್ನ ಅಮೋಘವಾದ ಶಕ್ತಿಯಿಂದ ಪ್ರಪಂಚವನ್ನು ಹುರಿದುಂಬಿಸುತ್ತಿರುವಳು. ಆದರೆ ಲಕ್ಷ್ಮಿಯು ಎಂದಿನಂತೆ ಸಂಸ್ಕೃತಿಯ ಕಾರ್ಯಕ್ಕೆ ಭಂಗವನ್ನೇ ಉಯ್ಯುತ್ತಿರುವಳು. ಲೋಕದಲ್ಲಿ ವಿವೇಕವು ಹೆಚ್ಚಿದ್ದಂತೆ ದಾರಿದ್ರ್ಯವು ಬಲವಾಗುವುದು. ಪುರಾಣಾಧಾರದ ಮೇಲೆ ಚರ್ಚಿಸುವ ಸಮಯವಿದಲ್ಲವು. ಈಗಲಾದರೋ ಕಾರ್ಯೋಥ (Practical) ಆಗಬೇಕಾದ ಸಂಗತಿಯಾಗಿರುತ್ತೆ.

ಐಕ್ಯತೆಯು ಸಹ ದೃಷ್ಟಿಸದಂತಾ ಆರ್ಥಿಕ ಕಸಿವಿಸಿಯು ಪ್ರಪಂಚವನ್ನೇ ತಲ್ಲಣಿಸುತ್ತಿದೆ. ಪ್ರತಿಯೊಂದು ದೇಶವು ಈ ಪೆಟ್ಟಿನೇಟನ್ನು ಸೈರಿಸದೆ ತನ್ನ ತನ್ನ ಸುಧಾರಣೆಗೆ ಹಾದಿ ಹುಡುಕುತ್ತಿರುವದು. ಮುಖ್ಯವಾಗಿ ಪ್ರತಿ ದೇಶದ ರೈತರಿಗೆ ಈಗಿನ ಆರ್ಥಿಕ ಸ್ಥಿತಿಯು ಮಹತ್ತಾದ ಅವಶ್ಯಕತೆಯಿದೆ. ಇಂಥಾ ಕಾಲದಲ್ಲಿ ಶೇಕಡ 80 ಮಂದಿ ರೈತರನ್ನು ಹೊತ್ತಿರುವ ಭರತ ಮಾತೆಯು ಗೋಳಿಗೆ ಬಲಿಪಟ್ಟೆಂದಿರಲಾರಳು. ಪ್ರಪಂಚದಲ್ಲೆಲ್ಲಾ ಅತೀ ಬಡತನದಲ್ಲಿರುವ ಭಾರತೀಯರಿಗೆ ಇದು ಇಂಮ್ಮಡಿ ತಲ್ಲೀರದಂತಾಯಿತು. ಹಿಂದೂದೇಶದ ಯಾವ ವಿಧವಾದ ಅಭಿವೃದ್ಧಿಗಳಾಗಲೀ ಈ ಬಡತನವು ಅಡಚಣೆಯಾಗಿ ಬಂದು ದೇಶವು ಮುಂದಿರಾದ ದಾರಿದ್ರ್ಯ ಬಾಯಿಗೆ ಸವರೋಪಾಯ ತೋರದ ಎಂ "India suffers from chronic poverty Schemes of Agriculture, Education Public health and the such other nation building activities cannot be undertaken unless and until the national resources are increased' ದೇಶದ ಆರ್ಥಿಕ ಸ್ಥಿತಿಯನ್ನು ದೃಢಪಡಿಸದೆ ದೇಶೋಭಿವೃದ್ಧಿಯು ಯಾವ ವಿಧವಾದದ್ದಾದರೂ ಸಾಧ್ಯವಲ್ಲ.

ಸಂಪೂರ್ಣ ದೈವಕೃಪೆಯಿಂದ ಈ ನಮ್ಮ ಕೊಡಗೂ ಈ ಕಷ್ಟಕ್ಕೆ ಹೆಚ್ಚು ಬಲಿಯಾಗಿರುತ್ತದೆಂಬುದನ್ನು ಸದ್ಯಕ್ಕೆ ಖಂಡಿತವಾಗಿ ಹೇಳುವಂತಿಲ್ಲವೆಂದು ನಂಬುತ್ತೇನೆ. ಕೈಗಾರಿಕೆಯು ಅಲ್ಪವಲ್ಲದಿರುವದರಿಂದ ಕೊಡಗಿನ ರೈತರು ಹೆಚ್ಚು ಕಷ್ಟಪಡುತ್ತಲಿರುವರು. ಆದುದರಿಂದ ಇತರ ಪ್ರಾಂತ್ಯಗಳಿಂದ (ಕೂಡಗಲ್ಲದೆ ಬೇರೆ ಹಿಂದೂದೇಶದ ಕಡೆಯಿಂದ) ಬರುವ ಸ್ವದೇಶೀ ವಸ್ತುಗಳು ನಮಗೆ ಕೇವಲ ವಿದೇಶೀಯವು ಅದುದರಿಂದ ಎಲ್ಲಾ ನಮಗೆ ಒಂದೇ ಎಂದು ಎತ್ತಿ ಹಿಡಿಯುವಂಥವರಿಗೆ ಸ್ವದೇಶ ವಿದೇಶವೆಂಬ ವ್ಯತ್ಯಾಸವನ್ನು ತಿಳಿಯದೆ ಇರುವುದೇ (ಶ್ರದ್ಧೆ) ಕಾರಣವೆಂದು ನಂಬಬೇಕಾಗಿದೆ. ಸ್ವದೇಶಿ ಸ್ವಸ್ಕಾರವೆಂದರೆ ತನ್ನ ಸುತ್ತು ಮುತ್ತಲಿನ ಕೈಗಾರಿಕೆ ವೃದ್ಧಿಗೊಳಿಸುವುದೂ ಮತ್ತು ತನ್ನ ಉತ್ಪತ್ತಿಯನ್ನು ಪೂರ್ಣ ಸ್ವದೇಶೀ ವಸ್ತುಗಳಿಗೆ ಒದಗಿಸುವುದೇ ಸ್ವದೇಶೀ ತತ್ವವೆಂದು ನಾನು ತಿಳಿಯುತ್ತೇನೆ. ಮಹಾತ್ಮ ಗಾಂಧಿಯವರು ಮದ್ರಾಸಿನಲ್ಲಿ 'ಸ್ವದೇಶೀ' ವಿಷಯ—"After much thinking I have arrived at a definition of Swadeshi that perhaps best illustrates my meaning Swadeshi is that spirit in us which restricts us to the use and service of our immediate surroundings to the exclusion of the more remote"—ಭಾಷಣ ಮಾಡಿದರು. ಆದುದರಿಂದ ನಮ್ಮ ಕೊಡಗಿನಲ್ಲಿ ಕೈಗಾರಿಕೆಗಳಿಲ್ಲದಿದ್ದರೆ ನಾವು ಸ್ವದೇಶೀ ವಸ್ತುಗಳನ್ನೇ ಕೊಂಡುಕೊಂಡು ಹಿಂದೂದೇಶದ ಆರ್ಥಿಕ ಬೆಳವಣಿಗೆಗೆ ಉತ್ತೇಜನ ಕೊಟ್ಟರೆ ಕೊಡಗೂ ಸಹ ತನ್ನಷ್ಟಕ್ಕೆ ಅಭಿವೃದ್ಧಿಯನ್ನು ಹೊಂದುವುದರಲ್ಲಿ ಯಾವ ಸಂಶಯವೂ ಇಲ್ಲ.

ಇದಕ್ಕೋಸ್ಕರ ದೇಶಪ್ರೇಮಿಗಳಾದ ನಾವೆಲ್ಲರೂ ದೇಶೋದ್ಧಾರದ ಬಗ್ಗೆ ಮನಸ್ಸಿಟ್ಟು, ನಮ್ಮ ನಮ್ಮ ಶಕ್ತ್ಯಾನುಸಾರ ಮಟ್ಟಿಗೆ ಸ್ವದೇಶೀ ವ್ರತರಾಗಬೇಕಾಗಿದೆ. ಕಳೆದ ತಿಂಗಳ 26ನೇ ತಾರೀಖಿನ ಬೊಂಬಾಯಿ ಕ್ರಾನಿಕಲ್" ಎಂಬ ಪತ್ರಿಕೆಯು ಹೇಳಿದ್ದೇನೆಂದರೆ:—'It is the imperative duty of every son and daughter of India to help the national industries and thus assist the countless millions of the poor in the Country"—ಇದರಿಂದ ಸ್ವದೇಶಾಭಿವೃದ್ಧಿಯು ಪ್ರತಿಯೊಬ್ಬ ಭಾರತೀಯನ ಕರ್ತವ್ಯವಾಗಿದೆ. ಈ ಕರ್ತವ್ಯವನ್ನು ಪ್ರತಿಯೊಬ್ಬ ದೇಶಪ್ರೇಮಿಯು ಮತ್ತು ತನ್ನ ಕರ್ತವ್ಯವನ್ನು (Do your duty first) ಬೋಧಿಸುವ ಕರ್ಮಯೋಗಿಗಳು ಸಹ ಮಾಡುವರೆಂದಾಗಿ ನಂಬುತ್ತೇನೆ.

ರಾಜಕೀಯ ಚಳವಳಿಯಲ್ಲ. (Entirely non-political.)

ದೇಶದಲ್ಲಿ ಸ್ವದೇಶೀ ಪ್ರೇಮಿಗಳು ಅಪರಿಮಿತವಾಗಿದ್ದರೂ ಕೂಡ, ಈಗಿನ ರಾಜಕೀಯ ಚಳವಳಿಗೋಸ್ಕರ ಈ ಸ್ವದೇಶೀ ವ್ರತರು ಸದ್ಯಕ್ಕೆ ಹಿಮ್ಮೆಟ್ಟಿರುವರು. ಸ್ವದೇಶಾಭಿಮಾನವು ಎಂದಿಗೂ ರಾಜಕೀಯ ಚಳವಳಿಗೆ ಒಳಪಟ್ಟದ್ದಲ್ಲ. ('It is purely non-political, so that there is no fear that people joining—such leagues—will come into any kind of rouble. The Govt. of India in a recent Communique have given their sanction for the "Buy Indian League" Pombay Chronicle) ಈ ವಿಷಯವು ಜನರಿಗೆ ತಿಳಿದಿರುವದೇ ಕಾರಣವಾಗಿದೆಂಬುದನ್ನು ಊಹಿಸಬೇಕಾಗಿದೆ. ಮೊದಲೂ ಮೊದಲೂ ವೀರ ಉತ್ಸಾಹಿಗಳಾಗಿ ಬಾಧೆ ಧರಿಸುತ್ತಿದ್ದ ಅನೇಕ ಮಹನೀಯರೂ ವಿಚಾರವನ್ನರಿಯದೆ ಹಿಮ್ಮೆಟ್ಟಿರುವವನ್ನು ನೋಡಲು ಸಂಕಟವಾಗುತ್ತೆ. ಈ ವಿಷಯ ಇಂಡಿಯಾ ಸರಕಾರವೇ ಪ್ರಚುರ ಪಡಿಸಿ 'ಬೈ ಇಂಡಿಯನ್ ಲೀಗ್" ಎಂಬ ಸ್ವದೇಶೀ ಸಂಘ ಸ್ಥಾಪನೆಗೆ ಅನುಮತಿ ಕೊಟ್ಟಿರುವರು. ಇದರ ವಿಷಯ ಗಾಂಧಿಯವರು ಸ್ವದೇಶೀ ಎಂಬುದನ್ನು ಬಹಿಷ್ಕಾರ ಪ್ರಯುಕ್ತ ಮಾಡಿರುವದಲ್ಲವೆಂದೂ, ಪ್ರತಿಯೊಬ್ಬನ ದೈವಿಕ ನಿತ್ಯಕರ್ಮವೆಂದೂ ಹೇಳಿರುವರು. ಆದುದರಿಂದ ಯಾವ ದೇಶಸ್ಥನಾಗಲೀ ಯಾವದೊಂದು ಭಯವಿಲ್ಲದೆ ತನ್ನ ಶಕ್ತ್ಯನುಸಾರ ಮಟ್ಟಿಗೆ ಸಹಕಾರ ಮಾಡಬಹುದೆಂದೂ ಮತ್ತು ಯಾವ ಉದ್ಯೋಗದಲ್ಲಿರುವವನೂ ತನ್ನ ಉದ್ಯೋಗ ಭಂಗವಾಗುವದೆಂದು ಹೆದರಬೇಕಾದುದಿಲ್ಲವೆಂದೂ ಅಲ್ಪತಿಳಿದ ನಾನು ದೃಢವಾಗಿ ಹೇಳಬಲ್ಲೆನು.

ಇಂಗ್ಲೆಂಡು ದೇಶವು ಏನು ಮಾಡುತ್ತಿರುವದು?

ಮೊದಲು ವಿವರಿಸಿದ ರೀತಿಯಲ್ಲಿ ಇಂಗ್ಲೆಂಡು ಸಹ 'ಲಕ್ಷ್ಮಿ' ತಪಸ್ಸಿನಲ್ಲಿ ಮೈಮರೆತಿದೆ. ದೇಶದ ಆರ್ಥಿಕ ಸ್ಥಿತಿಯು ಎಡವಿ ಬೀಳುವ ಸಂಭವವನ್ನರಿತು ಈಗಾಗಲೇ ಅನೇಕ ಸಂಸ್ಥೆ ಮತ್ತು ಉಪ ಸಂಸ್ಥೆಗಳು ಏರ್ಪಾಡು ಆಗಿ ಹೋಗಿ ಬಿಟ್ಟಿವೆ. (Buy British and Sell British Leagues have as it were galvatised—the whole country in to vigorours activities. The Prince of Wales has associated himself with the inauguration of these campaigns) ಅಲ್ಲಿಯ ಸ್ವದೇಶಿ ಸಂಘಗಳಲ್ಲಿ ಯುವರಾಜ ಸಾರ್ವಭೌಮರಾದ ಪ್ರಿನ್ಸ್-ಆಫ್-ವೇಲ್ಸ್‌ರವರೇ ಕಾರ್ಯವನ್ನು ವಹಿಸಿ ಭಗೀರಥ ಪ್ರಯತ್ನ ನಡಿಸುತ್ತಿರುವರು. ಅಲ್ಲಿಯ ಶ್ರೀಮಂತರು ತಮ್ಮ ಆರೋಗ್ಯ ಜೀವನಗೆಗೋಸ್ಕರ ಇತರ ದೇಶಗಳಿಗೆ ಹೋಗಿ ಹಣ ಬಿಡಲಾಯಿಸುತ್ತಿದ್ದರು. ಈ ಪ್ರಮಾಣವಾದರೆ ತಮ್ಮ ದೇಶದ ಐಶ್ವರ್ಯವು ಇತರ ದೇಶಗಳಿಗೆ ಹರಿದು ಹೋಗುತ್ತದೆಂದು ತಿಳಿದು ತಮ್ಮ ದೇಶದ ಸಮುದ್ರ ತರಂಗಗಳಲ್ಲಿ ಆರೋಗ್ಯ ಸಂಸ್ಥೆಗಳನ್ನೇರ್ಪಡಿಸಿ (Health resorts) ಅಲ್ಲಿರುತ್ತಾರೆ. ಎಡ್ವರ್ಡ್ ಸಾರ್ವಭೌಮರ ಸಹೋದರರಾದ ಡ್ಯೂಕ್-ಆಫ್-ಕನಾಟ್ ಎಂಬವರು ಸಹ (ಈ ವರೆಗೆ ಪರದೇಶಗಳಿಗೆ ಆರೋಗ್ಯ ನಿಮಿತ್ತ ಹೋಗುತ್ತಲಿದ್ದವರು) ತಮ್ಮ ದೇಶದ ಸಂಸ್ಥೆಗಳ ಉದ್ಧಾರಾರ್ಥವಾಗಿ ಇಂಗ್ಲೆಂಡಿನ ಒಂದು ಸಮುದ್ರ ತರಂಗಯಲ್ಲಿದ್ದುಕೊಂಡು ರಾಷ್ಟ್ರೀಯ ಮಿತವ್ಯಯವನ್ನಾಚರಿಸುತ್ತಾ ಉದಾಹರಣೆ ತೋರುತ್ತಲಿರುವರು. ನಮ್ಮ ದೇಶದ ರಾಜ ಮಹಾರಾಜರೂ ಶ್ರೀಮಂತರು ಉದಾಹರಣೆಗಳಾಗಬೇಡಲಾರದು. ಈ ಮೊದಲು ಪಾರ್ಲಿಮೆಂಟ್ ಮೆಂಬರಾದ ವಿನ್ಸ್ಟನ್-ಚರ್ಚಿಲ್ ಎಂಬವರು ಬರ್ಮುಡಾದಲ್ಲಿ ಹಡಗಿನಲ್ಲಿ ಪ್ರಯಾಣ ಮಾಡಿದರೆಂದು ಅಲ್ಲಿಯ ರಾಷ್ಟ್ರೀಯ ಪತ್ರಿಕೆಗಳು ಅವರ ವರ್ತನೆಯನ್ನು ಖಂಡಿಸಿದರು.

ಈ ರೀತಿ ಇಂಗ್ಲೆಂಡು ಸಹ ಪ್ರತಿ ಬಾಬಿನಲ್ಲಿ ಸ್ವದೇಶ ಅಭಿಮಾನ ನ್ನು ಕಾಪಾಡುವಾಗ ಭಾರತೀಯರಾದ ನಾವು ಏತಕ್ಕೆ ನಮ್ಮ ಅಭಿಮಾನವನ್ನ ತೋರದು. ಏಕ್ಯಯಿಸಿಕೊಳ್ಳಬೇಕು. ನಮ್ಮ ಗುಣ್ಯ ಕಾರ್ಯಕ್ಕೆ ಕಥೆಯು ಈಗ ನನಗೆ ಬರದಿರಲಾರದು. ಆದುದರಿಂದ ನಾವುಗಳು ಸಹ ನಮಗೆ ಸಾಧ್ಯವಾದ ಮಟ್ಟಿಗೆ ಸ್ವದೇಶ ಪ್ರೇಮತ್ವವನ್ನು ಬೆಳಸುವುದರಲ್ಲಿ ಮಗ್ನರಾಗಿರಬೇಕೆಂದು ನನ್ನ ಅಭಿಪ್ರಾಯ. ನಮ್ಮ ದೇಶದ ಶ್ರೀಮಂತರು ಎಂದಿನಂತೆ ಹೆಚ್ಚು ಉತ್ಸಾಹಿಗಳಾಗುವುದರಲ್ಲಿ ಸಂದೇಹವಿಲ್ಲ.

ಮಾಲಿನಿಯಾಯೆಯವರ ಪ್ರಕಟನೆ.

ಈ ಸ್ವದೇಶ ಪ್ರೇಮತ್ವವನ್ನು ಯಾವ ರೀತಿಯಲ್ಲಿ ಮಾಡಬೇಕೆಂಬ ಕಾರ್ಯಕ್ರಮ ಪಟ್ಟಿಯು ಮಾಲವೀಯಾಜೀಯವರು ಹೊರಡಿಸಿದ್ದರು. ಯುವಕ ವೃದ್ಧರೆಂಬ ಭೇದವಿಲ್ಲದೆ ಎಮ್ಮ ನಡಿಸಿದ ಎಲ್ಲರೂ ಸ್ವದೇಶೀ ಸಂಸ್ಥೆಗಳ ಸಹಿಗಳಾಗಿ ತಮ್ಮ ಹಿನ ಕರ್ತವ್ಯವನ್ನು ಎಂಡಬೇಕು ಮತ್ತು ವಿದ್ಯಾವಂತರು ಎಂಬ ಮುಂದಾಳುತನವನ್ನು ವಹಿಸಬೇಕೆಂಬುದೇ ಅವರ ಅಭಿಪ್ರಾಯ.

ಅಲ್ಲಲ್ಲಿ ಸ್ವದೇಶಿ ಸಂಘಗಳನ್ನು ಸ್ಥಾಪಿಸಬೇಕೆಂದೂ ಮತ್ತು ಆನಂದ ಸ್ವದೇಶಿ ಪ್ರತಿಜ್ಞೆ ತೆಗೆದುಕೊಳ್ಳಬೇಕೆಂದೂ ಮೊದಲಾಗಿ ಗಳನ್ನು ಈ ಬಗ್ಗೆ ಪ್ರಚಾರಕಾರ್ಯಗಳು ಏರ್ಪಾಡು ಮಾಡಬೇಕೆಂದು ಸಹ ಪ್ರಚುರ ಪಡಿಸಿರುವರು.

ಸ್ವದೇಶಾಭಿಮಾನಿಗಳೂ ಮತ್ತು ಸ್ವದೇಶಿ ವ್ರತರೂ ಆಗಿ ಉತ್ಸಾಹದಿಂದ ತುಂಬಿ ದೇಶವೃದ್ಧಿಗೋಸ್ಕರ ಕಾರ್ಯತತ್ಪರರಾಗಿ ಕೆಲಸ ಮಾಡಬೇಕೆಂದು ಕುತೂಹಲರಾಗಿರುವ ಮಹನೀಯರಿಗೆ ಹೊಸ ಅಭಿಪ್ರಾಯಗಳನ್ನು ಕೊಟ್ಟು ಹುರಿದುಂಬಿಸುವ ಮಾಲವೀಯಾಜೀಯವರಿಗೆ ಜಯ ವು ನಮ್ಮ ದೃಷ್ಟಿ ನಾಡಿನಲ್ಲಿಯೂ ಸಹ ದೊರಕದಿರಲಿಕ್ಕಿಲ್ಲವಾಗಿ ಹಾರೈಸುತ್ತೇನೆ. ಇದಕ್ಕೆ ದೇವದ ದೈವ ಶಕ್ತಿ ಮತ್ತು ಸ್ಥಿರ ಬುದ್ಧಿಯನ್ನ ದಯಪಾಲಿಸಲಿ ಆ ಭೂಮಾತೆಯಾದ ಭಾರತ ಮಾತೆಗೆ ವಿಜ್ಞಾಪನೆಯು.

ಪೂಣಚ್ಚ.

ವರ್ತಮಾನ ಸಂಗ್ರಹ.

ಒಳ ದೇಶ.

ಜೂನ್ ತಾ. 6ರಿಂದ ಕೊಡಗಿನ ಸಿವಿಲ್ ಕೋರ್ಟುಗಳು ತೆರೆಯಲ್ಪಟ್ಟಿವೆ.

ಕೊಡಗಿನ ಚೀಫ್ ಕಮಿಶನರವರು ಈ ತಾ. 11ರಲ್ಲು ಕೊಡಗಿನಿಂದ ತೆರಳುವರೆಂದು ಇತ್ತೀಚೆಗೆ ತಿಳಿಯುತ್ತೇವೆ.

ವಿರಾಜಪೇಟೆಯಲ್ಲಿ ಭತ್ತದ ಧಾರಣೆ ಗಾಡಿ 1ರ 48/— ರೂ. ಇದೆ. ಇತರ ಕಡೆಗಳಲ್ಲಿ ಜದಕ್ಕಿಂತ ಕಮ್ಮಿ ಕ್ರಯವಿದೆ.

ದೇಶದ ಎಲ್ಲಾ ಭಾಗಗಳಿಗೂ ಮಳೆ ಹೊಡೆಯುತ್ತಿರುವುದು. ಮಡಿಕೇರಿಯಲ್ಲಿ ತಾ 3ರಿಂದ ತಾ. 10ರ ವರೆಗೆ 3.27 ಇಂಚು ಮಳೆಯಾಗಿದೆ.

ಮೆ. ತಾ. 30ರಲ್ಲು ಕಿಗ್ಗಟ್ಟನಾಡು ಪರಕಟಗೇರಿ ಗ್ರಾಮದ ಚೇರಂಡ ಐಯ್ಯಮ್ಮನೆಂಬವರು ಹೇಗೋ ಕೆರೆಗೆ ಬಿದ್ದು ಮೃತರಾಗಿರುವರೆಂದು ತಿಳಿಯುತ್ತೇವೆ.

ಹೆಬ್ಬಾಲೆಯ ಹೊಲಗೇರಿಯಲ್ಲಿ ಪ್ಲೇಗು ತಲೆದೋರಿ 8 ಜನರಿಗೆ ಅಂಟಿದೆಯೆಂದೂ, ಕಳೆದ ವಾರ ಇದರ ದೆಸೆಯಿಂದ 3 ಮರಣಗಳು ಸಂಭವಿಸಿದೆಯೆಂದೂ ತಿಳಿಯುತ್ತೇವೆ.

ಬಿಳುಗುಂದ ಗ್ರಾಮದ ನೆಲ್ಲಮಕ್ಕಳ ಅಪ್ಪಯ್ಯನವರು ಈ ತಾರೀಕು 2ರಲ್ಲಿ ಒಂದು ದೊಡ್ಡ ಚಿರತೆಯನ್ನು ಗುಂಡು ಹೊಡೆದು ಕೊಂದದ್ದರಿಂದ ಸುತ್ತುಮುತ್ತಲಿನ ದನ ಕರುಗಳಿಗೆ ಸ್ವಲ್ಪ ನೆಮ್ಮದಿ.

ಸಮಯ ತಪ್ಪಿ ಹೊಡೆದ ಈ ಮಳೆಯಿಂದ ಗದ್ದೆಗೆ ಭತ್ತದ ಬೀಜ ಹಾಕುವ ಸಮಯವು ತಪ್ಪುವಂತಿದೆ. ಈಗಾಗಲೇ ನಾಡುಗಳಲ್ಲಿ ಕಾಯಿಲವು ತಲೆದೋರಿ ಮರಣವು ಅಲ್ಲಲ್ಲಿ ಆಗುತ್ತಲಿದೆ.

ನಾವು ಈ ಮೊದಲೇ ಪ್ರಕಟಿಸಿದಂತೆ ಜೂನ್ ತಾ 6ರಲ್ಲು ಕಾವೇರಿ ಬಸ್ಸು ಸರ್ವೀಸಿನ ಹರಾಜು ಮಾಡಲ್ಪಟ್ಟು ಒಟ್ಟಾಗಿ ಎಲ್ಲವನ್ನೂ ಮೆ ಪಾಂಡಂಡ ನಂಜಪ್ಪನವರು ರೂ. 20500ಕ್ಕೆ ಕೊಂಡುಕೊಂಡರೆಂಬುದಾಗಿ ತಿಳಿಯುತ್ತೇವೆ.

ಮೆ. ಪಿ. ಯಸ್. ರಾಮಚಂದ್ರರಾವ್‌ರವರು ಮಡಿಕೇರಿಯಲ್ಲಿ ಒಂದು ಸೆಲೂನ್ ಫ್ಯಾಕ್ಟರಿಯನ್ನು ತೆರೆದಿರುವರು. ಇಲ್ಲಿ ಎಲ್ಲಾ ತರದ ಸಾಬೂನುಗಳು ಅಗ್ಗವಾಗಿ ದೊರೆಯುವುದರಿಂದ ಎಲ್ಲರೂ ಪ್ರೋತ್ಸಾಹಿಸುವರಾಗಿ ನಂಬುತ್ತೇವೆ.

ಮಡಿಕೇರಿ ಕೋಟೆಯ ರಿಪೇರಿ ಕೆಲಸವು ಇನ್ನೂ ಮುಗಿದಿರುವುದಿಲ್ಲ. ಈಗ ಕೆಲವು ದಿನಗಳಿಂದ ಮಳೆಯು ಹೊಡೆಯುತ್ತಿರುವುದರಿಂದ ಮಳೆಗಾಲಯೂರಿದಂತೆ ಕಾಣುವುದು. ಹೀಗಾದರೆ ಕೋಟೆಯ ಪರಿಣಾಮವೇನಾಗುವುದೋ ತಿಳಿಯದು.

ಈಗ ತಾನೇ ಬಿ. ಎಸ್. ಸಿ. ಪರೀಕ್ಷೆಯಲ್ಲಿ ಪಾಸಾದ ಮೆ. ಪಿ. ಎಸ್. ಕೇಶವಾಚಾರ್ಯರವರು ಕಾನ್ವೆಂಟಿನ ಟೀಚರಾಗಿ ನೇಮಿಸಲಟ್ಟಿರುವರು. ಅಲ್ಲಿನ ಮೊದಲನೇ ಟೀಚರಾಗಿದ್ದ ಮೆ. ಎಸ್. ಕೆ. ನಾರಾಯಣರವರು ಎಲ್. ಟಿ. ಟ್ರೈನಿಂಗಿಗೆ ಹೋಗಿರುವರು.

ಹಿಂದೂ ದೇಶ.

ಶ್ರೀ. ಸುಭಾಷ್‌ಚಂದ್ರ ಬೋಸರನ್ನು ಚಿಕಿತ್ಸೆಗಾಗಿ ಜಬ್ಬಲ್‌ಪುರ ಜೈಲಿಗೆ ತಂದಿರುವರು.

ಸಂಯುಕ್ತ ಪ್ರಾಂತ್ಯದ ಬರೆಲಿಯಲ್ಲಿ ಒಂದು ದನವು ಸಿಂಹದಂತೆ ಮುಖ ಮತ್ತು ದೇಹವಿರುವ ಕರವೊಂದನ್ನು ಹಾಕಿರುವುದು. ಅದು ಹುಟ್ಟಿದ ಕೂಡಲೇ ಮೃತವಾಗಿರುವುದು.

ಡಾಕ್ಟರ್ ಅಂಬೇಡ್ಕರರು ರಾಜಕೀಯ ಕಾರ್ಯದ ನಿಮಿತ್ತ ಮೇ ತಾ. 31ರಲ್ಲು ಇಂಗ್ಲೆಂಡಿಗೆ ಹೊರಟಿರುವರು. ಅವರು ಪ್ರಧಾನ ಮಂತ್ರಿಗಳೇ ಮೊದಲಾದ ಬ್ರಿಟಿಷ್ ಮುತ್ಸದ್ದಿಗಳ ಭೇಟಿ ಮಾಡಿ ತನ್ನ ಕಾರ್ಯ ಸಾಧನೆ ಮಾಡಲಿರುವರಂತೆ.

ಕಲ್ಕತ್ತಾ ನಗರದಲ್ಲಿ ಎರಡು ವರೆ ವರ್ಷದ ಹೆಣ್ಣು ಮಗುವು ತಬಲಾ ಬಾರಿಸುವುದರಲ್ಲಿ ಈಗಾಗಲೇ ಮೆಡಲುಗಳನ್ನು ಪಡೆದಿದೆಯೆಂದೂ, ಆ ವರ್ಷದ ಇನ್ನೊಬ್ಬ ಬಾಲಕಿಯು ಸಂಗೀತದಲ್ಲಿ ಕವಿ ರವೀಂದ್ರರ ಮೆಚ್ಚುಗೆಯನ್ನು ಪಡೆದಿದೆಯೆಂದೂ ಪ್ರಕಟವಾಗಿದೆ.

ಬಂಗಾಳದ ಕೆಲವು 'ಡಿಟೆನ್ಯೂ' (ನಿರಪರಾಧ ಇಚ್ಛಾಪೂರ್ವಕ ಕೈದಿ) ಗಳಿಗೆ ವರ್ಷವೊಂದಕ್ಕೆ ೧೨೦೦ ಪವನುಗಳ ತನಕ ಪರಿಹಾರದ್ರವ್ಯ ಬಂದುದಿದೆಯೆಂದುದು ನಿಜವೇ ಎಂದು ಪಾರ್ಲಿಮೆಂಟಿನಲ್ಲಿ ಪ್ರಶ್ನೆ ಬಂದಾಗ, ಹೋರ್‌ರು ಸದ್ಯದಲ್ಲೇ ತಿಳಿಸುತ್ತೇನೆಂದರು.

ಕರಾಚಿಯ ಮೇಜಿಸ್ಟ್ರೇಟರು ಒಬ್ಬ ಮುಸಲ್ಮಾನ ಕೈದಿಯನ್ನು ೨ ವರ್ಷ ಕಠಿಣ ಸಜಕ್ಕೆ ಗುರಿಪಡಿಸಲು ಆತನು ರೇಗಿ ತನ್ನ ಕಾಲಿನ ಜೋಡನ್ನು ಮೇಜಿಸ್ಟ್ರೇಟರ ಮೇಲೆ ಎಸೆದನು. ಇದಕ್ಕಾಗಿ ಪುನಃ ವಿಚಾರಣೆ ನಡೆದು ಆತನಿಗೆ ಇನ್ನೂ ೬ ತಿಂಗಳು ಕಠಿಣ ಸಜವಾಯಿತು.

ಲಕ್ನೋ ಪಟ್ಟಣದಲ್ಲಿ ಮುಹಮ್ಮದೀಯರು ಎರಡು ತಂಡಗಳಾಗಿ ಗಾಳಿಪಟಗಳನ್ನು ಆಡಿಸುತ್ತಿದ್ದರು. ಒಂದು ತಂಡದವರು ಇನ್ನೊಂದು ತಂಡದವರ ನೂಲನ್ನು ಕಡಿದರು. ಜಗಳ ಆರಂಭವಾಗಿ ಚೂರಿಗಳ ಯುದ್ಧವಾಯಿತು. ಒಬ್ಬನು ಕೂಡಲೇ ಮೃತನಾದನು. ಮತ್ತೊಬ್ಬನಿಗೆ ಗಾಯವಾಗಿದೆ.

ಕಾಂಗ್ರೆಸ್ ಪಿಕೆಟಿಂಗ್ ಬೋರ್ಡಿನ ಗುಪ್ತ ಸ್ಥಳಗಳಿಂದು ಪೋಲೀಸರು ಕಲ್ಕತ್ತದಲ್ಲಿ ಮೇ ತಾ. 30ರಲ್ಲು ಎರಡು ಮನೆಗಳನ್ನು ಜಡ್ತಿ ಮಾಡಿ 16 ಮಂದಿಯನ್ನು ಕೈದು ಮಾಡಿರುವರು. ಲೈಸೆನ್ಸ್ ಇಲ್ಲದೆ ಮೆರವಣಿಗೆ ನಡಿಸಿ ಪೋಲೀಸ್ ಕಾನ್ಸ್‌ಟೇಬಲರಿಗೆ ಹೊಡೆದುದಕ್ಕಾಗಿ 20 ಮಂದಿ ಕೈದು ಮಾಡಲ್ಪಟ್ಟು ಜುಲ್ಮಾನೆಗೊಳಗಾಗಿರುವರು.

ಪ್ರಾಂತಿಕ ಪರಿಷತ್ತು ಗುಂಟೂರಿನಲ್ಲಿ ಜರಗುವುದೆಂದು ಕಾಂಗ್ರೆಸ್ಸಿನವರ ಪಕಟಣೆಗಳು ಹೊರಟಿವೆ. ಪೋಲೀಸ್ ಅಧಿಕಾರಿಗಳು ಕಣ್ಣು ತೆರೆದೇ ಇರುವರು. ಪ್ರತಿನಿಧಿಗಳೆನಿಸಿ ಅಲ್ಲಲ್ಲಿಂದ ಬಂದ ಸುಮಾರು ೧೦೫ ಜನರನ್ನು ಈ ತನಕ ಕೈದುಮಾಡುವಾಯಿತು. ಶ್ರೀ. ಕೊಂಡ ವೆಂಕಪ್ಪಯ್ಯನವರನ್ನೂ ದಸ್ತಗಿರಿಮಾಡಿದ್ದಾರೆ.

ಕಳೆದ ತಾ. 27ರಲ್ಲು ಕಲ್ಕತ್ತದ ಡಾಕ್ಟರ್ ಬಿಧನ್‌ಚಂದ್ರ ರೋಯಿಯವರೂ, ಸಿವಿಲ್ ಸರ್ಜನರೂ ಪಂಡಿತ ಜವಾಹಿರ್‌ಲಾಲರನ್ನು ಬರೈಲಿ ಜೈಲಿನಲ್ಲಿ ಕಂಡು ಪರೀಕ್ಷಿಸಿದರು. ಪಂಡಿತರ ತೂಕವು ಹೆಚ್ಚಾಗಿರುವುದಾದರೂ ಎದೆನೋವು ನಿಂತಿರುವುದಿಲ್ಲ. ಸಂಜೆ ಸ್ವಲ್ಪ ಜ್ವರ ಬರುತ್ತಿರುವುದು. ಪಂಡಿತರು ಬೇಗನೆ ಬರೈಲಿ ಜೈಲಿನಿಂದ ಡೇರಡೂನಿಗೆ ಒಯ್ಯಲ್ಪಡುವರೆಂದು ತಿಳಿದು ಬರುತ್ತದೆ.

ಡೆಲ್ಲಿಯಲ್ಲಿ ನೀರಿಗೆ ಕೊಂದರೆಯಾಗಿ ನೀರನ್ನು ತೊಟ್ಟಿಗಳಲ್ಲಿ ತುಂಬುವರು. ಮಗ್ಗಿ ಸಂತ್‌ಸಿಂಗ್ ಎಂಬಾತನ ಮನೆಯಲ್ಲಿ ಹೀಗೆ ತುಂಬಿದ್ದಾಗ ಆತನ ಮಗುವು ಕಾಣದೆ ಅಲ್ಲಿಗೆ ಬಂದು ತೊಟ್ಟಿಗಳಲ್ಲಿ ತುಂಬಿದ್ದ ನೀರಿಗೆ ಬಿದ್ದು ಸತ್ತಿತು. ಇದನ್ನು ಯಾರೂ ನೋಡಲಿಲ್ಲ; ಯಾರೋ ಅಕಸ್ಮಾತ್ ನೀರು ತರಲು ತೊಟ್ಟಿಯ ಬಳಿಗೆ ಬಂದಾಗ ಮಗುವು ಸತ್ತು ತೇಲುತ್ತಿದ್ದುದು ಗೊತ್ತಾಯಿತು.

'ಡೇವಾಸಿಯ ಲ್ಯಾಂಡ್ ರಿಕಾರ್ಡ್' ಕಚೇರಿಯಲ್ಲಿ ಕೆಲಸ ಮಾಡುವ ಶ್ರೀ. ಬಾಬುರಾವ್ ಎಂಬವರು ೨೫೧ ಪೂಟು ಉದ್ದಗಲವುಳ್ಳ ಹಿಂದೂಸ್ಥಾನದ ನಕಾಶೆಯನ್ನು ಚಿತ್ರಿಸಿ, ಅದರಲ್ಲಿ ಭಗವದ್ಗೀತೆಯ ೧೮ ಅಧ್ಯಾಯಗಳನ್ನೂ, ವಿಷ್ಣು ಸಹಸ್ರನಾಮವನ್ನೂ ಸುಂದರವಾದ ಅಕ್ಷರದಿಂದ ಬರೆದಿರುವರೆಂದೂ, ಇಂದೂರಿನ ಪ್ರದರ್ಶನದಲ್ಲಿ ಈ ನಕಾಶೆಗೆ ಬಹುಮಾನ ದೊರೆತಿದೆಯೆಂದೂ 'ಕಾಸಡಾ ಧುರೀಣದ'ಲ್ಲೊಂದು ವಾರ್ತೆ.

ಲಾಹೋರಿನಲ್ಲಿ ಎಂಟು ಜನರ ಒಂದು ಚಿಕ್ಕ ಕೂಟ. ಇನ್ಶೂರೆನ್ಸ್ ಕಂಪೆನಿಗಳನ್ನು ಉದ್ಧರಿಸುವ ಸದುದ್ದೇಶದಿಂದ ಏರ್ಪಟ್ಟಿತು. ಸಾಧುಸಿಂಘ್ ಎಂಬವನನ್ನು ಗುಮಾಸ್ತನೆಂದು ನೇಮಿಸಿಕೊಳ್ಳಲಾಯಿತು. ಭಾರತ್ ಇನ್ಶೂರೆನ್ಸ್ ಕಂಪೆನಿಯಲ್ಲಿ ೩೫೦೦೦ ಕ್ಕೂ, ಪ್ರೂಡೆನ್ಶಿಯಲ್ ಕಂಪೆನಿಯಲ್ಲಿ ೩೦೦೦೦ ಕ್ಕೂ, ಬೇರೆ ಕೆಲವು ಕಂಪೆನಿಗಳಲ್ಲಿ ಕೆಲವು ಸಾವಿರಕ್ಕೂ ವಿಮೆ ಇಳಿಸಿ, ಒಂದು ವರ್ಷದಲ್ಲಿ ಸತ್ತು ಹೋದನೆಂದು ಸುಳ್ಳು ದಾಖಲೆಗಳನ್ನು ಮುಂದರಿಸಿ, 'ಸತ್ತವನ ವಿಧವೆ'ಯೊಬ್ಬಳನ್ನು ಎಲ್ಲಿಂದಲೋ ತಂದು, ಆಕೆಯ ಮೂಲಕ ಆ ಹಣವನ್ನು ಪಡೆದವರೊ, ಪಡೆಯಲು ಯತ್ನಿಸಿದವರೋ ಏನೋ ಅಂತೆ. ಎಲ್ಲರಿಗೂ ೩ ರಿಂದ ೫ ವರ್ಷದ ತನಕ ಶಿಕ್ಷೆಯಾಗಿದೆ.

ವಿದೇಶ.

1931 ನೆಯ ವರ್ಷದಲ್ಲಿ ಫೋರ್ಡ್ ಮೋಟಾರು ಕಂಪೆನಿಗೆ 1,80,000 ರೂ. ಗಳ ವರೆಗೂ ನಷ್ಟ ಸಂಭವಿಸಿರುತ್ತದೆ. ಅವರ ಮೋಟಾರು ಬಂಡಿಗಳ ನಿರ್ಮಾಣವು ಕಡಿಮೆಯಾದುದು ಕಾರಣವಂತೆ.

ಬೆಲ್ಜಿಯನ್ ದೇಶದಲ್ಲಿ ಮಾದಕ ವಸ್ತುಗಳನ್ನು ಸೇವಿಸದಂತೆ ಮಾಡಲು ಕೆಲವು ಸಂಘದವರು ಪ್ರಯತ್ನಪಟ್ಟದ್ದಾರೆ. ಚಿಕ್ಕ ಮಕ್ಕಳ ಕೈಯ್ಯಲ್ಲಿ ಬಾವುಟಗಳನ್ನು ಕೊಟ್ಟು ಬೀದಿ ಬೀದಿಗಳಲ್ಲಿ ಮಾದಕ ವಸ್ತು ಸೇವನೆಯನ್ನು ನಿಂದಿಸಿ ಪ್ರಚಾರ ಮಾಡುತ್ತಿರುವರು.

ಸರ್ ದೋರಾಬ್ಜಿ ತಾತಾರವರು ಇಂಡಿಯಾದೇಶದಲ್ಲಿ ಅಗ್ರಗಣ್ಯರಾದ ಕೈಗಾರಿಕೆ ಕಾರ್ಖಾನೆಗಳ ಯಜಮಾನರು. ಬಹು ಧನಿಷ್ಟರು. ಇವರು ಜೂನ್ ೩ ರಲ್ಲಿ ಜರ್ಮನಿಯ ಆಸ್ಪತ್ರೆಯಲ್ಲಿ ದೈವಾಧೀನರಾದರು. ಆರೋಗ್ಯ ರಕ್ಷಣೆಗಾಗಿ ಅಲ್ಲಿಗೆ ಮೇ ೩ ರಲ್ಲಿ ಹೋದರು.

ಲಂಡನ್ನಿನ ಇಂಡಿಯಾಕ್ಕೆ ಒಂದೇ ರಸ್ತೆಯನ್ನು ಮಾಡಿ ಮೋಟಾರುಗಾಡಿಗಳ ಸಂಚಾರಕ್ಕೆ ಅನುಕೂಲಪಡಿಸಬೇಕೆಂದು 'ಇಂಟರ್ ನ್ಯಾಷನಲ್ ಕಾಂಗ್ರೆಸ್ ಆಫ್ ಟೂರಿಸಂ' ಎಂಬ ಸಂಘದವರು ಕೋಪನ್ ಹೇಗನ್ನಿನಲ್ಲಿ ತೀರ್ಮಾನಿಸಿದ್ದಾರೆ. ಈ ರಸ್ತೆಯು ಒಂದು ಲಂಡನ್ನಿಂದ ಕಾನ್‌ಸ್ಟಾಂಟಿನೋಪಲ್, ಬಾಗದಾದ್, ಲಾಹೋರ್, ಡೆಲ್ಲಿ ಮಾರ್ಗವಾಗಿ ಬರುತ್ತೆ. ಇನ್ನೊಂದು ಕೈರೋ, ಕಾರ್ಟೂಂ, ಜೋಹಾನೆಸ್ ಬರ್ಗ್ ಮತ್ತು ಕೇಪ್ ಮಾರ್ಗವಾಗಿ ಬರುತ್ತೆ.

ಸಿ. ಲಿಸ್ಲಬಾರ್ಲೋ ಎಂಬ ಅಮೇರಿಕಾದ ಓರ್ವ ಇಂಜಿನಿಯರ ಒಂದು ಯಂತ್ರವನ್ನು ಕಂಡುಹಿಡಿದಿರುವನು. ಅದನ್ನು ಕೆಲಸ ಮಾಡಿಸಲಿಕ್ಕೆ ಐದು ಸಾವಿರ ಜನರು ಬೇಕಂತೆ. ಈ ಯಂತ್ರವು ರೇಡಿಯೋ ಮೂಲಕ ಕೆಲಸ ಮಾಡುವುದು. ದೂರದ ನಗರಗಳನ್ನೂ, ನಗರ ನಿವಾಸಿಗಳನ್ನೂ ಈ ಯಂತ್ರದ ಮೂಲಕ ಕೊಂದು ನೆಲಸಮ ಮಾಡಬಹುದಂತೆ! ಈ ನೂತನ ಯಂತ್ರದ ಭಾಗ ವಿಭಾಗಗಳನ್ನು ವಿವರವಾಗಿ ಯುನೈಟೆಡ್ ಸ್ಟೇಟ್ಸಿನ ಮಂತ್ರಾಲೋಚನ ಸಮಿತಿಯವರು ಪರೀಕ್ಷಿಸುತ್ತಿರುವರು.

ಲಾಹೋರಿನಲ್ಲಿ ಚಿಕ್ಕ ವಯಸ್ಸಿನ ಹಿಂದು ಹುಡುಗಿಯು ಸಂಗಡಿಗಾತಿಯರ ಕೂಡ ಆಡುತ್ತಿರುವಾಗ್ಗೆ ಒಬ್ಬ ಪೋಲೀಸನವನು ಬಂದು ಆ ಹುಡುಗಿಯ ಕೈಗಳನ್ನು ಹಿಡಿದುಕೊಂಡು ಕಪಾಳಕ್ಕೆ ಚೆನ್ನಾಗಿ ಹೊಡೆದನು. ಆ ಹುಡುಗಿಯು ಕೊಂಚ ಕಾಲ ಪ್ರಜ್ಞೆ ತಪ್ಪಿದ್ದು ಅನಂತರ ಚೇತರಿಸಿಕೊಂಡಿದ್ದರೆ ನೋಡುವಲ್ಲಿ ತನ್ನ ಕೈ ಬಳೆಗಳಿರಲಿಲ್ಲ. ಇದಕ್ಕಾಗಿ ಪೋಲೀಸಿನವನು ಕೆಲಸದಿಂದ ತಾತ್ಕಾಲಿಕವಾಗಿ ತೆಗೆಯಲ್ಪಟ್ಟಿರುವನಲ್ಲದೆ ಮೇಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಲ್ಪಟ್ಟಿರುತ್ತಾನೆ. ವಿಚಾರಣೆಯಲ್ಲಿ ಹುಡುಗಿಯು ನಡೆದ ವಿದ್ಯಮಾನವನ್ನೆಲ್ಲ ಯಥಾವತ್ತಾಗಿ ತಿಳಿಸಿದಳಲ್ಲದೆ ಪೋಲೀಸಿನವನು ಬಳೆಗಳನ್ನು ತನಗೆ ಮಾರಿರುತ್ತಾನೆಂದು ಒಬ್ಬ ಸಾಕ್ಷಿಯು ಹೇಳಿರುತ್ತಾನೆ.

ಪ್ರಕಟಣೆ.

ಶನಿವಾರಸಂತೆ ಸಹಕಾರಿ ಸ್ಟೋರಿನಲ್ಲಿರುವ ಸಮಸ್ತ ಸಾಮಾನುಗಳೂ ಮತ್ತು ಕಟ್ಟಡ ಸಹ ಇದೇ ತಾ. 25ನೇ ಶನಿವಾರ ದಿನ ಹಗಲು 12 ಗಂಟೆಗೆ ಸ್ಟೋರು ಬಳಿ ಹರಾಜು ಮಾಡಲಾಗುವುದು ಎಂದು ಈ ಮೂಲಕ ತಿಳಿಯಪಡಿಸಲಾಗಿದೆ. ಬಿಡಾಯಿಸ್‌ದಾರರು ಅರ್ಧ ಮೊಬಲಗು ಡಿಪಾಜಿಟ್ಟು ಮಾಡಬೇಕಾಗುವದು. ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳುವದು.

ಪಿ. ಯಂ. ಪೊನ್ನಪ್ಪ,

ಕ್ಯಾಂಪ್ ಶನಿವಾರಸಂತೆ. (ಲಿಕ್ವಿಡೇಟರ್.)

ಪ್ರಕಟಣೆ.

ಕೊಡಗು ವಿದ್ಯಾಭಿವೃದ್ಧಿ ಸಂಘ, ಮಡಿಕೇರಿ.

1931—32ನೇ ಸಂವತ್ಸರದ ಚಂದಾ ಮೊಬಲನ್ನು ಈ ಜೂನ್ ತಾರೀಕು ಅಂತ್ಯದೊಳಗೆ ಪಾವತಿ ಮಾಡಿ ಎಲ್ಲಾ ಕೊಡಗು ಮಹನೀಯರು ಮೆಂಬರುಗಳಾಗಬೇಕಾಗಿ ಕೋರಿದೆ. ಮೆಂಬರುಗಳಾಗಲಿಕ್ಕೆ ಇಷ್ಟವುಳ್ಳವರ ಚಂದಾ ಮೊಬಲಗು ವರ್ಷ ಒಂದಕ್ಕೆ ಒಂದು ರೂಪಾಯಿಗಿಂತ ಕಡಿಮೆ ಇರಕೂಡದು. ಮೇಲ್ಕಂಡಂತೆ 1931—32ನೇ ಸಂವತ್ಸರದ ಚಂದಾ ಮೊಬಲಗನ್ನು ಪಾವತಿ ಮಾಡಲು ತಪ್ಪಿದರೆ ಅಂಥವರು ತಮ್ಮ ಮೆಂಬರುತನವನ್ನು ಕಳಕೊಳ್ಳುವರು. ವಿದ್ಯಾರ್ಥಿಯು ವೇತನಕ್ಕೆ ಅರ್ಜಿಯು ಬರೆಯುವಾಗ್ಗೆ ಅವನ ಪ್ರಾಯ, ಅವನು ಯಸ್. ಯಸ್. ಯಲ್. ಸಿ. ಫೈನಲ್ ಪರೀಕ್ಷೆಯಲ್ಲಿ ಹೊಂದಿದ ಮಾರ್ಕು, ಅವನು ಮೊದಲನೇ ವರ್ಷದಲ್ಲಿಯೇ ತೇರ್ಗಡೆ ಹೊಂದಿರುತ್ತಾನೋ—ವನ್ನೈಕ ವಿಷಯಗಳ ಸಮೇತ ಅರ್ಜಿದಾರರು ಮಾಡತಕ್ಕದ್ದು. ಈಗ ವೇತನವನ್ನು ಹೊಂದುತ್ತಿರುವ ವಿದ್ಯಾರ್ಥಿಯು ಮುಂದಕ್ಕೂ ಹೊಂದುವ ಅಭಿಲಾಷೆ ಇದ್ದರೆ ತಾನು ಉತ್ತೀರ್ಣನಾದ ಬಗ್ಗೆ ತನ್ನ ಪ್ರಿನ್ಸಿಪಾಲರಿಂದ ಸರ್ಟಿಫಿಕೇಟನ್ನು ಪಡೆದು ಅರ್ಜಿಯೊಂದಿಗೆ ಹಾಜರು ಪಡಿಸತಕ್ಕದ್ದು.

ಕೆ. ಯಂ. ಬೆಳ್ಯಪ್ಪ,

ಮಡಿಕೇರಿ. (ಗೌರವ ಸೆಕ್ರೆಟರಿ.)

ಹೋಯಿತು.

ಹಗಲು ಹಾರಿತು ಮುಂದೆ ದಿನ ಕರನ ಕರೆದು
ಇರುಳು ಸರಿಯಿತು ಬೇಗ ಹಗಲೊಡನೆ ಬೆರೆದು.
ಹಗಲಿರುಳು ನಾಗುತಿದೆ ಒಂದಾಗಲೊಂದು
ನೋಡಿದರು ಜನರೆಲ್ಲ ಕತ್ತಲೆಯು ಬಂದು.
ಹಸಿವಡಗಿ ತೃಷೆಯಾಯ್ತು—ತೃಷೆಯಡಗಿ ಹಸಿವಾಯ್ತು,
ಹಸಿವು ತೃಷೆಗಳು ಹೋಗಿ—ಬೇಸರ ಬಂದಾತಾಯ್ತು,
ಬೇಸರವೆಲ್ಲ ದುಃಖಗಳಾಗುತ ಕಷ್ಟ ತಾನಾಯ್ತು
ಬೇನೆ ಹೋಗಲು ಮುಂದೆ ಪರಮ ಸಂತಸವಾಯ್ತು.
ಯೌವನವು ಬೇರೂರಿ ಆನಂದಗೊಳಲು
ಜವ್ವನವು ಹೋಯ್ತು ಹೊರಹೊಮ್ಮಿದೇಹದೊಳು.
ಮುಪ್ಪು ಮೂಡಿತು ಕರೆದು ಕೊನೆಗಾಲ ಯಮನ
ಮುಪ್ಪು ಹೋಗಲು ಮರಣ—ಹೊಸದಾಯ್ತು ಜನನ.
ಜನುಮ ಜನುಮಗಳಿಂತು ಹೊರಹೋಯ್ತು ತಿಳಿಯದೆವೆ
ಎನಿತು ಕಾಲವು ಕಳೆದುದೋ ಧರೆಯೊಳಿರುತಿಹೆವು.
ಜನುಮ ಜನುಮದ ಹೋಯಿತನುಭವದ ನೆನಪಿನಲಿ
ಕನಸಿನಂತೆ ಹಾರಿಹೋಯಿತು ಸಮಯ ಸಿದ್ಧಿಯಲಿ.

ಯು. ಯಸ್. ಅನಂತಪದ್ಮನಾಭ ರಾವ್.

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ದ್ವಿತೀಯ ರಾಮನಾಮ ಮಹೋತ್ಸವ.

ಕೊಡಗು ದೇಶದ ಮಹಾನೀಯರಿಗೂ ಮತ್ತು ಮಹಿಳೆಯರಿಗೂ ನಾನು ಈ ಮೂಲಕ ಅರಿಕೆಮಾಡಿಕೊಳ್ಳುವುದೇನೆಂದರೆ:—

ಈ ಮೊದಲೇ ಪರಲೋಕವಾಸಿಯಾದ ಮೆ. ಚೇಂದ್ರಿಮಾಡ ಕುಟ್ಟಪ್ಪನವರ ಧರ್ಮ ಪತ್ನಿಯವರಾದ ಶ್ರೀಮತಿ ಬೆಳ್ಯಮ್ಮನವರು ತಾ. 18—5—32 ನೇ ದಿನ ಶ್ರೀ ರಾಮನಾಮವನ್ನು ಮೂರು ಲಕ್ಷದ ಹದಿನಾರು ಸಾವಿರ ಬರೆದು ಶ್ರೀ ಓಂಕಾರೇಶ್ವರ ದೇವಸ್ಥಾನದಲ್ಲಿ ಶ್ರೀರಾಮನ ಪೂಜೆ, (ದೀಪಾರಾಧನೆ)

I. ಈಗ ಇರುವ ಪ್ರತಿನಿಧಿ ಕೌನ್ಸಿಲನ್ನು ಜವಾಬ್ದಾರಿ ಕೌನ್ಸಿಲಾಗಿ ಬದಲಾಯಿಸಬೇಕು; ಅಂದರೆ ತನ್ನ ಸಂಸ್ಥಾನದ ಹುಟ್ಟುವಳಿಯ ಮೇಲೆಯೂ, ಖರ್ಚಿನ ಮೇಲೆಯೂ ಅದಕ್ಕೆ ಜವಾಬ್ದಾರಿ ಇರಬೇಕು. (Provincial autonomy.)

II. ಈ ಕೌನ್ಸಿಲಿಗೆ ಸಾರ್ವತ್ರಿಕ ಚುನಾವಣೆಯು ಮೂಲಕ ಮೆಂಬರರು ಆರಿಸಲ್ಪಡಬೇಕು. ಅವಶ್ಯಕತೆ ಇದ್ದರೆ ಅಲ್ಪಸಂಖ್ಯಾತರ ಸಂಗಡಕ್ಕೆ ಅಷ್ಟಷ್ಟು ಸೀಟುಗಳನ್ನು ಕಾದಿಡಬಹುದು. (Joint election, Reservation of seats if necessary.)

III. ಕೊಡಗಿನ ಹಿತದ ದೃಷ್ಟಿಯಿಂದ ಇತರರ ಹಿತರಕ್ಷಣೆ. (Safeguards in the interest of Coorg.)

IV. ಇಂಡಿಯಾದ ಕೇಂದ್ರ ಸರ್ಕಾರಕ್ಕೆ ಜವಾಬ್ದಾರಿ. (Responsibility in the Central Government of India.)

ಇಷ್ಟು ಸಂಗತಿಗಳು ನೆರವೇರಿಸಲ್ಪಟ್ಟ ಹೊರತು ಕೊಡಗಿಗೆ ಸಮಾಧಾನವಾಗಲಿಕ್ಕಿಲ್ಲ. ಅಲ್ಲಿಯ ಉತ್ಪತ್ತಿಗೆ ಸರಿಯಾದ ಖರ್ಚು ನಡೆಸಿಕೊಂಡು ಅವರು ಸ್ವತಂತ್ರರಾಗಿರಬೇಕಲ್ಲದೆ ತಲೆಮಿಕ್ಕಿದ ಸಂಬಳ ಕೊಡುವುದಕ್ಕಾಗಿ ದೇಶದ ಉತ್ಪತ್ತಿ ಸಾಲದು ಎಂಬ ಕಾರಣದಿಂದ ಅದನ್ನು ಒಂದು ಜಿಲ್ಲೆಯಾಗಿ ಮದ್ರಾಸಿಗೆ ಸೇರಿಸಿಡುವುದು ಸರಿಯಲ್ಲ. ಇದಿಷ್ಟೇ ಪ್ರದೇಶದಿಂದ ಬಂದ ಉತ್ಪತ್ತಿಯಿಂದ ಹಿಂದಿನ ರಾಜರು ಅರಮನೆ ಖರ್ಚನ್ನೂ, ಸರ್ಕಾರದ ಖರ್ಚನ್ನೂ ನಡಿಸುತ್ತಿದ್ದದ್ದಲ್ಲದೆ ಯುದ್ಧಗಳನ್ನು ಮಾಡಿಯೂ, ಕೋಟೆಯನ್ನೂ, ಅರಮನೆಗಳನ್ನೂ, ಪೇಟೆಗಳನ್ನೂ ಕಟ್ಟಿಸುವ ಒಗ್ಗೆ ಹಣ ಉಳಿಸಿದ್ದು ಹೇಗೆ? ಅವರಿಗೆ ಅಬ್ಕಾರಿ ಇಲಾಖೆಯಿಂದ ಹುಟ್ಟುವಳಿ ಸಹ ಇರಲಿಲ್ಲ.

ರಾ. ಬ.

ಪಂ. ಮದನಮೋಹನ ಮಾಲವೀಯರ ವಿನಂತಿ.

ಭರತಖಂಡದ ವಯೋವೃದ್ಧ, ಸನ್ಮಾನ್ಯ ಲೋಕನಾಯಕರಾದ ಪಂ. ಮದನಮೋಹನ ಮಾಲವೀಯರವರು ಕಳೆದ ತಿಂಗಳ ತಾ. ೨೯ನೇ ದಿವಸ ಭರತ ಖಂಡದ ತುಂಬೆಲ್ಲ ಆಚರಿಸಲ್ಪಟ್ಟ 'ಸ್ವದೇಶೀ ದಿನ' ದ ನಿಮಿತ್ತವಾಗಿ ಅಖಿಲ ಭರತ ಖಂಡದ ಅಬಾಲವೃದ್ಧ ಸ್ತ್ರೀ ಪುರುಷರಿಗೆ ಕೊಟ್ಟ ದಿವ್ಯ ಸಂದೇಶವೇನೆಂದರೆ:—

ಪ್ರಜರ ಆರ್ಥಿಕ ಪರಿಸ್ಥಿತಿಯು ಮೂವತ್ತುಕೋಟಿಯ ಮತ್ತು ಈ ದೇಶದ ಹಿತಚಿಂತಕರಿಗೆ ಅತ್ಯಂತ ಚಿಂತೆಯನ್ನುಂಟು ಮಾಡುತ್ತಲಿದೆ. ಜಗತ್ತಿನಲ್ಲಿ ನಮ್ಮ ದೇಶದಂತೆ ಪ್ರಾಕೃತಿಕ ದ್ರವ್ಯಗಳು ಇನ್ನಾವ ದೇಶದಲ್ಲಿಯೂ ಸಿಗುವುದಿಲ್ಲ. ಭೂಮಿಯ ಮೇಲೆ ಭರತಖಂಡಕ್ಕಿಂತ ಪುರಾತನವಾದ ಸಂಸ್ಕೃತಿಯನ್ನು ಪಡೆದ ದೇಶವೊಂದೂ ಇರುವದಿಲ್ಲ.

ಆದರೂ ನಮ್ಮ ದೇಶವು ಇಂದಿನ ಮಿತಿಗೆ ಜಗತ್ತಿನೊಳಗಿನ ಅತ್ಯಂತ ದರಿದ್ರ ರಾಷ್ಟ್ರಗಳಲ್ಲೊಂದಾಗಿದೆ. ನಮ್ಮ ರಾಷ್ಟ್ರದ ಸರಾಸರಿ ಉತ್ಪನ್ನವು ಇಂಗ್ಲೆಂಡಿನ ಉತ್ಪನ್ನದ $\frac{1}{16}$ ರಷ್ಟು ಇದೆ. ಸರ್ಕಾರದ ಶಾಸನಗಳಿಂದ ಬೆಳಸಬಹುದಾದಂತೆ ರಾಷ್ಟ್ರೀಯ ಸಂಪತ್ತನ್ನು ವೃದ್ಧಿಗೊಳಿಸಲು ಪ್ರಜೆಗಳಲ್ಲಿ ಸದ್ಯ ಸಾಕಷ್ಟು ಸಾಮರ್ಥ್ಯವಿರುವುದಿಲ್ಲ. ತಮ್ಮ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳಲು ಅವರಿಗೆ (ಪ್ರಜೆಗೆ) ಒಂದೇ ಒಂದು ಮಾರ್ಗವು ತೆರೆದಿದೆ. ಅದಾವುದೆಂದರೆ:—

ಅತ್ಯಂತ ಮಿತವ್ಯಯದಿಂದ ಸಂಸಾರ ಸಾಗಿಸುವದು; ಮತ್ತು ಭರತಖಂಡದ ಹಣದಿಂದಲೂ, ಭಾರತೀಯ ಕೂಲಿಕಾರರ ಕೈಯಿಂದಲೂ ಸಿದ್ಧವಾದ ವಸ್ತುಗಳನ್ನೇ ಮಾರುವದು, ಮತ್ತು ಕೊಳ್ಳುವದು. ನನ್ನ ದೇಶದ ಬಂಧು, ಭಗಿನಿಯರೆಲ್ಲರೂ, ಹಿಂದೂಸ್ಥಾನದಲ್ಲಿ ಹುಟ್ಟಿದ ವಸ್ತುಗಳನ್ನೇ ಮಾರುತ್ತೇನೆ. ಹಿಂದುಸ್ಥಾನದ ವಸ್ತುಗಳನ್ನೇ ಉಪಯೋಗಿಸುತ್ತೇನೆ. ಇದರಿಂದ ಅಲ್ಪ ಸ್ವಲ್ಪ ಹಾನಿಯಾದರೂ ಚಿಂತೆಯಿಲ್ಲ. ಮತ್ತು ಶಾಂತ ರೀತಿಯಿಂದ ಪ್ರತಿಯೊಬ್ಬ ಸಹಕಾರಿಯು ಮನವೊಲಿಸಿ ಈ ಪ್ರಕಾರ ಮಾಡಲು ಪ್ರೋತ್ಸಾಹಿಸುತ್ತೇನೆ ಎಂದು ಪ್ರತಿಜ್ಞೆ ಮಾಡಬೇಕೆಂದು ನಾನು ಅತ್ಯಂತ ಅಗ್ರಹ ಪೂರ್ವಕ ವಿನಂತಿ ಮಾಡುತ್ತೇನೆ. ನಾನು ಸೂಚಿಸಿದ ವ್ರತಾಚರಣೆಯಿಂದ ಪ್ರಸ್ತುತ ಸ್ತ್ರೀಪುರುಷರು ದೇಶಕ್ಕೆ ಎಷ್ಟೊಂದು ಲಾಭ ಮಾಡುವರೆಂಬದನ್ನು ಪ್ರತಿಯೊಬ್ಬ ವಿಚಾರವಂತನು ತಿಳಿದು ನೋಡೆಂದು ಇಚ್ಛಿಸುತ್ತೇನೆ. ಅನೇಕ ಪಾಶ್ಚಾತ್ಯ ರಾಷ್ಟ್ರಗಳು ಇದೇ ಬಗೆಯ ವ್ರತವನ್ನು ರಾಷ್ಟ್ರೀಯ ಧೋರಣೆಯೆಂದು ಸ್ವೀಕರಿಸುವವು. ಇಂಗ್ಲೆಂಡಿನಲ್ಲಿ, ಸರಕಾರ, ಪ್ರಜಾಪ್ರಮುಖರು ಎಲ್ಲರೂ ಕೂಡಿ ಪ್ರತಿಯೊಬ್ಬ ಆಂಗ್ಲ (ಬ್ರಿಟಿಷರು) ಬ್ರಿಟಿಷ್ ವಸ್ತುಗಳನ್ನೇ ಕೊಳ್ಳಬೇಕು. ಮಾರಬೇಕು. ಎಂಬ ಬಗ್ಗೆ ಚಳವಳವನ್ನು ಮಾಡುವರು. ಹಿಂದೂಸ್ಥಾನದಲ್ಲಿ ಹುಟ್ಟುವ ವಸ್ತುಗಳ ಉತ್ಕರ್ಷಕ್ಕಾಗಿ ಇದೇ ಬಗೆಯ ಚಳವಳವು ಅತ್ಯಂತ ಅವಶ್ಯಕವಿರುವುದು. ಹಿಂದೂಸ್ಥಾನದ ಉದ್ಯೋಗ ವ್ಯವಹಾರಗಳಿಗೆಯು ಕೊಟ್ಟು ಅವುಗಳನ್ನು ಅಭಿವೃದ್ಧಿಗೆ ತರುವುದು ಪ್ರತಿ ಭಾರತೀಯನ ಆದ್ಯಕರ್ತವ್ಯವಾಗಿದೆಯೆಂಬುದನ್ನು ಒಬ್ಬ ವಿಚಾರವಂತನು ಒಪ್ಪದಿರನು.

ಹಿಂದೂಸ್ಥಾನದವರೂ, ಸ್ವದೇಶೀ ಚಳವಳಕ್ಕೆ ನಮ್ಮ ದೇಸೂ ಅಲ್ಲವೆಂದು ಸಾರಿ ಹೇಳಿದ್ದಾರೆ. ಸ್ವದೇಶೀ ಚಳವಳವು ಪ್ರಗತಿಯನ್ನು ಪಡೆದಿದೆ. ಆದರೆ ಪ್ರಜರ ಆರ್ಥಿಕ ದುಸ್ಥಿತಿಯನ್ನು ಸುಧಾರಿಸಲು ಈ ಪ್ರಗತಿಯು ಸಾಕಾಗಿಸದು. ಸ್ವಪ್ರೇಮಿಯಾದ ಪ್ರತಿಯೊಬ್ಬ ಭಾರತೀಯನೂ ತನ್ನ ದೇಶಬಂಧುವರ ಸ್ಥಿತಿಗತಿಗಳನ್ನು ಸುಧಾರಿಸಬೇಕನ್ನುವವನೂ ಪ್ರತಿಜ್ಞೆಯನ್ನು ಒಮ್ಮನಸ್ಸಿನಿಂದ ಮನ್ನಿಸುವನೆಂದು ಹಾರೈಸುತ್ತೇನೆ. ಮತ್ತು ನನ್ನ ಸ್ವದೇಶಬಾಂಧವರು ಹಾಗೆ ಮಾಡುವ ಕರುಣಿಸೆಂದು ದೇವರನ್ನು ಪ್ರಾರ್ಥಿಸುತ್ತೇನೆ.

'ಕರ್ನಾಟಕ ಟೈಮ್ಸ್'

ಬಾರ್ಕಮಧು.

ಬಾಲಾರ್ಕಮಧು... ಕೊಡುವುದರಿಂದ ಶಕ್ತಿ, ಮತ್ತು ಆರೋಗ್ಯವೂ ಹೆಚ್ಚು. ಇದು ಮಧುರವಾಗಿದೆ. ಬೆಲೆ ಸೀಸೆ 1ಕ್ಕೆ 0—12—0 ಟ. 0—12—0.



(Spleen Lever enlargemt) ಎಂಬ ಮಕ್ಕಳ ಭಯಂಕರ ಗಡ್ಡೆರೋಗ—ಪ್ಲೀಹ—ಪಿತ್ತಕೋಶದ ಗಡ್ಡೆಗೆ ಚಕ್ರಬಿಂದು. ಚಕ್ರಕ್ಷಾರ—ಚಕ್ರಚೂರ್ಣ—ಚಕ್ರಪ್ರಭಾ—ಈ ನಾಲ್ಕು ಮಹೌಷಧಗಳಿವೆ. ಸಾವಿರಾರು ಮಕ್ಕಳ ಪ್ರಾಣವನ್ನು ಉಳಿಸಿದೆ. ನಾಲ್ಕು ಔಷಧಗಳು ಸೇರಿ 1ತಿಂಗಳ ಔಷಧದ ಬೆಲೆ 3—0—0. ಟ. ಖ. 0—8—0. ಏಜಂಟರು ಬೇಕಾಗಿರುವರು.

ಪ. ಎ. ಮುನ್. ಶ್ರೀನಿವಾಸರಾವ್,

ವ್ಯೆ. ವಿ. ಆಯುರ್ವೇದ ಭಿಷಕ್,

ಬ್ರಾಂಚ್ ಆಫೀಸ್.	Spleen &Lever ಸ್ಪೆಶಲಿಸ್ಟ್.
ಉಡ್ಪಿ. S. K.	ಯಂ. ವಿ. ಪ್ರಾದಿಕ ಔಷಧಾಲಯ,
52- 21	ಶಿಮೊಗಾ (ಮೈಸೂರು ಸೀಮೆ)

ಮಡಿಕೇರಿ.

(ಕವನ.)

ಮಾಡಿದನು ರಾಜಂದು ಮಡಿಕೇರಿಯನ್ನು
ಹೂಡಿಕಾಸಮುರವನು ಕಾಡಿಪರ ಕೂಡಿ
ನಾಡಿನಾಜನರಿದಕೆ ಒಪ್ಪಿದರೊ ಅರಿಯೆ
ದೂಡಿಯವರನುಯಿಂದು ಪದೂವಿಡ ಒರೆಯೆ ||೧||
ಏರಬರೆ ಮಡಿಕೇರಿ ಹಾರಿಹೋಗುದು ಜೀವ
ಕೂರಿರನೇಕೂಕಲ್ಲಿ ಏರಿಪನು ಮರರ
ದೂರದೂರುಗಳಿಂದ ನಡೆನಡೆದು ನೋಡು
ಕ್ರೂರ ಬೆಟ್ಟವನೇರಿದೀರಕನ ಬೇಕು ||೨||
ನೋಡಿದೆನು ನಾನಿಂದು ಮಡಿಕೇರಿ ನೊಬಗ
ಹಾಡಿ ತೀರ್ಥಿಸಲರಿಯೆ ಮಡಿಕೇರಿ ಬೆಡಗ
ನೋಡುನೋಡ ತಹೋಗಿ ನೊಬಗೊಳು ಅಲ್ಲಿ
ನೀಡಿರುವ ಸೌಂದರ್ಯ ಶಿವನದೇ ಎಲ್ಲ ||೩||
ಮಾಡಿದ್ದು ಮನುಜಲ್ಲಿ ನೋಡಲೇನಿಲ್ಲ
ಕಾಡುಗುಡ್ಡಗಳೀವ ಸೌಂದರ್ಯವೆಲ್ಲ
ನೋಡಲವು ಮಸ್ತಕನ ಮಸ್ತಕನರಾಡಿ
ಗೀಡುಮಾಡುವೆಯೆನ್ನ ಕಾಡಿಪವು ಬೇಗ ||೪||
ಭಕ್ತರಾಜನು ಕೋಟೆ ಮುಕ್ತಿಯೊಳು ಕಟ್ಟಿ
ಶಕ್ತಿಮೀರುತೆ ತನ್ನ ಚಿತ್ತವದಕಿತ್ತು
ಎತ್ತಿಕಾಣುವ ತರದಿ ಹೊತ್ತಿಸಿದ ದೀಪ
ಇತ್ತಿರುವ ಜಗದೀಶ ಉತ್ತಮದಿ ಇಂದು ||೫||
ಅರಳಿತಾನಳಿದ ಚಿಹ್ನೆಎಲ್ಲವ ತೋರಿ
ಕುರುಹದರ ಇರಲೆಂದು ರಾಜಕಟ್ಟಿಹರು
ಅರುವನ್ನೆ ಬೀರುತಿಹ ಗದ್ದಿಗೆಯ ಮೂರಿ
ಪೂರುವಾ ಸೌಂದರ್ಯ ಊರೊಳೇ ಇಲ್ಲ ||೬||
ದೇವಸ್ಥಾನದೊಳು ಸ್ಥಾನ ಓಂಕಾರ ಸ್ಥಾನ
ಅವಜ್ಞಾನನೊಳು ರಾಜತಾನಿದ್ದನೆಂಬ
ಬಾವವನು ತೋರಿಸುತೆ ಹರಸುವುದು ಇಂದು
ಅವರೆನ್ನ ವಾರಾಜ ಅಜ್ಞಾನಿಯೆಂದು ||೭||
ರಾಜಸೀಟನು ಇಂದು ವರಕವಿಯು ನೋಡೆ
ಭೂಜಗದಿ ಇಲ್ಲದಿಹ ಸುಂದರ ನೋಡಿ
ರಾಜನೊಳು ಅಡಗಿದ್ದ ಕವಿತೆಮನು ಹೀರೆ
ಮಾಬಿರಾಜನ ಒಲವ ಕಾಡಿಗ್ಗೆಯುವ ನೋಡೆ ||೮||
ಮಳೆಯಿಲ್ಲದಿಹ ಕಾಲ ಮಡಿಕೇರಿ ಲೀಲೆ
ಮೊಳೆಯಿಸುದು ಮನದೊಳಗೆ ಮೋಹಿಸಲು ಎಲ್ಲ
ಯೆಳೆವುದೆಲ್ಲರ ಮನವ ಥಳ ಥಳಿಸಿಹೊಳೆಯೆ
ಮಳೆಗಾಲ ಮಸಿಯಂತೆ ಸುಂಗುರಾ ಲೀಲೆ ||೯||
ಮಡಿಕೇರಿ ಮಳೆಯಿಂದು ಕಾಪುದು ಎನ್ನ
ತಡೆಯಲಾರೆನು ನಾನು ಹೊಡೆಚರದ ಯಿಂದು
ಕಡುಕಸ್ಟ್ರ ಮಳೆಯಲ್ಲಿ ನಡುತಿರುವುದು ಎಲ್ಲ
ಬಿಡಲೇಕೆ ಹೂಡೆಯುದೇ ಪೊಡವಿಯೆ ದೆನು ಒಲ್ಲ ||೧೦||
ಹಾಳುಮಳೆಯಲ್ಲಿ ಹಾಳುಮಾಡುದು ಬಾಳ
ಗೊಳುಜನರಿಗೆ ಅಲ್ಲಿ ಹಾಳ ಮಳೆಗಾಲ
ನಾಳದರ ಕಳೆವ ಬಾಳೆಲ್ಲ ಹಾಳ
ಗೋಳು ಎನ್ನುವ ಮಾತು ಜಾಳು ಎನ್ನುರು ಕೆಲವು ||೧೧||
ಒಡ ಊರಗೂಡವೆಲ್ಲ ನಾರದರೆ ನಾನು
ಬಡದೆನ್ನ ಮಡುಕರು ಒಡಿಯದೇ ಇಂದು
ಒಡವೇಲೆ ಬೆಡಗಿರುದು ಒಡಲೊಳಗೆ ಇಲ್ಲ
ಒಡೆಯನೆಲ್ಲಿಗೆ ಇವರ ಒಯ್ಯುವನೊ ಅರಿಯೆ ||೧೨||
ಮಡುಕರು ಮಂಡೂಕಂದು ಕೂಪದೊಳು ತನ್ನ
ಒಡಲನ್ನು ಒಡೆದಂತೆ ಒಡೆಯುವುದ ನೋಡಿ
ಒಡವರೊಡೆಯನು ತನ್ನ ಕರುಣೆಯನು ಬೀರಿ
ಕೊಡುತಿರುವ ಮಡುಕರಿಗೆ ಜ್ಞಾನದಾದಾರ ||೧೩||

ಅ ಬೊ.

ಗ್ರೇಂಡ್ ಕ್ಲೀಯರೇನ್ಸ್ ಸೇಲ್.

ಸುಗಂಧ ಪುಷ್ಪಗಳಿಂದ ತಯಾರಿಸಿದ ಅಟೊ ಮೋತಿಯಾ ಎಸೆನ್ಸ್.

3 ವಾಚುಗಳೊಡನೆ 60 ಸಾಮಾನುಗಳು ಪುಕ್ಕಟೆಯಾಗಿ ರೂ. 3—0—0.



6 ಬಾಟ್ಲಿ ಒಮ್ಮೆಲೆ ತೆಗೆಯತಕ್ಕವರಿಗೆ ಒಂದು ರೋಲ್ಡ್ ಗೋಲ್ಡಿನ ಡಮ್ಮಿ ರಿಸ್ಟ್ ವಾಚು ಒಂದು ಜರ್ಮನ್ 'ಬಿಟ್ಟಂಪೀಸು, (5 ವರ್ಷದ ಖಾತರಿ) ಮತ್ತು ಒಂದು ಟ್ರೈಲ್ಡ ಡಮ್ಮಿ ಪಾಕೆಟ ವಾಚು. ಇದಲ್ಲದೆ 60 ಇತರ ಸಾಮಾನುಗಳು ಒಂದು ಪೌಂಟನ್ ಪೆನ್ನಿನೊಡನೆ ಫ್ರೀಯಾಗಿ ದೊರಕುವವು. ಪ್ಯಾಕಿಂಗ್ ಮತ್ತು ಪೋಸ್ಟೇಜು ಎಕ್ಸ್ಟ್ರಾ.

David & Co. Post Box No. 11403.

Empire of India Life Assurance Company, Ltd.

Established 1897.

The New "FAMILY SECURITY" Policy issued by this Company provides

A. In the event of death during an agreed period

1. The immediate payment to the Widow, Son or legal representative of a part of the sum Assured together with the Bonus accrued.

2. The payment of a guaranteed Yearly Income, payable by monthly instalments, during the balance of the period.

3. The payment of the blance of the sum of assured at the end o the period

OR

B. In the event of death after the period has expired the payment of the sum assured together with any Bonus that has accrued.

Descriptive Pamphlet on application to—

Head Office:—		Branch Office.—
EMPIRE OF INDIA LIFE BUILDING,		152, COMMERCIAL STREET,
Bombay.	52- 37	Bangalore.

ಕರ್ತವ್ಯ ನಿಷ್ಠತೆ.

(ಮಹಾತ್ಮ ಗಾಂಧಿಯವರ ಲೇಖನಿಯಿಂದ)

ನನ್ನ ಕಸುಬೇನೋ ತೃಪ್ತಿಕರವಾಗಿಯೇ ವೃದ್ಧಿ ಹೊಂದುತ್ತಿದ್ದರೂ ನನಗೆ ಮಾತ್ರ ಅಷ್ಟು ಸಂತೋಷವಾಗಲಿಲ್ಲ. ನನ್ನ ಜೀವನವನ್ನು ಇನ್ನೂ ಸಾಧಾರಣವನ್ನಾಗಿ ಮಾಡುವ ಮತ್ತು ಇತರರಿಗೆ ಯಾವುದಾದರೊಂದು ಶಾಶ್ವತವಾದ ಕೆಲಸ ಮಾಡುವ ಪ್ರಶ್ನೆಗಳು ಸದಾ ನನ್ನ ಮನಸನ್ನು ಅಲ್ಲೋಲ ಕಲ್ಲೋಲ ಮಾಡುತ್ತಲೇ ಇತ್ತು.

ಹೀಗಿರುವಾಗ ಒಂದು ದಿನ ಒಬ್ಬ ಕುಷ್ಠ ರೋಗಿಯು ಮನೆ ಬಾಗಿಲಿಗೆ ಬಂದನು. ಅನ್ನ ಹಾಕಿ ಅವನನ್ನು ಹೊರಡಿಸಲು ನನಗಿಷ್ಟ ಬರಲಿಲ್ಲ. ಆದುದರಿಂದ ಅವನಿಗೆ ನನ್ನ ಮನೆಯಲ್ಲಿ ಇರಲು ಸ್ಥಳ ಕೊಟ್ಟೆ. ಅವನ ಹುಣ್ಣುಗಳನ್ನು ತೊಳೆದು ಕಟ್ಟಿದೆ. ಅಂದಿನಿಂದ ಅವನನ್ನು ನೋಡಿಕೊಳ್ಳಲು ಮೊದಲು ಮಾಡಿದೆ.

ಆದರೆ ಅದೇ ರೀತಿ ಸದಾಕಾಲವೂ ಇರಲಾಗಲಿಲ್ಲ; ದೃಢ ಮನಸ್ಸೂ ಇರಲಿಲ್ಲ. ಅದಕ್ಕಾಗಿ ಅವನನ್ನು ನನ್ನ ಮನೆಯಲ್ಲಿ ಇರಲೀಸದೆ ಪೆಟ್ಟು ಬಿದ್ದವರೇ ಮುಂತಾದವರಿಗಾಗಿ ಸರ್ಕಾರದವರು ಸ್ಥಾಪಿಸಿದ್ದ ಚಿಕಿತ್ಸಾಲಯಕ್ಕೆ ಕಳುಹಿಸಿಬಿಟ್ಟೆ. ಇಷ್ಟಾದರೂ ಮನಸಿಗೆ ಶಾಂತಿ ಇಲ್ಲ. ಜನಾಂಗಕ್ಕೆ ಶಾಶ್ವತವಾಗಿ ಸಹಾಯವಾಗುವಂತೆ ಯಾವುದಾದರೊಂದು ಕೆಲಸ ಮಾಡಬೇಕೆಂಬ ಹಂಬಲ ಮಾತ್ರ ತಪ್ಪಲಿಲ್ಲ.

ಡಾ. ಬೂತ್‌ರವರು ಸೇಂಟ್ ಏಡ್ಯಾನ್ಸ್ ಮಿಷನ್ನಿನ ಅಧ್ಯಕ್ಷರಾಗಿದ್ದರು. ಆತನು ದಯಾಳು. ರೋಗಿಗಳಿಂದ ಪ್ರತ್ಯಾಶೆಯಿಲ್ಲದೆ ಔಷಧೋಪಚಾರಗಳನ್ನು ಮಾಡುತ್ತಿದ್ದನು. ಪಾರ್ಸಿ ರುಸ್ತುಂಜಿಯವರ ದಾನಗಳ ಸಹಾಯದಿಂದ ಡಾ. ಬೂತ್‌ರವರು ಒಂದು ಧರ್ಮ ಚಿಕಿತ್ಸಾಲಯವನ್ನು ತೆರೆದಿದ್ದರು. ನನಗೆ ಆ ಚಿಕಿತ್ಸಾಲಯದಲ್ಲಿ ಉಪಚಾರಕನಂತೆ ಕೆಲಸ ಮಾಡಲು ಮಹಾ ಆಶೆ. ಔಷಧಿಗಳನ್ನು ಬೆರಸಿ ತಯಾರು ಮಾಡುವ ಕೆಲಸವೇ ದಿನಕ್ಕೆ ಒಂದೆರಡು ಗಂಟೆಗಳ ಕಾಲ ಹಿಡಿಯುತ್ತಿತ್ತು. ನನ್ನ ಕಛೇರಿ ಕೆಲಸದಲ್ಲಾದರೂ ಕೊಂಚ ಪುರಸತ್ತು ಮಾಡಿಕೊಂಡು ಆ ಆಸ್ಪತ್ರೆಯಲ್ಲಿ ಔಷಧಿಗಳನ್ನು ತಯಾರು ಮಾಡುವ ಕಾಂಪೌಂಡರು ಕೆಲಸ ಮಾಡಬೇಕೆಂದುಕೊಂಡೆ.

ನನ್ನ ವೃತ್ತಿಗೆ ಸಂಬಂಧಿಸಿದ ಕೆಲಸಗಳ ಬಹುಭಾಗವೆಲ್ಲಾ ಕೊಠಡಿಯಲ್ಲಿ ನಡೆಯುತಿತ್ತು; ಇಲ್ಲವೇ ರಾಜಿಯಾಗುತಿತ್ತು. ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿಯೂ ಕೆಲವು ಕೇಸುಗಳಿರುತ್ತಿದ್ದವು. ಅವುಗಳಲ್ಲಿಯೂ ಅನೇಕ ಕೇಸುಗಳಲ್ಲಿ ಅಷ್ಟಾಗಿ ತಕರಾರು ಇರುತ್ತಿರಲಿಲ್ಲ. ನನ್ನೊಡನೆ ದಕ್ಷಿಣ ಆಫ್ರಿಕಾಕ್ಕೆ ಬಂದಿದ್ದ ಮಿ. ಖಾನರವರು ನನ್ನ ಗೈರುಹಾಜರಿ ಕಾಲದಲ್ಲಿ ಆ ಕೇಸುಗಳನ್ನು ನೋಡಿಕೊಳ್ಳುತ್ತಿದ್ದರು. ಈ ಕಾರಣಗಳಿಂದ ನನಗೆ ಆಸ್ಪತ್ರೆಯಲ್ಲಿ ಕೆಲಸ ಮಾಡಲು ಪುರಸತ್ತು ಸಿಕ್ಕಿತು. ಅಂದರೆ ಪ್ರತಿ ಪ್ರಾತಃಕಾಲವೂ ಆಸ್ಪತ್ರೆಯಲ್ಲಿನ ಕೆಲಸದ ಕಾಲ ಮತ್ತು ಅಲ್ಲಿಂದ ಹೋಗಿ ಬರುವ ಕಾಲ ಎರಡೂ ಸೇರಿ ಎರಡು ಗಂಟೆಗಳ ಕಾಲ ಹಿಡಿಯುತ್ತಿತ್ತು.

ಇದರಿಂದ ನನ್ನ ಮನಸಿಗೆ ಸ್ವಲ್ಪ ಸಮಾಧಾನವಾಯಿತು. ನನ್ನ ಕೆಲಸವೇನೆಂದರೆ ರೋಗಿಗಳ ಕಾಯಿಲೆಯನ್ನು ವಿಚಾರಿಸುವುದು. ಅವುಗಳನ್ನು ಡಾಕ್ಟರಿಗೆ ತಿಳಿಸುವುದು. ಅವರು ಹೇಳಿದ ಔಷಧಿಗಳನ್ನು ಬೆರಸಿ ಕೊಡುವುದು. ಇದರಿಂದ ಕೆಲಸ ಮಾಡಲು ಆಗದೆ ನರಳುತಿದ್ದ ತಮಿಳ, ಆಂಧ್ರ ಮತ್ತು ಉತ್ತರ ಹಿಂದೂಸ್ಥಾನದ ಭಾರತೀಯರ ವಿಚಾರ ನನಗೆ ಚೆನ್ನಾಗಿ ಗೊತ್ತಾಯಿತು.

ಈ ಅನುಭವದಿಂದ ನನಗೊಂದು ಒಳ್ಳೆಯದೇ ಆಯಿತು. ಮುಂದೆ ಬೋಯರ್ ಯುದ್ಧವಾದ ಕಾಲದಲ್ಲಿ ನಾನು ಉಪಚಾರಕನಾಗಿದ್ದುಕೊಂಡು ಖಾಯಿಲೆ ಇದ್ದ ಮತ್ತು ಪೆಟ್ಟು ಬಿದ್ದಿದ್ದ ಸೈನಿಕರ ಸೇವೆಗೆ ನಿಲ್ಲಲು ನಾನೊಪ್ಪಿಕೊಳ್ಳಲು ನನಗೆ ಸಹಾಯಕಾರಿಯಾಯಿತು.

ಮಕ್ಕಳ ಪೋಷಣೆಯ ಪ್ರಶ್ನೆಯು ನನ್ನನ್ನು ಬಿಟ್ಟದ್ದೇ ಇಲ್ಲ. ದಕ್ಷಿಣ ಆಫ್ರಿಕಾದಲ್ಲಿ ನನ್ನೊಡನೆ ನನ್ನಿಬ್ಬರು ಮಕ್ಕಳಿದ್ದರು. ಅವರನ್ನು ಯಾವ ರೀತಿ ತಬೇತು ಮಾಡಬೇಕೆಂದು ಚಿಂತಿಸುತ್ತಿದ್ದ ನನಗೆ ನನ್ನ ಆಸ್ಪತ್ರೆಯ ಅನುಭವದಿಂದ ಚಿಂತೆಯು ಹರಿದಂತಾಯಿತು.

ಆ ಕಾಲದಲ್ಲಿ ನನ್ನ ಹೆಂಡತಿಯು ಗರ್ಭಿಣಿ. ನಾವಿಬ್ಬರೂ ಪ್ರಸವಕಾಲದಲ್ಲಿ ಒಳ್ಳೆಯ ವೈದ್ಯಸಹಾಯವು ಅಗತ್ಯವೆಂದು ನಿರ್ಧರಿಸಿದ್ದೆವು. ಆದರೆ ವೈದ್ಯನೂ, ಮಂತ್ರಸಾನಿಯೂ ಆ ಪ್ರಸವಕಾಲಕ್ಕೆ ಬರದೆ ನಮ್ಮನ್ನು ಕೈಬಿಟ್ಟರೆ ನಾವೇನು ಮಾಡಬೇಕು? ಅಲ್ಲದೆ ಮಂತ್ರಸಾನಿಯು ಭಾರತೀಯಳೇ ಆಗಬೇಕು. ತರಬೇತಾದ ಭಾರತೀಯ ಮಂತ್ರಸಾನಿಯು ದೊರಕುವುದು ಇಂಡಿಯಾದಲ್ಲಿ ಎಷ್ಟು ಕಷ್ಟವೋ ಆ ದಕ್ಷಿಣ ಆಫ್ರಿಕಾದಲ್ಲಿಯೂ ಅಷ್ಟೇ ಎಂಬುದಾಗಿ ಸುಲಭವಾಗಿ ಊಹಿಸಬಹುದು. ಆದಕಾರಣ ನಾನು ಸುಖ ಪ್ರಸವ ಮಾಡಿಸಲು ತಿಳಿಯಬೇಕಾದ ಅಂಶಗಳನ್ನೆಲ್ಲಾ ಓದಿಕೊಂಡೆ. ಡಾ. ತ್ರಿಭುವನದಾಸರಿಂದ ರಚಿತವಾಗಿದ್ದ 'ಮಾನೆ ಶಿಖಾಮಣ' (ತಾಯಿಗೆ ಬುದ್ಧಿವಾದ) ಎಂಬ ಪುಸ್ತಕವನ್ನೋದಿ ಅದರ ಪ್ರಕಾರ ನನ್ನಿಬ್ಬರು ಮಕ್ಕಳನ್ನು ನೋಡಿಕೊಂಡೆ. ಅಲ್ಲಲ್ಲಿ ನಾನು ತಿಳಿದಿದ್ದ ಅನುಭವವನ್ನೂ ಪ್ರಯೋಗಿಸುತ್ತಿದ್ದೆ. ಮಂತ್ರಸಾನಿಯೇನೋ ದೊರಕಿದಳು—ಎರಡು ಭಾರಿಯೂ ಎರಡೆರಡು ತಿಂಗಳ ಕಾಲ ಮಾತ್ರ ಆದೂ ಮಕ್ಕಳ ಪೋಷಣೆಗಲ್ಲ. ಅದನ್ನೂ ನಾನೇ ವಹಿಸಿಕೊಂಡೆ.

ಈ ಕೊನೆಯ ಮಗುವಿನ ಪ್ರಸವವು ನನ್ನನ್ನು ಮಹಾ ಪರೀಕ್ಷೆಗೇ ಸಿಕ್ಕಿಸಿಬಿಟ್ಟಿತು. ಪ್ರಸವವೇದನೆಯು ಅಕಸ್ಮಾತಾಗಿ ಉಂಟಾಯಿತು. ಕೂಡಲೇ [illegible] ಬರುವಂತಿರಲಿಲ್ಲ. ಮಂತ್ರಸಾನಿಯನ್ನು ಹುಡುಕಲು ಕಾಲವಿಳಂಬವಾಯಿತು. ಅವಳು ಸ್ಥಳದಲ್ಲಿಯೇ ಇದ್ದರೂ ಅವಳಿಂದ ಪ್ರಸವಕ್ಕೇನೂ ಸಹಾಯವಾಗುವಂತಿರಲಿಲ್ಲ. ನಾನೇ ಮಗುವಿನ ಸುಖ ಪ್ರಸವವನ್ನು ನೋಡಿಕೊಳ್ಳಬೇಕಾಯಿತು. ಆಗ ನಾನು ಡಾಕ್ಟರ್ ತ್ರಿಭುವನದಾಸರ ಕದಲ್ಲಿ ಓದಿ ತಿಳಿದುಕೊಂಡಿದ್ದ ಅಂಶಗಳು ನನಗೆ ಬಹಳ ಸಹಾಯ ಮಾಡಿತು. ನಾನೇನೂ ಘಾಬರಿ ಬೀಳಲಿಲ್ಲ.

ಮಕ್ಕಳನ್ನು ಸರಿಯಾದ ರೀತಿ ಪೋಷಿಸಬೇಕಾದರೆ ತಾಯಿ ತಂದೆಗಳು ಮಕ್ಕಳ ಪೋಷಣೆ ಮತ್ತು ಉಪಚಾರದ ವಿಷಯವಾಗಿ ಪರಿಜ್ಞಾನವನ್ನು ಪಡೆದಿರಬೇಕಾದದ್ದು ಅತ್ಯವಶ್ಯಕವೆಂದು ನನಗೆ ಚೆನ್ನಾಗಿ ತಿಳಿದು ಬಂದಿತು. ಹೆಜ್ಜೆ ಹೆಜ್ಜೆಗೂ ಆ ವಿಷಯದಲ್ಲಿ ಜಾಗರೂಕತೆಯಿಂದಿರಬೇಕಾದುದನ್ನು ನಾನು ಓದಿ ತಿಳಿದುಕೊಂಡ ಪ್ರಯೋಜನವು ನನಗೆ ಗೊತ್ತಾಗುತ್ತಾ ಬಂದಿತು. ಆ ವಿಷಯವನ್ನು ಓದದೆ ಅದನ್ನು ಸರಿಯಾದ ದಾರಿಯಲ್ಲಿ ಪ್ರಯೋಗಿಸದೆ ಇದ್ದ ಭಾಗದಲ್ಲಿ ನನ್ನ ಮಕ್ಕಳು ಇವತ್ತಿರುವಷ್ಟು ಆರೋಗ್ಯದೃಢಕಾಯರಾಗಿ ಇರುತ್ತಲೇ ಇರ.

ಮಗುವಿಗೆ ಐದು ವರ್ಷವಾಗುವ ತನಕ ಏನನ್ನೂ ಕಲಿಯುವ ಹಾಗಿಲ್ಲವೆಂದು ನಮ್ಮದೊಂದು ಮೂಢಭಕ್ತಿ ಇದೆ. ಅದಕ್ಕೆ ಬದಲಾಗಿ ಇರುವಾರವಿದು. ಮಗುವು ತನ್ನ ಮೊದಲ ಐದು ವರ್ಷಗಳಲ್ಲಿ ಕಲಿತದನ್ನು ಮುಂದೆ ಕಲಿಯುವುದೇ ಇಲ್ಲ. ಮಗುವಿನ ವಿದ್ಯಾಭ್ಯಾಸವು ಗರ್ಭೋತ್ಪತ್ತಿಯೊಡನೆಯೇ ಪ್ರಾರಂಭವಾಗುವ(ದು). ಗರ್ಭೋತ್ಪತ್ತಿಯ ಕಾಲದಲ್ಲಿ ಮಾತಾಪಿತೃಗಳ ದೈಹಿಕ ಮಾನಸಿಕ ಸ್ಥಿತಿಗಳು ಯಾವ ರೀತಿ ಇರುತ್ತವೋ ಅವೇ ಮಗುವಿನಲ್ಲಿ ಹುಟ್ಟುತ್ತವೆ. ಗರ್ಭದಲ್ಲಿರುವಾಗಲೂ ತಾಯಿಯ ಸ್ಥಿತಿಗತಿಗಳನ್ನು ಅನುಸರಿಸುತ್ತದೆ. ಆಕೆಯ ಆಶಯಗಳನ್ನೂ, ಮನಸ್ಸಿನ ಪರಿಸ್ಥಿತಿಯನ್ನೂ, ಆ ಜೀವನ ಗತಿಯನ್ನೂ ಅನುಸರಿಸುತ್ತದೆ. ಜನನವಾದ ಮೇಲೆ ಮಗುವು ಮಾತಾಪಿತೃಗಳನ್ನು ಅನುಕರಿಸುತ್ತ ಹೋಗುತ್ತ ಅನಂತರ ಕೆಲವು ವರ್ಷಗಳ ಪರಿಯಂತರವೂ ಮಗುವಿನ ಬೆಳವಣಿಗೆಯು ತಂದೆ ತಾಯಿಗಳನ್ನೇ ಅನುಸರಿಸುತ್ತದೆ.

ಈ ವಿಚಾರಗಳನ್ನು ತಿಳಿದ ಗಂಡ ಹೆಂಡಿರು ತಮ್ಮ ಕೇವಲ ಕಾಮ ತೃಪ್ತಿಗಾಗಿ ಸಂಭೋಗವನ್ನು ಇಚ್ಛಿಸುವುದೇ ಇಲ್ಲ; ತಮಗೆ ಯಾವಾಗ ಸಂತಾನ ಪ್ರಾಪ್ತಿಯಾಗಬೇಕೆಂದು ಅಪೇಕ್ಷಿಸುವರೋ ಆಗ ಮಾತ್ರವೆ ಅದಕ್ಕೆ ಗಮನ ಕೊಡುವರು. ಸಂಭೋಗವು ಆಹಾರಗಳಂತೆ ಅವಶ್ಯಕವಾದ ಸ್ವೇಚ್ಛಾ ಕರ್ತವ್ಯವೆಂದು ತಿಳಿಯುವುದು [illegible] ಪರಮಾವಧಿಯೆಂದು ನನ್ನ ನಂಬಿಗೆ. ಪ್ರಪಂಚದ ಇರುಕೆಗೆ ಸಂತತಿಯೇ ಆಧಾರಭೂತವಾದುದು. ಈ ಪ್ರಪಂಚವು ಭಗವನ ಕ್ರೀಡಾರಂಗ; ಅವನ ಯಶಸ್ಸು ಪ್ರತಿಫಲಿಸುವುದೂ ಇದೇ ಪ್ರಪಂಚವು. ಸರಿಯಾದ ರೀತಿಯಲ್ಲಿ ಬೆಳೆಯುವಂತೆ ತಾನು ಕ್ರಿಯೆಯನ್ನು ಹತೋಟಿಯಲ್ಲಿಟ್ಟುಕೊಂಡಿರಬೇಕು. ಇದನ್ನು ಯಾವನು ಅರಿತುಕೊಳ್ಳುವನೋ ಅವನು ತನ್ನ ಕಾಮೇಚ್ಛೆಯನ್ನು ಎಷ್ಟೋ ಕಷ್ಟವಾದರೂ ಹತೋಟಿ ತಂದುಕೊಳ್ಳುವನು; ತನ್ನ ಸಂತಾನದ ಶಾರೀರಕ ಮಾನಸಿಕ ಆಧ್ಯಾತ್ಮಿಕ ಅಭಿವೃದ್ಧಿಗಾಗಿ ಯಾವ ಯಾವ ಜ್ಞಾನವು ಆವಶ್ಯಕವೋ ಅದೆಲ್ಲವನ್ನೂ ತಿಳಿದುಕೊಳ್ಳುವನಲ್ಲದೆ ತನ್ನ ಜ್ಞಾನದಿಂದ ಮುಂದಿನ ಜನಾಂಗಕ್ಕೂ ಒಳ್ಳೆಯದಾಗುವಂತೆ ಮಾಡುವನು.

'ಪ್ರಜಾಮತ'

ಕೊಡಗು ಅಮಲ್ಗಮೇಶನ್ ಪ್ರಶ್ನೆ.

(ಯಂ. ಪೂವಯ್ಯನವರಿಂದ.)

ಇತ್ತ ಇಂಡಿಯಾ ದೇಶದ ರಾಜಕೀಯ ಚಳವಳದ ಫಲಿತಾಂಶವಾಗಿ ಬೇರೆ ಹೆಚ್ಚಿನ ರಾಜಕೀಯ ಮಾರ್ಪಾಟುಗಳು ಜರುಗಿವೆ. ಸದ್ಯಕ್ಕೆ ಈಗ ಬೇಗನೇ ಪ್ರಾಂತೀಯ ಸಂಪೂರ್ಣ ಜವಾಬ್ದಾರಿಯನ್ನು ಪ್ರಾಂತ್ಯಗಳಿಗೆ ಕೊಟ್ಟು ಮಧ್ಯವರ್ತಿ ಸರಕಾರದ ಜವಾಬ್ದಾರಿಕೆಯನ್ನು ಸದ್ಯಕ್ಕೆ ಮೂಲೆಗೆ ಒತ್ತಿದಾಗಿರುವ ವರ್ತಮಾನವು ಪ್ರಚಲಿಸುತ್ತಿದೆ.

ಈಗ ನಮ್ಮ ಕೊಡಗು ಪ್ರಾಂತ್ಯವು ಈಗಿರುವಂತೆ ಪ್ರತ್ಯೇಕ ಪ್ರಾಂತ್ಯವಾಗಿರಬೇಕೋ, ಇಲ್ಲವೇ ಮದ್ರಾಸು ಅಧಿಪತ್ಯದ ಒಂದು ಜಿಲ್ಲೆಯಾಗಿ ಮದ್ರಾಸು ಸರಕಾರದೊಂದಿಗೆ ಸೇರಿ ಹೋಗಬೇಕೋ ಎಂಬ ಪ್ರಶ್ನೆಯು ಈಗ ಪಕ್ಷನೆ ಪ್ರಾಮುಖ್ಯತೆಗೆ ಬಂದು, ಸರಕಾರದವರು ಕೊಡಗಿನಲ್ಲಿಯ ಎಲ್ಲಾ ಸಂಸ್ಥೆಗಳಿಗೂ ಅವರವರ ಅಭಿಪ್ರಾಯಗಳನ್ನು ಸೂಚಿಸಲು ಬರೆದಿರುವರಂತೆ, ಮತ್ತು ಕೆಲವು ಸಂಸ್ಥೆಗಳು ಅವರವರ ಅಭಿಪ್ರಾಯಗಳನ್ನು ಕೊಟ್ಟಿರುವರೆಂದಾಗಿಯೂ ತಿಳಿಯಬರುತ್ತದೆ. ಈ ಅಮಲ್ಗಮೇಶನ್ ಪ್ರಶ್ನೆ ಎಂಬುದು—ಕೊಡಗು ಅಮಲ್ಗಮೇಶನಿಗೆ ಒಪ್ಪಿದರೆ ಕೊಡಗಿನವರಿಗೆ ಬೇರೆ ಪ್ರಾಂತ್ಯಗಳಲ್ಲಿ ದೊಡ್ಡ ಹುದ್ದೆಗಳು ಸಿಕ್ಕಬಹುದೆಂದಾಗಲಿ, ನಮ್ಮ ವಿದ್ಯಾರ್ಥಿಗಳಿಗೆ ಸುಲಭದಲ್ಲಿಯೇ ಮದ್ರಾಸು ಕಾಲೇಜುಗಳಲ್ಲಿ ಸ್ಥಳದೊರಕಿಯಾತೆಂದಾಗಲಿ, ಮುಂತಾದ ಈ ತರದ ಚಿಕ್ಕ ಪ್ರಶ್ನೆಗಳಿಗೆ ಸಮ್ಮಂಧಿಸುವ ಪ್ರಶ್ನೆಯಲ್ಲ. ಈ ಪ್ರಶ್ನೆಯು ಕೊಡಗು ದೇಶದ ಬೆನ್ನೆಲುಬು ಆಗಿರುವ ಮಧ್ಯಮ ಮತ್ತು ಕೆಳಗಿನ ತರಗತಿಯವರ (Middle clas & Lower class) ಸ್ಥಿತಿಯನ್ನು ಒಂದೇ ಅಭಿವೃದ್ಧಿಗೊಳಿಸುವ, ಇಲ್ಲವೇ ಅವರನ್ನು ಸಂಪೂರ್ಣ ನಿರ್ಮೂಲ ಮಾಡುವ ಪ್ರಶ್ನೆಯಾಗಿದೆ. ಇಷ್ಟು ಪ್ರಾಮುಖ್ಯತೆಯ ಪ್ರಶ್ನೆಯ ವಿಷಯದಲ್ಲಿ ಸರಕಾರದವರು ಇಷ್ಟು ಅವಸರದಲ್ಲಿರುವುದು ವ್ಯಸನಕರ ಮತ್ತು ಸಂಸ್ಥೆಗಳೂ ಸಹ ಜನಸಮುದಾಯದ ಅಭಿಪ್ರಾಯವನ್ನು ಈ ವಿಷಯದಲ್ಲಿ ತಿಳಿಯದೆ ಒಂದೆರಡು ವರ್ಷಗಳಿಗೆ ಹಿಂದೆ ಪಾಸಾದ ಠರಾವುಗಳ ಮೇಲೆ ಅಭಿಪ್ರಾಯವನ್ನು ಕೊಟ್ಟಿರುವುದು ಮತ್ತಷ್ಟು ವ್ಯಸನಕರ. ಈ ಕಳೆದ ಒಂದೆರಡು ವರ್ಷಗಳಲ್ಲಿ ಜನರಿಗೆ ಹೆಚ್ಚಿನ ತಿಳುವಳಿಕೆಯು ಹುಟ್ಟಿದೆ. ಆದುದರಿಂದ ಸರಕಾರದವರು ಈ ವಿಷಯದಲ್ಲಿ ಜನರ ಅಭಿಪ್ರಾಯವನ್ನು ತಿಳಿಯುವುದು ಉತ್ತಮವೆಂದು ಕೋರುತ್ತೇ.

ಮತ್ತು ನಮ್ಮ ದೇಶದ ನಿಜವಾದ ದೇಶಸೇವಕರು ಮತ್ತು ದೇಶಭಕ್ತರು ಕಾರಾಗೃಹದಲ್ಲಿರುವಾಗ ಜನರು ತಾನೇ ಏನು ಉತ್ತರ ಕೊಡುವರು. ಆದುದರಿಂದ ಸರಕಾರದವರು ಮೊದಲಾಗಿ ಈ ದೇಶಭಕ್ತರನ್ನು ಸೆರೆಮನೆಯಿಂದ ಬಿಡುಗಡೆ ಮಾಡಿ, ಅಮಲ್ಗಮೇಶನ್ ಪ್ರಶ್ನೆಯಲ್ಲಿ ಒಂದು ಚುನಾವಣೆ (referendum) ನಡಿಸಿದರೆ ಎಲ್ಲವೂ ನ್ಯಾಯವಾಗಿ ತೋರುವುದು. ಇಲ್ಲವೇ ಸರಕಾರದವರು ಒಂದು, ಇಲ್ಲವೇ ಇನ್ನೊಂದು ಕಡೆಯ ಸ್ವಕಾರ್ಯಧುರಂಧರರ ಒಳಗೆ ಬೀಳುವರು.

ಕೊಡಗಿನ ಭವಿಷ್ಯ.

(ಲೇಖಕರು: ಶ್ರೀ. ಸತ್ಯಮಿತ್ರ, ಬಂಗೇರ)

ಕೊಡಗಿನ ಸುತ್ತ ಮುತ್ತಲಿನ ದೇಶಗಳಾದ ಕರ್ನಾಟಕ, ಮಲೆಯಾಳ, ತುಳುವ ಅವೆಲ್ಲವೂ ತಮ್ಮ ಸ್ವಾತಂತ್ರ್ಯವನ್ನು ವಿಜಯನಗರ, ಇಕ್ಕೇರಿ, ಹೈದರಾಲಿ, ಮತ್ತು ಇಂಗ್ಲಿಷರ ಶಕ್ತಿಯ ದೆಸೆಯಿಂದ ಕಳೆದುಕೊಂಡವು: ಒಬ್ಬರ ಹಿಂದೊಬ್ಬರಿಗೆ ಗುಲಾಮರಾಗಿ ಬಿದ್ದು ಹೋದಲ್ಲಿ ಕೊಡಗು ಮಾತ್ರ ತನ್ನ ಶತ್ರುಗಳನ್ನು ಎದುರಿಸಿ ೧೮೩೪ ನೆಯ ಇಸವಿಯ ಪರ್ಯಂತರ ಶಕ್ತಿಯ ಬಲದಿಂದ ತನ್ನ ಸಂಪೂರ್ಣ ಸ್ವಾತಂತ್ರ್ಯವನ್ನು ಉಳಿಸಿಕೊಂಡಿತ್ತು. ೧೮೩೪ ನೆ ಇಸವಿಯಲ್ಲಿ ಕೊಡಗು ಸರಕಾರಿನ ಮೂಲಕ ಸ್ವೇಚ್ಛೆಯಿಂದ ಇಂಗ್ಲಿಷ್ ಸರ್ಕಾರಕ್ಕೆ ಒಳಬಿದ್ದ ಕಾರಣದಿಂದ ಅವರ ಆಕ್ರಮಣದಿಂದ ನಿವೃತ್ತರಾಗಿ ಈ ವರೆಗೆ ತಮ್ಮ ಜನಾಂಗ ವ್ಯಕ್ತಿತ್ವವನ್ನು ಕಾಪಾಡಿಕೊಂಡು ಉಳಿದಿರುತ್ತಾರೆ. ಇತರ ಜಿಲ್ಲೆಗಳೊಳಗೆ ಸೇರುವುದರಿಂದ ಕೊಡಗಿಗೆ ಒಳ್ಳೆದಾಗುತ್ತಿದ್ದರೆ ಅದು ಈ ಮೊದಲೇ ಸೇರುತಿತ್ತು. ಯಾಕೆಂದರೆ ಟೀಪು ಸುಲ್ತಾನನು—'ನಿಮ್ಮ ರಾಜ್ಯಾಡಳಿತೆಯನ್ನು ನಿಮ್ಮ ರಾಜ ಮನೆತನಕ್ಕೇನೇ ಬಿಟ್ಟು ಕೊಡುತ್ತೇನೆ. ಆದರೆ ನೀವು ಕರ್ನಾಟಕದಲ್ಲಿ ನನ್ನ ಸಾರ್ವಭೌಮಿಕೆಯನ್ನು ಒಪ್ಪಿಕೊಂಡರೆ ಸಾಕು' ಎಂಬ ಸಲಹೆಯನ್ನು ಮುಂದೊಡ್ಡಿದಾಗ್ಗ್ಯೂ ಕೊಡಗರು ಒಪ್ಪದೆ ಅವನಿಗೆ ವಿರೋಧವಾಗಿ ಹೋರಾಡಿ ಗೆದ್ದು ಅದರ ಫಲವಾಗಿ ಟೀಪು ಸುಲ್ತಾನನು ಶ್ರೀರಂಗಪಟ್ಟಣದಲ್ಲಿ ಎಷ್ಟು ಸ್ವತಂತ್ರನಾಗಿ ಆಳುತ್ತಿದ್ದನೋ ಅಷ್ಟೇ ಸ್ವತಂತ್ರರಾಗಿ ಕೊಡಗಿನ ದೊರೆಗಳು ಮಡಿಕೇರಿಯಲ್ಲಿ ಆಳುತ್ತಿದ್ದರು. ಈಗ ಕೊಡಗನ್ನು ಮದ್ರಾಸಿನ ಜಿಲ್ಲೆಗಳೊಳಗೆ ಸೇರಿಸುವುದೆಂದರೆ ಕೊಡಗರ ಹಿರಿಯರು ಯಾವುದರ ಬಗ್ಗೆ ಯುದ್ಧದಲ್ಲಿ ಹೋರಾಡಿ ರಕ್ತ ಚೆಲ್ಲಿ ಉಳಿಸಿಕೊಂಡರೋ ಆ ಸ್ವಾತಂತ್ರ್ಯವನ್ನು ಈಗ ಸಮಾಧಾನದ ಕಾಲದಲ್ಲಿ ಅವರ ಮಕ್ಕಳು ಬಿಟ್ಟುಕೊಟ್ಟು ಸೋಲಿಸಲ್ಪಟ್ಟ ಜನಾಂಗಗಳಾದ ನಮ್ಮ ಸಾಲಿಗೆ ಸೇರಿಸಿಕೊಂಡಂತಾಗುತ್ತದೆ.

ಕೊಡಗು ದೇಶದ ಆಳಿಕೆಯು ಸ್ವಂತರಾಜನ ಕೈಯಿಂದ ತೊಲಗಿ ಇಂಗ್ಲಿಷರ ಕೈ ಸೇರಿದ್ದರಿಂದ ತನ್ನ ರಾಜ್ಯದ ಗೌರವವು ಎಷ್ಟಕ್ಕೆ ಹೀನಾವಸ್ಥೆಗೆ ಇಳಿಯಿತು ಎಂದು ಅರಿತು ಮೂರು ವರ್ಷಗಳ ನಂತರ ಅಂದರೆ ೧೮೩೭ ನೆಯ ಇಸವಿಯಲ್ಲಿ ಅಲ್ಲಿ ಕಲ್ಯಾಣಪ್ಪನೆಂಬ ಶೂರನೊಬ್ಬನು ಎದ್ದು ಆ ದೇಶದ ಆಡಳಿತವನ್ನು ಪದಚ್ಯುತ ರಾಜನ ತಂಗಿಯಾದ ವೀರಮ್ಮಾಜಿಯ ಕೈಗೆ ಕೈವರ್ತಿಸಿ ಕೊಡಬೇಕಾಗಿ ಚಳವಳ ಹೂಡಿದನು. ಕೊಡಗರು ಅವನೊಂದಿಗೆ ಸೇರಲಿಲ್ಲ, ಅವನು ಮಡಿದುಹೋದನು. ಕೊಡಗರು ಅವನೊಂದಿಗೆ ಸೇರುತ್ತಿದ್ದರೆ ಕೊಡಗು ದೇಶವು ಈಗ ಮೈಸೂರು ಕೊಚ್ಚಿ ರಾಜ್ಯಗಳಂತೆ ದೇಶೀಯ ರಾಜರಿಂದ ಆಳಲ್ಪಡುವ ಒಂದು ಆಶ್ರಿತ ಸಂಸ್ಥಾನವಾಗಿ ಉಳಿಯುತಿತ್ತು. ಆ ಗೌರವವು ತಪ್ಪಿದರೂ ಇಂಗ್ಲಿಷರು ಆ ದೇಶವನ್ನು ದೇಶೀಯ ಸಂಸ್ಥಾನಗಳಿಗೂ, ಜಿಲ್ಲೆಗಳಿಗೂ ಮಧ್ಯಗೌರವದಿಂದ ನೋಡಿ ಒಬ್ಬ ಕಮಿಶನರ ಕೈಕೆಳಗೆ ಪ್ರತ್ಯೇಕ ಒಂದು ಸಂಸ್ಥಾನವೆಂಬಂತೆ ಮಾನಿಸಿ ಆಳಿಕೊಂಡು ಬರುವವರಾದರು.

1920 ನೇ ಇಸವಿಯಲ್ಲಿ ಮೊಂಟೆಗ್-ಫೋರ್ಡ್ ಸುಧಾರಣೆಯ ಪ್ರಕಾರ ಕೊಡಗಿಗೆ ಹೆಚ್ಚೇನೂ ಸಿಕ್ಕಲಿಲ್ಲ. ಅದಕ್ಕಾಗಿ ಕೊಡಗರು ಚಳವಳ ಹೂಡಿದರು. ಆ ಚಳವಳದ ಫಲವಾಗಿ ಕೊಡಗಿಗೆ 20 ಮಂದಿ ಸದಸ್ಯರಿರುವ ಒಂದು ಲೆಜಿಸ್ಲೇಟಿವ್ ಕೌನ್ಸಿಲು ಕೊಡಲ್ಪಟ್ಟಿತು. ಹೀಗೆ ಕೊಡಗು ಒಂದು ಜಿಲ್ಲೆ ಅಲ್ಲ, ಒಂದು ಸಂಸ್ಥಾನ ಎಂದು ದೃಢೀಕರಿಸಲ್ಪಟ್ಟಿತು. ಹೀಗಿರುವುದರಿಂದ ಈಗ ಅದನ್ನು ಆ ಗೌರವ ಸ್ಥಾನದಿಂದ ಇಳಿಸಿ ಈ ಮೊದಲು ಕೊಡಲ್ಪಟ್ಟ ಕೌನ್ಸಿಲನ್ನು ಹಿಂತೆಗೆದು ಅದನ್ನು ಒಂದು ಜಿಲ್ಲೆಯ ಸ್ಥಾನಕ್ಕೆ ತರುವುದು, ಅದು ಪೂರ್ಣ ಸ್ವಾತಂತ್ರ್ಯಕ್ಕಾಗಿ ಇತ್ತೀಚೆಗೆ ಮತ್ತೂ ಚಳವಳ ಮಾಡಿದ ಅಪರಾಧಕ್ಕಾಗಿ ಶಿಕ್ಷೆಗಾಗಿಯಲ್ಲದೆ ಮತ್ತಾವ ಕಾರಣದಿಂದಲಾದರೂ ನ್ಯಾಯವಲ್ಲ. ಆದುದರಿಂದ ಕೊಡಗಿನ ಮುಂದಿನ ರಾಜ್ಯಾಡಳಿತ ಕ್ರಮವು ಹೇಗಿರಬೇಕೆಂದರೆ—

ಕೊಡಗು.

ಸನ್ ೧೯೩೨ನೇ ಇಸವಿ

ಜೂನ್ ತಾ ೧೦ನೇ ಶುಕ್ರವಾರ

ಪ್ರೆಸ್ ಆರ್ಡಿನೇನ್ಸ್

ಜಾರಿಯಲ್ಲಿರುವ ವರಿವಿಗೆ

ನಾವು

ಅಗ್ರ ಲೇಖನ

ವನ್ನು

ಪ್ರಕಟಿಸುವುದಿಲ್ಲ.

ಲೋಥಿಯನ್ ಕಮಿಟಿ ರಿಪೋರ್ಟ್.

ಎರಡನೆಯ ರೌಂಡ್ ಟೇಬಲ್ ಕಾನ್‌ಫರೆನ್ಸ್ ಆದ ಮೇಲೆ ಏರ್ಪಾಡಾದ ಮೂರು ಮುಖ್ಯ ಕಮಿಟಿಗಳ ಪೈಕಿ ಲಾರ್ಡ್ ಲೋಥಿಯನ್‌ರವರು ಅಧ್ಯಕ್ಷರಾಗಿದ್ದ ಫ್ರಾಂಚೈಸ್ ಕಮಿಟಿಯು ಅತಿ ಪ್ರಾಮುಖ್ಯತೆಯನ್ನು ಪಡೆದುದು. ಏಕೆಂದರೆ ಈ ಹೊಸ ಕಮಿಟಿಯವರು ಹಿಂದೂ ದೇಶಕ್ಕೆ ಹೊಸ ರಾಜ್ಯಭಾರ ಬಂದಾಗ ನಾನಾ ಸಭೆಗಳಿಗೆ ಚುನಾವಣೆ ನಡಿಸುವ ವಿಷಯದಲ್ಲಿ ಯಾವ ಮಾರ್ಗವನ್ನನುಸರಿಸಬೇಕೆಂಬ ವಿಷಯಗಳಲ್ಲಿ ಸಲಹೆಯನ್ನು ಕೊಡಬೇಕಾಗಿತ್ತು. ಈ ಕಮಿಟಿಯವರು ಇಂಡಿಯಾದೇಶದ ಮುಖ್ಯ ಸ್ಥಳಗಳನ್ನು ಸುತ್ತಿ ಮುಖಂಡರ ಅಭಿಪ್ರಾಯವನ್ನು ತಿಳಿದು ಪ್ರಯಾಸಪಟ್ಟು ನಡೆಸಿದ ಕಾರ್ಯವು ಜೂನ್ ತಾ. 3ರಲ್ಲಿ ಬಯಲಿಗೆ ಬಂದಿದೆ. ಈ ರಿಪೋರ್ಟಿನ ಸಾರಾಂಶವು ಈ ಕೆಳಗೆ ಕೊಡಲ್ಪಟ್ಟಿದೆ. ಈ ರಿಪೋರ್ಟು 235 ಪುಟಗಳಿಂದ ಕೂಡಿದ್ದಾಗಿದೆ.

ಚುನಾವಣೆ ವಿಧಾನ.

ಪ್ರಾಪ್ತವಯಸ್ಕರಾದವರೆಲ್ಲರೂ ಚುನಾವಣೆಯ ಕಾಲದಲ್ಲಿ ಓಟು ಕೊಡಬಹುದೆಂಬುದನ್ನು ಈ ಕಮಿಟಿಯು ಒಪ್ಪಿಲ್ಲ. "ಗ್ರೂಪ್" ಅಂದರೆ ಸಂಗಡಗಳ ಮೂಲಕ ಮಾಡುವ ಚುನಾವಣೆಯನ್ನು ಇವರು ಒಪ್ಪಿಲ್ಲ. ಪ್ರಜೆಗಳಿಗೆ ಬೇಕಾದುದು ಅಲ್ಲಿಲ್ಲ ಅವರು ಕೊಟ್ಟ ಸಲಹೆಗಳಾವುವುವೆಂದರೆ:—

ಅಧಿಪತ್ಯ	ಒಟ್ಟು ಜನಸಂಖ್ಯೆಯಲ್ಲಿ ಓಟ್ ಕೊಡತಕ್ಕವರು.	ಒಟ್ಟು ಪ್ರಾಪ್ತ ವಯಸ್ಕರಲ್ಲಿ ಓಟ್ ಕೊಡತಕ್ಕವರು.
ಮದರಾಸು	ಶೇಕಡ 15.5	ಶೇಕಡ 29
ಬೊಂಬಾಯಿ	17.1	33.5
ಬಂಗಾಳ	16	31·6
ಸಂ. ಪ್ರಾಂತ್ಯ	15.5	29 7
ಪಂಜಾಬು	11.9	24.1
ಬಿಹಾರ್ ಒರಿಸ್ಸಾ	7.3	17.9
ಮಧ್ಯ ಪ್ರಾಂತ್ಯ	12.5	23.4
ವಾಯುವ್ಯ ಪ್ರಾಂತ್ಯ.	9 9	20.1
ಒಟ್ಟು ಇಂಡಿಯಾಕ್ಕೆ	14—1 ಭಾಗ	27—6 ಭಾಗ.

ಜುಮ್ಲ ಶೇಕಡ 1 ಭಾಗ.

ಇದಲ್ಲದೆ ಆಸ್ತಿ ಪಾಸ್ತಿಗಳಿರಬೇಕು. ಅಪ್ಪರ್ ಪ್ರೈಮರಿ ತರಗತಿಯವರೆವಿಗೆ ವಿದ್ಯೆ ಇರಬೇಕು. ಹೆಂಗಸರಿಗೂ ಸಹ ಇಷ್ಟೇ ವಿದ್ಯೆಯಿರಬೇಕು. ಆಸ್ತಿ ಪಾಸ್ತಿಗಳುಳ್ಳವರ ಪತ್ನಿಯರು ಗಂಡನ ಆಸ್ತಿಯ ಮೇಲೆ ಓಟುಮಾಡಬಹುದು ಗಂಡಸರಿಗೂ ಹೆಂಗಸರಿಗೂ ಓಟುಕೊಡುವ ವಿಚಾರದಲ್ಲಿ ಸರಾಸರಿ ಹ್ಯಾಗೆಂದರೆ—

ಅದಿಪತ್ಯ	ಗಂಡಸು.	ಹೆಂಗಸು.
ಮದರಾಸು	4	1
ಬೊಂಬಾಯಿ ಬಂಗಾಳ ಸಂ.		
ಪ್ರಾಂತ್ಯ ಅಸ್ಸಾಂ ಇವಕ್ಕೆ	5	1
ಬಿಹಾರ್ ಒರಿಸ್ಸಾ	9	1

ಹೆಂಗಸರಿಗೆ ಯಾವ ರೀತಿ ಸಭೆಗಳಲ್ಲಿ ಸ್ಥಾನಗಳನ್ನು ಕೊಡುವುದೆಂಬುದಕ್ಕೆ ಅವರಿಗಾಗಿ ಸ್ಥಾನಗಳನ್ನು ರಿಸರ್ವ್‌ಮಾಡಬೇಕೆಂದು ಕಮಿಟಿಯವರು ಹೇಳಿದ್ದಾರೆ.

ವ್ಯವಸಾಯಗಾರರಿಗೆ ಪ್ರತ್ಯೇಕ ಚುನಾವಣೆಯಿಲ್ಲ. ಕೂಲಿಗಾರರ ಸಂಘಗಳಿಗೆ ಮಾತ್ರ ಬಂಗಾಳ ಬೊಂಬಾಯಿ ಅಧಿಪತ್ಯಗಳಲ್ಲಿ 8 ಸಂಸ್ಥಾನಗಳು ಮದ್ರಾಸಿನಲ್ಲಿ 6 ಬಿಹಾರ್ ಒರಿಸ್ಸಾ ಕನ್ಯಾಂನಲ್ಲಿ 4 ಸಂಯುಕ್ತ ಸಂಸ್ಥಾನ ಮತ್ತು ಪಂಜಾಬಿನಲ್ಲಿ 3 ಮತ್ತು ಮಧ್ಯ ಪ್ರಾಂತ್ಯ 2.

ಆದಿ ಕರ್ಣಾಟಕರಿಗೆ ಪ್ರತ್ಯೇಕ ಚುನಾವಣೆ ಇಲ್ಲ

ಆದಿ ಕರ್ಣಾಟಕರಿಗೆ ಬಂಟಿಯರಿಗೂ ಮುಗಳಲ್ಲಿ ಪ್ರತ್ಯೇಕವಾಗಿಯಲ್ಲ [illegible] ಇಲ್ಲ [illegible] ಇಲ್ಲಿಯಲ್ಲಿರುವ ತೋಟಿ ಮೊದಲಾದವರನ್ನು ಚುನಾವಣೆಗೆ ಸೇರಿಸಿದ್ದಾರೆ. ಈ ಕ್ರಮವು ಮದರಾಸು ಬೊಂಬಾಯಿ ಮತ್ತು ಮಧ್ಯ ಪ್ರಾಂತ್ಯಗಳಿಗೆ ಅನ್ವಯಿಸುವುದು. ಅಂತು ಎಲ್ಲಾ ಅದಿಪತ್ಯಗಳಲ್ಲಿಯೂ ಆದಿ ಕರ್ನಾಟಕ ಚುನಾವಣೆಯನ್ನು ಶೇಕಡ 10 ರಷ್ಟಕ್ಕೆ ತರಬೇಕು.

ವಾಣಿಜ್ಯ ಕೈಗಾರಿಕೆ ಜಮೀನುದಾರರು, ವಿಶ್ವವಿದ್ಯಾಲಯಗಳು ಇವುಗಳ ಚುನಾವಣೆಯು ಎಂದಿನಂತೆಯೇ ಇರತಕ್ಕದ್ದು. ಸ್ಪೆಷಲ್ ಬಾಬುಗಳಿಗೆ ಚುನಾವಣೆ ಹೊಂದತಕ್ಕವರು ಇತರ ಬಾಬುಗಳನ್ನು ಜತೆಗೆ ಕೂಡಿ ಓಟುಮಾಡಲು ಶಕ್ಯರಲ್ಲ. ಇವರ ಸ್ವಂತ ಬಾಬ್ತು ಇವರದು. ಅದಿಪತ್ಯಗಳಲ್ಲಿ ಸೆಕೆಂಡ್ ಚೇಂಬರ್ ವಿಚಾರ ಇವರು ಮುಟ್ಟಿಲ್ಲ. ಕೇಂದ್ರಸ್ಥಾನದ ಸಭೆಗೆ ಈಗ ಅದಿಪತ್ಯಗಳಲ್ಲಿರುವ ಕೌನ್ಸಿಲುಗಳಿಗೆ ಇರುವಂತೆಯೇ ಚುನಾವಣೆಯ ಕ್ರಮವು ಇರತಕ್ಕದ್ದು. ಜತೆಗೆ ವಿದ್ಯಾಭ್ಯಾಸವು ಸಹ ಸ್ತ್ರೀಪುರುಷರಿಗಿರಬೇಕು.

ಕೆಲವು ಮೆಂಬರರ ಅಭಿಪ್ರಾಯ.

ಸರ್ ಮಹಮ್ಮದ್ ಯಾಕೂಬ್‌ರವರು ಸ್ತ್ರೀಯರಿಗೆ ಸ್ಪೆಷಲ್ ಯೋಗ್ಯತೆ ಇರಬೇಕೆಂಬುವುದನ್ನು ಒಪ್ಪುವುದಿಲ್ಲ. ವಿದ್ಯಾಭ್ಯಾಸ ಗಂಡನ ಆಸ್ತಿಗಳ ಮೇಲೆ ಹೆಂಗಸಿನ ಯೋಗ್ಯತೆ ಪರಿಗಣಿಸುವುದು ತಪ್ಪು ಎಂದು ಇವರ ಅಭಿಪ್ರಾಯ.

ದಿ ಆನರೇಬಲ್ ಮಿಲ್ಲ್‌ರವರು ಇತರ ಅಧಿಪತ್ಯದಂತೆ ಅಧಿಪತ್ಯದಲ್ಲಿ ಕೂಲಿಗಾರರ ಸಂಸ್ಥೆಗಳಿಗೆ ಕೊಟ್ಟಿರುವ ಅಭಿಪ್ರಾಯವನ್ನು ಸಾಕೆಂದು ಒಪ್ಪುವುದಿಲ್ಲ.

ಸರ್ದಾರ್ ಬಹದೂರ್ ಸರ್ ಸುಂದರ್‌ಸಿಂಗ್ ಮಜೀಠಿಯರವರು [illegible]

ಲದೆನ್ನುತ್ತಾರೆ. ಕಮಿಟಿಯ ಮತ್ತಾರೀಯ ಮೆಂಬರುಗಳು ಸ್ಪೆಷಲ್ ಚುನಾವಣೆಯಿಂದ ಬರುವ ಪ್ರತಿನಿಧಿಗಳಿಗೂ ಇತರ ಪ್ರತಿನಿಧಿಗಳಿಗೂ ಸಂಬಂಧವಿರಕೂಡದೆಂದೂ ಇತರ ಓಟರುಗಳಿಂದ ಚುನಾವಣೆಯಾಗುವಾಗ ಸ್ಪೆಷಲ್ ಓಟಿನಲ್ಲಿರುವ ಮತಸ್ಥರು ಚುನಾವಣೆಯಾಗಿರುವರೆಂಬಂಶವನ್ನು ಗಮನಿಸಬೇಕೆಂದೂ ಕೋರಿದ್ದಾರೆ.

ಮೇಜರ ಮಿಲ್ನರ್ ಮಾರಿನವರು ಪ್ರಾಪ್ತ ವಯಸ್ಕರಿಗೆ ಕೊಟ್ಟಿರುವ ಓಟಿನ ಯೋಗ್ಯತೆಯು ಸಾಲದೆಂದು ಅಭಿಪ್ರಾಯಪಟ್ಟಿದ್ದಾರೆ. ಮಿಸೆಸ್ ಸುಬ್ಬರಾಯನ್‌ರವರೂ ಸಹ ಇದೇ ಅಭಿಪ್ರಾಯವನ್ನು ತಿಳಿಸಿ ಪಟ್ಟಣಗಳಲ್ಲಾದರೆ ಪ್ರಾಪ್ತ ವಯಸ್ಕರಿಗೆ ಓಟಿನ ಅಧಿಕಾರ ಕೊಡಬೇಕೆಂದು ಹೇಳಿದ್ದಾರೆ. ಹೆಂಗಸರಿಗೆ ಕೋಮುವಾರು ಪ್ರಾತಿನಿಧ್ಯವು ಬೇಡವೆಂದೂ ಸ್ತ್ರೀಯರ ಚುನಾವಣೆಯನ್ನು ಹೆಚ್ಚಿಸಲು ದಾರಿ ಮಾಡಬೇಕೆಂದು ಹೇಳಿದ್ದಾರೆ. ಡಾ ಅಂಬೇಡಕರರು ಆದಿ ಕರ್ಣಾಟಕ ಜನಸಂಖ್ಯೆಯನ್ನು ಸರಿಯಾಗಿ ಲೆಕ್ಕ ಹಾಕಿಲ್ಲವೆಂದೂ ಇವರನ್ನು ಸರಿಯಾದ ರೀತಿಯಲ್ಲಿ ಗಣನೆಗೆ ತಂದಿಲ್ಲವೆಂದೂ ಉದ್ದವಾದ ಅಭಿಪ್ರಾಯ ಕೊಟ್ಟಿದ್ದಾರೆ. ಮೆ. ಗಳಾದ ತಂಬಿ ಚಿಂತಾಮಣಿ ಮತ್ತು ಬಾಕ್ಲೆ ಇವರುಗಳು ರಿಪೋರ್ಟಿನ ಎಲ್ಲಾ ಭಾಗಗಳನ್ನು ಒಪ್ಪಿರುವುದಿಲ್ಲ.

ಕೊಡಗೂ, ಕರ್ಣಾಟಕವೂ.

ಕೊಡಗು ದೇಶವು ಕರ್ಣಾಟಕ ದೇಶವಲ್ಲವೆಂದು ಹೇಳಬಲ್ಲ ಹಾಪಸಿಗಳೊಬ್ಬರೂ ಇಲ್ಲ. ಭವಿಷ್ಯದ್ಭಾರತದಲ್ಲಿ ಕೊಡಗೂ ಸಹ ತನ್ನ ಪಾತ್ರವನ್ನು ನಿರ್ವಹಿಸಬೇಕಾಗಿದೆ. ತಾವು ಹೇಗಿದ್ದರೆ ಭಾರತೀಯ ಸೇವೆಯು ತಮ್ಮಿಂದ ಸಮರ್ಪಕವಾಗಿ ಆದೀತೆಂಬುದನ್ನು ಕೊಡಗಿನವರು ಬಲ್ಲರು.

ಕರ್ಣಾಟಕ ಪ್ರಾಂತ್ಯ ರಚನೆಯು ಇಂದಲ್ಲ ನಾಳೆ ಆಗಲೇಬೇಕು. ಅದೇ ಕನ್ನಡಿಗರೆಲ್ಲರ ಆದರ್ಶ. ಅದಕ್ಕಾಗಿ ಅವರೆಲ್ಲರೂ ಒಮ್ಮನಸ್ಸಿನಿಂದ ದುಡಿಯಬೇಕು. ಆ ಪ್ರಾಂತ್ಯ ರಚನೆಗೆ ಆರಂಭಿಸುವ ಪವಿತ್ರ ಕರ್ಮದ ಮೊದಲನೇ ಅವಕಾಶವು ಕೊಡಗರಿಗೆ ಈಗ ಲಭಿಸಿದೆ. ಕೊಡಗು ಸ್ವತಂತ್ರವಾಗಿರಬೇಕೆ; ಇಲ್ಲ ಯಾವದಾದರೊಂದು ಪ್ರಾಂತ್ಯಕ್ಕೆ ಸೇರಬೇಕೇ ಎಂಬ ಪ್ರಶ್ನೆ ಎದ್ದಿದೆ. ಹೊರಗಿನವರೆಷ್ಟು ಚರ್ಚೆ ನಡಿಸಿದರೂ ನಿರ್ಧಾರ ಮಾಡುವವರು ಕೊಡಗರೇ.

ಮುಂಬಯಿ ಪ್ರಾಂತ್ಯಕ್ಕೆ ಕೊಡಗನ್ನು ಜೋಡಿಸಬೇಕೆಂದು 'ಬ್ರಿಟಿಷ್ ಕರ್ಣಾಟಕ ಸಂಘ'ದವರು ಕೇಳುತ್ತಿದ್ದಾರೆ. ಕೊಡಗನ್ನು ಮಂಗಳೂರು ಜಿಲ್ಲೆಗೇ ಜೋಡಿಸುವುದು ಯುಕ್ತವೆಂದು ಅಲ್ಲಿನ ಪತ್ರಿಕೆಗಳು ವಾದಿಸುತ್ತಿವೆ.

ಮುಂಬಯಿ ಪ್ರಾಂತ್ಯದ ಕನ್ನಡ ಜಿಲ್ಲೆಗಳಿಗ್ಯಾವುದಕ್ಕೂ ಕೊಡಗನ್ನು ಜೋಡಿಸುವುದು ಸಾಧ್ಯವಿಲ್ಲ. ಅದನ್ನು ಮಂಗಳೂರು ಜಿಲ್ಲೆಗೆ ಸೇರಿಸುವುದೇ ಸಹಜವಾಗಿದೆ; ಯಾವದೇ ದೃಷ್ಟಿಯಿಂದ ನೋಡಿದರೂ ಕೊಡಗು ನೆರೆ ನಾಡಾದ ಮಂಗಳೂರಿಗೆ ಸೇರುವುದೇ ಧರ್ಮವೆಂದು ಮೂರನೆಯವರು ಸಹ ಹೇಳುವರು. ಕನ್ನಡಿಗರೆಲ್ಲರೂ ಭಿನ್ನಾಭಿಪ್ರಾಯಕ್ಕೆ ಅವಕಾಶ ಕೊಡದೆ, ಕರ್ಣಾಟಕ ಪ್ರಾಂತ್ಯ ರಚನೆಯ ಮೊದಲನೇ ಹಂತವೆಂದು ಭಾವಿಸಿ ಕೊಡಗನ್ನು ಮಂಗಳೂರು ಜಿಲ್ಲೆಗೆ ಸೇರಿಸುವ ಹಾಗೆ ಕೇಂದ್ರ ಸರ್ಕಾರದವರಲ್ಲಿ ಒತ್ತಾಯದಿಂದ ಪ್ರಾರ್ಥನೆ ಮಾಡಬೇಕಾಗಿದೆ.

ವಿ. ಕ.

ರಾಂಚಿಸ್ಥಾಪನಾ ಸಮಿತಿಯೊಳಗೆ

ಶೌಕತ್ತಾಲಿಯವರ ಕ್ರಾಂತಿ!

ತನ್ಮಧ್ಯೆ ಶ್ರೀ. ಟೈಸ್ ಎಂಬುವರು 'ಶೌಕತಾಲಿಯವರು ಮಾಡಿರುವ ಆಪೇಕ್ಷಗಳಿಗೂ, ನಮ್ಮ ಈ ಸಭೆಗೂ ಸಂಬಂಧವಿಲ್ಲ! 'ಫ್ರೀ ಪ್ರೆಸ್ ಜರ್ನಲ್'ಗೆ, ಶೌಕತ್ತಾಲಿಯವರು ಏನಾದರೂ ಕಕ್ಷಿ ತಕರಾರು ನಡೆದಿದ್ದರೆ ಅದಕ್ಕೆ ಈ ಸಭೆಯು ಜವಾಬ್ದಾರಿಯಲ್ಲ. ಅದನ್ನು ನೀವು ನೀವು ನೋಡಿಕೊಳ್ಳಿರಿ' ಎಂದರು. ಆ ಅಭಿಪ್ರಾಯಕ್ಕೆ ಅಧ್ಯಕ್ಷರೂ ಒಪ್ಪಿದರು. ಖಾಸಗಿ ಜಳಜಗಳಗಳನ್ನು ಪ್ರಸ್ತಾಪಿಸುವ ಆವಶ್ಯಕತೆಯು ಇಲ್ಲಿ ಕಾಣುವುದಿಲ್ಲವೆಂದರು. ಶೌಕತ್ತಾಲಿಯವರು ಆ ವಿಚಾರಗಳನ್ನು ಪ್ರಸ್ತಾಪಿಸುತ್ತಾ ಮುಂದೆ ಸಾಗಿದರು. ಅದನ್ನು ನೋಡಿ ಅಧ್ಯಕ್ಷರು ಶೌಕತ್ತಾಲಿಯವರನ್ನು ಎಚ್ಚರಿಸುತ್ತಾ 'ಹಾಗೆ ಇನ್ನೂ ಅದೇ ವಿಷಯಗಳನ್ನೆತ್ತಿ ಹೇಳುವುದು ಬೇಡ'ವೆಂದರು. ಅದನ್ನು ಕೇಳಿ ಶೌಕತ್ತಾಲಿಯವರು ಬಿರುಸು ನುಡಿಗಳಿಂದ 'ಈ ಸಭೆಯು ಒಂದು ತಮಾಷೆಯಲ್ಲದೆ ಮತ್ತೆ ಬೇರೇನಿಲ್ಲ........' ಎಂದು ಮೊದಲಾಗಿ ಗಜಿಂದರು. ಅಧ್ಯಕ್ಷರು ಪುನಃ ಅವರನ್ನು ಎಚ್ಚರಿಸಿದರು. ಕೂಡಲೇ ಶೌಕತ್ತಾಲಿಯವರು ಸಿಡಿಮಿಡಿಗೊಂಡು ಕೋಪವನ್ನು ತಾಳುತ್ತಾ 'ಈ ಸಮಿತಿಯ ಕಮಿಟಿಗಳನ್ನು ನಾನು ಎಳ್ಳಷ್ಟು (I care a "damn" for the committee and for its proceedings) ಗಣ್ಯಮಾಡೆನು' ಎಂದು ಸಿಟ್ಟಿನಿಂದ ಹೊರಹೊರಟರು.

ಅದಾದ ಮೇಲೆ ಪಟ್ಟಣತಾತರು ನಡೆದ ವಿದ್ಯಮಾನಗಳನ್ನು ವಿವರಿಸುತ್ತಾ 'ಕೊಲೆಯಿಂದ ಮಡಿದ ಹಿಂದುಗಳೆಷ್ಟು, ಮುಸ್ಲಿಮರೆಷ್ಟು ಎಂಬ ವಿಷಯವಾಗಿ ನಾವು ಆಲೋಚಿಸಕೂಡದು. ನಾವು ನಮ್ಮ ಪಟ್ಟದ ಸನ್ಮಾನವನ್ನೂ, ಸತ್ಕೀರ್ತಿಯನ್ನೂ ಅಕ್ಷಯಿಯವಾಗಿಸಬೇಕು. ಅದಕ್ಕಾಗಿ ಎಲ್ಲರೂ ನೆರವಾಗಬೇಕು' ಎಂದರು.

ಸ್ವ. ವ.

Reg. No. M. 1550.
If not delivered please return to
"KODAGU" OFFICE MERCARA.

ಕೊಡಗು.

ಸತ್ಯೇನ ಭೂತದಯಯಾ ವಿದ್ಯಾ ಶೀಲ ಪ್ರಯತ್ನತಃ। ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ

ವಾರ್ಷಿಕ ಚಂದಾ ರೂ. ೩—೪—೦. ಸಂಪಾದಕ—ಮೂಚಿಮಂಡ ಯಂ. ಗಣಪತಿ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೨ | ಮಡಿಕೇರಿ, ಸನ್ ೧೯೩೨ನೇ ಇಸವಿ ಜೂನ್ ತಾರೀಕು ೧೦ ನೇ ಶುಕ್ರವಾರ. | ಸಂಚಿಕೆ ೨

SARI-PIN.

BRACELETS.

NECKCHAINS.

EAR-RINGS.
(Thodus)
Cut-rubys Rs. 25 to 50
With diamond in centre Rs. 80 to 120

Gold Rs. 10
Set rubys forming any letter Rs. 12



NOSE-RINGS.
Diamond in small size of best quality Rs. 35 & upwards according to size.

MARRIAGE PRESENTATIONS.

Attractive and inexpensive articles ready in stock. Prompt execution. Details on enquiry free with catalogue. Numerous customers in Coorg thoroughly satisfied with reliable service. Testimonials pouring in.

Telegrams: 'PRECIOUS.'

Telephone: 3146.

V. Subramaniaier
Jeweller,

CATALOGUE ON ENQUIRY.

Post Box 423, Triplicane, P. O., MADRAS.

MARRIAGE PRESENTATIONS.

Estimates free on enquiry.

Silver Guindys, Photo lockets, Dimond nose-screws, cut-ruby ear-rings, etc., etc., etc., in all prices. Very attractive. Prices most moderate.

Designs free on enquiry.



Pendant.



Tumblers with stand.

Fancy plate.

52–29

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲಿ)

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	26,800
ಜಮಾ ಬಂದ ಠೇವಣಾತಿ	—	2,50,301

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಮಾತ್ರ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0 ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಸಿ ಮಾಡುತ್ತಾರೆ.

ಪ್ರೆಸಿಡೆಂಟರು,	ಟ್ರೆಜರರ್
ಕೋದಂಡ ಅಪ್ಪಯ್ಯನವರು ರಾವ್ ಬಹದ್ದೂರ್.	ಮನೆಯಪ್ಪಂಡ ಬೆಳ್ಯಪ್ಪನವರು.

ಸೆಕ್ರೆಟರಿ

ಸಿ. ಯಸ್. ವೆಂಕಟಯ್ಯನವರು, ಬಿ.ಎ., ಬಿ.ಎಲ್.

ತಾರೀಕು 1-7-1931.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ದಾಖಲಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜೆಂಟರುಗಳು.

ಉತ್ತರ ಕೊಡಗಿಗೆ ಮೆ|| ಚೌರಿರ ಮಾದಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ|| ಮುಂಡೇಪಂಡ ಸೋಮಯ್ಯನವರು. (ಬಾದಿಭಂಡಾರ.)
ನಾಪೋಕ್ಲು—ಎಸ್ ಆರ್. ವೆಂಕಟಯ್ಯನವರು.
ಅಮ್ಮತ್ತಿ—ಸಿದ್ದಾಪುರ—ಮೆ|| ಬಿಸಾಡ ಮಾದಪ್ಪನವರು.
ಪೊನ್ನಂಪೇಟೆನಾಡು—ಮೆ|| ಸಿ. ಜಿ. ಮುದ್ದಯ್ಯನವರು ಮತ್ತು ಆರಮಣಮಾಡ ಪಿ. ಕಾರ್ಯಪ್ಪನವರು.
ಮಡಿಕೇರಿ & ಶಿತಿಮತ್ತಿ—ಮೆ|| ಪಿ. ಮಾದಯ್ಯನವರು.
ಸುಂಟಿಕೊಪ್ಪ—ಮೆ|| ಅಪ್ಪಚೆಟ್ಟೋಳಂಡ ಮಾಚಯ್ಯನವರು.

ಸೂಚನೆ.—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮ್ಯಾನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಪಂಚಾಯತರಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಿಸಲು ಅತ್ಯವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಕರಾರು ಫಾರಮುಗಳೂ, ಜಮ್ಮ ಮುಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನುದಾರರು ಫಾರಮುಗಳೂ, ಸ್ಟೋರ್ ಕೀಪರ್ ಕರಾರು ಫಾರಮುಗಳೂ, ಓವರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮಾ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮ್ಯಾನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.
ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.
ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,78,322 ಜನರಿಗೆ 38 ಕೋಟಿ ರೂ.
ಪಾಲಿಸಿ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ರಕ್ಕಿಂತ ವಿಪರೀತ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದಾಗಿದೆ.
ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ **ಕಡಿಮೆ ಖ**ರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚಿನ ಪ್ರೋತ್ಸಾಹವನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಇದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು,

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರಾ	ಕಲ್ಕತ್ತಾ	ಕೌಲಾಲಂಪೂರು	ಮೊಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್ ಪಿಂಡಿ
ಅಜ್ಮೀರ್	ಡಾಕ್ಕಾ	ಲಕ್ನೋ	ಪಾಟ್ನಾ	ಸುಕ್ಕೂರು
ಅಲ್ಲಾಹಾಬಾದು	[illegible]	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಹಾಂಗಕಾಂಗ್	ಮಂಡಲೆ	ರಾಯಪುರ	ತಿರುವೆಂದ್ರಮ್
ಫಿರೋಜಪುರ	ಕರಾಚಿ	ಮಂಗಳೂರು	ರಾಂಚಿ	ವಿಶಾಖಪಟ್ಣ [52—14

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ. ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
52—21 ಗಿರಿಗಾಂವ, ಮುಂಬಯಿ.

ಇಂಡಿಯನ್ ಇನ್ಶೂರೆನ್ಸ್ ಕಂಪೆನಿಗಳಿಗೇನೇ ಜೀವ ವಿಮೆ ಮಾಡಿರಿ.

ದಿ ಬೆಂಗಾಲ್ ಇನ್ಶೂರೆನ್ಸ್ ಎಂಡ್ ರಿಯಲ್ ಪ್ರಾಪರ್ಟಿ ಕಂಪೆನಿ ಲಿಮಿಟೆಡ್, **ಹೆಡ್** ಆಫೀಸ:—8 ಡಾಲ್ ಹೌಸಿ, ಸ್ಕ್ವೇರ್ (ಈಸ್ಟ್) ಕಲ್ಕತ್ತ, ಸಂಸ್ಥಾಪನೆ 1919

ನವಸಂಸ್ಕೃತಿಯು ಬೆಳೆದಷ್ಟಕ್ಕೆ ಅದರೊಡನೆ ಅದಕ್ಕೆ ಸಂಬಂಧಪಟ್ಟಿರುವ ಆರ್ಥಿಕ ಪರಿಸ್ಥಿತಿಯು ಬೆಳೆಯುತ್ತದೆ ಇಂಥಾ ಸಮಯದಲ್ಲಿ ಜೀವವಿಮೆ ನಿಯಮವು ಒಂದು ಪರವೆಂದೆಣಿಸಲ್ಪಟ್ಟದೆಯಲ್ಲದೆ, ಅದು ಸಮಾಜದಲ್ಲಿ ಜನರಿಗೊಂದು ಅತ್ಯಗತ್ಯ ವಿಷಯವೆಂದೂ ತಿಳಿದು ಬಂದಿದೆ. ಇದನ್ನು ಈಗೀಗ ಗಣಿತಶಾಸ್ತ್ರ ಪ್ರಕಾರವಾಗಿಯೇ ಜನರಿಂದ ಪರಿಪಾಲಿಸಿಕೊಂಡೇ ಬರುವಂತಾಗಿದೆ.

ಈ ಕಂಪೆನಿಯು ಸರಕಾರದಲ್ಲಿ ಕಂಪೆನಿಯ ಭದ್ರತೆಗೋಸ್ಕರ 2 ಲಕ್ಷ ರೂಪಾಯಿ ಠೇವಣಾತಿಯನ್ನು ಇಟ್ಟಿದೆ. ಇದು ಇನ್ಶೂರೆನ್ಸ್ ಕೆಲಸದಲ್ಲಿ ಒಳ್ಳೆ ಗುರುತಿರುವ ಸದ್ಗೃಹಸ್ಥರ ಮುಂದಾಳುತನದಿಂದಲೇ ನಡೆಯುತ್ತದೆ. ಈ ಕಂಪೆನಿಯು ಆಕರ್ಷಣೀಯವಾದ ಕೆಲವು ಸೂತ್ರಗಳ ಮೇರೆಗೆ ಅತೀ ಸುಲಭ ಪ್ರೀಮಿಯಂ ದರದಿಂದ ಪಾಲಿಸಿಗಳನ್ನು ಕೊಡುತ್ತದೆ. ಇದರ ಶರ್ತಗಳು, ನಿಯಮಗಳು ಸುಲಭಗಳಾಗಿವೆ; ಅನುಕೂಲವಾಗಿವೆ. ಅಲ್ಲದೆ ಬಹು ಉದಾರ. ಪೂರ್ಣ ಹೆಚ್ಚಿನ ಮಾಹಿತಿಗೆ ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಿರಿ.

ಯಂ. ಯಸ್. ಐಯ್ಯಪ್ಪ,
ಆರ್ಗನೈಸರ್,
ಸ್ಕೂಲ್ ರೋಡ್. ಮಡಿಕೇರಿ.
ಅಥವಾ
ಆರ್. ಸಿ. ಸೇನ್ ಗುಪ್ತ,
ಬ್ರಾಂಚ್ ಸೆಕ್ರೆಟರಿ,
12—7 28, ಅಂಗಪ್ಪನಾಯಕ್ ಸ್ಟ್ರೀಟ್,
ಜಿ. ಟಿ. ಮದರಾಸ್.

Wanted agents in every Taluk of Coorg on very liberal terms.

Printed & published by M. M. Ganapathy at "Kodagu" Press, Mercara for "Kodagu" Ltd.

ಜನರಲ್ ಅಷ್ಯೂರೆನ್ಸ್ ಸೊಸೈಟಿ.

ಅಜಮೀರ್.

ನಮ್ಮ ಅಯುಷ್ಯದ ಪಟ್ಟಿಯೇ ನಮ್ಮ ಅಭಿವೃದ್ಧಿಯನ್ನು ವ್ಯಕ್ತಗೊಳಿಸುತ್ತದೆ.

ವರ್ಷ	ಮಾಡಲ್ಪಟ್ಟ ವರಮಾನದಾಯ	ಮಾಡಲ್ಪಟ್ಟ ಮೂಲಧನ	ಖರ್ಚಿನ ಪ್ರಮಾಣದ ಶೇಕಡ
1911	46,248	49,442	83.9
1921	2,92,627	6,53,350	43 2
1931	12,50,000	40,00 000	28 2

ಬೋನಸ್ಸು.

ಕುರ್ತು ನಫೆ ದೊರಕುವ ಜೀವಾವಧಿ ಪಾಲಿಸಿಗಳ ಮೇಲೆ, ವರ್ಷ ಒಂದಕ್ಕೆ ಶೇಕಡ 22½

ಚೆನ್ನಾಗಿ ಕೆಲಸಮಾಡಿ ಅಭಿವೃದ್ಧಿ ಸ್ಥಿತಿಯಲ್ಲಿರುವ ಈ ಸೊಸೈಟಿಯಲ್ಲಿ ವಿಮೆ ಮಾಡಿ ಕಡಿಮೆ ಪ್ರೀಮಿಯಂ ಪಾವತಿ ಮಾಡುವ ಸೌಲಭ್ಯ ಹೊಂದಿ ಅಥವಾ ಈ ಕಂಪೆನಿಯ ಏಜೆಂಟರಾಗಿ ಕೆಲಸಮಾಡಿ ಉತ್ತಮ ಕಮಿಶನ್ ದರದ ಪ್ರಯೋಜನ ಹೊಂದಿ.

ಹೆಚ್ಚು ವಿಚಾರಗಳಿಗೆ ಈ ವಿಳಾಸಕ್ಕೆ ಬರೆಯಿರಿ:—

ಎ. ರಾಮಚಂದ್ರರಾವ್,
ಸುಪರಿಂಟೆಂಡೆಂಟ್,
52—6 ಮಿಂಟೋ ಆಸ್ಪತ್ರೆ ಬಳಿ,
ಬೆಂಗಳೂರು.

ಇಂಡಿಯಾ ಎಕ್ವಿಟೇಬಲ್ ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್.

(ಸ್ಥಾಪಿಸಲ್ಪಟ್ಟದ್ದು 1908)

ಪೋಲಿಸಿಗಳು ಕಳಕೊಳ್ಳುವಂತವುಗಳಲ್ಲ.

ಯಾವ ತಡೆಯೂ ಇಲ್ಲದೆ ಪ್ರತಿ ವರ್ಷವೂ ಬೋನಸ್ಸು.

ಹಕ್ಕು ಬಾಧ್ಯಸ್ಥರಿಗೆ ಸರಿಯಾಗಿ ಹಣ ಕೊಡಲ್ಪಡುವದು ಇಲ್ಲದಿದ್ದರೆ ಬಡ್ಡಿಯು ದೊರಕುವುದು.

ಹೆಡ್ಡ ಆಫೀಸು:—

102· ಕ್ಲೈವ್ ಸ್ಟ್ರೀಟ್, ಕಲ್ಕತ್ತಾ.

I. E., C. P. S. 12—7

ಗಮನಿಸಿರಿ! ಪರೀಕ್ಷಿಸಿರಿ!

ಅಂದವಾಗಿ ಫೋಟೋ ತೆಗೆಯುತ್ತಾರೆ.

ಧೀರ್ಘ ಕಾಲ ಬಾಳಿಕೆ ಬರುತ್ತೆ.

ಹದಿನಾಲ್ಕು ವರ್ಷಗಳಿಂದ ಮೈಸೂರಿನಲ್ಲಿ ಹೆಸರುವಾಸಿಯಾದ ಮೆಸರ್ಸ್ ಶಂಕರ್ ಕಂಪೆನಿಯವರು ಕೊಡಗು ದೇಶದ ಭಗಿನಿ ಬಾಂಧವರ ಸಲುವಾಗಿ ಮಡಿಕೇರಿಯಲ್ಲಿ ಬ್ರಾಂಚ್ ಓಪನ್ ಮಾಡಿರುತ್ತಾರೆ.

ಇಲ್ಲಿ ದೀರ್ಘಕಾಲ ಬಾಳಿಕೆ ಬರುವಂತೆ ಬೇಕಾದ ನಮೂನೆಯಲ್ಲಿ ಫೋಟೋ ತೆಗೆಯುವುದು, ಫೋಟೋ ಎನ್ಲಾರ್ಜ್ ಮಾಡುವುದು, ಆಯಿಲ್ ಪೆಯಿಂಟಿಂಗ್ ಕೆಲಸಗಳು, ಬ್ಲಾಕ್ ಮೊದಲುಗಳ ಕೆಲಸಗಳು ಸದಾ ನಡೆಯುತ್ತವೆ. ಕಾಮರಾ ಮೊದಲಾದ ಫೋಟೋ ಕೆಲಸದ ಎಲ್ಲಾ ಸಾಮಾನುಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ. ಅಮೆಚ್ಯೂರ್ಸ್ ಕೆಲಸಗಳು ಅಂದವಾಗಿ ತಯಾರಿಸಿ ಸಕಾಲಕ್ಕೆ ದೊರೆಯುತ್ತವೆ.

ದರಗಳ ಬಗ್ಗೆ ವಿಚಾರಿಸಿರಿ. ಒಂದಾವರ್ತಿ ಪರೀಕ್ಷಿಸಬೇಕಾಗಿ ವಿನಂತಿ

ಶಂಕರ್ & ಕಂಪೆನಿ
ಕಾರ್ಪೊರೇಶನ್ ಪಾರ್ಕ್,
12—9. ಮಡಿಕೇರಿ.



ಕೋವಿಗಳು, ಕತ್ತಿಗಳು, ಬಚೀಗಳು, ತೋಟಗಳು, ಚಾಕುಗಳು, ಮದು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS,
Largest Importers of Firearms and Ammunition
Cheapest priced firm in India,
24—13 210 Abdul Rehiman Street, BOMBAY.

ಎಂ. ಎಸ್. ಶಿದ್ಧಪ್ಪ & ಬ್ರದರ್ಸ್

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

1. ಉತ್ತಮ ತರಹ ಒಂದು ಸೆಟ್ ಜರ್ಮನ್ ರೀಡ್ಸ್ ಹಾಕಿರುವ ಸಿಂಗಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 20—0—0
   " ಮತ್ತು 22—8—0
2. ಇಟೋ ಉತ್ತಮ ತರಹ ಹಾರ್ಮೋನಿಯಂ
   " 1ಕ್ಕೆ ರೂ. 25—0—0
   ಮತ್ತು 27—8—0
3. ಡಿಟೋ ಉತ್ತಮ ತರಹದ್ದು, ದೂಳು ಬೀಳದಂತೆ ಕೇಸಿನ ಮೇಲೆ ಫೋಲ್ಡ್ ಮುಚ್ಚಳವುಳ್ಳ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ ರೂ. 27—8—0
4. ಶಾಸ್ತ್ರೀಯ, ಬಿಂದೋಬಸ್ತು, ಸುಸ್ವರವುಳ್ಳದ್ದೂ, ಅನೇಕ ವರ್ಷಗಳ ವರೆಗೆ ಬಾಳಿಕೆ ಬರತಕ್ಕದ್ದೂ ಆದ ಹೊಸದಾಗಿ ಸಪ್ಲೈ ಆಗಿರುವ ಫ್ರೆಂಚ್ ರೀಡ್ ನಮೂನೆ ಇರುವ ನಮ್ಮ ಹೆಸರಿನ ರೀಡ್ಸ್ ಹಾಕಿರುವ "ಸಿದ್ಧಪ್ಪಾಸ್ ಫ್ಲೂಟ್" ಸಿಂಗಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 42—8—0
5. ಉತ್ತಮ ತರಹ 2 ಸೆಟ್ ಜರ್ಮನ್ ರೀಡ್ಸ್ ಹಾಕಿರುವ, ದೂಳು ಬೀಳದಂತೆ ಕೇಸಿನ ಮೇಲೆ ಫೋಲ್ಡ್ ಮುಚ್ಚಳವುಳ್ಳ ಡಬ್ಬಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ ರೂ. 37—8—0
   ಉತ್ತಮ ತರಹ 2 ಸೆಟ್ ಜರ್ಮನ್ ಮೇಕ್ ರೀಡ್ಸ್ ಹಾಕಿರುವ, ಕೈಯಿಂದಾಗಲೀ ಅಥವಾ ಕಾಲಿನಿಂದಾಗಲೀ ಬಾರಿಸಲು ಅನುಕೂಲಿಸುವಂತೆ ತಯಾರಿಸಿರುವ "ಸ್ಪೆಷಲ್ ಫ್ಲೂಟ್" ಡಬ್ಬಲ್ ರೀಡ್ಸ್ ಹ್ಯಾಂಡ್ ಲೆಗ್ ಹಾರ್ಮೋನಿಯಂ 1ಕ್ಕೆ ರೂ. 78—8—0

ನಮ್ಮ ಟಿಂಬರ್ ಡಿಪೋನಲ್ಲಿ ಕಟ್ಟಡಗಳಿಗೂ, ಫರ್ನಿಚರ್ ತಯಾರಿಸಲೂ ಬೇಕಾದ ಎಲ್ಲಾ ನಮೂನೆ ನಾಟಾಗಳನ್ನು ಸುಲಭ ದರದಿಂದ ಬಿಕರಿಗಿಟ್ಟಿರುವುದಲ್ಲದೇ, ಗಿರಾಕಿಗಳು ಅಪೇಕ್ಷಿಸುವ ಸೈಜಿಗೆ ಕುಯಿಸಿಯೂ ರಿಯಾಯಿತಿ ದರದಿಂದ ಸಪ್ಲೈ ಮಾಡುತ್ತೇವೆ. ಹೆಚ್ಚಿಗೆ ವಿಷಯಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಳಾಸ:— ಯಂ. ಎಸ್. ಶಿದ್ಧಪ್ಪ ಬ್ರದರ್ಸ್,
ಹಾರ್ಮೋನಿಯಂ ಮತ್ತು ಟಿಂಬರ್ ವ್ಯಾಪಾರಿಗಳು.
ವಾಣೀವಿಲಾಸ ಮಾರ್ಕೆಟ್, ಮೈಸೂರು.

ಪ್ರಸಿದ್ಧ ಪತ್ರಿಕೆಯಾದ 'ಹಿಂದೂ' ಪತ್ರಿಕೆಯಲ್ಲಿಯೂ ಸಹ ಒಂದು ಅಗ್ರಲೇಖನವಿತ್ತು. ಕೊಡಗು ಪ್ರತ್ಯೇಕವಾಗಿರಲು ಸಾಧ್ಯವಿದೆಯೋ ಅಥವಾ ದೊಡ್ಡ ಪ್ರಾಂತ್ಯದೊಂದಿಗೆ ಸೇರಿಕೊಂಡು ತನ್ನ ಮುಂದಿನ ರಾಜಕೀಯ ಬೆಳವಣಿಗೆಯನ್ನು ಸಂಪಾದಿಸಿಕೊಳ್ಳಬೇಕೋ ಎಂಬುದೇ ಚರ್ಚಾಸ್ಪದವಾದ ಪ್ರಶ್ನೆ.

ಕೊಡಗು ಪ್ರತ್ಯೇಕವಾಗಿರಬೇಕೋ ಯಾ ಮದ್ರಾಸು ಆಧಿಪತ್ಯದ ಒಂದು ಜಿಲ್ಲೆಯಾಗಬೇಕೋ ಎಂಬ ವಿಷಯದಲ್ಲಿ ನಮ್ಮ ಈ ದೇಶದಲ್ಲಿ ಅನೇಕ ಚರ್ಚೆಗಳಾಗಿ ದ್ವೇಷಾಸೂಯೆಗಳೂ, ಪಂಗಡಗಳೂ ಅನೇಕವಾಗಿ ಬೆಳೆದದ್ದು ದೇಶೀಯರಿಗೆ ತಿಳಿಯದ್ದಲ್ಲ. ಅಲ್ಲದೆ ಮದ್ರಾಸು ಅಮಲ್ಗಮೇಶನನ್ನು ವಿರೋಧಿಸಲಿಕ್ಕಾಗಿ ಕೊಡವ ಸಭೆಯೊಂದು ಇದದ್ದು ಸಹ ಎಲ್ಲರಿಗೂ ವೇದ್ಯವಿದ್ದೇ ಇದೆ. ಈ ಮುಖ್ಯ ವಿಚಾರದಲ್ಲಿ ಸರಕಾರದವರು ಪ್ರಜೆಗಳ ಅಭಿಪ್ರಾಯವನ್ನು ತಿಳಿಯಲು ಬಹಳ ಕುತೂಹಲವುಳ್ಳವರಾಗಿದ್ದರೆಂದೂ, ಒಡನೇ ದೇಶದ ಸಮಸ್ತ ಜನರ ಅಭಿಪ್ರಾಯವನ್ನು ತಿಳಿಯಲು ಪ್ರವರ್ತಿಸು. ಮೂಲಕ ದ್ವಾರದಿಂದಲೂ ತಿಳಿಯುತ್ತೇವೆ. ಈ ಕಾರಣದಿಂದ ಆ ವಿಷಯಗಳ ಗುಣದೋಷಗಳನ್ನು ಇಲ್ಲಿ ಬರೆಯುವುದು ಆವಶ್ಯಕವಾಗಿ ಕಾಣುತ್ತೆ.

ಕೊಡಗು ಜಮೀನ್ದಾರರ ಸಂಘವು ನಮ್ಮ ದೇಶಕ್ಕೆ ಬೇರೆ ಪ್ರಾಂತೀಯ ಸ್ವತಂತ್ರ ಕೊಡಬೇಕು, ಸಾಧ್ಯವಿಲ್ಲದೆ ಹೋದರೆ ನಮ್ಮ ದೇಶವನ್ನು ಕರ್ನಾಟಕದ ಒಂದು ಜಿಲ್ಲೆಯಾಗಿ ಮಾಡಬೇಕೆಂದೂ ಕಳುಹಿಸಿದ ಠರಾವು ಸರಕಾರದ ಮುಂದೆ ಇದೆ. ಕೊಡವ ಸಭೆಯು ದೇಶವು ಹೀಗೆಯೇ ಇರಬೇಕು, ಯಾವ ಪ್ರಾಂತ್ಯಕ್ಕೂ ಸೇರುವುದು ಬೇಡವೆಂದು ಬರೆದ ಸಹ ಎಲ್ಲರಿಗೂ ತಿಳಿದೇ ಇದೆ. ಕೊಡಗು ಪ್ರತ್ಯೇಕವಾಗಿ ನಮ್ಮ ಮುಂದಿನ ಜನಾಂಗದ ಅಭಿವೃದ್ಧಿಯು ಯಾವ ರೀತಿಯಲ್ಲಿಯೂ ಮುಂದಕ್ಕೆ ಬರಲಿಕ್ಕಿಲ್ಲವೆಂಬುದು ಈ ಕೆಳಗೆ ಬರೆಯುವ ವಿಷಯಗಳಿಂದ ವ್ಯಕ್ತವಾಗುತ್ತದೆ. (1) ಯಾವ ದೇಶವೇ ಆಗಲಿ ಮುಂದಕ್ಕೆ ಬರಬೇಕಾದರೆ ದೇಶದಲ್ಲಿ ವೆಚ್ಚಕ್ಕಿಂತ ಆದಾಯವು ಹೆಚ್ಚಾಗಿ ಬರಬೇಕು. ಸಂಪೂರ್ಣವಾಗಿರಬೇಕು. ಹಣವಿಲ್ಲದೆ ಯಾವ ಅಭಿವೃದ್ಧಿಯೂ ಆಗುವುದಿಲ್ಲ. ಕೊಡಗಿನಲ್ಲಿ ದಿನೇ ದಿನೇ ಆಮ್ದಾನಿಯಿಂದಲೂ, ಫಸಲಿಂದಲೂ ಕಿಸ್ತಿನ ಉತ್ಪತ್ತಿಯು ಕಡಿಮೆಯಾಗುತ್ತ ಬರುವುದರಿಂದ ಮುಂದೆ ಜನರ ಪ್ರಯೋಜನಕ್ಕಾಗಿ ಯಾವ ಅಭಿವೃದ್ಧಿಯ ಕೆಲಸವೂ ಮಾಡಲಿಕ್ಕೆ ಅನುಕೂಲವಿರುವುದಿಲ್ಲ. (2) ದೊಡ್ಡ ಉದ್ಯೋಗಸ್ಥರ ವರ್ಗಾವರ್ಗಿಯನ್ನು ಮಾಡಲಿಕ್ಕೆ ಅನುಕೂಲವಿಲ್ಲದೆ ಹುಟ್ಟಿದಂದಿನಿಂದ ಸಾಯುವ ವರೆಗೂ ಒಬ್ಬನೂ ಒಂದೇ ಉದ್ಯೋಗದಲ್ಲಿದ್ದು ಜನರ ಕೋಪ ತಾಪ ಮೆಚ್ಚಿಕೆಗೆ ಸಿಕ್ಕಿ ದೇಶದಲ್ಲಿ ಹೆಚ್ಚಿಗೆ ನ್ಯಾಯ ಸಿಕ್ಕಲು ಅವಕಾಶವಾಗುವುದಿಲ್ಲ. ಈಗ 'ಗಜೆಟೆಡ' ಉದ್ಯೋಗಸ್ಥರ ವರ್ಗಾವರ್ಗಿಯ ವಿಷಯ ದೇಶದಲ್ಲಿ ಈ ಬಗೆಗೆ ಕೋಲಾಹಲವೆಬ್ಬಿದ್ದಿತೆಂಬುದು ಎಲ್ಲರಿಗೂ ತಿಳಿದಿದೆ. ಒಂದು ವೇಳೆ ಕೊಡಗಿಗೆ ಸ್ವರಾಜ್ಯ ಸಿಕ್ಕಿದರೂ ಸಹ ಒಬ್ಬ ದೊಡ್ಡ ಉದ್ಯೋಗಸ್ಥನನ್ನು ಒಂದೇ ಸ್ಥಳದಲ್ಲಿ ಮತ್ತು ಕೆಲಸದಲ್ಲಿಟ್ಟರೆ ಅದರಿಂದ ಬಹಳ ಅಪಾಯವುಂಟು. ಆದ್ದರಿಂದ ಇಂಥಾ ವರ್ಗಾವರ್ಗಿಯನ್ನು ನಡೆಸಲು ಅನುಕೂಲವು ಪ್ರತ್ಯೇಕವಾಗಿದ್ದರೆ ಸಿಕ್ಕದು. (3) ನಮ್ಮ ದೇಶದಲ್ಲಿ ಯಾವ ಕಾಲೇಜುಗಳೂ ಇಲ್ಲ. ನಮಗೆ ಕಾಲೇಜುಗಳನ್ನು ಮಾಡಲು ಅನುಕೂಲವೂ ಇಲ್ಲ, ಎಂದೂ ಸಂಪೂರ್ಣ ಪ್ರತ್ಯೇಕವಾಗಿ ಕಾಲೇಜುಗಳನ್ನು ಮಾಡಲು ಆಗುವುದೇ ಇಲ್ಲ. ಹಾಗಾದರೆ ನಮ್ಮ ಯುವಕರು ಎಲ್ಲಿ ಮುಂದಿನ ವ್ಯಾಸಂಗವನ್ನು ಪೂರ್ತಿ ಮಾಡಬೇಕು?

ಈಗಾಗಲೇ ಮದ್ರಾಸಿನಲ್ಲಿ ಪ್ರತಿ ಕಾಲೇಜಿಗೂ ನಮ್ಮ ವಿದ್ಯಾರ್ಥಿಗಳನ್ನು ಸೇರಿಸಲು ನಿರ್ಬಂಧಕ್ಕೆ ಗುರುವಾಗಿದೆ. ವಬಲಸಂ ಕಾಲೇಜಿಗೆ ವರ್ಷಕ್ಕೆ ಪ್ರತಿ ವಿದ್ಯಾರ್ಥಿಗೆ 500/—ರೂ. ಫೀಜು ಕೊಡಬೇಕು. ಹೀಗೆಯೇ ಇನ್ನು ಮುಂದಕ್ಕೆ ಪ್ರತಿ ಕಾಲೇಜಿಗೂ. ನಮ್ಮ ವಿದ್ಯಾರ್ಥಿಗಳು ಸಾವಿರಾರು ರೂಪಾಯಿ ಫೀಜು ಪ್ರತ್ಯೇಕವಾಗಿ ಕೊಟ್ಟು ವಿದ್ಯಾಭ್ಯಾಸಂಗ ಮಾಡಬೇಕಾಗಿದೆ. ಮೆಡಿಕಲ್ ಕಾಲೇಜು, ಇಂಜಿನಿಯರಿಂಗ್ ವಗೈರೆ ಕಾಲೇಜಿಗೆ ಪ್ರತ್ಯೇಕವಾದ ಫೀಜನ್ನು ನಮ್ಮ ವಿದ್ಯಾರ್ಥಿಗಳು ಮುಂದಿನ ವರ್ಷದಿಂದ ಕೊಡಬೇಕಾಗಿರುತ್ತೆ. ಎಲ್ಲಾ ಪ್ರಾಂತ್ಯವೂ ಅವರವರ ಅಭಿವೃದ್ಧಿಯಲ್ಲಿರುವಾಗ ಇನ್ನೊಂದು ಪ್ರಾಂತ್ಯದ ಮಕ್ಕಳಿಗೆ ಪುಕ್ಕಟೆಯಾಗಿ ಸ್ಥಳಗಳನ್ನು ಕೊಟ್ಟಾರೇ—ಈ ಕಾರಣದಿಂದ ಇನ್ನು ಮುಂದಕ್ಕೆ ನಮ್ಮ ಮಕ್ಕಳ ಕಾಲೇಜು ವಿದ್ಯಾಭ್ಯಾಸವೇ ಮನ್ನವಾಗುತ್ತೆ. ಅಲ್ಲದೆ ಅನೇಕ ವಿದ್ಯಾವಂತ ಯುವಕರೂ ಸಹ ನಮ್ಮ ದೇಶದಲ್ಲಿ ಚಾಕರಿ ಇಲ್ಲದೆ ಅಲೆದಾಡಿ ಬಹಳ ಸಂಕಟಪಡ್ಡು ಬಾಳುವ ಕಾಲವೂ ಸಹ ಬಂದಿದೆ.

ಇಂಥಾ ಇಕ್ಕಟ್ಟಿನಲ್ಲಿ ದೇಶದವರು ಪೂರಾ ಎಚ್ಚತ್ತು ಕೊಡಗನ್ನು ಕರ್ನಾಟಕದ ಒಂದು ಜಿಲ್ಲೆಯಾಗಿ ಮಾಡಲಿಕ್ಕೆ ಪ್ರಯತ್ನಿಸಬೇಕೆಂದೂ, ಕರ್ನಾಟಕ ಏಕೀಕರಣ ಆಗುವ ವರೆಗೆ ಮದ್ರಾಸು ಅಧಿಪತ್ಯದ ಒಂದು ಜಿಲ್ಲೆಯಾಗಿ ಮಾಡಲಿಕ್ಕೆ ಪ್ರಜಾಮತವಾದ ಜನವಳ ಸಹಿ ಸರ್ಕಾರಕ್ಕೆ ಅಭಿಪ್ರಾಯವನ್ನು ಕೊಡಬೇಕೆಂದೂ, ದೇಶೀಯರಲ್ಲಿ ಅಪ್ಪೀಲು ಮಾಡಿಕೊಳ್ಳುತ್ತೇನೆ. ಈ ಸಮಯವನ್ನು ಬಿಟ್ಟರೆ ಕೊಡವ ಕೂರ್ಗಿನಂತೆ ನಾವು ಇದ್ದ ಸ್ಥಿತಿಗಿಂತ ಕನಿಷ್ಠವಾಗಿ ಯಾವ ಮುಂದಿನ ಅಭಿವೃದ್ಧಿಯೂ ಇಲ್ಲದೆ ನಾಶವಾಗುವುದು.

'ಕೊಡವ'

IN THE COURT OF THE DISTRICT JUDGE OF COORG.

Civil Original Suit No 3 of 1931

Plaintiff		*Defendant*
P. B. Aiyamma.	*VS.*	**P. A. Nanjappa.**

Notice is hereby given that in the above said suit a preliminary decree has been passed by this court for the sale of the properties-movables and immovables of the partnership concern known as Sri Cauvery Bus Service which has been since dissolved as per order of the court.

The sale will be by public auction and the properties will be put up for sale either in one lot or by separate lots in the premises of the court of the Subordinate Judge of Coorg on the 6th day of June 1932 at 12 noon

At the sale, the public generally and either of the parties are invited to bid, either personally or by duly authorised agent.

CONDITIONS OF SALE.

1. The particulars specified in the schedule below have been stated to the best of the information of the court but the court will not be answerable for any error, misstatement or omission in the proclamation.

2. The amount by which the biddings to be increased shall be determined by the officer conducting the sale in the event of any dispute, arising as to the amount bid or as to the bidder, the lot shall at once be again put up to auction

3. The highest bidder shall be declared to be the purchaser of any lot, provided always that he is legally qualified to bid and provided that it shall be in the discretion of the court or officer holding the sale to decline acceptance of the highest bid when the price offered appears so clearly inadequate as to make it advisable to do so.

4. For reasons recorded, it shall be in the discretion of the officer conducting the sale to adjourn it subject always to the provisions of rule 69 of order XXI.

5. The person declared to be the purchaser shall pay immediately after such declaration a deposit of 25 per cent on the amount of his purchase money to the officer conducting the sale and in default of such deposit the property shall forthwith be put up again and resold.

6. The full amount of purchase money shall be paid by the purchaser before the court closes, on the 15th day after the sale of the property, exclusive of such day or if the 15th day be a Sunday or other holiday, then on the first office day after the 15th day.

7. In default of payment of the balance of purchase money within the period allowed, the property will be resold after the issue of a fresh notification of sale. The deposit after defraying the expenses of the sale, may, if the court thinks fit, be forfeited to Government and defaulting purchaser shall forfeit all claim to the property or to any part of the sum for which it may be subsequently sold

8. The purchaser shall get the possession of all the properties sold as soon as the full money is paid.

Given under my hand and the seal of the court this 9th day of April 1932.

(Sd) L. J. MACIVER,
District Judge.

SCHEDULE I.
IMMOVABLE PROPERTY.

Number of lot	Description of property to be sold	Municipal block Number & Survey Number	Area	Assessment	Name of owner	Remarks
				Rs A. P.		
1	Tiled house	Block No. 11 Mercara Muncipality Sy. No. 22.	0·07	11 4 0	Director of Sri Cauvery Bus Service	The property is estimated at Rs. 10,000
2	do.	do. Sy. No. 23.	0 15	32 8 0		
3	Hithlu	do. Sy. No. 23/1	1·20	0 0 0		
4	Sit	do. Sy. No. 24.	0·01	0 10 0		

SCHEDULE II.
MOVABLE PROPERTY.

Number of	Description of property	Approximate value Rs. A. P.	Remarks
1	Ten Buses	11,000 0 0	* 6 Cheverolet buses 2 Ford buses 2 Willeys buses
2	One Cheveroler car	250 0 0	
3	Cheverolet parts etc.	645 0 0	
4	Dodge parts	264 0 0	
5	Ford parts	23 0 0	
6	Reo parts	94 0 0	
7	Furniture	54 0 0	
8	Shed tools	370 0 0	
9	Old Model Ford	10 0 0	
	Total	12,710 0 0	

9-4-1932.

(Sd.) L. J. MACIVER,
District Judge.

ವರ್ತಮಾನ ಸಂಗ್ರಹ.

ಒಳದೇಶ.

ಹೆಬ್ಬಾಲೆಯಲ್ಲಿ ಪ್ಲೇಗು ತಲೆದೋರಿದೆಯೆಂದು ವರ್ತಮಾನ.

ಮಡಿಕೇರಿಯಲ್ಲಿ ಕಳೆದ ವಾರದಿಂದ ಮಳೆ ಹೊಡೆಯುವುದು ನಿಂತು, ವಾಯು ಗ [illegible] ಬಹು ಚೆನ್ನಾಗಿದೆ.

ಕಳೆದ ಎಲ್. ಟಿ. ಪರೀಕ್ಷೆಯಲ್ಲಿ ಮಿಸ್. ಗ [illegible] ದೇವತ್ಪ್ರಾಂಚಿಪರು ತೇರ್ಗಡೆಯಾಗಿರುವರೆಂದು ತಿಳಿದು ಸಂತೋಷ ಪಡುತ್ತೇವೆ.

ಸಾಕಷ್ಟು ಮೊಂಬರದ್ದರೆ ಫ್ರೇಜರ್‌ಪೇಟೆಯಲ್ಲಿ ಒಂದು ಪರ್ಸೆ ಸ್ಕೂಲ್ ತೆರೆಯಲ್ಪಡುವುದೆಂದೂ ಮತ್ತು ಆ ಸ್ಕೂಲಿನ ವಿದ್ಯಾರ್ಥಿಗಳಿಗೆ ತಿಂಗಳಿಗೆ 3 ರೂ. ಫೀಜು ಚಾರ್ಜು ಮಾಡಲ್ಪಡುವುದಾಗಿಯೂ ತಿಳಿಯಬರುತ್ತದೆ.

ವೀರರಾಜಪೇಟೆಯಲ್ಲಿ ಕೊಡಗೇತರರ "ನ್ಯಾಯ [illegible] ಒಂದು ವರ್ತಮಾನ ಪತ್ರಿಕೆಯು ಸ್ವಲ್ಪ ದಿವಸದಲ್ಲಿಯೇ ಪ್ರಕಟಿಸಲ್ಪಡುವುದಾಗಿ ಒಂದು ಗಾಳಿ ವರ್ತಮಾನ.

ಈಗಾಗಲೇ ಮಡಿಕೇರಿಯಲ್ಲಿ ನಿಮೂಲು ತಲೆದೋರಿ ಒಬ್ಬ ಕ್ರಿಶ್ಚಿಯನ್ ಹೆಂಗಸಿಗೆ ತಾಟಿದೆಯೆಂದೂ, ಅವಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವಳೆಂದೂ ತಿಳಿದುಬರುತ್ತದೆ.

ಮಿ. ಕೊರವಂಡ ಮುಂ [illegible] ಮ್ಮಯ್ಯನವರು ಬೊಂಬಾಯಿ ಯುನಿವರ್ಸಿಟಿಯ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರೆಂದು ತಿಳಿಸಲು ಸಂತೋಷ ಪಡುತ್ತೇವೆ. ಇವರಿಗೆ ನಮ್ಮ ಅಭಿನಂದನೆಗಳಿವೆ.

ಮೈಸೂರು ಯುನಿವರ್ಸಿಟಿಯ ಕಳೆದ ಯಂ. ಎ. ಪರೀಕ್ಷೆಯಲ್ಲಿ ಮಿ. ಸಿ. ಯನ್ ಅಕ್ಕಿ [illegible] ನಾರಾಯಣನವರೂ ಮತ್ತು ಬಿ. ಯಸ್. ಸಿ. ಯಲ್ಲಿ ಮಿ. ಯಸ್. ಕೇಶವಾಚಾರಿಯವರೂ ತೇರ್ಗಡೆಯಾಗಿರುವರೆಂದು ತಿಳಿದು ಸಂತೋಷ ಪಡುತ್ತೇವೆ.

ಕೊಡಗು ದೇಶವು ಸ್ವತಂತ್ರ ದೇಶವಾಗಿರಬೇಕೋ ಯಾ ಬೇರೆ ದೇಶದೊಂದಿಗೆ ಸೇರಿಕೊಳ್ಳಬೇಕೋ ಎಂಬ ಸಂಗತಿ ಸಾರ್ವಜನಿಕರು [illegible] ಯಿಂದ ಕೌನ್ಸಿಲ್ ಮೆಂಬರುಗಳಿಗೆ ತಮ್ಮ ಅಭಿಪ್ರಾಯವನ್ನು ಕೊಟ್ಟು ಕೊಡವ ಸಭೆ ಮುಂತಾದ ಸಭಾ ಸರ್ಕಾರಕ್ಕೆ ಕೊಡಲೋಸುಗ ಜೂನ್ ತಾ. 11 ನೇ ಶನಿವಾರ ದಿನ ಹಗಲು ಒಂದು ಗಂಟೆಗೆ [illegible] ಸ್ಕೂಲ್ ಒಳ ಒಂದು ಮೀಟಿಂಗ್ ಮಾಡುವುದಾಗಿಯೂ, ಆ ದಿನ ಸರ್ವ ಕೊಡಗರೂ, ಸರ್ಕಾರಿ ನೌಕರಿಯಲ್ಲಿರುವವರೂ ಸಹ ಈ ಚರ್ಚೆಯಲ್ಲಿ ಭಾಗಿಗಳಾಗಬೇಕಾಗಿಯೂ ಒಂದು ಬಾತ್ಮಿ.

ಹಿಂದೂದೇಶ.

ಪಂಡಿತ ಜವಹರ್‌ಲಾಲರಿಗೆ ನೈನಿಜೈಲಿನಲ್ಲಿ ಸ್ವಲ್ಪ ಜ್ವರವಿದೆ; ಡೆಹರಾಡೂನ್ನಿಗೆ ಕೊಂಡೊಯ್ಯುವರೆಂದು ಪ್ರಕಟವಾಗಿದೆ.

ಬೊಂಬಾಯಿಯಲ್ಲಿ ಪುನಃ ಪಿಕೆಟಿಂಗ್ ಆರಂಭವಾಗಿದೆ. ವಾಲೆಂಟಿಯರ್ [illegible] ಮುಂದೆ [illegible]

ಕಮಿಷನರ್ ಮಿ. ಗಿಬ್ಸನ್ ಸಾಹೇಬರನ್ನು ಕೊಲ್ಲಲು ಪ್ರಯತ್ನಿಸಿದ ಅಪರಾಧಕ್ಕೆ ಅಜಮೀರಿನ ರಾಮಚಂದ್ರ ಬಾಪಟನಿಗೆ ೧೦ ವರ್ಷದ ಸಶ್ರಮ ಸಜೆ.

'ಕರ್ನಾಟಕ ವೃತ್ತ' ದ ಸಂಪಾದಕರಾದ ಶ್ರೀ ಪಾಂಡುರಂಗ ಕೃಷ್ಣ ಜನ್ನನಭಾಗರನ್ನು ಕ್ರಿಮಿನಲ್ ಎಮೆಂಡ್‌ಮೆಂಟ್ ಶಾಸನದ ಪ್ರಕಾರ ದಸ್ತಗಿರಿ ಮಾಡಿರುವರು.

ಸಿಯೋನಿ ಜೈಲಿನಲ್ಲಿರುವ ಶ್ರೀ. ಸುಭಾಷ್ ಚಂದ್ರಬೋಸರು ತಮ್ಮ ಭಾರದಲ್ಲಿ 28 ರಾತ್ತಲು ಕಡಿಮೆಯಾಗಿರುವರೆಂದು ತಮ್ಮ ಸ್ನೇಹಿತರೊಬ್ಬರಿಗೆ ಪತ್ರ ಬರೆದಿರುವರು.

ಸರಕಾರಿ ಉದ್ಯೋಗಿಗಳಿಗೂ ಉದ್ಯೋಗವಾಗಬೇಕೆಂದು [illegible] ಶ್ರೀರಾಧಿಪತಿಗಳು [illegible] ರಾಜ್ಯದಲ್ಲಿನ ಕೆಲವೆಡೆಯಲ್ಲಿ — ಕಟ್ಟಡ—ಕಾಲುವೆಗಳ ದುರಸ್ತಿಯ ಯೋಜನೆ ಮಾಡಿರುವನು.

ಬೊಂಬಾಯಿಯು ತಣ್ಣಗಾಯಿತು. ತಾ. [illegible] ರ ಮೇಲೆ ಬಂದೆರಡು ದಿನ ಹಡೆದಾಟವಿತ್ತು. ಕೆಲವರಿಗೆ ಜಖಂ ಆಗಿತ್ತು. ಆ ಮೇಲೆ ಶಾಂತಿ. ಮಿಲಿಟರಿ ಪಹರೆ ಹಿಂತೆಗೆಯಲಾಗಿದೆ.

ಇದೇ ಬರುವ ಜುಲಾಯಿ ತಾ. ೩ಗೆ ಆರ್ಡಿನೇನ್ಸುಗಳ ಅವಧಿ ಮುಗಿಯುವ ಕಾರಣ, ಪೋಲೀಸರು (ಮುಟ್ಟುಗೋಲು ಹಾಕಿದ ಹೊರತಾಗಿ) ಇತರ ಸ್ವತ್ತುಗಳೆಲ್ಲವೂ ತಿರುಗಿ ಕೊಡಲಾಗುವುದಂತೆ.

ಸರ್ಕಾರದ ಇಚ್ಛಾ ದಿನ ಕೈದಿಯಾಗಿರುವ ಶ್ರೀ ಸೇನಗುಪ್ತರು ಕಲ್ಕತ್ತಾ ಕಾರ್ಪೊರೇಶನ್ ಸದಸ್ಯರಷ್ಟೆ? ಕಾರ್ಪೊರೇಶನಿನವರು ಇವರಿಗೆ ೬ ತಿಂಗಳ 'ರಜೆ' ಕೊಟ್ಟಿದ್ದರು. ಅದರ ಅವಧಿಯೇ ಮುಗಿತು; ಗುಪ್ತರು ಬಿಡುಗಡೆ ಹೊಂದಲಿಲ್ಲ. ಈಗ ಮತ್ತೆ ೬ ತಿಂಗಳ ರಜೆ ಕೊಟ್ಟಿರುವರು.

ಗಡಿನಾಡಿನಲ್ಲಿನ ಜಯ—ವ್ಯಯದ ಪಟ್ಟಿಯು ಕೌನ್ಸಿಲಿನ ಮುಂದೆ ಬಂದಾಗ ಭೂಕಂದಾಯದಿಂದ [illegible] ರೂ. ಉತ್ಪತ್ತಿಯೆಂದು ತಿಳಿಯಿತು. ಅಷ್ಟನ್ನ ಸ್ವತಃ ಪೋಲೀ [illegible] ಪೂರೈಸಬಹುದೆಂದು ತರಾವಾಯಿತು. [illegible] ಯಿಂದ ಬರುವ ೮೬,೦೦೦ಕ್ಕೆ ಮೊತ್ತ, ಮಂತ್ರಿಗಳು ಕೂಡಿ ತ[illegible]ಮ್ಮ ನಿಷೇಧವನ್ನು ತಿಳಿಸಿದರು. ಉರ್ದು ಭಾಷೆಯಲ್ಲಿ ಸದಸ್ಯರ ತೀಕ್ಷ್ಣ ಭಾಷಣಗಳಿದ್ದುವು.

ತಿರುವಾಂಕೂರಿನಿಂದ ಹನ್ನೆರಡು ಮೈಲಿ ಆಚೆ ಇರುವ ನೆಡುಮಂಗಾಡ್ ಎಂಬ ಊರಿನಲ್ಲಿ ತಾ 20ನೇ ಶುಕ್ರವಾರ ಸುಂಟರಗಾಳಿ ದೆಸೆಯಿಂದ ಅಲ್ಲಿಯ ಸ್ಕೂಲ್ ಕಟ್ಟಡವು ಬಿದ್ದು ಮೂವರು ಬಾಲಕಿಯರು ಮೃತಪಟ್ಟಿರುವರು. ಒಬ್ಬ ಉಪಾಧ್ಯಾಯನಿಗೂ, ಇನ್ನು ಹದಿನೇಳು ಮಂದಿಗೂ ಘಾಯಗಳಾಗಿವೆ.

ಹಿಂದೆ 'ಮೈಸೂರ್' ಜೈಲಿನಲ್ಲಿರುವ 'ಸ್ಪೆಶಲ್' ಕೈದಿ (ಡೆಟಿನ್ಯೂ)ಗಳು ಅಧಿಕಾರಿಗಳ ಅಪ್ಪಣೆಯಿಲ್ಲದೆ, ಗುಟ್ಟಾಗಿ ಹೊರಗಿನ ತಮ್ಮ ಸ್ನೇಹಿತರಿಗೆ ಪತ್ರಗಳು ಬರೆದು ಕಳುಹಿಸಿದರೆಂದು ಒಂದು ತಿಂಗಳಿನ ಸಜೆ ವಿಧಿಸಲ್ಪಟ್ಟರು. ಪತ್ರವಾಹಕರಾಗಿ ಸೇವೆ ಯನ್ನು ಸಲ್ಲಿಸಲು ಸಿದ್ಧರಾದ ವಾರ್ಡರನ್ನು 'ಸಸ್ಪೆಂಡ' ಮಾಡಿರುವರು.

ಬರ್ಮಾ ದೇಶದಲ್ಲಿ ದೊಂಬಿ ಕಲಹಗಳನ್ನು ನಡೆಸುತ್ತಿದ್ದರೆಂಬುದಾಗಿ 93 ಮಂದಿಯನ್ನು ಮೊಕದ್ದಮೆಗೆ ಗುರಿಪಡಿಸಲಾಗಿತ್ತು. ಅವರಲ್ಲಿ 70 ಮಂದಿಗೆ ಮರಣ ದಂಡನೆಯ ಶಿಕ್ಷೆಯನ್ನೂ, 23 ಮಂದಿಗೆ ದ್ವೀಪಾಂತರ ವಾಸವನ್ನು ಅನುಭವಿಸಬೇಕೆಂದೂ, ಇನ್ನೊಬ್ಬನಿಗೆ ಬಿಡುಗಡೆ ಆಯಿತೆಂದೂ ತಿಳಿಯಬರುತ್ತದೆ.

1932ನೇ ಇಸವಿಯಲ್ಲಿ ನಡೆದ ಸತ್ಯಾಗ್ರಹ ಸಂಬಂಧ ಏಪ್ರಿಲ್ ಅಖೈರು ವರೆಗೆ ಕೈದಾದವರ ಸಂಖ್ಯೆಯು 44,7[illegible] ಎಂದು ತಿಳಿಯಬರುತ್ತದೆ. ಜನವರಿಯಲ್ಲಿ 14,800, ಫೆಬ್ರವರಿಯಲ್ಲಿ 17,800, ಮಾರ್ಚಿಯಲ್ಲಿ 6900 ಮತ್ತು ಏಪ್ರಿಲಿನಲ್ಲಿ [illegible] ಮಂದಿ ಕೈದುಮಾಡಲ್ಪಟ್ಟಿರು. 1932ನೇ ಇಸವಿ ಏಪ್ರಿಲ್ ಅಖೈರಿನಲ್ಲಿ ಜೈಲಿನಲ್ಲಿದ್ದವರ ಸಂಖ್ಯೆ 32,524.

[illegible] ಇಂಡಿಯಾ ರೈಲ್ವೆಗೆ ಸೇರಿದ ಮೊಂಬಾಸಾ [illegible] ರೈಲ್ವೆ ಸ್ಟೇಶನಿನಲ್ಲಿ ಯಾರೋ ದುರಾತ್ಮರು ಮೂರು [illegible] ಗಳನ್ನು, ಪತ್ರಿಕೆ ಟಿಕೇಟು, ಆಫೀಸಿಗೆ ಬೇಕಾದ ಲೆಕ್ಕದ ಪುಸ್ತಕಗಳನ್ನು ಸುಟ್ಟು ಹಾಕಿದರೆಂದೂ, ಕಂಪೆನಿಯವರು ರೈಲ್ವೆ ಚಾರ್ಜನ್ನು ಹೆಚ್ಚು ಮಾಡಿರುವ ಪ್ರಯುಕ್ತ ಕೊಡಬೇಕಿನೆಂಬುದಾಗಿ ಜನರಿಗೆ ತಿಳಿಯಪಡಿಸಿ ಬರೆದಿದ್ದ ನೋಟೀಸುಗಳು ಅಲ್ಲಿ ಬಿದ್ದಿದ್ದವೆಂದೂ ತಿಳಿದುಬಂದಿದೆ.

ತಾ. ೨೫ರಲ್ಲಿ ಮಲಬಾರಿನಲ್ಲಿ ಬಿರುಗಾಳಿಯ ಹಾವಳಿ ಬಿರುಗಾಳಿಯು ಕಲ್ಲಿಕೋಟೆಯ ದಕ್ಷಿಣಕ್ಕೆ ೫೫ ಮೈಲುಗಳಿಗೂ, ಉತ್ತರಕ್ಕೆ ೧೫ ಮೈಲುಗಳಿಗೂ ಬೀಸಿ ಪ್ರತಾಪ ತೋರಿದೆ. ೫೦ ವೃಷ್ಟಿಯಾಗಿ ನೂರಾರು ಮನೆ ಮಠಗಳು ಬಿದ್ದು ಜನರು ಬಲಿಯಾಗಿದ್ದಾರೆ. ತಂತಿ ಕಂಬಗಳು ತಂತಿ ಕಡಿದು ಬಿದ್ದಿವೆ. ಮರಗಳು ಕಡಿದು ಹೋಗಿ ಗಾಡಿ ಮೋಟರುಗಳ ಚಲಾವಣೆಗೆ ಕೊಡಕಾಗಿದೆ. ರೈಲ್ವೆ ಮಾರ್ಗದಲ್ಲಿನ ಬರುಕು ಸಂಧಿಗಳನ್ನು ಸರಿಪಡಿಸಿದುದಾಯಿತು. ಸಂಚಾರಿಕರು ಕಡ ಸಂಖ್ಯೆಯಲ್ಲಿ ಸರಳುವಂತಾಗಿದೆ.

ಅಹಮ್ಮದಾಬಾದಿನ ಬಿಜಲಿ ಗಿರಣಿಯವರು ಸ್ತ್ರೀಯರನ್ನೂ ಕೆಲಸಕ್ಕಾಗಿ ನೇಮಿಸಿಕೊಳ್ಳದಿದ್ದರೆ ಎಲ್ಲ ಕೂಲಿಕಾರರ ಮುಷ್ಕರ ಹಿಡಿಯುವರೆಂದು ನೇಕಾರ ಕೂಲಿ ಸಂಘದವರು ಗಿರಣಿಯವರನ್ನು ಎಚ್ಚರಿಸಿರುವರು. ಈ ಗಿರಣಿದಾರರು ಸ್ತ್ರೀ ಕೂಲಿಗಳಿಗೆ ಪ್ರವೇಶ ಕೊಡುತ್ತಿಲ್ಲವಂತೆ. (ಗಂಡಸರ ಕೂಲಿಯು ಬಹಳ ಕಡಿಮೆಯಾದ ಕಾರಣ ಸಂಸಾರ ಭಾರವು ಹೆಚ್ಚಿದಲ್ಲಿ ಸ್ತ್ರೀಯರ ಕೂಲಿಗಳಾಗಿ ಸೇರಬೇಕಾಗಬಹುದು. ಅದುವರಿಂದ ಪ್ರತಿಯೊಂದು ಗಿರಣಿಯವರೂ ಶೇಕಡ ೫೦ರ ಸ್ತ್ರೀಯರನ್ನೂ ನೇಮಿಸಿಕೊಳ್ಳಬೇಕಾಗಿ ಸೂಚಿಸಿ ನೇಕಾರ ಕೂಲಿ ಸಂಘದವರ ಠರಾವಾಗಿತ್ತು.)

ಸೆಂಟ್ರಲ್ ಖಿಲಾಫತ್ ಕಮಿಟಿಯ ಸಭೆಯು ಬೊಂಬಾಯಿಯಲ್ಲಿ ಕೂಡಿತು. ಸಭೆಯೇನು ಆತಂಕದಲ್ಲ. ಮುಸಲ್ಮಾನ ಭಾವ ಪ್ರಕಟಣೆಗಳಾದುವಲ್ಲಿ ಮೌಲಾನ ಶೌಕತಾಲಿಯವರ ಮಡುವೆಯು ನ್ಯಾಯ ಹಾಗೂ ಧರ್ಮವಿಹಿತವಾದುದೊಂದು, ಗುಜರಾತಿ ದೈನಿಕ ಪತ್ರಿಕೊಂದನ್ನು ಹೊರಡಿಸಬೇಕೆಂದು ಮತ್ತೊಂದು; ಮೌಲಾನರ ವಿವಾಹ [illegible] ಹಿಂದೂ ಪತ್ರಿಕೆಗಳು ಕೆಲವು ಟೀಕಿಸಿದುವೆಂದು ನಿಷೇಧಿಸಿ ಮುಗಿದೊಂದು; ಮೌಲಾನರ ವಿಷಯವಾಗಿ ವಿಶೇಷ ಟೀಕಿಸಿದ ಒಂದು ಪತ್ರಿಕೆಯನ್ನು ಕೋರ್ಟಿಗೆಳೆಯಬೇಕೆಂದು ಇನ್ನೊಂದು. ಮೋಹರಂ ದಣುವಿದ್ದ ಕಾರಣವೋ ಏನೋ, ಹೆಚ್ಚಿನ ಠರಾವುಗಳು ಮುಂದೆ ಬರಲಿಲ್ಲ.

ತಾ. ೨೪ರಲ್ಲಿ ಮಥುಲೀಪಟ್ಟಣದ ಒಬ್ಬ ಕಾನ್‌ಸ್ಟೇಬಲಿನ ಮಗಳಾದ ಸುಂದರನಾಗಮ್ಮ ಎಂಬವಳು ಮರುದಿನ ಜರಗಲಿರುವ ತನ್ನ ವಿವಾಹದ ಸಿದ್ಧತೆಗಳಲ್ಲಿ ತಾನೂ ಸಹಕಾರಿಯಾಗಿ ಸಂತೋಷವೃತ್ತಿಯಲ್ಲಿದ್ದವಳು, ಎಲ್ಲರೂ ಮಲಗಿದ್ದ ಮೇಲೆ ರಾತ್ರೆ ಎದ್ದು ಚಿತೆಯನ್ನೇರ್ಪಡಿಸಿ ಅದರ ಮೇಲೆ ಮಲಗಿ ಸುಟ್ಟುಕೊಂಡು ಪ್ರಾಣ ತ್ಯಾಗ ಮಾಡಿದಳು. ಬೆಂಕಿಯನ್ನು ನೋಡಿ ಜನರು ಓಡಿ ಬರುವಾಗ ಹೆಣ ಮಾತ್ರ ಕಂಡು ಬಂತು ಸಮೀಪದಲ್ಲೊಂದು ಪತ್ರ. ಆಕೆಯೇ ಬರೆದುದಂತೆ!—ನನ್ನ ಜೀವನವೆಂಬುವುದು ಒಂದು ದೊಡ್ಡ ರಹಸ್ಯ. ನಾನು ಕುಮಾರಿಯಾಗಿಯೇ ಸಾಯಬೇಕೆಂದು ವಿಧಿನಿಯಮ. ನನ್ನ ಜನನ ಅತೀ ಪವಿತ್ರ; ನಾನು ಯಾರನ್ನೂ ವಿವಾಹವಾಗೆನು!' ಎಂದಿತ್ತು. ವಿವಾಹ ಸಂಭ್ರಮದ ದಿನವು ಶವದಹನದ ದಿನವಾಯಿತು. ನೆರೆಹೊರೆಯವರು ಮಂದಿ ನೆರೆದು ಶವವನ್ನು ಸ್ಮಶಾನಕ್ಕೆ ಬಿಳ್ಕೊಟ್ಟರು.

ವಿದೇಶ.

ನೆಟಾಲಿನಲ್ಲಿ ಹಿಂದೀಯರ ವಿದ್ಯಾಭ್ಯಾಸಕ್ಕಾಗಿ 66,345 ಪವನುಗಳು ಮಂಜೂರಾಯಿತು. ಅಲ್ಲಿ ಇದೇ ದೊಡ್ಡ ಸಂಖ್ಯೆಯೆನಿಸಿತು,—ಈ ವರ್ಷ.

ಲಂಕಾಶಯರಿನ ನೇಕಾರರ ಸಂಬಳವನ್ನು ಕಡಿಯಲು ಪುನಃ ಹಂಚಿಕೆಯಾಗುತ್ತದೆ. ೧½ ಲಕ್ಷ ಕೂಲಿಗಾರರು ಕೋಪದಿಂದ ಮುಷ್ಕರಕ್ಕೆ ಪುನಃ ಸಿದ್ಧರಾಗಿದ್ದಾರೆ.

ಕುಮಾರಿ ಬೀನಾ ಅಡ್ಡಿ ಎಂಬ ವಂಗ ಕುಮಾರಿಯು ಯುರೋಪಿಗೆ ಹೋಗಿ ಹಿಂದೀ ಗಾಯನ ಕಲೆಯನ್ನು ಅಲ್ಲಿ ಹರಡುತ್ತಿರುವಳು. ಎಲ್ಲರೂ ಅಡ್ಡಿ ಇಲ್ಲದೆ ಹಿಂದೀ ಹಾಡುಗಳ ಮರುಳರಂತೆ!

'ಫೋರ್ಜರಿ' ಮಾಡುವವರಿಗೆ ಇನ್ನು ಸುಖವಿಲ್ಲ; ಮೊಸದ ಮೂ ಅಳಿಸಿದ ಮೇಲೂ ಅದರ ಕುರುಹುಗಳನ್ನು ಕಂಡು ಹಿಡಿಯುವಂಥ 'ಅಲ್ಟ್ರಾವೈಲೆಟ್ ರೇಸ್' ಎಂಬ ವಿದ್ಯುತ್ ಕಿರಣಗಳು ಪರೀಕ್ಷಾರ್ಥವಾಗಿ ಪ್ರಯೋಗಿಸಲ್ಪಟ್ಟು, ಇಂಥ ತಕ್ಷೀರುಗಳನ್ನ ಕಂಡು ಹಿಡಿಯುವುದರಲ್ಲಿ ಬಹಳ ಪ್ರಯೋಜನಕಾರಿ ಎಂದು ಕಂಡು ಬಂದಿದೆ.

ಬರ್ಮಾವು ಸ್ವಾತಂತ್ರ್ಯವನ್ನು ಬಿಹಾರದಿಂದ ಪ್ರತ್ಯೇಕಿಸಬೇಕೆಂದು ಆ ಬಗ್ಗೆ ನಿಯುಕ್ತವಾದ ಕಮಿಟಿಯ ಶಿಫಾರಸು! ಪೃಥಕ್ಕರಿಸಿದಾಗ, ಇದು 33,000 ಚದರ ಮೈಲುಗಳ; 82,77,000 ಜನಸಂಖ್ಯೆಯ, 13,758 ಲಕ್ಷ ರೂ ವರಮಾನದ ಚಿಕ್ಕ ರಾಜ್ಯವಾಗುವುದಂತೆ! ಆಡಳಿತದ ಕಷ್ಟಗಳೂ ಕಡಿಮೆಯಾಗುವುವಂತೆ. ವಾರ್ಷಿಕ ನಷ್ಟವು 50 ಲಕ್ಷವಾಗುವುದಂತಿದೆ.

ಹಿಂದೀ ವಸ್ತುಗಳನ್ನೇ ಕೊಳ್ಳಿ.

(2ನೇ ಪುಟದಿಂದ ಮುಂದುವರಿದದ್ದು.)

ನೀವು ವಿವಾಹ ಮಾಡುವ ಮನುಷ್ಯರೋ? ನೀವು ಬಹಳ ಸಹಾಯ ಮಾಡಬಹುದು. ನಿಮ್ಮ ಮನೆಯಲ್ಲಿ ಸ್ವದೇಶೀ ವಸ್ತುಗಳನ್ನು ಕೆಲಸಿಸಿ, ನೆರೆಹೊರೆಯವರನ್ನು ಕರೆದು, ತೋರಿಸಿ ವಿಚಾರಿಸಿಯೂ ಸ್ವದೇಶೀ ಧರ್ಮವನ್ನು ಹರಡಲು ಮಹಿಳೆಯರಿಗೆ ತುಂಬಾ ಶಕ್ತಿ ಇದೆ.

ನೀವು ಉಪಾಧ್ಯಾಯರೋ? ನಿಮ್ಮ ಜವಾಬ್ದಾರಿ ದೊಡ್ಡದು. ಸ್ವದೇಶೀ ವಸ್ತುಗಳನ್ನು ಪ್ರೀತಿಸಿ ವಿದ್ಯಾರ್ಥಿಗಳಿಗೆ ಮಾದರಿಯಾಗಿರಿ. ನಿಮ್ಮ ಮಾದರಿಯು ವಿದ್ಯಾರ್ಥಿಗಳ ಹೃದಯ ಮನಸ್ಸಿಗೆ ಚೆನ್ನಾಗಿ ಅಂಟುತ್ತದೆ.

ನೀವು ಕೆಲಸಗಾರರೋ? ನಿಮಗೆ ಇರುವ ಅಲ್ಪ ಉತ್ಪತ್ತಿಯಿಂದ ಅನಾವಶ್ಯ ಮಾಡಲು ಅನುಕೂಲವಿಲ್ಲ. ನಿಮಗೆ ಅವಶ್ಯವಿರುವುದು ಅಷ್ಟು ಬಟ್ಟೆ, ಏನಾದರೆ ಕೊಂಡರೆ ಇಲ್ಲಿ ಸ್ವದೇಶೀ ವಸ್ತುಗಳನ್ನೇ ಕೊಳ್ಳಬಹುದು. ಅವರ ಕುಟುಂಬವನ್ನು ಬಿಟ್ಟು ಹಣ ಉಳಿಸಬೇಕು.

ನೀವು ಪಂಚಾಯಿತಿ ಯಾ ಜಾತಿ ಸಂಘದ ಸದಸ್ಯರೋ? ಮದುವೆ ಮುಂಜಿ ಮುಂತಾದ ಶುಭ ಕಾರ್ಯಗಳಲ್ಲೂ ಮತ್ತು ಅಶುಭ ಕಾರ್ಯಗಳಲ್ಲೂ ಸ್ವದೇಶೀ ವಸ್ತುಗಳನ್ನೇ ಕೊಳ್ಳುವಂತೆ ನೀವು ಬೋಧಿಸಬಹುದು. ಇಂಥಾ ಕಾರ್ಯಗಳಿಗೆ ಹಾವಿರಾರು ರೂಪಾಯಿ ಖರ್ಚು ಮಾಡುತ್ತಾರೆ. ಅಂಥಾ ಹಣವನ್ನು ದೇಶದಲ್ಲೇ ಉಳಿಯುವಂತೆ ಮಾಡುವುದು ನಿಮ್ಮ ಕರ್ತವ್ಯ.

ನಿಮ್ಮಲ್ಲಿ ಹಣವಿದೆಯೋ? ಅದನ್ನು ನಿಮ್ಮ ಊರಿನಲ್ಲಿ ಒಂದು ಸ್ವದೇಶಿ ಅಂಗಡಿಯನ್ನು ತೆರೆಯಲು ಉಪಯೋಗಿಸುವುದು ಅತ್ಯುತ್ತಮ ದಾರಿ. ಜೋಡಿಯವರೊಂದಿಗೆ ಸೇರಿ ಒಂದು ಸ್ವದೇಶಿ ಪ್ರದರ್ಶನವನ್ನು ಏರ್ಪಡಿಸಿ. ನಿಮ್ಮೂರಿನ ಸಮೀಪ ನಡೆಯುವ ಹಬ್ಬ, ಜಾತ್ರೆಗಳಿಗೆ ಸ್ವದೇಶಿ ವಸ್ತುಗಳನ್ನು ತೆಗೆದುಕೊಂಡು ಹೋಗಿ ನೂರು ಅಂಥಾ ಹಬ್ಬ ಜಾತ್ರೆಗಳನ್ನು ಸ್ವದೇಶಿ ದೇವಾಲಯಗಳಾಗಿ ಮಾಡಿ.

ಸ್ವದೇಶೀ ಧರ್ಮವು ಬೋಧನೆಗಿಂತ ಹೆಚ್ಚಾಗಿ ಮಾದರಿಯಿಂದಲೇ ಹರಡುವುದು ಹೆಚ್ಚು. ನೀವು ಬಡವರಾದರೆ ನಿಮ್ಮಿಂದ ದೇಶ ಸೇವೆ ಏನೂ ಆಗುವುದಿಲ್ಲವೆಂತ ಯೋಚಿಸಬೇಡಿ. ನೀವು ಸ್ವದೇಶೀ ಜೀವನವನ್ನೇ ಪ್ರೀತಿಸಿ ಸ್ವದೇಶೀಯನ್ನೇ ಹಿಡಿ ಎನ್ನಲ್ಲೇ ತುಂಬಾ ಮತ್ತು ಮೌನವಾದ ಕೆಲಸ ಮಾಡಬಹುದು. ಲಕ್ಷಾಂತರ ಜನರು ಈ ಕೆಲಸ ಮಾಡಬಹುದು. ಲಕ್ಷಾಂತರ ಜನರಿಗೆ ಇದರಿಂದ ಘಾಯಿದೆ ಕರವಾದ ಕೆಲಸ ದೊರೆಯುತ್ತದೆ. ರಾಷ್ಟ್ರವೆಲ್ಲಾ ಸ್ವದೇಶಿ ಹಸುತಿಂತಾದರೆ ಆರ್ಥಿಕ ಸ್ವರಾಜ್ಯವೇ ಆಯಿತು.

ಹಿಂದೀ ವಸ್ತುಗಳನ್ನೇ ಧರಿಸಿ, ಹಿಂದೂ ವಸ್ತುಗಳನ್ನೇ ಕೊಳ್ಳಿ, ಹಿಂದೀ ಗುಣವನ್ನೇ ಪ್ರೀತಿಸಿರಿ.

'ಮರಾಠಾ'

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಕೊಡಗಿನ ಮುಂದಿನ ರಾಜಕೀಯ ಭವಿಷ್ಯತ್.

ನಮ್ಮ ದೇಶದ ಮುಂದಿನ ರಾಜಕೀಯ ಭವಿಷ್ಯವು ಹೇಗಿರಬೇಕೆಂಬ ವಿಷಯದಲ್ಲಿ ಅಭಿಪ್ರಾಯ ಕೊಡಬೇಕೆಂದು ಸರಕಾರವು ಈಗ ತಾನೇ ಹಲವು ಸಂಸ್ಥೆಗಳನ್ನು ಕೇಳಿಕೊಂಡಿದ್ದಾರೆಂದೂ ತಿಳಿಯುತ್ತೇವೆ. ಇದೇ ವಿಷಯದಲ್ಲಿ ಬಾತ್ಮಿದಾ

4. ಈ ಕೆಳಗಿನ ಸೊಸೈಟಿಗಳಿಗೆ ಸಾಲಗಳು ಮಂಜೂರಾದವು. (1) ಪೊನ್ನಂಪೇಟೆ ಸೊಸೈಟಿಗೆ ರೂ. 1000. (2) ಪೊನ್ನಂಪೇಟೆ ಸಲ್ಲೂರು ಸೊಸೈಟಿಗೆ 800, (3) ಹಾತೂರಿ ಸೊಸೈಟಿಗೆ ರೂ. 1000, (4) ಸಂತಳ್ಳಿ ಕೊಡವೂರ ಲಿಂಗೇಶ್ವರ ಸೊಸೈಟಿಗೆ ರೂ. 700, (5) ಸೋಮವಾರಪೇಟೆ ಟವುನ್ ಸೊಸೈಟಿಗೆ 4000, (6) ನೇಗಳ್ಳಿ ಕರ್ಕಳ್ಳಿ ಸೊಸೈಟಿಗೆ ರೂ. 1500, (7) ಕಿರಗಂದೂರು ಸೊಸೈಟಿಗೆ ರೂ. 500, (8) ಕಾರ್ಯಪಟ್ಟಳ್ಳಿ ಸೊಸೈಟಿಗೆ ರೂ. 800 (9) ಗಾಳಿಹಳ್ಳಿ ಸೊಸೈಟಿಗೆ ರೂ. 800, (10) ಬೆಸಗೂರು ಸೊಸೈಟಿಗೆ ರೂ. 1000, (11) ಚಿಕ್ಕಮಂಡೂರು ಸೊಸೈಟಿಗೆ ರೂ. 1000, (12) ... ಸೊಸೈಟಿಗೆ ರೂ. 1000, (13) ... ಸೊಸೈಟಿಗೆ ರೂ. 1000. (14) ಕುಪ್ಪಂಡ ಕುಟುಂಬದ ಸೊಸೈಟಿಗೆ ರೂ. 500, (15) ಅಮ್ಮತ್ತಿ ಸೊಸೈಟಿಗೆ ರೂ. 400, (16) ಮತ್ತಂದೂರು ಸೊಸೈಟಿಗೆ ರೂ. 600, (17) ಕಾಫಿ ಪ್ಲಾಂಟರುಗಳ ಸೊಸೈಟಿಗೆ ರೂ. 15000, ಮತ್ತು (18) ಬೆಟ್ಟಗೇರಿ ಸೊಸೈಟಿಗೆ ರೂ. 300.

5. ಸೋಮವಾರಪೇಟೆ ಟಿ ಸೆಟ್ಲರ್ಸ್, ಪೊನ್ನಂಪೇಟೆ ಟವುನ್ ಸೊಸೈಟಿ ಮತ್ತು ಈಚೂರು ಐಮ್ಮಪ್ಪ ಸೊಸೈಟಿಗೆ ಕಾರಣಾಂತರಗಳಿಂದ ಸಾಲ ಮಂಜೂರಾಗಲಿಲ್ಲ.

6. ಬ್ಯಾಂಕಿಗೆ ಆವಶ್ಯವಿರುವ ಇನ್ನೊಂದು ಖಜಾನೆ ಪೆಟ್ಟಿಗೆಯ ವಿಷಯ ಇನ್ನು ಬೇರೆ ಕಂಪೆನಿಗಳಿಗೆ ಬರೆದು ಆಲೋಚಿಸಬೇಕಾಗಿ ತೀರ್ಮಾನವಾಯಿತು.

ಮಡಿಕೇರಿ,
ತಾ. 28—5—32.

ಪಿ. ದೇವಯ್ಯ
(ಅಧ್ಯಕ್ಷರು.)

ಕೊಡಗಿನ ಅಂಜುಮನ್ ಇತಿಹಾದ ಇಸ್ಲಾಮಿಯ ಸಂಗದ ವಾರ್ಷಿಕ ಸಮ್ಮೇಳನ.

ಕೊಡಗಿನ ಮಹಮ್ಮದೀಯ ಸಂಗದ ವಾರ್ಷಿಕ ಸಮ್ಮೇಳನವು ಮೇ ತಾ. 24ರಲ್ಲು ವೀರಾಜಪೇಟೆಯಲ್ಲಿ ವೆಲ್ಕಂ ಸಿನೇಮಾ ಹಾಲ್‌ನಲ್ಲಿ ಮದ್ರಾಸಿನ ಆರ್ಬಿಕ್ ಕಾಲೇಜಿನ ಪ್ರಿನ್ಸಿಪಲರಾದ ಅಫಜುಲ್ ಉಲೇಮ ಮೌಲ್ವಿ ಸೈಯದ್ ವಹಬ್ ಸಾಹೇಬ್ ಬಿಕಾರಿ ಯಂ. ಎ. ಎಲ್. ಟಿ. ಯಂ. ಆರ್. ಎ. ಯಸ್. ರವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ನಡೆಯಿತು. ಅನೇಕ ಕೊಡಗು ಕೊಡಗೇತರ ಮಹನೀಯರೂ, ಸರಕಾರೀ ಉದ್ಯೋಗಸ್ಥರೂ ನೆರೆದಿದ್ದರು.

ರಿಸೆಪ್ಶನ್ ಕಮಿಟಿಯ ಚೇರ್ ಮೇನರು ಆಗಂತುಕರಿಗೆ ಸ್ವಾಗತವನ್ನಿತ್ತ ನಂತರ ಅಧ್ಯಕ್ಷರು ತಮ್ಮ ಭಾಷಣವನ್ನು ಇಂಗ್ಲಿಷಿನಲ್ಲಿ ಮಾಡಲುದ್ಯುಕ್ತರಾದರು. ಅವರು ಹೇಳಿದ್ದೇನಂದರೆ:—ಸೋಮವಾರು ವರ್ಷಗಳಿಂದ ಈಗಿನ ಇಂಡಿಯಾದ ರಾಜಕೀಯ ಪರಿಸ್ಥಿತಿಯಲ್ಲಿ ಉನ್ನತ ಸ್ಥಿತಿಯನ್ನು ಪಡೆದು ಅದನ್ನು ಪರಿಹರಿಸಲು ಈಗ ಅಸಾಧ್ಯವಾಗಿದೆ. ಅನೇಕ ಕಡೆಗಳಲ್ಲಿ ಹಿಂದೂ ಮುಸ್ಲಿಂ ಎಂಬ ಪಂಗಡ ಮಾಡಿಕೊಂಡು ಹೊಡೆದಾಡಿಕೊಳ್ಳುತ್ತಿರುವರು. ಇದಕ್ಕೆ ಈಗಿನ ಬೊಂಬಾಯಿಯ ಹಿಂದೂ ಮುಸ್ಲಿಮರ ಜಗಳವೇ ಸಾಕ್ಷಿಯಾಗಿದೆ. ... ಹಿಂದೂಸ್ಥಾನದ ಚರಿತ್ರೆಯನ್ನು ಶೋಧಿಸಿದರೆ ಧರ್ಮಕಲಹವು ... ರಾಜವಾಗಿ ಸಿಗುತ್ತದೆ. ಪುರಾತನ ಕಾಲದ ಹಿಂದೂ ... ಯಲ್ಲಿ ಆದ ಕಲಹಗಳು ನಿಜವಾಗಲೀ, ಮುಸ್ಲಿಂಗಳೀ ಅದರ ಸಂಖ್ಯೆಯ ಮೇಲೆ ಈಗಲೂ ಒಬ್ಬರ ಮೇಲೊಬ್ಬರಿಗೆ ದ್ವೇಷವೂ, ಅಪ್ರೀತಿಯೂ ಇದ್ದೇ ಇರುತ್ತದೆ. ಚರಿತ್ರೆಯಲ್ಲಿ ಅವನು ಔರಂಗಜೇಬನು ಅತಿ ಕ್ರೂರನೆಂದು ವಿವರಿಸಿದ್ದರೂ ಅವನು ಅಷ್ಟು ದುಷ್ಟನಾಗಿರಲಿಲ್ಲವೆಂದು ಖ್ಯಾತಿಯ ಜದುನಾಥ್ ಸರ್ಕಾರರವರು ಬರೆದ ಚರಿತ್ರೆಯಿಂದ ವಿಶದವಾಗುತ್ತದೆ. ಔರಂಗಜೇಬನು ಕಾಶಿಯಲ್ಲಿಯು ಒಂದು ದೊಡ್ಡ ದೇವಸ್ಥಾನವನ್ನು ಕಟ್ಟಿಸಿ ಅದರ ಉದ್ಧಾರಕ್ಕಾಗಿ ಬೇಕಾದಷ್ಟು ದ್ರವ್ಯವನ್ನು ಜಹಗೀರು ಕೊಟ್ಟಿದ್ದನ್ನು ಓದಿದರೆ ಅವನಲ್ಲಿ ಜಾತಿ ವೈಷಮ್ಯಗಳು ಇರಲಿಲ್ಲವೆಂದು ವ್ಯಕ್ತಗೊಳ್ಳುತ್ತವೆ. ಅವನು ಕೆಲವು ದೇವಸ್ಥಾನಗಳನ್ನು ಕೆಡವಿದನೆಂಬ ಮಾತ್ರಕ್ಕೆ ಅವನು ಹಿಂದುಗಳ ವೈರಿ ಎಂದು ತಿಳಿಯಲಾಗದು. ಸ್ವಲ್ಪ ದಿನಗಳ ಹಿಂದೆ ಹೈದರಾಬಾದಿನಲ್ಲಿ ನಡೆದ ಗಲಭೆಯೇ ಉದಾಹರಣೆಯಾಗಿದೆ. ಅಂಥಾ ರಾಜಕೀಯ ಕಾರಣಗಳೇ ಬೇರೆ ... ಜನರನ್ನು ಹಾಗೆ ತಿಳಕೊಳ್ಳಲು ಪ್ರೇರೇಪಿಸಿರಬಹುದು. ... ಕ್ರಿಯಲ್ಲಿ ಓದಿದ ಮಾತ್ರಕ್ಕೆ ಒಪ್ಪಿಕೊಂಡನೆಂಬುದು ವೈಷ ... ಅದ್ದರಿಂದ ಎಲ್ಲರೂ ಇದನ್ನು ಕಟ್ಟಿಕೊಳ್ಳಕೂಡದು ... ವಿಷಯವಾಗಿ ಬಹುವಾಗಿ ಆಲೋಚಿಸಿ ಒಬ್ಬರೊಡನೊಬ್ಬರು ಯಾವ ವಿಧವಾದ ವೈಮನಸ್ಯವನ್ನು ಇಡಕೂಡದೆಂದು ಹೇಳಿಕೊಂಡರು.

ಈಗಿನ ರಾಜಕೀಯ ಪರಿಸ್ಥಿತಿಯನ್ನು ಪರಿಶೀಲಿಸಿದರೆ ಸ... ದ ಸೋಮವಾರು ವರ್ತಮಾನದ ಈ ಕಠಿಣತ್ವಕ್ಕೆ ಕೆಲ... ಹೊಣೆಗಾರರೇ ಜವಾಬ್ದಾರರು. ಹಿಂದೂ ಮುಸ್ಲಿಮರು ... ನೂರಾರು ವರ್ಷಗಳಿಂದಲೂ ಹಿಂದೂಸ್ಥಾನದಲ್ಲಿದ್ದರೂ ... ಸ್ನೇಹಭಾವದಿಂದಿರದಿರುವುದು ತುಂಬಾ ವಿಷಾದಕರ. ಜಾತಿ ವೈಷಮ್ಯವು ಆಳಿಸಿಹೋದ ಹೊರತು ಸ್ವರಾಜ್ಯ ಸಿಕ್ಕಿದರೂ ಅದರಿಂದ ಯಾವ ಪ್ರಯೋಜನವೂ ಉಂಟಾಗಲಾರದು. ಅದ್ದರಿಂದ ಹಿಂದೂ ಮುಸ್ಲಿಮರು ತಮ್ಮ ತಮ್ಮ ತಾರತಮ್ಯವನ್ನು ಗಣಿಸದೆ ಒಳ್ಳೆಯ ಒಮ್ಮನಸಿನಿಂದ ಹಿಂದೂ ದೇಶದ ಸ್ವರಾಜ್ಯಕ್ಕೆ ಹಾರೈಸಬೇಕೆಂದು ಬೇಡಿಕೊಂಡರು.

ಆಮೇರಿಕದಲ್ಲಿ 'ಇಸ್ಲಾಂ' ಮತವನ್ನು ವಿವರಿಸಿ ಹೇಳಿದರು. ಇಸ್ಲಾಮಿಯರು ಬರೆಯುವರಾದರೂ ಅವರನ್ನು ಕ್ರೂರಿಗಳೆಂದು ಅನೇಕ ಗ್ರಂಥಕರ್ತರು ಬರೆಯುತ್ತಿರುವರು. ಅದ್ದರಿಂದ 'ಇಸ್ಲಾಂ' ಎಂಥಾದ್ದೆಂದು ತಿಳಿಯಲು 'Spirit of Islam' ಎಂಬ ಪುಸ್ತಕವನ್ನು ಓದ ಬೇಕೆಂದು ಬೋಧಿಸಿದರು. ... ಇಸ್ಲಾಮಿನ ... ತತ್ವ ... ಇಂಥ ಸಂಘಟನೆ ... ಭ್ರಾತೃಭಾವದಿಂದ ಕಲೆತ ನಡೆದರೇನೇ ಮುಕ್ತಿ ... ಉದ್ಧಾರವಾಗುವದು.

ಅಧ್ಯಕ್ಷರ ಈ ಭಾಷಣವಾದ ತರುವಾಯ ... ಹೀರೆಸ್ ಸಾಹೇಬ್ ಯಂ. ಎ. ... ಎಲ್. ಟಿ. ... ಡಿ. ಸ್ಕೂಲ್ ಇನ್ಸ್‌ಪೆಕ್ಟರವರು ... ಮುಸ್ಲಿಮರನ್ನು ಶಿಕ್ಷಿತರಾಗುವಂತೆ ಕೇಳಿಕೊಂಡರು.

ಮಧ್ಯಾಹ್ನದ ವೇಳೆ ನಡೆದ ಮೀಟಿಂಗಿನಲ್ಲಿ ಅಧ್ಯಕ್ಷರು ಉರ್ದುವಿನಲ್ಲಿ ಭಾಷಣ ಮಾಡಿದನಂತರ ಈ ಕೆಳಗಿನ ಠರಾವುಗಳು ಪಾಸಾದವು.

1. ಈ ಸಂಘವು ಸರ್ ಮಹ್ಮದ್ ಶಾಫಿಯವರ ಅಕಾಲ ಮರಣಕ್ಕೂ ಮತ್ತು ಮೌಲಾನಾ ... ಮರಣಕ್ಕೂ ದುಃಖವನ್ನು ಸೂಚಿಸುತ್ತದೆ.

2. ಮೌಲಾನ ಮಹಮ್ಮದ್ ... ಹೋಬರವರ ಮರಣಕ್ಕೂ ವ್ಯಸನವನ್ನು ಸೂಚಿಸುತ್ತದೆ.

3. ಕೊಡಗಿಗೆ ಪ್ರತ್ಯೇಕ ಸ್ವರಾಜ್ಯವನ್ನು ಕೊಡಬೇಕೆಂದೂ ಮತ್ತು ... ಕೊಡಗಿಗೆ ಪ್ರತ್ಯೇಕ ಅಥವಾ ಜಾಯಿಂಟ್ ಇಲೆಕ್ಟೋರೇಟ್ ... ಜನ್ಮ ... ಯಾವ ವ್ಯತ್ಯಾಸವು ... ದೆಯೋ, ಹಾಗೆ ಕೊಡಗಿಗೆ ಸ್ವತಂತ್ರ ದೊರಕದ ಪಕ್ಷದಲ್ಲಿ ಮದ್ರಾಸಿನ ಒಡನೆ ... ವಾಗಿ ಮದ್ರಾಸ್ ಅಧಿಪತ್ಯಕ್ಕೆ ಸೇರಬೇಕೆಂದು ಠರಾವು ಪಾಸಾಯಿತು.

4. ಮುದ್ರಾಸಿಗೆ ಗವರ್ನಮೆಂಟಿನಿಂದ ಟ್ರೈನಿಂಗಿಗೆ ಕಳುಹಿಸಲ್ಪಟ್ಟು ತಮ್ಮ ಶಿಕ್ಷಣವನ್ನು ಮುಗಿಸಿ ಬಂದು ಈಗ ಅವರಿಗೆ ನೌಕರಿ ಕೊಟ್ಟದ್ದಕ್ಕೆ ವ್ಯಸನ ಸೂಚಿಸುತ್ತದೆ. ಇವರಲ್ಲಿ ಕೆಲವರು ಮೊದಲು ಸರ್ವಿಸಿನಲ್ಲಿದ್ದವರು. ಅದುದರಿಂದ ಗವರ್ನಮೆಂಟು ದಯಮಾಡಿ ಯಾವ ಶಾಲೆಯಲ್ಲಾದರೂ ಸ್ಥಳ ಕೊಡಬೇಕೆಂದು ಕೇಳಿಕೊಳ್ಳಲಾಯಿತು.

5. ಮಡಿಕೇರಿ, ಪೊನ್ನಂಪೇಟೆ, ಸಾಪೋಕ್ಲು ... ಪೇಟೆ ಮತ್ತು ಕೊಡ್ಲಿಪೇಟೆಗಳಿಗೆ ಒಡ್ಡೊಬ್ಬ ಉರ್ದು ಟೀಚರನ್ನು ನೇಮಿಸುವಂತೆ ಕೇಳಿಕೊಳ್ಳಲಾಯಿತು.

6. ಮಡಿಕೇರಿ ಮುನ್ಸಿಪಾಲಿಟಿಯವರು ಮುಸ್ಲಿಂ ಹುಡುಗರ ವಿದ್ಯಾಭ್ಯಾಸಕ್ಕೆ ವರ್ಷಕ್ಕೆ 450 ಸಹಾಯಮಾಡುತ್ತಿರುವುದಕ್ಕೆ ಸಂತೋಷವನ್ನೂ, ವೀರಾಜಪೇಟೆ ಮುನ್ಸಿಪಾಲಿಟಿಯವರೇ ಯಾವ ಸಹಾಯವನ್ನೂ ಮಾಡದ್ದರಿಂದ ದುಃಖವನ್ನೂ ಸೂಚಿಸುತ್ತದೆ.

7. ಸ್ಟಾಂಡರ್ಡನ್ನು 7ರಿಂದ 10 ವರೆಗೂ ಮತ್ತು 3ರಿಂದ 5 ರ ವರೆಗೂ ಎರಡುವರೆ ಮೂರು ಹುಡುಗರ ಸಂಖ್ಯೆಯನ್ನು 6 ಮತ್ತು 17ರ ಬದಲು 10 ಮತ್ತು 20ಕ್ಕೆ ಏರಿಸಬೇಕಾದುದನ್ನು ಕೇಳುವಂತೆ ಠರಾವು ಪಾಸಾಯಿತು.

8. ತಾ 26ರಲ್ಲು ಮಡಿಕೇರಿಯಲ್ಲಿ ಚೀಫ್ ಕಮೀಷನರವರಿಗೆ ಡೆಪ್ಯುಟೇಶನ್ ಕಳುಹಿಸಬೇಕೆಂದೂ ಮತ್ತು ಅದರ ಮೆಂಬರುಗಳು ಪ್ರಾಕ್ ಅಫಜುಲ್ ಉಲೇಮಾ ಮೌಲಾನ ಸೈಯದ್ ... ಸಾಹೇಬ್ ಬಿಕಾರಿ ಯಂ. ಎ. ಎಲ್. ಟಿ. ಎಂ. ಆರ್. ಎ. ಯಸ್., ಎ. ಎಂ. ... ಸಾಹೇಬ್, ಅಬ್ದುಲ್ ರಹಿಮಾನ್ ಖಾನ್ ಸಾಹೇಬ್, ಸೈಯದ್ ... ಸಾಹೇಬ, ಮಹಮ್ಮದ್ ಹುಸೈನ್ ಸಾಹೇಬ್ ಮತ್ತು ಅಬ್ದುಲ್ ಮಜೀದ ಖಾನ್ ಸಾಹೇಬರುಗಳು ಎಂದು ತೀರ್ಮಾನಿಸಲಾಯಿತು.

ಗ್ರೇಂಡ್ ಕ್ಲೀಯರೇನ್ಸ್ ಸೇಲ್.

ಸುಗಂಧ ಪುಷ್ಪಗಳಿಂದ ತಯಾರಿಸಿದ ಅಟೊ ನೋಬಿಯೆ ಎಸೆನ್ಸ್.

3 ವಾಚುಗಳೊಡನೆ 61 ಸಾಮಾನುಗಳು ಪುಕ್ಕಟೆಯಾಗಿ ರೂ. 5—0—0.



6 ಬಾಟ್ಲಿ ಒಮ್ಮೆಲೆ ತೆಗೆದುಕೊಳ್ಳುವವರಿಗೆ ಒಂದು ರೋಲ್ಡ್ ಗೋಲ್ಡಿನ ರಿಸ್ಟ್ ವಾಚು. ಒಂದು ಜರ್ಮನ್ 'ಟಿ' ಟೈಂಪೀಸು, (5 ವರ್ಷದ ಖಾತರಿ) ಮತ್ತು ಒಂದು ಸಿಲ್ವರ್ ಪಾಕೆಟು ವಾಚು. ಇವಲ್ಲದೆ 60 ಇತರ ಸಾಮಾನುಗಳು ಒಂದು ಪಾರ್ಸಲನ್ನು ಹೀಗೆ ಕಳುಹಿಸುವಾಗ ದೊರೆಯುವವು. ಪ್ಯಾಕಿಂಗ್ ಮತ್ತು ಪೋಸ್ಟೇಜು ಎಕ್ಸ್‌ಟ್ರಾ.

David & Co. Post Box No. 11403.
Calcutta.
3–2

ಬಾಲಾರ್ಕ ಮಧು

ಬಾಲಾರ್ಕ ಮಧುವ ಕ್ಕಳಿಗೆ ... ವೃದ್ಧರಿಗೆ ಶಕ್ತಿಯೂ ಆರೋಗ್ಯವೂ ಹೆಚ್ಚುವುದು. ಇದು ಮಧುರವಾಗಿದೆ. ಬೆಲೆ ಶೀಸೆ 1ಕ್ಕೆ 0—12—0 ಟಿ. ಖ. 0—12—0.



(Spleen Lever enlargement) ಎಂಬ ಮಕ್ಕಳ ಭಯಂಕರ ಗಡ್ಡೆರೋಗ—ಪ್ಲೀಹ—ಪಿತ್ತಕೋಶದ ಗಡ್ಡೆಗೆ ಚಕ್ರಬಿಂದು. ಚಕ್ರಕ್ಷಾರ—ಚಕ್ರಚೂರ್ಣ—ಚಕ್ರ ಪ್ರಭಾ—ಈ ನಾಲ್ಕು ಮಹಾಔಷಧಗಳಿವೆ. ಸಾವಿರಾರು ಮಕ್ಕಳ ಪ್ರಾಣವನ್ನು ಉಳಿಸಿದೆ. ನಾಲ್ಕು ಔಷಧಗಳು ಸೇರಿ 1 ತಿಂಗಳ ಔಷಧದ ಬೆಲೆ 3—0—0, ಟಿ. ಖ. 0—8—0. ಏಜೆಂಟರು ಬೇಕಾಗಿರುವರು.

ಪ. ಎ. ಮುನ್. ಶ್ರೀನಿವಾಸರಾವ್,
ವೈ. ವಿ. ಆಯುರ್ವೇದ ಭಿಷಕ್,

ಬ್ರಾಂಚ್ ಆಫೀಸ್, ಉಡ್ಪಿ, S. K. | Spleen & Lever ಸ್ಪೆಶಲಿಸ್ಟ್. ಎಂ. ವಿ. ಪ್ರಸಾದಿಕ ಔಷಧಾಲಯ ಶಿವಮೊಗ್ಗ. (ಮೈಸೂರು ಸೀಮೆ)

52-20

ಎಂಪೈರ್ ಆಫ್ ಇಂಡಿಯಾ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
(ಸ್ಥಾಪನೆಯಾದದ್ದು 1897.)

ಹಿಂದೂಸ್ಥಾನದಲ್ಲಿ ಪ್ರಾಮುಖ್ಯವೂ ನಮ್ಮೆಯವೂ ಆದ ಈ ಕಂಪೆನಿಯಲ್ಲಿ ನೀವು ಜೀವ ವಿಮೆ ಮಾಡದಕ್ಕೆ ಇದೇ ತಕ್ಕ ಸಮಯ.

ಬೋನಸ್ ವರ್ಷ!
ಬೋನಸ್ ವರ್ಷ!!

ಸಾಹಸವಂತರಾದ ಏಜೆಂಟರು ಬೇಕಾಗಿದೆ.

ಹೆಡ್ ಆಫೀಸು:—
ಎಂಪೈರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್,
ಬೊಂಬಾಯಿ.

ಬ್ರಾಂಚ್ ಆಫೀಸು:—
152–3 ಕಮರ್ಷಿಯಲ್ ಸ್ಟ್ರೀಟ್,
ಬೆಂಗಳೂರು.

52–36

ಬ್ರಹ್ಮಚರ್ಯ.

(ಮಹಾತ್ಮ ಗಾಂಧಿಯವರ ಲೇಖನಿಯಿಂದ.)

ನನಗೆ ಮದುವೆಯಾದಾಗಿನಿಂದಲೂ ನಾನು ಏಕಪತ್ನೀವ್ರತಸ್ಥ. ನನ್ನ ಹೆಂಡತಿಯಲ್ಲಿ ನಾನು ಅನನ್ಯವಾದ ಪ್ರೀತಿಯನ್ನಿಟ್ಟಿದ್ದೆ. ದಕ್ಷಿಣ ಆಫ್ರಿಕದಲ್ಲಿ 'ನನ್ನ ಹೆಂಡತಿಯ ವಿಷಯದಲ್ಲಿಯೂ ಬ್ರಹ್ಮಚರ್ಯವನ್ನು ಯಾಕೆ ನಡೆಸಬಾರದು' ಎಂದುಕೊಂಡೆ. ನನಗೆ ಆ ಯೋಚನೆ ಹುಟ್ಟುವಂತೆ ಮಾಡಿದ್ದು ಅದು ಯಾವ ಸಂದರ್ಭವೋ ಅಥವಾ ಪುಸ್ತಕವೋ ಮರೆತು ಹೋಗಿದೆ. ಆದರೆ ಈ ವಿಷಯದಲ್ಲಿ ನನ್ನ ಒಲ್ಮೆ ನೆಡುವಂತೆ ಮಾಡಿದ್ದು ರಾಯಚಂದ್ರ ಭಾಯಿಯವರ ಬೋಧನೆ.

ಅವರೊಡನೆ ಒಂದು ಸಂಭಾಷಣೆ ನಡೆಯಿತು. ಅದು ಇನ್ನೂ ಚೆನ್ನಾಗಿ ಜ್ಞಾಪಕವಿದೆ. ಆಗ ನಾನು ಅವರಿಗೆ ಮಿ. ಗ್ಲಾಡ್‌ಸ್ಟನ್‌ರವರ ವಿಷಯದಲ್ಲಿ ಅವರ ಪತ್ನಿಯಿಟ್ಟಿದ್ದ ಪ್ರೀತಿಯನ್ನು ತಿಳಿಸಿದೆ. ಆಕೆಯು ಆತನು ಪಾರ್ಲಿಮೆಂಟ್ ಭವನದಲ್ಲಿದ್ದಾಗಲೂ ತಾನೇ ಟೀ ಮಾಡಿಕೊಡಬೇಕೆಂದು ಹಟಹಿಡಿದಳಂತೆ. ಈ ದಂಪತಿಗಳ ಜೀವನ ಚರಿತ್ರೆಯಲ್ಲಿ ಅದೊಂದು ನಿಯಮವಾಗಿ ಹೋಗಿದ್ದಿತು. ನಾನು ಇದನ್ನು ಆ ಕವಿವರ್ಯರಿಗೆ ತಿಳಿಸಿ ದಾಂಪತ್ಯ ಪ್ರೇಮದ ವಿಚಾರವಾಗಿ ವಿಶೇಷವಾಗಿ ಪ್ರಶಂಸಿಸಿದೆ. ಆಗ ಅವರು ನನಗೀ ಪ್ರಶ್ನೆ ಹಾಕಿದರು. 'ಇವೆರಡರಲ್ಲಿ ಯಾವುದು ಹೆಚ್ಚಿನದು: ಸತೀ ಗ್ಲಾಡ್‌ಸ್ಟನ್‌ರವರ ಪತ್ನಿ ಸಹಜವಾದ ಪತಿಪ್ರೇಮವೋ, ಅಥವಾ ಪತಿಪತ್ನಿಯರೆಂಬ ಭೇದವೊಂದೂ ಇಲ್ಲದೆ ಆಕೆಯ ಭಕ್ತಿಭಾವವೋ? ಒಂದು ವೇಳೆ ಆಕೆಯು ಆತನ ಒಡಹುಟ್ಟಿದವಳೋ, ಅಥವಾ ಶ್ರದ್ಧಾಪೂರ್ಣಳಾದ ಉಪಾಸಿಯೋ ಆಗಿದ್ದು ಆತನಲ್ಲಿ ಅದೇ ರೀತಿಯಾದ ಶ್ರದ್ಧೆಯನ್ನಿಟ್ಟಿದ್ದರೆ ನೀನೇನು ಹೇಳುತ್ತಿದ್ದೆ? ನಾವು ಅಂತಹ ಸಹೋದರಿಯರ ಅಥವಾ ಉಪಾಸಿಯರ ವಿಷಯ ಕೇಳಿಲ್ಲವೇ? ಒಂದು ವೇಳೆ ಅಂತಹ ಶ್ರದ್ಧೆಯು ಒಬ್ಬ ಜವಾನನಲ್ಲಿಯೇ ಇದ್ದಿತಾದರೆ ಆಗ ನೀನು ಇದೇ ರೀತಿಯಾದ, ಅಂದರೆ ಸತೀ ಗ್ಲಾಡ್‌ಸ್ಟನ್‌ರವರ ವಿಷಯದಲ್ಲಿರುವಂತೆ ಉತ್ಸಾಹವನ್ನು ತೋರುತ್ತಿದ್ದೆಯಾ? ಇವುಗಳನ್ನು ಆಲೋಚಿಸಿ ನೋಡು.'

ಈ ರಾಯಚಂದ್ ಭಾಯಿಯವರೂ ಮದುವೆಯಾಗಿದ್ದರು. ಆಗ ಅವರ ಮಾತುಗಳು ಸ್ವಲ್ಪ ಕಠೋರವಾಗಿದ್ದರೂ ನನ್ನ ಮನದಲ್ಲಿ ಸಂಪೂರ್ಣವಾಗಿ ನಾಟಿತು. ಜವಾ[illegible] ಅಥವಾ ಜವಾನನ ಶ್ರದ್ಧೆಯು ಪತ್ನಿಯ ಶ್ರದ್ಧೆಗಿಂತಲೂ ಸಾವಿರ ಪಾಲು ಹೆಚ್ಚಿನದು ಎನ್ನಿಸಿತು. ಹೆಂಡತಿಯು ಗಂಡನಲ್ಲಿ ಶ್ರದ್ಧಾಯುತಳಾಗಿರುವುದೇನೂ ಆಶ್ಚರ್ಯವೇನೂ ಇಲ್ಲ. ಅವರವರಿಗೆ ವಿಚ್ಛೇದವಾಗದ ಬಂಧನವಿದೆ. ಶ್ರದ್ಧೆಯು ಸ್ವಾಭಾವಿಕವಾದುದು. ಆದರೆ ಯಜಮಾನ ಸೇವಕನಲ್ಲಿ ಒಂದೇ ತೆರನಾದ ಶ್ರದ್ಧೆ ಹುಟ್ಟಲು ಅದಕ್ಕೆ ಪ್ರಯತ್ನ ಬೇಕು. ಈ ಕವಿವರ್ಯರು ಹೇಳಿದ ಅಂಶಗಳು ಬರುಬರುತ್ತ ನನ್ನಲ್ಲಿ ಬೇರೂರಲಾರಂಭಿಸಿದುವು.

ಈಗ ನನ್ನ ಹೆಂಡತಿಯ ವಿಚಾರದಲ್ಲಿ ನಾನು ಹೇಗಿರಬೇಕು? ಎಂದು ಆಲೋಚಿಸಿದೆ. ನನ್ನ ಹೆಂಡತಿಯನ್ನು ನನ್ನ ಕಾಮಸಾಮಗ್ರಿಯನ್ನಾಗಿ ಮಾತ್ರ ಇಟ್ಟುಕೊಂಡಿದ್ದರೆ ನಾನು ನಿಜವಾಗಿ ನಡೆದುಕೊಂಡಂತಾಯಿತೇನು? ಎಲ್ಲಿಯ ತನಕ ನಾನು ಕಾಮೇಚ್ಛೆಯನ್ನು ಪಡೆಯುತ್ತೇನೋ ಅಲ್ಲಿಯ ತನಕ ನನ್ನ ಪ್ರಮಾಣಿಕತನವು ನಿರರ್ಥಕವಾದುದೇ ಸರಿ. ನನ್ನ ಹೆಂಡತಿಯು ನನ್ನನ್ನೆಂದಿಗೂ ಕಾಮೇಚ್ಛಾ ಪ್ರೇರಕನನ್ನಾಗಿ ಮಾಡಿದವಳಲ್ಲವೆಂಬುದು ಸತ್ಯವಾದ ಮಾತು. ಆದಕಾರಣ ನಾನು ಬ್ರಹ್ಮಚರ್ಯ ವ್ರತೋಪಾಸಕನಾಗುವುದು ಅಷ್ಟು ಕಷ್ಟತರವಾದ ಕೆಲಸವಾಗಿರಲಿಲ್ಲ. ಆದರೆ ನಾನು ಮಾತ್ರ ಮನಸ್ಸು ಮಾಡಬೇಕಾಗಿತ್ತು ಅಷ್ಟೆ. ಅಡ್ಡಿಯಾಗಿದ್ದದ್ದು ನನ್ನ ಅದೃಢವಾಗಿದ್ದ ಮನಸ್ಸು, ನನ್ನ ಕಾಮೇಚ್ಛೆ.

ಈ ರೀತಿ ನಾನು ಮನಸ್ಸು ನಿರ್ಧಾರ ಮಾಡಿಕೊಂಡನಂತರವೂ ಎರಡು ಬಾರಿ ಜಾರಿ ಬಿದ್ದೆ. ಯಾಕೆಂದರೆ ನನ್ನಲ್ಲಿ ಹುಟ್ಟಿದ ಇಚ್ಛೆಯು ತುಚ್ಛವಾದುದಾಗಿರಲಿಲ್ಲ. ನನ್ನ ಮುಖ್ಯ ಕಾಮವು 'ಇನ್ನು ಮುಂದೆ ಮಕ್ಕಳಾಗಬಾರದು' ಎಂಬುದಾಗಿ ಮಾತ್ರವಿತ್ತು. ನಾನು ಇಂಗ್ಲೆಂಡಿನಲ್ಲಿದ್ದಾಗಲೇ ಸಂತತಿ ನಿರೋಧಕ ವಿಷಯವನ್ನೊಳಗೊಂಡ ಒಂದು ಪುಸ್ತಕವನ್ನು ಓದಿದ್ದೆ. .... ಮಕ್ಕಳು ಬೇಡವೆಂದು ನಾನು ಆತ್ಮಸಂಯಮನವನ್ನು ಪ್ರಾರಂಭಿಸಿದೆ. ಈ ಕೆಲಸದಲ್ಲಿ ಕೊನೆಗಾಣದಷ್ಟು ಕಷ್ಟವಿತ್ತು. ನಾವು ಬೇರೆ ಬೇರೆ ಹಾಸಿಗೆಗಳಲ್ಲಿ ಮಲಗಲು ಮೊದಲು ಮಾಡಿದೆವು. ಸಾಕಾಗಿ ಹೋಗುವ ತನಕ ಕೆಲಸ ಮಾಡಿ ಮಲಗಬೇಕೆಂದು ನಿರ್ಧರಿಸಿಕೊಂಡೆ. ಇವುಗಳೊಂದರಿಂದಲೂ ಅಷ್ಟು ಫಲ ಕಾಣಲಿಲ್ಲ. ಈ ರೀತಿ ಪ್ರಯತ್ನ ವಿಫಲವಾಗಿ ಕೊನೆಗೆ ಒಂದು ಗಟ್ಟಿ ಮನಸ್ಸು ಮಾಡಿದೆ. ಅದು 1906ರಲ್ಲಿ ಸತ್ಯಾಗ್ರಹ ಚಳವಳವು ಇನ್ನೂ ಮೊದಲಾಗಿರಲಿಲ್ಲ. ಅದು ಪ್ರಾರಂಭವಾಗುವುದೆಂದೂ ನಾನೆಣಿಸಿರಲಿಲ್ಲ. ಬೋಯರ್ ಯುದ್ಧವಾದ ಮೇಲೆ ನೇಟಾಲಿನಲ್ಲಿ ನಡೆದ ಜೂಲೂ ಕ್ರಾಂತಿಯು ಜರುಗಿದಾಗ ನಾನು ಜೋಹಾನ್ಸ್‌ಬರ್ಗ್‌ನಲ್ಲಿ ವಕೀಲ ಕೆಲಸ ಮಾಡುತ್ತಿದ್ದೆ. ಆಗ ನಾನು ನೇಟಾಲ್ ಸರ್ಕಾರದ ಪಕ್ಷವನ್ನೂ ವಹಿಸಬೇಕೆಂದು ನಿರ್ಧರಿಸಿದೆ. ಸರ್ಕಾರದವರೂ ಒಪ್ಪಿದರು. ಈ ಕೆಲಸ ನನ್ನನ್ನು ಆತ್ಮ—ಸಂಯಮದ ಕಡೆ ಗಮನಕೊಡುವಂತೆ ಮಾಡಿತು. ನಾನದನ್ನು ನನ್ನ ಸಹೋದ್ಯೋಗಿಗಳ ಸಂಗಡ ಆಲೋಚಿಸಿದೆ. ಸಂತಾನಾಭಿವೃದ್ಧಿಯೂ, ತತ್ಸಂಬಂಧವಾದ ಮಕ್ಕಳ ಪೋಷಣೆಯೂ ನನ್ನನ್ನು ನನ್ನ ಸಾರ್ವಜನಿಕ ಕಾರ್ಯ ವಿಮುಖರನ್ನಾಗಿ ಮಾಡುತ್ತವೆಂದು ನಾನು ತಿಳಿದೆ. ನನ್ನ ಸಂಸಾರವನ್ನು ಜೋಹನ್ಸ್‌ಬರ್ಗ್‌ನಲ್ಲಿ ನಿಲ್ಲಿಸಿ ನಾನು ಬೇರೆಯಾದ ವೇಳೆಯೇ ನಾನು ಕ್ರಾಂತಿಯ ಕಾಲದಲ್ಲಿ ಕೆಲಸ ಮಾಡಲು ಸಹಾಯಕಾರಿಯಾಗಬೇಕಾದರೆ ಎಂದು ತೀರ್ಮಾನಿಸಿದೆ. ಅಲ್ಲಿಂದ ಒಂದು ತಿಂಗಳೊಳಗಾಗಿ ನನ್ನ ಮನೆಯನ್ನು ಬಿಡಬೇಕಾಯಿತು. ಫೀನಿಕ್ಸ್‌ನಲ್ಲಿ ನನ್ನ ಮನೆಯವರೆಲ್ಲರನ್ನು ಬಿಟ್ಟು, ನಾನು ಸರ್ಕಾರಕ್ಕೆ ಸಹಾಯವಾಗಿ ಇಂಡಿಯನ್ ಅಂಬುಲೆನ್ಸಿನ ಮುಂದಾಳುತನವನ್ನೂ ವಹಿಸಿದೆ. ಆಗ ನನ್ನ ಮನಸ್ಸಿನಲ್ಲಿ ಹೊಳೆಯಿತು: ನನ್ನ ಜನಾಂಗದವರ ಸೇವೆ ಮಾಡಬೇಕಾದರೆ ನಾನು ಭಾರ್ಯಾಪುತ್ರರ ಹಂಬಲ ಬಿಟ್ಟು ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಬೇಕೆಂದುಕೊಂಡೆ.

ಈ ಕ್ರಾಂತಿಯು ಬಹಳ ಕಾಲ ನಡೆಯಲಿಲ್ಲ. ಕೇವಲ ಆರು ವಾರಗಳು ಮಾತ್ರ. ಈ ಅತ್ಯಲ್ಪ ಅವಧಿಯೊಳಗೆ ನನ್ನ ಜೀವಿತದಲ್ಲೊಂದು ಮಹತ್ತರವಾದ ಬದಲಾವಣೆಯಾಗಿ ಹೋಗಿತ್ತು. ಮನೋನಿಶ್ಚಯಗಳ ಗುರುತ್ವವು ಮೊದಲಿಗಿಂತ ಚೆನ್ನಾಗಿ ತಿಳಿದು ಬಂದಿತು. ಆ ಮನೋನಿಶ್ಚಯವು ನಿಜವಾದ ಸ್ವಾತಂತ್ರ್ಯದ ಬಾಗಿಲನ್ನು ಮುಚ್ಚುವುದಕ್ಕೆ ಬದಲಾಗಿ ತೆರೆಯಿತು. ಇದುವರೆಗೂ ಚಂಚಲ ಬುದ್ಧಿಯಿಂದ ನಾನು ಕೃತನಿಶ್ಚಯನಾಗಿರಲಿಲ್ಲ. ಅದುವರೆಗೂ ನನ್ನಲ್ಲಿ ನನಗೆ ನಂಬಿಕೆ ಇರಲಿಲ್ಲ. ದೇವರಲ್ಲಿ ಭಕ್ತಿ ಇರಲಿಲ್ಲ. ನಾನು ಅನುಮಾನ ತರಂಗಗಳ ಮಧ್ಯ ಸಿಕ್ಕಿ ನರಳುತ್ತಿದ್ದೆ.

ಆಗ ತಿಳಿದುಕೊಂಡೆ. ಮನುಷ್ಯನು ಮನೋನಿಶ್ಚಯಗಳನ್ನು ಮಾಡಿಕೊಳ್ಳದೆ ವಿಷಯಲಂಪಟನಾಗುತ್ತಾನೆಂದು. ಮನೋನಿಶ್ಚಯ ಮಾಡಿ ಅದರಂತೆ ನಡೆಯಲು ಮೊದಲು ಮಾಡಿದಾಗ ಲಂಪಟನಾಗಿದ್ದವನು ಏಕಪತ್ನಿವ್ರತಸ್ಥನಾಗುವ ರೀತಿ ನಾನು ಕಾಣಿಸಿಕೊಂಡೆ. ನಾನು ಪ್ರಯತ್ನಗಳಲ್ಲಿ ನಂಬಿಕೆ ಇಟ್ಟವನೆ. 'ಇನ್ನೂ ಮನೋನಿಶ್ಚಯಗಳೇಕೆ?' ಎಂದು ಹೇಳುವವರು ತಮ್ಮ ಅದೃಢತೆಯನ್ನು ತೋರ್ಪಡಿಸುತ್ತಾರೆ. ಯಾವುದನ್ನು ಬಿಡಬೇಕೆಂದು ಇರುತ್ತಾರೋ ಅದರ ಮೇಲೆಯೇ ತಮಗಿರುವ ಅಭಿಲಾಷೆಯನ್ನು ತೋರ್ಪಡಿಸುತ್ತಾರೆ. ಇಲ್ಲವಾದರೆ ಅಂತಿಮವಾದ ಮನೋನಿಶ್ಚಯ ಮಾಡಲು ತೊಂದರೆ ಏನಿರುತ್ತದೆ? ನನ್ನನ್ನು ಕಚ್ಚಲು ಬರುತ್ತಿರುವ ಒಂದು ಹಾವಿನಿಂದ ತಪ್ಪಿಸಿಕೊಂಡು ಓಡಿ ಹೋಗಬೇಕೆಂದು ಮನಸ್ಸು ಮಾಡಿದೆನಂತೆ ಕೊಳ್ಳಿ. ಆಗ ನಾನು ಅದರಿಂದ ಓಡಿಹೋಗಲು ಮಾತ್ರ ಪ್ರಯತ್ನ ಮಾಡದೆನೆಂದಲ್ಲ, ಯಾಕೆಂದರೆ ಬರಿಯ ಪ್ರಯತ್ನವೆಂದರೆ ಸಾವು. ಖಂಡಿತ ಬರಿಯ ಪ್ರಯತ್ನಗಳು ಅಜ್ಞಾನದ ಗುರುತು. ಆ ಹಾವು ನನ್ನನ್ನು ಕಚ್ಚುವುದು ಖಂಡಿತ. ಆದಕಾರಣ ಸುಮ್ಮನೆ ಪ್ರಯತ್ನ ಪಟ್ಟು, ಇನ್ನೇನು ಮಾಡುವುದೇನು ಎಂದು ಕೊಂಡರೆ ನಾವು ನಮ್ಮ ಕೆಲಸದ ಗುರುತ್ವವನ್ನು ಅರಿತುಕೊಂಡಂತಾಗಲಿಲ್ಲ. ವ್ಯಕ್ತಿ ಅನೇಕರಿಗೆ 'ನಾವು ಅನೇಕ ಮನೋನಿಶ್ಚಯ ಮಾಡಿದ್ದೆವು, ಹುಡುಕಿಕೊಳ್ಳೋಣ, ಮುಂದೆ ನಾವು ಅದನ್ನು ಸರಿಪಡಿಸಿಕೊಂಡು ಬರುತ್ತೇವೆಂಬುವುದರಲ್ಲಿ ಏನು ನಿಶ್ಚಯ?' ಎಂಬ ಅನುಮಾನ ಬರುತ್ತದೆ. ಈ ಅನುಮಾನ ಸಂಶಯದ ಅಂತ್ಯಕ್ಕೆ ಬರಲಿಲ್ಲವೆಂಬುದನ್ನು ತೋರಿಸುತ್ತದೆ. ಯಾವುದನ್ನು ತ್ಯಜಿಸಬೇಕು, ಯಾವುದನ್ನು ತ್ಯಜಿಸಬಾರದು ಎಂಬ ತಿಳಿವಳಿಕೆ ಸಾಲದೆಂಬುದನ್ನು ತೋರಿಸುತ್ತದೆ.

'ಅಸ್ಯ ಹುಟ್ಟದೆ ತ್ಯಜಿಸಿದರೆ ಅದು ನಿಲ್ಲತಕ್ಕದಲ್ಲ' ಎಂದು ನಿಷ್ಕುಳಾನಂದರವರು ಹಾಡಿದ್ದಾರೆ.

ಆದಕಾರಣ ಆಸೆಯು ಯಾವಾಗ ಇಲ್ಲವಾಗುವುದೋ ಆಗ ತ್ಯಾಗಬುದ್ಧಿಯು ಸ್ವಾಭಾವಿಕವಾಗಿ, ಆಶಾಮುಕ್ತವಾದ ಫಲದಂತಾಗುತ್ತದೆ.

ಪ್ರ. ಮ.

ಕೊಡಗಿನ ಭವಿಷ್ಯ.

ಕೊಡಗಿಗೆ ನೆರೆ ಕರೆಯ ಸೀಮೆಯಾಗಿ ಒಂದು ಕಡೆ ಮೈಸೂರು ಸಂಸ್ಥಾನವಿದೆ, ಇನ್ನೊಂದು ಕಡೆ ಮದ್ರಾಸ್ ಆಧಿಪತ್ಯದ ಜಿಲ್ಲೆಯಾದ ದಕ್ಷಿಣ ಕನ್ನಡವಿದೆ. ಕೊಡಗು ಬ್ರಿಟಿಷ್ ಮೇಲ್ವಿಚಾರಕ್ಕೆ ಒಳಪಟ್ಟ ಒಂದು ಸೀಮೆಯಾಗಿರುವುದರಿಂದ ಕೊಡಗಿನವರು ಸಂಸ್ಥಾನದೊಡನೆ ಸೇರಲು ಇಷ್ಟವಿಲ್ಲ. ಅದುಕಾರಣ ಮೈಸೂರಿಗೆ ಕೊಡಗು ಹೋದರೂ ಅರ್ಥ ಇಲ್ಲ, ಮದ್ರಾಸನ್ನು ಕೂಡಿಕೊಂಡರೂ, ಬೊಂಬಾಯಿಯನ್ನು ಅಪ್ಪಿಕೊಂಡರೂ ಅರ್ಥ ಇಲ್ಲ. ಹಾಗಾದ ಮೇಲೆ ಕೊಡಗು ತನ್ನ ನೆರೆ ಸೀಮೆಯಾದ ದಕ್ಷಿಣ ಕನ್ನಡದೊಂದಿಗೆ ಕಲೆತು ಮದ್ರಾಸು ಆಧಿಪತ್ಯದೊಳಗೆ ಐಕ್ಯವಾಗುವುದೇ ಹೆಚ್ಚು ಕಾರಣದಿಂದ ಸೂಕ್ತವೆಂದು ನಮಗೆ ತೋರುತ್ತದೆ.

'ಸ್ವ ಕಾರಣಗಳಿಂದ' ಎಂದು ಹೇಳಿದುದು ವಿಶೇಷ ಬಂದಲ್ಲ. ಅವರಿಗೂ ನಮ್ಮ ಜಿಲ್ಲೆಗೂ ತನಕಲಕ ನಮ್ಮಾಧಿಪತ್ಯಕ್ಕೂ ಈ ಮೊದಲೇ ಇರುವ ಪೂರ್ವ ಸಂಬಂಧದಿಂದ. ಕೊಡಗಿನ ಮತ್ತು ಮದ್ರಾಸ್ ಆಧಿಪತ್ಯದ ಇತರ ವ್ಯಾವಹಾರಿಕ ವಿದ್ಯಮಾನಗಳನ್ನು ಸೂಕ್ಷ್ಮ ದೃಷ್ಟಿಯಿಂದ ಪರಾಮರ್ಶಿಸುವಲ್ಲಿ ಇತರ ಆಧಿಪತ್ಯಗಳಿಂದಲೂ ನಮ್ಮವರೊಳಗೇ ಕೊಡಗಿಗೂ ನಮ್ಮ ಆಧಿಪತ್ಯಕ್ಕೂ ವಿಷಯಗಳಲ್ಲಿ ಹೆಚ್ಚಿನದಾದ, ಸಮೀಪವಾದ ಸಂಬಂಧವಿದೆಯೆಂದು ತಿಳಿಯುವುದರಿಂದ. ವ್ಯಾಪಾರದ ದೃಷ್ಟಿಯಿಂದ ನೋಡಿದರೆ ಇದರಲ್ಲಿನ ಮುಖ್ಯ ಬೆಳೆಗಳಾದ ಕಾಫಿ ಯಾಲಕ್ಕಿ ಮೊದಲಾದುವು ಹೊರದೇಶಕ್ಕೆ ಸಾಗಬೇಕಾದುದು ನಮ್ಮ ನಮ್ಮ ಬಂದರುಗಳ ಮೂಲಕವೇ. ಹಾಗೆಯೇ ನಮ್ಮಲ್ಲಿಂದಲೂ ಅಲ್ಲಿಗೆ ಹೋಗಬೇಕಾದ ಸಾಧನ ಸಾಮಗ್ರಿಗಳೂ ಅನೇಕವಿವೆ. ಅದರಂತೆ ವಿದ್ಯಾಂಗದ ಬಾಂಧವ್ಯದ ಕುರಿತಾಗಿ ಆಲೋಚಿಸಿದರೂ ಉಚ್ಚ ಶಿಕ್ಷಣದ ಸೌಕರ್ಯವು ಕೊಡಗಿನಲ್ಲಿ ಇಲ್ಲದಿರುವುದರಿಂದ ಅಲ್ಲಿನ ಹೆಚ್ಚು ಮಂದಿ ವಿದ್ಯಾರ್ಥಿಗಳು ನಮ್ಮ ವಿಶ್ವ ವಿದ್ಯಾಲಯದ ಶಿಕ್ಷಣವನ್ನು ಪಡೆದು ನಮ್ಮಲ್ಲಿನ ಸ್ಥಾನಮಾನಗಳಿಗೆ ಭಾಗಿಗಳಾಗುತ್ತಾರೆ. ತಂಪಾದ ಹವೆಯಲ್ಲಿ ಬೆಳೆದ ಇವರಿಗೆ ನಮ್ಮ ಆಧಿಪತ್ಯದ ಹವೆ ಹಿಡಿಯದೆಂಬ ಚಿಂತೆಯೂ ಇಲ್ಲ. ಅಥವಾ ನಮ್ಮೊಡನೆ ಸೇರುವುದರಿಂದ ಇವರಿಗೆ ನಮ್ಮ ಗುಣ ಸ್ವಭಾವವೂ, ನಮ್ಮಲ್ಲಿನ ವೇಷಭಾಷೆಗಳೂ, ನಾಗರೀಕತನವೂ, ಜೀವನ ಕ್ರಮವೂ ಒಗ್ಗದೆಂದಾಗಲೀ, ಇವರ ದೇಶೀಯ ಸಂಸ್ಕೃತಿ, ಧರ್ಮನಿಷ್ಠೆ ಇತಿಹಾಸಾದಿಗಳಿಗೆ ಹಾನಿಯಾದೀತೆಂಬ ಬೆದರಿಕೆಯಾಗಲೀ ಇದೂ ಇಲ್ಲ. ಇವರ ಸ್ವಭಾವಸಿದ್ಧವಾದ ಬುದ್ಧಿಕುಶಲತೆಯು ಇನ್ನಷ್ಟು ವಿಕಾಸಗೊಂಡು ಪ್ರಕಾಶಿಸಬೇಕಾದರೆ, ಅವರ ಪರಿಣಾಮವಾಗಿ ಅಧಿಕಾರ ಸ್ಥಾನಗಳೂ, ಉಚ್ಚ ಪದವಿಗಳೂ ಧಾರಾಳವಾಗಿ ಲಭಿಸಬೇಕಾದರೆ ಕೊಡಗಿನ ದ್ರವ್ಯ ಸಂಪತ್ತೂ, ಧನ ಸಂಪತ್ತೂ, ವ್ಯಾಪಾರ, ಕೃಷಿ, ಕೈಗಾರಿಕೆಗಳ ಮೂಲಕ ವೃದ್ಧಿಗೊಂಡು ಉತ್ಕರ್ಷವನ್ನು ಪಡೆಯಬೇಕಾದರೆ ಹೆಚ್ಚೇನು ಸರ್ವ ಪ್ರಕಾರದಿಂದಲೂ ಅರ್ಥಕೋನ್ನತಿಯನ್ನು ಸಾಧಿಸಿಕೊಂಡು ಪ್ರತಿಯೊಂದು ವಿಷಯದಲ್ಲಿಯೂ ತನ್ನನ್ನು ತಾನು ಹೆಚ್ಚಿಸಿಕೊಳ್ಳಬೇಕಾದರೆ ಕೊಡಗು ಸಾಮಾನ್ಯವಾದ ನಿಯಮಿತವಾದ ನದಿಯಾಗಿ ಮಾತ್ರವೇ ಹರಿದರೆ ಸಾಲದು. ಸಮೀಪವಿರುವ ವಿಶಾಲವಾದ ಸಮುದ್ರವನ್ನೇ ಸೇರಿ ಸಂಗಮವಾಗಿ ತನ್ನ ವಿಸ್ತಾರವಾದ ವ್ಯಾಪ್ತಿಗೆ ತಕ್ಕ ಅವಕಾಶವನ್ನು ಅವಶ್ಯಕವಾಗಿಯೂ ಉಂಟುಮಾಡಿಕೊಳ್ಳಬೇಕು. ಇನ್ನು ಆ ಸಮುದ್ರವು ಮದ್ರಾಸ್ ಆಧಿಪತ್ಯವೆಂದೇ ಕೊಡಗು ನಿರ್ಣೈಸಿ, ಅದರೊಡನೆ ಐಕ್ಯವಾಗಲು ಸಂಕಲ್ಪಿಸುವುದಾದರೆ ಇದೋ ಈಗಲೇ ಮುಂದಾಗಿ ನಮ್ಮ ದೇಶಬಾಂಧವರಿಗೆ ನಮ್ಮ ಕರ್ನಾಟಕ ಸಹೋದರ ಸಹೋದರಿಯರಿಗೆ ಸಂಭ್ರಮ—ಸಂತೋಷಪೂರ್ವಕವಾದ ಸ್ವಾಗತ! ಸುಸ್ವಾಗತ!!

ಪ್ರಾಂತರಚನೆ ಎಂಬ ಕಾರಣದ ದೃಷ್ಟಿಯಿಂದ ನೋಡಿದರೂ ಈ ಏರ್ಪಾಡು ೨ ಕನ್ನಡ ಜಿಲ್ಲೆಗಳ ಈ ಸಂಯೋಗವು ಹಿತವೆಂದೇ ಹೇಳಬಹುದು. ಕಾರಣವೇನು? ಇತರ ಆಧಿಪತ್ಯಗಳ ಕನ್ನಡ ಜಿಲ್ಲೆಗಳು ಕೊಡಗಿಗೆ ದೂರವಿವೆ; ಮಾತ್ರವಲ್ಲ, ನಮ್ಮ ಆಧಿಪತ್ಯದ ಬಳ್ಳಾರಿ, ಕೊಯಮುತ್ತೂರು ಜಿಲ್ಲೆಗಳಾದರೂ ನಮ್ಮಷ್ಟು ಸಮೀಪದಲ್ಲಿಲ್ಲ; ನಮ್ಮಂತೆ ಅಂಟಿಕೊಂಡಿಲ್ಲ. ಆದುದರಿಂದ ಉಗುರಿಂದಾಗುವ ಈ ಕಾರ್ಯಕ್ಕೆ ಕೊಡಲಿಯನ್ನು ಹಿಡಿಯ ಹೋಗದೆ ಇತರ ಆಧಿಪತ್ಯಗಳ ಬಾಂಧವ್ಯವನ್ನೇ ತಮಿಳು, ತೆಲುಗು, ಮಲೆಯಾಳಿಗಳ ಸಹವಾಸವನ್ನೇ ಬಯಸಹೋಗದೆ ನೈಸರ್ಗಿಕ ನಿಯಮದಿಂದ ಬಂದಿರುವ ನಮ್ಮ ನಮ್ಮೊಳಗಿನ ಪೂರ್ವ ಬಾಂಧವ್ಯವನ್ನೇ ಬಲಪಡಿಸಿಕೊಂಡು ಒಂದಾಗುವುದು ಸಮುಚಿತವೂ, ಸುಕರವೂ, ಸುಲಭವೂ ಆಗಿದೆ. ಕನ್ನಡ ಭಾಗಗಳ ಈ ಏಕೀಕರಣದಿಂದ ಮುಂದಿನ ನಮ್ಮ ಪ್ರಾಂತರಚನೆಗೆ ವಿಶೇಷವಾದ ಸಹಾಯವೇ ದೊರಕುವುದರಲ್ಲಿ ಸಂದೇಹವೇನೂ ಇಲ್ಲ. ಪ್ರತ್ಯೇಕ ಪ್ರಾಂತರಚನೆಯ ಕಾರ್ಯದ ಒಂದು ಅಂಶವು ಇಲ್ಲಿಗೇ ತೀರ್ಮಾನವಾದ ಹಾಗಾಯಿತು. ಅದರಲ್ಲಿಯೂ ಬ್ರಿಟಿಷ್ ಕರ್ನಾಟಕವು ಮೈಸೂರು ಕರ್ನಾಟಕದೊಂದಿಗೆ ಸೇರುವ ಹಾಗಾದರೆ, ನಮಗೆ ಇದೊಂದು '[illegible] ಅಲ್ಲವೇ'?

ಕೊಡಗು ಮದರಾಸ್ ಆಧಿಪತ್ಯಕ್ಕೆ ಸೇರುವಲ್ಲಿ ಅದನ್ನು ಪ್ರತ್ಯೇಕವಾದ ಒಂದು ಜಿಲ್ಲೆಯಾಗಿ ಏರ್ಪಡಿಸುವ ಅವಶ್ಯಕತೆಯು ತೋರುವುದಿಲ್ಲ. ಅದನ್ನು ಎರಡು ತಾಲೋಕುಗಳಾಗಿ ವಿಂಗಡಿಸಿ ದಕ್ಷಿಣ ಕನ್ನಡದ ತಾಲೋಕುಗಳಾಗಿ ಏರ್ಪಡಿಸಿ ಅಲ್ಲಿಗೆ ಒಬ್ಬ ಡೆ. ಕಲೆಕ್ಟರನ್ನು ನಿಯಮಿಸಬಹುದು. ಅವಶ್ಯವಿರುವಷ್ಟು ಮುನ್ಸೀಫ್ ಕೋರ್ಟುಗಳನ್ನೂ, ತಾಲೋಕು ಆಫೀಸುಗಳನ್ನು, ಇನ್ನಿತರ ಸರಕಾರಿ ಸಂಸ್ಥೆಗಳನ್ನೂ ಇಟ್ಟುಕೊಳ್ಳಬಹುದು. ಈ ವ್ಯವಸ್ಥೆಯಿಂದ ಕೊಡಗಿಗೆ ಈಗ ಎಷ್ಟು ರಾಜ್ಯಭಾರಕ್ಕಾಗಿ ವೆಚ್ಚವಾಗುವುದೋ ಅಷ್ಟರ ಭಂಡಾರದಲ್ಲಿ ಸ್ವಲ್ಪ ದುಡ್ಡು ಉಳಿದ, ಅದು ಕೊಡಗಿನ ಜನೋಪಕಾರ್ಯಗಳಿಗಾಗಿ ವಿನಿಯೋಗವಾಗಬಹುದು.

ಪಿ. ಕೆ.

ಸೆಂಟ್ರಲ್ ಬ್ಯಾಂಕು ಮೀಟಿಂಗು.

ಈ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ತಾರೀಖು 28—5—33ರಲ್ಲಿ ಬ್ಯಾಂಕಿನ ಆಫೀಸಿನಲ್ಲಿ ನಡೆಯಿತು. 9 ಡೈರೆಕ್ಟರುಗಳು ಹಾಜರಿದ್ದರು.

ಅಧ್ಯಕ್ಷರಾದ ರಾವ್ ಬಹದ್ದೂರ್ ಕೋದಂಡ ಅಪ್ಪಯ್ಯನವರು ಕಾಯಿಲೆಯ ದೆಸೆಯಿಂದ ಗೈರುಹಾಜರು. ಆದಕಾರಣ ರಾವ್ ಬಹದ್ದೂರ್ ಪಟ್ಟಮಾಡ ದೇವಯ್ಯನವರು ಅಧ್ಯಕ್ಷರಾಗಿದ್ದರು.

1. ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು.

2. ಏಪ್ರಿಲ್ ತಿಂಗಳ ಜಮಾ ಮತ್ತು ಖರ್ಚಿನ ಲೆಕ್ಕ ಓದಿ ಮಂಜೂರು ಮಾಡಲಾಯಿತು.

3. ಸೊಸೈಟಿಗಳಿಂದ ಬ್ಯಾಂಕಿಗೆ ಮರುಪಾವತಿಗೆ ಬಾಕಿ ಇರುವ ವಾಯಿದೆ ಮೀರಿದ ಸಾಲಗಳ [illegible]

ಕೊಡಗು.

ಸನ್ ೧೯೩೦ನೇ ಇಸವಿ

ಜೂನ್ ತಾ ೬ ನೇ ಶುಕ್ರವಾರ.

ಪ್ರೆಸ್ ಆರ್ಡಿನೆನ್ಸ್

ಜಾರಿಯಲ್ಲಿರುವ ವರಿವಿಗೆ

ನಾವು

ಅಗ್ರಲೇಖನ

ವನ್ನು

ಪ್ರಕಟಿಸುವುದಿಲ್ಲ.

ಕೊಡಗಿನ ರಾಜಕೀಯ ಭವಿಷ್ಯತ್ತು.

(ಬರೆದು ಬಂದದ್ದು)

ಒಟ್ಟು ಹಿಂದೂಸ್ಥಾನದ ರಾಜಕೀಯ ಭವಿಷ್ಯತ್ತು ಹೇಗಿರಬೇಕೆಂತ ನಿರ್ಣೈಸಲು ದುಂಡು ಮೇಜು ಪರಿಷತ್ತು ಕೂಡಿದ್ದೂ ಅದರಿಂದ ಫಲ ದೊರಕೀತೆಂಬ ಭರವಸೆ ಇಲ್ಲದೆ ಮಹಾತ್ಮ ಗಾಂಧಿಯವರು ಅಸಹಕಾರ ಚಳವಳಿ ನಡಿಸಲು ತೀರ್ಮಾನಿಸಿದ್ದೂ ಸರಕಾರವು ಅಸಹಕಾರವನ್ನು ನಿಲ್ಲಿಸಲು ಆರ್ಡಿನೇನ್ಸುಗಳನ್ನು ಜಾರಿಗೆ ತಂದದ್ದೂ ಮತ್ತು ಅದೇ ಸಮಯದಲ್ಲಿ ರಾಜಕೀಯ ಭವಿಷ್ಯತ್ತನ್ನು ನಿರ್ಣೈಸಲು ದುಂಡು ಮೇಜಿನ ಉಪಸಮಿತಿಗಳನ್ನು ನೇಮಿಸಿಕೊಂಡದ್ದೂ ಜನರಿಗೆ ತಿಳಿಯದ್ದಲ್ಲ. ಈಗಾಗಲೇ ರಾಜಕೀಯ ಸುಧಾರಣೆಯನ್ನು ನಿರ್ಣೈಯಿಸುವ ಮಸೂದೆಯು ಪಾರ್ಲಿಮೆಂಟಿನ ಮುಂದೆ ಇಡಲು ತಯಾರಾಗುತ್ತಲಿದೆಯೆಂತ ವರ್ತಮಾನಗಳಿವೆ. ಮುಂದೆ ಮಂಜೂರಾಗಲಿಕ್ಕಿರುವ ಸುಧಾರಣೆಗಳಲ್ಲಿ ಮಧ್ಯವರ್ತಿ ಸರಕಾರದ ಆಡಳಿತದಲ್ಲಿರುವ ಚಿಕ್ಕ ಚಿಕ್ಕ ಪ್ರಾಂತ್ಯಗಳಿಗೆ ಯಾವ ಸ್ಥಾನ ಕೊಡಬೇಕೆಂಬುದನ್ನು ದುಂಡು ಮೇಜಿನ ಆಲೋಚನಾ ಸಭೆಯವರು ತೀರ್ಪಿನಲ್ಲೇ ಯೋಚಿಸುತ್ತಲಿದ್ದಾರೆ. ಆದ್ದರಿಂದ ಈ ಗುಂಪಿಗೆ ಸೇರಿದ ಕೊಡಗಿಗೆ ಯಾವ ತರದ ಸುಧಾರಣೆ ಬೇಕೆಂತ ಕೊಡಗಿನ ಸರಕಾರವನ್ನು ಮಧ್ಯವರ್ತಿ ಸರಕಾರವು ಕೇಳಿದೆ. ಕೊಡಗಿನ ಸರಕಾರವು ದೇಶದ ಜಮೀನ್ದಾರರ ಸಂಘ ಮೊದಲಾದ ಬೇರೆ ಬೇರೆ ಸಂಘಗಳ ಅಭಿಪ್ರಾಯವನ್ನು ಕೇಳಿದೆ. ಜಮೀನ್ದಾರರ ಸಂಘವು ಮೊದಲೇ ತೀರ್ಮಾನಿಸಿಕೊಂಡ [illegible]

[illegible] ಬೇಕೆಂತಲೂ ಇದು ಸಾಧ್ಯವಿಲ್ಲದಿದ್ದರೆ ಮದ್ರಾಸಿಗೆ ಕೊಡಗನ್ನು ಒಂದು ಜಿಲ್ಲೆಯಾಗಿ ಸೇರಿಸಬೇಕೆಂತಲೂ ಹೇಳಿದ್ದಾರೆ. ಮುಸಲ್ಮಾನ್ ಸಹೋದರರು ಇದೇ ಅಭಿಪ್ರಾಯ ಕೊಟ್ಟಿದ್ದಾರೆಂತಲೂ ತಿಳಿದುಬಂದಿದೆ. ಕೊಡಗೇತರ ಸಂಘ ಗೌಡ ಜನರ ಸಂಘ ಮತ್ತು ಲಿಂಗಾಯತರ ಸಂಘ ಸಹ ಕೊಡಗನ್ನು ಮದ್ರಾಸಿನ ಒಂದು ಜಿಲ್ಲೆಯಾಗಿ ಸೇರಿಸಬೇಕೆಂತಲೂ, ಪ್ರತ್ಯೇಕವಾಗಿಯೇ ಕೊಡಗನ್ನು ಇಡುವುದಾದರೆ ಹೆಚ್ಚಿನ ಸುಧಾರಣೆ ಕೊಡತಕ್ಕದ್ದಾಗಿಯೂ, ಈಗ ಇರುವ ಕೌನ್ಸಿಲಿಗೂ ಸಹ ಎಲ್ಲಾ ಕೋಮಿನವರಿಗೂ ಪ್ರತ್ಯೇಕ ಪ್ರತ್ಯೇಕ ಚುನಾವಣೆಯ ಹಕ್ಕು ಕೊಡಬೇಕೆಂತಲೂ ಹೇಳಿದ್ದಾರಾಗಿ ವರ್ತಮಾನವಿದೆ. ಯೂರೋಪಿಯನ್ ಬಂಧುಗಳ ಸಂಸ್ಥೆಯಿಂದ ಯಾವ ಅಭಿಪ್ರಾಯವು ಹೋಗಿದೆಯೋ ತಿಳಿಯದು. ಆದರೆ ಕೊಡಗು ಪ್ರತ್ಯೇಕವೇ ಇರಬೇಕೆಂತಲೂ ಯಾವ ತರದ ಹೆಚ್ಚಿನ ಸುಧಾರಣೆಯೂ ಕೊಡುವ ಅವಶ್ಯವಿಲ್ಲವೆಂತಲೂ ಅವರ ಅಭಿಪ್ರಾಯವೆಂತ ವರ್ತಮಾನವಿದೆ. ಕೊಡವ ಸಭೆಯವರು ಇನ್ನೂ ಯಾವ ಅಭಿಪ್ರಾಯವನ್ನು ಕೊಟ್ಟಿಲ್ಲವೆಂತ ತಿಳಿಯುತ್ತೇವೆ.

ಈ ರೀತಿ ದೇಶದ ಜನರ ಅಭಿಪ್ರಾಯವು ಭಿನ್ನಭಿನ್ನವಾಗಿದೆ. ದುಂಡು ಮೇಜು ಪರಿಷತ್ತು, ಪಾರ್ಲಿಮೆಂಟು ಯಾವ ರೀತಿ ತೀರ್ಮಾನಿಸುತ್ತವೋ ನೋಡಬೇಕಷ್ಟೆ. ಆದರೆ ಪಾರ್ಲಿಮೆಂಟಿನ ಈಗಿನ ಸ್ಥಿತಿ ನೋಡಿದರೆ ಮತ್ತು ಈಗ ಬರುವ ವರ್ತಮಾನಗಳು ನಿಜವಾಗಿದ್ದರೆ ಸೈಮನ್ ಕಮಿಷನ್ ವರದಿಯ ಮುಖ್ಯ ಅಂಶಗಳೇ ಜಾರಿಗೆ ಬರಬಹುದೆಂತ ತೋರುತ್ತದೆ. ಮಧ್ಯವರ್ತಿ ಸರಕಾರದಲ್ಲಿ ಪ್ರಜಾ ಜವಾಬ್ದಾರಿಯನ್ನು ಕೂಡಲೇ ಕೊಡದೆ ಪ್ರಾಂತ್ಯಗಳಿಗೆ ಅವರವರ ಒಳ್ಳೇ ನಡತೆ ನೋಡಿ ಅದಕ್ಕೆ ತಕ್ಕಂಥ ಜವಾಬ್ದಾರಿಯನ್ನು ಕೊಡುವ [illegible] ಜನೆಯಿದೆಯಂತೆ. ಇದನ್ನು ದೇಶದ ಜನರ ಶೇಕಡ 99 [illegible] ಖಂಡಿಸಿದ್ದಾರೆ. ಆದರೆ ದೇಶದ ಜನರ ಅಭಿಪ್ರಾಯದಂತೆ ಸರಕಾರವು ಕೆಲಸ ಮಾಡುವ ಕಾಲ ಇನ್ನೂ ಬಂದಿಲ್ಲವಷ್ಟೆ. ಇಂಗ್ಲೆಂಡಿನ ಕನ್ಸರ್ವೇಟಿವ್ ಪಾರ್ಟಿಗೆ ಎಷ್ಟು ಕೊಡಬಹುದೆಂತ ತೋರುತ್ತದೋ ಅಷ್ಟೇ ಸಿಕ್ಕೀತಷ್ಟೆ.

ಹೀಗಿರುವಾಗ ಕೊಡಗಿನ ಭವಿಷ್ಯತ್ತು ಬಹಳ ಕಗ್ಗತ್ತಲೆಯಿಂದ ಕವಿದಿದೆ. ಸೈಮನ್ ಕಮಿಷನ್ ವರದಿಯಲ್ಲಿ ಕೊಡಗನ್ನು ಮದ್ರಾಸಿಗೆ ಸೇರಿಸಲು ಜನರು ಒಪ್ಪುವದಿಲ್ಲವೆಂತಲೂ ಕೊಡಗನ್ನು ಪ್ರತ್ಯೇಕವಾಗಿಯೇ ಇಟ್ಟುಕೊಂಡು ಪ್ರಜಾ ಜವಾಬ್ದಾರ ಸರಕಾರವನ್ನು ಕೊಡಲು ಸಾಧ್ಯವಿಲ್ಲವೆಂತಲೂ ಬರೆದಿದ್ದಾರೆ. ಆದ್ದರಿಂದ ಕೊಡಗಿನ ಭವಿಷ್ಯತ್ತನ್ನು ಯೋಚಿಸಲು ಶಕ್ತರಾಗಿರುವವರೆಲ್ಲರೂ ಎಚ್ಚತ್ತು ಚೇತರಿಸಿಕೊಂಡು ಕೊಡಗಿನ ಮುಂದಿನ ಜನಾಂಗಕ್ಕೆ ಹಿತವಾಗುವುದನ್ನು ದೊರಕುವಂತೆ ಮಾಡಬೇಕಾದದ್ದು ಬಹಳ ಅವಶ್ಯವಿದೆ. ಕೊಡಗು ಪ್ರತ್ಯೇಕವಾಗಿದ್ದರೆ ಉಂಟಾಗುವ ಕಷ್ಟಗಳು ಅನುಭವಿಗಳು ಸರ್ವ ಸಾಗರದವರಿಗೂ ಈಗ ತಿಳಿದಿದೆ. ದೊಡ್ಡ ಅಧಿಕಾರಿಗಳು ತಮ್ಮ ಬೇಕಾದವರನ್ನೇ ಕೊಡಗಿನ ಜನರ ಮೇಲೆ ಅಧಿಕಾರ ನಡಿಸುತ್ತಿದ್ದರೆ ಜನರ ಸ್ವಾತಂತ್ರ್ಯವೇನು ಉಳಿದೀತು? ವಿದ್ಯಾವ್ಯಾಸಂಗಕ್ಕೆ ಮದ್ರಾಸ್ ಸ್ಕೂಲ್ ಕಾಲೇಜುಗಳು ಆಡಚಣೆಗೆ ಹಾಕಲು ಪ್ರಾರಂಭಿಸಿವೆ. ಕೃಷಿ ಕೈಗಾರಿಕೆಯ ಅಭಿವೃದ್ಧಿಗೆ ಸಹಾಯ ಮಾಡುವ ಇಲಾಖೆಗಳೇ ಇಲ್ಲ. ಇಲಾಖೆಗಳಿದ್ದರೂ ಈ ಬಾಬಿನ ಅಭಿವೃದ್ಧಿ ಮಾಡಿಕೊಳ್ಳಲು ಹಣವೇ ಇಲ್ಲ. ಸರಕಾರದ ದಿನಚರ್ಯೆ ಕೆಲಸ ನಡಿಸಲಿಕ್ಕೆ ಸಹ ಹಣವಿಲ್ಲದಾಗಿದೆ. ಹೀಗಿರುವಾಗ ಪ್ರಜಾ ಜವಾಬ್ದಾರಿ ಸರಕಾರ ಕ್ರಮವು ಹೇಗೆ ತಾನೇ ಸಾಧ್ಯ! ಅಧಿಕಾರಿಗಳನ್ನು ಮದ್ರಾಸಿನ ಅಧಿಕಾರಿಗಳೊಂದಿಗೆ ಅದಲು ಬದಲು ಮಾಡಬೇಕೆಂತ ಈ ವರೆಗೆ ನಡೆಸಿದ ಚಳವಳಿ ವ್ಯ ಜನರಿಗೆ ತಿಳಿದಿದೆ. ಮದ್ರಾಸ್ ಪ್ರಾಂತ್ಯಕ್ಕೆ ಸ್ವಾತಂತ್ರ್ಯ ಸಿಕ್ಕುವ ಮುಂಚೆಯಾದರೂ ಈ ಸಲಹೆಯು ಜಾರಿಗೆ ಬರಬಹುದಿತ್ತೇನೋ. ಇನ್ನು ಮೇಲೆ ಮದ್ರಾಸಿಗೆ ಸ್ವಾತಂತ್ರ್ಯ ದೊರೆತು ಪ್ರಜಾಪ್ರತಿನಿಧಿಗಳೇ ಅಧಿಕಾರವನ್ನು ಪೂರ್ತಿಯಾಗಿ ನಡಿಸುವಾಗ ಈ ಸಲಹೆಯು ಜಾರಿಗೆ ಬರುವ ಸಂಭವ ಬಹಳ ಕಡಿಮೆ.

ಇದಕ್ಕೆಲ್ಲಾ ಮುಖ್ಯ ವಿಷಯವೇನೆಂದರೆ—ನಮ್ಮ ನೆರೆಹೊರೆಯ ಊರುಗಳಾದ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಮಲಬಾರುಗಳಲ್ಲಿ ಸರಕಾರವು ಪೂರ್ತಿಯಾಗಿ ಪ್ರಜಾ ಜನರ ಅಧೀನವಾಗಿರುವಾಗ ಅವರಿಗಿಂತ ಮುಂದುವರಿದ್ದೇವೆ ಎಂದುಕೊಳ್ಳುವ ಕೊಡಗಿನವರು ಮಾತ್ರ ಪ್ರಜಾಜನರ ಆಳ್ವಿಕೆಗೆ ಅರ್ಹರಲ್ಲವೆಂಬ ಕೊರತೆಗೆ ಗುರಿಯಾಗುತ್ತೇವೆ. ಅಲ್ಲದೆ ಒಬ್ಬ ಅಧಿಕಾರಿಯ ನಿರಂಕುಶ ಅಧಿಕಾರದಲ್ಲೇ ಇರಬೇಕಾಗುತ್ತದೆ.

ಆದ್ದರಿಂದ ಮದ್ರಾಸಿಗೆ ಸೇರಿಸಿಕೊಂಡಾದರೂ ಪ್ರಜಾಜನರ ಆಳಿಕೆಯನ್ನು ಪಡೆಯಲು ಸರ್ವರೂ ಸಹಾಯ ಕೊಡಬೇಕಾದದ್ದು ಅವಶ್ಯ.

ಹಿಂದೀ ವಸ್ತುಗಳನ್ನೇ ಕೊಳ್ಳಿ.

ಪ್ರತಿಯೊಬ್ಬ ತಂದೆ ತಾಯಿಯೂ ತಮ್ಮ ತಮ್ಮ ಮಕ್ಕಳನ್ನು ಪೋಷಿಸಿ ಕಾಪಾಡಿ ಪ್ರೀತಿಸುತ್ತಾರೆ. ಯಾಕೆಂದರೆ—ಅವು ತಮ್ಮವೇ ಆದ್ದರಿಂದ—ಹಾಗೆಯೇ ನಮ್ಮ ದೇಶದ್ದೇ ಆದ ಕೃಷಿ ಮುಂತಾದ ಕೈಗಾರಿಕೆಗಳನ್ನು ನಾವು ಬೆಳೆಸಿ ಕಾಪಾಡಬೇಕು.

ಹಾಗೆ ಮಾಡಿದರೆ ನಮ್ಮವರೇ ಆದ ಜನರಿಗೆ ಕೆಲಸ ಕೊಟ್ಟಂತಾಗುತ್ತದೆ. ಮತ್ತು ನಮ್ಮ ಹಣವು ನಮ್ಮದಿಯೋ [illegible] ಫಲವನ್ನು ಬೇರೆ ಒಳ್ಳೇ ಉಪಯೋಗವಾದ ಕೆಲಸಗಳಿಗೆ ಉಪಯೋಗಿಸುವುದು ಅಲ್ಲದೆ ನಮ್ಮ ಜನರ ಜೀವನದ ಅನುಕೂಲವೂ ಹೆಚ್ಚುತ್ತದೆ.

ಪ್ರಪಂಚದಲ್ಲಿ ಕೈಗಾರಿಕೆಗಳಿರುವ ದೇಶಗಳೇ ಅತಿ ಐಶ್ವರ್ಯ ಮತ್ತು ಬಲವುಳ್ಳವಾಗಿವೆ. ಅವು ಪ್ರಪಂಚವನ್ನೇ ಆಳ್ವವೆ. ನಾವೂ ಹಾಗೆಯೇ ಧನ ಸಮೃದ್ಧಿಯನ್ನು ಪಡೆದ ಸುಖಿಗಳಾಗಬೇಕು.

ನಮ್ಮಲ್ಲಿ 35 ಕೋಟಿ ಜನರಿದ್ದಾರೆ. ಇವರಲ್ಲಿ ಕೋಟ್ಯಾಂತರ ಜನರಿಗೆ ವರ್ಷದ ಕೆಲವು ತಿಂಗಳುಗಳಲ್ಲಿ ಕೆಲಸವೇ ಇಲ್ಲ.

ಅಂಥವರಿಗೆ ಕೆಲಸವನ್ನು ಒದಗಿಸಿಕೊಟ್ಟು ಹಸಿವೆಯಿಂದ ಬಿಡಿಸುವಂತೆ ನಾವು ಸಹಾಯ ಕೊಡಬೇಕು.

ಪರದೇಶೀ ವಸ್ತುಗಳು ಎಷ್ಟೇ ಚೆನ್ನಾಗಿಯೂ, ಸೌಂದರ್ಯವಾಗಿಯೂ, ಉಪಯೋಗಕರವಾಗಿಯೂ ಇದ್ದರೂ ಅವುಗಳನ್ನು ಕೊಂಡುಕೊಂಡರೆ ಅವುಗಳನ್ನು ಮಾಡುವ ಕಾರ್ಮಿಕರನ್ನೂ, ಸಂತೋಷವನ್ನೂ ಕಳಕೊಳ್ಳುತ್ತೇವೆ. ಮತ್ತು ಬೇರೆಯವರನ್ನು ಐಶ್ವರ್ಯವಂತರನ್ನಾಗಿ ಮಾಡಿ ನಮ್ಮನ್ನು ನಾವೇ ಬಡತನಕ್ಕೆ ಇಳಿಸಿಕೊಳ್ಳುತ್ತೇವೆ.

ಬ್ರಿಟಿಷ್ ಜನಾಂಗದಲ್ಲಿ ಕೆಲಸವಿಲ್ಲದವರಿಗೆ ಕೆಲಸ ಒದಗಿಸಿಕೊಡಲಿಕ್ಕಾಗಿ ಬ್ರಿಟಿಷ್ ಮಾಲುಗಳನ್ನೇ ಕೊಂಡುಕೊಳ್ಳಿ ಎಂದು ಹೇಳಿದಂತೆ ನಾವು ಹಿಂದೀ ಮಾಲುಗಳನ್ನೇ ಕೊಂಡುಕೊಳ್ಳಿ ಎಂತ ಹೇಳುವುದಾಗಿದೆ.

ಹಿಂದೂಸ್ಥಾನದವರಿಗೆ ಉಪಯೋಗಕ್ಕೆ ಬೇಕಾದ ಅನೇಕ ವಸ್ತುಗಳನ್ನು ಈಗ ಹಿಂದೂಸ್ಥಾನದಲ್ಲೇ ತಯಾರಿಸುತ್ತಾರೆ.

ಹಿಂದೀಯರಿಗೆ ಎಷ್ಟೇ ಶೋಕಿಸವರಾದರೂ ಬೇಕಾದ ಹಿಂದೀ ಆಹಾರ, ಹಿಂದೀ ಬಟ್ಟೆ, ಹಿಂದೀ ದವಾ ಮುಂತಾದ ಎಲ್ಲಾ ವಸ್ತುಗಳೂ ಹಿಂದೂಸ್ಥಾನದ ಎಲ್ಲಾ ಊರುಗಳಲ್ಲೂ ಸುಲಭ ಕ್ರಯಕ್ಕೆ ಈಗ ದೊರೆಯುತ್ತದೆ. ಸ್ವಲ್ಪ ಬೆಲೆ ಹೆಚ್ಚಾದರೂ, ಗುಣದಲ್ಲಿ ಕಡಿಮೆಯಾದರೂ ಹಿಂದೀ ವಸ್ತುಗಳನ್ನೇ ಕೊಂಡುಕೊಳ್ಳುವುದು ನಮ್ಮ ದೇಶ ಭಕ್ತಿಯ ಕರ್ತವ್ಯವಾಗಿದೆ.

ಆದರೆ ಸಾಮಾನು ಕೊಂಡುಕೊಳ್ಳಲು ಹೋಗುವ ಹೆಚ್ಚಿನ ಜನರು ಹಿಂದೂಸ್ಥಾನದಲ್ಲೇ ತಯಾರಾದ ವಸ್ತುಗಳನ್ನು ಕೊಡಿ ಎಂತ ಕೇಳುವುದೇ ಇಲ್ಲ. ಕೊಟ್ಟದ್ದನ್ನು ತೆಗೆದುಕೊಂಡು ಬಿಡುತ್ತಾರೆ.

ಇನ್ನು ಮೇಲೆ ಹಾಗೆ ಮಾಡಬೇಡಿ.

ಹಿಂದೂಸ್ಥಾನದ ವಸ್ತುಗಳನ್ನೇ ಕೊಳ್ಳಿ.

ನಿಮಗೆ ಬೇಕಾದ ವಸ್ತುಗಳು ಅಂಗಡಿಯಲ್ಲಿ ಸಿಕ್ಕುವುದಿಲ್ಲವೆಂತ ಹೇಳಬಹುದು.

ಹಾಗಾಗುವುದು ಯಾಕೆಂತ ಗೊತ್ತಿದೆಯೋ? ನೀವು ಕೊಂಡುಕೊಳ್ಳದ ವಸ್ತುಗಳನ್ನು ಮಾರಾಟಕ್ಕೆ ಇಟ್ಟರೆ ವ್ಯಾಪಾರಿಗೆ ಫಾಯಿದೆಯಾಗುವುದಿಲ್ಲ.

ಹಿಂದೂಸ್ಥಾನದಲ್ಲಿ ಆದ ವಸ್ತುವೇ ಬೇಕೆಂತ ಕೇಳಿ, ಅದನ್ನು ತರಿಸಲಿಕ್ಕೆ ಹೇಳಿ. ಆಗ ನಿಮಗೆ ಬೇಕಾದದ್ದು ಸಿಕ್ಕುವುದು ಮಾತ್ರವಲ್ಲ, ಅಂಥಾ ಮಾಲುಗಳು ಹೆಚ್ಚಾಗಿ ಖರ್ಚಾಗಿ ಬೆಲೆಯೂ ಸಹ ಕಮ್ಮಿಯಾಗುತ್ತದೆ.

ಹೆಚ್ಚು ಖರ್ಚಾಗದೆ ಮಾಲುಗಳ ಗುಣವೂ ಸಹ ಉನ್ನತವಾಗುತ್ತಾ ಹೋಗುತ್ತದೆ.

ಪ್ರತಿಯೊಬ್ಬನೂ ಸಹಾಯ ಮಾಡಬಹುದು.

ನಿಮಗೆ ಸಹಾಯ ಮಾಡಲು ಆಗುವುದಿಲ್ಲವೆನ್ನಬೇಡಿ— ಸ್ವದೇಶೀ ವ್ರತವನ್ನು ಹಿಡಿಯಲು ನಿಮಗೆ ಶಕ್ತಿ ಇಲ್ಲವೆನ್ನಬೇಡಿ. ನೀವು ಸ್ವದೇಶೀ ವಸ್ತುಗಳನ್ನೇ ಧರಿಸಿ ಸ್ವದೇಶೀ ಜೀವನವನ್ನೇ ನಡಿಸಿ ಹೋದರೆ ಎಲ್ಲಾ ಸ್ವದೇಶೀ ಭಾವವನ್ನು ಹರಡಬಹುದು. ಸ್ವದೇಶೀ ಧರ್ಮವನ್ನು ಹರಡುವ ಯಂತ್ರವೇ ಆಗಬಹುದು.

ನೀವು ಐಶ್ವರ್ಯವಂತರೋ, ಹಾಗಾದರೆ ನಿಮ್ಮ ಮನೆಯನ್ನೂ ದೇಹವನ್ನೂ ಪರದೇಶಿ ಮತ್ತು ಅವಶ್ಯವಿಲ್ಲದ ವಸ್ತುಗಳಿಂದ ತುಂಬಿ ಕೆಟ್ಟ ಮಾದರಿಯಾಗಬೇಡಿರಿ.

ಸ್ವದೇಶೀ ವಸ್ತುಗಳನ್ನೇ ಕೊಳ್ಳಿ—ಸ್ವದೇಶೀ ವಸ್ತುಗಳನ್ನೇ ಧರಿಸಿ, ಸ್ವದೇಶಿ ವಸ್ತುಗಳನ್ನೇ ಪ್ರೀತಿಸಿ, ಐಶ್ವರ್ಯವಂತರಾದ್ದರಿಂದ ನಿಮಗೆ ತುಂಬಾ ಶಕ್ತಿ ಇದೆ. ಒಳ್ಳೇದಕ್ಕೇ ಆಗಲಿ ಕೆಟ್ಟದಕ್ಕೇ ಆಗಲಿ, ನಿಮ್ಮ ಮಾದರಿಯನ್ನು ಬೇರೆಯವರು ಹಿಂಬಾಲಿಸುತ್ತಾರೆ. ನಿಮ್ಮ ಮಕ್ಕಳಲ್ಲೂ ಸ್ವದೇಶೀ ಭಾವನೆಯೇ ಬೆಳೆಯುವಂತೆ ಮಾಡಿ.

ನೀವು ಸಾಧಾರಣ ಉತ್ಪತ್ತಿ ಇರುವ ಮಧ್ಯಮ ತರಗತಿಯವರೋ—ಸುಖ ಭೋಗದ ವಸ್ತುಗಳು ನಿಮಗೆ ಬೇಡ. ನಿಮ್ಮ ಮನೆಗೆ ಬೇಕಾದ ಎಲ್ಲಾ ಸ್ವದೇಶಿವಸ್ತುಗಳು ನಿಮ್ಮ ಊರಲ್ಲೇ ಅಥವಾ ಪಟ್ಟಣದಲ್ಲೇ ಸಿಕ್ಕುತ್ತದೆ.

ನೀವು ವಿದ್ಯಾರ್ಥಿಯೋ? ಹಿಂದೂಸ್ಥಾನದಲ್ಲೇ ತಯಾರಾದ ಬಟ್ಟೆಯನ್ನು ಧರಿಸಿ. ಬೆಲೆಯುಳ್ಳ ಉಡುಪು ಬೇಡ. ಸ್ವದೇಶೀ ಕಾಗದ, ಪೆನ್ಸಿಲ್ ಪೆನ್, ನಿಬ್ಬು, ಟೋಪಿ, ಸ್ವದೇಶಿ ಸಾಬೂನು, ಸ್ವದೇಶಿ ಜೋಡು, ಸ್ವದೇಶಿ ಜೆಂಡುಗಳನ್ನೇ ಕೊಂಡುಕೊಳ್ಳಿ. ಸಮಯವಿರುವಾಗ ಸ್ವದೇಶೀ ಪ್ರಚಾರದ ಕೆಲಸ ಮಾಡಿರಿ. ನಿಮ್ಮ ಸ್ಕೂಲ್, ಕಾಲೇಜಿನಲ್ಲಿ ಒಂದು ಸ್ವದೇಶೀ ಅಂಗಡಿ ತೆರೆಯಿರಿ. ರಜವಿರುವಾಗ ಖಾದಿ ಮತ್ತು ಸ್ವದೇಶೀ ವಸ್ತುಗಳನ್ನು ಮನೆ ಮನೆಗೆ ತೆಗೆದುಕೊಂಡು ಹೋಗಿ ಮಾರಾಟ ಮಾಡಿರಿ.

([illegible])

Reg. No. M. 1550.
If not delivered please return to
"KODAGU" OFFICE MERCARA.

ಕೊಡಗು.

ಸತ್ಯೇನ ಧರ್ಮದಯಯೋ ವಿಪ್ರ ಏಕೇ ಪ್ರಯತ್ನತಃ ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ

ವಾರ್ಷಿಕ ಚಂದಾ ರೂ. ೩—೪—೦. ಸಂಪಾದಕ—ಮೂಚಿಮಂಡ ಯಂ. ಗಣಪ

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೭ | ಮಡಿಕೇರಿ, ಸನ್ ೧೯೩೭ನೇ ಇಸವಿ ಜೂನ್ ತಾರೀಕು ೪ ನೇ ಶುಕ್ರವಾರ. | ಸಂಚಿಕೆ



SARI PIN.



BRACELETS.

Gold Rs. 10

Set rubys forming any letter Rs. 12

NECKCHAINS.

EAR-RINGS.
(Thodus)

Cut-rubys Rs. 25 to 50

With diamond in centre Rs. 80 to 120

NOSE-RINGS.

Diamond in small size of best quality Rs. 35 & upwards according to size.

MARRIAGE PRESENTATIONS

Attractive and inexpensive articles ready in stock. Prompt execution. Details on enquiry free with catalogue. Numerous customers in Coorg thoroughly satisfied with reliable service. Testimonials pouring in.

Telegrams: 'PRECIOUS.'

V. Subramaniaier

Jeweller,

Telephone: 3145.

CATALOGUE ON ENQUIRY.

Post Box 423, Triplicane, P. O., MADRAS.

MARRIAGE PRESENTATIONS.

Estimates free on enquiry

Silver Guindys, Photo lockets, Dimond nose-screws, cut-ruby ear-rings, etc., etc., etc., in all prices. Very attractive. Prices most moderate.

Designs free on enquiry.

Pendant.



Tumblers with stand.



Fancy plate.

52—28

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್- ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲಿ)

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	26,800
ಜಮಾಖರ್ಚು ಲೇವಾದೇವಿ	—	2,50,301

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹಣ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ತನಿಖೆಯನ್ನು ಮಾಡುತ್ತಾರೆ.

ಪ್ರೆಸಿಡೆಂಟರು,	ಟ್ರೆಜರರ್
ಕೋಳಂಡ ಅಪ್ಪಯ್ಯನವರು ರಾವ್ ಬಹದ್ದೂರ್.	ಮನೆಯಪ್ಪಂಡ ಬೆಳ್ಯಪ್ಪನವರು.

ಸೆಕ್ರೆಟರಿ

ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಖು 1—7—1931.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು,

ಉತ್ತರ ಕೊಡಗಿಗೆ ಶ್ರೀ. ಚೌರಿರ ಮಾದಯ್ಯನವರು,

ಸಬ್ ಏಜೆಂಟರುಗಳು.

ಗಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು, (ಪಾರುಪತ್ತೇಗಾರ.)

ಕ್ಕ—ಎಮ್. ಆರ್. ವೆಂಕಪ್ಪಯ್ಯನವರು.

ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,

ಟಿನಾಡು—ಮೆ. ಪಿ. ಜಿ. ಮುದ್ದಪ್ಪಯ್ಯನವರು,

ಅರಮಣಮಾಡ ಪಿ ಕಾರ್ಯಪ್ಪನವರು,

& ತಿತಿಮತ್ತಿ—ಮೆ. ಜಿ. ಮಾದಪ್ಪಯ್ಯನವರು

ಪ್ಪ—ಮೆ. ಅಪ್ಪಚೆಟ್ಟೋಳಂಡ ಮಾಚ್ಚಯ್ಯನವರು,

ಪಿನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರಿಗೆ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮ್ಯಾನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ,

ಕ್ಕೆ ಸಿದ್ಧವಾಗಿವೆ.

ಮತ್ತು ದವಸ ಭಂಡಾರಗಳ ಪ್ರತಿ ಇರಬೇಕಾದ ಅಮಿತ ಜವಾ ಸಂಘದ ಮತ್ತು ದವಸ ಭಂಡಾ ಪುಸ್ತಕಗಳೂ, ಎಲ್ಲಾ ಸಹ ಭಂಡಾರಗಳ ಕೆಲಸಗಳನ್ನು ವಾಗಿರುವ, ರೂಲ್ಸಿಗನು ನಾವಾ ಫಾರಮುಗಳೂ, ಮಂಜೂರಾತಿ ಫಾರಮು ಗಳೂ, ಜಾಮೀನು ಕೇಷರ್ ಮರಾರು ಫಾ ಪುಸ್ತಕಗಳೂ, ಪ್ರೆಸ್ಸ್ ನಲ್ಲಿ ದೊರೆಯುತ್ತವೆ.

ಎ. ಪಿ.

ಸರಕಾರಿ ಛಿದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ಸರ್ವೇ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ.	ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.
ವಿಮೆದಾರರಿಗೆ ಕೊಟ್ಟಿದ್ದು—3231 ಜನರಿಗೆ 81 ಲಕ್ಷ ರೂ.	ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.

ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,78,322 ಜನರಿಗೆ 38 ಕೋಟಿ ರೂ.

ಹೋದಿನ ಕೆಲಸಗಳ್ಲಿವೂ ಪ್ರೀಮಿಯಂ ಉತ್ಪತ್ತಿ ವಿ ಶೇಕಡ 22.4ಕ್ಕಿಂತ ವಿಾರದ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದಾಗಿದೆ.

ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಉತ್ತೇಜನವನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬುದು ಇದರ ಹಿಂದಿನ ದಾಖ್ಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್ ಬೆಂಗಳೂರು,

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ಮೊಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೋ	ಪಾಟ್ನಾ	ಸುಕ್ಕೂರು
ಅಲ್ಲಾಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಡೌಲಗಾನ್	ಮಂಡಲೆ	ರಾಯಪುರ	ತಿರುವೆಂದ್ರಮ್
ಭೋಪಾಲ್	ಕರಾಚಿ	ಮಂಗಳೂರು	ರಾಂಚಿ	ವಿಶಾಖಪಟ್ಣ [52—13

ಕಟುಕಷಾಯಂ ಮಲೇರಿ ರಕೆ:—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಮಲೆ ಜ್ವರ, ದಿನಬಿಟ್ಟು ಬರುವ ಜ್ವರ, 3—4 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1—8—0; 3ಕ್ಕೆ ರೂ. 4—0—0; 6ಕ್ಕೆ ರೂ 7—8—0; 12ಕ್ಕೆ ರೂ. 14

ಮಲೇರಿ ಜ್ವರಕ್ಕೆ ರತ್ನಕಷಾಯ

ಚಂದನಾಸವ:—ಇದು ಪ್ರಮೇಹ ಮೂತ್ರಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಪಿಂಡಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಸುಣ್ಣ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು. ಇವುಗಳಿಗೆ ಪರಮ ಔಷಧ. ಚಿಕ್ಕ ಬಾಟ್ಲ 1, 3, 6ಕ್ಕೆ ರೂ 1—4—0 3—8—0; 6—12—0

ರೋಮನಾಶಿನಿ:— ಈ ಪುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು. ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ. 1, 1 ಡಜನಿಗೆ 3—8—0

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆಹುರಿ, ಕಣ್ಣುರಿ, ಕಿವಿಯಿಂದ ಕೀವು ಸೋರುವುದು ಕಿವುಡು, ಕಣ್ಣು ನೋವು, ಅಪಸ್ಮಾರ ಬಿದ್ದ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು. ಇವುಗಳೆಲ್ಲ ಖಂಡಿತ ಗುಣವಾಗುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ನಿತ್ಯವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಿಕ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಚಿಕ್ಕ ಸೀಸೆಗೆ ರೂ. 1, 3 ಸೀಸೆಗೆ 2—10—0. ಒಂದು ದೊಡ್ಡ ಸೀಸೆಗೆ ರೂ. 2, 3 ಸೀಸೆಗಳಿಗೆ 5—8—0

ವಿಳಾಸ:—ಮನೋಲ್ಲಾಸಿನಿ ಕಂಪೆನಿ,

52—1 ಕೆಳಿಂಗು ಶಾ ನೋಂ. 9 ಬೆಂಗಳೂರು.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತಂ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,

52—20 ಗಿರಿಗಾಂವ, ಮುಂಬಯಿ.

Printed & published by M. M. Ganapathy at "Kodagu" Press Mercara

ಜನರಲ್ ಅಷ್ಯೂರೆನ್ಸ್ ಸೊಸೈಟಿ.

ಅಜವಿರಾ ರ್.

ನಮ್ಮ ಆಯವ್ಯಯದ ಪಟ್ಟಿಯೇ ನಮ್ಮ ಅಭಿವೃದ್ಧಿಯನ್ನು ವ್ಯಕ್ತಗೊಳಿಸುತ್ತದೆ.

ವರ್ಷ	ಮೇಲ್ಪಟ್ಟ ವರ್ಷಾದಾಯ	ಮೇಲ್ಪಟ್ಟ ಮೂಲಧನ	ಖರ್ಚು ಪ್ರಮಾಣ ಶೇಕಡ
1911	46,248	49,442	82.9
1921	2,92,627	6,53,350	43 2
1931	12,50,000	40,00 000	28.2

ಬೋನಸ್ಸು.

ತುರ್ತು ನಫೆ ದೊರಕುವ ಜೀವಾವಧಿ ಪಾಲಿಸಿಗಳ ಮೇಲೆ ವರ್ಷ ಒಂದಕ್ಕೆ ಶೇಕಡ 22½

ಚೆನ್ನಾಗಿ ಕೆಲಸಮಾಡಿ ಅಭಿವೃದ್ಧಿ ಸ್ಥಿತಿಯಲ್ಲಿರುವ ಈ ಸೊಸೈಟಿಯಲ್ಲಿ ವಿಮೆ ಮಾಡಿ ಕಡಿಮೆ ಪ್ರೀಮಿಯಂ ಪಾವತಿ ಮಾಡುವ ಸೌಲಭ್ಯ ಹೊಂದಿ ಅಥವಾ ಈ ಕಂಪೆನಿಯ ಏಜಂಟರಾಗಿ ಕೆಲಸಮಾಡಿ ಉತ್ತಮ ಕಮಿಶನ್ ದರದ ಪ್ರಯೋಜನ ಹೊಂದಿ.

ಹೆಚ್ಚು ವಿಚಾರಗಳಿಗೆ ಈ ವಿಳಾಸಕ್ಕೆ ಬರೆಯಿರಿ:–

ಎ. ರಾಮಚಂದ್ರರಾವ್,
ಸುಪರಿಂಟೆಂಡೆಂಟ್,

52—5 ಮಿಂಟೋ ಆಸ್ಪತ್ರೆ ಬಳಿ,
ಬೆಂಗಳೂರು.

ಇಂಡಿಯಾ ಎಕ್ವಿಟೇಬಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

(ಸ್ಥಾಪಿಸಲ್ಪಟ್ಟದ್ದು 1908.)

ಪೋಲಿಸಿಗಳು ಕಳಕೊಳ್ಳುವಂತವುಗಳಲ್ಲ.

ಯಾವ ತಡೆಯೂ ಇಲ್ಲದೆ ಪ್ರತಿ ವರ್ಷವು ಬೋನಸ್ಸು.

ಹಕ್ಕು ಬಾಧ್ಯಸ್ಥರಿಗೆ ಸರಿಯಾಗಿ ಹಣ ಕೊಡಲ್ಪಡುವದು ಇಲ್ಲದಿದ್ದರೆ ಬಡ್ಡಿಯು ದೊರಕುವುದು.

ಹೆಡ್ಡ್ ಆಫೀಸು:—

102· ಕ್ಲೈವ್ ಸ್ಟ್ರೀಟ್, ಕಲ್ಕತ್ತಾ.

I. E., C. P. S. 12–1

ಗಮನಿಸಿರಿ! ಪರೀಕ್ಷಿಸಿರಿ!

ಅಂದವಾಗಿ ಫೋಟೋ ತೆಗೆಯುತ್ತಾರೆ.

ಧೀರ್ಘ ಕಾಲ ಬಾಳಿಕೆ ಬರುತ್ತೆ.

ಹದಿನಾಲ್ಕು ವರ್ಷಗಳಿಂದ ಮೈಸೂರಿನಲ್ಲಿ ... ಶಂಕರ್ ... ಕಂಪೆನಿ ... ದೇಶದ ಭಗಿನಿ ಬಾಂಧವರ ... ಬ್ರ್ಯಾಂಚ್ ಓಪನ್ ಮಾಡಿರುತ್ತಾರೆ.

ಇಲ್ಲಿ ದೀರ್ಘಕಾಲ ಬಾಳಿಕೆ ... ನಮೂನೆಯಲ್ಲಿ ಫೋಟೋ ತೆಗೆಯುವ್ವರು. ಫೋಟೋ ಎನ್ಲಾರ್ಜ್ ಮಾಡುವುದು, ಆಯಿಲ್ ಪೇಂಟಿಂಗ್ ಕೆಲಸಗಳು, ರಬ್ಬರ್ ಮೊಹರುಗಳ ಕೆಲಸಗಳು ಸಹಾ ನಡೆಯುತ್ತವೆ. ಕ್ಯಾಮರಾ ಮೊದಲಾದ ಫೋಟೋ ಕೆಲಸದ ಎಲ್ಲಾ ಸಾಮಾನುಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ. ಅಮೆಚೂರ್‍ಸ್ ಕೆಲಸಗಳು ಅಂದವಾಗಿ ತಯಾರಿಸಿ ಸಕಾಲಕ್ಕೆ ದೊರೆಯುತ್ತವೆ.

ದರಗಳ ಬಗ್ಗೆ ವಿಚಾರಿಸಿರಿ. ಒಂದಾವರ್ತಿ ಪರೀಕ್ಷಿಸಬೇಕಾಗಿ ವಿನಂತಿ.

ಶಂಕರ್ & ಕಂಪನಿ
ಕಾರೊನೇಶನ್ ಪಾರ್ಕ್,
12—8. ಮಡಿಕೇರಿ.



ಕಾರ್ಟ್ರಿ ಒಡೆದರೆ ಈಗಿನ ...

ಕೋವಿಗಳು, ಕತ್ತಿಗಳು, ಬಚಿಗಳು, ತೋಟಗಳು, ಗೇಪ್ಪುಗಳು, ಮದ್ದು ಮತ್ತು ಬೇಟೆಯ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS,
Largest Importers of Firearms and Ammuni
Cheapest priced firm in India,
24–12 210, Abdul Rehiman Street, BOMBAY.

ಎಂ. ಎಸ್. ಶಿದ್ದಪ್ಪ ಬ್ರದರ್ಸ್
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು

1. ಉತ್ತಮ ತರಹ ಒಂದು ಸೆಟ್ ಜರ್ಮನ್ ರೀಡ್ಸ್ ಹಾಕಿರುವ ಸಿಂಗಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 20—0—0
" ಮತ್ತು 22—8—0
2. ಡಿಟೋ ಉತ್ತಮ ತರಹ ಹಾರ್ಮೋನಿಯಂ " 1ಕ್ಕೆ ರೂ. 25—0—0
ಮತ್ತು 27—8—0
3. ಡಿಟೋ ಉತ್ತಮ ತರಹವನ್ನು, ದೂಳು ಬೀಳದಂತೆ ಕೇಸಿನ ಮೇಲೆ ಪೂರ್ತಿ ಮುಚ್ಚಳವುಳ್ಳ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ ರೂ. 27—8—0
4. ಬಾಳಿಕೆಯೂ, ಬಂದೋಬಸ್ತೂ, ಸುಸ್ವರವುಳ್ಳದ್ದೂ, ಅನೇಕ ವರ್ಷಗಳ ವರೆಗೆ ಬಾಳಿಕೆ ಬರತಕ್ಕದ್ದೂ ಆದ ಹೊಸದಾಗಿ ಸಪ್ಲೈ ಆಗಿರುವ ಫ್ರೆಂಚ್ ರೀಡ್ಸ್ ನಮೂನೆ ಇರುವ ನಮ್ಮ ಹೆಸರಿನ ರೀಡ್ಸ್ ಹಾಕಿರುವ "ಸಿದ್ದಪ್ಪಾಸ್ ಫ್ಲೂಟ್" ಸಿಂಗಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 42—8—0
5. ಉತ್ತಮ ತರಹ 2 ಸೆ... ರೀಡ್ಸ್ ಹಾಕಿರುವ, ... ಕೇಸಿನ ಮೇಲೆ ... ಡಬ್ಬಲ್ ರೀಡ್ಸ್ ... ಉತ್ತಮ ತರಹ 2 ... ಮೇಕರ್ ರೀಡ್ ... ಕ್ಕೆನಿಂದಾ... ಗಳೀ ಬ... ತಯಾರಿ... ಡಬ್ಬಲ್ ... ಹಾರ್...

ನಮ್ಮ ಟಿಂಬರ್ ಡಿಪೋನಲ್ಲಿ ಕಟ್ಟಡಗಳಿಗೂ, ಫರ್ನಿಚರ್ ತಯಾರಿಸಲೂ ಬೇಕಾದ ಎಲ್ಲಾ ನಮೂನೆ ನಾಟಾಗಳನ್ನು ಸುಲಭ ದರದಿಂದ ಮಾರಗಿಟ್ಟಿರುವುದಲ್ಲದೇ, ಗಿರಾಕಿಗಳು ಅಪೇಕ್ಷಿಸುವ ಸೈಜಿಗೆ ಕುಯಿಸಿಯೂ ರಿಯಾಯಿತಿ ದರದಿಂದ ಸಪ್ಲೈ ಮಾಡುತ್ತೇವೆ. ಹೆಚ್ಚಿಗೆ ವಿಷಯಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

IN THE COURT OF THE DISTRICT JUDGE OF COORG.

Civil Original Suit No 3 of 1931

Plaintiff VS. *Defendant*

P. B. Aiyamma. **P. A. Nanjappa.**

Notice is hereby given that in the above said suit a preliminary decree has been passed by this court for the sale of the properties-movables and immovables of the partnership concern known as Sri Cauvery Bus Service which has been since dissolved as per order of the court.

The sale will be by public auction and the properties will be put up for sale either in one lot or by separate lots in the premises of the court of the Subordinate Judge of Coorg on the 6th day of June 1932 at 12 noon

At the sale, the public generally and either of the parties are invited to bid either personally or by duly authorised agent.

CONDITIONS OF SALE.

1. The particulars specified in the schedule below have been stated to the best of the information of the court but the court will not be answerable for any error, misstatement or omission in the proclamation.

2. The amount by which the biddings to be increased shall be determined by the officer conducting the sale in the event of any dispute, arising as to the amount bid or as to the bidder, the lot shall at once be again put up to auction.

3. The highest bidder shall be declared to be the purchaser of any lot, provided always that he is legally qualified to bid and provided that it shall be in the discretion of the court or officer holding the sale to decline acceptance of the highest bid when the price offered appears so clearly inadequate as to make it advisable to do so.

4. For reasons recorded, it shall be in the discretion of the officer conducting the sale to adjourn it subject always to the provisions of rule 69 of order XXI.

5. The person declared to be the purchaser shall pay immediately after such declaration a deposit of 25 per cent on the amount of his purchase money to the officer conducting the sale and in default of such deposit the property shall forthwith be put up again and resold.

6. The full amount of purchase money shall be paid by the purchaser before the court closes, on the 15th day after the sale of the property, exclusive of such day or if the 15th day be a Sunday or other holiday, then on the first office day after the 15th day.

7. In default of payment of the balance of purchase money within the period allowed, the property will be resold after the issue of a fresh notification of sale. The deposit after defraying the expenses of the sale, may, if the court thinks fit, be forfeited to Government and defaulting purchaser shall forfeit all claim to the property or to any part of the sum for which it may be subsequently sold.

8. The purchaser shall get the possession of all the properties sold as soon as the full money is paid.

Given under my hand and the seal of the court this 9th day of April 1932.

(Sd) L. J. MACIVER.
District Judge.

SCHEDULE I.
IMMOVABLE PROPERTY.

[Numb]er	Description of property to be sold	Municipal block Number & Survey Number	Area	Assessment	Name of owner	Remarks
				Rs. A. P.		
	[...]ed house	Block No. 11 Mercara Muncipality Sy. No. 22.	0·07	11 4 6	Director of Sri Cauvery Bus Service	The property is estimated at Rs. 10,000
		do. Sy. No. 23.	0·15	32 8 0		
		do. Sy. No. 23/1	1·20	0 0 0		
		do. Sy. No. 24.	0·01	0 10 0		

SCHEDULE II.
MOVABLE PROPERTY.

[Descripti]on of property	Approximate value	Remarks
	Rs. A. P.	
	11,000 0 0	* 6 Cheverolet buses
[...] car	250 0 0	
[...]s etc.	645 0 0	2 Ford buses
	264 0 0	2 Willeys buses
	23 0 0	
	94 0 0	
	54 0 0	
	370 0 0	
	10 0 0	
	12,710 0 0	

ಮುಂಬಯಿಯಲ್ಲಿನ ಗಡಿಬಿಡಿಗಳು.

ಹಿಂದೂಸ್ಥಾನದೊಳಗಿನ ಜಾತೀಯ ಸಮಸ್ಯೆಯು ಮತ್ತೂ ನಿವಿಡತರವಾಗುತ್ತಾ ಬರುವ ವಿಷಯವನ್ನು ನಾವು ಈ ಮೊದಲೇ ಹಲವು ಲೇಖನಗಳಲ್ಲಿ ಸೂಚಿಸಿದ್ದೇವೆ. ಕೆಲವು ವರ್ಷಗಳ ಹಿಂದೆ ಬರೇ ಹಿಂದೂ ಮುಸಲ್ಮಾನನೆಂಬ ಭೇದ ಮಾತ್ರವಿದ್ದಿತು. ಆದರ ಅನಂತರ ಈ ಜನತೆಯನ್ನು ವಿಭಾಗಿಸುವ ತಂತ್ರಗಳು ಹಿಂದೂಗಳನ್ನು ಪಂಗಡ ಪಂಗಡಗಳಾಗಿ ಮಾಡಲಾರಂಭಿಸಿತು. ಇದು ಬ್ರಾಹ್ಮಣ ಬ್ರಾಹ್ಮಣೇತರರೆಂಬ [illegible]ವದಿಂದ ಮೊದಲು ಹೊರಬಿದ್ದಿತು; ಈಗ ಅಸ್ಪೃಶ್ಯರೂ ಜಾತಿಯ ದ್ವೇಷಾಸೂಯೆಗಳ ಮತ್ತು ಪ್ರತ್ಯೇಕತೆಯ ಗೊಂದಲದಲ್ಲಿದ್ದಾರೆ. ಈ ಜಾತೀಯ ಭೇದಗಳ ಬೆಳವಣಿಗೆಯ ಇತಿಹಾಸವನ್ನು ಸರಿಯಾಗಿ ಪರಿಶೀಲಿಸಿದರೆ ಇವುಗಳಲ್ಲಿ ಸ್ವಾರ್ಥಸಾಧನೆಯ ಉದ್ದೇಶದ ಕೈಯು ಸ್ಪಷ್ಟವಾಗಿ ಕಂಡುಬರುತ್ತದೆ.

ಮುಂಬಯಿಯಲ್ಲಿ ಈಗ ನಡೆದ ಅನಾಹುತಗಳ ಕತೆಗಳನ್ನು ನೋಡಿದರೆ ಭಯಂಕರವಾಗಿ ಕಾಣುತ್ತದೆ. ಮುಂಬಯಿಯಲ್ಲಿ ಹಲವು ತರದ ಅನಾಹುತಗಳು ಈ ಮೊದಲೂ ನಡೆದಿರುವವು. ಈ ಬಾರಿಯದು ಹಿಂದಿನವುಗಳಿಗಿಂತ ಕಡಿಮೆ ತರದ್ದಾಗಿರುವುದಿಲ್ಲ. ಎಂದಿಗಿಂತಲೂ ಈ ಬಾರಿ ಇದು ಜೋರಾಗಿ ಯದೋ ಎಂಬುದು ಇನ್ನೂ ತಿಳಿಯಬೇಕಷ್ಟೆ.

ಮುಂಬಯಿಯಲ್ಲಿ ಒಂದು ಸಮಯದಲ್ಲಿ ಜಾತೀಯ ಭೇದಗಳು ಅಷ್ಟು ಹೆಚ್ಚಾಗಿರಲಿಲ್ಲ. ಇಂಥಾ ಜಾತೀಯ ಗೊಂದಲಗಳು ಉತ್ತರ ಹಿಂದೂಸ್ಥಾನದಲ್ಲಿ ಹೆಚ್ಚಾಗಿ ಇದ್ದುವು. ಆದರೆ ಇತ್ತೀಚೆಗೆ ಈ ಜಾತೀಯತೆಯ ಭಾವವು ಮುಂಬಯಿಯ ಪ್ರಜೆಗಳ ಅನ್ಯೋನ್ಯದಲ್ಲಿ ಕೂಡ ಕನ್ನಂಟುಮಾಡಿದೆ. ಇದರ ಹೆಚ್ಚಿನ ಜವಾಬ್ದಾರಿಯು ಕೆಲವು ಮುಸಲ್ಮಾನ್ ಧುರೀಣರ ಮೇಲೆ ಬೀಳಬೇಕಾಗಿದೆ. ಮುಖ್ಯವಾಗಿ ಕಳೆದ ಮುಜೂರ ನಮಸ್ಕಾರ ಸಮಯದಲ್ಲಿ ಏನಾಕಾರಣವುಂಟಾದ ಜಾತಿಯ ಗಡಿಬಿಡಿಗಳಿಗೆ ಮೌಲಾನಾ ಶೌಕತ್ ಅಲಿಯವರ ಅಪಭ್ರಂಥಾತ ವಾಕ್ಪಟುತ್ವವೂ ಕಾರಣವಾಗಿರಬಹುದೆಂದು ಊಹಿಸಲಾಗಿದೆ. ಮೌಲಾನರು ಇತ್ತೀಚೆಗೆ ಮುಂಬಯಿಯಲ್ಲಿ ಒಂದು ಜಾತಿಯ ಅನ್ಯೋನ್ಯಕ್ಕೆ ಬಾಧಕ ಬರುವಂಥ ಭಾಷಣಗಳನ್ನೀಯುತ್ತಿದ್ದಾರೆ. ಅಲ್ಲದೆ ಇಲ್ಲದಕಡೆಯಲ್ಲ ವಿದ್ವೇಷವನ್ನು ಪ್ರೇರಿಸಲು ಯತ್ನಿಸುತ್ತಾರೆ. ಕಾಂಗ್ರೆಸ್ಸಿನ ಪಿಕೆಟಿಂಗಿನ ವಿಚಾರದಲ್ಲಿ ಅವರು—ಕಾಂಗ್ರೆಸು ಮುಸಲ್ಮಾನ್ ಅಂಗಡಿಗಳನ್ನು ಪಿಕೆಟು ಮಾಡುತ್ತಾರೆ, ಆ ಬಗ್ಗೆ ಮುಸಲ್ಮಾನರು ಹೆಚ್ಚಿನ ಆಲೋಚನೆ ಮಾಡಬೇಕಾಗುತ್ತದೆ ಎಂಬರ್ಥದಲ್ಲಿ ಹೇಳಿದುದನ್ನು ಅದಕ್ಕೆ ಪ್ರತಿಯಾಗಿ ಮುಸಲ್ಮಾನರೊಬ್ಬರು—ಇದು ಬರೇ ಪೋಕರಿ ಸ್ವಭಾವದ ಮಾತು. ಕಾಂಗ್ರೆಸು ಹಿಂದೂ ಮುಸಲ್ಮಾನ ಭೇದ ಮಾಡಿಲ್ಲ; ಮೌಲಾನರು ಕಾಂಗ್ರೆಸು ಪಿಕೆಟು ಮಾಡುತ್ತದೆಂದು ಹೇಳುವ ಮುಸಲ್ಮಾನ ಅಂಗಡಿಯ ಮಾಲಿಕರಲ್ಲಿ ಹಿಂದೂಗಳು ಹಲವರಾಗಿ ಮುಸಲ್ಮಾನರು ಒಬ್ಬೇ ಆಗಿರುವುದರಿಂದ ಹೆಚ್ಚಿನ ನಷ್ಟವು ಹಿಂದೂಗಳಿಗೇನೇ ಎಂದು ಹೇಳಿದುದನ್ನು ನೋಡಿದರೆ ಶೌಕತ್ ಅಲಿಯವರು ಯಾವ ರೀತಿಯಲ್ಲಿ ಜಾತಿಯ ಅನ್ಯೋನ್ಯವು ಕೆಡುವುದರಲ್ಲಿ ಸಹಾಯಕರಾಗುತ್ತಾರೆಂಬುದು ಸ್ಪಷ್ಟವಾಗುವುದು.

ಈಗಿನ ಈ ತರದ ಜಾತಿಯ ವಿಭಾಗಣೆ ಮತ್ತು ವಿದ್ವೇಷದಲ್ಲಿ ಸರಕಾರದ ಜವಾಬ್ದಾರಿಯೂ ಇಲ್ಲವೆಂದು ಹೇಳಲಿಕ್ಕಾಗುವುದಿಲ್ಲ. ಕಾಂಗ್ರೆಸ್ ಚಳವಳಿವು ಬಲಗೊಂಡುದರಿಂದ ಅದನ್ನು ಪ್ರತ್ಯೇಕಪಡಿಸಿ ಅದನ್ನು ಬಲಗುಂದಿಸಲಿಕ್ಕೆ ಜಾತಿಯ ವಿಭಾಗಣೆಯೇ ಉತ್ತಮ ಉಪಾಯವೆಂದು ಯೂರೋಪಿಯನರೂ, ಸರಕಾರವೂ ತಿಳಕೊಂಡಂತೆ ತೋರುತ್ತದೆ. ಮುಖ್ಯವಾಗಿ ಕಾಂಗ್ರೆಸು ಚಳವಳಿವು ಹಿಂದೂಗಳದೆಂದು ತೋರಿಸಲು ಪ್ರಯತ್ನ ನಡೆಯುತ್ತಿದೆ. ಆದಕ್ಕಾಗಿ ಹಿಂದೂ ಮುಸಲ್ಮಾನ್ ಭೇದ, ಅಸ್ಪೃಶ್ಯರ ಚಳವಳಕ್ಕೆ ಪ್ರೋತ್ಸಾಹ ಇತ್ಯಾದಿ ಕೊಡಬೇಕಾಗುತ್ತದೆ. ಇತ್ತೀಚೆಗಿನ ಸರಕಾರದ ಧೋರಣೆಯನ್ನು ನೋಡಿದರೆ ಎಲ್ಲೆಲ್ಲಿಯೂ ಮುಸಲ್ಮಾನರಿಗೆ ಹೆಚ್ಚಿನ ಪ್ರಾಧಾನ್ಯವು ದೊರಕುತ್ತಿದೆ. ಮುಸಲ್ಮಾನರಿಗೆ ಹೆಚ್ಚಿನ ಪ್ರಾಧಾನ್ಯವು ದೊರಕಿದರೆ ದೊಡ್ಡದಿರಲಿಲ್ಲ. ಆದರೆ ಅದು ಹಿಂದೂ ಮುಸಲ್ಮಾನ ಭೇದಗಳು ಬೆಳೆಯಲು ಕೊಡಲ್ಪಡುವ ಲಂಚವಾಗಿ ಪರಿಣಮಿಸುವುದರಿಂದಲೇ ನಾವು ಸರಕಾರದ ಧೋರಣೆಯನ್ನು ಖಂಡಿಸಬೇಕಾಗುತ್ತಿದೆ.

ಸರಕಾರದ ಈ ತರದ ಧೋರಣದಿಂದ ಅಲ್ಪಸಂಖ್ಯಾಕರೆನಿಸಿ ಹಿಡಿದು ಈ ಜಾತಿಗಳು ತಮ್ಮ ದುಸ್ಸ್ವಯಾಗಿ ನಡೆಯಬಹುದೆಂಬ ಧೈರ್ಯವನ್ನೂ ತಾಳಿದಂತೆ ತೋರುತ್ತದೆ. ಅಲ್ಲಿಯೂ ಕಾನ್‌ಪುರ ಗಲಭೆಯಲ್ಲಿ ಅಲ್ಲಿ ದ. ಮೇಜಿಸ್ಟ್ರೇಟು ಹಿಂದೂಗಳಿಗೆ ಹೇಳಿದಂತೆ ನಿಮ್ಮ ರಕ್ಷಣೆಗೆ ಗಾಂಧಿಯವರ ಬಳಿಗೆ ಹೋಗಿ ಎಂಬಂಥಾ ಮಾತುಗಳು ಜಾತಿಯ ಪೋಕರಿಗಳಿಗೆ ತುಂಬಾ ಪ್ರೋತ್ಸಾಹವನ್ನುಂಟುಮಾಡುವಂಥಾದ್ದು. ಸರಕಾರವು ಈ ತರದಲ್ಲಿ ವರ್ತಿಸಿದರೆ ಹಿಂದೀ ಸಾರ್ವಜನಿಕ ಜೀವನವು ಅಸಹ್ಯಕರವಾಗಿ ಪರಿಣಮಿಸುವುದರಲ್ಲಿ ಆಶ್ಚರ್ಯವಿ[ಲ್ಲ]

ಜಾ. ಜಾತಿಗಳು ಹೊಡೆದಾಡಿಕೊಳ್ಳುವುದು, ಬ್ರಿ[ಟಿಷ್] ಸಾಮ್ರಾಜ್ಯದ ರತ್ನಪ್ರಾಯವಾದ ಹಿಂದೂಸ್ಥಾನವನ್ನು [...]ಕ್ಕೈಯೊಳಗಿಂದ ತಪ್ಪಿ ಹೋಗದ ಹಾಗೆ ನೋಡಿಕೊಳ್ಳ[...] ಸುಲಭೋಪಾಯವಾಗಿರಬಹುದು. ಆದರೆ ವಿಶ್ವವು [...] ಮತ್ತು ಪ್ರತಿಕ್ರಿಯೆಗಳ ಸರಣಿಯಾಗಿದೆ. ಆದುದರಿಂ[ದ] [...] ತರದ ಧೋರಣದಿಂದ ಉಂಟಾದ ಕ್ರಿಯೆಯ ಪ್ರತಿಕ್ರಿಯೆ ಒಮ್ಮೆಂದೊಮ್ಮೆಯೇ ಮೇಲೆದ್ದರೆ ಎಲ್ಲಿ ನಿಲ್ಲಬಹು[ದು] ಹೇಳಲಾಗುವುದಿಲ್ಲ. ಬ್ರಿಟಿಷ್ ಸಾಮ್ರಾಜ್ಯವು ಈ [...] [illegible] ಆಗಬಹುದು.

'ಸ್ವ. ಮ[...]'

ನೋಟೀಸು.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇ ನೆಂದರೆ:—

ಸೆಂಟ್ರಲ್ ಸಹಕಾರಿ ಬ್ಯಾಂಕಿಗೆ ತಪ್ಪು ನಂಬರಿನ ಒಂದು ನೂರು ರೂಪಾಯಿಯ ಒಂದು ನೋಟು ಬಂದಿದೆ. ಸದರಿ ನೋಟಿನ ಬಲಪಾರ್ಶ್ವದ ನಂಬರು $\frac{B}{67}$ 751479, ಎಡಪಾರ್ಶ್ವದ ನಂಬರು $\frac{B}{67}$ 759479.

ಮೇಲ್ಕಂಡ ನಂಬರುಗಳಿರುವ ನೋಟುಗಳ ಇನ್ನೆರಡು ಭಾಗಗಳಿರುವವರು ಬ್ಯಾಂಕಿಗೆ ಬರೆದರೆ ಸರಿಪಡಿಸಿಕೊಳ್ಳಬಹುದು.

ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ, 26.5.32.	ಸಿ. ಜಾನ್. ವೆಂಕಟಯ್ಯ. (ಗೌರವ ಕಾರ್ಯದರ್ಶಿ)

ವರ್ತಮಾನ ಸಂಗ್ರಹ.

ಒಳದೇಶ.

ಮಡಿಕೇರಿಯಲ್ಲಿ ತಾ. 20ರಿಂದ 26ರ ವರೆಗೆ 4.61 ಇಂಚು ಮಳೆಯಾಗಿದೆ.

'ಕೊಡಗು' ಕಂಪೆನಿಯ ಡೈರೆಕ್ಟರುಗಳ ಮೀಟಿಂಗೊಂದು ಜೂನ್ ತಾ. 5ರಲ್ಲಿ ಕಂಪೆನಿಯ ಆಫೀಸಿನಲ್ಲಿ ನಡೆಯುವುದು.

ಚೀಫ್ ಕಮಿಷನರವರು ಜೂನ್ ತಾ. 6 ರಲ್ಲಿ ಕೊಡಗಿನಿಂದ ಬೆಂಗಳೂರಿಗೆ ತೆರಳುತ್ತಾರೆಂದು ತಿಳಿಯುತ್ತೇವೆ.

ಎಗ್ಸಿಕ್ಯೂಟಿವ್ ಇಂಜಿನಿಯರರಾದ ಮಿ. ಬರ್ಗರವರು 5 ತಿಂಗಳು ರಜೆಯಲ್ಲಿ ಹೋಗಿರುವದರಿಂದ ಮಿ. ಕೋರನ್‌ರವರು, ಅವರ ಕೆಲಸದೊಂದಿಗೆ ಮಿ. ಬರ್ಗರವರ ಕೆಲಸವನ್ನು ನೋಡುವದಾಗಿ ತಿಳಿಯುತ್ತೇವೆ.

ಪೂಜಾರಿ ರಾಮಪ್ಪನವರು ಮತ್ತು ಚೆಪ್ಪುಡಿರ ಪೂಣಚ್ಚನವರು ಕಾನೂನು ಭಂಗದ ಸಂಬಂಧ ಮೂರು ತಿಂಗಳ ಕಠಿಣ ಜೈಲು ವಾಸವನ್ನು ಮುಗಿಸಿ ಮೊನ್ನೆ ತಾನೆ ಬಿಡುಗಡೆಯಾಗಿ ಕೊಡಗಿಗೆ ಬಂದಿರುತ್ತಾರೆಂದು ತಿಳಿಯುತ್ತೇವೆ.

ಎರಡು ಮೂರು ದಿವಸಗಳ ಹಿಂದೆ ಮೈಸೂರು ಲೈನಿನ ಗಣೇಶ ಮೋಟಾರು ಸರ್ವಿಸು ಹೇಗೋ ಆಕಸ್ಮಿಕವಾಗಿ ಆನೆಚೌಕೂರಿನ ಬಳಿ ಮಗುಚಿ ಬಿತ್ತು. ಆದರೆ ಪ್ರಯಾಣಿಕರ್ಯಾರಿಗೂ ಯಾವ ಅಪಾಯವೂ ಸಂಭವಿಸಿರುವುದಿಲ್ಲವಂತೆ.

ಕಳೆದ ಸೀನಿಯರ್ ಕೇಂಬ್ರಿಜ್ ಪರೀಕ್ಷೆಯಲ್ಲಿ ಮಿ. ಕೋದಂಡ ಕೆ. ಬೆಳ್ಯಪ್ಪನವರು ಪ್ರಸಿಡೆನ್ಸಿಯಲ್ಲಿ ಮೊದಲನೆಯದಾಗಿ ತೇರ್ಗಡೆಯಾಗಿರುವರು. ಮತ್ತು ಮಿ. ಕೊಳುವಂಡ ಟಿ. ಮಾದಪ್ಪನವರು ಸಹ ಪಾಸಾಗಿರುವರೆಂದು ತಿಳಿಸಲು ಸಂತೋಷಿಸುತ್ತೇವೆ.

ಕಳೆದ ಇಂಟರ್ ಮೀಡಿಯೇಟ್ ಪರೀಕ್ಷೆಯಲ್ಲಿ ಮಿ. ಅಬೆಲ್ ಸೋರೋನ್ಸರವರು ಪೂರ್ತಿಯಾಗಿಯೂ ಮತ್ತು ಮಂಡೇಡ ಕೆ. ಚಂಗಪ್ಪನವರು, ಪೊಳೇಟಿರ ಡಬ್ಲ್ಯು. ನಾಣಯ್ಯನವರು ಮತ್ತು ಹಫೀಸ್ ರಹಿಮಾನ್‌ರವರು 1 ಮತ್ತು 2 ನೇ ಭಾಗದಲ್ಲಿಯೂ ತೇರ್ಗಡೆಯಾಗಿರುವರೆಂದು ಇತ್ತೀಚೆಗೆ ತಿಳಿದು ತುಂಬಾ ಸಂತೋಷಿಸುತ್ತೇವೆ.

ತಾ. 26—5—32ನೇ ಸಾಯಂಕಾಲ ಕೊಡಗು ಜಮಾನ್ದಾರರ ಸಂಘದ ಹಾಲ್‌ನಲ್ಲಿ ಮದರಾಸಿನ ಜಮ್ಮೈಲ ಎರೇಬಿಕ್ ಕಾಲೇಜಿನ ಪ್ರಿನ್ಸಿಪಲರಾದ ಮಿ. ಅಫಜುಲ್‌-ಉಲೀಮ ಮಾಲಾನ ಮೌಲ್ವಿ ಸೈಯದ್ ಅಬ್ದುಲ್ ವಹಾಬ್ ಸಾಹೇಬ್ ಬೊಕಾರಿ ಯಂ. ಎ. ಎಲ್. ಟಿ. ಯವರು 'ಈಗಿನ ಇಂಡಿಯಾದ ಪರಿಸ್ಥಿತಿ'ಯನ್ನು ಕುರಿತು ಬಹು ಸ್ವಾರಸ್ಯವಾದ ಭಾಷಣವನ್ನು ಮಾಡಿದರು.

ತಾ. 25 ರಿಂದ ಮಡಿಕೇರಿ ಮಹದೇವಪೇಟೆಯ ಕಂಚಿಕಟ್ಟೆ ದರ್ಮಚಕ್ರದಲ್ಲಿ ಸಿದ್ಧಲಿಂಗ ವೈದ್ಯಶಾಲಾ ಪುತ್ತೂರು, ಇವರ ಪರವಾಗಿ ಒಂದು ಧರ್ಮಾರ್ಥ ಆಯುರ್ವೇದಿಕ್ ಆಸ್ಪತ್ರೆಯು ತೆರೆಯಲ್ಪಟ್ಟಿದೆ. ಮೈಸೂರು ವಿದ್ವಾನ್ ಯಂ. ನಾರಾಯಣಶಾಸ್ತ್ರಿಯವರಿಂದ ಪರೀಕ್ಷಿಸಿ ಔಷಧಿಯು ಕೊಡಲ್ಪಡುವುದು. ಆಸ್ಪತ್ರೆಯು ಬೆಳಗ್ಗೆ 8 ಗಂಟೆಯಿಂದ 11 ಗಂಟೆಯ ವರೆಗೂ ಸಾಯಂಕಾಲ 2½ ಗಂಟೆಯಿಂದ 5 ಗಂಟೆಯವರೆಗೂ ತೆರೆಯಲ್ಪಟ್ಟಿರುವುದು.

ಈ ಕೆಳಗಿನ ಮೇರೆ ಕಮಿಷನರ ಆಫೀಸಿನಿಂದ ಒಂದು ನೋಟೀಸ್ ನಮಗೆ ಬಂದಿದೆ.

ಮದ್ರಾಸ್ ಅಧಿಪತ್ಯದ ಇಂಡಿಯನ್ ಪೋಲೀಸ್ ಸರ್ವಿಸಿಗೆ ಒಬ್ಬ ಬ್ರಾಹ್ಮಣೇತರನನ್ನೂ, ಒಬ್ಬ ಮುಸಲ್ಮಾನನನ್ನೂ ಚುನಾಯಿಸಬೇಕೆಂತ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಮಂಜೂರುಮಾಡಿರುತ್ತಾರೆ. ಇದಕ್ಕಾಗಿ ಒಂದು ಪರೀಕ್ಷೆ ನಡಿಸಿ ಅದರ ಫಲಿತಾಂಶ ನೋಡಿ ಚುನಾಯಿಸುವುದಾಗಿದೆ. ಅಪೇಕ್ಷೆ ಇರುವವರು ಕಮಿಷನರ ಮೂಲಕ ಮದ್ರಾಸ್ ಸರಕಾರದ ಚೀಫ್ ಸೆಕ್ರೆಟರಿಯವರಿಗೆ ಅರ್ಜಿ ಬರೆದುಕೊಳ್ಳಬೇಕು. ಕಮಿಷನರ ಆಫೀಸಿಗೆ ತಾ. 10—6—32 ರ ಒಳಗೆ ಅರ್ಜಿ ಕೊಡಬೇಕು. ಹೆಚ್ಚಿನ ಸಂಗತಿಗಳನ್ನು ಕಮಿಷನರ ಆಫೀಸಿನಿಂದ ತಿಳಿದುಕೊಳ್ಳಬಹುದು.

ಹಿಂದೂದೇಶ.

ಬೊಂಬಾಯಿಯ ಹಿಂದೂ—ಮುಸ್ಲಿಮ್ ಗಲಭೆಯ ನಡುವೆ 94,370 ರೂ. ಮೌಲ್ಯದ ಭಂಗಾರವು ಸುಸುಳಿ, ಎದೇ ಕಳೆಗೆ ತೀರಿ ಹೋಯಿತು.

ಒಳಸಂಚಿನ ಕೂಟದ ಯಶಪಾಲನೆಂಬವನು ಪೋಲೀಸರ ಹಿಡಿತದಿಂದ ತಪ್ಪಿ ಹೋಗಿದ್ದನು. ಆತನಿಗೆ ಆಶ್ರಯಕೊಟ್ಟ ವಳೆಂಬ ಅಪವಾದನೆಯಲ್ಲಿ ಸಾವಿತ್ರೀದೇವಿ ಎಂಬ ಮಹಿಳೆಯನ್ನು ಅಲ್ಲಹಾಬಾದಿನಲ್ಲಿ ವಿಚಾರಿಸಿ 5 ವರ್ಷದ ಸಜೆ ವಿಧಿಸಿದ್ದಾರೆ.

ಚಿತ್ತಗಾಂಗ್ ಟಪ್ಪಾಲಾಫೀಸಿನ ಪೇದೆಯು ಕಾಗದ ಪತ್ರಗಳನ್ನು ಪೃಥಕ್ಕರಿಸುತ್ತಿದ್ದಾಗ ಒಂದು ಪಾರ್ಸಲು ಪಟಾಕಿಯಂತೆ ಸಿಡಿದು, ಗಾಯಗೊಂಡನು. ಒಂದು ಚಿಕ್ಕ ಬಾಂಬು ಮಡಗಿತ್ತೆಂದು ತಿಳಿಯಲಾಗಿದೆ.

ಲಾಹೋರಿನ ಹಿಂದೂ ಬಾಲಿಕೆಯೋರ್ವಳು ಕ್ರೈಸ್ತರ ಕಾನ್ವೆಂಟಿಗೆ ಹೋಗುವ (ಬಿ. ಎ. ಕಲಿಯುವ) ವಿದ್ಯಾರ್ಥಿನಿಯಾಗಿದ್ದವಳು, ಕ್ರೈಸ್ತ ಸನ್ಯಾಸಿನಿಯಾಗುವ ಇಚ್ಛೆಯನ್ನು ತನ್ನ ಹೆತ್ತವರಿಗೆ ತಿಳಿಸಿದುದು, ಹಿಂದೂ ಸಮಾಜದಲ್ಲಿ ದೊಡ್ಡ ಕೋಲಾಹಲವನ್ನೆಬ್ಬಿಸಿದೆ.

ನಾಗಪುರದಲ್ಲಿ ಶ್ರೀ. ಅಭಯಂಕರರ ಮೋಟಾರು, ದಂಡ ವಸೂಲಿಗಾಗಿ 1600 ರೂ. ಗಳಿಗೆ ಏಲಂ ಮಾಡಲ್ಪಟ್ಟಿತಷ್ಟೆ? ಕೊಂಡುಕೊಂಡವರು ಡಾ. ಕೊಲ್ಹಾಟ್ಕರ್ ಎಂಬವರು; ಅದನ್ನೀರದೆ ಮನೆಗೆ ಕಳುಹಿದರು; ತಿರುಗಿ ಅಭಯಂಕರರಿಗೆ ಕೊಡುವರಂತೆ.

ಮಛಲೀ ಪಟ್ಟದ ಒಂದು ಮನೆ ಬಾವಿಯಲ್ಲಿ ನಾಲ್ಕು ದಿನಗಳಿಂದ ನೀರಿನ ಮೇಲೆ ಗುಳ್ಳೆಗಳೆದ್ದುದು ವಿಚಿತ್ರವೆಂದು ತೋರಲು, ನಾಲ್ಕನೇ ದಿನ ಕೆಳಗಿಳಿದು ನೋಡಲಾಗಿ ಒಂದು ಹಿತ್ತಾಳೆಯ ಪ್ರತಿಮೆ ದೊರೆಯಿತು. ಪ್ರತಿಮೆ ಇಸ್ಲಾಂ ಪುರಾತನದಂತೆ ತೋರುವುದು ಊರಲ್ಲೆಲ್ಲಾ ವಿಶೇಷ ಕೋಲಾಹಲ. ಪ್ರತಿಮೆಯನ್ನು ಹಿಡಿದುಕೊಂಡು ಒಂದು ಮೆರವಣಿಗೆಯೂ ಆಯಿತು.

ವಿಚಾರಣೆಗೊಳಗಾದ ಒಬ್ಬ ಕೈದಿಯನ್ನು ಚಿತ್ರಹಿಂಸೆಗೊಳಪಡಿಸಿ ಕೊಂದೇಬಿಟ್ಟರೆಂದು ಅಪ್ಯುಕ್ತನಾದ ಒಬ್ಬ ಸಬ್ ಇನ್ಸ್‌ಪೆಕ್ಟರಿಗೆ 10 ವರ್ಷ, 3 ಕಾನ್ಸ್‌ಟೇಬಲರಿಗೆ 3 ವರ್ಷಗಳ ಸಜೆ ವಿಧಿಸಲಾದುದನ್ನು ಅಪೀಲಿನಲ್ಲಿ ತಿದ್ದಿ, ಮೊದಲನೇ ಹತ್ತನ್ನು ಮೂರಕ್ಕಿಳಿಸಿ, ಎರಡನೇ ಮೂರನ್ನು ಪೂರ್ಣ ಅಳಿಸಿ, ಸೆಶನ್ ಜಡ್ಜರು ತೀರ್ಪು ಬರೆದರು. ಇಂಥ ದಂಡನೆಯು 'ಚಿತ್ರಹಿಂಸೆ' ಯೂ ಉಂಟೇ?

ಕಣ್ಣಾನೂರಿನ ಸೆಂಟ್ರಲ್ ಜೈಲಿನಲ್ಲಿ ಒಬ್ಬ ಕೈದಿಯನ್ನು ವಾಯಿದೆಗಿಂತ 6 ತಿಂಗಳು ಹೆಚ್ಚಿಗೆ ಕೈದಿಯಾಗಿ ಇಟ್ಟ ಭೀಷಣ ಪ್ರಮಾದವು ಪ್ರಕಾಶಕ್ಕೆ ಬಂದಿದೆ! ಗುಮಾಸ್ತನ ತಪ್ಪಂತೆ! ಇನ್ಸ್‌ಪೆಕ್ಟರ್ ಜನರಲರಿಂದ ವಿಚಾರಣೆಯಾಯಿತು. 6 ತಿಂಗಳ ತಪ್ಪು ಲೆಕ್ಕ ಮಾಡಿದ ಆ ತಪ್ಪು ಗುಮಾಸ್ತನು ದಿನಕ್ಕೊಂದೊಂದು ರೂಪಾಯಿಯಂತೆ ಆ ಪಾಪದ ಬೆಪ್ಪ ಕೈದಿಗೆ (ಒಟ್ಟು 180 ರೂಪಾಯಿಗಳು) ಕೊಡಬೇಕೆಂದು ತೀರ್ಮಾನಿಗಿದೆ. ಎಲ್ಲಾ ಜೈಲುಗಳಿಗೂ ಒಪ್ಪೊಪ್ಪರಂತೆ ಇಂಥ ಉದಾರಿ ಕಾರಕೂನರು ದೊರೆತ ದಿನವೇ ನಿರುದ್ಯೋಗ ಸಮಸ್ಯೆಯ ನಿವಾರಣೆ!

ಅತ್ಯದ್ಭುತ ವಾರ್ತೆಯೊಂದು ವಿಶಾಖ ಪಟ್ಟಣದಿಂದ ಬಂದಿದೆ. ಗಂಗಪುರಿ ಎಂಬ ಹಳ್ಳಿಯ ಪಾಪಮ್ಮ ಎಂಬ ಹೆಸರಿನ ನೇಕಾರ ಜಾತಿಯ ಹೆಂಗಸೊಬ್ಬಳು 13 ವರ್ಷಗಳಿಂದ ಅನ್ನಾಹಾರ ತೆಗೆದುಕೊಳ್ಳದಿದ್ದರೂ ಆರೋಗ್ಯವಂತಳಾಗಿದ್ದಾಳೆ! 13 ವರ್ಷಗಳ ಹಿಂದೆ ಒಂದು ದಿನ ಕೆಲವು ಜನರೊಂದಿಗೆ ಎಲ್ಲಿಗೋ ಹೋಗುವಾಗ ದಾರಿಯಲ್ಲಿ ಫಕ್ಕನೆ ಬಿದ್ದುಬಿಟ್ಟಳು. ಸ್ಮೃತಿ ತಪ್ಪಿತು, ಆಸ್ಪತ್ರೆಯಲ್ಲಿ ಚಿಕಿತ್ಸೆಗಿಟ್ಟರು, ಬಾಯಿ ತೆರೆಯದೆ ಬಿದ್ದುಕೊಂಡಿದ್ದಳು, ಬಾಯಿ ತೆರೆಸುವುದು ಆಸ್ಪತ್ರೆಯವರಿಂದ ಸಾಧ್ಯವಾಗದೆ, ವ್ಯಾಧಿ ಎಂತಹುದೆಂದು ತಿಳಿಯದೆ ಬಿಟ್ಟುಬಿಟ್ಟರು. ಅಂದಿನಿಂದ ಮನೆಯಲ್ಲೇ ಅನ್ನ ನೀರುಗಳಿಲ್ಲದೆ ಇರುತಿದ್ದು, ಒಂದು ದಿನ ಫಕ್ಕನೆ ಮಾತಾಡಲಾರಂಭಿಸಿದಳು. ಈಗಲೂ ಮಾತಾಡುತ್ತಾಳೆ. ಅನ್ನ ನೀರುಗಳನ್ನು ಮಾತ್ರ ಮುಟ್ಟುವುದಿಲ್ಲ. ತನಗೆ ಹಸಿವೂ, ಬಾಯಾರಿಕೆಯೂ ಇಲ್ಲವೇ ಇಲ್ಲವೆನ್ನುವಳು. ಮನೆಗೆಲಸವನ್ನೂ ಮಾಡುತ್ತಿದ್ದಾಳೆ. ಮೂರು ಮಕ್ಕಳು ಹುಟ್ಟಿವೆ. ಒಂದು ದಿನ ಪರೀಕ್ಷಾರ್ಥ ಒಂದು ಗುಟುಕು ನೀರು ಕುಡಿಸಲು ಕಾರಿಯೇಬಿಟ್ಟಳು! ಎಲ್ಲಾ ಕಡೆಗಳಲ್ಲೂ ಇಂಥ ಹೆಂಗಸರೇ ಗೃಹಲಕ್ಷ್ಮಿಯರಾದರೆ.........!

ಒಂಟೆಗೂ ನೇಣಿನ ಶಿಕ್ಷೆಯಿದೆ ಎಂಬುದು ಪಂಜಾಬಿನಿಂದ ಬಂದ ಒಂದು ವಿಚಿತ್ರ ಸಮಾಚಾರದ ಸುದ್ದಿ:—ಸಾಂಗೋಡಾ ಎಂಬ ಹಳ್ಳಿಯಲ್ಲಿ ದುಲೀಚಸಿಂಘನೆಂಬವನಿಗೊಂದು ಒಂಟೆ; ಅದು ಮತ್ತೊಂದು ಒಂಟೆಯೊಡನೆ ಸಂಭೋಗಕ್ಕೆಳಸಿದಾಗ ಸಿಂಘನು ತಡೆದನು. ಒಂಟೆಗೆ ಅದಕ್ಕಾಗಿ ಕೋಪ. ಅದು ಅಸಮಾಧಾನದಿಂದಿದೆಯೆಂದು ತಿಳಿದು, ಆತನು ಒಬ್ಬೊಂಟಿಗನಾಗಿ ಅದರೊಂದಿಗೆ ಹೊರಗೆ ಹೋಗುತ್ತಿದ್ದಿಲ್ಲ. ಆರು ತಿಂಗಳು ಕಳೆದ ಮೇಲೆ ಒಂಟೆಯು ಕೋಪ ಮರೆತಿರಬಹುದೆಂದೆಣಿಸಿ, ಅದರ ಮೇಲೆ ಸವಾರಿ ಹೊರಟು, ಊರ ಹೊರಗೆ ಹೊರಟನು. ಸಾಯಂಕಾಲವಾದರೂ ಬಾರದಿದ್ದುದನ್ನು ಕಂಡು ಹಳ್ಳಿಯವರು ಹುಡುಕುತ್ತಾ ಬಂದಾಗ ಕೆಲವು ಮೈಲು ದೂರದಲ್ಲಿ ಒಂಟೆಯು ಹುಲ್ಲು ಮೇಯುತ್ತಿರುವುದೂ, ಸಿಂಘನು ಸತ್ತುಬಿದ್ದಿರುವುದೂ ಕಂಡು ಬಂತು. ಸಮೀಪಕ್ಕೆ ಬಂದು ನೋಡಲಾಗಿ ಸಿಂಘನ ಕಾಲು ಕಡಿದಿತ್ತು, ಮೈಮೇಲೆ ಒಂಟೆಯು ಕಾಲಿಟ್ಟು ತುಳಿದ ಗುರುತು ಇತ್ತು! ಜನರನ್ನು ನೋಡಿದೊಡನೆ ಅವರ ಮೈಮೇಲೇರಿ ಬಂತು; ಎಲ್ಲರೂ ಕೂಡಿ 'ದಸ್ತಗಿರಿ' ಮಾಡಿದರು! ವಿಚಾರಣೆಯಲ್ಲಿ ? ಶಿಕ್ಷೆಯಾವುದು ?

ವಿದೇಶ.

'ಆರ್ಡಿನೇನ್ಸಿನ ರಾಜ್ಯಭಾರ ಸಾಕು; ಅದನ್ನು ಹಿಂತೆಗೆಯಲು ಪ್ರಥಮ ಮಂದಿರದಲ್ಲಿ ಚರ್ಚೆಯಾಗಲಿ!' ಎಂದು ಇಂಡಿಯಾ ಲೀಗಿನ ಪರವಾಗಿ ಮಿ ಆಂಡ್ರ್ಯೂಸರವರ ವಿನಂತಿ ಪೂರ್ವ ಪಶ್ಚಿಮಗಳೊಳಗೆ ಸಹೋದರ ಭಾವ ಪ್ರೇಮಗಳಾಗಲೆಂಬ ಕವೀಂದ್ರ ಠಾಕೂರರ ವಿನಂತಿಯನ್ನು ಸ್ವೀಕರಿಸುತ್ತ ಮಿ. ಸ್ಪೆಂಡರ್ ಸಾಹೇಬರೂ ಒಂದು ಪ್ರಕಟಣೆ ಕೊಟ್ಟಿರುವರು. ಆ ಸಾಹೇಬರ ಮಾಣ್ಯವನ್ನು ಸಾಹೇಬರ ರಾಜ್ಯದಲ್ಲಿ ಕೇಳುವವರಿರುವರೇ?

ಕೆನ್ಯ (ಆಫ್ರಿಕದ) ಮೂಲ ನಿವಾಸಿಯೊಬ್ಬನ ಹೆಂಡತಿ ಕಾಯಿಲೆ ಬೀಳಲು ಓರ್ವ ಮಾಟಗಾತಿಯಿಂದಾದುದೆಂದು ತಿಳಿದು ಆತನು ೭೦ ಜನ ಸಂಗಾತಿಗಳನ್ನು ಕೂಡಿ ಆ ಮಾಟಗಾತಿಯನ್ನು ಕೊಂದನು ಆಗಲ್ಲ ಜಪ್ತಿಗೊಬ್ಬರು ಆ ಅರುವತ್ತು ಮಂದಿಗೂ ಸಾವಿ ಶಿಕ್ಷೆ ವಿಧಿಸಿರುವರು ಎಂಬ ಭಯಂಕರ ವಾರ್ತೆಯನ್ನು ದಿವಾನ್ ಬಹದ್ದೂರ್ ಕೇಶವ ಪಿಳ್ಳೆ ಎಂಬವರು 'ಹಿಂದೂ' ಪತ್ರಿಕೆಗೆ ಕಳುಹಿಸಿದ್ದಾರೆ. ಹಿಂದೆ ಆಂಗ್ಲೇಯರೇ 'ಮಾಟವೆಂಬುವುದನ್ನು ನಂಬುತ್ತಿದ್ದರು; ಓರ್ವ ಆಂಗ್ಲ ಪ್ರಭುವು ಒಂದು ಕುಥಾಸೆದ್ದು ಹಾವಳಿಯಾದದು ಮಾಟಗಾತಿಯ ಪ್ರಭಾವದಿಂದೆಂದು ಎಣಿಸಿ ಆಕೆಯನ್ನು ತಾನೇ ಕೈಯೆತ್ತಿ ಕಡಿದು ಕೊಲೆ ಮಾಡಿದ್ದನು!' ಎಂದೂ, ಶ್ರೀಮಾನ್ ಪಿಳ್ಳೆಯವರು ಬರೆಯುತ್ತಾರೆ.

'ಜಾರ್ಜ್ ಫಿಲಿಪ್ಪರ್' ಎಂಬ ಫ್ರೆಂಚರ ಸ್ಟೀಮರು ಕೆಂಪು ಸಮುದ್ರದ ಏಡನ್ ಬಂದರವನ್ನು ಸಮೀಪಿಸುವಲ್ಲಿ ಬೆಂಕಿಗೆ ತುತ್ತಾಯಿತು. ಬೆಂಕಿ ಎದ್ದಾಗ ಜನರೆಲ್ಲ ನೃತ್ಯವಿಲಾಸ ಮಗ್ನರಾಗಿದ್ದರು. ಜ್ವಾಲೆಗಳನ್ನು ಕಂಡು ಕೋಲಾಹಲವೆದ್ದಿತು. ಸಾಧ್ಯವಿದ್ದವರನ್ನು ಚಿಕ್ಕದೋಣಿಗಳಲ್ಲಿ ರಕ್ಷಿಸಿದರು. ಬೇರೆ ಎರಡು ಸ್ಟೀಮರುಗಳು ವಯರ್‌ಲೆಸ್ ವಾರ್ತೆಯನ್ನು ಕೇಳಿ ಧಾವಿಸಿ, ರಕ್ಷಣಾ ಕಾರ್ಯದಲ್ಲಿ ಸಹಾಯಕವಾದವು. ಇದ್ದವರು ಒಟ್ಟು ೭೬೭; ಇವರಲ್ಲಿ ೬೯೭ ಜನರನ್ನು ರಕ್ಷಿಸಲಾಗಿದೆ. ಉಳಿದವರು ಜ್ವಾಲೆಗಳಿಗೆ ಆಹುತಿಯಾದರೆಂದು ಊಹಿಸಲಾಗಿದೆ. ಸ್ಟೀಮರಿನ ಮೇಲಿದ್ದ ನಾಲ್ವರು ಹಿಂದೀ ಪ್ರಯಾಣಿಕರು ಸುರಕ್ಷಿತ. ಇನ್ನೂ ದಹಿಸುತ್ತಿರುವ ಆ ಸ್ಟೀಮರಿನಲ್ಲಿ ಯಾರಾದರೂ ಸಜೀವರಾಗಿದ್ದರೆ, ದೂರದ ಕರಾವಳಿಯಿಂದ ಮೂಲ ನಿವಾಸಿಗಳು (ಕಾಡು ಜನರು) ನೋಡಿ ಅತ್ತ ಒಂದು ಸರಕನ್ನು ಅಪಹರಿಸಿ ಬನಿಗೆ ದೇವದಾನ ಎನ್ನುತ್ತಾರೆಂದು ಕೇಳಿಕೆ. ಸ್ಟೀಮರು ಮೆಸ್ಸೇಜರಿ ಮೇರಿಟೈಮ್ಸ್ ಎಂಬ ಫ್ರೆಂಚ್ ಕಂಪೆನಿಯದು. ವಿರಾಸವೆಲ್ಲವು ಗಳ ಸಾಕರ್ಯವಿದ್ದವು. ೧|| ಮಿಲಿಯ ಪವನು ಬೆಲೆಯದ್ದು.

ಪರಾರಿಯಾಗಿದೆ.

ಮೇ ತಾರೀಖು 16ನೇ ಸೋಮವಾರ ಎರಡು ಗಂಟೆಯ ಮೇಲೆ ನಮ್ಮದೊಂದು ಹಸುವು ಮತ್ತು ಅದರ ಗಂಡು ಕರವು ಪರಾರಿಯಾಗಿದೆ.

ಹಸ ಮೈ ವರ್ಣವು ಕೆಂಪಾಗಿಯೂ, ಹೊಟ್ಟೆಯ ಕೆಳಗೆ ಸ್ವಲ್ಪ ಸ್ವಲ್ಪ ಬೂದಿಯಾಗಿಯೂ ಇದೆ. ಸಾಧಾರಣ 3½ ಅಡಿ ಎತ್ತರವಿದೆ. 4⅔ ಅಡಿ ಉದ್ದವಿದೆ ಕೋಡು 1½ ಅಡಿ ... ನೆಟ್ಟಗೆ ಹೋಗಿರುತ್ತದೆ. ಕರವು ಸಾಧಾರಣ 2 ಅ... ಎದೆ. 2½ ಅಡಿ ಉದ್ದವಿದೆ. ಬೂದುವರ್ಣದಾಗಿ... ಮಾದರಿಯ ಹಸ ಕರವನ್ನು ಕಂಡದ್ದೇ ಆದರೆ ದ... ಡಿದು ಕಟ್ಟಾಕಿ ಈ ಕೆಳಗಿನ ವಿಳಾಸಕ್ಕೆ ತಿಳಿಸ... ಕೆ. ತಿಳಿಸಿದಂಥವರಿಗೆ ಇನಾಮು ದೊರಕ...

ವಿಳಾಸ:— Mrs. K. S. K...
Davy Estate...

...QUIRY.

ಗ್ರೇಂಡ್ ಕ್ಲೀಯರ್...
ಸುಗಂಧ ಪುಷ್ಪಗಳಿಂದ
ಮೋಹಿಯ...
3 ವಾಚುಗಳೊಡನೆ 6...
ಟಯಾಗಿ ...

6 ಬಾ...
ಗೋಲ್ಡಿನ ...
ಟೈಂಪೀ...
ದವು ...fancy plate...
ಗಳ...
52—...

ಸು, ಒಬ್ಬ ಜವಾನನ ಸಂಬಳವನ್ನು ಸಹ ಸರಕಾರದಿಂದ ಕೊಡುವಂತೆಯೂ, ಮೇನೇಜರ್ ಮತ್ತು ರೆಸಿಡೆಂಟ್ ಡೈರಕ್ಟರವರ ವಾಸಕ್ಕಾಗಿ ಹಾಲಿ ಬೋರ್ಡಿಂಗಿಗೆ ಸಮೀಪದಲ್ಲಿ ಖಾಲಿಯಾಗಿರುವ ಒಂದು ಕಟ್ಟಡವನ್ನು ಮುಫತ್ತಾಗಿ ಬಿಟ್ಟುಕೊಡುವಂತೆಯೂ, ದಯಾಳು ಕಮಿಷನರ್ ಸಾಹೇಬರವರಿಗೆ ಬರೆದುಕೊಳ್ಳಬೇಕಾಗಿ ಸಭೆಯು ಕೇಳಿಕೊಂಡದ್ದನ್ನು ಮಂಜೂರು ಮಾಡಲ್ಪಟ್ಟಿತು.

ಆನಂತರ 16 ಜನರಿಂದೊಡಗೂಡಿದ ಒಂದು ಆಡಳಿತ ಕಮಿಟಿಯ ಚುನಾವಣೆ ನಡೆದು ಸಭಾಧ್ಯಕ್ಷರ ಅಮೂಲ್ಯ ಭಾಷಣೆಗಳು ನಡೆದವು.

ಮಹಾಸಭೆಗೆ ಅಧ್ಯಕ್ಷರ ಜೊತೆಯಲ್ಲಿ ಮೂವರು ಶ್ರೀಮಂತ ಮಹಾಶಯರೂ, ಪುತ್ತೂರು ತಾಲೋಕು ಕೋಪರೇಟಿವ್ ಬ್ಯಾಂಕ್ ಇನ್‌ಸ್ಪೆಕ್ಟರ್ ಪದ್ಮೈಯ್ಯನವರೂ ದಯಮಾಡಿಸಿದ್ದಲ್ಲದೆ ಕೊಡಗಿನ ಎಲ್ಲಾ ಭಾಗಗಳಿಂದಲೂ ಅನೇಕ ಮಹನೀಯರು ದಯಮಾಡಿಸಿ ಸಭೆಯ ಕಾರ್ಯಗಳಲ್ಲಿ ಭಾಗಿಗಳಾಗಿದ್ದರು. ಕಡೆಗೆ ಸಂಘದ ಮತ್ತು ಸಭೆಯ ಪರವಾಗಿ ಧನ್ಯವಾದಗಳು ನಡೆದು ಸಭೆಯು ಮುಕ್ತಾಯಗೊಂಡಿತು. ಮಳೆಯ ಬೆಳಸಿಂದ ಅಡಚಣೆಯಾದಂತೆ ಕಂಡುಬಂದರೂ ಸಭೆಯನ್ನೇರ್ಪಡಿಸಿದ ಮಹಾಶಯರಾದ ಮ. ಮೂಕೋಂಡ ಮಂದಣ್ಣನವರೂ, ಕರ್ನೈಯ್ಯನ ಕರುಂಬೈಯ್ಯನವರು ಮತ್ತು ಅಲ್ಲಿಯ ಸ್ಥಳೀಕ ಮಹನೀಯರು ಇವರ ಅತಿಥಿ ಸತ್ಕಾರ ಕಾರ್ಯವು ಪ್ರಶಂಸಾರ್ಹವಾಗಿದ್ದವು.

ಸಿ. ಕೆ. ಪೊನ್ನಪ್ಪ,
(ಗೌ. ಕಾರ್ಯದರ್ಶಿ.)

ಮೇ ತಾರೀಖು 22 ರಲ್ಲಿ ಫೆಡರೇಶನ್ ಜನರಲ್ ಮೀಟಿಂಗಿನಲ್ಲಿ ಫೆಡರೇಶನ್ ಪ್ರೆಸಿಡೆಂಟರು ರಾವುಬಹದ್ದೂರ್ ಪಿ. ಬೇಪ್ಪೈಯ್ಯನವರು ಮಾಡಿದ ಭಾಷಣ:—

ಮಹನೀಯರೇ,

ಕೊಡಗಿನಲ್ಲಿ ಸಹಕಾರ ಸಂಘಗಳು ಸ್ಥಾಪನೆಯಾಗಿ ಅನೇಕ ವರ್ಷಗಳಾಗಿದ್ದಾಗ್ಯೂ ಸಹಕಾರಿಗಳಿಗೆ ಅವರ ಕರ್ತವ್ಯಗಳೇ ಚೆನ್ನಾಗಿ ಗೊತ್ತಿರುವಂತೆ ಕಂಡುಬರುವುದಿಲ್ಲ. ಸಂಘಗಳು ಇದುವರೆಗೂ ಅಭಿವೃದ್ಧಿಗೆ ಬಾರದೆ ಇದ್ದುದಕ್ಕೆ ವ್ಯಕ್ತಿತ್ವವೇ ಮುಖ್ಯ ಕಾರಣವಾಗಿದೆ. ಕೆಲವು ಕಡೆಗಳಲ್ಲಿ ಸ್ವಂತ ಲೇವಾದೇವಿ ನಡಸುವವರೆ ಮತ್ತು ಕೆಲವು ಕಡೆಗಳಲ್ಲಿ ಸಾಲಹೊಂದುವಂಥಾವರೆ ಸಂಘಗಳ ಅಧ್ಯಕ್ಷರು ಮತ್ತು ಕಾರ್ಯಕಾರೀ ಮಂಡಳಿಗಳಾಗುವರು. ಈ ತರದ ಮಹನೀಯರನ್ನು ಚುನಾಯಿಸುವುದರಿಂದ ಸಂಘಗಳ ಕೆಲಸಕ್ಕೆ ಘೋರ ಅಡಚಣೆ ಬರುವುದರಲ್ಲಿ ಸಂದೇಹವಿಲ್ಲ. ಈ ತರದ ಅಕ್ರಮಗಳನ್ನು ಹೋಗಲಾಡಿಸದಿದ್ದರೆ ಗ್ರಾಮ ಸಂಘಗಳು ಮುಂದುವರಿಯಲು ಯಾವ ಅವಕಾಶವು ಇರುವದಿಲ್ಲ. ಸಂಘಗಳ ಸಂಖ್ಯೆಯನ್ನು ಹೆಚ್ಚಿಸುವುದಕ್ಕಿಂತ ಹೀನಸ್ಥಿತಿಯಲ್ಲಿರುವ ಸಂಘಗಳನ್ನು ಮುಚ್ಚುವದೇ ಲೇಸೆಂದು ಅನೇಕರು ಅಭಿಪ್ರಾಯಪಡುತ್ತಾರೆ.

ಸಹಕಾರಿಗಳು ಇತರ ವಿಷಯಗಳನ್ನು ಮನಸ್ಸಿಗೆ ತಾರದೆ ಸಹಕಾರದ ವಿದ್ಯೆಯನ್ನೆ ಪ್ರಚುರಪಡಿಸಿದಲ್ಲಿ ಚಳವಳವು ಭದ್ರ[illegible]ಗಿ ಸಂಘಗಳು ಅಭಿವೃದ್ಧಿಗೆ ಬರುವದರಲ್ಲಿ ಯಾವ ಸಂಶ[illegible]ಯವಿರುವದಿಲ್ಲ. ಸಹಕಾರಿಗಳು ಗ್ರಾಮದಲ್ಲಿ ಉಪನ್ಯಾ[illegible]ಸ ಮೂಲಕವೂ, ಸಂಘಗಳ ಕಾರ್ಯಕ್ರಮಗಳನ್ನು ತೋರಿಸಿ[illegible]ವು ಅಧಿಕಾರಿಗಳಿಂದ ಸಟನೆ ಮಾಡಿಯೂ ವಿ[illegible]ರುಗಳಲ್ಲಿ ಪ್ರಮಾಣಿಕತೆಯನ್ನು ಹೆಚ್ಚಿಸಲು[illegible]ಡಲು ಪ್ರಯತ್ನ ಪಡಬೇಕು.

ಸಹಕಾರ ಸಂಘಗಳು ಮುಖ್ಯವಾಗಿ ಪ[illegible]ಗಳೇ ಆಗಿವೆ. ವ್ಯವಸಾಯ, ಕೈಗಾ[illegible]ರ್ಯಗಳನ್ನು ಕೈಕೊಂಡು ಕೆಲಸ [illegible]ವಿಲ್ಲ.

[illegible]ಂಬರುಗಳಿಗೆ ಸಾಲಕೊಡ ವಾ[illegible]ರಾಗ್ಯ ಮೆಂಬರುಗಳ ಕೆಲ[illegible]ತ ಮಾಡುವ ಶಕ್ತಿಯನ್ನು, ಅವ[illegible]ರ ಆಸ್ತಿಯ ಮತ್ತು ಬೆಳಸುವ ಪದಾರ್ಥಗಳ ಬೆಲೆಯನ್ನು ನೋಡಿ ಮಂಜೂರು ಮಾಡಬೇಕು. ಈ ಮೇರೆ ಮಂಜೂರು ಮಾಡುವ ಕಾಲದಲ್ಲಿ ಯಾವ ದಯದಾಕ್ಷಿಣ್ಯವೂ ಇರಕೂಡದು. ಯೂನಿಯನ್ನಿನ ಕಾರ್ಯಮಂಡಳಿಯವರು ಪ್ರತಿ ಒಬ್ಬ ಮೆಂಬರನ ವಿಚಾರವನ್ನು ಚೆನ್ನಾಗಿ ತಿಳಿದಿರಬೇಕು. ನಮ್ಮ ಈ ದೇಶದಲ್ಲಿ ಮಿತವ್ಯಯವೆಂಬದು ಏನೆಂಬವನ್ನು ಅನೇಕರು ಇನ್ನೂ ಗೊತ್ತುಮಾಡಿಕೊಂಡಿರುವುದಿಲ್ಲ. ಮದುವೆ ಮುಂಚೆಗಳಲ್ಲಿಯೂ, ಕಷ್ಟಕಾಲಗಳಲ್ಲಿಯೂ ಸಾಲ ಮಾಡುವ ಕರ್ತವ್ಯವಂದನ್ನೇ ಪದ್ಧತಿಯಾಗಿಟ್ಟುಕೊಂಡಿರುವದು ಕಂಡುಬರುತ್ತೆ. ಪ್ರತಿ ಸಂಘದವರು ಮೆಂಬರುಗಳಲ್ಲಿ ಉತ್ಪತಿಯಿಂದ ಖರ್ಚು ಕಳೆದು ಸ್ವಲ್ಪ ಭಾಗವನ್ನು ಯಾವಾಗಲೂ ಉಳಿಸುವಂತೆ ಮಾಡಬೇಕು. ಕಳೆದ ವರ್ಷ ಮತ್ತು ಈ ವರ್ಷ ರೈತರು ಬೆಳೆಸಿದ ಬೆಳೆಗಳಿಗೆ ಬೆಲೆಯಿಲ್ಲದೆ ಕಂದಾಯ ಕಟ್ಟುವದೇ ಅಸಾಧ್ಯವಾಗಿ ಕಾಣುಬಂತು. ಆದರೆ ರೈತರಲ್ಲಿ ಮಿತವ್ಯಯವು ಇದ್ದು ದ್ರವ್ಯವನ್ನು ಉಳಿಸಿದ್ದ ಪಕ್ಷದಲ್ಲಿ ಇಷ್ಟು ಕಷ್ಟವು ಎಂದೂ ಸಂಭವಿಸುತ್ತಿರಲಿಲ್ಲವೆಂದು ಖಂಡಿತವಾಗಿ ಹೇಳಬಹುದು. ಉತ್ಪತ್ತಿಯನ್ನು ಹೆಚ್ಚಿಸದೆ ಖರ್ಚು ಜಾಸ್ತಿ ಮಾಡಿ ಕಾಲಾನುಗುಣವಾಗಿ ನಡಿಯದೆ ಇರುವದೇ ನಮ್ಮ ಈಗಿನ ಸ್ಥಿತಿಗೆ ಕಾರಣವಾಗಿದೆ. ಈ ಕಾರಣಗಳಿಂದಲೇ ಕೊಟ್ಟ ಸಾಲವನ್ನು ಮರುಪಾವತಿಮಾಡದೆ ಸಾಲಕೊಟ್ಟ ಸಂಘಗಳು ತೊಂದರೆಗೆ ಗುರಿಯಾಗಿರುವದಾಗಿದೆ. ಮೆಂಬರುಗಳಲ್ಲಿ ಉತ್ಪತ್ತಿಯನ್ನು ಹೆಚ್ಚಿಸಿ ಖರ್ಚನ್ನು ಕಮ್ಮಿಮಾಡಿ ಈಗಿರುವ ಕಷ್ಟಗಳನ್ನು ನಿವಾರಣೆ ಮಾಡಲು ಪ್ರಯತ್ನಪಡಬೇಕಾಗಿ ತಮ್ಮೆಲ್ಲರನ್ನು ಕೇಳಿಕೊಳ್ಳುತ್ತೇನೆ.

ಮಿತವ್ಯಯವನ್ನು ಎಲ್ಲಾ ಮೆಂಬರುಗಳಲ್ಲಿಯೂ ಹೆಚ್ಚಿಸುವದು ಸಂಘಗಳ ಮುಖ್ಯ ಕರ್ತವ್ಯವಾಗಿರುವುದರಿಂದ ಇದಕ್ಕೆ ಎಲ್ಲಾ ಸಂಘಗಳು ನಿಗವಿಡಬೇಕಾಗಿ ನಾನು ಅತಿ ವಿನಯದಿಂದ ತಮ್ಮನ್ನು ಕೋರುತ್ತೇನೆ.

ಮುಖ್ಯವಾಗಿ ಸಂಘವು ಪೂರ್ತಿ ಸಹಕಾರವಾಗಬೇಕಾದರೆ ಆ ಸಂಘದ ಮೆಂಬರರೊಳಗೆ ಒಗ್ಗಟ್ಟು ಇರಬೇಕು. ಅಂಥಾ ಒಗ್ಗಟ್ಟಿನಲ್ಲಿ ಪ್ರೇಮವನ್ನು ಹೆಚ್ಚಿಸಿ ನೀತಿ ಮಾರ್ಗದ ಸ್ವಭಾವವನ್ನು ಉಂಟುಮಾಡುವದೂ, ಆನಂತರ ಅಂಥವುಗಳನ್ನು ವೃದ್ಧಿಪಡಿಸುವದೂ ವಗೈರೆ ಸಹಕಾರ ತತ್ವದ ಮುಖ್ಯ ಕಾರ್ಯವಾಗಿದೆ. ಇಂಥಾ ಸಂಘದಲ್ಲಿ ಇರುವ ಎಲ್ಲಾ ಮೆಂಬರುಗಳು ಭಿನ್ನಭೇದಗಳಿಲ್ಲದೆ ಪ್ರೀತಿಭಾವದಿಂದ ಕೆಲಸ ನಡಿಸುತ್ತಾ ತಮ್ಮ ತಮ್ಮ ಗುಣ, ನಡತೆ, ನೀತಿಯನ್ನು ಹೆಚ್ಚಿಸುತ್ತಾ ಬಂದರೆ ತಮಗಳ ದರಿದ್ರಾವಸ್ಥೆಯನ್ನು ಹೋಗಲಾಡಿಸಿ ಸಂಪತ್ತನ್ನು ಹೆಚ್ಚಿಸುವ ದಾರಿಯನ್ನು ಅದು ತೋರಿಸುತ್ತದೆ.

ಇಂಥಾ ದಾರಿಯನ್ನು ವೃದ್ಧಿಪಡಿಸಲಿಕ್ಕೆ ಪ್ರತಿಯೊಬ್ಬ ಮೆಂಬರನು ಸಹಕಾರದ ಎಲ್ಲಾ ತತ್ವಗಳನ್ನು ತಿಳಿದವನಾಗಿರಬೇಕು. ಇಂಥಾ ಸಂಘವನ್ನು ಸ್ಥಾಪಿಸುವುದರಲ್ಲಿ ಒಳ್ಳೆ ನಡತೆಗಾರರನ್ನೂ, ಸಂಬಿಗಸ್ಥರನ್ನೂ ಎಚ್ಚರಿಕೆಯಿಂದ ಮರ್ಯಾದೆಯಲ್ಲಿ ಕೆಲಸ ಮಾಡುವವರನ್ನು ಚುನಾಯಿಸುವದು ಅವಶ್ಯಕರವಾದ ಸಂಗತಿಯಾಗಿದೆ. ಹಾಗೆ ಮಾಡಿದ ಪಕ್ಷದಲ್ಲಿ ಅಂಥಾ ಸಂಘವು ಖ್ಯಾತಿಯನ್ನು ಸಂಪಾದಿಸುತ್ತದೆ. ಅದು ಬಿಟ್ಟು ಭಿನ್ನಭೇದವಿಟ್ಟುಕೊಂಡು ಸಂಗಡಗಳಾಗಿ ಆಯಾಯ ಸಂಗಡದವರು ಅವರವರ ಪಾರ್ಟಿಯವರೇ ಮುಂದಾಳಾಗಿರಬೇಕಾಗಿ ಪುಂಡುಗಾರಿಕೆಯಿಂದ ಚುನಾಯಿಸಲ್ಪಟ್ಟು ಕೆಲಸ ಮಾಡುತ್ತಾ ಬಂದರೆ ಅಂಥಾ ಸಂಘವು ಎಂದೂ ಸಹಕಾರ ಸಂಘವಾಗಲಾರದು. ಮತ್ತು ಅದರಲ್ಲಿ ನಡಿಸುತ್ತಾ ಬರುವ ಯಾವ ಕೆಲಸವೂ ತೃಪ್ತಿಕರವಾಗಲಾರದು. ಮುಖ್ಯವಾಗಿ ಪ್ರತಿಯೊಬ್ಬರೂ ತಾವು ಯೋಗ್ಯರು ತತ್ವಗಳಿಗೆ ಅನುಸಾರವಾಗಿ ಸತ್ಯದಿಂದ ಕೆಲಸ ನಡಿಸುತ್ತೇವೆಂಬ ಹೆಸರುವಾಸಿ ಪಡೆಯಬೇಕಾಗಿದೆ. ಅದರಲ್ಲಿ ಕಾರ್ಯನಿರ್ವಾಹಕ ಮಂಡಳಿಯವರು ಒಗ್ಗಟ್ಟಿನ ಪ್ರೀತಿಭಾವದಿಂದ ತಮಗಳಿಗೆ ವಹಿಸಿದ ಕಾರ್ಯಗಳನ್ನು ಮುತುವರ್ಜಿಯಿಂದ ಎಲ್ಲರಿಗೂ ತೃಪ್ತಿಯಾಗುವಂತೆ ಮಾಡುತ್ತಾ ಬಂದರೆ ಆ ಸಂಘದಲ್ಲಿ ಶಕ್ತಿಕ್ಷೇಮವು ಹೆಚ್ಚಾದದಾಗಿ ನಾನು ಹೇಳದೆ ಅದು ತಪ್ಪಾಗಲಾರದಾಗಿ ನಂಬುತ್ತೇನೆ. ಆದುದರಿಂದ ಮಹನೀಯರೇ ತಾವುಗಳೆಲ್ಲ ತಮ್ಮಲ್ಲಿ ಇರುವಂಥ ಶಕ್ತಿಗಳನ್ನು ಕೃಷಿಸಿ ಎಲ್ಲಾ ಕಲ್ಮಷಗಳನ್ನು ಶುಚಿ ಮಾಡಿ ಸಂಘದಲ್ಲಿ ಎಸೊಂದೂ ಭಿನ್ನಭೇದವಿಲ್ಲದೆ ಪ್ರೇಮಭಾವದಿಂದ ಕೆಲಸಗಳನ್ನು ನಡಿಸುತ್ತಾ ಈ ದೇಶದ ಸಂಘಗಳನ್ನು ಉನ್ನತ ಸ್ಥಿತಿಗೆ ತರಬೇಕಾಗಿ ನಾನು ತಮ್ಮೆಲ್ಲರನ್ನು ಕೇಳಿಕೊಳ್ಳುತ್ತೇನೆ.

ನಾನು ಈಗ ಮಾಡಿದ ಈ ಭಾಷಣದಲ್ಲಿ ಏನಾದರೂ ಕುಂದು ಕೊರತೆಗಳಿದ್ದರೆ ಅವೆಲ್ಲವನ್ನೂ ಕ್ಷಮಿಸಬೇಕಾಗಿ ತಮ್ಮೆಲ್ಲರನ್ನೂ ಪ್ರಾರ್ಥಿಸುತ್ತೇನೆ.

ಇಂಡಿಯನ್ ಇನ್ಶೂರೆನ್ಸ್ ಕಂಪೆನಿಗಳಿಗೇನೇ ಜೀವ ವಿಮೆ ಮಾಡಿರಿ.

ದಿ ಬೆಂಗಾಲ್ ಇನ್ಶೂರೆನ್ಸ್ ಎಂಡ್ ರಿಯಲ್ ಪ್ರಾಪರ್ಟಿ ಕಂಪೆನಿ ಲಿಮಿಟೆಡ್. ಹೆಡ್ ಆಫೀಸು:—8 ಡಾಲ್ ಹೌಸಿ, ಸ್ಕ್ವೇರ್ (ಈಸ್ಟ್) ಕಲ್ಕತ್ತ, ಸಂಸ್ಥಾಪನೆ 1919

ನವಸಂಸ್ಕೃತಿಯು ಬೆಳೆದಷ್ಟಕ್ಕೆ ಅದರೊಡನೆ ಅದಕ್ಕೆ ಸಂಬಂಧಪಟ್ಟಿರುವ ಆರ್ಥಿಕ ಪರಿಸ್ಥಿತಿಯು ಬೆಳೆಯುತ್ತದೆ. ಇಂಥಹ ಸಮಯದಲ್ಲಿ ಜೀವವಿಮೆ ನಿಯಮವು ಒಂದು ವರವೆಂದೆಣಿಸಲ್ಪಟ್ಟಿದೆಯಲ್ಲದೆ, ಅದು ಸಮಾಜರಂಗದಲ್ಲಿ ಬಸರಿಗೊಂಡು ಅತ್ಯಗತ್ಯ ವಿಷಯವೆಂದೂ ತಿಳಿದು ಬಂದಿದೆ. ಅದನ್ನು ಈಗೀಗ ಗಣಿತಶಾಸ್ತ್ರ ಪ್ರಕಾರವಾಗಿಯೇ ಜನರಿಂದ ಪರಿಪಾಲಿಸಿಕೊಂಡೇ ಬರುವಂತಾಗಿದೆ.

ಈ ಕಂಪೆನಿಯು ಸರಕಾರದಲ್ಲಿ ಕಂಪೆನಿಯ ಭದ್ರತೆಗೋಸ್ಕರ 2 ಲಕ್ಷ ರೂಪಾಯಿ ಠೇವಣಾತಿಯನ್ನು ಇಟ್ಟಿದೆ. ಇದು ಇನ್ಶೂರೆನ್ಸ್ ಕೆಲಸದಲ್ಲಿ ಒಳ್ಳೆ ಗುರುತಿರುವ ಸದ್‌ಗೃಹಸ್ಥರ ಮುಂದಾಳುತನದಿಂದಲೇ ನಡೆಯುತ್ತದೆ. ಈ ಕಂಪೆನಿಯು ಆಕರ್ಷಣೀಯವಾದ ಕೆಲವು ಸೂತ್ರಗಳ ಮೇರೆಗೆ ಅತೀ ಸುಲಭ ಪ್ರೀಮಿಯಮ್ ದರದಿಂದ ಪೋಲಿಸಿಗಳನ್ನು ಕೊಡುತ್ತದೆ. ಇದರ ಶರ್ತಗಳು, ನಿಯಮಗಳು ಸುಲಭ ಗ್ರಾಹ್ಯವಾಗಿವೆ; ಅನುಕೂಲವಾಗಿವೆ. ಅಲ್ಲದೆ ಬಹು ಉದಾತ್ತವೂ ಆಗಿವೆ. ಹೆಚ್ಚಿನ ಮಾಹಿತಿಗೆ ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಿರಿ.

ಯಂ. ಯಸ್. ಐಯ್ಯಪ್ಪ,
ಆರ್ಗನೈಸರ್,
ಸ್ಕೂಲ್‌ರೋಡ್, ಮಡಿಕೇರಿ.
ಅಥವಾ
ಆರ್. ಸಿ. ಸೆನ್‌ಗುಪ್ತ,
ಬ್ರಾಂಚ್ ಸೆಕ್ರೆಟರಿ,
28, ಅಂಗಪ್ಪನಾಯಕ್ ಸ್ಟ್ರೀಟ್,
ಜಿ. ಟಿ. ಮದರಾಸ್.

12—6

Wanted agents in every Taluk of Coorg on very liberal terms.

ಬಾಲಾರ್ಕಮಧು.

ಬಾಲಾರ್ಕಮಧು ಮಕ್ಕಳಿಗೆ ಕೊಡುವುದರಿಂದ ಶಕ್ತಿಯೂ ಆರೋಗ್ಯವೂ ಹೆಚ್ಚುವುದು. ಇದು ಮಧುರವಾಗಿದೆ. ಬೆಲೆ ಶೀಸೆ 1ಕ್ಕೆ 0—12—0 ಟ. ಖ. 0—12—0.

(Spleen Lever enlargement) ಎಂಬ ಮಕ್ಕಳ ಭಯಂಕರ ಗಡ್ಡೆ ರೋಗ—ಪ್ಲೀಹ—ಪಿತ್ತಕೋಶದ ಗಡ್ಡೆಗೆ ಚಕ್ರಬಂದ. ಚಕ್ರಕ್ಷಾರ—ಚಕ್ರಚೂರ್ಣ—ಚಕ್ರಪ್ರಭಾ—ಈ ನಾಲ್ಕು ಮಹೌಷಧಗಳಿವೆ. ಸಾವಿರಾರು ಮಕ್ಕಳ ಪ್ರಾಣವನ್ನು ಉಳಿಸಿದೆ. ನಾಲ್ಕು ಔಷಧಗಳು ಸೇರಿ 1 ತಿಂಗಳ ಔಷಧದ ಬೆಲೆ 3—0—0. ಟ ಖ. 0—8—0. ಏಜೆಂಟರು ಬೇಕಾಗಿರುವರು.

ಪ. ಎ. ಯನ್. ಶ್ರೀನಿವಾಸರಾವ್,
ವೈ. ವಿ. ಆಯುರ್ವೇದಭೂಷಣ್,

ಬ್ರಾಂಚ್ ಆಫೀಸ್, ಉಡ್ಪಿ. S· K. } Spleen & Lever ಸ್ಪೆಶಲಿಸ್ಟ್. ಯಂ·ವಿ. ಪ್ರಸಾದಿಕ ಔಷಧಾಲಯ,

52—19 ಶಿವಮೊಗ್ಗ. (ಮೈಸೂರು ಸೀಮೆ)

'ia Life Assurance Company, Ltd.

Established 1897.

SECURITY" Policy issued by this Company provides

during an agreed

to the Widow,

part of the

ıus accrued

eed Yearly

ments, dur-

3. The payment of the balance of the sum of assured at the end of the period

OR

B In the event of death after the period has expired the payment of the sum assured together with any Bonus that has accrued.

ıphlet on application to—

Branch Office :—
152, COMMERCIAL STREET,
Bangalore.

35

ವಿವಾಹವನ್ನು ವರ್ಜಿಸಬೇಕೇ?

(ಮಹಾತ್ಮ ಗಾಂಧಿಯವರ ಲೇಖನಿಯಿಂದ.)

ನನಗೆ ಚೆನ್ನಾಗಿ ತಿಳಿದ ಬಾತ್ಮಿದಾರರೊಬ್ಬರು ಒಂದು ಪ್ರಶ್ನಾಪತ್ರವನ್ನಿತ್ತಿರುವರು. ಅದನ್ನು ನಾನು ಚರ್ಚೆಗಾಗಿಯೇ ತೆಗೆದುಕೊಂಡಿರುತೇನೆ. ಏಕೆಂದರೆ:— ಅವರು ಹೇಳುವ ಅಭಿಪ್ರಾಯಗಳು ಅವರದೇ ಅಲ್ಲವೆಂದು ನನಗೆ ಗೊತ್ತಿದೆ. "ಇಂದಿನ ನಮ್ಮ ನೀತಿ ನಡತೆಗಳು ಸ್ವಭಾವವಿರುದ್ಧವಾಗಿಲ್ಲವೇ?" ಎಂದು ಕೇಳುತ್ತಲಿರುವರು. ಅದು ಸ್ವಭಾವಸಿದ್ಧವಾದುದಾಗಿದ್ದರೆ ಎಲ್ಲೆಲ್ಲಿಯೂ ಎಂದೆಂದಿಗೂ ಒಂದೇ ಆಗಿರಬೇಕಾಗಿದ್ದಿತು. ಆದರೆ ಪ್ರತಿ ಜನಾಂಗದಲ್ಲಿಯೂ, ಜನಸಮುದಾಯದಲ್ಲಿಯೂ ಅದಕ್ಕದಕ್ಕನುಗುಣವಾದ ವಿವಾಹ ನಿಯಮಗಳು ಇದ್ದೇ ಇರುವಂತೆ ತೋರುವುದು ಮತ್ತು ಅವುಗಳನ್ನು ಪ್ರಚಾರಕ್ಕೆ ತರುವಲ್ಲಿ ಮನುಷ್ಯರು ಮೃಗಗಳಿಗಿಂತಲೂ ಹೀನವಾಗಿ ವರ್ತಿಸಿರುವರು. ಏಕೆಂದರೆ—ಪಶುವರ್ಗಗಳಲ್ಲಿ ಕಾಣಲೂಬಾರದ ವ್ಯಾಧಿಗಳು ಮನುಷ್ಯರಲ್ಲಿ ಸರ್ವಸಾಮಾನ್ಯವಾಗಿ ಕಾಣಬರುತ್ತಿವೆ. ತಿರ್ಯಗ್ವರ್ಗಗಳಲ್ಲಿ ಎಂದೂ ಸಾಧ್ಯವಿಲ್ಲದಿರುವ ಶಿಶುಹತ್ಯೆ, ಭ್ರೂಣಹತ್ಯೆ, ಬಾಲ್ಯವಿವಾಹ ಇವುಗಳು, ವಿವಾಹವು ಧರ್ಮಬದ್ಧವಾದುದೆಂದು ಸಾಗ್ಗಿಸಿ ಸಾರಿ ಹೇಳುವ ಮಾನವ ಸಂಘಕ್ಕೆ ದೊಡ್ಡ ಕಳಂಕವನ್ನೇ ತಂದೊಡ್ಡಿವೆ. ಮತ್ತು ನೀತಿ ಧರ್ಮಗಳೆಂದು ನಾವು ಯಾವವನ್ನು ಸಮರ್ಥಿಸುತ್ತೇವೆಯೋ ಅವುಗಳಿಂದ ಅಪಾರವಾದ ದುಷ್ಪರಿಣಾಮಗಳುಂಟಾಗಿವೆ. ಇನ್ನು ಹಿಂದೂ ವಿಧವೆಯರ ನಿಕೃಷ್ಟ ಸ್ಥಿತಿಯ ವಿಚಾರವಾಗಿ ಈಗ ನಮ್ಮಲ್ಲಿ ರೂಢಿಯಾಗಿ ಬಂದಿರುವ ವಿವಾಹ ಪದ್ಧತಿಗಳಲ್ಲದೆ ಮತ್ತೇತರಿಂದ? ತಿರ್ಯಗ್ವರ್ಗದ ಆದರ್ಶವನ್ನೇ ಇಟ್ಟುಕೊಂಡು ನಾವೇಕೆ ಪ್ರಕೃತಿಯ ಮಾರ್ಗವನ್ನವಲಂಬಿಸಬಾರದು.

ಪಾಶ್ಚಾತ್ಯ ದೇಶಗಳಲ್ಲಿ ಸ್ವೇಚ್ಛಾ ಪ್ರೇಮವನ್ನು (Free Love) ಅನುವಾದಿಸುವವರು ಮೇಲೆ ಸಂಕ್ಷೇಪವಾಗಿ ಹೇಳಿದ ಅರ್ಥವನ್ನೇ ಅನುಮೋದಿಸುವರೋ ಇಲ್ಲವೆ ಅವರಿಗೆ ಇನ್ನೂ ಬಲವಾದ ಕಾರಣಗಳು ಇವೆಯೋ ನನಗೆ ತಿಳಿಯದು. ಆದರೆ ವಿವಾಹ ಬಂಧವು ಅನಾಗರಿಕವೆಂಬ ಭಾವನಾ ಪ್ರವಾಹವು ಪಾಶ್ಚಾತ್ಯರಿಂದಲೇ ಬಂದುದೆಂಬುದು ಖಚಿತವು. ಇದನ್ನು ಸಮರ್ಥಿಸುವ ಕಾರಣಗಳು ಪಾಶ್ಚಾತ್ಯರಿಂದಲೇ ತೆಗೆದುಕೊಂಡುವಾಗಿದ್ದರೆ, ಅದಕ್ಕೆ ಸರಿಯಾದ ಪ್ರತ್ಯುತ್ತರವನ್ನು ಕೊಡುವುದರಲ್ಲೇನೂ ಕಷ್ಟವಿಲ್ಲ.

ಮಾನವನಿಗೂ, ಪಶುವರ್ಗಕ್ಕೂ ಸಾಮ್ಯವನ್ನು ಕಲ್ಪಿಸುವುದೇ ತಪ್ಪು. ಈ ತಪ್ಪೇ ವಾದದ ಬಲವನ್ನೇ ಹಾಳುಮಾಡಿಬಿಡುತ್ತದೆ. ಮಾನವನಾದರೋ ಧಾರ್ಮಿಕ ರೀತಿನೀತಿಗಳ ಮೂಲಕ ಪಶುವರ್ಗಕ್ಕಿಂತ ಮಿಗಿಲೆನಿಸಿಕೊಂಡಿರುವನು. ಒಂದಕ್ಕೆ ಸರಿಹೋಗುವ ಪ್ರಕೃತಿ ನಿಯಮಗಳು ಮತ್ತೊಂದಕ್ಕೆ ಸರಿಹೋಗುವ ಪ್ರಕೃತಿ ನಿಯಮಗಳಿಂದ ಭಿನ್ನವಾಗಿರುವುವು.

ಮಾನವನಲ್ಲಿ ವಿಚಾರವಿದೆ, ವಿವೇಚನಾಶಕ್ತಿಯಿದೆ. ಮತ್ತು ಸ್ವೇಚ್ಛೆಯಿದೆ. ಪಶುವಿಗೆ ಅಂಥಾದ್ದೇನೂ ಇಲ್ಲ. ಅದು ತಾನಾಗಿ ಕಾರ್ಯ ಮಾಡಲಾರದು. ಧರ್ಮವಾವುದು ಅಧರ್ಮವಾವುದು, ಒಳ್ಳೆಯದಾವುದು ಕೆಟ್ಟದಾವುದು ಎಂಬ ವಿವೇಚನೆಯನ್ನೇ ಅದು ತಿಳಿಯದು. ಮನುಷ್ಯನು ತಾನಾಗಿ ಕಾರ್ಯಗಳನ್ನು ಮಾಡಬಲ್ಲವನಾದುದರಿಂದ ಈ ಭೇದಗಳನ್ನು ತಿಳಿದಿರುವನು. ಮತ್ತು ಆತನು ಉತ್ತಮ ಸ್ವಭಾವವನ್ನನುಸರಿಸಿ ನಡೆದಾಗ ಪಶುವಿಗಿಂತ ಎಷ್ಟೋ ಉತ್ತಮನಾಗಿ ಕಾಣಿಸಿಕೊಳ್ಳುವನು. ಅವರ ಆತನು ನೀಚ ಪ್ರಕೃತಿಯನ್ನು ಅನುಸರಿಸಿ ನಡೆದಾಗ ಕೇವಲ ಪಶುವಿಗಿಂತಲೂ ಅಧಮನಾಗಿ ವರ್ತಿಸಬಲ್ಲನು. ಲೋಕದಲ್ಲಿ ಕೇವಲ ಅನಾಗರಿಕರೆಂದು ಕರೆಯಲ್ಪಡುವ ಜನರು ಕೂಡ ಅವರವರ ದಾಂಪತ್ಯ ವರ್ತನೆಗಳಲ್ಲಿ ಕೆಲಕೆಲವು ಪ್ರತಿಬಂಧಕಗಳನ್ನು ಅನುಸರಿಸುತಲಿರುವರು. ಇಂಥಾ ಪ್ರತಿಬಂಧಕಗಳೇ ಅನಾಗರಿಕತೆಯನ್ನು ಸೂಚಿಸುತ್ತವೆಯೆಂದು ಹೇಳುವುದಾದರೆ ಇಂಥಾ ಅಡ್ಡಿಗಳಾವವೂ ಇಲ್ಲದಿರುವುದೇ ಮಾನವ ಧರ್ಮವಾಗಿರಬೇಕು. ಮನುಷ್ಯರೆಲ್ಲರೂ ಈ ನಿಯಮದ ಹಿತವಾದ ನಿಯಮವನ್ನು ಅನುಸರಿಸಿ ನಡೆಯುವುದಾದರೆ ಇಪ್ಪತ್ತನಾಲ್ಕು ತಾಸಿನೊಳಗಾಗಿಯೇ ಲೋಕದಲ್ಲಿ ಅಲ್ಲೋಲ ಕಲ್ಲೋಲವುಂಟಾಗಬಹುದು. ಪಶುವಿಗಿಂತಲೂ ಮಾನವನಲ್ಲಿ ಸ್ವಾಭಾವಿಕವಾಗಿ ವಿಷಯೇಚ್ಛೆಯು ಹೆಚ್ಚಾಗಿರುವಲ್ಲಿ ಒಮ್ಮೆ ಈ ಅಡ್ಡಿಗಳನ್ನೆಲ್ಲ ತೆಗೆದುಬಿಟ್ಟರೆ ಹತೋಟಿಯಿಲ್ಲದ ವಿಷಯೇಚ್ಛೆಯೆಂಬ ಅಗ್ನಿಯು ಮೇರೆ ಮೀರಿ ಲೋಕವೆಲ್ಲವನ್ನೂ ಆವರಿಸಿ ಮಾನವಕೋಟಿಯನ್ನೇ ನಾಶ ಮಾಡಿಬಿಡುವುದು. ಇಂದ್ರಿಯ ದಮನ ಮತ್ತು ಆತ್ಮ ನಿವೇದನಗಳನ್ನು ಎಸಗಬಲ್ಲನಾದುದರಿಂದಲೇ ಮಾನವನು ಪಶುವಿಗಿಂತ ಮಿಗಿಲೆನಿಸಿದವನು. ಪಶುವಿಗೆ ಈ ಶಕ್ತಿ ಇಲ್ಲ.

ಈಗ ಸಾಮಾನ್ಯವಾಗಿ ತೋರಿಬರುವ ಕೆಲವು ವ್ಯಾಧಿಗಳು ವಿವಾಹ ನಿಯಮಗಳನ್ನು ಅತಿಕ್ರಮಿಸುದುದರ ಫಲಗಳಾಗಿವೆ. ಕ್ರಮಪ್ರಕಾರವಾಗಿ ದಾಂಪತ್ಯ ಧರ್ಮದ ಅಡ್ಡಿಗಳನ್ನು ತಪ್ಪದೆ ನಡೆಸುತ್ತಾ ಬಂದವರಲ್ಲಿ, ಬಾತ್ಮಿದಾರರಿಗೆ ತೋರಿಬಂದಿರಬಹುದಾದ ವ್ಯಾಧಿಗಳ ಒಂದೇ ಒಂದು ಉದಾಹರಣೆಯನ್ನು ಗೊತ್ತುಮಾಡಿಕೊಳ್ಳಲು ಕುತೂಹಲವುಳ್ಳವನಾಗಿದ್ದೇನೆ. ಶಿಶುಹತ್ಯ, ಬಾಲ್ಯವಿವಾಹ ಮೊದಲಾದವುಗಳು ಕೂಡ ವಿವಾಹ ನಿಯಮಗಳನ್ನತಿಕ್ರಮಿಸಿ ನಡೆದುದರ ಫಲಗಳೇ ಆಗಿವೆ. ಏಕೆಂದರೆ, ಯಾವ ಗಂಡಸೇ ಆಗಲೀ, ಹೆಂಗಸೇ ಆಗಲೀ ಯುಕ್ತವಯಸ್ಕರಾದಾಗ, ಆರೋಗ್ಯವಾಗಿದ್ದಾಗ, ಇಂದ್ರಿಯ ನಿಗ್ರಹವನ್ನು ಅಭ್ಯಾಸಬಲ್ಲವರಾದಾಗ ಮತ್ತು ಸಂತಾನಾಪೇಕ್ಷೆಯುಳ್ಳವರಾದಾಗ ಮಾತ್ರವೇ ಪರಸ್ಪರವಾಗಿ ವರಿಸಿ ದಂಪತಿಗಳಾಗಬೇಕೆಂಬುದೇ ಮಾನವ ಧರ್ಮವಾಗಿದೆ. ಈ ನಿಯಮವನ್ನು ತಪ್ಪದೆ ನಡೆಸಿಕೊಂಡು ಬಂದವರು, ಮತ್ತು ವಿವಾಹವು ದೈವಸಂಕಲ್ಪವೆಂದು ತಿಳಿದವರು ದಾಂಪತ್ಯ ವಿಚಾರದಲ್ಲಿ ಅಸುಖಿಗಳಾಗಿಯಾಗಲೀ, ಕಷ್ಟಪಟ್ಟವರಾಗಿಯಾಗಲೀ ಇರುವ ಸಂದರ್ಭವು ಎಂದೂ ಒದಗಲಿಲ್ಲ. ವಿವಾಹವು ದೈವಸಂಕಲ್ಪವೆಂದು ಎಣಿಸುತ್ತಿರುವರಲ್ಲಿ ಅಂತಹ ಐಕ್ಯವು ಕೇವಲ ದೇಹಮಾತ್ರದ ಐಕ್ಯವಾಗಿರದೆ ಆಂತರಿಕ ಐಕ್ಯವೂ ಆಗಿದ್ದು ಮೃತ್ಯು ಮುಖದಲ್ಲಿ ಕೂಡ ವಿಚ್ಛೇದವಾಗಲಾರದು. ಎಲ್ಲಿ ನಿಜವಾದ ಆತ್ಮೈಕ್ಯವಿರುವುದೋ ಅಲ್ಲಿ ವಿಧವೆಯ ಅಥವಾ ವಿಧುರನ ಪುನರ್ವಿವಾಹವು ಅಚಿಂತನೀಯ, ಅಯುಕ್ತ ಮತ್ತು ಅಪರಾಧವು. ಎಲ್ಲಿ ವಿವಾಹದ ನಿಜವಾದ ನಿಯಮಗಳನ್ನು ಅತಿಕ್ರಮಿಸಿ ವಿವಾಹಗಳು ನಡೆದಿವೆಯೋ ಅಂತಹ ವಿವಾಹಗಳು ವಿವಾಹಗಳೇ ಅಲ್ಲ. ಈಗಿನ ಕಾಲದಲ್ಲಿ ನಿಜವಾದ ವಿವಾಹಗಳು ಅಪರೂಪವಾಗಿದ್ದರೆ ವಿವಾಹ ಪದ್ಧತಿಯನ್ನು ನಾವು ದೂರಬೇಕಾದುದಿಲ್ಲ. ಆದರೆ ಈಗ ಪ್ರಚಾರದಲ್ಲಿರುವ ವಿವಾಹ ರೀತಿಯನ್ನೇ ದೂರಬೇಕು. ಇದು ಸಂಸ್ಕಾರ ಹೊಂದಲೇ ಬೇಕು.

"ವಿವಾಹದಲ್ಲಿ ನೈತಿಕ ಅಥವಾ ಧಾರ್ಮಿಕ ಬಂಧವಿಲ್ಲ. ಅದೊಂದು ರೂಢಿಯೇ ಆಗಿದೆ. ಮತ್ತು ಧರ್ಮಕ್ಕೂ, ನೀತಿಗೂ ವಿರುದ್ಧವಾದ ಈ ರೂಢಿಯು ಕಿತ್ತುಬಿಡಲು ಯೋಗ್ಯವಾಗಿದೆ" ಎಂದು ನಮ್ಮ ಬಾತ್ಮಿದಾರರು ಸಾಧಿಸುವರು. ನಾನು ಹೇಳುವುದು "ಮದುವೆಯೆಂಬುದು ಧರ್ಮವನ್ನು ಕಾಯ್ದಿಡುವ ಬೇಲಿ" ಎಂದು. ಬೇಲಿಯನ್ನೇ ಹಾಳುಮಾಡಿಬಿಟ್ಟರೆ ಧರ್ಮವು ನಾಶವಾಗಿಯೇ ಹೋಗುವುದು.

ಇಂದ್ರಿಯ ನಿಗ್ರಹವೇ ಧರ್ಮದ ಆಧಾರ ಮತ್ತು ವಿವಾಹವೆಂಬುದು ನಿಗ್ರಹವಲ್ಲದೆ ಮತ್ತೊಂದಲ್ಲ. ಇಂದ್ರಿಯ ನಿಗ್ರಹದ ಗಂಧವೇ ಇಲ್ಲದವನಿಗೆ ಆತ್ಮಜ್ಞಾನವೆಂದಿಗೂ ಉಂಟಾಗಲಾರದು. ಇಂದ್ರಿಯ ನಿಗ್ರಹದ ಆವಶ್ಯಕತೆಯನ್ನು ನಾಸ್ತಿಕನಿಗಾಗಲೀ, ಚಾರ್ವಾಕನಿಗಾಗಲೀ ಸಮಾಧಾನಪಡುವಂತೆ ಸಿದ್ಧಾಂತ ಮಾಡಿಹೇಳುವುದು ಕಷ್ಟಸಾಧ್ಯವೆಂದೇ ನಾನು ಒಪ್ಪಿಕೊಳ್ಳುವೆನು. ಆದರೆ ಈ ಸ್ಥೂಲ ದೇಹದ ಅನಿತ್ಯತ್ವವನ್ನು ಅರಿತವನು ಸಾಧನೆ ಅಥವಾ ಇಂದ್ರಿಯನಿಗ್ರಹಗಳಿಂದಲ್ಲಿಗೆ ಆತ್ಮಜ್ಞಾನ ಉಂಟಾಗಲಾರದೆಂದು ತಾನಾಗಿಯೇ ತಿಳಿಯುವನು. ಈ ದೇಹವೆಂಬುದು ವಿಷಯಸುಖಗಳ ವಿಹಾರರಂಗವಾದರೂ ಆಗಬಹುದು. ಅಥವಾ ಮೋಕ್ಷಸಾಧನೆಯ ಪವಿತ್ರ ಕ್ಷೇತ್ರವಾದರೂ ಆಗಬಹುದು. ಅದು ಎರಡನೆಯದೇ ಆಗಿದ್ದರೆ ವಿಷಯಲಾಲಸೆಗೆ ಅವಕಾಶವೇ ಇಲ್ಲ. ಅಂತರಾತ್ಮನು ಸುಖೋಪಭೋಗಲಾಲಸೆಯನ್ನು ಪ್ರತಿಕ್ಷಣವೂ ಅಣಗಿಸುತ್ತಲೇ ಇರಬೇಕು.

ವಿವಾಹಬಂಧವು ಶಿಥಿಲವಾಗಿದ್ದು ಇಂದ್ರಿಯ ನಿಗ್ರಹದ ನಿಯಮಗಳ ಆಚರಣೆಯು ಇಲ್ಲದಿರುವಲ್ಲಿ ಸ್ತ್ರೀಯು ಕಲಹದ ಬೀಜವೇ ಆಗಿರುವಳು. ಪಶುಗಳಂತೆ ಮನುಷ್ಯರೂ ನಿಯಮಗಳೇ ಇಲ್ಲದಿದ್ದಲ್ಲಿ ಅವರು ನೆಟ್ಟಗೆ ನಾಶದ ದಾರಿಯನ್ನೇ ಹಿಡಿವರು. ನಮ್ಮ ಬಾತ್ಮಿದಾರರು ಪ್ರಸ್ತಾಪಿಸಿರುವ ಅನಿಷ್ಟಗಳೆಲ್ಲವೂ ವಿವಾಹ ನಿಯಮಗಳನ್ನು ವರ್ಜಿಸುವುದರಿಂದಲೇ ನಿವಾರಣೆಯಾಗುವಂತಿಲ್ಲ. ವಿವಾಹ ನಿಯಮಗಳನ್ನು ಚೆನ್ನಾಗಿ ತಿಳಿದು ದಾಂಪತ್ಯ ಧರ್ಮವನ್ನು ಕ್ರಮವಾಗಿ ಪರಿಪಾಲಿಸುತ್ತಾ ಬರುವುದರಿಂದಲೇ ನಿವಾರಿಸಬಹುದೆಂಬುವುದೇ ನನ್ನ ದೃಢವಾದ ನಂಬಿಕೆಯಾಗಿದೆ.

ಕೆಲವರಲ್ಲಿ ಅತೀ ಸಮೀಪ ಬಂಧುಗಳಲ್ಲಿ ವಿವಾಹ ಸಂಬಂಧಗಳನ್ನು ಬೆಳೆಸುವುದು ವಾಡಿಕೆಯಾಗಿದೆ. ಕೆಲವರಲ್ಲಿ ಅದು ನಿಷೇಧಿಸಲ್ಪಟ್ಟಿದೆ. ಕೆಲವರಲ್ಲಿ ಬಹು ವಿವಾಹಗಳು (Polygomy) ನಿಷೇಧಿಸಲ್ಪಡುತ್ತದೆ, ಕೆಲವರಲ್ಲಿ ಇದು ಪ್ರಚಾರದಲ್ಲಿದೆ. ಎಲ್ಲಾ ಜಾತಿಯವರಿಂದಲೂ ಅನುಸರಿಸಲು ಯೋಗ್ಯವಾದ ಒಂದೇ ತರಹದ ನೈತಿಕ ನಿಯಮವು ಇರಬೇಕಾದುದು ಇಷ್ಟವಾದರೂ ಈಗ ಇರುವ ಭಿನ್ನತೆಯ ಕಾರಣದಿಂದಲೇ ಎಲ್ಲಾ ವಿವಾಹ ನಿಯಮಗಳನ್ನು ದೂರಮಾಡಿಬಿಡುವುದರ ಅವಶ್ಯಕತೆಯು ಇರುವುದಿಲ್ಲ. ನಮ್ಮ ಅನುಭವದಿಂದ ಜ್ಞಾನವು ಅಭಿವೃದ್ಧಿಯಾದ ಹಾಗೆಲ್ಲಾ ನಮ್ಮ ದಾಂಪತ್ಯ ಧರ್ಮವೂ ಏಕರೀತಿಯನ್ನೇ ಹೊಂದುವುದು. ಇಂದಿಗಾದರೂ ಏಕ ಪತ್ನೀವ್ರತವೇ ಪರಮ ಶ್ರೇಷ್ಠವೆಂದು ಲೋಕವೇ ಹೇಳುತ್ತಿದೆ. ಮತ್ತು ಯಾವ ಮತವಾದರೂ ಬಹು ಪತ್ನಿಯರನ್ನು ವರಿಸೆಂದು ಒತ್ತಾಯಪಡಿಸುವುದಿಲ್ಲ. ಕಾಲದೇಶಕ್ಕನುಗುಣವಾಗಿ ಆಚರಣೆಯು ವ್ಯತ್ಯಾಸಗೊಂಡರೂ ಈ ಧ್ಯೇಯವೇನೋ ಇದ್ದಂತೆಯೇ ಇದೆ.

ವಿಧವೆಯರ ಪುನರ್ವಿವಾಹದ ಕುರಿತು ನಾನಿನ್ನು ಬೇರೆ ಹೇಳಬೇಕಾದುದಿಲ್ಲ. ಏಕೆಂದರೆ—ಬಾಲವಿಧವೆಯರ ಪುನರ್ವಿವಾಹವು ಯುಕ್ತವು ಮಾತ್ರವೇ ಅಲ್ಲದೆ ಅಂತಹ ವಿಧವೆಯರನ್ನು ತಂದೆತಾಯಂದಿರುಗಳು ಮಾಡಬೇಕಾದ ಮುಖ್ಯ ಕರ್ತವ್ಯವಾಗಿದೆಯೆಂದು ತಿಳಿಯುತ್ತೇನೆ.

ಪ್ರ: ಮ:

ಮೀರಾಬೆನ್ನರ ಜೈಲುವಾಸ.

(ಮೀರಾಬೆನ್ನರವರು 'ದಿ ಡೈಲಿ ಹೆರಾಲ್ಡ್'ಗೆ ತನ್ನ ಜೈಲುವಾಸದ ಅನುಭವವನ್ನು ಕೊಟ್ಟ ವಿವರದಿಂದ)

"ಒಬ್ಬನು ಜೈಲಿನಿಂದ ಬಿಡುಗಡೆಯಾಗಿ ಅವನು ಸ್ವಾಭಾ... [illegible] ತನ್ನ ಸಹೋದರರು [illegible] ವುದನ್ನು ಮನಸ್ಸಿಗೆ ತಂದುಕೊಂಡರೆ ಅವನಿಗೆ ಎಷ್ಟು ಮಾತ್ರಕ್ಕೂ ಸಂತೋಷವೇ ಇರಲಾರದು. ನಾನು ಜೈಲಿಗೆ ಹೋದಾಗ ಆರ್ಡಿನೆನ್ಸುಗಳು ಕಾಣುತ್ತವನ್ನೇ ಇದ್ದುವು. ನಾನು ಜೈಲಿನಿಂದ ಹೊರಗೆ ಬಂದಾಗ ಆರ್ಡಿನೆನ್ಸಿನ ಜೊತೆಗೆ ಕಾಲವೂ ಲತ್ವವು ಸೇರಿಸಲ್ಪಟ್ಟಿದೆ.

"ನಾನು ನನ್ನ ಮೂರು ತಿಂಗಳ ಜೈಲುವಾಸವನ್ನು ಬೊಂಬಾಯಿಯ ಆರ್ಥರ್ ರೋಡ್ ಜೈಲಿನಲ್ಲಿ ಕಳೆದೆನು. ನನಗೆ ಸಿ; ಕ್ಲಾಸು ಕೊಡಲ್ಪಟ್ಟಿದ್ದುದರಿಂದ ನನ್ನ ಸುಖ ಸೌಕರ್ಯಕ್ಕೆ ಯಾವ ಕುಂದು ಕೊರತೆಯೂ, ಅಡಚಣೆಯೂ ಇರಲಿಲ್ಲ. ಆದರೆ ಪಕ್ಕದಲ್ಲಿಯೂ ಇದ್ದ 'ಸಿ' ಕ್ಲಾಸ್ ರಾಜಕೀಯ ಖೈದಿಗಳ ಜೀವನವನ್ನು ಮನಸಾರ ಕಂಡೆನು. ಒಂದು ಚಿಕ್ಕ ಅಡಿಗೆ ಮನೆಯನ್ನು ನನ್ನ ಉಪಯೋಗಕ್ಕೆ ಕೊಟ್ಟಿದ್ದರು. ಅದರಲ್ಲಿಯೇ ನನಗೆ ಬೇಕಾದ ಆಹಾರ ಪದಾರ್ಥಗಳನ್ನು ತಯಾರಿಸಿಕೊಳ್ಳುತ್ತಿದ್ದೆನು. ನಿತ್ಯದಂತೆ ಮುಂಜಾನೆ 4–30 ಗಂಟೆಗೆ ಎದ್ದು ನಿತ್ಯದ ಪ್ರಾರ್ಥನೆಯಾದ ಮೇಲೆ ಸ್ವಲ್ಪ ಹಿಂದಿಯನ್ನು ಅಭ್ಯಾಸಿಸುತ್ತಿದ್ದೆನು. ಬೆಳಕು ಹರಿದ ಕೂಡಲೇ 50 ಅಡಿ ಉದ್ದ ಇದ್ದ ಜಗಲಿಯ ಮೇಲೆ ವಿಹಾರ ಮಾಡುತ್ತಿದ್ದೆನು. ಸಾಧಾರಣವಾಗಿ ನನ್ನ ಆಹಾರ ಸಾಮಗ್ರಿಗಳನ್ನು 9½–10½ ಗಂಟೆಯೊಳಗೆ ತಯಾರಿಸುತ್ತಿದ್ದೆನು. ನಿತ್ಯದ ಸ್ನಾನವನ್ನೂ, ಊಟವನ್ನೂ 11 ಗಂಟೆಯೊಳಗೆ ಮುಗಿಸಿಕೊಂಡು, ಸ್ವಲ್ಪ ನೂಲನ್ನು ನೇಯುತ್ತಿದ್ದೆನು. ಈ ಮೂರು ತಿಂಗಳ ಜೈಲುವಾಸದಲ್ಲಿ 27,000 ಗಜ ನೂಲನ್ನು ತಯಾರಿಸಿರುವೆನು. ಸಾಯಂಕಾಲದ ಊಟವನ್ನು 4½ ಗಂಟೆಯೊಳಗೆ ಮುಗಿಸಿ 'ಸಿ' ಕ್ಲಾಸಿನಲ್ಲಿರಿಸಲ್ಪಟ್ಟಿದ್ದ [illegible] ತಕಲಿಯಿಂದ ನೂಲು ನೇಯುತ್ತಿದ್ದೆನು. ಸಾಯಂಕಾಲದ ವಿಹಾರ ಮುಗಿಸಿಕೊಂಡು ಎಂದಿನಂತೆ 9 ಗಂಟೆಗೆ ನಿದ್ರಿಸುತ್ತಿದ್ದೆನು.

"ಆದರೂ ನಾನು ಕೇಳಿ ತಿಳಿದಂತೆ ಆರ್ಥರ್ ರೋಡು ಜೈಲುವಾಸವು ಸ್ವಲ್ಪಮಟ್ಟಿಗೆ ದುಸ್ಥಿತಿಯದಾದರೂ ಬೇರೆ ಜೈಲುಗಳಿಗಿಂತ ಮೇಲು ತರಗತಿಯಲ್ಲಿದೆ. ಆದರಲ್ಲಿ ಯಾವನೂ ಸರಿಯಾಗಿ ಯಾವ ವಿಧದಲ್ಲಿಯೂ ದೂಷಿಸಲು ಯಾವ ಅವಕಾಶವೇ ಇಲ್ಲ."

ಈಗ ಇವರಿಗೆ ಮಹಾತ್ಮ ಗಾಂಧಿಯವರನ್ನು ನೋಡಕೂಡದೆಂದು ಅಪ್ಪಣೆಯಾಗಿದೆ.

'ಹಿಂದೂ'

ತಾ. 17–5–32 ರಲ್ಲಿ ನಡೆದ ಗೌಡ ವಿದ್ಯಾ ಸಂಘದ ವಾರ್ಷಿಕ ಮಹಾಸಭೆ.

ಮೇಲ್ಕಂಡ ಸಭೆಯು ಕೊಡಪ್ಪುರುಚೆಟ್ಟಳ್ಳಿ ಗ್ರಾಮದ ಮ. ಕರ್ನಯ್ಯನ ಕಲುಂಬೈಯ್ಯನವರ ಮನೆಯಲ್ಲಿ ಪುತ್ತೂರು ವಕೀಲರು ಮ. ಮುಲವಳ್ಳಿ ಶಿವರಾಯರವರ ಅಧ್ಯಕ್ಷತೆಯಲ್ಲಿ ನಡೆಯಿತು.

ವಕೀಲರು ಮ. ನಿಡ್ಯಮಲೆ ಸೋಮಣ್ಣನವರು ಮೇಲ್ಕಂಡವರನ್ನು ಸಭಾಧ್ಯಕ್ಷರಾಗಬೇಕೆಂದು ಸೂಚಿಸಿದ ಮೇರೆ ಮ. ಉಳುವಾರನ ಅಪ್ಪಯ್ಯನವರಿಂದ ಅನುಮೋದಿಸಲ್ಪಟ್ಟು ಸರ್ವಾನುಮತದಿಂದ ಮ. ಶಿವರಾಯರು ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡರು.

ಮ. ಕರ್ನಯನ ಕಲುಂಬೈಯ್ಯನವರು ಸ್ವಾಗತಾ... ರಾಗಿದ್ದು ಅವರ ಪರವಾಗಿ ಮ. ಮೂಟೇರ ಪೊನ... ಮಹಾಸಭೆಗೆ ಸ್ವಾಗತವನ್ನು ಬಯಸಿ ಸಭಾಧ್ಯಕ್ಷ... ಘದ ಪ್ರೆಸಿಡೆಂಟರಿಗೂ ಪುಷ್ಪ ಹಾರವನ್ನು ಹಾ... ಮುಂದಣ ಕಾರ್ಯಗಳು ಜರುಗಿಸಲ್ಪಟ್ಟವು. ...ರ್ಯದರ್ಶಿಯವರು ಓದಿದ ವಾರ್ಷಿಕ ರಿ... ಸರ್ವಾನುಮತದಿಂದ ಮಂಜೂರು ಮ... ಗ್' ಮೇನೇಜರು ಮ. ಚೆರಿಯಮನೆ ... ಡಿಂಗ್' ವಾರ್ಷಿಕ ವರದಿಯನು... ಆಡಿಟರ್' ಮ. ಕಿಕ್ಕಡ ಪೂವಯ್ಯ... ಮಾಡಿ ಕಂಡುಹಿಡಿದ ನ್ಯೂನತೆಗ... ಚರ್ಚೆಯಿಂದ ಸ್ವೀಕರಿಸಲ್ಪಟ್ಟ... ಬಡತಕ್ಕ ಸಾಲಗಳ ವ್ಯವಹಾ... ಚರ್ಚೆಗಳು ನಡೆದುದಲ್ಲದೆ ... ದಡಂತೆಯೂ, ಸಂಘದ ... ದಲಿಯು ಹೆಚ್ಚಿನ ಜವಾ... ಯೂ ಠರಾವುಗಳು ... ಸ ನಿಬಂಧನೆಗಳನ್ನು ... ಳ್ಳ ಬದಲಾವಣೆಗಳ... ಈ ವರೆಗೆ ಇದ್ದ ಸ... ವಂತೆಯೂ, ಮುಂದ... ಘವು ನಡೆದುಕೊ... ಜ.ಆರಾಯ...

ಸಂಘ... ರ ಹೆಸರಿನ... ನ್ನು, ಹೊ... ದಲ್ಲಿ ... [illegible]

ಕೊಡಗು.

ಸನ್ ೧೯೩೨ನೇ ಇಸವಿ

ಮೇ ತಾ. ೨೭ ನೇ ಶುಕ್ರವಾರ.

ಪ್ರೆಸ್ ಆರ್ಡಿನೇನ್ಸ್

ಜಾರಿಯಲ್ಲಿರುವವರೆಗೆ

ನಾವು

ಅಗ್ರಲೇಖನ

ನನ್ನ

...ವುದಿಲ್ಲ.

ಸ್ವಾಲಿಕೆ

'ನು

ಕಾಂಗ್ರೆಸನ್ನು ಎದುರಿಸಲು ನೀವು ಕೊಡುವ ಸೂಚನೆಗಳನ್ನು ನಾನು ಒಪ್ಪುವವನಲ್ಲ. ಆದರೂ ನಿಮ್ಮ ಪತ್ರಿಕೆಯಲ್ಲಿ ನನ್ನ ಅಭಿಪ್ರಾಯಗಳಿಗೆ ಎಡೆಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

ನೀವು ಕಲ್ಕತ್ತಾದಲ್ಲಿದ್ದೀರಿ. ನಾನು ದೂರ ಪ್ರಾಂತ್ಯದಲ್ಲಿದ್ದೇನೆ. ನಿಮಗೆ ಕಾಣದ್ದು ಒಂದೆರಡು ಸಂಗತಿಗಳು ನನಗೆ ಕಾಣುತ್ತದೆ. ಕೃಷಿಕ ಸಮೂಹದ ಸಹಾನುಭೂತಿಯು ಕಾಂಗ್ರೆಸಿನ ಕಡೆಗೆ ಇದೆ. ಆ ಸಹಾನುಭೂತಿಯು ನೂತನ ಸರ್ಕಾರದ ಆರ್ಡಿನೇನ್ಸ್‌ಗಳಿಂದ ಕಾಂಗ್ರೆಸಿನವರು ಕಷ್ಟಕ್ಕೆ ಗುರಿಯಾಗಿರುವಮೋ ಅಂಥಾ ಸರ್ಕಾರದ ಮೇಲೆ ದ್ವೇಷವಾಗಿ ಪರಿಣಮಿಸುತ್ತಿದೆ.

ಶಾಂತಿಸ್ಥಾಪನೆಗೆ ಈ ಆರ್ಡಿನೇನ್ಸ್‌ಗಳು ಅವಶ್ಯವಿಕ್ಕೋ ಎಂತ ಈ ಗ್ರಾಮಾಂತರದ ನಿವಾಸಿಗಳು ಯೋಚಿಸುತ್ತಾ ಕೂರುವುದಿಲ್ಲ. ಹಿಂದುಸ್ಥಾನದ ಅಭಿಲಾಷೆಗಳನ್ನು ಬಹಿರಂಗಪಡಿಸಲು ಶಕ್ತಿ ಇರುವ ಒಂದೇ ಒಂದು ಸಂಸ್ಥೆಯಾದ ಕಾಂಗ್ರೆಸನ್ನು ನಾಶಪಡಿಸಲು ಸರ್ಕಾರವು ಆರ್ಡಿನೇನ್ಸ್‌ಗಳನ್ನು ಉಪಯೋಗಿಸುತ್ತಿದೆಯೆಂತ ಮಾತ್ರ ತಿಳಿದುಕೊಳ್ಳುತ್ತಾರೆ. ಈ ಅಭಿಪ್ರಾಯವು ಹೆಚ್ಚಾಗಿ ಹರಡಿಲ್ಲವೆಂತಲೂ, ಮುಸಲ್ಮಾನರಿಗೆ ಕಾಂಗ್ರೆಸಿನ ಮೇಲೆ ಸಹಾನುಭೂತಿ ಇಲ್ಲವೆಂತಲೂ ಹೇಳುವುದು ನಿಜವಲ್ಲ; ಇತ್ತೀಚೆಗೆ ನೂರಾರು ಮುಸಲ್ಮಾನರು ಕಾಂಗ್ರೆಸಿನ ಧ್ಯೇಯಕ್ಕಾಗಿ ಜೈಲಿಗೆ ಹೋಗಿದ್ದಾರೆ. ಮುಸಲ್ಮಾನ್ ಅಥವಾ ಬೇರೆ ಯಾವುದೇ ಕೂಟದಲ್ಲಿ ಮುಖ್ಯಸ್ಥರು ತಮ್ಮ ಸ್ವಾರ್ಥಸಾಧನೆಗಾಗಿ ತಮ್ಮ ಜಾತಿಯವರು ಕಾಂಗ್ರೆಸ್ ಚಳವಳದಲ್ಲಿ ಸೇರಲಿಲ್ಲವೆನ್ನಬಹುದು. ಹಿಂದೂ ಮುಸಲ್ಮಾನ್ ಅಥವಾ ಯಾವುದೇ ಜಾತಿಯವನಾಗಲೀ ಕಾಂಗ್ರೆಸ್ ಕೆಲಸದಲ್ಲಿ ಸಹಾನುಭೂತಿ ಇಲ್ಲದವನಿಲ್ಲ. ಕಾಂಗ್ರೆಸ್ ತಪ್ಪು ದಾರಿಯನ್ನು ಅವಲಂಬಿಸಿ ತನ್ನ ಮೇಲೆ ತಂದುಕೊಂಡ ಕಷ್ಟಗಳಿಗಾಗಿ ಕಾಂಗ್ರೆಸಿನ ಮೇಲೆ ಸಹಾನುಭೂತಿ ಇಲ್ಲದವನಿಲ್ಲ. ಸರ್ಕಾರವು ಕೊಡುತ್ತಿರುವ ಅತಿ ಕಠಿಣ ಶಿಕ್ಷೆಯಿಂದ ಕಾಂಗ್ರೆಸಿಗೆ ಬಂದೊದಗಿದ ಕಷ್ಟಗಳಿಗೆ ಕಾಂಗ್ರೆಸಿನವರೇ ಕೆಲವು ಮಟ್ಟಿಗೆ ಜವಾಬ್ದಾರರು ಎಂಬದನ್ನು ಜನಸಮುದಾಯವು ಮರೆತುಬಿಡುತ್ತದೆ.

ರೂಪಾಯಿಗೆ ಹದಿನಾರು ಆಣೆಯೂ ಮನಸೋಇಚ್ಛೆ ನಡಿಸುವ ದಬ್ಬಾಳಿಕೆಯನ್ನು ಬಿಡಲೇಬೇಕು. ಈಗಾಗಲೇ ಜನರಲ್ಲಿ ಹುಟ್ಟಿದ ಸಿಟ್ಟನ್ನೂ, ದ್ವೇಷವನ್ನೂ ಇನ್ನು ಎಷ್ಟೇ ಸ್ನೇಹಭಾವ ತೋರಿಸಿದರೂ ಪುನಃ ಸಂಪಾದಿಸುವುದು ಬಹು ಕಷ್ಟಸಾಧ್ಯವೇ ಸರಿ. ಈ ಮನೋಭಾವವನ್ನು ಬೆಳೆಯಲು ಬಿಡುವುದು ಕ್ಷೇಮವಲ್ಲ. ತತ್ಕಾಲ ಕೆಡಕನ್ನುಂಟುಮಾಡದಿದ್ದರೂ ಇನ್ನು ಮುಂದೆ ಇದರಿಂದ ತುಂಬಾ ಕೇಡುಗಳು ಸಂಭವಿಸುವುದರಲ್ಲಿ ಸಂಶಯವಿಲ್ಲವೆಂಬುವುದು ಎಲ್ಲಾ ಒಳ್ಳೇ ಆಲೋಚನಾಪರರಿಗೆ ತಿಳಿಯದೆ ಇರದು. ಹಿಂದೂಸ್ಥಾನದವರಿಗೆ ಎಷ್ಟು ಸಿಟ್ಟು ಬಂದರೇನು? ಅವರಿಗೆ ನಮ್ಮ ಮೇಲೆ ಎಷ್ಟು ದ್ವೇಷ ಹೆಚ್ಚಿದರೇನು ಅವರನ್ನು ಅಣಗಿಸುವ ಯುದ್ಧದ ಹತ್ಯಾರುಗಳು ನಮ್ಮಲ್ಲಿ ಅಪರಿಮಿತವಾಗಿರುವಾಗ ಹಿಂದೀಯರನ್ನು ನಾವು ಲಕ್ಷಿಸುವ ಅವಶ್ಯವಿಲ್ಲವೆಂತ ಕೆಲವರ ಅಭಿಪ್ರಾಯ. ಇದು ತಪ್ಪೆಂತ ನನ್ನ ಭಾವನೆ ಹಿಂದೂಸ್ಥಾನದಲ್ಲಿ ಎಷ್ಟೇ ಚಳವಳವೆದ್ದರೂ ಅಂತರ ರಾಷ್ಟ್ರೀಯ ಶಾಂತಿಯೊಂದು ಇದ್ದರೆ ಹಿಂದೂಸ್ಥಾನವನ್ನು ಅಣಗಿಸುವುದು ಕಷ್ಟವಿಲ್ಲವೆಂತ ನನಗೆ ತಿಳಿದಿದೆ. ಆದರೆ ಈ ತರದ ಶಾಂತಿಯಿಂದ ನಾವು ತೃಪ್ತರಾಗುವುದು ಹುಚ್ಚುತನ. ಲಾರ್ಡ್ ಸ್ಯಾಂಕಿಯವರು ನಿಜವಾಗಿ ಹೇಳಿರುವಂತೆ ನಾವು ತೃಪ್ತಿಯುಳ್ಳ ಹಿಂದೂಸ್ಥಾನವಾಗಿರುವಂತೆ, ನಮಗೆ ಕಷ್ಟಬಂದಾಗ ಸಹಾಯಕ್ಕೆ ಒದಗುವಂಥಾ ಅವಕಾಶ ದೊರೆತಾಗ ನಮಗೆ ಕೇಳುವುದಬೇಕೆಂಬ ಇಚ್ಛೆ ಹುಟ್ಟುವಂಥ ಹಿಂದೂಸ್ಥಾನವಾಗುವಂತೆ ನಾವು ಪ್ರಯತ್ನಿಸಬೇಕು.

ಈಗಿನ ರೀತಿನೀತಿಯಿಂದ ಇದು ಸಾಧ್ಯವಿದೆಯೋ ಎಂತ ಯೋಚಿಸಬೇಕು. ಸಮಯ ಪ್ರತಿಕೂಲವಾಗಿ ನಗುವುದು ಸುಲಭ—ಆಪತ್ತು ಎದ್ದಾಗ ಸಹಾಯ ಮತ್ತು ಆಶ್ರಯ ಎಲ್ಲಿಯೂ ದೊರಕದೆ ಇರುವಾಗ ನಗುವುದು ಅಷ್ಟೊಂದು ಸುಲಭವಲ್ಲ.

ಒಬ್ಬ ಇಂಗ್ಲಿಷ್ ಗೃಹಸ್ಥನ ಅಭಿಪ್ರಾಯ.

ಹಿಂದೂಸ್ಥಾನದಲ್ಲಿ ಇತ್ತೀಚೆಗೆ 18 ತಿಂಗಳು ಮಿಶನರಿ ಕೆಲಸ ಮಾಡಿ ಬಂದ ರೆವರೆಂಡ್ ಯಂ. ಸಿ. ರ್‍ಯಾಟ್ಸರ್ ಎಂಬವರು ಬರ್ಮಿಂಗ್ಹಾಮಿನಲ್ಲಿ ಮಾಡಿದ ಭಾಷಣದಿಂದ—

ಯೂರೋಪಿನಲ್ಲೂ, ಇಂಗ್ಲೆಂಡಿನಲ್ಲೂ ಕೆಲವು ರಾಜಕೀಯ ಹಕ್ಕುಗಳಿಗಾಗಿ ನಡೆಯುವ ಹೋರಾಟಕ್ಕೆ ನನ್ನ ಸಹಾನುಭೂತಿ ಇದ್ದರೂ ಇಂಡಿಯಾದಲ್ಲಿ ನಾನು ರಾಜಕೀಯ ವಿಚಾರದಲ್ಲಿ ಕೈಹಾಕಲಿಲ್ಲ. ಈ ಸಭೆಯಲ್ಲಿ ನಾನು ಆಡುವ ಮಾತುಗಳನ್ನು ನಾನು ಇಂಡಿಯಾದಲ್ಲಿ ಆಡಿದ್ದಿದ್ದರೆ ನನ್ನನ್ನು ಜೈಲಿಗೆ ಕಳುಹಿಸುತ್ತಿರಲಿಲ್ಲ. ಬೇರೆ ಕೆಲವು ಇಂಗ್ಲಿಷ್ ಮತ್ತು ಅಮೇರಿಕನ್ ಮಹನೀಯರನ್ನು ಗಡೀಪಾರು ಮಾಡಿದಂತೆ ನನ್ನನ್ನು ಇಂಡಿಯಾದಿಂದ ಗಡೀಪಾರುಮಾಡಿಬಿಡುತ್ತಿದ್ದರು. ಆದರೆ ಹಣ ಖರ್ಚು ಮಾಡಿ ನನ್ನನ್ನು ಇಂಡಿಯಾಕ್ಕೆ ಕಳುಹಿಸಿದವರ ಪ್ರಯತ್ನವನ್ನು ನಿಷ್ಪ್ರಯೋಜನವಾಗಬಾರದೆಂಬುದಕ್ಕಾಗಿ ನಾನು ರಾಜಕೀಯದಲ್ಲಿ ಕೈಹಾಕಲಿಲ್ಲ.

ಮತವನ್ನೂ, ರಾಜಕೀಯವನ್ನೂ ಬೇರ್ಪಡಿಸಲು ಸಾಧ್ಯವಿಲ್ಲ. ಇಂಡಿಯಾದಲ್ಲಿ ಬೇರ್ಪಡಿಸಿಕೊಂಡಿದ್ದೆ, ಇಲ್ಲವಾದರೆ ಮತಸಂಬಂಧವಾದ ಕೆಲಸ ಮಾಡಲು ಬಿಡದೆ ನನ್ನನ್ನು ಗಡೀಪಾರು ಮಾಡುತ್ತಿದ್ದರು.

ಇಂಡಿಯಾದಲ್ಲಿ ನಮ್ಮ ಸಾಮ್ರಾಜ್ಯವು ಅಂತ್ಯವಾಯಿತು. ಇಂಡಿಯಾದಲ್ಲಿ ಬ್ರಿಟಿಷರು ಬಹಳ ಒಳ್ಳೇ ಕೆಲಸ ಮಾಡಿದ್ದಾರೆ. ಈಗಿನ ರಾಜಕೀಯ ಹೋರಾಟದಲ್ಲಿ ಇದನ್ನು ಹಿಂದೀಯರು ಒಪ್ಪದಿದ್ದರೂ ನ್ಯಾಯಶೀಲ ಚರಿತ್ರಕಾರರು 19 ನೇ ಶತಮಾನದಲ್ಲಿ ಇಂಡಿಯದಲ್ಲಿ ಇಂಗ್ಲಿಷರು ಒಳ್ಳೇ ಕೆಲಸ ಮಾಡಿದ್ದನ್ನು ಒಪ್ಪಲೇಬೇಕು. ಹೀಗೆ ಮಾಡಿದ ಸಹಾಯಕ್ಕಾಗಿ ಬ್ರಿಟನಿಗೆ ಒಳ್ಳೆ ಪ್ರತಿಫಲದೊರಕಿದೆ. ಕೆಲವು ಸಾರಿ ಶೇಕಡ 500 ರಷ್ಟು ಲಾಭ ಹೊಂದಿದ್ದಾರೆ. ಹಿಂದೂಸ್ಥಾನಕ್ಕೆ ಮಾಡಿದ ಉಪಕಾರವು ಬರೇ ಧರ್ಮಬುದ್ಧಿಯಿಂದಲ್ಲ. ಈಗ ನಾವು ಹಿಂದೂಸ್ಥಾನದ ಸೇವೆಮಾಡುತ್ತಿಲ್ಲ. ಈಗ ನಾವು ಹಿಂದೂಸ್ಥಾನವನ್ನು ಉಪಯೋಗಿಸಿ ಜೀವಿಸುತ್ತಿದ್ದೇವೆ. ಇದನ್ನು ಹಿಂದೀಯರು ತಿಳಿದುಕೊಂಡಿದ್ದಾರೆ. ನಾವು ಹಿಂದೀಯರಿಗೆ ಅಲ್ಪಸ್ವಲ್ಪ ಕೆಲಸ ಮಾಡುತ್ತಿದ್ದೇವೆ. ಆದರೆ ನಾವು ಇಂಡಿಯಾದ ಮೇಲೆ ಹೊರಿಸುತ್ತಿರುವ ಹೊರೆಗೆ ಹೋಲಿಸಿದರೆ ನಾವು ಮಾಡುವ ಕೆಲಸವು ತೃಣಮಾತ್ರವೂ ಇಲ್ಲ. ಹಿಂದೂಸ್ಥಾನದಲ್ಲಿ ಸಾವಿರಾರು ಮೈಲು ಸಂಚರಿಸಿದ್ದೇನೆ. ಅನೇಕ ದೊಡ್ಡಮನೆಸ್ಥರ ಸ್ವಂತ ಅತಿಥಿಯಾಗಿದ್ದೆನು ಅವರ ಸ್ನೇಹಿತನಾಗಿದ್ದೆನು. 18 ತಿಂಗಳುಗಳ ವರೆಗೆ ಹಿಂದೂಸ್ಥಾನದಲ್ಲಿ ತಿರುಗುತ್ತಿದ್ದರೂ ಬ್ರಿಟಿಷ್ ಆಳ್ವಿಕೆಯು ಒಳ್ಳೇದೆಂತ ಹೇಳಿದವನು ನನಗೆ ದೊರಕಿದ್ದು ಒಬ್ಬನೇ ಮಾತ್ರ. ಇದು ದುಃಖಸೂಚಕವಲ್ಲವೇ? ನಾವು ಪ್ರೀತಿಸುವ ಇಂಗ್ಲೆಂಡು ಈ ರೀತಿ ಇಂಡಿಯಾದ ಸ್ನೇಹವನ್ನೂ, ಪ್ರೀತಿಯನ್ನೂ ಕಳೆದುಕೊಂಡದ್ದು ತುಂಬಾ ವ್ಯಸನಕರವಲ್ಲವೇ? ನಮಗೆ ಜನರ ಪ್ರೀತಿಯ ಬೆಂಬಲವಿದೆಯೆನ್ನಲು ಸಾಧ್ಯವಿಲ್ಲ. ನಮ್ಮ ಕೈಯಿಂದ ಹಿಂದೂಸ್ಥಾನವು ಜಾರಿಯೇ ಹೋಯಿತು. ಎಂದೆಂದಿಗೂ ಜಾರಿ ಹೋಯಿತೋ ಎಂತ ಖಂಡಿತ ಹೇಳಲಾರೆ—ಬಹುಶಃ ಹಾಗೆಯೇ ಇಂಡಿಯಾದಲ್ಲಿ ಬ್ರಿಟಿಷ್ ಆಳ್ವಿಕೆಯು ನಿಂತಿರುವುದು ಜನರ ಬೆಂಬಲದಿಂದ ಅಲ್ಲ, ನಮ್ಮ ಪಾವುಟಿಯ ನೆರಳುಗಳ ಅಡಿಯಲ್ಲಿ ಕೆಲವು ವೇಳೆ ರಕ್ತದಲ್ಲಿ ನೆನೆಸಲ್ಪಟ್ಟ ಕೋವಿಯ ಸಂಗೀನು (ಬೇಯೊನೆಟ್) ಗಳಿಂದ ಬ್ರಿಟಿಷ್ ಅಧಿಕಾರವುಳಿದಿದೆಯೆಂತ ಕೆಲವು ಹಿಂದೀಯರು ಹೇಳುತ್ತಾರೆ.

ಪಂಡಿತ ಮದನಮೋಹನ ಮಾಳವೀಯರ ವಿಜ್ಞಾಪನೆ.

ಅಖಿಲ ಭಾರತ ಸ್ವದೇಶಿ ದಿವಸ.

ಇದೇ ತಿಂಗಳು 29ನೇ ತಾರೀಕಿನ ದಿನವನ್ನು ಅಖಿಲ ಭಾರತ ಸ್ವದೇಶೀ ದಿವಸವಾಗಿ ಆಚರಿಸಬೇಕೆಂತ ಮಾಳವೀಯರು ವಿಜ್ಞಾಪಿಸಿಕೊಂಡಿರುತ್ತಾರೆ.

ಸ್ವದೇಶೀ ಸಂಘಗಳೂ, 'ಹಿಂದೀ ವಸ್ತುಗಳನ್ನೇ ಕೊಂಡುಕೊಳ್ಳಿ' ಎಂಬ ಸಂಘಗಳೂ ಅನೇಕ ಕಡೆಗಳಲ್ಲಿ ಸ್ಥಾಪಿತವಾಗಿವೆಯೆಂತಲೂ, ಇನ್ನೂ ಅನೇಕ ಕಡೆಗಳಲ್ಲಿ ಆಗಲಿಕ್ಕಿವೆ ಎಂತಲೂ ತಿಳಿಯಲು ಸಂತೋಷವೇ. ಹಿಂದೀಯರ ಆರ್ಥಿಕ ಸ್ಥಿತಿಯನ್ನು ಅಭಿವೃದ್ಧಿಗೊಳಿಸಲು ರಾಷ್ಟ್ರೀಯ ಮಿತವ್ಯಯವನ್ನು ಅಭ್ಯಾಸಿಸಿ ಸ್ವದೇಶೀ ವಸ್ತುಗಳ ಉಪಯೋಗ, ತಯಾರಿ, ಮಾರಾಟವೇ ದಾರಿ ಎಂತ ಹಿಂದೂಸ್ಥಾನದ ಜನಾಂಗದ ಎಲ್ಲಾ ಭಾಗದವರೂ ಒಪ್ಪುತ್ತಾರೆ. ಬ್ರಿಟನಿನಲ್ಲಿ 'ಬ್ರಿಟಿಷ್ ಸಾಮಾನುಗಳನ್ನೇ ಕೊಳ್ಳಿ, ಬ್ರಿಟಿಷ್ ಸಾಮಾನುಗಳನ್ನೇ ಮಾರಾಟ ಮಾಡಿ' ಎಂಬ ಚಳವಳವು ಇತ್ತೀಚೆಗೆ ಹೆಚ್ಚಾದ್ದರಿಂದ ಹಿಂದೂಸ್ಥಾನದಲ್ಲಿ ಸ್ವದೇಶೀ ಭಾವವು ಹರಡಲು ಸಹಾಯವಾಯಿತು.

ಇಂಗ್ಲೆಂಡಿನ ಪ್ರಯತ್ನವನ್ನು ಹೋಲಿಸಿದರೆ ಇಂಡಿಯದಲ್ಲಿ ಈ ವರೆಗೆ ನಡೆದ ಚಳವಳವು ಏನೇನೂ ಸಾಲದು, ದೇಶದ ಎಲ್ಲಾ ಭಾಗಗಳಲ್ಲೂ ಒಂದು ಸ್ವದೇಶೀ ದಿನವನ್ನು ಆಚರಿಸಿ ಸ್ವದೇಶೀ ಚಳವಳಕ್ಕೆ ದೊಡ್ಡ ಹುಮ್ಮಸ್ಸು ಕೊಡಬೇಕು. ತಾ 29—5—32ನೇ ಆದಿತ್ಯವಾರವನ್ನು ಸ್ವದೇಶೀ ದಿನವಾಗಿ ಆಚರಿಸಲು ಜಾತಿಮತ ಭೇದವಿಲ್ಲದೆ ರಾಜಕೀಯ ವಿಚಾರದಲ್ಲಿ ಯಾವ ಅಭಿಪ್ರಾಯವೇ ಇರಲಿ ನನ್ನ ದೇಶದ ಸಹೋದರ ಬಂಧುಗಳು ಸಹಕರಿಸಬೇಕೆಂತ ವಿಜ್ಞಾಪಿಸಿಕೊಳ್ಳುತ್ತೇನೆ.

ಈ ಕೆಳಗಿನ ಕಾರ್ಯಕ್ರಮವು ಸೂಚಿಸಲ್ಪಟ್ಟಿದೆ:—

ಸಂಘದ ಉದ್ದೇಶಗಳನ್ನು ಒಪ್ಪಿಕೊಳ್ಳುವ ಪ್ರತಿಯೊಬ್ಬ ಪ್ರಾಯಬಂದ ಸ್ತ್ರೀ ಪುರುಷನನ್ನೂ ಸ್ವದೇಶೀ ಸಂಘದ ಸದಸ್ಯರನ್ನಾಗಿ ಸೇರಿಸಿಕೊಳ್ಳುವುದು. ಜನರು ಒಬ್ಬೊಬ್ಬನಾಗಿಯಾಗಲೀ, ಗುಂಪು ಗುಂಪಾಗಿಯಾಗಲೀ ಮನೆಮನೆಗೆ ಸುತ್ತಿ ಸ್ವದೇಶೀ ಸಂಘಕ್ಕೆ ಸೇರಬೇಕೆಂತ ಪತ್ರಿಕೆಗಳ ಮೂಲಕವೂ, ಬೇರೆ ವಿಧದಿಂದಲೂ ಬೋಧಿಸುವುದು.

ಮಧ್ಯಾಹ್ನದ ಮೇಲೆ ಖದ್ದರ್ ಮತ್ತು ಸ್ವದೇಶೀ ವಸ್ತುಗಳನ್ನೇ ಉಪಯೋಗಿಸಿಕೊಂಡು ಮೆರವಣಿಗೆಗಳನ್ನೂ ಹೊರಡಿಸಬೇಕು. ಮೆರವಣಿಗೆಯ ಅಂತ್ಯವಾದ ನಂತರ ಸಭೆಗಳನ್ನು ಮಾಡಿ, ಸ್ವದೇಶೀ ಪ್ರಚಾರದ ಕುರಿತು ಭಾಷಣಗಳನ್ನು ಮಾಡಿ ಸ್ವದೇಶೀ ವಸ್ತುಗಳನ್ನೇ ಉಪಯೋಗಿಸುತ್ತೇವೆಂತ ಪ್ರಮಾಣ ಮಾಡಿಸಬೇಕು, ಮತ್ತು ಸ್ವದೇಶೀ ಸಂಘಗಳು ಇಲ್ಲದಲ್ಲಿ ಸ್ಥಾಪಿಸಬೇಕು, ಠರಾವು ಮಾಡಬಹುದು. ಆವರೆ 5 ಘಂಟೆಯ ಮೇಲೆ ಮೆರವಣಿಗೆಗಳಿಗೂ, ಮೀಟಿಂಗುಗಳಿಗೂ ಜನರು ತುಂಬಾ ಸೇರಲು ಸಹಾಯವಾಗುವಂತೆ ಅಂಗಡಿಗಳನ್ನು ಮುಚ್ಚಬಹುದು.

ಕೊಡಗು.

Reg. No. M. 1550.
If not delivered please return to
"KODAGU" OFFICE MERCARA.

ಸತ್ಯೇನ ಧರ್ಮದಯಯಾ ವಿದ್ಯಾ ನೀತಿ ಪ್ರಯುಕ್ತಯಾ । ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಮೂಚಿಮಂಡ ಯಂ. ಗಣಪತಿ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೧ | ಮಡಿಕೇರಿ, ಸನ್ ೧೯೩೨ನೇ ಇಸವಿ ಮೇ ತಾರೀಕು ೨೭ ನೇ ಶುಕ್ರವಾರ. | ಸಂಚಿಕೆ ೫೧

SARI-PIN.

BRACELETS.

NECKCHAINS.

EAR-RINGS.
(Thodus)
Cut-rubys Rs. 25 to 50
With diamond in centre Rs. 80 to 120

Gold Rs. 10
Set rubys forming any letter Rs. 12



NOSE-RINGS.
Diamond in small size of best quality Rs. 35 & upwards according to size.

MARRIAGE PRESENTATIONS

Attractive and inexpensive articles ready in stock. Prompt execution. Details on enquiry free with catalogue. Numerous customers in Coorg thoroughly satisfied with reliable service. Testimonials pouring in.

Telegrams: 'PRECIOUS.'

V. Subramaniaiyer
Jeweller,

Telephone: 8145.

CATALOGUE ON ENQUIRY.

Post Box 423, Triplicane, P. O., MADRAS.

MARRIAGE PRESENTATIONS.

Estimates free on enquiry.

Silver Guindys, Photo lockets, Dimond nose-screws, cut-ruby ear-rings, etc., etc., etc., in all prices, Very attractive. Prices most moderate.

Designs free on enquiry.



Pendant.



Tumblers with stand



Fancy plate.

52–28

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲು)

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	26,806
ಜಮೆಬಂದ ಠೇವಣಾತಿ	—	2,50,301

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೋಸ್ಕರ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ವಾರ್ಷಿಕ ರೂ. 5-0-0ರ ಪ್ರಕಾರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ವಾರ್ಷಿಕ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡಿಸಿ ಪ್ರಕಟಿಸುತ್ತಾರೆ.

ಪ್ರೆಸಿಡೆಂಟರು,	ಟ್ರೆಜರರ್
ಕೋಳಿಮಾಡ ಅಪ್ಪಯ್ಯನವರು ರಾವ್ ಬಹದ್ದೂರ್.	ಮನೆಯಪ್ಪಂಡ ಬೆಳ್ಯಪ್ಪನವರು.

ಸೆಕ್ರೆಟರಿ

ಸಿ. ಯಮ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಖು 1—7—1931.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿದೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜೆಂಟರುಗಳು.

ಉತ್ತರ ಕೊಡಗಿಗೆ ಕು: ಚೌರಿರ ಮಾದಯ್ಯನವರು,

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮುಂಡೇಪಂಡ ಸೋಮಯ್ಯನವರು, (ಖಾದಿಭಂಡಾರ.)

ನಾಪೋಕ್ಲು—ಎಸ್. ಆರ್. ವೆಂಕಪ್ಪಯ್ಯನವರು.

ಅಮ್ಮತ್ತಿ—ಸಿದ್ದಾಪುರ—ಮೆ. ಬಿಸಂಡ ಮಾದಪ್ಪನವರು.

ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಯ್ಯನವರು,

ಸುಂಟಿಕೊಪ್ಪ ಅರಮಣಮಾಡ ಪಿ ಕಾರ್ಯಪ್ಪನವರು,

ಕೇರಿ & ತಿತಿಮತ್ತಿ—ಮೆ. ಪಿ. ಮಾದಯ್ಯನವರು,

ಕೊಪ್ಪ—ಮೆ. ಅಪ್ಪಚಟ್ಟೋಳಂಡ ಮಾಚಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಹಣ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,

"ಕೊಡಗು" ಲಿಮಿಟೆಡ್,

ಮಡಿಕೇರಿ,

[illegible]ಕ್ಕೆ ಸಿದ್ಧವಾಗಿವೆ.

[illegible]ತ್ತು ದವಸ ಭಂಡಾರಗಳ ಪ್ರತಿ [illegible]ಇರಬೇಕಾದ ಆಮಿತ ಜವಾ[illegible]ಖಥದ ಪುತ್ತು ದವಸ ಭಂಡಾ[illegible] ಬುಕ್ಕುಗಳೂ, ಎಲ್ಲಾ ಸಹ[illegible]ಂಡಾರಗಳ ಕೆಲಸಗಳನ್ನು [illegible]ವಾಗಿರುವ, ರೂಲ್ಸಿಗನು[illegible]ವಾದ ಫಾರಮುಗಳೂ, ಮಂಜೂರಾತಿ ಫಾರಮು[illegible]ಗಳೂ, ಜಾಮೀನು[illegible]ರ್ ಖರಾರು ಫಾ[illegible]ತಿ ಪುಸ್ತಕಗಳೂ, [illegible] ಚೆಕ್ ಪುಸ್[illegible]ಯುತ್ತವೆ.

ಎ. ಪಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.

ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ-8013 ಜನರಿಗೆ 32 ಲಕ್ಷ ರೂ.

ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,78,322 ಜನರಿಗೆ 38ಕೋಟಿ ರೂ.

ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ರಷ್ಟರ ವಿಪರೀತ ಕಮ್ಮಿ ಖರ್ಚಿನಲ್ಲಿಯೇ ನಡೆಸಲ್ಪಟ್ಟಿದ್ದಾಗಿದೆ.

ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡೆಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚಿನ ಉತ್ತೇಜನವನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬುದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್ ಬೆಂಗಳೂರು.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ಮೊಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೋ	ಪಾಟ್ನಾ	ಸುಕ್ಕೂರು
ಅಲಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಡೌಲಗಾಸ್	ಮಂಡಲೆ	ರಾಯಿಪುರ	ತಿರುವೆಂಡ್ರಮ್
ಭೋಪಾಲ್	ಕರಾಚಿ	ಮಂಗಳೂರು	ರಾಂಚಿ	ವಿಶಾಖಪಟ್ಣ

[52—12

ರಟು ಕಷಾಯ ಮಲೆಜ್ವರಕ್ಕೆ:—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಮಲೆಜ್ವರ, ದಿನಬಿಟ್ಟು ಬರುವ ಜ್ವರ, 3—4 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ. 1—8—0; 3ಕ್ಕೆ ರೂ. 4—0—0; 6ಕ್ಕೆ ರೂ. 7—8—0; 12ಕ್ಕೆ ರೂ. 14

ಮಲೆ ಜ್ವರಕ್ಕೆ ರಟು ಕಷಾಯ

ಚಂದನಾಸವ:—ಇದು ಪ್ರಮೇಹ ಮೂತ್ರಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಹಿಂದಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು. ಇವುಗಳಿಗೆ ಪರಮ ಔಷಧಿ. ಬೆಲೆ ಬಾಟ್ಲು 1, 3, 6ಕ್ಕೆ ರೂ. 1—4—0 3—8—0; 6—12—0

ರೋಮನಾಶಿನಿ:—ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಹೋಗುವುದು. ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ. 1, 1 ಡಜನಿಗೆ 3—8—0

ಮನಸೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆಹೊಟ್ಟು, ಕಣ್ಣುರಿ, ಕಿವಿಯಿಂದ ಕೀವು ಸೋರುವುದು, ಕಿವುಡುತನ, ಕಣ್ಣು ನೋವು, ಅಪಸ್ಮಾರ, ನಿದ್ದೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು. ಇವುಗಳೆಲ್ಲ [illegible] ಮುರುತ ಕೂದಲನ್ನು ಕಪ್ಪಾಗಿ [illegible] ಕೂದಲನ್ನು ಬೆಳೆಯುತ ಕೂದಲಿಗೆ [illegible] ಕೊಡುವ [illegible] ಕೂದಲನ್ನು ಕಡೆವ ಕೂದಲು ಇಲ್ಲದ ಸ್ಥಳದಲ್ಲಿ, ಹೊಸ ಕೂದಲನ್ನು ಹುಟ್ಟಿಸುತ್ತದೆ. ಬೆಲೆ ಸೀಸೆಗೆ ರೂ. 1, 3 ಸೀಸೆಗೆ 2—10—0. ಒಂದು ದೊಡ್ಡ ಸೀಸೆಗೆ ರೂ. 2, 3 ಸೀಸೆಗಳಿಗೆ 5—0—0.

ವಿಳಾಸ:—ಮನಸೋಲ್ಲಾಸಿನಿ ಕಂಪೆನಿ,

52—52 ಕಡೆಲಾಗು ಸರಿ ನಂ 30 9. ಮಂಗಳೂರು.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ, ಟಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,

52—19 ಗಿರಿಗಾಂವ, ಮುಂಬಯಿ.

Printed & published by M. M. Ganapathy at "Kodagu" Press Mercara

ಕೊಡಕಗಳ. ಒರಲಿ ಅವರು ಹಿಡಿದ ಕೆಲಸವನ್ನು ನಡೆಸಲು ಶಕ್ಯರೆಂದೂ, ಈಗ ಏಷಾಡು ಮಾಡಿರುವ ಇನ್ಸ್‌ಪೆಕ್ಟರೇಟ್ ಆಫೀಸು ಒಡನೇ ಸಬ್ ಆಫೀಸು ಆಗಬೇಕೆಂದೂ ವಗೈರೆಯೂ ಗಿ ಸಾಂಗವಾಗಿ ಭಾಷಣ ಮಾಡಿದರು. ಅಲ್ಲದೆ ಅಧ್ಯಕ್ಷರು ನೆರೆದಿದ್ದ ಸಭಿಕರೆಲ್ಲರನ್ನೂ ಸಂಬೋಧಿಸಿ ಎಲ್ಲರೂ ಈ ಕಂಪೆನಿಯಲ್ಲಿ ವಿಮೆ ಮಾಡಲು ಉತ್ತೇಜನ ಕೊಡಬೇಕೆಂದೂ, ಇಂಡಿಯಾದ ಅತ್ಯಂತ ದೊಡ್ಡದಾದ ಮತ್ತು ಸರ್ಕಾರದ ಪೂರ್ಣ ಜಾಮೀನು ಇರುವ ದೇಶೀಯ ಕಂಪೆನಿ ಇದಾಗಿದ್ದರಿಂದ ಎಲ್ಲರೂ ಈ ಕಂಪೆನಿಯನ್ನು ಪ್ರೋತ್ಸಾಹಿಸಬೇಕೆಂದೂ ಅಪ್ಪೀಲು ಮಾಡಿಕೊಂಡರು.

ಇದಾದನಂತರ ಮೆ. ಕೆ. ಪಿ ಅಂಣಪ್ಪನವರು ಸಭಿಕರಿಗೆ ವಂದಿಸಿ, ತಾನು ಯಾವ ಮೆಂಗಳಿಕೆಗೂ ಅರ್ಹನಲ್ಲವೆಂದೂ ಎಲ್ಲ ಹೊಗಳಿಕೆಯೂ ತನಗೆ ಬಹಳವಾಗಿ ಸಹಾಯ ಮಾಡಿರುವ ಇಲ್ಲಿ ನೆರೆದ ಮತ್ತು ದೇಶದ ಇತರ ಸ್ನೇಹಿತರಿಗೆ ಸಲ್ಲತಕ್ಕದೆಂದೂ, ತನ್ನ ಇದು ವರೆಗೆ ನಡೆದ ಕೆಲಸವೆಲ್ಲವೂ ಸ್ನೇಹಿತರಿಂದಲೇ ನಡೆಸಲ್ಪಟ್ಟಿದೆಯೆಂತಲೂ, ಇನ್ನು ಮುಂದಕ್ಕೂ ಸ್ನೇಹಿತರೆಲ್ಲರೂ ಸಹಾಯ ಮಾಡಿ ಈ ಇನ್ಸ್‌ಪೆಕ್ಟರೇಟ್ ಆಫೀಸನ್ನು ಅಭಿವೃದ್ಧಿಯಾಗಿ ನಡೆಸಲು ಸಹಾಯ ಮಾಡಬೇಕೆಂದೂ ಕೇಳಿಕೊಂಡನಂತರ ತಿಂಡಿತೀರ್ಥ ಪಲಾಹಾರಾದಿಗಳಿಂದ ಸಭೆಯು ಮುಕ್ತಾಯವಾಯಿತು.

'ಹಾಜರಿದ್ದವ'



ಫೋಟೋ ಕ್ಯಾಮರಾ.

ಈ ಕ್ಯಾಮರಾಗಳಲ್ಲಿ ಒಬ್ಬರ ಸಹಾಯವಿಲ್ಲದೆ ಫೋಟೋಗಳನ್ನು ತೆಗೆಯಬಹುದು. ಈ ಕ್ಯಾಮರಾ ಒಂದು ಇದ್ದರೆ ಬೇಕಾದವರಿಗೆ ಫೋಟೋ ತೆಗೆದು ಹಣ ಸಂಪಾದನೆ ಮಾಡಬಹುದು. ಫೋಟೋ ಕಾರ್ಡಿನ ಸೈಜಿನಲ್ಲಿ ಫೋಟೋಗಳನ್ನು ತೆಗೆಯಬಹುದು. ಫೋಟೋ ತೆಗೆಯುವ ವಿಧಾನವನ್ನು ಕಲಿತುಕೊಳ್ಳಬೇಕಾಗಿಲ್ಲ. ಕ್ಯಾಮರಾ ಜೊತೆಯಲ್ಲಿಯೇ ಫೋಟೋ ತೆಗೆಯುವ ವಿಧಾನವನ್ನೂ ಕಳುಹಿಸುವೆವು.

ಈ ಕ್ಯಾಮರಾವನ್ನು ಕರಿಸಿಕೊಳ್ಳುವವರಿಗೆ 3 ವರ್ಷಗಳ ಗ್ಯಾರಂಟಿ ಇರುವ ಟೈಂಪೀಸು ಒಂದನ್ನು ಇನಾಮಾಗಿ ಕೊಡುವೆವು. ಬೆಲೆ 1ಕ್ಕೆ ರೂ. 4—8—0.

M. Leo & Co. 165 China Bazar.
12—9 Madras.

ಗಮನಿಸಿರಿ! ಪರೀಕ್ಷಿಸಿರಿ!

ಅಂದವಾಗಿ ಫೋಟೋ ತೆಗೆಯುತ್ತಾರೆ.

ದೀರ್ಘ ಕಾಲ ಬಾಳಿಕೆ ಬರುತ್ತೆ.

ಹದಿನಾಲ್ಕು ವರ್ಷಗಳಿಂದ ವ್ಯಾಪಾರದಲ್ಲಿ ಹೆಸರುವಾಸಿಯಾದ ಮೆಸರ್ಸ್. ಶಂಕರ್ ಆ ಕಂಪೆನಿಯವರು ಕೊಡಗು ದೇಶದ ಭಗಿನಿ ಬಾಂಧವರ ಸಲುವಾಗಿ ಮಡಿಕೇರಿಯಲ್ಲಿ ಬ್ರಾಂಚ್ ಓಪನ್ ಮಾಡಿರುತ್ತಾರೆ.

ಇಲ್ಲಿ ದೀರ್ಘಕಾಲ ಬಾಳಿಕೆ ಬರುವಂತೆ ಬೇಕಾದ ನಮೂನೆಯಲ್ಲಿ ಫೋಟೋ ತೆಗೆಯುವುದು. ಫೋಟೋ ಎನ್‌ಲಾರ್ಜ್ ಮಾಡುವುದು. ಆಯಿಲ್ ಪೆಯಿಂಟಿಂಗ್ ಕೆಲಸಗಳು. ರಬ್ಬರ್ ಮೊಹರುಗಳ ಕೆಲಸಗಳು ಸದಾ ನಡೆಯುತ್ತವೆ. ಕ್ಯಾಮರಾ ಮೊದಲಾದ ಫೋಟೋ ಕೆಲಸದ ಎಲ್ಲಾ ಸಾಮಾನುಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ. ಅಮೆಚ್ಯೂರ್ಸ್ ಕೆಲಸಗಳು ಅಂದವಾಗಿ ತಯಾರಿಸಿ ಸಕಾಲಕ್ಕೆ ದೊರೆಯುತ್ತವೆ. ದರಗಳ ಬಗ್ಗೆ ವಿಚಾರಿಸಿರಿ. ಒಂದಾವರ್ತಿ ಪರೀಕ್ಷಿಸಬೇಕಾಗಿ ವಿನಂತಿ.

ಶಂಕರ್ & ಕಂಪನಿ.
ಕಾರೊನೇಷನ್ ಪಾರ್ಕ್,
12—7. ಮಡಿಕೇರಿ.

ಪುತ್ರ ಸಂತಾನದ ಎಣ್ಣೆ.

ಈ ಎಣ್ಣೆಯು ಒಬ್ಬ ದೊಡ್ಡ ಪಂಡಿತರಿಂದ ತಯಾರಿಸಲ್ಪಟ್ಟ ಹೆಂಗಸರಿಗೆ ಅನೇಕ ಕಾರಣಗಳಿಂದ ಗರ್ಭವು ನಿಲ್ಲುವುದಿಲ್ಲ. ಕೆಲವರಿಗೆ 3—4 ತಿಂಗಳ ಕಾಲ ನಿಂತು ನಂತರ ಹೋಗಿ ಬಿಡುವುದು. ಅಂಥಾ ಹೆಂಗಸರು ಈ ಎಣ್ಣೆಯನ್ನು ಗಣ ದಿನಗಳು ಸೇವಿಸುವದರಿಂದ ಗರ್ಭವು ನಿಂತು ಪುತ್ರ ಸಂತಾನವಾಗುವುದು. ಕೆಲವು ಹೆಂಗಸರಿಗೆ ಮುಟ್ಟಾಗುವ ಸಮಯದಲ್ಲಿಯೂ ಮುಟ್ಟಾದ ನಂತರವೂ ಉಂಟಾಗುವ ಹೊಟ್ಟೆ ನೋವು ಮುಂತಾದವುಗಳನ್ನು ಬಿಡಿಸಿ ಗರ್ಭ ನಿಲ್ಲಿಸುವುದು. ಈ ಎಣ್ಣೆಯನ್ನು ಬಹಳ ಜನರು ಉಪಯೋಗಿಸಿ ಪುತ್ರ ಸಂತಾನವನ್ನು ಪಡೆದಿರುವರು. ಒಂದು ಬಾಟ್ಲಿಯನ್ನು ತರಿಸಿ ಪರೀಕ್ಷಿಸಿರಿ. ಉಪಯೋಗಿಸುವ ವಿಧ ಔಷಧದ ಜೊತೆಯಲ್ಲಿ ಕಳುಹಿಸಲ್ಪಡುವುದು.

ಕ್ರಯ ಬಾಟ್ಲಿ 1ಕ್ಕೆ 2—8—0

K. Nadhamuni & sons.
12—9 168 China Bazar, Madras.

ಬಾಲಾರ್ಕಮಧು.

ಬಾಲಾರ್ಕಮಧು ಮಕ್ಕಳಿಗೆ ಕೊಡುವುದರಿಂದ ಶಕ್ತಿಯೂ ಆರೋಗ್ಯವೂ ಹೆಚ್ಚುವುದು. ಇದು ಮಧುರವಾಗಿದೆ. ಬೆಲೆ ಶೀಸೆ 1ಕ್ಕೆ 0—12—0 ಟ. ಖ 0—12—0.



(Spleen Lever enlargement) ಎಂಬ ಮಕ್ಕಳ ಭಯಂಕರ ಗಡ್ಡೆ ರೋಗ—ಪ್ಲೀಹ—ಪಿತ್ತಕೋಶದ ಗಡ್ಡೆಗೆ ಚಿಕಿತ್ಸೆ ಬಂದು. ಜ್ವರ—ಕೆಮ್ಮು—ಅಜೀರ್ಣ—ಜ್ವರ ಪ್ರಭಾ—ಈ ನಾಲ್ಕು ಮಹೋಪದ್ರವಗಳಿವೆ. ಸಾವಿರಾರು ಮಕ್ಕಳ ಪ್ರಾಣವನ್ನು ಉಳಿಸಿದೆ. ನಾಲ್ಕು ಔಷಧಗಳು ಸೇರಿ 1 ತಿಂಗಳ ಔಷಧದ ಬೆಲೆ 3—0—0. ಟ. ಖ 0—8—0. ಏಜೆಂಟರು ಬೇಕಾಗಿರುವರು

ಸ. ಎ. ಸನ್ಸ್. ಶ್ರೀನಿವಾಸರಾವ್,
ವೈ. ವಿ. ಆಯುರ್ವೇದ ಚಿಕಿತ್ಸಕ್,
ಬ್ರಾಂಚ್ ಆಫೀಸ್, ಉಡ್ಪಿ. S. K. | Spleen & Lever ಸ್ಪೆಶಲಿಸ್ಟ್, ಎಂ.ವಿ. ಪ್ರಸಾದಿಕ ಔಷಧಾಲಯ,
52—18 ಶಿವಮೊಗ್ಗ. (ಮೈಸೂರು ಸಂಸ್ಥಾನ)



ಕಾರ್ಡು ಬರೆದರೆ ಉಗಿನ ... ಪಟ್ಟಿಯನ್ನು ಕಳುಹಿಸಲ್ಪಡುವುದು.

ಬಂದೋಕುಗಳು, ಕತ್ತಿಗಳು, ಚಾಕುಗಳು, ಕೋವಿಗಳು, ತೋಟಗಳು, ಮದ್ದು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS,
Largest Importers of Firearms and Ammunition
Cheapest priced firm in India,
24—11 **210 Abdul Rehiman Street, BOMBAY.**

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

1. ಉತ್ತಮ ತರಹ ಒಂದು ಸೆಟ್ ಜರ್ಮನ್ ರೀಡ್ಸ್ ಹಾಕಿರುವ ಸಿಂಗಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 20—0—0
   „ ಮತ್ತು 22—8—0
2. ಡಿಟೋ ಉತ್ತಮ ತರಹ ಹಾರ್ಮೋನಿಯಂ „ 1ಕ್ಕೆ ರೂ. 25—0—0
   ಮತ್ತು 27—8—0
3. ಡಿಟೋ ಉತ್ತಮ ತರಹದ್ದು, ದೂಳು ಬೀಳದಂತೆ ಕೇಸಿನ ಮೇಲೆ ಪೂರ್ತಿ ಮುಚ್ಚಳವುಳ್ಳ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ ರೂ. 27—8—0
4. ಬಾಕ್ಸಿಯೂ, ಬಂದೋಬಸ್ತೂ, ಸುಸ್ವರವುಳ್ಳದ್ದೂ, ಅನೇಕ ವರ್ಷಗಳ ವರೆಗೆ ಬಾಳಿಕೆ ಬರತಕ್ಕದ್ದೂ ಆದ ಹೊಸವಾಗಿ ಸೃಷ್ಟಿ ಆಗಿರುವ ಫ್ರೆಂಚ್ ರೀಡ್ಸ್ ನಮೂನೆ ಇರುವ ನಮ್ಮ ಹೆಸರಿನ ರೀಡ್ಸ್ ಹಾಕಿರುವ "ಸಿದ್ಧಪ್ಪಾಸ್ ಫ್ಲೂಟ್" ಸಿಂಗಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 42—8—0
5. ಉತ್ತಮ ತರಹ 2 ... ರೀಡ್ಸ್ ಹಾಕಿರುವ, ... ಕೇಸಿನ ಮೇಲೆ ಪೂ... ಡಬ್ಬಲ್ ರೀಡ್ಸ್ ... ಉತ್ತಮ ತರಹ 2... ಮೇಕ್ ರೀಡ್ಸ್ ... ಕ್ಟೈನಿಂದಾಗಲಿ ... ಗಲೀ ಬಾ... ತಯಾರಿಸಿ... ಡಬ್ಬಲ್ ... ಹಾ...

...esi... free ...quiry. ...ancy plate...

ನಮ್ಮ ಟಿಂಬರ್ ಡಿಪೋನಲ್ಲಿ ಕಟ್ಟಡಗಳಿಗೂ, ಫರ್ನಿಚರ್ ತಯಾರಿಸಲೂ ಬೇಕಾದ ಎಲ್ಲಾ ನಮೂನೆ ನಾಟಾಗಳನ್ನು ಸುಲಭ ದರದಿಂದ ವಿಕರಿಗಿಟ್ಟಿರುವುದಲ್ಲದೇ, ಗಿರಾಕಿಗಳು ಅಪೇಕ್ಷಿಸುವ ಸೈಜಿಗೆ ಕುಯಿಸಿಯೂ ನಿಯಮಿತ ದರದಿಂದ ಸಪ್ಲೈ ಮಾಡುತ್ತೇವೆ. ಹೆಚ್ಚಿಗೆ ವಿಷಯಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

52—18

IN THE COURT OF THE DISTRICT JUDGE OF COORG.

Civil Original Suit No. 3 of 1931.

Plaintiff — **P. B. Aiyamma.** *VS.* *Defendant* — **P. A. Nanjappa.**

Notice is hereby given that in the above said suit a preliminary decree has been passed by this court for the sale of the properties-movables and immovables of the partnership concern known as Sri Cauvery Bus Service which has been since dissolved as per order of the court.

The sale will be by public auction and the properties will be put up for sale either in one lot or by separate lots in the premises of the court of the Subordinate Judge of Coorg on the 6th day of June 1932 at 12 noon.

At the sale, the public generally and either of the parties are invited to bid either personally or by duly authorised agent.

CONDITIONS OF SALE.

1. The particulars specified in the schedule below have been stated to the best of the information of the court but the court will not be answerable for any error, misstatement or omission in the proclamation.
2. The amount by which the biddings to be increased shall be determined by the officer conducting the sale in the event of any dispute, arising as to the amount bid or as to the bidder, the lot shall at once be again put up to auction.
3. The highest bidder shall be declared to be the purchaser of any lot, provided always that he is legally qualified to bid and provided that it shall be in the discretion of the court or officer holding the sale to decline acceptance of the highest bid when the price offered appears so clearly inadequate as to make it advisable to do so.
4. For reasons recorded, it shall be in the discretion of the officer conducting the sale to adjourn it subject always to the provisions of rule 69 of order XXI.
5. The person declared to be the purchaser shall pay immediately after such declaration a deposit of 25 per cent on the amount of his purchase money to the officer conducting the sale and in default of such deposit the property shall forthwith be put up again and resold.
6. The full amount of purchase money shall be paid by the purchaser before the court closes, on the 15th day after the sale of the property, exclusive of such day or if the 15th day be a Sunday or other holiday, then on the first office day after the 15th day.
7. In default of payment of the balance of purchase money within the period allowed, the property will be resold after the issue of a fresh notification of sale. The deposit after defraying the expenses of the sale, may, if the court thinks fit, be forfeited to Government and defaulting purchaser shall forfeit all claim to the property or to any part of the sum for which it may be subsequently sold.
8. The purchaser shall get the possession of all the properties sold as soon as the full money is paid.

Given under my hand and the seal of the court this 9th day of April 1932.

(Sd) L. J. MACIVER,
District Judge.

SCHEDULE I.
IMMOVABLE PROPERTY.

Description of property to be sold	Municipal block Number & Survey Number	Area	Assessment	Name of owner	Remarks
			Rs. A. P.		
...led house	Block No. 11 Mercara Muncipality Sy. No. 22.	0·07	11 4 0	Director of Sri Cauvery Bus Service	The property is estimated at Rs. 10,000
	do. Sy. No. 23.	0·15	32 8 0		
	do. Sy. No. 23/1	1·20	0 0 0		
	do. Sy. No. 24.	0·01	0 10 0		

SCHEDULE II.
MOVABLE PROPERTY.

...n of property	Approximate value	Remarks
	Rs. A. P.	
	11,000 0 0	* 6 Cheverolet buses
...ler car	250 0 0	2 Ford buses
...rts etc.	645 0 0	2 Willeys buses
	264 0 0	
	23 0 0	
	94 0 0	
	54 0 0	
	370 0 0	
	10 0 0	
	12,710 0 0	

(Sd.) L. J. MACIVER,
Judge.

ಮುಂದೇನು?

ಬೇಸಿಗೆಕಾಲ, ಸೆಕೆ, ಮೋಡ, ಸಿಡಿಲ್ಮಿಂಚು, ಮಳೆ ಇದು ಅನುಕ್ರಮವಾಗಿ ನಡೆಯುತ್ತದೆ ಎಂದು ಬಲ್ಲೆವು. ಈಗ ಮೋಡಕಟ್ಟಲಾರಂಭ. ಅಲ್ಲಲ್ಲಿ ಸಿಡಿಲ್ಮಿಂಚೂ, ಬಿಡಿ ಮಳೆಯೂ ಪ್ರಾರಂಭವಾಗಿದೆ. ಬಂಗಾಳದ ಒಂದು ಭಾಗದಲ್ಲಿ, ಚಿತ್ತಗಾಂಗದ ಹಾವಳಿ, ಅಲ್ಲಲ್ಲಿ ಗುಂಡಿನೇಟು ಆದಂತೆಯೇ ಬಿಡಿಮಳೆಗೆ ಹಳ್ಳಿಗಳೇ ಕೊಚ್ಚಿಕೊಂಡು ಹೋದುದೂ ಇದೆ. ಫ್ರಾಂಚೈಸ್ ಮೊದಲಾದ ಕಮಿಟಿಗಳು ಸಂಚಾರ ಮುಗಿಸಿ ರಿಪೋರ್ಟು ಬರೆದು ತಮ್ಮ ಕೆಲಸ ಮುಕ್ತಾಯಗೊಳಿಸಿವೆ. ಇನ್ನು ಆರ್ಡಿನೆನ್ಸುಗಳ ಬೇಸಿಗೆ ಕಾಲವು, ಸೆಕೆಯೂ ಮುಗಿಯಲು ಸಾಕಷ್ಟು ದಿವಸಗಳು ಮಾತ್ರವಿವೆ. ಮುಂದೆ ಮಳೆಗಾಲದ ಕಾನ್ಫರೆನ್ಸಿಗೆ ಸಮಯವಾಗುವುದು. ಆದರೆ, ಈ ಮಧ್ಯ ಹೋರಾಟದಿಂದು, ಶಾಂತಿಯವರದಿಂದು, ಫ್ರಾಂಚೈಸ್ ಕಮಿಟಿಯ ಎಕ್ಸ್‌ಪರ್ಟನದೊಂದು ಹೀಗೆ ಮೂರು ಬಿಲ್ಲುಗಳು ತಯಾರಾಗುತ್ತಿವೆ. ಆರ್ಡಿನೆನ್ಸಿನ ಅವಧಿಯಾದ ಬಳಿಕ ಎರಡು ತಿಂಗಳು ಬಿಡಿಮಳೆ; ಸಾಮಾನ್ಯ ಶಾಸನಗಳ ಸಹಾಯ ಗುಣ. ಆದಾಗುತ್ತಲೇ ಈ ಮಸೂದೆಯ ಬೀಜವನ್ನು ಬಿತ್ತುವರು ಸೇಟೆ ನೆಡಬೇಕು; ಬಲವು ಇಂಡಿಯಾ ಸರ್ಕಾರದ ಮೆಂಬರರು ರಜೆ ಪಡೆದು ಇಂಗ್ಲೆಂಡಿನಲ್ಲಿ ಹಾಜರಾಗುವರು. ಅಜೆ, ಆಜೆ ಏರು ಹುದು, ಗೊಬ್ಬರ ಹಿಂಡಿ, ಸ್ಪರ್ಶಗಾರ್ಡನುಗಳ ಬೇಲಿ ಹಾಕಲು ತಮ್ಮ ಹೊಲಗಳಿಗೆ ಮೋಸವಾದೀತೆಂದು ಪಲ್ಲಿಯರ್‌ರೆಂಬ ಯೂರೋಪಿಯನ್ ಸಂಘಗಳ ಅರಸೂ, ಮುಸ್ಲಿಮ್ ಪ್ರತ್ಯೇಕ ಪ್ರಾತಿನಿಧ್ಯವಾದ ಸರ್ ಫಜಲೀ ಹುಸ್ಸೇನರೂ ಅಲ್ಲಿಯೇ ಎಚ್ಚರ ನೋಡುವರು. ನವಂಬರಿನಲ್ಲಿ ಬೆಳೆ ಕಟಾವಿಗೆ ಬಂದೀತು. ಮೇ ತಿಂಗಳಲ್ಲಿ ನಮ್ಮ ದೇಶದ, ನಮ್ಮ ಜನಾಂಗದ ಹಿತವಾಗಿ ಇಂಗ್ಲೆಂಡಿನಲ್ಲಿ ಹುಟ್ಟಿಸಲಾದ ಈ ಬೆಳೆಯು ಇತ್ತ ಮೊರಾಟಕ್ಕೆ ಬರುವುದು. ಸವಂಬರಿನ ಸುಮಾರಿಗೆ ಧನಪೂಜೆಯಾಗಿ ದೀಪಾವಳಿಯಾಗುವುದರೊಳಗೆ ಈಗ ಕಾರಾವಾಸದಲ್ಲಿರುವವರನ್ನು ಬಿಡುಗಡೆ ಮಾಡಬಹುದು. ಹಾಗಾದಲ್ಲಿ ಮುಂದಣ ಅಕ್ಟೋಬರಿನೊಳಗೆ ಹೊಸ ಕೌನ್ಸಿಲುಗಳಿಗೆ ಚುನಾವಣೆ ನಡೆಯಬಹುದು. ಅಂತೂ, ಮುಂದಿನ ಮಳೆಗಾಲವೇ ಈಗಿನ ಕಲ್ಪಿತ ನಿವಾರಿಸಬಹುದಾಗಿ ರಾಜಕೀಯ ವಾತಾವರಣವಲ್ಲವ ಫೋರ್‌ಕಾಸ್ಟು ಅಂದಾಜು.

ಸ್ವ ಮ.

ಪತ್ರವ್ಯವಹಾರ.

[ವಾಕ್ಯದಾಂಟು ಪತ್ರ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ.]

ಓರಿಯಂಟಲ್ ಕಂಪೆನಿಯ ಇನ್ಸ್‌ಪೆಕ್ಟರೇಟ್ ಆಫೀಸು.

ಕಳೆದ ತಾರೀಕು 16ರಲ್ಲಿ ಸದರಿ ಕಂಪೆನಿಯ ಇನ್ಸ್‌ಪೆಕ್ಟರೇಟು ಆಫೀಸು ದಕ್ಷಿಣ ಕನ್ನಡ, ಕೊಡಗು, ಮೈಸೂರು ಹಾಸನ, ಕಡೂರು ಡಿಸ್ಟ್ರಿಕ್ಟುಗಾಗಿ ಮಡಿಕೇರಿ ಹೆಡ್ ಕ್ವಾರ್ಟರಿನಿ ತೆರೆಯಲ್ಪಟ್ಟಿತು. ಕಂಪೆನಿಯ ಬ್ರಾಂಚ್ ಸೆಕ್ರೆಟರಿ ಮಿ. ಯಮ್. ಎ. ಯನ್. ನಾಯುಡುರವರು ಬೆಂಗಳೂರಿನಿಂದ ಉಪಸ್ಥಿತರಿದ್ದರು. ಈ ಸಮಾರಂಭವು ಮಿ. ಕೊಡವಂ ಮುತ್ತಣ್ಣನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಹೊಸ ಇನ್ಸ್‌ಪೆಕ್ಟರಾಗಿ ನೇಮಿಸಲ್ಪಟ್ಟಿರುವ ಮಿ. ಪಿ. ಚಿಣ್ಣಪ್ಪನವರ ಆಮಂತ್ರಣ ಮೇರೆ ಮಡಿಕೇರಿಯ...ರು ಪಾಲಿಸಿದಾರರೂ, ದೊಡ್ಡ ಮನುಷ್ಯರೂ, ಡಾಕ್ಟರುಗಳೂ, ಏಜಂಟರುಗಳೂ ವಗೈರೆಯಿಂದ ಸುಮಾರು 150 ಜನರು ಹಾಜರಿದ್ದರು.

ಆಫೀಸು ತೆರೆಯುವ ಕೆಲಸವು ಪೂರ್ವಾಹ್ನ ಹತ್ತು ಗಂಟೆಗೆ ಸರಿಯಾಗಿ ಪ್ರಾರಂಭವಾಯಿತು. ಕಂಪೆನಿಯ ಸೆಕ್ರೆಟರಿಯವರಾದ ಮಿ. ನಾಯುಡುರವರು ಕೊಡಗಿನಲ್ಲಿ ಓರಿಯಂಟಲ್ ಕಂಪೆನಿಯು ಈ ವರೆಗೆ ಮಾಡಿದ ಕೆಲಸವನ್ನೂ, ಮಿ. ಚಿಣ್ಣಪ್ಪನವರು ಕಂಪೆನಿಯ ಕೆಲಸದಲ್ಲಿ ತಗೆದುಕೊಂಡ ಶ್ರದ್ಧೆಯನ್ನೂ ಕುರಿತು ಮಾತಾಡಿದರು. ಅಲ್ಲದೆ ಅವರು ಮಾಡಿದ ಒಳ್ಳೇ ಕೆಲಸದ ಫಲದಿಂದ ಅವರನ್ನು ಈ ದೊಡ್ಡ ಹುದ್ದೆಗೆ ನೇಮಿಸಿರುತ್ತಾರೆಂದು ಹೇಳಿದರು. ಮತ್ತು ಇನ್ಶೂರೆನ್ಸಿನ ಅಗತ್ಯ ಪ್ರಯೋಜನ ಕುರಿತು ಅನುಕೂಲವಾಗಿ, ಮನೋರಂಜಕವಾಗಿ ಮಾತಾಡಿ ಓರಿಯಂಟಲ್ ಜೀವ ವಿಮಾ ಕಂಪೆನಿಯು ಪ್ರತಿ ವರ್ಷವೂ ಮಾಡುತ್ತಿರುವ ಮಹತ್ವದ ಕೆಲಸ ಕುರಿತು ದಾಖಲೆಯಿಂದ ವಿವರಿಸಿದರು. ಅಲ್ಲದೆ ಇಂಥ ಅತೀ ಮಹತ್ವದ ಮತ್ತು ದೇಶೀಯ ಕಂಪೆನಿಯೂ ಈ ಕಂಪೆನಿಯಲ್ಲಿ ಹೆಂಗಸರೂ, ಮಕ್ಕಳೂ, ವೃದ್ಧರೂ, ಯುವಕರೂ ಎಲ್ಲರೂ ವಿಮೆ ಮಾಡಬೇಕೆಂಬುದಾಗಿ ಹೇಳಿ ಸಭೆಯವರಲ್ಲಿ ಅಪ್ಪೀಲು ಮಾಡಿಕೊಂಡನಂತರ ಅಧ್ಯಕ್ಷರಾದ ಮಿ. ...ಯನ್; ಮುತ್ತಣ್ಣನವರನ್ನು ಹೊಸ ಆಫೀಸನ್ನು ತೆರೆಯಬೇಕೆಂಬುದಾಗಿ ಕೇಳಿಕೊಂಡರು. ಮಿ. ಮುತ್ತಣ್ಣನವರು ಗಂಭೀರವಾದ ಭಾಷಣದಿಂದ ಕಂಪೆನಿಯವರು ವರ್ಷಾವಧಿ ಮಾಡುತ್ತಿರುವ ಖರ್ಚು, ಉತ್ಪತ್ತಿ ಮತ್ತು ಅವರ ಒಟ್ಟು ವಿ... ವಗೈರೆಯನ್ನು ಚೆನ್ನಾಗಿ ವಿವರಿಸಿದರು. ಮಿ. ಕೆ. ಪಿ. ಚಿಣ್ಣಪ್ಪನವರು ತೋರಿಸಿದ ಉದಾಹರಣೆಯು ದೇಶದ ಯುವಕರಿಗೆ ಒಂದು ದಾರಿಯಂತಿದೆ, ಅವರು ...ಬಿಡ ಒಳ್ಳೇ ಕೆಲಸವನ್ನು ಅಂಗೀಕರಿಸಬೇಕೆಂದೂ, ಎ...

ವರ್ತಮಾನ ಸಂಗ್ರಹ.

ಒಳದೇಶ.

ಮಡಿಕೇರಿ ಮತ್ತು ವೀರಾಜಪೇಟೆ ಶಾಲೆಗಳು ಈ ತಾರೀಖು 23ನೇ ಸೋಮವಾರ ತೆರೆಯಲ್ಪಡುತ್ತವೆ.

ಕೊಡಗಿನ ಶಾಲಾ ಇನ್ಸ್‌ಪೆಕ್ಟರು ಮೆ॥ ಸುಲ್ತಾನ್ ಮೆ ಹಿದಿನ್‌ರವರು ಪತ್ನಿ ಸಮೇತರಾಗಿ ಬಂದು ಮಡಿಕೇರಿಯಲ್ಲಿ ಇರುತ್ತಾರೆ.

ಮಡಿಕೇರಿಯಲ್ಲಿ ತಾ. 6ರಿಂದ ಇಲ್ಲಿಯ ವರೆಗೆ 12.65 ಇಂಚು ಮಳೆಯಾಗಿದೆ. ಜೋರಾಗಿ ಬಿದ್ದ ತಾ. 19ರಲ್ಲಿ 5.52 ಇಂಚು ಮಳೆ ಬಿತ್ತು.

ತಾ. 18 ನೇ ಸಾಯಂಕಾಲ ಆಸ್ಪತ್ರೆಯ ಬಳಿ ಯಾವುದೋ ಒಂದು ಲಾರಿಗೆ ಒಬ್ಬ ಗೌಳಿಯು ಆಕಸ್ಮಾತಾಗಿ ಸಿಕ್ಕಿ ಗಾಯವಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಿರುವಳೆಂದು ತಿಳಿಯುತ್ತೇವೆ.

ಮಹಾತ್ಮರ ಮಳೆಯ ದೆಸೆಯಿಂದ ಬೇತರಿ ಮತ್ತು ಕೊಟ್ಟಮುಡಿ ಹಂಗಾಮು ಸೇತುವೆಗಳು ಕೊಚ್ಚಿ ಹೋಗಿವೆಯೆಂದೂ, ಇದರಿಂದ ಬಸ್ಸ್ ಸರ್ವೀಸಿನವರಿಗೆ ಅನಾನುಕೂಲವಾಗಿದೆಯೆಂದೂ ತಿಳಿಯುತ್ತೇವೆ.

ವಿಲಿಯಮ್ ಶಾಕೆ ಟೀಮಿನವರು ಕಮಿಷನರ್ಸ್ ಶಾಕೆ ಕಪ್ಪನ್ನು ಗೆದ್ದು ಮೊನ್ನೆ ತಾನೇ ಬೆಂಗಳೂರಿನ ಟೂರ್ನಮೆಂಟಿಗೆ ತಮ್ಮ ಟೀಮನ್ನು ತೆಗೆದುಕೊಂಡು ಹೋಗಿರುತ್ತಾರೆ. ಇದು ಜಯಪ್ರದವಾಗಿ ಹಿಂತಿರುಗಲೆಂದು ಹಾರೈಸುತ್ತೇವೆ.

ಕಳೆದ ಬಿ. ಎ. ಪರೀಕ್ಷೆಯಲ್ಲಿ ಮೆ. ಗಳಾದ ಕೆ. ಯಮ್. ಪೊನ್ನಪ್ಪನವರು, ಸಿ. ಎ. ಮಂದಣ್ಣನವರು ಪಿ. ಟಿ. ಸುಬ್ಬಯ್ಯನವರು ಯಂ. ಪಿ ಬೆಳ್ಯಪ್ಪನವರು, ಪಿ ಯಸ್. ಈರಪ್ಪನವರು, ಯಂ ಯಂ. ಕಾಳಪ್ಪನವರು, ಕೆ. ಯಂ. ನಂಜುಂಡನವರು, ತೀತಮಂಡ ಕಾರ್ಯಪ್ಪನವರು, ಮಿಸ್. ಕೊಡಂದೆರ ಚಂಗಪ್ಪನವರು, ಪೂರ್ತಿಯಾಗಿ ಪಾಸಾಗಿರುತ್ತಾರೆಂದು ತಿಳಿಯಲು ಸಂತೋಷಪಡುತ್ತೇವೆ. ಇವರೆಲ್ಲರಿಗೂ ನಮ್ಮ ಅಭಿವಂದನೆಗಳಿವೆ.

ಕಳೆದ ಇಂಟರ್‌ಮೀಡಿಯೆಟ್ ಪರೀಕ್ಷೆಯಲ್ಲಿ ಮೆ. ಗಳಾದ ಕೊಂಗಂಡ ಎಸ್. ಅಯ್ಯಪ್ಪನವರು, ಪಟ್ಟಮಾಡ ಅಪ್ಪಣ್ಣನವರು, ತೀತಿಮಂಡ ಸಿ. ಗಣಪತ್ತಿಯವರು, ಯಂ. ಕೆ. ಮಾಚಪ್ಪನವರು, ಮಲಚಿರ ಎಸ್. ಮುತ್ತಣ್ಣನವರು, ಯಂ. ಬಿ. ಅನಂತಶೈಯನವರು ಕು ಪ್ಪಂಡ ಯಂ ಚಂಗಪ್ಪನವರು, ಶ್ರೀಮತಿ ನಡಿಕೇರಿಯಂಡ ಬೋಳ್ಯಮ್ಮನವರು (ಫಸ್ಟ್ ಕ್ಲಾಸ್) ಮತ್ತು ಶ್ರೀಮತಿ ಕಾಳಂಡ ತಂಗಮ್ಮನವರು, ಪೂರ್ತಿಯಾಗಿಯೂ ಮತ್ತು ಮೆ. ಗಳಾದ ಸಿ. ಎ. ಅಪ್ಪಯ್ಯನವರು 2ನೇ ಭಾಗದಲ್ಲಿಯೂ, ಪಿ. ಕೆ. ಮಾದಪ್ಪನವರು 2 ಮತ್ತು 3ನೇ ಭಾಗಗಳಲ್ಲಿಯೂ, ಕೆ. ಕೆ. ಮುತ್ತಪ್ಪನವರು 1 ಮತ್ತು 2ನೇ ಭಾಗಗಳಲ್ಲಿಯೂ, ಕೆ. ಸಿ. ಚಂಗಪ್ಪನವರು 2ನೇ ಭಾಗದಲ್ಲಿಯೂ, ಕೆ. ಎ. ಅಪ್ಪಚ್ಚುನವರು 2ನೇ ಭಾಗದಲ್ಲಿಯೂ ಕೆ. ಡಿ. ಮಾಚಯ್ಯನವರು 1 ಮತ್ತು 2ನೇ ಭಾಗಗಳಲ್ಲಿಯೂ ಕೆ. ಎಸ್. ಪದ್ಮನಾಭನವರು 2ನೇ ಭಾಗದಲ್ಲಿಯೂ ಮತ್ತು ಕೆ. ಯಂ. ಅಯ್ಯಪ್ಪನವರು 2ನೇ ಭಾಗದಲ್ಲಿಯೂ ತೇರ್ಗಡೆಯಾಗಿರುವರೆಂದು ತಿಳಿದು ಸಂತೋಷಿಸುತ್ತೇವೆ. ಇವರೆಲ್ಲರಿಗೂ ನಮ್ಮ ಅಭಿವಂದನೆಗಳಿವೆ.

ಹಿಂದೂದೇಶ.

ಅಸ್ಸಾಮಿನ ಹೊಸ ಗವರ್ನರಾಗಿ ಸರ್ ಮೈಕಲ್ ಕೀನವರು ಗದ್ದುಗೆಯನ್ನೇರಿದರು.

ಕಳೆದ ಏಪ್ರಿಲ್ ತಿಂಗಳಲ್ಲಿ ಬೆಂಗಳೂರಿನಲ್ಲಿ ಜನ್ಮಗಳಿಸಿದವರ ಸಂಖ್ಯೆ ೧೪೫ ಮಂದಿ ಮಾತ್ರ.

ಮದರಾಸಿನ ಹಿಂದ್ಬಜಾರು ಬೀದಿಯಲ್ಲಿರುವ ಮರದ ಜಟ್ಟಿ ಅಂಗಡಿಗೆ ಬೆಂಕಿ ಬಿದ್ದು ಯಾರೋ ಗಂಧಕವನ್ನಿಟ್ಟಿದ್ದರಂತೆ.

ಸರದಾರ ಪಟೇಲರ ಪುತ್ರಿ ಕು. ಮಣಿಬಾಯಿಯವರು ಮೊನ್ನೆ ಹಿಂದಲಗಿಯ ತುರುಂಗದಿಂದ ಬಂಧಮುಕ್ತರಾಗಿ ಮುಂಬಯಿಗೆ ಹೋದರು.

ತಾ. ೧ ರಲ್ಲಿ ಬೊಂಬಾಯಿಯ ವಡಾಲಾ ಉಪ್ಪಿನ ಕೋಟೆಯ ಮೇಲೆ ದಾಳಿಯಿಡಲಾಗುವುದೆಂದು ಶಾಸನಭಂಗಕರ ಪ್ರಕಟಣೆಯಿತ್ತಂತೆ. ಪೋಲೀಸರು ಸುಸಜ್ಜಿತರಾಗಿರುವರು.

ಕಮೀಷನರ್ ಮಿ. ಗಿಬ್ಬನ್ಸರನ್ನು ಕೊಲೆಗೈದ ಪ್ರಯತ್ನದ ಆಪಾದನೆಯ ಮೇಲೆ ಇನ್ಸ್‌ಪೆಕ್ಟರರಾದ ಖಾನ್ ಅಹಮ್ಮದ್ ಎಂಬವರಿಗೆ ಏಳು ವರ್ಷ ಕಠಿಣ ಶಿಕ್ಷೆ ವಿಧಿಸಲಾಯಿತು.

ಲಾಹೋರಿನಲ್ಲಿ 'ಪಂಜಾಬ್ ಕೇಸರಿ' ಎಂಬ ಹಿಂದೀ ವಾರ ಪತ್ರಿಕೆಯ ಸಂಪಾದಕರಿಗೂ, ಅದರ ಪ್ರೆಸ್ಸಿನ ಮೇಲೆ ಜರುಗಿದ ರಾಜದ್ರೋಹದ ಆರೋಪಣೆಯಿಂದ ಶಿಕ್ಷೆಯಾಯಿತು.

ಡಾ. ಕಿಚಲೂರವರನ್ನು ಲಾಹೋರಿನ ಡ್ರೈವ್ ಸ್ಟೇಷನಿನಲ್ಲಿ ಕೈದುಮಾಡಿ, ಮರುದಿನ ಬಿಡುಗಡೆಮಾಡುತ್ತ ಲಾಹೋರು ಮತ್ತು ಜಲಂಧರ ಜಿಲ್ಲೆಗಳಿಗೆ ಕಾಲಿಡಬಾರದೆಂದು ನೋಟೀಸು ಕೊಟ್ಟಿರುವರು.

'ಪ್ರೆಮಾ ಜಟಿಕ' ಎಂಬ ಮೆಗಜೈನಿನ ಸಂಪಾದಿಕೆಯರಾದ ಶ್ರೀಮತಿ ಲಕ್ಷ್ಮೀದೇವಿ ಎಂಬವರನ್ನು ಸರಕಾರಕ್ಕೆ ವಿರುದ್ಧವಾಗಿ ಪತ್ರಗಳನ್ನು ಪ್ರಕಟಿಸಿದರೆಂಬ ಆರೋಪಣೆಯ ಮೇಲೆ ಅವರನ್ನು 1000 ರೂ. ಜಾಮೀನಿನ ಕೇಳಿರುವರು.

ಇತ್ತೀಚೆಗೆ ಕೆಲವು ದಿನಗಳಿಂದ ಲಾಹೋರಿನಲ್ಲಿ ಪ್ರತಿದಿನವೂ ಇಪ್ಪತ್ತರಿಂತ ಕಡಿಮೆಯಾಗದೆ ಸ್ವಯಂಸೇವಕರು ಪೋಲೀಸು ಜೇಲಿನ ಪಿಕೆಟಿಂಗ್ ಮಾಡಿ ಕೈದು ಮಾಡಲ್ಪಡುತ್ತಾರೆ.

ಕಾಶಿಯಲ್ಲಿ ದಶಾಶ್ವಮೇಧ ಘಾಟಿನಲ್ಲಿ ಸ್ವಯಂಸೇವಕರ ಮರವನ್ನು ಹೀನತನದಿಂದ ನಡೆಸಿಕೊಂಡ ಕಾಲ್ಪನಿಕ ಪೋಲೀಸರ ಮೇಲೆ ಬಿಟ್ಟಿಯಾಗಿದ್ದರೆ. ಈ ಪ್ರಕರಣದ ವಿಚಾರಣೆಯಲ್ಲಿ ಪಂಡಿತ ಮಾಲವೀಯರವರ ಸಾಕ್ಷಿಯಾಗುವುದು.

ಗುಜರಾತ್ ಕಾಂಗ್ರೆಸ್ ಕಮಿಟಿಯ 17ನೇ ಡಿಕ್ಟೇಟರಾದ ಶ್ರೀ. ಮಹಾರಾಜಸಿಂಗ್ ಠಾಕೂರ್ ಎಂಬವರು ಒಕ್ಕೋಡದಲ್ಲಿ ಒಂದು ಕಡೆಯಲ್ಲಿ ಸಿದ್ಧ ಮಾಡುತ್ತಿದ್ದಾಗ ಅಲ್ಲಿಯ ಪೋಲೀಸರಿಂದ ಕೈದು ಮಾಡಿ ಬ್ರಿಟಿಷ್ ಪೋಲೀಸರಿಂದ ವಶಕೊಡಲ್ಪಟ್ಟರು.

ರಾಜಮಹೇಂದ್ರಿಯ ಡಾ. ಕೆ ಎಲ್. ನರಸಿಂಹರಾವ್ ಮತ್ತು ಚಿಂತಲಪೂಡಿಯ ಶ್ರೀ. ವಿನಾಯಕ ಪಟ್ಟಿಕವಿಯವರನ್ನು ನೆಲ್ಲೂರು ಜೈಲಿಗೆ ತಂದು, ಕ್ಲಾಸುಗಳಿಗೆ ಸೇರಿಸಲ್ಪಡದ ಸಂದಿಗ್ಧದ ಕಾರಣ, ಇವರಿಬ್ಬರೂ ಉಪವಾಸದ ಮಾರ್ಗ ಹಿಡಿದಿರುವರು.

ಮನೆಯಲ್ಲಿ ಅಬ್ದುಲ್ ಗಫಾರ ಖಾನರ ವೈದ್ಯದ ಅವಧಿ ಮುಗಿದು ಬಿಡುಗಡೆ ಹೊಂದಿದರು. ಹೊರಗೆ ಬರುವಾಗ ಮರಳಿ ಶಾಸನಭಂಗ ಚಳವಳಿಯಲ್ಲಿ ಭಾಗವಹಿಸಬಾರದೆಂದು, ಹಳ್ಳಿ ನಗರವನ್ನು ಬಿಟ್ಟು ಹೊರಗೆ ಹೋಗಬಾರದೆಂದೂ ನೋಟೀಸು ದೊರೆಯಿತು.

ಗುಂಟೂರಿನಲ್ಲಿ ಜೈಲಿನಲ್ಲಿರುವ ರಾಜಕೀಯ ಕೈದಿಗಳಿಗೆ ಅನ್ನ ತೆಗೆದುಕೊಂಡು ಹೋಗುತ್ತಿದ್ದ ಶ್ರೀ. ರಾಘವಾಚಾರಿ ಎಂಬವರ ಮೇಲೆ ಕೈದಿಗಳಿಗೆ ಪತ್ರಗಳನ್ನು ತೆಗೆದುಕೊಂಡು ಹೋಗಿ ಕೊಟ್ಟರು ಎಂಬ ಆರೋಪಣೆಯಿಂದ ಪೋಲೀಸರು ದಾವೆಯನ್ನು ಹೂಡಿದ್ದಾರೆ. ವಿಚಾರಣೆಯು ನಡೆಯಲಿದೆ.

ಕಾಶಿಯ ಪಡಗಗಳಲ್ಲಿನ ನಾಲ್ಕು ಬಂಗಲೆಗಳು ಪಟ್ಟಿಗೆಗೆ ಶೇ ಮಾಡಿಯಾದುದೊಂದು ಏಕೆಂದ. ಒಂದು ಬಂಗಲೆ ಪೆಟ್ಟಿಗೆಯಲ್ಲಿ 'ಕ್ರಾಂತಿಕಾರಕ'ನೆಂದು ಸಹಿಮಾಡಿ, ಅಂಜೆಯ ಅಧಿಕಾರಿಗಳಿಗೆ ಎಚ್ಚರಿಕೆಕೊಟ್ಟ ಒಂದು ಪತ್ರ ದೊರಕಿದನ್ನು ಚೀಟು ಹಚ್ಚಿರುವುದು. ಅಂಚೆಯವರು ವಿಕಾರಿಗೆ ಒಪ್ಪಿಸಿದರು.

ಬರೇಲಿಯ ಜೈಲಿನಲ್ಲಿ ಪಂಡಿತ ಜವಾಹರಲಾಲರಿಗೆ ಸ್ವಲ್ಪ ಜ್ವರವಿದ್ದಂತೆ. ಎದೆಯ ಎಡ ಭಾಗದಲ್ಲಿ ನೋವಿದೆಯೆಂದೂ, ಸ್ವಲ್ಪ ಬಾಧೆಗೆ ತುತ್ತಾಗಿರುವರೆಂದೂ ತಿಳಿಯುತ್ತದೆ. ಆ ವರ ಭಾಗವು ಮೊದಲಿಗಿಂತ ಕಡಿಮೆಯಾಗಿದೆಯಂತೆ. ಜೈಲಿನ ಡಾಕ್ಟರು ಚಿಕಿತ್ಸೆ ನಡೆಸುತ್ತಿದ್ದಾರಂತೆ. ಅವರನ್ನು ಅಲ್ಲಿಂದ ಕಾನ್‌ಪುರದ ಜೈಲಿಗೆ ಸಾಗಿಸುತ್ತಾರೆಂದೂ ಸುದ್ದಿ.

ಒಂದೇ ನಮ್ಮ ಗಳಿಗೆ, ರಾಜಕೀಯ ಅಧಿಕಾರಿಯಿಂದ:— ಕೇರಳ ರಾಜಕೀಯ ಪರಿಷತ್ತು ಬಹಳ ಕಾಲದಲ್ಲಿ ಕಲ್ಲಿಕೋಟೆಯಲ್ಲಿ ಕೂಡುವುದೆಂದು ನಿಶ್ಚಯವಾಗಿದೆ. ಶ್ರೀ ಸರೋಜಿನಿ ನಾಯಿಡುರವರನ್ನು ಅಧ್ಯಕ್ಷರನ್ನಾಗಿ ಈ ಪರಿಷತ್ತಿನ ಅಧ್ಯಕ್ಷರಾಗಿ ಆರಿಸಲಾಗಿದೆ. ಪರಿಷತ್ತಿನ ಮಂಟಪದ ಕೆಲಸಗಳು ತ್ವರಿತವಾಗಿ ನಡೆಯುತ್ತಿವೆ. ಉತ್ಸಾಹದಿಂದ ಪ್ರತಿನಿಧಿಗಳು ಕೂಡುತ್ತಿದ್ದಾರೆ.

ಧಾರವಾಡದ ಒಂದು ಮುಸಲ್ಮಾನ್ ಕುಟುಂಬದಲ್ಲಿ (ಐವರು) ಕಳೆದ ವಾರ, ಮಧ್ಯಾಹ್ನ ಭೋಜನವಾಗಿ ಎದ್ದಾಗ—ಹುಚ್ಚು !—ಎಲ್ಲರೂ ಹುಚ್ಚರು! ಪದಾರ್ಥವನ್ನು ತಯಾರಿಸುವಾಗ, ಮಸಾಲೆಯ ಯಾವುದೋ ಒಂದು ಬದಲಾಗಿ 'ದತ್ತೂರಿ' ಸಸ್ಯದ ಬೀಜವನ್ನು ತಪ್ಪಾಗಿ ಬೆರಸಿ, ಊಟದಿಂದ ಈ ಸ್ಥಿತಿಗೆ ತಂದಿರೆಂದು ಹೇಳಲಾಗಿದೆ. ದತ್ತೂರಿ ಹೂವನ್ನು, ಉಬ್ಬಸದವರು ಕಾಯಿಲೆಯ ಅಂಶ ಶಮನಕ್ಕಾಗಿ ಉಪಯೋಗಿಸುತ್ತಾರೆ.

ಕಲ್ಕತ್ತಾದಲ್ಲಿ ಮೊನ್ನೆ ಮೆರವಣಿಗೆಯನ್ನು ತಡೆಗಟ್ಟಿ ಕೊಂಡು ಹೋಗುತ್ತಿದ್ದವರ ಮೇಲೆ ಕಲ್ಲು ಹೊಡೆದದ್ದು ಕಾರಣದಿಂದ ಜಗಳವಾಗಿ ಇದನ್ನು ಶಮನಪಡಿಸಲು ಬಂದ ಅಲ್ಲಿಯ ಡೆಪ್ಯುಟಿ ಕಮಿಷನರರೂ, ಎಸಿಸ್ಟೆಂಟ್ ಕಮಿಷನರರಿಗೂ ಮತ್ತು ಕೆಲವು ಪೋಲೀಸರಿಗೂ ಗಾಯವಾಗಿದೆ. ದಂಗೆಯನ್ನು ನಿಲ್ಲಿಸಲು ಗುಂಡುಹಾರಿಸುವಲ್ಲಿ 3 ಜನರಿಗೆ ಬಲವಾದ ಗಾಯ ಆಗಿದೆಯೆಂತಲೂ ಮತ್ತು 20 ಜನರಿಗೆ ಸಾಧಾರಣವಾಗಿ ಗಾಯವಾಗಿದೆಯೆಂತಲೂ ತಿಳಿಯಬರುತ್ತದೆ.

ಅಸ್ಸಾಮಿನ—ಬಂಗಾಳ ರೈಲ್ವೆ ಕಂಪೆನಿಯ ಸಂಬಂಧ ೧೫ನೇ ರೈಲು ಬಂಡಿಯು ಢಾಕಾ ನಗರವನ್ನು ಸಮೀಪಿಸುವಾಗ, ಬಂಡಿಯೊಳಗಿಂದ ಯಾರೋ ಸರಪಣಿಯನ್ನೆಳೆದರು; ರೈಲು ನಿಂತಿತು. (ಇದು ಢಾಕಾ ವಿಶ್ವವಿದ್ಯಾಲಯದ ಬಳಿಯಲ್ಲಿ.) ಕೆಲವು ಯುವಕರು ಒಡನೆಯೆ ರೈಲು ಹತ್ತಿದರು. ಒಂದು ಗಾಡಿಯಲ್ಲಿ ಕೂತ ಕೆಲವು ಮಾರವಾಡೀ ಸಾಹುಕಾರರಿಗೆ ಪಿಸ್ತೂಲು ತೋರಿಸಿ, ೩,೦೦೦ ರೂ. ಗಳನ್ನು ಬಿಟ್ಟುಗೊಡಿಸಿ, ಕೈಗಳಿಂತ ಕಾರಣವನ್ನು ತಿಳಿಕೊಳ್ಳಲು ಇಳಿದು, ಢಾಕಾ ರೈಲ್ವೆ ಗಾರ್ಡನಿಗೆ ನೆಟ್ಟಗೆ ಎದೆಯಲ್ಲಿ ನಾಟುವಂತೆ ಪಿಸ್ತೂಲು ಹಾರಿಸಿ, ಪರಾರಿಯಾದರು.

ಬೆಂಗಳೂರಿನಲ್ಲಿ ಹಿಂದೂ ಮುಸ್ಲಿಮರ ಹೊಡೆದಾಟವು ತಾರೀಖು 14 ರಂದ ಆಕಸ್ಮಿಕವಾಗಿ ಉದ್ಭವಿಸಿ ಮಸೀದಿಗೂ, ಮಂದಿರಗಳಿಗೂ, ಹಿಂದುಗಳ ಸೀ ... ... 2000 ...

ಬಜಾರ್ ಕ್ರಾಫರ್ಡ್ ಮಾರ್ಕೆಟನ್ನು ಬಿಟ್ಟು ಬೇರೆ ಸ್ಥಳಕ್ಕೆ ಒಯ್ಯಲ್ಪಟ್ಟಿವೆ. ಪೋಲೀಸರು ತಮ್ಮ ಗುಂಡುಸೇನೆಯಿಂದ ಜನರನ್ನು ಕರೆದರೂ ಏನೂ ಶಾಂತತೆಯಾಗುವ ಹಾಗಿಲ್ಲ. ಅನೇಕ ಜನಗಳು ಬಸಿದ್ದಾರೆ ಹಾಗೆಯೇ ಸುಡುಗಾಡಿನಂತಿದೆ. 30 ಮಂದಿ ಗಳು ಇದರ ದೆಸೆಯಿಂದ ಮುಚ್ಚಲ್ಪಟ್ಟಿವೆ. ಕೆಲಸಕ್ಕೆ ಹೋಗಲು ಸಿಂತ ಕೂಲಿಗಳು ದೆಸೆಯಿಂದ ದಂಗೆಯು ಪ್ರಬಲವಾಗುವಂತೆ ತೋರುವುದು. ಈ ದಂಗೆಯಲ್ಲಿ 105 ಜನರು ಮೃತಪಟ್ಟಿರುವರು. ಸುಮಾರು 1065 ಜನರು ಗಾಯಗೊಂಡಿರುವರು. 150 ಜನರನ್ನು ಕೈದು ಮಾಡಿರುವರು. ಮೋಟರುಗಳು ಹೆಚ್ಚಿನ ನಷ್ಟವಾಗಿ ಹಿಂದಾದವನ್ನಿಟ್ಟರು. ಕೆಲವು ಮಹಮ್ಮದೀಯ ಹುಡುಗರನ್ನು ಏನೋ ಕಾರಣದಿಂದ ಹೊಡೆದದ್ದೇ ಈ ದಂಗೆಗೆ ಕಾರಣವಂತೆ.

ಸರದಾರ್ದಿನ ಗಾಂಧಿ ಅಬ್ದುಲಗಫಾರ ಸಾಹೇಬರನ್ನು ಎಲ್ಲಿಟ್ಟಿದ್ದಾರೆಂದು, ಈ ಸರ್ಕಾರಂತೆ ಗುಪ್ತವಾಗಿತ್ತು. ಈಗ ಇವರನ್ನು ಪಶ್ಚಿಮೋತ್ತರ ಪ್ರಾಂತಕ್ಕೆ ಸೇರಿದ ಹಜಾರಾ ಜಿಲ್ಲೆಯ ತಂಗದಲ್ಲಿಟ್ಟಿದ್ದಾರೆ. ಇವರಿಗೆ ಬೇರೆ ಜನರ ಜೊತೆ ಇರಲು ಬಿಡುವುದಿಲ್ಲ. ಬೇರೆ, ಬೇರೆ ಸುದ್ದಿ ಪತ್ರಿಕೆ, ವಾರ್ತಾ ಪತ್ರಿಕೆಯ ಇವರಿಗೆ ಓದಲಾಗದಂತೆ ಪ್ರತಿಬಂಧಿಸಿದ್ದಾರೆ. ಇವರ ಪತ್ರಗಳನ್ನು ಪರೀಕ್ಷಿಸಿಯೇ ಕೊಡುತ್ತಾರೆ. ಇವರಿಗೆ ಸತ್ಯಾಗ್ರಹದ ಅನುಮತಿ ಇಲ್ಲ ದೇಶದಿಂದ ಹಾಕಿಕೊಳ್ಳಲು ಸ್ವಾತಂತ್ರ್ಯ ಕೊಟ್ಟಿಲ್ಲ. ಇವರನ್ನು ಹಿಡಿದು ಕಾರಾಗೃಹದಲ್ಲಿ ಇರಿಸಿದ್ದಾರೆ. ಮುಸಲ್ಮಾನರಿಗೆ ಅನ್ನಪಾನಾದಿಗಳನ್ನು ಕಾಣಲಿಕ್ಕೂ, ಪತ್ರ ಬರೆಯಲಿಕ್ಕೂ, ಪತ್ರಗಳಿಗೆ ಉತ್ತರ ಕಳುಹಿಸಲಿಕ್ಕೂ ಅಧಿಕಾರವಿಲ್ಲ. ಅವರ ಈ ಸ್ಥಿತಿಯ ಗಾಂಧಿ ಸರದಾರರ ಸ್ಥಿತಿಗಿಂತಲೂ ಶೋಚನೀಯ. ಏಕೆಂದರೆ ಕೇಳಿದರೆ—ಇವರು ನಮ್ಮ ದೇಶದ ಕೈದಿಗಳಲ್ಲ. ದೇಶ ಪ್ರೇಮಾಭಿಮಾನದ ಕೈದಿಗಳೆಂದು ಗುರುತಿಸಲ್ಪಟ್ಟಿರುತ್ತಾರೆ. ಆಹಾರವನ್ನು ಕೂಡಾ ಸಹ ಇವರಿಗೆ ಇಷ್ಟಬಂದಂತೆ ಕೊಡುವುದಿಲ್ಲ.

ವಿದೇಶ.

ದಕ್ಷಿಣ ಆಫ್ರಿಕಾ ಪ್ರದೇಶದಲ್ಲಿ ಮಿಡತೆಗಳ ಪ್ರಭಾವದಿಂದ ನಾನಾ ಬಗೆ ಹಾನಿಯಾಗಿರುವರು.

ಸಿಲೋನಿನಲ್ಲಿ ಮಿಡತೆಗಳ ಕಾಟ; ಮಲೇರಿಯಾ ಕಾಟ; ಮಳೆಯಿಂದ ಹಾನಿ; ಇವು ಮೊದಲಾಗಿ ಕಷ್ಟಗಳು ಹೆಚ್ಚಾಗಿವೆ.

ಜರ್ಮನಿಯ ಪ್ರಸಿದ್ಧ 'ಗ್ರಾಫ್ ಜೆಪ್ಪಲಿನ್' ವಾಯುಯಾನವು ದಕ್ಷಿಣ ಅಮೇರಿಕದಿಂದ ಜರ್ಮನಿಗೆ ಏರಿ ಹಾರಿ, ಪ್ರಪಂಚ ಪರ್ಯಟನೆಯನ್ನು ಮುಗಿಸಿದ ಕೀರ್ತಿಯನ್ನು ಇನ್ನು ಪಡೆಯಿತು.

ಸ್ಪೈನ್ ದೇಶದ ಮಾಜಿ ಅರಸರಾದ ಅಲ್ಫೋನ್ಸೋ ರವರು ಹೊಸ ಸರಕಾರದ ಮತ್ತು ಶಾಸನದ ಹಿಡಿತಕ್ಕೆ ಸಿಗದೆ ಇದ್ದು, ಈಗ ಸ್ಪೇನಿಗೆ ಹಿಂತಿರುಗಲಿದ್ದಾರೆ. ಈತನು ತಾಯಿಯ ಮುಖಕ್ಕೆ ಹೊಡೆಯಬಾರದು ಎಂದು ಹೇಳಿದ್ದರಂತೆ! ಹೊಡೆದವನನ್ನು ಕೂಡಲೇ ಕೈದುಮಾಡಿದ್ದಾರೆ.

ಅಮೆರಿಕದ ಪ್ರವಾಸಿಗಳ ಪ್ರಯಾಣಕ್ಕಾಗಿ 'ಹೊಸ ಬ್ರಿಟನ್' 'ಹೊಸ ಕೆಲಸ' ಎಂಬ ವಿಮಾನ ... ಗಳ ... ವು ... ಕೆಲಸ ... ಗುರುವಾರ ... ಕಾರಣವಿಲ್ಲದುದೊಂದು ಆಶ್ಚರ್ಯ.


ಪ್ರಿನ್ಸಿಪಲ್ ... ಇದನ್ನು ... ಉಪಯೋಗಿಸಿ ... ನಿವಾರಣೆ ... FOIRY. ... ಇಂಗ್ಲೆಂಡಿನ ... esi ... n free ... quiry ... ಆನೇಕರ ... fancy plate 52-38

'ಅಂದಿನಿಂದಲೂ ನಾನು ಸ್ವತಃ ಇಲ್ಲಿಗೆ ಬಂದು ನಿಮ್ಮ ವಿದ್ಯಾರ್ಥಿಗಳನ್ನೂ ನಿಮ್ಮನ್ನೂ ಸಂದರ್ಶಿಸಬೇಕೆಂಬ ಆಸೆಯು ಬಲವಾಗಿತ್ತು. ಈ ಚಿಕ್ಕ ವಿದ್ಯಾರ್ಥಿಗಳ ವಿಚಾರವನ್ನು ಆಗಾಗ್ಯೆ ಕೇಳಿ ತಿಳಿದುಕೊಳ್ಳುತ್ತಿದ್ದೆ. ಈಗ ನೋಡಿ ನನಗೆ ಮಹದಾನಂದವಾಯಿತು.

ನಾನು ಬರ್ಮಿಂಗ್ ಹ್ಯಾಮಿನಲ್ಲಿ ಒಂದು ಶಿಕ್ಷಣಶಾಲೆಯನ್ನು ನೋಡಿದೆ, ಅಲ್ಲಿಗೂ ಇಲ್ಲಿಗೂ ಬಹಳ ಅಂತರವಿದೆ. ಅಲ್ಲಿಯೂ ಮಾನವ ಪ್ರಕೃತಿಯು ಹೊರ ಹೊರಡಲು ಪ್ರಯತ್ನಿಸುತ್ತಿತ್ತು. ಇಲ್ಲಿಯೂ ಅಷ್ಟೆ.

ನೀವು ಇಲ್ಲಿ ಮಕ್ಕಳಿಗೆ ಬಾಲ್ಯದಿಂದಲೂ ಸ್ವಾತಂತ್ರ್ಯದ ಚಲನೆಯ ಮಹತ್ವವನ್ನು ಕಲಿಸುತ್ತಿರುವುದನ್ನು ನೋಡಿ ನನಗೆ ಬಹಳ ಸಂತೋಷ. ಶಿಕ್ಷಕನು ನಿಮಿಷಮಾತ್ರದಲ್ಲಿ ಹೇಳಿದ್ದನ್ನು ಕೇವಲ ನಿಶ್ಶಬ್ದವಾಗಿದ್ದುಕೊಂಡು ಮಕ್ಕಳು ಒಬ್ಬರ ಹಿಂದೆ ಒಬ್ಬರು ಬರುತ್ತಾರೆ. ನಿಮ್ಮ ಶಾಲೆಯಲ್ಲಿ ಪ್ರವೇಶಿಸುತ್ತಿರುವ ತಾಳಬದ್ಧವಾದ ಕೆಲಸಗಳೂ ಬಹಳವೇ.

ಈ ಮಕ್ಕಳು ತಾಳಲಯಬದ್ಧವಾಗಿ ಕೆಲಸಮಾಡುವುದನ್ನು ನೋಡಿ ಕೂಡಲೆ ನನ್ನ ಮನಸ್ಸು ಇಂಡಿಯಾದೇಶದಲ್ಲಿ ಅರೆಹೊಟ್ಟೆಯಿಂದ ಜೀವಿಸುತ್ತಿರುವ ಕೋಟ್ಯಾಂತರ ಹಳ್ಳಿಯ ಹುಡುಗರ ಕಡೆ ತಿರುಗಿತು. ಆಗ ನನ್ನ ಮನಸ್ಸಿನಲ್ಲಿ ಈ ಪ್ರಶ್ನೆಯು ಹುಟ್ಟಿತು; ನೀವು ಇಲ್ಲಿ ಈ ಮಕ್ಕಳಿಗೆ ಶಿಕ್ಷಣವನ್ನು ಕೊಡುತ್ತಿರುವಂತೆಯೆ ಅಲ್ಲಿ ಆ ಮಕ್ಕಳಿಗೆ ಕೊಡಲು ಸಾಧ್ಯವೆ? ನಾವು ಈ ವಿಧಾನದ ಪರೀಕ್ಷೆಗಳನ್ನು ಮಾಡುತ್ತಿರುವುದು ಕೇವಲ ನಿರ್ಗತಿಕರ ಮಕ್ಕಳಿಗೆ. ಅದು ಎಷ್ಟು ಮಾತ್ರ ಫಲಕಾರಿಯಾಗುವುದೆಂಬುದನ್ನು ಹೇಳಸಾಧ್ಯವಿಲ್ಲ. ನಾವು ಇಂಡಿಯಾದೇಶದ ಗುಡಿಸಿಲಿನಲ್ಲಿರುವ ಹುಡುಗರಿಗೆ ನಿಜವಾದ ಆತ್ಮಶಕ್ತಿಯುಳ್ಳ ಶಿಕ್ಷಣವಿಧಾನವನ್ನು ಕೊಡಬೇಕೆಂಬ ಪ್ರಶ್ನೆಯೇನೋ ಬಲವಾಗಿದೆ. ಆದರೆ ತಕ್ಕ ಸಾಧನ ಸಾಮಗ್ರಿಗಳು ಮಾತ್ರವಿಲ್ಲ.

ಮು ಗು ವೇ ಗು ರು .

ನಾವು ಸ್ವತಃ ಶಿಕ್ಷಣ ಪ್ರೇಮದಿಂದ ಸಹಾಯ ಮಾಡುವ ಶಿಕ್ಷಕರ ಸಹಾಯವನ್ನು ಕೋರಬೇಕು. ಆದರೆ ಅಂತಹ ಶಿಕ್ಷಕರು ಸಿಗುವುದು ತುಂಬಾ ಕಷ್ಟ. ಅದಲ್ಲದೆ ಮಕ್ಕಳ ಮನೋಭಾವ ಕಥನಮಾಡಿ, ಅವರಿಂದ ತಿಳಿಯಬೇಕಾದುದನ್ನು ತಿಳಿದು ಪ್ರತಿಯೊಂದು ಮಗುವಿನ ಮನೋಗ್ರಹಣಮಾಡಿ ಅದಕ್ಕೆ ತಕ್ಕಂತೆ ಅವಕಾಶಗಳನ್ನು ಕಲ್ಪಿಸಿ—ಆ ಮನೋಶಕ್ತಿಗೆ ಗೌರವ ಕೊಡಲು—ಕೊಡುವಂತಹ ಶಿಕ್ಷಕರು ಬಹಳ ಅಪರೂಪ. ನಾನು ನೂರಾರು—ಯಾಕೆ ಸಾವಿರಾರೆಂದರೂ ಎನ್ನಬಹುದು—ಮಕ್ಕಳನ್ನು ನೋಡಿದ್ದೇನೆ. ಆ ಮಕ್ಕಳಿಗಿರುವಂತಹ ಗೌರವ ಬುದ್ಧಿಯು ಯಾಕೆ ನನಗೂ—ನಿಮಗೂ ಇರುವುದಕ್ಕಿಂತಲೂ ಹೆಚ್ಚೆನ್ನಬಹುದು. ನಮ್ಮ ಜೀವನದ ಮಹಾ ಪ್ರಶ್ನೆಯನ್ನು ಕಲಿಯಬೇಕಾದರೆ, ನಮ್ಮ ಗರ್ವ ಗುರುತ್ವಗಳೆಂಬುದನ್ನು ಬಿಟ್ಟು ಮಕ್ಕಳಿಂದಲೆ ಪಾಠ.. ಅವರನ್ನು ಎನೂ ಅರಿಯದ ಹಸುಳೆಗಳೆನ್ನುತ್ತಾರೆ. ಆದರೆ ದೊಡ್ಡವರಿಗೆ ತಿಳಿಯಬಹುದಾದಂತಹಗಳಿಗಿಂತಲೂ ಅವರಿಂದ ಹೆಚ್ಚಾಗಿ ತಿಳಿಯಬಹುದು. ಮಹಾತ್ಮ ಏಸುಕ್ರಿಸ್ತರು ಹೇಳಿರುವ ಸಂಗತಿಗಳೆಲ್ಲಕ್ಕೂ ಮಣಿವಾಕ್ಯವಾದುದು 'ಮಕ್ಕಳ ಬಾಲ್ಯಜ್ಞಾನಶೀಲ' ಎಂಬುದು. ನಾನೇನೂ ಅದನ್ನು ಪ್ರತಿಪಾದಿಸಿಕೊಂಡಿದ್ದೇನೆ."

...ಮ್ಮ ಹೊತ್ತು ತೆಗೆದುಕೊಂಡೆ. ನಾನು ಈ ನನ್ನ ಮನಸ್ಸಿನಲ್ಲಿ ಕುದಿಯುತ್ತಿರುವ ವಿಷಯ ಮಕ್ಕಳಿಂದ ಜೀವನ ಧರ್ಮಗಳನ್ನು ತಿಳಿವಾದ ಪ್ರಶ್ನೆ. ಆದರೆ ನನಗೆ ಈ ಮಾತನೇ ...ಸ್ಯನಿಗೆ ನಮ್ಮೆಲ್ಲರ ಅದೃಷ್ಟ ಸ್ವಾತಂತ್ರ್ಯ ...ತವಾದುದು ಮಗುವಿಗೆ ದೇವರೋ ದೈವದಲ್ಲಿ ನಂಬಿಕೆಯುಳ್ಳ ಪಕ್ಷದಲ್ಲಿ ...ಗುವುದು. ಅತನ ಅಜ್ಞೆಗಳನ್ನು ...ಲು ಕಲ್ಪಿಸುತ್ತಿದ್ದೇನೆ. ಅದನ್ನೆ ನಿ ...ಗೆ ಮಕ್ಕಳಲ್ಲಿ ತುಂಬಾ ಪ್ರೀತಿ. ...ಣ ಶಾಲೆಗಳ ಮೂಲಕ ಅವರಿ... ನೀವು ಬೋಧಿಸುತ್ತಿರುವ ... ನೋಡಬೇಕಾದರೆ ಮಾ... ಗಳನ್ನುಳ್ಳವರ ಮಕ್ಕಳಲ್ಲಿ ...—ಮಕ್ಕಳಲ್ಲಿ. ನಾವು ಪ್ರಪಂಚದಲ್ಲಿ ವಾಸ್ತವವಾಗಿಯೂ ಶಾಂತಿಸ್ಥಾಪನೆ ಮಾಡಬೇಕಾದರೆ, ಯುದ್ಧವನ್ನು ಯುದ್ಧಮಾಡಿ ಜೈಸಬೇಕಾದರೆ ನಾವು ಮಕ್ಕಳೊಡನೆ ಪ್ರಾರಂಭಮಾಡಬೇಕು. ಅವರು ತಮ್ಮ ಸ್ವಾಭಾವಿಕವಾದ ನಿಷ್ಕಾಪಟ್ಯವನ್ನು ವೇಷದಲ್ಲಿ ಬೆಳೆದರೆ ನಮಗೆ ಹೋಂದಬೇಕೋ ಇದು. ನಾವು ಆಗ ನಿರರ್ಥಕಗಳಾದ ನೋವುರಹಿತದ ಠರಾವುಗಳನ್ನು ಮಂಜೂರು ಮಾಡಬೇಕಾಗಿ ಬರುವುದಿಲ್ಲ. ಆಗ ನಾವು ಶಾಂತಿಯಿಂದ ಶಾಂತಿಗೆ, ಪ್ರೀತಿಯಿಂದ ಪ್ರೀತಿಗೆ ಹೋಗಿ ಕೊನೆಗೆ, ಈಗ ಪ್ರಪಂಚವೆಲ್ಲವೂ ಆಸಿಸುತ್ತಿರುವಂತೆ ಪ್ರಪಂಚದ ಮೂಲೆ ಮೂಲೆಯೂ ಶಾಂತಿಮಯವೂ, ಪ್ರೀತಿಮಯವೂ ಆಗುವುದು."

ಸ್ವ. ಮ.

ಕಳ್ಳರನ್ನು ಹಿಡಿಯುವ ಮತ್ತು ಗೊತ್ತು ಹಚ್ಚುವ ಹೊಸ ಪ್ರಯೋಗಗಳು.

ಇಂಗ್ಲೆಂಡಿನಲ್ಲಿ ಅಂಗಡಿಕಾರರು ತಮ್ಮಲ್ಲಿಯ ಪದಾರ್ಥಗಳು ದಾರೀ ಹೋಗುವಂತವರಿಗೆ ಕೂಡ ಸಹಜವಾಗಿ ಕಾಣಬೇಕೆಂದು ಎಂಡೆರಡು ಅಳತ್ತರವಾದ ಕಿಟಕಿಗಳಿಗೆ ನಿಲುವುಗನ್ನಡಿ ಹಚ್ಚಿ, ಹಿಂದೆ ನಿಸ್ಸಿಂದ ಪದಾರ್ಥಗಳನ್ನಿಡುವರು. ಕಳ್ಳರು ಅಪರಾತ್ರಿಯಲ್ಲಿ ಈ ಕನ್ನಡಿಗಳನ್ನೊಡೆದು ಒಳಗಿನ ಪದಾರ್ಥಗಳನ್ನು ತಕ್ಕೊಂಡು ಪಲಾಯನಮಾಡುತ್ತಿರುವರು. ಕನ್ನಡಿಯಂಥ ತಿಳುವು ಹಾಗೂ ಸಹಜವಾಗಿ ಒಡೆಯಲಿಕ್ಕೆ ಒಂದು ಸರಕು ಕಳವಾಗದಂತೆ ಮುಂದೆ ರಾತ್ರಿ ಹೊತ್ತಿನ ಮಟ್ಟಿಗೆ ಕಟ್ಟಿಗೆಯ ಬಾಗಿಲು ಕೂಡಿಸಬೇಕೆಂದು ಪೊಲೀಸರು ಅಂಗಡಿಕಾರರಿಗೆ ಸೂಚಿಸಿದರು. ಕಳ್ಳರು ಈ ತಿಳುವಾದ ಹಲಗೆಗಳನ್ನೂ ಮುರಿದು, ಒಡೆದು ತಮ್ಮ ಕಾರ್ಯ ಸಾಧಿಸುವಂಥವರಾಗಿದ್ದಾರೆ. ಇದ್ದರಿಂದ ಇವರಿಗೆ ಮುಖ್ಯವಾಗಿ ಪೊಲೀಸರು ಎರಡು ಹೊಸ ಯುಕ್ತಿಗಳನ್ನು ಮಾಡಿದ್ದಾರೆ.

ಕಳ್ಳರು ಕಿಟಕಿಗಳನ್ನೊಡೆದ ಕೂಡಲೇ ವಿದ್ಯುತ್ತಿನ ಘರ್ಷಣವಾಗಿ ಅದರಿಂದೊಂದು ಪ್ರಕಾರದ ಪುಡಿಯು ಹೊರಬಿದ್ದು ಕಳ್ಳನನ್ನು ಎಚ್ಚರಿಸಿ ಕೆಡುವುದು. ಆದರೆ ಅದರಿಂದ ಅತನ ಜೀವಕ್ಕೂ, ಅರೋಗ್ಯಕ್ಕೂ ಅಪಾಯವಾಗಲಾರದು ಕೆಲ ಹೊತ್ತಿನ ತನಕ ಅವರು ನಿಶ್ಚೇತನ ಬೀಳುವರು. ಒಂದು ವೇಳೆ ಈ ಪ್ರಯೋಗದಲ್ಲಿ ಸಿಕ್ಕದೆ ಪಾರಾಗಿ, ಕದ್ದ ಪದಾರ್ಥಗಳನ್ನು ಮೋಟಾರಿನಲ್ಲಿ ಹಾಕಿಕೊಂಡು ಭರಾಟೆಯಿಂದ ಹೋಗುದಾದರೆ ಪೊಲೀಸರು ಇದಕ್ಕೆ ಒಂದು ಪ್ರಕಾರದ ದ್ರಾವಕದ ಚೀಳಿ ಹೊಡೆಯುವರು. ಅದರ ಕಲೆಗಳು ಮೋಟಾರದ ಮೇಲೆ ಕೂತು ಆ ಕಲೆಗಳ ಗುರ್ತಿನಿಂದ ಕಳ್ಳರು ಸಿಕ್ಕುವರು.

ನೋ ಟೀ ಸ್ .

ರೋಲ್ಡ್ ಗೋಲ್ಡ್ ಭಂಗಾರದ ಗಡಿಯಾರಗಳು.

ಹಸಲು ಕ್ರಯ 17—12—0. ಕೆಲವು ದಿನಗಳ ವರೆಗೆ 8—12—0.

ಈ ಗಡಿಯಾರಗಳು ಬಹು ಪ್ರಖ್ಯಾತಿಯಾದ ಫಿಡೋಲೀವರ್ ಮೂಮೆಂಟ್ಸ್‌ಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ. ಇವು ಸರಿಯಾದ ಗಂಟೆಯನ್ನು ತೋರಿಸುವುವು. ಒಳಗಡೆ



ಕೆಂಪು ಇಟ್ಟಿರುವುದು ಇದರ ಕೇಸು ಭಂಗಾರಕ್ಕೆ ಸರಿಯಾಗಿದೆ. ಇದಕ್ಕೆ 5 ವರ್ಷ ಖಾತ್ರಿಯಾದ ಗ್ಯಾರಂಟಿ ಕೊಡುವೆವು. 1 ಕೈಯ್ಯಲ್ಲಿ ಕಟ್ಟುವ ರಿಸ್ಟ್ ವಾಚ್, 1 ಪಾಕೆಟ್ ವಾಚ್, ಮತ್ತು ಒಂದು ಟೇಬಲ್ ಟೈಂಪೀಸ್ ಈ ಮೂರು ಸೇರಿ ರೂ. 8—12—0 ಮಾತ್ರ. ಈ ಕ್ರಯವು ಕೆಲವು ದಿನಗಳ ವರೆಗೆ ಮಾತ್ರ. ನಂತರ ಸಿಕ್ಕಲಾರದು. ರಿಸ್ಟ್ ವಾಚ್ ಮತ್ತು ಟೈಂಪೀಸು ರೂ. 5—8—0; ರಿಸ್ಟ್ ವಾಚ್ ಮತ್ತು ಪಾಕೆಟ್ ವಾಚ್ ರೂ. 7—0—0.

ವಿಳಾಸ:— ಕೆ. ಎಸ್. ಬೆನ್‌ಸನ್ ಅಂಡ್ ಕೊ,

12—9 ಪೋ || ನಂ || 1246, ಮದರಾಸು.

...ಡಿಯಾ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

(ಸ್ಥಾಪನೆಯಾದದ್ದು 1897.)

...ವೂ, ಜನಪ್ರಿಯವೂ ಆಗಿರುವ ಈ ಕಂಪೆನಿಯಲ್ಲಿ ನೀನು ಜೀವ ವಿಮೆ ...ವುದಕ್ಕೆ ಇದೇ ತಕ್ಕ ಸಮಯ.

ಬೋನಸ್ ವರ್ಷ !!

...ಡ ಏಜೆಂಟರು ಬೇಕಾಗಿದೆ.

ಬ್ರಾಂಚ್ ಆಫೀಸು:—

152—3 ಕಮರ್ಷಿಯಲ್ ಸ್ಟ್ರೀಟ್,

ಬೆಂಗಳೂರು.

ಇಂಡಿಯನ್ ಇನ್ಶೂರೆನ್ಸ್ ಕಂಪೆನಿಗಳಿಗೇನೇ ಜೀವ ವಿಮೆ ಮಾಡಿರಿ.

ದಿ ಬೆಂಗಾಲ್ ಇನ್ಶೂರೆನ್ಸ್ ಎಂಡ್ ರಿಯಲ್ ಪ್ರಾಪರ್ಟಿ ಕಂಪೆನಿ ಲಿಮಿಟೆಡ್, ಹೆಡ್ ಆಫೀಸು:—8 ಡಾಲ್ ಹೌಸಿ, ಸ್ಕ್ವೇರ್ (ಈಸ್ಟ್) ಕಲ್ಕತ್ತ, ಸಂಸ್ಥಾಪನೆ 1919

ನವಸಂಸ್ಕೃತಿಯು ಬೆಳೆದಷ್ಟಕ್ಕೆ ಅದರೊಡನೆ ಅದಕ್ಕೆ ಸಂಬಂಧಪಟ್ಟಿರುವ ಆರ್ಥಿಕ ಪರಿಸ್ಥಿತಿಯು ಬೆಳೆಯುತ್ತದೆ. ಇಂಥ ಸಮಯದಲ್ಲಿ ಜೀವವಿಮೆ ನಿಯಮವು ಒಂದು ವರವೆಂದೆಣಿಸಲ್ಪಟ್ಟಿವೆಯಲ್ಲದೆ, ಅದು ಸಮಾಜರಂಗದಲ್ಲಿ ಜನರಿಗೊಂದು ಅತ್ಯಗತ್ಯ ವಿಷಯವೆಂದೂ ತಿಳಿದು ಬಂದಿದೆ. ಅದನ್ನು ಈಗೀಗ ಗಣಿತಶಾಸ್ತ್ರ ಪ್ರಕಾರವಾಗಿಯೇ ಜತನದಿಂದ ಪರಿಪಾಲಿಸಿಕೊಂಡೇ ಬರುವಂತಾಗಿದೆ.

ಈ ಕಂಪೆನಿಯು ಸರಕಾರದಲ್ಲಿ ಕಂಪೆನಿಯು ಭದ್ರತೆಗೋಸ್ಕರ 2 ಲಕ್ಷ ರೂಪಾಯಿ ಠೇವಣಾತಿಯನ್ನು ಇಟ್ಟಿದೆ. ಇದು ಇನ್ಶೂರೆನ್ಸ್ ಕೆಲಸದಲ್ಲಿ ಒಳ್ಳೆ ಗುರುತಿರುವ ಸದ್ಗೃಹಸ್ಥರ ... ಪ್ರಕಾರವೇ ನಡೆಯುತ್ತದೆ. ಈ ಕಂಪೆನಿಯು ... ಕೆಲವು ಸೂತ್ರಗಳ ಮೇರೆಗೆ ... ದರದಿಂದ ಪೊಲಿಸಿಗಳನ್ನು ಕೊಡು... ಇದರ ಶರ್ತಗಳು, ನಿಯಮಗಳು ಸುಲಭ ಗ್ರಾಹ್ಯವು ... ಅನುಕೂಲವಾಗಿವೆ. ಅಲ್ಲದೆ ಬಹು ಉದಾತ್ತ ... ಹೆಚ್ಚಿನ ಮಾಹಿತಿಗೆ ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಿರಿ.

ಯಂ. ಯಸ್. ಐಯ್ಯಪ್ಪ,

ಆರ್ಗನೈಸರ್,

ಸ್ಟೂವರ್ಟ್‌ರೋಡ್, ಮಡಿಕೇರಿ.

ಅಥವಾ

ಆರ್. ಸಿ. ಸೇನ್‌ಗುಪ್ತ,

ಬ್ರಾಂಚ್ ಸೆಕ್ರೆಟರಿ,

12—5 28, ಅಂಗಪ್ಪನಾಯಕ್ ಸ್ಟ್ರೀಟ್,

ಜಿ. ಟಿ. ಮದರಾಸ್.

Wanted agents in every Taluk of Coorg on very liberal terms.

ಜನರಲ್ ಅಸ್ಯೂರೆನ್ಸ್ ಸೊಸೈಟಿ.

ಅ ಜ ಮಿ ರ್ .

ನಮ್ಮ ಆಯವ್ಯಯದ ಪಟ್ಟಿಯೇ ನಮ್ಮ ಅಭಿವೃದ್ಧಿಯನ್ನು ವ್ಯಕ್ತಗೊಳಿಸುತ್ತದೆ.

ವರ್ಷ	ಮೇಲ್ಪಟ್ಟ ವರ್ಷಾದಾಯ	ಮೇಲ್ಪಟ್ಟ ಮೂಲಧನ	ಖರ್ಚು ವರಮಾನದ ರೀತಿ
1911	46,248	49,442	82.9
1921	2,93,627	6,53,350	43 2
1931	12,50,000	40,00 000	28.2

ಬೋ ನ ಸ್ಸು .

ಕುಕ್ಕರ್ ನಷ್ಟೆ ದೊರಕುವ ಜೀವಾವಧಿ ಪಾಲಿಸಿಗಳ ಮೇಲೆ ವರ್ಷ ಒಂದಕ್ಕೆ ಶೇಕಡ 22½

ಚೆನ್ನಾಗಿ ಕೆಲಸಮಾಡಿ ಅಭಿವೃದ್ಧಿ ಸ್ಥಿತಿಯಲ್ಲಿರುವ ಈ ಸೊಸೈಟಿಯಲ್ಲಿ ವಿಮೆ ಮಾಡಿ ಕಡಿಮೆ ಪ್ರೀಮಿಯಂ ಪಾವತಿಮಾಡುವ ಸೌಲಭ್ಯ ಹೊಂದಿ ಅಥವಾ ಈ ಕಂಪೆನಿಯ ಪರವಾಗಿ ಕೆಲಸಮಾಡಿ ಉತ್ತಮ ಕಮಿಶನ್ ದರದ ಪ್ರಯೋಜನ ಹೊಂದಿ.

ಹೆಚ್ಚು ವಿಚಾರಗಳಿಗೆ ಈ ವಿಳಾಸಕ್ಕೆ ಬರೆಯಿರಿ:—

ಎ. ರಾಮಚಂದ್ರರಾವ್,

ಸುಪರಿಂಟೆಂಡೆಂಟ್,

52—4 ವಿಂಟೋರ್ ಬಸ್ತಿಕ್ಸ್ ಬಳಿ,

ಬೆಂಗಳೂರು.

ಸ್ವದೇಶೀ ಸೀರೆಗಳು.



ಈ ಸೀರೆಗಳನ್ನು ಹೆಸರುವಾಸಿ ಹೊಂದಿದ ದೊಡ್ಡ ಕಂಪೆನಿಯವರಿಂದ ತಯಾರಿಸಿದ್ದು. ೧೮ ಮೊಳ ಉದ್ದವೂ ೪½ ಮೊಳ ಅಗಲವೂ ಇರುವುದು ಇವನ್ನು ಗಟ್ಟಿಯಾದ ಸಣ್ಣ ನೂಲಿನಿಂದಲೂ, ರೇಶ್ಮೆಯಿಂದಲೂ ತಯಾರಿಸಿದೆ. ಅಂದವಾದ ಅಂಚಿನ ಸುಂದರವಾದ ಸೆರಗೂ ಇರುವದು ಇವು ಯಾವಾಗ್ಯೂ ರೇಶ್ಮೆಯಂತೆ ಇರುವವು. ಎಲ್ಲಾ ಬಣ್ಣಗಳಲ್ಲಿಯೂ ಸಿಕ್ಕುವವು. ಎಲ್ಲಾ ಬಣ್ಣಗಳಲ್ಲಿಯೂ ಸಿಕ್ಕುವವು. ಮತ್ತು ಎಲ್ಲಾ ಮತಸ್ಥರಿಗೂ ಉಪಯುಕ್ತವಾದದ್ದು. ಈ ವಾರದಲ್ಲಿ ತರಿಸುವವರಿಗೆ ೭ ಕಲ್ಲಿನ ಪಚ್ಚದ ಪೆಂಡೋಲೆ ಜತೆ ಒಂದನ್ನು ಇನಾಮಾಗಿ ಕೊಡುತ್ತೇವೆ. ಕ್ರಯ ಗಟ್ಟಿ ೭—೮—೦.

ವಿಳಾಸ:—ಕೆ. ನಾರಾಯಣ ಅಂಡ್ ಸನ್ಸ್,

12—7 168 ಜೈನಾ ಬಜಾರ ಮದರಾಸು.

ನೀವೆಲ್ಲರೂ ಜೀವ ವಿಮೆ ಮಾಡಬೇಕಾದದ್ದು ಅತ್ಯಾವಶ್ಯಕ.

ದೇಶೀಯ ವಿಮೆ ಕಂಪೆನಿಗಳಿಗೇನೇ ಸಹಾಯ ಮಾಡಿರಿ.

ದೇಶೀಯ ಕಂಪೆನಿಯಾದ

ಓರಿಯಂಟಲ್ ಜೀವ ವಿಮೆ ಕಂಪೆನಿಯು

ಹಿಂದೂದೇಶದ ವಿಮೆ ಕಂಪೆನಿಗಳಲ್ಲೆಲ್ಲಾ ಅತ್ಯಂತ ದೊಡ್ಡದಾದ ಮತ್ತು ಜನಾನುರಾಗಕ್ಕೆ ಪಾತ್ರವಾದ ಕಂಪೆನಿ—ಇದನ್ನು ಮರೆಯಬೇಡಿರಿ.

ಈ ಕಂಪೆನಿಯ ಜೀವ ವಿಮೆ ಪಾಲಿಸಿಯನ್ನು ನೀವು ಮರಿಯದೆ ತೆಗೆದುಕೊಳ್ಳಿರಿ.

ವಾರ್ಷಿಕ ಆದಾಯ	245 ಲಕ್ಷ.
ಪಾಲಿಸಿದಾರರಿಗೂ ಅವರ ಸಮ್ಬಂಧಿಕರಿಗೂ ವರ್ಷಕ್ಕೆ ಕೊಟ್ಟ ಮೊಬಲಗು	100 ಲಕ್ಷ.
ವರ್ಷದ ಸರಾಸರಿ ಲಾಭ	39 ಲಕ್ಷ.
ಮೊತ್ತ ಧನ	1131 ಲಕ್ಷ.

ಇತರ ಎಲ್ಲಾ ವಿಷಯಗಳಿಗೂ ಬೊಂಬಾಯಿ ಹೆಡ್ಡಾಫೀಸಿಗಾಗಲೀ ಅಥವಾ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಬೆಂಗಳೂರು, ಇವರಿಗಾಗಲೀ ಅಥವಾ ಮಡಿಕೇರಿ ಇನ್‌ಸ್ಪೆಕ್ಟರೇಟ ಆಫೀಸಿಗಾಗಲೀ ಬರೆದುಕೊಂಡಲ್ಲಿ ಎಲ್ಲಾ ವಿಷಯವೂ ತಿಳಿಸಲಾಗುವುವು.

ಮಾತಾಪಿತೃಗಳ ಜವಾಬ್ದಾರಿ.

(ಮಹಾತ್ಮ ಗಾಂಧಿಯವರ ಲೇಖನಿಯಿಂದ.)

ಮಹಾತ್ಮಾಜೀಯವರು ದ್ವಿತೀಯ ಚಕ್ರಗೋಷ್ಠಿಗೆ ಹೋಗಿ ವಾಪಸು ಬರುವಾಗ ರೋಮ್ ಪಟ್ಟಣದಲ್ಲಿ ಪ್ರಖ್ಯಾತರಾದ ಶಿಕ್ಷಣ ವಿದ್ಯಾಪ್ರವೀಣರು ಪ್ರೊ|| ಮಾಂಟಿಸೋರಿಯವರ ಶಕ್ತಿಯವರನ್ನು ಸಂದರ್ಶಿಸಿದ್ದರು. ಆ ಸಂದರ್ಶನದ ವಿಚಾರವಾಗಿ ಆಕೆಯು ಈ ರೀತಿ ಬರೆದಿರುವಳು. 'ಗಾಂಧಿಜೀಯು ನನಗೆ ಆತ್ಮಸ್ವರೂಪನಾಗಿರುವನೇ ಹೊರತು ಮಾನವನಲ್ಲ. ಆತನು ನನ್ನ ಮನಸ್ಸಿನಲ್ಲಿ ಎಷ್ಟೋ ವರ್ಷಗಳಿಂದ ಇದ್ದನು. ನಾನು ಆತನನ್ನು ನನ್ನಾತ್ಮದ ಮೂಲಕ ಹಿಂಬಾಲಿಸಿದ್ದೇನೆ. ಆತನ ಸಾಧು ವರ್ತನವೂ, ಮಾಧುರ್ಯವೂ ಇನ್ನು ಪ್ರಪಂಚದಲ್ಲಿ ಹಿಂಸೆಯೆನ್ನುವುದು ಇಲ್ಲವೇ ಇಲ್ಲವೋ ಎನ್ನಿಸುವಂತಿವೆ. ಆತನೊಂದು ಜಗಚ್ಛಕ್ತ್ಯುವಿನ ಕಿರಣವಿದ್ದಂತೆ. ಆತನ ಪ್ರಭೆಯಿಂದ ನಾವೆಲ್ಲಾ ಕಲಿಯಬೇಕು. ಮಾಡುತ್ತಿರುವ ಶಿಕ್ಷಕರಿಗೆ ಎಷ್ಟೋ ಸಹಾಯವಾಗಿರಬೇಕು.

ಶಿಕ್ಷಕನಾದವನು ಸರಳ ಸ್ವಭಾವದವನೂ, ದಯಾದಾಕ್ಷಿಣ್ಯ ಸಂಪನ್ನನೂ ಆಗಿರಬೇಕು. ಯುವಕರು ಬಲವಂತವಾದ ಪ್ರಪಂಚದಿಂದೀಚೆಗೆ ಒಂದು ಹಾಗೆ ತಮ್ಮ ಶಕ್ತಿಗಳನ್ನೇ ಮಾರ್ಪಾಟು ಮಾಡಿಕೊಳ್ಳಬೇಕು. ನಮ್ಮ ಶಿಕ್ಷಕರೊಂದಿಗೆ ನಡೆದ ಮಹಾತ್ಮಾಜೀಯವರ ಭೇಟಿಯು ಬಾಲಕರಲ್ಲಿ ಆಧ್ಯಾತ್ಮಿಕ ವಿಚಾರಗಳು ಬಲಗೊಳ್ಳುವಂತೆ ನಮ್ಮ ಶಿಕ್ಷಕರು ಮಾಡಲು ಸಹಾಯವಾಗುವುದೆಂದು ನಾನು ಭಾವಿಸುತ್ತೇನೆ.

ಮಹಾತ್ಮಾಜೀಯು ಈ ಜಗದ್ವಿಖ್ಯಾತ ಶಿಕ್ಷಣಶಾಲೆಗೆ ಹೋಗಿದ್ದಾಗ ಪಂಡಿತೋತ್ತಮಳಾದ ಮಾಂಟಿಸೋರಿಯು ಶಿಕ್ಷಣಶಾಲೆಯ ಸಂಚಾಲಕಳಾಗಿರುವ ಆಕೆಯು ಇಟಾಲಿಯನ್ ಭಾಷೆಯಲ್ಲಿ ಈ ಕೆಳಗಿನ ಭಾಷಣವನ್ನು ಮಾಡಿದಳು. ಭಾಷಣವಾದರೋ ಮಹಾ ಉದಾತ್ತವಾದುದು. ಅದರ ಸ್ವಾದವು ಅನ್ಯಭಾಷೆಗಳಿಗೆ ಪರಿವರ್ತಿತವಾಗಿ ಅದರ ಮಹತ್ವವನ್ನು ಕಳೆದುಕೊಂಡಿರಬಹುದು. ಆದರೂ ಮೈ ಜುಮ್ಮೆಬ್ಬಿಸುವ ಭಾಷಣವದು. ಇದೇ ಅದರ ಭಾಷಾಂತರದ ಭಾವಾಂತರ:—

ನನ್ನ ಶಿಷ್ಯಬೃಂದವೇ! ಸ್ನೇಹಿತರೇ! ನಾನೊಂದು ಮಹತ್ತರವಾದ ವಿಷಯವನ್ನು ನಿಮಗೆ ಹೇಳಲಿದ್ದೇನೆ. ಈಗ ನಮ್ಮೆಲ್ಲರ ಮಧ್ಯೆ ಇರುವ ಆ ಮಹಾಪುರುಷನಾದ ಗಾಂಧಿಜೀಯ ಮಹಾ ಆತ್ಮವು ಮಾನವರೂಪವಾಗಿ ನಮ್ಮೆದುರಿನಲ್ಲಿದೆ. ನಾವು ಈಗ ಯಾವ ಧ್ವನಿಯನ್ನು ಕೇಳುವೆವೋ ಆ ಧ್ವನಿಯು ಪ್ರಪಂಚವನ್ನೆಲ್ಲಾ ವ್ಯಾಪಿಸುವ ಧ್ವನಿ. ಆತನು ಪ್ರೀತಿಸೂಚಿಯನ್ನು ಸುರಿಸುತ್ತಾ ಮಾತನಾಡುವನು. ಆತನು ತನ್ನ ಕೇವಲ ಧ್ವನಿಯೊಡನೆ ಮಾತನಾಡುವುದಿಲ್ಲ, ತನ್ನ ಪೂರ್ಣ ಜೀವನದೊಡನೆ ಮಾತನಾಡುವನು. ಇದು ಮಹಾ ಅಪರೂಪವಾದ ಭಾಷಣ. ಆ ಭಾಷಣವಾಗ ಬಾಗ ಪ್ರತಿಯೊಂದು ಕಿವಿಯೂ ಕೇಳುತ್ತಲೇ ಇರುತ್ತದೆ.

ಮಹಾಗುರು! ಈಗ ನಿನಗೆ ಸ್ವಾಗತಕೋರುತ್ತಿರುವ ಧ್ವನಿಯು ನನ್ನದಲ್ಲ; ನಮ್ಮ ಇಟ್ಯಾಲಿಯನ್ ಜನಾಂಗದ ಧ್ವನಿ; ರೋಮಿನ—ಮಹಾನಗರವಾದ ರೋಮಿನ—ವಾಸ್ತವ್ಯರು ತನಗಳ ಜನ್ಮಸ್ಥಾನವಾದ ರೋಮಿನ—ಧ್ವನಿ. ಆ ಧ್ವನಿ ಮಾಡುವ ನಾನೆಂತಹ ಧನ್ಯಳು—ಅದರಿಂದ ನನಗೆಷ್ಟೋ ಗರ್ವ.

ನನಗೊಂದು ಮಹತ್ವಾಕಾಂಕ್ಷೆ—ವೈಶಿಷ್ಟ್ಯ ಜೀವನ ಮನನಗಳಿಗೆ ಒಂದು ರೂಪು ಗೊಟ್ಟು—ಅದರ ಕೈಯಿಂದ ವಾರ್ತಾಕ್ಕೆ ಸಲ್ಲತಕ್ಕ ಗೌರವವನ್ನು ಮಾಡಬೇಕೆಂದು ನನ್ನಾಸೆ.

ಇಗೋ ನನ್ನ ಶಿಷ್ಯರು. ಅವರೆಲ್ಲರೂ ನನ್ನ ಶಿಷ್ಯರಲ್ಲ—ಅವರ ಸ್ನೇಹಿತರು—ಸ್ನೇಹಿತರ ಸ್ನೇಹಿತರು—ಅವರ ಬಂಧುವರ್ಗದವರು ಎಲ್ಲರೂ ಇಲ್ಲಿ ನೆರೆದಿದ್ದಾರೆ. ನನ್ನ ವಿದ್ಯಾರ್ಥಿವರ್ಗದಲ್ಲಿ ಪ್ರಪಂಚದ ಎಲ್ಲ ಜನಾಂಗಗಳವರೂ ಇದ್ದಾರೆ. ಎಲ್ಲಾ ದೇಶಗಳವರೂ ಇದ್ದಾರೆ. ಅವರೆಲ್ಲರೂ ಮಕ್ಕಳ ಮೇಲಿನ ಪ್ರೀತಿಗಾಗಿಯೇ ಇಲ್ಲಿಗೆ ಬಂದಿರುವುದು.

ಮಹಾತ್ಮರೆ! ಪ್ರಪಂಚಕ ನಾಗರಿಕತೆಯೂ, ಮಗುವಿನ ಆಲೋಚನೆಯೂ ನಮನಮಗೆ ಈಗ ಭೇಟಿಮಾಡಿಸಿರುವುದು. ನಾವು ಮಕ್ಕಳಿಗೆ ಮುಂದೆ ಯಾವ ರೀತಿ ಜೀವನಪಥವನ್ನು ನಾಗಿಸಬೇಕೆಂದು ಕೋರಿಸುತ್ತಿರುವೆವು—ಪ್ರಪಂಚದಲ್ಲಿ ಶಾಂತಿ ಭವ್ಯತೆಗಳನ್ನು ಕಲ್ಪಿಸಲು ಸಾಧ್ಯವಾದ ಆ ಸ್ಥಿತಿಶೀಲ ಜೀವನ ರಹಸ್ಯವನ್ನೇ ನಾವಿಲ್ಲಿ ಶೋಧಿಸುತ್ತಿರುವುದು.

ಇದ ಕಾರಣವೇ ಜೀವನಕಲಾಕೋವಿದನಾದ ಗುರುವಿನ ಧ್ವನಿಯನ್ನು ಕೇಳಬೇಕೆಂದೇ ವಿದ್ಯಾರ್ಥಿಗಳೂ—ಅವರ ಸ್ನೇಹಿತರೂ ಎಲ್ಲರೂ ಇಲ್ಲಿ ಸೇರಿರುವುದು. ಇವರೊಂದು ಮಹಾದಿನ.

"ಈ ಇಪ್ಪತ್ತುನಾಲ್ಕು ಆಂಗ್ಲೀಯ ಮಕ್ಕಳು—ಮುಂದಿನ ಜನಾಂಗದ ಸ್ಫೂರ್ತಿಗಳ—ಆದರ್ಶಮೊಳಕೆಗಳು. ಎಲ್ಲಿ, ನಿಮ್ಮ ಮಾತನ್ನು ಕೇಳಬಯಸುವೆವು."

ಸಂ. ಪ್ರ. ಮ.

ತಾಯಿ! ನಿಮ್ಮ ಮಾತುಗಳಿಂದ ಆನಂದವಾಯಿತು. ನೀವು ಹೇಳಿದ್ದು ನಿಜ. ನಾನು ನನ್ನ ದೇಶದ ಪ್ರತಿಯೊಂದು ಸಂದರ್ಭದಲ್ಲಿಯೂ ಪ್ರೀತಿಯನ್ನು ತೋರ್ಪಡಿಸಬೇಕೆಂದು ಪ್ರಯತ್ನಿಸುತ್ತಿದ್ದೇನೆಂದು ನಾನು ಧೈರ್ಯದಿಂದಾದರೂ ಒಪ್ಪಿಕೊಳ್ಳಲೇಬೇಕಾಗಿದೆ. ಸತ್ಯದ ಮೂರ್ತಿಯಾದ ನನ್ನ ನಿವರ್ಣ ಕೃತ್ಯವನ್ನು ನಾನು ನೋಡಬೇಕೆಂದು ಅತ್ಯಾತುರದಲ್ಲಿದ್ದೇನೆ. ನನ್ನ ಜೀವನದ ಆದಿ ಭಾಗದಲ್ಲಿಯೆ ಸತ್ಯತೆ ... ಅಂತಃ ... ಲು ಪ್ರೀತಿಯ ನಿಯಮಗಳನ್ನು ಎಷ್ಟೋ ಕಷ್ಟವಾದ ... ಪರಿಪಾಲಿಸಬೇಕ ... ಅವಶ್ಯಕವೆಂಬುದಾಗಿ ... ದೆ. ನನಗೂ ... ಬಂದ ಪ್ರೀತಿಯ ನಿಯಮಗಳನ್ನು ಕಲಿಯಬಹುದೆಂದು ಕಂಡುಕೊಂಡೆ. ನಮ್ಮಿಂದ ಅವರು ಕೆಡದ ಭಾಗದಲ್ಲಿ ಮಕ್ಕಳು ಸಂಪೂರ್ಣವಾಗಿಯೂ ಏನೂ ತಿಳಿಯದ ನಿರಪರಾಧಿಗಳಾಗಿಯೇ ಇರುತ್ತಾರೆ. ಮಕ್ಕಳು ಹುಟ್ಟುವಾಗಲೇ ಕೆಡುಕರಾಗಿ ಹುಟ್ಟುವುದಿಲ್ಲವೆಂದು ನನ್ನ ದೃಢವಾದ ನಂಬಿಕೆ. ಮಕ್ಕಳು ಹುಟ್ಟುವುದಕ್ಕಿಂತ ಮೊದಲೂ, ಆ ಮೇಲೂ, ಮಕ್ಕಳು ಬೆಳೆಯುತ್ತಿರುವಾಗ ಮಾತಾಪಿತೃಗಳು ಯೋಗ್ಯ ರೀತಿ ನಡೆಯುತ್ತಿದ್ದರೆ ಮಕ್ಕಳು ಯಥಾರ್ಥವಾಗಿ ಸತ್ಯಸಂಧತೆಯ ಪ್ರೀತಿಯ ನಿಯಮಗಳನ್ನೆ ಪರಿಪಾಲಿಸುತ್ತಿದ್ದರೆಂಬುದಾಗಿ ತಿಳಿದ ಅಂಶ. ನಾನು ಯಾವಾಗ ಇದನ್ನು ತಿಳಿದುಕೊಂಡೆನೋ ಆಗಿನಿಂದ ನನ್ನ ಜೀವಿತದ ... ದಿಸೆ ಬದಲಾಯಿತು.

ನನ್ನ ಜೀವನದಲ್ಲಿ ಎಂತೆಂತಹ ... ಬಂದದನ್ನು ಈಗ ಹೇಳಹೋಗುವುದಿಲ್ಲ. ... ಮಾತ್ರ ಹೇಳಬಲ್ಲೆ: ನಾನು ಶಾಂತಿಯ ... ಮಾರ್ಗಗಳನ್ನು ಅನುಸರಿಸಿ 'ತಿಳಿವಳಿಕೆ' ... ದನ್ನು ಅರಿತೆ. ನಾನು ಶಾಂತ ... ನ್ನ ಸ್ನೇಹಿತರಿಗೆಷ್ಟು ಮುಂದಿಗೆ ... ಲ್ಲದ ಶಾಂತತೆಯನ್ನು ಪಡೆಯು ... ಅವರು ನನ್ನನ್ನು ಪ್ರಶ್ನಿಸಿದಾ ... ಕಲು ಸಾಧ್ಯವಾಗಲಿಲ್ಲ. ... ವನ್ನು ಅನುಸರಿಸಿದ್ದರ ...

ನಾನು ನಿಮ್ಮ ಕೆಲ... ಡಮ್ಮ ... ಲ್ಲಿ. ವಿಧಾನಗಳ ರೀತ್ಯಾ ಮ... ಜರುಗುತ್ತಿದ್ದಾಗ. ನಿ... ಆ ಶಾಲೆಯಲ್ಲಿ ನಿಮ್ಮ ... ಆಕ್ಕರಗಳು ಮಾತ್ರ...

ನಾನು ... ನ್ನು ನೋಡುತ್ತ ... ಒಳ್ಳೆಯದೆಂ... ಕ್ಕಳಿಗೆ ... ಮಗಳಿಂ... ವಾಕ

ಕೊಡಗು.

ಸನ್ ೧೯೩೨ನೇ ಇಸವಿ

ಮೇ ತಾ. ೨೦ನೇ ಶುಕ್ರವಾರ.

ಪ್ರೆಸ್ ಆರ್ಡಿನೇನ್ಸ್ ಜಾರಿಯಲ್ಲಿರುವವರಿವಿಗೆ ನಾವು ಅಗ್ರಲೇಖನವನ್ನು ಪ್ರಕಟಿಸುವುದಿಲ್ಲ.

ಭವಿಷ್ಯತ್ತಿನ ಸೂಚನೆಗಳು.

ಹಿಂದೂಸ್ಥಾನದ ರಾಜಕೀಯ ಸ್ಥಿತಿಯು ದಿನ ದಿನಕ್ಕೆ ಬಿಗಟ್ಟಾಗುತ್ತಲಿದೆ. ನಿದಾರ್ಕ್ಷಿಣ್ಯದ ದಬ್ಬಾಳಿಕೆಯಲ್ಲಿ ನಂಬಿರುವ ನೈಸರಾಯರಿಂದ ಕೂಡಿದ ಇಂಡಿಯಾ ಸರ್ಕಾರ [illegible]ಂಗ್ರೆಸನ್ನು ಮುರಿಯಲಿಕ್ಕೆ ಹೊಸ ಹೊಸ ಉಪಾಯಗ[illegible] ಕಂಡುಹಿಡಿಯುತ್ತಲಿರುವಾಗ ಕಾಂಗ್ರೆಸು ಸಾಯ[illegible] [illegible]ೀವದಿಂದಲೇ ಇದೆ. ತನ್ನ ಶಕ್ತಿಯನ್ನು ತೋರಿ[illegible] ಕಾಂಗ್ರೆಸ್ ಎಂದರೆ ಏನು? ಹಿಂದೂಸ್ಥಾನ[illegible]ದು ದೊಡ್ಡ ಭಾಗದ ಸ್ವಾತಂತ್ರ್ಯಾಭಿಲಾ[illegible] . ಜನಾಂಗದ ಈ ಭಾಗವನ್ನು ಎಷ್ಟೋ[illegible] —ಜನಾಂಗದ ಆ ಭಾಗಕ್ಕೆ ಸೇರಿದ ಕಾಂಗ್ರೆ[illegible]ಲಿಗ ಸೇರಿಸಬಹುದು. ಜೈಲಿನ ಹೊರಗೆ [illegible]ಬಹುದು. ಆದರೆ ಜನಾಂಗದ ಈ [illegible]ಾವವನ್ನು ಹದಲಾಯಿಸುವಂತೆ ಬ[illegible] ಮಾಡಲು ಸಾಧ್ಯವಿದೆಯೇ? ಪ್ರ[illegible] [illegible]ೀರಾಟದಲ್ಲಿ ಎಲ್ಲಿಯೂ ಜುಲುಂ [illegible]ನ್ನು ಒಪ್ಪಿಗೆ ಪಡಿಸಿದ್ದು [illegible] [illegible]ಯವು ಎಷ್ಟೋ ಕಾರ್ಯ[illegible] [illegible]ಳಿದರೂ ಜನರ ಅಭಿಪ್ರಾ[illegible] . ಕಾಂಗ್ರೆಸನ್ನು ಕೊಂ[illegible] [illegible]ಕೊಳ್ಳುವ ಮೇರೆ ಕೊಲ್ಲ [illegible] ಕಾಂಗ್ರೆಸಿನ ಮನೋ[illegible] [illegible]ರುತ್ತದೆ. ಆಗ ದೃಷ್ಟಿಗೆ [illegible] [illegible]ಂದಿಗೆ ಹೋರಾಡಲು [illegible] [illegible]ಗೆದ ಒಂದು ಶಕ್ತಿಯ[illegible] [illegible] ಹೋರಾಟವು ಹಿಂ[illegible] [illegible]ಗ್ರೆಸಿನವರು ಹೇಳ[illegible] . ಸರ್ವ ಬಲವನ್ನು [illegible] [illegible]ಚಳವಳವನ್ನು [illegible] ಈಗ ಒಂದೂ [illegible] [illegible]ೀ ದೇಶದ [illegible] [illegible]ವೆರ್ [illegible] ಕೃಪ [illegible]

[illegible]ಸ್ಥಾನದಲ್ಲಿ ಅತಿ ವಿರಳ. ಒಪ್ಪುವವರು ಇದ್ದರೂ ಸಹ ಆ ರೀತಿಯಿಂದ ಜಯವಾಗಬೇಕಾದರೆ ಎರಡು ಕಾರ್ಯವನ್ನೂ ಬಲದಿಂದಲೂ, ದೃಢ ನಿಶ್ಚಯದಿಂದಲೂ ಮುಂದರಿಸಬೇಕೆಂತ ಹೇಳುತ್ತಾರೆ. ಸರ್ ಸ್ಯಾಮ್ಯುವೆಲರು ಪಾರ್ಲಿಮೆಂಟಿನಲ್ಲಿ ಮಾಡಿದ ಭಾಷಣದಿಂದ ಅವರಿಗೂ ಸಹ ಇದರ ಸತ್ಯತೆಯು ತಿಳಿದಿದೆಯೆಂತ ಸ್ಪಷ್ಟವಾಗುತ್ತದೆ. ಆದರ ಈ ಅಭಿಪ್ರಾಯವನ್ನು ಕಾರ್ಯರೂಪಕ್ಕೆ ಇಳಿಸಿದರೆ ಇಂಗ್ಲೆಂಡಿಗೂ, ಹಿಂದೂಸ್ಥಾನಕ್ಕೂ ಒಳ್ಳೆದಾದೀತು. ಈಗ ಇವರ ರಾಜಕಾರ್ಯ ಶಕ್ತಿಯನ್ನು ಉಪಯೋಗಿಸಬೇಕಾಗಿದೆ. ಈ ವಾರ ಲಂಡನಿನಿಂದ ಬಂದ ವರ್ತಮಾನವು ಸ್ವಲ್ಪ ಆಶಾಜನಕವಾಗಿದೆ.

ಆರ್ಡಿನೇನ್ಸ್‌ಗಳನ್ನು ವಾಪಸು ತೆಗೆದುಕೊಳ್ಳುತ್ತೀರೋ ಎಂಬ ಪಾರ್ಲಿಮೆಂಟಿನ ಪ್ರಶ್ನೆಗೆ ನೇರವಾ ಉತ್ತರ ಕೊಡದೆ ಆ ಸಭಿಕರಿಗೆ ಜವಾಬು ಕೇಳುವ ಕಾಲ ಬಂದಿಲ್ಲ, ಆರ್ಡಿನೇನ್ಸ್‌ಗಳು ಜೂಲೈ ವರೆಗೆ ಜಾರಿಯಲ್ಲಿರುತ್ತವೆ, ಆಗ ಇರುವ ಪರಿಸ್ಥಿತಿಯನ್ನು ನೋಡಿ ನಿರ್ಣಯಿಸಿಕೊಳ್ಳಬೇಕಷ್ಟೆ ಎಂತ ಸ್ಟೇಟ್ ಸೆಕ್ರೆಟರಿಯವರು ಜವಾಬು ಕೊಟ್ಟರು. ಅದರ ತರುವಾಯ ಇಂಡಿಯಾ ಸರ್ಕಾರಕ್ಕೂ, ಪ್ರಾಂತೀಕ ಸರ್ಕಾರಗಳಿಗೂ ಈ ಬಾಬಿನಲ್ಲಿ ಪತ್ರವ್ಯವಹಾರ ನಡೆಯುತ್ತಲಿದೆಯೆಂತಲೂ ಜಾಗರೂಕತೆಯಿಂದ ನೇರಿಸಿದ್ದಾರೆ. ಸರ್ಕಾರವು ಆರ್ಡಿನೇನ್ಸ್‌ಗಳ ವಿಷಯದಲ್ಲಿ ಮಾಡಿಕೊಂಡಿರುವ ಯಾ ಮಾಡಲಿಕ್ಕಿರುವ ತೀರ್ಮಾನವನ್ನು ಪಾರ್ಲಿಮೆಂಟಿಗೆ ತಿಳಿಸಲು ತಯಾರಿಲ್ಲದಿದ್ದರೂ ಸರ್ಕಾರವು ಆರ್ಡಿನೇನ್ಸ್‌ಗಳನ್ನು ಜಾರಿಯಲ್ಲಿಡಬೇಕೋ, ಬೇಡವೋ ಎಂತ ಯೋಚಿಸುತ್ತಲಿದೆಯೆಂತ ಸ್ಪಷ್ಟವಾಯಿತು. ಇಂಡಿಯಾದಲ್ಲಿ ವಿಷಯಗಳನ್ನು ತಿಳಿದವರು ಆರ್ಡಿನೇನ್ಸ್‌ಗಳನ್ನು ಪುನಃ ಜಾರಿಗೆ ತರುವ ಯೋಚನೆಯಲ್ಲಿ ಇಲ್ಲವೆಂತ ಹೇಳುತ್ತಾರೆ. ಆರ್ಡಿನೇನ್ಸ್‌ಗಳನ್ನು ಪುನಃ ಜಾರಿಗೆ ತರಲು ಮಾಸೂಸಿಗೆ ಆಟಂಕವಿದೆಯೆಂತಲೂ, ಬಂಗಾಳ ವಿನಹ ಬೇರೆ ಪ್ರಾಂತ್ಯಗಳಲ್ಲಿ ಆರ್ಡಿನೇನ್ಸ್‌ಗಳ ಅವಶ್ಯಕತೆಯೇ ಇಲ್ಲವೆಂತಲೂ ಅನ್ನುತ್ತಾರೆ. ಈ ವರ್ತಮಾನವು ನಿಜವೋ, ಸುಳ್ಳೋ ನಾವು ಹೇಳಲಾರೆವು. ಹೇಗೂ ಇಂಡಿಯಾ ಸರಕಾರಕ್ಕೂ, ಪ್ರಾಂತೀಕ ಸರ್ಕಾರಗಳಿಗೂ ಬುದ್ಧಿ ಬಂದಿರುವಂತೆ ತೋರುತ್ತದೆ. ದಬ್ಬಾಳಿಕೆಯಿಂದ ಎಲ್ಲಿಯೂ ಜಯವಾಗಲಿಲ್ಲ.

ಮುಂದಿನ ಸುಧಾರಣೆ ವಿಷಯದಲ್ಲಿ ಬ್ರಿಟಿಷ ಮಂತ್ರಿಮಂಡಲಿಯ ಮನಸು ಹೇಗೆ ಓಡುತ್ತಲಿದೆಯೆಂತಲೂ ತಿಳಿದು ಬಂದಿದೆ. ಅಖಿಲ ಹಿಂದೂಸ್ಥಾನದ ಸಂಯುಕ್ತ ರಾಜ್ಯ ರಚನೆಯನ್ನು ಕೂಡಲೇ ಜಾರಿಗೆ ತರಲು ತುಂಬಾ ಅಡಚಣೆಗಳಿವೆಯೆಂತಲೂ, ಆದ್ದರಿಂದ ಸಂಯುಕ್ತ ರಾಜ್ಯ ರಚನೆಯನ್ನು ಪೂರ್ತಿ ಬಿಡದಿದ್ದರೂ, ಮುಂದರಿಸಿ ಇಡಲಾಗಿದೆಯೆಂತಲೂ ತಿಳಿದು ಬಂದಿದೆ. ರಾಜರುಗಳ ಶರತ್ತುಗಳೂ, ಮುಸಲ್ಮಾನರ ಅಸಾಧ್ಯ ಮನೋಭಾವವೂ ಇದಕ್ಕೆ ಕಾರಣ. ಈ ವಿಷಯದ ತೀರ್ಮಾನವು ಹೇಗೆಯೋ ಆಗಬಹುದೆಂತ ಊಹಿಸಲಾಗಿತ್ತು. ಸಂಯುಕ್ತ ಹಿಂದೂಸ್ಥಾನವಾಗುವುದು ಶ್ಲಾಘನೀಯವೇ ಸರಿ. ಆದರೆ ದುಂಡು ಮೇಜು ಪರಿಷತ್ತಿನ ಮೊದಲನೇ ಕೂಟದಲ್ಲಿ ಈ ವಿಷಯವನ್ನು ತಂದದ್ದು ಬ್ರಿಟಿಷ್ ಇಂಡಿಯಾದ ಸ್ವರಾಜ್ಯದ ಕೋರಿಕೆಯನ್ನು ಮೂಲೆಗೆ ಒತ್ತಲು ಹೂಡಿದ ಉಪಾಯವೆಂತಲೇ ಊಹಿಸಬೇಕಾಗುತ್ತದೆ. ಸಂಯುಕ್ತ ರಾಜ್ಯ (ಫೆಡರೇಶನ್) ಆಗಬೇಕಾದರೆ ರಾಜರುಗಳು ಒಪ್ಪಲೇಬೇಕೆಂತಾದ ಮೇಲೆ ರಾಜರುಗಳು ಅಸಾಧ್ಯ ಶರತ್ತುಗಳನ್ನು ಹೇಳಲು ಪ್ರಾರಂಭಿಸಿದರು. ಮುಸಲ್ಮಾನ್ ಅಸ್ಪೃಶ್ಯ ಮುಂತಾದವರು ಇವರ ಸಂಗಡ ಸೇರಿ ಅಲ್ಪಸಂಖ್ಯಾತರಿಗೆ ವಿಧವಿಧದ ಹಕ್ಕುಗಳನ್ನು ಕಾದಿಡಬೇಕೆಂತ ಹೇಳಿ [illegible] ಸ್ವರಾಜ್ಯವನ್ನು [illegible] ಫೆಡರೇಶನ್ [illegible] ಕಣ್ಣೀರು ಸುರಿಸುವವರಿಲ್ಲ.

ಆದರೆ ಇದಕ್ಕೆ ಬದಲು ಏನು? ಪ್ರಾಂತ್ಯಗಳಲ್ಲಿ ಸ್ವಯ[illegible] [illegible] ಮಧ್ಯವರ್ತಿ ಸರ್ಕಾರವು ಸಂಪೂರ್ಣ [illegible] ಈಗ ತಯಾರಿಸಿದ [illegible] ಇದೆಯೆಂತ ಹೇಳುತ್ತಾರೆ. ಇಂಥಾ ಸುಧಾರಣೆಗೆ ಎರಡನೇ ಯೋಚನೆಯಿಲ್ಲದೆ ಆರಸ್ಥಾನವೇ. ಇಂಥಾ ಸುಧಾರಣೆಯನ್ನು ಸರಕಾರವು ಕೊಟ್ಟರೆ ಇದನ್ನು ಈಗ ಸರಕಾರದ ಪಕ್ಷವಿರುವವರೂ ಸಹ ತಿರಸ್ಕರಿಸಿ ಬಿಡುತ್ತಾರೆ. ಕಳೆದ 40 ವರ್ಷಗಳಿಂದ ಹಿಂದೂಸ್ಥಾನವು ಸಂಪೂರ್ಣ ಸ್ವರಾಜ್ಯಕ್ಕೆ ಹೋರಾಡುತ್ತಲಿದೆ. ಅದಕ್ಕೆ ಕಡಿಮೆಯಾಗಿ ಯಾವುದೂ ಸಮ್ಮತವಾಗಲಾರದು. ಈ ಧ್ಯೇಯಕ್ಕಾಗಿ ಹಿಂದೀಯರು ತಮ್ಮ ಸರ್ವಸ್ವವನ್ನೂ ತ್ಯಾಗಮಾಡಲು ತಯಾರಿದ್ದಾರೆಂತ ಕಳೆದ ಎರಡು ವರ್ಷಗಳಿಂದ ತಿಳಿದಿದೆ. ಸ್ವರಾಜ್ಯದೊರೆಯದಿದ್ದರೆ ಹೋರಾಟವು ಮುಂದರಿಯುತ್ತಲೇ ಹೋಗುತ್ತದೆಯೆಂತ ಇದರಿಂದಲೇ ತಿಳಿಯಬಹುದು.

ಈಗಿನ ಬಿಕ್ಕಟ್ಟಿನ ಸ್ಥಿತಿಯನ್ನು ತಪ್ಪಿಸಿಕೊಳ್ಳಲು ಸಹಾಯ ಪಡೆಯಲಿಕ್ಕಾಗಿ ಮಹಾತ್ಮ ಗಾಂಧಿಯವರನ್ನು ಬಿಡುಗಡೆ ಮಾಡುತ್ತಾರೆಯೋ? ಪಾರ್ಲಿಮೆಂಟಿಗೆ ಮಸೂದಾ ಕಾನೂನು [illegible]ದನಂತರ ಮಹಾತ್ಮರನ್ನು ಬಿಡುತ್ತಾರೆಂತ ಕೇಳುತ್ತೇವೆ. [illegible] ತಪ್ಪು ದಾರಿ. ಮಹಾತ್ಮರು ಶಾಂತಿಸ್ಥಾಪನೆಗೆ ಇಚ್ಛೆ[illegible] ಪುರುಷರು. ಅವರನ್ನು ಮುಚ್ಚಲು ಸೆಲೆ ಕೊಟ್ಟವರು ಇದು ಅಲ್ಲವೆಂತ ವಾದಿಸಿಯಾರು. ಆದರೂ ಅವರು ಸಹ ಹಿಂದೂಸ್ಥಾನದಲ್ಲಿ ಶಾಂತಿ ಸ್ಥಾಪನೆಗೆ ಮಹಾತ್ಮರಿಂದಲ್ಲದೆ ಬೇರೆಯವರಿಂದ ಸಾಧ್ಯವಿಲ್ಲವೆಂತ ಒಪ್ಪುತ್ತಾರೆ. ಹಿಂದೂಸ್ಥಾನದ ತುಂಬಾ ಜನರು ಮಹಾತ್ಮ ಗಾಂಧಿಯವರ ರಾಜಕೀಯ ಅಭಿಪ್ರಾಯವನ್ನು ಒಪ್ಪುತ್ತಾರೆ. ಅದನ್ನು ಅಲ್ಲಗಳೆಯುವುದೆಂದರೆ ಕಳೆದ 10 ವರ್ಷಗಳ ಚರಿತ್ರೆಯನ್ನೇ ಅಲ್ಲಗಳೆದಂತೆ. ಆದ್ದರಿಂದ ಅವರನ್ನೂ ಕಾಂಗ್ರೆಸ್ ಮುಖಂಡರನ್ನೂ ಬಿಡುಗಡೆ ಮಾಡುವುದು ಅತ್ಯಂತ ಬುದ್ಧಿವಂತಿಕೆಯ ಕಾರ್ಯ. ಬೇರೆ ಯಾವ ದಾರಿಯಿಂದ ಪ್ರಯೋಜನವಿಲ್ಲ.

'ಮರಾಠಾ.'

ಓರಿಯಂಟಲ್ ಲೈಫ್ ಅಷ್ಯೂರೆನ್ಸ್ ಕಂಪೆನಿಯ ವಾರ್ಷಿಕ ಸಭೆ.

ಬೊಂಬಾಯಿ ಓರಿಯಂಟಲ್ ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿಯ ಐವತ್ತೇಳನೇ ವಾರ್ಷಿಕ ಸಮ್ಮೇಳನವು 1932ನೇ ಇಸವಿ ಏಪ್ರಿಲ್ 20ನೇ ತಾರೀಕು ಬುಧವಾರ ಸ. ದಿ. ಸೊರಾಬ್ಜಿ, ಡಿ. ವಾಚ್ಛಾರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಕಳೆದ 1931ನೇ ಇಸವಿಯಲ್ಲಿ ಕಂಪೆನಿಯ ಅಭಿವೃದ್ಧಿಯ ವಿಷಯದಲ್ಲಿ ಅಧ್ಯಕ್ಷರು ಪಟ್ಟ ಅಭಿಪ್ರಾಯವೇನೆಂದರೆ—

ಕಳೆದ ವರ್ಷವು 1930ನೇ ಇಸವಿಯಂತೆಯೇ, 'ಪ್ರಪಂಚದ ಇತರ ಎಲ್ಲಾ ಭಾಗಗಳಲ್ಲಿಯೂ ಸ್ಥಿತಿಗೆ ಬಂದಂತೆ, ಈ ದೇಶದಲ್ಲಿಯೂ ಸಹ ವಾಣಿಜ್ಯ ಕೈಗಾರಿಕೆಗಳ ಅಭಿವೃದ್ಧಿಯು ಸ್ವಲ್ಪಮಟ್ಟಿಗೆ ಸ್ಥಾಯಿಯಾಗಿ ಮುಂದುವರಿಯದೇ ನಿಂತಿರುವುದನ್ನು ಗಮನಕ್ಕೆ ತಂದುಕೊಂಡರೆ, ನಮ್ಮ ಕಂಪೆನಿಯು ಕಳೆದ ವರ್ಷದ ಹೊಸ ಜೀವವಿಮೆ ಮೊತ್ತವು 1829ನೇ ಇಸವಿಯಲ್ಲಿ ಅತ್ಯಧಿಕವಾಗಿ ಹೊಂದಿದ ಮೊತ್ತವನ್ನು ಮೀರದಿರುವ ಅಂಶವು ಯಾರಿಗೂ ಅಸಮಾಧಾನಕರವಾಗಿಲ್ಲವೆನ್ನುವದನ್ನು ನಿಸ್ಸಂಶಯವಾಗಿ ಹೇಳಬಹುದು.

ಸರ್ವರಿಗೂ ವೇದ್ಯವಾಗಿರುವಂತೆ, ಇಂಥಾ ಅಸಾಧಾರಣವಾದ ಕಾಲಸ್ಥಿತಿಯಲ್ಲಿಯೂ ಕೂಡ ನಮ್ಮ ಕಂಪೆನಿಯ ಕಳೆದ ವರ್ಷದ ಹೊಸ ಜೀವವಿಮೆ ಮೊತ್ತವು 534 ಲಕ್ಷ ರೂಪಾಯಿಗಳಿಗೆ ಮೀರಿದ 26,486 ವಿಮೆ ಪತ್ರಗಳಾಗಿರುವುವು. ಈ ಅಭಿವೃದ್ಧಿಸ್ಥಿತಿಯು ಎಲ್ಲರಿಗೂ ತೃಪ್ತಿಕರವಾಗಿದೆ ಎನ್ನುವ ವಿಷಯವನ್ನು ದೃಢವಾಗಿ ಹೇಳಬಹುದು. ವಿಮೆ ಪತ್ರಗಳ ಸಂಖ್ಯೆಯು ಹಿಂದಿನ ವರ್ಷಕ್ಕಿಂತಲೂ ಸ್ವಲ್ಪಮಟ್ಟಿಗೆ ಜಾಸ್ತಿಯಾಗಿದ್ದಾಗ್ಯೂ ವಿಮೆ ಮೊತ್ತವು ಸುಮಾರು 9 ಲಕ್ಷ ಅಂದರೆ ಶೇಕಡ 2ರಂತೆ ಕಮ್ಮಿಯಾದಂತೆ ಕಂಡುಬಂದಿದೆ. ಮತ್ತು ಪ್ರತಿ ಪಾಲಿಸಿಯ ವಿಮೆ ಹಣವು ಕಳೆದ ವರ್ಷ 2,018 ರೂ. ಹಿಂದಿನ ವರ್ಷ 2,055 ರೂ. 1929ರಲ್ಲಿ 2,088 ರೂ. ಗಳಂತೆಯೂ ಕಂಡುಬಂದಿದೆ. ಈ ದಾಖಲೆಗಳನ್ನು ನೋಡಿದರೆ ಕಳೆದ ವರ್ಷದಲ್ಲಿ ಸಾಮಾನ್ಯವಾಗಿ ದ್ರವ್ಯದ ಚಲಾವಣೆಯು ಕಮ್ಮಿ ಬಿದ್ದಿದ್ದರಿಂದ ವಿಶೇಷವಾಗಿ ಕಮ್ಮಿ ಮೊತ್ತದ ವಿಮೆ ಪತ್ರಗಳೇ ಜಾಸ್ತಿಯಾಗಿ ತೆಗೆಯಲ್ಪಟ್ಟಿರುವುದೆಂಬ ಅಂಶವು ವೇದ್ಯವಾಗುತ್ತೆ.

ರದ್ದಾದ ಪಾಲಿಸಿಗಳನ್ನು ಪುನಃ ಜಾರಿಗೆ ತರಲು ಅನುಕೂಲಿಸುವಂತೆ ಬಹಳ ಉಪಯುಕ್ತವಾದ ಸೌಕರ್ಯಗಳನ್ನು ಕಳೆದ ವರ್ಷದಲ್ಲಿ ಕಲ್ಪಿಸಿಕೊಟ್ಟಿರುವುದರಿಂದ, ವಿಮೇದಾರರು ಸಾಧ್ಯವಾದಮಟ್ಟಿಗೂ ತಮ್ಮ ವಿಮೇ ಪತ್ರಗಳನ್ನು ಚಾರಿಯಲ್ಲಿ ತರಲು ಏರ್ಪಾಡು ಮಾಡುವರೆಂತ ಊಹಿಸಲಾಗಿದೆ.

ಕಂಪೆನಿಯ ಬಡ್ಡಿಯ ಉತ್ಪನ್ನವು [illegible] 1930ರಲ್ಲಿ ಶೇಕಡ 22.4ರಂತೆ [illegible] ವರ್ಷದಲ್ಲಿ ಶೇಕಡ 21[illegible] [illegible]

ಹಿಂದಿನ [illegible] ವರ್ಷ ವರ್ಷಕ್ಕೆ ಅತಿ[illegible]ವಾದ ಅಭಿವೃದ್ಧಿ [illegible] ಕಳೆದ ಎರಡು ವರ್ಷಗಳಿಂದಲೂ ಒಂದೇ ಸಮನಾದ [illegible] ಕಳೆದ ವರ್ಷಗಳಿಗಿಂತಲೂ ಹೆಚ್ಚು ಮಟ್ಟಿಗೆ ಅಭಿವೃದ್ಧಿಗೆ [illegible]ದು ಊಹಿಸಲ್ಪಟ್ಟಿದೆ.

ಕಳೆದ ವರ್ಷದ ಆದಾಯಗಳಿಂದ ಕಂಪೆನಿಯ ಧನವು 95 ಲಕ್ಷ ರೂಪಾಯಿಗಳನ್ನು ಹೆಚ್ಚಿ, ಒಟ್ಟು 14 ಕೋಟಿ ರೂಪಾಯಿಗಳಿಗೆ ಏರಿರುತ್ತೆ.

ಇತ್ತೀಚೆಗೆ ಅಧಿಕಾಧಿಕವಾಗಿ ವಿಮೆ ಪತ್ರ ಇನ್ನು ಹೊಂದಿರುವ ಮಹಮ್ಮದೀಯ ಪಾಲಿಸಿದಾರರ ಸಂಖ್ಯೆಯು ಹೆಚ್ಚುತ್ತಿರುವುದನ್ನು ನೋಡಿದರೆ, ನಮ್ಮ 'ಓರಿಯಂಟಲ್' ಕಂಪೆನಿಯು ಈ ಹಿಂದೂದೇಶದಲ್ಲಿ ಎಲ್ಲಾ ಕೋಮಿನ ಮತ್ತು ಮತದವರಿಂದಲೂ ಬಹಳಮಟ್ಟಿಗೆ ಪ್ರೋತ್ಸಾಹಿಸಲ್ಪಟ್ಟಿರುತ್ತೆ ಎನ್ನುವ ವಿಷಯವು ಸ್ಪಷ್ಟವಾಗುತ್ತೆ.

ಓರಿಯಂಟಲ್ ಜೀವವಿಮೆ ಪಾಲಿಸಿಯು ಸರ್ವರಿಗೂ ಒಳ್ಳೇ ಕಾಲದಲ್ಲಿಯೂ ಮತ್ತು ಕಷ್ಟಕಾಲಗಳಲ್ಲಿಯೂ ಕೂಡ ಅತ್ಯುತ್ತಮ ತರಹವಾದ ರಕ್ಷಣೆ ಎನ್ನುವ ವಿಚಾರವು ಸ್ಥಿರವಾಗಿ ದೃಢಪಡಿಸಲ್ಪಟ್ಟಿರುವುದರಿಂದ ನಮ್ಮ ದೇಶಿಯರು ಸಾಧ್ಯವಾದ ಮಟ್ಟಿಗೂ ತಮ್ಮ ಧನವನ್ನು ಅತ್ಯಂತ ಭದ್ರವಾದ ಈ ದೇಶೀಯ ಕಂಪೆನಿಯಲ್ಲಿಯೇ ವಿನಿಯೋಗಿಸುವುದರ ಮೂಲಕ ವಿನೋದರಾಗುವರೆಂಬ ಭರವಸೆಯು ಸಂಪೂರ್ಣವಾಗಿರುತ್ತೆ.

Reg. No. M. 1550.
If not delivered please return to
"KODAGU" OFFICE MERCARA.

ಕೊಡಗು.

ಸತ್ಯೇನ ಧೂಶವಯುಯೂ ವಿದ್ಯಾ ವೀತಿ ಪ ಯತ್ನತಾ / ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ

ವಾರ್ಷಿಕ ಚಂದಾ ರೂ. ೩—೮—೦.

ಸಂಪಾದಕ—ಮಾಚಿಮಂಡ ಯಂ. ಗಣ

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೧ | ಮಡಿಕೇರಿ, ಸನ್ ೧೯೩೨ನೇ ಇಸವಿ ಮೇ ತಾರೀಕು ೨೦ ನೇ ಶುಕ್ರವಾರ. | ಸಂಚಿಕೆ

SARI-PIN.

BRACELETS.

NECKCHAINS.

EAR-RINGS.
(Thodus)
Cut-rubys Rs. 25 to 50
With diamond in centre Rs. 80 to 120

Gold Rs. 10
Set rubys forming any letter Rs. 12

NOSE-RINGS.
Diamond in small size of best quality Rs. 35 & upwards according to size.

MARRIAGE PRESENTATIONS.

Attractive and inexpensive articles ready in stock. Prompt execution. Details on enquiry free with catalogue. Numerous customers in Coorg thoroughly satisfied with reliable service. Testimonials pouring in.

Telegrams: 'PRECIOUS.'

V. Subramaniaier
Jeweller,
Post Box 423, Triplicane, P. O., MADRAS.

Telephone 314.

CATALOGUE ON ...UIRY.

MARRIAGE PRESENTATIONS.

Silver Guindys, Photo lockets, Dimond nose screws, cut-ruby ear-rings, etc., etc., etc., in all prices. Very attractive. Prices most moderate.

Estimates free on enquiry.

De... free on ...quiry.


Pendant.


Tumblers with stand.


Fancy plate.

52-28

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್. ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್: ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲಿ)

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	26,800
ಜಮೂಬಂದ ಠೇವಣಾತಿ	—	2,50,301

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5—0—0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಷಿ ಮಾಡುತ್ತಾರೆ.

ಪ್ರೆಸಿಡೆಂಟರು,	ಟ್ರೆಜರರ್
ಕೋಳಂಡ ಅಪ್ಪಯ್ಯನವರು	ಮನೆಯಪ್ಪಂಡ ಬೆಳ್ಯಪ್ಪ
ರಾವ್ ಬಹದ್ದೂರ್.	ನವರು.

ಸೆಕ್ರೆಟರಿ

ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ, ಬಿ.ಎಲ್.

ತಾರೀಖು 1—7—1931.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜೆಂಟರುಗಳು.

ಉತ್ತರ ಕೊಡಗಿಗೆ ಮು· ಚೌರಿರ ಮೊಣ್ಣಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮು. ಮಂಡೇಪಂಡ ಸೋಮಯ್ಯನವರು, (ಖಾದಿಭಂಡಾರ.)

ಸಾತ್ಲೋಕ್ಲು—ಎಮ್. ಆರ್. ವೆಂಕಪ್ಪಯ್ಯನವರು.

ಅಮ್ಮತ್ತಿ—ಸಿದ್ದಾಪುರ—ಮು. ಐನಂಡ ಮಾದಪ್ಪನವರು.

ಪೊನ್ನಂಪೇಟೆನಾಡು—ಮು. ಪಿ. ಜಿ. ಮುದ್ದಯ್ಯನವರು,

ಕ್ಕು ಅರಮಣಮಾಡ ಪಿ ಕಾರ್ಯಪ್ಪನವರು,

ಶ್ರೀ & ತಿತಿಮತ್ತಿ—ಮು. ಜಿ. ಪೂವಯ್ಯನವರು,

ಶೆಕೊಪ್ಪ—ಮು. ಅಪ್ಪಚಟ್ಟೋಳಂಡ ಮಾಚ್ಚಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಹಣ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ,

...ಕ್ಕೆ ಸಿದ್ಧವಾಗಿವೆ.

... ಮತ್ತು ದವಸ ಭಂಡಾರಗಳ ಪ್ರತಿ... ಕಾರಬೇಕಾದ ಅಮಿತ ಜನಾ... ಂಘದ ಮತ್ತು ದವಸ ಭಂಡಾ... ಪುಸ್ತಕಗಳೂ, ಎಲ್ಲಾ ಸಹ... ಭಂಡಾರಗಳ ಕೆಲಸಗಳನ್ನು... ...ವಾಗಿರುವ, ರೂಲ್ಸಿಗನು... ದಾವಾ ಫಾರಮುಗಳೂ, ಮಂಜೂರಾತಿ ಫಾರಮು... ...ಮುಗಳೂ, ಜಾಮೀನು... ...ಪರ್ ಖರಾರು ಫಾ... ...ತಿ ಪುಸ್ತಕಗಳೂ, ...ಡ್ಜ್ ಶೀಟ್ ಪುಸ್ತ... ...ಯುತ್ತವೆ.

ವಿ. ಪಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.

ವಿಮೆದಾರರಿಗೆ ಕೊಟ್ಟದ್ದು—3291 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.

ಭಂಡವಾಳವು ಹೆಚ್ಚಾದದ್ದು—ನೂರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,78,322 ಜನರಿಗೆ 58ಕೋಟಿ ರೂ.

ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ಕ್ಕಿಂತ ವಿಶೇಷ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದಾಗಿದೆ.

ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಬೆಂಬಲವನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬುದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ಮೆಡಾಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೋ	ಪಾಟ್ನಾ	ಸುಕ್ಕೂರು
ಅಲಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಡೆಲಗಾವ್	ಮಂಡಲೆ	ರಾಯಪುರ	ತಿರುವೆಂಡ್ರಮ್
ಭೋಪಾಲ್	ಕರಾಚಿ	ಮಂಗಳೂರು	ರಾಂಚಿ	ವಿಶಾಖಪಟ್ಣ

52—11

ಕಟುಕಷಾಯ ಮಲೆಜ್ವರಕ್ಕೆ:—ಇದು ಇಂಜಕ್ಷನ್ ಮತ್ತು ಕ್ವಿನೈನು ಸೇವಿಸಿದರೂ ಗುಣವಾಗದಿರುವ ಮಲೆ ಜ್ವರ, ದಿನ ಬಿಟ್ಟು ಬರುವ ಜ್ವರ, 3—4 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ ಮತ್ತು ಜ್ವರಗಡ್ಡೆ ರೋಗದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ. 1—8—0; 3ಕ್ಕೆ ರೂ. 4—0—0; 6ಕ್ಕೆ ರೂ. 7—8—0; 12ಕ್ಕೆ ರೂ. 14

ಮಲೆ ಜ್ವರಕ್ಕೆ ಕಟು ಕಷಾಯ

ಚಂದನಾಸವ:—ಇದು ಪ್ರಮೇಹ ಮೂತ್ರ ಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಹಿಂದಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಸುಡಿ ಹೋಗುವುದು, ಅಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು. ಇವುಗಳಿಗೆ ಪರಮ ಔಷಧ. ಬೆಲೆ ಬಾಟ್ಲಿ 1, 3, 6ಕ್ಕೆ ರೂ 1—4—0 3—8—0; 5—12—0

ರೋಮನಾಶಿನಿ:— ಈ ಪುಡಿಯನ್ನು ನೀರಿನಲ್ಲಿ ಕಲಸಿ ಸ್ನಾನದಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಹೋಗುವುದು. ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ. 1, 1 ಡಜನಿಗೆ 3—8—0

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆಭಾರ, ಕಣ್ಣುರಿ, ಕಿವಿಯಿಂದ ಕೀವು ಸೋರುವುದು ... ಕಣ್ಣು ನೋವು, ಅತಿಸ್ವಾಪ ಇದ್ದೆ ಬಾಧಿಸುವುದು, ನೆನಪು ಶಕ್ತಿ ಕುಂದಿಹೋಗುವುದು, ಇವುಗಳೆಲ್ಲ ಮಂದಿಗೆ ಗುಣಮಾಡುತ್ತದೆ. ... ಉದುರುವ ಕೂದಲನ್ನು ನಿಲ್ಲಿಸಿ ... ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಉದುರಿದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಬೆಲೆ ಸೀಸೆಗೆ ರೂ. 1, 3 ಸೀಸೆಗೆ 2—10—0. ಒಂದು ದೊಡ್ಡ ಸೀಸೆಗೆ ರೂ. 2, 3 ಸೀಸೆಗಳಿಗೆ 5—8—0

ವಿಳಾಸ:—ಮನೋಲ್ಲಾಸಿನಿ ಕಂಪೆನಿ,

52—51 ಕಟಿಲಾಗು ಕರಾ ಮೋಡಿ 9. ಮಂಗಳೂರು.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,

52—18 **ಗಿರಿಗಾಂವ, ಮುಂಬಯಿ.**

Printed & published by M. M. Ganapathy at "Kodagu" Press Mercara for "Kodagu" Ltd.

ಗೊಳಿಸಿದರು ಕಡನಂತರ ಹುದಾರಿ ಮೆ. ಸುಬ್ಬರಾಯರು ಪಯೂರ ಧ್ವಜದ ಕಥೆಯನ್ನು ಹೇಳಿದರು

ಕಡೆಗೆ ಸ್ವಾಮಿ ಶಾಂಭವಾನಂದರವರು ಅತಿಥಿ ಅಭ್ಯಾಗತರಿಗೂ, ಉತ್ಸವ ಕಾರ್ಯಕ್ಕೆ ನೆರವಾದ ಸರ್ವರಿಗೂ ವಂದನೆಗಳನ್ನರ್ಪಿಸಿದ ನಂತರ ಮಂಗಳವೆಂದು, ಜಯಘೋಷಿಸುತ್ತ ಜನಸ್ತೋಮವು ಅವರವರ ಮನೆಗೆ ತೆರಳಿದರು.

ಇದೇ ಹಗಲು ರಾತ್ರಿಯಲ್ಲಿ ಸ್ಥಳೀಕ ಮತ್ತು ವೀರಾಜಪೇಟೆಯ ಸ್ವಯಂ ಸೇವಕರು ಓಡಾಡಿ ಕೆಲಸ ನಡಿಸುವದೊಂದು ಆನಂದ ನೋಟವಾಗಿತ್ತು. ಅವರ ಪ್ರಮುಖ ಮೆ. ಎನ್. ಸಿ. ಪೊನ್ನಪ್ಪನವರು ನಗುಮುಖದಿಂದ ಅತ್ಯಂತ ಸಡಗರದಿ ಪ್ರತಿಯೊಬ್ಬನಿಗೂ ತಕ್ಕ ಉಪಚಾರವನ್ನು ನೀಡುವದೊಂದು ಬೆಡಗು. ಹೆಂಗಸರ ಮತ್ತು ಮಕ್ಕಳ ಕ್ಷೇಮದ ಕಡೆ ಪ್ರತ್ಯೇಕ ನಿಗ ಇಡುತ್ತಿದ್ದರು.

ಅಪೇಕ್ಷೆಯಿಂದ ಜನ ಸಂದಣಿಯೂ, ಸರ್ವರೂ ಸಾವಧಾನ ಚಿತ್ತದಿಂದ ಕಾರ್ಯಗಳಲ್ಲಿ ಭಾಗಿಗಳಾಗಿದ್ದದನ್ನು ನೋಡಿದರೆ ಭಾರತ ಧೀರಾತ್ಮರ ಉಪಾಸನೆಯು ಬಲಗೊಂಡಲ್ಲಿ ಈ ನಾಡಿನಲ್ಲಿ ಈಗಾಗಲೇ ಹಿಂದೂ ಧರ್ಮದ ಬೇಬಳಾಸವಾದ ಅದ್ವೈತ ತತ್ವವು ಮೊಳೆಗೆ ಗೊಂಡಿದೆಯೆಂದು ಹೇಳಬಹುದು.

'ನೋಡಿದವ'



ಫೋಟೋ ಕ್ಯಾಮರಾ.

ಈ ಕ್ಯಾಮರಗಳಲ್ಲಿ ಬಿಬ್ಬರ ಸಹಾಯವಿಲ್ಲದೆ ಫೋಟೋಗಳನ್ನು ತೆಗೆಯಬಹುದು. ಈ ಕ್ಯಾಮರಾ ಒಂದು ಇದ್ದರೆ ಬೇಕಾದವರಿಗೆ ಫೋಟೋ ತೆಗೆದು ಹಣ ಸಂಪಾದನೆ ಮಾಡಬಹುದು. ಪೋಸ್ಟ್ ಕಾರ್ಡಿನ ಸೈಜಿನಲ್ಲಿ ಫೋಟೋಗಳನ್ನು ತೆಗೆಯಬಹುದು. ಫೋಟೋ ತೆಗೆಯುವದನ್ನು ಕಲಿತುಕೊಳ್ಳಬೇಕಾಗಿಲ್ಲ. ಕ್ಯಾಮರಾ ಜೊತೆಯಲ್ಲಿಯೇ ಫೋಟೋ ತೆಗೆಯುವ ವಿಧಾನವನ್ನೂ ಕಳುಹಿಸುವೆವು.

ಈ ಕ್ಯಾಮರವನ್ನು ತರಿಸಿಕೊಳ್ಳುವವರಿಗೆ 3 ವರ್ಷಗಳ ಗ್ಯಾರಂಟಿ ಇರುವ ಟೈಂಪೀಸು ಒಂದನ್ನು ಇನಾಮಾಗಿ ಕೊಡುವೆವು. ಬೆಲೆ 1ಕ್ಕೆ ರೂ. 4—8—0.

M. Leo & Co. 168 China Bazar
12—8 Madras.

ಪುತ್ರ ಸಂತಾನದ ಎಣ್ಣೆ.

ಈ ಎಣ್ಣೆಯು ಬಹಳ ದೊಡ್ಡ ಪಂಡಿತರಿಂದ ತಯಾರಿಸಿದ್ದು. ಹೆಂಗಸರಿಗೆ ಅನೇಕ ಕಾರಣಗಳಿಂದ ಗರ್ಭವು ನಿಲ್ಲುವುದಿಲ್ಲ. ಕೆಲವರಿಗೆ 3—4 ತಿಂಗಳ ಕಾಲ ನಿಂತು ನಂತರ ಹೋಗಿ ಬಿಡುವದು. ಅಂಥಾ ಹೆಂಗಸರು ಈ ಎಣ್ಣೆಯನ್ನು ೧೫ ದಿನಗಳು ಸೇವಿಸುವದರಿಂದ ಗರ್ಭವು ನಿಂತು ಪುತ್ರ ಸಂತಾನವಾಗುವುದು. ಕೆಲವು ಹೆಂಗಸರಿಗೆ ಮುಟ್ಟಾಗುವ ಸಮಯದಲ್ಲಿಯೂ ಮುಟ್ಟಾದ ನಂತರವೂ ಉಂಟಾಗುವ ಹೊಟ್ಟೆ ನೋವು ಮುಂತಾದುವುಗಳನ್ನು ಖಂಡಿತ ಗುಣಪಡಿಸುವದು. ಈ ಎಣ್ಣೆಯನ್ನು ದೊಂಬಾಯಿ, ಮದರಾಸು ಆಸ್ಪತ್ರೆಗಳಲ್ಲಿ ಮಕ್ಕಳಿಲ್ಲದವರು ಉಪಯೋಗಿಸಿ ಪುತ್ರ ಸಂತಾನವನ್ನು ಪಡೆದಿರುವರು. ಒಂದು ಬಾಟ್ಲಿಯನ್ನು ತರಿಸಿ ಪರೀಕ್ಷಿಸಿರಿ. ಉಪಯೋಗಿಸುವ ವಿಧಿ ಔಷಧದ ಜೊತೆಯಲ್ಲಿ ಕಳುಹಿಸುತ್ತೇವೆ.

ಕ್ರಯ ಬಾಟ್ಲಿ 1ಕ್ಕೆ 2—8—0

K. Nadhamuni & sons.
12—8 108 China Bazar Madras.

ಬಾಲಾರ್ಕಮಧು.

ಬಾಲಾರ್ಕಮಧು ಮಕ್ಕಳಿಗೆ ಕೊಡುವುದರಿಂದ ಶಕ್ತಿಯೂ ಆರೋಗ್ಯವೂ ಹೆಚ್ಚುವುದು. ಇದು ಮಧುರವಾಗಿದೆ. ಬೆಲೆ ಶೀಸೆ 1ಕ್ಕೆ 0—12—0 ಟಿ. ಖ. 0—12—0.



(Spleen Lever enlargement) ಎಂಬ ಮಕ್ಕಳ ಭಯಂಕರ ಗಡ್ಡೆರೋಗ—ಪ್ಲೀಹ—ಪಿತ್ತಕೋಶದ ಗಡ್ಡೆಗೆ ಚಕ್ರಬಿಂದು. ಚಕ್ರಕಲ್ಪ—ಚಕ್ರಚೂರ್ಣ—ಚಕ್ರ ಪ್ರಭಾ—ಈ ನಾಲ್ಕು ಮಹೌಷಧಗಳಿವೆ. ಸಾವಿರಾರು ಮಕ್ಕಳ ಪ್ರಾಣವನ್ನು ಉಳಿಸಿವೆ. ನಾಲ್ಕು ಔಷಧಗಳು ಸೇರಿ 1 ತಿಂಗಳ ಔಷಧದ ಬೆಲೆ 3—0—0. ಟಿ ಖ. 0—8—0. ಏಜೆಂಟರು ಬೇಕಾಗಿರುವರು

ಪಿ. ಎ. ಮುನ್. ಶ್ರೀನಿವಾಸರಾವ್,
ವೈ. ವಿ. ಆಯುರ್ವೇದ ವಿಶಾರದ,

ಬ್ರಾಂಚ್ ಆಫೀಸ್. ಉಡುಪಿ. S. K.	Spleen & Lever ಸ್ಪೆಶಲಿಸ್ಟ್. ಎಂ. ವಿ. ಪ್ರಸಾದಿಕ ಔಷಧಾಲಯ,
52—17	ಶಿಮೊಗಾ. (ಮೈಸೂರು ಸೀಮೆ)

ಗಮನಿಸಿರಿ! ಪರೀಕ್ಷಿಸಿರಿ!

ಅಂದವಾಗಿ ಫೋಟೋ ತೆಗೆಯುತ್ತಾರೆ.

ಧೀರ್ಘ ಕಾಲ ಬಾಳಿಕೆ ಬರುತ್ತೆ.

ಹದಿನಾಲ್ಕು ವರ್ಷಗಳಿಂದ ಮೈಸೂರಿನಲ್ಲಿ ಹೆಸರುವಾಸಿಯಾದ ಮೆಸರ್ಸ್ ಶಂಕರ್ & ಕಂಪೆನಿಯವರು ಕೊಡಗು ದೇಶದ ಭಗಿನಿ ಬಾಂಧವರ ಸಲುವಾಗಿ ಮಡಿಕೇರಿಯಲ್ಲಿ ಬ್ರಾಂಚ್ ಓಪನ್ ಮಾಡಿರುತ್ತಾರೆ.

ಇಲ್ಲಿ ದೀರ್ಘಕಾಲ ಬಾಳಿಕೆ ಬರುವಂತೆ ಬೇಕಾದ ಸಮೂನೆಯಲ್ಲಿ ಫೋಟೋ ತೆಗೆಯುವುದು. ಫೋಟೋ ಎನ್ಲಾರ್ಜ್ ಮಾಡುವುದು. ಆಯಿಲ್ ಪೈಂಟಿಂಗ್ ಕೆಲಸಗಳು. ರಬ್ಬರ್ ಮೊಹರುಗಳ ಕೆಲಸಗಳು ಸದಾ ನಡೆಯುತ್ತವೆ. ಕ್ಯಾಮರಾ ಮೊದಲಾದ ಫೋಟೋ ಕೆಲಸದ ಎಲ್ಲಾ ಸಾಮಾನುಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ. ಅಮೆಚ್ಯೂರ್ಸ್ ಕೆಲಸಗಳು ಅಂದವಾಗಿ ತಯಾರಿಸಿ ಸಕಾಲಕ್ಕೆ ಕೊಡುತ್ತೇವೆ.

ದರಗಳ ಬಗ್ಗೆ ವಿಚಾರಿಸಿರಿ. ಒಂದಾವರ್ತಿ ಪರೀಕ್ಷಿಸಬೇಕಾಗಿ ವಿನಂತಿ

ಶಂಕರ್ & ಕಂಪನಿ
ಕಾರೊನೇಶನ್ ವಾರ್ಡ್,
12—6. ಮಡಿಕೇರಿ.



ಕೋವಿಗಳು, ಕತ್ತಿಗಳು, ಬಚೀಗಳು, ಕೋಟಿಗಳು, ಕೇಪುಗಳು, ಮದ್ದು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

ಕಾರ್ಡು ಬರೆದರೆ ಇಗಿನ ಕ್ಯಾಟಲಾಗು ಮಫತಿಯಾಗಿ ಕಳುಹಿಸಲ್ಪಡುವುದು.

GOOLAMHUSAIN ALLIBHOY & SONS.
Largest Importers of Firearms and Ammunition
Cheapest priced firm in India,
24—10 210 Abdul Rehiman Street, BOMBAY.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಉತ್ತಮ ತರಹ ಒಂದು ಸೆಟ್ ಜರ್ಮನ್ ರೀಡ್ಸ್ ಹಾಕಿರುವ ಸಿಂಗಲ್ ರೀಡ್ಸ್ ಸ್ಟ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 20—0—0

" ಮತ್ತು 22—8—0

ಬಹಳ ಉತ್ತಮ ತರಹ ಹಾರ್ಮೋನಿಯಂ

" 1ಕ್ಕೆ ರೂ. 25—0—0

" ಮತ್ತು 27—8—0

ಬಹಳ ಉತ್ತಮ ತರಹದ್ದು, ದಪ್ಪ ಪಿಯಾನೋದಂತೆ ಕೇಸಿನ ಮೇಲೆ ಪೂರ್ತಿ ... ಳುಳ್ಳ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ ರೂ. 27—8—0

4. ಖಾತ್ರಿಯೂ, ಬಲದೊಡನೆಯೂ, ಸುಸ್ವರವುಳ್ಳದ್ದೂ, ಅನೇಕ ವರ್ಷಗಳ ವರೆಗೆ ಬಾಳಿಕೆ ಬರತಕ್ಕದ್ದೂ ಆದ ಹೊಸದಾಗಿ ಸಪ್ಲೈ ಆಗಿರುವ ಫ್ರೆಂಚ್ ರೀಡ್ಸ್ ಸಮಾನ ಇರುವ ನಮ್ಮ ಹೆಸರಿನ ರೀಡ್ಸ್ ಹಾಕಿರುವ "ಸಿದ್ಧಪ್ಪ ... ಫ್ಲ್ಯಾಟ್" ಸಿಂಗಲ್ ರೀಡ್ಸ್ ... ಸ್ಟ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 42—8—0

5 ಉತ್ತಮ ತರಹ ೭ ಸೆಟ್ ರೀಡ್ಸ್ ಹಾಕಿರುವ, ದಪ್ಪ ಕೇಸಿನ ಮೇಲೆ ಪೂರ್ತಿ ಡಬ್ಬಲ್ ರೀಡ್ಸ್ ಹಾರ್ಮೋನಿಯಂ ... ಉತ್ತಮ ತರಹ 2 ಸೆಟ್ ... ಮೇಕ್ ರೀಡ್ಸ್ ಹಾ... ಕೈನಿಂದಾಗಲೀ ... ಗಲೀ ಬಾರಿಸ... ತಯಾರಿಸಿರು... ಡಬ್ಬಲ್ ಹಾರ್ಮೊ... fancy plate

52—28

ನಮ್ಮ ಟಿಂಬರ್ ಡಿಪೋನಲ್ಲಿ ಕಟ್ಟಡಗಳಿಗೂ, ಫರ್ನಿಚರ್ ತಯಾರಿಸಲೂ ಬೇಕಾದ ಎಲ್ಲಾ ನಮೂನೆ ನಾಟಾನ್ನು ಸುಲಭ ದರದಿಂದ ವಿಕರಗಿಟ್ಟಿರುವುದಲ್ಲದೇ, ಗಿರಾಕಿಗಳು ಅಪೇಕ್ಷಿಸುವ ಸೈಜಿಗೆ ಕುಯಿಸಿಯೂ ಬಿಯಾಯಿತಿ ದರದ ನಪ್ಪೈ ಮಾಡುತ್ತೇವೆ. ಹೆಚ್ಚಿಗೆ ವಿಷಯಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಜನರಲ್ ಅಷ್ಯೂರೆನ್ಸ್ ಸೊಸೈಟಿ.

ಅ ಜ ಮಿ ಎ ರ್.

ನಮ್ಮ ಆಯುಷ್ಯವಿಮಾದ ಪಟ್ಟಿಯೇ ನಮ್ಮ ಅಭಿವೃದ್ಧಿಯನ್ನು ವ್ಯಕ್ತಗೊಳಿಸುತ್ತದೆ.

ವರ್ಷ	ಮೇಲ್ಪಟ್ಟ ವರ್ಷಾದಾಯ	ಮೇಲ್ಪಟ್ಟ ಮೂಲಧನ	ಖರ್ಚು ವಾವತಿನ ಶೇಕಡ
1911	46,248	49,442	82.9
1921	2,93,627	6,53,350	43 2
1931	12,30,000	4 5,00 000	28 2

ಬೋನಸ್ಸು.

ಟರ್ಮ್ ನಷ್ಟ ದೊರಕುವ ಜೀವಾವಧಿ ಪಾಲಿಸಿಗಳ ಮೇಲೆ ವರ್ಷ ಒಂದಕ್ಕೆ ಶೇಕಡ 22½

ಚೆನ್ನಾಗಿ ಕೆಲಸಮಾಡಿ ಅಭಿವೃದ್ಧಿ ಸ್ಥಿತಿಯಲ್ಲಿರುವ ಈ ಸೊಸೈಟಿಯಲ್ಲಿ ವಿಮೆ ಮಾಡಿ ಕಡಮೆ ಪ್ರೀಮಿಯಂ ಪಾವತಿ ಮಾಡುವ ಸೌಲಭ್ಯ ಹೊಂದಿ ಅಥವಾ ಈ ಕಂಪೆನಿಯ ಏಜಂಟರಾಗಿ ಕೆಲಸಮಾಡಿ ಉತ್ತಮ ಕಮಿಶನ್ ದರದ ಪ್ರಯೋಜನ ಹೊಂದಿ.

ಹೆಚ್ಚು ವಿಚಾರಗಳಿಗೆ ಈ ವಿಳಾಸಕ್ಕೆ ಬರೆಯಿರಿ:—

ಎ. ರಾಮಚಂದ್ರರಾವ್,
ಸುಪರಿಂಟೆಂಡೆಂಟ್,
52—3 ಮಿಂಟೋ ಆಸ್ಪತ್ರೆ ಬಳಿ,
ಬೆಂಗಳೂರು.

ಸ್ವದೇಶೀ ಶೀರೆಗಳು.

ಈ ಶೀರೆಗಳನ್ನು ಹೆಸರುವಾಸಿ ಹೊಂದಿದ ದೊಡ್ಡ ಕಂಪೆನಿಯವರಿಂದ ತಯಾರಿಸಿದ್ದು, ೧೮ ಮೊಳ ಉದ್ದವೂ, ೫॥ ಮೊಳ ಅಗಲವೂ ಇರುವುದು. ಇವನ್ನು ಗಟ್ಟಿಯಾದ ಸಣ್ಣ ನೂಲಿನಿಂದಲೂ, ರೇಶ್ಮೆಯಿಂದಲೂ ತಯಾರಿಸಿದೆ. ಅಂದವಾದ ಅಂಚೂ ಸುಂದರವಾದ ಸೆರಗೂ ಇರುವದು. ಇವು ಯಾವಾಗ್ಲೂ ರೇಶ್ಮೆಯಂತೆ ಇರುವವು. ಎಲ್ಲಾ ಬಣ್ಣಗಳಲ್ಲಿಯೂ ಸಿಕ್ಕುವವು. ಎಲ್ಲಾ ಬಣ್ಣಗಳಲ್ಲಿಯೂ ಸಿಕ್ಕುವವು. ಮತ್ತು ಎಲ್ಲಾ ಋತುಗಳಿಗೂ ಲಾಯಕಾದದ್ದು. ಈ ವಾರದಲ್ಲಿ ಕೊಳ್ಳುವವರಿಗೆ ೭ ಕಲ್ಲಿನ ವಜ್ರದ ಬೆಂಡೋಲೆ ಜತೆ ಒಂದನ್ನು ಇನಾಮಾಗಿ ಕೊಡುತ್ತೇವೆ. ಕ್ರಯ ೧ಕ್ಕೆ ೩—೮—೦.

ಬಿಲಾಸ್—ಕೆ. ಸಾಧುಮಣಿ ಅಂಡ್ ಸನ್ಸ್,
12—6 168 ಚೈನಾ ಬಜಾರ ಮದರಾಸು,

ಕರ್ಣಾರ್ಜುನರಿಲ್ಲದೆ ಭಾರತವೇ?

ಅರ್ಡ್ಸ ನ್ಯಾಂಕಿಗಳ ವರದಿ ಸಿದ್ಧವಾಗಿ ಪಾರ್ಲಿಮೆಂಟಿಯ ಮಂತ್ರಿಮಂಡಲದ ಮುಂದೆ ಇದೆಯೆಂದೂ, ತೃತೀಯ ಚಕ್ರಗೋಷ್ಠಿಯೊಂದನ್ನು ನಡೆಸಿದ ಕೂಡಲೇ ಸರ್ ಸ್ಯಾಮ್ಯುವೆಲ್ ಹೋರರು ಪಾರ್ಲಿಮೆಂಟಿನ ಮುಂದೆ 'ಇಂಡಿಯಾ ಮಸೂದೆ'ಯೊಂದನ್ನು ತರುವರೆಂದೂ ತಿಳಿದು ಬರುತ್ತದೆ. ಆ ಮ... ...ಸೂಚನೆಗಳೆಲ್ಲ ಶೀಲಿಸಿದ್ದಾಯಿತಂತೆ. ಸ್ವಾತಂತ್ರ್ಯ... ...ಹೇಗಿದೆಯೋ, ಯಾರನ್ನು ತೃಪ್ತಿಗೊಳಿಸುತ್ತದೇ ಬಲ್ಲ. ಇಲ್ಲ; ಬ್ರಿಟಿಷ್ ರಾಜನೀತಿ ವಿಶಾ... ...ರಗಳು ದೇವರಿಗೂ ತಿಳಿಯುವ ಹಾಗಿಲ್ಲ! ಅದ... ...ಭಕ್ತರು, ಸಾಮ್ರಾಜ್ಯ ಧುರಂಧರರು ...ಗಾಮಿಗಳನ್ನು ಸೃಷ್ಟಿ ಹಾಕಿಬಿಟ್ಟವು. ...ವಿಶೇಷವಾಯಿತು." ಎಂದು ಒಡೆಯರು ...ಸರವಾಗಿ ಒಂದು ಪಸೂದೆಯನ್ನು ರೂ... ...ನೋಡಿದರೆ ಪಾಪೋತ್ಕರ್ಷವಾಗುತ್ತ... ...ಒಪ್ಪುವವರು ಯಾರೆಂಬ ಪ್ರಶ್ನೆ...

...ವರದಿ ಮುಗಿಯಿತು. ವರ... ...ಶಂಪೆ, ಚಿಂತಾಮಣಿ ... ...ಕಾ ಸದಸ್ಯರ ಅಭಿಪ್ರಾ... ...ವ್ಯಕ್ತಪಡಿಸಿರುವ ಫಾ... ...ಸಮಿತಿ' ಎಂದು ಹೆಸರು ...ಇಂಗೆ ಪ್ರೋಟಿನ ಅಧಿ... ...ಯೋ ಈ ಸಮಿತಿ ...ಬಂದಿರುವುದರಲ್ಲಿ ...ತನಕದಲ್ಲಿ 100ಕ್ಕೆ 4 ...ಕಟವಾದಂದು ಪೇ... ...ನ್ನ 100ಕ್ಕೆ 14 ... ...ಸಿದ್ಧ... ...ಮುಂದಿಗೆ ...ಇದರು ...

...ಸಿದರಂತೆ. ಆದರೆ ಶ್ರೀಮತಿ ಸುಬ್ಬರಾಯನ್‌ರವರು ತಮ್ಮ ವಾದವನ್ನು ಚೆನ್ನಾಗಿ ಸಮರ್ಥಿಸಿದ ಹಾಗಿದೆ. ಇದೆಲ್ಲಾ ಹಾಗಿರಲಿ. ಸಮಿತಿಯವರು (1) ಒಂದೇ ಶಾಸನ ಸಭೆ ಇರಬೇಕೆ; ಎರಡು ಶಾಸನ ಸಭೆಗಳಿರಬೇಕೆ ಎಂಬ ಪ್ರಶ್ನೆಯನ್ನು ಹಾಗೆಯೇ ಬಿಟ್ಟುಬಿಟ್ಟರು. (2) ಸಂಯುಕ್ತ ಚುನಾವಣೆಯ ಅನುಸರಿಸಬೇಕೆ; ಪ್ರತ್ಯೇಕ ಚುನಾವಣೆಯ ನೀತಿಯನ್ನು ಅನುಸರಿಸಬೇಕೆಂಬ ಪ್ರಶ್ನೆಯನ್ನು ಸಹ ಬಿಟ್ಟಿಲ್ಲ.

ಮುಖ್ಯವಾಗಿ ಏನು ಮಾಡಬೇಕೆಂಬೋ ಅದನ್ನು ಬಿಟ್ಟು ಉಳಿದ ಚಿಲ್ಲರೆ ವಿಚಾರಗಳನ್ನೆಲ್ಲಾ ನೋಡಿ, ಪರಸ್ಪರ ಹೊಗಳಿಕೊಂಡು ಸುಟಿ ಹಾಡಿದರು.

ಈ ಮಧ್ಯೆ ನರೇಂದ್ರ ಮಂಡಲವು ಅರಗದ ಮೇಲೆ ಅರಗ ಹಾಕುತ್ತಿದೆ. ನರೇಂದ್ರರಲ್ಲೇ ಏಕಾಭಿಪ್ರಾಯವಿಲ್ಲ. ಫೆಡರೇಶನಿಗೆ ಮೊದಲು 'ಜಸ್ತು' ಅಂದವರು ಸಹ ಈಗ ಅಲ್ಲದ ಸಲ್ಲದ ಆಕ್ಷೇಪಗಳನ್ನು ಮುಂದಿಡುತ್ತಿದ್ದಾರೆ. ಆದರೂ ನರೇಂದ್ರರು ಜೋಯಿಂಟ್ ಸಮಿತಿಯ ಮುಂದೆ ತಮ್ಮ ತಮ್ಮ ಹಾನಿ, ವೃದ್ಧಿ, ಸ್ಥಾನ, ಮಾನ ಕತೆಯೋಳ ಏನೇನೋ ವಹಿಸುತ್ತಿದ್ದಾರೆ.

ಸಾಮಾನ್ಯವಾಗಿ ಇದು ಈಗಿನ ವಿದ್ಯಮಾನಗಳು. ಪಂಚತಂತ್ರದ 'ದ್ವಿಮುಖಿ ನೀತಿ' ಯಲ್ಲಿ ಒಂದರ ಕತೆ ಇದು. ಇನ್ನೊಂದರ ಕತೆಯಂತೂ ಪ್ರೋಲೀಸರ ಅರಳಿಗೂ. ಸೆರೆಮನೆಗಳೂ, ನ್ಯಾಯಸ್ಥಾನಗಳೂ ಘೋಷಿಸುತ್ತಿವೆ. ದೆಹಲಿಯ ಕಾಂಗ್ರೆಸ್ ಅಧಿವೇಶನವು ರಾಷ್ಟ್ರಬಲವನ್ನು ವ್ಯಕ್ತಗೊಳಿಸುತ್ತದೆ. ಮದನಮೋಹನ ಮಾಳವೀಯರು ಸರ್ ಸ್ಯಾಮ್ಯುವೆಲ್ ಹೋರರಿಗಿತ್ತ ಉತ್ತರವು ರಾಷ್ಟ್ರಸಂಕಲ್ಪವನ್ನು ಸೂಚಿಸುತ್ತದೆ. ಕಾಂಗ್ರೆಸ್ ಇಲ್ಲದೆ ಸಂಧಿಯೇ? ಶಾಂತಿಯೇ? ಗಾಂಧಿಜೀಯವರಿಲ್ಲದೆ ಸ್ವರಾಜ್ಯ ವ್ಯವಸ್ಥೆಯ ರಚನೆಯೇ? ಕರ್ಣಾರ್ಜುನರಿಲ್ಲದೆ ಮಹಾಭಾರತವೇ? ಇದೆಂತಹ ಹುಚ್ಚು! ಸರ್ ಸ್ಯಾಮ್ಯುವೆಲ್ ಹೋರರು ತಾವು ಕಲಿಯುಗದ ಚಾಣಕ್ಯರೆಂದೂ, ಸುಮಂತ್ರರೆಂದೂ, ಯೋಗಂಧರಾಯಣರೆಂದೂ ಹೆಮ್ಮೆಗೊಂಡು ಮಾಟುತ್ತಿರಬಹುದು. ಆದರೆ ಮೂವತ್ತೈದು ಕೋಟಿ ಭಾರತೀಯರು, ಆತ್ಮ ಸಾಕ್ಷಾತ್ಕಾರ ಪಡೆದಿರುವ ಭಾರತೀಯರು ಪೂರ್ಣ ಸ್ವಾತಂತ್ರ್ಯಗಳಿಸುವ ವರೆಗೂ ತಟಸ್ಥರಾಗುವ ಹಾಗಿಲ್ಲವೆಂಬುದನ್ನವರು ತಿಳಿಯಲಿ.

ಪಿ. ಕೆ.

ನಮ್ಮ ವ್ಯಾಪಾರ ಸ್ವಾತಂತ್ರ್ಯ.

ಬ್ರಿಟಿಷ್ ರಾಜ್ಯ ಮಂಡಳಿಯಲ್ಲಿ ಸ್ವತಂತ್ರವಾದ ಅನೇಕ ದೇಶಗಳಿವೆಯಷ್ಟೆ? ಇವುಗಳಲ್ಲಿ ಕೆನಡ, ಆಸ್ಟ್ರೇಲಿಯ, ಆಫ್ರಿಕ ಮೊದಲಾದುವು ಸರ್ವ ಸ್ವತಂತ್ರವಾಗಿವೆಯೆನ್ನಬಹುದು. ಹಿಂದೂದೇಶ ಸಿಂಹಳಗಳಂಥವು ಸಂಪೂರ್ಣ ಪರತಂತ್ರವಾಗಿವೆ. ಆದರೆ ಮುಂದೆ ಎಂದಾದರೊಂದು ದಿನ ಇವೂ ಸ್ವತಂತ್ರ ಪ್ರತಿಷ್ಠೆಯನ್ನು ಹೊಂದುವವು ಎಂದು ಆಳರಸರು ನಮ್ಮ ಆಸೆಯನ್ನು ಬೆಳೆಸುತ್ತಿದ್ದಾರೆ. ಪರತಂತ್ರ ದೇಶಗಳಾಗಲೀ, ಸ್ವತಂತ್ರ ದೇಶಗಳಾಗಲೀ, (ಅಯಾತ ನಿರ್ಯಾತವಾಗಿ) ವ್ಯಾಪಾರದಿಂದ ಬರುವ ಹೋಗುವ ಸಾಮಾನುಗಳಲ್ಲಿ—ಬ್ರಿಟಿಷ್ ರಾಜ್ಯಮಂಡಲದಲ್ಲಿ ಆಗುವ ವಸ್ತುಗಳಿಗೆ ಹೆಚ್ಚು ಪುರಸ್ಕಾರವನ್ನು ಕೊಡಬೇಕೆಂಬ ತತ್ತ್ವವು ಬಳಕೆಯಲ್ಲಿರುವುದು. ತಮ್ಮ ತಮ್ಮೊಳಗೆ ವ್ಯಾಪಾರ ಮಾಡಿ, ಲಾಭವನ್ನು ತಮ್ಮೊಳಗೇ ಹಂಚಿಕೊಳ್ಳುವ ವ್ಯಾಪಾರ ಮಂಡಲದಂತೆ ಈ ಸಾಮ್ರಾಜ್ಯಮಂಡಲವು ವರ್ತಿಸುತ್ತಿದೆ. ಉದಾಹರಣೆಗಾಗಿ ಇಂಗ್ಲೆಂಡಿನಲ್ಲಿ ಏನಾದರೊಂದು ವಸ್ತುವಿದ್ದರೆ, ಅದು ಹಿಂದೂದೇಶಕ್ಕೆ ಬರುವುದಿದ್ದರೆ ಇಲ್ಲಿಯ ಸರ್ಕಾರವು ಅದರ ಮೇಲೆ ಕಡಿಮೆ ಸುಂಕವನ್ನು ಹೊರಿಸುವುದು. ಅದೇ ವಸ್ತು ಇತರ ದೇಶದಿಂದ ಎಂದರೆ ಸಾಮ್ರಾಜ್ಯ ಬಹಿರ್ಭೂತ ದೇಶಗಳಿಂದ ಬಂದರೆ ಸುಂಕ ಹೆಚ್ಚಿರುವುದು. ಈ ನ್ಯಾಯವು ಸಾಮಾನ್ಯವಾಗಿ ಆಚರಣೆಯಲ್ಲಿದೆ. ಕೆನಡ ಆಸ್ಟ್ರೇಲಿಯಗಳಂಥಾ ಸ್ವತಂತ್ರ ರಾಜ್ಯಗಳಾದರೆ, ತಮ್ಮ ಪೆಕ್ಷೆ ದೇಶದೊಡನೆ ನಿರ್ದಾಕ್ಷಿಣ್ಯವಾಗಿ ಸೆಣಸಾಡಿ ಅದಕ್ಕೆ ಕೊಡುವಂಥಾ ಗೌರವವನ್ನು ಅದರಿಂದ ಕಿತ್ತುಕೊಳ್ಳುವವು. ಹಿಂದೂ ದೇಶಕ್ಕೆ ಇನ್ನೂ ಆ ಅಧಿಕಾರವು ಸಮಗ್ರವಾಗಿ ಬರಲಿಲ್ಲ. ಆದುದರಿಂದ 'ಇಂಪೀರಿಯಲ್ ಪ್ರಿಫರೆನ್ಸನ್ನು' ಎಂದರೆ ಸಾಮ್ರಾಜ್ಯ ವಸ್ತುಗಳಿಗೆ ಪ್ರಧಾನ ಮರ್ಯಾದೆ ಕೊಡುವುದನ್ನು ಹಿಂದೂ ದೇಶವು ಒಪ್ಪಿಕೊಂಡರೆ—ಆದರೆ ತತ್ಕಾಲಕ್ಕೆ ಅಪ್ರಯೋಜನಕಾರಿಯಾಗಬಹುದಾದರೂ—ಮುಂದೆ ಅದು ನಮಗೆ ಅನಿಷ್ಟಕರವಾಗಬಹುದು ಎಂಬುದನ್ನು ನ್ಯಾಯಸಭೆಗಳಲ್ಲಿರುವ ನಮ್ಮ ಸದಸ್ಯರು ಪದೇ ಪದೇ ಡಂಗುರ ಹೊಡೆದು ಹೇಳಿದ್ದಾರೆ. ಗಳಾದರೆಯ ಇಸವಿಯಲ್ಲಿ ಇಂಗ್ಲೆಂಡಿನ ಬಟ್ಟೆ ವಸ್ತುಗಳಿಗೆ ಹಿಂದೂದೇಶದಲ್ಲಿ ಕಡಿಮೆ ಸುಂಕವನ್ನು ಹೊರಿಸಬೇಕೆಂದು ಎಸೆಂಬ್ಲಿಯಲ್ಲಿ ನಿರ್ಣಯವಾದಾಗ, ಶ್ರೀ ಜಯಕರ್ ಪ್ರಭೃತಿಗಳು 'ಇಂಪೀರಿಯಲ್ ಪ್ರಿಫರೆನ್ಸ್' ಹಿಂದೂ ದೇಶಕ್ಕೆ ಸದ್ಯಕ್ಕೆ ಮೆಚ್ಚುಗೆಯಾಗಲಾರದೆಂಬುದನ್ನು ಒತ್ತಿ ಹೇಳಿದರು. ಒಟ್ಟಾವದಲ್ಲಿ ಇನ್ನು ನಡೆಯುವ ಬ್ರಿಟಿಷ್ ಸಾಮ್ರಾಜ್ಯ ಪರಿಷತ್ತು 'ಇಂಪೀರಿಯಲ್ ಪ್ರಿಫರೆನ್ಸ್' ಎಂಬ ಸೂತ್ರವನ್ನು ಸ್ಥಿರಗೊಳಿಸುವ ಉದ್ದೇಶದಿಂದಲೇ ಸೇರುತ್ತಿದೆ. ಹಿಂದೂದೇಶದ ಪ್ರತಿನಿಧಿಗಳನ್ನು ಕೇಳದೆ ನಾವು ವ್ಯಾಪಾರ ವಿಷಯದಲ್ಲಿ ಯಾವ ನಿರ್ಣಯವನ್ನೂ ಮಾಡುವಂತಿಲ್ಲವೆಂದು ಸರ್ಕಾರದ ಪ್ರತಿನಿಧಿಗಳು ಹೇಳಿದ್ದಾರೆ. ಹಿಂದೀ ಪ್ರತಿನಿಧಿಗಳು ಇ... ...ಗಳು 'ಇಂಪೀರಿಯಲ್ ಪ್ರಿಫರೆನ್ಸ್' ಎಂಬೀ ತತ್ತ್ವದಿಂದ ...ಕ್ಕೆ ಈ ಸ್ಥಿತಿಯಲ್ಲಿ ಯಾವ ಕಷ್ಟ ನಷ್ಟಗಳಾಗಬಹುದೆಂಬುದನ್ನು ತಿಳಿದು ಅದನ್ನು ಈ ಸಭೆಯಲ್ಲಿ ವಿರೋಧಿಸಲೇ ಬೇಕು.

ಕೊಡುವ ಕೊಳ್ಳುವ ಅಧಿಕಾರವು ಸ್ವತಂತ್ರರ ಕೈಗೆ ಬಂದರೆ ಮಾತ್ರ ಅದರ ನಿರುಪಯೋಗವಾಗಬಹುದು. ಹಿಂದೀಯರಿಗೆ ವ್ಯಾಪಾರ ಸ್ವಾತಂತ್ರ್ಯವನ್ನು ಎಂದರೆ ತೆರಿಗೆಗಳನ್ನು ಹಾಕುವ ತೆಗೆಯುವ ಅಧಿಕಾರವನ್ನು ಕೊಟ್ಟುಬಿಟ್ಟರೆ—ಮಂಗನು ತನ್ನ ಕೈಯಲ್ಲಿರುವ ಮಾಣಿಕವನ್ನು ಬಿಸುಡುವಂತೆ ಈ ಮಂಗಬುದ್ಧಿಯ ಹಿಂದೀಯರು ನಮ್ಮ ಕಡೆಗೆ ಅನೇಕ ಸೌಕರ್ಯಗಳನ್ನು ಬಿಸಾಡುವರೆಂಬ ಭಾವನೆ ಬ್ರಿಟಿಷರಿಗೂ ಇರುವುದು. ಅದರ ಪಕ್ಷಪಾತದ ಇತರ ಸಾಮ್ರಾಜ್ಯಾಧಿಪರಿಗೂ ಇರುವುದು. ಸರ್ವತೋಮುಖವಾದ ಸ್ವಾತಂತ್ರ್ಯವನ್ನು ಪಡೆಯದೆ ಭಾರತವರ್ಷವು ವ್ಯಾಪಾರ ಪಕ್ಷಪಾತದ ಈ ನೊಗಕ್ಕೆ ಕತ್ತು ನೊಗಲನ್ನು ಕೊಟ್ಟರೆ ಅದರಿಂದ ಅನರ್ಥವಾದೀತು. ಇಲ್ಲಿ ೩೫ ಕೋಟಿ ಪ್ರಜಾ ಸಂಖ್ಯೆ ಇದೆ. ಒಂದಲ್ಲ ಇನ್ನೊಂದು ಅವಶ್ಯಕತೆ ಇದ್ದೇ ಇದೆ. ಇಷ್ಟು ಜನರ ಸುಖ ಸೌಕರ್ಯಗಳಿಗೆ ತಕ್ಕ ವಸ್ತುಗಳನ್ನು ಕಳುಹಿಸಿ ಹಣ ಮಾಡಿಕೊಳ್ಳುವುದು ಯಾರಿಗೆ ಬೇಕಾಗಿಲ್ಲ? ಇದೇನೋ ಸರಿ. ಆದರೆ ತಕ್ಕ ಪ್ರತಿಫಲ ಸಿಕ್ಕದೆ ಕೆನಡ, ಆಸ್ಟ್ರೇಲಿಯ, ದ. ಆಫ್ರಿಕ ಮೊದಲಾದ ದೇಶಗಳಂತೆ ಸ್ವತಂತ್ರವಾಗಿರದ ಈ ದೇಶವು ಈ ಒಂದೇ ಒಂದು ಮಾತ್ರ ಅಧಿಕಾರವನ್ನು ಹೇಗೆ ಮಾರೀತು? ದಕ್ಷಿಣ ಆಫ್ರಿಕವೂ ಬ್ರಿಟಿಷ್ ರಾಜ್ಯ ಮಂಡಲದಲ್ಲಿದೆ; ಹಿಂದೂ ದೇಶವೂ ಇದೆ. ಆದರೆ ಹಿಂದೀಯರು ಆಫ್ರಿಕಕ್ಕೆ ಹೋದರೆ ಕೂಲಿಗಳಾಗಿಯೇ ಜೀವಿಸಬೇಕು; ಕೊಳಗೇರಿಯಲ್ಲೇ ವಾಸಿಸಬೇಕು. ಅಸ್ಪೃಶ್ಯರಾಗಿಯೇ ಸಾಯಬೇಕು. ಇದ್ಯಾವ ನ್ಯಾಯ? ಕೆನಡದಲ್ಲಿಯೂ ಹಾಗೆಯೇ ಭಾರತ ವರ್ಷದ ಧರ್ಮಗಳ ಬಗ್ಗೆ ತಾತ್ಸಾರವಿದೆ. ಇದ್ಯಾವ ನ್ಯಾಯ? ಇಂಥಾ ಅನ್ಯಾಯಗಳು ಹೋಗುವ ವರೆಗೆ—ವ್ಯಾಪಾರ ಸ್ವಾತಂತ್ರ್ಯವನ್ನು ಬ್ರಿಟಿಷ್ ರಾಜ್ಯಮಂಡಲದ ಹಿತಾರ್ಥವಾಗಿ ಪ್ರಯೋಗಿಸಲು ಹಿಂದೂದೇಶಕ್ಕೆ ಸಾಧ್ಯವಾಗದು. ನ್ಯಾಯವೆಂದರೆ ಎಲ್ಲರಲ್ಲಿಯೂ ಇರಬೇಕು. ಹಾಗಲ್ಲದೆ ತಮಗೆ ಅನುಕೂಲವಾದಲ್ಲಿ ನ್ಯಾಯ ನಷ್ಟವಾಗುವಲ್ಲಿ ಅನ್ಯಾಯ ಎಂಬ ತತ್ತ್ವವನ್ನು ಹಿಡಿದುಕೊಂಡು ಹಿಂದೂ ದೇಶವನ್ನು ಮರುಳು ಮಾಡಬಾರದು; ಅಲ್ಲಿಯ ವ್ಯಾಪಾರವನ್ನು ನುಂಗಬಾರದು; ಎಂದು ಈ ರಾಜ್ಯಮಂಡಲದ ನಾಯಕರು ಒಗಡರೆ ಅವರನ್ನು ಪ್ರಾರ್ಥಿಸಬೇಕು.

'ರಾಷ್ಟ್ರಬಂಧು'

ಪತ್ರಪ್ರಪಂಚ.

[ಬಾತ್ಮಿದಾರರು ಪತ್ರದ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ.]

ಶಾರದಾಶ್ರಮ (ಪೊನ್ನಂಪೇಟೆ.)

ಪೊನ್ನಂಪೇಟೆ ಶಾರದಾಶ್ರಮದಲ್ಲಿ ತಾ. 30—4—1930ರಲ್ಲಿ ಶ್ರೀ ರಾಮಕೃಷ್ಣ ಪರಮಹಂಸರವರ ವಾರ್ಷಿಕ ಜಯಂತ್ಯುತ್ಸವವು ಮಿ. ಕೆ. ಹೆಚ್. ರಾಮಯ್ಯ ಬಿ. ಎ. ಬಾರ್-ಎಟ್-ಲಾ ಮೈಸೂರು ಸಹಕಾರ ಸಂಘಗಳ ರಿಜಿಸ್ಟ್ರಾರ್ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರಾತಃಕಾಲ ಶ್ರೀರಾಮಕೃಷ್ಣ ಪರಮಹಂಸರ ಮತ್ತು ಸ್ವಾಮಿ ವಿವೇಕಾನಂದರವರ ಭಾವಚಿತ್ರದೊಡನೆ ಬೀದಿಗಳಲ್ಲಿ ಮೆರವಣಿಗೆಯಾಯಿತು. ನಂತರ 12 ಗಂಟೆಯ ವರೆಗೆ ಹೋಮ, ಆ ಮೇಲೆ ಅಲ್ಲಿ ನೆರೆದವರಿಗೆಲ್ಲ ಪ್ರಸಾದ ವಿನಿಯೋಗವಾಯಿತು. 3000ಕ್ಕೆ ಮೀರಿದ ಜನಸ್ತೋಮವು ನೆರೆದಿತ್ತು.

ಮೂರು ಗಂಟೆಯಿಂದ ಸಭೆ ನೆರೆಯಿತು. ಕೊಡಗು ಕಮಿಷನರಾದ ಮಿ. ಮೆಕ್ ಎವರ್ ದೊರೆಗಳೂ, ರಾಮಕೃಷ್ಣ ಸಂಸ್ಥೆಯ ಕೆಲವು ಸ್ವಾಮಿಗಳೂ, ಮೈಸೂರು ನಗರದ ಪ್ರಖ್ಯಾತ ವರ್ತಕರೂ ದಾನಶೀಲರೂ ಆದ ಸಾಹುಕಾರ ಚನ್ನಯ್ಯನವರೂ, ಮೈಸೂರಿನ ಇನ್ನೂ ಅನೇಕ ಮಹನೀಯರೂ ಮತ್ತು ಕೊಡಗಿನ ಕೆಲವು ಮುಖ್ಯ ಅಧಿಕಾರಿಗಳೂ ಹಾಜರಿದ್ದರು.

ಮೈಸೂರು ಸರ್ಕಾರದ ಕನ್ನಡ ಟ್ರಾನ್ಸ್‌ಲೇಟರ್ ಮಿ. ಸಿ. ಕೆ. ವೆಂಕಟರಾಮಯ್ಯ ಎಂ. ಎ. ಎಲ್‌ಎಲ್. ಬಿ ಇವರು ಶ್ರೀ ರಾಮಕೃಷ್ಣರ ಜೀವನ ಚರಿತ್ರೆ ಮತ್ತು ಬೋಧನೆಗಳ ಕುರಿತು ಸವಿಸ್ತಾರ ಮಾತನಾಡಿದರು. ಅಧ್ಯಕ್ಷರ ಭಾಷಣವನ್ನು ಕೇಳುವ ಕುತೂಹಲವು ಬಹು. ದಿನಗಳಿಂದಲೂ ಸಭೆಯವರಲ್ಲನೇಕರಿಗೆ ಇದ್ದುದರಿಂದ ಅವರು ಒಂದುವರೆ ಗಂಟೆಯ ವರೆಗೆ ದೀರ್ಘ ಭಾಷಣ ಮಾಡಿ ಸಭಿಕರ ಮನಸ್ಸಂತೋಷಪಡಿಸಿದರು. ಆ ಸ್ಥಾನ ವಿದ್ವಾನ್ ದೇವೇಂದ್ರಪ್ಪನವರ ನವವಾದ್ಯ ಸಂಗೀತ ಮಂಡಲಿಯೂ ತಮ್ಮ ಕೈಚಳಕ, ಕುಶಲತೆ ದುರ್ಯ ಇತ್ಯಾದಿಗಳಿಂದ ಜನರನ್ನು ಬೆರಗುಗೊಳಿಸಿದರು.

ಸಾಯಂಕಾಲವಾದ ನಂತರ ನೆರೆದವರಿಗೆ ಪುನಃ ಪ್ರಸಾದ ಹಂಚಿದ ತರುವಾಯ ಮೈಸೂರಿನ ಆರೋಗ್ಯ ಇಲಾಖೆಯವರು ಕಳುಹಿಸಿಕೊಟ್ಟ ನಿರ್ಮಲ ಜಲ, ಆಟಪಾಠ್ಯ, ವೈದ್ಯಸಹಾಯ, ಮಾದರಿ ಹಳ್ಳಿ ಇತ್ಯಾದಿಗಳನ್ನು ಕುರಿತು ಫಿಲ್ಮ ಚಿತ್ರಗಳನ್ನು ಪ್ರದರ್ಶಿಸಿ ಭಾಷಣಗಳಾದುವು. ಮಹಾರಾಜ ಕಾಲೇಜಿನ ಲೈಬ್ರೇರಿಯನ್ ಮಿ. ಕೃಷ್ಣರಾಯರು ಭಾರತದೊಳಗಣ ಶ್ರೀಕೃಷ್ಣ ಸಂಧಾನ ಕಥೆಯನ್ನು ಹಸಿಬಳಾಸ, ಹಾವಭಾವಗಳಿಂದ ಓದಿ ಹೇಳಿ ಜನರ ಕಣ್ಣನಂಗಳಿಗೆ ರಂಜನೆ

ವರ್ತಮಾನ ಸಂಗ್ರಹ.

ಒಳದೇಶ.

ಬೆಂಟಿಹೋರಿ ಮಲ್ ಪಟಾಲಾಮಿನವರು ತಮ್ಮ ಶಿಕ್ಷೆಯನ್ನು ಮುಗಿಸಿ ತಾ. 18ರಲ್ಲು ಬಿಡುಗಡೆಯಾಗಿರುವರು.

ಕಮಿಷನರ್ಸ್ ಟೂರ್ನಮೆಂಟಿನ ಕಡೇ ಆಟವು ತಾ. 14 ರಲ್ಲು ಮಡಿಕೇರಿಯಲ್ಲಿ ಮಿಲಿಟರಿ ಟೀಮಿನವರಿಗೂ ಮತ್ತು ಆಗ್ಸಿಲರಿ ಫೋರ್ಸ್‌ನವರಿಗೂ ನಡೆಯುವುದು.

ಕಳೆದ ವಾರ ಕಕ್ಕಬೆಯ ಮನೆಗೆ ಸೇರಿದ ಯುವಕರ ಗುಡಿಸಲಿನ ಮೇಲೆ ಬಿರುಗಾಳಿಯ ದೆಸೆಯಿಂದ ಆಕಸ್ಮಾತಾಗಿ ಮರ ಬಿದ್ದು ಇಬ್ಬರು ಯುವತಿಯರು ಮೃತರಾಗಿರುವರೆಂದು ತಿಳಿದು ಬರುತ್ತದೆ.

ಕೆಲವು ದಿವಸಗಳ ಹಿಂದೆ ಎಂಜಲ್‌ಗೇರಿಯಲ್ಲಿ ನಡೆದ ಖೂನಿ ಕೇಸಿನ ವಿಚಾರವು ಸೆಷನ್ ಕೋರ್ಟಿನಲ್ಲಿ ನಡೆದು ತಾ. 9ರಲ್ಲು ಅಪರಾಧಿಯಾದ ಪೂಣಚ್ಚ ಅಣ್ಣಪ್ಪ ಎಂಬವನನ್ನು ಬಿಡುಗಡೆ ಮಾಡಿರುವರು.

ಟ್ರೆಜರಿ ಆಫೀಸರಾದ ಮಿ. ಪಾಲೇಕಂಡ ಚಂಗಪ್ಪನವರು ಈ ತಾ. 16ರಿಂದ ತನ್ನ ಉದ್ಯೋಗದಿಂದ ಬಿಡುಗಡೆಯಾಗುವ ಬಗ್ಗೆ ಇವರ ಬದಲಿಗೆ ಟ್ರೆಜರಿಯ ಚಾರ್ಜನ್ನು ಸಬ್ ಜಡ್ಜಿಯವರೇ ನೋಡಿಕೊಳ್ಳಬೇಕೆಂದು ಆರ್ಡರು ಆಗಿದೆಯಂತೆ.

ಈ ತಾ. 18ನೇ ಬುಧವಾರ ದಿನ ಸಾಯಂಕಾಲ 5—30 ಘಂಟೆಯಿಂದ ಓಂಕಾರೇಶ್ವರ ದೇವಸ್ಥಾನದ ಹವಳಿಯಲ್ಲಿ "ಶ್ರೀ ರಾಮನಾಮ ಮಹಿಮೆ" ಕುರಿತು ಪೂಜಾದಿಗಳೂ ಮತ್ತು ಮಿ. ಪಿ. ಕೆ. ಸುಬ್ರಾಯರಿಂದ ಹರಿಕಥೆಯೂ ನಡೆಯುತ್ತೆ.

ಇದೇ ತಾ. 16ರಿಂದ ಈ ವರೆಗೆ ಓರಿಯಂಟಲ್ ಜೀವವಿಮೆ ಕಂಪೆನಿಯ ಏಜಂಟರಾಗಿದ್ದ ಮಿ. ಕೆ. ಪಿ. ಚಿಣ್ಣಪ್ಪನವರನ್ನು ದಕ್ಷಿಣ ಕನ್ನಡ, ಕೊಡಗು, ಮೈಸೂರು, ಹಾಸನ ಮತ್ತು ಕಡೂರು ಡಿಸ್ಟ್ರಿಕ್ಟಿನಲ್ಲಿರುವ ಏಜೆನ್ಸಿಗಳ ಇನ್ಸ್‌ಪೆಕ್ಟರಾಗಿ ಸದರಿ ಕಂಪೆನಿಯವರು ನೇಮಿಸಿದ್ದಾರೆಂದೂ, ಹೆಡ್ ಕ್ವಾರ್ಟರ್ಸ್ ಮಡಿಕೇರಿಯಲ್ಲಿಯೇ ಇರುವುದೆಂದೂ ಇವರ ಇನ್ಸ್‌ಪೆಕ್ಟರೇಟ್ ಆಫೀಸನ್ನು ಸದರಿ ಕಂಪೆನಿಯ ಬೆಂಗಳೂರಿನ ಬ್ರಾಂಚ್ ಸೆಕ್ರೆಟರಿಯವರೇ ಬಂದು ಈ ತಾ. 16ರಲ್ಲು ಪೂರ್ವಾಹ್ನ 10 ಗಂಟೆಗೆ ಹೊಸದಾಗಿ ಮಾಡಿರುವ ಪೋಸ್ಟಾಫೀಸಿಗೆ ಎದುರಿರುವ 'ಗೀತಾಂಜಲಿ' ಬಂಗಲೆಯಲ್ಲಿ ತೆರೆಯುತ್ತಾರೆಂದೂ ತಿಳಿಯುತ್ತೇವೆ.

ಹಿಂದೂದೇಶ.

ಕೋಕನಾಡದ ಕಲೆಕ್ಟರ್ ಮಿ. ಚಾರ್ಲ್ಸ್ ಹೆಂಡರ‍್ಸನರು ತಮ್ಮ ಮನೆ ಮಹಡಿಯಿಂದ ಬಿದ್ದು, ಎರಡು ಕಾಲುಗಳಿಗೂ ಜಖಂ ಆಗಿದೆ.

ಕಳೆದ 7ನೇ ತಾರೀಕಿನಲ್ಲಿ ಸಬರಮತಿ ಜೈಲಿನಿಂದ ರಾಜಕೀಯ ತಕ್ಸೀರಿನ 200 ಮಂದಿ ಕೈದಿಗಳೂ ಮತ್ತು ಇತರ 8 ಜನ ಕೈದಿಗಳೂ ಬೇರೆ ಕಡೆಗೆ ಸಾಗಿಸಲ್ಪಟ್ಟರೆಂದು ತಿಳಿಯುತ್ತೆ.

ಬಂಗಾಳದ ಗವರ್ನರ ವೃತ್ತಿಯಿಂದ ನಿವೃತ್ತರಾಗಿ ತವರುಮನೆಗೆ ತೆರಳಿದ ಸರ್ ಸ್ಟೇನ್ಲಿ ಜೇಕ್ಸನ್‌ರನ್ನು ಕರೆಸಿ ಚಕ್ರವರ್ತಿಯವರು 'ಜಿ. ಸಿ. ಯಸ್. ಐ.' ಬಿರುದನ್ನು ದಯಪಾಲಿಸಿದರು.

ಗಾಂಧಿ ತತ್ವವನ್ನು ನಿರೋಧಿಸಿ ಹಿಂಸೆಯನ್ನು ಬೋಧಿಸಿ ಕಾನ್‌ಪುರದಲ್ಲಿ 'ಹಿಂದೂಸ್ಥಾನ ಕ್ರಾಂತಿಕಾರಿ ಸೈನ್ಯ' ದವರ ಸಹಿಯಿಂದ ಕೆಂಪು ಪತ್ರಗಳು ಹಚ್ಚಲಾಗಿವೆ; ಹಂಚಲ್ಪಡುತ್ತಲೂ ಇದೆ.

ಪಂಡಿತ ಮಾಲವೀಯರನ್ನು ಕಂಡು ಮಾತಾಡಿ, ಮುನಶಿ ಈಶ್ವರ ಶರಣರವರು ಇಂಗ್ಲೆಂಡಿಗೆ ಹೊರಟರು. ಅಲ್ಲಿಯ ಜವಾಬುದಾರೀ ಮುಖಂಡರೊಡನೆ ಆರ್ಡಿನೆನ್ಸುಗಳ ಕುರಿತು ಮಾತನಾಡುವರಂತೆ.

ಡಕ್ಕಾದಲ್ಲಿ ಖಾದಿ ಡ್ರೆಸ್ ಹಾಕಿಕೊಂಡು ಕೆಲಸ ಮಾಡುತ್ತಿದ್ದ ಇಬ್ಬರು ಪೋಲೀಸಿನವರ ಮೇಲೆ ಕೈ ಮಾಡಿದರೆಂಬ ಆಪಾದನೆಯ ಮೇರೆ ಕೇವಲ ಗೌರವಸ್ಥರಾದ 13 ಜನ ಯುವಕರು ದಸ್ತಗಿರಿ ಮಾಡಲ್ಪಟ್ಟಿರುವರು.

ರಾಜಪಾಳ್ಯದ ಓರ್ವ ಸ್ತ್ರೀಯು ಕಳೆದ ವಾರ ಒಮ್ಮೆಗೇ ನಾಲ್ಕು ಮಕ್ಕಳನ್ನು ಹೆತ್ತಿರುವಳು. ಎಲ್ಲರೂ ಕ್ಷೇಮವೇ. ಅಲ್ಲೇ ಮತ್ತೋರ್ವ ಹೆಂಗಸು ಹಡೆದ ಶಿಶುವಿಗೆ ವಾನರನಂತೆ ಬಾಲವಿದೆಯಂತೆ. ರಾಮ ಲಕ್ಷ್ಮಣಾದಿಗಳೂ ಹನುಮಂತನೂ ಒಂದೇ ಕಡೆಯಲ್ಲಿ ತಿರುಗೊಮ್ಮೆ ಜನಿಸಿದರೆನ್ನುವ.

ಅಖಿಲ ಭಾರತ ಮಹಾರ ಪರಿಷತ್ತು ಕಾಮಠೀ ಎಂಬಲ್ಲಿ ಒರಲ್ಲಿ ಜರಗಿತು. ಅಧ್ಯಕ್ಷರಾದ ಆಂಬೇಡಕರರನ್ನು ಎದುರಿಸಲು, ಅಸ್ಪೃಶ್ಯ ಮುಖಂಡರ ಮತ್ತೊಂದು ತಂಡದವರು ಕರಿಯ ಬಾವುಟಗಳನ್ನು ಹಿಡಿದುಕೊಂಡು ಬಂದಿದ್ದರು. ಇವನ್ನು ಪೋಲೀಸರು ಕಸೆದರು. ಕಾದಾರು ಪಲಾಯನದರು.

ಪಂಜಾಬು ಜೈಲುಖಾನೆಯಲ್ಲಿ ೧೭೩೩ ಕೈದಿಗಳಿರುವರೆಂದು ಪ್ರಕಟವಾಗಿದೆ. ಯಾವ ತಿಂಗಳು, ಯಾವ ತಾರೀಕು ಎಂದು ಪ್ರಕಟವಾಗಿಲ್ಲವಾದ ಕಾರಣ ಈ ಸಂಖ್ಯೆಯನ್ನು ಎಡದಿಂದ ಬಲಕ್ಕೆ ಓದಬೇಕೋ, ಬಲದಿಂದ ಎಡಕ್ಕೆ ಓದಬೇಕೋ ತಿಳಿಯದಾಗಿದೆ.

ನ್ಯಾಯವಿರುದ್ಧವಾದ ಮೆರವಣಿಗೆಯನ್ನು ತೆಗೆದುಕೊಂಡು ಹೋದುದಕ್ಕಾಗಿ ಅರಂಬಾಗ್ ಪಟ್ಟದ ನಿರ್ಮಲ್ ಎಂಬ ಮುಖಂಡನೂ ಮತ್ತು ಇತರ 15 ಜನರೂ ದಸ್ತಗಿರಿ ಮಾಡಲ್ಪಟ್ಟಿರುವರು. ಇವರನ್ನು ದಸ್ತಗಿರಿ ಮಾಡಿದನಂತರ ಮೆರವಣಿಗೆಯಲ್ಲಿ ಭಾಗಗಳಾಗಿದ್ದ ಸುಮಾರು 400 ಜನರನ್ನು ಪೋಲೀಸಿನವರು ಚದರಿಸಿದರು.

ಅಮೃತಸರದ ಕಾಂಗ್ರೆಸ್ ಸೇವಕಿಯಾದ ಶ್ರೀಮತಿ ಭಗವಂತಿ ಎಂಬಾಕೆಗೆ, 1 ವರ್ಷ ಕಠಿಣ ಸಜೆಯೂ, 200 ರೂ. ಗಳ ಜುಲ್ಮಾನೆಯೂ ವಿಧಿಸಲಾಗಿತ್ತು. ಈ ದಂಡನೆಯ ಮೇಲೆ ಅಪ್ಪೀಲು ಮಾಡಿದರ ಪರಿಣಾಮವಾಗಿ, ಜಸ್ಟೀಸ್ ದಿಲೀಪ್ ಸಿಂಗ್ ಎಂಬಾತರು, ಜುಲ್ಮಾನೆಯನ್ನು ಕಡಿಮೆ ಮಾಡಿ ಬರೇ 25 ರೂ. ಗಳಿಗೆ ಇಳಿಸಿದರು.

ಮೋಹರಂ ಮೆರವಣಿಗೆಯ ಸಂಬಂಧ ಕಲ್ಕತ್ತಾದ ಪೋಲೀಸಿನವರು ಬಹಳ ಬಂದೋಬಸ್ತು ಮಾಡುತ್ತಲಿರುವರು. ಮೆರವಣಿಗೆ ತೆಗೆದುಕೊಂಡು ಹೋಗಲು ಈಗಲೇ 200 ಲೈಸೆನ್ಸ್‌ಗಳು ಕೊಡಲ್ಪಟ್ಟಿವೆ. ಅಲ್ಲದೆ ಪಂಗಡಗಳಿಗೆ ಸೇರಿದ ಸುಮಾರು 500 ಜನರನ್ನು ಪೋಲೀಸಿನವರು ಈಗಲೇ ತಮ್ಮ ವಶಕ್ಕೆ ತೆಗೆದುಕೊಂಡಿರುವರು.

ಲಕ್ನೋದಲ್ಲಿ ಯಸ್. ಯನ್. ರವಸಿ ಎಂಬಾತನ 18 ವರ್ಷ ಪ್ರಾಯದ 'ನಾರೀ' ಎಂಬ ಹೆಸರಿನ ಪತ್ನಿಯು ಪ್ರೈವೇಲಿನ ಬಟ್ಟೆಗೆ ಗ್ಯಾಸನ್ನು ಸುರಿದು ಬೆಂಕಿ ಹಚ್ಚಿಕೊಂಡು ಆತ್ಮಹತ್ಯ ಮಾಡಿಕೊಂಡಳು. ಇವಳ ಪತಿಯು ಕೆಲವು ದಿವಸಗಳ ಹಿಂದೆ ಮತ್ತೊಬ್ಬ ಹುಡುಗಿಯನ್ನು ಮದುವೆ ಮಾಡಿಕೊಂಡದ್ದೇ ಈ ಆತ್ಮಹತ್ಯಕ್ಕೆ ಕಾರಣ.

ಲಾಹೋರಿನಲ್ಲಿ ಪೋಸ್ಟ್ ಬಾಕ್ಸ್‌ಗಳಲ್ಲಿನ ಕಾಗದಗಳನ್ನು ಸುಡುವ ಅತ್ಯಾಚಾರವು ಇನ್ನೂ ನಡೆಯುತ್ತಲಿದೆ. ಕಳೆದ 6 ನೇ ತಾರೀಕಿನಲ್ಲಿ ಜನರಲ್ ಪೋಸ್ಟ್ ಆಫೀಸಿನಲ್ಲಿದ್ದ ಪೆಟ್ಟಿಗೆಯೊಂದನ್ನು ತೆಗೆದು ನೋಡಿದಾಗ ಅದರಲ್ಲಿದ್ದ ಕೆಲವು ಕಾಗದಗಳು ಸುಡಲ್ಪಟ್ಟಿದ್ದವು. ಅದಲ್ಲದೆ ಪೆಟ್ಟಿಗೆಯಲ್ಲಿ "ಸಲ್ಫ್ಯೂರಿಕ್ ಏಸಿಡ್" ಎಂಬ ವಿಷದ್ರಾವಕವು ಇದ್ದದ್ದು ಕಂಡುಬಂದಿದೆಂದು ತಿಳಿಯುತ್ತೆ.

ಬೊಂಬಾಯಿಯ ಮಲಾಡ್ ಎಂಬ ಸ್ಥಳದಲ್ಲಿ 40 ಜನರು ಸಂತೋಷಕೂಟದಲ್ಲಿ ಸೇರಿ ಸಮುದ್ರಸ್ನಾನಕ್ಕೆ ಹೋದರು. ಇವರು ಸಮುದ್ರದಲ್ಲಿ ಈಜುತ್ತಿದ್ದ ಹಾಗೆ ಒಬ್ಬನು ಸುಳಿಗೆ ಸಿಕ್ಕಿ ನೀರು ಪಾಲಾದನು. ಇವನ ಜೀವವನ್ನುಳಿಸಲು ಪ್ರಯತ್ನಿಸಿದ ಇನ್ನಿಬ್ಬರು ಬಹು ಪ್ರಯಾಸದಿಂದ ಹಿಂದಕ್ಕೆ ಬಂದರು. ಮಧ್ಯಾಹ್ನದ ನಂತರ ಈಜಲು ಹೋದಾಗ ಒಬ್ಬ ಮುಸ್ಲಿಂ ಯುವಕನು ನೀರಿನಲ್ಲಿ ಮುಳುಗಿ ಸತ್ತನು.

ಮಾಜಿ ಎಂ. ಎಲ್. ಸಿ. ಯಾಗಿದ್ದ ಲಾಹೋರಿನ ಚೌಧುರಿ ಅಫ್ಜಲ್ ಹಾಕ್ ಎಂಬಾತರು, ಲಾಹೋರನ್ನು 24 ಗಂಟೆಗಳೊಳಗೆ ಬಿಟ್ಟು ಹೋಗಬೇಕೆಂಬ ಸರಕಾರದ ಹುಕುಂನ್ನು ಉಲ್ಲಂಘಿಸಿದುದಕ್ಕಾಗಿ ದಸ್ತಗಿರಿ ಮಾಡಲ್ಪಟ್ಟು, ವಿಚಾರಣೆಗೆ ಗುರಿಪಡಿಸಲಾದರು. ಮ್ಯಾಜಿಸ್ಟ್ರೇಟರು ಇವರಿಗೆ 1 ವರ್ಷ ಕಠಿಣ ಸಜೆ, ಮತ್ತು 50 ರೂ. ಗಳ ಜುಲ್ಮಾನೆ. ಜುಲ್ಮಾನೆ ಕೊಡಲು ತಪ್ಪಿದರೆ ಪುನಃ 3 ತಿಂಗಳ ಸಜೆಯ ದಂಡನೆಯನ್ನು ವಿಧಿಸಿರುವರು.

ಬೊಂಬಾಯಿ ಪಟ್ಟಣದಲ್ಲಿ ಯಾರೋ ದುರಾತ್ಮರು ಮಕ್ಕಳನ್ನು ಪುಸಲಾಯಿಸಿ ರೈಲುಗಾಡಿಗಳಲ್ಲಿ ದೂರಪ್ರದೇಶಗಳಿಗೆ ಕರೆದುಕೊಂಡು ಹೋಗಿ ಅವರ ಮೈಮೇಲಿರುವ ಒಡವೆಗಳನ್ನೆಲ್ಲಾ ಕಿತ್ತುಕೊಂಡು ಅವರನ್ನು ಅಲ್ಲೇ ಬಿಟ್ಟು ಹೊರಟು ಹೋಗುತ್ತಿದ್ದಾರೆಂದೂ, ಎರಡು ತಿಂಗಳಿನಿಂದ ಈಚೆಗೆ ಹದಿನೆಂಟು ಮಕ್ಕಳನ್ನು ಈ ರೀತಿ ಅಪಹರಿಸಿಕೊಂಡು ಹೋಗಿರುತ್ತಾರೆಂದೂ ಬೊಂಬಾಯಿ ಪಟ್ಟಣದಲ್ಲಿ ವರ್ತಮಾನ ಹರಡಿ ಜನರಿಗೆಲ್ಲಾ ವಿಶೇಷ ಗಾಬರಿಯನ್ನುಂಟುಮಾಡಿದೆ.

ಕಳೆದ ತಾ. 6 ರಲ್ಲು ಬೊಂಬಾಯಿಯ ಮುಂಬಾದೇವಿ ಎಂಬ ಸ್ಥಳದಲ್ಲಿ ಮೂರು ಮಾರ್ವಾಡಿಗಳು ತಮ್ಮ ಅಂಗಡಿಗಳಲ್ಲಿ ಕೂತುಕೊಂಡಿರುವಾಗ್ಯೆ ಒಬ್ಬ ಪಠಾಣನು ಬಂದು ಆ ಮೂವರನ್ನು ಕತ್ತಿಯಿಂದ ಇರಿದು ಘಾಯಗೊಳಿಸಿ ಓಡಿಹೋದನು. ಈ ಪಠಾಣನು ಕೆಲವು ದಿವಸಗಳ ಹಿಂದೆ ಮಾರ್ವಾಡಿಗಳಿಂದ ಹಣ ಸುಲಿಯಲು ಯತ್ನಿಸಿದನೆಂದು ತಿಳಿದುಬರುತ್ತದೆ. ಘಾಯಗೊಂಡ ಮಾರ್ವಾಡಿಗಳು ಆಸ್ಪತ್ರೆಗೆ ಒಯ್ಯಲ್ಪಟ್ಟು ಚಿಕಿತ್ಸೆ ಹೊಂದುತ್ತಿರುವರು. ಪಠಾಣನು ಇನ್ನು ಪತ್ತೆಯಾಗಿರುವುದಿಲ್ಲ.

ಶ್ರೀಮತಿ ಕಮಲಾ ನೆಹರುರವರು ತನ್ನ ಪತಿಯಾದ ಪಂಡಿತ ಜವಾಹಿರ್‌ಲಾಲ್ ನೆಹರುರವರನ್ನು ಕಳೆದ ಆದಿತ್ಯವಾರ ದಿನ ಬೆರೇಲಿ ಜೈಲಿನಲ್ಲಿ ಹೋಗಿ ನೋಡಿದರು. ಪಂಡಿತ ಜವಾಹಿರ್‌ಲಾಲ್‌ರವರಿಗೆ ಎಡಭಾಗದ ಶ್ವಾಸಕೋಶದ ಹತ್ತಿರ ನೋವಿದೆಯೆಂದೂ, ಅವರಿಗೆ 99 ಡಿಗ್ರಿಗಳ ಜ್ವರ ಬರುತ್ತದೆಂದೂ ಮತ್ತು ದೇಹದ ಭಾರವು ಕಡಿಮೆಯಾಗಿದೆಯೆಂದೂ ಇದಕ್ಕಾಗಿ ಅವರು ಜೈಲ್ ಡಾಕ್ಟರವರಿಂದ ಚಿಕಿತ್ಸೆ ಹೊಂದುತ್ತಿದ್ದಾರೆಂದೂ ಶ್ರೀಮತಿ ಕಮಲಾ ನೆಹರುರವರು ಒಬ್ಬ ಪತ್ರಿಕಾ ಪ್ರತಿನಿಧಿಗೆ ತಿಳಿಸಿರುತ್ತಾರೆ.

ಕಾಶಿ (ಬೆನಾರಿಸ್) ಪಟ್ಟಣದಲ್ಲಿ ವಾಸಮಾಡುತ್ತಿರುವ ಒಬ್ಬ ವಿಧವೆಯು 1914 ರಲ್ಲಿ ಆದರೆ ಘೋರ ಯುದ್ಧ ಕಾಲದಲ್ಲಿ ಸುಮಾರು ಎಂಟು ಲಕ್ಷ ರೂಪಾಯಿ ಬೆಲೆಬಾಳುವ ಒಡವೆಗಳನ್ನು ಮನೆಯಲ್ಲಿ ಇಟ್ಟುಕೊಂಡಿರುವುದು ಕ್ಷೇಮಕರವಲ್ಲವೆಂದು ತಿಳಿದು ಗೋರಖಾಯುನ್ ಬ್ಯಾಂಕಿನಲ್ಲಿ ಡಿಪಾಜಿಟ್ಟು ಮಾಡಿದ್ದಳು. ಯುದ್ಧ ನಿಂತ ಮೇಲೆ ಅವಳು ಆಭರಣಗಳನ್ನು ವಾಪಸು ಕೊಡಬೇಕೆಂದು ಕೇಳಲು ಬ್ಯಾಂಕಿನವರು ಆ ವಿಷಯ ತಮಗೆ ತಿಳಿಯದೆಂದು ಹೇಳಿದರು. ವಿಧವೆಯು ಸಬ್—ಜಡ್ಜರ ಕೋರ್ಟಿನಲ್ಲಿ ದಾವಾ ಮಾಡಿದಳು. ಆಕೆಗೆ ಪರ ಡಿಕ್ರಿ ಆಯಿತು. ಅಲಹಾಬಾದ್ ನಗರದ ಹೈಕೋರ್ಟಿನಲ್ಲಿ ಅಪ್ಪೀಲಾಗಿ ಅಲ್ಲಿಯೂ ಕೆಳಕೋರ್ಟಿನ ಡಿಕ್ರಿ ಖಾಯಂ ಆಯಿತು. ಅಮಲ್ದಾರಿ ಕ್ರಮ ನಡಿಸಲು ಪ್ರಯತ್ನ ಪಟ್ಟಾಗ ಬ್ಯಾಂಕಿನ ಆಸ್ತಿ ಪಾಸ್ತಿಗಳು ಧ್ಯಾನಪುರಿ ಮಠಕ್ಕೆ ಸೇರಿ ಹೋಗಿದ್ದವೆಂದು ಗೊತ್ತಾಯಿತು. ಆ ವಸ್ತುಗಳ ಮೇಲೆ ಅಮಲ್ದಾರಿ ಕ್ರಮ ನಡಿಸುವುದಕ್ಕಾಗುವುದಿಲ್ಲವೆಂದು ಹೈಕೋರ್ಟಿನವರು ತೀರ್ಮಾನಮಾಡಿದ್ದಾರೆ.

ಕರಾಚಿಯಲ್ಲಿ ಕಳೆದ 6 ನೇ ತಾರೀಕಿನ ಸಾಯಂಕಾಲ 200 ಜನ ಹೆಂಗಸರ ಮತ್ತು ಗಂಡಸರಿಂದ ಸೇರಿದ ಪುಂಡುಗಾರರ ಪಂಗಡವೊಂದು ಪೋಲೀಸಿನವರ ಮೇಲೆ ಬಿದ್ದು 3 ಮಂದಿ ಪೋಲೀಸು ಆಫೀಸರುಗಳನ್ನು 7 ಜನ ಪೋಲೀಸಿನವರನ್ನು ಘಾಯಗೊಳಿಸಿತು. ಪೋಲೀಸಿನವರಿಬ್ಬರು, ಪಟ್ಟಣದ ಒಂದು ಕಡೆ ಕಳ್ಳತನದ ಕೇಸಿನ ಸಂಬಂಧವಾಗಿ ಒಬ್ಬ ಮುಸಲ್ಮಾನನನ್ನು ದಸ್ತಗಿರಿಮಾಡಲು ಹೋದುದೇ ಪುಂಡುಗಾರರು ಪೋಲೀಸಿನವರಿಬ್ಬರ ಮೇಲೆ ಬಿದ್ದು, ಅಪರಾಧಿಯನ್ನು ದಸ್ತಗಿರಿಯಿಂದ ಬಿಡಿಸಲು ಹವಣಿಸಿದುದೇ ಪುಂಡಿಗೆ ಕಾರಣ. ಪೋಲೀಸಿನವರಿಬ್ಬರ ಮೇಲೆ ಕೈಮಾಡಿದ ಸುದ್ದಿಯು, ಠಾಣೆಯನ್ನು ಸೇರುತ್ತಲೇ, 50 ಜನ ಪೋಲೀಸಿನವರನ್ನು ಕರೆದುಕೊಂಡು ಹೊರಟರು. ಹೋದ ಕೂಡಲೆ ಕೋಪಗೊಂಡಿದ್ದ ಪುಂಡುಗಾರರು ಮೇಲೆ ಹೇಳಿದಂತೆ ಪೋಲೀಸಿನವರನ್ನು ಹೊಡೆದು ಘಾಯಗೊಳಿಸಿದರು. ಹ್ಯಾಗೂ ಒಂದು ಗಂಟೆಯ ಕಾಲ ಪೋಲೀಸಿನವರು ಪುಂಡುಗಾರರೊಡನೆ ಹೋರಾಡಿ, ಅವರನ್ನು ಚದರಿಸಿ, ಪುಂಡಗಾರರ ಮುಖಂಡರಾದ 8 ಜನರನ್ನು ದಸ್ತಗಿರಿಮಾಡಿರುವರು.

ಕಲ್ಕತ್ತಾದಲ್ಲಿನ ಅಲೀಪುರ ಕೋರ್ಟಿನಲ್ಲಿ ಕಳ್ಳರ ಗುಂಪಿಗೆ ಸೇರಿದ ಕೆಲವರು ತನಿಖೆ ಮಾಡಲ್ಪಡುತ್ತಿರುವರು. ಕಳೆದ ವಾರ ಇವರನ್ನು ಕೋರ್ಟಿಗೆ ವಿಚಾರಣೆಗೆ ತಂದಾಗ 49 ಅಪರಾಧಿಗಳ ಪೈಕಿ ಒಬ್ಬನಾದ ಇಂದ್ರಸಿಂಗ್ ಎಂಬಾತನು ಪೋಲೀಸಿನವರು ಲಂಚ ತೆಗೆದುಕೊಳ್ಳುತ್ತಾರೆಂಬ ಆಪಾದನೆಯನ್ನು ಹೊರಿಸಿ ಕೆಲವು ಅಪರಾಧಿಗಳಿಗೆ ಹಣ ಕೊಟ್ಟು ಅವರನ್ನು ತಪ್ಪು ಒಪ್ಪಿಕೊಳ್ಳುವಂತೆ ಮಾಡಿದರೆಂಬ ಪೋಲೀಸಿನವರ ಮೇಲೆ ಫಿರ್ಯಾದು ಹೇಳಿರುವನು. ಕೋರ್ಟಿನವರು ಪ್ರಶ್ನೆ ಮಾಡಿದಾಗ ತನ್ನ ಸ್ಟೇಟ್‌ಮೆಂಟ್ ಕೂಡ ಬಲಾತ್ಕಾರ ಮಾಡಿಸಲ್ಪಟ್ಟದೆಂದೂ, ಮನಃಪೂರ್ವಕವಾಗಿ ಮಾಡಿದ್ದಲ್ಲವೆಂದೂ ಮತ್ತು ಪೋಲೀಸಿನವರು ಸಟ್ಟಾಸಿಂಗ್ ಎಂಬವನಿಗೆ 100 ರೂ. ಕೊಟ್ಟು ಅವನನ್ನು ಸರ್ಕಾರದ ಪರ ಸಾಕ್ಷಿ ಹೇಳುವಂತೆ ಮಾಡಿದರೆಂದೂ ಹೇಳಿದನು. ಕೊನೆಗೆ ಕೋರ್ಟಿನವರ ಹುಕುಂ ಮೇರೆ ಜೈಲ್ ಸುಪರಿಂಟರು ಸಟ್ಟಾಸಿಂಗ್ ಎಂಬಾತನನ್ನು ಶೋಧನೆಮಾಡಿ ಹುಡುಕುವಾಗ ಅವನು ಯಾವುದೋ ಒಂದು ವಸ್ತುವನ್ನು ಬಾಯೊಳಗೆ ಹಾಕಿ ನುಂಗಿ ಬಿಟ್ಟನು. ಇದನ್ನು ಕಂಡು ಸಟ್ಟಾಸಿಂಗ್ ಎಂಬಾತನನ್ನು ಪರಿಶೋಧನೆಗಾಗಿ ಆಸ್ಪತ್ರೆಗೆ ಒಯ್ದಿರುವರು. ಈ ಮೇಲ್ಕಂಡ ಅಪರಾಧಿಗಳೆಲ್ಲರೂ ದರೋಡೆ ಮಾಡಿದ ತಕ್ಸೀರಿಗಾಗಿ ವಿಚಾರಣೆಗೆ ಗುರಿಪಡಿಸಿದವರಾಗಿರುವರು.

ವಿದೇಶ.

ಸಂಯುಕ್ತ ಅಮೇರಿಕದವರು ತಮ್ಮಲ್ಲಿಗೆ ಆಮದಾಗುವ ರಬ್ಬರಿನ ಮೇಲೆ ಶಾಕ್ಕಿಗೆ ಶೇಕಡ 50 ಕರ ಹೊರಿಸಿರುವರು. ರಬ್ಬರಿನ ಬೆಲೆಯೂ ಏರಿದೆ.

ಮಿ. ಎಡಿಸನರ ಮಗನು 50 ಸಾವಿರ ಡಾಲರು ಕ... ದ್ದರೆ ಆತನ ವ್ಯಾಪಾರವನ್ನು ಅಡ್ಡಗಟ್ಟಿ, ನಿರ್ನಾಮವೆಂದು ನ್ಯೂಯಾರ್ಕ್ ಕಳ್ಳರು ಆತನಿಗೆ ಪತ್ರ... ರು. ಪತ್ತೆದಾರರಿಗೆ ತಿಳಿಸಲಾಗಿದೆ.

ಜರ್ಮೇರಿ ಯದೊಂದು ನಗರದ ಒಬ್ಬ ... ಬೀಜದಷ್ಟು ಚಿಕ್ಕ ಇಲೆಕ್ಟ್ರಿಕ್ ಮೋಟಾ... ರುವನು. ಇದಕ್ಕೆ ಚಿಕ್ಕ ದೀಪವೂ ಇದೆ. ...ತ್ತದೆ. ಪ್ರಯೋಗ'ಕರಿಗೆ ಇದರಿಂದ ... ರೂ ಅವಘಡಗಳಿಗಿದು ಕಾರಣವಾಗ...

ಲಂಡನಿನ ಸಮೀಪ ಮಿಡಕೆಗ... ವಸ್ತು ಪ್ರದರ್ಶನಶಾಲೆಯವು ಎರ... ಲಾಗಿ ಒಂದು ವಿದ್ಯುದ್ದೀಪವು... ವೂ ವಿಲಿಯಗಟ್ಟಿಯ ಜೆಟ್ಟ... ಗುತ್ತಿದೆ. ಇವುಗಳು ಎಲ್ಲಿ... ದುವುದೆಂಬ ಶೋಧವೂ ಆ... ನ್ನು ಕಡೆಗಟ್ಟ ವ ಅಲೋ... ನ್ನು ಕಾಪಾಡಲು ಮಹ... ದೊಂದು ಪ್ರಶ್ನೆ ಹೇಳ...

... free ...
... quiry ...

A Secondar...
60—70 is w...
School for...
will be...
certif...
unde... ancy plate...
52—28

ಸ್ತ್ರೀ ಪ್ರಪಂಚ.

('ಹಿಂದೂ' ಪತ್ರಿಕೆಗೆ "ಇಂಡಿಯಾದ ಹೆಂಗಸು ಬರೆದದ್ದು.)

ಏಪ್ರಿಲ್ ೨೬ ನೆ 'ಹಿಂದೂ, ಪತ್ರಿಕೆಯಲ್ಲಿ 'ಇಂಡಿಯಾ ದೇಶದಲ್ಲಿರುವ ಇಂಗ್ಲಿಷರು' ಎಂಬೊಬ್ಬ ಲೇಖಕನು ಇಂಡಿಯಾ ದೇಶದಲ್ಲಿ ಇಂಗ್ಲಿಷರು ಹೇಗೆ ಇಂಡಿಯಾ ದೇಶೀಯರ ವಿಷಯದಲ್ಲಿ ಕೇವಲ ಧೋರಣೆಯಿಂದ ನಡೆದುಕೊಳ್ಳುತ್ತಿರುವರೆಂಬುದನ್ನು ವಿವರಿಸಿದ್ದಾನೆ. ಇದರಲ್ಲಿ ಲೇಖಕನು ಗಂಡಸರಿಗೆ ಸಂಬಂಧಪಟ್ಟ ರಾಜಕೀಯ ವಿಷಯವನ್ನು ಮಾತ್ರ ಕುರಿತು ಬರೆದಿದ್ದಾನೆ. ಇದಕ್ಕೆ ಸಮಜೋಡಿಯಾಗಿ ಮೇ ೩ನೆಯ 'ಹಿಂದೂ' ಪತ್ರಿಕೆಯಲ್ಲಿ "ಇಂಡಿಯಾದ ಹೆಂಗಸು" ಎಂಬ ಅಭಿದಾನದಿಂದ ಲೇಖಕಿಯೊಬ್ಬಳು ಇಂಗ್ಲಿಷರ ಹೆಂಗಸರು ಇಂಡಿಯಾದ ಹೆಂಗಸರೊಡನೆ ಸಮಾಜದಲ್ಲಿ ಹೇಗೆ ವಾತ್ಸಲ್ಯದಿಂದ ಬೆರೆಯುತ್ತಿಲ್ಲವೆಂಬ ವಿಷಯಗಳನ್ನು ಚರ್ಚಿಸಿದ್ದಾಳೆ. ವಾಚಕರು ಇದನ್ನು ಓದಿ ತಿಳಿಯುವರೆಂದು ನಂಬಿದ್ದೇವೆ.—

—'ಇಂಡಿಯಾ ದೇಶದಲ್ಲಿ ನೆಲಸಿರುವ ಇಂಗ್ಲಿಷ್ ಅಧಿಕಾರಿಗಳ ಹೆಂಡಿರು ಮಕ್ಕಳನೇಕರು ತಮ್ಮ ಗಂಡಂದಿರಿಗಿಂತಲೂ ಕಠಿಣವಾಗಿ ಇಂಡಿಯಾ ದೇಶದ ವಿಷಯದಲ್ಲಿ ಏನೋ ಒಂದು ವಿಧವಾದ ಬಾಹ್ಯ ಆಡಂಬರವನ್ನು ತೋರಿಸುತ್ತಿರುವರೇ ವಿನಹ ತಾವಿರುವವರೆಗೆ ತಮ್ಮ ಆಳ್ವಿಕೆಗೊಳಪಟ್ಟಿರುವ ದೇಶವನ್ನು ವಾತ್ಸಲ್ಯದಿಂದ ಉದ್ಧರಿಸಬೇಕೆಂಬ ಅಭಿಮಾನವನ್ನು ಇಟ್ಟಿಲ್ಲ. ಇಂಗ್ಲಿಷರ ಹೆಂಗಸರೂ, ಇಂಡಿಯಾದ ಹೆಂಗಸರೂ, ಟೀಪಾರ್ಟಿಗಳಲ್ಲಿ ಆಗಾಗ ಸೇರುವುದೇನೋ ನಿಜ; ಮತ್ತು ಅಲ್ಲಲ್ಲಿ ಆರೋಗ್ಯ ವಿಚಾರಗಳಲ್ಲಿ ಪರಸ್ಪರ ಒಂದುಗೂಡಿ ನಡೆಯುತ್ತಿರುವುದೂ ಉಂಟು. ಆದರೆ ಇವರಿಬ್ಬರ ಮಧ್ಯೆ ಇರುವ ಒಂದು ದೊಡ್ಡ ಗೋಡೆಯಂತಹ ಭೇದಭಾವವನ್ನು ಯಾರೂ ಪರಿಹರಿಸಲೆತ್ನಿಸುವ ಹಾಗಿಲ್ಲ. ಎಷ್ಟೋ ಮಿಷನರಿಗಳಾದ ಇಂಗ್ಲಿಷರ ಸ್ತ್ರೀಯರು ನಿಜವಾಗಿಯೂ ಸಹೋದರೀಭಾವದಿಂದ ಕೆಲಸ ಮಾಡಿದರೂ, ಇವರು ಹೆಚ್ಚಾಗಿ ವಿದ್ಯಾಹೀನರಾದ ಜನರ ಮಧ್ಯದಲ್ಲೇ ಕೆಲಸ ಮಾಡುವರು. ಒಂದು ವೇಳೆ ಇವರು ವಿದ್ಯಾವಂತರಾದ ಇಂಡಿಯಾ ದೇಶೀಯರೊಡನೆ ಆಗಾಗ ಸೇರಿದರೂ, ತಮ್ಮದೊಂದು ಹೆಚ್ಚಿನ ಅಹಂಭಾವವನ್ನು ತೋರಿಸದೆ ಇರುವುದಿಲ್ಲ. ತಾವು ಮಾಡಿದ ಕೆಲಸವನ್ನು ಏನೋ ಮಾಡಬೇಕೆಂಬ ಕಟ್ಟಳೆಯಂತೆ ಮಾಡುವರು.

ಈ ರೀತಿ ಇಂಗ್ಲಿಷರ ಹೆಂಗಸರು ಉದಾಸೀನಭಾವದಿಂದ ಕೆಲಸ ಮಾಡಲು ಕಾರಣವೇನು? ಕೇವಲ ಉದಾಸೀನವ್ವೋ? ಸ್ವಾತಂತ್ರ್ಯರಾದವರ ದೇಶದಲ್ಲಿ ಹೆಜ್ಜೆ ಇಡಲಾರದ ಅಂಜಿಕೆಯೋ? ಇಂಡಿಯಾ ದೇಶೀಯರನ್ನು ಇಂಗ್ಲಿಷರನ್ನಾಗಿ ಮಾಡುವ ಪದ್ಧತಿಗಳನ್ನು ಇವರು ಆಗಾಗ ತೋರಿಸುತ್ತಿರುವರು. ಮನೆಗೆ ಬಂದು ವಿಜಿಟಿಂಗ್ ಕಾರ್ಡು ಕೊಡುವುದು, ಅಥವಾ ಪೋಸ್ಟಿನಲ್ಲಿ ಹಾಕಿ ಬಂದು ಹೋಗುವುದು ಇದಕ್ಕೆ ಉದಾಹರಣೆ. ಈ ಪದ್ಧತಿಯು ವಿಶೇಷವಾಗಿ ಕಾರ್ಯದಲ್ಲಿ ಮಗ್ನರಾಗಿ ಕುಳಿತು ಮಾತನಾಡಲು ಕಾಲವಿಲ್ಲದ ಪಶ್ಚಿಮ ದೇಶೀಯರಿಗೆ ಸರಿಹೋಗಬಹುದು. ಆದರೆ, ಇಂಡಿಯಾ ದೇಶದ ಮನೆ ಮಠಗಳಲ್ಲಿ ಇಂತಹ "ವಿಜಿಟಿಂಗ್ ಕಾರ್ಡಿನ ಅ[illegible]ನವು" ಸಂಭವಿಸುವುದಿಲ್ಲ. ಇಲ್ಲಿ ಬೇಕಾಗಿರುವುದು ಕೇ[illegible]ಸಭಾವದಿಂದ ಸಮಸ್ತ ದೇಶೀಯರೂ ಕಲೆತು ನಡೆ[illegible] "ಲೇಡೀಸ್ ಕ್ಲಬ್" ಗಳಲ್ಲಿ ಕಲೆತು ನಡೆದರೆ ಬರಿಯ ಶೃಂಗಾರದ ನಟನೆಯಿಂದ ಕಲೆಯುವ [illegible]ವೇನು? ಇಲ್ಲಿ ಒಂದೇ ಮನಸ್ಸಿನ ಆತ್ಮೀಯತೆಯು ಹುಟ್ಟಲಾರದು.

[illegible]ದೆ ಕೆಲವು ವೇಳೆ ಅಲ್ಲಲ್ಲಿ ಏಟಿಂಗುಗಳಾ[illegible] ಹೆಂಗಸರೂ, ಇಂಡಿಯಾದ ಸ್ತ್ರೀಯ[illegible]. ಆದರೇನು? ಇವರು ಪರಸ್ಪರ [illegible]ವನ್ನು ಕಾಲಾಂತರವಾಗಿ ಕ[illegible] ಇರುವುದಿಲ್ಲ. ಬರಿಯ ಮಾತು [illegible] ಕೈಚಳಕ ಇದ್ದರೆ ಮುಗಿ[illegible] 'ಇಂಗಿಷ' ಹೆಂಗಸರೂ [illegible]ರುವುದು. ಇವರಿಬ್ಬರೂ ಒಂಟಿಯಾಗಿ ಪಟ್ಟು

[illegible] ಕೂಡಿ ಮಾತನಾಡುವ [illegible] ವಾತ್ಸಲ್ಯದಿಂದ ತಿಳಿದು ಆನಂದಿಸಿ [illegible]ಗಳು ಎಷ್ಟೋ ಇಂಗ್ಲಿಷ್ ಸ್ತ್ರೀಯರು ವಾತ್ಸಲ್ಯದ [illegible] ಸ್ತ್ರೀಯರು ಹಾಗೆ [illegible] ಹೇಳುವರು ವಿಷಯ ರುವದು [illegible]

ನೋಡಿ ಅವರು ಬೆರಗಾಗುವಂತೆಯೋ, ಅವರ ಪ್ರತ್ಯೇಕ ಭಾವವನ್ನು ನೋಡಿ ನಮ್ಮವರು ಬೆರಗಾಗುವರು. ಇದರಿಂದ ಅವರ ಸಹವಾಸವನ್ನು ಬಿಟ್ಟು ದೂರವಿರುತ್ತಾರೆ. ಪಾಶ್ಚಿಮಾತ್ಯ ಹೆಂಗಸರು ಸಾಹಸಿಗಳೆಂಬುವುದೇನೋ ನಿಜ. ಆದರೆ ಈ ಸಾಹಸವು ಪ್ರೇಮದಿಂದ ತುಂಬಿರಬೇಕು. ಇದನ್ನು ಬೇಗನೆ ಇವರು ಅರಿತು ನಡೆದು ಎರಡು ದೇಶದ ಎಲ್ಲ ಸ್ತ್ರೀಯರೂ ಒಂದೇ ಸರಿಸಮಾನರೆಂಬುವುದನ್ನು ಸ್ಥಾಪಿಸಬೇಕಾಗಿದೆ.

ಬಿ. ಪ

Wanted.

An accountant to the Mercara Nad Co-operative Store from 1st May 1932 on a salary of Rs. 25 per mensem. Only those who have the knowledge of accounts or Retired Government Officer prefered. Applications may be sent to the address below.

HONORARY SECRETARY.

4=4 Mercara Nad Co-operative Store.

ಭಂಗಾರದ ಉಂಗುರಗಳು.

ಈ ಉಂಗುರಗಳನ್ನು ವಜ್ರದ ಕಲ್ಲುಗಳನ್ನು ಇಟ್ಟು ರೋಲ್ಡ್ ಗೋಲ್ಡ್ ಭಂಗಾರದಿಂದ ಕಟ್ಟಡ ಕಟ್ಟಿದೆ. ಇದರ ಬಣ್ಣವು ಕೆಡದಂತೆ ಎಲೆಟ್ರಿಕ್ ಪವರಿನಿಂದ ನವರಿನ್ ಭಂಗಾರದ ಬಣ್ಣ ಕೊಟ್ಟಿದೆ. ಇವು ಸಾಚಾ ವಜ್ರದ ಉಂಗುರಗಳಿಗೆ ಸರಿಸಮಾನವಾಗಿವೆ. ರಕ್ಕೆ ೨—೧೨—೦. ೩ ಉಂಗುರಗಳಿಗೆ ೧ ಟೇಬಲ್ ಟೈಂಪೀಸನ್ನೂ ೬ ಉಂಗುರಗಳಿಗೆ ೧ ಭಂಗಾರದ ಪಾಕೆಟ್ ವಾಚನ್ನೂ ೧೨ ಉಂಗುರಗಳಿಗೆ ಒಂದು ಭಂಗಾರದ ಕೈಯ್ಯಲ್ಲಿ ಕಟ್ಟುವ ರಿಸ್ಟ್ ವಾಚನ್ನೂ ಇನಾಮಾಗಿ ಕೊಡುವೆವು.

ವಿಳಾಸ:—ಕೆ. ಎಸ್. ಬೆನ್‌ಸನ್ ಅಂಡ್ ಕೊ.,

12—6 ಪೋ|| ಸಂ|| 1246, ಮದರಾಸು.

ರೋಲ್ಡ್ ಗೋಲ್ಡ್ ಭಂಗಾರದ ಗಡಿಯಾರಗಳು.

ಮಸಲು ಕ್ರಯ 17—12—0, ಕೆಲವು ದಿನಗಳ ವರೆಗೆ 8—12—0.

ಈ ಗಡಿಯಾರಗಳು ಬಹು ಪ್ರಖ್ಯಾತಿಯಾದ ಫಿಡೋ ಲೀವರ್ ಮೂಮೆಂಟ್‌ಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ. ಇವು ಖರೆಯಾದ ಗಂಟೆಯನ್ನು ತೋರಿಸುವುವು. ಒಳಗಡೆ



ಕೆಂಪು ಇಟ್ಟಿರುವುದು. ಇದರ ಕೇಸು ಭಂಗಾರಕ್ಕೆ ಸರಿಯಾಗಿದೆ. ಇದಕ್ಕೆ 5 ವರ್ಷ ಖಾತ್ರಿಯಾದ ಗ್ಯಾರಂಟಿ ಕೊಡುವೆವು 1 ಕೈಯ್ಯಲ್ಲಿ ಕಟ್ಟುವ ರಿಸ್ಟ್ ವಾಚ್, 1 ಪಾಕೆಟ್ ವಾಚ್, ಮತ್ತು ಒಂದು ಟೇಬಲ್ ಟೈಂಪೀಸ್ ಈ ಮೂರು ಸೇರಿ ರೂ. 8—12—0 ಮಾತ್ರ. ಈ ಕ್ರಯವು ಕೆಲವು ದಿನಗಳ ವರೆಗೆ ಮಾತ್ರ. ಸಂಶಯ ಸಿಕ್ಕಲಾರದು. ರಿಸ್ಟ್ ವಾಚ್ ಮತ್ತು ಟೈಂಪೀಸು ರೂ. 5—8—0; ರಿಸ್ಟ್ ವಾಚ್ ಮತ್ತು ಪಾಕೆಟ್ ವಾಚ್ ರೂ. 7—0—0.

ವಿಳಾಸ:—ಕೆ. ಎಸ್. ಬೆನ್‌ಸನ್ ಅಂಡ್ ಕೊ.,

12—8 ಪೋ|| ಸಂ|| 1246, ಮದರಾಸು.

ಚೀಫ್ ಫಾರೆಸ್ಟ್ ಆಫೀಸು,
ಮಡಿಕೇರಿ, ತಾ. 4—5—1932.

ನೋಟೀಸ್.

ಕೊಡಗಿನ ರಿಸರ್ವ್ ಫಾರೆಸ್ಟುಗಳಲ್ಲಿಯೂ, ಪೈಸಾರಿಗಳಲ್ಲಿಯೂ, ದೇವರ ಕಾಡುಗಳಲ್ಲಿಯೂ ಮತ್ತು ಉರುಡ್ವೆಗಳಲ್ಲಿಯೂ 1932ನೇ ಇಸವಿ ಜುಲಾಯಿ ತಾರೀಕು 1ರಿಂದ 1933ನೇ ಇಸವಿ ಜೂನ್ ತಾರೀಖು 30ರ ವರೆಗೆ ಮೈನರ್ ಫಾರೆಸ್ಟ್ ಉತ್ಪತ್ತಿಯನ್ನು ಜಮಾಯಿಸುವ ಹಕ್ಕು ಪೊನ್ನಂಪೇಟೆಯಲ್ಲಿ ಮೇ ತಾರೀಖು 20ರಲ್ಲಿಯೂ, ವೀರರಾಜಪೇಟೆಯಲ್ಲಿ 25ರಲ್ಲಿಯೂ, ಸೋಮವಾರಪೇಟೆಯಲ್ಲಿ 30ರಲ್ಲಿಯೂ, ಫ್ರೇಜರ್‌ಪೇಟೆಯಲ್ಲಿ 31ರಲ್ಲಿಯೂ ಮತ್ತು ಮಡಿಕೇರಿಯಲ್ಲಿ ಜೂನ್ ತಾರೀಖು 3ರಲ್ಲಿಯೂ ಹರಾಜು ಮಾಡಲ್ಪಡುವುದು

ಅಲ್ಲದೆ ಹಾರಂಗಿ ಹೊಳೆಯಿಂದ ಉತ್ತರಕ್ಕಿರುವ ಕಕ್ಕೆ ಮರಗಳ ಚಕ್ಕೆಯನ್ನು ಜಮಾಯಿಸುವ ಹಕ್ಕು ಸಹ ಮೇ ತಾರೀಖು 30ರಲ್ಲಿ ಸೋಮವಾರಪೇಟೆಯಲ್ಲಿ ಹರಾಜು ಮಾಡಲ್ಪಡುವುದು,

ಹೆಚ್ಚಿನ ವಿವರಕ್ಕೆ ಮಡಿಕೇರಿ ಚೀಫ್ ಫಾರೆಸ್ಟ್ ಆಫೀಸರವರಿಗೆ ಬರೆದುಕೊಳ್ಳತಕ್ಕದ್ದು.

ಜೆಚ್. ಡಿ. ಹಿಕ್ಸ್,
ಚೀಫ್ ಫಾರೆಸ್ಟ್ ಆಫೀಸರ್,

ಇಂಡಿಯನ್ ಇನ್ಶ್ಯೂರೆನ್ಸ್ ಕಂಪೆನಿಗಳಿಗೇನೇ ಜೀವ ವಿಮೆ ಮಾಡಿರಿ.

ದಿ ಬೆಂಗಾಲ್ ಇನ್ಶ್ಯೂರೆನ್ಸ್ ಎಂಡ್ ರಿಯಲ್ ಪ್ರಾಪರ್ಟಿ ಕಂಪೆನಿ ಲಿಮಿಟೆಡ್, ಹೆಡ್ ಆಫೀಸು:—8 ಡಾಲ್ ಹೌಸಿ, ಸ್ಕ್ವೇರ್ (ಈಸ್ಟ್) ಕಲ್ಕತ್ತಾ, ಸಂಸ್ಥಾಪನೆ 1919.

ನವಸಂಸ್ಕೃತಿಯು ಬೆಳೆದಷ್ಟಕ್ಕೆ ಅದರೊಡನೆ ಅದಕ್ಕೆ ಸಂಬಂಧಪಟ್ಟಿರುವ ಆರ್ಥಿಕ ಪರಿಸ್ಥಿತಿಯೂ ಬೆಳೆಯುತ್ತದೆ. ಇಂಥಹ ಸಮಯದಲ್ಲಿ ಜೀವವಿಮೆ ನಿಯಮವು ಒಂದು ವರವೆಂದೆನಿಸಲ್ಪಟ್ಟಿದೆಯಲ್ಲದೆ, ಅದು ಸಮಾಜದಂಗದಲ್ಲಿ ಜನರಿಗೊಂದು ಅತ್ಯಗತ್ಯ ವಿಷಯ-ವೆಂದೂ ತಿಳಿದು ಬಂದಿದೆ. ಅದನ್ನು ಈಗೀಗ ಗವರ್ನಮೆಂಟ್ಸ್ ಪ್ರಕಾರವಾಗಿಯೇ ಜನರಿಂದ ಪರಿಪಾಲಿಸಿಕೊಂಡೇ ಬರುವಂತಾಗಿದೆ.

ಈ ಕಂಪೆನಿಯು ಪರಿಕಾರದಲ್ಲಿ ಕಂಪೆನಿಯ ಭದ್ರತೆಗೋಸ್ಕರ 2 ಲಕ್ಷ ರೂಪಾಯಿ ಠೇವಣಾತಿಯನ್ನು ಇಟ್ಟಿದೆ. ಇದು ಇನ್ಸೂರೆನ್ಸ್ ಕೆಲಸದಲ್ಲಿ ಒಳ್ಳೆ ಗುರುತಿರುವ ಸದ್ಗೃಹಸ್ಥರ ಮುಂದಾಳುತನದಿಂದಲೇ ನಡೆಯುತ್ತದೆ. ಈ ಕಂಪೆನಿಯು ಆಕರ್ಷಣೀಯವಾದ ಕೆಲವು ಸೂತ್ರಗಳ ಮೇರೆಗೆ ಅತೀ ಸುಲಭ ಪ್ರೀಮಿಯಮ್ ದರದಿಂದ ಪೊಲಿಸಿಗಳನ್ನು ಕೊಡುತ್ತದೆ. ಇದರ ಶರ್ತಗಳು, ನಿಯಮಗಳು ಸುಲಭ ಗ್ರಾಹ್ಯವಾಗಿವೆ; ಅನುಕೂಲವಾಗಿವೆ. ಅಲ್ಲದೆ ಬಹು ಉದಾತ್ತವೂ ಆಗಿವೆ. ಹೆಚ್ಚಿನ ಮಾಹಿತಿಗೆ ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಿರಿ.

ಯಂ. ಯಸ್. ಐಯ್ಯಪ್ಪ,
ಆರ್ಗನೈಸರ್,
ಸ್ಕೂಲ್‌ರೋಡ್, ಮಡಿಕೇರಿ.
ಅಥವಾ
ಆರ್. ಸಿ. ಸೇನ್‌ಗುಪ್ತ,
ಬ್ರಾಂಚ್ ಸೆಕ್ರೆಟರಿ,
12—3 28, ಅಂಗಪ್ಪನಾಯಕ್ ಸ್ಟ್ರೀಟ್,
ಜಿ. ಟಿ. ಮದರಾಸ್.

Wanted agents in every Taluk of Coorg on very liberal terms

Empire of India Life Assurance Company, Ltd.

Established 1897.

The New "FAMILY SECURITY" Policy issued by this Company provides.

A. In the event of death during an agreed period,

1. The immediate payment to the Widow, Son or legal representative of a part of the sum Assured together with the Bonus accrued.

2. The payment of a guaranteed Yearly Income, payable by monthly instalments, during the balance of the period.

3. The payment of the balance of the sum of assured at the end of the period

OR

B. In the event of death after the period has expired the payment of the sum assured together with any Bonus that has accrued

Descriptive Pamphlet on application to—

Head Office:—
EMPIRE OF INDIA LIFE BUILDING
Bombay.

52—33

Branch Office:—
152, COMMERCIAL STREET,
Bangalore.

ನಾನು ಮಹಾಪುರುಷನೂ ಅಲ್ಲ, ಕಳ್ಳನೂ ಅಲ್ಲ.

(ಮಹಾತ್ಮ ಗಾಂಧಿಯವರ ಲೇಖನಿಯಿಂದ.)

ನಾನು ಇಲ್ಲಿಗೆ ಯಾಕೆ ಬಂದಿದ್ದೇನೆ? ನನಗೆ ಯಾತರಲ್ಲಿ ನಂಬಿಕೆ? ನಾನು ರಚಿಸಬೇಕೆಂದಿರುವ ಭರತಖಂಡವು ಯಾವ ರೀತಿ ಇರುತ್ತದೆ? ನಾನು ಇಲ್ಲಿಗೆ ಬಂದಿರುವುದು ಸತ್ಯವನ್ನು—ನನಗೆ ಅದು ಕಂಡುಬರುವಂತೆ—ಎತ್ತಿ ನಿಲ್ಲಿಸಲು. ಯಾಕೆಂದರೆ ಅದು ಜೀವನದ ಒಳಗುಟ್ಟು. ಎಲ್ಲಕ್ಕೂ ಅದೇ ಮೂಲಾಧಾರ. ಅದೇ ಎಲ್ಲದರ ಅತಿಮುಖ್ಯಾಂಶಗಳು.

ಎಲ್ಲಾ ವಿಚಾರಗಳಲ್ಲೂ ಸತ್ಯವನ್ನೇ ಮಾಡಬೇಕೆಂದು ಹೇಳುವುದಕ್ಕೆ ಸಾಧ್ಯ. ನಾನೇನೋ ಆ ರೀತಿ ಮಾಡುವುದಕ್ಕೆ ಯಾವಾಗಲೂ ಪ್ರಯತ್ನಿಸಿದ್ದೇನೆ. ನನ್ನ ರಾಜಕೀಯ ವಿಷಯಗಳಲ್ಲಿ ನಾನು ಸುಳ್ಳು ಮೋಸಗಳನ್ನು ದೂರವಾಗಿಟ್ಟಿದ್ದೇನೆ. ನಾನು ಯಾವುದನ್ನೇ ಸಾಧಿಸಬೇಕಾದರೂ ಮೋಸಕ್ಕೆ ಮಾತ್ರ ಕೈಹಾಕೆನು.

ನನ್ನ ವಿಷಯವಾಗಿ ಬರೆದಿರುವ ವಿವಿಧ ವಿಮರ್ಶೆಗಳನ್ನು ಓದಿದ್ದೇನೆ. ಕೆಲವರು ನನ್ನನ್ನು ಮಹಾಪುರುಷನೆಂದು ಕರೆಯುತ್ತಾರೆ. ಮತ್ತೆ ಕೆಲವರು ಕಳ್ಳನೆನ್ನುತ್ತಾರೆ. ನಾನು ಅವನೂ ಅಲ್ಲ. ಇವನೂ ಅಲ್ಲ. ನನ್ನ ಮುಖ್ಯವಾದ ಅಭಿಲಾಷೆಯು ಈಗ ಸ್ವಲ್ಪ ಮಟ್ಟಿಗೆ ಈ ನನ್ನ ಪ್ರಯತ್ನದಲ್ಲಿ ಫಲಾನುಭವವನ್ನು ಮಾಡಿದ್ದೇನೆ. ಸತ್ಯವಂತನಾಗಿದ್ದುಕೊಂಡು ದೈವವೆಂದರೆ ಹೆದರಿ ನಡೆದುಕೊಳ್ಳುವವನಾಗಬೇಕೆಂಬುದು.

ಆದರೆ ನನ್ನ ವಿಚಾರವಾಗಿ ನಾನು ಓದಿದ ವಿಷಯಗಳು ನನಗೆ ಅಷ್ಟಾಗಿ ಬುದ್ಧಿ ಕಲ್ಪಿಸಿಕೊಡುವಂತಿಲ್ಲ. ಯಾಕೆ ಮಾಡಬೇಕು? ನನಗೆ ನನ್ನ ವೇದಾಂತ, ನನ್ನ ಕೆಲಸ ಇದ್ದೇ ಇವೆ. ದಿನವೂ ಕೊಂಚ ಹೊತ್ತು ವಾರವನ್ನು ನೂಲುತ್ತೇನೆ. ನೂಲುವಾಗ ಧ್ಯಾನಾಸಕ್ತನಾಗಿರುತ್ತೇನೆ. ಎಷ್ಟೋ ವಿಚಾರಗಳನ್ನು ಮನನಮಾಡುತ್ತೇನೆ. ಆದರೆ ಆ ಆಲೋಚನೆಗಳು ನನ್ನ ಮನಸ್ಸಿನ ದುಗುಡವನ್ನು ದೂರವಾಗಿಟ್ಟಿರಲು ಸಹಾಯ ಮಾಡುತ್ತವೆ.

ನನ್ನ ರಾಟೆಯನ್ನು ಕುರಿತು ವಿಚಾರಮಾಡಿ ನೋಡಿ. ಅದು ನಾನು ಕಲಿಸುವುದಕ್ಕಿಂತಲೂ ಹೆಚ್ಚಾಗಿ ಕಲಿಸುತ್ತದೆ.—ಸಹಿಷ್ಣುತೆ, ಕಾರ್ಯತತ್ಪರತೆ, ಸಾಮಾನ್ಯ ಜೀವನ ಇವುಗಳೆಲ್ಲವನ್ನೂ ಕಲಿಸುತ್ತವೆ. ಭರತಖಂಡದಲ್ಲಿ ಹೊಟ್ಟೆಗಿಲ್ಲದೆ ಕಷ್ಟಪಡುತ್ತಿರುವ ಲಕ್ಷಾಂತರ ಜನರಿಗೆ ರಾಟೆಯು ಕಲ್ಪದ್ರುಮದಂತಿದೆ.

ನನ್ನ ಸೊಂಟದ ಅರಿವೆ ತುಂಡು.

ನನ್ನ ವಸನವನ್ನು ವೃತ್ತಪತ್ರಿಕೆಗಳನೇಕ, ಸೊಂಟ ಬಟ್ಟೆ ಎಂಬುದಾಗಿ ಹೆಸರಿಟ್ಟು, ವಿಮರ್ಶಿಸಿ, ಪರಿಹಾಸ್ಯ ಸಹಾ ಮಾಡಿವೆ. ನಾನದನ್ನು ಯಾಕೆ ಉಡುತ್ತೇನೆಂದು ಕೆಲವರು ಕೇಳಿದ್ದಾರೆ. ಕೆಲವರಿಗಂತೂ ನಾನದನ್ನು ಉಡುವುದು ಇಷ್ಟವಿಲ್ಲ.

ಕೆಲವರು ಆಂಗ್ಲೇಯರು ಇಂಡಿಯಾದೇಶಕ್ಕೆ ಬರುತ್ತಾರಲ್ಲ. ಆಗವರು ತಮ್ಮ ಐರೋಪ್ಯ ವಸನವನ್ನು ಬಿಟ್ಟು—ಇಂಡಿಯಾದೇಶಕ್ಕೆ ಅನುಕೂಲವಾಗಿದ್ದರೂ ಸಹ—ಪೌರಾತ್ಯ ಉಡಿಗೆ ತೊಡಿಗೆಗಳನ್ನು ಧರಿಸುವರೇನು? ಇಲ್ಲ. ನಾನು ಇಂಗ್ಲೆಂಡಿನಲ್ಲಿ ಇಂಡಿಯಾದ ಬಟ್ಟೆ ಬರೆಗಳನ್ನೆ ಯಾಕೆ ಉಪಯೋಗಿಸುತ್ತಿದ್ದೇನೆಂದು ಕೇಳುವವರಿಗೆ ಅಷ್ಟೆ ಉತ್ತರ. ನನ್ನ ದೇಶದ ಉಡುಪು—ನಾನು ಧರಿಸುತ್ತೇನೆ.

ನಾನು ಇಲ್ಲಿಗೇ ವಾಸಿಸಲು ಬಂದು ನೆಲೆಸಿ ಕೆಲಸ ಕಾರ್ಯಗಳು ಆಂಗ್ಲೇಯ ನಾಗರಿಕನಂತೆ ಮಾಡಿದ್ದ ಆದರೆ ಆಗ ನಾನು ದೇಶದ ಶಿಷ್ಟಾಚಾರಗಳಂತೆ ನಡೆದುಕೊಳ್ಳಬೇಕಾದುದೇ ಸರಿ. ಆಗ ನಾನು ಆಂಗ್ಲೇಯನಂತೆಯೆ ಉಡುಪುಗಳನ್ನು ಹಾಕಿಕೊಳ್ಳಬೇಕು. ಆದರೆ ನಾನು ಇಲ್ಲಿಗೆ ಬಂದಿರುವುದು ಒಂದು ಭಾರಿ ಕೆಲಸಕ್ಕಾಗಿ. ನನ್ನ ಸೊಂಟದ ಬಟ್ಟೆಯನ್ನು ನೀವು ವರ್ಣಿಸುವುದೇ ಆದರೆ, ಇದು ನನ್ನ ಆಚಾರ—ಭಾಂಡೇಯ ಪದ್ಧತಿ. ನನ್ನನ್ನು ನಂಬಿ ಒಂದು ಕೆಲಸಕ್ಕೆ ಬಿಟ್ಟಿದ್ದಾರೆ. ಒಂದು ವಿಶೇಷ ಕಾರ್ಯವನ್ನು ಮಾಡಲು ನನಗೊಪ್ಪಿಸಿದ್ದಾರೆ. ಈಗ ನನ್ನನ್ನು ಕುರಿತ ವಿವಿಧ ವರ್ಣನೆಗಳು ಬಹಳ ಆಹ್ಲಾದಕರವಾಗಿಯೂ, ಕೆಲವು ಸಂದರ್ಭಗಳಲ್ಲಿ ತಮಾಷೆಯಾಗಿಯೂ ಇವೆ. ಆದರೆ ನಾನು ನನ್ನ ಪ್ರಜೆಗಳ ಕೇವಲ ಪ್ರತಿನಿಧಿಮಾತ್ರ—ಅವರು ಹೇಳಿರುವ ಕೆಲಸ ಮಾಡಲು ಪ್ರಯತ್ನಿಸುತ್ತಿರುವವನು.

ಹೌದು, ಹೆಂಗಸರಿಗೆ ಸರಿಸಮಾನವಾದ ಹಕ್ಕಿರಬೇಕೆಂಬುದು ನನಗೆ ನಂಬಿಕೆ. ನಾನು ರಚಿಸಲಿರುವ ಭರತಖಂಡದಲ್ಲಿ ಅವರಿಗೆ ಅದು ದೊರೆಯುವುದು. ಇಷ್ಟೊಂದು ಮಂದಿ ಹೆಂಗಸರು ಸಹೋದ್ಯೋಗಿಗಳಾಗಿರುವುದು ಯಾಕೆಂದರೆ ನನ್ನ ಬ್ರಹ್ಮಚರ್ಯದ ಅವಲಂಬನದಿಂದ, ನಾನು ಮನಃಪೂರ್ವಕವಾಗಿ ಸ್ತ್ರೀಯರಲ್ಲಿ ಕನಿಕರವನ್ನು ತೋರುವುದರಿಂದ.

ನಮ್ಮ ದೇಶದಲ್ಲಿ ಸ್ತ್ರೀಯರು ಯಾವಾಗಲೂ ಕೈಕೆಳಗಿನ ಪಾತ್ರಗಳನ್ನ ವಹಿಸುತ್ತಾರೆಂಬುದನ್ನು ಪ್ರಾಯಶಃ ನೀವು ಕೇಳಿರಬಹುದು. ಅದು ಹೊರಗಡೆ ಕಾಣಿಸುವುದು ಆ ರೀತಿ. ವಾಸ್ತವವಾಗಿ ಅವರ ಶಕ್ತಿಯು ಮಹತ್ತರವಾದುದು. ಎಷ್ಟೋ ಶತಮಾನಗಳಿಂದ ಹೆಂಗಸರು ಗಂಡಸರ ಪಕ್ಕದಲ್ಲಿ ಅವರಿಗೆ ಸರಿಸಮಾನರಾಗಿ ನಿಂತು ಕೆಲಸ ಮಾಡಿದ್ದಾರೆ. ಅವರೇನಾದರೂ ಕೆಲಸಮಾಡದೆ ಹೋದರೆ ಅನೇಕಾನೇಕ ಗಂಡಸರು ಹೊಟ್ಟೆಗಿಲ್ಲದೆ ಸಾಯಬೇಕಾಗಿ ಬರುವುದು.

ಆಟದ ಸಾಮಗ್ರಿಗಳು.

ವ್ಯವಸಾಯಿಕ ಪರಿಶ್ರಮದಲ್ಲಿ—ಬೆಳೆ ಬೆಳೆಯುವುದರಲ್ಲಿ ಗಂಡಸರು ಹೆಂಗಸರು ಜೊತೆಯಲ್ಲಿ ಕಷ್ಟಪಡುತ್ತಾರೆ. ಅವರ ಕೆಲಸವು ಬಹಳ ಕಠಿಣತರವಾದುದು. ಕೆಲಸವಿಲ್ಲದವರು ಕೆಲವರಿದ್ದಾರಲ್ಲ ಆ ಪಂಗಡದಲ್ಲಿ ಮಾತ್ರ ಗಂಡು—ಹೆಣ್ಣೆಂಬ ಭೇದ ಭಾವವು. ಒಡೆದು ಕಾಣಬೇಕಾದರೆ. ಪ್ರಯೋಜನ ತತ್ವದ ಸದ್ಗುಣವನ್ನೂ ಹೆಂಗಸರು ಬದಿಗೊತ್ತಿ ಮರೆಯುವಂತೆ ಮಾಡಿರುವುದು ಆಶ್ಚರ್ಯ. ಅದ ಕಾರಣ ಹಣವುಳ್ಳ ಹೆಂಗಸರು ಕೇವಲ ಆಭರಣಗಳು—ಆಟದ ಸಾಮಗ್ರಿಗಳಾಗಲು ಆಶಿಸುವವರು.

ಎಲ್ಲ ಕಛೇರಿಗಳಲ್ಲಿಯೂ, ಕೆಲಸಗಳಲ್ಲಿಯೂ ಹೆಂಗಸರನ್ನು ನಿಯಮಿಸಿಕೊಳ್ಳುವುದನ್ನು ನೋಡಬೇಕೆಂದು ನನಗೆ ತುಂಬಾ ಆಸೆ. ಇಲ್ಲವಾದರೆ ಸರಿಸಮಾನವಾದ ಹಕ್ಕಿಲ್ಲಿಂದ ಬರಬೇಕು? ಆದರೆ ಹೆಂಗಸರು ಗೃಹದಲ್ಲಿ ಮಾತ್ರ ಪೂರ್ವದಂತೆ ರಾಣಿಯರಾಗಿದ್ದುಕೊಂಡು ಮನೆಕೆಲಸಗಳನ್ನು ನಡೆಸಬೇಕೆಂದು ನನಗೆ ಮನಸಾರ ಅಭಿಲಾಷೆ.

ಆ ಗದ್ದುಗೆಯಿಂದ ಅವಳನ್ನು ಎಂದಿಗೂ ಇಳಿಸಕೂಡದು. ಮನೆಯಲ್ಲಿ ಹೆಂಗಸಾದವಳು ಅದರ ಕೇಂದ್ರವಾಗಿರದಿದ್ದಲ್ಲಿ ಅದು ಮರುಭೂಮಿಯೇ ಸರಿ. ಆದರೆ ಹೆಂಡತಿಯಾದವಳು ಟೈಪಿಸ್ಟಾಗಿದ್ದುಕೊಂಡು ಮನೆಯಿಂದಾಚೆಯೇ ಹೆಚ್ಚು ಹೊತ್ತು ಇರುವಂತಿದ್ದರೆ ಆ ಮನೆಯನ್ನು ಒಳ್ಳೆಯ ಸುಖದ ಬೀಡೆಂದು ನಾನು ಊಹಿಸಲಾರೆ. ಮನೆಯಲ್ಲಿ ಮಕ್ಕಳನ್ನು—ಬಡವನ ಮನೆಯ ಮಾಣಿಕ್ಯಗಳನ್ನು—ಯಾರು ನೋಡಿಕೊಳ್ಳಬೇಕು?

ಮೊದಲು ಸಂಸಾರ.

ಕೆಲವು ಬುದ್ಧಿವಂತರಾದ ಹೆಂಗಸರು ಹೊರಕ್ಕೆ ಹೋಗಿ ಹೆಚ್ಚು ಹಣವನ್ನು ಸಂಪಾದಿಸಿ, ಮಕ್ಕಳಿಗೂ ಎಲ್ಲವನ್ನೂ ಮಾಡಿ, ಅವರನ್ನು ನೋಡಿಕೊಳ್ಳುವವರಿಗೂ ಹಣಕೊಟ್ಟು ಇಟ್ಟಿರುವವರನ್ನು ಕೆಲವರನ್ನು ಉದಾಹರಿಸಬಹುದು. ಜೀವನದ ಪ್ರತಿಯೊಂದು ವಿಷಯದಲ್ಲಿಯೂ ಕೆಲವು ಆ ರೀತಿ ಇರುತ್ತವೆ. ಆ ರೀತಿ ಕೆಲವನ್ನು ನೋಡಿ ಅವುಗಳಿಂದ ಸರ್ವಸಾಮಾನ್ಯ ಮಾಡಲಾಗುವುದಿಲ್ಲ.

ಸಾಮಾನ್ಯವಾಗಿ ಸಂಪಾದಿಸಬೇಕಾದವನು ತಂದೆ. ಒಳ್ಳೆಯ ಸಹಕಾರಿಣಿಯೊಂದು ತಿಳಿದರೆ ಇನ್ನು ಚೆನ್ನಾಗಿ ಕೆಲಸ ಮಾಡಿ ಸಂಪಾದಿಸುವನು. ಮಗುವನ್ನು ಮಹಾಪ್ರೀತಿಯಿಂದ ನೋಡಿಕೊಳ್ಳುವ ತಾಯಿಯ ಸುಖವನ್ನು ಅದಕ್ಕೆ ಇಲ್ಲದಂತೆ ಮಾಡುವುದು ಮಹಾ ಅನ್ಯಾಯ.

ಎಳೆಮಕ್ಕಳ ಮನಸ್ಸನ್ನೂ, ನಡತೆಯನ್ನೂ ತಿದ್ದಿ ಮುಂದಕ್ಕೆ ತರುವವಳು ತಾಯಿ. ಅದು ಸರ್ವೋತ್ತಮವಾದ ಕೆಲಸವೂ ಹೌದು. ಹೆಂಗಸರಿಗೆ ಸರಿಸಮಾನವಾದ ಹಕ್ಕು ಇರಬೇಕೆಂದು ನಾನು ಹೇಳುವೆನಾದರೂ ಮಕ್ಕಳ ವಿಚಾರದಲ್ಲಿ ಹೆಂಗಸರು ಕರ್ತವ್ಯವಿಮುಖರಾದರೆ ಅದಕ್ಕೆ ಪ್ರಾಯಶ್ಚಿತ್ತವಿಲ್ಲ.

ಯಾವುದು ಹೇಗಾದರೂ ಇರಲಿ ಎಲ್ಲಕ್ಕೂ ಮೊದಲನೆಯದು, ಸರ್ವೋತ್ಕೃಷ್ಟವಾದುದು ಸಂಸಾರ. ಅದರ ಪವಿತ್ರತೆಯು ಇದ್ದೇ ಇರಬೇಕು. ಅದರ ಮೂಲಕವೇ ರಾಷ್ಟ್ರದ ಕ್ಷೇಮ ಪರಿಪಾಲನೆಯಾಗಬೇಕಾಗಿದೆ. ರಾಷ್ಟ್ರಕ್ಕೆ ಒಳ್ಳೆಯದೇ ಆಗಲಿ, ಕೆಟ್ಟದೇ ಆಗಲಿ ಮನೆಯ ವಾತಾವರಣವೇ ಅದಕ್ಕೆ ಕಾರಣ. ಅದರಲ್ಲಿ ಸ್ವಲ್ಪವೂ ಸಂದೇಹವಿಲ್ಲ. ಮನೆಯ ಕ್ಷೇಮ ಉಚಿತತೆಯು ಯಾವ ರಾಷ್ಟ್ರದಲ್ಲಿಲ್ಲವೋ ಆ ರಾಷ್ಟ್ರವು ಬಹುಕಾಲ ನಿಲ್ಲಲಾರದು.

ಯಾವುದೋ ಒಂದು ಮಹಾಪ್ರಯತ್ನದ ಸಾಧನೆಗಾಗಿ—ಧ್ಯೇಯಪೂರ್ತಿಗಾಗಿ ಕೆಲವರು ನನ್ನಂತಹವರು—ಮನೆಯ ಆನಂದವನ್ನೂ ತ್ಯಜಿಸಬಹುದು. ಅದಕ್ಕೆ ಬದಲಾಗಿ ಆತ್ಮನಿರಾಕರಣೆಯನ್ನೂ, ಬ್ರಹ್ಮಚರ್ಯವನ್ನೂ ಅಭ್ಯಸಿಸಬಹುದು. ಆದರೆ ಸಮಸ್ತ ಪ್ರಜೆಗಳಿಗೂ ಅನ್ವಯಿಸಬೇಕಾಗಿದ್ದರೆ ಮನೆಯ ಸ್ಥಿತಿಗತಿಗಳು ನೆಟ್ಟಗಿರಬೇಕೆಂಬುದು ಅತ್ಯಂತ ಆವಶ್ಯಕ.

ಪ್ರ. ಮ.

ಕಾಂಗ್ರೆಸ್ ಚಳವಳಿಯಿಂದ ಜಗತ್ತಿಗೇನು ತಿಳಿಯಿತು?

ಕಾಂಗ್ರೆಸದ ಮುಖಂಡರೆಲ್ಲರೂ ತುರಂಗದಲ್ಲಿರುವಾಗ ಹೊರಗಿರುವಂಥವರು ೧೯೩೨ ರಲ್ಲಿ ಕಾಂಗ್ರೆಸನ್ನು ಸೇರಿಸಲಿಲ್ಲೆಂಬ ಅಪಕೀರ್ತಿಯನ್ನು ಹೊರಬಾರದೆಂದು ದೇವಿ ಸರೋಜಿನಿ ಹಾಗು ಪಂಡಿತ ಮಾಳವಿಯವರು ಯೋಚಿಸಿ, ಆ ಮೇರೆಗೆ ಕಾಂಗ್ರೆಸ್ ಸೇರಿಸುವ ಸಿದ್ಧತೆ ನಡಿಸಿದರು. ಆದರವರು ನಾನಾವಿಧ ಜನರು ತುರಂಗದಲ್ಲಿರುವಾಗ ನೀವೇನು ಸಭೆ ಕೂಡಿಸುತ್ತೀರೆಂದು ಕೆಲವರು ದೇವಿಯವರಿಗೆ ಪ್ರಶ್ನೆ ಮಾಡಲು ಕಾಂಗ್ರೆಸದ ಹಿಂದೆ ಅಸಂಖ್ಯ ಜನವುಂಟು; ಆದ್ದರಿಂದ ಕಾಂಗ್ರೆಸ್ ಸೇರಿಸಲು ಅಡ್ಡಿಯೇನೆಂದು ಉತ್ತರ ಕೊಟ್ಟರು. ಆ ಮಾತು ನಿಜವಾಗುವಂತೆ ತೋರಿತು. ಕಾಂಗ್ರೆಸ್ ಆಗುತ್ತದೆಂದು ತೋರಿದ ಕೂಡಲೆ ಹಿಂದೂಸ್ಥಾನದ ತುಂಬ ಚಟುವಟಿಕೆಯಾಗಿ [illegible] ಊರಲ್ಲಿ ನವೀನವಾದ ಚೈತನ್ಯವುಂಟಾದಂತೆ ಕಂಡ ಬಂತು.. ಸರಕಾರದವರು ಕಾಂಗ್ರೆಸ್ ಆಗಬಾರದು. ಅಲ್ಲಲ್ಲಿಯೇ ಜನರನ್ನು ಹಿಡಿದು ಹಾಕಬೇಕೆಂದು ಆರ್ಡಿನೆನ್ಸದಂಥ ಹುಕುಮು ತೆಗೆಯದಿದ್ದರೆ ಹಿಂದಿನಂತೆ ಕಾಂಗ್ರೆಸ್ ಸಭೆಗೆ ಪ್ರತಿನಿಧಿ ಪ್ರೇಕ್ಷಕರ ಸಂಖ್ಯೆ ಎಷ್ಟೋ ಆಗುತ್ತಿದ್ದಿಲ್ಲ.

ಕಾಂಗ್ರೆಸದವರನ್ನು ಅಲ್ಲಿಂದಲ್ಲೇ ಹಿಡಿದುಹಾಕಬೇಕೆಂದು ಪೋಲೀಸರು ಮಾಡಿದ ಯುಕ್ತಿಯು ಕೆಲ ಮಟ್ಟಿಗೆ ಸಾಧ್ಯವಾಯಿತು. ಪೂರಾ ಸಾಧ್ಯವಾಗಲಿಲ್ಲೆಂದು ಅವರೇ ಒಪ್ಪುವಂತಿದೆ. ಇಲ್ಲವಾದರೆ—ಹೊರಗಿನಿಂದ ಹೋದಂಥ ನೂರಾರು ಜನರನ್ನು ಹಿಡಿಯುವ ಅಗತ್ಯವು ಡಿಲ್ಲಿಯಲ್ಲುಂಟಾಗುತ್ತಲೇ ಇದ್ದಿಲ್ಲ. ಮಾದರಿಯಾಗಿ ಕರ್ನಾಟಕದಿಂದದೇ ಉದಾಹರಣೆ ಹೇಳುತ್ತೇನೆ. ಡಿಲ್ಲಿಯಲ್ಲಿಯೇ ಹಿಡಿಯಲ್ಪಟ್ಟವರಲ್ಲಿ ದೇಶಭಕ್ತ ಕಾಕಾ ಕಾರಖಾನಿಸರೊಬ್ಬರಾಗಿದ್ದಾರೆ, ಇವರಿಗೆ ವಿಜಾಪುರ ಬಿಟ್ಟು ಹೊರಗೆ ಹೋಗದಂತೆ ನೋಟೀಸುಂಟು. ದಿನಾಲು ಇವರ ಮನೆಯ ಮುಂದೆ ಪೋಲೀಸರ ಕಾವಲುಂಟು ಆದರೂ ಇವರು ಸಾವಿರ ಮೈಲಿನ ಮೇಲಿರುವ ಡಿಲ್ಲಿಯಲ್ಲಿ ಹೇಗೆ ಪ್ರಕಟರಾದರೆಂಬುದು ಯಾರನ್ನಾದರೂ ಆಶ್ಚರ್ಯಚಕಿತ ಮಾಡುವಂತಿರುತ್ತದೆ. ಹೊರಗಿನವರನ್ನು ಬಿಟ್ಟರೂ ಡಿಲ್ಲಿಯಲ್ಲಿಯೇ ಜನರ ಉತ್ಸುಕತೆಯು ಕಡಿಮೆಯದಾಗಿ ತೋರಲಿಲ್ಲ. ಏವರು ಅಂಗಡಿಕಾರರನ್ನು ಹೊರ್ತುಪಡಿಸಿ. ಎಲ್ಲ ಅಂಗಡಿಕಾರರು ಹರತಾಳ ಮಾಡಿದ್ದು ಏತರ ಕುರುಹು? ಊರ ತುಂಬ ಕಾಂಗ್ರೆಸದ ವಿಷಯ. ಸ್ವಯಂಸೇವಕರ ತಿರುಗಾಟ, ಇವಾದರೂ ಏನು ಹೇಳುತ್ತವೆ. ಜನರಲ್ಲಿ ಕಾಂಗ್ರೆಸದ ಬಗ್ಗೆ ಅಭಿಮಾನವಿರುತ್ತದೆಂಬದನ್ನೇ ತೋರಿಸುವದಿಲ್ಲವೇ? ಕಾಂಗ್ರೆಸವೇ ಹಿಂದೂಸ್ಥಾನದ ಆಗುಹೋಗುಗಳ ಬ್ರಹ್ಮಲಿಪಿ ಬರೆಯತಕ್ಕದ್ದಲ್ಲ. ಅದರಷ್ಟನಂಥ ಬೇರೆ ಸಂಸ್ಥೆಗಳುಂಟೆಂದು ಜವಾಬ್ದಾರ ಮುತ್ಸದ್ದಿಗಳು ಹೇಳುತ್ತಾ ಬಂದಿದ್ದಾರೆ. ಅವರ ಬೇರೆ ಸಂಸ್ಥೆಗಳಿಗೂ ತಮ್ಮ ಪ್ರಭಾವಾಗಿ ಕಾಂಗ್ರೆಸದಂತೆ ಸಾರ್ವಜನಿಕ ಸಭೆಗೂಡಿಸಲಿಕ್ಕೆ ಹೇಳಬೇಕು. ಆಂದರೆ ಅವು ಅವನ್ನು ಯಾವ ರೀತಿಯಿಂದ ಕೂಡಿಸುತ್ತವೆ. ಅವುಗಳಿಗೆ ಲೋಕಮತದ ಬೆಂಬಲವೆಷ್ಟೆಂಬುದು ಆ ಸಮಯದಲ್ಲಿ ಚೆನ್ನಾಗಿ ವ್ಯಕ್ತವಾಗುವದು. ಕಾಂಗ್ರೆಸ್ ಸೇರಬಾರದೆಂದು ಒಡ್ಡಿದ ಬಲಿಯಿಂದ ಕಾಂಗ್ರೆಸದ ಶಕ್ತಿಯೆಷ್ಟುಂಟೆಂದು ಜಗತ್ತಿಗೆ ತೋರಿಸಿ ಕೊಡಲು ಅವಕಾಶವನ್ನುಂಟುಮಾಡಿ ಕೊಟ್ಟಂತಾಯಿತು. ಹೊಸ ರಾಜ್ಯಘಟನೆಯ ಸ್ವರೂಪವು ಹೇಗೇ ಆಗಲಿ; ಅದನ್ನು ಯಶಸ್ವಿ ಮಾಡುವದು ಪ್ರಜೆಯರ ಕಯ್ಯಲ್ಲುಂಟು ಮೆ| ಮಾಂಟಗು ಸಾಹೇಬರ ಸುಧಾರಣೆಗಳನ್ನ ಅಮಲಿನಲ್ಲಿ ತಂದು, ಅದಕ್ಕೆ ಯಶಸ್ಸು ತಂದು ಕೊಡುತ್ತೇವೆಂದು ಮವಾಳರು ಅವರಿಗೆ ನಂಬಿಗೆ ಹೇಳಿದ್ದರು. ಅವರು ಅದರಂತೆ ಮಾಡಲಿಲ್ಲೆಂದು ರಾಜ್ಯಕರ್ತರು ಹಲವು ಸಾರೆ ಕಾವಾಗಿ ಹೇಳಿರುತ್ತಾರೆ. ಈಗಾದರೂ ಮವಾಳರು ಅದೇ ಭಾಷೆ ಕೊಟ್ಟಿರಬಹುದು. ಹಾಗೆ ಹೇಳುವದರಲ್ಲಿ ಅರ್ಥವೇನೂ ಇರುವದಿಲ್ಲೆಂದು ತಿಳಿದು, ಹಿಂದೂಸ್ಥಾನದಲ್ಲಿ ನಿಜವಾದ ರಾಜಕೀಯ ಪ್ರಗತಿಯಾಗಬೇಕಾದರೆ—ಪೂರ್ಣವಾಗಿ ರದಿದ್ದರೂ, ಕೆಲಮಟ್ಟಿಗಾದರೂ ಕಾಂಗ್ರೆಸದ ಬೇಡಿಕೆಗಳನ್ನು ಈಡೇರಿಸಬೇಕಾಗುತ್ತದೆ. ನಾವು ಬೇಡಿದ್ದರಲ್ಲಿ ಕನಿಷ್ಟವೆನಿಸುವಂಥ ಹಕ್ಕುಗಳನ್ನಾದರೂ ಕೊಟ್ಟರೆ ಸಾಕೆಂದು ಮಹಾತ್ಮರು ಹೇಳಿದ್ದಾರೆ ಆ ರೀತಿಯಾಗಿ ರಾಜಿಯನ್ನುಂಟುಮಾಡಿಕೊಳ್ಳಲು ಕಾರ್ಯಾರಂಭವನ್ನೇಕೆ ಮಾಡಬಾರದು?

ವಿಜಯ.

ಭಾರತ ಮಂತ್ರಿಗಳಿಗೆ ವ್ಯಾಪಾರಸ್ಥರ ಎಚ್ಚರಿಕೆ.

ಭಾರತ ಮಂತ್ರಿಗಳಿಗೆ ಲಂಡನೊಳಗಿನ ... ಚೇಂಬರ್ಸ್ ಅಫ್ ಕಾಮರ್ಸ ಸಭೆಯವರು ... ನ್ನು ಕಳುಹಿಸಿ ಅದರಲ್ಲಿ ಹಿಂದೂಸ್ಥಾನದೊಳಗಿನ ... ಜಕೀಯ ಪರಿಸ್ಥಿತಿಯಿಂದ ವ್ಯಾಪಾರದ ಮೇಲೆ ... ಪರಿಣಾಮದ ಬಗ್ಗೆ ಚಿಂತೆಯನ್ನು ವ್ಯಕ್ತಪ...

ಈ ಪತ್ರದೊಳ ಚೇಂಬರನವರು ... ನ ಸದ್ಯದ ಆರ್ಥಿಕ ಯಾ ರಾಜಕೀಯ ... ಚರ್ಚೆ ಮಾಡಿ ಈ ಪರಿಸ್ಥಿತಿಗೆ ಸಂ... ವೇ ಬಹಳ ಮಾಡಿ ಕಾರಣವೆಂದು ...

ಸರ್ಕಾರೀ ಧೋರಣದಿಂದ ... ಗುತ್ತಿರುತ್ತದೆ. ಬ್ರಿಟಿಷ್ ... free ... ಹದಲ್ಲಿ ಸಂಶಯವು ಉತ್ಪ... quiry ... ಲೀಗ್' ಇತ್ಯಾದಿ ವ್ಯಾಪಾ... ಬಹಾವಣೆ ಮಾಡಿದ್ದರಿಂದ ... ರುತ್ತದೆ. ಆರ್ಡಿನೇನ್ಸ ... ಡಿದರೂ ಜನರು ಆಜ ... ಷ್ಪಲವೆಂದು ಕಂಡುಬರು...

ಬ್ರಿಟಿಷ್ ವ್ಯಾ... ರೀ ಸ್ಥಿತಿ ಬ್ರಿಟಿಷ್ ... ವ ರಾಜ್ಯಘಟನೆಯ ... ವುದಕ್ಕೆ ಬರ... ದೂ ಅನ್ನಲು ...

ಲೀ... ದಿನದ ... ಡಿ ತ... ವ ...



ಕೊಡಗು.

ಸನ್ ೧೯೩೦ನೇ ಇಸವಿ

ಮೇ ತಾ. ೧೬ನೇ ಶುಕ್ರವಾರ.

ಪ್ರೆಸ್ ಆರ್ಡಿನೇನ್ಸು ಜಾರಿಯಲ್ಲಿರುವವರಿವಿಗೆ

ನಾವು

ಮೌನ

ದ್ವಿಮುಖ ಕಾರ್ಯಕ್ರಮದ ನಿಷ್ಪ್ರಯೋಜನ.

ಒಂದು ಕಡೆ ಬಲವಾದ ದಬ್ಬಾಳಿಕೆ ಇನ್ನೊಂದು ಕಡೆ ದುಂಡು ಮೇಜಿನ ಕಮಿಟಿಗಳ ಕಾರ್ಯವನ್ನು ತ್ವರೆಯಿಂದ ಮುಂದರಿಸುವುದು, ಎಂಬ ದ್ವಿಮುಖ ಕಾರ್ಯಕ್ರಮವು ಈ ನಾಲ್ಕು ತಿಂಗಳುಗಳಿಂದ ಜಾರಿಯಲ್ಲಿರುವುದಾಗಿ ಹೇಳುತ್ತಾರೆ. ಈ ವರೆಗೆ ಇದರಿಂದ ಏನಾದರೂ ಜಯವಾಗಿದೆಯೋ? ಲಾರ್ಡ್ ಸ್ಯಾಂಕಿಯಂಥ ಬ್ರಿಟಿಷ್ ರಾಜತಂತ್ರ ಧುರೀಣರು ಈ ಕಾರ್ಯಕ್ರಮಕ್ಕೆ ಪಶ್ಚಾತ್ತಾಪಪಡುವುದಲ್ಲದೆ ಇದರಿಂದ ಜಯವಾಗಿದೆಯೆಂತ ಶ್ಲಾಘನೆ ಸಹ ಮಾಡುವವರಿದ್ದಾರೆ. ಈ ದಬ್ಬಾಳಿಕೆಯೊಡನೆ ಸ್ಲೇವ್ ರೋಲರನ್ನು ನಡಿಸುವ ಸರ್ ಸ್ಯಾಮ್ಯುವೇಲ್ ಹೋರನು ತನ್ನ ಕಾರ್ಯದಿಂದ ಆಗುವ ಕೆಡಕುಗಳನ್ನೂ, ಹಿಂದೀ ಜನಾಂಗಕ್ಕೂ, ಬ್ರಿಟಿಷ್ ಸರಕಾರಕ್ಕೂ, ಇನ್ನು ಮುಂದೆ ಎಷ್ಟರಮಟ್ಟಿಗೆ ಮನಸ್ತಾಪ ಹೆಚ್ಚೀತೆಂಬುದನ್ನೂ ಎಣಿಸದೆ ತನ್ನ ಸ್ಟೀಮ್ ರೋಲರನ್ನೂ ನಿಧಾನವಾಗಿಯೂ, ಬಲವಾಗಿಯೂ ನಡಿಸುತ್ತಲೇ ಇದ್ದಾನೆ. ಕಾಂಗ್ರೆಸ್ ಸಭೆಯು ಕಾದುವುದರಿಂದ ಶ್ರೀಮತಿ ಸರೋಜಿನಿ ನಾಯ್ಡು ಮತ್ತು ಪಂಡಿತ ಮೋತಿಲಾಲ ನೆಹರೂರಂಥ ಮುಂದಾಳುಗಳಿಗೂ ಸರಕಾರಕ್ಕೂ ರಾಜಿ ಮಾತುಗಳನ್ನು ಮುಂದರಿಸಲು ಅನುಕೂಲ ದೊರೆತೀತೆಂತ ನಿರೀಕ್ಷಣೆ ಇತ್ತು. ಈ ನಿರೀಕ್ಷಣೆಯು ಫಲದಾಯಕವಾಗದೆ ಹೋಗಲು ಯಾರು ಕಾರಣರೆಂಬುದನ್ನು ಊಹಿಸುವುದು ಕಷ್ಟ. ಯಾಕೆಂದರೆ ಒಳಗಿಂದ ಒಳಗೆ ಏನೇನು ಕಾರ್ಯಗಳು ನಡೆದಿವೆಯೆಂತ ತಿಳಿಯದು. ಆದರೆ ಈ ಅವಕಾಶವನ್ನು ಕಳಕೊಂಡದ್ದರಿಂದ ಉಭಯ ಪಕ್ಷದವರ ಮುಖ್ಯವಾಗಿ ಸರಕಾರದ ರಾಜಿಯಲ್ಲಿ ತೀರಿಸಿಕೊಳ್ಳುವ ಶಕ್ತಿಗೆ ಕುಂದಕ ಬಂದಂತಾಯಿತು. ಸರಕಾರದ ಮೇಲೆ ಹೆಚ್ಚು ಜವಾಬ್ದಾರಿ ಇದೆಯೆಂತ ಯಾಕೆ ಹೇಳುತ್ತೇವೆಯೆಂದರೆ—ಈ ಹೋರಾಟದಲ್ಲಿ ಸರಕಾರವೇ ಹೆಚ್ಚಿನ ಬಲವುಳ್ಳವನಾಗಿದೆ ಆದ್ದರಿಂದ ರಾಜಿಮಾತು ಪ್ರಾರಂಭಿಸುವ ಭಾರವು ಸರಕಾರದ ಮೇಲೆ ಇತ್ತು. ಹೋರಾಟದ ಧರ್ಮದಲ್ಲು ಬಲಾಢ್ಯನೇ ಸ್ನೇಹದ ಕೈಯ್ಯನ್ನು ಮುಂದರಿಸಬೇಕೆಂತ ಇರುವುದು. ಆದರೆ ಸರಕಾರವು ಇದಕ್ಕೆ ವಿರೋಧವಾಗಿ ವರ್ತಿಸಲು ತೀರ್ಮಾನಿಸಿದಂತೆ ತೋರುತ್ತದೆ.

ಕಾಂಗ್ರೆಸಿಗೂ, ಸರಕಾರಕ್ಕೂ ನಡೆಯುವ ಈ ಬಲವಾದ ಹೋರಾಟದಲ್ಲಿ ಇರುವ ಒಂದು ಭಾವವನ್ನು ಮರೆಯಬಾರದು. ಅದು ಮನಸ್ಸಿನ ಮೇಲೆ ಉಂಟುಮಾಡುವಂಥ ಪ್ರಭಾವವು. ಪ್ರಪಂಚದಲ್ಲಿ ಅತಿ ಪ್ರಬಲವಾದ ಸಾಮ್ರಾಜ್ಯವಾದ ಬ್ರಿಟಿಷ್ ಸಾಮ್ರಾಜ್ಯವು ಕಾಂಗ್ರೆಸ್ ಸಂಸ್ಥೆಯನ್ನು ನಾಶಮಾಡಲೇ ಹೊರಟಿದೆ. ಈ ಕಾರ್ಯದಲ್ಲಿ ಸಂಪೂರ್ಣ ವೇಗದಿಂದ ಮುಂದರಿಯುತ್ತಲೇ ಇದೆ. ಕಾಂಗ್ರೆಸೆಂದರೆ ಏನು? ಜನರು ಅಥವ ಜನರ ಒಂದು ಭಾಗ, ಮುಖ್ಯವಾದ ಭಾಗವು ಸ್ವೇಚ್ಛೆಯಿಂದ ಮಾಡಿಕೊಂಡ ಸಂಸ್ಥೆಯು. ಈ ಸಂಸ್ಥೆಯೇ ಹಿಂದೂಸ್ಥಾನದ ರಾಜಕೀಯ ಅಭಿಲಾಷೆಗಳನ್ನು ಪ್ರತಿಬಿಂಬಿಸುವ ಸಂಸ್ಥೆಯಾಗಿದೆ. ಕಾಂಗ್ರೆಸಿಗೆ ಸೇರದವರಿಗೂ ಸಹ ಇದರ ಅಭಿಲಾಷೆಗಳೇ ಇವೆ ಎಂಬುದರಲ್ಲಿ ಸಂಶಯವಿಲ್ಲ. ಕಾಂಗ್ರೆಸನ್ನು ಮುರಿಯಲು ಬ್ರಿಟಿಷ್ ಸರಕಾರವು ಉಪಯೋಗಿಸುವ ದಬ್ಬಾಳಿಕೆಯ ರೀತಿಯಿಂದಲೇ ಕಾಂಗ್ರೆಸಿನ ಬಲವು ಸಾಧಾರಣವಾದದ್ದಲ್ಲವೆಂತ ತಿಳಿಯುತ್ತದೆ. ಕಾಂಗ್ರೆಸಿಗೆ ಜನರ ಮೇಲೆ ಎಷ್ಟು ಪ್ರಭಾವವಿದೆಯೆಂಬ ವಿಷಯದಲ್ಲಿ ಮತಭೇದ ಬರಬಹುದಾದರೂ ದಕ್ಷಿಣ ಆಫ್ರಿಕಾದ ತನಿಖಾ ನಿಯೋಗದ ಸದಸ್ಯರಾಗಿ ನೇಮಿಸಲ್ಪಟ್ಟ ಶ್ರೀಮತಿ ಸರೋಜಿನಿಯಂಥವರು ಮತ್ತು ಸಾವಿರಾರು ಜನರು ಕಾಂಗ್ರೆಸಿನ ಆಜ್ಞೆ ಮೇರೆ ಪ್ರೀತಿಯಿಂದ ಜೈಲ್ ವಾಸವನ್ನು ಸ್ವೀಕರಿಸಲು ತಯಾರಿದ್ದಾರೆಂಬುದನ್ನೇನೋ ಎಲ್ಲರೂ ಒಪ್ಪಲೇಬೇಕು. ಹೀಗಿರುವಾಗ ಸರಕಾರದ ನಿರ್ದಾಕ್ಷಿಣ್ಯದ ದಬ್ಬಾಳಿಕೆಯಿಂದ ಜನರಿಗೂ, ಸರಕಾರಕ್ಕೂ ದ್ವೇಷವು ತುಂಬಾ ಹೆಚ್ಚುತ್ತಿದೆಯೆಂಬುದು ನಿಜವಲ್ಲವೇ? ಮನಸ್ಸಿನ ಮೇಲೆ ಆಗುವ ಈ ಪ್ರಭಾವವನ್ನು ತೀರ್ಮಾನಿಸತಕ್ಕಂಥ ವಿಷಯವಲ್ಲ. ಮುಂದಾಲೋಚನೆ ಇರುವ ಮುಖಂಡರು ಈ ಕಾರಣದಿಂದಲೇ ಮುಂದೆ ಬಂದು ಈ ದಬ್ಬಾಳಿಕೆಯನ್ನು ನಿಲ್ಲಿಸಬೇಕೆಂತ ಹೇಳುವುದಾಗಿದೆ. ಅವರ ಅಭಿಪ್ರಾಯಗಳಿಗೆ ಗೌರವ ಕೊಡಲೇ ಬೇಕು.

ಈಗಿನ ವಿಧ್ವಂಸನದ ಮೇಲೆ ಬೆಳಕನ್ನು ಬೀರುವ ಅಭಿಪ್ರಾಯಗಳು ಹಿಂದೂಸ್ಥಾನದ ಪತ್ರಿಕೆಗಳಲ್ಲಿ ಕೊಟ್ಟಿರುವುದನ್ನು ನಾವು ಕೊಡಲು ಅಪೇಕ್ಷಿಸುವುದಿಲ್ಲ. ಯಾಕೆಂದರೆ ಅವು ಪಕ್ಷಪಾತಿಗಳಾಗಿ ಬರೆದಿರಬಹುದೆಂತ ಹೇಳಬಹುದು. ಪತ್ರಿಕೆಗಳೇ ಜನರ ಅಭಿಪ್ರಾಯಕ್ಕೆ ರೂಪಕೊಡುವಂಥವು ಎಂಬುದು ಸರ್ವಸಮ್ಮತವಾದ ವಿಷಯ, ಆದ್ದರಿಂದ ಪತ್ರಿಕೆಗಳ ಅಭಿಪ್ರಾಯವನ್ನು ಅಲ್ಲಗಳೆಯಬಾರದು. ಹೇಗೂ ಅಂಥಾ ಪತ್ರಿಕೆಗಳ ಮತವನ್ನು ಬದಿಗೆ ಇಡೋಣ, ಸರ್ ಶಿವಸ್ವಾಮಿ ಐಯ್ಯರ್, ಸರ್ ತೇಜ್‌ಬಹಾದ್ದೂರ್ ಸಪ್ರುರಂಥವರ ಅಭಿಪ್ರಾಯಗಳೇ ಸಾಕಾಗಿದೆ. ಇವರು ಕಾಂಗ್ರೆಸಿನ ಪರವೆಂತ ಹೇಳಲು ಸಾಧ್ಯವಿಲ್ಲವಷ್ಟೆ. "ದಬ್ಬಾಳಿಕೆಯ ಶಾಸನಗಳು ಮತ್ತು ಅದನ್ನು ಜಾರಿಮಾಡುವ ರೀತಿ ಇದರಿಂದ ಒಂದು ಫಲಿತಾಂಶವಾಗುವುದರಲ್ಲಿ ಸಂಶಯವೇನೂ ಇಲ್ಲ. ಶಾಸನಗಳು, ಶಾಂತಿಕಾಲದಲ್ಲಿ ಮತ್ತು ಜನರ ಎಲ್ಲಾ ಕಷ್ಟಗಳಿಗೂ ಸರಕಾರದವರೇ ದೂರುವ ಸ್ವಭಾವವಿರುವಾಗ, ಜಯವಾಗಿ ಹೆಚ್ಚಾಗುತ್ತದೆ"—ಎಂತ ಸರ್ ಶಿವಸ್ವಾಮಿ ಐಯ್ಯರು ಬರೆದಿದ್ದಾರೆ. ಇದೇ ಸರಕಾರದ ದಬ್ಬಾಳಿಕೆಯ ವರ್ತನೆಯನ್ನು ಖಂಡಿಸಲು ಸಾಕು. ದುಂಡು ಮೇಜು ರೀತಿಯಲ್ಲಿ ಸಂಪೂರ್ಣ ನಂಬಿಕೆ ಇರುವ ಸರ್ ತೇಜ್‌ಬಹಾದ್ದೂರ್ ಸಪ್ರೂರವರು ಹೇಳಿರುವುದೇನೆಂದರೆ:—

"ದ್ವೇಷವು ಹಚ್ಚುತ್ತಾ ಹೆಚ್ಚಿದೆ—ಸರಕಾರದ ಮೇಲೆ ಅಸಂತುಷ್ಟಿಯು ಕಾಂಗ್ರೆಸಿನವರಿಗೆ ಮಾತ್ರವಲ್ಲ, ಕಾಂಗ್ರೆಸಿಗೆ ಸೇರದವರಿಗೆ ಸಹ ಹರಡಿದೆ—"ಸರಕಾರಕ್ಕೆ ಪಶ್ಚಾತ್ತಾಪವಾಗಿರುವ ಈ ಇಬ್ಬರು ಪ್ರಮುಖ ಮುಖಂಡರ ಮಾತಿನಲ್ಲಿ ಅರ್ಥವಿಲ್ಲವೇ? ದಬ್ಬಾಳಿಕೆಯಿಂದ 'ಅತೃಪ್ತಿ', 'ಅಸಂಬಳಿಕೆ' ಮುಂತಾದ್ದು ಹೆಚ್ಚುತ್ತಿದೆಯೆಂತ ಇಂಥವರು ಹೇಳುವಾಗ ಸರಕಾರವು ತನ್ನ ರೀತಿಯನ್ನು ವಿಮರ್ಶಿಸಿ ನೋಡಬೇಕಾದ ಅವಶ್ಯವಿಲ್ಲವೇ?

ಹಿಂದೂಸ್ಥಾನದ ಸ್ಥಿತಿಯನ್ನು ಕಣ್ಣಾರೆ ಕಂಡು ತನ್ನ ಅಭಿಪ್ರಾಯವನ್ನು ಪ್ರಕಟಿಸಿದ ಕೆಲವು ಬ್ರಿಟಿಷರೂ ಇದ್ದಾರೆ—ಸರಕಾರಕ್ಕೂ, ವಿದ್ಯಾವಂತ ಹಿಂದೀಯರಿಗೂ ಈಗಿನಷ್ಟು ಮನಸ್ತಾಪ ಇನ್ನೆಂದೂ ಆಗಿರಲಿಲ್ಲವೆಂತ ರೆವರೆಂಡ್ ಜೆ. ಯಫ್. ಎಡ್ವರ್ಡ್ಸ್‌ರು ಬರೆದಿದ್ದಾರೆ—'ಈ ಆರ್ಡಿನೇನ್ಸ್‌ಗಳು ಶಾಂತಿ ಸ್ಥಾಪನೆ ಮಾಡಲು ಸಹಾಯಕರವಾದರೂ ಅವುಗಳನ್ನು ಜಾರಿ ಮಾಡುವ ರೀತಿಯಿಂದ ಉಂಟಾಗಿರುವ ಸಿಟ್ಟು ಆರ್ಡಿನೇನ್ಸ್‌ಗಳ ಪ್ರಯೋಜನವನ್ನು ಮರೆಸಿಯೇ ಬಿಟ್ಟಿದೆಯೆಂತ ನನ್ನ ಅಭಿಪ್ರಾಯ' ಎಂತ ಪ್ರೊಫೆಸರ್ ಜಾನ್ ಕೇಳಾಸರು ಹೇಳಿರುತ್ತಾರೆ. ಬ್ರಿಟಿಷ್ ಜನಾಂಗದ ಮನೋಭಾವವನ್ನು ಪಾರ್ಲಿಮೆಂಟಿನಿಂದಲೇ ತಿಳಿಯತಕ್ಕದ್ದು ಎಂಬ ಮಾತೇನೋ ನಿಜ. ಆದರೆ ಹಿಂದೂಸ್ಥಾನಕ್ಕೆ ಸಂಬಂಧಪಡುವಂಥ ವಿಷಯಗಳಲ್ಲಿ ಪಾರ್ಲಿಮೆಂಟಿನ ಅಭಿಪ್ರಾಯ ಪ್ರಯೋಜನವಾಗುವುದಿಲ್ಲ. ಯಾಕೆಂದರೆ—ಪಾರ್ಲಿಮೆಂಟಿನ ಅಭಿಪ್ರಾಯವು ಪಾರ್ಟಿಗಳನ್ನು ಹೊಂದಿದೆ. ಪಾರ್ಲಿಮೆಂಟಿನ ಸಭಿಕರೆಲ್ಲರೂ ಮೆಜಾರಿಟಿಯಿಂದ ತಯಾರಾಗಿರುವಂಥ ಪಾರ್ಟಿ ಅಭಿಪ್ರಾಯಗಳಿಗೆ ಒಳಗಾಗಿರಲೇಬೇಕು. ಆದರೂ ಈಗಿನ ಪಾರ್ಲಿಮೆಂಟಿನಲ್ಲಿ ಲೇಬರ್ ಮತ್ತು ಲಿಬರಲ್ ಮುಖಂಡರು ತಮ್ಮ ಪಾರ್ಟಿ ಅಭಿಪ್ರಾಯವನ್ನು ಲಕ್ಷಿಸದೆ ತಮ್ಮ ತಮ್ಮ ಅಭಿಪ್ರಾಯಗಳನ್ನು ಕೊಡುತ್ತಲಿದ್ದಾರೆ. ಪಾರ್ಲಿಮೆಂಟಿನ ಹೊರಗಿರುವ ಮಿ. ಬ್ರೈಲ್ಸ್‌ಫರ್ಡ್ ಮತ್ತು ಅಲೆಗ್ಸಾಂಡರ್‌ರಂಥ, ಜನರ ಅಭಿಪ್ರಾಯವನ್ನು ತಯಾರಿಸುವ ಮುಖಂಡರು ಈಗಿನ ರಾಜನೀತಿಯನ್ನು ಖಂಡಿಸಿ ರಾಜಿಮಾರ್ಗವನ್ನು ಹಿಡಿಯಬೇಕೆಂತ ಹೇಳಿದ್ದಾರೆ—'ಮ್ಯಾಂಚೆಸ್ಟರ್ ಗಾರ್ಡಿಯನ್' ಮುಂತಾದ ಕೆಲವು ಪತ್ರಿಕೆಗಳು ಸಹ ರಾಜಿಮಾಡಿಕೊಳ್ಳಬೇಕೆಂತ ಸರಕಾರಕ್ಕೆ ಸಲಹೆ ಕೊಡುತ್ತವೆ. ಅಂಥಾ ಪತ್ರಿಕೆಗಳಿಂದ ಅಭಿಪ್ರಾಯಗಳನ್ನು ಎತ್ತಿ ಬರೆಯಬೇಕಾದ ಅವಶ್ಯವಿಲ್ಲ. ಯಾಕೆಂದರೆ—ಅವು ರಾಶಿ, ರಾಶಿ ಇವೆ.

ದುಂಡು ಮೇಜು ಕಮಿಟಿಗಳು ಹೆಚ್ಚಿನ ತ್ವರೆಯಿಂದಲೂ, ಉತ್ಸಾಹದಿಂದಲೂ ಕೆಲಸ ಮಾಡಿದ್ದರೆ ಈಗಿನ ಕಗ್ಗತ್ತಲಿನ ಆಕ್ರಮಣೆಯು ಶೀಘ್ರದಲ್ಲಿಯೇ ಅಂತ್ಯವಾದೀತೆಂಬ ಆಶೆ ಇತ್ತು. ಆದರೆ ಹಿಂದೂ ಮುಸ್ಲಿಂ ಸಮಸ್ಯೆ ಮತ್ತು ರಾಜರುಗಳ ಅಭಿಪ್ರಾಯ ಮುಂತಾದ ಅಡಚಣೆಗಳಿಂದ ಈ ಕಮಿಟಿಗಳ ಕೆಲಸವು ಮುಂದರಿಯಲು ಅಡ್ಡಿಗಳಿವೆ. ಆದ್ದರಿಂದ ಹಿಂದೂಸ್ಥಾನದ ಕತ್ತಲು ಹರಿಯುವ ಸಂಭವವೇ ಕಾಣುವುದಿಲ್ಲ. ವಿಧ್ವಂಸನವನ್ನು 'ಮ್ಯಾಂಚೆಸ್ಟರ್ ಗಾರ್ಡಿಯನ್' ಹೀಗೆಂತ ವಿವರಿಸಿದೆ: 'ಬಂದೀಖಾನೆಗಳೆಲ್ಲಾ ರಾಜಕೀಯ ಕೈದಿಗಳಿಂದ ತುಂಬಿದವಾಗ ಎನ್ನೊಬ್ಬರ ಅಭಿಪ್ರಾಯಗಳನ್ನಿಲ್ಲಿ ಪ್ರಕಟಿಸುವ ಸ್ವಾತಂತ್ರ್ಯ ಸಹ ಪತ್ರಿಕೆಗಳಿಗೂ ಇಲ್ಲದಿರುವಾಗ ದುಷ್ಟರ ಪೇಟೆಯ ಕೇಸಿನ ಸ್ಥಿತಿ. ಒಂದು ಮೇರೆ ಪೋಲೀಸಿನವರು ಮನಸು ಬಂದಂತೆ ಅತ್ಯಾಚಾರ ನಡಿಸಲು ಉತ್ತೇಜಿಸಲ್ಪಡುತ್ತಿರುವಾಗ ದುಂಡು ಮೇಜು ಪರಿಷತ್ತಿನ ಕಮಿಟಿಗಳು ಭೂತ ಪಿಶಾಚಿಗಳಂತೆ ಮೇಜದಲ್ಲಿ ಸುತ್ತುತ್ತಾ ಇವೆ. ದಬ್ಬಾಳಿಕೆಯು ನಿಷ್ಪ್ರಯೋಜನವಾಗುವುದಲ್ಲದೆ, ಬೇರೆ ರೀತಿಯಿಂದ ರಾಜಿ ಮಾಡಿಕೊಳ್ಳುವುದನ್ನು ಸಹ ದಬ್ಬಾಳಿಕೆಯು ಅಸಾಧ್ಯ ಮಾಡುತ್ತದೆ. ದಬ್ಬಾಳಿಕೆಯಿಂದ ಅತೃಪ್ತಿಯು ದ್ವೇಷವಾಗಿ ಪರಿಣಮಿಸಿ ಅಂಥಾ ದ್ವೇಷವನ್ನು ಮುರಿಯಬೇಕಾದರೆ ಎಷ್ಟೋ ತಲೆ ಕಳೆಯಬೇಕಾಗುತ್ತದೆ—ಎಂತ 'ಡೈಲಿ ಹೆರಾಲ್ಡ್' ಎಂಬ ಪತ್ರಿಕೆಯು ಬರೆದಿದೆ.

ಇದರಿಂದೆಲ್ಲಾ ಆಗುವುದೇನು? ದಬ್ಬಾಳಿಕೆ ಮತ್ತು ಸುಧಾರಣೆ ಎಂಬ ದ್ವಿಮುಖ ಕಾರ್ಯಕ್ರಮವು ನಿಷ್ಪ್ರಯೋಜನವಾಗುತ್ತದೆ. ಕುದಿಯುವ ಪಾತ್ರಕ್ಕೆ ಒಳಗಿನ ಬಿಸಿಯು ಹೆಚ್ಚುತ್ತಲೇ ಇರುವ ವರೆಗೆ ಮುಚ್ಚಳವನ್ನು ಒತ್ತಿ ಹಾಕಿದ್ದರಿಂದ ಪ್ರಯೋಜನವಿಲ್ಲ. ದೇಶದ ಈಗಿನ ವಿಧ್ವಂಸನದಿಂದ ದೊರೆಯುವ ಸ್ಥಿತಿಯು ನರಕಕ್ಕಿಂತ ಕಡೆಯಾದೀತು. ಆದ್ದರಿಂದ ಅನ್ಯೋನ್ಯ ನಂಬಿಕೆಯನ್ನು ಇಟ್ಟುಕೊಂಡು ರಾಜಿ ಮಾಡಿಕೊಳ್ಳಬೇಕೆಂತಲೇ ನಾವು ಕೇಳಿಕೊಳ್ಳುತ್ತೇವೆ. ಆದರೆ ಇದು ಸಾಧ್ಯವಾಗದೇ ಇದ್ದರೆ ಆರ್ಡಿನೇನ್ಸುಗಳು ರದ್ದಾಗಬೇಕು ಶಾಸನಭಂಗ ಚಳವಳಿಯು ನಿಲ್ಲಿಸಲ್ಪಡಬೇಕು. ಸರಕಾರವು ಈ ರಾಜಿ ಪ್ರಯತ್ನವನ್ನು ಮಾಡಲಿಕ್ಕಿಲ್ಲವೇ?

"KODAGU" OFFICE MERCARA.
If not delivered please return to
.350.

ಕೊಡಗು.

[illegible]

[illegible] ಚಂದಾ ರೂ. ೩—೮—೦.

ಸಂಪಾದಕ—ಮೊಚಿಮಂಡ ಯಂ. ಗಣಪತಿ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೧ | ಮಡಿಕೇರಿ, ಸನ್ ೧೯೩೨ನೇ ಇಸವಿ ಮೇ ತಾರೀಕು ೧೩ ನೇ ಶುಕ್ರವಾರ. | ಸಂಚಿಕೆ ೪೯

SARI-PIN.

BRACELETS.

NECKCHAINS.

EAR-RINGS.
(Thodus)
Cut-rubys Rs. 25 to 50
With diamond in centre Rs. 80 to 120

Gold Rs. 10
Set rubys forming any letter Rs. 12

NOSE-RINGS.
Diamond in small size of best quality Rs. 35 & upwards according to size.

MARRIAGE PRESENTATIONS

Attractive and inexpensive articles ready in stock. Prompt execution. Details on enquiry free with catalogue. Numerous customers in Coorg thoroughly satisfied with reliable service. Testimonials pouring in.

Telegrams: 'PRECIOUS.'

V. Subramaniaier
Jeweller,

Telephone 8145.

CATALOGUE ON ENQUIRY.

Post Box 423, Triplicane, P. O., MADRAS.

MARRIAGE PRESENTATIONS.

Estimates free on enquiry.

Silver Guindys, Photo lockets, Dimond nose-screws, cut-ruby ear-rings, etc., etc., etc., in all prices. Very attractive. Prices most moderate.

Free on enquiry.

Pendant.



Tumblers with stand.

Fancy plate.

52—28

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್. ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲು)

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	26,800
ಜಮೂಬಂದ ಠೇವಣಾತಿ	—	2,50,301

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ಕರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ತಕೊಡ್ಪಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು,	ಟ್ರೆಜರರ್
ಕೋಳುಮಂಡ ಅಪ್ಪಯ್ಯನವರು!	ಮನೆಯಪ್ಪಂಡ ಬೆಳ್ಯಪ್ಪ
ರಾವ್ ಬಹದ್ದೂರ್.	ನವರು.

ಸೆಕ್ರೆಟರಿ

ಸಿ. ಯಮ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್

ತಾರೀಖು 1—7—1931.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಉತ್ತರ ಕೊಡಗಿಗೆ ಮೆ· ಚಾರಂಡ ಮೊಣ್ಣಯ್ಯನವರು

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ: ಮುಂಡೇಪಂಡ ಸೋಮಯ್ಯನವರು, (ಖಾದಿಭಂಡಾರ.)

ನಾಪೋಕ್ಲು—ಎಸ್. ಆರ್. ವೆಂಕಪ್ಪಯ್ಯನವರು.

ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,

ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಯ್ಯನವರು, ಮತ್ತು ಅರಮಣಮಾಡ ಪಿ ಕಾರ್ಯಪ್ಪನವರು,

ಕುದಿಕೇರಿ & ತಿತಿಮತ್ತಿ—ಮೆ. ಜಿ. ಮಾಚಯ್ಯನವರು,

ಕುಂಟಿಕೊಪ್ಪ—ಮೆ. ಅಪ್ಪಚಟ್ಟೋಳಂಡ ಮೊಣ್ಣಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಿಸಲು ಅವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಖರಾರು ಫಾರಮುಗಳೂ, ಜಮ್ಮ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಖರಾರು ಫಾರಮುಗಳೂ, ಸ್ಟೋರ್ ಕೀಪರ್ ಖರಾರು ಫಾರಮುಗಳೂ, ಓವಚರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮಾ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಎಷ್ಟು ಬರಲಿಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.

ವಿಮೆದಾರರಿಗೆ ಕೊಟ್ಟದ್ದು—3231 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.

ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,78,322 ಜನರಿಗೆ 38ಕೋಟಿ ರೂ.

ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ಕ್ಕಿಂತ ಹೊರದ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದಾಗಿದೆ.

ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚಿನ ಉತ್ಸಾಹವನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬುದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು,

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ಬೆಂಗಳೂರು	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೋ	ಪಾಟ್ನಾ	ಸುಕ್ಕೂರು
ಅಲಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಡಾರ್ಜಲಿಂಗ್	ಮಂಡಲೆ	ರಾಯಪುರ	ತಿರುವೆಂಡ್ರಮ್
ಭೋಪಾಲ್	ಕರಾಚಿ	ಮಂಗಳೂರು	ರಾಂಚಿ	ವಿಶಾಖಪಟ್ಣ [52—10

ರತಿ ಕಷಾಯ ಮಲೇರಿಯಾ ರೋಗ:—ಇದು ಇಂಜಕ್ಷನ್ ಮತ್ತು ಕ್ವಿನೈನು ಸೇವಿಸಿದರೂ ಗುಣವಾಗದಿರುವ ಮಲೆ ಜ್ವರ, ದಿನಬಿಟ್ಟು ಬರುವ ಜ್ವರ, 3—4 ದಿನಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1—8—0; 3ಕ್ಕೆ ರೂ. 4—0—0; 6ಕ್ಕೆ ರೂ. 7—8—0; 12ಕ್ಕೆ ರೂ. 14

ಮಲೆ ಜ್ವರಕ್ಕೆ ರತಿ ಕಷಾಯ

ಚಂದನಾಸವ:—ಇದು ಪ್ರಮೇಹ ಮೂತ್ರ ಕೃಚ್ಛ್ರ, ಮೂತ್ರ ಸಣ್ಣದಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಹಿಂಡಿದ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹನಿಹನಿಯಾಗಿ ಉದುರುವುದು, ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಸುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು. ಇವುಗಳಿಗೆ ಪರಮ ಔಷಧಿ. ಬೆಲೆ ಬಾಟ್ಲು 1, 3, 6ಕ್ಕೆ ರೂ 1—4—0 3—8—0; 6—12—0

ರೋಮನಾಶಿನಿ:— ಈ ಹುಡಿಯನ್ನು ಕೆರೆದಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಹೋಗುವುದು. ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ. 1, 1 ಡಜನಿಗೆ 3—8—0

ಮನೋಲ್ಲಾಸಿನಿ ತೈಲ:—ತಲೆನೋವು ತಲೆತಿರುಗುವುದು, ತಲೆಭಾರ, ಕಣ್ಣುರಿ, ಕಿವಿಯಿಂದ ಕೀವು ಸೋರುವುದು ಕಿವುಡು ತನ, ಕಣ್ಣು ನೋವು, ಅಪಸ್ಮಾರ ಜಡೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು. ಇವುಗಳೆಲ್ಲ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ಹಣ್ಣಾಗಿ ನೆರೆತಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಉದುರಿದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಬೆಲೆ ಸೀಸೆಗೆ ರೂ. 1, 3 ಸೀಸೆಗೆ 2—10—0 ಒಂದು ದೊಡ್ಡ ಸೀಸೆಗೆ ರೂ. 2, 3 ಸೀಸೆಗಳಿಗೆ 5—8—0

ವಿಳಾಸ:—ಮನೋಲ್ಲಾಸಿನಿ ಕಂಪೆನಿ,

52—50 ಕೆಟಲಾಗು ಉಚಿತ ಕೋರಿರಿ. 9. ಮಂಗಳೂರು.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,

52—17 ಗಿರಿಗಾಂವ, ಮುಂಬಯಿ.

Printed & published by M. M. Ganapathy at "Kodagu" Press Mercara for "Kodagu" Ltd.

ಹೋಗಿದ್ದೆವು. ಹುಂಕಥೆಯು ಸ್ವಾರಸ್ಯವಾಗಿ ನಡೆದ ಬಳಿಕ ರಾತ್ರಿ 9½ ಗಂಟೆಗೆ ಮನೆಗೆ ಹೊರಟೆವು. ಶಾಲೆ ಬಳಿ ಒಂದು ದೀಪ ಇತ್ತು. ಆದರೆ ಶಾಲಾ ಕೊಳಗಣ ಬೆಳಕು ದಾರಿ ಎದ್ದಕ್ಕೂ ಇದ್ದುದರಿಂದ ನಾವು ಅದನ್ನು ಲಕ್ಷಿಸದೆ ಮುಂದಿನ ಮನೆಯ ಮಹದೇವಪೇಟೆಯನ್ನು ದಾಟಿ ಬರುವಾಗ ಮಧ್ಯೆ ಎಲ್ಲೂ ಬೆಳಕು ಇತ್ತಿಲ್ಲ. ಇನ್ನೂ ಕೆಳಗೆ ಬರುವರೆ ಮ. ಲಿಂಗಣ್ಣ ಸೆಟ್ಟರ ಅಂಗಡಿ ದಾಟಿದ ಮೇಲಂತೂ ಕತ್ತಲೆಯು ಕವಿದುಬರುವಂತೆ ತೋರುತ್ತಿತ್ತು. ಸಾಲದುದಕ್ಕೆ ರಸ್ತೆಯ ಬದಿಗಳಲ್ಲಿ ಕಲ್ಲು, ಮಣ್ಣುಗಳ ರಾಶಿ ರಸ್ತೆಯ ಅರ್ಧ ಭಾಗದ ವರೆಗೆ ಹಾಕಿದ್ದರು. ಬೆಳಕು ಇಲ್ಲದಿರುವುದು, ಕಲ್ಲು ಮಣ್ಣು ರಾಶಿ ಉದ್ದಕ್ಕೂ ಹರಡ್ಡೋಲಿಸ್ಸು ಹಲ್ಲದೆ ಹಾಕಿರುವುದು, ಜೊತೆಗೆ ಜನರು ತಿರುಗಾಡುವುದು, ಎಷ್ಟೋ ಮಂದಿ ಅಲ್ಪ ಸ್ವಲ್ಪ ದೃಷ್ಟಿಯುಳ್ಳವರು. ಮುಗ್ಗರಿಸಿ ಬಿದ್ದದ್ದೂ ಇದೆ. ನಾವು ಹ್ಯಾಗೂ ಕಷ್ಟದಿಂದ ನಿಧಾನವಾಗಿ ಕೆಳಗೆ ಇಳಿದೆವು. ಚೌಕಕ್ಕೆ ಬಂದ ಮೇಲೆ ಅಲ್ಲೊಂದು ದೀಪ ಉರಿಯುತ್ತಿತ್ತು.

ಜನ ಸಂಚಾರ ಹೆಚ್ಚಿರುವ ಈ ಭಾಗದಲ್ಲಿ ದೀಪಗಳನ್ನು ಮುನ್ಸಿಪಾಲಿಟಿಯವರು ಯಾಕೆ ಸರಿಯಾಗಿ ಹಚ್ಚುವುದಿಲ್ಲ? ಮತ್ತೂ ಕಲ್ಲು ಮಣ್ಣುಗಳ ರಾಶಿ ರಸ್ತೆಯ ಪಕ್ಕದಲ್ಲಿ ಹಾಕಿಬಿಟ್ಟು ಅಲ್ಲಿ ಯಾವ ತರಹದ ಅಪಾಯ ಸೊಡಳ ದೆಳಕು ಇರದಿದ್ದರೆ ಕಾಲುನಡೆಯಲ್ಲಿ ಹೋಗುವ ಜನರ ಪಾಡೇನಾಗಬೇಕು? ಮತ್ತು ಶಾಲೆಯಿಂದ ಚೌಕದ ವರೆಗೆ ಒಂದು ದೀಪವಾದರೂ ಇರಲಿಲ್ಲವೆಂದ ಬಳಿಕ—ಮೋಟಾರುಗಳ ತಿರುಗಾಡುವ ರಸ್ತೆಗಳಲ್ಲಿ ದೇಕಿದ್ದರೆ ಮಾತ್ರ ಸಾಲದು. ಜನರು ಸಂಚರಿಸುವಲ್ಲಿ ಒಳ್ಳೆಯ ದೀಪಗಳಿರಬೇಕೆಂಬುದು ಮುನ್ಸಿಪಾಲಿಟಿಯವರು ಇನ್ನಾದರೂ ತಿಳಿದು ಸರಿಪಡಿಸಿಕೊಂಡಾರೆ?

'ಪಟ್ಟಣದವ'

ಫೋಟೋ ಕ್ಯಾಮರಾ.



ಈ ಕ್ಯಾಮರಗಳಲ್ಲಿ ಇನ್ನೊಬ್ಬರ ಸಹಾಯವಿಲ್ಲದೆ ಫೋಟೋಗಳನ್ನು ತೆಗೆಯಬಹುದು. ಈ ಕ್ಯಾಮರಾ ಒಂದು ಇದ್ದರೆ ಬೇಕಾದವರಿಗೆ ಫೋಟೋ ತೆಗೆದು ಹಣ ಸಂಪಾದನೆ ಮಾಡಬಹುದು. ಪೋಸ್ಟ್ ಕಾರ್ಡಿನ ಸೈಜಿನಲ್ಲಿ ಫೋಟೋಗಳನ್ನು ತೆಗೆಯಬಹುದು. ಫೋಟೋ ತೆಗೆಯುವುದನ್ನು ಕಲಿತುಕೊಳ್ಳಬೇಕಾಗಿಲ್ಲ. ಕ್ಯಾಮರಾ ಜೊತೆಯಲ್ಲಿಯೇ ಫೋಟೋ ತೆಗೆಯುವ ವಿಧಾನವನ್ನು ಕಳುಹಿಸುವೆವು.

ಈ ಕ್ಯಾಮರವನ್ನು ತರಿಸಿಕೊಳ್ಳುವವರಿಗೆ ವರ್ಷಗಳ ಗ್ಯಾರಂಟಿ ಇರುವ ಟೈಂಪೀಸು ಒಂದನ್ನು ಇನಾಮಾಗಿ ಕೊಡುವೆವು. ಬೆಲೆ 1ಕ್ಕೆ ರೂ. 4—8—0.

M. Leo & Co. 168 China Bazar. Madras.

12—7

ಮನಿಸಿರಿ! ಪರೀಕ್ಷಿಸಿರಿ!

ಅಂದವಾಗಿ ಫೋಟೋ ತೆಗೆಯುತ್ತಾರೆ.

ದೀರ್ಘ ಕಾಲ ಬಾಳಿಕೆ ಬರುತ್ತೆ.

ಹದಿನಾಲ್ಕು ವರ್ಷಗಳಿಂದ ಮೈಸೂರಿನಲ್ಲಿ ಹೆಸರುವಾಸಿಯಾದ ಮೆಸರ್ಸ್. ಶಂಕರ್ & ಕಂಪೆನಿಯವರು ಕೊಡಗು ದೇಶದ ಭಗಿನಿ ಬಾಂಧವರ ಸಲುವಾಗಿ ಮಡಿಕೇರಿಯಲ್ಲಿ ಬ್ರಾಂಚ್ ಓಪನ್ ಮಾಡಿರುತ್ತಾರೆ.

ಇಲ್ಲಿ ದೀರ್ಘಕಾಲ ಬಾಳಿಕೆ ಬರುವಂತೆ ಬೇಕಾದ ಸಮಾನೆಯಲ್ಲಿ ಫೋಟೋ ತೆಗೆಯುವುದು. ಫೋಟೋ ಎನ್‌ಲಾರ್ಜ್ ಮಾಡುವುದು. ಆಲ್ ಪೇಯಿಂಟಿಂಗ್ ಕೆಲಸಗಳು. ಬ್ಲಾಕ್ ಮೊದಲಾದುಗಳ ಕೆಲಸಗಳು ಸದಾ ನಡೆಯುತ್ತವೆ. ಕ್ಯಾಮರಾ ಮೊದಲಾದ ಫೋಟೋ ಕೆಲಸದ ಎಲ್ಲಾ ಸಾಮಾನುಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ. ಅಮೆಚ್ಯೂರ್ಸ್ ಕೆಲಸಗಳು ಅಂದವಾಗಿ ತಯಾರಿಸಿ ಸಕಾಲಕ್ಕೆ ದೊರೆಯುತ್ತವೆ. ದರಗಳ ಬಗ್ಗೆ ವಿಚಾರಿಸಿರಿ. ಒಂದಾವರ್ತಿ ಪರೀಕ್ಷಿಸಬೇಕಾಗಿ ವಿನಂತಿ.

ಶಂಕರ್ & ಕಂಪನಿ,
ಕಾರ್ಪೊರೇಶನ್ ಪಾರ್ಕ್,
12—3 ಮಡಿಕೇರಿ.

ಪುತ್ರ ಸಂತಾನದ ಎಣ್ಣೆ.

ಈ ಎಣ್ಣೆಯು ಒಬ್ಬ ದೊಡ್ಡ ಪಂಡಿತರಿಂದ ತಯಾರಿಸಿದ್ದು. ಹೆಂಗಸರಿಗೆ ಅನೇಕ ಕಾರಣಗಳಿಂದ ಗರ್ಭವು ನಿಲ್ಲುವುದಿಲ್ಲ. ಕೆಲವರಿಗೆ 3—4 ತಿಂಗಳ ಕಾಲ ನಿಂತು ನಂತರ ಹೋಗಿ ಬಿಡುವದು. ಅಂಥಾ ಹೆಂಗಸರು ಈ ಎಣ್ಣೆಯನ್ನು ೧೫ ದಿನಗಳು ಸೇವಿಸುವದರಿಂದ ಗರ್ಭವು ನಿಂತು ಪುತ್ರ ಸಂತಾನವಾಗುವುದು. ಕೆಲವು ಹೆಂಗಸರಿಗೆ ಮುಟ್ಟಾಗುವ ಸಮಯದಲ್ಲಿಯೂ ಮುಟ್ಟಾದ ನಂತರವೂ ಉಂಟಾಗುವ ಹೊಟ್ಟೆ ನೋವು ಮುಂತಾದುವುಗಳನ್ನು ಬಂದಾಗ ಗುಣಪಡಿಸುವದು. ಈ ಎಣ್ಣೆಯನ್ನು ಬೊಂಬಾಯಿ ಮದರಾಸು ಆದಿಪಟ್ಟಣಗಳಲ್ಲಿ ಮಕ್ಕಳಿಲ್ಲದವರು ಉಪಯೋಗಿಸಿ ಪುತ್ರ ಸಂತಾನವನ್ನು ಪಡೆದಿರುವರು. ಒಂದು ಬಾಟ್ಲಿಯನ್ನು ತರಿಸಿ ಪರೀಕ್ಷಿಸಿರಿ. ಉಪಯೋಗಿಸುವ ವಿಧ ಔಷಧದ ಜೊತೆಯಲ್ಲಿ ಕಳುಹಿಸುತ್ತೇವೆ.



ಕ್ರಯ ಬಾಟ್ಲಿ 1ಕ್ಕೆ 2—8—0.

K. Nadhamuni & sons.
12— 168 China Bazar. Madras.

ರೋಲ್ಡ್ ಗೋಲ್ಡ್ ಭಂಗಾರದ ಗಡಿಯಾರಗಳು.

ಅಸಲು ಕ್ರಯ 17—12—0. ಕೆಲವು ದಿನಗಳ ವರೆಗೆ 8—12—0.

ಈ ಗಡಿಯಾರಗಳು ಬಹು ಪ್ರಖ್ಯಾತಿಯಾದ ಫಿಡೋ ಲೀವರ್ ಮೂಮೆಂಟ್‌ಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ. ಇವು ಸರಿಯಾದ ಗಂಟೆಯನ್ನು ತೋರಿಸುವುವು. ಒಳಗಡೆ



ಕೆಂಪು ಇಟ್ಟಿರುವುದು. ಇದರ ಕೇಸು ಭಂಗಾರಕ್ಕೆ ಸರಿಯಾಗಿದೆ. ಇದಕ್ಕೆ 5 ವರ್ಷ ಖಾತ್ರಿಯಾದ ಗ್ಯಾರಂಟಿ ಕೊಡುವೆವು. 1 ಕೈಯಲ್ಲಿ ಕಟ್ಟುವ ರಿಸ್ಟ್ ವಾಚ್. 1 ಪಾಕೆಟ್ ವಾಚ್, ಮತ್ತು ಒಂದು ಟೇಬಲ್ ಟೈಂಪೀಸ್ ಈ ಮೂರು ಸೇರಿ ರೂ. 8—12—0 ಮಾತ್ರ. ಈ ಕ್ರಯವು ಕೆಲವು ದಿನಗಳ ವರೆಗೆ ಮಾತ್ರ. ನಂತರ ಸಿಕ್ಕಲಾರದು. ರಿಸ್ಟ್ ವಾಚ್ ಮತ್ತು ಟೈಂಪೀಸು ರೂ. 5—8—0; ರಿಸ್ಟ್ ವಾಚ್ ಮತ್ತು ಪಾಕೆಟ್ ವಾಚ್ ರೂ. 7—0—0.

ವಿಳಾಸ:—ಕೆ. ಎನ್. ಬೆನ್‌ಸನ್ ಅಂಡ್ ಕೊ,
12—7 ಪೋ|| ಸಂ|| 1246, ಮದರಾಸು.

ಎಂಪೈರ್ ಆಫ್ ಇಂಡಿಯಾ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

(ಸ್ಥಾಪನೆಯಾದದ್ದು 1897.)

ಹಿಂದೂಸ್ಥಾನದಲ್ಲಿ ಪ್ರಾಮುಖ್ಯವೂ, ಜನಪ್ರಿಯವೂ ಆಗಿರುವ ಈ ಕಂಪೆನಿಯಲ್ಲಿ ನೀವು ಜೀವ ವಿಮೆ ಮಾಡುವುದಕ್ಕೆ ಇದೇ ತಕ್ಕ ಸಮಯ.

ಬೋನಸ್ ವರ್ಷ! ಬೋನಸ್ ವರ್ಷ!!

ಸಾಹಸವಂತರಾದ ಏಜೆಂಟರು ಬೇಕಾಗಿದೆ.

ಹೆಡ್ ಆಫೀಸು:—
ಎಂಪೈರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್,
ಬೊಂಬಾಯಿ.

ಬ್ರಾಂಚ್ ಆಫೀಸು:—
152—3 ಕಮರ್ಷಿಯಲ್ ಸ್ಟ್ರೀಟ್,
ಬೆಂಗಳೂರು.

52—32

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್.
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

1. ಉತ್ತಮ ತರಹ ಒಂದು ಸೆಟ್ ಜರ್ಮನ್ ರೀಡ್ಸ್ ಹಾಕಿರುವ ಸಿಂಗಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 20—0—0
   " ಮತ್ತು 22—8—0
2. ಡಿಟೋ ಉತ್ತಮ ತಂಪ ಹಾರ್ಮೋನಿಯಂ " 1ಕ್ಕೆ ರೂ. 25—0—0
   ಮತ್ತು 27—8—0
3. ಡಿಟೋ ಉತ್ತಮ ತರಹದ್ದು, ದೂಳು ಬೀಳದಂತೆ ಕೇಸಿನ ಮೇಲೆ ಪೂರ್ತಿ ಮುಚ್ಚಳವುಳ್ಳ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ ರೂ. 27—8—0
4. ಖಾತ್ರಿಯೂ, ಬಂದೋಬಸ್ತೂ, ಸುಸ್ವರವುಳ್ಳದ್ದೂ, ಅನೇಕ ವರ್ಷಗಳ ವರೆಗೆ ಬಾಳಿಕೆ ಬರತಕ್ಕದ್ದೂ ಆದ ಹೊಸದಾಗಿ ಸಪ್ಲೈ ಆಗಿರುವ ಫ್ರೆಂಚ್ ರೀಡ್ಸ್ ನಮೂನೆ ಇರುವ ನಮ್ಮ ಹೆಸರಿನ ರೀಡ್ಸ್ ಹಾಕಿರುವ "ಸಿದ್ಧಪ್ಪಾಸ್ ಫ್ಲೂಟ್" ಸಿಂಗಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 42—8—0
5. ಉತ್ತಮ ತರಹ 2 ಸೆಟ್ ಜರ್ಮನ್ ರೀಡ್ಸ್ ಹಾಕಿರುವ, ದೂಳು ಬೀಳದಂತೆ ಕೇಸಿನ ಮೇಲೆ ಪೂರ್ತಿ ಮುಚ್ಚಳವುಳ್ಳ ಡಬ್ಬಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ ರೂ. 32—8—0
   ಉತ್ತಮ ತರಹ 2 ಸೆಟ್ ಜರ್ಮನ್ ಮೇಕ್ ರೀಡ್ಸ್ ಹಾಕಿರುವ, ಕೈನಿಂದಾಗಲೀ ಅಥವಾ ಕಾಲಿನಿಂದಾಗಲೀ ಬಾರಿಸಲು ಅನುಕೂಲಿಸುವಂತೆ ತಯಾರಿಸಿರುವ "ಸ್ಪೆಷಲ್ ಫ್ಲೂಟ್" ಡಬ್ಬಲ್ ರೀಡ್ಸ್ ಹ್ಯಾಂಡ್ ಲೆಗ್ ಹಾರ್ಮೋನಿಯಂ 1ಕ್ಕೆ ರೂ. 78—

ನಮ್ಮ ಟಿಂಬರ್ ಡಿಪೋನಲ್ಲಿ ಕಟ್ಟಡಗಳಿಗೂ, ಫರ್ನಿಚರ್ ತಯಾರಿಸಲೂ ಬೇಕಾದ ಎಲ್ಲಾ ನಮೂನೆ ನಾಟುಗಳನ್ನು ಸುಲಭ ದರದಿಂದ ವಿಕರಿಗಿಟ್ಟಿರುವುದಲ್ಲದೇ, ಗಿರಾಕಿಗಳು ಅಪೇಕ್ಷಿಸುವ ಸೈಜಿಗೆ ಕುಯಿಸಿಯೂ ರಿಯಾಯಿತಿ ದರದಿಂದ ಸಪ್ಲೈ ಮಾಡುತ್ತೇವೆ. ಹೆಚ್ಚಿಗೆ ವಿಷಯಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಳಾಸ:—ಯಂ. ಎಸ್. ಶಿದ್ದಪ್ಪ ಬ್ರದರ್ಸ್
ಹಾರ್ಮೋನಿಯಂ ಮತ್ತು ಟಿಂಬರ್ ಮರ್ಚೆಂಟ್ಸ್
ದೇವರಾಜ ಮಾರ್ಕೆಟ್, ಮೈ
52—45

ರಾಜಸೀಟ್, ಮಡಿಕೇರಿ.

(ಮಿನಗಿರಿ ಮಿನುಗಿರಿ ನಕ್ಷತ್ರ ಅಥವಾ ಆಕ್ಷಿಜ್ಞ ಕವಿಯು ಕಾಲಕಿರಿ ಅದ್ ಆರ್ಕ ನೋಟಿ-ಎಂಬಂತೆ)

ಹೋದೆನು ರಾಜಸೀಟ ನೋಡೆ |
ಬಾಡಿದ ಮನವನು ಶಾಂತಿಲಿಡೆ |
ಕಾವಿಶ್ವನ್ನನು ಅಸ್ತಮಯ |
ನೋಡದಿ ಮೋಹಗಳಾಡಿಸುತೆ ||೧||

ರಾಜನು ಕೂಡಿದೆ ನಾಕಕೂತೆ |
ರಾಜನೆ ನಾನೆಂದು ಭಾವಿಸುತೆ |
ರಾಜಿಸಿದಾಗ ಮನಕಂಡೂ |
ಸೋಜಿಗವಿರುದು ಗೋಜಿಗೆಂದು ||೨||

ಸುಂದರ ವನವಿದೆ ಮುಂದುಗಡೆ |
ಹಿಂದಿದೆ ನೋಡಲು ಬಂಧು ಲೀಲೆ |
ಅಂದದ ವನವನು ಬಣ್ಣಿಸಿಡೆ |
ಬಂಧುವೆ ಕಳುಹಲಿ ಕವಿವರನ ||೩||

ಮನಕೆನ್ನ ರಮ್ಯವ ಬೀರಿತದು |
ವನಕೇ ಚಂದವ ಇತ್ತುದಾರು |
ಘನತರವಿರುವುದು ಭಂದು ಲೀಲೆ |
ವನದೊಳು ವನವಿದೆ ಮನಕೆಣಿಸೆ ||೪||

ವಾತಳ ಭೀತಿಯ ಈಯುವುದು |
ಭೀತಳ ಮನವನು ವರ್ಜಿಸದೆ |
ಪ್ರೀತಿಯ ತೋರುದು ಈ ತಳವು |
ಭೀತಿಯ ಪ್ರೀತಿಯ ಮಾಡುತಲಿ ||೫||

ಆದಿಶೇಷಗೇನದ್ದು ತಪ್ಪೋ |
ಶೋಧನೆ ಇಲ್ಲದೆ ತೋರುದಿದಸ |
ಸಾಧ್ಯವಲ್ಲದ ಸಾಧಿಸಲು |
ಆದಿಶೇಷನೇ ಕರೆಯುವೆನು ||೬||

ಸುಂದರ ವನವೇನು ಮಂದಿರವೊ |
ನಂದಕುಮಾರನ ಬೃಂದೊವನವೊ !
ಇಂದಿರೆಯರಸನ ಮಂದಿಕವೊ !
ಅಂದದ ಚಂದ್ರನ ಮಂಡಲವೊ ||೭||

ಯನಗೇನು ಬಣ್ಣಿಸಲರಿಯದಿದ |
ಮನುಜಗಸಾಧ್ಯವಿರುವುದಿದು |
ಮನವನು ಮನ್ಮಥಗೀಯುವುದು |
ವನವಿದು ವನಗಳಶೀವತೆಯು ||೮||

ಮಡಿಕೇರಿ ಮೂಕಯಂದದವಿಲ್ಲಿ |
ಒಡನಾಡಿ ಜನಗಳ ಕೂಟವಿಲ್ಲಿ |
ತೊಡವಿಯಗೊಡವೇನು ಇಲ್ಲವಿಲ್ಲಿ |
ಕೊಡುವುದು ಜ್ಞಾನವು ಜ್ಞಾನಿಗಿಲ್ಲಿ ||೯||

ಹಲತರ ಬೋಧನೆ ಇಲ್ಲಿರುದು
ಕುಲಜಲ ನಿರ್ದರ ಇಲ್ಲಿರುದು
ಫಲಚಾರ ದಾರಿಯು ಇಲ್ಲಿರುದು
ಜಲನೆಯ ಕೊಲ್ಲುದು ಇಲ್ಲಿರುದು ||೧೦||

ಸೂರ್ಯನು ಮೂಡಿಹ ಮೋಸವಿಲ್ಲಿ |
ಯೊರಿಗೆ ಆರುಹಲಿ ನಾನಿಲ್ಲಿ |
ಮುಂದಿನು ಬಂಧುವು ಚಂದವೆಲ್ಲ |
ನಾರಿಕವನ ಆಡ ಮಾಡುತಲಿ ||೧೧||

...ಟ್ಟ ಗದ್ದೆಯ ಸಾಲುಗಳೂ |
...ಷೆ ಏಳುತ ತೋರುವವು
...ಲ್ಲಿ ದುಡಿಯುವರು |
...ಲವ ಕಳೆಯುತಲಿ ||೧೨||

...ವರಿಗೆ ಕಾಣದೇನು |
...ಯ ಮುಗಿಸುತಲೆ |
... ಆಗುತಿದೆ |
...ಗ ಬೇಡುವುದೆ ||೧೩||

...ವ್ವದೇನು |
... ಹೊರಬಲು |
... ನಮಗೇನು |
...ಇಯುತಿರೆ ||೧೪||

...ಗಳು |
...ಳಿ |
...ತೆ |

...ಳು |
...ಡಿಡೆ |

ಜಯಕರ್ನಾಟಕ ಗ್ರಂಥಮಾಲೆಯ ೨ ನೆಯ ವರ್ಷದ ಯೋಜನೆ.

ಮನೋರಂಜಕವಾದವೂ.	ಗಂಭೀರವೈಲಿಯ ಗ್ರಂಥಗಳ ಸುಗ್ಗಿ !!
ಚಂದಾ ಹಣವನ್ನು ಕಳಿಸಿ ನೋಡಿರಿ!	ವರ್ಷದಲ್ಲಿ ೬ ಪುಸ್ತಕಗಳು!!
ವಾರ್ಷಿಕ ಚಂದಾ (ಅ. ವೆ. ಸೇರಿ)	ಜಯಕರ್ನಾಟಕ ಚಂದಾದಾರರಿಗೆ
೩-೪-೦ ಮಾತ್ರ !!	೨-೦-೦ ಮಾತ್ರ !!

ಮೊದಲನೆಯ ಗ್ರಂಥವಾಗಿ ಶ್ರೀ. ಆನಂದಕಂದರ ಕಥೆಗಳ ಸಂಗ್ರಹವು. ಆಕ್ಷಯ್ಯ ತೃತೀಯೆಯ ದಿನ ಹೊರಡುವದು

ಅಲ್ಲದೆ ಶ್ರೀಯುತರಾದ. 'ಶ್ರೀನಿವಾಸ' ಬೇಂದ್ರೆ. ಬೇಂಗಡೆ ಮುಗಳಿ, ಚೆನ್ನಮಲ್ಲ ಮೊದಲಾದ ಸುರಿತ ಬರಹಗಾರರ ನಾಟಕ, ಕಾದಂಬರಿ, ಕಥೆಗಳೂ ಶ್ರೀ ಅರವಿಂದ ಯೋಗಿಗಳ ("mother") ಗ್ರಂಥದ ಅನುವಾದವೂ, ಭಾವಗೀತ ಸಂಗ್ರಹವೂ ಹೊತ್ತಿಗೆ ಸರಿಯಾಗಿ ಹೊರಡುವವು.

ನಿಯಮಿತವಾಗಿಯೇ ಪ್ರತಿಗಳನ್ನು ತೆಗೆಯುವದರಿಂದ ಚಂದಾದಾರರಾಗಲು ಬಯಸುವವರು ಈಗಲೇ ಪತ್ರ ಬರೆಯಬೇಕು.

ಎಲ್ಲ ಕಡೆಗೂ ಏಜಂಟರು ಬೇಕಾಗಿದ್ದಾರೆ.

ಪತ್ರವ್ಯವಹಾರ ಮಾಡಬೇಕು.

ವ್ಯವಸ್ಥಾಪಕ

ಜಯಕರ್ನಾಟಕ ಕಾರ್ಯಾಲಯ.

ಸಾಧನಕೇರಿ, ಧಾರವಾಡ.

'ಜೈ ಇಂಡಿಯನ್' ಚಳವಳಿ.

(ಬಿ. ಏಕ-ಯಂ. ಯಸ್. ಮಾಧವರಾವ್.

ಸಕ್ರೆಟರಿ, ಜೈ ಇಂಡಿಯನ್ ಲೀಗ್, ಮಂಗಳೂರು)

ಸರ್ವಂ ಪರವಶಂ ದುಃಖಂ,

ಸರ್ವಂ ಆತ್ಮವಶಂ ಸುಖಂ ||

(ಪರಾವಲಂಬನೆಯೇ ಪರಮ ದುಃಖವು;

ಸ್ವಾವಲಂಬನೆಯೇ ಸರ್ವ ಸುಖವು)

ಭಾರತೀಯರ ಎಲ್ಲಾ ಇಚ್ಛೆಗಳನ್ನು ತೃಪ್ತಿಪಡಿಸಲು ಬೇಕಾದ ತಕ್ಕ ಸಾಮಾನುಗಳು ಹಿಂದೂದೇಶದಲ್ಲಿ ಧಾರಾಳವಾಗಿ ಸಿಕ್ಕುತ್ತವೆ. ಜನರು ಉಪಯೋಗಿಸುವ ಸಾಮಾನುಗಳನ್ನು ಅವುಗಳಿಂದ ತಯಾರಿಸುವ ಸಾಧನಗಳು ದೇಶದಲ್ಲಿರುವವಾದರೆ ಪರದೇಶಗಳಿಂದ ಯಾವ ಸಾಮಾನನ್ನೂ ತರಿಸುವ ಅವಶ್ಯಕತೆ ಇರಲಾರದು. ಈಗ ಹಿಂದೀಯರು ಹಲವು ವಿಧದ ಸಾಮಾನುಗಳನ್ನು ಅನ್ಯ ದೇಶಗಳಿಂದ ಬಹಳವಾಗಿ ತರಿಸುವುದರಿಂದ ದೇಶದಿಂದ ಅಪಾರ ಹಣವು ಹೊರಗೆ ಹರಿದು ಹೋಗುತ್ತದೆ. ದೇಶೀಯ ಸಾಮಾನುಗಳ ಉಪಯೋಗಕ್ಕೆ ಹೆಚ್ಚಿನ ಪ್ರೋತ್ಸಾಹ ದೊರೆಯದೆ, ಅವುಗಳ ತಯಾರಿಯ ಕೌಶಲ್ಯವು ನಿರ್ನಾಮವಾಗಿರುವುದು. ಈಗ ದೇಶದಿಂದ ಹರಿದು ಹೋಗುವ ಹಣವು ಇಲ್ಲಿಯೇ ಉಳಿಯುವಂತಾಗಿದ್ದರೆ ಅದು ಬೇರೆ ಬೇರೆ ದೇಶೀಯ ಸಾಮಾನುಗಳನ್ನು ತಯಾರಿಸುವ ಮಜೂರಿಗೆ ಸಂಬಳವಾಗಿ ದೊರೆಯುತ್ತಿದ್ದಿತು. ಮುಖ್ಯಗಟ್ಟಲೆಯಲ್ಲಿ ಹಿಂದೀ ಸ್ತ್ರೀ ಪುರುಷರಿಗೆ ಉದ್ಯೋಗ ದೊರೆತು ಅವರು ಅಶನ ವಸನ ಮತ್ತು ಜೀವನದ ಇತರ ಸರ್ವ ಸಾಮಾನ್ಯ ಸುಖಾನುಕೂಲತೆ ಪಡೆಯುತ್ತಿದ್ದರು. ದೇಶದಲ್ಲಿ ಸ್ವಜನರೇ ತಯಾರಿಸುವ ಸಾಮಾನುಗಳನ್ನು ನಾವು ಹೆಚ್ಚು ಹೆಚ್ಚಾಗಿ ಉಪಯೋಗಿಸುತ್ತಾ ಬಂದರೆ ಅವುಗಳ ತಯಾರಿಯಲ್ಲಿ ಜನರು ಪಟ್ಟಾಗಿ ಕ್ರಮೇಣ ಪರದೇಶೀ ಸಾಮಾನುಗಳಿಗಿಂತಲೂ ಅವುಗಳ ಬೆಲೆ ಕಡಿಮೆಯಾಗದಿರದು. ಯಾಕೆಂದರೆ ಕಚ್ಚಾ ಮಾಲನ್ನು ಪರದೇಶಗಳಿಗೆ ಕಳುಹಿಸಿ ಅಲ್ಲಿಂದ ಸಾಜೂಕು ಸಾಮಾನುಗಳನ್ನು ತರಿಸುವ ವೆಚ್ಚವು ಉಳಿಯುವುದು. ಹಿಂದೀ ಮಜೂರರ ಸಂಬಳವು ಪರದೇಶೀಯರದನ್ನು ಎಂದಿಗಾದರೂ ಹೆಚ್ಚಾಗಲಾರದು; ಸಾಮಾನುಗಳ ಬೆಲೆಯನ್ನು ಹೆಚ್ಚಿಸಿ ಹೇರಳ ಲಾಭ ಹೊಡೆಯುವ ಮಧ್ಯಸ್ಥರು ಅಥವಾ ಏಜೆಂಟರು ಹಿಂದೂದೇಶದಲ್ಲಿ ಕಡಿಮೆಯಾಗುವರು. ವ್ಯಕ್ತಿಯಂತೆಯೇ ಜನಾಂಗವೂ ಸ್ವಾಭಿಮಾನಪೂರ್ಣವಾಗಿರಬೇಕಾದರೆ ತನ್ನ ಅಸ್ತಿತ್ವಕ್ಕಾಗಿ ಆದಷ್ಟು ಕಡಿಮೆಯಾಗಿ ಪರಾವಲಂಬಿಯಾಗಿರಬೇಕಾಗಿದೆ. ಆದುದರಿಂದ ಕೆಲಮಟ್ಟಿನ ಸ್ವಾರ್ಥತ್ಯಾಗದಿಂದಲೂ, ಪ್ರಾಯಶಃ ಸ್ವಲ್ಪ ಹೆಚ್ಚಿನ ಬೆಲೆಯಿಂದಲೂ, ನಾಜೂಕಿಗೆ ಗಮನ ಕೊಡದೆಯೂ ಸ್ವಲ್ಪ ಕಾಲ ಹಿಂದೀಯರು ಸ್ವದೇಶಿ ಸಾಮಾನುಗಳನ್ನೇ ತೆಗೆದುಕೊಂಡು ಉಪಯೋಗಿಸುವುದನ್ನು ತಮ್ಮ ಧರ್ಮವಾಗಿ ಮಾಡಿಕೊಳ್ಳಬೇಕು. ನಾವು ಹೋಗುವ ಪ್ರತಿಯೊಂದು ಅಂಗಡಿಯಲ್ಲಿಯೂ ಸ್ವದೇಶಿ ವಸ್ತುಗಳನ್ನೇ ಕೇಳುವ ನಿರ್ಧಾರವು ಇರಬೇಕು. ಅಂಗಡಿಯಲ್ಲವು ಇಲ್ಲವಾದರೆ, ಅವುಗಳನ್ನು ತಂದಿಡದಿದ್ದರೆ ನಾವು ಆ ಅಂಗಡಿಯ ಗಿರಾಕಿಗಳಾಗುವುದಿಲ್ಲ ವೆಂಬದನ್ನು ಖಚಿತಗೊಳಿಸಬೇಕು. ಅತ್ಯಭಿವೃದ್ಧಿಯನ್ನೈದಿರುವ ಇಂಗ್ಲೆಂಡು, ಯೂರೋಪ್ ಮತ್ತು ಅಮೇರಿಕ ದೇಶಗಳವರು ಈಗ ಇದೇ ರೀತಿ ಮಾಡುವರು. ಬಡ ಹಿಂದೂಸ್ಥಾನವಾಸಿಗಳಾದ ನಾವೂ ಏಕೆ ಈ ರೀತಿ ಮಾಡಬಾರದು?

ಹಿಂದಿನ ಕಾಲದಲ್ಲಿ ಹಿಂದೂದೇಶವು ತನಗೆ ಬೇಕಾದ ಎಲ್ಲಾ ನಿತ್ಯದ ಸಾಮಾನುಗಳನ್ನು ತಯಾರಿಸಿಕೊಂಡಿದ್ದುದು ಮಾತ್ರವಲ್ಲದೆ ಯೂರೋಪೇ ಮೊದಲಾದ ಇತರ ದೇಶಗಳಿಗೆ ಕಳುಹಿಸುತ್ತಿದ್ದಿತು. ಅವು ಅಷ್ಟೊಂದು ನಾಜೂಕಾಗಿದ್ದುವು. ಈಗಲೂ ಅವನ್ನೆಲ್ಲಾ ಪುನರುಜ್ಜೀವಿಸಬಹುದು, ಮತ್ತು ಹೊಸತಾಗಿಯೇ ಸ್ಥಾಪಿಸಬಹುದು. ಹಿಂದೀಯರು ಸ್ವದೇಶಿ ಸಾಮಾನುಗಳನ್ನೇ ಉಪಯೋಗಿಸಬಹುದು. ಹಿಂದೀಯರು ಸ್ವದೇಶಿ ಸಾಮಾನುಗಳನ್ನೇ ಉಪಯೋಗಿಸಿದರೆ ಅವುಗಳನ್ನು ಒಳ್ಳೆಯದಾಗಿ ತಯಾರಿಸುವಂತೆ ಪ್ರೋತ್ಸಾಹಿಸಿದಂತಾಗುವುದು. ಇತ್ತೀಚಿನ ವರೆಗೆ ಪರದೇಶದಿಂದ ಆಮದಾಗುತ್ತಿದ್ದ ಹಲವು ಸಾಮಾನುಗಳನ್ನು ಇಷ್ಟರಲ್ಲೇ ದೇಶದಲ್ಲೇ ತಯಾರಿಸತೊಡಗಿರುತ್ತಾರೆ. ಪ್ರಕೃತ ನಮಗೆ ನಿತ್ಯಗಟ್ಟಲೆಯ ಹೆಚ್ಚಿನ ಅವಶ್ಯಕತೆಗಳನ್ನು ಸ್ವದೇಶಿ ಸಾಮಾನುಗಳಿಂದಲೇ ತೃಪ್ತಿ ಮಾಡಿಕೊಳ್ಳಬಹುದು. ಆಹಾರ ಸಾಮಗ್ರಿಗಳಿಗಾಗಿ ನಾವು ಹಿಂದೂದೇಶದಿಂದ ಹೊರಗೆ ನೋಡಬೇಕಾದುದಿಲ್ಲ. ದೇಶದಲ್ಲಿ ಧಾರಾಳವಾಗಿ ಬೆಳೆಯುವ ದವಸಧಾನ್ಯ ಹಣ್ಣು ಹಂಪಲುಗಳಿಂದ ದೇಶದಲ್ಲೇ ನಾನಾ ತರದ ಆಹಾರ ಪದಾರ್ಥಗಳನ್ನು ತಯಾರಿಸಲಾಗುತ್ತದಲ್ಲದೆ ಇನ್ನೂ ಹೆಚ್ಚಿನವುಗಳನ್ನು ಮಾಡಬಹುದು. ಉಡುಗೆಯ ವಿಷಯದಲ್ಲಿ ವಿಧ ವಿಧವಾದ ಖಾದಿ ಮತ್ತು ಹಿಂದೀ ಗಿರಣಿ ವಸ್ತ್ರವು ದೊರೆಯುತ್ತದೆ. ದೇಶೀಯ ಲೋಹ ಮತ್ತು ಗಾರಿಕೆಗಳು ವಿದೇಶಿ ಸಾಮಾನುಗಳಿಗಿಂತ ಅಗ್ಗವಾದ ಮತ್ತು ಹೆಚ್ಚಿನ ಬಾಳಿಕೆಯ ಗೃಹಕೃತ್ಯ ಉಪಯೋಗದ ಸಾಮಾನುಗಳನ್ನೊದಗಿಸಬಲ್ಲವು. ಹಿಂದೀ ಪಾತ್ರೆಗಳು ಅಗ್ಗವಾಗಿ ಸುಂದರವಾಗಿವೆ. ಸಾಬೂನು, ಎಣ್ಣೆ, ಬಾಚಣಿಗೆ, ಪಾದರಕ್ಷೆ, ಶಾಯಿ, ಕಾಗದ, ಲೇಖನಿ, ಪೆನ್ಸಿಲು, ಛತ್ರಿ. ಸಾಮಾನುಗಳೆಲ್ಲಾ ಈಗ ಸ್ವದೇಶಿ ದೊರೆಯುವುದರಿಂದ ಪರದೇಶದವುಗಳನ್ನು ಕೊಳ್ಳುವ ಅವಶ್ಯವಿಲ್ಲ. ದೇಶೀಯ ವಸ್ತು, ಎಲ್ಲೋಪತಿಕ್ ಪದ್ಧತಿಯ ಮದ್ದುಗಳೂ ಈಗ ಬಂಗಾಳ ಮತ್ತು ಬೊಂಬಾಯಿಯಲ್ಲಿ ತಯಾರಾಗುತ್ತಿವೆ. ಅವುಗಳು ಪರದೇಶದವುಗಳಷ್ಟೇ ಉತ್ತಮವಾಗಿದ್ದು ಅಗ್ಗವಾಗಿ ದೊರೆಯುವವೆಂದು ಡಾಕ್ಟರರ ಅಭಿಪ್ರಾಯವಿದೆ.

ಇನ್ನು ಮುಂದಾದರೂ ನಾವು ದೇಶೀಯ ಸಾಮಾನುಗಳನ್ನೇ ತೆಗೆದುಕೊಳ್ಳುವ ನಿರ್ಧಾರ ಮಾಡಿಕೊಳ್ಳಬೇಕು. ಯಾವುದಾದರೊಂದು ಸಾಮಾನು ಬೇಕಾದರೆ ಮೊದಲು ಅದು ದೇಶೀಯವಾಗಿರುವುದೋ ಎಂಬುವುದನ್ನು ನೋಡಿಕೊಳ್ಳಿರಿ, ದೇಶೀಯವಾದರೆ ಮಾತ್ರವೇ ತನ್ನಿರಿ. ಪರದೇಶೀ ವಸ್ತುವು ನಿರ್ವಾಹವಿಲ್ಲದೆ ಬೇಕಾದರೆ ಅದರ ಬದಲಿಗೆ ಒಳ್ಳೇದಾದ ಸ್ವದೇಶಿ ವಸ್ತುವು ಸಾಲದೇ ಎಂಬದನ್ನು ವಿಚಾರಿಸಿರಿ. ಅಲ್ಲವಾದರೆ ಬೇರೆ ಯಾರಾದರೂ ತೆಗೆದುಕೊಂಡಿರುವ ಅದೇ ವಸ್ತುವಿನಿಂದ ನಿಮ್ಮ ಕೆಲಸ ಸಾಗುವಂತೆ ನೋಡಿರಿ. ಅಥವಾ ಬಹಳವಾಗಿ ಯೋಚಿಸಿ, ಪ್ರಯತ್ನಿಸಿ ಹೇಗಾದರೂ ಮಾಡಿ ಒಂದು ಪೈಯಾದರೂ ಹಿಂದೂದೇಶದಿಂದ ಹೊರ ಹೋಗದಂತೆ ನೋಡುವುದೇ ನಮ್ಮ ಕರ್ತವ್ಯವಾಗಿರಬೇಕು.

ಸ್ವದೇಶಿ ಪ್ರಚಾರಕ್ಕಾಗಿಯೂ ದೇಶೀಯ ಸಾಮಾನು ತಯಾರಿಸುವವರ ಮತ್ತು ಜನತೆಯೊಳಗೆ ನಿಕಟ ಸಂಬಂಧವನ್ನುಂಟುಮಾಡುವುದಕ್ಕಾಗಿಯೂ 'ಜೈ ಇಂಡಿಯನ್' ಲೀಗು, ಸ್ಥಾಪಿತವಾಗಿರುವುದು. ಅದಕ್ಕೆ ಎಲ್ಲಾ ಪಕ್ಷಗಳವರೂ ಸೇರುವರು. ಮತ್ತು ಅದರ ಕಾರ್ಯಕಲಾಪಗಳು ರಾಜಕೀಯ ಬಾಹ್ಯವಿರುವುದರಿಂದ ಸರ್ಕಾರವೂ ಅದನ್ನೊಪ್ಪಿರುವುದು. ಅದರ ಶಾಖೆಗಳು ದೇಶದಲ್ಲೆಲ್ಲಾ ಸ್ಥಾಪಿತವಾಗಿವೆ. ಮಂಗಳೂರಲ್ಲಿಯೂ ಇತ್ತ ಅದರ ಶಾಖೆಯೊಂದು ಏರ್ಪಾಡಾಗಿದೆ. ಪದವೀಧರ, ಭೂಮಾಲಿಕ, ವಕೀಲ, ವೈದ್ಯರೆನ್ನದೆ ಎಲ್ಲಾ ತರಗತಿ, ವೃತ್ತಿ ಮತ್ತು ಜಾತಿಯ ಜನರೂ ಅದಕ್ಕೆ ಮೆಂಬರರಾಗಿ ಸೇರಿರುವರು. ಪ್ರತಿದಿನ ಹೆಚ್ಚೆಚ್ಚು ಮೆಂಬರರೂ ಸೇರುತ್ತಿದ್ದಾರೆ. ಅದಕ್ಕೆ ಸೇರುವುದೂ ತನ್ನ ಊರಲ್ಲಿ ಅದರ ಶಾಖೆಯೊಂದನ್ನು ಸ್ಥಾಪಿಸುವುದೂ, ತಾನಾಗಿ ಸ್ವದೇಶಿ ವಸ್ತುಗಳನ್ನು ಉಪಯೋಗಿಸಿ, ಅನ್ಯರೂ ಹಾಗೆ ಮಾಡುವಂತೆ ಮಾಡುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವಿರುವುದು. ಈ ರೀತಿ ನಮ್ಮ ಮಾತೃಭೂಮಿಯನ್ನು ನಿರುದ್ಯೋಗದ ಭೀಕರತೆ ದಾರಿದ್ರ್ಯದ ದುರ್ಗಂಧ ಮತ್ತು ಖೇದಕರ ಜಡತ್ವದಿಂದ ಉದ್ಧರಿಸಬಹುದು.

'ರಾಷ್ಟ್ರಬಂಧು'

ಪತ್ರವ್ಯವಹಾರ.

[ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕರ್ತರು ಜವಾಬ್ದಾರರಲ್ಲ. ಸಂ.

ಮಡಿಕೇರಿ ಮುನ್ಸಿಪಾಲಿಟಿಯಲ್ಲಿ ಬೆಳಕು !

ಅಯ್ಯಾ,

ಕಳೆದ ವಾರ ಮಹದೇವಪೇಟೆ ಶಾಲೆಯಲ್ಲು ... ಯು ನಡೆಯಿತು. ನಾನೂ ನನ್ನ ಸ್ನೇಹಿತರು ಕೇ...

ವರ್ತಮಾನ ಸಂಗ್ರಹ.

ಒಳದೇಶ.

ಕೊಡಗು ಪ್ಲಾಂಟರು ಸಹಕಾರಿ ಸಂಘದ ಕಮಿಟಿ ಮೀಟಿಂಗೊಂದು ಬರುವ ತಾ. 17 ರಲ್ಲಿ ಸೊಸೈಟಿಯ ಆಫೀಸಿನಲ್ಲಿ ಮಧ್ಯಾಹ್ನ 2–30 ಗಂಟೆಗೆ ನಡಿಯಲಿಕ್ಕಿದೆ.

ಕಮಿಷನರ್ಸ್ ಟಾಕಿಟೂರ್ನಮೆಂಟಿನ ಮೊದಲನೆಯ ಆಟದಲ್ಲಿ ಸ್ಕೂಲಿನ ಟೀಮಿನವರು ಎಕ್ಸ್‌ಟ್ರಾ ಟೀಮಿನವರನ್ನು ಸೋಲಿಸಿರುವರು, ಪಂದ್ಯಾಟವು ಮುಂದುವರಿಯುತ್ತಲೇ ಇದೆ,

ಮೂರ್ನಾಡಿನಲ್ಲಿ ಒಂದು ಹೊಸ ಶಾಲೆಯನ್ನು ಕಟ್ಟುವುದರ ನಿಮಿತ್ತ ಮೆ., ಪಳಂಗಂಡ ಚಂಗಪ್ಪನವರು (ರಿಟಯರ್ಡ್ ರೇಂಜರ್) 1000 ರೂ, ಗಳನ್ನು ಉಚಿತವಾಗಿ ಕೊಟ್ಟಿರುವರಂತೆ,

ಪೊನ್ನಂಪೇಟೆ ಪಂಚಾಯಿತಿಯ ಅಧ್ಯಕ್ಷರಾಗಿ ಮೆ, ಕೃಟ್ಟಿಮಾಡ ಮಾದ್ಯಯ್ಯನವರೂ, ಭಾಗಮಂಡಲದ ಪಂಚಾಯಿತಿಯ ಅಧ್ಯಕ್ಷರಾಗಿ ಮೆ, ಸರಳಾಯ ಕೃಷ್ಣಭಟ್ಟರೂ ನೇಮಿಸಲ್ಪಟ್ಟಿದ್ದಾರೆಂತ ಗಜೆಟಿನಲ್ಲಿ ಪ್ರಕಟವಾಗಿದೆ,

ಊಟಕಮಂಡಿನ ರಾಮಕೃಷ್ಣ ಮಠದ ಶ್ರೀಯುತ ದೇಶಿಕಾನಂದ ಸ್ವಾಮಿಜಿಯವರು ಮಡಿಕೇರಿಗೆ ಬಂದಿರುವರು, ಇವರು ತಾ. 6 ಮತ್ತು 7ರಲ್ಲು ಜವಾನನ್ನಾಧರ ಸಂಘದ ಹಾಲಿನಲ್ಲು ಸಾಯಂಕಾಲ 6 ಗಂಟೆಗೆ ಉಪನ್ಯಾಸಗಳನ್ನು ಮಾಡುವರು,

ಕಳೆದ ಜನವರಿಯಲ್ಲಿ ಸತ್ಯಾಗ್ರಹ ಸಂಬಂಧ ವೀರರಾಜಪೇಟೆಯಲ್ಲಿ ದಸ್ತಗಿರಿಯಾಗಿ ಕಣ್ಣನೂರಿನ ಜೈಲಿಗೆ ಕಳುಹಿಸಲ್ಪಟ್ಟ ಶ್ರೀಮತಿಗಳಾದ ಪಂದ್ಯಂಡ ಸೀತವ್ವನವರು, ಒಲ್ಯಾಟಂಡ ಮುದ್ದವ್ವನವರು, ಮತ್ತು ಮುಕ್ಕಾಟಿರ ಬೋಜಮ್ಮನವರು ತಮ್ಮ 3 ತಿಂಗಳ ಕಾರಾಗೃಹವಾಸದಿಂದ ಈಗ ನಿವೃತ್ತರಾಗಿ ಕಳೆದ ತಾ. 29 ರಲ್ಲು ಕೊಡಗಿಗೆ ಬಂದಿರುವರು.

ಮಿಲಿಟರಿ ಪಟಾಲಾಮಿನ ಜನರಲ್ ಪೇರೇಡು ತಾ. 5 ರಲ್ಲಿ ಮಡಿಕೇರಿಯಲ್ಲಿ ನಡೆಯಿತು. ಆದೇ ದಿನ ಚೀಫ್ ಕಮಿಷನರವರೂ, ಕಮಿಷನರೂ ಅವರನ್ನು ಪರೀಕ್ಷಿಸಿ ಹೋದರು. ಅದೇ ದಿನ ಸಾಯಂಕಾಲ ಮಿಲಿಟರಿಯವರ ಆಟೋಟಗಳ ಸ್ಪರ್ಧೆಯು ನಡೆದು ಮೆ, ಕೂತಂಡ ಚಂಗಪ್ಪನವರು ½ ಮೈಲಿನ ಓಟದಲ್ಲಿ ಮೊದಲನೆಯದಾಗಿ ಬಂದು ಬೆಳ್ಳಿಯ ಬಟ್ಟಲನ್ನು ಗೆದ್ದಿರುವರು.

ಟಕಾವಿ ಸಾಲಗಳನ್ನು ಕಂತಿಗೆ ಸರಿಯಾಗಿ ಮರುಪಾವತಿ ಮಾಡಲು ತಕ್ಕ ಸಾಧ್ಯವಿಲ್ಲವೆಂಬದಕ್ಕೆ ತಕ್ಕ ಸಬೂಬು ತೋರಿಸಿದ ಕಂತುಗಳನ್ನು ಬದಲಾಯಿಸಿಕೊಡುವ ಅಧಿಕಾರ ಕಲೆಕ್ಟರಿಗೂ ಸಾಲ ಕೊಡುವ ಆಫೀಸರಿಗೂ ಕೊಡಲಾಗಿದೆ. ಆದರೆ ಸಾಲ ಮರುಪಾವತಿಗೆ ಮೊದಲು ಕೊಟ್ಟ ಅವಧಿ ಯು ಮುಂದೆಗೆ ಮೀರಬಾರದು. ಹೀಗೆಂತ ರೂಲನ್ನು ಬದಲಾಯಿಸಿರುವುದಾಗಿ ಗಜೆಟಿನಲ್ಲಿ ಪ್ರಕಟವಾಗಿದೆ.

ಹಿಂದೂದೇಶ.

ಅಮರಾವತಿಯ, ಡಾಕ್ಟರ್ ಯಸ್‌, ಜೆ, ಪತವರ್ಧನರವರನ್ನು ರಾಜದ್ರೋಹಕ್ಕಾಗಿ ಮೊದಲು 3 ವರ್ಷ ಕಠಿಣ ಸಜೆಗೂ ಮತ್ತು 750 ರೂ, ದಂಡವಿಧಿಸಿದ್ದನ್ನು ಈಗ ಸಜೆಯಲ್ಲಿ ಒಂದು ವರ್ಷ ಕಡಿಮೆ ಮಾಡಿರುವರು,

ಮೆ, ಆರ್, ಯಸ್‌, ಪಂಡಿತ್‌ರವರಿಗೆ ಅಲ್ಲಹಬಾದಿನ ಎಲ್ಲೆಯನ್ನು ಮೀರಿ ಹೋಗಬಾರದೆಂದಿದ್ದರೂ ಅವರು ಕಳೆದ ವಾರ ಡೆಲ್ಲಿಗೆ ಹೋದುದಕ್ಕಾಗಿ 1 ವರ್ಷ ಕಠಿಣ ಸಜೆಗೂ, 200 ರೂ, ಗಳ ದಂಡಕ್ಕೂ ಗುರಿಪಡಿಸಲ್ಪಟ್ಟಿರುವರು,

ಈ ವಾರ ಇಂಡಿಯಾದಿಂದ ಹೊರಗೆ ಸಾಗಿ ಹೋದ ಚಿನ್ನದ ಬೆಲೆ 90 ಲಕ್ಷಕ್ಕಿಂತ ಸ್ವಲ್ಪ ಹೆಚ್ಚಾಗಿದೆ, ಕಳೆದ ಸೆಪ್ಟಂಬರಿನಿಂದ ಇಲ್ಲಿಯ ವರೆಗೆ ಇಂಡಿಯಾದೇಶದ ರೇವನ್ನು ಬಿಟ್ಟ ಚಿನ್ನದ ಮೊತ್ತದ ಬೆಲೆ 62 ಕೋಟಿ ಎರಡು ಲಕ್ಷ,

ಗುಜರಾತ್ ನೆರೆ ಹಾವಳಿ ನಿವಾರಣಾ ಕಮಿಟಿಯ ಕಾರ್ಯದರ್ಶಿಗಳು ತಮ್ಮ ಲೆಕ್ಕಗಳನ್ನು ಪ್ರತಿ ವಾರವೂ ಪೋಲೀಸ್ ಸುಪರಿಂಟೆಂಡೆಂಟರವರಿಗೆ ತೋರಿಸಬೇಕೆಂದು ಹುಕುಂ! ಶಾಸನಭಂಗದ ನೆರೆಯಲ್ಲಿ ದುಡ್ಡು ತೀಲಬಿಡುವರೋ ಎಂಬ ಸಂದೇಹದಿಂದಂತೆ,

ಬೊಂಬಾಯಿಯ ಭಟವಾಡಿಯ ಒಂದು ಮನೆಯಲ್ಲಿ ಕಾಂಗ್ರೆಸಿನವರು ತಮ್ಮ ಗುಪ್ತ ಕೆಲಸಗಳನ್ನು ನಡಿಸುತಿದ್ದರೆಂಬ ಅನುಮಾನದ ಮೇರೆ ಆ ಮನೆಯು ಜಡತಿಮಾಡಲ್ಪಟ್ಟು ಹಲವು ಕಾಂಗ್ರೆಸ ಪತ್ರಗಳು ಮತ್ತು ನಗದು 940 ರೂ. ಯನ್ನು ಪೋಲೀಸರು ವಶಮಾಡಿಕೊಂಡರು,

ಕೌಕತಾಲಿಯವರು ನವ ವಧುವನ್ನೊ ಡಗೂಡಿ ವಿದೇಶ ಯಾತ್ರಕ್ಕೆ ಹೊರಡುವಾಗ, 'ನೀವು ಹೇಳುವಂಥಾ ಪ್ರೇಮ ಅಕಸ್ಮಿಂತ ದೊರಕದಿದ್ದರೂ ನನಗೆ ದೊಡ್ಡ ವನೊಬ್ಬನು ಬೇಕಿತ್ತು! ಎಂದು ವಧುವು ಹೇಳಿದ ದೊಡ್ಡ ಮಾತನ್ನು ದೊಡ್ಡವರೆಲ್ಲರೂ ಮರೆಯಬಾರದಾಗಿದೆ.

ಬಂಕೂರಾ ಡಿಸ್ಟ್ರಿಕ್ಟ್ ಬೋರ್ಡಿನ ಮೆಂಬರರೂ, ಗಣ್ಯ ಶ್ರೀಮಂತರೂ ಆಗಿರುವ ಬಾಬು ನರೇಂದ್ರನಾಥ ಬೋಸರವರು ತಮ್ಮ ಒಂದೂರನ್ನು ಪೋಲೀಸ್ ಸ್ಟೇಷನಿಗೂ ಹೆಡ್ ಕಾನ್‌ಸ್ಟೇಬಲರಾಗಿ ಕೆಲಸ ನೋಡಬೇಕೆಂದು ಆ ಜ್ಞಾಪಿಸಿ—ಇವರು ರಿಜರ್ವ್ ಖಾತೆಗೆ ಸೇರಿದಂತಿದೆ

ಪ್ರಬೋಧ ಚಂದ್ರಭಟ್ಟಾ ಚಾರ್ಜಿ ಎಂಬೊಬ್ಬ ಯುವಕ ಮಿಡ್ನಾಪೂರ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಾದ [illegible]

ಗ್ಯಾಸ್‌ರನ್ನು ಪಿಸ್ತೂಲಿನಿಂದ ಹೊಡೆದು ಗಾಯಪಡಿಸಿ ತಾನೂ ಪೋಲೀಸರ ಕೈಸೆರೆಯಾದನು, ಮಿ, ಡಗ್ಲಸ್‌ರವರು ಕಳೆದ ತಿಂಗಳ 30 ನೆಯ ರಾತ್ರಿ ಪರಲೋಕವಾಸಿಗಳಾದರು,

ಮದರಾಸಿನ ಮಾರ್ವಾಡಿಯೊಬ್ಬನು ಟ್ರೈನ್ ಒಂದರಲ್ಲಿ ನಾಲ್ವತ್ತು ರೂಪಾಯಿಗಳ ಭಂಗಾರ ಗಟ್ಟಿಗಳ ಗಂಟನ್ನು ಬಿಟ್ಟು ನಡೆದನು. ಕಂಡೆಕ್ಟರನು ಸ್ವಲ್ಪ ಹೊತ್ತಿನ ಮೇಲೆ ಪೋಲೀಸ್ ಸ್ಟೇಷನಿಗೊಪ್ಪಿಸಿದನು. ಮಾರ್ವಾಡಿಗೆ ಎಲ್ಲಿಯೋ ಭಂಗಾರದ ನೆನಪಾಗಿ ಕಳಕೊಂಡುದನ್ನು ನೋಡಿ ಮೂರ್ಛೆ ತಪ್ಪಿ ಆ ಮೇಲೆ ಜೇಕರಿಸಿ ಪೋಲೀಸರಲ್ಲಿ ದೂರಿಟ್ಟು, ಕೊನೆಗೆ ಭಂಗಾರ ದೊರೆತು ಹೇಗೂ ಬದುಕಿಕೊಂಡನು.

ಬಿಜಾಪೂರ ಜೈಲಿನಲ್ಲಿದ್ದ ಡಾಕ್ಟರ್ ಜೀವರಾಜ ಮೆಹತಾರವರನ್ನು ಬಿಡುಗಡೆ ಮಾಡಿ, ಅವರು ನಿತ್ಯವೂ ಪೋಲೀಸರಲ್ಲಿ ಕಾಣಿಸಿಕೊಳ್ಳಬೇಕೆಂಬ ಹುಕುಂ ಮಾಡಿದ್ದರು, ಆದರೆ ಅವರು ಇದಕ್ಕೆ ತಪ್ಪಿದ್ದಕ್ಕೆ ಎಮರ್ಜೆನ್ಸಿ ಪವರ್ ಆರ್ಡಿನೆನ್ಸ್ ಪ್ರಕಾರ 2 ವರ್ಷ ಕಠಿಣ ಸಜೆಯೂ 200 ರೂ, ಗಳ ದಂಡವೂ ವಿಧಿಸಲಾಗಿದೆ,

ತಾ. 24ನೇ ದಿನ ನಾಲ್ವರು ಸಿಖ್ಖರು, ಲಾಹೋರಿನಲ್ಲಿ ಸ್ಥಾಪಿತವಾಗಿರುವ ಲಾರ್ಡ್ ಲೋರೆನ್ಸ್ (ಮಾಜಿ ಗವರ್ನರ್ ಜನರಲ್) ರ ಪ್ರತಿಮೆಯನ್ನು ಚೂರು ಚೂರಾಗಿ ಮಾಡುವ ಉದ್ದೇಶದಿಂದ ಉಳಿಯನ್ನು ಪ್ರಯೋಗಿಸ ಹತ್ತಿದರು. ಲೋರೆನ್ಸ್ ಸಾಹೇಬನ ಕೈಯಲ್ಲಿನ ಕತ್ತಿ, ಮೊದಲಾಗಿ ತುಂಡಾಯಿತು. ಆದರ ಹಿಂದೆ ಲೇಖಿನಿಯು ಚೂರಾಯಿತು. ಇನ್ನು ಕೈಯ ಮೇಲೆ ಉಳಿ ಬರುವಷ್ಟರಲ್ಲಿ ಪೋಲೀಸರ ಆಗಮನವಾಗಿ ಇವರ ಕೈಗೆ ಕೋಳ ಬಿಗಿದರು.

ಮೊನ್ನೆ ತಾನೇ ಡೆಲ್ಲಿಯಲ್ಲಿ ಅಖಿಲ ಭಾರತ ಅಧಿವೇಶನದಲ್ಲಿ ದಸ್ತಗಿರಿಯಾದ ಮೆ. ಪಂಡಿತ ಮದನಮೋಹನ ಮಾಳವೀಯರನ್ನೂ, ಅವರ ಮಗನನ್ನೂ ಮತ್ತು ಇನ್ನಿಬ್ಬರು ಸ್ನೇಹಿತರೊಡನೆ ಮೊಮ್ಮಗನನ್ನು ಮೇ, ತಾ. 1ನೇ ರಾತ್ರಿ ಖುಲಾಸು ಮಾಡಿರುವರು. ಅವರನ್ನು ಕಾರಿನಲ್ಲಿ ಜೈಲಿನಿಂದ ಹೊರಗೆ ಸಾಗಿಸಿ ಗಾಜಿ ಬಾದಿನ ಹತ್ತಿರ ಬಿಟ್ಟು ಬಿಟ್ಟರು. ಇದರಂತೆಯೇ ಡೆಲ್ಲಿಯಲ್ಲಿ ದಸ್ತಗಿರಿಯಾದ 13 ಹೆಂಗಸರು ಮತ್ತು 65 ಗಂಡಸರನ್ನು ಸಹ ಬಿಡುಗಡೆ ಮಾಡಿರುವರು,

ಪ್ರೊ, ಶಿವಾಸ್ ಎಂಬಾತನು ತಾನು ಕಲಿಯುಗದ ಶಿವಾಭೀಮನೆಂದುಕೊಳ್ಳುತ್ತಾನೆ. ಇಪ್ಪತ್ತೈದು ಜನರು ಹೊರುವ ಒಂದು ದೊಡ್ಡ ದೋಣಿಯಿಂದ ಹೊಟ್ಟೆಗೆ ಹೊಡೆಯಿಸಿಕೊಳ್ಳುತ್ತಾನೆ, ಕೊರಳಿಗೆ ಒಂದು ಹಗ್ಗ ಕಟ್ಟಿಸಿ ಎರಡು ಕಡೆಗಳಿಂದಲೂ ಮೂವತ್ತು ಜನರಿಂದ ಎಳೆಯಿಸಿಕೊಳ್ಳುತ್ತಾನೆ, ಇವನ ಶಿಷ್ಯೆ ಹಸೀನಾ ಎಂಬ ಮುಸಲ್ಮಾನ ಯುವತಿ ಕಬ್ಬಿಣದ ಸರಳನ್ನು ಬಗ್ಗಿಸುವುದು; ತಲೆಕೂದಲಿಗೆ ಗಾಡಿಯನ್ನು ಕಟ್ಟಿ ಎಳೆಯುವುದು; ಮೊದಲಾದ ಅದ್ಭುತ ಶಕ್ತಿ ಪ್ರದರ್ಶನಗಳನ್ನು ಮಾಡುತ್ತಾಳಂತೆ,

ಜಗತ್ಪ್ರಸಿದ್ಧಿಯನ್ನು ಸಿದ ಗಾಮನೊಡನೆ ಮಲ್ಲಯುದ್ಧಕ್ಕೆ ಇಟಲಿಯ ಕಾರ್ನೇರನೆಂಬ ರಾಕ್ಷಸ ಯುವಕನೊಬ್ಬನು (ಅರ್ಧ ಮಿಂಡಿ ಭಾರ; 2 ಅಡಿ ಉದ್ದ) ಬರಲಿರುವನೆಂದು ನಿರೀಕ್ಷೆ, ಗೆದ್ದರೆ ಲಕ್ಷ ಪವನು ದೊರೆತನೆ ಬರುವನಂತೆ. (ಗಾಮನು ಕೆಲವು ವರ್ಷಗಳ ಹಿಂದೆ ಜುಬಿಸ್ಕೋ ಎಂಬವನನ್ನು ಎರಡು ಕ್ಷಣಗಳಲ್ಲಿ ನೆಲಕ್ಕಪ್ಪಳಿಸಿ ಜಗದೇಕನೆನಿಸಿದ್ದನು. ಈ ಕಾರ್ನರನು ಪಾಶ್ಚಿಮಾತ್ಯದೇಶಗಳ ಜಟ್ಟಿಗಳನ್ನು ಸೋಲಿಸಿ ಕೀರ್ತಿ ಪಡೆದಿದ್ದಾನೆ.) ಈ ಭಾವೀ ಯುದ್ಧವನ್ನು ಪ್ರಪಂಚವೆಲ್ಲ ಆತುರದಿಂದ ಕಾಯುತ್ತಿದೆ.

ಮದುರೆಯ ರಬ್ಬರ್ಟ್ ವಿಕ್ಟರ್ ಎಂಬ ಬಾಲಕನು ಇತರ ಗೆಳೆಯರೊಂದಿಗೆ ಆಟವಾಡುತ್ತಾ ಪುಸ್ತಕಗಳನ್ನಿಡುವ ದೊಡ್ಡದೊಂದು ಪೆಟ್ಟಿಗೆಯಲ್ಲಿ ಅಡಗಿ ಕೂತನು. ಬಾಗಿಲು ಬಿತ್ತು; ಚಿಲಕವೂ ತನ್ನಷ್ಟಕ್ಕೇ ಭದ್ರವಾಯಿತು. ಮೇಲೇಳಲಾಗಲಿಲ್ಲ; ಉಸಿರು ಕಟ್ಟಿ ಸತ್ತನು. ಆಟ ಮುಗಿದು ಬಾಲಕರು ತಂತಮ್ಮ ಕ್ಲಾಸುಗಳಿಗೆ ಹೋಟರು. ಒಬ್ಬ ಬಾಲಕನು ಆ ಪೆಟ್ಟಿಗೆಯೊಳಗಿದ್ದ ತನ್ನ ಪುಸ್ತಕಗಳಿಗಾಗಿ ಅತ್ತ ಹೋಗಿ ಬಾಗಿಲು ತೆರೆದಾಗ ಹೆಣವನ್ನು ಕಂಡು ಚೀರಿದನು. ಪೋಲೀಸ್ ತನಿಖೆಯಾಗಿ ಉಸಿರುಕಟ್ಟಿ ಸತ್ತನೆಂದು ತೀರ್ಮಾನಯಿತು.

ವಿದೇಶ.

ಸ್ವೀಡನಾ ದೇಶದ ಅರಸು ಕುಮಾರರ ಕುಮಾರರೊಬ್ಬರು ಜರ್ಮನಿಯ ಉಫಾಫಿಲ್ಮ್ ಕಂಪೆನಿಯ ಡೈರೆಕ್ಟರರಾಗುವರಂತೆ.

ಇಂಡಿಯಾ ದೇಶದಲ್ಲಿ ಬ್ರಿಟಿಷ್ ರಕ್ಷಣೆಗಿಂತ ಅನುಕೂಲವಾದ ರಕ್ಷಣೆಯಿಲ್ಲವೆಂದೂ, ಈಗಿನ ಸರ್ಕಾರವು ಬಹು ಬಲಶಾಲಿಯೆಂದೂ, ಅಭಿವೃದ್ಧಿಯು ಖಚಿತವಾಗಿದೆಯೆಂದೂ ಸರ್ ಸೇಮ್ಯುವೆಲ್ ಹೋರ್‌ರು ಹೌಸ್, ಆಫ್, ಕಾಮನ್ಸ್‌ರವರಿಗೆ ತಾ. 30 ರಲ್ಲಿ ಕೊಟ್ಟ ಅಭಿಪ್ರಾಯ.

ಶಾಂಗಾಯಿ ನಗರದ ಮೇಲೊಂದು ಬಾಂಬು ಯಾರಿಂದಲೋ ಬಿಸಲ್ಪಟ್ಟು ಐವರು ಜಪಾನ್ ಮುಖಂಡರು ಘಾಯಗೊಂಡಿರುವರು. ಒಬ್ಬಿಬ್ಬರು ಮೃತಪಟ್ಟಿರುವರು. ಬಿಸುಡಿದಾತನಾರೆಂದು ಗೊತ್ತೇ ಇಲ್ಲ. ಅವನ ಪತ್ತೆಯೂ ಇಲ್ಲ. ಚೀನಾ ಜಪಾನರ ರಾಜಿಯ ಕುರುಹು.

ಇಂಡಿಯಾದಿಂದ ಹೊರಗಿನ ದೇಶಕ್ಕೆ ರಫ್ತಾಗುತ್ತಿರುವ ಅಫೀಮಿನ ವ್ಯಾಪಾರವು ವರ್ಷಂಪ್ರತಿ ಶೇಕಡ 10 ರಂತೆ ಕಡಿಮೆಯಾಗುತ್ತಾ 1935 ರಲ್ಲಿ ನಿಂತು ಹೋಗಬಹುದೆಂದು ಜಿನೀವದ ಪರಿಷತ್ತಿನಲ್ಲಿ ಊಹಿಸಲಾಗಿದೆ. ಇದರಿಂದ ಇಂಡಿಯಕ್ಕೆ 4 ಮಿಲಿಯ ರೂಪಾಯಿಗಳ ನಷ್ಟ.

ಜಿನೀವದಲ್ಲಿ ಕೂಡಿದ ಅಂತರರಾಷ್ಟ್ರೀಯ ಪರಿಷತ್ತಿನಲ್ಲಿ ಇಂಡಿಯದ ರೈಲ್ವೆ ಕೆಲಸಗಾರರು ದಿನಕ್ಕೆ 22 ತಾಸು ಕೆಲಸ ಮಾಡಿದ ಉದಾಹರಣೆಗಳು ಎಷ್ಟೋ ಇವೆಯೆಂದು ಪ್ರತಿನಿಧಿಗಳಾದ ದಿವಾನ್ ಚಮನ್‌ಲಾಲರು ತಿಳಿಸಿದೊಂದು ವಿಶೇಷ ಮಹತ್ವದ ರಹಸ್ಯದಿಂದ ದಿನಕ್ಕೆ 24 ತಾಸುಗಳಿವೆಯೆಂದು ಸ್ಮೃತಿಗೆ ಬರುವಂತಾಯಿತು.

ಕೈಗಾರಿಕೆಗಳಲ್ಲದ ಇತರ ಕಾಮಗಾರೀ ಕಾರ್ಖಾನೆಗಳಲ್ಲಿ, ಹಿಂದೂ ದೇಶದಲ್ಲಾದರೆ 10 ವರ್ಷಗಳಿಗಿಂತ ಕಡಿಮೆ ವಯಸ್ಸಿನ ಮತ್ತು ಇತರ ದೇಶಗಳಲ್ಲಾದರೆ 14 ವರ್ಷ ವಯಸ್ಸಿಗಿಂತ ಕಡಿಮೆಯವರನ್ನು ಕೆಲಸಕ್ಕೆ ನೇಮಿಸಬಾರದೆಂದೂ ನಿರ್ಧಾರ. ಇಂಡಿಯಾದಲ್ಲಿ ಆಯುಸ್ಯವೂ ಐಶ್ವರ್ಯವೂ ಕಡಿಮೆಯಾದಂತೆ ಕೆಲಸದ ಪ್ರಮಾಣವು ಹೆಚ್ಚಲೆಂದೇ.

'ಎಂಟರ್ ಟ್ರೈನ್‌ಮೆಂಟ್ ಟ್ಯಾಕ್ಸ್' ಎಂಬ ಆಟ ವಿನೋದಗಳ ಸಂಬಂಧವಾದ ಸುಂಕವನ್ನು ಹೆಚ್ಚಿಸಿದ ಕಾರಣದಿಂದ ಇಂಗ್ಲೆಂಡಿನ ಚಲನ ಚಿತ್ರ ಕಂಪೆನಿಗಳು ಮುನಿದುಕೊಂಡು ಸುಮಾರು 500 ಸಿನೇಮಾ ಗೃಹಗಳು ಮುಚ್ಚಲ್ಪಡುವ ಸಂಭವವು ಬರಬಹುದೆಂದೂ ಎಲ್ಲಾ ಸಿನೇಮಾ ಕಂಪೆನಿಗಳು ಈ ತಿಂಗಳ ಸಪ್ತಮಾರ್ಥ 24 ಗಂಟೆಗಳ ಹರತಾಳವನ್ನು ಆಚರಿಸಲಿರುವರೆಂದು ವರ್ತಮಾನ.

ಚೀಫ್ ಫಾರೆಸ್ಟ್ ಆಫೀಸು,
ಮಡಿಕೇರಿ, ತಾ, 4–5–1932,

ನೋಟೀಸ್.

ಕೊಡಗಿನ ರಿಸರ್ವ್ ಫಾರೆಸ್ಟುಗಳಲ್ಲಿಯೂ, ಪೈಸಾರಿಗಳಲ್ಲಿಯೂ, ದೇವರ ಕಾಡುಗಳಲ್ಲಿಯೂ ಮತ್ತು ಉರುಡೈಗಳಲ್ಲಿಯೂ 1932ನೇ ಇಸವಿ ಜುಲಾಯಿ ತಾರೀಕು 1ರಿಂದ 1933ನೇ ಇಸವಿ ಜೂನ್ ತಾರೀಕು 30ರ ವರೆಗೆ ಮೈನರ್ ಫಾರೆಸ್ಟ್ ಉತ್ಪತ್ತಿಯನ್ನು ಜಮಾಯಿಸುವ ಹಕ್ಕು ಪೊನ್ನಂಪೇಟೆಯಲ್ಲಿ ಮೇ ತಾರೀಕು 20ರಲ್ಲಿಯೂ, ವೀರರಾಜಪೇಟೆಯಲ್ಲಿ 25ರಲ್ಲಿಯೂ, ಸೋಮವಾರಪೇಟೆಯಲ್ಲಿ 30ರಲ್ಲಿಯೂ, ಫ್ರೇಜರ್‌ಪೇಟೆಯಲ್ಲಿ 31ರಲ್ಲಿಯೂ ಮತ್ತು ಮಡಿಕೇರಿಯಲ್ಲಿ ಜೂನ್ ತಾರೀಕು 1ರಲ್ಲಿಯೂ ಹರಾಜು ಮಾಡಲ್ಪಡುವುದು

ಅಲ್ಲದೆ ಹಾರಂಗಿ ಹೊಳೆಯಿಂದ ಉತ್ತರಕ್ಕಿರುವ ಕಕ್ಕೆ ಮರಗಳ ಚಕ್ಕೆಯನ್ನು ಜಮಾಯಿಸುವ ಹಕ್ಕು ಸದ ಮೇ ತಾರೀಕು 30ರಲ್ಲಿ ಸೋಮವಾರಪೇಟೆಯಲ್ಲಿ ಹರಾಜು ಮಾಡಲ್ಪಡುವುದು,

ಹೆಚ್ಚಿನ ವಿವರಕ್ಕೆ ಮಡಿಕೇರಿ ಚೀಫ್ ಫಾರೆಸ್ಟ್ ಆಫೀಸರವರಿಗೆ ಬರೆದುಕೊಳ್ಳತಕ್ಕದ್ದು,

ಹೆಚ್. ಜಿ ಹಿಕ್ಸ್,
ಚೀಫ್ ಫಾರೆಸ್ಟ್ ಆಫೀಸರ್,

ಕೊಡಗು ಪ್ಲಾಂಟರುಗಳ ಸಹಕಾರಿ ಸಂಘದ
ಆಫೀಸಿನಿಂದ,
ತಾ|| 5–5–32

ನೋಟೀಸ್.

ಕಳೆದ ವಾರ ತಾ. 30–4–32ರಲ್ಲು ಕೊಡಗು ಪ್ಲಾಂಟರುಗಳ ಸೊಸೈಟಿಯ ಜನರಲ್ ಮೀಟಿಗೊಂದು [illegible] ಯಿತು. ಮೆ. ಕೊಡಂದೆರ ದೇವಯ್ಯನವರು ಪ್ರೆಸಿಡೆಂಟರಾಗಿ ಸರ್ವ ಸಮ್ಮತದಿಂದ ಚುನಾಯಿಸಲ್ಪಟ್ಟಿತ್ತು, ಈ ಕೆಳಗಿನ ಮೆಂಬರುಗಳು ಕಾರ್ಯ ಕ್ರಮ [illegible] ಮೆಂಬರುಗಳಾಗಿ ಚುನಾಯಿಸಲ್ಪಟ್ಟರು.

1. ರಾ. ಬಾ. ಕೋಡಿಮಣಿಯಂಡ [illegible]
2. ರಾ. ಬಾ. ಪಟ್ಟಮಾಡ ದೇವಯ್ಯನವರು,
3. ಯಂ. ಯಂ. ಸಿದ್ದೀಕರವರು, 4 ವ[illegible]ಯ್ಯನವರು, 5. ಮಂಡೇಟಿರ ಅಪ್ಪಯ್ಯ[illegible] ಚಂಗಪ್ಪನವರು, 7. ಎಸ್‌. ಬಸಪ್ಪ[illegible] ಬೆಳ್ಯಪ್ಪನವರು, 9. ಕೋಂಗಂಡ ಕುಶಾಲ[illegible] ಡಂದೆರ ಮಾದಪ್ಪನವರು, 11. ಮುಂಜ್ಞ ಕವ್ವಳ್ಳ[illegible]ರು, 12. ಎಸ್‌. ತಿಂಕಯ್ಯನವರು, [illegible]ಯ್ಯನವರು, 14. ನಿಡ್ಡಡ ರಾಮ[illegible] ಯಂ. ಸುಬ್ಬಯ್ಯನವರು (ಸೆಕ್ರೆಟರಿ [illegible]

ಕಳೆದ 30–4–32 ರಲ್ಲು ನಡೆ[illegible] ಟಂಗಿನಲ್ಲು ಮುಂದಿನ ವರ್ಷದ [illegible]ಕಾಲಿನಿಂದಾ[illegible] ಕಾಗುವ ಖರ್ಚಿನ ಬಗ್ಗೆ ಹೂಂ ಕೂಲಿಸುವಂತೆ [illegible] ತಾ, 15 ರೊಳಗೆ ಬರಮೂಸ್ಪತಲ್ ಫ್ಲ್ಯಾಟ್" [illegible] ರಿಂದ ಸಾಲ ಬೇಕಾದ್ದು [illegible] ಹ್ಯಾಂಡ್ ಲೆಗ್ [illegible] ಸದರಿ ತಾರೀಕಿನ ಬಳಿ 1ಕ್ಕೆ [illegible] ಕೃದ್ದು, ಆದರ [illegible] ಗುವುದಿಲ್ಲ.

ಯಂ 1ಕ್ಕೆ ರೂ. 32–8–0

ರೂ. 78

—ಯಂ. ಎಸ್‌. ತಿಮ್ಮಪ ಪ್ರದಶ[illegible]

[illegible]ಯಂ ಮತ್ತು ಹಾಜೀನ [illegible]

ಕಾಂಗ್ರೆಸು ಬೇಕಾಯಿದೇಶೀರ!

ಸರೋಜಿನಿ ದೇವಿಗೆ ಒಂದು ವರ್ಷ ಶಿಕ್ಷೆ.

ಪಂಡಿತ ಮಾಳವೀಯರ ದಸ್ತಗಿರಿ.

ಡಿಲ್ಲಿಯಲ್ಲಿ 3 ದಿನಗಳಲ್ಲಿ 600ಕ್ಕಿಂತ ಮಿಕ್ಕಿದ ದಸ್ತಗಿರಿ.

ಡಿಲ್ಲಿಯ ಪೋಲೀಸ್ ಕಮಿಶನರು 47ನೇ ಕಾಂಗ್ರೆಸ್ ಅಧಿವೇಶನದ ಸ್ವಾಗತ ಕಮಿಟಿಯನ್ನು ಇದೇ ತಾ॥ 19 ರಲ್ಲು ಬೇಕಾಯಿದೇಶೀರವಾಗಿ ಮಾಡಿ ಪೋಲಿಸರು ಸದರಿ ಕಮಿಟಿಯ ಆಫೀಸನ್ನೂ, ಅದರ 12 ಮಂದಿ ಸದಸ್ಯರ ಮನೆಗಳನ್ನೂ ಜಪ್ತಿ ಮಾಡಿದರು. ಕಾಂಗ್ರೆಸಿನ ಆಕ್ಟಿಂಗ್ ಪ್ರೆಸಿಡೆಂಟರಾದ ಸರೋಜಿನಿ ದೇವಿಯವರು ಕಾಂಗ್ರೆಸನ್ನು ನಡಿಸಲೇ ಬೇಕೆಂಬ ನಿರ್ಧಾರದಿಂದ ತಾ. 22ಕ್ಕೆ ಡಿಲ್ಲಿಗೆ ತೆರಳಲಿದ್ದರು. ಆದರೆ ತಾ. 20ರಲ್ಲು ಬೊಂಬಾಯಿಯ ಪೋಲೀಸ್ ಕಮಿಶನರು, ಸರೋಜಿನಿ ದೇವಿಯವರು ಕಾಯಿದೆ ಭಂಗ ವಿಷಯಕವಾದ ಕೆಲಸವನ್ನೇನೂ ಮಾಡಬಾರದೆಂದೂ, ಬೊಂಬಾಯಿ ಬಿಟ್ಟು ಹೋಗಬಾರದೆಂದೂ ನಿರ್ಬಂಧದ ಹುಕುಂ ಜಾರಿ ಮಾಡಿದರು. ದೊಡ್ಡ ಜನಸಮೂಹದ ಗಡಣದಿಂದ ಡಿಲ್ಲಿಗೆ ಕಾಂಗ್ರೆಸಿಗೆ ಹೋಗಲಿದ್ದ ಬೊಂಬಾಯಿಯ ಇಬ್ಬರು ಪ್ರತಿನಿಧಿಗಳನ್ನು ಪೋಲೀಸರು ತಡೆದಾಗ ಅವರು ಫಕ್ಕನೆ ಟ್ರೈನಿಗೆ ಹಾರಿ ಹೋಗಿಬಿಟ್ಟರು. ಕಾಂಗ್ರೆಸ್ ಸ್ವಾಗತ ಕಮಿಟಿ ಮೆಂಬರರ ಮನೆಗಳನ್ನು ತಾ. 28ರಲ್ಲೂ ಪುನಃ ಜಪ್ತಿ ಮಾಡಲಾಯಿತು. ಬೇಕಾಯಿದೇಶೀರವಾದ ಕಾಂಗ್ರೆಸ್ಸಿನ ಕೂಟವನ್ನು ಯಾವ ರೀತಿಯಲ್ಲಿಯೂ ಉಪಯೋಗಿಸಬಾರದೆಂದು ಈ ಮೆಂಬರರಿಗೆಲ್ಲಾ ನೋಟೀಸ್ ಕೊಡಲಾಗಿದೆ. ಲಾಹೋರಿನಿಂದ ಡಿಲ್ಲಿ ಕಾಂಗ್ರೆಸಿಗೆ ಹೋಗಲಿದ್ದ 14 ಮಂದಿ ಸ್ವಯಂ ಸೇವಕರು ಬಸ್ತಗಿರಿಯಾಗಿದೆ. ತಾ. 21ರಲ್ಲು ಕಾಂಗ್ರೆಸ್ ಸ್ವಾಗತ ಕಮಿಟಿಯ ಕಾರ್ಯದರ್ಶಿಗಳಾದ ಶ್ರೀಗಳಾದ ಶಂಕರಲಾಲ್, ಸಾಹ್ನಿ ಮತ್ತು ಇನ್ನೈದು ಮಂದಿ ಮೆಂಬರರು ಕೈದು ಮಾಡಲ್ಪಟ್ಟಿರುತ್ತಾರೆ. ಕಾಂಗ್ರೆಸ್ ಪ್ರಮುಖರ ದಸ್ತಗಿರಿಯ ನಿಮಿತ್ತ ಡಿಲ್ಲಿಯಲ್ಲಿ ಕೆಲವು ದಿನ ಹರತಾಳ ನಡೆಯಬಹುದೆಂಬ ಸಂಶಯದಿಂದ ಪೋಲೀಸ್ ಕಮಿಶನರು, ವ್ಯಾಪಾರಸ್ಥರಾರೂ ಹರತಾಳವಾಚರಿಸಬಾರದೆಂದೂ, ಆಚರಿಸಿದರೆ ರೂ 2000 ದವರೆಗಿನ ಜುಲುಮಾನೆ ವಿಧಿಸಲಾಗುವುದೆಂದೂ ಹುಕುಂ ಕೊಟ್ಟಿರುವರು.

ಪಂಡಿತ ಮಾಲವೀಯರ ದಸ್ತಗಿರಿ.

ಡಿಲ್ಲಿಯ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾದ ಪಂಡಿತ ಮಾಲವೀಯರು ಡಿಲ್ಲಿಗೆ ಪ್ರವೇಶಿಸಕೂಡದೆಂದು ಸರ್ಕಾರವು ಹುಕುಂ ಕೊಟ್ಟಿದ್ದಿತು, ಅವರು ಅದನ್ನುಲ್ಲಂಘಿಸಿ ಡಿಲ್ಲಿಗೆ ಪ್ರವೇಶಿಸಲಿದ್ದಾಗ ತಾ. 23—4—32ರಲ್ಲಿ ಕೈದು ಮಾಡಲ್ಪಟ್ಟಿರುವರು. ಪಂಡಿತ ಮಾಲವೀಯರು ತನ್ನ ಪುತ್ರ, ಪಂಡಿತ ಗೋವಿಂದ ಮಾಲವೀಯರು, ಪೌತ್ರ ಶ್ರೀಧರ ಮಾಲವೀಯ, ಪಂಡಿತ ಮೋತಿಲಾಲರ ಅಳಿಯ ಆರ್. ಯಸ್. ಪಂಡಿತ್, ಠಾಕ್ಕೂರ್ ಮಂಗಲಸಿಂಗ್ ಮತ್ತು ವಾರ್ತಾ ಪತ್ರ ವರದಿಯವರೊಂದಿಗೆ ಸಿಲ್ದಾ ಎಕ್ಸ್‌ಪ್ರೆಸ್ ಟ್ರೈನಿನಿಂದ ಡಿಲ್ಲಿಯಿಂದ 40 ಮೈಲು ದೂರದಲ್ಲಿಳಿದು ಮೋಟಾರ್ ಕಾರಿನಲ್ಲಿ ಡಿಲ್ಲಿಗೆ ಪಯಣಿಸಿದಾಗ, ಸಿಟಿ ಮೇಜಿಸ್ಟ್ರೇಟರು ಪೋಲೀಸ್ ರಾಜನೊಂದಿಗೆ ಹೋಗಿ ಅವರು ಡಿಲ್ಲಿಗೆ ಪ್ರವೇಶಿಸಬಾರದೆಂದು ನೋಟೀಸ್ ಕೊಟ್ಟರು. ಅದನ್ನು ಅವರು ಉಲ್ಲಂಘಿಸೆ ...ಲವೀಯರೂ, ಅವರ ಸಂಗಾತಿಗಳೂ ಕೈದು ಮಾಡಲ್ಪ ...ಳಗೆ ಒಯ್ಯಲ್ಪಟ್ಟರು. ಅವರು ಸಂಚರಿಸುತ್ತಿದ್ದ ಮೋ ...ನ್ನೂ ವಶ ಮಾಡಿಕೊಳ್ಳಲಾಯಿತು. ಡಿಲ್ಲಿಗೆ ಕಾಂ ...ಧಿಗಳಾರೂ ಪ್ರವೇಶಿಸದಂತೆ ಪೋಲೀಸರ ಪ್ರಬಲ ...ಲಾಗಿದೆ. ಬಂದ ಪ್ರತಿನಿಧಿಗಳೆಲ್ಲಾ ಕೈದು ... ತಾ. 22ರಲ್ಲಿ 65 ಮಂದಿಯ ದಸ್ತಗಿರಿ ... ಪೋಲೀಸರಿಂದ ತಲೆತಪ್ಪಿಸಿ ಡಿಲ್ಲಿಗೆ ಪ್ರ... 28 ರಲ್ಲು 50 ಕ್ಕಿಂತಲೂ ಮಿಕ್ಕಿದ ... ಸ್ವಯಂ ಸೇವಕರೂ ಕೈದು ಮಾ...

...ನ್ನಿಯರ ದಸ್ತಗಿರಿ.

... ಬೊಂಬಾಯಿಯನ್ನು ಬಿಟ್ಟು ... ಕಮಿಶನರ ಹುಕುಮನ್ನುಲ್ಲಂ ... ಗ್ರೆಂಟಿಯರ್ ಮೈಲ್" ಹತ್ತಿ ಡಿಲ್ಲಿ ... ಯವನ್ನೀಯಲು ಪ್ರಚಂಡ ... ಆದರೆ ಪೋಲೀಸರಾರನ್ನೂ ...ಲ್ಲ, ಸರೋಜಿನಿ ದೇವಿ ...ಗೆ ಪ್ಲೇಟ್ ಫಾರ್ಮ ... ಪ್ರವೇಶಿಸಿದರು. ಜನರ ... ಸರೋಜಿನಿಯವರು ದೇಶ ... ಜೈಲ್ ಬೇಲ ಸ ... ಅಲ್ಲುಮಿನಿಯಂ ... ಸ ಪೂತಿ ಮೊದ ... ಹೋದೊಡ ... ಜನರೂ ... ಕೋ ... ಹೇ ... ಕರ

ರಣೆ ನಡೆಯಿತು, ಸರೋಜಿನಿಯವರು ಅದರಲ್ಲಿ ಭಾಗಿಯಾಗಲಿಲ್ಲ, ಮೇಜಿಸ್ಟ್ರೇಟರು ಅವರಿಗೆ 1 ವರ್ಷ ಸಾದಾ ಶಿಕ್ಷೆ ಮತ್ತು 'ಏ' ಕ್ಲಾಸು ಕೊಟ್ಟರು. ಸರೋಜಿನಿಯವರನ್ನು ಕೋರ್ಟಿನಿಂದ ಜೈಲಿಗೊಯ್ಯುವಾಗ ಜನರೆಲ್ಲಾ ಜಯಕಾರವೆಬ್ಬಿಸಿದರು. ಕರಾಚಿ ಅಹ್ಮದಾಬಾದ್, ತಮಿಳುನಾಡು, ಆಂಧ್ರ, ಕೇರಳ, ಕರ್ನಾಟಕದಿಂದೆಲ್ಲಾ ಪ್ರತಿನಿಧಿಗಳು ಡಿಲ್ಲಿಗೆ ಹೋಗಿರುವರು.

ಡಿಲ್ಲಿಯಲ್ಲಿ ಲಾಠಿ ಚಾರ್ಜು.

ತಾ. 24ರಲ್ಲು ಡಿಲ್ಲಿಯಲ್ಲಿ ಹರತಾಳವಾಚರಿಸಲ್ಪಟ್ಟಿತು. ಸಿಪಾಯಿ ಸಶಸ್ತ್ರ ಪೋಲೀಸರು ಬೀದಿಗಳಲ್ಲಿ ಪೆಟ್ರೋಲ್ ಮಾಡತೊಡಗಿದರು. ಬೆಳಗ್ಗೆ 9 ಗಂಟೆ ಸಮಯಕ್ಕೆ ಕ್ಲಾಕ್ ಟವರ್ ಮೈದಾನದಲ್ಲಿ ಜನರು ಸೇರಲಾರಂಭಿಸೆ ಕಾಂಗ್ರೆಸಿನವರು ತಾವು ಮುಂಚಿನ ರಾತ್ರಿ ಗುಪ್ತವಾಗಿ ಅಹಮ್ಮದಾಬಾದಿನ ಶೇಟ್ ರಾಂಚೋಡಲಾಲ್ ಅಮೃತಲಾಲರ ಅಧ್ಯಕ್ಷತೆಯಲ್ಲಿ ಸೇರಿದ ಸಬ್ಜೆಕ್ಟ್ ಕಮಿಟಿಯಲ್ಲಿ ಮಂಜೂರು ಮಾಡಲ್ಪಟ್ಟಿರುವುದೆಂಬ 5 ಠರಾವುಗಳನ್ನು ಓದಿ ಹೇಳಲಾಯಿತು. ಪಂಡಿತ ಪ್ಯಾರಿಲಾಲ ಶರ್ಮರ ಸ್ವಾಗತ ಭಾಷಣ, ಕಾಂಗ್ರೆಸಿನ ಆ ವರದಿ ನಿರ್ಣಯಗಳ ಪ್ರತಿಗಳೆಲ್ಲಾ ಜನರಿಗೆ ಹಂಚಲ್ಪಟ್ಟಿದ್ದಿತು. ಕೂಡಲೆ ಪೋಲೀಸರು ಜನರನ್ನೆಲ್ಲಾ ಸುತ್ತಿ 150 ಮಂದಿಯನ್ನು ಕೈದು ಮಾಡಿದರು. ಆಗ ಅಕಾಲಿ ಸಿಖ್ಖರ 90 ಮಂದಿಯ ದಳವೊಂದು ಕ್ಲಾಕ್ ಟವರಿಗೆ ಬರುತ್ತಿರಲು ಪೋಲೀಸರು ಅವರನ್ನೆಲ್ಲಾ ಕೈದು ಮಾಡಿದರು. ಇದೇ ರೀತಿ 13 ಮಂದಿ ಸ್ತ್ರೀಯರ ದಳವೊಂದು ದಸ್ತಗಿರಿಯಾಯಿತು. ಮಧ್ಯಾಹ್ನ 1 ಗಂಟೆಯ ನಂತರ ಇಬ್ಬರಿಬ್ಬರ ದಳವಾಗಿ ಕ್ಲಾಕ್ ಟವರಿಗೆ ಸಾಗುತ್ತಿದ್ದ ಹಲವು ಮಂದಿ ಸ್ವಯಂಸೇವಕರ ದಸ್ತಗಿರಿಯಾಯಿತು. ಸುಮಾರು ಅಪರಾಹ್ನ 4—30 ಗಂಟೆಗೆ ಕಾಂಗ್ರೆಸ್ ಪಕ್ಷೀಯರು ಮೆರವಣಿಗೆಯೊಂದನ್ನು ನಡಿಸಿದಾಗ ಪೋಲೀಸರು ಲಾಠಿ ಪ್ರಹಾರ ಮಾಡಿ 3 ಮಂದಿಯನ್ನು ಕೈದು ಮಾಡಿದರು. ಇನ್ನೊಂದು ಮೆರವಣಿಗೆಯನ್ನು ಪೋಲೀಸರು ಇದೇ ರೀತಿ ಮಾಡಿದರು, ನಂತರ ಡಿಲ್ಲಿ ಮುನ್ಸಿಪಲ್ ಕೌನ್ಸಿಲರಾದ ಶ್ರೀ ದೇಶಬಂಧು ಗುಪ್ತರವರ ಮುಂದಾಳುತ್ವದಲ್ಲಿ ದೊಡ್ಡದೊಂದು ಮೆರವಣಿಗೆ ನಡೆದಾಗ ಪೋಲೀಸರು ಲಾಠಿ ಪ್ರಹಾರ ಮಾಡಿ 7 ಮಂದಿಯನ್ನು ಕೈದು ಮಾಡಿದರು. ಪುನಹ ಹಿಂದು ಸನ್ಯಾಸಿಯೊಬ್ಬರು ಮೆರವಣಿಗೆ ನಡಿಸಿ ಪೋಲೀಸರು ಬಂದಾಗ ನೆಲದ ಮೇಲೆ ಕುಳಿತುಬಿಟ್ಟರು. ಪೋಲೀಸರವರನ್ನೆಲ್ಲಾ ಎತ್ತಿ ಲಾರಿಯಲ್ಲಿ ಹಾಕಿ ಜೈಲಿಗೆ ಕೊಂಡೊಯ್ದರು. ಇಲ್ಲಿಗೆ ಕಾಂಗ್ರೆಸ್ ಕಾರ್ಯಕ್ರಮ ಮುಗಿಯಿತು, ನಂತರ ಉತ್ತೇಜಿತ ಜನರು ಸ್ವಲ್ಪ ಗಲಾಟೆ ಮಾಡಿದರು. ಅಧಿಕಾರಿಗಳ ಅಂದಾಜಿನ ಪ್ರಕಾರ ಕಳೆದ 4 ದಿನಗಳಲ್ಲಿ 670 ಮಂದಿ ದಸ್ತಗಿರಿಯಾಗಿರುವರೆಂದು ತಿಳಿದುಬರುತ್ತದೆ. ಸರೋಜಿನಿ ದೇವಿಯವರು ಕಾಂಗ್ರೆಸ್ ಸಬ್‌ಜೆಕ್ಟ್ ಕಮಿಟಿಗೆ ಬೇರೆ ಬೇರೆ ಪ್ರಾಂತ್ಯಗಳಿಂದ 40 ಮಂದಿಯನ್ನು ಆರಿಸಿದ್ದರೆಂದೂ, ಇವರಲ್ಲಿ 17 ಮಂದಿ ಕೈದು ಮಾಡಲ್ಪಟ್ಟು ಉಳಿದವರು ಡಿಲ್ಲಿಯಲ್ಲಿ ಸಭೆ ನಡಿಸಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಬೊಂಬಾಯಿಯಲ್ಲಿ ಮಂಜೂರು ಮಾಡಿದ ನಿರ್ಣಯಗಳನ್ನು ಸರ್ವ ಸಮ್ಮತಿಯಿಂದ ಸ್ವೀಕರಿಸಿರುವರೆಂದೂ ತಿಳಿದು ಬರುತ್ತದೆ. ತಾ. 25ರಲ್ಲು ಹಿಂದು ಅಂಗಡಿಗಳೆಲ್ಲಾ ಮುಚ್ಚಲ್ಪಟ್ಟಿದ್ದವು. ನಂತರ ಕೆಲವು ತೆರೆಯಲ್ಪಟ್ಟವು. ಎರಡು ಮೆರವಣಿಗೆ ನಡಿಸಲು ಸೇರಿದ ಜನರು ಪೋಲೀಸರು ಬಂದೊಡನೆಯೇ ಚೆದರಿ ಹೋದರು.

'ನವಯುಗ'

ಮೋಸಗಾರ ಮಹಾತ್ಮನಿಗೆ ೨ ವರ್ಷ ಸಜ.

ಕೆಲವು ಕಾಲ ಸೇನೆಯಲ್ಲಿ ಕೆಲಸ ಮಾಡಿದ್ದ ಒಬ್ಬ ಹವಾಲ್ದಾರನು ಹಣವನ್ನು ಗಳಿಸುವುದಕ್ಕಾಗಿ ಒಂದು ದೊಡ್ಡ ಮೋಸದ ಮಾರ್ಗವನ್ನು ಹುಡುಕಿ ಮಹಾತ್ಮನಂತೆ ವೇಷಧಾರಿಯಾದನು ಮತ್ತು ಕೆಲ ಶಿಷ್ಯರನ್ನು ಹೊಂಚಿಸಿಕೊಂಡನು. ಈ ಮಹಾತ್ಮನು ತನ್ನ ಮಹಿಮಾಶಕ್ತಿಯಿಂದ ನೋಟುಗಳನ್ನು ಒಂದಕ್ಕೆರಡಾಗಿ ಮಾಡಬಲ್ಲನೆಂದು ಶಿಷ್ಯರ ಮೂಲಕ ಪ್ರಚಾರಗೊಳಿಸಿದನು. ಕೆಲ ಆಶಾಪರರು ಪರೀಕ್ಷೆಗಾಗಿ 5 ರೂಪಾಯಿನ ಮತ್ತು 10 ರೂಪಾಯಿನ ನೋಟುಗಳನ್ನು ಕೊಡಲು ಅವನ್ನು ತೆಗೆದುಕೊಂಡು ಅವುಗಳಿಗೆರಡರಷ್ಟು ಹೊಸ ನೋಟುಗಳನ್ನು ಕೊಡುತ್ತಿದ್ದನು. ಇದರಿಂದ ಧನಿಕರು ಆಶ್ಚರ್ಯ ಚಕಿತರಾಗಿ ಮಹಾತ್ಮರ ಶಿಷ್ಯರುಗಳನ್ನು ರಹಸ್ಯವಾಗಿ ತಮ್ಮ ಮನೆಗಳಿಗೆ ಕರೆದುಕೊಂಡು ಹೋಗಿ ಅವರಿಗೆ ಮೃಷ್ಟಾನ್ನಭೋಜನ ಮಾಡಿಸಿ 30 ಸಾವಿರ ರೂಪಾಯಿಗಳ ನೋಟುಗಳನ್ನು ಕೊಟ್ಟು ಅವಕ್ಕೆ ಪ್ರತಿಯಾಗಿ ಎರಡರಷ್ಟು ನೋಟುಗಳು ಕೊಡಲ್ಪಡುವುದನ್ನೇ ಇದಿರು ನೋಡುತ್ತಿದ್ದರು. ಆದರೆ ಮಹಾತ್ಮನು ಶಿಷ್ಯರ ಸಮೇತ ಮಾಯವಾಗಿ ಹೋದನು. ಆದರೂ ನೋಟುಗಳನ್ನು ಕಳೆದುಕೊಂಡವರು ಪೋಲೀಸಿಗೆ ತಿಳಿಸದೆ ಮೌನವಾಗಿದ್ದರು. ಮಹಾತ್ಮರ ಶಿಷ್ಯರುಗಳಲ್ಲೊಬ್ಬನು ಪೋಲೀಸರಿಗೆ ರಹಸ್ಯವನ್ನು ತಿಳುಹಲಾಗಿ ಅವರು ಮಹಾತ್ಮನನ್ನು ಸೆರೆಹಿಡಿದರು. ಈ ಮಹಾತ್ಮನ ಮೋಸಕ್ಕೆ ಒಳಗಾದವರಲ್ಲಿ ಗುಜರಾತಿನ ಧನಾಧಿಪತಿಗಳು ಅನೇಕರಿದ್ದರು. ಭಾವನಗರದಲ್ಲಿ ಹಿಂದೆ ದಿವಾನರಾಗಿದ್ದಾತನು ತನ್ನ ಮನೆಗಳ ಬೆಳ್ಳಿಯನ್ನು ತನ್ನ ತಂದೆಯ ಸ್ನೇಹಿತನಾದ ಧನಿಕನಲ್ಲಿ ಒತ್ತೆಯಿಟ್ಟು 30,000 ರೂಪಾಯಿಗಳನ್ನು ಮೋಸಗಾರ ಮಹಾತ್ಮನಿಗೆ ಕೊಟ್ಟು ನಿರ್ಗತಿಕನಾದನು. ಒಬ್ಬ ಮಹಮ್ಮದೀಯ ಐಶ್ವರ್ಯವಂತನು ದುರಾಶೆಯಿಂದ 50,000 ರೂಪಾಯಿಗಳ ನೋಟುಗಳನ್ನು ಮಹಾತ್ಮನಿಗೆ ಕೊಟ್ಟು ದರಿದ್ರನಾದನು. ಈ ಮಹಾತ್ಮನು ಆಗಾಗ್ಗೆ, ಅಪಹರಿಸಿದ ನೋಟುಗಳಲ್ಲಿ ಕೆಲವು ಶಿಷ್ಯರ ಅಜಾಗರೂಕತೆಯಿಂದ ಸುಟ್ಟುಹೋದುವೆಂದು ಅವರ ಮೇಲೆ ಕೋಪಗೊಂಡವನಂತೆ ನಟಿಸುತ್ತಿದ್ದನು. ಕಡೆಯಲ್ಲಿ ಇವನ ಮೋಸವು ಬಯಲಾಗಿ ಇವನು ಪೋಲೀಸರಿಂದ ಸೆರೆಹಿಡಿಯಲ್ಪಟ್ಟು 2 ವರ್ಷ ಕಠಿಣ ಸಜಾ ವಿಧಿಸಲ್ಪಟ್ಟನು.

ವೈ. ಸ್ಟಾರ್.

Wanted.

An accountant to the Mercara Nad Co-operative Store from 1st May 1932 on a salary of Rs. 25 per mensem. Only those who have the knowledge of accounts or Retired Government Officer prefered. Applications may be sent to the address below.

HONORARY SECRETARY.

4=3 Mercara Nad Co-operative Store.

ಇಂಡಿಯನ್ ಇನ್ಶೂರೆನ್ಸ್ ಕಂಪೆನಿಗಳಿಗೇನೇ ಜೀವ ವಿಮೆ ಮಾಡಿರಿ.

ದಿ ಬೆಂಗಾಲ್ ಇನ್ಶೂರೆನ್ಸ್ ಎಂಡ್ ರಿಯಲ್ ಪ್ರಾಪರ್ಟಿ ಕಂಪೆನಿ ಲಿಮಿಟೆಡ್, ಹೆಡ್ ಆಫೀಸು—8 ಡಾಲ್ ಹೌಸಿ, ಸ್ಕ್ವೇರ್ (ಈಸ್ಟ್) ಕಲ್ಕತ್ತ, ಸಂಸ್ಥಾಪನೆ 1919.

ನವನಾಗರಿಕತೆಯು ಬೆಳೆದಷ್ಟಕ್ಕೆ ಅದರೊಡನೆ ಅದಕ್ಕೆ ಸಂಬಂಧಪಟ್ಟಿರುವ ಆರ್ಥಿಕ ಪರಿಸ್ಥಿತಿಯೂ ಬೆಳೆಯುತ್ತದೆ. ಇಂಥಹ ಸಮಯದಲ್ಲಿ ಜೀವವಿಮೆ ನಿಯಮವು ಒಂದು ವರವೆಂದೆಣಿಸಲ್ಪಟ್ಟಿದೆಯಲ್ಲದೆ, ಅದು ಸಮಾಜಾಂಗದಲ್ಲಿ ಜನರಿಗೊಂದು ಅತ್ಯಗತ್ಯ ವಿಷಯವೆಂದೂ ತಿಳಿದು ಬಂದಿದೆ. ಅದನ್ನು ಈಗಿಂಗ ಗಣಿತಶಾಸ್ತ್ರ ಪ್ರಕಾರವಾಗಿಯೇ ಜತನದಿಂದ ಪರಿಪಾಲಿಸಿಕೊಂಡೇ ಬರುವಂತಾಗಿದೆ.

ಈ ಕಂಪೆನಿಯ ... ಸಂಕಲ್ಪದಲ್ಲಿ ಕಂಪೆನಿಯ ಭದ್ರತೆಗೋಸ್ಕರ 2 ಲಕ್ಷ ರೂಪಾಯಿ ಠೇವಣಾತಿಯನ್ನು ಇಟ್ಟಿದೆ. ಇದು ಇನ್ಶೂರೆನ್ಸ್ ಕೆಲಸದಲ್ಲಿ ಒಳ್ಳೆ ಗುರುತಿರುವ ನೆರಾಗ್ಯಹಸ್ತರ ಮುಂದಾಳುತನದಿಂದಲೇ ನಡೆಯುತ್ತದೆ. ಈ ಕಂಪೆನಿಯು ಆಕರ್ಷಣೆಯ ಮಾದರಿ ಕೆಲವು ಸಂಸ್ಥೆಗಳ ಮೇರೆಗೆ ಅತೀ ಸುಲಭ ಪ್ರೀಮಿಯಂ ದರದಿಂದ ಪಾಲಿಸಿಗಳನ್ನು ಕೊಡುತ್ತದೆ. ಇದರ ಶರ್ತುಗಳು, ನಿಯಮಗಳು ಸುಲಭ ಗ್ರಾಹ್ಯವಾಗಿವೆ; ಅನುಕೂಲವಾಗಿವೆ ... ಉದಾರವೂ ಆಗಿವೆ. ಹೆಚ್ಚಿನ ಮಾಹಿತಿಗೆ ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಿರಿ.

ಯಂ. ಯಸ್. ಐಯ್ಯಪ್ಪ,
ಆರ್ಗನೈಸರ್,
ಸ್ಕೂಲ್‌ರೋಡ್, ಮಡಿಕೇರಿ.
ಅಥವಾ
ಆರ್. ಸಿ. ಸೆನ್‌ಗುಪ್ತ,
ಬ್ರಾಂಚ್ ಸೆಕ್ರೆಟರಿ,
12—3 28, ಅಂಗಪ್ಪನಾಯಕ್ ಸ್ಟ್ರೀಟ್,
ಜಿ. ಟಿ. ಮದರಾಸ್.

Wanted agents in every Taluk of Coorg on very liberal terms.

ಜನರಲ್ ಅಶ್ಯೂರೆನ್ಸ್ ಸೊಸೈಟಿ.

ಅ ಜ ಮೀ ರ್.

ನಮ್ಮ ಆಯವ್ಯಯದ ಪಟ್ಟಿಯೇ ನಮ್ಮ ಅಭಿವೃದ್ಧಿಯನ್ನು ವ್ಯಕ್ತಗೊಳಿಸುತ್ತದೆ.

ವರ್ಷ	ಮೊಬಲ್ಗು ವರಮಾನ	ಮೊಬಲ್ಗು ಮೂಲಧನ	ಖರ್ಚು ವರಮಾನದ ಶೇಕಡ
1911	46,248	49,442	82.9
1921	2,92,627	6,53,350	43.2
1931	12,50,000	41,00,000	28.2

ಬೋನಸ್ಸು.

ತುರ್ಕು ನಫೆ ದೊರಕುವ ಜೀವಾವಧಿ ಪಾಲಿಸಿಗಳ ಮೇಲೆ ವರ್ಷ ಒಂದಕ್ಕೆ ಶೇಕಡ 22½

ಚೆನ್ನಾಗಿ ಕೆಲಸಮಾಡಿ ಅಭಿವೃದ್ಧಿ ಸ್ಥಿತಿಯಲ್ಲಿರುವ ಈ ಸೊಸೈಟಿಯಲ್ಲಿ ವಿಮೆ ಮಾಡಿ ಕಡಮೆ ಪ್ರೀಮಿಯಂ ಪಾವತಿ ಮಾಡುವ ಸೌಲಭ್ಯ ಹೊಂದಿ ಅಥವಾ ಈ ಕಂಪೆನಿಯ ಪರವಾಗಿ ಕೆಲಸಮಾಡಿ ಉತ್ತಮ ಕಮಿಶನ್ ದರದ ಪ್ರಯೋಜನ ಹೊಂದಿ.

ಹೆಚ್ಚು ವಿಚಾರಗಳಿಗೆ ಈ ವಿಳಾಸಕ್ಕೆ ಬರೆಯಿರಿ:—

ಎ. ರಾಮಚಂದ್ರರಾವ್,
ಸುಪರಿಂಟೆಂಡೆಂಟ್,
52—2 ವಿಂಟೋ ಆಸ್ಪತ್ರೆ ಬಳಿ,
ಬೆಂಗಳೂರು

ಆಯುರ್ವೇದದ ವಿಧಾನ.

(ಮಹಾತ್ಮ ಗಾಂಧಿಯವರ ಲೇಖನಿಯಿಂದ.)

ಕವಿರಾಜ ಗಣನಾಥ ಸೇನರವರು ಈ ರೀತಿ ಬರೆಯುತ್ತಾರೆ. "ನೀವು ಅಷ್ಟಾಂಗ ಆಯುರ್ವೇದ ವಿದ್ಯಾಲಯದ ಅಸ್ತಿಭಾರವನ್ನು ಹಾಕಿದಾಗ ಮಾಡಿದ ಭಾಷಣಕ್ಕೆ ಎಷ್ಟೋ ಮಂದಿ ಜನರೂ, ಕಲ್ಕತ್ತೆಯ ಎಷ್ಟೋ ಆಯುರ್ವೇದ ವೈದ್ಯರೂ ಬೇರೆ ಬೇರೆ ಅರ್ಥಗಳನ್ನು ಕಲ್ಪಿಸಿಕೊಂಡಿದ್ದಾರೆ. ತಾವು ಆ ಭಾಷಣವನ್ನು ಮಾಡಿದಾಗ್ಯೂ ಆಯುರ್ವೇದವನ್ನಾಗಲಿ ಅಥವಾ ಆಯುರ್ವೇದ ವಿಧಾನವನ್ನು ಬಾಹಿರ ಕಸ್ಸದೆ ಅನುಸರಿಸುತ್ತಿರುವವರನ್ನಾಗಲೀ ಕುರಿತು ಖಂಡಿಸಿ ಏನೂ ಹೇಳಲಿಲ್ಲವೆಂದೂ, ಹೇಳಿದ್ದೆಲ್ಲಾ ಕೆಲವರು ತಾವು ವೈದ್ಯರೆಂದು ಹೇಳಿಕೊಳ್ಳುತ್ತಾ ಮೋಸದಿಂದ ಜೀವನಮಾಡುತ್ತಿರುವವರನ್ನು ಕುರಿತು ಹೇಳಿದ್ದೆಂದೂ ವಿಶದವಾಗಿ ತಿಳಿಯಪಡಿಸಲು ನನಗೊಂದು ಸಲಹೆ ಕೊಡಲು ಅವಕಾಶ ಕೊಡುವಿರಾ? ಅಂತಹ ವಿಶದೀಕರಣವು ಕೇವಲ ಅಗತ್ಯವಾಗಿ ಹೋಗಿದೆ. ಯಾಕೆಂದರೆ ಸಾಮಾನ್ಯವಾಗಿ ಎಲ್ಲಾ ಬಂಗಾಳಿ ವೃತ್ತಪತ್ರಿಕೆಗಳೂ ಆ ಭಾಷಣಕ್ಕೆ ಅಪಾರ್ಥ ಕಲ್ಪನೆ ಮಾಡುತ್ತಿರುವುದೊಂದೇ ಅಲ್ಲದೆ ನಾವು ಯಾಕೆ ಆ ಭಾಷಣವನ್ನು ಇನ್ನೂ ಖಂಡಿಸಿಲ್ಲವೆಂದು ನಮ್ಮನ್ನು ದೂರುತ್ತಿರುವರು."

ನನಗೆ ಈ ಕೋರಿಕೆಯನ್ನು ನೆರವೇರಿಸುವುದರಲ್ಲಿ ಎಷ್ಟೋ ಸಂತೋಷ. ಅದರಲ್ಲೂ ಹಾಗೆ ಮಾಡುವುದರಿಂದ ಆಯುರ್ವೇದ ವಿದ್ಯೆಯಲ್ಲಿ ನನಗಿರುವ ಭಾವನೆಗಳನ್ನು ಇನ್ನೂ ಚೆನ್ನಾಗಿ ತಿಳಿಯಹೇಳಲು ಅವಕಾಶ ಸಿಕ್ಕಿದಂತಾಗುವುದು.

ನಾನೊಂದು ವಿಷಯವನ್ನು ಮೊದಲೇ ಹೇಳಬೇಕು: ನಾನು 'ಇಂಡಿಯನ್ ಹೋಂ ರೂಲು' ಎಂಬ ಪುಸ್ತಕದಲ್ಲಿ ಔಷಧಿಗಳ ವಿಚಾರದಲ್ಲಿ ನನಗಿರುವ ಭಾವನೆಗಳನ್ನು ಹೇಳಿರುವಂತೆ ನನಗೆ ಟಿಬ್ಬ ಕಾಲೇಜಿನ ಪ್ರಾರಂಭೋತ್ಸವವನ್ನು ನೆರವೇರಿಸಲು ಎಷ್ಟು ಹಿಂತೆಗೆಯುತ್ತಿದ್ದೆನೊ ಅದೇ ರೀತಿ ಮೇಲೆ ಹೇಳಿದ ತಳಹದಿಯ ಕಲ್ಲನ್ನು ಹಾಕುವ ಉತ್ಸವದಲ್ಲಿಯೂ ನಾನು ಭಾಗಿಯಾಗಲೇಬಾರದೆಂದಿದ್ದೆ.

ಅದನ್ನು ನಾನು ಹೇಳಿ ಹದಿನೇಳು ವರ್ಷಗಳಾದವು (ಇದನ್ನು ೧೯೦೮ರಲ್ಲಿ ಬರೆದುದು. ಸಂ.) ಆದರೂ ಅದರ ವಿಚಾರದಲ್ಲಿ ನನಗೇನೂ ಅಷ್ಟಾಗಿ ವ್ಯತ್ಯಾಸ ಕಂಡುಬಂದಿಲ್ಲ. ನಾನೂ ಆ ಪುಸ್ತಕವನ್ನು ಪುನಃ ಬರೆದರೆ ನನ್ನ ಅಭಿಪ್ರಾಯಗಳನ್ನು ಬೇರೆ ಭಾಷೆಯಲ್ಲಿ ಒದಗಿಸುವುದೊಂದೇ ಸಾಧ್ಯ. ಆದರೆ ನನ್ನ ಪ್ರವಾಸವನ್ನು ಏರ್ಪಡಿಸುವ ಚಾಲಕರಿಗೆ ಹೇಗೆ ಎದುರು ಹೇಳಲಾರೆನೊ ಹಾಗೆಯೆ ನನ್ನ ಪರಮ ಮಿತ್ರರಾದ ಹಕೀಂ ಸಾಹೇಬರಿಗೂ ಹೇಳಲಾರೆ. ಆದರೆ ನನ್ನ ಭಾಷಣವು ಅವರನ್ನ ತೃಪ್ತಿಗೊಳಿಸುವುದೆಂದು ನಾನವರಿಗೆ ಆಗಲೇ ಹೇಳಿದ್ದೆ. ಈ ಚಳವಳಿಗೆ ನಾನು ವಿರುದ್ಧನಾಗಿಲ್ಲವಾದರೂ ಇದ್ದ ಭಾಗದಲ್ಲಿ ಎಷ್ಟು ಮಾತ್ರಕ್ಕೂ ನಾನು ಆ ಕೆಲಸಕ್ಕೆ ಕೈ ಹಚ್ಚುತ್ತಲೆ ಇರಲಿಲ್ಲ. ಆದರೆ ನಾನು ನನ್ನ ಭಾಷಣದಲ್ಲಿ ಹೇಳಿದಂತೆ ಕೆಲವು ನಿಬಂಧನೆಗಳಾದಲ್ಲಿ ನನಗೆ ಸಮ್ಮತವೆಂದು ನನ್ನ ಮನಸಿಗೆ ಸಮಾಧಾನ ತಂದುಕೊಂಡೆ. ನಾನು ಅಸ್ತಿಭಾರವನ್ನು ಹಾಕಿದ ಮಹಾ ಪಾಠಶಾಲೆಯವರೂ, ಆ ಪಾಠಶಾಲೆಯನ್ನು ಸ್ಥಾಪಿಸಲು ರಾಜರಂತೆ ದಾನಮಾಡಿರುವ ಸ್ವಯಂ ಕವಿರಾಜರಾಗಿರುವ ಸಂಸ್ಥಾಪಕರೂ ನಿಜವಾಗಿಯೂ ಜನರ ತೊಂದರೆಗಳನ್ನು ನಿವಾರಿಸಲು ಪ್ರಯತ್ನಿಸುವರೆಂದೂ, ದೇಶದಲ್ಲಿರುವ ಕಡುಬಡವನೂ ಸುಲಭ ಚಿಕಿತ್ಸೆಗಳನ್ನು ಅರಿತುಕೊಂಡು ಖಾಯಿಲೆಗಳನ್ನು ಗುಣಪಡಿಸಿಕೊಳ್ಳುವುದಕ್ಕೆ ಬದಲಾಗಿ ಅವುಗಳು ಬಾರದೆ ಇರುವಂತೆ ಮಾಡಿಕೊಳ್ಳಲು ಸಹಕಾರಿಯಾಗುವಂತೆ ಆಯುರ್ವೇದದಲ್ಲಿ ನೂತನವಾದ ಸಂಶೋಧನೆಗಳನ್ನು ಶಾಸ್ತ್ರಾನ್ವೇಷಣೆಗಳನ್ನು ಮಾಡುತ್ತಾರೆಂದು ನಂಬುತ್ತೇನೆ.

ವೈದ್ಯ ಕಸುಬಿನೊಂದಿಗೆ ನನ್ನ ಜಗಳವಿರುವುದು ಇದೊಂದು: ಅವರು ಆತ್ಮವನ್ನು ಸುತರಾಂ ಬಿಟ್ಟುಬಿಟ್ಟು ದೇಹ ಮಾತ್ರವನ್ನು—ನಶ್ವರವಾದ ದೇಹವನ್ನು—'ರಿಪೇರಿ' ಮಾಡಹೋಗುವರು. ಈ ರೀತಿ ಆತ್ಮವನ್ನು ನಿರಾಕರಿಸಿದರೆ ಜನರು ಈ ಕಸುಬಿನ ಸೇವಕರಾಗುವರು, ಮಾನವನ ಘನತೆಯೂ, ಇಂದ್ರಿಯ ನಿಗ್ರಹವೂ ಕಡಿಮೆಯಾಗುತ್ತ ಬರುವುದು. ಪಾಶ್ಚಾತ್ಯ ದೇಶಗಳಲ್ಲಿ ಹೊಸ ಶಿಷ್ಯಬೃಂದವೊಂದು ನಿಧಾನವಾಗಿ ಬೆಳೆಯುತ್ತಿದೆ. ಈ ಪಂಗಡದವರು ಆತ್ಮವನ್ನು ಲೆಕ್ಕಕ್ಕೆ ತಂದುಕೊಂಡು ಔಷಧಿಗಳಿಗಿಂತಲೂ ಪ್ರಕೃತಿಯಲ್ಲಿ ಹೆಚ್ಚು ನಂಬಿಕೆಯನ್ನಿಡುತ್ತಿದ್ದಾರೆ. ಪ್ರಕೃತಿಯು ಖಾಯಿಲೆಗಳನ್ನು ಗುಣಪಡಿಸುವುದರಲ್ಲಿ ಹೆಚ್ಚು ಫಲಕಾರಿಯೆಂದು ತಿಳಿಯುತ್ತಿದ್ದಾರೆ. ಆಯುರ್ವೇದ ವೈದ್ಯರೊಂದಿಗೆ ನನ್ನ ಜಗಳವಿದು;

ಅನೇಕಾನೇಕಮಂದಿಯಲ್ಲಿದ್ದರೂ ಅವರಲ್ಲಿ ಬಹಳ ಮಂದಿ ಬರಿ ಅಲ್ಲಲೇಖಾಯಿ ಪಂಡಿತರು. ಅವರಿಗೇನೂ ತಿಳಿಯದಿದ್ದರೂ ಎಂತಹ ಖಾಯಿಲೆಗಳನ್ನಾದರೂ ಖಾತರಿಯಿಂದ ಗುಣಪಡಿಸುವುದಾಗಿ ಹೇಳುತ್ತಿರುವರು. ಈ ಜನರಲ್ಲಿ ವಿನಯವೆನ್ನುವುದೇ ಇಲ್ಲ. ಅವರು ಆಯುರ್ವೇದವನ್ನು ಓದಿ ಅದರಲ್ಲಿರುವ ಒಳಗುಟ್ಟುಗಳನ್ನು—ಇದುವರೆವಿಗೂ ಪ್ರಪಂಚಕ್ಕೆ ತಿಳಿಯದಿರುವ ಒಳಗುಟ್ಟುಗಳನ್ನು—ತಿಳಿದುಕೊಳ್ಳುವುದಿಲ್ಲ. ಅವರು ಆಯುರ್ವೇದವನ್ನು ಸರ್ವಶಕ್ತಿಯುತವಾದದ್ದೆಂದು ಹೇಳುತ್ತಾ (ಅದರಲ್ಲಿ ಇಲ್ಲದಿದ್ದಾಗ್ಯೂ) ಈ ಶಾಸ್ತ್ರವು ಮುಂದುವರಿಯುವುದನ್ನು ತಪ್ಪಿಸಿ ಕೂಪ ಜಲದಂತೆ ಮಾಡಿಬಿಟ್ಟಿರುವರು. ನನಗೆ ತಿಳಿದ ಹಾಗೆ ಆಯುರ್ವೇದದಲ್ಲಿ ಇಂದಾವುದೂ ಮುಖ್ಯವಾದ ನಿರ್ಮಾಣವಾಗಲಿ ಅನ್ವೇಷಣವಾಗಲಿ ನಡೆದಿಲ್ಲ. ಆದರೆ ಪಾಶ್ಚಾತ್ಯ ವೈದ್ಯದ ಕಡೆ ಸ್ವಲ್ಪ ನೋಡಿದರೆ ಆ ವೈದ್ಯರು ಎಷ್ಟೋ ಅಮೋಘಗಳಾದ ನೂತನ ಅನ್ವೇಷಣೆಗಳನ್ನು ಮಾಡಿರುವರು. ನನಗೆ ತಿಳಿದ ಹಾಗೆ ಈ ಆಯುರ್ವೇದ ವಿದ್ವಾಂಸರು ಖಾಯಿಲೆಯಲ್ಲಿ ಮಾಡುವುದಿಷ್ಟು: ಸುಮ್ಮನೆ ನಾಡಿಹಿಡಿದು ನೋಡುವುದು. ಕೊನೆಗೆ ರೋಗಿಯು ಕರುಳಿನ ರೋಗ (Appendicitis) ದಿಂದ ನರಳುತ್ತಿದ್ದರೂ ನಾಡಿಯನ್ನೆ ಹಿಡಿದು ನೋಡುತ್ತಾರೆ. ಪೂರ್ವದ ವೈದ್ಯರು ಎಂತಹ ಖಾಯಿಲೆಯನ್ನಾದರೂ ನಾಡೀ ಪರೀಕ್ಷೆಯಿಂದ ಗೊತ್ತುಹಚ್ಚುತ್ತಿದ್ದರೆ ಎಂಬುದನ್ನು ಯಾರೂ ಹೇಳಲಾಗದು. ಅದು ಹೇಗಾದರೂ ಇರಲಿ, ಈ ಕಾಲಕ್ಕಂತೂ ಅಕೆರಸಾದ ರೋಗನಿರೂಪಣವು ಕೆಲಸಕ್ಕೆ ಬಾರದು. ಈ ಆಯುರ್ವೇದ ವೈದ್ಯರ ವಿಚಾರದಲ್ಲಿ ಇಷ್ಟು ಮಾತ್ರ ಸುಲಭವಾಗಿ ಹೇಳಬಹುದು. ಕೆಲವು ಔಷಧಿಗಳ ಮತ್ತು ಲೋಹಮಿಶ್ರಿತ ಔಷಧಿಗಳಿಗೆ ಇರುವ ಖಾಯಿಲೆಗಳನ್ನು ಗುಣಪಡಿಸುವ ಶಕ್ತಿಯನ್ನು ಊಹಿಸಿಕೊಂಡು ಬಡರೋಗಿಗಳಿಗೆ ಅವುಗಳನ್ನು ಕೊಟ್ಟು ಖಾಯಿಲೆಗಳನ್ನು ಮತ್ತಷ್ಟು ಹೆಚ್ಚಿಸುತ್ತಾರೆ. ಪಾಶವ ಕಾಮವಾಸನೆಯನ್ನೂ ದುರ್ನೀತಿಯನ್ನು ಹೆಚ್ಚಿಸುವ ಔಷಧಿಗಳ ಜಾಹಿರಾತುಗಳನ್ನು ಪ್ರಕಟಿಸಿ ಅವುಗಳನ್ನು ಉಪಯೋಗಿಸುವವರಿಂದ ನಿಜವಾಗಿಯೂ ಸಮಾಜಕ್ಕೆಂದು ತೊಂದರೆಯನ್ನು ಮಾಡುತ್ತಾರೆ.

ಧನವಂತರ ಪುರುಷತ್ವವನ್ನೆ ಟೊಳ್ಳುಮಾಡುತ್ತಿರುವ ವೃದ್ಧರನ್ನೆಲ್ಲ ಕೇವಲ ಪಾಶವ ಕಾಮಸಾಧನೆಗಾಗಿ ಒದಗುವಂತೆ ಮಾಡುತ್ತಿರುವ ಈ ದುರ್ನೀತಿಯನ್ನು ನಿಲ್ಲಿಸಲು ಯಾವ ಆಯುರ್ವೇದ ವೈದ್ಯರ ಸಂಘವೂ ಪ್ರಯತ್ನಿಸುತ್ತಿರುವುದನ್ನು ನಾನು ಕಾಣೆ. ಈ ತೆರನಾದ ಔಷಧಿಗಳನ್ನು ಕೊಡುತ್ತಿರುವ ವೈದ್ಯರಿಗೆ ವೈದ್ಯರ ಸಮಾಜದಲ್ಲೊಂದು ಗೌರವಸ್ಥಾನ ಸಹ ಇರುವುದೆಂದು ಬಲ್ಲೆ. ಆದ ಕಾರಣ ನನಗೆ ಸಮಯ ಸಿಕ್ಕಿದಾಗಲೆಲ್ಲ ಇದರ ಸತ್ಯಾಂಶವನ್ನು ಆಯುರ್ವೇದದ ಮತ್ತು ಯುನಾನಿ ವೈದ್ಯರ ಮನಸ್ಸಿನಲ್ಲಿ ಚೆನ್ನಾಗಿ ನಾಟುವಂತೆ ತಿಳಿಯಹೇಳಿ, ಸತ್ಯಕ್ಕಾಗಿಯೂ, ನಮ್ರತೆಗಾಗಿಯೂ ಸಾವಧಾನವಾದ ಶಾಸ್ತ್ರಾನ್ವೇಷಣಕ್ಕಾಗಿಯೂ ಪ್ರಯತ್ನಿಸುವಂತೆ ಹೇಳುತ್ತೇನೆ. ನನಗೆ ಪುರಾತನವಾದುದರಲ್ಲಿಯೂ ಘನತೆಯುಳ್ಳದರಲ್ಲಿಯೂ ಬಹುಪ್ರೀತಿ. ಒಂದಾನೊಂದು ಕಾಲದಲ್ಲಿ ಇದೇ ಆಯುರ್ವೇದ ವೈದ್ಯವೂ ಯುನಾನಿ ವೈದ್ಯವೂ ಸದುಪಯೋಗಕರಗಳಾದ ಕೆಲಸಗಳಲ್ಲಿ ಉಪಯೋಗಿಸಲ್ಪಡುತ್ತಿದ್ದವೆಂದೂ ಮುಂದುವರಿಯುತ್ತಿದ್ದವೆಂದೂ ನಾನು ನಂಬುತ್ತೇನೆ. ಆದರೆ ಅನುಭವವು ಇಲ್ಲವನ್ನೂ ಪ್ರತ್ಯಕ್ಷಪಡಿಸಿದೆ. ಈಗ ನಾನು ಎಷ್ಟೋ ಅಂತಹ ವೈದ್ಯರಲ್ಲಿ ನೋಡುತ್ತಿರುವುದು ಕೇವಲ ಜಂಭ ಮತ್ತು ಅಜ್ಞಾನ. ಇಂತಹ ಘನವಿದ್ಯೆಯು ಈ ರೀತಿ ಹಣಕ್ಕೋಸ್ಕರ ಹಾಳಾಗಿರುವುದನ್ನು ನೋಡಿದರೆ ವಿಷಾದವಾಗುತ್ತದೆ. ನಾನು ವ್ಯಕ್ತಿಗಳನ್ನು ದೂಷಿಸಲು ಇದನ್ನು ಬರೆಯುತ್ತಿಲ್ಲ. ನಾನು ಎಷ್ಟೋ ವರ್ಷಗಳಿಂದ ಆಯುರ್ವೇದ ವೈದ್ಯರು ಮಾಡುತ್ತಿರುವ ಕೆಲಸಗಳನ್ನು ನೋಡಿ ನೋಡಿ ನನ್ನ ಮನಸ್ಸಿನಲ್ಲುಂಟಾಗಿರುವ ಭಾವವನ್ನು ಈ ಲೇಖನದಲ್ಲಿ ತಿಳಿಸಿದ್ದೇನೆ. ಪಾಶ್ಚಾತ್ಯ ವೈದ್ಯರನ್ನು ನೋಡಿ ತಾವೂ ಅವರನ್ನು ಅನುಕರಿಸುತ್ತಿದ್ದೇನೆಂದು ಹೇಳಿದರೆ ಪ್ರಶ್ನೆಗೆ ಉತ್ತರ ಹೇಳಿದಹಾಗಾಗಲಿಲ್ಲ. ಬುದ್ಧಿವಂತನು ಅನುಕರಿಸುವುದು ಇತರರಲ್ಲಿರುವ ಒಳ್ಳೆಯದನ್ನು ಮಾತ್ರ; ಕೆಟ್ಟದನ್ನಲ್ಲ. ನನ್ನ ಕವಿರಾಜರೂ, ವೈದ್ಯರೂ, ಹಕೀಮರೂ, ಪಾಶ್ಚಾತ್ಯ ವೈದ್ಯರೂ ತೋರಿಸುವ ಶಾಸ್ತ್ರ ಭಾವವನ್ನು ಅನುಕರಿಸಲಿ, ಅವರ ದೈನ್ಯವನ್ನು ಅನುಕರಿಸಲಿ, ಬಡತನವನ್ನಾದರೂ ಅನುಭವಿಸಿಕೊಂಡು ದೇಶೀಯ ಔಷಧಿಗಳನ್ನು ತಯಾರುಮಾಡಲಿ, ಪಾಶ್ಚಾತ್ಯ ವೈದ್ಯದ ಕೆಲವು ಭಾಗವನ್ನು—(ತಮ್ಮಲ್ಲಿಲ್ಲದ) ತಮ್ಮ ವೈದ್ಯ ವಿದ್ಯೆಯೊಂದಿಗೆ ಸೇರಿಸಿಕೊಳ್ಳಲಿ ಹಾಗೆ ಸೇರಿಸಿಕೊಂಡದ್ದೆಂದು ಒಪ್ಪಿಕೊಳ್ಳಲಿ. ಪಾಶ್ಚಾತ್ಯರಲ್ಲಿ ಹಲವರು ಶಾಸ್ತ್ರಶೋಧಕ ಕೆಲಸಗಳಿಗೆಂದು ಪಶುಪ್ರಾಣಿಗಳಿಗೆ ಔಷಧಿಗಳ ಪ್ರಯೋಗ ಮಾಡಿ, ಅವುಗಳನ್ನು ಕೊಲ್ಲುವುದನ್ನೂ, ಅವರ ಮತಭ್ರಾಂತತ್ವವನ್ನೂ ತೊರೆಯಲಿ. ಕೆಲವರು ಈ ರೀತಿ ಪ್ರಾಣಿಗಳನ್ನು ಕೊಲ್ಲುವುದಕ್ಕೆ ಆಯುರ್ವೇದ ಶಾಸ್ತ್ರದಲ್ಲಿಯೂ ಆಧಾರವಿರುವುದು. ಹಾಗೇನಾದರೂ ಇದ್ದರೆ ನನಗೆ ತುಂಬಾ ವ್ಯಸನ ಉಂಟಾಗುತ್ತದೆ. ಪುಣ್ಯವನ್ನು ದೂಷಣವನ್ನು ಪಾವನ ಮಾಡಲು ಅಧಿಕಾರವು ಉಂಟೆಂದು ಚತುರ್ವೇದಗಳಲ್ಲಿ ಸಹ ಹೇಳಿಲ್ಲ.

'ಪ್ರಜಾ ಮತ'

ಸೆಂಟ್ರಲ್ ಬ್ಯಾಂಕು ಮೀಟಿಂಗು.

ಈ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ತಾರೀಕು 30—4—32ರಲ್ಲು ಬ್ಯಾಂಕಿನ ಆಫೀಸಿನಲ್ಲಿ ನಡೆಯಿತು. 6 ಡೈರೆಕ್ಟರುಗಳು ಹಾಜರಿದ್ದರು. ಖಾಯಂ ಅಧ್ಯಕ್ಷರಾದ ರಾವ ಬಹದ್ದೂರ್ ಕೋದಂಡ ಅಪ್ಪಯ್ಯನವರು ಗೈರಹಾಜರು ಆದ್ದರಿಂದ ರಾವ್ ಬಹದ್ದೂರ್ ಪಟ್ಟಮಾಡ ದೇವಯ್ಯನವರನ್ನು ಈ ದಿವಸದ ಮೀಟಿಂಗಿಗೆ ಅಧ್ಯಕ್ಷರನ್ನಾಗಿ ನೇಮಿಸಲಾಯಿತು.

1 ಹಿಂದಿನ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು.

2. ಕಳೆದ ಮಾರ್ಚಿ ತಿಂಗಳ ಜಮಾ ಮತ್ತು ಖರ್ಚಿನ ಲೆಕ್ಕ ಓದಿ ಮಂಜೂರು ಮಾಡಲಾಯಿತು.

3. ಈ ಕೆಳಗಿನ ಸೊಸೈಟಿಗಳಿಗೆ ಸಾಲಗಳು ಮಂಜೂರಾದವು (1) ಮಗ್ಗುಲ ಸೊಸೈಟಿಗೆ ರೂ. [illegible], (2) ಚೆಂಬೆಳಯೂರು ಸೊಸೈಟಿಗೆ ರೂ. 1300, (3) ಬಜೇ ಸೊಸೈಟಿಗೆ ರೂ. 1000, (4) ಬೇಟೋಳಿ ಸೊಸೈಟಿಗೆ ರೂ. 1300, (5) ಸುಂಟಿಕೊಪ್ಪ ಸೊಸೈಟಿಗೆ ರೂ. 1500, (6) ಸೆಂಟ್ರಲ್ ಹೈಸ್ಕೂಲ್ ವಿದ್ಯಾರ್ಥಿಗಳ ಸೊಸೈಟಿಗೆ ರೂ. 1000, (7) ಅರ್ಕೆಕೊಳ್ಳ ಸೊಸೈಟಿಗೆ ರೂ. 1500, (8) ಕಾರುಗುಂದ ಸೊಸೈಟಿಗೆ ರೂ. 1000, (9) ವಿರಾಜಪೇಟೆ ಟವುನ್ ಸೊಸೈಟಿಗೆ ರೂ. 2500, (10) ಕಕ್ಕೂರು ಸೊಸೈಟಿಗೆ ರೂ. 500, (11) ಗೋಣಿಕೊಪ್ಪ ಸೊಸೈಟಿಗೆ ರೂ. 400, (12) ನಿಡತ ಸೊಸೈಟಿಗೆ ರೂ. 800, (13) ಚೆಂಬೆಳೂರು ಸೊಸೈಟಿಗೆ ರೂ. 800, (14) ನಂದಿಗುಂದ ಸೊಸೈಟಿಗೆ ರೂ. 800, (15) ನೀರುಗುಂದ ಸೊಸೈಟಿಗೆ ರೂ. 1000, (16) ಮಕ್ಕಂದೂರು ಸೊಸೈಟಿಗೆ ರೂ. 2000, (17) ಸಂಪಾಜೆ ಸೊಸೈಟಿಗೆ ರೂ. 1000, (18) ಅಮ್ಮತ್ತಿ ಟವುನ್ ಸೊಸೈಟಿಗೆ ರೂ. 400, (19) ಗುಹ್ಯ ಸೊಸೈಟಿಗೆ ರೂ. 200, (20) ಬೈರಂಬಡ ಸೊಸೈಟಿಗೆ ರೂ. 800, (21) ಹೂಸೂರು ಸೊಸೈಟಿಗೆ ರೂ. 500, (22) ಕಾವಾಡಿ ಸೊಸೈಟಿಗೆ ರೂ. 1000, (23) ಕಾಂತೂರು ಸೊಸೈಟಿಗೆ ರೂ. 1000, (24) ಅಂಕನಳ್ಳಿ ಸೊಸೈಟಿಗೆ ರೂ. 200, (25) ಬಿದರೂರು ಸೊಸೈಟಿಗೆ ರೂ. 2000, (26) ತಿರ್ಕೊಡ್ಲಿ ಸೊಸೈಟಿಗೆ ರೂ. 2000, (27) ಪಾಡಿನಾಲ್ಕುನಾಡು ಸೊಸೈಟಿಗೆ ರೂ. 1500, (28) ಮೂರ್ನಾಡು ಟವುನ್ ಸೊಸೈಟಿಗೆ ರೂ. 400, (29) ಬಿಟ್ಟಂಗೇರಿ ಸೊಸೈಟಿಗೆ ರೂ. 200, (30) ಕಟ್ಟೆಮಾಡು ಸೊಸೈಟಿಗೆ ರೂ. 800 (31) ಹಾಕತ್ತೂರು ಕೊಳಕೇರಿ ಬೈಗೋಡು ಸೊಸೈಟಿಗೆ ರೂ. 1000 (32) ತಿಂಗಾದೂರು ಸೊಸೈಟಿಗೆ ರೂ. 1000 (33) ಗೆಜ್ಜೆ ಹಣಕೋಡು ಸೊಸೈಟಿಗೆ ರೂ. 1000 (34) ಯಡೂರು ಸೊಸೈಟಿಗೆ ರೂ. 1500 ಮತ್ತು ಕೆದಮುಳ್ಳೂರು ಸೊಸೈಟಿಗೆ ರೂ. 500.

4. ಬಾಳುಗೋಡು ಸೊಸೈಟಿಗೆ, ಪೊಳ್ಳಿಬೆಟ್ಟ ಸೊಸೈಟಿಗೆ ಸೋಮವಾರಪೇಟೆ ಸಪ್ಲೈ ಸ್ಟೋರ್ಸ್‌ಗೆ, ಮತ್ತು ಪೊನ್ನಂಪೇಟೆ ನಲ್ಲೂರು ಸೊಸೈಟಿಗೆ ಕಾರಣಾಂತರಗಳಿಂದ ಸಾಲಗಳು ಮಂಜೂರಾಗಲಿಲ್ಲ.

5. ಕಂಗಳತ್ತುನಾಡು ಸೊಸೈಟಿ, ಹಾಲುಗುಂದ ಸೊಸೈಟಿ ಮತ್ತು ಕುಂಜಲಗೇರಿ ಸೊಸೈಟಿಯವರು ಬ್ಯಾಂಕಿಗೆ ಮರುಪಾವತಿ ಮಾಡಲಿಕ್ಕಿರುವ ಸಾಲಕ್ಕೆ ಹೆಚ್ಚಿನ ಕಂತು ಕೊಡಬೇಕಾಗಿ ಬರಕೊಂಡ ಅರ್ಜಿ ಓದಲಾಗಿ ಹೆಚ್ಚಿಗೆ ಕಂತು ಕೊಡತಕ್ಕದ್ದಾಗಿ ತೀರ್ಮಾನವಾಯಿತು.

6. ಟ್ರೆಜರಿ ಕೊಠಡಿಯಲ್ಲಿರುವ ಬ್ಯಾಂಕಿನ ಖಜಾನೆ ಪೆಟ್ಟಿಗೆಯನ್ನು ಅಲ್ಲಿಂದ ತೆಗೆದು ಬೇರೆ ಜಾಗದಲ್ಲಿ ಇಟ್ಟುಕೊಳ್ಳಲು ಏರ್ಪಾಡು ಮಾಡಬೇಕಾಗಿ ಬಂದ ನಂಬ್ರ ಬಿ $\frac{1486}{32}$ ತಾರೀಕು 7—4—1932 ರ ಕೊಡಗು ಕಮಿಷನರವರ ಪತ್ರ ಓದಲಾಯಿತು.

ರಿಜಿಸ್ಟ್ರಾರವರನ್ನು ಈ ಬಾಬಿನಲ್ಲಿ ಕಮಿಷನರವರ ಜೊತೆಯಲ್ಲಿ ಮಾತಾಡುವ ಹಾಗೆ ಕೇಳಿಕೊಳ್ಳುವಂತೆ ತೀರ್ಮಾನವಾಯಿತು.

7. ಖಜಾನೆ ಮೂಲಕ ಸೊಸೈಟಿಗಳಿಂದ ಬ್ಯಾಂಕಿಗೂ, ಬ್ಯಾಂಕಿನಿಂದ ಸೊಸೈಟಿಗೂ ಹಣ ತೆಗೆದುಕೊಳ್ಳುವುದರ ವಿಷಯ ಆ ಬಾಬಿನಲ್ಲಿ ಆದ ಮೊದಲಿನ ಆರ್ಡರು ನಕಲು ಕಳುಹಿಸಬೇಕಾಗಿ ಕೊಡಗು ಕಮಿಷನರವರಿಂದ ಬಂದ ನಂಬ್ರ ಬಿ. $\frac{4178}{31}$ ತಾ. 7—4—32 ರ ಪತ್ರ ಓದಲಾಯಿತು.

ಬ್ಯಾಂಕಿನಲ್ಲಿ ಅಂಥಾ ಆರ್ಡರಿನ ನಕಲು ಏನೂ ಇಲ್ಲದ್ದರಿಂದ ರಿಜಿಸ್ಟ್ರಾರವರನ್ನು ನಕಲು ಕಳುಹಿಸುವ ಹಾಗೆ ಕೇಳಿಕೊಳ್ಳುವಂತೆ ತೀರ್ಮಾನವಾಯಿತು.

8. ಕೊಡಗು ಕಮಿಷನರವರಿಂದ ಸ್ಟಾಂಪು ಡ್ಯೂಟಿ ಮತ್ತು ರಿಜಿಸ್ಟ್ರೇಶನ್ ಚಾರ್ಜು ವಜಾ ಮಾಡಿಕೊಡಬೇಕಾಗಿ ಕೇಳಿಕೊಂಡ ಪತ್ರಕ್ಕೆ, ಈ ಕೋರಿಕೆಯು ನಡೆಯಲಾಗುವುದಿಲ್ಲವೆಂತ ಬಂದ ನಂಬ್ರ $\frac{1769\text{-D-3}}{32}$ ರ ಪತ್ರ ಓದಲಾಯಿತು.

9. ಡೈರೆಕ್ಟರುಗಳು ಇನ್ನೊಂದಾವೃತ್ತಿ ಚುನಾವಣೆ ಆಗುವ ವರೆಗೆ ವಾಯಿದೆ ಮೀರಿದ ಸಾಲದ ವಸೂಲಾತಿ ಮಾಡತಕ್ಕದ್ದಾಗಿ ತೀರ್ಮಾನವು

10. ಖಾಯಂ ಅಧ್ಯಕ್ಷರಾದ ಕೋದಂಡ ಅಪ್ಪಯ್ಯನವರು ರಜೆಯಲ್ಲಿರುವುದರಿಂದ ಅವರು ಬರುವ ವರೆಗೆ ಪಟ್ಟಮಾಡ ದೇವಯ್ಯನವರು ಬ್ಯಾಂಕಿನ ದಿನಚರಿ ವಗೈರೆಗಳಿಗೆ ಸೈನು ಹಾಕತಕ್ಕವರು

ಮಡಿಕೇರಿ,
ತಾ. 30—4—32

ಯಂ 1ಕ್ಕೆ ರೂ. 32—8—0

——ರ್ಮನ್

ಮಾರಾಟ.

ಕಾಲಿನಿಂದಾ
ಎರಡು ಮೈಲೊಳಗಿರುವಂತೆ
ಒಂದು ಸೇವರ್ ರೈಸ್ ಫ್ಲಾಟ್
ಮಡಿಕಲ್ ಹಾಲ್)
ಇದೆ. 2 ಮನೆಗಳು (ಹ್ಯಾಂಡ್ ಲೆಗ್
ಇದರ ಸಮೀಪ ಎಂ 1ಕ್ಕೆ ರೂ. 78—[illegible]
ಳಗಿನ ವಿಳಾಸ:—ಯಂ. ಎಸ್. [illegible]

ಓಫಿಯಂ ಮತ್ತು [illegible]

ಪಾಲಿಬೆಟ್ಟ [illegible]
52—65

ಕೊಡಗು.

ಸನ್ ೧೯೩೦ನೇ ಇಸವಿ

ಮೇ ತಾ ೨ ನೇ ಶುಕ್ರವಾರ.

ಪ್ರೆಸ್ ಆರ್ಡಿನೇನ್ಸ್

ಜಾರಿಯಲ್ಲಿರುವ ಪರಿವಿಗೆ

ನಾವು

ಅಗ್ರಲೇಖನ

ವನ್ನು

ಕಟಿಸುವುದಿಲ್ಲ.

45 ರಂತೆ ಹೆಚ್ಚಿದವು. ಆದರೆ ಇಂಗ್ಲೆಂಡಿನಲ್ಲಿ ಹತ್ತಿಯ ವ್ಯಾಪಾರವು ಶೇಕಡ 91 ರಿಂದ 25 ಕ್ಕೆ ಇಳಿದು ಹೋಯಿತು. ಮ ಪಾನವು ಶೇಕಡ 72 ರಂತೆ ಏರಿತ್ತು. ಜಪಾನಿನ ಒಟ್ಟು ವ್ಯಾಪಾರವು ಶೇಕಡ 72 ರಂತೆ ಏರಿದ್ದಿತ್ತು. ಈ ಸಂದರ್ಭದಲ್ಲಿ ಬೇರೆ ಚಿಲ್ಲರೆ ಸಾಮಾನುಗಳ ರಫ್ತು ಇತ್ತು. ಈ ಸಂದರ್ಭದಲ್ಲಿ ಬೇರೆ ಚಿಲ್ಲರೆ ಸಾಮಾನುಗಳ ರಫ್ತು ಇಂಗ್ಲೆಂಡಿನಲ್ಲಿ ಶೇಕಡ 77 ಕ್ಕೆ ಇಳಿದು ಹೋಯಿತು ಆದರೆ ಜಪಾನಿನ ವಾಣಿಜ್ಯವು ಶೇಕಡ 22 ರಷ್ಟು ಏರಿಸಲ್ಪಟ್ಟಿತು.

ಬ್ರಿಟಿಷ್ ವ್ಯಾಪಾರಕ್ಕೆ ಕುಂದು ಇಂಡಿಯಾದಿಂದ ಬಂದಿದೆ. ಸ್ವದೇಶಿ ಭಾವನೆಯಿಂದ ಇಂಡಿಯಾ ಸರಕಾರವು ಜಾಗೆ ಚಾರಂಗನ್ನು ನಿಲ್ಲಿಸಿ ಇಂಗ್ಲೆಂಡಿನಿಂದಲೇ ಬಟ್ಟೆಯನ್ನು ತರಿಸಬೇಕೆಂದು ಬಲತ್ಕರಿಸಲು ಅನೇಕ ಯುಕ್ತಿಗಳನ್ನು ಮಾಡುತ್ತಲಿರುವರು. ಇಂಗ್ಲೆಂಡಿನಲ್ಲಿ ಎಲ್ಲಿ ನೋಡಿದರೂ "ಬೈ ಬ್ರಿಟಿಷ್" ಎಂಬುವವೇ ಕಾಣುತ್ತಿರುವುವು. ಇಂಡಿಯಾದಲ್ಲೂ ಕೂಡ "ಬೈ ಇಂಡಿಯನ್" ಎಂಬುದೇ ಪ್ರಚಲಿತವಾದಂತೆ ತೋರುತ್ತದೆ. ಧನಸಹಾಯಕವಾದ ಪತ್ರಗಳನ್ನು ಪ್ರಚಾರ ಮಾಡುವುದನ್ನು ದೊಡ್ಡ ಆಫೀಸರುಗಳಿಗೂ ಕಳುಹಿಸುತ್ತಿರುವರು. ಆದರೆ ಪೋಲೀಸಿನವರು ದಸ್ತಗಿರಿಯಿಂದಲೂ ಲಾಠಿ ಪೆಟ್ಟುಗಳಿಂದಲೂ ಹೆದರಿಸಿ ಈ ಕೆಲಸಕ್ಕೆ ಅಡಚಣೆಯನ್ನು ತರುತ್ತಿರುವರು.

ಇಂಡಿಯಾದಲ್ಲಿ ಈ ಸ್ವದೇಶೀ ಗಲಭೆಯು ನಿಂತ ಮಾತ್ರಕ್ಕೆ ಲಂಕಾಶಯರಿನ ಗಿರಣಿಗಳು ತಮ್ಮ ಮೊದಲಿನ ಉನ್ನತ ಸ್ಥಿತಿಗೆ ಏರುವಂತೆ ತೋರುವುದಿಲ್ಲ. ಇಲ್ಲಿನ ಬಡ ಸತ್ಯಾಗ್ರಹಿಗಳನ್ನು ಹೇಗೆ ಸದೆಬಡಿದರೂ ಇಲ್ಲಿನ ಜನರು ಸ್ವದೇಶಿಯನ್ನೇ ಬಯಸುವರೇ ಹೊರತು ಲಂಕಾಶಯರಿನ ಗಿರಣಿಗೆ ಬೀಳುವಂತಿಲ್ಲ. ಇಲ್ಲಿಯ ಸತ್ಯಾಗ್ರಹವು ನಿಂತು ಹೋದರೂ ಬೊಂಬಾಯಿ ಮತ್ತು ಅಹಮ್ಮದಾಬಾದಿನ ಯೂರೋಪಿಯನ್ ಗಿರಣಿಗಳು ತಮ್ಮ ಪೂರ್ವೋನ್ನತಿಗೆ ಬರಬೇಕಾದರೆ ಸ್ವಲ್ಪ ಕಾಲಕ್ರಮ ಪಡಬೇಕಾಗುವುದು.

ಲಂಕಾಶಯರಿನ ಹತ್ತಿಯ ವ್ಯಾಪಾರದ ಅಭಾವಕ್ಕೆ ಇಲ್ಲಿನ ರೈತರು ಕೊಂಡುಕೊಳ್ಳದಿರುವುದೇ ಮುಖ್ಯ ಕಾರಣ. ಇಂಡಿಯಾದ ಜನಸಂಖ್ಯೆಯು 40 ಮಿಲಿಯಕ್ಕೆ ಏರಿದ್ದರೂ ಇಲ್ಲಿನ ಒಟ್ಟು ಖರ್ಚು 1913 ರಲ್ಲಿ ಆಗುತಿದ್ದ ಖರ್ಚಿಗಿಂತ ಬಹು ಕಡಿಮೆ. ಸೀಮೆಯಲ್ಲಿ ತಯಾರಾದ ಆಹಾರ ಪದಾರ್ಥಗಳೂ, ಟಿನ್ನಿನಲ್ಲಿಡಲ್ಪಟ್ಟ ಪದಾರ್ಥಗಳೂ ಆರ್ಥಿಕ ದುಸ್ಥಿತಿಯಿಂದಲೂ ಗಿರಾಕಿಯಿಲ್ಲದ್ದರಿಂದಲೂ ಖರ್ಚಾಗದೆ ಇಂಗ್ಲೆಂಡಿನ ವ್ಯಾಪಾರವು ಬಹುವಾದ ಆಪತ್ತಿಗೆ ಗುರಿಯಾಗಿದೆ. ಆದರೂ ಹತ್ತಿಯ ವ್ಯಾಪಾರವು ಒಂದೇ ಮಟ್ಟದಲ್ಲಿ ನಿಂತಿದೆ. ಈ ದುಸ್ಥಿತಿಯು ಒದಗಿದ್ದರೂ ಸರ್ ಸ್ಯಾಮುವೆಲ್ ಹೋರರವರು ಪಾರ್ಲಿಮೆಂಟಿಗೆ ಈ ಕಲಹದಿಂದ ಏನೊಂದೂ ಈಗ ಆಗುವುದಿಲ್ಲವೆಂದು ಇನ್ನೂ ಅಭಯವನ್ನೀಯುತ್ತಿರುವರು.

ಇಂಗ್ಲೆಂಡೂ ಮತ್ತು ಇಂಡಿಯಾವು ತಮ್ಮ ತಮ್ಮಲ್ಲಿಯೇ ರಾಜಿ ಸಂಧಾನವನ್ನು ಮಾಡಿಕೊಂಡು ಹೊಂದಿಕೊಂಡು ಸುಖಿಸಬೇಕಲ್ಲ. ಹೀಗೆ ಮಾಡದಿದ್ದರೆ ಮುಂದೆ ಬಹು ದುಃಖಸ್ಥಿತಿಗೆ ಕಾಲಿಡಬೇಕಾಗಿ ಬರುವದು. ಸುಂಕ ಹಾಕುವ ಪ್ರಶ್ನೆಯೇ ಇದಕ್ಕೆ ಕಾರಣ ಇದು ಸುಧಾರಣೆಯಾದ ಹೊರತು ಲಂಕಾಶಯರನೊಡನೆ ಇಂಡಿಯಾವು ಕಲೆಯುವ ದಾರಿಯೇ ಇಲ್ಲವೆಂದು ತೋರುತ್ತದೆ. ಲಂಕಾಶಯರಿನ ಅನುಕೂಲಕ್ಕೆ ಸರಿಯಾಗಿ ಇಂಡಿಯಾದ ಸುಂಕವನ್ನು ವ್ಯತ್ಯಾಸಮಾಡುವ ಸಂಭವವೇ ಇಲ್ಲ.

ಈ ಸುಂಕವನ್ನು ಪ್ರಾರಂಭದಲ್ಲಿ ಹಾಕುವಾಗ ಉತ್ಪತ್ತಿಯ ದೃಷ್ಟಿಯಿಂದಲೇ ಹಾಕಿಟ್ಟು. ಹಿಂದೂಸ್ಥಾನದ ಕೈಗಾರಿಕೆಯ ಮುಖಂಡರು ತಮ್ಮ ಕೈಗಾರಿಕೆಗಳಿಗೆ ಸಹಾಯ ದೊರಕುವ ಬಗ್ಗೆ ಸುಂಕ ಹಾಕಬೇಕೆಂದು ಕೇಳಿಕೊಂಡಿದ್ದರು. ಈಚೆಗೆ ಕೈಗಾರಿಕೆಯ ಮುಖಂಡರು ಕಾಂಗ್ರೆಸಿಗೆ ಪ್ರತ್ಯಕ್ಷವಾಗುತ್ತಿರುವುದರಿಂದ ಇವರಿಗೆ ತಕ್ಕ ಸಹಾಯ ಕೊಡುವ ಯೋಚನೆ ಇದೆ. ಏನೊಪ್ಪಿ ಇದಕ್ಕೆ ಒಪ್ಪಿಸುವ ಹಾಗೆ ಸುಂಕವನ್ನು ಇಳಿಸುವ ಯೋಚನೆ ಇದೆ. ಅರ್ಥಶಾಸ್ತ್ರಗಳಿಂದ ಲಂಕಾಶಯರಿಗೆ ಸಹಾಯಮಾಡುವಂತೆಯೇ ಸುಂಕ ಇಳಿಸಿಯೂ ಲಂಕಾಶಯರಿಗೆ ಸಹಾಯಮಾಡುವುದು ಉದ್ದೇಶವೆಂದು ಏನೊಪ್ಪಿ ಮೆಂಬರುಗಳಿಗೆ ತಿಳಿಯದೆ ಇರದು.

ವೈಸರಾಯರು ಏನೊಪ್ಪಿದರೂ ತಿರಸ್ಕರಿಸಿ ಸುಂಕವನ್ನು ಇಳಿಸುವ ಹಕ್ಕೇನೋ ಇದೆ. ಇದಕ್ಕೆ ಪಾರ್ಲಿಮೆಂಟಿನಲ್ಲಿ ಒತ್ತಾಸೆ ಇರಬಹುದು. ಹೊಸ ರಾಜಕೀಯ ರಚನೆಯ ಬಂದರೆ ಇಲ್ಲಿ, ಆಮದು ವಸ್ತುಗಳನ್ನು ಹಿಂದೂಸ್ಥಾನದ ಅನುಕೂಲಕ್ಕಾಗಿ ಏರ್ಪಡಿಸಿಕೊಳ್ಳುವ ಹಕ್ಕು ಹಿಂದೂಸ್ಥಾನದ ಸರ್ಕಾರಕ್ಕೆ ಖಂಡಿತವಾಗಿ ಸಿಗುತ್ತದೆ. ಆ ಹಕ್ಕು ದೊರೆತಾಗ ಹಿಂದೂಸ್ಥಾನದ ಕೈಗಾರಿಕೆಗಳಿಗೆ ಸಹಾಯ ದೊರಕುವದಕ್ಕಾಗಿ ಹೊರಗಿನಿಂದ ಬರುವ ಸರಕುಗಳಿಗೆ ಸುಂಕವನ್ನು ಹಾಕುವರೆಂಬುವುದರಲ್ಲಿ ಸಂಶಯವಿಲ್ಲ. ಆಗ ಲಂಕಶಯರಿಗೆ ಪೆಟ್ಟು ತಗಲದೆ ಇರುವುದಿಲ್ಲ. ಜಪಾನಿನ ವ್ಯಾಪಾರವು ಹಿಂದೂಸ್ಥಾನದಲ್ಲಿ ಹೆಚ್ಚುತ್ತಲಿದೆ. ಬೆಲೆಯನ್ನು ಬಹಳ ಇಳಿಸಿರುವುದೇ ಈ ಜಯಕ್ಕೆ ಕಾರಣ. ಲಂಕಾಶಯರು ಸಹ ಬೆಲೆಯನ್ನು ಇಳಿಸಬೇಕಾಗುತ್ತದೆ. ಹಿಂದೂಸ್ಥಾನದ ಮಿಲ್ಲುಗಳಲ್ಲೂ, ಹೆಚ್ಚೆಚ್ಚು ಬಟ್ಟೆ ತಯಾರಾಗುತಲಿದೆ. ಹಿಂದೂಸ್ಥಾನದ ಮತ್ತು ಜಪಾನಿನ ಬಟ್ಟೆಯೊಂದಿಗೆ ಲಂಕಾಶಯರಿನ ಬಟ್ಟೆಯು ಹೋರಾಡುವುದು ಕಷ್ಟವಾದೀತು. ಲಂಕಾಶಯರಿಗೆ ರಿಯಾಯಿತಿ ಬೇಕಾದರೆ ಹಿಂದೂಸ್ಥಾನದ ಪ್ರೀತಿಯನ್ನು ಸಂಪಾದಿಸಬೇಕು. ಎರಡು ದೇಶಗಳೊಳಗೆ ಪುನಸ್ಥಾಪನವನ್ನು ಹೆಚ್ಚಿಸುವಂತೆ ಸರ್ಕಾರವು ಮಾಡುತ್ತಿರುವ ಕಾರ್ಯಗಳನ್ನು ಲಂಕಾಶಯರು ಸಾಕಷ್ಟು ವಿರೋಧಿಸಬಾರದಿಲ್ಲ.

ವಾಣಿಜ್ಯ ಪ್ರತೀಕ್ಷೆ.

(...ನವರು ಪ್ರಕಟಿಸಿದ ಲೇಖನದಿಂದ)

...ರಿನ ಹತ್ತಿಯ ವ್ಯಾಪಾರವನೆತ್ತಿ ...ರು 30 ವರ್ಷಗಳ ಹಿಂದೆ ಇಂ... ...ದ್ದ ಆರ್ಥಿಕ ವ್ಯವಸ್ಥೆಯ ವ್ಯ... ...ಸಾಧ್ಯವಾದಂತೆ ಕಂಡುಬ...

...ದಲ್ಲಿ ಇಂಡಿಯಾವು ಇಂ... ...ಬಟ್ಟೆಯ ಮುಕ್ಕಾಲಂಶ ...ಕಡ 97 ರಂತೆ ಲಂ... ...ಗುತಿತ್ತು. ಆದ... ...ಕಡ 35 ರಂತೆ ... ಶೇಕಡ 58 ... 1913 ರಲ್ಲಿ ...ದಲ್ಲಿ ನಾ... ...ಡಿಯಾ ...ು

ಇಂಡಿಯಾದ ಸುಧಾರಣೆಗೆ ಮಂತ್ರಿ ಮಂಡಲಿಯ ಹಂಚಿಕೆ.

('ಬೊಂಬಾಯಿ ಕ್ರಾನಿಕಲ್' ಪತ್ರಿಕೆಯ ಲಂಡನ್ ಬಾತ್ಮಿದಾರರು ಮಂತ್ರಿ ಮಂಡಲಿಯ ಅಭಿಪ್ರಾಯವನ್ನು ಊಹಿಸಿ ಬರೆದದ್ದು)

ಮೊದಲನೆಯದಾಗಿ ಸಂಯುಕ್ತ ರಾಜ್ಯ ನಿಯಮವನ್ನು ಸ್ಥಾಪಿಸಲು ತುಂಬಾ ಅಸಾಧ್ಯವೆಂದೂ, ಇಲ್ಲಿನ ತರ್ಕವನ್ನೂ ಮತ್ತು ಇನ್ನೂ ಅನೇಕ ವಿಷಯಗಳನ್ನೂ ಚರ್ಚಿಸಿ ನಿರ್ಣಯವಾಗಿ ನಿರ್ಧರಿಸಿ ಸಂಯುಕ್ತ ರಾಜ್ಯ ನಿಯಮವನ್ನು ಸ್ಥಾಪಿಸಲು ಸುಮಾರು ಎರಡು ವರ್ಷ ಹಿಡಿಯಬಹುದೆಂದೂ ಹೇಳುತ್ತಾರೆ. ಇಲ್ಲಿನ ರಾಜರುಗಳೇ ಇದಕ್ಕೆ ಅಡಚಣೆ ಮಾಡುವವರೆಂದು ತಂದಿರುವವರಾದ್ದರಿಂದ ಈಗ ಕ್ಷಣವೇ ಈ ರೀತಿಯ ರಾಜ್ಯ ನಿಯಮವನ್ನು ಅನುಸರಿಸಲು ಕಷ್ಟವಾಗಿದೆ.

ಇದಲ್ಲದೆ ಇಂಡಿಯನ್ ಫ್ರಾಂಚೈಸೇ ಮೊದಲಾದವುಗಳಿಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ಚರ್ಚಿಸಿ ಹೊಸ ಜವಾಬ್ದಾರಿ ಸರ್ಕಾರದ ಕ್ರಮವನ್ನು ತಯಾರಿಸಲು ಒಂದು ವರ್ಷಕ್ಕಿಂತ ಹೆಚ್ಚು ಸಮಯವು ಬೇಕಾಗುವುದು.

ಈ ಸಮಯದಲ್ಲಿ ಈಗಿನ ರಾಜ್ಯಾಡಳಿತ ಕ್ರಮಕ್ಕೆ ಸ್ವಲ್ಪ ಬದಲಾವಣೆಯನ್ನು ತಂದು ಸುಧಾರಿಸುವುದು.

ಜೂನ್ ತಿಂಗಳೊಳಗೆ ಪ್ರಧಾನಿಯವರ ಕೋನ್ಸವಾಸನ್ನು ಸಮಸ್ಯೆಯ ಮೇಲೆ ತೀರ್ಪು ಕೊಡಲಾಗುವುದೆಂದೂ ಮತ್ತು ಗವರ್ನಮೆಂಟ್ ಆಫ್ ಇಂಡಿಯಾ ಆಕ್ಟನ್ನು ತಿದ್ದುಪಾಟು ಮಾಡುವುದಕ್ಕಾಗಿ ಹೌಸ್ ಆಫ್ ಕಾಮನ್ಸಿನಲ್ಲಿ ಒಂದು ಹೊಸ ಬಿಲ್ಲಿನ ಮಸೂದೆಯನ್ನು ತರುವರು.

ಈ ಬಿಲ್ಲಿನ ಪ್ರಸ್ತಾವನೆಯು ಪ್ರಧಾನಿಯವರ ಕಳೆದ ೩ ನವಂಬರಿನ ಕ್ರಮವನ್ನು ಕುರಿತಲ್ಲದೆ ಮತ್ತಾವುದೂ ಅಲ್ಲ.

ಈ ಬಿಲ್ಲಿನ ಎರಡು ಮುಖ್ಯ ಭಾವಗಳು:—

1. ಗವರ್ನರ್ ಜನರಲ್ ಇನ್ ಕೌನ್ಸಿಲ್ ರ ಅಧಿಕಾರದ ಕೆಲವು ಅಂಶಗಳನ್ನು ಬದಲಾವಣೆ ಮಾಡಿ ಸೆಂಟ್ರಲ್ ಗವರ್ನಮೆಂಟಿನಲ್ಲಿ ಜವಾಬ್ದಾರಿಯ ಮೂಲ ತತ್ವವನ್ನು ಮುಂದಕ್ಕೆ ತರುವುದು.

2. ಸ್ಯಾಮ್ಯುವೆಲ್ ಹೋರರು ಮೊದಲೇ ತಮ್ಮ ಭಾಷಣದಲ್ಲಿ ಹೇಳಿದ ಹಾಗೆ ಕೆಲವು ಭದ್ರತೆಗಳೊಡನೆ ಪ್ರಾಂತೀಕ ಸರಕಾರಗಳಲ್ಲಿ ಪೂರ್ತಿ ಜವಾಬ್ದಾರಿ ಕ್ರಮವನ್ನು ಸ್ಥಾಪಿಸುದು.

ಈ ಬಿಲ್ಲನ್ನು ಬರುವ ಜೂನ್‌ನಲ್ಲಿ ಒಂದು ಕಾನೂನಾಗಿ ಮಾಡುವರೆಂತ ನಿರೀಕ್ಷಿಸಲಾಗಿದೆ.

ಮಂತ್ರಿ ಮಂಡಲವು ಇಲ್ಲಿನ ನೇಶನಲ್ ಗವರ್ನಮೆಂಟು ಇನ್ನು ಬರುವ ವರ್ಷದ ಆದಿಯ ವರೆಗೆ ಮುಂದುವರಿಯುವುದಿಲ್ಲವೆಂತ ನಿರೀಕ್ಷಿಸುವರು. ಅಷ್ಟರಲ್ಲಿ ಕೆಲವು ರಾಜಕೀಯ ಬದಲಾವಣೆಗಳು ನಡೆದು ಒಂದು ಜನರಲ್ ಚುನಾವಣೆಯು ಸುಮಾರು ಬರುವ ಫೆಬ್ರವರಿಯಲ್ಲಿ ಆಗುವಂತೆಯೂ, ಇದರ ಫಲವಾಗಿ ಟೋರಿ ಪಕ್ಷದವರು ಅಧಿಕಾರಕ್ಕೆ ಒಂದು ಐದು ವರ್ಷಗಳ ವರೆಗೆ ಬಲವಾಗಿ ನಿಂತು ಇಂಡಿಯಾದ ರಾಜಕೀಯ ಸುಧಾರಣೆಯನ್ನು ಆಗ ಟೋರಿಯವರ ಅಭಿಪ್ರಾಯದಂತೆ ತೀರ್ಮಾನಿಸುವ ಹಾಗೂ ನಿರೀಕ್ಷಿಸಿದ್ದಾರೆ

ಕೀರ್ತನ ಧುರೀಣೆ ಶ್ರೀಮತಿ ಯದುಗಿರಿಯಮ್ಮನವರು.

(ಪ್ರೇಕ್ಷಕರಿಂದ)

ಈಚೆಗೆ ಇವರು ಕೃಷ್ಣ ತುಲಾಭಾರ, ವೀರ್ಯ ಪ್ರತಿಜ್ಞೆ, ವಸ್ತ್ರಾಪಹರಣ ಎಂಬ ಹರಿಕಥೆಗಳನ್ನು ಮಡಿಕೇರಿ ಮೈಸೂರು ಹಾಲ್‌ನಲ್ಲಿಯೇ ನಡಿಸಿದರು. ಮುಂಗೆ ನಡೆದ ಎರಡು ಕಥೆಗಳಿಗೂ ಜನ ಸಮುದಾಯವು ಅತಿ ದೊಡ್ಡದಿದ್ದುದರಿಂದ, ಭೀಷ್ಮ ಪ್ರತಿಜ್ಞೆ, ವಸ್ತ್ರಾಪಹರಣ ಈ ಕಥೆಗಳನ್ನು ಟಿಕೇಟಿನ ಮೇಲೆ ನಡಿಸಲಾಯಿತು. ಕಳೆದ ಮಂಗಳವಾರ ನಡೆದ ವಸ್ತ್ರಾಪಹರಣಕ್ಕೆ ಹಜೂರ್ ಕಮಿಷನರ್ ಸಾಹೇಬರವರು ದಯಮಾಡಿಸಿದ್ದರು. ಆ ಸಭೆ ಸಭಿಕರ ಪರವಾಗಿ ಶ್ರೀಮತಿ ಶೀತಮ್ಮನವರು ಹರಿಕಥಾ ಕಾರಣಿಯವರಿಗೆ ಧನ್ಯವಾದ ಸಹಿತ ಒಂದು ಕಾಣಿಕೆ ಒಂದು ಪದಕವನ್ನು ಅರ್ಪಿಸಿದರು. ಆ ದಿನದ ಉತ್ಪನ್ನವು ರೂ. 154 ಆಗಿತ್ತು.

ಇವರ ಪ್ರತಿಭೆಯಿಂದ ಕಥೆಯು ಮನೋರಂಜಕವಾಗಿತ್ತು. ಪ್ರತಿಯೊಂದು ಕಥೆಯು ಭಿನ್ನ ಭಿನ್ನ ಶೈಲಿಯಿಂದ ಕೂಡಿತ್ತು. ಇವರ ವಚನವು ಗಂಭೀರವಾಗಿಯೂ ಉತ್ತಮತರದಾಗಿಯೂ, ಇವರ ಸಂಗೀತವು ಬಹಳ ಇಂಪಾಗಿಯೂ ಇತ್ತು. ಆಯಾಯ ರಸಕ್ಕೆ ತಕ್ಕಂತ ಅಭಿನಯದಿಂದ ಕೂಡಿದ ಭಾಷಣವೂ ಇದ್ದಿತು.

ಮಂಗಳವಾರ ದಿನದ ಕಥೆಯ ಆದಿ ಭಾಗದಲ್ಲಿ ಹರಿಕಥಾ ಕಾರಣಿಯವರು ಭಾರತಮಾತೆ, ಕರ್ಣಾಟಕಮಾತೆ ಮತ್ತು ಕೊಡಗು ಇವುಗಳನ್ನು ಕುರಿತು ಮಾಡಿದ ವರ್ಣನೆಯು ಸಭಿಕರನ್ನು ಮುಗ್ಧರನ್ನಾಗಿ ಮಾಡಿತು. ಇವರು ನಿಂತ ರೀತಿ, ಇವರಾಡಿದ ಮಾತು, ಇವರು ಹಾಡಿದ ರಾಗ, ಇವರು ತೋರಿದ ಭಾವ ಇವೆಲ್ಲವೂ ಸಮ್ಯನೋರಂಜಕವಾಗಿದ್ದವು.

ಜನ ಸಂದಣಿಯನ್ನು ಹತೋಟಿಯಲ್ಲಿ ತರಲಾಗದ ಸಂದರ್ಭದಲ್ಲಿ, ಟಿಕೇಟುಗಳನ್ನಿಟ್ಟು ಕಥೆ ಮಾಡಿದ್ದು ಇದೇ ಮೊದಲು. ಟಿಕೇಟಿದ್ದಾಗ್ಯೂ ಜನರು ಮಿತಿಮೀರಿ ಸೇರಿದ್ದನ್ನು ನೋಡಿದರೆ, ಹರಿಕಥಾಕಾರಣಿಯವರ ಕಥಾವಿದ್ವತ್ತು ಅವರ್ಣನೀಯವಾದದ್ದೆಂದು ತೋರುತ್ತದೆ.

Reg. No. M. 1550.
If not delivered please return to
"KODAGU" OFFICE MERCARA.

ಕೊಡಗು.

ಸತ್ಯೇನ ಧೂತದಯುಯೆ. ವಿದ್ಯಾ ಶೀಲ ಪ ಯತ್ನಶಾ ' ಐಕ ಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ
ವಾರ್ಷಿಕ ಚಂದಾ ರೂ. ೩—೪—೦.
ಸಂಪಾದಕ—ಮೂಚಿಮಂಡ ಯಂ. ಗಣಪತಿ.
ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೧	ಮಡಿಕೇರಿ, ಸನ್ ೧೯೩೨ನೇ ಇಸವಿ ಮೇ ತಾರೀಕು ೬ ನೇ ಶುಕ್ರವಾರ.	ಸಂಚಿಕೆ ೪೮

SARI-PIN.

BRACELETS

NECKCHAINS.

EAR-RING (Thodu)
Cut-rubys Rs. 25 to 50
With diamond in centre Rs. 80 to 120

Gold Rs. 10
Set rubys forming any letter Rs. 12

NOSE-RINGS
Diamond in small size of best quality Rs. 35 & upwards according to size.

MARRIAGE PRESENTATIONS.
Attractive and inexpensive articles ready in stock. Prompt execution. Details on enquiry free with catalogue. Numerous customers in Coorg thoroughly satisfied with reliable service. Testimonials pouring in.
Silver Guindys, Photo lockets, Dimond nose-screws, cut-ruby ear-rings, etc., in all prices. Very attractive. Prices most moderate.

Estimates free on enquiry.

V. Subramaniaier
Jeweller,

Designs free on enquiry.

Telegrams: 'PRECIOUS.'

Telephone: 3145.

CATALOGUE ON ENQUIRY.

52–24

Post Box 423, Triplicane, P. O., MADRAS.



ಕಾಗದ ಬರೆದರೆ ಉಗಿನ
ಕ್ಯಾಟಲಾಗು ಪೂಕೆಯಾಗಿ
ಕಳುಹಿಸಲ್ಪಡುವುದು.

ಕೋವಿಗಳು, ಕತ್ತಿಗಳು, ಬಟೀಗಳು, ಕೋಟೆಗಳು, ಕೇಪುಗಳು, ಮದ್ದು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS,
Largest Importers of Firearms and Ammunition
Cheapest priced firm in India,
24–9 210 Abdul Rehman Street, BOMBAY

ಬಾಲಾರ್ಕಮಧು.

ಬಾಲಾರ್ಕಮಧು ಮಕ್ಕಳಿಗೆ ಕೊಡುವುದರಿಂದ ಶಕ್ತಿಯ ಆರೋಗ್ಯವೂ ಹೆಚ್ಚುವುದು. ಇದು ಮಧುರವಾಗಿದೆ. ಶೀಸೆ 1ಕ್ಕೆ 0–12–0 ಟ. ಖ. 0–12–0.



ಯಂ 1ಕ್ಕೆ ರೂ. 32–8–0

(Spleen Lever ...ಕಾಯಿಲೆಯಿಂದಾ ಕರ ಗಡ್ಡೆ ರೋಗ... ಕಳೆಯಿಸುವಂತೆ ಚಕ್ರ...ಸಲ್ ಪ್ಲೇಟ್" ಔಷಧಗಳಿವೆ. ಹ್ಯಾಂಡ್ ರೇಗ್... ನಾಲ್ಕು 1ಕ್ಕೆ 3–0–0. ಟ ರೂ. 7

ಪ. —ಯಂ. ಎಸ್. ಸಿದ್ದೇಶ ಬ್ರದರ್ಸ್
...ಯಂ ಮತ್ತು ಜಾಬೀಸ
ಪಾಲೆಪಿ ಲಾನ ಮೋರ್ಕೆಟ್, ಬೆಂ
52–45

ಭಂಗಾರದ ಉಂಗುರಗಳು.

ಈ ಉಂಗುರಗಳನ್ನು ವಜ್ರದ ಕಲ್ಲುಗಳನ್ನು ಇಟ್ಟು ರೋಲ್ಡ್ ಗೋಲ್ಡ್ ಭಂಗಾರದಿಂದ ಕಟ್ಟಡ ಕಟ್ಟಿದೆ. ಇದರ ಬಣ್ಣವು ಕೆಡದಂತೆ ಎಲೆಕ್ಟ್ರಿಕ್ ಪವರಿನಿಂದ ಸವರಿನ್ ಭಂಗಾರದ ಬಣ್ಣ ಕೊಟ್ಟಿದೆ. ಇವು ಸಾಚಾ ವಜ್ರದ ಉಂಗುರಗಳಿಗೆ ಸರಿಸಮಾನವಾಗಿವೆ. ೧ಕ್ಕೆ ೦–೧೨–೦. ೩ ಉಂಗುರಗಳಿಗೆ ೧ ಟೇಬಲ್ ಟೈಂಪೀಸನ್ನೂ ೬ ಉಂಗುರಗಳಿಗೆ ೧ ಭಂಗಾರದ ಪಾಕೆಟ್ ವಾಚನ್ನೂ ೧೨ ಉಂಗುರಗಳಿಗೆ ಒಂದು ಭಂಗಾರದ ಕೈಯ್ಯಲ್ಲಿ ಕಟ್ಟುವ ರಿಸ್ಟ್ ವಾಚನ್ನೂ ಇನಾಮಾಗಿ ಕೊಡುವೆವು.

ವಿಳಾಸ:—ಕೆ. ಎಸ್. ಬಿನ್‌ಸೆಸ್ ಅಂಡ್ ಕೊ,
12–5 ಪೋ|| ನಂ|| 1246, ಮದರಾಸು.

ಸ್ವದೇಶೀ ಶೀರೆಗಳು.

ಈ ಶೀರೆಗಳನ್ನು ಹೆಸರುವಾಸಿ ಹೊಂದಿದ ದೊಡ್ಡ ಕಂಪೆನಿಯವರಿಂದ ತಯಾರಿಸಿದ್ದು. ೧೮ ಮೊಳ ಉದ್ದವೂ. ೩|| ಮೊಳ ಅಗಲವೂ ಇರುವುದು ಇವನ್ನು ಗಟ್ಟಿಯಾದ ಸಣ್ಣ ನೂಲಿನಿಂದಲೂ, ರೇಶ್ಮೆಯಿಂದಲೂ ತಯಾರಿಸಿದೆ. ಅಗಲವಾದ ಅಂಚೂ ಸುಂದರವಾದ ಸೆರಗೂ ಇರುವದು ಇವು ಯಾವಾಗ್ಯೂ ರೇಶ್ಮೆಯಂತೆ ಇರುವವು. ಎಲ್ಲಾ ಬಣ್ಣಗಳಲ್ಲಿಯೂ ಸಿಕ್ಕುವವು. ಎಲ್ಲಾ ಬಣ್ಣಗಳಲ್ಲಿಯೂ ಸಿಕ್ಕುವವು. ಮತ್ತು ಎಲ್ಲಾ ಮತಸ್ಥರಿಗೂ ಒಪ್ಪುವಂತಾದದ್ದು. ಈ ವಾರದಲ್ಲಿ ೩ ಕೊಳ್ಳುವವರಿಗೆ ೭ ಕಲ್ಲಿನ ವಜ್ರದ ಬೆಂಡೋಲೆ ಜತೆ ಒಂದನ್ನು ಇನಾಮಾಗಿ ಕೊಡುತ್ತೇವೆ. ಕ್ರಯ ೧ಕ್ಕೆ ೭–೮–೦.

ವಿಳಾಸ—ಕೆ. ನಾಥಮುನಿ ಅಂಡ್ ಸನ್ಸ್,
12–5 168 ಚೈನಾ ಬಜಾರ ಮದರಾಸು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್. ಕೋ ಆಪರೇಟಿವ್ ಸೊಸೈಟೀಸ್ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲು)

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	26,800
ಜಮೂಬಂದ ಠೇವಣಾತಿ	—	2,50,301

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು. ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5–0–0ರ ದರದಲ್ಲಿ ಬಡ್ಡಿ ದೊರೆಯುತ್ತೆ, ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ. ... ಕೋ ಆಪರೇಟಿವ್ ರಿಜಿಸ್ಟ್ರಾರವರು ... ಲೆಕ್ಕ ಪರಿಶೋಧನೆ ಮಾಡುತ್ತಾರೆ.

ಪ್ರೆಸಿಡೆಂಟರು, ಕೋಳಿಮಾಡ ಅಪ್ಪಯ್ಯನವರು ರಾವ್ ಬಹದ್ದೂರ್.

ಟ್ರೆಜರರ್ ಮನೆಯಪ್ಪಂಡ ಬೆಳ್ಯಪ್ಪನವರು.

ಸೆಕ್ರೆಟರಿ

ಸಿ. ಯಸ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಖು 3–7–1931.

ನೋಟೀಸು.

ಈ ಕೆಳಗಿನ ಮಹಾಶಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿದೆ. ಕೆಳಗಿನ ಸಬ್ ಏಜೆಂಟರುಗಳಿಗೆ ... ಏಜೆಂಟರವರ ... ಚಂದಾದಾರರೆಲ್ಲರೂ ಅವರಿಗೆ ... ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ... ನಮ್ಮ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜೆಂಟರುಗಳು.

ಉತ್ತರ ಕೊಡಗಿಗೆ ಮೆ: ... ಪೂವಯ್ಯನವರು,

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು, (ಖಾದಿಭಂಡಾರ.)

ನಾಪೋಕ್ಲು—ಎಮ್. ಆರ್. ವೆಂಕಪ್ಪಯ್ಯನವರು.

ಅಮ್ಮತಿ—ಸಿದ್ದಾಪುರ—ಮೆ. ಬಿಸಂಡ ಮಾದಪ್ಪನವರು,

ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಯ್ಯನವರು,

ಮತು. ಅರಮಣಮಾಡ ಪಿ ಕಾರ್ಯಪ್ಪನವರು,

ಹುದಿಕೇರಿ & ತಿತಿಮತಿ—ಮೆ. ಜಿ. ಮಾದಯ್ಯನವರು,

ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಪೂವಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರಿಗೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ,

...ರಾಟಕ್ಕೆ ಸಿದ್ಧವಾಗಿವೆ.

... ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿ ...ಲ್ಲಿಯೂ ಬೇಕಾದ ... ...ಯಕ ಸಂಘದ ಮತ್ತು ದವಸ ಭಂಡಾ... ..., ಪಾಸ್ ಪುಸ್ತಕಗಳೂ, ಎಲ್ಲಾ ... ದವಸ ಭಂಡಾರಗಳ ಕೆಲಸಗಳನ್ನು ... ಅತ್ಯವಶ್ಯವಾಗಿರುವ, ರೂಲ್ಸಿಗನು... ...ರುವ ದಾವಾ ಫಾರಮುಗಳೂ, ... ಮತ್ತು ಮಂಜೂರಾತಿ ಫಾರ... ...ಗೆ ಫಾರಮುಗಳೂ, ...ರ್ ಕೀಪರ್ ... ... ರಶೀತಿ ಪುಸ್ತಕಗಳೂ, ... ಮತ್ತು ಚೆಕ್ ಪುಸ್ತ... ...ಲ್ಲಿ ದೊರೆಯುತ್ತವೆ. ...ಟ್ಟಲ್ಲಿ ವಿ. ಪಿ. ...

...ರ್, ...ಕೇರಿ,

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ. ವಿಮೆದಾ: 26,431 ಪಾಲಿಸಿಗಳು.

ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ.

ಪಾಲಿಸಿದಾರರಿಗೆ ಸಾಲ-8013 ಜನರಿಗೆ 32 ಲಕ್ಷ ರೂ.

ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ.

ಭಂಡವಾಳವು ಹೆಚ್ಚಾದದ್ದು—ಸುಮಾರು 1½ ಕೋಟಿ ರೂ.

... 1,78,322 ಜನರಿಗೆ 38 ಕೋಟಿ ರೂ. ...

... ಶೇಕಡ 22.4 ... ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ...

ಈ ದೊಡ್ಡ ಇಂಡಿಯನ್ ಕಂಪೆನಿಯ ... ಗೊತ್ತುಮಾಡಿಕೊಳ್ಳಬಹುದು.

... ಮತ್ತು ಉತ್ತಮ ... ಇಂಡಿಯನ್ ಕಂಪೆನಿಯೊಂದು ... ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ... ಎಲ್ಲಾ ದೇಶಭಕ್ತರಾದ ಹಿಂದೀ... ... ಉತ್ತೇಜನ ...

ಓರಿಯಂಟಲ್ ಕಂಪೆನಿಯು ... ...ತ್ತಿದೆ

... ಅದರ ... ಮುಂದಿನ ... ...ಗುತ್ತದೆ.

ಹೆಚ್ಚಿನ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಬೇಕಾದ್ದು:—

ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ...ಫೀಲ್ಡ್ ಬೆಂಗಳೂರು.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ,	ಕಲ್ಕತ್ತಾ	ಲಾಹೋರ್	ನಾಗಪುರ	ರಂಗೂನು
ಅಹ್ಮದಾಬಾದು	ಕರಾಚಿ	...	ಪಾಟ್ನಾ	ರಾವಳಪಿಂಡಿ
ಅಜ್ಮೀರ್	ಢಕ್ಕಾ	ಮದ್ರಾಸು	ಪೂನಾ	...
ಅಲಹಾಬಾದು	...	...	ರಾಯಪುರ	ತಿರುಚನಾಪಳ್ಳಿ
ಬೊಂಬಾಯಿ	...ಗಾಂವ್	...	ರಾಂಚಿ	ತಿರುವಂದ್ರಮ್
ಭೋಪಾಲ್	...ಚಿ			ವಿಶಾಖಪಟ್ಟಣ

[52—9

... ಗುಣವಾಗದಿರುವ ... 14 ...

... 3—4 ... ರೂ. 1—8—0; 3ಕ್ಕೆ ರೂ. 4—0—0 ...



... ರೂ. 1—4—0 3—8—0; 6—12—0 ... 1, 3, 6ಕ್ಕೆ ರೂ ...

ರೋಗಮನಾಶಿನಿ:— ... 1ಕ್ಕೆ 6 ಆ. ...

ಮನೋಲ್ಲಾಸಿನಿ ತೈಲ:— ... ರೂ. 2—10—0 ...

ವಿಳಾಸ:—ಮನೋಲ್ಲಾಸಿನಿ ...

9

52—49

Printed & published by M. M. Ganapathy at "Kodagu" Press Mercara for "Kodagu" Ltd.

ದರೆ ಈ ಸಂಗ್ರಹವು ಗ್ರಂಥಕರ್ತರ ಪರಿಶ್ರಮದಿಂದ ಕೇಳುವ ಲ್ಪಟ್ಟಿದೆಂಬುದಕ್ಕೆ ಅಲ್ಲಲ್ಲಿ ಸೂಚನೆಗಳು ದೊರೆಯುತ್ತವೆ. ಕೊಡಗಿನ ಭೂಮಿ ಕ್ರಮ (Land Tenure) (ಜಮ್ಮ ಉಂಬಳಿ ಜಹಗೀರ್)ನ ವಿಷಯ ಮತ್ತಿಗೆ ಮಾಹಿತಿ ದೊರೆಯುವಂತೆ ನಾಲ್ಕು ಪಂಕ್ತಿಗಳನ್ನು ಸೇರಿಸಿದರೆ ಪ್ರಯೋಜನವಾದೀತು.

ಈ ಎರಡು ಪುಸ್ತಕಗಳು ಪಠ್ಯ ಪುಸ್ತಕಗಳಾಗಿ ಶಾಲಾವಿದ್ಯಾರ್ಥಿಗಳು ಕೊಳ್ಳುವಂತೆ ಈಗಾಗಲೇ ಏರ್ಪಾಡಾಗಿದೆ. ಈ ವಿಷಯವು ಕೊಡಗಿನ ಭಾವಿ ಗ್ರಂಥಕರ್ತರಿಗೆ ಹೆಂಬಲ ಉತ್ತೇಜನವನ್ನುಂಟುಮಾಡಿ ಕೊಡಲೇ ಅವರ ಉತ್ಸಾಹವು ಪುಸ್ತಕರಚನೆಯಲ್ಲಿ ಹೊರಬೀಳುವದೆಂಬುದಾಗಿ ನಮ್ಮೆಲ್ಲರ ಆಕಾಂಕ್ಷೆ. ಹೊರ ಪ್ರಾಂತ್ಯದವರ ಪುಸ್ತಕಗಳನ್ನು ಬಹಿಷ್ಕರಿಸಬೇಕೆಂದು ಯಾರೂ ಹೇಳಲಿಕ್ಕಿಲ್ಲ. ಆದರೆ ಈ ಊರಿನ ವಿಷಯಗಳನ್ನು ಎತ್ತಿ ಬರೆದ ಪುಸ್ತಕಗಳನ್ನು ಆದರಿಸಬೇಕೆಂದು ಹೇಳಲು ಯಾರೂ ಹಿಂಜರಿಯರು. ಹೀಗೆನ್ನುವಾಗ ಕೆ. ಪಿ. ಪುಟ್ಟಪ್ಪನವರ "ಕೆಂದರ ಜೋಗಿ" ಪಂಜೆ ಮಂಗೇಶರಾಯರ "ಕೋಟಿ ಚನ್ನಯ್ಯ" ಮುಂತಾದ ಶ್ರೇಷ್ಠ ತರಹದ ಸಾಹಿತ್ಯಗಳನ್ನು ಉಪೇಕ್ಷಿಸಬೇಕೆಂಬ ಅರ್ಥವಾಗಲಾರದು. ಇಂಥಾ ಪುಸ್ತಕಗಳನ್ನು ಬಿಟ್ಟರೆ ಕೊಡಗಿನಲ್ಲಿ ಕನ್ನಡ ಭಾಷಾಭಿವೃದ್ಧಿಯಾಗಲಾರದು. ಕನ್ನಡ ಭಾಷೆಯು ಊರಿಗೊಂದು ನಾಡಿಗೊಂದು ರೀತಿ ಬರೆಯಲ್ಪಡುತ್ತದೆ. ಇಂಥಾ ಭಿನ್ನ ಭೇದಗಳನ್ನು ಹೋಗಲಾಡಿಸಿ ಕನ್ನಡ ಭಾಷಾಭಿವೃದ್ಧಿಯನ್ನು ಮಾಡುವುದೇ ಗ್ರಂಥಕರ್ತರೆಲ್ಲರ ಗುರಿಯಾಗಬೇಕು. ಕನ್ನಡ ಸಾಹಿತ್ಯ ಬೆಳವಣಿಗೆಗೆ ಕೊಡಗಿನ ವಿದ್ಯಾವಂತರು ಈ ವರೆಗೆ ಕೈಹಾಕಿಲ್ಲ. ಈ ಕೊರತೆಯನ್ನು ಹೋಗಲಾಡಿಸಿದ ನಮ್ಮ ಗೆಳೆಯರನ್ನು ಅಭಿನಂದಿಸಬೇಕಾಗಿದೆ.

ಕರ್ನಾಟಕ ಭಾಷಾಭಿಮಾನಿ.



ಫೋಟೋ ಕ್ಯಾಮರಾ.

ಈ ಕ್ಯಾಮರಗಳಲ್ಲಿ ಬೇರೆ ಸಹಾಯವಿಲ್ಲದೆ ಫೋಟೋಗಳನ್ನು ತೆಗೆಯಬಹುದು. ಈ ಕ್ಯಾಮರಾ ಒಂದು ಇದ್ದರೆ ಬೇಕಾದವರಿಗೆ ಫೋಟೋ ತೆಗೆದು ಹಣ ಸಂಪಾದನೆ ಮಾಡಬಹುದು. ಪೋಸ್ಟ್ ಕಾರ್ಡಿನ ಸೈಜಿನಲ್ಲಿ ಫೋಟೋಗಳನ್ನು ತೆಗೆಯಬಹುದು. ಫೋಟೋ ತೆಗೆಯುವುದನ್ನು ಕಲಿತುಕೊಳ್ಳಬೇಕಾಗಿಲ್ಲ. ಕ್ಯಾಮರಾ ಜೊತೆಯಲ್ಲಿಯೇ ಫೋಟೋ ತೆಗೆಯುವ ವಿಧಾನವನ್ನೂ ಕಳುಹಿಸುವೆವು.

ಈ ಕ್ಯಾಮರವನ್ನು ತರಿಸಿಕೊಳ್ಳುವವರಿಗೆ 3 ವರ್ಷಗಳ ಗ್ಯಾರಂಟಿ ಇರುವ ಟೈಂಪೀಸು ಒಂದನ್ನು ಇನಾಮಾಗಿ ಕೊಡುವೆವು. ಬೆಲೆ 1ಕ್ಕೆ ರೂ. 4-8-0.

M. Leo & Co., 168 China Bazar.
12—6 Madras.

ಪುತ್ರ ಸಂತಾನದ ಎಣ್ಣೆ.

ಈ ಎಣ್ಣೆಯು ಒಬ್ಬ ದೊಡ್ಡ ಪಂಡಿತರಿಂದ ತಯಾರಿಸಿದ್ದು. ಹೆಂಗಸರಿಗೆ ಅನೇಕ ಕಾರಣಗಳಿಂದ ಗರ್ಭವು ನಿಲ್ಲುವುದಿಲ್ಲ. ಕೆಲವರಿಗೆ 3—4 ತಿಂಗಳ ಕಾಲ ನಿಂತು ನಂತರ ಹೋಗಿ ಬಿಡುವದು. ಅಂಥಾ ಹೆಂಗಸರು ಈ ಎಣ್ಣೆಯನ್ನು ೧೫ ದಿನಗಳು ಸೇವಿಸುವದರಿಂದ ಗರ್ಭವು ನಿಂತು ಪುತ್ರ ಸಂತಾನವಾಗುವುದು. ಕೆಲವು ಹೆಂಗಸರಿಗೆ ಮುಟ್ಟಾಗುವ ಸಮಯದಲ್ಲಿಯೂ ಮುಟ್ಟಾದ ನಂತರವೂ ಉಂಟಾಗುವ ಹೊಟ್ಟೆ ನೋವು ಮುಂತಾದುವುಗಳನ್ನು ಬಾಧಕ ಗುಣಪಡಿಸುವದು. ಈ ಎಣ್ಣೆಯನ್ನು ಬೊಂಬಾಯಿ, ಮದರಾಸು ಅನೇಕ ಸ್ಥಳಗಳಲ್ಲಿ ಮಕ್ಕಳಿಲ್ಲದವರು ಉಪಯೋಗಿಸಿ ಪುತ್ರ ಸಂತಾನವನ್ನು ಪಡೆದಿರುವರು. ಒಂದು ಬಾಟ್ಲಿಯನ್ನು ತರಿಸಿ ಪರೀಕ್ಷಿಸಿರಿ. ಉಪಯೋಗಿಸುವ ವಿಧ ಔಷಧದ ಜೊತೆಯಲ್ಲಿ ಕಳುಹಿಸುತ್ತೇವೆ.

ಕ್ರಯ ಬಾಟ್ಲಿ 1ಕ್ಕೆ 2-8-0.

K. Nadhamuni & sons.
12—7 168 China Bazar. Madras.

ರೋಲ್ಡ್ ಗೋಲ್ಡ್ ಭಂಗಾರದ ಗಡಿಯಾರಗಳು.

ಅಸಲು ಕ್ರಯ 17—12—0. ಕೆಲವು ದಿನಗಳ ವರೆಗೆ 8—12—0.

ಈ ಗಡಿಯಾರಗಳು ಬಹು ಪ್ರಖ್ಯಾತಿಯಾದ ಫರೋಲೀವರ್ ಮೂವ್ಮೆಂಟ್‌ಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ. ಇವು ಖರಾರು ಗಂಟೆಯನ್ನು ತೋರಿಸುವುವು. ಒಳಗಡೆ ಕೆಂಪು ಇಟ್ಟಿರುವುದು. ಇದರ ಕೇಸು ಭಂಗಾರಕ್ಕೆ ಸರಿಯಾಗಿದೆ. ಇದಕ್ಕೆ 5 ವರ್ಷ ಖಾತ್ರಿಯಾದ



ಗ್ಯಾರಂಟಿ ಕೊಡುವೆವು. 1 ಕೈಯಲ್ಲಿ ಕಟ್ಟುವ ರಿಸ್ಟ್ ವಾಚ್. 1 ಪಾಕೆಟ್ ವಾಚ್, ಮತ್ತು ಒಂದು ಟೇಬಲ್ ಟೈಂಪೀಸ್ ಈ ಮೂರು ಸೇರಿ ರೂ. 8—12—0 ಮಾತ್ರ. ಈ ಕ್ರಯವು ಕೆಲವು ದಿನಗಳ ವರೆಗೆ ಮಾತ್ರ. ನಂತರ ಸಿಕ್ಕಲಾರದು. ರಿಸ್ಟ್ ವಾಚ್ ಮತ್ತು ಟೈಂಪೀಸು ರೂ. 5—8—0; ರಿಸ್ಟ್ ವಾಚ್ ಮತ್ತು ಪಾಕೆಟ್ ವಾಚ್ ರೂ. 7—0—0.

ವಿಳಾಸ:— ಕೆ. ಎನ್. ಬೆನ್‌ಸನ್ ಅಂಡ್ ಕೊ,
12—6 ಪೋ || ನಂ || 1246, ಮದರಾಸು.

ಗಮನಿಸಿರಿ! ಪರೀಕ್ಷಿಸಿರಿ!

ಅಂದವಾಗಿ ಫೋಟೋ ತೆಗೆಯುತ್ತಾರೆ.

ದೀರ್ಘ ಕಾಲ ಬಾಳಿಕೆ ಬರುತ್ತೆ.

ಹದಿನಾಲ್ಕು ವರ್ಷಗಳಿಂದ ಮೈಸೂರಿನಲ್ಲಿ ಹೆಸರುವಾಸಿಯಾದ ಮೆಸರ್ಸ್. ಶಂಕರ್ & ಕಂಪೆನಿಯವರು ಕೊಡಗು ದೇಶದ ಭಗಿನಿ ಬಾಂಧವರ ಸಲುವಾಗಿ ಮಡಿಕೇರಿಯಲ್ಲಿ ಬ್ರ್ಯಾಂಚ್ ಓಪನ್ ಮಾಡಿರುತ್ತಾರೆ.

ಇಲ್ಲಿ ದೀರ್ಘಕಾಲ ಬಾಳಿಕೆ ಬರುವಂತೆ ಬೇಕಾದ ಸಮಾನಿಯಲ್ಲಿ ಫೋಟೋ ತೆಗೆಯುವುದು. ಫೋಟೋ ಎನ್‌ಲಾರ್ಜ್ ಮಾಡುವುದ. ಆಯಿಲ್ ಪೈಂಟಿಂಗ್ ಕೆಲಸಗಳು, ರಬ್ಬರ್ ಮೊಹರುಗಳ ಕೆಲಸಗಳು ಸದಾ ನಡೆಯುತ್ತವೆ. ಕ್ಯಾಮರಾ ಮೊದಲಾದ ಫೋಟೋ ಕೆಲಸದ ಎಲ್ಲಾ ಸಾಮಾನುಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ. ಅಮೆಚ್ಯೂರ್ಸ್ ಕೆಲಸಗಳು ಅಂದವಾಗಿ ತಯಾರಿಸಿ ಕೊಡಲಿಕ್ಕೆ ದೊರೆಯುತ್ತವೆ.

ದರಗಳ ಬಗ್ಗೆ ವಿಚಾರಿಸಿರಿ. ಒಂದಾವರ್ತಿ ಪರೀಕ್ಷಿಸಬೇಕಾಗಿ ವಿನಂತಿ.

ಶಂಕರ್ & ಕಂಪನಿ.
ಕಾರ್ಪೊರೇಶನ್ ಪಾರ್ಕ್,
12—4. ಮಡಿಕೇರಿ.

Empire of India Life Assurance Company, Ltd.

Established 1897.

The New "FAMILY SECURITY" Policy issued by this Company provides.

A. In the event of death during an agreed period,

1. The immediate payment to the Widow, Son or legal representative of a part of the sum Assured together with the Bonus accrued.

2. The payment of a guaranteed Yearly Income, payable by monthly instalments, during the balance of the period.

3. The payment of the balance of the sum of assured at the end of the period.

OR

B In the event of death after the period has expired the payment of the sum assured together with any Bonus that has accrued.

Descriptive Pamphlet on application to—

Head Office :—
EMPIRE OF INDIA LIFE BUILDING
Bombay.

Branch Office :—
152, COMMERCIAL STREET,
Bangalore.

52—29

ಎಂ. ಎಸ್. ಶಿದ್ದಪ್ಪ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

1. ಉತ್ತಮ ತರಹ ಒಂದು ಸೆಟ್ ಜರ್ಮನ್ ರೀಡ್ಸ್ ಹಾಕಿರುವ ಸಿಂಗಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 20—0—0
   " ಮತ್ತು 22—8—0
2. ಡಿಟೋ ಉತ್ತಮ ತರಹ ಹಾರ್ಮೋನಿಯಂ " 1ಕ್ಕೆ ರೂ. 25—0—0
   ಮತ್ತು 27—8—0
3. ಡಿಟೋ ಉತ್ತಮ ತರಹದ್ದು, ದೂಳು ಬೀಳದಂತೆ ಕೇಸಿನ ಮೇಲೆ ಪೂರ್ತಿ ಮುಚ್ಚಳವುಳ್ಳ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ ರೂ. 27—8—0
4. ಖಾತ್ರಿಯೂ, ಬಂದೋಬಸ್ತೂ, ಸುಸ್ವರವುಳ್ಳದ್ದೂ, ಅನೇಕ ವರ್ಷಗಳ ವರೆಗೆ ಬಾಳಿಕೆ ಬರತಕ್ಕದ್ದೂ ಆದ ಹೊಸದಾಗಿ ಸಪ್ಲೈ ಆಗಿರುವ ಫ್ರೆಂಚ್ ರೀಡ್ಸ್ ಸಮಾನೆ ಇರುವ ನಮ್ಮ ಹೆಸರಿನ ರೀಡ್ಸ್ ಹಾಕಿರುವ "ಸಿದ್ಧಪ್ಪಾಸ್ ಫ್ಲೂಟ್" ಸಿಂಗಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 42—8—0
5. ಉತ್ತಮ ತರಹ 2 ಸೆಟ್ ಜರ್ಮನ್ ರೀಡ್ಸ್ ಹಾಕಿರುವ, ದೂಳು ಬೀಳದಂತೆ ಕೇಸಿನ ಮೇಲೆ ಪೂರ್ತಿ ಮುಚ್ಚಳವುಳ್ಳ ಡಬ್ಬಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ ರೂ. 32—8—0
   ಉತ್ತಮ ತರಹ 2 ಸೆಟ್ ... ಮೇಲ್ ರೀಡ್ಸ್ ಹಾಕಿರುವ ... ಕೈನಿಂದಾಗಲೀ ಅಥವಾ ... ಕಾಲಿನಿಂದಾಗಲೀ ಬಾರಿಸಲು ... ಕೂಲಿಸುವಂತೆ ತಯಾರಿಸಿರುವ "... ಶಲ್ ಫ್ಲೂಟ್" ಡಬ್ಬಲ್ ರೀಡ್ಸ್ ... ಹ್ಯಾಂಡ್ ಲೆಗ್ ಹಾರ್ಮೋನಿಯಂ 1ಕ್ಕೆ ರೂ. 78—

ನಮ್ಮ ಟಿಂಬರ್ ಡಿಪೋನಲ್ಲಿ ಕಟ್ಟಡಗಳಿಗೂ, ಫರ್ನಿಚರ್ ತಯಾರಿಸಲೂ ಬೇಕಾದ ಎಲ್ಲಾ ನಮೂನೆ ನಾಟಾಗಳನ್ನು ಸುಲಭ ದರದಿಂದ ವಿಕರಿಗಿಟ್ಟಿರುವುದಲ್ಲದೇ, ಗಿರಾಕಿಗಳು ಅಪೇಕ್ಷಿಸುವ ಸೈಜಿಗೆ ಕುಯಿಸಿಯೂ ರಿಯಾಯಿತಿ ದರದಿಂದ ಸಪ್ಲೈ ಮಾಡುತ್ತೇವೆ. ಹೆಚ್ಚಿಗೆ ವಿಷಯಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಳಾಸ:—ಎಂ. ಎಸ್. ಶಿದ್ದಪ್ಪ ಬ್ರದರ್ಸ್,
ಹಾರ್ಮೋನಿಯಂ ಮತ್ತು ಟಿಂಬರ್ ...
... ಹೊಸಕೇರಿ, ...
12—46

"ನಾನು ಇನ್ನು ವಿಧೇಯನಾಗಿರುವೆನು."

(ತಪಸ್ಸಿನಮಗನು ಮಯೂರೇಶನು–) ಎಂಬಂತೆ

"ಬೆಂಗಳೂರಿನ| ಕೋಟೆಯೊಳಗಣ|
ಅಂಗಳೆಯರ| ವಿದ್ಯೆಯಾ||
ಭಂಗವಿಲ್ಲದೆ| ಕಲಿತು ಬಂದೆನು|
ಹೆಂಗೂ ಹೆದರೆನು| ನಾನೆಲಾ ||೧||
ನಮ್ಮ ಹಿರಿಯರ| ಗೇಣಕೋಲಿಯಮ|
ಹೆಮ್ಮೆಯ ವಿಲೆ| ಮರೆವರೋ||
ನಮ್ಮ ವಿದ್ಯೆಯ| ನೋಡಿಕೊಂಡು|
ನಮ್ಮ ಹಿರಿಯರು| ಕಲಿಯಲೀ" ||೨||
ಎಂದು ಹೇಳುತ| ಬಂದನೊಬ್ಬ|
ಕಂದ ತಾನೆಂದು| ತಿಳಿಯದೇ||
ಅಂದ ಮಾತನು, ಆದವಿಂದಲೀ|
ಬಂದು ಮುದುಕನು| ಕೇಳಿದಾ ||೩||
ಇಕ್ಕಿಬಾರಯ್ಯ| ಮುದ್ದುಕಂದನೆ|
ಹತ್ತು ಮಾತನು| ಆಡುವೇ||
ಕತ್ತು ಕುಯಿದರು| ಮತ್ತು ಅಕ್ಕರ|
ಹತ್ತದಿನ್ನೀ| ಮನಸಿಗೇ ||೪||
"ಹೊತ್ತು ಹೋಯಿತು| ಹುಚ್ಚು ಮುದುಕಾ|
ಹತ್ತು ಮಾತೇನು| ಆಡೆಲಾ||
ಅತ್ತ ಎನಗೇ| ಬರಲು ಆಗದು|
ಇತ್ತ ನೀನೇ| ಬಾರೆಲೋ" ||೫||
ಮುದುಕನೆದ್ದನು| ಕೋಲಲೂರುತ|
ಮುದದಿಂದಕ್ಕರ| ನಿಂದನೂ||
"ಕಾದು ಕೂತಿದ್ದೆ| ಹಾದಿಯಲ್ಲಿಯೋ|
ಹಾದು ಹೋಗಲು| ಆತಲೂ ||೬||
ಮುದ್ದು ಕಂದನೆ| ವಿದ್ಯದಲಿನೀ|
ಗೆದ್ದು ಬಂದರೆ| ಸಾಲದೂ||
ಹದ್ದು ಮೀರುವ| ವಿದ್ಯವಾಗಲು|
ಗೆದ್ದ ಮುಂದೇಕರು| ಹೊಡೆವರೂ" ||೭||
"ಹೋಗುತೋಗೆಲೋ| ಗೂಗೆಮುದುಕಾ|
ಮೂಗು ಹಿಡಿದೂ| ಜಡಿವೆನೂ||
ಮೂಗನಂತೇ| ಕೂಗಿ ಹೇಳುವೆ|
ಬಾಗಿ ಶಿರವನು| ಹೋಗೆಲೋ" ||೮||
ಎಲವೋ ಬಾಲ| ಒಲವ ತೋರುವೆ|
ಒಲದ ಕಯ್ಯಲಿ| ನೋಡೆಲೋ|| ೨
ಒಲವ ಕುಂದಿಸ| ಮುದುಕನೆಂದೂ
ಹಾಲ ಮಾತನು ಆಡುವೇ ||೯||
ತುಂಡು ಮಾಸಿಯ| ಇಟ್ಟುಕೊಂಡು|
ತುಂಡು ಕುಪ್ಪಸ| ತೊಟ್ಟಿರೇ|
ಗಡ್ಡ ಮೀಸೆಯ| ಕಟ್ಟ ಹಿರಿಯಗೆ|
ಅಡ್ಡಬಿದ್ದೀ ಜಾಣನೇ ||೧೦||
ಕ್ರಿಸ್ತ ಧರ್ಮದ| 'ಕ್ರಾಸು' ಚಿನ್ನದ|
ಕತ್ತಿನಲ್ಲೇ| ತಾಗುಬೆದೂ||
ಅತ್ತ ಬೇಡುವೆ| ಅಯ್ಯೋ ಕಂದನೆ|
ಕತ್ತಿನಲ್ಲೇ| ನಿನದೂ ||೧೧||
ಮನೆಯ ಹಿರಿಯರ| ಮನವ ನೋಯಿಸ|
ಘನದ ಮಾತಾ| ನಾಡದೇ|
ನಾನು ಕಿರಿಯನು| ನೀವು ಹಿರಿಯರು|
ನಿಮ್ಮ ಪಾದಕೆ| ಎರಗೆಲೋ ||೧೨||

ಸಿ. ಯಂ. ಚೆಂಗಪ್ಪ, (ವಿದ್ಯಾರ್ಥಿ

ಸೆಸಿಲ್ ಲಾಸ್ಕಿಯವರ ಲೇಖನ.

...ತ ಲೇಖಕರಾದ ಪ್ರೊಫೆಸರ್ ಹೆರಾಲ್ಡ್ ಜೆ. ...ಯೂ ರಿವ್ಯೂ' ಎಂಬ ಪತ್ರಿಕೆಯಲ್ಲಿ ಒಂ... ...ರಾರಂತೆ:—

...ಪಾರ್ಲಿಮೆಂಟ್ ಅಧಿವೇಶನವು ಮು... ...ಯಲ್ ಹೋರ್‌ರವರು ಭಾರತೀಯರ ...ದು ಸಣ್ಣ ಭಾಷಣವನ್ನು ಮಾಡಿ ...ದು.

...ಕಳೆದ ದಿವಸಗಳಲ್ಲಿ ಆದರ ...ನೂಕುವುದಕ್ಕೆ ಮುಂಚೆ ಇದ್ದ

...ಕಠಿಣವಾಗಿದ್ದಾಗ್ಯೂ ಈ ಸ್ಥಿತಿ ...ವಿಲ್ಲೋ ಅಷ್ಟು ಕಠಿಣವಾಗಿಲ್ಲ, ...ತಾಳ್ಮೆ ಪ್ರದರ್ಶನ ಮಾಡಿದ ...ದುದು, ಮಿ. ವೀಜ್‌ವುಡ್ ಬೆನ್ ...ಗಳನ್ನು ಮಧ್ಯಾನ ಸರ್ಕಾರ

...ದ ಮನೋಭಾವ ...ಕಂಡು ಹಿಡಿಯಲು ...ಕೆಲವು ಸಂಗತಿ

...ಮಾರು ೪೦

...ಸರ್ಕಾರ ...ಗ

೩. ಹತ್ತಾರು ಕಾಂಗ್ರೆಸ್ ಸಂಘಗಳು ಅಕ್ರಮ ಸಂಘಟ ಗಳೆಂದು ಪ್ರಕಟವಾಗಿವೆ.

೪. ಬೊಂಬಾಯಿನಲ್ಲಿ ಬಹಿಷ್ಕಾರವು ಅತೀ ತೀಕ್ಷ್ಣವಾಗಿ ಜರಗುತ್ತಿದೆ.

೫ ದಿನ ಬೆಳಗಾದರೆ ಪೋಲೀಸರನ್ನು ಪ್ರತಿಭಟಿಸಿದ ಸು ದ್ದಿಗಳು ಬರುತ್ತಿವೆ.

೬. ಹೆಂಗಸರು ಭಯೋತ್ಪಾದಕ ಕೃತ್ಯಗಳಲ್ಲಿ ತೊಡಗಿದ್ದಾರೆ.

೭. ವಾಯುವ್ಯ ಗಡಿನಾಡಿನಲ್ಲಿನ ಗಲಾಟೆಗಳು ವಿಪರೀತ ವಾಗಲು ಅದನ್ನು ಅಡಗಿಸಲಾಯಿತು. ಆದರೆ ಆಗ ಉಪ ಯೋಗಿಸಿದ ಕ್ರಮಗಳನ್ನು ನೋಡಿ ಮಧ್ಯದೇಶದ ಅಭಿಪ್ರಾ ಯವು ಸಹ ವ್ಯತ್ಯಾಸವಾಗಿದೆ.

೮. ಸಮಾಚಾರಗಳನ್ನು ತೀಕ್ಷ್ಣವಾಗಿಯೇ ಪರೀಕ್ಷಿಸು ತ್ತಿದ್ದಾರೆ. ಕೊನೆಗೆ ಶಾಸನ ಸಂಘದ ಸಮಾಚಾರಗಳನ್ನು ಪ್ರಕಟಿಸುವುದು ಸಹಾ ಕ್ಷೇಮಕರವಾಗಿಲ್ಲ.

ದ್ವಿತೀಯ ಚಕ್ರಗೋಷ್ಠಿಯ ಕಾಲದಲ್ಲಿ ಇವುಗಳಲ್ಲಿ ಯಾವುದೂ ಇರಲಿಲ್ಲ. ಇವು ಕೇವಲ ಸ್ಥಿತಿಗಳು ಮಾರ್ಪಟ್ಟು ಕಟ್ಟಿರುವುದರ ಸೂಚನೆಯೆಂದೂ ಎಗ್ಗಿಸುವವರು ಎಂಬುದನ್ನು ಪಾರ್ಲಿಮೆಂಟಿಗೂ, ತನ್ನ ಬಳಿಕ ಬ್ರಿಟಿಷ್ ಪ್ರಜೆಗಳಿಗೂ ತಿಳಿ... ಪಡಿಸುವರೇ ?

ಸ್ಥಿತಿಗತಿಗಳು ಎಷ್ಟು ಕಠಿಣವಾಗಿದೆಯೋ ಆರ್ಡಿನೇನ್ಸು ಗಳು ಅಷ್ಟರ ಮಟ್ಟಿಗಿಲ್ಲವೆಂದರೆ ಆಗ ಆರ್ಡಿನೆನ್ಸುಗಳ ಅಗತ್ಯ ವಿಲ್ಲದುದರಿಂದ ದ್ವಿತೀಯ ಚಕ್ರಗೋಷ್ಠಿಯ ಕಾಲಕ್ಕಿಂತಲೂ ಈಗ ಹೆಚ್ಚು ಸುಲಭವಾಗಿದೆಯೆಂದು ಹಾಗೆ ತಾನೆ? ಭಾರತೀ ಯ ರಾಜಕೀಯ ವಿಚಾರಗಳನ್ನು ಮಿ. ಗಾಂಧಿ, ಪಂಡಿತ ನೆಹ ರು, ಡಾ ಅನ್ಸಾರಿ, ಮತ್ತು ಅವರ ಅನುಯಾಯಿಗಳೊಡನೆ ಚರ್ಚಿ ಸುವುದಿಲ್ಲವೆಂದ ಮೇಲೆ ಅದು ನಕಲಾದ ಮೇಲೆ ಅದನ್ನು ಪ ಳಿಕೆಗೆ ತಂದಾಗ ಯಾರ ಸಹಾನುಭೂತಿಯ ಮೇಲೆ ಅವರು ಭ ರವಸೆಯನ್ನಿಟ್ಟಿದ್ದಾರೆಂಬುದನ್ನು ಸರ್ ಸ್ಯಾಮ್ಯುಯಲ್ ಹೋ ರ್‌ರವರು ತಿಳಿಸುವರೇ ? ಸರ್ ತೇಜ ಬಹಾದೂರ್ ಸಪ್ರೂ, ಮುಂತಾದ ವಿಚಾರವಾದಿಗಳು ಬಹಳ ಘಟ್ಟಿಗರೇನೋ ಹೌದು. ಆದರೆ ಅವರನ್ನು ಭಾರತೀಯ ಪ್ರಜೆಗಳು ಅನುಸರಿಸು ವುದಿಲ್ಲವೆಂಬ ವಿಚಾರವು ಅವರಿಗೆ (ಹೋರರವರಿಗೆ) ತಿಳಿಯದೆ?

ಕಾಂಗ್ರೆಸ್ಸಿನ ಅಪರಾಧಗಳು ಎಷ್ಟೇ ಇದ್ದಾಗ್ಯೂ ಇಂ ಡಿಯಾದ ಅಭಿಪ್ರಾಯವನ್ನು ತಿಳಿಸಲು ಅದಕ್ಕಿಂತಲೂ ಹೆಚ್ಚಾ ದ ಅಧಿಕಾರ ಮತ್ತಾವ ಸಂಘಕ್ಕೂ ಇಲ್ಲ. ಇಲ್ಲವಾದರೆ ಇಂಗ್ಲೆಂಡಿನಲ್ಲಿ ಕಲ್ಲಿದ್ದಲಿನ ಪ್ರಶ್ನೆ ಬಂದಾಗ ಅದರಂತೆಯೇ ಆಗುವುದು. ಪ್ರಮುಖರಾಗಿ ಈಗ ಜೈಲಿನಲ್ಲಿರುವ ಮುಂದಾ ಳುಗಳ ನೆರವಿಲ್ಲದಿದ್ದಲ್ಲಿ ಯಾವ ನಿರ್ಧಾರಗಳೂ ಫಲಕಾರಿಯೂ ಗಬಾರದವು ಎಂಬುದನ್ನು ಸರ್ ಸ್ಯಾಮ್ಯುಯಲ್ ಹೋರ್‌ರವರು ತಿಳಿಯಬೇಕು. ಅವರು ಜೈಲಿನಲ್ಲಿರುವ ಒಂದೊಂದು ದಿನವೂ ಜನರ ಉದ್ರೇಕವು ಹೆಚ್ಚುವಂತೆ ಮಾಡುವದಲ್ಲದೆ ಪ್ರಶ್ನೆಯನ್ನು ಬಿಡಿಸಲು ಹೆಚ್ಚು ಕಷ್ಟಕರವಾಗುವುದು. ಇತಿ ಹಾಸವನ್ನು ನೋಡಿದರೆ ಆರ್ಡಿನೆನ್ಸುಗಳು ಒಳ್ಳೆಯದಲ್ಲವೆಂದು ತಿಳಿದುಬರುವುದು. ಅವುಗಳು ಬಲವನ್ನೂ, ದಿಗಿಲನ್ನೂ ಪ್ರದ ರ್ಶಿಸುವುದರಿಂದ ಜನರು ಬೇಸರಪಡುವರು. ಆ ನೀತಿಯು ಕೆ ಲಕಾಲ ಮಾತ್ರ ಫಲಕಾರಿಯಾಗಿದ್ದರೂ ಆ ಮೇಲೆ—ಯಾವ ತೊಂದರೆಗಳನ್ನು ಅಡಗಿಸಲು ಅವುಗಳನ್ನು ಉಪಯೋಗಿಸಿದ ರೋ ಅದಕ್ಕಿಂತಲೂ ಕಠಿಣ ತರನಾಗಿ ಪರಿಣಮಿಸುವುದು. ಐ ರ್ಲೆಂಡಿನ ಚರಿತ್ರೆಯನ್ನು ನೋಡಿದರೆ ಅದರ ತಪ್ಪು ಗೊತ್ತಾ ಗುವುದು. ಯಾರೊಡನೆ ಇಂದೋ ನಾಳೆಯೋ ಸಂಧಿ ಪ್ರ ಸ್ತಾಪಗಳನ್ನು ಮಾಡಬೇಕಾಗುವುದೋ ಅವರ ಮನಸು ಬೇರೆ ಯಾಗುವುದು.

ಸರ್ ಸ್ಯಾ. ಹೋರ್‌ರವರು ಪೋಲೀಸಿನವರ ಅತ್ಯಾಚಾರ ಗಳ ಅಪವಾದನೆಗಳ ವಿಚಾರವಾಗಿ ಸುಮ್ಮನೆ ಹಾಗೆ ಇಂದಿರುವ ರು. ಇಂಗ್ಲೆಂಡಿನಲ್ಲಿ ನಮಗೆ ಎಲ್ಲಾ ಸಮಾಚಾರಗಳೂ ತಿಳಿ ಯದ ಕಾರಣ ಅವರು ತಪ್ಪೆಂದು ತೋರಿಸಲು ಆಗುವುದಿಲ್ಲ.

ಆದರೆ ಇಂಥಾ ಸಂದರ್ಭಗಳಲ್ಲೆಲ್ಲಾ ಸರ್ಕಾರದ ನಡತೆ ಸ್ವಲ್ಪ ಕೆಲಸವೇ ನಡೆಯುವುದೇ ಅದರ ಪಾಡಿಕೆ. ಮಿ. ಬ್ರೇ ಲ್ಸ್‌ಫರ್ಡ್, ಮಿ. ಜಾನ್ಸ್, ಮುಂತಾದವರು ... ರಿ... ಳಿರುವಾಗ ಸರ್ಕಾರದವರ ಮಾತನ್ನು (ಅಧಿಕಾರಿಗಳು ಸಹ ನಂಬಿಕೆಗಳನ್ನು ನಮ್ಮುವುದನ್ನು) ನಂಬಲು ಆಗುವುದಿಲ್ಲ; ಆದಕಾ ರಣ ಒಂದು ಸಮಿತಿ (ಮಿ. ವೆಡ್ಜ್‌ವುಡ್ ಬೆನ್, ಮಿ ಲೋಥಿ ಯನ್ ಡಿಕನ್‌ಸನ್, ಮಿ. ಟಾನಿ, ಮಿ. ಜಾನ್ಸ್ ಮುಂತಾದವರ ನ್ನೊಳಗೊಂಡ) ಯನ್ನೇರ್ಪಡಿಸಿ ಅದರ ಅಧ್ಯಕ್ಷತೆಗೆ ಒಬ್ಬ ರು ಬ್ರಿಟಿಷ್ ಜಡ್ಜರನ್ನು ನೇಮಿಸಿ ಇವರಿಗೆ ಈಗ ಬಂದಿರುವ ವ ರದಿಯನ್ನು ಪರೀಕ್ಷಿಸಲು ಕಳುಹಿಸಿದರೆ ಆಗ ಗೊತ್ತಾಗುವುದು.

ಇಂಥಾ ವಿಚಾರಗಳಲ್ಲಿ ಇಂಡಿಯಾ ಆಫೀಸು ಹೇಳಿದ ವಿ ಷಯಗಳು ಎಲ್ಲರನ್ನು ಒಪ್ಪುವಂತೆ ಮಾಡುತ್ತದೆ ಎಂಬುದಾಗಿ ಅವರು (ಹೋರ್‌ರವರು) ಊಹಿಸಿಕೊಂಡಿದ್ದರೆ ಅವರಿಗೆ (ಹೋ ರರವರಿಗೆ ಇಂಡಿಯಾ ದೇಶದಲ್ಲಿ ಬ್ರಿಟಿಷ್ ಅಕ್ಕರೆ ಎಷ್ಟಿದೆಯೆ ನ್ನುವ ವಿಚಾರದಲ್ಲಿ ತಿಳಿದಿರುವುದು ಬಹಳ ಸ್ವಲ್ಪವೆನ್ನಬೇಕು.

ಕಳೆದ ಕಾರ್ಮಿಕ ಸರ್ಕಾರದ ಕಾಲದಲ್ಲಿ ಲಾರ್ಡ್ ಇ ರ್ವಿನ್, ಮಿ. ಬೆನ್, ಮತ್ತು ಲಾರ್ಡ್ ಸ್ಯಾಂಕೆಯವರ ಸಮ್ಮಿ ಳಿತ ಬುದ್ಧಿಯಿಂದ ಇಂಡಿಯಾಕ್ಕೆ ಜವಾಬ್ದಾರಿಯುಳ್ಳ, ಸೆಲ್ಫ್ ಗವರ್ನಮೆಂಟು ವಿಚಾರ ಇಂಗ್ಲೆಂಡಿಗೂ, ಇಂಡಿಯಾಕ್ಕೂ ಸ್ನೇಹಪರವಾದ ಸಂಬಂಧ ಉಂಟಾಗುವದೆಂದು ಆ ಸರ್ಕಾರವು ತಿಳಿ ದಿದ್ದಿತು. ಈ ಕೆಲಸಕ್ಕಾಗಿಯೇ ಲಾರ್ಡ್ ಸ್ಯಾಂಕಿಯವರು **ದೇಶೀಯ ಸರ್ಕಾರದಲ್ಲಿ ಕೆಲಸವು ತಮಗೆ ಇಲ್ಲದೇ ಇಂದರು.**

ಈಗ ರಾಜಕೀಯ ನೀತಿಯೇ ಬದಲಾಯಿಸಿದೆಯೆಂದು ನೋಡಿದವರಿಗೆಲ್ಲ ಗೊತ್ತಾಗುತ್ತದೆ. ಸಮಾಧಾನಕ್ಕೆ ಬದ ಲಾಗಿ ಬಲಾತ್ಕಾರದಿಂದ ಅಡಗಿಸುವಿಕೆಯು ಹುಟ್ಟಿದೆ. ಇಂಡಿ ಯಾದ ವಿಚಾರವನ್ನು ನಿಜವಾಗಿಯೂ ಮನಸಿನಲ್ಲಿಟ್ಟುಕೊಂ ಡಿರುವವರೂ ಇದ್ದಾರೆ ಎಂದು ನಂಬುವುದಕ್ಕೆ ಅಸಾಧ್ಯವಾ ಗಿದೆ. ಅವರು ಹಳೆಯ ಅಟವಾದ 'ವಿಭಜನ—ಪರಿಪಾಲನ' ದ ಮಾರ್ಗ ಹಿಡಿದಿದ್ದಾರೆ. ಅವರು ನೋಡಲುವುದೇನೋ ಬಾ ಡಿತ ಇವರು ಅದೇ ನೀತಿಯನ್ನು ಐರ್ಲೆಂಡಿನಲ್ಲಿ ಉಪಯೋ ಗಿಸಿದರು. ಅಮೇರಿಕಾದಲ್ಲಿ ಪ್ರಯೋಗಿಸಿದರು; ದಕ್ಷಿಣಾದ ವರು ಪೋಲೆಂಡಿನಲ್ಲಿ ಉಪಯೋಗಿಸಿದರು. ಆಸ್ಟ್ರಿಯನವ ರು ಇಟಲಿಯಲ್ಲಿ ನೋಡಿದರು. ಇವುಗಳ ಫಲಗಳನ್ನು ನೋಡಲಾಗಿ ಅದನು ಪ್ರಯೋಗಿಸಿದವರು ಎಂದಿಗೂ ಕೊ ನೆಯಲ್ಲಿ ವಿಜಯಿಗಳಾಗಲಿಲ್ಲ.

ನಿಜವಾದ ಸಮಾಧಾನಕ್ಕೆ ಬರಲು ಈಗಲೂ ಕಾಲ ಮೀ ರಿಲ್ಲ. ಆದರೆ ಸರ್ ಸ್ಯಾಮ್ಯುವೆಲ್ ಹೋರ್‌ರವರು ಬ್ರಿಟಿಷ್ ಪ್ರಜೆಗಳು ಯಾವ ನೀತಿಯನ್ನು ಪರಿಪಾಲಿಸಬೇಕೆಂದಿದ್ದರೋ ಅದು ನಡೆಸದಂತೆ ನಡೆಸುತ್ತಿದ್ದಾರೆ. 'ಪ್ರಜಾಮತ'

ಪತ್ರಸ್ಯವಹಾರ.

[ಬಾತ್ಮೀದಾರರ ಪದರ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಬಾಧ್ಯರಲ್ಲ. ಸಂ.]

ಕೊಡಗು ದೇಶೀಯ ಕಥೆಗಳು, ಕೊಡಗು ದೇಶದ ಭೂಗೋಳ ಚರಿತ್ರೆ ಮತ್ತು ಸಿವಿಕ್ಸ್.

ಈ ವರೆಗಿನ ಕೊಡವ ಜನಾಂಗದ ಚರಿತ್ರೆಯಲ್ಲಿ ದೊಡ್ಡ ದೊಡ್ಡ ಹುಲಿ, ಕಾಡಾನೆಗಳ ಬೇಟೆ ಮಾಡಿದವರ ಕೀರ್ತಿಯೂ ಧೈ ರ್ಯವೂ "ಕುಟ್ಟುಂಬೆಟ್ಟ ಗಳ" ಮುಂತಾದ ಭತ್ತದ ಗದ್ದೆಗ ಳಲ್ಲಿ ಓಡಿ ಗದ್ದೆಯ ಮೇಲೂ, ಮುಂದುವರಿಸಿಗಳಲ್ಲಿ ಜಗಳ ವಾದಾಗ ಕೈತೋರಿಸಿ ಶಕ್ತಿಯನ್ನು ತೋರಿಸಿದವರ ಪ್ರತಾಪ ವೂ ಎಷ್ಟೋ ನೊರೆಯುತ್ತವೆ. ಆದರೆ ಸಾಹಿತ್ಯ ಮತ್ತು ವಿ ಜ್ಞಾನ ಪ್ರಪಂಚದಲ್ಲಿ ಕೊಡವರ್ಯಾರಿಗೂ ಈ ವರೆಗೆ ಸ್ಥಳ ದೊ ರಕಲಿಲ್ಲ. ಇತ್ತೀಚೆಗೆ ಒಬ್ಬಿಬ್ಬರು ಸಾಹಿತ್ಯದಲ್ಲಿ ಅಭಿರುಚಿ ವುಳ್ಳವರಾಗಿ ಗ್ರಂಥ ಕರ್ತರಾಗಲು ಪ್ರಯತ್ನಿಸುತ್ತಿರುತ್ತಿ ದ್ದಾರೆ. ಅಂಥ ನನ್ನಲ್ಲಿರುವ ಒಂದು ದೊಡ್ಡ ಕೊರತೆಯ ನ್ನು ಹೋಗಲಾಡಿಸಲು ಉದ್ದೇಶಿಸಿದ್ದಾಗ ಅವರು ಕೊಡಗಿ ರುವ ಕೀರ್ತಿಗೆ ನಾವು ಉತ್ತೇಜನ ಕೊಡಬೇಕಲ್ಲ ವಿನಯ ಅವ ರ ಕೈಬೆರಳನ್ನು ಚಿತ್ರಿಸಲು ಪ್ರಯತ್ನಿಸುವರು.

ಈ ವಿಮರ್ಶಿಸಲ್ಪಡುವ ಪುಸ್ತಕಗಳನ್ನು ಪ್ರಾ ಥಮಿಕ ಶಾಲೆಗಳ ಉಪಯೋಗಾರ್ಥವಾಗಿ ಶ್ರೀಮಾನ್ ಮು ಯಸ್. ಕುಶಾಲಪ್ಪನವರು ಬರೆದಿದ್ದಾರೆ. ದೇಶೀಯ ಕಥೆಗ ಳಲ್ಲಿ ಹೊನ್ನಮ್ಮ, ಪನ್ನಂಗಾಲತಮ್ಮ, ಶ್ರೀ ಓಂಕಾರೇಶ್ವರ, ಕಲಿಯಾಟ ಅಜ್ಜಪ್ಪ ಎಂಬ ಅಂತೆಯ ನಾಲ್ಕು ಪ್ರತಿಗಳು ಸೇರಿ ರುವುದು. ಈ ಪುಟ್ಟ ಚಾರಿತ್ರಿಕ ಕಥೆಗಳನ್ನು ನಮ್ಮ ಅಜ್ಜಿ ಅಜ್ಜಂದಿಯರ ಬಾಯಿಂದ ಆಗಾಗ ಕೇಳುತ್ತೇವೆಯಾದರೂ ಈ ವರೆಗೆ ಪುಸ್ತಕ ರೂಪದಲ್ಲಿ ಹೊರಡಿಸಲು ಯಾರೂ ಪ್ರಯ ತ್ನಿಸಲಿಲ್ಲ. ಗ್ರಂಥಕರ್ತರು ಈ ಕಥೆಗಳನ್ನು ಮಕ್ಕಳಿಗೆ ಭಾ ಷಾಪರಿಚಯವಾಗುವಂತೆ ಪುಸ್ತಕ ರೂಪದಲ್ಲಿ ನಮ್ಮ ಬಾಲಕ ಬಾಲಕಿಯರ ಮುಂದಿಟ್ಟಿದ್ದಾರೆ. ಈ ಪುಟ್ಟ ಗ್ರಂಥಗಳ ಭಾ ಷಾ ಶೈಲಿಯು ಸರಳವಾಗಿದೆ. ಆದರೆ ಮಕ್ಕಳ ಮನಮೆಚ್ಚು ವಂತೆ ಅಲ್ಲಲ್ಲಿ ಚಮತ್ಕಾರಯುಕ್ತವಾದ ಮತ್ತು ಹಾಸ್ಯಾಸ್ಪ ದವಾದ ಸಂಭಾಷಣೆಗಳಿದ್ದಿದ್ದರೆ ಮಕ್ಕಳ ಮನಸ್ಸನ್ನು ಇನ್ನೂ ಆನಂದಪಡಿಸುತ್ತಿದ್ದವು. ವಾಕ್ಯರಚನೆಯು ಬಹಳ ಕಡೆ ದೊಡ್ಡದಾಗಿಯೂ, ಕಷ್ಟ ಶಬ್ದಗಳಿಂದ ಕೂಡಿದ್ದಾಗಿಯೂ ಇದೆ. ಈ ಪೈಕಿ ಕೆಲವು ಕಥೆಗಳು 'ಪಟ್ಟೋಲೆ ಪಳಮೆ' ಯ ಲ್ಲಿ ಹಾಡಿನ ರೂಪದಲ್ಲಿ ಸಂಗ್ರಹಿಸಲ್ಪಟ್ಟಿವೆ. ಮಧ್ಯೆ ಮಧ್ಯೆ ಈ ಹಾಡುಗಳನ್ನಿತ್ತು ಬರೆದಿದ್ದರೆ ಅವು ಕೊಡವ ಮಕ್ಕಳ ಕುಟ್ಟ ಯಲ್ಲಿ ನಲಿದಾಡುತ್ತಿದ್ದವು. ಈ ಪುಸ್ತಕಗಳ ಮುದ್ರಣವು ಅಂದವಾಗಿದೆ, ಕ್ರಮ ಸ್ವಲ್ಪ ಹೆಚ್ಚು. ಆದರೆ ಪುಸ್ತಕಗಳ ಆಗದ ಹೆಸರಾಗಿದೆ. ಓಂಕಾರೇಶ್ವರ ದೇವಸ್ಥಾನವನ್ನು ಕ ಟ್ಟಿಸುವ ಮೊಹಮ್ಮದನ ಸುಲ್ತಾನರ ... ಅನ್ನಿಲ್ಲ ದಿ ವಾನರ ವಿಷಯ ಈ ಕಥೆಯಲ್ಲಿ ಏನೂ ಉಲ್ಲೇಖಿಸಲಿಲ್ಲ. ಕೊಡಗು ರಾಜನ ಕಾಲದಲ್ಲಿ ಶಬ್ದಾರ್ಥದಲ್ಲಿ ಕೊರಲು ಇವರಿ ಗೆ ಮಾತ್ರ ಅಪ್ಪಣೆ ಕೊಡಿಸಿದುದನ್ನು, ಇವರು ತಾವೇ ಕೈ ಯಿಂದ ಹುಗಿದ ಚಿತ್ರದ ಶಬ್ದದಲ್ಲಿ ಕಾತುಕೊಂಡು ಕ ಟ್ಟೋಣದ ಕೆಲಸಗಾರರ ಮೇಲ್ವಿಚಾರಣೆ ನಡೆಸುತ್ತಿದ್ದರೆಂ ದೂ ಹಿರಿಯರು ಹೇಳುತ್ತಾರೆ.

ಕೊಡಗು ಭೂವಿವರಣೆ ಚರಿತ್ರೆ ಮತ್ತು ಸಿವಿಕ್ಸ್:—ಇದು ಪ್ರಾಥಮಿಕ ಶಾಲೆಗಳ ಉಪಯೋಗಾರ್ಥವಾಗಿ ಸಂಗ್ರಹಿಸಲ್ಪ ಟ್ಟುದಾಗಿದೆ. ಚರಿತ್ರೆ ಎಂದರೆ ರಾಜರ ಮತ್ತು ಯುದ್ಧಗಳ ಕಥೆಯಲ್ಲವೆಂಬುದನ್ನು ಗ್ರಂಥಕರ್ತರು ಪೀಠಿಕೆಯಲ್ಲಿ ಒಪ್ಪಿ ಕೊಂಡಿದ್ದಾರೆ. ಆದರೂ ದೇಶದ ಸಾಮಾಜಿಕ ಮತ್ತು ಆರ್ಥಿ ಕ ಸ್ಥಿತಿಯ ವಿಷಯ, ಆಧಾರಗಳು ದೊರೆಯದ್ದರಿಂದಲೋ ಅ ಥವಾ ಇನ್ನಾವ ಕಾರಣಗಳಿಂದಲೋ ತುಂಬಾ ಬರೆಯಲಿಲ್ಲ. ಕೊಡಗಿನ ಚರಿತ್ರೆಯು ಕ್ರಿಸ್ತ ಶಕಕ್ಕೆ ಮೊದಲಿಂದಲೇ ಈ ಪು ಸ್ತಕದ ಪರಿಮಿತಿಯಲ್ಲಿ ಬರೆಯಲ್ಪಟ್ಟಿದೆ. ಕೊಡಗು ಚರಿತ್ರೆ ಯನ್ನು ಬರೆವವರ ಪೈಕಿ ಒಬ್ಬರು ಆಧಾರಗಳನ್ನು ಹುಡುಕಿ ಬರೆಯುವುದರ ಬದಲು ರಿಚರ್ಡ್ ರೈಸ್ ಕೊಡಗು ಚರಿತ್ರೆ **ಯಿಂದ ನಕಲು ತೆಗೆದದ್ದು ಅನೇಕರ ಗೋಚರಕ್ಕೆ ಬಿದ್ದಿದೆ. ಅ**

ವರ್ತಮಾನ ಸಂಗ್ರಹ.

ಒಳದೇಶ.

ಪೊನ್ನಂಪೇಟೆ ಶಾರದಾಶ್ರಮದ ವಾರ್ಷಿಕೋತ್ಸವವು ತಾ. 30ರಲ್ಲಿ ಪೊನ್ನಂಪೇಟೆಯಲ್ಲಿ ನಡೆಯುವುದು.

ಫಾರೆಸ್ಟ್ ಡಿಪಾರ್ಟ್‌ಮೆಂಟಿನವರ ಸ್ಪೋರ್ಟ್ಸ್ ತಾ. 28ರಲ್ಲಿ ಮಡಿಕೇರಿಯಲ್ಲಿ ಬಹು ವಿಜೃಂಭಣೆಯಿಂದ ನಡೆಯಿತು.

ಕೊಡಗು ಕಮಿಷನರವರ ಹಾಕಿ ಟೂರ್ನಮೆಂಟು ಮೇ ತಾ. 3ರಲ್ಲಿ ಪ್ರಾರಂಭವಾಗುವದು. ಮೊದಲನೇ ಆಟವು ಸ್ಕೂಲು ಟೀಮಿನವರಿಗೂ ಮತ್ತು ಪೋಲೀಸು ಟೀಮಿನವರಿಗೂ ನಡೆಯುವುದು.

ಎಕ್ಸಿಕ್ಯೂಟಿವ್ ಇಂಜಿನೀಯರ್ ಮಿ. ಒಗ್ಗರವರು ಈ ತಿಂಗಳು 23 ರಿಂದ ರಜೆಯಲ್ಲು ಹೋಗುತ್ತಾರೆಂತ ಕಳೆದ ವಾರ ಪ್ರಕಟಿಸಿದ ವರ್ತಮಾನವು ಸರಿಯಲ್ಲ. ಅವರು ರಜೆಯಲ್ಲಿ ಹೋಗುವುದು ಮೇ ತಿಂಗಳು 23 ನೇ ತಾರೀಕಿನಿಂದಲಾಗಿದೆ.

ಸೋಮನಾಥ ಗಂಧರ್ವ ಸಂಗೀತರ್ ಎಂಬ ಕೊಲ್ಲಾಪುರದ ಪ್ರಖ್ಯಾತ ಕೀರ್ತನಕಾರರು ಮಡಿಕೇರಿ ಜಮಿನ್ನಾರರ ಜಂಘದ ಹಾಲ್‌ನಲ್ಲಿ ಎರಡು ಹರಿಕಥೆಗಳನ್ನೂ, ಮುನ್ಸಿಪಲ್ ಸ್ಕೂಲ್‌ನಲ್ಲಿ ಒಂದು ಕಥೆಯನ್ನೂ ನಡಿಸಿದ್ದಾರೆ. ಇವರು ಜನರ ಮೆಚ್ಚಿಕೆಯನ್ನು ಪಡೆದಿದ್ದಾರೆ.

ಎಕ್ಸ್‌ಟ್ರಾ ಅಸಿಸ್ಟೆಂಟ್ ಕಮಿಷನರ್ ಪೇಟದುಗಳು ಇದ್ದರೆ ಇರುವವಲ್ಲ ಒಬ್ಬರು ಅವಶ್ಯವಿಲ್ಲವೆಂತ ಬಹು ಕಾಲದಿಂದಲೇ ಸರ್ಕಾರವು ಒಪ್ಪಿದರೂ ಅದನ್ನು ವಾಪಸು ತೆಗೆದುಕೊಳ್ಳಲು ಮದ್ರಾಸ್ ಸರ್ಕಾರವು ಒಪ್ಪಿರಲಿಲ್ಲ. ಈಗ ಇದಕ್ಕೆ ಒಪ್ಪಿದ್ದರಿಂದ ಎಕ್ಸ್‌ಟ್ರಾ ಅಸಿಸ್ಟೆಂಟ್ ಕಮಿಷನರಲ್ಲಿ ಒಬ್ಬರಾದ ಮಿ. ಬೌನರು ಕೊಡಗಿನಿಂದ ಮದ್ರಾಸಿಗೆ ವರ್ಗಾಯಿಸಲ್ಪಟ್ಟಿದ್ದಾರೆ. ಇವರ ಬದಲಿಗೆ ಯಾರನ್ನೂ ನೇಮಿಸುವುದಿಲ್ಲ.

'ಬಾಲಭಾರತಿ' ಯದುಗಿರಿ ಕುಮಾರಿ ಎಂಬ ಬೆಂಗಳೂರಿನ 14 ವರ್ಷ ಪ್ರಾಯದ ಪ್ರಖ್ಯಾತ ಕೀರ್ತನಕಾರಳು ಸೋಮವಾರಪೇಟೆಯಲ್ಲಿ ಮೂರು ಹರಿಕಥೆಗಳನ್ನು ನಡೆಸಿ ಮಡಿಕೇರಿಗೆ ಈ ವಾರ ಒಂದು ಹೈಸ್ಕೂಲ್ ಹಾಲ್‌ನಲ್ಲಿ ಎರಡು ಹರಿಕಥೆಗಳನ್ನು ನಡೆಸಿದರು. ಇವರ ಸಂಗೀತ ಪಾಂಡಿತ್ಯ ಮುಂತಾದ ಶಕ್ತಿಗಳು ಶ್ಲಾಘನೀಯವಾಗಿವೆ.

ಹಿಂದೂದೇಶ.

ಮದ್ರಾಸು ಪ್ರಾಂತ್ಯದಲ್ಲಿ ಇಷ್ಟರ ವರೆಗೆ ಸತ್ಯಾಗ್ರಹದ ಸಂಬಂಧ ದಸ್ತಗಿರಿಯಾದವರ ಸಂಖ್ಯೆಯು 1800ಕ್ಕೆ ತಲಪಿದೆಂದು ವರ್ತಮಾನ.

ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರನ್ನು ಇತರ 20 ಮಂದಿ ರಾಜಕೀಯ ಕೈದಿಗಳೊಂದಿಗೆ ಬೆಳಗಾಂವ ಸೆಂಟ್ರಲ್ ಜೈಲಿಗೆ ತಂದಿರುವರು.

ನಾಗಪುರದಲ್ಲಿ "ಕಾಂಗ್ರೆಸ್ ಡೇ" ದಿನ 8 ಸ್ವಯಂಸೇವಕರು ಮೆರವಣಿಗೆಯನ್ನು ತೆಗೆದುಕೊಂಡು ಹೋದುದಕ್ಕಾಗಿ ದಸ್ತಗಿರಿ ಮಾಡಲ್ಪಟ್ಟಿರುವರು.

ತಾ. 24ರಲ್ಲಿ ಡೆಲ್ಲಿಯಲ್ಲಿ ಶ್ರೀಮತಿ ಸರೋಜಿನಿ ನಾಯುಡುರವರ ಮತ್ತು ಪಂಡಿತ ಮದನಮೋಹನ ಮಾಳವೀಯರ ದಸ್ತಗಿರಿಗಾಗಿ ಹರತಾಳವು ಆಚರಿಸಲ್ಪಟ್ಟಿತು.

ಶ್ರೀಮತಿ ಸರೋಜಿನಿ ನಾಯುಡುರವರನ್ನು ಬೊಂಬಾಯಿಯ ಆರ್ಥರ್ ರೋಡ್ ಜೈಲಿನಲ್ಲಿ ಹಂಗಾಮಿಯಾಗಿರಿಸಿರುವರು. ಅವರನ್ನು ಬೇಗನೆ ಎರವಾಡ ಜೈಲಿಗೆ ಒಯ್ಯುವರಂತೆ.

ಶ್ರೀಮತಿ ಸರೋಜಿನಿ ನಾಯುಡುರವರಿಂದ ಕಾಂಗ್ರೆಸ್ಸಿನ ಆಕ್ಟಿಂಗ್ ಪ್ರೆಸಿಡೆಂಟರಾಗಿ ನೇಮಿಸಲ್ಪಟ್ಟಿದ್ದ ಮಿ. ಗಂಗಾಧರ ರಾವ್ ದೇಶಪಾಂಡೆಯವರು ಡೆಲ್ಲಿಯಲ್ಲಿ ತಾ. 25 ರಲ್ಲಿ ದಸ್ತಗಿರಿಮಾಡಲ್ಪಟ್ಟಿರುವರು.

ಕಲ್ಕತ್ತಾದಲ್ಲಿ ಲಲಿತ ಮೋಹನ್ ಸಿನ್ಹಾ ಮತ್ತು ಮನ್ಮಥ ನಾಥ ಬಿಸ್ವಾಸ್ ಎಂಬವರಿಗೆ ಲೈಸೆನ್ಸ್ ಇಲ್ಲದೆ ರಿವಾಲ್ವರುಗಳನ್ನೂ, ಗುಂಡುಗಳನ್ನೂ ಇಟ್ಟುಕೊಂಡದಕ್ಕಾಗಿ 6 ಮತ್ತು ಎರಡು ವರ್ಷಗಳ ಕಠಿಣ ಸಜೆ ವಿಧಿಸಲಾಗಿದೆ.

ಬನಾರಿಸಿನ ಎಂಡು, ನೂರು ಸ್ಥಳೀಯ ಟೆಲಿಗ್ರಾಫ್ ವೈಯರುಗಳು ಕತ್ತರಿಸಲ್ಪಟ್ಟು ಪರಸ್ಪರ ತಂತಿ ಸಮಾಚಾರ ನಡೆಯಲು ಅಡಚಣೆಯಾದ್ದರಿಂದ ಇದನ್ನು ಯಾರೋ ಕಾಂಗ್ರೆಸಿನ ಕಡೆಯವರು ಮಾಡಿದರೆಂತ ಗೌರ್ನಮೆಂಟಿನವರ ಊಹನೆ.

ಮಿ. ಸೇಠ್ ಗೋವಿಂದದಾಸರು ನಾಗಪುರದ ಜೈಲಿನಲ್ಲಿ ಅಸ್ವಸ್ಥರಾಗಿದ್ದಾರೆಂದು ತಿಳಿಯಬರುತ್ತದೆ. ಆದರೆ ಅಲ್ಲಿನ ಜೈಲುಗಳ ಅಧಿಕಾರಿಗಳ ಹುಕುಂ ಮೇರೆ ಯಾರೂ ಅವರಿಗೆ ಭೆಟ್ಟಿ ಕೊಡಲು ಬರಬಾರದೆಂತ ಅವರ ಸೆಂಟ್ರಿಗಳಿಗೆ ಅವರು ತಿಳಿಸಿರುತ್ತಾರೆ.

ಆರ್ಥಿಕ ಅಡಚಣೆಗಳ ದೆಸೆಯಿಂದಲೂ, ಚಳವಳದ ದೆಸೆಯಿಂದಲೂ ಸಂಯುಕ್ತ ಪ್ರಾಂತ್ಯದ ಸ್ಥಿತಿಯು ನೆಟ್ಟಗಿಲ್ಲವೆಂದು ಸರ್ಕಾರದ ವರದಿಯೇ ತಿಳಿಸುತ್ತಿದೆ. ಶಾಸನಭಂಗಕಾರರು ಹೆಚ್ಚು ಹೆಚ್ಚಿರುವುದು. ಚಳವಳವು ಅತೀ ಪ್ರಬಲವಾಗಿದೆ.

ಅಜಮೀರಿನ ಮಿ. ಚೇತ್‌ಮಲ್ ಕುಮ್ಮ ಮತ್ತು ಇನ್ನು ಮೂವರು ಚೆಲಿಗೋಲರುಗಳು ಡಿಲ್ಲಿಯ ಅಖಿಲ ಭಾರತ ಕಾಂಗ್ರೆಸ್ ಕಮಿಟಿಗೆ ಟ್ರೈನಿನಲ್ಲಿ ಬರುತ್ತಿರುವಾಗ ದಾರಿಯಲ್ಲಿಯೇ ದಸ್ತಗಿರಿಮಾಡಲ್ಪಟ್ಟು 3 ತಿಂಗಳು ಸಜೆಗೆ ಗುರಿಪಡಿಸಲ್ಪಟ್ಟಿದ್ದಾರೆ.

ಮದರಾಸಿನ ರಾಜಭಕ್ತ ಧುರೀಣ ದಿವಾನ್ ಬಹದೂರ್ ಮಿ. ರಾಮಸ್ವಾಮಿ ಮೊದಲಿಯಾರರು 'ಅಲ್ಲಹಾಬಾದಿನ ಪಾಯನೀರ್' ಪತ್ರಿಕೆಯ ಸಂಪಾದಕರಾಗಲಿರುವರೆಂದು ಸುದ್ದಿ. ನಿಜವಾದರೆ ಗಯ ಕ್ಷೇತ್ರದಿಂದ ಹೊಸ ಹೊಸ ಮಹಾತ್ಮೆಯನ್ನು ಕೇಳುವ ಸಂಯೋಗ!

ಲಾಹೋರಿನ ಪ್ರಾಮುಖ್ಯ ಕಾಂಗ್ರೆಸ್ ಕೆಲಸಗಾರರಾದ ಮಿಸೆಸ್. ಯಲ್. ಆರ್ ದತ್ತ ಮತ್ತು ಇವರ ಪುತ್ರ ಮನಮೋಹಿನಿ ದತ್ತ ಇವರನ್ನು ಶಾಸನಭಂಗ ಸಂಬಂಧ ದಸ್ತಗಿರಿ ಮಾಡಿದ್ದು ಈಗ 18 ತಿಂಗಳು ಕಠಿಣ ಸಜೆಗೆ ಗುರಿಮಾಡಿ "ಎ" ಕ್ಲಾಸಿನಲ್ಲಿ ಇಡಲ್ಪಟ್ಟಿರುವರು.

ಬೊಂಬಾಯಿಯ ರಾಜಹಂಸ ಪ್ರಿಂಟಿಂಗ್ ಪ್ರೆಸ್ಸಿನ ನೌಕರರನ್ನು ನಿಷೇಧಿತ ಹಸ್ತಪತ್ರಿಕೆಗಳನ್ನು ಪ್ರಿಂಟುಮಾಡುವರೆಂಬ ಗುಮಾನಿಯ ಮೇಲೆ ಪೊಲೀಸರು ಝಡತಿ ಮಾಡಿದಲ್ಲಿ ಕೆಲವು ರಾಜದ್ರೋಹದ ಹಸ್ತಪತ್ರಿಕೆಗಳು ಸಿಕ್ಕಿ ಅಲ್ಲಿನ ಪ್ರಿಂಟರನ್ನೂ, ಪ್ರೆಸ್ಸಿನ ಬಗರನ್ನೂ ಮತ್ತು ಕಂಪೋಜಿಟರನ್ನೂ ದಸ್ತಗಿರಿ ಮಾಡಿದರು.

ತಾ. 24 ರಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಸಮ್ಮೇಳನದಲ್ಲಿ ಸುಮಾರು 630 ಜನರು ದಸ್ತಗಿರಿಯಾಗಿರುವರೆಂದು ಅಂದಾಜು ಮಾಡಲಾಗಿದೆ. ತಾ. 18 ರಲ್ಲಿ 91 ದಸ್ತಗಿರಿಗಳೂ, ತಾ. 21 ರಲ್ಲಿ 9 ದಸ್ತಗಿರಿಗಳೂ, ತಾ. 23 ರಲ್ಲಿ 157 ದಸ್ತಗಿರಿಗಳೂ ಮತ್ತು ತಾ. 24 ರಲ್ಲಿ ಮಧ್ಯಾಹ್ನ 1 ಗಂಟೆಯ ವರೆಗೆ 369 ದಸ್ತಗಿರಿಗಳೂ ಆದವೆಂದೂ ತಿಳಿದುಬರುತ್ತದೆ.

ಪೋಲೀಸ್ ಅಧಿಕಾರಿಗಳು 25 ಕ್ರಿಮಿನಲ್ ಕೈದಿಗಳನ್ನು ಅಲಿಗಡ್‌ನಿಂದ ಪಂಜಾಬು ಜೈಲಿಗೆ ಟ್ರೈನಿನಲ್ಲಿ ಸಾಗಿಸುತ್ತಿರುವಾಗ ಸವಾರನ ಎಂಬಲ್ಲಿ ಈ ಕೈದಿಗಳು ಹಠಾತ್ತಾಗಿ ಪೊಲೀಸರ ಮೇಲೆ ಬಿದ್ದು ಒಬ್ಬೊಬ್ಬನನ್ನು ಕೊಂದೂ ಘಾಯಮಾಡಿಯೂ, 10 ಕೈದಿಗಳು 3 ಪೋಲೀಸ್ ರೈಫಲ್‌ಗಳನ್ನು ತೆಗೆದುಕೊಂಡು ಓಡಿಹೋದರು. ಅವರ ಪತ್ತೆಯು ನಡೆಯುತ್ತಾ ಇದೆ.

ಸಿಂದ್ ಪ್ರಾಂತದ ಕಾಂಗ್ರೆಸ್ ಲೀಡರಾದ ಡಾಕ್ಟರ್ ಚೋಯಿತ್ರಾಂ ಎಂಬವರನ್ನು ಬೊಂಬಾಯಿಯಲ್ಲಿ ಎರೆ ಜೆಸ್ಟ್ರ ಆರ್ಡಿನೆನ್ಸು ಮೇರೆ ದಸ್ತಗಿರಿ ಮಾಡಿ ಕೂಡಲೆ ಬಿಡುಗಡೆ ಮಾಡಿ ಬೊಂಬಾಯಿಯನ್ನು ತಕ್ಷಣ ಬಿಟ್ಟು ಹೋಗಬೇಕೆಂಬ ಹುಕುಂ ಮಾಡಿದ್ದು ಇವರಿಗೆ ಈಗ ಅಲ್ಲಿನ ಪೊಲೀಸ್ ಕಮಿಷನರರ ಹುಕುಂ ಇಲ್ಲದೆ ಬೊಂಬಾಯಿಯ ಎಲ್ಲೆಯನ್ನು ದಾಟಕೂಡದೆಂದು ನೋಟೀಸ್ ಕೊಟ್ಟಿದ್ದಾರೆ.

ಬೊಂಬಾಯಿಯ "ಫ್ರುಟ್ ಗ್ರೋವರ್ಸ್ ಎಸೋಸಿಯೇಶನ್"ನವರು ಆರು ಡಜನ್ ಅತೀ ಉತ್ಕೃಷ್ಟವಾದ ಮಾವಿನ ಹಣ್ಣುಗಳನ್ನು ಬಹು ನಾಜೂಕಾಗಿ, ಕಡವಂತೆ, ಪ್ಯಾಕುಮಾಡಿ "ಮಂಜೂಷ" ಹಡಗ ಮೂಲಕ ಲಂಡನಿಗೆ ಕಳುಹಿರುವರು. ಇದು ಕೆಟ್ಟು ಹೋಗದೆ ಇಂಗ್ಲೆಂಡಿಗೆ ತಲಪಿದರೆ ಚಕ್ರವರ್ತಿಯವರಿಗೆ ಅರ್ಪಿಸಲ್ಪಡುವುದಂತೆ. ಇದು ಸುರಕ್ಷಿತವಾಗಿ ತಲಪಿದರೆ ಹಿಂದೂದೇಶದ ಪುಣ್ಯ. ಆ ಮೇಲೆ ಇಂಡಿಯಾದಿಂದ ಮಾವಿನ ಹಣ್ಣಿನ ರಫ್ತೇ ರಫ್ತು.

ತಾ. 26ರಲ್ಲಿ ಕಾಂಗ್ರೆಸ್ ಮೆರವಣಿಗೆಯಲ್ಲಿ ಭಾಗವಹಿಸಿಕೊಂಡ 39 ಸ್ವಯಂಸೇವಕರನ್ನು ದಸ್ತಗಿರಿಮಾಡಿ, ಅವರ ಮುಖಂಡರಾದ ಮಿ. ಎ. ಕೆ ದತ್ತರಿಗೆ 2 ವರ್ಷ ಕಠಿಣ ಸಜೆಯೂ, 200 ರೂಗಳ ಜುಲುಮಾನೆಯೂ ತಪ್ಪಿದರೆ 6 ತಿಂಗಳುಗಳ ಹೆಚ್ಚಿನ ಸಜೆಯೂ ವಿಧಿಸಲಾಗಿದೆ. ಇವರ ಜೊತೆಯಲ್ಲಿದ್ದ ಶ್ರೀಮತಿ ಮುಕರಮತ್ ಕಾಸಿಮ ಬಿ ಎಂಬವರಿಗೆ 1 ವರ್ಷ ಕಠಿಣ ಸಜೆಯೂ, 200 ರೂಗಳ ಜುಲುಮಾನೆಯೂ ತಪ್ಪಿದರೆ 3 ತಿಂಗಳ ಹೆಚ್ಚಿನ ಕಾರಾಗೃಹ ವಾಸವೂ ವಿಧಿಸಲಾಗಿದೆ.

ಅಜಮೀರಿನ ಕಮಿಶನರಾದ ಮಿ. ಗಿಬ್‌ಸನ್ನವರಿಗೆ ಯಾರೋ ಅಕಸ್ಮಾತ್ತಾಗಿ 4 ಗುಂಡುಗಳನ್ನು ಹೊಡೆದರು. ಆದರೆ ದೈವಾನುಗ್ರಹದಿಂತ ಅವರಿಗೆ ಯಾವ ಅಪಾಯವೂ ಸಂಭವಿಸಲಿಲ್ಲ. ಈ ಕಾರ್ಯವು ಜರುಗುವುದಕ್ಕಿಂತ ಮುಂಚೆ ಆ ಸ್ಟೇಷನಿನ ಪಕ್ಕದಲ್ಲಿ ತಿರುಗಾಡುತ್ತಿದ್ದ ರಾಮಚಂದ್ರ ಬಾಪತ್ ಎಂಬವನನ್ನು ದಸ್ತಗಿರಿ ಮಾಡಿ ಆತನ ಮನೆಯನ್ನು ಝಡತಿ ಮಾಡಿದಾಗ 18 ಕೀಲಿ ಕೈಗಳು ಸಿಕ್ಕಿದವು. ಇವನನ್ನು ದಸ್ತಗಿರಿ ಮಾಡಿದ ಇನ್‌ಸ್ಪೆಕ್ಟರವರಿಗೆ 'ಫಸ್ಟ್ ಗ್ರೇಡ'ಗೆ ಪ್ರಮೋಷನ್.

ಕರಾಚಿ ಪಟ್ಟಣದಿಂದ ಮದರಾಸಿಗೆ ಟಪ್ಪಾಲನ್ನು ವಾರಕ್ಕೊಂದು ಸಲ ವಿಮಾನ ಯಂತ್ರಗಳಲ್ಲಿ ಸಾಗಿಸುವ ವಿಚಾರದಲ್ಲಿ ಹಿಂದೂಸ್ಥಾನದ ಸರ್ಕಾರದವರಿಗೂ, ತಾತಾ ಕಂಪೆನಿಯ ಯಜಮಾನರಿಗೂ ಒಪ್ಪಂದಗಳು ನಡೆದು ಸರ್ಕಾರದವರು ತಮ್ಮ ಅನುಮತಿ ಕೊಟ್ಟಿರುತ್ತಾರೆ. ಈ ವಿಮಾನ ಯಂತ್ರಗಳು ಪ್ರತಿ ಸೋಮವಾರ ಮದರಾಸಿನಿಂದಲೂ, ಪ್ರತಿ ಶನಿವಾರ ಕರಾಚಿ ಪಟ್ಟಣದಿಂದಲೂ ಹೊರಟು, ಬಳ್ಳಾರಿ, ಬೊಂಬಾಯಿ, ಅಹ್ಮದಾಬಾದ್ ನಗರಗಳಲ್ಲಿ ತಂಗಿ ಅಲ್ಲಲ್ಲಿನ ಟಪ್ಪಾಲುಗಳನ್ನು ಕೊಟ್ಟು ಮುಂದಕ್ಕೆ ಹೊರಡುತ್ತವೆ. ಸದ್ಯ ಈ ವಿಮಾನ ಯಂತ್ರಗಳಲ್ಲಿ ಪ್ರಯಾಣಿಕರನ್ನು ಕೂಡಿಸಿಕೊಂಡು ಹೋಗುವುದಿಲ್ಲವೆಂಬುದಾಗಿ ತಿಳಿದು ಬರುತ್ತದೆ.

ಕಾಶಿ (ಬೆನಾರಿಸ್) ಪಟ್ಟಣದ ಜೈಲಿನಲ್ಲಿ ಕಾಂಗ್ರೆಸ್ ಕೈದಿಗಳು ಕೆಲವರು ಗಲಭೆ ನಡಿಸಿದರೆಂಬುದಾಗಿ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ತಿಳಿಸಿರುತ್ತಾರೆ. ಈ ಕೈದಿಗಳನ್ನು ಕೆಲವು ದಿನಗಳ ಹಿಂದೆ ಲಕ್ನೋ ನಗರದ ಜೈಲಿನಿಂದ ಕಾಶಿಪಟ್ಟಣದ ಜೈಲಿಗೆ ಸಾಗಿಸಿಕೊಂಡು ಬರಲಾಗಿದ್ದಿತು. ಇವರು ಜೈಲು ಅಧಿಕಾರಿಗಳ ಹುಕುಮಿನಂತೆ ನಡೆಯುತ್ತಿರಲಿಲ್ಲ. ಅಲ್ಲದೆ ಕಾವಲುಗಾರರ ಮೇಲೆ ಕೈ ಮಾಡುವಂತೆ ಇತರ ಕೈದಿಗಳಿಗೆ ಪ್ರೇರಿಪಿಸಿದರು. ಗಲಭೆಯಲ್ಲಿ ಕೆಲವು ಮಂದಿ ಕಾವಲುಗಾರರಿಗೆ ಪೆಟ್ಟು ಬಿದ್ದು ಗಾಯಗಳೂ ಆದವು. ಹಾಗೆ ಮಾಡ[illegible]

ನವೆಂಬುದಾಗಿ ಜೈಲು ಅಧಿಕಾರಿಗಳು ಎಚ್ಚರಿಕೆ ಕೊಟ್ಟದ್ದರ ಮೇಲೆ ಕೈದಿಗಳು ಅವರವರ ದಿನಚರ್ಯೆಯ ಕೆಲಸ ಕಾರ್ಯಗಳನ್ನು ಮಾಡಬೇಕಾದವರು ಒಪ್ಪಿದ ಮಾತ್ರ ಆ ರೀತಿ ನಡೆದುಕೊಳ್ಳಲು ಒಪ್ಪದಿದ್ದುದರಿಂದ ಛಡೀ ಏಟು ತಿಂದರು.

ಈ ವಾರದ ಕೊನೆಯಲ್ಲಿ ಅಖಿಲಭಾರತ ಕಾಂಗ್ರೆಸ್ ಅಧಿವೇಶನವು ಜರುಗುವುದೆಂದು ನಿಶ್ಚಯವಾಗಿತ್ತಷ್ಟೆ. ಅಧ್ಯಕ್ಷರಾಗಿ ಗೊತ್ತು ಮಾಡಿದ ಪಂಡಿತ ಮಾಳವೀಯರವರು ಡಿಲ್ಲಿ ನಗರವನ್ನು ಅಧಿಕಾರಿಗಳ ಅಪ್ಪಣೆ ಇಲ್ಲದೆ ಪ್ರವೇಶಿಸಬಾರದೆಂದು ನೋಟೀಸ್ ಕೊಡಲಾಗಿದೆ. ಸರೋಜಿನಿ ದೇವಿಯರನ್ನು ಮೇಜಿಸ್ಟ್ರೇಟರ ಅಪ್ಪಣೆ ವಿನಾ ಬೊಂಬಾಯಿಯಿಂದ ಡಿಲ್ಲಿಗೆ ಹೊರಟಾಗ ಬಾಂದ್ರಾದಲ್ಲಿ ದಸ್ತಗಿರಿ ಮಾಡಿ ಬೊಂಬಾಯಿಗೆ ತಂದು ಒಂದು ವರ್ಷದ ಸಜೆ ವಿಧಿಸಿದರೆಂದು ವಾರ್ತೆ ಬಂದಿದೆ. ಮಾಳವೀಯರವರನ್ನು ಡಿಲ್ಲಿ ನಗರವನ್ನು ಪ್ರವೇಶಿಸುವಾಗ ಕೈದು ಮಾಡಿರುವರು. ಯುಕ್ತಪ್ರಾಂತ್ಯದ ಪರವಾಗಿ ಅಲಹಾಬಾದಿನಿಂದಲೂ, ಗುಜರಾಥದ ಪರವಾಗಿ ಅಹ್ಮದಾಬಾದಿನಿಂದಲೂ, ಸಿಂಧ ಪರವಾಗಿ ಕರಾಚಿನಿಂದಲೂ ಹೊರಟ ಪ್ರತಿನಿಧಿಗಳನ್ನು ಪೊಲೀಸರು ಹಿಡಿದರೆಂದೂ, ತಮಿಳುನಾಡಿನ ಪರವಾಗಿ ಮದರಾಸಿನಿಂದ ಹೊರಟವರು ಸುರಕ್ಷಿತವಾಗಿ ಡಿಲ್ಲಿಯನ್ನು ಮುಟ್ಟಿದರೆಂದೂ, ಕೇರಳದ ಪರವಾಗಿ ಕಲ್ಲಿಕೋಟೆಯಿಂದ ಮೂವರು ಹೊರಟಿರುವರೆಂದೂ ತಿಳಿಯಬರುತ್ತದೆ.

ಕಲ್ಕತ್ತಾದ ಪೋಸ್ಟ್ ಮಾಸ್ಟರ್ ಜನರಲರವರು ಆ ಪಟ್ಟಣದವರಿಗೆ ಕಾಗದಗಳನ್ನು ಪೋಸ್ಟಾಫೀಸಿನ ಕಾಗದ ಪೆಟ್ಟಿಗೆಯಲ್ಲಿ ಪೋಸ್ಟು ಮಾಡಬೇಕೆಂದೂ, ಯಾರೋ ದುಷ್ಕರ್ಮಿಗಳು ನಕ್ಕದಲ್ಲಿ ಪೋಸ್ಟು ಬಾಕ್ಸುಗಳ ಕಾಗದಗಳನ್ನೂ ಸುಟ್ಟು ಹಾಕಿಬಿಡುತ್ತಾರಾದ್ದರಿಂದ ಹೀಗೆ ಮಾಡಬೇಕೆಂದೂ ಕೇಳಿಕೊಂಡಿರುವರು. ಮದರಾಸಿನಲ್ಲಿಯೂ ಕೂಡ ಹೀಗೆಯೇ ಟಪ್ಪಾಲು ಪೆಟ್ಟಿಗೆಗಳ ದರೋಡೆಗಳು ಆಗುತ್ತಿದೆ.

ಟ್ಯುಟಿಕೋರಿನದಲ್ಲಿ ತಾ. 17ನೇ ದಿನ ಒಂದು ಘೋರ ನೋಟ! ಮಾಣಿಕವಾಸಗ ಎಂಬ 30 ವಯಸ್ಸಿನ ತರುಣನು ಪಾರಾಯಿಟ್ಟನೂ, ರಾಜಮ್ಮಾಳ್ ಎಂಬ ಅವನ ಪತ್ನಿಯೂ ಕವಾಗಿ ಒಂದಿಗಿದ್ದರು. ಪತ್ನಿಯ ಮೈಮೇಲೆಲ್ಲಾ ಕತ್ತಿಯ ಗಾಯಗಳಿದ್ದವು; ಪತಿಯ ಮೈಯೂ ಅರ್ಧ ಸುಟ್ಟು ಬೆಂದು ಹೋಗಿತ್ತು. ಪತ್ನಿ ಮನ್ನೀತಕೃತ್ಯ ಕೊಂದು ತಾನು ಬೆಂಕಿ ಇಟ್ಟುಕೊಂಡು ಆತ್ಮಹತ್ಯೆ ಮಾಡಿಕೊಂಡನೆಂದು ಊಹೆ, ಸತಿ ಸಹಗಮನದಂತೆ—'ಪತಿ' ಸಹಗಮನ.

ಬೊಂಬಾಯಿಯಲ್ಲಿ (ದಾದರ್) ಅಮಕೇದ್ದಿ ರಸ್ತೆಯ ಪಕ್ಕದ ಮಾರುತಿ ದೇವಾಲಯದ ಬಳಿಯಲ್ಲಿ ತಾ. 19 ನೇ ರಾತ್ರಿ ರಾಮನವಮಿ! ಮುಸಲ್ಮಾನರೂ ಪಕ್ಕದಲ್ಲೊಂದು ಮಸೀದಿಯನ್ನು ಇತ್ತೀಚೆಗೆ ಕಟ್ಟಿಸಿದ್ದು ನಿತ್ಯವೂ ಪ್ರಾರ್ಥನೆ! ರಾಮನವಮಿ ಮಹೋತ್ಸವದ ಭಜನೆ ಸಂಗೀತಗಳು ಮುಸಲ್ಮಾನರಿಗೆ ಅಹಿತವಾಗಿ ದಂಗೆ ಎದ್ದರು. ಹಿಂದೂಗಳೂ ಉತ್ತರ ಕೊಟ್ಟರು. ಪರಿಸ್ಥಿತಿಯನ್ನು ನಿಲ್ಲಿಸಲು ಪೊಲೀಸರು ಆಗಮಿಸಿ, ಬಂದೂಕು ಹಾರಿಸಿ, ಶಾಂತ ಮಾಡಿದರು. ಒಟ್ಟು 50 ಮಂದಿಗಳಿಗೆ ಮಾರಾಮಾರಿಯಲ್ಲೇ ಜಖಂ; ಒಬ್ಬನಿಗೆ ಬಂದೂಕಿನ ಜಖಂ; ಜಖಂ ಹೊಂದಿದವರಲ್ಲಿ 10-12 ಪೊಲೀಸರೂ ಇರುವರು. ಒಬ್ಬ ಪಠಾಣನು ಮಸೀದಿಯ ಬಳಿಯಲ್ಲಿ ನಾಯಿ ಬೊಗಳಿದ, ಆಸ್ಪತ್ರೆಯಲ್ಲಿ ಮಡಿದನು. ಮರುದಿನ ಬೆಳಗಿನ ವರೆಗೂ ಬಂದು (ಗಲಭೆ ನಿಂತಮೇಲೆ) 'ರಾಮ'ಗಾಗಿ ಪ್ರವೇಶವಲ್ಲ ಕೆಲವು ಹೊತ್ತು ರಾರಾಜಿಸಿದರು. ಮಾರ್ಗದತ್ತ ಬರುತ್ತಿದ್ದ ಒಂದು ಮೆರವಣಿಗೆಯನ್ನು 120 ಪೊಲೀಸರು ನಿಲ್ಲಿಸಿದ್ದಾರೆ. ದೇವಾಲಯದ ಬಳಿಯ ಮುಂದೆ ಖಿಲಾಫತ್ ಸ್ವಯಂ ಸೇವಕರು ಕುಳಿತುಕೊಂಡಿದ್ದವರು ಮಸೀದಿಯ ಮುಂದೆ [illegible] ನಿಲ್ಲಿಸಿದರೆಂದೂ, ದೇವಾಲಯದೊಳಗೆ [illegible]ಲ್ಲಿ ಸಲಾಂರೆಂದೂ ಹಿಂದೂಗಳ ಹಟ; [illegible]ಳಗೂ ಮೇಳ ಎಲ್ಲಿಯೂ (ತಮ್ಮ [illegible] ಶಬ್ದವೇ ಕೇಳಬಾರದೆಂದು ಮುಸ್ಲಿಮ[illegible] ದಿಗಳ ಮಧ್ಯಕ್ಕೆ ಪರಿಹಾರ [illegible]ದ ಶಾಂತಿ ಯಾವಾಗ ಎಂದೇ ಜನ[illegible]

[illegible] ಕೂ. ...ರು.

ವಿದೇ[illegible]

ಕೈಯಿಂದ ಮಗ್ಗ ನಿಗಿ[illegible]
ಲು ಹಾರಿದ ಅಲೆಕ್ಸಾಂಡರ್
ಟು ನಿದಕ್ಕರೊಪ್ಪರ ಮಗನ[illegible]ವಳ್ಳ
ಮಂತ್ರಿಶ್ರೇಷ್ಠರಿಗೆ, ಎಂಬ 1ಕ್ಕೆ ರೂ. 32-8-0
ಹೊಂದಿ [illegible] ಹೊಂದುತ್ತಾನ್
ಷ ತಲೆದೋರಿದೆಯೊಂದು '[illegible]
ದೃಷ್ಟಿ ದೋಷ!
[illegible]ಕಾಲಿನಿಂದ
ಜಪಾನೀಯ[illegible]ಕೂಲಿಸುವಂತೆ
ಮಧ್ಯಸ್ಥಿಕೆಗೆ ಬ[illegible]ಸೆಲ್ ಪ್ಲೇಟ್
ಮಾಡು ಬಟ್ಟ[illegible]ಮೆಕ್ಸಂಡ್ ರೇಗ
ಗಾಂವಕ್ಕೆ [illegible] 1ಕ್ಕೆ
ಪಕ್ಕೆ[illegible] ರೂ. 78-[illegible]
ಎಡಿಟರ್ —ಯಂ. ಎಸ್. ತಿಮ್ಮಯ ಪ್ರಿ[illegible]
ಸ್ವಂತ [illegible]
ದ[illegible]ಯಂ ಹುತ್ತು! ಕಾಲೇಜ
ಕಾಲೇಜಿ ಬಾಸ ಹೋಟೇಲ್, [illegible]
32-45.

ವಿಚಾರಣೆ ವೇಳೆ ಕೇಸೇನೋ ನಡೆಯುತ್ತಿದೆ. ಪೋಲೀಸಿನವರೂ ಒಂದು ಕಂಪ್ಲೇಂಟು ಮಧ್ಯೆ ತಂದಿದ್ದಾರೆ. ಅದರಲ್ಲಿ 'ದಾವಾದಲ್ಲಿ ನಮೂದಿಸಿರುವ ಅಪಾದನೆಗಳೆಲ್ಲ ನಿಜ. ಗಾಂಧಿಯ ಭಾಷಣವನ್ನು ಕೇಳಿದವರು ಮಾಡುತ್ತಿದ್ದ ಗಲಭೆಯು ಅತಿಯಾಗಿತ್ತು. ಪ್ಯಾರಿಸ್ ನಗರದ ಗಲಭೆಯು ಸ್ಟೇಗಳಲ್ಲಿ ನಡೆಯುವ ಗಲಭೆಗಳಿಗಿಂತಲೂ ಜೋರಾಗಿತ್ತು.' ಎಂದಿತ್ತು ಪೋಲೀಸಿನವರ ಹೇಳಿಕೆಯಲ್ಲಿ.

ಈ ದಾವದಲ್ಲಿ ಪ್ರತಿವಾದಿಯಾಗಿರುವ ಭಾರತೀಯನು ಖಂಡಿತವಾಗಿಯೂ ಪರಿಹಾರದ್ರವ್ಯವನ್ನು ಕೊಡಬೇಕಾಗಿ ಬರುತ್ತೆಂದು ಊಹಿಸಿ ಪ್ಯಾರಿಸ್ಸಿನಲ್ಲಿರುವ ಭಾರತೀಯ ಮುಖಂಡರೆಲ್ಲರೂ ಆತನ ವಿಚಾರದಲ್ಲಿ ಅನುಕಂಪವನ್ನು ತೋರಿಸಿಯೂ ಗಾಂಧಿಜಿಯವರು ಯಾವ ಕಾರ್ಯಕ್ಕಾಗಿ ಬಂದಿದ್ದರೋ ಅದನ್ನು ತಿಳಿಸಿಯೂ ಸೀಟ್ ಗಾಂಧಿಜಿಯವರಿಗೆ ಸ್ಥಳ ಕೊಟ್ಟಿದ್ದಕ್ಕೆ ಆತನಿಗೆ ನಷ್ಟವುಂಟಾಗಬಾರದೆಂದು ಚಂದಾಹಣದ ಪಟ್ಟಿಯನ್ನು ಈಗಲಿಂದಲೇ ತೆರೆದಿದ್ದಾರೆ.

ಆ ಮನೆಯ ಯಜಮಾನನು ಆ ಭಾರತೀಯನನ್ನು ಮನೆ ಬಿಟ್ಟು ಹೋಗೆಂದು ನೋಟೀಸು ಕೊಟ್ಟಿರುತ್ತಾನೆ. ಆದರೆ ಆತನು ಅದನ್ನು ಪ್ರತ್ಯೇಕವಾದ ನ್ಯಾಯಸ್ಥಾನದಲ್ಲಿ ಇದಿರಿಸುತ್ತಿರುವುದಲ್ಲದೆ ಗಾಂಧಿಯ ಹಿಂಬಾಲಕರು ಗಲಭೆ ಮಾಡಿದ ಕಾರಣದಿಂದ ತನ್ನನ್ನು ಮನೆಯಿಂದ ಹೊರಡಿಸಲು ಸಾಕಾದಷ್ಟು ಕಾರಣಗಳಿಲ್ಲವೆಂಬುದಾಗಿ ವಾದಿಸುತ್ತಿದ್ದಾನೆ.

ಫ್ರೆಂಚ್ ನ್ಯಾಯಶಾಸ್ತ್ರದ ಇತಿಹಾಸದಲ್ಲಿ ಭಾರತೀಯ ಬ್ಯಾರಿಸ್ಟರೊಬ್ಬನು ಕೋರ್ಟಿಗೆ ಹೋಗಿ ವಕೀಲಿ ವಹಿಸುವುದು ಹೊಸದು. ಈ ಭಾರತೀಯ ವಕೀಲನು ಆ ಭಾರತೀಯನ ಪರವಾಗಿ ವಾದಿಸುವನಂತೆ. ಆದರೆ ಬ್ರಿಟಿಷ್ ಇಂಡಿಯಾದ ಪ್ರಜೆಯು ಫ್ರೆಂಚ್ ನ್ಯಾಯಸ್ಥಾನಗಳಲ್ಲಿ ವಾದಿಸಲು ಅವಕಾಶವುಂಟೋ ಎಂಬುದನ್ನು ತೀರ್ಮಾನಿಸಲು ಫ್ರೆಂಚ್ ಲಾಯರುಗಳ ಮೇಲ್ವಿಚಾರಣಾ ಸಂಘದವರ ಅಭಿಪ್ರಾಯವನ್ನು ಕೇಳಿದ್ದಾರೆ. ಯಾಕೆಂದರೆ ಪ್ರತಿವಾದಿಗಳು ಆ ಭಾರತೀಯ ಬ್ಯಾರಿಸ್ಟರನ್ನು ನಿಯೋಮಿಸಿ ಮಾಡಿದ್ದಾರಂತೆ.

ಪ್ರ. ಮಿತ

ಕೀರ್ತನ ಕೇಸರಿ ಶ್ರೀಮತಿ ಯದುಗಿರಿಯಮ್ಮನವರು.

(ಪ್ರತಿ ಕರಿಂದ.)

ಇವರು ಸೋಮವಾರಪೇಟೆಗೆ ಬಂದಿದ್ದು, ಅಲ್ಲಿ ಕೆಲವು ಕಥೆಗಳನ್ನು ನಡಿಸಿ ಮೊನ್ನೆ ಮೊನ್ನೆ ಮಡಿಕೇರಿಗೆ ದಯಮಾಡಿ, ನಿನ್ನೆ ಮಂಗಳವಾರ ದಿನ "ಶಾಂತೋಪಾಖ್ಯಾನ" ಇಲ್ಲವೆ "ರಾಮಾಂಜನೇಯ" ಎಂಬ ಕಥೆಯನ್ನು ಮಾಡಿದರು. ಕಥೆಯು ಅತಿ ಸ್ವಾರಸ್ಯವಾಗಿದ್ದಿತು. ಹೈಸ್ಕೂಲ್ ಹಾಲ್‌ನಲ್ಲಿ ನೆರೆದ ಸಭೆಯು ಕಿಕ್ಕಿರಿದು ತುಂಬಿತ್ತು. ಸ್ಥಳಾಭಾವದಿಂದ ಅನೇಕ ಪ್ರೇಕ್ಷಕರು ಹಿಂತಿರುಗಿದರು ಬಹು ಜನರು ಸ್ಕೂಲಿನ ಜಗಲಿಯ ಮೇಲೆ ನಿಂತು ಕಾಲಕಳೆದರು.

ಗುರುವಿಲ್ಲದೆ ಯಾವ ಸಾಮರ್ಥ್ಯವು ಮನುಷ್ಯನಿಗೆ ಸಿದ್ಧಿಸಲಾರದು ಎಂಬುದೇ ಕಥೆಯ ಧ್ಯೇಯ. ಈ ಧ್ಯೇಯಕನುಸಾರವಾಗಿ ರಾಮನ ಶಕ್ತಿ, ಸಾಮರ್ಥ್ಯ ಔದಾರ್ಯಗಳನ್ನು ಸಾಂಗವಾಗಿ ಪ್ರತಿಪಾದಿಸಿ, ಹರಿದಾಸಿನಿಯರು ಸಭಿಕರಿಗಾನಂದವನ್ನುಂಟುಮಾಡಿದರು. ಇವರ ಸಂಗೀತವು ಅದ್ವಿತೀಯವಾಗಿತ್ತು. ಸಾಕ್ಷಾತ್ ಸರಸ್ವತಿಯೇ ಇವರಲ್ಲಿ ಮೂರ್ತಿವೆತ್ತಿರುವಳೋ ಎಂದೆನಿಸಿತು. ಇನ್ನು ಕೇವಲ ಅನುಭವಸ್ಥರಾದ ಇವರು ಈ ರೀತಿಯಿಂದ ಕಥೆ ಮಾಡಿದ್ದು, ... ಒಂದು ಖ್ಯಾತಿ. ಇವರ ಕೀರ್ತಿಯು ಸಮಗ್ರ ...ವನ್ನು ಆವರಿಸಿದೆ. ಕನ್ನಡನಾಡಿನ ಪದಕವೇ ಇ...

...ಕಥೆಯು ಮುಗಿದ ನಂತರ ಮ. ರಾ. ರಾ. ... ಹರಿದಾಸಿನಿಯವರನ್ನು ಸಮಯೋಚಿತ ... ಪರವಾಗಿ ಅವರನ್ನು ವಂದಿಸಿದರು.

...ಗ ದುಃಖ ತಾಳಲಾರದೆ ... ಶೌಕತಲ್ಲಿಯವರು ...ಯಾದರು.

...ಯವರು ಗುರುವಾರ ಮಧ್ಯಾಹ್ನ ...ರ ಕಚೇರಿಯಲ್ಲಿ ಆಯೋಜನೆಯ ...ದಿವೆಗೆ ಊರ ತುಂಬ ... ...ಇನರು ಈ ಸಂಯೋಗಕ್ಕೆ ... ...ಷ್ಟು ಗದ್ದಲ ಮಾಡಿದೆ, ಗು... ...ದುವೆಯಾದರು. ಇದು ... ಆಯೋಜಿಸಿಗೆ ... ಮುಸಲ್ಮಾನರ ...ಗೆ ೨೫ ವರ್ಷ ...ಯು ನಗರದ ... ಅನಿಸ್ಸಂ... ...ಟ್ಟು ...ದ್ದರು.

ರು, ವಿವಾಹಬಂಧನದಿಂದ ಬದ್ಧರಾಗುವಿರಾ ಎಂದು ಕೇಳಿದ ತಾಯಿಗೆ ಸವಾಲು ಹಾಕಿದರು. ಅದಕ್ಕೆ ಅವರು ಹಾಗೆಂದು ಉತ್ತರ ಕೊಟ್ಟು ಬಳಿಕ ಮದುವೆಯ ಕನಸುಗಳೆಲ್ಲ ಮಾಗಿಯಿತು. ಮುಸಲ್ಮಾನರ ಧರ್ಮ ಪ್ರಕಾರ ಮೌಲ್ವಿಗಳು ವಧುವರರ ಕೈ ಹಿಡಿದು ... ರೂಪವಾಗಿ ... ಕೊಡುವಂತೆ ಬಾಹಿರ್ ಮಾಡಿದರು.

ಮುಸಲ್ಮಾನರವರಿಗೆ ಒಬ್ಬ ಪ್ರಬುದ್ಧ ಚಿರಂಜೀವನಿದ್ದಾನೆ. ಆತನಿಗೆ ೩೫ ವರ್ಷ. ಈ ಮದುವೆಯಾಗಬಾರದೆಂದು ಈತನು ಒಬ್ಬನಾಗಿ ಪ್ರಯತ್ನಿಸಿದನು. ಆದರೂ ಕೋಪಾವಿಷ್ಟನಾಗಿ ಸಂಗತಿಯಾದುದಕ್ಕೆ ಅತನಿಗೆ ಬಹು ವಿಷಾದವಾಗಿರುತ್ತದೆ. ಅಲ್ಲಾನ ಇಚ್ಛೆ ಎಂದು ಉಸುರು ಹಾಕಿದನು. ಮಗನಂತೆ ಮುಸಲ್ಮಾನ ಪ್ರಮುಖರೂ ಈ ಮದುವೆಗೆ ಹೋಗಬೇಕೆಂದು ಇವರಿಗೆ ಒತ್ತಾಯದಿಂದ ಹೇಳಿದರು. ತಾವು ಕರುಣಾಪಾತ್ರರಾಗಿರುತ್ತೇವೆಂಬುದನ್ನು ಆಗ ಅವರು ಯೋಚಿಸಲಿಲ್ಲ. ಅಯೋಜನೆಯನ್ನು ಬೇಗನೆ ಮಾಡಬೇಕೆಂದು ಅವರ ಸತ್ಯಾಗ್ರಹ; ಅದಕ್ಕನುಸರಿಸಿ ನಡೆದರು. ನೀವು ಹಲವರು. ಅಸ್ವಸ್ಥ ದಿನಗಳಲ್ಲಿ ... ಜೊತೆ ಸತ್ತು ಹದಿನೆಂಟು ವರ್ಷವಾಯಿತು. ಸತಿವಿರಹ ದುಃಖವನ್ನು ತಾಳಿ ತಾಳಿ, ಕೊನೆಗೆ ತಾಳಲಾರದೆ ಮದುವೆಯಾದೆನೆಂದು ಹೇಳುತ್ತಾ ಮತ್ತೆ ಪ್ರಪಂಚದಲ್ಲಿ ತೊಡಗಿದರು.

ಮುಸಲ್ಮಾನರವರು ಮದುವೆಯಾದ ದಿನವು ಮುಂಬಯಿಯ ಮುಸಲ್ಮಾನರ ದೃಷ್ಟಿಯಿಂದ ದುರ್ದಿನವಾಗಿತ್ತು. ದಾದರದ ದಂಗೆಯಲ್ಲಿ ಸತ್ತವರ ಮರವಣಿಗೆ ಹೊರಟಾಗ ಮದುವೆಯ ಆರ್ಕೆಸ್ಟ್ರಾಗಳು ಬಾರಿಸುತ್ತಿದ್ದವು. ಇಂಥ ಅಶುಭ ವೇಳೆಯಲ್ಲಾದರೂ ಇವರು ಮದುವೆಯಾಗಬಾರದೆಂದು ಜನಮತವಾಗಿತ್ತು. ಆದರೂ ಇವರು ಮದುವೆ ಮಾಡಿಕೊಂಡರು. ತಮ್ಮ ಹೊತ್ತಿನ ನಂತರ ಸಭಾಸ್ಥಾನಕ್ಕೆ ಹೊರಡುವ ಮುಂಚೆ ಸ್ವರ್ಗವಾಸಿ ಉಮರ ಸೋಬಾನಿಯವರ ಮನೆಗೆ ಬಂದು ಅಲ್ಲಿ ನಿಂತುಕೊಂಡು, ಮೃತನ ಮರವಣಿಗೆ ಬಂದ ಕಾವಲಿ ಅದಕ್ಕೆ ಹೆಗಲು ಕೊಟ್ಟರು. ಮದುವೆಯಾದ ಕೂಡಲೆ—ಗಂಡ ಹೆಂಡಂದಿರೀರ್ವರೂ ಎಲ್ಲಾದರೊಂದು ವಿಹಾರಸ್ಥಾನಕ್ಕೆ ಹೋಗಿ, ಒಂದು ತಿಂಗಳು ಸುಖದಿಂದ ಕಾಲಕಳೆಯುವ ನಿಯಮವುಂಟು. ಆ ಪ್ರಕಾರ ಇವರು ಬೇಗಮುರೊಂದಿಗೆ ಎಲ್ಲಾದರೊಂದು ಏಕಾಂತ ಸ್ಥಳಕ್ಕೆ ಹೋಗಿ, ಕಾಲಕಳೆಯುವರು. ಅಷ್ಟರಲ್ಲಿ ತಮ್ಮ ಮೇಲಾದ ಸ್ವಜಾತಿಯವರ ಕೋಪವು ಶಮನವಾಗುವದೆಂದೂ ಆಶಿಸಿದ್ದಾರೆ.

ವಿಜಯ.

Coorg Forest Department,
South Division.

TENDER NOTICE.

Mercara, the 23rd April 1932.

Tenders are invited by 17—5—32 for the supply of the following quantities of gram and ragi required for the use of the Departmental Live Stock for 1932—33.

Gram 193 pallas.
Ragi 67 pallas.

For further particulars apply to the
DIVISIONAL FOREST OFFICER,
SOUTH COORG, MERCARA.

ಜಯಕರ್ನಾಟಕ ಗ್ರಂಥಮಾಲೆಯ ೨ನೆಯ ವರ್ಷದ ಯೋಜನೆ.

ಮನೋರಂಜಕವಾದವೂ,	ಗಂಭೀರತ್ವದಿಯ ಗ್ರಂಥಗಳ ಸುಗ್ಗಿ!!
ಚಂದಾ ಹಣವನ್ನು ಕಡಿಮೆ ಮಾಡಿದೆ!	ವರ್ಷದಲ್ಲಿ ೬ ಪುಸ್ತಕಗಳು!!
ವಾರ್ಷಿಕ ಚಂದಾ (ಅ. ವೆ. ಸೇರಿ)	ಜಯಕರ್ನಾಟಕ ಚಂದಾದಾರರಿಗೆ
೩—೮—೦ ಮಾತ್ರ!!	೩—೦—೦ ಮಾತ್ರ!!

ಮೊದಲನೆಯ ಗ್ರಂಥವಾಗಿ ಶ್ರೀ. ಆನಂದಕಂದರ ಸಣ್ಣಕತೆಗಳ ಸಂಗ್ರಹವು ಅಕ್ಷಯ್ಯ ತೃತೀಯೆಯ ದಿನ ಹೊರಡುವದು

ಅಲ್ಲದೆ ಶ್ರೀಯುತರಾದ. 'ಶ್ರೀನಿವಾಸ' ಬೇಂದ್ರೆ, ಬೇಂಗನೆ ಮುಗಳಿ, ಚೆನ್ನಮಲ್ಲ ಮೊದಲಾದ ಸುರಿತ ಬರಹಗಾರರ ನಾಟಕ, ಕಾದಂಬರಿ, ಕಥೆಗಳೂ ಶ್ರೀ ಅರವಿಂದ ಯೋಗಿಗಳ ("mother") ಗ್ರಂಥದ ಅನುವಾದವೂ, ಭಾವಗೀತಗಳ ಸಂಗ್ರಹವೂ ತೂಕ್ಕಿಗೆ ಸರಿಯಾಗಿ ಹೊರಡುವವು

ನಿಯಮಿತವಾಗಿಯೇ ಪ್ರತಿಗಳನ್ನು ತೆಗೆಯುವದರಿಂದ ಚಂದಾದಾರರಾಗಲು ಬಯಸುವವರು ಈಗಲೇ ಪತ್ರ ಬರೆಯಬೇಕು.

ಎಲ್ಲ ಕಡೆಗೂ ಏಜಂಟರು ಬೇಕಾಗಿದ್ದಾರೆ.

ಪತ್ರವ್ಯವಹಾರ ಮಾಡಬೇಕು.

ವ್ಯವಸ್ಥಾಪಕ
ಜಯಕರ್ನಾಟಕ ಕಾರ್ಯಾಲಯ.
ಸಾಧನಕೇರಿ, ಧಾರವಾಡ.

Wanted.

An accountant to the Mercara Nad Co-operative Store from 1st May 1932 on a salary of Rs. 25 per mensem. Only those who have the knowledge of accounts or Retired Government Officer prefered. Applications may be sent to the address below.

HONORARY SECRETARY.
4=. Mercara Nad Co-operative Store.

ಜನರಲ್ ಅಶ್ಯೂರೆನ್ಸ್ ಸೊಸೈಟಿ.

ಅಜಮೀರ್.

ನಮ್ಮ ಆಯವ್ಯಯದ ಪಟ್ಟಿಯೇ ನಮ್ಮ ಅಭಿವೃದ್ಧಿಯನ್ನು ವ್ಯಕ್ತಗೊಳಿಸುತ್ತದೆ.

ವರ್ಷ	ಮೇಲ್ಪಟ್ಟ ವರಮಾನವು	ಮೇಲ್ಪಟ್ಟ ಮೂಲಧನ	ಖರ್ಚು ವರಮಾನದ ಶೇಕಡ
1911	46,248	49,447	82.9
1921	2,92,627	6,53,350	43.2
1931	12,50,000	40,00,000	28.2

ಬೋನಸ್ಸು.

ಹುಟ್ಟಿದ ನಷ್ಟ ದೊರಕುವ ಜೀವಾವಧಿ ಪಾಲಿಸಿಗಳ ಮೇಲೆ ವರ್ಷ ಒಂದಕ್ಕೆ ಶೇಕಡ 22½

ಚೆನ್ನಾಗಿ ಕೆಲಸನಡೆಸಿ ಅಭಿವೃದ್ಧಿ ಸ್ಥಿತಿಯಲ್ಲಿರುವ ಈ ಸೊಸೈಟಿಯಲ್ಲಿ ವಿಮೆ ಮಾಡಿ ಕಡಿಮೆ ಪ್ರೀಮಿಯಂ ಪಾವತಿ ಮಾಡುವ ಸೌಲಭ್ಯ ಹೊಂದಿ ಅಥವಾ ಈ ಕಂಪೆನಿಯ ಪರವಾಗಿ ಕೆಲಸನಡಿಸಿ ಉತ್ತಮ ಕಮಿಶನ್ ದರದ ಪ್ರಯೋಜನ ಹೊಂದಿ.

ಹೆಚ್ಚು ವಿಚಾರಗಳಿಗೆ ಈ ವಿಳಾಸಕ್ಕೆ ಬರೆಯಿರಿ:—

ಎ. ರಾಮಚಂದ್ರರಾವ್,
ಸುಪರಿಂಟೆಂಡೆಂಟ್,
ವಿಂಟೋ ಪಾರ್ಕ ಬಳಿ,
ಬೆಂಗಳೂರು

ಮಾರಾಟಕ್ಕಿದೆ.

ಎರಡು ಮನೆಗಳು ಮಾರಾಟಕ್ಕಿವೆ.

ಒಂದು ನೇಪಿಯರ್ ರೋಡಿನಲ್ಲಿಯೂ (ಹಳೆಯ ಕೂರ್ಗ್ ಮೆಡಿಕಲ್ ಹಾಲ್) ಇನ್ನೊಂದು ಗಣಪತಿ ಬೀದಿಯಲ್ಲಿಯೂ ಇದೆ. 2 ಮನೆಗಳಿಗಾಗಿ ಒಟ್ಟು ಕ್ರಯ ರೂ. 6000. ಅಥವಾ ಇದರ ಸಮೀಪದ ಬೆಲೆ ಬೇಕಾದವರು ಹೆಚ್ಚಿನ ವಿಷಯ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

'S'
C/o I. C. Subbaih
M. A. B. L.
4—3 Vakil.
Mercara.

ಇಂಡಿಯನ್ ಇನ್ಶೂರೆನ್ಸ್ ಕಂಪೆನಿಗಳಿಗೇನೇ ಜೀವ ವಿಮೆ ಮಾಡಿರಿ.

ದಿ ಬೆಂಗಾಲ್ ಇನ್ಶೂರೆನ್ಸ್ ಎಂಡ್ ರಿಯಲ್ ಪ್ರಾಪರ್ಟಿ ಕಂಪೆನಿ ಲಿಮಿಟೆಡ್, ಹೆಡ್ ಆಫೀಸು:—8 ಡಾಲ್‌ಹೌಸಿ, ಸ್ಕ್ವೇರ್ (ಈಸ್ಟ್) ಕಲ್ಕತ್ತ, ಸಂಸ್ಥಾಪನೆ 1919.

ನವಸಂಸ್ಕೃತಿಯು ಬೆಳೆದಷ್ಟಕ್ಕೆ ಆದರೊಡನೆ ಅದಕ್ಕೆ ಸಂಬಂಧಪಟ್ಟಿರುವ ಆರ್ಥಿಕ ಸಂಸ್ಥಿತಿಯು ಬೆಳೆ ಯುತ್ತದೆ ಇಂಥಹ ಸಮಯದಲ್ಲಿ ಜೀವವಿಮೆ ನಿಯಮವು ಒಂದು ವರವೆಂದೆ ಣಿಸಲ್ಪಟ್ಟಿದೆಯಲ್ಲದೆ, ಅದು ಸಮಾಜರಂಗದಲ್ಲಿ ಬಸರಿಗೊಂಡು ಅತ್ಯಗತ್ಯ ವಿಷಯವೆಂದೂ ತಿಳಿದು ಬಂದಿದೆ. ಅದನ್ನು ಈಗೀಗ ಗಣಿತಶಾಸ್ತ್ರ ಪ್ರಕಾರವಾಗಿಯೇ ಜನರಿಂದ ಪಾಲಿಸಿಕೊಂಡೇ ಬರುವಂತಾಗಿದೆ.

ಈ ಕಂಪೆನಿಯು ಸರಕಾರದಲ್ಲಿ ಕಂಪನಿಯ ಭದ್ರತೆಗೋಸ್ಕರ 2 ಲಕ್ಷ ರೂಪಾಯಿ ಠೇವಣಾತಿಯನ್ನು ಇಟ್ಟಿದೆ. ಇದು ಇನ್ಶೂರೆನ್ಸ್ ಕೆಲಸದಲ್ಲಿ ಒಳ್ಳೆ ಗುರುತಿರುವ ಸದ್ಗೃಹಸ್ಥರ ಮುಂದಾಳುತನದಿಂದಲೇ ನಡೆಯುತ್ತದೆ. ಈ ಕಂಪೆನಿಯು ಆಕರ್ಷಣೀಯವಾದ ಕೆಲವು ಸೂತ್ರಗಳ ಮೇರೆಗೆ ಅತೀ ಸುಲಭ ಪ್ರೀಮಿಯಮ್ ದರದಿಂದ ಪಾಲಿಸಿಗಳನ್ನು ಕೊಡುತ್ತದೆ. ಇದರ ಶರ್ತಗಳು, ನಿಯಮಗಳು ಸುಲಭ ಗ್ರಾಹ್ಯವಾಗಿವೆ; ಅನುಕೂಲದ್ದಾಗಿವೆ ಅಲ್ಲದೆ ಬಹು ಉದಾತ್ತವೂ ಆಗಿವೆ. ಹೆಚ್ಚಿನ ಮಾಹಿತಿಗೆ ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಿರಿ.

ಯಂ. ಯಸ್. ಐಯ್ಯಪ್ಪ,
ಆರ್ಗನೈಸರ್,
ಸ್ಕೂಲ್‌ರೋಡ್, ಮಡಿಕೇರಿ.
ಅಥವಾ
ಆರ್. ಸಿ. ಸೆನ್‌ಗುಪ್ತ,
ಬ್ರಾಂಚ್ ಸೆಕ್ರೆಟರಿ,
12—1 28, ಅಂಗಪ್ಪನಾಯಕ್ ಸ್ಟ್ರೀಟ್,
ಜಿ. ಟಿ. ಮದರಾಸ್.

Wanted agents in every Taluk of Coorg on very liberal terms.

ಸರಕಾರವೂ, ಕಾಂಗ್ರೆಸೂ.

ಕಾಂಗ್ರೆಸನ್ನು ಸರಕಾರವು ಸಭೆ ಸೇರಲು ಬಿಡದ್ದರಿಂದ ವಿಶೇಷ ಪರಿಣಾಮಗಳಾಗಿವೆ. ಸ್ವಾಗತ ಸಮಿತಿಯು ಶಾಸನಿಗೆ ವಿರೋಧವಾದ ಸಂಸ್ಥೆಯಾಗಿ ಮಾಡಲ್ಪಟ್ಟಿತು. ಕಾಂಗ್ರೆಸಿನ ಹಂಗಾಮಿ ಅಧ್ಯಕ್ಷರೂ, ಸಭೆಯ ಅಧ್ಯಕ್ಷಸ್ಥಾನಕ್ಕೆ ಚುನಾಯಿತರಾದವರೂ ಆರ್ಡಿನೇನ್ಸುಗಳ ಮೇರೆ ದಸ್ತಗಿರಿ ಮಾಡಲ್ಪಟ್ಟಿದ್ದಾರೆ. ಪ್ರತಿನಿಧಿಗಳನ್ನು ಕೊಂಡೊಯ್ಯುವ ಟ್ರೇನಿನಲ್ಲಿಯೂ, ದಾರಿಯಲ್ಲಿಯೂ, ಡಿಲ್ಲಿಗೆ ತಲುಪಿದ ವೇಳೆಯೂ ದಸ್ತಗಿರಿ ಮಾಡಲ್ಪಡುತ್ತಿದ್ದಾರೆ. ಕಾಂಗ್ರೆಸ್ ಮಹಾಸಭೆಯನ್ನೇ ಶಾಸನಕ್ಕೆ ವಿರೋಧವೆಂತ ಮಾಡುವುದು ವಿನಹ ಕಾಂಗ್ರೆಸನ್ನು ನಡೆಯದಂತೆ ಮಾಡಲು ಮಾಡಬೇಕಾದ ಏರ್ಪಾಡುಗಳನ್ನೆಲ್ಲಾ ಮಾಡಿದ್ದಾರೆ. ಅದರೂ ತಕ್ಕಷ್ಟು ದೊಡ್ಡ ಸಂಖ್ಯೆ ಪ್ರತಿನಿಧಿಗಳು ವಿಷಯನಿಯಾಮಕ ಸಮಿತಿಯು ಮಂಜೂರು ಮಾಡಿದ ಠರಾವುಗಳನ್ನು ಗಮನಕ್ಕೆ ತೆಗೆದುಕೊಳ್ಳಲು ಡಿಲ್ಲಿಯಲ್ಲಿ ಸೇರಿದ್ದರು. ಅದರೆ ಇವರ ಕೆಲಸಗಳನ್ನೆಲ್ಲಾ ಪಕ್ಕನೇ ನಿಲ್ಲಿಸಿಬಿಟ್ಟರು. ಒಂದು ಕಡೆ ಸೇರಿದ್ದ 150 ಜನರನ್ನು ಒಂದೇ ಸಾರಿ ದಸ್ತಗಿರಿ ಮಾಡಿಬಿಟ್ಟರು. ಕಳೆದ ನಾಲ್ಕು ದಿನಗಳಿಂದ ಡಿಲ್ಲಿಯಲ್ಲಿ ಕಾಂಗ್ರೆಸ್ ಸಂಬಂಧವಾಗಿಯೇ ದಸ್ತಗಿರಿಯಾದ ಸಂಖ್ಯೆಯು 600 ಕ್ಕೆ ಮೀರಿದೆಯೆಂತ ತಿಳಿಯುತ್ತದೆ. ಆದರೆ ಗವರ್ನಮೆಂಟು ಕಾಂಗ್ರೆಸನ್ನು ಕೂಡಗೊಡದ್ದರಿಂದ ದೇಶದಲ್ಲಿ ಆದ ಅತೃಪ್ತಿಯು ಈ ದಸ್ತಗಿರಿ ಸಂಖ್ಯೆಯಿಂದ ತಿಳಿಯಾವುದಿಲ್ಲ. ಕಳೆದ ಕೆಲವು ದಿನಗಳ ಕಾರ್ಯಗಳಿಂದ ಕಾಂಗ್ರೆಸಿಗೆ ದೇಶದ ಜನಸಮುದಾಯದ ಮೇಲೆ ಎಷ್ಟೊಂದು ಪ್ರಭಾವವಿದೆಯೆಂತ ತಿಳಿಯುತ್ತದೆ. ಕಾಂಗ್ರೆಸಿನ ಕಾರ್ಯಕಾರೀ ಮಂಡಲಿಯ ತೀರ್ಮಾನಗಳ ಮೇಲೆ ಒಪ್ಪಿಗೆ ಇಲ್ಲದವರ ಮೇಲೆ ಸಹ ಕಾಂಗ್ರೆಸಿನ ಬಲವಿದ್ದೇ ಇದೆ. ಕಾಂಗ್ರೆಸಿನ ಒಟ್ಟಿನ ಮೇಲೆ ಹೊಸ ಆರ್ಡಿನೇನ್ಸುಗಳನ್ನು ಉಪಯೋಗಿಸದೆ ಇರುವುದರಿಂದ ಕಾಂಗ್ರೆಸು ಜನರ ಪ್ರೀತಿಗೆ ಪಾತ್ರನಾಗಿದೆಯೆಂಬುದನ್ನು ಸರಕಾರವು ಒಪ್ಪಿದೆಯೆಂತ ಸ್ಪಷ್ಟವಾಯಿತು. ಆದರೆ ಗವರ್ನಮೆಂಟಿನವರು ಮಾಡಬೇಕಿನಾತೆ ಕಾಂಗ್ರೆಸನ್ನು ಸಭೆ ಕೂಡಲು ಬಿಡದೆ ಇರುವಂತೆ ಮಾಡಿದ್ದರಿಂದ ಸರಕಾರದ ಕಾರ್ಯಗಳು ತಿಳಿಯಲು ಸಾಧ್ಯವಾಗಿದೆ. ಸರಕಾರವು ಕಾಂಗ್ರೆಸನ್ನು ಸೇರಲು ಬಿಡಲಿಲ್ಲವೆಂತ ಹೇಳಿಕೊಂಡರೂ ಕಾಂಗ್ರೆಸಿನಲ್ಲಿ ನಂಬಿಗೆ ಇರುವವರು ಕಾಂಗ್ರೆಸ್ ಸಭೆ ಸೇರಿಯೇ ಸೇರಿಸುತ್ತಾರೆ. ಕಾಂಗ್ರೆಸಿನ ಮೇಲೆ ಪ್ರೀತಿ ಇರುವ ಕೋಟ್ಯಾಂತರ ಜನರಿಗೆ ಮಾತ್ರ ಸರಕಾರವು ಕಾಂಗ್ರೆಸಿನ ವಾರ್ಷಿಕ ಸಮ್ಮೇಳನವನ್ನು ಸೇರಲು ಬಿಡಲಿಲ್ಲವೆಂತ ಸರಕಾರದ ಮೇಲೆ ಅತೃಪ್ತಿ ಹುಟ್ಟಿತು.

ಸರಕಾರವು ಈ ಮೊದಲು ಮಾಡಿದ ತಪ್ಪುಗಳನ್ನು ಜನರ ಮುಂದೆ ತಿದ್ದಿಕೊಳ್ಳಲು ದೊರೆತ ಇನ್ನೊಂದು ಅವಕಾಶವನ್ನು ಸರಕಾರವು ಕಳಕೊಂಡಿತೆಂತ ನಮ್ಮ ಅಭಿಪ್ರಾಯ. ತಮ್ಮ ದ್ವಿಮುಖ ನೀತಿಗೆ ಜನರ ಬೆಂಬಲವಿದೆಯೆಂತಲೂ, ಕಾಂಗ್ರೆಸಿಗೆ ಮಹತ್ವವಿಲ್ಲವೆಂತಲೂ ಸರಕಾರವು ಅಂದುಕೊಳ್ಳುತ್ತದೆ. ಅಲ್ಲದೆ ತಾವು ತಯಾರಿಸುವ ರಾಜಕೀಯ ರಚನೆಗೆ ಜನಸಮುದಾಯದ ಬೆಂಬಲ ಬೇಕೆಂತಲೂ ಸರಕಾರವು ಅಂದುಕೊಳ್ಳುತ್ತದೆ. ಸರಕಾರದ ದ್ವಿಮುಖ ನೀತಿಯು ಈಗ 4 ತಿಂಗಳುಗಳಿಂದ ಜಾರಿಯಲ್ಲಿತ್ತು. ಯಾರಿಗೆ ಜಯವಾಯಿತೆಂತ ತೀರ್ಮಾನಿಸಿಕೊಳ್ಳಲು ಜನರಿಗೆ ಬೇಕಾದಷ್ಟು ಸಮಯವಿತ್ತು. ಕಾಂಗ್ರೆಸಿನ ನಿಯಮಗಳಿಗನುಸಾರವಾಗಿ ವರ್ಷಕೊಂದಾವರ್ತಿ ಸೇರುವ ಸಭೆಯನ್ನು ಸೇರಲು ಬಿಟ್ಟಿದ್ದರೆ ಕಾಂಗ್ರೆಸಿನ ದ್ವಿಮುಖ ನೀತಿಗೆ ದೇಶದ ಸಮುದಾಯದ ಜನರ ಬೆಂಬಲವೆಷ್ಟರಮಟ್ಟಿಗೆ ಇದೆಯೆಂತ ನೋಡಬಹುದಿತ್ತು. ಸರಕಾರವು ಅನಂತರಾಗ್ಯೆ ತಮ್ಮ ತೀರ್ಮಾನಗಳನ್ನು ಬದಲಾಯಿಸಿಕೊಂಡದ್ದರಿಂದ ಕಾಂಗ್ರೆಸಿನವರು ಸಹ ತಮ್ಮ ಸಭೆಯ ಕಾರ್ಯಕ್ರಮವನ್ನು ಬದಲಾಯಿಸಿಕೊಳ್ಳಬೇಕಾಯಿತು. ಕಾಂಗ್ರೆಸ್ ಸಭೆ ಕೂಡಲು ಬಿಡದ್ದರಿಂದ ಕಾನೂನು ಭಂಗದ ಚಳವಳಿಯನ್ನು ನಡಸಬೇಕೆಂತ ಮಾಡಿದ ತೀರ್ಮಾನದವರ್ಗಕ್ಕೆ ಕಾನೂನುಭಂಗದ ಚಳವಳಿಯಲ್ಲಿ ಭಾಗತೆಗೆದುಕೊಳ್ಳದ ಪಂಡಿತ ಮದನಮೋಹನ ಮಾಳವೀಯರನ್ನೂ, ನರೀಮನ್ ಮೊದಲಾದವರನ್ನೂ ಸರಕಾರವು ದಸ್ತಗಿರಿ ಮಾಡಬೇಕಾಗಿ ಬಂತು. ಕಾಂಗ್ರೆಸನ್ನು ಕಾನೂನಿಗೆ ವಿರೋಧವಾದ ಸಂಸ್ಥೆಯನ್ನಾಗಿ ಮಾಡದಿರುವಾಗ ಕಾಂಗ್ರೆಸ್ ಸಭೆಗೆ ಹೋಗಲು ಹೊರಟ ಇವರನ್ನು ದಸ್ತಗಿರಿ ಮಾಡಲು ಎಳ್ಳಷ್ಟಾದರೂ ಕಾರಣವಿರಲಿಲ್ಲ. ಕಾಂಗ್ರೆಸ್ ಸಭೆಯನ್ನು ಸೇರಲು ಬಿಟ್ಟಿದಿದ್ದರೆ ಅದರ ತೀರ್ಮಾನವು ಸರಕಾರಕ್ಕೆ ಒಪ್ಪಿಗೆಯಾಗಲೂ ಬಹುದಿತ್ತು, ಆಗದೆಯೂ ಇರಬಹುದಿತ್ತು. ಆದರೆ ಜನಸಮುದಾಯದ ಅಭಿಪ್ರಾಯವನ್ನು ತಿಳಿಸಲು ಸರಕಾರವು ಬಿಡಲೇ ಇಲ್ಲ ಎಂಬ ಆಕ್ಷೇಪಣೆಗೆ ಸರಕಾರವು ಗುರಿಯಾಗುತ್ತಿರಲಿಲ್ಲ. ತುಂಬಾ ಅನುಭವಶಾಲಿಯೂ ಸಂಧಾನಿಯೂ ಆದ ಶ್ರೀ ಮಾಳವೀಯರ ಅಧ್ಯಕ್ಷತೆಯಲ್ಲಿ ಸರಕಾರಕ್ಕೂ, ಕಾಂಗ್ರೆಸಿಗೂ ರಾಜಿಯಾಗುವ ತೀರ್ಮಾನಗಳೇ ಆಗಬಹುದಿತ್ತು. ಅದನ್ನು ತಪ್ಪಿಸಿಕೊಂಡಂತಾಯಿತು. ರಾಜಿಮಾಡಿಕೊಳ್ಳಲು ತಡವಾದಷ್ಟು ರಾಜಿಯ ಶರತ್ತುಗಳು ಕಠಿಣವಾಗುತ್ತದೆ.

ತಾ. 25—೪—32. 'ಹಿಂದೂ'

ಸನಾತನ ಹಿಂದು.

ಮಹಾತ್ಮ ಗಾಂಧಿಯವರ ಲೇಖನಿಯಿಂದ.

ನನಗೆ ಒಬ್ಬ ಬಾತ್ಮಿದಾರನಿದ್ದಾನೆ. ನಾನು ಯಾವಾಗಲಾದರೂ ಕೊಂಚ ಉದ್ವೇಗಗೊಳಿಸುವಸಂದರ್ಭದಲ್ಲಿಯು, ಕಾದಲೆ ನನ್ನ ಮೇಲೆ ತಪ್ಪು ಹೊರಿಸುತ್ತಾನೆ. ಅತನು ವಾಸ್ತವವಾಗಿಯೂ 'ಯಂಗ್ ಇಂಡಿಯಾ' ವಿದ್ಯಾರ್ಥಿಯಾಗಿರಬೇಕು. ಅವನ ಹೇಳಿದ್ದನ್ನೆಲ್ಲಾ ಕಣ್ಣು ಮುಚ್ಚಿಕೊಂಡು ಒಪ್ಪಿಕೊಳ್ಳತಕ್ಕವನಲ್ಲ. ಅತನು ನಿಷ್ಪಕ್ಷಪಾತನಾದ ಸ್ನೇಹಪರನಾದ ವಿಮರ್ಶಕ. ನನ್ನ ಬರಹಗಳಲ್ಲಿ ಒಳ್ಳೆಯದಿದ್ದರೆ ಪ್ರಶಂಸಿಸುವಂತೆಯೇ ತಪ್ಪುಗಳಿದ್ದರೂ ಹುಡುಕುತ್ತಾನೆ. ಅತನು ತನ್ನ ಇಂದಿನೊಂದು ಪತ್ರಗಳಲ್ಲಿ ನನ್ನ ಬರಹಗಳಲ್ಲಿ ಪರಸ್ಪರ ವಿರುದ್ಧಾರ್ಥಗಳಿದ್ದುದನ್ನು ನನ್ನ ಅವಗಾಹನೆಗೆ ತಂದಿದ್ದಾನೆ. ಆದರೆ ಅದು ಬಹಳ ದಿನಗಳಿಂದಲೂ ನನ್ನ ಕಡತದಲ್ಲಿ ಹಾಗೆಯೇ ಇದ್ದಿತ್ತು. ಆ ಪತ್ರದ ಒಂದು ಭಾಗವು 'ಸನಾತನ ಹಿಂದೂ'ವಿನ ನಿರೂಪಣಕ್ಕೆ ಸಂಬಂಧಿಸಿದುದು. ಇದೇ ಆತನ ಪತ್ರ—

"ನೀವು ಒಬ್ಬ ಸನಾತನ ಹಿಂದೂವೆಂದು ಹೇಳಿಕೊಂಡಿದ್ದೀರಿ. ವೇದಗಳು ಸ್ಮೃತಿಗಳು ಮುಂತಾದ್ದರಲ್ಲಿ ನಂಬಿಕೆಯುಳ್ಳವನೇ ಸನಾತನ ಹಿಂದುವೆಂದಿದ್ದೀರಿ. ಜಾತಿಭೇದಗಳು ವೇದಗಳ ಅನುಸಾರವಾಗಿ, ಜನ್ಮದಿಂದಲೇ ಬರುವುದೆಂಬುದಾಗಿ ಹೇಳಿದ್ದೀರಿ. ಅದರೆ ನೀವೇನೂ ಜಾತಿಗಳ ಸಂಖ್ಯೆಯನ್ನು ಮೊದಲಿನಿಂದಲೂ ಊಹಿಸಲ್ಪಟ್ಟಿರುವಂತೆ ನಾಲ್ಕೇ ಎಂಬುದಾಗಿ ಗಣಿಸುತ್ತೀರಿ. (ನಾನು ಮೊದಲಿನಿಂದಲೂ 'ಊಹಿಸಲ್ಪಟ್ಟಿರುವಂತೆ' ಎಂಬುದಾಗಿ ಹೇಳಿದ್ದೇನೆ; ಯಾಕೆಂದರೆ ಮನುಸ್ಮೃತಿಯೇ ಮುಂತಾದವುಗಳು ಹುಟ್ಟಿದಾಗ್ಯೂ ಈ ಚತುರ್ವರ್ಣಗಳಿಂದಲೆ ಹುಟ್ಟಿ, ಒಪ್ಪಲ್ಪಟ್ಟಿದ್ದ ಅನೇಕಾನೇಕ ಜಾತಿಗಳು ಇದ್ದವು—ಅದರೆ ವರ್ಣಾಂತರಗಳ ಸಹಪಂಕ್ತಿ ಭೋಜನವೂ, ಸಂಕರವಿವಾಹವೂ ಇನ್ನೂ ನಿಷೇಧವೆಂದಾಗಿರಲಿಲ್ಲವೆಂಬುದನ್ನು ಮಾತ್ರ ಮರೆಯಬಾರದು.) ಈಗ ಈ ಮುಖ್ಯವಾದ ಜಾತಿ ಪೃಥಗ್ಭಾವದಲ್ಲಿ ಕಡೆಯದಾದ ನಾಲ್ಕನೆಯ ವರ್ಣವು ಶೂದ್ರಜಾತಿ. ಈ ಜಾತಿಯವರು ವೇದಗಳನ್ನು ಓದಕೂಡದು, ಪಠಿಸಕೂಡದು. ಅಂದಿಗೆ ವೇದಗಳ ಪ್ರಕಾರ ಹಕ್ಕಿಲ್ಲವೆಂದೂ ಅದು ಸನಾತನ ಹಿಂದೂವಿನ ವಿಶಿಷ್ಟ ಪದ್ಧತಿಯೆಂದೂ ದ್ವಿಜೋತ್ತಮರು ಹೇಳುತ್ತಾರೆ. ಅದು ಸನಾತನ ಹಿಂದೂವಿನ ಮೂಲತತ್ವದ ನಂಬಿಕೆಯೆಂದು ನೀವೂ ಒಪ್ಪುತ್ತೀರಿ. ಆದರೆ ನೀವು ಗಾಯತ್ರಿ ಪಠನವನ್ನು ಜಾತಿಭೇದಗಳಿಲ್ಲದೆ ಎಲ್ಲರೂ ಮಾಡಲೇ ಬೇಕೆನ್ನುತ್ತೀರಿ.

ಅದರಿಂದ ಈಗೊಂದು ಪ್ರಶ್ನೆಯು ಹುಟ್ಟಿದೆ: ಶೂದ್ರನಿಗೆ— ಅರಿಯ ವೇದಪಠನ, ಶ್ರವಣಗಳೇ ದೈವದೂಷಣೆಗಳೆಂತ ನಿಷಿದ್ಧವಾಗಿರುವಾಗ ಒಂದು ಜಾತಿಗೆ ಸೇರಿದ ಶೋಗೆ ಆ ಜಾತಿಗೆ ನಿಮ್ಮ ವರ್ಣಾಸೂತ್ರದ ಪ್ರಕಾರ ಹಿಂದೂ ಜಾತಿಗೆ ಹೇಗೆ ಸೇರಬಹುದು? ನೀವು ನನ್ನ ಮುಟ್ಟಕೂಡದೆನ್ನುತ್ತಾ ಇದು ಕರೆ ಎನ್ನುತ್ತೀರಿ. ಇದು ಹೇಗೆ ಸಾಧ್ಯ?

ಅದಕಾರಣ ಶೂದ್ರನಾಗಿ ಜನ್ಮಿಸಿದವನು ನಿಮ್ಮ ರೀತಿಯ ಪ್ರಕಾರ ಸನಾತನ ಹಿಂದೂವಾಗಿರಲಾರ—ಇಲ್ಲವೆ— ಸನಾತನ ಹಿಂದೂವೆಂಬರೆ ನೀವು ಹೇಳಿದ ವ್ಯಾಖ್ಯೆ ಬದಲಾಗಬೇಕಿರಬೇಕು. ಈ ಸಂದರ್ಭದಲ್ಲಿ, ನೀವು ೧೯೨೧ರಲ್ಲಿ 'ಹಿಂದೂಜಾತಿ' ಎಂಬ ಲೇಖನವನ್ನೂ, ನೀವು ಬೆಳಗಾಮಿನಲ್ಲಿ ಸೇರಿದ್ದ ಗೋಸಮ್ಮೇಳನದಲ್ಲಿ ಮಾಡಿದ ಭಾಷಣವು ಪ್ರಕಟವಾಗಿರುವ ೨೯—೧—೨೫ ನೆ 'ಯಂಗ್ ಇಂಡಿಯಾ' ಲೇಖನವನ್ನೂ ನಿಮ್ಮ ಅವಗಾಹನೆಗೆ ತರಬಯಸುವೆನು.

ನಾನು ಜನ್ಮತಃ ಬ್ರಾಹ್ಮಣ. ನಿಜವಾದ ಸನಾತನ ಧರ್ಮವನ್ನು ನೀವು ಹೇಳಿದಂತೆ ಎಷ್ಟೋ ಪರಸ್ಪರ ವಿರುದ್ಧಾರ್ಥಗಳಿಂದ ಪ್ರತಿಪಾದಿಸಹೋದರೆ ನಾನು ಹಿಂದೂ ಎಂಬ ಹೆಸರಲ್ಲಿ ಅನ್ನು ಹೆಮ್ಮೆ ತೋರಿಸಲಾರೆ. ಇದನ್ನು ನಾನು ನಿಮಗೆ ತೋರಿಸಯೇ ಇದ್ದೇನೆ. ಕೊನೆಯದಾಗಿ, ನೀವು ಗಾಯತ್ರಿ ಮಂತ್ರದ ವಿಷಯದಲ್ಲಿ ಪಟ್ಟಿರುವ ಅಭಿಪ್ರಾಯವನ್ನು ಕುರಿತು, 'ನೀವು ನಿಮ್ಮ ದ್ವಿಜ ಜನ್ಮದ ನಿತ್ಯ ಪ್ರಾರ್ಥನೆಗಳಲ್ಲಿ ಒಂದು ದಿನವಾದರೂ ಗಾಯತ್ರಿಯನ್ನು ಬಿಡದೆ ಪ್ರಾರ್ಥಿಸಿದ್ದೀರಾ' ಎಂಬುದಾಗಿ ಕೇಳಲು ಅವಕಾಶ ಕೊಡುವಿರಾ?"

ನಾನು ಶಬ್ದಾರ್ಥಗಳನ್ನು ಮಾತು ಮಾತಿಗೆ ನಿಂತುಹಿಡಿದು ಹೋಗುವವನಲ್ಲ. ಅದ ಕಾರಣವೆ ನಾನು ಪ್ರಪಂಚದ ಎಲ್ಲಾ ಮತಗ್ರಂಥಗಳ ಸಾರವನ್ನು ಗ್ರಹಿಸಲು ಪ್ರಯತ್ನಿಸುತ್ತಿರುವುದು. ನಾನು ಅರ್ಥ ವಿವರಣೆಗೋಸುಗ ಸತ್ಯ ಮತ್ತು ಅಹಿಂಸೆಗಳ ಪರೀಕ್ಷೆಯನ್ನು ಈ ಮತಗ್ರಂಥಗಳು ಹೇಳಿರುವ ಪ್ರಕಾರವೇ ಮಾಡುತ್ತಿದ್ದೇನೆ. ಪರೀಕ್ಷೆಗೆ ವ್ಯತಿರೇಕವಾಗಿರುವುದನ್ನೆಲ್ಲಾ ತ್ಯಜಿಸುತ್ತಿದ್ದೇನೆ. ಅದಕ್ಕೆ ಹೊಂದುವುದನ್ನೆಲ್ಲಾ ಉಪಯೋಗಿಸಿಕೊಳ್ಳುತ್ತಿದ್ದೇನೆ. ವೇದಗಳನ್ನು ಕಲಿಯ ಹೋದ ಶೂದ್ರನನ್ನು ಶ್ರೀರಾಮಚಂದ್ರನು ಶಿಕ್ಷಿಸಿದನೆಂಬ ಕಥೆಯನ್ನು ಹೊಸದಾಗಿ ತೋರಿಸಿರುವ ಸ್ವಕಪೋಲ ಕಲ್ಪಿತವೆಂದು ತಳ್ಳಿಹಾಕುತ್ತೇನೆ. ಹೇಗಾದರೂ ಇರಲಿ ನಾನು ರಾಮನನ್ನು ಪೂಜಿಸುತ್ತೇನೆ. ಅತನು ನನ್ನ ಭಾವನೆಯ ಪ್ರಕಾರ ಲೋಕೋಪಕಾರಿಯಾದ ಮನುಷ್ಯ—ಇತಿಹಾಸ ಪುರುಷನಾದ ರಾಮನನ್ನಲ್ಲ ನಾನು ಪೂಜಿಸುವುದು. ಯಾಕೆಂದರೆ ಹೊಸ ಹೊಸದಾಗಿ ಇತಿಹಾಸ ಸಂಶೋಧಕ ಕಾರ್ಯಗಳು ಬರುವಾಗೆಲ್ಲ ಆತನ ಜೀವಿತ ಚರಿತೆಯಲ್ಲಿ ವ್ಯತ್ಯಾಸಗಳು ಬಂದು ಬಿಡುತ್ತವೆ. ಇತಿಹಾಸ ಪುರುಷನಾದ ರಾಮನನ್ನು ತುಲಸೀದಾಸನು ಮನಸ್ಸಿಗೆ ಹತ್ತಿಸಿಕೊಳ್ಳಲಿಲ್ಲ. ಇತಿಹಾಸ ಪರೀಕ್ಷೆಯ ದೃಷ್ಟಿಕೋಣದಿಂದ ಆತನ ರಾಮಾಯಣವನ್ನು ಪರೀಕ್ಷಿಸಿದ್ದರೆ ಅದರ ಆ ರಾಮಾಯಣವನ್ನು ಹರಿದ ಕಾಗದದ ಚೂರುಗಳ ರಾಶಿಗೆ ಸೇರಿಬಿಡಬಹುದು. ಆಧ್ಯಾತ್ಮಿಕ ಅನುಭವಗಳ ವಿಷಯಗಳಲ್ಲಿ ತೂಸಿದ ಪಳ್ಳ ನನ್ನ ಮತ ಲೇಶವ್ಯ—ಆತನ ಪುಸ್ತಕದಂತಹ ಪುಸ್ತಕವು ಮತ್ತೊಂದಿಲ್ಲ. ನಾನು ಹಾಗೆ ಹೇಳಿದರೂ, ತುಲಸೀದಾಸಕೃತ ರಾಮಾಯಣಗಳೆಂದು ಎಷ್ಟೆಷ್ಟೋ ಪ್ರತಿಗಳು ಪ್ರಕಟವಾಗಿವೆಯಲ್ಲ, ಅವುಗಳಲ್ಲಿರುವ ಮಾತುಗಳ ಪದವೂ ಸತ್ಯವೆಂದು ನಾನು ಪ್ರಮಾಣ ಮಾಡ ಹೋಗುವುದಿಲ್ಲ. ನನ್ನನ್ನು ಮೋಹಿತನನ್ನಾಗಿ ಮಾಡಿರುವುದು ಆ ರಾಮಾಯಣದಲ್ಲಿ ಹರಿಯುತ್ತಿರುವ ಅಂತರಾರ್ಥದ ಪ್ರವಾಹ. ಶೂದ್ರರು ವೇದಗಳನ್ನು ಓದಬಾರದೆಂದು ನಿಷೇಧಿಸುವುದಕ್ಕೆ ನಾನು ಒಪ್ಪಲಾರೆ. ವಾಸ್ತವವಾಗಿ, ನನ್ನ ಅಭಿಪ್ರಾಯದನುಸಾರ, ಈ ಕಾಲದಲ್ಲಿ, ದಾಸರಾಗಿರುವ ನಾವೆಲ್ಲರೂ ಅಧಿಕವಾಗಿ ಶೂದ್ರರೇ. ಜ್ಞಾನವೆಂಬುದು ಅಸಾಧಾರಣರಾಗಿರುವವರ ಹಕ್ಕು, ಅವರ ಹಕ್ಕು ಎನ್ನುವ ಹಾಗಿಲ್ಲ.

ಜನರು ವಿಸ್ತೃತವಾದ ಅಥವ ಸಂಕ್ಷಿಪ್ತವಾದ ಸತ್ಯಾಂಶಗಳನ್ನು ಅನುಷ್ಠಾನಕ್ಕೆ ತಂದುಕೊಳ್ಳಬೇಕಾದರೆ ಅವರಿಗೆ ಮೊದಲು ಶಿಕ್ಷೆಯಾಗಿಲ್ಲದಿದ್ದಲ್ಲಿ ಅಸಾಧ್ಯವೆಂಬುದನ್ನು ನಾನು ಬಲ್ಲೆ. ಯಾಕೆಂದರೆ, ಮೊಟ್ಟಮೊದಲಿನ ಗಣಿತ ಸೂತ್ರಗಳನ್ನೆ ತಿಳಿಯದವನು ರೇಖಾಗಣಿತ ಬೀಜಗಣಿತಗಳನ್ನು ಹೇಗೆ ತಿಳಿದುಕೊಳ್ಳಲಾರನೊ ಹಾಗೆಯೆ ಪ್ರಥಮ ಶಿಕ್ಷೆಯಾಗದವನಿಗೆ ಆ ಸಂಸ್ಕೃತ ವಾತಾವರಣದಲ್ಲಿ ಉಸಿರಾಡುವುದಕ್ಕೂ ಕಷ್ಟವಾಗುವುದು. ಕೊನೆಗೆ ನನಗೆ ಕೆಲವು ಒಳ್ಳೆಯ ಸಾಂಕೇತಿಕ ನಡವಳಿಗಳಲ್ಲಿ ನಂಬಿಕೆ ಉಂಟು. ಅದೇ ರೀತಿಯಾಗಿ ಗಾಯತ್ರಿ ಮಂತ್ರೋಚ್ಚಾರಣೆಗೂ ಕೆಲವು ಸಾಂಕೇತಿಕ ಬಹಿರಂಗದ ಗುಣಗಳುಂಟು. ಆ ಗಳವು ಸಾಂಕೇತಿಕಗಳಲ್ಲಿ ಇದು ಒಂದು: ಆ ಮಂತ್ರಗಳನ್ನು ಕೆಲವು ನಿರ್ದಿಷ್ಟ ಕಾಲಗಳಲ್ಲಿ, ಅದರಲ್ಲಿ ನಿಯಮಿತ ಮಾರ್ಗಗಳಲ್ಲಿ ಕೆಲವು ನಿತ್ಯವಿಧಿಗಳನ್ನು ಮಾಡಿದ ನಂತರ ಪಠಿಸಬೇಕು. ನಾನು ಈ ರೂಢಿಬದ್ಧವಾದ ಸಾಂಕೇತಿಕ ವಿಚಾರಗಳಲ್ಲಿ ನಂಬಿಕೆಯನ್ನಿಟ್ಟಿರುವುದರಿಂದಲೂ, ನಾನು ಆ ಪದ್ಧತಿಗಳಿಗನುಸಾರವಾಗಿ ನಡೆಸುಕೊಳ್ಳಲು ಅನುಕೂಲ್ಯಗಳು ಉಂಟಾಗದಿರುವ ಕಾರಣಗಳಿಂದಲೂ ಎಷ್ಟೋ ವರ್ಷಗಳಿಂದಲೂ ನಾನು ಈಚೀಚಿನ ಸಿದ್ಧಪುರುಷರನ್ನು ಅನುಕರಿಸುವುದೇ ಹೆಚ್ಚು. ಅದ ಕಾರಣ ನಾನು ಭಾಗವತದ 'ದ್ವಾದಶಮಂತ್ರ'ದಿಂದಲೇ ತೃಪ್ತಿಹೊಂದಿದ್ದೇನೆ. ಕೆಲವು ಸಂದರ್ಭಗಳಲ್ಲಿ ತುಲಸೀದಾಸರ ಇನ್ನೂ ಸುಲಭವಾದ ಸೂತ್ರಗಳನ್ನೆ ಅನುಷ್ಠಾನಕ್ಕೆ ತರುತ್ತಿದ್ದೇನೆ. ಭಗವದ್ಗೀತೆ ಮತ್ತು ಕೆಲವು ಗ್ರಂಥಗಳನ್ನು ಅನುಸರಿಸುತ್ತಿದ್ದೇನೆ ಮತ್ತೆ ಕೆಲವು ಸಂದರ್ಭಗಳಲ್ಲಿ ಪ್ರಾಕೃತ ಭಾಷೆಯಲ್ಲಿರುವ ಕೆಲವು ಭಜನೆಗಳಿಂದಲೇ ತೃಪ್ತಿಪಡೆದಿದ್ದೇನೆ. ಇವುಗಳೇ ನನ್ನ ನಿತ್ಯ ಪಠನ ಮಂತ್ರಗಳು, ನನ್ನ ಗಾಯತ್ರಿ—ನನ್ನ ಅಧ್ಯಾತ್ಮಿಕ ಆಹಾರ. ಅವುಗಳು ನನಗೆ ದಿನ ದಿನವೂ ಅತ್ಯವಶ್ಯಕವಾಗಿ ಬೇಕಾಗಿರುವ ಮನಶ್ಶಾಂತಿಯನ್ನೂ, ದುಃಖೋಪಶಮನವನ್ನೂ ಕೊಡುತ್ತವೆ.

ಗಾಂಧಿಜಿಗೆ ಔತಣ ಮಾಡಿದಾಕೆಯನ್ನು ಮನೆಯಿಂದ ಹೊರಡಿಸಲು ದಾವ.

ಗಾಂಧಿಜಿಯವರು ಲಂಡನ್ನಿನಿಂದ ಪ್ಯಾರಿಸಿಗೆ ಬಂದ ಕೂಡಲೇ ಅವರಿಗಾಗಿ ಭಾರತೀಯ ವಿದ್ಯಾರ್ಥಿಗಳೂ, ವರ್ತಕರೂ 'ಟಿ' ಪಾರ್ಟಿಯನ್ನು 'ಗ್ರ್ಯಾಂಟ್ ಹೋಟೇಲ್ ಟರ್ಮಿನಸ್, ಸೇಂಟ್ ಲಾಜ್ರೆ' ಎಂಬಲ್ಲಿ ಏರ್ಪಡಿಸಿದರು. ಅನಂತರ ಸೀನ್ ನದಿಯ ದಕ್ಷಿಣ ದಡದಲ್ಲಿದ್ದ ಒಂದು ಭಾಷಣ ಮಂದಿರದಲ್ಲಿ ಒಂದು ಭಾಷಣ ಮಾಡಿದರು.

ಅದು ಮುಗಿದ ನಂತರ ಬಹುಮಂದಿ ಉತ್ಸಾಹಿಗಳು ಗಾಂಧಿಜಿಯವರನ್ನು, ಅವರು ಗ್ಯಾರ ಮಾಂಟಾ... ನ್ಸ್ ಎಂಬ ಸ್ಥಳಕ್ಕೆ ಸಮೀಪವಾಗಿದ್ದ ಒಂದು ಮನೆ... ಒಬ್ಬಳು ಸ್ವ್ಯಾರೀಸಿನಲ್ಲಿದ್ದ ಭಾರತೀಯ ತರುಣಾ... ಹದಲ್ಲಿ—ಇಳಿದುಕೊಂಡಿದ್ದ ಸ್ಥಳಕ್ಕೂ ಹಿಂಬಾ...

ಆ ಉತ್ಸಾಹಶಾಲಿಗಳು ಅಷ್ಟಕ್ಕೆ ಬಿ... ಜಿಯವರನ್ನು ಮತ್ತೊಂದು ಭಾಷಣ ಮ... ದರು. ಅವರ ಭಾಷಣವು ಬಹಳ ಚಿ... ರ ಉತ್ಸಾಹವು ಉಕ್ಕಿ ಹರಿದು ಕೊ... ಇದರಿಂದ ಮನೆಯಲ್ಲಿ ವಾಸಮಾಡುತ್ತಿ... ಜಿಯನ್ನು ಇಳಿಸಿಕೊಂಡಿದ್ದ ಆಕೆ... ಗಂಟೆ ಸಮಯದಲ್ಲಿ ಈ ರೀತಿ ಕೆ... ರಿಯಾದುದ್ದಲ್ಲ. ನಿಮ್ಮ ಭಾಗ... ಬರುತ್ತಿದೆ' ಎಂದರು.

ರ. ರು.
ಕೊಂತ
'ಇಷ್ಟಾದರೂ ಆ ಉತ್ಕೃಷ್ಟವಳ್ಳನ್ನು ಕೊಂಚವೂ ಕದಿವೆ ಮತ್ತು 1ಕ್ಕೆ ರೂ. 32—8—0
ತರದು ಪೋಲೀಸಿನವನ್ನು ಕ... ಲ ಕರಿವೆಯಾಗಲೇ ಇಲ್ಲ... ಸಿಕ್ಕಿದು ಇಷ್ಟೇ ಉತ್ತರ... ಕಾಲಿನಿಂದಾ ವಿಶ್ ವಾಪ ಮಾಡುವ... ಕೊಲಿಸುವಂತೆ
ಅವರ (ನಿದ್ರ್ಯ... ಹಲ್ ಪ್ಲೇಟ್" ಸರವಾಗಿ ಒಂದ... ಲ್ಯಾಂಡ್ ಲೆಗ್ ಗಳು—ಮನೆ... 1ಕ್ಕೆ ಮತ್ತು ಗಾ... ರೂ. ...
ವೆ—ಯಂ. ಎಸ್. ಶಿವಶ ಪ್ರ...
ವರ್ತನ...
ಸೋಶಿಯೆಂ ಹುಟ್ಟ! ಹಾಕ್ಷ...
ಕಾಲೇಜಿ ರಾತ ಹೊರ್‍ಯ, ...
32—45

ಕೊಡಗು.

ಸನ್ ೧೯೩೨ನೇ ಇಸವಿ

೨೯ ಏಪ್ರಿಲ್ ತಾ. ೨೯ನೇ ಶುಕ್ರವಾರ.

ಪ್ರೆಸ್ ಆರ್ಡಿನೇನ್ಸ್

ಜಾರಿಯಲ್ಲಿರುವದರಿಂದ

ನಾವು

ಅಗ್ರಲೇಖನ

ವನ್ನು

ಪ್ರಕಟಿಸುವುದಿಲ್ಲ.

ನಿಜವಾದ ಪರಿಸ್ಥಿತಿ.

(ಒಬ್ಬ ಇಂಗ್ಲಿಷ್ ಮನುಷ್ಯನು ಬರೆದದ್ದು.)

...ದ ಸ್ಥಿತಿಯು ಬ್ರಿಟಿಷ್ ಜನರಿಗೆ ಬ್ರಿಟನಿನ ಸಾಧಾರಣ ಜನರಿಗೆ ... ಪರಿಹಾರಗಳು ಆಗಿವೆಯೆಂತ ... ಕುರಿತು ಅಭಿಪ್ರಾಯ ಕೂ... ಕಮಿಟಿಗಳು ಹಿಂದೂ... ಲು ಗೊತ್ತಿದೆ, ಗಾಂ... ಧುಂಡು ಮೇಜಿನ ... ಮೂನು ಭಂಗವು ... ನಾದ ಕಾರ... ನಡೆಸುತ್ತಿ... ಾಗಿದ ಅಭ... ಾಗುತ್ತದೆ ...

ಹಿಂದೂಸ್ಥಾನದಲ್ಲಿ ವ್ಯಾಪಾರ, ಕೈಗಾರಿಕೆ, ಕೃಷಿ ಕೆಲಸದಲ್ಲಿ, ಸ್ಕೂಲುಗಳಲ್ಲಿ ಇರುವ ನಾವೆಲ್ಲರೂ ಕಾಂಗ್ರೆಸ್ ಎಂದರೆ ಸ್ವರಾಜ್ಯ ಬೇಕೆಂತ ಕೇಳುವವರಲ್ಲದೂ ಎಂತ ಅಭಿಪ್ರಾಯ ಪಡುತ್ತೇವೆ. ಸ್ವರಾಜ್ಯ, ಪೂರ್ಣ ಸ್ವರಾಜ್ಯ, ಎಕ್ಸ್ಟ್ರೀಮಿಸ್ಟ್, ಮೋಡರೇಟ್ ಎಂಬ ವ್ಯತ್ಯಾಸಗಳು ಸಾಧಾರಣದ ಇಂಗ್ಲಿಷ್ ಮನುಷ್ಯನಿಗೆ ತಿಳಿಯುವುದಿಲ್ಲ. ಗತಿಸಿದ ಸಿ. ಆರ್. ದಾಸರಿಗೂ, ವಿಠಲ್‌ಭಾಯಿ ಪಟೇಲರಿಗೂ ಅಭಿಪ್ರಾಯ ಭೇದವಿದೆಯೋ ಎಂತ ನಮಗೇನೂ ಗೊತ್ತಿಲ್ಲ. ಸ್ವರಾಜ್ಯ ಬೇಕೆನ್ನುವವರೆಲ್ಲರೂ 'ಕಾಂಗ್ರೆಸ್ ವಾಲಾ' ರೇ ಮತ್ತು ಅವರೆಲ್ಲರೂ ಮುಖ್ಯವಾಗಿ ಖದ್ದರ್ ಧರಿಸುವವರೆಲ್ಲರೂ ರಾಜದ್ರೋಹಿಗಳೇ.

ನನ್ನ ವ್ಯಾಪಾರದ ಮೇಲೆ ಕಾಂಗ್ರೆಸ್ ಬಹಿಷ್ಕಾರದ ಪರಿಣಾಮ ಪ್ರಬಲವಾಗಿ ತಟ್ಟಿದ್ದರಿಂದ ತುಂಬಾ ವಿದ್ಯಾವಂತ ಗಂಡಸರು, ಹೆಂಗಸರು ಬಾಸೂನ... ಧರಿಸುತ್ತಿದ್ದರೂ, ಆರ್ಡಿನೇನ್ಸ್‌ಗಳು ಜಾರಿಯಲ್ಲಿದ್ದರೂ ಕಾಂಗ್ರೆಸಿನವರು ದೇಶದ ಜನರ ಬಹಳ ಅಲ್ಪ ಭಾಗವೆಂತಲೂ, ಅದನ್ನು ಅಲಕ್ಷಿಸಬಹುದೆಂತಲೂ ಇಂಗ್ಲಿಷ್ ಮನುಷ್ಯನು ಯೋಚಿಸುತ್ತಾನೆ. ಈ ಅಭಿಪ್ರಾಯಕ್ಕೆ ಆಧಾರವಿದೆಯೆಂತಿಲ್ಲ. ಒಂದು ಕಾಲದಲ್ಲಿ ಕಾಂಗ್ರೆಸಿಗೆ ಹೆಚ್ಚಿನ ಬೆಂಬಲವಿತ್ತಿಲ್ಲ. ಈಗಲೂ ಇಲ್ಲವೆಂತ ಭಾವಿಸುವುದಕ್ಕೆ, ವಿಚಾರಿಸಿ ನೋಡಿದರೆ ಹಿಂದೀಯರೇ ಮಾಲೀಕರಾಗಿರುವ ಪತ್ರಿಕೆಗಳೆಲ್ಲವೂ ಅಲ್ಪ ಸ್ವಲ್ಪ ಜನರು ಬಿಟ್ಟರೆ ಹೆಚ್ಚಿನ ಭಾಷಣಕಾರರೆಲ್ಲವೂ ಕಾಂಗ್ರೆಸಿಗೆ ಒತ್ತಾಸೆಯಾಗಿದ್ದಾರೆ, ಕಾಪ್ಟ್ರೇಯ ಬಾವುಟವನ್ನು ಅಲ್ಲಲ್ಲಿ ಹಾರಿಸಲು ಪ್ರಯತ್ನಿಸುತ್ತಿದ್ದಾರೆ, ಕಾಂಗ್ರೆಸಿನವರನ್ನು ದಸ್ತಗಿರಿ ಮಾಡಿದಾಗ ಅಜು ಬಾಜು ನಿಂತಿದ್ದ ಜನರು ಕಾಂಗ್ರೆಸ್‌ನ ದಸ್ತಗಿರಿಯಾದ ಕೆಲಸಗಾರರನ್ನು ನೋಡಿ ನಗುವುದಿಲ್ಲ, ದಸ್ತಗಿರಿ ಮಾಡುವ ಪೋಲೀಸಿನವನನ್ನು ನೋಡಿ ಹೀಯಾಳಿಸುತ್ತಾರೆಂತಲೂ ತಿಳಿದು ಬರುತ್ತದೆ, ದಬ್ಬಾಳಿಕೆ ಪ್ರಾರಂಭಿಸುವ ಮೊದಲು ಸರ್ಕಾರಕ್ಕೆ ಬೆಂಬಲವಾಗಿ ನೇರದ ಹೆಚ್ಚಿನ ಆಜಭರ, ಜನರ ಬೆಂಬಲವಿದೆಯೆಂತ ಸರ್ಕಾರವು ಅಂದುಕೊಳ್ಳುತ್ತಿತ್ತು. ಕ್ಷಕಿಂದ ದೇಶದ ಈ ವರ್ತನೆಗಳೆಲ್ಲಾ ವಿಚಾರಾರ್ಹವಾಗಿವೆ.

ಸ್ವಲ್ಪ ಆಳವಾಗಿ ವಿಚಾರಿಸಿದರೆ, ಸಮಾಜದಲ್ಲಿ ಸರಿಸಮಾನತ್ವದಿಂದ ಮಿಳಿತವಾದರೆ ತುಂಬಾ ಅನುಕೂಲ ಮತ್ತು ಗೌರವವಿರುವ ಕುಟುಂಬದವರೂ ಸಹ ತಮ್ಮ ನೆಂಟರಿಷ್ಟರು ಜೈಲಿಗೆ ಹೋಗಿದ್ದಾರೆಂತ ಹೆಮ್ಮೆ ಪಡುತ್ತಾರೆಂತಲೂ; 1914 ರಲ್ಲಿ ನಮ್ಮ ವಿದ್ಯಾರ್ಥಿಗಳು ಯುದ್ಧದಲ್ಲಿ ತೋರಿಸಿದಷ್ಟೇ ಕುತೂಹಲ ಹಿಂದೀ ಯುವಕರೆಲ್ಲರೂ ಕಾಂಗ್ರೆಸ್ ಕೆಲಸದಲ್ಲಿ ಉತ್ಸಾಹವುಳ್ಳವರಾಗಿದ್ದಾರೆಂತಲೂ ತಿಳಿದು ಬರುತ್ತದೆ, ಹಿಂದೀಯರೊಂದಿಗೆ ಹೆಚ್ಚಿನ ಬಳಕೆ ಇದ್ದರೆ ಆರ್ಡಿನೇನ್ಸ್‌ಗಳಿಂದ ಹಿಂದೀ ಜನರ ಮನಸ್ಸಿನಲ್ಲಿ ಯಾವ ಬದಲಾವಣೆಯೂ ಆಗಿದೆಯೆಂತ ಗೊತ್ತಾಗುತ್ತದೆ, ಆರ್ಡಿನೇನ್ಸ್‌ಗಳೂ ಮತ್ತು ಅವುಗಳನ್ನು ಜಾರಿಮಾಡುವ ಪೋಲೀಸರ ವರ್ತನೆಯೂ ಹಿಂದೀಯರೊಳಗೆ ಒಗ್ಗಟ್ಟಾಗಲು ತುಂಬಾ ಸಹಾಯವಾಗಿವೆ. ಬ್ರಿಟಿಷ್ ಆಳ್ವಿಕೆಯಿಂದ ಪ್ರಯೋಜನ ಹೊಂದುವ ಮತ್ತು ಈ ವರೆಗೂ ರಾಜಕೀಯ ವಿಷಯಗಳಲ್ಲಿ ಕೈಹಾಕದಿದ್ದ ವ್ಯಾಪಾರಿಗಳೂ ಸಹ ಕಾಂಗ್ರೆಸಿಗೆ ಒತ್ತಾಸೆಕೊಡುತ್ತಿದ್ದಾರೆ.

ಆದರೂ ಇದೆಲ್ಲಾ ಬ್ರಿಟಿಷ್ ಜನರಿಗೆ ತಿಳಿದಿಲ್ಲ. ಕಾಂಗ್ರೆಸ್ ಚಳವಳವು ಜನರಿಗೆ ಬೇಕಾಗಿಲ್ಲವೆಂತಲೂ ಅದ್ದರಿಂದಲೂ ಕಾಂಗ್ರೆಸನ್ನು ಅಡಗಿಸಬಹುದೆಂತಲೂ ಬ್ರಿಟಿಷರು ನಂಬಿದ್ದಾರೆ. ಜನರ ಮನಸ್ಸನ್ನು ಬೇರೆ ಕಡೆಗೆ ತಿರುಗಿಸುವ ಆಶೆಯಿಂದ ರಾಜಕೀಯ ಸುಧಾರಣೆಯ ಕಾರ್ಯವನ್ನು ಮುಂದುವರಿಸುತ್ತಲೇ ಇದ್ದೇವೆ. ದೊಡ್ಡ ಉದ್ಯೋಗಸ್ಥರು ಅಗಾಂಧವಾಗ್ಯೆ ತಿಳಿಸುತ್ತಿದ್ದಾರೆ. ಆದರೆ ಇಂಥಾ ಮಾತುಗಳಿಂದ ಜನಗಳಿಗೆ ಏನೂ ತೃಪ್ತಿಯಾಗುವುದಿಲ್ಲ.

ಹಿಂದೀಯರ ದೃಷ್ಟಿಯಿಂದ ಬ್ರಿಟಿಷರು ಹಿಂದೀ ವಿಷಯಗಳನ್ನು ನೋಡದೆ ಇರಲು ಕಾರಣವೇನೆಂದರೆ-ಹಿಂದೀಯರಿಗೂ ಬ್ರಿಟಿಷರಿಗೂ ಸಮಾಜದಲ್ಲಿ ಸಂಪರ್ಕವಾಗದಿರುವುದೇ. ಹಿಂದೀ ಸಹತ್ರ ಸದಾರ ಮುಂತಾದ ಅನಾಚಾರಗಳನ್ನು ನೋಡುತ್ತಾರೆ. ಅದರಿಂದ ... ಹಿಂದೀ ... ಅಸಹ್ಯಪಡುತ್ತಾರೆ, ರಾಜಭಕ್ತಿಯಿಂದ ಇರುವ ಹಿಂದೀಯರೊಂದಿಗೆ ಸ್ನೇಹ ಬೆಳೆಸಿದರೇನೇ ಇಂಗ್ಲಿಷ್ ಮನುಷ್ಯನು ವಿಸೋಲೊಂದು ಪದವನ್ನು ತರುತ್ತಾನೆ, ಅದಿಂದಲ್ಲ ಕಾಂಗ್ರೆಸ್ ಅಭಿಪ್ರಾಯದ ಹಿಂದೀಯನ ಸ್ನೇಹ ಮಾಡಿದರಂತೂ ಅವನ 'ನೇಟಿವ್ ಪಕ್ಷದ' ವನೆನ್ನುತ್ತಾರೆ, ಅದ್ದರಿಂದ ಹಿಂದೀಯನ ಸ್ನೇಹವನ್ನು ಗುಟ್ಟಾಗಿ ಇಟ್ಟುಕೊಳ್ಳಬೇಕಾಗುತ್ತದೆ, ಇಲ್ಲವೇ ತನ್ನ ಜನರ ನಿಷ್ಠೂರಕ್ಕೆ ಗುರಿಯಾಗಬೇಕಾಗುತ್ತದೆ. ನಾನು ಹಿಂದೂಸ್ಥಾನಕ್ಕೆ ಬಂದೊಡನೆ ಒಬ್ಬ ಹಿಂದೀಯನು ನನ್ನ ಜಿನ್ನು ತಟ್ಟಿ ಮಾತಾಡಿದನು. ಅದನ್ನು ನೋಡಿದ ನನ್ನ ದೊಡ್ಡ ಸಾಹೇಬನು ನನ್ನನ್ನು ಕರೆಸಿ "ಈ ರೀತಿ ಹಿಂದೀಯರಿಗೆ ಸಲಿಗೆ ಕೊಡಬಾರದು, ಬ್ರಿಟಿಷರಿಗೆ ಗೌರವವನ್ನು ಇಟ್ಟುಕೊಳ್ಳಬೇಕು," ಎಂತ ಪಗ್ಗರೆ ಬುದ್ಧಿವಾದ ಹೇಳಿದರು, ಇದಾಗಿ 10 ವರ್ಷಗಳಾದವು. ಆದರೂ ಈಗಲೂ ಇದೇ ಅಭಿಪ್ರಾಯವಿದೆ.

ಬ್ರಿಟಿಷರ ಗೌರವಕ್ಕೆ ಹಾನಿ ಬರಬಾರದೆಂಬ ಕಾರಣದಿಂದಲೇ ಹಿಂದೀಯರೊಂದಿಗೆ ಬ್ರಿಟಿಷರು ಮಿಳಿತವಾಗುವುದಿಲ್ಲ. ಗಾಂಧಿಯವರು ಲಾರ್ಡ್ ಇರ್ವಿನರನ್ನು ತನ್ನ ಸ್ನೇಹಿತ ಎಂದು ಹಿಸಲ್ಪಟ್ಟು ಕಂಡದ್ದರಿಂದ ಲಾರ್ಡ್ ಇರ್ವಿನರಿಗೆ ಗಾಂಧಿಯವರು ಅಗೌರವ ತೋರಿಸಿದರು, ಎಂಬ ಅಭಿಪ್ರಾಯದಲ್ಲಿರುವ ವಿಶೇಷ ಮನೋಭಾವವೇ ಇದಕ್ಕೆ ಕಾರಣ.

ಇದರಿಂದ ಅದ ಫಲಿತಾಂಶವೇನೆಂದರೆ ಕುಚ್ಚೇಕಾರತನ ಎಣಿಸುವಲ್ಲಿ ತುಚ್ಛೀಕಾರವಿದೆಂದು ತ ಯೋಚಿಸುವುದು ದೇಶಭಕ್ತಿ ತೋರಿಸಿದರೆ, ವಿರೋಧ ತೋರಿಸಿದರೆ, ವಿರೋಧ ತೋರಿಸಿದರೆನ್ನುವುದು. ಸಾಧಾರಣ ಪುಂಡಾಟದ ದಂಗೆ ಎದ್ದರೆನ್ನುವುದು, ಇವೇ ಮುಂತಾದ ಮನೋಭಾವವೇ ಫಲಿತಾಂಶ, ಇದರಿಂದ ಅನ್ಯೋನ್ಯ ದ್ವೇಷ ಹೆಚ್ಚುತ್ತಲೇ ಇದೆ.

ಈಗ ಹತ್ತು ವರ್ಷಗಳಿಂದ ನಿಜವಾದ ಸ್ನೇಹ ಬೆಳೆಯಲು ಎಷ್ಟೋ ಅವಕಾಶಗಳು ದೊರೆತರೂ ಕಳಕೊಂಡೆವು. ನಮ್ಮ ಯುವಕರು ಹಿಂದೀ ಯುವಕರನ್ನು ಸೇರಿಸಿಕೊಂಡು ಸ್ವಾತಂತ್ರ್ಯವಾಗಿ ಚರ್ಚೆ ಮಾಡುವ ಸಂಸ್ಥೆಗಳನ್ನು ಏರ್ಪಡಿಸಿಕೊಳ್ಳಬಹುದಿತ್ತು, ಎಲ್ಲಾ ಇಂಗ್ಲಿಷರೂ ದೇಶೀ ಭಾಷೆಯೊಂದನ್ನಾದರೂ ಕಲಿತು, ಹಿಂದೀ ಸಂಸ್ಕೃತಿ ಏನೆಂದು ತಿಳಿಯಲು ಪ್ರಯತ್ನಿಸಬಹುದಿತ್ತು, ನಮ್ಮ ಹೆಂಗಸರು ಹಿಂದೀ ಹೆಂಗಸರ ಸಂಗಡ ಬೆರೆತು ಅವರು ಮಕ್ಕಳ ಪೋಷಣೆ ಮುಂತಾದ್ದರಲ್ಲಿ ಸಹಾಯಕರಾಗಬಹುದಿತ್ತು. ಹೀಗೆ ಮಾಡಿದ್ದರೆ ಜಗಳ ಒಂದಾಗ ರಾಜಿಮಾಡುವ ಸ್ನೇಹಿತರೂ ಎರಡು ಪಂಗಡಗಳಲ್ಲಿ ಇರುತ್ತಿದ್ದರು.

ಈಗಲಾದರೂ ಹಿಂದೂಸ್ಥಾನವನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ಸಮಾನಸ್ಥಭಾಗಿಯಾಗಿ ಇಟ್ಟುಕೊಳ್ಳಲು ಪ್ರಯತ್ನಿಸಬಹುದಾಗಲಿಲ್ಲವೆಂತ ನನ್ನ ಅಭಿಪ್ರಾಯ. ಹೀಗೆ ಮಾಡುತ್ತೇವೋ, ಅಥವಾ ನಮ್ಮನ್ನು ದ್ವೇಷದಿಂದ ಬಿಟ್ಟು ಹೋಗುವಂತೆ ಮಾಡುತ್ತೇವೋ ನೋಡಬೇಕಷ್ಟೆ.

ಕಾಂಗ್ರೆಸಿನ ವಿಷಯದಲ್ಲಿ ಬ್ರಿಟಿಷ್ ಜನರಿಗೆ ಇರುವ ಅಭಿಪ್ರಾಯವು ಅಪ್ರಮಾಣಿಕತನದಿಂದ ಹುಟ್ಟಿದ್ದಲ್ಲ. ಸ್ವಲ್ಪ ಪಾಲರೂ ಊಹನಾಶಕ್ತಿ ಇಲ್ಲದ್ದರಿಂದ ಈ ಅಭಿಪ್ರಾಯವು ಹುಟ್ಟಿರುವುದಾಗಿದೆ. ಸ್ವಾತಂತ್ರ್ಯ ಪ್ರೇಮಿಗಳಾದ ನಮ್ಮ ಜನಾಂಗದ ಆಕಾಂಕ್ಷೆಯನ್ನು ಬಿಟ್ಟು ಸ್ವರಾಜ್ಯ ಬೇಕೆಂತ ಹಿಂದೀಯರು ಅಪೇಕ್ಷಿಸುವರೆಂತ ನಾವೂ ಊಹಿಸಲಾರೆವು. ಹಾಗೆಯೇ ಹಿಂದೂಸ್ಥಾನದ ಬಡತನವನ್ನು ಊಹಿಸಿ ನೋಡುವುದಿಲ್ಲ. ಹಿಂದೀಯರಿಗೆ ಕಡಿಮೆ ಸಂಬಳ ಸಿಕ್ಕುತ್ತದೆಯೆಂತಲೂ, ಅನೇಕರಿಗೆ ಉದ್ಯೋಗವಿಲ್ಲವೆಂತಲೂ ಗೊತ್ತಿದೆ. ಆದರೆ ಕ್ಷಾಮಪೀಡಿತರಾದ ಕೋಟ್ಯಾಂತರ ಜನರದ್ದಾಂಬ ಮಾತು ನಿಜವಲ್ಲವೆಂತ ಯೋಚಿಸುತ್ತೇವೆ. ಬರೀ ಉತ್ಪ್ರೇಕ್ಷೆ ಎಂತ ಭಾವಿಸುತ್ತೇವೆ. ಹಿಂದೂ ಅವಿಭಕ್ತ ಕುಟುಂಬಗಳಲ್ಲಿ ಕುಟುಂಬದ ಎಲ್ಲರನ್ನೂ ಒಬ್ಬನು ಸಾಕುತ್ತಾನೆಂತ ಭಾವಿಸುತ್ತೇವೆ.

... ಯೋ ಪೋಲೀಸರು ಅವಶ್ಯವಿಲ್ಲದಷ್ಟು ಜುಲುಮೆ ನಡೆಸುತ್ತಾರೆಂತಾಗಲೀ, ಪಕ್ಷಪಾತ ಮಾಡುತ್ತಾರೆಂತಾಗಲೀ ಊಹಿಸುವುದಿಲ್ಲ—ನಿರಪರಾಧಿ ನಿರಾಯುಧರಾದ ಜನರನ್ನು ಪೋಲೀಸರು ಏನೂ ಕಾರಣವಿಲ್ಲದೆ ಹೊಡೆಯುತ್ತಾರೆಂಬುವುದನ್ನೂ ನಂಬುವುದಿಲ್ಲ, ... ಧರಿಸಿದ ತಪ್ಪಿಗೆ ಹೊಡೆದರೂ ಸಹ ನಿರಪರಾಧಿಗಳನ್ನು ಹೊಡೆದಾರೆಂಬ ಸಂಶಯ ಸಹ ಹುಟ್ಟುವುದಿಲ್ಲ. ... ನವರಿಗೆ ಹೊಡೆದದ್ದಕ್ಕೆ ಸ್ಟೇಟ್ ಸೆಕ್ರೆಟರಿಯವರು ಮನ್ನಣೆ ಕೇಳಿಕೊಂಡರು; ಪೋಲೀಸರು ಮನುಷ್ಯರಷ್ಟೆ—ಒಂದು ತಪ್ಪಾಗಬಹುದು, ಅದಕ್ಕೆ ಎಷ್ಟು ಬೇಗನೆ ಮನ್ನಣೆ ಕೇಳಿದರು ನೋಡಿ ಎಂತ ಹೇಳುತ್ತೇವೆ. ಆದರೆ ಮನ್ನಣೆ ಕೇಳಿಕೊಳ್ಳದ ನೂರಾರು ಇತರ ಜನರಿಗೆ ಪೆಟ್ಟು ಬಿದ್ದು ಇದೆಯೆಂತ ಮಾತ್ರ ಊಹಿಸುವುದಿಲ್ಲ.

ಊಹನಾಶಕ್ತಿ ಇಲ್ಲದ್ದರಿಂದಲೇ ಹಿಂದೂಸ್ಥಾನದ ನಿಜವಾದ ಸ್ಥಿತಿ ಬ್ರಿಟಿಷರಿಗೆ ತಿಳಿಯದೆ ಇರಲು ಕಾರಣವೆಂತ ನಾನು ಹೇಳಿದ್ದಕ್ಕೆ ಖದ್ದರ್ ಧಾರಣೆಯ ವಿಷಯ ನಮಗಿರುವ ಅಭಿಪ್ರಾಯವು ಉದಾಹರಣೆಯಾಗಿದೆ. ಖದ್ದರ್ ಧರಿಸಿದವರು ಏಸ್ಕ್ರಿಯಲ್ಲಿ ಹೋಗುವುದು ನೋಡುವಾಗ ನಿಟ್ಟು ಬರುತ್ತದೆ. ನಮ್ಮ ನೇಕಾರರು ಖದ್ದರ್ ಧರಿಸಲು ಬಿಡುವುದಿಲ್ಲ. ಅದರೂ ಬ್ರಿಟನ್ನಿನಲ್ಲಿ ಪ್ರತಿಯೊಬ್ಬನೂ ಬ್ರಿಟಿಷ್ ಸಾಮಾನುಗಳನ್ನೇ ಕೊಂಡುಕೊಳ್ಳಬೇಕು, ಪರದೇಶೀ ವಸ್ತುಗಳನ್ನು ಕೊಂಡುಕೊಳ್ಳಬಾರದೆಂತ ಚಳವಳ ನಡೆಸುತ್ತಿದ್ದೇವೆ. ಖದ್ದರಿನ ಮೇಲೆ ನಮಗಿರುವ ದ್ವೇಷವು ಊಹನಾಶಕ್ತಿ ಇಲ್ಲದ್ದರಿಂದ ಹುಟ್ಟಿದ್ದಲ್ಲವಾದರೆ ಬೇರೆ ಇನ್ನು ಆತಿಶಯ ಕಾರಣವಿರಬೇಕು.

ಇದು ಬಹ ಸಾಧಾರಣವಾದ ... ನೊಬ್ಬ ಉದ್ಯೋಗಸ್ಥರ ವಿಷಯ ಒಂದು ಉದಾಹರಣೆ ಕೊಡುತ್ತೇನೆ, ಗವರ್ನರಿಗಿಂತ ಕಡಿಮೆ ದರ್ಜೆಯಲ್ಲಿದ್ದ ಒಬ್ಬ ಐ. ಸಿ. ಎಸ್. ಆಫೀಸರನೊಬ್ಬರು ತನ್ನ ಜೊತೆ ಹಿಂದೀ ಅಧಿಕಾರಿಯ ವಿಷಯವಾಗಿ ಮಾತಾಡುವಾಗ ಹೇಳಿದ್ದೇನೆಂದರೆ 'ಅವನು ಒಳ್ಳೇ ಕೆಲಸಗಾರ ಅವನಲ್ಲಿ ಪ್ರಮಾಣಿಕತನ ವಗೈರೆ ಎಲ್ಲಾ ಗುಣವಿದೆ ಹೌದು, ಆದರೆ ಏನಿದ್ದರೇನು ಮನೆಗೆ ಹೋದ ಒಡನೆ ಧೋತಿ ಧರಿಸಿಕೊಳ್ಳುತ್ತಾನೆ ನೋಡಿ—ಇದನ್ನು ನನಗೆ ಸಹಿಸಲಾಗುವುದಿಲ್ಲ!' ಇದನ್ನು ಇನ್ನೊಬ್ಬ ಸಿವಿಲಿಯನ್ ಆಫೀಸರಿಗೆ ನಾನು ಹೇಳಿದಾಗ ಇದರಲ್ಲಿ ಅವರಿಗೆ ಆಶ್ಚರ್ಯವೇನೂ ತೋರಲಿಲ್ಲ, ಎಲ್ಲಾ ಸಿವಿಲಿಯನ್ ಆಫೀಸರುಗಳೂ ಹೀಗೆಯೇ ಊಹನಾಶಕ್ತಿ ಇಲ್ಲದವರೆಂತ ನಾನು ಹೇಳುವುದಿಲ್ಲ.

ಧೋತಿ ಕಥೆಯನ್ನು ಯೋಚಿಸಿದಷ್ಟು ಆಶ್ಚರ್ಯವನ್ನುಂಟುಮಾಡುತ್ತದೆ, ಇಂಥಾ ಅಭಿಪ್ರಾಯಗಳುಳ್ಳವರು ತಮ್ಮ ಅಧಿಕಾರವನ್ನು ಚಲಾಯಿಸುವುದರಲ್ಲಿ ದಾರಿ ತಪ್ಪಿದರೆ ಆಶ್ಚರ್ಯವೇನಿದೆ? ಹಿಂದೂಸ್ಥಾನದ ಸ್ಥಿತಿಯೇ ಇಂಗ್ಲೆಂಡಿನಲ್ಲಿದ್ದರೆ ಎಲ್ಲರೂ ಕಾಂಗ್ರೆಸಿನ ಪಕ್ಷಪಾತಿಗಳೆಂತ ಹೇಳಲೂ ಬಹುದು ಸ್ವತಃ ಸಿದ್ಧವಾಗಿದೆ, ಆದರೂ ಅದನ್ನು ಒಪ್ಪಿಕೊಳ್ಳುವುದಿಲ್ಲ.

Reg. No. M. 1550.
If not delivered please return to
"KODAGU" OFFICE MERCARA.

ಕೊಡಗು.

ಸತ್ಯೇನ ಧರ್ಮದಯಾಯಾ ವಿದ್ಯಾ ಶೀಲ ಪ್ರಯುಕ್ತಶಾ ! ಐಕ ಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಮಾಚಿಮಂಡ ಯಂ. ಗಣಪತಿ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೧ | ಮಡಿಕೇರಿ, ಸನ್ ೧೯೩೨ನೇ ಇಸವಿ ಏಪ್ರಿಲ್ ತಾರೀಕು ೨೯ನೇ ಶುಕ್ರವಾರ. | ಸಂಚಿಕೆ ೪೭

Office of the Asst. Commr. & Dt. Magte., Mercara (Coorg). 6th May 1931.

Dear Sir,

I am QUITE PLEASED with the workmanship of the two Coorg weapons (PICHAKATTI & ODIKKATTI)

Yours faithfully,
(Sd) (Rao Bhadur)
K. CHENGAPPA, B. A.
District Magistrate and Assistant Commissioner of Coorg.

JEWELLER
By Appointment to
H. E. The Governor of Madras.



PEECHAKATTI (WITH SILVER FITTINGS)
Prices From Rs 160 & upwards.

"New Bungalow,"
Ammatti, (Coorg).
14th December 1931.

Dear Sir,

I am IMMENSELY PLEASED with the workmanship of the PICHAKATTI you made and sent me some time back.

Yours faithfully,
Sd/ K. P. MUDDAYYA,
Ammatti (Coorg.)

Telegrams: 'PRECIOUS.'

V. Subramaniaier Jeweller,

Telephone: 3145.

CATALOGUE ON ENQUIRY.

52–23

Post Box 423, Triplicane, P. O., MADRAS.



ಕೋವಿಗಳು, ಕತ್ತಿಗಳು, ಬಚೀಗಳು, ತೋಟೆಗಳು, ಕೇಪುಗಳು, ಮದ್ದು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS.
Largest Importers of Firearms and Ammunition
Cheapest priced firm in India.

24–8 210 Abdul Rehman Street BOMBAY

ಜಾಗ ಬೇಕಾದರೆ ಇಗಿನ
ಸ್ಥಳ ಬಾಡಿಗೆಗೆ ಕೊಡಲ್ಪಡು
ವದು.

ಬಾಲಾರ್ಕಮಧು.

ಬಾಲಾರ್ಕಮಧು ಮಕ್ಕಳಿಗೆ ಕೊಡುವುದರಿಂದ ಶಕ್ತಿಯು ಆರೋಗ್ಯವೂ ಹೆಚ್ಚುವುದು. ಇದು ಮಧುರವಾಗಿದೆ. ಶೀಸೆ 1ಕ್ಕೆ 0–12–0 ಟಿ. ಖ. 0–12–0.



ಗೆ. ರು:

ಡಜನ್ 1ಕ್ಕೆ ರೂ. 32–8–0

(Spleen Lever enl.) ಇದರಿಂದಾಗುವ ಗಡ್ಡೆ ರೋಗ—ಪ್ಲೀಹೆ ... ಚಿಕಿತ್ಸೆ "ಸ್ಪ್ಲೀನ್ ಪ್ಲಾಸ್ಟರ್" ಔಷಧಗಳಿವೆ. ... ಸಿದ್ಧ ... 1ಕ್ಕೆ 3–0–0. ... ರೂ. 70—

ಪ. —ಮಾ. ಎಸ್. ಶಿವಪ್ರಸಾದ ...

ಬಾ. ... ಶೆಟ್ಟಿಯ ... ಬೆಂಗಳೂರು ...

... ಸಾಹೇಬಿ ... ಮಂಗಳೂರು ...

32–8

ಭಂಗಾರದ ಉಂಗುರಗಳು.

ಈ ಉಂಗುರಗಳನ್ನು ವಜ್ರದ ಕಲ್ಲುಗಳನ್ನು ಇಟ್ಟು ರೋಲ್ಡ್ ಗೋಲ್ಡ್ ಭಂಗಾರದಿಂದ ಕಟ್ಟಿಡ ಕಟ್ಟಿದೆ. ಇದರ ಬಣ್ಣವು ಕೆಡದಂತೆ ಎಲೆಕ್ಟ್ರಿಕ್ಸ್ ಪವರಿನಿಂದ ಸವರಣ ಭಂಗಾರದ ಬಣ್ಣ ಕೊಟ್ಟಿದೆ. ಇವು ಸಾಚಾ ವಜ್ರದ ಉಂಗುರಗಳಿಗೆ ಸಮಸಮಾನವಾಗಿವೆ. ೧ಕ್ಕೆ ೦–೧೨–೦. ೩ ಉಂಗುರಗಳಿಗೆ ೧ ಟೇಬಲ್ ಟೈಂಪೀಸನ್ನೂ ೬ ಉಂಗುರಗಳಿಗೆ ೧ ಭಂಗಾರದ ಪಾಕೆಟ್ ವಾಚನ್ನೂ ೧೨ ಉಂಗುರಗಳಿಗೆ ಒಂದು ಭಂಗಾರದ ಕೈಯಲ್ಲಿ ಕಟ್ಟುವ ರಿಸ್ಟ್ ವಾಚನ್ನೂ ಇನಾಮಾಗಿ ಕೊಡುವೆವು.

ಪತ್ತ:—ಕೆ. ಎಸ್. ಜೆನ್‌ಸನ್ ಅಂಡ್ ಕೊ.,
12–4 ಪೋ|| ನಂ|| 1246, ಮದರಾಸು.

ಸ್ವದೇಶೀ ಶೀರೆಗಳು.

ಈ ಶೀರೆಗಳನ್ನು ಹೆಸರುವಾಸಿ ಹೊಂದಿದ ದೊಡ್ಡ ಕಂಪೆನಿಯವರಿಂದ ತಯಾರಿಸಿದ್ದು, ೧೮ ಮೊಳ ಉದ್ದವೂ. ೨|| ಮೊಳ ಅಗಲವೂ ಇರುವುದು. ಇವನ್ನು ಗಟ್ಟಿಯಾದ ಸಣ್ಣ ನೂಲಿನಿಂದಲೂ, ರೇಶ್ಮೆಯಿಂದಲೂ ತಯಾರಿಸಿದೆ. ಅಂದವಾದ ಅಂಚಿನ ಸುಂದರವಾದ ಶೀರೆಗಳು ಇರುವದು ಇವು ಯಾವಾಗಲೂ ರೇಶ್ಮೆಯಂತೆ ಇರುವವು. ಎಲ್ಲಾ ಬಣ್ಣಗಳಲ್ಲಿಯೂ ಸಿಕ್ಕುವವು. ಎಲ್ಲಾ ಬಣ್ಣಗಳಲ್ಲಿಯೂ ಸಿಕ್ಕುವವು. ಮತ್ತು ಎಲ್ಲಾ ಮತಸ್ಥರಿಗೂ ಉಪಯೋಗವಾದದ್ದು. ಈ ವಾರದಲ್ಲಿ ತರಿಸುವವರಿಗೆ ೭ ಕಲ್ಲಿನ ವಜ್ರದ ರೆಂಡೋಲೆ ಜತೆ ಒಂದನ್ನು ಇನಾಮಾಗಿ ಕೊಡುತ್ತೇವೆ. ಕ್ರಯ ೧ಕ್ಕೆ ೭–೮–೦.

ಪತ್ತ:—ಕೆ. ನಾಥಮುನಿ ಅಂಡ್ ಸನ್ಸ್,
12–4 168 ಕೈನಾ ಬಜಾರ ಮದರಾಸು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್. ಈ ಬ್ಯಾಂಕಿನ ಆಫೀಸು ಕೊಡಗು ಮಡಿಕೇರಿಯಲ್ಲಿ ಇರುತ್ತದೆ.

(ಸ್ಥಾಪಿತವಾದದ್ದು 1922ರಲ್ಲು)

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	26,800
ಠೇವಣಿ ಹಣ	—	2,50,301

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೆ ಸಾಲ ಕೊಡಲ್ಪಡುತ್ತದೆ.

ಒಂದು ವರ್ಷ ಬಾಕಿಯ ಠೇವಣಿದಾರರಿಗೆ ಶೇಕಡ ವಾರ್ಷಿಕ ರೂ. 5-0-0 ರ ಮೇರೆಗೆ ಬಡ್ಡಿ ದೊರೆಯುತ್ತದೆ. ಸೇವಿಂಗ್ಸ್ ಠೇವಣಿದಾರರಿಗೆ ಶೇಕಡ ವಾರ್ಷಿಕ ೪ರ ಬಡ್ಡಿ ದೊರೆಯುತ್ತದೆ.

ಹೆಚ್ಚಿನ ವಿವರಗಳನ್ನು ರಿಜಿಸ್ಟ್ರಾರವರು ಅಥವಾ ಮ್ಯಾನೇಜರವರು ತಿಳಿಸುತ್ತಾರೆ.

ಪ್ರೆಸಿಡೆಂಟರು, ಕೋಳೆಯಂಡ ಅಪ್ಪಯ್ಯನವರು ರಾವ್ ಬಹದ್ದೂರ್.   ಮ್ಯಾನೇಜರ್ ಮನೆಯಪಂಡ ಬೆಳ್ಳಪ್ಪನವರು.

ಸೆಕ್ರೆಟರಿ

ಟಿ. ಎಚ್. ವೆಂಕಟಸ್ವಾಮಯ್ಯನವರು, ಬಿ.ಎ., ಬಿ.ಎಲ್.

ತಾರೀಖು 1—7—1931.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಹಸ್ತಾಕ್ಷರದ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಲಾಗಿದೆ.

ಏಜೆಂಟರುಗಳು,

ಉತ್ತರ ಕೊಡಗಿಗೆ ಮೆ. ಚೌರಿರ ಮಾದಯ್ಯನವರು,

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು, (ಶಾನುಭೋಗರು.)

ಪಾಲ್ಗೇರಿ—ಎಚ್. ಆರ್. ವೆಂಕಪ್ಪಯ್ಯನವರು.

ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,

ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುತ್ತಮ್ಮಯ್ಯನವರು, ಮತ್ತು ಅರಮಣಮಾಡ ಪಿ ಕಾರ್ಯಪ್ಪನವರು,

ಹುದಿಕೇರಿ & ತಿತಿಮತ್ತಿ—ಮೆ. ಪಿ. ಪೂವಮ್ಮಯ್ಯನವರು,

ಕುಂಬಳೆಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಪೊನ್ನಯ್ಯನವರು,

ಸೂಚನೆ:—ಪ್ರಿಂಟೆಡ್ ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮ್ಯಾನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿದೆ.

ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿ ... ಉಪಯೋಗವಾದ ಅಮಿತ ಬವಾ ... ಸಂಘದ ಮತ್ತು ದವಸ ಭಂಡಾರ ... ಕ್ಯಾಷ್ ಬುಕ್ಕುಗಳೂ, ಎಲ್ಲಾ ಸಹ ... ದವಸ ಭಂಡಾರಗಳ ಕೆಲಸಗಳನ್ನು ... ಅವಶ್ಯವಾಗಿರುವ, ಕಾಲ್ಕ್ಕುಗಳು ... ಪ್ರಿಯವ ವಾರಂಟು ಫಾರಮುಗಳೂ, ... ಜಮ್ಮಾ ಮುಂಜೂರಾತಿ ಫಾರಮು ... ಸ್ಕಿಗೆ ಫಾರಮುಗಳೂ, ಜಾಮೀನು ... ಸ್ಟೇಷನ್ ಶೀಟ್ ಬರಾರು ಫಾ ... ಗಳೂ, ರಶೀತಿ ಪುಸ್ತಕಗಳೂ, ... ಗಳೂ ಮತ್ತು ಚೆಕ್ ಫಾ ... ಇಲ್ಲಿ ದೊರೆಯುತ್ತವೆ.

ಕೊಟ್ಟಲ್ಲಿ ಪಿ. ಪಿ.

ಆರ್,
ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ.   ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.

ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ.   ಪಾಲಿಸಿದಾರರಿಗೆ ಸಾಲ - 8013 ಜನರಿಗೆ 32 ಲಕ್ಷ ರೂ.

ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿಸುವ 1,78,322 ಜನರಿಗೆ 38 ಕೋಟಿ ರೂ.

ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4 ಪರ್ಸೆಂಟ ಮೀರದ ಕಮ್ಮಿ ಖರ್ಚಿನಲ್ಲಿಯೇ ನಡೆಸಲ್ಪಟ್ಟಿದ್ದಾಗಿ.

ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡೆಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಬೆಂಬಲವನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಇದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೊಲಂಬೋ	ಬೆಳಗಾವಿ	ರಂಗೂನು
ಅಹ್ಮದಾಬಾದು	ಕರಾಚಿ	ಲಾಹೋರ್	ನಾಗಪುರ	ರಾವಲ್ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೋ	ಪಾಟ್ನಾ	ಸಿಕಂದ್ರಾಬಾದು
ಅಲಹಾಬಾದು	ದೆಹಲಿ	ಮದ್ರಾಸು	ಪೂನಾ	ತಿರುಚನಾಪಲ್ಲಿ
ಬೊಂಬಾಯಿ	ಜಲಂಗಾವ್	ಮಂಡಲೆ	ರಾಯಪುರ	ತಿರುವೆಂದ್ರಮ್
ಭೋಪಾಲ್	ಗೌಹಾಟಿ	ಮಂಗಳೂರು	ರಾಂಚಿ	ವಿಶಾಖಪಟ್ಣ [52—8

ಶೀತಜ್ವರಾರಿಯ ಮಾತ್ರೆ:—ಇದು ಶೀತಜ್ವರ ಮತ್ತು ಪ್ರೀಹೆಯ ರೋಗದಿಂದ ಉಂಟಾಗಿರುವ ಮಲೆ ಜ್ವರ, ದಿನ ಬಿಟ್ಟು ಬರುವ ಜ್ವರ, 3—4 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ ಮತ್ತು ಸ್ತ್ರೀಗಳಿಗೆ ರೋಗದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1—8—0; 3ಕ್ಕೆ ರೂ. 4—0—0; 6ಕ್ಕೆ ರೂ 7—8—0. 12ಕ್ಕೆ ರೂ. 14



ಚಂದನಾಸವ:—ಇದು ಪ್ರಮೇಹ ಮೂತ್ರಕೃಚ್ಛ್ರ, ಮೂತ್ರ ತಡೆಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಪಿಂಡಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹನಿ ಹನಿಯಾಗಿ ಉದುರುವುದು, ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ತುರಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರ ನಾಳದಲ್ಲಿ ಬರುವ ಸೋಕು, ಇವುಗಳಿಗೆ ಪರಮ ಔಷಧಿ. ಬೆಲೆ ಬಾಟ್ಲು 1, 3, 6ಕ್ಕೆ ರೂ 1—4—0 3—8—0; 6—12—0

ರೋಮನಾಶಿನಿ:— ಈ ಪುಡಿಯನ್ನು ನೀರಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಹೋಗುವುದು. ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ. 1, 1 ಪೌಂಡಿಗೆ 3—8—0

ಮಹಾಕೇಶ್ಯಾಸಿನಿ ತೈಲ:—ತಲೆನೋವು, ತಲೆ ತಿರುಗುವುದು, ತಲೆವರಿ, ಕಣ್ಣುರಿ, ಇವುಗಳಿಂದ ಕೇಶ ಉದುರುವುದು ... ಕಣ್ಣು ನೋವು, ಅಪಸ್ಮಾರ ಇದ್ದರೆ ಬಾರದಿರುವುದು, ನಿದ್ರಾ ಶಕ್ತಿ ಕುಂದಿಹೋಗುವುದು. ಇವುಗಳೆಲ್ಲಕ್ಕೂ ಖಂಡಿತ ಗುಣಮಾಡುತ್ತದೆ. ... ಬರುವ ಕೂದಲನ್ನು ಪಕ್ವವಾಗಿರುವ ಕೂದಲನ್ನು ಬೆಳೆಯಿಸ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ಕರಿದು ಕೂದಲು ಆಗದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಬೆಲೆ ಸೀಸೆಗೆ ರೂ. 1, 3 ಸೀಸೆಗೆ 2—10—0. ಒಂದು ದೊಡ್ಡ ಸೀಸೆಗೆ ರೂ. 2, 3 ಸೀಸೆಗಳಿಗೆ 5—8—0

ವಿಳಾಸ:—ಮಹಾಕೇಶ್ಯಾಸಿನಿ ಕಂಪೆನಿ,

52—48   ಶಿವಾಜಿ ...   9   ಬೆಂಗಳೂರು

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ, ಚಿಕ್ಕಬಾಟ್ಲು ಒಂದಕ್ಕೆ 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಿಗಾಂವ, ಮುಂಬಯಿ.

52—15

Printed & published by M. M. Ganapathy at "Kodagu" Press Mercara for "Kodagu" Ltd.

ನಸ್ನ ಮುಂದಕ್ಕೆ ಹೋದಾಗ ಕೆಸರು ಕೊಚ್ಚೆ ನೀರು ಹಿಂ
ಅವುಗಳ ಮೇಲೆ ಕೊಯ್ಯೊಡು ಹಾರಾಡುವ ಕ್ರಿಮಿಕೀಟ
ಗಳನ್ನು ನೋಡಿದೆವು. ಇವನ್ನು ಸಹಿಸಿ ಮುಂದಕ್ಕೆ ಹೋ
ಬೇಕೆಂದು ನಾವು ನಿರ್ಧರಿಸುವಾಗ ಕೆಲವು ಸ್ಥಳಗಳಲ್ಲಿ ಈ
ಕೊಚ್ಚೆಯು ಒಂದು ಮೊಳದಷ್ಟು ಆಳವಾಗಿದ್ದು ಕಾಲಿಟ್ಟರೆ
ಹೂತುಹೋಗುವುದೋ ಎಂಬ ಭೀತಿಯೂ ನಮಗೆ ಬಂತು.
... ಗೌರವಾನ್ವಿತ ಸುತ್ತು ಮುತ್ತಲಿನ ವಿಷಯವಾಯಿತು.
ಜನರು ಕುಡಿಯುವ ನೀರನ್ನು ನೋಡದೇ ಹೋಗಿ ನಾವು ಆ
ಸಿದ್ಧರಿಂದ ನಮ್ಮನ್ನು ಒಂದು ಭಾವಿಯ ಬಳಿಗೆ ಕರೆದುಕೊಂ
ಡು ಹೋದರು.

ಈ ಬಾವಿಯ ಪಕ್ಕವು ಸುತ್ತ ಮುತ್ತಲಿನ ದುರ್ಗಂಧವು
ಯವಾದ ಕೊಚ್ಚೆಯ ಪಕ್ಕವೂ ಒಂದೇ ಆಗಿತ್ತು. ಅಲ್ಪ
ಸ್ವಲ್ಪ ಓದಿದವರಿಗಾದರೂ ಈ ರೀತಿಯ ಭಾವಿಯ ನೀರು ಎ
ಷ್ಟು ಆರೋಗ್ಯಕರವಾದುದೆಂದು ಚೆನ್ನಾಗಿ ಗೊತ್ತು.
ಇನ್ನು ನಾವು ಅದನ್ನು ಪ್ರತ್ಯೇಕ ವಿವರಿಸಬೇಕಾಗಿಲ್ಲ.

ಕೆ. ಸಿ. ದೇವಯ್ಯ.

ಫೋಟೋ ಕ್ಯಾಮರಾ.



ಈ ಕ್ಯಾಮರಾಗಳಲ್ಲಿ ಬಿಚ್ಚಿರ ಸಹಾಯವಿಲ್ಲದೆ ಫೋಟೋಗಳನ್ನು ತೆಗೆಯಬಹುದು. ಈ ಕ್ಯಾಮರಾ ಒಂದು ಇದ್ದರೆ ದೇಶಾಟನವರಿಗೆ ಫೋಟೋ ತೆಗೆದು ಹಣ ಸಂಪಾದನೆ ಮಾಡಬಹುದು. ಪೋಸ್ಟ್ ಕಾರ್ಡಿನ ಸೈಜಿನಲ್ಲಿ ಫೋಟೋಗಳನ್ನು ತೆಗೆಯಬಹುದು. ಫೋಟೋ ತೆಗೆಯುವುದನ್ನು ಕಲಿತುಕೊಳ್ಳಬೇಕಾಗಿಲ್ಲ. ಕ್ಯಾಮರಾ ಜೊತೆಯಲ್ಲಿಯೇ ಫೋಟೋ ತೆಗೆಯುವ ವಿಧಾನವನ್ನೂ ಕಳುಹಿಸುವೆವು. ಈ ಕ್ಯಾಮರಾವನ್ನು ತರಿಸಿಕೊಳ್ಳುವವರಿಗೆ ವರ್ಷಗಳ ಗ್ಯಾರಂಟಿ ಇರುವ ಟೈಂಪೀಸು ಒಂದನ್ನು ಇನಾಮಾಗಿ ಕೊಡುವೆವು. ಬೆಲೆ 1ಕ್ಕೆ ರೂ. 4—8—0.

M. Leo & Co. 168 China Bazar,
12—5 Madras.

ಪುತ್ರ ಸಂತಾನದ ಎಣ್ಣೆ.



ಈ ಎಣ್ಣೆಯು ಒಬ್ಬ ದೊಡ್ಡ ಪಂಡಿತರಿಂದ ತಯಾರಿಸಿದ್ದು. ಹೆಂಗಸರಿಗೆ ಅನೇಕ ಕಾರಣಗಳಿಂದ ಗರ್ಭವು ನಿಲ್ಲುವುದಿಲ್ಲ. ಕೆಲವರಿಗೆ 3—4 ತಿಂಗಳ ಕಾಲ ನಿಂತು ನಂತರ ಹೋಗಿ ಬಿಡುವುದು. ಅಂಥಾ ಹೆಂಗಸರು ಈ ಎಣ್ಣೆಯನ್ನು ೧೫ ದಿನಗಳು ಸೇವಿಸುವದರಿಂದ ಗರ್ಭವು ನಿಂತು ಪುತ್ರ ಸಂತಾನವಾಗುವುದು. ಕೆಲವು ಹೆಂಗಸರಿಗೆ ಮುಟ್ಟಾಗುವ ಸಮಯದಲ್ಲಿಯೂ ಮುಟ್ಟಾದ ನಂತರವೂ ಉಂಟಾಗುವ ಹೊಟ್ಟೆ ನೋವು ಮುಂತಾದುವುಗಳನ್ನು ಖಂಡಿತ ಗುಣ ಪಡಿಸುವುದು. ಈ ಎಣ್ಣೆಯನ್ನು ಬೆಂಗಳೂರು, ಮದ್ರಾಸು ಪತ್ರಿಕೆಗಳಲ್ಲಿ ಪ್ರಕಟಿಸಿದವರು ಉಪಯೋಗಿಸಿ ಪುತ್ರ ಸಂತಾನವನ್ನು ಪಡೆದಿರುವರು. ಒಂದು ಬಾಟ್ಲಿಯನ್ನು ತರಿಸಿ ಪರೀಕ್ಷಿಸಿರಿ. ಉಪಯೋಗಿಸುವ ವಿಧ ಔಷಧದ ಜೊತೆಯಲ್ಲಿ ಕಳುಹಿಸುತ್ತೇವೆ.

ಕ್ರಯ ಬಾಟ್ಲಿ 1ಕ್ಕೆ 2—8—0

K. Nadhamuni & sons.
12—6 168 China Bazar, Madras.

ರೋಲ್ಡ್ ಗೋಲ್ಡ್ ಭಂಗಾರದ ಗಡಿಯಾರಗಳು.

ಹಳೇ ಕ್ರಯ 17—12—0. ಕೆಲವು ದಿನಗಳ ವರೆಗೆ 8—12—0.

ಈ ಗಡಿಯಾರಗಳು ಬಹು ಪ್ರಖ್ಯಾತಿಯಾದ ಫಿಡೋ ಲೀವರ್ ಮಾಮೂಲ್ಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ. ಇವು ಖರಾರು ಗಂಟೆಯನ್ನು ತೋರಿಸುವುವು. ಒಳಗಡೆ ಕೆಂಪು ಇಟ್ಟಿರುವುದು. ಇದರ ಕೇಸು ಭಂಗಾರಕ್ಕೆ ಸಮಾನವಾಗಿದೆ. ಇದಕ್ಕೆ ೧ ವರ್ಷ ಮಾತ್ರಿ ಮಾಡಿದ



ಗ್ಯಾರಂಟಿ ಕೊಡುವೆವು. 1 ಕೈಯಲ್ಲಿ ಕಟ್ಟುವ ರಿಸ್ಟ್ ವಾಚ್. 1 ಪಾಕೆಟ್ ವಾಚ್, ಮತ್ತು ಒಂದು ಟೇಬಲ್ ಟೈಂಪೀಸ್ ಈ ಮೂರು ಸೇರಿ ರೂ. 8—12—0 ಮಾತ್ರ. ಈ ಕ್ರಯವು ಕೆಲವು ದಿನಗಳ ವರೆಗೆ ಮಾತ್ರ. ನಂತರ ಸಿಕ್ಕಲಾರದು. ರಿಸ್ಟ್ ವಾಚ್ ಮತ್ತು ಟೈಂಪೀಸು ರೂ. 5—8—0; ರಿಸ್ಟ್ ವಾಚ್ ಮತ್ತು ಪಾಕೆಟ್ ವಾಚ್ ರೂ. 7—0—0.

ವಿಳಾಸ:— ಕೆ. ಎಸ್. ಬೆನ್‌ಸನ್ ಅಂಡ್ ಕೊ,
12—5 ಪೋ|| ನಂ|| 1246. ಮದರಾಸು.

ಮನಿಸಿರಿ! ಪರಿ ಕ್ಷಿಸಿರಿ!

ಅಂದವಾಗಿ ಫೋಟೋ ತೆಗೆಯುತ್ತಾರೆ.

ಶೀಘ್ರ ಕಾಲ ಬಾಳಿಕೆ ಬರುತ್ತೆ.

ಹದಿನಾಲ್ಕು ವರ್ಷಗಳಿಂದ ವ್ಯವಸಾಯದಲ್ಲಿ ಹೆಸರುವಾಸಿಯಾದ ಮೆ. ಕರ್ನ್ನ್, ಶಂಕರ್ ಆ ಕಂಪೆನಿಯವರು ಕೊಡಗು ...ದ ಭಗಿನಿ ಬಾಂಧವರ ಸಲುವಾಗಿ ಮಡಿಕೇರಿಯಲ್ಲಿ ಬ್ರಾಂಚ್ ಓಪನ್ ಮಾಡಿರುತ್ತಾರೆ.

ಇಲ್ಲಿ ದೀರ್ಘಕಾಲ ಬಾಳಿಕೆ ಬರುವಂತೆ ಬೇಕಾದ ನಮೂನೆಯಲ್ಲಿ ಫೋಟೋ ತೆಗೆಯುವುದು. ಫೋಟೋ ಎನ್‌ಲಾರ್ಜ್ ಮಾಡುವುದು. ಆಲ್ ಪೆಯಿಂಟಿಂಗ್ ತಂತ್ರ ಕಾರ್ಡ್ ಮೊದಲುಗಳ ಕೆಲಸಗಳು ಸದಾ ನಡೆಯುತ್ತವೆ. ಕ್ಯಾಮರಾ ಮೊದಲಾದ ಫೋಟೋ ಕೆಲಸದ ಎಲ್ಲಾ ಸಾಮಾನು ಮಾರಾಟಕ್ಕೆ ಸಿದ್ಧವಾಗಿರುತ್ತವೆ. ಅನುಭವಸ್ಥರಾಗಿ ಕೆಲಸಗಳು ಅಂದವಾಗಿ ತಯಾರಿಸಿ ಸಕಾಲಕ್ಕೆ ದೊರೆಯುತ್ತವೆ.

ದರಗಳ ಬಗ್ಗೆ ವಿಚಾರಿಸಿರಿ. ಒಂದಾವರ್ತಿ ಪರೀಕ್ಷಿಸಬೇಕಾಗಿ ವಿನಂತಿ.

ಶಂಕರ್ & ಕಂಪನಿ
ರಾಜಧಾನಿಸೇಶನ್ ವಾರ್ಡ್,
12—3. ಮಡಿಕೇರಿ.

೫೩ ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ ಔಷಧಗಳು.

೧. ಧಾತುಪುಷ್ಟಿ ಲೇಹ.

ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದುವಿಕೆ ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜೀರ್ಣಕ ಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ಬಾಧೆ, ರಕ್ತ, ಪಿತ್ತ, ಒಳ ಜ್ವರ, ಮಲಬದ್ಧತೆ, ಕೈಕಾಲು ಜಡ್ಡು ವುದು ಮೊದಲಾದುವುಗಳು ಪೂರ್ಣ ಗುಣವಾಗಿ ಕಳೆದು ಹೋದ ಶಕ್ತಿಯು ಪುನಃ ಹುಂದಿಕೊಳ್ಳುವುದು—ಕ್ರಯ ಡಬ್ಬಿ 1ಕ್ಕೆ 2—8—0 ಮೂರು ಡಬ್ಬಿಗಳಿಗೆ ರೂ. 7—0—0

೨. ಅಶೋಕಾರಿಷ್ಟ ಮತ್ತು ಮಾತ್ರೆ.

ಹೆಂಗಸರ ಮುಟ್ಟು ದೋಷಗಳು, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟ ನೋವು, ಸೌತಾಂಗ ಶೀಣತೆ, ಮೂರ್ಛೆ, ಮಲಬದ್ಧತೆ, ಒಳಜ್ವರ, ರಕ್ತಹೀನತೆ, ಕೈಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಅತಿ ಶೀಘ್ರದಲ್ಲಿಯೇ ಗುಣ ಪಡಿಸುವುದು. ಈ ಅಶೋಕಾರಿಷ್ಟ ಮತ್ತು ಮಾತ್ರೆಗಳು ಸಾವಿರಾರು ಹೆಂಗಸರಿಗೆ ಅಂತರಿಕ ಆರೋಗ್ಯವನ್ನು ಒದಗಿಸಿ, ಮನೋಭಿಲಾಷೆಯನ್ನು ಪೂರಯಿಸಿರುವವು.

ಕ್ರಯ 1 ಬಾಟ್ಲಿ ಔಷಧ, 1 ಡಬ್ಬಿ ಮಾತ್ರೆ, ರೂ. 2 ಆ. ೪.
3 ಬಾಟ್ಲಿ ಮತ್ತು ಡಬ್ಬಿಗಳಿಗೆ ರೂ. 6 ಆ. ೪.

೪. ಮಲೇರಿಯಾ ನಿವಾರಣೆ.

ದಿನ ಬಿಟ್ಟು ಬರುವ ಜ್ವರ, ಮಳೆ ಜ್ವರ, 2 ಯಾ 3 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರ ಗಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರ ಗಡ್ಡೆಯನ್ನು ಕರಗಿಸಿ ಶಕ್ತಿಯನ್ನು ಉಂಟು ಮಾಡುತ್ತದೆ. ಬಾಟ್ಲಿ 1ಕ್ಕೆ 1—8—0, 3 ಬಾಟ್ಲಿಗಳಿಗೆ 4—2—0.

೪. ಮೇಹ ಕುಠಾರ. ಇದು ಮೂತ್ರನಾಳದಿಂದ ಕೆಂಪು, ಬಿಳಿದು, ಹಳದಿಯಂತೆ ಹೋಗತಕ್ಕ ಕೀವನ್ನೂ, ವ್ರಣವನ್ನೂ, ಉರಿಯನ್ನೂ ಗುಣಪಡಿಸುತ್ತದೆ. ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7.

೫. ಇಛ್ಛಾ ಭೇದಿ ಗುಟಿಕೆ. ಅಯಾಸವನ್ನು ಉಂಟುಮಾಡುವ ಸುಖ ವಿರೇಚಕ. ಬಾಟ್ಲಿ 1ಕ್ಕೆ 0—12—0 ಆಣೆ. 3 ಬಾಟ್ಲಿಗಳಿಗೆ 2—2—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ರೋಗಿಯ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ರವಾನಿಸುವೆವು. ಕೆಟಲಾಗು ತರಿಸಿ ನೋಡಿರಿ.

ಎಂ. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್ಸ್,
52—28 ರಥಬೀದಿ, ಮಂಗಳೂರು, ದ. ಕನ್ನಡ

ಎಂ. ಎಸ್. ಶಿದ್ದಪ್ಪ ಬ್ರದರ್ಸ್
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

೧. ಉತ್ತಮ ತರಹ ಒಂದು ಸೆಟ್ ಜರ್ಮನ್ ರೀಡ್ಸ್ ಹಾಕಿರುವ ಸಿಂಗಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 20—0—0
,, ಮತ್ತು 22—8—0

೨. ಡಿಟೋ ಉತ್ತಮ ತರಹ ಹಾರ್ಮೋನಿಯಂ
,, 1ಕ್ಕೆ ರೂ. 25—0—0
,, ಮತ್ತು 27—8—0

೩. ಡಿಟೋ ಉತ್ತಮ ತರಹದ್ದು, ದೂಳು ಬೀಳದಂತೆ ಕೇಸಿನ ಮೇಲೆ ಪೂರ್ತಿ ಮುಚ್ಚಳವುಳ್ಳ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ ರೂ. 27—8—0

೪. ಪಾಶ್ಚಿಮಾತ್ಯ, ಬಂದೋಬಸ್ತು, ಸುತ್ತಲವುಳ್ಳದ್ದೂ, ಅನೇಕ ವರ್ಷಗಳ ವರೆಗೆ ಬಾಳಿಕೆ ಬರತಕ್ಕದ್ದೂ ಆದ ಹೊಸದಾಗಿ ಸಪ್ಲೈ ಆಗಿರುವ ಫ್ರೆಂಚ್ ರೀಡ್ಸ್ ನಮೂನೆ ಇರುವ ನಮ್ಮ ಹೊಸ ರೀಡ್ಸ್ ಹಾಕಿರುವ "ಸಿದ್ಧಪ್ಪಾಸ್ ಫ್ಲೂಟ್" ಸಿಂಗಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 42—8—0

5. ಉತ್ತಮ ತರಹ 2 ಸೆಟ್ ಜರ್ಮನ್ ರೀಡ್ಸ್ ಹಾಕಿರುವ, ದೂಳು ಬೀಳದಂತೆ ಕೇಸಿನ ಮೇಲೆ ಪೂರ್ತಿ ಮುಚ್ಚಳವುಳ್ಳ ಡಬ್ಬಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ ರೂ. 32—8—0
ಉತ್ತಮ ತರಹ 2 ಸೆಟ್ ಜರ್ಮನ್ ... ರೀಡ್ಸ್ ಹಾಕಿರುವ ... ಕೈನಿಂದಾಗಲೀ ಅಥವಾ ಕಾಲಿನಿಂದಾಗಲೀ ಬಾರಿಸಲು ಅನುಕೂಲಿಸುವಂತೆ ತಯಾರಿಸಿರುವ "ಸ್ಪೆಷಲ್ ಫ್ಲೂಟ್" ಡಬ್ಬಲ್ ರೀಡ್ಸ್ ಹ್ಯಾಂಡ್ ಲೆಗ್ ಹಾರ್ಮೋನಿಯಂ 1ಕ್ಕೆ ರೂ. ...

ನಮ್ಮ ಟಿಂಬರ್ ಡಿಪೋನಲ್ಲಿ ಕಟ್ಟಡಗಳಿಗೂ, ಫರ್ನಿಚರ್ ತಯಾರಿಸಲೂ ಬೇಕಾದ ಎಲ್ಲಾ ನಮೂನೆ ನಾಟಾಗಳನ್ನು ಸುಲಭ ದರದಿಂದ ವಿಕರಗಿಟ್ಟಿರುವುದಲ್ಲದೇ, ಗಿರಾಕಿಗಳು ಅಪೇಕ್ಷಿಸುವ ಸೈಜಿಗೆ ಕುಯಿಸಿಯೂ ರಿಯಾಯಿತಿ ದರದಿಂದ ಸಪ್ಲೈ ಮಾಡುತ್ತೇವೆ. ಹೆಚ್ಚಿಗೆ ವಿಷಯಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಳಾಸ:— ಎಂ. ಎಸ್. ಶಿದ್ದಪ್ಪ ಬ್ರದರ್ಸ್,
ಹಾರ್ಮೋನಿಯಂ ಮತ್ತು ಟಿಂಬರ್
ವ್ಯಾಪಾರಿ ... ಮೈಸೂರು.

ಅಯರ್ಲೆಂಡು ಮತ್ತು ಬ್ರಿಟಿಷ್ ಸರ್ಕಾರವು.

ಪ್ರಕೃತ ಅಯರ್ಲೆಂಡಿಗೂ, ಬ್ರಿಟಿಷ್ ಸರ್ಕಾರಕ್ಕೂ ನಡೆಯುತ್ತಿರುವ ವಾದವಿವಾದಗಳ ವಿವರವು ಈಗ ತಿಳಿಯುತ್ತದೆ. ಹಿಂದೊಮ್ಮೆ ಅಯರ್ಲೆಂಡೆಂಬುದು ಹಿಂದೂಸ್ಥಾನದಂತೆ ಬ್ರಿಟಿಷರ ಆಳಿಕೆಯಲ್ಲಿದ್ದ ಒಂದು ದೇಶವಾಗಿತ್ತು. ಇತ್ತೀಚೆಗೆ ಅವರು ಸ್ವರಾಜ್ಯಕ್ಕಾಗಿ ಹೋರಾಡಿ ಜಯಶೀಲರಾಗಿ ಈಗ ಪ್ರಜಾಪ್ರಭುತ್ವವನ್ನು ಸ್ಥಾಪಿಸಿದ್ದಾರೆ. ಡಿವೆಲೆರ ಎಂಬವರು ಅಲ್ಲಿಯ ಈಗಿನ ಅಧ್ಯಕ್ಷರು. ಬ್ರಿಟಿಷರು ಅಲ್ಲಿಯ ಸಿದ್ಧಿಯನ್ನು ಬಿಟ್ಟು ಓಡಿ ಬರುವಾಗ ಅವರೊಡನೆ ಒಂದು ಒಪ್ಪಂದವನ್ನು ಮಾಡಿಕೊಂಡಿದ್ದಾರೆ. ಅದರ ಪ್ರಕಾರ ಅಯರ್ಲೆಂಡು ಸ್ವಲ್ಪ ಮಟ್ಟಿಗೆ ಸ್ವತಂತ್ರವೇ ಆದರೂ ಅಲ್ಲಿಯ ಪಾರ್ಲಿಮೆಂಟಿನಲ್ಲಿ ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಮನ್ನಣೆ ಇದೆಯಂತೆ. ಅದರ ಸದಸ್ಯರು ಬ್ರಿಟಿಷ್ ಚಕ್ರವರ್ತಿಗಳಿಗೆ ವಿಧೇಯರಾಗಿರುವೆವೆಂದು ಪ್ರತಿಜ್ಞೆ ತೆಗೆದುಕೊಳ್ಳಬೇಕಂತೆ. ಮತ್ತು ಪ್ರತಿ ವರ್ಷವೂ ಅಲ್ಲಿಂದ ಬ್ರಿಟಿಷ್ ಸರ್ಕಾರಕ್ಕೆ ಮೂರು ಮಿಲಿಯ ಪವನನ್ನು ತಪ್ಪದೆ ಸಹ ಕೊಡಬೇಕಂತೆ. ಆ ಒಪ್ಪಂದವಾದಂದಿನಿಂದ ಎಂದರೆ 1921ನೇ ಇಸವಿಯಿಂದ ಅಯರ್ಲೆಂಡು ಆ ಪ್ರಕಾರ ನಡೆದುಕೊಂಡಿದೆ. ಈಗ ಡಿವೆಲೆರರು, "ನಿಮ್ಮ ಕಪ್ಪವನ್ನು ಎಂದಿನಂತೆ ಕೊಡಲಾಗುವುದಿಲ್ಲ. ನಿಮ್ಮ 'ವಿಧೇಯ ಪ್ರತಿಜ್ಞೆ' ಯನ್ನು ನಾವು ಪಾಲಿಸುವುದಿಲ್ಲ. ಹಾಗೆ ಮಾಡಿದರೆ ನಮ್ಮ ಒಪ್ಪಂದಕ್ಕೆ ವಿರೋಧವೂ ಆಗುವುದಿಲ್ಲ. ನಮ್ಮದು ಇನ್ನೊಬ್ಬರ ಆಶ್ರಯದಲ್ಲಿರುವ ದೇಶವಲ್ಲ; ಸ್ವತಂತ್ರ ದೇಶ. ಇನ್ನೊಂದು ಸರ್ಕಾರದ ಅಜ್ಞೆಯನ್ನು ಯಾವ ರೀತಿಯಲ್ಲಿಯೇ ಆಗಲೀ ಪಾಲಿಸಲೇ ಬೇಕೆಂಬ ಒಂದು ಬಂಧವಿದ್ದರೆ ನಮ್ಮ ಸ್ವಾತಂತ್ರ್ಯವೆಲ್ಲಿ ಉಳಿಯಿತು? ನಾವು ಪಾಲಿಸಿಕೊಂಡು ಬಂದ ಕಪ್ಪ ಕಾಣಿಕೆಯೂ, 'ವಿಧೇಯ ಪ್ರತಿಜ್ಞೆ' ಯೂ ಅಗತ್ಯವಾದುದಲ್ಲ. ಆದುದರಿಂದ ಅದನ್ನು ತೆಗೆದು ಹಾಕುತ್ತೇವೆ. ನಮ್ಮ ಪ್ರತಿಜ್ಞೆಗಳೆಲ್ಲಾ ಹೀಗೆ ಮಾಡಬೇಕೆಂಬ ಇಚ್ಛೆಯಿದೆ. ನಮ್ಮ ಪಾರ್ಲಿಮೆಂಟಿನಲ್ಲಿ ಈ ವಿಷಯವಾಗಿ ಒಂದು ಬಿಲ್ಲನ್ನು ತಂದು ಪ್ರಜೆಗಳ ಮತವು ಯಾವ ಪಕ್ಷಕ್ಕಿದೆ ಎಂಬುದನ್ನು ಪರೀಕ್ಷಿಸಬಹುದು." ಎಂದು ಬ್ರಿಟಿಷ್ ಸರ್ಕಾರಕ್ಕೆ ಕಾಗದ ಬರೆದಿದ್ದಾರೆ. ಅದಕ್ಕೆ ಬ್ರಿಟಿಷರು, "ನಿಮ್ಮ ಆಲೋಚನೆಯು ನಮಗೆ ಸಮ್ಮತವಾಗಿಲ್ಲ. ಇದು ವರೆಗೆ ಪಾಲಿಸಿಕೊಂಡು ಬಂದ ಒಪ್ಪಂದ ಶರತ್ತುಗಳನ್ನು ಈಗ ಮುರಿಯಬೇಕೆಂದು ಕೇಳುವುದಕ್ಕೆ ಕಾರಣವೇನು? ಮತ್ತು ಅದು ಹೇಗೆ ನ್ಯಾಯ? ಮಾತ್ರವಲ್ಲ, ಮೊದಲು ನಿಮ್ಮ ಹಿತಕ್ಕಾಗಿಯೇ ಆ ಒಪ್ಪಂದ ಮಾಡಲ್ಪಟ್ಟದ್ದು. (ನಿಮಗೆ ಇಷ್ಟರ ಮಟ್ಟಿನ ಸ್ವಾತಂತ್ರ್ಯವನ್ನು ಕೊಟ್ಟವರಾದರೂ ನಾವೇ!!) ನೀವು ಪ್ರತಿ ವರ್ಷವೂ ಕೊಡುವ ಹಣವು ನಿಮ್ಮ ಸರ್ಕಾರದಿಂದ ನಮ್ಮ ಪಕ್ಷಕ್ಕೆ ಬರುವ ತಪ್ಪವಲ್ಲ. ಮೊದಲು ನಿಮ್ಮಲ್ಲಿಯ ಬಡ ಒಕ್ಕಲುದಾರರಿಗೆ ಭೂಮಿಗಳನ್ನು ಕ್ರಯಕ್ಕೆ ಪಡೆದುಕೊಳ್ಳುವುದಕ್ಕಾಗಿ ನಾವು ಕೊಟ್ಟ ಹಣವಿದೆ. ಅದೇ ಈಗ ಕಂತುಪ್ರಕಾರ ಸಲ್ಲಿಸಲ್ಪಡುವಂತೆ ಪ್ರತೀ ವರ್ಷವೂ ಸ್ವಲ್ಪ ಸ್ವಲ್ಪ ಮಟ್ಟಿಗೆ ನಮಗೆ ಬರುತ್ತದೆ. ಅದನ್ನು ನಿಮ್ಮ ಸರ್ಕಾರವೇ ಕೊಡುವುದಲ್ಲ, ಜಮೀನುದಾರರಿಂದ ಸಂಗ್ರಹ ಮಾಡಿಕೊಡುವ ಕೆಲಸ ಮಾತ್ರ ಸರ್ಕಾರದ್ದಾಗಿರುವುದು. ಅದನ್ನು ನಿಲ್ಲಿಸುವ ಅಧಿಕಾರವು ನಿಮಗಿಲ್ಲ. ಹಾಗೆ ಮಾಡಿದರೆ ಅದು ಅನ್ಯಾಯವಾಗುತ್ತದೆ. ಚಕ್ರವರ್ತಿಗಳಿಗೆ ವಿಧೇಯರಾಗಿರುವ ಪ್ರತಿಜ್ಞೆಯನ್ನು ನೀವು ಪಾಲಿಸಲೇ ಬೇಕು. ಒಪ್ಪಂದದಲ್ಲಿರುವ ಶರತ್ತುಗಳನ್ನು ಬದಲಿಸುವುದಕ್ಕೆ ನಮಗೆ ಸಮ್ಮತಿಯಿಲ್ಲ. ಇದು ವರೆಗೆ ನಡೆದುಕೊಂಡು ಬಂದಂತೆ ಇನ್ನೂ ನಡೆದುಕೊಳ್ಳಬೇಕು. ಇಲ್ಲದಿದ್ದರೆ ನಮ್ಮೊಳಗೆ ಎಂದಿನಂತೆ ವ್ಯಾಪಾರ ... ವುದಕ್ಕೆ ಸಾಧ್ಯವಿಲ್ಲ" ಎಂದು ಉತ್ತರ ಬರೆದಿದ್ದಾರೆ.

ಅಯರ್ಲೆಂಡಿಗೆ ಸ್ವಾತಂತ್ರ್ಯವನ್ನು ಕೊಟ್ಟವರೂ, ಅದ... ರಕ್ಷಿಸಿದವರೂ ಬ್ರಿಟಿಷರೇ ಎಂಬ ಅರ್ಥವು ಈ ಉತ್ತರದಿಂದ ತೋರುತ್ತದೆ. ಆದರೆ ಡಿವೆಲೆರೆಂದರೆ ಒಂದು ಅಲ್ಲಿ ಸರ್ಕಾರಕ್ಕೆ ಎದುರು ನಿಂತು ಸ್ವಾತಂತ್ರ್ಯ ಯುದ್ಧ ... ನವರೇ! ಬ್ರಿಟಿಷರನ್ನು ಅಲ್ಲಿಂದ 'ಲಗುಬಗೆ ಪ್ರಯಾಣ' ಹೊಡೆಯಿಸಿದ ದಂಗೆಕಾರರ ಮುಖಂಡರೇ!! ... ಅಯರ್ಲೆಂಡಿಗೆ ಸಂಪೂರ್ಣ ಸ್ವಾತಂ... ಅದಕ್ಕೆ ಯಾವ ರೀತಿಯಿಂದಲೂ ಭಂಗ ... ಪ್ಪಂದದಲ್ಲಿ ಸ್ವಾತಂತ್ರ್ಯಕ್ಕೆ ತಡೆ ಹಾಕುವ ... ಒಂದು ವೇಳೆ ಈ ಹೊಸ ಆಲೋಚನೆ ... ಕಂಡರೆ ಆಗಲಿ. ಅದು ಹಾಗಿರಲಿ ... ವರು ಹೇಳುತ್ತಾರೆ ನಮ್ಮನ್ನು ಬದು... ನಿಮ್ಮನ್ನು ಉಳಿಸಿದವರು ನಾವೆಂದು ... ನ್ಯಾಯಾನ್ಯಾಯವನ್ನು ನಿರ್ಧರಿಸುವುದು ... ಡಿವೆಲೆರರಿಗೂ, ಬ್ರಿಟಿಷ್ ಸರ್ಕಾ... ವ್ಯವಹಾರಗಳು ನಡೆದಿವೆ ... ಅತ್ಯಂತ ಪಾಲಿಸಬೇಕೆಂದು ... ಒಪ್ಪಂದದ ವಿಚಾರವು ಹೇ... ವಿಷಯಗಳನ್ನು ಪಾಲಿ... ಸುಂದ ನ್ಯಾಯವಾದಿಗ... ಕ್ಷಯಲ್ಲ, ನಾವು ... ಕೆಂದು ಹೇಳುತ್ತಾ ... ಈಗ ಊಹಿಸ...

ಗಾ. ಬ.

ಪತ್ರವ್ಯವಹಾರ.

[ಪತ್ರ ಬರೆದವರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಕೊಡಗು ಹುಜೂರ್ ಚೀಫ್ ಕಮಿಶನರ್ ಸಾಹೇಬರವರಿಗೆ ಬಹಿರಂಗ ಪತ್ರ.

ಅಯ್ಯಾ!

ನಮ್ಮ ಕೊಡಗು ದೇಶಕ್ಕೆ ಚೀಫ್ ಕಮಿಶನರ್ ಸಾಹೇಬರು ಒಬ್ಬರೇ ನಮ್ಮ ಪ್ರಭುಗಳು. ಕೊಡಗು ದೇಶವು ಮದರಾಸು ಸರ್ಕಾರದ ಅಧೀನದಲ್ಲಿ ಇಂದೆ ಇರುವ ... ದೇಶವಾಗಿದೆ. ಈ ದೇಶದಲ್ಲಿ ಮಡಿಕೇರಿ ತಾಲ್ಲೂಕಿನಲ್ಲಿ ... ಕೊಡಗಿನ ಇತರ ತಾಲೂಕುಗಳಿಂದ ಪ್ರತ್ಯೇಕಿಸಿ ಇರುತ್ತೆ. ಅಂದರೆ ನ್ಯಾಯವಾದ ನೀರುಗಳಿಂದ ಪ್ರತ್ಯೇಕಿಸಿ ... ಕೊಟ್ಟಿರುವ ಹೊಳೆಗೆ ಇಲ್ಲದೆ ವರ್ಷದ 9 ತಿಂಗಳು ... ಈ ಪ್ರಾಂತ್ಯವು ಅಂದನೂ ದ್ವೀಪದಂತೆ ಆಗುವ ... ಈ ಪ್ರಾಂತ್ಯಕ್ಕೆ ತಕ್ಕ ... ಹೊಳೆಗೆ ಸೇತುವೆ ಮಾಡಿಕೊಡಬೇಕಾಗಿ ಅನೇಕ ವರ್ಷಗಳಿಂದ ಹೋರಾಡಿದಲ್ಲಿ 12 ಸಾವಿರ ಜಿಲ್ಲೆಯ ರೂಪಾಯಿ ... ನಿಟ್ಟು ಮಾಡು ಹೊಳೆಗೆ ಮಾಡಿದ ... ಚೀಫ್ ಕಮಿಶನರ್ ಸಾಹೇಬರವರು ಸಹ ... ಈ ವರ್ಷ ಹುಜೂರು ಮಂಜೂರು ಮಾಡಿದ್ದಾಗಿ ತಿಳಿದು ... ಕೊಡಗು ಕಮಿಶನರ್ ಸಾಹೇಬರವರಿಗೆ ದಯಪಾಲಿಸಿದ ... ಅರ್ಜಿಗೆ ತಾ. 14—3—32 ಒರವರಿಗೆ ಈ ಬಾಬಿನಲ್ಲಿ ಕೊಟ್ಟ ... ನಾಪೋಕ್ಲು ನಾಡು ಕಚೇರಿ ... ಕಾಂತರ ಕಕ್ಕಬೆ ಹೊಳೆಗೆ ಕಾಸ್ ವೇ ಮಾಡಿಸಿಕೊಡಬೇಕೆಂದು ಬರೆಕೊಂಡ ಅರ್ಜಿಗೆ ಸದರಿ ಕೆಲಸವನ್ನು ಹಣಕ್ಕೆ ಅವಕಾಶವು ... ದುದರಿಂದ ಹಣ ಬರುವ ... ಮಾಡಲ್ಪಡ... ಬೇಸ್ ದೊರೆತಿರುತ್ತೆ.

ಮೇಲೆ ... ಕೊಡಗಿನ ಪ್ರತ್ಯೇಕಿಸಿ ಗುಡ್ಡ ಬೆಟ್ಟ ... ಮಳೆ ಪ್ರದೇಶ ... ಯೂ ಮಲೆ ಪ್ರಾಂತಗಳಾಗಿಯೂ ಸಣ್ಣ ಸಣ್ಣ ತೋಡು ಹೊಳೆಗಳಿಂದ ಕೂಡಿದ ಪ್ರಾಂತ್ಯವಾಗಿ ಜನಸಂಖ್ಯೆ ಹೆಚ್ಚಾಗಿ ಭೂಮಿ ... ದುದರಿಂದಲೇ ಪೂರ್ವ ರಾಜರ ಕಾಲದಲ್ಲಿ ಈ ನಾಡಿನ ರೈತರಿಗೆ ಭೂಮಿ, ಕೊಡಲು ಜಾಗ ಇಲ್ಲದ್ದರಿಂದ ಬೆಟ್ಟದ ಭಾಗವನ್ನು ಬಾಣೆ (ಬಲ್ಕ) ವಾಗಿ ಇನಾಮು ಮಾಡಿಕೊಂಡು ಬರುತ್ತಿದ್ದು ಕೊಟ್ಟಿರುತ್ತಾರೆ. ಇಂಥಾ ಬಡ ತಾಲೂಕುಗಳ ಮಕ್ಕಳನ್ನು ಮಡಿಕೇರಿ ಮತ್ತು ವೀರರಾಜಪೇಟೆಯಲ್ಲಿ 4, 5, 6ನೇ ಫಾರಮಿಗೆ ಓದು ಬರಹಕ್ಕೆ ಕಳುಹಿಸಲು ಸಹ ಒಂದಕ್ಕೆ 150 ರೂಪಾಯಿ ಕೊಡಬೇಕಾಗಿರುವುದರಿಂದ ಈ ನಾಡಿನ ನಾಪೋಕ್ಲು ಮೋಡಲ್ ಸ್ಕೂಲನ್ನು ಹೈಸ್ಕೂಲ್ ಮಾಡಿಕೊಡಬೇಕಾಗಿ ಬರೆಕೊಂಡ ಅರ್ಜಿಗೆ "Dis No. A. 229/32 ಇದಕ್ಕೆ ತುಂಬಾ ಖರ್ಚು ಬರುವುದರಿಂದ ... ಬೇರೆ ಕಾರಣಗಳಿಂದ ಈ ಕೋರಿಕೆಯನ್ನು ನೆರವೇರಿಸಲು ಆಗುವುದಿಲ್ಲ" ವೆಂತ ಇಂಡೋರ್ಸ್ ದೊರೆತಿರುತ್ತೆ.

ಬ್ರಿಟಿಷ್ ಸರ್ಕಾರದವರು ಈ ಭೂಮಂಡಲದಲ್ಲಿ ... ನ್ಯಾಯಶೀಲರೆಂತಲೂ ತಿಳಿದಿದ್ದೇನು. ಈ ಕೊಡಗು ದೇಶದ ಉತ್ಪತ್ತಿಯನ್ನೆಲ್ಲಾ ಈ ದೇಶದಲ್ಲೇ ಖರ್ಚು ಮಾಡುತ್ತಾರೆಂಗಿ ಸಹ ಹೇಳುವುದನ್ನು ಕೇಳಿದ್ದೇನೆ. ಈ ದೇಶದ ಸುಮಾರು 82 ಲಕ್ಷ ರೂಪಾಯಿ ಇಂಪೀರಿ... ಗವರ್ನಮೆಂಟಿನಲ್ಲಿ ಇದೆಯೆಂದು ತಿಳಿಯುತ್ತೆ.

ಕಳೆದ 1931ನೇ ಇಸವಿಯಲ್ಲಿ ಸ್ವರಾಜ್ಯ ಚಳವಳಿ ... ಅಬ್ಕಾರಿ ಖಾತೆ, ಗಂಧದಲ್ಲೂ ನಷ್ಟವಾದ್ದರಿಂದ ಈ ಕೆಲಸಗಳು ಕೈಕೊಳ್ಳಲು ಆಗುವುದಿಲ್ಲವಾಗಿ ಹೇಳಿದ್ದಕ್ಕೆ ... ಪ್ಪಿದ್ದಾಯಿತು.

ಮೇಲ್ಕಂಡ ಕಾಲದಲ್ಲೂ ಕೂಡ ಈ ಬಾಬಿನಲ್ಲಿ ... ನಾಡು ತಾಲ್ಲೂಕು ರೈತರು ಯಾವ ವಿಧದಲ್ಲೂ ಭಾಗಿಗಳಾಗಿರುವುದಿಲ್ಲವೆಂಬುದು ಸರ್ಕಾರದವರಿಗೇನೇ ವೇದ್ಯವಿದೆ.

ಈ ವರ್ಷವಾದರೂ ಅಬ್ಕಾರಿಯಲ್ಲಿ 35 ಸಾವಿರ ರೂ. ಗಂಧದಲ್ಲಿ 1,22, ... ರೂ. ವರೆಗೆ ಕಳೆದ ವರ್ಷಕ್ಕಿಂತ ಹೆಚ್ಚಿಗೆ ಉತ್ಪತ್ತಿಯಾಗಿದೆಯಾಗಿ ... ಇದು ನಿಜವಾಗಿದ್ದರೆ ಈ ಕೊಡಗಿನಿಂದ ಪ್ರತ್ಯೇಕಿಸಲ್ಪಟ್ಟ ಈ ಮೂಲೆ ಮಲೆನಾಡಾದ ಪಾಡಿನಾಲ್ಕುನಾಡಿಗೆ ಒಂದು ಹೈಸ್ಕೂಲು ಮತ್ತು ಕೊಟ್ಟಂಬಾಡಿ, ಕಕ್ಕಬೆ ಹೊಳೆಗಳಿಗೆ ಕಾಸ್ ವೇ ಮಾಡಿಕೊಡಲು ಯಾವ ಅಭ್ಯಂತರವೂ ಇರಲಾರದು.

ಮೇಲ್ಕಂಡ ಕಾರಣಗಳನ್ನು ಚೆನ್ನಾಗಿ ಪರಿಯಾಲೋಚಿಸಿ ಪಡನೆ ಕಕ್ಕಬೆ ಹೊಳೆಗಾದರೂ ಈ ವರ್ಷವೇ ಸೇತುವೆ ಮಾಡಿಕೊಡುವರಾಗಿ ಅತೀ ವಿನಯದಿಂದ ಕೋರುವ,

ಬಡವನಾದ ಪಾಡಿನ್ಯಾ...

ವಿದ್ಯಾ ಇಲಾಖೆ ಹುಬ್ಬಳ್ಳಿ ಶಾಲಾ ಇನ್ಸ್‌ಪೆಕ್ಟರರ ನೇಮಕ.

ಈಗ ತಾನೇ ವಿಚಾರ ... ಶಾಲಾ ಇನ್ಸ್‌ಪೆಕ್ಟರರು ಏಳು ತಿಂಗಳು ರಜೆಯಲ್ಲಿ ಹೋದದ್ದರಿಂದ ಕಳೆದ ವಾರದ 'ಕೊಡಗು' ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಇವರ ಬದಲಿಗೆ ಮೈಸೂರಿನಿಂದ ಒಬ್ಬ ಉಮೇದ್ವಾರರನ್ನು ನೇಮಕ ಮಾಡಿದ್ದಾರಂತೆ. ಇದು ಬಹಳ ವ್ಯಸನಕರವಾದ ಸಂಗತಿ ... ಸರ್ಕಾರದಲ್ಲೇ ಈ ಹುದ್ದೆಗೆ ತಕ್ಕಂಥ ಪಾಂಡಿತ್ಯವನ್ನು ಹೊಂದಿರುವ ಉಮೇದುವಾರರು ಇದ್ದರೂ ಸಹ ಸರ್ಕಾರದವರು ಬೇರೆಯವರನ್ನು ಬೇರೆ ಕಡೆಯಿಂದ ಏಕೆ ತಂದರು ... ತಿಳಿಯಲಿಲ್ಲ. ಈ ಇನ್ಸ್‌ಪೆಕ್ಟರರು ಕೊಡಗು ಮತ್ತು ಬೆಂಗಳೂರಿಗೆ ಇನ್ಸ್‌ಪೆಕ್ಟರಾಗಿದ್ದು ಇವರ ಸಂಬಳದ ಸ್ವಲ್ಪ ಭಾಗವನ್ನು ಕೊಡಗು ಸರ್ಕಾರದಿಂದ ಕೊಡುತ್ತಾ ಇರುವಾಗ್ಯೂ ಇವರು ಈಗ ರಜೆಯಲ್ಲಿ ಹೋದಾಗ ಕೊಡಗಿನಿಂದ ಯಾ ಬೆಂಗಳೂರು ... ಗವರ್ನಮೆಂಟಿನಿಂದಲೇ ಒಬ್ಬ ಅರ್ಹರಾದಂಥ ಉಮೇದುವಾರರನ್ನು ನೇಮಕ ಮಾಡಿದ್ದೇ ಆದರೆ, ಏನಾಗುತ್ತಿತ್ತು; ಅಥವಾ ಗವರ್ನಮೆಂಟಿಗೆ ಯಾವ ವಿಧದಲ್ಲಾದರೂ ನಷ್ಟವಾಗುತ್ತಿತ್ತೋ ಎಂಬುದು ತಿಳಿಯಲು ಅಸಾಧ್ಯ. ಕೊಡಗಿನಲ್ಲಿ ಕೆಲವು ಗಜೆಟೆಡ್ ಆಫೀಸರು (Gazetted Officers) ಗಳು ಇರುವರು. ಇವರ ರಜೆ ಕಾಲದಲ್ಲಿ ಸ್ಥಳೀಕ ಸರ್ಕಾರದಿಂದಲೇ ತಕ್ಕ ಉಮೇದುವಾರರನ್ನು ನೇಮಕ ಮಾಡುತ್ತಿರುವರು ಮತ್ತು ಮಾಡಿದ್ದರು. ಆಗ್ಯೂ ಕೆಲವು ತಿಂಗಳುಗಳ ಹಿಂದೆ ಎಗ್ಸಿಕ್ಯೂಟಿವ್ ಇಂಜಿನಿಯರರು ರಜೆಯಲ್ಲಿ ಹೋಗಿದ್ದಾಗ್ಯೂ ಅವರ ಸ್ಥಳಕ್ಕೆ ಇಲ್ಲಿಂದಲೇ ಸಬ್ ಡಿವಿಜನಲ್ ಆಫೀಸರರವರನ್ನು ಎಗ್ಸಿಕ್ಯೂಟಿವ್ ಇಂಜಿನೀಯರಾಗಿ ನೇಮಕ ಮಾಡಿದ್ದಾಗ್ಯೂ ಈ ವಿದ್ಯಾ ಇಲಾಖೆಯಲ್ಲಿ ಸಹ ಅದೇ ಕ್ರಮವನ್ನು ಅನುಸರಿಸಿದ್ದೇ ಆದರೆ, ಅಂಥಾ ಉಮೇದುವಾರರಿಗೆ ಹೆಚ್ಚು ಉತ್ಸಾಹ ಕೊಟ್ಟಂತೆ ಆಗಿ ಅವರ ಕೆಲಸದಲ್ಲಿ ಹೆಚ್ಚು ಶ್ರದ್ಧೆ ತೆಗೆದುಕೊಳ್ಳುತ್ತಿದ್ದು ದೇಶವು ಉನ್ನತ ಸ್ಥಿತಿಗೆ ಬರುವುದರಲ್ಲಿ ಸಂದೇಹವೇ ಇರುತ್ತಿರಲಿಲ್ಲ—ಇನ್ನು ಮುಂದಾದರೂ ಇಂಥಾ ಸಂದರ್ಭದಲ್ಲಿ ಸರ್ಕಾರದವರು ಆದಷ್ಟು ಮಟ್ಟಿಗೆ ಸ್ಥಳೀಕ ಸರ್ಕಾರದಿಂದಲೇ ತಕ್ಕ ಉಮೇದುವಾರರನ್ನು ಆರಿಸುವರೆಂದು ಭಾವಿಸೆ.

"ಹಿತಚಿಂತಕ"

ಮಡಿಕೇರಿ ಮುನಿಸಿಪಾಲಿಟಿಯನ್ನು ಕುರಿತು.

ಅಯ್ಯಾ!

ನಮ್ಮ ಮುನಿಸಿಪಾಲಿಟಿಯು ... ಕೆಲವು ಜನರು ಈ ಗ್ರಾಮದಿಂದಲೇ ಹಣವನ್ನು ಕೊಡುವರು. ಈ ಊರು ದೊಡ್ಡದಿಗೆ ಮಾತ್ರ ಅಲ್ಲ. ಇದು ಜನಗಳಿಗೆ ಪ್ರಾಣಾಧಾರವೆಂದು ಈ ಕಡೆ 'ಜೋಡಿಕೆರೆ' ದಲ್ಲಿ ... ಕುಡಿಯುವ ... ಈ ಕಡೆ ಅದೇ ಹಾಳು ಮಾಡುವ ಸ್ಥಳದಿಂದ ಬರುತ್ತಿದೆ? ... ನೀರು ಮಾತ್ರವಾಗಿಲ್ಲವೆಂದು ... ಹೇಳಲಿಕ್ಕಾದೀತೇ? ... ಜನರ ಮನೆ ಮನೆಗಳ ಕೊಟ್ಟಿಗೆ ಇವು ... ಜಲ ... ಕೆರೆಯ ಬೋಧಿಸುತ್ತಿರುವಾಗ ಇಲ್ಲಿ ನಮ್ಮ ... ಮುಂದೆ ಅದಕ್ಕೆ ಅಕ್ಕಪಕ್ಕ ... ಚಿಕ್ಕದೇನು? ಇದಕ್ಕೆ ಅಧಿಕಾರಿಗಳು ಗಮನಕೊಡಬೇಡವೇ?

ಕಳೆದ ವರ್ಷ ಈ ಮಾರ್ಗ ಇಷ್ಟು ಹಾಳಾಗಿತ್ತಿಲ್ಲ ... ವರ್ಷ ನಾನು ನೋಡಿ ಈ ಮುನಿಸಿಪಾಲಿಟಿಯ ... ಈ 'ಹೊಲಸು' ಇರುವುದು ನಮ್ಮ ಆರೋಗ್ಯಕ್ಕೇ ಕೇಡೆಂದು. ನಮ್ಮ ಮುನಿಸಿಪಾಲಿಟಿಯಲ್ಲಿ ಸ್ಯಾನಿಟರಿ ಇನ್ಸ್‌ಪೆಕ್ಟರರು ... ದ್ದರೂ ಇವನ್ನು ಸುಧಾರಿಸಲು ಏಕೆ ಯುಕ್ತಿಸಿಲ್ಲವೆಂದೂ ... ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಗಮನಕೊಡಬೇಕಾಗಿದೆ.

ಇದೇ ನಾವು ... ಉತ್ಸವಕ್ಕೆ ಹೋಗಿದ್ದೆ ... ನಮಗೆ 'ಹೊಲಗೇರಿ' ಯಾಗಿ ಕಾಣುವುದಿಲ್ಲ. ... ವಾದ ಸರಿಕರಿ ಕಣ್ಣುಕಟ್ಟುವಷ್ಟು ಚಂದವಾಗಿರುವ ... ಅಚ್ಚುಕಟ್ಟಾದ ಮನೆ ಇವುಗಳನ್ನು ನೋಡಿ ನಾವು ... ದಪಟ್ಟೆವು. ಪಂಚಮರೂ ಈ ರೀತಿಯಾಗಿರಲು ... ಮೇಲೆಂದೆನ್ನಿಸಿಕೊಂಡವರ ಗ್ರಾಮದಲ್ಲಿ ಹೀಗೆ ... ರೋಗ್ಯವು ಹದಗೆಡುವುದು ನಮ್ಮ ಊರಿಗೇ ಕೆಡುಕಾಗಿದೆ.

ಇದಾದ ನಂತರ ನಾವು ದೇವಾಲಯಕ್ಕೆ ಬಂದೆವು ... ಮನೆಗಳು ಅವುಗಳ ಹಿತ್ತಲುಗಳು ... ತೃಪ್ತಿಕರವಾಗಿದ್ದವು. ಕೂರ್ಗ ಸರ್ವೆಂಟ್ಸ್ ಸೊಸೈಟಿಯ ಮನೆ ... ನೋಡಲು ಬಂದೆವು. ಅಲ್ಲಿನ ಬಡವರ ಮನೆಗಳ ... ಬಹಳ ಅಚ್ಚುಕಟ್ಟಾಗಿ ಕಂಡು ಬಂದುದರಿಂದ ಮನೆ ... ನೋಡಬೇಕೆನಿಸಿದರೂ ... ಬರಬೇಕಾಯಿತು.

ಕಳೆದ 'ಶಿಶು ಪ್ರದರ್ಶನದ' ಸಮಯದಲ್ಲಿ ಮಡಿಕೇರಿ ಮುನಿಸಿಪಾಲಿಟಿಯ ಕೆಲವು ಮನೆಗಳನ್ನು ನೋಡಿ ಅವುಗಳು ... ದುರಾಗಿರುವುದಕ್ಕೆ ಏನು ಮಾಡಬೇಕೆಂದು ಒಂದು ಸಭೆಯನ್ನು ಸ್ಥಳೀಕ ರೆಡ್ ಕ್ರಾಸ್ ಸಂಘದವರು ... ಆ ಸಭೆಯಲ್ಲಿ ಮೇ. ಗಳಾದ ಕೊಡಂದೇರ ಮಾದಪ್ಪ ಎಸ್. ಒನಪ್ಪನವರು, ... ಚೆಟ್ಟಪ್ಪನವರು, ... ಪೂವಯ್ಯನವರು, ಮತ್ತು ನಾನೂ ಇದ್ದೆವು. ನಾವು ... ಗ್ರಾಮದಾರ್ಗೆ ಹೋಗುವುದೇ ಒಳ್ಳೆಯದೆಂದು ... ಲ್ಲಿಗೆ ಹೋದೆವು. ಅಲ್ಲಿಯ ಮನೆ, ಸರಿಕರಿ, ದನಗಳ ... ಇವನ್ನು ಪರೀಕ್ಷಿಸಿದೆವು. ಸಂಗತಿಯು ಬಹು ಅತೃಪ್ತಿಕರವೆಂದು ಕಂಡು ಬಂದದ್ದರಿಂದ ಅದನ್ನು ಸುಧಾರಿಸಲಿಕ್ಕಾಗಿ ... ವು ಬರೆಯಲ್ಪಟ್ಟಿದೆ.

ಕಮಿಟಿಯ ಸದಸ್ಯರಾದ ನಾವು ಕೊಟ್ಟಿಗೆಗಳ ... ಹೋದಾಗ ದುರ್ಗಂಧ ಗಾಳಿಯ ಅನುಭವ ... ಕೊಟ್ಟಿಗೆಯಲ್ಲಿ ಹಾಕಲಾಗುತ್ತಿದ್ದ ಹೊಲಸುಗಳನ್ನು ...

ವರ್ತಮಾನ ಸಂಗ್ರಹ.

ಒಳದೇಶ.

ಎಕ್ಸಿಕ್ಯೂಟಿವ್ ಇಂಜನೀಯರಾದ ಮಿ. ಬರ್ಗರವರು ತಾ. 23ರಿಂದ ಆರು ತಿಂಗಳ ರಜೆಯಲ್ಲಿ ಹೋಗುತ್ತಾರೆ.

ಸೆಂಟ್ರಲ್ ಸಹಕಾರಿ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗೊಂದು ತಾ. 3—4—32ನೇ ಶನಿವಾರ ಬೆಳಗ್ಗೆ 11 ಗಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ನಡೆಯಿತು.

ಮಡಿಕೇರಿ ಆಸ್ಪತ್ರೆಯ ಸಬ್ ಅಸಿಸ್ಟೆಂಟ್ ಸರ್ಜನರಾದ ಮಿ. ಕೊಂಗಂಡ ಕಾರ್ಯಪ್ಪನವರು ಸಿವೋಸಿಸ್ ಕಾಯಿಲೆಯಿಂದ ತಾ. 20ರಲ್ಲಿ ಮಡಿಕೇರಿ ಆಸ್ಪತ್ರೆಯಲ್ಲಿ ಸ್ವರ್ಗಸ್ಥರಾದರೆಂದು ತಿಳಿಯಲು ವಿಷಾದಿಸುತ್ತೇವೆ.

'ಬಾಲ ಭಾರತಿ' ಎಂಬ ಹೆಸರಿನಿಂದ ಪ್ರಸಿದ್ಧಳಾದ ಬಾಲಹರಿದಾಸಿ ಯಡುಗಿರಿಯಮ್ಮನವರು ಈಗಾಗಲೇ ಸೋಮವಾರಪೇಟೆಗೆ ಬಂದು ಕೆಲವು ಹರಿಕೀರ್ತನೆಗಳನ್ನು ಮಾಡಿದರಂತೆ. ಇವರು ಶೀಘ್ರದಲ್ಲಿಯೇ ಮಡಿಕೇರಿಗೆ ಬರುವರೆಂಬ ವರ್ತಮಾನವಿದೆ.

ತಾ. 17ರಲ್ಲಿ ಕೊಡಗು ಎತ್ಲೆಟಿಕ್ ಎಸೋಸಿಯೇಶನಿನ ಓಪನ್ ಡಬಲ್ಸ್ ಟೆನ್ನೀಸ್ ಟೂರ್ನಮೆಂಟಿನಲ್ಲಿ ಮಿ. ಅಪ್ಪಾರಂಡ ಮಾದಪ್ಪ ಮತ್ತು ತಿಂಮಯ್ಯನವರೂ ಮತ್ತು ಓಪನ್ ಸಿಂಗಲ್ಸ್‌ನಲ್ಲಿ ಮಂಗಳೂರಿನ ಮಿ. ಉಗ್ರಪ್ಪನವರೂ ಮತ್ತು ಹೇಂಡಿಕೇಪ್ ಸಿಂಗಲ್ಸ್‌ನಲ್ಲಿ ಕೆ. ಎಸ್. ಶಂಕರನಾರಾಯಣರೂ ಗೆದ್ದಿರುವರು.

ತಾ. 30ರಲ್ಲಿ ಪೊನ್ನಂಪೇಟೆ ಶಾರದಾಶ್ರಮದಲ್ಲಿ ಜರಗಲಿಕ್ಕಿರುವ ಮಹೋತ್ಸವಕ್ಕೆ ಈಗಾಗಲೇ ವಾಲಂಟೀಯರುಗಳು ಸದಾ ಅಶ್ರಮಕ್ಕೆ ತೆರಳಿರುವರು. ಇವರನ್ನು ಶ್ರೀ ಗಣೇಶ ಸರ್ವೀಸಿನವರು ಮೊಟಾರು ಬಸ್ಸಿನಲ್ಲಿ ಫ್ರೀಯಾಗಿ ಒಯ್ದರೆಂದು ತಿಳಿಯಲು ಬಹಳ ಸಂತೋಷಿಸುತ್ತೇವೆ. ಇವರ ಭಕ್ತಿಯನ್ನು, ಸಹಾಯವನ್ನು ಎಷ್ಟು ಕೊಂಡಾಡಿದರೂ ಸಾಲದು.

ವೀರರಾಜಪೇಟೆ ಹೈಸ್ಕೂಲಿನ ಟೀಚರಾಗಿರುವ ಮಿ. ಪಟ್ಟಮಾಡ ಪೂವಯ್ಯನವರನ್ನು ಮಡಿಕೇರಿ ಸೆಂಟ್ರಲ್ ಹೈಸ್ಕೂಲಿಗೂ, ಮಡಿಕೇರಿ ಹೈಸ್ಕೂಲಿನಿಂದ ಸೈನ್ಸ್ ಟೀಚರಾದ ಮಿ. ಕೃಷ್ಣಸ್ವಾಮಿ ಐಯ್ಯರ್‌ರವರನ್ನು ವೀರರಾಜಪೇಟೆ ಹೈಸ್ಕೂಲಿಗೂ ವರ್ಗಾಯಿಸಿರುವರು. ವೀರರಾಜಪೇಟೆ ಸ್ಕೂಲಿನ ಶಿಕ್ಷಕರಾಗಿದ್ದ ಮಿ. ಚೇನಂಡ ಮಂದಣ್ಣನವರನ್ನು ಮಡಿಕೇರಿಯ ಸ್ಕೂಲ್ ಸಬ್ ಅಸಿಸ್ಟೆಂಟ್ ಇನ್ಸ್‌ಪೆಕ್ಟರವರ ಆಫೀಸಿಗೂ, ಅದೇ ಆಫೀಸಿನ ಮಿ. ಅಚ್ಯುತರಾಯರನ್ನು ವೀರರಾಜಪೇಟೆಗೂ ವರ್ಗಾಯಿಸಿರುವರಾಗಿ ವದಂತಿ.

ತಿದ್ದುಪಡಿ.

ಕಳೆದ ವಾರ ಪ್ರಕಟವಾದ ಶ್ರೀಮತಿ ಡಿ. ನಾಗಮ್ಮನವರ ಭಾಷಣದ 2ನೇ ಪೇರಾದ 2ನೇ ಪಂಕ್ತಿಯಲ್ಲಿ "ಹಂಕು" ಶಬ್ದವನ್ನು ಎಂಬ ಮಾತು ಪ್ರಿಂಟಾಗಿದೆ. ಮೂಲದಲ್ಲಿ 'ಹಕು' ಎಂಬ ಮಾತು ಇಂದಿಲ್ಲ. ಇದು ಮೊಳೆ ಜೋಡಿಸುವಾಗ ಆದ ತಪ್ಪು—ಈ ತಪ್ಪಿದ್ದಕ್ಕೆ ಕ್ಷಮಿಸಬೇಕೆಂತ ಕೋರುತ್ತೇವೆ. ಇದನ್ನು "ನನ್ನ ಕರ್ತವ್ಯವೆಂದರೆ" ಎಂದು ತಿದ್ದಿಕೊಂಡು ಓದಬೇಕಾಗಿ ಕೇಳಿಕೊಳ್ಳುತ್ತೇವೆ.

ಹಿಂದೂದೇಶ.

ಕಾನ್‌ಪುರದ ತಾಜು ಮ. ಕ., ಫ್ರೊ. ... ಫೀ ... ಬಂದ ... ರು ಸ್ವಯಂಸೇವಕರು ಪಿಕೆಟಿಂಗ್ ... [illegible] ... ಪೋಲೀಸಿನವರಿಂದ ಬಂಧಿಸಲ್ಪಟ್ಟರು.

ಕಡಲೂರಿನ ಪೆರುಮಾಳ್ ಎಂಬ ಹೆಡ್ ಕಾನ್‌ಸ್ಟೇಬಲ್ ಮತ್ತೊಬ್ಬ ಕಾನ್‌ಸ್ಟೇಬಲನ ಮನೆಯನ್ನು ರಾತ್ರಿ ಸ್ವತೇ ಭಂಗಾರದ ಒಂದು ಸರಪಣಿಯನ್ನು ಕಳವು ಮಾಡಿದನು. ... ನಡೆಯುತ್ತಿದೆ.

ಕರಾಚಿಯಲ್ಲಿ ಇಂಪೀರಿಯಲ್ ಬ್ಯಾಂಕು, ಕರೆನ್ಸಿ ಆಫೀಸು, ಪೋಸ್ಟು ಆಫೀಸು, ಹಡಗುಕಟ್ಟೆಗಳು ಮೊದಲಾದುವೆಲ್ಲಾ ... ಗು ಮಾಡಲ್ಪಡುತ್ತಿವೆ. ತಾ. 13ಕ್ಕೆ ಆ ಸಂಬಂಧವಾಗಿ ... ಮಂದಿ ಕೈದು ಮಾಡಲ್ಪಟ್ಟರು.

... ಸಂಬಾಯಿಯ ... ಫಕೀರನು ವರ್ಷಾಂತರಗಳಿಂದ ಭಕ್ತಿ ಕೂಡಿಸಿಟ್ಟ ರೂ. ೧೬೧೦ ಗಂಟನ್ನು ನಾಲ್ವರು ಮನುಷ್ಯರು ಹಣ್ಣು ಕೊಟ್ಟು ಪುಸಲಾಯಿಸಿ ಎತ್ತಿ ಓಡಿದರು. ... ರನ್ನು ಪೋಲೀಸರು ಕೈದು ಮಾಡಿರುತ್ತಾರೆ.

... ಸಿರಸಿ ತಾಲೋಕಿನ ಹಾರುಗೇರಿ ಗ್ರಾಮದಲ್ಲಿ ಒಂದು ... ಯ ಶಾಲೆ. ಒಂದುವರೆ ವರ್ಷದಿಂದ ನಡೆಯುತ್ತಾ ... ಕಳೆದ 30ನೇ ತಾರೀಖಿನ ರಾತ್ರಿಯಲ್ಲಿ ಯಾರೋ ಹಚ್ಚಿ ಸುಟ್ಟು ಬೂದಿಯಾಗಲು ಮಾಡಿರುವರು.

... ಬಾಗಡವೆಂಬ ಗ್ರಾಮದಲ್ಲಿ ಹುಲ್ಲೆ ವಸೂಲಿಗಾಗಿ ... ಹೋದರು. ಕೆಲವರು ಹಣವಿಲ್ಲೆಂದರು. ಏತಕ್ಕೇ ... ಕರೆಂಬವರೊಬ್ಬರು ತಿರ್ವೆಯನ್ನು ಕೊಟ್ಟರು. ಅದ ... ಮಗನಿಗೆ ಸಿಟ್ಟು ಬಂತು. ಮನೆಬಿಟ್ಟು ನಡೆದೇಬಿ

ತಾ. 11ರಲ್ಲಿ ಭಾಷಣ ಮಾಡಿದ ಆರೋಪದಿಂದ ಕರ್ಮಯೋಗಿ ಪತ್ರದ ರಿಪೋರ್ಟರಾದ ಶ್ರೀ ಯನ್. ಡಿ. ದೇಶಪಾಂಡೆಯವರನ್ನು ಹಿಡಿದಿದ್ದಾರೆ ಮತ್ತು ಇವರ ವಾಸವಾಗಿದ್ದ ಅವರ ತಮ್ಮನ ಮನೆಯ ಶೋಧನೆಯನ್ನು ಝಡ್ತಿ ಮಾಡಿರುವರು.

ಪಂಡಿತ ಜವಾಹಿರ್‌ಲಾಲರ ವೈದ್ಯರೂ ಲಕ್ನೋ ವಿಶ್ವವಿದ್ಯಾನಿಲಯದಲ್ಲಿ ಶಾಸ್ತ್ರ ಪರಿಶೋಧಕರೂ ಆದ ಪಂಡಿತ ಶ್ರೀಕೃಷ್ಣನಾಥ ... ರವರು ಶಾಸನೋಲ್ಲಂಘನಾಪರಾಧಕ್ಕಾಗಿ ೨ ... ತಿಂಗಳ ಕಠಿಣ ಶಿಕ್ಷೆ ಮತ್ತು 200 ರೂ. ದಂಡ ವಿಧಿಸಲ್ಪಟ್ಟರು.

ಡಿಲ್ಲಿಯಲ್ಲಿ ಕಾಂಗ್ರೆಸು ಸಭೆಯನ್ನು ಜರಗಿಸುವ ಉದ್ದೇಶದಿಂದ ಸರಕಾರದ ತಡೆಯನ್ನು ಗಣಿಸದೆ ಸನ್ನಾಹಗಳು ನಡೆಯುತ್ತಿವೆ. ಸರೋಜಿನಿ ನಾಯಡುರವರೂ ಮಾಲವೀಯರೂ ಆ ಸಂಬಂಧವಾಗಿ ಕೆಲಸ ಮಾಡುತ್ತಿದ್ದಾರೆ.

ಮಿದ್ನಾಪುರದ ಕಾಂಗ್ರೆಸಿನ ಮುಂದಾಳಾದ ಶ್ರೀ ಪೂರ್ಣಾನಂದ ಕಿನ್ನಾರರವರಿಗೆ ಅರ್ಡಿನೆನ್ಸಿನಲ್ಲಿ ಸ್ಪೆಶಲ್ ಪೋಲೀಸ್ ಆಫೀಸರಾಗಬೇಕೆಂದು ಹುಕುಂ ಮಾಡಿದ್ದರು. ಅದಕ್ಕೆ ಅವರು ಹುಕುಮನ್ನು ಅನಾದರ ಮಾಡಲು ಮೇಜಿಸ್ಟ್ರೇಟರು ಇವರಿಗೆ 6 ತಿಂಗಳ ಸಖ್ತ ಶಿಕ್ಷೆಯನ್ನು ವಿಧಿಸಿರುವರು.

ಬೇಕನೋರಿನ ಆಸ್ಪತ್ರೆಯಲ್ಲಿ ಕ್ರಾಂತಿಕಾರನಾದ ಪ್ರೇಮ್‌ಚಂದನೆಂಬವನು ಚಿಕಿತ್ಸೆ ಹೊಂದುತ್ತಿದ್ದನು. ಈತನ ಮೇಲೆ ಪೊಲೀಸರ ಕಾವಲಿತ್ತು. ... ಪೋಲೀಸರ ಕಣ್ಣಿಗೆ ... ತಪ್ಪಿಸಿ ಓಡಿಹೋದನು. ಈತನನ್ನು ಹಿಡಿದು ಕೊಟ್ಟವರಿಗೆ ೫೦೦ ರೂ. ಬಹುಮಾನ ಕೊಡುವರು.

ಪಿಕೇಟಿಂಗ್ ಭಂಗ ಮಾಡಿದುದಕ್ಕಾಗಿ ಸೋಲಾಪುರದ ಪ್ರಮುಖರಾದ ಶ್ರೀ ಗುಲಾಬಚಂದರ ವಿಚಾರಣೆಯು ನಡೆದು, ಮೇಜಿಸ್ಟ್ರೇಟರು ಅವರಿಗೆ ಒಂದುವರೆ ವರ್ಷ ಸಾದಾ ಶಿಕ್ಷೆಯೂ 20,000 ರೂ. ದಂಡ ಅಥವಾ ೩ ತಿಂಗಳ ಹೆಚ್ಚು ಶಿಕ್ಷೆ ಎಂದು ತೀರ್ಮಾನಿಸಿದರು. ಇವರಿಗೆ 'ಬಿ' ಕ್ಲಾಸು ಕೊಡಲಾಗಿದೆಯಂತೆ.

ಮುಂಬಯಿಯಲ್ಲಿ ಶ್ರೀಯುತ ವಾಲಚಂದ ಹೀರಾಚಂದರೆಂಬ ಪ್ರಸಿದ್ಧ ವ್ಯಾಪಾರಿಗಳ ತಮ್ಮನಾದ ಶ್ರೀಯುತ ಗೋಕುಲಚಂದ ಹೀರಾಚಂದ ಎಂಬವರಿಗೆ 'ಪಿಕೇಟಿಂಗ'ನ್ನು ಮುರಿದುದಕ್ಕಾಗಿ 18 ತಿಂಗಳ ಶಿಕ್ಷೆಯೂ, 20,000 ರೂಪಾಯಿಗಳ ಜುಲ್ಮಾನೆಯೂ ವಿಧಿಸಲ್ಪಟ್ಟಿತು. ಇದು ವರೆಗೆ ಇಂಥ ಆರೋಪಣೆಯಲ್ಲಿ ಇಷ್ಟು ದೊಡ್ಡ ದಂಡವು ವಿಧಿಸಲ್ಪಡಲಿಲ್ಲ.

ಕಾಕಿನಾಡದ ರಾಷ್ಟ್ರೀಯ ನದಿಯ ದಂಡೆಯ ಮೇಲೆ ಸಭೆ ನಡೆಸಿದ್ದಕ್ಕೆ ... ಸಾವಿರಗಟ್ಟಲೆ ಜನರು ನೆರೆದಿದ್ದರು. ಆಗ ನಾಲ್ವರು ಸ್ವಯಂಸೇವಕರು ನಾಡಗುಡಿಯನ್ನೂ, ಹಸ್ತಪತ್ರಿಕೆಗಳನ್ನೂ ಹಿಡಿದುಕೊಂಡು ಅಲ್ಲಿಗೆ ಬಂದರು. ಪೋಲೀಸರು ಅವರನ್ನು ಹಿಡಿದರು. ಒಬ್ಬ ಸ್ವಯಂಸೇವಕನು ಸ್ವರಾಜ್ಯ ಪತಾಕೆಯನ್ನು ಲಜಪತರಾಯರ ಮೂರ್ತಿಯ ಮೇಲೆ ಏರಿಸಿದ್ದರಿಂದ ಬಂಧಿಸಲ್ಪಟ್ಟನು.

ಸಿದ್ದಾಪುರದಲ್ಲಿ ರಾಷ್ಟ್ರೀಯ ನಿಶಾನೆ ಹಚ್ಚಬಾರದೆಂದು ಪೋಲೀಸರು ಹುಕುಂ ಮಾಡಿದರು. ಹುಕುಮನ್ನು ಮುರಿದು ಜನರು ಪ್ರತಿಯೊಂದು ಮನೆಯ ಮಾಳಿಗೆಯ ಮೇಲೆ ನಿಶಾನೆ ಏರಿಸಿದರು. ಪೋಲೀಸರು ಇವನ್ನು ತೆಗೆದರು. ಅವಿಯ ನಿಶಾನೆ ಹೋದ ಬಳಿಕ ಕಾಗದದ ನಿಶಾನೆ ಮಾಡಿ ಹಚ್ಚಿದರು. ಇವನ್ನೂ ತೆಗೆದರು. ಬಳಿಕ ಪ್ರತಿಯೊಂದು ಮನೆಯ ಗೋಡೆಯ ಮೇಲೆ ನಿಶಾನೆ ಬರೆದರು.

ಸ್ವದೇಶೀ ಸತ್ಯಾಗ್ರಹಿಯ ಶೃಂಗಾರಕ್ಕೆಗೆ ಯಾವ ಕಷ್ಟನಷ್ಟಗಳು ಸಂಭವಿಸಿದರೂ 7 ವರ್ಷದ ವರೆಗೆ ಪ್ರಭುತ್ವದವರ ರಕ್ಷಣೆ, ಪ್ರೋತ್ಸಾಹಗಳು ಕೊಡಲ್ಪಡುವುವೆಂದು ಈಚೆಗೆ ಕೊಟ್ಟ ಭರವಸೆಯ ಮೇಲೆ ಫಲವತ್ತ ... ದೇಶದ ಬೇರೆ ಬೇರೆ ಭಾಗಗಳಲ್ಲಿ 15 ಸಕ್ಕರೆ ಕಾರ್ಖಾನೆಗಳ ಸ್ಥಾಪನೆಗೋಸ್ಕರ ಏರ್ಪಾಡು ನಡೆಯುತ್ತಿದೆ. ಇದಕ್ಕಾಗಿ ಮುಂದಿನ ಪುದಲ್ಲಿ 20,000 ಎಕ್ರೆ ಭೂಮಿಯು ಕಬ್ಬಿನ ವ್ಯವಸಾಯಕ್ಕಾಗಿ ತೆಗೆದುಕೊಳ್ಳಲ್ಪಟ್ಟಿರುವುದು.

ಮಾಳವೀಯರ ಕಾರ್ಯದರ್ಶಿ ಎಂಬವರು ತಮ್ಮ ಆಂಗ್ಲ ಕಾರ್ಯದರ್ಶಿಯನ್ನು ಗೃಹಿಣಿಯ ಬೇಕಾಗಿರುವರೆಂದು ಸುದ್ದಿ. 'ಸುಳ್ಳು!' ಎಂದು ಮಾಳವೀಯರ ನಿಜವಾದ ನಗು! (ಈ ಆಂಗ್ಲ ಸ್ತ್ರೀಯು ಮೊದಲು ಮಾಳವೀಯರ ಕಾರ್ಯದರ್ಶಿಯಾಗಿ, ಆಬಳಿ ಕಾಲವಾದ ಮೇಲೆ ಕಾರ್ಯದರ್ಶಿ ಜೊಂದಿಗೆ ಇಂಡಿಯಕ್ಕೆ ಬಂದು ಕಾಶಿಯಲ್ಲಿ ಮುಸಲ್ಮಾನ ಕಾಗಿ ಮತಾಂತರ ಹೊಂದಿ 'ಆಯಿಷ' ಯಾದವಳು.)

'ಯಾರಾದರೂ ಹೊಸಬರು ನಿಮ್ಮ ಗ್ರಾಮಕ್ಕೆ ಬಂದು ಕಾಂಗ್ರೆಸಿಗೆ ಹಣ ಕೊಡಿರೆಂದು ಗ್ರಾಮವಾಸಿಗಳೊಡನೆ ಕೇಳಿದರೆ, ಕಾಂಗ್ರೆಸ್ ಕಾರಣವನ್ನು ಬೋಧಿಸಿದರೆ, ಕೂಡಲೇ ಪೋಲೀಸರಿಗೆ ತಿಳಿಸಬೇಕು. ಇಂಥವರ ಬೋಧನೆಗೆ ಕಿವಿಗೊಡಬಾರದು. ಎಲ್ಲರಿಗೂ ಎಚ್ಚರ ಕೊಡಬೇಕು' ಎಂದು ನಾಗಪುರ ... ಸಾಗರ ಜಿಲ್ಲಾ ಕಲೆಕ್ಟರು ತಮ್ಮ ಕೈಕೆಳಗಿನ ... ಗ್ರಾಮಾಧಿಕಾರಿಗಳಿಗೆ ಸರ್ಕ್ಯುಲರು ಕಳುಹಿಸಿರುವರು.

'... ಕೋಟ ಕುರಿಯು ಕಾದಾಡುತ್ತದೆ, ಮತ್ತು ಸಂಜೆಯಲ್ಲಿ ನದಿಯ ದಂಡೆಯ ಮೇಲೆ ಕುಸ್ತಿಯು ನಡೆಯುವುದು, ನೋಡ ಬನ್ನಿ.' ಎಂದು ಕಟಕ ಪಟ್ಟಣದಲ್ಲಿ ... ಡಂಗೂರ ಹೊಡೆದರು. ಸಾವಿರಾರು ಜನರು ನೆರೆದರು. ಹುಲಿಯ ಕೋಟ ಕುರಿಯ ಕುಸ್ತಿಯ ಬದಲಾಗಿ ಕಾಂಗ್ರೆಸಿನ ಸ್ವಯಂಸೇವಕರ ಕಾಯಿದೆ ಭಂಗದ ವ್ಯಾಖ್ಯಾನ ಪ್ರಾರಂಭ

ವಾಯಿತು. ಪೋಲೀಸರು ಇವರನ್ನು ಹಿಡಿದು ಜನರಿಗೆ ಮನೆಗೆ ಹೋಗಹೇಳಿದರು.

ರಾಷ್ಟ್ರೀಯ ವಾರದ ದೆಸೆಯಿಂದ ಉತ್ತರಿಯಲ್ಲಿ ರಾಷ್ಟ್ರಧ್ವಜವಂದನೆಯಾಯಿತು. ಅನೇಕ ಜನರು ಸೇರಿದ್ದರು. ಪೋಲೀಸರು ಇವರನ್ನು ತಡೆಯಲಿಲ್ಲ. ವಂದನೆಯಾದ ಬಳಿಕ ಸ್ವಯಂಸೇವಕರು ಪರದೇಶೀ ಬಟ್ಟೆಯ ಅಂಗಡಿಯ ಮುಂದೆ ಪಿಕೆಟಿಂಗ್ ಮಾಡಿದರು. ಆಗೂ ಯಾರ ಗೋಜಿಗೂ ಹೋಗಲಿಲ್ಲ. ಸಾಯಂಕಾಲದಲ್ಲಿ ಮತ್ತೆ ಪಿಕೆಟಿಂಗ್ ಮಾಡಲು ಪೋಲೀಸರು ಸ್ವಯಂಸೇವಕರನ್ನು ನೆಲಕ್ಕೆ ಬೀಳುವ ತನಕ ಬೆತ್ತದಿಂದ ಹೊಡೆದರು. ಆ ಮೇಲೆ ಪರದೇಶೀ ಬಟ್ಟೆ ಇಟ್ಟಿಟ್ಟ ಅಂಗಡಿಗಳನ್ನು ಬಂದು ಮಾಡಿದರು.

ನಾಗಪುರದ 14 ವರ್ಷ ಪ್ರಾಯದ ಹುಡುಗಿಯೊಬ್ಬಳ ಮುಖವನ್ನು ತೊಳೆದಷ್ಟೂ ಮುಖದ ಮೇಲೆ ಮಸಿ ಕಲೆಗಳು ಕಾಣುತ್ತಿವೆಯಂತೆ; ಆಕೆಯ ಪೆಟ್ಟಿಗೆಯೊಳಗಿನ ವಸ್ತ್ರಗಳೂ, ಚಾಪೆಯೂ ಕಪ್ಪಾಗುತ್ತವೆ ಎಂದು ಒಂದು ವಿಚಿತ್ರ ವರ್ತಮಾನ. ಹುಡುಗಿಯ ಮುಖವನ್ನು ತೊಳೆದು, ಸುತ್ತಲೂ ಕಾವಲಿಟ್ಟರು; ಕೆಲವು ಕ್ಷಣಗಳಲ್ಲಿ ಪುನಃ ಮಸಿ ಕಲೆಗಳು ತಲೆದೋರಿದವು. ಅವುಗಳನ್ನೂ ತೊಳೆಯಲಾಗಿ ಮತ್ತೂ ಕಪ್ಪೇರುವುದೇ ತೋರಿದೆ! ಗೋಣಿ ತುಂಬಾ ಮಸಿ ನುಂಗಿಲ್ಲವಷ್ಟೇ? ಅಥವಾ ಇದು ಕಾಯಿ ದೇವತೆಯೇ?

ಮುಂಬಯಿಯ ಸುಪ್ರಸಿದ್ಧ ಸಾಲಿಸಿಟರರಾದ ಶ್ರೀ. ಬಾಲಗಂಗಾಧರ ಖೇರರವರು ಚಳವಳಿಯ ಮೂಲಕ ನಾಸಿಕದ ಜೈಲಿನಲ್ಲಿದ್ದಾರೆ. ಇವರ ತಂದೆಯವರ ಆಯುಷ್ಯ ಪ್ರಮಾಣ ತೀರಿತು. ಅವರನ್ನು ಕಾಣಲು ಪೆರೋಲ ಮೇಲೆ ಬಿಡಬೇಕೆಂದು ಶ್ರೀ. ಖೇರರವರು ಸರಕಾರಕ್ಕೆ ಪತ್ರ ಬರೆದರು. ಚಳವಳಿಯಲ್ಲಿ ಸೇರುವದಿಲ್ಲೆಂದೂ, ಈ ಹಿಂದಿನ ಕೃತ್ಯಗಳಿಗಾಗಿ ಕ್ಷಮೆ ಬೇಡಿಕೊಳ್ಳಬೇಕೆಂದೂ ಸರಕಾರದವರು ಉತ್ತರ ಬರೆದರು. ಅಭಿಮಾನಶಾಲಿಯಾದ ಶ್ರೀ. ಖೇರರು ಕರಾರಿಗೊಪ್ಪಲಿಲ್ಲ. ತಂದೆಯವರು ಸ್ವರ್ಗಸ್ಥರಾದರು. ಸವಿಮಗನ ಅಪ್ಪನು ದಿನಕರ್ಮ ಮಾಡುವರು.

ಅಹಮ್ಮದಾಬಾದಿನ ರಮೇಶ ಮೆಹತಾ ಎಂಬ ಯುವಕನು, 'ಗುಜರಾತ್ ಪ್ಯೂರ್' ಎಂಬ ಹೆಸರಿಟ್ಟುಕೊಂಡು, ಪೋಲೀಸ್ ಅಧಿಕಾರಿಗಳ ಕೊಲೆ ಮಾಡುವೆನೆಂದು ಬೆದರಿಸಿ ಬರೆದ ಪತ್ರಗಳನ್ನು ನಗರದೊಳಗೆ ಅಲ್ಲಲ್ಲಿ ಗೋಡೆಗೆ ಹಚ್ಚುತ್ತಲೂ; ತೀಕ್ಷ್ಣ ಶೈಲಿಯಲ್ಲಿ ಖಾರವಾದ ಲೇಖಗಳನ್ನು ಬರೆಯಬೇಕೆಂದು ಎಚ್ಚರಿಕೆಕೊಟ್ಟು ಪತ್ರಿಕಾ ಸಂಪಾದಕರಿಗೆ ಪತ್ರ ಬರೆಯುತ್ತಲೂ ಇರುವನೆಂದು ಪತ್ತೆಯಾಗಿ ಪೋಲೀಸರ ಕೈಸೆರೆಗೊಳಗಾಗಿರುವನು. ಇವನು ಸಾರಾಭಾಯಿ ಮಗನ್‌ಲಾಲ್ ಎಂಬವರ ಮನೆಯನ್ನು ಪ್ರವೇಶಿಸಿ, ರಿವಾಲ್ವರ್ ತೋರಿಸಿ, ೧೦೦ ರೂಪಾಯಿಗಳನ್ನು ಕೊಡಬೇಕೆಂದು ಗದರಿಸಿದನಂತೆ. ಝಡ್ತಿ ಮಾಡಿದಾಗ ಕಿಸೆಯಲ್ಲಿ ಎರಡು ರಿವಾಲ್ವರುಗಳು ದೊರೆತವೆ; ಟೊಪ್ಪಿಯಲ್ಲಿ ಗುಜರಾತ್ ಪ್ಯೂರ್ ಎಂದು ಬರೆದ ಕರಪತ್ರಗಳು ದೊರೆತಿವೆ. ಇವನನ್ನು ಕೈದುಮಾಡಿ ಸೆರೆಯಲ್ಲಿಟ್ಟರು. ರಾತ್ರಿ ವೇಳೆಯಲ್ಲಿ ತಪ್ಪಿಸಿಕೊಳ್ಳುವೆನೆಂದು ಕಿಟಕಿಯಿಂದ ೨೦ ಅಡಿ ಹಾರಿ, ಏಟು ಹೊಂದಿದನು. ಆಸ್ಪತ್ರೆಯಲ್ಲಿ, ಪೋಲೀಸ್ ಪಹರೆಯಲ್ಲಿ, ಚಿಕಿತ್ಸೆಯಾಗುತ್ತಿದೆ.

ವಿದೇಶ.

ಬ್ರಿಟಿಷರ ಉಕ್ಕಿನ ವ್ಯಾಪಾರವನ್ನು ಉತ್ಕರ್ಷಗೊಳಿಸಲು ಹೊರಗಣ ದೇಶಗಳಿಂದ ಇಂಗ್ಲೆಂಡಿಗೆ ಬರುವ ಉಕ್ಕಿನ ಮೇಲೆ ಶೇಕಡ 30ರ ಕರವನ್ನು ಹೊರಿಸುವ ಆಲೋಚನೆ!

ಹಿಂದೂದೇಶದ ಸಂಚಾರವನ್ನು ಮುಗಿಸಿ ಲಂಡನ್ನಿಗೆ ... ಪೆಟರರೂ, ... ಇಲ್ಲಿಯ ಚಳವಳಿ ಸಂಗತಿಗಳನ್ನಲ್ಲಿ ವಿವರಿಸುತ್ತಿದ್ದಾರೆ. ಕೇಳುವರು ಕೇಳುವರೇ?

ಚೀನಾ ಸೇನಾಪತಿಯಾದ ಜನರಲ್ ... ಹೇಜನು ಜಪಾನರ ಕಡೆಗಿರುವಂಥ ಮನಸ್ಸು ... ನೆಂಬ ಸಂಶಯ ಹುಟ್ಟಿ, ಚೀನರು ಆತನ ಕ್ರುದ್ಧರಾಗಿ ಆತನನ್ನು ಕೊಂದೇ ಹಾಕಿ...

ಅಮೇರಿಕದ ಲಿಂಡ್‌ಬರ್ಗ್ ಸಾಹೇಬರ ... ರು) ಕಳ್ಳರಿಗೆ 50,000 ಡಾಲರುಗಳನ್ನು ... ದರೆ ಮಗು ಬರಲಿಲ್ಲ. ಕಳ್ಳರಲ್ಲಿ ... ಈಗ ಕಳ್ಳರು ನೋಟುಗಳನ್ನು 50,000 ... ಚ್ಚಿಸಿರುವರಂತೆ.

ಜನರಲ್ ಕ್ರೋಯ್ಯುಸರ್, ... ಬರ್ಟ್ ಮೆಸೈಲ್ ಮುಂತಾದ ... ದೀ ಸಿಪಾಯಿಗಳೊಂದಿಗೆ ಕಳೆತು ... ಧ್ವಜಾರೋಹಣ ಮಾಡಿದ್ದ ... ಧಿಬ್ಬಸಿಕೆಯನ್ನು ... ಸ್ಕಾಂಡ್ ಲೆಗ್ ...

ವ್ಯಾಪಾರ ದಂಗೆ ...

'ಗುಪ್ತ ಚೋದಕಾ ...'

ಫ್ರಾನ್ಸಿನ 'ಶ್ರೀಮಾ...—ಯಂ. ಎಸ್. ... ನ್ನು ದರ್ಶಿಸಿದ ... ಕಳಿಗಿ, ಅನೇಕ ... ವಳು.

ನೆ ಇಲ್ಲ; ಏಕೀಕರಣವಿಲ್ಲ. ಇಂಥ ಸ್ಥಿತಿಯಲ್ಲಿ ಸಾಗಿದ ಐಕ್ಯತೆ ಉಳಿಯಲಾಗದು. ಯಾವ ತರದ ಸುಖವೂ ಆಗಲಾರದು. ಹಿರಿಯರ ಪದ್ಧತಿಯಂತೆ ಊರಾಗಿಗೆ ಮೋಚು ಪಂಚ ಲು, ಅಟಸೋಟಗಳನ್ನು ಮಾಡುತ್ತ ಹೋಗಬೇಕು. ಅವೆಲ್ಲವುಗಳಲ್ಲಿ ನೀತಿಯ ಜರಿ, ಧರ್ಮದ ಅಭಾವ ಮಾತ್ರ ಆಡಕ ವಾಗಿರಲಿಕ್ಕೆಬೇಕು. ಪ್ರೇಮಸಂವರ್ಧನೆಯಾಗುವಂಥವುಗಳ ನ್ನು ಮಾತ್ರ ಪ್ರಕೃತಿಯಲ್ಲಿರಬೇಕು. ಹೀಗೆ ಮಾಡುವದರಿಂದ ಪ್ರೀತಿ ವಿಶ್ವಾಸ ನೀತಿ, ಒಕ್ಕಟ್ಟು ವಿದ್ಯಾವಿನೋದ ಮುಂತಾದವುಗಳು ವೃದ್ಧಿಂಗತವಾಗುವವು.

೫. ಹಳ್ಳಿಗಳಲ್ಲಿ ಪ್ರಾಚೀನ ಕಾಲದಿಂದಲೂ ನಡೆಗುತ್ತ ಬಂದಿರುವ ಧಾರ್ಮಿಕ ಕೃತ್ಯಗಳು, ಅಂದರೆ ರಥೋತ್ಸವ, ಪ್ರತ್ಯಕ್ಷ ಪ್ರಯೋಜನ, ಭಕ್ತಿಭಾವ ಮೊದಲಾದವುಗಳು. ... ಟ್ಟು, ಇಕ್ಕಾಟ ಕಿರ್ತ್ಯಾಟಗಳ ಮೂಲಕ ಮೂಲೆಗೆ ಬೀಳಹತ್ತಿರುವವು. ಇದರಿಂದ ಸ್ಮೃತಿಕಹ್ರಾಸ ಒಂದೇ ಅಲ್ಲದೆ, ಸಂಘಟನೆಗೆ ಧಕ್ಕೆ ತಗಲಿ ಕಳಚಿ ಹೋಗ ಹತ್ತಿವೆ. ಹಳ್ಳಿಯ ಮುಂದಾಳುಗಳು ಆಳವಾಗಿ ಆಲೋಚಿಸಿ ಬಿಡ ತಂಟೆಗಳನ್ನು ತಮ್ಮಲ್ಲಿಯೇ ತಿದ್ದಿಕೊಂಡು ಇಂಥ ಕೃತ್ಯಗಳು ತಪ್ಪಗೆ ಆಗದಂತೆ ಎಲ್ಲಿಡೆಯಲ್ಲಿಯೂ ಜೋರಿನಿಂದ ಸಾಗಿಸಿದರೆ ಹಳ್ಳಿಗಳ ಪುನರ್ಘಟನೆಗೆ ಸರ್ವತಃ ಪ್ರಾಯವಾದ ಅನುಕೂಲವಾಗುವದಲ್ಲದೆ, ದೇಶದ ಎಳ್ಗೆಯಾದರೂ ಒಕ್ಕಟ್ಟಿನಿಂದ ಸಾಗುವದು.

೬. ಹಳ್ಳಿಗಳಲ್ಲಿ ಸ್ಥಾಪಿಸಲ್ಪಟ್ಟಿರುವ ಸಹಕಾರ ಸಂಘಗಳು ಗ್ರಾಮಂಟ ಹಣ ಪೂರೈಸಿಕೊಡುವ ಸಂಕಾರದ ಸಂಸ್ಥೆಗಳು ಗ್ರಾಮ ಸಂಘಟನೆಗೆ ಬಲವಾದ ಸಹಾಯಕಾರಿಯಾಗಿರುವವು. ಆದರೆ ಜನರು 'ಕೋಆಪರೇಟಿವ್ ಆಕ್ಟಿನ' ಗುಟ್ಟನ್ನು ಅರಿತು ಸಮಯಾನುಸಾರವಾಗಿ ನಡೆಯುತಿದ್ದರೆ, ಈಗಿನಂತೆ ಬಹಳ ಕಡೆಯ ಸೊಸೈಟಿಗಳು ರದ್ದು ಆಗುವದಿಲ್ಲದೆ ಒಕ್ಕಟ್ಟು, ಸಹಾಸುಭೂತಿ, ಸಹಕಾರ ತತ್ವಗಳ ಕೇಲವೇ ಸಡಲಿಸಿ ಸಂಘಟನಾರ್ಥವು ಲಿಕಲಿಕಿಯಾಗಿ ಬಿದ್ದು ಹೋಗುವದು. ಇವುಗಳನ್ನು ಸಮಶೀಲನಾ ಬುದ್ಧಿಯಿಂದ ಸಾಗಿಸಿಕೊಂಡು ಹೋಗುವದರ ಕಡೆಗೆ ಸರಿಯಾಗಿ ಚಿಕ್ಕಗೊಡಬೇಕು. ಆದರೆ ಎಲ್ಲ ರೀತಿಯಿಂದ ಸುಸಂಘಟಿತವಾಗುವದು.

೭. ಮಧ್ಯಮ ತರಗತಿಯ ಊರುಗಳಲ್ಲಿ ಸ್ಯಾನಿಟರಿ ಬೋರ್ಡನ್ನು ಸ್ಥಾಪಿಸುವದು (ಆರೋಗ್ಯಾಭಿವೃದ್ಧಿಯ ಶಾಖೆಯನ್ನು) ಸಂಘಟನೆಯ ಒಂದು ಅಂಗವಾಗಿರುವದು.

೮. ಈಗ ಬಹಳ ಕಡೆಗೆ ಗ್ರಾಮಪಂಚಾಯತಿಯ ಬಗ್ಗೆ ... ಇದರಿಂದ ಸರ್ವಸಾಧಾ... ಕಂಡುಬರುವದು ... ಊರಿಗೆ ಬಸರು ಸಹ ರಾಜಕಾರಣದಲ್ಲಿ ... ಉತ್ತಮ ನಾಗರಿಕತೆಯನ್ನು ಹೊಂದಲಿಕ್ಕೆ ಬರುವದು. ... ಪುನರ್ಘಟನೆಗಂತೂ ಇದು ಬಲು ಉತ್ತಮ ಸಾಧನವು. ... ಗ್ರಾಮ ಪಂಚಾಯತಿಯ ಕಾಯಿದೆಯು ... ಅಂದಿನಿಂದ ಇಂದಿನ ವರೆಗೆ ಅದು ಸಾವಕಾಶ ... ಕೆಲಸಮಾಡುತ್ತಿರುವದು. ಒಕ್ಕಲಿಗರ ... ಈ ಕಾಯಿದೆಯು ಬಸ್ತಿತಾಳಿರುವ ... ಮಧ್ಯಮ ತರಗತಿಯ ಊರುಗಳಲ್ಲಿ ಗ್ರಾಮಪಂಚಾಯತಿಗಳಾಗಿರುವವು. ಆದರೆ ಕೆಲಸದ ಮೂಲದಿಂದ ನೋಡಿದರೆ ಪರಿಣಾಮವು ಚೆನ್ನಾಗಿ ಅದರಂತೆ ಕಂಡುಬರುವದಿಲ್ಲ. ... ಸ್ವರಾಜ್ಯಮಾತೆಯು ... ಮೇಲಿಂದ ಗೊತ್ತಾಗುವದು. ಇದಕ್ಕೆ ಕಾರಣವೇನಂದರೆ ಚಾಲಕರ ಪಕ್ಷಪಾತ ದಾಕ್ಷಿಣ್ಯ, ... ಸ್ವಾರ್ಥ ಸಾಧಿಸಿಕೊಳ್ಳೋಣ ಮುಂತಾದ ... ಒಂದಿವೆ. ಸುಶಿಕ್ಷಿತ ಜಾತಿಯವರು (... ದವರು) ಅಶಿಕ್ಷಿತ ಸಮಾಜಗಳ ಕೈತಪಗೆ ... ಸರಿಯಾಗಿ ಮಾಡಿಕೊಟ್ಟಂತೆ ... ಮೊಬ್ಬುಲುಗಳನ್ನು ... ಮುಖ್ಯಸಾಧನವಾಗಿರುವದು. ... ಹಳ್ಳಿಗರ ಆರೋಗ್ಯವನ್ನು ... ಗ್ರಾಮ... ಒಪ್ಪಿಸೋಣ, ಬಡವರಿಗೆ ... ಇವೇ ಮೊದಲಾದವುಗಳು. ಇವೆಲ್ಲವುಗಳಿಗೆ ಯೋಗ್ಯನಾ... ಪಟ್ಟು, ಸಂರಕ್ಷಕ ಜರಾತ್ರಿ ಹಳ್ಳಿ... (ಅಕಸ್ಮಾತ್ಯಯುಪ್ಯುಟಿ)

ಗಟಾರ ಪಟ್ಟಿ ಇವುಗಳಿಂದ ಆಗುತ್ತದೆ. ಹಳ್ಳಿಗಳ ಜನ ... ತರು ಈ ಹಣವನ್ನು ಸರಿಯಾಗಿ ಕೊಡಬೇಕಾಗುವದು. ... ದಳಿತ್ಯಗದವರ ಕೈಯಿಂದ ಕೆಲಸವಿಲ್ಲದ ವೇಳೆಯಲ್ಲಿ ... ಯ ವೇಳಿನ ಕಸ ತೆಗೆಯೋಣ, ವಿಷಮ್ಯಾಗಳನ್ನು ... ಕೊಳ್ಳೋಣ ಗಟಾರದ ಸಲು ನಾಗಿ ... ಈ ರೂಪದಿಂದ ... ಮಾಡಿಕೊಳ್ಳ ಬೇಕು. ದುಡ್ಡಿದ್ದವರ ಕಡೆಯಿಂದ ಪ್ರತ್ಯಕ್ಷ ಹಣದ ರೂಪದಿಂದ ಮುಟ್ಟಿಸಿಕೊಳ್ಳಬೇಕು. ಆದರೆ ಸುವ್ಯವಸ್ಥೆಯಿಂದ ಕೆಲಸ ನಡೆಸಲಿಕ್ಕೆ ... ಸುಶಿಕ್ಷಿತ ಸಮಾಜಗಳು ಜಾತಿ ಸ್ವಾರ್ಥ, ಅನುವಾಗುವದು. ... ಅಶಿಕ್ಷಿತ ಸಮಾಜಗಳ ಮೇಲೆ ಪಕ್ಷಸ್ವಾರ್ಥಗಳನ್ನು ... ಏಕೀಕರಣಕ್ಕೆ ಬಲು ಉತ್ತಮವಾಗಿದೆ.

ಈ ಎಲ್ಲ ರೀತಿಯಿಂದ ಪ್ರಯತ್ನಿಸಿದರೆ ಹಳ್ಳಿಗಳ ಉದ್ಧಾರವು ಕೆಲವಂಶದಿಂದಲಾದರೂ ಆಗಿ ಹಿಂದೂಸ್ಥಾನವು ಸ್ವಾತಂತ್ರ್ಯಪಥದೆಡೆಗಿರ್ಕೆ ಅರ್ಹನಾದೀತೆಂದು ತೋರುತ್ತದೆ.

(ಕ. ಪ್ರೈ.

ಇಂಡಿಯನ್ ಇನ್ಶ್ಯೂರೆನ್ಸ್ ಕಂಪೆನಿಗಳಿ ಗೇನೇ ಜೀವ ವಿಮೆ ಮಾಡಿರಿ.

ದಿ ಬೆಂಗಾಲ್ ಇನ್ಶ್ಯೂರೆನ್ಸ್ ಎಂಡ್ ರಿಯಲ್ ಪ್ರಾಪರ್ಟಿ ಕಂಪೆನಿ ಲಿಮಿಟೆಡ್. ಹೆಡ್ ಆಫೀಸು:—8 ಡಾಲ್ ಹೌಸಿ, ಸ್ಕ್ವೇರ್ (ಈಸ್ಟ್) ಕಲ್ಕತ್ತೆ, ಸಂಸ್ಥಾಪನೆ 1919.

ಸದಸಂಸ್ಕೃತಿಯ: ಜೀವದಷ್ಟಕ್ಕೆ ಅಬರೂಡನೆ ಅದಕ್ಕೆ ಸಂಬಂಧಪಟ್ಟಿರುವ ಆರ್ಥಿಕ ... ಜೀವ ಎತ್ತದೆ ಇಂಥ ಹ ಸಮಯದಲ್ಲಿ ಜೀವವಿಮೆಯು ಒಂದು ವರವೆಂದು ... ತಿಳಿಸು ಬಂದಿದೆ. ಅದನ್ನು ದ. ಅತ್ಯಗತ್ಯ ವಿಷಯವೆಂದೂ ... ಜನರಿಂದ ಸಂ ಈಗೀಗ ಗಣ್ಯ ಕಂಪೆನಿ ಪ್ರಕಾರವಾಗಿಯೇ ... ಪಾಲಿಸಿಕೊಂಡೇ ಬರುವಂತಾಗಿದೆ.

ಈ ಕಂಪೆನಿಯು ಸರಕಾರದಲ್ಲಿ ಕಂಪೆನಿಯ ಭದ್ರತೆಗೋಸ್ಕರ 2 ಲಕ್ಷ ರೂಪಾಯಿ ಠೇವಣಿಯನ್ನು ಇಟ್ಟಿದೆ. ... ದು ಇನ್ಶ್ಯೂರೆನ್ಸ್ ಕೆಲಸದಲ್ಲಿ ಒಳ್ಳೆ ಗುರುತಿರುವ ಸದ್ಗೃಹಸ್ಥರ ಮುಂದಾಳುತನದಿಂದಲೇ ನಡೆಯುತ್ತದೆ. ಈ ಕಂಪೆನಿ ... ಆಕರ್ಷಣೀಯವಾದ ಕೆಲವು ಸೂತ್ರಗಳ ಮೇರೆಗೆ ... ಸುಲಭ ಪ್ರೀಮಿಯಮ್ ದರದಿಂದ ಪೋಲಿಸಿಗಳನ್ನು ಕೊಡುತ್ತದೆ. ಇದರ ಶರ್ತಗಳು, ನಿಯಮಗಳು ಸುಲಭ ಗ್ರಾಹ್ಯವಾಗಿವೆ; ಅನುಕೂಲದ್ದಾಗಿವೆ. ಅಲ್ಲದೆ ಬಹು ಉದಾತ್ತವೂ ಆಗಿವೆ. ಹೆಚ್ಚಿನ ಮಾಹಿತಿಗೆ ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಿರಿ.

ಯಂ. ಯಸ್. ಐಯ್ಯಪ್ಪ,
ಆರ್ಗನೈಸರ್,
ಸ್ಕೂಲ್‌ರೋಡ್, ಮಡಿಕೇರಿ.
ಅಥವಾ
ಆರ್. ಸಿ. ಸೆನ್‌ಗುಪ್ತ,
ಬ್ರಾಂಚ್ ಸೆಕ್ರೆಟರಿ,
28, ಅಂಗಪ್ಪನಾಯಕ್ ಸ್ಟ್ರೀಟ್,
ಜೆ. ಟಿ. ಮದರಾಸ್.

12—1

Wanted agents in every Taluk of Coorg on very liberal terms.

Wanted.

An accountant to the Mercara Nad Co-operative Store from 1st May 1932 on a salary of Rs. 25 per mensem. Only those who have the knowledge of accounts or Retired Government Officer prefered. Applications may be sent to the address below.

HONORARY SECRETARY.
Mercara Nad Co-operative Store.

4—2

ಇಂಡಿಯಾ ಲೈಫ್ ಇನ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

(ಸ್ಥಾಪನೆಯಾದದ್ದು 1897.)

ವಯಸ್ಸೂ, ಜನಪ್ರಿಯವೂ ಆಗಿರುವ ಈ ಕಂಪೆನಿಯಲ್ಲಿ ನೀವು ಜೀವ ವಿಮೆ ಮಾಡುವುದಕ್ಕೆ ಇದೇ ತಕ್ಕ ಸಮಯ.

ಬೋನಸ್ ವರ್ಷ !!

ಉತ್ತಮರಾದ ಏಜೆಂಟರು ಬೇಕಾಗಿದೆ.

ಬ್ರಾಂಚ್ ಆಫೀಸು:—
152-3 ಕಮರ್ಷಿಯಲ್ ಸ್ಟ್ರೀಟ್,
ಬೆಂಗಳೂರು.

ಮಡಿಕೇರಿ.

ಇಷ್ಟರಧಿಗವಿದರು ಇಷ್ಟವಿಯ ಇರದಲಿ ।
ಮುಷ್ಯಗುಟಕ್ಕತಾ ಪುರ ನೋಡ ತಲಿ ॥
ಗಾಡ—ಅಪ್ಪ, ಇದೇನಪ್ಪ ಇಷ್ಟನಿಮಿಕಾಟ ।
ಕುಬ್ಬದನಮುದ್ದ ದಂಕಮುದೇನೋಟ ॥ ೧ ॥

ಕೊಡಗ—ವ ಎಂಜಾನೆ ಮಂಜುಗಳು, ಮುಸುಕಿತುದು ನೋಡ ।
ಮಂಜುಗಳಿಗಂಜುವವ ನೀನಹುದೀಗ ॥
ಅಂಜಿನೀ ಸೋದ್ಯೋಗ ಬೇಡಕಾಣಪ್ಪ ।
ಮಂಜೆಲ್ಲ ಹಿಂಜರಿಯುತ್ತಾಗ ನೋಡಪ್ಪ ॥ ೨ ॥

'ಮಡಿಕೇರಿ, ಮಡಿಕೇರಿ' ಎಂದೇಳ್ವನಗರ ।
ಕೊಡಗಿಗದು ಇಕ್ರಿಹನು ಪರ್ವೊದ ಸುಹರ ॥
ಮಡಿಕೆ ಪರಿಬರುವ ಮುಡಿಯಂತಾಗಿ ।
ಎಡಬಲದಿನೊಡುತಿಹ ಅತಿಸುಂದರಾಂಗಿ ॥ ೩ ॥

ಬೆಟ್ಟಗುಡ್ಡಗಳೇ ಕೇಳು, ಸುಂದರಿಯೊಗೆ ।
ಕಟ್ಟಡದ ನೋಟವದು ತಲೆಲಿಟ್ಟಗಳಿಗೆ ॥
ಓಟ ಓಡುವ ರಸ್ತೆ ಏನೆಂದು ಏನೆಂದು ತಿಳಿವೆ? ।
ಆಟ ಆಡುವ ಕಂದ ತಂದಿಟ್ಟ ಪಡವೆ ॥ ೪ ॥

ಈತಳಾರ ಸತಿಯೆಂದು ನೀನೇಕೆ ಕೇಳ್ವೆ? ।
ಕ್ಯಾತಿಗೊಂಡ ಕೊಡಗೇಪತಿ ಎಂದು ಹೇಳ್ವೆ ॥
ಈತಳೆಮಗೇನಾಗ ಬೇಕೆಂದೆ? ತಾಳು ।
ಮಾತೆಯಮಗಾಗಲೇ ಬೇಕವ್ವ ಕೇಳು ॥ ೫ ॥

ಗಾಡ—ಹೇಳು ನೀಳವಾಗಿಹ ಈ ಹಾಲು ಬೆಟ್ಟ ।
ಬಾಳುವೆಗೆ ಬಾರದಂತೆ ಕಾಡಿಹುದು ದಟ್ಟ ॥
ಬಾಳೆ ಹಣ್ಣನು ಸುಲಿದು ಸುಲಭದಲಿ ತಿಂಬಂತೆ ।
ಬಾಳುಸರಟಿಯ ಹೇಳ್ವೆ, ನಾಹೋಗ್ವೆನಂತೆ ॥ ೬ ॥

ಕೊಡಗ— ಹೇಳುವೆನು ಕೇಳಯ್ಯ ನೀನತಿಮುಷ್ಯ ।
ಹೋಕ ನೀಳವಾಗಿಹ ಈ ಸಾಲು ಬೆಟ್ಟ ॥
ಕಾಳು ತುಂಬಿಟ್ಟ ಕಣಜದಂತಾಗಿ ।
ಬಾಳುವೆಗೆ ಇಟ್ಟಿಹುದು ಗದ್ದೆ ಸದಾಗಾಗಿ ॥ ೭ ॥

ಎತ್ತರದ ಬೆಟ್ಟದಲಿ ಹಕ್ಕಿ ನೀನಿಂತು ।
ಸುತ್ತಲು ಅಂದವನ ನೇತ್ರಕ್ಕೆ ಇತ್ತು ॥
ಹೊತ್ತು ಇಳಿವಾಗ ಜೊತ್ತಿಸುವ ದೀಪವನು ।
ಎತ್ತರ ... ನೋಡುವೆಯೇನು? ॥ ೮ ॥

ಇತ್ತ ಬಾರಪ್ಪ ನೀನತ್ತನೋಡು ।
ಎತ್ತರದ ಕಟ್ಟಡದು ಮನೆಗಳಾ ವಾಡು ॥
ಒತ್ತರಕೆ ಹತ್ತಿನೀನತ್ತನೋಡಿದರೂ ।
ಒತ್ತಿಗೆ ... ಬೀರುತಿಹುದು ॥ ೯ ॥

ಗಾಡ—ಹೌದಯ್ಯ, ಹೌದಯ್ಯ ಬಹುಚಂದವಿಹುದು ।
ಇದನೆಲ್ಲ ನೋಡದೆಯೆ ಹಳಿದುದೂ ಹೌದು ॥
ಇದಕ್ಕಾಗಿ ನೀಯೆನ್ನ ಕ್ಷಮಿಸಬೇಕಯ್ಯ ।
ಇದಲ್ಲದಿನಸ್ಯಾವುದು ಭೂದೇವಿ ಸೌಂದರ್ಯ ॥ ೧೦ ॥

ಸಿ. ಯಂ. ಚಂಗಪ್ಪ,
ವಿದ್ಯಾರ್ಥಿ.

ಮಾರಾಟಕ್ಕಿವೆ.

ಎರಡು ಮನೆಗಳು ಮಾರಾಟಕ್ಕಿವೆ.

ಒಂದು ಸೇವಿನ್ಸ್ ರೋಡಿನಲ್ಲಿಯೂ (ಹಳೆಯ ಕೋರ್ಟ್ ಮೆಡಿಕಲ್ ಹಾಲ್) ಇನ್ನೊಂದು ಗಣಪತಿ ಬೀದಿಯಲ್ಲಿಯೂ ಇವೆ. 2 ಮನೆಗಳಿಗಾಗಿ ಒಟ್ಟು ಕ್ರಯ ರೂ. 6000. ಅಥವ ಇದರ ಸಮೀಪದ ಬೆಲೆ ಬೇಕಾದವರು ಹೆಚ್ಚಿನ ವಿಷಯ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

'S'
C/o I. C. Subbaih
M. A. B. L.
Vakil.
Mercara.

4—3

ಒಡೆಯ—1 ಕೊಡವರೊಡೆಯ ಬೇಡ.

(ಕಾರದಾಂಜಿ ಪಾಲಿನ—ಎಂಬಂತೆ)

ಒಡೆಯಬೇಡ | ಒಡೆಯಬೇಡ | ಒಡೆಯ ಕೊಡವರಾ ॥
ಒಡಕಿನೊಳಗೆ | ಕಡಕಕಲಾ | ತೊಡಕು ಕೊಡುವುದೋ ॥
ಕೊಡಗು ದೇಶ | ಕೊಡುವ ದೇಶ, ನಡಗರಾವರೇ ॥
ಒಡೆದು ಒಡಕು | ಒಡಪರೊಡೆಯ | ಒಡನಾಯಿನ್ನಾ ॥
ಕೊಡುವ ಕೊಡವ | ಹಿಡಿಯಬೇಡ; ಕೊಡಲು ಕೊಡುವುದಾ ॥

ಕೊಟ್ಟು ಕೆಟ್ಟ | ದಿಟ್ಟನಿಲ್ಲ | ಪುಟ್ಟ ಕೂಡವನೇ ॥
ಪುಟ್ಟ ಜಾಲ | ನರಿಪ ಬಟ್ಟ | ನಟ್ಟ ನಡುವಿನಾ ॥
ದಿಟ್ಟತನದಿ | ನಡೆಯ ಮಾಡೋ | ಬಟ್ಟಗೊಡಿಸೇ ॥
ಬೇಡಬೇಕೆ | ಬೇಡಬೇಕೆ, ಒಡೆಯಬೇಡೆಂದೂ ॥
ಬೇಡುವೇನು | ಪೊಡವಿಯಾಡೆಯ | ಕೇಡ ತಡೆಯಲೂ ॥
ಕೊಡಗು ನೀನು | ಕೊಡಗು ಕುವರ | ನಡಗರಾವರೇ ॥
ಬೆಡಗಿನಿಂದ | ಹಿತವು ಕೇಳು | ಕೊಡಗ ಕಾಪಾಡೂ ॥

ಟಿ. ಪಿ.

ನಮ್ಮ ಸಮಾಜವು ಏನು ಮಾಡುತ್ತಲಿದೆ?

(ಒಬ್ಬ ವೀರಶೈವ, ಧಾರವಾಡ)

ನಿದ್ದೆಯಿಂದೆದ್ದು ಕಣ್ಣು ತೆರೆದ ಕೂಡಲೆ ಎಂದೇ ಮೇಲಿನ ಪ್ರಶ್ನೆಗೆ ಉತ್ತರವು. ರಾಜಕೀಯ, ಧಾರ್ಮಿಕ, ಬೌದ್ಧಿಕ, ಸಾಮಾಜಿಕ ಔದ್ಯೋಗಿಕ ಯಾವ ಅಂಗವನ್ನು ಕುರಿತು ವಿಚಾರಿಸಿದರೂ ಮೇಲಿನ ಪ್ರಶ್ನೆಗೆ ಇದೇ ಉತ್ತರವು ದೊರೆಯುತ್ತದೆ. ನಮ್ಮ ಸಮಾಜದಲ್ಲಿ ಬುದ್ಧಿವಂತರಾದ ವ್ಯಕ್ತಿಗಳ ಅಭಾವವಿಲ್ಲ. ಇಂಥವರು ತಮ್ಮ ಬುದ್ಧಿ ಸಾಮರ್ಥ್ಯದಿಂದ ಮುಂಬಯಿ ಇಲಾಖೆಯ ಮಂತ್ರಿಪದ, ಮೈಸೂರ, ಸಂಸ್ಥಾನದ ಹೈಕೋರ್ಟು ಜಡ್ಜಿಯ ಪದವಿ ಮುಂತಾದ ದೊಡ್ಡ ಹುದ್ದೆಗಳನ್ನು ಪಡೆದಿರುವರು. ಇದರಿಂದ ಇಂಥ ವ್ಯಕ್ತಿಗಳನ್ನು ಕುರಿತು ನಮ್ಮ ಸಮಾಜವು ಅಭಿನಂದಿಸಬಹುದಾಗಿದೆ. ಆದರೆ ಇಷ್ಟರಿಂದಲೇ ಸಮಾಜದ ಕರ್ತವ್ಯವು ಮುಗಿಯಲಿಲ್ಲ. ಸಾಮಾಜಿಕ ಕಾರ್ಯಗಳು ನಮ್ಮ ಸಮಾಜದಲ್ಲಿ ಆಚೆಗೆ ಬೇರೆ ಪಾಲಾದಂತೆ ತೋರುತ್ತವೆ. ಕೆಲವು ನಡೆದಿದ್ದರೂ ಅವು ಏಕನಿಷ್ಠೆಯಿಂದ ಸಮಾಜಹಿತ ದೃಷ್ಟಿಯಿಂದ ನಡೆದಿರುವುದಿಲ್ಲ.

ರಾಜಕೀಯ ಕ್ಷೇತ್ರದಲ್ಲಿ ನಮ್ಮ ಸಮಾಜದ ಹೆಸರೇ ಇಲ್ಲದಂತಾಗಿದೆ. ಹಿಂದೂಸ್ಥಾನವು ಸಾಮ್ರಾಜ್ಯಾಂತರ್ಗತ ಸ್ವಾತಂತ್ರ್ಯವನ್ನು ಪಡೆದುಕೊಳ್ಳಬೇಕೆಂದು ಜಗತ್ತಿನಲ್ಲಿ ಅದ್ವಿತೀಯವಾದ ಚಳವಳಿಯನ್ನು ಹೂಡಿ ನಡೆಸುತ್ತದೆ. ಕಾಂಗ್ರೆಸ್ ಹಿಂದೂಮಹಾಸಭೆ, ಮುಸ್ಲಿಂ ಲೀಗ, ಲಿಬರಲ್ ಲೀಗ, ಜಸ್ಟೀಸ್ ಪಕ್ಷ ಮುಂತಾದ ಸಂಸ್ಥೆಗಳು ಇಡೀ ದೇಶಕ್ಕೆ ಅಥವಾ ತಮ್ಮ ತಮಗೆ ಹಿತವಾಗುವಂಥ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ ತಮ್ಮ ತಮ್ಮ ಅಸ್ತಿತ್ವವನ್ನು ಕಾಯ್ದುಕೊಳ್ಳುತ್ತಿರುವಾಗ ಈ ವಿಷಯವು ತಮಗೆ ಏನೂ ಸಂಬಂಧಿಸುವದೇ ಇಲ್ಲವೆಂಬಂತೆ ನಮ್ಮ ಸಮಾಜದವರು ಸ್ವಸ್ಥ ಕೈ ಮುಚ್ಚಿಕೊಂಡು ಕುಳಿತಿರುವದು ಆಶ್ಚರ್ಯಕರವಲ್ಲವೇ? ಈಗಿನ ಹೊಸ ರಾಜ್ಯ ಸಂಘಟನೆಯಲ್ಲಿ ಕರ್ನಾಟಕವು ಸ್ವತಂತ್ರ ಪ್ರಾಂತವಾಗುವದೆಂದು ವಿಚಾರವಾಗಿದೆ. ಈ ವಿಚಾರವು ಯಾವ್ಯಾವ ದೃಷ್ಟಿಯಿಂದ ನಮ್ಮ ಸಮಾಜಕ್ಕೆ ವಿಶೇಷವಾಗಿ ಸಂಬಂಧಿಸಿದ್ದರೆ ಅದು ನಮ್ಮ ಸಮಾಜಕ್ಕೇನೇ ಸಂಬಂಧಿಸಿದೆ. ಈ ವಿಷಯದಲ್ಲಿ ಕೂಡ ನಮ್ಮ ಸಮಾಜವು ಇನ್ನೂ ಮೌನವನ್ನೇ ತಾಳಿರುವದು. ಇಂಥ ವಿಷಯಗಳ ವಿಚಾರವನ್ನು ಮಾಡುವದಕ್ಕೆ ಸಂಸ್ಥೆಯೆಂದರೆ ಶ್ರೀ ಅಖಿಲಭಾರತ ವೀರಶೈವ ಮಹಾಸಭೆಯು. ಈ ಸಭೆಯಲ್ಲಿ ರಾಜಕೀಯ ವಿಷಯಗಳನ್ನು ಚರ್ಚಿಸಕೂಡದೆಂದು ನಿರ್ಬಂಧವಿದೆಯಂತೆ. ಧಾರ್ಮಿಕ ವಿಷಯಗಳಿಗಷ್ಟೆ ಸೀಮಿತವಾಗಿರುವ ಗುರು ವರ್ಗದವರೇ ಮುಂದಾಳುಗಳಿರುವರು. ಸಾಮಾಜಿಕ ಔದ್ಯೋಗಿಕ ಮುಂತಾದ ವಿಷಯಗಳ ಮೇಲೆ ಕೆಲವು ನಿರ್ಣಯಗಳನ್ನು ಮಾಡುವ ನಿಮಿತ್ತ ಸಭೆಯನ್ನು ಕರೆಯುವಂತೆ ನಿರ್ಧರಿಸಿದ ಮಹಾಸಭೆಯು ನಡೆಯುವ ಕಾರ್ಯವು ಕಂಡಿತು. ಈ ವರ್ಷದ ಮಹಾಸಭೆಯು ಕರೆಯುವುದಕ್ಕಂತೂ ಅದು ಕೂಡದೆ ಇರುವುದೇ ಲೇಸು. ಇಂಥ ಸಭೆಯನ್ನು ಕೂಡಿಸಬೇಕೆಂದು ಧಾರವಾಡದಲ್ಲಿ ಸಾರ್ವಜನಿಕರು ತಿಂಗಳುಗಳಿಂದ ಪ್ರಯತ್ನಗಳು ನಡೆದಿವೆ. ಇದು ಬರುವ ಮೇ ತಿಂಗಳಲ್ಲಿ ಕೂಡುವದಂತೆ. ಈ ಸಭೆಯು ಬಹುಶಃ ಕಮಿಟಿಯೊಂದ ಸ್ಥಾಪಿಸುವಂಥ ಕಮಿಟಿಯು ಎಂದು ಮುಂದು ಸಾರಿ ಕೂಡಿದಾಗ ಇನ್ನೂ ಅಧ್ಯಕ್ಷರು ಚರ್ಚಿಸತಕ್ಕ ವಿಷಯಗಳ ನಿರ್ಣಯಗಳನ್ನು ಮಾಡುವಂತೆ ತೋರುವದಿಲ್ಲ. ಕಮಿಟಿಯು ಹೊಂದಿದ ಸುಮಾರು ೧೦೦೦ ವರೆಗೆ ಇದ್ದರೂ ಕಮಿಟಿಯಲ್ಲಿ ಕೂಡಿದ ಜನರು ಕೈಬೆರಳಿನಿಂದ ಎಣಿಸತಕ್ಕಷ್ಟು ಸಹ ಇರಲಿಲ್ಲ. ಇದರಿಂದ ಸಾಮಾಜಿಕ ರೀತಿಯಿಂದ ನಮ್ಮ ಸಮಾಜದವರು ಮಾಡುವ ಕಾರ್ಯದ ಉತ್ಸಾಹ ಅಂದಾಜಾಗಬಹುದಾಗಿದೆ.

ಇನ್ನೊಂದು ಉದಾಹರಣೆಯೆಂದರೆ ಮೊನ್ನೆ ಮೊನ್ನೆ ಶ್ರೀ ಮುರುಘರಾಜೇಂದ್ರ ಸಂಸ್ಥೆಯವರು ಧಾರವಾಡದಲ್ಲಿ ಜರಗಿಸಿದ ಆರವತ್ತು ನೂರು ಪುರಾತನರ ಪೂಜಾ ಮಹೋತ್ಸವವು ಈ ಪುರಾತನರ ಪೂಜೆಯು ಲಿಂಗಾಯತರಲ್ಲಿ ಸಾಂಪ್ರದಾಯಿಕವಾಗಿ ಬಂದಿರುವದೇನೋ ನಿಜ. ಇವರ ಭಾವಚಿತ್ರ ಅಥವಾ ಶಿಲಾ ಪ್ರತಿಮೆಗಳನ್ನು ಈ ಉತ್ಸವದಲ್ಲಿ ಪೂಜಿಸಿದ್ದರೆ ಇದಕ್ಕೆ ಆಪೇಕ್ಷೆಯೊಂದು ಆಕ್ಷೇಪಣೆಗೆ ಅವಕಾಶವಿದ್ದಿಲ್ಲ. ಈ ಪುರಾತನರ ಹೆಸರಿನಿಂದ ಈಗಿನ ವಿರಕ್ತ ಗುರುವರ್ಗಗಳ ಸ್ವಾಮಿಗಳೆಂದೆನಿಸಿಕೊಳ್ಳುವವರನ್ನು ಪೂಜಿಸುವದು ಪುರಾತನರ ಅವಹೇಳನವೇ ಸರಿ. ಪುರಾತನರ ಅಪಾರ ಭಕ್ತಿ ಭಾವವೆಲ್ಲಿ! ಈಗಿನ ಎಷ್ಟೋ ಸ್ವಾಮಿಗಳ ಅಧಿಕಾರ ಆಸಕ್ತಿ! ಇದೂ ಇರಲಿ. ಈ ಸಮಾರಂಭಕ್ಕೆ ಸಮಾಜದ ಎಷ್ಟು ಹಣವು ವೆಚ್ಚವಾಯಿತು ಮತ್ತು ಇದರಿಂದ ಸಮಾಜಕ್ಕೆ ಎಷ್ಟು ಲಾಭಗಳಾದವು. ಇವುಗಳ ವಿಷಯವಾಗಿ ತುಸು ವಿಚಾರಿಸೋಣ. ಪ್ರತಿಯೊಬ್ಬ ಸ್ವಾಮಿಗೆ ಹೋಗಬರುವ ಖರ್ಚು, ಆತನಿಗೆ ಸಂಸ್ಥೆಯವರು ಮತ್ತು ಭಕ್ತರು ನೀಡಿದ ಭಿಕ್ಷೆ, ಕೂಡಿದ ಸಾವಿರಗಟ್ಟಲೆ ಜನರಿಗೆ ಅನ್ನದಾನ, ಹೋಗಿಬರುವ ಜನರಿಗೆ ಪ್ರವಾಸ ಖರ್ಚು, ಊರ ಜನರಿಗೆ ತಮ್ಮ ಉದ್ಯೋಗವನ್ನು ನಿಲ್ಲಿಸುವ ಬಗ್ಗೆ ಆದ ಖರ್ಚು ಮುಂತಾದವುಗಳನ್ನು ಒಟ್ಟುಗೂಡಿಸಿದರೆ ಅಂದಾಜು ಸುಮಾರು ೩ ಲಕ್ಷ ರೂಪಾಯಿಗಳ ವರೆಗೆ ಮುಟ್ಟಬಹುದು. ಈ ಸಮಾರಂಭದಿಂದ ಎಷ್ಟೋ ಲಾಭಗಳಾದವೆಂದು ಅದನ್ನು ಜರಗಿಸಿದವರು ಅನ್ನುವದು ವಿಶೇಷವಲ್ಲ. ನಮ್ಮ ವರ್ತಮಾನಪತ್ರಕಾರರು ಸಹ ಅವುಗಳ ಬಗ್ಗೆ ಹೊಗಳಿದರು. ಇದರಿಂದ ಧರ್ಮ ಜಾಗೃತಿ, ವಿರಕ್ತ ಗುರುಸ್ಥಳದವರಲ್ಲಿ ಐಕ್ಯ, ಸಮುಯುಭೇದನಾಶ, ಸಂಸ್ಕೃತ ಕಾಲೇಜು ಮತ್ತು ವ್ಯಾಯಾಮ ಮಂದಿರ ಸ್ಥಾಪನೆ ಮುಂತಾದವುಗಳು ಉಂಟಾದವೆಂದು ಇವರ ಹೇಳಿಕೆ. ನಮ್ಮ ಜನರಲ್ಲಿ ಅಂಥ ಶ್ರದ್ಧೆಯು ತುಂಬಿರುವದೇನೋ ನಿಜ. ಅದು ಈ ಪ್ರಸಂಗದಲ್ಲಿ ಬಹಿರಂಗವಾಗಿ ಒಡಮೂಡಿದ್ದು ಸಹ ನಿಜ. ಇದಕ್ಕೆ ನಿಜವಾದ ಧರ್ಮ ಜಾಗೃತಿಯೆನ್ನಬೇಕೋ ಎಂಬುದನ್ನು ವಾಚಕರೇ ಊಹಿಸಲಿ. ಯಾವ ಯಾವ ಧರ್ಮ ತತ್ವಗಳು ಭಕ್ತರ ಮನವರಿಕೆಯಾಗಿ ಅವರ ಆಚರಣೆಯಲ್ಲಿ ಏನಾದರೂ ಬದಲಾವಣೆಯಾಗಿದೆಯೋ ಎಂಬುದನ್ನು ಈ ಪೂಜಾ ಪುರಸ್ಕೃತ ಗುರುಗಳೇ ಅದನ್ನು ಕಂಡಾಡುವವರಾಗಲೀ ತೋರಿಸಿ ಕೊಡಲಿ. ಮೊದಲಿದ್ದ ಅಂಧ ಶ್ರದ್ಧೆಯು ಮತ್ತಷ್ಟು ದೃಢವಾಯಿತೆಂದರೆ ಅದರಿಂದ ಸಮಾಜಕ್ಕೆ ಹಾನಿಯೇ ಹೊರತು ಲಾಭವಿಲ್ಲ.

ವಿರಕ್ತ ಗುರು ವರ್ಗದವರ ಐಕ್ಯ—ಪೂಜೆಯ ಸಲುವಾಗಿ ಒಂದು ಕಡೆ ೪೦ ಜನ ವಿರಕ್ತರು, ೩೦ ಜನ ಪಟ್ಟಾಧಿಕಾರಿಗಳು ೩ ಜನ ದೇಶಿಕರು ಇದ್ದರು. ಈಗಿನ ಪರಿಸ್ಥಿತಿಯಲ್ಲಿ ಒಕ್ಕಟ್ಟಿಗೆ ಸೇರಲಿಕ್ಕೆ ಪ್ರತಿಕೂಲ ಇಲ್ಲದವರನ್ನೇ ಆರಿಸುವದರಲ್ಲಿ ಸಂಸ್ಥೆಯವರು ಎಚ್ಚರವಹಿಸಿದ್ದರು. ಈ ಊರ ಜನರು ತಮ್ಮ ಪೂರ್ತಿ ಪೂಜೆಯನ್ನೇ ಕೈಕೊಂಡು ಭಕ್ತಿಯನ್ನೇ ಸ್ವೀಕರಿಸಿ ತಮ್ಮ ತಮ್ಮ ದಾರಿ ಹಿಡಿದರು. ಇವರಲ್ಲಿ ವಿರಕ್ತ ಗುರುವರ್ಗದವರಲ್ಲಿ ಐಕ್ಯವು ಹೇಗಾಯಿತು ಗೊತ್ತಾಗಲಿಲ್ಲದು. ಸಭಾ ಕಾಲದಲ್ಲಿ ಕುಳಿತು ಈ ವಿಷಯವನ್ನೇ ಕುರಿತು ಭಾಷಣ ಮಾಡಿದ್ದರ ಮೇಲಿಂದ ಐಕ್ಯವು ಸಾಧಿಸಿದಂತಾಗಲಿಲ್ಲ. ವಿರಕ್ತ ವರ್ಗದವರು ತಾವು ತಮ್ಮೊಳಗಿನ ಜನರೊಂದು ಕಮಿಟಿಯನ್ನು ನೇಮಿಸಿ ಈ ವಿಷಯದ ಮೇಲೆ ವಿಚಾರ ಮಾಡುತ್ತ, ಅದನ್ನು ಸಾಧಿಸುವದರಲ್ಲಿ ಇತರ ರೀತಿಯಿಂದಾಗಲೀ ಐಕ್ಯವನ್ನು ಸಾಧಿಸಬೇಕೆಂದು ಯುಕ್ತಿಸಿದ್ದರೆ ಅದೊಂದು ಉಪಯುಕ್ತ ಸಂಗತಿಯಾಗುತ್ತಿತ್ತು. ಈ ತರದ ಯಾವ ಪ್ರಯತ್ನವೂ ನಡೆದಂತೆ ಕಾಣಲಿಲ್ಲ.

ಸಮಯಭೇದನಾಶ ಈ ವಿಷಯವಾಗಿ ಯಾವ ಮನಸ್ಸೂ ವರ್ತನೆಯು ಯುಕ್ತ ನಡೆದಂತೆ ಕಂಡು ಬಂತು. ಕಡೆಗೆ ಅದು ಫಲಿತಾಂಶವು ಏನಾಯಿತು ಇನ್ನೂ ಗೊತ್ತಾಗಲಿಲ್ಲ.

ಸಂಸ್ಕೃತ ಕಾಲೇಜು ಮತ್ತು ವ್ಯಾಯಾಮ ಮಂದಿರಗಳ ಸ್ಥಾಪನೆಗೆ ಈ ಪೂಜಾ ಮಹೋತ್ಸವದಂಥ ದುಂದುಗಾರಿಕೆಯ ಸಮಾರಂಭವು ಬೇಕಾಗಿದ್ದಿಲ್ಲ. ಶ್ರೀ. ಅಥಣಿ ಶಿವಯೋಗಿಗಳ ಪುಣ್ಯತಿಥಿಯೇ ಇದಕ್ಕೆ ಸಾಕಾಗುತ್ತಿತ್ತು. ಅಂಥ ಸುಸಮಯ ಈ ಕಾಲೇಜು ಮಂದಿರಗಳ ಸ್ಥಾಪನೆಗೆ ಸಾಕಷ್ಟು ಪ್ರಶಸ್ತವಾಗಿದ್ದಿತು.

ಒಟ್ಟಿನ ಮೇಲೆ ನೋಡಲಾಗಿ ಈ ಸಮಾರಂಭವು ಈಗಿನ ಕಾಲದಲ್ಲಿ ಅನವಶ್ಯವಾದ ಒಂದು ದೊಡ್ಡ ಉದಾಹರಣೆಯೆಂದೇ ಹೇಳಬೇಕಾಗುತ್ತದೆ.

ನಮ್ಮ ಪೂರ್ವಜರು ಬೌದ್ಧಿಕ ಕಾರ್ಯವನ್ನು ಮಾಡಿದ್ದು ಸಹ ಅಸಾಧಾರಣವು. ಸಂಸ್ಕೃತ, ಕನ್ನಡ, ತೆಲುಗು, ಭಾಷೆಗಳಲ್ಲಿ ಅವರು ಎಷ್ಟೋ ಅಮೋಲ್ಯ ಗ್ರಂಥಗಳನ್ನು ಬರೆದು ಹೆಸರಾಗಿರುವರು. ಕನ್ನಡ ವಾಙ್ಮಯವನ್ನು ಆರಂಭಿಸಿದವರು ಜೈನರಾದರೂ ಅದನ್ನು ಸರ್ವಾಂಗಸುಂದರವಾಗಿ ಮಾಡಿದವರೆಂದರೆ ಲಿಂಗಾಯತರೇ ಹೇಳಬೇಕು. ಬರದಲ್ಲಿ ಯಾವ ಯಾವ ಹೊಸ ಸುಧಾರಣೆಗಳನ್ನು ಮಾಡಿ ಅದನ್ನು ಈಗಿನ ಸ್ಥಿತಿಗೆ ತಂದಿರುವರೆಂದು ಹೇಳುವದು ಈ ಲೇಖದ ಉದ್ದೇಶವಲ್ಲ. ಅಂಥಾ ವಾಙ್ಮಯವನ್ನು ಹೆಚ್ಚಿಸುವದು ಹತ್ತಟ್ಟಿಗಿರಲಿ. ಅದನ್ನು ಶುದ್ಧವಾಗಿಯೂ ಅಂದವಾಗಿಯೂ ಪ್ರಕಟಿಸಿ ಜನರ ಮನಸನ್ನು ಅದರ ಕಡೆಗೆ ಎಳೆಯುವ ಪ್ರಯತ್ನವು ಸಹ ಸಮಾಜದ ಪುರಸ್ಕಾರದಿಂದ ನಡೆಯದೆ ಇರುವದು ಆಶ್ಚರ್ಯವು. ಇದೇ ಸ್ಥಿತಿಯು ಕೆಲವು ದಿವಸಗಳ ವರೆಗೆ ಮುಂದುವರಿದರೆ ಸಂಸ್ಕೃತ ವಾಙ್ಮಯವು ಹೇಳಹೆಸರಿಲ್ಲದಂತಾಗುತ್ತದೆಂಬುವುದರಲ್ಲಿ ಆಶ್ಚರ್ಯವೇನು? ಸಮಾಜದ ಸುದೈವದಿಂದ ಒಬ್ಬೊಬ್ಬ ವ್ಯಕ್ತಿಗಳು ಹಿಂದಕ್ಕೂ ಈಗಿನ ಕಾಲಕ್ಕೂ ಈ ಸಂಬಂಧದಿಂದ ಪ್ರಯತ್ನಗಳನ್ನು ನಡೆಸಿದ್ದರಿಂದ ಈ ವಾಙ್ಮಯವು ಜಗತ್ತಿನ ಎದುರಿಗೆ ಬರುವ ಅವಕಾಶವು ಕಲೆದೋರ ಹತ್ತಿದೆ. ಇದು ಬೆಳೆಯಬೇಕಾದರೆ ಇಡೀ ಸಮಾಜವೇ ಮುಂದೆ ಬಂದರೆ ಸಾಧ್ಯವಾಗುವದು. ಇಲ್ಲದಿದ್ದರೆ ಇದು ಶಕ್ಯವಿಲ್ಲ.

ನಮ್ಮ ಸಮಾಜದ ಸಾಮಾಜಿಕ ಸ್ಥಿತಿಯಂತೂ ಬಹಳ ದುರವಸ್ಥೆಗೆ ಬಂದಿದೆ. ಜಂಗಮ ಜಂಗಮರಲ್ಲಿ ಜಗಳ, ಭಕ್ತ ಭಕ್ತರಲ್ಲಿ ಜಗಳ. ಭಕ್ತ ಜಂಗಮರಲ್ಲಿ ಜಗಳ ಹೀಗೆ ಸಮಾಜದ ತುಂಬೆಲ್ಲ ಅನೈಕ್ಯವು ಒಡಮೂಡಿ ಕಾಣುತ್ತಿರಲು ಈ ಬಗ್ಗೆ ಹೆಚ್ಚು ಸ್ಪಷ್ಟೀಕರಿಸುವ ಅವಶ್ಯಕತೆ ಇರುವದಿಲ್ಲ.

ಔದ್ಯೋಗಿಕ ಸ್ಥಿತಿಯು ಇಡೀ ಜಗತ್ತನ್ನೇ ಕೀಳ ಸ್ಥಿತಿಗೆ ಎಳೆದಿರುವಾಗ ನಮ್ಮ ಸಮಾಜದ ಪಾಡೇನು?

ಮೇಲೆ ಕಾಣಿಸಿದ ಸಂಗತಿಗಳನ್ನು ಮನಸ್ಸಿನಲ್ಲಿ ತಂದು ನಮ್ಮ ಸಮಾಜದ ಭಕ್ತ ಜಂಗಮ ವರ್ಗಗಳ ವಿದ್ಯಾವಂತರು ಧನಿಕರು ಈಗಾದರೂ ಎಚ್ಚತ್ತು ಉನ್ನತಿಯ ಮಾರ್ಗವನ್ನು [illegible]ವರೋ? ಅಥವಾ ಇನ್ನೂ ಅಧೋಗತಿಗೆ ಇಳಿ[illegible]ವರೋ?

'ನವಕರ್ನಾಟಕ'

ಗ್ರಾಮ ಸಂಘಟನೆ.

ಲೇಖಕ—ಬಿ. ಕ ಉಗರಗೋಳ

ಹಿಂದೂಸ್ಥಾನವು ಹಳ್ಳಿಗಳ ದೇಶವಾಗಿದೆ. ರಾಷ್ಟ್ರೀಯ ಸಭೆಯವರು ಹಿಂದೂಸ್ಥಾನದಲ್ಲಿ ಸುಮಾರು ಒಂಬತ್ತು ಲಕ್ಷ ಹಳ್ಳಿಗಳಿವೆ ಎಂದು ಗು[illegible]ಸಿ. ಧಾರಿಸಿದ ಹೊರತು ಈ ದೇಶದ ಉದ್ಧಾರ ಸ್ಥಿತಿಯನ್ನು ತಿಳಿಯಲಾರದು. ಹಳ್ಳಿಗಳು ಎಲ್ಲಾ ರೀತಿಯಿಂದ ಹಿಂದುಳಿದಿವೆ. ಮೊದಲಿನ ಕರಗತಿಯ ಜಾತಿಗಳು ಮಾತ್ರ ಕೆಲ ಮಟ್ಟಿಗೆ ಸುಧಾರಿಸಿವೆ. ಏಕಾರು ನೂರು ಜನವಸತಿಯುಳ್ಳ ಹಳ್ಳಿಗಳಲ್ಲಿ ಇಂದಿನ ವರೆಗೂ ದೇಶ ಭಾಷೆಯ ಶಿಕ್ಷಣ ಕೊಡುವ ಶಾಲೆಗಳಿಲ್ಲ. ಅಲ್ಲಿ ಅಕ್ಷರಸ್ಥರ ಸಂಖ್ಯೆ ಶೇಕಡೆಯಲ್ಲಿ ಎಂಟು ಕೂಡ ಆಗದಂತೆ ಆಗಿದೆ.

ಅವುಗಳಿಗೆ ಯಾವ ತರದ ನಾಗರಿಕತ್ವದ ಕಲ್ಪನೆಯೂ ಇಲ್ಲ. ಅಷ್ಟೇಕೆ? ಸರಿಯಾಗಿ ಪ್ರಪಂಚವನ್ನು ಸಾಗಿಸಿಕೊಂಡು ಹೋಗ ಬೇಕು ತಿಳಿವು ಕೂಡ ಅವರಲ್ಲಿ ಇಲ್ಲ. ಇಂಥ ಅಶಿಕ್ಷಿತ ಸ್ಥಿತಿಯಲ್ಲಿ ದೇಶವು ಮುಳುಗಿರುವಾಗ ಹಿಂದುಸ್ಥಾನವು ಸ್ವರಾಜ್ಯೋಪಭೋಗಕ್ಕೆ ಎಷ್ಟರ ಮಟ್ಟಿಗೆ ಅರ್ಹವಾಗಿದೆಯೆಂಬುದು ಹೇಳಬರುವಂತಿಲ್ಲ. ಏನೇ ಇರಲಿ; ಹಳ್ಳಿಗಳು ತಿದ್ದಲ್ಪಡದ ಹೊರತು ಭಾರತ ದೇಶದ ಸಾಮಾಜಿಕ ನೈತಿಕ ರಾಜಕೀಯ ಉನ್ನತಿಯಾಗಲಾರದು.

ಹಳ್ಳಿಗಳ ಉದ್ಧಾರದ ಮಾರ್ಗಗಳು.

೧ ಪ್ರತಿಯೊಂದು ಹಳ್ಳಿಯಲ್ಲಿ ದೇಶಭಾಷೆಯ ಶಾಲೆಗಳನ್ನು ಸ್ಥಾಪಿಸುವದು ಅತ್ಯಗತ್ಯವಿದೆ. ಸರಕಾರಕ್ಕೆ ಈ ಆರ್ಥಿಕ ದುಸ್ಥಿತಿಯುಂಟಾಗಿದ್ದದರಿಂದ ಸರಕಾರದ ಹಣದ ಸಹಾಯ ದೊರೆತು ಹಳ್ಳಿಗಳಲ್ಲಿ ಶಾಲೆಗಳಾಗಬೇಕಾದರೆ ಕೆಲವು ಕಾಲವು ಗತಿಸಬೇಕಾಗುವದು. ಅಲ್ಲಿಯ ವರೆಗೆ ನಾವು ಕೈಮುಚ್ಚಿಕೊಂಡು ಸರಕಾರದವರ ಮೋರೆ ನೋಡುತ್ತಾ ಕೂಡುವದು ಒಳಿತಲ್ಲ. ಆಯಾ ಗ್ರಾಮದ ಮುಖಂಡರು ಖಾಸಗಿ ಶಾಲೆಗಳನ್ನು ತೆಗೆದು ವಿದ್ಯಾ ಗುರುಗಳಿಗೆ ಕೆಲಮಟ್ಟಿಗೆ ಪ್ರತಿಫಲಕೊಟ್ಟು ವಿದ್ಯಾ ಪ್ರಸಾರದ ಕಾರ್ಯವನ್ನು ಹಿಕ್ಕರಿಸಿ[illegible]ಬೇಕು. ಆದರೆ ಇಂಥಾ ಶಾಲೆಗಳು ಸರಕಾರದಿಂದ ರಿಜಿಸ್ಟರ ಆಗಲಿಕ್ಕೆ ಬೇಕು. ಗ್ರ್ಯಾಂಟಿನ್ ಆಗದಿದ್ದರೂ ಚಿಂತೆಯಿಲ್ಲ ಅಂದರೆ ಹುಡುಗರ ಕಲಿಕೆಯ ಫಲವು ನಿಗದಿಯಾಗುವುದು. ಈ ಕಾರ್ಯವು ಸಧ್ಯಸ್ಥಿತಿಯಲ್ಲಿ ಅಷ್ಟು ಜಡವೂ ಹೋಗುವದಿಲ್ಲ ಯಾಕೆಂದರೆ ಲಕ್ಷಗಟ್ಟಲೆ ವಿದ್ಯಾರ್ಥಿಗಳು ದೇಶ ಭಾಷೆಗಳಲ್ಲಿ ಮುಲ್ಕಿ ಪರೀಕ್ಷೆ ಪಾಸಾಗಿ ಇತರ ಉದ್ಯೋಗವಿಲ್ಲದೆ ನಿರ್ಗತಿಕರಾಗಿ ತಿರುಗುತ್ತಿರುವರು. ಇಂಥವರಿಂದ ಶಾಲಾಕಾರ್ಯವನ್ನು ನಡಿಸಿಕೊಂಡರೆ ಹಳ್ಳಿಗರು ಅಕ್ಷರಸ್ಥರಾಗುವರಲ್ಲದೆ ವಾಸ್ತವವಾಗಿಯೂ ಕೆಲಸ ಇಲ್ಲದ ಕೆಲಕೊಟ್ಟಂತೆ ಆಗುತ್ತದೆ. ಅಲ್ಲದೆ ಗ್ರಾಮ ಸಂಘಟನೆಯ ಕಾರ್ಯವು ಇದರಿಂದ ಕೆಲಮಟ್ಟಿಗೆ ಸಾಗುತ್ತದೆ.

೨. ಮುಷ್ಟಿ ಫಂಡ ಮತ್ತು ಒಂದು ದುಡ್ಡಿನ ಫಂಡ ಜಾರಿ ಮಾಡಿ ಹತ್ತು ಹನ್ನೆರಡು ರೂಪಾಯಿಗಳಲ್ಲಿ ಹಳ್ಳಿಗೊಂದು ಚಿಕ್ಕ ವಾಚನಾಲಯವನ್ನು ಸ್ಥಾಪಿಸಬೇಕು. ಅದರಲ್ಲಿ ಒಂದೆರಡು ವಾರ ವಾರ್ತಾಪತ್ರ, ಒಂದೆರಡು ಪಕ್ಷ ಪತ್ರ, ಒಂದೆರಡು ಮಾಸ ಪತ್ರಿಕೆ ತರಿಸಬೇಕು. ಉಳಿದ ಅಲ್ಪ ಸ್ವಲ್ಪ ನಿಧಿಯಿಂದ ಧಾರ್ಮಿಕ, ನೈತಿಕ ವಿಜ್ಞಾನ ಮುಂತಾದ ತುಸು ಹೆಚ್ಚು ಬೆಲೆಯ ಪುಸ್ತಕಗಳನ್ನು ಸಂಗ್ರಹಿಸಬೇಕು. ಸರ್ವ ಸಾಧಾರಣ ಸ್ಥಿತಿವಂತರು ತಮ್ಮ ಹತ್ತರ ಇದ್ದ ಪುಸ್ತಕಗಳನ್ನು ವಾಚನಾಲಯಕ್ಕೆ ಉಚಿತವಾಗಿ ಕೊಡಬೇಕು. ಉತ್ತಮರು ಕೆಲವು ರಕಮು ಕೊಡಬೇಕು ಹಳ್ಳಿಯಲ್ಲಿ ಹಳೆಯ ಜನರ ಹತ್ತರ ರಾಮಾಯಣ, ಮಹಾಭಾರತ, ರಾಜಶೇಖರವಿಳಾಸ ಮೊದಲಾದ ನೈತಿಕ ರಸಾಲಂಕಾರಯುಕ್ತ ಗ್ರಂಥಗಳೂ ಬೃಹತ್ ಭಸವೇಶ್ವರ ಪುರಾಣ ಪದ್ಮ ಮೊದಲಾದ [illegible]ಕ ಗ್ರಂಥಗಳೂ ಅರಿವೆಯ ಗಂಟಿನಲ್ಲಿ ಸುಖ [illegible] [illegible]ಯಲ್ಲಿ ಬಿದ್ದುಕೊಂಡಿರುತ್ತವೆ. ಇಂಥವರನ್ನು ಅವುಗಳನ್ನು ವಾಚನಾಲಯಕ್ಕೆ ಪುಕ್ಕಟೆಯಾಗಿ [illegible] ದ ಕೊಡುವರಲ್ಲದೆ ಅವು ಒಂದು ರೀತಿಯ[illegible] ದಂತೆ ಆಗುತ್ತದೆ ಹಳ್ಳಿಗಳಲ್ಲಿ ಜನರು [illegible] ಥ ಪಾಟಿ ಬಿಡಿದ. ಇಷ್ಟೇಕೆ, ಸಗದಿ, ನಿರುಪಯೋಗಿ ಆಟಗಳನ್ನಾಡಿ ಇಲ್ಲ ದಿಗೊಂಬಿಗಳಲ್ಲಿಯ ಪತ್ತೆಯಗಳನ್ನು ಕಟ್ಟಿ ಹಾ[illegible]...............ವೇಳೆಯ ಕ್ರಿಯತಾರೆ. ವಾಚನಾಲಯ[illegible] ದ್ದರೆ ಅವರು ಕೆಲಸವಿಲ್ಲದಾಗ ದಾದರೂ ಓದುವ ಚಟವನ್ನು ಅವರಲ್ಲಿ ವಾಚನಾಭಿರುಚಿ ಹುಟ್ಟಿ ಬೆಳೆಯಲಿಕ್ಕೆ ಮಹತ್ವದವುಗಳುಳ್ಳ

೩. ಪ್ರಾಚೀನ ಆಯುರ್ವೇದ [illegible] ರೂ. 3/-
ಗುಂಡು ಸಂಗ್ರಹಣಿ, [illegible]
ಮಾಡುವ ಮೇಳಗಳೆ[illegible]
ರುವುದರಿಂದ ಜನರಲ್ಲಿ [illegible]
ಯುಷ್ಯ ಹೇರಿತನ [illegible]
ದೇಶವು ರಸಾತಲ[illegible]
ಇವುಗಳ ಕಡೆಗೆ [illegible]
[illegible]
ಬಲವಾದ [illegible] ರೂ. 7/-
ಮನುಗ[illegible]
ಅವ[illegible]
ಗಳ[illegible]
[illegible]

ಕೊಡಗು.

ಸನ್ ೧೯೩೨ನೇ ಇಸವಿ

ಏಪ್ರಿಲ್ ತಾ. ೨೨ನೇ ಶುಕ್ರವಾರ.

ಪ್ರೆಸ್ ಆರ್ಡಿನೆನ್ಸ್

ಜಾರಿಯಲ್ಲಿರುವ ವರೆಗೆ

ನಾವು

ಅಗ್ರಲೇಖನ

ವನ್ನು

ಪ್ರಕಟಿಸುವುದಿಲ್ಲ.

ಪಾರ್ಲಿಮೆಂಟಿನಲ್ಲಿ ಸರಕಾರಕ್ಕೆ ಎದುರು ಪಕ್ಷದ ಬಲವು ಬಹಳ ಕಡಿಮೆಯಾಗಿದೆ. ಆದ್ದರಿಂದ ದೇಶದಲ್ಲಿ ಜನರಿಗೆ ಸರಿಯಾದ ತಿಳುವಳಿಕೆ ಕೊಟ್ಟು ಜನರ ಮನಸ್ಸನ್ನು ತಿರುಗಿಸಬೇಕು. ಆರ್ಡಿನೆನ್ಸುಗಳನ್ನು ರದ್ದು ಪಡಿಸಿ ಕಾಂಗ್ರೆಸಿನವರೊಂದಿಗೆ ರಾಜಿಮಾಡುವುದರಿಂದ ವಿನಹ ಕ್ಷೇಮವಿಲ್ಲವೆಂತ ಜನರಿಗೆ ತಿಳಿಸಬೇಕು.

ಗಾಂಧಿಯವರನ್ನು ಸರಕಾರವು ಮುಚ್ಚುಮರೆಯಿಂದ ಜೈಲಿನಲ್ಲಿಟ್ಟಿದೆ. ಹಿಂದೂಸ್ಥಾನವನ್ನು ಸರಕಾರವು ನ್ಯಾಯದಿಂದ ಆಳ್ವ ಪದ್ಧತಿಕೆ ಬಂದಿರುವುದರಿಂದ ಅದು ಹಿಂದೂಸ್ಥಾನದ ಬ್ರಿಟಿಷ್ ಜನರಿಗೆ ತಿಳಿಸಿಕೊಡಬೇಕಾದ ಅವಶ್ಯಕತೆ ಬಹಳ ಇದೆ. ಶೀಘ್ರದಲ್ಲೇ ಲೇಬರ್ ಪಾರ್ಟಿಯು ಪಾರ್ಲಿಮೆಂಟಿನಲ್ಲಿ ಪುನಃ ಈ ವಿಷಯವನ್ನು ಚರ್ಚೆಗೆ ತರುವುದು. ಸಾರ್ವಜನಿಕ ಅಭಿಪ್ರಾಯದ ಬೆಂಬಲವನ್ನು ಹುಟ್ಟಿಸಿಕೊಳ್ಳಬೇಕಷ್ಟೆ.

ಈಗ ಅಗತ್ಯವಾದ ರಾಜಕೀಯ ರಚನೆಯಲ್ಲಿ ಹಿಂದೂಸ್ಥಾನದವರೇ ತಮ್ಮ ಭವಿಷ್ಯತ್ತನ್ನು ನಿರ್ಣಯಿಸಿಕೊಳ್ಳುವ ಹಕ್ಕು ಇರುವಂತೆ ಮಾಡಲು ಲೇಬರ್ ಪಾರ್ಟಿಯು ಪ್ರಯತ್ನಿಸುತ್ತದೆ. ಮಧ್ಯವರ್ತಿ ಸರಕಾರದಲ್ಲಿ ಜವಾಬ್ದಾರಿ ಕೊಡದೆ ಪ್ರಾಂತ್ಯಗಳಲ್ಲಿ ಮಾತ್ರ ಕೊಟ್ಟರೆ ಹಿಂದೂಸ್ಥಾನಕ್ಕೆ ತುಂಬಾ ಹಾನಿಯಿದೆ. ಈ ಅಭಿಪ್ರಾಯವನ್ನು ಸ್ವಾಭಾವಿಕವಾಗಿಯೇ ಹಿಂದೂಸ್ಥಾನದ ಎಲ್ಲಾ ಪಾರ್ಟಿಗಳೂ ವಿರೋಧಿಸಿದ್ದಾರೆ.

ಕೋಮುವಾರು ಸಮಸ್ಯೆಯನ್ನು ಬ್ರಿಟಿಷ್ ಸರಕಾರವು ಬಗೆಹರಿಸುವ ವಿಷಯದಲ್ಲಿ ನನಗೆ ಸಮ್ಮತವಿಲ್ಲ. ಕೋಮುವಾರು ಸಮಸ್ಯೆಗೆ ಸಂಬಂಧವಾಗುವಂತೆ ಅತಿ ಮುಖ್ಯ ರಾಜಕೀಯ ಹಕ್ಕುಗಳಿವೆ. ಅಂಥವುಗಳನ್ನೆಲ್ಲಾ ಹಿಂದೀಯರೇ ನಿರ್ಣಯಿಸಿಕೊಳ್ಳಬೇಕಾದದ್ದು ಅವಶ್ಯ. ಹೇಗಿದ್ದರೂ ಆತ್ಯದಲ್ಲಿ ಈ ಕೋಮುವಾರು ಸಂಬಂಧದ ತೀರ್ಮಾನವು ದುಂಡು ಮೇಜಿನ ಮುಂದೆ ಬಂದು ಸರ್ವರ ಸಮ್ಮತಿ ಪಡೆಯಲೇಬೇಕು. ಜನಾಂಗದ ಮೇಲೆಯೇ ಆಗಲೀ ವ್ಯಕ್ತಿಯ ಮೇಲೆಯೇ ಆಗಲೀ ಸ್ವಾತಂತ್ರ್ಯಕ್ಕೆ ಅಡೆತಡೆಗಳನ್ನು ಹೊರಗಿನಿಂದ ನಿರ್ಬಂಧಿಸುವುದು ಯುಕ್ತವಲ್ಲ.

ಇಲ್ಲಿ (ಇಂಗ್ಲೆಂಡಿನಲ್ಲಿ) ವಾತಾವರಣವು ಶೀಘ್ರದಲ್ಲೇ ಬದಲಾಗುತ್ತದೆಂತಲೂ ಹಿಂದೂಸ್ಥಾನದ ಈಗಿನ ಉಗ್ರ ಸ್ಥಿತಿಯು ಬಹಳ ದಿನ ಇರಲಾರದೆಂತ ಹಿಂದೀ ಸ್ನೇಹಿತರು ತಿಳಿಯಲಿ. ಗಾಂಧಿಯವರ ಬೋಧನೆಯೇ ಅತ್ಯುತ್ತಮವೆಂತ ನಾನು ನಂಬುತ್ತೇನೆ. ದಬ್ಬಾಳಿಕೆಗೆ ಗುರಿಯಾದ ಪ್ರತಿಯೊಬ್ಬ ವ್ಯಕ್ತಿಯೂ ಜನಾಂಗವೂ ಸತ್ಯಾಗ್ರಹವೇ ಅತ್ಯುತ್ತಮವಾದ ದಾರಿ. ಹಿಂಸಾಮಾರ್ಗದಿಂದ ಪ್ರಯೋಜನವಿಲ್ಲ. ಈಗಿನ ದಬ್ಬಾಳಿಕೆಯಲ್ಲಿ ಹಿಂದೀ ಜನರು ಯಾವ ರೀತಿಯಲ್ಲಿ ಸಂಘಟನೆ ತಾಳ್ಮೆ, ಶಿಸ್ತಿಗೆ ಒಳಗಾಗಿದ್ದಾರೆ ಎಂಬುದನ್ನು ಬ್ರಿಟಿಷ್ ಜನರು ತಿಳಿದ ಒಡನೇ ಹಿಂದೀಯರ ಧೈರ್ಯವನ್ನೂ ತಮ್ಮ ಧ್ಯೇಯದಲ್ಲಿರುವ ನಂಬಿಕೆಯನ್ನೂ ಬ್ರಿಟಿಷರು ತಿಳಿಯುವರು. ಅಲ್ಲದೆ ಸರಕಾರವು ಕಾಂಗ್ರೆಸಿಗೆ ಬಾಗುವಂತೆ ಮಾಡುವರು. ಆದರೆ ಗಾಂಧಿಯವರನ್ನೂ ಕಾಂಗ್ರೆಸಿನ ಮುಖಂಡರನ್ನೂ ಜೈಲಿನಲ್ಲಿಟ್ಟುಕೊಂಡು ನಡೆಸುತ್ತಿರುವ ದಬ್ಬಾಳಿಕೆಯನ್ನು ನೋಡಿದರೆ ಶಾಂತಿಯು ಶೀಘ್ರದಲ್ಲೇ ಸ್ಥಾಪನೆಯಾಗುವಂತೆ ತೋರುವುದಿಲ್ಲ. ಆದ್ದರಿಂದ ನಮ್ಮ ಮನಸಿನಲ್ಲಿರುವುದನ್ನು ಬಲವಾಗಿಯೇ ಆಡಬೇಕಾಗಿದೆ. ಸರಕಾರವು ಹಿಂಸಾಮಾರ್ಗವನ್ನು ಬಿಟ್ಟು ರಾಜಿ ದಾರಿಯನ್ನು ಹಿಡಿದು ರಾಜಕೀಯ ಸುಧಾರಣೆಗಳನ್ನು ಶೀಘ್ರದಲ್ಲೇ ಕೊಡುವಂತೆ ಮಾಡಬೇಕು.

ಸ್ವದೇಶಿ.

ಆಚಾರ್ಯ ಪಿ. ಸಿ. ರೇಯವರು ಬಂಗಾಳಕ್ಕೆ ಹೊರಡಿಸಿದ ವಿಜ್ಞಾಪನೆ.

ಜನರ ಸರಾಸರಿ ಉತ್ಪತ್ತಿಯು ಜರ್ಮನಿಯಲ್ಲಿ ದಿನ ಒಂದಕ್ಕೆ 2 ರೂ. ಇಂಗ್ಲೆಂಡಿನಲ್ಲಿ 2 ರೂ. 1 ಆ 4 ಪೈ, ಅಮೇರಿಕಾದ ಯುನೈಟೆಡ್ ಸ್ಟೇಟ್ಸಿನಲ್ಲಿ 3 ರೂ. ಇವು ಆಗಿರುವಾಗ ಇಂಡಿಯಾದ ಮನುಷ್ಯನ ಸರಾಸರಿ ಉತ್ಪತ್ತಿಯು ಒಂದೇ 2 ಆ. 6 ಪೈ ಎಂತ ಸೈಮನ್ ರಿಪೋರ್ಟಿನಲ್ಲಿ ತಿಳಿಸಿದೆ. ಹಿಂದೂಸ್ಥಾನದ ಅತ್ಯಂತ ಬಡತನವೇ ಹಿಂದೂಸ್ಥಾನದ ಅನೇಕ ಕಷ್ಟಗಳಿಗೆ ಕಾರಣ. ಆದ್ದರಿಂದ ಬಡತನವನ್ನು ಆದಷ್ಟು ಬೇಗನೇ ಹೋಗಲಾಡಿಸಿಕೊಳ್ಳಬೇಕು. ಹಿಂದೂಸ್ಥಾನದ ಐಕ್ಯ, ಸ್ವರಾಜ್ಯ ಎಲ್ಲವೂ ಬಡತನ ತುಂಬಿದ ದೇಶಕ್ಕೆ ಪ್ರಯೋಜನವಿಲ್ಲ. ಪ್ರಯೋಜನವಾಗಬೇಕಾದರೆ ಜನರ ಉತ್ಪತ್ತಿ ಶಕ್ತಿಯನ್ನು ಶೀಘ್ರದಲ್ಲೇ ಹೆಚ್ಚಿಸಿಕೊಳ್ಳಬೇಕು. ಈ ದೇಶದ ಮುಖ್ಯವಾದ ಕಸುಬಾದ ವ್ಯವಸಾಯವನ್ನು ಅಭಿವೃದ್ಧಿಗೊಳಿಸಿಕೊಳ್ಳಬೇಕಲ್ಲದೆ ಎಂತಹ ಕಸುಬಾದ ಕೈಗಾರಿಕೆಯನ್ನೂ ಸಂಬಂಧಪಟ್ಟ ಬ್ಯಾಂಕಿಂಗ್ ಮತ್ತು ಇನ್ನಿತರ ಕೆಲಸಗಳನ್ನೂ ಹೆಚ್ಚಿಸಿಕೊಳ್ಳಬೇಕು. ದುರದೃಷ್ಟದಿಂದ ಜನರಿಗೆ ಬೇಕಾದಷ್ಟು ಭೂಮಿ ಇಲ್ಲ—ಮನೆಯಲ್ಲಿದ್ದ ಕೈಗಾರಿಕೆಗಳೆಲ್ಲಾ ನಾಶವಾದ್ದರಿಂದ ಜನರು ತಮಗಿರುವ ಅಲ್ಪಸ್ವಲ್ಪ ಭೂಮಿಯಲ್ಲಿ ಬೆಳೆದಷ್ಟು ಬೆಳೆಸಿಕೊಂಡು ಹೆಚ್ಚಿನ ಕಾಲವನ್ನೆಲ್ಲಾ ನಿರುದ್ಯೋಗದಲ್ಲಿ ಕಳೆಯಬೇಕಾಗಿದೆ. ಕೆಲಸವಿಲ್ಲದ ಮನುಷ್ಯನ ಆರ್ಥಿಕ ಸ್ಥಿತಿಯು ಇನ್ನೂ ಹಾಳಾಗಿದೆ. ಆದ್ದರಿಂದ ನಾಶವಾದ ಕೈಗಾರಿಕೆಗಳನ್ನು ಪುನಃ ಸ್ಥಾಪಿಸಬೇಕು. ಹೊಸ ಕೈಗಾರಿಕೆಗಳನ್ನು ಕಂಡು ಹಿಡಿಯಬೇಕು.

ನಾವು ಪ್ರತಿಯೊಬ್ಬರೂ ಹೊಸ ಹೊಸ ಕೈಗಾರಿಕೆಯ [illegible]

ದೇಶಗಳಿಂದ ಉತ್ಪತ್ತಿಯಾಗುವ ವಸ್ತುಗಳನ್ನೇ ಹೆಚ್ಚಿಗೆ ಬೆಲೆ ಕೊಟ್ಟಾದರೂ ಕೊಂಡುಕೊಂಡು ಉತ್ತೇಜನಕೊಡಬಹುದು. ಸ್ವದೇಶೀ ಸಾಮಾನುಗಳದ್ದಾರೂ ಅವು ಕೊಂಡುಕೊಳ್ಳಲು ದೊರಕದೆ ಇರುವ ತೊಂದರೆ ಇರುತ್ತದೆ. ತನಗೆ ಬೇಕಾದ ಸಾಮಾನು ಸ್ವದೇಶದ್ದೇ ಇದೆಯೋ ಇದ್ದರೆ ಎಲ್ಲಿ ದೊರೆಯುತ್ತದೆ ಎಂತ ತಿಳಿದಿರುವುದಿಲ್ಲ. ಆದ್ದರಿಂದ ಆಯಾ ಊರಿಗೆ ತಿಳಿಸಿಕೊಡತಕ್ಕ ಸ್ವದೇಶೀ ಕೈಗಾರಿಕೆಗಳಿಗೆ ಉತ್ತೇಜನಕೊಡಲಿಕ್ಕೆ "ಹಿಂದೀ ವಸ್ತುಗಳನ್ನು ಕೊಳ್ಳಿ" ಸಂಸ್ಥೆಗಳ ಸಹಾಯ ವಾಗುತ್ತದೆ. ಸ್ವದೇಶೀ ವಸ್ತು ಉತ್ಪನ್ನ ಮಾಡುವವರಿಗೂ ಕೊಂಡುಕೊಳ್ಳುವವರಿಗೂ ಸಂಬಂಧವನ್ನುಂಟುಮಾಡಲು ಈ ಸಂಸ್ಥೆಗಳು ಉಪಯೋಗವಾಗುತ್ತವೆ. ಈ ಸಂಸ್ಥೆಗಳು ಸ್ವದೇಶೀ ವಸ್ತುಗಳು ಎಲ್ಲೆಲ್ಲಿ ತಯಾರಾಗುತ್ತವೆ, ದೊರೆಯುತ್ತವೆ ಎಂಬುದನ್ನು ತಿಳಿಸಿಕೊಡಬೇಕು. ಸ್ವದೇಶೀ ವಸ್ತುಗಳನ್ನು ತಯಾರಿಸುವವರು ಸಹ ಈ ಸಂಸ್ಥೆಗಳೊಂದಿಗೆ ಸಹಕರಿಸಿ ತಮ್ಮ ಸಾಮಾನುಗಳ ಕುರಿತು ಎಲ್ಲಾ ತಿಳುವಳಿಕೆಯನ್ನು ಕೊಡಬೇಕು.

ಎಲ್ಲಾ ಪ್ರಾಂತ್ಯಗಳೂ ರಾಷ್ಟ್ರೀಯ ಭಾವನೆಯು ಬೆಳೆಯಲು ಪ್ರಯತ್ನಿಸುತ್ತಿರುವಾಗ "ಸ್ವದೇಶೀ" ಹುಟ್ಟಿದ ಬಂಗಾಳವು ಹಿಂದೆ ಬೀಳಬೇಕೇ? ನಮಗೋಸ್ಕರ ಮಾತ್ರವಲ್ಲ, ರಾಜನಾರಾಯಣ ಬೋಸರ ಸಹ ಸ್ವದೇಶೀ ಚಳವಳವನ್ನು ಪ್ರಾರಂಭಿಸಿದಾಗ ಬಂಗಾಳವು ಎಷ್ಟು ಉತ್ಸಾಹದಿಂದ ಸಹಕರಿಸಿದರು! ಗತಿಸಿದ ಗೌರವಯುಕ್ತರಾದ ಸುರೇಂದ್ರನಾಥ ಬ್ಯಾನರ್ಜಿಯವರ ಹೃದಯಂಗಮವಾದ ಭಾಷಣಗಳಿಂದ ಸ್ವದೇಶಿಗೆ ಎಷ್ಟೊಂದು ಉತ್ತೇಜನ ದೊರಕಿತ್ತು? ಇತ್ತೀಚೆಗೆ ಮಹಾತ್ಮ ಗಾಂಧಿಯವರ ಬೋಧನೆಯಿಂದ ಖದ್ದರ್ ಪ್ರಚಾರಕ್ಕೆ ತುಂಬಾ ಉತ್ತೇಜನ ದೊರಕಿದೆ. ಇದರಿಂದ ಬಂಗಾಳದ ಹೃದಯವು ಸರಿಯಾಗಿಯೇ ಇದೆಯೆಂಬುದು ಸ್ಪಷ್ಟವಾಗಿದೆ. ಈ ಚಳವಳಗಳಲ್ಲಿ ನಾನೂ ಸಹ ಅಲ್ಪ ಸೇವೆಮಾಡಿದ್ದೇನೆ. ನನ್ನ ಯೌವನದ ಕನಸುಗಳು ವೃದ್ಧಾಪ್ಯದಲ್ಲಿ ಕಾರ್ಯರೂಪಕ್ಕೆ ಬರುತ್ತಿರುವುದನ್ನು ನೋಡಿ ನನಗೆ ಎಷ್ಟೊಂದು ಹರ್ಷವಾಗುತ್ತದೆ!

ಬಂಗಾಳದ ಪ್ರತಿಯೊಬ್ಬನೂ "ಹಿಂದೀವಸ್ತುಗಳನ್ನು ಕೊಳ್ಳಿ" ಸಂಸ್ಥೆಗಳಿಗೆ ಸೇರಬೇಕಂತ ಕೇಳಿಕೊಳ್ಳುತ್ತೇನೆ. ತನಗೆ ತಾನೇ ಸಹಾಯಮಾಡಿಕೊಳ್ಳುವವರಿಗೆ ದೇವರು ಸಹಾಯ ಮಾಡುತ್ತಾರೆ.

ಸಂಯುಕ್ತನಿಯೋಜನೆ ಕ್ರಾಂತಿಯವರ ಸವಾರಿ.

ಅಂದು ಡೆಪ್ಯುಟೇಷನ್ ಕಾನ್ಫರೆನ್ಸಿನಲ್ಲಿ, ಕ್ರಾಂತೀ ಪ್ರಭುಗಳು ಕೇವಲ ನಮ್ಮಂತೆ ಕೆಣಕಿಕೊಂಡರು ನಮ್ಮ ಬೆನ್ನು ಗುದ್ದಿದರು. ಇಂಗ್ಲೆಂಡಿಗೂ, ಇಂಡಿಯಾಕ್ಕೂ ಸೇತುವೆ ಹಾಕಿ ಸರಿಮಾಡುತ್ತೇವೆಂದರು. ಎಲ್ಲ ಬಗೆಯ ಮೋಹ ಜಾಲದಲ್ಲಿಯೂ ನಮ್ಮನ್ನು ಸಿಲುಕಿಸಿದರು. ಸುತ್ತಿಸಿದರು. ಸರಿ! ಇಂದು? ಅವರ ರೀತಿಯೇ ಬೇರೆ. ಬನ್ನಿರೇ ಬೇರೆ. ಕಾಂಗ್ರೆಸಿನ ಅಮಾನ ಧಿಕ್ಕಾರ. ಬ್ಯುರೋಕ್ರೆಸಿಯ ಸಂಪೂರ್ಣ ಪುರಸ್ಕಾರ!

ಇರಲಿ; ಕಾಂಗ್ರೆಸನ್ನು ಅವರು ಬೇಕಾದಷ್ಟು ಬಯ್ಯಲಿ, ನಿಂದಿಸಲಿ, ಆರೋಪಗಳನ್ನು ಅದರ ತಲೆಯ ಮೇಲೆ ಹುರಿಸಲಿ ಚಿಂತೆಯಿಲ್ಲ. ಅದರ ಚರ್ಚೆಗೆ ನಾನೀಗ ಹೋಗುವುದಿಲ್ಲ. ಏಕೆ? ಸುಧಾರಣೆ ಬರುತ್ತದೆ; ಆ ವೇಳೆ ಎಲ್ಲವೂ ಸರಿ ಹೋಗುತ್ತದೆ" ಎಂದು ಅನೇಕರಿಗೆ ಆತ್ಮತೃಪ್ತಿ ಇದೆ ಇಲ್ಲ! ಆದರೆ ಅಲ್ಲಿಯೂ ಕ್ರಾಂತಿಯವರು ಮೆಲ್ಲಗೆ ತಿಂಡಿಸಿರುವ ಈ ಸೂಕ್ಷ್ಮ ಕಾಲಿನ ಅರ್ಥವೇನು? 'ಗುರಿಯನ್ನು ಮುಟ್ಟಿಸಬೇಕಾಗಿದ್ದುದನ್ನು ಕಲಂಕಿತವಾಗಿದೆ' ಎಂಬುವುದರ ಸ್ವಾರಸ್ಯವೇನು? ಇನ್ನು ಪುದೂ ಮುಟ್ಟುವುದೂ ಎರಡೂ ಒಂದೇ? ಈ ಗುರಿಯು [illegible] ಇದನ್ನು ಕ್ರಾಂತೀಯವರು ಹೀಗೆ ಹೇಳಬೇಕು? [illegible] ಈಗ ದೂರದಲ್ಲಿ ಕಾಣುತ್ತದೆ ಎಂದು ಅರ್ಥವೇ? ಪ್ರಾಯಶಃ ಅದೇ ನಿಜವಾಗಿರಬಹುದು. ಕಾರಣವೇನು? ಆಗ ಕಂಡ ಕಾರ್ಯವು ಈಗ ಇಲ್ಲ. ಯಾವ ದೂರವನ್ನು ಸುಧಾರಣೆ—ಸಾಲೋಚನೆಗಳ ಮೂಲಕ ಶಾಂತಿಯನ್ನು ಸರಕಾರದವರು ಸ್ಥಾಪಿಸಬೇಕೆನಿಸಿಕೊಂಡು, ಆ ಬೇರೆಯ ಸಂಕೇತದ ಸಮಯಾಯಿತು. ಜನರೊಂದಿಗೆ ಆತ್ಮವಂಚನೆ ಅವಶ್ಯ ಬೇಕಾಗಿದೆ. ಆ ದಬ್ಬಾಳಿಕೆ ಸರ್ವಸಮ್ಮತವಾದ ಸುಧಾರಣೆಗಳನ್ನು ದೊರ ಕೊಡುವುದಿಲ್ಲ? ತೆಗೆದುಕೊಳ್ಳುವುದಿಲ್ಲ? ಕೊಟ್ಟು ತೆಗೆದುಕೊಳ್ಳುವರು, ಕಾಣುವುದೆಂದರೂ ಎಲ್ಲಿ? ದಂಡನೀತಿಯು ಮೋಸಮುಸುಕಿರುವಷ್ಟು ಕಾಲ, ಗುಂಡು ನೀತಿಯಿಂದ ಸಹಕಾರ ಲಭ್ಯವಿರುವಷ್ಟು ಕಾಲ, ಆ ಗುರಿ ದೂರವಲ್ಲ ಕಾಣಿಸುವುದಿಲ್ಲ! ಈಗಿನ ನೀತಿ ಎಂದರೆ ಇದೇ—ಕಂಡ ಗುರಿ ಕಾಣಿಸದಂತೆ ಮಾಡುವುದು. ಕ್ರಾಂತಿಯವರನ್ನು ಬಡಿಸಿ ಕೇಳುತ್ತೇನೆ. ಆಕೋ ಪೃಚ್ಛ; ತಕೋ ನಿಮಗೆ ದಂಡವೂ ತಪ್ಪುವುದಿಲ್ಲ; ನಿಜವಾದ ಸುಧಾರಣೆ ದಕ್ಕುವುದಿಲ್ಲ' ಎಂದೇ ಮನಸಿನಲ್ಲಿ ಗುಣುಗುಟ್ಟಿ, ನಗುವ್ಮೊಗದ ಸವಾರಿ ಮಾಡುತ್ತಿದ್ದಾರೆ. ನೆನಪಿರಲಿ, ಇಷ್ಟರಲ್ಲೇ ಈಗಿನ ಕಳಕಳಿಯುಕ್ತ!

[illegible]ನ ಲೇಬರ್ ಪಾರ್ಟಿ

[illegible] ಅಭಿಪ್ರಾಯ.

[illegible] ಮೇಲೆಯೇ ನಿಂದಿಕೆ ಇ[illegible] ಒಂದಲ್ಲ ಒಂದು ದಿನ [illegible] ಇರುವ ಆರ್ಡಿನೆನ್ಸ್ [illegible] ಸುಧಾರಣೆಯ [illegible] ಸಂಬಂಧಪಟ್ಟ [illegible] ಪಕ್ಷ ಬಲ [illegible] ಸೇರಿದೆಯಾಗಿ [illegible]

Reg. No. M. 1530
If not delivered please return to
"KODAGU" OFFICE MERCARA.

ಕೊಡಗು.

ವಾರ್ಷಿಕ ಚಂದಾ ರೂ. ೪—೮—೦.

ಸಂಪಾದಕ—ಮೂಕೊಂಡ ಯಂ. ಗಣಪತಿ

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಪುಸ್ತಕ ೧೧	೧೯೩೩ನೇ ಇಸವಿ ಏಪ್ರಿಲ್ ತಾರೀಕು ೨೨ನೇ ಶುಕ್ರವಾರ.	ಸಂಚಿಕೆ ೪೬

Office of the Asst.
Commr. & Dt. Magte.,
Mercara (Coorg). 6th May 1931.

Dear Sir,

I am QUITE PLEASED with the workmanship of the two Coorg weapons (PICHAKATTI & ODIKKATTI).

Yours faithfully,
(Sd) (Rao Bhadur)
K. CHENGAPPA, B. A.
District Magistrate and Assistant Commissioner of Coorg.

JEWELLER
By Appointment to
H. E The Governor of Madras.



PEECHAKATTI (WITH SILVER FITTINGS)
Prices-From Rs. 100 & upwards.

"New Bungalow,"
Ammatti, (Coorg).
14th December 1931.

Dear Sir,

I am IMMENSELY-PLEASED with the workmanship of the PICHAKATTI you made and sent me some time back.

Yours faithfully,
Sd/ K. P. MUDDAYYA,
Ammatti (Coorg.)

Telegrams: 'PRECIOUS.'

Telephone: 3145.

V. Subramaniaier
Jeweller,

CATALOGUE ON ENQUIRY.

52-22 Post Box 423, Triplicane, P. O., MADRAS.



ಕೋವಿಗಳು, ಕತ್ತಿಗಳು, ಬಚೀಗಳು, ತೋಟೆಗಳು, ಕೇಪುಗಳು, ಮದ್ದು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS.
Largest Importers of Firearms and Ammunition
Cheapest priced firm in India.
44-7 210 Abdul Rehman Street, BOMBAY.

ಜಾಹಿರು ಬರೆದ ಬಗೆಗೆ ವ್ಯವಹಾರ ಮಾಡಿದರೆ ಕೆಲಸ ನಡೆಸಲ್ಪಡುವದು.

ಬಾಲಾರ್ಕಮಧು.

ಬಾಲಾರ್ಕಮಧು ಮಕ್ಕಳಿಗೆ ಕೊಡುವುದರಿಂದ ಶಕ್ತಿಯೂ ಆರೋಗ್ಯವೂ ಹೆಚ್ಚುವುದು. ಇದು ಮಧುರವಾಗಿಯಿದ್ದಿದೆ ಶೀಸೆ 1ಕ್ಕೆ 0—12—0 ಟ. ಖ. 0—12—0.



ರೂ. 3—8—0

(Spleen Lever enlarge) ಇವುಗಳಿಂದ ... "ಫ್ಲೂಟ್" ... ಔಷಧಗಳಿವೆ. ... ಶೀಸೆ ನಾಲ್ಕು ಔಷಧಗಳ್ಳ 3—0—0. ಟ. ಖ.

ರೂ. 78

ಸ. ಎ. ... ಎಸ್. ...

ಭಂಗಾರದ ಉಂಗುರಗಳು.

ಈ ಉಂಗುರಗಳನ್ನು ವಜ್ರದ ಕಲ್ಲುಗಳನ್ನು ಇಟ್ಟು ರೋಲ್ಡ್ ಗೋಲ್ಡ್ ಭಂಗಾರದಿಂದ ಕಟ್ಟಿದ ಕಟ್ಟಿದೆ. ಇದರ ಬಣ್ಣವು ಕೆಡದಂತೆ ಎಲೆಕ್ಟ್ರಿಕ್ ಪವರಿನಿಂದ ಸವರಿಸ್ ಭಂಗಾರದ ಬಣ್ಣ ಕೊಟ್ಟಿದೆ. ಇವು ಸಾಚಾ ವಜ್ರದ ಉಂಗುರಗಳಿಗೆ ಸಮಸಮಾನವಾಗಿವೆ. ೧ಕ್ಕೆ ೦—೧೨—೦. ೩ ಉಂಗುರಗಳಿಗೆ ೧ ಟೈಮ್‌ಪೀಸನ್ನು ೬ ಉಂಗುರಗಳಿಗೆ ೧ ಭಂಗಾರದ ವಾಚನ್ನು ೧೨ ಉಂಗುರಗಳಿಗೆ ಒಂದು ಭಂಗಾರದ ಕೈಯಲ್ಲಿ ಕಟ್ಟುವ ವಾಚನ್ನು ಇನಾಮಾಗಿ ಕೊಡುವೆವು.

ವಿಳಾಸ—ಕೆ. ಎಸ್. ... ಅಂಡ್ ಕೊ.,
12-3 ನಂ|| 1244, ಮದರಾಸು.

ಸ್ವದೇಶೀ ಶೀರೆಗಳು.

ಈ ಶೀರೆಗಳನ್ನು ಹೊಸದಾಗಿ ಹೊಂದಿದ ದೊಡ್ಡ ಕಂಪೆನಿಯವರಿಂದ ತಯಾರಿಸಿದ್ದು. ೧೮ ಮೊಳ ಉದ್ದವೂ, ೨½ ಮೊಳ ಅಗಲವೂ ಇರುವುವು. ಇವನ್ನು ಗಟ್ಟಿಯಾದ ಸಣ್ಣ ನೂಲಿನಿಂದಲೂ, ರೇಶ್ಮೆಯಿಂದಲೂ ತಯಾರಿಸಿದೆ. ಅಂದವಾದ ಅಂಚಿನ ಸುಂದರವಾದ ಶೆರಗೂ ಇರುವದು. ಇವು ಯಾವಾಗ್ಯೂ ರೇಶ್ಮೆಯಂತೆ ಇರುವವು. ಎಲ್ಲಾ ಬಣ್ಣಗಳಲ್ಲಿಯೂ ಸಿಕ್ಕುವವು. ಎಲ್ಲಾ ಬಣ್ಣಗಳಲ್ಲಿಯೂ ಸಿಕ್ಕುವವು. ಮತು ಎಲ್ಲಾ ಮತಸ್ಥರಿಗೂ ಉಪಯುಕ್ತವಾದದ್ದು. ಈ ವಾರದಲ್ಲಿ ಕೊಳ್ಳುವವರಿಗೆ ೬ ಕಲ್ಲಿನ ವಜ್ರದ ಗಡಿಯಾರ ಒಂದನ್ನು ಇನಾಮಾಗಿ ಕೊಡುತ್ತೇವೆ. ಕ್ರಯ ೧ಕ್ಕೆ ೭—೮—೦.

ವಿಳಾಸ—ಕೆ. ನಾರಾಯಣ ಅಂಡ್ ಸನ್ಸ್,
12-3 168 ಕ್ರೈಸ್ಟ ಬಜಾರ ಮದರಾಸು,

ಪ್ರಕಟಣೆ.

"ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್",
ಲಿಮಿಟೆಡ್- ಕೊ ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.
(ಸ್ಥಾಪಿತವಾದದ್ದು 1922ರಲ್ಲಿ)

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	26,800
ಜಮೆಬಂದ ಠೇವಣಾತಿ	—	2,50,301

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೋಸ್ಕರ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5–0–0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ನರ್ಕಾರಿಂದ ಬೆಂಬಲಿತ ಕೊಡಗು ಡಿಪೋಸಿಟ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು,	ಟ್ರೆಜರರ್
ಕೋದಂಡ ಅಪ್ಪಯ್ಯನವರು	ಮನೆಯಪ್ಪಂಡ ಬೆಳ್ಳಪ್ಪ
ರಾವ್ ಬಹದ್ದೂರ್.	ನವರು.

ಸೆಕ್ರೆಟರಿ

ಸಿ. ಯಸ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.
ತಾರೀಖು 1–7–1931.

ನೋಟೀಸು.

ಈ ಕೆಳಗಿನ ಮಹಾಶಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಉತ್ತರ ಕೊಡಗಿಗೆ ಶ್ರೀ ಚೌರಿರ ಪೂವಯ್ಯನವರು,

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮುಂಡೇಪಂಡ ಸೋಮಯ್ಯನವರು, (ಖಾದಿಭಂಡಾರ.)
ಸೋಮವಾರಪೇಟೆ—ಎಸ್. ಆರ್. ವೆಂಕಪ್ಪಯ್ಯನವರು.
ಅಮ್ಮತ್ತಿ—ಸಿದ್ದಾಪುರ—ಮೆ. ಬಸವ ಮಾದಪ್ಪನವರು,
ಪೊನ್ನಂಪೇಟೆ—ಮೆ. ಪಿ. ಜಿ. ಮುದ್ದಪ್ಪಯ್ಯನವರು,
ಮತ್ತು ಅರಮಣಮಾಡ ಪಿ ಕಾರ್ಯಪ್ಪನವರು,
ಕುದಿಕೇರಿ & ತಿತಿಮತ್ತಿ—ಮೆ. ಜಿ. ಮಾದಪ್ಪಯ್ಯನವರು,
ಗೋಣಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಪೂವಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರಿಗೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.
ವಿಮೆದಾರರಿಗೆ ಕೊಟ್ಟದ್ದು—3231 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ-8013 ಜನರಿಗೆ 32 ಲಕ್ಷ ರೂ.
ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.
ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,78,322 ಜನರಿಗೆ 38 ಕೋಟಿ ರೂ.
ವೆಚ್ಚದ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ರಕ್ಕಿಂತ ಮಿತವಾದ ಕಮ್ಮಿ ಖರ್ಚಿನಲ್ಲಿಯೇ ನಡೆಸಲ್ಪಟ್ಟಿದ್ದಾಗಿದೆ.

ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡೆಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಒತ್ತಾಸೆಯನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಬೋನಸು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ಸ್ಪಷ್ಟವಾಗುತ್ತದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೊಲಂಬೊ	ಪೆಂಗಳೂರು	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೋ	ಪಾಟ್ನಾ	ಸಿಕಂದ್ರಾಬಾದು
ಅಲಹಾಬಾದು	ಢಿಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	[illegible]	ಮಂಡಲೆ	ರಾಯಪುರ	ತಿರುವೆಂದ್ರಮ್
ಭೋಪಾಲ್	ಕರಾಚಿ	ಮಂಗಳೂರು	ರಾಂಚಿ	ವಿಶಾಖಪಟ್ಟಣ

[52—7

ಛಳಿಜ್ವರದ ಮಾತ್ರೆ:—ಇದು ಆರ್ಸೆನಿಕ್ ಮತ್ತು ಕ್ವಿನೈನ್ ಸೇರಿಸಿದ್ದು. ಗುಣವಾಗದಿರುವ ಮಲೇರಿಯ ಜ್ವರ, ದಿನ ಬಿಟ್ಟು ಬರುವ ಜ್ವರ, 3–4 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ ಮತ್ತು ಜ್ವರಗಳ್ಗೆ ದೋಷದಿಂದ ಬರುವ ಜ್ವರಗಳಿಗೆ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1–8–0; 3ಕ್ಕೆ ರೂ. 4–0–0; 6ಕ್ಕೆ ರೂ. 7–8–0. 12ಕ್ಕೆ ರೂ. 14

ಚಂದನಾಸವ:—ಇದು ಪ್ರಮೇಹ ಮೂತ್ರಕೃಚ್ಛ್ರ, ಮೂತ್ರ ಕಷ್ಟವಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಸೋರುವುದು, ಮೂತ್ರನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದ ಚುಚ್ಚುವ ನೋವು. ಇವುಗಳಿಗೆ ಪರಮ ಔಷಧಿ. ಬೆಲೆ ಬಾಟ್ಲಿ 1, 3, 6ಕ್ಕೆ ರೂ 1–1–0 3–8–0; 6–12–0

ಕೋಮಲಾಮೃತ:—ಈ ಎಣ್ಣೆಯನ್ನು ತಲೆಯಲ್ಲಿ ಕೂದಲು ಹುಟ್ಟದೆ ಬೋಳಾಗಿರುವ ಭಾಗಕ್ಕೆ ಹಚ್ಚಲು ಬೋಳು ಹೋಗಿ ಕೂದಲು ಹುಟ್ಟುವುದು. ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ. 1. 1 ಡಜನಿಗೆ 3—2—0

ಮಹೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆಹೊಟ್ಟು, ಕಣ್ಣುರಿ, ಕಿವಿಯಿಂದ ಕೀವು ಸೋರುವುದು ಕಿವುಡು, ಕಣ್ಣು ಕೋಟಲೆ, ಅಕಾಲದ ನರೆ, ಬಾಧಿಸುವುದು, ನಿದ್ರೆ ಶಕ್ತಿ ಕುಂದಿಹೋಗುವುದು. ಇವೆಲ್ಲಕ್ಕೂ ಜಂಡೀಗ ಗುಣಮಾಡುತ್ತದೆ. ಉದುರುವ ಕೂದಲನ್ನು, ಬಿಳಿ ಬಣ್ಣವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಆಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಉದ್ದವಾಗಿ ಬೆಳೆಯುವಂತೆ ಮಾಡುತ್ತದೆ. ಚಿಕ್ಕ ಸೀಸೆಗೆ ರೂ. 1, 3 ಸೀಸೆಗೆ 2—10—0. ದೊಡ್ಡ ಸೀಸೆಗೆ ರೂ. 2, 3 ಸೀಸೆಗಳಿಗೆ 5—8—0

ವಿಳಾಸ:—ಮಹೋಲ್ಲಾಸಿನಿ ಕಂಪೆನಿ,

52—47 ಕಟೀಲಾಗು ಹಾಲ್ ನಂ. 9 ಮಂಗಳೂರು.

ಸಣ್ಣ ಮಕ್ಕಳ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತಾರೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪನಿ,

52—14 ಗಿರಿಗಾಂವ, ಮುಂಬಯಿ.

ಪಟಿಕ್ಕೆ ಸಿದ್ಧವಾಗಿವೆ.

ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿ ನಿತ್ಯ ಉಪಯೋಗಕ್ಕೆ ಬೇಕಾದ ಅನೇಕ ಜಮಾ ಖರ್ಚು ಸಂಘದ ಮತ್ತು ದವಸ ಭಂಡಾರದ ಪುಸ್ತಕಗಳೂ, ಎಲ್ಲಾ ಸಹಕಾರ ದವಸ ಭಂಡಾರಗಳ ಕೆಲಸಗಳನ್ನು ವ್ಯವಸ್ಥೆಯಾಗಿರುವ, ರೂಲ್ಸಿನಂತೆ ಬೇಕಾದ ಫಾರಮುಗಳೂ, ನಮ್ಮ ಮಂಜೂರಾತಿ ಫಾರಮು ಫಾರಮುಗಳೂ, ಜಾಮೀನು ಶೇರ್ ಪತ್ರದ ಫಾರಮು ರಶೀತಿ ಪುಸ್ತಕಗಳೂ, ಮತ್ತು ಚೆಕ್ ಪುಸ್ತಕ ದೊರೆಯುತ್ತವೆ.
ಪ್ರೆಸ್ಸಿಲ್ಲಿ ವಿ. ಪಿ.

Printed & published by M. M. Ganapathy at "Kodagu" Press, Merca[illegible] for "Kodagu" Ltd.

೫೩ ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ ಔಷಧಗಳು.

೧. ಧಾತುಪುಷ್ಟಿ ಲೇಹ.

ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೋಗ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದುವಿಕೆ ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕ ಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ದೇಹದ ಪಿತ್ತದ ಬಾಧೆ, ರಕ್ತ ಪಿತ್ತ, ಒಳ ಜ್ವರ, ಮಲಬದ್ಧತೆ, ಕೈಕಾಲು ಉರಿ ಮೊದಲಾದವುಗಳು ಪೂರ್ಣ ಗುಣವಾಗುತ್ತವೆ. ಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು.—ಕ್ರಯ ಡಬ್ಬಿ 1ಕ್ಕೆ 2—8—0 ಮೂರು ಡಬ್ಬಿಗಳಿಗೆ ರೂ. 7—0—0

೨. ಅಶೋಕಾರಿಷ್ಟ ಮತ್ತು ಮಾತ್ರೆ.

ಹೆಂಗಸರ ಮುಟ್ಟು ದೋಷಗಳು, ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟ ನೋವು, ಸಂತಾನ ಹೀನತೆ, ಮೂರ್ಛೆ, ಮಲಬದ್ಧತೆ, ಒಳಜ್ವರ, ರಕ್ತಹೀನತೆ, ಕೈಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಅತಿ ಶೀಘ್ರದಲ್ಲಿಯೇ ಗುಣ ಪಡಿಸುವುದು. ಅಶೋಕಾರಿಷ್ಟ ಮತ್ತು ಮಾತ್ರೆಗಳು ಸಾವಿರಾರು ಹೆಂಗಸರಿಗೆ ಅಂತರಂಗ ಆರೋಗ್ಯವನ್ನು ಒದಗಿಸಿ, ಮನೋಭಿಲಾಷೆಯನ್ನು ಪೂರಯಿಸಿರುವವು.

ಕ್ರಯ: 1 ಬಾಟ್ಲಿ ಔಷಧ, 1 ಡಬ್ಬಿ ಮಾತ್ರೆ ರೂ. 2 ಆ. 4
3 ಬಾಟ್ಲಿ ಮತ್ತು ಡಬ್ಬಿಗಳಿಗೆ ರೂ. 6 ಆ. 4.

೩. ಮಲೇರಿಯಾ ನಿವಾರಣೆ.

ದಿನ ಬಿಟ್ಟು ಬರುವ ಜ್ವರ, ಮಲೆ ಜ್ವರ, 2 ಯಾ 3 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರ ಗಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರ ಗಡ್ಡೆಯನ್ನು ಕರಗಿಸಿ ಶಕ್ತಿಯನ್ನು ಉಂಟು ಮಾಡುತ್ತದೆ. ಬಾಟ್ಲಿ 1 ಕ್ಕೆ 1—8—0, 3 ಬಾಟ್ಲಿಗಳಿಗೆ 4—2—0.

೪. ಮೇಹ ಕುಠಾರ. ಇದು ಮೂತ್ರಸ್ಥಾನದಿಂದ ಕೆಂಪು, ಬಿಳಿದು, ಹಳದಿಯಂತೆ ಹೋಗತಕ್ಕ ಕೀವನ್ನೂ, ವ್ರಣವನ್ನೂ, ಉರಿಯನ್ನೂ ಗುಣಪಡಿಸುತ್ತದೆ. ಡಬ್ಬಿ 1 ಕ್ಕೆ ರೂ. 2—8—0. 3ಕ್ಕೆ ರೂ. 7.

೫. ಇಚ್ಛಾ ಭೇದಿ ಗುಟಿಕೆ. ಅಯಾಸವನ್ನು ಉಂಟುಮಾಡುವ ಸುಖ ವಿರೇಚಕ. ಬಾಟ್ಲಿ 1ಕ್ಕೆ 0—12—0 ಆಣೆ. 3 ಬಾಟ್ಲಿಗಳಿಗೆ 2—2—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ತಾವು ಬರೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ರವಾನಿಸಬಹುದು. ಕೆಟಲಾಗು ತರಿಸಿ ನೋಡಿರಿ.

ಎಂ. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದಿಕ್ ಫಿಜಿಷಿಯನ್,
52—27 ರಥಬೀದಿ, ಮಂಗಳೂರ, ದ. ಕನ್ನಡ

ಪುತ್ರ ಸಂತಾನದ ಎಣ್ಣೆ.

ಈ ಎಣ್ಣೆಯು ಒಬ್ಬ ದೊಡ್ಡ ಪಂಡಿತರಿಂದ ತಯಾರಿಸಿದ್ದು. ಹೆಂಗಸರಿಗೆ ಅನೇಕ ಕಾರಣಗಳಿಂದ ಗರ್ಭವು ನಿಲ್ಲುವದಿಲ್ಲ: ಕೆಲವರಿಗೆ 3—4 ತಿಂಗಳ ಕಾಲ ನಿಂತು ನಂತರ

ಹೋಗಿ ಬಿಡುವದು. ಅಂಥಾ ಹೆಂಗಸರು ಈ ಎಣ್ಣೆಯನ್ನು ೧೫ ದಿನಗಳು ಸೇವಿಸುವದರಿಂದ ಗರ್ಭವು ನಿಂತು ಪುತ್ರ ಸಂತಾನವಾಗುವುದು. ಕೆಲವು ಹೆಂಗಸರಿಗೆ ಮುಟ್ಟಾಗುವ ಸಮಯದಲ್ಲಿಯೂ ಮುಟ್ಟಾದ ನಂತರವೂ ಉಂಟಾಗುವ ಹೊಟ್ಟೆ ನೋವು ಮುಂತಾದವುಗಳನ್ನು ಖಂಡಿತ ಗುಣಪಡಿಸುವದು. ಈ ಎಣ್ಣೆಯನ್ನು ಬೆಂಗಳೂರು, ಮದರಾಸ್, ಆದಿಪಟ್ಟಣಗಳಲ್ಲಿ ಮಕ್ಕಳಿಲ್ಲದವರು ಉಪಯೋಗಿಸಿ ಪುತ್ರ ಸಂತಾನವನ್ನು ಪಡೆದಿರುವರು. ಒಂದು ಬಾಟ್ಲಿಯನ್ನು ತರಿಸಿ ಪರೀಕ್ಷಿಸಿರಿ. ಉಪಯೋಗಿಸುವ ವಿಧ ಔಷಧದ ಜೊತೆಯಲ್ಲಿ ಕಳುಹಿಸುತ್ತೇವೆ.

ಕ್ರಯ ಬಾಟ್ಲಿ 1ಕ್ಕೆ 2—8—0.

K. Nadhamuni & sons.
168 China Bazar. Madras.

12—5

ರೋಲ್ಡ್ ಗೋಲ್ಡ್ ಭಂಗಾರದ ಗಡಿಯಾರಗಳು.
ಹಿಸಿಲ: ಕ್ರಯ 17—12—0. ಕೆಲವು ದಿನಗಳ ವರೆಗೆ 8—12—0.

ಈ ಗಡಿಯಾರಗಳು ಬಹು ಪ್ರಖ್ಯಾತಿಯಾದ ಫಿಡೋಲೀವರ್ ಮೂಮೆಂಟ್ಸ್‌ಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ. ಇವು ಬರಾಬರ ಗಂಟೆಯನ್ನು ತೋರಿಸುವವು. ಒಳಗಡೆ



ಕೆಂಪು ಹಚ್ಚಿರುವುದು. ಇದರ ಕೇಸು ಭಂಗಾರಕ್ಕೆ ಸಮವಾಗಿದೆ. ಇದಕ್ಕೆ 5 ವರ್ಷ ಖಾತ್ರಿಯಾದ ಗ್ಯಾರಂಟಿ ಕೊಡುವೆವು. 1 ಕೈಯಲ್ಲಿ ಕಟ್ಟುವ ರಿಸ್ಟ್ ವಾಚ್, 1 ಪಾಕೆಟ್ ವಾಚ್, ಮತ್ತು ಒಂದು ಟೇಬಲ್ ಟೈಂ ಪೀಸ್ ಈ ಮೂರು ಸೇರಿ ರೂ. 8—12—0 ಮಾತ್ರ. ಈ ಕ್ರಯವು ಕೆಲವು ದಿನಗಳ ವರೆಗೆ ಮಾತ್ರ. ನಂತರ ಸಿಕ್ಕಲಾರದು. ರಿಸ್ಟ್ ವಾಚ್ ಮತ್ತು ಟೈಂಪೀಸು ರೂ. 5—8—0; ರಿಸ್ಟ್ ವಾಚ್ ಮತ್ತು ಪಾಕೆಟ್ ವಾಚ್ ರೂ. 7—0—0.

ವಿಳಾಸ:—ಕೆ. ಎನ್. ಜೆನ್‌ಸನ್ ಅಂಡ್ ಕೊ,
12—4 ಪೋ || ನಂ || 1246, ಮದರಾಸು.

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಎಂಬುವ ಸುಪ್ರಸಿದ್ಧ ದೇಶೀಯ ವಿಮೋ ಸಂಘ.

ಅಧ್ಯಕ್ಷರು:—ಮಾನನೀಯ ಸರ್ ಲಲ್ಲೂಭಾಯಿ ಸಾಮಲದಾಸ್, ಕೆಟಿ., ಸಿ. ಐ. ಇ., ಜೆ. ಪಿ., ಯವರು.

ಕೊಚ್ಚಿಕಾರ ಬ್ರದರ್ಸ್, ಮದ್ರಾಸು ಬ್ರಾಂಚು ಸೆಕ್ರಟರಿಗಳು.

1. ಭಾಗ್ಯವಂತರ ಭಂಡಾರ, ವ್ಯಾಪಾರಸ್ಥರ ಕೋಶಾಗಾರ, ಕುಟುಂಬದ ಸಂರಕ್ಷಣಾನಿಲಯ, ಬಡವರ ಜೀವನಾಧಾರ ಇದೇ ಜೀವ ವಿಮೆಯು ತತ್ವವು.

2. ಹಿಂದೂಸ್ಥಾನದ ನಿವಾಸಿಯರಲ್ಲಿ ವಿಮೆ ತೆಗಿಯಬೇಕೆನ್ನುವವರ ಪ್ರಯೋಜನಾರ್ಥವಾಗಿ ಈ ಕಂಪೆನಿಯು ಭಾರತೀಯರ ಉತ್ತಮವಾದ ಅಡಳಿತದಿಂದ ಖರ್ಚು ಬೋಕಿ ಮಾಡಿ ಇಂಡಿಯಾ ಸರ್ಕಾರದ ಇಂಡಿಯನ್ ಟ್ರಸ್ಟ್ ಆಕ್ಟಿಗೆ ಒಳಪಟ್ಟು ಸರ್ಕಾರದ ಭದ್ರತೆಯಿಂದ ದೇಶೀಯರ ಸೇವೆಯಲ್ಲೇ ನಿರತವಾಗಿ ಹಿಂದೂಸ್ಥಾನದ ಎಲ್ಲಾ ಕಡೆಗಳಲ್ಲಿ ಅತಿ ಕೀರ್ತಿಯನ್ನು ಪಡೆದಿರುತ್ತೆ.

3. ಈ ಸ್ವದೇಶೀ ಕಂಪೆನಿಯು ಪೋಲಿಸಿದಾರರಿಗೆ ಪೋಲಿಸಿ ಅವಧಿ ಪೂರ್ತಿಸಿದ್ದಾಂತರವಾಗಲೀ ಅಥವಾ ಮಧ್ಯದಲ್ಲಿ ಮರಣಾನಂತರ ವಾರೀಸುದಾರರಿಗಾಗಲೀ ಹೆಚ್ಚಿನ ಬಿರ್ಚಿಗೆ ಅಸ್ಪದ ಕೊಡದೆಯೂ, ದೀರ್ಘ ಸಮಯ ತೆಗೆದುಕೊಳ್ಳದೆಯೂ ಶೀಘ್ರದಲ್ಲಿ ವಿಮೋ ಮೊಬಲಗನ್ನು ಲಾಭ ಸಹಿತ ಪಾವತಿಕೊಡುವುದರಲ್ಲಿ ಹೆಸರುಗೊಂಡಿದೆ.

4. ಭರತಖಂಡದ ಮಹನೀಯರಿಂದ ಸ್ಥಾಪಿಸಲ್ಪಟ್ಟ ದೇಶೀಯರಿಂದಲೇ ಅತಿ ಕಡಿಮೆ ಖರ್ಚಿನಿಂದ ನಡಿಸಲ್ಪಡುವ ಈ ಸ್ವದೇಶೀ ಕಂಪೆನಿಯಲ್ಲಿ ಇಂದು ಭಾಗಿಗಳಾಗಿರಿ; ಪತಿಪತ್ನಿಯರಿಗೆ ಮತ್ತು ವ್ಯಾಪಾರಸ್ಥರು ವಗೈರರಿಗೆ ವಿಶೇಷವಿನಿ (ಜಾಯಿಂಟ್ ಲೈಫ್) ಪೋಲಿಸಿ ತೆಗೆದುಕೊಳ್ಳಲು ಈ ಕಂಪೆನಿಯು ತುಂಬಾ ಅನುಕೂಲಗಳನ್ನು ಕಲ್ಪಿಸಿರುತ್ತೆ. ಇಂಥ ಸುಸಮಯವನ್ನು ಎಂದಿಗೂ ತಳಕೊಳ್ಳಬಾರದು.

ಆಫೀಸು—
ಟೆಂಪಲ್ ಸೈಡ್,
ಮಡಿಕೇರಿ. (26—26)

ಬಿ. ಎಸ್. ಐಯ್ಯಪ್ಪ,
ಕೊಡಗು ಚೀಫ್ ಏಜೆಂಟ್.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

1. ಉತ್ತಮ ತರಹ ಒಂದು ಸೆಟ್ ಜರ್ಮನ್ ರೀಡ್ಸ್ ಹಾಕಿರುವ ಸಿಂಗಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 20—0—0
„ ಮತ್ತು 22—8—0

2. ಇದೇ ಉತ್ತಮ ತರಹ ಹಾರ್ಮೋನಿಯಂ „ 1ಕ್ಕೆ ರೂ. 25—0—0
ಮತ್ತು 27—8—0

3. ಇದೇ ಉತ್ತಮ ತರಹದ್ದು. ದೂಳು ಬೀಳದಂತೆ ಕೇಸಿನ ಮೇಲೆ ಪೂರ್ತಿ ಮುಚ್ಚಳವುಳ್ಳ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ ರೂ. 27—8—0

4. ಖಾತ್ರಿಯೂ, ಬಂದೋಬಸ್ತೂ, ಸುಸ್ವರವುಳ್ಳದ್ದೂ, ಅನೇಕ ವರ್ಷಗಳ ವರೆಗೆ ಬಾಳಿಕೆ ಬರತಕ್ಕದ್ದೂ ಆದ ಹೊಸದಾಗಿ ಸಪ್ಲೈ ಆಗಿರುವ ಫ್ರೆಂಚ್ ರೀಡ್ಸ್ ನಮೂನೆ ಇರುವ ನಮ್ಮ ಹೆಸರಿನ ರೀಡ್ಸ್ ಹಾಕಿರುವ "ಸಿದ್ದಪ್ಪಾಸ್ ಫ್ಲೂಟ್" ಸಿಂಗಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 42—8—0

5. ಉತ್ತಮ ತರಹ 2 ಸೆಟ್ ಜರ್ಮನ್ ರೀಡ್ಸ್ ಹಾಕಿರುವ, ದೂಳು ಬೀಳದಂತೆ ಕೇಸಿನ ಮೇಲೆ ಪೂರ್ತಿ ಮುಚ್ಚಳವುಳ್ಳ ಡಬ್ಬಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ ರೂ. 32—8—0

ಉತ್ತಮ ತರಹ 2 ಸೆಟ್ ... ಮೇಕ್ ರೀಡ್ಸ್ ಹಾಕಿರ... ಕೈನಿಂದಾಗಲೀ ಅಥವಾ ... ಲಿನಿಂದಾಗಲೀ ಬಾರಿಸಲು ... ಲಿಸುವಂತೆ ತಯಾರಿಸಿರುವ "... ಫ್ಲೂಟ್" ಡಬ್ಬಲ್ ರೀಡ್ಸ್ ... ಹಾರ್ಮೋನಿಯಂ 1ಕ್ಕೆ ರೂ. 78—...

ನಮ್ಮ ಟೆಂಬಲ್ ಡಿಪೋನಲ್ಲಿ ಕಟ್ಟಡಗಳಿಗೂ, ಫರ್ನಿಚರ್ ತಯಾರಿಸಲೂ ಬೇಕಾದ ಎಲ್ಲಾ ನಮೂನೆ ನಾಟಾಗಳನ್ನು ಸುಲಭ ದರದಿಂದ ವಿಕರಗಿಟ್ಟಿರುವುದಲ್ಲದೇ, ಗಿರಾಕಿಗಳು ಅಪೇಕ್ಷಿಸುವ ಸೈಜಿಗೆ ಕುಯಿಸಿಯೂ ರಿಯಾಯಿತಿ ದರದಿಂದ ಸಪ್ಲೈ ಮಾಡುತ್ತೇವೆ. ಹೆಚ್ಚಿಗೆ ವಿಷಯಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಳಾ:—ಎಂ. ಎಸ್. ಶಿದ್ದಪ್ಪ ಬ್ರದರ್ಸ್,
ಹಾರ್ಮೋನಿಯಂ ಮತ್ತು ಟಿಂಬರ್ ...
... ಬೀದಿ ... ಮೈಸೂರು, ...
32—45

ಮುಚ್ಚಿಡುವದೂ ದುಃಖದಕ್ಕೆ ಅಂಥಾ ಅನ್ಯಾಯದ ಕೃತ್ಯಗಳು ನಡೆಯುವಂತೆ ಮಾಡುತ್ತಿರುವದೂ ಎಲ್ಲಾ ಪತ್ರಿಕೆಗಳಲ್ಲಿಯೂ ನಮಗೆ ಕಂಡು ಬರುವದು.

ನಮ್ಮ ದೇಶದ ರಾಜಕೀಯ ಕೈದಿಗಳನ್ನು ಕಣ್ಣಾನೂರಿಗೆ ಕಳುಹಿಸಿದರಂತೆ ಅಲ್ಲಿ ಅವರಿಗೆ ಹೊಡೆದರಂತೆ ಎಂದು ಪತ್ರಿಕೆಗಳಲ್ಲಿ ಓದಿ ಆನಂದಿಸುವರೋ ಯಾ ಗುಣ ಗುಟ್ಟುವರೋ?

ಒಡನೆ ಕೌನ್ಸಿಲು ಮೆಂಬರುಗಳೇ. ಈ ಸಂಗತಿಯನ್ನು ವಿಚಾರಿಸುವುದಕ್ಕಾಗಿ ಒಂದು ಸಮಿತಿಯನ್ನು ಏರ್ಪಡಿಸುವಂತೆ ಕೊಡಗು ಸರಕಾರವನ್ನು ಕೇಳಿ, ವಿಚಾರಿಸಬೇಕಾಗಿ ಕೋರುವ.

"ಓಟರ್."

ಕೋಆಪರೇಟಿವ್ ಸೊಸೈಟಿ.

ಕೋಆಪರೇಟಿವ್ ಸಂಘವೆಂದರೆ ಪರಸ್ಪರ ಸಹಾಯವೆಂದು. ಈಗ ಒಡೆಯುತ್ತಾ ಸರಕಾರವು ಸಂಘಗಳೊಂದಿಗೆ ನಾನ್‌ಕೋಆಪರೇಶನ್ ಮಾಡ ಬಂತೆ ಕಾಣುತ್ತದೆ.

ಕೋಆಪರೇಟಿವ್ ಸಂಘದಿಂದ ಮೆಂಬರುಗಳು ಮೊದಲು ಖರ್ಚು ಇಲ್ಲದೆ ರಿಜಿಸ್ಟ್ರೇಶನ್ ಸಹ ಮಾಡಿಸಿಕೊಂಡು ಹಣ ಪಡೆಯುತ್ತಿದ್ದರು.

ಅನಂತರ ಜೊತೆ ಜೊತೆಯಲ್ಲಿಯೇ ನಿವ್ವಳ ಲಾಭದ ಶೇಕಡ 25/ರಂತೆ ರಿಜರ್ವ್ ಫಂಡೆಂದು "ಶೃಂಗ ಕಾಣದ" ಹಣವೊಂದನ್ನು ವಸೂಲು ಮಾಡುತ್ತಿದರು. ಇತ್ತೀಚೆಗೇನಾಯಿತು. ಹಣ ಪಡೆಯಲೂ, ರಿಜಿಸ್ಟ್ರೇಶನ್ನಿಗೂ ದಾವೆಗೆ ಮತ್ತಿನ್ನಿತರಕ್ಕೂ ಅರ್ಧ ಚಾರ್ಜು ಕೊಡಬೇಕೆಂತ ಮಾಡಿದರು. ಇವೆರಡು ಅಂಶಗಳನ್ನು ಸೇರಿಸಿದರೆ ಸಿವಿಲ್ ಕೋರ್ಟಿಗೆ ಹಣ ವಸೂಲಾತಿಗೆ ಕೊಡಬೇಕಾದ ಸ್ಟಾಂಪು ಮೊಬಲಗಿನಷ್ಟೇ ಕೋ. ಸಂಘದಿಂದ ಸಾಲ ಪಡೆಯುವವರು ಕೊಡಬೇಕಾಯಿತು ಆದ ಮೇಲೆ ಸರಕಾರವೂ ಕೋ ಸಂಘವೂ ಕೋಆಪರೇಶನ್ ಆದದಂತೆ. ಇದರಿಂದ ಬಡ್ಡಿ ಜಾಹಿರಾತಿಗೇರು ಭೂಮಿಗಳನ್ನು ಗಿರ್ವಿ ಕೊಟ್ಟು ಹಣ ಪಡೆದವರ ಫಲವಾದರೂ ಏನಾಯಿತು ?

ಭೂಮಿ ಕಳಕೊಳ್ಳುವದೊಂದೇ ? ಹಣ ಪಡೆದವನು ಕೊಡಲಾರದ ಮೇಲೆ ಹಿಂದಿನ ಮೇಲೆ ದಾವೆ ಖರ್ಚು ಬಿದ್ದರೆ ಅವನು ಋಣಮುಕ್ತನಾಗುವ ಬಗೆ ಹೇಗೆ. ಸಾಲದಿಂದಕ್ಕೆ ಸಾಲ ಮರುವಾವತಿ ಮಾಡದ ಒಡವರಿಗೆ ತಿನ್ನಲೆಂದೂ ಇಲ್ಲವೆಂದ ಮೇಲೆ ಒಡವನು ಇನ್ನೂ ಏನು ಕಟ್ಟ.

ಇದ್ದರಿಂದ ಬಡಬಡ ಉದ್ದಾರಕರಾದ ಸರಕಾರವು ಸಂಘದ ಮೆಂಬರುಗಳು ಸಂಘದಿಂದ ಸಾಲ ಪಡೆಯುವಾಗ ಆಗಲೀ ಸಾಲ ಹಿಂದಕ್ಕೆ ತೆಗೆಯುವಾಗ ಕೋರ್ಟಿನ ಸಹಾಯ ಅಪೇಕ್ಷ ಪಡೆಯಬೇಕಾದ ಅವಶ್ಯ ಬಿದ್ದಲ್ಲಿ ಸಹ ಈ ಮೊದಲಿನಂತೆ ಮಾಡ ಖರ್ಚು ಇಲ್ಲದೆ ವಸೂಲು ಮಾಡುವ ಏರ್ಪಾಡು ಮಾಡಬೇಕಾಗಿ ದೇವಿನ.

"ಸಾಲಗಾರ"

ಸಹಕಾರಿ ಸಂಘ.

ಕೌನ್ಸಿಲು ಮೆಂಬರುಗಳಲ್ಲಿ ವಿನಂತಿ—

ಕೊಡಗಿನಲ್ಲಿ ಸಹಕಾರಿ ಸಂಘ 19೦೬ರಲ್ಲಿ ಪ್ರಾರಂಭ
ಆ ಬಗ್ಗೆ ಸಹರಿ ಅತ್ಯಗತ್ಯವಾಗಿ ರಿಜಿಸ್ತ ಫಂಡೆಂದು
ಕಾರಿ ಬ್ಯಾಂಕಿನಲ್ಲಿ ಇಡಲಾಯಿತು. ಈ ರೀತಿ ಇಡುವ
ನ ಸಂಘಗಳಲ್ಲಿ ವ್ಯವಹಾರಕ್ಕೆ ಹಣವಿಲ್ಲದೆ ಕಂಡು ಬಂ
ತ ಬ್ಯಾಂಕಿನಲ್ಲಿ ಇಟ್ಟ ರಿಜರ್ವ ಹಣವನೆಲ್ಲಾ ವಾಪಸು
ಸಂಘಗಳಲ್ಲೇ (Working Capital) ಇಟ್ಟು ಕೆಲ
ಗಳು ನಡೆಸುವಂತೆ ಮಾಡಿದ್ದಾಯಿತು. ಇತ್ತ
ರಕಾರದಲ್ಲಿ ಹಣವಿಲ್ಲವೆಂಬುದು ಮೇಲೆಯೇ
ಇಷ್ಟೇ ತೀರಬೇಕಾಗಿ ಈಗ ಹಲದಿಂದ ಇ
ದೇಶವು ಬೇರೆ ಪ್ರಾಂತ್ಯಗಳಂತೆ ಅಲ್ಲ. ...
ಭೂ ಮಾಸೋಕದಾಗಿರುತ್ತಾಗಿ ಸಂಘ
...ಮಿ ಗಿರ್ವಿ ಇಡುವುದರಿಂದ ಭೂಮಿ
...ಕ್ಕೆ ಕೊಟ್ಟಿದ್ದರೂ ಹಣ ಭರ್ತಿ ಮಾ
...ಗ್ಗ ಕುಂತ, ಅನೇಕ ಅರ್ಜಿಗಳು
...ಲ್ಲದೆ ಒಮ್ಮೆ ಬಂದ ಆಫೀಸರಿಗೂ
...ರೇಶನ್ ಸೆಂಟ್ರಲ್ ಬ್ಯಾಂಕು ಮ
...ಲೇ ಘಸಿಸಿ ಹೊಸದಾಗಿ ವಿದಿಸ
...ರೇಶನ್ ಸಹ ಮನ್ನ ಮಾಡ
...ಹ ಬೇಕೆನ್ನೂಂದು ಪ್ರಯ
...ತು ಒಲ್ಲಿಲ್ಲ.
...ಗಳ ರಿಜಿಸ್ಟ್ರಾರವರು ಸ
...ಕಾರಿ ಕಾನ್ಫರೆನ್ಸಿಗೆ ಕರ
...ತ್ ಚೀಫ್ ಕಮಿಶನರ
...ಘಗಳಲ್ಲಿ ಭಾಗಿಯೂ
...ವಾಗಿಯೂ ಅವರಿಂ
...ಕ್ಕ ಸ್ಮೋರನ
...ಡಿ ಸರಕಾರ
...ಇ, ಅಧ್ಯಕ್ಷ
...ಒಳ್ಳೇ ಕ
...ಮ್ಮ

ಈ ಕಾರಣಗಳನ್ನೆಲ್ಲಾ ಚೆನ್ನಾಗಿ ಪರ್ಯಾಲೋಚಿಸಿ (ಕೊಡ.) ಕೌನ್ಸಿಲು ಮೆಂಬರರು ಯಥಾರ್ಥದಲು ಬೇಕೀಯುರ ಮೇಲೆ ಕೃಪೆ ಯಿಟ್ಟು ಒಂದು ನ್ಯಾಯವಾದ ಠರಾವು ತಂದು, ಹೋಗ ಸ್ಟಾಂಪು ಮತ್ತು ರಿಜಿಸ್ಟರ್ ಫೀಜು ಪೂರ್ವದಂತೆ ಮನ್ನ ಮಾಡ ಬೇಕಾಗಿ ರಿಜರ್ವ್ ಫಂಡ್ ಇಡುವದರ ಹಿಗೆ ಇದ್ದಂತೆ ಸಂಘಗಳಲ್ಲೇ ಯಿರುವಂತೆ ಮಾಡಬೇಕಾಗಿ ಕೋರಲ್ಪ.

ವೇಕಾಭಿಮಾನಿ.

ಡಿ. ಬೋರ್ಡ್ ವಿಧ್ಯಾ ಇಲಾಖೆ:—

ಡಿ. ಬೋರ್ಡ ಮೆಂಬರುಗಳಲ್ಲಿ ವಿನಂತಿ,

ಮೊಂಬರು ಮಹಾಶಯರೇ ತಾ. 30. 3. 32ರಲ್ಲು ನಾಪೋಕ್ಲು ಸೆಂಟರಿನಲ್ಲಿ 245 ಯುವಕರು ಪರೀಕ್ಷೆಗಾಗಿ ಕೂತಿದ್ದರು. ಇವರ ಪೈಕಿ 59 ಯುವಕರು VIIIನೇ ತರಗತಿಯೂನ (3rd Form) ಬಾಕಿ 186 ಯುವಕರು Vನೇ ಸ್ಟಾಂಡರ್ಡಿನವರು ಪ್ರೈಮರಿ ಪರೀಕ್ಷೆಯವರಾಗಿದ್ದರು. ಇವರುಗಳ ಪೈಕಿ 27 ಯುವಕರು VIII ತರಗತಿಯಲ್ಲಿ ಪಾಸಾದವರಾಗಿಯೂ, ಪ್ರೈಮರಿಯಲ್ಲು ಈ ಕೆಳಗೆ ಕಂಡ ಪ್ರಕಾರ ಪಾಸಾದರಾಗಿ ತಿಳಿಯುತ್ತೆ.

ನಾಪೋಕ್ಲು	ಶಾಲೆ 71	ಹುಡುಗರ	ಪೈಕಿ 37	ಪಾಸ್.
ಕಕ್ಕಬೆ	,,	15	,,	13
ನೆಲಜಿ	,,	8	,,	5
ಕಂಡ	,,	10	,,	8
ಪಾರಾಣೆ	,,	16	,,	5
ಬಿಟ್ಟಂಗಾಲ	,,	10	,,	6
ಕೊಟ್ಟೂರು	,,	18	,,	8
ಕುಂಜಿಲಗೇರಿ	,,	10	,,	4
ಹೊದ್ದೂರು	,,	5	,,	3
ಭಾಗಮಂಡಲ	,,	4	,,	1
ಮೂರ್ನಾಡು	,,	20	,,	14
		193		104

ನಾಪೋಕ್ಲು ಸರ್ಕಲಿಗೆ ಸೇರಿದ ಚ್ಯೆಯಂಡಾಣೆ ಹುಡುಗರು ಕಾಕೋಟು ಪರಂಬು ಸೆಂಟರಿಗೆ ಹೋಗಿರುತ್ತಾರೆ. ಕಾಕೋಟು ಪರಂಬು ಸೆಂಟರಿಗೆ ಸೇರಿದ ಮೂರ್ನಾಡು ಹುಡುಗರು ಈ ಸೆಂಟರಿಗೆ ಬಂದಿರುವುದರಿಂದ ಅಲ್ಲಿಂದ ಅಲ್ಲಿಗೆ ಸರಿಹೋಯಿತು.

ಕಕ್ಕಬೆ ಸ್ಕೂಲಿನ ಪೂರ ಹುಡುಗರನ್ನು ಪರೀಕ್ಷೆಗೆ ಬಿಡದ ಬಾಬಿನಲ್ಲಿ ವ್ಯಸನ ಪಡಬೇಕಾಗಿದೆ.

ನಾಪೋಕ್ಲು ಶಾಲೆಯಲ್ಲು VIIIನೆ ತರಗತಿಯಲ್ಲು ಪಾಸಾಗದೆ ನಿಂತ 32 ಹುಡುಗರು ಕುಡುತೆ ಇದೆ. ಪರೀಕ್ಷೆಗೆ ಬಿಡದ ಹುಡುಗರು ಎನೆಷ್ಟು ಇದ್ದಾರೋ ದೇವರೇಬಲ್ಲ

ಹೀಗಿರುತ್ತ ಈಗ ಪಾಸಾದ 104 ಹುಡುಗರಿಗೆ ಜಾಗ ಯೆಲ್ಲಿಯದು? ಅದರಂತೆ VI ಮತ್ತು VII ತರಗತಿಯಲ್ಲು ಆಗಿರುತ್ತೆಯೋದ್ದರಿಂದ ನಾಪೋಕ್ಲಿನಲ್ಲಿ ಸ್ಥಳಯೆಲ್ಲಿಯದು?

ಈ ಕಾರಣದಿಂದಲೇ ಕಕ್ಕಬೆಯಲ್ಲು VIIIನೆ ತರಗತಿಗೆ ತೆರೆಯಬೇಕಾಗುವುದಾಗಿದೆ. ಇದಕ್ಕಾಗಿಯೇ ವಿಧ್ಯ ಇಲಾಖೆಯವರು ಹೆಚ್ಚಿನ ಮಾಸ್ತರುಗಳಿಗೆ ಡಿ. ಬೋರ್ಡಿನಲ್ಲಿ ಮೊರೆಯಿಡುವುದಾಗಿದೆ. ಅವರು ಮಂಜೂರು ಮಾಡದಿದ್ದರೆ VIIIನೆ ತರಗತಿ ತೆರೆಯುವುದು ಹೇಗೆ?

ಮೇಲ್ಕಂಡ ಸಂಗತಿಗಳನ್ನೆಲ್ಲಾ ಚೆನ್ನಾಗಿ ಪರಿಯಾಲೋಚಿಸಿ ಕೊಡಗಿನ ಮಲೆನಾಡು ಮಾಲೆ ಪ್ರಾಂತ್ಯವಾದ ಮತ್ತು ಕಾಪಾಡಿರ ಸೇತುವೆ ಯಾವನೊಂದು ಪ್ರಾಂತ್ಯದಿಂದ ಪ್ರತ್ಯೇಕಿಸಿರುವ ಸಣ್ಣ ಸಣ್ಣ ತೋಡು ಹೊಳೆಗಳಿಂದ ತುಂಬಿರುವ ಈ ಪ್ರಾಂತ್ಯದ ಕಕ್ಕಬೆ ಸ್ಕೂಲಿಗೆ VIIIನೆ ತರಗತಿ ತೆರೆದು ಗರೀಬ ಕೃಷಿಕ ಮಕ್ಕಳಿಗೆ ವಿದ್ಯಾದಾನ ಉಪಕಾರವಾಗಿ ವಿದ್ಯಾ ಇಲಾಖೆಯವರು ಮಂಜೂರು ಮಾಡಿ VIII ತರಗತಿ ತೆರೆದದ್ದಕ್ಕೆ ಎಷ್ಟು ವಂದಿಸಿದರೂ ಅಲ್ಪವೆ.

ಮುಕ್ಕಾಟ ತಂಬಿ.

ಕೊಡವರ ಮದುವೆಯೂ ಬೂದುಗಾರಿಕೆಯೂ,

ಕೊಡಗು ದೇಶದಲ್ಲಿ ಯುವಕ ಯುವತೀಯರ ಮದುವೆಯ ಕಾಲವು ಬಂದೊದಗಿತು. ಕೊಡವರು ಮದುವೆಗಳಲ್ಲಿ ನಡೆಸುವ ಅನಾವಶ್ಯ ಖರ್ಚು ಪ್ರಾಣಿ ಹಿಂಸೆಯೂ ಪ್ರತಿಯೊಬ್ಬ ಬುದ್ಧಿವಂತನ ಮನಸ್ಸಿಗೂ ವ್ಯಸನವನ್ನುಂಟುಮಾಡದೆ ಇರಲಾರದು. ದಿನಕ್ಕೆ ಹತ್ತು ನೂರು ಸಾವಿರವನ್ನು ಕೊಡುವ ತನ್ನ ಸಂಸಾರವನ್ನು ದಾರಿದ್ರ್ಯಕೂಪದಲ್ಲಿ ತಳ್ಳುವ ಮಧ್ಯರೂಪದಲ್ಲಿರುವ ಪ್ರಾಣಿ ಹೃದಯದಲ್ಲಿ ಮಾತ್ರ ಯಾತ ವ್ಯಸನವೂ ಇರಲಿಕ್ಕಿಲ್ಲ.

ಮದುವೆ ಮೊದಲಾದ ಶುಭಕಾರ್ಯಗಳಲ್ಲಿ ಮದ್ಯ ಮಾಂಸವನ್ನು ಉಪಯೋಗಿಸುವದು ಹಿಂದೂ ಧರ್ಮಕ್ಕೆ ವಿರೋಧವಾದ ಸಂಗತಿಯಾಗಿದೆಯೆಂಬದು ಪ್ರತಿಯೊಬ್ಬ ಕೊಡವನೂ ಒಪ್ಪನು. ಆದರೆ ಪೂರ್ವ ಪದ್ಧತಿ ಎಂಬ ನೆವದಿಂದ ತನ್ನ ದುರಭ್ಯಾಸವನ್ನು ಬಿಡಲಾರದೆ ಮದುವೆಗಳಲ್ಲಿ ಹುಟ್ಟಿ ತುಂಬ ಸೇರಿದ ಸಾರಾಯಿಯನ್ನು ಕುಡಿದು ಮಾಂಸವನ್ನು ಭಕ್ಷಿಸುವನು. ಹಳಬರಾದ ಮನುಷ್ಯರನ್ನು ಕೇಳಿದರೆ, ಬಹಳ ಕಾಲಗಳಿಗೆ ಮುಂಚೆ ಕೊಡವರ ಮದುವೆಗಳಲ್ಲಿ ಮುಹೂರ್ತದ ದಿವಸ ಮದ್ಯ ಮಾಂಸವನ್ನು ಉಪಯೋಗಿಸುವ ಪದ್ಧತಿ ಇರಲಿಲ್ಲವೆಂತಲೂ, ಇತ್ತೀಚಿನ ದಿನ ಅಪರೂಪವಾಗಿ ಮಾಂಸವನ್ನು ಉಪಯೋಗಿಸುತ್ತಿದ್ದರೆಂತಲೂ ತಿಳಿದು ಬರುತ್ತದೆ. ಒಂದು ಸಮಯ ಪೂರ್ವಿಕರು ಮದ್ಯ ಮಾಂಸವನ್ನು ಉಪಯೋಗಿಸುತ್ತಿದ್ದರೂ ನಾವೂ ಅದನ್ನು ಉಪಯೋಗಿಸಬೇಕೆಂದಿಲ್ಲ. ಪೂರ್ವಿಕರು ತೋಡಿದ ಬಾವಿಯಲ್ಲಿ ಕೊಳಕು ನೀರು ನಮಗೆ ಕಂಡು ಬಂದರೆ ನಾವು ಆ ಕೊಳಕು ನೀರನ್ನೆ ಕುಡಿಯಬೇಕೆಂದಿಲ್ಲ. ಬುದ್ಧಿವಂತಿಕೆಯುಳ್ಳ ನಾವು ಹೊಸ ಬಾವಿಯನ್ನು ತೋಡಿ ಶುದ್ಧವಾದ ಜಲವನ್ನು ಉಪಯೋಗಿಸುವದು ನಮ್ಮ ಕರ್ತವ್ಯವಾಗಿದೆ. ಈ ಮದ್ಯ ಮಾಂಸವನ್ನು ಉಪಯೋಗಿಸುವ ಹೀನಪದ್ಧತಿಯೊಂದಲ್ಲದೆ ಬಾಕಿ ಎಲ್ಲಾ ಕ್ರಿಯೆಗಳೂ ಕ್ಷತ್ರಿಯ ನಡವಳಿ ಎಂಬುದಕ್ಕೆ ಯಾರೂ ವಿರೋಧವನ್ನು ಹೇಳಲಾರರು. ಕೊಡವರ ಮದುವೆಯಲ್ಲಿ ನಡೆಯುವ ಕೆಲವು ಆಚಾರಗಳನ್ನು ನೋಡಿದರೆ ಕೊಡವರು ಕ್ಷತ್ರಿಯರೆಂದೂ ಈಗ ಅವರ ಮನೆಗಳಲ್ಲಿ ಒಡಕ್ಯಾಡುವ ಮಂದಿ ಬುದ್ಧಿಯು ನಾಲ್ಕು ಕಾಲಿನ ಪ್ರಾಣಿಗಳು ಮೊದಲು ಇರಲಿಲ್ಲವೆಂತಲೂ ಇದು ಇತ್ತೀಚೆಗೆ ಬೇರೆ ಜಾತಿಯವರಿಂದ ಕಲಿತುಕೊಂಡ ದುರಭ್ಯಾಸವೆಂದೂ ತೋರುತ್ತದೆ. ಈ ಪ್ರಾಣಿಗಳ ಮಾಂಸವನ್ನು ಉಪಯೋಗಿಸುವದರಿಂದ ಕಲೆಗೆ ಮಂದ ಬುದ್ಧಿ ಹಿಡಿದು ಅನೇಕರು ಈ ಮಂದ ಬುದ್ಧಿಯನ್ನು ಹೋಗಲಾಡಿಸುವುದಕ್ಕಾಗಿ ಸೇಂದಿ ಸಾರಾಯಿ ಕುಡಿಯುವ ದುರ್ವ್ಯಸನವನ್ನು ಕಲಿತುಕೊಳ್ಳುವನು. ನೆಪ್ಪ ಅನ್ನವನ್ನು ಕೊಟ್ಟು ಸಾಕಿದ ಮಕ್ಕಳಿಗೆ ಮದುವೆಯೆಂಬ ಒಂದು ದಿನಕ್ಕೆ ಮುಂದಾಗಿ, ಗಂಜಿ ತೌಡು ಕೊಟ್ಟು ಸಾಕಿದ ನಾಲ್ಕು ಕಾಲಿನ ಮಕ್ಕಳಿಗೆ ಯಮಪುರಿಗೆ ಯಾತ್ರೆಯಾಗುವದು. ಇದು ಯಾವ ಧರ್ಮವೆಂಬದು ವಾಚಕರೇ ಊಹಿಸಿನೋಡಿರಿ. ಆ ಪ್ರಾಣಿಯ ಮಾಂಸವನ್ನು ತಿನ್ನುವುದಕ್ಕಿಂತ ವಿಷ ಮಂದ ಸೂಕ್ಷ್ಮ ಬಹಳ ಉತ್ತಮವಾದದ್ದು. ಕೊಡವರಿಗೆ ದನ ಕರಗಳಲ್ಲಿ ಪ್ರೀತಿ ಕರುಣೆ ಮಮತೆ ಇವನ್ನು ಬಿಡತನಕ್ಕೆ ಇಳಿಸಿರುವ ಆ ನೀಚ ಪ್ರಾಣಿಯು ಕೊಡವರ ಮನೆಗಳಲ್ಲಿ ಇಲ್ಲದಂತೆ ಮಾಡಲು ನಮ್ಮ ದೇಶದ ಉನ್ನತಿಕೆಯಲ್ಲಿ ಆಶೆಯುಳ್ಳ ಪ್ರತಿಯೊಬ್ಬ ಮನುಷ್ಯನು ಹೋರಾಡಬೇಕಾಗಿ ನನ್ನ ಪ್ರಾರ್ಥನೆ.

ಕೊಡವರ ಮದುವೆಯಲ್ಲಿ ಎರಡನೆ ಅತ್ಯಾಚಾರವು ಬಟ್ಟೆ ಬರೆಗಳ ಹಣ ಖರ್ಚು ಮಾಡುವದು. ಒಬ್ಬ ಹುಡುಗಿಯ ಮದುವೆಯೆಂದರೆ ಅವಳ ತಂದೆಯೋ ಇಲ್ಲವೇ ಸಹೋದರನೋ ವಳಿವ್ಯಾಪಾರಿಯಲ್ಲಿಗೆ ಹೋಗಿ ಒಂದಕ್ಕೆ ಡಬ್ಬಲ್ ಪ್ರೋ...ಟು ಬರೆದುಕೊಟ್ಟು ಹುಡುಗಿಯ ಪೆಟ್ಟಿಗೆ ತುಂಬ ಬಟ್ಟೆ ಬಂ ತುಂಬಿಸುವದು. ಹೀಗೆ ತುಂಬಿದ ಬಟ್ಟೆ ಬರೆಗಳಲ್ಲಿ ಹುಡುಗಿಯು ಒಂದು ಹರಿದಯಾಗುವವರೆಗೆ ಒಂದೆರಡು ಸೀರೆಯನ್ನು ಉಡುವಳು. ಒಂದು ಹೆಂಗಿಯಾದ ನಂತರ ಹೆಚ್ಚು ಬೆಲೆ ಯುಳ್ಳ ಸೀರೆಯನ್ನು ಉಡಲು ಆಗುವದು ಅನಂತರ ಅವಳಿಗೆ ಕೃಷಿಕಪ್ಪುಮಾದ ಬಳೇ ಸೀರೆಯಲ್ಲಿ ಪ್ರೀತಿ ಹೆಚ್ಚು. ಮದುವೆಯಲ್ಲಿ ಪೆಟ್ಟಿಗೆಗೆ ಹಾಕಿದ ಬಟ್ಟೆ ಬರೆಗಳನ್ನು ಉಪಯೋಗಿಸದೆ ಹುಳ ತಿಂದು ಹಾಳಾಗುವದು ಬಟ್ಟೆ ಬರೆಲ್ಲಾ ಹುಳ ತಿಂದು ಹಾಳಾದರೂ ಬವಳಿ ಪ್ಯಾರಿಯ ವಾರಂಟುಗಳು ಬಿಡುವದು ತಪ್ಪದು. ಹುಡುಗಿಯ ತಂದೆಯೋ ಸಹೋದರನೋ ಬವಳಿ ವ್ಯಾಪಾರಿಯ ವಾರಂಟು ಬರುವಾಗ ಹೊಟ್ಟೆಗೆ ಅನ್ನವಿಲ್ಲದೆ ಕಾಡು ಸೇರಬೇಕಾಗುವದು. ಈ ಅನರ್ಥಗಳಿಗೆ ಕಾರಣವೇನೆಂದರೆ ಜನರ ಅಹಂಭಾವವು. ತಾನು ಕಡು ಬಡವನಾದರೂ ಐಶ್ವರ್ಯವಂತನಂತೆ ಇತರರಿಗೆ ತೋರಿಸುವುದಕ್ಕಾಗಿ ಸಾಲ ಮಾಡಿಕೊಂಡು ಡಂಬಾಚಾರ ಮಾಡುವದು. ಕೆಲವರಿಗೆ ಎಲ್ಲವೂ ತನ್ನದ್ದೇ, ಎಲ್ಲವೂ ತಾನು ಮಾಡಿದ್ದು, ತನಗಿಂತ ದೊಡ್ಡ ಮನುಷ್ಯ ಏನೂ ಇಲ್ಲವೆಂಬ ದುರಹಂಕಾರ ಹೆಚ್ಚು. ಕೊಡವರು ತಿಳಿದುಕೊಳ್ಳುವವನೂ ಸರ್ವಶಕ್ತ ಸಾಧನಾದವನು ಬೇರೆ ಒಬ್ಬನು ಇದ್ದಾನೆ ಎಂಬುದು ತಿಳಿಯದು. ಒಬ್ಬನ ಮದುವೆಯಲ್ಲಿ ಹೆಚ್ಚಾಗಿ ಖರ್ಚುಮಾಡಿ ಯಾರನ್ನು ಪ್ರೀತಿಸುವುದಕ್ಕೆ ಮರಣಿಸುವದು? ಅವನ ಇಷ್ಟಮಿತ್ರರನ್ನು ಬಂಧುಗಳನ್ನು. ಆಗಲಿ ಇವರ ಪೈಕಿ ಕೆಲವರು ಮುಹೂರ್ತದ ದಿನ ತಮ್ಮ ಮನೆಗಳಿಂದ ಹೊರಡುವಾಗ ಜೇಬಿನಲ್ಲಿ 3 ಆಣೆಯ ಒಡವೆಗೆ ನಾಲ್ಕಾಣೆಯ ಪಾವಲಿ ಕೈಯಲ್ಲಿದ್ದರೆ ದಾರಿಯಲ್ಲಿ ಬರುವಾಗ ಒಂದು ಸೇರು ಸೇಂದಿ ಕುಡಿದು ನಾಲ್ಕಾಣೆಯಲ್ಲಿ ಒಂದಾಣೆಯನ್ನು ಖರ್ಚುಮಾಡಿ ಮೂರಾಣೆಯನ್ನು ಮದುಮಗನ ಕೈಗೆ ಕೊಡುವರು. ಅಂತಹ ನೆಂಟರನ್ನು ಇಷ್ಟಮಿತ್ರರನ್ನು ಪ್ರೀತಿಸುವುದಕ್ಕೆ ಅಲ್ಲವೇ ಮದುವೆ ಮಾಡುವನು ಸಾಲಮಾಡಿ ದುಂದುಗಾರಿಕೆ ಮಾಡುವದು? ಇದರಿಂದ ನನ್ನ ಪ್ರಾಣಪ್ರಿಯರಾದ ಕೊಡವರು ಇನ್ನು ಮುಂದಕ್ಕಾದರೂ ಮದುವೆ ಮೊದಲಾದ ಶುಭಕಾರ್ಯಗಳಲ್ಲಿ ದುಂದುಗಾರಿಕೆ ಮಾಡದೆಯೂ, ಮದ್ಯ ಮಾಂಸ ಉಪಯೋಗಿಸದೆಯೂ, ನಾಲ್ಕು ಕಾಲಿನ ನೀಚ ಪ್ರಾಣಿಗಳನ್ನು ತಮ್ಮ ಮನೆಗಳಲ್ಲಿ ಸಾಕದೆಯೂ ನಮ್ಮ ದೇಶದ ಕೀರ್ತಿಯನ್ನು ಉಳಿಸಬೇಕಾಗಿ ಪ್ರಾರ್ಥಿಸುತ್ತೇನೆ. ನಮ್ಮ ದೇಶವು ಅತ್ಯಂತ ಬಡತನಕ್ಕೆ ಇಳಿದು ಹೋಗಿದೆ. ಡಂಭಾಚಾರಕ್ಕೆ ದುಂದುಗಾರಿಕೆಗೂ ಇದು ಸಮಯವಲ್ಲ. ನಮ್ಮ ದೇಶದ ಮರ್ಯಾದೆಯನ್ನು ಕೀರ್ತಿಯನ್ನು ಉಳಿಸಿ ಇನ್ನು ಮುಂದಿನ ಸಂತಾನಗಳನ್ನಾದರೂ ಒಳ್ಳೇ ಸ್ಥಿತಿಗೆ ತರುವುದಕ್ಕೆ ಪ್ರಯತ್ನಿಸುವದು ನಮ್ಮ ಕರ್ತವ್ಯವಾಗಿದೆ.

ವರ್ತಮಾನ ಸಂಗ್ರಹ.

ಒಳದೇಶ.

ಕೊಡಗು ಕೊಆಪರೇಟಿವ್ ಫೆಡರೇಶನಿನ ಎಗ್ಸಿಕ್ಯೂಟಿವ್ ಕಮಿಟಿ ಮೀಟಿಂಗು ಈ ತಾ. 17ನೇ ಆದಿತ್ಯವಾರ ಫೆಡರೇಶನ್ ಆಫೀಸಿನಲ್ಲಿ ನಡೆಯುವುದು.

ಪಡ್ಮಾಂಬುದಿ ನಾಟಕ ಕಂಪೆನಿಯವರು ಕಳೆದ ವಾರದ ಶನಿವಾರ ಒಂದು ವೀರಸಿಂಹನೆಂಬ ನಾಟಕವನ್ನು ಅಭಿನಯಿಸಿದರು. ಇವರು ಇನ್ನೂ ಕೆಲವು ನಾಟಕಗಳನ್ನು ಅಭಿನಯಿಸುವರಂತೆ.

ಕೊಡಗು ಶಾಲಾ ಇನ್‌ಸ್ಪೆಕ್ಟರಾದ ಮಿ. ಎಡ್ಮಂಡ್ಸ್ ರವರು 7 ತಿಂಗಳು ರಜೆಯಲ್ಲಿ ಹೋಗಿರುವುದರಿಂದ ಅವರ ಬದಲು ಮಿ. ಸುಬ್ಬಾನ್ ಮೊಹಿದೀನ್ ಯಂ. ಎ. ಎಲ್. ಎಲ್. ಬಿ. ಯಂ. ಇ. ಡಿ. ಯವರು ತಾತ್ಕಾಲಿಕ ಇನ್ಸ್‌ಪೆಕ್ಟರಾಗಿ ನೇಮಿಸಲ್ಪಟ್ಟಿರುವರು.

ಕೊಡಗಿನ ಸಿವಿಲ್ ಕೋರ್ಟುಗಳು ತಾ. 25—4—32ರಿಂದ ತಾ. 5—6—32ರ ವರೆಗೆ ಮುಚ್ಚಲ್ಪಡುತ್ತಿರುವುದಾಗಿ ತಿಳಿಯುತ್ತೇವೆ. ಈ ತಾ. 15ರಿಂದ ಮುಚ್ಚಬೇಕಾಗಿ ಇದ್ದ ಅಭಿಪ್ರಾಯವನ್ನು ಬೆಂಗಳೂರು ಚೀಫ್ ಕಮಿಶನರ ಆಫೀಸಿನಲ್ಲಿ ಬದಲಾಯಿಸಿದರಂತೆ.

ತಂಜಾವೂರಿನಲ್ಲಿ ಡಿಸ್ಟ್ರಿಕ್ಟ್ ಜಡ್ಜಿಯವರಾಗಿರುವ ಮಿ. ಬಟ್ಲರ್ ಐ. ಸಿ. ಯಸ್. ರವರು ಚಿತ್ತೂರು ಡಿಸ್ಟ್ರಿಕ್ಟ್ ಜಡ್ಜಿಯವರಾಗಿ ನೇಮಿಸಲ್ಪಡುವರೆಂದೂ, ಅಲ್ಲಿಂದ ಅವರೇ ಕೊಡಗಿನ ಎಡಿಶನಲ್ ಜುಡಿಶಿಯಲ್ ಕಮಿಶನರಾಗಿ ನೇಮಿಸಲ್ಪಡುತ್ತಾರೆಂದೂ ವರ್ತಮಾನವಿದೆ.

ಇದೇ ಏಪ್ರಿಲ್ ತಿಂಗಳು 30 ನೇ ತಾರೀ ಶನಿವಾರ ದಿನ ಪಾಡಿ ಸುಬ್ರಾಯ (ಇಗ್ಗುತಪ್ಪ) ದೇವರ ಭಕ್ತಜನ ಸಂಘದ 14 ನೇ ವಾರ್ಷಿಕ ವರ್ಧಂತಿ ಉತ್ಸವವು ಹಗಲು 11 ಗಂಟೆಗೆ ಪಾಡಿ ದೇವಸ್ಥಾನದಲ್ಲಿ ನಡೆಯುವುದಾಗಿಯೂ, ಸದರಿ ದಿನ ಕೊಡಗಿನ ಯಾರಾದರೂ ತುಲಾಭಾರ ಹರಕೆ ಬಾಕಿಯಾಗಿದ್ದರೆ ಒಂದು ದಿನಕ್ಕೆ ಮುಂದಾಗಿ ತುಲಾಭಾರಕ್ಕೆ ಬೇಕಾದ ಸಾಮಾನು ಪಾಡಿದೇವಸ್ಥಾನಕ್ಕೆ ಕಳುಹಿಸಿ ಪಾರುಪತ್ಯಗಾರರಿಗೆ ತಿಳುವಳಿಕೆ ಕೊಟ್ಟಲ್ಲಿ ಹರಕೆ ಒಪ್ಪಿಸಬಹುದಾಗಿ ಒಂದು ಚಾಪೆ.

ಕೊಡಗಿನ ಓಪನ್ ಟೆನ್ನಿಸ್ ಟೂರ್ನಮೆಂಟಿನ ಸಿಂಗಲ್ಸ್ ಸೆಮಿಫೈನಲ್ಸ್‌ನಲ್ಲಿ ಮಿ. ಅಪ್ಪಾರಂಡ ತಿಮ್ಮಯ್ಯನವರು ಮಿ. ಅಪ್ಪಾರಂಡ ಮಾದಪ್ಪನವರನ್ನೂ ಮತ್ತು ಮಂಗಳೂರಿನ ಮಿ. ಉಗ್ಗಪ್ಪ ಶೆಟ್ಟಿಯವರು ಮಿ. ಜೋಸೆಫ್‌ರವರನ್ನೂ ಸಿಂಗಲ್ಸಿನಲ್ಲಿ ಸೋಲಿಸಿ, ತಿಮ್ಮಯ್ಯನವರೂ, ಉಗ್ಗಪ್ಪನವರೂ ಫೈನಲ್ಸಿಗೆ ನಿಂತಿರುವರು. ಇವರ ಕಡೇ ಆಟವು ಈ ತಾ. 17ನೇ ಆದಿತ್ಯವಾರ ಸಾಯಂಕಾಲ ನಡೆಯುವುದು. ಮತ್ತು ಡಬ್ಬಲ್ಸ್‌ನ ಟೆನ್ನಿಸ್ ಟೂರ್ನಮೆಂಟಿನ ಕಡೇ ಆಟವು ಮಿ. ಗಳಾದ ಅಪ್ಪಾರಂಡ ಮಾದಪ್ಪ, ತಿಮ್ಮಯ್ಯ ಮತ್ತು ಮನೆಯಪಂಡ ತಿಮ್ಮಯ್ಯ, ಎ. ಎಸ್. ಅಪ್ಪಚ್ಚುನವರಿಗೂ ಈ ದಿನ ಸಾಯಂಕಾಲ ನಡೆಯುವುದು.

ಸತ್ಯಾಗ್ರಹ ಸಂಬಂಧವಾದ ಹಸ್ತ ಪತ್ರಿಕೆಗಳನ್ನು ಹಂಚಿದ್ದಕ್ಕಾಗಿ ವೀರಾಜಪೇಟೆಯಲ್ಲಿ ಶ್ರೀ. ಮಂಡೇಪಂಡ ಸೋಮಣ್ಣನವರನ್ನು ಮತ್ತು ಶ್ರೀ. ಮಂಡೇಪಂಡ ಕಾರ್ಯಪ್ಪನವರನ್ನು ದಸ್ತಗಿರಿ ಮಾಡಿ ಶ್ರೀ. ಸೋಮಣ್ಣನವರಿಗೆ 5 ತಿಂಗಳ ಕಠಿಣ ಸಜೆ ಮತ್ತು 100 ರೂ. ಜುಲ್ಮಾನೆ ಶಿಕ್ಷೆಗೂ ಮತ್ತು ಶ್ರೀ. ಕಾರ್ಯಪ್ಪನವರಿಗೆ 5 ತಿಂಗಳು ಕಠಿಣ ಸಜೆ ಮತ್ತು 50 ರೂ. ಜುಲ್ಮಾನೆ ಶಿಕ್ಷೆಗೂ ಗುರುಪಡಿಸಿದ್ದಾರಾಗಿ ತಿಳಿಯುತ್ತೇವೆ.

ಹಿಂದೂದೇಶ.

ಪಂಡಿತ ಮೋತಿಲಾಲರು ಕಂಡಾಯದ ಬಾಬ್ತು ಸರಕಾರಕ್ಕೆ ಕೊಡಬೇಕಾದ ಬಾಕಿ ರೂ. 30,000 ಕ್ಕೆ ಏಲಂ ಆಯಿತಂತೆ.

ಸೆಂಟ್ರಲ್ ಪ್ರಾವಿನ್ಸ್ ಮತ್ತು ಬೀರಾರಿನ ಗವರ್ನಮೆಂಟು ಗಾಂಧಿಯವರ ವಿಷಯವಾಗಿ ತೋರಿಸುವ ಕೆಲವು ಚಲನ ಚಿತ್ರಗಳನ್ನು ಕಾಯಿದೆಗೆ ವಿರುದ್ಧವೆಂದು ತೀರ್ಮಾನಿಸಿರುವರು.

ಗುಜರಾತ್ ಕಾಂಗ್ರೆಸ್ ಕಮಿಟಿಯ 13ನೇ ಡಿಕ್ಟೇಟರಾದ ಪ್ರೊಫೆಸರ್ ಪಲ್ಲಿ ದೇಸಾಯಿಯವರು ದಸ್ತಗಿರಿಯಾಗಿ 6 ತಿಂಗಳು ಕಠಿಣ ಸಜೆ ವಿಧಿಸಲಾಗಿದೆ. ಇವರು ಗಾಂಧಿಯವರ ಆಶ್ರಮವಾಸಿಗಳಲ್ಲೊಬ್ಬರು.

ಪಂಡಿತ ಮಾಳವೀಯವರು ಮೇ ತಿಂಗಳ ಅಖೈರಿನೊಳಗೆ ಇಂಗ್ಲೆಂಡಿನ ಜನರಿಗೆ, ಇಲ್ಲಿ ಆರ್ಡಿನೆನ್ಸುಗಳ ಪರಿಣಾಮ ಹೇಗಿವೆ ಎಂದು ತಿಳಿಸುವುದಕ್ಕಾಗಿ ಇಂಗ್ಲೆಂಡಿಗೆ ಹೋಗುವರೆಂಬ ಒಂದು ಸುದ್ದಿ ಇದೆ.

ನೇಶನಲ್ ವೀಕ್‌ನಲ್ಲಿ ಬೊಂಬಾಯಿಯಲ್ಲಿ ರೈಲ್ವೆಯಲ್ಲಿ ಜನರು ಪ್ರಯಾಣ ಮಾಡದ ಹಾಗೆ ವಿಕ್ಟೋರಿಯಾ ಟರ್ಮಿನಸ್ಸಿನಲ್ಲಿ ಪಿಕೆಟ್ ಮಾಡಿದುದಕ್ಕಾಗಿ 8 ಜನ ಸ್ವಯಂ ಸೇವಕರನ್ನು ದಸ್ತಗಿರಿ ಮಾಡಲ್ಪಟ್ಟು ಸಜೆ ವಿಧಿಸಲಾಗಿದೆ.

ತಾ. 11ರಲ್ಲಿ ಮದ್ರಾಸಿನ ರತನ್ ಬಜಾರಿನಲ್ಲಿ ಅನೇಕ ಜನರು ಗವರ್ನಮೆಂಟಿಗೆ ವಿರೋಧವಾಗಿ ಮುದ್ರಿಸಿದ ಹಸ್ತ ಪತ್ರಿಕೆಗಳನ್ನು ಹಂಚಿದ ಕಾರಣ ಕೆಲವು ದಸ್ತಗಿರಿಗಳಾಗಿವೆ. ಈ ತಿಂಗಳಲ್ಲಿ 10 ಸತ್ಯಾಗ್ರಹಿಗಳಿಗೆ ಫಾಯಿದಾ ಗಿರುತ್ತದೆಯಾಗಿಯೂ ತಿಳಿದು ಬರುತ್ತದೆ.

'ಗಾಂಧಿ ಗಾಸ್ಪೆಲ್' ಎಂಬ ಪುಸ್ತಕ ಮಾರಿದುದನ್ನು ಬರೆದ ಶ್ರೀ. ಪರಂತ ಕುಮಾರ ಚಟರ್ಜಿಯವರಿಗೆ 6 ತಿಂಗಳು ಕಠಿಣ ಸಜೆಯೂ, 200 ರೂ. ದಂಡವೂ ತಪ್ಪಿದರೆ ಪುನಃ ಮೂರು ತಿಂಗಳ ಸಜೆಯೂ ವಿಧಿಸಲಾಗಿದೆ. ಇದರಲ್ಲಿ ರಾಜದ್ರೋಹದ ಅಂಶಗಳು ಇವೆಯಂತೆ.

ತಾ 3ರಲ್ಲಿ ಅಲಹಾಬಾದಿನಲ್ಲಿ ರಾಷ್ಟ್ರೀಯ ಧ್ವಜವನ್ನು ಹಾರಿಸಿದುದಕ್ಕಾಗಿ 22 ಸ್ವಯಂಸೇವಕರು ದಸ್ತಗಿರಿಯಾಗಿದ್ದರು. ಇವರಲ್ಲೊಬ್ಬರಾದ ನರೋಜ್ ಸಿಂಗರೆಂಬವರಿಗೆ ಒಂದು ವರ್ಷ ಕಠಿಣ ಸಜೆಯೂ, 200 ರೂ. ಜುಲ್ಮಾನೆಯೂ, ತಪ್ಪಿದರೆ ಪುನಃ 3 ತಿಂಗಳ ಸಜೆಯೂ ವಿಧಿಸಲಾಗಿದೆ.

ತಾ. 2ರಲ್ಲು 'ಕಾಂಗ್ರೆಸ್ ವಾರ'ದ ಸಂಬಂಧ ಮೆರವಣಿಗೆ ತೆಗೆದುಕೊಂಡು ಹೋಗುತ್ತಿದ್ದ ಮಹಾತ ಅಜಯಸಿಂಗ್ ಎಂಬವರು ಇನ್ನಿಬ್ಬರು ಸತ್ಯಾಗ್ರಹಿಗಳೊಡನೆ ದಸ್ತಗಿರಿಯಾಗಿ 6 ತಿಂಗಳ ಸಜೆಗೂ, 100 ರೂ. ಜುಲ್ಮಾನೆಗೂ, ತಪ್ಪಿದರೆ ಪುನಃ 1½ ತಿಂಗಳ ಸಜೆಗೂ ಗುರಿಯಾಗಿರುವರು. ಇವರು ಅಲಹಾಬಾದಿನ 3ನೇ ಡಿಕ್ಟೇಟರರು.

ಪಂಡಿತ ಜವಹರಲಾಲರ ಮೇಲೆ ವಿಧಿಸಿದ ದಂಡದ ಹಣಕ್ಕಾಗಿ ಅವರ "ಆನಂದ ಭವನ"ದಿಂದ ತೆಗೆದುಕೊಂಡಿದ್ದ ಮೋಟಾರು ಕಾರನ್ನು ರೂ. 1150 ಕ್ಕೆ ಹರಾಜು ಮಾಡುವರು. ಜವಹರಲಾಲರ ಸಹೋದರಿಯವರಾದ ವಿಜಯಲಕ್ಷ್ಮಿ ಪಂಡಿತರವರ ಮೇಲೆ ಟಿಪ್ಪಣಿಯನ್ನು ಸಹ ಅವರ ಮೇಲೆ ವಿಧಿಸಿದ್ದ ದಂಡವನ್ನು ವಸೂಲಿಗಾಗಿ ರೂ. 310 ಕ್ಕೆ ಹರಾಜು ಮಾಡುವರು.

ಪಂಡಿತ ಮಾಳವೀಯರು ಮೋತಿಲಾಲರ ಪತ್ನಿಯವರಿಗೆ ಆದ ಸಂಘಟನೆಗೆ ವಿಷಾದಿಸಿ, ಒಂದು ಪತ್ರದಲ್ಲಿ ನೀವು ನಿಮ್ಮ ದೌರ್ಬಲ್ಯವನ್ನು ಪರಿಗಣಿಸದೆ ಇಂಥಾ ವೃದ್ಧ ವಯಸ್ಸಿನಲ್ಲಿ ತೋರಿಸಿದ ಧೈರ್ಯ ಸಂತೋಷವೆಂದೂ, ಅದರಿಂದ ನೀವು ನಿಮ್ಮ ದೇಶಾಭಿಮಾನಿಗಳಾದ ಮಹಿಳಾ ಮಣಿಯರು ಚಿನ್ನ ಹೊಸತೆ ಸ್ವತಂತ್ರದ ಸಂಗ್ರಾಮದಲ್ಲಿ ಕೆಲಸ ಮಾಡುವುದನ್ನು ನೆನೆಸಿ ಎಂದೂ ಬರೆದಿರುವರು.

ಅಮದಾಬಾದಿನಲ್ಲಿ ಮಿಸೆಸ್ ಮಹೇಂದ್ರ ಎಂಬವಳು ಪರದೇಶಿ ಬಟ್ಟೆ ಅಂಗಡಿಯನ್ನು ಪಿಕೆಟ್ ಮಾಡಿದುದಕ್ಕಾಗಿ ರೂ. 150 ಅವಳ ಮೇಲೆ ದಂಡ ವಿಧಿಸಿದ್ದರು. ಪೋಲೀಸಿನವರು ಇದರ ವಸೂಲಿಗಾಗಿ ಅವಳ ಗಂಡನ ಕೆಲವು ಸಾಮಾನುಗಳನ್ನು ತೆಗೆದುಕೊಂಡದ್ದರಿಂದ ಗಂಡನು, ಹೆಂಡತಿಗೆ ಯಾವ ಸ್ವಂತ ಆಸ್ತಿ ಇಲ್ಲವೆಂದೂ, ತನ್ನ ಸಾಮಾನುಗಳನ್ನು ತೆಗೆದುಕೊಂಡದ್ದರಿಂದ ಪೋಲೀಸರ ಮೇಲೆ ಕೇಸು ಹಾಕುವೆನೆಂದೂ ಅವರಿಗೆ ನೋಟೀಸ್ ಕಳುಹಿಸಿರುವನಂತೆ.

ವಿಜಾಪೂರ ಮ್ಯಾಜಿಸ್ಟ್ರೇಟರು ಮುಂಬಯಿ ಮುಂದಾಳುಗಳಾದ ಶ್ರೀ. ನರೀಮನ್ ಇವರಿಗೆ ಹಾಕಿದ 300 ರೂ ಗಳ ವಸೂಲಿಗಾಗಿ ಮುಂಬಯಿಯಲ್ಲಿ ೬ನೇ ತಾ. ದಿವಸ ಶ್ರೀ. ನರೀಮನ್ನರ ಮನೆಗೆ ಒಂದು ಪೋಲೀಸಂ ಅವರ ಆಸ್ಪತ್ರೆ ಕಡೆಗೆ ದಂಡದ ಹಣವನ್ನು ಕೇಳಿದರು. ಶ್ರೀ. ನರೀಮನ್ನರು ಹೇಳಿಕೆಯ ಮೇರೆಗೆ ತಾವಾಗಿ ಏನೂ ಕೊಡಬಾರದೆಂದು ಅವರು ಹೇಳಿದರು. ಆ ಮೇಲೆ ಪೋಲೀಸರು ಅಲ್ಲಿಯ 300 ರೂ. ಬೆಲೆ ಬಾಳುವ ಸಾಮಾನುಗಳನ್ನು ಜಪ್ತಿ ಮಾಡಿ ಒಯ್ದರು. ಪೋಲೀಸರು ಅವರ ಲಿಲಾವನ್ನು ಮಾಡಬಹುದೆಂಬ ಅಂದಾಜಿದೆ. ಶ್ರೀ. ನರೀಮನ್ನ ಇವರು ವಿಜಾಪೂರ್ ಜೈಲಿನಲ್ಲಿದ್ದು ಅವರ ಪ್ರಕೃತಿಯು ನೆಟ್ಟಗಿದೆಂದು ತಿಳಿಯುತ್ತದೆ.

ಮೋತಿಲಾಲ್ ನೆಹರೂರವರ ಪತ್ನಿಯವರಿಗೆ ಕಳೆದ ಶುಕ್ರವಾರ ಅಲಹಾಬಾದಿನಲ್ಲಿ ನಡೆದ ಸತ್ಯಾಗ್ರಹ ಗಲಭೆಯಲ್ಲಿ ಯಾವ ತರದ ಅತ್ಯಪ್ರಹಾರವೂ ಆಗಲಿಲ್ಲವೆಂದೂ ಹಾಗೇನಾದರೂ ಘಾಯವಾಗಿದ್ದರೆ ಅದು ಅಲ್ಲಿ ನೆರೆದಿದ್ದ ಜನಸಂದಣಿಯಿಂದಾಗಿ ಬಿಚ್ಚುದಿರಬೇಕೆಂದೂ ತಿಳಿಸಿದ ಅಲ್ಲಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಅಭಿಪ್ರಾಯವನ್ನು ಖಂಡಿಸುತ್ತಾರೆ. ಅದರ ನಿಜವಾಗಿಯೂ ಅವರಿಗೆ ಕುರ್ಚಿಯ ಮೇಲಿಂದ ಕೆಳಗೆ ಬಿದ್ದಾಗ ಅನೇಕ ಪ್ರಹಾರಗಳಾದವೆಂದೂ ಅವರಲ್ಲಿ ಒಂದು ಘಾಯವಾಗಿ ತಲೆಯ ಮೇಲೆ ಬಿದ್ದಿತೆಂದೂ, ಹೊಡೆದವನು ಒಬ್ಬ ಆಫೀಸರನ ಹಾಗೆ ಕಂಡುಬಂದನೆಂದೂ, ಆದ್ದರಿಂದ ಪತ್ರವು ಸಂಯುಕ್ತವೆಂದೂ ಅದರ ಸ್ಮೃತಿ ತಪ್ಪಿರಲಿಲ್ಲವೆಂದೂ ತಿಳಿಸಿರುತ್ತಾರೆ.

ಮುಂಬಯಿಯಲ್ಲಿ ತಾ. ೮ ನೇ ದಿವಸ ಮುಳಜೀಜೇಠಾ ಮಾರ್ಕೆಟಿನಲ್ಲಿಯ ಸ್ವದೇಶಿ ಅಂಗಡಿಗಳ ಭಾಗವನ್ನು ಶ್ರೀಮತಿ ಸರೋಜಿನಿ ನಾಯಡೂ ಇವರು ತೆರೆದರು. ಆ ಕಾಲಕ್ಕೆ ಅವರು ಅಂದದ್ದೇನಂದರೆ:—

ನಮ್ಮ ಸ್ವಾತಂತ್ರ್ಯದ ಹುಚ್ಚು ಇನ್ನೂ ಶಾಂತವಾಗಿರುವಿಲ್ಲ. ನಮ್ಮ ನಿಯಂತ್ರಕ ಮುಂದಾಳು ಹುರಂಗದಲ್ಲಿರುವಾಗ ... ಒಪ್ಪಂದದ ಮಾತು ಕಥೆಗಳು ಹೇಗೆ ನಡೆಯುವವು? ಒಪ್ಪಂದವನ್ನು ಮಾಡಿಸುವ ಮನುಷ್ಯನು ಒಬ್ಬನೇ ಒಬ್ಬನಿದ್ದು ಅವನೆಂದರೆ ಮಹಾತ್ಮ ಗಾಂಧಿಯು. ಜೇರೆ ಯಾರೂ ಅಲ್ಲ. ಸ್ವದೇಶೀ ವಸ್ತುಗಳನ್ನು ಬಿಟ್ಟು ಎರಡನೇಯದಾದ ವಸ್ತುಗಳ ವ್ಯಾಪಾರ ಮಾಡುವ ರಾಷ್ಟ್ರದ ಮಾನವನ್ನು ಕಳೆಯುವದಕ್ಕಿಂತ ತಮ್ಮ ಸ್ವಂತ ಅಂಗಡಿಯನ್ನು ಕಳೆಯುವದೇ ಲೇಸೆಂದು ನನ್ನ ವ್ಯಾಪಾರಸ್ಥರಿಗೆ ಸಹಿಸುಯ ಬಿನ್ನಹವಿದೆ.

ಸರ್ ಸ್ಯಾಮ್ಯುವೆಲ್ ಹೋರರವರು ತನ್ನ ಪತ್ರದಲ್ಲಿ, ಸತ್ಯಾಗ್ರಹ ಚಳವಳಿಯನ್ನು ರದ್ದುಮಾಡುವಂತೆಯೂ ಮತ್ತು ತಾನು ಈ ಸತ್ಯಾಗ್ರಹದ ಕೆಲಸದಲ್ಲಿ ಯಾವ ಭಾಗವನ್ನು ವಹಿಸಿಯೂ ಇದ್ದರೆ, ಗಾಂಧಿಯವರನ್ನು ಬಂದಿಖಾನೆಯಿಂದ ಬಿಡುಗಡೆ ಮಾಡಿದ ಮುಂದಿನ ರಾಜ್ಯಭಾರ ಕ್ರಮದಲ್ಲಿ ಗಾಂಧಿಯವರ ವಾಕ್ಯವನ್ನು ಪಾಲಿಸುವಂತೆಯೂ ಬರೆದಿರುವರಂತೆ. ಆದರೆ ಗಾಂಧಿಯವರು, ತನ್ನ ದಸ್ತಗಿರಿಗೆ ಸ್ಯಾಮುವೆಲ್ ಹೋರರು ಮತ್ತು ಬ್ರಿಟಿಷ್ ಸರಕಾರಗಳೇ ಕಾರಣರಾಗಿರುವರೆಂದೂ, ಮತ್ತು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಕೋರಿಕೆಯು ಪೂರೈಸುವ ವರೆಗೂ ಸತ್ಯಾಗ್ರಹವನ್ನು ರದ್ದುಮಾಡಲಾಗುವುದಿಲ್ಲವೆಂದೂ, ಮತ್ತು ತಾನು ಯಾವ ಕಾಲಕ್ಕೂ ಕಾಂಗ್ರೆಸ್ ಪಾರ್ಟಿಯನ್ನು ಧಿಕ್ಕರಿಸುವುದಿಲ್ಲವೆಂದೂ ಬರೆದಿರುವರಂತೆ. ಆದರೆ ಈ ಪತ್ರಗಳ ವ್ಯವಹಾರವು ಬೊಂಬಾಯಿಯ ಗವರ್ನಮೆಂಟಿಗೆ ತಿಳಿದೇ ಇರುವುದಿಲ್ಲವಂತೆ.

ಹತ್ತು ಆಣೆಯ ವ್ಯಾಜ್ಯವೊಂದು ಕಲ್ಕತ್ತೆಯ ಕೋರ್ಟಿಗೆ ಹತ್ತಿದೆ. ಅಲ್ಲಿಯ ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರಾದ ಮಿ. ಎಫ್. ಕರೀಮುರೆಂಬುವರು ಕರೀಮ್ ಬಕ್ಸ್ ಎಂಬ ಹಣ್ಣು ಹಂಪಲುಗಳ ವ್ಯಾಪಾರಿಯೊಡನೆ ಒಂದು ಖರ್ಬೂಜವನ್ನು ಹತ್ತಾಣೆಗಿದ್ದರೆ ಮಾತ್ರ ಹತ್ತಾಣೆ ಕೊಡುವೆನೆಂಬ ಕರಾರಿನಿಂದ ಕೊಂಡುಕೊಂಡರು. ಕೊಯ್ದಾಗ ಹಣ್ಣಾಗಿರಲಿಲ್ಲ. ೧೦ ಆಣೆಗಳನ್ನು ಪುನಃ ಪಡೆಯದೆ ಆ ಹಣ್ಣನ್ನು ತಿರುಗಿ ಕೊಟ್ಟು ಹಣ್ಣಾದ ಒಂದು ಖರ್ಬೂಜವನ್ನು ತನ್ನ ಮನೆಗೆ ಕಳುಹಿಸುವಂತೆ ಹೇಳಿ ಹೋದರು. ಕರೀಂ ಬಕ್ಸನು ಕಳುಹಿಸಲಿಲ್ಲ. ಆದಕ್ಕಾಗಿ ಅವನ ಮೇಲೆ ವಿಶ್ವಾಸಘಾತಕತನದ ತಕ್ರಾರು ಸ್ಥಾಪಿಸಿ; ಮೂರು ತಿಂಗಳ ಸಜೆ! ಆತನು ಅಪೀಲು ಮಾಡಿ ವಿಶ್ವಾಸದಿಂದ ತೀರ್ಪು ಕಾಯುತ್ತಿರುವನು. ಹತ್ತಾಣೆಗೆ ಹೋದ ಮಾನ ಹತ್ತಾಸೆ ಕೊಟ್ಟರೂ ಬಂದೀತೆ?

ವಿದೇಶ.

ಆಗೋಸ್ತು ತಿಂಗಳಲ್ಲಿ ಸಲ್ಲಬೇಕಾದ ೩೦೦ ಮಿಲ್ಲಿಯ ಪೌಂಡ ಕಂತನ್ನು ಇಂಗ್ಲೆಂಡು ಅಮೇರಿಕಕ್ಕೆ ಈ ತಿಂಗಳೇ ಸಲ್ಲಿಸಿದುದು ಈ ಕಾಲದಲ್ಲೊಂದು ಸಂತೋಷಕರವಾದ ವಿಷಯ.

ಡಿಲ್ಲಿಯಲ್ಲಿ ಕೂಡಲಿರುವ ಕಾಂಗ್ರೆಸನ್ನು ಪ್ರತಿಬಂಧಕ ಆಜ್ಞೆಯಿಂದ ತಡೆಯಿರಿ; ಎರಡು ವರ್ಷಗಳ ಹಿಂದೆ ಮಾಡಬೇಕಾಗಿದ್ದುದನ್ನು ಈಗಲಾದರೂ ಮಾಡಿರಿ ಎಂದು ಇಂಡಿಯಾ ಸರಕಾರಕ್ಕೆ ಲಂಡನಿನ 'ಡೈಲಿ ಮೈಲ್' ಪತ್ರಿಕೆಯು ಹಿತವು ಚನೆ.

ಬಸ್ಟರ್ ಕೀಟನ್ ಎಂಬ ಸಿನೇಮಾ ಹಾಸ್ಯಗಾರನು ಗ್ರಾಮಫೋನಿನಲ್ಲಿ ಕೊಟ್ಟ ಒಂದು ಹಾಡನ್ನು ಕೇಳಿಯೇ ಕ್ರೂರ ಮನಃ ಪರಿವರ್ತನವಾಗಿ, ಹಿಂದೆ ದಾಂಪತ್ಯವಿಚ್ಛೇದನವಾಗಿ ಹೋದ ಆತನ ಪತ್ನಿಯು ಮರಳಿ ಬಂದು ಪತಿಯನ್ನು ಸೇರಿದಳಂತೆ! ಪುನರ್ಮಿಲನವಾಗುವಂಥಾ ಹಾಡು ಬಾರದಿದ್ದರೆ ಗ್ರಾಮಫೋನಿಗೆ ಬಂದ ಈ ಕೀರ್ತಿ ಉಳಿದೀತು.

ನ್ಯೂಯಾರ್ಕಿನ ವೈಮಾನಿಕ ಲಿಂಡ್ ಬರ್ಗರ ಕಳುವಾದ ಶಿಶುವು ಇನ್ನೂ ದೊರೆತಿಲ್ಲವಾದರೂ, ಕಳ್ಳರ ಕೈಯಲ್ಲಿ ಸ್ವಾಧೀನವಾಗಿದೆ ಎಂದು ವರ್ತಮಾನ ಬಂದಿದೆ. ಲಿಂಡ್ ಬರ್ಗರದ ೫೦ ಸಾವಿರ ಡಾಲರುಗಳನ್ನು ಪಡೆಯುವವರು ಅಷ್ಟು ವೇಳೆಯನ್ನು ಆ ಮಗುವನ್ನು ಮರೆಯಲ್ಲಿಡುವುದಕ್ಕಾಗಿ ಕಷ್ಟ ಪಡುವವರಾದರೆ ಅದೊಂದು ವಿಚಿತ್ರವಾಗಿರುವುದು.

ಅಮೇರಿಕದ ಎರಡನೆಯ ದೊಡ್ಡ ನಗರವಾದ ಶಿಕಾಗೋದಲ್ಲಿಯ ಹೆಲೆನ್‌ಳೆಂಬವಳು ಪತಿಯು ತನಗೆ ದಾಗ ಪ್ರತಿಬಾರಿಯೂ ಫೋಟೋಗ್ರಾಫರನ್ನು ಕರೆದಾಗ ಬರಿಸಿದ ಅವನ ಭಾವಚಿತ್ರ ಸ್ವತಃ ಚಿತ್ರಗಳು ಕೂಡಿದಾಗ ಎಲ್ಲ ಕಲ್ಲಿ ವಿಚ್ಛೇದಕ್ಕೆ ಅರ್ಜಿ ಬರೆದುಕೊಂಡು ಈ ದಾಖಲು ಮಾಡಿ ಪತಿಯಿಂದ ಬಿಡುಗಡೆ ಪಡೆದಳು.

ಪತ್ರವ್ಯವಹಾರ

ಬಾತ್ಮೀದಾರರು ಬರುವ ... ಕರ್ತರಿಂದ ಜವಾಬ್ದಾರರಲ್ಲ. ... ಕವಳ

... 1½ ರೂ. 32—8—0

ಕನ್ನಡಿಗರು ಪ್ರತಿ...

ಕಳೆದ ವಾರದಲ್ಲಿ ... ರಾಜಕೀಯ ಕೈದಿಗಳ ... ತ್ರಿಮಲ್ಲಿ ... ರಾಜಕೀಯ ಕೈದಿ... ದು ಪತ್ರಿಕೆಗಳಲ್ಲಿ 1½ ರೂ. 1

... ಯರ್‌ಗಳಿ... ಎಸ್. ... ಕೈದಿಗಳಿಗೆ ...

... ಮತ್ತು ! ...

... 32—45.

ಶ್ರೀಗುರು ಸಿದ್ಧಾರೂಢ ಸ್ವಾಮಿ ಪ್ರಸನ್ನಃ

(ಕೊ ಹ ಗು.)

ಚಿದಂಬರ ಮಠಾಧೀಶಂ । ಸಿದ್ಧಾರೂಢ ಮಹೀಶ್ವರಂ ॥
ಶಿಷ್ಯಪ್ರಶಿಷ್ಯ ರೂಪೇಣ । ಬೋಧಕಂ ಗುರುಮಾಶ್ರಯೇ ॥

ಶ್ರೀಗುರುನಾಥ ಆರೂಢ ಸ್ವಾಮಿಯವರ ಆಶೀರ್ವಾದದ ಮೇರೆ.

ಶ್ರೀಮನ್ನಿಶ್ಚಲನಿರ್ಗುಣ ಪರಾಲಂಬ ನಿರ್ವಿಕಾರ ನಿರಂಜನ ನಿಂಭ ನಿರ್ದ್ವಂದ್ವ ನಿಷ್ಕಲ ನಿಗಮಾತೀತ ತ್ರಿಕಟನಾನಂದಾತ್ಮಕಸ್ವರೂಪರಿಂದ ಶ್ರೀಗುರು ಸಿದ್ಧಾರೂಢ ಸ್ವಾಮಿಗಳವರ ಶಿಷ್ಯರಾದ ಮೂಢಮಾನಂದ ಸ್ವಾಮಿಯವರ ಮುಖಲಕ.

ಕೊಡಗು ಭಾಗಮಂಡ್ಲನಾಡು ಕೊಳಗದಾಳು ಚೇರಂಬಾಣೆ ಸಿದ್ಧಾಶ್ರಮದಲ್ಲಿ ಕಾರ್ಯದರ್ಶಿಯಾದ ಮೂಢಮಾನಂದ ಸ್ವಾಮಿಯವರು ಮತ್ತು ಭಕ್ತಮಂಡಲಿ ಸಹಿತ ಸಪ್ತಾಹ ಪ್ರಾರಂಭ ಮಾಡುವರು.

ಸನ್ 1932ನೇ ಇಸವಿ ಏಪ್ರಿಲ್ ತಾರೀಕು 19ನೇ ಮಂಗಳವಾರ ದಿನ ಬೆಳಗ್ಗೆ 3 ಗಂಟೆಗೆ ಸಪ್ತಾಹ ಪ್ರಾರಂಭವಾಗಿ ನಿತ್ಯ ಅನ್ನ ಸಂತರ್ಪಣೆ, ಬ್ರಹ್ಮವಿದ್ಯಾಸ, ಅಹೋರಾತ್ರಿ ಭಜನೆ, ಕೀರ್ತನೆ ಈ ಪ್ರಕಾರ ನಡೆದು ಏಪ್ರಿಲ್ ತಿಂಗಳು 26ನೇ ಮಂಗಳವಾರ ದಿನ ಪ್ರಾತಃಕಾಲ ಸಪ್ತಾಹ ಸಮಾಪ್ತಿ ಆಗುತ್ತೆ. ಆದ್ದರಿಂದ ತಾವುಗಳೆಲ್ಲರೂ ಬಂದು ಈ ಕಾರ್ಯವನ್ನು ನೆರವೇರಿಸಿ ಆಶೀರ್ವಾದ ತೆಗೆದುಕೊಂಡು ಹೋಗಬೇಕಾಗಿ ಕೋರುತ್ತೇವೆ.

ಇತಿ ಆಶೀರ್ವಾದಗಳು,
ಮೂಢಮಾನಂದ.

|| ಓಂ ನಮಃ ಶಿವಾಯ ||
ಶಾಂತಿಃ ಶಾಂತಿಃ ಶಾಂತಿಃ

ಶ್ರೀ ರಾಮಕೃಷ್ಣ ಮಠ, ಪೊನ್ನಂಪೇಟೆ. ಕೊಡಗು.

ಮಹನೀಯರೇ,

ಶ್ರೀರಾಮಕೃಷ್ಣ—ವಿವೇಕಾನಂದರ ವಾರ್ಷಿಕೋತ್ಸವವು ಈ ಏಪ್ರಿಲ್ ತಿಂಗಳು ತಾ|| ೩೦ ನೇ ರವಿವಾರ ಆಶ್ರಮದಲ್ಲಿ ನೆರವೇರುತ್ತದೆ. ತಾವುಗಳೆಲ್ಲರೂ ಆ ಪುಣ್ಯೋತ್ಸವದಲ್ಲಿ ಭಾಗಿಗಳಾಗಬೇಕೆಂದು ಕೋರುತ್ತೇವೆ.

ಉತ್ಸವವು ಯಶಸ್ವಿಯಾಗಿ ನಡೆಯುವಂತೆ ಸರ್ವರೂ ಕೈಲಾದ ಮಟ್ಟಿಗೆ ಉದಾರ ಸಹಾಯ ಮಾಡುವರೆಂದು ಹಾರೈಸುತ್ತೇವೆ.

ಇತಿ
ಶಾಂಭವಾನಂದ.

ಕಾರ್ಯಕ್ರಮ.

ಬೆಳಗ್ಗೆ: ೮—೧೦ ರ ವರೆಗೆ ಮಂಗಳಾರತಿ.
೧೦—೧೨ ರ ವರೆಗೆ ಭಜನೆ, ಪೂಜೆ ಮತ್ತು ಹೋಮ.
ಮಧ್ಯಾಹ್ನ ೧೨—೩ ರ ವರೆಗೆ ಮಹಾಪ್ರಸಾದ ವಿನಿಯೋಗ.
ಅಪರಾಹ್ನ ೩—೬ ರ ವರೆಗೆ ಮಹಾಸಭೆ.

ಅಧ್ಯಕ್ಷರು ಶ್ರೀಯುತ ಕೆ. ಎಚ್. ರಾಮಯ್ಯನವರು ಬಿ. ಎ. ಚಾರ್ಟರ್ಡ್ ರಿಜಿಸ್ಟ್ರಾರ್ ಕೋ-ಆಪರೇಟಿವ್ ಸೊಸೈಟಿ, ಮೈಸೂರು. ಉಪನ್ಯಾಸಕರು ಶ್ರೀಮಾನ್ ಸಿ. ಕೆ. ವೆಂಕಟರಾಮಯ್ಯನವರು, ಎಂ. ಎ., ಎಲ್. ಟಿ., ಮೈಸೂರು ಸರಕಾರದ ಕನ್ನಡ ಟ್ರಾನ್ಸ್‌ಲೇಟರು.

ರಾತ್ರಿ ೭—೯ ರ ವರೆಗೆ ಸಂಗೀತ ಕಚೇರಿ ಖ್ಯಾತ ಸಂಗೀತ ವಿದ್ವಾನ್ ಬಿ. ದೇವೇಂದ್ರಪ್ಪನವರು.
೯—೧೦ ರ ವರೆಗೆ ಭಜನೆ (ಆರೋಗ್ಯದವರು)
೧೦—೧೧ ರ ವರೆಗೆ ಪ್ರಸಾದ ವಿನಿಯೋಗ.
೧೧—೧೨ ರ ವರೆಗೆ ಶ್ರೀ ರಾಮಕೃಷ್ಣ ಕೃಷ್ಣಕಥಾ.
೧—೬ ರ ವರೆಗೆ ಹರಿಕಥೆ-ಭಕ್ತ ಮಾರ್ಕಂಡೇಯ (ವಿದ್ವಾನ್ ವೆಂಕಟಸುಬ್ಬದಾಸರು.)

ಹಿಂದೀ ವ್ಯಾಪಾರ ಪರಿಷತ್ತಿನಲ್ಲಿ

ಪಾಸಾದ ನಿರ್ಣಯಗಳು.

ಕಳೆದ 28ನೇ ತಾರೀಕಿನಂದು ಡಿಲ್ಲಿಯಲ್ಲಿ ಸೇರಿದ ಹಿಂದೀ ವ್ಯಾಪಾರ ಮತ್ತು ಕೈಗಾರಿಕೆಯ ಸಭಾ ಮಂಡಲದ ವಾರ್ಷಿಕ ಪರಿಷತ್ತಿನಲ್ಲಿ ಪಾಸಾದ ನಿರ್ಣಯಗಳು.

೧. ಹಿಂದೂಸ್ಥಾನದಿಂದ ಪರದೇಶಕ್ಕೆ ಬಂಗಾರವು ಹೋಗದಂತೆ ಪ್ರತಿಬಂಧ ಮಾಡಬೇಕು. ಹಾಗೂ ಭಾವೀ ರಾಜ್ಯಘಟನೆಯಲ್ಲಿ ರಿಜರ್ವ ಬ್ಯಾಂಕನ್ನು ಸ್ಥಾಪಿಸಲು ನಾಣ್ಯದ ಸ್ಥಿತಿಯನ್ನು ಕಾಪಾಡುವುದಕ್ಕಾಗಿ ಪೇಟೆಯ ಧಾರಣೆಯಿಂದ ಸರಕಾರದವರು ಬಹಿರಂಗವಾಗಿ ಬಂಗಾರವನ್ನು ಕೊಳ್ಳಬೇಕು.

ಹಿಂದೂಸ್ಥಾನ ಮತ್ತು ಇಂಗ್ಲಂಡುಗಳ ಆರ್ಥಿಕ ಸಂಬಂಧವನ್ನು ಚೌಕಶಿ ಮಾಡುವುದಕ್ಕಾಗಿ ಒಂದು ಸ್ವತಂತ್ರ ಪಂಚಾಯತಿ ಮಂಡಲವನ್ನು ಸ್ಥಾಪಿಸಬೇಕು.

೩. ಹಿಂದೀ ಕೈಗಾರಿಕೆಗೆ ಉತ್ತೇಜನ ಕೊಡುವುದಕ್ಕಾಗಿ ಶಾಂತ್ರೀಯ ಪದ್ಧತಿಯನ್ನು ತಯಾರಿಸಬೇಕು.

೪. ಬೇರೆ ಪೋರ್ಟ ಟಸ್ಟುಗಳ ಪುನರ್ಘಟನೆ ಮಾಡಿ ಅದರಲ್ಲಿ ಹಿಂದೀ ಪ್ರತಿಗಳನ್ನು ದೊಡ್ಡ ಪ್ರಮಾಣದಿಂದ ಸೇರಿಸಿಕೊಳ್ಳಬೇಕು. ಹಾಗೂ ಹಿಂದೀಯರ ಕೈಗೆ ಅದರ ನಿಯಂತ್ರಣವನ್ನು ಕೊಡಬೇಕು. ಪೋರ್ಟ ಟ್ರಸ್ಟಿನ ಅಧ್ಯಕ್ಷ ಮತ್ತು ಉಪಾಧ್ಯಕ್ಷರು ಹಿಂದೀಯರಿಂದ ಬೇಕು.

೫. ಪರಸಿನ ಭವಿಷ್ಯವು ಹಿಂದೂಸ್ಥಾನ ಸರಕಾರದ ಅಧಿಕಾರದ ತೊಂದರೆಬೇಕು. ಪರಸಿನ ಹೊಸ ಬೆಲೆಯನ್ನು ಇಂಗ್ಲೆಂಡಿನ ಲಾಭದ ದೃಷ್ಟಿಯಿಂದ ಇಡಬಾರದು. ಹಾಗೆ ಮಾಡಿದರೆ ಹಿಂದೂಸ್ಥಾನಕ್ಕೆ ನಷ್ಟವಾಗುವ ಸಂಭವವಿದೆ. ರೂಪಾಯಿ ಮತ್ತು ಪರಸುಗಳ ಜೊತೆ ಮಾಡುವುದು ಇಷ್ಟವಲ್ಲ. ಯಾಕೆಂದರೆ ಈಗ ಪರಸಿನ ಸ್ಥಿತಿಯು ಅತ್ಯಂತ ಅಸ್ಥಿರವೂ ಒದಗಿಬರತಕ್ಕದ್ದೂ ಇದೆ.

೬. ದೇಶದ ಸದ್ಯದ ಕೋಶನಿಯ ಸ್ಥಿತಿಯನ್ನು ನೋಡಿದರೆ ಕರ್ಚು ಮಾಡುವದಕ್ಕೆ ದುಬ್ಬಾರಿಕೆಯು ಯೋಗ್ಯ ವರ್ತನವಲ್ಲ. ಇದನ್ನು ಬಿಟ್ಟು ಸಂಘಾನದ ವರ್ತನೆಗಳನ್ನು ಕೈಕೊಳ್ಳಬೇಕು. ಹಾಗೆ ಮಾಡಿದರೆ ಜನಗಳ ಮನಸ್ಸಿನವಾಗುವಂಥ ರಾಜ್ಯಘಟನೆಯನ್ನು ತಯಾರಿಸಲಿಕ್ಕೂ ಅದನ್ನು ಅಮಲಿನಲ್ಲಿ ತರಲಿಕ್ಕೂ ಅನುಕೂಲವಾಗುವ ವಾತಾವರಣವುಂಟಾಗುವದೆಂದು ಈ ಮಹಾ ಸಭೆಯ ಮತವಿದೆ.

೭. ಸರಕಾರದ ವಿಜ್ಞಾಪಿಕೆಯನ್ನು ಲಂಡನ್ನಿನಲ್ಲಿ ಎರಡನೆಯ ರೌಂ. ಟೇ. ಕಾನ್‌ಫರೆನ್ಸಿನಲ್ಲಿ ಭಾಗ ತಕ್ಕೊಂಡಿದ್ದರಿಂದ ಮಹಾ ಮಂಡಲದ ಪ್ರತಿನಿಧಿಗಳಿಗೆ ಬಂದ ಅನುಭವವನ್ನು ಲಕ್ಷದಲ್ಲಿ ಹಿಡಿದು ರೌಂ. ಟೇ. ಕಾನ್‌ಫರೆನ್ಸಿನ ಸಲಹೆಗಾರ ಕಮಿಟಿಯ ಕೆಲಸದಲ್ಲಿ ಭಾಗ ತೆಗೆದುಕೊಳ್ಳುವುದರಿಂದ ಈ ಸಂಘದ ಸಂಗತಿಗಳು ಅದರ ಹೊಂದು ಪೇಟಕ್ಕೆ ಹಿತವಾಗದೆಂದು ಈ ಮಹಾ ಮಂಡಲದ ಮತವಿದೆ. ಆದಾಗ್ಯೂ ವೆಂದರೆ.

೮. ಸದ್ಯದ ಧೋರಣವನ್ನು ಬದಲಿಸಿ ಆರ್ಥಿಕ ಸ್ವಾತಂತ್ರ್ಯ ಮತ್ತು ಸಂರಕ್ಷಕ ಕರಗಳ ವಿಷಯದಲ್ಲಿ ಹಿಂದೂಸ್ಥಾನದ ಪುರೋಗಾಮಿ ವಿಚಾರದ ಜನರೊಡನೆ ಚರ್ಚೆ ಮಾಡುವ ಇಚ್ಛೆಯನ್ನು ಸರಕಾರವು ತೋರಿಸಬೇಕು.

ಸಲಹೆಗಾರ ಕಮಿಟಿಗೆ ಆರ್ಥಿಕ ಮತ್ತು ಇತರ ಪ್ರಶ್ನೆಯ ಮೇಲೆ ನಿರಂಕುಶವಾಗಿ ಚರ್ಚೆ ಮಾಡಲು ಸ್ವತಂತ್ರತೆಯಿರಬೇಕು. ವ್ಯಾಪಾರದ ಹಕ್ಕು ಮತ್ತು ಆರ್ಥಿಕ ವಿಷಯದಲ್ಲಿ ಸುರಕ್ಷಿತತೆಯ ಕರಾರುಗಳನ್ನು ಗೊತ್ತುಪಡಿಸುವ ಪ್ರಶ್ನೆಯನ್ನು ಮಹಾ ಮಂಡಲದ ಎಕ್ಸಿಕ್ಯೂಟಿವ್ ಕಮಿಟಿಗೆ ಒಪ್ಪಿಸಬೇಕು. (ಈ ಠರಾವಿನ ಮೇಲೆ ನಾಲ್ಕು ತಾಸು ಗರ್ಮಾಗರಮ ಚರ್ಚೆಯಾದ ಬಳಿಕ ಬಹು ಮತದಿಂದ ಪಾಸಾಯಿತು.)

'ಡಾ. ಪ.'

ಮಹಾ|| ಪೌರಕಾರಿಯವರಿಗೆ ಉತ್ತರ.

ಸರ್ದಾರ್ ಮಿರ್ಜಾರವರ ಮಗನ ಹೇಳಿಕೆ.

ಸರ್ದಾರ್ ಸುಲೇಮಾನ್ ಕಾಸಿಂ ಮಿರ್ಜಾರವರ ಹಿರಿಯ ಮಗನಾದ ಮಿ. ಅಬ್ದುಲ್ ರಹಮಾನ್ ಮಿರ್ಜಾರವರು ಈ ರೀತಿ ಹೇಳಿಕೆಯನ್ನು ಪ್ರಕಟಿಸಿದ್ದಾರೆ.

ಮಹಾತ್ಮನಾ ಪೌರಕಾರಿಯವರು ಮಿಸೆಸ್ ಸರೋಜಿನಿ ನಾಯುಡುರವರಿಗೆ ಬರೆದಿರುವ ಪತ್ರದಲ್ಲಿ ಅನೇಕ ಮಿಥ್ಯಾಂಶಗಳಿವೆ. ಅನೇಕ ವರ್ಷಗಳಿಂದ ಹೆಸರುವಾಸಿ ಪಡೆದಿರುವ ಮುಸ್ಲಿಂ ಅಂಗಡಿಗಳು—ಉದಾಹರಣೆಗಾಗಿ ಕರೀಂ ಭಾಯಿರವರ, ಅಬುಬಾಕರ್‌ರವರ ಅಂಗಡಿಗಳು—ಎಷ್ಟೋ ಇವೆ. ಆ ಅಂಗಡಿಗಳನ್ನು ಬಹಿಷ್ಕರಿಸುತ್ತಿಲ್ಲ. ಅವರು ಯಥಾಪ್ರಕಾರ ಶಾಂತ ರೀತಿಯಲ್ಲಿ ವ್ಯಾಪಾರವನ್ನು ಮಾಡುತ್ತಲೇ ಇದ್ದಾರೆ.

ನನ್ನ ತಂದೆಯವರು ಯಾವ ಹಣ್ಣಿನ ವ್ಯಾಪಾರವನ್ನೂ ಮಾಡುತ್ತಿಲ್ಲ; ಮತ್ತು ಹಣ್ಣಿನ ಮಾರ್ಕೆಟ್ಟಿನಲ್ಲಿ ಸರ್ದಾರ್ ಸುಲೇಮಾನ್ ಕಾಸಿಂ ಮಿರ್ಜಾರವರ ಅಂಗಡಿ ಯಾವುದೂ ಇಲ್ಲ. ನನ್ನ ಸಹೋದರರಿಬ್ಬರು—ಮೆಸರ್ಸ್ ಮಹಮ್ಮದ್ ಸುಲೇಮಾನ್ ಮತ್ತು ಉಸ್ಮಾನ್ ಸುಲೇಮಾನ್—ಮಾತ್ರ ತಾವೇ ಸ್ವಂತವಾಗಿ ಹಣ್ಣಿನ ವ್ಯಾಪಾರವನ್ನು ಮಾಡುತ್ತಿದ್ದಾರೆ. ಅವುಗಳಲ್ಲಿ ಮೊದಲನೆಯದಕ್ಕೆ ಮಾತ್ರ ಬಹಿಷ್ಕಾರ ಮಾಡುತ್ತಿದ್ದಾರೆ. ಎರಡನೆಯದು ಎಲ್ಲರಂತೆ ಯಾವ ತಲೆ ಕಷ್ಟ ಇಲ್ಲದೆ ವ್ಯಾಪಾರವನ್ನು ಮಾಡುತ್ತಿದೆ.

ಯಾವುದೋ ಒಂದು ಅಂಗಡಿಯನ್ನು ಬಹಿಷ್ಕರಿಸಿದರೆ ಮುಖ್ಯವಾಗಿ ಮುಸ್ಲಿಂ ಜನರ ಅಂಗಡಿಗಳನ್ನೆಲ್ಲಾ ಬಹಿಷ್ಕರಿಸುತ್ತಿದ್ದಾರೆಂದು ಹೇಳಲು ಸಾಕಾರದಷ್ಟು ಪ್ರಮಾಣಗಳಿಲ್ಲ. ಮಹಮ್ಮದ್ ಸುಲೇಮಾನ್ ಅಂಡ್ ಕಂಪನಿ ಎಂಬ ಅಂಗಡಿಯ ಹೊರತು ಮಿಕ್ಕ ಎಲ್ಲಾ ಮುಸ್ಲಿಂ ಅಂಗಡಿಗಳೂ ಬಹಿಷ್ಕಾರವಿಲ್ಲದೆ ವ್ಯಾಪಾರವನ್ನು ಮಾಡುತ್ತಲೇ ಇದ್ದಾರೆ. ಹಾಗೆ ನೋಡಿದರೆ ಕೆಲವು ಹಿಂದೂ ಜನರ ಅಂಗಡಿಗಳನ್ನೂ ಬಹಿಷ್ಕರಿಸುತ್ತಿದ್ದಾರೆ. ಅದೂ ಅಲ್ಲದೆ, ಮಹಮ್ಮದ್ ಸುಲೇಮಾನ್ ಅಂಡ್ ಕಂಪನಿಯು ಹೆಸರಿಗೆ ಮಾತ್ರ ಮುಸ್ಲಿಂ ಕಂಪನಿ. ಅದರ ಭಾಗಸ್ಥರಲ್ಲಿ ಹಿಂದೂಗಳೇ ಹೆಚ್ಚು ಮಂದಿ. ಆ ಅಂಗಡಿಯನ್ನು ಬಹಿಷ್ಕರಿಸಿದರೆ ನನ್ನ ಅಭಿಪ್ರಾಯದಂತೆ ಹಿಂದೂಗಳಿಗೇ ಹೆಚ್ಚು ನಷ್ಟ ತಟ್ಟಬೇಕಾಗಿದೆ.

ನಿಶ್ಚಯವಾಗಿ ನಾನು ಕಾಂಗ್ರೆಸ್ಸಿನವನಲ್ಲವೆಂದು ಹೇಳುತ್ತೇನೆ. ಈ ಬಹಿಷ್ಕಾರವು ಎಂದಿಗೂ ಜಾತಿಭೇದಗಳನ್ನು ಕುರಿತು ಹುಟ್ಟಿದ್ದಲ್ಲ.

ಕೊನೆಯ ಮಾತಾಗಿ, ಕಳವಳವಾಗುವುದೆಂದು ಪ್ರವಾದ ಬೀಳುವ ಮಹಾತ್ಮನಾ ಪೌರಕಾರಿಯವರು ವೈಶ್ಯರನ್ನು ಮೇಲಿನಗಳನ್ನು ಪಕ್ಷಪಾತದಿಂದ ನನ್ನ ತಂದೆಯವರ ನಿಷ್ಕಳಂಕವಾದ ಹೆಸರನ್ನೂ, ಕೀರ್ತಿ ಮತ್ತು ಗೌರವಗಳನ್ನು—ಅದರಲ್ಲೂ ಅವರು ಯಾತ್ರಾರ್ಥವಾಗಿ ಹಿಂದೂ ದೇಶದಿಂದ ಹೊರಕ್ಕೆ ಹೋಗಿರುವಾಗ ಅಪಮಾನಗೊಳಿಸಿಕೊಂಡಿರುವ ಕೆಲಸ ಅಷ್ಟು ಚೆನ್ನಾಗಿಲ್ಲ. ನನ್ನ ತಂದೆಯವರು ಸಹ ಹಾಗೆ ಮಾಡಲು ಅವರಿಗೆ ಅಪ್ಪಣೆ ಕೊಟ್ಟಿಲ್ಲ. ಮಹಾತ್ಮನಾ ಪೌರಕಾರಿಯವರ ಉದ್ದೇಶವು ದುಶ್ಚೇಷ್ಟೆ ಅಸಂಬದ್ಧ.

(ಹಿಂದೂ.)

ಫೋಟೋ ಕ್ಯಾಮರಾ.



ಈ ಕ್ಯಾಮರಾಗಳಲ್ಲಿ ಒಬ್ಬರ ಸಹಾಯವಿಲ್ಲದೆ ಫೋಟೋಗಳನ್ನು ತೆಗೆಯಬಹುದು. ಈ ಕ್ಯಾಮರಾ ಒಂದು ಇದ್ದರೆ ಬೇಕಾದವರಿಗೆ ಫೋಟೋ ತೆಗೆದು ಹಣ ಸಂಪಾದನೆ ಮಾಡಬಹುದು. ಫೋಟೋ ಗ್ರಾಫಿನ ಸ್ಥಿರದಲ್ಲಿ ಫೋಟೋಗಳನ್ನು ತೆಗೆಯಬಹುದು. ಫೋಟೋ ತೆಗೆಯುವ ದನ್ನು ಕಲಿಯಬೇಕಾಗಿಲ್ಲ. ಕ್ಯಾಮರಾ ಜೊತೆಯಲ್ಲಿ ಫೋಟೋ ತೆಗೆಯುವ ವಿಧಾನವನ್ನು ಕಳುಹಿಸುವೆವು.

ಈ ಕ್ಯಾಮರಾವನ್ನು ತರಿಸಿಕೊಳ್ಳುವವರಿಗೆ 3 ವರ್ಷಗಳ ಗ್ಯಾರಂಟಿ ಇರುವ ಟೈಂಪೀಸು ಒಂದನ್ನು ಇನಾಮಾಗಿ ಕೊಡುವೆವು. ಬೆಲೆ 1ಕ್ಕೆ ರೂ. 4—8—0.

M. Leo & Co. 168 China Bazar
Madras.

…e of India Life Assurance Company, Ltd.

Established 1897.

"FAMILY SECURITY" Policy issued by this Company provides-

…vent of death during an agreed …

…ate payment to the Widow, …entative of a part of the …e with the Bonus accrued. …of a guaranteed Yearly …nthly instalments, dur…eriod.

3. The payment of the balance of the sum of assured at the end of the period

OR

B In the event of death after the period has expired the payment of the sum assured together with any Bonus that has accrued.

…otive Pamphlet on application to—

…G, Branch Office:—
152, COMMERCIAL STREET,
Bangalore.

52—29

Wanted.

An accountant to the Mercara Nad Co-operative Store from 1st May 193… on a salary of Rs. 25 per mensem. Only those who have the knowledge of account… or Retired Government Officer prefer… Applications may be sent to the addres… below.

HONORARY SECRETAR…
Mercara Nad Co-operative St…

4-1

ಶ್ರೀ ಮದ್ಯುವರಾಣಿಯವರ ಭಾಷಣ.

ವಿದ್ಯೆಯಿಲ್ಲದೆ ಸಮಾಜ ಸುಧಾರಣೆಯಿಲ್ಲ; ಸಮಾಜ ಸುಧಾರಣೆಯಿಲ್ಲದೆ ವಿದ್ಯೆಯಿಲ್ಲ. ಸ್ತ್ರೀ ಜನಾಂಗವು ಮುಂದುವರಿಯಲು ಸಮಾಜವು ಸಹಕಾರಿಯಾಗಲಿ.

(೨೩—೩—೩೨ರಲ್ಲಿ ಮೈಸೂರು ಮಹಿಳಾ ಸಮಾಜದ ಹೊಸ ಕಟ್ಟಡದ ಪ್ರವೇಶೋತ್ಸವವನ್ನು ಶ್ರೀಮದ್ಯುವ ರಾಣಿಯವರು ನೆರವೇರಿಸಿದರು. ಸಮಿತಿಯ ಅಧ್ಯಕ್ಷರಾದ ಶ್ರೀಮತಿ ಡಿ. ರುಕ್ಮಿಣಮ್ಮನವರು ಕಟ್ಟಡದ ಸಂಕ್ಷಿಪ್ತ ಇತಿಹಾಸ [illegible]ಸಿದರು. ಶ್ರೀಮದ್ಯುವರಾಣಿಯವರಿಗೊಂದು ಬಿನ್ನವತ್ತಳೆಯನ್ನು ಅರ್ಪಿಸಿದರು.)

"ಮಹಿಳೆಯರೇ,—ನನ್ನನ್ನು ಆದರದಿಂದ ಆಹ್ವಾನ ಮಾಡಿ [illegible] ಮಹಿಳಾ ಸಮಾಜದ ಹೊಸ ಕಟ್ಟಡದ ಪ್ರವೇಶ ಮಹೋತ್ಸವವನ್ನು ನಿಮ್ಮೆಲ್ಲರೊಡಗೂಡಿ ನಡಿಸಲು ನನಗೆ ಅವಕಾಶವನ್ನು ಕೊಟ್ಟದ್ದಕ್ಕಾಗಿ ನಾನು ಮಹಿಳಾ ಸಮಾಜದವರೆಲ್ಲರನ್ನೂ ಅಭಿನಂದಿಸುತ್ತೇನೆ. ಸಮಾಜಸೇವೆಯ ಉದ್ದೇಶದಿಂ[ದ] ೧೩—೧೪ ವರುಷಗಳ ಹಿಂದೆ ಮಹಾರಾಣೀಯವರ ಕಾ[ಲ]ದಲ್ಲಿ ಪ್ರಾರಂಭವಾಗಿ ಸ್ಥಳಸಂಕೋಚದಿಂದ ಸರ್ಕಾರಿ ಕಟ್ಟಡಗಳಲ್ಲಿ ತಾತ್ಕಾಲಿಕವಾಗಿ ಮಾತ್ರ ಸೇರುತ್ತಿದ್ದ ಸಮಾಜವು ಈಗ್ಗೆ ೨—೩ ವರ್ಷಗಳ ಹಿಂದೆ ಈ ಸ್ಥಳವನ್ನು [illegible] ವಾಸಿಸುವುದಕ್ಕೋಸ್ಕರ ಬೇರೆ ಬಾಡಿಗೆ ಮನೆಯಲ್ಲಿ ಸ್ಥಾಪಿತವಾಗಿ ಶೀಘ್ರದಲ್ಲಿಯೇ ಇಷ್ಟು ಅಭಿವೃದ್ಧಿಗೆ ಬಂದ [illegible] ಪಟ್ಟಣದ ಮುಖ್ಯ ಭಾಗಗಳಲ್ಲೊಂದಾದ [illegible] ಆದವಾಗಿ ಕಟ್ಟಲ್ಪಟ್ಟಿರುವ ಸ್ವಂತ ಕಟ್ಟಡದಲ್ಲಿ ನೆಲೆಸಲು ಸುಕಾಲವಾದದ್ದು ಮೈಸೂರು ಮಹಿಳೆಯರಾದ ನಮ್ಮೆಲ್ಲರಿಗೂ ಉತ್ಸಾಹವನ್ನುಂಟುಮಾಡುತ್ತದೆ.

'ಆದರೆ ಮಹಿಳಾ ಸಮಾಜದವರು ಇಷ್ಟರಲ್ಲಿಯೇ ತೃಪ್ತ[ರಾ]ಗದೆ ಮೈಸೂರಿನ ಸ್ತ್ರೀ ಸಮೂಹದ ಏಳಿಗೆಗೆ ಬೇಕಾದ ಎ[ಲ್ಲಾ] ಅವಕಾಶಗಳನ್ನೂ ಕಾಲಕ್ರಮೇಣ ಕಲ್ಪಿಸಿಕೊಳ್ಳುತ್ತಾರೆಂ[ದು] ನಾವು ನಂಬುತ್ತೇವೆ. ಸುಂದರವಾದ ಕಟ್ಟಡವೇ ನೋ[ಡು]ವವರ ಸಂತೋಷವನ್ನು ಉಂಟುಮಾಡತಕ್ಕದ್ದಾಗಿದೆ. ಅಂಥಾ [ಸುಂ]ದರವಾದ ಕಟ್ಟಡವು ಸರ್ವಸಮ್ಮತವಾದ ಮತ್ತು ಸರ್ವಜ[ನ]ೋಪಕಾರಿಯಾಗುವಂತೆ ಉಪಯೋಗಿಸಲ್ಪಡುವುದು ಇನ್ನೂ [ಸ]ೊಭಾಯಮಾನವಾದದ್ದು.

ಈ ಸಂದರ್ಭದಲ್ಲಿ ನಮ್ಮ ದೇಶದ ಏಳಿಗೆಗೆ ಅಗತ್ಯವಾ[ಗಿ]ರುವ ವಿಷಯಗಳಲ್ಲಿ ಈಗ [illegible] ವರ್ಷಗಳ ಹಿಂ[ದೆ] ನಾವು ಕೊಟ್ಟ ಸಲಹೆಗಳನ್ನು ಪುರಸ್ಕರಿಸಿ ಅದರಂತೆ ನಡೆಸು[ವ]ು ಶುಭೋದಯವಾಗುತ್ತಿದೆಯೆಂದು ಕೇಳಿ ನಾವು ಸಂತೋಷ ಪ[ಡು]ತ್ತೇವೆ. ಅವರು ಆಗ ನಾವು ಹೇಳಿದಂತೆ ಸರಿಯಾದ ವಿದ್ಯಾ[ಭ]್ಯಾಸವಿಲ್ಲದೆ ಸಾಮಾಜಿಕ ಸುಧಾರಣೆಯಾಗದು. ಸಾಮಾ[ಜ]ಿಕ ಸುಧಾರಣೆಯಿಲ್ಲದೆ ಸರಿಯಾದ ವಿದ್ಯಾಭ್ಯಾಸವು ದೊರಕ[ಲ]ು ಅವಕಾಶವಿಲ್ಲ. ಈ ತೊಡಕನ್ನು ಬಿಡಿಸಲು ನಮ್ಮ ಮ[ಹಿ]ಳಾ ಸಮಾಜದವರು ತಮ್ಮ ಕೈಲಾದ ಸಕಲ ಪ್ರಯತ್ನವನ್ನು ಮಾಡುತ್ತಾರೆಂದು ನಂಬಿದ್ದೇವೆ. ನಿಮ್ಮಂಥಾ ಸದ್ವಿದ್ಯಾ[ಸಂ]ಪನ್ನರಾದ ಸ್ತ್ರೀಯರೆಲ್ಲರೂ ಮುಂದುವರಿದು ಮನಸಿಟ್ಟು ತ[ಮ]್ಮ ವಿರಾಮ ಕಾಲವನ್ನೂ ರಚನಾ ಶಕ್ತಿಯನ್ನೂ ಪೂರ್ತಿ[ಯ]ಾಗಿ ಉಪಯೋಗಿಸಿ ಕೆಲಸವನ್ನು ನಡೆಸಿದರೆ ಈ ತೊಂದರೆಯನ್ನು ಪರಿಹರಿಸುವುದು ಅಷ್ಟೇನೂ ಕಷ್ಟವಾಗಲಾರದು.

'ನಮ್ಮ ಮೈಸೂರಿನ ಮಹಿಳೆಯರಲ್ಲಿ ಬಹಳ ಮಂದಿ ಸರಿಯಾದ ವಿದ್ಯಾಭ್ಯಾಸಕ್ಕೆ ಅವಕಾಶವಿಲ್ಲದೆ ಇನ್ನೂ ಗ್ರಾಮ್ಯದ[ಲ್ಲಿ]ಯೇ ಇದ್ದಾರೆಂಬುದು ಎಲ್ಲರಿಗೂ ಗೊತ್ತೇ ಇದೆ. ಅವ[ರ]ು ಬಹುಕಾಲ ಎಲ್ಲರೂ ಮನೆಗೆಲಸಗಳಲ್ಲಿಯೇ ಬೆಳೆಸಲ್ಪ[ಟ್ಟ]ವರಾಗಿರುತ್ತಾರೆ. ಇಂಥಾ ಹಿಂದುಳಿದ ಮಹಿಳೆಯರೊಡನೆ ಜಾ[ತಿ] ಮತ ಮುಖ್ಯವಾಗಿ ತರಗತಿಯ ಅಂತರ ಇವುಗಳೊಂದನ್ನೂ ಲಕ್ಷ್ಯಿಸದೆ ನೀವೆಲ್ಲರೂ ಕಲೆತು ಅವರನ್ನು ಸರಿಯಾದ ಮಾರ್ಗ[ಕ]್ಕೆ ಎಳೆಯಲು ಮಹಿಳಾ ಸಮಾಜದಲ್ಲಿ ಬೇಕಾದ ಅನುಕೂಲ[ಗ]ಳನ್ನೂ, ಆಕರ್ಷಣೆಗಳನ್ನೂ ಇನ್ನೂ ಹೆಚ್ಚು ಹೆಚ್ಚಾಗಿ ಕಲ್ಪಿಸುವುದು ಅಗತ್ಯವೆಂದು ತೋರುತ್ತದೆ. ಈಗ ಈ ಸಮಾಜದ ಕಾರ್ಯಕ್ರಮಗಳಲ್ಲಿ ಕಂಡು ಬರುವ ಹಿಂದೀ ತರಗತಿ ಇಂ[ಗ]್ಲಿಷು ತರಗತಿ, ಹೊಲಿಗೆ ತರಗತಿ ಚರಕ, ಪುರಾಣ ಪಠನ, ಮುಂತಾದುವುಗಳನ್ನು ಇನ್ನೂ ಉತ್ತಮ ಸ್ಥಿತಿಗೆ ತರುವುದಕ್ಕೆ ಪ್ರಯತ್ನಪಡುವುದಲ್ಲದೆ ವ್ಯವಹಾರಿಕ ವಿಷಯಗಳನ್ನು ತಿಳಿ[ಸ]ಲು ತಕ್ಕ ಪ್ರಸಿದ್ಧ ಪತ್ರಿಕೆಗಳು, ಪುಸ್ತಕ ಭಂಡಾರ ಉಪನ್ಯಾ[ಸ]ಗಳೂ ಅಲ್ಲದೆ ಗೃಹಕೃತ್ಯ, ಮನೆ ಕೈಗಾರಿಕೆಗಳು, ಗರ್ಭಿಣಿ [ಸಂ]ರಕ್ಷಣೆ ಈ ವಿಷಯಗಳಲ್ಲಿಯೂ ನಮ್ಮ ಸ್ತ್ರೀಯರುಗಳಿಗೆ [ಸರಿ]ಯಾದ ಶಿಕ್ಷಣ, ಸಣ್ಣ ಪುಟ್ಟ ಇತಿಹಾಸಿಕ ನಾಟಕಗಳ ನಾ[ಟ]ಕಗಳು; ಸಂಗೀತ, ಹಿತಕರವಾಗಿಯೂ ಉಪಯೋಗಕರವಾ[ಗಿ]ಯೂ ಇರುವ ಆಟಪಾಟಗಳು; ಮುಖ್ಯವಾಗಿ ಕನ್ನಡ ತಂಗ[ಳ]ಗಳು ಇವೇ ಮುಂತಾದ ವಿಷಯಗಳಲ್ಲಿ ಹೆಚ್ಚು ಆಸಕ್ತಿಯ[ನ್ನು] ವಹಿಸಿ ಕಾಲಕ್ರಮೇಣ ತಕ್ಕ ಸಕಲ ಸಲಕರಣೆಗಳನ್ನೂ ಶ[ೇ]ಖರಿಸಿಟ್ಟು ನಮ್ಮ ಸ್ತ್ರೀಯರೆಲ್ಲರೂ ಅವುಗಳನ್ನು ಸದು[ಪ]ಯೋಗಪಡಿಸಿಕೊಂಡು ಸ್ತ್ರೀ ಜನಾಂಗವು ಮುಂದುವರಿಯಲು ಸಮಾಜವು ಸಹಕಾರಿಯಾಗಲೆಂದು ನಾವು ಆಶಿಸುತ್ತೇವೆ. [ಇ]ದಕ್ಕೆ ಬೇಕಾದ ಯಾವ ವಿಷಯದಲ್ಲೇ ಆಗಲಿ ನಮ್ಮ ಯುವ[ರಾ]ಜರಾದ ಶ್ರೀಮದ್ಯುವರಾಜರವರ ಮತ್ತು ನಮ್ಮ ವಿಶ್ವಾಸ[ಸಹಾನುಭೂತ]ಿಯೂ ಇರುವುದೆಂದು ನಾವು ಭರವಸೆಯನ್ನು ಕೊಡದೇ [ಇರುವುದಿ]ಲ್ಲ.

'ಈ ದಿನದಿಂದ ಈ ಕಟ್ಟಡದಲ್ಲಿ ನೆಲಸುವ ಮಹಿಳಾ ಸಮಾಜವು ನಮ್ಮ ಮೈಸೂರಿಗೆ ಮಾತ್ರವೇ ಅಲ್ಲ, ಇಡೀ ಭಾ[ರತ]ದಯಾದೇಶದ ಸ್ತ್ರೀ ಜನಾಂಗಕ್ಕೇ ಮೇಲ್ಪಂಕ್ತಿಯಾಗಿ ದೇಶದ ಏಳಿಗೆಗೆ ಸಹಕಾರಿಯಾಗಲೆಂದು ಹಾರೈಸಿ ಈ ಕಟ್ಟಡದ ಪ್ರವೇಶ ಮಹೋತ್ಸವವನ್ನು ಬಹಳ ಸಂತೋಷದಿಂದ ನೆರವೇರಿಸುತ್ತೇವೆ.

'ವಿ. ಕ.'

ಮಹಾತ್ಪುರ ತೋಟದಲ್ಲಿ ಶ್ರೀಮತಿ ಡಿ. ಸಾಕಮ್ಮ ನವರು ಕಟ್ಟಿಸಿದ ಚಿಕಿತ್ಸಾಲಯ.

(ಪ್ರೇಷಿತರಿಂದ.)

ತಾ. ೩—೪—೩೨ರಲ್ಲಿ ಶ್ರೀಮತಿ ಡಿ. ಸಾಕಮ್ಮನವರು ಮಹಾತ್ಪುರ ತೋಟದಲ್ಲಿ ಕಟ್ಟಿರುವ ಚಿಕಿತ್ಸಾಲಯವನ್ನು ತೆರೆಯುವ ಸಮಾರಂಭದಲ್ಲಿ ಸಿವಿಲ್ ಸರ್ಜನರಾದ ವಿ. ಡಿಸಾಫ್ರಾಮ್ಜಿಯವರು ಮಾಡಿದ ಭಾಷಣ.

ಶ್ರೀಮತಿ ಡಿ ಸಾಕಮ್ಮನವರೇ, ಮಹಿಳೆಯರೇ, ಮಹನೀಯರೇ, ತಾವು ಈ ದಿನದ ಕಾರ್ಯಕ್ಕೆ ಅಧ್ಯಕ್ಷನಾಗಿರ ಬೇಕೆಂದು ಕೇಳಿಕೊಂಡದ್ದಕ್ಕೆ ನಾನು ತಮ್ಮೆಲ್ಲರಿಗೂ ಮುಖ್ಯವಾಗಿ ಶ್ರೀಮತಿ ಡಿ. ಸಾಕಮ್ಮನವರಿಗೂ ವಂದನೆ[ಗಳನ್ನು] ಸಲ್ಲಿಸುತ್ತೇನೆ.

ಸಾಧಾರಣವಾಗಿ ವೈದ್ಯರ ಕೆಲಸವು ಚಿಕಿತ್ಸೆ ಮಾಡುವುದಲ್ಲದೆ ಅಧ್ಯಕ್ಷರುಗಳಂತೆ ಮಾತಾಡುವುದಲ್ಲವೆಂದು ತಮಗೆಲ್ಲರಿಗೂ ತಿಳಿದೇ ಇದೆ. ಆದರಲ್ಲಿಯೂ ಕನ್ನಡದಲ್ಲಿ ಮಾತಾಡುವುದೆಂದರೆ ಕಷ್ಟವೇ ಸರಿ. ಹ್ಯಾಗೂ ನನಗೆ ತಿಳಿದ ಮಟ್ಟಿಗೆ ಈ ದಿನದ ಕಾರ್ಯವನ್ನು ನೆರವೇರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ನನ್ನ ಭಾಷಣದಲ್ಲಿ ಬರತಕ್ಕ ಕುಂದು ಕೊರತೆಗಳನ್ನು ಮನ್ನಿಸುವಿರಾಗಿ ನಂಬುತ್ತೇನೆ.

ಶ್ರೀಮತಿ ಡಿ. ಸಾಕಮ್ಮನವರು ಅತೀ ಹೆಸರುವಾಸಿ ಪಟ್ಟೆ ಕಾಫಿ ಪ್ಲಾಂಟರೆಂದು ಎಲ್ಲರಿಗೂ ತಿಳಿದಿದೆ. ಇವರು ತಮ್ಮ ಸಾರ್ವಜನಿಕ ಸೇವೆಯಿಂದ ಮೈಸೂರು ದೇಶದಲ್ಲಿಯೂ, ನಮ್ಮ ಈ ದೇಶದಲ್ಲಿಯೂ, ಮತ್ತು ಇಡೀ ಕರ್ನಾಟಕದಲ್ಲಿಯೂ, ಸಹ ಹೆಸರುವಾಸಿಯನ್ನು ಪಡೆದಿದ್ದಾರೆ. ಇವರು ತಮ್ಮ ತೋಟದ ನೌಕರರ ಪ್ರಯೋಜನಕ್ಕಾಗಿ ಮಾಡುತ್ತಿರುವ ಕೆಲಸಗಳು. ಆದರೆ ಆರೋಗ್ಯ ವಿಚಾರದಲ್ಲಿ ಮನೆ ಮತ್ತು ಬಿ[ಡ]ು ಕೂಲಿ ಆಳುಗಳನ್ನು ಪಾಲಿಸುವ ವಿಷಯದಲ್ಲಿ ಮಾಡಲಿಕ್ಕಾಗಿಯೂ ಮಾಡತಕ್ಕ ಕೆಲಸಗಳು ಕೊಂಡಾಡ ತಕ್ಕದ್ದಾಗಿದೆ. ತೋಟದ ಆಳುಗಳ ಮತ್ತು ಇತರ ನೌಕರರ ಆರೋಗ್ಯ ಅಭಿವೃದ್ಧಿ ಹೊಂದಿಲ್ಲದೆ ಹೋದರೆ ತೋಟದ ಮುಂದಿನ ಅಭಿವೃದ್ಧಿಯೂ ಚೆನ್ನಾಗಿ ಆಗಲಿಕ್ಕಿಲ್ಲವೆಂದು ನಂಬಿಕೊಂಡು, ಇವರು ತಮ್ಮ ನೌಕರರ ಪ್ರಯೋಜನಕ್ಕಾಗಿ ಕುಡಿಯಲಿಕ್ಕೆ ಶುದ್ಧವಾದ ನೀರನ್ನು, ವಾಸಕ್ಕೆ ಯೋಗ್ಯವಾದ ಮನೆಗಳನ್ನು, ಮತ್ತು ಬಾಯಿಲಸ್ಸಿಗೆ ಚಿಕಿತ್ಸೆ ಮಾಡಲಿಕ್ಕಾಗಿ ತಕ್ಕ ಶ್ರೇಷ್ಠವಾದ ಏರ್ಪಾಡುಗಳನ್ನು ಮಾಡಿರುತ್ತಾರೆ. ಇವುಗಳೆಲ್ಲಾ ಇತರ ಕಾಫಿ ಪ್ಲಾಂಟರುಗಳಿಗೆ ಉದಾಹರಣೆ ಯಾಗಿವೆ ಎಂದು ಹೇಳಬಹುದು. ಪುರುಷರಿಗಿಂತ ವಿಶಾರದ ಕೆಲಸಗಳನ್ನು ಸ್ತ್ರೀಯರು ಮಾಡುವುದು ಅಸಾಧ್ಯವೆಂಬ ತಪ್ಪು ಅಭಿಪ್ರಾಯವನ್ನು ಇವರು ತಮ್ಮ ಒಳ್ಳೆ ಕೆಲಸಗಳಿಂದ ಪ್ರತ್ಯಕ್ಷವಾಗಿ ತೋರಿಸಿರುತ್ತಾರೆ.

ಈಗ ಪ್ರಾರಂಭದಲ್ಲಿಯೇ 18 ರೋಗಿಗಳಿಗೆ ಇರುವ ವಾರ್ಡುಗಳನ್ನು ಕಟ್ಟಿಸಿ ಅವಕ್ಕೆ ತಕ್ಕ ನರ್ಸ ಮತ್ತು ಇತರ ನೌಕರರನ್ನು ಇಟ್ಟಿರುತ್ತಾರೆ. ಈ ವಾರ್ಡುಗಳಲ್ಲಿ ಇನ್ನು ಮುಂದೆ ಚಿಕಿತ್ಸೆ ಹೊಂದಲು ಬರುವ ರೋಗಿಗಳು ದೇವರ ದ[ಯೆ]ಯಿಂದ ಸಂಪೂರ್ಣವಾಗಿ ಗುಣ ಹೊಂದಿ ತೋಟದಲ್ಲಿ ಅವ[ರ] [illegible] ಕೆಲಸವನ್ನು ಯಜಮಾನರ ತೃಪ್ತಿಗೆ ಸರಿಯಾಗಿ ಮಾಡಿ ಪ್ರೀತಿಗೆ ಪಾತ್ರರಾಗುವರೆಂದು ನಂಬುತ್ತೇನೆ.

ಶ್ರೀಮತಿ ಸಾಕಮ್ಮನವರು ಇಂಥಾ ಪುಣ್ಯ ಕೆಲಸವನ್ನು ಮಾಡುವುದಕ್ಕಾಗಿಯೂ, ಇನ್ನು ಮುಂದಕ್ಕೆ ತಮ್ಮ ದೇಶದವ[ರ] ಪ್ರಯೋಜನಕ್ಕಾಗಿ ಅನೇಕ ಶ್ರೇಷ್ಠವಾದ ಕೆಲಸಗಳನ್ನು ಮಾಡಲಿಕ್ಕಾಗಿಯೂ, ದೇವರು ಇವರಿಗೆ ದೀರ್ಘ ಆಯುಷ್ಯವನ್ನು ಮತ್ತು ಆರೋಗ್ಯವನ್ನು ದಯ ಪಾಲಿಸ ಬೇಕಾಗಿ ನಾವೆಲ್ಲರೂ ಪ್ರಾರ್ಥಿಸುವ. ಈಗ ಶ್ರೀಮತಿ ಸಾಕಮ್ಮನವರ ಮತ್ತು ತಮ್ಮೆಲ್ಲರ ಕೋರಿಕೆ ಮೇರೆ ಈ ವಾರ್ಡನ್ನು ತೆರೆಯುತ್ತೇನೆ.

ಶ್ರೀಮತಿ ಸಾಕಮ್ಮನವರು ವಾರ್ಡನ್ನು ತೆರೆಯಲು ಕೇಳಿಕೊಂಡಾಗ ಮಾಡಿದ ಭಾಷಣದ ಸಾರಾಂಶ—

ಅನೇಕ ಕೆಲಸಗಳನ್ನು ಸನಗಾಗಿ ಬದಿಗಿಟ್ಟು ನನ್ನ ಕೋರಿಕೆ ಮೇರೆ ಈ ದಿನ ಈ ವಾರ್ಡನ್ನು ತೆರೆಯಲು ನೀವು ದಯ ಮಾಡಿಸಿದ್ದಕ್ಕೆ ನಿಮಗೆ ಚಿರಋಣಿಯಾಗಿರುವೆನು. ಮಿ. ಫ್ರಾಮ್ಜಿ ಡಿಸಾಫ್ರವರು ಸಾಮರ್ಥ್ಯದಿಂದ ಕೆಳಗಿನ ದರ್ಜೆಯಿಂದ ಸಿವಿಲ್ ಸರ್ಜನರವರ ಪದವಿಗೆ ಬಂದಿರುವುದು ಇವರಿಂದ ಈ ದೇಶದ [illegible]ನ ಸಾಮಾನ್ಯಕ್ಕೆ ಆಗುವ ಪ್ರಯೋಜನವು ನಿಮಗೆಲ್ಲರಿಗೂ [ತಿ]ಳಿದೇ ಇದೆ. ದೇವರು ಇವರಿಗೆ ಇನ್ನು ಇದೇ ತರದ [illegible] ಬುದ್ಧಿಯನ್ನು ಉನ್ನತ ಪದವಿಯನ್ನು ಕೊಡಲೆಂದು ಪ್ರಾರ್ಥಿಸುತ್ತೇನೆ.

[illegible] ಕೂಲಿಗಾರರಿಗೆ ಕೈಲಾದ ಮಟ್ಟಿಗೆ ಅನುಕೂಲಗಳನ್ನು ಕಲ್ಪಿಸಿ ಕೊಡುವುದು ನನ್ನ ಕರ್ತವ್ಯವೇ. ಈ ಹವಳು ವಾರ್ಡನ್ನು ಕಟ್ಟಿಸಿರುವುದಾಗಿದೆ. ನನ್ನ ಕೈ ಕೆಳಗಿರುವ ಎಲ್ಲಾ ತೋಟಗಳಲ್ಲಿಯೂ, ಕೂಲಿಗಾರರಿಗೆ ವಾಸಕ್ಕೆ ಯೋಗ್ಯವಾದ ಮನೆಗಳನ್ನೂ, ಕುಡಿಯಲಿಕ್ಕೆ ಶುದ್ಧವಾದ ನೀರನ್ನೂ, ಇತರ ಕೆಲವು ಸಲಕರಣೆಗಳನ್ನೂ, ಕೆಲ ಮಟ್ಟಿಗೆ ಅನುಕೂಲ ಮಾಡಿ[ಕೊಟ್ಟಿ]ದ್ದೇನೆ. ಆದರೂ ಕಾಯಿಲೆಯಾಗಿರುವ ಬಡ ಕೂಲಿಗಾರರಿಗೆ ಔಷಧಿಗಳ ಜೊತೆಗೆ ಸರಿಯಾದ ಆಹಾರ ಮತ್ತು ಚಿಕಿತ್ಸೆ ನಡೆಸಲು ಅನುಕೂಲವಾಗುವ ಹಾಗೆ ಚಿಕಿತ್ಸಾಲಯವನ್ನು ಏರ್ಪಡಿಸದೇ ಹೋದರೆ ನನ್ನ ಕರ್ತವ್ಯ ಪೂರೈಸಿದಂತಾಗಲಿಲ್ಲವೆಂದು ತಿಳಿದು ಈ ವಾರ್ಡನ್ನು ಕಟ್ಟಿಸಿದ್ದೇನೆ. ಈ ವಾರ್ಡನ್ನು ಈ ದಿನ ತೆರೆಯಲು ಒಪ್ಪಿ ದಯಮಾಡಿಸಿದ್ದಕ್ಕೆ ನನ್ನ ವಂದನೆಗಳನ್ನು ಪುನಃ ಮಿ. ಡಿಸಾಫ್ರಾಮ್ಜಿಯವರಿಗೂ, ಈ ದಿನವೇ ಪಡುಮಲ್ಕೈರುವ ಕೂಲಿಗಳ ಸೆಕ್ರೆಟರಿ ಗಳಲ್ಲಿ ಗಿದ್ದವರಿಗೆ ಇ[ಲ್ಲಿ] ನಾಮಗಳನ್ನು ಹಂಚಲು ಒಪ್ಪಿ ಬಂದ ಮಿಸೆಸ್. ಫ್ರಾಮ್ಜಿ ಡಿಸಾಫ್ರವರಿಗೂ, ನನ್ನ ವಂದನೆಗಳನ್ನು ಅರ್ಪಿಸುತ್ತೇನೆ.

ಕೊಡವ ಮಾತೃಕೋ(ಟ್ಟೆ)ಯರಲ್ಲಿ ವಿಜ್ಞಪ್ತಿ.

(ಶ್ರೀ. ರಾಮಕೃಷ್ಣ ಪರಮಹಂಸ ಗುರುವಿನ್ನ ಅಚ್ಚಯ್ಯ ಎಂಬಿಸಿ.)

ಕೊಡವ ಕುವರಿ | ಕೊಡವ ರಮಣಿ |
ಕೊಡವ ಮಾತೆ | ವೀರಳೇ |
ಕೊಡವ ಧರ್ಮ | ಕೊಡವ ಧ್ಯೇಯ |
ಕೊಡವ ಸತ್ಯ | ಪಾಲಳೇ ||
ಕೊಡವ ದೇಶ | ಕೊಡವ ಕೋಶ |
ಕೊಡವರಾವಿ | ಮಾಲಳೇ |
ಕೊಡುವ ಕೊಡವ | ಕಡಿವ ಶೂರ |
ಸುಗುಣ ಧೀರ | ಮಾತೆಯೇ ||
ಜೋಜೊ ನಿನ್ನ | ತೇಜವಾಗಿ |
ರಾಜ ಸೊತೆ | ಲೋಕದೀ |
ರಾಜಯೋಗ | ಕರ್ಮತ್ಯಾಗ |
ಬೋಜೊ ಹಾಡು | ಕೊಂಬೇ ||
ದೇಶ ನಿನ್ನ | ಉಸಿಯಿಂದು | ಅಶಿಯಲ್ಲಿ ನಂಬಿದೇ |
ಆಸೆ ನಿನ್ನ | ಕೈಯಲ್ಲಿದೆ |
ದೇಶದಾಸೆ | ಉಸಿಯು ||
ಭಾರತಿಯ | ಧೀರ ಮಣಿ |
ನೀನು ಎಂಬ ಖ್ಯಾತಿಯ |
ನಾಡುವಂತೆ | ಲೋಕವೆಲ್ಲ |
ನೀನು ಹಾಡು | ಖ್ಯಾತಿಯೇ ||

ಅ. ಬಿ.

ಮಾರಾಟಕ್ಕಿದೆ.

ಎರಡು ಮನೆಗಳು ಮಾರಾಟಕ್ಕಿವೆ.

ಒಂದು ಸೇಪರ್ಸ್ ರೋಡಿನಲ್ಲಿಯೂ (ಹಳೆಯ ಕುರ್ಗ ಮೆಡಿಕಲ್ ಹಾಲ್) ಇನ್ನೊಂದು ಗಣಪತಿ ಬೀದಿಯಲ್ಲಿಯೂ ಇವೆ. 2 ಮನೆಗಳಿಗಾಗಿ ಒಟ್ಟು ಕ್ರಯ ರೂ. 6000. ಅಥವಾ ಇದರ ಸಮೀಪದ ಬೆಲೆ ಬೇಕಾದವರು ಹೆಚ್ಚಿನ ವಿಷಯ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

'S'
C/o I. C. Subbaih
M. A. B. L.
Vakil.
Mercara.

4—2

COORG COMMISSIONER'S HOCKEY TOURNAMENT MERCARA.

Open to Recognised Civilian, Milita[ry] University and School Team. Ent[ries] with fee of Rs. 20/—per team must [reach] the Honarary, Secretary, Coorg A[thletic] Association, Mercara, before th[e] April 1932. Tournament Commen[ces on] the 3rd May 1932.

2—2 SEC[RETARY]

ಗಮನಿಸಿರಿ!

ಅಂದವಾಗಿ ಫೋಟೋ ತೆಗೆ[ಯಲು]

ಧೀರ್ಘ ಕಾಲ ಬಾಳಿಕೆ [illegible]

ಹದಿನಾಲ್ಕು ವರ್ಷಗಳಿಂದ ಮೈಸೂರಿನಲ್ಲಿ ಸ್ಥಿರವಾದ ಮಿ. ಕರ್ಸ್ ಕಂಪನಿಯ ಕಂಪನಿ 1ಕ್ಕೆ ರೂ. 32—8—0

ದೇಶದ ಭಾಗದ ಬಾಂಧವರ ಸಲುವಾಗಿ ಬ್ರಾಂಚ್ ಓಪನ್ ಮಾಡಿರುತ್ತಾರೆ.

ಇಲ್ಲಿ ದೀರ್ಘ ಕಾಲ ಬಾಳಿಕೆ [illegible]ರಲಿನಿಂದಾ ಮಾನಸಿಯಲ್ಲಿ ಫೋಟೋ ತೆಗೆ[illegible]ಯಲಿಸುವಂತೆ ಚಾರ್ಜ್ ಮಾಡುವುದು. [illegible] ಪ್ಲೇಟ್ ರಬ್ಬರ್ ಮೊಹರುಗಳು ಕೆಲಸ[illegible] ಮುದ್ರಾ ಮಾಡುವ ಫೌಂ[ಟನ್] ಪೆನ್ [illegible]ಗಳು ಮಾಡಲಿಕ್ಕೆ ಸಿದ್ಧ 1ಕ್ಕೆ ರೂ. 7

[illegible]ಗಳು ಅಂದವಾಗಿ [illegible] ಯಂ. ಎಸ್. ತಿಮ್ಮಪ್ಪ [illegible]

ದರಗಳ ಬಗ್ಗೆ [illegible]

ಬೇಕಾಗಿ ವಿ[illegible]ಯಿಂ ಮುಕ್ತ್ ಜಾ[illegible]

[illegible] ಮಾರ್ಕೆಟ್, [illegible]

12—45

ಕೊಡಗು.

ಸನ್ ೧೯೩೦ನೇ ಇಸವಿ

ಏಪ್ರಿಲ್ ತಾ. ೨೫ನೇ ಶುಕ್ರವಾರ.

ಪ್ರೆಸ್ ಆರ್ಡಿನೇನ್ಸ್ ಜಾರಿಯಲ್ಲಿರುವ ವರೆವಿಗೆ ನಾವು ಅಗ್ರಲೇಖನವನ್ನು ಬರೆಯುವುದಿಲ್ಲ.

ಪ್ರಶ್ನೆಮಾಲೆ.

(ಮಹಾತ್ಮ ಗಾಂಧಿಯವರ ಲೇಖನಿಯಿಂದ)

1. ತಾವು ಫರೀದಪುರದಲ್ಲಿ ಕೆಲವು ಅಸ್ಪೃಶ್ಯರನ್ನು ಕಂಡು ಮಾತುಕಥೆಗಳನ್ನಾಡಿದ ವಿಷಯಗಳನ್ನು "ಯಂಗ್ ಇಂಡಿಯಾ" (ತಾ. 14—5—25) ಪತ್ರಿಕೆಯಲ್ಲಿ ಬರೆಯುತ್ತಾ ಅವರು ಆತ್ಮ ಶುದ್ಧಿಗಾಗಿ ಮಾಡತಕ್ಕ ಕಾರ್ಯಗಳೆಂದು ಕೆಲವನ್ನು ಹೇಳಿರುವಿರಿ. ಈಗ ಆತ್ಮ ಶುದ್ಧಿಯೆಂದರೆ ನಿಮ್ಮ ಅಭಿಪ್ರಾಯವೇನು? ಆತ್ಮ ಶುದ್ಧಿಯ ಸ್ಪಷ್ಟೀಕರಣಗಳಾವುವು? ಆತ್ಮ ಶುದ್ಧಿಯೆಂದರೆ ಕಾಯಿಕ, ಮಾನಸಿಕ ಮತ್ತು ಶುದ್ಧಿಗಳೇ ಅಥವಾ ಇವುಗಳಲ್ಲಿ ಯಾವುದಾದರೊಂದೇ?

ಆತ್ಮ ಶುದ್ಧಿಯೆಂದರೆ ಮನೋವಾಕ್ಕಾಯಗಳಿಂದುಂಟಾಗುವ ಯಾವ ಕಲ್ಮಷಗಳೂ ಇಲ್ಲದಿರುವಂತೆ ಶುದ್ಧಿಮಾಡಿಕೊಳ್ಳುವುದೆಂದರ್ಥ. ನಾನು ಅಸ್ಪೃಶ್ಯರಿಗೆ ಹೇಳಿದ್ದು: 'ಕೆಟ್ಟ ಯೋಚನೆಗಳನ್ನು ಮಾಡಬೇಡ; ಸುಳ್ಳನ್ನಾಡಬೇಡ; ಶರೀರವನ್ನು ಅದನ್ನು ತೊಳೆದು ಸದಾ ಶುಭ್ರವಾಗಿಟ್ಟುಕೊಳ್ಳಿ; ಒಳ್ಳೆಯ ಆಹಾರವನ್ನು ತೆಗೆದುಕೊಳ್ಳಿ; ಕೊಳೆತ ಮಾಂಸ, ಇತರ ಅಪರಿಶುದ್ಧವಾದ ಆಹಾರ, ಅಥವಾ ಮತ್ತನ್ನುಂಟುಮಾಡುವ ಪಾನೀಯಗಳನ್ನೂ, ಮಾದಕ ದ್ರವ್ಯಗಳನ್ನೂ ವರ್ಜಿಸಿ' ಎಂದು.

2. ಯಾವುದಾದರೊಂದು ಜಾತಿಯೇ ಆಗಲೀ, ಅಥವಾ ಯಾವನಾದರೂ ಒಬ್ಬ ಮನುಷ್ಯನೇ ಆಗಲೀ ಈ ನಿಯಮಗಳನ್ನು ಅನುಸರಿಸಿ ಈ ನಿರ್ಣಯಗಳಿಗೆ ಬಾಧಿತನಾಗದಿದ್ದಲ್ಲಿ ಅವರನ್ನು ಅಥವಾ ಅವನನ್ನು ಅಸ್ಪೃಶ್ಯರೆ(ನೆ)ಂದು ಲೆಕ್ಕಿಸಬಹುದಷ್ಟೆ?

ನಮ್ಮಲ್ಲಿ ಬಹು ಜನರ ಕೈಯಿಂದ ಈ ನಿರ್ಣಯಗಳನ್ನು ತಕ್ಷಣವೇ ಸಾಧಿಸಲು ಕಷ್ಟ. ಆದಕಾರಣ ಯಾವನಾದರೊಬ್ಬನು ಈ ನಿರ್ಣಯಗಳನ್ನು ಸಾಧಿಸದೆ ಹೋದಾಗ್ಯೂ ಅವನನ್ನು ಅಸ್ಪೃಶ್ಯನೆಂದು ಗಣಿಸಲಾಗದು. ಈ ನಿರ್ಣಯಗಳನ್ನು ನಮಗೆ ಅನ್ವಯಿಸಿದ್ದೇ ಆದರೆ ನಮ್ಮೆಲ್ಲರಿಗೂ ಬಹಳ ಕಷ್ಟಪ್ರಾಪ್ತಿಯಾಗುವುದು.

3. ಎಲ್ಲಾ ಹಿಂದೂ ಜಾತಿಗಳಲ್ಲಿಯೂ, ಆಹಾರದಲ್ಲಿಯಾಗಲೀ, ಪಾನೀಯದಲ್ಲಿಯಾಗಲೀ, ಭಗವದಾರಾಧನೆಯಲ್ಲಿಯಾಗಲೀ ಒಗ್ಗಟ್ಟಿಲ್ಲ. ಈ ಒಗ್ಗಟ್ಟನ್ನುಂಟುಮಾಡಲು ಮೊಟ್ಟಮೊದಲು ತಾವು ಯಾವ ಪ್ರಯತ್ನವನ್ನು ಮಾಡಿದರೆ ಸಾಧ್ಯವಾಗುವುದೆನ್ನುವಿರಿ?

ಈ ಒಗ್ಗಟ್ಟು ಉಂಟಾಗುವಂತೆ ನಾನು ಯಾವುದನ್ನೂ ಮಾಡುತ್ತಿಲ್ಲ. ಒಗ್ಗಟ್ಟು ಒಗ್ಗಟ್ಟೆಂದು ನಾನು ಆಶಾಪೆಯಿಂದ ಹೇಳುತ್ತಿರುವುದು ಹೃದಯದ ಒಗ್ಗಟ್ಟು. ಅದು ಉಂಟಾದರೆ ಈ ಅಡ್ಡಕಟ್ಟುಗಳೆಲ್ಲಾ ಒಡೆದು, ಅವು ಇಷ್ಟದ ವಿಷಯ ತೋರುವುದು. ನಾವು ಒಂದೇ ದೇವರನ್ನು ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾ, ಬೇರೆ ಬೇರೆ ಮಾರ್ಗಗಳಲ್ಲಿ ಆರಾಧಿಸುತ್ತಿರುವೆವು.

೪. ಸಾರ್ವಜನಿಕ ಭಗವದಾರಾಧನಾ ಸ್ಥಳಗಳಿಗೂ, ಮತೀಯ ಆಚರಣೆಗಳಿಗೂ ಆರೋಗ್ಯ ರೀತಿಯ ಶುದ್ಧವಾಗಿರುವ ಹಿಂದೂಗಳೆಲ್ಲರನ್ನೂ ಸೇರಿಸಿದರೆ ಐಕಮತ್ಯ ಸೋಪಾನದ ಮೊದಲನೆಯ ಮೆಟ್ಟಲನ್ನು ಹತ್ತಿದಂತಾಗುವುದೆಂದು ಒಂದು ಸೂಚನೆ ಇದರಲ್ಲಿ ನಿಮ್ಮ ಅಭಿಪ್ರಾಯವೇನು?

ಜನಸಾಮಾನ್ಯಕ್ಕೆ ಆರೋಗ್ಯವಾದ ಕಟ್ಟಳೆಗಳಂತೆ ನಡೆದುಕೊಳ್ಳುವವರೆಲ್ಲರಿಗೂ ಸಾರ್ವಜನಿಕ ಭಗವದಾರಾಧನ ಸ್ಥಳಗಳಿಗೆ ಹೋಗಲು ಅವಕಾಶವಿರಬೇಕು. ಒಬ್ಬೊಬ್ಬರಲ್ಲಿ ತಮ್ಮ ಚಿತ್ತದ ನಿರ್ಣಯವನ್ನು ಗೊತ್ತು ಹಚ್ಚುವವರಾರು? ಈ ಸಂಗತಿಗಳಿಗೆ ಯಾವ ನಿಬಂಧನೆಗಳೂ ಇಲ್ಲ. ಸಾರ್ವಜನಿಕ ಅಭಿಪ್ರಾಯವೇ ಅದಕ್ಕೆ ನಿರ್ಣಯ. ಮಿತಾಯಿ ಮಾಡುವವನು ತಾನು ಶುದ್ಧನಾಗಿದ್ದ ಭಾಗದಲ್ಲಿ ಕೊಳಕಾಗಿಯೂ ರೋಗಿಯೂ ಸಾಮಾನುಗಳನ್ನು ಮಾರಲು ಮಾರಲೊಲ್ಲರು ನಿಶ್ಚಯವಾದ ಮಾತು. ಅವನು ತನ್ನ ಗಿರಾಕಿಗಳನ್ನೇ ಕಳೆದುಕೊಳ್ಳುವನು. ಆದರೆ ಯಾವ ಮಿಠಾಯಿ ಮಾರುವವನು ಅಸ್ಪೃಶ್ಯನೆಂದು ಕರೆಯಲ್ಪಡುವನೆಂಬ ಮಾತ್ರಕ್ಕೆ ಅಸ್ಪೃಶ್ಯನಿಗೆ ಮಾರದೆ ಹೋದ ಪಕ್ಷದಲ್ಲಿ ಅವನು ವ್ಯಾಪಾರ ಮಾಡಬಹುದಾದ ತನ್ನ ಹಕ್ಕನ್ನೇ ಕಳೆದುಕೊಳ್ಳುವನು.

೫. ನಿಮ್ಮ ಅಸ್ಪೃಶ್ಯತಾ ನಿರೂಪಣವು ಬಹಳ ಕಷ್ಟವಾಗುವುದು. ಮೇಲ್ವರ್ಗದ ಹಿಂದೂ ಸಂಗಡದಲ್ಲಿ ಸಹಾ ಅವರು ತಮ್ಮ ಅಸಂಸ್ಕೃತರಾದ ಮಕ್ಕಳ ಕೈಯಿಂದಲೂ ಕುಡಿಯಲು ನೀರನ್ನೂ ತಿನ್ನಲು ಬೇಯಿಸಿದ ಆಹಾರವನ್ನೂ ತೆಗೆದುಕೊಳ್ಳರು. ಇದನ್ನು ತಾವು ಅಸ್ಪೃಶ್ಯತೆಯೆಂದು ಕರೆಯುವಿರಾ?

ನಾನಿದನ್ನು ಅಸ್ಪೃಶ್ಯತೆಯೆಂದು ಕರೆಯುವುದಿಲ್ಲ. ಹಿಂದೂ ಮತದಲ್ಲಿ ಪಂಚಮ ವರ್ಣವೆಂಬುದು ಇಲ್ಲವೇ ಇಲ್ಲವೆಂದು ನಾನು ನೂರಾರು ಬಾರಿ ಹೇಳಿ ವಿವರಿಸಿದ್ದೇನೆ. ಆದಕಾರಣ ಅಸ್ಪೃಶ್ಯರಿಗೂ ಇತರ ಚತುರ್ವರ್ಣಗಳಿಗಿರುವಂಥಾ ಎಲ್ಲಾ ಹಕ್ಕುಗಳೂ ಸಮಾನವಾಗಿರಬೇಕಾದದ್ದು ಆವಶ್ಯಕ.

ಕೆಲವು ಮಂದಿ ಈ ರೀತಿ ಸಲಹೆ ಕೊಡುವರು. ಕುಡಿಯುವ ನೀರಿಗೆ ಅಷ್ಟು ಗುರುತ್ವ ಕೊಡುವ ಬದಲು ಹಿಂದೂಗಳಲ್ಲಿ ಉತ್ತಮರೆನ್ನಿಸಿಕೊಂಡಿರುವವರ ಹೃದಯದಿಂದ ಮೇಲು ಕೀಳು ಭಾವನೆಗಳನ್ನು ಕಿತ್ತೊಗೆಯುವಂತೆ ಮಾಡಿ ಪರಸ್ಪರ ಪ್ರೀತಿ ವಿಶ್ವಾಸ ಸಹಾನುಭೂತಿಗಳನ್ನು ತೋರುವಂತೆ ಮಾಡುವುದು ಉತ್ತಮ. ಈ ಸಲಹೆಯ ವಿಚಾರದಲ್ಲಿ ನಿಮ್ಮ ಅಭಿಪ್ರಾಯವೇನು? ನಾನು ಎಲ್ಲೆಲ್ಲಿ ಯಾವ ಯಾವಾಗ ಅವಕಾಶವನ್ನು ಮೆಚ್ಚುವುದಕ್ಕಿಲ್ಲದ ಸಲಹೆಗಳು ಬರುತ್ತವೋ ಅವುಗಳೆಲ್ಲವನ್ನೂ ಅನುಮೋದಿಸುತ್ತೇನೆ. ಫಲವನ್ನು ನೋಡಿ ಗಿಡವನ್ನು ಪರೀಕ್ಷಿಸಬೇಕು. ನಾನು ಯಾವಾಗಲೂ ಆಹಾರ ಪಾನೀಯಗಳ ವಿಚಾರಕ್ಕೆ ಅಷ್ಟಾಗಿ ಪ್ರಾಮುಖ್ಯತೆಯನ್ನು ಕೊಡುವುದಿಲ್ಲ. ಆದರೆ ಯಾವನಾದರೂ ಅಸ್ಪೃಶ್ಯನೆಂದು ಕರೆಸಿಕೊಳ್ಳಲ್ಪಡುವನೆಂದು ಅವನ ಕೈಯಿಂದ ನೀರನ್ನು ಕುಡಿಯದಿದ್ದಾಗ ನಾನು ಬಂಧಿತನಾಗಿಯೂ ಆಹಾರ ಪಾನೀಯ ವಿಚಾರಕ್ಕೆ ಪ್ರಾಮುಖ್ಯತೆಯನ್ನು ಕೊಡುತ್ತೇನೆ. ಏಕೆಂದರೆ ಆಗ ನಿರಾಕರಣವು ಮೇಲೆಂಬ ಭಾವದ ದುರಹಂಕಾರದ ಹೆಗ್ಗುರುತೆಂದು ಭಾವಿಸುತ್ತೇನೆ.

ಮತೀಯ ಕೀರ್ತನೆಗಳಿಂದ ವೈಷ್ಣವ ಮತಾಚಾರದ ಬೋಧನೆಯನ್ನು ಜಾತಿ ಕಟ್ಟಳೆಗಳನ್ನು ಮುರಿದು ಶಾಂತೀಯವಾದ ಉಪವಾಸ ವ್ರತಗಳನ್ನೂ ಜಾತಿ ಮತ ಭೇದಗಳಿಲ್ಲದೆ ಮಾಡಿಸುವುದೇ ಈ ತೊಂದರೆಗಳೆಲ್ಲವನ್ನೂ ನಿವಾರಿಸಲು ಸುಲಭವೂ ಸಾಮಾನ್ಯವೂ ಆದ ಮಾರ್ಗ. ಈ ಮಾರ್ಗವು ಕಳೆದ ನಾಲ್ಕು ಶತಮಾನಗಳಿಗಿಂತಲೂ ಹೆಚ್ಚಾಗಿಯೇ ಪ್ರಚಾರದಲ್ಲಿರುವುದು. ಈ ಸಲಹೆಯ ವಿಚಾರದಲ್ಲಿ ನಿಮ್ಮ ಅಭಿಪ್ರಾಯವೇನು?

ಈ ಕೀರ್ತನೆಗಳಿಂದ ಯಾವ ಫಲಗಳುಂಟಾಗುವುವೆಂಬುದನ್ನು ನಾನು ಪರೀಕ್ಷಿಸಿ ನೋಡಿಲ್ಲ. ಆದರೆ ಉತ್ತಮವೆಂಬ ದುರಹಂಕಾರದ ಭಕ್ತಿಗಳನ್ನೊಡೆಯಲು ಸಹಾಯಕವಾಗುವಂಥಾ ಎಲ್ಲಾ ಒಳ್ಳೆ ಮಾರ್ಗಗಳಿಗೂ ನಾನು ಆತ್ಮಾದರದಿಂದ ಸ್ವಾಗತ ಕೋರುವೆನು.

ಬಂಗಾಳದಲ್ಲಿ ಹಿಂದೂ ಜನಾಂಗವೇ ವಿಲಯವಾಗುತ್ತಿದೆ ಎಂಬ ವಿಷಯವನ್ನು ಒಪ್ಪಿಕೊಳ್ಳಬೇಕಾಗಿ ಬರುತ್ತಿದೆ. ಈ ರೀತಿಯಾಗಿ ಕ್ರಮೇಣ ವಿಲಯವಾಗುತ್ತಿರುವುದಕ್ಕೆ ಮುಖ್ಯವಾದ ಕಾರಣಗಳು ಯಾವುವೆಂದು ನೀವು ತಿಳಿಯುವಿರಿ. ಈ ವಿಲಯವನ್ನು ತಡೆಯಲು ಸಾಧನಗಳಾದರೂ ಯಾವುವು? ಇದೇ ರೀತಿಯಾಗಿ ಹಿಂದೂ ಜನಗಳ ಶಾರೀರಕ ಸ್ಥಿತಿಗಳಲ್ಲಿಯೂ ಕ್ಷೀಣತೆಯು ಕಾಣಬರುತ್ತಿದೆ; ಹಿಂದೂಗಳು ಎತ್ತರದಲ್ಲಿಯೂ, ಬಲದಲ್ಲಿಯೂ, ವೀರ್ಯದಲ್ಲಿಯೂ ಕ್ಷೀಣವಸ್ಥೆಗೆ ಬರುತ್ತಿರುವರು. ಇದೂ ನಿಜ ಸರ್ವರಿಗೂ ತಿಳಿದ ಅಂಶ. ಇವು ಪುನಃ ಉತ್ತೇಜನಗೊಳ್ಳಲು ಯಾವ ಕೆಲಸಗಳನ್ನು ಕೈಕೊಳ್ಳಬೇಕು?

ನಾನು ಈ ವಿಷಯ ಕಥನಗಳನ್ನು ಕೇಳಿದ್ದೇನೆ. ಆದರೆ ಹಿಂದೂ—ಮಿಶ್ರತ್ವದ ಸಾಧ್ಯತೆಗಳನ್ನು ಮಾತ್ರ ನೋಡಿಲ್ಲ. ಆದಾಗ್ಯೂ ನಾವು ಶಕ್ತಿಯಲ್ಲಿ ಬಲಹೀನರಾಗುತ್ತಾ ಬರುತ್ತಿದ್ದೇವೆಂಬ ವಿಷಯವನ್ನು ಮಾತ್ರ ನಂಬುತ್ತೇನೆ. ಇದಕ್ಕೆ ಕಾರಣಗಳೂ ಪ್ರತ್ಯಕ್ಷವಾಗಿಯೇ ಇವೆ. ನಮ್ಮ ಬೆಳೆಯುತ್ತಿರುವ ಬಡತನವೂ, ಬಾಲ್ಯವಿವಾಹ ಪದ್ಧತಿಗಳೂ ಎರಡು ಈ ಪ್ರಬಲವಾದ ಕಾರಣಗಳಿಂದಲೇ ಕ್ಷೀಣದೆಸೆಯು ಬೇಗ ಬರುತ್ತಾ ಬಂದಿರುವುದು. ಇವುಗಳೆರಡನ್ನೂ ಹೋಗಲಾಡಿಸಬೇಕಾದರೆ ಚರಕದಿಂದ ಆಗುವುದು; ಮತ್ತೊಂದನ್ನು ಮುಟ್ಟಿಸಬೇಕಾದರೆ ಪ್ರತಿಯೊಬ್ಬರೂ ತಮ್ಮ ಮಕ್ಕಳನ್ನು—ಹೆಣ್ಣಾಗಲೀ ಗಂಡಾಗಲೀ—ಹದಿನಾರು ವರ್ಷಗಳು ತುಂಬಿ [illegible] ಹತ್ತಿರ ಹತ್ತಿರಕ್ಕೆ ಬರುವ ತನಕ ಮದುವೆಗಳನ್ನು ಮುಂದಾಗಿ ಮಾಡದಿರಬೇಕು. ಇಷ್ಟರಿಂದ ಸಾಕಾಗುವುದಿಲ್ಲ. ಸನಾತನರೋ ಊಹಿಸಲು ಸಾಧ್ಯವಾಗದ ಯಾವ ಯಾವ ತೊಂದರೆಗಳಿರುವವೋ ಅವುಗಳೆಲ್ಲವನ್ನೂ ಅನುಭವಿಸಿಯಾದರೂ ಹುಡುಗನಾಗಲಿ ಹುಡುಗಿಯಾಗಲಿ ಬೆಳೆದು ಗಿ ಮುಂದುವರಿದು ಸಂಸಾರದ ಭಾರವನ್ನು ವಹಿಸಲು ಶಕ್ತಿ ಹೊಂದಿ ಸಂಪೂರ್ಣವಾಗಿ ಆ ಯೋಗ್ಯರಾಗಿರುವವರೆಗೂ ಮದುವೆಯನ್ನು ಮಾಡದೆ ಕಾಲ ತಳ್ಳಬೇಕು. ಇವುಗಳನ್ನು [illegible] ಅವಶ್ಯಕತೆ ಇದೆಯೆಂದು ತಿಳಿಯುತ್ತಾರೋ ಅವರೇ ಮೊದಲು ತಮ್ಮಲ್ಲಿ ಸುಧಾರಣೆಗಳನ್ನು ಮಾಡಿಕೊಂಡು ಅನಂತರ ತಮ್ಮ ನೆರೆ ಹೊರೆಯವರಲ್ಲಿ ಅವುಗಳನ್ನು ಬಿತ್ತಬೇಕು. ಸುಧಾರಣೆಗಳಾಗಬೇಕೆಂದೂ ತೊಂದರೆಗಳನ್ನು ನಿವಾರಿಸಬೇಕೆಂದೂ ಬಯಸುವವರೆಲ್ಲರೂ ತಾವು ಸದ್ಯದಲ್ಲಿ ಇರುವ ಸ್ಥಿತಿಗಿಂತಲೂ ಉತ್ತಮವಾದ ಉತ್ತೇಜಕಗಳಾದ ಮನೋವಾತಾವರಣದಲ್ಲಿ ತಮ್ಮ ತಮ್ಮ ಮಕ್ಕಳನ್ನು ಬೆಳೆಸಬೇಕು.

'ಪ್ರಜಾಮತ'

Reg. No. M. 1150.

If not delivered please return to "KODAGU" OFFICE MERCARA.

ಕೊಡಗು.

ಸಕ್ಯೇನ [illegible] ವಿದ್ಯಾ [illegible] ಕ್ರಿಯಯೈ [illegible]

ವಾರ್ಷಿಕ [illegible] ೩—೮—೦.

ಸಂಪಾದಕ—ಮೊಚೆನಂಡ ಯಂ. ಗಣಪತಿ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೧	ಮಡಿಕೇರಿ, ಸನ್ ೧೯೩೨ನೇ ಇಸವಿ ಏಪ್ರಿಲ್ ತಾರೀಕು ೧೫ನೇ ಶುಕ್ರವಾರ.	ಸಂಚಿಕೆ [illegible]

Office of the Asst. Commr. & Dt. Magte., Mercara (Coorg). 6th May 1931.

Dear Sir,

I am QUITE PLEASED with the workmanship of the two Coorg weapons (PICHAKATTI & ODIKKATTI).

Yours faithfully,
(Sd) (Rao Bhadur)
K. CHENGAPPA, B. A.
District Magistrate and Assistant Commissioner of Coorg.

JEWELLER
By Appointment t:
H. E The Gov rnor of Madras.



PEECHAKATTI (WITH SILVER FITTINGS)
Prices-From Rs 160 & upwards.

"New Bungalow," Ammatti, (Coorg). 14th December 1931.

Dear Sir,

I am IMMENSELY PLEASED with the workmanship of the PICHAKATTI you made and sent me some time back.

Yours faithfully,
Sd/ K. P. MUDDAYYA,
Ammatti (Coorg.)

Telegrams: 'PRECIOUS.'

V. Subramaniaier
Jeweller.

Telephone: 3145.

CATALOGUE ON ENQUIRY.

52–21 Post Box 423, Triplicane, P. O., MADRAS.



[illegible]

ಕೋವಿಗಳು, ಕತ್ತಿಗಳು, ಬಟೀಗಳು, ತೋಟೆಗಳು, ಕೇಪ್ಪುಗಳು, [illegible] ಎಲ್ಲಾ [illegible] ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS.
Largest Importers of Firearms and Ammunition
Cheapest priced firm in india.

24–6 210 Abdul Rehman Street BOMBAY

ಬಾಲಾರ್ಕಮಧು.

ಬಾಲಾರ್ಕಮಧು ಮಕ್ಕಳಿಗೆ ಕೊಡುವುದರಿಂದ ಶಕ್ತಿ ಮತ್ತು ಆರೋಗ್ಯವೂ ಹೆಚ್ಚುವುದು. ಇದು ಮಧುರವಾಗಿ[illegible] ಶೀಸೆ 1ಕ್ಕೆ 0–12–0 ಟಿ. ಖ. 0–12–0.



ಭಂಗಾರದ ಉಂಗುರಗಳು.



ಈ ಉಂಗುರಗಳನ್ನು ವಜ್ರದ ಕಲ್ಲುಗಳನ್ನು [illegible] ಭಂಗಾರದಿಂದ ಕಟ್ಟಿದ [illegible]. [illegible] ಉಂಗುರಗಳಿಗೆ [illegible] ೧ಕ್ಕೆ ೦–೧೨–೦. [illegible] ಉಂಗುರಗಳಿಗೆ [illegible] ಭಂಗಾರದ [illegible] ಕಟ್ಟುವ [illegible] ಇನಾಮವಾಗಿ ಕೊಡುವೆವು.

ವಿಳಾಸ—[illegible] ಅಂಡ್ ಕೊ,
12–2 [illegible] ನಂ|| 1246, ಮದರಾಸು.

ಸ್ವದೇಶೀ ಶೀರೆಗಳು.

ಈ ಶೀರೆಗಳನ್ನು [illegible] ಇನಾಮವಾಗಿ ಕೊಡುತ್ತೇವೆ. ಕ್ರಯ ೧ಕ್ಕೆ ೭–೫–೦.

ವಿಳಾಸ—ಕೆ. [illegible] ಅಂಡ್ ಸನ್ಸ್,
12–2 168 [illegible] ಬಜಾರ ಮದರಾಸು.

(Spleen Lever enlargement) [illegible] 3–0–0. [illegible] 0–8 [illegible]

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರ ಬ್ಯಾಂಕ್, ಲಿಮಿಟೆಡ್ ಈ ಆಡಳಿತ ... ಆಫೀಸ್ : ಪ್ರಕಾಶ ಬೀದಿ ಹತ್ತಿರ

(ಸ್ಥಾಪಿತವಾದದ್ದು 1922ರಲ್ಲಿ)

	ರೂ.
ಷೇರ್ ಬಂಡವಾಳ	50,000
ವಸೂಲಾದ ಷೇರ್ ಮೊಬಲಗು ...	26,800
ಜಮೆಯಾದ ಠೇವಣಿ	2,50,301

ಈ ಬ್ಯಾಂಕಿನಲ್ಲಿ ಕೊಡಗು ದೇಶದ ಸಹಕಾರ ಸಂಘಗಳೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಕೆಳಕಂಡ ಸಾಲಿಯಾನ ರೂ. 5-0-0 ಪ್ರಕಾರ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಕೆಳಕಂಡ ಸಾಲಿಯಾನ 4½ ಬಡ್ಡಿ ದೊರೆಯುತ್ತೆ. ವರ್ಷಕ್ಕೊಂದಾವರ್ತಿ ಕೊಡ ... ಕೆಳ್ಳ ... ಮಾಡುತ್ತಾರೆ.

ಪ್ರೆಸಿಡೆಂಟರು, ಕೊ. ಮಂದಣ್ಣ ಅಯ್ಯಣ್ಣನವರು, ರಾವ್ ಬಹದ್ದೂರ್.

ಮ್ಯಾನೇಜರ್, ಮನೆಯಪಂಡ ಬೆಳ್ಯಪ್ಪನವರು.

ಸೆಕ್ರೆಟರಿ,
ಸಿ. ಯಸ್. ವೆಂಕಟಯ್ಯನವರು, ಬಿ.ಎ. ಬಿ.ಎಲ್.

ತಾರೀಖು 1-7-1931.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಏಜೆಂಟರಾಗಿ ... ಪ್ರತಿ ಕಳುಹಿಸಲಾಗಿದೆ. ಕೆಳಗಿನ ಸಬ್ ಏಜೆಂಟರುಗಳಿಗೆ ಪುಸ್ತಕಗಳು ಕೊಡಲಾಗಿದೆ. ... ಚಂದಾದಾರರೆಲ್ಲರೂ ತಮ್ಮ ಚಂದಾವನ್ನು ... ಅನುಕೂಲವಿರುವ ಸ್ಥಳದಲ್ಲಿ ... ರಶೀತಿ ಪಡೆಯಬೇಕಾಗಿ ಕೋರಲಾಗಿದೆ.

ಏಜೆಂಟರುಗಳು.

ಉತ್ತರ ಕೊಡಗಿಗೆ ಶ್ರೀ ... ಸೋಮಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು. (ಪಾಡಿಭಂಡಾರ.)

ಸಾಮ್ವರ್ಪೇಟೆ—ಎಸ್. ಆರ್. ವೆಂಕಟಯ್ಯನವರು.
ಅಮ್ಮತ್ತಿ—ಸಿದ್ದಾಪುರ—ಮೆ. ಬಸಂಡ ಮಾದಪ್ಪನವರು.
ಪೊನ್ನಂಪೇಟೆ—... ಪಿ. ಜಿ. ಮುದ್ದಯ್ಯನವರು.
ಮತ್ತು ... ಪಿ. ಕಾರ್ಯಪ್ಪನವರು.
ಬಿರುನಾಣಿ & ತಿತಿಮತಿ—ಮೆ. ಜಿ. ಮಾದಯ್ಯನವರು.
... ಪೊನ್ನಪ್ಪ—ಮೆ. ... ಪೂವಯ್ಯನವರು.

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ... ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮ್ಯಾನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

ಸರಕಾರ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ.

ಪಾಲಿಸಿದಾರರಿಗೆ ಸಾಲ - 8013 ಜನರಿಗೆ 32 ಲಕ್ಷ ರೂ.

ಪಾಲಿದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ.

ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,78,322 ಜನರಿಗೆ 38 ಕೋಟಿ ರೂ.

... ಶೇಕಡ 22.4 ರಷ್ಟಿಂತ ಮೀರದ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದಾಗಿ ... ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ... ಕೆಲಸಗಳ ಪರಿಮಾಣವನ್ನು ಈ ಸಂಸ್ಥೆಗಳಿಂದಲೂ, ಇತರ ... ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ... ಗೊತ್ತುಮಾಡಿಕೊಳ್ಳಬಹುದು.

... ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ... ಇಂಡಿಯನ್ ಕಂಪೆನಿಯೊಂದು ... ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ... ಎಲ್ಲಾ ... ಹಿಂದೀಯರ ಹೆಚ್ಚೆಚ್ಚು ...

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

... ಹಿಂದಿನ ... ಮುಂದಿನ ...

ಹೆಚ್ಚಿನ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್, ಬೆಂಗಳೂರು.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೊಲಂಬೋ	ನಾಗಪುರ	ರಂಗೂನು
ಅಮ್ರಾವತಿ	...	ಲಾಹೋರ್	ಪಾಟ್ನಾ	ರಾವಲ್ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೋ	ಪೂನಾ	ಸಿಂಗಪುರ
...	...	ಮದ್ರಾಸು	ರಾಯಪುರ	ತಿರುಚನಾಪಳ್ಳಿ
ಬೆಂಗಳೂರು	...	ಮಂಡಲೆ	ರಾಂಚಿ	ತಿರುವೆಂದ್ರಮ್
ಭೋಪಾಲ್	...	ಮಂಗಳೂರು	...	ವಿಶಾಖಪಟ್ಟಣ

52—5

... ಹೊಟ್ಟೆ ನೋವು, ... ಮತ್ತು ... ಬೀಜ ... ಗುಣವಾಗದಿರುವ ಮಲೇರಿಯ, ... ಬೆಲೆ ... 14

... ಬೆಲೆ ... ರೂ. 7—8—0, ... ರೂ. 14

ಮಲೆ ಜ್ವರಕ್ಕೆ ರಕ್ತ ಕಷಾಯ

... ಮತ್ತು ... ಕಣ್ಣು ... ಹೊಟ್ಟೆ ನೋವು, ... ಮುಖ ... ಬಿಳುಪಾಗುವುದು, ... ತಲೆಸುತ್ತು ... ರೂ. 1—4—0 3—8—0; 6—12—0 ... 1, 3, 6 ... ರೂ. 1—4—0

ರೋಗವು ನಾಶವಾಗಿ ... ರೂ. 1 ... 3—8—0

... ಪ್ರಕ್ರಿಯೆ, ... ಮನೋಲಾಸ್ತಿ ... ರೂ. 1, 3 ... 2—10—0 ... ರೂ. 2, 3 ... 5—8—0.

ವಿಳಾಸ:—ಮನೋಲಾಸ್ತಿ ... ಕಂಪೆನಿ,
9 ಮಂಗಳೂರು.

ಕೊಡಗಿನ ... ಡಾಕ್ಟರ್ ...

52—45

ಚಿಕ್ಕ ಹುಡುಗರ ಸಲುವಾಗಿ

... ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚು ವವು ಮತ್ತು ಇದು ಮಧುರವಾಗಿ ರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತಾರೆ

ಕ್ರಯ: ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ದೋಂಗರೆ ಕಂಪೆನಿ,
ಗಿರಿಗಾಂವ, ಮುಂಬಯಿ.

52—12

... ಸಿದ್ಧವಾಗಿವೆ.

... ಮತ್ತು ... ಭಂಡಾರಗಳ ಪ್ರತಿ ... ಯೋಗ್ಯವಾದ ... ಮತ್ತು ... ಭಂಡಾರ ... ಎಲ್ಲಾ ... ಕೆಲಸಗಳನ್ನು ... ಗಳನ್ನು ... ಫಾರಂಗಳು, ... ಫಾರಂ ... ಬಿಲ್ ... ರಶೀತಿ ಪುಸ್ತಕಗಳು, ... ಪುಸ್ತಕಗಳು ಮತ್ತು ... ಪುಸ್ತ... ದಲ್ಲಿ ದೊರೆಯುತ್ತವೆ. ... ಕಚೇರಿ ...

ಮ್ಯಾನೇಜರ್,
"ಕೊಡಗು" ಆಫೀಸು,
ಮಡಿಕೇರಿ.

Printed & published by M. M. Ganapathy at "Kodagu" Press, Mercara for "Kodagu" Ltd.

೫೪ ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ ಔಷಧಗಳು.

೧. ಧಾತುಪುಷ್ಟಿ ಲೇಹ.

ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕ ಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ಬಾಧೆ, ರಕ್ತ ಪಿತ್ತ, ಒಳ ಜ್ವರ, ಮಲ ಬದ್ಧತೆ, ಕೈಕಾಲು ಬಚ್ಚುವುದು ಮೊದಲಾದುವುಗಳು ಪೂರ್ಣ ಗುಣವಾಗಿ ಕಳೆದು ಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು.—ಕ್ರಯ ಡಬ್ಬಿ 1ಕ್ಕೆ 2—8—0 ಮೂರು ಡಬ್ಬಿಗಳಿಗೆ ರೂ. 7—0—0

೨. ಅಶೋಕಾರಿಷ್ಟ ಮತ್ತು ಮಾತ್ರೆ.

ಹೆಂಗಸರ ಮುಟ್ಟು ದೋಷಗಳು, ಮುಟ್ಟು ನಿಂತು ಹೋಗುವುದು, ಹೊಟ್ಟೆ ನೋವು, ಸೊಂಟ ನೋವು, ಸಂತಾನ ಹೀನತೆ, ಮೂರ್ಛೆ, ಮಲಬದ್ಧತೆ, ಒಳಜ್ವರ, ರಕ್ತಹೀನತೆ, ಕೈಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಅತಿ ಶೀಘ್ರದಲ್ಲಿಯೇ ಗುಣ ಪಡಿಸುವುದು. ಅಶೋಕಾರಿಷ್ಟ ಮತ್ತು ಮಾತ್ರೆಗಳು ಸಾವಿರಾರು ಹೆಂಗಸರಿಗೆ ಸಂತತಿ ಆರೋಗ್ಯವನ್ನು ಒದಗಿಸಿ, ಮನೋಭಿಲಾಷೆಯನ್ನು ಪೂರಯಿಸಿರುವವು.

ಕ್ರಯ 1 ಬಾಟ್ಲಿ ಔಷಧ, 1 ಡಬ್ಬಿ ಮಾತ್ರೆ ರೂ. 2 ಆ. 4
3 ಬಾಟ್ಲಿ ಮತ್ತು ಡಬ್ಬಿಗಳಿಗೆ ರೂ. 6 ಆ. 4.

೩. ಮಲೇರಿಯಾ ನಿವಾರಣೆ.

ದಿನ ಬಿಟ್ಟು ಬರುವ ಜ್ವರ, ಚಳಿ ಜ್ವರ, 2 ಯಾ 3 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರ ಗಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರ ಗಡ್ಡೆಯನ್ನು ಕರಗಿಸಿ ಶಕ್ತಿಯನ್ನು ಉಂಟು ಮಾಡುತ್ತದೆ. ಬಾಟ್ಲಿ 1ಕ್ಕೆ 1—8—0, 3 ಬಾಟ್ಲಿಗಳಿಗೆ 4—2—0.

೪. ಮೇಹ ಕುಠಾರ. ಇದು ಮೂತ್ರಸ್ಥಾನದಿಂದ ಕೆಂಪು, ಬಿಳಿದು, ಹಳದಿಯಂತೆ ಹೋಗತಕ್ಕ ಕೀವನ್ನೂ, ಪ್ರ[illegible]ವನ್ನೂ, ಉರಿಯನ್ನೂ ಗುಣಪಡಿಸುತ್ತದೆ. ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7.

೫. ಇಛ್ಛಾ ಭೇದಿ ಗುಟಿಕೆ. ಅಜೀರ್ಣವನ್ನು ಸುಲಭವಾಗಿ ಉಂಟುಮಾಡುವ ಸುಖ ವಿರೇಚಕ. ಬಾಟ್ಲಿ 1ಕ್ಕೆ 0—12—0 ಮಾತ್ರ. 3 ಬಾಟ್ಲಿಗಳಿಗೆ 2—2—0.

ಎಲ್ಲಾ ಸಮುನಸೆಯ ಔಷಧಿಗಳು ದೊರೆಯುತ್ತವೆ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ರವಾನಿಸಬಹುದು. ಕೆಟಲಾಗು ತರಿಸಿ ನೋಡಿರಿ.

ಎಂ. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್ಸ್,
52—26 ರಥಬೀದಿ, ಮಂಗಳೂರು, ದ. ಕನ್ನಡ

ಭಂಗಾರದ ಕೈಗಡಿಯಾರ.



ಈ ಚಿತ್ರದಲ್ಲಿ ಕಾಣುವ ಭಂಗಾರದ ಕೈಗಡಿಯಾರವು ಬಹು ಬಲಿಷ್ಟವಾದ (ಸ್ವಿಸ್ ಮೇಡ್) ಲೀವರ್ ಸಾಮಾನುಗಳಿಂದ ತಯಾರಾದವು. ಸರಿಯಾದ ಗಂಟೆಯನ್ನು ತೋರಿಸುವವು. ಒಳಗಡೆ ಕೆಂಪುಗಳು ಇಟ್ಟಿವೆ. ಇದರ ಬಣ್ಣವು ಭಂಗಾರಕ್ಕೆ ಸರಿಯಾಗಿರುವದು. ಇದನ್ನು ಈ ವಾರದಲ್ಲಿ ತರಿಸಿಕೊಳ್ಳುವವರಿಗೆ ಒಂದು ವಜ್ರದ ಉಂಗುರ, ಒಂದು ರೋಲ್ಡ್ ಗೋಲ್ಡ್ ಭಂಗಾರದ ಕತ್ತಿನ ಹಾರ (ನೆಕ್‍ಲೇಸ್), ಒಂದು ಟೇಬಲ್ ಟೈಂಪೀಸು ಇನಾಮವಾಗಿ ಕೊಡುವೆವು. 2 ಗಡಿಯಾರಗಳಿಗೂ ಖಾತ್ರಿಯಿಂದ 4 ವರ್ಷ ಗ್ಯಾರಂಟಿ ಪತ್ರ ಸಹ ಕಳುಹಿಸುವೆವು.

3 ಬಹುಮಾನಗಳ ಸಹಿತ ರಿಸ್ಟ್‌ವಾಚ್ 1ಕ್ಕೆ 6—8—0.

ವಿಳಾಸ:— **ಸಿಟಿ ಮಾರ್ಟ್,**
12—? 168. ಜೈನಾ ಬಜಾರ್, ಮದರಾಸು.

12 ಸೆಂಟ್ ಬಾಟಲ್, ಫೌಂಟನ್ ಪೆನ್ ಲೀವರ್ ಪಾಕೆಟ್ ವಾಚ್ 2—12—0 ಮಾತ್ರ.

ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ

ಲಿಲ್ಲಿ ಆಫ್ ದಿ ವ್ಯಾಲಿ ಮತ್ತು ಫೌಂಟನ್ ಪೆನ್.



ಈ ಸುಗಂಧ ದ್ರವ್ಯವು ಫ್ರಾನ್ಸ್ ದೇಶದಲ್ಲಿ ಪುಷ್ಪಗಳ ಸಾರದಿಂದ ತಯಾರಿಸಿದ್ದು. ಇದರಲ್ಲಿ ಮದ್ಯಸಾರಗಳು ಯಾವವೂ ಸೇರಿರುವುದಿಲ್ಲ. ಇದರಲ್ಲಿ ಒಂದೇ ಒಂದು ಬೊಟ್ಟನ್ನು ಬಟ್ಟೆಗೆ ಹಾಕಿದರೆ ಒಂದು ವಾರದ ವರೆಗೂ ಒಂದೇ ಸರಿಯಾಗಿ ಗಮಗಮಿಸುತ್ತಿರುವುದು. ಲಿಲ್ಲಿ ಆಫ್ ದಿ ವ್ಯಾಲಿ ಎಂಬ ಈ ಸುಗಂಧ ದ್ರವ್ಯಕ್ಕೆ ಸರಿಸಮಾನವಾದದ್ದು ಬೇರೊಂದು ಇಲ್ಲ. ವಿಲಾಯಿತಿಯಲ್ಲಿ ತಯಾರಾದ 14 ಕ್ಯಾರೆಟ್ಟಿನ ಭಂಗಾರದ ನಿಬ್ಬು ಹಾಕಿದ ಫೌಂಟನ್ ಪೆನ್, ಒಂದೇ ಸಲ 12 ಸೆಂಟ್ ಬಾಟಲ್, ಪೆನ್ ತರಿಸುವವರಿಗೆ ಒಂದು ಪಾಕೆಟ್ ವಾಚನ್ನು ಇನಾಮಾಗಿ ಕೊಡುತ್ತೇವೆ.

ಕ್ರಯ ರೂ. 2—12—0 ಮಾತ್ರ.

The Legal Trading Co.
12—? P. B. 243, Madras.

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಎಂಬುವ ಸುಪ್ರಸಿದ್ಧ ದೇಶೀಯ ವಿಮೆ ಸಂಘ.

ಅಧ್ಯಕ್ಷರು:—ಮಾನನೀಯ ಸರ್ ಲಲ್ಲೂಭಾಯಿ ಸಾಮಲದಾಸ್,
ಕೆಟಿ., ಸಿ. ಐ. ಇ., ಜೆ. ಪಿ., ಯವರು.

ಕೊಚ್ಚಿಕಾರ ಬ್ರದರ್ಸ್, ಮದ್ರಾಸು ಬ್ರಾಂಚು ಸೆಕ್ರಟರಿಗಳು.

1. ಭಾಗ್ಯವಂತರ ಭಂಡಾರ, ವ್ಯಾಪಾರಸ್ಥರ ಕೋಶಾಗಾರ, ಕುಟುಂಬದ ಸಂರಕ್ಷಣಾನಿಲಯ. ಬಡವರ ಜೀವನಾಧಾರ ಇದೇ ಜೀವ ವಿಮೆಯ ತತ್ವವು.

2. ಹಿಂದೂಸ್ಥಾನದ ನಿವಾಸಿಯರಲ್ಲಿ ವಿಮೆ ತೆಗೆಯಬೇಕೆನ್ನುವವರ ಪ್ರಯೋಜನಾರ್ಥವಾಗಿ ಈ ಕಂಪೆನಿಯು ಭಾರತೀಯರ ಉತ್ತಮವಾದ ಆಡಳಿತದಿಂದ ಬರ್ಮಾ ಬೋಟ ಮಾಡಿ ಇಂಡಿಯಾ ಸರ್ಕಾರದ ಇಂಡಿಯನ್ ಟ್ರಸ್ಟ್ ಆಕ್ಟಿಗೆ ಒಳಪಟ್ಟು ಸರ್ಕಾರದ ಭದ್ರತೆಯಿಂದ ದೇಶೀಯರ ಸೇವೆಯಲ್ಲೇ ನಿರತವಾಗಿ ಹಿಂದೂಸ್ಥಾನದ ಎಲ್ಲಾ ಕಡೆಗಳಲ್ಲೂ ಅತಿ ಕೀರ್ತಿಯನ್ನು ಪಡೆದಿರುತ್ತೆ.

3. ಈ ಸ್ವದೇಶೀ ಕಂಪೆನಿಯು ಪೋಲಿಸಿದಾರರಿಗೆ ಪೋಲಿಸಿ ಅವಧಿ ಪೂರೈಸಿದನಂತರವಾಗಲೀ ಅಥವಾ ಮಧ್ಯದಲ್ಲು ಮರಣಾನಂತರ ವಾರೀಸುದಾರರಿಗಾಗಲೀ ಹೆಚ್ಚಿನ ಬೋನಸ್ ಅನ್ನದ ಕೊಡುವುದಲ್ಲದೆ, ದೀರ್ಘ ಸಮಯ ತೆಗೆದುಕೊಳ್ಳದೆಯೂ ಶೀಘ್ರದಲ್ಲಿ ವಿಮೆ ಮೊಬಲಗನ್ನು ಲಾಭ ಸಹಿತ ಪಾವತಿಕೊಡುವುದರಲ್ಲಿ ಹೆಸರುಗೊಂಡಿದೆ.

4. ಭವತಬಗಡದ ಮಹನೀಯರಿಂದ ಸ್ಥಾಪಿಸಲ್ಪಟ್ಟ ದೇಶೀಯರಿಂದಲೇ ಅತಿ ಕಡಿಮೆ ಖರ್ಚಿನಿಂದ ನಡೆಸಲ್ಪಡುವ ಈ ಸ್ವದೇಶೀ ಕಂಪೆನಿಯಲ್ಲಿ ತಾವು ಭಾಗಿಗಳಾಗಿರಿ, ಪತಿಪತ್ನಿಯರಿಗೆ ಮತ್ತು ವ್ಯಾಪಾರಸ್ಥರು ವರ್ಗದವರಿಗೆ ಏಕೀಭವಿಸಿ (ಜಾಯಿಂಟ್ ಲೈಫ್) ಪೋಲಿಸಿ ತೆಗೆದುಕೊಳ್ಳಲು ಈ ಕಂಪೆನಿಯು ತುಂಬಾ ಅನುಕೂಲಗಳನ್ನು ಕಲ್ಪಿಸಿರುತ್ತೆ. ಇಂಥ ಸುಸಮಯವನ್ನು ಎಂದಿಗೂ ಕಳಕೊಳ್ಳಬಾರದು.

ಆಫೀಸು—
ಟೆಂಪಲ್ ಸೈಡ್,
ಮಡಿಕೇರಿ. (26—24)

ಬಿ. ಎಸ್. ಐಯ್ಯಪ್ಪ,
ಕೊಡಗು ಚೀಫ್ ಏಜೆಂಟ್.

ಎಂ. ಎಸ್. ಶಿದ್ಧಪ್ಪ ಅಂಡ್ ಬ್ರದರ್ಸ್,

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.



1. ಉತ್ತಮ ತರಹ ಒಂದು ಸೆಟ್ ಜರ್ಮನ್ ರೀಡ್ಸ್ ಹಾಕಿರುವ ಸಿಂಗಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 20—0—0
   „ ಮತ್ತು 22—8—0
2. ಡಿಟೋ ಉತ್ತಮ ತರಹ ಹಾರ್ಮೋನಿಯಂ „ 1ಕ್ಕೆ ರೂ. 25—0—0
   ಮತ್ತು 27—8—0
3. ಡಿಟೋ ಉತ್ತಮ ತರಹದ್ದು, ದೂಳು ಬೀಳದಂತೆ ಕೇಸಿನ ಮೇಲೆ ಪೂರ್ತಿ ಮುಚ್ಚಳವುಳ್ಳ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ ರೂ. 27—8—0
4. ಖಾತ್ರಿಯೂ, ಬಂದೋಬಸ್ತೂ, ಪುಷ್ಟಿಯುಳ್ಳದ್ದೂ, ಅನೇಕ ವರ್ಷಗಳ ವರೆಗೆ ಬಾಳಿಕೆ ಬರತಕ್ಕದ್ದು ಆಗ ತಾನೆ ಹೊಸದಾಗಿ ಸಪ್ಲೈ ಆಗಿರುವ ಫ್ರೆಂಚ್ ರೀಡ್ಸ್ ನಮೂನೆ ಇರುವ ನಮ್ಮ ಹೆಸರಿನ ರೀಡ್ಸ್ ಹಾಕಿರುವ "ಸಿದ್ಧವ್ಯಾನ್ ಫ್ಲೂಟ್" ಸಿಂಗಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 42—8—0
5. ಉತ್ತಮ ತರಹ 2 [illegible] ರೀಡ್ಸ್ ಹಾಕಿರ[illegible] ಕೇಸಿನ ಮೇಲೆ [illegible] ಸ್ಟಬ್ಬರ್ ರೀ[illegible] [illegible]ವುಳ್ಳ 1ಕ್ಕೆ ರೂ. 32—8—
6. ಉತ್ತಮ ತರ[illegible] ಪೇಕ್ ರೀಡ್ [illegible] ಕೈನಿಂದಾಗಲೀ [illegible] ಗಲೀ ಬಾ[illegible] ತಯಾ[illegible] [illegible]ಲಿನಿಂದಾ [illegible] ಪ್ರೇಮ—ಪಿತ[illegible] [illegible]ಲಿಸುವಂತೆ [illegible] "[illegible] ಫ್ಲೂಟ್" [illegible] ಹ್ಯಾಂಡ್ ರೆಗ[illegible] 1ಕ್ಕೆ ರೂ. 78—

ನಮ್ಮ ಟಿಂಬರ್ ಡಿಪೋನಲ್ಲಿ ಕಟ್ಟಡಗಳಿಗೂ, ಫರ್ನಿಚರ್ ತಯಾರಿಸಲೂ ಬೇಕಾದ ಎಲ್ಲಾ ನಮೂನೆ ನಾಟಗಳನ್ನು ಸುಲಭ ದರದಿಂದ ಬಿಕರಿಗಿಟ್ಟಿರುವುದಲ್ಲದೇ, ಗಿರಾಕಿಗಳು ಅಪೇಕ್ಷಿಸುವ ಸೈಜಿಗೆ ಕುಯಿಸಿಯೂ ರಿಯಾಯಿತಿಯಿಂದ ಸಪ್ಲೈ ಮಾಡುತ್ತೇವೆ. ಹೆಚ್ಚಿಗೆ ವಿಷಯಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಳಾಸ,
ಎಂ. ಎಸ್. ಶಿದ್ಧಪ್ಪ ಬ್ರದರ್ಸ್,
[illegible] ಹಾರ್ಮೋನಿಯಂ ಮತ್ತು ಔಷಧ [illegible]
ಹಾರ್ಡಿಂಜ್ ಸರ್ಕಲ್,
52—45

ಕೊಡಗು ಕೌನ್ಸಿಲ್.

(ಕಳೆದ ವಾರದಿಂದ ಮುಂದುವರಿದದ್ದು)

28. ಡಿಸ್ಟ್ರಿಕ್ಟ್ ಬೋರ್ಡ್ ರೋಡುಗಳ ನವೀಕರಣ ಬೇರೆ ನೀಡುವೆಯ ಸ್ಥಿತಿ ಚೆನ್ನಾಗಿಲ್ಲವೆಂಬುದನ್ನು ಸರ್ಕಾರಕ್ಕೆ ತಿಳಿಸಲು ತಂದ ಠರಾವಿನ ಮೇಲೆ ಮೆ. ಬಿ. ಎ. ಬೆಳ್ಯಪ್ಪನವರು ಡಿಸ್ಟ್ರಿಕ್ಟ್ ಬೋರ್ಡು ರೋಡುಗಳಿಗೆ ಸಂಬಂಧಪಡುವ ... ಸರಿಯಾಗಿ ಖರ್ಚಾಗುತ್ತಿಲ್ಲವೆಂತಲೂ, ವೇಸ್ಟ್ ಬೋರ್ಡ ಸರಿಯಾಗಿ ಖರ್ಚಾದೀತೆಂತಲೂ, ಬೆಳ್ಯಪ್ಪನವರು ನೀಡುವೆಯನ್ನು ಒಂದಾವರ್ತಿ ಕಟ್ಟಿದ್ದು ತೋಟ ... ರು ಹೋಯಿತೆಂತಲೂ ಈ ನೀಡುವೆಯಿಂದ ರೈತರಿಗೆ ಬಹಳ ಪ್ರಯೋಜನವಿದೆಯೆಂತಲೂ ವಾದಿಸಿದರು.

ಕಮಿಶನರು ತಾನು ಈ ನೀಡುವೆಯನ್ನು ನೋಡಿರುವೆನಾಗಿಯೂ, ಅದರಿಂದ ಜನರಿಗೆ ಪ್ರಯೋಜನವಿರುವುದು ನಿಜವೆಂತಲೂ, ಆದರೆ ಇದಕ್ಕಿಂತ ಅಪಾಯದಲ್ಲಿರುವ ಬೇರೆ ರಸ್ತೆಗಳವೆಯೆಂತಲೂ, ಪಿ. ಪಿ. ಯಲ್ಲಿ ಈ ವಿಷಯ ಶೀಘ್ರ ವಿಚಾರಕ್ಕೆ ಬರಲಿದೆಯೆಂತಲೂ ತಿಳಿಸಿದರು.

ಠರಾವು ವಾಪಸು ತೆಗೆದುಕೊಳ್ಳಲಾಯಿತು.

ಕೊಡಗಿನ ರಸ್ತೆಗಳ ಸ್ಥಿತಿಯನ್ನೂ, ಭಾಗಮಂಡ್ಲ ರಸ್ತೆಯ ... ನೇ ಮೈಲು ಬಳಿ ನೀಡುವೆ ರಿಪೇರಿಯ ಅವಶ್ಯಕತೆಯನ್ನೂ ಕುರಿತು ಚರ್ಚಿಸಲು ಒಂದು ಠರಾವನ್ನು ರಾ. ಸಾ. ಬಿ ... ತಂದರು. ರಸ್ತೆಗಳಿಗೆ ಹಣ ಕಡಿಮೆ ಮಾಡಿದ್ದು ಯುಕ್ತವಲ್ಲವೆಂತಲೂ, ಭಾಗಮಂಡ್ಲದ ರಸ್ತೆ, ನೀಡುವೆ ಮತ್ತು ಹಳೆ ನೀಡುವೆಯ ರಿಪೇರಿಯ ಕುರಿತು ವಿವರಿಸಿದರು.

ಕಮಿಶನರು ಸಹಾನುಭೂತಿ ಸೂಚಿಸಿದ ನಂತರ ಠರಾವು ವಾಪಸು ತೆಗೆದುಕೊಳ್ಳಲಾಯಿತು.

30. ಫ್ರೇಜರ್‌ಪೇಟೆ, ಸಿದ್ದಾಪುರ ರಸ್ತೆಯ ಸ್ಥಿತಿಯ ಕುರಿತು ಮೆ. ಪಿ. ಎ. ಚಂಗಪ್ಪನವರು ತಂದ ಠರಾವಿನ ಮೇಲೆ ಆ ರಸ್ತೆಯ ಸ್ಥಿತಿಯು ಬಹಳ ಕೆಟ್ಟಿದೆಯಾಗಿಯೂ, 6 ವರ್ಷಗಳಿಂದ ಇದಕ್ಕೆ ವಿನಾ ಖರ್ಚು ಮಾಡುತ್ತಿಲ್ಲವಾಗಿಯೂ ಹೇಳಿದರು.

ರಸ್ತೆ ತಕ್ಕಷ್ಟು ಚೆನ್ನಾಗಿದೆಯಾಗಿಯೂ, ಹೆಚ್ಚಿನ ಖರ್ಚು ಮಾಡಲಾಗುವುದಿಲ್ಲವಾಗಿಯೂ ಕಮಿಶನರು ಹೇಳಿದ ನಂತರ ಠರಾವು ವಾಪಸು ತೆಗೆದುಕೊಳ್ಳಲಾಯಿತು.

31. ಡಿ. ಪಿ. ಡಬ್ಲ್ಯು. ಇಲಾಖೆಯಲ್ಲಿ ಮೇಲಿನ ಸಿಬ್ಬಂದಿಯನ್ನು ಕಡಿಮೆ ಮಾಡಬೇಕೆಂಬುದಕ್ಕೆ ಮೆ. ಪಿ. ನಾಣೈಯ್ಯನವರು ತಂದ ಠರಾವಿನ ಮೇಲೆ ಸ್ವಲ್ಪ ವಿವಾದದ ನಂತರ ವಾಪಸು ತೆಗೆದುಕೊಂಡರು.

32. ಎಕ್ಸ್ ಎಕ್ಸಿಕ್ಯೂಟಿವ್ ಉದ್ಯೋಗಸ್ಥರು ತಮ್ಮ ಸ್ವಂತ ವಾಹನಗಳನ್ನೇ ಇಟ್ಟುಕೊಳ್ಳಬೇಕೆಂಬ ಠರಾವನ್ನು ಮೆ. ಎ. ಪಿ. ಚಂಗಪ್ಪನವರು ವಾಪಸು ತೆಗೆದುಕೊಂಡರು.

33. ಟೆಂಪಲ್ ಫಂಡ್ಸ್ ಆಡಳಿತವನ್ನು ಚರ್ಚಿಸಲು ಮೆ. ಬಿ. ಎ. ಬೆಳ್ಯಪ್ಪನವರು ತಂದ ಠರಾವಿನ ಮೇಲೆ ಅವರು ಹೇಳಿದ್ದೇನೆಂದರೆ—

ದೇವಸ್ಥಾನಗಳ ಆಡಳಿತದಲ್ಲಿ ಉದ್ಯೋಗಿಗಳಿಗೆ ... ಹೆಚ್ಚು ಅಧಿಕಾರ ಕೊಡಬೇಕು. ಅಧ್ಯಕ್ಷರೂ ಉದ್ಯೋಗಿಗಳಲ್ಲದವರಾಗಬೇಕು. ಈಗಿನ ಪ್ರೆಸಿಡೆಂಟರು ಸ್ವಲ್ಪ ಕಾಲದ ... ಪ್ರೆಸಿಡೆಂಟರಾಗಿರುತ್ತೇನೆಂತ ಹೇಳಿದ್ದರೂ ಇನ್ನೂ ... ಅವರಿಗೆ ತುಂಬಾ ಬೇರೆ ಕೆಲಸಗಳು ಇರುವುದರಿಂದ ಹೆಚ್ಚಿಗೆ ಸಿಗದಿಂದ ಕೆಲಸ ಮಾಡಲು ... ಅನೇಕ ದೇವಸ್ಥಾನಗಳು ಬಹಳ ಹೀನ ಸ್ಥಿತಿ ... ಇವುಗಳನ್ನು ತಿದ್ದುಪಡಿ ಮಾಡಿ ಉದ್ಯೋಗಿಗಳಲ್ಲದ ... ಒಬ್ಬರನ್ನು ಮಾಡಿಕೊಳ್ಳಬೇಕು.

... ರಾ. ಸಾ. ಬಿ. ತ್ರಿಮಪ್ಪಯ್ಯನವರೂ ಈ ... ಕೊಟ್ಟ ನಂತರ ಠರಾವನ್ನು ವಾಪಸು ತೆ...

... ಗಳನ್ನು ಕಡ್ಡಾಯವಾಗಿ ಅಧಿ... ರೂ, ತಿಳಿಸದಿದ್ದರೆ ಮೇಜಿಸ್ಟ್ರೇ... ಮಾಡಬಹುದೆಂದೂ ... ಮಂಜೂರಾಯಿತು. ... ಸುಂಕವನ್ನು ತೆಗೆದು ... ಮಸೂದೆ ಮಾನನೀ... ದಿಂದ ಮಂಜೂರಾಯಿ... ದೇಶೀಯ ಬಸ್ಸು ಮ... ಗಳಿಲ್ಲಾ ಪರದೇಶೀಯರ ... ದಿಂದ ಮೆ. ಬಿ. ಎ... ... ನಾಣೈಯ್ಯನವರೂ ಮಸೂದೆ ಮಾನನೀ...

ಪತ್ರವ್ಯವಹಾರ.

ಬರುವ ಅಭಿಪ್ರಾಯಗಳಿಗೆ ಪತ್ರಿಕಾ ಸಂ.]

ರೈತರಿಗೆ ಗೋಳಾಟ.

... ಮೋಸ್ ಸುರುವಾದ ರಾಗಾ ... ಬೇಕಾದ ಕಷ್ಟ ನಷ್ಟಗಳು ...

...ಲ್ಲಿರುವಲ್ಲ. ಎಷ್ಟೋ ಮೈಲು ದೂರದಿಂದ ಕಚ್ಚೇರಿಗೆ ಬಂದ ... ಹೋಟ್ಲೇ ಯಲ್ಲಿ ನೋಡುವಾಗ್ಗೆ ... ರಾಯರುಗಳು ಸುಮ್ಮನೆ ಕೂತುಕೊಂಡು, ... ನೋಡಿಕೊಂಡು, ಒಂದೊಂದು ಕಥೆಗಳನ್ನು ಪಟ್ಟಾಂಗ ಹೊಡೆಯುವ ಮತ್ತು ನೋವೆಲ್ಸ್ ಓದಿಕೊಂಡು ... ದಿನಕ್ಕೆ ರಡು ಕಾಲ ಕಳೆಯುವದು.... ಮತ್ತೊಬ್ಬನ ಜೊತೆಯಲ್ಲಿ ಬೆರೆಯಲ್ಲಿ ಕೂತುಕೊಂಡು, ... ದಾರಿನೋಡುತ್ತಾ ಕಾಲ ಕಳೆಯುವದು .... ಬಂದು ... ಸೆಕ್ಷನ್ ಕಚ್ಚೇರಿಯ ... ಕೂತುಕೊಂಡು ಬಿಸ್ಸನ ... (Clock) ನೋಡುತ್ತಕೊಂಡು ... ಗುಮಾಸ್ತರ ಸಂಗಡ ... ನನ್ನ ಅರ್ಜಿನ್ ಮಾತ ನನ್ನನ್ನ ಬಿಟ್ಟು ಬಿಡಿ, ಎಂದು ಕೇಳಿದರೆ ವಾಸದ ಗುಮಾಸ್ತನಿಗೆ ನನ್ನಿಂದ ಸಾಧ್ಯವಿಲ್ಲ, ಅದಕ್ಕೆ ಆಡ್ಲರಾ ಕೊಡಲಿಲ್ಲ, ... ಕೊಡಲೇ ಬಿಡುತ ... ನ್ನ ವಿಷಯಿದಲ್ಲೊಂದು.

ರೈತರ ಮನೆಯ ತಿಂದು, ರೈತರ ಅನುಕೂಲತೆಗಳನ್ನು ನೋಡದ ಜವಾಬ್ದಾರಿಕೆ ಇರುವ ದೊಡ್ಡ ದೊಡ್ಡ ಜಬ್ಬರು ಇಂಥಾ ಕಷ್ಟಗಳನ್ನು ಕೊಡುತ್ತಿದ್ದಾರೆ ಕೇಳುವವರೇ ಇಲ್ಲ. ಮತ್ತು ರೈತರ ಕಷ್ಟನಷ್ಟಗಳಲ್ಲಿ ಗಮನ ಕೊಡುವವರಿಗೆ ಯಾವ ವ್ಯಸನವೂ ಇಲ್ಲವೆಂದರಲ್ಲಿ ಏನು ಸಂದೇಹವಿಲ್ಲ ... ಸಕೀಲರೋ ಹಾಗೆ ... ಜಬ್ಬಿಗೆ ... ಬಂದರೆ ಕೆಲಸವೇ ಕೆಟ್ಟು ಹೋಗುತ್ತದೆ. ಕಚ್ಚೇರಿಗೆ ನಮ್ಮ ವ್ಯಾಪಾರಕ್ಕೆ ನಾವೇನು ಮಾಡುವುದು? ಕಾಲವೆಲ್ಲಾ ಕೆಟ್ಟು ಹೋಯಿತು. ... ಕಚ್ಚೇರಿಯ ಗಾರರು ಕಷ್ಟವನ್ನಿ ... ? ... ಕೃತ್ಯವಿದೆ.

ಇಂಥಾ ... ಕಚ್ಚೇರಿಗೆ ... ಅರ್ಜಿನ್ ... ರೈತರಿಗೆ ಈ ಬಂದದ ಕಷ್ಟ ನಷ್ಟಗಳು ... ಇನ್ನು ಮುಂದಾದರೂ ... ಅಧಿಕಾರಿಗಳು ಬಿಕ್ಕಿ ... ಒಂದನೆಟ್ಟ ಅಧಿಕಾರಿಗಳು ಬಿಕ್ಕಿ ... ಕನಿಷ್ಟ ಕಾಲದಲ್ಲಿ ಬಡ ರೈತರನ್ನು ಇಂಥಾ ... ಳಗೆ ಗುರಿಮಾಡದಂತೆ ಕಷ್ಟ ... ಬೇಕೆ?

'ಬಡ ರೈತ'

ಹೆಚ್ಚಿನ ನ್ಯಾಯ ಮತ್ತು ಕಡಿಮೆ ಮಾಡುತ್ತಿರುವ ತೆರಿಗೆಗಳು.

ಕೊಡಗಿನ ಸರ್ಕಾರದ ಉತ್ಪತ್ತಿ ಕಡಿಮೆಯಾಗುತ್ತಾ ಬರುವ ... ಹೆಚ್ಚುತ್ತಾ ಬರುತ್ತಿರುವುದರಿಂದ ಸರ್ಕಾರದ ಜವಾಬ್ದಾರಿ ... ಸ್ವಲ್ಪ ಕಡಿಮೆ ಮಾಡಿ ತೆರಿಗೆಗಳನ್ನು ಅನೇಕ ಬಾಬುಗಳಲ್ಲಿ ಹೆಚ್ಚಿಸಿರುವರು. ಇನ್ನು ಹೆಚ್ಚಿಸುವ ವಿಚಾರದಲ್ಲಿ ... ಕೌನ್ಸಿಲಿನ ಬಜೆಟ್ ಚರ್ಚೆ ... ತಿಳಿಯುತ್ತೇವೆ. ... ಆದರೆ ಜನರ ಮೇಲೆ ತೆರಿಗೆ ಹೆಚ್ಚಿಸುತ್ತಿರುವುದನ್ನು ... ಮಿತಿ ... ಮಾಡಿಸುವಂತೆ ತಿಳಿದು ಬಂದಿಲ್ಲ. ... ಆಫೀಸರುಗಳ ಬೆನ್ನು ಹತ್ತಿ, ಅವರನ್ನು ... ಅನೇಕ ... ಇದ್ದವು. ಇಂಥಾ ಆಫೀಸರುಗಳು, ಅವರ ಅಧಿಕಾರ ಚಲಾಯಿಸುವುದರಲ್ಲಿ ತಕ್ಕವರಿಗೆ ... ಗುಂಡ್ಯದಂಥಾ ಚರ್ಯೆಗಳನ್ನು ... ಇದ್ದರೆ ... ಏನುವುದನ್ನು ನಾವು ಇಲ್ಲಿ ವಾದಿಸುವದು ನಮ್ಮ ಉದ್ದೇಶವಲ್ಲ. ಆದರೆ ಜನರಿಗೆ ತುಂಬಾ ತೊಂದರೆ ಕೊಡುವ ಈಗಿನ ... ಸ್ಥಿತಿಯಲ್ಲಿ ಜನರ ಮೇಲೆ ಅಲ್ಪ ಸ್ವಲ್ಪವಾದಂತೆ ಹೊಸ ತೆರಿಗೆ ಹಾಕಿದ್ದು ಜನರ ಮನಸನ್ನು ಕಳವಳಗೊಳಿಸಿರುವಾಗ ಹೊಸ ತೆರಿಗೆಗಳನ್ನು ಹೊಂದಿಸಿ ಮೂಡಿಸಿದ್ದು ತುಂಬಾ ವಿಷಾದಕರ.

ಸಹಕಾರಿ ಸಂಘಗಳಿಗೆ ಬಾಡಿಗೆಗಳ ಮತ್ತು ರಿಜಿಸ್ಟ್ರೇಶನ್ ಫೀಸಿನ ಬಾಬುಗಳಲ್ಲಿ ಸಹಕಾರ ಸಂಘಗಳು ಹುಟ್ಟಿದಂದಿನಿಂದ ಪೂರ್ತಿ ಮಾಫಿ ಬಿಟ್ಟಿದ್ದರೂ ಈ ರಿಯಾಯಿತಿಗಳನ್ನು ತೆಗೆದುಹಾಕಿ ಅರ್ಧದಷ್ಟಾದರೂ ಕೊಡಬೇಕಂತ ಮಾ... ದಿದ್ದು ಜನರಿಗೆ ಎಷ್ಟೊಂದು ನೋವು ಉಂಟು ಮಾಡಿದೆ! ಆ ದರೂ ಈ ಬಾಬಿನಲ್ಲಿ ಬಂದ ನಷ್ಟವು ಇಲ್ಲ. ಇದನ್ನು ... ಎಂದರೆ ... ರಿಜಿಸ್ಟ್ರೇಶನ್ ಡಿಪಾರ್ಟ್‌ಮೆಂಟು ... ಸರ್ಕಾರಕ್ಕೆ ಹೊರೆಯಾಗಿದೆಯೇ? ಜನರಿಗೆ ಈ ಬಾಬುಗಳ ... ಲಾಭ ... ನೀಡುವ ನಿಜವಾಗಿ ... ದ್ದರೆ ... ಠರಾವು ಬರುತ್ತಿಲ್ಲವೇ? ... ಫ್ ಕಮಿಶನರು ಹೇಳಬಹುದು.

ಆರ್ಥಿಕ ಸಂಕಟ ಒದಗಿರುವುದು ಸರ್ಕಾರಕ್ಕೆ ಮಾತ್ರವಲ್ಲ, ಜನರೂ ಅತ್ಯಂತ ಕಷ್ಟದಲ್ಲಿದ್ದಾರೆಂತ ಕೌನ್ಸಿಲರುಗಳೇ ... ಹೇಳುತ್ತಿದ್ದರು. ಹಾಗಿದ್ದರೆ ... ವರ್ಷದ ಹಿಂದೆ ನಾಲ್ಕು ಪಟ್ಟು ... ಮೇಲೆ ಪುನಃ ಹೆಚ್ಚಿನ ಸಲ್ಲಿಂದ ... ಮತ್ತು ರಿಜಿಸ್ಟ್ರೇಷನ್ ಫೀಸಿನ ರಿಯಾಯಿತಿಗಳನ್ನು ತೆಗೆದು ... ಕಿದ್ದರಲ್ಲಿ ಏನು ನ್ಯಾಯವಿದೆ? ... ಆಫೀಸರುಗಳನ್ನು ... ಕೊಡಗಿಗೆ ಕೌನ್ಸಿಲ್ ... ಅಂಥಾ ಆಫೀಸರುಗಳ ... ಕೌನ್ಸಿಲರುಗಳಿಗೆ ... ಲೆಕ್ಕ ಸಹ ಹಣವಿಲ್ಲದ ಸಾವಿರಾರು ಬಡ ರೈತರ ಗೋಳನ್ನು ಇವರ ದೃಷ್ಟಿಗೆ ಗೋಚರವಾಗಿಲ್ಲ.

ಮ್ಯೂಟೇಶನ್ ಫೀಸ್ ಹೆಚ್ಚಿಸುವ ಠರಾವ್ ಕಳಿಸಲೇ ಬಾರಿಗೆ ಬರುತ್ತದೆ. ಮತ್ತು ಕೊಂಡುಕೊಂಡವರು ಬಾರಿಗೆ ... ಪಡೆದುಕೊಳ್ಳುವಾಗ ರಿಜಿಸ್ಟ್ರೇಶನ್ ಫೀಸಿಗೂ ಈಗಾಗಲೇ ಹೆಚ್ಚಿನ ತೆರಿಗೆ ಕೊಡುತ್ತಿರುವಾಗ ಬಿಸೂದಾ ... ಗಿರುವುದರಿಂದ ಪುನಃ ಎರಡು ಸಾವಿರ ... ತೆರಬೇಕೆಂತ ಕೇಳುವುದರಲ್ಲಿ ನ್ಯಾಯವೇನಿದೆ?

ಇನ್ನು ... ಬಾಬಿನ ತೆರಿಗೆಯು ಬಿದ್ದಿದೆ ಮಾ... ದೇಯಿತ್ತವೆಂತ ತಿಳಿ ಮತ್ತು ... ಬಂದಾಕೆ ... ದ ಮಸ್ತು.

ಕೌನ್ಸಿಲಿನಲ್ಲಿ ಚರ್ಚೆಗೆ ಬಂದ ವೃತ್ತಾಂತದಿಂದ ಹೊಸ ತೆರಿಗೆಗಳನ್ನು ರೈತರ ಬಾರಿಕ ... ನಿಸಿಕೊಳ್ಳುತ್ತಿದ್ದಂತೆ ಸರ್ಕಾರವು ತಿಳಿ ... ರೈತರ ಕಷ್ಟವನ್ನು ಸರ್ಕಾರವು ಆಫೀಸರುಗಳ ಮೂಲಕ ಗುಟ್ಟಾಗಿ ತಿಳಿದುಕೊಂಡು, ರೈತರಿಗೆ ನ್ಯಾಯವಾದ ಆರ್ಥಿಕ ಸಹಾಯ ಕೊಡುವುದು ಸರ್ಕಾರದ ಕರ್ತವ್ಯವಾಗಿದೆ. 'ಓಟರು'

ಸ್ತ್ರೀ ಪುರುಷರ ಪ್ರೀತಿಯ ಮರ್ಮಗಳನ್ನು ಚಿತ್ರ ಪಟಗಳ ಸಹಿತ ಇದ್ದದ್ದನ್ನು ಇದ್ದ ಹಾಗೆ ತಿಳಿಸುವ
ಸ್ತ್ರೀ ದಾಂಪತ್ಯ ರಹಸ್ಯವೆಂಬ
ಮರ್ಮ ಶಾಸ್ತ್ರ.

ಈ ಪುಸ್ತಕವು ಫ್ರೆಂಚ್, ಹಿಂದೂಸ್ತಾನಿ ಭಾಷೆಗಳಲ್ಲಿ ಬಹುಕಾಲದಿಂದ ಗುಪ್ತವಾಗಿತ್ತು. ಈಗ ನಾವು ಎಲ್ಲರಿಗೂ ವಿವರವಾಗಿ ತಿಳಿಯುವಂತೆ ಸುಲಭ ಶೈಲಿಯ ಕನ್ನಡ ಭಾಷೆಯಲ್ಲಿ ಭಾಷಾಂತರಿಸಿ ಫೋಟೋಗಳ ಸಹಿತ ಅಂದವಾಗಿ ಮುದ್ರಿಸುತ್ತೇವೆ. ಈ ಪುಸ್ತಕದಲ್ಲಿ ಸ್ತ್ರೀ ಪುರುಷರಿಗೆ ಬೇಕಾದ ಎಲ್ಲ ಮರ್ಮರಹಸ್ಯಗಳು, ಪುರುಷರು ಸ್ತ್ರೀಯರಲ್ಲಿ ನಡೆಸಬೇಕಾದ ಬಗೆ ಸ್ತ್ರೀಪುರುಷರ ಚಿ... ಲಕ್ಷಣಗಳು, ಸ್ತ್ರೀಯರಿಗೆ ಬೇಕಾದ ಅನೇಕ ಗುಪ್ತ ... ಯುಗಳು, ಸಂಭೋಗದ ರೀತಿ, ಗರ್ಭ ಧರಿಸುವುದು, ಗರ್ಭ ... ತಡೆಗಟ್ಟುವುದು, ಸಂಧಿಸುವುದರಿಂದಾಗುವ ಸಂತೋಷ, ... ಸ್ವರಭೇದಗಳ ... ಸ್ತ್ರೀಯರು ಗರ್ಭಿಣಿಯಾಗಿ ಬೇಕಾದ ಅನೇಕ ಮರ್ಮ ... ಗಳು, ಉತ್ಪತ್ತಿ ... ಗುಪ್ತ ವ್ಯಾಧಿಗಳ ಚಿಕಿತ್ಸೆ, ... ಗೃಹಸ್ಥರಿಗೆ ... ಸರ್ವರಿಗೂ ... ಚಿಕಿತ್ಸೆ, ಇನ್ನೂ ಸ್ತ್ರೀಪುರುಷರುಗಳಿಗೆ ಬೇಕಾದ ರಹಸ್ಯ... ಚಿತ್ರಗಳ ಸಹಿತ ಪ್ರಕಟವಾಗಿದೆ.

ಕ್ರಯ: ಪುಸ್ತಕ ... ಅಂಚೆ ಖರ್ಚು ...

The Legal Trading Co.,
P. B. 243 Madra[s]

12—2

Empire of India Life Assurance Co.mpany, Ltd

Established 1897.

The New "FAMILY SECURITY" Policy issued by this Company provides—

A. In the event of death during an agreed period,

1. The immediate payment to the Widow, Son or legal representative of a part of the sum Assured together with the Bonus accrued.

2. The payment of a guaranteed Yearly Income, payable by monthly instalments, during the balance of the period.

3. The payment of the balance of the sum of assured at the end of the period.

OR

B. In the event of death after the period has expired the payment of the sum assured together with any Bonus that has accrued.

Descriptive Pamphlet on application to—

Head Office:—
EMPIRE OF INDIA LIFE BUILDING,
Bombay.

Branch Office:—
152, COMMERCIAL STREET,
Bangalore.

52—27

ವರ್ತಮಾನ ಸಂಗ್ರಹ.

ಒಳದೇಶ.

ಮಡಿಕೇರಿ ಹೈಸ್ಕೂಲ್ ಈ ತಾ. 8ರಿಂದ ಮುಚ್ಚಲ್ಪಡುವೆ.

ಕೊಡಗಿನ ಸಿವಿಲ್ ಕೋರ್ಟುಗಳು ಈ ತಾ. 15ರಿಂದ 6 ವಾರಗಳ ವರೆಗೆ ಮುಚ್ಚಲ್ಪಡುವವೆಂದು ವರ್ತಮಾನವಿದೆ.

ಆಯುರ್ವೇದಿಕ್ ಡಾಕ್ಟರಾದ ಮೋಹಿನೀಬಾಯಿ ಜಂಗಮ್ಮನವರಿಗೆ 75—5—175ರ ಗ್ರೇಡಿನಲ್ಲಿ ಸಂಬಳವು ಮಂಜೂರಾಗಿದೆ.

ಈ ವಾರ ಮಡಿಕೇರಿಯಲ್ಲಿ ಸ್ವಲ್ಪ ಮಳೆಯಾಗಿದೆ. ಪೊನ್ನಂಪೇಟೆ, ಸುಂಟಿಕೊಪ್ಪ ಕಡೆಯೂ ತಕ್ಕ ಮಟ್ಟಿಗೆ ಮಳೆಯಾಗಿರುವುದಾಗಿ ವರ್ತಮಾನವಿದೆ.

ಕಣ್ಣಾನೂರು ಜೈಲಿನಿಂದ ಶ್ರೀ. ಪಂದ್ಯಂಡ ಬೆಳ್ಯಪ್ಪ ಮತ್ತು ಇನ್ನು ಕೆಲವರನ್ನೂ ಕಡಲೂರು ಜೈಲಿಗೆ ವರ್ಗಾಯಿಸಿದ್ದಾರೆಂತ ವರ್ತಮಾನವಿದೆ.

ಹಾಲುಗುಂದ ಗ್ರಾಮದ ಮೋಕೇರಿರ ಬೋಪಯ್ಯನವರ ಪೈತಾ[illegible] ಕಗ್ಗಲಿಗೂ ಮಧ್ಯ ಇರುವ ತಕ್ಕಟ್ಟು ಕಡು[illegible] ಕಾವೇರಿ ಹೊಳೆಯಲ್ಲಿ ಮುಣುಗಿ ಮೃತರಾದರು.

ಶ್ರೀಮಂಗಲನಾಡು ಬಿರುನಾಣಿ ಗ್ರಾಮದ ಜಂಗಮ[illegible] ಬೆಳ್ಯಪ್ಪನವರು ತಾ 17ರಲ್ಲಿ ಗುಂಡು ಹೊಡೆದುಕೊಂಡು ಆತ್ಮ ಹತ್ಯೆ ಮಾಡಿಕೊಂಡಿರುವುದಾಗಿ ವರ್ತಮಾನವಿದೆ.

ಕೊಡಗಿನ ಸಿವಿಲ್ ಸರ್ಜನರಾಗಿದ್ದ ಮೇಜರ್ ಥಾರ್ನ್‌ಹಿಲ್‌ರವರು ಕಳೆದ ತಾ 25ರಲ್ಲಿ ಕೊಡಗಿನಿಂದ ಹೊರಟು ಹೋದರು. ಇವರ ಇಲಾಖೆ ಸಿದ್ದರು. ಇವರನ್ನು ತಾ 24 ರಲ್ಲಿ ಸತ್ಕರಿಸಿದರು.

ಕಳೆದ ಮಾರ್ಚ್ ತಾ. 27ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕೊಡಗಿನ ವಿದ್ಯಾರ್ಥಿಗಳ ಸಂಘದ ವಾರ್ಷಿಕ ಕಾರ್ಯಸಭೆ ಸೋಮವಾರಪೇಟೆ ಗ್ರಾಮದ ಮೇ. ಮಡಿಕೇರಿ ಬೆಳ್ಯಪ್ಪಗೌಡರವರ ಮನೆಯಲ್ಲಿ ಮೇ. ಕೋಟೆರ ಪಿ. ಚಿಣ್ಣಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತೆಂದು ತಿಳಿಯುತ್ತೇವೆ.

ಕೊಡಗು ಪ್ಲಾಂಟರುಗಳ ಸಹಕಾರಿ ಸಂಘದ ಮಹಾಸಭೆಯು ಈ ತಾ. 30ರಲ್ಲಿ ಸಂಘದ ಆಫೀಸಿನಲ್ಲಿ ನಡೆಯುತ್ತದೆ. ಅದೂ, ಚರ್ಚಿಸತಕ್ಕ ವಿಷಯಗಳೂ ಮತ್ತು ಬೈಲಾ ತಿದ್ದುಪಡಿಗಳೇನಾದರೂ ಇದ್ದರೆ ಈ ತಾ. 10ರೊಳಗೆ ಸಂಘದ ಆಫೀಸಿಗೆ ತಲುಪಿಸಬೇಕೆಂದೂ ಸೆಕ್ರೆಟರಿಯವರು ತಿಳಿಸುತ್ತಾರೆ.

ಕಣ್ಣಾನೂರು ಜೈಲಿನಲ್ಲಿ ಏನೋ ಕಾರಣದಿಂದ ಖೈದಿಗಳ ಮೇಲೆ ವಾರ್ಡರುಗಳು ಲಾಠಿ ಚಾರ್ಜು ಮಾಡಿದ್ದಾರೆಂತ ವರ್ತಮಾನವಿತ್ತು. ಈ ದೊಣ್ಣೆ ಹೊಡೆತದಲ್ಲಿ ಕೊಡಗಿನ ಸತ್ಯಾಗ್ರಹಿಗಳ ಪೈಕಿ ಒಬ್ಬರಿಗೆ ಬಲವಾದ ಪೆಟ್ಟು ಬಿದ್ದಿವೆಯೆಂತ ಸ್ವರಾಜ್ಯ ಪತ್ರಿಕೆಯಲ್ಲಿ ಪ್ರಕಟವಾಗಿದೆ.

ವೀರಾಜಪೇಟೆಗೆ ಸಮೀಪವಾದ ಮಗ್ಗುಲ ಗ್ರಾಮದ ಮೇಕಂಡ ಪಮ್ಮಯ್ಯನವರನ್ನು ಅವರ ಮನೆ ಬೋಪಯ್ಯನವರು ಕಳೆದ ಜನವರಿ ತಾ. 18ರಲ್ಲಿ ಗುಂಡು ಹೊಡೆದು ಕೊಂದ ಆಪಾದನೆಗೆ ಸದರಿ ಬೋಪಯ್ಯನವರ ಮೇಲೆ ಸೆಶನ್ಸ್ ಕೋರ್ಟಿನಲ್ಲಿ ಕಳೆದ ತಾ. 30, 31 ರಲ್ಲಿ ವಿಚಾರ ನಡೆದಿದೆ.

ಕ್ರಿಕೆಟ್ ಟೂರ್ನಮೆಂಟು ಪ್ರಾರಂಭವಾಗಿ ಕೈಸ್ಕೂಲ್ ಟೀಮನ್ನು ವಿಕ್ಟೋರಿಯಾ ಟೀಮೂ. ಟೆಂಟೋರಿಯಲ್ ಟೀಮನ್ನು ಜವಾಹರ ಟೀಮೂ, ವಿಕ್ಟೋರಿಯಾ ಟೀಮನ್ನು ಟೀಚರ್ಸ್ ಟೀಮೂ ಸೋಲಿಸಿವೆ. ಇದರ ಕಡೇ ಆಟವು ತಾ 4 ಮತ್ತು 5ರಲ್ಲು ಟೀಚರ್ಸ್ ಟೀಮಿನವರಿಗೂ ಮತ್ತು ಜವಾಹರ ಟೀಮಿನವರಿಗೂ ನಡೆಯುವುದು.

ಸೆಂಟ್ರಲ್ ಸಹಕಾರಿ ಬ್ಯಾಂಕಿನ ಗೌರವ ಸೆಕ್ರೆಟರಿಯಾಗಿ ಮೇ. ಸಿ. ಎನ್. ವೆಂಕಪ್ಪಯ್ಯ ಬಿ. ಎ. ಬಿ. ಎಲ್. ರವರನ್ನು ಮತ್ತು ಮೇ. ಮಾನೆಯಪಂಡ ಬೆಳ್ಯಪ್ಪನವರನ್ನು ಟ್ರೆಜರರ (ಖಜಾಂಚಿ) ಯನ್ನಾಗಿಯೂ ತಾ. 26—3—32ರಲ್ಲಿ ನಡೆದ ಡೈರೆಕ್ಟರುಗಳ ಮೀಟಿಂಗಿನಲ್ಲಿ ಚುನಾಯಿಸಲಾಗಿದೆ [illegible] ರ ಪವಡವು ಇನ್ನೊಂದು ಕಡೆ ಪ್ರಕಟಿಸಿದೆ.

ಹಿಂದೂದೇಶ.

ಹಿಂದೂಸ್ಥಾನದ ಎಲ್ಲಾ ಪ್ರಾಂತ್ಯಗಳಲ್ಲೂ [illegible] ಗವು ಆಗುತ್ತಲೇ ಇದೆ.

ಸಿಂಗಪೂರಕ್ಕೆ ಸಿ. ಪಿ. ರೇಯವರು ಒಂದು ಸ್ವದೇಶಿ ಕುರಿತು ಕೆಲವು ಉಪನ್ಯಾಸಗಳನ್ನು ಮಾಡಿದರು.

ಝುಂಡಾಭಿವಂದನೆಯ ಸಂಬಂಧವಾಗಿ ತಾ. 27 ರಲ್ಲಿ ಮುಂಬಾಯಿಪಟ್ಟಣದಲ್ಲಿ 102 ದಸ್ತಗಿರಿಗಳಾಗಿವೆ.

ತಮಿಳು, ತೆಲುಗು ಪ್ರಾಂತ್ಯದ ಅನೇಕ ಕಡೆಗಳಲ್ಲಿ ಶಾಸನ ಭಂಗಕ್ಕಾಗಿ ಜನರು ದಸ್ತಗಿರಿಯಾಗುತ್ತಲೇ ಇದ್ದಾರೆ.

ಕೊಚ್ಚಿನ್ ಮಹಾರಾಜರಾದ ಶ್ರೀರಾಮವರ್ಮರು 74 ವರ್ಷ ಪ್ರಾಯದಲ್ಲಿ ಮದ್ರಾಸಿನಲ್ಲಿ ತಾ. 25 ರಲ್ಲಿ ಮೃತರಾದರು.

ಉತ್ತರ ಕನ್ನಡ ಜಿಲ್ಲೆಯ ಶಿರಸಿ ಸಿದ್ದಾಪುರ ತಾಲೂಕಿನಲ್ಲಿ ಕೈದಿಗಳು ತಂದಿರಾಯ ಕೊಡದೆ ಇದ್ದದ್ದಕ್ಕೆ ಗುರಿಯಾಗಿದ್ದಾರೆ.

ತಿರುಪಂಕಾಲೂರು ಸಂಸ್ಥಾನದ ಹೊಲೆಯರ ಸಮ್ಮೇಳನ ನಡೆಯಿತು. ಅಲ್ಲಿನ ದಿವಾನರು ಈ ಸಮ್ಮೇಳನವ ತೆರೆದರು.

ಬಂಗಾಳದ ಹೊಸ ಗವರ್ನರು ಸರ್ ಜಾನ್ ಆಂಡರ್ಸನ್ ಎಂಬವರು ಕಲ್ಕತ್ತಾಕ್ಕೆ ತಲಪಿ ತಮ್ಮ ಕೆಲಸವನ್ನು ವಹಿಸಿಕೊಂಡಿರುತ್ತಾರೆ.

ಪಂಡಿತ ಜವಾಹರ್‌ಲಾಲರಿಗೆ ಜೈಲಿನಲ್ಲಿ ಜ್ವರಬರುತ್ತಿವೆಯೆಂತಲೂ, ಎದೆಯಲ್ಲಿ "ಪ್ಲೂರಸಿ" ಎಂಬ ಖಾಯಿಲೆಯಿಂದ ನೋವಿದೆಯೆಂತಲೂ ತಿಳಿದು ಬಂದಿದೆ.

ಕೌನ್ಸಿಲ್ ಆಫ್ ಸ್ಟೇಟ್ ಎಂಬ ಮಧ್ಯವರ್ತಿ ನ್ಯಾಯವಿಧಾಯಕ ಸಭೆಯ ಮೆಂಬರಾದ ಶ್ರೀ. ಕೆ. ವಿ ರಂಗಸ್ವಾಮಿಯ್ಯಂಗಾರರು ಡಿಲ್ಲಿಯಲ್ಲಿ ಮೃತರಾದರು.

ಗುಜರಾತಿನ ಬೋರ್‌ಸಾದ್ ತಾಲೋಕಿನಲ್ಲಿ ಕಂದಾಯ ಕೊಡದ್ದಕ್ಕಾಗಿ ಸರಕಾರವು ಜಪ್ತಿಮಾಡಿರುವ ಭೂಮಿಗಳನ್ನು ಕೊಂಡುಕೊಳ್ಳಲು ಬರುವ ಜನರಿದ್ದಾರೆ.

ಮಧ್ಯಪ್ರಾಂತ್ಯದಲ್ಲಿ ಬೆಳೆ ಬೆಳೆಯದೆ ಇರುವುದರಿಂದ ಹತ್ತು ಲಕ್ಷಕ್ಕಿಂತ ಹೆಚ್ಚು ಸರಕಾರಿ ಕಂದಾಯ ವಸೂಲಿ ಬಾಕಿಯಾಗಿದೆ ಇನ್ನು ಕೆಲವು ಲಕ್ಷ ಜನ ಯೋಚನೆ ಇದೆ.

ಫೆಬ್ರವರಿ ಅಖೈರ್ ವರೆಗೆ ಒಟ್ಟು ಹಿಂದೂಸ್ಥಾನದಲ್ಲಿ ಶಾಸನ ಭಂಗಕ್ಕಾಗಿ 1491 [illegible] ಸಜೆಯಾಗಿದೆಯೂ [illegible] ಆರ್ಡಿನೆನ್ಸ್ ಪ್ರಕಾರವಾಗಿ ಸರಕಾರ [illegible] ಬಂದಿದೆ.

ಸಂಯುಕ್ತ ಪ್ರಾಂತ್ಯದಲ್ಲಿ ರೈತರ ಬವಣೆಯ ಸ್ಥಿತಿಯು ತಿಳಿಯದ್ದರಿಂದ ರೈತರು ಬೆಳೆಸಿದ ಪೈರಿನಲ್ಲಿ ಮೂರರಲ್ಲಿ ಒಂದು ಭಾಗ ಸಹ [illegible] ಸರಕಾರವು [illegible].

[illegible] ಬನಾರಸಿನ ವಿ ಹಿಳಾ ಸಭಾ [illegible] ಹಿಡಿದ [illegible] ಮಾಡಿದ ಗಾಂಧಿಯವರು ತಾ. 24ರಲ್ಲಿ ತೆರೆದರು. ಹಿಂದೂಸ್ಥಾನದ ಮಹಿಳೆಯರ ಅಭ್ಯುದಯವನ್ನು ಹೇಗೆ ಮಾಡಿಕೊಳ್ಳಬೇಕೆಂಬುದರ ಕುರಿತು ಕನ್ನಡದಲ್ಲಿ ಅವರು ಒಂದು ಭಾಷಣ ಮಾಡಿದರು.

[illegible] ರಾಜ್ಯಸಭೆಯ ಲೆಜಿಸ್ಲೇಟಿವ್ ಅಸೆಂಬ್ಲಿಯಲ್ಲಿ ಸಂಸ್ಥಾನದಲ್ಲಿ [illegible] ಸುಧಾರಣೆಯನ್ನು ಹೇಗೆ ಎಷ್ಟರ ಮಟ್ಟಿಗೆ [illegible] ಕುರಿತು ಸಿಫಾರಸ್ಸು ಮಾಡಲು ಒಂದು ಕಮಿಟಿ ನೇಮಿಸಬೇಕೆಂತ ವಿ. ಸತ್ಯನಾರಾಯಣ [illegible] ಎಂಬ ಮೆಂಬರು ಚರ್ಚಿಸುತ್ತಾರೆ.

ತಿರುಪೂರಿನ ಖಾದಿ ಉತ್ಪನ್ನ ಮಾಡುವ ಸಂಘದವರು ಖಾದಿಯ ಕ್ರಯವನ್ನು ಬಹಳವಾಗಿ ಇಳಿಸಲಾಗಿದೆಯೆಂತಲೂ, ಹತ್ತಿಯ ಬೆಲೆ ಹೆಚ್ಚುತ್ತಿರುವುದರಿಂದ ಕಡಿಮೆ ಬೆಲೆ ಬಹಳ ದಿವಸ ಇರಲಾರದೆಂತಲೂ, ಎಲ್ಲರೂ ಕೂಡಲೇ ಖಾದಿ ಕೊಂಡುಕೊಳ್ಳಬೇಕೆಂತಲೂ ಕೇಳಿಕೊಳ್ಳುತ್ತಾರೆ.

ಮುಂಬಾಯಿ ಹತ್ತಿ ವ್ಯಾಪಾರಿಗಳು ಜನವರಿಯಲ್ಲಿ ತೀರ್ಮಾನ ಮಾಡಿಕೊಂಡ ಪ್ರಕಾರ ಯಾವ ವಿದೇಶಿ ಹತ್ತಿ ವ್ಯಾಪಾರ ಮಾಡಬಾರದೆಂತ ಪುನಃ ತೀರ್ಮಾನಿಸಿಕೊಂಡು ಕೃಷಿಕರ ಸಹಾಯಕ್ಕಾಗಿ ವಾರಕ್ಕೆ ಮೂರು ದಿನ ಹತ್ತಿ ವ್ಯಾಪಾರ ಮಾಡಬೇಕೆಂತ ತೀರ್ಮಾನಿಸಿಕೊಂಡಿರುತ್ತಾರೆ.

ಲೋಥಿಯನ್ ಕಮಿಟಿಯ ಮುಂದೆ ಅಭಿಪ್ರಾಯಕೊಡಬೇಕಾಗಿ ಪಂಡಿತ ಮದನಮೋಹನ ಮಾಳವೀಯರನ್ನು ಕೇಳಿಕೊಂಡದ್ದಕ್ಕೆ ಆರ್ಡಿನೆನ್ಸುಗಳನ್ನು ರದ್ದುಮಾಡಿ ರಾಜಕೀಯ ಖೈದಿಗಳನ್ನು ಜೈಲುಗಳಿಂದ ಬಿಡಗಡೆ ಮಾಡುವ ವಿನಹ ತಾನು ಸಹಕರಿಸುವುದಿಲ್ಲವಾಗಿ ಜವಾಬುಕೊಟ್ಟಿರುತ್ತಾರೆ.

ಮೌಲಾನಾ ಶೌಕತ್ತಾಲಿಯವರು ದುಂಡು ಮೇಜಿನ ಪರಿಷತ್ತಿನ ಕಮಿಟಿಗಳನ್ನು ಬಹಿಷ್ಕರಿಸಬೇಕೆಂತ ಮುಸ್ಲಿಮ್ ಕಾನ್ಫರೆನ್ಸಿನ [illegible] ತೀರ್ಮಾನಕ್ಕೆ ಒಪ್ಪಿಗೆ ಇಲ್ಲವೆಂತಲೂ ತಾನು ಇಸ್ಲಾಂ ಕುಲಕ್ಕಾಗಿ ಹಿಂದೂಸ್ಥಾನದ ಹಿತದ ಜೊತೆಗೆ ಹೋಗಬೇಕೆಂದಿದ್ದೇನೆಂತಲೂ ಹೇಳಿದ್ದಾರೆ.

ಕಲ್ಲಿಕೋಟೆ ಕೋಆಪರೇಟಿವ್ ಅರ್ಬನ್ ಬ್ಯಾಂಕಿನಲ್ಲಿ [illegible] ಮತ್ತು ವರ್ಷಗಳಿಂದ ಸುಮಾರು 34,000 ರೂಪಾಯಿ ಚಿಲ್ಲರೆ ನಷ್ಟವಾಗಿರುವುದಾಗಿ ತಿಳಿದುಬಂದಿದೆ. ಗೌರವ ಕಾರ್ಯದರ್ಶಿಯು ಪರಾರಿಯಾಗಿದ್ದಾನೆ. ಒಬ್ಬ ಗುಮಾಸ್ತನನ್ನು ದಸ್ತಗಿರಿ ಮಾಡಿದ್ದಾರೆ. ಆಡಿಟರುಗಳಿಗೆ ಸಹ ಸಿಕ್ಕದೆ ಈ ರೀತಿ ಹಣವನ್ನು ತಿಂದು ಹಾಕಿರುವುದೇ ಆಶ್ಚರ್ಯ.

ದೇಶೀರಾಜರುಗಳ ಕೂಟದಲ್ಲಿ ನೈಜಾಮರು ಮಾಡಿದ ಭಾಷಣದಲ್ಲಿ ದಬ್ಬಾಳಿಕೆಯನ್ನು ನಡೆಸಬೇಕೆಂತಲೇ ದಬ್ಬಾಳಿಕೆ ನಡೆಸುತ್ತಿರುವುದಿಲ್ಲ, ಹಿಂದೂಸ್ಥಾನದಲ್ಲಿ ಶೀಘ್ರದಲ್ಲೇ ಸ್ಥಾಪಿಸಲು ಯೋಚಿಸಿರುವ ರಾಜಕೀಯ ಸುಧಾರಣೆಗಳನ್ನು ಹಿಂದೂಸ್ಥಾನದಲ್ಲಿ ಶಾಂತತೆಯನ್ನಿಟ್ಟುಕೊಂಡು ಪ್ರಾರಂಭಿಸಬೇಕೆಂಬುದೇ ಉದ್ದೇಶವಾಗಿದೆಯೆಂತ ಹೇಳಿದ್ದಾರೆ.

ಡಿಲ್ಲಿಯಲ್ಲಿ ನಡೆದ ಅಖಿಲ ವ್ಯಾಪಾರಿಗಳ ಕೂಟದ ಸಮ್ಮೇಳನದಲ್ಲಿ ಹಿಂದೂಸ್ಥಾನದಿಂದ ಚಿನ್ನವನ್ನು ಹೊರಗೆ ಹೋಗಲು ಬಿಡಬಾರದೆಂತಲೂ, ಆರ್ಡಿನೆನ್ಸು ರಾಜ್ಯವು ನಿಲ್ಲಬೇಕೆಂತಲೂ ಪಗ್ಗರ ತೀರ್ಮಾನ ಮಾಡಿಕೊಂಡರು. ಈ ತೀರ್ಮಾನವನ್ನನುಸರಿಸಿ ಬೊಂಬಾಯಿ ಚಿನ್ನ ವ್ಯಾಪಾರದವರು ಇನ್ನು ಮೇಲೆ ಚಿನ್ನ ಕೊಳ್ಳಬಾರದೆಂತ ತೀರ್ಮಾನಿಸಿದ್ದಾರೆ.

ಪೂದರಿ ಪುರ ಎಂಬಲ್ಲಿ ಮೂವರು ಹುಡುಗರು ಸ್ವರಾಜ್ಯ ಬಾವುಟೆಯನ್ನು ತೆಗೆದುಕೊಂಡು ಕ್ರಿಮಿನಲ್ ಕೋರ್ಟಿನೊಳಗೆ ನುಗ್ಗಿದಾಗ ವಂದೇ ಮಾತರಂ ಎಂತ ಹೇಳುತ್ತಿದ್ದುದರಿಂದ ದಸ್ತಗಿರಿ ಮಾಡಲ್ಪಟ್ಟರು. ಕೂಡಲೇ ಇನ್ನು ಮೂವರು ಸಮೀಪದಲ್ಲಿ ಪ್ರತಿಸ್ಪರ್ಧಿಯಾಗಿ ಹಾಗೆಯೇ ಒಂದನ್ನು ಪೋಲೀಸರು ಹಿಡಿದರು. ಅನಂತರ ಪೋಲೀಸರು ಬಂದು ಚದ್ದಿಸಲಾಯಿತು.

ಅಸ್ಪೃಶ್ಯರಿಗೆ ಪ್ರತ್ಯೇಕ ಚುನಾವಣೆ ಬೇಡವೆಂತಲೂ ಅವರಿಗಾಗಿ ಸ್ಥಳಗಳನ್ನು ಕಾದಿಡುವುದು ಹಂಗಾಮಿ ಏರ್ಪಾಡು ಮಾತ್ರವಾಗಿರಬೇಕೆಂತಲೂ ತಮ್ಮ ಜನಾಂಗವು ಹಿಂದೂ ಸಮಾಜಕ್ಕೆ ಸೇರಿದ್ದಾದ್ದರಿಂದ ತಮಗೆ ಹಿಂದುಗಳ ಹಕ್ಕುಗಳೇ ಸಿಕ್ಕಿದರೆ ಸಾಕೆಂತಲೂ ವಿಶದವಾಗಿ ವಿವರಿಸುವ ಪತ್ರವೊಂದನ್ನು ಬ್ರಿಟಿಷ್ ಮಂತ್ರಿಯವರಿಗೆ ರಾವ್‌ಬಹದ್ದೂರ್ ಯಂ. ಸಿ. ರಾಜಾರವರು ಬರೆದುಕೊಂಡಿರುತ್ತಾರೆ.

ಮೈಸೂರು ದೇಶದ ಅಮಲ್ದಾರರುಗಳ ಸಮ್ಮೇಳನವೊಂದು ತಾ. 22ರಲ್ಲಿ ಬೆಂಗಳೂರಿನಲ್ಲಿ ನಡೆಯಿತು. ಅಮಲ್ದಾರರೊಳಗೆ ಅನ್ಯೋನ್ಯತೆಯು ಹೆಚ್ಚುವಂತೆಯೂ, ಉದ್ಯೋಗದ ಅನುಭವಗಳನ್ನು ಅನ್ಯೋನ್ಯ ಉಪಯೋಗಿಸಿಕೊಳ್ಳಲಿಕ್ಕೂ, ಸರಕಾರದ ಉದ್ದೇಶಗಳನ್ನು ಹೇಗೆ ಜಾರಿಗೆ ತರಬೇಕೆಂಬುದನ್ನೂ, ಆವಶ್ಯಕವಾದ ಚರ್ಚೆಗಳನ್ನು ಮಾಡಿಕೊಳ್ಳಲಿಕ್ಕೂ ಇದು ಸೇರಿ ನಡೆದ ಸಮ್ಮೇಳನವಾಗಿದೆ.

'ದೀನ ಜನ ಸಹಾಯ ಗೃಹ' ಎಂಬ ಸಂಸ್ಥೆಯನ್ನು ತಂಜಾವೂರಿನಲ್ಲಿ ಸ್ಥಾಪಿಸಿದ್ದಾರೆ. ಭಿಕ್ಷೆ ಬೇಡುವವರ ದೇಹದಾರ್ಢ್ಯ, ಖಾಯಿಲೆ ಮುಂತಾದ್ದನ್ನು ಪರೀಕ್ಷಿಸಿ ನಿಜವಾಗಿಯೂ ತಮ್ಮ ಜೀವನವನ್ನು ತಮಗೆ ಮಾಡಿಕೊಳ್ಳಲು ಆಗದಿರುವವರಿಗೆ ವಸತಿ, ಅನ್ನ ಬಟ್ಟೆ ಕೊಡಲು ಜನರ ಉಪಕಾರದಿಂದಲೂ, ಮುನಿಸಿಪಾಲಿಟಿ ಡಿಸ್ಟ್ರಿಕ್ಟ್ ಬೋರ್ಡುಗಳ ಸಹಾಯದಿಂದಲೂ ಸ್ಥಾಪನೆಯಾದದ್ದು. ಈ ಸಂಸ್ಥೆಯನ್ನು ತಾ. 23ರಲ್ಲಿ ಕಲೆಕ್ಟರು ತೆರೆದರು.

ಹಟಯೋಗಿ ನರಸಿಂಗಸ್ವಾಮಿ ಎಂಬವರು ಕಲ್ಕತ್ತಾ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಪ್ರಮುಖ ಸೈಯನ್ಸ್ ಪಂಡಿತರುಗಳ ಮುಂದೆ ಅತಿ ಕಠಿಣ ವಿಷ, ಗಾಜಿನ ಚೂರು ಮುಂತಾದ್ದನ್ನು ತಿಂದು ಏನೂ ಅಪಾಯವಾಗಿರಲಿಲ್ಲ. ಅವರು ರಂಗೂನಿನಲ್ಲಿ ತಾ. 25 ರಲ್ಲಿ ಇದೇ ರೀತಿ ವಿಷಸೇವನೆ ಮಾಡಿ ಕೆಲವು ಗಂಟೆಗಳ ಮೇಲೆ ಮೃತರಾದರು. ಇವರು ವಿಷಪಾನ ಮಾಡಿದ ನಂತರ ಮಾಡಬೇಕಾದ ಯೋಗಸಾಧನೆಗಳನ್ನು ಮಾಡಲು ತಡವಾದ್ದರಿಂದ ವಿಷದ ಶಕ್ತಿಯು ನಿರೋಧವಾಗಲಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು, ಉಡುಪಿ ಮುಂತಾದ ಸ್ಥಳಗಳಲ್ಲಿ ಪಿಕೆಟಿಂಗ್ ಮುಂತಾದ ಚಳವಳಿಗಳು ನಡೆಯುತ್ತಲೇ ಇದೆ. ಕೆಲವು ಸ್ವಯಂಸೇವಕರನ್ನು ಪೋಲೀಸರು ಪಿಕೆಟ್ ಮಾಡುವಲ್ಲಿಂದ ಓಡಿಸುತ್ತಾರೆ. ಕೆಲವರನ್ನು ದಸ್ತಗಿರಿಮಾಡಿ ಅನಂತರ ಬಿಡುತ್ತಾರೆ ಮಂಗಳೂರಿನ ಮೂರನೇ ಡಿಕ್ಟೇಟರಾದ ಕುಂದಾಪುರ ತಾಲೋಕು ಪ್ರೆಸಿಡೆಂಟರಾದ ದೆಂಡ್ತ ಬಲಿಯ ದಾರಿದೂ ಆದ ಹಲಸನಾಡು ಮಾದಪ್ಪಯ್ಯನವರ ಮಗ ಸೂರಪ್ಪಯ್ಯನೆಂಬವರಿಗೆ 6 ತಿಂಗಳು ಸಜಾ 100 ರೂಪಾಯಿ ಜುಲ್ಮಾನೆಯಾಗಿದೆ.

ಪಂಡಿತ ಮದನಮೋಹನ ಮಾಳವೀಯರೂ ಸರೋಜಿನಿ ದೇವಿಯವರೂ ಬನಾರಸಿನಲ್ಲಿ ದೀರ್ಘಕಾಲ ಸಂಭಾಷಣೆ ನಡೆಸಿದರು. ಕಾಂಗ್ರೆಸನ್ನು ಈ ವರ್ಷ ಹೇಗೆ ನಡೆಸುವುದು ಎಂಬುದನ್ನು ಚರ್ಚಿಸಿದ್ದಾಗಿದೆಯೆಂತ ತಿಳಿದುಬಂದಿದೆ. ಕಾಂಗ್ರೆಸ್ ಮಹಾಸಭೆಯನ್ನು ಶಾಸನಕ್ಕೆ ವಿರೋಧವಾದ ಕೂಟವಾಗಿ ಸರಕಾರವು ಇನ್ನೂ ಮಾಡದಿರುವುದರಿಂದ ಡಿಲ್ಲಿಯಲ್ಲಿ ಏಪ್ರಿಲ್ ತಿಂಗಳಲ್ಲಿ ಕಾಂಗ್ರೆಸ್ ನಡೆಸಬೇಕೆಂಬ ಯೋಚನೆ ನಡೆದಿದೆ. ಶಾಸನ ಭಂಗಕ್ಕೆ ಉತ್ತೇಜನ ಕೊಡದೆ ರಾಜಕೀಯ ಸುಧಾರಣೆ ಹೇಗಾಗಬೇಕೆಂಬ ವಿಷಯ ಮಾತ್ರ ಚರ್ಚಿಸುವುದಾದರೆ ಮಹಾಸಭೆಯನ್ನು ನಡೆಸಲು ಸರಕಾರವು ಅಡ್ಡಿ ಬರುವುದಿಲ್ಲವಂತೆ.

ಲಂಡನಿನಲ್ಲಿ ಹಿಂದೀ ವಿದ್ಯಾರ್ಥಿಗಳು ಸರೋಜಿನಿಯವರಿಗೆ ಸತ್ಕರಿಸಿದಾಗ ಅವರು ಹೇಳಿದ್ದೇನೆಂದರೆ— "ನಾ ದೇಶಭಕ್ತನು.. ನನ್ನ ಮಾತೃಭೂಮಿಯನ್ನು ನಾನು ಪ್ರೀತಿಸುತ್ತೇನೆ ಮಾತೃಭೂಮಿಯ ಎಲ್ಲಾ ಬಾಬುಗಳಲ್ಲೂ ದರಿದ್ರರೆಂತ ಅರಿತಿದ್ದೇನೆ. ರಾಜರು ಮಹಾರಾಜರು ಸಾಲದು. ಜನಸಮುದಾಯವೇ [illegible]. ಸಾಧಾರಣ ಜನರಿಗೆ ವಿದ್ಯೆ ಆಹಾರ [illegible] ವಂತೆ ಮಾಡುವುದೇ ನಮ್ಮ ಕರ್ತವ್ಯ"—

ಡಾಕ್ಟರ್ ಪಿಲ್ಲೆ
ಯಲ್. ಡಿ. ಯಸ್.
ಕೇರಳ) ಫೋಟೋಗ್ರಾಫೀಸ್ [illegible]

ತರಹ ಎಲ್ಲಾ [illegible] ಮವಾದ ಔಷಧಿಯನ್ನು [illegible] ತ್ತಾರೆ. 1ಕ್ಕೆ ರೂ. 3—8—0

ಯಾವ ತರಹದ ಬಾಧೆ [illegible] ಹಲ್ಲುಗಳನ್ನು ಚೆನ್ನಾಗಿ ಶುದ್ಧ ಪಡಿಸಿ ದುರ್ವಾಸನೆ ಹೋಗಲಾಡಿಸುವರು. ಹೊಸ ಚಿಕಿತ್ಸೆಯನ್ನು [illegible] ದಲ್ಲಿ ಮಾಡುತ್ತಾರೆ. ಚಿನ್ನ ಮತ್ತು ಬೆಳ್ಳಿ ರಂಧ್ರಗಳನ್ನು ಗಟ್ಟಿಯಾಗಿ ಮುಚ್ಚುತ್ತಾರೆ ಹಲ್ಲುಗಳನ್ನು ಸೆಟ್ಟು ಹಾಕುವರು ಮತ್ತು [illegible] ದ ದಂತ ಚಿಕಿತ್ಸೆಗಳನ್ನು ಮಾಡುವರು. ರೂ. 78 ಟ್ಟುಗಳು ಮತ್ತು ರಬ್ಬರಿನ ಇರುವ ಟ್ಟುಗಳು ಅಗ್ಗ ದರದಲ್ಲಿ ತಯಾರು [illegible]

ಸ್ವಲ್ಪ ದಿನವೇ ಇದ್ದು [illegible]
ಸಂದರ್ಭವನ್ನು ಕಳೆ[illegible]

ಶ್ರೀ ಮಂಗೇಶರಾಯರ ಕಾವ್ಯದ ವೇಳೆ.

(ಶ್ರೀಮಾನ್ ಪಂಜೆ ಮಂಗೇಶರಾಯರು ಫೆಬ್ರವರಿ ತಿಂಗಳ ಕಡೆಯ ವಾರ ಜಿಲ್ಲಾ ಸಂಚಾರ ಮಾಡಿ, ಅಲ್ಲಿಯ ಕನ್ನಡಿಗರಲ್ಲಿ ವಾಙ್ಮಯ ಪ್ರೇಮ ಹುಟ್ಟಿಸಿದರು. ೨೬—೨—೩೨ ರಲ್ಲಿ ಕಾರವಾರ ಹೈಸ್ಕೂಲಿಗೂ, ೨೭—೨—೩೨ ರಲ್ಲಿ ಕುಮಟಾ ಇಂಗ್ಲೀಷ್ ಸ್ಕೂಲಿಗೂ ಹೋಗಿದ್ದರು. ೨೮-೨-೩೨ ರಲ್ಲಿ ಮಿತ್ರ ಸಮಾಜದಲ್ಲಿ 'ಕಾವ್ಯ'ದ ಮೇಲೆ ಒಳ್ಳೆ ಮನೋಹರವಾದ ಭಾಷಣ ಮಾಡಿದರು. ಅನಂತರ ಅಂಕೋಲೆ ಮುಂತಾದ ಕಡೆ ಹೊರಟರು.)

ಕಾವ್ಯದ ಹೊಸಲು.

"ಕಾವ್ಯವನ್ನು ಕುರಿತು ಮಾತಾಡಬೇಕೆಂದು ನೀವು ನನಗೆ ಅಪ್ಪಣೆಯನ್ನು ಕೊಟ್ಟಿದ್ದೀರಿ. ಅದರ ಕವಿಯ ಯೋಗ್ಯತೆಯು ನನ್ನಲ್ಲಿ ಎಷ್ಟು ಮಾತ್ರವೂ ಇಲ್ಲ. ನಾನು ಕನ್ನಡದೇವಿಯ ಪ್ರಾಂಗಣದ ಹೊಸಲಿನಲ್ಲಿ ಬಿದ್ದಿರುವ ಕಸವನ್ನು ತೆಗೆಯುವ ಓರ್ವ ಪಂಚಮನು. ಕಸದಲ್ಲಿ ಎಲ್ಲಿಯಾದರೂ ಸಿಕ್ಕಿರುವ ರತ್ನಗಳನ್ನು ಕಂಡು, ಕಾದಿಟ್ಟು ನೋಡಿ ಆನಂದಪಟ್ಟವನು. ಅದರಿಂದ ನನ್ನಲ್ಲಿ ಉಂಟಾದ ಸಂಸ್ಕಾರದ ಫಲವನ್ನು ನಾನು ಸ್ವಲ್ಪ ದರಲ್ಲಿ ನಿಮಗೆ ಅರುಹುವೆನು.

ನಾನು ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದವನು. ನಮ್ಮ ಸೀಮೆಗೆ ಮೊಟ್ಟ ಮೊದಲು ಕಾವ್ಯದ ಹೊನಲು ಹರಿದು ಬಂದದ್ದು ಉತ್ತರ ಕನ್ನಡದಿಂದಲೇ. ನಮಗೆ ಕವಿತೆಯ ಸವಿಯನ್ನುಣಿಸಿದವರು ಭಟಕಳ ಅಪ್ಪಯ್ಯನವರು. ಅನಂತರ ಯಕ್ಷಗಾನ ಪ್ರಬಂಧಗಳಿಂದ ನಮ್ಮನ್ನು ಸಂತೋಷಪಡಿಸಿದವರು ಗೇರಸೊಪ್ಪೆ ಶಾಂತಯ್ಯನವರು. ಯಕ್ಷಗಾನ ಪ್ರಬಂಧಗಳಲ್ಲಿ ಏನು ಕಾವ್ಯವಿದೆ ಎಂದು ನೀವು ಕೇಳಬಹುದು. ಇಂಗ್ಲಿಷ್ ಅಂಜನವನ್ನು ಹಾಕಿಕೊಂಡ ನಮಗೆ ಅದರಲ್ಲಿ ಕಾವ್ಯ ಕಾಣದೆ ಇರಬಹುದು. ಆದರೆ ನಿಜವಾಗಿಯೂ ಅದರಲ್ಲಿ ಕಾವ್ಯವಿದೆ.

(ಅವರು ಶಾಂತಯ್ಯನವರ ಯಕ್ಷಗಾನದೊಳಗಿನ ಹಾಡನ್ನು ಹಾಡಿ ಅದರೊಳಗೆ ಕಾವ್ಯಮಯ ಭಾಗವಾವುದೆಂಬುದನ್ನು ತೋರಿಸಿದರು.)

ಶಿಕ್ಷಣವೂ ಶಿಕ್ಷಕರೂ

ಕಾವ್ಯವನ್ನೋದಿ ಅದರ ಸೊಂಪನ್ನು ಅನುಭವಿಸಿ ಅದರ ಮರ್ಮವನ್ನರಿತು ಅದರಿಂದ ಆನಂದವನ್ನು ಹೇಗೆ ಉಣಬೇಕು, ರಸವನ್ನು ಹೇಗೆ ಹೀರಬೇಕು, ಎಂಬುದು ನಮಗೆ ಈಗ ತಿಳಿಯದಾಗಿದೆ. ಹತ್ತು ಹನ್ನೆರಡು ವರ್ಷಗಳ ವರೆಗೆ ಇಂಗ್ಲಿಷ್ ಭಾಷೆಯನ್ನು ಕಲಿತವರು ಅದರೊಳಗಿನ ಕಾವ್ಯವನ್ನೋದಿ 'ಈ ಕಾವ್ಯ ಬಹಳ ಚೆನ್ನಾಗಿದೆ' ಎಂದು ಹೇಳುವದುಂಟು. ಯಾಕೆ ಎಂದು ಅವರಿಗೆ ಪ್ರಶ್ನೆ ಮಾಡಲು, "ನಮ್ಮ ಪ್ರೊಫೆಸರ್ರು ಇಲ್ಲವೆ ಇನ್ನಾವ ಮಹನೀಯರು ಹೀಗೆ ಹೇಳುತ್ತಿದ್ದರು" ಎಂದು ಉತ್ತರ ಕೊಡುವರು. ಕಾವ್ಯವನ್ನು ಓದಿ ಅದರ ರುಚಿಯನ್ನು ತಿಳಕೊಳ್ಳುವ ಶಕ್ತಿಯೇ ನಮ್ಮಲ್ಲಿ ಇಲ್ಲದಂತಾಗಿದೆ. ಕವಿವರ್ಯ ರವೀಂದ್ರನಾಥ ಠಾಗೋರರು ಕಾವ್ಯದ ರಸಾನುಭವವನ್ನು ಪಡೆಯಲಾರದಂಥ ಜನಾಂಗ ಶೋಚನೀಯ ಸ್ಥಿತಿಯಲ್ಲಿದೆ ಎಂದು ತಿಳಕೊಳ್ಳಬೇಕೆಂದು ಒಂದೆಡೆಗೆ ಅಂದಿರುವರು. ಈ ದುರವಸ್ಥೆಗೆ ನಮ್ಮ ಶಿಕ್ಷಣ ಶಿಕ್ಷಕರ ಅನಾಸ್ಥೆಯೂ ಕಾರಣ. ನಮ್ಮ ಸ … ಅನುಕರಣದಿಂದ ಕವನಗಳನ್ನು ಕಟ್ಟುವ ಶಕ್ತಿಯು ಇರುತ್ತದೆ. ಅದಕ್ಕೆ ಪ್ರೋತ್ಸಾಹ ಕೊಡದೆ ಅವರಲ್ಲಿದ್ದ ಸ್ವಾಭಾವಿಕ ಕವಿತಾ ಶಕ್ತಿಯನ್ನು ಕೊಂದುಬಿಟ್ಟಿದ್ದೇವೆ. ಇಂಗ್ಲಿಷಿನಲ್ಲಿ … ತಕ್ಕ ಸಾಹಿತ್ಯಗಳೆಲ್ಲವೆಂದು … ನ ಕನ್ನಡ ಕಾವ್ಯಗಳು ಚಿಕ್ಕ … ದ ವಿಷಯಗಳನ್ನು ಪ್ರಾಯಃ … ರ ದೆಸೆಯಿಂದ ಕನ್ನಡ ಕವಿತೆ ಇಲ್ಲವೆ ಮಕ್ಕಳಲ್ಲಿ ಸ್ವಾಭಾವಿಕವಾಗುತ್ತದೆ. ಇಂಗ್ಲಿಷ್ ಕವನಗಳವು. ಅವುಗಳ … ಕರಣದಿಂದ ನನ್ನ … ದಕ್ಕೆ ಹೇಳುವ … ಳಗಿನ ಸ್ವಾಭಾ … ನಾವು ನನ್ನ … ಗೆ ಕಡೆದೊಯ್ದು … ಷ್ಟ, ನಾಲ್ಕು ಕಟ್ಟ … ಕ್ಕ ಕಲಿಯುತ್ತಿದ್ದ … ನಮಗೇನೂ ಅ … ಲ್ಲ. ಆದರೆ ಸಮ್ಮೇಳನದೊಬ್ಬನು ಅ … ಗಳ ತಲೆಯ ಮೇಲೆ ನಿಂತಿನ … ಪ್ರಾರಂಭಿಸಿದನು. ಇದು ಅನುಕರ … ಣಾಕರವಾದು (ಪ್ಯಾರೊಡೀ) … ಲ್ಲಿ ಬಹಳವಾಗಿ ಪ್ರಚಾರದಲ್ಲಿ

ಕವಿತ್ವವೂ.

ನಮಗೆ ತಿಳಿಯದೆ ಹೋಗಲಿ … ತಿಳುವಳಿಕೆಗಳೇ ಕಾರಣ … ರಾಗವಿರಬೇಕೆಂದು ಒ … ಆಗವು ಗೌಣವೆಂದು ನನ್ನ … ನಮ್ಮಲ್ಲಿಗೆ ಒಬ್ಬನಿದ್ದ … ತೆ ಇಷ್ಟೇ. ಇಂಗ್ಲಿಷ್ ಕಾವ್ಯಗಳಿಗೆ ರಾಗವಿರುತ್ತದೆಯೋ? ರಾಗವಿಲ್ಲದಿದ್ದರೂ ಅದನ್ನು ಓದಿ ಅದರ ಸವಿಯನ್ನು ಹೇಗೆ ಸವಿಬಲ್ಲೆವು? ಕನ್ನಡಕ್ಕೂ ಅದೇ ನಿಯಮವನ್ನು ಏಕೆ ಅನ್ವಯಿಸಿ ಕೊಳ್ಳಬಾರದು? ದಕ್ಷಿಣ ಕನ್ನಡದವರು, ಇಲ್ಲಿಯ ಹುಡುಗರು ಕವಿತೆಯನ್ನು ರಾಗದಲ್ಲಿ ಹಾಡುವುದನ್ನು ಕೇಳಿ, 'ಯಾರಾದರೂ ಕೋಲಾಟ ಹಾಡುವ ಹಾಗೆ ಕಾಣುತ್ತೆ' ಎಂದು ಅನ್ನಬಹುದು. ಅದೇ ನಮ್ಮಲ್ಲಿ ತಾಳಬದ್ಧವಾಗಿ ಅಂದು ಮೃದಂಗ ಬಾರಿಸಿತು ಆದರೆ ಯಾವ ಮನುಷ್ಯನ ಅಂತಃಕರಣದಲ್ಲಿಯೂ ಭಾವನಾತರಂಗಳೇಳುವವು; ಅವನ ಹೃದಯವು ಕುಣಿದಾಡ ಹತ್ತುವದು. ಅದಕ್ಕೆ ಯಾವನೊಬ್ಬನ ಗನ್ನತಿಯು ಪೀಲುರಾಗದಲ್ಲಿ ಹಾಡಲಿಕ್ಕೆ ಪ್ರಾರಂಭಿಸಿದ ಕೂಡಲೇ ನಾವು ತಲೆದೂಗಿ, 'ಇದು ಕಾವ್ಯ' ಎಂದು ಅನ್ನುತ್ತೇವೆ. ಆದರೆ, ಹಾಡುಗಾರಿಕೆಯು ಕಾವ್ಯದ ನಿಜವಾದ ಬಗೆಯಲ್ಲ ಅಲ್ಲ.

ನಾದ ಮಾಧುರ್ಯವಿರಬೇಕು.

ಇಷ್ಟು ಹೇಳಿದ ಮೇಲೆ ಕಾವ್ಯವೆಂದರೇನು? ಅದರ ಲಕ್ಷಣಗಳಾವವು? ಅದು ಹೇಗೆ ಹುಟ್ಟುತ್ತದೆ? ಎಂಬ ಸಂಗತಿಗಳನ್ನು ಚರ್ಚಿಸಬೇಕಾಗಿದೆ. ಯಾವುದು ಹೃದಯ ಸ್ಪರ್ಶಿಯಾಗಿರುವುದೋ, ಯಾವದನ್ನು ಓದುವದರಿಂದ ಒಂದು ನಿಮಿಷವಾದರೂ ತನ್ಮಯತೆಯನ್ನು ರಸಾನುಭವವನ್ನು ಪಡೆಯಬಹುದೋ ಅದು ಕಾವ್ಯವು. ಕಾವ್ಯದಲ್ಲಿ ನಾದಮಾಧುರ್ಯವು ಇರಬೇಕು. ಕಾಶೀಪಾತ ಎಂದು ಅನ್ನುವದು ಸ್ವಲ್ಪ ಕಷ್ಟವೆನಿಸುತ್ತದೆ; ಅದೇ ಆಂತರಿಕ ಎಂದು ಹೇಳುವದು ಸುಲಭ. ಗೋಪಿಕಾವಸ್ತ್ರಾಪಹಾರ ಎನ್ನುವದು ಎಷ್ಟು ಕಷ್ಟ ನೋಡಿರಿ; ಅದೇ ನಂದನಂದನ ಎನ್ನುವದು ಎಷ್ಟು ಮಧುರ. ಶಬ್ದ … ದಿಂದ … ಮಾಧುರ್ಯವಾಗುತ್ತದೆ. ಆದರೆ ಅದರಲ್ಲಿರುವ ನಾದಮಾಧುರ್ಯವು … ಲ್ಲಿಯೂ ಕಾಣಬರದು ಕಷ್ಟ.

(ಇಲ್ಲಿ ಅವರು … ದೊಳಗಿನ ಒಂದು ಭಾಗವನ್ನು ಓದಿ ತೋರಿಸಿದರು. ಅದರೊಳಗಿನ ನಾದ ಮಾಧುರ್ಯವನ್ನು ಕೇಳಿ … ಸಭಿಕರ … ಕಥಕರಿಗೆ ಹೊಳೆಯಿತು.)

ನಾದಮಾಧುರ್ಯ ಬರಬೇಕಾದರೆ ಅದರಲ್ಲಿ ಅನುಪ್ರಾಸಗಳೂ, ಅನುಸ್ವರಗಳೂ ಹೊಂದಿಕೊಂಡಿರಬೇಕು. ಅವು … ಕವಿತೆಯಲ್ಲಿ … ಇರಬೇಕು. … ಅನಂತ ಪಾಸ … ಇಂಗ್ಲಿಷ್ ಕಾಲದಲ್ಲಿ ಇಂತಿಷ್ಟೇ ಕಟ್ಟುಗಳಿರುವವು; ಹಾಗೆಯೇ ಕಾವ್ಯಕ್ಕೆ ಕಟ್ಟುಗಳಿರುವವು. ಅವುಗಳಿಂದಲೇ ಅದಕ್ಕೆ ತಾಳಬದ್ಧತೆಯು ಬರುತ್ತದೆ. ಗದ್ಯಕ್ಕೂ ಪದ್ಯಕ್ಕೂ ಇಂಥ ಭೇದವಾದರೂ ಇದೇ.

ಪರಿಸ್ಥಿತಿ ಪ್ರಭಾವ.

ಕಾವ್ಯದ ಹುಟ್ಟಿಗೆ ಕವಿಯ ಭಾವನೆಯೂ, ಸಂಸ್ಕಾರವೂ ಕಾರಣ. ಕವಿಯ ಮನದೊಳಗೆ ಭಾವನೆಗಳುದಯಿಸಿ ಅವುಗಳಿಂದ ಅವನ ಹೃದಯವು ತುಂಬಿ ಹೊರಸೂಸತೊಡಗಿದರೆ ಕಾವ್ಯವು ಹುಟ್ಟುವದು. ಆ ಸಂಸ್ಕಾರಗಳಿಗೂ ಭಾವನೆಗಳಿಗೂ ಸುತ್ತಲಿನ ಪರಿಸ್ಥಿತಿಯು ಕಾರಣ. ಬಾಹ್ಯ ಪರಿಸ್ಥಿತಿಯ ಪರಿಣಾಮವು ಅವನಿಗೆ ತಿಳಿಯದಂತೆ ಕೂಡ ಅವನ ಮನಸ್ಸಿನ ಮೇಲೆ ಆಗುತ್ತಿರುತ್ತದೆ. ನಮ್ಮಲ್ಲಿ ಶ್ರೀ. ಯಂ. ಎನ್. ಕಾಮತ ಎಂಬ ಕವಿಗಳಿದ್ದಾರೆ. ಅವರು 'ಗೂಡಿನಲ್ಲಿಯ ಇಲಿ' ಎಂಬ ಕವಿತೆಯನ್ನು ಬರೆದಿದ್ದಾರೆ. ಅವರ ಅಭಿಪ್ರಾಯದ ಪ್ರಕಾರ ಅದೊಂದು ಹಾಡು ಕವಿತೆ. ಅದನ್ನು ನೋಡಿದೆನು; ಅದರಲ್ಲಿ ನಾನು ಉತ್ತಮವಾದ ಕಾವ್ಯವನ್ನು ಕಂಡೆನು;

(ಇಲ್ಲಿಗೆ ಅವರು ಆ ಕವಿತೆಯನ್ನು ಓದಿ ಅದರಲ್ಲಿ ಕಾವ್ಯ ಹೇಗೆ ತುಂಬಿದೆ ಎಂದು ತೋರಿಸಿದರು.)

ಅದರಲ್ಲಿ ಕೂಲಿಕಾರರ ಪ್ರಶ್ನೆಯ ಸಹಿ ನೆರಳು ಬಿದ್ದಿದೆ ಎಂದು ನನಗೆ ತೋರಿತು. ಈ ಕವಿತೆಯನ್ನು ನಾನು ವಿದ್ಯಾರ್ಥಿಗಳಿಗೆ ಕಲಿಸುವಾಗ ಕವಿಗಳು (ಶ್ರೀ ಕಾಮತ) ಹಿಂದೆ ಕೂತುಕೊಂಡು ಕೇಳುತ್ತಿದ್ದರು. ಅದಕ್ಕೆ ನಾನು ಕೊಟ್ಟ ಅರ್ಥವನ್ನು ವಿವರಣೆಯನ್ನೂ ಕೇಳಿ ಅವರು ವಿಸ್ಮಿತರಾದರು. ಕೂಲಿಕಾರರ ಪ್ರಶ್ನೆಯ ಮಹತ್ವವನ್ನು ಎತ್ತಿ ತೋರಿಸಲಿಕ್ಕೆ ನೀವು ಈ ಕವಿತೆಯನ್ನು ಬರೆದಿದ್ದೀರೋ ಎಂದು ಅವರಿಗೆ ಕೇಳಿದೆನು. ಅವರು ಅದೇನೂ ಇಲ್ಲ ಎಂದು ಹೇಳಿದರು. ಇದರ ಮೇಲಿಂದ ನಾವು ತಿಳಕೊಳ್ಳುವುದು ಇಷ್ಟೇ. ಬಾಹ್ಯಪರಿಸ್ಥಿತಿಯ ಪರಿಣಾಮವು ಕವಿಯ ಮನಸ್ಸಿನ ಮೇಲೆ ತಿಳಿಯದೆ ಆಗುತ್ತದೆ. ಅವನು ಅದನ್ನು ತಿಳಿಯದೆ ಅನುಭವಿಸಿ ಹಾಡುತ್ತಾನೆ. ಎಲ್ಲ ಕಾವ್ಯಗಳು ಸ್ಫೂರ್ತಿಯಿಂದಲೇ ಹುಟ್ಟುವದಿಲ್ಲ; ದೀರ್ಘಕಾಲದ ಅಭ್ಯಾಸದಿಂದಲೂ ಸುತ್ತಲಿನ ಪರಿಸ್ಥಿತಿಯನ್ನು ನಿರೀಕ್ಷಿಸಿ, ಅನುಭವಿಸಿ ಕವಿತೆಗಳನ್ನು ಬರೆಯಬಹುದು. ಅವು ಉಚ್ಚತರಗತಿಯವಾಗದೆ ಹೋಗಬಹುದು; ಆದರೆ ಅವುಗಳಿಂದ ಕೂಡ ಒಂದು ತರದ ಆನಂದವನ್ನು ಅನುಭವಿಸಬಹುದು.

ಹೊಸ ಕಾವ್ಯಗಳು.

ಹೊಸ ಕಾವ್ಯಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿ ಈ ಉಪನ್ಯಾಸವನ್ನು ಮುಗಿಸುವೆನು. ಹಿಂದಿನ ಕಾವ್ಯವು ಬಹುತರ ಧರ್ಮಶಾಸ್ತ್ರ ಸಂಬಂಧಪಟ್ಟದ್ದಾಗಿತ್ತು. ಈಗಿನ ಕಾವ್ಯವು ಇಂಗ್ಲಿಷ್ ಮಾರ್ಗಗಳ ಅನುಸರಣದಿಂದ ರಾಷ್ಟ್ರೀಯ, ಸಾಮಾಜಿಕ, ಧಾರ್ಮಿಕ; ಹೀಗೆ ಬಹುಮುಖವಾಗಿ ಬೆಳೆಯುತ್ತಿದೆ. ಸಾಮಾಜಿಕ ಪರಿಸ್ಥಿತಿಯ ಪರಿಣಾಮವು ಕವಿಯ ಮನಸ್ಸಿನ ಮೇಲೆ ಆಗುತ್ತದೆ. ನನ್ನ ಮಿತ್ರರಾದ ಶ್ರೀ ಶ್ರೀಮಾನ್ ಬಿ. ಯಂ. ಶ್ರೀಕಂಠಯ್ಯನವರು ಥಾಮಸ್ ಹುಡ್ ಎಂಬ ಇಂಗ್ಲಿಷ್ ಕವಿಯು ಬರೆದ 'ಬ್ರಿಡ್ಜ್ ಆಫ್ ಸೈಸ್' ಎಂಬ ಕವಿತೆಯನ್ನು 'ದುಃಖ ಸೇತು' ಎಂಬ ಹೆಸರಿನಿಂದ ಕನ್ನಡಕ್ಕೆ ಇಳಿಸಿದ್ದಾರೆ. ಹುಡ್ ಕವಿಯು … ಇಂಗ್ಲಿಷ್ ಮಹಿಳೆಯ ಸ್ಥಿತಿಯನ್ನು ನೋಡಿ ಮರುಗಿ ಮರುಗಿ ಹಾಡಿದ್ದಾನೆ. ನಮ್ಮಲ್ಲಿ ವಿಧವೆಯರ ಸ್ಥಿತಿಯೂ ಹಾಗೇ ಇದೆ. ಮಾ|| ಶ್ರೀಕಂಠಯ್ಯನವರು ಅದರ ಚಿತ್ರವನ್ನು ಮನಸ್ಸು ಕರಗುವಂತೆ, ಮೈ … ನಿಗಿರೆನಿಸುವಂತೆ ತಮ್ಮ 'ದುಃಖಸೇತು' ವಿನಲ್ಲಿ ಇಳಿಸಿದ್ದಾರೆ.

ಸೆಂಟ್ರಲ್ ಬ್ಯಾಂಕ್ ಮೀಟಿಂಗ್.

ಈ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ತಾ. 16ರಲ್ಲಿ ಬ್ಯಾಂಕಿನ ಆಫೀಸಿನಲ್ಲಿ ಹಾಲಿ ಅಧ್ಯಕ್ಷರಾದ ರಾವ್ ಬಹದ್ದೂರ್ … ಅಪ್ಪಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. 13 ಡೈರೆಕ್ಟರರು ಹಾಜರಿದ್ದರು.

ಕಳೆದ ತಿಂಗಳ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು.

2. ಫೆಬ್ರವರಿ ತಿಂಗಳ ಜಮಾ ಖರ್ಚು ಮತ್ತು ಪಟ್ಟೀ ಲೆಕ್ಕ ಓದಿ ಮಂಜೂರು ಮಾಡಲಾಯಿತು.

3. ಈ ಕೆಳಗಿನ ಸೊಸೈಟಿಗಳಿಗೆ ಸಾಲಗಳು ಮಂಜೂರಾದವು. (1) … ಸೊಸೈಟಿಗೆ ರೂ. 500, (2) … ಕ್ರೆಡಿಟ್ … ಸೊಸೈಟಿಗೆ ರೂ. 3000 (3) … ಸೊಸೈಟಿಗೆ ರೂ. 1000 (4) … ಸೊಸೈಟಿಗೆ ರೂ. 1000, (5) … ಸೊಸೈಟಿಗೆ ರೂ. 1000, ಮತ್ತು (6) … ಕೋಆಪರೇಟಿವ್ ಸ್ಟೋರ್ಸ್‌ಗೆ ರೂ. 1000.

4. … ಸೊಸೈಟಿಗಳಿಗೆ … ಸಾಲಗಳು ಮಂಜೂರಾಗಲಿಲ್ಲ.

5. … ಬ್ಯಾಂಕಿನ … (ಟ್ರೆಜರರ್) … ವರೆಗೆ … ಠರಾವಾಯಿತು.

6. ಬ್ಯಾಂಕಿನ ಪ್ರಯೋಜನಾರ್ಥವಾಗಿ ರೂ. 125ರಿಂದ 150ರೊಳಗೆ ಒಂದು … ಪೆಟ್ಟಿಗೆಯನ್ನು ತೆಗೆದುಕೊಳ್ಳಬೇಕೆಂತ ಠರಾವಾಯಿತು.

7. ಬ್ಯಾಂಕಿನ ಬಳಿಯಲ್ಲಿ ಈಗ ಶಿಲ್ಲಿರುವ ಹಣದ ಪೈಕಿ 30,000 ರೂಪಾಯಿಗಳನ್ನು ನ್ಯಾಶನಲ್ ಮತ್ತು … ಬ್ಯಾಂಕುಗಳಲ್ಲಿ 3 ತಿಂಗಳುಗಳ ವರೆಗೆ ಇಡುವಂತೆ ಠರಾವಾಯಿತು.

8. … ಗುಮಾಸ್ತರ ಸಂಬಳವನ್ನು 60 ರೂಪಾಯಿಯಿಂದ 40 ರೂಪಾಯಿಗೆ ಇಳಿಸಬೇಕೆಂತ ಠರಾವಿನ ಮೇಲೆ ಚರ್ಚೆ ನಡೆದು ಠರಾವಿಗೆ ಬಹುಮತದ ಒಪ್ಪಿಗೆ ಸಿಕ್ಕದ್ದರಿಂದ ಪಾಸಾಗಲಿಲ್ಲ.

9. … ಮತ್ತು ಗೋಕರ್ಣ … ಸೊಸೈಟಿಗಳು … ಕೊಟ್ಟ ಕಂತನ್ನು ಮುಂದೂಡಬೇಕಾಗಿ ಬಂದಿರುವ ಅರ್ಜಿಗಳನ್ನು ಓದಲಾಯಿತು.

ಅವರ ತೋರಿಕೆ ಮೇರೆ ಕಂತು ಮುಂದರಿಸಲು ಅಡ್ಡಿಯಿಲ್ಲವೆಂತ ಠರಾವಾಯಿತು.

10. … ಮತ್ತು … ಕಟ್ಟಲು … ಓದಲಾಯಿತು.

ಒಂದು ವರ್ಷದ … ಠರಾವಾಯಿತು.

ಕೆ. [illegible]
([illegible])

ನೋಟೀಸು.

… ಸೆಂಟ್ರಲ್ … ಶಿಶುಪ್ರದರ್ಶನ ಮತ್ತು … ಪ್ರದರ್ಶನ … ಏಪ್ರಿಲ್ ತಾರೀಕು 2 ಮತ್ತು 3ರಲ್ಲಿ ಜರುಗುತ್ತದೆ. ತಾರೀಕು 3ನೇ ದಿನ ಪ್ರದರ್ಶನವಾಗುವುದರಿಂದ ಶಿಶುಗಳನ್ನು ಪಡೆದ ಎಲ್ಲ ತಾಯಂದಿರು ತಮ್ಮ ತಮ್ಮ ಶಿಶುಗಳ ಸಮೇತ, ಪ್ರದರ್ಶನಕ್ಕೆ ದಯಮಾಡಿಸಿ, ಶಿಶುಗಳನ್ನು ಪ್ರದರ್ಶಿಸಿ ಬಹುಮಾನಗಳನ್ನು ಪಡೆಯಲು ಉದ್ಯುಕ್ತರಾಗಬೇಕಾಗಿ ಕೇಳಿಕೊಳ್ಳಲಾಗಿದೆ. ಚೆನ್ನಾಗಿ ಪೋಷಿಸಿದ ಶಿಶುವಿಗೆ ಬೆಳ್ಳಿಯ ಪದಕವನ್ನು ಬಹುಮಾನವಾಗಿ ಕೊಡಲಾಗುತ್ತದೆ. … ಪಟ್ಟಣಗಳಲ್ಲಿ … ಮತ್ತು … ಚೆನ್ನಾಗಿ ಸಾಕಿದವರಿಗೆ ಇನಾಮುಗಳು ದೊರೆಯುತ್ತವೆ. ಮತ್ತು ಹೆಚ್ಚು ಹಾಲು ಕೊಡುವ ಹಸುವಿನ ಮಾಲೀಕರಿಗೂ ಕೂಡ ಇನಾಮು ಕೊಡಲಾಗುತ್ತದೆ.

Rg. No. M. 1550.
If not delivered please return to
"KODAGU" OFFICE MERCARA.

ಕೊಡಗು.

ಸತ್ಯೇನ ಧಾರ್ಯತೇ ಪೃಥ್ವೀ ... ವಿದ್ಯಾ ... ಸ್ವಯುತ್ನ ... ಸ್ವಸ್ತಿ ... ರಾಜ್ಯ ...

ವಾರ್ಷಿಕ ಚಂದಾ ರೂ. ೩—೮—೦.

ಸಂಪಾದಕ—ನಾಚಿಮಂಡ ಯಂ. ಗಣಪತಿ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೧ | ಮಡಿಕೇರಿ, ಸನ್ ೧೯೩೨ನೇ ಇಸವಿ ಏಪ್ರಿಲ್ ತಾರೀಕು ೧ನೇ ಶುಕ್ರವಾರ. | ಸಂಚಿಕೆ ೪೭

Office of the Asst.
Commr. & Dt. Magte.,
Mercara (Coorg). 6th May 1931.

Dear Sir,

I am QUITE PLEASED with the workmanship of the two Coorg weapons (PICHAKATTI & ODIKKATTI).

Yours faithfully,
(Sd) (Rao Bhadur)
K. CHENGAPPA, B. A.
District Magistrate and
Assistant Commissioner of
Coorg.

JEWELLER
By Appoi tment to
H. E The Gov rnor of Madras.



PEECHAKATTI (WITH SILVER FITTINGS)
Prices - From Rs. 100 & upwards.

"New Bungalow,"
Ammatti, (Coorg).
14th December 1931.

Dear Sir,

I am IMMENSELY-PLEASED with the workmanship of the PICHAKATTI you made and sent me some time back.

Yours faithfully,
Sd/ K. P. MUDDAYYA,
Ammatti (Coorg.)

Telegrams:
'PRECIOUS.'

V. Subramaniaier
Jeweller.

Telephone:
3145.

CATALOGUE ON ENQUIRY.

52—19

Post Box 423, Triplicane, P. O., MADRAS.



ಈ ಜಾಹೀರು ಬರೆದ ಆಗಿನ
ದ್ಯಾಕೀರು ಮಾತ್ರವೇ
ಕಳುಹಿಸಲ್ಪಡುವದು.

ಕೋವಿಗಳು, ಕತ್ತಿಗಳು, ಬಡಿಗಳು, ಕೋವಿ ... ಕತ್ತಿಗಳು, ಮದ್ದು ಮತ್ತು ಬೇಟೆಯ ಎಲ್ಲಾ ... ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN AL BHOY & SONS.
Largest Importers of Firearms and Ammunition
Cheapest priced firm in India,
210 Abdul Rehman Street, BOMBAY.

24—4

ಬಾಲಾರ್ಕಮಧು.

ಬಾಲಾರ್ಕಮಧು ಮಕ್ಕಳಿಗೆ ಕೊಡುವುದರಿಂದ ಚಿಕ್ಕವರ ಆರೋಗ್ಯವು ಹೆಚ್ಚುವದು. ಇದು ಮಧುರವಾಗಿದೆ. ಶೀಸೆ 1ಕ್ಕೆ 0—12—0 ಟ. ಖ. 0—12—0.



... 1ಕ್ಕೆ ರೂ. 32—8—0

(Spleen Lever enlargement) ... ಕರ ಗಡ್ಡೆ ರೋಗ—ಪ್ಲೀಹ—ಪಿತ್ತಕೋಶದ ಗಡ್ಡೆ ... ಹೌಷಧಗಳಿವೆ. ... ಸಣ್ಣ ಔಷಧಗಳು ... 1 ಕ್ಕೆ ... ರೂ. 78— ... 3—0—0. ಟ. ಖ. 0—8—0. ಏಜೆಂ...

ಪ. ಎ. ...ನ್. ಶ್ರೀನಿ... ಪ್ರದ...
ವೈ. ಪಿ. ಅಯ್ಯನ ...

ಬಿಕ್ರಿಯ ಆಫೀಸ್, { Spleen &
ಉಪ್ಪಿ. S. K. { ಯು. ಪಿ. ...
52—11

ವಜ್ರದ ಅಡ್ಡಿಗೆ.

ಈ ಅಡ್ಡಿಗೆಗಳನ್ನು ಅಮೇರಿಕನ್ ಡೈಮಂಡ್ ಎಂಬ ಇಮಿಟೇಶನ್ ... ದ ಕಲ್ಲುಗಳನ್ನು ಕಟ್ಟಿ ಕವರಿ ... ಬಂಗಾರದಿಂದ ಕಟ್ಟಿದ ಕಟ್ಟು ... ಅದರ ಬಣ್ಣವು ಕೆಡದಂತೆ ಸವ ... ಬಂಗಾರದ ಬಣ್ಣ ಕೊಟ್ಟಿದೆ. ... ಗಳ ಪ್ರಕಾಶವು ಸಾಚಾದ ಅಡ್ಡಿಗೆಗೆ ಸರಿಯಾಗಿದೆ. ಇದ ... ನೋಡಿದವರು ೫,೦೦೦ ರೂ. ... ಕ್ರಯ ಕಟ್ಟುವರು. ... ಗರೀಬರಿಗೂ ಲಾಯಕಾದವು. ಕ್ರಯ ೧ಕ್ಕೆ ರೂ. ೫—೧೨—೦. ... ಗಟ್ಟಿ ... ಬಂಗಾರದ ... ೧ಕ್ಕೆ ... ರೂ. ... —೦. ವ್ಹಿ. ಪಿ. ೩—೮—೦.

ವಿಳಾಸ—ಕೆ. ಎಸ್. ಬೆನ್‌ಸನ್ ಅಂಡ್ ಕೊ.,
ಪೋ || ನಂ || 1246, ಮದರಾಸು.
12—1

ಈ ಗಡಿಯಾರಗಳು ... ನಕ್ಷೆಯಲ್ಲಿರುವಂತೆಯೇ ಇರುವವು. ನಮ್ಮ ಸ್ವಂತ ಆರ್ಡರ್ ಮೇಲೆ ... ತಯಾರಿಸಿ ತರಿಸಿರುತ್ತೇವೆ. ಸರಿಯಾಗಿ ಘಂಟೆಯನ್ನು ತೋರಿಸುತ್ತವೆ. ಈ ದುಪಟೆಗಳು ಯಾರೂ ಈಗಿನ ಕಡಿಮೆ ಬೆಲೆಗೆ ತರಿಸಿರುವವರೇ ಇಲ್ಲ. ಆದ್ದರಿಂದ ಬೇಗನೆ ಬರೆದು ತರಿಸಿಕೊಳ್ಳಿರಿ. ನಮ್ಮಲ್ಲಿ ಸ್ವಲ್ಪವೇ ಇರುತ್ತವೆ. ಇವಕ್ಕೆ ಖಾತ್ರಿಯಾದ 3 ವರ್ಷ ಗ್ಯಾರಂಟಿ ಕೊಡುತ್ತೇವೆ. ಕ್ರಯ 1ಕ್ಕೆ 4—4—0.

ವಿಳಾಸ:—ಕೆ. ಎಸ್. ಬೆನ್‌ಸನ್ ಅಂಡ್ ಕೊ.,
ಪೋ || ನಂ || 1246, ಮದರಾಸು.
12—2

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್ ಈ ಬ್ಯಾಂಕಿನ ಶೇರ್ ಸರ್ಟಿಫಿಕೇಟ್
ಅಪ್ಪು ಪ್ರಕಾರ ತಿಳಿಸಲಾಗಿದೆ.
(ಸ್ಥಾಪಿತವಾದದ್ದು 1922ರಲ್ಲಿ)

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	26,800
ಜವಾಬಂದಿ ಠೇವಣಾತಿ	—	2,50,301

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೆ ಸಾಲ ಕೊಡಲಾಗುತ್ತದೆ.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ನೂರಕ್ಕೆ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ನೂರಕ್ಕೆ 4ರ ಬಡ್ಡಿ ದೊರೆಯುತ್ತೆ.

ವರ್ತಕರಿಗೂ ಬ್ಯಾಂಕಿನ ವ್ಯವಹಾರ ನಡೆಸುವವರಿಗೂ ಅನುಕೂಲ ಮಾಡುತ್ತಾರೆ.

ಪ್ರೆಸಿಡೆಂಟರು,	ಟ್ರೆಜರರ್
ಕೋಡಂದ ಅಪ್ಪಯ್ಯನವರು	ಮನೆಯಪ್ಪಂಡ ಬೆಳ್ಯಪ್ಪ
ರಾವ್ ಬಹದ್ದೂರ್.	ನವರು.

ಸೆಕ್ರೆಟರಿ

ಸಿ. ಯಸ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.
ತಾರೀಖು 1—7—1931.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಏಜೆನ್ಸಿಯನ್ನು ವಹಿಸಿಕೊಳ್ಳಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿದೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ನಮ್ಮ **ಮುದ್ರಿತ ರಶೀತಿ ಪಡೆಯಬೇಕಾಗಿ ಕೋರಿದೆ.**

ಏಜೆಂಟರುಗಳು,

ಉತ್ತರ ಕೊಡಗಿಗೆ ಮೆ॥ ಚೌರಿರ ಮೊಣ್ಣಯ್ಯನವರು,

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮುಂಡೇಟಿರ ಸೋಮಯ್ಯನವರು, (ಪಾರುಪತ್ಯಗಾರ)
ನಾಪೋಕ್ಲು—ಎಮ್. ಆರ್. ವೆಂಕಪ್ಪಯ್ಯನವರು.
ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮೊದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಪ್ಪಯ್ಯನವರು,
ಮತ್ತು ಅರಮಣಮಾಡ ಪಿ ಕಾರ್ಯಪ್ಪನವರು,
ಕುದಿಕೇರಿ & ಕಿರಿಮಕ್ಕಿ—ಮೆ. ಜಿ. ಮಾದಪ್ಪಯ್ಯನವರು,
ಕುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಪೊನ್ನಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮ್ಯಾನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿವೆ.

ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿ ನಿಯೂ ಇರಬೇಕಾದ ಅಮಿತ ಬಾಧ್ಯತ ಸಂಘದ ಮತ್ತು ದವಸ ಭಂಡಾರಗಳ ಬುಕ್ಕುಗಳೂ, ಎಲ್ಲಾ ದವಸ ಭಂಡಾರಗಳ ಕೆಲಸಗಳನ್ನು ... ಅವಶ್ಯವಾಗಿರುವ, ದೂರ್ನಿಗೆ ... ಅವಶ್ಯವಾಗಿ ಕಳುಹಿಸುವ ... ರುವ ಬಾಬಾ ಫಾರಮುಗಳೂ, ... ಫಾರಮುಗಳೂ, ಜಮಾ ಮುಂಜೂರಾತಿ ಫಾರಮು ... ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ... ಫಾರಮುಗಳೂ, ಸ್ಟಾಕ್ ರಿಜಿಸ್ಟರ್ ಮರಾಠಿ ಫಾ... ಓಚರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ... ರಿಜಿಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತ... ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಬೇಕಾದವರು ಆರ್ಡರು ಕಳುಹಿಸಿದಲ್ಲಿ ವಿ. ಪಿ. ಕಳುಹಿಸಲಾಗುವುದು.

ಮ್ಯಾನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.
ವಿಮೆದಾರರಿಗೆ ಕೊಟ್ಟದ್ದು—3231 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ - 8013 ಜನರಿಗೆ 32 ಲಕ್ಷ ರೂ.
ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.
ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,78,322 ಜನರಿಗೆ 38ಕೋಟಿ ರೂ.
ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ರಕ್ಕಿಂತ ಹೆಚ್ಚು ಖರ್ಚಿಲ್ಲದೆಯೇ ನಡೆಸಲ್ಪಟ್ಟಿದ್ದಾಗಿದೆ.
ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ **ಕಡಿಮೆ ಖರ್ಚಿನ ಮತ್ತು ಉತ್ತಮವಾದ** ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.
ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಪ್ರೋತ್ಸಾಹವನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬುದು ಅದರ ಹಿಂದಿನ ದಾಖ್ಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು.

(ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ಮೊಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಢಾಕ್ಕಾ	ಲಖ್ನೋ	ಪಾಟ್ನಾ	ಸುಕ್ಕೂರು
ಅಲ್ಲಾಹಾಬಾದು	ಢಿಲ್ಲಿ	ಮದ್ರಾಸು	ಪೂನಾ	ತಿರುಚಿನಾಪಲ್ಲಿ
ಬೆಂಗಳೂರು	ಹೈದರಾಬಾದು	ಮಂಡಲೆ	ರಾಯಪುರ	ತಿರುವೇಂದ್ರಮ್
ಬೊಂಬಾಯಿ	ಕರಾಚಿ	ಮಂಗಳೂರು	ರಾಂಚಿ	ವಿಶಾಖಪಟ್ಟ

[52—4

ಮಲೆ ಜ್ವರಕ್ಕೆ ರಾಮಬಾಣ

... ಇದು ಇಂಜೆಕ್ಷನ್ ಮತ್ತು ಕ್ವಿನೈನು ಸೇವಿಸಿದರೂ ಗುಣವಾಗದಿರುವ ಮಲೆ ಜ್ವರ, ದಿನಾ ಬರುವ ಜ್ವರ, 3—4 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ ಮತ್ತು ಜ್ವರಗಳ ದೋಷದಿಂದ ಬರುವ ಜ್ವರಗಳಿಗೆ ಖಂಡಿತ ಗುಣ ಕೊಡುತ್ತದೆ. ... ರೂ. 1—... 3ಕ್ಕೆ ರೂ. 4—0—0; 6ಕ್ಕೆ ರೂ. 7—8—0; 12ಕ್ಕೆ ರೂ. 14

ಚಂದನಾಸವ:—ಇದು ಪ್ರಮೇಹ ಮೂತ್ರಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಹಿಂದಿನ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರ ಕಾಲದಲ್ಲಿ ಬರುತ್ತಿರುವ ನೋವು, ಇವುಗಳಿಗೆ ಪರಮ ಔಷಧಿ. ಶೀಶೆ 1, 3, 6ಕ್ಕೆ ರೂ. 1—4—0 3—8—0; 6—12—0

ರೋಮನಾಶಿನಿ:—ಈ ಹುಡಿಯನ್ನು ನೀರಿನಲ್ಲಿ ಕಲಸಿ ಕೂದಲು ತೆಗೆಯಬೇಕಾಗಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಹೋಗುವುದು. ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ. 1 1 ಡಜನಿಗೆ 3—8—0

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆಹೊಟ್ಟು, ಕಣ್ಣುರಿ, ಕಿವಿಯಿಂದ ಕೀವು ಸೋರುವುದು ಕಿವುಡುತನ, ಕಣ್ಣು ನೋವು, ಅಕಾಲದಲ್ಲಿ ಕೂದಲು ಬಾಡಿರುವುದು, ನೆನಪು ಶಕ್ತಿ ಕುಂದಿಹೋಗುವುದು. ಇವುಗಳೆಲ್ಲಾ ಖಂಡಿತ ಗುಣವಾಗುತ್ತದೆ. ಉದುರುವ ಕೂದಲನ್ನು ... ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ... ಕೂದಲನ್ನು ಕಪ್ಪಾಗಿಸುತ್ತದೆ. ... ರೂ. 1, 3 ... 2—10—0. ... ರೂ. 2, 3 ... 5—...—0

ವಿಳಾಸ:—**ಮನೋಲ್ಲಾಸಿನಿ ಕಂಪೆನಿ,**

52—44 ... 9. ಮಂಗಳೂರು.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ
ಇವರ
ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,

52—11 ಗಿರಿಗಾಂವ, ಮುಂಬಯಿ.

Printed & published by M. M. Ganapathy at "Kodagu" Press Mer for "Kodagu" Ltd.

೩೩ ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ ಔಷಧಗಳು.

೧. ಧಾತುಪುಷ್ಟಿ ಲೇಹ.

ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕ ಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ಬಾಧೆ, ರಕ್ತ ಪಿತ್ತ, ಒಳ ಜ್ವರ, ಮಲಬದ್ಧತೆ, ಇತ್ಯಾದಿಗಳು ಬಹುಕಾಲದಿಂದ ಪೀಡಿಸುತ್ತಿರುವುದಾದರೆ ಇವು ಪೂರ್ಣ ಗುಣವಾಗಿ ಕಳೆದು ಹೋದ ಶಕ್ತಿಯು ಪುನಃ ಕುಂದಿಕೊಳ್ಳುವುದು.—ಕ್ರಯ ಡಬ್ಬಿ 1ಕ್ಕೆ 2—8—0 ಮೂರು ಡಬ್ಬಿಗಳಿಗೆ ರೂ. 7—0—0

೨. ಅಶೋಕಾರಿಷ್ಟ ಮತ್ತು ಸೂತ್ರೆ.

ಹೆಂಗಸರ ಮುಟ್ಟಿನ ದೋಷಗಳು, ಅತಿ ಋತುಸ್ರಾವ, ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟ ನೋವು, ಸಂತಾನ ಹೀನತೆ, ಮೂರ್ಛೆ, ಮಲಬದ್ಧತೆ, ಒಳಜ್ವರ, ರಕ್ತಹೀನತೆ, ಕೈಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಅತಿ ಶೀಘ್ರದಲ್ಲಿಯೇ ಗುಣ ಪಡಿಸುವುದು. ಅಶೋಕಾರಿಷ್ಟ ಮತ್ತು ಮಾತ್ರೆಗಳು ಸಾವಿರಾರು ಹೆಂಗಸರಿಗೆ ಆಂತರಿಕ ಆರೋಗ್ಯವನ್ನು ಒದಗಿಸಿ, ಮನೋಭಿಲಾಷೆಯನ್ನು ಪೂರಯಿಸಿರುವವು.

ಕ್ರಯ 1 ಬಾಟ್ಲಿ ಔಷಧ, 1 ಡಬ್ಬಿ ಮಾತ್ರೆ, ರೂ. 2 ಆ. 4
3 ಬಾಟ್ಲಿ ಮತ್ತು ಡಬ್ಬಿಗಳಿಗೆ ರೂ. 6 ಆ. 4.

೩. ಮಲೇರಿಯಾ ನಿವಾರಣೆ.

ದಿನ ಬಿಟ್ಟು ಬರುವ ಜ್ವರ, ಚಳಿ ಜ್ವರ, 2 ಯಾ 3 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರ ಗಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರ ಗಡ್ಡೆಯನ್ನು ಕರಗಿಸಿ ಶಕ್ತಿಯನ್ನು ಉಂಟು ಮಾಡುತ್ತದೆ. ಬಾಟ್ಲಿ 1ಕ್ಕೆ 1—8—0, 3 ಬಾಟ್ಲಿಗಳಿಗೆ 4—2—0.

೪. ಮೇಹ ಕುಠಾರ. ಇದು ಮೂತ್ರಸ್ಥಾನದಿಂದ ಕೆಂಪು, ಬಿಳಿದು, ಹಳದಿಯಂತೆ ಹೋಗತಕ್ಕ ಕೀವನ್ನೂ, ವ್ರಣವನ್ನೂ, ಉರಿಯನ್ನೂ ಗುಣಪಡಿಸುತ್ತದೆ. ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7.

೫. ಇಛ್ಛಾ ಭೇದಿ ಗುಟಿಕೆ. ಆಯಾಸವನ್ನು ಉಂಟುಮಾಡುವ ಸುಖ ವಿರೇಚಕ. ಬಾಟ್ಲಿ 1ಕ್ಕೆ 0—12—0 ಆಣೆ. 3 ಬಾಟ್ಲಿಗಳಿಗೆ 2—2—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕ ವಾದ ಔಷಧಿ ರವಾನಿಸಬಹುದು. ಕೆಟಲಾಗು ತರಿಸಿ ನೋಡಿರಿ.

ಎಮ್. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್,
52—25 ರಥಬೀದಿ, ಮಂಗಳೂರು, ದ. ಕನ್ನಡ

ಭಂಗಾರದ ಕೈಗಡಿಯಾರ.



ಈ ಚಿತ್ರದಲ್ಲಿ ಕಾಣುವ ಭಂಗಾರದ ಕೈಗಡಿಯಾರವು ಬಹು ಬಲಿಷ್ಟವಾದ (ಸ್ವಿಸ್ ಮೇಡ್) ಲೀವರ್ ಸಾಮಾನುಗಳಿಂದ ತಯಾರಾದವು. ಸರಿಯಾದ ಗಂಟೆಯನ್ನು ತೋರಿಸುವವು. ಒಳಗಡೆ ಕೆಂಪುಗಳು ಇಟ್ಟಿವೆ. ಇದು ಚಿನ್ನವು, ಭಂಗಾರಕ್ಕೆ ಸರಿಯಾಗಿರುವದು. ಇದನ್ನು ಈ ಕಾರಣದಿಂದ ತರಿಸಿಕೊಳ್ಳುವವರಿಗೆ ಒಂದು ವಜ್ರದ ಉಂಗುರ, ಒಂದು ರೋಲ್ಡ್ ಗೋಲ್ಡ್ ಭಂಗಾರದ ಕಾಸಿನ ಸಾರ (ಚೇನು), ಒಂದು ಟೇಬಲ್ ಟೈಂಪೀಸ ಇನಾಮು ಕೊಡುವೆವು. 2 ಗಡಿಯಾರಗಳಿಗೂ ಬಿಡಾಕ್ರಿಯದ 4 ವರ್ಷ ಗ್ಯಾರಂಟಿ ಪತ್ರ ಸಹ ಕಳುಹಿಸುವೆವು.

3 ಬಹುಮಾನಗಳ ಸಹಿತ ರಿಸ್ಟವಾಚ್ 1 ಕ್ಕೆ 5—8—0.

ವಿಳಾಸ:— ಸಿಟಿ ವಾಚ್,
12—13 168, ಜೈನಾ ಬಜಾರ್, ಮದರಾಸು.

12 ಸೆಂಟ್ ಬಾಟಲ್, ಜೆಸ್ಮಿನ್ ಸೆಂಟ್ ಲೀವರ್ ವಾಚ್ ವಾಚ್ 2—12—0 ಮಾತ್ರ.

ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ

ಲಿಲ್ಲಿ ಆಫ್ ದಿ ವ್ಯಾಲಿ ಮತ್ತು ಜೆಸ್ಮಿನ್ ಸೆಂಟ್.



ಈ ಸುಗಂಧ ದ್ರವ್ಯವು ಫ್ರಾನ್ಸ್ ದೇಶದಲ್ಲಿ ಪುಷ್ಪಗಳ ಸಾರದಿಂದ ತಯಾರಿಸಿದ್ದು. ಇದರಲ್ಲಿ ಮದ್ಯಸಾರಗಳು ಯಾವವೂ ಸೇರಿರುವುದಿಲ್ಲ. ಇದರಲ್ಲಿ ಒಂದೇ ಒಂದು ತೊಟ್ಟನ್ನು ಬಟ್ಟೆಗೆ ಹಾಕಿದರೆ ಒಂದು ವಾರದ ವರೆಗೂ ಒಂದೇ ಸರಿಯಾಗಿ ಗಮಗಮಿಸುತ್ತಿರುವುದು. ಲಿಲ್ಲಿ ಆಫ್ ದಿ ವ್ಯಾಲಿ ಎಂಬ ಈ ಸುಗಂಧ ದ್ರವ್ಯಕ್ಕೆ ಸರಿಸಮಾನವಾದದ್ದು ಬೇರೊಂದು ಇಲ್ಲ. ವಿಲಾಯಿತಿಯಲ್ಲಿ ತಯಾರಾದ 14 ಕ್ಯಾರೆಟ್ಟಿನ ಭಂಗಾರದ ನಿಬ್ಬು ಹಾಕಿದ ಫೌಂಟೆನ್ ಪೆನ್, ಒಂದೇ ಸಲ 12 ಸೆಂಟ್ ಬಾಟಲ್, ಪೆನ್ ತರಿಸುವವರಿಗೆ ಒಂದು ಪಾಕೆಟ್ ವಾಚನ್ನು ಇನಾಮಾಗಿ ಕೊಡುತ್ತೇವೆ.

ಕ್ರಯ ರೂ. 2—12—0 ಮಾತ್ರ.

The Legal Trading Co.
12—? P. B. 243, Madras.

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಎಂಬುವ ಸುಪ್ರಸಿದ್ಧ ದೇಶೀಯ ವಿಮೋ ಸಂಘ.

ಅಧ್ಯಕ್ಷರು:—ಮಾನನೀಯ ಸರ್ ಲಲ್ಲೂಭಾಯಿ ಸಾಮಲದಾಸ್,
ಕೆಟಿ., ಸಿ. ಐ. ಇ., ಜೆ. ಪಿ., ಯವರು.

ಕೊಚ್ಚಿಕಾರ ಬ್ರದರ್ಸ್, ಮದ್ರಾಸು ಬ್ರಾಂಚು ಸೆಕ್ರೆಟರಿಗಳು.

1. ಭಾಗ್ಯವಂತರ ಭಂಡಾರ, ವ್ಯಾಪಾರಸ್ಥರ ಕೋಶಾಗಾರ, ಕುಟುಂಬದ ಸಂರಕ್ಷಣಾನಿಲಯ. ಬಡವರ ಜೀವನಾಧಾರ ಇದೇ ಜೀವ ವಿಮೆಯ ತತ್ವವು.

2. ಹಿಂದೂಸ್ಥಾನದ ನಿವಾಸಿಯರಲ್ಲಿ ವಿಮಾ ತೆಗೆಯಬೇಕೆನ್ನುವವರ ಪ್ರಯೋಜನಾರ್ಥವಾಗಿ ಈ ಕಂಪೆನಿಯು ಭಾರತೀಯರ ಉತ್ತಮವಾದ ಆಡಳಿತದಿಂದ ಖರ್ಚು ಕಡಿಮೆ ಮಾಡಿ ಇಂಡಿಯಾ ಸರಕಾರದ ಇಂಡಿಯನ್ ಟ್ರಸ್ಟ ಆಕ್ಟಿಗೆ ಒಳಪಟ್ಟು ಸರಕಾರದ ಭದ್ರತೆಯಿಂದ ದೇಶೀಯ ಸೇವೆಯಲ್ಲೇ ನಿರತವಾಗಿ ಹಿಂದೂಸ್ಥಾನದ ಎಲ್ಲಾ ಕಡೆಗಳಲ್ಲೂ ಅತಿ ಕೀರ್ತಿಯನ್ನು ಪಡೆದಿರುತ್ತೆ.

3. ಈ ಸ್ವದೇಶೀ ಕಂಪೆನಿಯು ಪೋಲಿಸಿದಾರರಿಗೆ ಪೋಲಿಸಿ ಅವಧಿ ಪೂರ್ತಿಸಿದನಂತರವಾಗಲೀ ಅಥವಾ ಮಧ್ಯದಲ್ಲಿ ಮರಣಾನಂತರ ವಾರೀಸುದಾರರಿಗಾಗಲೀ ಹೆಚ್ಚಿನ ಖರ್ಚಿಗೆ ಆಸ್ಪದ ಕೊಡದೆಯೂ, ದೀರ್ಘ ಸಮಯ ತೆಗೆದುಕೊಳ್ಳದೆಯೂ ಶೀಘ್ರದಲ್ಲಿ ವಿಮೆ ಮೊಬಲಗನ್ನು ಲಾಭ ಸಹಿತ ವಾಪಸುಕೊಡುವುದರಲ್ಲಿ ಹೆಸರುಗೊಂಡಿದೆ.

4. ಭರತಖಂಡದ ಮಹನೀಯರಿಂದ ಸ್ಥಾಪಿಸಲ್ಪಟ್ಟು ದೇಶೀಯರಿಂದಲೇ ಅತಿ ಕಡಿಮೆ ಖರ್ಚಿನಿಂದ ನಡೆಸಲ್ಪಡುವ ಈ ಸ್ವದೇಶೀ ಕಂಪೆನಿಯಲ್ಲಿ ಇಂದು ಭಾಗಿಗಳಾಗಿರಿ; ಪತಿಪತ್ನಿಯರಿಗೆ ಮತ್ತು ವ್ಯಾಪಾರಸ್ಥರು ವಗೈರೆರಿಗೆ ಏಕೀಭವಿಸಿ (ಜಾಯಿಂಟ್ ಲೈಫ್) ಪೋಲಿಸಿ ತೆಗೆದುಕೊಳ್ಳಲು ಈ ಕಂಪೆನಿಯು ಹುಂಬಾ ಅನುಕೂಲಗಳನ್ನು ಕಲ್ಪಿಸಿರುತ್ತೆ. ಇಂಥ ಸುಸಮಯವನ್ನು ಎಂದಿಗೂ ಕಳಕೊಳ್ಳಬಾರದು.

ಆಫೀಸು—
ಹೆಂಪಲ್ ಸ್ಟೈಡ್,
ಮಡಿಕೇರಿ. (26—23)

ಬಿ. ಎಸ್. ಐಯ್ಯಪ್ಪ,
ಕೊಡಗು ಚೀಫ್ ಏಜೆಂಟ್.

ಎಂ. ಎಸ್. ಶಿದ್ದಪ್ಪ ಬ್ರದರ್ಸ್

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.



ಉತ್ತಮ ತರಹ ಒಂದು ಸೆಟ್ ಜರ್ಮನ್ ರೀಡ್ಸ್ ಹಾಕಿರುವ ಸಿಂಗಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 20—0—0
" ಮತ್ತು 22—8—0
ಡಿಟೋ ಉತ್ತಮ ತರಹ ಹಾರ್ಮೋನಿಯಂ
" 1ಕ್ಕೆ ರೂ. 25—0—0
" ಮತ್ತು 27—8—0
ಡಿಟೋ ಉತ್ತಮ ತರಹದ್ದು, ದೂಳು ಬೀಳದಂತೆ ಕೇಸಿನ ಮೇಲೆ ಪೂರ್ತಿ ಮುಚ್ಚಳವುಳ್ಳ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ ರೂ. 27—8—0

4. ಪಾಶ್ಚಿಮಾತ್ಯ ಬ್ಯಾಂಡೋಬಸ್ತು, ಸಂಗೀತ ರಸಿಕರಿಗೂ, ಅನೇಕ ವರ್ಷಗಳ ವರೆಗೆ ಬಾಳಿಕೆ ಬರತಕ್ಕದ್ದೂ ಅತಿ ಹೊಸದಾಗಿ ಸಪ್ಲೈ ಆಗಿರುವ ಫ್ರೆಂಚ್ ರೀಡ್ಸ್ ನಮೂನೆ ಇರುವ ನಮ್ಮ ಹೆಸರಿನ ರೀಡ್ಸ್ ಹಾಕಿರುವ "ಸಿದ್ದಪ್ಪಾಸ್ ಫ್ಲೂಟ್" ಸಿಂಗಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 42—8—0

5. ಉತ್ತಮ ತರಹ 2 ಸೆಟ್ ಜ... ರೀಡ್ಸ್ ಹಾಕಿರುವ, ದೂ... ಕೇಸಿನ ಮೇಲೆ ಪೂರ್ತಿ ... ಡಬ್ಬಲ್ ರೀಡ್ಸ್ ಹಾರ್ಮೋ... ರೂ. 32—8—0

6. ಉತ್ತಮ ತರಹ 2 ಸೆಟ್ ಜರ್ಮನ್ ಮೇಲ್ ರೀಡ್ಸ್ ಹಾಕಿರುವ, ಕೈನಿಂದಾಗಲೀ ಅಥವಾ ಕಾಲಿನಿಂದಾಗಲೀ ಬಾರಿಸಲು ಅನುಕೂಲಿಸುವಂತೆ ತಯಾರಿಸಿರುವ "ಸ್ಪೆಷಲ್ ಫ್ಲೂಟ್" ಡಬ್ಬಲ್ ರೀಡ್ಸ್ ಹ್ಯಾಂಡ್ ಲೆಗ್ ಹಾರ್ಮೋನಿಯಂ 1ಕ್ಕೆ ರೂ. 78—

ನಮ್ಮ ಟಿಂಬರ್ ಡಿಪೋನಲ್ಲಿ ಕಟ್ಟಡಗಳಿಗೂ, ಫರ್ನಿಚರ್ ತಯಾರಿಸಲೂ ಬೇಕಾದ ಎಲ್ಲಾ ನಮೂನೆ ನಾಟಾಗಳನ್ನು ಸುಲಭ ದರದಿಂದ ವಿಕರಿಗಿಟ್ಟಿರುವುದಲ್ಲದೇ, ಗಿರಾಕಿಗಳು ಅಪೇಕ್ಷಿಸುವ ಸೈಜಿಗೆ ಕೊಯಿಸಿಯೂ ರಿಯಾಯಿತಿ ದರದಿಂದ ಸಪ್ಲೈ ಮಾಡುತ್ತೇವೆ. ಹೆಚ್ಚಿಗೆ ವಿಷಯಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಳಾಸ:—ಯಂ. ಎಸ್. ಶಿದ್ದಪ್ಪ ಬ್ರದರ್ಸ್
ಹಾರ್ಮೋನಿಯಂ ಮತ್ತು ಟಿಂಬರ್ ಮರ್ಚೆಂಟ್ಸ್
ಹಾರ್ಡಿಂಜ್ ಸರ್ಕಲ್ ...
52—30

ಬೆಂಗಳೂರು ಸ್ವದೇಶೀ ಸಭೆಯ ಪ್ರಕಟನೆ.

ನಮ್ಮ ದೇಶದ ಭಂಗಾರ ಹಾಗಿ ಹೋದದ್ದು ಎಷ್ಟು?

ದಯವಿಟ್ಟು ಗಮನಿಸಿರಿ!

	ಕೋಟಿ	ಲಕ್ಷ	ಸಾವಿರ
ಕಳೆದ ಸೆಪ್ಟಂಬರ್ ೨೬ನೇ ತಾರೀಖು		೨೬	೧೭
ಅಕ್ಟೋಬರ್ ೩ ,,	೨	೫೫	೫೬
,, ೧೦ ,,	೩	೩೩	೬೯
,, ೧೭ ,,	೨	೦೨	೪೫
,, ೨೪ ,,	೧	೨೩	೯೩
,, ೩೧ ,,	೨	೪೧	೪೩
ನವಂಬರ್ ೭ ,,	೨	೮೯	೫೫
,, ೧೪ ,,	೧	೧೧	೪೯
,, ೨೧ ,,	೨	೬೨	೮೨
,, ೨೮	೩	೩೨	೩೨
ಡಿಸೆಂಬರ್ ೫ ,,	೨	೪೩	೯೯
,, ೧೨ ,,	೪	೩೩	೩೬
,, ೧೯ ,,	೪	೬೨	೪೭
,, ೨೬ ,,	೩	೯೯	೯೯
ಜನವರಿ ೧ ,,	೨	೯೬	೪೧
,, ೮ ,,	೧	೭೦	೪೪
,, ೧೫ ,,	೩	೬೬	೧೭
,, ೨೯ ,,	೨	೧೯	೬೦
ಫೆಬ್ರುವರಿ ೬ ,,	೧	೯೪	೬೮
ಒಟ್ಟು ೪ ತಿಂಗಳಲ್ಲಿ	೪೬	೧೩	೬೮

ಇದುವರೆವಿಗೂ ಭಂಗಾರವು ಬೊಂಬಾಯಿನ ಮಾರ್ಗವಾಗಿ ರಫ್ತಾಗುತ್ತಿತ್ತು; ಬೊಂಬಾಯಿನ ವರ್ತಕರು ಇತರರಿಗಿಂತಲೂ ತ್ಯಾಗಬುದ್ಧಿಯುಳ್ಳವರೆಂದರೆ ಯಾರೂ ಅಗ್ರಗಣ್ಯರೆನ್ನಬೇಕಾಗಿಲ್ಲ. ಭಂಗಾರವನ್ನು ರಫ್ತು ಬಗ್ಗೆ ತೆಗೆಸಿಕೊಂಡು ಮಾಳವೀಯರಂಥವರು ಅವರನ್ನು ಪ್ರಾರ್ಥಿಸಿದರು. ಅದರಂತೆ ಬೊಂಬಾಯಿನ ನ್ಯಾಯವಾದ ಒಹ.ಭಾಗ ನಿಂತಿತು. ಸ್ವಪ್ರಯೋಜನಕ್ಕಾಗಿ ಬರುವ ಲಾಭಕ್ಕೆ ಬೊಂಬಾಯಿನ ವರ್ತಕರು ಆಸೆ ಪಟ್ಟಲಿಲ್ಲ. ದೇಶಹಿತವೇ ಅವರ ಜೀವನವಾಯಿತು. ಇತ್ತೀಚೆಗೆ ಮುದರಾಸಿನ ಮೂಲಕ ಪಶ್ಚಿಮಕ್ಕೆ ಪ್ರಾರಂಭವಾಗಿರುವಂತೆ ತಿಳಿಯಬರುತ್ತದೆ. ಬೊಂಬಾಯಿನಷ್ಟು ದೇಶಸೇವೆಯನ್ನು ಮುದರಾಸ್ ಮಾಡುವುದೆಂದರೆ ಬಹಳ ಅನುಮಾನವೇ ಸರಿ. ಕಾಂಗ್ರೆಸ್ಸಿನವರ ಕಾವಲು ಕಟ್ಟು ಸಹ ಮುದರಾಸಿನಲ್ಲಿ ಅಷ್ಟು ಜೋರಾಗಿ ನಡೆಯುವುದಿಲ್ಲ. ನಮ್ಮ ಇಂಡಿಯಾದಲ್ಲಿರುವ ಒಟ್ಟು ಭಂಗಾರವೆಲ್ಲಾ ಸುಮಾರು ೭೪೭ ಕೋಟಿ ರೂ. ದಷ್ಟಿರಬಹುದು. ಇದೆಲ್ಲಾ ಒಂದು ಘಳಿಗೆಯಲ್ಲಿ ಮಾಯವಾಗುತ್ತದೆ. ಎರಡು ಸಾವಿರ ನಷ್ಟದ ಮೇಲೆ ನಮ್ಮ ಬಾಯಿಗೆ ಮಣ್ಣೇ. ಪ್ರಪಂಚದ ಮುಕ್ಕಾಲು ಪಾಲು ಭಂಗಾರವೆಲ್ಲಾ ಅಮೇರಿಕಾ ಫ್ರಾನ್ಸು ಮತ್ತು ಇಂಗ್ಲೆಂಡಿನಲ್ಲಿ ಸೇರಿಬಿಟ್ಟಿದೆ.

ಮತ್ತೊಂದು ಗುಟ್ಟೇನೆಂದರೆ—ಇಂಡಿಯಾ ದೇಶದಿಂದ ಭಂಗಾರವು ಸಾಗಿಹೋಗಲು ಪ್ರಾರಂಭವಾದ ಮೇಲೆ ಇಂಗ್ಲೆಂಡಿನವರು ಅಮೇರಿಕಾ ಮತ್ತು ಫ್ರಾನ್ಸ್ ದೇಶಕ್ಕೆ ಕೊಡಬೇಕಾಗಿರುವ ಸಾಲದ ಸ್ಥಿತಿ, ೮ ಕೋಟಿ ಪೌಂಡು. ಅಂದರೆ ೧೨ ಕೋಟಿ ರೂಪಾಯಿಯನ್ನು ನಮ್ಮ ದೇಶದಿಂದ ಸೆಳೆದುಕೊಂಡು ಹೋದ ಭಂಗಾರದಿಂದ ತೀರಿಸಿಕೊಂಡರು. ಭಂಗಾರದ ರೂಪವಾಗಿ ಕಟ್ಟಿ ಕೊಂಡು ಅಮೇರಿಕಾ ಫ್ರಾನ್ಸಿನವರಿಗೆ ಹಣವನ್ನು ತೆಗೆದುಕೊಂಡರೆಂದು ಅದಕ್ಕೋಸ್ಕರವೇ ಭಂಗಾರವು ಇಲ್ಲಿಂದ ಸಾಗುತ್ತಿದೆ. ನಮಗೆ ತಿಳಿಯಲಿಲ್ಲ; ಎಂದು ಕಾಸು ಬರುವ ಪ್ರತಿಷ್ಠೆ ಬಿದ್ದಿವೆ. ಕರೆಯುವ ಎಮ್ಮೆ ಕರುವಿನ ಕೋಣನನ್ನು ಕಟ್ಟಿಕೊಂಡಂತಾ...

ಬರುತ್ತದೆಂದು ನಾವು ಭಂಗಾರವ ನ್ನೇನೋ ಬಿಡಬಹುದು. ಅದು ಕೊಡಾಗುತ್ತದೆ. ತಾ ಕಾಸಿನ ಬರುವ ಒಂದೆರಡು ರೂಪಾಯಿ ಭಂಗಾರವನ್ನು ಮಾರುವುದು ಧೆಪ್ಪೇಕಾಪುರ ... ಏಜೇಯವರು ಅಪ್ಪಣೆ ಕೊಡು ವಿ. ಇದನ್ನು ಮಾಡುವುದರಿಂದ ಶಕ್ತಿ ಕಾಸಿಲ್ಲದೆ ಈ ಪುರಂದರದಾಸರಾಗಿರುವುದಕ್ಕೆ ಬೇರೆ ಕಾರಣಗಳ ... ದಾರಿದ್ರ್ಯತನವು ಮಾಯ ಭಂಗಾರ ಮಾರುವುದ ಗುವುದಿಲ್ಲ. ಅವ್ಯಕ್ತ ಸಿಕ್ಕಲಿಲ್ಲವೆಂದು ವಿಷ ತೆಗೆಯಾಗುತ್ತದೆಯೋ?

೪ ವಸ್ತುಗಳನ್ನು ಕೊಂಡುಕೊಳ್ಳುತ್ತಿರುವುದೇ ಕಾರಣ. ಸ್ವದೇಶೀವ್ರತವನ್ನು ಸ್ವೀಕರಿಸ... ವೃದ್ಧಿಯುಂಟಾಗುತ್ತದೆ. ಇದು ನಿಜವಾ... ದೃಷ್ಟದಾಗಿ ಕಾಣದೇ ಇರಬಹುದು. ..., ಮಾಳವೀಯರೇ ಮೊದಲಾದ ಅಗ್ರಗ... ಅರ್ಥಶಾಸ್ತ್ರವಿಶಾರದರಾದ ಇತರೇ... ವಿಷಯವನ್ನು ಅಮೂಲಾಗ್ರವಾಗಿ ವಿ... ... ಶಾಸನಕಾರರು ಗುಟ್ಟನ್ನು ಹೊ... ...ತೆಸ್ತು ಪ್ರಸಿದ್ಧಪಡಿಸುವ ಅವಶ್ಯಕ...

...ಯಿಲ್ಲ. ಮನೆಯ ಭಂಗಾರವನ್ನು ಮಾರಬೇಡಿರೆಂದು ಅವರು ಹೇಳಿರುವುದನ್ನು ಪಾಲಿಸೋಣ. ಅಂಕದ ಕೋಳನ್ನು ನೆಚ್ಚಿ ವರುಷದ ಕೋಳನ್ನು ಕಳೆದುಕೊಳ್ಳಬಹುದೇ?

"ಸ್ವದೇಶಿ" ವ್ರತವನ್ನು ಕೈಕೊಳ್ಳಿರಿ.

ಸ್ವದೇಶಿ ವ್ರತಕ್ಕೆ ನೀವು ಸಂಕಲ್ಪ ಮಾಡಿದರೆ, ನಮ್ಮ ದೇಶದ ಹಣವು ನಮ್ಮಲ್ಲೇ ನಿಲ್ಲುತ್ತದೆ. ಸಾಮಾನುಗಳಿಗೆ ನೀವು ಕೊಡುವ ದುಡ್ಡು ನಮ್ಮ ದೇಶದ ಕಸಬುದಾರರಿಗೇ ಉಳಿಯುತ್ತದೆ. ನೀವು ಕಸಬುದಾರರಾದರೆ, ನಿಮ್ಮ ತಯಾರಿಯ ಮಾಲಿನ ದುಡ್ಡು ನಿಮಗೇ ಸಿಗುತ್ತದೆ. ಬಡತನವು ತಪ್ಪಿ ಹೋಗುತ್ತದೆ. ಈ ಬಡತನವನ್ನು ತಪ್ಪಿಸಿಕೊಳ್ಳುವುದಕ್ಕಿಲ್ಲವೆ, ನೀವು ಭಂಗಾರವನ್ನು ಮಾರುತ್ತಿರುವುದು? ನಿಮ್ಮ ಕೈಗಾರಿಕೆಯಿಂದ ದುಡ್ಡು ಮಿಕ್ಕರೆ, ಆಗ ಭಂಗಾರವನ್ನು ಮಾರಿ ಬಡತನವನ್ನು ನೀಗಬೇಕೆಂಬ ಚಪಲವು ತಪ್ಪುತ್ತದೆ. ಆತುರ ಪಡಬೇಡಿ. ಇಂದಿಲ್ಲದಿದ್ದರೆ ನಾಳೆ ದುಡ್ಡು ಮಿಗುತ್ತದೆ. ಸ್ವದೇಶೀವ್ರತದ ರಹಸ್ಯವೇ ಇದು. ಆತುರಪಟ್ಟು ಭಂಗಾರವನ್ನು ಈ ದಿನ ಮಾರಿಬಿಟ್ಟರೆ, ನಾಳೆ ನಿಮಗೆ ಪುನಹ ಸಿಕ್ಕುವುದಿಲ್ಲ. ಒಂದಕ್ಕೆ ಮೂರು ಬೆಲೆಯನ್ನು ಕೊಟ್ಟರೂ ಸಿಕ್ಕಲಾರದು. ಬೆಳ್ಳಿಯನ್ನು ನೆಚ್ಚಿಕೊಳ್ಳಬೇಡಿ. ಕಬ್ಬಿಣ ನೋಟು ಭಂಗಾರದಂತೆ ಭ್ರಮಿಸಬೇಡಿ. ಭಂಗಾರವೊಂದೇ ಗಟ್ಟಿಯಾದದ್ದು. ಪ್ರಪಂಚದ ಇತರೆ ಎಲ್ಲಾ ಜನಾಂಗದವರೂ ಭಂಗಾರವನ್ನು ಭದ್ರಮಾಡುತ್ತಿದ್ದಾರೆ. ಒಡುಕರೇ! ಕಂದಿಸುವ ವರೆಗೂ ಹಾಗೇನೆ ಮಾಡಬೇಡಿ. ನೀವು ಕೂಡ ಹಾಗೇ ಮಾಡುತ್ತೀರಲ್ಲವೆ? ಸ್ವದೇಶೀ ವ್ರತವನ್ನು ಆಚರಿಸುವಿರಾ? ಹಾಗಾದರೆ ಪ್ರತಿಜ್ಞೆ ಮಾಡಿ, ದಯವಿಟ್ಟು ಈ ಕ್ಷಣವೇ ಪ್ರತಿಜ್ಞೆ ಮಾಡಿ!

ಸ್ವದೇಶೀ ವ್ರತದ ಪ್ರಮಾಣಗಳು.

೧. ಖಾದಿಯನ್ನೇ ಧರಿಸುತ್ತೇನೆ.
೨. ದುಂದು ಖರ್ಚನ್ನು ಕಡಿಮೆ ಮಾಡುತ್ತೇನೆ.
೩. ಇಂಡಿಯಾ ದೇಶದ ಮಾಲನ್ನು ಹೊರತು ಮತ್ತಾವುದನ್ನೂ ಕೊಳ್ಳುವುದಿಲ್ಲ.
೪. ಭಂಗಾರವನ್ನು ಮಾರುವುದಿಲ್ಲ.

ಕೆಟ್ಟ ಮೇಲೆ ಬುದ್ಧಿ

... ಕೆಲಸಕ್ಕೆ ಬರತಕ್ಕ ಫಲವೇನು? ಮೊದಲು ಯೋಚಿಸಬೇಕಾಗಿತ್ತು. ಆದರೆ ಈ ಅಭಿಪ್ರಾಯವು ಅಧಿಕಾರಿಗಳಿಗೂ ಅಹಂಕಾರಿಗಳಿಗೂ ಎಂದೂ ತೋರುವುದಿಲ್ಲ. ಹೀಗೆಯೇ ನಮ್ಮ ಮೈಸೂರಿನ ಹೋರಾಟವೂ ಹೋಯಿತು. ಇವರು ಡಾಕ್ಟರ್ ಪೀಟರ್ಸ್‌ರವರನ್ನು ಮುಂದಿಟ್ಟು ದೂರದೃಷ್ಟಿ ಇಲ್ಲದ ವ್ಯಸನವನ್ನು ಸೂಚಿಸಿದರು. ಡಾಕ್ಟರ್ ಪೀಟರ್ಸ್ ಒಬ್ಬ ಮದರಾಸಿನ ಪಾದ್ರಿ ... ಜನವರಿ ತಾ. 15 ರಲ್ಲಿ ಸತ್ಯಾಗ್ರಹಿಗಳು ಸೆರೆ. ವರ್ತಕರಿದ್ದ ಪರದೇಶಿ ಬಟ್ಟೆ ಅಂಗಡಿಗಳ ಬಾಗಿಲಲ್ಲಿ ಹೋಗಬೇಕಿತ್ತು. ಇವರು ಖದ್ದರ್ ಬಟ್ಟೆಯನ್ನು ಧರಿಸಿ ಅದೇ ದಾರಿಯಾಗಿ ನಡೆದು ಹೋಗುತ್ತಿದ್ದಾಗ ಪೋಲೀಸಿನವರು ಅವರನ್ನು ಸತ್ಯಾಗ್ರಹಿಯೆಂದು ತಿಳಿದು ಅವರ ಮೇಲೆ ನೀರನ್ನು ಎರಚಿ ಸ್ವಲ್ಪ ತಪ್ಪು ಮಾಡಿದರು. ಇಂಥಾ ಅಧಿಕಾರಿಗಳನ್ನೂ ಪ್ರೇಮಿಗಳನ್ನೂ ಈ ಸ್ಥಿತಿಗೆ ತಂದದ್ದು ಬಹಳ ವ್ಯಸನಕರವು. ಇದರ ವಿಷಯವಾಗಿ ಕೆಲವು ದಿನಗಳ ಹಿಂದೆ ಹೌಸ್ ಆಫ್ ಕಾಮನ್ಸಿನಲ್ಲಿ ಪ್ರಶ್ನೆಯು ಬಂದು ಅದನ್ನು ಚಮತ್ಕಾರವಾಗಿ ನಿವಾರಿಸಿದರು. ಆದರೆ ಈಗ ಸ್ಟೇಟ್ ಸೆಕ್ರೆಟರಿಯವರು ಎಚ್ಚತ್ತು, ವಾರ್ ಮಂಟ್ ಬಂದಿರಬಹುದು. ಪೀಟರ್ಸ್‌ರವರಿಗೆ, ಪೀಟರ್ಸ್‌ರವರನ್ನು ದಸ್ತಗಿರಿ ಮಾಡಿದ್ದು ತುಂಬಾ ತಪ್ಪೆಂದೂ ಇದಕ್ಕಾಗಿ ಪಶ್ಚಾತ್ತಾಪಪಡುವುದಾಗಿ ತಿಳಿಸಿರುವರು. ಇಂಥಾ ನೀತಿಯನ್ನು ಅರಿತ ಮೇಲೆ ಜೈಲಿನಲ್ಲಿರುವ ಸ್ವಯಂಸೇವಕರ ಮೇಲೆ ತಮ್ಮ ಕೃಪೆಯನ್ನು ದಯಪಾಲಿಸುವರೋ ಎಂದು ಆತುರದಿಂದ ನಿರೀಕ್ಷಿಸುತ್ತಿದ್ದೇವೆ.

ಮಂಡಾಳ

ಪತ್ರವ್ಯವಹಾರ.

[ಬಾತ್ಮಿದಾರರು ಬರೆವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಲೋವರ್ ಸೆಕೆಂಡರಿ ಪರೀಕ್ಷೆ.

ಈಗ ಕೆಲವು ವರ್ಷಗಳಿಂದ ಲೋವರ್ ಸೆಕೆಂಡರಿ ಪರೀಕ್ಷೆಯನ್ನು ನಡಿಸಲು ಕಾಲಾ ಕಾಲ್ ಇನ್‌ಸ್ಪೆಕ್ಟರವರ ಜವಾಬ್ದಾರಿಯಲ್ಲಿ ಒಂದು ಬೋರ್ಡು ಇತ್ತಷ್ಟೆ. ಈ ವರ್ಷ ಅಂಥಾ ಬೋರ್ಡಿನ ಪರೀಕ್ಷೆಯನ್ನು ನಿಲ್ಲಿಸಿ ಆಯಾಯ ಹೈಯರ್ ಎಲಿಮೆಂಟರಿ ಶಾಲಾ ಹೆಡ್ ಮಾಸ್ಟರೇ ಶಾಲಾ ಸಬ್ ಅಸಿಸ್ಟೆಂಟ್ ಇನ್‌ಸ್ಪೆಕ್ಟರವರ ಮೊಖಾ ಪರೀಕ್ಷೆ ಮಾಡಿ ಕಳುಹಿಸುವುದೆಂದು ನಿಶ್ಚಯವಾಗಿ ಶಾಲೆಗಳಿಗೆ ಸರ್ಕ್ಯುಲರ್ ಕಳುಹಿಸಲಾಗಿದೆ. ಮೂರು ಶಾಲೆಗಳಲ್ಲಿ ಓದುವ ವಿದ್ಯಾರ್ಥಿಗಳಿಗೆ ಇದರಿಂದ ಯಾವ ತೊಂದರೆಯೂ ಇಲ್ಲ. ಆದರೆ ಹೈಯರ್ ಎಲಿಮೆಂಟರಿ ಶಾಲೆಗಳಿಂದ ಹೈಸ್ಕೂಲಿಗೆ ಬರುವ ವಿದ್ಯಾರ್ಥಿಗಳನ್ನು ಹೈಸ್ಕೂಲು ಹೆಡ್ ಮಾಸ್ಟರು ಪುನಹ ಪರೀಕ್ಷಿಸುತ್ತಾರೆಂಬ ಒಂದು ವರ್ತಮಾನವು ಹುಟ್ಟಿ ಹಬ್ಬಿದೆ. ಹಾಗಾದರೆ ಸಬ್ ಅಸಿಸ್ಟೆಂಟ್ ಇನ್‌ಸ್ಪೆಕ್ಟರವರ ಮೊಖಾ ಮಾಡಿದ ಪರೀಕ್ಷೆಯಿಂದೇನು ಲಾಭವಾಯಿತು. ಬೋರ್ಡ ಪರೀಕ್ಷೆಯನ್ನು ನಿಲ್ಲಿಸಿದ ಉದ್ದೇಶವು ಎಷ್ಟರ ಮಟ್ಟಿಗೆ ಸಫಲವಾದಂತಾಯಿತು? ಹೈಯರ್ ಎಲಿಮೆಂಟರಿ ಶಾಲೆಯಿಂದ ಹೋಗುವ ವಿದ್ಯಾರ್ಥಿಗಳನ್ನು ಪುನಹ ಪರೀಕ್ಷಿಸುತ್ತಾರೆಂಬ ವರ್ತಮಾನವು ನಿಜವೇ! ಈ ವಿಷಯಗಳಲ್ಲೆಲ್ಲಾ ಇದಕ್ಕೆ ಸಮ್ಮಂದಪಟ್ಟ ಅಧಿಕಾರಿಗಳು ವಿದ್ಯಾರ್ಥಿಗಳ ಪೋಷಕರಿಗೆ ಉಪಕಾರವಾಗುವಂತೆ ನಿಜಾಂಶಗಳನ್ನು ಪ್ರಕಟಿಸಿ ಪೋಷಕರನ್ನು ಸಮಾಧಾನಗೊಳಿಸುವರೆಂದು ನಂಬೋಣವೆ?

ಪೋಷಕ.

ಸ್ತ್ರೀ ಪುರುಷರ ಪ್ರೀತಿಯ ಮರ್ಮಗಳನ್ನು ಚಿತ್ರಪಟಗಳ ಸಹಿತ ಇದ್ದದ್ದನ್ನು ಇದ್ದ ಹಾಗೆ ತಿಳಿಸುವ

ಸ್ತ್ರೀ ದಾಂಪತ್ಯ ರಹಸ್ಯವೆಂಬ ಮರ್ಮ ಶಾಸ್ತ್ರ.

ಈ ಪುಸ್ತಕವು ಫ್ರೆಂಚ್, ಹಿಂದೂಸ್ಥಾನಿ ಭಾಷೆಗಳಲ್ಲಿ ಬಹುಕಾಲದಿಂದ ಗುಪ್ತವಾಗಿತ್ತು. ಈಗ ನಾವು ಎಲ್ಲರಿಗೂ ವಿವರವಾಗಿ ತಿಳಿಯುವಂತೆ ಸುಲಭ ಶೈಲಿಯ ಕನ್ನಡ ಭಾಷೆಯಲ್ಲಿ ಭಾಷಾಂತರಿಸಿ ಫೋಟೋಗಳ ಸಹಿತ ಅಂದವಾಗಿ ಮುದ್ರಿಸಿರುತ್ತೇವೆ. ಈ ಪುಸ್ತಕದಲ್ಲಿ ಸ್ತ್ರೀಪುರುಷರಿಗೆ ಬೇಕಾದ ಎಲ್ಲ ಮರ್ಮರಹಸ್ಯಗಳು, ಪುರುಷರು ಸ್ತ್ರೀಯರಲ್ಲಿ ನಡೆದುಕೊಳ್ಳಬೇಕಾದ ಬಗೆ, ಸ್ತ್ರೀಪುರುಷರ ಜಾತಿಯ ಲಕ್ಷಣಗಳು, ಸ್ತ್ರೀಯರಿಗೆ ಬೇಕಾದ ಅನೇಕ ಗುಪ್ತ ವಿಷಯಗಳು, ಸಂಭೋಗದ ಕಾಲ, ಗರ್ಭ ಧರಿಸುವುದು, ಗರ್ಭ ನಿಂತು ಹೋಗುವುದು, ಸಂಭೋಗದಿಂದಾಗುವ ಸಂತೋಷ, ಜನನೇಂದ್ರಿಯಗಳ ವರ್ಣನೆ, ಹಸ್ತ ಪ್ರಯೋಗದಿಂದಾಗುವ ಹಾನಿ, ಗರ್ಭಿಣಿಗೆ ಬೇಕಾದ ಅನೇಕ ಮರ್ಮಸೂಚನೆಗಳು, ಶಿಶು ಉತ್ಪತ್ತಿ, ವಿಧ, ಗುಪ್ತ ವೈದ್ಯಗಳ ಚಿಕಿತ್ಸೆ, ಶಯನ ಗೃಹದ ರಹಸ್ಯನಿಯಮಗಳು, ಮಾನವ ಶರೀರದ ಮರ್ಮಗಳ ವಿವರ, ನಪುಂಸಕತ್ವಕ್ಕೆ ಚಿಕಿತ್ಸೆ, ಇನ್ನೂ ಸ್ತ್ರೀಪುರುಷರುಗಳಿಗೆ ಬೇಕಾದ ಅನೇಕ ರಹಸ್ಯಗಳು ಚಿತ್ರಪಟಗಳ ಸಹಿತ ಇರುತ್ತವೆ.

ಕ್ರಯ: ಪುಸ್ತಕ ೧ಕ್ಕೆ ೧ ರೂಪಾಯಿ

The Legal Trading Co.,
12—1 P. B. 243, Madras.

ಬಂದೂಕುಗಳು. GUNS.



ಇತ್ತ ವಿಲಾಯಿತಿಯಲ್ಲಿ ತಯಾರಾದ ... ಇವುಗಳನ್ನು ... ಲೈಸನ್ಸ್ ಪಡೆಯಬೇಕಾಗಿಲ್ಲ ... ಭಯವೂ ಇಲ್ಲದೆ ಕೈಯಲ್ಲಿ ಹಿಡಿದುಕೊಂಡು ತಿರುಗಬಹುದು.

೧೦೦ ರವೆಗಳ ಸಹಿತ ಕ್ರಯ ೧ಕ್ಕೆ ೫—೨—೦

ಯಂ. ಲಿಯೋ ಅಂಡ್ ಕೋ,
12—1 168, ಪೈಸಾ ಬಜಾರ್ ಮದರಾಸ್

ಎಂಪೈರ್ ಆಫ್ ಇಂಡಿಯಾ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

(ಸ್ಥಾಪನೆಯಾದದ್ದು 1897.)

ಹಿಂದೂಸ್ಥಾನದಲ್ಲಿ ಪ್ರಾಮುಖ್ಯವೂ, ಜನಪ್ರಿಯವೂ ಆಗಿರುವ ಈ ಕಂಪನಿಯಲ್ಲಿ ನೀವು ಜೀವ ವಿಮೆ ಮಾಡುವುದಕ್ಕೆ ಇದೇ ತಕ್ಕ ಸಮಯ.

ಬೋನಸ್ ವರ್ಷ! ಬೋನಸ್ ವರ್ಷ!!

ಸಾಹಸವಂತರಾದ ಏಜೆಂಟರು ಬೇಕಾಗಿದೆ.

ಹೆಡ್ ಆಫೀಸು:— ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ.

ಬ್ರಾಂಚ್ ಆಫೀಸು:— 152—3 ಸುಲ್ತಾನ್‌ಪೇಟೆ, ಬೆಂಗಳೂರು.

52—26

ವರ್ತಮಾನ ಸಂಗ್ರಹ.

ಒಳದೇಶ.

ಚೀಫ್ ಕಮಿಶನರವರು ಕೊಡಗಿನಲ್ಲಿ ಸುಮಾರು ಮೂರು ತಿಂಗಳ ವರೆಗೆ ಇರುತ್ತಾರೆಂತ ವರ್ತಮಾನವಿದೆ.

ಕುಂಜಿಲಗೇರಿ ಗ್ರಾಮದ ಪೊಂಜಂಡ ಮುದ್ದಯ್ಯನೆಂಬವರು ಗುಂಡು ಹೊಡೆದುಕೊಂಡು ಆತ್ಮಹತ್ಯ ಮಾಡಿಕೊಂಡಿರುವರಾಗಿ ವರ್ತಮಾನವಿದೆ.

ಲೋವರ್ ಸೆಕೆಂಡರಿಯ 'ಎಂಟರೆನ್ಸ್' ಪರೀಕ್ಷೆಯು ಇದೇ ತಾರೀಕು 30—31 ಮತ್ತು ಏಪ್ರಿಲ್ 1 ರಲ್ಲಿ ನಡೆಯುತ್ತದೆ ಎಂದು ತಿಳಿಯಬರುತ್ತದೆ.

ಮದ್ರಾಸ್ ಎಗ್ರಿಕಲ್ಚರಿಸ್ಟ್ ಪರೀಕ್ಷೆಗೆ ಹೋಗಿದ್ದವರಲ್ಲಿ ಮೆ. ಬಾಚಿರಣಿಯಂಡ ಗಣಪತಿಯವರೂ ಮತ್ತು ಪಂಡಿಕುತ್ತಿರ ಚಂಗಪ್ಪನವರೂ ಪಾಸಾಗಿದ್ದಾರೆ.

ಮಡಿಕೇರಿ ಮಹದೇವಪೇಟೆ ಮಾರ್ಕೆಟ್ ಹಿಂದುಗಡೆ ಇರುವ ಕೆರೆಗೆ ಯಾರೋ ಒಬ್ಬನು ಬಿದ್ದು ಆತ್ಮಹತ್ಯ ಮಾಡಿಕೊಂಡಿದ್ದಾನಾಗಿ ತಿಳಿಯಬಂದಿದೆ. ಮೃತನು ಬ್ರಾಹ್ಮಣ ಜಾತಿಯವನಂತೆ.

ಹಿಟ್ಲರ್ಸ್ ಕಂಪೆನಿಯ ಏಜೆಂಟರಾಗಿದ್ದ ಮೆ. ಎ. ಡಿ. ಲೋಬೋರವರು ತಾ. 22 ರಲ್ಲಿ ಮೃತರಾದರೆಂತ ತಿಳಿಸಲು ವಿಷಾದಿಸುತ್ತೇವೆ. ಇವರು ಮಡಿಕೇರಿ ಮುನಿಸಿಪಾಲ್ ಕಮಿಟಿ ಮೆಂಬರು ಆಗಿದ್ದರು.

ತಾ. 23,24 ರಲ್ಲಿ [illegible] ನ್ ಟೀಮಿನವರ [illegible] ಮಿನವರೂ ಕ್ರಿಕೆಟ್ ಮೇಚ್ ನಡೆದು [illegible] ಟೀಮ್ ಸೋಲಿಸಲ್ಪಟ್ಟಿತು.

"ಲೋಕಮಾನ್ಯ" ಪತ್ರಿಕೆಯ ಎಡಿಟರಾಗಿದ್ದ ಮೆ. ಒಕ್ಕಲಿಗರ ಬೆಳ್ಳಪ್ಪ ಬಿ. ಎ. ಯವರು "ಜನ್ಮಭೂಮಿ" ಎಂಬ ವಾರಪತ್ರಿಕೆಯೊಂದನ್ನು ಹೊಸದಾಗಿ ಪ್ರಕಟಿಸಲು ಪ್ರಾರಂಭಿಸಿದ್ದಾರೆ. ಇದರ ಮೊದಲನೇ ಸಂಚಿಕೆಯು ನಮ್ಮ ಕೈಸೇರಿದೆ.

ತಾ. 23 ರಲ್ಲಿ ಸಾಯಂಕಾಲ 4 ಗಂಟೆಗೆ ಮಡಿಕೇರಿಯಿಂದ ಮೂರ್ನಾಡಿಗೆ ಹೋಗುವ ಬಸ್ಸು ಮಡಿಕೇರಿಯಿಂದ ಒಂದು ಮೈಲು ದೂರದಲ್ಲಿ ಚರಂಡಿಗೆ ಬಿದ್ದಾಗಿಯೂ ಬಸ್ಸಿನಲ್ಲಿ ಡ್ರೈವರ್ ಕಂಡಕ್ಟರ್ ಮಾತ್ರ ಇದ್ದರಾಗಿಯೂ ಅದರಿಂದ ಅವರಿಗೆ ಏನೂ ಅಪಾಯವಾಗಲಿಲ್ಲವಾಗಿಯೂ ತಿಳಿಯುತ್ತೇವೆ.

ಮಡಿಕೇರಿನಾಡು ಮೇಕೇರಿ ಗ್ರಾಮದಲ್ಲಿ ಸೋದನ್ಯಮುದ್ದಯ್ಯನೆಂಬವರ ದನಗಳನ್ನು ಗದ್ದೆಯಲ್ಲಿ ದೊಡ್ಡಿ ಮಾಡಿ ಕಟ್ಟಿಸಿದ್ದರು. ಪಬ್ಲಿಕ್ ರಸ್ತೆ ಬಳಿ ಇದ್ದ ಈ ದೊಡ್ಡಿಯೊಳಗೆ ಇದ್ದ ಒಂಬತ್ತು ಸಣ್ಣ ದನಗಳ ಪೈಕಿ ಎರಡಕ್ಕೆ ಯಾರೋ 9ನೇ ತಾರೀಕು ರಾತ್ರಿ ಗುಂಡುಹೊಡೆದು ಕೊಂದಿದ್ದಾರೆ. ಯಾರು ಹೊಡೆದವರೆಂತ ಪತ್ತೆಯಾಗಿಲ್ಲ.

ಡಿಸ್ಟ್ರಿಕ್ಟ್‌ಬೋರ್ಡ್ ವೈಸ್ ಪ್ರೆಸಿಡೆಂಟರು ಕಳೆದ ವಾರ ಗೋಣಿಕೊಪ್ಪಲು, ಉತ್ತರ ಕೊಡಗಿನ ಶನಿವಾರಸಂತೆ ಸೋಮವಾರಪೇಟೆ ಕಡೆ ಗ್ರಾಮಗಳಿಗೆ ಸಾನಿಟರಿ ಇನ್ಸ್‌ಪೆಕ್ಟರ ಸಮೇತ ಹೋಗಿ, ಆಸ್ಪತ್ರೆ, ಬಾವಿ, ರಸ್ತೆ, ಶಾಲೆ ವಗೈರೆಗಳನ್ನು ಸಂದರ್ಶಿಸಿದ್ದರೆಂದೂ, ಈ ವಿಷಯ ತಪಶೀಲು ಮುಂದಿನ ಸಂಚಿಕೆಯಲ್ಲಿ ಬರೆಯುತ್ತಾರೆಂದೂ ಒಬ್ಬರು ತಿಳಿಸಿರುತ್ತಾರೆ.

ಡಾಕ್ಟರ್ ಡಿನ್ಸ್ಮೋರರವರು ಮಡಿಕೇರಿಗೆ ಸಿವಿಲ್ ಸರ್ಜನ್ ಚಾರ್ಜಿಗೆ ಬರುವಾಗ ಇವರ ಸ್ಥಳಕ್ಕೆ ನಿಯಮಿಸಲ್ಪಟ್ಟಿದ್ದ ಡಾಕ್ಟರ್ ಸಾಯಿಡಾಸರವರನ್ನು, ವಿರಾಜಪೇಟೆಗೆ ಮಡಿಕೇರಿಯಿಂದ ಡಾಕ್ಟರ್ ಸಿ. ಬಿ. ಕಾರ್ಯಪ್ಪನವರನ್ನೂ ವರ್ಗಾವರ್ಗಿ ಮಾಡಿದ್ದಾರಾಗಿ ತಿಳಿಯುತ್ತೇವೆ. ಮಡಿಕೇರಿ ಆಸ್ಪತ್ರೆಯಲ್ಲಿ ತಾತ್ಕಾಲಿಕ ಕೆಲಸಕ್ಕೆ ಡಾಕ್ಟರ್ ಯಸ್. ಉದ್ದಪ್ಪನವರನ್ನು ನೇಮಿಸಿರುತ್ತಾರಾಗಿ ತಿಳಿಯಬಂದಿದೆ.

ತಾ. 1—4—31 ರಲ್ಲಿ ಮಡಿಕೇರಿ ಪಾರುಪತ್ಯಗಾರರಾದ ಮೆ. ಮುಂಡೇಟಿರ ಅಪ್ಪಚ್ಚುನವರು ರಿಟೈರ್ ಆಗುತ್ತಾರೆ. ಇವರ ಬದಲಿಗೆ ಸೋಮವಾರಪೇಟೆ ಪಾರುಪತ್ಯಗಾರರ. ಮೆ. ಬಾಲೇಕಂಡ ಪೂಣಚ್ಚನವರೂ, ಸೋಮವಾರಪೇಟೆಗೆ ಕುಟ್ಟ ಕೊಪ್ಪಲಿನಲ್ಲಿರುವ ಮೆ. ಪಾಲೇಕಂಡ ಮುತ್ತಪ್ಪನವರನ್ನೂ, ಕುಟ್ಟಕೊಪ್ಪಲು ಪಾರುಪತ್ಯಗೆ ಮೆ. ಚೆಯ್ಯಪ್ಪಂಡ ತಿಮ್ಮಯ್ಯನವರನ್ನೂ, ವೀರರಾಜಪೇಟೆಗೆ ಪೊನ್ನಂಪೇಟೆ ಪಲ್ಲಿರುವ ಮೆ. ಮಡಿಕೇರಿ ಮುಂಡಿ ಮುಂದಣ್ಣನವರನ್ನೂ ಪೊನ್ನಂಪೇಟೆ ಅಸಿಸ್ಟೆಂಟ್ ಪಾರುಪತ್ಯಗೆ ಕೆಲಸಕ್ಕೆ ಮೆ. ಪಟ್ಟದ ನಾಣಪ್ಪನವರನ್ನೂ ನೇಮಿಸಿದ್ದಾರಾಗಿ ತಿಳಿಯುತ್ತೇವೆ.

ಫ್ರೇಜರ್‌ಪೇಟೆ ಹೋಬಳಿ ರಾಮಸ್ವಾಮಿ ಕಣಿವೆ ಶ್ರೀ [illegible]ದೇವರ ದೇವಸ್ಥಾನದಲ್ಲಿ ತಾ. 13—4—32 ರಿಂದ ತಾ. [illegible]—32 ರ ವರೆಗೆ ಉತ್ಸವಾದಿಗಳು ನಡೆಯುತ್ತವೆ. ತಾ. [illegible]ಲ್ಲಿ ಅಂಕುರಾರ್ಪಣ. 14 ರಲ್ಲಿ ಧ್ವಜಾರೋಹಣ, ತಾ. [illegible]ಲ್ಲಿ ರಥೋತ್ಸವ ತಾ. 16 ರಲ್ಲಿ ತೆಪ್ಪೋತ್ಸವ ಮತ್ತು ತಾ. [illegible]ಲ್ಲಿ ತೀರ್ಥಸ್ನಾನ ನಡೆಯುತ್ತವೆ. ಈ ಸಂದರ್ಭದಲ್ಲಿ 15,16 ರಲ್ಲಿ ದನಗಳ ಪ್ರದರ್ಶನವಾಗುತ್ತದೆ. ತಾ. 15 ಪ್ರದರ್ಶನಕ್ಕೆ ಬಂದ ಉತ್ತಮವಾದ ದನಗಳಿಗೆ ಇನಾಮು ಸಹಾ ಹಂಚಲಾಗುತ್ತದೆ. ಈ ಮಹತ್ಕಾರ್ಯಕ್ಕೆ ಸರ್ವರೂ ಸಹಾಯ ಮಾಡಿ ಪ್ರೋತ್ಸಾಹಿಸಬೇಕೆಂತ ಈ ಕಾರ್ಯದ [illegible]ದ ಯಜಮಾನರಾದ ಹೆಬ್ಬಾಲೆ ದೊಡ್ಡ ಬಸಪ್ಪನವರು [illegible]

ಹಿಂದೂದೇಶ.

ಮೀರತ್ ಮೊಕದ್ದಮೆಯಲ್ಲಿ ದೀನಬಂಧು ಸಿ. ಯಫ್. ಆಂಡ್ರ್ಯೂಜರನ್ನು ಬಚಾವು ಸಾಕ್ಷಿಯಾಗಿ ವಿಚಾರಮಾಡಿದರು.

'ಹಿಂದೀ ವಸ್ತುಗಳನ್ನೇ ಕೊಂಡುಕೊಳ್ಳಿ' ಎಂಬ ಸಂಸ್ಥೆಯ ಶಾಖೆಗಳು ಮದ್ರಾಸಿನ ಅನೇಕ ಜಿಲ್ಲೆಗಳಲ್ಲಿ ಸ್ಥಾಪನೆಯಾಗುತ್ತಿದೆ.

ಮಂಡಲಗೋಷ್ಠಿಯ ಮಂಡಲಿಗಳಲ್ಲಿ ಕಾಂಗ್ರೆಸು ಇಲ್ಲದಿರುವುದು ಹಾಸ್ಯಾಸ್ಪದವೆಂದು ಜೋಷಿ ಸಾಹೇಬರು ಈಗ ಹೇಳುತ್ತಾರೆ.

ಕಣ್ಣೂರು, ತಳಿಪರಂಬು ಮತ್ತು ಬಡಗರೆಯಲ್ಲಿ ಕಾಂಗ್ರೆಸ್ ಕೆಲಸ ಮಾಡುತ್ತಿರುವುದಕ್ಕಾಗಿ ಆ ಊರ ಕೆಲವರು ದಸ್ತಗಿರಿಯಾಗಿದ್ದಾರೆ.

ಬಂಗಾಳದ ನಾರಾಯಣ ಪ್ರಸಾದ್ ಎಂಬ ಜಮೀನ್ದಾರನೊಬ್ಬನಿಗೆ ಖೂನಿ ಮಾಡಲು ಪ್ರಯತ್ನಿಸಿದ ತಕ್ಸೀರಿಗೆ 10 ವರ್ಷ ಸಜಾ ಶಿಕ್ಷೆಯಾಗಿದೆ.

ಎಸೆಂಬ್ಲಿ ಸವಾಲ್ ಜವಾಬಿನಲ್ಲಿ ಕಾಂಗ್ರೆಸ್ ಮಹಾಸಭೆಯು ಕಾಂಗ್ರೆಸಿಗೆ ವಿರೋಧವಾದ ಸಭೆಯಾಗಿ ಮಾಡಲ್ಪಟ್ಟಿರುವುದಿಲ್ಲವೆಂಗಿ ಸರ್ಕಾರಿ ಜವಾಬು ಬಂದಿದೆ.

ಖಾನ್‌ಪುರದಲ್ಲಿ ಕಾಂಗ್ರೆಸ್ ಕೆಲಸಗಾರರೆಂತ ಊಹಿಸಲ್ಪಟ್ಟ 14 ಜನರು 24 ಗಂಟೆ ಒಳಗೆ ಊರು ಬಿಟ್ಟು ಹೋಗಬೇಕೆಂತ ಸರ್ಕಾರ್ ನೋಟೀಸು ಕೊಟ್ಟಿತ್ತು.

ಸ್ವಾಂ ಪ್ಯದಿ ಸಿಂಗ್ ಕನ್ನಸ್ಸು ಗಾರ್ವದಿಂದ ನೋಡದ ಇತ್ಯದನ್ನು ಬಂದಕೆಲಕ್ಕಾಗಿ ತಾ. 23ರಲ್ಲಿ ಎಸೆಂಬ್ಲಿಯಲ್ಲಿ ಬಂದ. ಚರ್ಚೆಯಾಗುತ್ತಿದೆ. ಅದರ ಫಲಿತಾಂಶ ತಿಳಿದಿಲ್ಲ.

ಹಿಂದೂಸ್ಥಾನದಲ್ಲೆಲ್ಲಾ ಆಸಹಕಾರಕ್ಕಾಗಿ ದಸ್ತಗಿರಿಗಳು ಕಡಿಮೆಯಾಗಿದೆ. ಆದರೂ ಅನೇಕ ಕಡೆಗಳಲ್ಲಿ ಚಳವಳವು ನಡೆಯುತ್ತಲಿದೆ. ಬೊಂಬಾಯಿ ಪಟ್ಟದಲ್ಲಿ ಚಳವಳವು ಕಡಿಮೆಯಾಗಿರುವುದಿಲ್ಲ.

ಪಂಡಿತ ಜವಾಹರ್‌ಲಾಲರ ಮಾತುಶ್ರೀಯವರಾದ ಶ್ರೀ. ನೆಹರು ಇವರು ಜೋರಿನ ಕಾಯಿಲೆಯಲ್ಲಿದ್ದಾರೆಂಬ ಸುದ್ದಿ ನಿಜವಲ್ಲ. ಅವರು ಲಖನೌ ಪಟ್ಟಣದಲ್ಲಿ ಸೌಖ್ಯವಾಗಿದ್ದಾರೆಂದು ವಾರ್ತೆ ಬಂದಿದೆ.

ಬೊಂಬಾಯಿ 'ಡೈಲಿಮೆಯಿಲ್' ಎಂಬ ಪತ್ರಿಕೆಯಿಂದ ಸರ್ಕಾರವು 6000 ರೂ. ಜಾಮಿನ್ ಕೇಳಿತು. ಈ ಆರ್ಡರಿನ ಮೇಲೆ ಹೈಕೋರ್ಟಿಗೆ ಅಪೀಲಾಗಿ ಡಿಸ್‌ಮಿಸ್ ಆಯಿತು. ಆದ್ದರಿಂದ ಈ ಪತ್ರಿಕೆಯ ಪ್ರಕಟಣೆಯನ್ನು ನಿಲ್ಲಿಸಿದ್ದಾರೆ.

ರಂಗೂನ ತಾ. ೧೯, ಮಹಾತ್ಮಾಜೀಯವರ ಒಬ್ಬ ಮಿತ್ರರಾದ ಶ್ರೀ|| ಮದನಜಿತ ಎಂಬುವವರು ಇವತ್ತಿನ ದಿವಸ ಇನಸೀನ ಜೇಲಿನಲ್ಲಿ ತಮ್ಮ ೬೨ನೇ ವಯಸ್ಸಿನಲ್ಲಿ ಮೃತರಾದರೆಂದು ತಿಳಿಯುವದು. ಇವರು ಮಹಾತ್ಮಾಜೀಯವರ ಸಂಗಡ ದಕ್ಷಿಣ ಆಫ್ರಿಕೆಗೆ ಹೋಗಿದ್ದರು.

ಮದ್ರಾಸ ಸರ್ಕಾರವು ನೋಟೀಸ್ ಒನ್ಸಗಳಿಗೆ ಹಾಕಿದ ಕಾಯಿದೆಯು ಹೆಚ್ಚಾಯಿತೆಂತಲೂ ಅದನ್ನು ಕಡಿಮೆ ಮಾಡಬೇಕೆಂತಲೂ ಯೂರೋಪಿಯನ್ ಜನರ ಮತ್ತು ಇತರರ ಪ್ರತಿನಿಧಿಗಳಿಂದ ಕೂಡಿದ ಕೆಲವರು ಮದ್ರಾಸ್ ಮುಖ್ಯಮಂತ್ರಿಯವರ ಮುಂದೆ ಫಿರ್ಯಾದು ಹೇಳಿದರು.

ಶ್ರೀ: ಜೆ. ಯಂ. ಸೇನ್‌ಗುಪ್ತರನ್ನು ಬಂದೀಖಾನೆಯಲ್ಲಿ ಇಟ್ಟಿರುವುದರಿಂದ ಅವರ ಸ್ವಂತ ಖರ್ಚಿಗೆ ತಿಂಗಳಿಗೆ 167 ರೂ. ಬಟ್ಟೆ ಬರೆಗಾಗಿ 294 ರೂ. ಮತ್ತು ಅವರ ಕುಟುಂಬದ ಖರ್ಚಿಗಾಗಿ ತಿಂಗಳಿಗೆ 100 ರೂ. ಸಹಾ ಕೊಡಲಾಗುತ್ತದೆ ಎಂತ ಎಸೆಂಬ್ಲಿ ಸವಾಲ್ ಜವಾಬಿನಿಂದ ತಿಳಿದು ಬಂದಿದೆ.

ಮದ್ರಾಸ್ ತಾ. ೧೮ ನಾ|| ಪೃಥು ಇವರ ಮಂಗಳಸೂತ್ರವನ್ನು ಕಸಿದುಕೊಂಡು ನ್ಯಾಜಿಸ್ಟ್ರೇಟರು ಕಡೆಗೆ ತಗ್ಗಾಲಾಗಿರುವವರು ಒಪ್ಪಿಸಿದರು. ನಿದರೀ ನಾ|| ಪೃಥು ಇವರನ್ನು ಜೈಲಿನಲ್ಲಿ ಕ ವರ್ಗ ಬಂಧಿಯನ್ನಾಗಿ ಮಾಡಿದ್ದು ಈಗ ಅ ವರ್ಗದ ಬಂದಿಯಲ್ಲಿ ಸೇರಿಸಿರುವರೆಂದು ತಿಳಿಯುವದು.

ಬೊಂಬಾಯಿಯಲ್ಲಿ ಅಂಗಡಿಗಳಲ್ಲಾ, ಮನೆಗಳಲ್ಲೂ ಮಹಾತ್ಮ ಗಾಂಧಿ ಮುಂತಾದವರ ಪಟ್ಟಗಳನ್ನು ತೆಗೆದುಬಿಡಬೇಕೆಂತ ಸರ್ಕಾರವು ಹುಕುಂ ಮಾಡಿತೋ ಎಂತ ಕೇಳಿದ್ದಕ್ಕೆ ಸರ್ಕಾರವು ಹುಕುಂ ಮಾಡಲಿಲ್ಲವಾಗಿಯೂ, ಜನರು ತಾವಾಗಿಯೇ ತೆಗೆದರೆಂತಲೂ ಕೌನ್ಸಿಲಿನಲ್ಲಿ ಜವಾಬು ದೊರೆಕಿತು.

ಮಧ್ಯಪ್ರಾಂತ್ಯದ ಕಟನೀ ಎಂಬ ಪಟ್ಟಣದ ಮಾರ್ಕೆಟ್ಟಿಗೆ ಕ್ರಾಡಕ್ ಮಾರ್ಕೆಟ್ ಎಂಬ ಹೆಸರಿತ್ತು. 1911ರಲ್ಲಿ ಚೀಫ್ ಕಮಿಶನರಾಗಿದ್ದ ಸರ್ ಕ್ರಾಡಕ್ಕರು ಈ ಮಾರ್ಕೆಟ್ಟನ್ನು ತೆರೆದದ್ದರಿಂದ ಈ ಹೆಸರಿತ್ತು. ಈಗ ಈ ಕ್ರಾಡಕ್ಕರು ಗಾಂಧಿಯವರನ್ನು ಆಕ್ಷೇಪಿಸಿದ್ದರಿಂದ ಮಾರ್ಕೆಟ್ಟಿಗೆ ಇದ್ದ ಇವರ ಹೆಸರನ್ನು ತೆಗೆದು ನೆಹರು ಮಾರ್ಕೆಟ್ ಎಂತ ಹೆಸರಿಡಬೇಕೆಂತ ಮುನ್ಸಿಪಾಲಿಟಿಯು ಬಹುಮತದಿಂದ ತೀರ್ಮಾನಿಸಿದೆ.

ಭೋಪಾಲ ಸಂಸ್ಥಾನದ ಹಿಂದುಗಳ ಕಷ್ಟ ನಿವಾರಣೆ ಬಗ್ಗೆ ಹಿಂದೂ ಸಮ್ಮೇಳನ ಒಂದನ್ನು ನಡೆಸಲು ಅಲ್ಲಿ ಬರುವಂತೆ ಸ್ವಾಗತಾಧ್ಯಕ್ಷ ಮುಂತಾದ ಕೆಲವು ಜನರನ್ನು ದಸ್ತಗಿರಿ ಮಾಡಿ ಅಲ್ಲಿ ಮಾಡಿದ್ದು ವ್ಯಸನಕರವೆಂತ ದಿಲ್ಲಿಯಿಂದ ಒಂದು ಟೆಲಿಗ್ರಾಮ್ ಕೊಟ್ಟದ್ದಕ್ಕೆ ಸಂಸ್ಥಾನದ ಕಾರ್ಯಗಳಲ್ಲಿ ಹೊರಗಿನವರು ಕೈಹಾಕಬಾರದೆಂತಲೂ, ಸಮ್ಮೇಳನ ಮಾಡಲು ಅಲ್ಲಿ ಮಾಡಿಲ್ಲವೆಂತಲೂ, ಆಜ್ಞೆ ಕಾನೂನಿಗೆ ವಿರೋಧವಾಗಿ ವರ್ತಿಸಿದವರನ್ನು ಶಿಕ್ಷೆಗೆ ಗುರಿಪಡಿಸಲಾಗುತ್ತದೆ ಎಂತಲೂ ಜವಾಬು ಬಂದಿದೆ.

ಲಾಹೋರಿನಲ್ಲಿ ಈ ವಾರ ನಡೆದ ಮುಸ್ಲಿಮ್ ಕಾನ್‌ಫರೆನ್ಸಿನ ಅಜ್ಮೀರ್ ದಿನ ಅಹ್ರಾರ್ ಪಾರ್ಟಿಯವರಿಗೂ, ಇತರರಿಗೂ ದೊಣ್ಣೆಗಳಿಂದಲೂ, ಇಟ್ಟಿಗೆ ಚೂರುಗಳಿಂದಲೂ ಹೊಡೆದಾಟವಾಯಿತು. ಠರಾವುಗಳೆಲ್ಲವೂ ಭಾಷಣಗಳಿಲ್ಲದೆ ಮಂಜೂರಾದವು. ಮುಸಲ್ಮಾನರು ಕೇಳುವ ಎಲ್ಲಾ ರಿಯಾಯಿತಿಗಳನ್ನು ಸರ್ಕಾರವು ಜೂನ್ ಆಖೈರ್ ಒಳಗೆ ಒಪ್ಪಿಕೊಳ್ಳದೆ ಇದ್ದರೆ ರೌಂಡ್ ಟೇಬಲ್ ಕಾನ್‌ಫರೆನ್ಸಿನೊಂದಿಗೂ, ಸರ್ಕಾರದೊಂದಿಗೂ ಅಸಹಕಾರ ನಡಿಸುವ ಯೋಚನೆ ಮಾಡಿದ್ದಾರೆ. ತನ್ನಿಮಿತ್ತ, ಕಾನ್‌ಫರೆನ್ಸಿನ ಶಾಖೆಗಳನ್ನು ಎಲ್ಲಲ್ಲಿಯೂ ಸ್ಥಾಪಿಸಬೇಕೆಂತಲೂ, ಸ್ವಯಂ ಸೇವಕರನ್ನು ಒಟ್ಟುಗೂಡಿಸಬೇಕೆಂತಲೂ, ಧನ ಶೇಖರಿಸಬೇಕೆಂತಲೂ ನಿಶ್ಚಯಿಸಿದ್ದಾರೆ.

ಬಂಗಾಳದ ಗೋಣಿ ಚೀಲಗಳನ್ನು ತಯಾರಿಸುವ ಕೈಗಾರಿಕೆಯಲ್ಲಿ ಅತೀ ಕಠಿಣ ತರಹದ ಬಿಕ್ಕಟ್ಟು ಬಂದೊದಗಿದೆ. ಈ ಕೈಗಾರಿಕೆಯನ್ನು ನಡಿಸುವವರೆಲ್ಲರೂ ಸೇರಿ ಒಂದು ಸಂಘವನ್ನು ಮಾಡಿಕೊಂಡು ಕೆಲಸಗಾರರಿಂದ ಒಂದು ವಾರಕ್ಕೆ 40 ಗಂಟೆ ಮಾತ್ರ ಕೆಲಸ ಮಾಡಿಸಬೇಕೆಂತ ನಿಶ್ಚಯಿಸಿಕೊಂಡಿದ್ದರು. ಕೆಲವು ಕಾರ್ಖಾನೆಗಾರರು ಈ ಒಪ್ಪಂದಕ್ಕೆ ವಿರೋಧವಾಗಿ ನಡಿಯುವ ಬಗ್ಗೆ ಆ ಸಂಘವನ್ನು ಬಿಟ್ಟು ವಾರಕ್ಕೆ 108 ಗಂಟೆ ಕೆಲಸ ಮಾಡಿಸಲು ಪ್ರಾರಂಭಿಸಿದ್ದಾರೆ. ಇದರಿಂದ ವ್ಯಾಪಾರವೆಲ್ಲಾ ಅವರ ಕೈವಶವಾಗಿದೆ. ಇದರಿಂದ ಗೋಣಿ ಚೀಲದ ವ್ಯಾಪಾರವೇ ಹಾಳಾಗಿ ಕಲ್ಕತ್ತಾದ ಅನೇಕ ಬ್ಯಾಂಕುಗಳಿಗೂ, ವ್ಯಾಪಾರಗಾರರಿಗೂ ಆರ್ಥಿಕ ಸಂಕಟ ಒಂದೊದಗಬಹುದೆಂತಲೂ, ಸರ್ಕಾರಕ್ಕೆ ಸಹ ಇದರ ಫಲ ತಟ್ಟಬಹುದೆಂತಲೂ, ಊಹಿಸಲಾಗಿದೆ.

ವಿದೇಶ.

ವಿ. ಜೆ. ಪಟೇಲರು ವಿಯನ್ನಾಕ್ಕೆ ತಲಪಿದ್ದಾರೆ.

ಚೈನಾ ಜಪಾನ್ ಯುದ್ಧವು ನಿಂತಿದೆ. ಆದರೂ ತಾ. 22ರಲ್ಲಿ ಕೆಲವು ಪಟ್ಟಿನ ಹೊಡೆದಾಟವೂ ಸಾವೂ ಆಗಿದೆ.

ಪೇರೆ ಸ್ಪೈನಿನಲ್ಲಿ ಮಳೆ ಇಲ್ಲದೆ ಬೆಳೆಗೂ ಜನರಿಗೂ ಕಷ್ಟವಾಗಿರುವುದರಿಂದ ಮುಸಲ್ಮಾನ್, ಕ್ರಿಶ್ಚಿಯನ್ ಮತ್ತು ಯಹೂದಿ ಜನರೆಲ್ಲರೂ ಪ್ರಾರ್ಥನೆಗಳನ್ನು ನಡಿಸುತ್ತಿದ್ದಾರೆ. ಒಂದು ಊರಿನ ಮುಸಲ್ಮಾನರು ಮಳೆಗಾಗಿ ಮೂರು ದಿನ ಉಪವಾಸವಿದ್ದರು.

ಲಂಡನಿನ ಒಂದು ಮೀಟಿಂಗಿನಲ್ಲಿ ಮೆ. ಜಿನ್ನಾವರು ಹಿಂದುಸ್ಥಾನದಲ್ಲಿ ಫೆಡರೇಶನ್ ಸರ್ಕಾರವು ಸ್ಥಾಪನೆಯಾಗಲು ಬಹಳ ಕಾಲವಿದೆಂತಲೂ ಹಿಂದೂ ಮುಸ್ಲಿಂ ತಕರಾರುಗಳನ್ನು ಸರ್ಕಾರವು ಬೇಕೆಂತಲೇ ಅತಿ ದೊಡ್ಡದು ಮಾಡಿದೆಯೆಂತಲೂ ಬ್ರಿಟಿಷ್ ಇಂಡಿಯಕ್ಕೆ ಮಾತ್ರ, ಸ್ವರಾಜ್ಯವನ್ನು ಕೂಡಲೇ ಕೊಡಬೇಕೆಂತ ಹೇಳಿದರು.

ಲಂಡನಿನಲ್ಲಿ ಎಂಗ್ಲಿಷ್ ಇಂಡಿಯನ್ ಟೆಂಪರೇನ್ಸ್ ಎಸೋಸಿಯೇಶನ್ ಎಂಬ ಹಿಂದುಸ್ಥಾನದಲ್ಲಿ ಕುಡುಕತನವನ್ನು ನಿಲ್ಲಿಸಲು ಪ್ರಯತ್ನಿಸುವ ಸಂಘದ ಮಹಾ ಸಭೆಯೊಂದು 22ರಲ್ಲಿ ನಡೆಯಿತು. ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯ[illegible]ಕ ವಿನಹ ಹಿಂದುಸ್ಥಾನದಲ್ಲಿ ಕುಡುಕತನವನ್ನು ನಿಲ್ಲಿಸಬಿ ಧ್ಯವಿಲ್ಲವೆಂತ ರೆವೆರೆಂಡ್ ಆಂಡರ್ಸನ್ನರು ಹೇಳಿದರು.

ಇಟೆಲಿಯಲ್ಲಿ ಪತ್ರಿಕಾ ಬಾತ್ಮಿದಾರರಿಗೆ ಗಾಂಧಿಯವರು ಭೇಟಿ ಕೊಟ್ಟು ಹಿಂದುಸ್ಥಾನಕ್ಕೆ ಡನೆ ಅಸಹಕಾರ ಹೂಡುತ್ತೇನೆಂತ ಅವರು ನಿಜವಲ್ಲವೆಂತ ಮಹಾತ್ಮ ಗಾಂಧಿಯವರು ಹ ಅವರನ್ನು ಬಂದಿಖಾನೆಯಲ್ಲಿ ಇಟ್ಟ[illegible] ಹೇಳಿದ್ದು ನಿಜವೆಂತ ಕೆಲವು ಯೂರೋ[illegible]ಲ್ಲಿ ಬರೆದರು. ತಾನು ಮಹಾತ್ಮ[illegible] ಇದ್ದೇನೆಂತಲೂ ಅಂಥಾ ಅಭಿಪ್ರಾ[illegible] ಳಿದ್ದಿಲ್ಲವೆಂತ ಬಹಳ ಖಾಡಿತವಾ[illegible] ಸ್ತರವರು ಬರೆದಿರುತ್ತಾರೆ.

ಐರಿಶ್ ಪಾರ್ಲಿಮೆಂಟಿ[illegible] ಟೀಗೆ ಬಹುಮತ ಬಂದು ಇ[illegible]ರಾಗಿ, ಐರಿಶ್ ಪಾರ್ಲಿಮೆಂಟಿನ ಮೆಂಬರುಗಳ ಬ್ರಿಟಿಷ್ ರಾಜರಿಗೆ ರಾಜಭಕ್ತಿಯನ್ನು ಸೂಚಿಸುವ ಪ್ರಮಾಣ ಮಾಡಬೇಕಾದ್ದಿಲ್ಲವೆಂತ ತೀರ್ಮಾನಿಸಲು ಯೋಚನೆ ಸರ್ಕಾರಕ್ಕೆ ಬಂದಿದ್ದಾರೆ. ಅಲ್ಲದೆ ಐರಿಶ್ ಸ್ವಾತಂತ್ರ್ಯ ಕೊಡುವಾಗ ಆದ ರಾಜಿ ಕರಾರು ಇಂಗ್ಲೆಂಡಿಗೆ ಜಮೀನು ಕೊಡಲು ಒಪ್ಪಿದ 30 [illegible] ದ್ರವ್ಯವನ್ನು ಸಹ ಕೊಡ ಬೇಕಿಲ್ಲವಾಗಿ ಬ[illegible]ಲೂ ತಿಳಿಯಬಂದಿದೆ. [illegible]ಲನಿಗೂ ಐರಿ[illegible] ಸ್ನೇಹಕ್ಕೆ ಭಂಗ ಬರುತ್ತದೋ ಎಂಬ ಸಂದೇಹದಿಂದ ಇಂಗ್ಲೆಂಡಿನವರು ಒಪ್ಪಂದ ಪ್ರಕಾರ ಕೊಡತಕ್ಕ ದ್ರವ್ಯವನ್ನು ಕೊಡದಿದ್ದರೆ ಐರ್ಲೆಂಡಿನಿಂದ ಇಂಗ್ಲೆಂಡಿಗೆ ಬರುವ ಸಾಮಾನುಗಳಿಗೆ ದೊಡ್ಡ ಸುಂಕ ಹಾಕಬೇಕೆಂದು ಪಾರ್ಟಿಯ ಕೆಲವರು ಹೇಳುತ್ತಾರೆ.



ಫಾರೆಸ್ಟ್ ಇಲಾಖೆಯ ಖರ್ಚನ್ನು ಕಡಿಮೆಮಾಡಕೂಡದ ಎಂಬ ವಗೈರೆ ಕಾರಣಗಳಿಂದ ಠರಾವನ್ನು ವಿರೋಧಿಸಿದರು.

ಠರಾವು ವಾಪಸು ತೆಗೆದುಕೊಳ್ಳಲಾಯಿತು.

27. ಫಾರೆಸ್ಟ್ ಇಲಾಖೆಯ ಖರ್ಚು ಕಡಿಮೆಮಾಡಿ ಗ್ರಾಮಾಂತರಗಳಿಗೆ ಕುಡಿಯುವ ನೀರಿನ ಭಾವಿಗಳನ್ನು ಮಾಡಿಕೊಡಬೇಕೆಂಬ ಠರಾವನ್ನು ಮೆ. ಪಿ. ಎ. ಚಂಗಪ್ಪನವರು ತಂದರು. ಕಮಿಟಿಯವರು ಸಹಾನುಭೂತಿ ತೋರಿಸಿದರು. ಮಿಸ್ಟ್ರ್ ಮೆಕ್‌ಡರ್ ಈ ಖರ್ಚು ಮಾಡಬಹುದೆಂತ ಹೇಳಿದರು.

ಮೆ. ಬಿ. ಎ. ಬೆಳ್ಳಿಯಪ್ಪನವರು ಫಾರೆಸ್ಟ್ ಇಲಾಖೆಯ ಖರ್ಚು ಕಡಿಮೆಮಾಡಕೂಡದು. ಪಿ. ಬಿ. ಯ ಈ ಹಣ ಖರ್ಚು ಮಾಡಬಹುದು ಎಂತ ಹೇಳಿ ಠರಾವನ್ನು ವಿರೋಧಿಸಿದರು.

ಠರಾವು ವಾಪಸು ತೆಗೆದುಕೊಳ್ಳಲಾಯಿತು.

(ಮುಂದುವರಿಯುವುದು)

'ಸ್ವಾಭಾವಿಕ'ವೆಂದರೆ ಏನು?

(ಮಹಾತ್ಮ ಗಾಂಧಿಯವರ ಲೇಖನಿಯಿಂದ)

'ಸ್ವಾಭಾವಿಕ'ವೆಂಬ ಪದಕ್ಕಿಂತಲೂ ಹೆಚ್ಚು ಅಪಾರ್ಥ ಕಲ್ಪನೆಯಾಗಿರುವ ಪದವು ಮತ್ತೊಂದಿಲ್ಲ. ಉದಾಹರಣೆಯಾಗಿ, 'ತಿನ್ನುವುದೂ ಕುಡಿಯುವುದೂ ಹೇಗೋ ಕಾಮವೂ ಹಾಗೆಯೇ ಮಾನವನಿಗೆ ಸ್ವಾಭಾವಿಕ'ವೆಂದು ಒಬ್ಬಾತನು ಬರೆಯುತ್ತಾನೆ. ಜನನ ಕ್ರಿಯೆಯೂ ಶರೀರದ ಇತರ ಕ್ರಿಯೆಗಳಂತೆಯೇ ಸ್ವಾಭಾವಿಕವಾದುದು. ಇಲ್ಲವಾಗಿದ್ದಲ್ಲಿ ದೇವರು ಅದನ್ನು ಜನರಿಗೆ ಅನುಗ್ರಹಿಸುತ್ತಿರಲಿಲ್ಲ. ಶರೀರವನ್ನು ಕಪಿಸುವುದೂ ಸಜ್ಜನರನ್ನು ಅನುಗ್ರಹಿಸುವುದೂ ನಮ್ಮ ಕರ್ತವ್ಯಗಳಾಗಿಲ್ಲದಿದ್ದಲ್ಲಿ ನಮಗೇಕೆ ಶರೀರಗಳ ಶಕ್ತಿ ಕೊಡದೇಕಿತ್ತು? ನಮ್ಮ ಶಕ್ತಿಗಳೆಲ್ಲವನ್ನು ಪೂರ್ಣವಾಗಿ ವೃದ್ಧಿಸಿಕೊಳ್ಳುವುದೇ ನಮ್ಮ ಇತಿ ಕರ್ತವ್ಯವಲ್ಲವೇ? ಆದ್ದರಿಂದ ಒಬ್ಬನಿಗೆ 'ಅಹಿಂಸೆ'ಯು ಎಂಥ ಧರ್ಮವೋ 'ಹಿಂಸೆ'ಯೂ ಅಂಥಾದ್ದೇ ಎಂದು ತೋರುತ್ತದೆ. ಒಟ್ಟಾರೆ ಸದ್ಗುಣಗಳನ್ನು ವೃದ್ಧಿಪಡಿಸುವುದು ಕೇವಲ ನಮ್ಮ ಊಹಿತ ಕಲ್ಪನೆಗಳು ನಿಮ್ಮ ಅಹಿಂಸೆಯು ಒಂದು ನಮ್ಮ ಸ್ವಭಾವದ ಒಬ್ಬರಿಯನ್ನು ಮಾತ್ರ ವಿಪರೀತವು ಮಾಡುವ ಕಾರಣ ಅದು ದುರ್ಬಲ್ಲದ ಗುಣವೇ ಸರಿ. ಅವನ್ನು ನಮ್ಮ ಪರಮ ಧರ್ಮವೆಂದು ಭಾವಿಸುವುದಕ್ಕಿಂತಲು ಪರಮ ಅಧರ್ಮವೆಂದೇಕೆನ್ನಬಾರದು? 'ಅಹಿಂಸಾ ಪರಮೋ ಧರ್ಮ' ಎನ್ನುವುದು ಮೊಟ್ಟಮೊದಲು 'ಅಹಿಂಸಾ ಪರಮೋ ಧರ್ಮ' ಎಂಬುವುದಾಗಿತ್ತು. ನಿಷೇಧಾರ್ಥದ ಉಪಸರ್ಗವಾದ 'ಅ' (ಅಭಾವ) ಎಂಬುದು ಮೂಲಾಗಲೋ ಹೇಗೋ ಬಿದ್ದು ಹೋಗಿದೆ; ಇಲ್ಲವೇ ಪಾಪಸರ ಕತ್ತರಿಸಿದನು ಅದನ್ನು ಅಳಿಸಿರಬೇಕು. ಯಾಕೆಂದರೆ ಅನೇಕ ಸಂದರ್ಭಗಳಲ್ಲಿ 'ಅಹಿಂಸೆಯೇ ಪರಮ ಅಧರ್ಮ'ವೆಂಬುವುದನ್ನು ನಿರ್ಧಾರವಾಗಿ ತೋರಿಸಬಹುದು ಎಂದು ಬಗೆದು ನೀಕಿಸಲ್ಪಟ್ಟ ನ ಪೂರ್ವ ಪಕ್ಷವನ್ನು ಹೂಡಬಹುದು.

ಯಾವನೊಬ್ಬನೂ ಮೇಲ್ಕಂಡಂತೆ ವಾದಿಸಿಲ್ಲವಾದರೂ ನಾನು ಅನೇಕರ ತರ್ಕಗಳನ್ನು ಒಟ್ಟುಗೂಡಿಸಿ ಹೇಳಿದ್ದೇನೆ. 'ಅಹಿಂಸೆಯಲ್ಲಿನ ಅಭಾವಾರ್ಥಕ ಉಪಸರ್ಗವಾದ 'ಅ' ಎಂಬುದು ಬಿದ್ದುಹೋಗಿರಬೇಕೆಂಬ ವಾದವನ್ನು ಬರೆಯುವವರು ನನ್ನ ವ್ಯಾಖ್ಯಾನ-ಪ್ರೇಮಿತರಿಬ್ಬರು. ಅದು ಅನುಕೇತ್ಸ್ಯಕೆಯಿಂದಲೇ ವಾದಿಸಿದರು. ಹೀಗೆ ನರೂ ಮನುಷ್ಯನನ್ನು ಮೃಗದ ತರಗತಿಗೆ ಸೇರಿಸಿದ ವಿಷಯಗಳು 'ಸ್ವಾಭಾವಿಕ'ವೆಂಬ ವಿವರಣೆಯು ಬಂಬುವಾಗಿ ತೋರಿಸಬಹುದು. ಆದರೆ ಅವುಗಳಿಗೆ ಸ್ಪಷ್ಟವೆಂಬುದಾದರೆ, ಮೃಗಕ್ಕೆ ಸ್ವಾಭಾವಿಕ ಪ್ರಕೃತಿಯೊಂದೂ ಮನುಷ್ಯನಿಗೆ ಸ್ವಾಭಾವಿಕ ಪ್ರಕೃತಿಯೇ ಮಾನವನ ಧರ್ಮ—ಅದೂ ಕೆಲವಲ್ಲ" ಮಾನವನಿಗೆ ಯುಕ್ತ [illegible] ಕಾರ್ಯಕರ್ತನ ಪದವೇಕವೂ ಇದೆ. 'ಆ ಕಾರ್ಯದರ್ಶನವೊಂದರಿಂದಲೇ ನರನೆ ಮೃಗಕ್ಕೆ ಹಾಗಿಲ್ಲ. ದೇವತ್ವದ ಸಾಧಕರೊಳ್ಳಲು ತನ್ನ [illegible] ನೇ. ಆ ಬಹ್ಮನಸಿದ್ಧಿಯು ತಿಳಿಸಿ ತನ್ನ [illegible] ದ ಪ್ರಥಮ ಕರ್ತವ್ಯವೆಂದು ತಿಳಿದ್ದಾನೆ. 'ಮೃಗವೂ ಸಹ ಭಗವಧೀರದವನೆಂದು ಹೇಳಿದಲ್ಲಿ ಅದು ಹಾಗೆ ಮಾಡುವುದು ಪೂರ್ವಕವಾಗಿ ಭಗವಂತನನ್ನು ಅರಾಧಿಸಬೇಕೆಂಬುದು ಮೃಗದಲ್ಲಿಯೂ ಇದೆಯೆಂಬುವುದು ಭಾವಿಸಕ್ಕವೇ ಆರಿಸತಕ್ಕದ್ದಲ್ಲ. ಮಾನವನಾದರೋ ಹಾ ಪಿಶಾಚಿಯನ್ನು ದೇವರಾದೂ ಪೂಜಿಸಬಹುದು ಪಿಶಾಚಿಯನ್ನು ಪೂಜಿಸುವುದು ಅವನ ಗಿ. ಆದರೆ ಮಾನವನ ಮೃಗಗಳಿಂದ ಪನಿಗೆ ಕಾಣು ಸಂಜಿತ ಹುಟ್ಟ ಸಹೋದರ ದುರ್ಗುಣಗಳು ಅವನಿಗೆ ವಿಪರ್ಯಾಸ್ಥಿ ಅವನ ಉದ್ದೇಶವೂ ಗುರಿಯೂ ಭಗವಂತನ ಶಾಸನಗಳು ಸಹ ಹಿಂದು ಪದ್ಧತಿ ವಿಶವಾಗಿರಬೇಕಾದರೆ. ಯಾಕೆಂದರೆ ಸ್ಥೇಯವಾಗಿಸಲ್ಪನು ಅನ್ನ ನಾಶ ಅನ್ನು ಉಪಯೋಗಿಸುವುದು ಆ ಮೋದಗಳಿಗಲ್ಲ; ಕೇವಲ ಶರೀರ ರಕ್ಷಣೆಗಾಗಿ. ಅದರಂತೆ, ಈ ಕೆಲಸಗಳನ್ನು ಮಾಡುವಾಗ ಸಹ ಅವನು ಪಂಭುತಿ ಪರಿತ್ಯಾಗಗಳನ್ನು ಸದಾ ತನ್ನ ನಾಂಕೇತಿಕ ಪದಗಳನ್ನಾಗಿಟ್ಟುಕೊಂಡಿರುತ್ತಾನೆ.

ಭಗವಂತನನ್ನು ತಿಳಿದು ಕಾಣುವುದೇ ಮನುಷ್ಯನ ಸ್ವಭಾವವಾಗಿದ್ದರೆ ಸಂಭೋಗೇಚ್ಛೆಯು ಅವನ ಸ್ವಭಾವಕ್ಕೆ ವಿರುದ್ಧವಾಗಿರಬೇಕು. ಪೂರ್ಣ ಪರಿತ್ಯಾಗವೇ ಅವನ ಕಾರ್ಯಾರ್ಥಕ್ಕೆ ಹೊಂದಬೇಕಾದರೆ ಸಂಭೋಗೇಚ್ಛೆಯನ್ನು ಸಂಪೂರ್ಣವಾಗಿ ಪರಿತ್ಯಜಿಸದಿದ್ದಲ್ಲಿ ಬ್ರಹ್ಮಸಾಕ್ಷಾತ್ಕಾರವಾಗಲಾರದು. ತನ್ನ ಯಾವತ್ತಿತಿಷ್ಟ ಶಕ್ತಿಗಳನ್ನು ದೋಷರಹಿತಗಳನ್ನಾಗಿ ಮಾಡಿ, ಪರಿಪಕ್ವ ಸ್ಥಿತಿಗೆ ತಂದುಕೊಳ್ಳಬೇಕೆಂಬುದು ಮಾನವನ ಕರ್ತವ್ಯವಲ್ಲ. ಅವನ ಕರ್ತವ್ಯವು ಬ್ರಹ್ಮಸಾಕ್ಷಾತ್ಕಾರವಾಗಿರುವ ತನ್ನ ಯಾವತ್ತು ಶಕ್ತಿಗಳನ್ನು ಪೂರ್ಣ ಪರಿಪಕ್ವ [illegible] ಸ್ಥಿತಿಗೆ ತಂದು ವ್ಯತಿರೇಕೋದ್ದೇಶ ಸಾಧಕಗಳೆಲ್ಲವನ್ನೂ ಕೊಂಚವೂ ತಲೆಯೆತ್ತದಂತೆ ಮಾಡುವುದು.

ಅಂಗೀಕಾರ ನಿರಾಕರಣಗಳನ್ನು ಅರಿತುಕೊಳ್ಳುವ ಸ್ವಾತಂತ್ರ್ಯದ ವರವು ಯಾವಾಗಲೂ ಅವನು ಒಳ್ಳೆಯದು ಯಾವುದು ಕೆಟ್ಟದಾವುದು ಎಂಬುವುದನ್ನು, ಸದ್ಗುಣ ಯಾವುದು ದುರ್ಗುಣವಾವುದು ಎಂಬುದನ್ನು ಚೆನ್ನಾಗಿ ತಿಳಿಯುವಲ್ಲ. ಹಾಗೆಂದರೆ, ಮತ್ತೊಬ್ಬನ ನಾಶವನು ಕಡಿಯುವುದು ಬಿಡಬೇಕಾದದ್ದು; ಆದಕಾರಣ ಅದು ಕೆಟ್ಟದು; ನಾಶಕಾರ್ಯ. ಸದಪೇಕ್ಷಗಳೆಂತಹ ಸಹಿಷ್ಣುತೆ ಇದೆ. ಇವುಗಳಲ್ಲಿ ಮೊದಲನೆಯದನ್ನು ಅಭ್ಯಸಿಸಬೇಕು; ಎರಡನೆಯದನ್ನು ಅನಾಗಿಸಬೇಕು; ಇಲ್ಲವೇ ನಿರ್ಮೂಲವನ್ನೇ ಮಾಡಬೇಕು. ಹಾಗೆ ಮಾಡದಿದ್ದಲ್ಲಿ ಮನುಷ್ಯರಾಗಿ ಹುಟ್ಟಿದರೂ ಮೃಗಗಳೇ ಸರಿ. ಆದಕಾರಣ, ಮಾನವನು ಹುಟ್ಟ ಬೇಕೆನ್ನುವುದು ಅನಾವಿನಾಭ್ಯಾಧಿಕಾರವೆಂದೂ ಅದೇನೆಂದರೆ [illegible] ಶಿಲುವೆಯೆಂದರೆ ಸಕಲ ಮತಗಳೂ ಸಾರುತ್ತಿವೆ. [illegible] ಯು ಮತ ತತ್ವವು 'ನಮ್ಮನ್ನು ತನ್ನ ಬಗ್ಗೆ ಹಾಕಿದಾಗ [illegible] ಬರುವಲ್ಲಿ ನಾವು ಮೃಗ್ಗೊಂದಾವತಾರಗಳಾಗಿ ಹುಟ್ಟಬೇಕಾಗುವುದು' ಎಂದು ಹೇಳುತ್ತದೆ.

ಪ್ರಪಂಚವೆಲ್ಲವೂ ಹಿಂಸೆಮಯವಾದದ್ದು. ಪ್ರಕೃತಿಯು ಜಾಯ ಕ್ಕರಗಳಲ್ಲ ರಕ್ತಮಯವಾಗಿ ಕಾಣುತ್ತದೆ. ಆದರೆ 'ಮಾನವನು ಮೃಗಕ್ಕಿಂತಲೂ ಉತ್ತಮನು...ಎಂಬುದನ್ನು' ನನಸಲ್ಲಿಟ್ಟುಕೊಂಡರೆ ಅವನು ಪ್ರಕೃತಿಯ ಗಿಂತಲೂ ಉತ್ತಮನಾಗುತ್ತಾನೆ. ಮಾನವನಿಗೆ ಅದು ಮಾಡಬೇಕಾದ ಜೀವಿತಕಾರ್ಯ—ಅವನಿಗೊಪ್ಪಿತ ಕಾರ್ಯ—ಇದ್ದಲ್ಲಿ ಅದು 'ಅಹಿಂಸೆ' ಸಂಬಂಧಪಟ್ಟದು. ಮಾನವ ವೃದ್ಧ ಅವನದು ಹೊಂಡು, ತನ್ನ ಹೃದಯಾಂತರಂಗವನ್ನು ಬಗೆ ಹಾಕ್ಕು ನುಂಚವರು ನಾದ ಈ ಸ್ಪಷ ಹದಲ್ಲಿ ನಾನು ಕರ್ತವ್ಯ 'ಅಹಿಂಸೆ' ಎಂದು ತನ್ನ ಮನಸ್ಸಿಗೆ ಪ್ರಪಂಚದಲ್ಲೆಲ್ಲಾ ನಾಶವಾಗುವುದು, ಅಂದ ಮೇಲೆ ಮಾನವನ ಸ್ವಭಾವವು ಹಿಂಸೆಯ ವಿರುದ್ಧ ಅಹಿಂಸೆ. ಯಾಕೆಂದರೆ ತನ್ನ ಒಳಸಂಬಂಧ ಅನುಭವದಿಂದ ತಾನು ಶರೀರವಲ್ಲವೆಂದೂ, ಆತ್ಮನೆಂದೂ, ಆತ್ಮ ಪ್ರಕಾಶಕ್ಕಾಗಿ—ಆತ್ಮನನ್ನು ವಿಕಾಸಗೊಳಿಸುವುದಕ್ಕಾಗಿ ಎಂದೂ, ತಿಳಿದ ಆತ್ಮ ಸಾಕ್ಷಾತ್ಕಾರಕ್ಕಾಗಿ ತನ್ನ ಶರೀರವನ್ನು ಉಪಯೋಗಿಸಬಹುದು.

ಈ ಅನುಭವದಿಂದಲೇ ಮಾನವನು ಲೋಭ, ಕೋಪ, ಅಜ್ಞಾನ, ಅಸೂಯೆ, ಮುಂತಾದ ಇತರ ದುಷ್ಟಗುಣಗಳನ್ನೂ ಜೈಸುವ ನೀತಿ ಶಾಸ್ತ್ರವನ್ನು ನಿರ್ಮಿಸಿರುತ್ತದೆ. ಆತ್ಮಸ್ವಾಧೀನತೆಯ ಧ್ಯೇಯವನ್ನು ಸಾಧಿಸಿ ಸಂಪೂರ್ಣ ಸಾವಿರಲ್ಯವನ್ನು ಪಡೆಯಲು ಎಂಥಾ ಪ್ರಯತ್ನವನ್ನಾದರೂ ಮಾಡಲು ಸಿದ್ಧನಾಗಿರುವನು. ಅವನ ಪ್ರಯತ್ನಗಳಿಂದ ಕಾರ್ಯಸಿದ್ಧಿ ಹೊಂದಾಗ ಪವಿತ್ರ ಅವನ ಸ್ವಭಾವಾನುಗುಣವಾಗಿ ಕೆಲಸ ಮಾಡಿ ತನ್ನ ಜೀವಿತಸಾಧನೆ ಪೂರೈಕೆಯಾಗಿದೆಯೆಂದು ಹೇಳಬಹುದು. ಆದಕಾರಣ ಇಂದ್ರಿಯ ನಿಗ್ರಹಗಳು ಮಾನವಸ್ವಾಭಾವಿಕವಲ್ಲ, ಮಾನವನಿಗೆ ಅದು ಸಾಧ್ಯ. ಅಹಿಂಸಾರ್ಧರ್ಮೋಪದೇಶವೆಂದು ನಿರ್ವಿವಾದವಾಗಿ ತೋರಿಸುವುದು ಎಂದರೆ ನಿಜವಾದ ಧೀರತೆ; ಅಲ್ಲ ಅದುಗಳ ಕತನನ್ನು ಸ್ವೀಕರಿಸಿಕೊಳ್ಳಲಲ್ಲ.

'ಪ್ರಜಾಮಿತ್ರ'

ಸ್ವದೇಶೀ ಪ್ರಚಾರವು.

ಕಾನೂನಿಗೆ ವಿರುದ್ಧವೆ? [illegible] ಉತ್ತರಕ್ಕಾಗಿ ಕುತೂಹಲ ಎದ್ದಿದೆ. ಮದ್ರಾಸು ಸರಕಾರದ ಹೋಂ ಮೆಂಬರು 'ಗಾಂಧಿ ಟೋಪಿಗಳನ್ನು ಉಪಯೋಗಿಸುವುದು ಕಾನೂನು ವಿರುದ್ಧ ಎಂದೇನೂ ಸರಕಾರವು ಭಾವಿಸಿಲ್ಲ; ಇಂತಹ ಟೋಪಿಗಳನ್ನು ಧರಿಸುವುದಕ್ಕಾಗಿ ಯಾರನ್ನು ತಡೆದು ಶಿಕ್ಷಿಸುವುದಿಲ್ಲ ಅಗತ್ಯವಾದ ಶಾಸನಗಳನ್ನು ಪ್ರಯೋಗಿಸಿ ಕಾನೂನಿನ ಸರಕಾರವು ಅಲಕ್ಷಿಸುವುದು' ಎಂದು ಹೇಳಿದ ತಾ. ೨೪ ರಲ್ಲಿ ಕೌನ್ಸಿಲಿನಲ್ಲಿ ಹೇಳಿದರು. ಮಾರ್ಚಿ ತಾ. ೭ ರಲ್ಲಿ ಸರಕಾರವು ಹೊರಡಿಸಿರುವ ಕೇಳಿಕೆಯೆಂದರೆ 'ಸ್ವದೇಶೀ ಪ್ರಚಾರದ ಸಂಸ್ಥೆ'ಯನ್ನು ಅದು ಚಳುವಳಿಯ ಉದ್ದೇಶವೆಂದೇ ಅರ್ಥವಾಗುತ್ತದೆ. ಎಂದು ಸುಂದರ ಮುಖ್ಯ ಕಾರ್ಯದರ್ಶಿಯವರು ಸರಕಾರದ ಧೋರಣೆ (ಪ್ರೆಸ್ಸ್ ತಾ. ೨೨) ಈಗಿನ ಆರ್ಡಿನೆನ್ಸ್ ಅಧಿಕಾರ ದೃಷ್ಟಿಯಲ್ಲಿದರೂ ಸ್ವದೇಶೀ ಪ್ರಚಾರವು ಶಿಕ್ಷಾರ್ಹವಾಗುವುದಿಲ್ಲ. ಈ ವಿಚಾರವು ಕೃಷಿಯ ಸರಕಾರಗಳಿಗೂ ತಿಳಿದೇ ಇರುವ ಪ್ರಯುಕ್ತ, ಪ್ರತ್ಯೇಕವಾಗಿ ಕಾನೂನು ಸೂತ್ರಗಳ ಕಡೆಗೆ ಅವರ ಗಮನವನ್ನು ಸೆಳೆಯಬೇಕಾಗಿಲ್ಲ' ಎಂದಿರುವರು. 'ಹಿಂದೀಯರು ಹಿಂದೀ ಸಾಮಾನುಗಳನ್ನು ಕೊಂಡುಕೊಳ್ಳುವ ಹಾಗೆ ಪ್ರಚಾರ ಮಾಡಿದರೆ ಬ್ರಿಟಿಷ್ ಸರಕಾರವು ಯಾವ ಹೊಸ ವಿರುದ್ಧ ಶಾಸನಗಳನ್ನು ಮಾಡಲಿರುವುದೇ?' ಎಂದು ಇಂಡಿಯಾ ಸೆಕ್ರೆಟರಿಯವರನ್ನು ಫೆಬ್ರವರಿ ತಾ. ೧೨ ರಲ್ಲಿ ಕಾಮನ್ಸ್ ಸಭೆಯಲ್ಲಿ ಕೇಳಲು 'ಇತರರ ಹಕ್ಕುಗಳಿಗೆ ಬಾಧಕ ಉಂಟಾಗದ ರೀತಿಯಲ್ಲಿ ಹಿಂದೀಯರು ತಮ್ಮ ಕೈಗಾರಿಕೆಗಳಿಗೆ ಪ್ರೋತ್ಸಾಹ ದೊರೆವ ಹಾಗೆ ಯಥಾರ್ಥ ರೀತ್ಯಾ ಚಳವಳಿಸಿದರೆ ಸರಕಾರವು ಅವನ್ನು ಎದುರಿಸುವುದಿಲ್ಲ' ಎಂದುತ್ತರ ಕೊಟ್ಟಿರುವರು. ಫೆಬ್ರವರಿ ತಾ. ೧೯ ರಲ್ಲಿ ಮುಂಬಾಯಿಯ ಗವರ್ನರರೂ ಇದೇ ಬಗೆಯಾಗಿ ಕೌನ್ಸಿಲಿನಲ್ಲಿ ವಿಶದಗೊಳಿಸಿರುವರು. ಹೀಗೆ ಅಲ್ಲಿಂದಿಲ್ಲಿಗೂ ಅಧಿಕಾರಿಗಳೆಲ್ಲರು ಸ್ವದೇಶೀ ಪ್ರಚಾರವು ನಿರಾಬಾಧಿತವಾಗಿ ಸಾಗಲೆಂದು ಆಶ್ವಾಸನೆ ಕೊಟ್ಟಿರುವಾಗ, ಈ ಭಾಗದಲ್ಲಿ ಇನ್ನು ಸಂದೇಹಗಳಿರುವುದು ಅನಾವಶ್ಯಕ, ಅಯೋಗ್ಯ.

IN THE COURT OF THE DISTRICT JUDGE OF COORG

O. S. No 0.5 of 3-31.

PLAINTIFF:— PALECANDA ATAMMA

VS

DEFENDANT:— PANDANDA NANJAPPA

Notice is hereby given that the partnerships known as the Sri Cauvery Bus Service is dissolved and the affairs of the partnership are under the management of the Sheristedar of this Court as a Receiver.

"BY ORDER"

(Sd.) K. C. Subbayya.

11-3-32. Judicial Sheristedar.

ನೋಟೀಸು.

ಮಡಿಕೇರಿ ಸೆಂಟ್ರಲ್ ಸ್ಕೂಲಿನಲ್ಲಿ ಶಿಶುಪ್ರದರ್ಶನ ಮತ್ತು ಆರೋಗ್ಯಾರಕ್ಷಣ ಕ್ರಮದ ಪ್ರದರ್ಶನ ಸಹ ಇದೇ ಏಪ್ರಿಲ್ ತಾರೀಕು 2 ಮತ್ತು 3ರಲ್ಲು ಜರುಗುತ್ತದೆ. ತಾರೀಕು 3ನೇ ದಿನ ಪ್ರದರ್ಶನವಾಗುವುದರಿಂದ ಶಿಶುಗಳನ್ನು ಪಡೆದ ಎಲ್ಲಾ ತಾಯಂದಿರುಗಳು ತಮ್ಮ ತಮ್ಮ ಶಿಶುಗಳ ಸಮೇತ ಪ್ರದರ್ಶನಕ್ಕೆ ದಯಮಾಡಿಸಿ, ಶಿಶುಗಳನ್ನು ಪ್ರದರ್ಶಿಸಿ ಬಹುಮಾನಗಳನ್ನು ಪಡೆಯಲು ಉದ್ಯುಕ್ತರಾಗಬೇಕಾಗಿ ಕೇಳಿಕೊಳ್ಳೋಣವಾಗಿದೆ. ಚೆನ್ನಾಗಿ ಪೋಷಿಸಿದ ಶಿಶುಗೆ ಚಿನ್ನದ ಪದಕವನ್ನು ಬಹುಮಾನವಾಗಿ ಕೊಡಲಾಗುತ್ತೆ. ಮಡಿಕೇರಿ ಪಟ್ಟಣಗಳಲ್ಲು ಮನೆ ಮತ್ತು ಹಿತ್ತಲುಗಳನ್ನು ಸ್ವಚ್ಛ ಕೆಲಸ ಮಾಡಿ ಶುಚಿಯಾಗಿ ಇಟ್ಟವರಿಗೆ ಇನಾಮುಗಳು ದೊರೆಯುತ್ತೆ. ಮತ್ತು ಹೆಚ್ಚು ಹಾಲು ಕೊಡುವ ಹಸುವಿನ ಮಾಲೀಕರಿಗೂ ಸಹ ಇನಾಮು ಕೊಡಲಾಗುತ್ತೆ.

ಕೊಡಗು ಪ್ಲ್ಯಾಂಟರ್ಸ್ ಎಸೋಸಿಯೇಷನ್ ಆಫೀಸು, ಮಡಿಕೇರಿ,

ತಾ. 17-3-32

ನೋಟೀಸು.

ಈ ಸಂಘದ ಎಲ್ಲಾ ಮೆಂಬರುಗಳಿಗೆ ತಿಳಿಸುವುದೇನೆಂದರೆ—

ಮದ್ರಾಸ್ ಪ್ಲಾಂಟರ್ಸ್ [illegible] ಎಸೋಸಿಯೇಷನಿನಲ್ಲಿ ಮೆಂಬರುಗಳಾಗಿ [illegible] ಸಲ್ಲಿಸದ್ದು ಅರಿಯೆಂದು, ಅದು [illegible] ತಿಳಿಯುವರು. ಪೆನ್ನಿಂದ ಪ್ಲಾಂಟರ್ಸ್ ಸಂಘದ [illegible] ಸಂಘದ ರೂಲ್ಸ್ ಸಹ [illegible] ಮೆಂಬರುಗಳನ್ನು [illegible] ಕೊಡಗು ಪ್ಲ್ಯಾಂಟರ್ಸ್ ಎಸೋಸಿಯೇಷನ್ ಎಂಬ ಸಂಘವನ್ನು ನಡೆಸಬೇಕೆಂಬ ವಿಷಯ ಮೊದಲು ಬಂದು ಜನರಲ್ ಮೀಟಿಂಗು 1932ನೇ ಏಪ್ರಿಲ್ ತಾ. 10ನೇ ಆದಿತ್ಯವಾರ 2 ಗಂಟೆಗೆ [illegible] ಫೆಡರೇಷನ್ ಆಫೀಸಿನಲ್ಲಿ ನಡೆಯುವುದು. ಮೆಂಬರುಗಳು ದಯಮಾಡಿಸಿ ತಕ್ಕ ಸಲಹೆಗಳನ್ನು ಕೊಡಬೇಕಾಗಿ ಕೋರುವೆ.

ರಾ. ಬಾ. ಕೆಟ್ಟೋಳಿರ ದೇವಯ್ಯ

(ಮ್ಯಾನೇಜಿಂಗ್ ಸೆಕ್ರೆಟರಿ)

ಕೊಡಗು ಕೌನ್ಸಿಲು ಚರ್ಚೆಗಳು.

(ಕಳೆದ ವಾರದಿಂದ ಮುಂದುವರಿದದ್ದು.)

8. ಕಮಿಷನರ ಆಫೀಸ್ ಮೇನೇಜರ್ ಕೆಲಸಕ್ಕೆ ಡಾ ಪ್ಲಾಯ್ ರಿಪೋರ್ಟರಾದ ಮೆ. ವೆಂಕಟೇಶ್ವರೈಯ್ಯರನ್ನು ನೇಮಿಸಬಾರದೆಂಬುದನ್ನು ಸೂಚಿಸಲಿಕ್ಕೆ ಮೆ. ಪಿ. ನಾಣ್ಯೆ ಯ್ಯನವರು ಒಂದು ಠರಾವು ತಂದರು. ಕೌನ್ಸಿಲ್ ರಿಪೋರ್ಟರಿಗೆ ದೇಶೀಯ ಭಾಷೆ ತಿಳಿಯುವುದಿಲ್ಲ. ದೇಶದ ಚಾಲೂ ಕಾಯಿದೆಗಳು ತಿಳಿಯುವುದಿಲ್ಲ—ಎಂಬುದಾಗಿ ವಾದಿಸಿದರು.

ಕಮಿಷನರು ದೇಶೀಯ ಭಾಷೆ ತಿಳಿಯದಿರುವುದು ಒಂದು ಕೊರತೆಯೋ ಏನೋ ಹೌದು ಎಸ್ಟೇಟ್ ಕೆಲಸವೇ ಇವರ ಮುಖ್ಯ ಕೆಲಸ. ಆ ಕೆಲಸ ಇವರಿಗೆ ಚೆನ್ನಾಗಿ ತಿಳಿದಿದೆಯೆಂತ ವಿವರಿಸಿದರು.

ಮೆ. ಎ. ಬಿ. ಚಂಗಪ್ಪನವರು ಠರಾವಿಗೆ ಉತ್ಸಾಹದಿಂದ ಮಾತನಾಡಿದರು.

ಓಟಿಗೆ ಹಾಕಲಾಗಿ ಮೆ. ಗಳಾದ ಎ. ಬಿ. ಚಂಗಪ್ಪನವರು, ಕೆ. ಗಣಪತಿಯವರು, ಪಿ. ನಾಣ್ಯೆಯ್ಯನವರು, ಎಸ್. ಪಿ. ಸೋಮಯ್ಯನವರು, ಸಿ. ಪೂವಯ್ಯನವರು ಮತ್ತು ಪಿ. ಬಿ. ಅಪ್ಪಯ್ಯನವರು ಮಾತ್ರ ಪರವಾಗಿ ಓಟ್ ಮಾಡಿದ್ದರಿಂದ ಠರಾವು ಬಹುಮತದಿಂದ ಸೋತು ಹೋಯಿತು.

9. ಸರ್ವೀಸ್ ಅವಧಿಗೆ ಉದ್ಯೋಗವನ್ನು ಮುಂದರಿಸಬಾರದೆಂತಲೂ 30 ವರ್ಷ ಸರ್ವೀಸ್ ಆದವರನ್ನು ರಿಟೈರ್ ಮಾಡಲೇ ಬೇಕೆಂತಲೂ ಕಾಯಿದೆಗೆ ಮುಂದಾಗಿ ಕೆಲಸ ಖಾಲಿ ಆದವರನ್ನು ಬೇರೆ ಇಲಾಖೆಗಳಿಗೆ ತೆಗೆದುಕೊಳ್ಳಬೇಕೆಂತಲೂ ಸೂಚಿಸಲು ಮೆ. ಬಿ. ಎ. ಬೆಳ್ಯಪ್ಪನವರು ಒಂದು ಠರಾವು ತಂದರು.—ಕಾಯಿದೆ ತೀರಿದ ಅಧಿಕಾರಿಗಳಿಗೆ ಹೆಚ್ಚಿಗೆ ಕಾಯಿದೆ ಮಾಡಿ ಕೊಡುವುದು ಯೋಗ್ಯವಲ್ಲ. ಕಾಯಿದೆ ಕಡಿಮೆಯಾಗುವುದು ಒಳ್ಳೆಯದೆಂತ ಕೆಲವು ವಿದ್ಯಾವಂತರ ಅಭಿಪ್ರಾಯವನ್ನು ಸಹಿಸಿಕೊಳ್ಳಬೇಕು. ಕೆಲವು ಆಫೀಸರುಗಳಿಗೆ ಅಧಿಕಾರವನ್ನು ಮುಂದರಿಸಿ ಕೊಟ್ಟರೆ ದೇಶಕ್ಕೆ ಸಹಿಸಲಾರದು ಎಂತ ವಗೈರೆ ಭಾಷಣ ಮಾಡಿದರು.

ಕಮಿಷನರು:—ರೂಲ್ಸ್ ಮೇರೆ ಅಧಿಕಾರಿಗಳನ್ನು 60 ವರ್ಷದ ವರೆಗೆ ಬೇಕಾದರೂ ಇಟ್ಟುಕೊಳ್ಳಬಹುದು. ಠರಾವಿನಲ್ಲಿ ಸೂಚಿಸಿರುವ ಮೇರೆ ಕಡ್ಡಾಯವಾದ ನಿರ್ಬಂಧ ಮಾಡಲು ಸಾಧ್ಯವಿಲ್ಲ—ಸರಕಾರದ ಕೆಲಸ ನಡೆಯಲು ಅವಶ್ಯವಿರುವ ರಿಲೀವಾಯಿದೆಯನ್ನು ಮುಂಧರಿಸ ಬೇಕಾಗುತ್ತದೆ—ಕಾಯಿದೆ ಮುಂದೆ ಮನೆಗೆ ಹೋಗಬೇಕಾದವರು ಬೇರೆ ಅಧಿಕಾರಿಗಳು ಅರ್ಹರಾಗಿದ್ದರೆ ಇಟ್ಟುಕೊಳ್ಳಬಹುದೆಂಬುದಕ್ಕೆ ನನ್ನ ಒಪ್ಪಿಗೆ ಇದೆ—ಎಂತ ಹೇಳಿದರು.

ಠರಾವಿನ ಮೇಲೆ ಮೆ. ಚೌಡ್ಲು ಕಾಳಪ್ಪನವರು ಸಹ ಮಾತಾಡಿದರು.

ಠರಾವನ್ನು ವಾಪಸು ತೆಗೆದುಕೊಂಡರು.

10. ಕಂದಾಯ ಕಟ್ಟಲಿಕ್ಕೆ ರೈತರಿಗೆ ಹೆಚ್ಚಿಗೆ ವಾಯಿದೆ ಕೊಡಬೇಕು ಎಂಬುದನ್ನು ಸೂಚಿಸುವ ಠರಾವನ್ನು ಮೆ. ಬಿ. ಎ. ಬೆಳ್ಯಪ್ಪನವರು ತಂದರು. ಕಾಫಿ ಬೆಳೆಯು ಶೇಕಡ 30 ರಷ್ಟು ಮಾತ್ರವಾಗಿದೆ—ಭತ್ತದ ಬೆಳೆಯೂ ತುಂಬಾ ಕಡಿಮೆಯಾಗಿದೆ—ಕಾಫಿಗೆ ತಕ್ಕ ಮಟ್ಟಿಗೆ ಬೆಲೆ ಇದೆಯಾದರೂ ಭತ್ತಕ್ಕೆ ಬೆಲೆಯೇ ಇಲ್ಲ—ಆದ್ದರಿಂದ ಕಂದಾಯವನ್ನು ವಸೂಲಿ ಮಾಡಲು ತುಂಬಾ ಹೆಚ್ಚು ಸಮಯ ಕೊಡಬೇಕೆಂತ ವಾದಿಸಿದರು.

ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಹೇಳಿದ್ದೇನೆಂದರೆ—ಕಳೆದ ವರ್ಷ ಇಂಥಾ ಠರಾವೇ ಬಂದಿತು. ವಾಯಿದೆ ಕೊಡಲಾಯಿತು. ರೂ 7500 ರ ವರೆಗೆ ಬರುತ್ತಿದ್ದ ಪ್ರೋಸೆಸ್ ಫೀಸನ್ನು ವಜಾ ಮಾಡಲಾಯಿತು. ಆದರೆ ಇಲಾಖೆಯು ಬಹಳ ಕಷ್ಟಕ್ಕೆ ಗುರಿಯಾಯಿತು. ಕಂದಾಯ ಕಟ್ಟುವ ಯೋಚನೆಯನ್ನು ಇಟ್ಟುಕೊಳ್ಳದೆ ಭತ್ತವನ್ನೆಲ್ಲಾ ಮಾರಿ ಬಿಟ್ಟರು. ವಸೂಲಿಗೆ ಹೋಗುವಾಗ ಮನೆಯಲ್ಲಿ ಏನೂ ಇರಲಿಲ್ಲ. ನವಂಬರ್ ವರೆಗೆ ವಸೂಲ್ ತರದೂದು ನಡೆಯಬೇಕಾಯಿತು. ರೈತರು ಮುಂದಿನ ಫಸಲನ್ನು ಭೋಗ್ಯಕ್ಕೆ ಕೊಟ್ಟು ಕಂದಾಯ ಹಣ ಎತ್ತಬೇಕಾಯಿತು. ರೈತರ ಕೈಯಲ್ಲಿ ಹಣ ಇರುವಾಗ ವಸೂಲ್ ತರದೂದು ಮಾಡಬೇಕು. ಫಸಲಿನಲ್ಲಿ ಭಾಗವೇ ಸರಕಾರಕ್ಕೆ ಸಿಕ್ಕಬೇಕಾದದ್ದು; ಆದ್ದರಿಂದ ಮೇ ಜೂನ್ ವರೆಗೆ ಕಾಯ ಕೂಡದು. ಕಳೆದ ವರ್ಷದಂತೆಯೇ ಪ್ರೋಸೆಸ್ ಫೀಸ್ ವಸೂಲು ಮಾಡಲಾಗುವುದಿಲ್ಲ.

ಮೆ. ಬೆಳ್ಯಪ್ಪನವರ ಉತ್ತರವೇನೆಂದರೆ—ಭತ್ತಕ್ಕೆ ಧಾರಣೆ ಇಲ್ಲದಿರುವುದರಿಂದ ವಾಯಿದೆ ಕೇಳುವುದಾಗಿದೆ—ಎಂತ ಹೇಳಿ ಠರಾವನ್ನು ವಾಪಸು ತೆಗೆದುಕೊಂಡರು.

ನಿಂಬು ಪೇಯನ್ನೇ ಉಪಯೋಗಿಸಬೇಕೆಂಬ ಕಾನೂನು ಮಾಡಿದಂದಿ ಅದನ್ನು ಜಾರಿಗೆ ತಂದಿರುವುದರಿಂದ ಜನರಿಗೆ ಕಷ್ಟ ಇದೆ ಎಂತ ಸೂಚಿಸಲು ಮೆ. ಬಿ. ಎ. ಬೆಳ್ಯಪ್ಪನವರು ತಂದ ಠರಾವಿನ ಮೇಲೆ ಹೇಳಿದ್ದೇನೆಂದರೆ ಕಾನೂನು ಮಂಜೂರಾಗಿ 9 ತಿಂಗಳಾದರೂ ಕಾನೂನನ್ನು ಜಾರಿ ಮಾಡದಿರುವುದು ಬಹಳ ವಿಷಾದಕರವೆಂತ ಹೇಳಿದರು.

ಕಮಿಷನರು ಹೇಳಿದ್ದೇನೆಂದರೆ—ಬೊಂಬಾಯಿಯಲ್ಲಿ ಪರಿಶೋಧಿಸಲು ಏರ್ಪಾಡಾಗಿದೆ ವ್ಯಾಪಾರಿಗಳ ಮತ್ತು ಜನರ ಅಭಿಪ್ರಾಯ ತೆಗೆದುಕೊಳ್ಳಲು ಸ್ವಲ್ಪ ಕಾಲ ಹಿಡಿಯಿತು. ಜನರಿಗೆ ಕಷ್ಟವಿರುವುದು ಸರ್ಕಾರಕ್ಕೆ ತಿಳಿದಿದೆ.

ಠರಾವು ವಾಪಸು ತೆಗೆದುಕೊಳ್ಳಲಾಯಿತು.

12. ಆಫೀಸರುಗಳ ಪ್ರಯಾಣದ ಭತ್ಯಕ್ಕಾಗಿ ಆಗುತ್ತಿರುವ ಖರ್ಚನ್ನು ಕಡಿಮೆ ಮಾಡಬೇಕೆಂತ ಮೆ. ಬಿ. ಎ. ಬೆಳ್ಯಪ್ಪನವರು ತಂದ ಠರಾವು ಬಹುಮತದಿಂದ ನಾಪಾಸಾಯಿತು.

13. ಪೊನ್ನಂಪೇಟೆಯ ಎಲಿಮೆಂಟರಿ ಶಾಲೆಯನ್ನು ಸೆಕೆಂಡರಿ ಶಾಲೆಯಾಗಿ ಮಾಡಿ ಕೊಡಬೇಕೆಂತ ಮೆ. ಚೆಪ್ಪುಡಿರ ಪೂವೈಯ್ಯನವರು ತಂದ ಠರಾವು ಬಹುಮತದಿಂದ ಪಾಸಾಯಿತು.

14. ಸಿವಿಲ್ ಸರ್ಜನ್ ಪದವಿಗೆ ಒಳ್ಳೇ ಅರ್ಹರಾದವರನ್ನು ನೇಮಿಸಬೇಕೆಂತ ಸೂಚಿಸುವ ಠರಾವಿನ ಮೇಲೆ ರಾವ್ ಸಾಹೇಬ್ ಶ್ರೀಪತಿರಾಯರು ಹೇಳಿದ್ದೇನೆಂದರೆ—ಕೊಡಗಿನಲ್ಲಿ ಒಳ್ಳೇ ಡಾಕ್ಟರಿಲ್ಲದೆ ಸಾಧಾರಣದ ಖಾಯಿಲೆಗೆ ಸಹ ಜನರು ಮೈಸೂರಿಗೆ ಹೋಗಬೇಕಾಗಿದೆ. ಹಿಂದೂಸ್ಥಾನದ ಯುನಿವರ್ಸಿಟಿಗಳಲ್ಲಿ ಓದಿದವರು ಸಾಕು. ಮದ್ರಾಸ್ ಸರ್ವೀಸಿನಲ್ಲಿ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರ ಪದವಿಗೆ ಬರಲು ಅರ್ಹರಾದವರನ್ನು ನೇಮಿಸಿಕೊಳ್ಳಬೇಕು.

ಕಮಿಷನರು—ಇಂಡಿಯನ್ ಮೆಡಿಕಲ್ ಸರ್ವೀಸಿಗೆ ಇದ್ದ ಸ್ಥಳವನ್ನು ಪಡೆ ಪಡೆಯುವುದಾದರೆ ಇಂಡಿಯಾ ಸರಕಾರದ ಅನುಮತಿ ಬೇಕಾಗಿದೆ. ಆದ್ದರಿಂದ ಆ ನಂಬರನ್ನು ಇಲ್ಲಿ ಪರಿಹಾರ ಮಾಡಿ ಸಲ ಒಬ್ಬ ಪದವಿಯಲ್ಲಿ ಇದ್ದವರು ಹಿಂತಿರುಗಿ ಬರುವ ವರೆಗೆ ಸ್ಥಳವನ್ನು ಬಿಡುವುದಿಲ್ಲ. ನಾವು ಕೊಡುವ ಸಂಬಳಕ್ಕೆ ಮದ್ರಾಸಿನಿಂದ ಒಳ್ಳೆಯವರು ಸಿಕ್ಕುವುದು ಕಷ್ಟ. ಒಳ್ಳೆಯವರನ್ನು ನೇಮಿಸಬೇಕೆಂಬ ತತ್ವವನ್ನೇನೋ ಒಪ್ಪುತ್ತೇವೆ.

ಅಪ್ಪಸೆಂಟ್ ಸರ್ಜನ್ ಸಂಬಳ … ಯೂರೋಪಿಯನರೇ ಆಗಬೇಕು, ಅಂಥವರ ಸಂಬಳವನ್ನು ಸರಕಾರವು ಕೊಡಲು ತಯಾರಿಲ್ಲದಿದ್ದರೂ ಯೂರೋಪಿಯನ್ ಪ್ಲಾಂಟರುಗಳು ವಂತಿಗೆ ಕೊಡಲು ತಯಾರಿದ್ದಾರೆ ಎಂತ ಹೇಳಿದರು.

ಮೆ. ಎ. ಬಿ. ಚಂಗಪ್ಪನವರು, ಯೂರೋಪಿಯನ್ ಮೆಂಬರು ಹೇಳಿದ ಸಲಹೆಗೆ ಒಪ್ಪಿಕೊಂಡರು. ನೇರಾಗಿ ಯುನಿವರ್ಸಿಟಿಯಲ್ಲಿ ಒಬ್ಬ ಸಮರ್ಥ ವಿದ್ಯಾವಂತನಿರಬೇಕು. ಮುಖ್ಯ ರನ್ನು ಅಸಿಸ್ಟೆಂಟರನ್ನು ನೇಮಿಸುವ ಪದ್ಧತಿಯನ್ನು ಬಿಡಬೇಕು.

ಮೆ. ಬಿ. ಎ. ಬೆಳ್ಯಪ್ಪನವರು ಹೇಳಿದ್ದೇನೆಂದರೆ—ಅಸಿಸ್ಟೆಂಟ್ ಸರ್ಜನರನ್ನು ಬದಲಿಗೆ ನೇಮಿಸುವುದು ಸರಿಯಲ್ಲ. ತಕ್ಕ ವಿದ್ಯೆ ಇರುವ ದೇಶೀಯರೇ ಇರುವಾಗ ವಿದ್ಯಾಅರ್ಹತೆ ಇಲ್ಲದವರನ್ನು ನೇಮಿಸುವುದು ಸರಿಯಲ್ಲ. ಹಂಗಾಮಿ ಏರ್ಪಾಡು ದೀರ್ಘ ಕಾಲಕ್ಕೆ ಆಗಬಾರದು.

ಮೆ. ಪಿ. ಯಂ. ನಾಣ್ಯೆಯ್ಯನವರು ಯೂರೋಪಿಯನ್ ಪ್ಲಾಂಟರುಗಳ ಸಲಹೆಯನ್ನು ಒಪ್ಪುತ್ತೇನೆ. ಯೂರೋಪಿಯನರಿಗೆ ಯೂರೋಪಿಯನರೇ ಬೇಕೆಂತ ಇರುವ ಆಶೆಗೆ ವಿರೋಧ ಹೋಗಬಾರದು. ಅನುಕೂಲ ದೊರೆತರೆ ಸ್ಥಳೀಯ ಅರ್ಹರಾದ ಜನರಿಗೂ ಅವಕಾಶ ಕೊಡಬೇಕು ಎಂತ ಹೇಳಿದರು.

ಯೂರೋಪಿಯನ್ ಮೆಂಬರು ಹೇಳಿದ ಸಲಹೆಯನ್ನು ಸರಕಾರವು ಪರಿಶೀಲನೆಗೆ ತೆಗೆದುಕೊಳ್ಳುತ್ತದೆ ಎಂತ ಹೇಳಿದ ಮೇಲೆ ಠರಾವು ವಾಪಸು ತೆಗೆದುಕೊಳ್ಳಲಾಯಿತು.

15. 14ನೇ ಠರಾವಿನಂತೆಯೇ ಇದ್ದ ಮೆ. ಬಿ. ಎ. ಬೆಳ್ಯಪ್ಪನವರ ಠರಾವನ್ನು ಸಭೆಯ ಮುಂದೆ ತರಲಿಲ್ಲ.

16. ಮಡಿಕೇರಿಯಲ್ಲಿ ಹುಡುಗಿಯರಿಗೆ ಕಟ್ಟುವ ಲೇಡಿ ಡಾಕ್ಟರ ಸ್ಥಳವನ್ನು ಖಾಯಂ ಮಾಡಬೇಕೆಂತ ರಾವ್ ಸಾಹೇಬ್ ಶ್ರೀಪತಿರಾಯರು ತಂದ ಠರಾವಿಗೆ ಸರಕಾರದ ಸಹಾನುಭೂತಿ ದೊರೆತದ್ದರಿಂದ ಠರಾವು ವಾಪಸು ತೆಗೆದುಕೊಳ್ಳಲಾಯಿತು.

17. ದೇಶೀಯ ನರ್ಸ್‌ಗಳಿಗೆ ವಸತಿಯ ಅನುಕೂಲವು ಸರಿಯಾಗಿಲ್ಲವೆಂತ ತಿಳಿಸುವ ಬಗ್ಗೆ ಮೆ. ಪಿ. ನಾಣ್ಯೆಯ್ಯನವರು ಠರಾವು ತಂದರು. ಕಮಿಷನರು ಸಹಾನುಭೂತಿ ಸೂಚಿಸಿದರು. ಆದರೆ ನರ್ಸ್‌ಗಳಿಂದಲೇ ಫಿರ್ಯಾದು ಬಂದಿಲ್ಲವೆಂತ ಹೇಳಿದ ಮೇಲೆ ಠರಾವು ವಾಪಸು ತೆಗೆದುಕೊಳ್ಳಲಾಯಿತು.

18. ಫಾರೆಸ್ಟ್ ಇಲಾಖೆಯ ಖರ್ಚು ಕಡಿಮೆಮಾಡಿ ಕೊಡಗಿನ ಕ್ಷಯರೋಗಿಗಳನ್ನು ಇಟ್ಟುಕೊಳ್ಳುವ ಬಗ್ಗೆ ಮೈಸೂರು ಕ್ಷಯರೋಗದ ಆಸ್ಪತ್ರೆಗೆ 1000 ರೂ. ಕೊಡಬೇಕೆಂತಲೂ ಆರೋಗ್ಯ ವಿಚಾರದ ಇನ್ಸ್‌ಪೆಕ್ಟರನ್ನು ನೇಮಿಸಲು ಇನ್ನೊಂದು 1000 ರೂ ಉಪಯೋಗಿಸಬೇಕೆಂತಲೂ ಮೆ. ಎ. ಬಿ. ಚಂಗಪ್ಪನವರು ತಂದ ಠರಾವಿನ ವಾದ ನಡೆದ ನಂತರ ವಾಪಸು ತೆಗೆದುಕೊಂಡರು.

19. ಮಡಿಕೇರಿಯ ಕೆಲಸಕ್ಕೆ ಮೊದಲಿನಂತೆಯೇ ಇಬ್ಬರು ಆಫೀಸರುಗಳು ಇರಬೇಕೆಂತ ಸೂಚಿಸಲು ಮೆ. ಬಿ. ಎ. ಬೆಳ್ಯಪ್ಪನವರು ತಂದ ಠರಾವನ್ನು ಮೆ. ನಿಕಲ್ಸರು ವಿರೋಧಿಸಿದರು. ಓಟಿಗೆ ಹಾಕಲಾಗಿ ಬಹುಮತದಿಂದ ಮಂಜೂರಾಗಲಿಲ್ಲ.

20. ಅಸಿಸ್ಟೆಂಟ್ ರಿಜಿಸ್ಟ್ರಾರ್ ಡಿಪ್ಯುಟಿ ಡೈರೆಕ್ಟರ್ ಕೆಲಸ ನೋಡುವವರೇ ಕೃಷಿ ಇಲಾಖೆಯ ಡಿಪ್ಯುಟಿ ಡೈರೆಕ್ಟರಾಗಿರುವುದನ್ನೂ ವೆಟರಿನರಿ ಆಫೀಸರಾಗಿರುವುದನ್ನೂ ತಪ್ಪಿಸಿ ಈ ಉದ್ಯೋಗಗಳಿಗೆ ಬೇರೆಯವರನ್ನು ನೇಮಿಸಬೇಕೆಂತ ಮೆ. ಸಿ. ಯಸ್. ಪೂವೈಯ್ಯನವರು ತಂದ ಠರಾವಿಗೆ ಮೆ. ಪಿ. ಎ. ಚಂಗಪ್ಪನವರೂ, ತಿಮ್ಮಪ್ಪ ಪುಂಜರೂ ಹಣವಿಲ್ಲವೆಂಬ ಕಾರಣದಿಂದ ವಿರೋಧಿಸಿದರು. ಅಲ್ಲದೆ ಇಲಾಖೆಯ ಆಫೀಸರ ಕೃಷಿ ಮತ್ತು ಪಶುವೈದ್ಯದ ಜ್ಞಾನ ಬೇಕೆಂತ ಇಲ್ಲವೆಂತಲೂ ವಿವರಿಸಿದರು.

ಮೆ. ನಾಣ್ಯೆಯ್ಯನವರು ಹೇಳಿದ್ದೇನೆಂದರೆ ಇಂಥಾ ಠರಾವುಗಳ ಮೇಲೆ ಮಾತಾಡುವಾಗ ಆಫೀಸರುಗಳ ಕೃತ್ಯಗಳ ಕುರಿತು ಟೀಕಿಸಲೇ ಬೇಕಾಗುತ್ತದೆ. ಹಾಗೆ ಟೀಕಿಸಿದರೆ ನಾವು ಸರಕಾರಕ್ಕೆ ವಿರೋಧವೆಂತ ನಮ್ಮ ಮೇಲೆ ದೂರು ಹೇಳುತ್ತಾರೆ. ಆಫೀಸರುಗಳ ಕೃತ್ಯಗಳ ಕುರಿತು ಟೀಕಿಸಲು ಸ್ವಾತಂತ್ರ್ಯವಿಲ್ಲದಿದ್ದರೆ ಈ ಕೌನ್ಸಿಲಿನಿಂದ ಪ್ರಯೋಜನವಿಲ್ಲವೆಂತ ವಿವರಿಸಿ ಠರಾವಿಗೆ ಪಕ್ಷಪಾತಿಯಾಗಿ ಕೆಲವರು ಮಾತಾಡಿದರು.

ಠರಾವನ್ನು ಓಟಿಗೆ ಹಾಕಲಾಗಿ ಬಹುಮತದಿಂದ ಬಿದ್ದು ಹೋಯಿತು.

21, 22—20ನೇ ಠರಾವಿನ ಅಭಿಪ್ರಾಯವೇ ಇದ್ದ 21, 22ನೇ ಠರಾವುಗಳನ್ನು ಮೆ. ಪೂವೈಯ್ಯನವರು ಸಭೆಯ ಮುಂದೆ ತರಲಿಲ್ಲ.

23. ಪಶುವೈದ್ಯ ಇಲಾಖೆಯ ಸಂಬಂಧವಾದ ಸರಕಾರದ ಧ್ಯೇಯವನ್ನು ಚರ್ಚಿಸುವ ಬಗ್ಗೆ ಮೆ. ಬಿ. ಎ. ಬೆಳ್ಯಪ್ಪನವರು ತಂದ ಠರಾವಿನ ಮೇಲೆ ಅವರ ಭಾಷಣ:—ಕೊಡಗಿನಲ್ಲಿ ವ್ಯವಸಾಯ ಸ್ಥಿತಿಯೇ ದನಕರಗಳ ಮೇಲೆ ಹೊಂದಿದೆ. ದನಗಳ ಸಾವು ಹೆಚ್ಚುತ್ತಲೇ ಇದೆ. ದನಗಳಿಗಾಗಿ ಲಕ್ಷಾಂತರ ರೂಪಾಯಿ ಕೊಡಗಿನಿಂದ ಹೊರಗೆ ಹೋಗುತ್ತದೆ. ಈಗ ಪಶುಚಿಕಿತ್ಸೆಗೆ ಇಟ್ಟಿರುವ ಸಿಬ್ಬಂದಿ ಸಾಲದು. ಮದ್ರಾಸಿಗೆ ಸರಕಾರ ಖರ್ಚಿನಿಂದ ಇಬ್ಬರನ್ನು ತರಬೇತಿಗೆ ಕಳುಹಿಸಿ ಅವರ ಪೈಕಿ ಒಬ್ಬರು ಮದ್ರಾಸ್ ಆಧಿಪತ್ಯದಲ್ಲೇ ಅತಿ ಉಚ್ಚ ಪದವಿಯಲ್ಲಿ ತೇರ್ಗಡೆಯಾಗಿರುವಾಗ ಇಂಥವನ್ನು ನಮ್ಮ ದೇಶದಲ್ಲಿ ಉಪಯೋಗಿಸದೆ ಇರುವುದು ವಿಷಾದಕರ. ಇಲಾಖೆಯ ಮೇಲಧಿಕಾರಿಗೆ ಪಶುವೈದ್ಯ ವಿಷಯ ತಿಳಿದಿದ್ದರೆ ಈ ವಿದ್ಯಾರ್ಥಿಗಳನ್ನು ಉಪಯೋಗಿಸಿಕೊಳ್ಳದೆ ಬಿಡುತ್ತಿರಲಿಲ್ಲ.

ಕಮಿಷನರು ಹೇಳಿದ್ದೇನೆಂದರೆ—190‥ ರಲ್ಲಿ ಈ ಇಲಾಖೆಯು ಪ್ರಾರಂಭವಾಯಿತು ಈಗ ನಾಲ್ಕು ಪಶುವೈದ್ಯದ ಆಸ್ಪತ್ರೆಗಳಿವೆ 1930—31 ರಲ್ಲಿ ಈ ಇಲಾಖೆಗೆ 17000 ರೂ. ಖರ್ಚಾಗಿದೆ ಹಿಂದಿನ ವರ್ಷ 15000 ರೂ. ಮಾತ್ರ ಖರ್ಚಾಗಿತ್ತು. ಅದಕ್ಕೆ ಹಿಂದಿನ ವರ್ಷ 13000 ರೂ. ಮಾತ್ರವಾಗಿತ್ತು.

1930—31 ರಲ್ಲಿ 5000 ದನಗಳಿಗೆ ಚಿಕಿತ್ಸೆ ಮಾಡಲಾಗಿದೆ. ಹಿಂದಿನ ವರ್ಷ 1000 ದನಗಳಿಗೆ ಮಾತ್ರ ಚಿಕಿತ್ಸೆ ಮಾಡಲಾಗಿತ್ತು. ಒಳ್ಳೇ ತರಬೇತಾದವರ ಸಹಾಯವನ್ನು ಪಡೆಯಲು ಪ್ರಯತ್ನಿಸಿ ಸಾಧ್ಯವಾಗಲಿಲ್ಲ. ಕಳೆದ ಅಕ್ಟೋಬರಿನಿಂದ ನೀರು ಸ್ಪೆಷಲ್ ಲೈಸನ್ಸ್ ಕೈಯಲ್ಲಿ ಇನಾಕ್ಯುಲೇಷನ್ ಮಾಡಲು ಪ್ರಾರಂಭಿಸಲಾಗಿದೆ.

ಮೆ. ಪಿ. ನಾಣ್ಯೆಯ್ಯನವರು ಇಲಾಖೆಯು ಚೆನ್ನಾಗಿ ಕೆಲಸ ಮಾಡುತ್ತಿರುವುದು ತೃಪ್ತಿಕರ. ಫಾರೆಸ್ಟ್ ಇಲಾಖೆಯ ಪಶುವೈದ್ಯರನ್ನು ರೈತರ ಉಪಯೋಗಕ್ಕೆ ಬಿಟ್ಟುಕೊಟ್ಟದ್ದಕ್ಕೆ ಸರಕಾರಕ್ಕೆ ಧನ್ಯವಾದಗಳಿವೆ. ಆದರೂ ಇಲಾಖೆಗೆ ಜನ ಸಾಲದು—ಎಂತ ಹೇಳಿದರು.

ಠರಾವು ಬಹುಮತದಿಂದ ಮಂಜೂರಾಯಿತು.

24. ಕೊಡಗು ಸರಕಾರದಿಂದ ಪ್ಲಾಂಟರುಗಳ ಸಂಘಕ್ಕೆ ಕೊಡುತ್ತಿರುವ ರೂ. 2350 ರಲ್ಲಿ 1350 ಕಡಿದು ಮಾಡಿ ಈ ಹಣವನ್ನು ವೀರರಾಜಪೇಟೆಯಲ್ಲಿ ಒಂದು ಪಶುವೈದ್ಯ ಶಾಲೆಯನ್ನು ತೆರೆಯಲು ಉಪಯೋಗಿಸಬೇಕೆಂಬ ಠರಾವನ್ನು ಮೆ. ಎ. ಬಿ. ಚಂಗಪ್ಪನವರು ತಂದರು.

ಕಮಿಷನರು, ಪ್ಲಾಂಟರುಗಳ ಕ್ಷೇಮವೂ ದೊಡ್ಡದಾಗಿದೆ. ಪಶುವೈದ್ಯ ಇಲಾಖೆಯ ವಿಷಯ ಹೆಚ್ಚು … ಬೇಕಾಗಿಲ್ಲವೆಂತ ಹೇಳಿದರು.

ಮೆ. ನಿಕಲ್ಸರು ಹೇಳಿದ್ದೇನೆಂದರೆ ಬಾಳೆ … ಕಾಫಿ ಫಾರಮಿನಿಂದ ಒಂದು ಲಕ್ಷ ಎಕರೆ ಕಾಫಿಗೆ ಪ್ರಯೋಜನವಿದೆ. ಕೊಡಗಿನಲ್ಲಿ 5000 … ಇದೆ. ಫಾರಮಿನ ಪ್ರಯೋಜನವು ದೊಡ್ಡದು ಇದೆ. ಆ ಫಾರಮಿಗಾಗಿ 45000 ರೂ. ಯಾರು ಬೇಕಾದರೂ ಯಾವ ಸಲಹೆ ಬೇಕಾದರೂ ತೆಗೆದುಕೊಳ್ಳಬಹುದು. ಅದಕ್ಕೆ ಕೊಡಬೇಕು.

ಮೆ. ಯಸ್. ಪಿ. ಸೋ… ಯಲ್ಲಿ ಪಶುವೈದ್ಯ ಶಾಲೆಯ … ತಾಡಿದರು.

ಮೆ. ಎ. ಬಿ. ಚಂಗಪ್ಪನವರು … ಈ ಫಾರಮಿನಿಂದ ಈ ವರೆಗೆ … ಪ್ರಯೋಜನ … ತೋಟಗಳಲ್ಲೂ ವಿಶೇಷವಾಗ ಕಾಣಿವೆ. ಇಂಥ ಸಹಾಯ ಬೇಕಿಲ್ಲ. … ತೆಗೆದುಕೊಂಡರು.

25. ಫಾರೆಸ್ಟ್ ಇಲಾಖೆಯ ಖರ್ಚು ಕಡಿಮೆ … ರಹಸ್ಯವನ್ನು ವಿಚಾರಿಸಬೇಕು ಎಂಬ ಠರಾವು … ಬಿ. ಚಂಗಪ್ಪನವರು ತಂದು, ಠರಾವು … ಮಾನುಗಳನ್ನು ಮಾಡಲಿ … ಹಣ … ದರು.

ಕಮಿಷನರು ನೆವರಿ ಕಾರಣಗಳ …

ಎಂತ ಹೇಳಿ ಠರಾವಿಗೆ ವಿರೋಧಿಸಿದರು. …

ಮೆ. ನಾಣ್ಯೆಯ್ಯನವರು ಕೃಷಿ … ತರಬೇತಿ ವಿಷಯ ಏನೂ ತಿಳಿಯದ್ದ … ಮಾಡುವ ಹಣವು ನಿಷ್ಪ್ರಯೋಜನ… ವಿಗೆ ವಿರೋಧಿಸಿದರು. ಮೆ. ಬಿ. …

ಕೊಡಗು.

ಸನ್ ೧೯೩೧ನೇ ಇಸವಿ

ಮಾರ್ಚ ತಾ. [illegible] (ಶುಕ್ರವಾರ

ಪ್ರೆಸ್ ಆರ್ಡಿನೇನ್ಸ್ ಜಾರಿಯಲ್ಲಿರುವ ವರೆವಿಗೆ ನಾವು ಅಗ್ರಲೇಖನವನ್ನು ಪ್ರಕಟಿಸುವುದಿಲ್ಲ.

"ಹಿಂದೂ" ಪತ್ರಿಕೆಗೆ ಲಂಡನ್ ಬಾತ್ಮಿದಾರರಿಂದ ಬಂದದ್ದು.

ಮಹಾತ್ಮ ಗಾಂಧಿಯವರ ಶ್ಲಾಘನೆ.

ಹಿಂದೂಸ್ಥಾನದ ವಿರೋಧಿಗಳು ಮಹಾತ್ಮ ಗಾಂಧಿಯವರನ್ನು ಎಷ್ಟೇ ಹೀಯಾಳಿಸಿ ದೂಷಿಸುತ್ತಿದ್ದರೂ, ಮಹತ್ವವಿರುವ ಅನೇಕರು ಅವರನ್ನು ಈಗಲೂ ತುಂಬಾ ಶ್ಲಾಘಿಸುತ್ತಿದ್ದಾರೆ. ಅನೇಕ ಗುಡಿಗಳಲ್ಲಿ ಅವರ ಬೋಧನೆಯನ್ನು ತಿಳಿದುಕೊಳ್ಳಬೇಕೆಂತ ಬೋಧಿಸುತ್ತಾರೆ. ಹಿಂದೂಸ್ಥಾನದ ಈಗಿನ ರಾಷ್ಟ್ರೀಯ ಹೋರಾಟವನ್ನು ಸಹಾನುಭೂತಿಯಿಂದ ತಿಳಿದುಕೊಳ್ಳಬೇಕೆಂಬ ಕುತೂಹಲವು ಅನೇಕ ಕಡೆಗಳಲ್ಲಿ ಇದೆ.

ಪೆಂಬ್ರೋಕ್‌ಡಕ್ಕಿನ ಕ್ರಿಸ್ತ ಚರ್ಚಿನಲ್ಲಿ ರೆವರೆಂಡ್ ಹೂವರ್ ಎಂಬವರು ಏಸುಕ್ರಿಸ್ತನ ಹೆಸರನ್ನು ಹೇಳುವ ಅನೇಕರಿಗಿಂತ ಹೆಚ್ಚಾಗಿ ಏಸುಕ್ರಿಸ್ತನನ್ನು ಹೋಲುವವರ ವಿಷಯವಾಗಿ ಇವರು ಹೇಳಿರುವುದೇನೆಂದರೆ—

ಮಿ. ಗಾಂಧಿಯವರನ್ನು ಈಗ ತಿಳಿಯದವರಿಲ್ಲ. ಅವರನ್ನು ಹಿಡಿದು ನಿಜವಾಗಿ ವರ್ಣಿಸದೆ ಅವರನ್ನು ಅಣಕಿಸಿ ಬರೆಯುವ ಲೇಖನ ಮತ್ತು ಚಿತ್ರಗಳಿಂದಲೇ ಹೆಚ್ಚು ಪಂಚಿಕೆಗೆ [illegible] ವೆಂಬುದು ವ್ಯಸನಕರ. ಅವರ ಜೀವನದ ಅನೇಕ ಕೃತ್ಯಗಳನ್ನು ವರ್ಣಿಸಿ ಮಹಾತ್ಮ ಗಾಂಧಿಯವರೆಂದರೆ ಸಾಧಾರಣ ಮನುಷ್ಯನಲ್ಲ. ಬರೇ ಕಟ್ಟೀಕೆಯಂತೆ ಮಾತಾಡುವವರಲ್ಲ. ಬ್ರಿಟಿಷರನ್ನು ದ್ವೇಷಿಸುವವರಲ್ಲವೆಂಬದನ್ನು ಉಪನ್ಯಾಸಕರು ನಿದರ್ಶಿಸಿದರು. ಎಲ್ಲವನ್ನಾದರೂ ಕಳಂಕವಿಲ್ಲದ ನಡತೆ ಇರುವ ಸ್ಥಿತಪ್ರಜ್ಞರೂ, ವಿಶೇಷವಾದ ಆತ್ಮಶಕ್ತಿಯು ಇರುವವರಾಗಿದ್ದಾರೆ. ಯೂರೋಪಿನ ನಾಗರೀಕತೆಯನ್ನು ಕಣ್ಣಾರೆ ನೋಡಿ ಕೊಳವಾಡಿದವರಾಗಿದ್ದಾರೆ. ತಾನು ನಂಬಿದ ತತ್ವಗಳಿಗಾಗಿ ತುಂಬಾ ತ್ಯಾಗವನ್ನು ಮಾಡಿದವರಾಗಿದ್ದಾರೆ. ಮಹತ್ವವಾದಂಥ ಭಕ್ತಿಯಿಂದ ಬಡವರ ಸೇವೆ ಯನ್ನು ಕೈಕೊಂಡವರಾಗಿದ್ದಾರೆ. ಮುಂದಾಳುತನಕ್ಕೆ ಆಧ್ಯಾತ್ಮಿಕಶಕ್ತಿಯುಳ್ಳವರಾಗಿದ್ದಾರೆ.

ಹಾಗಾದರೆ ಅವರು ಮುಂದಾಳಾಗಿ ನಡಸುತ್ತಿರುವ ಚಳವಳದ ಉದ್ದೇಶವೇನು, ಅರ್ಥವೇನು ? ಅವರು ಇಂಗ್ಲಿಷರಿಗಾಗಲೀ ಯೂರೋಪಿಯನರಿಗಾಗಲೀ ವಿರೋಧವಾದ ಚಳವಳವಲ್ಲವೇ. ಅದು ಧರ್ಮಕ್ಕೂ ಅಧರ್ಮಕ್ಕೂ ಜೀವಿತ ಶಕ್ತಿಗೂ, ಶಸ್ತ್ರಲಯ ಶಕ್ತಿಗೂ, ಇರುವ ಹೋರಾಟವೆಂತಲೂ ಗಾಂಧಿಯವರೇ ವಿವರಿಸುತ್ತಾರೆ. ಈಗಿನ ಯೂರೋಪ್ ದೇವರ ಶಕ್ತಿಯನ್ನು ತಿಳಿಯುವಂಥವರಾಗಿಲ್ಲ. ಅದು ಸೈತಾನನ ಶಕ್ತಿಯನ್ನು ಪ್ರದರ್ಶಿಸುತ್ತಿದೆ. ದೇವರ ಹೆಸರನ್ನು ತುಟಿಯಲ್ಲಿ ಹೇಳುತ್ತಾ ತೋರ್ಪಡಿಸಿಕೊಳ್ಳುವಾಗ ಸೈತಾನನ ಶಕ್ತಿಯು ಅತಿ ಹೆಚ್ಚು. ಈಗಿನ ಯೂರೋಪ್ ಹೆಸರಿಗೆ ಮಾತ್ರ ಕ್ರಿಶ್ಚಿಯನ್ ನಿಜವಾಗಿಯೂ ಯೂರೋಪ್ ಹಣವನ್ನು ಪೂಜಿಸುತ್ತಿದೆಯಷ್ಟೆ. ಯೇಸುಕ್ರಿಸ್ತನ ಹಿಂಬಾಲಕರೆನಿಸಿಕೊಳ್ಳುವವರು ತಮ್ಮ ನೊತ್ತಿನಿಂದ ತಮ್ಮ ಮಹತ್ವವನ್ನು ಅಳೆದು ಮಾಡುವವರಾಗಿದ್ದಾರೆ.

ಆದ್ದರಿಂದ ಮಹಾತ್ಮ ಗಾಂಧಿಯವರ ಯುದ್ಧವು ಬ್ರಿಟಿಷ್ ಜನರ ಮೇಲಾಗಲೀ ಅವರ ಸಾಮ್ರಾಜ್ಯದ ಮೇಲಾಗಲೀ ಅಲ್ಲ. ಆತ್ಮವನ್ನೇ ನಾಶಪಡಿಸುವ ಪ್ರಾಪಂಚಿಕ ಸುಖವನ್ನೇ ಮುಖ್ಯವಾಗಿ ಸ್ವೀಕರಿಸಿರುವ ನಾಗರೀಕತನದ ಮೇಲೆ ಅವರ ಯುದ್ಧವಾಗಿದೆ.

ಹಿಂದೂಸ್ಥಾನದ ಈಗಿನ ಸ್ಥಿತಿಯನ್ನು ರಾಷ್ಟ್ರೀಯತ್ವ, ಸ್ವಾತಂತ್ರ್ಯದ ಹೋರಾಟದಿಂದ ಬೇರೆಯಾಗಿ ನೋಡಲು ಸಾಧ್ಯವಿಲ್ಲ. ಮಿ. ಗಾಂಧಿಯವರು ನಮ್ಮ ಯಾಂತ್ರಿಕ ನಾಗರೀಕತನ ವ್ಯಾಪಾರಾಭಿವೃದ್ಧಿಯನ್ನು ನೋಡಿ ಬೆದರಿದರು. ಅದರಿಂದಲೇ ಬ್ರಿಟಿಷ್ ಸರಕಾರವನ್ನು ಸೈತಾನ್ ಸಂಬಂಧವಾದದ್ದೆಂತ ಅವರು ಹೇಳಿದ್ದು. ನಮ್ಮ ನಾಗರೀಕತನದಿಂದ ಹಿಂದೂಸ್ಥಾನವು ಹೇಗೆ ಬಡತನ ಸ್ಥಿತಿಯೆಂಬುದನ್ನು ಬೊಂಬಾಯಿ ಕಲ್ಕತ್ತಾ ಮುಂತಾದ ಸ್ಥಳಗಳಲ್ಲಿ ಕಾರ್ಖಾನೆಗಳು, ಹೆಚ್ಚಿ ಗ್ರಾಮವಾಸಿಗಳು ಪಟ್ಟಣಗಳಲ್ಲಿ ತುಂಬುತ್ತಿರುವದನ್ನು ವಿವರಿಸಿ ತೋರಿಸಿದರು. ಈ ರೀತಿ ಯಂತ್ರಗಳ ಕಾಟದಿಂದ ಹಿಂದೂಸ್ಥಾನದ ಆತ್ಮಕ್ಕೆ ಹಾನಿತಟ್ಟುತ್ತದೆಯೆಂತ ಮಿ. ಗಾಂಧಿಯವರು ನಂಬುತ್ತಾರೆ. ಆದ್ದರಿಂದ ಯಂತ್ರಗಳ ಪ್ರಗತಿಯನ್ನು ಅವರು ತಡೆಯಬೇಕೆನ್ನುವುದು.

ಕ್ರಿಶ್ಚಿಯನರಾದ ನಾವು ಈ ಮನುಷ್ಯನನ್ನು ತಿಳಿದುಕೊಳ್ಳಲು ಪ್ರಯತ್ನಿಸಬೇಕು. ಈಗಿನ ಕಾಲದಲ್ಲಿ ನಮಗೆ ಯಂತ್ರಗಳು ದೇವರಂತಾಗಿದೆ. ಕಟ್ಟಣದ ಯಂತ್ರಗಳು ಮಾತ್ರವಲ್ಲ. ಹಣಕೂಡಿಸುವ ಯೋಚನೆಯಲ್ಲೇ ಮಗ್ನರಾಗಿರುವ ಮನುಷ್ಯರೂ ಸಹ ಯಂತ್ರಗಳಂತಾಗಿದ್ದಾರೆ. ಯಂತ್ರಗಳಿಂದ ಆಗುವ ಪ್ರಯೋಜನಗಳನ್ನು ಮಿ. ಗಾಂಧಿಯವರು ಮರೆತಿರುವಂತೆ ಕಾಣುತ್ತದೆ.

ಹಿಂದೂಸ್ಥಾನಕ್ಕೆ ಮೆಶೀನುಗಳ ಅವಶ್ಯಕತೆ ಇದೆ. ಆದರೆ ಅದಕ್ಕಿಂತ ಹೆಚ್ಚಾಗಿ ಹಿಂದೂಸ್ಥಾನಕ್ಕೆ ಆಸಹಕಾರದಿಂದ ಪ್ರಯೋಜನವಾಗಲಾರದು. ಮೆಶೀನುಗಳ ಹಾನಿಗಳಿಯೂ ಅದ್ದರಿಂದ ತಪ್ಪದು. ಹಿಂದೂಸ್ಥಾನಕ್ಕೂ ನಮಗೂ ಸಹಕಾರದಿಂದ ಪ್ರಯೋಜನವಾದೀತು. ನಮ್ಮ ಸಂಸ್ಕೃತಿಯನ್ನು ನಾಶಮಾಡುವುದಲ್ಲ, ತಿದ್ದಿಕೊಳ್ಳಬೇಕಾಗಿದೆ. ಗಾಂಧಿಯವರ ಬೋಧನೆಯು ಮುಖ್ಯ ಅಂಶ ಯಾವದೆಂದರೆ—ಮನುಷ್ಯತ್ವವನ್ನು ಗಣನೆಗೆ ತೆಗೆದುಕೊಳ್ಳಬೇಕೆಂಬುದು. ಮೆಶೀನುಗಳಿಂದ ಮನುಷ್ಯನ ಅಂಗಗಳು ನಿರ್ಜೀವವಾಗಲು ಬಿಡಬಾರದೆನ್ನುತ್ತಾರೆ. ಈ ತತ್ವವನ್ನು ಕ್ರಿಶ್ಚಿಯನ್ ಧರ್ಮವು ನಂಬುವುದರಿಂದಲೇ ಕ್ರಿಶ್ಚಿಯನ್ ಧರ್ಮವು ಇನ್ನೂ ಉಳಿದಿದೆ. ಮೆಶೀನುಗಳಿಂದ ಮನುಷ್ಯರಿಗೂ ದೇವರಿಗೂ ಸೇವೆಯಾದಾಗ ಮಾತ್ರ ಮೆಶೀನುಗಳ ಪ್ರಯೋಜನ. ಹಿಂದೀ ಮುಖಂಡರಾದ ಮಹಾತ್ಮ ಗಾಂಧಿಯವರು ಮೆಶೀನುಗಳನ್ನು ನಾಶಪಡಿಸಬೇಕೆನ್ನುತ್ತಾರೆ. ಕ್ರಿಶ್ಚಿಯನ್ ಧರ್ಮವಾದರೋ ಮೆಶೀನುಗಳನ್ನು ನಮ್ಮ ಅಧೀನದಲ್ಲಿಟ್ಟುಕೊಳ್ಳಬೇಕೆನ್ನುತ್ತದೆ. ಪಾಶ್ಚಿಮಾತ್ಯ ಸಂಸ್ಕೃತಿಯೂ ಕ್ರಿಶ್ಚಿಯನ್ ಧರ್ಮವೂ ಆತ್ಮವು ನಾಶವಾಗದಂತೆ ನೋಡಿಕೊಳ್ಳಬೇಕು. ಕೈಗಾರಿಕೆಗಳು ಮನುಷ್ಯನ ಅಧೀನವಾಗಿರುವಂತೆ ನೋಡಿಕೊಳ್ಳಬೇಕು. ಜನಾಂಗಗಳೊಳಗಿನ ಸಂಬಂಧವು ಪ್ರೀತಿಯನ್ನನುಸರಿಸುವಂತೆ ಮಾಡಬೇಕು.

ಬಿಷಪ್ಪಿನ ಏಸುಪ್ಪರೂ ಇದೇ ರೀತಿ ಬೋಧಿಸಿದ್ದಾರೆ. ಆದರ್ಶ ಜೀವನದ ದಾರಿಯನ್ನೇ ಪೂರ್ತಿ ಹಿಡಿಯಬೇಕು, ದಬ್ಬಾಳಿಕೆಯು ಜಿದ್ದು ಸಾಧನೆಯ ರೂಪವನ್ನು ಧರಿಸಲು ಬಿಡಬಾರದು. ಕೆಟ್ಟ ಭಾವನೆಗಳಿಗೆ ತಪ್ಪಬಾರದು ಎಂತ ಬೋಧಿಸಿದ್ದಾರೆ. ಇನ್ನೂ ಅನೇಕ ಮತಬೋಧಕರು ಇದೇ ರೀತಿ ಬೋಧಿಸುತ್ತಿರುವುದನ್ನು ವಿವರಿಸಿದ್ದಾರೆ.

ಹಿಂದೂಸ್ಥಾನದ ಸ್ವಾತಂತ್ರ್ಯಕ್ಕಾಗಿ ಸಮುದಾಯಿಕ ಪ್ರಾರ್ಥನೆ.

ಹಿಂದೂಸ್ಥಾನದ ಸ್ವಾತಂತ್ರ್ಯದ ಹೋರಾಟದಲ್ಲಿ ಹಿಂದೂಸ್ಥಾನಕ್ಕೆ ಜಯ ಬರಬೇಕೆಂಬದಕ್ಕೆ ಹಿಂದೂಸ್ಥಾನದ ಕೆಲವು ಸ್ನೇಹಿತರು ಲಂಡನಿನಲ್ಲಿ ಪ್ರತಿ ಬುಧವಾರ ಸಾಯಂಕಾಲ ಏಳು ಘಂಟೆಗೆ ಸೇರಿ ಪ್ರಾರ್ಥಿಸುತ್ತಾರೆ. ಸಾಧಾರಣವಾಗಿ 2[illegible] ನಿಮಿಷದ ವರೆಗೆ ಮೌನವಾಗಿ ಪ್ರಾರ್ಥಿಸುವುದಾಗಿದೆ. ನಾವು ದೂರದಲ್ಲಿದ್ದರೂ ಪ್ರಾರ್ಥನೆಯಿಂದ ನಾವು ಹಿಂದೂಸ್ಥಾನದೊಂದಿಗೆ ಆತ್ಮಸಂಬಂಧ ಇಟ್ಟುಕೊಳ್ಳಬಹುದೆಂತ ನಂಬುತ್ತೇವೆ. ಈ ಹೋರಾಟದಲ್ಲಿ ದೂರದಿಂದ ಭಾಗ ತೆಗೆದುಕೊಳ್ಳಲು ಇದು ಒಂದೇ ದಾರಿಯಾಗಿದೆ.

ಹಿಂದೂಸ್ಥಾನದಲ್ಲಿ ಸಾರ್ವಜನಿಕ ಅಭಿಪ್ರಾಯವನ್ನು ತಿಳಿಸಲು ಅವಕಾಶ ಇರುವುದರಿಂದ ರಾಷ್ಟ್ರೀಯ ಮುಖಂಡರಿಗೆ ಒಂದು ಸಲಹೆ ಕೊಡಲು ಅಪೇಕ್ಷಿಸುತ್ತೇವೆ. ಪ್ರಾರ್ಥನೆಯಲ್ಲಿ ಬಹಳ ಬಲವಿದೆ. ಅವರ ಪ್ರಾರ್ಥನೆಯು ಮೊದಲಾಗಿ ನಮ್ಮೊಳಗೆ ಇರುವ ದ್ವೇಷವನ್ನೂ ಮನಸ್ತಾಪವನ್ನೂ ಹೊರಗಲಾಡಿಸಿಕೊಂಡು, ಪರಿಶುದ್ಧರನ್ನಾಗಿ ಮಾಡಿಕೊಳ್ಳಬೇಕು. ಹಾಗೆ ಪರಿಶುದ್ಧರಾದರೆ ನಮ್ಮಿಂದ ಇನ್ನು ಮುಂದೆ ಆಗಬೇಕಾದ ಕೆಲಸಕ್ಕೆ ಅರ್ಹರಾಗುತ್ತೇವೆ. ಮತ್ತು ಏಕೋಭಾವದ ಸತ್ಯವನ್ನೇ ಅವಲಂಬಿಸಲಿಕ್ಕೂ ಸಾಧ್ಯವಾಗುತ್ತದೆ. ಭಾವನೆಯಿಂದ ಹಿಂದೂಸ್ಥಾನದ ಎಲ್ಲಾ ದೇವಸ್ಥಾನಗಳಲು ಮಶೀದಿಗಳಲ್ಲೂ ಮನೆಗಳಲ್ಲೂ ಹಿಂದೂಸ್ಥಾನದ ಸ್ವಾತಂತ್ರ್ಯಕ್ಕಾಗಿಯೂ ಅದಕ್ಕಾಗಿ ಹೋರಾಡುವವರಿಗೆ, ಕಷ್ಟವನ್ನನುಭವಿಸುವವರಿಗೆ ಬಲ ಬರಲಿ ಎಂತಲೂ ಸಾರ್ವಜನಿಕ ಪ್ರಾರ್ಥನೆ ನಡೆಸಿದರೆ ಹಿಂದೂಸ್ಥಾನದ ನ್ಯಾಯಕ್ಕಾಗಿ ನಡಸುತ್ತಿರುವ ಹೋರಾಟಕ್ಕೆ ಎಷ್ಟೋ ಬಲ ಬರುತ್ತದೆ. ಮಹಾತ್ಮ ಗಾಂಧೀಯವರ ತತ್ವವನ್ನು ಅವಲಂಬಿಸಿ ಈ ಹೋರಾಟದ ಎಲ್ಲ ಪಕ್ಷದವರಿಗಾಗಿಯೂ ಪ್ರಾರ್ಥನೆ ಮಾಡು [illegible].

ಸಮುದಾಯಕ್ಕೆ ಈ ಹೋರಾಟದಲ್ಲಿ [illegible] ತಿಯನ್ನು ಪ್ರಾರ್ಥನೆ ಮೂಲಕ ತೋರಿಸಬಹುದೆಂತಲೂ, [illegible] ಲಗೆ ಈ ಚಳವಳದ ಬೇರೆ ಬೇರೆ ಕಾರ್ಯಗಳಲ್ಲಿ ಭಾಗ ತೆಗೆದುಕೊಳ್ಳಲು ಸಾಧ್ಯವಿಲ್ಲದಿದ್ದರೂ ನಮ್ಮಂತೆ ಪ್ರಾರ್ಥನೆ ಮಾಡಿಯಾದರೂ ಸಹಾಯ ಮಾಡಬಹುದೆಂತ ನಂಬುತ್ತೇವೆ.

ಇದಕ್ಕೆ ಸೈನ್ ಮಾಡಿದವರು.—ಹೋರೇಸ್ ಜಿ. ಅಲೆಗ್ಸಾಂಡರ್

ಮ್ಯುರಿಯಲ್ ಲಿಸ್ಟರ್,
ಅಗಾತಾ ಹ್ಯಾರಿಸನ್,
ಯಲ್. ಹೌಸ್‌ಮನ್,
ಪೈಡ್ರಿ ಭಟ್ಟಾಚಾರ್ಯ,
ಎಲ್ಸಿ ಸ್ಪ್ರಿಂಗರ್,
ಪೀಟರ್ ಏಡ್ಕಿನ್ಸನ್,
ಯಂ. ಇ. ಪಾರ್ಕರ್,
ಯಂ. ಹೆಚ್. ನೆಯುವಿ,
ಮಾರ್ಗರೇಟ್ ಹಾಲೆಂ,
ಆಕ್ಸಿಯಸ್. ಕಮಲಾನಿ
ಫ್ರಾನ್ಸಿಸ್ ಇ. ಪೋಗ್

Reg. No. M. 1350.
If not delivered please return to "KODAGU" OFFICE MERCARA.

ಕೊಡಗು.

ಸತ್ಯೇನ ಧೂತದಯಯು ವಿದ್ಯಾ ವೀತಿ ಪ್ರ...ಕ್ಷಣಾ / ಏಕವಾಕ್ಯೇನ ದೇಶಾನಾಂ ಶುಶ್ರೂಷಾ ರಾಜ್ಯ ಸಂಪದಾ

ವಾರ್ಷಿಕ ಚಂದಾ ರೂ. ೩—೪—೦.

ಸಂಪಾದಕ—ಮಾಚಿಮಂಡ ಯಂ. ಗಣಪತಿ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೧	ಮಡಿಕೇರಿ, ಸನ್ ೧೯೩೨ನೇ ಇಸವಿ ಮಾರ್ಚ್ ತಾರೀಕು ೨೫ನೇ ಶುಕ್ರವಾರ.	ಸಂಚಿಕೆ ೪೨

Office of the Asst. Commr. & Dt. Magte., Mercara (Coorg). 6th May 1931.
Dear Sir,
I am QUITE PLEASED with the workmanship of the two Coorg weapons (PICHAKATTI & ODIKKATTI)
Yours faithfully,
(Sd) (Rao Bhadur) K. CHENGAPPA, B. A.
District Magistrate and Assistant Commissioner of Coorg.

JEWELLER
By Appointment to
H. E. The Governor of Madras.



PEECHAKATTI (WITH SILVER FITTINGS)
Prices - From Rs 100 & upwards.

"New Bungalow," Ammatti, (Coorg), 14th December 1931.
Dear Sir,
I am IMMENSELY PLEASED with the workmanship of the PICHAKATTI you made and sent me some time back.
Yours faithfully,
Sd K. P. MUDDAYYA, Ammatti (Coorg.)

Telegrams: 'PRECIOUS.'

V. Subramaniaier Jeweller.

Telephone: 3145.

CATALOGUE ON ENQUIRY.

52—18

Post Box 423, Triplicane, P. O., MADRAS.



ಕೋವಿಗಳು, ಕತ್ತಿಗಳು, ಬಚೀಗಳು, ಕೋಟಿ ... ಮತ್ತು ಇತರ ... ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS,
Largest Importers of Firearms and Ammunition
Cheapest priced firm in India,
210 Abdul Rehman Street, BOMBAY.

54—3

ಕಾಗದ ಬರೆದರೆ ಅಗಸ ... ವಾಪಿಯಾಗ ... ಸಲ್ಲುವದು.

ಬಾಲಾರ್ಕಮಧು.

ಬಾಲಾರ್ಕಮಧು ಮಕ್ಕಳಿಗೆ ಕೊಡ. ಪುದರಿಂದ ಶಕ್ತಿಯ ಆರೋಗ್ಯವೂ ಹೆಚ್ಚುವುದು. ಇದು ಮಧುರವಾಗಿದೆ. ಶೀಸೆ 1ಕ್ಕೆ 0—12—0 ಟಿ. ಖ. 0—12—0.



(Spleen Lever enlargement) ... ಮಕ್ಕಳ ... ಪ್ಲೀಹ—ಪಿತ್ತಕೋಶದ ಗಡ್ಡೆಗೆ ... ಔಷಧಗಳಿವೆ ... ಮಕ್ಕಳ ... ಶೀಸೆ 1 ... 3—0—0 ಟಿ. ಖ. 0—8—0. ಏಜೆಂಟರು ...

ಪ. ಎ. ಮುನ್. ಶ್ರೀನಿವಾಸ್
ವೈ. ವಿ. ಆಯುರ್ವೇದ ... ಡಿಪ್ಲೊ

ಬ್ರಾಂಚ್ ಆಫೀಸ್, ಉಡುಪಿ. S. K. } Spleen & Lever ... ಯಂ. ವಿ. ಪ್ರಸಾದಿ...

52—10

ರೂ. 78— ... —8—0

ವಜ್ರದ ಅಡ್ಡಿಗೆ.

ಅಡ್ಡಿಗೆಗಳನ್ನು ಅಮೇರಿಕನ್ ಡೈಮಂಡ್ ಎಂಬ ಇಮಿಟೇಶನ್ ಕಲ್ಲುಗಳನ್ನು ಅಚ್ಚು ಕಟ್ಟಾ...ಂಗಾರದಿಂದ ಕಟ್ಟಿದ ... ದರ ಬಣ್ಣವು ಕೆಡದಂತೆ ... ಗಾರದ ಬಣ್ಣ ಕೊಟ್ಟಿದೆ. ...ಗಳ ಪ್ರಕಾಶವು ಸಾಚಾವ...ಗೆ ಸರಿಯಾಗಿದೆ. ... ರಿದವರು ೫,೦೦೦ ರೂ. ...ಕೊಟ್ಟುವರು. ಶ್ರೀಮಂ...ರಿಗೆ ಲಾಯಕಾದವು. ಕ್ರಯ ೧ಕ್ಕೆ ರೂ. ೫—೧೨—೦. ... ಕಳ್ಳದ ಭಂಗಾರದ ಡಾಬು ೧ಕ್ಕೆ ನಂ ೧ ... ರೂ. ೩—೮—೦.

ಕಾಗದ—ಕೆ. ಎಸ್. ಬೆನ್‌ಸನ್ ಅಂಡ್ ಕೊ,
ಪೋ || ನಂ || 1246, ಮದರಾಸು.

—12

ಈ ಗಡಿಯಾರಗಳು ... ಇರುವವು ... ಸ್ವಂತ ಅರ್ಧ್ ಮೇಲೆ ... ತಯಾರಿಸಿ ... ಗಿ ಘಂಟೆಯನ್ನು ಕೊಡುವ ... ದಿವಸಗಳೂ ಯಾವಾಗ ... ಬೆಲೆಗೆ ... ಇಲ್ಲ. ... ದಿಂದ ಬೇಗನೆ ... ನಮ್ಮಲ್ಲಿ ಸ್ವಲ್ಪವೇ ಇರುತ್ತವೆ. ಇವಕ್ಕೆ ಬಾತ್ರಿಯಾದ 3 ವರ್ಷ ಗ್ಯಾರಂಟಿ ಕೊಡುತ್ತೇವೆ. ಕ್ರಯ 1ಕ್ಕೆ 4—4—0.

ವಿಳಾಸ—ಕೆ. ಎಸ್. ಬೆನ್‌ಸನ್ ಅಂಡ್ ಕೊ,
ಪೋ || ನಂ || 1246, ಮದರಾಸು.

12—1

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್
ಲಿಮಿಟೆಡ್ [illegible]
[illegible]
(ಸ್ಥಾಪಿತವಾದದ್ದು 1922ರಲ್ಲು)

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	26,800
ಜಮೆಬಂದ ಠೇವಣಾತಿ	—	2,50,301

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೆ ಸಾಲ ಕೊಡಲ್ಪಡುವುದು.

ಒಂದು ವರ್ಷ ಬಾಯಿದೆ ಅಥವ ಹೆಚ್ಚಿನ ಬಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5–0–0ರ ದರದಲ್ಲಿ ಬಡ್ಡಿ ದೊರೆಯುತ್ತೆ, ಕಡಿಮೆ ಬಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ನಿಷ್ಠುರ [illegible] ಕೋಆಪರೇಟಿವ್ ರಿಜಿಸ್ಟ್ರಾರವರು [illegible] ಮಾಡುತ್ತಾರೆ.

ಪ್ರೆಸಿಡೆಂಟರು,	ಡೈರಕ್ಟರ್
ಕೋಳಿಯಂಡ ಅಪ್ಪಯ್ಯನವರು,	ಮನೆಯಪ್ಪಂಡ ಬೆಳ್ಯಪ್ಪ
ರಾವ್ ಬಹದ್ದೂರ್.	ನವರು.

ಸೆಕ್ರೆಟರಿ,
ಸಿ. ಯಸ್. ವೆಂಕಟಪ್ಪಯ್ಯನವರು, ಬಿ.ಎ. [illegible]
ತಾರೀಖು 1–7–1931.

ಸೂಚನೆ.

ಕೆಳಗಿನ [illegible] "ಕೊಡಗು" ಪತ್ರಿಕೆಯ [illegible] ಬರುವ [illegible], [illegible] ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ [illegible] ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. [illegible] ಚಂದಾದಾರರೆಲ್ಲರೂ ಅವರಿಗೆ [illegible] ಹಣವನ್ನು [illegible] ರಶೀತಿ ಪಡೆಯಬೇಕಾಗಿ ಕೋರಿದೆ.

ಏಜೆಂಟರುಗಳು.
ಉತ್ತರ ಕೊಡಗಿಗೆ ಮೆ॥ [illegible] ಪೂವಯ್ಯನವರು,

ಸಬ್ ಏಜೆಂಟರುಗಳು.
ವೀರರಾಜಪೇಟೆ—ಮೆ. ಮುಂಡೇಪಂಡ ಸೋಮಯ್ಯನವರು, (ಖಾದಿಭಂಡಾರ.)
ನಾಪೋಕ್ಲು—ಎಸ್. ಆರ್. ವೆಂಕಟಪ್ಪಯ್ಯನವರು.
ಅಮ್ಮತ್ತಿ—ಸಿದ್ದಾಪುರ—ಮೆ. ಬಸಂಡ ಮಾದಪ್ಪನವರು.
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಪ್ಪಯ್ಯನವರು,
ಮತ್ತು ಅದಮೆಣಮಾಡ ಪಿ ಕಾರ್ಯಪ್ಪನವರು,
ಕೇರಿ & ತಿತಿಮತ್ತಿ—ಮೆ. ಬಿ. ಮಾದಪ್ಪಯ್ಯನವರು,
[illegible]—ಮೆ. ಅಪ್ಪಚೆಟ್ಟೋಳಂಡ ಪೂವಯ್ಯನವರು,

ನೋ:—ಏಜೆಂಟರು ಆದ ರಶೀತಿ ಹೊಂದಿಕೊಳ್ಳದೆ ಯಾ[illegible] ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

[illegible]ಕ್ಕೆ ಸಿದ್ಧವಾಗಿವೆ.

[illegible] ದವಸ ಭಂಡಾರಗಳ ಪ್ರತಿ [illegible]ಬೇಕಾದ ಅಮಿತ ಜವಾ[illegible] ಮತ್ತು ದವಸ ಭಂಡಾ[illegible]ಗಳೂ, ಎಲ್ಲಾ ಸಹ[illegible] [illegible]ದಾರಗಳ ಕೆಲಸಗಳನ್ನು [illegible] ಅತ್ಯವಶ್ಯವಾಗಿರುವ, ರೂಲ್ಸಿಗನು[illegible] ದಾವಾ ಫಾರಮುಗಳೂ, ಜಮ್ಮ ಮಂಜೂರಾತಿ ಫಾರಮು [illegible] ಫಾರಮುಗಳೂ, [illegible], ಸ್ಟೋರ್ ಕೀಪರ್ [illegible] ಪುಸ್ತಕಗಳೂ, ರಶೀತಿ ಪುಸ್ತಕಗಳೂ, [illegible] ಪುಸ್ತಕಗಳೂ ಮತ್ತು ಚೆಕ್ ಪುಸ್ತ[illegible] [illegible]ಯದಲ್ಲಿ ದೊರೆಯುತ್ತವೆ. [illegible] ಆರ್ಡರು ಕೊಟ್ಟಲ್ಲಿ [illegible]ದು.

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳ.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.
ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.
ಭಂಡವಾಳವು ಹೆಚ್ಚಾದದ್ದು—ಸುಮಾರು [illegible] ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ [illegible] 1,78,322 ಜನರಿಗೆ [illegible] ಕೋಟಿ ರೂ.
ಪೋಲಿಸಿ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.40ಕ್ಕಿಂತ [illegible] ನಡೆಸಲ್ಪಟ್ಟಿದ್ದಾಗಿದೆ.
ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು [illegible]
ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಒತ್ತಾಸೆಯನ್ನು

ಓರಿಯಂಟಲ್ ಕಂಪೆನಿಯು [illegible]ದೆಯುತ್ತಿದೆ

ಎಂಬದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಭಿವೃದ್ಧಿಯಿಂದಲೂ [illegible].
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು.

[illegible] ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ,	ಕಲ್ಕತ್ತಾ	ಕೌಲಾಲಂಪೂರು	ಮೊಂಬಾಸ	ರಂಗೂನು
ಅಹ್ಮದಾಬಾದ	ಕೊಲಂಬೊ	[illegible]	ನಾಗಪುರ	ರಾವಲ್ಪಿಂಡಿ
ಅಜ್ಮೀರ್	ಢಕ್ಕಾ	ಲಾಹೋರ್	ಪಾಟ್ನಾ	ಸುಕ್ಕೂರು
ಅಲ್ಲಾಹಾಬಾದ	ಡಿಲ್ಲಿ	ಮದ್ರಾಸು	ಪೂನಾ	ತಿರುಚಿನಾಪಲ್ಲಿ
ಬೊಂಬಾಯಿ	[illegible]	[illegible]	ರಾಯಪುರ	ತಿರುವೆಂದ್ರಮ್
ಭೋಪಾಲ್	[illegible]	[illegible]	ರಾಂಚಿ	ವಿಶಾಖಪಟ್ಟಣ

52—3

[illegible] ಮತ್ತು [illegible] ಸೇವಿಸುವುದರಿಂದ ಗುಣವಾಗದಿರುವ ಮಲೆ ಜ್ವರ, [illegible] ಬರುವ ಜ್ವರ, 3–4 ದಿವಸಕ್ಕೊಂದು ಸಾರಿ ಬರುವ [illegible] ಬರುವ ಜ್ವರ ಮತ್ತು [illegible] ದೋಷದಿಂದ ಬರುವ ಜ್ವರಗಳಿಗೆ [illegible]. [illegible] ರೂ. 1–[illegible]; 3ಕ್ಕೆ ರೂ. [illegible]–0–0; 6ಕ್ಕೆ ರೂ. 7–8–0; 12ಕ್ಕೆ ರೂ. 14

ಮಲೆ ಜ್ವರಕ್ಕೆ ರಕ್ತಶುದ್ಧಿ [illegible]

[illegible]:—ಇದು [illegible], ಮೂತ್ರ [illegible] ಹೋಗುವುದು, ಮೂತ್ರಕೋಶದ ಉರಿ, ಮೂತ್ರ, ಹಿಂದಿನ ಉರಿ, ಮೂತ್ರನಾಳದಲ್ಲಿ [illegible], ಮೂತ್ರ [illegible] ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, [illegible] ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, [illegible]. ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ [illegible] ರೋಗ. ಇವುಗಳಿಗೆ [illegible] ಔಷಧಿ. ಬೆಲೆ [illegible] 1, 3, 6ಕ್ಕೆ ರೂ. 1–[illegible]–0 3–8–0; 6–12–0

[illegible]:—[illegible] ಇರುವ ಭಾಗಕ್ಕೆ [illegible]. [illegible] 1ಕ್ಕೆ 6 ಆಣೆ, 3 [illegible]ಗಳಿಗೆ ರೂ. 1 [illegible] 2–[illegible]–0

[illegible]:—ತಲೆನೋವು, ತಲೆತಿರುಗುವುದು, ತಲೆಬುರುಡೆ, [illegible], ಕಿವಿಯಿಂದ ಕೀವು ಸೋರುವುದು [illegible], [illegible] ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು. ಇವುಗಳೆಲ್ಲ ಖಂಡಿತ ಗುಣವಾಗುತ್ತದೆ. [illegible] ಕೂದಲನ್ನು [illegible] ಕೂದಲನ್ನು [illegible] ಸೌಂದರ್ಯವನ್ನು [illegible] ಕೊಟ್ಟು [illegible] ಕೂದಲನ್ನು [illegible] ಹುಟ್ಟಿಸುತ್ತದೆ. ಬೆಲೆ [illegible] ರೂ. 1, 3 [illegible] 2–10–0. ಒಂದು ದೊಡ್ಡ [illegible] ರೂ. 2, 3 [illegible] 5–8–0

ವಿಳಾಸ:—[illegible] ಕಂಪೆನಿ,

52–43 [illegible] 9, [illegible].

ಸಣ್ಣ ಹುಡುಗರ ಸಲುವಾಗಿ

ಪ್ರಸಿದ್ಧ

ಇರುವ

ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ
ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚು
ವವು ಮತ್ತು ಇದು ಮಧುರವಾಗಿ
ರುವುದರಿಂದ ಮಕ್ಕಳು ಪ್ರೀತಿ
ಯಿಂದ ತೆಗೆದುಕೊಳ್ಳುತ್ತಾರೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ದೊಂಗರೆ ಕಂಪೆನಿ,
52–10 ಗಿರಿಗಾಂವ, ಮುಂಬಯಿ.

Printed & published by M. M. Ganapathy at "Kodagu," Press M
for "Kodagu" Ltd.

೫೪ ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ ಔಷಧಗಳು.

೧. ಧಾತುಪುಷ್ಟಿ ಲೇಹ.

ಧಾತು ನಷ್ಟವಾಗುವಿಕೆ, ಧಾತು ಮೂತ್ರದೊಡನೆ ಹೋಗುವಿಕೆ, [illegible] ಸ್ವಪ್ನದಲ್ಲಿ ಧಾತು [illegible], ಜ್ಞಾಪಕ ಶಕ್ತಿ [illegible] ತಲೆ ಸುತ್ತು, ಕೈ ಕಾಲು ಉರಿ, [illegible] ಬಹುಬೇಗನೆ ಗುಣವಾಗುವುದು. ಡಬ್ಬಿ 1ಕ್ಕೆ 2—8—0 ಮೂರು ಡಬ್ಬಿಗಳಿಗೆ ರೂ. 7—0—0

೨. ಅಶೋಕಾರಿಷ್ಟ ಮತ್ತು ಮಾತ್ರೆ.

ಹೆಂಗಸರ ಮುಟ್ಟು ದೋಷಗಳು, [illegible] ಕೆಂಪಾಗಿ [illegible] ಸೆಳೆತ ಮತ್ತು ಗರ್ಭಕೋಶದ ಎಲ್ಲಾ ರೋಗಗಳನ್ನೂ ಅತಿ ಶೀಘ್ರದಲ್ಲಿಯೇ ಗುಣ ಪಡಿಸುವುದು. ಅಶೋಕಾರಿಷ್ಟ ಮತ್ತು ಮಾತ್ರೆಗಳು ಸಾಧಾರಣ ಹೆಂಗಸರಿಗೆ ಅಂತರಿಕ ಆರೋಗ್ಯವನ್ನು ಒದಗಿಸಿ, [illegible]

ಕ್ರಯ 1 ಬಾಟ್ಲಿ ಔಷಧ, 1 ಡಬ್ಬಿ ಮಾತ್ರೆ ರೂ. 2 ಆ. 4
3 ಬಾಟ್ಲಿ ಮತ್ತು ಡಬ್ಬಿಗಳಿಗೆ ರೂ. 6 ಆ. 4.

೩. ಮಲೇರಿಯಾ ನಿವಾರಣೆ.

ದಿನ ಬಿಟ್ಟು ಬರುವ ಜ್ವರ, ಚಳಿ ಜ್ವರ, 2 ಯಾ 3 ದಿನ ಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರದ ಗಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರ ಗಡ್ಡೆಯನ್ನು ಕರಗಿಸಿ ಶಕ್ತಿಯನ್ನು ಉಂಟು ಮಾಡುತ್ತದೆ. ಬಾಟ್ಲಿ 1ಕ್ಕೆ 1—8—0, 3 ಬಾಟ್ಲಿಗಳಿಗೆ 4—2—0.

೪. ಮೋಹ ಕಂಠಾರ. ಇದು ಮೂತ್ರಸ್ಥಾನದಿಂದ ಕೆಂಪು, ಬಿಳಿದು, ಹಳದಿಯಂತೆ ಹೋಗತಕ್ಕ ಕೀವನ್ನೂ, ವ್ರಣವನ್ನೂ, ಉರಿಯನ್ನೂ ಗುಣಪಡಿಸುತ್ತದೆ. ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7.

೫. ಇಛ್ಛಾ ಭೇದಿ ಗುಟಿಕೆ. ಆಯಾಸವನ್ನು ಉಂಟುಮಾಡುವ ಸುಖ ವಿರೇಚಕ. ಬಾಟ್ಲಿ 1ಕ್ಕೆ 0—12—0 ಆಣೆ. 3 ಬಾಟ್ಲಿಗಳಿಗೆ 2—2—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕವಾದ ಔಷಧ ರವಾನಿಸಬಹುದು. ಕೆಟಲಾಗು ತರಿಸಿ ನೋಡಿರಿ.

ಎಂ. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್,
52—24 **ರಥಬೀದಿ, ಮಂಗಳೂರು, ದ. ಕನ್ನಡ**

ಭಂಗಾರದ ಕೈಗಡಿಯಾರ.



ಈ ಚಿತ್ರದಲ್ಲಿ ಕಾಣುವ ಭಂಗಾರದ ಕೈಗಡಿಯಾರವು [illegible] (ಸ್ವಿಸ್ ಮೇಡ್) ಲೀವರ್ [illegible] ದ ತಯಾರಾದವು. [illegible] ಗ್ಯಾರಂಟಿ ಪತ್ರ ಸಹ ಕಳುಹಿಸುವೆವು.

3 ಬಹುಮಾನಗಳ ಸಹಿತ ರಿಸ್ಟವಾಚ್ 1 ಕ್ಕೆ 6—8—0.

ವಿಳಾಸ:— **[illegible]**,
12—12 168. ಜೈನಾ ಬಜಾರ್, ಮದರಾಸು.

12 ಸೆಂಟ್ ಬಾಟಲ್, ಫೌಂಟನ್ ಪೇನಾ ಲೀವರ್ ಪಾಕೆಟ್ ವಾಚ್ 2—12—0 ಮಾತ್ರ.
ಪ್ರಸಂಚದಲ್ಲೆಲ್ಲಾ ಹೆಸರುವಾಸಿಯಾದ
ಲಿಲ್ಲಿ ಆಫ್ ದಿ ವ್ಯಾಲಿ ಮತ್ತು ಫೌಂಟೆನ್ ಪೇನಾ.



ಈ ಸುಗಂಧ ದ್ರವ್ಯವು ಫ್ರಾನ್ಸ್ ದೇಶದಲ್ಲಿ ಪುಷ್ಪಗಳ ಸಾರದಿಂದ ತಯಾರಿಸಿದ್ದು. ಅದರಲ್ಲಿ ಮದ್ಯಸಾರಗಳು ಯಾವವೂ ಸೇರಿಸುವುದಿಲ್ಲ. ಅದರಲ್ಲಿ ಒಂದೇ ಒಂದು ಹನಿಯನ್ನು ಬಟ್ಟೆಗೆ ಹಾಕಿದರೆ ಒಂದು ವಾರದ ವರೆಗೂ ಒಂದೇ ಸರಿಯಾಗಿ ಗಮಗಮಿಸುತ್ತಿರುವುದು. ಲಿಲ್ಲಿ ಆಫ್ ದಿ ವ್ಯಾಲಿ ಎಂಬ ಈ ಸುಗಂಧ ದ್ರವ್ಯಕ್ಕೆ ಸರಿಸಮಾನವಾದದ್ದು ಬೇರೊಂದು ಇಲ್ಲ. [illegible] 14 ಕ್ಯಾರೆಟ್ಟಿನ ಭಂಗಾರದ ನಿಬ್ಬು ಹಾಕಿದ ಫೌಂಟೆನ್ ಪೇನಾ, ಒಂದೇ ತಲ 12 ಸೆಂಟ್ ಬಾಟಲ್, ಪೇನಾ ತರಿಸುವವರಿಗೆ ಒಂದು ಪಾಕೆಟ್ ವಾಚನ್ನು ಇನಾಮಾಗಿ ಕೊಡುತ್ತೇವೆ.

ಕ್ರಯ ರೂ. 2—12—0 ಮಾತ್ರ.

The Legal Trading Co.
12—1 P. B. 243, Madras.

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಎಂಬುವ ಸುಪ್ರಸಿದ್ಧ ದೇಶೀಯ ವಿಮೋ ಸಂಘ.
ಅಧ್ಯಕ್ಷರು:—ಮಾನನೀಯ ಸರ್ ಲಲ್ಲೂಭಾಯಿ ಸಾಮುಲದಾಸ್,
ಕೆಟಿ., ಸಿ. ಐ. ಇ., ಜೆ. ಪಿ., ಯವರು.
ಕೊಚ್ಚಿಕಾರ ಬ್ರದರ್ಸ್, ಮದ್ರಾಸು ಬ್ರಾಂಚು ಸೆಕ್ರೆಟರಿಗಳು.

1. ಭಾಗ್ಯವಂತರ ಭಂಡಾರ, ವೃದ್ಧಾಪ್ಯದ ಕೋಶಾಗಾರ, ಕುಟುಂಬದ ಸಂರಕ್ಷಣಾನಿಲಯ. ಬಡವರ ಜೀವನಾಧಾರ ಇದೇ ಜೀವ ವಿಮೆಯ ಕರ್ತವ್ಯ.

2. ಹಿಂದೂಸ್ಥಾನದ ನಿವಾಸಿಯರಲ್ಲಿ ವಿಮಾ ತೆಗೆಯಬೇಕನ್ನುವವರ ಪ್ರಯೋಜನಾರ್ಥವಾಗಿ ಈ ಕಂಪೆನಿಯು ಭಾರತೀಯರ ಉತ್ತಮವಾದ [illegible] ಇಂಡಿಯಾ ಸರ್ಕಾರದ ಇಂಡಿಯನ್ ಟ್ರಸ್ಟು ಏಕ್ಟಿಗೆ ಒಳಪಟ್ಟು ಸರ್ಕಾರದ ಭದ್ರತೆಯಿಂದ ದೇಶೀಯರ ಸೇವೆಯಲ್ಲೇ ನಿರತವಾಗಿ ಹಿಂದೂಸ್ಥಾನದ ಎಲ್ಲಾ ಕಡೆಗಳಲ್ಲೂ ಅತಿ ಕೀರ್ತಿಯನ್ನು ಪಡೆದಿರುತ್ತೆ.

3. ಈ ಸ್ವದೇಶೀ ಕಂಪನಿಯು ಪೋಲಿಸಿದಾರರಿಗೆ ಪೋಲಿಸಿ ಅವಧಿ ಪೂರ್ತಿಸಿದನಂತರಾಗಲೀ ಅಥವಾ ಮಧ್ಯದಲ್ಲಿ [illegible] ಹೆಚ್ಚಿನ ಖರ್ಚಿಗೆ ಅಸ್ಪದ ಕೊಡದೆಯೂ, ದೀರ್ಘ ಸಮಯ ತೆಗೆದುಕೊಳ್ಳದೆಯೂ ಶೀಘ್ರದಲ್ಲಿ ವಿಮೋ ಮೊಬಲಗನ್ನು ಲಾಭ ಸಹಿತ ವಾಪಸಕೊಡುವುದರಲ್ಲಿ ಹೆಸರುಗೊಂಡಿದೆ.

4. ಭರತಖಂಡದ ಮಹನೀಯರಿಂದ ಸ್ಥಾಪಿಸಲ್ಪಟ್ಟು ದೇಶೀಯರಿಂದಲೇ ಅತಿ ಕಡಿಮೆ ಖರ್ಚಿನಿಂದ ನಡಿಸಲ್ಪಡುವ ಈ ಸ್ವದೇಶೀ ಕಂಪೆನಿಯು [illegible]; ಸತಿಪತ್ನಿಯರಿಗೆ ಮತ್ತು ವ್ಯಾಪಾರಸ್ಥರು ವರ್ಗೈರರಿಗೆ ಜತೆಭಾಗಿ (ಜಾಯಿಂಟ್ ಲೈಫ್) ಪೋಲಿಸಿ ತೆಗೆದುಕೊಳ್ಳಲು ಈ ಕಂಪೆನಿಯು ತುಂಬಾ ಅನುಕೂಲಗಳನ್ನು ಕಲ್ಪಿಸಿರುತ್ತೆ. ಇಂಥ ಸುಸಮಯವನ್ನು ಎಂದಿಗೂ ಕಳಕೊಳ್ಳಬಾರದು.

ಆಫೀಸು—
ಟೆಂಪಲ್ ಸ್ಟೆಡ್,
ಮಡಿಕೇರಿ. (26—22)

ಬಿ. ಎಸ್. ಐಮ್ಮಪ್ಪ,
ಕೊಡಗು ಜೀಫ್ ಏಜೆಂಟ್.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

1. ಉತ್ತಮ ತರಹ ಒಂದು ಸೆಟ್ ಜರ್ಮನ್ ರೀಡ್ಸ್ ಹಾಕಿರುವ ಸಿಂಗಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 20—0—0
 " ಮತ್ತು 22—8—0
2. ಇದಕ್ಕಿಂತಲೂ ಉತ್ತಮ ತರಹ ಹಾರ್ಮೋನಿಯಂ
 " 1ಕ್ಕೆ ರೂ. 25—0—0
 " ಮತ್ತು 27—8—0
3. ಇದಕ್ಕಿಂತಲೂ ಉತ್ತಮ ತರಹದ್ದು, ದೂಳು ಬೀಳದಂತೆ ಕೇಸಿನ ಮೇಲೆ ಪೂರ್ತಿ ಮುಚ್ಚಳವುಳ್ಳ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ ರೂ. 27—8—0
4. ಬಾಳಿಕೆಯೂ, ಬಂದೋಬಸ್ತೂ, ಸುಸ್ವರವುಳ್ಳದ್ದೂ, ಅನೇಕ ವರ್ಷಗಳ ವರೆಗೆ ಬಾಳಿಕೆ ಬರತಕ್ಕದ್ದೂ ಆದ ಹೊಸದಾಗಿ ನಮ್ಮ ಆಗಿರುವ ಫ್ರೆಂಚ್ ರೀಡ್ಸ್ ನಮೂನೆ ಇರುವ ನಮ್ಮ ಹೆಸರಿನ ರೀಡ್ಸ್ ಹಾಕಿರುವ "ಸಿದ್ದಪ್ಪ ಸ್ ಫ್ಲೂಟ್" ಸಿಂಗಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 42—8—0
5. ಉತ್ತಮ ತರಹ 2 [illegible] ರೀಡ್ಸ್ ಹಾಕಿರುವ ಕೇಸಿನ ಮೇಲೆ [illegible] ಡಬ್ಬಲ್ ರೀಡ್ಸ್ ಹಾರ್ಮೋನಿಯಂ [illegible] —8—0
6. ಉತ್ತಮ ತರಹ 2 ಸೆಟ್ ಜರ್ಮನ್ [illegible] ಪೇಲ್ ರೀಡ್ಸ್ ಹಾಕಿರುವ, ಕೈನಿಂದಾಗಲೀ ಅಥವಾ ಕಾಲಿನಿಂದಾಗಲೀ ಬಾರಿಸಲು ಅನುಕೂಲಿಸುವ ತಯಾರಿಸಿರುವ "ಸ್ಪೆಷಲ್ ಫ್ಲೂಟ್" ಮತ್ತು ಡಬ್ಬಲ್ ರೀಡ್ಸ್ ಹ್ಯಾಂಡ್ ಲೆಗ್ ಗಳಿಗೆ ಹಾರ್ಮೋನಿಯಂ 1ಕ್ಕೆ [illegible] ರೂ.

ನಮ್ಮ ಟಿಂಬರ್ ಡಿಪೋನಲ್ಲಿ ಕಟ್ಟಡಗಳಿಗೂ, ಫರ್ನಿಚರ್ ತಯಾರಿಗಲೂ ಬೇಕಾದ ಎಲ್ಲಾ ನಮೂನೆ ಸಾಮಾನುಗಳನ್ನು ಸುಲಭ ದರದಿಂದ ಇಟ್ಟುಕೊಂಡಿರುವುದಲ್ಲದೇ, ಗಿರಾಕಿಗಳು ಅಪೇಕ್ಷಿಸುವ ಸೈಜಿಗೆ ಕುಯಿಸಿಯೂ ರಿಯಾಯಿತಿ ದರದಿಂದ ಸಪ್ಲೈ ಮಾಡುತ್ತೇವೆ. ಹೆಚ್ಚಿಗೆ ವಿಷಯಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಳಾಸ:— ಯಂ. ಎಸ್. [illegible]
ಹಾರ್ಮೋನಿಯಂ ಮತ್ತು [illegible]
ಪಾಕೇವಿಲಾಸ ಮೊಹಲ್ಲಾ,
52—38

[illegible] ಪ್ರದ [illegible] ನಿವಾ [illegible] ದಧಿಪ [illegible] & Lev [illegible] ಪ್ರಸಾದ [illegible]

ಬೆಲ್ಲವನ್ನು ತಿಂದರೆ ಗಂಟಲು ಮೊಸುವುದೇಕೆ?

1. [illegible]

2. [illegible]

3. [illegible]

4. [illegible]

5. [illegible]

[illegible]

ಸ್ವದೇಶೀ ವ್ರತದ ಪ್ರತಿಜ್ಞೆಗಳು.

1. ಭಾರತ ಭೂಮಿಯ ವಸ್ತುಗಳನ್ನೇ ಉಪಯೋಗಿಸುತ್ತೇನೆ.
2. [illegible]
3. [illegible]

ಸತ್ಯವ್ಯವಹಾರ.

[illegible]

"ಶಿರಾಧಿಪತಿ."

Wanted.

Influential and well-to-do District an Taluk Managers for the important center of the Coorg Districts on a monthly sal ir of Rs. 100 and 80 respectively.

Apply to the DISTRICT INSPECTO (on Camp), MADRAS CHIT INSURANC BANK LTD, Post VEERARAJENDRAPE S. Coorg. (4—)

ಬಂದೂಕುಗಳು. GUNS.

[illegible]

12—12

Empire of India Life Assurance Co npany, Ltd

Established 1897.

The New "FAMILY SECURITY" Policy issued by this Co npany provides

A. In the event of death during an agreed period.

1. The immediate payment to the Widow, Son or legal representative of a part of the sum Assured together with the Bonus accrued.

2 The payment of a guaranteed Yearly Income, payable by monthly instalments, during the balance of the period.

3. The payment of the balance of the sum of assured at the end of the perio

OR

B In the event of death after period has expired the payment of sum assured together with any Bo that has accrued.

Descriptive Pamphlet on application to—

Head Office:— EMPIRE OF INDIA LIFE BUILDING, Bombay.

52—25

Branch Office:— 152, COMMERCIAL STREET, Bangalore.

ವರ್ತಮಾನ ಸಂಗ್ರಹ.

ಒಳದೇಶ.

ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಚುನಾವಣೆಯೊಂದು ಈ ತಾ. 26ರಲ್ಲಿ ಬ್ಯಾಂಕಿನ ಆಫೀಸಿನಲ್ಲಿ ನಡೆಯುವುದು.

ಮಡಿಕೇರಿಯಲ್ಲಿ ತಾ. 15ರಲ್ಲಿ ಕೊಡಗು ಜನ್ಮಾಷ್ಟಮೀ ... ಸಿನಿಮಾ ಒಂದು ಬಹು ಸೊಗಸಾದ ಆಟ ನಡೆಯಿತು. ತಾ. 16 ಅಂದೇ ಈ ದಿನ ಇನ್ನೊಂದು ಆಟ ನಡೆಯುತ್ತದೆ.

ತಾ. 16ರಲ್ಲಿ ಮಡಿಕೇರಿಯಲ್ಲಿ 1·26 ಇಂಚು ಮಳೆಯಾಯಿತು. ತಾ. 11ರಲ್ಲಿ ಕೆಲವು ಕಡೆಗಳಲ್ಲೂ, ತಾ 15ರಲ್ಲಿ ಕೆಲವು ಕಡೆಗಳಲ್ಲೂ ಮಳೆಯಾಗಿದೆಯಾಗಿ ತಿಳಿದು ಬಂದಿದೆ.

ಎಡಿಷನಲ್ ಜುಡಿಷಿಯಲ್ ಕಮಿಷನರ್ ಆಗಿ ಕೊಡಗಿನ ಅಪ್ಪೀಲುಗಳ ವಿಚಾರ ಮಾಡುತ್ತಿದ್ದ ಮಿ. ಜಾಕ್ಸನ್ ... ರು ಮದ್ರಾಸ್ ಹೈಕೋರ್ಟ್ ಜಡ್ಜಿಯಾಗಿ ನೇಮಿಸಲ್ಪಟ್ಟಿದ್ದಾರೆ.

ನಾವು ಕಳೆದ ವಾರ ಪ್ರಕಟಿಸಿದಂತೆ ಈ ದಿನ ಟಿ ಬಿ ಕೋನ್ ನಡೆಯುವುದಿಲ್ಲವೆಂದೂ ಇದು ಏಪ್ರಿಲ್ ತಾ. 2 ಮತ್ತು 3ರಲ್ಲಿ ಮಡಿಕೇರಿಯಲ್ಲಿ ನಡೆಸಲಾಗುವುದೆಂದೂ ತಿಳಿಸುತ್ತೇವೆ.

ಈ ತಿಂಗಳು ಕಡೆಯಲ್ಲಿ ಡಾಕ್ಟರ್ ಕೆ. ಜಿ. ಕಾರುಂಬೈಯ್ಯನವರಿಗೆ ಸೋಮವಾರಪೇಟೆಗೂ, ಸೋಮವಾರಪೇಟೆಯಲ್ಲಿರುವ ಡಾಕ್ಟರ್ ಸಿ. ಬಿ. ಅಚ್ಚಯ್ಯನವರಿಗೆ ಮಡಿಕೇರಿಗೂ ವರ್ಗವಾಗುತ್ತದೆ.

ಈ ತಾ 18, 19, ಮತ್ತು 20 ಈ ಮೂರು ದಿವಸ ಗೋಣಿಕೊಪ್ಪಲು ಸಂತೆ ಮಾಳದ ಒಳ ದನಗಳ, ಕರಕಾರಿಗಳ ಮತ್ತು ತೋಟಿಗೆ ಸೂಚಿಸುವ ಹಣ್ಣು ಮುಂತಾದ ಕೆಲಸಗಳ ಪ್ರದರ್ಶನವು ನಡೆಯುತ್ತದೆ.

ಮಡಿಕೇರಿ ಜೈಲಿನಲ್ಲಿದ್ದ ಪಂದ್ಯಂಡ ಬೆಳ್ಯಪ್ಪನವರ ಪತ್ನಿ ಶ್ರೀಮತಿ ಸೀತಮ್ಮನವರೂ, ಬಿದ್ದಾಟಂಡ ಶ್ರೀಮತಿ ಮುದ್ದವ್ವನವರೂ ಮತ್ತು ಮಾಚಿಮಾಡ ಶ್ರೀಮತಿ ಬೋಜಮ್ಮನವರೂ ಕಡ ಕಣ್ಣಾನೂರು ಜೈಲಿಗೆ ತಾ. 12ರಲ್ಲಿ ಸಾಗಿಸಲ್ಪಟ್ಟಿದ್ದಾರೆಂದು ವರ್ತಮಾನ.

ಶ್ರೀ ಗುರು ಸಮರ್ಥ ನಾಟಕ ಮಂಡಳಿಯವರು ಕನ್ನಡ ಕೇಸರಿಯೇ ನೋಡದಾದ ಎಲೆಂಟು ನಾಟಕಗಳನ್ನು ಈ ವರೆಗೆ ಅಭಿನಯಿಸಿರುವರು. ಈ ದಿನ ಶಿಶುಪಾಲ ವಧೆಯೆಂಬ ನಾಟಕವನ್ನೂ ಮತ್ತು ನಾಳೆ ದಿನ ರೆಡ್‌ಕ್ರಾಸ್ ಸಂಘದ ಸಹಾಯವಾಗಿ ಕರಾರು ಬೈರವನೆಂಬ ನಾಟಕವನ್ನೂ ಮಡಿಕೇರಿಯಲ್ಲಿ ತಮ್ಮ ಸ್ವಂತ ಥಿಯೇಟರಿನಲ್ಲಿ ಅಭಿನಯಿಸುವರು.

ಕೊಡಗಿನ ಫ್ರಾಂಚೈಸ್ ಕಮಿಟಿಯ ಸದಸ್ಯರು ಯಾರೆಂದರೆ—ಕಮಿಶನರು (ಅಧ್ಯಕ್ಷರು) ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು, ರಾ. ಸಾ. ಬಿ. ಶ್ರೀಪತಿರಾಯರೂ, ಲೆಫ್ಟಿನೆಂಟ್ ಕರ್ನಲ್ ಮುಕ್ಕಾಟಿರ ... ಮಿ. ಗಳದ ಅಪ್ಪಾರಂಡ ಚಂಗಪ್ಪನವರೂ, ಎ. ಆರ್. ತಿಮ್ಮಪ್ಪಯ್ಯನವರೂ, ... ಸಾಹೇಬರು ಸಹ. ಈ ಕಮಿಟಿಯು ತಾ 15ರಲ್ಲಿ ಮಡಿಕೇರಿಯಲ್ಲಿ ಸೇರಿ ತಮ್ಮ ಅಭಿಪ್ರಾಯವನ್ನು ಕೊಟ್ಟಿದೆಯಾಗಿ ತಿಳಿದು ಬಂದಿದೆ.

ಕೊಡಗಿನಲ್ಲಿ ಮಲೇರಿಯಾ ಕಮಿಟಿ ಎಂಬದೊಂದು ಕಮಿಟಿ ನೇಮಕವಾಗಿದೆ. ಕಮಿಶನರು ಅಧ್ಯಕ್ಷರು, ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರೂ, ಎರಡು ಮುನ್ಸಿಪಾಲಿಟಿ ಪ್ರೆಸಿಡೆಂಟರುಗಳೂ, ... ಸರ್ಜನರೂ, ರಾವ್ ಸಾಹೇಬ್ ಬಿ ಶ್ರೀಪತಿರಾಯರೂ, ... ಮಲೇರಿಯಾ ಆಫೀಸರೂ ಸಹ ಇದರ ಸದಸ್ಯರಾಗಿದ್ದಾರೆ. ಇದರ ಮೀಟಿಂಗೊಂದು ಈ ತಾ. 8ರಲ್ಲಿ ಮಡಿಕೇರಿಯಲ್ಲಿ ನಡೆಯಿತು.

ಹಿಂದೂದೇಶ.

ತಾ. 14 ರಲ್ಲಿ ಬೊಂಬಾಯಿಯಲ್ಲಿ 170 ದಸ್ತಗಿರಿಗಳಾದವು.

ಮೋತಿಲಾಲರ ಪತ್ನಿಯವರು ಲಕ್ನೋದಲ್ಲಿ ಕಠಿಣ ಖಾಯಿಲೆಯಲ್ಲಿದ್ದಾರೆ.

ಮಿ. ಸಿ. ಯಫ್. ಆಂಡ್ರೂಸರವರು ವೈಸರಾಯರ ಭೇಟಿಗೆ ದಿಲ್ಲಿಗೆ ಹೋಗಿರುತ್ತಾರೆ.

ಹಿಂದೂಸ್ಥಾನದ ಎಲ್ಲಾ ಪ್ರಾಂತ್ಯಗಳಲ್ಲೂ ದಸ್ತಗಿರಿಗಳು ಸಜಗಳೂ ಆಗುತ್ತಲೇ ಇವೆ.

ಬಂಗಾಳದಲ್ಲಿ ಭೂಮಿ ಕಂದಾಯವು ಹೆಚ್ಚಾಯಿತೆಂಬದನ್ನು ಸೂಚಿಸಲು ತಂದ ಠರಾವು ಬಹುಮತದಿಂದ ಮಂಜೂರಾಯಿತು.

ಜೆರುಸೇಲಮ್‌ನಲ್ಲಿ ನಡೆದ ಪ್ರಪಂಚದ ಮುಸಲ್ಮಾನರ ... ಶಾಖೆಯೊಂದನ್ನು ಹಿಂದೂಸ್ಥಾನದಲ್ಲಿ ಸ್ಥಾಪಿಸಿದೆ.

ಜಮ್ನಲಾಲ್ ಬಜಾಜರ ಪತ್ನಿ ಜಾನಕೀ ಬೇನ್ ಬಜಾಜ್ ಜೈಲಿನಲ್ಲಿರುವವರಿಗೆ ಸಖತ್ ಖಾಯಿಲೆಯೆಂತ ವರ್ತಮಾನವಿದೆ.

ಮಂಗಳೂರು, ಉಡುಪಿ, ಕುಂದಾಪುರದಲ್ಲಿ ಪರದೇಶೀ ಅಂಗಡಿಗಳ ಪಿಕೆಟ್ ನಡೆಯುತ್ತಿದೆ, ಪೋಲೀಸರು ...

ಮದ್ರಾಸ್ ಪಟ್ಟಣದಲ್ಲಿ ಪರದೇಶೀ ಅಂಗಡಿಗಳನ್ನು ಪಿಕೆಟ್ ಮಾಡುವ ಸ್ವಯಂಸೇವಕರನ್ನು ಹೊಡೆಯುವ ಬದಲು ದಸ್ತಗಿರಿ ಮಾಡುತ್ತಿದ್ದಾರೆ.

ಮಹಾತ್ಮ ಗಾಂಧಿಯವರ ಪತ್ನಿ ಕಸ್ತೂರಿಬಾಯಿ ಗಾಂಧಿಯವರು ಪುನಃ 6 ತಿಂಗಳು ಕಠಿಣ ಸಜೆಗೆ ಗುರಿಯಾಗಿದ್ದಾರೆ. ಸಿ. ಕ್ಲಾಸಿಗೆ ಸೇರಿಸಲ್ಪಟ್ಟಿದ್ದಾರೆ.

ಮಂಗಳೂರಿನಲ್ಲಿ ಪರದೇಶೀ ಅಂಗಡಿಗಳನ್ನು ಪಿಕೆಟ್ ಮಾಡುತ್ತಿದ್ದವರನ್ನು ಕೆಲವು ದಿನಗಳ ವರೆಗೆ ದಸ್ತಗಿರಿ ಮಾಡದಿದ್ದರೂ ತಾ. 14 ರಲ್ಲಿ ದಸ್ತಗಿರಿಮಾಡಲು ಪ್ರಾರಂಭಿಸಿದ್ದಾರೆ.

ಬಂಗಾಳದ ಕೋಮಿಲ್ಲಾದಲ್ಲಿ ಎಂಬಲ್ಲಿ ಮಿಸೆಸ್ ಶಾಂತಿ ಘೋಷ್ ಎಂಬವಳು ಮೂರು ತಿಂಗಳ ವರೆಗೆ ತನ್ನ ಮನೆಯಿಂದ ರಾತ್ರಿ ಹೊತ್ತು ಎಲ್ಲಿಗೂ ಹೊರಡಬಾರದೆಂತ ಹುಕುಂ ಆಗಿದೆ.

ಕಾಂಗ್ರೆಸ್ ಕೆಲಸ ಮಾಡುತ್ತಿರುವ ಮಹಾತ್ಮ ಗಾಂಧಿಯವರ ಶಿಷ್ಯ ಬರೋಡಾ ಹೈಕೋರ್ಟಿನ ಚೀಫ್ ಜಡ್ಜಿಯಾಗಿದ್ದ ಅಬ್ಬಾಸ್ ತಯಬ್ಜಿ ಅವರ ಪೆನ್ಶನನ್ನು ಬರೋಡ ಸರಕಾರವು ನಿಲ್ಲಿಸಿದೆ.

ರಂಗರಾವ್ ದಿವಾಕರರು "ಕರ್ಮವೀರ" ಪತ್ರಿಕೆಯಲ್ಲಿ ಕಳೆದ ಡಿಸೆಂಬರ್ ತಿಂಗಳಲ್ಲಿ ರಾಜದ್ರೋಹ ಬರೆದರೆಂಬ ತಕ್ಷೀರಿಗೆ ... ವರ್ಷ ಕಠಿಣ ಶಿಕ್ಷೆಗೆ ಗುರಿಪಡಿಸಲ್ಪಟ್ಟಿರುವರು. ... ಸ್ಥಾನವನ್ನು ... ಮಾಡಿದ್ದಾರೆ.

... ಭದ್ರವಸ್ತ್ರ ... ಭಾಗದ ಚಳವಳಿಕ್ಕೆ ಸೇರಲು ... ದೇಶದ ... ಇವಳು ... ಮಾಡಿದ್ದಾರೆ ... ಇವಳನ್ನು ದಸ್ತಗಿರಿ

ಶಿರಾಲಿಯ ... ಮೇರೆ ... ಬರದ ಹುಡುಗಿಯನ್ನು ಮದುವೆ ಮಾಡಿದಕ್ಕಾಗಿ 34 ಜನರಿಗೆ ಶಿಕ್ಷೆಯಾಗಿದೆಯೆಂತ ಎಸೆಂಬ್ಲಿಯಲ್ಲಿ ಜವಾಬು ದೊರೆತಿದೆ. ಇದು ಬಹುಶಃ ಇಂಡಿಯಾದ ಎಲ್ಲಾ ಪ್ರಾಂತ್ಯಗಳಿಗಾಗಿ ಇಷ್ಟೇ ಶಿಕ್ಷೆಯಾದದ್ದಾಗಿದೆ.

ನಾಗಪುರದಲ್ಲಿ "ಹಿಂದೀ ವಸ್ತುಗಳನ್ನು ಕೊಂಡುಕೊಳ್ಳಿ" ಎಂಬ ಸಂಸ್ಥೆಯ ಬಾಲಕರು ಒಂದು ಮೆರವಣಿಗೆ ಹೊರಡಿಸಿದಾಗ ಪೋಲೀಸಿನವರು ದೊಣ್ಣೆಗಳಿಂದ ಹೊಡೆದು ಚದರಿಸಿದರು—ಇದನ್ನು ಖಂಡಿಸಿ ಬ್ರಿಟಿಷ್ ಮಂತ್ರಿ ಮಂಡಲದವರಿಗೆ ತಂತಿ ವರ್ತಮಾನ ಕೊಟ್ಟಿದ್ದಾರೆ.

ರತ್ನಗಿರಿಯಲ್ಲಿ 13 ವರ್ಷದ ಹುಡುಗನಿಗೆ 10 ಛಡಿಪೆಟ್ಟಿನ ಶಿಕ್ಷೆ ವಿಧಿಸಲಾಯಿತು. ಛಡಿ ಪೆಟ್ಟು ತಿಂದು ಕೊಳ್ಳಲು ಹುಡುಗನಿಗೆ ಬಲವಿಲ್ಲವೆಂತ ಡಾಕ್ಟರು ಹೇಳಿದ್ದರಿಂದ ಹುಡುಗನ ತಂದೆ ಮೇಲೆ ಮೊಕದ್ದಮೆ ವಿಚಾರವಾಗಿ 50 ರೂಪಾಯಿ ಜುಲ್ಮಾನೆ ವಿಧಿಸಲಾಯಿತು.

ಶ್ರೀಮತಿ ಕಸ್ತೂರಿಬಾಯಿ ಗಾಂಧಿಯವರು ಮಹಾತ್ಮ ಗಾಂಧಿಯವರನ್ನು ಜೈಲಿನಲ್ಲಿ ನೋಡಿ ಮಹಾತ್ಮರ ಆರೋಗ್ಯ ಚೆನ್ನಾಗಿರುವುದೆಂತಲೂ ... ಕೆಲಸ ನಡೆಯುವುದರಲ್ಲಿಯೂ ಓದುವುದರಲ್ಲಿಯೂ ತಮ್ಮ ಕಾಲ ಕಳೆಯುತ್ತಿದ್ದಾರೆಂತ ತಿಳಿಸಿದ್ದಾರೆ.

ಎಸೆಂಬ್ಲಿಯಲ್ಲಿ ... ಸರ ಹರಿಸಿಂಗ್ ಗೌರರೂ ಮತ್ತು ಸರ್ ಅಬ್ದುರ್ ರಹಿಮಾನರೂ ಮಾಡಿದ ಭಾಷಣಗಳು ಅವರಿಂದ ... ಅಭಿಪ್ರಾಯವನ್ನು ... ಎಸೆಂಬ್ಲಿಯ 25 ಕ್ಕಿಂತ ಹೆಚ್ಚು ಮೆಂಬರುಗಳು ... ಕಾಂಗ್ರೆಸ್ ... ಮಾಡುತ್ತಾರೆ.

ಸಿಂಧ್ ಪ್ರಾಂತ್ಯವನ್ನು ಬೊಂಬಾಯಿ ಆಧಿಪತ್ಯದ ಸರಕಾರದ ಅಧೀನದಿಂದ ತಪ್ಪಿಸಿ ಮಧ್ಯವರ್ತಿ ಸರಕಾರಕ್ಕೆ ವರ್ಗಾಯಿಸಬೇಕೆಂಬ ಠರಾವು ಬೊಂಬಾಯಿ ಕೌನ್ಸಿಲಿನಲ್ಲಿ ಪಾಸಾಯಿತು. ಈ ವಿಚಾರದನ್ನು ಸರಕಾರವು ಗುಟ್ಟು ಗುಟ್ಟಾಗಿ ನಡೆಸುತ್ತಿರುವದನ್ನು ಮೆಂಬರುಗಳು ಖಂಡಿಸಿದರು.

ರಾಜಕೀಯ ಖೈದಿಗಳನ್ನು ಎ. ಬಿ. ಸಿ. ಕ್ಲಾಸುಗಳಾಗಿ ವಿಂಗಡಿಸುವುದರಲ್ಲಿ ಸರಕಾರವು ಖೈದಿಗಳ ಸ್ಥಿತಿ, ಯೋಗ್ಯತೆ ಮುಂತಾದ್ದನ್ನು ನೋಡುವ ಬದಲು ಖೈದಿಗಳಿಗೆ ಶಿಕ್ಷೆಯು ಕಠಿಣವಾಗುವಂತೆ ಉಪಯೋಗಿಸಿದ್ದಾರೆಂತ ಬೊಂಬಾಯಿಯಲ್ಲಿರುವ ಬಿ. ಜಿ. ಹಾರ್ನಿಮ್ಯಾನರು ಒಂದು ಲೇಖನ ಬರೆದಿದ್ದಾರೆ.

ಕಾಂಗ್ರೆಸಿನ ಖಜಾಂಚಿಯಾದ ಜಮ್ನಲಾಲ್ ಬಜಾಜರನ್ನು ವಿಚಾರವಿಲ್ಲದೆ ಬಂಧಿಖಾನೆಯಲ್ಲಿಟ್ಟಿದ್ದು, ಪೋಲೀಸರ ಮುಂದೆ ನಿತ್ಯವೂ ಹಾಜರಾಗಬೇಕೆಂಬ ಹುಕುಂ ಮಾಡಿಬಿಟ್ಟರು. ಈ ಹುಕುಮನ್ನು ಉಲ್ಲಂಘಿಸಿದ್ದಕ್ಕಾಗಿ ಇವರಿಗೆ ಒಂದು ವರ್ಷ ಸಜೆ ಮತ್ತು 500 ರೂ. ಜುಲುಮಾನೆ ಸಹ ವಿಧಿಸಲಾಗಿದೆ.

ಬೆಳ್ಗಾಂವಿನಲ್ಲಿ ದಂಡಿ ದಿನವನ್ನು ಆಚರಿಸುವ ಸಂಬಂಧವಾಗಿ ಕುಂದನಾದ ನಾಗಭೂಷಣ ಶಾಸ್ತ್ರಿ ಎಂಬವರು ಒಂದು ಮೆರವಣಿಗೆ ಹೊರಡಿಸಿದರು. ಮೆರವಣಿಗೆ ಹೋಗುತ್ತಿದ್ದಾಗ ಈ ... ಪೋಲೀಸಿನವರು ಹೊಡೆದರು. ಇವರಿಗೆ ಕಳೆದ ಜನವರಿ ಭಂಗದ ಚಳವಳದಲ್ಲಿ 2 ವರ್ಷ ಸಜೆ ಶಿಕ್ಷೆಯಾಗಿತ್ತು.

ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಅಬ್ದುಲ್ ಕಲಾ ಆಜಾದರು ... ಯಾಗಿದ್ದಾರೆ. ಇವರ ಬದಲು ಮಿಸೆಸ್ ಜುಟ್ಶಿ ... ಲಾಹೋರಿನ ಮಹಿಳೆಯು ಅಧ್ಯಕ್ಷರಾಗಿ ನೇಮಿ...

... ಟ್ಟಿದ್ದಾರೆ. ಶ್ರೀಮತಿ ಸರೋಜಿನಿ ದೇವಿಯವರೂ ಸಹ ... ಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳಲು ತಯಾರಾಗಿ ... ಯಿಗೆ ಬಂದಿದ್ದಾರೆ.

ಮಧ್ಯವರ್ತಿ ಸರಕಾರದ ಖರ್ಚು ಕಡಿಮೆಯಾದದ್ದು ... ಲವೆಂತಲೂ, ತೆರಿಗೆ ಹಾಕುತ್ತಿರುವುದು ಹೆಚ್ಚಾಯಿತೆಂತಲೂ ಸೂಚಿಸಲು ಎಸೆಂಬ್ಲಿಯಲ್ಲಿ ತಂದ ಠರಾವು ಬಹುಮತದಿಂದ ಪಾಸಾಯಿತು. ಯೂರೋಪಿಯನ್ ಆಫೀಸರುಗಳಿಗೆ ಲೀ ಕಮಿಶನ್ ಮೇರೆ ಕೊಡುವ ಹೆಚ್ಚಿನ ರಿಯಾಯಿತಿಗಳನ್ನು ನಿಲ್ಲಿಸಬೇಕೆಂತಲೂ ಮಿಲಿಟರಿ ಇಲಾಖೆಯ ಖರ್ಚು ಕಡಿಮೆ ಮಾಡಬೇಕೆಂತಲೂ ಪ್ರಜಾಪ್ರತಿನಿಧಿಗಳ ವಾದವಾಗಿದೆ.

ಲೋಕಲ್ ಕಮಿಟಿಯು ಬೊಂಬಾಯಿಯಲ್ಲಿ ಇದುವರೆಗೆ ಹರತಾಳ ನಡೆಸಬೇಕೆಂತ ಕಾಂಗ್ರೆಸ್ಸಿನವರು ಹುಕುಂ ಮಾಡಿದ್ದರಿಂದ ಮಾರ್ಕೆಟ್ಟುಗಳೆಲ್ಲಾ ಮುಚ್ಚಲ್ಪಟ್ಟಿದ್ದವು. ಸರಕಾರದವರಿಗೆ ಸಹಕರಿಸುತ್ತೀರೋ? ಕಾಂಗ್ರೆಸಿನ ಕಾರ್ಯಕ್ರಮವನ್ನು ನಡಿಸುತ್ತೀರೋ? ಎಂಬ ಸವಾಲು ಕೇಳಿ ಒಂದು ಸರ್ಕ್ಯುಲರನ್ನು ಸರಕಾರವು ಹೊರಡಿಸಿದೆ. ಅಂಗಡಿಗಳು ತೆರೆದಿವೆ.

ದೀನ ಬಂಧು ಸಿ. ಯಫ್. ಆಂಡ್ರೂಸರು ದಿಲ್ಲಿಗೆ ಹೋಗಿ ಮುಂದೆ ರವೀಂದ್ರನಾಥ ಟಾಗೋರರ ಶಾಂತಿನಿಕೇತನಕ್ಕೆ ಹೋಗುತ್ತಾರೆ. ಅವರು ಚೈನಾಕ್ಕೆ ಹೋಗುವವರಿದ್ದರು. ಆದರೆ ಹಿಂದೂಸ್ಥಾನದ ಅತಿ ಕಠಿಣ ಸಂಕಟ ಸ್ಥಿತಿಯನ್ನು ನೋಡಿ ಚೈನಾಕ್ಕೆ ಹೋಗುವುದನ್ನು ನಿಲ್ಲಿಸಿದ್ದಾರೆ. ಈ ತಿಂಗಳ ಕಡೆಯಲ್ಲಾಗಲೀ, ಬರುವ ತಿಂಗಳ ಮಧ್ಯದಲ್ಲಾಗಲೀ ಹಿಂದೂಸ್ಥಾನದ ಸ್ಥಿತಿಯು ಶಾಂತಿಗೆ ಬರಬಹುದೆಂತ ಅಭಿಪ್ರಾಯಪಟ್ಟಿದ್ದಾರೆ.

ಅಹಮದಾಬಾದ್ ಮುನ್ಸಿಪಾಲಿಟಿಯು ಎರಡು ಅಂಗಡಿಗಳನ್ನು ಖಾದಿ ವ್ಯಾಪಾರಕ್ಕಾಗಿ ಲೇಬರ್ ಯೂನಿಯನ್ನಿನವರಿಗೆ ವರ್ಷಕ್ಕೆ 500 ರೂಪಾಯಿ ಬಾಡಿಗೆಗೆ ಮುನ್ಸಿಪಾಲಿಟಿಯವರು ಕೊಟ್ಟಿದ್ದಾರೆ. ಕಡಿಮೆ ದರದಲ್ಲಿ ಮುನ್ಸಿಪಲ್ ಕಟ್ಟಡಗಳನ್ನು ಬಾಡಿಗೆಗೆ ಕೊಡುವುದು ವಿರೋಧವೆಂತ ಗವರ್ನ್ಮೆಂಟ್ ಆಡಿಟರು ಹೇಳಿದರೂ ಸಹ ಹೇಗೆ ಬಾಡಿಗೆಗೆ ಕೊಡುವುದೆಂದು ಕೇಳಿದ್ದಕ್ಕೆ ಆಡಿಟರ ಅಭಿಪ್ರಾಯವು ಸರಿಯಲ್ಲವೆಂತ ಮುನ್ಸಿಪಾಲಿಟಿಯವರು ಹೇಳಿದರು.

ವಿದೇಶ.

ಪಾದ್ರಿ ಡಾಕ್ಟರ್ ಪೇಟನರ ಕಡೆಗೆ ಪೋಲೀಸಿನವರು ... ಸ್ಪೈನಿಂದ ವರ್ತಿಸಿದಕ್ಕೂ ದಸ್ತಗಿರಿ ಮಾಡಿದಕ್ಕೂ ಕಾರಣ ವಿಚಾರಿಸಬೇಕೆಂತ ಸರ್ ಹೋರರು ಒಪ್ಪಿಕೊಂಡಿದ್ದಾರೆ.

ಫ್ರಾಂಚೈಸ್ ಕಮಿಟಿ ಹಿಂದಿಯರ ಸಂಪೂರ್ಣ ಸಹಕಾರ ದೊರೆಯುತ್ತಿದೆಯಾಗಿಯೂ ಆದರೆ ಕಾಂಗ್ರೆಸ್ಸಿನವರು ಸಹಕಾರವಿಲ್ಲದೆ ಇರುವುದು ವಿಷಾದಕರವಾಗಿದೆಯೆಂತಲೂ ಸರ್ ಸ್ಯಾಮ್ಯುವೆಲ್ ಹೋರರು ಪಾರ್ಲಿಮೆಂಟಿನಲ್ಲಿ ಒಂದು ಸವಾಲಿಗೆ ಜವಾಬು ಹೇಳಿರುತ್ತಾರೆ.

ಸ್ವೀಡನ್ ದೇಶದ ಬೆಂಕಿ ಕಡ್ಡಿ ವ್ಯಾಪಾರದಿಂದ ಕೋಟ್ಯಾಧಿಪತಿಯಾಗಿದ್ದ ಯಂ. ಕ್ರ್ಯೂಗರ್ ಎಂಬವರು ತಾ. 12ರಲ್ಲಿ ಪ್ಯಾರಿಸಿನಲ್ಲಿ ಆತ್ಮಹತ್ಯ ಮಾಡಿಕೊಂಡರು. ಇವರ ಆರ್ಥಿಕ ... ಕ್ಷವೆಷ್ಟು ಇತ್ತೆಂದರೆ ಇವರ ಮರಣದಿಂದ ಯೂರೋಪಿನ ಆರ್ಥಿಕ ಸ್ಥಿತಿಯು ಕೆಲವು ಮಟ್ಟಿಗೆ ಗಲಿಬಿಲಿಗೆ ...

ಅಮೇರಿಕಾದ ಯುನೈಟೆಡ್ ಸ್ಟೇಟ್ಸಿನ ... ಎಂಬವರ ಗಂಡು ಮಗುವೊಂದನ್ನು ಯಾರೋ ... ಹೋಗಿದ್ದಾರೆ. ಈ ಮಗುವಿನ ತಂದೆಯು ... ರಿಂದ ಇಷ್ಟರ ಹಣವನ್ನು ... ವುದಕ್ಕಾಗಿ ಈ ಕೃತ್ಯ ನಡೆಸಿದ್ದೆಂತ ...

ವಿರ್ಲೋರಿಯನ ... ಜ್ಯ ಸಿಕ್ಕದ ಮುಂಚೆ ... ಕಿರಲೆಂತ ... ರಾಗಿ ... ನಿಸಿ ... ಟ್ಟಿಗೆ ...



ಡಾಕ್ಟರ್ ... ಡಿಸಾ

ಯಲ್. ಡಿ. ಯಸ್. ಸಿ. ದಂತ ...

(ಲೇಡಿ) ... ಪ್ರಾಕ್ಟೀಷನರ್,

... ರು ಎಲ್ಲಾ ತರದ ಹಲ್ಲಿನ ರೋಗಗಳಿಗೆ ... ಮವಾದ ಔಷಧಿಯನ್ನು ಅತ್ಯಂತ ಕರಾರಿ ... ಗಿಸುತ್ತಾರೆ.

ಯಾವ ತರದ ಬಾಧೆ ಇಲ್ಲದೆ ಹಲ್ಲುಗಳನ್ನು ಚೆನ್ನಾಗಿ ಶುದ್ಧಪಡಿಸಿ ಕೊಡುವ ... ಗಳಾಗಿಸುವರು. ಹೊಸ ... ಮಾಡುತ್ತಾರೆ. ಚಿನ್ನ ಮತ್ತು ... ಗಳನ್ನು ಗಟ್ಟಿಯಾಗಿ ... ಇನ್ನು ಸಂದು ಹಾಕುವರು ... ಚಿಕಿತ್ಸೆಗಳನ್ನು ಮಾಡುವರು. ... ಮತ್ತು ಮುರಿಯದೆ ಇರುವಂತೆ ... ಅಗ್ಗದರದಲ್ಲಿ ತಯಾರಿಸುತ್ತಾರೆ ...

—8—0

ರೂ. 75—

ಸ್ವಲ್ಪ ದಿನವೇ & Love ...

ಸುಗಂಧಿಯನ್ನು ...

ಬೋಧಕವಾದದ್ದು. ಇದನ್ನು ನಡಿಸುವವರು ಯಾರು, ಯಾವ ಉದ್ದೇಶದಿಂದ ನಡಿಸುತ್ತಾರೆ? ದೇವರಿಗೇ ಗೊತ್ತು. ಈ ಚಳವಳವನ್ನು ನಿಲ್ಲಿಸಲು ಸರಕಾರವು ಮಾಡಿದ ಕೆಲಸವು ಅಂತ್ಯದಲ್ಲಿ ಸುರುಮಾಡಿದಂತೆ ಕಾಣುತ್ತದೆ. ಚಿಕ್ಕ ಚಿಕ್ಕ ಹುಡುಗರೂ, ಶಾಲಾ ಬಾಲಕರೂ ಸಹ ಮುಚ್ಚಲ್ಪಟ್ಟಿದ್ದಾರೆ. ಸೂತ್ರಧಾರಕರನ್ನು ಬಿಟ್ಟು ಬಿಟ್ಟಿದ್ದಾರೆ. ರಾಜಭಕ್ತರಾದ ಜನರು ಈ ಚಳವಳದಲ್ಲಿ ಯಾಕೆ ಭಾಗಕೆಗೆದುಕೊಂಡರು? ಸ್ವದೇಶೀ ಚಳವಳದ ಮೇಲೆ ಬ್ಯಾಳಿಕೆ ನಡಿಸಿದರೆ ಚಳವಳವು ನಿಲ್ಲುವುದಿಲ್ಲ. ಜನರಿಗೆ ರಾಜಕೀಯ ಜ್ಞಾನವು ವ್ಯಾಪ್ತಿಯಾಗಿದೆ. ಕೊಡವ ಸಭೆಯು ಬಹಳ ಸ್ವಲ್ಪ ಸುಧಾರಣೆ ಕೇಳಿರುವುದಾಗಿದೆ. ಅದನ್ನು ಸಹ ಕೊಡಲಿಲ್ಲ. ಮಧ್ಯವರ್ತಿ ನ್ಯಾಯ ವಿಧಾಯಕ ಸಭೆಗಳಲ್ಲಿ ಪ್ರತಿನಿಧಿತ್ವ ಬೇಕೆಂತ ಕೇಳಿದ್ದೆವು ಅದೇನೋ ಕೊಡಲಾಗಿದೆ. ಅದರಿಂದ ತೃಪ್ತಿಯಾಗಲಾರದು. ಬಜೆಟ್ಟನ್ನು ಮಂಜೂರುಮಾಡುವ ಅಧಿಕಾರ ಕೇಳಿದ್ದೆವು. ಇದಕ್ಕಿಂತ ಎಲ್ಲಾ ಮುಖ್ಯವಾದದ್ದು ಯಾವದೆಂದರೆ ಒಬ್ಬರಲ್ಲೇ ಅಡಕವಾಗಿರುವ ಅಧಿಕಾರವನ್ನು ಬೇರ್ಪಡಿಸಿಕೊಡಬೇಕೆಂಬುದು. ಕಮಿಶನರಲ್ಲಿ ಅಧಿಕಾರಗಳು ಬೆರೆತಿರುವುದೇ ಕೆಟ್ಟದ್ದು. ಆದರೆ ಅವರಲ್ಲಿ ಅಧಿಕಾರಗಳು ಹೆಚ್ಚಿರುವುದು ದೇಶಕ್ಕೆ ದುರುಪಯೋಗವಾಗುವ ಮುಂಚೆ ಅವರು ಹೊರಟು ಹೋಗುತ್ತಾರೆ. ಆದರೆ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಾದರೆ ಇಲ್ಲೇ ಖಾಯಂ ಆಗಿರುವವರಾಗಿದ್ದಾರೆ. ಗಜೆಟೆಡ್ ಉದ್ಯೋಗಸ್ಥರನ್ನೆಲ್ಲಾ ವರ್ಗಾಯಿಸಬೇಕೆಂತ ಚಳವಳವು ಹುಟ್ಟಿದ್ದದ್ದು ಇದರಿಂದಲೇ. ಸರಕಾರದ ವಿರೋಧ ಪಕ್ಷದ ಮುಖಂಡರಾದ ಸಿ. ಯಮ್. ವೆಂಕಪ್ಪಯ್ಯನವರು ಈ ಕೌನ್ಸಿಲಿನಲ್ಲಿ ಏನು ಹೇಳಿದ್ದಾರೆಂದರೆ—

[illegible] ಅಧ್ಯಕ್ಷರಾದ ಚೀಫ್ ಕಮಿಶನರು ಎಮ್ಮ ಆಫೀಸರುಗಳನ್ನು ಈ ಕೌನ್ಸಿಲಿನಲ್ಲಿ ಗುಪ್ತ ರೀತಿಯಿಂದ ಆಕ್ಷೇಪಿಸುವುದು ಯುಕ್ತವಲ್ಲವೆಂತ ಎಚ್ಚರಿಸಿದರು.

ಅನಂತರ ಠರಾವಿನ ಮೇಲೆ ಸ್ವಲ್ಪ ಮಾತನಾಡಿದರು.

ಕಮಿಶನರ ಜವಾಬು. ಚಳವಳ ಪ್ರಾರಂಭವಾದ ಕೂಡಲೇ ಅಂದರೆ ತಾ. 7—1—32 ರಲ್ಲಿ 144 ನೇ ಸೆಕ್ಷನ್ ಪ್ರಕಾರ ಹುಕುಂ ಕೊಡಲಾಯಿತು. ಕ್ರಿಮಿನಲ್ ಲಾ ಎಮೆಂಡ್ಮೆಂಟ್ ಆಕ್ಟ್ ಮೇರೆ ತಾ 16—1—32 ರಲ್ಲಿ ಕೊಡಗು ಕಾಂಗ್ರೆಸ್ ಕಮಿಟಿಯನ್ನು ಖಾನೂನಿಗೆ ವಿರೋಧವಾದ ಕೂಟವೆಂತ ಮಾಡಲಾಯಿತು. ಪಿನಲ್ ಕೋಡು ಮೇರೆಯೂ ಪಿನಲ್ ಲಾ ಎಮೆಂಡ್ಮೆಂಟ್ ಆಕ್ಟ್ ಮೇರೆಯೂ 86 ಜನರನ್ನು ದಸ್ತಗಿರಿ ಮಾಡಲಾಯಿತು. 78 ಜನರಿಗೆ ಸಜಾ ವಿಧಿಸಲಾಗಿದೆ. ಪೋಲೀಸ್ ಅಧಿಕಾರಿಗಳು ಜುಲುಂ ನಡಿಸಲಿಲ್ಲ. ಸ್ಥಿತಿಯು ತೃಪ್ತಿಕರವಾಗಿದೆ. ಅರ್ಜಿಗಳನ್ನೇನೂ ಬಹಾರಿಗೆ ತಂದಿಲ್ಲ. ಅಧಿಕಾರಿಗಳು [illegible] ಬುದ್ಧಿವಂತಿಕೆಯಿಂದಲೂ ಚಾತುರ್ಯದಿಂದಲೂ ದೇಶದ ಪದ್ಧತಿಗಳನ್ನು ಅರಿತು ಕೆಲಸ ನಡಿಸಿದರು. ಖಾನೂನಿಗೆ ವಿರೋಧವಾದ ಚಳವಳವನ್ನು ಬಲದಿಂದ ನಿಲ್ಲಿಸಲಾಗುವುದು. ಉದ್ಯೋಗಸ್ಥರಲ್ಲದವರ ಸಹಾಯಬೇಕು. [illegible] ಬೇಗೂ ಇಲ್ಲದಂತೆ ಕಾಣುತ್ತದೆ. ಕಾಂಗ್ರೆಸ್ [illegible] ವಿರೋಧವಾದ ಚಳವಳವನ್ನು ಎಬ್ಬಿಸಬೇಕು. ಚಳವಳ [illegible] ಅಲ್ಲಲ್ಲಿ ಹೇಳಬೇಕು. ರಾಜಕೀಯ ಸುಧಾರಣೆಯಲ್ಲಿ ಯಾವ ರೀತಿಯಲ್ಲಿ ಮುಂದರಿಸಬೇಕೆಂಬುದನ್ನು ಪತ್ರಿಕೆಗಳಲ್ಲಿ ಚರ್ಚಿಸುತ್ತಿದ್ದಾರೆ. ಇಲ್ಲಿನ ಸರಕಾರವು [illegible] ಕೆಲಸ ಮಾಡಬೇಕಾದ ಅವಶ್ಯವಿಲ್ಲ.

[illegible]ಪ್ಪಯ್ಯನವರು ಜವಾಬಿನಲ್ಲಿ ಹೇಳಿದ್ದೇನೆಂದರೆ [illegible] ವರು ಕಾಂಗ್ರೆಸ್ ಚಳವಳವನ್ನು [illegible]. ಅದರಿಂದ ಚಳವಳವು ಪ್ರಬಲವಾಗಿದೆ [illegible], ಎಂತ ಹೇಳಿ ಠರಾವನ್ನು [illegible]

(—ಮುಂದರಿಯುವುದು)

ಮಾರಾಟ[illegible]ದ ಸಾಲ.

(ಸಹಕಾರ ಸಂಘಗಳ [illegible]ದುವರಿದದ್ದು.)

[illegible] ಮೆಂಬರರಲ್ಲಿಯೂ [illegible] ಇನ್‌ಸಾಲ್ವೆನ್ಸಿ [illegible] ಪರಸ್ಪರ ಸಹಾಯಕ ಸಂಘಗಳು. ಆದರೆ, ಅವು [illegible] ಉಪನಿಬಂಧನೆಗಳ, ಪಾಸ್ ಬೇಗೊಳಿಸಬೇಕು. ಈ [illegible] ಅಗ್ರಿಕಲ್ಚರ್ ಎಂಬ [illegible] ಸೆಂಟ್ರಲ್ ಬ್ಯಾಂಕಿ[illegible] ಇನ್‌ಸ್ಟಿಟ್ಯೂಟ್ ಕಮಿ[illegible] ಪ್ರತಿಪಾದಿಸುವ ಸಲಹೆಗಳನ್ನು ನಾನು ಒಪ್ಪುತ್ತೇನೆ. [illegible]ವಾಗಿ ಬಡ್ಡಿಯ ಸಾಲವನ್ನು ತಪ್ಪಿಸುವದು. ಆಗ [illegible] ಸಾಲವನ್ನು ತಪ್ಪಿಸಿ ಪರಸ್ಪರ ಸಹಾ[illegible] ಬಡ್ಡಿಗೆ ಸಾಲ ಕೊಡುವ ಮಾರ್ಗವನ್ನು [illegible] ಈ ವಿಚಾರದಲ್ಲಿ ಕೋ.ಆಪರೇಟಿವ್ [illegible] ಗಾರರ ಸಾಲವನ್ನು ತೀರಿಸಲಾ[illegible] ರದು ಅಭಿಪ್ರಾಯಪಟ್ಟಿದ್ದಾರೆ.

[illegible]ಕಾಲದ ತೀರ್ಮಾನ.—ಇದರ [illegible] ಕರ್ಜವು ಸಾಹುಕಾರರು ಬಡ್ಡಿಗೆ [illegible]ದಿಂದ ಹೆಚ್ಚಾಗಿದೆ. ಹಿಂ[illegible]ವನ್ನು ನಡಿಸಿದರೆ ಎಷ್ಟೋ [illegible]ರು. ಈ ಕ್ರಮದಂತೆ ಸಾ[illegible]ಲು ಸಿದ್ಧರಾಗಿರಬೇಕು. [illegible] ಪಂಜಾಬ್, ಬೆಂಗಾಲ್, [illegible] ಈ ಅವಸ್ಥೆಗಳಲ್ಲಿ ಪ್ರಚಾರ

ಗೆ ಹುಡು ಸೋಡಿರುತ್ತಾರೆ. ಈ ಕ್ರಮಗಳನ್ನು ಆಚರಣೆಗೆ ತರುವುದರಲ್ಲಿರುವ ಒಂದೇ ಕಷ್ಟವಾವುದೆಂದರೆ ಸಾಹುಕಾರರು ಒಪ್ಪಿದ ಮೇಲೆ ಅವರಿಗೆ ಹಣ ಕೊಡಲು ಸಾಲ ಕೊಡುವ ಬ್ಯಾಂಕು ಅಥವಾ ಮಾರ್ಗವು ಇಲ್ಲದಿರುವುದು. ಸಾಹುಕಾರರು ಸ್ವಾಭಾವಿಕವಾಗಿ ತಮಗೆ ಬರಬೇಕಾದ ಸಾಲವನ್ನು ಕಡಿಮೆ ಮಾಡಿಕೊಳ್ಳಲು ಒಪ್ಪುವುದಿಲ್ಲ. ಈ ಸಮಯದಲ್ಲಿ ಕೋ.ಆಪರೇಟಿವ್ ಬ್ಯಾಂಕುಗಳನ್ನು ಹಳ್ಳಿಗಳಲ್ಲಿ ಏರ್ಪಡಿಸಿ ಆ ಮೂಲಕವೂ, ಸರ್ಕಾರ ಹಣದ ಸಹಾಯದಿಂದಲೂ, ಸಾಲಗಳನ್ನು ದೇಬಾಕಿ ಮಾಡಿಸಿ ರೈತರನ್ನು ಉದ್ಧಾರ ಮಾಡಬೇಕಾಗಿದೆ.

ಕೊಡಬೇಕಾದ ಸಾಲವನ್ನು ಇಳಿಸಿ ತೀರಿಸುವ ಮಾರ್ಗ.

ಮಾರ್ಗವನ್ನು ಅನೇಕರು ಒಪ್ಪುತ್ತಾರೆ. ಇದಕ್ಕಾಗಿ ಗೊತ್ತಾದ ಸರ್ಕಾರಿ ಆಫೀಸರರು ಸಾಲಗಾರರ ಸಾಲದ ಮೊಬಲಗನ್ನು ಅವರಿಗಿರುವ ತೀರಿಸುವ ಶಕ್ತಿಯನ್ನು ಅನುಸರಿಸಿ ನಿರ್ಧರಿಸಬೇಕಾಗುವದು. ಪ್ರತಿ ವರ್ಷವೂ ಸಾಲಗಾರರು ಖರ್ಚು ಕಳೆದು ಎಷ್ಟು ಉಳಿಸಬಲ್ಲನೋ ಅದರ ಮೇಲೆ ಈ ಮೊಬಲನ್ನು ನಿರ್ಧರಿಸಬೇಕು. ಅಮೇರಿಕಾದ ಕೆನಡಾ ರಾಜ್ಯದಲ್ಲಿ ಈ ತೆರನಾದ ಖಾನೂನು ಹುಟ್ಟಿದೆ.

ಈ ವಿಚಾರದಲ್ಲಿ ಎಷ್ಟು ಹೇಳಿದರೂ ತೀರದು. ದಿನೇ ದಿನೇ ರೈತನು ಬಡುಬಡವನಾಗಿ ಸಾಲದಿಂದ ಸಾಯುತ್ತಿರುವನು. ಇದನ್ನು ಪರಿಹರಿಸದಿದ್ದರೆ ಮುಂದೆ ದೇಶದಲ್ಲಿ ಮಹಾ ಪ್ರಳಯ ಸ್ವರೂಪವಾದ ನಷ್ಟವು ಒದಗುವದೆಂದು ಹೇಳಬಹುದು.

'ಬ. ಪ.'

ಸರ್ ಅಬ್ದುಲ್ [illegible]ನವರು ಎಸೆಂಬ್ಲಿಯಲ್ಲಿ ಹೇಳಿದ್ದೇನೆಂದರೆ—

ಮಂತ್ರಿಯವರು ಸ್ಟೇಟ್ ಸೆಕ್ರೆಟರಿಯವರೂ ಪಾರ್ಲಿಮೆಂಟಿನಲ್ಲಿ ಮಾಡಿದ ಭಾಷಣ ಕೇಳಿದ ನಂತರ ರೌಂಡು ಟೇಬಲು ಪರಿಷತ್ತಿನಿಂದ ಪ್ರಯೋಜನವಾದೀತೂ ಎಂಬ ಸಂಶಯ ಹುಟ್ಟಿದೆ. ರೌಂಡು ಟೇಬಲಿನಲ್ಲಿ ಮುಖ್ಯವಾದ ಯಾವ ವಿಷಯದಲ್ಲೂ ಆಖೈರ್ ತೀರ್ಮಾನಕ್ಕೆ ಬರಲಿಲ್ಲ.

ಫೆಡರೇಶನ್ ರೂಪದ ಆಡಳಿತ ರಚನೆಯು ಪ್ರಯೋಜನಕರವಾದದ್ದಲ್ಲ. ದೇಶೀ ರಾಜರುಗಳು ಫೆಡರೇಶನಿಗೆ ಸೇರಿ ಬ್ರಿಟಿಷ್ ಹಿಂದೂಸ್ಥಾನದ ಆಡಳಿತದಲ್ಲಿ ಹಕ್ಕು ಪಡೆಯುತ್ತಾರೆಯೇ ಹೊರತು ತಮ್ಮ ಹಕ್ಕುಗಳನ್ನು ಸ್ವಲ್ಪವೂ ಬಿಟ್ಟುಕೊಡುವುದಿಲ್ಲ. ಬ್ರಿಟಿಷ್ ಇಂಡಿಯಾದ ಜನರ ಮತ್ತು ದೇಶೀ ರಾಜ್ಯಗಳ ಜನರ ಮನೋಭಾವಕ್ಕೂ ಬಹಳ ಭೇದವುಂಟು. ದೇಶೀ ರಾಜ್ಯಗಳಲ್ಲಿ ರಾಜಕೀಯ ಜಾಗೃತಿಯೇ ಇಲ್ಲ. ಸ್ವತಂತ್ರವಾದ ವರ್ತಮಾನ ಪತ್ರಿಕೆಗಳೇ ದೇಶೀ ರಾಜ್ಯಗಳಲ್ಲಿ ಇಲ್ಲ. ಮಧ್ಯವರ್ತಿ ಕೌನ್ಸಿಲಿನಲ್ಲಿ ರಾಜರುಗಳಿಗೆ ಮೂರನೇ ಒಂದು ಅಂಶವೂ, ಮುಸಲ್ಮಾನರಿಗೆ ಇನ್ನೊಂದು ಮೂರನೇ ಒಂದು ಅಂಶವೂ ಬೇಕಂತೆ. ಉಳಿದ ಮೂರನೇ ಒಂದಂಶದಿಂದ ಹಿಂದುಗಳೂ ಇತರರು ಏನೂ ಮಾಡಬಹುದು? ದೇಶೀ ರಾಜರುಗಳ ಪ್ರತಿನಿಧಿಗಳು ಆಯಾ ರಾಜ್ಯಗಳ ಬ್ರಿಟಿಷ್ ಅಧಿಕಾರಿಗಳ ಹೇಳಿಕೆಯಲ್ಲಿ ಇರುತ್ತಾರೆ. ಅದರಿಂದ ಸರಕಾರಕ್ಕೆ ಬೇಕಾದಂತೆ ವರ್ತಿಸಲು ಅನುಕೂಲವಿರುತ್ತದೆ. ಈಗಿನ ಸ್ಥಿತಿಗಿಂತ ಕೆಟ್ಟು ಹೋಗುತ್ತದೆ. ಆಗ ನಮ್ಮನ್ನು ವಿರೋಧಿಸುವವರಾದರೂ ಬ್ರಿಟಿಷ ಇಂಡಿಯಾದವರೇ ಆಗಿರುತ್ತಾರೆ.

ಕಾಂಗ್ರೆಸನ್ನು ಅಡಗಿಸಿರುವುದರಿಂದ ದೇಶದ ವಾಕ್ಶಕ್ತಿ (ಅಭಿಪ್ರಾಯಕೊಡುವ ಶಕ್ತಿ) ಮಾತ್ರ ಅಡಗಿಸಿದ್ದೀರಿ. ನಮ್ಮ ಮಾತನ್ನು ನೀವು ಗಣನೆಗೇ ತೆಗೆದುಕೊಳ್ಳುವದಿಲ್ಲ. ಫೆಡರೇಶನ್ ರಚನೆಯಿಂದ ಹಿಂದೂಸ್ಥಾನದ ಸ್ಥಿತಿಯು ಬಹಳ ಕೆಟ್ಟು ಹೋಗುತ್ತದೆ. ಈಗಾಗಲೇ ಸೈಮನ್ ಕಮಿಶನ್, ರೌಂಡು ಟೇಬಲು ಪರಿಷತ್ತು ಮುಂತಾದ್ದಕ್ಕೆ ಅಪಾರ ಹಣ ಖರ್ಚು ಮಾಡಿದಿರಿ, ಇನ್ನಾದರೂ ರೌಂಡು ಖರ್ಚನ್ನು ನಿಲ್ಲಿಸಿ ಸುಲಭವಾದ ರಚನೆಯನ್ನು ಏರ್ಪಡಿಸಿರಿ. ಮಧ್ಯವರ್ತಿ ಸರಕಾರದಲ್ಲಿ ಪ್ರಜಾಜವಾಬ್ದಾರಿ ಕೊಡಿರಿ.

ಕೊಡಗು ವಿದ್ಯಾರ್ಥಿಯ ಕಮಿಟಿ ಮೀಟಿಂಗು.

ರಾ. ಬ. ಕೆ. ಚಂಗಪ್ಪನವರ ಅಧ್ಯಕ್ಷತೆಯಲ್ಲಿ ಮಡಿಕೇರಿ ಓಂಕಾರೇಶ್ವರ ದೇವಸ್ಥಾನದ ಮಹಡಿಯಲ್ಲಿ ತಾರೀಕು 10—3—32ರಲ್ಲಿ ನಡೆದ ಕೊಡಗು ವಿದ್ಯಾನಿಧಿಯ ಮುಖ್ಯ ಕಮಿಟಿ ಮೆಂಬರುಗಳ ಮೀಟಿಂಗಿನ ವಿವರ.

ಹಾಜರಿದ್ದ ಮೆಂಬರುಗಳು:—1. ರಾ. ಬಾ. ಕೆ. ಚಂಗಪ್ಪನವರು (ಪ್ರೆಸಿಡೆಂಟರು) 2. ಮಿ. ಗಳಾಟ ಪಾರೇಕಂಡ ಮುತ್ತಣ್ಣನವರು, 3. ಮೇರಿಯಂಡ ಭೀಮಯ್ಯನವರು, 4. ಬಿಟ್ಟಿಯಂಡ ಕುಟ್ಟಪ್ಪನವರು, 5. ಮಂಡೇಪಂಡ ಮುಂಡಣ್ಣನವರು, 6. ಕೊಡಂದೆರ ಮಾದಪ್ಪನವರು, 7. ಕೊಡಂದೆರ ದೇವಯ್ಯನವರು (ಖಜಾಂಚಿ) ಮತ್ತು 8. ಕೇಟೋಳಂಡ ಬೆಳ್ಯಪ್ಪನವರು (ಸೆಕ್ರೆಟರಿ.)

(1) ಹಿಂದಿನ ಮೀಟಿಂಗಿನಲ್ಲಿ ನಡೆದ ವಿಷಯಗಳನ್ನು ಓದಿ ಮಂಜೂರು ಮಾಡಲಾಯಿತು.

(2) ಆಡಿಟರವರ ರಿಪೋರ್ಟನ್ನು ಓದಿ ಅದನ್ನು ಜನರಲ್ ಮೀಟಿಂಗಿಗೆ ಇಡುವಂತೆ ತೀರ್ಮಾನಿಸಲಾಯಿತು.

(3) ಪಿ. ಸಿ. ಮುತ್ತಣ್ಣನವರು ಸಾಲ ತೊಂದಿಕೆಯಿಂದ 300 ರೂಪಾಯಿಗಳನ್ನು ಬೇಗನೆ ವಾಪಸು ಕೊಡಲು ಆದೇಶ ಕೊಡಲೆಂದು ಅವರನ್ನು ಕೇಳಲು ತೀರ್ಮಾನಿಸಲಾಯಿತು.

(4) ನಡಿಕೇರಿಯಂಡ ಎನ್. ಬೆಳ್ಯಪ್ಪನವರು ಹೊಂದಿದ ವೇತನವನ್ನು ವಾಪಸು ಕೊಡಬೇಕಾಗಿ ಅವರ ಜಮೀನುದಾರ ಮಿ. ಎನ್. ಪೊನ್ನಪ್ಪನವರನ್ನು ಕೇಳಬೇಕಾಗಿ ಇತ್ಯಾರ್ಥವಾಯಿತು.

(5) ಮಿ. ಯನ್. ಕುಟ್ಟಪ್ಪನವರಿಗೆ ಸಾಲವಾಗಿ ಕೊಟ್ಟ 100 ರೂಪಾಯಿಗಳನ್ನು ತಾ 5—4—32ರ ವಳಗೆ 50 ರೂಪಾಯಿಗಳನ್ನೂ ಮತ್ತು ತಾ. 8—4—33ರ ವಳಗೆ 50 ರೂಪಾಯಿಗಳನ್ನೂ ಹೀಗೆ 2 ಕಂತುಗಳಲ್ಲಿ ವಸೂಲು ಮಾಡಬೇಕಾಗಿಯೂ ಮತ್ತು ಆ ರಂದ ವೇತನದ ಬಾಪ್ತು 735—8—0 ವನ್ನು ತಿಂಗಳು ಒಂದರ ಉತ್ಕೃಷ್ಟ ಕೇಳಡ 5 ರಂತೆ ವಸೂಲು ಮಾಡಬೇಕೆಂತಲೂ ಅವರಿಂದ ವಸೂಲಾಗದೆ ಇದ್ದ ಪಕ್ಷದಲ್ಲಿ ಕಾನೂನು ಮೇರೆ ಜಾರಿಮಾಡಬೇಕೆಂದೂ ಇತ್ಯಾರ್ಥವಾಯಿತು.

(6) ಪುಲಿಯಂಡ ಯನ್ ಅಪ್ಪಯ್ಯನವರು ತೀರಿಹೋಗಿದ್ದರಿಂದ ಅವರಿಂದ ಬರಬೇಕಾದ 180 ರೂಪಾಯಿಗಳನ್ನು ಲೆಕ್ಕದಿಂದ ವಜಾ ಮಾಡಬೇಕಾಗಿ ಇತ್ಯಾರ್ಥವಾಯಿತು.

(7) ಸ್ಕಾಲರ್ ಶಿಫ್ ಹಣವನ್ನು ಮತ್ತು ಸಾಲ ಹೊಂದಿದ ಹಣವನ್ನು ತಿಂಗಳುವಾರು ಸರಿಯಾಗಿ ಕೊಡದಿರುವವರಿಗೆ ಸೆಕ್ರೆಟರಿಯವರು ರಜಿಸ್ಟರ್ ನೋಟೀಸು ಕೊಡಬೇಕೆಂದೂ, ಆ ನೋಟೀಸು ಪ್ರಕಾರ ಕೊಡದಿದ್ದ ಪಕ್ಷದಲ್ಲಿ ಕೋರ್ಟು ಮುಖಾಂತರ ವಸೂಲು ಮಾಡಬೇಕೆಂದೂ ಇತ್ಯಾರ್ಥವಾಯಿತು.

(8) 15 ರೂಪಾಯಿಗೆ ಮೀರದ ಈ ನಿಧಿಗೆ ಬೇಕಾಗದ ಪತ್ರಗಳನ್ನು ಇಡಲಿಕ್ಕೆ ಒಂದು ಪೆಟ್ಟಿಗೆಯನ್ನು ಕ್ರಯಕ್ಕೆ ತೆಗೆದುಕೊಳ್ಳಲು ಸೆಕ್ರೆಟರಿಯವರಿಗೆ ಅಧಿಕಾರ ಕೊಟ್ಟಿದೆಯೆಂದಾಗಿಯೂ ಇತ್ಯಾರ್ಥವಾಯಿತು.

ಮಡಿಕೇರಿ, ಕೆ. ಚಂಗಪ್ಪ,
ತಾ. 10—3—32. (ಪ್ರೆಸಿಡೆಂಟರು.)

ಕೊಡಗು ಮ್ಯೂಚುವಲ್ ಎಯಿಡ್ ಎಸೋಸಿಯೇಷನ್ ಆಫೀಸ್, ಮಡಿಕೇರಿ,
ತಾ. 17—3—32.

ನೋಟೀಸು.

ಈ ಸಂಘದ ಎಲ್ಲಾ ಮೆಂಬರುಗಳಿಗೆ ತಿಳಿಯಪಡಿಸುವುದೇನೆಂದರೆ—

ಮದ್ರಾಸ್ ಯುನಿವರ್ಸೆಲ್ ಮ್ಯೂಚುವಲ್ ಎಯಿಡ್ ಎಸೋಸಿಯೇಷನಿನಲ್ಲಿ ಮೆಂಬರುಗಳಿಗೆ ಡ್ರಾಯಿಂಗ್ ಮೂಲಕ ಸಾಲ ಕೊಡುವುದು ಲಾಟರಿಯೆಂದೂ, ಅಂಥಾ ಲಾಟರಿಯು ಖಾನೂನಿಗೆ ವಿರೋಧವೆಂಬದಾಗಿಯೂ ಮದ್ರಾಸ್ ಹೈ ಕೋರ್ಟಿನಲ್ಲಿ ಇತ್ತೀಚೆಗೆ ತೀರ್ಮಾನವಾಗಿರುವುದಾಗಿ ತಿಳಿಯುತ್ತದೆ. ಮೇಲ್ಕಂಡ ಮದ್ರಾಸ್ ಸಂಘದ ರೂಲ್ಸಿಗೆ ಅನುಗುಣವಾಗಿ ನಮ್ಮ ಸಂಘದ ರೂಲ್ಸು ಸಹ ಮಾಡಲ್ಪಟ್ಟಿರುವುದರಿಂದ ಇಂಥಾ ರೂಲ್ಸುಗಳನ್ನು ರದ್ದುಪಡಿಸಿ, ಇನ್ನು ಮುಂದೆ ಯಾವ ರೀತಿಯಲ್ಲಿ ಕೊಡಗು ಮ್ಯೂಚುವಲ್ ಎಯಿಡ್ ಎಸೋಸಿಯೇಷನ್ ಎಂಬ ಸಂಘವನ್ನು ನಡಿಸಬೇಕೆಂಬ ವಿಷಯ ತೀರ್ಮಾನಿಸಲು ಒಂದು ಜನರಲ್ ಮೀಟಿಂಗು 1932ನೇ ಇಸವಿ ಎಪ್ರಿಲ್ ತಾ. 10ನೇ ಆದಿತ್ಯವಾರ 2 ಗಂಟೆ ಸಮಯಕ್ಕೆ ಮಡಿಕೇರಿ ಫೆಡರೇಶನ್ ಆಫೀಸಿನಲ್ಲಿ ನಡೆಯುತ್ತದೆ. ಎಲ್ಲಾ ಮೆಂಬರುಗಳು ದಯಮಾಡಿ ತಕ್ಕ ಸಲಹೆಗಳನ್ನು ಕೊಡಬೇಕಾಗಿ ಕೋರುವ,

ತ. ಬಾ. ಪಟ್ಟಮಾಡ ದೇವಯ್ಯ,
(ಮೇನೇಜಿಂಗ್ ಡೈರೆಕ್ಟರ್)

ಸ್ತ್ರೀ ಪುರುಷರ ಪ್ರೀತಿಯ ಮರ್ಮಗಳನ್ನು ಚಿತ್ರಪಟಗಳ ಸಹಿತ ಇದ್ದದ್ದನ್ನು ಇದ್ದ ಹಾಗೆ ತಿಳಿಸುವ

ಸ್ತ್ರೀ ದಾಂಪತ್ಯ ರಹಸ್ಯವೆಂಬ ಮರ್ಮ ಶಾಸ್ತ್ರ.

ಈ ಪುಸ್ತಕವು ಫ್ರೆಂಚ್, ಹಿಂದೂಸ್ಥಾನಿ ಭಾಷೆಗಳಲ್ಲಿ ಬಹುಕಾಲದಿಂದ ಗುಪ್ತವಾಗಿತ್ತು. ಈಗ ನಾವು ಎಲ್ಲರಿಗೂ ವಿವರವಾಗಿ ತಿಳಿಯುವಂತೆ ಸುಲಭ ಶೈಲಿಯ ಕನ್ನಡ ಭಾಷೆಯಲ್ಲಿ ಭಾಷಾಂತರಿಸಿ ಫೋಟೋಗಳ ಸಹಿತ [illegible] ರುತ್ತೇವೆ. ಈ ಪುಸ್ತಕದಲ್ಲಿ ಸ್ತ್ರೀಪುರುಷರಿಗೆ ಬೇಕಾದ ಎಲ್ಲಾ ಮರ್ಮರಹಸ್ಯಗಳು, ಪುರುಷರು ಸ್ತ್ರೀಯರಲ್ಲಿ ನಡೆದುಕೊಳ್ಳಬೇಕಾದ ಬಗೆ, ಸ್ತ್ರೀಪುರುಷರ ಲಕ್ಷಣಗಳು, ಸ್ತ್ರೀಯರಿಗೆ ಬೇಕಾದ ಅನೇಕ ಗುಪ್ತ ವಿಷಯಗಳು, ಸಂಭೋಗದ ಕಾಲ, ಗರ್ಭ ಧರಿಸುವುದು, ಗರ್ಭ ನಿಂತು ಹೋಗುವುದು, ಸಂಭೋಗದಿಂದಾಗುವ ಸಂತೋಷ, ಜನನೇಂದ್ರಿಯಗಳ ವರ್ಣನೆ, ಹಸ್ತ ಪ್ರಯೋಗದಿಂದಾಗುವ ನಾಶ, ಗರ್ಭಿಣಿಗೆ ಬೇಕಾದ ಅನೇಕ ಮರ್ಮನಿಯಮಗಳು, ಶಿಶು ಉತ್ಪತ್ತಿ ವಿಧಿ, ಗುಪ್ತ ವೈದ್ಯರ ಚಿಕಿತ್ಸೆ, ಶಯನ ಗೃಹದ ರಹಸ್ಯನಿಯಮಗಳು, ಮಾನವ ಶರೀರದ ಮರ್ಮಗಳ ವಿವರ, ನಪುಂಸಕತ್ವಕ್ಕೆ ಚಿಕಿತ್ಸೆ, ಇನ್ನೂ ಸ್ತ್ರೀಪುರುಷರುಗಳಿಗೆ ಬೇಕಾದ ಕಾಮರಹಸ್ಯಗಳು ಚಿತ್ರಪಟಗಳ ಸಹಿತ ಪ್ರಿಂಟಾಗಿದೆ

ಕ್ರಯ: ಪುಸ್ತಕ ಒಂದಕ್ಕೆ 1 ರೂಪಾಯಿ

The Legal Trading Co.,
12—12 P. B. 243, Madras.

ಕೊಡಗು ಕೌನ್ಸಿಲ್.

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ ಮೀಟಿಂಗು ತಾ॥ 11, 12 ಮತ್ತು 14ರಲ್ಲಿ ಮಡಿಕೇರಿಯಲ್ಲಿ ಚೀಫ್ ಕಮೀಶನರ ಅಧ್ಯಕ್ಷತೆಯಲ್ಲಿ ನಡೆಯಿತು. ತಾ॥ 11ರಲ್ಲಿ ಬಜೆಟ್ಟನ್ನು ಕೌನ್ಸಿಲ್ ಮುಂದೆ ಇಡುವಾಗ ಕಮಿಶನರ ಭಾಷಣವಾಯಿತು. ಅನಂತರ ಮೆ. ಗಳಾದ ಪಾಂಡಂಡ ಬೆಂಗಪ್ಪನವರು, ಚೆಪ್ಪುಡಿರ ಪೂವಯ್ಯನವರು, ಕುಟ್ಟೆಯಡ ನಾಣಯ್ಯನವರು, ಅಪ್ಪನೆರಂಡ ಬೆಂಗಪ್ಪನವರು, ಕಲ್ಲಂಡ ಬೆಳ್ಳಪ್ಪನವರು, ಬಾರದ್ದ ಕಾಳಪ್ಪನವರು, ನಾಳೀಕಾಂಡ ಐಯ್ಯಪ್ಪನವರು ಮತ್ತು ರಾವ್ ಸಾಹೇಬ್ ಬಿ. ಶ್ರೀಪತಿರಾಯರು ಸಹ ಅದಾಯ ವೆಚ್ಚ ಮತ್ತು ಆಡಳಿತದ ಕುರಿತು ಟೀಕಿಸಿ ಭಾಷಣ ಮಾಡಿದರು.

1932—33ನೇ ಇಸವಿಯ ಜಮಾ ಖರ್ಚಿನ ಅಂದಾಜು ಪಟ್ಟಿ.

ಜಮಾ	— —	ರೂ.	13,28,000.
ಹಿಂದಿನ ವರ್ಷದ ಶಿಲ್ಕು		,,	1,93,000.
	ಒಟ್ಟು	,,	15 21,000.
	ಖರ್ಚು	,,	12,77, 00.
	ಶಿಲ್ಕು	,,	24 40,00.

ರಿಟ್ರೆಂಚ್‌ಮೆಂಟ್ ಕಮಿಟಿಯು ಶಿಫಾರಸ್ಸು ಮೇರೆ ರೂ. 70,000 ಹೊಸ ಕೆಲಸಗಳ ಉತ್ಪತ್ತಿಯೂ, ಒಂದುವರೆ ಲಕ್ಷ ರೂ. ಖರ್ಚಿನಲ್ಲಿ ಕಡಿಮೆಯೂ ಮಾಡಲು ... ಬಜೆಟ್ ಮಾಡಲು ಸಾಧ್ಯವಾಗಿದೆಯೆಂತ ಬಜೆಟ್ಟಿನಲ್ಲಿ ... 1930—31ರಲ್ಲಿ ಉತ್ಪತ್ತಿಗಿಂತ ಖರ್ಚು 3.58,000 ರೂ. ಹೆಚ್ಚಾಗಿದೆ. 1931—32ರಲ್ಲಿ ಉತ್ಪತ್ತಿಗಿಂತ ಖರ್ಚು ರೂ. 89,000 ಹೆಚ್ಚಾಗಬಹುದೆಂತ ಅಂದಾಜು ಮಾಡಲಾಗಿದೆ.

ತಾ. 12ರಲ್ಲಿ ಬಜೆಟ್ಟಿನ ಮೇಲೆ ಈ ಕೆಳಕಂಡ ಚರ್ಚೆ ನಡೆಯಿತು.

1. ಸರ್ಕಾರದ ಎಜ್ಯುಕೇಷನ್ ಇಲಾಖೆಯ ಧ್ಯೇಯವನ್ನು ತಿಳಿಸುವ ಬಗ್ಗೆ ಈ ಇಲಾಖೆಯ ಖರ್ಚಿನಲ್ಲಿ 100 ರೂ. ಕಡಿಮೆ ಮಾಡಬೇಕೆಂಬ ಠರಾವಿನ ಮೇಲೆ ಮೆ. ಪಿ. ಬಿ. ಐಯ್ಯಮ್ಮನವರು ಹೇಳಿದ್ದೇನೆಂದರೆ:—ಸರ್ಕಾರದ ಧ್ಯೇಯವು ಈ ... [illegible]

[illegible]



[illegible]

ಕೊಡಗು.

ಸನ್ ೧೯೩೦ನೇ ಇಸವಿ

ಜುಲೈ ತಾ. ೧೮ ಶುಕ್ರವಾರ.

ಪ್ರೆಸ್ ಆರ್ಡಿನೇನ್ಸ್

...ಪ್ರೆಸ್ ...ಲ್ಲಿರುವ ವರದಿಗೆ
...ನ್ನು ...
...ನ್ನಂತೆ
...ಮತ್ತು, ...
...ದೀಲ ...
...ಪ್ಪ—...

ನಾವು

...:—...,
... ...

—ಲೇಖನ

...

(... ಸಂಘಗಳ ಮತ್ತು ...
... ಮುಂಬಯಿಯಲ್ಲಿಯೂ ...
... ... ಸಂಘದ
...
... ಸಂಘಗಳ
... ಪ್ರಕಾರ
... ಗಾಗಿ ...

...ಸುವುದಿಲ್ಲ.

...

"ಹಿಂದೀ ವಸ್ತ್ರಗಳನ್ನೇ ಕೊಳ್ಳಿ."

"ಹಿಂದೀ ವಸ್ತ್ರಗಳನ್ನೇ ಕೊಳ್ಳಿ" ಎಂಬ ಚಳವಳಿಯನ್ನು ಪಂಡಿತ ಮದನಮೋಹನ ಮಾಳವೀಯರು ಬನಾರಸದಲ್ಲಿ ಪ್ರಾರಂಭಿಸಿದ್ದಾರೆ. ಅದನ್ನು ಪ್ರಾರಂಭಿಸುವ ಬಗ್ಗೆ ಏರ್ಪಡಿಸಿದ ಮೀಟಿಂಗಿನಲ್ಲಿ ಇವರು ಹೇಳಿದ್ದೇನೆಂದರೆ:— ಒಳ್ಳೇ ಆರ್ಥಿಕ ದೃಷ್ಟಿಯಿಂದ ಸ್ವದೇಶೀ ವಸ್ತು ವ್ಯಾಪಾರಕ್ಕೆ ಉತ್ತೇಜನ ಕೊಡುವ ಬಗ್ಗೆ ಒಂದು ಸಂಸ್ಥೆಯಾಗಬೇಕು. ಒಳ್ಳೇ ಆರ್ಥಿಕ ದೃಷ್ಟಿಯಿಂದ ಪ್ರಾರಂಭಿಸಿದರೆ ರಾಜಕೀಯ ವಿಚಾರದಲ್ಲಿ ಯಾವ ಅಭಿಪ್ರಾಯವೇ ಇರಲಿ ಎಲ್ಲಾ ಹಿಂದೀಯರೂ ಈ ಚಳವಳಿಗೆ ಸೇರಲು ಸಾಧ್ಯವಾಗುತ್ತದೆ. ನಾನು ಬನಾರಸದಲ್ಲಿ ಅಖಿಲ ಭಾರತ ಸ್ವದೇಶೀ ಸಂಘದ ಆಫೀಸ್ ಒಂದನ್ನು ತೆರೆಯುತ್ತೇನೆ. ಪ್ರತಿ ಜಿಲ್ಲೆ, ತಾಲೋಕು, ಗ್ರಾಮದ ನಿವಾಸಿಗಳು ಮುಖ್ಯವಾಗಿ ಮಹಿಳೆಯರು ಸೇವೆಗಾಗಿ ಬೇರೆ ರೀತಿಯಿಂದ ಕೆಲಸ ಮಾಡದೆ ಇರುವವರು ಸೇರಿ 'ಸ್ವದೇಶೀ ಲೀಗ್' ಎಂಬ ಸಂಸ್ಥೆಗಳನ್ನು ಮಾಡಿಕೊಳ್ಳಬೇಕು. ಪ್ರತಿಯೊಬ್ಬ ಹಿಂದೀಯನೂ ಈ ಲೀಗ್‌ಗಳಿಗೆ ಮೆಂಬರುಗಳಾಗಿ ಸೇರಬೇಕು. ಹೀಗೆ ಸ್ವದೇಶೀ ವ್ರತದ ಪ್ರಮಾಣ ಪತ್ರಿಕೆಗೆ ಸೈನ್ ಹಾಕಬೇಕು. ಈ ಸಂಘಗಳು ಹಸ್ತಪತ್ರಿಕೆಗಳನ್ನು ಪ್ರಕಟಿಸಬೇಕು, ಮೀಟಿಂಗ್ ಮಾಡಬೇಕು, ಮೆರವಣಿಗೆಗಳನ್ನು ಹೊರಡಿಸಬೇಕು, ಪ್ರದರ್ಶನಗಳನ್ನು ಏರ್ಪಡಿಸಬೇಕು. ಜನರ ಗುಂಪು ಕೂಡಿಕೊಂಡು ಮನೆ ಮನೆಗೆ ಹೋಗಿ ಸ್ವದೇಶದ ಮಹತ್ವವನ್ನು ಜನರಿಗೆ ತಿಳಿಸಿಕೊಡಬೇಕು. ಈ ಮಧ್ಯವರ್ತಿ ಸಂಸ್ಥೆಗೆ ಸೇರುವ ಎಲ್ಲಾ ಸಂಸ್ಥೆಗಳಿಗೆ ಬೇಕಾದ ಹಸ್ತಪತ್ರಿಕೆ ಮುಂತಾದ್ದನ್ನು ಮಧ್ಯವರ್ತಿ ಆಫೀಸಿನಿಂದ ಕಳುಹಿಸಿಕೊಡಲಾಗುತ್ತದೆ. ಹಿಂದೂಸ್ಥಾನದ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸಬೇಕು, ಅವುಗಳಿಗೆ ಉತ್ತೇಜನ ಕೊಡಬೇಕು, ಎಂಬ ವಿಚಾರದಲ್ಲಿಯೂ ಯಾರೂ ವಿರೋಧವಿಲ್ಲ.

ಇಂಗ್ಲೆಂಡಿನಲ್ಲಿ ಸರಕಾರ, ಜನರೂ, ರಾಜರೂ ಅವರ ಮನೆಯವರು ಸಹ ಪ್ರಿನ್ಸ ಒಳ್ಳೇ ಬ್ರಿಟಿಷ್ ಸಾಮಾನುಗಳನ್ನೇ ಕೊಳ್ಳಬೇಕು, ಮಾರಬೇಕು ಎಂಬ ಚಳವಳಿಯನ್ನು ನಡಿಸುತ್ತಿದ್ದಾರೆ. ಅಂಥಾ ಚಳವಳಿಯು ಹಿಂದೂಸ್ಥಾನದಲ್ಲಿ ತುಂಬಾ ತೀವ್ರದಲ್ಲೇ ಅವಶ್ಯಕತೆ ಇದೆ. ನಮ್ಮ ರಾಷ್ಟ್ರದ ಉತ್ಪತ್ತಿಯು ಇಂಗ್ಲೆಂಡಿನ ರಾಷ್ಟ್ರದ ಉತ್ಪತ್ತಿಗಿಂತ 20 ಪಟ್ಟು ಕಡಿಮೆಯಾಗಿದೆ. ಅದರಿಂದ ಸಿವಿಲ್ ಮಿಲಿಟರಿ ಇಲಾಖೆಗಳಲ್ಲಿ ಪರದೇಶೀಯರಿಗೆ ಅತಿ ದೊಡ್ಡ ಸಂಬಳಗಳನ್ನು ಕೊಡುತ್ತಿರುವುದೇ ಈ ಘೋರ ಬಡತನಕ್ಕೆ ಕಾರಣವಾಗಿದೆ. ಸರಕಾರದ ರಚನೆಯು ಸಂಪೂರ್ಣವಾಗಿ ಬದಲಾದ ವಿನಹ ಈ ದುಂದು ಖರ್ಚನ್ನು ಕಡಿಮೆ ಮಾಡಲು ಸಾಧ್ಯವಿಲ್ಲ. ಸರಕಾರದ ಸಹಾಯದಿಂದ ದೇಶದ ಸಂಪತ್ತನ್ನು ಹೆಚ್ಚಿಸಿಕೊಳ್ಳಲು ಸಹಾಯ ಮಾಡಿಕೊಳ್ಳಲು ಸಾಧ್ಯವಿಲ್ಲ. ರಾಷ್ಟ್ರದ ಆರ್ಥಿಕ ಸ್ಥಿತಿಯನ್ನು ಅಭಿವೃದ್ಧಿಗೊಳಿಸಿಕೊಳ್ಳಲು ದೇಶದವರು ಖರ್ಚು ಕಡಿಮೆ ಮಾಡಿಕೊಳ್ಳುವುದು ಒಂದು ದಾರಿ. ದೇಶೀಯ ವಸ್ತುಗಳನ್ನೇ ಕೊಳ್ಳುವುದೂ ಮಾರುವುದೂ ಇನ್ನೊಂದು ದಾರಿ.

ಹಿಂದೀ ವಸ್ತುಗಳನ್ನೇ ಕೊಂಡುಕೊಳ್ಳುತ್ತೇವೆಂತಲೂ ಮಾರುತ್ತೇವೆಂತಲೂ, ಬೇರೆಯವರಿಂದಲೂ ಹೀಗೆಯೇ ಮಾಡಿಸುತ್ತೇವೆಂತಲೂ ಪ್ರತಿಜ್ಞೆ ಮಾಡಿಕೊಳ್ಳಬೇಕು. ಪಶ್ಚಿಮದೇಶದ ಅನೇಕ ರಾಜ್ಯಗಳಲ್ಲಿ ಹೀಗೆಯೇ ನಡೆಯುತ್ತಿದೆ. ಸ್ವದೇಶೀ ಚಳವಳಿಗೆ ಸರಕಾರದ ಅಡ್ಡಿ ಇಲ್ಲವೆಂತ ಸರಕಾರವೂ ತಿಳಿಸಿದೆ.

ಇರ್ವಿನ್ ದಾರಿ ಹಿಡಿಯಿರಿ.

ಲಂಡನ್ 'ಇಕಾನೋಮಿಸ್ಟ್' ಎಂಬ ಪತ್ರಿಕೆಯು ಬರೆದಿರುವುದೇನೆಂದರೆ:—

ದಬ್ಬಾಳಿಕೆಯಿಂದಲೇ ಒಂದು ಜನಾಂಗವು ಇನ್ನೊಂದು ಜನಾಂಗವನ್ನು ಆಳುವುದು ಸಾಧ್ಯವಿಲ್ಲ. ಈ ತತ್ವವು ಹಿಂದೂಸ್ಥಾನದಲ್ಲಿ ಈಗ ಚೆನ್ನಾಗಿ ಅನ್ವಯಿಸುತ್ತದೆ.

ಹಿಂದೂಸ್ಥಾನದ ಆಡಳಿತವನ್ನು ಬ್ರಿಟಿಷರ ಕೈಯಿಂದ ಹಿಂದೀಯರಿಗೆ ಒಪ್ಪಿಸಬೇಕೆಂಬುದು ಹಿಂದೂಸ್ಥಾನದಲ್ಲೂ, ಬ್ರಿಟನಿನಲ್ಲೂ ಎಲ್ಲಾ ಪಾರ್ಟಿಗಳು ಒಪ್ಪುವ ವಿಷಯವಾಗಿದೆ. ಹಿಂದೂಸ್ಥಾನದ ಅಧಿಕಾರವನ್ನು ಹಿಂದೀಯರಿಗೆ ಒಪ್ಪಿಸುವಾಗ ಸರ್ಕಾರದ ರಚನೆಯು ಭದ್ರವಾಗಿಯೇ ಇರಬೇಕೆಂಬ ಸ್ವಾರ್ಥ ಕರ್ತವ್ಯದಿಂದ ಸರ್ಕಾರದ ಈಗಿನ ದಬ್ಬಾಳಿಕೆಯು ಆಡಳಿತವನ್ನು ನಡೆಸುತ್ತಿರುವುದಷ್ಟೆ. ಆದರೆ ಆರ್ಡಿನೇನ್ಸ್‌ಗಳನ್ನು ಬೇರೆ ಒಂದು ಒಳ್ಳೇ ಉದ್ದೇಶಕ್ಕಾಗಿಯೇ ಉಪಯೋಗಿಸುವುದಾಗಿದೆ. ಈ ದಬ್ಬಾಳಿಕೆಯ ಆವಧಿಯು ಬಹಳ ದೀರ್ಘವಾದರೆ ಅಧಿಕಾರವನ್ನು ಹಿಂದೀಯರಿಗೆ ವಹಿಸುವುದು ಅಷ್ಟು ಕಷ್ಟವಾಗುತ್ತದೆ. ಉದಾಹರಣೆಗಾಗಿ ಹೇಳುವುದಾದರೆ—ಬ್ರಿಟಿಷರು ಬ್ರಿಟಿಷ್ ಸಾಮಾನುಗಳನ್ನೇ ಕೊಳ್ಳಬೇಕೆಂಬ ಬಾವುಟದ ಚಳವಳಿ ನಡಿಸುತ್ತಿರುವಾಗ ಹಿಂದೂಸ್ಥಾನದ "ಹಿಂದೀ ವಸ್ತುಗಳನ್ನೇ ಕೊಳ್ಳಿ" ಎಂಬ ಚಳವಳಿಯ ಮೇಲೆ ಪ್ರತಿಬಂಧ ನಡಿಸುವುದರಲ್ಲಿ ನ್ಯಾಯವೇನಿದೆ? ನಮಗಿಂತ ಅವರಿಗೂ ಆಗಬೇಡವೆ?

ಕಾಂಗ್ರೆಸಿನವರು ಮಾಡಿದ ಒಂದು ತಪ್ಪಿಗಾಗಿ ನಡಿಸಬೇಕಾದ ದಬ್ಬಾಳಿಕೆಯನ್ನು ಬ್ರಿಟಿಷ್ ಸಾಮಾನುಗಳನ್ನು ಇಂದಿನ ... ಮಾಡಿದರೆ, ಬ್ರಿಟಿಷರು ಹಿಂದೂಸ್ಥಾನದಲ್ಲಿ ... ... ಮಾಡಿಕೊಳ್ಳದಿದ್ದರೆ ... ಹೋಗಿಸುತ್ತೇವೆಂತ ಹಿಂದೀಯರಿಗೆ ಸ್ವಲ್ಪ ಸಂಶಯವನ್ನಾದರೂ ಹುಟ್ಟಿಸಿದರೆ ಒಗ್ಗಟ್ಟಿನಿಂದ ಒಹು ಕಾಲದಿಂದ ಮಾಡಿದ ಕೆಲಸವನ್ನೆಲ್ಲಾ ಹಾಳುಮಾಡಿಕೊಳ್ಳುತ್ತೇವೆ.

ಆರ್ಡಿನೇನ್ಸ್‌ಗಳಿಂದ ಪ್ರತ್ಯಕ್ಷವಾಗಿ ಕಾನೂನು ಭಂಗ ಮಾಡುವುದನ್ನು ಮಾತ್ರ ನಿಲ್ಲಿಸಬಹುದಷ್ಟೆ. ಹಿಂದೀಯರು ಪರದೇಶದವರೊಂದಿಗೆ ವ್ಯಾಪಾರ ಮಾಡಲೇ ಬೇಕೆಂತ ಪತ್ರಿಯ ಪಡಿಸಲು ಸಾಧ್ಯವಿಲ್ಲ. ಅಥವಾ ಸರಕಾರೀಯ ರಾಜ್ಯಾಧಿಕಾರಿಗಳ ಸಂಗಡ ಸಹಕರಿಸಬೇಕೆಂತ ಒತ್ತಾಯಪಡಿಸಲು ಸಹ ಸಾಧ್ಯವಿಲ್ಲ. ಸರ್ಕಾರದ ಅಧಿಕಾರವನ್ನು ಬಹಿರಂಗವಾಗಿ ಉಲ್ಲಂಘಿಸುವುದನ್ನು ಆರ್ಡಿನೇನ್ಸ್‌ಗಳು ನಿಲ್ಲಿಸಿವೆ. ಆದರೆ ವಿರೋಧವನ್ನು ನೆಲದ ಅಡಿಗೆ ಹೋಗುವಂತೆ ಮಾಡಿದೆ—ಬಹಿರಂಗ ಕಾನೂನು ಭಂಗಕ್ಕಿಂತ ಕೆಡುಕು. ಮುಂದುವ ಈ ನೆಲದ ಅಡಿಯ ಚಳವಳಿಯನ್ನು ರಾಜಿಮಾಡುವಂತೆ ನಿಲ್ಲಿಸಬೇಕಷ್ಟೆ.

ಇರ್ವಿನ್ ದಾರಿಯನ್ನು ಹಿಡಿಯಬೇಕಾದ ಕಾಲ ಬಂದಿದೆ.

ಹಳ್ಳಿಗಾರರ ಸಾಲ.

ಈ ತಿಂಗಳು ೬ ರಲ್ಲಿ ಸಂಯುಕ್ತ ಸಂಸ್ಥಾನದ ಕೋ-ಆಪರೇಟಿವ್ ಕಾನ್‌ಫರೆನ್ಸಿನ ೧೭ ನೆಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಮಿ. ಎ. ರಾಮದಾಸ್ ಪಂತುಲುವರು ಹಳ್ಳಿಗಾರರ ಸಾಲವನ್ನು ಕುರಿತು ಅನೇಕವಾದ ಸಲಹೆಗಳನ್ನು ಕೊಟ್ಟರು. ಅವುಗಳನ್ನು ಹಳ್ಳಿಯ ರೈತರ ತಿಳುವಳಿಕೆಗಾಗಿ ಇಲ್ಲಿ ಪ್ರಕಟಿಸಿದ್ದೇವೆ. ಅದರ ಭಾಷಣದ ಮುಖ್ಯಾಂಶಗಳಾವುವೆಂದರೆ—

ಹಳ್ಳಿಗಳಲ್ಲಿ ಸಾಲವಿಲ್ಲದೆ ಇರುವ ರೈತರು ಶೇಕಡ ೧೦ ರಷ್ಟು ಇರುವುದೂ ಕಷ್ಟ. ಹಳ್ಳಿಯ ಸಾಲವು ಎರಡು ವಿಧವಾಗಿದೆ. ವ್ಯವಸಾಯ ಕಾರ್ಯಕ್ಕಾಗಿ ಸಾಲ ಮಾಡಿ ಬಂದ ಬೆಳೆಯಿಂದ ಅದನ್ನು ತೀರಿಸುವಂತೆ ಏರ್ಪಾಡಾಗಿರುವ ಸಾಲವೊಂದು; ತೀರಿಸುವುದಕ್ಕೆ ದಾರಿಯಿಲ್ಲದೆ ಸುಮ್ಮನೆ ಹೊತ್ತುಕೊಂಡ ಸಾಲವೊಂದು. ಒಂದೊಂದು ವೇಳೆ ರೈತರು ಇವೆರಡನ್ನೂ ಮಹಾಜನರ ಕಡೆಗೆ ಎರಡು ವಿಧದಲ್ಲಿಯೂ ಸಾಲವನ್ನು ಹೊತ್ತುಕೊಳ್ಳುತ್ತಾರೆ. ಇಂತಹ ಘೋರವಾದ ಸಾಲವನ್ನು ತೀರಿಸಬೇಕಾದರೆ ಆದಾಯವನ್ನು ಹೆಚ್ಚಿಸುವುದೊಂದು ಮಾರ್ಗ. ಸಾಲವನ್ನು ಏರಿಸುವುದಾಗಲಿ, ಕಡಿಮೆ ದರದಂತೆ ಪರಿಹರಿಸುವುದಾಗಲಿ ಇನ್ನೊಂದು ಮಾರ್ಗ.

ಈ ಸಮಯದಲ್ಲಿ ಬಡ್ಡಿಯ ವ್ಯಾಪಾರವೂ, ಧಾನ್ಯದ ವ್ಯಾಪಾರವೂ ತೀರಾ ಕಡಿಮೆಯಾಗಿ ಯಾವ ಮಾರ್ಗದಿಂದಲೂ ರೈತರನ್ನು ಸಂರಕ್ಷಿಸುವ ದಾರಿಯೇ ಇಲ್ಲವಾಗಿದೆ. ಕಂದಾಯವನ್ನು ಕಡಿಮೆ ಮಾಡುವುದು, ಕಡಿಮೆ ಸಾಲಕೊಡುವುದು, ಹಾಸಾವಳಿಯ ಸಾಮ್ಯವನ್ನು ಹೆಚ್ಚಿಸುವುದು, ಸಾಲ ತೀರಿಸಲು ದೀರ್ಘವಾದ ಅವಧಿ ಮುನ್ನ ಕಂತು ಕಟ್ಟುವಂತೆ ಮಾಡಿಕೊಡುವುದು, ಜಮೀನು ಹರಾಜಿನ ಡಿಕ್ರಿಗಳನ್ನು ದೀರ್ಘ ಮಾಡುವುದು ಇತ್ಯಾದಿ ನಾನಾ ಮಾರ್ಗಗಳನ್ನು ಬುದ್ಧಿವಂತರಾದವರು ತಿಳಿಸಿದ್ದಾರೆ.

ಹಳ್ಳಿಗಾರರ ಸಾಲವನ್ನು ತೀರಿಸಬೇಕಾದರೆ ಈ ಕೆಳಗಿನ ಕೆಲವು ರೀತಿ ನೀತಿಗಳನ್ನು ಪರ್ಯಾಲೋಚಿಸಬಹುದು:

೧. ಸಾಲ ವಜಾ ಮಾಡುವುದು—ಇದು ಯಾವ ದೇಶದಲ್ಲಿ ಅನೇಕರು ಈ ಮಾರ್ಗವನ್ನು ಸೂಚಿಸುವರು. ಇದರಿಂದ ಸಾಲವನ್ನೇ ತೆಗೆದು ಹಾಕಿ ಪುನಹ ರೈತರಿಗೆ ಹೊಸ ದಾರಿಯಲ್ಲಿ ಬಿಡುವುದೇ ಇದರ ಉದ್ದೇಶ. ಆದರೆ ನಮ್ಮದರಲ್ಲಿ ಇದು ಅಸಾಧ್ಯವಾದ ಮಾತು. ಕಾರ್ಯತಃ ನಡೆಸಬಹುದಾದ ದಾರಿ ಬೇರೆ ಹುಡುಕಬೇಕು.

೨. ಸಾಲ ಕೊಡುವುದಕ್ಕೆ ಕ್ರಮ ಮಾಡುವುದು—ಸಾಲ ಕೊಡುವ ಸಾಹುಕಾರರನ್ನು ಒಂದು ಕ್ರಮಕ್ಕೆ ತರುವ, ಆಗಿರುವ ಕೆಲವು ಅನಿಷ್ಟಗಳನ್ನು ತಪ್ಪಿಸುವುದಾದರೆ ಅದು ಉತ್ತಮ ಮಾರ್ಗ. ಆದರೆ, ಸಾಲ ಕೊಡುವ ಸಾಹುಕಾರರ ... ಗಳು ಅನೇಕವಾಗಿವೆ. ಅವುಗಳನ್ನು ಎತ್ತುವ ... ದ ಅಧಿಕಾರಿಯೂ ಹಿಡಿದುಕೊಂಡಿರಬೇಕು. ಆದರೂ, ಸಾಧಾರಣ ರೀತಿ ಸಾಹುಕಾರರು ಸಾಲ ಕೊಡುವ ಕ್ರಮವನ್ನು ಒಂದು ಪಟ್ಟಿಗೆ ತರಬೇಕು. ಹೆಚ್ಚು ಬಡ್ಡಿಯ ದಾರಿಯನ್ನು ತಪ್ಪಿಸಬೇಕು.

೩. ರೈತನಿಗೆ ಸಾಲದ ಹೊರೆಯನ್ನು ಕಡಿಮೆ ಮಾಡುವುದು. ಈ ಸ್ಥಿತಿ ಎರಡು ದಾರಿಗಳಿವೆ. ಕಂತಿನಂತೆ ತೆಗೆದುಕೊಂಡ ಸಾಲವನ್ನು ಕೊಡಲು ತೊಂದರೆಯಾದರೆ ಆ ಕರಾರನ್ನು ಇಷ್ಟ ಬಂದಾಗ ಬದಲಾಯಿಸುವಂತೆ ಅನುಕೂಲವನ್ನುಂಟು ಮಾಡುವುದು ಒಂದನೆಯದು. ಜಮೀನನ್ನು ಸ್ವೇಚ್ಛೆಯ ಪರಭಾರೆ ಮಾಡುವಿಕೆಯೂ, ಡಿಕ್ರಿ, ಪಡೆದ ಸಾಹುಕಾರರು ... ವುಗಳನ್ನು ಮಾರಿಕೊಂಡು ಸಾಗುವರೀತಿಯನ್ನು ಜಮೀನು ಪಟ್ಟಿ ಹೊರಡಿಸುವಾಗ ಆಕಡು ಜಮೀನಿನ ಮೇಲೆ ನೆಚ್ಚಿಕೊಂಡಿರುವ ಮೊಬಲಗನ್ನು ಲೆಕ್ಕಕ್ಕೆ ತರುವಂತೆಯೂ ಏರ್ಪಡಿಸುವುದು ಎರಡನೆಯದು ಇವೆರಡು ವಿಚಾರಗಳಲ್ಲಿಯೂ ಜನ ಅಭಿಪ್ರಾಯವು ನಾನಾ ವಿಧವಾಗಿದೆ. ಆದರೆ ಸ್ವೇಚ್ಛೆಯ ದಾಗಲಿ ಪರೆಚ್ಛೆಯಿಂದಾಗಲಿ ಜಮೀನನ್ನು ಪರಭಾರೆ ಮಾಡುವ ವಿಷಯವನ್ನು ನಾನು ಒಪ್ಪುತ್ತೇನೆ. ಉಳಿದವುಗಳನ್ನು ಆರಿಗೆ ಹಿಡಿದರೆ ಬಹಳ ಉಪಯೋಗವಿದೆ.

(೪ನೇ ಪುಟದಲ್ಲಿ ಮುಂದುವರಿದಿದೆ.)

Reg. No. M. 1550.
If not delivered please return to
"KODAGU" OFFICE MERCARA.

ಕೊಡಗು.

ಸತ್ಯೇನ ಧಾರ್ಯತೇ ಪೃಥ್ವೀ ... ಪ್ರಯತ್ನ ... ಸತ್ಯೇನ ... ಕನ್ನಡ
ವಾರ್ಷಿಕ ಚಂದಾ ರೂ. ೩—೮—೦.
ಸಂಪಾದಕ—ಮಾಚಿಮಂಡ ಯಂ. ಗಣ...

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೧	ಮಡಿಕೇರಿ, ಸನ್ ೧೯೩೨ನೇ ಇಸವಿ ಮಾರ್ಚ್ ತಾರೀಕು ೧೮ನೇ ಶುಕ್ರವಾರ.	ಸಂಚಿಕೆ

Office of the Asst.
Commr. & Dt. Magte.,
Mercara (Coorg). 6th May 1931.

Dear Sir,

I am QUITE PLEASED with the workmanship of the two Coorg weapons (PICHAKATTI & ODIKKATTI)

Yours faithfully,
(Sd) (Rao Bhadur)
K. CHENGAPPA, B. A.
District Magistrate and
Assistant Commissioner of
Coorg.

JEWELLER
By Appointment to
H. E. The Governor of Madras.



PEECHAKATTI (WITH SILVER FITTINGS)
Prices From Rs. 100 & upwards.

"New Bungalow,"
Ammatti, (Coorg).
14th December 1931.

Dear Sir,

I am IMMENSELY PLEASED with the workmanship of the PICHAKATTI you made and sent me some time back.

Yours faithfully,
Sd/ K. P. MUDDAYYA,
Ammatti (Coorg.)

Telegrams: 'PRECIOUS.'

Telephone: 3145.

V. Subramaniaier
Jeweller.

CATALOGUE ON ENQUIRY.

52—17

Post Box 423, Triplicane, P. O., MADRAS.



ಕೋವಿಗಳು, ಕತ್ತಿಗಳು, ಬಿಜೀಗಳು, ತೋಟೆಗಳು, ... ಮುಂತಾದ ... ಎಲ್ಲಾ ಸಾಮಾನುಗಳು ಬಹು ಕಡಿಮೆ ಕ್ರಯದಲ್ಲಿ ದೊರೆಯುವವು.

GOOLAMHUSAIN ALLIBHOY & SONS.
Largest Importers of Firearms and Ammunition
Cheapest priced firm in India,

೩೩—2

210 Abdul Rehman Street, BOMBAY.

ಕಾಲೂ ಒರೆದರೆ ಅಗಿಸ
ಕನ್ನಾಟಕರಿಗೂ ಮಾಹಿತಿಯಾಗಿ
ಕಾಣಿಸಿಕೊಳ್ಳುವುದರು.

ವಜ್ರದ ಅಡ್ಡಿಗೆ.

ಈ ಅಡ್ಡಿಗೆಗಳನ್ನು ಅಮೇರಿಕಾ ಡೈಮಂಡ್ ಎಂಬ ಇಮಿಟೇಶನ್ ವಜ್ರದ ಕಲ್ಲುಗಳನ್ನು ಇಟ್ಟು ... ಬಂಗಾರದಿಂದ ... ನೋಡಲು ... ಅಡ್ಡಿಗೆಗೆ ... ಕ್ರಯ ...

ಶಿವಾಸ—ಕೆ. ಎಸ್. ಶೇಷಗಿರಿ ಅಂಡ್ ಕೊ.,
12—11 ಪೋ|| ನಂ|| 1246, ಮದರಾಸು.

ಈ ಗಡಿಯಾರಗಳು ಈ ಸಣ್ಣ ... ರೇಡಿಯಂ ... ಕತ್ತಲೆಯಲ್ಲಿ ... ಸಮಯ ... ಕಾಣಿಸುತ್ತವೆ. ... ವರ್ಷ ಗ್ಯಾರಂಟಿ ಕೊಡುತ್ತೇವೆ. ಕ್ರಯ 1ಕ್ಕೆ ೩—೪—೦.

ಶಿವಾಸ—ಕೆ. ಎಸ್. ಶೇಷಗಿರಿ ಅಂಡ್ ಕೊ.,
12—12 ಪೋ|| ನಂ|| 1246, ಮದರಾಸು.

ಬಾಲಾರ್ಕಮಧು.

ಬಾಲಾರ್ಕಮಧು ಮಕ್ಕಳಿಗೆ ಕೊಡುವುದರಿಂದ ಆರೋಗ್ಯವು ಹೆಚ್ಚುವುದು. ಇದು ಮಧು ... ಶೀಸೆ 1ಕ್ಕೆ 0—12—0 ಟಿ. ಖ. 0—12—0 ...

(Spleen Lever enlargement) ... 3—0—0. ಟಿ. ಖ. 0—8—0. ...

ಪ. ಎ. ... ಮ. ವಿ. ಅಯ್ಯನವಾರ್ ...
ಏಜೆಂಟ್ ಆಫೀಸ್, ... S. K.
52—0

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ... ಕೊಪ್ಪರೇಟಿವ್ ...
ಅಪ್ಪೆಕ್ಸ್ ಬ್ಯಾಂಕ್ ... ಸಂಘವಾಗಿದೆ.
(ಸ್ಥಾಪಿತವಾದದ್ದು 1922ರಲ್ಲಿ)

	ರೂ.
ಶೇರ್ ಬಂಡವಾಳ	— 50,000
ವಸೂಲಾದ ಶೇರ್ ಮೊಬಲಗು	— 26,800
ಇಟ್ಟಿರುವ ಠೇವಣಿ	— 2,50,301

ಈ ಬ್ಯಾಂಕಿನಿಂದ ಕೊಡಗು ಜಿಲ್ಲಾ ಸಹಕಾರಿ ಸಂಘಗಳಿಗೆ ಹಣ ಸಾಲ ಕೊಡಲ್ಪಡುತ್ತದೆ.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಿಗಳಿಗೆ ಶೇಕಡ ನೂರಿಯಾಗಿ ರೂ. 5-0-0ರ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಿಗಳಿಗೆ ಶೇಕಡ ನೂರಿಯಾಗಿ 4ರ ಬಡ್ಡಿ ದೊರೆಯುತ್ತೆ.

ಹೆಚ್ಚಿನ ವಿವರ ಬೇಕಾದವರು ... ಸೆಕ್ರೆಟೆರಿ ... ತಿಳಿದುಕೊಳ್ಳಬಹುದು.

ಪ್ರೆಸಿಡೆಂಟರು,	ಟ್ರೆಜರರ್
... ಅಪ್ಪಯ್ಯನವರು	ಮನೆಯಪ್ಪಂಡ ಬೆಳ್ಳಪ್ಪ
ರಾವ್ ಬಹದ್ದೂರ್.	ನವರು.

ಸೆಕ್ರೆಟೆರಿ:
... ವೆಂಕಪ್ಪಯ್ಯನವರು, ಬಿ.ಎ. ಬಿ.ಎಲ್.
ಮಡಿಕೇರಿ 1-7-1931.

ಸೂಚನೆ.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ... ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ... ಜವಾಬ್ದಾರಿ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ... ಸ್ಥಳದಲ್ಲಿ ಕಟ್ಟಿ ಚಂದಾ ಹಣವನ್ನು ... ರಶೀತಿ ಪಡೆಯಬೇಕಾಗಿ ಕೋರಲಾಗಿದೆ.

ಏಜೆಂಟರುಗಳು.
... ಕೊಡಗಿಗೆ ಮೆ: ಚೌರಿರ ಮಾಚ್ಚಯ್ಯನವರು,

ಸಬ್ ಏಜೆಂಟರುಗಳು.
... ಪೇಟೆ—ಮೆ: ಮಂಡೇಪಂಡ ಸೋಮಯ್ಯನವರು, (ಪಾರುಪತ್ಯಗಾರ.)
... —ಎಮ್. ಆರ್. ವೆಂಕಪ್ಪಯ್ಯನವರು.
... —ಸಿದ್ದಾಪುರ—ಮೆ. ... ಪೂವಪ್ಪನವರು.
... —ಮೆ. ಪಿ. ಜಿ. ಮುದ್ದಪ್ಪಯ್ಯನವರು.
... ಅರಮಣಮಾಡ ಪಿ ಕಾರ್ಯಪ್ಪನವರು,
... ತಿತಿಮತಿ—ಮೆ. ಜಿ. ಪೂವಪ್ಪಯ್ಯನವರು,
... —ಮೆ. ಅಪ್ಪನೆರವಂಡ ... ಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರಿಗೂ ಹಣ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್.
"ಕೊಡಗು" ಲಿಮಿಟೆಡ್,
ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ಧವಸ ಭಂಡಾರಗಳ ಪ್ರತಿ ... ಮೆಂಬರರಲ್ಲಿಯೂ ... ಸಹಾಯಕ ಸಂಘದ ಮತ್ತು ಧವಸ ಭಂಡಾರ ... ಬೈಲಾಗಳು, ... ಪುಸ್ತಕಗಳು, ... ಸಂಘಗಳ ಮತ್ತು ಧವಸ ಭಂಡಾರಗಳ ಕೆಲಸಗಳನ್ನು ... ಪ್ರಕಾರ ನಡೆಸಲು ಅವಶ್ಯವಾಗಿರುವ ... ಫಾರಮುಗಳು, ... ಫಾರಮುಗಳು, ... ಫಾರಮುಗಳು, ... ಪುಸ್ತಕಗಳು, ರಶೀತಿ ಪುಸ್ತಕಗಳು, ... ಪುಸ್ತಕಗಳು ಮತ್ತು ... ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ... "ಕೊಡಗು" ಆಫೀಸು ...

ಮೇನೇಜರ್,
"ಕೊಡಗು" ಆಫೀಸು,
...

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ.	ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.
ವಿಮೆದಾರರಿಗೆ ಕೊಟ್ಟದ್ದು—3291 ಜನರಿಗೆ 81 ಲಕ್ಷ ರೂ.	ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.

ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,78,322 ಜನರಿಗೆ 58 ಕೋಟಿ ರೂ.
ವೇಳೆಯ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4 ... ವಿನಾ ... ನಡೆಸಲ್ಪಟ್ಟಿದ್ದಾಗಿದೆ.

ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಅಂಕೆಗಳಿಂದಲೂ, ಇದರ ಕಡಿಮೆ ... ಮತ್ತು ಉತ್ತಮವಾದ ನಡೆಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಬೆಂಬಲವನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬುದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು.

(ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೊಲಂಬೋ	ಮೆಲಂಬಾಸ	ರಂಗೂನು
ಅಹ್ಮದಾಬಾದು	ಕೌಲಾಲಂಪೂರ್	ಲಾಹೋರ್	ನಾಗಪುರ	ರಾವಲ್ಪಿಂಡಿ
ಅಜ್ಮೀರ್	ಢಾಕ್ಕಾ	ಲಕ್ನೌ	ಪಾಟ್ನಾ	ಸಿಕಂದ್ರಾಬಾದು
ಅಲಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಜಲಂಗಾಸ್	ಮಂಡಲೆ	ರಾಯಪುರ	ತಿರುವೆಂದ್ರಮ್
ಧೋಳಬಾಗ್	ಕರಾಚಿ	ಮಂಗಳೂರು	ರಾಂಚಿ	ವಿಶಾಖಪಟ್ಟಣ [52—2

ಅಶೋಕ ... ರಾಜ ...:—ಇದು ... ಮತ್ತು ... ಸೇವಿಸುವುದರಿಂದ ಗುಣವಾಗದಿರುವ ಮಲೇರಿಯ, ... ಬರುವ ಜ್ವರ, 3—4 ದಿವಸಕ್ಕೊಂದು ಸಾರಿ ಬರುವ ಜ್ವರ, ... ಬರುವ ಜ್ವರ ಮುಂತಾದ ಜ್ವರಗಳನ್ನು ದೇಹದಿಂದ ಬರುವ ಜ್ವರಗಳಿಗೆ ... ಗುಣಕೊಡುತ್ತದೆ. ... ರೂ. 1—0—0; 6ಕ್ಕೆ ರೂ. 7—8—0; 12ಕ್ಕೆ ರೂ. 14



... :—ಇದು ... ಕೈ, ಕಾಲು, ... ಹೋಗುವುದು, ... ಉರಿ, ... ಕಣ್ಣು ... ಹಳದಿಯಾಗಿ ... ಉರಿಯುವುದು, ಮುಖ ... ಬರುವುದು, ... ತಲೆ ... ಸುತ್ತುವುದು, ಆಗಾಗ್ಗೆ ... ಬರುವುದು, ... ಬರುವುದು, ದೇಹದಲ್ಲಿ ಉರಿ, ... ಮುಂತಾದ ರೋಗಗಳಿಗೆ ... ಕ್ರಯ ಬಾಟ್ಲಿ 1, 3, 6ಕ್ಕೆ ರೂ. 1—4—0 3—8—0; 6—12—0

ರೋಗ ... :— ಈ ... ಹೊಟ್ಟೆ ... ಬರುವ ರೋಗಗಳಿಗೆ ... ಬಾಟ್ಲಿ 1ಕ್ಕೆ 6 ಆಣೆ, 3 ಬಾಟ್ಲಿಗಳಿಗೆ ರೂ. 1, 1 ಡಜನಿಗೆ 3—8—0

ಮನೋಲ್ಲಾಸಿನಿ ತೈಲ:—ತಲೆನೋವು, ... ತಲೆಸುತ್ತು, ... ಕೂದಲು ಉದುರುವುದು ... ಈ ತೈಲವು ... ಗುಣಮಾಡುತ್ತದೆ. ... ಕೂದಲನ್ನು ... ಕೂದಲಿಗೆ ... ಶುದ್ಧವಾಗಿರುವ ... ಬೆಳೆಯುವಂತೆ ... ಮಾಡುತ್ತದೆ. ... ಬಾಟ್ಲಿಗೆ ರೂ. 1, 3 ಬಾಟ್ಲಿಗೆ 2—10—0 ... ಬಾಟ್ಲಿಗೆ ರೂ. 2, 3 ಬಾಟ್ಲಿಗಳಿಗೆ 5—4—0

ವಿಳಾಸ:—ಮನೋಲ್ಲಾಸಿನಿ ಕಂಪೆನಿ,

52—42	...	9 ಮಂಗಳೂರು.

ಸಣ್ಣ ಹುಡುಗರ ಸಲುವಾಗಿ

... ಇರುವ
ಬಾಲಾಮೃತ

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿ ರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ದೋಂಗರೆ ಕಂಪೆನಿ,
ಗಿರಿಗಾಂವ, ಮುಂಬಯಿ.

52—9

Printed & published by M. M. Ganapathy at "Kodagu" Press Merca
for "Kodagu" Ltd.

೩೩ ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ ಔಷಧಗಳು.

೧. ಧಾತುಪುಷ್ಟಿ ಲೇಹ.

ಧಾತು ನಷ್ಟವಾಗುವಿಕೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕ ಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ಬಾಧೆ, ರಕ್ತ ಪಿತ್ತ, ಒಳ ಜ್ವರ, ಮಲ ಬದ್ಧತೆ, ಕೈಕಾಲು ಬಿಸಿಯಾಗಿರುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದು, ಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು.—ಕ್ರಯ ಡಬ್ಬಿ 1ಕ್ಕೆ 2—8—0 ಮೂರು ಡಬ್ಬಿಗಳಿಗೆ ರೂ. 7—0—0

೨. ಅಶೋಕಾರಿಷ್ಟ ಮತ್ತು ಮಾತ್ರೆ.

ಹೆಂಗಸರ ಮುಟ್ಟಿನ ದೋಷಗಳು, ಮುಟ್ಟಾದವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟ ನೋವು, ಸೊಂಟದ ಹಿಡಿತ, ಮೂರ್ಛೆ, ಮಲಬದ್ಧತೆ, ಒಳಜ್ವರ, ರಕ್ತಹೀನತೆ, ಕೈಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಅತಿ ಶೀಘ್ರದಲ್ಲಿಯೇ ಗುಣ ಪಡಿಸುವುದು. ಅಶೋಕಾರಿಷ್ಟ ಮತ್ತು ಮಾತ್ರೆಗಳು ಸಾವಿರಾರು ಹೆಂಗಸರಿಗೆ ಅಂತರಂಗ ಆರೋಗ್ಯವನ್ನು ಒದಗಿಸಿ, ಮನೋಭಿಲಾಷೆಯನ್ನು ಪೂರೈಸಿರುವವು.

ಕ್ರಯ 1 ಬಾಟ್ಲಿ ಔಷಧ, 1 ಡಬ್ಬಿ ಮಾತ್ರೆ, ರೂ. 2 ಆ. 4
3 ಬಾಟ್ಲಿ ಮತ್ತು ಡಬ್ಬಿಗಳಿಗೆ ರೂ. 6 ಆ. 4.

೩. ಮಲೇರಿಯಾ ನಿವಾರಣೆ.

ದಿನ ಬಿಟ್ಟು ಬರುವ ಜ್ವರ, ಚಳಿ ಜ್ವರ, 2 ಯಾ 3 ದಿನಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರ ಗಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರ ಗಡ್ಡೆಯನ್ನು ಕರಗಿಸಿ ಶಕ್ತಿಯನ್ನು ಉಂಟು ಮಾಡುತ್ತದೆ. ಬಾಟ್ಲಿ 1ಕ್ಕೆ 1—8—0, 3 ಬಾಟ್ಲಿಗಳಿಗೆ 4—2—0.

೪. ಮೇಹ ಕುಠಾರ. ಇದು ಮೂತ್ರಸ್ಥಾನದಿಂದ ಕೆಂಪು, ಬಿಳಿದು, ಹಳದಿಯಂತೆ ಹೋಗತಕ್ಕ ಕೀವನ್ನೂ, ವ್ರಣವನ್ನೂ, ಉರಿಯನ್ನೂ ಗುಣಪಡಿಸುತ್ತದೆ. ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7.

೫. ಇಚ್ಛಾ ಭೇದಿ ಗುಟಿಕೆ. ಭೇದಿಯನ್ನು ಉಂಟುಮಾಡುವ ಸುಖ ವಿರೇಚಕ. ಬಾಟ್ಲಿ 1ಕ್ಕೆ 0—12—0 ಆಣೆ. 3 ಬಾಟ್ಲಿಗಳಿಗೆ 2—2—0.

ಎಲ್ಲಾ ಸಮಯದ ಔಷಧಿಗಳು ದೊರೆಯುತ್ತವೆ. ರೋಗದ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ರವಾನಿಸಬಹುದು. ಕೆಟಲಾಗು ತರಿಸಿ ನೋಡಿರಿ.

ಎಂ. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್,
52—23 ರಥಬೀದಿ, ಮಂಗಳೂರು, ದ. ಕನ್ನಡ

ಭಂಗಾರದ ಕೈಗಡಿಯಾರ.



ಈ ಚಿತ್ರದಲ್ಲಿ ಕಾಣುವ ಭಂಗಾರದ ಕೈಗಡಿಯಾರವು ಬಹು ಬಲಿಷ್ಠವಾದ (ಸ್ವಿಸ್ ಮೇಡ್) ಲೀವರ್ ಸಾಮಾನುಗಳಿಂದ ಮಾಡಲ್ಪಟ್ಟಿದ್ದು, ಸರಿಯಾದ ಗಂಟೆಯನ್ನು ತೋರಿಸುವವು. ಒಳಗಡೆ ಕೆಂಪುಗಳು ಇಟ್ಟಿವೆ. ಇದರ ಬಣ್ಣವು ಭಂಗಾರಕ್ಕೆ ಸರಿಯಾಗಿರುವದು. ಇದನ್ನು ಈ ವಾರದಲ್ಲಿ ತರಿಸಿಕೊಳ್ಳುವವರಿಗೆ ಒಂದು ವಜ್ರದ ಉಂಗುರ, ಒಂದು ಗೋಲ್ಡ್ ಗಿಲ್ಟ್ ಭಂಗಾರದ ಕತ್ತಿನ ಹಾರ (ನೆಕ್‌ಲೇಸ್), ಒಂದು ಟೇಬಲ್ ಟೈಂಪೀಸ್ ಇನಾಮಾಗಿ ಕೊಡುವೆವು. 2 ಗಡಿಯಾರಗಳಿಗೂ ಖಾತ್ರಿಯಾದ 4 ವರ್ಷ ಗ್ಯಾರಂಟಿ ಪತ್ರ ಸಹ ಕಳುಹಿಸುವೆವು.

3 ಬಹುಮಾನಗಳ ಸಹಿತ ರಿಸ್ಟ್‌ವಾಚ್ 1ಕ್ಕೆ 6—8—0.
ವಿಳಾಸ:— ಓ.ಟಿ. ಹೂಬೇ,
12—11 168. ಜೈನಾ ಬಜಾರ್, ಮದರಾಸು.

12 ಸೆಂಟ್ ಬಾಟಲ್, ಜಾನ್‌ಂಟೇನ್ ಪೆನ್ನು ರೀವರ್ ಪಾಕೆಟ್ ವಾಚ್ 2—12—0 ಮಾತ್ರ.

ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ

ಲಿಲ್ಲಿ ಆಫ್ ದಿ ವ್ಯಾಲಿ ಮತ್ತು ಫೌಂಟೇನ್ ಪೆನ್ನು.

ಈ ಸುಗಂಧ ದ್ರವ್ಯವು ಫ್ರಾನ್ಸ್ ದೇಶದಲ್ಲಿ ಪುಷ್ಪಗಳ ಸಾರದಿಂದ ತಯಾರಿಸಿದ್ದು, ಇದರಲ್ಲಿ ಮದ್ಯಸಾರವು ಯಾವುದೂ ಸೇರಿರುವುದಿಲ್ಲ. ಇದರಲ್ಲಿ ಒಂದೇ ಒಂದು ಬೊಟ್ಟನ್ನು ಬಟ್ಟೆಗೆ ಹಾಕಿದರೆ ಒಂದು ವಾರದ ವರೆಗೂ ಒಂದೇ ಸಮನಾಗಿ ಸುವಾಸನೆ ಬೀರುತ್ತಿರುವುದು. ಲಿಲ್ಲಿ ಆಫ್ ದಿ ವ್ಯಾಲಿ ಎಂಬ ಈ ಸುಗಂಧ ದ್ರವ್ಯಕ್ಕೆ ಸರಿಸಮಾನವಾದದ್ದು ಬೇರೊಂದು ಇಲ್ಲ. [illegible] ತಯಾರಾದ 14 ಕ್ಯಾರೆಟ್ಟಿನ ಭಂಗಾರದ ನಿಬ್ಬು ಹಾಕಿದ ಫೌಂಟೇನ್ ಪೆನ್ನು, ಒಂದೇ ಸಲ 12 ಸೆಂಟ್ ಬಾಟಲ್, ಪೆನ್ನು ತರಿಸುವವರಿಗೆ ಒಂದು ಪಾಕೆಟ್ ವಾಚನ್ನು ಇನಾಮಾಗಿ ಕೊಡುತ್ತೇವೆ.

ಕ್ರಯ ರೂ. 2—12—0 ಮಾತ್ರ.

The Legal Trading Co.
12—12 P. B. 243, Madras.

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಎಂಬುವ ಸುಪ್ರಸಿದ್ಧ ದೇಶೀಯ ವಿಮೇ ಸಂಘ.

ಅಧ್ಯಕ್ಷರು:—ಮಾನನೀಯ ಸರ್ ಲಲ್ಲೂಭಾಯಿ ಸಾಮಲದಾಸ್, ಕೆಟಿ., ಸಿ. ಐ. ಇ., ಜೆ. ಪಿ., ಯವರು.

ಕೊಠಾರಿ ಬ್ರದರ್ಸ್, ಮದ್ರಾಸು ಬ್ರಾಂಚು ಸೆಕ್ರೆಟರಿಗಳು.

1. ಭಾಗ್ಯವಂತರ ಭಂಡಾರ, ವ್ಯಾಪಾರಸ್ಥರ ಕೋಶಾಗಾರ, ಕುಟುಂಬದ ಸಂರಕ್ಷಣಾಲಯ. ಬಡವರ ಜೀವನಾಧಾರ ಇದೇ ಜೀವ ವಿಮೆಯ ತತ್ವವು.

2. ಹಿಂದೂಸ್ಥಾನದ ನಿವಾಸಿಯರಲ್ಲಿ ವಿಮಾ ತೆಗೆಯಬೇಕೆನ್ನುವವರ ಪ್ರಯೋಜನಾರ್ಥವಾಗಿ ಈ ಕಂಪೆನಿಯು ಭಾರತೀಯರ ಉತ್ತಮವಾದ ಆಡಳಿತದಿಂದ ಖರ್ಚು ಕಡಿಮೆ ಮಾಡಿ ಇಂಡಿಯಾ ಸರ್ಕಾರದ ಇಂಡಿಯನ್ ಟ್ರಸ್ಟ್ ಆಕ್ಟಿಗೆ ಒಳಪಟ್ಟು ಸರ್ಕಾರದ ಭದ್ರತೆಯಿಂದ ದೇಶೀಯರ ಸೇವೆಯಲ್ಲೇ ನಿರತವಾಗಿ ಹಿಂದೂಸ್ಥಾನದ ಎಲ್ಲಾ ಕಡೆಗಳಲ್ಲೂ ಅತಿ ಕೀರ್ತಿಯನ್ನು ಪಡೆದಿರುತ್ತೆ.

3. ಈ ಸ್ವದೇಶೀ ಕಂಪೆನಿಯು ಪಾಲಿಸಿದಾರರಿಗೆ ಪಾಲಿಸಿ ಅವಧಿ ಪೂರೈಸಿದನಂತರವಾಗಲೀ ಅಥವಾ ಮಧ್ಯದಲ್ಲು ಮರಣಾನಂತರ ವಾರೀಸುದಾರರಿಗಾಗಲೀ ಹೆಚ್ಚಿನ ಖರ್ಚಿಗೆ ಅವಕಾಶ ಕೊಡದೆಯೂ, ದೀರ್ಘ ಸಮಯ ತೆಗೆದುಕೊಳ್ಳದೆಯೂ ಶೀಘ್ರದಲ್ಲಿ ವಿಮೇ ಮೊಬಲಗನ್ನು ಲಾಭ ಸಹಿತ ಪಾವತಿಕೊಡುವುದರಲ್ಲಿ ಹೆಸರುಗೊಂಡಿದೆ.

4. ಭರತಖಂಡದ ಮಹನೀಯರಿಂದ ಸ್ಥಾಪಿಸಲ್ಪಟ್ಟ ದೇಶೀಯರಿಂದಲೇ ಅತಿ ಕಡಿಮೆ ಖರ್ಚಿನಿಂದ ನಡೆಸಲ್ಪಡುವ ಈ ಸ್ವದೇಶೀ ಕಂಪೆನಿಯಲ್ಲಿ ಇಂದು ಭಾಗಿಗಳಾಗಿರಿ; ಪತಿಪತ್ನಿಯರಿಗೆ ಮತ್ತು ವ್ಯಾಪಾರಸ್ಥರು ವರ್ಗದವರಿಗೆ ವಿಶೇಷವಿಸಿ (ಜಾಯಿಂಟ್ ಲೈಫ್) ಪಾಲಿಸಿ ತೆಗೆದುಕೊಳ್ಳಲು ಈ ಕಂಪೆನಿಯು ತುಂಬಾ ಅನುಕೂಲಗಳನ್ನು ಕಲ್ಪಿಸಿರುತ್ತೆ. ಇಂಥ ಸುಸಮಯವನ್ನು ಎಂದಿಗೂ ಕಳೆಕೊಳ್ಳಬಾರದು.

ಆಫೀಸು—
ಬೆಂಪಸ್ ಸ್ಟ್ರೀಟ್,
ಮಡಿಕೇರಿ. (26—21)

ಟಿ. ಎಸ್. ಐಯ್ಯಪ್ಪ,
ಕೊಡಗು ಚೀಫ್ ಏಜೆಂಟ್.

ಎಂ. ಎಸ್. ಶಿದ್ದಪ್ಪ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

1. ಉತ್ತಮ ತರಹ ಒಂದು ಸೆಟ್ ಜರ್ಮನ್ ರೀಡ್ಸ್ ಹಾಕಿರುವ ಸಿಂಗಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 20—0—0
" ಮತ್ತು 22—8—0
2. ಇದಕ್ಕಿಂತ ಉತ್ತಮ ತರಹ ಹಾರ್ಮೋನಿಯಂ " 1ಕ್ಕೆ ರೂ. 25—0—0
" ಮತ್ತು 27—8—0
3. ಇದಕ್ಕಿಂತ ಉತ್ತಮ ತರಹದ್ದು, ದೂಳು ಬೀಳದಂತೆ ಕೇಸಿನ ಮೇಲೆ ಪೂರ್ತಿ ಮುಚ್ಚಳವುಳ್ಳ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ ರೂ. 27—8—0
4. ಖಾತ್ರಿಯೂ, ಬಂದೋಬಸ್ತೂ, ಸುಸ್ವರವುಳ್ಳದ್ದೂ, ಅನೇಕ ವರ್ಷಗಳ ವರೆಗೆ ಬಾಳಿಕೆ ಬರತಕ್ಕದ್ದೂ ಆದ ಹೊಸದಾಗಿ ಸೃಷ್ಟಿ ಆಗಿರುವ ಫ್ರೆಂಚ್ ರೀಡ್ಸ್ ಸಮಾನ ಇರುವ ನಮ್ಮ ಹೊಸ ರೀಡ್ಸ್ ಹಾಕಿರುವ "ಸಿದ್ದಪ್ಪಾಸ್ ಫ್ಲೂಟ್" ಸಿಂಗಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 42—8—0
5. ಉತ್ತಮ ತರಹ 2 ಸೆಟ್ ಜರ್ಮನ್ ರೀಡ್ಸ್ ಹಾಕಿರುವ, ದೂಳು ಬೀಳದಂತೆ ಕೇಸಿನ ಮೇಲೆ ಪೂರ್ತಿ ಮುಚ್ಚಳವುಳ್ಳ ಡಬ್ಬಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ ರೂ. 32—
6. ಉತ್ತಮ ತರಹ 2 ಸೆಟ್ ಜರ್ಮನ್ ನೋಟ್ ರೀಡ್ಸ್ ಹಾಕಿರುವ, ಕೈನಿಂದಾಗಲೀ ಅಥವಾ ಕಾಲಿನಿಂದಾಗಲೀ ಬಾರಿಸಲು ಅನುಕೂಲಿಸುವಂತೆ ತಯಾರಿಸಿರುವ "ಸ್ಪೆಷಲ್ ಫ್ಲೂಟ್" ಡಬ್ಬಲ್ ರೀಡ್ಸ್ ಹ್ಯಾಂಡ್ ಲೆಗ್ ಹಾರ್ಮೋನಿಯಂ 1ಕ್ಕೆ ರೂ. 73—

ನಮ್ಮ ಟಿಂಬರ್ ಡಿಪೋನಲ್ಲಿ ಕಟ್ಟಡಗಳಿಗೂ, ಫರ್ನಿಚರ್ ತಯಾರಿಕೆಗೂ ಬೇಕಾದ ಎಲ್ಲಾ ನಮೋನೆ ನಾಟಾಗಳನ್ನು ಸುಲಭ ದರದಿಂದ ವಿಕರಿಗಿಟ್ಟಿರುವುದಲ್ಲದೇ, ಗಿರಾಕಿಗಳು ಅಪೇಕ್ಷಿಸುವ ಸೈಜಿಗೆ ಉಯಿಸಿಯೂ ರಿಯಾಯಿತಿ ದರದಿಂದ ಸಪ್ಲೈ ಮಾಡುತ್ತೇವೆ. ಹೆಚ್ಚಿಗೆ ವಿಷಯಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಳಾಸ:—ಎಂ. ಎಸ್. ಶಿದ್ದಪ್ಪ ಬ್ರದರ್ಸ್ [illegible]
ಹಾರ್ಮೋನಿಯಂ ಮತ್ತು ಟಿಂಬರ್ [illegible]
ಹಾಕೇವಿಲಾಸ ಮಾರ್ಕೆಟ್ [illegible]
52—37

ಪ್ರಜಾಪ್ರತಿನಿಧಿತ್ವ.

ಮಿ. ಜೆ. ಎ. ಸ್ಪೆಂಡರರು ಈಗಿನ ಪ್ರಪಂಚದ ರಾಜಕೀಯ ಚಳವಳಿಯಿಂದ ಆರ್ಥಿಕ ಅನನುಕೂಲಕ್ಕೆ ಎಡೆ ಇದೆಯೋ ಎಂಬುದೇ ಈಗಿನ ಪ್ರಪಂಚದ ದೊಡ್ಡ ಸಮಸ್ಯೆಯಾಗಿದೆಯೆಂತ ಒಂದು ಲೇಖನದಲ್ಲಿ ಕೇಳಿದ್ದಾರೆ.

ಪ್ರಪಂಚಕ್ಕೀ ಈಗ ಬಡತನ ಬಂದಿದೆ—ಜನಾಂಗಗಳ ಬಡತನವು ಅವರ ಸರ್ಕಾರಗಳ ಒತ್ತಾಯದಿಂದ ತೀರದು ಬರುತ್ತದೆ. ಪ್ರಪಂಚವು ಐಶ್ವರ್ಯದಿಂದ, ಅತೀ ಐಶ್ವರ್ಯದಿಂದ ತುಂಬಬೇಕಾದರೆ ಅದಕ್ಕೆ ಬೇಕಾದ ಅನುಕೂಲಗಳೆಲ್ಲಾ ಈಗ ಇದೆ. ಉತ್ಪನ್ನ ಮಾಡುವ ಶಕ್ತಿಯು ಬಹಳವಾಗಿ ಹೆಚ್ಚಿದೆ. ಕೃಷಿ, ಕೈಗಾರಿಕೆಗಳು ಪ್ರಪಂಚಕ್ಕೆ ಬಹಳ ಹೆಚ್ಚಿನ ಉತ್ಪತ್ತಿಯನ್ನು ಕೊಡುತ್ತಲಿವೆ. ಆದರೆ ಆಶ್ಚರ್ಯದ ವಿಷಯ ಏನೆಂದರೆ—ಉತ್ಪತ್ತಿ ಹೆಚ್ಚಾಗುತ್ತಾ ಬಂದಂತೆಯೇ ಪ್ರಪಂಚದ ಬಡತನವೂ ಹೆಚ್ಚಾಗುತ್ತಲೇ ಇದೆ. ಈ ಸಮೃದ್ಧಿಯು ಕಷ್ಟಕ್ಕಿಂತ ಹೆಚ್ಚು ಕ್ಲೇಶವನ್ನುಂಟುಮಾಡಿದೆ. ವಿಜ್ಞಾನ ಶಾಸ್ತ್ರವನ್ನು ಕಂಡು ಹಿಡಿದದ್ದಕ್ಕೆ ಮನುಷ್ಯನು ಹೆಮ್ಮೆ ಪಡುತ್ತಾನೆ. ಆದರೆ ಆ ವಿಜ್ಞಾನ ಶಾಸ್ತ್ರವೇ ಮನುಷ್ಯನನ್ನು ಸಂಪೂರ್ಣವಾಗಿ ಸೋಲಿಸಿದೆ. ಅತೀ ಸಮೃದ್ಧಿಗೂ, ಅತೀ ಕಷ್ಟಕ್ಕೂ ಮಧ್ಯೆ ಜನರಿಗೆ ಸುಖವನ್ನುಂಟುಮಾಡುವ ಮಧ್ಯವರ್ತಿ ಯಾವುದು ಎಂತ ಹುಡುಕಿ ತಿಳಿಯಬೇಕಾಗಿದೆ.

ಯುದ್ಧದ ಸಂಬಂಧವಾದ ಸಾಲಗಳೂ, ಪರಿಹಾರಗಳೂ ಮತ್ತು ಸುಂಕಗಳ ತಡೆಯೂ ಈ ಪರಿಸ್ಥಿತಿಗೆ ಕಾರಣವೆಂತ ಸ್ಪೆಂಡರರು ಅಭಿಪ್ರಾಯ ಪಡುತ್ತಾರೆ. ಪಶ್ಚಿಮ ಸಮೃದ್ಧಿ ಇದ್ದಾಗ ಇವೆರಡರಲ್ಲಿ ಯಾವುದಾದರೂ ಒಂದು ಇದ್ದೇ ಇರುವುದು ಸಾಧ್ಯವಿಲ್ಲ.

ಹಾಗಾದರೆ ಪ್ರಪಂಚದಲ್ಲಿ ಯುದ್ಧದ ಸಾಲ—ಯುದ್ಧದ ಪರಿಹಾರ ದ್ರವ್ಯವೆಂಬುದು ಹೇಗೆ ಹುಟ್ಟಿತು? ಯುದ್ಧದಿಂದ—ಎಲ್ಲ ಯಾಕೆ ಆಗಬೇಕು. ಈಗಾಗಲೇ ಪೂರ್ವ ಪ್ರಾಂತ್ಯದಲ್ಲಿ ಯುದ್ಧದ ಚಿಂತೆ ತೋರಬರುತ್ತದೆ. ಯಾವ ಜನಾಂಗದಲ್ಲಾದರೂ ಒಟ್ಟು ಪ್ರಪಂಚವನ್ನೇ ಅನುಸರಿಸಲ್ಪಬಹುದು. ಜನಾಂಗಗಳ ಕೂಟವೆಂಬ ಶಾಂತಿಸ್ಥಾಪನೆಗಾಗಿ ಸ್ಥಾಪಿಸಲ್ಪಟ್ಟ ಸಂಸ್ಥೆಗೆ ಯುದ್ಧವನ್ನು ತಡೆಯಲು ಯಾಕೆ ಶಕ್ತಿ ಇಲ್ಲ? ಮಿ. ಲ್ಯಾನ್ಸ್‌ಬೆರಿಯವರು ಧೈರ್ಯದಿಂದ ಸ್ಪಷ್ಟವಾಗಿ ಹೇಳಬಲ್ಲವರೆಂದರೆ:—ಈ ಕೂಟಕ್ಕೆ ಸೇರಿದ ಯಾವ ಜನಾಂಗವಾದರೂ ಸಾಮ್ರಾಜ್ಯಾಧಿಪತ್ಯದ ದೋಷದಿಂದ ಬಿಡುಗಡೆಯಾಗಿಲ್ಲವೆಂತ ಹೇಳಿದ್ದಾರೆ.

ಮಿ. ಲ್ಯಾನ್ಸ್‌ಬೆರಿಯವರು ಈಗಿನ ಯುದ್ಧವನ್ನು ನಿಲ್ಲಿಸಲು ಒಂದು ಉಪಾಯವನ್ನು ಸೂಚಿಸಿದ್ದಾರೆ—"ಜಪಾನನ್ನು ಹಿಮ್ಮೆಟ್ಟಿಸಲು ನಾವು ಭಾಗಿಗಳೆಂದುಕೊಳ್ಳುವುದಿಲ್ಲವೆಂತ ಜಪಾನಿಗೆ ತಿಳಿಸಬೇಕು. ಪ್ರಪಂಚದಲ್ಲಿ ಎಲ್ಲಿ ಬೇಕಾದರೂ ವ್ಯಾಪಾರ ಮಾಡಲು ಜಪಾನಿಗೆ ಸ್ವತಂತ್ರವಿರಲಿ—ಜಪಾನ್ ಚೈನಾದಿಂದ ಹೊರಟು ಹೋಗಲು ಒಪ್ಪಿದರೆ ಅಮೇರಿಕ ಸಂಬಂಧವಾದ ಹಕ್ಕುಗಳನ್ನು ಮತ್ತು ನಾವು ಚೈನಾದಲ್ಲಿ ಉಂಟು ಮಾಡಿಕೊಂಡಿರುವ ಹಕ್ಕುಗಳನ್ನು ಬಿಟ್ಟುಕೊಡಲು ಒಪ್ಪಬೇಕು, ಚೈನಾದವರಿಗೆ ಪೂರ್ಣ ಸ್ವಾತಂತ್ರ್ಯವನ್ನು ಕೊಡಲು ನಾವೂ ಸೇರುವ."

ಇದೇ ಸರಿಯಾದ ದಾರಿ. ಎಲ್ಲಾ ದೇಶವನ್ನೂ ಜಪಾನಿನ ಮೇಲೆ ಕೋಪಿಸಿ ಪ್ರಯೋಜನವಿಲ್ಲ. ಜಪಾನು ಯೂರೋಪಿನ ಜನಾಂಗಗಳು ಚೈನಾದಲ್ಲಿ ಸ್ಥಾಪಿಸಿಕೊಂಡಿರುವುದನ್ನು ಜಪಾನ್ ಹಕ್ಕುಗಳನ್ನು ಸ್ಥಾಪಿಸಿಕೊಂಡಿರುವುದನ್ನು [illegible] ಸಮೀಪದಲ್ಲೇ ಇರುವ ಮತ್ತು ಹೆಚ್ಚು ಬಾಂಧವ್ಯವಿರುವ ತಾನು ಯಾಕೆ ಚೈನಾದಲ್ಲಿ ಹಕ್ಕುಗಳನ್ನು ಸ್ಥಾಪಿಸಿಕೊಳ್ಳಬಾರದೆಂತ ಯೋಚಿಸುತ್ತದೆ. ಯೂರೋಪಿನ [illegible] ಬೇಕಾದಷ್ಟು ಪ್ರಯೋಜನಗಳು ಚೈನಾದಿಂದ ಬೇಕಾದಷ್ಟು [illegible] ಪಡೆದಿಂದು ಬಹಳ ಪ್ರಮಾಣಗಳೆಯಿಂದ ಇರುವಂತೆ [illegible] ಯುವಕ ಜಪಾನು ವಿನಾಗಬೇಕು. ಜಪಾನು [illegible] ಪ್ರಮಾಣಕ್ಕೆ ಮಾತ್ರ ಸಾಕೋ, ಪ್ರಯೋಜನ [illegible] ಬೇಡವೇ? ತನ್ನ ವಿಷಯದಲ್ಲಿ ನ್ಯಾಯ ತೀರ್ಮಾನಿಸ [illegible] ಸರ್ಕಾರಗಳ ನಡತೆಯನ್ನು ಜಪಾನು ಬರಿಗಣ್ಣಿನಿಂದ [illegible] ವೇ? ಆದ್ದರಿಂದ ನಾವು ಜಪಾನಿನ ಒಳ [illegible] ಮಲಿನವಾದ ಕೈಯೊಡನೆ ಹೋಗೋಣ [illegible] ಲ್ಯಾನ್ಸ್‌ಬೆರಿಯವರು ಹೇಳುವುದಾಗಿದೆ.

[illegible] ಕೂಟಕ್ಕೆ ಸೇರಿದ ಸರ್ಕಾರಗಳ ಕೈಗಳು [illegible] ವೇ? ಇದಕ್ಕೆ ಬಂದೇ ಜಪಾನು ಜಪಾನಿನ [illegible] ಮಲಿನವಾದ ಕೈಗಳುಳ್ಳವರಾಗಿದ್ದಾರೆ.

[illegible] ಲ್ಯಾನ್ಸ್‌ಬೆರಿ! ಪಾರ್ಲಿಮೆಂಟಿನಲ್ಲಿ ಒಲೀ [illegible] ಎದುರು ಪಾರ್ಟಿಯ ಮುಖಂಡನಾಗಿ [illegible] ದಿಟ್ಟತನಗಿಗ ಇರುವ ಹಕ್ಕನ್ನು ಪಡ[illegible] ಬಹುದು. ಆದರೆ ಅದನ್ನು ಕೇಳ [illegible] ರವಾದರು. ಯೂರೋಪಿನ ಬೇರೆ [illegible] ಗಳಲ್ಲೂ ಅವನಂಥ ಹುಚ್ಚರು [illegible] ದ್ದು. ಆದರೆ ಅವರ ಕೂಗಿಗೂ [illegible]

[illegible] ಸಾಮ್ರಾಜ್ಯ ಮೋಹ ದೂರವಿಡುವಂತೆಯುಂ [illegible] ಯೆಂದು ಜನಾಂಗವೂ ಬೇರೆ ಬೇ[illegible] ಐಶ್ವರ್ಯವಂತರಾ

ಗಲು ಪ್ರಯತ್ನಿಸುವುದೇ ಸುಂಕದ ಮೂಲ ಕಾರಣ. ಈ ಪ್ರಯತ್ನದಿಂದ ತಾನು ಇನ್ನಷ್ಟು ಬಡತನಕ್ಕೆ ಇಳಿಯುತ್ತದೆ.

ಯುದ್ಧ ಮತ್ತು ಸುಂಕದ ಹುಚ್ಚು ಇವೆಂದನ್ನೂ ಹೇಗೆ ನಿಲ್ಲಿಸುವುದು? "ಕೆಲವರ ಅನುಕೂಲವನ್ನು ಮರೆತು ಜನಸಮುದಾಯದ ಅನುಕೂಲಕ್ಕಾಗಿಯೇ ಕೆಲಸ ಮಾಡಬೇಕಾದದ್ದು ಅವಶ್ಯವೆಂತ ಜನಸಮುದಾಯದಲ್ಲಿ ಅಭಿಪ್ರಾಯ ಬೆಳೆಯೂ, ಒಬ್ಬರಿಗಿಂತ ಒಬ್ಬರು ಸುಂಕ ಹೆಚ್ಚಿಸುವುದರಿಂದ ಈಗಿನ ಆರ್ಥಿಕ ಪರಿಸ್ಥಿತಿಯು ಬದಲಾಗುವುದಿಲ್ಲವೆಂತ ಜನರಿಗೆ ತಿಳಿಯಿಯೂ ಯುದ್ಧ ಮತ್ತು ಸುಂಕದ ಹುಚ್ಚನ್ನು ನಿಲ್ಲಿಸಬೇಕಷ್ಟೆ—" ಎಂತ ಸ್ಪೆಂಡರರು ಹೇಳುತ್ತಾರೆ. ಇದು ಪ್ರಜಾಪ್ರತಿನಿಧಿ ಸರ್ಕಾರದ ದೋಷವಲ್ಲ. ಕೆಲವು ಮುಖಂಡರಲ್ಲಿ ಅಧಿಕಾರ ನಿಲ್ಲುವುದರ ದೋಷ. ನಿಜವಾದ ಪ್ರಜಾಪ್ರತಿನಿಧಿ ಕ್ರಮವು ಜಾರಿಯಲ್ಲಿದ್ದಿದ್ದರೆ ರಾಷ್ಟ್ರೀಯ ಸರ್ಕಾರಕ್ಕೆ ಇಷ್ಟೊಂದು ದೊಡ್ಡ ಬಹುಮತ ಸಿಕ್ಕಲು ಸಾಧ್ಯವಿರಲಿಲ್ಲ. ಓಟು ಕೊಡುವ ಮನುಷ್ಯನದಕ್ಕಿಂತ ದುಸ್ಥಿತಿಯು ಬೇರೆ ಇಲ್ಲ. ಸಾಲಭದಲ್ಲಿ ಆನಂದದ ಮಾತು ಕೇಳಿ ತನ್ನ ಹಣವನ್ನೇ ಕೊಟ್ಟು ಫಿರಂಗಿ ಬಾಯಿಗೆ ಹುತ್ತಾಗುತ್ತಾನೆ. ತನ್ನ ಸ್ವಾರ್ಥಕೆ ಅಥವಾ ಅಹಂಕಾರಕ್ಕೆ ರುಚಿಸುವಂಥ ಮಾತಾಡಿದರೆ ಒಳಗಾಗಿ ಬಿಡುತ್ತಾನೆ. ಸುಂಕಕ್ಕೆ ಪರವಾಗಿ ಮಾತು ಕೊಡುತ್ತಾನೆಂದರೆ—ಅದರಿಂದ ತನಗೆ ಹಣ ಬಂದೀತೆಂತ ನಂಬುತ್ತಾನೆ. ಸಾಮ್ರಾಜ್ಯವಾದಕ್ಕೆ ಯಾಕೆ ಒಪ್ಪಿಗೆ ಕೊಡುತ್ತಾನೆಂದರೆ—ಅದರಿಂದ ತನ್ನ ಜನಾಂಗವು ಐಶ್ವರ್ಯವಂತವಾಯಿತೆಂತಲೂ, ಸಾಮ್ರಾಜ್ಯವನ್ನು ಬಿಟ್ಟರೆ ತಾನೂ, ತನ್ನ ಜನಾಂಗವೂ ನಾಶಕ್ಕೆ ಹೋದೀತೆಂತ ನಂಬುತ್ತಾನೆ. ತಾನು ದೇಶದ ಸಾಮ್ರಾಜ್ಯಕ್ಕೆ ಸೇರಿದವನೆಂಬ ಭಾವನೆಯಿಂದ ತಾನು ಇರುವ ಎತ್ತರಕ್ಕಿಂತ ಒಂದು ಅಡಿ ಹೆಚ್ಚು ಎತ್ತರ ಇರುವವನೆಂತ ಭಾವಿಸಿಕೊಳ್ಳುತ್ತಾನೆ.

ಸ್ಪೆಂಡರ್ ರ[illegible] ಜಯವಾಗಲಿ ಎನ್ನುತ್ತೇವೆ. ಆದರೆ [illegible] ಅವರ ಅಭಿಪ್ರಾಯವಾದ್ದರಿಂದ ಪ್ರಪಂಚದ ಶಾಂತಿ [illegible] ಕಲಿತ [illegible] ಅವರು ಕೆಲವು ಮುಖಂಡರ ಮೇಲೆ ಹೊರಿಸಿದ ದೋಷ [illegible] —ಅವರು ಕೆಲವು ಮುಖಂಡರ ನೀತಿ ಹೋಗಬಾರದೆ [illegible] ದೆ. ಆ ಮುಖಂಡರು ನಿಜವಾದ ಸಾಮ್ರಾಜ್ಯ ಲೋಲುಪರಾಗಿದ್ದರೂ ಸರ್ವ ಜನರ ಹಕ್ಕು ಕಾಪಾಡುವವರಂತೆ ನಟಿಸುತ್ತಾರೆ. ಪ್ರಪಂಚದ ಶಾಂತಿಗೆ ಇದು ಸುಲಭವಾಗಿ ದೊರಕತಕ್ಕಂಥಾ ಅಲ್ಪ ವಿಷಯವಲ್ಲ.

"ಅಮೃತ ಬಜಾರ್ ಪತ್ರಿಕೆ"

ಪತ್ರವ್ಯವಹಾರ.

[ಚಾತ್ರಿದಾರರು ನಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ.]

ವಾಹನ ಕೆರಿಗೆ.

ಇನ್ನೊಂದು ತಿಂಗಳೊಳಗಾಗಿಯೇ ಕೊಡಗಿನಲ್ಲಿಯೂ ಅಲ್ಲದೆ ಬೇರೆ ಪ್ರಾಂತ್ಯದಲ್ಲಿರುವ ವಾಹನ ಕೆರಿಗೆಯು ಜಾರಿಗೆ ಬರುವುದು. ಯಾವುದಾದರೊಂದು ಬದಲಾವಣೆಯನ್ನು ಅನುಸರಿಸುವುದು ಮನುಷ್ಯ ಸ್ವಭಾವವಾಗಿದೆ. ಆದರೆ ಬದಲಾವಣೆಗಳಲ್ಲಿ ಅನೇಕ ತರದವುಗಳಿವೆ. ಅಂತವುಗಳಲ್ಲಿ ಒಳ್ಳೆ ಅವುಗಳ ಹೊಂದಿಗಿನ ಮೇಲ್ಪಂಕ್ತಿಯ ವೈಭವಕ್ಕೆ ಆಕರ್ಷಿಸಲ್ಪಟ್ಟು ಅವುಗಳನ್ನು ಅನುಸರಿಸುವುದರಿಂದ ದೀರ್ಘಕಾಲದಲ್ಲಿ ಅನುಭವಿಸುವ ಉಪಯೋಗಾನುಪಯೋಗಗಳನ್ನು ಪರ್ಯಾಲೋಚಿಸದೆ ಒಳ್ಳೆ ಇಂದಿನ ದಿನದಲ್ಲಿ ಉಂಟಾಗುವ ಆನಂದವನ್ನಾಗಲೀ ಅನುಭವವನ್ನಾಗಲೀ ಮಾತ್ರ ಯೋಚಿಸಿಕೊಂಡು ಬದಲಾವಣೆಗಳನ್ನು ಅನುಸರಿಸುವುದು ಯಾ ಜಾರಿಗೆ ತರುವುದು ಮನುಷ್ಯನ ಬುದ್ಧಿ ಆತುರದಿಂದಲೀ ಸಮೀಪ ದೃಷ್ಟಿಯಿಂದಲೀ ಆಗುತ್ತದೆ. ಹೀಗೆ ಸರ್ಕಾರದವರು ಯೋಚಿಸುತ್ತಿರುವ ಈ ವಾಹನ ಕೆರಿಗೆಯು ಮಾರ್ಪಾಡು ಬಹು ಸಮೀಪ ದೃಷ್ಟಿಯ ಸೃಷ್ಟಿಯ ಒಂದು ಕಾರ್ಯವಾಗಿ ತೋರುತ್ತದೆ. ಈ ಶಾಸನವನ್ನು ಜಾರಿಗೆ ತಂದು ಸರ್ಕಾರದವರು ಅವರ ಉತ್ಪತ್ತಿಯನ್ನು ಸುಲಭವಾಗಿ ಹೆಚ್ಚಿಸಿಕೊಳ್ಳಬಹುದೆಂಬ ಒಂದು ಯೋಚನೆಯನ್ನು ಈ ಹೊಸ ಶಾಸನದಲ್ಲಿ ಸೇರಿಸಿದ್ದಾರೆ.

ವ್ಯಾಪಾರಸ್ಥರು ತಮ್ಮ ಸಾಮಾನುಗಳನ್ನು ಕಮ್ಮಿ ಕ್ರಯಕ್ಕೆ ಮಾರಿದಲ್ಲದೆ ಹೆಚ್ಚು ವ್ಯಾಪಾರವಾಗಿ ಹೆಚ್ಚು ಲಾಭ ಹೊಂದುವುದು ವ್ಯಾಪಾರಸ್ಥರ ಒಂದು ಗುಟ್ಟಾಗಿರುತ್ತೆ. ಹಾಗೆಯೇ ಬಸ್ಸು ಚಾರ್ಜು ಕಮ್ಮಿಯಾದಲ್ಲಿ ಹೆಚ್ಚು ಜನರು ಬಸ್ಸುಗಳಲ್ಲಿಯೇ ಪ್ರಯಾಣ ಮಾಡಿ, ಬಸ್ಸುಗಳ ಚಾಲಕರಾಗಿ ಬರುವುದು ಜಾಸ್ತಿಯಾಗಿ ಬಸ್ಸು ಮಾಲೀಕರ ಉತ್ಪತ್ತಿಯು ಹೆಚ್ಚುವುದು ಜಾಸ್ತಿಯಾಗಿ ಬಸ್ಸು ಮಾಲೀಕರ ಉತ್ಪತ್ತಿಯು ಹೆಚ್ಚುವುದು. ತರ್ಮೋಪಾಯದಲ್ಲಿಯೇ ಸರ್ಕಾರದವರು ಅವರ ವ್ಯಾಪಾರದಲ್ಲಿಯೂ ಕೂಡ ಕಮ್ಮಿ ಚಾರ್ಜು ಕಟ್ಟಿ ಬಸ್ಸುಗಳು ಬರುವ ಹಾಗಾದರೆ ಹೆಚ್ಚು ಬಸ್ಸುಗಳು ಬಂದು ಸರ್ಕಾರದ ಉತ್ಪತ್ತಿಯು ಹೆಚ್ಚಾಗುವುದು.

ಬದಲಾಗಿ ಕಿರಿದಾಗಿ ಬಳುವ ಸರ್ಕಾರದವರೇ ಎಲ್ಲವನ್ನು ತಮಗಾಗಿ ಮಾಡಲು ಯೋಚಿಸಿದರೆ ಎಲ್ಲವೂ ಕಿರಿಯದಾಗಿ ಬರುವುದು. ಇದರ Law of diminishing returns ನಲ್ಲಿರುವ ಸತ್ಯವನ್ನು ಸರ್ಕಾರದವರು ತಿಳಿದುಕೊಳ್ಳಬೇಕಾಗಿರುವುದು.

ಈ ಕೆರಿಗೆಯು ವಿಷಯದಲ್ಲಿ ಬಸ್ಸು ಮಾಲೀಕರು ಸ್ವಲ್ಪ ದಾರಿಯ ಪಾಲನೆಯನ್ನಿಸಬೇಕಿತ್ತು. ಬದಲಾಗಿ ಬಸ್ಸು ಮಾಲೀಕರುಗಳಿಗೂ-ಅನುಮತಿಯೇ ಪ್ರಯೋಜನವೂ ಬೇರೆಯಾಗಿ ತಿಳಿಯದಿರುವುದು. ಈ ವಿಷಯ ಕೊಂಚವೂ ಯೋಚಿಸದೇ ಇರುವುದು.

ಇದು ವಿಷಯಕ್ಕೆ ಸರ್ಕಾರದವರು ಇನ್ನೂ ವಿಷಯ ಹೆಚ್ಚು ಯೋಚಿಸದೇ ಇರುವುದು ಸರಿಯಲ್ಲ. ಬೇರೆ ಪ್ರಾಂತ್ಯಗಳಲ್ಲಿ ರೈಲಿನವರಿಗೂ, ಬಸ್ಸುಗಳಿಗೂ ಪೋಟಾಪೋಟಿಯಿಂದಾಗಿ ರೈಲ್ವೆ ಕಂಪೆನಿಯವರ ಉತ್ಪತ್ತಿಯು ಬಹಳವಾಗಿ ಕಮ್ಮಿಯಾಗಿ ಹೋಗಿರುವುದರಿಂದ ರೈಲ್ವೆ ಕಂಪೆನಿ, ಟ್ರಾಮ್ವೆ ಕಂಪೆನಿಗಳನ್ನು ಕಾಪಾಡುವುದಕ್ಕೋಸ್ಕರ ಸರ್ಕಾರದವರು ಕಂಡು ಹಿಡಿದ ಇದೊಂದು ಉಪಾಯವಾಗಿದೆ. ಆದರೆ ಈ ಹೊಸ ಕೆರಿಗೆಯು ಶಾಸನದ ಯಾವ ಕಡೆಯಲ್ಲಿ ನಿಂತು ನೋಡಿದರೂ ಈ ಶಾಸನವನ್ನು ಕೊಡಗಿನಲ್ಲಿ ಜಾರಿಗೆ ತರಲು ಕಾರಣವೂ ಕಾಣುವುದಿಲ್ಲ.

1. ಇಲ್ಲಿನ ಬಸ್ಸಿನವರು ಹೊರಗಿನ ಬಸ್ಸು ಕಂಪೆನಿಯವರಂತೆ ಹೆಚ್ಚು ಲಾಭ ಮಾಡಲು ಸಾಧ್ಯವಿಲ್ಲ. ಯಾತಕ್ಕೆಂದರೆ ಮದ್ರಾಸು ಪ್ರಾಂತ್ಯದಲ್ಲಿ ಚದರ ಮೈಲಿ ಒಂದರ 300 ಜನರಿಗಿಂತ ಹೆಚ್ಚು ಇರುವಾಗ ಕೊಡಗಿನಲ್ಲಿ ಹೆಚ್ಚು ಕಮ್ಮಿ ಒಳ್ಳೇ 120ರಷ್ಟು ಇರುವರು. ಹೀಗಿರುವಾಗ ಬಸ್ಸುಗಳನ್ನು ಪ್ರೋತ್ಸಾಹ ಮಾಡುವ ಜನರು ನ್ಯಾಯಕ್ಕೆ ಬಹು ಕಮ್ಮಿಯಾಗಬೇಕು.

2. ಕೊಡಗು ಒಳ್ಳೇ ಒಂದು ವ್ಯವಸಾಯಗಾರರ ಸೀಮೆಯಾದುದರಿಂದಲೂ, ವ್ಯಾಪಾರವು ಬಹು ಕಮ್ಮಿಯಾಗಿರುವುದರಿಂದಲೂ ಜನರಿಗೆ ಹೆಚ್ಚಾಗಿ ಪ್ರಯಾಣ ಮಾಡಬೇಕಾದ ಅವಶ್ಯಕತೆಯೇ ಇರುವುದಿಲ್ಲ.

3. ಕೊಡಗಿನಲ್ಲಿ ರೈಲು ಟ್ರಾಮ್ವೆಗಳು ಇಲ್ಲದೆ ಇರುವುದರಿಂದ ಬಸ್ಸುಗಳನ್ನು ಕಮ್ಮಿ ಮಾಡಿ ರೈಲ್ವೆ ಕಂಪೆನಿ ಮುಂತಾದವರ ಉತ್ಪತ್ತಿಯನ್ನು ಹೆಚ್ಚಿಸಬೇಕೆಂಬ ಆಶೆಯು ನಮ್ಮ ಸರ್ಕಾರದವರಿಗೆ ಇರಲು ಕಾರಣವಿಲ್ಲ.

ಹೀಗಿರುವಾಗ ಯಾವ ರೀತಿಯಲ್ಲಿ ಸರ್ಕಾರದವರು ಈ ಹೊಸ ಕೆರಿಗೆಯು ಕೊಡಗಿಗೆ ಉಚಿತವೆಂಬದಾಗಿ ಯೋಚಿಸಿರುವರೆಂದು ಕಂಡು ಹಿಡಿಯಲು ಕಷ್ಟ. ಈಗ ಒಂದು ವರ್ಷದೊಳಗಾಗಿಯೇ ಮದ್ರಾಸು ಪ್ರಾಂತ್ಯದಲ್ಲಿ ವ್ಯಾಪಾರದಲ್ಲಿದ್ದ ಹೆಚ್ಚು ಕಮ್ಮಿ ಐದು ಸಾವಿರ ಬಸ್ಸುಗಳು ಮೂಲೆ ಸೇರಿ ಹೋಗಿವೆ. ದಕ್ಷಿಣ ಜಿಲ್ಲೆಯಲ್ಲಿ ಶೇಕಡ 50ಕ್ಕಿಂತಲೂ ಹೆಚ್ಚು ಬಸ್ಸುಗಳು ನಿಂತು ಹೋಗಿವೆ. ಒಂದು ವರ್ಷದೊಳಗಾಗಿ ಕೊಡಗಿನಲ್ಲಿಯೂ ಕೂಡ ಶೇಕಡ 50ರಷ್ಟು ಬಸ್ಸುಗಳು ಮೂಲೆಗೆ ಒತ್ತಲ್ಪಟ್ಟು ಕೊಡಗಿನ ಬಸ್ಸು ಲೈಸೆನ್ಸುಗಳೆಲ್ಲವೂ ಒಂದೆರಡು ಹೊರಗಿನ ಬಲಾಢ್ಯ ಕಂಪೆನಿಯವರ ಕೈಸೇರುವವು. ಹೀಗಾಗಿ ಕೊಡಗಿನಲ್ಲಿ ಈಗಾಗಲೇ ಕೆಲವು ಜನರು ಬಸ್ಸುಗಳಲ್ಲಿ ಹಾಕಿರುವ ಹಣವನ್ನು ಕಳಕೊಳ್ಳಬೇಕಾಗುವದಲ್ಲದೆ, ಸರ್ಕಾರದವರ ಉತ್ಪತ್ತಿಯೂ ಕೂಡ ಒಂದು ವರ್ಷದೊಳಗಾಗಿಯೇ ಈಗಿರುವುದಕ್ಕಿಂತಲೂ ಹೆಚ್ಚಾಗಿ ಕಮ್ಮಿಯಾಗುವುದು.

ಆದುದರಿಂದ ಸರ್ಕಾರದವರು ಇದರ ವಿಷಯ ಇನ್ನೂ ದೀರ್ಘ ಯೋಚನೆ ಮಾಡಬೇಕಾಗಿ ಕೋರುವ,

ಕೆ. ಯಂ. ಪಿ.

Wanted.

Influent al and well-to-do Disirict and Taluk Managers for the important centers of the Coorg Districts on a monthly salary of Rs. 100 and 80 respectively.

Apply to the DISTRICT INSPECTOR (on Camp), MADRAS CHIT INSURANCE BANK LTD. Post VEERARAJENDRAPET. S. Coorg. (4—3)

ಸ್ತ್ರೀ ಪುರುಷರ ಪ್ರೀತಿಯ ಮರ್ಮಗಳನ್ನು ಚಿತ್ರ ಪಟಗಳ ಸಹಿತ ಇದ್ದದ್ದನ್ನು ಇದ್ದ ಹಾಗೆ ತಿಳಿಸುವ

ಸ್ತ್ರೀ ದಾಂಪತ್ಯ ರಹಸ್ಯವೆಂಬ ಮರ್ಮಶಾಸ್ತ್ರ.

ಈ ಪುಸ್ತಕವು ಫ್ರೆಂಚ್, ಹಿಂದೂಸ್ಥಾನಿ ಭಾಷೆಗಳಲ್ಲಿ ಬಹುಕಾಲದಿಂದ ಉಪಯೋಗವಾಗಿತ್ತು. ಈಗ ನಾವು ಎಲ್ಲರಿಗೂ ವಿವರವಾಗಿ ತಿಳಿಯುವಂತೆ ಸುಲಭ ಶೈಲಿಯ ಕನ್ನಡ ಭಾಷೆಯಲ್ಲಿ ಭಾವನಂತರ ಫೋಟೋಗಳ ಸಹಿತ ಅಚ್ಚು ಮಾಡಿರುತ್ತೇವೆ. ಈ ಪುಸ್ತಕದಲ್ಲಿ ಸ್ತ್ರೀಪುರುಷರಿಗೆ ಬೇಕಾದ ಎಲ್ಲಾ ಮರ್ಮರಹಸ್ಯಗಳು, ಪುರುಷರು ಸ್ತ್ರೀಯರಲ್ಲಿ ನಡೆಸಬೇಕಾದ ಬಗೆ, ಸ್ತ್ರೀಪುರುಷರ ಜಾತಿ ಲಕ್ಷಣಗಳು, ಸ್ತ್ರೀಯರಿಗೆ ಬೇಕಾದ ಅನೇಕ ಗುಪ್ತ ವಿಷಯಗಳು, ಸಂಭೋಗದ ಕಾಲ, ಗರ್ಭ ಧರಿಸುವುದು, ಗರ್ಭ ನಿಂತ ಮೇಲಾಗುವುದು, ಸಂಭೋಗದಿಂದಾಗುವ ಸಂತೋಷ, ಬಸರಿಯರ ಲಕ್ಷಣಗಳ ವರ್ಣನೆ, ಹಸ್ತ ಪ್ರಯೋಗದಿಂದಾಗುವ ಹಾನಿ, ಗರ್ಭಾಗಳಿಗೆ ಬೇಕಾದ ಅನೇಕ ಮರ್ಮ ನಿಯಮಗಳು, ಶಿಶು ಉತ್ಪತ್ತಿ ವಿಧಿ, ಗುಪ್ತ ವ್ಯಾಧಿಗಳ ಚಿಕಿತ್ಸೆ, ಕಾಮದ ಗ್ರಂಥದ ರಹಸ್ಯನಿಯಮಗಳು, ಮಾನಸಿಕದಿಂದ ಮರ್ಮಗಳ ವಿವರ, ನಪುಂಸಕತ್ವಕ್ಕೆ ಚಿಕಿತ್ಸೆ ಇನ್ನೂ ಸ್ತ್ರೀಪುರುಷರಿಗೆ ಬೇಕಾದ ಲೀಲಾರಹಸ್ಯಗಳು ಚಿತ್ರಪಟಗಳ ಸಹಿತ ಸ್ಪಷ್ಟವಾಗಿವೆ.

ಕ್ರಯ: ಪುಸ್ತಕ 1ಕ್ಕೆ 1 ರೂಪಾಯಿ

The Legal Trading Co.,
P. B. 243, Madras.

13—11

ಗಿ ಕಳುಹಿಸಲ್ಪಟ್ಟಿದ್ದ ಮಿ. ಶಿವಾನಂದ ಚದಲ್ಲಾನವರು ಫಿ ಯೊಡಲ್ಮೆಂಟ್ ಸರ್ವೇಯಲ್ಲಿ ಉತ್ತಮ ತರಗತಿಯಲ್ಲಿ ಪಾಸಾ ಗಿ ತಾರೀಖು 8 ನೇ ದಿನ ಮಡಿಕೇರಿಗೆ ಬಂದು ಹೆಡ್ ಸರ್ವೇಯರ್ ಕೆಲಸದ ಚಾರ್ಜು ವಹಿಸಿಕೊಂಡಿರುವರು.

ಕೊಡಗಿನಲ್ಲಿ ಜಮಾಬಂದಿ ನಗಾರ ವರ್ಗ ಕೇಸ್‌ಗಳಲ್ಲಿ ಎರಡಾಣೆ, ನಾಲ್ಕಾಣೆ ಮತ್ತು ಎಂಟಾಣೆ ದರದಲ್ಲಿ ಫೀಸ್ ವಸೂಲ್ ಮಾಡಬೇಕೆಂದು ಇದ್ದ ರೂಲನ್ನು 2 ಆಣೆ, 6 ಆಣೆ ಮತ್ತು 2 ರೂಪಾಯಿಗೆ ಹೆಚ್ಚಿಸುವ ಬಗ್ಗೆ ರೂಲ್ ತಿದ್ದುಪಡಿಯಾಗುತ್ತದೆ ಎಂತಲೂ. ಆಕ್ಷೇಪಣೆ ಇರುವವರು ತಾರೀಖು 17—3—32ರ ಒಳಗೆ ಚೀಫ್ ಕಮಿಷನರವರಿಗೆ ಬರಕೊಳ್ಳಬೇಕೆಂತಲೂ ಗೆಜೆಟ್ಟಿನಲ್ಲಿ ಪ್ರಕಟವಾಗಿದೆ.

ಇರುವು ಜಾತ್ರೆಯಲ್ಲಿ ಕಾಂಗ್ರೆಸ್ ಕೆಲಸಮಾಡುತ್ತಿದ್ದದ್ದಕ್ಕಾಗಿ 4 ಜನರು ದಸ್ತಗಿರಿಯಾಗಿರುತ್ತಾರಾಗಿ ವರ್ತಮಾನ ಇದೆ.

ಹಿಂದೂದೇಶ.

ಮದ್ರಾಸಿನ ಎಲ್ಲಾ ಜಿಲ್ಲೆಗಳಲ್ಲೂ ದಸ್ತಗಿರಿಗಳೂ ಶಿಕ್ಷೆಗಳೂ ಆಗುತ್ತಲೇ ಇವೆ.

ಎಲ್ಲಾ ಪ್ರಾಂತ್ಯಗಳಲ್ಲೂ ಶಾಸನಭಂಗದ ಸಂಬಂಧವಾಗಿ ದಸ್ತಗಿರಿಗಳು ಆಗುತ್ತಲಿವೆ.

ಮಹಾತ್ಮ ಗಾಂಧಿಯವರ ಮೊಮ್ಮಗ ಕಾಂತಿಗಾಂಧಿ ಎಂಬವರನ್ನು ದಸ್ತಗಿರಿ ಮಾಡಿ ಅನಂತರ ಬಿಟ್ಟುಬಿಟ್ಟರು.

ದುಂಡುಮೇಜು ಪರಿಷತ್ತಿಗೆ ಹೋಗಿ ಅಲ್ಲಿಂದ ದಕ್ಷಿಣ ಆಫ್ರಿಕಾಕ್ಕೆ ಹೋಗಿದ್ದ ಸಾಮದಾರ್ ಶ್ರೀನಿವಾಸ ಶಾಸ್ತ್ರಿಗಳು ಮದ್ರಾಸಿಗೆ ಬಂದಿದ್ದಾರೆ.

ಅಸ್ಸಾಮಿನಲ್ಲಿ ಕೋರ್ಟು ಫೀಸು ಮತ್ತು ಸ್ಟಾಂಪು ಫೀಸನ್ನು ಹೆಚ್ಚಿಸಲು ತಂದ ಸರ್ಕಾರದ ಮಸೂದೆ ಬಹುಮತದಿಂದ ಸೋತು ಹೋಯಿತು.

ಲಾಹೋರಿನ 'ಜಮೀನ್ದಾರ' ಎಂಬ ಪತ್ರಿಕೆಯಿಂದ ತೆಗೆದುಕೊಂಡಿದ್ದ 1000 ರೂ. ಜಾಮೀನಿನ ಹಣವನ್ನು ಸರ್ಕಾರವು ಮುಟ್ಟುಗೋಲು ಹಾಕಿಕೊಂಡಿದೆ.

ಮಂಗಳೂರಿನ ಡಿಸ್ಟ್ರಿಕ್ಟ್‌ಬೋರ್ಡ ನಾರಾಯಣ ಪೈ ಮತ್ತು ಇನ್ನೊಬ್ಬ ಸಂಕಪ್ಪ ರೈ ಎಂಬವರನ್ನು ಪಿಕೆಟ್ ಮಾಡಿದ್ದಕ್ಕಾಗಿ ತಾ. 7ರಲ್ಲಿ ದಸ್ತಗಿರಿ ಮಾಡಿದ್ದಾರೆ.

ಮಧ್ಯ ಪ್ರಾಂತ್ಯದಲ್ಲಿ ಕೃಷಿಕರ ಕಷ್ಟವನ್ನೂ ಕಂದಾಯದ ಹೊರೆಯನ್ನೂ ಸರಕಾರದ ಅವಗಾಹನೆ ತರುವ ಬಗ್ಗೆ ತಂದ ಠರಾವು ಬಹುಮತದಿಂದ ನಾಶವಾಯಿತು.

ಕಾಶ್ಮೀರ ದೇಶದಲ್ಲಿ ರಾಜಕೀಯ ಸುಧಾರಣೆಯನ್ನು ಯಾವ ರೀತಿಯಲ್ಲಿ ಮಾಡಿಕೊಳ್ಳಬೇಕೆಂಬ ಬಗ್ಗೆ ಆಲೋಚಿಸಲು ಒಂದು ಕಮಿಟಿಯು ನೇಮಕವಾಗಿದೆ.

ಬೆಳಗಾವಿನ ಹನುಮಂತರಾವ್ ಕೌಜಲಗಿ ಎಂಬವರನ್ನು ವಿಚಾರವಿಲ್ಲದೆ ಜೈಲಿನಲ್ಲಿಟ್ಟಿದ್ದರು. ಈಗ ಅವರಿಗೆ ಒಂದು ವರ್ಷ ಸಜಾ 200 ರೂ. ಜುಲುಮಾನೆ ಶಿಕ್ಷೆ ವಿಧಿಸಿದ್ದಾರೆ.

ಸಂಯುಕ್ತ ಪ್ರಾಂತ್ಯದಲ್ಲಿ ಭೂಮಿಗಳಿಗೆ ನೀರು ಸರಬರಾಯಿ ಮಾಡುವ ನಾಲೆಗಳಲ್ಲಿ ಎತ್ತರದಿಂದ ಬೀಳುವ ನೀರಿನ ಸಹಾಯದಿಂದ ವಿದ್ಯುಚ್ಛಕ್ತಿಯನ್ನು ಉತ್ಪನ್ನ ಮಾಡಿಕೊಂಡಿದ್ದಾರೆ.

ತಾ. 5ರಲ್ಲಿ ಬೊಂಬಾಯಿಯಿಂದ ರಾಂಚಿ ಎಂಬ ಹಡಗದಲ್ಲಿ ಒಂದು ಕೋಟಿ ಅರುವತ್ತೇಳು ಲಕ್ಷ ರೂ. ಕ್ರಯದ ಚಿನ್ನವು ಬೊಂಬಾಯಿಯಿಂದ ವಿದೇಶಗಳಿಗೆ ಹೊರಟು ಹೋಯಿತು.

ತ್ರಿಚಿನಾಪಳ್ಳಿ ಜಿಲ್ಲೆಯ ರಾಘ್ ಎಂಬ ಗ್ರಾಮದಲ್ಲಿ ರೈತರು ಕಂದಾಯ ಕೊಡುವುದಿಲ್ಲವಾಗಿ ತೀರ್ಮಾನಿಸಿಕೊಂಡದ್ದಕ್ಕಾಗಿ ಪಸಲು ಎತ್ತುವಿಕೆ ಮಾಡದಂತೆ ಸರಕಾರದವರು ಪಹರೆ ಇಟ್ಟಿದ್ದಾರೆ.

ಭೀಮಾವರದಲ್ಲಿ ಪೊಲೀಸಿನವರು ಬಟ್ಟ ಕಾಂಗ್ರೆಸ್ ಕೆಲಸಗಾರರನ್ನು ದಸ್ತಗಿರಿ ಮಾಡಲು ಸಹಾಯ ಮಾಡಲಿಲ್ಲವೆಂಬುದಕ್ಕೆ ಲಕ್ಷ್ಮಣ ಸ್ವಾಮಿ ಎಂಬವರಿಗೆ 6 ತಿಂಗಳ ಸಜೆ 200 ರೂ. ಜುಲುಮಾನೆ ಶಿಕ್ಷೆ ವಿಧಿಸಲಾಗಿದೆ.

ಜಿನೀವಾದಲ್ಲಿ ನಡೆಯುತ್ತಿರುವ ಅಂತರರಾಷ್ಟ್ರೀಯ ಕೂಲಿ ಕಾನ್‌ಫರೆನ್ಸಿಗೆ ಹಿಂದೂಸ್ಥಾನದ ಪ್ರತಿನಿಧಿಯಾಗಿ ಮಿ. ಷಣ್ಮುಖಂ ಚೆಟ್ಟಿಯವರು ಈ ತಿಂಗಳು 24 ನೇ ತಾರೀಖಿನಲ್ಲಿ ಬೊಂಬಾಯಿಯಿಂದ ಹೋಗುತ್ತಾರೆ.

ಮದ್ರಾಸ್ ಪಟ್ಟಣದಲ್ಲಿ ಪರದೇಶೀ ಬಟ್ಟೆ ಅಂಗಡಿಗಳ ಮುಂದೆ ಆಗಿಂದಾಗ್ಗೆ ಪಿಕೆಟ್ ಆಗುತ್ತಲಿದೆ. ಪಿಕೆಟ್ ಮಾಡುವವರನ್ನು ಕೆಲವು ಸಾರಿ ದಸ್ತಗಿರಿ ಮಾಡುತ್ತಾರೆ. ಕೆಲವು ಸಾರಿ ಬೆತ್ತದಿಂದ ಹೊಡೆದು ಓಡಿಸುತ್ತಾರೆ.

ತಾಲೀಕುವಾರ ದರ್ಬಾರ್ ಗೋಪಾಲ್‌ದಾಸ್ ದೇಸಾಯಿಯವರಿಗೆ ಪೊಲೀಸರ ಮುಂದೆ ಪ್ರತಿನಿತ್ಯವೂ ಹಾಜರಾಗಬೇಕೆಂತ ಮಾಡಿದ್ದ ಹುಕುಂ ಉಲ್ಲಂಘನೆಗಾಗಿ 9 ತಿಂಗಳ ಸಜೆ 200 ರೂ. ಜುಲುಮಾನೆ ವಿಧಿಸಲಾಗಿದೆ.

ಮಹಾತ್ಮ ಗಾಂಧಿಯವರ "ನವಜೀವನ" ಮತ್ತು 'ಯಂಗ್ ಇಂಡಿಯಾ' ಎಂಬ ಪತ್ರಿಕೆಗಳು ಪ್ರಿಂಟಾಗುತ್ತಿದ್ದ ಪ್ರೆಸ್ಸನ್ನು ಸರಕಾರವು ಸ್ವಾಧೀನಪಡಿಸಿಕೊಂಡಿತ್ತು. ಈಗ ಅವುಗಳನ್ನು ಸರಕಾರವು ವಾಪಸು ಬಿಟ್ಟುಕೊಟ್ಟಿದೆ.

ಬರೋಡಾ ಸಂಸ್ಥಾನದ ಚೀಫ್ ಜಸ್ಟಿಸರಾಗಿದ್ದ ಅಬ್ಬಾಸ್ ತಯಾಬ್ಜಿಯವರಿಗೆ ಶಾಸನಭಂಗಕ್ಕಾಗಿ ಸಜಾ ಗಿತ್ತು. ಅವರ ಸಜಾಯಿದೆ ತೀರಿ ಹೊರಗೆ ಬಂದಿದ್ದಾರೆ. ಇವರು ಕೈರಾ ಜಿಲ್ಲೆಗೆ ಪ್ರವೇಶಿಸಕೂಡದೆಂತ ಹುಕ್ಕುಂ ಆಗಿದೆ.

"ಪ್ರತಾಪ" ಎಂಬ ಹಿಂದೀ ವಾರಪತ್ರಿಕೆಯ ಪ್ರಿಂಟರು ಮತ್ತು ಎಡಿಟರು ಜೈಲಿನಲ್ಲಿದ್ದರೂ ಸಹ ಪ್ರೆಸನ್ನು ಪತ್ರಿಕೆಯನ್ನೂ ಅವರ ಹೆಸರಿನಲ್ಲೇ ಬೇರೆಯವರು ನಡೆಸಬಹುದೆಂತ ಅಲಹಾಬಾದ್ ಜಡ್ಜ್‌ಗಳು ಅಭಿಪ್ರಾಯಕೊಟ್ಟಿರುವುದರಿಂದ ಪತ್ರಿಕೆಯು ಪ್ರಕಟನೆ ತೊಡಗಿದೆ.

ಪಂಡಿತ ಮದನಮೋಹನ ಮಾಳವೀಯರು ತಾ. 8 ರಲ್ಲಿ ಅಸ್ಪೃಶ್ಯರೇ ಮೊದಲಾದ ಸಕಲ ವರ್ಣದ ಹಿಂದೀಯರಿಗೂ ಮಂತ್ರ ದೀಕ್ಷೆ ಕೊಡಲು ಪುನಃ ಪ್ರಾರಂಭಿಸಿದ್ದಾರೆ. ತಾ. 4—5 ರಲ್ಲಿ 150 ಜನ ಅಸ್ಪೃಶ್ಯರು ಸೇರಿ 500 ಜನರಿಗೆ ಹೀಗೆ ದೀಕ್ಷೆ ಕೊಟ್ಟಿದ್ದಾರೆ.

ಬೆಂಗಳೂರಿನ ಒಂದು ಛತ್ರದ ಕೊಠಡಿಯಲ್ಲಿ ಒಂದು ಅಗ್ಗಿಷ್ಟಿಕೆಯಲ್ಲಿ ಬೆಂಕಿ ಇಟ್ಟುಕೊಂಡು ಕದಗಳನ್ನೆಲ್ಲಾ ಮುಚ್ಚಿ ಮಲಗಿದ್ದ ಗಂಡ ಹೆಂಡರ ಪೈಕಿ ಬೆಳಗಾಗಬೇಕಾದರೆ ಹೆಂಡತಿ ಸತ್ತಿದ್ದಾಳೆ. ಗಂಡನು ಸಾಯುವಂತಿದ್ದನು. ಆಸ್ಪತ್ರೆಗೆ ಸಾಗಿಸಲ್ಪಟ್ಟ ಸ್ವಲ್ಪ ಹುಷಾರಾಗಿದ್ದಾನೆ.

ಅಲಹಾಬಾದಿನಲ್ಲಿ ವಿದ್ಯಾರ್ಥಿಗಳ ದಿನವೆಂತ ಆಚರಿಸುವ ಬಗ್ಗೆ ಮುನ್ಸಿಪಲ್ ಬಾಲಿಕಾ ಶಾಲೆಯ ವಿದ್ಯಾರ್ಥಿಗಳು ಒಂದು ಮೆರವಣಿಗೆಯನ್ನು ತಾ. 27ರಲ್ಲಿ ಹೊರಡಿಸಿದರು. 85 ಹುಡುಗಿಯರನ್ನು ದಸ್ತಗಿರಿ ಮಾಡಿದರು. ಶಾಸನಭಂಗಕ್ಕೆ ಇನ್ನು ಮೇಲೆ ಸೇರುವುದಿಲ್ಲವೆಂತ ಒಪ್ಪಿದ್ದರಿಂದ ಎಲ್ಲರನ್ನು ಬಿಡುಗಡೆ ಮಾಡಿದ್ದಾರೆ.

ದುಂಡು ಮೇಜು ಪರಿಷತ್ತಿನ ಉಪಕಮಿಟಿಯಾದ ಲೋಥಿಯನ್ ಕಮಿಟಿಯು ಬೊಂಬಾಯಿಗೆ ಬಂದಿರುವುದಕ್ಕಾಗಿ ವ್ಯಾಪಾರಿಗಳು 10 ದಿನಗಳ ಹರತಾಳವನ್ನು ಪಕ್ಷಿಸಿದ್ದಾರೆ. ಅಂಗಡಿಗಳನ್ನು ತೆರೆಯದಿದ್ದರೆ ಆರ್ಡಿನೇನ್ಸು ಮೇರೆ ಶಿಕ್ಷೆ ಮಾಡಬಹುದೆಂತ ಪೊಲೀಸಿನವರು ತಿಳಿಸುತ್ತಿದ್ದಾರೆ.

ವಿಚಾರವಿಲ್ಲದೆ ಈ ವರೆಗೆ ಬಂಧನದಲ್ಲಿದ್ದ ಮಿ. ನರಿಮನ್ ಮತ್ತು ಮುನ್ಷಿಯವರೂ ಬಂದೀಖಾನೆಯಿಂದ ಬಿಡಲ್ಪಟ್ಟು ಪೊಲೀಸರ ಮುಂದೆ ಪ್ರತಿನಿತ್ಯವೂ ಹಾಜರಾಗಬೇಕೆಂತ ಮಾಡಿದ ಹುಕುಮನ್ನು ಉಲ್ಲಂಘಿಸಿದ್ದಕ್ಕಾಗಿ 2 ವರ್ಷ ಸಜೆ ಮತ್ತು 200 ಜುಲುಮಾನೆಗೆ ಸಹ ಗುರಿಪಡಿಸಲ್ಪಟ್ಟಿದ್ದಾರೆ.

'ಇಂಡಿಯಾದ ಕೇಳಿಕೆಯು ಸ್ವಾಭಾವಿಕ. ಕೇಳಿದ್ದನ್ನು ನಾವು ಕೊಡುವುದು ನಮ್ಮ ಕರ್ತವ್ಯ' ಎಂದೇ ಲಾರ್ಡ್ ಇರ್ವಿನರ (ಮಾಜಿ ಇಂಡಿಯಾ ವೈಸರಾಯರ) ಲಂಡನಿನಲ್ಲಿ ಕಳೆದ ವಾರದ ಭಾಷಣದ ಸಾರ. ಇವರನ್ನು, ಇಂಡಿಯಾದ ವಿಷಯವಾಗಿಯೇ ಭಾಷಣ ಕೊಡಲು ಅಮೇರಿಕಕ್ಕೆ ಕರೆಯುವರಂತೆ.

ಅಸ್ಪೃಶ್ಯರಿಗೆ ಪ್ರತ್ಯೇಕ ಚುನಾವಣೆ ಬೇಡವೆಂತಲೂ ಅವರಿಗೆ ಸೀಟು ಮಾಡುವಷ್ಟು ಸ್ಥಳವನ್ನು ಕಾದಿಟ್ಟರೆ ಸಾಕೆಂತಲೂ ಅಸ್ಪೃಶ್ಯರ ಪರ ಎಸೆಂಬ್ಲಿ ಮೆಂಬರಾದ ರಾವ್ ಬಹದ್ದೂರ್ ಎಂ. ಸಿ. ರಾಜಾರವರು ಮಂತ್ರಿಯವರಿಗೆ ಬರೆದು ಕಳುಹಿಸಿರುವರಾಗಿ ತಿಳಿದು ಬಂದಿದೆ. ಬೊಂಬಾಯಿ ಚರ್ಮಂ ಸಂಘದ ಪ್ರತಿನಿಧಿಯಾದ ಮಿ. ಬಾಲೂಪರವರೂ ಸಹ ಇದೇ ಅಭಿಪ್ರಾಯಕೊಟ್ಟಿದ್ದಾರೆ.

ಹೈದರಾಬಾದ್ ಸಂಸ್ಥಾನದಲ್ಲಿ ಹಿಂದುಗಳಿಗೆ ಇರುವ ಅನಾನುಕೂಲಗಳ ಕುರಿತು ಸರ್ಕಾರಿ ರಾಜಕೀಯ ಮೆಂಬರನ್ನು ಬಾಯಿ ಪರಮಾನಂದ್ ಮುಂತಾದವರು ಹಿಂದೂ ಸಭೆಯ ಪರವಾಗಿ ಸಂದರ್ಶಿಸಿದರು. ಹಿಂದೂಗಳಿಗೆ ತಮ್ಮ ಧರ್ಮವನ್ನು ಆಚರಿಸಲು ಇರುವ ಅಡಚಣೆಗಳನ್ನೂ ವಿದ್ಯಾಭ್ಯಾಸಕ್ಕೆ ಅನುಕೂಲವಿಲ್ಲದಿರುವುದನ್ನು ಸರ್ಕಾರಿ ನೌಕರಿ ದೊರಕದಿರುವುದನ್ನೂ ಕುರಿತು ಚರ್ಚಿಸಿದ್ದಾಗಿದೆ.

ಬೊಂಬಾಯಿಯ ಸುಮಾರು 13000 ಮೆಂಬರುಗಳುಳ್ಳ 30 ಸಂಸ್ಥೆಗಳಿಂದ ಕೂಡಿದ 'ಹಿಂದೀ ವ್ಯಾಪಾರಿಗಳ ಕೂಟ' ವೆಂಬ ಸಂಸ್ಥೆಯವರು ಮಹಾತ್ಮರ ದಸ್ತಗಿರಿಯನ್ನೂ ಈಗಿನ ಆರ್ಡಿನೇನ್ಸಿನ ರಾಜ್ಯವನ್ನೂ ಖಂಡಿಸಲು ಏರ್ಪಡಿಸಿದ ಮೀಟಿಂಗನ್ನು ನಡೆಸಕೂಡದೆಂತ ಮೀಟಿಂಗನ್ನು ನಡೆಸಲು ಏರ್ಪಡಿಸಿದ 50 ಜನರಿಗೆ ನೋಟೀಸ್ ಜಾರಿಯಾಗಿದೆ. ಮೀಟಿಂಗ್ ನಡೆಸುವುದಿಲ್ಲವಾಗಿ ತೀರ್ಮಾನಿಸಿದ್ದಾರೆ.

ಇಂಡಿಯಾದ ಮಧ್ಯವರ್ತಿ ಸರ್ಕಾರದ ಆದಾಯ ವೆಚ್ಚದ ತಖ್ತೀಲ್ ಪಟ್ಟಿಯು ಎಸೆಂಬ್ಲಿ ಮುಂದೆ ಇಡಲಾಗಿದೆ. ಈಗ ನಡೆಯುತ್ತಿರುವ ವರ್ಷದಲ್ಲಿ ಉತ್ಪತ್ತಿ 120.77 ಕೋಟಿ. ಖರ್ಚು 134.13 ಕೋಟಿ—ಉತ್ಪತ್ತಿಗಿಂತ 13.66 ಕೋಟಿ ಹೆಚ್ಚು ಖರ್ಚು. 1932—33ನೇ ವರ್ಷದಲ್ಲಿ 129.96 ಕೋಟಿ ಉತ್ಪತ್ತಿ, 127.81 ಖರ್ಚು, ಅಂದರೆ 2.15 ಕೋಟಿ ರೂ. ಖರ್ಚಿಗಿಂತ ಹೆಚ್ಚಾಗುತ್ತದೆಂತ ಅಂದಾಜು ಮಾಡಲಾಗಿದೆ.

ಕಲ್ಕತ್ತಾದಲ್ಲಿ ಮರ್ಫಿ ಮತ್ತು ರಾಬಿನ್ ಎಂಬ ಇಬ್ಬರು ಯುರೋಪಿಯನರು ರಿವಾಲ್ವರ್ ಒಂದನ್ನು ಕ್ರಾಂತಿಕಾರಿ ಪಂಗಡದವರಿಗೆ ಮಾರಲು ಪ್ರಯತ್ನಿಸಿದರೆಂಬ ತಕ್ಸೀರಿಗೆ ಎರಡೆರಡು ವರ್ಷ ಸಜೆಗೆ ಗುರಿ ಮಾಡಲ್ಪಟ್ಟಿರುವರು. ಇವರು ಹೀಗೆ ಮಾರುತ್ತಿರುವುದು ಪೊಲೀಸಿನವರಿಗೆ ತಿಳಿದು ಪೊಲೀಸ್ ಆಫೀಸರೊಬ್ಬ ಗಾಂಧಿ ಟೊಪ್ಪಿ ಹಾಕಿಕೊಂಡು ಕ್ರಾಂತಿಕಾರಿ ಪಾರ್ಟಿಯವನಂತೆ ನಟಿಸಿ ಸುಳುಗೆ ಹಚ್ಚಿಸಿ ಇವರನ್ನು ಹಿಡಿದದ್ದಾಗಿದೆ.

ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ರಾಜಕೀಯ ಖೈದಿಗಳಿಗೆ ಕೊರಡಾ ಪೆಟ್ಟು ಹೊಡೆಯುತ್ತಿರುವುದನ್ನು ಖಂಡಿಸಲು ಸಾರ್ವಜನಿಕ ಸಭೆಗಳು ಬೆಂಗಳೂರಿನಲ್ಲೂ ಮೈಸೂರಿನಲ್ಲೂ ನಡೆದವು. ಸುಬ್ರಹ್ಮಣ್ಯ ಎಂಬ ಖೈದಿಯು 40 ಸೇರು ರಾಗಿ ಒಂದು ದಿನದಲ್ಲಿ ಬೀಸದೆ ಇದ್ದದ್ದಕ್ಕಾಗಿ 30 ಪೆಟ್ಟಿನ ಶಿಕ್ಷೆಗೆ ಗುರಿಯಾದನೆಂದು ತಿಳಿದುಬಂದಿದೆ. ಇನ್ನು ಮೇಲೆ ಛಡಿ ಕೊರಡದ ಪೆಟ್ಟು ಕೊಡುವ ಪದ್ಧತಿಯನ್ನೇ ನಿಲ್ಲಿಸಬೇಕೆಂತ ಠರಾವುಗಳು ಪಾಸಾದವು.

ಮದ್ರಾಸಿನಲ್ಲಿ ಲಾರ್ಡ್ ಲೋಥಿಯನರು ಓಟುಕೊಡುವ ಹಕ್ಕಿನ ಕುರಿತು ಸರ್ವರಿಗೂ ತಿಳಿಯುವಂತೆ ತಂತಿ ಇಲ್ಲದೂರ ದೇಶಗಳಲ್ಲಿಯೂ ಕೇಳುವ ಯಂತ್ರದ ಮೂಲಕ ಒಂದು ಭಾಷಣ ಮಾಡಿದರು. ಸರ್ವರಿಗೂ ಓಟುಕೊಡುವ ಹಕ್ಕು ಇದ್ದರೆ ಜನಸಮುದಾಯದ ತಿಳುವಳಿಕೆ ಹೆಚ್ಚುತ್ತದೆ ಎಂತ ಹೇಳಿದರು. ಈ ಭಾಷಣ ನಡೆಯುತ್ತಿದ್ದಾಗ "ಲೋಥಿಯನರೇ ಹೊರಟು ಹೋಗಿ" ಎಂತ ಕೂಗಿದ ನಾಲ್ಕು ಸ್ವಯಂಸೇವಕರು ದಸ್ತಗಿರಿಮಾಡಲ್ಪಟ್ಟರು.

ಲೋಥಿಯನ್ ಕಮಿಟಿಯು ಬೊಂಬಾಯಿಗೆ ತಲಪುವ ಒಂದು ದಿನದ ಮುಂಚೆ 'ಲೋಥಿಯನರೇ ಹೊರಟು ಹೋಗಿ' ಎಂದು ಇದ್ದ ಹಳ್ಳ ಪತ್ರಿಕೆಗಳು ಬೊಂಬಾಯಿಯಲ್ಲೆಲ್ಲಾ ಹಚ್ಚಲ್ಪಟ್ಟಿತು. ಅವರ ರೈಲ್ ತಲಪುವ ಸಮಯದಲ್ಲಿ ಹಾಗೆಯೇ ಬರೆದ ಕಾಗದಗಳನ್ನೂ ಕರೀಬಾವುಟೆಯನ್ನೂ ಹಿಡಿದ ಮೆರವಣಿಗೆಯೊಂದು ಹೊರಟಿತು. ಬೊಂಬಾಯಿಯ 17ನೇ 'ವಾರ್ ಕೌನ್ಸಿಲ್' ಮೆಂಬರುಗಳೂ ಸೇರಿ 13 ಜನರು ದಸ್ತಗಿರಿಯಾದರು. ಸೇರಿದ್ದ ಗುಂಪನ್ನು ಬೆತ್ತದಿಂದ ಹೊಡೆದು ಓಡಿಸಿದರು.

ಅಹಮದಾಬಾದ್ ಮುನ್ಸಿಪಾಲಿಟಿಯವರು ಕಳೆದ ಶಾಸನ ಭಂಗದ ಚಳವಳದಲ್ಲಿ ಜೈಲಿಗೆ ಹೋಗಿದ್ದ ಇಬ್ಬರು ಮುನ್ಸಿಪಲ್ ನೌಕರರಿಗೆ ಜೈಲಿನಲ್ಲಿದ್ದಾಗ ಸಂಬಳ ಕೊಟ್ಟದ್ದಕ್ಕೂ, ಮುನ್ಸಿಪಲ್ ಕಟ್ಟಡವನ್ನು ಕಡಿಮೆ ಬಾಡಿಗೆಗೆ ಪರದೇಶೀ ಬಟ್ಟೆ ಬಹಿಷ್ಕಾರದ ಕಮಿಟಿಗೆ ಕೊಟ್ಟದ್ದಕ್ಕೂ, ಕಾಂಗ್ರೆಸ್ ಆಸ್ಪತ್ರೆಗೆ ಹಣ ಸಹಾಯ ಮಾಡಿದ್ದಕ್ಕೂ, ಮುನಿಸಿಪಾಲಿಟಿಯ ಖರ್ಚಿನಿಂದ ಕಾಂಗ್ರೆಸ್ ಬಾವುಟೆಯನ್ನು ಮುನ್ಸಿಪಲ್ ಕಟ್ಟಡದಲ್ಲಿ ಹಾರಿಸಿದ್ದಕ್ಕೂ ಸರಕಾರ ಅವರು ಆಕ್ಷೇಪಣೆ ಮಾಡಿದ್ದಾರೆ—ಸರಿಯಾದ ಸಮಾಧಾನ ಕೊಡದಿದ್ದರೆ ಸರಕಾರವು ಮುನ್ಸಿಪಾಲಿಟಿಯ ಮೇಲೆ ಮಂತಸ ಹುಕ್ಕುಂ ಮಾಡುತ್ತೆಂತಲೂ ತಿಳಿದುಬಂದಿದೆ.

ಎಸೆಂಬ್ಲಿಯ ಅಧ್ಯಕ್ಷರಾಗಿದ್ದ ಶ್ರೀ. ವಿ. ಜೆ. ಪಟೇಲರನ್ನು ಸರಕಾರದವರು ವಿಚಾರವಿಲ್ಲದೆ ಸೆರೆಮನೆಯಲ್ಲಿ ಇಟ್ಟಿದ್ದರು. ಆರೋಗ್ಯವು ಪುನಃ ಕೆಟ್ಟದ್ದರಿಂದ ಇವರು ವಿಯನ್ನಾಕ್ಕೆ ಪುನಃ ಹೋಗುವ ಬಗ್ಗೆ ಇವರನ್ನು ಬಿಡುಗಡೆ ಮಾಡಿದ್ದಾರೆ. ಕಳೆದ ಚುನಾವಣೆಯಲ್ಲಿ ಕನ್ಸರ್ವೇಟಿವ್ ಪಾರ್ಟಿಗೆ ಬಹಳ ಬಲ ಬಂದಿರುವುದರಿಂದ ಸರಕಾರದ ತಲೆ ತಿರುಗಿ ಹೋಗಿದೆಯೆಂತಲೂ ಮಹಾತ್ಮ ಗಾಂಧಿಯಂಥವರೊಡನೆ ರಾಜಿಮಾಡಿಕೊಳ್ಳುವ ಅವಕಾಶವನ್ನು ಸರಕಾರವು ಕಳಕೊಂಡಿತೆಂತಲೂ ಇವರು ಹೇಳಿದರು. ತಾನು ಜೈಲಿಗೆ ಹೋಗುವಷ್ಟು ಆರೋಗ್ಯ ಸರಿಯಾದೊಡನೆ ತಾನು ವಾಪಸು ಬರುವುದಾಗಿಯೂ ಆರೋಗ್ಯ ಚೆನ್ನಾಗಿ ಆಗದಿದ್ದರೂ ಜೈಲಿಗೆ ಹೋಗಲಿಕ್ಕಾಗಿಯೇ ತಾನು ಹಿಂದೂಸ್ಥಾನಕ್ಕೆ ಬಂದಿದ್ದೇನೆಂತಲೂ ತಾ. 5 ರಲ್ಲಿ ಹಡಗು ಹತ್ತುವಾಗ ಇವರು ಹೇಳಿದರು.

ವಿದೇಶ.

ಫ್ರಾನ್ಸಿನ ಸರಕಾರದಲ್ಲಿ ಅನೇಕ ಸಾರಿ ಮುಖ್ಯ ಮಂತ್ರಿಯಾಗಿದ್ದ ಎಂ. ಬ್ರೈಯಾಂಡ್ ಎಂಬವರು ತಾ. 7ರಲ್ಲಿ ತೀರಿದರು. ಇವರು ಪ್ರಪಂಚದ ಶಾಂತಿ ಸ್ಥಾಪನೆಗಾಗಿ ಬಹಳ ಸಹಾಯ ಮಾಡಿದವರೆಂಬ ಖ್ಯಾತಿ ಪಡೆದವರಾಗಿದ್ದರು.

ಇಂಡಿಯಾ ಲೀಗಿನ ಕಾರ್ಯದರ್ಶಿ ಮಂಡಲಿಯ ಹೆಸರಿನಿಂದ ಬರ್ಟ್ರಾಂಡ್ ರಸ್ಸೆಲ್, ಲ್ಯಾನ್ಸ್‌ಬರಿ, ಬ್ರೈಲ್ಸ್‌ಫರ್ಡ್, ಪ್ರೊಫೆಸರ್ ಲಸ್ಕಿ ಮುಂತಾದವರು ಒಂದು ಮನವಿಯನ್ನು ಮಾಡಿಕೊಂಡಿದ್ದಾರೆ. ಇತರರೂ ಇದಕ್ಕೆ ಸೇರುತ್ತಿದ್ದಾರೆ.

ಯೂರೋಪಿನಲ್ಲಿ ಕಂದಾಯವನ್ನು ಹಣದ ರೂಪ ಕೊಡುವ ಬದಲು ಬೆಳೆಸಿದ ಧಾನ್ಯ ಮೊದಲಾದ್ದರ ರೂಪ ಕೊಡುವ ಪದ್ಧತಿಯು ಹೆಚ್ಚಾಗುತ್ತಲಿದೆ. ಹಂಗೇರಿ, ಗ್ರೀಸ್, ರುಮೇನಿಯ, ಫ್ರಾನ್ಸಿನಲ್ಲಿ ಮೊಟ್ಟೆಗಳನ್ನೂ [illegible] ಯಾದಲ್ಲಿ ದನಗಳನ್ನೂ ಕೊಟ್ಟರಂತೆ.

ಹಿಂದೂಸ್ಥಾನದ ಕೂಲಿಕಾರರ ಸ್ಥಿತಿಯನ್ನು [illegible] ನ ಬಗ್ಗೆ ಬಂದ ಕಮಿಷನಿನ ಅಧ್ಯಕ್ಷರಾದ ವ್ಹಿಟ್ಲಿಯವರು ಹಿಂದೂಸ್ಥಾನದ ಕೂಲಿಯವರ ಸ್ಥಿತಿಯನ್ನು ಸುಧಾರಿಸಿ ಯೋಗ್ಯ ಸ್ಥಿತಿಗೆ ತರಬೇಕಾಗಿ [illegible] ನಾಗಿ ಒಂದು ಭಾಷಣದಲ್ಲಿ ಹೇಳಿದ್ದಾರೆ.

ಬ್ರಿಟನಿನಲ್ಲಿ ವರ್ಷಕ್ಕೆ 50,000 ಪೌಂಡಿಗಿಂತ ಹೆಚ್ಚು ಉತ್ಪತ್ತಿ ಇರುವವರು 540 ಜನರು ಇದ್ದ [illegible] ಪೌಂಡಿಗಿಂತ ಹೆಚ್ಚು ಉತ್ಪತ್ತಿ ಇ [illegible] ವರೆಂತಲೂ ಇಂಥಾ ಕೋಟ್ಯಾಧಿ [illegible] ಸ್ಟರ್ಕೀಂತ ಈ ವರ್ಷ 21 ಹೆಚ್ಚಾ [illegible] ಇದರಿಂದ ಕಳೆದ ವರ್ಷದ [illegible] ಇರಲಿಲ್ಲವೆಂತಲೂ ಕಳೆದ ವರ್ಷ [illegible] ಸನ ಕಡಿಮೆಯೆಂತಲೂ ಸರಕಾರ [illegible] ಬಂದಿದೆ.

ರೂ. 78.

[illegible]

ದಲ್ಲಿ ಪಿಕೆಟಿಂಗ್ ನಿನವುಕ್ಕಳಿವೆ. ಆರ್ಥಿಕ ಬಹಿಷ್ಕಾರವೂ ಜಾರಿಯಲ್ಲಿದೆ. ಆದರೂ ಸ್ಥಿತಿಯು ಉತ್ತಮವಾಗುತ್ತಲಿದೆ. ಬೊಂಬಾಯಿ ಸರ್ಕಾರಕ್ಕೆ ಬೇಕಾದ ಅಧಿಕಾರ ಕೊಡಲಾಗಿದೆ.

ಕೋಮುಗಳೊಳಗಿನ ತಕರಾರು ತೀರಿರುವುದಿಲ್ಲ. ಮುಸಲ್ಮಾನರಿಗೂ, ಹಿಂದುಳಿದ ವರ್ಗದವರಿಗೂ ಇರುವ ಭೀತಿಗೆ ನನ್ನ ಸಹಾನುಭೂತಿ ಇದೆ. ಮುಂದಿನ ರಾಜಕೀಯ ರಚನೆಗೆ ನಾವು ಒಪ್ಪಬೇಕಾದರೆ ತಮ್ಮ ಕ್ಷೇಮದ ಭದ್ರತೆಗಳ ಗಳಿಕೆಗೆ ನನ್ನ ಬಯಕೆ ನ್ಯಾಯ ಇದೆ. ಅಕಾರಣ ಶಾಸನದಿಂದ ದೂರ ನಿಂತ ಮುಸಲ್ಮಾನರಿಗೆ ಬೇಕಾದ ಭದ್ರತೆಗಳನ್ನು ಮಾಡಿಕೊಡಬೇಕಾದದ್ದು ನಮ್ಮ ಕರ್ತವ್ಯವಾಗಿದೆ. ಈ ವಿಷಯ ಈಗ ಚರ್ಚೆಯಲ್ಲಿರುವುದರಿಂದ ಅದ್ರ ಕುರಿತಾಗಿ ನಾನು ಹೇಳಲಾರೆನು.

ಹಿಂದುಸ್ಥಾನದಲ್ಲಿ ಅತೀ ಕಠಿಣದ ಆರ್ಥಿಕ ಸಂಕಟವು ಒದಗಿದೆ. ಹಿಂದುಸ್ಥಾನದಲ್ಲಿ ಸಣ್ಣ ಹಿಡುವಳಿದಾರರು ಹೆಚ್ಚು—ಬೆಳೆಗಳಿಗೆ ಬೆಲೆ ಕಡಿಮೆಯಾದ್ದರಿಂದ ಇಂಡಿಗೆ ಅತ್ಯಂತ ಪ್ರಪಂಚದ ಬೇರೆ ಕಡೆಗಳಿಂತಲೂ ಕಷ್ಟವಾಗಿದೆ. ಬೆಳೆಯ ಕೆಲವು ಜಾತಿಗಳಲ್ಲಿ ಅರ್ಧಕ್ಕೆ ಅರ್ಧ ಇಳಿದಿದೆ. ಅದು 10ರಲ್ಲಿ 9ರಷ್ಟು ಸಾಲವಿದೆ. ಪಂಜಾಬಿನಲ್ಲಿ ಮಾತ್ರ 45000 ಜನ ಸಾಲ ಕೊಡುವ ಸಾಹುಕಾರರಿದ್ದಾರೆ. ಅಂದರೆ ಆ ಸಾಲದ ಕಾಟ ಎಷ್ಟಿದೆ ಎಂಬವನ್ನು ಊಹಿಸಬಹುದು. ಈಗಿಗ ಬೆಲೆ ಸ್ವಲ್ಪ ಏರುತ್ತಲಿದೆ. ಕೊಂಡುಕೊಳ್ಳುವ ಶಕ್ತಿ ಹೆಚ್ಚುತ್ತಲಿದೆ. ಜನವರಿ ತಿಂಗಳಲ್ಲಿ ಹಿಂದುಸ್ಥಾನಕ್ಕೆ ಹೊರಟ ಒಟ್ಟು ಮತ್ತು ಸಾಲು ತುಂಬಾ ಹೆಚ್ಚಾಗಿದೆ. ಹಿಂದುಸ್ಥಾನದ ಸರ್ಕಾರದ ಆರ್ಥಿಕ ಸ್ಥಿತಿಯು ಉತ್ತಮವಾಗುತ್ತಲಿದೆ.

ಹಿಂದುಸ್ಥಾನದಿಂದ ಚಿನ್ನವು ಬಹಳವಾಗಿ ರಫ್ತಾಗುತ್ತಲಿದೆ. ಇದರಿಂದ ಹಿಂದುಸ್ಥಾನದ ಸರ್ಕಾರಕ್ಕೆ ತುಂಬಾ ಅನುಕೂಲವಾಯಿತು. ಇಂಡಿಯಾ ಸರ್ಕಾರದ ಸಾಲದ ಪ್ರೋನೋಟುಗಳ ಬೆಲೆ ಏರುತ್ತಿರುವುದೇ ಇದಕ್ಕೆ ಸಾಕ್ಷಿ.

ಲೇಬರ್ ಪಾರ್ಟಿಯ ಮಿ. ಮೋರ್ಗನ್ ಜೋನ್ಸ್ ಎಂಬವರು ಗಾಂಧಿಯವರು ಶಾಂತಿ ಸ್ಥಾಪನೆಗೆ ಮಾಡಿದ ಪ್ರಯತ್ನ, ಸರ್ಕಾರವು ತಿಳ್ಳಿಂದು ಅವರನ್ನು ಮುಚ್ಚಿಬಿಟ್ಟದ್ದು ಕೂಡಾ ಪ್ರತಿಕೂಲ, ಹಿಂದುಸ್ಥಾನದಲ್ಲಿ ಸ್ವಾತಂತ್ರ್ಯವೆಂಬುದು ಎಳ್ಳಷ್ಟು ಇಲ್ಲವೆಂದೂ, ಮದ್ರಾಸಿನಲ್ಲಿ ಡಾಕ್ಟರ್ ಪೇಟನ್ ಎಂಬವರ ಮೇಲೆ ನಡೆಸಿದ ಅತ್ಯಾಚಾರವೇ ಸಾಕ್ಷಿ ಎಂತಲೂ, ಇಷ್ಟು ಶೀಘ್ರದಲ್ಲಿ ರಾಜಿಮಾಡಿಕೊಂಡ ವಿನಹ ಹಿಂದುಸ್ಥಾನದಲ್ಲಿ ಬ್ರಿಟಿಷ್ ಸರ್ಕಾರದ ಸ್ನೇಹಿತರೇ ಇಲ್ಲದೆ ಹೋದಾರೆಂತಲೂ ವಾದಿಸಿದರು.

ವಿಜ್ಞಾಪನೆ.

ಮಡಿಕೇರಿನಾಡು ಕಾಂತೂರು ಪೇಟೆಯಲ್ಲಿರುವ ಪೌತಿ ಚೌಕೋಳ್ ಬಿದ್ದುರೊಟ್ಟಿ ಇವರ ಮಕ್ಕಳು ವೈದ್ಯರು. ವ. ಮ್ಮು ಇವರಲ್ಲಿ ವೈದ್ಯರು ಪೌತಿಯಾದ್ದರಿಂದ ಹಾಲಿ ಮಮ್ಮು ನಮ್ಮ ವೈದ್ಯರು ಮಗ ಅಸು ಎಂಬವರ ಹೆಸರಿನಲ್ಲಿ ಜಮಾಬಂದಿ ನಡೆದು ಬರುವ ಮುಖಸರ್ಗಾದಿನಲ್ಲಿರುವ ಗದ್ದೆ, ಮನೆಯೊಳಗಲ್ಲಿರುವ ವಿಶಿಷ್ಟ ವಸ್ತುಗಳು ಪೌತಿ ಖಾತೆಯಂತೆ ಆಸ್ತಿಯಾದ್ದರಿಂದ ಹಾಲಿ ಜಮಾಬಂದಿ ನಡೆದು ಬರುವ ಮಮ್ಮು ವಗ್ಗೇರಿರು ಇವನ್ನು ಪಠವರಿ ಕೊಳ್ಳುವುದಕ್ಕೆ ಪ್ರಯತ್ನಿಸುತ್ತಿರುವುದರಿಂದ ಇವನ್ನು ಕೊಳ್ಳುವವರಾಗಲೀ ಅಧವಾ ಬೇರೆ ವಿಧದಲ್ಲಾದರೂ ಪರಾಧೀನ ಮಾಡಿಕೊಂಡಲ್ಲಿ ನಿಂಥ ವಾಗತಕ್ಕದ್ದಲ್ಲ. ಪೌತಿ ಬಿದ್ದುರೊಟ್ಟಿಯ ಹಕ್ಕುದಾರರು ನಾವಾಗಿರುತ್ತೇವೆ.

ಚೌಕೋಳ್ ಚೇರಿಯಂಡ ಬಿದು ವಗ್ಗೆರಿರು.

2—2.

ಬಂದೂಕುಗಳು. GUNS.

ಇದು ವಿಲಾಯಿತಿಯಲ್ಲಿ ತಯಾರಾದವು. ಇವುಗಳನ್ನು ಮನೆಯ ಬಳಕೆಗೆ ಲೈಸೆನ್ಸ ಪಡೆಯಬೇಕಾಗಿಲ್ಲ. ಯಾರು ಬೇಕಾದರೂ ಯಾವ ಭಯವೂ ಇಲ್ಲದೆ ಕೈಯಲ್ಲಿ ಹಿಡಿದುಕೊಂಡು ತಿರುಗಬಹುದು.

೧೦೦ ರವೆಗಳ ಸಹಿತ ಕ್ರಯಾತಿ ರೂ ೫—೦—೦

ಯಂ. ಲಿಯೋ ಅಂಡ್ ಕೋ.,

168, ಮಿನ್ಟ್ ಬಜಾರ್ ಮದರಾಸು.

ಉಪಾಧ್ಯಾಯ ಕೆಲಸದ ಜವಾಬ್ದಾರಿ

(2ನೇ ಪುಟದಿಂದ ಮುಂದುವರಿದದ್ದು.)

ತಿದ್ದುವುದೆಂತಲ್ಲ. ವಿಶಾಲರೂಪದಿಂದ ನಡತೆಗೆ ಆಕಾರ ಕೊಡುವುದಾಗಿದೆ. ಪ್ರತಿಯೊಂದು ಸಂಸ್ಕೃತಿಯೂ ಕೆಲವು ಆದರ್ಶಗಳನ್ನು ತೋರಿಸಿಕೊಡುತ್ತದೆ. ಆ ಆದರ್ಶಗಳೇ ನಮ್ಮ ನಡತೆಗೆ ಆಧಾರವಾಗಿರಬೇಕು. ಪ್ರತಿಯೊಂದು ಸಂಸ್ಕೃತಿಯೂ ಬೇರೆ ಬೇರೆಯಾಗಿದೆ. ಪ್ರಪಂಚದ ಪ್ರತಿಯೊಂದು ಜನಾಂಗವೂ ಸಂಸ್ಕೃತಿಯ ಬೆಳವಣಿಗೆಗೆ ಕೆಲವು ಮಟ್ಟನ್ನಿಟ್ಟಿದೆ. ಒಂದೇ ಒಬ್ಬರ ಮೇಲೆ ಹೊಂದಿಲ್ಲ. ಮನೆಯ ನನವಳಿಕೆಯ ಆದರ್ಶಗಳಿವೆ, ಧಾರ್ಮಿಕ ಆದರ್ಶಗಳಿವೆ, ಸರಕಾರಿ ಆದರ್ಶಗಳಿವೆ, ವ್ಯಾಪಾರ ಕೈಗಾರಿಕೆಗಳ ಆದರ್ಶಗಳಿವೆ, ಪ್ರಜೆಯ ದೇಶಭಕ್ತಿಯ, ಗಾಢನು ಹೆಂಗಸಿನ ಆದರ್ಶಗಳಿವೆ. ಇವು ಬೇರೆ ಬೇರೆ ಜನಾಂಗಗಳಿಗೆ ಬೇರೆ ಬೇರೆಯಾಗಿವೆ. ಪಶ್ಚಿಮಾತ್ಯರ ದೇಶಭಕ್ತಿಗೂ ಪೌರಾತ್ಯರ ದೇಶಭಕ್ತಿಗೂ ವ್ಯತ್ಯಾಸವಿದೆ. ಇಲ್ಲಿ ದೇಶಭಕ್ತಿಯೆಂದರೆ ಮನುಷ್ಯ ಜಾತಿಯ ಭಕ್ತಿ. ಪಶ್ಚಿಮ ದೇಶಗಳಲ್ಲಿ ದೇಶಭಕ್ತಿಯೆಂದರೆ "ನನ್ನ ದೇಶ, ಸರಿಯಾಗಲೀ ತಪ್ಪಾಗಲೀ," ಗಾಂಧೀಜೀಯವರ ದೇಶಭಕ್ತಿಯೆಂದರೆ ಮನುಷ್ಯ ಜಾತಿಯ ಮೇಲೆ ಪ್ರೀತಿಯೇ. ಪೌರಾತ್ಯ ದೇಶಗಳಲ್ಲಿ ಮನುಷ್ಯನ ವೈಯಕ್ತಿಕ ಜೀವನಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡಲಾಗುತ್ತದೆ. ಇಲ್ಲಿ ಹುಡುಗರ ಮುಂದೆ ಇಡುವ ಆದರ್ಶಗಳು ಅವರ ಜೀವನಕ್ಕೆ ಸರಿಯಾದದ್ದಾಗಿರಬೇಕು. ಈಗ ಶಾಲೆಗಳಲ್ಲಿ ಕೊಡುವ ವಿದ್ಯೆಯು ರಾಷ್ಟ್ರೀಯ ವಿದ್ಯೆಗೆ ಸಂಬಂಧವೇ ಇಲ್ಲ. ಮನೆಯು ಸಂಪೂರ್ಣವಾಗಿ ರಾಷ್ಟ್ರೀಯತ್ವಕ್ಕೆ ವಿರೋಧವಾಗಿ ಹೋಗಿದೆ. ಧರ್ಮ (ಜಾತಿ)ದ ಅನುಕೂಲ್ಯ ಆದರ್ಶಗಳನ್ನು ಮರೆತು ಒಬ್ಬ ತನ ತನ ಕರ್ಮಗಳಿಗೆ ಪ್ರಾಮುಖ್ಯತೆ ಕೊಡುತ್ತಾರೆ. ಹಾಗೆಯೇ ಮುಸಲ್ಮಾನರಲ್ಲಿ ಜನಾಂಗಕ್ಕರುವ ಆತ್ಮ ತಪ್ಪಿಹೋಗಿದೆ. ಮುಸಲ್ಮಾನರಿಗೆ ಹಿಂದೂ ವಿರೋಧ, ಬ್ರಾಹ್ಮಣರಿಗೆ ಬ್ರಾಹ್ಮಣೇತರರ ವಿರೋಧ, ಕ್ರಿಶ್ಚಿಯನರು ಯಾರಿಗೋ ವಿರೋಧ, ಯಾರಿಗೋ ಪಕ್ಷ ಇನ್ನೊಬ್ಬರಿಗೆ ವಿರೋಧ.

ಅಂತ್ಯದಲ್ಲಿ ಉಪನ್ಯಾಸಕರು ಹೇಳಿದ್ದೇನೆಂದರೆ:—ನಾವೆಲ್ಲರೂ ಅನ್ಯೋನ್ಯವಾಗಿಯೂ ಒಗ್ಗಟ್ಟಾಗಿರುವ ಎಲ್ಲಾ ಮತಗಳೂ ಸ್ವಾತಂತ್ರ್ಯದಲ್ಲಿ ಬೆಳೆಯಲು ಅನುಕೂಲವಾಗುವ ವಾತಾವರಣವನ್ನು ಸ್ಥಾಪಿಸುವ. ನಾನ ಹೇಳುವ ಶಕ್ತಿಯನ್ನು ಪುನಃ ಸಂಘಟನೆ ಮಾಡಿಕೊಂಡು, ಪೂರ್ವಕಾಲದ ಧ್ಯೇಯಗಳಿಂದ ನಮ್ಮ ಮಾದರಿಗಳನ್ನು ಆರಿಸಿಕೊಳ್ಳಬೇಕು. ಆ ಉಚ್ಚ ಧ್ಯೇಯಗಳಿಗೆ ಪುನಃ ಜೀವ ಕೊಟ್ಟರೆ ಜೊತೆಗೂಡುವಾಗಿ, ಅಲ್ಪ ವಿಚಾರಗಳು ಬೇರೆ ಬೇರೆಯಾಗಿದ್ದು ಜಗಳವಾಡಬೇಕೆನ್ನುವ ಯೋಚನೆ ನಮ್ಮ ಧರ್ಮವೇ ದೊಡ್ಡದು ಎಂಬ ಭಾವನೆಗಳು ಇವೆಲ್ಲವೂ ಹೊರಟು ಹೋದೀತು. ನಮ್ಮ ರಾಷ್ಟ್ರೀಯ ಆದರ್ಶಗಳಿಗೆ ಪ್ರಾಮುಖ್ಯತೆ ದೊರಕುವಂತೆ ಮಾಡುವುದೇ ಉಪಾಧ್ಯಾಯರ ಕೆಲಸವಾಗಿರಬೇಕು. ಸಂಬಳವೆಷ್ಟು ದೊರೆಯುತ್ತದೆ ಎಂಬವನ್ನು ಎಣಿಕೆಗೆ ತೆಗೆದುಕೊಳ್ಳಬಾರದು. ಕೋಮುವಾರು ಭೇದಭಾವನೆಗಳನ್ನು ಬಿಡಬೇಕು. ಎಲ್ಲಾ ಸುಧಾರಣೆಯ ಕಾರ್ಯಗಳಲ್ಲಿ ನಾವು ಮುಂದಾಗ ಇರಬೇಕು. ಬೆಳವಣಿಗೆಗೆ ಅಭಿವೃದ್ಧಿ, ಅಸ್ಪೃಶ್ಯರಂಥ ವಿಷಯಗಳಿಗೆ ಉಪಾಧ್ಯಾಯರುಗಳಿಂದ ಬೆಂಬಲವೇ ದೂ ಬಲವಾದದ್ದು ಇದ ನೆಪ್ಪು ನಿಶ್ಚಯಬೇಕು. ಜೀವನದ ಗುಪ್ತ ಉದ್ದೇಶವನ್ನು ಕಂಡು ಹಿಡಿಯಬೇಕು—ನಮ್ಮ ಬೋಧನೆಯನ್ನು ಪ್ರಪಂಚದ ಎಲ್ಲಾ ಭಾಗಕ್ಕು ಹರಡುವಂತೆ ಮಾಡಬೇಕು.

ಲಾರ್ಡ್ ಇರ್ವಿನರ ಅಭಿಪ್ರಾಯ.

ಹಿಂದುಸ್ಥಾನದ ವಿಷಯ ಅಮೇರಿಕಾದಲ್ಲಿ ಉಪನ್ಯಾಸ ಮಾಡಲು ಹೋಗಲು ಹೊರಟಿರುವ ಲಾರ್ಡ್ ಇರ್ವಿನರು ಹಿಂದುಸ್ಥಾನದ ಕುರಿತು ಹೇಳಿರುವುದೇನೆಂದರೆ—"ಹಿಂದುಸ್ಥಾನದ ವಿದ್ಯಾವಂತರುಗಳನ್ನು ನಾನು ನೋಡಿ ತಿಳಿದ್ದು, ಕೊಂಡುಕೊಂಡದ್ದೇನೆಂದರೆ ಹಿಂದುಸ್ಥಾನದವರು ಸ್ವಾತಂತ್ರ್ಯವನ್ನು ಅಪೇಕ್ಷಿಸುವುದೂ ತಮ್ಮ ಆಡಳಿತವನ್ನು ತಾವೇ ಮಾಡಿಕೊಳ್ಳಬೇಕೆಂಬ ಆಕಾಂಕ್ಷೆಯೂ ಮನುಷ್ಯ ಸ್ವಭಾವಕ್ಕೆ ಅನುಗುಣವಾಗಿದೆ. ಎಲ್ಲಾ ಜನಾಂಗಗಳಿಂತಲೂ ಬ್ರಿಟಿಷರು ಹಿಂದೀಯರ ಈ ಆಕಾಂಕ್ಷೆಗೆ ಸಹಾನುಭೂತಿ ತೋರಿಸಲೇ ಬೇಕು. ಎಲ್ಲಾ ಸರಕಾರಗಳೂ ಜನರ ಇಷ್ಟ್ರದ

ಯ ಮೇಲೆಯೇ ಹೊಂದಿರುವುದಾಗಿದೆ. ಎಲ್ಲಾ ಸಮಾಜಕ್ಕೂ ಜನಾನುಗಳನ್ನು ಅನುಕರಿಸುವುದು ಅವಶ್ಯವೆಂತ ಹಿಂದೀಯರು ತಿಳಿಯಬೇಕು. ಸಮಾಜದ ಭದ್ರತೆಗೆ ಕೇಡಾಗುವಂಥಾ ಪ್ರಶ್ನೆ ಎದೆಗೊಟ್ಟರೆ ಹಿಂದುಸ್ಥಾನಕ್ಕೆ ನಾವು ಕೇಡೇ ಮಾಡಿದಂತಾಗುತ್ತದೆ. ಅದ್ದರಿಂದ ನಾವು ಹಿಂದುಸ್ಥಾನದಲ್ಲಿ ಎರಡು ನ್ಯಾಯಗಳನ್ನು ಸಾಧಿಸಬೇಕಾಗಿದೆ. ಸರಕಾರದ ಭದ್ರತೆಯನ್ನು ಕಾಪಾಡಬೇಕಾಗಿದೆ, ಜುಲುಮಿನಿಂದಲೇ ರಾಜಕೀಯ ಸಮಸ್ಯೆಯನ್ನು ನಡೆಸಲಾಗುವುದಿಲ್ಲವೆಂಬದನ್ನು ನೆನಪಿನಲ್ಲಿಡಬೇಕಾಗಿದೆ. ಕಾರಣ, ವಾದ, ರಾಜಿ ಮುಂತಾದದ್ದು ಸಾಧ್ಯವಾಗುವ ಪರಿಸ್ಥಿತಿಯನ್ನು ಒದಗಿಸಿಕೊಳ್ಳಲು ಮಾತ್ರ ಜುಲುಮಿನ ಸಹಾಯವಾಗಬಹುದು." ಇಂಗ್ಲೆಂಡಿನಲ್ಲಿ ಹಾಜರಿದ್ದ ಹಿಂದೀ ಸ್ನೇಹಿತರನ್ನು ಕುರಿತು ಅವರು ಹೇಳಿದ್ದೇನೆಂದರೆ—"ನಾವೂ ನೀವೂ ಸೇರಿ ಹಿಂದುಸ್ಥಾನದ ಸಮಸ್ಯೆಯನ್ನು ತೃಪ್ತಿಕರವಾಗಿ ಬಿಡಿಸಿದರೆ ಪ್ರಪಂಚದ ಇತಿಹಾಸದಲ್ಲಿ ಅತಿ ಮಹತ್ವದ ವಿಷಯವನ್ನು ಸಾಧಿಸಿದೆವೆಂತ ಕಥಾವಾಗಳ ಪಠಿಗೆ ಪ್ರಖ್ಯಾತಿ ಇದ್ದೀತು."

ಪಂಡಿತ ಮಾಳವೀಯರವರ ಶಾಂತ ಕಾರ್ಯ.

ಹಿಂದುಸ್ಥಾನ ಸರ್ಕಾರದವರು ಪಂಡಿತ ಮಾಳವೀಯರವರ 1100 ಚಳುವಳಿಗಳನ್ನು ಹಿಡಿದು ಹಾಕಿದರಷ್ಟೇ; ಆದರೆ ಆಶ್ಚರ್ಯವು ಈಗ ಪ್ರಕಟವಾಗಿರುತ್ತದೆ. ಜನವರಿ ತಿಂಗಳಲ್ಲಿ 15 ಸಾವಿರ ಜನರು ಸೆರೆಗೆ ಹೋದರೆಂದು ಸರ್ ಸ್ಯಾಮುವೆಲ್ ಹೋರ್ ಸಾಹೇಬರು ಹೇಳಿದ್ದಾರೆ. ಅದು ಅಸತ್ಯ, ಸಾವಿರವಾಗಿರುತ್ತದೆ. ಅಲ್ಲಹಾಬಾದ್ ಇಲಾಖೆಯಲ್ಲಿ ಹತ್ತು ವಸೂಲಾಯಿತೆಂದಿದ್ದಾರೆ. ಹಾಗಾದರ ನಿಮ್ಮ ದಬ್ಬಾಳಿಕೆ ಏಕೆ? ಅದನ್ನು ರದ್ದು ಮಾಡಿರೆಂದಿದ್ದಾರೆ. ಸರ್ಕಾರ ಪಕ್ಷದ ಮಾತು ಹಳೇ ನೌಕರಿಗೆ ಹೊಂದಿ ನಂಬುವಂತಿದೆ. ಸ್ವರಾಜ್ಯ ಕೊಟ್ಟರೆ ದೇಶದಲ್ಲಿ ನಿಜವಾದ ಶಾಂತಿ, ಸೌಖ್ಯ ನೆಲೆಯಾಗುವವೆಂದು ಪಂಡಿತರು ಧೈರ್ಯವಾಗಿ ಹೇಳಿದ್ದಾರೆ.

ವರ್ತಮಾನ ಸಂಗ್ರಹ.

ಒಳದೇಶ.

ತಾರೀಕು 18—3—32ರಲ್ಲಿ ಮಡಿಕೇರಿಯಲ್ಲಿ ದೇವಿ ಕೆರೋ ನಡೆಸಲಾಗುತ್ತದೆ.

ಮೆಟ್ರಿಕ್ಯುಲೇಷನ್ ಪರೀಕ್ಷೆಯವರ ತರಬೇತು ಈ ತಾ. ೫ರಿಂದ ಮಡಿಕೇರಿಯಲ್ಲಿ ಪ್ರಾರಂಭವಾಗಿದೆ.

ಮಡಿಕೇರಿ ರಾಜಸೀಟ್ ವೈದ್ಯದಾನದ ಬಳಿ ವ್ಯವಸಾಯದ ಕೆಲಸಗಳಿಗೆ ಮೊದಲನೇ ಸಾರಿ ಬಂದ ಚಿಕ್ಕಾಪಕರ ಬಗ್ಗೆ ಒಂದು ತಿಂಗಾತ್ಕಾಲಿಕವಾಗಿದೆ.

ಕೌನ್ಸಿಲ್ ಎಲೆಕ್ಷನಿಗಾಗಿ ಚೀಫ್ ಕಮೀಷನರು ಈ ವಾರ ಮಡಿಕೇರಿಗೆ ಬಂದಿದ್ದಾರೆ. ಅವರ ಅಧ್ಯಕ್ಷತೆಯಲ್ಲಿ ಈ ದಿನ ಕೌನ್ಸಿಲ್ ಮೀಟಿಂಗು ನಡೆಯುತ್ತದೆ.

ಹೆಬ್ಬಾಲೆ, ಕೆರೆಹಳ್ಳಿ ಮತ್ತು ಸಿರಂಗಾಲ ಗ್ರಾಮಗಳಿಗೆ ಪಂಚಾಯಿತರ ಆಕ್ಟ್ ಮೇರೆ ಪಂಚಾಯಿತರಾಗಿ ಚುನಾವಣೆಯಾದವರ ಹೆಸರು ಗೆಜೆಟ್ಟಿನಲ್ಲಿ ಪ್ರಕಟವಾಗಿದೆ.

ತಾರೀಕು 1—5—32ರಿಂದ ಟ್ರೆಜರಿ ಆಫೀಸರಾದ ಮ. ರಾ. ಕೇಶವರ ಚಂಗಪ್ಪನವರು ರಿಟೈರ್ ಆಗುವ ಬಗ್ಗೆ ಕೆಲಸದಿಂದ ನಿವೃತ್ತರಾಗುತ್ತಾರಾಗಿಯೂ ಅನಂತರ ಸಬ್‌ಜಡ್ಜಿಯ ಟ್ರೆಜರಿ ಆಫೀಸರಾಗಿ ಇರುತ್ತಾರೆಂತಲೂ ವರ್ತಮಾನವಿದೆ.

ಕೊಡಗಿನಲ್ಲಿ ಲೋವರ್ ಸೆಕೆಂಡರಿ ಪರೀಕ್ಷೆಯೆಂತ ಬೋರ್ಡಿನಿಂದ ನಡೆಸಲ್ಪಡುತ್ತಿದ್ದ ಪರೀಕ್ಷೆ ಇನ್ನು ಮೇಲೆ ಇರುವುದಿಲ್ಲವಾಗಿಯೂ, ಪ್ರವೇಶನಿಗೆ ಅರ್ಹರೇ ಎಂಬುದನ್ನು ಆಯಾ ಶಾಲೆಯವರೇ ಪರೀಕ್ಷೆ ಮಾಡಿಕೊಳ್ಳತಕ್ಕದ್ದೆಂತ ಈ ಶಾಲಾ ಇನ್ಸ್‌ಪೆಕ್ಟರು ತೀರ್ಮಾನಿಸಿರುವರಾಗಿ ತಿಳಿಯುತ್ತೇವೆ.

ಅಖಿಲಭಾರತ ನೂಲುವ ಸಂಘದ ಪರವಾಗಿ ಹಾಸನದ ಖಾದಿ ಭಂಡಾರವನ್ನು ತೆರೆದಿರುವ ಶ್ರೀ ಮಹದೇವರಾವ್ ಬೆಟಗೇರಿ ಬಿ. ಎ. ಎಸ್. ಯವರು ಮಡಿಕೇರಿಗೆ ಈ ತಾ. 9ರಲ್ಲಿ ಬಂದಿದ್ದರು. ಇವರು ಶೀಘ್ರದಲ್ಲೇ ಮಡಿಕೇರಿಯಲ್ಲಿ ಖಾದಿ ಭಂಡಾರವೊಂದನ್ನು ತೆರೆಯುವ ಯೋಚನೆ ಮಾಡಿದ್ದಾರಾಗಿ ತಿಳಿಯುತ್ತೇವೆ.

ವೆಲ್ಕಂ ಸಿನೇಮಾ ಕಂಪೆನಿ ಎಂಬ ಹೆಸರಿನಿಂದ ಮಡಿಕೇರಿಯ ಕೆಲವು ಮುಸಲ್ಮಾನ ಬಂಧುಗಳು ಕೊಡಗು ಜವಿಷನ್ಯಾದರ ಸಂಘದ ಹಾಲ್‌ನಲ್ಲಿ ಈ ವಾರ ನಾಲ್ಕೂರು ರಾತ್ರಿ ಸಿನೇಮಾ ನಾಟಕವನ್ನು ಪ್ರದರ್ಶಿಸಿದರು. 'ಗುಲಗಾದಿ' ಎಂಬ ಹೆಸರಿನಿಂದ ಘಾತಕದ ಒಂದು ಕಥೆಯನ್ನು ನಕ್ಕೆಗಳಲ್ಲಿ ಅಧಿಕ ಮಾಡಿ ತೋರಿಸಿದ್ದಾರಿದೆ;

ಮೂರೆ ಗ್ರಾಮದಲ್ಲಿ ಕೆಲವು ಮಾಪಿಳ್ಳೆಯವರುಗಳೂ, ಹುದೇರಿ ಮುದ್ದಯ್ಯನೆಂಬುವರಿಗೂ ಮತ್ತು ಇನ್ನೊಬ್ಬರಿಗೂ ಈ ತಾ. 8ರಲ್ಲಿ ಏನೋ ಜಗಳವಾಗಿ ಇಬ್ಬರು ಮಾಪಿಳ್ಳೆಯವರಿಗೆ ತುಂಬಾ ಘಾತಕದ ಗಾಯಗಳಾಗಿವೆಯೆಂತ ವರ್ತಮಾನವಿದೆ. ಮುದ್ದಯ್ಯನವರನ್ನು ಪೋಲೀಸಿನವರು ದಸ್ತಗಿರಿ ಮಾಡಿದ್ದಾರೆ.

ಕೊಡಗು ಗವರ್ನಮೆಂಟಿನವರಿಂದ ಕೆಲವು ತಿಂಗಳ ಹಿಂದೆ ಮಹಾರಾಜಾ ಕಾಲೇಜಿನಲ್ಲಿ ಹೆಚ್ಚಿನ ತರಬೇತು ಹೊಂದಿರುವ

ಎಂಪೈರ್ ಆಫ್ ಇಂಡಿಯಾ ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

(ಸ್ಥಾಪಿತವಾದದ್ದು 1897.)

ಹಿಂದುಸ್ಥಾನದಲ್ಲಿ ಪ್ರಖ್ಯಾತವೂ, ಜನಪ್ರಿಯವೂ ಆಗಿರುವ ಈ ಕಂಪೆನಿಯಲ್ಲಿ ನೀವು ಜೀವ ವಿಮೆ ಮಾಡುವುದಕ್ಕೆ ಇದೇ ತಕ್ಕ ಸಮಯ.

ಬೋನಸ್ ವರ್ಷ !!

ಸಾಹಸವಂತರಾದ ಏಜೆಂಟರು ಬೇಕಾಗಿದೆ.

ಬ್ರಾಂಚ್ ಆಫೀಸು:—

ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ.

152—3 ಕಮರ್ಷಿಯಲ್ ಸ್ಟ್ರೀಟ್, ಬೆಂಗಳೂರು.

ಭಗವದ್ಗೀತಾರ್ಥ.

(ಮಹಾತ್ಮ ಗಾಂಧಿಯವರ ಟೀಕಿನಿಂದ.)

(ಕಳೆದ ವಾರದಿಂದ ಮುಂದುವರಿದದ್ದು.)

ಆದುದರಿಂದಲೇ ವೇದಗಳ ಭಾಷ್ಯಕಾರನಿಗೆ ಅಧ್ಯಾತ್ಮಿಕ ಶಿಕ್ಷಣವಾಗಿರಬೇಕು. ಸತತವೂ ಶಾಶ್ವತ ಮಾರ್ಗದರ್ಶಕಗಳಾದ ಯಮನಿಯಮಗಳನ್ನು ಅಭ್ಯಸಿಸಬೇಕು. ಗ್ರಂಥಗಳ ಕೇವಲ ಮೇಲೆ ಮೇಲಿನ ಅಭ್ಯಾಸವೊಂದೇ ಸಾಲದು; ಅದು ನಿಷ್ಫಲ. ಶಾಸ್ತ್ರಗಳು ಗುರುವಿನ ಅವಶ್ಯಕತೆಯನ್ನು ವಿಧಿಸಿವೆ. ಆದರೆ ಈ ಕಾಲದಲ್ಲಿ ಗುರುವು ಅಲಭ್ಯ. ಆದ ಕಾರಣ ಸಂತರು, ಬೋಧಕರುಗಳಾದ ಆಧುನಿಕ ಗ್ರಂಥಗಳ ಪಠನ ಮನನಗಳನ್ನು ಋಷಿಗಳು ಸೂಚಿಸಿದ್ದಾರೆ. ಶ್ರದ್ಧಾ ಭಕ್ತಿಗಳಿಲ್ಲದವನು ವೇದಭಾಷ್ಯಕ್ಕೆ ಅನರ್ಹನು. ವಿದ್ವಾಂಸನಾದವನ ಭಾಷ್ಯವು ವಿಶಾಲ ಪಾಂಡಿತ್ಯವನ್ನೇನೋ ತೋರಿಸಿದರೂ ಅದು ನಿಜವಾದ ಭಾಷ್ಯವಾಗಲಾರದು. ನಿಜವಾದ ವೇದಭಾಷ್ಯವು ಅನುಭವಿಗಳಿಗೆ ಮಾತ್ರ ಸಾಧ್ಯ. ಈ ಅನುಭವಿಗಳಾದ ಅನುಭವಶಾಲಿಗಳಿಗೂ ಕೆಲವು ನಿಯಮಗಳುಂಟು. ತತ್ತ್ವಾರ್ಥ ವಿರುದ್ಧವಾದ ಭಾಷ್ಯವು ಎಂದಿಗೂ ನಿಜವಲ್ಲ. ಸಂದರ್ಭಗಳಲ್ಲಿ ಅವಲಂಬಿತ ತೋರುವವನಿಗೆ ವೇದಗಳು ನಿರರ್ಥಕ. ಅವನೊಂದಿಗೆ ಯಾರೂ ವಾದ ಹೂಡಲಾರರು. ವೇದಗಳಲ್ಲಿ ಅಹಿಂಸೆಯನ್ನು ಕಾಣದವನಿಗೆ ಅಪಾಯವುಂಟು. ಆದರೆ ಅವನಿಗೆ ರಕ್ಷಣೆಯಿಲ್ಲ. ಸತ್—ಅಂದರೆ ಸತ್ಯವು ಧನರಾಶಿ; ಅಹಿಂಸೆಯು ತ್ಯಾಗರಾಶಿ. ಸತ್ಯವು ಭಾವಾರ್ಥಕ; ಅಹಿಂಸೆಯು ಅಭಾವಾರ್ಥಕ. ಇಷ್ಟಾದರೂ ಅಹಿಂಸೆಯೇ ಪರಮ ಧರ್ಮ. ಸತ್ಯವು ಸ್ವತಃಸಿದ್ಧವಾದುದು; ಅಹಿಂಸೆಯು ಅದರ ಪಕ್ವಫಲ. ಅದು ಸತ್ಯದೊಳಗೆ ಮುದುಗಿಕೊಂಡಿದೆ. ಆದರೆ ಅದು ಸ್ವತಸ್ಸಿದ್ಧವಲ್ಲವಾದ ಕಾರಣ ಮಾನವನು ಅದನ್ನು ಒಪ್ಪದೆ ಶಾಸ್ತ್ರಗಳ ಅರ್ಥವಿವರಣೆಯನ್ನು ಮಾಡಬಹುದು. ಆದರೆ, ಅವನು ಸತ್ಯವನ್ನು ಒಪ್ಪದಿರಲಾರನು. ಅನಂತರ ಅದು ಅವನನ್ನು ಅಹಿಂಸೆಯನ್ನು ಒಪ್ಪುವಂತೆ ಮಾಡುವುದು.

ತತ್ತ್ವಾರ್ಥಸಿದ್ಧಿಗೆ ಮಾಂಸವಿಸರ್ಜನೆಯು ಅತ್ಯಂತಾವಶ್ಯಕ. ಈ ಸಿದ್ಧಿಯನ್ನು ಪಡೆದ ಜ್ಞಾನಿಯು ತನ್ನ ಬಹಿರಾವರಣದಲ್ಲಿ ಹತ್ತಿ ಉರಿಯುತ್ತಿರುವ ಹಿಂಸೆಯ ಮಧ್ಯೆ ಅಹಿಂಸೆಯನ್ನು ಕಂಡುಹಿಡಿದಿದ್ದಾನೆ. ಹಿಂಸೆಯು ಮಿಥ್ಯಾರೂಪವಾದುದು; ಅಹಿಂಸೆಯು ವಾಸ್ತವವಾದುದು. ಅಹಿಂಸೆಯಿಂದಲ್ಲದೆ ತತ್ತ್ವಾರ್ಥಸಿದ್ಧಿಯಾಗದು. ಬ್ರಹ್ಮಚರ್ಯ, ಅಸ್ತೇಯ, ಅಪರಿಗ್ರಹಗಳೇ ಅಹಿಂಸಾ ಸಾಧನದ ಮಾರ್ಗಗಳು. ಸತ್ಯದ ಆಂತರಾತ್ಮವೇ ಅಹಿಂಸೆ. ಅಹಿಂಸೆ ಇಲ್ಲದವನು ಮಾನವನಲ್ಲ; ಮೃಗ. ತತ್ತ್ವಾರ್ಥ ಶೋಧನ ಮಾಡುತ್ತಿರುವವನು ಇವುಗಳೆಲ್ಲವನ್ನೂ ಗ್ರಹಿಸುವನು. ಅನಂತರ ಶಾಸ್ತ್ರಗಳ ಗೂಢಾರ್ಥವಿವರಣವು ಅವನಿಗಷ್ಟು ಕಷ್ಟತರವಲ್ಲ.

ಶಾಸ್ತ್ರಗಳಲ್ಲಿನ ಪದವಿಭಜನೆಯನ್ನು ಮಾಡದೆ ಸಾರ ಸಂಗ್ರಹಿಸಿ ಮಾಡುವುದು ಈ ಗೂಢಾರ್ಥವಿವರಣೆಯ ಒಂದು ನಿಯಮ. ತುಲಸೀದಾಸರ ರಾಮಾಯಣವು ದಿವ್ಯವಾಗಿರಲು ಕಾರಣವೇನೆಂದರೆ ಅದರಲ್ಲಿ ಪಾವನತ್ವವಿದೆ; ಅನುಕಂಪವಿದೆ, ಭಕ್ತಿ ಧರ್ಮನಿಷ್ಠಾಪರತೆಗಳಿವೆ. ಅದರಲ್ಲಿ ಒಂದು ಶ್ಲೋಕವಿದೆ: 'ಮದ್ದಳೆಗಳು, ಶೂದ್ರರು, ಪಶುಗಳು, ಹೆಂಗಸರು ಇವರೆಲ್ಲರೂ ಒಂದೇ ಶ್ರೇಣಿಯವರು. ಇವರೆಲ್ಲರನ್ನೂ ಹೊಡೆದು ಸ್ವಾಧೀನಪಡಿಸಬೇಕು' ಯಾವನಾದರೊಬ್ಬನು ತನ್ನ ಹೆಂಡತಿಯನ್ನು ಹೊಡೆಯಲು ಈ ಶ್ಲೋಕವನ್ನು ಉದಹರಿಸಿದಲ್ಲಿ ಅವನಿಗೆ ಅಧೋಗತಿಯೇ ಸಿದ್ಧ. ಶ್ರೀರಾಮನು ತನ್ನ ಹೆಂಡತಿಯನ್ನು ಹೊಡೆಯಲೂ ಇಲ್ಲ; ಅವಳಿಗೆ ಅಗ್ರಹ ಹುಟ್ಟುವಂತೆ ಮಾಡಲೂ ಇಲ್ಲ. ತುಲಸೀದಾಸರು ಈ ಶ್ಲೋಕದಲ್ಲಿ ತಮ್ಮ ಕಾಲದ ಒಂದು ಗಾದೆಯನ್ನು ಸೇರಿಸಿದರೇ ವಿನಹ ಮತ್ತೆ ಬೇರೆಯಲ್ಲ. ಯಾರೋ ಮೂರ್ಖರು ಹೆಂಡತಿಯರನ್ನು ಹೊಡೆಯುವುದು ಧರ್ಮವೆನ್ನಲು ತಮ್ಮ ಶ್ಲೋಕದ ಪಂಕ್ತಿಯನ್ನೇ ಆಧಾರವಾಗಿಟ್ಟುಕೊಳ್ಳುವರೆಂದು ಅವರು ಕನಸಿನಲ್ಲಿ ಕೂಡ ನೆನಸಿರಲಿಲ್ಲ. ವಾದಪಕ್ಷವಾಗಿ, ತುಲಸೀದಾಸರೇ ತಮ್ಮ ಕಾಲದಲ್ಲಿ ಪ್ರಚಲಿತ ಪದ್ಧತಿಯಂತೆ ತಾವೂ ನಡೆದುಕೊಳ್ಳುತ್ತಾ ತಮ್ಮ ಹೆಂಡತಿಯನ್ನು ಹೊಡೆದಿರಬಹುದು. ಆದರೇನು? ಹಾಗೆ ಹೊಡೆದದ್ದು ತಪ್ಪೇ. ಆದರೆ, ರಾಮಾಯಣವನ್ನು ಬರೆದದ್ದು ಗಂಡಂದಿರು ಹೆಂಡತಿಯರನ್ನು ಹೊಡೆಯುವುದು ನ್ಯಾಯವೆಂದು ಹೇಳುವುದಕ್ಕಲ್ಲ. ದೋಷರಹಿತ ಮಾನವನಾದ ರಾಮ, ಆದರ್ಶಪತ್ನಿಯಾದ ಸೀತೆ; ಆದರ್ಶ ಭಕ್ತಿಯುತ ಸಹೋದರನಾದ ಭರತ ಇವರನ್ನು ಚಿತ್ರಿಸಲು ಅದನ್ನು ಬರೆದದ್ದು. ಆದ ಕಾರಣ, ಕೆಟ್ಟ ಪದ್ಧತಿಗಳೇನಾದರೂ ಆಕಸ್ಮಿಕವಾಗಿ ಅದರಲ್ಲಿ ಸೇರಿಹೋಗಿದ್ದರೂ ಅವು ತ್ಯಾಜ್ಯವೇ ಸರಿ. ತುಲಸೀದಾಸರು ತಮ್ಮ ಅಮೂಲ್ಯವಾದ ಮಹಾಕಾವ್ಯವನ್ನು ಭೂವಿವರಣೆಯನ್ನು ಕಲಿಸಬೇಕೆಂದು ಬರೆದಿಲ್ಲ; ರಾಮಾಯಣದಲ್ಲಿ ತಪ್ಪು ಭೂವಿವರಣೆಯನ್ನು ನಾವು ನೋಡಿದ್ದೇ ಆದರೆ ಅದನ್ನು ತಳ್ಳಿಹಾಕಲೇ ಬೇಕು.

ಈ ದೃಷ್ಟಿಕೋಣಗಳಿಂದ ಗೀತೆಯನ್ನು ಪರೀಕ್ಷಿಸೋಣ. ಗೀತೆಯ ಕಥಾವಸ್ತುವು 'ಆತ್ಮಸಿದ್ಧಿ ಮತ್ತು ಆ ಸಿದ್ಧಿಯ ಮಾರ್ಗಗಳು; ದ್ವಿಪಕ್ಷಸೇನೆಗಳ ಯುದ್ಧವು ಈ ವಸ್ತುವಿಗೆ ಸಂದರ್ಭ ಒದಗಿಸಿಕೊಂಡುವ ಸಮಯ ಮಾತ್ರ. ನಿಮಗೆ ಬೇಕಾಗಿದ್ದಲ್ಲಿ ಗ್ರಂಥಕಾರನು ಯುದ್ಧಕ್ಕಾಗಲಿ, ಹಿಂಸೆಗಾಗಲಿ ವಿರುದ್ಧನಾಗಿಲ್ಲವಾದ ಕಾರಣದಿಂದಲೇ ಯುದ್ಧ ಸಮಯವನ್ನು ತನ್ನ ಕೆಲಸಕ್ಕೆ ಉಪಯೋಗಿಸಿಕೊಳ್ಳಲು ಹಿಂದೆ ಮುಂದೆ ನೋಡಲಿಲ್ಲವೆನ್ನಿ. ನನಗೆ ಮಾತ್ರ ಮಹಾಭಾರತ ಪಠನದಿಂದ ಹುಟ್ಟಿರುವ ಭಾವವೇನೂ ಸುತರಾಂ ಬೇರೆ. ಮಹಾಕವಿ ವ್ಯಾಸನು ಅತ್ಯಾಶ್ಚರ್ಯಕರವಾದ ಮಹಾಕಾವ್ಯವನ್ನು ಬರೆದು ಯುದ್ಧದ ನಿರರ್ಥಕತೆಯನ್ನು ಬಹು ಚೆನ್ನಾಗಿ ನಿರೂಪಿಸಿರುವನು. 'ಕೌರವರು ಸೋತರೇನು—ಪಾಂಡವರು ಗೆದ್ದರೇನು? ಗೆದ್ದವರಲ್ಲಿ ಉಳಿದವರೆಷ್ಟು ಮಂದಿ? ಅವರು ಪಡೆದ ಭಾಗ್ಯವೇನು? ತಾಯಿ ಕುಂತಿಗೆ ಯಾವ ಗತಿಯುಂಟಾಯಿತು? ಇಂದು, ಯಾದವರೆಲ್ಲಿ?' ಎಂಬುದಾಗಿ ಅವನು ಕೇಳುತ್ತಾನೆ.

ಎಲ್ಲಿ, ಯುದ್ಧ ಕಥನವೂ ಹಿಂಸೆಯ ನ್ಯಾಯವಾದಿತ್ವವೂ ಮಹಾಕಾವ್ಯದ ರಚನೆಯ ಗುರಿಗಳಾಗಿಲ್ಲವೋ, ಅಲ್ಲಿ ಆಗ ಆ ಅಂಶಗಳನ್ನು ಒತ್ತಿ ಹೇಳುವುದು ಸರ್ವಥಾ ತಪ್ಪು. ಕೆಲವು ಶ್ಲೋಕಗಳನ್ನು 'ಅಹಿಂಸೋ'ಪದೇಶಕ್ಕೆ ಅನುಗುಣವಾಗುವಂತೆ ಮಾಡಲು ಕಷ್ಟವಾಗಿದೆಯೆಂದರೆ, ಅನಂತರ, ಗೀತೆಯನ್ನು 'ಹಿಂಸೆ'ಯ ಆಧಾರಭೂತವಾದುದೆಂದು ತೋರಲು ಮತ್ತೂ ಕಷ್ಟ. ತನ್ನ ಗ್ರಂಥವು ಎಷ್ಟೆಷ್ಟು ವ್ಯಾಖ್ಯಾನಗಳಿಗೆ ಆಧಾರವಾದ ಅವಕಾಶಕ್ಕೆ ಗುರಿಯಾಗುವುದೆಂಬುದನ್ನು ಕವಿಯು ಅದನ್ನು ಬರೆಯುತ್ತಿರುವಾಗಲೇ ತಿಳಿಯಲಾರ. ಕವಿತ್ವವು ಕವಿಯನ್ನು ಮೀರಿ ಮುಂದೆ ಮುಂದೆ ಹೋಗುವುದೇ ಕಾವ್ಯದ ಸೊಗಸು. ಅವನು ಭಾವನಾಗಮನದ ಅತ್ಯುಚ್ಚ ಸ್ಥಾನದಲ್ಲಿ ಕಂಡ ಜ್ಞಾನ ತತ್ತ್ವಾರ್ಥವನ್ನು ಅನೇಕ ಬಾರಿ ತನ್ನ ಜೀವನದಲ್ಲಿ ಕಾಣಲಾರ. ಈ ರೀತಿ ಎಷ್ಟೋ ಕವಿಗಳ ಜೀವನ ಚರಿತ್ರೆಗಳನ್ನು ಅವರ ಕಾವ್ಯಗಳನ್ನೂ ಹೋಲಿಸಿ ನೋಡಿದರೆ ಒಂದಕ್ಕೊಂದಕ್ಕೆ ಅರ್ಥಾರ್ಥ ಸಂಬಂಧವಿರುವುದಿಲ್ಲ. ಗೀತೆಯ ಮುಖ್ಯೋಪದೇಶವು ಹಿಂಸೆಯಲ್ಲ, ಅಹಿಂಸೆ ಎಂಬುದನ್ನು, ದ್ವಿತೀಯಾಧ್ಯಾಯದಲ್ಲಿ ಪ್ರಾರಂಭವಾಗಿರುವ ಮತ್ತು ಅಷ್ಟಾದಶಾಧ್ಯಾಯದಲ್ಲಿ ಪರಿಸಮಾಪ್ತಿಗೊಂಡ ಗ್ರಂಥ ವಿಷಯವು ವಿಸ್ತಾರವಾಗಿ ನಿರೂಪಿಸಿದೆ. ಇತರ ಅಧ್ಯಾಯಗಳಲ್ಲಿನ ಪ್ರಸಂಗವೂ ಇದೇ ಪಕ್ಷವನ್ನೇ ಪ್ರತಿಪಾದಿಸುವುದು. ಕೋಪವಿಲ್ಲದೆ, ದ್ವೇಷವಿಲ್ಲದೆ ಹಿಂಸೆಯು ಅಸಾಧ್ಯ. ಗೀತೆಯು ನಮ್ಮನ್ನು ಸತ್ವರಜಸ್ತಮೋಗುಣಗಳಿಂದಾಚೆಗೆ, ರಾಗದ್ವೇಷಗಳ ಸಂಪರ್ಕವಿಲ್ಲದೆಡೆಗೆ ಕರೆದೊಯ್ಯಲು ಪ್ರಯತ್ನಿಸುತ್ತದೆ. ಆದರೆ, ಅರ್ಜುನನು ಕಣ್ಣನ್ನು ಕೆಂಪಗೆ ಮಾಡಿಕೊಂಡು ನೆಲಕಲ್ಪಿಸಿ ಬಿಲ್ಲಿನ ಹೆದೆಯನ್ನು ತನ್ನ ಕರ್ಣಾಗ್ರಕ್ಕೆ ಎಳೆಯುವುದನ್ನು ಮಾತ್ರ ಆಗಲೂ ನನ್ನ ಮನಸ್ಸಿನಲ್ಲಿ ಚಿತ್ರಿಸಿಕೊಳ್ಳಲಾರೆ.

ಅರ್ಜುನನು ಶಸ್ತ್ರಸನ್ಯಾಸಮಾಡಿ ರಣಾಂಗಣಕ್ಕೆ ಹೋಗೆನೆಂದದ್ದು ಅಹಿಂಸಾಭಾವದಿಂದಲ್ಲ. ಹಿಂದೆ ಅವನು ಎಷ್ಟೋ ಬಾರಿ ಯುದ್ಧಗಳನ್ನು ಮಾಡಿದ್ದವನು. ಈ ಬಾರಿ ಮಾತ್ರ ಕಪಟ ಅನುಕಂಪದಿಂದ ಪರಾವೃತ್ತನು! ತನ್ನ ರಕ್ತ ಸಂಬಂಧಿಗಳನ್ನು ಕೊಲ್ಲಲು ಅವನು ಬೆಚ್ಚಿ ಬೆದರುತ್ತಾನೆ! ಮಾನವನು ಕೊಲ್ಲುವುದನ್ನು ಅವನೆಂದೂ ವಿರೋಧಿಸಿದವನೇ ಅಲ್ಲ. 'ಯಾವನೊಬ್ಬನು—ಅವನೆಂಥಹ ದುಷ್ಟನಾಗಿದ್ದರೂ—ನಾನು ಕೊಲ್ಲೆನು' ಎಂಬುದಾಗಿ ಅವನು ಹೇಳಲಿಲ್ಲ. ಕೃಷ್ಣಪರಮಾತ್ಮನು ಪ್ರತಿಯೊಬ್ಬರ ಮನಸ್ಸಿನ ಅಂತರ್ಯವನ್ನೂ ಬಲ್ಲ. ಅರ್ಜುನನ ತಾತ್ಕಾಲಿಕ ಮೋಹವನ್ನು ಬೇಧಿಸಿ ನೋಡಿ 'ನೀನು ಈಗಾಗಲೇ ಕೊಂದಿದ್ದೀಯೆ. ಇದ್ದಕ್ಕಿದ್ದ ಹಾಗೆಯೇ ಅಹಿಂಸಾವಾದವನ್ನು ಹಿಡಿಯಲಾರೆ. ನೀನು ಪ್ರಾರಂಭಿಸಿರುವುದನ್ನು ಪೂರೈಸು' ಎಂದು ಹೇಳುತ್ತಾನೆ.

ಅತ್ಯಂತ ವೇಗವಾಗಿ ಓಡುವ ರೈಲಿನಲ್ಲಿ ಹೋಗುತ್ತಿರುವ ಪ್ರಯಾಣಿಕನಿಗೆ ಪ್ರಯಾಣದಲ್ಲಿ ಬೇಜಾರು ಹುಟ್ಟಿ ಗಾಡಿಯಿಂದ ಧುಮುಕಿದರೆ ಆತ್ಮಹತ್ಯಾದೋಷವು ಅವನ ತಲೆಗೆ ಕಟ್ಟಿದ್ದು. ಅವನು ಪ್ರಯಾಣದ ಅಥವಾ ರೈಲುಗಾಡಿ ಪ್ರಯಾಣದ ನಿರರ್ಥಕತ್ವವನ್ನು ತಿಳಿದಂತಾಗಲಿಲ್ಲ. ಅರ್ಜುನನ ಸ್ಥಿತಿಯೂ ಅಂತಹುದೇ. ಅಹಿಂಸಾಪರನಾದ ಕೃಷ್ಣನು ಮತ್ತಾವ ಬುದ್ಧಿವಾದವನ್ನೂ ಅರ್ಜುನನಿಗೆ ಕೊಡಲಾರದೆ ಹೋದ. ಆದರೆ, ಪ್ರತಿ ದಿನದ ಜೀವನದಲ್ಲಿ ಎಷ್ಟೋ ಕೊಂಚ ಹಿಂಸೆ ನಡೆಯದಿರಲು ಅಸಾಧ್ಯವಾಗಿರುವ ಕಾರಣ 'ಹಿಂಸೆಯೇ ಜೀವನದ ವಿಧಿ' ಎಂದು ಹೇಳುವುದು ಹ್ಯಾಗೆ ತಪ್ಪೋ, ಅದೇ ರೀತಿ ಯಾವುದೋ ಒಂದು ಅಸಾಧಾರಣ ಸಮಯದಲ್ಲಿ ಮಾಡಬೇಕಾದ ಕರ್ತವ್ಯ ಮಾಡೆಂದು ಹೇಳಿದ್ದಕ್ಕಾಗಿಯೆ 'ಗೀತೆಯು ಹಿಂಸೆಯನ್ನು ಬೋಧಿಸುತ್ತದೆ; ಅಥವಾ, ಯುದ್ಧವನ್ನು ನ್ಯಾಯವೆನ್ನುತ್ತದೆ' ಎಂಬುದು, ತಪ್ಪು. ಗೀತೆಯ ಉದ್ದೇಶಾರ್ಥವನ್ನು ಕುರಿತು ಓದುವವನಿಗೆ, ಅದು ಉಪದೇಶಿಸುವುದು ಅಹಿಂಸೆಯ ಗುಟ್ಟನ್ನು; ನಶ್ವರ ಶರೀರದ ಮೂಲಕ ಆತ್ಮಸಿದ್ಧಿಯನ್ನು ಪಡೆಯಬಲ್ಲ ಕೌಶಲ್ಯವನ್ನು.

ಧೃತರಾಷ್ಟ್ರ, ಯುಧಿಷ್ಠಿರ ಅರ್ಜುನ, ಇವರು ಯಾರು? ಕೃಷ್ಣನು ಯಾರು? ಇವರೆಲ್ಲರು ಐತಿಹಾಸಿಕ ಪುರುಷರೆ? ಅವರು ಅಂತಹವರೆಂದು ಗೀತೆಯು ಹೇಳುತ್ತದೆಯೆ? ಮಧ್ಯ ಯುದ್ಧದಲ್ಲಿ ಅರ್ಜುನನು ಅಕಸ್ಮಾತ್ತಾಗಿ ಯುದ್ಧವನ್ನು ನಿಲ್ಲಿಸಿ, ಕೃಷ್ಣನನ್ನು ಪ್ರಶ್ನಿಸಲು, ಕೃಷ್ಣನು ಅವನ ಮುಂದೆ ಗೀತೆಯೆಲ್ಲವನ್ನೂ ಕಥನ ಮಾಡುತ್ತಾನೆಯೋ? ಆ ಗೀತೆಯೂ ಮತ್ತು—ಆ ಗೀತೆ ಅರ್ಜುನನು ಯಾವುದನ್ನು ಕೇಳಿ ತನ್ನ ಮೋಹವು ಹೊರಟುಹೋಯಿತೆಂದು ಹೇಳಿ ಅನಂತರ ಮರೆತು ಹೋದನೋ—ಯಾವುದನ್ನು ಕೇಳಲು ಕೃಷ್ಣನನ್ನು ಪುನಃ ಮೊದಲಿನಿಂದ ಹಾಡೆಂದನೋ—ಯಾವುದನ್ನು ಕೃಷ್ಣನು ಪಾಡಲಾರದೆ ಹೋದನೋ—ಆದ ಕಾರಣ ಯಾವುದನ್ನು ಅನುಗೀತೆಯ ರೂಪದಲ್ಲಿ ಹಾಡಿದನೋ—ಆ ಗೀತೆ—ಅದು ಯಾವುದು?

ನಾನು ದುರ್ಯೋಧನ ಮತ್ತು ಅವನ ಅನುಯಾಯಿಗಳನ್ನು ಮಾನವನ ನೀಚ ಪ್ರೇರಣೆಗಳೆಂದೂ ಅರ್ಜುನ ಮತ್ತು ಅವನ ಕಡೆಯವರನ್ನು, ಶ್ರೇಷ್ಠ ಪ್ರೇರಣೆಗಳೆಂದೂ ತಿಳಿಯುತ್ತೇನೆ. ಯುದ್ಧರಂಗವೆಂದರೆ ನಮ್ಮ ಸ್ವಂತ ದೇಹ. ದ್ವಿಪಕ್ಷಗಳಿಗೂ ಅನ್ಯವಿಲ್ಲದ ಯುದ್ಧವು ಸದಾ ಜರುಗುತ್ತಲೇ ಇರುವುದನ್ನು ಋಷಿಯಾದ ಕವಿಯು ಸ್ಪಷ್ಟವಾಗಿ ಬಣ್ಣಿಸಿದ್ದಾನೆ. ಅಂತಃ ಸಾಕ್ಷಿಯಾದ ಕೃಷ್ಣನು ಪವಿತ್ರ ಹೃದಯದಲ್ಲಿ ಸದಾ ರಹಸ್ಯವಾಗಿ ಮಾತನಾಡುತ್ತಿದ್ದಾನೆ. ಘಡಿಯಾರಕ್ಕೆ ಕೀಲು ಕೊಡುವಂತೆ ನಮ್ಮ ಹೃದಯದಲ್ಲೂ ಪವಿತ್ರತೆಯೆಂಬ ಕೀಲನ್ನು ತಿರುಗಿಸಬೇಕು, ಇಲ್ಲವಾದರೆ ಅಂತಃವಾಸಿಯು ಮಾತನಾಡುವುದನ್ನು ನಿಲ್ಲಿಸಿಬಿಡುತ್ತಾನೆ.

ಭೌತಿಕ ಯುದ್ಧವನ್ನು ಕೇವಲ ಬಿಟ್ಟೇ ಬಿಡುವುದಕ್ಕಾಗದು. ಅಹಿಂಸೆಯಿಂದ ನಿಶ್ಚಲಂತರಾಗಿರುವವರಿಗೆ ಗೀತೆಯು ನಿರಾಕಾರಬೋಧನೆಯನ್ನು ಮಾಡದು. ಅಂಜುಬುರುಕನಾದವನು, ದೇಹರಕ್ಷಣೆಯನ್ನು ಮಾಡಿಕೊಳ್ಳುವವನು, ತನ್ನ ಇಂದ್ರಿಯಗಳಿಗೆ ದಾಸನಾಗಿರುವವನು, ತನಗೆ ಇಚ್ಛೆಯಿರಲಿ ಇಲ್ಲದಿರಲಿ ಭೌತಿಕ ಯುದ್ಧವನ್ನು ಮಾಡಲೇ ಬೇಕು. ಆದರೆ ಅದು ಅವನ ಧರ್ಮವಲ್ಲ. ಧರ್ಮವಿರುವುದು ಒಂದೇ ಒಂದು. ಅಹಿಂಸೆಯೆಂದರೆ ಮೋಕ್ಷ: ಮೋಕ್ಷವೆಂದರೆ ಪರಮಾರ್ಥ ಸಿದ್ಧಿ. ಅಳುಕು ಮನಸ್ಸಿನವನಿಗೆ ಇಲ್ಲಿ ಸ್ಥಳವಿಲ್ಲ. ಈ ವಿಚಿತ್ರ ಪ್ರಪಂಚದಲ್ಲಿ ಹಿಂಸೆಯು ನಿರರ್ಗಳವಾಗಿ ಎಂದೆಂದಿಗೂ ನಡೆಯುವುದು. ಅದರಿಂದ ತಪ್ಪಿಸಿಕೊಂಡು ಹೊರಬೀಳಲು ಗೀತೆಯು ದಾರಿತೋರುವುದು. ಆದರೆ ಅದು, ಅಂಜುಬುರುಕತನ ಮತ್ತು ನಿರಾಶೆಗಳಿಂದ ತಪ್ಪಿಸಿಕೊಳ್ಳುವುದೇ ಹಾದಿಯಲ್ಲವೆಂಬುದನ್ನೂ ತೋರುವುದು. ಅಂಜುಬುರುಕುತನಕ್ಕಿಂತಲೂ ಯುದ್ಧದಲ್ಲಿ ಕೊಂದು ಕೊಲ್ಲಿಸಿಕೊಳ್ಳುವುದು ಎಷ್ಟೋ ಉತ್ತಮ.

ಸತ್ಯ್ಯವಚಾರ ಮಾಡುವಾತನು ಉದಹರಿಸಿದ ಶ್ಲೋಕಗಳ ಅರ್ಥವು ಇನ್ನೂ ಸ್ಪಷ್ಟವಾಗದಿದ್ದಲ್ಲಿ ಅವನ್ನು ಸ್ಪಷ್ಟಪಡಿಸಲು ನನ್ನಿಂದ ಅಸಾಧ್ಯವೆಂಬುದಾಗಿ ನಾನು ಒಪ್ಪಿಕೊಳ್ಳಲೇಬೇಕು. ಸರ್ವಶಕ್ತನಾದ ಭಗವಂತನು ಸೃಷ್ಟಿಕರ್ತನೂ, ಸ್ಥಿತಿರಕ್ಷಕನೂ, ಲಯಕಾರಣನೂ ಹೌದೆಂಬ ವಿಷಯಕ್ಕೂ, ಅದು ಹಾಗೆಯೇ ಇರಬೇಕೆಂಬುದಕ್ಕೂ, ಸಮ್ಮತಿಯುಂಟಷ್ಟೆ? ಹಾಗೆ, ಅವನು ಸೃಷ್ಟಿಸಿದ್ದೇ ಉಂಟಾದರೆ ಲಯಮಾಡುವುದಕ್ಕೂ ಅವನಿಗೆ ನಿಸ್ಸಂದೇಹವಾದ ಹಕ್ಕುಂಟು. ಆದರೆ ಅವನು ಲಯಮಾಡುವುದೇ ಇಲ್ಲ; ಯಾಕೆಂದರೆ ಅವನು ಸೃಷ್ಟಿಸುವುದಿಲ್ಲ. ಅವನ ನಿಯಮವೇನೆಂದರೆ ಯಾವುದು ಹುಟ್ಟುವುದೋ ಅದು ಸಾಯಲೇ ಬೇಕು ಅಲ್ಲಿಯೇ ಆತನು ದಯೆತೋರುವುದು. ಆತನ ನಿಯಮಗಳು ನಿರ್ವಿಕಲ್ಪವಾದವುಗಳು, ಹಾಗಲ್ಲದೆ, ಆತನು ಚಿತ್ತಚಾಂಚಲ್ಯದಿಂದೇನಾದರೂ ಅವುಗಳನ್ನು ಬದಲಾಯಿಸುತ್ತಾ ಬಂದರೆ ನಾವೆಲ್ಲರೂ ಎಲ್ಲಿರಬೇಕೋ?

'ಪ್ರಜಾಮತ'

ಪಾರ್ಲಿಮೆಂಟ್ ಚರ್ಚೆ.

ಸ್ಟೇಟ್ ಸೆಕ್ರೆಟರಿ ಸರ್ ಸೇಮ್ಯುವೆಲ್ ಹೋರರ ಧಾಟಿ.

(ಕಳೆದ ವಾರದಿಂದ ಮುಂದುವರಿದದ್ದು.)

ಪೋಲೀಸರ ಮೇಲೆ ಬರುವ ಆರೋಪಗಳು ಸುಳ್ಳು ಎಂಬ ಕಾರಣದಿಂದ ಇಂಡಿಯಾ ಸರ್ಕಾರವು ಎಚ್ಚರ ತಪ್ಪಿಲ್ಲ. ಅಧಿಕಾರದ ದುರುಪಯೋಗವಾಗದಂತೆ ನೋಡಿಕೊಳ್ಳುತ್ತಾರೆ. ಸ್ಥಳೀಕ ಸರ್ಕಾರಗಳಿಗೆ ಈ ವಿಷಯದಲ್ಲಿ ಆಗಿಂದಾಗ್ಯೆ ಇಂಡಿಯಾ ಸರ್ಕಾರವು ಎಚ್ಚರಿಕೆ ಕೊಡುತ್ತಲಿದೆ. ಇದರಿಂದ ಸರ್ಕಾರವು "ಬಲವಾಗಿ ಆಳುವಿಕೆ" ಯನ್ನು ಬಿಡುವುದಿಲ್ಲ. ಹದಮೀರದೆ ನಡೆದುಕೊಳ್ಳುವಂತೆ ಎಚ್ಚರಿಸುವುದರಿಂದ ಬಲವಾಗಿ ಆಳುವುದರ ಫಲ ಬೇಗನೆ ದೊರೆಯುತ್ತದೆ. ಶಾಸನವನ್ನು ಭಂಗದ ಚಳವಳವನ್ನು ನಿಲ್ಲಿಸಲಿಕ್ಕೆ ಅಧಿಕಾರಿಗಳು ನಡಿಸುವ ಕಾರ್ಯಗಳಲ್ಲಿ ಅಧಿಕಾರಿಗಳಿಗೆ ಸಂಪೂರ್ಣ ವಿಶ್ವಾಸ ಇದೆ. ಈಗಿನ ರೀತಿಯ ತಳ್ಳಿಕೆಯು ದೇಶದಲ್ಲಿ ಅವಶ್ಯವಿದೆಯೆಂಬುದಕ್ಕೆ ಒಂದು ಲೆಜಿಸ್ಲೇಟಿವ್ ಕೌನ್ಸಿಲ್‌ಗಳೇ ಸರ್ಕಾರಕ್ಕೆ ಈ ವಿಷಯದಲ್ಲಿ ಆಶಯವಾಗಿ ನಿಂತಿರುವುದಲ್ಲದೆ ಅನೇಕ ಜನರಿಂದಲೂ ಮತ್ತು ಸಂಸ್ಥೆಗಳಿಂದಲೂ ಸರ್ಕಾರಕ್ಕೆ ಒತ್ತಾಸೆ ದೊರೆಯುತ್ತಿದೆ ಎಂಬುದೂ ನಿದರ್ಶನವಾಗುತ್ತದೆ.

ಬಂಗಾಳದ ಕೊಲೆಪಾತಕ ಚಳವಳವು ಜೋರಾಗಿದೆ. ಕೆಲವು ತಿಂಗಳುಗಳಿಂದ 17 ಕೊಲೆ ತರಹದ ನನ್ನು ಪ್ರಯತ್ನಿಸಿದರು. ಬ್ರಿಟಿಷ್ ಅಧಿಕಾರಿಗಳ [illegible] ವುದೇ ಇವರ ಉದ್ದೇಶ. ಕೆಲವು ಕಾಂಗ್ರೆಸ್‌ [illegible] ಗಳು ಸಹ ಇದಕ್ಕೆ ಒತ್ತಾಸೆ ಕೊಡುತ್ತಾರೆ. [illegible] ಬಂಗಾಳದ ಸರ್ಕಾರಕ್ಕೆ ತುರ್ತು ಅಧಿಕಾರ [illegible]

ವಾಯುವ್ಯ ಪ್ರಾಂತ್ಯದಲ್ಲಿ ಗಿರಾಕಿ [illegible] ಎದುರಿಸಿತು. ಕಂದಾಯ ನಿರಾ[illegible] ಲಿದೆ. ಸಂಯುಕ್ತ ಪ್ರಾಂತ್ಯದ ಗೇಣಿ [illegible] ಚಳವಳವು ಅಂತ್ಯವಾಯಿತೆನ್ನಬಹುದು. [illegible] ಕ್ಕಗಳಲ್ಲೂ ಪರಿಸ್ಥಿತಿಯು ಸ್ವಲ್ಪ [illegible] ಕ್ರಾಂತಿಕಾರಿ ಚಳವಳವು ಇನ್ನೂ ನಿಂ[illegible] ಯಬೇಕು. ಆದರೂ ನಮಗೆ [illegible] ಬಾಯಿ ಅಧಿಕೃತ ಸ್ಥಿತಿ [illegible]

ಕೊಡಗು.

[illegible]

ನವಂಬರ್ ೧೧ ರ ಶುಕ್ರವಾರ.

ಪ್ರೆಸ್ ಆರ್ಡಿನೆನ್ಸ್

ಜಾರಿಯಲ್ಲಿರುವ ಪರಿವಿಗೆ

ನಾವು

ಅಗ್ರ ಲೇಖನ

ವನ್ನು

ಪ್ರಕಟಿಸುವುದಿಲ್ಲ.

ಸ್ಟೇಟ್ ಸೆಕ್ರೆಟರಿಯೂದ ಸರ್ ಸೇಮ್ಯುವೆಲ್ ಹೋರರ

ಭಾಷಣದ ಮೇಲೆ ಟೀಕೆ

ಇಂಡಿಯೂದ ಈಗಿನ ಪರಿಸ್ಥಿತಿಯ ಸಂಬಂಧವಾಗಿ ಸರ್ ಸೇಮ್ಯುವೆಲ್ ಹೋರರು ಪಾರ್ಲಿಮೆಂಟಿನಲ್ಲಿ ಮಾಡಿದ ಭಾಷಣದ ಮೇಲೆ ಸಂಪೂರ್ಣವಾಗಿ ಟೀಕೆ ಮಾಡುವುದು ಈಗ ಸಾಧ್ಯವಿಲ್ಲ. ಈಗಿನ ಸರಕಾರದ ಕಾರ್ಯಗಳನ್ನು ಅನುಮೋದಿಸದ ಹಿಂದೀ ಜನರು ಮತ್ತು ಪತ್ರಿಕೆಗಳು ಹೇಳುವುದು ನಿಜವಲ್ಲವೆಂತ ಹೋರರು ಹೇಳುವ ಮಾತು ಸುಳ್ಳೆಂದು ತೋರ ತೋರಿಸುವದೂ ಕಷ್ಟವಲ್ಲ.

ಹಿಂದೂಸ್ಥಾನದಲ್ಲಿ ಸರಕಾರವು ಈಗ ನಡಿಸುತ್ತಿರುವ ಕಾರ್ಯಗಳು ಅವಶ್ಯವೆಂತಲೂ ಈಗಿನ ವಿಶೇಷ ಅಧಿಕಾರಗಳನ್ನು ಸಮಾಧಾನದಿಂದಲೂ, ಬುದ್ಧಿವಂತಿಕೆಯಿಂದಲೂ ಉಪಯೋಗಿಸುತ್ತಲಿದ್ದಾರೆಂತ ಹೇಳಿದ್ದಾರೆ. ಅಧಿಕಾರವನ್ನು ಅಧಿಕಾರಿಗಳು ದುರುಪಯೋಗಪಡಿಸುತ್ತಾರೆ ಎಂಬ ಆಕ್ಷೇಪಣೆಗೆ ಹೋರರ ಜವಾಬು ಮುಖ್ಯವಾಗಿ ಕೊಡಲಾಗಿದೆ. ಪತ್ರಿಕೆಗಳಿಗೆ ವರ್ತಮಾನ ಕೊಡಲು ಯಾವ ತಡೆ ಇಲ್ಲವೆಂತಲೂ ಸಾರ್ವಜನಿಕ ಅಭಿಪ್ರಾಯವನ್ನು ಪತ್ರಿಕೆಗಳ ಮೂಲಕ ತಿಳಿಸಲು ಅಡಚಣೆಯೇ ಇಲ್ಲವೆಂತ ಹೇಳಿದ್ದಾರೆ. ಎಡ್ವರ್ಡ್ ಕಿಪ್ಲಿಂಗ್ ಎಂಬ ಬ್ರಿಟಿಶ್ ತತ್ವಜ್ಞಾನಿಯು ಹೇಳುವುದೇನೆಂದರೆ ಸುಳ್ಳು ಮತ್ತು ಅಸತ್ಯ ವಿಷಯಕ್ಕೆ ಸತ್ಯ ಮತ್ತು ನ್ಯಾಯವಾದ ವಿಷಯಕ್ಕಿಂತ ಒಂದು ಹೆಚ್ಚಿನ ಅನುಕೂಲವಿದೆ. ಯಾವುದೆಂದರೆ ಮರ್ಯಾದೆಯುಳ್ಳ ಜನರು ಸುಳ್ಳನ್ನು ನಿರಾಕರಿಸುವ ಬೇಸರದ ಕೆಲಸಕ್ಕೆ ತೊಡಗುವುದೇ ಇಲ್ಲವಾದ್ದರಿಂದ ಸುಳ್ಳುಗಾರರು ಹೇಳುವ ಮಾತನ್ನು ಯಾರೂ ಅಲ್ಲ ಎಂತ ಹೇಳಲಿಲ್ಲವೆಂಬುದೇ ಸುಳ್ಳುಗಾರರಿಗೆ ಇರುವ ಅನುಕೂಲ. ಸರ್ ಸೇಮ್ಯುವೆಲ್ ಹೋರರು ದೊಡ್ಡ ಮನುಷ್ಯರು. ಬ್ರಿಟನಿನಲ್ಲಿ ದೊಡ್ಡ ಸ್ಥಾನದಲ್ಲಿದ್ದಾರೆ. ಅಲ್ಲದೆ ಹಿಂದೂಸ್ಥಾನದ ಆಳಿಕೆಯ ಮುಖ್ಯಾಧಿಕಾರಿಯಾಗಿದ್ದಾರೆ. ಅದ್ದರಿಂದ ಇಂಥವರು ಬೇಕಂತಲೇ ಸುಳ್ಳು ಹೇಳಿದರೆಂತ ಹೇಳುವುದು ನಮ್ಮ ಉದ್ದೇಶವಲ್ಲ. ಆದರೆ ಅವರು ಯಾವ ಬರವಣಿಗೆಯ ಆಧಾರದಿಂದ ಈ ಭಾಷಣ ಮಾಡಿದರೋ ಆ ಬರವಣಿಗೆ ಬರೆದವರು ಸತ್ಯಕ್ಕೆ ಮರ್ಯಾದೆ ಕೊಡುವವರಲ್ಲವೆಂತ ಗೌರವಯುಕ್ತವಾಗಿ ಈ ಮಹನೀಯರಿಗೆ ತಿಳಿಸಬೇಕಾಗಿದೆ. ಅವರು ಪುನಹ ತನಿಖೆ ಮಾಡಲಿ. ಅನೇಕರ ಹಿಂದೂಸ್ಥಾನದ ನಿಜವಾದ ವಿದ್ಯಮಾನಗಳನ್ನು ಒಣ್ಣ ಹಚ್ಚದೆ ವರ್ತಮಾನ ಪತ್ರಿಕೆಗಳು ಬರೆದರೆ ಅಂಥಾ ಪತ್ರಿಕೆಗಳು ಶಿಕ್ಷೆಗೆ ಗುರಿಯಾಗುವುದಿಲ್ಲವೆಂತ ಅವರು ಎದೆ ಮೇಲೆ ಕೈಮಡಗಿ ಹೇಳಬಹುದೇ? ವಿಲಾತಿ ಚೆನ್ನರ ಹಂತಿ ವರ್ತಮಾನವನ್ನು ಟೆಲಿಗ್ರಾಫ್ ಆಫೀಸಿನಲ್ಲಿ ತೆಗೆದುಕೊಳ್ಳಲು ಇನ್ಕಾರ ಮಾಡಿದರೆಂತ ತಿಳಿಯುತು. ಇದನ್ನು ಅಲ್ಲವೆಂತ ಹೇಳಲು ಹೋರರಿಗೂ ಸಾಧ್ಯವಾಗಲಿಲ್ಲ. ಇದು ಬರೇ ಮಾಯವೆಂತ ಹೇಳಲು ಸಾಧ್ಯವಿದೆಯೇ? ಎಲ್ಲಾ ಪ್ರಾಂತ್ಯಗಳಲ್ಲೂ ಜಾರಿಯಲ್ಲಿರುವ ವರ್ತಮಾನಗಳಿಗೆ ಇರುವ ತಡೆಯು ಬರೇ ಕಪೋಲ ಕಲ್ಪನೆಯೆಂತ ಭಾವಿಸಬಹುದೇ?

ಪೋಲೀಸಿನವರ ದಬ್ಬಾಳಿಕೆಯನ್ನು ಸಹ ಸರ್ ಹೋರರು ಇನ್ಕಾರ ಮಾಡಿದರು. ಇದಕ್ಕೆ ಆಧಾರವಾಗಿ ಕಳೆದ ಹೋರಾಟದಲ್ಲಿ ಪೋಲೀಸರ ಮೇಲೆ ಅನಾವಶ್ಯವಾಗಿ ಅಸತ್ಯವಾದ ಆರೋಪಗಳನ್ನು ಮಾಡಿದ್ದರೆಂಬುದೇ ಸಾಕ್ಷಿಯೆಂದರು. ಮೊದಲು ಬಂದ ಆಕ್ಷೇಪಗಳು ಸುಳ್ಳಾದ್ದರಿಂದ ಈಗಿನ ಆಕ್ಷೇಪಗಳು ಸುಳ್ಳೆಂತಲೇ ಭಾವಿಸಬೇಕಾಗಿತ್ತು. ಈ ರೀತಿ ಮಾಡಿ ತಮ್ಮ ಪಕ್ಷಕ್ಕೆ ತಾವೇ ತೃಪ್ತರಾಗಿರಲು ನಮ್ಮ ಆಕ್ಷೇಪಣೆ ಇಲ್ಲ. ಆದರೂ ಸರಕಾರ ಉದ್ಯೋಗಸ್ಥರು ಇವರು ತಿಳಿದವನ್ನು ನಿರಪರಾಧಿಗಳೆಂದಾದರೆ ಬಹಿರಂಗವಾದ ತನಿಖೆ ನಡೆಸಬೇಕೆಂತ ಕೇಳಿದರೂ ಮತ್ತು 'ಡೈಲಿ ಹೆರಾಲ್ಡ್' ಮತ್ತು 'ಮ್ಯಾಂಚೆಸ್ಟರ್ ಗಾರ್ಡಿಯನ್' ಇವುಗಳಂಥ ಪತ್ರಿಕೆಗಳು ತನಿಖೆಯಾಗಬೇಕೆಂತ ಒಪ್ಪಿದರೂ ಸಹ ತನಿಖೆ ಯಾಕೆ ಒಪ್ಪಲಿಲ್ಲ?

ಸುಳ್ಳಾದ ಶಬ್ದಗಳನ್ನಾಗಲೀ, ಬುದ್ಧಿ ಚಾತುರ್ಯವನ್ನಾಗಲೀ ತೋರಿಸುವುದರಿಂದ ಹಿಂದೂಸ್ಥಾನದಲ್ಲಿ ಶಾಂತಿ ಯುಗಲಾರದೆಂತ ಸ್ಟೇಟ್ ಸೆಕ್ರೆಟರಿಯವರಿಗೆ ತಿಳಿಸಿಕೊಡಬೇಕಾಗಿದೆ. ಕಾಂಗ್ರೆಸಿನ ಬಲದ ವಿಷಯದಲ್ಲಿ ಬ್ರಿಟನಿನ ಈಗಿನ ಸರಕಾರವು ತಪ್ಪು ತಿಳುವಳಿಕೆಯಲ್ಲಿದೆ. ಹಿಂದೂಸ್ಥಾನದ ಮೇಲಧಿಕಾರಿಗಳು ಕಾಂಗ್ರೆಸು ಕೆಲವರ ಸಂಸ್ಥೆಯಾಗಿದೆ ಮತ್ತು ಜನಾಂಗದ ಅಲ್ಪ ಭಾಗದ ಮಾತ್ರ ಪ್ರತಿನಿಧಿಯಾಗಿದೆಯೆಂತ ಭಾವಿಸಿಕೊಂಡಿರುವ ತಪ್ಪನ್ನೇ ಸರ್ ಹೋರರು ನಂಬಿದ್ದಾರೆ. ಕಾಂಗ್ರೆಸಿನವರು ಕೇಳುವಂಥಾ ರಿಯಾಯಿತಿಗಳನ್ನು ಸ್ವಲ್ಪ ಭಾಗದವರ ಕೋರಿಕೆಯೆಂತ ತಿರಸ್ಕರಿಸಿದ್ದಾರೆ. ಲಾರ್ಡ್ ಇರ್ವಿನರ ದೋಷಗಳು ಎಷ್ಟೇ ಇದ್ದರೂ ಈ ಅಭಿಪ್ರಾಯವು ತಪ್ಪೆಂತ ಅವರು ತಿಳಿದುಕೊಂಡಿದ್ದರು. ಅದರಿಂದಲೇ ಅವರಿಗೆ ಜಯವಾಯಿತು. ಅವರನಂತರ ಬಂದ ಲಾರ್ಡ್ ವಿಲ್ಲಿಂಗ್ಡನರಿಗೆ ಅಪಜಯವಾಯಿತು. ಈ ತಪ್ಪನ್ನು ತಪ್ಪೆಂತ ಬ್ರಿಟಿಶ್ ಸರಕಾರವು ತಿಳಿಯುವ ವರೆಗೆ ಹಿಂದೂಸ್ಥಾನದ ಬಿಕ್ಕಟ್ಟಿನ ಸ್ಥಿತಿಯು ಸುಧಾರಿಸಲ್ಪಡುವುದಿಲ್ಲವೆಂತ ನಾವು ಹೇಳಬಲ್ಲೆವು.

ದಬ್ಬಾಳಿಕೆಯ ದಾರಿಯನ್ನು ಕೈಕೊಂಡದ್ದರಿಂದ ಸಹಕಾರವನ್ನೂ ಬಿಟ್ಟು ಬಿಟ್ಟಿದ್ದೇವೆಂತ ಭಾವಿಸಬಾರದೆಂತ ಹೋರರು ಹೇಳಿದರು. ಅಷ್ಟು ಮಾತ್ರವಲ್ಲ, ಆಳಿಕೆಗೆ ಮತ್ತು ಸುಧಾರಣೆ ಸಂಬಂಧಿಸಿದ ಸಭೆಗಳಲ್ಲಿ ಹಿಂದೀ ಮುಖಂಡರ ಸಹಕಾರವನ್ನೇ ಸರಕಾರವು ನಿರೀಕ್ಷಿಸುತ್ತಲಿದೆ ಎಂದಿದ್ದಾರೆ. ಆದರೆ ಸಹಕರಿಸುವುದು ಪಾರ್ಲಿಮೆಂಟಿಗೆ ಕಳೆದ ಸೆಪ್ಟಂಬರ್ ತಿಂಗಳಲ್ಲಿ ಒಪ್ಪಿಗೆಯಾದ ತತ್ವಗಳ ಆಧಾರದ ಮೇಲೆಯೇ ಆಗಬೇಕೆಂತ ಹೇಳಿದ್ದಾರೆ. ಸರ್ ಸೇಮ್ಯುವೆಲ್ ಹೋರರು ಸಹಕಾರಕ್ಕೆ ಕುತೂಹಲವುಳ್ಳವರಾಗಿದ್ದಾರೆಂತ ತಿಳಿಯಲು ಸಂತೋಷ ಪಡುತ್ತೇವೆ. ಮಂತ್ರಿಯವರು ಸೂಚಿಸಿದ ಕುತೂಹಲವನ್ನೇ ಪುನಃ ಹೇಳುವುದರಿಂದ ಹೆಚ್ಚಿಗೆ ಪ್ರಯೋಜನವೇನೂ ಆಗಲಿಲ್ಲ. ಹೋರರು ಸೂಚಿಸಿದ ದಾರಿಯು ಏನೂ ತೃಪ್ತಿಕರವಾಗಿರಲಿಲ್ಲ. ಆದರೂ ಈಗ ಹಿಂದೂಸ್ಥಾನದ ಪ್ರತಿನಿಧಿಯಾದ ಮಹಾತ್ಮ ಗಾಂಧಿಯವರು ಸಹಕರಿಸಬೇಕೆಂಬ ಕುತೂಹಲದಿಂದ ಹಿಂದೂಸ್ಥಾನಕ್ಕೆ ಹಿಂತಿರುಗಿ ಬಂದರು. ಆದರೆ ಹಿಂದೂಸ್ಥಾನದಲ್ಲಿ ಅವರ ಆಸೆಯು ನೆರವೇರಲು ಅನುಕೂಲ ಇಲ್ಲದಂತೆ ಮಾಡಿದ್ದರು. ಹಿಂದೀ ಮುಖಂಡರ ಸಹಕಾರ ಬೇಕೆಂತಾದರೆ ಬರೇ ಮಾತಿನಿಂದ ಸಹಕಾರ ದೊರೆಯುವುದಿಲ್ಲ. ಮಹಾತ್ಮ ಗಾಂಧಿಯವರು ಹಿಂತಿರುಗಿ ಬರುವಾಗ ಬದಲಾಗಿದ್ದ ವಾತಾವರಣವನ್ನು ಮೊದಲಿನ ಸ್ಥಿತಿಗೆ ತಿರುಗಿಸಬೇಕು. ತತ್ಕಾಲಿಕ ಅಧಿಕಾರಗಳನ್ನೆಲ್ಲಾ ಒದಿಗೆ ಇಟ್ಟು ಮನೋಭಾವವು ನಿಜವಾಗಿಯೂ ಬದಲಾಗಿದೆಯೆಂತ ತೋರಿಸಬೇಕು.

"ಅಮೃತ ಬಜಾರ್ ಪತ್ರಿಕೆ"

ಉಪಾಧ್ಯಾಯರ ಕಸಬಿನ ಜವಾಬ್ದಾರಿ.

(ಡಾಕ್ಟರ್ ಜೆ. ಯಂ. ಕುಮಾರಪ್ಪನವರ ಭಾಷಣ.)

೭ ನೇ ತಾರೀಕಿನಲ್ಲಿ ವೈಸರಾಯ್ ಟ್ರೈನಿಂಗ್ ಕಾಲೇಜಿನಲ್ಲಿ ಡಾಕ್ಟರ್ ಜೆ. ಯಂ. ಕುಮಾರಪ್ಪ ಯಂ. ಎ., ಪಿ. ಹೆಚ್. ಡಿ. ಯವರು ಮಾಡಿದ ಭಾಷಣದಿಂದ—

ಈಗಿನ ಬದಲಾದ ಮತ್ತು ಬದಲಾಗುತ್ತಿರುವ ಹಿಂದೂಸ್ಥಾನದ ಪರಿಸ್ಥಿತಿಯಲ್ಲಿ ಉಪಾಧ್ಯಾಯರ ಕಸಬಿನವರ ಜವಾಬ್ದಾರಿಯು ಬಹಳ ಹೆಚ್ಚಾಗಿದೆ. ಮನುಷ್ಯನಿಗೆ ನಾಲ್ಕು ರೂಪದ ಜೀವನಗಳಿವೆ. ದೈಹಿಕ ಎಂದರೆ ದೇಹಕ್ಕೆ ಸಂಬಂಧಪಟ್ಟದ್ದು, ಮಾನಸಿಕ, ಅಂದರೆ ಮನಸ್ಸಿಗೆ ಸಂಬಂಧಪಡುವುದು, ನೈತಿಕ ಮತ್ತು ಸಾಮಾಜಿಕ. ದೈಹಿಕ ಜೀವನದ ಎಚ್ಚರ ನೋಡಿಕೊಳ್ಳುವ ದಾಕ್ತರು ಇದ್ದಾರೆ. ಮಾನಸಿಕ ಜೀವನದ ಎಚ್ಚರ ನೋಡಿಕೊಳ್ಳಲು ಇರುವುದೇ ಉಪಾಧ್ಯಾಯ— ನೈತಿಕ ಮತ್ತು ಧಾರ್ಮಿಕ ಜೀವನದ ವಿಚಾರಕ್ಕೆ ಪುರೋಹಿತನು ಮತ್ತು ಸಾಮಾಜಿಕ ಜೀವನದ ಮೇಲ್ವಿಚಾರಕ್ಕೆ ಅರಸರು.

ಈ ಕಸಬಿನ ಧರ್ಮವೊಂದು ಇದೆ. ನಾಗರೀಕತೆಯು ಹೆಚ್ಚಿ ಜೀವನವು ತೊಡಕಾಗುತ್ತಾ ಬಂದಂತೆ ಈ ಕಸಬಿನ ಜವಾಬ್ದಾರಿಯು ಹೆಚ್ಚಾಗುತ್ತಲಿದೆ. ಮಕ್ಕಳಿಗೆ ಮನೆಯಲ್ಲೇ ಅತಿ ಶ್ರೇಷ್ಠವಾದ ತರಬೇತು ದೊರಕಬೇಕು. ಆದರೆ ಈಗಿನ ಜೀವನದ ರೀತಿಯಲ್ಲಿ ಮಕ್ಕಳ ಮೇಲಿನ ಮನೆಯ ಶಕ್ತಿಯು ಕಡಿಮೆಯಾಗುತ್ತಲಿದೆ. ಮನೆಯು ಮಗುವಿನ ನೋಡಿ ಇಡಬೇಕಾದಷ್ಟು ಎಚ್ಚರ ಇಡುತ್ತಿರುವುದಿಲ್ಲ. ಹುಡುಗರು ತಂದೆ ತಾಯಿಗಳ ಹಿಡಿತದಿಂದ ಬೇಗನೇ ಬಿಡುಗಡೆ ಹೊಂದುತ್ತಾರೆ. ಗಂಡ ಹೆಂಡತಿ ಸಂಬಂಧವೂ ಹೀಗೆಯೇ ಆಗುತ್ತಲಿದೆ. ಮನುಷ್ಯರ ಮನೋಭಾವನೆಯಲ್ಲಿ ವಿಶೇಷವಾದ ಮಾರ್ಪಾಡಾಗಿದೆ. ಹೀಗೆ ಮಾರ್ಪಾಡಾದ ಸ್ಥಿತಿಯಲ್ಲಿ ಉಪಾಧ್ಯಾಯನ ಜವಾಬ್ದಾರಿಯು ಬಹಳ ಹೆಚ್ಚಾಗಿದೆ. ಮೇಲೆ ಹೇಳಿದ ಮನುಷ್ಯ ಜೀವನದ ನಾಲ್ಕು ಭಾಗಗಳಲ್ಲೂ ಉಪಾಧ್ಯಾಯನು ಕೆಲಸಮಾಡಬೇಕಾಗಿದೆ. ಮಕ್ಕಳ ಮೇಲಿನಲ್ಲಿ ಕುಂದುಕೊರತೆಗಳು ಬಂದರೆ ಉಪಾಧ್ಯಾಯನನ್ನೇ ಜವಾಬ್ದಾರಿಯಾಗಿ ತಂದೆ ತಾಯಿಗಳು ಮಾಡುತ್ತಾರೆ. ಪೂರ್ವ ಕಾಲದಲ್ಲಿ ದೇವಸ್ಥಾನಗಳು ಮಠಗಳು, ಚರ್ಚುಗಳು ಮತ್ತು ಕೈಬೂ ಶಾಲೆಗಳು ಬೆಳೆಯುತ್ತಿದ್ದವು. ಈಗ ಪುರೋಹಿತರುಗಳು ಗಂಟೆ ಬಾರಿಸುವುದರಲ್ಲೂ, ಪೂಜೆ ಮಾಡುವುದರಲ್ಲೂ ಕಾಲವನ್ನೆಲ್ಲಾ ಕಳೆಯುತ್ತಾರೆ. ಮಂದಿರಗಳು ನೈತಿಕ ಮೇಲ್ವಿಚಾರ ಮಾಡುವ ಬದಲು ಕೇವಲ ಗಳಲ್ಲಿ ... ಗಿ ಕರ್ಮಗಳ ಪ್ರದರ್ಶನ ಕೆಲಸದಲ್ಲಿ ನಿರತರಾಗಿರುತ್ತಾರೆ.

ಒಬ್ಬ ಬಾಲಕನು ಕ್ರಿಮಿನಲ್ ತತ್ವಗಳನ್ನನುಸರಿಸಿದರೆ ಉಪಾಧ್ಯಾಯನನ್ನೇ ಗುರಿಮಾಡುತ್ತಾರೆ. ನಾಗರೀಕತೆ ಹೆಚ್ಚಿದಂತೆ, ಕಸಬುಗಳ ವಿಭಾಗವು ಬೇಗ ಬೇರೆಯಾಗುತ್ತಾ ಬಂದಂತೆ ಮನುಷ್ಯನ ವ್ಯಕ್ತಿತ್ವಕ್ಕೆ ರೂಪು ಕೊಡುವ ಕೆಲಸವು ಉಪಾಧ್ಯಾಯನದಾಗಿದೆ. ಈ ಜವಾಬ್ದಾರಿಯು ಉಪಾಧ್ಯಾಯನ ಮೇಲೆ ಬಿದ್ದಿರುವುದರಿಂದ ಈ ಕೆಲಸಕ್ಕೆ ತಕ್ಕಂಥ ಅರ್ಹತೆಯನ್ನು ಉಪಾಧ್ಯಾಯನು ಪಡೆಯಬೇಕು. ದೇಹದ ರಚನೆ ಶಾಸ್ತ್ರವನ್ನು ಆರೋಗ್ಯ ಶಾಸ್ತ್ರವನ್ನು ತಿಳಿದಿರಬೇಕು. ತನ್ನ ಅಧೀನಕ್ಕೆ ಒಪ್ಪಿಸಿದ ಬಾಲಕನ ಮನಸ್ಸಿನ ಬೆಳವಣಿಗೆಯಾಗಬೇಕಾದರೆ ಮನಶ್ಶಾಸ್ತ್ರವನ್ನು ಚೆನ್ನಾಗಿ ತಿಳಿಯಬೇಕು. ಮಕ್ಕಳ ನೈತಿಕ ಜೀವನವನ್ನು ತಿದ್ದಲು ತತ್ವಜ್ಞಾನ ಮತ್ತು ನೈತಿಕ ಧರ್ಮ (ಎಥಿಕ್ಸ್)ವನ್ನೂ ಕಲಿತು ಮತ್ತು ಶಿಲ್ಪವನ್ನೂ ಎಲ್ಲಾ ಧರ್ಮಗಳ ಮೂಲತತ್ವವೂ ಸಹ ತಿಳಿಯಬೇಕು. ಮಗುವಿನ ಸಾಮಾಜಿಕ ಜೀವನವನ್ನು ತಿದ್ದಲು, ಸಾಮಾಜಿಕ ಶಾಸ್ತ್ರವೂ ತಿಳಿದಿರಬೇಕು. ವಿದ್ಯೆಯ ಮುಖ್ಯ ಉದ್ದೇಶವೇನೆಂದರೆ ಮಕ್ಕಳ ನಡತೆಯನ್ನು ರೂಪಿಸುವದು. ಧರ್ಮ (ಜಾತಿ) ಬಗೆಗೆ ಕಲಿಸುವ ಶಿಕ್ಷಣ ನನ್ನ ...

(ಇನ್ನೂ ಇದೆ)

(ಇನ್ನೇ ಪುಟದಲ್ಲಿ ಮುಂದುವರಿದಿದೆ)

Reg. No. M. 1550.
If not delivered please return to
"KODAGU" OFFICE MERCARA.

ಕೊಡಗು.

ಸರ್ವೇಷಾ ಧನಾನಾಮಪಿ ವಿದ್ಯಾ ನೀತಿ ಪ್ರಯುಕ್ತಾ / ... ತುಷ್ಟಿರಾ ರಾಜ್ಯ ಸಂಪದಾ

ವಾರ್ಷಿಕ ಚಂದಾ ರೂ. ೩—೮—೦.

ಸಂಪಾದಕ—ಮೂಚಿಮಂಡ ಯಂ. ಗಣಪತಿ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೧	ಮಡಿಕೇರಿ, ಸನ್ ೧೯೩೨ನೇ ಇಸವಿ ಮಾರ್ಚ್ ತಾರೀಖು ೧೧ನೇ ಶುಕ್ರವಾರ.	ಸಂಚಿಕೆ ೧೦

Office of the Asst. C^ominr. & Dt. Magte., Mercara (Coorg). 6th May 1931.

Dear Sir,

I am QUITE PLEASED with the workmanship of the two Coorg weapons (PICHAKATTI & ODIKKATTI)

Yours faithfully,
(Sd) (Rao Bhadur) K. CHENGAPPA, B. A.
District Magistrate and Assistant Commissioner of Coorg.

JEWELLER
By Appointment to
H. E. The Governor of Madras.

PEECHAKATTI (WITH SILVER FITTINGS)
Prices From Rs 160 & upwards.

"New Bungalow," Ammatti, (Coorg). 14th December 1931.

Dear Sir,

I am IMMENSELY PLEASED with the workmanship of the PICHAKATTI you made and sent me some time back.

Yours faithfully,
Sd/ K. P. MUDDAYYA, Ammatti (Coorg.)

Telegrams: 'PRECIOUS.'

Telephone: 8145.

V. Subramaniaier Jeweller,

CATALOGUE ON ENQUIRY.

52—16

Post Box 423, Triplicane, P. O., MADRAS.



ಕಾಗದ ಬರೆದರೆ ಆಗಿನ ಕ್ಯಾಟಲಾಗು ಮಾಫಿಯಾಗಿ ಕಳುಹಿಸಲ್ಪಡುವದು.

ಕೋವಿಗಳು, ಕತ್ತಿಗಳು, ಬಚೀಗಳು, ತೋಟೆ ... ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS.
Largest Importers of Firearms and Ammunition
Cheapest priced firm in India,
24—25 **210 Abdul Rehman Street, BOMBAY.**

ಬಾಲಾರ್ಕಮಧು.

ಬಾಲಾರ್ಕಮಧು ಮಕ್ಕಳಿಗೆ ಕೊಡುವುದರಿಂದ ಶಕ್ತಿಯೂ, ಆರೋಗ್ಯವೂ ಹೆಚ್ಚುವುದು. ಇದು ಮಧುರವಾಗಿದೆ. ಬೆಲೆ ಸೀಸೆ 1ಕ್ಕೆ 0—12—0 ಟ. ಖ. 0—12—0.



Spleen Lever enlargement ... ಗಡ್ಡೆರೋಗ—ಪ್ಲೀಹ—ಪಿತ್ತಕೋಶದ ಗಡ್ಡೆ ... ಔಷಧಗಳಿವೆ. ... ಸೀಸೆ ... 1 ಕ್ಕೆ 3—0—0. ಟ. ಖ. 0—8—0. ಏಜೆಂಟ್. ರೂ. 7

ಸಿ. ಎ. ಮಹಮದ್ ... ಶ್ರೀನಿ... ಪ್ರಿಡಕ್ಟ್

ಬ್ರಾಂಚ್ ಆಫೀಸ್, ... S K. | Spleen ... ಯಂ. ವಿ. ...

52—8

ವಜ್ರದ ಅಡ್ಡಿಗೆ.

ಈ ಅಡ್ಡಿಗೆಗಳನ್ನು ಅಮೇರಿಕನ್ ಡೈಮಂಡ್ ಎಂಬ ಹರಳುಗಳನ್ನು ... ಫ್ಯಾಕ್ಟರಿ ... ಬೆಲೆ ರೂ. ೫.೦೦೦ ... ಗ್ಯಾರಂಟಿ ... ಬೆಲೆ ರೂ. ೫—೧೨—೦.

ವಿಳಾಸ:—ಕೆ. ಎಸ್. ಬೆನ್‌ಸನ್ ಅಂಡ್ ಕೊ,
12—10 ಪೋ || ನಂ || 1246, ಮದರಾಸು.



ಈ ಗಡಿಯಾರಗಳು ಈ ಪಕ್ಷಿಯ ... ಇರುವವು. ... ಫಂಟೆಗಳನ್ನು ... ಬೆಲೆಗೆ ... ಬೇಗನೆ ಬರೆದು ತರಿಸಿಕೊಳ್ಳಿರಿ. ನಮ್ಮಲ್ಲಿ ಸ್ವಲ್ಪವೇ ಇರುತ್ತವೆ. ಇವಕ್ಕೆ ಖಾತ್ರಿಯಾದ 3 ವರ್ಷ ಗ್ಯಾರಂಟಿ ಕೊಡತ್ತೇವೆ. ಕ್ರಯ 1ಕ್ಕೆ 4—4—0.

ವಿಳಾಸ:—ಕೆ. ಎಸ್. ಬೆನ್‌ಸನ್ ಅಂಡ್ ಕೊ,
12—11 ಪೋ || ನಂ || 1246, ಮದರಾಸು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ [illegible] ಅಪೆಕ್ಸ್. ಪ್ರಕಾರ [illegible] ಸ್ಥಾಪಿತವಾಗಿದೆ.

(ಸ್ಥಾಪಿತವಾದದ್ದು 1922ರಲ್ಲಿ)

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	26,800
ಒಟ್ಟು ಬಂದ ಠೇವಣಾತಿ	—	2,50,301

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೆ ಹಣವಾಗಿ ಸಾಲ ಕೊಡಲಾಗುತ್ತದೆ.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0 ರಂತೆ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ತಕರೊಂದಾಪತ್ತಿ [illegible] ರಿಜಿಸ್ಟ್ರಾರವರು [illegible] ಮಾಡುತ್ತಾರೆ.

ಪ್ರೆಸಿಡೆಂಟರು.	ಟ್ರೆಜರರ್
[illegible] ಅಪ್ಪಯ್ಯನವರು	ಮನೆಯಪ್ಪಂಡ [illegible]
ರಾವ್ ಬಹದ್ದೂರ್.	ನವರು.

ಸೆಕ್ರೆಟರಿ

[illegible] ವೆಂಕಪ್ಪಯ್ಯನವರು, [illegible]

[illegible] 1-7-1931.

[illegible]

ಈ [illegible] "ಕೊಡಗು" ಪತ್ರಿಕೆಯ [illegible] ರಶೀತಿ [illegible] ಪುಸ್ತಕಗಳು [illegible] ರಶೀತಿ ಪುಸ್ತಕಗಳು [illegible] ಅವರಿಗೆ [illegible] ರಶೀತಿ [illegible].

ಏಜಂಟರುಗಳು.

ಉತ್ತರ ಕೊಡಗಿಗೆ ಶ್ರೀ [illegible] ಮಾದಯ್ಯನವರು,

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮಿ. [illegible] ಸೋಮಯ್ಯನವರು, (ಬಾಡಿಭಂಡಾರ.)

ಸಾಮೋಕ್ಕ—ಎಸ್. ಆರ್. ವೆಂಕಪ್ಪಯ್ಯನವರು.

[illegible]—ಮಿ. [illegible] ನವರು,

[illegible]—ಮಿ. ಕೆ. ಪಿ. [illegible] ನವರು,

ಮತ್ತು ಅರಮಣಮಾಡ [illegible] ನವರು,

ಹುದಿಕೇರಿ & ತಿತಿಮತ್ತಿ—ಮಿ. ಜಿ. [illegible] ನವರು,

[illegible]—ಮಿ. [illegible] ನವರು,

ಸೂಚನೆ:—[illegible] ರಶೀತಿ [illegible] ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿ [illegible] ಸಹಕಾರ ಸಂಘದ ಮತ್ತು ದವಸ ಭಂಡಾರದ [illegible], ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು [illegible] ನಡಿಸಲು ಅವಶ್ಯವಾಗಿರುವ, [illegible] ಫಾರಮುಗಳೂ, [illegible] ಫಾರಮುಗಳೂ, [illegible] ಫಾರಮುಗಳೂ, [illegible] ಸ್ಟೋರ್ ಕೀಪರ್ [illegible] ಪುಸ್ತಕಗಳೂ, ರಶೀತಿ ಪುಸ್ತಕಗಳೂ, [illegible] ಪುಸ್ತಕಗಳೂ ಮತ್ತು ಚೆಕ್ ಪುಸ್ತಕ [illegible] ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. [illegible] ಆರ್ಡರು ಕೊಟ್ಟಲ್ಲಿ ವಿ. ಪಿ. [illegible] ಗುವುದು.

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.

[illegible] ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.

ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮೊತ್ತದ 1,78,322 ಜನರಿಗೆ 39 ಕೋಟಿ ರೂ.

[illegible] ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4 [illegible] ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದಾಗಿದೆ.

ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಉತ್ತೇಜನವನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬುದು ಇದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ಡೆಹರಾಡೂನ್	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	[illegible]
ಅಜ್ಮೀರ್	ಢಾಕ್ಕಾ	ಲಖ್ನೌ	ಪಾಟ್ನಾ	[illegible]
ಅಲ್ಲಾಹಾಬಾದು	[illegible]	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	[illegible]	ಮಂಡಲೆ	ರಾಯಪುರ	ತಿರುವೆಂದ್ರಮ್
ಭೋಪಾಲ್	[illegible]	[illegible]	ರಾಂಚಿ	[illegible]

[52—1

[illegible] ರೂ. 7—8—0. [illegible] ರೂ. 14

[illegible] ರೂ. 1—4—0 3—8—0; 6—12—0

[illegible] ರೂ. 1, 1 ಡಜನಿಗೆ 3—8—0

ಮನೋಲ್ಲಾಸಿನಿ [illegible] ರೂ. 1, 3 [illegible] 2—10—0. [illegible] ರೂ. 2, 3 [illegible] 5—4—0

ವಿಳಾಸ:— ಮನೋಲ್ಲಾಸಿನಿ ಕಂಪೆನಿ,

52-41 [illegible] 9 [illegible]

ಸಣ್ಣ ಹುಡುಗರ ಸಲುವಾಗಿ

[illegible]

ಇವರ

ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚಿ ಅವು ಮತ್ತು [illegible] ಸುಂದರವಾಗಿ ರುವುದರಿಂದ ಮಕ್ಕಳು ಪ್ರೀತಿ ಯಿಂದ ತೆಗೆದುಕೊಳ್ಳುತ್ತವೆ

ಕ್ರಯ: ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,

52—8 ಗಿರಿಗಾಂವ, ಮುಂಬಯಿ.

Printed & published by M. M. Ganapathy at "Kodagu" Press Mercar[a] for "Kodagu" Ltd.

೩೩ ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ ಔಷಧಗಳು.

೧. ಧಾತುಪುಷ್ಟಿ ಲೇಹ.

ಧಾತು ನಷ್ಟವಾಗುವಿಕೆ, ಧಾತು ಮೂತ್ರದೊಡನೆ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕ ಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ಬಾಧೆ, ರಕ್ತ ಪಿತ್ತ, ಒಳ ಜ್ವರ, ಮಲ ಬದ್ಧತೆ, ತೈಲಾದಿ ಒಳ್ಳೆ ವೃದ್ಧಿ ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದು ಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು. ಕ್ರಯ ಡಬ್ಬಿ 1ಕ್ಕೆ 2—8—0 ಮೂರು ಡಬ್ಬಿಗಳಿಗೆ ರೂ. 7—0—0

೨. ಅಶೋಕಾರಿಷ್ಟ ಮತ್ತು ಮಾತ್ರೆ.

ಹೆಂಗಸರ ಮುಟ್ಟು ದೋಷಗಳು, ಮುಟ್ಟಾಗುವ ಹೊತ್ತು ಅಧಿಕ ನೋವಾಗುವುದು, ಹೊಟ್ಟೆನೋವು, ಸೊಂಟ ನೋವು, ಸೆರಗಿನ ಹೋಗುವಿಕೆ, ಮೂರ್ಛೆ, ಮಲಬದ್ಧತೆ, ಒಳಜ್ವರ, ರಕ್ತಹೀನತೆ, ಕೈಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಅತಿ ಶೀಘ್ರದಲ್ಲಿಯೇ ಗುಣ ಪಡಿಸುವುದು. ಅಶೋಕಾರಿಷ್ಟ ಮತ್ತು ಮಾತ್ರೆಗಳು ಸಾವಿರಾರು ಹೆಂಗಸರಿಗೆ ಅಂತರಂಗ ಆರೋಗ್ಯವನ್ನು ಒದಗಿಸಿ, ಮನೋಭಿಲಾಷೆಯನ್ನು ಪೂರಯಿಸಿರುವವು.

ಕ್ರಯ 1 ಬಾಟ್ಲಿ ಔಷಧ, 1 ಡಬ್ಬಿ ಮಾತ್ರೆ ರೂ. 2 ಆ. 4
3 ಬಾಟ್ಲಿ ಮತ್ತು ಡಬ್ಬಿಗಳಿಗೆ ರೂ. 6 ಆ. 4.

೩. ಮಲೇರಿಯಾ ನಿವಾರಣೆ.

ದಿನ ಬಿಟ್ಟು ಬರುವ ಜ್ವರ, ಚಳಿ ಜ್ವರ, 2 ಯಾ 3 ದಿನಕ್ಕೊಂದು ಸಾರಿ ಬರುವ ಜ್ವರ, ಸದಾ ಬರುವ ಜ್ವರ, ಜ್ವರ ಗಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರ ಗಡ್ಡೆಯನ್ನು ಕರಗಿಸಿ ಶಕ್ತಿಯನ್ನು ಉಂಟು ಮಾಡುತ್ತದೆ. ಬಾಟ್ಲಿ 1ಕ್ಕೆ 1—8—0, 3 ಬಾಟ್ಲಿಗಳಿಗೆ 4—2—0.

೪. ಮೇಹ ಕುಠಾರ. ಇದು ಮೂತ್ರಸ್ಥಾನದಿಂದ ಕೆಂಪು, ಬಿಳಿದು, ಕೀವಿಯಂತೆ ಹೋಗತಕ್ಕ ಮೇಹವನ್ನೂ, ವ್ರಣವನ್ನೂ, ಉರಿಯನ್ನೂ ಗುಣಪಡಿಸುತ್ತದೆ. ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7.

೫. ಇಛ್ಛಾ ಭೇದಿ ಗುಟಿಕೆ. ಭೇದಿಯನ್ನು ಉಂಟುಮಾಡುವ ಸುಖ ವಿರೇಚಕ. ಬಾಟ್ಲಿ 1ಕ್ಕೆ 0—12—0 ಆಣೆ. 3 ಬಾಟ್ಲಿಗಳಿಗೆ 2—2—0.

ಎಲ್ಲಾ ನಮೂನೆಯ ಔಷಧಗಳು ದೊರೆಯುತ್ತವೆ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ರವಾನಿಸಬಹುದು. ಶೀಟಾಗು ಬರಿಸಿ ನೋಡಿರಿ.

ಎಂ. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್,
52—22 **ರಥಬೀದಿ, ಮಂಗಳೂರು, ದ. ಕನ್ನಡ**

ಭಂಗಾರದ ಕೈಗಡಿಯಾರ.



ಈ ಚಿತ್ರದಲ್ಲಿ ಕಾಣುವ ಭಂಗಾರದ ಕೈಗಡಿಯಾರವು ಬಹು ಬಲಿಷ್ಟವಾದ (ಸ್ವಿಸ್ ಮೇಡ್) ಲೀವರ್ ಸಾಮಾನುಗಳಿಂದ ತಯಾರಾದವು. ಸರಿಯಾದ ಗಂಟೆಯನ್ನು ತೋರಿಸುವವು. ಒಳಗಡೆ ಕೆಂಪುಗಳು ಇಟ್ಟಿವೆ. ಇದರ ಬಣ್ಣವು ಭಂಗಾರಕ್ಕೆ ಸರಿಯಾಗಿರುವದು. ಇದನ್ನು ಈ ದರದಲ್ಲಿ ತರಿಸಿಕೊಳ್ಳುವವರಿಗೆ ಒಂದು ವಜ್ರದ ಉಂಗುರ, ಒಂದು ರೋಲ್ಡ್ ಗೋಲ್ಡ್ ಭಂಗಾರದ ಕತ್ತಿನ ಹಾರ (ನೆಕ್ಲೇಸ್), ಒಂದು ಟೇಬಲ್ ಕ್ಲಾಕ್ ಇನಾಮಾಗಿ ಕೊಡುವೆವು. 2 ಗಡಿಯಾರಗಳಿಗೂ ಖಾತ್ರಿಯಾದ 4 ವರ್ಷ ಗ್ಯಾರಂಟಿ ಪತ್ರ ಸಹ ಕಳುಹಿಸುವೆವು.

3 ಬಹುಮಾನಗಳ ಸಹಿತ ರಿಸ್ಟ್‌ವಾಚ್ 1 ಕ್ಕೆ 6—8—0.
ವಿಳಾಸ:— ಸಿಟಿ ಮಾರ್ಟ್,
12—10 168, ಜೈನಾ ಬಜಾರ್, ಮದ್ರಾಸು.

12 ಸೆಂಟ್ ಬಾಟಲ್, ಫೌಂಟನ್ ಪೇನಾ ಲೀವರ್ ಪಾಕೆಟ್ ವಾಚ್ 2—12—0 ಮಾತ್ರ.
ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ
ಲಿಲ್ಲಿ ಆಫ್ ದಿ ವ್ಯಾಲ್ಲಿ ಮತ್ತು ಫೌಂಟನ್ ಪೇನಾ.



ಈ ಸುಗಂಧ ದ್ರವ್ಯವು ಫ್ರಾನ್ಸ್ ದೇಶದಲ್ಲಿ ಪುಷ್ಪಗಳ ಸಾರದಿಂದ ತಯಾರಿಸಿದ್ದು. ಇದರಲ್ಲಿ ಮಿಶ್ರವಸ್ತುಗಳು ಯಾವವೂ ಸೇರಿರುವುದಿಲ್ಲ. ಇದರಲ್ಲಿ ಒಂದೇ ಒಂದು ಬೊಟ್ಟನ್ನು ಬಟ್ಟೆಗೆ ಹಾಕಿದರೆ ಒಂದು ವಾರದ ವರೆಗೂ ಒಂದೇ ಸರಿಯಾಗಿ ಗಮಗಮಿಸುತ್ತಿರುವುದು. ಲಿಲ್ಲಿ ಆಫ್ ದಿ ವ್ಯಾಲಿ ಎಂಬ ಈ ಸುಗಂಧ ದ್ರವ್ಯಕ್ಕೆ ಸಮಾನವಾದದ್ದು ಬೇರೊಂದು ಇಲ್ಲ. ವಿಲಾಯಿತಿಯಲ್ಲಿ ತಯಾರಾದ 14 ಕ್ಯಾರೆಟ್ಟಿನ ಭಂಗಾರದ ನಿಬ್ಬು ಹಾಕಿದ ಫೌಂಟನ್ ಪೇನಾ, ಒಂದೇ ಸಲ 12 ಸೆಂಟ್ ಬಾಟಲ್, ಪೇನಾ ತರಿಸಿದವರಿಗೆ ಒಂದು ಪಾಕೆಟ್ ವಾಚನ್ನು ಇನಾಮಾಗಿ ಕೊಡುತ್ತೇವೆ.

ಕ್ರಯ ರೂ. 2—12—0 ಮಾತ್ರ.

The Legal Trading Co.
12—11 P. B. 243, Madras.

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಎಂಬುವ ಸುಪ್ರಸಿದ್ಧ ದೇಶೀಯ ವಿಮೇ ಸಂಘ.

ಅಧ್ಯಕ್ಷರು:—ಮಾನನೀಯ ಸರ್ ಲಲ್ಲೂಭಾಯಿ ಸಾಮಲದಾಸ್,
ಕೆಟಿ., ಸಿ. ಐ. ಇ., ಜೆ. ಪಿ., ಯವರು.

ಕೊಚ್ಚಿಕಾರ ಬ್ರದರ್ಸ್, ಮದ್ರಾಸು ಬ್ರಾಂಚು ಸೆಕ್ರಟರಿಗಳು.

1 ಭಾಗ್ಯವಂತರ ಭಂಡಾರ, ವ್ಯಾಪಾರಸ್ಥರ ಕೋಶಾಗಾರ, ಕುಟುಂಬದ ಸಂರಕ್ಷಣಾನಿಲಯ. ಬಡವರ ಜೀವನಾಧಾರ ಇದೇ ಜೀವ ವಿಮೆಯ ತತ್ವವು.

2. ಹಿಂದೂಸ್ಥಾನದ ನಿವಾಸಿಯರಲ್ಲಿ ವಿಮೆ ತೆಗೆಯಬೇಕೆನ್ನುವವರ ಪ್ರಯೋಜನಾರ್ಥವಾಗಿ ಈ ಕಂಪೆನಿಯು ಭಾರತೀಯರ ಉತ್ಸಾಹದ ಆಡಳಿತದಿಂದ ಬಹಳ ಜೋಕೆ ನಾಡಿ ಇಂಡಿಯಾ ಸರ್ಕಾರದ ಇಂಡಿಯನ್ ಟ್ರಸ್ಟ್ ಆಕ್ಟಿಗೆ ಒಳಪಟ್ಟು ಸರ್ಕಾರದ ಭದ್ರತೆಯಿಂದ ದೇಶೀಯರ ಸೇವೆಯಲ್ಲೇ ನಿರತವಾಗಿ ಹಿಂದೂಸ್ಥಾನದ ಎಲ್ಲಾ ಕಡೆಗಳಲ್ಲೂ ಅತಿ ಕೀರ್ತಿಯನ್ನು ಪಡೆದಿರುತ್ತೆ.

3. ಈ ಸ್ವದೇಶೀ ಕಂಪೆನಿಯು ಪೊಲಿಸಿದಾರರಿಗೆ ಪೊಲಿಸಿ ಅವಧಿ ಪೂರೈಸಿದನಂತರವಾಗಲೀ ಅಥವಾ ಮಧ್ಯದಲ್ಲು ಮರಣಾನಂತರ ವಾರೀಸುದಾರರಿಗಾಗಲೀ ಹೆಚ್ಚಿನ ಬರ್ಚಿಗೆ ಅಸ್ಪದ ಕೊಡದೆಯೂ, ದೀರ್ಘ ಸಮಯ ತೆಗೆದುಕೊಳ್ಳದೆಯೂ ಶೀಘ್ರದಲ್ಲಿ ವಿಮೇ ಮೊಬಲಗನ್ನು ಲಾಭ ಸಹಿತ ಪಾವತಿಕೊಡುವುದರಲ್ಲಿ ಹೆಸರುಗೊಂಡಿವೆ.

4. ಧನಿಕರಿಂದಲ ಮಹನೀಯರಿಂದ ಸ್ಥಾಪಿಸಲ್ಪಟ್ಟ ದೇಶೀಯರಿಂದಲೇ ಅತಿ ಕಡಿಮೆ ಖರ್ಚಿನಿಂದ ನಡೆಸಲ್ಪಡುವ ಈ ಸ್ವದೇಶೀ ಕಂಪೆನಿಯಲ್ಲಿ ಇಂದು ಭಾಗಗಳಾಗಿ, **ಪತಿಪತ್ನಿಯರಿಗೆ ಮತ್ತು ವ್ಯಾಪಾರಸ್ಥರು ವಗೈರೆರಿಗೆ ಏಕೀಭವಿಸಿ (ಜಾಯಿಂಟ್ ಲೈಫ್) ಪೊಲಿಸಿ** ತೆಗೆದುಕೊಳ್ಳಲು ಈ ಕಂಪೆನಿಯು ತುಂಬಾ ಅನುಕೂಲಗಳನ್ನು ಕಲ್ಪಿಸಿರುತ್ತೆ. ಇಂಥ ಸುಸಮಯವನ್ನು ಎಂದಿಗೂ ಕಳಕೊಳ್ಳಬಾರದು.

ಆಫೀಸು—
ಟೆಂಪಲ್ ಸೈಡ್,
ಮಡಿಕೇರಿ. (26—20)

ಬಿ. ಎಸ್. ಐಯ್ಯಪ್ಪ,
ಕೊಡಗು ಚೀಫ್ ಏಜೆಂಟ್.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

1. ಉತ್ತಮ ತರಹ ಒಂದು ಸೆಟ್ ಜರ್ಮನ್ ರೀಡ್ಸ್ ಹಾಕಿರುವ ಸಿಂಗಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 20—0—0
   " ಮತ್ತು 22—8—0
2. ಎಟಿ ೯ ಉತ್ತಮ ತರಹ ಹಾರ್ಮೋನಿಯಂ " 1ಕ್ಕೆ ರೂ. 25—0—0
   " ಮತ್ತು 27—8—0
3. ಏಟೋ ಉತ್ತಮ ತರಹದ್ದು, ದೂಳು ಬೀಳದಂತೆ ಕೇಸಿನ ಮೇಲೆ ಪೂರ್ತಿ ಮುಚ್ಚಳವುಳ್ಳ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ ರೂ. 27—8—0
4. ಬಾಳಿಕೆಯೂ, ಬಂದೋಬಸ್ತೂ, ಸುಸ್ವರವುಳ್ಳದ್ದೂ, ಅನೇಕ ವರ್ಷಗಳ ವರೆವಿಗೆ ಬಾಳಿಕೆ ಬರತಕ್ಕದ್ದೂ ಆದ ಹೊಸದಾಗಿ ಸೃಷ್ಟಿ ಆಗಿರುವ ಫ್ರೆಂಚ್ ರೀಡ್ಸ್ ನಮೂನೆ ಇರುವ ನಮ್ಮ ಹೆಸರಿನ ರೀಡ್ಸ್ ಹಾಕಿರುವ "ಸಿದ್ದಪ್ಪಾಸ್ ಫ್ಲೂಟ್" ಸಿಂಗಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ 42—8—0
5. ಉತ್ತಮ ತರಹ 2 ಸೆಟ್ ಜರ್ಮನ್ ರೀಡ್ಸ್ ಹಾಕಿರುವ, ದೂಳು ಬೀಳದಂತೆ ಕೇಸಿನ ಮೇಲೆ ಪೂರ್ತಿ ಮುಚ್ಚಳವುಳ್ಳ ಡಬ್ಬಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ ರೂ. 37...
6. ಉತ್ತಮ ತರಹ 2 ಸೆಟ್ ಜರ್ಮನ್ ಮೇಕ್ ರೀಡ್ಸ್ ಹಾಕಿರುವ, ಕೈನಿಂದಾಗಲೀ ಅಥವಾ ಕಾಲಿನಿಂದಾಗಲೀ ಬಾರಿಸಲು ಅನುಕೂಲಿಸುವಂತೆ ತಯಾರಿಸಿರುವ "ಸ್ಪೆಷಲ್ ಫ್ಲೂಟ್" ಡಬ್ಬಲ್ ರೀಡ್ಸ್ ಹ್ಯಾಂಡ್ ಲೆಗ್ ಹಾರ್ಮೋನಿಯಂ 1ಕ್ಕೆ ರೂ. 7...

ನಮ್ಮ ಟಿಂಬರ್ ಡಿಪೋನಲ್ಲಿ ಕಟ್ಟಡಗಳಿಗೂ, ಫರ್ನಿಚರ್ ತಯಾರಿಸಲೂ ಬೇಕಾದ ಎಲ್ಲಾ ನಮೂನೆ ನಾಟಗಳನ್ನು ಸುಲಭ ದರದಿಂದ ಬಿಕರಿಗಿಟ್ಟಿರುವುದಲ್ಲದೇ, ಗಿರಾಕಿಗಳು ಅಪೇಕ್ಷಿಸುವ ಸೈಜಿಗೆ ಕುಯಿಸಿಯೂ ರಿಯಾಯಿತಿ ದರದಿಂದ ಸಪ್ಲೈ ಮಾಡುತ್ತೇವೆ. ಹೆಚ್ಚಿಗೆ ವಿಷಯಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಳಾಸ—ಯಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್
ಹಾರ್ಮೋನಿಯಂ ಮತ್ತು ಟಿಂಬರ್ ವ್ಯಾಪಾರಿಗಳು
ಹಾಬೀವಿಲಾಸ ಮಾರ್ಕೆಟ್
22—36

ಪತ್ರವ್ಯವಹಾರ.

[ಬಾತ್ಮಿದಾರರು ಪತ್ರದ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಸಾಹುಕಾರರಲ್ಲಿ ವಿಜ್ಞಾಪನೆ.

ಅಯ್ಯಾ,

ಕಳೆದ ಎರಡು ವರ್ಷಗಳಿಂದ ನಮ್ಮ ದೇಶವು ಎಷ್ಟರ ಮಟ್ಟಿಗೆ ಆರ್ಥಿಕ ಹೀನ ಸ್ಥಿತಿಗೆ ತುತ್ತಾಗಿದೆ ಎಂದು ನಮ್ಮ ವಾಚಕ ಮಹಾಶಯರಿಗೆ ವೇದ್ಯವಿರಬಹುದು. ಇದು ಇನ್ನೂ ಮುಂದುವರಿಯುತ್ತಾ ಹೋದ ಹಾಗೆಲ್ಲಾ ಗರೀಬ ರೈತರ ಕಷ್ಟವು ಮತ್ತಷ್ಟು ಹೆಚ್ಚುವುದು. ಕಳೆದ ವರ್ಷ ಭತ್ತದ ಧಾರಣೆಯು ಕಮ್ಮಿಯಾಗಿತ್ತು. ಈ ವರ್ಷವೂ ಸಹ ಭತ್ತದ ಧಾರಣೆಯು ಕಳೆದ ವರ್ಷಕ್ಕಿಂತ ಬಹಳ ಕಮ್ಮಿ. ಪೇಟೆಪಟ್ಟಣಗಳಲ್ಲಿ ಗಾಡಿ ಒಂದರ ಬರೇ 40—45 ರೂ. ಮಾತ್ರ! ಅದರ ಈ ಕ್ರಯವು ಬೇರೆ ಎಲ್ಲಾ ಗ್ರಾಮಗಳಿಗೆ ಸಿಕ್ಕುವುದಿಲ್ಲ. ಸ್ವಲ್ಪ ಹತ್ತಿರದ ಗ್ರಾಮಗಳಿಗೆ ಮಾತ್ರ ಪೇಟೆಯ ಧಾರಣೆಗಿಂತ 2—3 ರೂ. ಕಮ್ಮಿಯಲ್ಲಿ ಸಿಕ್ಕುವುದು. ಇನ್ನುಳಿದ ಗ್ರಾಮದ ರೈತರಿಗೆ ಬಹಳ ಕಷ್ಟ. ಗಾಡಿಗೆ ಬರೇ 30—35 ರೂಪಾಯಿ ಕ್ರಯ ಸಿಕ್ಕುವುದು. ಇದೂ ಸಹ ವ್ಯಾಪಾರಸ್ಥರ ಮನಸ್ಸು ಬಳಿಕ.

ಕೆಲವು ವರ್ಷಕ್ಕೆ ಮೊದಲು ನಮ್ಮ ಸರ್ಕಾರವು ಗರೀಬರಿಗೆ ಸಹಾಯಕವಾಗಿ ನ್ಯಾಯವಾದ ಬಡ್ಡಿಯ ದರದಲ್ಲಿ ಗ್ರಾಮಾಂತರಗಳಿಗೆ ಕೊಡುತ್ತಾ ಬಂದ ವರ್ತಮಾನವು ... ಇಂಥ ವರ್ತಮಾನವು ಈಗ ಕೇಳುವುದೇ ಇಲ್ಲ. ರೈತರು ಪೇಟೆಪಟ್ಟಣಗಳ ಸಾಹುಕಾರರಿಂದಾಗಲೀ ಯಾ ಗ್ರಾಮದಲ್ಲಿಯ ಸಾಹುಕಾರರಿಂದಾಗಲೀ 100 ರೂಪಾಯಿ ಸಾಲ ತೆಗೆದರೆ ಅದಕ್ಕೆ 24 ರೂ. ಬಡ್ಡಿ ಕೊಡುವುದು ಎಲ್ಲರಿಗೂ ಗೊತ್ತಿದ ಸಂಗತಿಯಾಗಿದೆ. ಈ ಬಡ್ಡಿ ಹಣ ಮಾತ್ರ ಸಾಲಗಾರರಿಂದ ವಾಯಿದೆಯಂತೆ ಒಂದು ಗಾಡಿ ಭತ್ತ ಮಾರಬೇಕಾಗುವುದು. ಹೀಗಾಗಿ ಅಸಲು ರೂಪಾಯಿ ಸಲ್ಲಿಸುವ ಸಂಧರ್ಭವೇ ಇಲ್ಲ. ಪುನಹ ಮುಂದಿನ ವರ್ಷವೂ ನೂರು ರೂಪಾಯಿಗೆ 24 ರೂ. ಬಡ್ಡಿ. ಹೀಗಾಗಿ ಗರೀಬ ರೈತರು ಬಹಳ ಕಷ್ಟ ನಷ್ಟಗಳಿಗೆ ಈಡಾಗಬೇಕಾಗುವುದು. ಆದ್ದರಿಂದ ಸರ್ಕಾರವು ರೈತರಿಗೆ ಅನುಕೂಲವಾಗುವಂಥ ಏರ್ಪಾಡನ್ನು ಇಡಲು ನಮ್ಮ ಕೌನ್ಸಿಲು ಮೆಂಬರರು ಪ್ರಯತ್ನ ತೆಗೆದುಕೊಳ್ಳುವರಾಗಿ ನಂಬುತ್ತೇನೆ.

ಮೊನ್ನೆ ತಾನೇ ನಡೆದ ಸೆಂಟ್ರಲ್ ಬ್ಯಾಂಕಿನ ಜನರಲ್ ಮೀಟಿಂಗಿನಲ್ಲಿ ಬಡ್ಡಿಯ ವಿಷಯ ಚರ್ಚೆ ನಡೆದು, ಬ್ಯಾಂಕು ಸೊಸೈಟಿಗಳಿಗೆ ಕೊಡುವ ಸಾಲಕ್ಕೆ 100 ರೂಪಾಯಿಗೆ ಈ ತನಕ ಇದ್ದ 7—13—0 ಆನೆ ಬಡ್ಡಿಯನ್ನು ಈಗ 7—4—0 ಕ್ಕೆ ಇಳಿಸಿರುವರು. ಹಾಗಾದರೆ ಸೊಸೈಟಿಯವರು ಮೆಂಬರುಗಳಿಗೆ ಕೊಡುವ ಸಾಲಕ್ಕೆ ಬಡ್ಡಿಯನ್ನು ಇಳಿಸುತ್ತಾರೋ ನೋಡಬೇಕಾಗಿದೆ.

ಹ್ಯಾಗೂ ನಮ್ಮ ಸೊಸೈಟಿಗಳವರೂ ಮತ್ತು ಸಾಹುಕಾರರೂ ಸಹ ಮರುವಾವತಿಯಾಗುವ ಈ ಸಮಯದಲ್ಲಿ ತಮ್ಮ ಬಡ್ಡಿಯನ್ನು ಕೆಲವು ಮಟ್ಟಿಗಾದರೂ ಇಳಿಸಿ, ಗರೀಬ ರೈತರು ಪಡುವ ಕಷ್ಟವನ್ನು ಮನಸ್ಸಿಗೆ ತಂದು ತಮ್ಮ ಉದಾರ ಸ್ವಭಾವವನ್ನು ಬಿಚ್ಚಿ ತೋರಿಸಲು ಒಳ್ಳೆ ಸಮಯ ಬಂದದ್ದು ಮರೆಯಬಾರದಾಗಿ ನಾನು ಈ ಮೂಲಕ ವಿಜ್ಞಾಪಿಸುವೆನು.

ಯಂ. ಯಂ. ಬಿ.

ರಜೆಯಲ್ಲಿ ಹೋಗುವ ಸಿವಿಲ್ ಸರ್ಜನರು.

ನಮ್ಮ ಈಗಿನ ಸಿವಿಲ್ ಸರ್ಜನರು ಸದ್ಯದಲ್ಲೇ ರಜೆಯಲ್ಲಿ ಹೋಗುವರೆಂದೂ, ವಾಪಸು ನಮ್ಮ ದೇಶಕ್ಕೆ ಬರಲಾರರೆಂದೂ ತಿಳಿದುಬಂದಿದೆ. ಮಿ. ಫಾರ್ನ್‌ಟೇನ್‌ರವರು ನಮ್ಮ ದೇಶಕ್ಕೆ ಬಂದು ಇಂದಿಗೆ ಏಳು ವರ್ಷಗಳಾದುವು. ಇಷ್ಟು ವರ್ಷಗಳಲ್ಲಿ ಇದ್ದು ನಮ್ಮ ದೇಶವನ್ನು ಬಿಟ್ಟು ಹೋಗುವಾಗ ನಮ್ಮ ದೇಶದಲ್ಲಿ ಅವರು ಮಾಡಿದ ಕೆಲವು ಜನೋಪಕಾರದ ಕಾರ್ಯಗಳನ್ನು ನಾವು ಶ್ಲಾಘಿಸಿ ಅದಕ್ಕಾಗಿ ನಮ್ಮ ಅಭಿನಂದನೆಗಳನ್ನು ಅರ್ಪಿಸುವುದು ನಮ್ಮ ಕರ್ತವ್ಯವಾಗಿದೆ.

ಅವರು ಮಾಡಿದ ಮಹತ್ಕಾರ್ಯಗಳಲ್ಲಿ ಮಡಿಕೇರಿ, ... ಪೇಟೆ ಮತ್ತು ಸಂಪಾಜೆಯಲ್ಲಿ ಆಸ್ಪತ್ರೆಗಳನ್ನು ಸ್ಥಾಪಿಸಿ ಮಡಿಕೇರಿಯಲ್ಲಿ ಒಬ್ಬ ಲೇಡಿ ಡಾಕ್ಟರನ್ನು ನೇಮಿಸಿದ್ದು ಮುಖ್ಯವಾಗಿದೆ. ಈ ಎಲ್ಲಾ ಕಾರ್ಯಗಳ ಪೈಕಿ ಲೇಡಿ ಡಾಕ್ಟರನ್ನು ನೇಮಿಸಿದ್ದೇ ಅತ್ಯಂತ ಮುಖ್ಯ ಉಪಕಾರ. ಏಕೆಂದರೆ, ಇಷ್ಟರ ವರೆಗೆ ನಮ್ಮ ದೇಶದ ಜನ ... ಸ್ತ್ರೀಯರ ಚಿಕಿತ್ಸೆಯ ವಿಷಯ ನ್ಯಾಯವಾ... ಸದರಿ ಲೇಡಿ ಡಾಕ್ಟರ ಹುದ್ದೆ ... ರಿಜಿಸ್ಟ್ರೇಟಿವ್ ಕೌನ್ಸಿಲಿನಲ್ಲಿ ... ಮಾಡಬೇಕಾಯಿತು. ಹಾಗೆ ... ಈಗ ಅದು ಖಾಯಂ ಆಗಿ ನಿಲ್ಲು... ಬಂದಿದೆ. ಕಳೆದ ವಾರ ಪತ್ರಿಕೆ... ವನ್ನು ಎಲ್ಲರೂ ನೋಡಿರು... ಹುದ್ದೆಗೆ ಈಗ ... ಷ್ಟು ಓದಿದವರು ಸಿಕ್ಕುವುದು ಅಸಾಧ್ಯ. ಬೇರೆ ಡಾಕ್ಟರುಗಳಿಗೆ ತಿಂಗಳಿಗೆ ರೂ. 75 ರಿಂದ 200/ರ ವರೆಗೆ ಸಂಬಳವಿರುವಾಗ ಅವರಷ್ಟೇ ಓದಿದ ಲೇಡಿ ಡಾಕ್ಟರಿಗೆ ಬರೇ 50 ರೂಪಾಯಿ ಸಂಬಳ ನಿಶ್ಚೈಸಿರುವುದು ಪೂರಾ ಅನ್ಯಾಯ. ಬೇರೆ ಕಡೆಗಳಲ್ಲೆಲ್ಲಾ ಲೇಡಿ ಡಾಕ್ಟರುಗಳಿಗೆ ಇತರ ಡಾಕ್ಟರುಗಳಿಗಿಂತ ಹೆಚ್ಚು ಸಂಬಳ ಕೊಡುತ್ತಿರುವಾಗ ನಮ್ಮ ದೇಶದಲ್ಲಿ ಕಮ್ಮಿ ಕೊಡುತ್ತಿರುವುದು ಯಾವ ನ್ಯಾಯ? ಹೀಗೆ ಸಂಬಳದವರು ಸಿಬ್ಬಂದಿ ಚೋರಿಯನ್ನು ಜಾರಿಗೆ ತರಬೇಕೆಂದಿದ್ದರೆ, ಗಂಡಸು ಡಾಕ್ಟರುಗಳ ಪೈಕಿ ಒಬ್ಬರನ್ನು ತೆಗೆಯುವ ಆಲೋಚನೆಯನ್ನು ಮಾಡಬಹುದು. ಈಗಿರುವ ಕಮ್ಮಿ ಸಂಬಳದಲ್ಲಿ ಹೆಚ್ಚು ಓದಿದ ಲೇಡಿ ಡಾಕ್ಟರುಗಳು ಖಾಯಂ ನಿಲ್ಲಲಾರರು. ಸಾಧಾರಣ ತರಬೇತು ಹೊಂದಿದ ನರ್ಸುಗಳಿಗೆ ನೂರು ರೂಪಾಯಿ ಸಂಬಳ ಕೊಡುತ್ತಿರುವಾಗ ಸ್ಪೆಷಲ್ ಪ್ರೈವೇಟ್ ಪರೀಕ್ಷೆಯಾಗಿ ಐದು ವರ್ಷ ಡಾಕ್ಟರ್ ಕೆಲಸದಲ್ಲಿ ತರಬೇತು ಹೊಂದಿದ ಲೇಡಿ ಡಾಕ್ಟರಿಗೆ ಬರೇ 50 ರೂಪಾಯಿ ಕೊಡುವುದು ಎಷ್ಟು ದೊಡ್ಡ ಅನ್ಯಾಯವೆಂದು ಇಲ್ಲಿ ಹೇಳುವುದು ಅಗತ್ಯವಿಲ್ಲ.

ಈಗ ಆಸ್ಪತ್ರೆಯಲ್ಲಿ ಒಬ್ಬ ಲೇಡಿ ಡಾಕ್ಟರಿಗೆ ಸಾಕಷ್ಟು ಕೆಲಸವು ಇಲ್ಲವೆಂದು ಹೇಳುವುದು ನಿಜವಲ್ಲ. ಸಾಧಾರಣ ಮೂವತ್ತು ಜನ ಸ್ತ್ರೀಯರಿಗೆ ಅನುಕೂಲವಿರುವ ಒಂದು ಪ್ರತ್ಯೇಕ ವಾರ್ಡ್ ಇರುವಾಗ ಒಬ್ಬ ಲೇಡಿ ಡಾಕ್ಟರಿಗೆ ಹೇಗೂ ಸಾಕಷ್ಟು ಕೆಲಸವು ಇದ್ದೇ ಇದ್ದೀತು. ಇದೂ ಅಲ್ಲದೆ ಹೊರಗಿನಿಂದ ಬಂದು ಮದ್ದು ತೆಗೆದುಕೊಂಡು ಹೋಗುವವರ (Out patients) ಪೈಕಿ ಶೇಕಡ 75 ರಷ್ಟು ಹೆಂಗಸರೂ ಮತ್ತು ಮಕ್ಕಳೂ ಇರುವರು. ಸ್ತ್ರೀಯರ ಚಿಕಿತ್ಸೆಯನ್ನೆಲ್ಲಾ ಲೇಡಿ ಡಾಕ್ಟರರೇ ಮಾಡುವುದಾದರೆ ಒಬ್ಬ ಲೇಡಿ ಡಾಕ್ಟರು ಸಾಲದೆ ಇಬ್ಬರಾದರೂ ಜನರಿಗೆ ಸಾಕಷ್ಟು ಕೆಲಸವಿರಬಹುದು. ಹೆರಿಗೆಗಳಲ್ಲಿ ಸಾಧಾರಣವಾಗಿ ನರ್ಸುಗಳನ್ನು ಮಾತ್ರ ಕರೆಯಿಸುವುದು ರೂಢಿಯಾಗಿದೆ. ಹೆಚ್ಚು ಕಷ್ಟಕರದ ಹೆರಿಗೆಯಾಗಿದ್ದ (Abnormal cases of delivery) ವಿಶೇಷ ಚಿಕಿತ್ಸೆ ಅವಶ್ಯಕವಾದಾಗ ಬೇಕಾದರೆ ಮಾತ್ರ ಡಾಕ್ಟರನ್ನು ಕರೆಯಿಸಿಕೊಳ್ಳುವರು. ಹೀಗೆ ಡಾಕ್ಟರನ್ನು ಕರೆಯಿಸಿಕೊಳ್ಳುವುದು ಶೇಕಡ 5 ರಷ್ಟು ಹೆಂಗಸರಲ್ಲಿ ಕೂಡಾ ಇಲ್ಲ. ಆದ್ದರಿಂದ ಲೇಡಿ ಡಾಕ್ಟರಿಗೆ ಸಾಕಷ್ಟು ಹೆರಿಗೆ ಕೆಲಸವು ಸಿಕ್ಕುವುದಿಲ್ಲವೆಂದು ಹೇಳುವುದು ಸರಿಯಲ್ಲ. ಆಸ್ಪತ್ರೆಯಲ್ಲಿ ಸಾಧಾರಣ ಹೆರಿಗೆಗಳಲ್ಲಿ ಕೂಡ ಲೇಡಿ ಡಾಕ್ಟರ ಸಹಾಯವನ್ನು ಕೊಡುವುದು ಅತ್ಯಂತ ಅವಶ್ಯಕ. ಖಾಯಂ ಲೇಡಿ ಡಾಕ್ಟರು ಇದ್ದಾರೆಂತ ತಿಳಿದರೆ ಈಗ ಬರುವುದಕ್ಕಿಂತಲೂ ಹೆಚ್ಚು ಸ್ತ್ರೀಯರು ಆಸ್ಪತ್ರೆಗೆ ಬರಬಹುದು. ಗಂಡಸರು ಡಾಕ್ಟರರಾಗಿರುವಾಗ ಘೋಷಾ ಸ್ತ್ರೀಯರಿಗೂ, ನಾಚಿಕೆಯುಳ್ಳ ಇತರ ಸ್ತ್ರೀಯರಿಗೂ ಬಹಳ ಕಷ್ಟವಾಗಿರುವುದು.

ಈ ಮೇಲಿನ ಕಾರಣಗಳಿಂದ ನಮ್ಮ ಲೇಡಿ ಡಾಕ್ಟರ ಹುದ್ದೆಯ ಸಂಬಳವನ್ನು ಸದ್ಯ 75 ರೂಪಾಯಿಗಳಿಗಾದರೂ ಏರಿಸಿ ಸದರಿ ಹುದ್ದೆಯನ್ನು ಖಾಯಂ ಮಾಡತಕ್ಕದ್ದು. ಮತ್ತು ಕಾಯಿಲೆಸ್ಥರಿಗೆ ಅನುಕೂಲವಾಗುವಂತೆಯೂ, ಹೆಂಗಸರಿಗೆ ಒಡನೆ ಸಹಾಯ ಸಿಕ್ಕುವಂತೆಯೂ ಸದರಿ ಲೇಡಿ ಡಾಕ್ಟರಿಗೆ ಖಾಯಂ ವಾಸದ ಬಿಡಾರವನ್ನು ಆಸ್ಪತ್ರೆಯಲ್ಲಿಯೇ ಏರ್ಪಡಿಸಿ ಕೊಡತಕ್ಕದ್ದು. ಈ ವಿಷಯದಲ್ಲಿ ಕೊಡಗಿನ ಫೈನಾನ್ಸ ಕಮಿಟಿ ಮೆಂಬರುಗಳೆಲ್ಲರೂ ಲೇಡಿ ಡಾಕ್ಟರ ಸಂಬಳವನ್ನು ಹೆಚ್ಚಿಸಲು ತಮ್ಮ ಒಪ್ಪಿಗೆಯನ್ನು ಕೊಟ್ಟಿರುವರೆಂದು ನಾನು ತಿಳಿಯುತ್ತೇನೆ. ನಮ್ಮ ಸಿವಿಲ್ ಸರ್ಜನರು ತಾವು ಹೋಗುವುದರ ಮೊದಲು ಇಷ್ಟೊಂದು ಉಪಕಾರವನ್ನು ಮಾಡಿದರೆ ನಮ್ಮ ದೇಶದ ಸ್ತ್ರೀಯರೆಲ್ಲರೂ ಅವರಿಗೆ ಕೃತಜ್ಞರಾಗುವುದರಲ್ಲಿ ಸಂಶಯವಿಲ್ಲ. ಅಲ್ಲದೆ, ಅವರು ಮಾಡಿದ ಮಹತ್ಕಾರ್ಯಗಳ ಕೊನೆಯ ಭಾಗವನ್ನು ಪೂರ್ಣಗೊಳಿಸಿದಂತಾಗುವುದು. ನಮ್ಮ ಸರಕಾರದವರು ಕೂಡ ಈ ವಿಷಯದಲ್ಲಿ ಗಮನವಿಟ್ಟು ನಮ್ಮ ದೇಶದ ಸ್ತ್ರೀಯರ ಕಷ್ಟನಿವಾರಣೆ ಮಾಡಬೇಕಾಗಿ ಕೋರುತ್ತೇನೆ.

"ಪಟ್ಟಣಿಗ"

ಸೋಮವಾರಪೇಟೆ ಬಿಸಿಲೆಗಾಟ್ ರೋಡ್.

ಡಿ. ಬೋರ್ಡ್ ಮಹನೀಯರುಗಳಲ್ಲಿ ವಿನಂತಿ.

ಸೋಮವಾರಪೇಟೆಯಿಂದ ಜಕ್ಕನಳ್ಳಿಗೆ ಹೋಗುವ ಡಿ. ಬೋರ್ಡ್ ರಸ್ತೆಯ 7 ಮೈಲು 3 ಫರ್ಲಾಂಗಿನಿಂದ ಕುಂದಳ್ಳಿ ಗ್ರಾಮಕ್ಕಾಗಿ ಬಿಸಿಲೆಗಾಟ್ ರಸ್ತೆಯಾದ ಮೈಸೂರು ಶೀಮೆ ಒಣಗೂರು ರಸ್ತೆಗೆ ಕೂಡಿಸಿ ಒಂದು ಗಾಡಿ ರಸ್ತೆಯನ್ನು ಮಾಡಿಸಿ ಕೊಡಬೇಕಾಗಿಯೂ ನಾವು ಡಿ. ಬೋರ್ಡ್ ಮೆಂಬರು ಮ. ರಾ. ಶ್ರೀ. ಚೌಡ್ಲು ಕಾಳಪ್ಪನವರ ಮೀಟಿಂಗಿನಲ್ಲಿ ಒಂದು ಠರಾವು ತಂದದಕ್ಕೆ ಬೋರ್ಡಿಗೆ ಸಮ್ಮಂದಪಟ್ಟ ಮಹನೀಯರುಗಳು ರಸ್ತೆಯನ್ನು ಮಾಡಬೇಕಾಗಿರುವ ಸ್ಥಳವು ಬೆಟ್ಟಪ್ರದೇಶವಾಗಿರುವದರಿಂದ ಗಾಡಿರಸ್ತೆಯನ್ನು ಮಾಡಿಸಲು ತುಂಬಾ ಅಡಚಣೆ ಇರುತ್ತದೆ. ಈ ರಸ್ತೆಯನ್ನು ಮಾಡಿಸುವ ಸ್ಥಳವನ್ನು ಪ್ರಸಿಡೆಂಟರು ಹುಜೂರ್ ಕಮಿಶನರ್ ಸಾಹೇಬರವರು ಪರಿಶೀಲಿಸಿದ ನಂತರ ರಸ್ತೆಗೆ ಬೇಕಾಗುವ ಮೊಬಲಗನ್ನು ಮಂಜೂರು ಮಾಡಬಹುದಾಗಿಯೂ ತಾ 27—10—31 ರ ಮೀಟಿಂಗಿನಲ್ಲು ತೀರ್ಮಾನವಾಗಿರುವದು ಸರ್ವರಿಗೂ ತಿಳಿದ ವಿಷಯವಾಗಿರುತ್ತದೆ.

ಹುಜೂರ್ ಕಮಿಶನರ್ ಸಾಹೇಬರವರ ಅಪ್ಪಣೆ ಮೇರೆ [illegible] ಜಂಗಪ್ಪನವರು ತಾರೀಕು 17—11—31 ರಲ್ಲು ರಸ್ತೆಯನ್ನು ಮಾಡಬೇಕಾಗಿರುವ ಸ್ಥಳವನ್ನು ಪರಾಂಬರಿಸಿದರು. ನಮ್ಮ ಬೋರ್ಡಿನ ಮೆಂಬರುಗಳವರು ರಸ್ತೆ ಹೋಗಬೇಕಾಗಿರುವ ಸ್ಥಳವನ್ನು ವಿವರಿಸಿ ಬೆಟ್ಟ ಗುಡ್ಡ ಪ್ರದೇಶದಲ್ಲು ರಸ್ತೆಯನ್ನು ತೆಗೆದುಕೊಂಡು ಹೋಗಲು ಅಸಾಧ್ಯವೆಂಬ ಸಂಶಯವನ್ನು ಹೋಗಲಾಡಿಸಿದ ನಂತರ ಗ್ರಾಮದ ರೈತರು ನೇರ ಗಾಡಿಯು ನಡ್ಡಗಲೀ, ಕಡಿದಾಗಲೀ ತೆಗೆದುಕೊಂಡು ಹೋಗುವ ಹಾಗೆ ರಸ್ತೆ ಮಾಡಿದರೆ ತಾವು ಬೋರ್ಡಿನಿಂದ ಹಣ ಕೊಡುವದಾಗಿ ವಾಗ್ದಾನವಿತ್ತರು. ಈ ವಿಷಯ ತಾರೀಕು 4—12—31 ರ ಕೊಡಗು ಪತ್ರಿಕೆಯಲ್ಲು ಒಬ್ಬ ಮಹನೀಯರು ಪ್ರಕಟಿಸಿರುವುದು ಸರ್ವರ ಅವಗಾಹನೆಯಲ್ಲು ಇರಬಹುದಾಗಿರುತ್ತದೆ.

ಡಿ. ಬೋರ್ಡ್ ಮಹನೀಯರುಗಳ ವಾಗ್ದಾನದ ಮೇರೆ ಕುಂದಳ್ಳಿ ಗ್ರಾಮಸ್ಥರುಗಳು ಜಕ್ಕನಳ್ಳಿ ರಸ್ತೆಯ 7 ಮೈಲು 3 ಫರ್ಲಾಂಗಿನಿಂದ ಕುಂದಳ್ಳಿ ಗ್ರಾಮಕ್ಕಾಗಿ ಅಂದಾಜು 3½ ಮೈಲು ರಸ್ತೆಯನ್ನು ಗಾಡಿ ಹೋಗುವ ಹಾಗೆ ಮಾಡಲು 800 ರೂಪಾಯಿಗೆ ಕಂಟ್ರಾಕ್ಟ ಕೊಟ್ಟು ತಾರೀಕು 1—12—31 ರಿಂದ ರಸ್ತೆ ಕೆಲಸ ಸುರುಮಾಡಿ ತಾರೀಕು 8—2—32 ಕ್ಕೆ ಪೂರೈಸಿರುವದಾಗಿದೆ. ರಸ್ತೆಯ ಮಧ್ಯೆ ಕೆಲವು ಕಲ್ಲುಗಳು ಇದ್ದು ಗಾಡಿ ಹೋಗಲು ಅಡಚಣೆಯಾಗಿರುವದಲ್ಲದೆ ಗಾಡಿ ಹೋಗಲು ಯಾವ ಕುಂದಕವು ಸದರಿ ರಸ್ತೆಯಲ್ಲು ಇರುವದಿಲ್ಲ. ಮೈಸೂರು ಶೀಮೆ ಗ್ರಾಮಸ್ಥರಾದ ಪಟ್ಟದ ಪಟೇಲ್ ದೊಡ್ಡೇಗೌಡರು ಮತ್ತು ನೇರಳೆ ಪಟೇಲ್ ಕಣ್ಣಪ್ಪಗೌಡರು ಸಹ ನಮ್ಮ ಸಹಾಯದಿಂದ ಬಿಸಿಲೆಗಾಟ್ ರಸ್ತೆಗೆ ಕೂಡಿಸಲು ರಸ್ತೆಯ ಕೆಲಸವನ್ನು ತಾರೀಕು 8—2—32 ರಿಂದ ಸುರುಮಾಡಿರುತ್ತಾರೆ. ಈ ರಸ್ತೆಯ ಕೆಲಸವು ಸಹ ಕೆಲವು ದಿವಸಗಳಲ್ಲಿಯೇ ಪೂರೈಸಬಹುದಾಗಿರುತ್ತದೆ.

ಈ ರಸ್ತೆಯ ಕೆಲಸವು ಅರ್ಧವಾಗಿದ್ದಾಗ್ಯೂ ಬೋರ್ಡಿಗೆ ಸಮ್ಮಂದಪಟ್ಟ ಪ್ರಭುಗಳವರಿಗೆ ಇಲ್ಲಿಯ ರೈತರು ಗರೀಬರಾಗಿರುವದರಿಂದ ಪೂರ್ತಿ ರಸ್ತೆಯನ್ನು ಮಾಡಿಸಿ ಹಿಂದಿನಿಂದ ರಸ್ತೆಯ ಕರ್ಚಿನ ಮೊಬಲಗನ್ನು ಹೊಂದಿಕೊಳ್ಳಲು ಅಶಕ್ತರಾಗಿರುವದಾಗಿಯೂ ರಸ್ತೆಯನ್ನು ಪರಿಶೀಲಿಸಿ ರಸ್ತೆಯ ಕೆಲಸವನ್ನು ಮುಂದರಿಸಲು ಹಣದ ಸಹಾಯ ಕೊಡಬೇಕಾಗಿ ಅರಿಕೆಮಾಡಿಕೊಂಡಿದ್ದರು. ಸಮ್ಮಂದಪಟ್ಟ ಪ್ರಭುಗಳವರಿಂದ ಯಾವ ಅಪ್ಪಣೆಯೂ ಸಿಕ್ಕಲಿಲ್ಲ. ಗರೀಬರಾದಾಗ್ಯೂ ತಾವುಗಳು ಹಿಡಿದ ಕೆಲಸವನ್ನು ಪೂರೈಸಬೇಕೆಂದು ಧನಿಕರಿಂದ ದ್ವಿಗುಣ ಬಡ್ಡಿಗೆ ಸಾಲ ತೆಗೆದು ರಸ್ತೆಯ ಕೆಲಸವನ್ನು ಪೂರೈಸಿರುವದು ಸಂತೋಷಕರ.

ನಾವು ಮಾನ್ಯಪತ್ರಗಾರರವರು ಸದರಿ ರಸ್ತೆಯನ್ನು ಪರಿಶೀಲಿಸಿ ಗರೀಬರಾದಾಗ್ಯೂ ಇಷ್ಟು ದೊಡ್ಡ ಕೆಲಸವನ್ನು ಮಾಡಿದಕ್ಕೆ ತುಂಬಾ ಸಂತೋಷಪಟ್ಟರು. ಈ ರಸ್ತೆಯ ಮಧ್ಯೆ (ಕುಂದಳ್ಳಿ ಗ್ರಾಮಸ್ಥರ ಭೂಮಿಯಲ್ಲು) ಎರಡು ಭಾಗದಲ್ಲು ಕಲ್ಲುಕಟ್ಟಡ ಇದ್ದು ಗಾಡಿ ಹೋಗಲು ಅಡಚಣೆಯಾಗಿರುವದಾಗಿಯೂ ಒಂದು ಭಾಗದ ಕಲ್ಲು ಕಟ್ಟಡವನ್ನು ತೆಗೆದು ರಸ್ತೆಗೆ 15 ಅಡಿ ಸ್ಥಳ ಬಿಡಬೇಕಾಗಿ ಅಪ್ಪಣೆ ದಯಪಾಲಿಸಿದರು. ರಸ್ತೆಯ ಕರ್ಚಿನ ಮೊಬಲಗಿಗೆ ತಾವು ಶಿಫಾರಸ್ಸು ಮಾಡುವದಾಗಿ ವಾಗ್ದಾನವಿತ್ತಿದ್ದಾಗಿರುತ್ತದೆ. ಮಾನ್ಯಪತ್ರಗಾರರವರ ಅಪ್ಪಣೆ ಮೇರೆ ಭೂಮಿಯ ಮಾಲೀಕರ ಅನುಮತಿ ತೆಗೆದುಕೊಂಡು ಒಂದು ಭಾಗದ ಕಟ್ಟಡವನ್ನು ತೆಗೆದು 15 ಅಡಿ ಯಂಗೆ ಹೊಸ ಕಲ್ಲು ಕಟ್ಟಡವನ್ನು ಮಾಡಲು 50 ರೂಪಾಯಿಗೆ ಕಂಟ್ರಾಕ್ಟ ಕೊಟ್ಟು ಸದರಿ ಕೆಲಸವನ್ನು ಸಹ ಪೂರೈಸಿರುತ್ತಾರೆ.

ರಸ್ತೆಯ ಕೆಲಸಕ್ಕೆ ಒಟ್ಟು 850 ರೂಪಾಯಿ ಕರ್ಚಾಗಿರುವದಾಗಿರುತ್ತದೆ. ಇದರಲ್ಲು ಹೆಚ್ಚಿನ ಹಣಕ್ಕೆ ಶೇಕಡ ನೂರಕ್ಕೆ ಎರಡು ರೂಪಾಯಿ ಮೇರೆ ಬಡ್ಡಿ ಕೊಡುವದಾಗಿ ಸಾಲ ತೆಗೆದದ್ದಾಗಿರುತ್ತದೆ. ಒಡನೆ ರಸ್ತೆಯ ಕರ್ಚಿನ ಮೊಬಲಗು ದೊರೆಯದಿದ್ದಲ್ಲಿ ದಿನೇ ದಿನೇ ಬಡ್ಡಿಯು ಹೆಚ್ಚಿ ಗರೀಬ ರೈತರಿಗೆ ಬಹಳ ಕಷ್ಟ ನಷ್ಟವಾಗುವದಲ್ಲದೆ ಯಾವ ಅನ್ಯ ... ತವು ಇರುವದಿಲ್ಲ.

ಇದಕ್ಕೆ ಸಮ್ಮಂದಪಟ್ಟ ಮಹನೀಯರುಗಳು ಒಡನೆ ರಸ್ತೆಯನ್ನು ಪರಿಶೀಲಿಸಿ ರಸ್ತೆಯ ಕರ್ಚನ್ನು ಸಮ್ಮಂದಪಟ್ಟ ಪ್ರಭುಗಳವರಿಗೆ ಬಿಲ್ಲು ಕಳುಹಿಸಿ ಮೊಬಲಗನ್ನು ಬೋರ್ಡಿನಿಂದ ಕೊಡಿಸಬೇಕಾಗಿಯೂ ರಸ್ತೆಯ ಮಧ್ಯೆ ಇರುವ ಕಲ್ಲುಗಳನ್ನು ತೆಗೆಸಿ ... ಗಾಡಿ ಹೋಗಲು ಅನುಕೂಲಪಡಿಸಿ ಕೊಡಬೇಕಾಗಿಯೂ ... ದೈನ್ಯದಿಂದ ಬೇಡಿಕೊಳ್ಳುವ.

ಗ್ರಾಮಸ್ಥ.

ಬಂದೂಕುಗಳು. GUNS.



ಇವು ವಿಲಾಯತಿಯಲ್ಲಿ ತಯಾರಾದವು ಇವುಗಳನ್ನು ಮನೆಯಲ್ಲಿಡಲು ಲೈಸನ್ಸ ಪಡೆಯಬೇಕಾಗಿಲ್ಲ ಯಾವ ಜೀವಾಪಾಯ ಭಯವೂ ಇಲ್ಲದೆ ಕೈಯಲ್ಲಿ ಹಿಡಿದುಕೊಂಡು ತಿರುಗಬಹುದು.

೧೦೦ ರವೆಗಳ ಸಹಿತ ಜುಬಾಕ ಒಂದಕ್ಕೆ ೫—೦—೦

ಯಂ. ಲಯೋ ಅಂಡ್ ಕೊ.

12—10 168, ಜೈನಾ ಬಜಾರ್, ಮದರಾಸು.

ವರ್ತಮಾನ ಸಂಗ್ರಹ.

ಒಳದೇಶ.

ಜೇಫ್ ಕಮಿಶನರು ತಾ. 28ರಲ್ಲಿ ಮಡಿಕೇರಿಗೆ ಬಂದವರು ಹಿಸನೇ ವಾಪಸು ಹೋದರು. ಪುನಃ ಈ ತಾ. 12ರಲ್ಲಿ ಬರುವರೆಂಬ ವರ್ತಮಾನವಿದೆ.

ಹೆಡ್ ಸರ್ವೆಯರಾಗಿದ್ದ ಮೆ. ಮಾಕಂಡ ಕುಟ್ಟಪ್ಪನವರಿಗೆ ತಾ. 1—3—1932ರಿಂದ ರಿಟೈರ್ ಆಗುವ ಬಗ್ಗೆ ಕೆಲಸದಿಂದ ಮುಕ್ತರಾಗಿದ್ದಾರೆ.

ಪಿಕ್ಚರ್ ನ ಸೈಟಿಯವರ ಜನರಲ್ ಮೀಟಿಂಗು ಇದೇ ತಾ. 26ರಲ್ಲಿ ಮಡಿಕೇರಿ ಫೆಡರೇಶನ್ ಆಫೀಸಿನಲ್ಲಿ ನಡೆಯುವುದೆಂದು ತಿಳಿಯ ಬರುತ್ತದೆ.

ಸಿವಿಲ್ ಸರ್ಜನರಾದ ಮೇಜರ್ ಥಾರ್ನ್‌ಟನ್ನರು ರಜದಲ್ಲಿ ಹೋಗುವಾಗ ಡಾಕ್ಟರ್ [illegible]ರವರು ಸಿವಿಲ್ ಸರ್ಜನ್ ಕೆಲಸದ ಚಾರ್ಜಿನಲ್ಲಿರುತ್ತಾರೆಂಬ ವರ್ತಮಾನವಿದೆ.

ಕಳೆದ ಬುಧವಾರ ದಸ್ತಗಿರಿಯಾದ ಮೆ. ಅಬ್ದುಲ್ ಗಫೂರ್ ಸಾಹೇಬರಿಗೆ ಆರು ತಿಂಗಳ ಸಜೆ ಮತ್ತು 50 ರೂ. ಜುಲ್ಮಾನೆ ವಿಧಿಸಲ್ಪಟ್ಟು ಕಣ್ಣಾನೂರಿಗೆ ಸಾಗಿಸಲ್ಪಟ್ಟಿದ್ದಾರೆ.

ಕೊಡಗು ದೇಶದ ಸೇಂದಿ ಸಾರಾಯಿ ಅಂಗಡಿಗಳ ಹರಾಜು ಕಳೆದ ವಾರ ನಡೆದು ಕಳೆದ ವರ್ಷಕ್ಕಿಂತ ಈ ವರ್ಷ 34450 ರೂಪಾಯಿ. ಹೆಚ್ಚಿಗೆ ಮೊಬಲಗಿಗೆ ಅಂಗಡಿಗಳು ಹರಾಜಾದವು.

ಕಳೆದ ತಾರೀಕು 28ರಲ್ಲಿ ದಕ್ಷಿಣ ಕೊಡಗು ಕ್ರಿಕೆಟ್ ಟೀಮಿನ ರಿಗೆ ಮತ್ತು ತಲಚೆರಿ ಟೀಮಿನವರಿಗೂ ನಡೆದ ಕ್ರಿಕೆಟ್ ಪಂದ್ಯಾಟದಲ್ಲಿ ದಕ್ಷಿಣ ಕೊಡಗಿನವರನ್ನು ತಲಚೇರಿ ಟೀಮಿನವರು ಸೋಲಿಸಿದರು.

ಇದೇ ತಾರೀಕು 9ನೇ ಬುಧವಾರ ಸಾಯಂಕಾಲ 5½ ಗಂಟೆಯಿಂದ ಜನಾರ್ದನ ಸಂಘದ ಹಾಲ್‌ನಲ್ಲಿ ಮ. ಶ್ರೀ. ಬಿ. ಕೆ. ಸುಬ್ರಾಯರು 'ಶ್ರೀರಾಮ ಕೃಷ್ಣ ಪರಮ ಹಂಸರ ಜೀವನ ಚರಿತ್ರೆ'ಯನ್ನು ಕುರಿತು ಹರಿಕಥೆ ನಡಿಸುತ್ತಾರೆ.

ಮಂಗಳೂರು ಕಾಲೇಜಿನ ವಿದ್ಯಾರ್ಥಿಯಾದ ಮೆ. ಪೆತ್ತಣ್ಣಮೂಲ ಚಂಗಪ್ಪನವರು ಕಳೆದ ಫೆಬ್ರವರಿ ತಾ. 14ರಲ್ಲಿ ಪೊನ್ನಂಪೇಟೆ ನಾಡಿನ ದನಕರುಗಳನ್ನು ಹಾವಳಿ ಮಾಡುತಿದ್ದ ಒಂದು ಹೆಬ್ಬುಲಿಯನ್ನು ಗುಂಡು ಹೊಡೆದು ಕೊಂದಿರುವರು.

ಈ ತಾ. 15ರಿಂದ ಕಾರ್ಗುಂದದಲ್ಲಿ ವಾಸಿಸುತ್ತಿರುವ ತೀರ್ಥ ಭಾಗಮಂಡಲದ ಆಯುರ್ವೇದಿಕ್ ಡಾಕ್ಟರರು ತಮ್ಮ ಆಸ್ಪತ್ರೆಯನ್ನು ತೆರೆಯಲು ನಿರ್ಧರಿಸಿರುವರು. ಗ್ರಾಮಸ್ಥರಿಗೆ ಅನುಕೂಲವಾಗುವ ದಿನವನ್ನು ಭಾಗಮಂಡಲದ ವಾಯುಪತ್ಯಗಾರರಿಗೆ ತಿಳಿಸಬೇಕೆಂದು ತಿಳಿಸಿರುತ್ತಾರೆ.

ಶ್ರೀ ಗುರು ಸಮರ್ಥ ನಾಟಕ ಮಂಡಳಿಯವರು ಮಡಿಕೇರಿಯಲ್ಲಿ ನಾಟಕವಾಡಲು ಪ್ರಾರಂಭಿಸಿದ್ದಾರೆ. ಕಳೆದ ಬುಧವಾರ 'ಶ್ರೀರಾಮ ಪಾದುಕಾ ಪಟ್ಟಾಭಿಷೇಕ' ಎಂಬ ನಾಟಕವನ್ನು ಅಭಿನಯಿಸಿದರು. ಈ ದಿನ 'ಚಪಲೆಯ ಚಂದ್ರ' ಎಂಬ ನಾಟಕವನ್ನು ಅಭಿನಯಿಸಲಿರುವರು.

ಸಿದ್ಧೀಕ್ ದೀನ್ ದಾರ್ ಚೆನ್ನಬಸವೇಶ್ವರ ಎಂಬ ಹೆಸರಿನ ಇಸ್ಲಾಂ ಧರ್ಮದ ಪ್ರಚಾರಕ್ಕಾಗಿ ಕೆಲಸ ಮಾಡುವವರು ಮಡಿಕೇರಿಗೆ ಬಂದಿದ್ದಾರೆ. ತಾ. 15ರಲ್ಲಿ ರಾಜಾಸ ಸೀಟಿನಲ್ಲಿ ಒಂದು ಉಪನ್ಯಾಸವಾಯಿತು. ಲಿಂಗಾಯತ ಧರ್ಮಸ್ಥಾಪಕರಾದ ಚೆನ್ನ ಬಸವೇಶ್ವರರ ಅವತಾರವೆಂದುಕೊಳ್ಳುವವರು ಇವರು.

ಪೊನ್ನಂಪೇಟೆಯ 'ಫೇರಾವೇಲಿ' ಎಸ್ಟೇಟಿನಿಂದ ಒಣಗಿಸಿದ ಸುಮಾರು 1 ಖಂಡಿ ಒಳ್ಳೆ ಮೆಣಸನ್ನು ಅಲ್ಲಿ ಅದನ್ನು ಕಾವಲು ಕಾಯುತ್ತಿದ್ದ ಕಾವಲಿಯವರೇ ಅಪಹರಿಸಿದರೆಂದೂ, ಅಲ್ಲಿನ ಒಬ್ಬ ಮಾಪಿಳ್ಳೆ ಅಂಗಡಿಯವನಿಗೆ ಮಾರಿದ್ದು ತಿಳಿದು ಒಂದು ಅವರಲ್ಲರೂ ಹಿಡಿಯಲ್ಪಟ್ಟಿರುವರೆಂದೂ ವರ್ತಮಾನವಿದೆ.

ಸಿದ್ದಾಪುರದ ಇಂಜಿನ್‌ಗೆರೆ ಒಳೆ ವಾಸವಾಗಿದ್ದ ಮರತಿ ತಮ್ಮಣ್ಣನವರ ಮಗ ಅಪ್ಪಣ್ಣನೆಂಬವನು ಮಧ್ಯಾಹ್ನದ ಮೇಲೆ ಸುಮಾರು 3 ಗಂಟೆ ಸಮಯದಲ್ಲಿ ಸದರಿ ಸ್ಥಳದ ಕ್ರಿಸ್ತಾನರ ಅಂತೋಣಿ ಎಂಬವನನ್ನು ಕೊಂದು ಪರಾರಿಯಾಗಿದ್ದನೆಂಬ ಅಪವಾದನೆಯ ಮೇಲೆ ಅವನನ್ನು ಪೋಲೀಸಿನವರು ಹಿಡಿದು ತನಿಖೆ ನಡಿಸುತ್ತಲಿದ್ದಾರೆ. ಕೊಲೆಯ ಕಾರಣವು ಇನ್ನೂ ತಿಳಿದು ಬಂದಿರುವುದಿಲ್ಲ.

ಹಿಂದೂದೇಶ.

ಹಿಂದೂಸ್ಥಾನದ ಅನೇಕ ಕಡೆಗಳಲ್ಲಿ ದಸ್ತಗಿರಿಗಳು ಆಗುತ್ತಲಿವೆ.

ಡಿಲ್ಲಿಯಲ್ಲಿ ಪ್ರಸಿದ್ಧ ವಕೀಲರಾದ ಆಸಫ್ ಅಲಿಯವರು ದಸ್ತಗಿರಿಯಾಗಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಶಾರ್ದೂಲ್ ಸಿಂಗರಿಗೆ 2½ ವರ್ಷ ಸಜಾ ಶಿಕ್ಷೆ ವಿಧಿಸಲಾಗಿದೆ.

ಅಹಮದಾಬಾದಿನ ಸರಕಾರ ಸಂಘದ ಆಫೀಸನ್ನು ನಾಲ್ಕು ದಿನಗಳ ವರೆಗೆ ಬಲ್ಲ ನಡಿಸಿದರು.

ಬೊಂಬಾಯಿಯ ಪ್ರಸಿದ್ಧ ವಕೀಲರಾದ ಡಾಕ್ಟರ್ ಅರಾಮರಿಗೆ ಎರಡು ವರ್ಷ ಸಜಾಶಿಕ್ಷೆಯಾಗಿದೆ.

ಗುಜರಾತಿನ ಖೇಡಾದ ಕವಿಯಾದ ಶ್ರೀ. ಶಂಕರಲಾಲ್ ಎಂಬವರಿಗೆ ಒಂದು ವರ್ಷ ಸಜಾವಾಯಿತು.

ಶ್ರೀ. ವಿ. ಜೆ. ಪಟೇಲರನ್ನು ನಾಸಿಕ ಜೈಲಿನಿಂದ ಯರವಾಡಾ ಜೈಲಿಗೆ ವರ್ಗಾಯಿಸಿದ್ದಾರೆ.

ಕಾರದಾ ಆಕ್ಟನ್ನು ರದ್ದುಪಡಿಸಬೇಕೆಂತ ಕೌನ್ಸಿಲ್ ಆಫ್ ಸ್ಟೇಟಿನಲ್ಲಿ ತಂದ ಠರಾವು ನಾಪಾಸಾಯಿತು.

ಇಂಡಿಯಾ ಸರಕಾರವು ನಡಿಸುತ್ತಿರುವ ರೈಲ್ವೆಗಳ ಆದಾಯದಲ್ಲಿ ಈ ವರ್ಷ 10 ಕೋಟಿ ರೂಪಾಯಿ ನಷ್ಟ ಬಂದಿದೆ.

ಮದ್ರಾಸ್ ಕೌನ್ಸಿಲಿನ ಬಜೆಟ್ ಚರ್ಚೆಯಲ್ಲಿ ಪೋಲೀಸರ ಅತ್ಯಾಚಾರಗಳನ್ನು ಖಂಡಿಸಿ ಅನೇಕರು ಮಾತನಾಡಿದರು.

ಬೊಂಬಾಯಿಯಲ್ಲಿ ಶ್ರೀಮತಿ ಲೀಲಾವತಿ ಮುನ್ಶಿಯವರಿಗೆ ಒಂದು ವರ್ಷ ಸಜೆ 300 ರೂ. ಜುಲ್ಮಾನೆ ಶಿಕ್ಷೆಯಾಗಿದೆ.

ಬಂಗಾಳದ ಆರ್ಡಿನೇನ್ಸನ್ನು ಅನುಸರಿಸಿ ಅದರಂತೆಯೇ ಇರುವ ಕಾನೂನು ಸ್ಥಳೀಯ ಕೌನ್ಸಿಲಿನಲ್ಲಿ ಮಂಜೂರಾಗಿದೆ.

ತಾ. 23—2—32ರ ವರೆಗೆ ಹಿಂದೂಸ್ಥಾನದಿಂದ ಏಳು ಕೋಟಿ ರೂ. ಬೆಲೆಯ ಚಿನ್ನವು ಪರದೇಶಗಳಿಗೆ ಹೊರಟು ಹೋಯಿತು.

ವಿಲಾಯತಿನಲ್ಲಿ ಮಹಾತ್ಮ ಗಾಂಧಿಯವರ ಪುತ್ರ ದೇವಿದಾಸ್ ಗಾಂಧಿಯವರಿಗೆ ಆರು ತಿಂಗಳ ಸಜೆ 200 ರೂ. ಜುಲ್ಮಾನೆಯಾಗಿದೆ.

ಬಿಹಾರ್ ಕೌನ್ಸಿಲಿನಲ್ಲಿ ಮೆಂಬರುಗಳ ಭತ್ಯ ದಿವಸ ಒಂದರ ರೂ 20 ಇದ್ದುದನ್ನು 15 ರೂ. ಗೆ ಇಳಿಸಬೇಕೆಂತ ಕೌನ್ಸಿಲಿನಲ್ಲಿ ಠರಾವು ಪಾಸಾಯಿತು.

ರಂಗೂನಿನಿಂದ ತುಂಬಾ ಭತ್ತ ಜಪಾನಿಗೆ ರಫ್ತಾಗುತ್ತಿರುವುದರಿಂದ ಅಲ್ಲಿ ಭತ್ತದ ಕ್ರಯವು ಏರುತ್ತಲೇ ಇದೆ ಎಂತ ತಾ. 29—2—32ರ ವರ್ತಮಾನವಿದೆ.

ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ ಇವರಿಗೆ ಜೈಲಿನಿಂದ ಬಿಡುಗಡೆಯಾಗ ಪುನಃ ಪ್ರೆಸಿಡೆನ್ಸಿ ಮುಂದೆ ಏವ ಸಲೂ ಹಾಜರಾಗಬೇಕೆಂತ ಆರ್ಡರ್ ಮಾಡಿದ್ದಾರೆ.

ಧಾರವಾಡದ ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿದ್ದ ಶ್ರೀ ರಂಗರಾವ್ ದಿವಾಕರ್ ಮೇಲೆ ಒಂದು ಕೇಸು ಸೆಶನ್ ಕೋರ್ಟಿನಲ್ಲಿ ವಿಚಾರಕ್ಕೆ ಇಡಲಾಗಿದೆ.

ಮದ್ರಾಸ್ ಪಟ್ಟದಲ್ಲಿ ಹಿಂದೂಸ್ಥಾನದ ಸಾಮಾನುಗಳ ಸ್ನೇಹ ಕೊಂಡುಕೊಳ್ಳಬೇಕೆಂತ ಮಾಡಲು "ಬೈ ಇಂಡಿಯನ್ ಲೀಗ್" ಎಂಬ ಹೆಸರಿನ ಸಂಸ್ಥೆಯೊಂದು ಹೊಸತಾಗಿ ಸ್ಥಾಪನೆಯಾಗಿದೆ.

ಮಲಬಾರಿನಲ್ಲಿ ಪೋಲೀಸರು ನಡಿಸುವ ಅತ್ಯಾಚಾರಗಳನ್ನು ವಿವರಿಸಿ ಇದನ್ನು ನಿಲ್ಲಿಸುವ ಬಗ್ಗೆ ಮಲಬಾರಿನ ಅನೇಕ ಮುಖಂಡರ ಸಹಿ ಇರುವ ಒಂದು ಪತ್ರವು ಸರಕಾರಕ್ಕೆ ಕಳುಹಿಸಲಾಗಿದೆ.

ಅಲ್ಲಹಾಬಾದಿನಲ್ಲಿ ಒಂದು ಪೋಲೀಸ್ ಸ್ಟೇಶನಿನಲ್ಲಿ ಒಬ್ಬ ಸಬ್ ಇನ್ಸ್‌ಪೆಕ್ಟರ ಮನೆಯಲ್ಲಿ ಮಿಲಿಟರಿ ಬ್ಯಾರೆಕ್ಸಿನಲ್ಲಿ ಒಂದೊಂದು ಬಾಂಬುಗಳು ಹಾರಿದವು ಯಾರಿಗೂ ಅಪಾಯವಾಗಲಿಲ್ಲ.

ಬಿಹಾರಿನ ಶಿವಹರ ಎಂಬ ಊರಿನಲ್ಲಿ 7000 ಜನರು ಪೋಲೀಸ್ ಸ್ಟೇಶನಿಗೆ ಮುತ್ತಿಗೆ ಹಾಕಲು ಬಂದದ್ದಕ್ಕಾಗಿ ಪೋಲೀಸಿನವರು ಗುಂಡು ಹಾರಿಸಿದರು. 4 ಜನರು ಸತ್ತರು. 8 ಜನರಿಗೆ ಘಾಯವಾಗಿದೆ.

ಮಹಾತ್ಮ ಗಾಂಧಿಯವರ ಪತ್ನಿ ಕಸ್ತೂರಿಬಾಯಿ ಗಾಂಧಿಯವರಿಗೆ ಆಗಿದ್ದ ಸಜೆಯು ಮುಗಿದೆಯಾಗಿ ಬಿಡುಗಡೆ ಹೊಂದಿದ್ದಾರೆ. ಇವರು ಯರವಾಡ ಜೈಲಿಗೆ ಮಹಾತ್ಮರ ಸಂದರ್ಶನಕ್ಕೆ ಹೋಗಿದ್ದಾರೆ.

ಜೈಲಿನಲ್ಲಿರುವ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಡಾಕ್ಟರ್ ಅನ್ಸಾರಿಯವರಿಗೆ ಇನ್‌ಕಂಟ್ಯಾಕ್ಸನ್ನು ಕೊಡಬೇಕೆಂತ ನೋಟೀಸ್ ಹೋಗಿದೆ. ಅದನ್ನು ಕೊಡಲು ತನಗೆ ಶಕ್ತಿ ಇಲ್ಲವೆಂತ ಜವಾಬು ಕೊಟ್ಟಿದ್ದಾರೆ.

ಬೆಂಗಳೂರು ದೊಡ್ಡ ಆಸ್ಪತ್ರೆಯಾದ ಕಿಂಗ್ ಎಡ್‌ವಾರ್ಡ್ ಆಸ್ಪತ್ರೆಯ ಡೀನ್ ಎಂಬ ಅಧಿಕಾರದಲ್ಲಿದ್ದ ಡಾಕ್ಟರ್ ಜೀವರಾಜ್ ಮೆಹತಾ ಮತ್ತು ಇವರ ಪತ್ನಿ ಶ್ರೀ. ಹಂಸಾ ಮೆಹತಾರವರನ್ನು ಸಹ ದಸ್ತಗಿರಿಮಾಡಿದ್ದಾರೆ.

ಮಂಗಳೂರಿನಲ್ಲಿ ಪಿಕೆಟ್ ಮಾಡುವವರ ಮೇಲೆ ಲಾಠಿ ಪೆಟ್ಟು ಆಗಿಂದಾಗ್ಯೆ ಬೀಳುತ್ತಲೇ ಇದೆ. ಕಳೆದ ಗುರುವಾರ ದಿನ ರಾಮಯ್ಯ ಮಲ್ಯ, ಕೋಚಣ್ಣ ಭಂಡಾರಿ ಬಿ. ಎಸ್. ಸಂಕಪ್ಪ, ತಿಮ್ಮಪ್ಪಶೆಟ್ಟಿ ಮುಂತಾದವರನ್ನು ದಸ್ತಗಿರಿ ಮಾಡಿ ಮರುದಿನ ಬಿಟ್ಟರು.

ಮದ್ರಾಸಿಗೆ ದುಂಡುಮೇಜು ಪರಿಷತ್ತಿನ ಸಂಬಂಧವಾದ ಲೋಥಿಯನ್ ಕಮಿಟಿ ಬರುವ ದಿನ ಹೈಕೋರ್ಟ್ ವಕೀಲರಾದ ಕೆ. ಭಾಷ್ಯಂ ಎಂಬವರು ಸದರಿ ಕಮಿಟಿಯನ್ನು ವಿರೋಧಿಸುವ ಮೆರವಣಿಗೆಯನ್ನು ಹೊರಡಿಸಿದ್ದಕ್ಕಾಗಿ 6 ತಿಂಗಳು ಸಜೆಗೆ ಗುರಿಪಡಿಸಲ್ಪಟ್ಟರು.

ಮುಂಬಯಿಯಲ್ಲಿ ಶ್ರೀ. ಸೌ|| ಊರ್ಮಿಳಾ ದೇವಿಯ ಮನೆಯಲ್ಲಿ ನಾಯಕ್ಲೋರೈಡಿಯ ಮತ್ತು ಬೇರೆ ಪದಾರ್ಥಗಳು ಹೊರಟವು. ಇವರು ಹಿಂದಿನ ಚಳವಳಿಯಲ್ಲಿ ದಿಕ್ಟೇಟರಾಗಿದ್ದರು. ಇವರಿಗೆ ಆರು ತಿಂಗಳ ಕ್ರಮ ಶಿಕ್ಷೆ ಮತ್ತು ಮೂವರು ಸಾವಿರ ರೂಪಾಯಿ ದಂಡವಾಯಿತು.

ಬೊಂಬಾಯಿಯ ಚಿಕ್ಕಪಿಣ್ಣುಸ ಕರೆಯನ್ನು ಕಲಿಸುವ ಶಾಲೆಯಲ್ಲಿ ಗವರ್ನರು ತಾ. 29ರಲ್ಲಿ ಬಹುಮಾನ ಹಂಚಿದರು.

ಒಂದು ಇನಾಮಿಗೆ ಅರ್ಹನಾಗಿದ್ದ ಒಬ್ಬ ಗುಜರಾತಿ ಯುವಕನ ಹೆಸರನ್ನು ಕರೆದಾಗ ಕಾಂಗ್ರೆಸ್ ತತ್ವವನ್ನು ತಾನು ಅನುಸರಿಸುವ ದೆಸೆಯಿಂದ ಇನಾಮನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲವೆಂತ ಹೇಳಿದನು.

ಪ್ರಾಂತ್ಯಗಳಿಗೆ ಕೂಡಲೇ ಸ್ವಾತಂತ್ರ್ಯ ಕೊಡಬೇಕೆಂಬ ಠರಾವನ್ನು ಸರ್ ಶಂಕರನಾಯರು ಕೌನ್ಸಿಲ್ ಆಫ್ ಸ್ಟೇಟಿನಲ್ಲಿ ತಂದರು. ಇದಕ್ಕೆ ಪರವಾಗಿ 4 ವಿರೋಧವಾಗಿ 16 ಓಟು ದೊರೆತು ಠರಾವು ಸೋತುಹೋಯಿತು. ಮಧ್ಯವರ್ತಿ ಸರಕಾರದಲ್ಲಿ ಸ್ವಾತಂತ್ರ್ಯ ದೊರೆತ ವಿನಹ ಪ್ರಾಂತ್ಯಗಳಲ್ಲಿ ಸ್ವಾತಂತ್ರ್ಯ ಬೇಡವೆಂತ ದುಂಡುಮೇಜು ಪರಿಷತ್ತಿನ ಬಹುಮತದ ಅಭಿಪ್ರಾಯವೆಂತ ಠರಾವಿಗೆ ವಿರೋಧಿಸಿದವರು ವಿವರಿಸಿದರು.

ಕಲೆಯ ಮೇಲೆ ಪಿಸ್ತೂಲಿನ ಚಿತ್ರ ತೆಗೆದಂಥ ಕೈ ಬರಹದ ಅನೇಕ ಹಸ್ತ ಪತ್ರಿಕೆಗಳನ್ನು ಅಹಮದಾಬಾದಿನ ತುಂಬ ಹಚ್ಚಿದ್ದಾರೆ. ಸಂಪಾದಕ ಕಾಮದಾರರು ವಿಶೇಷವಾಗಿ ಪೋಲೀಸು ಇನ್ಸ್‌ಪೆಕ್ಟರ ಗ್ರೀನ್ ಸಾಹೇಬನನ್ನು ಕೊಲ್ಲುವಂತೆ ಇದರಲ್ಲಿ ಬರೆದಿದ್ದಾರೆ. ಗುಜರಾಥವೆಂಬದೊಂದು ಅರಾಜಕತ ಸಂಸ್ಥೆ, ಮನುಷ್ಯಕೃತ್ಯಗಳನ್ನು ಮಾಡುವಂಥವರನ್ನು ಕೊಲ್ಲುವದೇ ತಮ್ಮ ಕೆಲಸವೆಂದು ತಮ್ಮ ಧ್ಯೇಯ ಹಾಗು ಸಂಸ್ಥೆಯ ಹೆಸರು ಹೇಳಿದ್ದಾರೆ. ಇವೇ ಹಸ್ತ ಪತ್ರಿಕೆಗಳನ್ನು ಪೋಸ್ಟಿನಿಂದ ಇಬ್ಬರು ಪತ್ರಕಾರರಿಗೆ ಕಳಿಸಿ, ನೀವು ನಿಮ್ಮ ಬರಹದ ಪದ್ಧತಿಯನ್ನು ಬಿಡಲು ನೋಡದಿದ್ದರೆ—ನಿಮಗೆ ಕಂಠಸ್ನಾನ ಹಾಕುವೆವೆಂದು ಅವರಿಗೆ ಭಯ ಹಾಕಿದ್ದಾರೆ.

ಮಧ್ಯ ಪ್ರಾಂತ್ಯದ ಮರದಾ ಎಂಬ ಊರಿನಲ್ಲಿ ಪೋಲೀಸರ ಲಾಠಿ ಚಾರ್ಜಿನ ವಿಷಯ ಸರಕಾರವು ಹೊರಡಿಸಿದ ಪತ್ರಿಕೆಯಲ್ಲಿ ಸುಳ್ಳು ಬರೆದಿದೆ ಎಂಬ ಆರೋಪಣೆ ಮೇರೆ ಕೌನ್ಸಿಲಿನ ಕೆಲಸವನ್ನು ಮುಂದರಿಸಿ ಇಡಬೇಕೆಂಬ ಠರಾವು ಬಹುಮತದಿಂದ ಮಂಜೂರಾಯಿತು. ಠರಾವನ್ನು ತಂದ ಮೆಂಬರರು ಹೇಳಿದ್ದೇನೆಂದರೆ—ಸರಕಾರದ ಪತ್ರದಲ್ಲಿ ಜನರು ಪೋಲೀಸರ ಮೇಲೆ ಕಲ್ಲು ಎಸೆಬಿದ್ದಕ್ಕಾಗಿ ಲಾಠಿ ಚಾರ್ಜು ಮಾಡಲಾಯಿತೆಂತ ಬರೆದಿರುವುದು ನಿಜವಲ್ಲ. ಕಲ್ಲು ಎಸೆಯುವ ಮುಂಚೆ ಮೂರಾವರ್ತಿ ಲಾಠಿ ಚಾರ್ಜು ಆಗಿ 125 ಜನರಿಗೆ ಘಾಯವಾಗಿದೆಯೆಂತ ವಗೈರೆ ವಾದಿಸಿದರು. ರಾವ್ ಬಹದ್ದೂರ್ ಕೆ. ಯಸ್. ನಾಯುಡುರವರು ಸಹ ಕಾಂಗ್ರೆಸಿನ ಕಾರ್ಯಕ್ರಮವನ್ನು ತಾನು ವಿರೋಧಿಸುತ್ತೇನಾದರೂ ಕಾಂಗ್ರೆಸಿನವರು ಸಂಪೂರ್ಣ ಅಹಿಂಸಾಯುಕ್ತರಾಗಿದ್ದರೂ ಪೋಲೀಸರು ಅನಾವಶ್ಯಕವಾಗಿ ಲಾಠಿ ಚಾರ್ಜು ಮಾಡಿದರೆಂತ ವಿವರಿಸಿದರು.

ಮದ್ರಾಸಿನಲ್ಲಿ "ಸ್ವರಾಜ್ಯ" ಪತ್ರಿಕೆಯ ಸಬ್ ಎಡಿಟರಾದ ಕೆ. ಸುಬ್ಬರಾವ್ ಎಂಬವರೂ ಇನ್ನೊಬ್ಬ ಟಿ. ಪಿ. ರಾಮಸ್ವಾಮಿ ಎಂಬ ಇಬ್ಬರನ್ನು ಪೋಲೀಸಿನವರು ಅತಿಯಾಗಿ ಹೊಡೆದರು. ಇವರು ಘಾಯ ಹೊಂದಿದ ನಂತರ ಇವರನ್ನು ಜನರಲ್ ಆಸ್ಪತ್ರೆಗೆ ಸಾಗಿಸಿದರು. ಇವರ ಸಂಬಂಧವಾಗಿ ಕೌನ್ಸಿಲ್ ಸವಾಲು ಜವಾಬು ನಡೆದು ಪೋಲೀಸರು ಉಪಯೋಗಿಸಿದ ಬಲವು ಅತಿಯಾಯಿತೆಂತ ಪೋಲೀಸ್ ಕಮಿಶನರು ಒಪ್ಪಿರುವುದಾಗಿಯೂ, ಈ ಬಗ್ಗೆ ವಿಚಾರ ನಡೆಸುವುದಾಗಿಯೂ ಸರಕಾರದ ಉತ್ತರ ದೊರೆತಿದೆ.

ಈ ರೀತಿ ಮದ್ರಾಸು ಪೋಲೀಸರು ನಡಿಸುವ ಅತ್ಯಾಚಾರಗಳ ಕುರಿತು "ಟೈಮ್ಸ್ ಆಫ್ ಇಂಡಿಯಾ" ಎಂಬ ಇಂಗ್ಲಿಷ್ ಜನರು ನಡಿಸುವ ಪತ್ರಿಕೆ ಹೇಳಿರುವುದೇನೆಂದರೆ—"ಮದ್ರಾಸ್ ಪೋಲೀಸರ ಮೇಲೆ ಆಕ್ಷೇಪಣೆ ಬರುವುದು ಇದು ಮೊದಲಲ್ಲ. ಡಾಕ್ಟರ್ ಪೇಟನರಿಗೆ ಹೊಡೆದದ್ದು ಒಂದು ಈ ರೀತಿ ಪೋಲೀಸರು ಮಾಡಿದರೆ ಜನರ ನಂಬಿಕೆ ಕೆಟ್ಟು ಹೋಗುತ್ತದೆ. ಪಿಕೆಟ್ ಮಾಡುವುದು ಜನರಿಗೆ ಬೇಸರವನ್ನುಂಟು ಮಾಡ ಬಹುದೇನೋ ಹೌದು. ಆದರೆ ಪಿಕೆಟಿಂಗ್ ಮಾಡುವುದನ್ನು ತಂದ ಕೂಡಲೇ ಹೊಡೆಯುವಂಥ ಶಕ್ತಿಯೇನೂ ಇವರ ತಮ್ಮ ಕೈಕೆಳಗಿನವರಿಗೆ ಈಗ ಇರುವ ಅಧಿಕಾರದ ಮಿತಿ [illegible] ಇದನ್ನು ಮದ್ರಾಸ್ ಸರಕಾರವು ತಿಳಿಸಿಕೊಡುವುದು ಅಗತ್ಯವಿದೆ"—

ವಿದೇಶ.

ಬ್ರಿಟನಿನಲ್ಲಿ ಹೊಸ ಧರ್ಮದ ಪ್ರಚಾರ [illegible]ಗುತ್ತಲಿದೆ.

ವೇಲ್ಸಿನ ಒಂದು ಕ್ಲಾಸಿನಲ್ಲಿ ಹಾರುತ್ತಿದ್ದ ಬಾವುಟವಾದ 'ಯೂನಿಯನ್ ಜ್ಯಾಕ್'ನ್ನು ಕೆಳಗಿಳಿಸಿ ಅದನ್ನು ಆ ಊರಿನ ರಾಷ್ಟ್ರೀಯ ಪಕ್ಷದವರು ಅಧೀನಪಡಿಸಿ ಸುಟ್ಟು ಹಾಕಿದರು. ಕೆಲವು ಯುವಕರು ಅದನ್ನು [illegible] ಮಾಡಿದ್ದರು.

ಪಾರ್ಲಿಮೆಂಟು ಮೆಂಬರರಿಗೆ [illegible] ರಾಜನ್ನಿಳೂ ಮತ್ತು [illegible]ದೇಶ ದೇ[illegible]ಸಿದ ಟೆಲಿಗ್ರಾಮುಗಳನ್ನು [illegible] ಮೆಂಟಿನಲ್ಲಿ ಚರ್ಚೆ ನಡೆದು [illegible] ಭಾಷಿಸಿದ ವರ್ತಮಾನಗಳನ್ನು [illegible] ಕೃಷ್ಣಮೆನ[illegible] ರೂ. 78[illegible] ಶ್ರೀ[illegible] ಟ್ಟರು.

....

ಷ್ಯಾಂಗುಹೇ, ಫೆಬ್ರುವರಿ ೨೩. ೨೨. ರಾತ್ರಿ 2 ಗಂಟೆ. ಹಿಂದು ಸಂವತ್ಸರದ ಜನಕ ಯುದ್ಧವನ್ನು ಮುಂದರಿಸುವ ಪ್ರಯತ್ನಗಳನ್ನು ಚೈನಾ ಸರ್ಕಾರದವರು ಮಾಡುವರೆಂದು ಗೊತ್ತಾಗಿ ತಿಳಿದು ಬಂದಿದೆ. ಮದ್ದು ಗುಂಡು ಸಾಮಗ್ರಿಗಳನ್ನು, ವಿಮಾನಗಳನ್ನು ಕೊಳ್ಳುತ್ತಿದ್ದಾರೆ. ಟಾಂಕುಗಳನ್ನು ತೆಗೆಯಲು ಯಂತ್ರಗಳನ್ನು ಜರ್ಮನಿಯಿಂದ ಕೊಳ್ಳುತ್ತಿದ್ದಾರೆ. ಚೈನಾ ಜಾತಿಯೆಲ್ಲವೂ ಸರ್ಕಾರಕ್ಕೆ ಸಹಾಯವಾಗಿರುವ ಕಾರಣ ಸರ್ಕಾರಕ್ಕೆ ಪ್ರೋತ್ಸಾಹ ಉಂಟಾಗಿದೆ. ಚೈನಾ ಸರ್ಕಾರವು ಯಾರಾದರೊಬ್ಬರು ಸೋಲುವ ತನಕ ಯುದ್ಧವನ್ನು ಮಾಡಿಯೇ ತೀರುವುದಂತೆ.

ಜಪಾನರು ಮುಂದಕ್ಕೆ ಸಾಗದಂತೆ ಪ್ರತಿಯೊಂದು ಸ್ಥಳದಲ್ಲಿಯೂ ಅಡ್ಡಗಿಸಲ್ಪಟ್ಟರು. ಜಾಪೀ ಕಿವಾಂಗ್ವಿನ್ ಪಟ್ಟಣಗಳನ್ನು ಚೈನಾದವರ ವಶದಲ್ಲೇ ಇವೆ. ಜಪಾನರು ಚೈನಾದವರನ್ನು ಈ ಪ್ರದೇಶಗಳಿಂದ ಹೊರಡಿಸಲು ವ್ಯರ್ಥ ಪ್ರಯತ್ನಗಳನ್ನು ಮಾಡಿದರು. ಜಪಾನರ ಸಾಹಾಯಾರ್ಥವಾಗಿ ಎರಡು ಪಟಾಲಾಂಗಳನ್ನು ಜಪಾನು ಸರ್ಕಾರದವರು ಕಳುಹಿಸುತ್ತಿದ್ದಾರೆಂದು ಸ್ಪಷ್ಟವಾಗಿ ತಿಳಿದು ಬಂದಿದೆ.

....

(ರಾತ್ರಿ ೧–೫೦) ೨೨ ನೇ ತಾರೀಕಿನ ದಿನ ಕಿಯಾಂಗ್ವವನ್ನು ಸ್ವಾಧೀನ ಮಾಡಿಕೊಳ್ಳಲು ಭಯಂಕರವಾಗಿ ಜಪಾನು ಸೈನ್ಯಗಳು ಹೋರಾಡಿದಾಗ್ಯೂ ಅವರೇ ಸೋತು ಹಿಂದಕ್ಕೆ ಹೋಗುವಂತೆ ಮಾಡಲ್ಪಟ್ಟರು.

ಇದ್ದ ಸೈನ್ಯವೆಲ್ಲವೂ ರಣರಂಗದಲ್ಲಿ ಯುದ್ಧ ಮಾಡಲು ಹೋಗಿದ್ದ ಕಾರಣ ಜಪಾನರಿಗೆ ಮೀಸಲು ಸೈನ್ಯವು ಯಾವುದೂ ಮಿಕ್ಕಿರಲಿಲ್ಲ.

ಕಿಯಾಂಗ್ವನ್ ಸುತ್ತಲೂ ಘೋರವಾಗಿರುವುದನ್ನು ನೋಡಲಾಗಿ ಚೈನಾ ಸೈನ್ಯವನ್ನು ಹಿಂದಕ್ಕಟ್ಟಲು ಯುದ್ಧವು ಧೀರವಾಗಿ ಜರುಗಿತೆಂಬುದನ್ನು ಊಹಿಸಬಹುದು. ನಿಸ್ಸಂಶಯವಾದ ವ್ಯವಸಾಯಕ್ಷೇತ್ರಗಳಲ್ಲಿದ್ದ ಮನೆಗಳು ಸುಟ್ಟು ಕರಿದಾಗಿ ನಾಶವಾದ ಜನರ ಹೆಣಗಳು ಬಿದ್ದಿದ್ದವು.

ಪೂರಿಗಾ ಸೇತುವೆ ಪ್ರದೇಶ (ಸೋಚ್ಯೂನ್ ಬ್ರಿಡ್ಜ್) ದ ಹತ್ತಿರ ಲೋಕ್ರಸ್ ಕಂಪೆನಿಯವರು ಚೈನಾ ಸೈನ್ಯದವರು ಅತ್ಯಂತ ಭಯಂಕರವಾಗಿ ಜಪಾನು ಸೇನೆಗಳ ಮೇಲೆ ಬಿದ್ದ ವಿಮಾನಗಳು, ಫಿರಂಗಿಗಳು ಮೆಷಿನ್ ಗನ್ನುಗಳು, ಕಂದಕ ಫಿರಂಗಿಗಳು ಎಂಬವುಗಳು ಅಗ್ನಿ ಜ್ವಾಲೆಗೆ ಸಿಕ್ಕಿಕೊಂಡು ಬಾಧೆ ಪಡುತ್ತಿದ್ದವರಿಗೆ ಸಹಾಯ ಮಾಡಿದವು. ಜಪಾನು ಕಾಲ್ಬಲದವರು ಸರ್ವವಿಧಗಳಾದ ಟ್ಯಾಂಕುಗಳು, ಸಾಂಘ ಕಟಗಳು ವಿಮಾನಗಳೊಡನೆ ಸನ್ನದ್ಧರಾಗಿದ್ದಾಗ್ಯೂ ಯುದ್ಧ ಪ್ರಾರಂಭವಾಗಲು ಜಪಾನಿನ ಸೈನಿಕ ಪಂಕ್ತಿಗಳು ತಲ್ಲಣಗೊಳ್ಳುತ್ತ ಬಂದವು.

ಭಯಂಕರವಾಗಿ ಕೈ ಕೈ ಮಿಲಾಯಿಸಿ ಚೈನಾ ಸೈನ್ಯಗಳೊಡನೆ ಜಪಾನರು ಯುದ್ಧ ಮಾಡಿದ ಬಳಿಕ ಜಪಾನರು ತಮ್ಮ ಸೈನ್ಯಗಳನ್ನು ಹಿಂದಕ್ಕೆ ತೆಗೆದುಕೊಂಡು ಹೋಗುವಂತೆ ಮಾಡಲ್ಪಟ್ಟರು.

ಜಪಾನು ಸೈನಿಕರು ತಮ್ಮ ಶರೀರಗಳಿಗೆ ಬಾಂಬುಗಳನ್ನು ಕಟ್ಟಿಕೊಂಡು ಚೈನ ಕಟ್ಟಡದೊಳಕ್ಕೆ ಬೀಳುವಿಕೆ.

ಮೂವರು ಜಪಾನು ಸೈನ್ಯಕರು ತಮ್ಮ ಶರೀರಗಳಿಗೆ ಭಯಂಕರಗಳಾದ ಸಿಡಿಯುವ ಬಾಂಬುಗಳನ್ನು ಕಟ್ಟಿಕೊಂಡು ಚೈನಾ ಸೈನಿಕರು ಪರ್ವದಿಸಿದ್ದ ವಿಸ್ಫೋಟಕವಾದ ಕಟ್ಟಡದ ಅಟ್ಟದೊಳಗೆ ದುಮುಕಿದರು. ಅದರ ಕಾರಣ ಬಾಂಬುಗಳು ಸಿಡಿದು ಆ ಕಟ್ಟಡಗಳೆಲ್ಲವೂ ಭಗ್ನವಾದವು. ಇವರು ಈ ರೀತಿ ಮಾಡಿ ತಮ್ಮ ಸೈನಿಕ ಸಮೂಹಕ್ಕೆ ದಾರಿ ತೋರಿಸಿ ಕೊಟ್ಟರು. ಇದನ್ನು ಜಪಾನರು ಸ್ವಾರ್ಥತ್ಯಾಗವೆಂದು ಹೊಗಳುತ್ತಿದ್ದಾರೆ. ಇದು ಪೂರ್ವಂಗ್ ಬಳಿ ನಡೆಯಿತು.

....

ಷ್ಯಾಂಗ್ಹೈಯಲ್ಲಿ ಹಳೆಯ ಜರ್ಮನ್ ಸೈನ್ಯಾಧಿಕಾರಿಗಳು ಚೈನಾ ಸೈನ್ಯದವರಿಗೆ ಸೈನಿಕ ಶಿಕ್ಷಣವನ್ನು ಕೊಡುವುದಲ್ಲದೆ [illegible] ಜಪಾನಿನವರೊಡನೆ ಯುದ್ಧ ಮಾಡುತ್ತಿರು [illegible] ಸಂಗತಿ ಸುಳ್ಳೆಂದು ಜರ್ಮನಿನ ಅಧಿಕಾರಿಗಳು [illegible]ದ್ದಾರೆ.

....

[illegible] ನೇ ತಾ. ರಾತ್ರಿ ಮತ್ತೆ ಒಂದು ಚೈನಾ ಜಪಾನು ಸೈ[illegible]

ಷ್ಯಾಂಗ್ಹೈಯಲ್ಲಿದ್ದ ಹದಿನಾರು ಸಾವಿರ ಜಪಾನು ವಾಸಸ್ಥರು ಜಾಗ್ರತೆಯಾಗಿ ಆ ಪ್ರದೇಶವನ್ನು ಖಾಲಿ ಮಾಡಿ ಜಪಾನಿಗೆ ಹೋಗುತ್ತಿದ್ದಾರೆ.

....

ಚೈನಾ ಸೇನಾನಾಯಕನಾಗಿದ್ದ ಜನರಲ್ ಮೂಚನ್ ಶಾನ್ ಎಂಬವನು ಜಪಾನ್ ಸೇನಾನಾಯಕನ ಕೈವಶನಾಗಲು ಬೇಕಾದಷ್ಟು ಹಣ ತೆಗೆದುಕೊಂಡು ಬಾವಿಸಿಕ್ಕೆ ಹೋಗಿದ್ದವನು. ಅವನನ್ನು ಜನರು ಮತ್ತೆ ಬಿಟ್ಟರು. (ತಾ. ೨೪ರಲ್ಲಿ)

ವಿಜ್ಞಾಪನೆ.

ಮಡಿಕೇರಿ ನಾಡು ಕಾರಂತೂರು ಪೇಟೆಯಲ್ಲಿರುವ ಪಾತಿಮಾಬೀ ಜಾನ್‌ಕೋಟ್ ಬಡುವಂತಟ್ಟೆ ಇವರ ಮಕ್ಕಳು ಮೈದು, ಮತ್ತು ಇವರಲ್ಲಿ ಮೈದು ಪೌತಿಯಾದ್ದರಿಂದ ಹಾಲಿ ಮಮ್ಮು ಮತ್ತು ಮೈದು ನವಗ ಅಸು ಎಂಬವರ ಹೆಸರಿನಲ್ಲಿ ಜಮಾಬಂದಿ ನಡೆದು ಬರುವ ಮೂಸಾ ಕಾರ್ಯದಲ್ಲಿರುವ ಗದ್ದೆ, ತೋಟ ಮತ್ತು ಮನೆಯಲ್ಲಿರುವ ವಿಷಯಗಳು ಸ್ವತ್ತುಗಳು ಪೌತಿ ಬಡುವಂತಟ್ಟೆ ಅಸ್ವಾಧೀನದಿಂದ ಹಾಲಿ ಜಮಾಬಂದಿ ನಡೆದು ಬರುವ ಮಮ್ಮು ಮಗ್ಗೇರು ಇವನ್ನು ವಶಪಡಿಸಿಕೊಳ್ಳುವುದಕ್ಕೆ ಪ್ರಯತ್ನಪಡುತ್ತಿರುವುದರಿಂದ ಇವನ್ನು ಕೊಳ್ಳುವವರಾಗಲೀ ಅಥವಾ ಯಾವ ವಿಧದಲ್ಲಿದರೂ ಪರಾಧೀನ ಮಾಡಿಕೊಂಡಲ್ಲಿ ಸಿಂಧುವಾಗತಕ್ಕದ್ದಲ್ಲ. ಪಾತಿ ಬಡುವಂತಟ್ಟೆಯ ಮತ್ಯುದಾರರು ನಾವಾಗಿರುತ್ತೇವೆ.

ಜಾನ್‌ಕೋಟ್ ಚೆರಿಯಮ್ಮ ಮೈದು ಮಗ್ಗೇರು.

2—1.

Wanted.

Influential and well-to-do Disirict and Taluk Managers for the important centers of the Coorg Districts on a monthly salary of Rs. 100 and 80 respectively.

Apply to the DISTRICT INSPECTOR (on Camp), MADRAS CHIT INSURANCE BANK LTD., Post VEERARAJENDRAPET. S. Coorg. (4—4)

ಸ್ತ್ರೀ ಪುರುಷರ ಪ್ರೀತಿಯ ಮರ್ಮಗಳನ್ನು ಚಿತ್ರಪಟಗಳ ಸಹಿತ ಇದ್ದದ್ದನ್ನು ಇದ್ದ ಹಾಗೆ ತಿಳಿಸುವ

ಸ್ತ್ರೀ ದಾಂಪತ್ಯ ರಹಸ್ಯವೆಂಬ ಮರ್ಮಶಾಸ್ತ್ರ.

ಈ ಪುಸ್ತಕವು ಫ್ರೆಂಚ್, ಹಿಂದೂಸ್ಥಾನಿ ಭಾಷೆಗಳಲ್ಲಿ ಬಹುಕಾಲದಿಂದ ಗುಪ್ತವಾಗಿತ್ತು. ಈಗ ಸರ್ವರಿಗೂ ವಿವರವಾಗಿ ತಿಳಿಯುವಂತೆ ಸುಲಭ ಶೈಲಿಯ ಕನ್ನಡ ಭಾಷೆಯಲ್ಲಿ ಭಾಷಾಂತರಿಸಿ ಫೋಟೋಗಳ ಸಹಿತ ಅಂದವಾಗಿ ಮುದ್ರಿಸಿರುತ್ತೇವೆ. ಈ ಪುಸ್ತಕದಲ್ಲಿ ಸ್ತ್ರೀಪುರುಷರಿಗೆ ಬೇಕಾದ ಎಲ್ಲ ಮರ್ಮರಹಸ್ಯಗಳು, ಪುರುಷರು ಸ್ತ್ರೀಯರಲ್ಲಿ ನಡೆದುಕೊಳ್ಳಬೇಕಾದ ಬಗೆ, ಸ್ತ್ರೀಪುರುಷರ ಜಾತಿಯ ಲಕ್ಷಣಗಳು, ಸ್ತ್ರೀಯರಿಗೆ ಬೇಕಾದ ಅನೇಕ ಗುಪ್ತ ವಿಷಯಗಳು, ಸಂಭೋಗದ ಕಾಲ, ಗರ್ಭ ಧರಿಸುವುದು, ಗರ್ಭ ನಿಂತು ಹೋಗುವುದು, ಸಂಭೋಗದಿಂದಾಗುವ ಸಂತೋಷ, ಜನನೇಂದ್ರಿಯಗಳ ವರ್ಣನೆ, ಹಸ್ತ ಪ್ರಯೋಗದಿಂದಾಗುವ ಹಾನಿ ಗರ್ಭಕ್ಕೆ ಬೇಕಾದ ಅನೇಕ ಮರ್ಮವಿಷಯಗಳು ಶಿಶು ಉತ್ಪತ್ತಿ ವಿಧ, ಗುಪ್ತ ವೈದ್ಯಗಳ ಚಿಕಿತ್ಸೆ, ಶಯನ ಗೃಹದ ರಹಸ್ಯವಿಷಯಗಳು, ಮಾನವ ಶರೀರದ ಮರ್ಮಗಳ ವಿವರ, ನಪುಂಸಕತ್ವಕ್ಕೆ ಚಿಕಿತ್ಸೆ, ಇನ್ನೂ ಸ್ತ್ರೀಪುರುಷರಿಗೆ ಬೇಕಾದ ಲೋಕರಹಸ್ಯಗಳು ಚಿತ್ರಪಟಗಳ ಸಹಿತ ಪ್ರಿಂಟಾಗಿದೆ

ಕ್ರಯ: ಪುಸ್ತಕ ೧ಕ್ಕೆ ೧ ರೂಪಾಯಿ

The Legal Trading Co.,

12—10 P. B. 243, Madras.

ಬೆಂಗಳೂರು ಸಮಾಜ ನಾಟಕ ಮಂಡಳಿಯವರು ಪ್ರಾರಂಭಿಸಿದ ನಾಟಕ.

(ಸೋಮವಾರ ಪ್ರೇಕ್ಷಕರಿಂದ)

ಪೋಲ್ಯಂತ ಕಂಪೆನಿಯವರು ಮಡಿಕೇರಿಯಲ್ಲಿ ಹಾಕಿರುವ ತಮ್ಮ ಭವ್ಯವಾದ ಥಿಯೇಟರಿನಲ್ಲಿ ಮೊನ್ನೆ ಬುಧವಾರ (ತಾ. 2—3—32) ದಿವಸ ಪ್ರಾರಂಭದ ನಾಟಕವಾಗಿ 'ಶ್ರೀರಾಮ ಪಾದುಕಾ ಪಟ್ಟಾಭಿಷೇಕ' ಎಂಬ ನಾಟಕವನ್ನು ಅಭಿನಯಿಸಿದರು. ಈ ನಾಟಕದ ವಸ್ತುವು (Plot) ಪ್ರಸಿದ್ಧವಾದ ಶ್ರೀ ರಾಮಾಯಣದಿಂದ ತೆಗೆದದ್ದಾದರೂ ಅದನ್ನು ನೂತನ ಶೈಲಿಯಲ್ಲಿ ಈಗಿನ ಕಾಲಕ್ಕೆ ಸರಿ ಹೊಂದುವಂತೆ ಮೂರು ಅಂಕಗಳಿಂದ ರಚಿತವಾದದ್ದಾಗಿದೆ. ಕರ್ನಾಟಕ ರಂಗಭೂಮಿಯಲ್ಲಿ ಮನೋಹರವಾಗಿ ನಾಟಕ ರಚಿತವಾಗುವುದರಿಂದ, ಅದನ್ನು ಅಭಿನಯಿಸುವುದು—ಅಭಿನಯದಿಂದ ಜನರ ಮನಸ್ಸು ಹರಣವಾಗುವದು ಇನ್ನು ಕೂಡ ನಾವು ಬರೆಯುತ್ತಿದ್ದಾವರೆ ಕನ್ನಡ ರಂಗಭೂಮಿಗೆ ಇದರಿಂದ ಭೂಷಣವೇ ಸರಿ. ದಶರಥ, ಶ್ರೀರಾಮ, ಕೈಕೇಯಿ, ಮಂಥರೆ, ಸೀತಾ ದೇವಿಯರ ಪಾತ್ರವಹಿಸಿದ ನಟರು ಕನ್ನಡ ರಂಗಭೂಮಿಯಲ್ಲಿ ಮುಂದೆ ಕೀರ್ತಿ ತರತಕ್ಕವರು. ಈ ನಾಟಕ ಮಂಡಳಿಯವರು ತಮ್ಮ ನಾಟಕ 'ವಸ್ತು'ವನ್ನು ಜನರಿಗೆ ಬೋಧಪ್ರದವಾಗುವ ರೀತಿ ಅರಿಯಿಸಿ ಅಭಿನಯಿಸುವದರಿಂದ ಅವರಿಗೆ ಉತ್ತೇಜನವು ಸಿಬ್ಬಂದಿಯಾಗಿ ದೊರೆಯಬೇಕು. ಈ ನಾಟಕದಲ್ಲಿ ಹುಡುಗರು ನಟ್ಟನರಿರುತ್ತಾರೆ. ಒಡೆಯನ ಭಕ್ತಿಯಲ್ಲಿ ಕಣ್ಣೀರು ಸುರಿಸಿದವರು ಉಂಟು.

ಸೀನರಿಗಳು, ಡ್ರೆಸ್, ಮೇಕಪ್, ಕಥೆ—ಇವೆಲ್ಲವೂ ಚೆನ್ನಾಗಿ ಜತೆಯಾಗಿದ್ದವು. ಇಂಥಾ ನಾಟಕಗಳನ್ನು ನೋಡುವುದು ಒಂದು ಸಂತೋಷ ಉತ್ತೇಜನ ಕೊಡುವುದು ಒಂದು. ಪ್ರತಿ ನಾಟಕಕ್ಕೆ ಪ್ರೇಕ್ಷಕರು ಕೊಡುವವರು ಕೊಡಗು ದೇಶಕ್ಕಿರುವ ಒಂದು ಕೀರ್ತಿ.

ಮಾರಾಟಕ್ಕಿದೆ.

ಸುಂಟಿಕೊಪ್ಪ ನಾಡು ಹೊರೂರು ಗ್ರಾಮದಲ್ಲಿ "ರುಕ್ಮ ಎಸ್ಟೇಟು" ಎಂಬ 70 ಎಕ್ರೆ, ಕಾಫಿತೋಟ, 20 ಎಕ್ರೆ, ಭೂಮಿ, ಒಂದು ಸಣ್ಣ ಬಂಗ್ಲೆ, ಕೂಲಿ ಲೈನ್ ಮತ್ತು 40 ಎಕ್ರೆ ಕಾಫಿ ತೋಟಕ್ಕೆ ಯೋಗ್ಯವಾದ ಕಾಡು ಸಹ ಮಾರಾಟಕ್ಕೆ ಇದೆ. ಬಂಗ್ಲೆ ವರೆಗೆ ನ್ಯಾಯವಾದ ರಸ್ತೆ ಇದೆ. ಖರೀದಿದಾರರು ಈ ಕೆಳಗಿನ ವಿಳಾಸದಾರರಿಂದ, ಬರಹ ಮೂಲಕವಾಗಲೀ, ಮುಖ್ಯ ಮಾತಾಡಿಯಾಗಲೀ ಕ್ರಯದ ಮೊಬಲಗು ಮತ್ತು ಇತರ ವಿಷಯಗಳನ್ನು ತಿಳಿಯಬಹುದು.

"ಪ್ರೊಪ್ರೈಟರ್"

'R'

C/o. I. C. SUBBAIAH, M. A. B. L., Vakil, Mercara. (Coorg)

4—4

ಕೊಡಗು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟವರ ಆಫೀಸು. ಮಡಿಕೇರಿ, ತಾ. 20 ನೇ ಫೆಬ್ರವರಿ 1932 ನೇ ಇಸವಿ.

ನೋಟೀಸು.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನೆಂದರೆ—ಸರಕಾರ ಸ್ವಾಧೀನಕ್ಕೆ ಬಂದಿರುವ ಇದರ ಕೆಳಗೆ ನಮೂದಿಸಿದಂಥ ಕೋವಿಗಳನ್ನು ಮಡಿಕೇರಿಯಲ್ಲಿ ನನ್ನ ಆಫೀಸು ಮುಂದೆ ಇದೇ ಮಾರ್ಚ ತಾರೀಕು 18 ನೇ ಹುಕ್ರವಾರ 2 ಗಂಟೆ ಸಮಯಕ್ಕೆ ಹರಾಜು ಮಾಡಲ್ಪಡುವುದು.

15. ಒಂಟಿ ಕೊಳವಿನ ಕೇಪು ಕೋವಿಗಳು.
4. ಜೋಡು ಕೊಳವಿನ ಕೇಪು ಕೋವಿಗಳು.
1. ಜೋಡು ಕೊಳವಿನ ತೋಟದ ಕೋವಿ.

ಕೆ. ಚಂಗಪ್ಪ,
ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟ್.

2—2

Empire of India Life Assurance Company, Ltd.

Established 1897.

The New "FAMILY SECURITY" Policy issued by this Company provides.

A. In the event of death during an agreed period,

1. The immediate payment to the Widow, Son or legal representative of a part of the sum Assured together with the Bonus accrued

2. The payment of a guaranteed Yearly Income, payable by monthly instalments, during the balance of the period.

3. The payment of the balance of the sum of assured at the end of the period

OR

B. In the event of death after the period has expired the payment of the sum assured together with any Bonus that has accrued.

Descriptive Pamphlet on application :—

Head Office :— EMPIRE OF INDIA LIFE BUILDING, Bombay.

Branch Office :— 152, COMMERCIAL STREET, Bangalore

52—23

ಭಗವದ್ಗೀತಾರ್ಥ.

(ಮಹಾತ್ಮ ಗಾಂಧಿಯವರ ಲೇಖನದಿಂದ)

ಭಗವದ್ಗೀತೆಯು ಬೋಧಿಸುವುದು 'ಹಿಂಸೆ' ಯನ್ನೇ ಅಥವಾ 'ಅಹಿಂಸೆ' ಯನ್ನೇ ಎಂಬುವುದು ಬಹು ಕಾಲದ ವಾದ ವಿಷಯ.' ಗೀತೆಯಲ್ಲಿ ನಾವು ಓದುವುದೂ, ನಾವು ಓದಬೇಕೆಂದಿರುವುದೂ ಅಂದರ್ಥಕ್ಕಾಗಿ; ನಿಷ್ಪಕ್ಷಪಾತವಾಗಿ ಓದಿದರೆ ನಮಗೆ ನಿಶ್ಚಿತವಾದ ಅರ್ಥ ದೊರೆಯುತ್ತದೆ. ಆದಕಾರಣ, ಈ ಪ್ರಶ್ನೆಯು 'ಅಹಿಂಸೆ' ಯನ್ನೇ ನಿಶ್ಚಯಿಸುವ ಗೀತೆಗೆ ಅಷ್ಟು ಕಷ್ಟವಾದುದಲ್ಲ. ಗೀತೆಯು 'ಅಹಿಂಸೆ' ಯನ್ನು ಬೋಧಿಸದಿದ್ದರೇನೇ ಅದನ್ನು ಅವನು ಒಪ್ಪಬೇಕಾಗಿದೆ: ಗೀತೆಯಂತಹ ಮಹಾಕಾವ್ಯವು ಅವನಿಗೆ ನಿಶ್ಚಯವಾದ ಅಹಿಂಸಾ ಮತಕ್ಕಿಂತ ಹೆಚ್ಚು ಮಹತ್ವದ ಬಲವುಳ್ಳದ್ದನ್ನು ಉಪದೇಶಿಸದು. ಹಾಗಿಲ್ಲದಿದ್ದರೆ, ಅದು ಅವನಿಗೆ ಸನ್ಮಾರ್ಗದರ್ಶಕವಾಗಿರುವುದಿಲ್ಲ. ಅದರ ವಿಷಯದಲ್ಲಿ ಜಗಳವೂ ಅವನು ಅದರ ಗೌರವವನ್ನೇನೋ ಬಿಟ್ಟಿಲ್ಲ; ಆದರೆ ಅದು ಅವನಿಗೆ ಪೂರ್ಣವಾದ ಅಧಿಕಾರವನ್ನು ವಹಿಸ ಒಪ್ಪಲಾರ.

ಮೊದಲನೇ ಅಧ್ಯಾಯದಲ್ಲಿ ಅರ್ಜುನನು ಅಹಿಂಸಾಧರ್ಮ ಪ್ರೇರಿತನಾಗಿ ಆಯುಧಗಳನ್ನು ಕೆಳಗಿಟ್ಟು ಕೌರವರ ಕೈಯಿಂದ ಕೊಲ್ಲಿಸಿಕೊಳ್ಳಲು ಸಿದ್ಧನಾಗಿರುವುದನ್ನು ನೋಡುತ್ತೇವೆ. ಹಿಂಸೆ ಕಾರ್ಯಪ್ರವೃತ್ತನಾದ ಎಂತಹ ವಿಷಮಗಳುಂಟಾಗಿ ಪಾಪಸಂಘಟನೆಯುಂಟಾಗುವುದೆಂಬುದನ್ನು ಅವನು ತನ್ನ ಮನೋಭೀತಿಯ ಮೇಲೆ ಚಿತ್ರಿಸಿಕೊಳ್ಳುತ್ತಾನೆ. ಕೊನೆಗೆ ಮನಸ್ಸನ್ನು ಇಳೀ ಬಿಟ್ಟ ದುಃಖದಿಂದ ನಡುಗುತ್ತಾ— 'ಆಹಾ! ಎಂಥ ಮಹಾ ಪಾಪಕೃತ್ಯವನ್ನು ಮಾಡಲು ಮುಂದಾಗಿದ್ದೇವೆ!' ಎನ್ನುತ್ತಾನೆ.

ಕೃಷ್ಣನು ಇದೇ ತಕ್ಕ ಸಮಯವೆಂದು ತಿಳಿದು ಹೀಗೆ ಹೇಳುತ್ತಾನೆ—'ಪಾರ್ಥ, ಪಾರ್ಥ ನಿನ್ನ ವೈರಾಗ್ಯ ಕೊಲ್ಲುವವನು ಯಾರು? ಕೊಲ್ಲಿಸಿಕೊಳ್ಳುವವನು ಯಾರು? ಆತ್ಮ ಅದಾವುದು ಅಲ್ಲ; ದೇಹವಾದರೋ ನಶ್ವರವಾಗಲೇ ಬೇಕು. ನಿನ್ನ ಪಾಲಿಗೆ ಒಂದಿರುವ ಯುದ್ಧವು ನಿನ್ನ ಧರ್ಮವೆಂದು ಒಗ್ಗಿದು ಯುದ್ಧ ಮಾಡು. ಜಯ ಪರಾಭವ ವಿಚಾರಗಳು ನಿನ್ನದಲ್ಲ. ನಿನ್ನ ಕೆಲಸ ನೀನು ಮಾಡಿ ಪೂರೈಸು!

ಹನ್ನೊಂದನೆಯ ಅಧ್ಯಾಯದಲ್ಲಿ ಭಗವಂತನು ತನ್ನ ವಿಶ್ವರೂಪವನ್ನು ತೋರಿಸುತ್ತಾ—'ಪ್ರಪಂಚಗಳ ಲಯಕರನಾದ, ದಿನಾದಿಕಾರಣನಾದ ಕಾಲನು ನಾನು; ಇಲ್ಲಿ ಈಗ ನನ್ನ ಲಯಕಾರ್ಯದಲ್ಲಿ ತೊಡಗಿದ್ದೇನೆ. ಈಗ ಇವರೆಲ್ಲರೂ ನನ್ನಿಂದ ಸಂಹೃತರಾಗಿದ್ದಾರೆ. ಕೊಲ್ಲು ಇವರನ್ನು ದುಃಖಿಸಬೇಡ' ಎಂದು ಹೇಳುತ್ತಾನೆ.

ದೇವರಿಗೆ ಹಿಂಸೆ-ಅಹಿಂಸೆಗಳೆರಡೂ ಸಮವೂ ಆದರೆ ಮಾನವನಿಗೆ ಭಗವಂತನ ಸಂದೇಶವು 'ಯುದ್ಧ ಮಾಡು, ರಣಾಂಗಣದಲ್ಲಿ ನಿನ್ನ ಶತ್ರುಗಳನ್ನು ಖಂಡಿತವಾಗಿ ಗೆಲ್ಲುವೆ ಎಂಬುದೇನು! ಆದಕಾರಣ ಗೀತೆಯು ಹಿಂಸೆಯನ್ನೇ ಉಪದೇಶಿಸುವ ಪಕ್ಷದಲ್ಲಿ ಮೊದಲನೇ ಮತ್ತು ಹನ್ನೊಂದನೇ ಅಧ್ಯಾಯಗಳು ವಿಶ್ವವುಗಳಿಗೆ ಅನುಗುಣ್ಯಗಳಾಗಿಲ್ಲ; ಏನೇ ಆದರೂ ಅಹಿಂಸಾವಾದವನ್ನಂತೂ ಪೋಷಿಸುವಂತಿಲ್ಲವೇ ಇಲ್ಲ.

ಆದಕಾರಣ ಹೇಗಾದರೂ ಪುರುಷತ್ವ ಮಾಡಿಕೊಂಡು ನನ್ನ ಅನುಮಾನವನ್ನು ಪರಿಚ್ಛೇದಿಸಬೇಕು. ಎಂಬವರು ನನ್ನ ಸ್ನೇಹಿತರೊಬ್ಬರು. ಈ ಕಠಿಣ ಪ್ರಶ್ನೆಯನ್ನು ಕೇಳಿದ್ದರು. ಈ ಪ್ರಶ್ನೆಯು ನನ್ನ ಹೊಸದೇನೂ ಅಲ್ಲ; ನಾಳೆ ಕಡೆವರೆಗೆ ಮುಗಿಯುವಂತಹದ್ದೂ ಅಲ್ಲ. ಇದರ ಪ್ರಶ್ನೋತ್ತರವು ಪ್ರತಿಯೊಬ್ಬ ಗೀತಾಪಾಠಕನ ವ್ಯಾಖ್ಯಾನದಲ್ಲಿಯೇ ಇದೆ.

ಈಗ ನನ್ನ ವ್ಯಾಖ್ಯಾನವನ್ನು ನಾನು ಹೇಳುವೆನಾದರೆ ಕೊನೆಯಲ್ಲಿ ಪ್ರತಿಯೊಬ್ಬನೂ ನ ಒಪ್ಪಬೇಕಾದರೆ ತನ್ನ ವಿಷಯವನ್ನೇ ಹೊರತು ಬುದ್ಧಿಕುಶಲತೆಯನ್ನಲ್ಲ ವೆಂಬುವ ನಾನು ಒಬ್ಬ ಮತ್ತು ನಿಷ್ಪಕ್ಷಪಾತಿಯಾದ ಶ್ರೀಲ ದೃಢ ಕಲಿಕೆಯು. ಅದಕ್ಕೆ ತಕ್ಕ ಹೇತುವಾದವನ್ನು ಕಲ್ಪಿಸಲು. ಯಾವಾಗಲೂ ಮೊದಲು ಮನಸ್ಸಿನಲ್ಲಿ. ಅನಂತರ ತರ್ಕ. ಮಾನವನು ತಾನು ಯಾವುದನ್ನು ಮಾಡುವನೋ, ಅಥವಾ ಮಾಡಬೇಕೆನ್ನುವನೋ ಅದನ್ನು ಬಲಪಡಿಸಲು, ಸ್ಥಾಪಿಸಲು ಬೇಕಾದ ನಿಮಿತ್ತಗಳನ್ನೂ, ತರ್ಕಗಳನ್ನೂ ಹುಡುಕುತ್ತಾನೆ.

ಆದಕಾರಣ ನನ್ನ ಗೀತಾ ವ್ಯಾಖ್ಯಾನವನ್ನು ಒಪ್ಪದಿರುವವರ ಸಿದ್ಧಾಂತವನ್ನು ಗ್ರಹಿಸುತ್ತೇನೆ. ಯಾವ ರೀತಿ ನನ್ನ ಸಿದ್ಧಾಂತಕ್ಕೆ ಬಂದಿದ್ದೇನೋ, ಆ ಸಿದ್ಧಾಂತಕ್ಕೆ ಬರಲು ನಾನು ಯಾವ ಗೂಢಾರ್ಥ ವಿವರಣ ಶಾಸ್ತ್ರೀಯ ತೋರುವೆನೋ ಎಂಬುವುದನ್ನೇ ನಾನೀಗ ತಿಳಿಯಪಡಿಸಬೇಕೆಂದಿರುವುದು. ಈಗ ನನ್ನ ಅರ್ಥ ವಿವರಣೆಗಳಿಗಾಗಿ ಹೊರಡುವುದು. ಅದರಲ್ಲಿ ನಾನು ಸೋತರೂ ಒಂದೇ. ಗೆದ್ದರೂ ಒಂದೇ.

ಮೊದಲನೇ ಬಾರಿ ನನಗೆ ಗೀತಾ ಪರಿಚಯವಾದದ್ದು ೧೮೮೯ರಲ್ಲಿ; ಆಗ್ಯೆ ನನಗೆ ಸುಮಾರು ಇಪ್ಪತ್ತು ವರ್ಷ ವಯಸ್ಸು. ಆಗ ನನಗೆ ಅಷ್ಟಾಗಿ ಅಹಿಂಸೆಯ ಜ್ಞಾನವೂ ಗೊತ್ತಿರಲಿಲ್ಲ. ಗುಜರಾತಿ ಕವಿಯಾದ ಶ್ಯಾಮಳಭಟ್ಟನ 'ಪ್ರಿತಿಯಿಂದ ಶತ್ರುವನ್ನು ಗೆಲ್ಲಬಹುದೆಂಬ' ನೀತಿ ಸೂತ್ರ ಸುಗ್ಗಿಯೆಂದು ಮಾತ್ರ ನನ್ನ ಮನಸ್ಸಿನಲ್ಲಿ ಚೆನ್ನಾಗಿ ಬೇರೂರಿದ್ದಿತು. ಆದರೆ ಅದರಿಂದ ನಾನಿನ್ನೂ ನಿತ್ಯಧರ್ಮವಾದ ಅಹಿಂಸೆಯನ್ನು ಮಾತ್ರ ಅನುವೇದಿಸಿರಲಿಲ್ಲ. ಉದಾಹರಣೆಗಾಗಿ ನಾನು ಅದು ಸರ್ವಪ್ರಾಣಿಗಳಿಗೂ ವ್ಯಾಪ್ತಿಯಾಗುವುದೆಂದು ತಿಳಿದೇ ಇರಲಿಲ್ಲ. ಹಾಗು ಭರತಖಂಡದಲ್ಲಿದ್ದಾಗಲೇ ಮಾಂಸದ ರುಚಿ ನೋಡಿದ್ದೆ. ಹಾವು ಮುಂತಾದ ವಿಷ ಜಂತುಗಳನ್ನು ಕೊಲ್ಲುವುದೇ ನನ್ನ ಕರ್ತವ್ಯವೆಂದುಕೊಂಡಿದ್ದೆ. ಆ ದಿವಸ ನನ್ನ ವಿಚಾರದ ನಂಬಿಕೆಯೊಡನೆಯೋ ಅಹಿಂಸಾಮತವಾದಿಯಾದವನು ವಿಷಕ್ರಿಮಿಗಳನ್ನು ಸಹಾ ಕೊಲ್ಲಕೂಡದೆಂದೆ. ಆಂಗ್ಲೇಯರೊಡನೆ ಹೋರಾಡಲು ನಾವು ಸಿದ್ಧರಾಗಬೇಕೆಂದು ಆಗ ನಾನು ನಂಬಿದ್ದೆ.

'ಆಂಗ್ಲೇಯರು ಆಳಿದರೇನು ಆಶ್ಚರ್ಯ!' ಎಂಬ ಗುಜರಾತಿ ಕವಿಯೊಬ್ಬನ ಧ್ವನಿಯಿಂದೊಡಗೂಡಿದ ನೀಚ ಕವಿತೆಯನ್ನು ನಾನು ಎಷ್ಟೋ ಬಾರಿ ಹಾಡುತ್ತಿದ್ದೆ. ಆಂಗ್ಲೇಯರೊಡನೆ ಹೋರಾಡುವ ಯೋಗ್ಯತೆಯುಂಟಾಗಬೇಕಾದರೆ ಮಾಂಸ ಭಕ್ಷಣವೇ ಪ್ರಥಮ ಸೋಪಾನವೆಂದು ನಂಬಿದ್ದೆ.

ಇದೀಗ ನಾನು ಇಂಗ್ಲೆಂಡಿಗೆ ಹೋಗುವ ಮೊದಲು ಇದ್ದ ಸ್ಥಿತಿ. ಅನಂತರ ಅಲ್ಲಿ ನಾನು ಮಾಂಸ ಭಕ್ಷಣವೇ ಮುಂತಾದುದರಿಂದ ಪಾರಾದೆ. ನನ್ನ ತಾಯಿಗೆ ನಾನು ಮಾಡಿದ್ದ ಪ್ರತಿಜ್ಞೆಗನುಗುಣವಾಗಿ ನನ್ನ ಮರಣ ಪರ್ಯಂತರವೂ ನಡೆಯಲೇಬೇಕೆಂಬ ದೃಢ ನಿಶ್ಚಯವೇ ಅದಕ್ಕೆ ಕಾರಣ. ಅಲ್ಲದೆಯೇ ನನ್ನ ಸತ್ಯ ಪ್ರೇಮವು ನನ್ನನ್ನು ಎಷ್ಟೋ ಅಪಾಯಗಳಿಂದ ರಕ್ಷಿಸಿರುವುದು.

ಅನಂತರ ಇಂಗ್ಲೆಂಡಿನಲ್ಲಿದ್ದಾಗ ಆಂಗ್ಲೇಯ ಮಿತ್ರರಿಬ್ಬರ ಸಹವಾಸವು ನನ್ನನ್ನು ಗೀತೆಯನ್ನೋದುವಂತೆ ಮಾಡಿತು. ಇಲ್ಲಿ 'ಓದುವಂತೆ ಮಾಡಿತು' ಎಂದು ಹೇಳುತ್ತೇನೆ. ಯಾಕೆಂದರೆ—ಅದನ್ನು ನಾನು ಓದಬೇಕೆಂಬ ನನ್ನ ಸ್ವತಂತ್ರವಾದ ಆಸೆಯಿಂದಲ್ಲ. ಆದರೆ ಈ ಸ್ನೇಹಿತರಿಬ್ಬರೂ ನನ್ನನ್ನು ಅವರೊಡನೆ ಗೀತೆಯನ್ನು ಓದಬೇಕೆಂದಾಗ ನನ್ನ ಅಜ್ಞಾನವನ್ನು ನೋಡಿ ನನಗೆ ನಾಚಿಕೆಯಾಯಿತು. ನನ್ನ ಮತ ಗ್ರಂಥಗಳ ವಿಷಯದಲ್ಲೇ ನಾನಿದ್ದ ಅಜ್ಞಾನವು ನನ್ನ ಮನಸ್ಸನ್ನು ಕೊರೆಯತೊಡಗಿತು. ಈ ಚಿತ್ತವೃತ್ತಿಯ, ಬಹುಶಃ ನನಗೆ ಗರ್ವವಿತ್ತೆಂದು ತೋರುತ್ತದೆ. ಅದುದರಿಂದಲೇ ಗೀತಾಶ್ಲೋಕಗಳನ್ನು ಅರ್ಥಮಾಡಿಕೊಳ್ಳುವಷ್ಟು ಮಟ್ಟಿಗೆ ನನಗೆ ಸಂಸ್ಕೃತ ಭಾಷಾಜ್ಞಾನವಿರಲಿಲ್ಲ. ನನ್ನ ಸ್ನೇಹಿತರಂತೂ ಸಂಸ್ಕೃತ ಗ್ರಂಥವನ್ನೇ ಅರಿಯರು. ಅವರು ಸರ್ ಎಡ್ವಿನ್ ಆರ್ನಾಲ್ಡರವರ ದಿವ್ಯವಾದ ಗೀತಾನುವಾದದ ಪ್ರತಿಯೊಂದನ್ನು ನನಗೆ ತಂದುಕೊಟ್ಟರು. ನಾನು ಅದನ್ನು ಮೊದಲಿನಿಂದ ಕಡೆಯವರೆಗೂ ಓದಿ ಆನಂದಪಟ್ಟೆನೆಂಬುದನ್ನು ಹೇಳಬೇಕಿದೆ. ದ್ವಿತೀಯಾಧ್ಯಾಯದ ಕಡೆಯ ಹನ್ನೊಂದು ಶ್ಲೋಕಗಳಂತೂ ನನ್ನ ಹೃದಯಫಲಕದ ಮೇಲೆ ಕೆತ್ತಲ್ಪಟ್ಟಿವೆ. ನನ್ನ ಸರ್ವ ಜ್ಞಾನ ಭಂಡಾರಗಳವು. ಅವು ಬೋಧಿಸುವುದಂತೂ ಎಂದಿಗೂ ಅಳಿಯದ ಶಾಶ್ವತ ತತ್ವಗಳು. ಅವುಗಳಲ್ಲಿ ತರ್ಕವಿಲ್ಲದಿದ್ದರೂ ಜ್ಞಾನವಿದ್ದೇ ಇದೆ.

ಈಚೆಗೆ ನಾನು ಅನೇಕಾನೇಕ ಭಾಷಾಂತರಗಳನ್ನೂ, ಭಾಷ್ಯಗಳನ್ನೂ ಓದಿದ್ದೇನೆ; ತರ್ಕಿಸಿದ್ದೇನೆ; ಮನನಮಾಡಿ ವಿಚಾರಿಸಿದ್ದೇನೆ. ಇಷ್ಟಾದರೂ ಇವುಗಳಿಂದೂ ನಾನು ಮೊದಲನೇ ಬಾರಿ ಓದಿದಾಗ ಮನಸ್ಸಿನಲ್ಲಿ ನಾಟಿದ ಭಾವವನ್ನು ಮಾತ್ರ ಬದಲಾಯಿಸದೆ ಹೋದವು. ಆ ಶ್ಲೋಕಗಳು ಗೀತಾರ್ಥ ವಿವರಣೆಯ ತಿರುಳು, ಅಂತರಾರ್ಥ, ರಹಸ್ಯ. ಆ ಶ್ಲೋಕಗಳಿಗೆ ವಿರುದ್ಧವಾಗಿರುವವೆಂದು ತೋರುವ ಮಿಕ್ಕ ಶ್ಲೋಕಗಳೆಲ್ಲವನ್ನೂ ತಳ್ಳಿ ಹಾಕೆಂದು ಬೇಕಾದರೂ ನಾನು ಹೇಳುತ್ತೇನೆ. ಆದರೆ ಅಲ್ಪ ವಿದ್ಯಾರ್ಥಿಯು ಯಾವುದನ್ನೂ ಹಾಗೆ ತಳ್ಳಕೂಡದು. 'ಪರಸ್ಪರ ವಿರುದ್ಧಭಾವವನ್ನು ವಿಭಜಿಸಿ ನಿರ್ಣಯಿಸುವುದು ನನ್ನ ಗೋಚರ ಶಕ್ತಿಯ ಮೇರೆ ಮೀರಿದುದು; 'ಮುಂದೆ ಕಾಲಾನುಕಾಲದಲ್ಲಿ ಹಾಗೆ ನಡೆಯಲಾರೆ' ಎಂದು ಅವನು ತನ್ನಾಗಿ ಹೇಳಿಕೊಳ್ಳುವನು. ಅವನು ತನ್ನೊಂದಿಗೂ, ಇತರರೊಂದಿಗೂ ವಾದಿಸುವುದು ಆ ರೀತಿ.

ಮತಗ್ರಂಥಗಳ ಸರಿಯಾದ ಗೂಢಾರ್ಥ ವಿವರಣೆಗೆ ಭಗವದ್ಭಜನ ಪರಿಪಾಕುಗಾರ ಚಿಂತನವೂ, ಅನುಭವವೂ ಆವಶ್ಯಕ. ಕೆಲವರು ವೇದಾಭ್ಯಾಸ ಮಾಡಕೂಡದೆಂಬ ಆಜ್ಞೆಯು ಕೇವಲ ಅರ್ಥರಹಿತವಾದುದಲ್ಲ. ಶೂದ್ರನೆಂದರೆ ಆಧ್ಯಾತ್ಮಿಕ ವಿಷಯಗಳಲ್ಲಿ ಅಶಿಕ್ಷಿತನೆಂದೂ, ಜ್ಞಾನ ಶೂನ್ಯನೆಂದೂ ಅರ್ಥ. ವೇದಗಳಿಗೆ ಅವನು ಬಹುತರ ಅನರ್ಥ ಮಾಡಬಹುದೆಂದು ಆ ರೀತಿ ಹೇಳಬಹುದು. ಪ್ರತಿಯೊಬ್ಬನೂ ಬೀಜಗಣಿತದ ಲೆಕ್ಕವನ್ನು ಮಾಡಲಾರ. ಕೊಂಚ ಪ್ರಾರಂಭರೂಪವಾದ ಶಿಕ್ಷೆಯು ಆವಶ್ಯಕ. "ಅಹಂ ಬ್ರಹ್ಮಾಸ್ಮಿ" ಎಂಬ ಘನವಾದ ತತ್ವಾರ್ಥವನ್ನು ಪಾಪ ಕೂಪದಲ್ಲಿ ಮುಳುಗಿರುವವನು ತನ್ನ ಬಾಯಿಯಲ್ಲಿ ಉಚ್ಚರಿಸುವುದು ಎಂತಹ ನೀಚ ಕೆಲಸಗಳಿಗೆ ಗುರಿಗೊಳಿಸದಿರುತ್ತದೆ! ಅವನ ಕೈಗಳಲ್ಲಿ ಅದಕ್ಕೆ ಎಂತಹ ಅಪಾರ್ಥ ಕಲ್ಪಿಸಲಾಯಿತು.

(ಮುಂದುವರಿಯುವುದು)

ಚೈನಾ—ಜಪಾನು ಯುದ್ಧ.

ಚೈನಾ ಸೈನ್ಯಗಳು ಧೈರ್ಯವಾಗಿ ಎದುರಿಸಿದ್ದನ್ನು ನೋಡಿ ಜಪಾನು ಸೈನ್ಯಗಳು ಅವುಗಳನ್ನು ಓಡಿಸಲಾರದೆ ಕಳೆದ ಭಾನುವಾರ ಸಾಯಂಕಾಲ ಟೋಕಿಯೋವಿಗೆ ತಮಗೆ ಸಹಾಯಾರ್ಥವಾಗಿ ಸೈನ್ಯಗಳನ್ನು ಕಳುಹಿಸಬೇಕೆಂದು ತಂತಿ ಸಮಾಚಾರವನ್ನು ಕಳುಹಿಸಿಕೊಟ್ಟರು.

ಚೈನಾ ಸೈನ್ಯಗಳ ನಿರೋಧಗಳನ್ನು ನೋಡಿ ಜಪಾನು ಸೈನ್ಯಗಳು ತತ್ತರಿಸುತ್ತಿವೆ.

ಜಪಾನು ಸೈನ್ಯಗಳು ಮುಂದಾಗಿ ಬಾಂಬುಗಳೊಡನೆ ವಿಮಾನಗಳ ಮೂಲಕ ಸುರಿಸಿ ಮುಂದಕ್ಕೆ ಸೈನ್ಯಗಳೊಡನೆ ನುಗ್ಗುತ್ತಿವೆ. ಅಂತರ್ಜಾತೀಯ ಪ್ರದೇಶಕ್ಕೆ ೫೦೦ ಗಜಗಳ ದೂರದಲ್ಲಿ ಜಪಾನು ಫಿರಂಗಿ ಗುಂಡುಗಳು ಬಾಂಬು ಎಂಬ ಸ್ಥಳದಲ್ಲಿ ಬೀಳುತ್ತಿದ್ದವು.

ಜಪಾನು ಸೈನ್ಯಗಳು ಅತಿ ಭಯಂಕರವಾಗಿ ಹೋರಾಡಿದಾಗ್ಯೂ ಕ್ವಿಯಾಂಗಿನ ದಾರಿಯಲ್ಲಿ ನುಗ್ಗಿಕೊಂಡು ಹೋಗಲಾರದೆ ಹೋದರು.

ಅತ್ತಕಡೆ ಚೈನಾ ಮಿಷಿನ್ ಗನ್ನುಗಳು ಕೆಲಸ ಮಾಡಿದವು. ಸಾಧ್ಯವಾದ ಮಟ್ಟಿಗೂ ರಕ್ತಪಾತವೂ ಪ್ರಾಣ ನಷ್ಟವೂ ಇಲ್ಲದೆಯೇ ಯುದ್ಧವ ತಲೆಗಿಸಿದರೋ ಎನ್ನುವಂತೆ ಜಪಾನು ಸಂಧಿಸುವುದು ತಗ್ಗಿತ್ತು.

ಕಳೆದ ಭಾನುವಾರ ಜಪಾನು ಸೈನ್ಯಕ್ಕೆ ೧೦೦ ಮಂದಿ ನಷ್ಟವಾದಂತೆ ಪ್ರಕಟಿಸಿದ್ದರು. ಆದರೂ ಅದಕ್ಕಿಂತ ಬಹಳ ಹೆಚ್ಚಾಗಿ ಇರಬಹುದೆಂದು ಅಂದುಕೊಳ್ಳುತ್ತಿದ್ದರು.

ಚೈನಾ ೧೯ನೇ ಪಟಾಲಂ ಮತ್ತು ಚಿಯಾಂಗು ಕೇಷ ಯವರ ಜಾತಿಯ ಸೈನ್ಯಗಳು ಗಂಟೆಗಳ ಕಾಲ ಕಿಯಾಂಗ್ವಾಗಾಗಿ ಭಯಂಕರವಾಗಿ ಹೋರಾಡಿದರು. ಯಾರೂ ಸಹ ಮುಂದಕ್ಕೆ ಹೋಗಲಿಲ್ಲ. ಆದರೂ ಬಾರಿಗಳಲ್ಲಿ ಎಟುಕಿಂದ ಜಪಾನರು ಹ್ಯಾಂಗು ಕ್ಯಾವನ್ನು ಪ್ರವೇಶಿಸಿದರು. ಇದಕ್ಕಿಂತಲೂ ಘೋರವಾದ ಹೋರಾಟವು ನಡೆಯುತ್ತಿದ್ದಂತೆ ತಿಳಿದು ಬರುತ್ತಿತ್ತು.

ಈ ದಿನದ ಹೋರಾಟದಲ್ಲಿ ಉಭಯ ಪಕ್ಷದವರೂ, ಘೋರ ನಷ್ಟಗಳನ್ನು ಹೊಂದಿದರಂತೆ. ಆ ವೇಳೆ ಜಪಾನು ಸೈನ್ಯಗಳು ಮುಖ್ಯಪ್ರದೇಶವಾದ ಕಿಯಾಂಗ್ ಗ್ರಾಮವನ್ನು ಹಿಡಿದುಕೊಂಡರೆಂಬುದಾಗಿ ತಿಳಿದು ಬಂದಿತು. ರೈಲ್ವೆ ಸ್ಟೇಷನನ್ನೂ ಸಹ ಹಿಡಿದುಕೊಂಡರಂತೆ. ಅಲ್ಲಿ ರಕ್ತ ಪಾತವೂ ಹೋರಾಟವೂ ಒಂದೇ ರೀತಿಯಾಗಿ ನಡೆಯುತ್ತಿತ್ತು. ಅಷ್ಟರಲ್ಲಿ ಚೈನರ ಫಿರಂಗಿ ಗುಂಡುಗಳು ಅಂತರ್ಜಾತೀಯ ಪ್ರದೇಶದಲ್ಲಿ ಬಿದ್ದರೂ ವಿದೇಶೀಯರಿಗಾರಿಗೂ ತಗಲಲಿಲ್ಲ. ಹಗಲೆಲ್ಲ ಭಯಂಕರವಾಗಿ ವಿಚಾರ ಒಗೆ ಹಾಯದೆ ನೋಟದಿಂದ ಒಂದು ಅಂತರ್ಜಾತೀಯ ಪ್ರದೇಶದಲ್ಲಿ ಎಷ್ಟೋ ಜನರು ಕಂಡು ಬರುತ್ತಿದ್ದರು.

....

ಇಷ್ಟರಲ್ಲಿಯೇ ತಾರೀಕಿನ ದಿವಸ ಕಿಯಾಂಗ್ವನ ಯುದ್ಧದಲ್ಲಿ ಜಪಾನರು ಆಧುನಿಕ ಆಯುಧಗಳೆಲ್ಲವನ್ನೂ ಉಪಯೋಗಿಸಿದರು. ಚೈನಾ ಸೇನೆಯು ಜಪಾನಿನವರ ಟ್ಯಾಂಕ್ (ಫಿರಂಗಿ ಗಾಡಿ)ಗಳನ್ನು ಮುಂದಕ್ಕೆ ಬರಲೀಸದೆ ಎದುರಿಸಿ ಪ್ರತಿಭಟಿಸಿದರು. ಪೂರ್ವಕಾಲದ ಬಾಂಬುಗಳನ್ನು ಅವುಗಳ ಮೇಲೆ ಎಸೆದಾಗ್ಯೂ ಒಂದು ಚಕ್ರ ಸಹ ಚಲಿಸಲಿಲ್ಲ.

ವೂಸಂಗಿನ ಹತ್ತಿರ ಚೈನಾ ಸೇನೆಯ ಕೊಂಚ ಭಾಗವು ಧೈರ್ಯವಾಗಿ ಜಪಾನರನ್ನು ಸಂಧಿಸ ವ್ಯರ್ಥಪ್ರಯತ್ನರಾದರು. ಜಪಾನರು ಸೈನಿಕ ನಾವಿಕ ವೈಮಾನಿಕ ದಳಗಳೊಡನೆ ಸಂಧಿಸಿದಾಗ್ಯೂ ಅಗ್ನಿ ಜ್ವಾಲೆಗಳ ಮಧ್ಯೆ ನುಗ್ಗಿ ಹಿಮ್ಮೆಟ್ಟದೆ ಚೈನಾ ಸೇನೆಗಳು ಜಪಾನರನ್ನು ಎದುರಿಸಿ ತಮ್ಮ ಸಾಹಸವನ್ನು ತೋರಿದರು.

ಇಂಗ್ಲೆಂಡು ಫ್ರಾನ್ಸುಗಳಿಗೆ ಜರುಗಿದ ಶತವರ್ಷದ ಸಂಗ್ರಾಮದಂತೆ ಷ್ಯಾಂಗ್ಹೈ ಯುದ್ಧವು ಜರುಗುತ್ತಿದೆಯೆಂದು ಬರ್ಲಿನ್ ಪತ್ರಿಕೆಗಳು ತಿಳಿಸುತ್ತಿವೆ. ಆ ಯುದ್ಧದಲ್ಲಿ ಬ್ರಿಟಿಷ್ ಫ್ರೆಂಚು ಜಾತಿಗಳೆಲ್ಲವೂ ಒಂದಾಗಿ ಹೋರಾಡಿದಂತೆ ಈಗ ಚೈನಾ ಜಾತಿಯೆಲ್ಲವೂ ಒಂದಾಗಿ ಹೋರಾಡುತ್ತಿದೆಯೆಂದು ಬರೆಯುತ್ತಿವೆ.

'ಜಪಾನರು ಷ್ಯಾಂಗ್ಹೈಯನ್ನು ಆಕ್ರಮಿಸಿಕೊಳ್ಳಬೇಕೆಂಬ ಈ ಹೊಸ ರಾಟವು ಆಗದ ಹೋಗದ ಕೆಲಸ' ಎನ್ನುತ್ತಿವೆ. ಅಮೇರಿಕಾ ಈ ಸಂಗತಿಗಳೆಲ್ಲವನ್ನೂ ಕಾದು ಹಿಡಿದು ನೋಡುತ್ತಿದೆಯೆಂದು ಅನ್ನುತ್ತಿವೆ. ರಾಕ್ಷಸ ಬಲವುಳ್ಳ ಚೈನಾದೊಡನೆ ಬಹಳ ಕಾಲ ಜಪಾನು ಹೋರಾಡಿ ಬಲಹೀನವಾದ ಮೇಲೆ ಅಮೇರಿಕಾ ಈ ವಿಷಯದಲ್ಲಿ ಪ್ರವೇಶವನ್ನು ಕಲ್ಪಿಸಿಕೊಳ್ಳುವುದೆಂದು ದಿಸೋರಿಕ್ಸ್ ಜಾಬುಟಾಗ್ ಎಂಬ ಪತ್ರಿಕೆಯು ಬರೆಯುತ್ತಿದೆ. ಜಪಾನು ಷ್ಯಾಂಗ್ಹೈಯಲ್ಲಿ ಹೊಂದಬಹುದಾದ ವಿಜಯದೊಡನೆ ಯುದ್ಧವು ಮುಗಿಯುವೆದೆಂದೂ ಮತ್ತಷ್ಟು ಮುಂದಕ್ಕೆ ಹೋಗುವುದೆಂದೂ ವಾಸೆನಾ ವಾಜ್ಯಾಟಂಗ್ ಪತ್ರಿಕೆಯು ಬರೆಯುತ್ತಿದೆ.

ಇಂಡಿಯಾ ಕಾರ್ಯಾಲಯದಲ್ಲಿ ಷ್ಯಾಂಗ್ಹೈ ಪರಿಸ್ಥಿತಿಯನ್ನು ಕುರಿತು ತೀವ್ರವಾಗಿ ಆಲೋಚಿಸುತ್ತಿದ್ದರೂ ಅಧಿಕಾರಿವರ್ಗದಲ್ಲಿ ಭಯವೇನೂ ಕಾಣಿಸದು. ಪರಿಸ್ಥಿತಿಗಳನ್ನೆಲ್ಲಾ ಯುದ್ಧ ಮಂತ್ರಿಯಾದ ಹೇಯಿಲ್ ಷಾರವರೂ ಹಾಗೆ ಮಂತ್ರಿಯಾದ ಸೈನ್ಯಾಧಿಪತಿಯೂ [illegible] ಹಿಡಿದು ನೋಡುತ್ತಿದ್ದಾರೆ. ಅವಶ್ಯಕವಾದರೆ [illegible] ಜನಗಳನ್ನು ಅಂತರ್ಜಾತೀಯ ಪ್ರದೇಶದಿಂದ [illegible] ಕಳುಹಿಸುವೆವೆಂದು ಯುದ್ಧ ಮಂತ್ರಿ ಹೇಳಿದ್ದಾನೆ. [illegible]ಗಳೆಲ್ಲವೂ ಪೂರ್ತಿಯಾಗಿವೆಯಂತೆ.

....

ವೂಸಂಗಿನಲ್ಲಿದ್ದ ಚೈನಾ ಸೈನ್ಯಗಳ [illegible] ಗುಂಡು ಸಾಮಗ್ರಿಗಳ ನಷ್ಟ [illegible] ಆಗಿದೆಯಂತೆ.

ಜಾತಿ ಸಮಿತಿ (ಲೀಗ್ ಆಫ್ ನೇಷನ್ಸ್) [illegible]ಲಗಿ ಹೋಗಬೇಕೆಂಬ ಉದ್ದೇಶವು ತಮಗ[illegible] ನ್ ಅಮೇರಿಕಾ ಮೈತ್ರಿಯನ್ನು ಬಿಡಬೇಕ[illegible] ಲ್ಲವೆಂದೂ ಜಪಾನ್ ಎಡ್ವೈಸರ್ ಮುಂ[illegible] ರನು ಪತ್ರಿಕೆಗಳಲ್ಲಿ ಪ್ರಕಟಿಸುತ್ತಾ[illegible]

ಕೊಡಗು.

ಸನ್ ೧೯೩೨ನೇ ಇಸವಿ

ಜೂನ್ ತಾ. ೪ ನೇ ಶುಕ್ರವಾರ.

ಪ್ರೆಸ್ ಆರ್ಡಿನೇನ್ಸ್ ಜಾರಿಯಲ್ಲಿರುವ ವರೆವಿಗೆ ನಾವು ಅಗ್ರಲೇಖನವನ್ನು [illegible]ಟಿಸುವುದಿಲ್ಲ.

ಪಾರ್ಲಿಮೆಂಟ್ ಚರ್ಚೆ.

ಸ್ಟೇಟ್ ಸೆಕ್ರೆಟರಿ ಸರ್ ಸೇಮ್ಯುವೆಲ್ ಹೋರರ ಭಾಷಣ.

ಹಿಂದೂಸ್ಥಾನದ ಆರ್ಥಿಕ ಮತ್ತು ರಾಜಕೀಯ ರಚನೆಯಲ್ಲಿ ಬ್ರಿಟಿಷ್ ಸರಕಾರವು ಹಿಂದೀಯರ ಸರ್ಕಾರವನ್ನು ಅಪೇಕ್ಷಿಸುತ್ತದೆ. ಈಗಿನ ಆರ್ಡಿನೇನ್ಸ್ ನಮೂನೆಯ ಹೆಚ್ಚಿನ ಹಕ್ಕುಗಳು ಹಿಂದೂಸ್ಥಾನದ ಶಾಂತಿ ರಕ್ಷಣೆಗಾಗಿ ಅವಶ್ಯವಿದೆ. ಹಿಂದೂಸ್ಥಾನದ ರಾಜಕೀಯ ಧ್ಯೇಯಕ್ಕೆ ಅಡ್ಡಿ ಬರುವುದು ಬ್ರಿಟಿಷ್ ಸರ್ಕಾರದ ಉದ್ದೇಶವಲ್ಲ. ಕಳೆದ ಡಿಸೆಂಬರಿನಲ್ಲಿ ಪಾರ್ಲಿಮೆಂಟಿನಲ್ಲಿ ಒಪ್ಪಿಗೆಯಾದ ದಾರಿಯಲ್ಲಿ ಸಹಕರಿಸಿ ಕೆಲಸ ಮಾಡಲು ನಾವು ತಯಾರಿದ್ದೇವೆಯೆಂತ ನಿರ್ಧರಿಸಿದ್ದೇನೆ. ಕೆಲವು ತಿಂಗಳುಗಳಿಂದ ಇಂಡಿಯಾದಲ್ಲಿ ನಡೆಯುತ್ತಿರುವ ವಿಚಾರದ ಕುರಿತು ಒಂದು ಪುಸ್ತಕವನ್ನು ಪ್ರಕಟಿಸಿದ್ದೇನೆ. ದುಂಡು ಮೇಜು ಪರಿಷತ್ತು ಸ್ನೇಹಭಾವದಿಂದ ನಡೆಯಿತು. ಕಾಂಗ್ರೆಸ್ಸಿನ ಒಬ್ಬನೇ ಪ್ರತಿನಿಧಿಯು ಅಲ್ಲಿಗಾಗಿ ಇದ್ದರು. ಸ್ನೇಹದ ಚರ್ಚೆಗಳಾದರೂ ಅಡಚಣೆಯಾಗುತ್ತಿರುವುದಕ್ಕಾಗಿ ತನಗೇನೇ ಬೇಸರವಾಗುತ್ತಿತ್ತು. ದುಂಡು ಮೇಜು ಪರಿಷತ್ತು ತೀರ ಸ್ವಲ್ಪ ದಿನದಲ್ಲೇ ಹೋರಾಟ ಪ್ರಾರಂಭವಾಯಿತು.

ಮಿ. ಗಾಂಧಿಯವರ ಅಭಿಪ್ರಾಯವು ಹೇಗೆಯೋ ಇರಲಿ ಡಿಸೆಂಬರ್ ತಿಂಗಳ ಮಧ್ಯ ಭಾಗದಿಂದಲೇ ಕಾಂಗ್ರೆಸ್ ಮುಂದಾಳುಗಳು ಇಂಡಿಯಾ ಸರ್ಕಾರದೊಂದಿಗೆ ಯುದ್ಧಕ್ಕೆ ಸಿದ್ಧರಿದ್ದರು. ನಾವು ಪ್ರಕಟಿಸಿದ ಪುಸ್ತಕದಲ್ಲಿ ಇದರ ಉದಾಹರಣೆಗಳು ಕೊಡಲಾಗಿದೆ. ವಾಯುವ್ಯ ಸರಹದ್ದಿನ ಪ್ರಾಂತ್ಯದಲ್ಲಿ ರೆಡ್ ಶರ್ಟ್ ಚಳವಳಿಯಿಂದ ಸರ್ಕಾರಕ್ಕೆ ಅಪಾಯ ಬರುವಂತಿತ್ತು. ಸಂಯುಕ್ತ ಪ್ರಾಂತ್ಯದಲ್ಲಿ ಕೃಷಿಕರ ಕ್ರಾಂತಿಗೆ ಉತ್ತೇಜನ ಕೊಡುತ್ತಿದ್ದರು. ಬಂಗಾಳದಲ್ಲಿ ಕಾಂಗ್ರೆಸ್ ಮುಖಂಡರು ಕೊಲೆ ಪಾತಕ ಚಳವಳಿಕ್ಕೆ ಉತ್ತೇಜನ ಕೊಡುತ್ತಿದ್ದರು.

ಗಾಂಧಿ—ಇರ್ವಿನ್ ಸಂಧಿ ಕಾಲವನ್ನು ಶಾಂತಿ ಸ್ಥಾಪನೆಗೆ ಉಪಯೋಗಿಸುವ ಬದಲು ಕಾಂಗ್ರೆಸ್ ಮುಖಂಡರು ತಮ್ಮ ಸಂಸ್ಥೆಯನ್ನು ಬಲಪಡಿಸುವುದರಲ್ಲಿಯೂ, ಇನ್ನೊಂದು ಸರ್ಕಾರವನ್ನೇ ಸ್ಥಾಪಿಸುವುದರಲ್ಲಿಯೂ ಉಪಯೋಗಿಸಿದರು. ಆದ್ದರಿಂದ ಸರ್ಕಾರವು ಈಗ ಅನುಸರಿಸಿರುವ ದಾರಿಯನ್ನೇ ಅನುಸರಿಸಬೇಕಾಯಿತು. ದೇಶದ ಅತೀ ಅಲ್ಪ ಭಾಗದ ಜನರ ಬೆಂಬಲವಿರುವ ಈ ಚಳವಳಿಯನ್ನು ಸರ್ಕಾರವು ಎದುರಿಸಲೇ ಬೇಕಾಯಿತು.

ಸರ್ಕಾರವು ಈ ಚಳವಳಿಯನ್ನು ನಿಲ್ಲಿಸಬೇಕಾದದ್ದು ನ್ಯಾಯವೆಂತ ಕೆಲವರು ಒಪ್ಪಿದರೂ ಸರ್ಕಾರವು ಮಾಡಿಕೊಂಡಿರುವ ಕಾನೂನುಗಳೂ, ಕಾನೂನು ಮೀರಿ ನಡಿಸುವ ಕಾರ್ಯಗಳೂ ಅತೀ ಆಯಿತೆಂತ ಅಭಿಪ್ರಾಯಪಡುತ್ತಾರೆ. ಈ ಆಕ್ಷೇಪವು ಬಲವಾದದ್ದೇ—ಇಂಡಿಯಾ ಸರ್ಕಾರಕ್ಕೂ, ಪ್ರಾಂತೀಯ ಸರಕಾರಗಳಿಗೂ ಮಹತ್ವದ ಅಧಿಕಾರ ಕೊಡಲಾಗಿದೆ. ಸರ್ಕಾರದ ಮೇಲೆ ಆಗುವ ಎಲ್ಲಾ ಮುತ್ತಿಗೆಗೂ ಎದುರಾಗಲು ತಯಾರಾಗಿರಬೇಕಾದದ್ದು ಅವಶ್ಯವೆನಿಸಿತು.

ಇಂಥಾ ಅಧಿಕಾರಗಳ ಉಪಯೋಗ ಶೀಘ್ರದಲ್ಲೇ ಅಂತ್ಯವಾಗಬೇಕಾದರೆ ಸರ್ಕಾರವನ್ನು ವಿರೋಧಿಸುವ ಸಂಸ್ಥೆಗೆ ಯಾವ ವಿಧದಿಂದಲೂ ಜಯವಾಗಲು ಅನುಕೂಲವಿಲ್ಲದಂತೆ ಮಾಡಿಕೊಳ್ಳುವುದು ಯುಕ್ತವಾಗಿ ತೋರಿತು. ಬೇಕಾದಷ್ಟು ಅಧಿಕಾರಗಳನ್ನು ಒದಗಿಸಿಕೊಳ್ಳದಿದ್ದರೇನೇ ಆಕ್ಷೇಪಣೆ ಬರುತ್ತಿತ್ತು. ಈಗಿನ ಚಳವಳಿಯು ಬ್ರಿಟಿಷ್ ಸರಕಾರದ ಮೇಲೆ ಮಾತ್ರ ಅಲ್ಲ. ಯಾವ ತರಹದ ಸರ್ಕಾರವೂ ಇರಕೂಡದೆಂಬುದೇ ಈ ಚಳವಳಿಯ ಉದ್ದೇಶ. ಒಟ್ಟು ಸಮಾಜದ ಮೇಲೆಯೇ ಈ ಚಳವಳಿಯು ಆರಂಭಿಸಿದೆ. ಈ ಚಳವಳಿಯು ಜಯಪ್ರದವಾಗಿದ್ದರೆ, ಪ್ರತಿಯೊಂದು ಸಮಾಜವೂ ಕೂಟವು ಇಂಥಾ ಚಳವಳಿಯನ್ನೇ ಹೂಡಿಯಾವು. ಹಿಂದೂಸ್ಥಾನದಲ್ಲಿ ಜಾತಿ ಸಂಬಂಧದ ವಾದಗಳು ಎಷ್ಟೊಂದು ಬೆಂಕಿ ಹತ್ತುವಂಥಾಗಿದೆ ಎಂತ ಮೆಂಬರುಗಳಿಗೆ ತಿಳಿದಿದೆ. ಇಷ್ಟರವರೆಗೇನೇ ಜಾತಿ ಜಗಳಗಳು ಎದ್ದು ಏನು ಅಪಾಯವಾಗುತ್ತದೋ ಎಂತ ಭೀತಿಯಲ್ಲಿದ್ದೆ. ಕಾನ್‌ಪುರದಲ್ಲಿ ಕಳೆದ ವರ್ಷ ಸಂಭವಿಸಿದ ಅದ್ಭುತ ಅನಾಹುತ ಎಲ್ಲರಿಗೂ ತಿಳಿದಿದೆ. ಅಂಥಾದ್ದು ಪುನಹ ಆಗಬಾರದೆಂಬುದಕ್ಕಾಗಿ ಬಲವಾದ ಕಾನೂನುಗಳ ಉಪಯೋಗ ಕೂಡ ಬೇಕಾಯಿತು.

ಅಧಿಕಾರಗಳನ್ನು ಅವಶ್ಯವಿದ್ದದ್ದಕ್ಕಿಂತ ಹೆಚ್ಚು ದಬ್ಬಾಳಿಕೆಯಿಂದ ಉಪಯೋಗ ಮಾಡುತ್ತಾರೆಂತಲೂ, ಸಾರ್ವಜನಿಕ ಅಭಿಪ್ರಾಯವನ್ನು ಸೂಚಿಸಲು ಅವಕಾಶವಿಲ್ಲದಂತೆ ಮಾಡಿದ್ದಾರೆಂತಲೂ ಇನ್ನೊಂದು ಆಕ್ಷೇಪಣೆ. ಹಿಂದೂಸ್ಥಾನದ ವಿದ್ಯಮಾನಗಳನ್ನು ನೋಡಿದರೆ ಅಧಿಕಾರಗಳನ್ನು ಬುದ್ಧಿವಂತಿಗೆಯಿಂದಲೂ, ಸಮಾಧಾನದಿಂದಲೂ ಉಪಯೋಗಿಸುತ್ತಿದ್ದಾರೆ ಎನ್ನಬಹುದು. ಕಠಿಣದ ಕೆಲಸ ಮಾಡುವಾಗ ಅಲ್ಲಲ್ಲಿ ತಪ್ಪುಗಳಿರಬಹುದು. ಅಂಥಾ ಸಂದರ್ಭಗಳಲ್ಲಿ ತನಿಖೆ ನಡಿಸಲಾಗುತ್ತದೆ. ಆದರೆ ಈ ವರೆಗೆ ನಡಿಸಿದ ತನಿಖೆಗಳಲ್ಲಿ ಪೊಲೀಸಿನವರು ಅಧಿಕಾರವನ್ನು ದುರುಪಯೋಗ ಮಾಡಿದಂತೆ ಕಂಡು ಬರಲಿಲ್ಲ.

ಪರದೇಶಗಳಿಗೆ ಕಳುಹಿಸುವ ವರ್ತಮಾನಗಳನ್ನು ತಡೆಯಲಿಲ್ಲ. ಹಿಂದೂದೇಶದ ಪತ್ರಿಕೆಗಳಿಗೂ ತಡೆ ಏನೂ ಇಲ್ಲ. ಪೊಲೀಸಿನವರ ಮೇಲೆ ಇಲ್ಲದ ಆಕ್ಷೇಪಣೆಗಳನ್ನು ಹೇಳುವುದು ಸ್ವಭಾವಿಕವಾಗಿದೆ. ಕಳೆದ ವರ್ಷ ಮಾಡಿದ ಇಂಥಾ ಆಕ್ಷೇಪಣೆಗಳಲ್ಲಿ ಹತ್ತರಲ್ಲಿ ಒಂಬತ್ತು ಸುಳ್ಳಾಯಿತು. ಡಾಕ್ಕಿನಲ್ಲಿ ಒಬ್ಬ ಸ್ವಯಂಸೇವಕನ ಮೇಲೆ ಅತ್ಯಾಚಾರ ನಡಿಸಿದ ವಿಷಯದಲ್ಲಿ ಒಬ್ಬ ಹಿಂದೀ ಮೇಜಿಸ್ಟ್ರೇಟರೇ ವಿಚಾರ ನಡಿಸಿದಲ್ಲಿ ಸುಳ್ಳಾಗಿ ಕಂಡು ಬಂತು.

ಬಾರ್ಡೋಲಿಯಲ್ಲಿ ಕಂದಾಯ ವಸೂಲು ಮಾಡುವಾಗ ಪೊಲೀಸಿನವರು ದಬ್ಬಾಳಿಕೆ ನಡಿಸಿದರೆಂಬ ವಿಷಯದಲ್ಲಿ ತನಿಖೆ ನಡಿಸಿದಾಗಲ್ಲಿ ಎಲ್ಲಾ ಸುಳ್ಳಾಗಿ ಕಂಡು ಬಂತು.

(ಮುಂದುವರಿಯುವುದು)

ಹಿಂದೂಸ್ಥಾನದಲ್ಲಿ ಸಕ್ಕರೆಯ ಖರ್ಚು.

ಬೊಂಬಾಯಿ ಸ್ವದೇಶಿ ಸಂಘದವರು ಈ ಕೆಳಗಿನ ಪ್ರಕಟಣೆಯನ್ನು ಹೊರಡಿಸಿದ್ದಾರೆ.

ನಮ್ಮ ರಾಷ್ಟ್ರದ ಆರ್ಥಿಕ ಸ್ಥಿತಿಯನ್ನು ಸುಧಾರಿಸುವ ಆಧುನಿಕ ಸ್ವದೇಶಿ ಚಳವಳಿಯಲ್ಲಿ ಮುಖ್ಯ ಪದಾರ್ಥಗಳ ಕಡೆಗೆ ಗಮನವನ್ನೀಯಬೇಕು. ನಮ್ಮ ದೇಶಕ್ಕೆ ಅನೇಕ ಪದಾರ್ಥಗಳು ಹೇರಳವಾಗಿ ಆಮದಾಗುತ್ತಿವೆ. ಇವುಗಳಲ್ಲಿ ಅನೇಕವನ್ನು ನಮ್ಮ ದೇಶದಲ್ಲೇ ತಯಾರಿಸಿಕೊಳ್ಳಬಹುದು. ಅವುಗಳಲ್ಲಿ ಮುಖ್ಯವಾದದ್ದು ಸಕ್ಕರೆ. ಈ ಕೆಳಗಿನ ಪಟ್ಟಿಯನ್ನು ನೋಡಿದರೆ, ಸುಖಭೋಗದ ವಸ್ತುವಾದ ಈ ಸಕ್ಕರೆಗಾಗಿ ಹಿಂದೂಸ್ಥಾನದಿಂದ ಹೊರಗೆ ಎಷ್ಟೊಂದು ದ್ರವ್ಯ ಹರಿದು ಹೋಗುತ್ತಲಿದೆಯೆಂತಲೂ, ಪರದೇಶದ ಸಕ್ಕರೆಯ ಬದಲಿಗೆ ಸ್ವದೇಶಿ ಸಕ್ಕರೆ ಅಥವಾ ಬೆಲ್ಲವನ್ನು ಉಪಯೋಗಿಸಿದರೆ ಹಿಂದೂಸ್ಥಾನಕ್ಕೆ ಎಷ್ಟೊಂದು ಆರ್ಥಿಕ ಪ್ರಯೋಜನವಾಗುತ್ತದೆಯೆಂತಲೂ ಸ್ಪಷ್ಟವಾಗುತ್ತದೆ.

ಪರದೇಶೀ ಸಕ್ಕರೆ	ಟನ್	ಕ್ರಯ ರೂ.
1929—30	1011348	157766467
1930—31	1003177	109636564
1931ನೇ ಏಪ್ರಿಲ್‌ನಿಂದ ನವಂಬರ್ ವರೆಗೆ	3,46,374	3,52 54,2[illegible]5

ಪರದೇಶದಿಂದ ಬರುವ ಸಾಮಾನುಗಳ ಪೈಕಿ ಬಟ್ಟೆಯೊಂದು ಬಿಟ್ಟರೆ ಸಕ್ಕರೆಗಾಗಿ ಖರ್ಚು ಮಾಡುವಷ್ಟು ಬೇರೆ ಯಾವುದಕ್ಕೂ ಮಾಡುವುದಿಲ್ಲ. ಹಿಂದೂಸ್ಥಾನಕ್ಕೆ ಬೇಕಾದಷ್ಟು ಬಟ್ಟೆಯನ್ನು ಹಿಂದೂಸ್ಥಾನದಲ್ಲೇ ತಯಾರಿಸಿಕೊಳ್ಳಬೇಕೆಂತ ದೃಢ ನಿಶ್ಚಯ ಮಾಡಲಾಗಿದೆ. ಇಂಥ ಬಿಕ್ಕಟ್ಟಿನ ಸಮಯದಲ್ಲಿ ಸ್ವದೇಶಿ ಸಕ್ಕರೆಯ ಅಥವ ಬೆಲ್ಲದ ಉಪಯೋಗದಿಂದ ಪರದೇಶಿ ಸಕ್ಕರೆಯ ಆವಶ್ಯಕತೆಯನ್ನು ರಾಷ್ಟ್ರವು ಮನಸು ಮಾಡಿದರೆ ಖಂಡಿತವಾಗಿಯೂ ನಿಲ್ಲಿಸಬಹುದು.

ಜಾವದಿಂದ 8 ಲಕ್ಷ, ಯೂರೋಪಿನಿಂದ ಒಂದು ಲಕ್ಷ, ಅಂತೂ ಒಟ್ಟು 9 ಲಕ್ಷ ಟನ್ ಸರಾಸರಿ ಪರದೇಶದಿಂದ ಬರುತ್ತದೆ. ಸಕ್ಕರೆಯನ್ನು ತಿನ್ನುವವರಿಗೆ ಟನ್ ಒಂದರ ರೂ. 280—ರೂ. 3 0 ವರೆಗೆ ಕ್ರಯ ಬೀಳುತ್ತದೆ. ಇದರ ಪೈಕಿ ಅರ್ಧಕ್ಕಿಂತ ಹೆಚ್ಚು ಸರಕಾರಕ್ಕೆ ಸುಂಕದ ರೂಪದಲ್ಲಿ ಸಲ್ಲುವದಾಗಿದೆ. ಬಾಕಿ ಉಳಿದದ್ದೆಲ್ಲಾ ಪರದೇಶಕ್ಕೆನೇ ಹೋಗುತ್ತದೆ. ಈಗ ಒಂದೆರಡು ವರ್ಷಗಳಿಂದ ಸಕ್ಕರೆಯ ಬೆಲೆ ಕಡಿಮೆಯಾದುದರಿಂದಲೂ, ಹಿಂದೂಸ್ಥಾನದ ಜನರು ಕೊಂಡುಕೊಳ್ಳುವುದು ಕಡಿಮೆಯಾದುದರಿಂದಲೂ ಆಮದಾಗುವ ಸಕ್ಕರೆಯ ಬೆಲೆಯು ಕಡಿಮೆಯಾಗಿದೆ.

ಹಿಂದೂಸ್ಥಾನದಲ್ಲಿ 28 ಲಕ್ಷ ಎಕರೆಯ ಸ್ಥಳದಲ್ಲಿ ಕಬ್ಬಿನ ವ್ಯವಸಾಯ ನಡಿಯುತ್ತದೆ. ಇದರಿಂದ ಒಂದೂ ಕಾಲು ಲಕ್ಷ ಟನ್ ಸಕ್ಕರೆಯೂ, 30 ಲಕ್ಷ ಟನ್ ಬೆಲ್ಲವೂ ತಯಾರಾಗುತ್ತದೆ. ಹಿಂದೂಸ್ಥಾನದ ಕಬ್ಬಿನ ವ್ಯವಸಾಯದ ವಿಸ್ತೀರ್ಣದ ಪೈಕಿ ಅರ್ಧದಷ್ಟು ವಿಸ್ತೀರ್ಣದಲ್ಲಿ ಬೆಳೆದ ಕಬ್ಬಿನಿಂದ ಸಕ್ಕರೆ ತಯಾರಿಸಿದರೆ ಹಿಂದೂಸ್ಥಾನವು ಪರದೇಶದಿಂದ ಸಕ್ಕರೆಯನ್ನು ತರಿಸುವ ಬದಲಿಗೆ ಹಿಂದೂಸ್ಥಾನದಿಂದ ಪರದೇಶಕ್ಕೆ ಸಕ್ಕರೆಯನ್ನು ಕಳುಹಿಸಬಹುದು. ಕಡಿಮೆ 25 ಲಕ್ಷ ಟನ್ ಸಕ್ಕರೆಯನ್ನಾದರೂ ತಯಾರಿಸಬಹುದು; ಇದು ಹಿಂದೂಸ್ಥಾನದ ಉಪಯೋಗಕ್ಕೆ ಬೇಕಾದದ್ದಕ್ಕಿಂತ ಹೆಚ್ಚಾಯಿತು. ಆದರೆ ಸಕ್ಕರೆ ಕಾರ್ಖಾನೆಗಳನ್ನು ಹೆಚ್ಚು ಹೆಚ್ಚಾಗಿ ಸ್ಥಾಪಿಸುವುದು ಸುಲಭ ಸಾಧ್ಯವಲ್ಲ. ಅದಕ್ಕೆ ತುಂಬಾ ಹಣ ಬೇಕು. ಹಾಗಾದರೆ ಹಿಂದೂಸ್ಥಾನಕ್ಕೆ ಬೇಕಾದಷ್ಟು ಸಕ್ಕರೆ ಹಿಂದೂಸ್ಥಾನದಲ್ಲೇ ತಯಾರಾಗುವ ವರೆಗೆ ಸುಮ್ಮನಿರಬೇಕೆ? ಜವಾಬು ಸುಲಭವಾಗಿದೆ. ಮೊದಲನೆಯದೇನೆಂದರೆ, ನಮ್ಮ ಆಹಾರವನ್ನ ಸ್ವಲ್ಪ ಮಟ್ಟಿಗೆ ಬದಲಾಯಿಸಿ, ನಮ್ಮ ರುಚಿಯನ್ನು ಮಾರ್ಪಡಿಸಿಕೊಂಡು ಸಕ್ಕರೆಯ ಉಪಯೋಗವನ್ನು ಬಹಳವಾಗಿ ಕಡಿಮೆಮಾಡಬೇಕು. ಆಗ ಆವಶ್ಯವಿದ್ದಷ್ಟು ಸಕ್ಕರೆ ಹಿಂದೂಸ್ಥಾನದಲ್ಲೇ ದೊರೆಯುತ್ತದೆ; ಇನ್ನು ಹಿಂದೂಸ್ಥಾನದೊಳಗೆ ತಯಾರಾಗುವ ಸಕ್ಕರೆಯು ಹೆಚ್ಚಾಗುತ್ತದೆ. ನಮ್ಮ ಉಡುಪಿನ ವಿಷಯದಲ್ಲಿ ಹೇಗೆ ನಮ್ಮ ಅಭಿರುಚಿಯನ್ನು ಬಿಟ್ಟು ಸೊಗಸಾದ ಬಟ್ಟೆಯ ಬದಲು ಒರಟಾದರೂ ಖಾದಿಯನ್ನು ಉಪಯೋಗಿಸಲು ನಿಶ್ಚಯಿಸುತ್ತೇವೋ ಹಾಗೆಯೇ ಸಕ್ಕರೆಯ ಬದಲು ಬೆಲ್ಲವನ್ನೇ ಉಪಯೋಗಿಸಲು ಪ್ರಾರಂಭಿಸಬೇಕು. ಹೀಗೆ ಮಾಡುವುದರಿಂದ ರಾಷ್ಟ್ರದ ದ್ರವ್ಯದ ಪ್ರವಾಹವನ್ನು ನಿಲ್ಲಿಸುತ್ತೇವಲ್ಲದೆ ಬಹಳ ಹೀನಾವಸ್ಥೆಗೆ ಇಳಿದಿರುವ ಮುಖ್ಯವಾಗಿಯೂ ಗ್ರಾಮವಾಸಿಗಳ ಕೈಗಾರಿಕೆಯಾದ ಬೆಲ್ಲದ ಕೈಗಾರಿಕೆಗೆ ಉತ್ತೇಜನ ಕೊಟ್ಟಂತಾಗುತ್ತದೆ.

Reg. No. M. 1550.
If not delivered please return to
"KODAGU" OFFICE MERCARA.

ಕೊಡಗು.

[illegible] ವಿದ್ಯಾ [illegible]
ವಾರ್ಷಿಕ ಚಂದಾ ರೂ. [illegible]
ಸಂಪಾದಕ—ಮೂಚಿಮಂಡ ಯಂ. ಗಣಪತಿ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೧ | ಮಡಿಕೇರಿ, ಸನ್ ೧೯೩೨ನೇ ಇಸವಿ ಮಾರ್ಚ್ ತಾರೀಕು ೪ನೇ ಶುಕ್ರವಾರ. | ಸಂಚಿಕೆ ೪೯

Office of the Asst.
Commr. & Dt. Magte.,
Mercara (Coorg). 6th May 1931.

Dear Sir,

I am QUITE PLEASED with the workmanship of the two Coorg weapons (PICHAKATTI & ODIKKATTI)

Yours faithfully,
(Sd) (Rao Bhadur)
K. CHENGAPPA, B. A.
District Magistrate and
Assistant Commissioner of Coorg.

JEWELLER
By Appointment to
H. E. The Governor of Madras.



PEECHAKATTI (WITH SILVER FITTINGS)
Prices–From Rs 160 & upwards.

"New Bungalow,"
Ammatti, (Coorg).
14th December 1931.

Dear Sir,

I am IMMENSELY-PLEASED with the workmanship of the PICHAKATTI you made and sent me some time back.

Yours faithfully,
Sd/ K. P. MUDDAYYA,
Ammatti (Coorg.)

Telegrams:
'PRECIOUS.'

V. Subramaniaier
Jeweller,

Telephone:
3145.

CATALOGUE ON ENQUIRY.

52–15

Post Box 423, Triplicane, P. O., MADRAS.



[illegible]

ಕೋವಿಗಳು, ಕತ್ತಿಗಳು, ಬಚೇಗಳು, [illegible] ಎಲ್ಲಾ [illegible] ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS,
Largest Importers of Firearms and Ammunition
Cheapest priced firm in India,
210 Abdul Rehman Street, BOMBAY.
[illegible]

ಬಾಲಾರ್ಕಮಧು.

ಬಾಲಾರ್ಕಮಧು ಮಕ್ಕಳಿಗೆ ಕೊಡುವುದರಿಂದ [illegible] ಆರೋಗ್ಯವೂ ಹೆಚ್ಚುವುದು. ಇದು ಮಧುರವಾಗಿದೆ. ಬೆಲೆ ಶೀಸೆ 1ಕ್ಕೆ 0–12–0 ಟ. ಖ. 0–12–0.



ವಜ್ರದ ಅಡ್ಡಿಗೆ.

ಈ ಅಡ್ಡಿಗೆಗಳನ್ನು ಅಮೇರಿಕನ್ ಡೈಮಂಡ್ ಎಂಬ ಇಮಿಟೇಶನ್ ವಜ್ರದ ಕಲ್ಲುಗಳನ್ನು ಇಟ್ಟು [illegible] ಬಂಗಾರದಿಂದ ಕಟ್ಟಿದ [illegible] ಭಂಗಾರದ [illegible] ಬೆಲೆ [illegible] ರೂ. [illegible] ೪–೮–೦, ಸಂ. ೨ ೩–೮–೦.

ಏಜಂಟ್—ಕೆ. ಎನ್. ಜೆನ್‌ಸನ್ ಅಂಡ್ ಕೊ,
12–9 ಪೋ || ಸಂ || 1246, ಮದರಾಸು.



ಈ ಗಡಿಯಾರಗಳು [illegible] ಇರುವವು. [illegible] ತರಿಸುತ್ತೇವೆ. [illegible] ಘಂಟೆಯನ್ನು ತೋರಿಸುತ್ತವೆ. [illegible] ಬೇಗನೆ ಬರೆದು ತರಿಸಿಕೊಳ್ಳಿರಿ. ನಮ್ಮಲ್ಲಿ ಸ್ವಲ್ಪವೇ ಇರುತ್ತವೆ. ಇವಕ್ಕೆ ಖಾತ್ರಿಯಾದ 3 ವರ್ಷ ಗ್ಯಾರಂಟಿ ಕೊಡುತ್ತೇವೆ. ಕ್ರಯ 1ಕ್ಕೆ [illegible]

ಏಜಂಟ್—ಕೆ. ಎನ್. ಜೆನ್‌ಸನ್ ಅಂಡ್ ಕೊ,
12–10 ಪೋ || ಸಂ || 1246, ಮದರಾಸು.

(Spleen Lever enlargement, [illegible] ಗಡ್ಡೆರೋಗ—ಸ್ಪ್ಲೀನ್—ಪಿತ್ತಕೋಶದ ಗಡ್ಡೆ [illegible] ಔಷಧಗಳಿವೆ. [illegible] ಔಷಧಗಳ [illegible] 1 ಕ್ಕೆ 3–0–0 ಟ ಖ. 0–8–0. ಏಜೆಂಟ: [illegible] ರೂ. 78–[illegible]

ಪಿ. ಎ. [illegible] ಶ್ರೀನಿವಾಸ [illegible]
ಬ್ರಾಂಚ್ ಆಫೀಸ್, ಉಡುಪಿ. S. K. | Spleen & [illegible] ಯಂ. ಎ. [illegible]
52–7

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, [illegible] ಲಿಮಿಟೆಡ್

ಆಫೀಸು : ಮರ್ಕಾರ [illegible]

(ಸ್ಥಾಪಿತವಾದದ್ದು 1922ರಲ್ಲು)

	ರೂ.
ಶೇರ್ ಬಂಡವಾಳ —	50,000
ವಸೂಲಾದ ಶೇರ್ ಮೊಬಲಗು —	26,800
ಜಮಾಬಂದಿ ಠೇವಣಾತಿ —	2,50,301

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೆ [illegible] ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವ ಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ತಕರುಗಳಿಗೆ [illegible] ಕ್ಯಾಶ್ ಕ್ರೆಡಿಟ್ ಏರ್ಪಾಟು ಮಾಡುತ್ತಾರೆ.

ಪ್ರೆಸಿಡೆಂಟರು,
ಕೋಳೇಜಂಡ ಅಪ್ಪಯ್ಯನವರು
ರಾವ್ ಬಹದ್ದೂರ್.

ಟ್ರೆಜರರ್
ಮನೆಯಪ್ಪಂಡ [illegible]
ನವರು.

ಸೆಕ್ರೆಟರಿ
[illegible] ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಖು 1—7—1931.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿದೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜೆಂಟರುಗಳು.

ಉತ್ತರ ಕೊಡಗಿಗೆ ಮೆ· [illegible] ಮಾದಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು. (ಪಾರುಪತ್ತೇಗಾರರು)

ಗೋಣಿಕೊಪ್ಪ—ಎಸ್. ಆರ್. ವೆಂಕಪ್ಪಯ್ಯನವರು.

ಪೊನ್ನಂಪೇಟೆ—ಸಿದ್ದಾಪುರ—ಮೆ. [illegible] ಮಾದಪ್ಪನವರು,

ಶ್ರೀಮಂಗಲ—ಮೆ. ಪಿ. ಜಿ. ಮುದ್ದಪ್ಪಯ್ಯನವರು,

[illegible] ಅರಮೇರಿ [illegible] ಕಾರ್ಯಪ್ಪನವರು,

ಕುದಿಕೇರಿ & ತಿತಿಮತಿ—ಮೆ. ಜಿ. ಮಾದಪ್ಪಯ್ಯನವರು,

ಸುಂಟಿಕೊಪ್ಪ—ಮೆ. ಅಪ್ಪಚ್ಚೆಟ್ಟೀರಂಡ [illegible]ಯ್ಯನವರು.

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್.
"ಕೊಡಗು" ಲಿಮಿಟೆಡ್.
ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿ [illegible] ಮೆಂಬರನ್ನಲ್ಲಿಯೂ ಇರಬೇಕಾದ ಅಮಿತ ಜವಾ[illegible] [illegible] ಸಹಕಾರ ಸಹಾಯಕ ಸಂಘದ ಮತ್ತು ದವಸ ಭಂಡಾ[illegible] ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹ[illegible] ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು [illegible] ನಡಿಸಲು ಅವಶ್ಯವಾಗಿರುವ, ರೂಲ್ಸಿಗನು[illegible] [illegible] ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, [illegible] ಫಾರಮುಗಳೂ, ಜಮ್ಮ ಮಂಜೂರಾತಿ ಫಾರಮು[illegible] ಒಪ್ಪಿಗೆ ಫಾರಮುಗಳೂ, ಜಾಮೀನು [illegible] ಸ್ಟಾಕ್ ರಿಜಿಸ್ಟರ್ [illegible] ಪುಸ್ತಕಗಳೂ, ರಶೀತಿ ಪುಸ್ತಕಗಳೂ, [illegible] ಪುಸ್ತಕಗಳೂ ಮತ್ತು ಚೆಕ್ ಪುಸ್ತ[illegible] ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. [illegible] ಆಗತಕ್ಕವರು ಆಫೀಸಿನ ಕೆಟ್ಟಲ್ಲಿ ಎ. ಪಿ. [illegible]ಗುವುದು.

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ.

ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.

ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ.

ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮೊತ್ತದ 1,78,322 ಜನರಿಗೆ 58 ಕೋಟಿ ರೂ.

[illegible] ಶೇಕಡ 22.4ರಷ್ಟರ ವಿಪರೀತ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದಾಗಿದೆ. ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ [illegible] ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ [illegible] ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ [illegible] ಗೊತ್ತುಮಾಡಿಕೊಳ್ಳಬಹುದು.

[illegible] ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ [illegible] ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಚಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಉತ್ತೇಜನೆಯನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬುದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

		ಕೌಲಾಲಂಪೂರು	ಪೆನಾಂಗ್	ರಂಗೂನು
ಆಗ್ರ	ಕಲ್ಕತ್ತಾ	ಲಾಹೋರ್	ನಾಗಪುರ	ರಾವಲ್ ಪಿಂಡಿ
ಅಹ್ಮದಾಬಾದು	ಕೊಲಂಬೊ	ಲಕ್ನೋ	ಪಾಟ್ನಾ	ಸಿಕ್ಕಾಪೂರು
ಅಜ್ಮೀರ್	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಲ್ಲಿ
ಅಲ್ಲಾಹಾಬಾದು	[illegible]	ಮಂಡಲೆ	ರಾಯಪುರ	ತಿರುವೆಂದ್ರಮ್
ಬೊಂಬಾಯಿ	[illegible]	[illegible]	ರಾಂಚಿ	ವಿಶಾಖಪಟ್ಟಣ [52—5
ಭೋಪಾಲ್	ಕರಾಚಿ			

[illegible] ಗುಣವಾಗದಿರುವ ಮಲೆ ಜ್ವರ, [illegible] ಬರುವ ಜ್ವರಗಳಿಗೆ [illegible] ಬರುವ ಜ್ವರ, ಸನ್ನಿ ಬರುವ ಜ್ವರ ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ [illegible] ಬರುವ ಜ್ವರ, [illegible] ರೂ. 4—0—0; 6ಕ್ಕೆ ರೂ. 7—8—0; 12ಕ್ಕೆ ರೂ. 14 [illegible] ರೂ. 1—[illegible] 3ಕ್ಕೆ [illegible]

[illegible] ಮುಖ್ಯಕಾರಣ [illegible] ಉರಿ, [illegible] ಮುಖ್ಯ ನಾಳದಿಂದ [illegible] ಹೊಯ್ಯುವಾಗ ಉರಿಯುವುದು, ಮೂತ್ರ [illegible] ವುದು, [illegible] ಧಾತು, ಸುಡಿ ಹೋಗುವುದು, [illegible] ಮೂತ್ರ ಬರುವುದು, ಮೂತ್ರ [illegible] ವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, [illegible] ಆವುಗಳಿಗೆ ಪರಮ ದಿವ್ಯ [illegible] 1, 3, 6ಕ್ಕೆ ರೂ. 1—4—0 3—8—0; 6—12 [illegible]

ರೋಮನಾಶಿನಿ:— [illegible] 3—8—0 [illegible] ರೂ. 1. 1 ಡಜನಿಗೆ [illegible] 1ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ. 1. [illegible] ಗುಣಮಾಡುತ್ತದೆ.

ಮನೋಲ್ಲಾಸಿನಿ ತೈಲ:— [illegible] ತಲೆ ಕೂದಲು ಉದುರಿ [illegible] ಶೀಸೆಗೆ ರೂ. 1, 3 ಸೀಸೆಗೆ 2—1[illegible] ಕೂದಲನ್ನು ಕಪ್ಪು ಮಾಡುವ [illegible] ಒಂದು ದೊಡ್ಡ ಸೀಸೆಗೆ ರೂ. 2, 3 ಸೀಸೆಗಳಿಗೆ 5—8—0.

ವಿಳಾಸ:—ಮನೋಲ್ಲಾಸಿನಿ ಕಂಪೆನಿ, 9 [illegible]

ಕಟಿಬಾಗು ಕಡಾ ಕೋಟೆ.

52—40

ಸಣ್ಣ ಹುಡುಗರ ಸಲುವಾಗಿ

ದ್ರಾಕ್ಷಾರಿ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತಾರೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ದೋಂಗರೆ ಕಂಪೆನಿ,
ಗಿರಿಗಾಂವ, ಮುಂಬಯಿ.

52—7

Printed & published by M. M. Ganapathy at "Kodagu" Press Me[illegible] for "Kodagu" Ltd.

೩೩ ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ ಔಷಧಗಳು.

೧. ಧಾತುಪುಷ್ಟಿ ಲೇಹ.

ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ... ದಿನೇ ದಿನೇ ಕ್ಷಯಿಸುವಿಕೆ, ಮೇಹ, ... ಬಾಧೆ, ರಕ್ತ, ಪಿತ್ತ, ... ಜ್ವರ, ಮಲಬದ್ಧತೆ, ... ಬರುವುದು ಮೊದಲಾಗುವುಗಳು ಪೂರ್ಣ ಗುಣವಾಗಿ ... ಹೋದ ಶಕ್ತಿಯು ಪುನಃ ಕುಂದಿಕೊಳ್ಳುವುದು. ಕ್ರಯ ... 1ಕ್ಕೆ 2–8–0 ಮೂರು ಡಬ್ಬಿಗಳಿಗೆ ರೂ. 7–0–0

೨. ಅಶೋಕಾರಿಷ್ಟ ಮತ್ತು ಮಾತ್ರೆ.

ಹೆಂಗಸರ ಮುಟ್ಟು ದೋಷಗಳು, ... ಕಡಿಮೆಯಾಗುವುದು, ಹೊಟ್ಟೆನೋವು, ಸೊಂಟ ನೋವು, ... ಹೀನತೆ, ಮೂರ್ಛೆ, ಮಲಬದ್ಧತೆ, ಚಳಿಜ್ವರ, ರಕ್ತ..., ಕೈಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಅತಿ ಶೀಘ್ರದಲ್ಲಿಯೇ ಗುಣ ಪಡಿಸುವುದು. ಅಶೋಕಾರಿಷ್ಟ ಮತ್ತು ಮಾತ್ರೆಗಳು ಸಾಮಾನ್ಯ ಹೆಂಗಸರಿಗೆ ... ಆರೋಗ್ಯವನ್ನು ಒದಗಿಸಿ, ಮನೋಭಿಲಾಷೆಯನ್ನು ... ಯಿಸಿರುವವು.

ಕ್ರಯ 1 ಬಾಟ್ಲಿ ಔಷಧ, 1 ಡಬ್ಬಿ ಮಾತ್ರೆ, ರೂ. 2 ಆ. 4. 3 ಬಾಟ್ಲಿ ಮತ್ತು ಡಬ್ಬಿಗಳಿಗೆ ರೂ. 6 ಆ. 4.

೩. ಮಲೇರಿಯಾ ನಿವಾರಣೆ.

ದಿನ ಬಿಟ್ಟು ಬರುವ ಜ್ವರ, ಚಳಿ ಜ್ವರ, 2 ಯಾ 3 ದಿನಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರ ಗಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರ ಗಡ್ಡೆಯು ಕರಗಿಸಿ ಶಕ್ತಿಯನ್ನು ಉಂಟು ಮಾಡುತ್ತದೆ. ಬಾಟ್ಲಿ 1 ಕ್ಕೆ 1–8–0, 3 ಬಾಟ್ಲಿಗಳಿಗೆ 4–2–0.

೪. ಮೇಹ ಕುಠಾರ.

ಇದು ಮೂತ್ರಸ್ಥಾನದಿಂ... ಕೆಂಪು, ಬಿಳಿದು, ಹಳದಿಯಂತೆ ಹೋಗತಕ್ಕ ಕೀವನ್ನೂ, ... ವನ್ನೂ, ಉರಿಯನ್ನೂ ಗುಣಪಡಿಸುತ್ತದೆ. ಡಬ್ಬಿ 1 ಕ್ಕೆ ರೂ. 2–8–0. 3ಕ್ಕೆ ರೂ. 7.

೫. ಇಚ್ಛಾ ಭೇದಿ ಗುಟಿಕೆ.

ಅಯಾಸವನ್ನುಂಟುಮಾಡುವ ಸುಖ ವಿರೇಚಕ. ಬಾಟ್ಲಿ 1ಕ್ಕೆ 0–12–0 ... 3 ಬಾಟ್ಲಿಗಳಿಗೆ 2–2–0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ... ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ರವಾನಿಸಬಹುದು. ಕೆಟಲಾಗು ತರಿಸಿ ನೋಡಿರಿ.

ಎಂ. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್,
52–12 ರಥಬೀದಿ, ಮಂಗಳೂರು, ದ. ಕನ್ನಡ

ಭಂಗಾರದ ಕೈಗಡಿಯಾರ.



ಈ ಚಿತ್ರದಲ್ಲಿ ಕಾಣುವ ಭಂಗಾರದ ಕೈಗಡಿಯಾರವು ಬಹು ಬಲಿಷ್ಟವಾದ (ಸ್ವಿಸ್ ಮೇಕ್) ಲೀವರ್ ಸಾಮಾನುಗಳಿಂದ ತಯಾರಾದವು. ಸರಿಯಾದ ಗಂಟೆಯನ್ನು ತೋರಿಸುವವು. ... ಗಳು ಇಟ್ಟಿವೆ. ... ಭಾಗಗಳಿಗೆ ... ಇದನ್ನು ಈ ವಾರದಲ್ಲಿ ತರಿಸಿಕೊಳ್ಳುವವರಿಗೆ ಒಂದು ವಜ್ರದ ಉಂಗುರ, ಒಂದು ಗೋಲ್ಡ್ ಗೋಲ್ಡ್ ಭಂಗಾರದ ಕತ್ತಿನ ಹಾರ (ನೆಕ್ಲೇಸ್), ಒಂದು ಟೇಬಲ್ ... ನಾವು ... ಕೊಡುವೆವು. 2 ಗಡಿಯಾರಗಳಿಗೂ ... ತ್ರಿಂಶದ ೩ ವರ್ಷ ಗ್ಯಾರಂಟಿ ಪತ್ರ ಸಹ ಕಳುಹಿಸುವೆವು.

3 ಬಹುಮಾನಗಳ ಸಹಿತ ರಿಸ್ಟ್‌ವಾಚ್ 1 ಕ್ಕೆ 6–8–0.

ವಿಳಾಸ:— ಸಿಟಿ ಮಾರ್ಟ್,
12–9 168. ಚೈನಾ ಬಜಾರ್, ಮದರಾಸು.

12 ಸೆಂಟ್ ಬಾಟಲ್, ಬೆನ್‌ರೊಬಿನ್ ಪೇನಾ ಲೀವರ್ ವಾಕೆಟ್ ವಾಚ್ 2–12–0 ಮಾತ್ರ.

ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ

ಅಲ್ಲಿ ಅಫ್ ದಿ ವ್ಯಾಲಿ ಮತ್ತು ಹೆನ್‌ರೊಬಿನ್ ಸೆಂಟು.



ಈ ಸುಗಂಧ ದ್ರವ್ಯವು ಫ್ರಾನ್ಸ್ ದೇಶದಲ್ಲಿ ಹೂಗಳ ಸಾರದಿಂದ ತಯಾರಿಸಿದ್ದು, ಇದರಲ್ಲಿ ಮಧ್ಯಸಾರಗಳು ಯಾವವೂ ಸೇರಿರುವುದಿಲ್ಲ. ಇದರಲ್ಲಿ ಒಂದೇ ಒಂದು ತೊಟ್ಟನ್ನು ಬಟ್ಟೆಗೆ ಹಾಕಿದರೆ ಒಂದು ವಾರದ ವರೆಗೂ ಒಂದೇ ಸರಿಯಾಗಿ ಗಮಗಮಿಸುತ್ತಿರುವುದು. ಲಿಲ್ಲಿ ಅಫ್ ದಿ ವ್ಯಾಲಿ ಎಂಬ ಈ ಸುಗಂಧ ದ್ರವ್ಯಕ್ಕೆ ಸರಿಸಮಾನವಾದದ್ದು ಬೇರೊಂದು ಇಲ್ಲ. ... ಲ್ಲಿ ತಯಾರಾದ 14 ಕ್ಯಾರೆಟ್ಟಿನ ಭಂಗಾರದ ನಿಬ್ಬು ಹಾಕಿದ ಪೌಂಟನ್ ಪೇನಾ, ... ದೇ ಸಲ 12 ಸೆಂಟ್ ಬಾಟಲ್, ಪೇನಾ ... ಕೊಂಡವರಿಗೆ ಒಂದು ಪಾಕೆಟ್ ವಾಚನ್ನು ಉಚಿತವಾಗಿ ಕೊಡುತ್ತೇವೆ.

ಕ್ರಯ ರೂ. 2–12–0 ಮಾತ್ರ.

The Legal Trading Co.
1?–10 P. B. 243, Madras.

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಎಂಬುವ ಸುಪ್ರಸಿದ್ಧ ದೇಶೀಯ ವಿಮೆ ಸಂಸ್ಥೆ.

ಅಧ್ಯಕ್ಷರು:—ಮಾನನೀಯ ಸರ್ ಲಲ್ಲೂಭಾಯಿ ಸಾಮಲದಾಸ್, ಕೆಟಿ., ಸಿ. ಐ. ಇ., ಜೆ. ಪಿ., ಯವರು.

ಕೊಚ್ಚಿಕಾರ ಬ್ರದರ್ಸ್, ಮದ್ರಾಸು ಬ್ರಾಂಚು ಸೆಕ್ರೆಟರಿಗಳು.

1. ಭಾಗ್ಯವಂತರ ಭಂಡಾರ, ವ್ಯಾಪಾರಸ್ಥರ ಕೋಶಾಗಾರ, ಕುಟುಂಬದ ಸಂರಕ್ಷಣಾಸಾಧನ. ಬಡವರ ಜೀವನಾಧಾರ ಇದೇ ಜೀವ ವಿಮೆಯು ತಕ್ಕದ್ದು.

2. ಹಿಂದೂಸ್ಥಾನದ ನಿವಾಸಿಯರಲ್ಲಿ ವಿಮಾ ತೆಗೆಯಬೇಕನ್ನುವವರ ಪ್ರಯೋಜನಾರ್ಥವಾಗಿ ಈ ಕಂಪೆನಿಯು ಭಾರತೀಯರ ಉತ್ತಮವಾದ ಅಡಳಿತದಿಂದ ಖರ್ಚು ಮೋಕೆ ಮಾಡಿ ಇಂಡಿಯಾ ಸರ್ಕಾರದ ಇಂಡಿಯನ್ ಟ್ರಸ್ಟ್ ಆಕ್ಟಿಗೆ ಒಳಪಟ್ಟು ಸರ್ಕಾರದ ಭದ್ರತೆಯಿಂದ ದೇಶೀಯರ ಸೇವೆಯಲ್ಲೇ ನಿರತವಾಗಿ ಹಿಂದೂಸ್ಥಾನದ ಎಲ್ಲಾ ಕಡೆಗಳಲ್ಲೂ ಅತಿ ಕೀರ್ತಿಯನ್ನು ಪಡೆದಿರುತ್ತೆ.

3. ಈ ಸ್ವದೇಶೀ ಕಂಪೆನಿಯು ಪಾಲಿಸಿದಾರರಿಗೆ ಪಾಲಿಸಿ ಅವಧಿ ಪೂರೈಸಿದನಂತರವಾಗಲೀ ಅಥವಾ ಮಧ್ಯದಲ್ಲು ಮರಣಾನಂತರ ವಾರೀಸುದಾರರುಗಳಿಗೇ ಹೆಚ್ಚಿನ ಖರ್ಚಿಗೆ ಆಸ್ಪದ ಕೊಡದೆಯೂ, ದೀರ್ಘ ಸಮಯ ತೆಗೆದುಕೊಳ್ಳದೆಯೂ ಶೀಘ್ರದಲ್ಲಿ ವಿಮೆ ಮೊಬಲಗನ್ನು ಲಾಭ ಸಹಿತ ಪಾವತಿಕೊಡುವುದರಲ್ಲಿ ಹೆಸರುಗೊಂಡಿದೆ.

4. ಭರತಖಂಡದ ಮಹನೀಯರಿಂದ ಸ್ಥಾಪಿಸಲ್ಪಟ್ಟು ದೇಶೀಯರಿಂದಲೇ ಅತಿ ಕಡಿಮೆ ಖರ್ಚಿನಿಂದ ನಡೆಸಲ್ಪಡುವ ಈ ಸ್ವದೇಶೀ ಕಂಪೆನಿಯಲ್ಲಿ ಇಂದು ಭಾಗಿಗಳಾಗಿ, ಪತಿಪತ್ನಿಯರಿಗೆ ಮತ್ತು ವ್ಯಾಪಾರಸ್ಥರು ವಗೈರೆಗೆ ಏಕೀಭವಿಸಿ (ಜಾಯಿಂಟ್ ಲೈಫ್) ಪಾಲಿಸಿ ತೆಗೆದುಕೊಳ್ಳಲು ಈ ಕಂಪೆನಿಯು ತುಂಬಾ ಅನುಕೂಲಗಳನ್ನು ಕಲ್ಪಿಸಿರುತ್ತೆ. ಇಂಥ ಸುಸಮಯವನ್ನು ಎಂದಿಗೂ ಕಳೆಕೊಳ್ಳಬಾರದು.

ಆಫೀಸು—
ಟೆಂಪಲ್ ಸೈಡ್,
ಮಡಿಕೇರಿ. (26–19)

ಬಿ. ಎಸ್. ಐಯ್ಯಪ್ಪ,
ಕೊಡಗು ಚೀಫ್ ಏಜೆಂಟ್.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಉತ್ತಮ ತರಹ ಒಂದು ಸೆಟ್ ಜರ್ಮನ್ ರೀಡ್ಸ್ ಹಾಕಿರುವ ಸಿಂಗಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 20–0–0

" ಮತ್ತು 22–8–0

ಇದಕ್ಕೋ ಉತ್ತಮ ತರಹ ಹಾರ್ಮೋನಿಯಂ " 1ಕ್ಕೆ ರೂ. 25–0–0

" ಮತ್ತು 27–8–0

ಇದಕ್ಕೋ ಉತ್ತಮ ತರಹದ್ದು, ದೂಳು ... ಳದಂತೆ ಕೇಸಿನ ಮೇಲೆ ಪೂರ್ತಿ ಮುಚ್ಚಳವುಳ್ಳ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ ರೂ. 27–8–0

4. ಹಾಗೆಯೇ, ಬಂದೋಬಸ್ತು, ಸುಸ್ವರವುಳ್ಳದ್ದೂ, ಅನೇಕ ವರ್ಷಗಳ ವರೆಗೆ ಬಾಳಿಕೆ ಬರತಕ್ಕದ್ದೂ ಆದ ಹೊಸದಾಗಿ ಸೃಷ್ಟಿ ಆಗಿರುವ ಫ್ರೆಂಚ್ ರೀಡ್ಸ್ ಸಮಾನ ಇರುವ ನಮ್ಮ ಹೊಸ ರೀಡ್ಸ್ ಹಾಕಿರುವ "ಸಿದ್ಧಪ್ಪಾಸ್ ಫ್ಲೂಟ್" ಸಿಂಗಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 42–8–0

5. ಉತ್ತಮ ತರಹ 2 ಸೆಟ್ ಜರ್ಮನ್ ರೀಡ್ಸ್ ಹಾಕಿರುವ, ದೂಳು ಬೀಳದಂತೆ ಕೇಸಿನ ಮೇಲೆ ಪೂರ್ತಿ ಮುಚ್ಚಳವುಳ್ಳ ಡಬ್ಬಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ ರೂ. 3?

6. ಉತ್ತಮ ತರಹ 2 ಸೆಟ್ ಜರ್ಮನ್ ಮೇಕ್ ರೀಡ್ಸ್ ಹಾಕಿರುವ, ಕೈನಿಂದಾಗಲೀ ಅಥವಾ ಕಾಲಿನಿಂದಾಗಲೀ ಬಾರಿಸಲು ಅನುಕೂಲಿಸುವಂತೆ ತಯಾರಿಸಿರುವ "ಸ್ಪೆಷಲ್ ಫ್ಲೂಟ್" ಡಬ್ಬಲ್ ರೀಡ್ಸ್ ಹ್ಯಾಂಡ್ ಲೆಗ್ ಹಾರ್ಮೋನಿಯಂ 1ಕ್ಕೆ ರೂ. 7?–

ನಮ್ಮ ಟೇಬಲ್ ಡಿಪೋನಲ್ಲಿ ಕಟ್ಟಡಗಳಿಗೂ, ಫರ್ನಿಚರ್ ತಯಾರಿಸಲೂ ಬೇಕಾದ ಎಲ್ಲಾ ನಮೂನೆ ನಾಟಾಗಳನ್ನು ಸುಲಭ ದರದಿಂದ ಮಾರಲಿಟ್ಟಿರುವುದಲ್ಲದೇ, ಗಿರಾಕಿಗಳು ಅಪೇಕ್ಷಿಸುವ ಸೈಜಿಗೆ ಕುಯಿಸಿಯೂ ರಿಯಾಯಿತಿ ದರದಿಂದ ಸಪ್ಲೈ ಮಾಡುತ್ತೇವೆ. ಹೆಚ್ಚಿಗೆ ವಿಷಯಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಳಾಸ:— ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್
ಹಾರ್ಮೋನಿಯಂ ಮತ್ತು ...
ಹೋಲ್‌ಸೇಲ್ ...
52–35

ಪಂಡಿತ ಮದನಮೋಹನ ಮಾಳವೀಯರು.

ಎಪ್ಪತ್ತು ವರ್ಷದ ಹಣ್ಣು ಹಣ್ಣು ಮುದುಕ; ಕೃಶವಾದ ಮುದುರಿಕೊಂಡು ಮೂಲೆಯಲ್ಲಿ ಕುಳಿತಿರುವ ವಯಸ್ಸು. ಆ ತರುಣನ ಉತ್ಸಾಹವೋ! ಅದಕ್ಕೆ ಅಂತ್ಯವಿಲ್ಲ, ವಯಸ್ಸಿನ ಅಭಾವವನ್ನು ಲೆಕ್ಕಿಸದೆ ಮೇಲಕ್ಕುಬ್ಬುತ್ತಿರುವ ಉತ್ಸಾಹ! ಪಂಡಿತ ಮದನಮೋಹನ ಮಾಳವೀಯರು ಉತ್ಸಾಹದ ಮೂರ್ತಿ.

ಮಧ್ಯಪ್ರಾಂತ್ಯದಲ್ಲಿ ಕಾಂಗ್ರೆಸ್ಸಿನ ಚಳವಳಿಯನ್ನು ಹಬ್ಬಿಸಿದ್ದ ಉತ್ಸಾಹಶಾಲಿ ಮಾಳವೀಯರು, ಅಲಹಾಬಾದಿನಲ್ಲಿ ಕಾಂಗ್ರೆಸ್ ಅಧಿವೇಶನಗಳನ್ನು ಕೂಡಿಸಿ, ಅವು ವಿಜೃಂಭಣೆಯಿಂದ ನಡೆಯುವಂತೆ ಏರ್ಪಾಡು ಮಾಡಿದವರು ಮಾಳವೀಯರು. ಕಾಶೀ ಕ್ಷೇತ್ರದ ಹಿಂದೂ ವಿಶ್ವವಿದ್ಯಾಲಯದ ಸ್ಥಾಪನೆಗಾಗಿ ಕೋಟಿಗಟ್ಟಲೆ ನಿಧಿ ಶೇಖರ ಮಾಡಿದವರು ಮದನಮೋಹನ, ಹಿಂದೂ ಮಹಾ ಸಭೆಯನ್ನು ಸ್ಥಾಪಿಸಿ ಅಖಿಲ ಭಾರತದ ಹಿಂದೂಗಳಲ್ಲಿ ಸಂಘಟನ ಶಕ್ತಿಯನ್ನುಂಟುಮಾಡಿದ ಮಹಾಶಕ್ತಿಶಾಲಿ ಮದನಮೋಹನರು.

ಮದನಮೋಹನರ ಕಾಲಾನಂತರ ಹಲವು ಶತಮಾನಗಳು ಉರುಳಿ ಹೋದರೂ, ಅವರ ಕೃತಿಗಳು ಮಾತ್ರ ಅಳಿದು ಹೋಗವು. ಭಾರತೀಯರ ಇತಿಹಾಸದಲ್ಲಿ ಮದನಮೋಹನ ಮಾಳವೀಯರ ಹೆಸರು ಚಿರವಾಗಿ ನಿಲ್ಲುವುದು.

ಮದನಮೋಹನರ ಕಾರ್ಯ ಶಕ್ತಿಯು ಅದ್ಭುತವಾದುದು. ಅವರು ಒಮ್ಮೆ ಮನಸ್ಸು ಮಾಡಿದರೆಂದರಾಯಿತು, ತಮ್ಮ ಎದುರಿಗೆ ಎತ್ತರದ ಗುಡ್ಡವಿದ್ದು ನಿಂತರೂ ಅದನ್ನು ದಾಟಿ ತಮ್ಮ ಕಾರ್ಯವನ್ನು ಸಾಧಿಸುವರು. ಒಮ್ಮೆ ಮದನರು ತರುಣರಾಗಿದ್ದಾಗ ಸರ್ಕಾರದವರ ಕಾಯಿದೆಯೊಂದರ ಬಗ್ಗೆ ಜನರ ಅಸಮ್ಮತಿಯನ್ನು ತೋರಿಸಲು ಒಂದು ದೊಡ್ಡ ಚಳವಳಿ ನಡೆಸುವ ಭಾರವನ್ನು ವಹಿಸಿ ಆ ಚಳವಳಿಯನ್ನು ನಡೆಸಲಾರಂಭಿಸಿದಾಗ, ಹಿರಿಯರೊಬ್ಬರು ಮದನರಿಗೆ 'ನೋಡಪ್ಪ ನೀನಿನ್ನೂ ಇದೀಗ ಈ ಕಾರ್ಯದ ಮುಂದಾಳುತನವನ್ನು ಅವರಿಗೆ ಬಿಡದೆ, ಏನೇ ಹುಡುಗನೇ ನೀನೇಕೆ ಮುಂದಾಗುವುದು? ಈ ಕೆಲಸವನ್ನು ಮಾಡುತ್ತಿರುವುದು ಚೆನ್ನಾಗಿಲ್ಲ' ವೆನ್ನಲು ಮದನರು 'ಸ್ವಾಮಿ ಹಿರಿಯರಲ್ಲಿ ನನಗೆ [illegible]ಭಾವವಿದೆ, ಆದರೆ ಹಿರಿಯರು ತಮ್ಮ ಕರ್ತವ್ಯವನ್ನು ಮರೆತು ಸುಮ್ಮನಿರುವಾಗ ನಮ್ಮಂತಹ ತರುಣರು ಆ ಕರ್ತವ್ಯವನ್ನು ನಡೆಸುವ ಭಾರವನ್ನು ವಹಿಸಲೇ ಬೇಕು. ಇದಕ್ಕಾಗಿ ಹಿರಿಯರು ನಮ್ಮ ಮೇಲೆ ಕೋಪಗೊಂಡರೂ ನಮ್ಮ ತಲೆ ಕಡಿದಿದ್ದರೂ ನಾವು ನಮ್ಮ ಕರ್ತವ್ಯವನ್ನು ನಡೆಸಿಯೇ ತೀರುವೆವು' ಎಂದುತ್ತರ ಕೊಟ್ಟರು!

ಅಂದಮೇಲೆ ಮದನರ ಕಾರ್ಯತತ್ಪರತೆಯ ಬಗ್ಗೆ ಹೆಚ್ಚು ವಿವರಣೆಯು ಅನಾವಶ್ಯಕ.

ಮದನರು ಶ್ರೋತ್ರಿಯ ಬ್ರಾಹ್ಮಣ ವಂಶದವರು. ಪ್ರಸಿದ್ಧ ಸಂಸ್ಕೃತ ವಿದ್ವಾಂಸರ ವಂಶ ಅವರದು. ಮದನರ ತಂದೆಯು ಶ್ರೇಷ್ಠ ವಿದ್ವಾಂಸರಿದ್ದು, ಅವರ ಶಾಸ್ತ್ರೀಯ ಜೀವನವು [illegible]ಲ್ಲೂ ಸುಪ್ರಸಿದ್ಧವಾಗಿತ್ತು. ಆಗಿನ ದರ್ಭಾಂಗದ ರಾಜರೂ, ಕಾಶಿಯ ರಾಜರೂ ಅವರಲ್ಲಿ ಗುರುಭಾವವನ್ನಿಟ್ಟಿದ್ದರು. ಇಂತಹ ಪೂರ್ವಾಚಾರಪರರ ಸಾನ್ನಿಧ್ಯದಲ್ಲಿ ಬೆಳೆದ ಮದನರೂ ಪೂರ್ವಾಚಾರಪರರಾದದ್ದರಲ್ಲಿ ಆಶ್ಚರ್ಯವೇನಿದೆ! ಮದನರ ಬಾಲ್ಯ ವಿದ್ಯಾಭ್ಯಾಸವೆಲ್ಲಾ ಸಂಸ್ಕೃತಾಧ್ಯಯನದಲ್ಲೇ ಮುಗಿಯಿತು. ನಂತರ ಅವರು ಇಂಗ್ಲಿಷ್ ವಿದ್ಯಾಭ್ಯಾಸವನ್ನಾರಂಭಿಸಿದರು. ಮೊದಲಿನಿಂದಲೂ ಸಾರ್ವಜನಿಕ ಕಾರ್ಯಗಳಲ್ಲಿ ಮದನರಿಗೆ ಬಹು ಆಸಕ್ತಿ. ಅವರು ಅಲಹಾಬಾದಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗ ತಮ್ಮ ಹಲವು ಮಿತ್ರರೊಡಗೂಡಿ, 'ಅಲಹಾಬಾದ್ ಸಾಹಿತ್ಯ ಸಂಘ' ವನ್ನೂ, [illegible] 'ಹಿಂದೂ ಸಮಾಜ' ವನ್ನೂ ಆರಂಭಿಸಿದರು.

ಹಿಂದೂಗಳನ್ನೆಲ್ಲಾ ಒಟ್ಟುಗೂಡಿಸಿ ಹಿಂದೂ ಧರ್ಮದಲ್ಲಿ ಐಕ್ಯತೆಯನ್ನುಂಟುಮಾಡಬೇಕೆಂಬುದು ಮದನರ ಮನಸ್ಸನ್ನು [illegible]ದಿಂದಲೂ ಆವರಿಸಿದ್ದ ಬಯಕೆ. ಆ ಬಯಕೆಯ ಪ್ರಥಮ [illegible]ರೂಪವೇ ತರುಣ ಮದನರು ಅಲಹಾಬಾದಿನಲ್ಲಿ ಸ್ಥಾಪಿಸಿದ 'ಹಿಂದೂ ಸಮಾಜ'. ನಂತರ ಮದನರು 1884ರಲ್ಲಿ '[illegible] ಹಿಂದೂ ಮಂಡಲ' ವೆಂಬ ಸಂಸ್ಥೆಯನ್ನು ಸ್ಥಾಪಿಸಿ ಅದು ಹಲವು ಕಾಲ ನಡೆಸಿಕೊಂಡು ಬಂದರು. ಈ ಸಂಸ್ಥೆಯು [illegible]ದಲ್ಲಿ ಬಲವಾಗುತ್ತಾ ಬಂದು 1906ರಲ್ಲಿ 'ಸನಾತನ [illegible]ಧ' ಎಂಬ ಹೆಸರನ್ನು ಪಡೆಯಿತು. ಈ ಸಭೆಯು [illegible] ಮೇಲೆ ಈಗಿನ ಹಿಂದೂ ಮಹಾಸಭೆಯು ಸ್ಥಾಪಿತ[illegible] ಮದನರ, ಸನಾತನ ಧರ್ಮ ಪ್ರೇಮವೂ ಅವರ ವಿಮರ್ಶಾ ಶಕ್ತಿಯನ್ನು [illegible] ಪ್ರೇಮವೂ [illegible] ಹಿತಕ್ಕಾಗಿ ಅವರು ಧರ್ಮ ಪ್ರೇಮ[illegible] [illegible]ಬಿಡುಗಿದಿರು[illegible]. ಎಪ್ಪತ್ತು ವರ್ಷ[illegible] [illegible]ರ್ಮ ಪ್ರೇಮಿಯು ಸಮುದ್ರ ಪ್ರಯಾ[illegible] [illegible]ಗಿ ಹೋಗುವುದು ಸಾಧ್ಯವೆಂದು ಭಾವಿ[illegible] [illegible]. ಆದರೆ ಮದನಮೋಹನ ಮಾ[illegible] [illegible]ಧನೆಗಾಗಿ ತಮ್ಮ ಧರ್ಮವನ್ನು ಬಿಡಿ[illegible] [illegible]ಗಿ ಚಳ್ಳಗೋಷ್ಠಿಯಲ್ಲಿ ಭಾಗವಹಿ[illegible] [illegible] ಅಸ್ಪೃಶ್ಯತಾ ನಿವಾರಣೆಯಲ್ಲಿ [illegible]

[illegible]ಕ್ಕಾಗಿ ಅವರು [illegible] [illegible]ಯಾಯಿತು. ಅವರ ಕಣ್ಣಿನಲ್ಲಿ [illegible]ರುವುದು.

1919ನೇ ಇಸವಿ. ಪಂಜಾಬಿನಲ್ಲಿ ಮಹಾ ಅನಾಹುತಗಳು ನಡೆದ ವರ್ಷ—ಡಿಸೆಂಬರ್ ತಿಂಗಳು; ಅಮೃತಸರ ಕಾಯಿದೆಯ ಕ್ರೂರ ಹಿಡಿತಕ್ಕೆ ಸಿಕ್ಕಿ ಅರೆಜೀವವಾಗಿ ಹೋಗಿದ್ದ ಪಂಜಾಬು ಆಗ ತಾನೇ ಸ್ವಲ್ಪ ಸ್ವಲ್ಪವಾಗಿ ಚೇತರಿಸಿಕೊಳ್ಳುತ್ತಿತ್ತು.

ಒಂದು ದಿನ ಮಧ್ಯಾಹ್ನ ಮದನರು ಊಟಮಾಡುತ್ತಿದ್ದಾಗ, ಸಡಿಬಾಗಿದ ಮುದುಕಿಯೊಬ್ಬಳು ಅಳುತ್ತಾ ಬಂದು 'ಮಾಳವೀಯರನ್ನು ನೋಡಬೇಕೆಂ'ದಳು ಇದು ತಿಳಿದ ತಕ್ಷಣವೇ ಮದನರು ಆಕೆಯನ್ನು ತಾವು ಊಟಮಾಡುತ್ತಿದ್ದೆಡೆಗೆ ಕರೆಸಿಕೊಂಡು, ಆಕೆಯ ಸಂಕಟವೇನೆಂದು ಕೇಳಿದರು. ಆಕೆಯು ಕಣ್ಣೀರು ಸುರಿಸುತ್ತಾ 'ಚಳವಳಿ ಕಾಲದಲ್ಲಿ ನಡೆದ ಸಭೆಯಲ್ಲಿದ್ದನೆಂದು ನನ್ನ ಮಗನನ್ನು ಜೈಲಿಗೆ ಹಾಕಿದ್ದಾರೆ; ಅವನನ್ನು ಬಿಟ್ಟು ಬಿಡಿ ಎಂದು ಗವರ್ನರಿಗೆ ಒಂದರ್ಜಿ ಬರೆದು ಕೊಡಿ' ಎಂದು ಬೇಡಿದಳು. ಇದನ್ನು ಕೇಳುತ್ತ ಕೇಳುತ್ತ ಮದನಮೋಹನ ಮಾಳವೀಯರಿಗೆ ತಡೆಯಲಾರದಷ್ಟು ಅಳುಬಂತು. ಅವರು ಆ ಮುದುಕಿಯ ಕಷ್ಟವನ್ನು ನೋಡಲಾರದೆ ಕರಗಿ ನೀರಾದರು. ತಕ್ಷಣವೇ ಪಕ್ಕದಲ್ಲಿ ಕುಳಿತಿದ್ದ ಯುವಕನನ್ನು ಕರೆದು, 'ಆಕೆಯನ್ನು ಈಗಲೇ ಕರೆದುಕೊಂಡು ಹೋಗಿ, ಗವರ್ನರಿಗೆ ಹೇಳಿ ಆಕೆಯ ಮಗನನ್ನು ಜೈಲಿನಿಂದ ಬಿಡಿಸು' ಎಂದರು. ಆ ಯುವಕನು ಆಶ್ಚರ್ಯಪಟ್ಟನು; ಏನೆಂದರೆ ಬಿಡಬೇಕೆಂಬುದು ಅವನಿಗೆ ಗೊತ್ತಾಗಲಿಲ್ಲ; ಪಂಜಾಬಿನ ಗವರ್ನರೆಲ್ಲಿ—ತಾನೆಲ್ಲಿ; ಆಗ ತಾನು ಹೇಳಿದ್ದನ್ನು ಮಾಡಿ ಆ ಮುದುಕಿಯ ಮಗನ ಬಂಧನ ಬಿಡುವುದೆಂತು! ಆ ತರುಣನ ಮನಸ್ಸಿನಲ್ಲಿ ಸಂದೇಹ ಉಂಟಾದದ್ದನ್ನು ಕಂಡೊಡನೆಯೇ ಮಾಳವೀಯರು 'ಪರಮಾತ್ಮನ ಮೇಲೆ ಭಾರ ಹಾಕಿ ನಿನ್ನ ಕೆಲಸ ಮಾಡು, ಫಲಿತಾಂಶದ ಚಿಂತೆ ನಿನಗೇಕೆ' ಎಂದರು.

ಮಾಳವೀಯರ ಕಾರುಣ್ಯ ಪ್ರವಾಹದಲ್ಲಿ ಮುದುಕಿಯ ಆತಂಕತೆಯು [illegible] ಹೋಯಿತು. ಆಕೆಯು ತನ್ನೆರಡು ಕೈಗಳನ್ನು ಜೋಡಿಸಿ '[illegible] ಕೃಷ್ಣಾವತಾರ, ಮಹಾಪ್ರಭಾವ' ಎಂದು ಮಾಳವೀಯರಿಗೆ ನಮಸ್ಕಾರ ಮಾಡಿದಳು.

ಅಲಹಾಬಾದಿನಲ್ಲಿ ಭಯಂಕರವಾದ ಪ್ಲೇಗಿನ ಅವಾಂತರವು ಆರಂಭವಾದಾಗ ಮಾಳವೀಯರು ತಮ್ಮ ಜೀವದ ಮೇಲೆ ಕೂಡ ಪರವೆ ಇಡದೆ ಅಲಹಾಬಾದಿನ ಬೀದಿಬೀದಿಗಳನ್ನೂ ತಿರುಗಿ ಜನರಿಗೆ ಧೈರ್ಯ ಹೇಳಿ, ಬಾಧಿತರಾದವರನ್ನು ಆಸ್ಪತ್ರೆಗೆ ಸಾಗಿಸಿ, ಪ್ಲೇಗು ತಗಲಿದ್ದ ಮನೆಗಳನ್ನೆಲ್ಲಾ ಶುದ್ಧಿ ಮಾಡಿಸಿದರಲ್ಲದೆ, ಜನಸಂದಣಿಯಿಂದ ಒತ್ತಾಗಿದ್ದ ಬಡಾವಣೆಯ ಜನರನ್ನು 'ಸ್ವಯಂಸೇವಕ'ರ ಮೂಲಕ ಕಳುಹಿಸಿ ಪ್ಲೇಗು ತಗಲು ತಮ್ಮ ಕೈಲಾದ ಸಹಾಯವನ್ನೆಲ್ಲಾ ಮಾಡಿದರು.

ಮಾಳವೀಯರಿಗೆ ತರುಣರನ್ನು ಕಂಡರೆ ಬಹು ಪ್ರೀತಿ. ತರುಣರ ವಿದ್ಯಾಭ್ಯಾಸದಲ್ಲವರಿಗೆ ಬಹು ಆಸಕ್ತಿ. ಕಾಶೀ ಕ್ಷೇತ್ರದ ಹಿಂದೂ ವಿಶ್ವವಿದ್ಯಾಲಯವೇ ಮಾಳವೀಯರ ವಿದ್ಯಾಪ್ರೇಮಕ್ಕೆ ಸಾಕ್ಷಿ. ಹದಿನೈದು ವರ್ಷ ಕಾಲದೊಳಗಾಗಿ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸಿ, ಅದನ್ನು ಶ್ರೇಷ್ಠ ರೀತಿಯಿಂದ ನಡೆಸಿಕೊಂಡು ಬಂದು, ಅದು ಚಿರಕಾಲ ನಡೆಯುವಂತೆ ಏರ್ಪಾಡುಗಳನ್ನು ಮಾಡುವುದೆಂದರದು ಸಾಮಾನ್ಯ ವಿಚಾರವಲ್ಲ.

ಹಿಂದೂ ವಿಶ್ವವಿದ್ಯಾಲಯದ ಆವರಣವನ್ನು ಪ್ರವೇಶಿಸಿದರಾಯಿತು, ಮಾಳವೀಯರು ಆನಂದಪರವಶರಾಗಿ ಬಿಡುತ್ತಾರೆ.

ಒಮ್ಮೆ ಮಾಳವೀಯರು ಹಲವು ಮಂದಿ ಪ್ರವಾಸಿಗಳಿಗೆ ವಿಶ್ವವಿದ್ಯಾಲಯದ ವಿವಿಧ ಭಾಗಗಳನ್ನು ತೋರಿಸುತ್ತಿದ್ದಾಗ ಆ ಪ್ರವಾಸಿಗಳಲ್ಲೊಬ್ಬರು 'ಗಂಗಾ ಪ್ರವಾಹವೆಲ್ಲಿ' ಎಂದರು. (ಹಿಂದೂ ವಿಶ್ವವಿದ್ಯಾಲಯದ ಆವರಣದ ಪಕ್ಕದಲ್ಲೇ ಗಂಗಾ ನದಿ ಹರಿಯುತ್ತದೆ) ಆದಕ್ಕೆ ಮಾಳವೀಯರು ಸ್ವಲ್ಪ ದೂರದಲ್ಲಿ ಹೋಗುತ್ತಿದ್ದ ವಿದ್ಯಾರ್ಥಿಗಳ ಗುಂಪೊಂದನ್ನು ತೋರಿಸಿ, ಆನಂದ ಪೂರ್ಣವಾದ ಕಂಠದಿಂದ 'ಗಂಗಾ ಪ್ರವಾಹವೇ! ಅಲ್ಲಿ ನೋಡಿ ಅಲ್ಲಿ; ಜ್ಞಾನ ಗಂಗಾಪ್ರವಾಹ ಹೇಗೆ ಹರಿಯುತ್ತಿದೆ' ಎಂದರು.

ಮಾಳವೀಯರು ಕೆಲವು ಕಾಲ ಪತ್ರಿಕಾ ಕರ್ತರಾಗಿದ್ದರು. ಅವರು ಮೊದಲು ತಮ್ಮ ಜೀವನವನ್ನಾರಂಭಿಸಿದ್ದು ಉಪಾಧ್ಯಾಯರಾಗಿ. ಜನಾಂಗಕ್ಕೆ ಜ್ಞಾನೋಪದೇಶ ಮಾಡುವ ಅವಕಾಶವುಳ್ಳ ಉಪಾಧ್ಯಾಯ ವೃತ್ತಿಯು ಬಹು ಶ್ರೇಷ್ಠವಾದದೆಂದು ಮಾಳವೀಯರ ಮನವಂತೆ. ಉಪಾಧ್ಯಾಯರಾಗಿ ತಾವು ಜನಾಂಗಕ್ಕೆ ಮಾಡಬಹುದಾದ ಸೇವೆಗಿಂತ, ಉತ್ತಮವಾದ ಸೇವೆಯನ್ನು ಪತ್ರಿಕಾ ಪ್ರಕಟಣದ ಮೂಲಕ ಮಾಡಬಹುದೆಂದು ಅವರು ಪತ್ರಿಕಾ ಪ್ರಚಾರವನ್ನು ಕೈಗೊಂಡರು. 'ಹಿಂದೂಸ್ಥಾನ', 'ಇಂಡಿಯನ್ ಯೂನಿಯನ್', 'ಅಭ್ಯುದಯ', 'ಅಭ್ಯುದಯ' 'ಲೀಡರ್' ದೈನಂದಿನ ಪತ್ರಿಕೆಗಳು ಮಾಳವೀಯರ ಪತ್ರಿಕಾ ಪ್ರಕಟಣ ಉದ್ಯಮದ ಫಲಗಳು.

ಸರ್ಕಾರದವರು ತಮ್ಮ ವರದಿಯಲ್ಲೊಮ್ಮೆ 'ಮಾಳವೀಯರ 'ಹಿಂದೂಸ್ಥಾನ' ಪತ್ರಿಕೆಯಿಂದ ಜನರಿಗೆ ವಿಶೇಷ ಹಿತವುಂಟಾಗಿದೆ' ಎಂದು ಬರೆದಿದ್ದರೆಂದಮೇಲೆ ಮಾಳವೀಯರ ಪತ್ರಿಕಾ ಪ್ರಕಟಣ ಶಕ್ತಿಯ ಶ್ರೇಷ್ಠತೆಯನ್ನು ವಿವರಿಸಬೇಕಾಗಿಲ್ಲ.

ಪಂಡಿತ ಮಾಳವೀಯರು ಕಾಂಗ್ರೆಸ್ಸನ್ನು ಪ್ರವೇಶ ಮಾಡಿ ಇಂದಿಗೆ 46 ವರ್ಷಗಳಾದುವು. ಆಗ್ಗೆ ಕಾಂಗ್ರೆಸ್ ಹುಟ್ಟಿ ಎರಡು ವರ್ಷ ಮಾತ್ರ ಆಗಿತ್ತು. ಪಂಡಿತ ಮಾಳವೀಯರಷ್ಟು ದೀರ್ಘ ಕಾಲ ಕಾಂಗ್ರೆಸ್ಸಿಗೆ ಸಂಬಂಧಿಸಿದ ಭಾರತೀಯ [illegible] ಈಗ ಜೀವಂತರಾಗಿಲ್ಲ. ಆದಿನಿಂದ ಇಂದಿನವರೆಗೂ ಮಾಳವೀಯರು ಕಾಂಗ್ರೆಸ್ಸನ್ನೇ ಅನುಸರಿಸಿ ನಡೆದ[illegible] [illegible] ಕಾಂಗ್ರೆಸ್ಸಿಗೂ, ಅವರಿಗೂ ಅನೇಕವೇಳೆ ಭಿನ್ನಾಭಿಪ್ರಾಯಗಳು ಉಂಟಾದುವಾದರೂ ಮಾಳವೀಯರು ಕಾಂಗ್ರೆಸ್ಸಿನ ಮೇಲಿಟ್ಟಿದ್ದ ಅಭಿಮಾನವು ಮಾತ್ರ ಕಡಿಮೆಯಾಗಲಿಲ್ಲ; ಅದು ಬೆಳೆಯುತ್ತಲೇ ಬಂದಿದೆ. ಮಾಳವೀಯರು ಕಾಂಗ್ರೆಸ್ಸಿನ ಹಿತಕ್ಕಾಗಿ ಬಹು ಶ್ರಮಿಸಿದ್ದಾರೆ.

ಇವರ ದೇಶ ಪ್ರೇಮ, ಸೇವೆ, ತ್ಯಾಗಗಳನ್ನು ಮನ್ನಿಸಿ ಭಾರತ ಜನಾಂಗವು ಇವರನ್ನು 1918 ನೇ ಇಸವಿಯಲ್ಲಿ ನಡೆದ ಲಾಹೋರ್ ಕಾಂಗ್ರೆಸಿನ ಅಧ್ಯಕ್ಷಸ್ಥಾನವನ್ನು ಇವರಿಗೆ ಅರ್ಪಿಸಿತು.

ಪಂಡಿತರು ಮೊದಲಿನಿಂದಲೂ 'ಸ್ವದೇಶೀ' ಪ್ರೇಮಿಗಳು. ಅವರು ತಮ್ಮ ಮುಂದಾಳುತನದಲ್ಲಿ ಅನೇಕ 'ಸ್ವದೇಶೀ ಕೈಗಾರಿಕೆ' ಯ ಉದ್ಯಮಗಳನ್ನು ಆರಂಭಿಸಿ, ಅವುಗಳು ಶ್ರೇಷ್ಠವಾದ ರೀತಿಯಲ್ಲಿ ನಡೆಯಲು ತಕ್ಕ ಏರ್ಪಾಡುಗಳನ್ನು ಮಾಡಿದ್ದಾರೆ. ಪರದೇಶೀ ವಸ್ತುಗಳು ಸುಲಭ ಬೆಲೆಗೆ ದೊರೆತರೂ ಅವನ್ನು ಕೊಳ್ಳದೆ ಹೆಚ್ಚು ಬೆಲೆಯನ್ನಾದರೂ ಕೊಟ್ಟು ಸ್ವದೇಶೀ ವಸ್ತುಗಳನ್ನೇ ಕೊಳ್ಳಬೇಕೆಂಬುದು ಮಾಳವೀಯರ 'ಸ್ವದೇಶೀ' ನೀತಿ. 'ಸ್ವದೇಶೀ' ತಯಾರಿಕೆಯ ಸಾಮಾನುಗಳು ಪರದೇಶೀ ಸಾಮಾನುಗಳಷ್ಟು ಚೆನ್ನಾಗಿಲ್ಲದಿದ್ದರೂ ನಾವು 'ಸ್ವದೇಶೀ' ಸಾಮಾನುಗಳನ್ನೇ ಕೊಳ್ಳಬೇಕೆಂದೂ, ನಾವು ಹಾಗೆ ಮಾಡಿದಲ್ಲಿ 'ಸ್ವದೇಶೀ' ಕೈಗಾರಿಕೆಗೆ ಪ್ರೋತ್ಸಾಹ ಸಿಕ್ಕಿದಂತಾಗಿ ಅವು ಅಭಿವೃದ್ಧಿಗೊಂಡು ಪರದೇಶೀ ಸಾಮಾನಿನಷ್ಟು ಉತ್ತಮದ ಸಾಮಾನುಗಳನ್ನು ತಯಾರಿಸಲು ಅವಕಾಶ ಉಂಟಾಗುವುದೆಂದೂ ಅವರು ಅನೇಕ ವೇಳೆ ಹೇಳಿರುವರು.

ಭಾರತ ಜನಾಂಗದ ಹಿತಸಾಧನೆಯಲ್ಲಿ ತಮ್ಮ ಇಡೀ ಜೀವಮಾನವನ್ನೆಲ್ಲಾ ಕಳೆದವರಲ್ಲಿ ಪಂಡಿತ ಮದನಮೋಹನ ಮಾಳವೀಯರು ಅಗ್ರಗಣ್ಯರು.

'ಪ್ರ. ಮು.'

ಸ್ವಾತಂತ್ರ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ.]

ಲೇಡಿ ಡಾಕ್ಟರ್.

ಅಯ್ಯ,

ಕೊಡಗಿನಲ್ಲಿ ಲೇಡಿ ಡಾಕ್ಟರುಗಳಿಲ್ಲದೆ ನಮ್ಮ ಹೆಂಗಸರು ನ್ಯಾಯವಾದ ಚಿಕಿತ್ಸೆಯನ್ನು ಹೊಂದಿಕೊಳ್ಳಲು ಅನಾನುಕೂಲವಿರುವ ದೆಸೆಯಿಂದ ನಮ್ಮ ಸರ್ಕಾರದವರು ಆಗ್ಗೆ ಸುಮಾರು ಎಂಟು ತಿಂಗಳಿಂದ ಈಚೆಗೆ ಒಬ್ಬ 'ಪಾರ್ಟ್ ಟೈಮ್' (ಅರ್ಧ ಸಮಯ) ಲೇಡಿ ಮೆಡಿಕಲ್ ಆಫೀಸರನ್ನು ತಿಂಗಳಿಗೆ 50 ರೂ. ಸಂಬಳದಲ್ಲಿ ನೇಮಿಸಿದ್ದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಮಡಿಕೇರಿಗೆ ಲೇಡಿ ಡಾಕ್ಟರ್ ನೇಮಿಸಲ್ಪಟ್ಟ ಲಾಗಾಯತಿನಿಂದ ತಮ್ಮ ಪಟ್ಟಣದ ಆಜುಬಾಜಿನ ಹೆಂಗಸರು ಹೆರಿಗೆಯಲ್ಲಿಯೂ, ಮತ್ತು ಹೆಂಗಸರೇ ಕೃಪೆ ಪಡುತ್ತಿರುವ ಇನ್ನಿತರ ಖಾಯಿಲೆಗಳಲ್ಲಿಯೂ ನ್ಯಾಯವಾದ ಚಿಕಿತ್ಸೆಯನ್ನು ಹೊಂದಿಕೊಂಡು ಮತ್ತು ಅದಕ್ಕೆ ಸಲಹೆಗಳನ್ನು ಪಡೆದುಕೊಂಡು ಎಷ್ಟೋ ಮಟ್ಟಿಗೆ ಪ್ರಯೋಜನ ಹೊಂದಿರುವ ವಿಷಯ ಇಲ್ಲಿ ಹೇಳಬೇಕಾಗಿಲ್ಲ. ಆದರೆ ತಿಂಗಳಿಗೆ ಬರೀ 50 ರೂ. ಸಂಬಳದಲ್ಲಿ ಇತರ ಸಬ್ ಅಸಿಸ್ಟೆಂಟ್ ಸರ್ಜನರಷ್ಟೇ ಕರ್ತವ್ಯ ಹೊಂದಿರುವ ಲೇಡಿ ಮೆಡಿಕಲ್ ಆಫೀಸರು ಕೆಲಸ ಮಾಡಬೇಕೆಂತ ಸರ್ಕಾರದವರು ಗ್ರಹಿಸಿದ್ದರೆ ಅದು ತಪ್ಪು ಅಭಿಪ್ರಾಯ. ಸರ್ಕಾರದವರು ಒಬ್ಬ ಲೇಡಿ ಡಾಕ್ಟರನ್ನು ನೇಮಿಸುವಾಗ್ಗೆ ಆಗ ಬೇರೆ ಸಬ್ ಅಸಿಸ್ಟೆಂಟ್ ಸರ್ಜನರಷ್ಟೇ ಸಂಬಳ ಅಂದರೆ ತಿಂಗಳಿಗೆ 75 ರೂ. ಸಂಬಳ ಕೊಟ್ಟು ಮಾತ್ರ ಸರ್ಕಾರದವರ ಕರ್ತವ್ಯವನ್ನು ಗ್ರಹಿಸಿದರೆ ಇದು ಬಹು ಉಚಿತ ಹಣವಾಗಿದೆ. ಈಗಿನ ಲೇಡಿ ಡಾಕ್ಟರವರಿಗೆ ತಕ್ಕ ಯೋಗ್ಯತೆಗೆ ತಕ್ಕ ಸಂಬಳ ದೊರೆಯದ್ದರಿಂದ ಬರೀ 50 ರೂ. ಸಂಬಳದಲ್ಲಿ ಕೆಲಸ ಮಾಡಲು ಇಷ್ಟವಿಲ್ಲವೆಂತಲೂ, ಬೇರೆ ಕಡೆ ಹೋಗುವ ವಿಚಾರದಲ್ಲಿದ್ದಾರೆಂತಲೂ, ತಿಳಿಯಬರುತ್ತೆ. ಇದು ನಿಜವಾದ ಪಕ್ಷ ನಮ್ಮ ಹೆಂಗಸರಿಗೆ ಸರ್ಕಾರದವರು ಪೂರಾ ಅನ್ಯಾಯ ಮಾಡಿದ ಹಾಗಾಗುತ್ತೆ. ಆದ್ದರಿಂದ ಸರ್ಕಾರದವರು ಇಂಥಾ ಸಂದರ್ಭಕ್ಕೆ ಎಡೆಕೊಡದೆ ಲೇಡಿ ಡಾಕ್ಟರವರಿಗೆ ಬೇರೆ ಸಬ್ ಅಸಿಸ್ಟೆಂಟ್ ಸರ್ಜನು ಹೊಂದುವ ಗ್ರೇಡಿನ ಸಂಬಳವನ್ನೇ ಕೊಡಲು ಅನುಕೂಲ ಕೊಡಬೇಕಾಗಿಯೂ, ದಕ್ಷಿಣ ಕೊಡಗಿಗೂ ಸಹ ಒಬ್ಬ ಲೇಡಿ ಡಾಕ್ಟರನ್ನು ಇದೇ ರೀತಿ ಸರ್ಕಾರದವರು ಬೇಗನೆ ನೇಮಕ ಮಾಡುವ ವಿಚಾರವನ್ನು ನಡೆಸಬೇಕಾಗಿಯೂ ಅತಿ ವಿನಯದಿಂದ ಕೋರುತ್ತೇನೆ.

'ಪದ್ಮಾವತಿ'

ಬಂದೂಕುಗಳು. GUNS.



ಇವು ವಿಲಾಯಿತಿಯಲ್ಲಿ ತಯಾರಾದವು. ಇವುಗಳನ್ನು ಮನೆಯಲ್ಲಿಡಲು ಲೈಸನ್ಸ್ ಪಡೆಯಬೇಕಾಗಿಲ್ಲ. ಯಾರು ಬೇಕಾದರೂ ಯಾವ ಭಯವೂ ಇಲ್ಲದೆ ಕೈಯಲ್ಲಿ ಹಿಡಿದುಕೊಂಡು ತಿರುಗಬಹುದು, [illegible] [illegible] ೩-೦-೦.

ಯಂ. ಲಿಯೋ ಅಂಡ್ ಕೋ.,

12—9 168, ಜೈನಾ ಬಜಾರ್, ಮದರಾಸು.

ವರ್ತಮಾನ ಸಂಗ್ರಹ.

ಒಳದೇಶ.

ಕೊಡಗಿನ ಚೀಫ್ ಕಮಿಶನರಾದ ಕರ್ನಲ್ ಲರ್ಕರು ಈಗಿನ ಅವರ ಕೆಲಸದೊಂದಿಗೆ ಮದ್ರಾಸ್ ಅಧಿಪತ್ಯದ ದೇಶೀ ಸಂಸ್ಥಾನಗಳಿಗೆ ಗವರ್ನರ್ ಜನರಲರ ಪ್ರತಿನಿಧಿಯಾಗಿ ಸಹ ನೇಮಿಸಲ್ಪಟ್ಟಿದ್ದಾರೆ.

ಶ್ರೀ ಗುರುಸಮರ್ಥ ನಾಟಕ ಮಂಡಳಿಯವರು ಮಡಿಕೇರಿಗೆ ಬಂದಿರುವರು. ಇವರು ಈ ತಾ. 29ನೇ ಸೋಮವಾರ "ಶ್ರೀ ರಾಮ ಪಾದುಕಾ ಪಟ್ಟಾಭಿಷೇಕ" ಎಂಬ ನಾಟಕವನ್ನು ಅಭಿನಯಿಸುವರು.

ಕಳೆದ ಶನಿವಾರ ಮಡಿಕೇರಿಯಲ್ಲಿ ನಡೆದ ದೇವಯ್ಯ ಮೆಮೋರಿಯಲ್ ಹಾಕಿ ಟೂರ್ನಮೆಂಟಿನ ಕಡೇ ಆಟದಲ್ಲಿ ಸೆಂಟ್ರಲ್ ಹೈಸ್ಕೂಲಿನ ಸೆಕೆಂಡ್ ಟೀಮಿನವರು ಎಕ್ಸೆಲ್ಸಿಯರ್ ಟೀಮಿನವರನ್ನು ಸೋಲಿಸಿ ಬಿಲ್ಲನ್ನು ಗೆದ್ದರು.

ಕಳೆದ ವಾರ ಪ್ರಕಟಿಸಿದ ಮೇರೆ ಸೆಶನ್ ಕೋರ್ಟಿನಲ್ಲಿ ಪಾಲಿ ಪಕೀರ ಎಂಬವನು ಪಾಲಿ ಚಂದು ಎಂಬವನನ್ನು ಸುಂಟಿಕೊಪ್ಪ ತೋಟದಲ್ಲಿ ಕೊಂದದ್ದಕ್ಕಾಗಿ ತಾ. 23 ಮತ್ತು 24ರಲ್ಲಿ ವಿಚಾರ ನಡೆದು ಅಪರಾಧಿಗೆ 7ವರ್ಷ ಸಜೆಯು ವಿಧಿಸಲಾಗಿದೆ.

ಶನಿವಾರಸಂತೆ ಸ್ಟೋರ್ ಸೊಸೈಟಿಯು ಸ್ವಾಭಾವಿಕವಾಗಿ ಕೆಲಸ ನಡೆಸುವುದಿಲ್ಲವಾದ್ದರಿಂದ ಅದರ ರಜಿಸ್ಟ್ರೇಶನನ್ನು ರದ್ದಿಯಾತಿಯಿಂದ ಲಿಕ್ವಿಡೇಟ್ ಮಾಡಿ ಸಹಕಾರ ಶಾಖೆಯ ಲೋಕಲ್ ಕೋ-ಆಪರೇಟಿವ್ ಇನ್ಸ್ಪೆಕ್ಟರಾದ ಮೆ. ಮಂದಣ್ಣನವರನ್ನು ಲಿಕ್ವಿಡೇಟರಾಗಿ ನಿಯಮಿಸಲಾಗಿದೆ. ಮಾರಾಟ ಗಡಿಯಂತ ತಿಳಿಯುತ್ತೇವೆ.

ಕೊಡಗು ಜಮೀನ್ದಾರರ ಸಂಘದ ಎಕ್ಸಿಕ್ಯುಟಿವ್ ಕಮಿಟಿ ಮೀಟಿಂಗೆಂದು ತಾ. 8—3—32ನೇ ಮಂಗಳವಾರ ಸರ್ಕಾರದವರು ಕಳುಹಿಸಿದ ಇಂಡಿಯನ್ ಫ್ರಾಂಚೈಸ್ (ಓಟು) ಕಮಿಟಿಯ ಪ್ರಶ್ನೆಗೆ ಜವಾಬು ಕಳುಹಿಸುವುದನ್ನೂ ಮತ್ತು ಸಂಘದ ಮುಂದಿನ ಜನರಲ್ ಮೀಟಿಂಗನ್ನು ನಿರ್ಣಯಿಸುವ ವಿಷಯವನ್ನೂ ಕುರಿತು ಚರ್ಚಿಸುವುದಕ್ಕಾಗಿ ಸಂಘದ ಹಾಲಿನಲ್ಲಿ ನಡೆಯುತ್ತೆ ಎಂದು ತಿಳಿಯುತ್ತೇವೆ.

ಶನಿವಾರಸಂತೆ ಪೋಸ್ಟ್ ಮಾಸ್ಟರಾದ ಮ. ರಾಮೇಗೌಡರೆಂಬವರು ನೀಲಾಪುರ ಸೊಸೈಟಿ (Nilapur C. C. S.) ಯಿಂದ ಮಣಿಯಾರ್ಡರ್ ಫಾರಂನಲ್ಲಿ ಬರೆದು ಒಂದು ನೂರು ರೂ. ಸೆಂಟ್ರಲ್ ಬ್ಯಾಂಕಿಗೆ ಕಳುಹಿಸಿದ್ದು ತಾ. 24—2—32ರಲ್ಲಿ ನಮಗೆ ಸಿಕ್ಕಿರುತ್ತೆಯಾಗಿಯೂ, ಆದರೆ ಸದರಿ ಫಾರಂನಲ್ಲಿ ಬರೆದ ಮೇಲ್ಕಂಡ ಸೊಸೈಟಿಯ ಹೆಸರು ದಾಖಲು ಇಲ್ಲದ್ದರಿಂದ ಮೇಲ್ಕಂಡ 100 ರೂ. ಕಳುಹಿಸಿದ್ದು ಯಾವ ಸೊಸೈಟಿಗೆಂತ ತಪಶೀಲ್ ಆಗಿ ಅದಕ್ಕೆ ಸಂಬಂಧಪಟ್ಟ ಸೊಸೈಟಿಯವರು ತಿಳಿಸಬೇಕಾಗಿಯೂ, ಆ ವರೆಗೆ ಹಣವನ್ನು ಅಮಾನತು ಜಮೆಗೆ ತೆಗೆದುಕೊಳ್ಳಲಾಗಿದೆಯಾಗಿಯೂ ಸೆಂಟ್ರಲ್ ಬ್ಯಾಂಕಿನ ಗೌರವ ಸೆಕ್ರೆಟರಿಯವರು ತಿಳಿಸುತ್ತಾರೆ.

ಶ್ರೀ ನಾಯುಡು ಬೆಳ್ಳಪ್ಪನವರನ್ನು ಮೇರೆ ಮಾಡುವ ಸಂಗಡ ಪಟ್ಟಣಗಳಲ್ಲಿ ಕಳೆದ ವಾರ ದಸ್ತಗಿರಿ ಮಾಡಿ ಶ್ರೀ ಬೆಳ್ಳಪ್ಪನವರಿಗೆ ಆರು ತಿಂಗಳ ಸಜೆ ಮತ್ತು 200 ರೂ. ಜುಲ್ಮಾನೆ ಶಿಕ್ಷೆ ಸಹ ವಿಧಿಸಿದ್ದಾರೆ. ಕಳೆದ ವಾರ ಪ್ರಕಟಿಸಿದ ಮೇರೆ ಶ್ರೀ ಪಾರುಪಂಗಡ ಗಣಪತಿಯವರಿಗೆ ಸಜೆ ಶಿಕ್ಷೆಯಾದದ್ದಲ್ಲದೆ 200 ರೂ. ಜುಲ್ಮಾನೆ ಸಹ ಹಾಕಿದೆ.

ತಾ. 24ನೇ ಬುಧವಾರ ದಿನ ವಿರಾಜಪೇಟೆಯಲ್ಲಿ ಸತ್ಯಾಗ್ರಹ ಸಂಬಂಧ ಮೆ. ಅಬ್ದುಲ್ ಘಫೂರ್ ಖಾನ್ ತ್ಯಾಗಿಯವರು ದಸ್ತಗಿರಿ ಮಾಡಲ್ಪಟ್ಟಿರುವರು. ಗೋಣಿಕೊಪ್ಪಲಿನಲ್ಲಾಗಲೀ, ಮಡಿಕೇರಿಯಲ್ಲಾಗಲೀ ಸತ್ಯಾಗ್ರಹ ಚಳವಳಕ್ಕೆ ಸಂಬಂಧಪಟ್ಟ ಯಾವ ಗಲಾಟೆಯೂ ಆಗಲಿಲ್ಲವೆಂಬುದಾಗಿ ತಿಳಿದು ಬರುತ್ತದೆ.

ಹಿಂದೂದೇಶ.

ಮದ್ರಾಸ್ ಗವರ್ನರವರ ಮಗಳ ಮದುವೆಯು ತಾ. 24ರಲ್ಲಿ ಮದ್ರಾಸಿನಲ್ಲಿ ಅತಿ ವಿಜೃಂಭಣೆಯಿಂದ ನಡೆಯಿತು.

ಒನಾರಸದ ಒಂದು ಪೋಲೀಸ್ ಸ್ಟೇಷನ್ ಮೇಲೆ ಸ್ವರಾಜ್ಯ ಬಾವುಟವನ್ನು ಹಾರಿಸಲು ಪ್ರಯತ್ನಿಸಿದ ಆರು ಸ್ವಯಂ ಸೇವಕರು ದಸ್ತಗಿರಿಯಾಗಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪೋಲೀಸರ ಅತ್ಯಾಚಾರದ ಕುರಿತು ಅಲ್ಲಿನ ಕೌನ್ಸಿಲ್ ಪ್ರತಿನಿಧಿಯಾದ ಸುಬ್ರಹ್ಮಣ್ಯ ಭಟ್ಟರು ಸರಕಾರ ಮೆಂಬರರ ಕೂಡೆ ಸಂಭಾಷಣೆ ನಡೆಸಿದರು.

ಈ ವಾರ ಬೊಂಬಾಯಿಯ ವಿಶ್ವವಿದ್ಯಾಲಯದ ಗೋಪುರದ ಮೇಲೆ ಸ್ವರಾಜ್ಯ ಬಾವುಟವನ್ನು ಕಾಂಗ್ರೆಸಿನವರು ಯಾರೋ ಹಾರಿಸಿದ್ದರು. ಈ ಬಗ್ಗೆ ಒಬ್ಬ ಯುವಕನು ದಸ್ತಗಿರಿಯಾಗಿದ್ದಾನೆ.

ಕಾಂಗ್ರೆಸ್ ಅಧ್ಯಕ್ಷರಾದ ಸರ್ದಾರ ಶಾರ್ದೂಲಸಿಂಘರವರನ್ನು ಲಾಹೋರಿನಲ್ಲಿ ಕೈದುಮಾಡಿರುವರು. ಸಂಘದವರು ಮೆ. ಅಬ್ದುಲ್ ಕಲಂ ಆಜಾದರನ್ನು ಕಾಂಗ್ರೆಸ್ ಅಧ್ಯಕ್ಷರನ್ನಾಗಿ ನೇಮಿಸಿದ್ದಾರೆ.

ಮದ್ರಾಸ್ ಕೌನ್ಸಿಲಿನಲ್ಲಿ ಮದ್ರಾಸ್ ಅಧಿಪತ್ಯದ ಆದಾಯ ವೆಚ್ಚದ ಅಂದಾಜು ಪಟ್ಟಿಯು ಚರ್ಚೆಗೆ ಇಡಲಾಗಿದೆ. 1594 ಕೋಟಿ ರೂಪಾಯಿಯು ಉತ್ಪತ್ತಿಯೂ ಅಷ್ಟೇ ಖರ್ಚ ಅಂದಾಜು ಮಾಡಲಾಗಿದೆ.

ಪ್ರೊ. ಕುಮಾರಪ್ಪನವರ ಸಹೋದರರಾದ ಡಾ. ಕುಮಾರಪ್ಪನವರು ಎಮರ್ಜೆನ್ಸಿ ಆರ್ಡಿನೆನ್ಸು ಪ್ರಕಾರ ದಸ್ತಗಿರಿ ಮಾಡಲ್ಪಟ್ಟರು.

ಎಮರ್ಜನ್ಸಿ ಆರ್ಡಿನೆನ್ಸು ಪ್ರಕಾರ ಕೈದಿನಲ್ಲಿದ್ದ ಮೆ. ನಾರಿಮನ್ನರೂ, ಮುನ್ಶೀಯವರೂ, ಶ್ರೀ. ಪೆರಿನ್ ಕ್ಯಾಪ್ಟನ್ ರವರೂ ಬೊಂಬಾಯಿಯಿಂದ ಬಿಜಾಪುರದ ಜೈಲಿಗೊಯ್ಯಲ್ಪಟ್ಟರು.

ಕರಾಚಿಯಲ್ಲಿ ಗುಪ್ತಿಗೆ ಹರಾಜು ನಡೆದು, ಕಳೆದ ವರ್ಷಕ್ಕಿಂತ ಹೆಚ್ಚಿಗೆ ಬೆಲೆಬಾಳಿಗೆ ವಿಲೆ ಆದುವು. ಹರಾಜುಗಳು ನಾಕು ಪಿಕೆಟಿಂಗ್ ನಡೆಸಿದ ೨೨ ಮಂದಿ ಸ್ವಯಂಸೇವಕರನ್ನು ಕೈದುಮಾಡಿರುತ್ತಾರೆ.

ಸಂಯುಕ್ತ ಪ್ರಾಂತ್ಯದಲ್ಲಿ ಶಾಸನಭಂಗ ಚಳವಳದ ಸಂಬಂಧವಾಗಿ ಜೇಲು ಕಾರಾಗೃಹವನ್ನು ಸೇರಿದವರ ಸಂಖ್ಯೆ ಆಗಿರುವ ಇದರಲ್ಲಿ ಜನವರಿ ತಿಂಗಳೊಂದರಲ್ಲಿ ೩೫೦೦; ಉಳಿದುವೆಲ್ಲ ಫೆಬ್ರವರಿ ತಿಂಗಳ ಪರಾಕ್ರಮ.

ಗುಜರಾತ್ ಕಾಂಗ್ರೆಸ್ ಉಪಭಕ್ತನೇ ದಕ್ಷರೆಂಬ ಮೆ. ತ್ರಿಕಮಲಾಲ್ ಹರಿಹರನು 'ಬಿಹಿಷ್ಕಾರದ ದಿವಸದ ಮೆರವಣಿಗೆ'ಯಲ್ಲಿ ಭಾಗಿಗಳಾದರೆಂದು ಒಂದು ವರ್ಷ ಕಠಿಣ ಸಜೆ ಮತ್ತು ೧೫೦ ರೂ. ಜುಲ್ಮಾನೆ ತಪ್ಪಿದರೆ ಮತ್ತೆ ಮೂರು ತಿಂಗಳು ಶಿಕ್ಷೆ.

ಪಲ್ಲಿ ಹಾಜಾರಿನ ಜೈಲುಗಳು ತುಂಬಿವೆ. ಲಕ್ನೋದ ಬಳಿ ಸ್ಥಳವಿಲ್ಲದ ಹುಂಗಾಮಿಯಾಗಿ ಬಂದೆಂದು ಕಟ್ಟಡಗಳನ್ನು ಜೈಲಾಗಿ ಉಪಯೋಗಿಸುತ್ತಿರುವರು. ಅಲ್ಲಿ ಹಾಜಾದಿಸಿರುವ ಲಕ್ನೋನಗರಕ್ಕೆ ೩೦೦ ರಾಜಕೀಯ ಕೈದಿಗಳನ್ನು ವರ್ಗಾಯಿಸಿರುವರು.

ಬನ್ನೂಲು ಪಿನರಾಸನ ವರ್ಷವನ್ನು ಕರಾಚಿಯಿಂದ ಬೊಂಬಾಯಿಗೂ, ಅಲ್ಲಿಂದ ಮದರಾಸಿಗೂ ತರುವ ಆಲೋಚನೆ ಸರಕಾರಕ್ಕಿರಲಿ. ಮ್ಯಾಂಚೆಸ್ಟರಿನ ಕನಕಸ್ತ್ರಾ ಒಮ್ಮೆ, ಪ್ಲೇಗಿನಿಂದ ಇಂತಾ ಮಗಳ ಬನ್ನೂಲು ಒಬ್ಬರಾದೆ ಮನಸ್ಸು ಸೃಷ್ಟಿ ಮಾಡುವುದಂತೆ.

ಹಾಸನ ಜಿಲ್ಲೆಯ ಘಟಪ್ರಭಾ ಎಂಬಲ್ಲಿ ಮುದಾಂಬ ದೇವರಾಜ ಎಂಬವನ ಮನೆಗೆ ಪೋಲೀಸ್ ಪೋಸ್ಟಾಫೀಸಿನಲ್ಲಿ ಗುಮಾಸ್ತರು ಹೋಗಿ ಬಾಗಿಲು ಕಟ್ಟಿ, ಬಾಗಿಲು ಕಿತ್ತು ಮತ್ತೇ ಒಳಗೆ ಪ್ರವೇಶಿಸಿ ಟ್ರಂಕಿನಲ್ಲಿದ್ದ ೫೦೦೦ ರೂಪಾಯಿಗಳನ್ನು ಅಪಹರಿಸಿದರು.

ದುಂಡು ಮೇಜಿನ ಸಂಬಂಧವಾದ ಆಲೋಚನಾ ಕಮಿಟಿಯವರ ಸಭೆಯು ವೈಸರಾಯರ ಅಧ್ಯಕ್ಷತೆಯಲ್ಲಿ ಡಿಲ್ಲಿಯಲ್ಲಿ ನಡೆಯುತ್ತಲಿದೆ. ಕಡಿಮೆ ಸಂಖ್ಯೆಯ ಜನರ ಹಕ್ಕುಗಳ ಕಾಪಾಡುವ ವಿಷಯದಲ್ಲಿ ಬ್ರಿಟಿಷ್ ಸರ್ಕಾರದವರ ಧ್ಯೇಯ ಮೇನೆಂಬುದನ್ನು ಕೂಡಲೆ ತಿಳಿಸಬೇಕೆಂತ ಕಮಿಟಿಯು ಕೇಳಿಕೊಂಡರು.

ಸರ್ದಾರ್ ಶಾರ್ದೂಲಸಿಂಗರನ್ನು ದಸ್ತಗಿರಿ ಮಾಡಿದಾಗ ಮೌಲಾನ ಅಬ್ದುಲ್ ಕಲಾಂ ಆಜಾದರನ್ನು ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಆರಿಸಿದ್ದರಷ್ಟೆ. ಸದರಿ ಅಬ್ದುಲ್ ಕಲಂ ಆಜಾದರಿಗೆ ಒಂದು ತಿಂಗಳ ವರೆಗೆ ಸಹಾ ಇತರ ಕಾಂಗ್ರೆಸಿನ ಕೆಲಸವನ್ನು ಮಾಡಬಾರದೆಂತ ಮೆಜಿಸ್ಟ್ರೇಟರ ಹುಕುಂ ಆಗಿದೆ.

ಮೌ. ಶೌಕತ್ ಅಲಿಯವರು ಸೆರೆಹಿದ್ದಿನ ಪ್ರಾಂತ್ಯಕ್ಕೆ ಪ್ರಯಾಣ ಬೆಳೆಸಿರುವರು. ನಾಮದಾರ ವಿ. ಶ್ರೀನಿವಾಸ ಶಾಸ್ತ್ರಿ ಮತ್ತು ಶ್ರೀಮತಿ ಸರೋಜಿನಿ ದೇವಿಯವರು. ಸಹ ದಕ್ಷಿಣ ಆಫ್ರಿಕಾದಿಂದ ತಾ. 27ನೇ ಶನಿವಾರ ಬೊಂಬಾಯಿಗೆ ತಲುಪುತ್ತಾರೆ. ಅವರಿಗೆ ಯುಕ್ತವಾದ ಸ್ವಾಗತವನ್ನೀಯುವ ಏರ್ಪಾಡು ನಡೆದಿದೆ.

ಮುಜಫ್ಫರಪುರ ಜೈಲಿನಿಂದ, ಹಿಂಸಾತ್ಮಕ ಕೃತ್ಯಗಳಿಗಾಗಿ ಶಿಕ್ಷಿಸಲ್ಪಟ್ಟ ದಿನೇಶ ಮಜುಮದಾರರೆಂಬವರು ಬೇರೆ ಕೆಲವು ಕೈದಿಗಳೊಂದಿಗೆ, ಪಹರೆಯವರನ್ನು ಕೆಡಹಿ, ಪರಾರಿಯಾಗಿರುವರು. ಆ ಪಹರೆಯವನನ್ನು ಕೊಲೆಯಿಂದ ಪ್ರಕೃತಕ್ಕೆ 'ಸಸ್ಪೆಂಡ' ಮಾಡಲಾಗಿದೆ. ತನಿಖೆಯಾಗುತ್ತಿದೆ. ಆತ್ತ, ತಪ್ಪಿಸಿಕೊಂಡ ಕೈದಿಗಳ ಪತ್ತೆ ನಡೆಯುತ್ತಿದೆ.

ರತ್ನಗಿರಿಯ ಇಬ್ರಾಹಿಮ್ ಎಂಬ ಮಹಮ್ಮದೀಯನು ಸ್ವೇಚ್ಛೆಯಿಂದ ಹಿಂದೂಮತಾವಲಂಬಿಯಾದನು. ಹಿಂದೂ ಮಹಾಸಭೆಯವರ ನೇತೃತ್ವದಲ್ಲೀ ಆ ಮತಾಂತರಗೊಳಿಸುವ ಸಮಾರಂಭವು ದೇವಾಲಯದಲ್ಲಿ ನಡೆಯಿತು. ಇಬ್ರಾಹಿಮನಿಗೆ ಈಶ್ವರದಾಸನೆಂದು ನಾಮಕರಣವಾದ ಮೇರೆ, ಅವನ ಹಸ್ತದಿಂದಲೇ ದೇವಪೂಜೆ ನಡೆದು, ಕುಳಿತವರೆಲ್ಲರಿಗೆ ತೀರ್ಥವನ್ನು ಹಂಚಲಾಯಿತು.

ಬೊಂಬಾಯಿಯ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಭಾಷಣ ಮಾಡುತ್ತ ಗವರ್ನರರಾದ ಸರ್ ಫ್ರೆಡರಿಕ್ ಸೈಕ್ಸರವರು, ಕಾಂಗ್ರೆಸ್ ಚಳವಳವು ನಿಲ್ಲುವ ತನಕ ಸರಕಾರವು ಗಡಿಯನ್ನು ಕಳಗಿಳಿಸುವುದಿಲ್ಲವೆಂದು ತಿಳಿಸಿ ಬಿಟ್ಟರು. ಗಾಂಧಿಜಿಯವರನ್ನು ಬಿಡುಗಡೆ ಮಾಡಬೇಕೆಂದೂ, ಆರ್ಡಿನೆನ್ಸುಗಳನ್ನು ಹಿಂತೆಗೆಯಬೇಕೆಂದೂ ಡಾ. ವೈಕುಂಠರಾಯರ ಎಂಬ ಸದಸ್ಯರು ತಂದ ಠರಾವನ್ನು, ಅಂಗೀಕರಿಸಲಿಲ್ಲ.

ಸಕ್ಕರೆಯ ವ್ಯಾಪಾರವನ್ನು ಸುಧಾರಿಸಲು ಬಯಸುವ ಉತ್ಪತ್ತಿ ಪ್ರದೇಶಗಳು ಇಂತಿಷ್ಟೇ ಸಕ್ಕರೆಯನ್ನು ವರ್ಷಂಪ್ರತಿ ಮಾರಾಟಕ್ಕೆ ಬಿಡಬೇಕೆಂದಾಯಿತು. ಜಾವಾದವರು ೧೫೫೦ ಸಾವಿರ ಟನ್, ಕ್ಯೂಬಾ ೨೩೫೦ ಸಾವಿರ ಟನ್; ಜರ್ಮನಿ ೩೫೦ ಸಾವಿರ ಟನ್; ಪೋಲೆಂಡ್ ೩೦೮ ಸಾವಿರ ಟನ್; ಝೆಕೋಸ್ಲೊವೇಕಿಯ ೫೭೭ ಸಾವಿರ ಟನ್; ಹಂಗೇರಿ ೮೯ ಸಾವಿರ ಟನ್; ಬೆಲ್ಜಿಯಮ್ ೩೦ ಸಾವಿರ ಟನ್ ಮತ್ತು ಪೇರು ೩೭೧ ಸಾವಿರ ಟನ್.

ತಲಚೇರಿ ಮೇಜಿಸ್ಟ್ರೇಟರು ಯಲ್. ಯಸ್. ಪ್ರಭುರವರ ಪತ್ನಿಯ ಕೈಯಿಂದ ಬುಲುಮಾನ ವಸೂಲಿಗಾಗಿ ತಾಳಿಯನ್ನು ಸೆಳೆದ ಮೇಜಿಸ್ಟ್ರೇಟರು ಪಶ್ಚಾತ್ತಾಪಪಟ್ಟು ಮನ್ನಣೆ ಕೇಳಿಕೊಂಡಿರುವರೆಂತ ಸರಕಾರವು ತಿಳಿಸಿದೆ. ಸ್ತ್ರೀಯರು ಬಾಹ ಸೂಚನೆಗಳಿಗೆ ಬಳೆದ ಅವರ ಗೌರವಕ್ಕೆ ಪೋಲೀಸರಿಂದ ಹಾನಿಬಂದಿರಕೆಂತ ಮೇಜಿಸ್ಟ್ರೇಟರು ಹೇಳಲಿಲ್ಲವೆಂತಲೂ ಆ ಸಾಯಕತ್ವವಾದರೆ ಹೆಂಗಸರ ಗೌರವಕ್ಕೆ ಹಾನಿಬಂದಿರಕೆಂತ ಮಾತ ಹೇಳಿದ್ದೆಂತಲೂ ಸಹ ವಿವರಿಸಿದ್ದಾರೆ.

ಇಲ್ಲಿ ಎಸೆಂಬ್ಲಿಯಲ್ಲಿ ಸರ್ ಹರಿಸಿಂಗ್ ಗೌರರ ಹಿಂದೂ ಬಾಲ ಸುಧಾರಣೆಯ ಶಾಸನದ ಮಸೂದೆಯು ಕಳೆದ ವಾರ ಚರ್ಚೆಯಾಗುತ್ತಿರುವಾಗ ಕೋರಂ ಇಲ್ಲದೆ ಸಭೆಯು ಬರಕಾಸ್ತಾಯಿತು. ಮೆಂಬರುಗಳು ಎಸೆಂಬ್ಲಿಗೆ ಹೋಗದಂತೆ ಸರ್ಕಾರ ಪರ ಮೆಂಬರುಗಳು ಪಡೆದರೆಂತ ಸರ್ ಗೌರರು ಅಧ್ಯಕ್ಷರಿಗೆ ಫಿರ್ಯಾದು ಮಾಡಿದನಂತರ ಅಧ್ಯಕ್ಷರು ವಿಚಾರ ನಡೆಸಿ ವಾಗ್ದಂಡನೆ ಮಾಡಿದರು. ಇನ್ನು ಮೇಲೆ ಹಾಗೆ ಮಾಡುವುದಿಲ್ಲವೆಂತ ಎಲ್ಲರೂ ವಾಗ್ದಾನ ಮಾಡಿದರು.

ಬೊಂಬಾಯಿಯ ಬ್ರಿಟಿಷ್ ಸೈನ್ಯವನ್ನು ಜೈನರ ಶಕ್ಯಾಂಗ್ಗೆ ಹೆಗೆದ ಕೊಂಡು ಹೋಗಬೇಕಾಗಿದ್ದ ಹಡಗಿನ ನಾವಿಕರು, ಕೆಲಸ ಮಾಡುವುದಿಲ್ಲವೆಂತ ಹಡಗು ಹೊರಡುವಾಗ ಇನ್ಕಾರ ಮಾಡಿದರು. ಹಡಗಿನ ಅರಿಗೆ ಮನಸು ಸರಿಯಾಗಿ ತಮ್ಮನ್ನು ಸಕ್ಕರಸದ್ದರಿಂದ ಕೆಲಸ ಮಾಡಲು ಇನ್ಕಾರ ಮಾಡಿದ್ದಾಗಿದೆ. ಇವರಿಗೆಲ್ಲಾ ಮೇಜಿಸ್ಟ್ರೇಟರ ಮುಂದೆ ವಿಚಾರ ನಡೆದು ಒಂದೊಂದು ವಾರ ಸಜೆ ವಿಧಿಸಲಾಯಿತು. ಬೇರೆ ನಾವಿಕರ ಸಹಾಯದಿಂದ ಹಡಗನ್ನು ಹೊರಡಲು ಹೋಯಿತು.

ಮೌಲಾನಾ ಶೌಕತಾಲಿಯವರು ಡಾ. ಅನ್ಸಾರಿಯವರನ್ನು ಕಾಣಬೇಕೆಂದಾಗ, ತನ್ನ ಮತ್ತು ತಮ್ಮವರ ರಾಜಕೀಯ ಅಭಿಪ್ರಾಯಗಳು ಭಿನ್ನ ಭಿನ್ನವಾಗಿರುವ ಕಾರಣ ತಾನು ಅವರಿಗೆ ಭೇಟಿಕೊಡೆನೆಂದು ಅಲಿಯವರಿಗೆ ತಿಳಿಸಿಬಿಟ್ಟರು. ಇಂಥಾ ಸಂಭಾಷಣೆಯಿಂದ ಹಾನಿಯಲ್ಲದೆ ಪ್ರಯೋಜನವಿಲ್ಲವೆಂದೂ, ಶೌಕತಾಲಿಯವರು ತಮ್ಮ ಸಂಭಾಷಣೆಯ ವಿಷಯವಾಗಿ ಏನಾದರೂ ಪ್ರಕಟಿಸಿದರೆ, ಅದನ್ನು ಅಲ್ಲಗಳೆಯಬೇಕಾದಲ್ಲಿ ಜೈಲಿನಲ್ಲಿರುವ ತಾನು ಅಸಮರ್ಥನಾಗಿರುವೆನೆಂದೂ, ಹೇಳಲು ಹಿಂಜರಿಯಲಿಲ್ಲ.

ವಿದೇಶ.

ಚೈನಾ ಜಪಾನರ ಯುದ್ಧ ನಡೆಯುತ್ತಲೇ ಇದೆ.

ಸಿಲೋನ್ ಕೌನ್ಸಿಲಿನಲ್ಲಿ ಆ ದ್ವೀಪದ ಗವರ್ನರಿಂದ ದೇಶಕ್ಕೆ ಹಾನಿ ಇರುವುದರಿಂದ ಅವರನ್ನು ಕೂಡಲೇ ಕೆಲಸದಿಂದ ವಜಾಮಾಡಬೇಕಾಗಿ ಠರಾವು ಪಾಸಾಯಿತು.

ದಕ್ಷಿಣ ಆಫ್ರಿಕದಲ್ಲಿ ಹಿಂದೀ ಸರ್ಕಾರದ ಪ್ರತಿನಿಧಿಯಾಗಿ ಸರ್ ಕೆ. ವಿ. ರೆಡ್ಡಿಯವರು ಇದ್ದವರ ಅಧಿಕಾರದ ಅವಧಿಯು ತೀರಿದ್ದರಿಂದ ಅವರ ಬದಲಿಗೆ ಜೆ. ಯಸ್. ಬಾಜ ಪೈ ಐ. ಸಿ. ಎಸ್. ಇವರು ನೇಮಿಸಲ್ಪಟ್ಟಿದ್ದಾರೆ.

ಬ್ರಿಟನಿಗೆ ಹಿಂದೂಸ್ಥಾನದಿಂದ 'ಬೆರೆಂಗೇರಿಯಾ' ಎಂಬ ಹಡಗದಲ್ಲಿ ಹತ್ತುವರೆ ಕೋಟಿ ರೂ. ಕ್ರಯದ ಚಿನ್ನವನ್ನಾಗಿಸಿಕೊಂಡು ಹೋದದ್ದನ್ನು ಶೆರ್ಬರೋ ಎಂಬಲ್ಲಿ ಹಡಗಿಂದ ಇಳಿಸುವಾಗ ಹದಿನೈದು ಲಕ್ಷ ರೂ. ಕ್ರಯದ ... ತಾ. 23ರಲ್ಲಿ ಸಮುದ್ರದಲ್ಲಿ ಮುಳುಗಿ ಹೋಯಿತು.

ಹಿಂದೂಸ್ಥಾನದಿಂದ ಚಿನ್ನ ಹೊರಗೆ ರಫ್ತಾಗುತ್ತಿರುವುದರಿಂದ ಬ್ರಿಟಿಷ್ ಸರ್ಕಾರವು ಫ್ರಾನ್ಸ್ ಮತ್ತು ಅಮೇರಿಕಾ ದೇಶಗಳಿಗೆ ಕೊಡಬೇಕಾದ ಸಾಲ ತೀರಿಸಲು ಅನುಕೂಲವಾಯಿತೆಂತಲೂ, ಅದೇ ಕಾರಣದಿಂದಲೇ ಇಂಗ್ಲೆಂಡಿನ ನಾಣ್ಯಸ್ಥಿತಿ ಭದ್ರವಾದ್ದರಿಂದ ಇಂಗ್ಲೆಂಡಿನ ಬ್ಯಾಂಕ್ ರೇಟು ಇಳಿಯಿತೆಂತಲೂ ಲಂಡನ್ನಿನ 'ಟೈಮ್ಸ್' ಪತ್ರಿಕೆಯು ಬರೆಯುತ್ತದೆ.

ಮಾರಾಟಕ್ಕಿದೆ.

ಸುಂಟಿಕೊಪ್ಪ ನಾಡು ಹರದೂರು ಗ್ರಾಮದ "... ಎಸ್ಟೇಟ್" ಎಂಬ 70 ಎಕ್ರೆ ಕಾಫಿತೋಟ ಭೂಮಿ, ಒಂದು ಸಣ್ಣ ಬಂಗ್ಲೆ, ಕೂಲಿ ಲೈನ್ ಕೈ, ಕಾಫಿ ತೋಟಕ್ಕೆ ಯೋಗ್ಯವಾದ ಕಾಡು ಟಕ್ಕೆ ಇದೆ. ಬಂಗ್ಲೆ ವರೆಗೆ ನ್ಯಾಯವಾದ ... ಯಸ್ ದಾರರು ಈ ಕೆಳಗಿನ ವಿಳಾಸಕ್ಕೆ ಬರೆಯಬೇಕಾಗಲೀ, ಮೊಬ್ಬ ಮಾತಾಡಿಯಾಗಲಿ ಬಗ್ಗೆ ಮತ್ತು ಇತರ ವಿಷಯಗಳನ್ನು ...

ರೂ. 75.

C/o. I. C. ...

4—3

ಮೀರಾಬೆನ್‌ರವರಿಗೆ ಶಿಕ್ಷೆ.

ಮಹಾತ್ಮಗಾಂಧಿಯವರ ಸುಪ್ರಸಿದ್ಧ ಶಿಷ್ಯಳಾದ ಮೀರಾಬೆನ್ ರವರಿಗೆ, ಬೊಂಬಾಯಿ ಪೋಲೀಸ್ ಕಮಿಷನರವರು, ಬೊಂಬಾಯಿನಲ್ಲಿ ಆಕೆ ಇದ್ದರೆ ಪ್ರಜಾಸಮೂಹಕ್ಕೆ ಭಂಗವುಂಟಾಗುವುದೆಂದೂ, ಆದ ಕಾರಣ ೧೭ ನೇ ತಾರೀಕು ಬುಧವಾರ ಮಧ್ಯರಾತ್ರಿಯೊಳಗಾಗಿ ಬೊಂಬಾಯಿ ಎಲ್ಲೆಕಟ್ಟಿನಿಂದಾಚೆಗೆ ಹೊರಟು ಹೋಗಬೇಕೆಂದೂ, ಪುನಃ ತಮ್ಮ ಅಪ್ಪಣೆ ಇಲ್ಲದೆ ಬೊಂಬಾಯಿಗೆ ಪ್ರವೇಶಿಸಕೂಡದೆಂದೂ ಅಪ್ಪಣೆಮಾಡಿ ಆ ಆಜ್ಞೆಗಳನ್ನೊಳಗೊಂಡ ನೋಟೀಸನ್ನು ಜಾರಿಮಾಡಿದ್ದರು. ಆ ನೋಟೀಸು ಜಾರಿಯಾದ ತಾರೀಕಿಗೆ ಸುಟ್ಟಿ ಪೋಲೀಸ್ ಇನಸ್ಪೆಕ್ಟರು ಜಾರಿ ಮಾಡಲು ಹೋದಾಗ ಆಕೆಯು ಆ ದಿನ [illegible]ಗಳಲ್ಲ. ಆದಕಾರಣ ಮರುದಿವಸ ತಾರೀಕು ಬೆಳಿಗ್ಗೆ ಜಾರಿಯಾಯಿತು.

ಅನಂತರ ಮೀರಾಬೆನ್‌ರವರು ಪ್ರೊ. ವಾಸ್ವಾನಿ ದೇಸಾಯಿ ಮತ್ತು ಇತರ ಗಾಂಧಿ ಆಶ್ರಮವಾಸಿಗಳು ಕೆಲವರೊಡನೆ ಗಾಂಧಿಯವರ ಭೇಟಿಮಾಡಲು ಯರವಾಡಕ್ಕೆ ಆ ರಾತ್ರಿ (೧೬ ನೇ ತಾ||) ಯೇ ಹೊರಟು ೧೭ ನೇ ತಾರೀಕು ಮಹಾತ್ಮಜಿಯವರನ್ನು ಸಂದರ್ಶಿಸಿ ಆ ರಾತ್ರಿ ಬೊಂಬಾಯಿಗೆ ವಾಪಸು ಬಂದಿದ್ದರು. ಆ ರಾತ್ರಿ ಹನ್ನೆರಡು ಗಂಟೆಯೊಳಗಾಗಿಯೇ ಬೊಂಬಾಯಿಯನ್ನು ಬಿಟ್ಟು ಹೋಗಬೇಕೆಂದು ಪೋಲೀಸಿನವರ ಆಜ್ಞೆಯಾಗಿದ್ದರೂ, ಆದರೆ ಆಕೆಯು ಹಾಗೆ ಮಾಡದೆ ಬೊಂಬಾಯಿನಲ್ಲೇ ಇದ್ದುಬಿಟ್ಟಳು.

ಈ ತಪ್ಪಿಗೋಸ್ಕರ ಮರುದಿವಸ ತಾರೀಕು ಬೆಳಿಗ್ಗೆ ೧೦ ಘಂಟೆಗೆ ನೀಪನ್ ರೋಡಿನಲ್ಲಿರುವ ಮನೆಯಲ್ಲಿದ್ದಾಗ ಆಕೆಯು ದಸ್ತಗಿರಿಯಾಯಿತು.

"ನಾನು ಎರಡು ಗಂಟೆಯಿಂದ ನಿಮ್ಮ ಬರುವಿಕೆಯನ್ನು ಎದುರುನೋಡುತ್ತಿದ್ದೇನೆ" ಎಂದು ಆಕೆ ಪೋಲೀಸ್ ಇನಸ್ಪೆಕ್ಟರು ಫಾರೆಸ್ಟರೊಂದಿಗೆ ಹೇಳಿದಳು.

"ನಿಮಗೆ ಅಷ್ಟು ಬೇಗ ತಿಳಿಯದಿದ್ದರೆ ಕೆಲಸವು ನನಗೆ ಇಷ್ಟವಿರಲಿಲ್ಲ" ಎಂದ ಆತ.

ಮೀರಾಬೆನ್‌ರವರು ಒಡನೆಯೇ ಎರಡು ಕಂಬಳಿಗಳನ್ನೂ, ಒಂದು ರಾಟೆಯನ್ನೂ, ಒಂದು ಎಕ್ಕದ ದಿಂಬನ್ನೂ, ಕೆಲವು ಹಿಂದೀ ಪುಸ್ತಕಗಳನ್ನೂ ತೆಗೆದುಕೊಂಡು ಆತನನ್ನು ಹಿಂಬಾಲಿಸಿದಳು.

ಕೇಸು ವಿಚಾರಣೆಗೆ ಎರಡನೆ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರಾದ ಮೇಘಾಣಿರವರ ಕೋರ್ಟಿಗೆ ಬಂದಿತು. ಮಧ್ಯಾಹ್ನ ೨ ಗಂಟೆಗೆ ವಿಚಾರಣೆಯು ಪ್ರಾರಂಭವಾಗುವ ವೇಳೆಗೆ ನ್ಯಾಯಸ್ಥಾನಾಂಗಣವೆಲ್ಲಾ ಕಿಕ್ಕಿರಿಯುತ್ತಿತ್ತು.

೧೯೩೧ನೇ ಇಸವಿ ೩ನೇ ಆರ್ಡಿನೆನ್ಸ್ ೨೧ನೇ ಸೆಕ್ಷನ್ ಪ್ರಕಾರ ಅಪರಾಧಿಯು ತಪ್ಪಿತಸ್ಥಳೆಂದು ಪ್ರಾಸಿಕ್ಯೂಷನ್ ಪರವಾದ ಮಿ. ಶಂಕರ್‌ರವರು ಹೇಳಿದರು. ೧೭ ನೇ ತಾರೀಕು ಮಧ್ಯರಾತ್ರಿಯೊಳಗಾಗಿ ಬೊಂಬಾಯಿನಗರವನ್ನು ಬಿಟ್ಟು ಹೋಗಬೇಕೆಂದು ಆಜ್ಞೆಯಾಗಿದ್ದರೂ ಹೋಗದೆ ಆಜ್ಞೋಲ್ಲಂಘನ ಮಾಡಿದ್ದೆ ಅಪರಾಧ.

ಅನಂತರ ಪ್ರಾಸಿಕ್ಯೂಷನ್ ಸಾಕ್ಷಿಯಾದ ಪೋಲೀಸ್ ಇನಸ್ಪೆಕ್ಟರ್ ಫಾರೆಸ್ಟರವರ ಕೈಫಿಯತ್ತಾಯಿತು.

"ಪ್ರಾಸಿಕ್ಯೂಷನ್ ಸಾಕ್ಷಿಯನ್ನೇನಾದರೂ ಪ್ರಶ್ನಿಸುವಿರಾ" ಎಂದು ಮೇಘಾಣಿರವರು ಆಕೆಯನ್ನು ಕೇಳಲಾಗಿ ಆಕೆಯು 'ಏನೂ ಇಲ್ಲ'ವೆಂದದ್ದಲ್ಲದೆ, "ಈ ಕೇಸಿನಲ್ಲಿ ನಾನು ಯಾವ ಹೇಳಿಕೆಯನ್ನೂ ಕೊಡುವುದಿಲ್ಲ. ಅಥವಾ ವಿದ್ಯಮಾನಗಳಲ್ಲಿ ಭಾಗಿಯಾಗುವುದೂ ಇಲ್ಲ"ವೆಂದಳು.

ಮರುದಿವಸದ ತಾರೀಕಿನ ದಿನ ಜಾರಿಯಾದ ನೋಟೀಸಿಗೆ ಸಹಿಮಾಡಿದ್ದುಂಟೆ ಮತ್ತು ನೋಟೀಸು ಜಾರಿಯಾಯಿತೆಂದು ಒಪ್ಪುವಿರಾ ಎಂದು ಕೇಳಿದ್ದಕ್ಕೆ ಆಕೆಯು ಹೌದೆಂದಳು.

ಮ್ಯಾಜಿಸ್ಟ್ರೇಟರು ಮೇಲೆ ಹೇಳಿದ ಸೆಕ್ಷನ್ ಮೇರೆ ತಪ್ಪು ಹೊರಿಸಿ "ನೀವು ತಪ್ಪು ಮಾಡಿದ್ದುಂಟೆ?" ಎಂದು ಕೇಳಲು "ನಾನು ವಿಚಾರಣೆಯ ವಿದ್ಯಮಾನಗಳಲ್ಲಿ ಭಾಗಿಯಾಗುವುದಿಲ್ಲ" ವೆಂದು ಉತ್ತರಕೊಟ್ಟಳು.

ಅನಂತರ ಮ್ಯಾಜಿಸ್ಟ್ರೇಟರು, 'ಕಮಿಷನರ ಆಜ್ಞೆಯ ಮೇರೆ ನೀವು ಬೊಂಬಾಯಿ ಬಿಟ್ಟು ಹೋಗಲಿಲ್ಲ. ನಿಮ್ಮ ತಪ್ಪಲ್ಲವೆ?' ಎನ್ನಲು "ಅಷ್ಟು ಮಾತ್ರ ಹೌದು" ಎಂದಳು.

[illegible] ಶಂಕರ್‌ರವರು ಕೇಸಿನ ಅಪಾದನೆಯನ್ನು ಸಂಕ್ಷೇಪವಾಗಿ ಹೇಳುತ್ತಾ, 'ಆಕೆಯು ಕಮಿಷನರ ಆಜ್ಞೋಲ್ಲಂಘನ ಮಾಡಿದ್ದಾಳೆ. ಕಾಂಗ್ರೆಸ್ಸಿನವರು ಹಿಂದೆ ಈ ಕಾನೂನಿನ ಕೇ[illegible] ಹೊರಿಸಿಕೊಟ್ಟಿದ್ದಾರೆ. ಈ ಸಲವೂ ನ್ಯಾಯವಾದ [illegible] "ಶಿಕ್ಷೆ" ಎಂದರು.

[illegible] ವಿಚಾರವೇನಾದರೂ ಹೇಳಬೇಕೆಂದಿರುವಿರಾ?" [illegible] ಮ್ಯಾಜಿಸ್ಟ್ರೇಟರು ಕೇಳಿದ್ದಕ್ಕೆ ಆಕೆಯು "ಇಲ್ಲ" ವೆಂ[illegible]

[illegible] ಮೂರು ತಿಂಗಳ ಸಾದಾ ಸಜಾ.

[illegible] ರವರು ಶಿಕ್ಷೆಯನ್ನು ಸಮಸ್ಮಿತವಾಗಿ [illegible] ಸುಲಭವಾದ ಶಿಕ್ಷೆ ವಿಧಿಸಿದ್ದಕ್ಕಾಗಿ ಆಶ್ಚ[illegible]

[illegible] ಕೆಯನ್ನು ಆರ್ಥರ್ ರಸ್ತೆಯ ಜೈಲಿಗೆ [illegible]

[illegible] ವನ್ನು ಮ್ಯಾಜಿಸ್ಟ್ರೇಟರು ವಿಚಾರಣೆ [illegible] ಎಂದು ಕೋರಿ ದರಂತೆ. ಆದರೂ ಆಕೆಯು ನಿರಾತಂಕವಾಗಿ ನೆಲದ ಮೇಲೆ ಕುಳಿತುಕೊಂಡು, ವಿಚಾರಣೆಯು ಜರುಗುತ್ತಿದ್ದಷ್ಟು ಹೊತ್ತೂ ನೂಲನ್ನು ತೆಗೆಯುತ್ತಿದ್ದಳಂತೆ.

ಪ್ರಜಾಮತ.

ಸ್ವದೇಶೀ ವ್ರತ.

ಬೊಂಬಾಯಿ ಸ್ವದೇಶಿ ಲೀಗಿನವರು ಈ ಕೆಳಗಿನ ಪತ್ರವನ್ನು ಪ್ರಕಟಿಸಿದ್ದಾರೆ.

ಸ್ವದೇಶೀ ಮಂತ್ರವು ಹಿಂದೂಸ್ಥಾನಕ್ಕೆ ಹೊಸತಲ್ಲ. ಸ್ವರಾಜ್ಯ, ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಸರ್ಕಾರ, ಇವೆಲ್ಲಾ ಅವಶ್ಯಕವಾಗಿಯೇ ಬೇಕಾದವುಗಳು. ಜನರ ಹೋರಾಟದ ಧ್ಯೇಯವೇನೆಂದರೆ ಜನರು ಹೆಚ್ಚು ಐಶ್ವರ್ಯವಂತರಾಗಿ ಸುಖಿಗಳಾಗಬೇಕೆಂಬುವುದೇ ಆಗಿದೆ. ದಾದಾಭಾಯಿ ನವರೋಜಿ, ರಾನಡೆ, ದತ್, ತಿಲಕ್, ಗೋಖಲೆ ಮತ್ತು ಮಹಾತ್ಮಗಾಂಧಿ ಮೊದಲಾದವರು ರಾಜಕೀಯ ಗುರುಗಳಿಗಿಂತ ಆರ್ಥಿಕ ಗುರುಗಳಾಗಿರುವರು. ನಮ್ಮ ದೇಶಕ್ಕೆ ಹೆಚ್ಚು ಹಾನಿಕರವೆಂತ ಅವರು ಹೇಳಿದ್ದಾರೆ. ಪ್ರಪಂಚದಲ್ಲೆಲ್ಲಾ ಹೆಚ್ಚಿನ ಕೈಗಾರಿಕೆಗಳುಳ್ಳ ದೇಶವಾಗಿದ್ದು ಹೋಗಿ ಹಿಂದುಳಿದ ದೇಶವಾಗಿ ಬರೇ ಕಚ್ಚಾ ಸಾಮಾಗ್ರಿಗಳನ್ನು ಬೇರೆ ದೇಶದವರು ಕೈಗಾರಿಕೆಗೆ ಉಪಯೋಗಿಸುವ ಮೂಲವಸ್ತುಗಳನ್ನು ಬೆಳೆಯುವ ದೇಶವಾಗಿಬಿಟ್ಟಿದೆ.

ಹೀಗಾಗಲು ಕಾರಣವೇನೆಂತ ಹೋಗಬೇಕಾಗಿಲ್ಲ. ಯಾಕೆಂದರೆ ಭವಿಷ್ಯತ್ತನ್ನು ಯೋಚಿಸಿದರೆ ಸಾಕಾಗಿದೆ. ಈ ಸ್ಥಿತಿಗೆ ನಮ್ಮನ್ನು ಇಳಿಸಿ, ನಿರಾತಂಕವಾಗಿ ಬಂದರೆ ನಂತರ ಗುಲಾಮರನ್ನಾಗಿ ಎಲ್ಲಾ ದೇಶದ ಸಾಮಾನುಗಳಿಗೂ ಮಾರಾಟವಾಗಲು ಸ್ವತಂತ್ರ ಕೊಡಬೇಕೆಂತ ನಮ್ಮ ಸರ್ಕಾರವು ನಮಗೆ ಬೋಧಿಸುತ್ತಿದೆ. ವ್ಯಾಪಾರದಲ್ಲಿ ಬೇರೆ ದೇಶಗಳಿಗೆ ಅಧೀನವಾಗಿರುವ ನಮ್ಮ ಶೋಚನೀಯ ಸ್ಥಿತಿಯು ಅವರಿಗೆ ವ್ಯಾಪಿಸುವುದಿಲ್ಲವಷ್ಟೆ. ಗ್ರಾಮಾಂತರಗಳಲ್ಲಿದ್ದ ಕೈಗಾರಿಕೆಗಳ ಕಡೆಗೆ ಸರ್ಕಾರವು ಬೇಕೋ ಬೇಡವೋ ಎಂತ ನೋಡುತ್ತಿದ್ದಷ್ಟೆ. ಕೈಗಾರಿಕೆಗಳು ಕ್ಷೀಣವಾದ್ದರಿಂದ ಕೃಷಿ[illegible] ಕ್ಷೀಣವಾಗುತ್ತಲಿದೆ.

ಇದನ್ನು ತಡೆಯಲು ಮನಃಪೂರ್ತಿಯಾದ ಕೆಲಸವೇ ನಡೆದಿಲ್ಲ. [illegible] ಟ್ಯಾರಿಫ್, ಬ್ಯಾಂಕಿನ ಅನಾನುಕೂಲ, ಸ್ವದೇಶೀ ವಸ್ತುಗಳಿಗೆ ತಿರಸ್ಕಾರ ಮುಂತಾದ ಕಾರಣಗಳಿಂದ ಪರದೇಶೀ ಸಾಮಾನುಗಳೇ ಬರುವಂತೆ ಮಾಡಿದೆ. ಸರ್ಕಾರವು ಈ ರೀತಿ ವರ್ತಿಸುವುದರಿಂದ ಜನರ ವ್ಯಾಪಾರ ತಪ್ಪಿಲ್ಲ, ಕೆಟ್ಟಾಗಿದೆ. ಜನ ಸಮುದಾಯವನ್ನು ಈ ಬಗ್ಗೆ ಎಚ್ಚರಿಸುವ ಭಾರ ಮುಂದಾಳುಗಳ ಮೇಲೆ ಬಿತ್ತು. ಸ್ವಾತಂತ್ರ್ಯವಿರುವ ರಾಜ್ಯಗಳ ಜನರು ತಮ್ಮ ದೇಶದ ಸಾಮಾನುಗಳನ್ನೇ ಎಷ್ಟೋ ಅನಾನುಕೂಲ ನಷ್ಟವಾದರೂ ಉಪಯೋಗಿಸುತ್ತಾರೆ. ತಮ್ಮ ಜೀವನದ ರೀತಿಯನ್ನು ಸಾದಾ ರೀತಿಗೆ ಇಳಿಸುತ್ತಾರೆ. ಪರದೇಶದಿಂದ ಬರುವ ಸುಖಭೋಗದ ವಸ್ತುಗಳನ್ನು ಉಪಯೋಗಿಸುವುದಿಲ್ಲ.

ಈ ಜನಾಂಗಗಳಂತೆಯೇ ನಾವು ವರ್ತಿಸಬೇಕಾದ ಕಾಲ ಬಂದಿದೆ. ನಮ್ಮ ದೇಶದ ತಲೆ ಎತ್ತಬೇಕಾದರೆ ನಮ್ಮ ದೇಶದಲ್ಲಿರುವ ಅನುಕೂಲ, ಜನರ ಶಕ್ತಿ ಇವುಗಳ ಮೂಲಕ ನಮ್ಮ ದೇಶಕ್ಕೆ ಬೇಕಾದ ಗೌರವ ಸ್ಥಾನ ಪುನಃ ದೊರೆಯಬೇಕಾದರೆ ಖರ್ಚು ಕಡಿಮೆ ಮಾಡಬೇಕು. ಸ್ವದೇಶೀ ವಸ್ತುಗಳನ್ನೇ ಕಡ್ಡಾಯವಾಗಿ ಉಪಯೋಗಿಸಬೇಕು.

ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು.

ಈ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ತಾ. 20-2-32 ರಲ್ಲಿ ಬ್ಯಾಂಕಿನ ಆಫೀಸಿನಲ್ಲಿ ನಡೆಯಿತು. 6 ಡೈರೆಕ್ಟರುಗಳು ಹಾಜರಿದ್ದರಲ್ಲದೆ ಕೋ-ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರರವರೂ ಸಹ ಹಾಜರಿದ್ದರು.

1. ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು.

2. ಜನವರಿ ತಿಂಗಳ ಜಮಾ ಮತ್ತು ಖರ್ಚಿನ ಲೆಕ್ಕ ಓದಿ ಮಂಜೂರು ಮಾಡಲಾಯಿತು.

3. ಬೆಂಬಳೂರು ಮತ್ತು ಅಂಕನಳ್ಳಿ ಸೊಸೈಟಿಗಳು ಬ್ಯಾಂಕಿನಿಂದ ಸಾಲ ಕೊಡಬೇಕಾಗಿ ಬರೆಕೊಂಡ ಅರ್ಜಿಗಳನ್ನು ಕಾರಣಾಂತರಗಳಿಂದ ತಿರಸ್ಕರಿಸಲಾಯಿತು.

4. ಸೋಮವಾರಪೇಟೆ ಸ್ಟೋರ್ ಸೊಸೈಟಿಯು ಬ್ಯಾಂಕಿಗೆ ವಾಪತಿ ಮಾಡಲು ಬಾಕಿ ಇರುವ ವಾಯಿದೆ ಮೀರಿದ ಸಾಲಕ್ಕೆ ವಾಯಿದೆ ಕೊಡಬೇಕಾಗಿ ಬರೆಕೊಂಡ ಅರ್ಜಿ ಓದಲಾಯಿತು.

ಈ ಸ್ಟೋರ್ ಸೊಸೈಟಿಯು ವಾಯಿದೆ ಮೀರಿದ ಸಾಲವನ್ನು ಮದರಾಸ ಸೆಂಟ್ರಲ್ ಬ್ಯಾಂಕಿಗೆ ವಾಪತಿ ಮಾಡದಿದ್ದಲ್ಲಿ ವಸೂಲಾತಿಗೆ ತಕ್ಕ ಕ್ರಮ ಜರುಗಿಸಲಾಗುವುದೆಂತ ಎಚ್ಚರಿಸಬೇಕಾಗಿ ತೀರ್ಮಾನವಾಯಿತು.

5. ಕುಂದಳ್ಳಿ ಕುಮ್ಮಳ್ಳಿ ಸೊಸೈಟಿಯು ಈ ಮೊದಲು ರಿಜರ್ವ್ ಫಂಡ್ ಡಿಪಾಜಿಟನ್ನು ಶೇರು ರೂಪದಲ್ಲಿ ವಾಪತಿ ಮಾಡಿದ್ದರಿಂದ ಅದನ್ನು ಶೇರು ಲೆಕ್ಕದಿಂದ ವಜಾ ಮಾಡಿ ರಿಜರ್ವ್ ಫಂಡ್ ಡಿಪಾಜಿಟ್ಟಾಗಿ ಜಮೆಗೆ ತೆಗೆದುಕೊಳ್ಳಬೇಕಾಗಿ ಬರೆಕೊಂಡ ಅರ್ಜಿಯನ್ನು ಓದಲಾಯಿತು.

ಶೇರು ಲೆಕ್ಕದಿಂದ ರಿಜರ್ವ್ ಫಂಡು ಡಿಪಾಜಿಟ್ಟಿನ ಲೆಕ್ಕಕ್ಕೆ ವರ್ಗಾಯಿಸುವುದೆಂತ ಮಂಜೂರಾಯಿತು.

6 ಮಾದಾಪುರ ಮತ್ತು ಪೊನ್ನಂಪೇಟೆ ಸಲ್ಲಾರು ಸೊಸೈಟಿಯವರು ಬ್ಯಾಂಕಿಗೆ ವಾಪತಿ ಮಾಡಲು ಬಾಕಿ ಇರುವ ವಾಯಿದೆ ಮೀರಿದ ಸಾಲವನ್ನು ಈಗ ಕೊಂಡಿಕೊಂಡು, ಈ ವರ್ಷ ವಾಪತಿ ಮಾಡಲು ಬಾಕಿ ಇರುವ ಸಾಲಕ್ಕೆ ಕಂತು ಮುಂದರಿಸಬೇಕಾಗಿ ಬರೆಕೊಂಡ ಅರ್ಜಿಗಳನ್ನು ಓದಲಾಯಿತು.

ವಾಯಿದೆ ಮೀರಿದ ಸಾಲ ಮತ್ತು ತಾ. 31—3—32ಕ್ಕೆ ವಾಪತಿ ಮಾಡಲು ಬಾಕಿ ಇರುವ ಸಾಲ ಅಂತು ಜಮ್ಮ [illegible] ವೇರು ಸಾಲಗಳ ಪೈಕಿ ಅರೆವಾಸಿ ಸಾಲ ಮರನೆ ವಾಪತಿ ಮಾಡಿ ಪುನಃ ಅರ್ಜಿ ಬರೆದುಕೊಂಡಲ್ಲಿ ಕಂತು ಮುಂದರಿಸುವ ವಿಷಯ ಆಲೋಚಿಸಲಾಗುವದೆಂತ ತೀರ್ಮಾನವಾಯಿತು.

ಮಡಿಕೇರಿ, ತಾ. 20—2—32.

ಕೆ. ಅಪ್ಪಯ್ಯ, (ಅಧ್ಯಕ್ಷರು.)

Wanted.

Influential and well-to-do Disirict and Taluk Managers for the important centers of the Coorg Districts on a monthly salary of Rs. 100 and 80 respectively.

Apply to the DISTRICT INSPECTOR (on Camp), MADRAS CHIT INSURANCE BANK LTD., Post VEERARAJENDRAPET. S. Coorg. (4—1)

ಸ್ತ್ರೀ ಪುರುಷರ ಪ್ರೀತಿಯ ಮರ್ಮಗಳನ್ನು ಚಿತ್ರ ಪಟಗಳ ಸಹಿತ ಇದ್ದದ್ದನ್ನು ಇದ್ದ ಹಾಗೆ ತಿಳಿಸುವ

ಸ್ತ್ರೀ ದಾಂಪತ್ಯ ರಹಸ್ಯವೆಂಬ ಮರ್ಮ ಶಾಸ್ತ್ರ.

ಈ ಪುಸ್ತಕವು ಫ್ರೆಂಚ್, ಹಿಂದೂಸ್ಥಾನಿ ಭಾಷೆಗಳಲ್ಲಿ ಬಹುಕಾಲದಿಂದ ಗುಪ್ತವಾಗಿತ್ತು. ಈಗ ನಾವು ಎಲ್ಲರಿಗೂ ವಿಸರವಾಗಿ ತಿಳಿಯುವಂತೆ ಸುಲಭ ಶೈಲಿಯ ಕನ್ನಡ ಭಾಷೆಯಲ್ಲಿ ಭಾಷಾಂತರಿಸಿ ಫೋಟೋಗಳ ಸಹಿತ ಅಂದವಾಗಿ ಮುದ್ರಿಸಿರುತ್ತೇವೆ. ಈ ಪುಸ್ತಕದಲ್ಲಿ ಸ್ತ್ರೀಪುರುಷರಿಗೆ ಬೇಕಾದ ಎಲ್ಲ ಮರ್ಮರಹಸ್ಯಗಳು, ಪುರುಷರು ಸ್ತ್ರೀಯರಲ್ಲಿ ನಡೆದುಕೊಳ್ಳಬೇಕಾದ ಬಗೆ, ಸ್ತ್ರೀಪುರುಷರ ಜಾತಿಯ ಲಕ್ಷಣಗಳು, ಸ್ತ್ರೀಯರಿಗೆ ಬೇಕಾದ ಅನೇಕ ಗುಪ್ತ [illegible]ಗಳು, ಸಂಭೋಗದ ಕಾಲ, ಗರ್ಭ ಧರಿಸುವುದು, ಗರ್ಭ ನಿಂತು ಹೋಗುವುದು, ಸಂಭೋಗದಿಂದಾಗುವ ಸಂತೋಷ, ಜನನೇಂದ್ರಿಯಗಳ ವರ್ಣನೆ, ಹಸ್ತ ಪ್ರಯೋಗದ ದಾರುಣ ಹಾನಿ, ಗರ್ಭಿಣಿಗೆ ಬೇಕಾದ ಅನೇಕ ಮರ್ಮನಿಯಮಗಳು, ಶಿಶು ಉತ್ಪತ್ತಿ ವಿಧ, ಗುಪ್ತ ವೈದ್ಯಗಳ ಚಿಕಿತ್ಸೆ, ಶಯನ ಗೃಹದ ರಹಸ್ಯನಿಯಮಗಳು, ಮಾನವ ಶರೀರದ ಮರ್ಮಗಳ ವಿವರ, ನಪುಂಸಕತ್ವಕ್ಕೆ ಚಿಕಿತ್ಸೆ, ಇನ್ನೂ ಸ್ತ್ರೀಪುರುಷರುಗಳಿಗೆ ಬೇಕಾದ ಲೀಲಾರಹಸ್ಯಗಳು ಚಿತ್ರಪಟಗಳ ಸಹಿತ ಪ್ರಕಟಿಸಲಾಗಿದೆ

ಕ್ರಯ: ಪುಸ್ತಕ ೧ಕ್ಕೆ ೧ ರೂಪಾಯಿ

The Legal Trading Co.,
12—9 P. B. 243, Madras

ಎಂಪೈರ್ ಆಫ್ ಇಂಡಿಯಾ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

(ಸ್ಥಾಪನೆಯಾದದ್ದು 1897.)

ಹಿಂದೂಸ್ಥಾನದಲ್ಲಿ ಪ್ರಾಮುಖ್ಯವೂ, ಜನಪ್ರಿಯವೂ ಆಗಿರುವ ಈ ಕಂಪೆನಿಯಲ್ಲಿ ನೀವು ಜೀವ ವಿಮೆ ಮಾಡುವುದಕ್ಕೆ ಇದೇ ತಕ್ಕ ಸಮಯ.

ಬೋನಸ್ ವರ್ಷ! ಬೋನಸ್ ವರ್ಷ !!

ಸಾಹಸವಂತರಾದ ಏಜೆಂಟರು ಬೇಕಾಗಿದೆ.

ಹೆಡ್ ಆಫೀಸು:— ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ.

ಬ್ರ್ಯಾಂಚ್ ಆಫೀಸು:— 152—3 ಕಮರ್ಷಿಯಲ್ ಸ್ಟ್ರೀಟ್, ಬೆಂಗಳೂರು.

52—24

ಸ್ವಾರ್ಥ ತ್ಯಾಗ.

(ಮಹಾತ್ಮ ಗಾಂಧಿಯವರ ಲೇಖನದಿಂದ)

ಹಲವು ಮಂದಿ ತರುಣರು ನನಗೆ ಹಲವು ಕಾಗದಗಳನ್ನು ಬರೆದಿದ್ದಾರೆ. ಆದರೆ ಅವರೆಲ್ಲರ ಕಾಗದದ ಅಭಿಪ್ರಾಯ ಮಾತ್ರ ಒಂದೇ—ಸಂಸಾರ ಬಾಹುಳ್ಯಗಳು ಬಹಳ; ತಮ್ಮ ಉದ್ಯೋಗದಿಂದ ತಮಗೆ ಬರುವ ಸಂಬಳ ಕಡಿಮೆ. ಈ ಕಷ್ಟ ದಿವಸ ಸ್ನಾತಕರು ಒಬ್ಬೊಬ್ಬರು ಒಂದೊಂದು ಮಾರ್ಗವನ್ನು ಸುಕರಿಸಬೇಕೆಂದು ನಿರ್ಧರಿಸಿದ್ದಾರೆ. ಅವರಲ್ಲೊಬ್ಬನು ಅವನನ್ನು ದೇವಿ, ಒಂದಷ್ಟು ದುಡ್ಡು ಮಾಡಿಕೊಂಡು ಅದರ ಜೊತೆಗೆ ಅವರವರ ಹತ್ತಿರ ಅಲ್ಪ ಸ್ವಲ್ಪ ಸಾಲ ತೆಗೆದುಕೊಂಡು ಯೂರೋಪಿಗೆ ಹೋಗಿ ಪದವಿ ತೆಗೆದುಕೊಂಡು ಬಂದು ತನ್ನ ಸಂಬಳ ಹೆಚ್ಚಿಸಿಕೊಳ್ಳಬೇಕೆಂದು ನಿರ್ಧರಿಸಿದ್ದಾನೆ; ಇನ್ನೊಬ್ಬನು, ತನ್ನ ಈಗಿನ ಕೆಲಸವನ್ನು ಬಿಟ್ಟು ಹೆಚ್ಚು ಆದಾಯ ಬರುವ ಬೇರೆ ಯಾವುದಾದರೂ ಕೆಲಸಕ್ಕೆ ಸೇರಬೇಕೆಂದು ಸಮಯ ಕಾಯುತ್ತಿದ್ದಾನೆ; ಮೂರನೆಯವನು ಧನವಂತರ ಕುಟುಂಬದ ಸಂಬಂಧ ಬರುವಂಥಾ ಯಾವುದಾದರೊಂದು ಉದ್ಯೋಗವನ್ನು ಆರಂಭಿಸಬೇಕೆನ್ನುವುದು ಮತ್ತೊಬ್ಬ ತರುಣನ ಆಸೆ. ನನಗೆ ಪತ್ರ ಬರೆದಿರುವ ಈ ತರುಣರೆಲ್ಲರೂ ಬುದ್ಧಿವಂತರು, ಯೋಗ್ಯರು. ಆದರೇನು ಮಾಡತಕ್ಕದ್ದು; ಅವರಿಗೆ ಕಷ್ಟ ಬಂದೊದಗಿದೆ. ಅವರ ಸಂಸಾರದ ಖರ್ಚು ಏರಹೋಗಿದೆ. ಬಾವಿ ದೇಶೀಯ ವಿದ್ಯಾಭ್ಯಾಸದಿಂದ ಅವರಿಗೆ ತೃಪ್ತಿ ದೊರೆಯುವ ಹಾಗಿಲ್ಲ. ತಮಗೆ ಹೆಚ್ಚು ಸಂಬಳ ಕೊಡಲೆಂದು ಸರ್ಕಾರದವರನ್ನು ಒತ್ತಾಯಿಸಿ, ನಾವಿನ್ನು ವ್ಯಾಪಾರಿಗಳ ತಲೆಯ ಮೇಲೆ ಈಗಾಗಲೇ ಹೊರಲಾರದ ತೆರಿಗೆ ಹೊರೆಯನ್ನೇರಿಸಲು ಅವರಿಗೆ ಇಷ್ಟವಿಲ್ಲ. ಪ್ರಕೃತ ಸ್ಥಿತಿಯಲ್ಲಿ ಈ ತರುಣರು ಕಷ್ಟವು ತೊಲಗಬೇಕಾದರೆ (ಈ ತರುಣರ ಭಾವನೆಯಂತೆ) ಇರುವ ಸರ್ಕಾರೀ ಕೆಲಸಗಳನ್ನು ಬಿಟ್ಟು ಆದಾಯ ಬರುವ ಮಾರ್ಗಗಳನ್ನು ಹುಡುಕಬೇಕು; ಇಲ್ಲವೇ ಸರ್ಕಾರದವರು ಪ್ರಜೆಗಳ ಕಷ್ಟ ನಿಷ್ಠುರಗಳನ್ನು ಗಮನಿಸದೆ ವರ್ಷಂಪ್ರತಿ ತೆರಿಗೆಯನ್ನು ಹೆಚ್ಚು ಮಾಡುತ್ತಾ, ಈ ತರುಣರ ಸಂಬಳಗಳನ್ನು ಹೆಚ್ಚಿಸುತ್ತಿರಬೇಕು. ಈ ಎರಡು ಮಾರ್ಗಗಳೂ ಶುಭಪ್ರದವಾದುವಲ್ಲ.

ನಮ್ಮ ಸುಖಜೀವನಕ್ಕೆ ಅವಶ್ಯಕವಾಗಿ ಬೇಕಿಲ್ಲದ, ಅನೇಕ ವಿಧವಾದ ಕೃತಕ ಸನ್ನಿವೇಶಗಳು, ನಮ್ಮ ಸಕಲರೂ ಅತಿ ವೇಗವಾಗಿ ಬೆಳೆಯುತ್ತಿರುವುದನ್ನು ಕಂಡು ವಿನಾಶಕಾರಿಯಾದ ಈ ವಿಷಯ ಪ್ರಸಂಗವನ್ನು ಕೊನೆಗಾಣಿಸುವ ಉದ್ದೇಶದಿಂದ ಅಸಹಕಾರ ಚಳವಳಿಯನ್ನು ಆರಂಭಿಸಿದ್ದೇನೆ. ನನ್ನ ಅಸಹಕಾರ ಚಳವಳಿಯು ವ್ಯಕ್ತಿಗಳನ್ನು ಕುರಿತ ದಾಗಿಲ್ಲ. ನನ್ನ ವಿಷಮವಲ್ಲರಿಯಿಂದ ನಮ್ಮನ್ನು ಮುಕ್ತಗೊಳಿಸಿ, ನಮ್ಮ ಜೀವನವನ್ನು ನಾಶಗೊಳಿಸುತ್ತಿರುವ ಕೃತಕ ಜೀವನ ಮಾರ್ಗ ಪ್ರೇರಕವಾಗಿರುವ ಮನೋವೃತ್ತಿಯನ್ನು ಕೊನೆಗಾಣಿಸುವ ಉದ್ದೇಶದಿಂದ ಈ ಅಸಹಕಾರ ಚಳವಳಿಯನ್ನಾರಂಭಿಸಿದ್ದಾಗಿದೆ. ಇಂಥಾ ಕೃತಕ ಜೀವನದ ಫಲವಾಗಿ ಅನವಶ್ಯಕವಾದ ಅಧಿಕ ಖರ್ಚುಗಳು ನಮ್ಮ ತಲೆಯ ಮೇಲೆ ಬಿದ್ದು ನಮ್ಮ ಖರ್ಚಿನ ಪಟ್ಟಿಯು ಬೆಳೆಯುತ್ತ ಬಂದಿದೆ. ಇಂಡಿಯಾ ದೇಶವು ಬಡರೈತರು ದುಡಿದ ಹಣವನ್ನು ಕೊಳ್ಳೆ ಹೊಡೆದು ತಂದು ಜೀವಿಸುವ ಜೀವನವಲ್ಲವಾದುದರಿಂದ ಕೃತಕ ಜೀವನವನ್ನು ನಡೆಸುವವರು ಖರ್ಚು ಮಾಡುವ ಹಣವೆಲ್ಲಾ ನಮ್ಮ ಬಡ ಜನರು ದುಡಿದ ಹಣವಾಗಿದೆ. ಮೇಲುಸ್ತರದ ಜನರ ದುಂದುವೆಚ್ಚವು ವಿದಿದಂತೆಲ್ಲಾ ಕೆಳ ಅಂತಸ್ತಿನ ಜನರಲ್ಲಿ ದಾರಿದ್ರ್ಯವು ಏರುತ್ತಿದೆ. ಒಡೆಯರ ರಕ್ಷಣೆಯಿಲ್ಲದ ಪ್ರಜೆಗಳಾದ ದೇಶಿಗರ ಕೃತಕ ಜೀವನದ ಫಲವಾಗಿ ನಮ್ಮ ದೇಶದ ಅನೇಕ ಸಣ್ಣ ಹಳ್ಳಿಗಳು ನಾಶವಾಗಿವೆ. ಆಗುತ್ತಿವೆ. ಬಡ ಜನರು ಎಷ್ಟು ಕಾಲ ಈ ದುಂದುಗಾರರಿಗೆ ಹಣವೊದಗಿಸಲಾದೀತು.

ಪಾಶ್ಚಾತ್ಯರಂತೆ ನಾವು ದುಂದು ವೆಚ್ಚ ಮಾಡುವುದು ಸಾಧ್ಯವಲ್ಲ. ಏಕೆಂದರೆ ಅವರ ಸಂಸಾರದ ಪದ್ಧತಿಯೇ ಬೇರೆ, ನಮ್ಮ ಸಂಸಾರದ ಪದ್ಧತಿಯೇ ಬೇರೆ. ಅವಿಭಕ್ತ ಕುಟುಂಬ ರೀತಿಯುಳ್ಳ ನಮ್ಮ ದೇಶದ ಸಂಸಾರ ಪದ್ಧತಿಗೆ, ಈ ದುಂದು ವೆಚ್ಚ ಸರಿಹೋಗುವುದಿಲ್ಲ. ಆದ್ದರಿಂದಲೇ ಪಾಶ್ಚಾತ್ಯರ ದುಂದು ವೆಚ್ಚದ ಮಾರ್ಗವನ್ನನುಸರಿಸುವ ನಮ್ಮ ಜನರಿಗೆ ನಾಶವಾದಷ್ಟು ಹಣವಿಲ್ಲದೆ ಒದ್ದಾಡುತ್ತಿರುವುದು.

ಈ ಕಷ್ಟದಿಂದ ಪಾರಾಗಬೇಕಾದರೆ, ನಾವು ಸ್ವಾರ್ಥತ್ಯಾಗವನ್ನವಲಂಬಿಸಬೇಕು. ದೇಶಭಕ್ತಿದೃಷ್ಟಿಯಿಂದ ದೇಶದ ಸ್ಥಿತಿಗತಿಯನ್ನನುಸರಿಸಿ ಸ್ವಾರ್ಥತ್ಯಾಗವನ್ನವಲಂಬಿಸಬೇಕು. ನಮ್ಮ ದೇಶವು ಉನ್ನತ ಸ್ಥಿತಿಗೆ ಬರಬೇಕಾದರೆ, ನಮ್ಮ ದೇಶದ ಅಂತರಂಗ ಜೀವನದಲ್ಲಿ ಅನೇಕ ಬದಲಾವಣೆಗಳಾಗತಕ್ಕದ್ದು ಆವಶ್ಯಕ. ಬಹಿರಂಗ ಸುಧಾರಣೆಗಿಂತ ಅಂತರಂಗ ಸುಧಾರಣೆ ಆವಶ್ಯಕತೆಯು ಈಗ ನಮಗೆ ಹೆಚ್ಚಾಗಿದೆ. ನಮ್ಮ ಅಂತರಂಗದ ಜೀವನವೇ ಯೋಗ್ಯ ರೀತಿಯಲ್ಲಿಲ್ಲದ ಮೇಲೆ ಬಹಿರಂಗ ಸುಧಾರಣೆಗಳಿಂದೇನುಪಯೋಗ. ಇಂಥಾ ಪರಿಸ್ಥಿತಿಯಲ್ಲಿ ನಮಗೆ ರಾಜಕೀಯ ಸುಧಾರಣೆಯು ದೊರೆತರೂ 'ಕೋತಿಯೊಳಗೆ ಗೋಣಿನೊಳಕ್ಕೆ ತೆರಳಿ ಸ್ವರ್ಗಾರ' ದಂತೆ ಮಾತ್ರ ಆಗುವುದು. ಮೊದಲು ನಮ್ಮ ಅಂತಃಕರಣವು ಪರಿಶುದ್ಧವಾಗಬೇಕು. ಸ್ವಾರ್ಥತ್ಯಾಗವು ಆವಶ್ಯಕ. ನಾವು ಮಾಡುವ ತ್ಯಾಗವು ನಮಗೆ ಮಹತ್ತರವಾಗಿ ಕಾಣಬಹುದು; ಆದರೆ ನಮ್ಮ ತ್ಯಾಗವು ದೇಶದ ಪುನರುಜ್ಜೀವನಕ್ಕಾಗಿ ಬೇಕಾಗುವ ತ್ಯಾಗದ ಕೋಟಿಯಲ್ಲೊಂದು ಪಾಲಿನಷ್ಟು ಕೂಡ ಇಲ್ಲವೆಂಬುವುದನ್ನು ನಾವು ಮರೆಯಬಾರದು.

ಸ್ವಾರ್ಥತ್ಯಾಗವಿಲ್ಲದೆ ನಾವು ನಮ್ಮ ಜೀವನದಲ್ಲಿ ಇನ್ನೂ ಅನೇಕ ಸುಧಾರಣೆಗಳನ್ನು ನಡೆಸಬೇಕಾಗಿದೆ. ಕೆಲಸ ಮಾಡಲು ಶಕ್ತಿಯಿರುವ ಸ್ತ್ರೀ ಪುರುಷರನ್ನು ಮನೆಯಲ್ಲಿ ಸುಮ್ಮನೆ ಕೂರಿಸಿ ಅವರಿಗೆ ಅನ್ನ ಹಾಕಬಾರದು. ಅನವಶ್ಯವಾದ ಮತ್ತು ಅರ್ಥವಿಲ್ಲದ ಔತಣಗಳು, ಸನ್ಮಾನಾದಿಗಳು, ಮುಂತಾದುವಕ್ಕಾಗಿ ಒಂದು ಕಾಸನ್ನಾದರೂ ಖರ್ಚುಮಾಡಬಾರದು. ಮದುವೆಗಳಿಗಾಗಿ ನಾವು ವಿಶೇಷವಾಗಿ ಖರ್ಚುಮಾಡುವ ಅಭ್ಯಾಸವನ್ನು ಬಿಟ್ಟುಬಿಡಬೇಕು. ಪ್ರಕೃತ ಸ್ಥಿತಿಯಲ್ಲಿ ನಮ್ಮ ಮನೆಗಳಲ್ಲಿ ಯಾರಾದರೂ ಸತ್ತುಹೋದರೆ ಅಥವಾ ಯಾರಾದರೊಬ್ಬರಿಗೆ ಮದುವೆಯಾದರೆ ಇಂಥಾ ಸಂದರ್ಭವೇ ಕೆಲವು ಕಾಲ ಆರ್ಥಿಕ ದುಸ್ಥಿತಿಯಲ್ಲಿ ನರಳಬೇಕಾಗುತ್ತದೆ. ನಾವು ಇಂಥಾ ಅನಾವಶ್ಯಕವಾದ ಖರ್ಚುಗಳನ್ನೆಲ್ಲಾ ಸಂಪೂರ್ಣವಾಗಿ ನಿಲ್ಲಿಸಬೇಕು. ಆವರೆ ಈ ಅನಾವಶ್ಯಕವಾದ ಖರ್ಚುಗಳನ್ನೆಲ್ಲಾ ನಿಲ್ಲಿಸಿ, ನಾವು ದೇಶಾದಷ್ಟು ಸ್ವಾರ್ಥತ್ಯಾಗವನ್ನು ಮಾಡಬೇಕೆಂದು ನನ್ನ ಭಾವನೆಯಾಗಿದೆ.

ಅನಾವಶ್ಯಕವಾದ ಖರ್ಚುಗಳನ್ನು ನಿಲ್ಲಿಸುವುದು ಮಾತ್ರ—ತ್ಯಾಗವಲ್ಲ. ನಮ್ಮ ಸರಳ ಜೀವನದಲ್ಲಿ ಬೇಕು ಬಂದಿರುವ ಈ ದುಂದು ಖರ್ಚುಗಳನ್ನು ಶೀಘ್ರವಾಗಿ ನಿಲ್ಲಿಸಲು ನಾವು ದೃಢ ಪ್ರತಿಜ್ಞರಾಗತಕ್ಕದ್ದು ಅವಶ್ಯಕ.

ಪ್ರೌಢ ವಿದ್ಯಾಭ್ಯಾಸವೊಂದು ನಮ್ಮ ತಲೆಯ ಮೇಲೆ ಬಿದ್ದಿರುವ ಮತ್ತೊಂದು ಹೊರಲಾರದ ಹೊರೆ. ಕೋಟ್ಯಾನುಕೋಟಿ ಭಾರತೀಯರು ಎರಡು ಹೊತ್ತಿನ ಕೂಳಿಗೆ ಗತಿಯಿಲ್ಲದೆ, ಕಂಗೆಟ್ಟು ಅಲೆಯುತ್ತಿರುವಾಗ ನಮ್ಮ ಸರಕಾರದವರು ಪ್ರೌಢ ವಿದ್ಯಾಭ್ಯಾಸಕ್ಕಾಗಿ ವಿಶೇಷ ದ್ರವ್ಯ ವ್ಯಯ ಮಾಡುವುದು ನ್ಯಾಯವೇ ಕ್ಷಮ್ಯವೇ. ಮನುಷ್ಯನು ಜೀವನ ಕಾಲದಲ್ಲಿ ಕಷ್ಟ ಸುಖಗಳನ್ನನುಭವಿಸಿ ಜಗತ್ತಿನ ಅನುಭವವನ್ನು ಪಡೆಯುತ್ತ ಬಂದ ಹಾಗೆಲ್ಲಾ ಮನುಷ್ಯನ ಮನಸು ವಿಕಾಸವಾಗುವುದು. ಪ್ರೌಢ ವಿದ್ಯಾಭ್ಯಾಸವೂ, ಕಾಲೇಜು ಅಧ್ಯಯನವೂ ಮನೋ ವಿಕಾಸಕ್ಕೆ ಅತ್ಯವಶ್ಯಕವೆಂದೂ ಯಾರೂ ಹೇಳಲಾರರು. ಈಗಿನ ಪ್ರೌಢ ವಿದ್ಯಾಭ್ಯಾಸದಿಂದ ನಮಗೆ ಉಂಟಾಗಿರುವ ಪರಿಣಾಮವನ್ನು ನಾವು ತಿಳಿದುಕೊಂಡಿರುವೆಯೋ. ನನಗೆ 'ನಿಜವಾದ ಪ್ರೌಢ ವಿದ್ಯಾಭ್ಯಾಸದ ಮಹತ್ವವೇನು ತಿಳಿದಿಲ್ಲವೆಂದಲ್ಲ. ಅಂಥಾ ವಿದ್ಯಾದಾನ ಮಾಡುವುದು ಮತ್ತು ಅದನ್ನು ಪರಿಗ್ರಹಿಸುವುದು ಹೇಗೆಂಬುದೂ ನಮ್ಮ ಅನುಭವಕ್ಕೆ ಬರುತ್ತದೆ. ಪ್ರೌಢ ವಿದ್ಯಾಭ್ಯಾಸದ ಮಹತ್ವವೇನೆಂಬುವುದರ ಅರಿವು ನಮಗುಂಟಾಗಿ, ಬಲುದು ಖರ್ಚಿನ ವಿದ್ಯಾಭ್ಯಾಸಕ್ಕೆ ಮನಸೊಪ್ಪಲಾರದೆಂಬ ಬುದ್ಧಿಯು ನಮ್ಮಲ್ಲಿ ಹುಟ್ಟಿದಲ್ಲಿ ನಾವು ನಮ್ಮ ಅನುಕೂಲವಾತಾವರಣಗಳಿಗೆ ತಕ್ಕ ಪ್ರೌಢ ವಿದ್ಯಾಭ್ಯಾಸ ಕ್ರಮವೊಂದನ್ನು ಶೀಘ್ರವಾಗಿ ನಿರ್ಮಿಸಿಕೊಳ್ಳುವೆವು.

ಕೋಟ್ಯಾನುಕೋಟಿ ಜನರು ಯಾವುದನ್ನು ಅನುಭವಿಸಬಲ್ಲರೋ, ಯಾವುದನ್ನು ಹೊಂದಬಲ್ಲರೋ, ಅಂತಹುದನ್ನು ಅನುಭವಿಸಲೂ, ಪಡೆಯಲೂ ನಾವು ಆಸೆಪಡಬಾರದು. ನಾವು ಈ ನೀತಿಯನ್ನನುಸರಿಸಿ ನಡೆದರೆ, ನಮ್ಮ ಜೀವನವು ಸಹಜಯೋಗ್ಯವಾಗುವುದು. ಆದರೆ, ಈ ನೀತಿಯನ್ನನುಸರಿಸುವುದು ಸುಲಭವಲ್ಲ. ಆಚರಣೆ ತರುವುದು ಕೂಡ ಅತಿ ಕಠಿಣವಾದ ಕಾರ್ಯ. ಆದ್ದರಿಂದ ಈ ನೀತಿಯನ್ನನುಸರಿಸಬಯಸುವವರು, ಸಾಧಾರಣರಿಗೆ ದೊರೆಯುವ ವಸ್ತುಗಳ ಆಸೆಯನ್ನು ಬಿಡುತ್ತ, ಬರಬೇಕಲ್ಲದೆ ನಮ್ಮ ಜೀವನವನ್ನು ದಿನಕ್ರಮವಾಗಿ ಸರಳವಾಗುವಂತೆ ಮಾಡಿಕೊಳ್ಳಬೇಕು. ದಿನ ದಿನಕ್ಕೂ ನಮ್ಮ ಆವಶ್ಯಕತೆಗಳನ್ನು ಕಡಿಮೆ ಮಾಡಿಕೊಳ್ಳುತ್ತ ನಡೆಯಬೇಕು.

ಇಂಥಾ ಸ್ವಾರ್ಥತ್ಯಾಗಿಗಳಾದ ದೇಶಸೇವಕರು ನಮ್ಮ ದೇಶದಲ್ಲೆಲ್ಲಿಯೂ ಹರಡಬೇಕು—ಆಗ ನಮ್ಮ ಅಂತರಂಗದಲ್ಲಿ ಸಹಜವಾದ ಬದಲಾವಣೆ ಉಂಟಾಗುವುದು. ಜನಸಾಮಾನ್ಯವು ಪ್ರಗತಿ ಪಥದಲ್ಲಿ ಅತಿಶಯದಿಂದ ಧಾವಿಸುವುದು. ನಮ್ಮ ದೇಶದಲ್ಲಿ ಇಂಥಾ ಪರಿವರ್ತನೆಯಾಗುವ ವರೆಗೂ ನಮಗೆ ಸ್ವರಾಜ್ಯ ಲಭಿಸದು. ನಮ್ಮ ದೇಶದಲ್ಲಿ ಸ್ವಾರ್ಥತ್ಯಾಗಿಗಳು ಹೆಚ್ಚಿದಂತೆಲ್ಲಾ ನಮಗೆ ಸ್ವರಾಜ್ಯವು ಲಭಿಸುವ ಕಾಲವು ಹತ್ತಿರವಾಗುತ್ತ ಹೋಗುವುದು.

ಸ್ವಾರ್ಥ ತ್ಯಾಗವೇ ಸ್ವರಾಜ್ಯ ಸಾಧನೆಯ ಅಡಿಗಲ್ಲು.

ಕಾಶ್ಮೀರದ ಪರಿಸ್ಥಿತಿ.

"ಕ್ರಮವಾಗಿ ಏರ್ಪಟ್ಟಿರುವ ಏಕತಂತ್ರವೊಂದು ಭಯಂಕರವಾದ ದಂಗೆಯಾಗಿ ಪರಿಣಮಿಸಿ, ಜಮ್ಮು ಮತ್ತು ಕಾಶ್ಮೀರ ಸಂಸ್ಥಾನಗಳ ಮಹಾರಾಜರವರೂ ಮತ್ತು ಮಹಾರಾಜರ ವರ ಶಾಂತಿಯುತರಾದ ಹಿಂದೂ ಮತ್ತು ಸಿಖ್ ಪ್ರಜೆಗಳಿಗೂ ವಿರೋಧವಾಗಿರುವುದಲ್ಲದೆ ಈ ಪ್ರಜೆಗಳನ್ನು ನಿರ್ನಾಮವನ್ನಾಗಿ ಮಾಡಲು ದುಸ್ಸಾಹಸವನ್ನು ಕೈಗೊಂಡಿದ್ದಾರೆಂಬ ವಿಷಯವು ನಿಮಗೂ ತಿಳಿದು ಬಂದಿರಬೇಕು. ಕಳೆದ ಸಲದ ಸಂಚಿನಲ್ಲಿ ಹಿಂದೂ ಮತ್ತು ಸಿಖ್ ಶಾಸನ ಸಭಾಸದಸ್ಯರು ಪ್ರಾಥಿನಿಸಿಕೆಂದಂತೆ ಕಾಶ್ಮೀರ ಸಂಸ್ಥಾನಕ್ಕೆ ವಿರುದ್ಧವಾಗಿರುವ ಆಹರಾರ್ ಚಳವಳಿಯ ಮುಖ್ಯ ಕರ್ತೃವು ಸಂಸ್ಥಾನದ ಮಹಮದೀಯ ಪ್ರಜೆಗಳ ನ್ಯಾಯವಾದ ಕಷ್ಟ ನಿವಾರಣೆಗಾಗಿ ಅಲ್ಲ; ಜಮ್ಮು ಹಿಂದೂ ದೇಶದಲ್ಲಿ ಮುಸ್ಲಿಂ ಪ್ರಾಬಲ್ಯವನ್ನು ಸ್ಥಾಪಿಸಬೇಕೆಂದಿರುವ 'ಪಾನ್ ಇಸ್ಲಾಮಿಕ್' ಆದರ್ಶದ ಚಳವಳಿಯು. ತಮ್ಮ ಕಾರ್ಯಸಾಧನೆಗೆ ದಂಗೆಕೋರರು ಪ್ರತ್ಯಕ್ಷವಾಗಿ ಕೆಲಸ ಮಾಡುತ್ತಿರುವುದೇ ನಿದರ್ಶನ. ಹಿಂದೂ ಮತ್ತು ಸಿಕ್ಕರನ್ನು ಬಲಾತ್ಕಾರದಿಂದ ತಮ್ಮ ಮತಕ್ಕೆ ಸೇರಿಸಿಕೊಳ್ಳುತ್ತಲೂ, ವಿವಾಹಿತರಾದ ಹಿಂದೂ ಹೆಂಗಸರನ್ನು ಬಲಾತ್ಕಾರವಾಗಿ ವಿಶಾಹಮಾಡಿಕೊಳ್ಳುತ್ತಲೂ, ಮುಸ್ಲಿಂ ರಾಜರ ಸಾಮ್ರಾಜ್ಯವನ್ನು ಸ್ಥಾಪಿಸುತ್ತಲೂ ಇದ್ದಾರೆ. ಇಷ್ಟಲ್ಲದೆ ಅವರು ವಿಂತಿಲ್ಲ; ಸಿಕ್ಕರ ಗುರುದ್ವಾರಗಳನ್ನೂ, ಹಿಂದುಗಳ ದೇವಾಲಯಗಳನ್ನೂ ಸುಟ್ಟಿರುವುದಲ್ಲದೆ ದೈವದೂಷಣೆಗಳಾದ ಅಪವಿತ್ರ ಕೃತ್ಯಗಳನ್ನೂ ಮಾಡುತ್ತಿದ್ದಾರೆ."

ಎಂಬುದಾಗಿ ಕಳೆದ ವಾರ ದೆಹಲಿಯ ಶಾಸನಸಭಾ ಸದಸ್ಯರಲ್ಲಿ ಎಂಟು ಮಂದಿ ಹಿಂದೂ ಮತ್ತು ಸಿಖ್ ಮತೀಯರು ವೈಸರಾಯರಿಗೆ ಪ್ರಾರ್ಥನಾ ಪತ್ರವೊಂದನ್ನು ಬರೆದಿದ್ದು, "ಕಾಶ್ಮೀರದಲ್ಲಿ ಪರಿಸ್ಥಿತಿಯು ಅಪಾಯಕರವಾಗಿ ಪರಿಣಮಿಸಲು ಅವಕಾಶ ದೊರೆತು, ಪ್ರಜೆಗಳ ಮನಸ್ಸಿನಲ್ಲಿ 'ಅಂಥಾ ಸರಕಾರದವರೂ ಈ ವಿಚಾರದಲ್ಲಿ ಯಾಕೆ ಹೀಗಿರುವರು' ಎಂಬುದಾಗಿ ಮಹಾಭ್ರಾಂತಿಗಳು ಹುಟ್ಟುವ ಸಂಭವವುಂಟಾಗಿದೆ. ಆದಕಾರಣ ಇರುವ ವಿಷಯವನ್ನು ನಿಮ್ಮ ಅರಿವಿಗೆ ತರಬಯಸಿದ್ದೇವೆ" ಎಂದು ನಿವೇದಿಸಿದ್ದರು.

ಅವರು ಅಮುಧವಕಾರಣಗಳಿಗಾಗಿ ಹಿಂದೂ ಗೃಹಸ್ಥರುಗಳನ್ನು ಬಹಿಷ್ಕಾರದ ಬೆಂಕಿ ಹಚ್ಚಿ ಹಿಂದೂ ಮತ್ತು ಸಿಕ್ಕರ ಗಂಡಸರು, ಹೆಂಗಸರು, ಮಕ್ಕಳನ್ನು ನಿರ್ದಯವಾಗಿ ಕೊಂದು, ಹೆಂಗಸರನ್ನು ಬಲಾತ್ಕಾರದಿಂದ ಕೊಂಡೊಯ್ದು ಹತರಾತಿ, ಅವರ ಬೆಲೆಯುಳ್ಳ ವಸ್ತು ಪದಾರ್ಥಗಳನ್ನು ಹಾಳುಮಾಡಿದ್ದಾರಂತೆ. ಹಿಂದೂ ಮತ್ತು ಸಿಕ್ಕರು ತಮ್ಮ ಪ್ರಾಣರಕ್ಷಣೆಗಾಗಿ ಮನೆ ಮಠಗಳನ್ನು ಬಿಟ್ಟುಹೋಗಿ ಸಿಕ್ಕಿದ ಕಡೆಯಲ್ಲಿ ದುರವಸ್ಥೆಯಲ್ಲಿ ಅಡಗಿಕೊಳ್ಳಬೇಕಾಗಿದೆಯಂತೆ.

"ನಾವು ದುರಾಗ್ರಹಪಕ್ಷಗಳಿಗಳ ಜನರ ಗೋಳಿನ ಪಾಡನ್ನು ಸವಿಸ್ತಾರವಾಗಿ ತಿಳಿಸಿ ನಿಮಗೆ ವೇದನೆಯುಂಟುಮಾಡಲು ಇಷ್ಟಪಡುವುದಿಲ್ಲ. ಆದರೂ ಆ ಪ್ರಜೆಗಳ ಬಾಧೆ ಮತ್ತು ಅವರಿಗೂ, ಬ್ರಿಟಿಷ್ ಇಂಡಿಯಾದಲ್ಲಿರುವ ಹಿಂದೂ ಮತ್ತು ಸಿಖ್ ಮತಸ್ಥರಿಗೂ ಮಹಾ ವ್ಯಥೆಯನ್ನೂ, ಆಗ್ರಹವನ್ನೂ ಉಂಟುಮಾಡಿವೆಯೆಂಬ ಅಂಶವನ್ನು ಮಾತ್ರ ನಿಮಗೆ ತೋರಿಸುವ ಸಾಹಸ ಮಾಡುತ್ತೇವೆ" ಎಂದು ಬರೆದಿದ್ದರು.

ಈಗಾಗಲೇ ಭಾರತೀಯ ಸರಕಾರದವರು ಕಾಶ್ಮೀರಕ್ಕೆ ಸಹಾಯ ಮಾಡಿದ್ದಾರೆ ಆದರೆ ಇದು ವರೆಗೆ ಆಗಿರುವ ಫಲಿತಾಂಶವನ್ನು ನೋಡಿದರೆ ಇವರು ಮಾಡಿರುವ ಸಹಾಯವು ಸಾಲದಂತೆ. ಅದ ಕಾರಣ ಈ ದಂಗೆಕೋರರನ್ನು ಅಣಗಿಸುವ ಪ್ರಯತ್ನದಲ್ಲಿ ಕಾಶ್ಮೀರದ ಮಹಾರಾಜರಿಗೆ ಬ್ರಿಟಿಷ್ ಸರಕಾರವೆಷ್ಟು ಸಹಾಯ ಮಾಡಬಹುದೋ ಅಷ್ಟನ್ನು ಮಾಡುವುದೆಂಬ ಪ್ರಕಟನೆಯನ್ನು ಹೊರಡಿಸಬೇಕೆಂದು ಅರ್ಜಿಯಲ್ಲಿ ಪ್ರಾರ್ಥಿಸಿಕೊಂಡಿದ್ದರು.

"ಪ್ರಕೃತದಲ್ಲಿ ಮುಸಲ್ಮಾನಧರ್ಮದವರ ಕೆಲವು ಪತ್ರಿಕೆಗಳು ಈ ಗಲಭೆಯ ಸೂತ್ರಧಾರಿತ್ವವನ್ನು ವಹಿಸಿಕೊಂಡು ಬೇಕಾದ ಸಹಾಯಗಳನ್ನು ಮಾಡುತ್ತಿದ್ದಾರೆ. ಪಂಜಾಬಿನ ಅಹರಾರು ದುಂದಾಳುಗಳನ್ನು ಕಾಶ್ಮೀರದೊಳಕ್ಕೆ ಹೋಗಗೊಡಿಸದಂತೆ ಮಾಡಲು ಆರ್ಡಿನೆನ್ಸುಗಳಿದ್ದಾಗ್ಯೂ ಅವರು ಆ ಕ್ಷೇತ್ರದೊಳಕ್ಕೆ ನುಗ್ಗುತ್ತಲೇ ಇದ್ದಾರೆ. ಆಂಗ್ಲ ಭಾರತದಲ್ಲಿರುವ ಮುಸ್ಲಿಂ ಸಂಘಗಳ ಸ್ಥಳಗಳೇ ಕ್ರಮವಾಗಿ ಈ ಚಳವಳಿಯನ್ನು ಹೊತ್ತಿಸಿ ಸಹಾಯ ಕೊಡುತ್ತಿರುವುದು. ಹೊರಗಿನಿಂದ ಕಾಶ್ಮೀರಕ್ಕೆ ಮದ್ದು ಗುಂಡುಗಳು ಸಹಾ ಹೋಗುತ್ತಿವೆ. ಉದ್ರೇಕಗೊಳಿಸುವ ಪ್ರಕಟಣೆಗಳೂ, ವೃತ್ತಪತ್ರಿಕೆಗಳೂ ನಿರ್ಭಯವಾಗಿ ಏಕಪಕ್ಷವಾಗಿ ಪ್ರಚಾರವಾಗಲು ಅವಕಾಶವಿದೆ. ಈ ತೊಂದರೆಗಳೆಲ್ಲವೂ ಕಾಶ್ಮೀರದಲ್ಲಿ ಕೊನೆಗಂಡು, ಕೃಷಿಕ್ಷೇತ್ರದಲ್ಲಿರುವ ಆಂಗ್ಲೇಯ ಪಕ್ಷಗಳಿಗೆ ಹಬ್ಬದಂತೆ ಮಾಡಲು ಈಗಲೇ ಬಲವಾದ ಪ್ರಯತ್ನಗಳನ್ನು ಮಾಡಬೇಕು. ಸಾರ್ವಭೌಮ ಸರಕಾರದವರು ಹಿಂದುಗಳ ಪ್ರಾಣವನ್ನೂ, ಆಸ್ತಿಯನ್ನೂ, ಮಾನವನ್ನೂ ರಕ್ಷಿಸಲು ಶಕ್ತರಾದಷ್ಟು ಬಲಪ್ರಯೋಗ ಮಾಡದಿದ್ದರೆ, ಮಹಾರಾಜರು ತಾವೇ ದಂಗೆಯನ್ನಡಗಿಸಲು ಸಾಕಷ್ಟು ಬಲಪ್ರಯೋಗಮಾಡಲು ಸಾರ್ವಭೌಮ ಸರಕಾರದವರು ಅವಕಾಶ ಕೊಡದೆಂದು ಸುಮ್ಮನಿರುವವರೆಂದೂ ತಿಳಿದಿರುವರೆಂದು ನಿಮಗೆ ತಿಳಿಸದೆ ಹೋದರೆ ನಾವು ಕರ್ತವ್ಯಭ್ರಷ್ಟರಾಗುತ್ತೇವೆ. ಹಿಂದೂ ಜನಾಂಗಕ್ಕೂ ಮಾಡಬೇಕಾದ ನಮ್ಮ ಕರ್ತವ್ಯವನ್ನು ಮಾಡದೆ ತಪ್ಪಿದವರಾಗುವೆವು. ಈ ತೊಂದರೆಗಳಲ್ಲಿ ಬಹು ಪ್ರಬಲವಾಗದ ಚಕ್ರವೃತ್ತಿಯು ನಿಂತು ಹೋಗುವ ಸಾಧ್ಯತೆಯಿದೆ. ಆದ್ದರಿಂದ ಸಾರ್ವಭೌಮ ಸರಕಾರದವರು ತಮ್ಮ ನೀತಿಯನ್ನು ಬದಲಾಯಿಸುವುದು ಅತ್ಯಾವಶ್ಯಕವಾಗಿದೆ. ಅದನ್ನು ಈ ಕೂಡಲೆ ಮಾಡತಕ್ಕದ್ದೆ ಸರಿ.

"ನೀತಿಯೂ ಸಂಘಟಿತವಾಗಿರಲೇ ಬೇಕೆಂಬ ಭಾವನೆ ನಮ್ಮ ಜನರಲ್ಲಿ ನಂಬಿಕೆ ಹುಟ್ಟಿಸಬೇಕು. "ಆದ ಕಾರಣ ಸಾರ್ವಭೌಮ ಸರಕಾರದವರು ಗಂಡಸರು ಹೆಂಗಸರ ಪ್ರಾಣ, ಧನ, ಮಾನವೆಂಬ ಮೂರರ ಪ್ರಾಣ ಧನ ಮಾನಗಳ ರಕ್ಷಣೆಗಾಗಿ ಯಾವ ಕ್ರಮ ಕೈಗೊಳ್ಳುವರೆಂಬುದನ್ನು ಹಿಂದೂ ಜನಾಂಗದವರಿಗೆ ಮತ್ತು ಕಾಶ್ಮೀರದಲ್ಲಿ ಅಲ್ಪಸಂಖ್ಯಾತರಾದ ಹಿಂದೂ ಮತ್ತು ಸಿಕ್ಕರಿಗೆ ತಿಳಿಸುವವರ ಸಹಾಯಾರ್ಥವಾಗಿ ಬಲಿಷ್ಠ ಹಿರಿ ಅಧಿಕಾರಿಗಳನ್ನು ತಾವೇ ಮುಂದಾಳಾಗಿ ನಿಯಮಿಸಿ ಕೊಡಬೇಕೆಂದು ವೈಸರಾಯರನ್ನು ಪ್ರಾರ್ಥಿಸಿಕೊಂಡಿದ್ದಾರೆ.

ಕೊಡಗು.

ಸನ್ ೧೯೩೨ನೇ ಇಸವಿ

ಫೆಬ್ರವರಿ ತಾ ೨೬ನೇ ಶುಕ್ರವಾರ.

ಪ್ರೆಸ್ ಆರ್ಡಿನೇನ್ಸ್

ಜಾರಿಯಲ್ಲಿರುವ ವರೆವಿಗೆ

ನಾವು

ಅಗ್ರಲೇಖನ

ವನ್ನು

ಪ್ರಕಟಿಸುವುದಿಲ್ಲ.

ಸೆಂಟ್ರಲ್ ಬ್ಯಾಂಕಿನ ಜನರಲ್ ಮೀಟಿಂಗು.

ಈ ಬ್ಯಾಂಕಿನ 1930—1931 ನೇ ಸಂವತ್ಸರದ 10 ನೇ ವಾರ್ಷಿಕ ಜನರಲ್ ಮೀಟಿಂಗು ತಾ. 21—2—32 ರಲ್ಲಿ ಕೊಡಗು ಜಮೀನ್ದಾರರ ಸಂಘದ ಹಾಲ್‌ನಲ್ಲಿ ಖಾಯಂ ಅಧ್ಯಕ್ಷರಾದ ರಾವ್‌ಬಹದ್ದೂರ್ ಕೋದಂಡ ಅಪ್ಪಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಸೊಸೈಟಿಗಳ ಪರವಾಗಿ 157 ಪ್ರತಿನಿಧಿಗಳೂ, 22 ಬಿಡಿ ಮೆಂಬರುಗಳೂ, ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರರವರಾದ ಮೆ. ಯಂ. ಯಸ್. ಮಂದಣ್ಣನವರೂ, ಜೂನಿಯರ್ ರಿಜಿಸ್ಟ್ರಾರರವರಾದ ಮೆ. ಕೆ. ಎನ್. ಸುಬ್ರಾಯರವರೂ, 4 ಕೋ-ಆಪರೇಟಿವ್ ಇನ್ಸ್‌ಪೆಕ್ಟರುಗಳೂ, 13 ಕೋ-ಆಪರೇಟಿವ್ ಸುಪರ್‌ವೈಸರುಗಳೂ ಮತ್ತು ಕೆಲವು ಪ್ರೇಕ್ಷಕರೂ ಸಹ ಹಾಜರಿದ್ದರು.

ಮೀಟಿಂಗು ಮಧ್ಯಾಹ್ನ 1 ಗಂಟೆಗೆ ಶುರುವಾದ ಕೂಡಲೇ ಈ ಮೊದಲೇ ಕಾರ್ಯಕ್ರಮ ಪಟ್ಟಿಯಲ್ಲಿ ತಿಳಿಸಿದ ಮೇರೆ ಸೊಸೈಟಿಗಳಿಂದ ಬ್ಯಾಂಕಿಗೆ ಕಳುಹಿಸಲ್ಪಟ್ಟ ಪ್ರತಿನಿಧಿಗಳ ಹೆಸರುಗಳನ್ನು ಓದಲು ಶುರು ಮಾಡುವಾಗ್ಯೆ ಕೆಲವು ಸೊಸೈಟಿಗಳು ಈ ದಿನದ ಮೀಟಿಂಗಿಗೆ ಕಳುಹಿಸುವ ಪ್ರತಿನಿಧಿಗಳ ಹೆಸರುಗಳನ್ನು ಮೀಟಿಂಗಿನ ನೋಟೀಸಿನಲ್ಲಿ ನಮೂದಿಸಿದ ಮೇರೆ ತಿಳಿಸದೆ ಇದ್ದು, ಈ ದಿನದ ಮೀಟಿಂಗಿಗೆ ಬಂದವರಿಂದ ಅಂಥವರನ್ನು ಮೀಟಿಂಗಿನಲ್ಲಿ ಭಾಗ ತೆಗೆದುಕೊಳ್ಳಲು ಬಿಡಕೂಡದಾಗಿ ಕೆಲವರು ತಕರಾರು ಮಾಡಿದ ಮೇರೆ ಚರ್ಚೆ ನಡೆದು ಅನಂತರ ಅಧ್ಯಕ್ಷರು ಈ ಬಾಬಿನಲ್ಲಿ ಡೈರೆಕ್ಟರುಗಳು ಪ್ರತಿನಿಧಿಗಳ ಚುನಾವಣೆ ಬಗ್ಗೆ ರೂಲ್ಸ್ ಮಾಡದ್ದರಿಂದ ಈ ದಿನ ಮೀಟಿಂಗಿಗೆ ಬಂದ ಎಲ್ಲಾ ಪ್ರತಿನಿಧಿಗಳೂ ಈ ಮೀಟಿಂಗಿನಲ್ಲಿ ಭಾಗ ತೆಗೆದುಕೊಳ್ಳಬಹುದಾಗಿ ತೀರ್ಮಾನಕೊಟ್ಟರು.

1. ಪ್ರಿಂಟಾದ ರಿಪೋರ್ಟ್ ಎಲ್ಲಾ ಸೊಸೈಟಿಗಳಿಗೂ ಮತ್ತು ಬಿಡಿ ಮೆಂಬರುಗಳಿಗೂ ಕಳುಹಿಸಿದ್ದರಿಂದ ಸದರಿ ರಿಪೋರ್ಟನ್ನು ಪುನಃ ಇಲ್ಲಿ ಓದುವುದು ಅವಶ್ಯವಿಲ್ಲವೆಂತ ಹೇಳಿದ ಮೇರೆ ರಿಪೋರ್ಟು ಮಂಜೂರು ಮಾಡಬಹುದಾಗಿ ಸೂಚಿಸಿ, ಪೋಷಿಸಿ ಬಹುಮತದಿಂದ ಮಂಜೂರಾಯಿತು.

2. ರಿಜಿಸ್ಟ್ರಾರರ ಆಡಿಟ್ ರಿಪೋರ್ಟಿನಲ್ಲಿ ಲಾಭ ಹಂಚುವಿಕೆಯ ವಿಷಯ ಶಿಫಾರಸು ಮಾಡಿದ ಮೇರೆ ನಂಬರು 1,2,4,5,6 ರ ಐಟಂಗಳನ್ನು ಮಂಜೂರ್ಮಾಡಬಹುದೆಂತಲೂ, ಮತ್ತು ನಂಬರು 3 ರ ಐಟಂ ಮೇರೆ ಶೇರುದಾರರಿಗೆ ಶೇಕಡ 6¼ ರ ದರದಲ್ಲಿ ಡಿವಿಡೆಂಡ್ ಹಂಚಬಹುದೆಂತಲೂ ಬಹುಮತದಿಂದ ತೀರ್ಮಾನವಾಯಿತು.

3. ರಿಜಿಸ್ಟ್ರಾರರೂ ಮತ್ತು ಡೈರೆಕ್ಟರುಗಳೂ ಶಿಫಾರಸು ಮಾಡಿದ ಮೇರೆ ಗುಮಾಸ್ತರು ಮೆ. ಬಲ್ಯಂಡ ಪೂವಯ್ಯನವರಿಗೆ 100 ರೂಪಾಯಿ ಬೋನಸ್ ಕೊಡಬಹುದೆಂತ ಬಹುಮತದಿಂದ ಮಂಜೂರ್ಮಾಡಲಾಯಿತು

4. ಸೆಂಟ್ರಲ್ ಬ್ಯಾಂಕಿನಿಂದ ಸೊಸೈಟಿಗಳಿಗೆ ಕೊಡುವ ಸಾಲಕ್ಕೆ ಶೇಕಡ 7—13—0 ದರದಲ್ಲಿರುವ ಬಡ್ಡಿಯನ್ನು ಶೇಕಡ 7—4—0ಕ್ಕೆ ಇಳಿಸಬೇಕಾಗಿ ಮೆ. ಗಳಾದ ಅಪ್ಪಾರಂಡ ಚಂಗಪ್ಪನವರು, ಬಿದ್ದಂಡ ಐಯ್ಯಪ್ಪನವರು, ನಡಿಕೇರಿಯಂಡ ಸೋಮಯ್ಯನವರು, ಗುಡ್ಡಂಡ ಭೀಮಯ್ಯನವರು ಮತ್ತು ಹಲವರು ಮಾತಾಡಿದಮೇಲೆ ದೀರ್ಘ ಚರ್ಚೆ ನಡೆದನಂತರ ಓಟಿಗೆ ಹಾಕಲಾಗಿ ಶೇಕಡ 7—4—0 ರ ದರದಲ್ಲಿ ಇನ್ನು ಮುಂದೆ ಸಾಲ ಕೊಡಬೇಕಾಗಿ ಬಹುಮತದಿಂದ ಮಂಜೂರಾಯಿತು.

5. ಬ್ಯಾಂಕಿನಿಂದ ಸೊಸೈಟಿಗಳಿಗೆ ಕೊಡುವ ಸಾಲಕ್ಕೆ ಈಗಿನ ಹೊಸ ರೂಲ್ಸ್ ಮೇರೆ ಬಾಂಡ್ ಕಾಗದದಲ್ಲಿ ಬರೆದು ಹಣ ಕೊಡುವುದು ಸೊಸೈಟಿಗಳಿಗೆ ಬಹಳ ಖರ್ಚಿನ ಬಾಬು ಆದ್ದರಿಂದ ಪ್ರೋನೋಟುಗಳ ಮೇಲೆ ಸಾಲ ಕೊಡುವ ಹಾಗೆ ಮಂಜೂರ್ಮಾಡಬೇಕಾಗಿ ಮೆ. ಕಂಜೀರಂಡ ಬೆಳ್ಯಪ್ಪನವರು ಮಾತಾಡಿದ ಮೇಲೆ, ಪ್ರೋನೋಟಿನ ಮೇರೆ ಹಣ ಕೊಟ್ಟರೆ ಆಗುವ ಕಷ್ಟನಷ್ಟಗಳನ್ನು ಮೆ.ಗಳಾದ ಸಿ ಎಸ್ ವೆಂಕಪ್ಪಯ್ಯನವರು ಮತ್ತು ಮಂಡೀರ ತಿಮ್ಮಯ್ಯನವರು ವಿವರಿಸಿದನಂತರ ಮೆ. ಬೆಳ್ಯಪ್ಪನವರು ತಂದ ಠರಾವನ್ನು ವಾಪಸು ತೆಗೆದುಕೊಂಡರು.

6. ಮೆ. ಗುಡ್ಡಂಡ ಭೀಮಯ್ಯನವರು ಜನವರಿಯಿಂದ ಜೂನ್ ಆಖೈರು ವರೆಗೆ ಬ್ಯಾಂಕಿನ ಬಂದು ಶಾಖೆಯನ್ನು ವೀರಾಜಪೇಟೆಯಲ್ಲಿ ಇಡಬೇಕಾಗಿಯೂ, ಈ 6 ತಿಂಗಳಲ್ಲಿ ವಸೂಲಾತಿ ಹಣವನ್ನು ಅಗಾಗ್ಯೆ ಸೊಸೈಟಿಗಳು ಬ್ಯಾಂಕಿಗೆ ಕಳುಹಿಸಲು ಕೇವಲ ಅನಾನುಕೂಲವಾಗುತ್ತೆ ಸಗ್ಯೆರಿಯಾಗಿ ಮಾತಾಡಿದ ಮೇರೆ ಚರ್ಚೆ ನಡೆದು, ವೀರಾಜಪೇಟೆಯಲ್ಲಿ ಬ್ಯಾಂಕಿನ ಶಾಖೆ ಇಡುವದರ ಬದಲು ಈ ವರೆಗೆ ಸರಕಾರದವರು ಖಜಾನೆ ಮೂಲಕ 150 ರೂಪಾಯಿ ಮೇಲ್ಪಟ್ಟು ಹೊಂದಿಕ್ಕಾಲ್ಯವನ್ನು ಇನ್ನು ಮುಂದೆ ಸೊಸೈಟಿಗಳ ಪ್ರಯೋಜನಾರ್ಥವಾಗಿ 50 ರೂಪಾಯಿಯಿಂದ ಮೇಲ್ಪಟ್ಟು ಹೊಂದಿಕೊಳ್ಳುವಂತೆ ಹುಕುಂ ಕೊಡುವ ಹಾಗೆ ಕಮಿಷನರವರಿಗೆ ಬರೆದು ಕೇಳಿಕೊಳ್ಳುವಂತೆ ತೀರ್ಮಾನವಾದ್ದರಿಂದ ಮೆ. ಭೀಮಯ್ಯನವರು ತಂದ ಠರಾವನ್ನು ವಾಪಸು ತೆಗೆದುಕೊಂಡರು.

7. ಬ್ಯಾಂಕಿನ ಸೊಸೈಟಿಗಳಿಗೆ ಕೊಡುವ ಸಾಲಕ್ಕೆ ಹೆಚ್ಚಿನ ಕಂತು ಕೊಡಬೇಕಾಗಿ ಮೆ. ಗುಡ್ಡಂಡ ಭೀಮಯ್ಯನವರು ತಂದ ಠರಾವಿಗೆ, ಡೈರೆಕ್ಟರುಗಳು ಸೊಸೈಟಿಗಳಿಗೆ ಸಾಲ ಮಂಜೂರ್ಮಾಡುವಾಗ ತೀರ್ಮಾನಿಸಬೇಕಾದ ವಿಷಯವಾದ್ದರಿಂದ ಚರ್ಚೆಯು ಮುಂದರಿಸಲಿಲ್ಲ.

8. ಸೊಸೈಟಿಗಳಿಂದ ಮೆಂಬರುಗಳಿಗೆ ಕೊಡುವ ಸಾಲಕ್ಕೂ, ಬ್ಯಾಂಕಿನಿಂದ ಸೊಸೈಟಿಗಳಿಗೆ ಕೊಡುವ ಸಾಲಕ್ಕೂ ಸ್ಟಾಂಪು ಡ್ಯೂಟಿ ಮತ್ತು ರಿಜಿಸ್ಟ್ರೇಶನ್ ಚಾರ್ಜು ವಸೂಲ್ಮಾಡಬೇಕೆಂಬ ಕಾನೂನನ್ನು ರದ್ದುಮಾಡುವಂತೆ ಸರಕಾರಕ್ಕೆ ಬರೆದುಕೊಳ್ಳಬೇಕಾಗಿ ಬಹುಮತದಿಂದ ಮಂಜೂರಾಯಿತು.

9. ಬಿಡಿ ಮೆಂಬರುಗಳ ಪರವಾಗಿ ಈ ಕೆಳಗಿನ ಮಹನೀಯರನ್ನು ಚುನಾಯಿಸಬಹುದೆಂತ ಸೂಚಿಸಲಾಯಿತು.

1. ರಾವ್‌ಬಹದ್ದೂರ್ ಕೆ. ಅಪ್ಪಯ್ಯನವರು, 2. ರಾವ್‌ಬಹದ್ದೂರ್ ಪಿ ದೇವಯ್ಯನವರು, ಮೆ. ಗಳಾದ 3. ಸಿ. ಎಸ್. ವೆಂಕಪ್ಪಯ್ಯನವರು, 4. ಕೋಟೆರ ಚಿಣ್ಣಪ್ಪನವರು, 5. ಐಚೆಟ್ಟಿರ ಸುಬ್ಬಯ್ಯನವರು, 6. ಕೆ. ಎಸ್. ಸುಬ್ರಾಯರವರು, 7. ಬಲ್ಲಚಂಡ ಬೆಳ್ಯಪ್ಪನವರು, 8. ಕೊಡಂದೇರ ದೇವಯ್ಯನವರು ಮತ್ತು 9 ಅಪ್ಪಾರಂಡ ಚಂಗಪ್ಪನವರು.

ಓಟಿಗೆ ಹಾಕಲಾಗಿ ಈ ಕೆಳಗಿನ ಮಹನೀಯರು ಬಹುಮತದಿಂದ ಚುನಾಯಿತರಾದರು.

1 ರಾವ್‌ಬಹದ್ದೂರ್ ಪಿ. ದೇವಯ್ಯನವರು, 2. ರಾವ್‌ಬಹದ್ದೂರ್ ಕೆ. ಅಪ್ಪಯ್ಯನವರು, ಮೆ. ಗಳಾದ 3. ಸಿ. ಎಸ್. ವೆಂಕಪ್ಪಯ್ಯನವರು, 4. ಕೋಟೆರ ಚಿಣ್ಣಪ್ಪನವರು ಮತ್ತು 5. ಐಚೆಟ್ಟಿರ ಸುಬ್ಬಯ್ಯನವರು.

10. ಸೊಸೈಟಿಗಳ ಪರವಾಗಿ ಈ ಕೆಳಗಿನ ಮಹನೀಯರನ್ನು ಡೈರೆಕ್ಟರುಗಳನ್ನಾಗಿ ಚುನಾಯಿಸಬಹುದೆಂತ ಸೂಚಿಸಲಾಯಿತು.

1. ಮೆ. ಗಳಾದ ಅಪ್ಪಾರಂಡ ಚಂಗಪ್ಪನವರು, 2. ಪಾಂಡಂಡ ಚಂಗಪ್ಪನವರು, 3 ಮನೆಯಪಂಡ ಬೆಳ್ಯಪ್ಪನವರು, 4. ಬಲ್ಲಚಂಡ ಬೆಳ್ಯಪ್ಪನವರು, 5 ಪುಟ್ಟಿಚಂಡ ಮಾದಯ್ಯನವರು, 6. ಕೋಟಿರ ಕಮ್ಮಯ್ಯನವರು, 7: ಮುಂಜಾಂದಿರ ದೇವಯ್ಯನವರು, 8 ನಾಪನೆರವಂಡ ಮೊಣ್ಣಪ್ಪನವರು, 9. ಕೊಡಂದೇರ ದೇವಯ್ಯನವರು, 10 ನಡಿಕೇರಿಯಂಡ ಸೋಮಯ್ಯನವರು, 11. ಉದಿಯಂಡ ಮಾಚಯ್ಯನವರು, 12 ಹಂಡ್ರ ಚಿನ್ನಮಲ್ಲಯ್ಯನವರು, 13. ಎಸ್. ಯನ್. ರಾಮಸೆಟ್ಟಿ, 14 ಕೊಂಗಂಡ ಗಣಪತಿಯವರು, 15. ಎಸ್. ಬಿಕ್ಕಪ್ಪನವರು. 16 ಪುತ್ತಮನೆ ಮುದ್ದಯ್ಯನವರು., 17. ಹೆಬ್ಬಾರೆ ಹೊನ್ನಪ್ಪನವರು, 18. ಯಸ್. ಎಸ್. ಶಂಕರಯ್ಯನವರು., 19. ಬಿದ್ದಂಡ ಐಯ್ಯಪ್ಪನವರು, 20. ಕೊಂಗಂಡ ಮುದ್ದಯ್ಯನವರು, 21 ಕಂಬೀರಂಡ ತಿಮ್ಮಯ್ಯನವರು ಮತ್ತು 22. ಪಳಂಗಂಡ ಚಂಗಪ್ಪನವರು.

ಮೆ. ಕೋಟೆರ ಚಿಣ್ಣಪ್ಪನವರು ಯೂನಿಯನ್ ಪ್ರೆಸಿಡೆಂಟರುಗಳನ್ನೇ ಡೈರೆಕ್ಟರುಗಳನ್ನಾಗಿ ಚುನಾಯಿಸಿದರೆ ಒಳ್ಳೆಯದೆಂತ ಸೂಚನೆ ಕೊಟ್ಟರು.

ಓಟಿಗೆ ಹಾಕಲಾಗಿ ಈ ಕೆಳಗಿನ ಮಹನೀಯರು ಬಹುಮತದಿಂದ ಚುನಾಯಿತರಾದರು

1. ಮೆ. ಗಳಾದ ಮನೆಯಪಂಡ ಯಂ. ಬೆಳ್ಯಪ್ಪನವರು, 2. ಅಪ್ಪಾರಂಡ ಚಂಗಪ್ಪನವರು, 3 ಪಾಂಡಂಡ ಚಂಗಪ್ಪನವರು, 4. ನಡಿಕೇರಿಯಂಡ ಸೋಮಯ್ಯನವರು, 5. ಉದಿಯಂಡ ಮಾಚಯ್ಯನವರು, 6. ಕೋಟಿರ ಕಮ್ಮಯ್ಯನವರು, 7. ಎಸ್. ಎನ್. ರಾಮಸೆಟ್ಟಿ, 8. ಪುತ್ತಮನೆ ಮುದ್ದಯ್ಯನವರು, 9. ಕೊಂಗಂಡ ಗಣಪತಿಯವರು ಮತ್ತು 10. ಪುಟ್ಟಿಚಂಡ ಮಾದಯ್ಯನವರು.

11. ನಂತರ ಸಾಯಂಕಾಲ 4 ಗಂಟೆ ಸಮಯಕ್ಕೆ ಮೀಟಿಂಗಿಗೆ ಬಂದ ಡೆಲಿಗೇಟರುಗಳಿಗೆಲ್ಲಾ ತಿಂಡಿ ತೀರ್ಥಗಳನ್ನು ಮತ್ತು ಪಾನ್ಸುಪಾರಿಗಳನ್ನೂ ಹಂಚಲಾಯಿತು.

12. ರಾವ್‌ಬಹದ್ದೂರ್ ಕೋದಂಡ ಅಪ್ಪಯ್ಯನವರನ್ನು ಬ್ಯಾಂಕಿನ ಪ್ರೆಸಿಡೆಂಟರನ್ನಾಗಿ ಇನ್ನು ಒಂದು ವರ್ಷದ ವರೆಗೆ ಚುನಾಯಿಸಬಹುದೆಂತ ಮೆ. ಐಚೆಟ್ಟಿರ ಸುಬ್ಬಯ್ಯನವರು ತಂದ ಠರಾವಿಗೆ ರಾವ್‌ಬಹದ್ದೂರ್ ಪಟ್ಟಮಾಡ ದೇವಯ್ಯನವರು ಉತ್ಸಾಹವಾಗಿ ಮಾತಾಡಿದನಂತರ ಬಹುಮತದಿಂದ ರಾ. ಬಾ. ಅಪ್ಪಯ್ಯನವರನ್ನು ಪ್ರೆಸಿಡೆಂಟರನ್ನಾಗಿ ಚುನಾಯಿಸಲಾಯಿತು.

13. ರಾ. ಬಾ. ಅಪ್ಪಯ್ಯನವರು ತನ್ನನ್ನು ಬ್ಯಾಂಕಿನ ಪ್ರೆಸಿಡೆಂಟರನ್ನಾಗಿ ಚುನಾಯಿಸಿದಕ್ಕಾಗಿ ಹಾಜರಿದ್ದ ಎಲ್ಲಾ ಪ್ರತಿನಿಧಿಗಳಿಗೂ ಮತ್ತು ಬಿಡಿ ಮೆಂಬರುಗಳಿಗೂ ವಂದನೆಯನ್ನು ಅರ್ಪಿಸಿದರು.

14. ಅಧ್ಯಕ್ಷರಿಗೆ ವಂದನೆಯಿಂದ ಮೀಟಿಂಗು ಸಾಯಂಕಾಲ 6 ಗಂಟೆಗೆ ಬರಖಾಸ್ತಾಯಿತು.

ಮಡಿಕೇರಿ, ಕೆ. ಅಪ್ಪಯ್ಯ,
ತಾ. 21—2—'32. (ಅಧ್ಯಕ್ಷರು.)

ಕೊಡಗು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್‌ರವರ ಆಫೀಸು.
ಮಡಿಕೇರಿ, ತಾ. 20 ನೇ ಫೆಬ್ರವರಿ 1932 ನೇ ಇಸವಿ.

ನೋಟೀಸು.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನೆಂದರೆ—ಸರಕಾರದ ಸ್ವಾಧೀನಕ್ಕೆ ಬಂದಿರುವ ಇದರ ಕೆಳಗೆ ನಮೂದಿಸಿದಂಥ ಕೋವಿಗಳನ್ನು ಮಡಿಕೇರಿಯಲ್ಲಿ ನನ್ನ ಆಫೀಸು ಮುಂದೆ ಇದೇ ಮಾರ್ಚಿ ತಾರೀಕು 18 ನೇ ಶುಕ್ರವಾರ 2 ಗಂಟೆ ಸಮಯಕ್ಕೆ ಹರಾಜು ಮಾಡಲ್ಪಡುವುದು.

15. ಒಂಟಿಕೊಳವಿನ ಕೇಪು ಕೋವಿಗಳು.
4. ಜೋಡು ಕೊಳವಿನ ಕೇಪು ಕೋವಿಗಳು.
1. ಜೋಡು ಕೊಳವಿನ ತೋಟದ ಕೋವಿ

ಕೆ. ಚಂಗಪ್ಪ,
2—1 ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್.

Reg. No. M. 1550.
If not delivered please return to "KODAGU" OFFICE MERCARA.

ಕೊಡಗು.

ಸತ್ಯೇನ ಧಾರ್ಯತೇ ... (slogan line, illegible)

ವಾರ್ಷಿಕ ಚಂದಾ ರೂ. ೩—೧—೦.

ಸಂಪಾದಕ—ಮೂಚಿಮಂಡ ಯಂ. ಗಣಪತಿ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೧	ಮಡಿಕೇರಿ, ಸನ್ ೧೯೩೨ನೇ ಇಸವಿ ಫೆಬ್ರವರಿ ತಾರೀಕು ೨೬ ನೇ ಶುಕ್ರವಾರ.	ಸಂಚಿಕೆ ೪೮

Office of the Asst. Commr. & Dt. Magte., Mercara (Coorg). 6th May 1931.

Dear Sir,

I am QUITE PLEASED with the workmanship of the two Coorg weapons (PICHAKATTI & ODIKKATTI)

Yours faithfully,
(Sd) (Rao Bhadur)
K. CHENGAPPA, B. A.
District Magistrate and Assistant Commissioner of Coorg.

JEWELLER
By Appointment to
H. E. The Governor of Madras.



PEECHAKATTI (WITH SILVER FITTINGS)
Prices–From Rs 100 & upwards.

"New Bungalow," Ammatti, (Coorg). 14th December 1931.

Dear Sir,

I am IMMENSELY-PLEASED with the workmanship of the PICHAKATTI you made and sent me some time back.

Yours faithfully,
Sd/ K. P. MUDDAYYA,
Ammatti (Coorg.)

Telegrams: 'PRECIOUS.'

V. Subramaniaier
Jeweller,

Telephone: 3145.

CATALOGUE ON ENQUIRY.

52–1

Post Box 423, Triplicane, P. O., MADRAS.



ಕೋವಿಗಳು, ಕತ್ತಿಗಳು, ಬಂದೂಕಗಳು, ... ಮುಂತಾದ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS.
Largest Importers of Firearms and Ammunition
Cheapest priced firm in India.

24–23 210 Abdul Rehman Street, BOMBAY.

ಬಾಲಾರ್ಕಮಧು.

ನಿಮ್ಮ ಮಕ್ಕಳ ಸೌಂದರ್ಯವನ್ನು ನೋಡಬೇಕಾದರೆ ಅದ್ಭುತ ಗುಣವುಳ್ಳ ಬಾಲಾರ್ಕ ಮಧುವನ್ನು ಕೊಡಿರಿ. ಮಕ್ಕಳು ...



ಯಂ. ವಿ. ...

52-6

ವಜ್ರದ ಅಡ್ಡಿಗೆ.

ಈ ಅಡ್ಡಿಗೆಗಳನ್ನು ಅಮೇರಿಕನ್ ಡೈಮಂಡ್ ಎಂಬ ಇಮಿಟೇಷನ್ ವಜ್ರದ ಕಲ್ಲುಗಳನ್ನು ... ಬಂಗಾರದಿಂದ ... ಬೆಲೆ ರೂ. ...



ವಿಳಾಸ:—ಕೆ. ಎಸ್. ... ಅಂಡ್ ಕೊ,

12—8 ... 1246, ಮದರಾಸು.

ಈ ಗಡಿಯಾರಗಳು ... ನಮ್ಮಲ್ಲಿ ಸ್ವಲ್ಪವೇ ಇರುತ್ತವೆ. ಇವಕ್ಕೆ ಖಾತ್ರಿಯಾದ 3 ವರ್ಷ ಗ್ಯಾರಂಟಿ ಕೊಡುತ್ತೇವೆ. ಕ್ರಯ 1ಕ್ಕೆ 4—4—0.

ವಿಳಾಸ:—ಕೆ. ಎಸ್. ... ಅಂಡ್ ಕೊ,

12—9 ... 1246, ಮದರಾಸು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೊ ಆಪರೇಟಿವ್ ಸೊಸೈಟೀಸ್ ಅಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದ್ದು 1922ರಲ್ಲಿ)

	ರೂ.
ಶೇರ್ ಬಂಡವಾಳ —	30,000
ವಸೂಲಾದ ಶೇರ್ ಮೊಬಲಗು —	26,800
ಜನರಿಂದ ಠೇವಣಾತಿ —	2,50,301

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ನೂರಿಯಾನ ರೂ. 5-0-0 ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ನೂರಿಯಾನ 4ರ ಬಡ್ಡಿ ದೊರೆಯುತ್ತೆ.

ಪರ್ಷಕೊಂಡಾವತಿ ಕೊ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು, ಕೋಳಿಮಾಡ ಅಪ್ಪಯ್ಯನವರು ರಾವ್ ಬಹದ್ದೂರ್. — ಡೈರೆಕ್ಟರ್ ಮನೆಯಪ್ಪಂಡ ಬೆಳ್ಯಪ್ಪನವರು.

ಸೆಕ್ರೆಟರಿ

ಸಿ. ಯಸ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಖು 1-7-1931.

ನೋಟೀಸು.

ಈ ಕೆಳಗಿನ ಮಹಾಶಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿದೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಲಾಗಿದೆ.

ಏಜೆಂಟರುಗಳು.

ಉತ್ತರ ಕೊಡಗಿಗೆ ಮೆ. ಬಾರಿಯಂಡ ಪೂವಯ್ಯನವರು,

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು, (ಬಾಡಿಭಂಡಾರ.)

ಸೋಮವಾರಪೇಟೆ—ಎಮ್. ಆರ್. ವೆಂಕಪ್ಪಯ್ಯನವರು.

ಅಮ್ಮತ್ತಿ—ಸಿದ್ದಾಪುರ—ಮೆ. ಬಸಂಡ ಮಾದಪ್ಪನವರು.

ಪೊನ್ನಂಪೇಟೆ—ಮೆ. ಸಿ. ಪಿ. ಮುದ್ದಯ್ಯನವರು, ಮತ್ತು ಅರಮಣಮಾಡ ಪಿ. ಕಾರ್ಯಪ್ಪನವರು,

ಕುದಿಕೇರಿ ಹಾ ತಿತಿಮತಿ—ಮೆ. ಜಿ. ಮಾದಯ್ಯನವರು,

ಕುಂಟೆಕೊಪ್ಪ—ಮೆ. ಅಪ್ಪಚಟ್ಟೋಳಂಡ ಮಾಚಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರಿಗೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿ ಯೊಬ್ಬ ಮೆಂಬರನ್ನಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಿಸಲು ಅವಶ್ಯವಾಗಿರುವ, ರೂಲ್ಸಿಗನು ಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, [illegible] ಫಾರಮುಗಳೂ, ಜಮ್ಮ ಮಂಜೂರಾತಿ ಫಾರಮು [illegible] ಬಟಂಬಸ್ಕರ ಒಪ್ಪಿಗೆ ಫಾರಮುಗಳೂ, ಜಾಮೀನು [illegible] ಫಾರಮುಗಳೂ, ಸ್ಟೋರ್ ಕೀಪರ್ ಮರಾಟು ಫಾರಮುಗಳೂ, [illegible] ಓವರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, [illegible] ರಿಜಿಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತ[illegible] ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. [illegible] ಅಗಪರ್ ಸಂಬಂಧ ಮಾ ಕಟ್ಟಳಲ್ಲಿ ವಿ. ಪಿ. [illegible] ಕಳುಹಿಸಲಾಗುವುದು.

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.

ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.

ಭಂಡವಾಳವು ಹೆಚ್ಚಾದದ್ದು—ಸುಮಾರು 1¼ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮೊಬಲಗುಳ್ಳ 1,78,322 ಜನರಿಗೆ 58 ಕೋಟಿ ರೂ.

ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4 ರಷ್ಟು ವಿಶೇಷ ಕಮ್ಮಿ ಖರ್ಚಿನಲ್ಲಿಯೇ ನಡೆಸಲ್ಪಟ್ಟಿದ್ದಾಗಿದೆ.

ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚಿನ ಬೆಂಬಲವನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬುದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ಸ್ಪಷ್ಟವಾಗುತ್ತದೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್, ಬೆಂಗಳೂರು.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೊಲಂಬೊ	ದೇಹಲಿ	ರಂಗೂನು
ಅಹ್ಮದಾಬಾದು	ಕರಾಚಿ	ಲಾಹೋರ್	ನಾಗಪುರ	ರಾವಲ್ಪಿಂಡಿ
ಅಜ್ಮೀರ್	ಢಾಕಾ	ಲಕ್ನೋ	ಪಾಟ್ನಾ	ಸಿಕಂದರಾಬಾದು
ಅಲಹಾಬಾದು	ದೆಹ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಡಾರ್ಜಿಲಿಂಗ್	ಮಂಡಲೆ	ರಾಯಪುರ	ತಿರುವೆಂದ್ರಮ್
ಭೋಪಾಲ್	ಕರಾಚಿ	ಮಂಗಳೂರು	ರಾಂಚಿ	ವಿಶಾಖಪಟ್ನ [52—51

[illegible] ಎಂಬ ಕೆಂಪು ಜ್ವರ, ಚಳಿ ಜ್ವರ, ಮಲೇರಿಯಾ ಜ್ವರ ಮತ್ತು ಜ್ವರಗಳ ದೋಷದಿಂದ ಬರುವ ರೋಗಗಳಿಗೆ [illegible] ಬೆಲೆ ಒಂದಕ್ಕೆ ರೂ. 1—4—0 [illegible] ರೂ. [illegible] 6ಕ್ಕೆ ರೂ. 7—8—0; 12ಕ್ಕೆ ರೂ. 14

ಮತ್ತೆ ರಘು ... [illegible]

[illegible] ಮುಖ್ಯ ಕಾರಣವಾಗಿ ಮೈಕೈ ನೋವು, ತಲೆನೋವು, ಬಾಯಿ ರುಚಿ ಇಲ್ಲದಿರುವುದು, ಮೂತ್ರ ಕಡಿಮೆಯಾಗಿ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಬಿಳಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯುವಿಕೆ, [illegible], ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರ ನಾಳದಲ್ಲಿ ಉಂಟಾಗುವ ರೋಗ. ಇವುಗಳಿಗೆ ಪರಮ ಔಷಧ. ಬೆಲೆ ಬಾಟ್ಲಿ 1, 3, 6ಕ್ಕೆ ರೂ. 1—4—0 3—8—0; 6—12—0

ರಿಂಗ್‌ವರ್ಮ್ ... [illegible] ಹಚ್ಚಲು [illegible] ಬೆಲೆ. ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ. 1, 7 ಡಬ್ಬಿಗೆ 3—8—0

ಮನೋಲ್ಲಾಸಿನಿ ತೈಲ:—[illegible] ಕೂದಲು ಉದುರುವುದು, [illegible] ತಲೆನೋವು [illegible] ಬೆಲೆ ಬಾಟ್ಲಿ 1, 3 ಬಾಟ್ಲಿಗೆ 2—10—0. ಒಂದು ದೊಡ್ಡ ಬಾಟ್ಲಿಗೆ ರೂ. 2, 3 ಬಾಟ್ಲಿಗಳಿಗೆ 5—[illegible]

ವಿಳಾಸ:—ಮನೋಲ್ಲಾಸಿನಿ ಕಂಪೆನಿ,

52—39 ಕಲ್ಲಿಕೋಟೆ ಕಡಿ ರೋಡು. 9. ಮಂಗಳೂರು.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ, ಟಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,

52—6 ಗಿರಿಗಾಂವ, ಮುಂಬಯಿ.

Printed & published by M. M. Ganapathy at "Kodagu" Press Mercara for "Kodagu" Ltd.

೫೩ ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ ಔಷಧಗಳು.

೧. ಧಾತುಪುಷ್ಟಿ ಲೇಹ.

ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕ ಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಮೂತ್ರದ ಬಾಧೆ, ರಕ್ತ, ಪಿತ್ತ, ಜೀರ್ಣ ಜ್ವರ, ನಿರ್ಬಲತೆ, ಮೊದಲಾಗಿ ಬರುವ ಸಮಸ್ತ ರೋಗಗಳು ಪೂರ್ಣವಾಗಿ ಗುಣವಾಗಿ ಕಳೆದು ಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು. ಕ್ರಯ ಡಬ್ಬಿ 1ಕ್ಕೆ 2–8–0 ಮೂರು ಡಬ್ಬಿಗಳಿಗೆ ರೂ. 7–0–0

೨. ಅಶೋಕಾರಿಷ್ಟ ಮತ್ತು ಸೂತ್ರ.

ಹೆಂಗಸರ ಮುಟ್ಟಿನ ದೋಷಗಳು, ಮುಟ್ಟು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟ ನೋವು, ಸಂತಾನ ಹೀನತೆ, ಮೂರ್ಛೆ, ನಿರ್ಬಲತೆ, ಬಿಳಿಸ್ರಾವ, ರಕ್ತಹೀನತೆ, ಕೈಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಅತಿ ಶೀಘ್ರದಲ್ಲಿಯೇ ಗುಣಪಡಿಸುವುದು. ಈ ಅಶೋಕಾರಿಷ್ಟ ಮತ್ತು ಸೂತ್ರಗಳು ಸಾವಿರಾರು ಹೆಂಗಸರಿಗೆ ಆಂತರಿಕ ಆರೋಗ್ಯವನ್ನು ಒದಗಿಸಿ, ಮನೋಭಿಲಾಷೆಯನ್ನು ಪೂರೈಸಿರುವವು.

ಕ್ರಯ 1 ಬಾಟ್ಲಿ ಔಷಧ, 1 ಡಬ್ಬಿ ಸೂತ್ರ ರೂ. 2 ಆ. 4

3 ಬಾಟ್ಲಿ ಮತ್ತು ಡಬ್ಬಿಗಳಿಗೆ ರೂ. 6 ಆ. 4.

೩. ಮಲೇರಿಯಾ ನಿವಾರಣೆ.

ದಿನ ಬಿಟ್ಟು ಬರುವ ಜ್ವರ, ಚಳಿ ಜ್ವರ, 2 ಯಾ 3 ದಿನ ಸಕಾಲಕ್ಕೆ ಬರುವ ಜ್ವರ, ಸದಾ ಬರುವ ಜ್ವರ, ಜ್ವರದ ಗಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರ ಗಡ್ಡೆಯನ್ನು ಕರಗಿಸಿ ಶಕ್ತಿಯನ್ನು ಉಂಟುಮಾಡುತ್ತದೆ. ಬಾಟ್ಲಿ 1 ಕ್ಕೆ 1–8–0, 3 ಬಾಟ್ಲಿಗಳಿಗೆ 4–2–0.

೪. ಮೋಹ ಕುಠಾರ. ಇದು ಮೂತ್ರಸ್ಥಾನದಿಂದ ಕೆಂಪು, ಬಿಳಿದು, ಹಳದಿಯಂತೆ ಹೋಗತಕ್ಕ ಕೀವನ್ನೂ, ವ್ರಣವನ್ನೂ, ಉರಿಯನ್ನೂ ಗುಣಪಡಿಸುತ್ತದೆ. ಡಬ್ಬಿ 1 ಕ್ಕೆ ರೂ. 2–8–0. 3ಕ್ಕೆ ರೂ. 7.

೫. ಇಚ್ಛಾ ಭೇದಿ ಗುಟಿಕೆ. ಭಯವನ್ನು ಉಂಟುಮಾಡುವ ಸುಖ ವಿರೇಚಕ. ಬಾಟ್ಲಿ 1ಕ್ಕೆ 0–12–0 ಆಣೆ. 3 ಬಾಟ್ಲಿಗಳಿಗೆ 2–2–0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ರವಾನಿಸಬಹುದು. ಕೆಟಲಾಗು ತರಿಸಿ ನೋಡಿರಿ.

ಬಿ. ಗಣಪಯ್ಯ ಅಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್ಸ್,

52–11 ರಥಬೀದಿ, ಮಂಗಳೂರು, ದ. ಕನ್ನಡ

ಭಂಗಾರದ ಕೈಗಡಿಯಾರ.

ಈ ಚಿತ್ರದಲ್ಲಿ ಕಾಣುವ ಭಂಗಾರದ ಕೈಗಡಿಯಾರವು ಬಹು ಬಲಿಷ್ಟವಾದ (ಸ್ವಿಸ್ ಮೇಡ್) ಲೀವರ್ ಸಾಮಾನುಗಳಿಂದ ತಯಾರಾದವು. ಬರಾಬರು ಗಂಟೆಯನ್ನು ತೋರಿಸುವವು. ಒಳಗಡೆ ಕಂಪ್ರಗಳು ಇಟ್ಟಿವೆ. ಇದರ ಬಣ್ಣವು ಭಂಗಾರದಕ್ಕೆ ಸರಿಯಾಗಿರುವುದು. ಇದನ್ನು ಈ ವಾರದಲ್ಲಿ ಖರೀದಿಸುವವರಿಗೆ ಒಂದು ವಜ್ರದ ಉಂಗುರ, ಒಂದು ಗೋಲ್ಡ್ ಗೆದೀಲ್ಟ್ ಭಂಗಾರದ ಕತ್ತಿನ ಹಾರ (ನೆಕ್‌ಲೇಸ್), ಒಂದು ಟೇಬಲ್ ಟ್ರಿಂಪೀಸು ಇನಾಮಾಗಿ ಕೊಡುವೆವು. 2 ಗಡಿಯಾರಗಳಿಗೂ ಖಾತ್ರಿಯಾದ 4 ವರ್ಷ ಗ್ಯಾರಂಟಿ ಪತ್ರ ಸಹ ಕಳುಹಿಸುವೆವು.

3 ಬಹುಮಾನಗಳ ಸಹಿತ ರಿಸ್ಟ್‌ವಾಚ್ 1 ಕ್ಕೆ 6–8–0.

ವಿಳಾಸ:— ಸಿಟಿ ಮಾರ್ಟ್,

12–8 168. ಜೈನರ ಬಜಾರ್, ಮದರಾಸು.

12 ಸೆಂಟ್ ಬಾಟಲ್, ಫೌಂಟನ್ ಪೇನಾ ಲೀವರ್ ಪಾಕೆಟ್ ವಾಚ್ 2–12–0 ಮಾತ್ರ.

ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ

ಲಿಲ್ಲಿ ಆಫ್ ದಿ ವ್ಯಾಲ್ಲಿ ಮತ್ತು ಫೌಂಟೆನ್ ಪೇನಾ.



ಈ ಸುಗಂಧ ದ್ರವ್ಯವು ಫ್ರಾನ್ಸ್ ದೇಶದಲ್ಲಿ ಪುಷ್ಪಗಳ ಸಾರದಿಂದ ತಯಾರಿಸಿದ್ದು, ಇದರಲ್ಲಿ ಮದ್ಯಸಾರಗಳು ಯಾವುವೂ ಸೇರಿರುವುದಿಲ್ಲ. ಇದರಲ್ಲಿ ಒಂದು ಒಂದು ತೊಟ್ಟನ್ನು ಬಟ್ಟೆಗೆ ಹಾಕಿದರೆ ಒಂದು ವಾರದ ವರೆಗೂ ಒಂದೇ ಸಮನಾಗಿ ಗಮಗಮಿಸುತ್ತಿರುವುದು. ಲಿಲ್ಲಿ ಆಫ್ ದಿ ವ್ಯಾಲ್ಲಿ ಎಂಬ ಈ ಸುಗಂಧ ದ್ರವ್ಯಕ್ಕೆ ಸರಿಸಮಾನವಾದದ್ದು ಬೇರೊಂದು ಇಲ್ಲ. ವಿಲಾಯಿತಿಯಲ್ಲಿ ತಯಾರಾದ 14 ಕ್ಯಾರೆಟ್ಟಿನ ಭಂಗಾರದ ನಿಬ್ಬು ಹಾಕಿದ ಫೌಂಟೆನ್ ಪೇನಾ, ಒಂದೇ ಸಲ 12 ಸೆಂಟ್ ಬಾಟಲ್, ಪೇನಾ ತರಿಸುವವರಿಗೆ ಒಂದು ಪಾಕೆಟ್ ಗಡಿಯಾರವನ್ನು ಇನಾಮಾಗಿ ಕೊಡುತ್ತೇವೆ.

ಕ್ರಯ ರೂ. 2–12–0 ಮಾತ್ರ.

The Legal Trading Co.

12–9 P. B. 243, Madras.

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಎಂಬುವ ಸುಪ್ರಸಿದ್ಧ ದೇಶೀಯ ವಿಮೇ ಸಂಘ.

ಅಧ್ಯಕ್ಷರು:—ಮಾನ್ಯ ಸರ್ ಲಲ್ಲೂಭಾಯಿ ಸಾಮಲದಾಸ್, ಕೆಟಿ., ಸಿ. ಐ. ಇ., ಜೆ. ಪಿ., ಯವರು.

ಜೋಜ್ಜೀಕಾರ ಬ್ರದರ್ಸ್, ಮದ್ರಾಸು ಬ್ರಾಂಚು ಸೆಕ್ರಟರಿಗಳು.

1. ಧಾನ್ಯವಂತರ ಭಂಡಾರ, ವ್ಯಾಪಾರಸ್ಥರ ಕೋಶಾಗಾರ, ಕುಟುಂಬದ ಸಂರಕ್ಷಣಾಸಾಧನ. ಬಡವರ ಜೀವನಾಧಾರ ಇದೇ ಜೀವ ವಿಮೆಯ ತತ್ವವು.

2. ಹಿಂದೂಸ್ಥಾನದ ನಿವಾಸಿಗಳಲ್ಲಿ ವಿಮೆ ತೆಗೆಯಬೇಕೆನ್ನುವವರ ಪ್ರಯೋಜನಾರ್ಥವಾಗಿ ಈ ಕಂಪೆನಿಯು ಭಾರತೀಯರ ಉತ್ಸಾಹದ ಪರಿಣಾಮದಿಂದ ಏರ್ಪಟ್ಟಿತು. ಇಂಡಿಯಾ ಸರಕಾರದ ಇಂಡಿಯನ್ ಟ್ರಸ್ಟ್ ಆಕ್ಟಿಗೆ ಒಳಪಟ್ಟು ಸರಕಾರದ ಭದ್ರತೆಯಿಂದ ದೇಶೀಯರ ಸೇವೆಯಲ್ಲೇ ನಿರತವಾಗಿ ಹಿಂದೂಸ್ಥಾನದ ಎಲ್ಲಾ ಕಡೆಗಳಲ್ಲೂ ಅತಿ ಕೀರ್ತಿಯನ್ನು ಪಡೆದಿರುತ್ತೆ.

3. ಈ ಸ್ವದೇಶೀ ಕಂಪೆನಿಯು ಪೋಲಿಸಿದಾರರಿಗೆ ಪೋಲಿಸಿ ಅವಧಿ ಪೂರೈಸಿದನಂತರವಾಗಲೀ ಅಥವಾ ಮಧ್ಯದಲ್ಲಿ ಮರಣಾನಂತರ ವಾರೀಸುದಾರರಿಗಾಗಲೀ ಹೆಚ್ಚಿನ ಖರ್ಚಿಗೆ ಅವಕಾಶ ಕೊಡದೆಯೂ, ದೀರ್ಘ ಸಮಯ ತೆಗೆದುಕೊಳ್ಳದೆಯೂ ಶೀಘ್ರದಲ್ಲಿ ವಿಮೇ ಮೊಬಲಗನ್ನು ಲಾಭ ಸಹಿತ ಪಾವತಿಕೊಡುವುದರಲ್ಲಿ ಹೆಸರುಗೊಂಡಿದೆ.

4. ಭಾರತಖಂಡದ ಮಹಾಸಭೆಯಿಂದ ಸ್ಥಾಪಿಸಲ್ಪಟ್ಟ ದೇಶೀಯರಿಂದಲೇ ಅತಿ ಕಡಿಮೆ ಖರ್ಚಿನಿಂದ ನಡಿಸಲ್ಪಡುವ ಈ ಸ್ವದೇಶೀ ಕಂಪೆನಿಯಲ್ಲಿ ಇಂದು ಭಾಗಿಗಳಾಗಿ, ಪತಿಪತ್ನಿಯರಿಗೆ ಮತ್ತು ವ್ಯಾಪಾರಸ್ಥರು ವಗೈರೆಗೆ ಏಕೀಭವಿಸಿ (ಜಾಯಿಂಟ್ ಲೈಫ್) ಪೋಲಿಸಿ ತೆಗೆದುಕೊಳ್ಳಲು ಈ ಕಂಪೆನಿಯು ತುಂಬಾ ಅನುಕೂಲಗಳನ್ನು ಕಲ್ಪಿಸಿರುತ್ತೆ. ಇಂಥ ಸುಸಮಯವನ್ನು ಎಂದಿಗೂ ಕಳಕೊಳ್ಳಬಾರದು.

ಆಫೀಸು—

ಟೆಂಪಲ್ ಸೈಡ್,

ಮಡಿಕೇರಿ. (26–18)

ಬಿ. ಎಸ್. ಐಯ್ಯಪ್ಪ,

ಕೊಡಗು ಚೀಫ್ ಏಜೆಂಟ್.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಉತ್ತಮ ತರಹ ಒಂದು ಸೆಟ್ ಜರ್ಮನ್ ರೀಡ್ಸ್ ಹಾಕಿರುವ ಸಿಂಗಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 20–0–0

" ಮತ್ತು 22–8–0

ಡಿಟೋ ಉತ್ತಮ ತರಹ ಹಾರ್ಮೋನಿಯಂ

" 1ಕ್ಕೆ ರೂ. 25–0–0

" ಮತ್ತು 27–8–0

ಡಿಟೋ ಉತ್ತಮ ತರಹದ್ದು, ದೂಳು ಬೀಳದಂತೆ ಕೇಸಿನ ಮೇಲೆ ಪೂರ್ತಿ ಮುಚ್ಚಳವುಳ್ಳ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ ರೂ. 27–8–0

4. ಬಾಳಿಕೆಯೂ, ಬಂದೋಬಸ್ತೂ, ಸ್ವರವುಳ್ಳದ್ದೂ, ಅನೇಕ ವರ್ಷಗಳ ವರೆಗೆ ಬಾಳಿಕೆ ಬರತಕ್ಕದ್ದೂ ಆದ ಹೊಸದಾಗಿ ಸಪ್ಲೈ ಆಗಿರುವ ಫ್ರೆಂಚ್ ರೀಡ್ಸ್ ನಮೂನೆ ಇರುವ ನಮ್ಮ ಹೊಸ ರೀಡ್ಸ್ ಹಾಕಿರುವ "ಸಿದ್ದಪ್ಪಾಸ್ ಫ್ಲೂಟ್" ಸಿಂಗಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 42–8–0

5. ಉತ್ತಮ ತರಹ 2 ಸೆಟ್ ಜರ್ಮನ್ ರೀಡ್ಸ್ ಹಾಕಿರುವ, ದೂಳು ಬೀಳದಂತೆ ಕೇಸಿನ ಮೇಲೆ ಪೂರ್ತಿ ಮುಚ್ಚಳವುಳ್ಳ ಡಬ್ಬಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ ರೂ. 3[illegible]

6. ಉತ್ತಮ ತರಹ 2 ಸೆಟ್ ಜರ್ಮನ್ ಮೇಕ್ ರೀಡ್ಸ್ ಹಾಕಿರುವ, ಕೈನಿಂದಾಗಲೀ ಅಥವಾ ಕಾಲಿನಿಂದಾಗಲೀ ಬಾರಿಸಲು ಅನುಕೂಲಿಸುವಂತೆ ತಯಾರಿಸಿರುವ "ಸ್ಪೆಷಲ್ ಫ್ಲೂಟ್" ಡಬ್ಬಲ್ ರೀಡ್ಸ್ ಹ್ಯಾಂಡ್ ಲೆಗ್ ಹಾರ್ಮೋನಿಯಂ 1ಕ್ಕೆ

ನಮ್ಮ ಟಿಂಬರ್ ಡಿಪೋನಲ್ಲಿ ಕಟ್ಟಡಗಳಿಗೂ, ಫರ್ನಿಚರ್ ತಯಾರಿಸಲು ಬೇಕಾದ ಎಲ್ಲಾ ನಮೂನೆ ನಾಟಾಗಳನ್ನು ಸುಲಭ ದರದಿಂದ ಶೇಖರಿಸಿಟ್ಟಿರುವುದಲ್ಲದೇ, ಗಿರಾಕಿಗಳು ಅಪೇಕ್ಷಿಸುವ ಸೈಜಿಗೆ ಕುಯಿಸಿಯೂ ರಿಯಾಯಿತಿ ದರದಿಂದ ಸಪ್ಲೈ ಮಾಡುತ್ತೇವೆ. ಹೆಚ್ಚಿಗೆ ವಿಷಯಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಳಾಸ:— ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಹಾರ್ಮೋನಿಯಂ ಮತ್ತು ಟಿಂಬರ್ ಮರ್ಚೆಂಟ್ಸ್, ವಾಣೀವಿಲಾಸ ಮಾರ್ಕೆಟ್ ಹತ್ತಿರ

52–34

ಪತ್ರವ್ಯವಹಾರ.

[ಬಾತ್ಮಿದಾರರು ಪತ್ರದ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ.]

ಕರ್ನಾಟಕ ಸಂಘ.

ಮಹನೀಯರೇ,

ಕರ್ನಾಟಕಾಭಿಮಾನಿಯು ಕೊಡಗಿನಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತಿನ ಅಂಗವಾಗಿ ಒಂದು ಸಂಘವನ್ನು ಸ್ಥಾಪಿಸಬೇಕೆಂದು ಬರೆದಿರುವುದು ಬಹಳ ಸ್ತುತ್ಯಾರ್ಹವಾದುದೇ ಸರಿ. ಅಂಥಾ ಸಂಘಗಳು ಕೊಡಗಿನಲ್ಲಿ ಇಲ್ಲದೆ ಇರುವುದರಿಂದ ಕನ್ನಡ ಭಾಷೆಯ ಏಳಿಗೆಗೂ, ಲೇಖಕರು ಮುಂದೆ ಬರುವುದಕ್ಕೂ ಏನೂ ಪ್ರೋತ್ಸಾಹವಿಲ್ಲದಂತಾಗಿದೆ. ಆದರೆ ಈ ಸಂಬಂಧವಾಗಿ ಚರ್ಚಿಸಲು ಸಮ್ಮೇಳನವನ್ನು ಈ ತಿಂಗಳು 21ರಲ್ಲಿ ನಡೆಸುವುದರ ಬದಲು ಮಾರ್ಚ್ ತಿಂಗಳ ಈಸ್ಟರ್ ರಜೆಯಲ್ಲಾಗಲೀ, ಅಥವಾ ಏಪ್ರಿಲ್ ತಿಂಗಳಿನ ಯಾವುದಾದರೊಂದು ಅನುಕೂಲವಾದ ದಿನದಲ್ಲಾಗಲೀ ಜರುಗಿಸಿದರೆ ಹೆಚ್ಚು ಜನರು ಅದರ ಕಾರ್ಯದಲ್ಲಿ ಭಾಗಿಗಳಾಗಿ ಅದನ್ನು ಯಶಸ್ವಿಯನ್ನಾಗಿ ಮಾಡುವುದಕ್ಕೆ ಸಾಧ್ಯವಾಗಬಹುದೆಂದು ಭಾವಿಸುವೆನು. ಈ ವಿಷಯವನ್ನು ಕರ್ನಾಟಕಾಭಿಮಾನಿಗಳೆಲ್ಲರೂ ಆಲೋಚಿಸಬೇಕೆಂದು ಕೋರುವ.

'ಕನ್ನಡಿಗ'

ಖರ್ಚಿನ ಹೊರೆ.

ಅಯ್ಯಾ,

ಸರಕಾರಕ್ಕೆ ಉತ್ಪತ್ತಿಯು ಕಡಿಮೆಯಾಗಿದೆಯೆಂಬ ಕಾರಣದಿಂದ ರೈತರಿಗೆ ಪ್ರಯೋಜನವಾಗುವ ಕೆಲಸಗಳೆಲ್ಲವೂ ಜಾರಿಯಾಗಿರುವುದೂ ಅಲ್ಲದೆ ಸರಕಾರ ನೌಕರರ ಸಂಬಳವೂ ಕಡಿಮೆ ಮಾಡಲ್ಪಟ್ಟಿದೆ. ಹೀಗಿರುವಾಗ ವೈಸ್‌ರಾಯರ ಭೇಟಿಯ ಜ್ಞಾಪಕಾರ್ಥವಾಗಿ ಮಡಿಕೇರಿಯಲ್ಲಿ ಒಂದು ಕಲ್ಲಿನ ಕಟ್ಟಡವನ್ನು ಕಟ್ಟುವ ಏರ್ಪಾಡು ನಡೆಯುತ್ತಿದೆಯಾಗಿ ತಿಳಿಯುತ್ತೇನೆ. ಈ ಕಟ್ಟಡವು ಎಂದರೆ ಮನೆಯೋ ಸಹ ಅಲ್ಲ. ಮನೆಯಾದರೆ ತಿರುಗಾಡಿಕೊಂಡು ಹೋಗುವವರಿಗೆ ಕೂಡ ಕೊಟ್ಟಲಿಕ್ಕಾದರೂ ಉಪಕಾರವಾಗುತ್ತಿತ್ತು.

ಈ ಕಟ್ಟಡವನ್ನು ಯಾವ ಸ್ಥಳದಲ್ಲಿ ಕಟ್ಟುವುದೆಂತ ವಾಚಕರಿಗೆ ನಾನು ತಿಳಿಸಲಿಲ್ಲ. ಇದು ಮಡಿಕೇರಿ ರಾಜಸೀಟ್ ಮೈದಾನದ ಬದಿ ಗುಡ್ಡದ ಮೇಲೆ ವೈಸ್‌ರಾಯರಿಗೆ ದೇಶದವರು ಸತ್ಕಾರ ಕೊಟ್ಟ ಸ್ಥಳದ ಸಮೀಪ.

ಈ ಕಟ್ಟಡವೆಂದರೆ ಒಂದು ಶಿಲೆಯಲ್ಲಿ ಶಾಸನ ಬರೆದು ನಿಲ್ಲಿಸುವುದು ಆಗಿದೆ. ಈ ಜ್ಞಾಪಕಾರ್ಥವಾಗಿ ಇರುವ ಶಿಲಾಶಾಸನವು ಕೊಡಗು ಕಾನ್ಸಿಲಿನಿಂದ ಮಂಜೂರಾಗಿದೆಯೇ? ಜನರ ಯಾವ ಪ್ರತಿನಿಧಿಯಾಗಲೀ, ವ್ಯಕ್ತಿಯಾಗಲೀ, ಸಂಸ್ಥೆಯಾಗಲೀ ಈ ಶಿಲಾಶಾಸನದ ಕಟ್ಟಡವನ್ನು ಕಟ್ಟಬೇಕೆಂತ ಕೇಳಿಕೊಂಡರೇ. ಪ್ರಜಾಜನರು ಇಂಥಾ ಶಿಲಾಶಾಸನವನ್ನು ಇಡಬೇಕೆಂತ ಅಪೇಕ್ಷಿಸದೆ ಇದ್ದರೆ ಜನರಿಗಾಗಿ ಇರುವ ಸರಕಾರವು ಇಂಥಾ ಶಾಸನವನ್ನು ಇಡಲು ಆಲೋಚಿಸಲು ಕಾರಣವೇನು.

ಕೊಡಗಿಗೆ ದಯಮಾಡಿಸಿದ ಲಾರ್ಡ್ ಇರ್ವಿನರು ಕೊಡಗಿಗೆ ಮಾಡಿದ ಉಪಕಾರವೇನು? ಕೊಡಗಿಗೆ ಸ್ವರಾಜ್ಯವನ್ನಿತ್ತರೇ? ಕೊಡಗಿನ ರೈತರಿಗೆ ಈ ಮೊದಲೇ ಇರುವ ಹೆಚ್ಚಿನ ಹೊರೆಯಾಗಿರುವ ತೆರಿಗೆಗಳಲ್ಲಿ ಯಾವುದಾದರೂ ಒಂದು ಬಾಬ್ತಾದರೂ ಕಡಿಮೆ ಮಾಡಿದರೇ? ಕೊಡಗಿಗೆ ಕೌನ್ಸಿಲ್ ಬರುವ ಮುಂಚೆ ಕೊಡಗಿನ ಗಂಧವನ್ನೆಲ್ಲಾ ಕಡಿದು ಮಾರಿ [illegible]ಕೊಂಡ ಉಳಿಪರಿಯಾದ ಲಕ್ಷಾಂತರ ರೂಪಾಯಿಗಳ [illegible] ಒಂದು ಭಾಗವನ್ನಾದರೂ ಕೊಡಗಿಗೆ ವಾಪಸು ಕೊಡಲು [illegible]ತ್ತಿದ್ದರೇ? ಒಪ್ಪುವುದಂತಿರಲಿ—ಈ ಕೋರಿಕೆಯನ್ನು ಜನರ [illegible]ವಾಗಿ ಒಪ್ಪಿಸಲ್ಪಟ್ಟ ಸನ್ಮಾನ ಪತ್ರಗಳಲ್ಲಿ ಕೇಳಿಕೊಂಡ [illegible] ಜವಾಬೇ ಕೊಡಲಿಲ್ಲ. ಆದ್ದರಿಂದ ಕೊಡಗಿನ ಭಾಗ್ಯಕ್ಕೆ ವೈಸರಾಯರು ಬಂದು ಹೋದದ್ದೆಂದರೆ ಕೊಡಗಿನ ಸೌಂದರ್ಯವನ್ನು ನೋಡಲು ಬಂದು ಹೋಗುವ ಎಷ್ಟೋ [illegible] ಯೂರೋಪಿಯರು ಬಂದು ಹೋದಂತೆಯೋ ಸರಿ. ಹೀಗಿರು[illegible]ಗೆ ವೈಸ್‌ರಾಯರು ಕೊಡಗನ್ನು ಸಂದರ್ಶಿಸಿದ್ದಕ್ಕೆ ಜ್ಞಾಪ[illegible]ರ್ಥ ಕಟ್ಟಡವನ್ನು ಕಟ್ಟಿಸಲು ಕಾರಣವೇ ಇಲ್ಲ.

[illegible] ಒಂದು ಚಿಕ್ಕ ಕಟ್ಟಡವನ್ನು ಕಟ್ಟುವುದಕ್ಕೆ ಇಷ್ಟೆಲ್ಲಾ [illegible] ಖರ್ಚು ಎಂತ ಕೇಳಬಹುದು. ಈ [illegible] ಸಾವಿರಕ್ಕಿಂತ ಕಡಿಮೆ ಇಲ್ಲದ ಹಣ ಖರ್ಚಾ[illegible] ತಿಳಿಯುತ್ತೇನೆ. ಈ ಖರ್ಚು ಎಷ್ಟಾಯಿತೆಂ[illegible] ಈ ವರ್ಷದ ಜಮಾ ಖರ್ಚು ಪ್ರಕಟ[illegible]ಯಬೇಕಷ್ಟೆ. ಸರಕಾರಕ್ಕೆ ಹಣವಿಲ್ಲವೆಂಬ [illegible] ಲೆಕ್ಕದಲ್ಲಿ ತೆಗೆದುಕೊಳ್ಳುವ ಬೀಡಿ ನ[illegible] ತೆರಿಗೆ ಹಾಕಬೇಕೆಂತ ಸರಕಾರವು ಯೋ[illegible] ಸಾವಿರ ರೂಪಾಯಿನ ಖರ್ಚನ್ನು [illegible] ಪ್ರಜಾಜನರ ಕರ್ತವ್ಯವಾಗಿದೆ.

[illegible] ಈ ಖರ್ಚಿನ ವಿಷಯದಲ್ಲಿ ಸರಕಾರದ ವಿ[illegible]ವಂತೆ ಕೌನ್ಸಿಲರುಗಳು ಮಾಡಿದರೆ ಉ[illegible]

"ರೈತ"

ಲೇಬರ್ ಪಾರ್ಟಿಯವರು ಬ್ರಿಟಿಷರ

ಈಗಿನ ಹಿಂದೀ ರಾಜನೀತಿಯನ್ನು ಖಂಡಿಸಿದುದು.

ತಾ॥ 13ರಲ್ಲಿ ಲಂಡನಿನ 'ಸ್ನೇಹಿತರ ಮನೆ' ಎಂಬ ಸಂಸ್ಥೆಯಲ್ಲಿ ಅರ್ಲ್ ರಸ್ಸೆಲ್ ಎಂಬವರ ಅಧ್ಯಕ್ಷಸ್ಥಾನದಲ್ಲಿ ತುಂಬಾ ಜನರು ಸೇರಿದ ಒಂದು ಮೀಟಿಂಗು ನಡೆಯಿತು. ಅಧ್ಯಕ್ಷರು ಹೇಳಿದ್ದೇನೆಂದರೆ:—ಸರ್ಕಾರದ ರಾಜನೀತಿಯು ಹುಚ್ಚುತನವು—ಪ್ರತಿಯೊಬ್ಬನೂ ಅದನ್ನು ನಿರಾಕರಿಸಬೇಕಾದದ್ದು ಕರ್ತವ್ಯವಾಗಿದೆ. ಹಿಂದೂಸ್ಥಾನದ ಜನರನ್ನು ಜುಲುಮಿನಿಂದ ಅಧೀನಪಡಿಸಬೇಕೆಂಬ ಪ್ರಯತ್ನವು ಸೋಲಲೇ ಬೇಕೆಂಬುದು ಸ್ವತಃ ಸಿದ್ಧವಾಗಿದೆ. ಯಾಕೆಂದರೆ—ಅಂತ್ಯದಲ್ಲಿ ಎಷ್ಟೇ ಗೌರವಕ್ಕೆ ಹಾನಿಯಾದರೂ ನಾವು ಒಗ್ಗಲೇ ಬೇಕಾಗುತ್ತದೆ. ಈಗ ನಾವು ಬಗ್ಗುವಂತೆ ಬಲತ್ಕರಿಸಲ್ಪಟ್ಟೆವು ಎಂಬ ಕಾರಣದಿಂದ ಸ್ವಾಭಾವಿಕವಾಗಿ ನಮ್ಮ ಮೇಲೆ ಇರುವ ದ್ವೇಷವನ್ನು ಮರೆಸಲಾಗುವುದಿಲ್ಲ. ಈಗಿನ ಹಿಂದೂಸ್ಥಾನದ ಆಳ್ವಿಕೆಯು ಎಲ್ಲಾ ಪ್ರಜಾತಂತ್ರ ಸರ್ಕಾರ ಪದ್ಧತಿಗೆ ವಿರೋಧವಾಗಿದೆ.

ಮಿ. ಬ್ರ್ಯಾನ್ಸ್‌ಬರಿಯವರು ಹೇಳಿದ್ದೇನೆಂದರೆ.—

ಹಿಂದೂಸ್ಥಾನವು ಬ್ರಿಟಿಷರ ಅಧೀನವಿರುವುದರಿಂದ ಹಿಂದೂಸ್ಥಾನದ ಧನವೆಲ್ಲಾ ಹೊರಗೆ ಹರಿದು ಹೋಗುತ್ತಿದೆ. ರಾಷ್ಟ್ರೀಯ ಚಳವಳವು ಬಹಳ ನಿಧಾನದಿಂದ ಪ್ರಾರಂಭವಾಯಿತು. ಕೆಲವು ವರ್ಷಗಳ ಕೆಳಗೇನೇ ನಾವು ಹಿಂದೀಯರ ಕೋರಿಕೆಗೆ ಕಿವಿಕೊಟ್ಟಿದ್ದರೆ ಹಿಂದೂಸ್ಥಾನವು ಈಗಿನ ಕಠಿಣ ತರಹದ ಹೋರಾಟವಿಲ್ಲದೇನೇ ಸ್ವರಾಜ್ಯ ಸರ್ಕಾರವನ್ನು ಇಷ್ಟರಲ್ಲೇ ಅನುಭವಿಸುತ್ತಲಿರುತ್ತಿತ್ತು. ಬ್ರಿಟಿಷ್ ಸಾಮ್ರಾಜ್ಯದೊಳಗೆ ಇರುತ್ತೇನೆ ಅಥವಾ ಇರುವುದಿಲ್ಲವೆಂಬ ಸ್ವಾತಂತ್ರ್ಯವು ಹಿಂದೂಸ್ಥಾನಕ್ಕೆ ಯಾಕೆ ಇರಬಾರದು? ಹಿಂದೀಯರ ಹಿತ ಅಹಿತ ನಮಗೆ ತಿಳಿದಿರುವುದರಿಂದ ಅವರನ್ನು ನಮಗೆ ಯುಕ್ತಕಂಡ ರೀತಿಯಲ್ಲಿ ಆಳಬೇಕೆಂಬ ಭಾವನೆಯನ್ನು ನಾವು ಬಿಡಬೇಕು. ಹಿಂದೂಸ್ಥಾನದ ಭವಿಷ್ಯವನ್ನು ನಿರ್ಣಯಿಸಿಕೊಳ್ಳುವ ಹಕ್ಕು ಹಿಂದೀಯರಿಗೇನೇ [illegible] ಬೇಕೆಂಬುವದೇ ಈ ಪ್ರಶ್ನೆಯ ಮುಖ್ಯ ವಿಷಯ. [illegible]ಮೆಂಟಿನ ಖಾನೂನು ಮೇರೆ ಸಾಮಂತ ರಾಜ್ಯಗಳಿಗೆ ಬ್ರಿಟಿಷ್ ಸಾಮ್ರಾಜ್ಯವನ್ನು ಬಿಟ್ಟು ಹೋಗಲು ಎಷ್ಟು ಹಕ್ಕಿದೆಯೋ ಹಿಂದೂಸ್ಥಾನಕ್ಕೂ ಅಷ್ಟೇ ಹಕ್ಕಿರಬೇಕು. ಬ್ರಿಟಿಷ್ ಸಾಮ್ರಾಜ್ಯದಲ್ಲಿ ಸಮಸಮಾನ ಹಕ್ಕು ಮತ್ತು ಸ್ಥಾನ ಹಿಂದೂಸ್ಥಾನಕ್ಕೆ ಸಿಕ್ಕುವ ರೀತಿಯ ರಾಜಕೀಯ ರಚನೆಯನ್ನು ನಮಗೆ ಯೋಜನಾಗಬೇಕೆಂಬ ಮನಃಪೂರ್ವಕ ಕುತೂಹಲದಿಂದಲೇ ಮಿ. ಗಾಂಧಿಯವರು ದುಂಡು ಮೇಜು ಪರಿಷತ್ತಿಗೆ ಬಂದರೆಂತ ನಾನು ನಂಬುತ್ತೇನೆ. ಆಖೈರ್ ತೀರ್ಮಾನಕ್ಕೆ ಬರದೆ ಪರಿಷತ್ತು ಮುಕ್ತಾಯವಾದದ್ದಕ್ಕೆ ಗಾಂಧಿಯವರು ಜವಾಬ್ದಾರರಲ್ಲ.

ಹಿಂದೀಯರು ತಮ್ಮೊಳಗೆ ಒಗ್ಗಟ್ಟಿನಿಂದ ಒಪ್ಪಂದಕ್ಕೆ ಬರದ್ದರಿಂದ ಪರಿಷತ್ತು ಒಡೆದು ಹೋಯಿತು ಎಂಬ ಭಾವನೆಯನ್ನು ಉಪನ್ಯಾಸಕರು ನಿರಾಕರಿಸಿದರು. ಅವರೊಳಗೆ ಇರುವ ವ್ಯತ್ಯಾಸಗಳು ನಮಗೆ ಸಂಬಂಧವಿಲ್ಲ. ನಾವು ಜುಲುಮಿ ನಡೆಸಿದರೂ ಅವರು ಒಗ್ಗಟ್ಟಿಗೆ ಬರುವುದಿಲ್ಲ.

ಪ್ರೊಫೆಸರ್ ಲಸ್ಕಿ ಎಂಬವರು ವಿದ್ಯಮಾನಗಳನ್ನು ಬಹಳ ವಿಷದವಾಗಿ ವಿವರಿಸಿ ಪರಿಷತ್ತು ಕಳೆದ ನಂತರ ಸಹಕರಿಸಲು ಮಿ. ಗಾಂಧಿಯವರು ನಿರಾಕರಿಸಲಿಲ್ಲ. ಬಂಗಾಳದ ಆರ್ಡಿನೇನ್ಸ್ ಜಾರಿಯಲ್ಲಿರುವಷ್ಟು ಕಾಲ ಇವರನ್ನು ಸಹಕರಿಸಲು ಬಿಡುವುದು ಕಾಂಗ್ರೆಸಿಗೆ ಸಾಧ್ಯವಿಲ್ಲವೆಂತ ಸರ್ಕಾರಕ್ಕೆ ತಿಳಿಯಿತು ಎಂತ ಭಾಷಣ ಮಾಡಿದರು.

ಅನಂತರ ಸಭೆಯಲ್ಲಿ ಸರಕಾರದ ದಬ್ಬಾಳಿಕೆಯ ನೀತಿಯನ್ನು ಖಂಡಿಸಿಯೂ, ಆರ್ಡಿನೇನ್ಸ್‌ಗಳನ್ನು ರದ್ದುಮಾಡಬೇಕೆಂತಲೂ, ರಾಜಕೀಯ ಖೈದಿಗಳನ್ನು ಬಿಡಬೇಕೆಂತಲೂ, ಕೂಡಲೇ ಕಾಂಗ್ರೆಸಿನೊಂದಿಗೆ ಸಂಧಿಮಾತುಗಳನ್ನು ಪ್ರಾರಂಭಿಸಬೇಕೆಂತಲೂ ಠರಾವುಗಳು ಪಾಸಾದವು.

ಲಂಡನಿನಲ್ಲಿ ಹಿಂದೂ ಸಾಧು.

ಹಿಮಾಲಯದಲ್ಲಿ ಅನೇಕ ವರ್ಷಗಳಿಂದ ತಪಸ್ಸು ಮಾಡುತ್ತಿದ್ದ ಸಾಧುವೂ, ಕವಿಯೂ ತತ್ವಜ್ಞಾನಿಯೂ ಆದ ಒಬ್ಬ ಹಿಂದೀಯನು ಲಂಡನಿಗೆ ಬಂದಿದ್ದಾರೆ. ಹಿಂದೂಸ್ಥಾನದಲ್ಲಿ ಪುರಾತನ ಕಾಲದಿಂದ ತಿಳಿದುಬಂದ ಆತ್ಮ ವಿಚಾರವನ್ನು ಇಂಗ್ಲಿಷರಿಗೆ ತಿಳಿಸಲು ಬಂದಿದ್ದೇನೆಂತಲೂ, ಗಲಿಬಿಲಿಯಾದ ಮನಸುಗಳಿಗೆ ಸೂರ್ಯನ ಕಿರಣಗಳಂತೆ ಬೆಳಕು ತೋರಿಸಲು ಬಂದಿದ್ದೇನೆಂತಲೂ ಹೇಳುತ್ತಾರೆ. ಅವರ ಹೆಸರು ಶ್ರೀ. ಪುರೋಹಿತ ಸ್ವಾಮಿ. ಲಂಡನಿನಲ್ಲಿ ಒಂದು ಆಶ್ರಮವನ್ನು ಸ್ಥಾಪಿಸಬೇಕೆಂತಲೂ. ತನ್ನ ಜೀವನ ಚರಿತ್ರೆಯನ್ನು ಬರೆಯಬೇಕೆಂತಲೂ ಉದ್ದೇಶಪಟ್ಟಿದ್ದಾರೆ.

"ಡೆಯಿಲಿ ಹೆರಾಲ್ಡ್" ಪತ್ರಿಕೆಯ ಪ್ರತಿನಿಧಿಯೊಂದಿಗೆ ಅವರು ಹೇಳಿದ್ದೇನೆಂದರೆ—ಈ ಪ್ರಪಂಚದ ಸರ್ವಸ್ವವನ್ನೂ ನಾನು ವರ್ಜಿಸಿದ್ದೇನೆ. ಯುಗ್ಯುಗಗಳ ಮಧ್ಯೆ ಹಿಮಾಲಯದಲ್ಲಿ ಕೂತು ತಪಸ್ಸನ್ನಾಚರಿಸಿದ್ದೇನೆ—ಬರೇ ಹಣ್ಣುಗಳನ್ನು ತಿನ್ನುತ್ತಾ ಬಹಳ ವರ್ಷಗಳನ್ನು ತಪಸ್ಸಿನಲ್ಲಿ ಕಳೆದಿದ್ದೇನೆ—ನಿಮ್ಮ ಜನರಿಗೆ ಸೂರ್ಯನ ಕಿರಣವನ್ನು ತರಬೇಕೆಂತ ಇಚ್ಛಿಸುತ್ತೇನೆ.

ಈ ಸಾಧುವು ಯಾವನೋ ಒಬ್ಬ ಕೋಟೀಶ್ವರನ ಮಗನೆಂತಲೂ ಅನೇಕ ವರ್ಷಗಳ ಕೆಳಗೆ ತನ್ನ ಸರ್ವಸ್ವವನ್ನು, ಹೆಂಡತಿಯನ್ನೂ ಸಹ ಬಿಟ್ಟು ಆತ್ಮವಿಚಾರದ ಸಾಧನೆಯನ್ನು ಪ್ರಾರಂಭಿಸಿದರೆಂತ ತಿಳಿದು ಬಂದಿದೆ.

ಹಿಂದೂಸ್ಥಾನದಲ್ಲಿ ಸೈನಿಕ ಅಧಿಕಾರಿಯಾಗಿದ್ದವನ ಮಗಳಾದ ಮಿಸ್ ಗ್ವಿನೆತ್ ಫೋಡೆನ್ ಎಂಬವಳು ಇವರ ಶಿಷ್ಯಳು. ಇಲ್ಲಿಯ ಒಂದು ನದೀ ತೀರದಲ್ಲಿ ತಾನು ಈ ಬೂದಿ ಬಳಿದುಕೊಂಡಿದ್ದ ಸಾಧುವನ್ನು ಕಂಡೆನೆಂತಲೂ, ರಸ್ತೆ ಬದಿಯಲ್ಲಿ ಜೀವನದ ಮತ್ತು ಧರ್ಮ ವಿಚಾರಗಳ ಕುರಿತು ಸಂಭಾಷಣೆ ಮಾಡಿದರೆಂತಲೂ, ಆಕ್ಸ್‌ಫರ್ಡ್ ಯೂನಿವರ್ಸಿಟಿಯಲ್ಲಿ ತೇರ್ಗಡೆ ಹೊಂದಿದವಳಾಗಿದ್ದೆನೆಂತಲೂ ಆ ಸಂಭಾಷಣೆಯಿಂದ ತನ್ನ ಜೀವನವೇ ಬದಲಾಯಿತೆಂತಲೂ "ಪೀಪಲ್" ಎಂಬ ಪತ್ರಿಕೆಗೆ ಇವಳು ತಿಳಿಸಿರುತ್ತಾಳೆ.

ನೋಟೀಸು.

ನಾಪೋಕ್ಲು ನಾಡು ಕೊಣಂಜಗೇರಿ ಗ್ರಾಮದಲ್ಲಿ ಬಟ್ಟಿಯಂಡ ಸುಬ್ಬಯ್ಯನವರ ಹೆಸರಿನಲ್ಲಿ ಜಮಾಬಂದಿ ನಡೆದು ಬರುವ ಭೂಮಿಯನ್ನು ಅವರು ಮಾರಾಟ ಮಾಡುವ ಪ್ರಯತ್ನದಲ್ಲಿದ್ದಾರೆ ಎಂತ ಅವರ ತಮ್ಮ ಬೋಪಯ್ಯನಾದ ನಾನು ತಿಳಿಯುತ್ತೇನೆ. ಸದರಿ ಭೂಮಿಯನ್ನು ಕುಟುಂಬ ಹಣದಿಂದ ನನ್ನ ತಂದೆಯವರು ನನ್ನ ಅಣ್ಣನ ಹೆಸರಿನಲ್ಲಿ ಕೊಂಡುಕೊಂಡದ್ದಾಗಿದೆ. ಆದ್ದರಿಂದ ಸದರಿ ನೆಲವನ್ನು ಯಾರೂ ಕೊಂಡುಕೊಳ್ಳಕೂಡದು. ಕೊಂಡುಕೊಂಡರೂ ಅಂಥವರಿಗೆ ಭೂಮಿಯಾಗಲೀ, ಹಣವಾಗಲೀ ಸಿಕ್ಕಲಾರದು.

ನರಿಯಂದಡ ಗ್ರಾಮ,
ತಾ. 13–2–'32. ಬಟ್ಟಿಯಂಡ ಬೋಪಯ್ಯ.

ಮಾರಾಟಕ್ಕಿದೆ.

ಸುಂಟಿಕೊಪ್ಪ ನಾಡು ಹೊರೂರು ಗ್ರಾಮದಲ್ಲಿ "ರುಕ್ಮ ಎಸ್ಟೇಟ್" ಎಂಬ 70 ಎಕ್ರೆ ಕಾಫಿತೋಟ, 20 ಎಕ್ರೆ ಭೂಮಿ, ಒಂದು ಸಣ್ಣ ಬಂಗ್ಲೆ, ಕೂಲಿ ಲೈನ್ ಮತ್ತು 40 ಎಕ್ರೆ ಕಾಫಿ ತೋಟಕ್ಕೆ ಯೋಗ್ಯವಾದ ಕಾಡು ಸಹ ಮಾರಾಟಕ್ಕೆ ಇದೆ. ಬಂಗ್ಲೆ ವರೆಗೆ ನ್ಯಾಯವಾದ ರಸ್ತೆ ಇದೆ. ಖರೀದಿದಾರರು ಈ ಕೆಳಗಿನ ವಿಳಾಸದಾರರಿಂದ, ಬರಹ ಮೂಲಕವಾಗಲೀ, ಮೊಖ್ಖ ಮಾತಾಡಿಯಾಗಲೀ ಕ್ರಯದ ಮೊಬಲಗು ಮತ್ತು ಇತರ ವಿಷಯಗಳನ್ನು ತಿಳಿಯಬಹುದು.

"ಪ್ರೊಪ್ರೈಟರ್"
'R'
C/o I. C. SUBBAIAH.
M. A. B. L.,
Vakil,
4—2 Mercara. (Coorg)

Empire of India Life Assurance Company, Ltd.

Established 1897.

The New "FAMILY SECURITY" Policy issued by this Company provides

A. In the event of death during an agreed period,

1. The immediate payment to the Widow, Son or legal representative of a part of the sum Assured together with the Bonus accrued

2. The payment of a guaranteed Yearly Income, payable by monthly instalments, during the balance of the period.

3. The payment of the balance of the sum of assured at the end of the period

OR

B. In the event of death after the period has expired the payment of the sum assured together with any Bonus that has accrued.

Descriptive Pamphlet on application to—

Head Office:— EMPIRE OF INDIA LIFE BUILDING, Bombay.

Branch Office:— 152, COMMERCIAL STREET, Bangalore.

52—23

'ಹಿಂದೂಸ್ಥಾನದ ಸಾಮಾನುಗಳನ್ನೇ ಕೊಳ್ಳಬೇಕು' ಎಂಬ ಚಳವಳಿಯನ್ನು ಪ್ರಾರಂಭಿಸಿದ ಕರಾಚಿಯ ಸಂಸ್ಥೆಯು ತಾ. 15ರಲ್ಲಿ ಸ್ವದೇಶೀ ವಸ್ತುಗಳ ಮೆರವಣಿಗೆಯೊಂದನ್ನು ಏರ್ಪಡಿಸಿತು. ಮೆರವಣಿಗೆಯು ಅರ್ಧ ಮೈಲು ಉದ್ದವಿತ್ತು. ಒಂಟೆಗಳ ಗಾಡಿ, ಕಾರುಗಳು, ಸಾರೋಟುಗಳು ಇವುಗಳ ಮೇಲೆ ಸಕಲ ತರಹದ ಸ್ವದೇಶೀ ವಸ್ತುಗಳು ಜನರನ್ನು ಆಕರ್ಷಿಸುವಂತೆ ಆ ಗಾಡಿಗಳಲ್ಲಿ ಪ್ರದರ್ಶಿಸಲ್ಪಟ್ಟಿದ್ದವು. ಸ್ತ್ರೀಯರು ಸ್ವದೇಶೀ ವಸ್ತುಗಳನ್ನು ಶ್ಲಾಘಿಸುವ ಹಾಡುಗಳನ್ನು ಹಾಡುತ್ತಿದ್ದರು. ಜನಸ್ತೋಮವು ನೆರೆದು ಪ್ರದರ್ಶನವನ್ನು ನೋಡಿತು.

ಸಂಯುಕ್ತ ಪ್ರಾಂತ್ಯದ ಶಾಲೆಗಳಲ್ಲಿ ವಿದ್ಯಾರ್ಥಿಗಳ ದೇಹಪುಷ್ಟಿ ಆರೋಗ್ಯವನ್ನು ಹೆಚ್ಚಿಸಲು ಪಾಶ್ಚಿಮಾತ್ಯ ಮತ್ತು ದೇಶೀಯ ವ್ಯಾಯಾಮ ರೀತಿಗಳನ್ನು ಅಭ್ಯಾಸಿಸಿ ಉತ್ತಮವಾದುದನ್ನು ಆರಿಸಲು ಆ ಪ್ರಾಂತ್ಯ ಸರ್ಕಾರ ವಿದ್ಯಾ ಇಲಾಖೆಯು ನಿಶ್ಚಯಿಸಿದೆ. ಹಿಂದೂಸ್ಥಾನದ ಯೋಗ ಸಂಬಂಧವಾದ ವ್ಯಾಯಾಮಗಳನ್ನು ಪ್ರಚಾರಕ್ಕೆ ತರುತ್ತಿರುವ ಪೂನಾಬಳಿ ಲೋನಾವಾಲದಲ್ಲಿ ಒಂದು ಆಶ್ರಮವನ್ನು ಸ್ಥಾಪಿಸಿರುವ ಸ್ವಾಮಿ ಕುವಲಯಾನಂದರನ್ನು ಸಂಯುಕ್ತ ಪ್ರಾಂತ್ಯದ ಸರ್ಕಾರ ವಿದ್ಯಾ ಇಲಾಖೆಯವರು ಲಕ್ನೋಕ್ಕೆ ಕರೆಸಿಕೊಂಡು ಉಪಾಧ್ಯಾಯರುಗಳಿಗೆ ತರಬೇತು ಕೊಡಲು ನಿಶ್ಚಯಿಸಿರುತ್ತಾರೆ.

ಬಂಗಾಳದ ಗವರ್ನರಿಗೆ ಗುಂಡು ಹೊಡೆದ ಬಂಗಾಳಿ ಯುವತಿ ಬಿನಾದಾಸ್ ಎಂಬವಳು ತಪ್ಪು ಮಾಡಿದ್ದೇನೆಂತ ಒಪ್ಪಿಕೊಂಡಳು. ಅವಳಿಗೆ 9 ವರ್ಷ ಕಠಿಣ ಸಜೆ ಶಿಕ್ಷೆ ವಿಧಿಸಲಾಗಿದೆ. ಆಗ ಬಾಗಸ್ವಲದಲ್ಲಿ ಅವಳು ಹೇಳಿರುವುದೇನೆಂದರೆ:— ದುಷ್ಟಾಳಿಕೆಗೆ ಗುರಿಯಾದ ನನ್ನ ಮಾತೃಭೂಮಿಯ ಮೇಲಿನ ಪ್ರೀತಿಗಾಗಿ ನಾನು ಗವರ್ನರಿಗೆ ಗುಂಡು ಹೊಡೆದೆನು. ನನ್ನ ಬೇಸರಗಳನ್ನೆಲ್ಲಾ ಪರಿಹರಿಸಿಕೊಳ್ಳಲು ನನ್ನ ದೇಶದ ಪಾದದಲ್ಲಿ ನನ್ನ ಜೀವವನ್ನು ಅರ್ಪಿಸುವುದೇ ಉಪಾಯವೆಂತ ನಂಬಿದೆ. ಹಿಂದೀ ಸ್ತ್ರೀಯರ ಧರ್ಮದ ಬುದ್ಧಿಯಲ್ಲೇ ಬೇರೆದಂಥ ಅಬಲೆಯಾದ ನನ್ನಂಥವಳ ಮನಸ್ಸನ್ನು ಸರ್ಕಾರದ ಈಗಿನ ರಾಜನೀತಿಯು ಕದಡುತ್ತಿದೆಯೆಂತ ಸರ್ಕಾರಿಗೂ ತಿಳಿಸಬೇಕಾಗಿದೆ. ಸರ್ ಸ್ಟೇನ್ಲಿ ಜ್ಯಾಕ್ಸನ್ ಎಂಬ ವ್ಯಕ್ತಿಯ ಮೇಲೆ ನನಗೆ ಯಾವ ತರದ ದ್ವೇಷವೂ ಇಲ್ಲ. ಅವರು ನನ್ನ ತಂದೆಗೆ ಸಮಾನರು—ಅವರ ಪತ್ನಿಯು ನನ್ನ ತಾಯಿಗೆ ಸಮಾನಳು. ಆದರೆ ಗವರ್ನರು ನನ್ನ ದೇಶೀಯರಾದ ಮೂವತ್ತು ಕೋಟಿ ಜನರನ್ನು ಗುಲಾಮಗಿರಿಯಲ್ಲಿ ಇಟ್ಟಿರುವ ಸರ್ಕಾರದ ಅಂಗವಾಗಿದ್ದಾರೆ.'

ವಿಚಾರವಾಗುವಾಗ ಅಪರಾಧಿಯಾದ ಆ ಯುವತಿಗೆ ಕೂತುಕೊಳ್ಳಲು ಆಸನ ಕೊಟ್ಟಿದ್ದರು. ಜಡ್ಜಿಯವರು ಶಿಕ್ಷೆಯನ್ನು ವಿಧಿಸಬೇಕಾದರೆ ಅವಳಿಗೆ 20, 21 ವರ್ಷ ವಯಸ್ಸು ಮಾತ್ರವೆಂಬುದನ್ನೂ ಆ ಕೃತ್ಯ ನಡೆಸುವ ವರೆಗೆ ಅತ್ಯುತ್ತಮ ನಡತೆಯುಳ್ಳವಳಾಗಿದ್ದಳೆಂಬುದನ್ನೂ ಗಣನೆಗೆ ತೆಗೆದುಕೊಂಡರು. ಅವಳ ಹೇಳಿಕೆಯಲ್ಲಿ ಇನ್ನೂ ಇರುವುದೇನೆಂದರೆ—'ಸರ್ ಸ್ಟೇನ್ಲಿ ಜ್ಯಾಕ್ಸನರ ಜೀವವನ್ನು ದೇವರು ಉಳಿಸಿದರೆಂತ ನನಗೆ ಸಂತೋಷವಿದೆ—ಅವರ ಪತ್ನಿ ಪುತ್ರರಿಗೆ ಸಂಭವಿಸಬಹುದಾಗಿದ್ದ ಅತ್ಯಂತ ಕಠಿಣ ದುಃಖವು ತಪ್ಪಿದ್ದಕ್ಕೂ, ಅವರ ಜೀವ ಹಾನಿ ಮಾಡದೇನೇ ನನ್ನ ಕಾರ್ಯ ನೆರವೇರಿತೆಂಬುದಕ್ಕೂ ಸಂತೋಷಪಡುತ್ತೇನೆ—'

ವಿದೇಶ.

ಚೈನಾ ಜಪಾನ್ ಯುದ್ಧವು ನಡೆಯುತ್ತಲೇ ಇದೆ. ಶ್ಯಾಂಗೈಗೆ ಜಪಾನಿನ ಸೈನ್ಯವು ಹೆಚ್ಚಾಗಿ ಬರುತ್ತಲೇ ಇದೆ. ಈಗ 20,000 ಜನ ಜಪಾನ್ ಸೈನಿಕರು ಆ ಪಟ್ಟಣದಲ್ಲಿದ್ದಾರೆ. ಬೇರೆ ಜನಾಂಗಗಳು ರಾಜಿ ಮಾಡಲು ತೆಗೆದುಕೊಂಡ ಪ್ರಯತ್ನಗಳೆಲ್ಲಾ ನಿಷ್ಫಲವಾದವು.

ಇಂಡಿಯಾದಿಂದ ಚಿನ್ನವು ಹೊರಗೆ ಹೋಗುತ್ತಿರುವುದು ಲಂಡನಿನ ವ್ಯಾಪಾರಿಗಳಿಗೆ ತೃಪ್ತಿಯಾಗಿದೆ. ಹೀಗೆ ಇಂಡಿಯಾದಿಂದ ಚಿನ್ನ ಹೋಗುತ್ತಿದ್ದರೆ ಚಿನ್ನದ ಸಾಲ ಕೊಡಲಿಕ್ಕಿರುವ ಜನಾಂಗಗಳಿಗೆ ತಮ್ಮ ಸಾಲ ತೀರಿಸಲು ಅನುಕೂಲವಾಗುತ್ತದೆಯೆಂತ ಲಂಡನ್ 'ಟೈಮ್ಸ್' ಎಂಬ ಪತ್ರಿಕೆಯು ಬರೆದಿದೆ.

ಇಂಗ್ಲೆಂಡಿನ ನೂಲು ಕಾರ್ಖಾನೆಗಳ ಮಾಲೀಕರ ಸಭೆಯ ಅಧ್ಯಕ್ಷರಾದ ಮಿ ಫ್ರೆಡ್ ಮಿಲ್ಸ್ ಎಂಬವರು ಇಂಡಿಯಾದ ರಾಜಕೀಯ ಹೋರಾಟವು ಸಮಾಧಾನಕರವಾಗಿ ತೀರಿ ಶಾಂತಿ ಸ್ಥಾಪನೆಯಾದರೆ ಇಂಡಿಯಕ್ಕೆ ಒಳ್ಳೇದಾದೀತೆಂತಲೂ ಅದರಿಂದ ತಮ್ಮ ವ್ಯಾಪಾರಕ್ಕೆ ಅನುಕೂಲವಾದೀತೆಂತಲೂ ಹೇಳಿದ್ದಾರೆ.

ಪಾರ್ಲಿಮೆಂಟಿನಲ್ಲಿ ಸವಾಲಿಗೆ ಜವಾಬು ಕೊಡುವಾಗ ಸ್ಟೇಟ್ ಸೆಕ್ರೆಟರಿಯವರು ಚಳವಳಿ ಬಹಳ ಕಡಿಮೆಯಾಗಿದೆಯೆಂತಲೂ, ಬೊಂಬಾಯಿ ಸ್ಥಿತಿ ಸಹ ಸ್ವಲ್ಪ ಉತ್ತಮವಾಗಿದೆಯೆಂತಲೂ, ಬ್ರಿಟಿಷ್ ವಸ್ತುಗಳ ಬಹಿಷ್ಕಾರವೇ ಗುಪ್ತರೀತಿಯಿಂದ ನಡೆಯುತ್ತಿದೆಯೆಂತಲೂ ಅದರಿಂದ ಬೇಸರವೇನೂ ಇಲ್ಲವಾಗಿಯೂ ತಿಳಿಸಿದ್ದಾರೆ.

ಹಿಂದೂಸ್ಥಾನದಲ್ಲಿ ಕ್ರಿಶ್ಚಿಯನ್ ಶಾಲೆಗಳಿಂದ ತುಂಬಾ ಪ್ರಯೋಜನವಾಗುತ್ತಿದೆಯೆಂತಲೂ, ಜನಸಮುದಾಯದಲ್ಲಿ ಆರೋಗ್ಯ ಮತ್ತು ಸಮಾಜ ಸುಧಾರಣೆಗಾಗಿ ಮಾಡಬೇಕಾದ ಸೇವೆಯು ಭಾವ ಸಹ ಕ್ರಿಶ್ಚಿಯನರಿಂದ ಹುಟ್ಟಿದ್ದೆಂತಲೂ, ನಂದಿಗೂ ನಡತೆಗೂ ಸಂಬಂಧವಿರಬೇಕೆಂಬ ಸತ್ಯವನ್ನು ಹರಡುವ ಕೆಲಸ ಕ್ರಿಸ್ತ ಧರ್ಮದಿಂದಲೇ ಆಗಬೇಕೆಂತಲೂ ವಗೈರೆಯಾಗಿ ಲಾರ್ಡ್ ಇರ್ವಿನರು ಒಂದು ಭಾಷಣದಲ್ಲಿ ಹೇಳಿದರು.

ಚೈನಾದಲ್ಲಿ ತಮ್ಮ ಜನ್ಮಭೂಮಿಯ ಸೇವೆಗಾಗಿ ಚೈನಾದೇಶದ ಯುವತಿಯರು ಬಹಳ ಉತ್ಸಾಹದಿಂದ ಕೆಲಸ ಮಾಡುತ್ತಿದ್ದಾರೆ. ತಮ್ಮ ಹೊಲಿಗೆಯ ಪೆಟ್ಟಿಗೆಯನ್ನು ಬಿಟ್ಟು ಖಡ್ಗ ಹಿಡಿಯುತ್ತಿದ್ದಾರೆ, ನರ್ಸುಗಳಾಗಲಿಕ್ಕೆ ತಯಾರಾಗುತ್ತಿದ್ದಾರೆ. ಜನರಿಗೆ ಬೋಧಿಸಿ ಸೈನ್ಯಕ್ಕೆ ಸೇರಲಿಕ್ಕೆ ಬೋಧಿಸುತ್ತಿದ್ದಾರೆ, ಹಣ ಚಂದಾ ಎತ್ತುತ್ತಿದ್ದಾರೆ. ಒಬ್ಬಳು ಶಾಲೆಯ ಹುಡುಗಿಯು ತನ್ನ ಪ್ರಿಯನಿಗೆ ಬರೆದಿರುವದೇನೆಂದರೆ—"ಧೈರ್ಯವನ್ನು ತಾಳಿಕೊಂಡು ಯುದ್ಧಭೂಮಿಗೆ ಹೋಗಲು ತಯಾರಾಗು. ನಮ್ಮ ಜನ್ಮಭೂಮಿಗಾಗಿ ಹೋರಾಡಲು ಹೊರಟರೆ ನಿನ್ನ ಸಂಗಡ ನಾನೂ ಇಳಿಯುತ್ತೇನೆ. ನಮ್ಮ ದೇಶಕ್ಕಾಗಿ ನಿನ್ನ ಜೀವವನ್ನು ಅರ್ಪಿಸಿದರೆ ನಿನ್ನ ಆತ್ಮಕ್ಕೆ ನನ್ನ ಹೃದಯವೇ ವಾಸಸ್ಥಾನವಾಗುತ್ತದೆ."

ಸ್ವದೇಶೀ ವ್ರತ.

ಕರಾಚಿಯಲ್ಲಿ ಸ್ಥಾಪಿತವಾಗಿರುವ 'ಹಿಂದೀ ವಸ್ತುಗಳನ್ನೇ ಕೊಂಡುಕೊಳ್ಳಿ' ಎನ್ನುವ ಸಂಸ್ಥೆಯು ಹೊರಡಿಸಿದ ಪತ್ರ.

ಪ್ರತಿಯೊಬ್ಬ ತಂದೆ ತಾಯಿಯೂ ತಮ್ಮ ಮಕ್ಕಳನ್ನು ಪೋಷಣೆ ಮಾಡಿ, ರಕ್ಷಿಸಿ ಪ್ರೀತಿಸುವುದು ಯಾತಕ್ಕೆಂದರೆ—ಅವರು ತಮ್ಮ ನಂತರ ಬದುಕಲೆಂದು. ಹಾಗೆಯೇ ನಮ್ಮ ದೇಶದ ಕೃಷಿ, ಕೈಗಾರಿಕೆಗಳಿಗೆ ಸಹಾಯ ಕೊಟ್ಟು ಬೆಳೆಸಬೇಕು.

ಹಾಗೆ ಮಾಡುವುದರಿಂದ ನಮ್ಮ ಜನರಿಗೆ ಕೆಲಸ ದೊರಕಿಸಿದಂತೆ ಆಗುತ್ತದೆ. ನಮ್ಮ ಹಣವು ನಮ್ಮ ಉಪಯೋಗವಾಗಲು ಅನುಕೂಲ ಮಾಡುತ್ತದೆ. ಲಾಭವು ನಮ್ಮ ದೇಶದಲ್ಲೇ ಉಳಿಯುತ್ತದೆ. ಅಂಥಾ ಲಾಭಗಳು ಬೇರೆ ಉದ್ಯಮಗಳಿಗೆ ಉಪಯೋಗಿಸಲ್ಪಡುತ್ತವೆ ಮತ್ತು ಜನರ ಜೀವನ ದರ್ಜೆಯು ಏರಲು ಸಹಾಯಕವಾಗುತ್ತದೆ.

ಕೈಗಾರಿಕೆಗಳಿರುವ ದೇಶಗಳೇ ಐಶ್ವರ್ಯವುಳ್ಳ ಬಲವುಳ್ಳವಾಗಿವೆ. ಅಂಥಾ ದೇಶಗಳೇ ಪ್ರಪಂಚವನ್ನು ಆಳುತ್ತವೆ. ನಾವೂ ಹಾಗೆಯೇ ಐಶ್ವರ್ಯವಂತರಾಗಿ ಸುಖಿಗಳಾಗಲು ಪ್ರಯತ್ನಿಸಬೇಕು.

ನಮ್ಮ ದೇಶದಲ್ಲಿ 35 ಕೋಟಿ ಜನರಿದ್ದಾರೆ. ಕೆಲವು ಕೋಟಿ ಜನರಿಗೆ ವರ್ಷದ ಕೆಲವು ತಿಂಗಳುಗಳಲ್ಲಿ ಉದ್ಯೋಗವೇ ಇಲ್ಲ. ಅಂಥವರಿಗೆ ಕೆಲಸವನ್ನು ಒದಗಿಸಿ ಕೊಟ್ಟು ಮರ್ಯಾದೆಯಿಂದ ಜೀವಿಸುವಂತೆ ಮಾಡುವುದು ನಮ್ಮ ಕರ್ತವ್ಯ.

ಪರದೇಶೀ ವಸ್ತುಗಳು ಎಷ್ಟೇ ಸೊಗಸಾದವೂ, ಸುಂದರವಾದವೂ, ಪ್ರಯೋಜನವಾದವೂ ಆದರೂ ಅಂಥವುಗಳನ್ನು ಕೊಂಡರೆ ಅವುಗಳನ್ನು ತಯಾರಿಸುವ ಕರ್ತವ್ಯ ಮತ್ತು ಸಂತೋಷವನ್ನು ಕಳೆಕೊಳ್ಳುತ್ತೇವೆ. ಬೇರೆಯವರನ್ನು ಐಶ್ವರ್ಯವಂತರನ್ನಾಗಿ ಮಾಡುತ್ತೇವೆ. ನಮ್ಮನ್ನು ಬಡವರನ್ನಾಗಿ ಮಾಡಿಕೊಳ್ಳುತ್ತೇವೆ.

ಕಸಪಲ್ಲದ ಬ್ರಿಟಿಷ್ ಜನರಿಗೆ ಕೆಲಸ ದೊರಕಿಸುವ ಬಗ್ಗೆ ಬ್ರಿಟಿಷ್ ಸಾಮಾನುಗಳನ್ನೇ ಕೊಂಡುಕೊಳ್ಳಿ ಎಂತ ಬ್ರಿಟನಿನವರು ಹೇಳುವಂತೆ ಹಿಂದೀ ವಸ್ತುಗಳನ್ನು ಕೊಂಡುಕೊಳ್ಳಿ ಎಂತ ಹೇಳುವುದಾಗಿದೆ.

ಹಿಂದೂಸ್ಥಾನದ ಮನೆಗಳಲ್ಲಿ ನಿತ್ಯವೂ ಉಪಯೋಗವಾಗುವ ಅನೇಕ ವಸ್ತುಗಳು ಈಗ ಹಿಂದೂಸ್ಥಾನದಲ್ಲೇ ತಯಾರಾಗುತ್ತವೆ.

ಹಿಂದೀ ಸಕ್ಕರೆ, ಹಿಂದೀ ಬಟ್ಟೆ, ಹಿಂದೀ ಪಾತ್ರೆಗಳು ಮತ್ತು ಇನ್ನೂ ಅನೇಕ ತರಹದ ಸಾಮಾನುಗಳು ಎಷ್ಟೇ ಬೇಕಾಗಿರುವವು ಬೇಕೆಂತಾದರೂ ಹಿಂದೂಸ್ಥಾನದ ಯಾವ ಪೇಟೆಯಲ್ಲಾದರೂ ಈಗ ಸಿಕ್ಕುತ್ತದೆ. ಸ್ವಲ್ಪ ಕ್ರಯ ಹೆಚ್ಚಾದರೂ, ಗುಣ ಕಡಿಮೆಯಾದರೂ ಹಿಂದೀ ಮಾಲುಗಳನ್ನೇ ಕೊಂಡುಕೊಳ್ಳುವುದು ನಿಮ್ಮ ದೇಶಭಕ್ತಿಯ ಕರ್ತವ್ಯವಾಗಿದೆ.

ಆದರೆ ವ್ಯಸನದ ಸಂಗತಿ ಏನೆಂದರೆ—ಸಾಮಾನುಗಳನ್ನು ಕೊಳ್ಳಲು ಹೋದಾಗ ಹಿಂದೀ ಸಾಮಾನುಗಳನ್ನೇ ಕೊಡಿ ಎಂತ ಕೇಳುವುದಿಲ್ಲ. ಸಿಕ್ಕಿದ್ದನ್ನು ಕೊಂಡುಬಿಡುತ್ತಾರೆ.

ನಿಮಗೆ ಬೇಕಾದ ಸಾಮಾನು ಸಿಕ್ಕುವುದಿಲ್ಲ ನಿಮಗೆ ಬೇಕಾದದ್ದು ಅಂಗಡಿಯಲ್ಲಿ ಇಲ್ಲವೆನ್ನಬಹುದು. ಹೀಗಾಗುವುದು ಯಾಕೆ ಗೊತ್ತಿದೆಯೋ? ಈ ವರೆಗೆ ನೀವು ಕೊಂಡುಕೊಳ್ಳದ ಇದ್ದ ವಸ್ತುಗಳನ್ನು ಮಾರಾಟಕ್ಕೆ ತರಿಸುವುದರಿಂದ ಅಂಗಡಿಯವನಿಗೆ ಫಾಯಿದೆ ಇರುತ್ತಿರಲಿಲ್ಲ. ಹಿಂದೀ ವಸ್ತುಗಳೇ ಬೇಕೆಂತ ಕೇಳಿ—ಅವುಗಳನ್ನು ತರಿಸಿ ಇಡುವಂತೆ ಉತ್ತೇಜನ ಕೊಡಿ. ಆಗ ನಿಮಗೆ ಬೇಕಾದದ್ದು ನಿಮಗೆ ಸಿಕ್ಕುತ್ತದೆ ಮಾತ್ರವಲ್ಲ, ಹೆಚ್ಚಾಗಿ ಖರ್ಚಾಗುವುದರಿಂದ ಅಗ್ಗವಾಗಿಯೂ ಸಿಕ್ಕುವಂತಾಗುತ್ತದೆ. ಖರ್ಚು ಹೆಚ್ಚಾಗುತ್ತಾ ಹೋದಂತೆ ವಸ್ತುವಿನ ಗುಣವೂ ಚೆನ್ನಾಗಿ ಆಗುತ್ತಾ ಬರುತ್ತದೆ.

ಸ್ವದೇಶೀ ವ್ರತವನ್ನು ಹರಡಿಸಲು ಸಹಾಯ ಮಾಡಲು ಶಕ್ತಿ ಇಲ್ಲವೆನ್ನಬೇಡಿ. ನೀವು ಸ್ವದೇಶೀ ಉಡುಪನ್ನೇ ಉಟ್ಟು ಸ್ವದೇಶೀ ಜೀವನವನ್ನೇ ನಡಸಿ, ನೀವು ಹೋದಲ್ಲೆಲ್ಲಾ ಸ್ವದೇಶೀಯನ್ನು ಹರಡಬಹುದು. ಸ್ವದೇಶೀ ಭಾವವನ್ನು ಹರಡಿಸುವ ವಿದ್ಯುಚ್ಛಕ್ತಿಯ ಯಂತ್ರವೇ ನೀವಾಗಬಹುದು.

ನೀವು ಐಶ್ವರ್ಯವಂತರೋ? ನಿಮ್ಮ ಮನೆಯನ್ನೂ, ದೇಹವನ್ನೂ ಪರದೇಶೀ ವಸ್ತುಗಳಿಂದ ತುಂಬಿ ಬೇರೆಯವರಿಗೆ ಕೆಟ್ಟ ಮಾದರಿಯಾಗಬೇಡಿ.

ಹಿಂದೀ ವಸ್ತುಗಳನ್ನು ಕೊಳ್ಳಿ, ಹಿಂದೀ ವಸ್ತ್ರಗಳನ್ನೇ ಧರಿಸಿ ಹಿಂದೀ ವಸ್ತುಗಳನ್ನೇ ಪ್ರೀತಿಸಿರಿ. ನೀವು ಐಶ್ವರ್ಯವಂತರಾಗಿಯೂ ಇರುವುದರಿಂದ ನಿಮಗೆ ತುಂಬಾ ಶಕ್ತಿ ಇದೆ. ನಿಮ್ಮ ಮಾದರಿಯನ್ನೇ ಒಳ್ಳೇದಾಗಲೀ ಕೆಟ್ಟದಾಗಲೀ ಬೇರೆಯವರು ಅನುಸರಿಸುತ್ತಾರೆ. ಆದ್ದರಿಂದ ಒಳ್ಳೇ ಮೇಲ್ಪಂಕ್ತಿ ನಮ್ಮ ಹಾಕಿಕೊಡಿ. ನಿಮ್ಮ ಮಕ್ಕಳಲ್ಲಿ ಸ್ವದೇಶಿ ಭಾವ ಹುಟ್ಟುವಂತೆ ಮಾಡಿ.

ನೀವು ಸಾಧಾರಣ ಅನುಕೂಲವಿರುವವರಾದರೆ ನಿಮಗೆ ಸುಖಭೋಗಗಳ ವಸ್ತುಗಳು ಬೇಕಾಗಿಲ್ಲ ನಿಮ್ಮ ಮನೆಗೆ ಬೇಕಾದ ವಸ್ತುಗಳು ನಿಮ್ಮ ಊರಿನ ಅಂಗಡಿಯಲ್ಲೇ ದೊರಕುತ್ತವೆ.

ನೀವು ವಿದ್ಯಾರ್ಥಿಗಳೋ? ಹಿಂದೂಸ್ಥಾನದಲ್ಲೇ ತಯಾರಾದ ವಸ್ತುಗಳನ್ನೇ ಕೊಂಡುಕೊಳ್ಳಿ. ತುಂಬಾ ಕ್ರಯದ ಉಡುಪನ್ನು ಧರಿಸಬೇಡಿ. ಸ್ವದೇಶಿ ಕಾಗದ, ಲೇಖನಿ, ಪೆನ್ಸಿಲ್, ನಿಬ್, ಟೋಪಿ, ಸಾಬೂನು, ಶಾಯಿ, ಫೂಟ್‌ಬಾಲ್, ಟೆನ್ನಿಸ್, ಮತ್ತು ಕ್ರಿಕೆಟ್ ಸಾಮಾನುಗಳನ್ನು ಉಪಯೋಗಿಸಿರಿ. ನಿಮ್ಮ ಶಾಲೆಯಲ್ಲಾಗಲೀ, ಬೋರ್ಡಿಂಗಿನಲ್ಲಾಗಲೀ, ಸ್ವದೇಶಿ ಸ್ಟೋರನ್ನು ಸ್ಥಾಪಿಸಿರಿ. ರಜದಲ್ಲಿ ಸ್ವದೇಶಿ ವಸ್ತುಗಳನ್ನೂ, ಖಾದಿಯನ್ನೂ ಮನೆಮನೆಗೆ ಹೊತ್ತು ಮಾರಿ.

ಹೆಂಗಸರಾದವರಿಗೆ ಹೇಳುವುದೇನೆಂದರೆ—ನಿಮ್ಮ ಮನೆಯಲ್ಲಿ ಸ್ವದೇಶಿ ವಸ್ತುಗಳನ್ನು ಕೊಡಿರಿ. ನಿಮ್ಮ ನೆರೆಯವರು ಅವುಗಳನ್ನು ಬಂದು ನೋಡುವಂತೆ ಮಾಡಿ. ಹಿಂದೀ ವಸ್ತುಗಳನ್ನೇ ಕೊಳ್ಳಬೇಕೆಂಬ ಆಸೆ ಹುಟ್ಟಿಸಿ. ಸ್ವದೇಶಿಯನ್ನು ಹರಡಿಸಲು ಹೆಂಗಸರು ಒಳ್ಳೇ ಕೆಲಸಗಾರರು.

ನೀವು ಉಪಾಧ್ಯಾಯರೋ? ನಿಮ್ಮ ಜವಾಬ್ದಾರಿ ದೊಡ್ಡದು. ಸ್ವದೇಶಿ ವಸ್ತುಗಳನ್ನು ಪ್ರೀತಿಸಿ, ವಿದ್ಯಾರ್ಥಿಗಳಿಗೆ ಒಳ್ಳೇ ಮಾದರಿಯಾಗಿ. ಎಳೆಯ ಮೃದುವಾದ ಮನಸ್ಸಿನಲ್ಲಿ ನಿಮ್ಮ ಮಾದರಿಯು ಎಂದೂ ಅಳಿಸದಂತೆ ಅಂಟಿಕೊಳ್ಳುತ್ತದೆ.

ನೀವು ಕೆಲಸಗಾರರೋ? ನಿಮಗಿರುವ ಅತಿ ಸ್ವಲ್ಪ ಉತ್ಪತ್ತಿಯಿಂದ ಸುಖಭೋಗದ ವಸ್ತುಗಳನ್ನು ಕೊಂಡುಕೊಳ್ಳುವುದು ನಿಮಗೆ ಸಾಧ್ಯವಿಲ್ಲ. ನಿಮಗೆ ಅವಶ್ಯವಿರುವುದು ಅನ್ನ, ಬಟ್ಟೆ. ಹಿಂದೀ ವಸ್ತುಗಳನ್ನೇ ಏನೂ ಕೊಂಡರೆ ಇಲ್ಲದೆ ಕೊಂಡುಕೊಳ್ಳಬಹುದು. ಕುಡುಕತನವನ್ನು ಬಿಟ್ಟು ಹಣ ಉಳಿಸಿರಿ.

ನೀವು ಪಂಚಾಯಿತಿ ಮೆಂಬರರೋ? ಆಗ ನಿಮ್ಮ ಪಂಚಾಯಿತಿಗೆ ಒಳಗಾದ ಜನರು ನುಡಿದ ಮುಂಚೆ, ನಾವು ತರಿಸುವುದಕ್ಕೆ ಬೇಕಾದ ಬಟ್ಟೆಗಳನ್ನು ಸ್ವದೇಶೀಯನ್ನೆ ಕೊಳ್ಳುವಂತೆ ಮಾಡಿ. ಅಂಥಾ ಕಾರ್ಯಗಳಿಗಾಗಿ ಸಾವಿರಾರು ರೂಪಾಯಿ ಖರ್ಚಾಗುತ್ತದೆ. ಅಂಥಾ ಹಣವನ್ನು ದೇಶದಲ್ಲೇ ಉಳಿಸಬೇಕಾದದ್ದು ನಿಮ್ಮ ಕರ್ತವ್ಯ.

ನಿಮ್ಮಲ್ಲಿ ಹಣವಿದೆಯೋ? ನಿಮ್ಮಲ್ಲಿ ಒಂದು ಸ್ವದೇಶೀ ಸ್ಟೋರನ್ನು ತೆರೆಯುವುದಕ್ಕೆ ಅದನ್ನು ಉಪಯೋಗಿಸಿದರೆ ಅತ್ಯುತ್ತಮ. ದೇಶ ಸೇವೆಗೆ ಆ ಹಣವನ್ನು ಉಪಯೋಗಿಸಿದಂತಾಗುತ್ತದೆ ಸ್ವದೇಶೀ ಪ್ರದರ್ಶನಗಳನ್ನು ಏರ್ಪಡಿಸಿ, ಜಾತ್ರೆಗಳಿಗೆ ಆ ಮಾಲುಗಳನ್ನು ತೆಗೆದುಕೊಂಡು ಹೋಗಿ ಮಾರಿ ಸ್ವದೇಶೀ ಜಾತ್ರೆಯಾಗುವಂತೆ ಮಾಡಿ.

ಸ್ವದೇಶೀಯು ಬೋಧನೆಗಿಂತ ಹೆಚ್ಚಾಗಿ ಮಾದರಿಯಿಂದಲೇ ಹರಡುವದು. ನೀವು ಬಡವರು, ಯಾರಿಗೂ ತಿಳಿಯದವರು ಎಂಬ ಕಾರಣದಿಂದ ಸ್ವದೇಶೀ ಕೆಲಸಕ್ಕೆ ಸಹಾಯ ಮಾಡಲು ಸಾಧ್ಯವಿಲ್ಲವೆನ್ನಬೇಡಿ. ಸ್ವದೇಶಿ ಜೀವನವನ್ನು ನಡೆಸಿ ಸ್ವದೇಶಿಯನ್ನು ಪ್ರೀತಿಸಿ ಎಷ್ಟೋ ಸಹಾಯ ಮಾಡಬಹುದು.

ಕೋಟ್ಯಂತರ ಜನರು ಈ ಕೆಲಸ ಮಾಡಬಹುದು. ಕೋಟ್ಯಂತರ ರೂಪಾಯಿ ಈ ದೇಶಕ್ಕಾಗಿ ಉಳಿಸಬಹುದು. ಕೋಟ್ಯಂತರ ಜನರಿಗೆ ಉಪಯೋಗಕರವಾದ ಕೆಲಸ ದೊರಕಿಸಬಹುದು. ದೇಶವೆಲ್ಲಾ ಸ್ವದೇಶೀ ಹರಡಿದರೆ ಆರ್ಥಿಕ ಸ್ವರಾಜ್ಯ ದೊರೆತಂತೆಯೇ ಆಯಿತು.

ಹಿಂದೀ ವಸ್ತುಗಳನ್ನೇ ಕೊಳ್ಳಿ.

ಹಿಂದೀ ವಸ್ತ್ರಗಳನ್ನೇ ಧರಿಸಿ.

ಹಿಂದೀ ಸಾಮಾನುಗಳನ್ನು ಪ್ರೀತಿಸಿರಿ.

"ಸ್ವರಾಜ್ಯ" ಪತ್ರಿಕೆಯಿಂದ.

ಬಂದೂಕುಗಳು. GUNS



ರೂ. ... ಇವು ವಿಲಾಯತಿಯಲ್ಲಿ ತಯಾರಾದವು. ಇವು ... ಲೈಸನ್ಸ್ ಪಡೆಯಬೇಕಾಗಿಲ್ಲ. ಯಾರು ಬೇಕಾದರೂ ಇಲ್ಲದೆ ಕೈಯಲ್ಲಿ ಹಿಡಿದುಕೊಂಡು ತಿರುಗ... ೧೦೦ ವರೆಗಳ ... ಗುರಿ ...

ಯಂ. ಶಿಯೋ ಅ...

12—8 168, ಚೈನಾ ಬಜಾರ...

ವರ್ತಮಾನ ಸಂಗ್ರಹ.

ಒಳದೇಶ.

ಕಳೆದ ಶುಕ್ರವಾರ ಮಡಿಕೇರಿ ಸೆಂಟ್ರಲ್ ಹೈಸ್ಕೂಲ್ ವಿದ್ಯಾರ್ಥಿಯಾದ ಮಿ. ಕೆ. ಯಸ್. ಗೋಪಾಲ ಕೃಷ್ಣನೆಂಬವರು ತಮ್ಮ ಮನೆಯ ಪಕ್ಕದ ಬಾವಿಗೆ ಬಿದ್ದು ಅಕಸ್ಮಾತ್ ಮೃತಿಹೊಂದಿದರೆಂಬುದನ್ನು ತಿಳಿಸಲು ವಿಷಾದಿಸುತ್ತೇವೆ.

ಸುಂಟಿಕೊಪ್ಪದ ಬಳಿ ಬಾಳೆಕಾಡು ತೋಟದಲ್ಲಿ ತಾರೀಖು 7—12—31 ರಲ್ಲಿ ಮಾಯಿಲ ಎಂಬ ಒಬ್ಬ ಆಳು ಬಂದು ಎಂಬ ಇನ್ಸ್ಪೆಕ್ಟರನ್ನು ಚಾಕುವಿನಿಂದ ತಿವಿದು ಕೊಂದನೆಂಬ ಕೇಸು ಸೆಷನ್ ಕೋರ್ಟಿನಲ್ಲಿ ತಾರೀಖು 23 ರಲ್ಲಿ ವಿಚಾರವಾಗುತ್ತದೆ.

ಕಳೆದ ಆದಿತ್ಯವಾರ ಗೋಣಿಕೊಪ್ಪಲಲ್ಲಿ ಇಬ್ಬರು ಸ್ವಯಂ ಸೇವಕರು ದಸ್ತಗಿರಿಯಾಗಿರುವರು. ಇವರ ಪೈಕಿ ಮಿ. ಪಾರ್ವಂಗಡ ಕುಶಾಲಪ್ಪನವರ ತಮ್ಮ ಗಣಪತಿಯವರೊಬ್ಬರು. ಹುದಿಕೇರಿಯಲ್ಲಾಗಲೀ, ವೀರಾಜಪೇಟೆಯಲ್ಲಾಗಲೀ ಯಾವ ಗಲಾಟೆಯೂ ದಸ್ತಗಿರಿಯೂ ಆಗಿರುವುದಿಲ್ಲವೆಂದು ತಿಳಿದುಬರುತ್ತದೆ.

ಕಳೆದ ವಾರ ಮಡಿಕೇರಿಯಲ್ಲಿ ದಸ್ತಗಿರಿಯಾದ ನಾಲ್ಕು ಸ್ವಯಂ ಸೇವಕರ ಪೈಕಿ ಮಿ. ಚೆಟ್ಟಿಯಿರ ಪೂಣಚ್ಚನವರೂ ಮತ್ತು ಮನೆಯಪಂಡ ತಿಮ್ಮಯ್ಯನವರೂ ಜಾಮೀನು ಮೇಲೆ ಬಿಡುಗಡೆ ಮಾಡಲ್ಪಟ್ಟಿರುವರು. ಅದರೆ ಮನೆಯಪಂಡ ತಿಮ್ಮಯ್ಯನವರನ್ನು ಬಿಡುಗಡೆಯಾದ ಸ್ವಲ್ಪ ಸಮಯ ವಳಗೇ ಪುನಃ ಪೋಲೀಸಿನವರು ದಸ್ತಗಿರಿ ಮಾಡಿರುವರು.

ಕಳೆದ ವಾರ ನಮ್ಮ ಪತ್ರಿಕೆಯ ಕೆಲವು ಪ್ರತಿಗಳಲ್ಲಿ ಕಾಯಡ ಬೆಳ್ಯಪ್ಪನವರು ವೀರಾಜಪೇಟೆಯಲ್ಲಿ ದಸ್ತಗಿರಿಯಾಗಿರುವರೆಂತ ಪ್ರಕಟವಾಗಿದೆ. ಪತ್ರಿಕೆಯು ಪ್ರಿಂಟಾಗುತ್ತಿರುವಾಗ ಈ ವರ್ತಮಾನವು ಸುಳ್ಳೆಂತ ತಿಳಿದು ಬಂದದರಿಂದ ಮಿಕ್ಕ ಪತ್ರಿಕೆಗಳಲ್ಲಿ ಈ ಸುಳ್ಳಿನ ವರ್ತಮಾನವನ್ನು ತೆಗೆದು ಬಿಡಲಾಯಿತು. ಈ ತಪ್ಪು ಸಂಭವಿಸಿದ್ದಕ್ಕೆ ವಿಷಾದಿಸುತ್ತೇವೆ.

ಶೇಷಯ್ಯ ಮೆಮೋರಿಯಲ್ ಹಾಕಿ ಟೂರ್ನಮೆಂಟು ಮಡಿಕೇರಿಯಲ್ಲಿ ತಾ. 17ರಲ್ಲಿ ಪ್ರಾರಂಭವಾಗಿ ಎಕ್ಸೆಲ್ಸಿಯರ್ ಟೀಮಿನವರು ಹೈಸ್ಕೂಲ್ ಫಸ್ಟ್ ಟೀಮಿನವರನ್ನೂ, ಹೈಸ್ಕೂಲ್ ಸೆಕೆಂಡ್ ಟೀಮಿನವರು ಬಿ. ಯು. ಫ. ಟೀಮಿನವರನ್ನೂ ಸೋಲಿಸಿದರು. ಇದೇ ಕಡೇ ಆಟವು ಸ್ಕೂಲ್ ಸೆಕೆಂಡ್ ಟೀಮಿನವರಿಗೂ ಮತ್ತು ಎಕ್ಸೆಲ್ಸಿಯರ್ ಟೀಮಿನವರಿಗೂ ಈ ದಿನ ಸಾಯಂಕಾಲ ನಡೆಯುವುದು.

ಫೆಡರೇಟೆಡ್ ಮಲೆಸ್ಟೇಟ್ಸ್ ಎಂಬ ದ್ವೀಪಗಳಲ್ಲಿ 'ಮಲಯನ್ ಇಂಡಿಯನ್' ಎಂಬ ಹೊಸ ಮಾಸಿಕ ಪತ್ರಿಕೆಯೊಂದು ಇತ್ತೀಚಿನಲ್ಲಿ ಹೊರಟಿದೆ. ಇದು ಸೆಲಂಗೋರ್ ಇಂಡಿಯನ್ ಅಸೋಸಿಯೇಶನಿನ ಪರವಾಗಿ ಪ್ರಕಟವಾಗುವುದು. ಇದರ ಸಂಪಾದಕರು ನಮ್ಮ ದೇಶೀಯರಾದ ಮಿ. ಬಲ್ಲಚಂಡ ಚಂಗಪ್ಪನೆಂಬವರು ಎಂಬುದನ್ನು ತಿಳಿಸಲು ಸಂತೋಷಪಡುತ್ತೇವೆ. ಈ ಹೊಸ ಪತ್ರಿಕೆಯು ಮೊದಲನೇ ಸಂಚಿಕೆ ನಮ್ಮ ಕೈಸೇರಿದೆ. ಕಳುಹಿಸಿದ ಸಂಘಕ್ಕೆ ನಮ್ಮ ಅಭಿನಂದನೆಗಳಿವೆ.

ದಕ್ಷಿಣ ಕೊಡಗಿನ ಒಬ್ಬ ಯೂರೋಪಿಯನ್ ಪ್ಲಾಂಟರಾದ ಮಿ. ಮರ್ಫಿ ಎಂಬವರ ಗಾಡಿಗಳು ರಸ್ತೆ ಮೇಲೆ ಹೋಗುತ್ತಿರುವಾಗ ದುರ್ಭಾಗ್ಯ ಒಂದು ದೊಡ್ಡ ಒಂಟಿಗ ಕಾಡಾನೆಯು ಎದುರಾಗಿ ಗಾಡಿಯವರೆಲ್ಲಾ ಚೆಲ್ಲಾಪಿಲ್ಲಿಯಾಗಿ ಓಡುತ್ತಿರುವಾಗ ಒಬ್ಬ ಗಾಡಿಯವನನ್ನು ಬೆನ್ನಟ್ಟಿ ಅವನ ಕೈಕಾಲುಗಳನ್ನೆಲ್ಲಾ [illegible] ತಿತ್ತು, ಎಸೆದುಬಿಟ್ಟು ಕೊಂದು ಓಡಿ ಹೋಯಿತೆಂತ 'ಹಿಂದೂ' ಪತ್ರಿಕೆಯ 15ನೇ ತಾರೀಖಿನ ಸಂಚಿಕೆಯಲ್ಲಿ ಪ್ರಕಟವಾಗಿದೆ. ಇದು ಕುಟ್ಟ ಪ್ರಾಂತ್ಯದಲ್ಲಿ ಸಂಭವಿಸಿದ ವಿಷಯವೆಂತ ಸ್ಥಳೀಕ ವರ್ತಮಾನವಿದೆ.

ತಾ. 14ರಲ್ಲಿ ಯೂರೋಪಿಯನ್ ಅವರ್ಗ್ಲ್ ನ ಮತ್ತು ಸೆಂಟ್ರಲ್ ಹೈ ಸ್ಕೂಲ್ ಫಸ್ಟ್ ಟೀಮಿಗೆ ನಡೆದ ಕ್ರಿಕೆಟ್ ಪಂದ್ಯಾಟದಲ್ಲಿ ಸ್ಕೂಲ್ ಟೀಮಿನವರು ಪುನಃ ಯೂರೋಪಿಯನರನ್ನು ಸೋಲಿಸಿದರು. ಸ್ಕೂಲಿನ ಪರ ಆಡಿದ ಮಿ. ಮನೆಯಪಂಡ ಎ. ಬೆಳ್ಯಪ್ಪನವರು 57 ರನ್ನುಗಳನ್ನೂ ಮತ್ತು ಯುರೋಪಿಯನರ ಕಡೆ ಮಿ. ಮೋರಿಸ್‌ರವರು 52 ರನ್ನುಗಳನ್ನೂ ಮಾಡಿದರು. ಮಿ. ಯಂ. ಎ. ಬೆಳ್ಯಪ್ಪನವರೂ ಮತ್ತು ಬಿ. ಎ. ಚಂಗಪ್ಪನವರೂ ಇನ್ನು ಮುಂದಕ್ಕೆ ತಾವು ಭಾಗ ತೆಗೆದುಕೊಳ್ಳುವ ಟೀಮಿನವರನ್ನು ಜಯಪ್ರದವಾಗಿ ಮಾಡುವರೆಂದು ಸಂಭಾವನೆಯನ್ನಿಡಬಹುದು.

[illegible] ಗವರ್ನಮೆಂಟ್ ಕಾಲೇಜಿನಲ್ಲಿ ಇಂಟರ್‌ಮೀಡಿಯಟ್ ಕ್ಲಾಸಿನಲ್ಲಿ ಕಲಿಯುತ್ತಿದ್ದ ಮಿ. ಪುಲಿಯಂಡ [illegible] ಗಣಪತಿ ಎಂಬ ವಿದ್ಯಾರ್ಥಿಯು ಕಳೆದ ಸೋಮವಾರ [illegible]ದಲ್ಲಿ ಆಡುತ್ತಿದ್ದಾಗ ತಲೆಗೆ ಚೆಂಡು [illegible]ಗಿ ಪರಿಣಮಿಸಿ ಮರುದಿನ ಕಾಲವಾದ[illegible]ಸ್ಕಂತ ವಿಷಾದಿಸುತ್ತೇವೆ. ಚೆಂಡು ತಾ[illegible]ಗಣಿಸಿಕೊಳ್ಳಲಿಲ್ಲವೆಂದೂ, ತನ್ನ ಬಿಡಾರ[illegible] ಕೇರಿಸಿ ಮಲಗಿದಾತನಾಗಿ [illegible] ಮಾತಾಡಿಯೂ ಆರಂಭಿಸಿ ಅಶಕ್ತನಾ[illegible] ತಲೆದೋರಿ ಮೃತ್ಯುವಶನಾದನೆಂದು [illegible] ಪ್ರಸ್ತುತಾರ್ಥ [illegible] ಗವರ್ನ[illegible]

ಹಿಂದೂ ದೇಶ.

ಈ ವಾರದಲ್ಲಿ ವಿಠಲಭಾಯಿಯವರು ಮಹಾತ್ಮ ಗಾಂಧಿಯವರನ್ನು ಯರವಾಡಾ ಜೈಲಿನಲ್ಲಿ ಸಂದರ್ಶಿಸುತ್ತಾರೆ.

ತಾ. 13ರಲ್ಲಿ ಬೊಂಬಾಯಿಯಿಂದ ಹೊರಟ ಎರಡು ಹಡಗುಗಳಲ್ಲಿ 1,45,000 ರೂಪಾಯಿ ಕ್ರಯದ ಚಿನ್ನವು ಹೊರಟು ಹೋಯಿತು.

ಮದರಾಸಿನ ಕೆಲವು ಜಿಲ್ಲೆಗಳಲ್ಲಿ ದಸ್ತಗಿರಿಗಳೂ ಶಿಕ್ಷೆಗಳೂ ಆಗುತ್ತಲಿವೆ. ಕೆಲವು ಕಡೆಗಳಲ್ಲಿ ಲಾಠಿ ಮತ್ತು ಬೆತ್ತವೂ ಉಪಯೋಗಿಸಲ್ಪಡುತ್ತಲಿವೆ.

ಮಹಾತ್ಮ ಗಾಂಧಿಯವರ ಸೆಕ್ರೆಟರಿಯಾದ ಶ್ರೀ ಪ್ಯಾರೀಲಾಲರ ತಾಯಿ 60 ವರ್ಷ ಪ್ರಾಯದ ತಾರಾ ದೇವಿಯವರನ್ನು ಡಾಮೋರಿಯಲ್ಲಿ ದಸ್ತಗಿರಿ ಮಾಡಿದ್ದಾರೆ.

ಹಿಂದೂ ಸ್ತ್ರೀಯರಿಗೆ ಗಂಡನನ್ನು ಬಿಡುವ ಸ್ವತಂತ್ರವನ್ನು ಕೊಡಬೇಕೆಂಬ ಖಾನೂನಿನ ಮಸೂದೆಯು ಎಸೆಂಬ್ಲಿಯಲ್ಲಿ ಚರ್ಚೆಗೆ ಬಂದು ಸ್ವಲ್ಪ ಚರ್ಚೆಯಾಗಿ, ಮುಂದರಿಸಲ್ಪಟ್ಟಿದೆ.

ಬರ್ಮಾ ಕೌನ್ಸಿಲಿನಲ್ಲಿ ಭತ್ತದ ಕ್ರಯ ಕಡಿಮೆಯಾದದ್ದಕ್ಕೆ ಸರಿಯಾಗಿ ಭೂಮಿ ಕಂದಾಯವನ್ನು ಕಡಿಮೆ ಮಾಡಬೇಕು ಎಂಬ ಠರಾವು ಬಹುಮತದಿಂದ ಮಂಜೂರಾಯಿತು.

ಗಾಂಧಿಯವರನ್ನು ಬಿಡಬೇಕೆಂತಲೂ, ಆರ್ಡಿನೆನ್ಸುಗಳನ್ನು ರದ್ದು ಮಾಡಬೇಕೆಂತಲೂ ಬೊಂಬಾಯಿ ಕೌನ್ಸಿಲಿನಲ್ಲಿ ಚರ್ಚೆಗೆ ಬಂದಿದ್ದ ಠರಾವುಗಳನ್ನು ಗವರ್ನರು ಚರ್ಚೆಗೆ ಬಿಡಲಿಲ್ಲ.

ಬೊಂಬಾಯಿಯಲ್ಲಿ ತಾ. 14ರಲ್ಲಿ ಝುಂಡಾಭಿವಂದನೆ ಮಾಡಲು ಪ್ರಯತ್ನಿಸಿದ 10 ಕಾಂಗ್ರೆಸಿನವರನ್ನೂ, ಪರದೇಶೀ ಬಟ್ಟೆ ಸುಡಲು ಪ್ರಯತ್ನಿಸಿದ ಹತ್ತು ಜನರನ್ನೂ ದಸ್ತಗಿರಿ ಮಾಡಿದ್ದಾರೆ.

ಬೊಂಬಾಯಿಯಿಂದ 17ನೇ ತಾರೀಖು ಮಧ್ಯರಾತ್ರಿಯೊಳಗೆ ಹೊರಟು ಹೋಗಬೇಕೆಂತ ಮೀರಾಬಾಯಿ ಎಂಬ ಮಹಾತ್ಮ ಗಾಂಧಿಯವರ ಶಿಷ್ಯೆಗೆ ತಾ. 16ರಲ್ಲಿ ನೋಟೀಸ್ ಜಾರಿಯಾಯಿತು.

ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ನೇಮಿಸಲ್ಪಟ್ಟಿದ್ದ ಸರ್ದಾರ್ ಶಾರ್ದೂಲ್ ಸಿಂಗರನ್ನು ತಾ. 14ರಲ್ಲಿ ದಸ್ತಗಿರಿ ಮಾಡಿದ್ದಾರೆ. ಅವರ ಬದಲು ಮೌಲಾನ ಅಬುಲ್ ಕಲಾಂ ಅಜಾದರನ್ನು ಅಧ್ಯಕ್ಷರನ್ನಾಗಿ ನೇಮಿಸಿದ್ದಾರೆ.

ಮಹಾತ್ಮ ಗಾಂಧಿಯವರ ಶಿಷ್ಯರಾದ ವಿಠಲಭಾಯಿಯವರು ಲಂಡನಿಗೆ ಪಾರ್ಲಿಮೆಂಟ್ ಮೆಂಬರೊಬ್ಬರಿಗೆ ಕಳುಹಿಸಿದ ತಂತಿ ವರ್ತಮಾನವನ್ನು ಟೆಲಿಗ್ರಾಫ್ ಆಫೀಸಿನಲ್ಲಿ ಅಂಗೀಕರಿಸದೆ ಇದ್ದುದಕ್ಕಾಗಿ ಎಸೆಂಬ್ಲಿಯಲ್ಲಿ ಸವಾಲುಗಳು ಬಂದುವು.

ಬಂಗಾಳದಲ್ಲಿ ಸ್ವತಂತ್ರ ಪತ್ರಿಕೆಗಳಲ್ಲಿ ವರ್ತಮಾನಗಳನ್ನು ಪ್ರಕಟಿಸುವ ವಿಷಯದಲ್ಲಿ ಸರಕಾರದವರು ಆತಂಕ ಮಾಡುವುದನ್ನು ಕುರಿತು ಹಿಂದೀ ಸ್ವತಂತ್ರ ಪತ್ರಿಕೆಗಳ ಪ್ರತಿನಿಧಿಗಳ ಸಂಘದವರು ಖಂಡಿಸಿ ಠರಾವುಗಳನ್ನು ಮಂಜೂರುಮಾಡಿದ್ದಾರೆ.

ಮಧ್ಯಪ್ರಾಂತ್ಯದ ನಾಗಪುರದಲ್ಲಿ ಶ್ರೀ ಅಭ್ಯಂಕರ್ ಎಂಬವರಿಗೆ ಖಾನೂನು ಭಂಗದ ಚಳವಳದ ಸಂಬಂಧವಾಗಿ 3 ವರ್ಷ ಸಜೆ 10,000 ರೂ. ಜುಲ್ಮಾನೆ ಮೇಜಿಸ್ಟ್ರೇಟರು ವಿಧಿಸಿದ್ದನ್ನು ಸರಕಾರವು ಒಂದು ವರ್ಷ ಸಜೆ, 2,500 ರೂ. ಜುಲ್ಮಾನೆಗೆ ಇಳಿಸಿದೆ.

ಬಂಗಾಳದ ಗವರ್ನರಿಗೆ ಯೂನಿವರ್ಸಿಟಿ ಹಾಲ್‌ನಲ್ಲಿ ಬಿನಾದಾಸ್ ಎಂಬವಳು ಗುಂಡು ಹೊಡೆಯುವಾಗ ಅವಳನ್ನು ಹಿಡಿದುಕೊಂಡ ಡಾಕ್ಟರ್ ಸುಹರ್ವಾರ್ದಿ ಎಂಬವರಿಗೆ 'ಸರ್' ಎಂಬ ಟೈಟಲನ್ನು ಈ ಸಾಹಸ ತೋರಿಸಿದ್ದಕ್ಕಾಗಿ ಚಕ್ರವರ್ತಿಯವರು ಕೊಟ್ಟಿದ್ದಾರೆ.

ಬಿಹಾರದ ತಾರಾಪುರ ಎಂಬ ಊರಿನ ಪೋಲೀಸ್ ಸ್ಟೇಶನಿಗೆ ಜನರು ಮುತ್ತಿಗೆ ಹಾಕಿದರೆಂತಲೂ, ಅದಕ್ಕಾಗಿ ಪೋಲೀಸರು ಗುಂಡು ಹಾರಿಸಿದರೆಂತಲೂ, 8 ಜನರು ಸತ್ತರೆಂತಲೂ, 4 ಜನರಿಗೆ ಅಪಾಯಕರವಾಗಿ ಗಾಯವಾಗಿದೆಯೆಂತಲೂ, ಸತ್ತವರಲ್ಲಿ ಇಬ್ಬರು ಕಾಂಗ್ರೆಸ್ ಮುಖಂಡರೆಂತಲೂ ತಿಳಿದು ಬಂದಿದೆ.

ಚೈನಾಕ್ಕೆ ಹಿಂದೂಸ್ಥಾನದಿಂದ ಸೈನ್ಯವನ್ನು ಕಳುಹಿಸುವುದಿಲ್ಲವಾಗಿಯೂ, ಹಿಂದೂಸ್ಥಾನದಿಂದ ಹೊರಟು ಹೋಗಬೇಕಾಗಿದ್ದ ಒಂದು ಬ್ರಿಟಿಷ್ ಸೈನ್ಯವನ್ನು ಮಾತ್ರ ಕಳುಹಿಸಲಾಗುತ್ತದೆಯೆಂತಲೂ ಅದರ ಸದರ ಖರ್ಚನ್ನು ಇಂಡಿಯಾ ಸರಕಾರವು ವಹಿಸಬೇಕಾಗಿಲ್ಲವೆಂತಲೂ ಎಸೆಂಬ್ಲಿಯಲ್ಲಿ ಜವಾಬು ದೊರಕಿದೆ.

ಅಹಮದಾಬಾದಿನಲ್ಲಿ ತಾ. 14ರಲ್ಲಿ ಒಂದರ ಮೇಲೊಂದು ನಾಲ್ಕು ಮೆರವಣಿಗೆಗಳು ಹೊರಟಾಗಲೇ ಅವರನ್ನು ಪೋಲೀಸಿನವರು ತಡೆದು ದಸ್ತಗಿರಿ ಮಾಡಿದರು. ಅಂತು ಒಟ್ಟಿನ ಮೇಲೆ 44 ಮಹಿಳೆಯರೂ, 9 ಗಂಡಸರೂ ದಸ್ತಗಿರಿಯಾದರು. ಅವರ ಪೈಕಿ ಒಬ್ಬ ಗಂಡಸು ವಿನಹ ಇತರರನ್ನೆಲ್ಲಾ ಸಾಯಂಕಾಲ ವಾಪಸ್ ಮಾಡಿದರು.

ಸೂರತ್ತಿನಲ್ಲಿ ಪರದೇಶೀ ಬಟ್ಟೆಗಳನ್ನು ಸೀಲ್ ಮಾಡಿ ಇಡಲು ಒಪ್ಪಿದ ವ್ಯಾಪಾರಿಗಳಿಗೆ ಅಂಥಾ ಸೀಲುಗಳನ್ನು ಮೂರು ದಿನಗಳೊಳಗೆ ತೆಗೆದುಬಿಡಬೇಕೆಂತಲೂ, ತಪ್ಪಿದರೆ ಅವರೂ ಸಹ ಖಾನೂನುಭಂಗದ ಚಳವಳಕ್ಕೆ ಸಹಾಯ ಮಾಡುವ ತಪ್ಪಿಗೆ ಗುರಿಯಾಗುತ್ತಾರೆಂತಲೂ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರ ನೋಟೀಸ್ ಜಾರಿಯಾಗಿದೆ.

ತಿರುವಾಂಕೂರಿನ ಕಲಾ ಉತ್ಸವ ಸಮಾರಂಭದಲ್ಲಿ ಭಾಗ ತೆಗೆದುಕೊಳ್ಳಲಿಕ್ಕಾಗಿ ತ್ರಿವೇಂಡ್ರಮಿಗೆ ಬಂದ ಹರೀಂದ್ರನಾಥ ಚಟ್ಟೋಪಾಧ್ಯಾಯ (ಶ್ರೀ. ಕಮಲಾದೇವಿ ಚಟ್ಟೋಪಾಧ್ಯಾಯರ ಪತಿ) ರನ್ನು ಆ ಸಂಸ್ಥಾನದಿಂದ ಹೊರಟು ಹೋಗಬೇಕೆಂತ ಹುಕುಂ ಮಾಡಿ ಪೋಲೀಸರು ಜೊತೆ ಮಾಡಿ ಹೊರಗೆ ಕಳುಹಿಸಿಬಿಟ್ಟರು.

ಕಲ್ಕತ್ತಾದಲ್ಲಿ ಇಬ್ಬರು ಎಂಗ್ಲೋ ಇಂಡಿಯನ್ ಯುವಕರು ಬಹಳ ಹೊಟ್ಟೆ ನೋವಿಗಾಗಿ ಆಸ್ಪತ್ರೆಗೆ ತರಲ್ಪಟ್ಟರೆಂದೂ, ಕಲ್ಕತ್ತಾದಲ್ಲಿ ತನ್ನ ಹಠಯೋಗದ ಶಕ್ತಿಯನ್ನು ಪ್ರದರ್ಶಿಸಿದ ನರಸಿಂಗ್ ಸ್ವಾಮಿಯವರಂತೆ ತಾವೂ ಗ್ಲಾಸ್ ತುಂಡುಗಳನ್ನು ನುಂಗಿದರೆಂತಲೂ, ಅದರಿಂದ ಹೊಟ್ಟೆ ನೋವು ಬಂತೆಂತಲೂ ತಿಳಿದು ಬಂದಿದೆ.

ಪೂನಾ ಮುನ್ಸಿಪಲ್ ಕಮಿಟಿಯವರು ಮಹಾತ್ಮ ಗಾಂಧಿಯವರ 63ನೇ ಜನ್ಮದಿನದಲ್ಲಿ ಅವರನ್ನು ಅಭಿನಂದಿಸುವ ಠರಾವು ಮಂಜೂರು ಮಾಡಿ ಅವರ ಜನ್ಮ ದಿನದಲ್ಲಿ ಮುನ್ಸಿಪಲ್ ಸ್ಕೂಲುಗಳಿಗೆ ರಜೆ ಕೊಟ್ಟದ್ದಕ್ಕೆ ಸರಕಾರವು ಮುನ್ಸಿಪಾಲಿಟಿಯ ವಿವರಣೆಯನ್ನು ಕೇಳಿದೆ. ಸರಕಾರವು ವಿವರಣೆ ಕೇಳಲಿಕ್ಕೆ ಯಾವ ಖಾನೂನು ಮೇರೆ ಅಧಿಕಾರವಿದೆಯೆಂತ ಮುನ್ಸಿಪಲ್ ಕಮಿಟಿಯವರು ಕೇಳಿದ್ದಾರೆ.

ಬಿಹಾರದ ಕೋವಿಲ್ಲಾ ಎಂಬಲ್ಲಿ ಮೀಟಿಂಗ್ ನಡೆಸಬಾರದೆಂತ ಪೋಲೀಸ್ ಹುಕುಂ ಇದ್ದರೂ 1000 ಜನರು ಸೇರಿ ಮೀಟಿಂಗ್ ಮಾಡಿದಾಗ ಪೋಲೀಸರು ಚದರಿಸಿದರೂ ಸಹ ಜನರು ಪೋಲೀಸರ ಮೇಲೆ ಕಲ್ಲು ಎಸೆದದ್ದಕ್ಕಾಗಿ ಪೋಲೀಸರು ಗುಂಡು ಹಾರಿಸಿದರು. ಇಬ್ಬರು ಸತ್ತರು, ಮೂವತ್ತು ಜನರಿಗೆ ಗಾಯವಾಯಿತು. ಗಾಯಪಟ್ಟವರಲ್ಲಿ ಇನ್ನೂ ಮೂವರು ಸಾಯುವಂತಿದ್ದಾರೆ.

ಬೊಂಬಾಯಿ ಕೌನ್ಸಿಲಿನಲ್ಲಿ ಅಲ್ಲಿಯ ಗವರ್ನರು ಹೇಳಿದ್ದೇನೆಂದರೆ—ಖಾನೂನು ಭಂಗ ಮಾಡುವವರೊಂದಿಗೆ ರಾಜಿಯಾಗುವುದಿಲ್ಲ. ಈಗ ಶಿಕ್ಷೆಗೆ ಗುರಿಯಾಗುವವರು ಪೂರ್ತಿ ಕಾಲದ ಶಿಕ್ಷೆಯನ್ನೇ ಅನುಭವಿಸಬೇಕಾಗುತ್ತದೆ. ಕೆಲವು ವ್ಯಾಪಾರಿಗಳು ಕಾಂಗ್ರೆಸಿಗೆ ಸಹಾಯಕೊಟ್ಟು ವ್ಯಾಪಾರವೆಲ್ಲಾ ಹಾಳಾಗಿದೆ. ವ್ಯಾಪಾರವನ್ನೂ, ರಾಜಕೀಯ ಚಳವಳವನ್ನೂ ಬೇರೆ ಬೇರೆ ಇಡುವುದು ಅವಶ್ಯವೆಂತ ವಗ್ಗೈರೆಯಾಗಿ ಭಾಷಣ ಮಾಡಿದರು.

ಅಹಮದಾಬಾದಿನ ಮಿಲ್ ಮಾಲೀಕರು ಹಿಂದೂಸ್ಥಾನದಿಂದ ಚಿನ್ನವು ರಫ್ತಾಗುವುದನ್ನು ತಡೆಯಬೇಕೆಂತ ಸರಕಾರವನ್ನು ಕೇಳಿಕೊಂಡಿರುತ್ತಾರೆ. ಇವರು ಹೇಳಿರುವುದೇನೆಂದರೆ—ಈ ರೀತಿ ಚಿನ್ನವು ದೇಶದಿಂದ ಹೊರಟು ಹೋಗುತ್ತಿದ್ದರೆ ದೇಶದ ಆರ್ಥಿಕ ಸಂಕಟವು ತುಂಬಾ ಹೆಚ್ಚುತ್ತದೆ. ಜನರಲ್ಲಿ ಕೊಂಡುಕೊಳ್ಳಲು ಇರುವ ಶಕ್ತಿಯು ಇನ್ನಷ್ಟು ಕಡಿಮೆಯಾಗುತ್ತದೆ. ಜಪಾನ್ ಪರ್ಷಿಯಾದಂಥ ದೇಶಗಳು ಸಹ ದೇಶದಿಂದ ಚಿನ್ನ ಹೊರಗೆ ಹೋಗದಂತೆ ತಡೆದಿರುತ್ತಾರೆ.'

ಬೊಂಬಾಯಿಯ ಯೂರೋಪಿಯನ್ ಎಸೋಸಿಯೇಶನಿನ ಪ್ರೆಸಿಡೆಂಟರಾದ ಎಬರ್‌ಕ್ರಾಂಬಿ ಎಂಬವರು "ಹಿಂದೂಸ್ಥಾನದ ಹೋರಾಟಕ್ಕೆ ನಾವು ಕೊಟ್ಟ ವಾಗ್ದಾನದಂತೆ ನಾವು ನಡೆದುಕೊಳ್ಳುತ್ತೇವೆಂಬ ಭರವಸೆ ಹಿಂದೀಯರಿಗೆ ಇಲ್ಲದಿರುವುದೇ ಕಾರಣವೆಂತ ಹೇಳಿ, ಮಂತ್ರಿಯವರು ಹೇಳಿದ ಮಾತುಗಳನ್ನು ನಡೆಸಿಕೊಡುವ ಕೆಲಸ ಮಾಡುತ್ತಿರಬೇಕು, ಖಾನೂನು ಭಂಗದ ಚಳವಳವನ್ನು ಈಗಿನ ರೀತಿಯಲ್ಲೇ ಮುರಿಯಬೇಕೆನ್ನುತ್ತಾರೆ.

ಸೊಲ್ಲಾಪುರದಲ್ಲಿ 'ಪೇಶಾವರ ದಿನ'ವನ್ನು ಆಚರಿಸಿರೆಂದು ಬರೆದ ಹಲಗೆಯನ್ನು ಶ್ರೀ. ಬಂಡಯ್ಯ ಗುಡಗಂಟಿ ಎಂಬವನು ತಂತಿಕಂಭವನ್ನೇರಿ ಹಚ್ಚುತ್ತಿದ್ದನು. ಪೋಲೀಸರು ಇವನನ್ನು ಕೈದುಮಾಡಿ ಮೇಜಿಸ್ಟ್ರೇಟರ ಮುಂದೆ ಹಾಜರುಪಡಿಸಿ ಪ್ರಶ್ನಿಸಿದಾಗ ಬಂಡಯ್ಯನು, 'ಸಾಧ್ಯವಿದ್ದಷ್ಟು ದೇಶಸೇವೆ ಮಾಡೆಂದು ನನಗೆ ಆಕಾಶವಾಣಿಯಾಯಿತು; ಈ ಬೋರ್ಡು ಆಕಾಶದಿಂದ ಕೆಳಗೆ ಬಿತ್ತು. ಅದನ್ನೆತ್ತಿ ಹಚ್ಚುತ್ತಿದ್ದೆ' ಎಂದು ಉತ್ತರಕೊಟ್ಟನು. ಈತನಿಗೆ ೬. ತಿಂಗಳ ಸಜೆ; ೫೦ ರೂ. ದಂಡ.

ಮಧ್ಯಪ್ರಾಂತ್ಯದ ಗವರ್ನರಾಗಿದ್ದ ಸರ್ ರೆಜಿನಾಲ್ಡ್ ಕ್ರಾಡ್ಡಾಕ್ ಎಂಬವರ ಪಟವು ಕೌನ್ಸಿಲ್ ಹಾಲ್‌ನಲ್ಲಿ ಇಡಲ್ಪಟ್ಟಿತ್ತು. ಅದನ್ನು ತೆಗೆದು ಬಿಡಬೇಕಾಗಿ ಕೌನ್ಸಿಲಿನಲ್ಲಿ ಠರಾವು ಬಂದಾಗ ಕೌನ್ಸಿಲ್ ಪ್ರೆಸಿಡೆಂಟರೇ ಅದನ್ನು ತೆಗೆಸುವುದಾಗಿ ವಾಗ್ದಾನ ಕೊಟ್ಟಿದ್ದ ಪ್ರಕಾರ ತೆಗೆಸಿದ್ದಾರಾಗಿ ವರ್ತಮಾನವಿದೆ. ಈ ಕ್ರಾಡ್ಡಾಕ್ಕರು ಮಹಾತ್ಮ ಗಾಂಧಿಯವರ ಮೇಲೆ ಆಕ್ಷೇಪಕರವಾದ ಮಾತುಗಳಾಡಿದ್ದರಿಂದ ಜನರಿಗೆ ಇವರ ಮೇಲೆ ಅಪ್ರೀತಿಯು ತುಂಬಾ ಹೆಚ್ಚಿದ್ದರಿಂದ ಈ ಠರಾವು ಬರಲು ಕಾರಣವಾಯಿತು.

ಅಸ್ಪೃಶ್ಯರಿಗೆ ಪ್ರತ್ಯೇಕ ಚುನಾವಣೆಯು ಬೇಡವೆಂತಲೂ, ಅಸ್ಪೃಶ್ಯರಿಗೆ ಇಂತಿಷ್ಟು ಸ್ಥಾನಗಳೆಂತ ನಿಯಮ ಮಾಡಿ ಇಟ್ಟರೆ ಸಾಕೆಂತಲೂ, ಮಂತ್ರಿ ಮಂಡಲಿಯಲ್ಲಿ ತಮ್ಮ ಪ್ರತಿನಿಧಿಗಳು ಇರಬೇಕೆಂತಲೂ, ಪ್ರತಿಯೊಬ್ಬ ಪ್ರಾಯಬಂದವರಿಗೂ ಓಟು ಇರುವುದು ಉತ್ತಮವಾದರೂ ಈಗ ತಿಂಗಳಿಗೆ ಪಟ್ಟಣದಲ್ಲಿ 10 ರೂ. ಗ್ರಾಮಗಳಲ್ಲಿ 5 ರೂ. ಸಂಪಾದಿಸುವವರಿಗೂ ಮತ್ತು ಇನ್ನು ಕೆಲವು ವಿಧದ ಬೇರೆಯವರಿಗೂ ಓಟ್ ಇರಬೇಕೆಂತಲೂ ವಗ್ಗೈರೆ ರಾವ್ ಬಹದ್ದೂರ್ ಯಂ. ಸಿ. ರಾಜ್ ಇವರು ಅಭಿಪ್ರಾಯ ಕೊಟ್ಟಿರುತ್ತಾರೆ.

ಕಾಶ್ಮೀರದ ಬಂಡಾಯ.

ಈಗ ಕೆಲವು ತಿಂಗಳುಗಳಿಂದ ಕಾಶ್ಮೀರ ಸಂಸ್ಥಾನವು ಪ್ರಚಂಡ ಕೋಲಾಹಲಮಯವಾಗಿರುವುದು. ಮಹಮ್ಮದೀಯರು ಹಲವು ಗಲಭೆಗಳನ್ನುಂಟುಮಾಡಿರುವರು. ಈ ಗಲಭೆಯನ್ನಡಗಿಸಲು ಕಾಶ್ಮೀರದ ಮಹಾರಾಜರು ಹಿಂದೀ ಸೇನೆಯ ಸಹಾಯಪಡೆಯಬೇಕಾಯಿತು. ನಂತರ ಈ ಅವಾಂತರದ ಕಾರಣ ವಿಚಾರಿಸಲು ಮಿ. ಗ್ಲೇನ್ಸಿಯವರ ಅಧ್ಯಕ್ಷತೆಯಲ್ಲಿ ಕಮಿಟಿಯೊಂದನ್ನೇರ್ಪಡಿಸಲಾಯಿತು. ಈ ಕಮಿಟಿಯ ವಿಚಾರಣೆ ನಡೆಯುತ್ತಿರುವಾಗಲೆ ಈಗ ಪುನಃ ಭಯಂಕರ ಬಂಡಾಯವೆದ್ದಿರುವುದು. ಶಾಂತಿ ಸ್ಥಾಪನೆಗಾಗಿ ಮಹಾರಾಜರು ಮಾಡಿದ ಪ್ರಯತ್ನವು ನಿರರ್ಥಕವಾಗಿರುವಂತೆ ತೋರುವುದು. ಈ ಬಂಡಾಯಕ್ಕೆ ಪಂಜಾಬೀ ಮೊದಲಾದ ಹೊರಗಣ ಮುಸಲ್ಮಾನರ ಸೂತ್ರಚಾಲನೆಯೇ ಕಾರಣವೆಂಬ ಸಂದೇಹಕ್ಕೆ ಸ್ಥಳವುಂಟಾಗುವುದು. ಅಷ್ಟು ಮಾತ್ರವಲ್ಲದೆ ಪಂಜಾಬಿನ ಅಹ್ರಾರ್ ಪಕ್ಷೀಯರೆಂಬವರು ಕಾಶ್ಮೀರದಲ್ಲಿ ಗಲಾಟೆಯಾರಂಭವಾದಾಗ ಅಲ್ಲಿಗೆ ಸ್ವಯಂಸೇವಕರನ್ನು ಕಳುಹಿಸಿ ಪ್ರೋತ್ಸಾಹಿಸಿದ್ದರು. ಈಗಲೂ ಅವರ ಆಂದೋಲನವು ಕಡಿಮೆಯಾಗಿರುವುದಿಲ್ಲ. ಸೋಜಿಗವಾದದ್ದು ಹೆಚ್ಚಿನ ಜನಸಂಖ್ಯೆಯು ಮುಸಲ್ಮಾನರಾಗಿದ್ದು ಅದನ್ನು ಹಿಂದುರಾಜರಾಳುವುದು ಕೆಲವು ಪ್ರತಿಷ್ಠಿತ ಮುಸಲ್ಮಾನರಿಗೆ ಅಸಹನೀಯವಾಗಿ ಅವರೇ ಒಳಗಿಂದೊಳಗೆ ಒಳಸಂಚು ನಡೆಸುತ್ತಿರುವರೆಂಬ ಅನುಮಾನವುಂಟಾಗಿದೆ. ಎಸೆಂಬ್ಲಿ ಮೆಂಬರಾದ ಶ್ರೀ. ಎ ಎಸ್. ರಂಗ ಐಯ್ಯಂಗಾರರು ತನ್ನ ಪತ್ರಿಕೆಯಾದ ಅಸೋಸಿಯೇಟೆಡ್ ಹಿಂದೂ ಪತ್ರಿಕೆಯಲ್ಲಿ ಕಾಶ್ಮೀರದ ಗಲಾಟೆಯಲ್ಲಿ ಇಂಡಿಯಾ ಸರಕಾರದ ಮಂತ್ರಿಗಳೊಬ್ಬರಾದ ಸರ್. ಫಾಜ್ಲ್ ಹುಸೇನರ ಗುಪ್ತಹಸ್ತವಿರುವುದೆಂದೂ, ಅದನ್ನು ತಾವು ಸ್ಥಾಪಿಸಲು ತಯಾರಿರುವೆವೆಂದೂ, ಪ್ರಕಟಿಸಿರುವರು. ಇದನ್ನು ಸರ್. ಫಾಜ್ಲ್ ಹುಸೇನರು ಇನ್ನೂ ತನಕ ನಿರಾಕರಿಸಿರುವುದಿಲ್ಲ.

ಕಾಶ್ಮೀರದ ಉತ್ತರ ಭಾಗದಲ್ಲಿ ಬಂಡಾಯಗಾರರು ಗ್ರಾಮ ಗ್ರಾಮಗಳಿಗೇನೇ ಬೆಂಕಿಕೊಟ್ಟು ಸುಟ್ಟು ಹಾಕಿರುವರು. ಜನವರಿ ತಾ 28, 29 ರಲ್ಲಿ ಮುಸಲ್ಮಾನರು ಬಹಳ ಲೂಟಿಮಾಡಿ ಸೇನಾಪತಿಯ ಸ್ಥಳಕ್ಕೇನೇ ಮುತ್ತಿಗೆ ಹಾಕಲೆತ್ನಿಸುವ ಸಾಹಸ ಮಾಡಿದಾಗ ಪೋಲೀಸರು ಗುಂಡು ಹಾರಿಸಿ ಅನೇಕರನ್ನು ಗಾಯಗೊಳಿಸಿ ಒಬ್ಬನು ಸತ್ತು ಹೋದನು. ಸರಕಾರವು ಪ್ರಬಲ ಬಂದೋಬಸ್ತನ್ನು ಪ್ರಯೋಗಿಸುತ್ತಿರುವುದಾದರೂ ದಂಗೆಗಾರರು ದಿನೇ ದಿನೇ ಹೆಚ್ಚುತ್ತಿದ್ದಾರೆ. ಹುಚ್ಚೆದ್ದ ಹಿಂದುಗಳ ಮನೆಮಾರು ನಾಶಮಾಡಿ ಕೆಲವರನ್ನು ಬಲತ್ಕಾರದಿಂದ ಮತಾಂತರಗೊಳಿಸುತ್ತಾರೆ. ಅವರಿಗೆ ರಕ್ಷಣೆಯಿತ್ತು ಸಹಾಯಮಾಡುವ ಪ್ರಯತ್ನ ನಡೆದಿದೆ. ಕೋಟ್ಲಿ ಎಂಬ ಪಟ್ಟಣದ ಬಳಿ ಬಂಡಾಯಗಾರರು ಅತಿ ಪ್ರಬಲರಾಗಿ ಅಲ್ಲಿಯ ಹಿಂದುಗಳೆಲ್ಲರೂ ಕಂಗೆಟ್ಟು ದಿಕ್ಕಾಪಾಲಾಗಿ ಓಡಿಹೋಗಿರುತ್ತಾರೆ. ಮುಸಲ್ಮಾನ ಪುಂಡರು ಬಂದೂಕು ಮೊದಲಾದ ಶಸ್ತ್ರಸನ್ನದ್ಧರಾಗಿ ಭಯಂಕರ ಹಾವಳಿ ಮಾಡುತ್ತಿರುವರು. ವಿಮಾನ ಮುಖಾಂತರವೂ ಕಾಶ್ಮೀರ ಸರಕಾರವು ಬಂಡಾಯವನ್ನಡಗಿಸಲೆತ್ನಿಸುತ್ತಿದೆ. ಇಂಡಿಯಾ ಸರಕಾರದವರೂ ಸೇನಾ ಸಹಾಯವಿತ್ತಿರುವರು. ಕಾಶ್ಮೀರ ಮೊದಲಾದೆಡೆಗಳಲ್ಲಿಯೂ ಅತಿ ಪ್ರಹಾರಮಾಡಿಸಿ ವಿರೋಧ ಪ್ರದರ್ಶನವನ್ನು ಚದರಿಸಬೇಕಾಗಿ ಬಂದಿದೆ. ಹಲವರ ದಸ್ತಗಿರಿಯೂ ಆಗಿದೆ. ಸೈನಿಕರು ಬಂಡಾಯದ ಮುಖ್ಯ ಮುಖ್ಯ ಸ್ಥಳಗಳಿಗೆಲ್ಲಾ ಹೋಗಿ ಪರಿಸ್ಥಿತಿಯು ಹತೋಟಿಗೆ ಬಂದಿರುವುದೆಂದು ತಿಳಿದು ಬರುತ್ತದೆ. ಕೋಟ್ಲಿ ತಾಲೋಕಿನಲ್ಲಿ 28 ಗ್ರಾಮಗಳು ಸುಟ್ಟು ಹಾಕಲ್ಪಟ್ಟಿವೆ ಪೂಂಚೆಂಬ ಸ್ಥಳವು ಸಂಪೂರ್ಣವಾಗಿ ಬಂಡಾಯಗಾರರ ಕೈವಶವಾಗಿದೆ. ಅಲ್ಲಿಗೆ ಸೈನಿಕರು ಸಾಗುತ್ತಿದ್ದಾರೆ. ಜೇಲಮ್ ಕಣಿವೆ ರಸ್ತೆಯ ಸಂಕವನ್ನು ಸುಡಲೆತ್ನಿಸಿದ ಸುಮಾರು 7 ಮಂದಿ ಕೈದುಮಾಡಲ್ಪಟ್ಟಿರುವರು. ಮಿರ್‌ಪುರ ಮತ್ತು ಕೋಟ್ಲಿ ತಾಲೋಕಿನಲ್ಲಿ ಹಿಂದು ಮತ್ತು ಸಿಖ್ಖರ ಪ್ರತಿಯೊಂದು ಮನೆಯೂ ಲೂಟಿಮಾಡಲ್ಪಟ್ಟಿವೆ ಅಥವಾ ಸುಟ್ಟು ಹಾಕಲ್ಪಟ್ಟಿವೆ. ಒಂದೆರಡು ಜನಾನುಮಂದಿರಗಳೆಲ್ಲಾ ಒಳಗಿರುವಾಗಲೇ ಕಟ್ಟಡಗಳಿಗೆ ಬೆಂಕಿಕೊಡಲಾಯಿತಂತೆ. ಶ್ರೀನಗರದಲ್ಲಿ ಸರಕಾರದ ಹುಕುಮಿನ ವಿರೋಧವಾಗಿ ಸಭೆ ನಡೆಸುವಿಕ್ಕಾಗಿ ಲಾಠಿ ಪ್ರಹಾರವಾಗಿ 100 ಮಂದಿ ಕೈದುಮಾಡಲ್ಪಟ್ಟಿರುವರು. ಮಿರ್‌ಪುರದ ಲೂಟಿಯಲ್ಲಿ ಬ್ರಿಟಿಷ್ ಇಂಡಿಯಾದ ಮುಸಲ್ಮಾನರು ಕೆಲವರೂ ಭಾಗಿಯಾಗಿದ್ದರು. ಇದೇ ತಾ. 5 ರಲ್ಲಿ ಕಾಶ್ಮೀರದಲ್ಲಿ ಲಾಠಿ ಪ್ರಹಾರಮಾಡಿ ಮುಸಲ್ಮಾನರನ್ನು ಚದುರಿಸಬೇಕಾಯಿತು. ಕಾಶ್ಮೀರ ಸರಕಾರದವರು ಶೇಕಡ 50 ರಷ್ಟು ರ ಕಂದಾಯಗಳನ್ನೆಲ್ಲಾ ಮುಸಲ್ಮಾನರಿಗೋಸ್ಕರ ಕೊಡಬೇಕೆಂದು ಹುಕುಮು ಕೊಟ್ಟಿರುವರೆಂದು ತಿಳಿದುಬರುತ್ತದೆ. ಕಾಶ್ಮೀರದ ಬಳಿ 4000 ಮುಸಲ್ಮಾನರು ಸೇರಿ ರಾಜದ್ರೋಹಕರ ಘೋಷಣೆಯಿಂದ ಉದ್ರೇಕಿತರಾಗಿ ಪೋಲೀಸರ ಮೇಲೆ ಬಿದ್ದಾಗ 72 ಮಂದಿ ಕೈದುಮಾಡಲ್ಪಟ್ಟರು. ಉರಿಯೆಂಬಲ್ಲಿ ಮುಸಲ್ಮಾನರು ಚದರಿ ಹೋಗದೆ ಲೂಟಿಮಾಡಿ ಕಲ್ಲೆಸೆದುದರಿಂದ ಪೋಲೀಸರು ಗುಂಡು ಹಾರಿಸಿ ಒಬ್ಬರು ಕೊಲ್ಲಲ್ಪಟ್ಟು 6 ಮಂದಿ ಗಾಯಗೊಂಡಿರುವರು. ಹಾಜಿಪ್ಪಿರ ಎಂಬಲ್ಲಿ ಮುಸಲ್ಮಾನ ಪುಂಡರೊಟ್ಟುಗೂಡಿ ಬಜಾರನ್ನೆಲ್ಲಾ ಲೂಟಿಮಾಡಿ ಪೋಲೀಸ್ ಜವಾನನೊಬ್ಬನಿಗೆ ಗುಂಡು ಹೊಡೆದು ಸೈನಿಕರ ಗುಂಡುಹಾರಿಸಿದ ಮೇಲೆ ಚದರಿ ಹೋದರು.

"ನವಯುಗ"

ಮಿಸ್ ಮುರಿಯೆಲ್ ಲೆಸ್ಟರ್.

(ಗಾಂಧಿಯವರಿಗೆ ಆತಿಥ್ಯವನ್ನಿತ್ತವಳು)

ಇವರು ಇಂಗ್ಲೆಂಡಿನ ಒಂದು ಮೀಟಿಂಗಿನಲ್ಲಿ ಹೇಳಿದ್ದೇನೆಂದರೆ—"ಮಹಾತ್ಮ ಗಾಂಧಿಯವರನ್ನು ಬಂಧಿಸಿದುದರಿಂದ ಅವರಿಗೇನೂ ಹಾನಿಯಾಗಲಿಲ್ಲ. ಹಾನಿಯು ನಮಗೆಂದೇ ನನ್ನ ಹೇಳಿಕೆ. ಶಾಂತಿಯನ್ನುಂಟುಮಾಡಲು ಭೂಲೋಕದಲ್ಲಿನ ಎಲ್ಲಾ ಮನುಷ್ಯರಿಗಿಂತಲೂ ಹೆಚ್ಚಿನ ಶಕ್ತಿಯುಳ್ಳ ಮನುಷ್ಯನನ್ನು ಹೀಗೆ ಬಂಧಿಸುವುದೆಂದರೆ ಬ್ರಿಟಿಷರಲ್ಲಿ ರಾಜನೀತಿಜ್ಞತೆಯು ಏನೂ ಇಲ್ಲವೆಂದೂ, ನಮಗೆ ಬಂದು ಕಷ್ಟಗಾಲವೆಂದೂ ನನ್ನ ಭಾವನೆ. ಗಾಂಧಿಯವರು ಹಿಂದೂದೇಶಕ್ಕೆ ಫ್ರಾನ್ಸ್, ಸ್ವಿಜರ್‌ಲೆಂಡ್ ಮತ್ತು ಇಟಲಿಗಳ ಮಾರ್ಗವಾಗಿ ಹೋಗುವಾಗ ನಾನು ಅವರನ್ನು ಕಂಡಿದ್ದೆನು. ಆದರೆ ನಾನು ಹಿಂತಿರುಗಿ ಬರುವಾಗ ಗಾಂಧಿಯವರು ಇಂಗ್ಲೆಂಡು ವಿರೋಧವಾಗಿ ನುಡಿದರೆಂಬ ವಾರ್ತೆಯನ್ನು ಬ್ರಿಟಿಷ್ ಮುದ್ರಣಾಲಯಗಳು ಹಬ್ಬಿಸಿದುದನ್ನು ನೋಡಿ ನನಗೆ ಆಶ್ಚರ್ಯವಾಯಿತು. ಎಲ್ಲಾ ಕಡೆಗಳಲ್ಲೂ ಗಾಂಧಿಯವರು ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡುವಾಗ ನಾನಿದ್ದೆನು. ರೋಮಿನಲ್ಲಿ ಕೌಂಟ್ ಟಿಲ್‌ಟೋಲಿಯವರ ಮಗಳೊಡನೆ ಮಾತನಾಡುವಾಗ ನಾನಿದ್ದೆನು. ಸೀನಿಯರ್ ಮುಸೊಲೋನಿಯವರನ್ನು ಗಾಂಧಿಯವರು ಸಂದರ್ಶಿಸಿದಾಗ ನಾನು ಅವರನ್ನು ನೋಡಿದೆ. ಒಮ್ಮೆಯೂ ಅಲ್ಲಾಗಲೂ ಗಾಂಧಿಯವರು ಬ್ರಿಟಿಷ್ ಜನರ ವಿರೋಧವಾಗಿ ಮಾತನಾಡಿದುದನ್ನು ನಾನು ಕೇಳಲಿಲ್ಲ. ಅದರ ಬದಲಿಗೆ ಅವರು ಬ್ರಿಟಿಷ್ ಜನರನ್ನು ಹೊಗಳಿದ್ದರು. ಇಟಲಿಯ ಪತ್ರಿಕಾ ಪ್ರತಿನಿಧಿಗಳು ಪ್ರಕಟಿಸಿದುದು ಒರೇ ಸುಳ್ಳು ವಾರ್ತೆ. ಇಂಗ್ಲೆಂಡಿನಲ್ಲಿ ಕಂಡ ಜನರನ್ನೆಲ್ಲಾ ಗಾಂಧಿಯವರು ಅತ್ಯುತ್ತಮರೆಂದು ಹೊಗಳಿದರು. ಗಾಂಧಿಯವರನ್ನು ಬಂಧಿಸಿದುದರಿಂದ ಸರ್ಕಾರದ ಶಕ್ತಿಯು ಅಧಿಕವಾಗಲಿಕ್ಕಿಲ್ಲ. ಅದರ ಬದಲಿಗೆ ಗಾಂಧಿಯವರ ಶಕ್ತಿಯು ಹತ್ತರಷ್ಟು ಬಲ ಹೆಚ್ಚುವುದು.

'ಸ್ವ. ಪೂರ'

ರಿಟೈರ್ಡ್ ಮುನ್ಸೀಫರು

ಮುತ್ತಣ್ಣನವರ ಶ್ರೇಯೋಭಿವೃದ್ಧಿಗೆ ವಿಜ್ಞಾಪನಾ.

ಕಂದ:—ಹರನೆ ಸರ್ವೋದ್ಧಾರನೆ।
ಪರಂಜ್ಯೋತಿಸಂಪೂರ್ಣ ಪರಮೇಶ್ವರನೆ॥
ನಿರಾಕಾರ ನಿರಂಜನನೆ।
ನಿರಾಲಂಬನಿಕಾಮಯನೆ ಪೊಲೀಸ್ ಮುತ್ತಣ್ಣನೆಂದು॥

(ಜನ್ಮವೊಂದ್ ಭಕ್ತಿಲೀನಿ—ಎಂಬಂತೆ)

ಬೆಂದುಮುತ್ತಣ್ಣ। ಯೆಂದು ಬಾಳಿಬೋಲ॥೧॥
ಇಂದುಧರದಯಿತೆಂದು ನುಗತಿರ॥೧।೧॥
ಉತ್ತಂಬ್‌ಕ್‌ಕೊತ್ತ। ಚೊಕ್ಕಕೆಂದವಂಡ॥
ತಕ್ಕ ಸಂಬಪಂಡ। ಮುತ್ತಣ್ಣನಸಿಂಗ॥೨॥
ಇಂಡಿಯ ಕಡಂದ್। ಅಂತನ್‌ಕ್ ಸೇರ॥
ಮಂಡೆದುಂಬಳ್‌ತ್। ಕೊಂಡಬಂದನಿಂಗ॥೩॥
ಗುಣನಲ್ಲಸಾಬ್। ಕ್ಷಣಾತೀದಂಜಿ॥
ಮುನ್‌ಶೀಫ್ ಮುದ್ರೆ। ಮನಬೆಚ್ಚಿತಾತ್॥೪॥
ಅಂದಿಂಜಿ ಉದ್ಯೋಗ। ಸಂದಾಸಗತ್॥
ಮೂಂದ್‌ಯೇಳ್ ಕಾಲ। ತಾಂದ್ ನಡತೀರ॥೫॥
ಮೂದ್‌ನಧಿಕಾರ। ನೋಟ‌ನ ಬನವ್ವೊ॥
ಕೇದ್‌ಕಾಣಾತಾಂಗ್। ಪಾಡ ಮಾಡಿದ॥೬॥
ಮಾನಕ್‌ಅಂಗೆನ್ನೋ। ಪೊನ್‌ದೋಪಕಂಡ್॥
ತಾನಕ್‌ ಪಾಗ। ತಾನೇ ಬಿಟ್ಟದಾಚಿ॥೭॥
ದಾನಕೂರನಿಂಗ। ಮಾನಾಧಿಕಾರ॥
ಮಾನತ್‌ಲೇ ಮೂಡಿ। ಮಾನಕೋಂಡದಾಚಿ॥೮॥
ತಾಪರ ಪೊಳೆಯತ್ತ। ದೇವಿ ದೇಹವ್ವಂಗೂ॥
ಬಾಪನಿಂಗಕೆಂದೂ। ದೇವತಾಕೆಯ್ಯ್॥೯॥
ಆಶಧಾನ್ಯತಿರಿ। ದೇಶಸೇವೆ ಮೂಡಿ॥
ಆಸಲ್‌ದಾಸ ಈಶನ ತುದಿಪ॥೧೦॥

ಶ್ರೀಮಾನ್ ಮುತ್ತಣ್ಣನವರೇ, ಸ್ವರ್ಗವಾಸಿಗಳಾದ ರಾವ್‌ಬಹದ್ದೂರ್ ಸಿ. ಯಂ. ಸಂಜಪ್ಪಣ್ಣನವರ ಜೇಷ್ಠ ಪುತ್ರರಾಗಿ ಅವತರಿಸಿದ ತಾವು ನಮ್ಮ ಇಂಡಿಯಾವಲ್ಲದೆ ಇಂಗ್ಲೆಂಡಿಗೆ ಸಹ ಹೋಗಿ ರಾಜ ವಿದ್ಯೆಯಲ್ಲಿ ಪ್ರವೀಣರಾಗಿ ಬ್ಯಾರಿಸ್ಟರ್ ಎಟ್-ಲಾ. ಎಂಬ ಘನ ಪದವಿ ಪಡೆದು ಸ್ವದೇಶಕ್ಕೆ ಬಂದು ದೇಶಸ್ಥರ ಅತೀ ಪ್ರೀತಿಗೆ ಪಾತ್ರರಾಗಿದ್ದ ಕೊಂಚ ಕಾಲದಲ್ಲೇ ದಕ್ಷಿಣ ಕೊಡಗಿನ ಮುನ್‌ಸೀಫ್ ಪದವಿ ತಮಗೆ ಲಭ್ಯವಾದದ್ದರಿಂದ ದೇಶಸ್ಥರ ಸಂತೋಷಕ್ಕೆ ಪಾರವೇ ಇಲ್ಲದಾಯಿತು. ಅದರ ಚಿಕ್ಕ ಪ್ರಾಯದಲ್ಲಿ ಘನ ಅಧಿಕಾರ ನಡೆಸಲು ತಮ್ಮ ಮೇಧಾ ಶಕ್ತಿಯೇ ಕಾರಣವೆಂಬಂತೆ ನಿಷ್ಠೆ, ಧೈರ್ಯ, ಭಕ್ತಿ, ದಯಾರಸದಿಂದ ಇಪ್ಪತ್ತೊಂದು ವರ್ಷ ಪರಿಯಂತರ ಚಟುವಟಿಕೆಯಿಂದ ಕೆಲಸ ಮಾಡಿ ಪ್ರಜಾನುರಾಗಕ್ಕೆ ಪಾತ್ರರಾದದ್ದು ನಮ್ಮ ದಕ್ಷಿಣ ಕೊಡಗಿನ ಅಬಾಲ ವೃದ್ಧರಾದಿಗಳಿಗೆ ತಿಳಿದಂತೆ ಇದೆ. ಅಂತ ಇನ್ನು ದೀರ್ಘ ಕಾಲದ ಸರ್ವೀಸಿನಲ್ಲಿ ಇದಕ್ಕಿಂತ ಹೆಚ್ಚಿನ ಯೋಗ್ಯ ಪದವಿಯನ್ನು ಅಲಂಕರಿಸಬೇಕಾದವರು ಧರ್ಮವಾಗಿದ್ದಾಗ್ಯೂ ಅದಕ್ಕೆ ಶಕ್ತಿಲ್ಲ ಲೋಕವುಂಟಾದ್ದರಿಂದ ಅಂಥಾ ವ್ಯಸನಕ್ಕೆ ದೇಶದವರೇ ಭಾಗಿಗಳಾದದ್ದು 'ಕೊಡಗು' ಪತ್ರಿಕೆಯ ಘಂಟಾನಾದದಿಂದ ತಾವು ತಿಳಿದಿರಬಹುದು. ಆಯುಷ್ಯವೇ ಅಸ್ಥಿರವಾಗಿರುವಾಗ್ಯೆ ಅಧಿಕಾರವೂ, ಐಶ್ವರ್ಯವೂ ಸ್ಥಿರವೆಂದು ನಂಬುವದು ಒಂದು ಭ್ರಾಂತಿಯಲ್ಲವೋ? ಹಾಗಿದ್ದು. ಆದ್ದರಿಂದಲೇ ಪ್ರಾಜ್ಞರಾದ ತಾವು ಇದು ತಿಳಿದು ಕೆಲಸದಿಂದ ನಿವೃತ್ತರಾಗಿ ವಿಶ್ರಾಂತಿ ಸುಖವನ್ನು ಪಡೆಯಲು ಯೋಚಿಸಿದಕ್ಕೆ ಸರಿಯಾಗಿ ದೈವೇಚ್ಛೆಯಿಂದ ದೇಹಾಲಸ್ಯವೂ, ಜುಗುಪ್ಸೆಯೂ ತೋರಿ ನಿವೃತ್ತರಾಗಿಯೇ ಬಿಟ್ಟಿರಿ. ಘನ ಉದ್ಯೋಗವನ್ನು ದೀರ್ಘ ಕಾಲ ಮಾನದಲ್ಲಿ ನಡೆಸಿದಕ್ಕೆ ದಕ್ಷಿಣ ಕೊಡಗಿನ ಕೊಡಗರೂ, ಕೊಡಗೇತರರೂ ಸಹ ಅತೀ ಪ್ರೀತಿಯಿಂದ ತಮಗೆ ನಡಿಸಿದ ಬಹುಮಾನದ ಸತ್ಕಾರವೇ ಸಾಕ್ಷಿಯಾಗಿರುತ್ತೆ. ಇದರಿಂದ ತಾವು ಕೇವಲ ಧನ್ಯರೇ ಸರಿ. ಚಿರಾಯುಷ್ಯವು ಭಗವಂತನು ಅನುಗ್ರಹಿಸಲಿ.

ಶ್ರೀಯುತರೇ ಮೇಲಿನ ಪದದಲ್ಲಿ ದಾಸಕೂರರೆಂದು ತಮ್ಮನ್ನು ಕವಿವರ್ಣಿಸಿದ್ದು ಕೊಂಚ ವಿಸ್ತರಿಸಬೇಕಾಯಿತು. ಲೋಕೋಪಕಾರಕ್ಕಾಗಿ ನಮ್ಮ ಕೊಡಗು ದೇಶದಲ್ಲಿ ತೀರ್ಥ ಅವತಾರವನೆತ್ತಿದ ಶ್ರೀ. ಕಾವೇರ್ಯಮ್ಮನವರ ಮಹಾ ಕ್ಷೇತ್ರದಲ್ಲಿ ಕಲಿಯುಗದಲ್ಲಿ ಧರ್ಮ ಮಾಡತಕ್ಕವರೇ ಪುಣ್ಯಕೋಟ್ಯರೆಂದು ಪುರಾಣ ಸಿದ್ಧಾಂತವಿದೆ. ಆದರೆ ಶ್ರೀ. ದೇವಿಯು ಜನ್ಮವೆತ್ತಿ ಎಷ್ಟೋ ಶತಸಹಸ್ರ ವರ್ಷಗಳಾದಗ್ಯೂ ಅಲ್ಲಿ ಧರ್ಮ ಮಾಡಿದ ಧರ್ಮ ಮೂರ್ತಿಗಳ ಸಂಖ್ಯೆ ಎಣಿಸಲು ಸಿಕ್ಕುವದೇ ಇಲ್ಲ. ತನ್ನದ್ಯ ಅಷ್ಟಲ್ಲದೆ ಮುದ್ದಪ್ಪನವರು ಒಂದು ಸಾವಿರ ರೂ. ಕ್ರಯದ ಭೂಮಿಯನ್ನು, ದೇವತಕ್ಕರಾದ ಕಳ್ಳಿಂಗಳ ಮನೆತನದವರು ಒಂದು ಸಾವಿರ ರೂ. ಕ್ರಯದ ಭೂಮಿಯನ್ನು, ದೇವತಕ್ಕರಾದ ಬೆಳ್ಳಿರ ಬೆಳ್ಳಪ್ಪನವರು ಯೋಗ್ಯವಾದ ಶಿವಾ ಕಂಟವನ್ನು ದರ್ಮಾರ್ಥ ಮಾಡಿರುತ್ತಾರೆ. ಶ್ರೀ. ಕಾವೇರಿಯು ಅವರನ್ನು ಸದಾ ಉದ್ಧರಿಸಲಿ.

ಪರೋಪಕಾರ ಧುರೀಣರಾದ ತಾವಾದರೋ ದಾನಶೂರರೆಂಬ ನಾಮಧೇಯಕ್ಕೆ ಸರಿಯಾಗಿ ಮಹಾ ಕ್ಷೇತ್ರಕ್ಕೆ ಏಳು ಸಾವಿರ ರೂಪಾಯಿ ಧರ್ಮಾರ್ಥ ಕೊಟ್ಟರೆಂಬ ಸಂಗತಿ ಈಚೆಗೆ ನಾನು ತಿಳಿದೆನು. ಇಂಥಾ ಚಿರಸ್ಮರಣೀಯವಾದ ಧರ್ಮ ಮಾಡಿದ ತಮಗೆ ದಾನ ಶೂರರೆಂಬ ನಾಮಧೇಯವು ಉತ್ಕೃಷ್ಟತರ ಇದ್ದು ಇಹಪರಕ್ಕೆ ಬೇಕಾಗಿ ತಮ್ಮ ಭಂಡಾರಕ್ಕೆ ಭಾಗ್ಯವೂ, ದೇಹಕ್ಕೆ ಆರೋಗ್ಯವೂ ದೀರ್ಘಾಯುಷ್ಯವೂ, ಸತಿ ಪತಿಗಳಿಗೂ, ಚಿರಂಜೀವಿಗಳಿಗೂ, ಶ್ರೀ. ಕಾವೇರ್ಯಮ್ಮನವರು ಉಂಟುಮಾಡಲೆಂದು ಮಹಾದೇವಿಯ ದಿವ್ಯ ಮಂಗಳದಿಂದ ಮಂಗಳ್ಯಾಯಗೊಳಿಸುತ್ತೇನೆ

(ಪವಮಾನ ಸುದಾಪಟ್ಟು—ಎಂಬಂತೆ)

ಪಾಪಾಪಲೋಕ್‌ಪದೇವಿ। ಲೋಪಮುದ್ರೆ ಮಂಗಳಂ॥೧।೧॥
ಏಳೇಳ್ ಲೋಕಕುನೀ। ನೀಳಾನ ಪಿತಾನಾಕ್ಷಿಯೆ॥
ಪಾಪಾಪಲೋಕ್‌ಪದೇವಿ। ಲೋಪಮುದ್ರೆ ಮಂಗಳಂ॥೨॥
ಕುಂದ್‌ಲುದಿಚಿನಿಂದ್। ಬೊದುಜಗಕ್‌ದಾನ॥
ಪಾಪಾಪಲೋಕ್‌ಪದೇವಿ। ಲೋಪಮುದ್ರೆ ಮಂಗಳಂ॥೩॥
ತ್‌ರ್‌ಕೂರವಾಯಿತ್। ನೂರನ ಪೂಜುವಂತ॥
ಪಾಪಾಪಲೋಕ್‌ಪದೇವಿ। ಲೋಪಮುದ್ರೆ ಮಂಗಳಂ॥೪॥
ಭಕ್ತೇಕ್ ಕುಳಪಯಿಂಗ್। ಮುತ್ತಿಕೋದ್ ಪಳನೀ॥
ಪಾಪಾಪಲೋಕ್‌ಪದೇವಿ। ಲೋಪಮುದ್ರೆ ಮಂಗಳಂ॥೫॥
ಹಂದಾತ ಬೋಡುವಳ। ವರದಾಪಿ ಕಾವೇರಿಯೆ॥
ಪಾಪಾಪಲೋಕ್‌ಪದೇವಿ। ಲೋಪಮುದ್ರೆ ಮಂಗಳಂ॥೬॥

ಜಯ ಮಂಗಳಂ, ಶುಭ ಮಂಗಳಂ.

ಹಂದಾಸ,
ಅಪ್ಪಚ್ಚಕವಿ.

ಸ್ತ್ರೀ ಪುರುಷರ ಪ್ರೀತಿಯ ಮರ್ಮಗಳನ್ನು ಚಿತ್ರಪಟಗಳ ಸಹಿತ ಇದ್ದದ್ದನ್ನು ಇದ್ದ ಹಾಗೆ ತಿಳಿಸುವ.

ಸ್ತ್ರೀ ದಾಂಪತ್ಯ ರಹಸ್ಯವೆಂಬ
ಮರ್ಮ ಶಾಸ್ತ್ರ.

ಈ ಪುಸ್ತಕವು ಫ್ರೆಂಚ್, ಹಿಂದೂಸ್ಥಾನ ಭಾಷೆಗಳಲ್ಲಿ ಬಹುಕಾಲದಿಂದ ಗುಪ್ತವಾಗಿತ್ತು. ಈಗ ನಾವು ಎಲ್ಲರಿಗೂ ವಿವರವಾಗಿ ತಿಳಿಯುವಂತೆ ಸುಲಭ ಶೈಲಿಯ ಕನ್ನಡ ಭಾಷೆಯಲ್ಲಿ ಭಾಷಾಂತರಿಸಿ ಫೋಟೋಗಳ ಸಹಿತ ಅಂದವಾಗಿ ... ರುತ್ತೇವೆ. ಈ ಪುಸ್ತಕದಲ್ಲಿ ಸ್ತ್ರೀಪುರುಷರಿಗೆ ಬೇಕಾದ ಎಲ್ಲ ಮರ್ಮರಹಸ್ಯಗಳು, ಪುರುಷನು ಸ್ತ್ರೀಯಲ್ಲಿ ನಡೆದುಕೊಳ್ಳಬೇಕಾದ ಬಗೆ. ಸ್ತ್ರೀಪುರುಷರ ಲಕ್ಷಣಗಳು, ಸ್ತ್ರೀಯರಿಗೆ ಬೇಕಾದ ಅನೇಕ ... ಯುಗಳು, ಸಂಭೋಗದ ಕಾಲ, ಗರ್ಭ ಧರಿಸುವ ... ತು ಹೋಗುವುದು, ಸಂಭೋಗದಿಂದಾಗುವ ... ನೇಂದ್ರಿಯಗಳ ವರ್ಣನೆ, ಹಸ್ತ ಪ್ರಯೋಗ ... ಸಿ, ಗರ್ಭಕ್ಕಾಗಿ ಬೇಕಾದ ಅನೇಕ ಮದ್ದು ... ಉತ್ಪತ್ತಿ ವಿಧ. ಗುಪ್ತ ವ್ಯಾಧಿಗಳ ಚಿಕಿತ್ಸೆ, ... ರು ಹಸ್ತನಿಯಮಗಳು, ಮಾನವ ಶರೀರದ ... ನಪುಂಸಕತ್ವಕ್ಕೆ ಚಿಕಿತ್ಸೆ, ಇನ್ನೂ ಸ್ತ್ರೀಪುರುಷ ... ದ ಲೀಲಾರಹಸ್ಯಗಳು ಚಿತ್ರಪಟಗಳ ಸಹಿತ ...

ಕ್ರಯ ಪುಸ್ತಕಕ್ಕೆ ರ...

The Legal Tr...

12—8 P. H...

ಕೊಡಗು.

ಸನ್ ೧೯೩೨ನೇ ಇಸವಿ

ಫೆಬ್ರವರಿ ತಾ. ೧೯ನೇ ಶುಕ್ರವಾರ.

ಪ್ರೆಸ್ ಆರ್ಡಿನೇನ್ಸ್ ಜಾರಿಯಲ್ಲಿರುವವರೆವಿಗೆ ನಾವು ಅಗ್ರಲೇಖನವನ್ನು ಪ್ರಕಟಿಸುವುದಿಲ್ಲ.

ಪಂಡಿತ ಮೋತಿಲಾಲ್ ನೆಹರು.

...ಧೀರರು ಮೃತರಾದ ಒಂದು ವರ್ಷದ ತಿಥಿಯನ್ನು ಹಿಂ... ಎಲ್ಲಾ ಕಡೆಗಳಲ್ಲೂ ತಾ. 6—2—1932 ರಲ್ಲಿ ಆ... ...ಯೂ ಈ ಮಾತೃಭೂಮಿಯ ಬಂಧನ ವಿಮೋಚನೆ... ...ದೆನ್ನೊಂದು ಹೋರಾಡಿದರೋ ಅಂಥ ಮಾತೃ... ...ಗಾಗಿ ಅವರ ದೇಶಬಾಂಧವರು ತಮ್ಮ ಜೀ... ...ವುದಕ್ಕಿಂತ ಪ್ರಿಯಕರವಾದ ವಿಷಯ ಅವರ... ...ಲ್ಲ. ಅವರ ಒಬ್ಬನೇ ಮಗ, ಅವರ ಪ್ರಿ... ...—ಅವರ ವೃದ್ಧ ಪತ್ನಿ ವಿನಹ—ಅವರ ಕು... ...ಜೈಲಿಗೆ ಹೋಗಿದ್ದಾರೆ. ಮೋತಿಲಾಲ್ಲಿ... ...ಯನ್ನು ಇದಕ್ಕಿಂತ ಉತ್ತಮ ರೀತಿಯ... ...ವಿಲ್ಲ. ಪಂಡಿತರು ಸ್ವರಾಜ್ಯದ ಹೋ...ರಿಕೆಯಲ್ಲೇ ಮೃತರಾದರು. ಮೋತಿಲಾಲರು ತ್ಯಾಗದ ಜೀವನವನ್ನು ಜೀವಿಸಿದರು. ಅವರ ಆತ್ಮಕ್ಕೆ ಅವರ ಕುಟುಂಬದವರು ಈಗ ಮಾಡಿರುವ ತ್ಯಾಗಕ್ಕಿಂತ ಬೇರೆ ತರ್ಪಣಗಳಿಂದ ಶಾಂತಿದೊರಕಲಾರದು.

ಮೋತಿಲಾಲರ ಜೀವನದ ಅಂತ್ಯವು ಹಿಂದೂಸ್ಥಾನದ ಸ್ವರಾಜ್ಯ ಹೋರಾಟದ ಪ್ರಗತಿಯಲ್ಲಿ ಒಂದು ಮುಖ್ಯ ಗತಿಯೆನ್ನಬಹುದು. ಅವರೊಂದಿಗೆ ಬ್ರಿಟಿಷರ ಸಂಗಡ ಸಂಧಿ ಸೇರಿ ಚರ್ಚಿಸಿ ಸ್ವರಾಜ್ಯ ಪಡೆಯುವ ಆಶೆ ನಾಶವಾಯಿತು. ಅವರ ಜೀವನದ ಅಂತ್ಯದಲ್ಲಿ ನಿರಾಶರಾಗಿ ಬಾಪೂಜೀ ಭುಗದ ಚಳವಳದಲ್ಲಿ ಸೇರಿದರೂ ಅವರ ಜೀವನವೆಲ್ಲಾ ಬಾಪೂಜಿಯವರ ಸರಿಸಿಯೇ ಹೋರಾಡಿದವರು. ಸರಕಾರದ ನಿರ್ದಾಕ್ಷಿಣ್ಯದ ದಬ್ಬಾಳಿಕೆಯು ಅಂತ್ಯದಲ್ಲಿ ಅವರ ಮನಸ್ಸಿನಲ್ಲಿ ಕ್ರಾಂತಿಯನ್ನುಂಟುಮಾಡಿತು.

ಈ ದೇಶದ ಈಗಿನ ಪರಿಸ್ಥಿತಿಗೆ ಜವಾಬ್ದಾರರಾದವರಿಗೆ ಅವರ ಜೀವನವು ಒಂದು ಪಾಠವಾಗಿದೆ. ಅವರ ರಾಜಕೀಯ ಜೀವನದ ಪ್ರಾರಂಭದಲ್ಲಿ ಅವರು ಬಹಳ ಮಧ್ಯಗಾಮಿ (ಮೊಡರೇಟ್) ಗಳಾಗಿದ್ದರು. "ಜವಾಬ್ದಾರಿ"ಯುಳ್ಳ ಮುಖಂಡರಾಗಿದ್ದರು. ಅವರು ಸ್ವಭಾವಿಕವಾಗಿ ಬಹಳ ಮುಂದುವರಿದ ಅಭಿಪ್ರಾಯವುಳ್ಳವರಾಗಿದ್ದರು. ಆದ್ದರಿಂದ ಬ್ರಿಟಿಷ್ ರಾಜಕೀಯ ಭಾವನೆಯಲ್ಲಿ ಅತ್ಯುತ್ತಮ ಗುಣಗಳನ್ನು ತನ್ನ ದೇಶೀಯರಿಗೆ ತಿಳಿಸಿಕೊಡಲು ಅವರು ಪೂರಾ ಆತುರರಾಗಿದ್ದರು. ಅವರ ಅರವತ್ತನೆಯ ... ಆಲ್ಲಹಾಬಾದಿನ ವಸತಿಯಲ್ಲಿ ತಮ್ಮ ಅಸಂಖ್ಯ ಯುರೋಪಿಯನ್ ಸ್ನೇಹಿತರಿಗೆ ಆಗಿನವಾಗ್ಯ ರಾಜರಿಗೆ ಯೋಗ್ಯವಾದ ಆತಿಥ್ಯವನ್ನು ಕೊಡುತ್ತಿದ್ದರು. ಬ್ರಿಟಿಷರ ಗುಣದಲ್ಲಿ ಅತ್ಯುತ್ತಮ ಭಾಗವನ್ನು ತುಂಬ ಗೌರವಿಸುತ್ತಿದ್ದರು. ಬ್ರಿಟಿಷ್ ಧರ್ಮ ಬುದ್ಧಿಯಲ್ಲಿ ತುಂಬಾ ಭರವಸೆಯಿತ್ತು. ಆದರೆ ಈ ದೇಶವನ್ನಾಳುವ ಅಧಿಕಾರಿಗಳು ಮುಂದಾಲೋಚನೆಯಿಲ್ಲದ ನಡೆಸಿದ ದಬ್ಬಾಳಿಕೆಯ ವರ್ತನೆಯಿಂದ ಅವರ ಮನಸ್ಸು ಒಡೆದುಹೋಯಿತು. ಪಂಜಾಬಿನ ಅತ್ಯಾಚಾರಗಳು ಅವರಿಗೆ ಬ್ರಿಟಿಷರಲ್ಲಿದ್ದ ನಂಬಿಕೆಯನ್ನೆಲ್ಲಾ ಹಾಳುಮಾಡಿತು. ಅವರ ಆ ಘಟನೆಯನ್ನು ಸ್ವೀಕರಿಸಿದ್ದ ಯುರೋಪಿಯನರಿಗೆ ಇವರು ಎಷ್ಟು ಬ್ರೀಫ್... ದರೆ ಮುಂದುವರಿದ ರಾಜಕೀಯ ಅಭಿಪ್ರಾಯವುಳ್ಳವರಾದದ್ದು ನೋಡಿ ಆಶ್ಚರ್ಯವಾಯಿತು.

ಅವರ ಜೀವಮಾನವೆಲ್ಲಾ ತುಂಬಾ ಸುಖ ಜೀವಿಗಳಾಗಿ ರಾಜರ ಜೀವನವನ್ನು ನಡೆಸುತ್ತಿದ್ದರೂ ಸಹ ಗಾಂಧೀಜೀಯವರ ಅಸಹಕಾರ ಚಳವಳವನ್ನು ಅವರಿಗೆ ಸ್ವಾಭಾವಿಕವಾದ ಉತ್ಸಾಹದಿಂದ ಕೈಕೊಂಡು ಅವರಿಗೆ ತುಂಬಾ ಸಂಪಾದನೆ ಕೊಡುತ್ತಿದ್ದ ಲಾಯರುತನವನ್ನು ಬಿಟ್ಟು ಖದ್ದರ್ ಮತ್ತು ಅಸಹಕಾರ ಚಳವಳದಲ್ಲಿ ಭಾಗಿಗಳಾದರು. ಆದರೂ ಇನ್ನೂ ವಾದದಿಂದ ಸ್ವರಾಜ್ಯಪಡೆಯುವುದರಲ್ಲಿ ನಂಬಿಕೆ ಉಳಿದಿತ್ತು. 1922ರಲ್ಲಿ ಗಾಂಧಿಯವರನ್ನು ಜೈಲಿನಲ್ಲಿಟ್ಟಾಗ ಅಸಹಕಾರವು ಜನರಿಗೆ ಸಂಪೂರ್ಣ ಸಮ್ಮತಿಯಾಗದೆ ಇದ್ದಾಗ ಗತಿಸಿದ ಶ್ರೀ. ಚಿತ್ತರಂಜನ ದಾಸರೊಂದಿಗ ಸೇರಿ ಕೌನ್ಸಿಲ್‌ಗಳಲ್ಲಿ ಕೆಲಸ ಮಾಡಲು ಪ್ರಾರಂಭಿಸಿದರು. ಸ್ವರಾಜ್ಯಪಾರ್ಟಿಯು ಸ್ಥಾಪನೆಯಾಯಿತು. ಆಳರಸರು ಕಂಡ ಎಲ್ಲಾ ಬಾಗಿಲುಗಳನ್ನೂ ಮುಚ್ಚಿದರು. ಈ ಪಾರ್ಟಿಯು ವಿರೋಧವಾಗುತ್ತಾ ಬಂದದ್ದರಿಂದ ರಾಜಕೀಯ ಸುಧಾರಣೆಯು ಶೀಘ್ರದಲ್ಲೇ ಆಗಬೇಕೆನಿಸಿತು. ಎಸೆಂಬ್ಲಿಯಲ್ಲಿ ಇವರು ಮಾಡಿದ ವಾದಗಳಿಂದ ಪಾರ್ಲಿಮೆಂಟ್ ಚರ್ಚೆಯಲ್ಲಿ ಇವರು ಎಷ್ಟರ ನಿಪುಣರು ಎಂಬುದು ಎಲ್ಲರಿಗೂ ತಿಳಿಯಿತು. ಮಂತ್ರಿಗಳಾಗಲು ಯೋಗ್ಯರಾದವರೆಂತ ಪ್ರತ್ಯಕ್ಷವಾಯಿತು. ಸರ್ಕಾರಕ್ಕೆ ಅಡ್ಡಬರುವ ಕೆಲಸದೊಂದಿಗೆ ಶೀಘ್ರದಲ್ಲೇ ಹಿಂದೀ ಮುಖಂಡರನ್ನೂ ಬ್ರಿಟಿಷ್ ಮುಖಂಡರನ್ನೂ ಸೇರಿಸಿ ದುಂಡು ಮೇಜಿನ ಪರಿಷತ್ತನ್ನು ಕೂಡಿಸುವಂತೆ ಸಹ ಬಲವಾಗಿ ವಾದಿಸಿದರು. ಶೀಘ್ರದಲ್ಲೇ ಅವರ ಆಶೆ ಎಲ್ಲಾ ನಿರಾಶೆಯೂ ಆಯಿತು. ಕೌನ್ಸಿಲ್ ಕೆಲಸದಿಂದ ಏನೂ ಪ್ರಯೋಜನ ದೊರೆಯಲಾರದೆಂತ ಅವರಿಗೆ ಮನವರಿಕೆಯಾಯಿತು.

ಹಿಂದೀಯರು ಸರ್ವರಿಗೂ ಒಪ್ಪಿಗೆಯಾಗುವ ರಚನೆಯನ್ನು ತಯಾರಿಸಲಿ ಎಂತ ಆಗಿನ ಸ್ಟೇಟ್ ಸೆಕ್ರಟರಿಯಾದ ಲಾರ್ಡ್ ಬರ್ಕನ್ ಹೆಡ್ಡರು ಹಿಂದೀಯರನ್ನು ಆಹ್ವಾನಿಸಿದಾಗ ಮೋತಿಲಾಲರು ಇತರ ಮುಖಂಡರೊಡನೆ ಸೇರಿ ನೆಹರು ವರದಿಯನ್ನು ತಯಾರಿಸಿದರು. ಇದನ್ನು ತಯಾರಿಸಿದ್ದರಿಂದ ಪಂಡಿತರ ರಾಜಕಾರ್ಯ ಪಟುತ್ವವು ಎಷ್ಟು ಉಚ್ಚ ತರದ್ದೆಂತ ತಿಳಿಯಿತು. ಇದಕ್ಕೆ ಎದುರಾಗಿ ಸೈಮನ್ ಕಮಿಶನಿನ ಅವಮರ್ಯಾದೆಯು ಇಂಗ್ಲೆಂಡಿನಿಂದ ಇಂಡಿಯಾಕ್ಕೆ ದೊರಕಿತು. ಅದರಿಂದ ಮೋತಿಲಾಲರಿಗೆ ನಿರಾಶೆಯಾಯಿತು. ದುಂಡು ಮೇಜು ಪರಿಷತ್ತೇ ಬೇಕೆಂತ ವಾದಿಸಿದವರು ಸೈಮನ್ ಕಮಿಶನನ್ನು ಬಹಿಷ್ಕರಿಸಿದರು. ಸಹಕರಿಸುವವರು ಪೂರ್ಣವಾಗಿ ಸಂಪೂರ್ಣ ಸ್ವಾತಂತ್ರ್ಯ ಸಂಪಾದನೆಗಾಗಿ ಅಸಹಕಾರಿಗಳಾದರು.

ಈ ರೀತಿ ಇವರ ದೀರ್ಘವಾದ ಕಾರ್ಯಗಳಿಂದ ಕಂಡ ಇವರ ಜೀವನದಿಂದ ಎಲ್ಲರಿಗೂ ಪಾಠಗಳಿವೆ. ಜನರ ನ್ಯಾಯದ ಅಭಿಪ್ರಾಯವನ್ನು ಸರ್ಕಾರವು ಗಣನೆಗೆ ತೆಗೆದುಕೊಳ್ಳದೆ ವರ್ತಿಸುವುದರಿಂದ ಮೋಡರೇಟ್ ಆಗಿದ್ದ ಮನುಷ್ಯನು ಸಹ ಹೇಗೆ ಎಕ್ಸ್‌ಟ್ರೀಮಿಸ್ಟ್ ಆಗುತ್ತಾನೆಂಬುದು ತಿಳಿಯುತ್ತದೆ. ಹಿಂದೂಸ್ಥಾನದ ಅಭ್ಯುದಯವನ್ನು ನಿಶ್ಚೈಯಿಸುವ ಹಕ್ಕು ಪಾರ್ಲಿಮೆಂಟಿನ: ಇದೆ ಎನ್ನುತ್ತಿದ್ದವರು ಸ್ವಪ್ರಯತ್ನದಿಂದಲೇ ಜಯವಾಗಬೇಕೆನ್ನುವವರಾದರು. ಹಿಂದುಸ್ಥಾನದ ಈಗಿನ ಸ್ಥಿತಿಗೆ ಕಾರಣರು ಯಾರು ಎಂಬುದನ್ನು ಕಂಡು ಹಿಡಿಯಲು ಈಗ ನಮ್ಮನ್ನಾಳುವವರು ಪಂಡಿತರ ಜೀವನ ಚರಿತ್ರೆಯನ್ನು ತಿಳಿದುಕೊಂಡರೆ ಪ್ರಯೋಜನವಾದೀತು. ಬ್ರಿಟಿಷರ ಮೇಲೆ ಅಪ್ರೀತಿಯನ್ನು ಹೆಚ್ಚಿಸಿದ್ದು ಎಷ್ಟು ವಿದ್ಯಾವಂತ ಹಿಂದೀಯರೆಂಬ ದೂರನ್ನು ಹೊರಿಸಿದರೆ ಪ್ರಯೋಜನವಿಲ್ಲ. ಆಳುವವರು ಅವರ ಅಭಿಗಳನ್ನು ಗಣನೆಗೆ ತೆಗೆದುಕೊಳ್ಳದೆ ದಬ್ಬಾಳಿಕೆ ನಡೆಸುವುದೇ ಇಂಥಾ ಪರಿಣಾಮದ ಹೋರಾಟಕ್ಕೆ ಕಾರಣ. 'ಬಲವಾಗಿ ಆಳುವ' ... ಬಿಡಬೇಕಾದ ಕಾಲ ಬಂದಿದೆ. ಜನರ ಅಭಿಪ್ರಾಯವನ್ನು ತೃಣೀಕರಿಸಿ ಅತಿ ಬಲಾಢ್ಯ ರಾಜ್ಯಗಳೇ ನೆಲಸಮವಾಗಿವೆ. 'ಇತಿಹಾಸದ ಉದಾಹರಣೆಗಳು ಆಳರಸರಿಗೆ ಉಪಯೋಗವಿಲ್ಲ'ವೆನ್ನುವ ಮೋತೀಲಾಲರ ಅನಿಸಿಕೆ ಯೆಂದು ಹೇಳಿಕೆಯೂ ನಿಜವೇ.

ದುರಾದೃಷ್ಟದ ತತ್ಕಾಲಿಕ ಶಾಂತಿಯೂ ಆಯಿತು. ನಮಗೂ ಆಯಿತು. ದಬ್ಬಾಳಿಕೆಯು ಇನ್ನು ಹೆಚ್ಚಿನ ಆರ್ಡಿನೆನ್ಸ್‌ಗಳ ಕೊರಳೊಡನೆ ಮುಂದುವರಿಯುತ್ತಲೇ ಇದೆ. ಆದರೂ ಎಸೆಂಬ್ಲಿ ಸಭಾಸದರುಗಳ ... (ಸ್ಟೇಟ್ ಸೆಕ್ರೆಟರಿಯವರು 'ನಾಯಕರುಗಳು ಹೋಗಿರುವರು ದಬ್ಬಾಳಿಕೆ ಮುಂದುವರಿಯುತ್ತದೆ' ಎಂತ ಈಚೆಗೆ ಹೇಳಿದ ಮಾತುಗಳನ್ನು ಉಪಯೋಗಿಸುವುದಾಗಿದೆ) ನಮ್ಮ ಜನ್ಮಸಿದ್ಧ ಶಕ್ತಿಯು ಎಷ್ಟೆಂದು ಇದರಿಂದ ಹಿಂದಕ್ಕೆ ಸರಿಯುತ್ತದೆ. ಮೋತಿಲಾಲರ ವಾಕ್ಪಟುತ್ವ, ಚತುರ ಶಕ್ತಿ, ಮುಂತಾದ ಗುಣಗಳೆಲ್ಲಾ ಈಗ ಎಸೆಂಬ್ಲಿಯಲ್ಲಿ ತೋರುವುದಿಲ್ಲ. ಎಸೆಂಬ್ಲಿಯು ಕೇವಲ ಹೊಗಳುವವರಿಗೆ ಕೇಳಿಸುವಂಥಾ ಮಾತುಗಳೇ ಎಸೆಂಬ್ಲಿಯಲ್ಲಿ ಕೇಳಿಬರುತ್ತಿವೆ.

ಮೋತಿಲಾಲರು ಇದ್ದಾಗ ಮಾಡಿದ ಕೆಲಸಕ್ಕಿಂತ ಅವರ ಮರಣಾನಂತರ ಅವರು ದೇಶಕ್ಕೆ ಕೊಟ್ಟು ಹೋದಂಥಾದ್ದೇ ಅಮೂಲ್ಯವಾದದ್ದು. ಅವರ ಒಟ್ಟು ಕುಟುಂಬದವರೆಲ್ಲಾ ರಾಷ್ಟ್ರ ಕಾರ್ಯದಲ್ಲಿ ಮುಂದಾಳುಗಳಾಗಿದ್ದಾರೆ. ಅವರ ದೇಶಭಕ್ತಿಯ ಜ್ಯೋತಿಯು ಅವರ ಮಗ ಜವಾಹಿರ್‌ಲಾಲರಲ್ಲಿ ಇದೆ. ಕಾಂಗ್ರೆಸಿನ ಮೇಲೆ ಯುದ್ಧ ಮಾಡಿ ಮುಂಚೆ ಈ ಜ್ಯೋತಿಯನ್ನು ಆರಿಸಲು ಸರ್ಕಾರವು ಪ್ರಯತ್ನಿಸಿತು. ಇಂಗ್ಲೆಂಡಿನ ವಿಲಿಯಂ ಪಿಟ್ ಮತ್ತು ಅವನ ಮಗನಿಂದರೆ ಗರ್ವಪಡುತ್ತದೆ. ಚಾಥಂ ಸಮುದಾಯವು ... ವಿಲಿಯಂ ಮತ್ತು ಅವನ ಮಗನಿಗಾಗಿ ಹೆಮ್ಮೆ ಪಡುತ್ತದೆ. ಹಿಂದೂಸ್ಥಾನವು ಮೋತಿಲಾಲ್ ನೆಹರು ಮತ್ತು ಅವರ ಮಗನ ಮೇಲೆ ಯಾವ ಹೆಮ್ಮೆಯಿಂದ ನೋಡುತ್ತದೆ!

"ಮರಾಠಾ"

ಪಂಡಿತ ಮದನಮೋಹನ ಮಾಳವೀಯರ ಜನ್ಮೋತ್ಸವ.

ತಾ. 11 ರಲ್ಲಿ ಪಂಡಿತ ಮದನಮೋಹನ ಮಾಳವೀಯರ 70 ನೇ ಜನ್ಮೋತ್ಸವವನ್ನು ಹಿಂದೂಸ್ಥಾನದ ಅನೇಕ ಕಡೆಗಳಲ್ಲಿ ಆಚರಿಸಿದರು. ಅವರ ವಿಷಯವಾಗಿ ಸರ್ ತೇಜ್ ಬಹದ್ದೂರರವರು ಹೇಳಿರುವ ಮಾತುಗಳಿಂದ ಆರಿಸಿದ್ದು

ಸುಮಾರು 40 ವರ್ಷಗಳ ಕೆಳಗೆ ಈ ಪ್ರಾಂತ್ಯಗಳಲ್ಲಿ ಸಾರ್ವಜನಿಕ ಕೆಲಸವು ಬಹಳ ಮೊಲದಲ್ಲಿದ್ದಾಗ ಮಾಳವೀಯರ ಉತ್ಸಾಹ, ಶಕ್ತಿ ಮತ್ತು ವಾಕ್ಪಟುತ್ವಗಳಿಂದ ಸಾರ್ವಜನಿಕ ಕೆಲಸದ ಭಾವವು ಜನರಲ್ಲಿ ಹುಟ್ಟಿತು. ಇವರ ಗುಣಗಳಿಂದ ಜನರಲ್ಲಿ ದೇಶಭಕ್ತಿ, ಸಾರ್ವಜನಿಕ ಅಭಿಪ್ರಾಯ ಸಹ ಬೆಳೆಯಿತು.

ಲಾಯರುಗಳಿಗೆ ದೊರಕಬಹುದಾದ ಅತ್ಯಂತ ಮೇಲಿನ ಪದವಿಗಳು (ಹೈಕೋರ್ಟು ಜಡ್ಜಿಯ ಪದವಿ) ಇವರಿಗೆ ದೊರಕಬಹುದಾಗಿದ್ದಾಗ ಅದನ್ನು ತ್ಯಜಿಸಿ ವಿದ್ಯಾ ಪ್ರಚಾರದ ಕಾರ್ಯವನ್ನು ಕೈಕೊಂಡರು. ಒಬ್ಬನು ನೆರವೇರಿಸಬೇಕೆಂತ ಮಾಡಿಕೊಂಡ ಉದ್ದೇಶಗಳು ಅವನ ಜೀವಮಾನದಲ್ಲೇ ನೆರವೇರುವುದು ಅಪರೂಪ. ಮಾಳವೀಯರಾದರೋ ತಾವು ಸ್ಥಾಪಿಸಬೇಕೆಂತ ಸಂಕಲ್ಪಿಸಿದ "ಹಿಂದೂ ಯೂನಿವರ್ಸಿಟಿ" ಇವರಿಂದಲೇ ಸ್ಥಾಪಿತವಾಯಿತು. ಈಗಿನ ಕಾಲದವರಿಗೆ ಮಾತ್ರವಲ್ಲ ಇನ್ನು ಮುಂದಿನ ಜನಾಂಗಕ್ಕೂ ಸಹ ಪ್ರಯೋಜನವಾಗುವ ಈ ಸಂಸ್ಥೆಯನ್ನು ಸ್ಥಾಪಿಸಲು ಇವರು ಎಷ್ಟೊಂದು ಆಲೋಚನೆ, ಪ್ರಯತ್ನ ಶಕ್ತಿಯನ್ನು ಇವರು ಉಪಯೋಗಿಸಿರಬಹುದು ಇವರು ಈ ಕಾರ್ಯವನ್ನು ನಡೆಸುವಾಗ ಇವರ ಕೇವಲ ಸಂಬಂಧಿಕರಾಗಿದ್ದವರಿಗೇ ಗೊತ್ತು. ಇದೊಂದು ಕಾರ್ಯದಿಂದಲೇ ಇವರು ದೇಶೀಯರ ಗೌರವವನ್ನು ಇವರು ಪಡೆಯಲು ಸಾಕಾಗಿದೆ. ಆದರೆ ಇವರ ಕೆಲಸಗಳು ಬೇರೆ ಭಾಗಗಳಲ್ಲೂ ಮಹತ್ವದ್ದಾಗಿರುವುದರಿಂದ ಇವರು ದೇಶದ ಜನರ ಪ್ರೀತಿಗೂ ಭಕ್ತಿಗೂ ಇನ್ನಷ್ಟು ಆಧಾರರಾಗಿದ್ದಾರೆ.

ಅವರ ಜೀವನದ ಶಕ್ತಿಯು ಅವರ ದೇಶಸೇವಾಬುದ್ಧಿಯಲ್ಲೇ ಅಡಕವಾಗಿದೆ. ಇವರ ಅಭಿಪ್ರಾಯಗಳಿಗೂ ಬೇರೆಯವರ ಅಭಿಪ್ರಾಯಗಳಿಗೂ ವ್ಯತ್ಯಾಸವಿರಬಹುದು. ಅವರ ಅಭಿಪ್ರಾಯಗಳು ಎಂಥವೇ ಇರಲಿ, ಅವರ ಧೈರ್ಯ, ಸಾಹಸ ಮುಂತಾದ್ದನ್ನು ನಾವು ಶ್ಲಾಘಿಸಬೇಕಾಗಿದೆ. ಅವರ ಜೀವನವು ಉಚ್ಚ ಧ್ಯೇಯಗಳಿಂದಲೂ, ಉಚ್ಚ ಸಾಧನೆಗಳಿಂದಲೂ, ವ್ಯಕ್ತಿಗತ ಮತ್ತು ಸಾರ್ವಜನಿಕ ಪರಿಶುದ್ಧತೆಯಿಂದಲೂ, ನಿರಂತರ ಪ್ರಯತ್ನದಿಂದಲೂ ತುಂಬಿದೆ.

If not delivered please return to
"KODAGU" OFFICE MERCARA.

ಕೊಡಗು.

ಸತ್ಯೇನ ಧಾಂತದಯಾಯಾ ವಿದ್ಯಾ ಶೀಲ ಪ್ರಯತ್ನತಾ' ಏಕ ಮತ್ಯೇನ ಲೋಕಾನಾಂ ಸುಸ್ಥಿರಃ ರಾಜ್ಯ ಸಂಪದಾ

ವರ್ಷ ಚಂದಾ ರೂ. ೩—೮—೦. ಸಂಪಾದಕ—ಮೂಚನಂಡ ಯಂ. ಗಣಪತಿ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಪುಟ ೧೧	ಮಡಿಕೇರಿ, ಸನ್ ೧೯೩೨ನೇ ಇಸವಿ ಫೆಬ್ರವರಿ ತಾರೀಖು ೧೯ ನೇ ಶುಕ್ರವಾರ.	ಸಂಚಿಕೆ ೩೭

Office of the Asst.
C^o^mmr. & Dt. Magte.,
Mercara (Coorg). 6th May 1931.

Dear Sir,

I am QUITE PLEASED with the workmanship of the two Coorg weapons (PICHAKATTI & ODIKKATTI)

Yours faithfully,
(Sd) (Rao Bhadur)
K. CHENGAPPA, B. A.
District Magistrate and
Assistant Commissioner of
Coorg.

JEWELLER
By Appointment to
H. E. The Governor of Madras.



PEECHAKATTI (WITH SILVER FITTINGS)
Prices—From Rs. 160 & upwards.

"New Bungalow,"
Ammatti, (Coorg).
14th December 1931.

Dear Sir,

I am IMMENSELY-PLEASED with the workmanship of the PICHAKATTI you made and sent me some time back.

Yours faithfully,
Sd/ K. P. MUDDAYYA,
Ammatti (Coorg.)

Telegrams: 'PRECIOUS.'

V. Subramaniaier
Jeweller.

Telephone: 3145.

CATALOGUE ON ENQUIRY.

52—13

Post Box 423, Triplicane, P. O., MADRAS.



ಬಂದೂಕು ಮೊದಲಾದ ಇತರ ಆಯುಧಗಳು ಮಾರಾಟಕ್ಕೆ ಸಿದ್ಧ ಇರುವುವು.

ತೋಟಿಗಳು, ಕತ್ತಿಗಳು, ಚಾಕುಗಳು, ತೋಟೆಗಳು, ಏರ್ ಗನ್‌ಗಳು, ಮಾದು ಮುತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS.
Largest Importers of Firearms and Ammunition
Cheapest priced firm in India,

24—22 210 Abdul Rehman Street, BOMBAY.

ಬಾಲಾರ್ಕಮಧು.

ನಿಮ್ಮ ಮಕ್ಕಳ ಸೌಂದರ್ಯವನ್ನು ನೋಡಬೇಕಾದರೆ ಅದ್ಭುತ ಗುಣವುಳ್ಳ ಬಾಲಾರ್ಕ ಮಧುವನ್ನು ಕೊಡಿರಿ. ಮಕ್ಕಳು ರೋಗ



ಹೀನರಾಗಿ ಎಷ್ಟೇ ಕ್ಷೀಣವಾಗಿದ್ದರೂ ಇದರಿಂದ ಬಹು ಬೇಗ, ಬಲವೂ ಬರುವದು. ದಿನ ದಿನಕ್ಕೆ ಆರೋಗ್ಯ ... ವದು. ಇದು ಮಧುರವಾಗಿದೆ. ... ಬೆಲೆ 1 ಕ್ಕೆ 12 ಆಣೆ ... ಆರ್ಡರ್ ... ಎಲ್ಲಾ ... ಅಂಗಡಿಗಳಲ್ಲಿ ...

ಯಂ. ವಿ. ಪ್ರ ... ರೋ. 78.

52—5

ವಜ್ರದ ಅಡ್ಡಿಗೆ.

ಈ ಅಡ್ಡಿಗೆಗಳನ್ನು ಅಮೇರಿಕನ್ ಡೈಮಂಡ್ ಎಂಬ ಇಮಿಟೇಶನ್ ವಜ್ರದ ಕಲ್ಲುಗಳನ್ನು ಇಟ್ಟು ಕೆವಡಿಯನ್ ಭಂಗಾರದಿಂದ ಕಟ್ಟಿದ ಕಟ್ಟಿದೆ. ಅದರ ಬಣ್ಣವು ಕೆಡದಂತೆ ಸವರನ್ ಭಂಗಾರದ ಬಣ್ಣ ಕೊಟ್ಟಿದೆ. ಈ ಕಲ್ಲುಗಳ ಪ್ರಕಾಶವು ಸಾಚಾವಜ್ರದ ಅಡ್ಡಿಗೆಗೆ ಸರಿಯಾಗಿದೆ. ಇದನ್ನು ನೋಡಿದವರು ೫,೦೦೦ ರೂ.ಗಳು ಕ್ರಯ ಕಟ್ಟುವರು. ಶ್ರೀಮಂತರಿಗೂ, ಗರೀಬರಿಗೂ ಉಪಯುಕ್ತವು. ಕ್ರಯ ೧ಕ್ಕೆ ರೂ. ೫—೧೨—೦. ೨೫ಂ ಗಜ್ಜೆ ಕಟ್ಟಿದ ಭಂಗಾರದ ಸಾಯು ೧ಕ್ಕೆ ನಂ ೧ ರೂಪಾಯಿ ೪—೮—೦. ನಂ. ೨ ೩—೮—೦.

ವಿಳಾಸ:—ಕೆ. ಎಸ್. ಜೆನ್‌ಸನ್ ಅಂಡ್ ಕೋ,
12—7 ಪೋ || ನಂ || 1246, ಮದರಾಸು.

ಈ ಗಡಿಯಾರಗಳು ಒಳ್ಳೆಯ ಸ್ಥಿತಿಯಲ್ಲಿರುವಂಥವೇ ಇರುವವು. ನಮ್ಮ ಸ್ವಂತ ಆರ್ಡರ್ ಮೇಲೆ ಸೀಮೆಯಲ್ಲಿ ತಯಾರಿಸಿ ತರಿಸುತ್ತೇವೆ. ಸರಿಯಾಗಿ ಘಂಟೆಯನ್ನು ತೋರಿಸುತ್ತವೆ. ಇದುವರೆಗೂ ಯಾರೂ ಈಗಿನ ಕಡಮೆ ಬೆಲೆಗೆ ತರಿಸಿರುವವರೇ ಇಲ್ಲ. ಆದ್ದರಿಂದ ಬೇಗನೆ ಬರೆದು ತರಿಸಿಕೊಳ್ಳಿರಿ. ನಮ್ಮಲ್ಲಿ ಸ್ವಲ್ಪವೇ ಇರುತ್ತವೆ. ಇವಕ್ಕೆ ಖಾತ್ರಿಯಾದ 3 ವರ್ಷ ಗ್ಯಾರಂಟಿ ಕೊಡುತ್ತೇವೆ. ಕ್ರಯ 1ಕ್ಕೆ 4—4—0.

ವಿಳಾಸ:—ಕೆ. ಎಸ್. ಜೆನ್‌ಸನ್ ಅಂಡ್ ಕೋ,
12—9 ಪೋ || ನಂ || 1246, ಮದರಾಸು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್. ೧೯೧೨ನೇ ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲು)

		ರೂ.
ಷೇರ್ ಬಂಡವಾಳ	—	50,000
ವಸೂಲಾದ ಷೇರ್ ಮೊಬಲಗು	—	26,800
ಜನರಿಂದ ಠೇವಣಾತಿ	—	2,50,301

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೆ ಹೆಚ್ಚಾಗಿ ಸಾಲಕೊಡಲಾಗುತ್ತದೆ.

ಒಂದು ವರ್ಷ ಮಾಯಿದೆ ಅಥವ ಹೆಚ್ಚಿನ ಮಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ಮಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ಸರ್ಕಾರ್ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ.

ಪ್ರೆಸಿಡೆಂಟರು,	ಮ್ಯಾನೇಜರ್,
ಕೋದಂಡ ಅಪ್ಪಯ್ಯನವರು	ಮನೆಯಪ್ಪಂಡ ಬೆಳ್ಯಪ್ಪ
ರಾವ್ ಬಹದ್ದೂರ್.	ನವರು.

ಸೆಕ್ರೆಟರಿ

ಸಿ. ಯಸ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್

ತಾರೀಖು 1—7—1931.

ನೋಟೀಸು.

ಈ ಕೆಳಗಿನ ಮಹಾಶಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡಿದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಯ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ಚಂದಾ ಹಣವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಉತ್ತರ ಕೊಡಗಿಗೆ ಮಿ॥ ಚೇರಿರ ಮಾದಯ್ಯನವರು,

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮಿ. ಮಂಡೇಪಂಡ ಸೋಮಯ್ಯನವರು, (ಜಾನಿಧಂಡಾರ.)

ಸಾಮ್ವಾರಪೇಟೆ—ಎಮ್. ಆರ್. ವೆಂಕಪ್ಪಯ್ಯನವರು.

ಅಮ್ಮತ್ತಿ—ಸಿದ್ದಾಪುರ—ಮಿ. ಐಸಂಡ ಮಾದಪ್ಪನವರು,

ಪೊನ್ನಂಪೇಟೆನಾಡು—ಮಿ. ಪಿ. ಜಿ. ಮುದ್ದಯ್ಯನವರು,

ಮತ್ತು, ಅಡಮಣಮಾಡ ಪಿ ಕಾರ್ಯಪ್ಪನವರು,

ಕುದಿಕೇರಿ & ತಿತಿಮತ್ತಿ—ಮಿ. ಜಿ. ಮಾದಯ್ಯನವರು,

ಕುಂಟಿಕೊಪ್ಪ—ಮಿ. ಅಪ್ಪಚೆಟ್ಟೋಳಂಡ ಮಾಚಯ್ಯನವರು.

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ಧವಸ ಭಂಡಾರಗಳ ಪ್ರತಿ ಯೊಬ್ಬ ಮೆಂಬರನಿಗೂ ಬೇಕಾದ ಅನುತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ಧವಸ ಭಂಡಾರ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರ ಸಂಘಗಳ ಮತ್ತು ಧವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಿಸಲು ಆವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ನಾನಾ ಫಾರಮುಗಳೂ, ಸಾಲದ ಫಾರಮುಗಳೂ, ಜಮಾ ಖರ್ಚು ಫಾರಮುಗಳೂ, ಸಂಬಳದ ಬಟವಾಡೆ ಫಾರಮುಗಳೂ, ಜಾಮೀನು ಕರಾರು ಫಾರಮುಗಳೂ, ಸ್ಟೋರ್ ಲೆಡ್ಜರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಮಿನಿಟ್ ಪುಸ್ತಕಗಳೂ ಮತ್ತು ಷೇರ್ ಪುಸ್ತಕಗಳೂ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಬೇಕಾದವರು ಆರ್ಡರ್ ಕಳುಹಿಸಿ ವಿ. ಪಿ. ಯಲ್ಲಿ ಕಳುಹಿಸಲಾಗುವುದು.

ಮ್ಯಾನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,461 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.

ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.

ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,78,322 ಜನರಿಗೆ 58 ಕೋಟಿ ರೂ.

ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ರಷ್ಟರ ಖರ್ಚಿನಲ್ಲಿ ನಡೆಸಲ್ಪಟ್ಟಿದ್ದಾಗಿದೆ.

ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಒತ್ತಾಸೆಯನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ಮೊಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೋ	ಪಾಟ್ನಾ	ಸುಕ್ಕೂರು
ಅಲ್ಲಾಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಡಾರ್ಜಿಲಿಂಗ್	ಮಂಡಲೆ	ರಾಯಿಪುರ	ತಿರುವೆಂದ್ರಮ್
ಭೋಪಾಲ್	ಕರಾಚಿ	ಮಂಗಳೂರು	ರಾಂಚಿ	ವಿಶಾಖಪಟ್ಣ [52—50

ಚಳಿಜ್ವರದ ಮಾತ್ರೆಗಳು! :—ಇದು ಕ್ವಿನೈನ್ ಮತ್ತು ಕ್ವಿನೀನು ಸೇರಿಸಿದ್ದು ಗುಣವಾಗದಿರುವ ಮಲೆ ಜ್ವರ, ದಿನಾ ಬರುವ ಜ್ವರ, 3—4 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ ಅಸಾಧ್ಯ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ. 1—8—0; 3ಕ್ಕೆ ರೂ. 4—0—0; 6ಕ್ಕೆ ರೂ. 7—8—0. 12ಕ್ಕೆ ರೂ. 14

ಮಲೆ ಜ್ವರಕ್ಕೆ

ರತು ಕಷಾಯ

ಚಂದನಾಸವ:—ಇದು ಪ್ರಮೇಹ ಮೂತ್ರಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವದು, ಮೂತ್ರಕೋಶದ ಉರಿ, ಮೂತ್ರ ಹಿಂಡಿಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು; ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಸುಣ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಹುಟ್ಟುವ ರೋಗ. ಇವುಗಳಿಗೆ ಪರಮ ಔಷಧ. ಬಾಟ್ಲು 1, 3, 6ಕ್ಕೆ ರೂ. 1—4—0 3—5—0; 6—12—0

ರೋಮನಾಶಿನಿ:—ಈ ಪುಡಿಯನ್ನು ಅರಿಸಿನದಲ್ಲಿ ಕಲಸಿ ದೇಹದಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಹೋಗುವುದು. ಡಬ್ಬಿ 1ಕ್ಕೆ 6 ಅಣೆ, 3 ಡಬ್ಬಿಗಳಿಗೆ ರೂ. 1, 1 ಡಜನಿಗೆ 3—8—0

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆಹೊಟ್ಟು, ಕಣ್ಣುರಿ, ಕಿವಿಯಿಂದ ಕೀವು ಸೋರುವುದು ಕಿವುಡು ... ಕೂದಲು ಬೆಳ್ಳಗಾಗುವುದು, ಕೂದಲು ಉದುರಿಹೋಗುವುದು. ಇವುಗಳಲ್ಲಿ ಖಂಡಿತ ಗುಣವಾಗುತ್ತದೆ. ... ಕೂದಲನ್ನು ... ಕಪ್ಪಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ... ಕೂದಲನ್ನು ... ಹೊಸ ಕೂದಲನ್ನು ಹುಟ್ಟಿಸುತ್ತದೆ. ಚಿಕ್ಕ ಸೀಸೆಗೆ ರೂ. 1, 3 ಸೀಸೆಗೆ 2—10—0 ಒಂದು ದೊಡ್ಡ ಸೀಸೆಗೆ ರೂ. 2, 3 ಸೀಸೆಗಳಿಗೆ 5—8—0

ವಿಳಾಸ:—ಮನೋಲ್ಲಾಸಿನಿ ಕಂಪೆನಿ,

52—38 ಕರಿಬಾಗು ಕರಾ ಹೊರಿಂದ. 9. ಮಂಗಳೂರು.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ: ಬಾಟ್ಲಿ 1ಕ್ಕೆ 14 ಅಣೆ, ಟಪ್ಪಾಲು ಖರ್ಚು 9 ಅಣೆ.

ಕೆ. ಟಿ. ಡೋಂಗರೆ ಕಂಪೆನಿ,

52—5 ಗಿರಿಗಾಂವ, ಮುಂಬಯಿ.

Printed & published by M. M. Ganapathy at "Kodagu" Press Mercara for "Kodagu" Ltd.

೫೬ ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ ಔಷಧಗಳು.

೧. ಧಾತುಪುಷ್ಟಿ ಲೇಹ.

ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕ ಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ಬಾಧೆ, ರಕ್ತ, ಪಿತ್ತ, ಒಳ ಜ್ವರ, ಮಲ ಬದ್ಧತೆ, ಕೈಕಾಲು ಉರಿಯುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದು, ಹೋದ ಶಕ್ತಿಯು ಪುನಃ ಕುಂಟಿಕೊಳ್ಳುವುದು.—ಕ್ರಯ ಡಬ್ಬಿ 1ಕ್ಕೆ 2—8—0 ಮೂರು ಡಬ್ಬಿಗಳಿಗೆ ರೂ. 7—0—0

೨. ಅಶೋಕಾರಿಷ್ಟ ಮತ್ತು ಮಾತ್ರೆ.

ಹೆಂಗಸರ ಮುಟ್ಟು ದೋಷಗಳು, ಮುಟ್ಟಾದ್ದು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟ ನೋವು, ಸಂತಾನ ಹೀನತೆ, ಮೂರ್ಛೆ, ಮಲಬದ್ಧತೆ, ಒಳಜ್ವರ, ರಕ್ತಹೀನತೆ, ಕೈಕಾಲು ಸೆಳತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಅತಿ ಶೀಘ್ರದಲ್ಲಿಯೇ ಗುಣ ಪಡಿಸುವುದು. ಅಶೋಕಾರಿಷ್ಟ ಮತ್ತು ಮಾತ್ರೆಗಳು ಸಾವಿರಾರು ಹೆಂಗಸರಿಗೆ ಅಂತರಿಕ ಆರೋಗ್ಯವನ್ನು ಒದಗಿಸಿ, ಮನೋಭಿಲಾಷೆಯನ್ನು ಪೂರಯಿಸಿರುವವು.

ಕ್ರಯ 1 ಬಾಟ್ಲಿ ಔಷಧ, 1 ಡಬ್ಬಿ ಮಾತ್ರೆ, ರೂ. 2 ಆ. 4
3 ಬಾಟ್ಲಿ ಮತ್ತು ಡಬ್ಬಿಗಳಿಗೆ ರೂ. 6 ಆ. 4.

೩. ಮಲೇರಿಯಾ ನಿವಾರಣೆ.

ದಿನ ಬಿಟ್ಟು ಬರುವ ಜ್ವರ, ಚಳಿ ಜ್ವರ, 2 ಯಾ 3 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರ ಗಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರ ಗಡ್ಡೆಯನ್ನು ಕರಗಿಸಿ ಶಕ್ತಿಯನ್ನು ಉಂಟು ಮಾಡುತ್ತದೆ. ಬಾಟ್ಲಿ 1ಕ್ಕೆ 1—8—0, 3 ಬಾಟ್ಲಿಗಳಿಗೆ 4—2—0.

೪. ಮೋಹ ಕುಠಾರ. ಇದು ಮೂತ್ರಸ್ಥಾನದಿಂದ ಕೆಂಪು, ಬಿಳಿದು, ಹಳದಿಯಂತೆ ಹೋಗತಕ್ಕ ಕೀವನ್ನೂ, ವ್ರಣವನ್ನೂ, ಉರಿಯನ್ನೂ ಗುಣಪಡಿಸುತ್ತದೆ. ಡಬ್ಬಿ 1ಕ್ಕೆ
ರೂ. 2—8—0. 3ಕ್ಕೆ ರೂ. 7.

೫. ಇಛ್ಛಾ ಭೇದಿ ಗುಟಿಕೆ. ಅಜೀರ್ಣವನ್ನು ಉಂಟುಮಾಡುವ ಸುಖ ವಿರೇಚಕ. ಬಾಟ್ಲಿ 1ಕ್ಕೆ 0—12—0 ಆಣೆ. 3 ಬಾಟ್ಲಿಗಳಿಗೆ 2—2—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕನಾದ ಔಷಧಿ ರವಾನಿಸಬಹುದು. ಕೆಟಲಾಗು ತರಿಸಿ ನೋಡಿರಿ.

ಏಂ. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್,
52—10 ರಥಬೀದಿ, ಮಂಗಳೂರು, ದ. ಕನ್ನಡ

ಭಂಗಾರದ ಕೈಗಡಿಯಾರ.



ಈ ಚಿತ್ರದಲ್ಲಿ ಕಾಣುವ ಭಂಗಾರದ ಕೈಗಡಿಯಾರವು ಬಹು ಬಲಿಷ್ಟವಾದ (ಸ್ವಿಸ್ ಮೇಡ್) ಲೀವರ್ ಸಾಮಾನುಗಳಿಂದ ತಯಾರಾದವು. ಸರಿಯಾದ ಗಂಟೆಯನ್ನು ತೋರಿಸುವವು. ಒಳಗಡೆ ಕಂಪುಗಳು ಇಟ್ಟಿವೆ. ಇದರ ಬಣ್ಣವು ಭಂಗಾರಕ್ಕೆ ಸರಿಯಾಗಿರುವದು. ಇದನ್ನು ಈ ವಾರದಲ್ಲಿ ತರಿಸಿಕೊಳ್ಳುವವರಿಗೆ ಒಂದು ವಜ್ರದ ಉಂಗುರ, ಒಂದು ಗೋಲ್ಡ್ ಗೇಲ್ಟ್ ಭಂಗಾರದ ಚೈನ ಹಾರ (ನೆಕ್‌ಲೇಸ್), ಒಂದು ಟೇಬಲ್ ಟೈಂಪೀಸ್ ಇನಾಮಾಗಿ ಕೊಡುವೆವು. 2 ಗಡಿಯಾರಗಳಿಗೂ ಖಾತ್ರಿಯಾದ 4 ವರ್ಷ ಗ್ಯಾರಂಟಿ ಪತ್ರ ಸಹ ಕಳುಹಿಸುವೆವು.

3 ಬಹುಮಾನಗಳ ಸಹಿತ ರಿಸ್ಟ್‌ವಾಚ್ 1ಕ್ಕೆ 6—8—0.

ವಿಳಾಸ:— **ಸಿಟಿ ಮಾರ್ಟ್,**
12—7 168. ಜೈನಾ ಬಜಾರ್, ಮದರಾಸು.

12 ಸೆಂಟ್ ಬಾಟಲ್, ಫೌಂಟನ್ ಪೇನಾ ಲೀವರ್ ಪಾಕೆಟ್ ವಾಚ್ 2—12—0 ಮಾತ್ರ,
ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ
ಲಿಲ್ಲಿ ಅಫ್ ದಿ ವ್ಯಾಲ್ಲಿ ಮತ್ತು ಫೌನ್ಟೆನ್ ಪೇನಾ.



ಈ ಸುಗಂಧ ದ್ರವ್ಯವು ಫ್ರಾನ್ಸ್ ದೇಶದಲ್ಲಿ ಪುಷ್ಪಗಳ ಸಾರದಿಂದ ತಯಾರಿಸಿದ್ದು. ಇದರಲ್ಲಿ ಮದ್ಯಸಾರಗಳು ಯಾವವೂ ಸೇರಿರುವುದಿಲ್ಲ. ಇದರಲ್ಲಿ ಒಂದೇ ಒಂದು ಹನಿಯನ್ನು ಬಟ್ಟೆಗೆ ಹಾಕಿದರೆ ಒಂದು ವಾರದ ವರೆಗೂ ಒಂದೇ ಸರಿಯಾಗಿ ಘಮಘಮಿಸುತ್ತಿರುವುದು. ಲಿಲ್ಲಿ ಅಫ್ ದಿ ವ್ಯಾಲ್ಲಿ ಎಂಬ ಈ ಸುಗಂಧ ದ್ರವ್ಯಕ್ಕೆ ಸರಿಸಮಾನವಾದದ್ದು ಬೇರೊಂದು ಇಲ್ಲ. ವಿಲಾಯಿತಿಯಲ್ಲಿ ತಯಾರಾದ 14 ಕ್ಯಾರೆಟ್ಟಿನ ಭಂಗಾರದ ನಿಬ್ಬು ಹಾಕಿದ ಫೌನ್ಟೆನ್ ಪೇನಾ, ಒಂದೇ ಸಲ 12 ಸೆಂಟ್ ಬಾಟಲ್, ಪೇನಾ ತರಿಸುವವರಿಗೆ ಒಂದು ಪಾಕೆಟ್ ವಾಚನ್ನು ಇನಾಮಾಗಿ ಕೊಡುತ್ತೇವೆ

ಕ್ರಯ ರೂ. 2—12—0 ಮಾತ್ರ.

The Legal Trading Co.
12—8 P. B. 243, Madras.

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಎಂಬುವ ಸುಪ್ರಸಿದ್ಧ ದೇಶೀಯ ವಿಮೋ ಸಂಘ.

ಅಧ್ಯಕ್ಷರು:—ಮಾನನೀಯ ಸರ್ ಲಲ್ಲುಭಾಯಿ ಸಾಮಲದಾಸ್,
ಕೆಟಿ., ಸಿ. ಐ. ಇ., ಜೆ. ಪಿ., ಯವರು.

ಕೊಚ್ಚಿಕಾರ ಬ್ರದರ್ಸ್, ಮದ್ರಾಸು ಬ್ರಾಂಚು ಸೆಕ್ರಟರಿಗಳು.

1. ಭಾಗ್ಯವಂತರ ಭಂಡಾರ, ವ್ಯಾಪಾರಸ್ಥರ ಕೋಶಾಗಾರ, ಕುಟುಂಬದ ಸಂರಕ್ಷಣಾನಿಲಯ. ಬಡವರ ಜೀವನಾಧಾರ ಇದೇ ಜೀವ ವಿಮೆಯ ತತ್ವವು.

2. ಹಿಂದೂಸ್ಥಾನದ ನಿವಾಸಿಯರಲ್ಲಿ ವಿಮೆ ತೆಗೆಯಬೇಕೆನ್ನುವವರ ಪ್ರಯೋಜನಾರ್ಥವಾಗಿ ಈ ಕಂಪೆನಿಯು ಭಾರತೀಯರ ಉತ್ಪಾದಿಸಿದ ಅಧಿಕತನದಿಂದ ಖರ್ಚು ಕಡಿಮೆ ಮಾಡಿ ಇಂಡಿಯಾ ಸರ್ಕಾರದ ಇಂಡಿಯನ್ ಟ್ರಸ್ಟು ಆಕ್ಟಿಗೆ ಒಳಪಟ್ಟು ಸರ್ಕಾರದ ಭದ್ರತೆಯಿಂದ ದೇಶೀಯರ ಸೇವೆಯಲ್ಲೇ ನಿರತವಾಗಿ ಹಿಂದೂಸ್ಥಾನದ ಎಲ್ಲಾ ಕಡೆಗಳಲ್ಲೂ ಅತಿ ಕೀರ್ತಿಯನ್ನು ಪಡೆದಿರುತ್ತೆ.

3. ಈ ಸ್ವದೇಶೀ ಕಂಪೆನಿಯು ಪೋಲಿಸಿದಾರರಿಗೆ ಪೋಲಿಸಿ ಅವಧಿ ಪೂರೈಸಿದನಂತರಾಗಲೀ ಅಥವಾ ಮಧ್ಯದಲ್ಲು ಮರಣಾನಂತರ ವಾರೀಸುದಾರರಿಗಾಗಲೀ ಹೆಚ್ಚಿನ ಖರ್ಚಿಗೆ ಅಸ್ಪದ ಕೊಡದೆಯೂ, ದೀರ್ಘ ಸಮಯ ತೆಗೆದುಕೊಳ್ಳದೆಯೂ ಶೀಘ್ರದಲ್ಲಿ ವಿಮೋ ಮೊಬಲಗನ್ನು ಲಾಭ ಸಹಿತ ಪಾವತಿಕೊಡುವುದರಲ್ಲಿ ಹೆಸರುಗೊಂಡಿದೆ.

4. ಭರತಖಂಡದ ಮಹನೀಯರಿಂದ ಸ್ಥಾಪಿಸಲ್ಪಟ್ಟ ದೇಶೀಯರಿಂದಲೇ ಅತಿ ಕಡಿಮೆ ಖರ್ಚಿನಿಂದ ನಡೆಸಲ್ಪಡುವ ಈ ಸ್ವದೇಶೀ ಕಂಪೆನಿಯು, ಇಂದು ಭಾಗಿಗಳಿಗಾಗಿ, ಪತಿಪತ್ನಿಯರಿಗೆ ಮತ್ತು ವ್ಯಾಪಾರಸ್ಥರು ವಗೈರರಿಗೆ ಏಕೀಭವಿಸಿ (ಜಾಯಿಂಟ್ ಲೈಫ್) ಪೋಲಿಸಿ ತೆಗೆದುಕೊಳ್ಳಲು ಈ ಕಂಪೆನಿಯು ಹುಂಬಾ ಅನುಕೂಲಗಳನ್ನು ಕಲ್ಪಿಸಿರುತ್ತೆ. ಇಂಥ ಸುಸಮಯವನ್ನು ಎಂದಿಗೂ ಕಳೆಕೊಳ್ಳಬಾರದು.

ಆಫೀಸು—
ಜೆಂಪರ್ ಸ್ವಿಡ್,
ಮಡಿಕೇರಿ. (26—17)

ಬಿ. ಎಸ್. ಐಯ್ಯಪ್ಪ,
ಕೊಡಗು ಚೀಫ್ ಏಜೆಂಟ್.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

1. ಉತ್ತಮ ತರಹ ಒಂದು ಸೆಟ್ ಜರ್ಮನ್ ರೀಡ್ಸ್ ಹಾಕಿರುವ ಸಿಂಗಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 20—0—0
„ ಮತ್ತು 22—8—0

2. ದಿಟೋ ಉತ್ತಮ ತರಹ ಹಾರ್ಮೋನಿಯಂ
„ 1ಕ್ಕೆ ರೂ. 25—0—0
„ ಮತ್ತು 27—8—0

3. ದಿಟೋ ಉತ್ತಮ ತರಹದ್ದು, ದೂಳು ಬೀಳದಂತೆ ಕೇಸಿನ ಮೇಲೆ ಪೂರ್ತಿ ಮುಚ್ಚಳವುಳ್ಳ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ ರೂ. 27—8—0

4. ಶಾಶ್ವತವೂ, ಬಲಯೋಜನವೂ, ಸುಸ್ವರವುಳ್ಳದ್ದೂ, ಅನೇಕ ವರ್ಷಗಳ ವರೆಗೆ ಬಾಳಿಕೆ ಬರತಕ್ಕದ್ದೂ ಆದ ಹೊಸದಾಗಿ ಸಪ್ಲೈ ಆಗಿರುವ ಫ್ರೆಂಚ್ ರೀಡ್ಸ್ ಸಮಾನವೆ ಇರುವ ನಮ್ಮ ಹೆಸರಿನ ರೀಡ್ಸ್ ಹಾಕಿರುವ "ಸಿದ್ದಪ್ಪಾಸ್ ಫ್ಲೂಟ್" ಸಿಂಗಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 42—8—0

5. ಉತ್ತಮ ತರಹ 2 ಸೆಟ್ ಜರ್ಮನ್ ರೀಡ್ಸ್ ಹಾಕಿರುವ, ದೂಳು ಬೀಳದಂತೆ ಕೇಸಿನ ಮೇಲೆ ಪೂರ್ತಿ ಮುಚ್ಚಳವುಳ್ಳ ಡಬ್ಬಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ ರೂ. 3—0

6. ಉತ್ತಮ ತರಹ 2 ಸೆಟ್ ಜರ್ಮನ್ ಮೇಕ್ ರೀಡ್ಸ್ ಹಾಕಿರುವ, ಕೈನಿಂದಾಗಲೀ ಅಥವಾ ಕಾಲಿನಿಂದಾಗಲೀ ಬಾರಿಸಲು ಅನುಕೂಲಿಸುವಂತೆ ತಯಾರಿಸಿರುವ "ಸ್ಪೆಷಲ್ ಫ್ಲೂಟ್" ಡಬ್ಬಲ್ ರೀಡ್ಸ್ ಹ್ಯಾಂಡ್ ಲೆಗ್ ಹಾರ್ಮೋನಿಯಂ 1ಕ್ಕೆ ರೂ. 78—

ನಮ್ಮ ಟಿಂಬರ್ ಡಿಪೋನಲ್ಲಿ ಕಟ್ಟಡಗಳಿಗೂ, ಫರ್ನಿಚರ್ ತಯಾರಿಸಲೂ ಬೇಕಾದ ಎಲ್ಲಾ ನಮೋನೆ ನಾಟಾಗಳನ್ನು ಸುಲಭ ದರದಿಂದ ವಿಕಲಗಿಟ್ಟಿರುವುದಲ್ಲದೇ, ಗಿರಾಕಿಗಳು ಅಪೇಕ್ಷಿಸುವ ಸೈಜಿಗೆ ಕುಯಿಸಿಯೂ ರಿಯಾಯಿತಿ ದರದಿಂದ ಸಪ್ಲೈ ಮಾಡುತ್ತೇವೆ. ಹೆಚ್ಚಿಗೆ ವಿಷಯಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಳಾಸ:—ಯಂ. ಎಸ್. ಶಿದ್ದಪ್ಪ ಬ್ರದರ್ಸ್
ಹಾರ್ಮೋನಿಯಂ ಮತ್ತು ಟಿಂಬರ್
ವಾಣೀವಿಲಾಸ ಮಾರ್ಕೆಟ್
52—33

ಮದ್ರಾಸು ಕೊಡಗರ ವರ್ಷದ ಕಡೇ ಸಮ್ಮೇಳನ.

ಮದ್ರಾಸು "ಕೂರ್ಗ್ ಅಸೋಸಿಯೇಶನ್"ನವರು, ಈ ವರ್ಷದ ಕಡೆಯ ಮೀಟಿಂಗನ್ನು ಮದ್ರಾಸು "ಲಾ" ಕಾಲೇಜಿನಲ್ಲಿ ಕಳೆದ ಆದಿತ್ಯವಾರ (31—1—32) ರಲ್ಲಿ ನಡೆಸಿದರು. ಸಂಘದ ಮೆಂಬರರಲ್ಲಿ ಕೆಲವರಲ್ಲದೆ ಎಲ್ಲರೂ ದಯಮಾಡಿಸಿದ್ದರು. ನಾಲ್ಕು ಗಂಟೆಗೆ ಸರಿಯಾಗಿ ಸಂಘದ ಒಂದು ಸಮುದಾಯ "ಫೋಟೋ" ತೆಗೆಯಲಾಯಿತು. 5 ಗಂಟೆಗೆ ಫಲಾಹಾರಕ್ಕೆ ಕುಳಿತರು. ಆ ಮೇಲೆ 5½ ಗಂಟೆಗೆ ಸಂಘದ ಆಗಾಮಿ ಮೆಂಬರರಾಗಿದ್ದ ಮ. ರಾ. ಶ್ರೀ. ಚಪ್ಪಂಡ ಕುಶಾಲಪ್ಪನವರು "My conception of Religion" ಎಂಬುದನ್ನು ಕುರಿತು ಒಂದು ಸೊಗಸಾದ ಭಾಷಣ ಮಾಡಿದರು. ಆ ಮೇಲೆ ಸಂಘದ ಅತಿಥಿಗಳಾಗಿ ದಯಮಾಡಿಸಿದ್ದ ಮ. ರಾ. ಶ್ರೀ. ಟಿ. ಯಂ. ಕಾರ್ಯಪ್ಪನವರು ಕೊಡಗಿನ ಯುವಕರು ದೇಶದ ಜನಸಮುದಾಯದ ಏಳಿಗೆಗೆ ಯಾವ ಯಾವ ರೀತಿಯಲ್ಲಿ ಕೆಲಸಮಾಡಬಹುದು ಎಂಬುದನ್ನು ವಿವರಿಸಿ, ರಜಾದಿ ಸಮಯಗಳಲ್ಲಿ ತಮ್ಮ ಕೈಲಾಗುವ ಕೆಲಸ ಮಾಡಲು ಮನಸ್ಸಿರುವವರು ತಮ್ಮ ಹೆಸರನ್ನೂ, ವಿಳಾಸವನ್ನೂ ತನಗೆ ತಿಳಿಸಿದಲ್ಲಿ ತಾನು ಅವರಿಗೆ ಬೇಕಾದ ಸಹಾಯಗಳನ್ನು ಒದಗಿಸಿಕೊಡುತ್ತೇನೆಂಬುದಾಗಿ ವಚನವಿತ್ತರು.

ಆ ಮೇಲೆ ಸಂಘದ ಮತ್ತೊಬ್ಬ ಮೆಂಬರರು, ಪ್ರಾರ್ಥನೆಯ ವಿಷಯ ಸ್ವಲ್ಪ ಟೀಕಿಸಿ ಮಾತಾಡಿದರು.

ಅಂತ್ಯದಲ್ಲಿ ಸಂಘದ ಪ್ರೆಸಿಡೆಂಟರಾದ ಮ. ರಾ. ಶ್ರೀ. ಬಿ. ಪಿ. ಕುಟ್ಟಪ್ಪನವರು ಮೆಂಬರರಿಗೆಲ್ಲಾ ಒಂದಿಗೆ ಮ. ರಾ. ಶ್ರೀ. ಚಪ್ಪಂಡ ಕುಶಾಲಪ್ಪನವರನ್ನೂ, ಕಾರ್ಯಪ್ಪನವರನ್ನೂ ಅವರು ಮಾಡಿದ ಭಾಷಣಕ್ಕೆ ಮುಖ್ಯವಾಗಿ ಒಂದಿಗೆ ವಂದಿಸಿದರು. ಸಭೆಯು 7½ ಗಂಟೆಗೆ ಬರ್ಖಾಸ್ತಾಯಿತು.

ಪಿ. ಬಿ. ಐಪ್ಪಪ್ಪ,
ಸೆಕ್ರೆಟರಿ.

ಸ್ವಾಮಿ ವಿವೇಕಾನಂದರ ಜನ್ಮದಿನೋತ್ಸವ

'ಭಾರತದ ಭವಬಂಧ ಹರಿಸಿದನಿವನೆ'

(ಶ್ರೀಯುತ ಡಿ. ವಿ. ಚೆನ್ನಿಗರಾಯರು ಬರೆದ ಲೇಖನ ಫೆಬ್ರು. 7ನೇ ತಾ. ಎಲ್ಲೆಲ್ಲೂ ಈ ಉತ್ಸವ ಆದಾಗ ಈ ವಿಭೂತಿಯ ಪರಿಚಯ ಪ್ರಸಾದವನ್ನು ಅರಿಯದವರು ಪಡೆಯಲೆಂಬುದೇ ಇದರ ಉದ್ದೇಶ.)

ಜನ್ಮ ಧಾರಣ.

ಪವಿತ್ರ ಭಾರತ ಭೂಮಿಯನ್ನು ಕಗ್ಗತ್ತಲೆಯಿಂದ ಹೋಗಲಾಡಿಸಲು ಯತ್ನಿಸಿ, ಬೆಳಕನ್ನು ತಂದವರು ಸ್ವಾಮಿ ಶ್ರೀ ವಿವೇಕಾನಂದರವರು.

ಶ್ರೀ ಸ್ವಾಮಿ ವಿವೇಕಾನಂದರವರು ಕ್ರಿ. ಶ. 1863ನೇ ವರ್ಷದಲ್ಲಿ ಪುಣ್ಯಾತ್ಮರಾದ ವಿಶ್ವನಾಥ ಭುವನೇಶ್ವರಿ ದಾಸಿಯೆಂಬ ದಂಪತಿಗಳ ಗರ್ಭದಲ್ಲಿ ಅವತಾರ ಮಾಡಿದರು. ವಿವೇಕಾನಂದರವರಿಗೆ ತಂದೆ ತಾಯಿಗಳು ಇಟ್ಟಿದ್ದ ಹೆಸರು ನರೇಂದ್ರನಾಥನೆಂದು.

ಬಾಲ್ಯ ವಿದ್ಯಾಭ್ಯಾಸ.

ನರೇಂದ್ರನಾಥನು ಚಿಕ್ಕಂದಿನಿಂದಲೂ ದೃಢಕಾಯನಾಗಿ ಆಟದಲ್ಲಿ ಪ್ರವೀಣನಾಗಿ, ಬಹಳ ಬುದ್ಧಿವಂತನಾಗಿ, ತೀಕ್ಷ್ಣ ಜ್ಞಾಪಕಶಕ್ತಿಯುಳ್ಳವನಾಗಿ ಬೆಳೆದನು. ವಿದ್ಯೆಯಲ್ಲಿಯೂ ಬಲು ಗಟ್ಟಿಗನಾಗಿ, ವೇದಾಂತ ಚರಿತ್ರೆ ಮುಂತಾದುವನ್ನು ವಿಶೇಷ ಶ್ರದ್ಧೆಯಿಂದ ಕಲಿತನು. ವಿಶ್ವವಿದ್ಯಾನಿಲಯದ ಪದವಿಗಳನ್ನು ಪಡೆದನು.

ಸನ್ಯಾಸ ಸ್ವೀಕರಣ.

ಆಮೇಲೆ ನರೇಂದ್ರನು ಶ್ರೀ ರಾಮಕೃಷ್ಣ ಪರಮಹಂಸರ ದಿವ್ಯ ಸನ್ನಿಧಿಯ ಸಮಾಗಮವನ್ನು ಪಡೆದ ಕೂಡಲೇ ಈ ಜಗತ್ತಿನ ಲೌಕಿಕ ವ್ಯವಹಾರ ಮಾಯಕ್ಕೆ ಅಳುಕಿ, ಸ್ವಾರ್ಥವನ್ನು [illegible] ಗಣಿಸದೆ ಸಮಸ್ತ ಭಾರತದ ಉದ್ಧಾರಕ್ಕೆ, ಇಡೀ ಜಗತ್ತೇ ಆಧ್ಯಾತ್ಮದ ಬೆಳಕನ್ನು ಕೋರುವುದಕ್ಕೆ ಮನೋಹರವಾದ ಲೌಕಿಕ ಬಲೆಯನ್ನು ಹರಿದು ತ್ಯಾಗದ ಮೂಲವಾದ ಸನ್ಯಾಸವನ್ನು ಸ್ವೀಕರಿಸಿದರು.

ಸ್ವಾಮಿ ವಿವೇಕಾನಂದರವರು ಉತ್ಕೃಷ್ಟರಾದ ಸನ್ಯಾಸಿ [illegible] ಸಕಲ ಮತದ ಆಚಾರ್ಯರನ್ನೂ ವಂದಿಸಿದರು. ಅವ[illegible] ರನಲ್ಲಿ 'ಇಸ್ಲಾಮ್, ಕ್ರಿಶ್ಚಿಯನ್' ಮುಂತಾದ ಸಮ[illegible] ಶ್ರೇಷ್ಠವಾಗಿದ್ದುವು. ವೇದ, ಕುರಾನ್, ಬೈ[illegible]ಗಳೂ, [illegible] ಉದ್ಘೋಷಿಸುತ್ತಿದ್ದುವೆಂದು ಅ[illegible]ರು [illegible]ತ್ತಿದ್ದರು. ಗೀತೆಯು ಅವರಿಗೆ ಪ್ರಿಯ[illegible] 'ಇಮಿಟೇಷನ್ ಆಫ್ ಕ್ರಿಸ್ತ್' ಎಂಬ [illegible]ಗಳೂ [illegible] ಪ್ರಿಯವಾಗಿದ್ದುವು.

[illegible] ನಾರಾಯಣರ ಸೇವೆ ಮತ್ತಿತರ.

[illegible]ಯಲ್ಲಿ ದರಿದ್ರ ನಾರಾಯಣರ ಸೇವೆ [illegible] ನಡಸಿದವರು ಸ್ವಾಮಿ ಶ್ರೀ ವಿವೇಕಾ[illegible] [illegible]ನ್ನೂ, [illegible]ನ್ನೂ, [illegible]ನ್ನೂ [illegible] ಆಲಿಂಗಿಸಿ ಅವರ ಕಷ್ಟ ಪರಿಹಾರ[illegible] ಮುಖ್ಯ ಕರ್ತವ್ಯವೆಂದು ವಿದ್ಯಾವಂತರ[illegible] [illegible]ನಂತೆ [illegible] ಪೂ[illegible] [illegible]ರು. ಯುವಕರೇ, ಕೊರಗುವ

ನ್ನು ರಕ್ಷಿಸಲು, ಜಟ್ಟಿಗಳಾಗಿಯೇ ವೇದಾಂತವನ್ನು ಅಭ್ಯಾಸ ಮಾಡಿರೆಂದು ಸಂದೇಶವನ್ನಿತ್ತವರು ಅವರು!

ಬಂಧನದಲ್ಲಿ ಸಿಕ್ಕಿರುವ ಭಾರತ ಭೂಮಿಯನ್ನು ಬಿಡಿಸಿ ಮಾತೆಯು ಅನುಭವಿಸುವ ದುಃಖವನ್ನು ಪರಿಹರಿಸಿ, ಸ್ವತಂತ್ರರಾಗಿರೆಂದೂ, ಪರಾತಂತ್ರ್ಯವನ್ನು ಬಿಟ್ಟು ನಿಮ್ಮ ಕಾಲಿನ ಬಲದ ಮೇಲೇ ನಿಲ್ಲಿರೆಂದೂ ಮನವರಿಯುವಂತೆ ಘೋಷಿಸಿದವರು ವಿವೇಕಾನಂದರು. ಮಾತೃಭೂಮಿಯ ಹಿತಕ್ಕಾಗಿ ನನ್ನನ್ನು ಜೈಲಿನಲ್ಲಿ ಬಂದಿಯಾಗಿಟ್ಟರೂ ಆನಂದದ ಹೆಮ್ಮೆಯಿಂದಲೇ ಇರುವವನು ನಾನೆಂದು ಬರೆದವನು ಆ ಮಹಾತ್ಮನೇ!!

ಈ ನುಡಿಗಳನ್ನು ಸ್ವಾಮಿ ವಿವೇಕಾನಂದರವರು ಹೇಳಿ ಮೂವತ್ತಾರು ವರ್ಷಗಳಾದರೂ, ಈ ಮಾತುಗಳ ಸತ್ಯತ್ವ ಇಂದಿಗೂ ಕಿವಿಯಲ್ಲಿ ಗಂಟೆ ಬಾರಿಸಿದಂತೆ ಪ್ರತಿಧ್ವನಿ ಕೇಳುತ್ತಿರುವುವು. ವಿವೇಕಾನಂದರು ಹಾಡಿರುವ ಮುಂದಿನ ವೀರರಸದ ಗೀತೆಯೊದರೋ ಅವರ ಜಯಂತಿ ಉತ್ಸವದ ದಿನದಲ್ಲಿ ಎಲ್ಲರ ಹೃದಯದಲ್ಲಿ ಪ್ರತಿಧ್ವನಿಸಲಿ.

ಮಾತೆಗಿನ್ನೆಂದಿಗೂ ಕೊರತೆ ಇಲ್ಲ!

(ಶ್ರೀ ಸ್ವಾಮಿ ವಿವೇಕಾನಂದರವರ ಭವಿಷ್ಯತ್ತು.)

ನಿಡುದಾದ ರಾತ್ರಿಯೂ ಸಂದಿಯೇ ಹೋಗುವುದು;
ದಾರುಣದ ಕಷ್ಟವೂ ಕಂದಿ ಕುಸಿಯುವುದು;
ಕಣ್ಣ ಮುಂದೆ ನೆಯುತಿಹ ಹೆಣವು ಕಾಣೇವುದು;

ಎಂಗಿಂದು ಸುಸ್ವರದ ವಾಣಿ ಬರುತಿಹುದು—
—ಕ್ಕೆ ಸ ವಾಂತನು ಜೀವ ಸತ್ವವ ತರಲು
ಜೀವವಿಲ್ಲದ ಮೂಳೆ ಬಲವ ಹೊಂದಿಹುದು!

ಮುಚ್ಚು ಹರಿದೋಡುತ್ತಿದೆ;
ಆಲಸಿಕೆಯು ಅಳಿಯುತ್ತಿದೆ;
ಕುರುಡನೊಬ್ಬನು ಮಾತ್ರ ಕಾಣನಾರ;
ಹುಚ್ಚನೊಬ್ಬನು ಮಾತ್ರ ಅರಿಯಲಾರ.

[illegible] ಶಾಯಿಯು ಇಂದು ಮೇಲೆದ್ದಳು;
ಮಾತೆ ನಿದ್ರೆಯ ಹರಿದು ಬೆಳಗಿದಳು;
ಇಂದವಳ ಶಕ್ತಿಯನು ತಡೆವನಾರೂ ಇಲ್ಲ!
ಅವಳ ತೇಜದ ಮುಂದೆ ಜಗದಿ ನಿಲ್ಲರಿಲ್ಲ!
ಅವಳಿಗಿನ್ನೆಂದಿಗೂ ಕೊರತೆ ಇಲ್ಲ!
ಅವಳ ಹಿಂದಳೆದಳ್ಳಿ, ಕಟ್ಟಿ, [illegible]
ಹೊಂದಕೆ, ಮರವುದೂ ಜಗದಿಲ್ಲ!

ನೋಡು! ಮಾತೆಯ ಚರಣ ಪಲ್ಲವದಿ ಮಾಡುತಿದೆ
ನೋಡು! ಮಾತೆಯ ಪಾದದೆಡೆಯಲ್ಲಿ ಹೂಳೆ ಮಿರಿದೆ
ಭೀಮ ಬಲ
ಜಗವ ಕಾಯುವ ತೇಜ, ಪಿರಿಯ ತೇಜ!

'ವಿ. ಕ.'

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಕರ್ಣಾಟಕ ಸಂಘ.

ಆಯ್ಯ,

ಕೊಡಗಿನಲ್ಲಿ ಕನ್ನಡ ಸಾಹಿತ್ಯ ಸೇವೆಯು ಇತರ ದೇಶಗಳಿಗಿಂತ ಎಷ್ಟೋ ಕಡಿಮೆಯಾಗಿದೆ. ಕರ್ಣಾಟಕ ಸೀಮೆಯ ಎಲ್ಲಾ ಭಾಗಗಳಲ್ಲಿಯೂ "ಕರ್ಣಾಟಕ ಸಂಘ" ಗಳನ್ನೇರ್ಪಡಿಸಿಕೊಂಡು ತಮ್ಮ ಪೀನ ಭಾಷಾಸೇವೆಯನ್ನು ಕೈಕೊಂಡು ಸಾಹಿತ್ಯ ಭಂಡಾರವನ್ನು ವೃದ್ಧಿಗೊಳಿಸುತ್ತಿರುವುದು ಬಹಳ ಸಂತೋಷದ ಮಾತಾಗಿದೆ. ತಮಿಳು, ತೆಲುಗು ದೇಶಗಳಲ್ಲೂ ಕೂಡ ನಮ್ಮ ಸಹೋದರರು ಅವರವರ ಮಾತೃಭಾಷೆ ಜೀವನಕ್ಕೆ ಬೇಕಾದ ಸೌಕರ್ಯಗಳನ್ನೊದಗಿಸಿಕೊಂಡು ಶ್ರಮವಹಿಸಿ ಕೆಲಸ ಮಾಡುತ್ತಿರುವಾಗ ನಾವು ಕೊಡಗಿನಲ್ಲಿ ಸಾಹಿತ್ಯ ಸೇವೆಯನ್ನು ಮಾಡುತ್ತಿಲ್ಲವೆಂದರೆ ಅಲಕ್ಷ್ಯಸ್ಪದವಾಗಿದೆ.

ಕರ್ಣಾಟಕದ ಇತರ ಸ್ಥಳಗಳಿಂದ ಭಾಷಾಭಿಮಾನಿಗಳು ಇಲ್ಲಿಗೆ ಬಂದು ಆಗಾಗ್ಗೆ ಎಚ್ಚರಿಸುತ್ತಿದ್ದರೂ ಉತ್ಸಾಹವಿಲ್ಲದೆ ಈ ಸಂಘ ಸ್ಥಾಪನೆ ಕಾರ್ಯವು ತನ್ನಿಂದ ತಾನೇ ಆಗಬೇಕಾಗಿದ್ದ ಸಾಹಿತ್ಯ ಸೇವೆಯೂ ಈ ವರೆಗೆ ನಡೆಯಲಿಲ್ಲ. ಕರ್ಣಾಟಕದ ಗ್ರಂಥ ಭಂಡಾರದಲ್ಲಿ, ಕಾವ್ಯನಿಧಿಯಲ್ಲಿ ಕೊಡಗಿನದೊಂದು ಚಿಕ್ಕ ನುಡಿಯೂ ಹಾಕುವಿಲ್ಲವೆಂದ ಮೇಲೆ ನಮ್ಮ ಊರು ಇನ್ನೂ ಎಷ್ಟು ಹಿಂದೆ ಬಿದ್ದಿದೆಯೆಂಬುದು ಸರಿಯಾಗಿ ವೇದ್ಯವಾಗುವುದು. ಇದು ನಮ್ಮ ನಾಡಿಗೊಂದು ದೊಡ್ಡ ಕೊರತೆಯಾಗಿದೆ. ಕರ್ಣಾಟಕದ ಎಲ್ಲಾ ಭಾಗಗಳಲ್ಲಿ (ಕೊಡಗು ಬಿಟ್ಟು) ಸಾಹಿತ್ಯ ಪರಿಷತ್ತು ನಡೆದು ಈಗ ಅವರೆಲ್ಲರ ದೃಷ್ಟಿಪಥದಲ್ಲಿ ಕೊಡಗು ನಾಡು ಗೋಚರಕ್ಕೆ ಬಂದಿದೆ.

ಹೀಗೆಂದ ಮೇಲೆ ಕೊಡಗಿನಲ್ಲಿ ಸಾಹಿತ್ಯ ಸೇವೆಯನ್ನು ಮಾಡುವವರು ಇಲ್ಲವೆಂದು ಹೇಳಿದಂತಾಗಲಿಲ್ಲ, ದಾತರು ಉತ್ಸಾಹ ಭರಿತರು ಪ್ರೋತ್ಸಾಹಕ್ಕೆ ಬರಲಿ. ಅವಕಾಶವಿಲ್ಲದೆ ಅನೇಕ ತರಂಗಗಳಿಂದ ಅಜ್ಞಾತವಾಗಿರುವುದರಿಂದ ಸರ್ವರಿಗೂ ಈ ಮುಖೇನ ಅವಕಾಶವನ್ನೊದಗಿಸಿ ಕೊಡಲು ಕೊಡಗಿನ ಸಕಲ ಕೃತಿಗಳೂ ಪ್ರಯತ್ನಪಡಬೇಕಾಗಿದೆ. ಇದಕ್ಕಾಗಿ ಕೊಡಗಿನಲ್ಲಿ 'ಕರ್ಣಾಟಕದ ಸಂಘ'' ಅವಶ್ಯಕತೆಯು ಬಹಳವಾಗಿದೆ. ಈ ವಿಷಯವಾಗಿ ಕೆಲವು ಮಹನೀಯರು ವಿಚಾರ ಮಾಡಿ 'ಕರ್ಣಾಟಕ ಸಂಘ'ವು ಕೊಡಗು ನಾಡಿಗೆ ಅವಶ್ಯವೆಂದು ತೀರ್ಮಾನಿಸಿ ಕೊಡಗಿನ ಎಲ್ಲಾ ಭಾಷಾಭಿಮಾನಿಗಳ ಯಾವತ್ತು ಪ್ರಜೆಗಳ ಅಭಿಪ್ರಾಯವನ್ನು ಪಡೆಯಲು ಇದೇ ತಿಂಗಳು 21 ನೇ ತಾರೀಖಿನ ದಿವಸ ಒಂದು ಸಮ್ಮೇಳನವನ್ನು ಏರ್ಪಡಿಸಲು ನಿಶ್ಚೈಸಿದೆ.

ದೇಶಭಾಷಾಭಿಮಾನಿಗಳೂ, ಸಾಹಿತ್ಯ ಸೇವಕರೂ, ಸರ್ವರೂ ಇದಕ್ಕೆ ನೆರವಾಗಬೇಕೆಂದು ಈ ಮುಖೇನ ಪ್ರಾರ್ಥಿಸುತ್ತೇವೆ.

ಕರ್ಣಾಟಕ ಬಂಧು.

ಸ್ತ್ರೀ ಪುರುಷರ ಪ್ರೇಮಿಯ ಮರ್ಮಗಳನ್ನು ಚಿತ್ರಪಟಗಳ ಸಹಿತ ಇದ್ದದ್ದನ್ನು ಇದ್ದ ಹಾಗೆ ತಿಳಿಸುವ

ಸ್ತ್ರೀ ದಾಂಪತ್ಯ ರಹಸ್ಯವೆಂಬ ಮರ್ಮ ಶಾಸ್ತ್ರ.

ಈ ಪುಸ್ತಕವು ಫ್ರೆಂಚ್, ಹಿಂದೂಸ್ಥಾನಿ ಭಾಷೆಗಳಲ್ಲಿ ಬಹುಕಾಲದಿಂದ ಗುಪ್ತವಾಗಿತ್ತು. ಈಗ ನಾವು ಎಲ್ಲರಿಗೂ ವಿವರವಾಗಿ ತಿಳಿಯುವಂತೆ ಸುಲಭ ಶೈಲಿಯ ಕನ್ನಡ ಭಾಷೆಯಲ್ಲಿ ಭಾಷಾಂತರಿಸಿ ಫೋಟೋಗಳ ಸಹಿತ ಅಂದವಾಗಿ ಮುದ್ರಿಸಿರುತ್ತೇವೆ. ಈ ಪುಸ್ತಕದಲ್ಲಿ ಸ್ತ್ರೀಪುರುಷರಿಗೆ ಬೇಕಾದ ಎಲ್ಲಾ ಮರ್ಮರಹಸ್ಯಗಳು, ಪುರುಷರು ಸ್ತ್ರೀಯರಲ್ಲಿ ನಡೆದುಕೊಳ್ಳಬೇಕಾದ ಬಗೆ ಸ್ತ್ರೀಪುರುಷರ ಜಾತಿಯ ಲಕ್ಷಣಗಳು, ಸ್ತ್ರೀಯರಿಗೆ ಬೇಕಾದ ಅನೇಕ ಗುಪ್ತ ವಿಷಯಗಳು, ಸಂಜೋಗದ ಕಾಲ, ಗರ್ಭ ಧರಿಸುವುದು, ಗರ್ಭ ನಿಂತು ಹೋಗುವುದು, ಸಂಭೋಗದಿಂದಾಗುವ ಸಂತೋಷ, ಜನನೇಂದ್ರಿಯಗಳ ವರ್ಣನೆ, ಹಸ್ತ ಪ್ರಯೋಗದಿಂದಾಗುವ ಹಾನಿ, ಗರ್ಭಿಣಿಗೆ ಬೇಕಾದ ಅನೇಕ ಮರ್ಮನಿಯಮಗಳು, ಶಿಶೂತ್ಪತ್ತಿ ವಿಧಿ, ಗುಪ್ತ ವೈದ್ಯಗಳ ಚಿಕಿತ್ಸೆ, ಶಯನ ಗೃಹದ ರಹಸ್ಯನಿಯಮಗಳು, ಮಾನವ ಶರೀರದ ಮರ್ಮಗಳ ವಿವರ, ನಪುಂಸಕತ್ವಕ್ಕೆ ಚಿಕಿತ್ಸೆ, ಇನ್ನೂ ಸ್ತ್ರೀಪುರುಷರುಗಳಿಗೆ ಬೇಕಾದ ಲೀಲಾರಹಸ್ಯಗಳು ಚಿತ್ರಪಟಗಳ ಸಹಿತ ಪ್ರಿಂಟಾಗಿದೆ.

ಕ್ರಯ: ಪುಸ್ತಕ ಒಕ್ಕೆ ೧ ರೂಪಾಯಿ.

The Legal Trading Co.,
12—8 P. B. 243, Madras.

ಸ್ವದೇಶೀ ಫಿಟೀಲುಗಳು

ಕ್ರಯ ಸುಲಭ! ಅಂದವಾದ ಮಾಲುಗಳು!!

ಸ್ವಲ್ಪವೇ ಉಳಿದಿವೆಯಾದ ಕಾರಣ ಬೇಕಾದವರು ಒಡನೆ ಆರ್ಡರು ಕಳುಹಿಸಿರಿ. ತಮ್ಮ ಕ್ರಯದ ವಿದೇಶೀ ಫಿಟೀಲುಗಳಿಗೂ, ಖುದ್ದಾಗಿ ನಮ್ಮಿಂದಲೇ ತಯಾರಿಸಲ್ಪಟ್ಟ ಈ ಫಿಟೀಲುಗಳಿಗೂ ರಾಗಿಗೂ, ಕೋಗಿಲೆಗೂ ಎಷ್ಟರ ವ್ಯತ್ಯಾಸವೋ ಅಷ್ಟು ವ್ಯತ್ಯಾಸವಿದೆಯೆಂದು ತಾವೇ ಒಪ್ಪಿಕೊಂಡಾದವರಾರು. ಇನ್ನು ಫಿಟೀಲ್, ವೀಣೆ, ಹಾರ್ಮೋನಿಯಂ ಮುಂತಾದ ಸಂಗೀತ ಸಾಹಿತ್ಯಗಳ ರಿಪೇರಿ ಇತ್ಯಾದಿ ಬಹಳ ತಮ್ಮ ದರದಲ್ಲಿ ಮಾಲುದಾರರ ಮನಒಪ್ಪುವಂತೆ ಮಾಡಿಕೊಡುವೆವು. ಫಿಟೀಲ್ ಹಾರ್ಮೋನಿಯಂ ಇತ್ಯಾದಿ ಕಲಿಯಬೇಕೆಂದಿರುವವರಿಗೆ ಇದೊಂದು ಸುಸಮಯ. ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ.

ಫಿಡ್ಲ್. ವಿ. ಕಟ್ರಿಮನಿ ಬಾಬಾಯರ್ ಅಂಡ್ ಸನ್ಸ್,
4—4 ಪೊನ್ನಂಪೇಟೆ, (ದ. ಕೊಡಗು)



ಈ ಗಡಿಯಾರಗಳು ಈ ಚಿತ್ರದಲ್ಲಿರುವಂತೆಯೇ ಇರುವವು. ನಮ್ಮ ಸ್ವಂತ ಡಿಸೈನ್ ಮೇಲೆ ಸೀಮೆಯಲ್ಲಿ ತಯಾರಿಸುತ್ತೇವೆ. ಸರಿಯಾಗಿ ಘಂಟೆಯನ್ನು ತೋರಿಸುತ್ತವೆ. ಇದುವರೆಗೂ ಯಾರೂ ಈಗಿನ ಕಡಮೆ ಬೆಲೆಗೆ ಕೊಡುವವರೇ ಇಲ್ಲ. ಆದ್ದರಿಂದ ಬೇಗನೆ ಬರೆದು ತರಿಸಿಕೊಳ್ಳಿರಿ. ನಮ್ಮಲ್ಲಿ ಸ್ವಲ್ಪವೇ ಇರುತ್ತವೆ. ಇವಕ್ಕೆ ಖಾತ್ರಿಯಾಗಿ 3 ವರ್ಷ ಗ್ಯಾರಂಟಿ ಕೊಡುತ್ತೇವೆ. ಕ್ರಯ 1ಕ್ಕೆ 4—4—0.

ವಿಳಾಸ:— ಕೆ. ಎಸ್. ಬಿನ್‌ಸನ್ ಅಂಡ್ ಕೊ,
12—8 ಪೋ || ನಂ || 1246, ಮದರಾಸು.

ಬಂದೋಕುಗಳು. GUNS.



ಇವು ವಿಲಾಯತಿಯಲ್ಲಿ ತಯಾರಾದವು. ಇವುಗಳನ್ನು ಇಟ್ಟುಕೊಳ್ಳಲು ಲೈಸನ್ಸ್ ಪಡೆಯಬೇಕಾಗಿಲ್ಲ. ಯಾರು ಬೇಕಾದರೂ (ಯಾರ ಸಹಾಯವೂ ಇಲ್ಲದೆ) ಕೈಯಲ್ಲಿ ಹಿಡಿದುಕೊಂಡು ಉಪಯೋಗಿಸಬಹುದು.

100 ರವೆಗಳ ಸಹಿತ ಒಂದಕ್ಕೆ ೫—೦—೦.

ಯಂ. ರಿಯಾ ಅಂಡ್ ಕೋ,
12—7 168, ಚೈನಾ ಬಜಾರ್, ಮದರಾಸು.

೫೩ ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ ಔಷಧಗಳು.

೧. ಧಾತುಪುಷ್ಟಿ ಲೇಹ.

ಧಾತು ನಷ್ಟವಾಗುವಿಕೆ, ಧಾತುವು ನೀರಾಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕ ಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪ್ರಮೇಹ ಬಾಧೆ, ವಾತ, ಪಿತ್ತ, ಜೀರ್ಣಜ್ವರ, ಮಲಬದ್ಧತೆ, ಕೈಕಾಲು ಉರಿಯುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದು ಹೋದ ಶಕ್ತಿಯನ್ನು ಪುನಃ ಹೊಂದಿಕೊಳ್ಳುವುದು.—ಕ್ರಯ ಡಬ್ಬಿ 1ಕ್ಕೆ 2—8—0 ಮೂರು ಡಬ್ಬಿಗಳಿಗೆ ರೂ. 7—0—0

೨. ಅಶೋಕಾರಿಷ್ಟ ಮತ್ತು ಮಾತ್ರೆ.

ಹೆಂಗಸರ ಮುಟ್ಟು ದೋಷಗಳು, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟ ನೋವು, ದೇಹದ ಹೀನತೆ, ಮೂರ್ಛೆ, ಮಲಬದ್ಧತೆ, ಬಿಳಿಸೆರಗು, ರಕ್ತಹೀನತೆ, ಕೈಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಅತಿ ಶೀಘ್ರದಲ್ಲಿಯೇ ಗುಣಪಡಿಸುವುದು. ಈ ಅರಿಷ್ಟ ಮತ್ತು ಮಾತ್ರೆಗಳು ಸಾವಿರಾರು ಹೆಂಗಸರಿಗೆ ಉತ್ತಮ ಆರೋಗ್ಯವನ್ನು ಒದಗಿಸಿ, ಸಂತಾನಭಾಗ್ಯವನ್ನು ಉಂಟುಮಾಡಿರುವವು.

ಕ್ರಯ: 1 ಬಾಟ್ಲಿ ಔಷಧ, 1 ಡಬ್ಬಿ ಮಾತ್ರೆ ರೂ. 2 ಆ. 4
3 ಬಾಟ್ಲಿ ಮತ್ತು ಡಬ್ಬಿಗಳಿಗೆ ರೂ. 6 ಆ. 4.

೩. ಮಲೇರಿಯಾ ನಿವಾರಣೆ.

ದಿನ ಬಿಟ್ಟು ಬರುವ ಜ್ವರ, ಚಳಿ ಜ್ವರ, 2 ಯಾ 3 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರಗಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರ ಗಡ್ಡೆಯನ್ನು ಕರಗಿಸಿ ಶಕ್ತಿಯನ್ನು ಉಂಟುಮಾಡುತ್ತದೆ. ಬಾಟ್ಲಿ 1ಕ್ಕೆ 1—8—0, 3 ಬಾಟ್ಲಿಗಳಿಗೆ 4—2—0.

೪. ಮೇಹ ಕುಠಾರ.

ಇದು ಮೂತ್ರಸ್ಥಾನದಿಂದ ಕೆಂಪು, ಬಿಳಿದು, ಹಳದಿಯಂತೆ ಹೋಗತಕ್ಕ ಕೀವನ್ನೂ, ವ್ರಣವನ್ನೂ, ಉರಿಯನ್ನೂ ಗುಣಪಡಿಸುತ್ತದೆ. ಡಬ್ಬಿ 1ಕ್ಕೆ ರೂ. 2—8—0, 3ಕ್ಕೆ ರೂ. 7.

೫. ಇಛ್ಛಾ ಭೇದಿ ಗುಟಿಕೆ.

ಅಜೀರ್ಣವನ್ನುಂಟುಮಾಡದ ಸುಖ ವಿರೇಚಕ. ಬಾಟ್ಲಿ 1ಕ್ಕೆ 0—12—0 ಆಣೆ. 3 ಬಾಟ್ಲಿಗಳಿಗೆ 2—2—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ರವಾನಿಸಬಹುದು. ಕೆಟಲಾಗು ತರಿಸಿ ನೋಡಿರಿ.

ಎಂ. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್,
52—10 ರಥಬೀದಿ, ಮಂಗಳೂರು, ದ. ಕನ್ನಡ

ಭಂಗಾರದ ಕೈಗಡಿಯಾರ.



ಈ ಚಿತ್ರದಲ್ಲಿ ಕಾಣುವ ಭಂಗಾರದ ಕೈಗಡಿಯಾರವು ಬಹು ಬಲಿಷ್ಟವಾದ (ಸ್ವಿಸ್ ಮೇಡ್) ಲೀವರ್ ಸಾಮಾನುಗಳಿಂದ ತಯಾರಾದವು. ಸರಿಯಾಗಿ ಗಂಟೆಯನ್ನು ತೋರಿಸುವವು. ಒಳಗಡೆ ಕೆಂಪುಗಳು ಇಟ್ಟಿವೆ. ಇದರ ಬಣ್ಣವು ಭಂಗಾರಕ್ಕೆ ಸರಿಯಾಗಿರುವದು. ಇದನ್ನು ಈ ವಾರದಲ್ಲಿ ತರಿಸಿಕೊಳ್ಳುವವರಿಗೆ ಒಂದು ವಜ್ರದ ಉಂಗುರ, ಒಂದು ರೋಲ್ಡ್ ಗೋಲ್ಡ್ ಭಂಗಾರದ ಕಡ್ಡಿನ ಹಾರ (ನೆಕ್ಲೇಸ್), ಒಂದು ಟೇಬಲ್ ಟೈಂಪೀಸ್ ಇನಾಮಾಗಿ ಕೊಡುವೆವು. 2 ಗಡಿಯಾರಗಳಿಗೂ ಖಾತ್ರಿಯಾದ 4 ವರ್ಷ ಗ್ಯಾರಂಟಿ ಪತ್ರ ಸಹ ಕಳುಹಿಸುವೆವು.

3 ಬಹುಮಾನಗಳ ಸಹಿತ ರಿಸ್ಟವಾಚ್ 1ಕ್ಕೆ 6—8—0.

ವಿಳಾಸ:— **ಸಿಟಿ ಮಾರ್ಟ್,**
12—7 168. ಚೈನಾ ಬಜಾರ್, ಮದರಾಸು.

12 ಸೆಂಟ್ ಬಾಟಲ್, ಫೌಂಟನ್ ಪೇನಾ ಲೀವರ್ ವಾಚ್ ವಗೈರೆ 2—12—0 ಮಾತ್ರ.

ಪ್ರಪಂಚದಲ್ಲಿಯೇ ಹೆಸರುವಾಸಿಯಾದ

ಲಿಲ್ಲಿ ಆಫ್ ದಿ ವ್ಯಾಲಿ ಮತ್ತು ಫೌಂಟನ್ ಪೇನಾ.



ಈ ಸುಗಂಧ ದ್ರವ್ಯವು ಫ್ರಾನ್ಸ್ ದೇಶದಲ್ಲಿ ಪುಷ್ಪಗಳ ಸಾರದಿಂದ ತಯಾರಿಸಿದ್ದು. ಇದರಲ್ಲಿ ಮದ್ಯಸಾರಗಳು ಯಾವವೂ ಸೇರಿರುವುದಿಲ್ಲ. ಇದರಲ್ಲಿ ಒಂದೇ ಒಂದು ಬೊಟ್ಟನ್ನು ಬಟ್ಟೆಗೆ ಹಾಕಿದರೆ ಒಂದು ವಾರದ ವರೆಗೂ ಒಂದೇ ಸರಿಯಾಗಿ ಗಮಗಮಿಸುತ್ತಿರುವುದು. ಲಿಲ್ಲಿ ಆಫ್ ದಿ ವ್ಯಾಲಿ ಎಂಬ ಈ ಸುಗಂಧ ದ್ರವ್ಯಕ್ಕೆ ಸರಿಸಮಾನವಾದದ್ದು ಬೇರೊಂದು ಇಲ್ಲ. ವಿಲಾಯಿತಿಯಲ್ಲಿ ತಯಾರಾದ 14 ಕ್ಯಾರೆಟ್ಟಿನ ಭಂಗಾರದ ನಿಬ್ಬು ಹಾಕಿದ ಫೌಂಟನ್ ಪೇನಾ, ಒಂದೇ ಸಲ 12 ಸೆಂಟ್ ಬಾಟಲ್, ಪೇನಾ ತರಿಸುವವರಿಗೆ ಒಂದು ವಾಚ್ ನ್ನು ಇನಾಮಾಗಿ ಕೊಡುತ್ತೇವೆ.

ಕ್ರಯ ರೂ. 2—12—0 ಮಾತ್ರ.

The Legal Trading Co.
12—8 P. B. 243, Madras.

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಎಂಬುವ ಸುಪ್ರಸಿದ್ಧ ದೇಶೀಯ ವಿಮೋ ಸಂಘ.

ಅಧ್ಯಕ್ಷರು:—ಮಾನನೀಯ ಸರ್ ಲಲ್ಲೂಭಾಯಿ ಶಾಮಲದಾಸ್, ಕೆಟಿ., ಸಿ. ಐ. ಇ., ಜೆ. ಪಿ., ಯವರು.

ಕೊಚ್ಚಿಕಾರ ಬ್ರದರ್ಸ್, ಮದ್ರಾಸು ಬ್ರಾಂಚು ಸೆಕ್ರಟರಿಗಳು.

1. ಭಾಗ್ಯವಂತರ ಭಂಡಾರ, ವ್ಯಾಪಾರಸ್ಥರ ಕೋಶಾಗಾರ, ಕುಟುಂಬದ ಸಂರಕ್ಷಣಾನಿಲಯ. ಬಡವರ ಜೀವನಾಧಾರ ಇದೇ ಜೀವ ವಿಮೆಯ ತತ್ವವು.

2. ಹಿಂದೂಸ್ಥಾನದ ನಿವಾಸಿಯರಲ್ಲಿ ವಿಮಾ ತೆಗೆಯಬೇಕೆನ್ನುವವರ ಪ್ರಯೋಜನಾರ್ಥವಾಗಿ ಈ ಕಂಪೆನಿಯು ಭಾರತೀಯರ ಉತ್ಸಾಹದ ಆಡಳಿತದಿಂದ ಖರ್ಚು ಜಾಸ್ತಿ ಮಾಡಿ ಇಂಡಿಯಾ ಸರ್ಕಾರದ ಇಂಡಿಯನ್ ಟ್ರಸ್ಟ್ ಆಕ್ಟಿಗೆ ಒಳಪಟ್ಟು ಸರ್ಕಾರದ ಭದ್ರತೆಯಿಂದ ದೇಶೀಯರ ಸೇವೆಯಲ್ಲೇ ನಿರತವಾಗಿ ಹಿಂದೂಸ್ಥಾನದ ಎಲ್ಲಾ ಕಡೆಗಳಲ್ಲೂ ಅತಿ ಕೀರ್ತಿಯನ್ನು ಪಡೆದಿರುತ್ತೆ.

3. ಈ ಸ್ವದೇಶೀ ಕಂಪನಿಯು ಪೋಲಿಸಿದಾರರಿಗೆ ಪೋಲಿಸಿ ಅವಧಿ ಪೂರೈಸಿದನಂತರವಾಗಲೀ ಅಥವಾ ಮಧ್ಯದಲ್ಲು ಮರಣಾನಂತರ ವಾರೀಸುದಾರರಿಗಾಗಲೀ ಹೆಚ್ಚಿನ ಬಡ್ಡಿಗೆ ಅಸಲು ಕೊಡುವಿಯೂ, ದೀರ್ಘ ಸಮಯ ತೆಗೆದುಕೊಳ್ಳದೆಯೂ ಶೀಘ್ರದಲ್ಲಿ ವಿಮೋ ಮೊಬಲಗನ್ನು ಲಾಭ ಸಹಿತ ವಾಪಸುಕೊಡುವುದರಲ್ಲಿ ಹೆಸರುಗೊಂಡಿದೆ.

4. ಭಿನ್ನತಬಂದರ ಮಹಾಸಭೆಯಿಂದ ಸ್ಥಾಪಿಸಲ್ಪಟ್ಟ ದೇಶೀಯವಾದರೋ ಅತಿ ಕಡಿಮೆ ಖರ್ಚಿನಿಂದ ನಡೆಸಲ್ಪಡುವ ಈ ಸ್ವದೇಶೀ ಕಂಪೆನಿಯಲ್ಲಿ ಇಂದು ಭಾಗಿಗಳಾಗಿ, ಪತಿಪತ್ನಿಯರಿಗೆ ಮತ್ತು ವ್ಯಾಪಾರಸ್ಥರು ವಗೈರರಿಗೆ ಏಕೀಭವಿಸಿ (ಜಾಯಿಂಟ್ ಲೈಫ್) ಪೋಲಿಸಿ ತೆಗೆದುಕೊಳ್ಳಲು ಈ ಕಂಪೆನಿಯು ಹುಂಬಾ ಅನುಕೂಲಗಳನ್ನು ಕಲ್ಪಿಸಿರುತ್ತೆ. ಇಂಥ ಸುಸಮಯವನ್ನು ಎಂದಿಗೂ ಕಳಕೊಳ್ಳಬಾರದು.

ಆಫೀಸು—
ಜಂಪಲ್ ಸ್ಟ್ರೀಟ್,
ಮಡಿಕೇರಿ. (26—17)

ಬಿ. ಎಸ್. ಐಯ್ಯಪ್ಪ,
ಕೊಡಗು ಚೀಫ್ ಏಜೆಂಟ್.

ಎಂ. ಎಸ್. ಶಿದ್ದಪ್ಪ ಬ್ರದರ್ಸ್

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

1. ಉತ್ತಮ ತರಹ ಒಂದು ಸೆಟ್ ಜರ್ಮನ್ ರೀಡ್ಸ್ ಹಾಕಿರುವ ಸಿಂಗಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 20—0—0
   " ಮತ್ತು 22—8—0
2. ಡಿಟೋ ಉತ್ತಮ ತರಹ ಹಾರ್ಮೋನಿಯಂ
   " 1ಕ್ಕೆ ರೂ. 25—0—0
   " ಮತ್ತು 27—8—0
3. ಡಿಟೋ ಉತ್ತಮ ತರಹದ್ದು, ದೂಳು ಬೀಳದಂತೆ ಕೇಸಿನ ಮೇಲೆ ಪೂರ್ತಿ ಮುಚ್ಚಳವುಳ್ಳ ಸಿಂಗಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ ರೂ. 27—8—0
4. ಖಾತ್ರಿಯೂ, ಬಂದೋಬಸ್ತೂ, ಸುಸ್ವರವುಳ್ಳದ್ದೂ, ಅನೇಕ ವರ್ಷಗಳ ವರೆಗೆ ಬಾಳಿಕೆ ಬರತಕ್ಕದ್ದೂ ಆದ ಹೊಸದಾಗಿ ಸಪ್ಲೈ ಆಗಿರುವ ಫ್ರೆಂಚ್ ರೀಡ್ಸ್ ನಮೂನೆ ಇರುವ ನಮ್ಮ ಹೆಸರಿನ ರೀಡ್ಸ್ ಹಾಕಿರುವ "ಸಿದ್ದಪ್ಪಾಸ್ ಫ್ಲೂಟ್" ಸಿಂಗಲ್ ರೀಡ್ಸ್ ಹ್ಯಾಂಡ್ ಹಾರ್ಮೋನಿಯಂ 1ಕ್ಕೆ ರೂ. 42—8—0
5. ಉತ್ತಮ ತರಹ 2 ಸೆಟ್ ಜರ್ಮನ್ ರೀಡ್ಸ್ ಹಾಕಿರುವ, ದೂಳು ಬೀಳದಂತೆ ಕೇಸಿನ ಮೇಲೆ ಪೂರ್ತಿ ಮುಚ್ಚಳವುಳ್ಳ ಡಬ್ಬಲ್ ರೀಡ್ಸ್ ಹಾರ್ಮೋನಿಯಂ 1ಕ್ಕೆ ರೂ. 3
6. ಉತ್ತಮ ತರಹ 2 ಸೆಟ್ ಜರ್ಮನ್ ಮೇಕ್ ರೀಡ್ಸ್ ಹಾಕಿರುವ, ಕೈನಿಂದಾಗಲೀ ಅಥವಾ ಕಾಲಿನಿಂದಾಗಲೀ ಬಾರಿಸಲು ಅನುಕೂಲಿಸುವಂತೆ ತಯಾರಿಸಿರುವ "ಸ್ಪೆಷಲ್ ಫ್ಲೂಟ್" ಡಬ್ಬಲ್ ರೀಡ್ಸ್ ಹ್ಯಾಂಡ್ ಲೆಗ್ ಹಾರ್ಮೋನಿಯಂ 1ಕ್ಕೆ

ನಮ್ಮ ಟಿಂಬರ್ ಡಿಪೋನಲ್ಲಿ ಕಟ್ಟಡಗಳಿಗೂ, ಫರ್ನಿಚರ್ ತಯಾರಿಸಲೂ ಬೇಕಾದ ಎಲ್ಲಾ ನಮೂನೆ ನಾಟಾಗಳನ್ನು ಸುಲಭ ದರದಿಂದ ವಿಕ್ರಯಕ್ಕಿಟ್ಟಿರುವುದಲ್ಲದೇ, ಗಿರಾಕಿಗಳು ಅಪೇಕ್ಷಿಸುವ ಸೈಜಿಗೆ ಕುಯಿಸಿಯೂ ರಿಯಾಯಿತಿ ದರದಿಂದ ಸಪ್ಲೈ ಮಾಡುತ್ತೇವೆ. ಹೆಚ್ಚಿಗೆ ವಿಷಯಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಳಾಸ:— ಎಂ. ಎಸ್. ಶಿ

ಹಾರ್ಮೋನಿಯಂ ಮತ್ತು

ವಾಣೀವಿಲಾಸ ಮೊಹ
52—33

ಮದ್ರಾಸು ಕೊಡಗರ ವರ್ಷದ ಕಡೇ ಸಮ್ಮೇಳನ.

ಮದ್ರಾಸು "ಕೂರ್ಗ್ ಅಸೋಸಿಯೇಶನ್"ನವರು, ಈ ವರ್ಷದ ಕಡೆಯ ಮೀಟಿಂಗನ್ನು ಮದ್ರಾಸು "ಲಾ" ಕಾಲೇಜಿನಲ್ಲಿ ಕಳೆದ ಆದಿತ್ಯವಾರ (31—1—32) ರಲ್ಲಿ ನಡೆಸಿದರು. ಸಂಘದ ಮೆಂಬರರಲ್ಲಿ ಕೆಲವರಲ್ಲದೆ ಎಲ್ಲರೂ ದಯಮಾಡಿಸಿದ್ದರು. ನಾಲ್ಕು ಗಂಟೆಗೆ ಸರಿಯಾಗಿ ಸಂಘದ ಒಂದು ಸಮುದಾಯ "ಫೋಟೋ" ತೆಗೆಯಲಾಯಿತು. 5 ಗಂಟೆಗೆ ಫಲಾಹಾರಕ್ಕೆ ಕುಳಿತರು. ಆ ಮೇಲೆ 5½ ಗಂಟೆಗೆ ಸಂಘದ ಆಗಾಮಿ ಮೆಂಬರರಾಗಿದ್ದ ಮ. ರಾ. ಶ್ರೀ. ಚನ್ನಿರ ಕುಶಾಲಪ್ಪನವರು "My conception of Religion" ಎಂಬುದನ್ನು ಕುರಿತು ಒಂದು ಸೊಗಸಾದ ಭಾಷಣ ಮಾಡಿದರು. ಆ ಮೇಲೆ ಸಂಘದ ಅತಿಥಿಗಳಾಗಿ ದಯಮಾಡಿಸಿದ್ದ ಮ. ರಾ. ಶ್ರೀ. ಟಿ. ಯಂ. ಕಾರ್ಯಪ್ಪನವರು ಕೊಡಗಿನ ಯುವಕರು ದೇಶದ ಜನಸಮುದಾಯದ ಏಳಿಗೆಗೆ ಯಾವ ಯಾವ ರೀತಿಯಲ್ಲಿ ಕೆಲಸಮಾಡಬಹುದು ಎಂಬುದನ್ನು ವಿವರಿಸಿ, ರಜಾದಿ ಸಮಯಗಳಲ್ಲಿ ತಮ್ಮ ಕೈಲಾಗುವ ಕೆಲಸ ಮಾಡಲು ಮನಸ್ಸಿರುವವರು ತಮ್ಮ ಹೆಸರನ್ನೂ, ವಿಳಾಸವನ್ನೂ ತನಗೆ ತಿಳಿಸಿದಲ್ಲಿ ತಾನು ಅವರಿಗೆ ಬೇಕಾದ ಸಹಾಯಗಳನ್ನು ಒದಗಿಸಿಕೊಡುತ್ತೇನೆಂಬುದಾಗಿ ಹೇಳಿದರು.

ಆ ಮೇಲೆ ಸಂಘದ ಮುತ್ತಪ್ಪ ಮೆಂಬರರು, ವಿದ್ಯಾರ್ಥಿಯ ವಿಷಯ ಸ್ವಲ್ಪ ಟೀಕಿಸಿ ಮಾತಾಡಿದರು.

ಅಂತ್ಯದಲ್ಲಿ ಸಂಘದ ಪ್ರಸಿಡೆಂಟರಾದ ಮ. ರಾ. ಶ್ರೀ. ಬಿ. ಪಿ. ಕುಟ್ಟಪ್ಪನವರು ಮೆಂಬರರೆಲ್ಲಾ ಬಂದಿರಿ ಮ. ರಾ. ಶ್ರೀ. ಗಳಾದ ಕುಶಾಲಪ್ಪನವರನ್ನೂ, ಕಾರ್ಯಪ್ಪನವರನ್ನೂ ಅವರು ಮಾಡಿದ ಭಾಷಣಕ್ಕೆ ಮುಖ್ಯವಾಗಿ ವಂದಿಸಿ ವಂದನೆ ಮಾಡಿದರು. ಸಭೆಯು 7½ ಗಂಟೆಗೆ ಮುಕ್ತಾಯವಾಯಿತು.

ಪಿ. ಜಿ. ಐಯ್ಯಪ್ಪ,
ಸೆಕ್ರೆಟರಿ.

ಸ್ವಾಮಿ ವಿವೇಕಾನಂದರ ಜನ್ಮದಿನೋತ್ಸವ
'ಭಾರತದ ಭವಬಂಧ ಹರಿಸಿದನಿವನೆ'

(ಶ್ರೀಯುತ ಡಿ. ಕೆ. ಚೆನ್ನಿಗರಾಯರು ಬರೆದ ಲೇಖನ. ಫೆಬ್ರು. 7ನೇ ತಾ. ಎಲ್ಲೆಲ್ಲೂ ಈ ಉತ್ಸವ ನಡೆಯುವುದು. ಈ ವಿಭೂತಿಯ ಪರಿಚಯ ಪ್ರಸಾದವನ್ನು ಅರಿಯದವರು ಪಡೆಯಲೆಂಬುದೇ ಇದರ ಉದ್ದೇಶ.)

ಜನ್ಮ ಧಾರಣ.

ಪವಿತ್ರ ಭಾರತ ಭೂಮಿಯನ್ನು ಕಗ್ಗತ್ತಲೆಯಿಂದ ಹೋರಾಡಿಸಲು ಯತ್ನಿಸಿ, ಬೆಳಕನ್ನು ತಂದವರು ಸ್ವಾಮಿ ಶ್ರೀ ವಿವೇಕಾನಂದರವರು.

ಶ್ರೀ ಸ್ವಾಮಿ ವಿವೇಕಾನಂದರವರು ಕ್ರಿ. ಶ. 1863ನೇ ವರ್ಷದಲ್ಲಿ ಪುಣ್ಯಾತ್ಮರಾದ ವಿಶ್ವನಾಥ ಭುವನೇಶ್ವರಿ ದಾಸಿಯೆಂಬ ದಂಪತಿಗಳ ಗರ್ಭದಲ್ಲಿ ಅವತಾರ ಮಾಡಿದರು. ವಿವೇಕಾನಂದರವರಿಗೆ ತಂದೆ ತಾಯಿಗಳು ಮೊದಲಿಟ್ಟ ಹೆಸರು ನರೇಂದ್ರನಾಥನೆಂದು.

ಬಾಲ್ಯ ವಿದ್ಯಾಭ್ಯಾಸ.

ನರೇಂದ್ರನಾಥನು ಚಿಕ್ಕಂದಿನಿಂದಲೂ ದೃಢಕಾಯನಾಗಿ ಆಟದಲ್ಲಿ ಪ್ರವೀಣನಾಗಿ, ಬಹಳ ಬುದ್ಧಿವಂತನಾಗಿ, ಜಿಜ್ಞಾಸಾಶಕ್ತಿಯುಳ್ಳವನಾಗಿ ಬೆಳೆದನು. ವಿದ್ಯೆಯಲ್ಲಂತೂ ಬಲು ಗಟ್ಟಿಗನಾಗಿ, ವೇದಾಂತ ಚರಿತ್ರೆ ಮುಂತಾದವುಗಳನ್ನು ವಿಚಕ್ಷಣೆಯಿಂದ ಕಲಿತನು. ವಿಶ್ವವಿದ್ಯಾನಿಲಯದ ಪದವಿಗಳನ್ನು ಪಡೆದನು.

ಸನ್ಯಾಸ ಸ್ವೀಕರಣ.

ಆದರೆ ನರೇಂದ್ರನು ಶ್ರೀ ರಾಮಕೃಷ್ಣ ಪರಮಹಂಸರ ದಿವ್ಯ ಸನ್ನಿಧಿಯ ಸಮಾಗಮವನ್ನು ಪಡೆದ ಕೂಡಲೇ ಇಹದ ಐಶ್ವರ್ಯ ಲೌಕಿಕ ವ್ಯಾಪಾರ ಮೊದಲಾದವುಗಳಲ್ಲಿ ಆಸೆಯನ್ನು ತೊರೆದು, ಸ್ವಾರ್ಥವನ್ನು ಗಣಿಸದೆ ಸಮಸ್ತ ಭಾರತದ ಉದ್ಧಾರಕ್ಕೆ, ಇಡೀ ಜಗತ್ತೇ ಆಧ್ಯಾತ್ಮದ ಬೆಳಕನ್ನು ತೋರಿಸುವುದಕ್ಕೆ ಮನೋಹರವಾದ ಲೌಕಿಕ ಬಲೆಯನ್ನು ಹರಿದು ತ್ಯಾಗದ ಮೂಲವಾದ ಸನ್ಯಾಸವನ್ನು ಸ್ವೀಕರಿಸಿದರು.

... ವಿವೇಕಾನಂದರವರು ಉತ್ಕೃಷ್ಟ ಸನ್ಯಾಸಿ ... ಮತದ ಆಚಾರ್ಯರನ್ನೂ ಎದುರಿಸಿದರು. ಅವ... ಇಸ್ಲಾಮ್, ಕ್ರಿಶ್ಚಿಯನ್ ಮುಂತಾದ ಸಮ... ಶ್ರೇಷ್ಠವಾಗಿದ್ದುವು. ವೇದ, ಕೊರಾನ್, ಬೈ... ತತ್ವವನ್ನೇ ಉದ್ಘೋಷಿಸುತ್ತಿದ್ದುವೆಂದು ಆ... ತಿಳಿಸುತ್ತಿದ್ದರು. ಗೀತೆಯು ಅವರಿಗೆ ಪ್ರಿಯ... 'ಇಮಿಟೇಷನ್ ಆಫ್ ಕ್ರೈಸ್ಟ್' ಎಂಬ ... ಪ್ರಿಯವಾಗಿದ್ದವು.

... ನಾರಾಯಣರ ಸೇವೆ ಮಹಿಮೆ.

... ವಿಯಲ್ಲಿ ದರಿದ್ರ ನಾರಾಯಣರ ಸೇವೆ ... ಸಾಧಿಸಿದವರು ಸ್ವಾಮಿ ಶ್ರೀ ವಿವೇಕಾ... ರೋಗಿಗಳನ್ನೂ, ಬಡವರನ್ನೂ, ನಿರ್ಗತಿಕರನ್ನೂ ... ಆಲಿಂಗಿಸಿ ಅವರ ಕಷ್ಟ ಪರಿಹಾರ ... ಮುಖ್ಯ ಕರ್ತವ್ಯವೆಂದು ವಿದ್ಯಾವಂತರ, ... ಗಿ ನಾಟುವಂತೆ ಮಾಡಿದವರು ಪೂ... ರವರು. ಮುಂಪಕಲೇ, ಬೊಂಬಾಯಿನ

ನ್ನು ಕಲಕತ್ತಾ, ಪಟ್ಟಿಗಳಲ್ಲಿಯೇ ವೇದಾಂತವನ್ನು ಅಭ್ಯಾಸ ಮಾಡಿರೆಂದು ಸಂದೇಶವನ್ನಿತ್ತವರು ಅವರು!

ಬಂಧನದಲ್ಲಿ ಸಿಕ್ಕಿರುವ ಭಾರತ ಭೂಮಿಯನ್ನು ಬಿಡಿಸಿ ಮಾತೆಯು ಅನುಭವಿಸುವ ದುಃಖವನ್ನು ಪರಿಹರಿಸಿ, ಸ್ವತಂತ್ರರಾಗಿರೆಂದೂ, ಪರಾತ್ಮ್ಯವನ್ನು ಬಿಟ್ಟು ನಿಮ್ಮ ಕಾಲಿನ ಬಲದ ಮೇಲೇ ನಿಲ್ಲಿರೆಂದೂ ಮನವರಿಯುವಂತೆ ಮಾಡಿದವರು ವಿವೇಕಾನಂದರು. ಮಾತೃಭೂಮಿಯ ಹಿತಕ್ಕಾಗಿ ನನ್ನನ್ನು ಜೈಲಿನಲ್ಲಿ ಬಂದಿಯಾಗಿಟ್ಟರೂ ಅನಂದದ ಹೆಮ್ಮೆಯಿಂದಲೇ ಇರುವವನು ನಾನೆಂದು ಬರೆದವನು ಆ ಮಹಾತ್ಮನೇ!!

ಈ ನುಡಿಗಳನ್ನು ಸ್ವಾಮಿ ವಿವೇಕಾನಂದರವರು ಹೇಳಿ ಮೂವತ್ತಾರು ವರ್ಷಗಳಾದರೂ, ಈ ಮಾತುಗಳ ಸತ್ಯವು ಇಂದಿಗೂ ಕಿವಿಯಲ್ಲಿ ಗಂಟೆ ಬಾರಿಸಿದಂತೆ ಪ್ರತಿಧ್ವನಿ ಕೊಡುತ್ತಿರುವುವು. ವಿವೇಕಾನಂದರು ಹಾಡಿರುವ ಮುಂದಿನ ವೀರರಸದ ಗೀತೆಯಾದರೋ ಅವರ ಜಯಂತಿ ಉತ್ಸವದ ದಿನದಲ್ಲಿ ಎಲ್ಲರ ಹೃದಯದಲ್ಲೂ ಪ್ರತಿಧ್ವನಿಸಲಿ.

ಮಾತೆಗಿನ್ನೆಂದಿಗೂ ಕೊರತೆ ಇಲ್ಲ!

(ಶ್ರೀ ಸ್ವಾಮಿ ವಿವೇಕಾನಂದರವರ ಭವಿಷ್ಯತ್ತು.)

ನಿಬಿಡವಾದ ರಾತ್ರಿಯೂ ಸಂದಿಯೇ ಹೋಗುವುದು;
ದಾರುಣದ ಕಷ್ಟವೂ ಕಂದಿ ಕುಸಿಯುವುದು,
ಕಣ್ಣಮುಂದೆ ನೆಯುತಿಹ ಬೇನೆವು ಕಾಣೆಯಾಗುವುದು;
ಎನಗಿಂದು ಸುಸ್ವರದ ವಾಣಿ ಬರುತಿಹುದು—
—ಕೈಲಾಸ ಎಂಬುತನು ಜೀವ ಸತ್ವದ ಕರೆಯು
ಜೀವವಿಲ್ಲದ ಮೂಳೆ ಬಲವ ಹೊಂದುತಿದೆ!

ಮಬ್ಬು ಹರಿದೋಡುತ್ತಿದೆ;
ಅಲಸಿಕೆಯು ಅಳಿಯುತ್ತಿದೆ;
ಕುರುಡನೊಬ್ಬನು ಮಾತ್ರ ಕಾಣಲಾರ;
ಹುಚ್ಚನೊಬ್ಬನು ಮಾತ್ರ ಅರಿಯಲಾರ.

ಎಲ್ಲ ... ತಾಯಿಯು ಇಂದು ಮೇಲೆದ್ದಳು;
ಮಹಾ ನಿದ್ರೆಯ ಹರಿದು ಬೆಳಗಿಹಳು;
ಇಂದವಳ ಶಕ್ತಿಯನು ತಡೆವರಾರೂ ಇಲ್ಲ!
ಅವಳ ತೇಜದ ಮುಂದೆ ಜಗದಿ ನಿಲ್ಲರಿಲ್ಲ!
ಅವಳಿಗಿನ್ನೆಂದಿಗೂ ಕೊರತೆ ಇಲ್ಲ!
ಅವಳ ಹಿಂದಳೆಯಿಟ್ಟು, ಕಟ್ಟಿ, ತಗ್ಗಿಸಲಿನ್ನು
ಹೊಂತಕರು ಯಾವುವೂ ಜಗದೊಳಿಲ್ಲ!
ನೋಡು! ಮಾತೆಯು ಚರಣ ಪಲ್ಲವದಿ ಮಾಡುತಿಹೆ
ನೋಡು! ಮಾತೆಯು ಪಾದದೆಡೆಯಲ್ಲಿ ಹೊಳೆಯುತಿದೆ
ಭೀಮ ಬಲ
ಜಗವ ಕಾಯುವ ತೇಜ, ಹಿರಿಯ ತೇಜ!

'ಪ. ಕ.'

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಕರ್ನಾಟಕ ಸಂಘ.

ಅಯ್ಯಾ,

ಕೊಡಗಿನಲ್ಲಿ ಕನ್ನಡ ಸಾಹಿತ್ಯ ಸೇವೆಯು ಇತರ ದೇಶಗಳಿಗಿಂತ ಎಷ್ಟೋ ಕಡಿಮೆಯಾಗಿದೆ. ಕರ್ನಾಟಕ ಸೀಮೆಯ ಎಲ್ಲಾ ಭಾಗಗಳಲ್ಲಿಯೂ "ಕರ್ನಾಟಕ ಸಂಘ"ಗಳನ್ನೇರ್ಪಡಿಸಿಕೊಂಡು ತಮ್ಮ ಪೀನ ಭಾಷಾಸೇವೆಯನ್ನು ಕೈಕೊಂಡು ಸಾಹಿತ್ಯ ಭಂಡಾರವನ್ನು ವೃದ್ಧಿಗೊಳಿಸುತ್ತಿರುವುದು ಬಹಳ ಸಂತೋಷದ ಮಾತಾಗಿದೆ. ತಮಿಳು, ತೆಲುಗು ದೇಶಗಳಲ್ಲಾ ಕೂಡ ನಮ್ಮ ಸಹೋದರರು ಅವರವರ ಮಾತೃಭಾಷೆ ಜೀವನಕ್ಕೆ ಬೇಕಾದ ಸಲಕರಣೆಗಳನ್ನೊದಗಿಸಿಕೊಂಡು ಕೃಷಿ ಮಾಡಿ ಕೆಲಸ ಮಾಡುತ್ತಿರುವಾಗ ನಾವು ಕೊಡಗಿನಲ್ಲಿ ಸಾಹಿತ್ಯ ಸೇವೆಯನ್ನು ಮಾಡುತ್ತಿಲ್ಲವೆಂದರೆ ಲಜ್ಜಾಸ್ಪದವಾಗಿದೆ.

ಕರ್ನಾಟಕದ ಇತರ ನಾಡಿನಿಂದ ಭಾಷಾಭಿಮಾನಿಗಳು ಇಲ್ಲಿಗೆ ಬಂದು ಆಗಾಗ್ಗೆ ಎಚ್ಚರಿಸುತ್ತಿದ್ದರೂ ಉತ್ಸಾಹವಿಲ್ಲದೆ ಈ ಸಂಘ ಸ್ಥಾಪನಾಕಾರ್ಯವು ತನ್ಮ ಹೀನ ಅಗಬೇಕಾಗಿದ್ದ ಸಾಹಿತ್ಯ ಸೇವೆಯು ಈ ವರೆಗೆ ನಡೆಯಲಿಲ್ಲ. ಕರ್ನಾಟಕದ ಗ್ರಂಥ ಭಂಡಾರದಲ್ಲಿ, ಕಾವ್ಯಸಾಗರದಲ್ಲಿ ಕೊಡಗಿನದೊಂದು ಚಿಕ್ಕ ನದಿಯೂ ಹರಿಯುತ್ತಿಲ್ಲವೆಂದ ಮೇಲೆ ನಮ್ಮ ಊರು ಇನ್ನೂ ಎಷ್ಟು ಹಿಂದೆ ಬಿದ್ದಿದೆಯೆಂದು ಸರಿಯಾಗಿ ವೇದ್ಯವಾಗುವುದು. ಇದು ನಮ್ಮ ನಾಡಿಗೆ ... ದೊಡ್ಡ ಕೊರತೆಯಾಗಿದೆ. ಕರ್ನಾಟಕದ ಎಲ್ಲಾ ಭಾಗಗಳಲ್ಲಿ (ಕೊಡಗು ದೇಶವನ್ನುಳಿದು) ಸಾಹಿತ್ಯ ಪರಿಷತ್ತು ನಡೆದು ಈಗ ಅವರೆಲ್ಲರ ದೃಷ್ಟಿಪಥದಲ್ಲಿ ಕೊಡಗು ನಾಡು ಗೋಚರಕ್ಕೆ ಬಂದಿದೆ.

ಹೀಗೆಂದ ಮೇಲೆ ಕೊಡಗಿನಲ್ಲಿ ಸಾಹಿತ್ಯ ಸೇವೆಯನ್ನು ಮಾಡುವವರು ಇಲ್ಲವೆಂದು ಹೇಳಿದಂತಾಗಲಿಲ್ಲ, ಆದರೆ ಉತ್ಸಾಹ ಭರಿತರು ಪ್ರಾರಂಭಕ್ಕೆ ಬರಲಿ. ಆದರೆ ಇಲ್ಲದೆ ಅವರ ಸಹಕಾರದಿಂದ ಅಜ್ಞಾತವಾಗಿರುವುದರಿಂದ ಸರ್ವರಿಗೂ ಈ ಮುಖೇನ ಅವರ ಪರಿಚಯವನ್ನೂ ತಿಳಿಸಿ ಕೊಡಲು ಕೊಡಗಿನ ಸಕಲ ಪ್ರಜೆಗಳೂ ಪ್ರಯತ್ನ ಪಡಬೇಕಾಗಿದೆ. ಇದಕ್ಕಾಗಿ ಕೊಡಗಿನಲ್ಲಿ "ಕರ್ನಾಟಕದ ಸಂಘ"ದ ಆವಶ್ಯಕತೆಯು ಬಹಳವಾಗಿದೆ. ಈ ವಿಷಯವಾಗಿ ಕೆಲವು ಮಹನೀಯರು ವಿಚಾರ ಮಾಡಿ 'ಕರ್ನಾಟಕ ಸಂಘ'ವು ಕೊಡಗು ನಾಡಿಗೆ ಅವಶ್ಯವೆಂದು ತೀರ್ಮಾನಿಸಿ ಕೊಡಗಿನ ಎಲ್ಲಾ ಭಾಷಾಭಿಮಾನಿಗಳ ಯಾವತ್ತು ಪ್ರಜೆಗಳ ಅಭಿಪ್ರಾಯವನ್ನು ಪಡೆಯಲು ಇದೇ ತಿಂಗಳು 21 ನೇ ತಾರೀಖಿನ ದಿವಸ ಒಂದು ಸಮ್ಮೇಳನವನ್ನು ಏರ್ಪಡಿಸಲು ನಿಶ್ಚಯಿಸಿದೆ.

ದೇಶಭಾಷಾಭಿಮಾನಿಗಳೂ, ಸಾಹಿತ್ಯ ಸೇವಕರೂ, ಸರ್ವರೂ ಇದಕ್ಕೆ ನೆರವಾಗಬೇಕೆಂದು ಈ ಮುಖೇನ ಪ್ರಾರ್ಥಿಸುತ್ತೇನೆ.

ಕರ್ನಾಟಕ ಬಂಧು.

ಸ್ತ್ರೀ ಪುರುಷರ ಸ್ತ್ರೀತಿಯ ಮರ್ಮಗಳನ್ನು ಚಿತ್ರಪಟಗಳ ಸಹಿತ ಇದ್ದದ್ದನ್ನು ಇದ್ದ ಹಾಗೆ ತಿಳಿಸುವ

ಸ್ತ್ರೀ ದಾಂಪತ್ಯ ರಹಸ್ಯವೆಂಬ ಮರ್ಮ ಶಾಸ್ತ್ರ.

ಈ ಪುಸ್ತಕವು ಫ್ರೆಂಚ್, ಹಿಂದೂಸ್ಥಾನಿ ಭಾಷೆಗಳಲ್ಲಿ ಬಹುಕಾಲದಿಂದ ಗುಪ್ತವಾಗಿತ್ತು. ಈಗ ನಾವು ಎಲ್ಲರಿಗೂ ವಿವರವಾಗಿ ತಿಳಿಯುವಂತೆ ಸುಲಭ ಶೈಲಿಯ ಕನ್ನಡ ಭಾಷೆಯಲ್ಲಿ ಭಾಷಾಂತರಿಸಿ ಫೋಟೋಗಳ ಸಹಿತ ಅಂದವಾಗಿ ಮುದ್ರಿಸಿರುತ್ತೇವೆ. ಈ ಪುಸ್ತಕದಲ್ಲಿ ಸ್ತ್ರೀಪುರುಷರಿಗೆ ಬೇಕಾದ ಎಲ್ಲ ಮರ್ಮರಹಸ್ಯಗಳು, ಪುರುಷರು ಸ್ತ್ರೀಯರಲ್ಲಿ ನಡೆದುಕೊಳ್ಳಬೇಕಾದ ಬಗೆ, ಸ್ತ್ರೀಪುರುಷರ ಜಾತಿಯ ಲಕ್ಷಣಗಳು, ಸ್ತ್ರೀ ಮರೆಗೆ ಬೇಕಾದ ಅನೇಕ ಗುಪ್ತ ವಿಷಯಗಳು, ಸಂಭೋಗದ ಕಾಲ, ಗರ್ಭ ಧರಿಸುವುದು, ಗರ್ಭ ನಿಂತು ಹೋಗುವುದು, ಸಂಭೋಗದಿಂದಾಗುವ ಸಂತೋಷ, ಜನನೇಂದ್ರಿಯಗಳ ವರ್ಣನೆ, ಹಸ್ತ ಪ್ರಯೋಗದಿಂದಾಗುವ ಹಾನಿ, ಗರ್ಭಿಣಿಗೆ ಬೇಕಾದ ಅನೇಕ ಮರ್ಮನಿಯಮಗಳು, ಶಿಶು ಉತ್ಪತ್ತಿ ವಿಧ, ಗುಪ್ತ ವೈದ್ಯಗಳ ಚಿಕಿತ್ಸೆ, ಶಯನ ಗೃಹದ ರಹಸ್ಯನಿಯಮಗಳು, ಮಾನವ ಶರೀರದ ಮರ್ಮಗಳ ವಿವರ, ನಪುಂಸಕತ್ವಕ್ಕೆ ಚಿಕಿತ್ಸೆ, ಇನ್ನೂ ಸ್ತ್ರೀಪುರುಷರುಗಳಿಗೆ ಬೇಕಾದ ಲೀಲಾರಹಸ್ಯಗಳು ಚಿತ್ರಪಟಗಳ ಸಹಿತ ಪ್ರಿಂಟಾಗಿದೆ.

ಕ್ರಯ: ಪುಸ್ತಕ ೧ಕ್ಕೆ ೧ ರೂಪಾಯಿ

The Legai Trading Co.,
12—8 P. B. 243, Madras.

ಸ್ವದೇಶೀ ಫಿಟೀಲುಗಳು.

ಕ್ರಯ ಸುಲಭ! ಅಂದವಾದ ಮಾಡಲುಗಳು!!

ಸ್ವಲ್ಪವೇ ಉಳಿದಿವೆಯಾದ ಕಾರಣ ಬೇಕಾದವರು ಒಡನೆ ಆರ್ಡರು ಕಳುಹಿಸಿರಿ. ಕಮ್ಮಿ ಕ್ರಯದ ವಿದೇಶೀ ಫಿಟೀಲುಗಳಿಗೂ, ಬುದ್ಧಿಯಾಗಿ ನಮ್ಮಿಂದಲೇ ತಯಾರಿಸಲ್ಪಟ್ಟ ಈ ಫಿಟೀಲುಗಳಿಗೂ ಆಕಾರಕ್ಕೂ, ಕೋಗಿಲೆಗೂ ಎಷ್ಟರ ವ್ಯತ್ಯಾಸವಿದೆಯೋ ಅಷ್ಟು ವ್ಯತ್ಯಾಸವಿದೆಯೆಂದು ತಾವೇ ಒಪ್ಪಿಕೊಂಡಿರಬಹುದು. ಇನ್ನು ಫಿಟೀಲ್, ವೀಣೆ, ಹಾರ್ಮೋನಿಯಂ ಮುಂತಾದ ಸಂಗೀತ ವಾದ್ಯಗಳ ರಿಪೇರಿ ಇತ್ಯಾದಿ ಬಹಳ ಕಮ್ಮಿ ದರದಲ್ಲಿ ಮಾಲುದಾರರ ಮನಒಪ್ಪುವಂತೆ ಮಾಡಿಕೊಡುವೆವು. ಫಿಟೀಲ್ ಹಾರ್ಮೋನಿಯಂ ಇತ್ಯಾದಿ ಕಲಿಯಬೇಕೆಂದಿರುವವರಿಗಂತೂ ಇದೊಂದು ಸುಸಮಯ. ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ.

ಫಿಡ್ಲ್. ವಿ. ಕಟ್ರಿಮನಿ ಕಾರ್ಯಾಯರ್ ಅಂಡ್ ಸನ್ಸ್,
4—4 ಪೊನ್ನಂಪೇಟೆ, (ದ. ಕೊಡಗು.)



ಈ ಗಡಿಯಾರಗಳು ಈ ಚಿತ್ರದಲ್ಲಿರುವಂತೆಯೇ ಇರುವವು. ನಮ್ಮ ಸ್ವಂತ ಆರ್ಡರ್ ಮೇಲೆ ಸೀಮೆಯಲ್ಲಿ ತಯಾರಿಸಿ ತರಿಸಿರುತ್ತೇವೆ. ಸರಿಯಾಗಿ ಘಂಟೆಯನ್ನು ತೋರಿಸುತ್ತವೆ. ಇದು ದಾಪಿಗೂ ಯಾರಿಗೂ ಈಗಿನ ಕಡಮೆ ಬೆಲೆಗೆ ಕಳಿಸಿರುವವರೇ ಇಲ್ಲ. ಆದ್ದರಿಂದ ಬೇಗನೆ ಬರೆದು ತರಿಸಿಕೊಳ್ಳಿರಿ. ನಮ್ಮಲ್ಲಿ ಸ್ವಲ್ಪವೇ ಇರುತ್ತವೆ. ಇವಕ್ಕೆ ಖಾತ್ರಿಯಾದ 3 ವರ್ಷ ಗ್ಯಾರಂಟಿ ಕೊಡುತ್ತೇವೆ. ಕ್ರಯ 1ಕ್ಕೆ 4—4—0.

ವಿಳಾಸ:— ಕೆ. ಎಚ್. ಬೆನ್‌ಸನ್ ಅಂಡ್ ಕೊ.,
12—8 ಪೋ॥ ನಂ॥ 1246, ಮದರಾಸು.

ಬಂದೂಕುಗಳು. GUNS.

ಇವು ವಿಲಾಯಿತಿಯಲ್ಲಿ ತಯಾರಾದವು. ಇವುಗಳನ್ನು ಇಟ್ಟುಕೊಳ್ಳಲು ಲೈಸನ್ಸ ಪಡೆಯಬೇಕಾಗಿಲ್ಲ. ಯಾರು ಬೇಕಾದರೂ ಯಾವ ಭಯವೂ ಇಲ್ಲದೆ ಕೈಯಲ್ಲಿ ಹಿಡಿದುಕೊಂಡು ತಿರುಗಬಹುದು. ೧೦೦ ರವೆಗಳ ಸಹಿತ ತುಪಾಕಿ ೧ಕ್ಕೆ ೫—೦—೦.

ಯಂ. ಲಿಯೋ ಅಂಡ್ ಕೊ.,
12—7 168, ಚೈನಾ ಬಜಾರ್ ಮದರಾಸು.

ವರ್ತಮಾನ ಸಂಗ್ರಹ.

ಒಳದೇಶ.

ಮಡಿಕೇರಿಯಲ್ಲಿ ದನಗಳಿಗೆ ದೊಡ್ಡ ರೋಗವು ಅಂಟಿದೆಯೆಂದೂ, ಅನೇಕ ದನಕರಗಳು ಇದಕ್ಕೆ ತುತ್ತಾಗಿವೆಯೆಂದೂ ತಿಳಿಯಬರುತ್ತದೆ.

ಕಳೆದ ವಾರ ಉದಿಯೂರ ಸೋಮಪ್ಪನ ಮೇಲೆ ನಡೆದ ಸೆಷನ್ ಮೊಕದ್ದಮೆಯಲ್ಲಿ ಆತನಿಗೆ ನೀರು ಮೇಲೆ ಕಳುಹುವ ಶಿಕ್ಷೆ ವಿಧಿಸಲಾಗಿದೆ.

ಕೊಡಗು ಕೌನ್ಸಿಲಿನ ಬಜೆಟ್ ಸೆಶನ್ ಅಂದರೆ ಆದಾಯ ವೆಚ್ಚಗಳ ಚರ್ಚೆ ಬಗ್ಗೆ ಕೂಡುವ ಮೀಟಿಂಗ್ ಮಾರ್ಚಿ ತಿಂಗಳ ತಾ. 11, 12, 14ನೇ ದಿನಗಳಲ್ಲಿ ನಡೆಯುವುದಾಗಿ ಗೆಜೆಟಿನಲ್ಲಿ ಪ್ರಕಟವಾಗಿದೆ.

ಸೆಂಟ್ರಲ್ ಸಹಕಾರಿ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ತಾ 20—2—32ನೇ ಶನಿವಾರ ದಿನ ಬೆಳಿಗ್ಗೆ 11 ಗಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ನಡೆಯುತ್ತೆ.

ಕಳೆದ ವಾರ ಸೋಮವಾರಪೇಟೆಯ ಬಜಾರು ಎಸ್ಟೇಟಿನಲ್ಲಿ ಪ್ಲೇಗಿನ ಇಲಿಗಳು ಸತ್ತಿವೆಯೆಂದೂ, ಆದರೆ ಇನ್ನುವರೆಗೆ ಯಾರಿಗೂ ಪ್ಲೇಗು ಅಂಟಿರುವುದಿಲ್ಲವೆಂದೂ ತಿಳಿಯಬರುತ್ತದೆ.

ಸೆಂಟ್ರಲ್ ಸಹಕಾರಿ ಬ್ಯಾಂಕಿನ ಜನರಲ್ ಮೀಟಿಂಗ್ ಈ ಮೊದಲೇ ತಿಳಿಸಿದ ಮೇರೆ ತಾರೀಕು 21—2—1932ನೇ ಆದಿತ್ಯವಾರ ದಿನ ಮಧ್ಯಾಹ್ನ 1 ಗಂಟೆಗೆ ಮಡಿಕೇರಿಯಲ್ಲಿ ಕೊಡಗು ಜಮೀನ್ದಾರರ ಸಂಘದ ಹಾಲ್‍ನಲ್ಲಿ ನಡೆಯುತ್ತೆ.

1932ನೇ ಜುಲೈ ಆಗಸ್ಟು ತಿಂಗಳುಗಳಲ್ಲಿ ಬರಲಿರುವ ಸಿವಿಲ್ ಸರ್ವಿಸಿಗೆ ಜನರನ್ನು ಆರಿಸುವ ಬಗ್ಗೆ ಪರೀಕ್ಷೆ ಆಗುವುದೆಂದೂ ಅಪೇಕ್ಷಿಸುವವರು ಕಮಿಷನರಿಗೆ ಬರೆದು ಹೆಚ್ಚಿನ ಮಾಹಿತಿ ಪಡೆಯಬಹುದೆಂತ ಸರ್ಕಾರದಿಂದ ನೋಟೀಸ್ ಬಂದಿದೆ.

ಶನಿವಾರಸಂತೆ ಪಾರುಪತ್ಯಗಾರರಾಗಿದ್ದ ಮೆ|| ಯಂ ಶೇಷಗಿರಿರಾಯರು ಇಂಗ್ಲಿಷ್ ಆಫೀಸಿನ ಅವರ ಮೊದಲಿನ ಕೆಲಸಕ್ಕೆ ಹೋದದಕ್ಕಾಗಿ ಲ್ಯಾಂಡ್ ರಿಕಾರ್ಡ್ ಆಫೀಸಿನಲ್ಲಿದ್ದ ಮೆ|| ಯಂ. ಕೃಷ್ಣಯ್ಯನವರು ಶನಿವಾರಸಂತೆ ಪಾರುಪತ್ಯಗಾರರಾಗಿ ನೇಮಿಸಲ್ಪಟ್ಟಿದ್ದಾರೆ.

ಈ ವಾರ ಬೆಟ್ಟಗೇರಿಯಲ್ಲಿ ಇಬ್ಬರು ಬೇಟೆಗೆ ಹೋದಲ್ಲಿ ಒಂದು ಹುಲಿಯನ್ನು ಕಂಡು ಅವರು ಅದನ್ನು ಗುಂಡು ಹೊಡೆಯಲು ಯತ್ನಿಸಿದಾಗ ಅದು ಅವರೊಬ್ಬರ ಮೇಲೆ ಬಿದ್ದು ಅವರನ್ನು ಗಾಯಪಡಿಸಿತು. ಹುಲಿಯು ಕೂಡಲೇ ಗುಂಡಿನಿಂದ ಹೊಡೆಯಲ್ಪಟ್ಟು ಕೊಲ್ಲಲ್ಪಟ್ಟಿತೆಂಬದಾಗಿ ತಿಳಿಯಬರುತ್ತದೆ.

ಈ ವಾರ ಗೋಣಿಕೊಪ್ಪಲಿನಲ್ಲೂ, ಮಡಿಕೇರಿಯಲ್ಲೂ ದಸ್ತಗಿರಿಗಳಿಲ್ಲ. ಆದರೆ ಬುಧವಾರ ದಿನ ವೀರಾಜಪೇಟೆಯಲ್ಲಿ ಆರು ಜನರೂ, ಮಡಿಕೇರಿಯಲ್ಲಿ ಇಬ್ಬರೂ ಮತ್ತು ಗುರುವಾರ ದಿನ ಮಡಿಕೇರಿಯಲ್ಲಿ ನಾಲ್ಕು ಜನರೂ, ಸೋಮವಾರಪೇಟೆಯಲ್ಲಿ ಒಬ್ಬನೂ ದಸ್ತಗಿರಿ ಮಾಡಲ್ಪಟ್ಟಿದ್ದಾರೆ. ಶಾಸನಭಂಗದ ಚಳವಳಿಕ್ಕೆ ಉತ್ತೇಜನ ಕೊಡಬೇಕೆಂತ ಸೂಚಿಸುವ ಇಂಗ್ಲಿಷ್ ಮತ್ತು ಕನ್ನಡ ಪತ್ರಿಕೆಗಳನ್ನು ಹಂಚಿದಕ್ಕಾಗಿ ದಸ್ತಗಿಯಾದದ್ದಾಗಿದೆ. ಮಡಿಕೇರಿಯಲ್ಲಿ ದಸ್ತಗಿರಿಯಾದವರಲ್ಲಿ ಶ್ರೀ. ಗಳಾದ ಮಲಚಿರ ಪೂವಯ್ಯನವರು ಮನೆಯಪಂಡ ತಿಮ್ಮಯ್ಯನವರು, ಚೆಪ್ಪುಡಿರ ಪೂಣಚ್ಚನವರು ಮತ್ತು ವಾಟ್ಯವಾಡ ಬೆಳ್ಯಪ್ಪನವರು. ಸೋಮವಾರಪೇಟೆಯಲ್ಲಿ ಶ್ರೀ. ಪೂಜಾರಿರ ರಾಮಪ್ಪನವರು ದಸ್ತಗಿರಿಯಾದದ್ದಾಗಿದೆ.

ತಾ. 11ನೇ ಗುರುವಾರ ದಿನ ಮಡಿಕೇರಿಯಲ್ಲಿ ಲಾಯರ್ ವೆಂಕಪ್ಪಯ್ಯ ಮತ್ತು ಮೆ|| ಕೋಟೆರ ಚಂಗಪ್ಪನವರ ಮನೆಯನ್ನೂ, "ಕೊಡಗು" ಆಫೀಸನ್ನೂ ಪೋಲೀಸಿನವರು ಜಪ್ತಿ ಮಾಡಿದರು. ದಸ್ತಗಿರಿಯಾದ ಯುವಕರು ಹಿಂದಿನ ದಿನ ಹಂಚಿದ ಹಸ್ತ ಪತ್ರಿಕೆಗಳ ಪತ್ತೆಗಾಗಿ ಜಪ್ತಿ ಮಾಡಲಾಗಿದೆ. ವೀರಾಜಪೇಟೆ ಮಿಡ್ಡರ್ ಸ್ಟೋರ್ ಸಹ ಇದೇ ರೀತಿ ಜಪ್ತಿ ಮಾಡಲಾಗಿ ವರ್ತಮಾನವಿದೆ.

ಹಿಂದೂದೇಶ.

ಬೊಂಬಾಯಿಯ 11ನೇ ತುರಿತದ ಕಮಿಟಿಯ ಸದಸ್ಯರು ದಸ್ತಗಿರಿಯಾಗಿದ್ದಾರೆ.

ಪಂಜಾಬಿನ 14 ನೇ ಡಿಕ್ಟೇಟರಾದ ಡಾಕ್ಟರ್ ಗೋಪಿಚಂದರನ್ನು ಸೆರೆಹಿಡಿದಿದ್ದಾರೆ.

ಮದ್ರಾಸ್ ಅಧಿಪತ್ಯದ ಅನೇಕ ಕಡೆಗಳಲ್ಲಿ ದಸ್ತಗಿರಿಗಳೂ, ಸಜೆಗಳೂ ಆಗುತ್ತಲೇ ಇವೆ.

ಪೂನಾದ 11ನೇ ಡಿಕ್ಟೇಟರಾದ ಬಲ್ವಂತ್ ರಾಮಚಂದ್ರ ಅಪ್ಟೆಯವರು ದಸ್ತಗಿರಿಯಾಗಿದ್ದಾರೆ.

ಹಿಂದೂಸ್ಥಾನದ ಎಲ್ಲಾ ಪ್ರಾಂತ್ಯಗಳಲ್ಲೂ ದಸ್ತಗಿರಿಗಳು ಆಗುತ್ತಲಿರುವ ವರ್ತಮಾನಗಳು ಪತ್ರಿಕೆಗಳಲ್ಲಿ ಪ್ರಕಟವಾಗುತ್ತಲಿವೆ.

ಪೇಶಾವರದ ಒಳಿ ಹರಿಪುರ ಜೈಲಿನ ಸುಪರಿಂಟೆಂಡೆಂಟಾದ ರಾಯ್ ಸಾಹೇಬ್ ಪರಮಾನಂದ ಎಂಬವರು ಮೋಟಾರಿನಲ್ಲಿ ಹೋಗುವಾಗ ಅಪಾಯವಾಗಿ ಮೃತರಾದರು.

ಮಹಾತ್ಮ ಗಾಂಧಿಯವರ ಆಶ್ರಮದ ಜಾಗದ ಕಂದಾಯ ಕಟ್ಟದ್ದರಿಂದ ಆ ಕಂದಾಯದ ವಸೂಲಿಗಾಗಿ ಆಶ್ರಮದಿಂದ ಜಪ್ತಿ ಮಾಡಲ್ಪಟ್ಟಿದ್ದ ಸಾಮಾನುಗಳು ತಾ. 17 ರಲ್ಲಿ ಹರಾಜಾಗುತ್ತವೆ.

ಮಂಗಳೂರಿನಲ್ಲಿ ಪರದೇಶೀ ಬಟ್ಟೆ ಅಂಗಡಿ ಮುಂದೆ ಪಿಕೆಟ್ ಮಾಡಿದ ಶ್ರೀಮತಿಗಳಾದ ರಮಾಬಾಯಿ ಮತ್ತು ಸುನಂದಾಬಾಯಿ ಎಂಬ ಇಬ್ಬರು ಮಹಿಳೆಯರಿಗೆ ಐದು ತಿಂಗಳು ಕಠಿಣ ಸಜೆಯಾಯಿತು.

ಬಂಗಾಳದ ಒಂದು ಕಾಗದ ಕಾರ್ಖಾನೆಯಲ್ಲಿ ಕೆಲಸದಲ್ಲಿದ್ದ ಇಬ್ಬರು ಯುರೋಪಿಯನರು ಬೆಳಗಿನ ಜಾವದಲ್ಲಿ ಒಂದು ಕಾರ್ನರ ತಿರುಗಿಸಿ ಬರುತ್ತಿದ್ದಾಗ ಮೋಟಾರ್ ಒಂದು ದಿಕ್ಕಿಗೆ ಬಿದ್ದು ಇಬ್ಬರೂ ಮೃತರಾದರು.

ಜಿನೇವಾದಿಂದ ಹಿಂದೂದೇಶಕ್ಕೆ ಮಹಾತ್ಮ ಗಾಂಧಿಯವರ ಜೊತೆಯಲ್ಲಿ ಬಂದ ಡಾಕ್ಟರ್ ಪ್ರಿವಾಟ್ ಎಂಬವರು ಹಿಂದೂಸ್ಥಾನವು ಈಗ ಕೈಕೊಂಡ ಅಹಿಂಸಾಯುಕ್ತವಾದ ದಾರಿಯಿಂದಲೂ ಯುದ್ಧವನ್ನು ನಿಲ್ಲಿಸಲು ಸಾಧ್ಯವಿದೆ ಎಂತ ಅಭಿಪ್ರಾಯಪಟ್ಟಿದ್ದಾರೆ.

ಬಳ್ಳಾರಿಯಲ್ಲಿ ಡಾಕ್ಟರ್ ಕೆ. ಲಕ್ಷ್ಮೀದೇವಿ ಯಲ್. ಸಿ. ಪಿ. ಯಸ್. ರವರು ಬಹಿಷ್ಕಾರದ ಹಸ್ತ ಪತ್ರಿಕೆ ಹಂಚಿದ್ದಕಾಗಿ ದಸ್ತಗಿಯಾಗಿದ್ದಾರೆ. ಅಲ್ಲೇ ಇನ್ನೊಬ್ಬ ಮಹಿಳೆಯಾದ ಡಾಕ್ಟರ್ ನಿರ್ಮಲ ಲಕ್ಷ್ಮೀದೇವಿಯವರನ್ನು ಒಳ್ಳೇ ನಡತೆಗೆ ಜಾಮೀನು ಕೇಳಿಕೊಡದ್ದಕ್ಕೆ ಒಂದು ವರ್ಷ ಸಜೆಗೆ ಗುರಿಮಾಡಿದ್ದಾರೆ.

ಹಿರಿಯಗಾವದ ಎಮ್. ಜೆ. ಹೈಸ್ಕೂಲಿನ ಹೆಡ್ಮಾಸ್ಟರು ತಮ್ಮ ಶಾಲೆಯ ವಿದ್ಯಾರ್ಥಿಗಳ ಪಾಲಕರಿಗೆ, ನಿಮ್ಮ ಮಕ್ಕಳು ರಾಜಕೀಯ ಚಳವಳಿಯಲ್ಲಿ ಭಾಗ ತೆಗೆದುಕೊಳ್ಳಬೇಕೆಂದು ಇಷ್ಟಪಟ್ಟರೆ ನಿಮ್ಮ ಮಕ್ಕಳನ್ನು ಶಾಲೆ ಬಿಡಿಸಬೇಕು. ಇಲ್ಲವಾದರೆ ನಾವು ಅವರನ್ನು ಶಾಲೆಯಿಂದ ಹೊರಗೆ ಹಾಕಬೇಕಾಗುವದು.

ದಿಲ್ಲಿಯಲ್ಲಿ ಅಖಿಲ ದಲ ಸಮ್ಮೇಲನದವರು ತಾ. 8 ರಲ್ಲಿ ಯೋಜನೆ ಮಾಡಿ ಸರಕಾರವೂ, ಕಾಂಗ್ರೆಸೂ ರಾಜಿಯಾಗಬೇಕೆಂತ ಕೇಳುವುದು ಬೇಡವೆಂತ ತೀರ್ಮಾನಿಸಿದ್ದಾರೆ. ಅವರು ಈಗಿನ ಖಾನೂನು ಮೇರೆ ಆಡಳಿತದಲ್ಲಿ ಹಿಂದೀಯರಿಗೆ ಕೊಡಬೇಕಾದಷ್ಟು ಅಧಿಕಾರವನ್ನೆಲ್ಲಾ ಕೂಡಲೇ ಕೊಡಬೇಕೆಂತ ಕೇಳಿಕೊಂಡಿದ್ದಾರೆ.

ತಾ 10 ರಲ್ಲಿ ಮಹಾತ್ಮ ಗಾಂಧಿಯವರನ್ನು ಜೈಲಿನಲ್ಲಿ ನೋಡಲಿಕ್ಕಾಗಿ ಮಹಾತ್ಮರ ಸ್ನೇಹಿತರಾದ ಪೂಜಾಬಾಲ್ ಸೇಟ್, ಮಹಾತ್ಮರ ಮೊಮ್ಮಗನಾದ ಕಾಂತಿ ಗಾಂಧಿ, ಅಬ್ಬಾಸ್ ತಯಬ್ಜಿಯವರ ಮಗಳಾದ ರೆಹಾನಾ ಎಂಬವರು ಸಹ ಪೂನಾಕ್ಕೆ ತಾ. 9 ರಲ್ಲಿ ಪ್ರಯಾಣ ಮಾಡಿದರು. ಪೂನಾಕ್ಕೆ ಹೊರಟಿದ್ದ ಮಹಾತ್ಮರ ಅಣ್ಣನ ಮೊಮ್ಮಗ ಪ್ರಭುದಾಸ್ ಗಾಂಧಿಯವರು ಬಾರ್ಡೋಲಿಯಲ್ಲಿ ದಸ್ತಗಿರಿಯಾಗಿದ್ದಾರೆ.

ಶಾಂತಿಯುಕ್ತರಾದ ಪಿಕೆಟ್ ಮಾಡುವವರು ಎಷ್ಟು ಜನರನ್ನು ಪೋಲೀಸಿನವರು ಲತ್ತಿ ಹೊಡೆತದಿಂದ ಘಾಯಪಡಿಸಿದರು ಎಂತ ಪಾರ್ಲಿಮೆಂಟಿನಲ್ಲಿ ಸವಾಲು ಕೇಳಿದ್ದಕ್ಕೆ "ಅನಾವಶ್ಯವಾಗಿ ಶಕ್ತಿಯನ್ನು ಉಪಯೋಗಿಸಲು ಪೋಲೀಸರಿಗೆ ಅಧಿಕಾರವಿಲ್ಲ. ಪೋಲೀಸರು ತಮ್ಮ ಅಧಿಕಾರವನ್ನು ದುರುಪಯೋಗಪಡಿಸುತ್ತಾರೆಂತ ಸವಾಲಿನಲ್ಲಿ ಇರುವ ಭಾವನೆಯನ್ನು ನಾನು ಒಪ್ಪುವುದಿಲ್ಲ"ವೆಂತ ಸ್ಟೇಟ್ ಸೆಕ್ರೆಟರಿಯವರು ಜವಾಬು ಕೊಟ್ಟರು.

ಬೊಂಬಾಯಿ ಗಿರ್ಗಾಂವ್ ಎಂಬ ಭಾಗದಲ್ಲಿ ಒಂದು ಮನೆಯಲ್ಲಿ ಕಾಂಗ್ರೆಸಿನ ಕೆಲಸಗಳನ್ನು ಹಿಂದೆ ನಿಂತು ನಡೆಸುವವರು ಕೂಡುವ ಸ್ಥಳವೆಂತ ಪೋಲೀಸ್ ಗೂಢಚಾರರಿಗೆ ತಿಳಿದು ತಾ. 9ನೇ ರಾತ್ರಿ ಆ ಮನೆಯನ್ನು ಪ್ರವೇಶಿಸುವಾಗ ಅಲ್ಲಿ ಹಾಜರಿದ್ದ ನಾಲ್ಕು ಜನ ಕಾರ್ಯಕರ್ತರ ಸೇವಾದಳದವರನ್ನು ಸೆರೆಹಿಡಿದರು. ಆ ಸ್ಥಳದಲ್ಲಿ ಸಿಕ್ಕಿದ ಕಾಗದ ಪತ್ರಗಳಿಂದ ಹಿಂದೆ ನಿಂತು ಕೆಲಸ ಮಾಡುವವರ ಹೆಸರುಗಳೆಲ್ಲಾ ತಿಳಿದು ಬಂದಿದೆಯೆಂತ ಪೋಲೀಸರು ಹೇಳುತ್ತಾರೆ.

ಅಲ್ಲಹಾಬಾದಿನ ಒಂದು ಜೈಲಿನಲ್ಲಿ ಖೈದಿಗಳನ್ನು ಜೈಲಿನ ಒಳಗೆ ಇಡಲು ಸ್ಥಳವಿಲ್ಲದಕ್ಕಾಗಿ ರಾತ್ರಿ ಮಲಗುವಾಗ ಅನೇಕ ರಾಜಕೀಯ ಖೈದಿಗಳನ್ನು ಸರಪಣಿಗಳಿಂದ ಕಾಲಿಂದ ಕಾಲಿಗೆ ಕಟ್ಟಿ ಹಾಕುತ್ತಾರೆ. ರಾತ್ರಿ ಮಲವಿಸರ್ಜನೆಗೆ ಅವರವರ ಸಮೀಪ ಒಂದು ಚಿಕ್ಕ ಪಾತ್ರೆ ಇಡಲಾಗಿದೆ. ಇದು ಆರೋಗ್ಯಕ್ಕೆ ಹಾನಿಕರವಲ್ಲವೋ ಎಂತ ಜೈಲ್ ಅಧಿಕಾರಿಗಳನ್ನು ಕೇಳಿದ್ದಕ್ಕೆ ಮಲವಿಸರ್ಜನೆಗೆ ಬೇಕಾದಷ್ಟು ಉದ್ದದ ಸಂಪಣ್ ಉಪಯೋಗಿಸಲಾಗಿದೆ ಎಂತ ಜವಾಬು ಕೊಟ್ಟರು.

ಕಲ್ಕತ್ತಾದಲ್ಲಿ ಈ ತಾ. 7ರಲ್ಲಿ ಯೂನಿವರ್ಸಿಟಿ ಕಾನ್ವೊಕೇಶನ್ ಎಂದರೆ ಪರೀಕ್ಷೆಗಳಲ್ಲಿ ಪಾಸಾದವರಿಗೆ ಪದವಿ ಕೊಡುವ ಸಮಾರಂಭದಲ್ಲಿ ಬಂಗಾಳದ ಗವರ್ನರು ಭಾಷಣ ಕೊಡುತ್ತಿದ್ದಾಗ್ಯೆ ಬಿ. ಎ. ಪಾಸಾದ ಯುವತಿಯೊಬ್ಬಳು ಗವರ್ನರಿಗೆ ಒಂದು ರಿವಾಲ್ವರಿನಿಂದ ಐದು ಗುಂಡುಗಳನ್ನು ಹೊಡೆದಳು. ಒಂದೂ ತಗಲಲಿಲ್ಲ. ಅವಳು ಮೊದಲನೇ ಗುಂಡು ಹಾರಿಸಿದೊಡನೆ ವೈಸ್ ಚಾನ್ಸಲರಾದ ಡಾಕ್ಟರ್ ಸುಹ್ರಾವರ್ದಿ ಎಂಬವರು ಅವಳನ್ನು ಹಿಡಿದು ಕೊಂಡರು. ಗವರ್ನರು ಅನಂತರ ತಮ್ಮ ಭಾಷಣವನ್ನು ಮುಂದುವರಿಸಿದರು. ಈ ಕ್ರೂರ ಕೃತ್ಯವನ್ನು ದೇಶದ ಅನೇಕ ಕಡೆಗಳಲ್ಲಿ ಖಂಡಿಸಿ ಠರಾವುಗಳು ಪಾಸಾಗಿವೆ.

ಹೈದರಾಬಾದಿನ ನಿಜಾಮುಸಾಹೇಬರು ರೆಸಿಡೆನ್ಸಿಯೆನಿಸುವಂಥ ಚದರ ಘಾಟ ಮತ್ತು ಮದ್ದಿದವನ್ನು ತಿರಿಗಿ ಬೇಡುವಂತೆ ಮೈಸೂರು ಸಂಸ್ಥಾನದವರು ಬೆಂಗಳೂರಿನ ದಂಡಿನ ಭಾಗವನ್ನು ತಿರಿಗಿಕೊಡಬೇಕೆಂದು ಇಂಗ್ಲಿಷ್ ಸರಕಾರದಿಂದ ನೇಮಿಸಲ್ಪಟ್ಟ ಫೆಡರಲ್ ಕಮಿಟಿಯ ಮುಂದೆ ಹೇಳಿದ್ದಾರೆ. ಇದರ ಕೂಡ ದರಬಾರವು ಪ್ರತಿ ವರ್ಷ ಕೊಡುತ್ತಾ ಬಂದ ಪೊಗದಿಯನ್ನೂ ನಿಲ್ಲಿಸಬೇಕೆನ್ನುವರು. ಪೊಗದಿಯು ಪ್ರಾರಂಭದಿಂದ ಈ ವರೆಗೆ ಕೊಡುತ್ತಾ ಬಂದ ಹಣವು ೩೭ ಕೋಟಿ ರೂಪಾಯಿಯಾಗಿರುತ್ತದೆ. ಸಂಯುಕ್ತ ಹಿಂದೂಸ್ಥಾನವೆಂಬ ರಾಜ್ಯಘಟನೆ ಇಲ್ಲಿ ಪೊಗದಿ ಎಂಬುದು ಅಪಮಾನದ ಕೆಲಸವಾಗುವದರಿಂದ ಅದನ್ನು ನಿಲ್ಲಿಸುವದೇ ಭಾವೀ ಸ್ವರಾಜ್ಯ ರಾಜ್ಯಕಾರಭಾರದ ಒಂದು ಕರ್ತವ್ಯ ಕರ್ಮವಾಗುತ್ತದೆ.

ಮೋಡರೇಟ್ ಪಕ್ಷದವರು ಅಂದರೆ ಸರ್ ಸಪ್ರೂ ಮುಂತಾದವರ ಕೂಟವಾದ ಲಿಬರಲ್ ಫೆಡರೇಶನಿನ ಕಮಿಟಿಯು ದುಂಡು ಮೇಜು ಪರಿಷತ್ತಿನ ಕಮಿಟಿಗಳಿಗೆ ರಾಷ್ಟ್ರೀಯ ಪಕ್ಷದವನ್ನು ಬೇಕಾದಷ್ಟು ಆರಿಸದೆ ಇದ್ದದ್ದಕ್ಕೂ, ಎಲ್ಲಾ ಸದಸ್ಯರನ್ನು ಮಂತ್ರಿಯವರೇ ನೇಮಿಸಿದ್ದಕ್ಕೂ ಅತೃಪ್ತಿ ಸೂಚಿಸುವ ಠರಾವು ಪಾಸ್ ಮಾಡಿದರು. ಅಲ್ಲದೆ ಆರ್ಡಿನೆನ್ಸುಗಳನ್ನು ರದ್ದುಮಾಡಬೇಕು. ಅಥವಾ ಅವುಗಳ ಕಾಠಿಣ್ಯವು ಕಡಿಮೆಯಾಗುವಂತೆ ಮಾಡಬೇಕೆಂತಲೂ, ಅವುಗಳನ್ನು ಜಾರಿಮಾಡುವಾಗ ನ್ಯಾಯವೂ, ಕರುಣೆಯೂ ಇರಬೇಕೆಂತಲೂ, ಶಾಂತಿದಾರಿಯನ್ನು ಸರಕಾರವು ಹಿಡಿಯಬೇಕೆಂತಲೂ, ಹೀಗೆ ಮಾಡದಿದ್ದರೆ ಯಾವ ಪಾರ್ಟಿಗಳೂ ಸರಕಾರದೊಂದಿಗೆ ಸಹಕರಿಸುವುದು ಕಷ್ಟವಾಗುತ್ತೆಂತಲೂ ಠರಾವುಗಳನ್ನು ಪಾಸ್ ಮಾಡಿದ್ದಾರೆ.

ವಿದೇಶ.

ಚೈನಾ ಜಪಾನರೊಳಗೆ ಹೊಡೆದಾಟವು ನಡೆಯುತ್ತಲೇ ಇದೆ. ಬೇರೆ ರಾಷ್ಟ್ರಗಳು ರಾಜಿ ಮಾಡಲು ಪ್ರಯತ್ನಿಸುತ್ತಲಿದ್ದಾರೆ.

ಬ್ರಿಟನಿಗೆ ಬರುವ ಎಲ್ಲಾ ಪರದೇಶೀ ವಸ್ತುಗಳ ಮೇಲೆ ಶೇಕಡ 10ರಷ್ಟು ಸುಂಕ ಹಾಕಲು ಪಾರ್ಲಿಮೆಂಟಿನ ಒಪ್ಪಿಗೆ ದೊರೆಯಿತು. ಇಬ್ಬರು ಮಂತ್ರಿಗಳು ಸಹ ಈ ಅಭಿಪ್ರಾಯಕ್ಕೆ ವಿರೋಧವಾಗಿ ಓಟು ಕೊಟ್ಟರು. ಮಂತ್ರಿ ಮಂಡಲಿಯವರಿಗೆ ಒಗ್ಗಟ್ಟಿರಬೇಕೆಂತ ಇದ್ದ ತತ್ವವು ಹೀಗೆ ಹಾಳಾಯಿತು.

ಪ್ಯಾರಿಸಿನ ಪ್ರಸಿದ್ಧ ಲೇಖಕರೂ ಮಹಾತ್ಮ ಗಾಂಧಿಯವರ ರೀತಿಯನ್ನು ಶ್ಲಾಘಿಸುವ ರೋಮ ರೋಲಾಂಡ ಎಂಬವರು ಹೇಳಿರುವುದೇನೆಂದರೆ—"ಹಿಂದೂಸ್ಥಾನದಲ್ಲಿ ಈಗ ನಡೆಯುತ್ತಿರುವ ಹೋರಾಟವು ಬ್ರಿಟಿಷರಿಗೂ, ಹಿಂದೀಯರಿಗೂ ರಾಜಕೀಯ ವಿಚಾರಕ್ಕಾಗಿ ನಡೆಯುವ ಹೋರಾಟವೆಂತ ಭಾವಿಸಬಾರದು. ಈಗಿನ ಅತೃಪ್ತಿಕರವಾದ ಸಾಮಾಜಿಕ ರಚನೆಯನ್ನು ಬದಲಾಯಿಸಲು ಮಹಾತ್ಮ ಗಾಂಧಿಯವರ ಅಹಿಂಸಾ ಮಾರ್ಗ ಉಪಯೋಗಿಸಲು ಪರೀಕ್ಷಿಸಲ್ಪಡುತ್ತದೆ. ಇದರಲ್ಲಿ ಜಯವಾಗದಿದ್ದರೆ ಹಿಂಸಾ ಮಾರ್ಗವೇ ಉಳಿಯಿತು. ಆದ್ದರಿಂದ ಶಾಂತಿಯೂ, ಸಾಮಾಜಿಕ ಕ್ಷೇಮವೂ ಇರಬೇಕೆಂತ ಬಯಸುವವರೆಲ್ಲರೂ ಹಿಂದೂಸ್ಥಾನಕ್ಕೆ ಈಗ ಸಹಾಯ ಮಾಡಬೇಕು."

ಮಾರಾಟಕ್ಕಿದೆ.

ಸುಂಟಿಕೊಪ್ಪ ನಾಡು ಹೊರೂರು ಗ್ರಾಮದಲ್ಲಿ "ಬುಕ್ಕ ಎಸ್ಟೇಟು" ಎಂಬ 70 ಎಕ್ರೆ ಕಾಫಿತೋಟ, 20 ಎಕ್ರೆ ಭೂಮಿ, ಒಂದು ಸಣ್ಣ ಬಂಗ್ಲೆ, ಕೂಲಿ ಲೈನ್ ಮತ್ತು 40 ಎಕ್ರೆ ಕಾಫಿ ತೋಟಕ್ಕೆ ಯೋಗ್ಯವಾದ ಕಾಡು ಸಹ ಮಾರಾಟಕ್ಕೆ ಇದೆ. ಬಂಗ್ಲೆ ವರೆಗೆ ನ್ಯಾಯವಾದ ರಸ್ತೆ ಇದೆ. ಖರೀದಿದಾರರು ಈ ಕೆಳಗಿನ ವಿಳಾಸದವರಿಂದ, ಬರಹ ಮೂಲಕವಾಗಲೀ, ಮೊಖ್ತಾ ಮಾತಾಡಿಯಾಗಲೀ ಕ್ರಯದ ಮೊಬಲಗು ಮತ್ತು ಇತರ ವಿಷಯಗಳನ್ನು ತಿಳಿಯಬಹುದು.

"ಪ್ರೊಪ್ರೈಟರ್"

'R'

C/o. I. [illegible] SUBBAIAH.
M. A. B. L.,
Vakil,
4—1 Mercara (Coorg)

ನೋಟೀಸು. 3—0

ಮಡಿಕೇರಿ ಸೋಮವಾರಪೇಟೆ ವೈದ್ಯರ ಬೀದಿಯಲ್ಲಿ ವಾಸಿಸುವ ಬಂಗಾರ್ಯ ಶೆಟ್ಟಿ ರವರ ಮಗ ಕೃಷ್ಣಶೆಟ್ಟಿಯು ಪ್ರಕಟಿಸಿ ತಿಳಿಯಪಡಿಸುವುದೇನಂದರೆ—

ನನ್ನ ತಂದೆ [illegible] ಶೆಟ್ಟಿ ರವರು [illegible] ನಡೆದು ಬಂದ ಸೊತ್ತು ಮತ್ತು ನನ್ನ ತಮ್ಮ ಶ್ರೀರಂಗಶೆಟ್ಟಿ [illegible] ಸ್ಥಿರ ಸೊತ್ತು [illegible] ಭಾಗವಾಗಿರುತ್ತಿವೆ. ಕುಟುಂಬದ [illegible] ಸ್ಥಿರ ಮತ್ತು ಚರ ಸೊತ್ತುಗಳಲ್ಲಿ ನನಗೆ [illegible] ಪಾಲಿಗೆ ದಾವೆ ದಾಖಲು ಆಗುತ್ತೆ. [illegible] ಶೆಟ್ಟಿಯಾಗಲೀ, ಯಾ ಶ್ರೀರಂಗ ಶೆಟ್ಟಿಯಾಗಲೀ ಯಾವ ಅಸ್ತಿಯನ್ನಾದರೂ ಸ್ವಾಧೀನ ಪಡಿಸಿ[illegible]ಧು ಆಗಲಾರದು. ರೂ. 75—[illegible]

ಮಡಿಕೇರಿ ತಾ. 12—2—32. ಕಿ. [illegible]

ರವು ಪ್ರಚಾರ ಮಾಡುತ್ತವೆ. ಮಹಾತ್ಮ ಗಾಂಧಿಯವರ ದ ಸ್ತಗಿರಿಗಿಂತ ಮುಂಚೆ ಇದ್ದ ಸ್ಥಿತಿಯೇ ಬರಬೇಕೆಂತ ವ್ಯಾಪಾರಿಗಳು ಅಪೇಕ್ಷಿಸುತ್ತಾರೆ. ಕಳೆದ ವರ್ಷ ಬಲದಲ್ಲಿ ಏನೂ ಕಡಿಮೆ ಇಲ್ಲದ ಸೈನಿಕರಾಯರು ಬಲವಾಗಿ ಆಳುವದನ್ನು ಚಾ ರಿ ಮಾಡಿ ಅಹಿಂಸ್ಯ ಜನರು ಪೆಟ್ಟು ತಿನ್ನಲಿಕ್ಕೂ, ಗುಂಡಿನ ಚಾ ಟುಗೆ ತುತ್ತಾಗಲಿಕ್ಕೂ ತಯಾರಿದ್ದಾರೆಂತ ಅವರಿಗೆ ತಿಳಿಯಿತು. ಒಂದು ವರ್ಷದಲ್ಲಿ 90,000 ಜನರು ಜೈಲಿಗೆ ಹೋದರು. ಆದ ರ ಮೇಲೆ ಶಾಂತಿ ಸಮಾಧಾನದ ದಾರಿಯನ್ನೂ ಅವರು ಹಿಡಿದು ತಿಳ್ಳಿ ರಾಜಿಯಾದದ್ದು.

ಈಗಲಾದರೂ ಮಹಾತ್ಮ ಗಾಂಧಿಯವರನ್ನೂ ಇತರ ಪುಢಾರಿಗಳನ್ನೂ ಬಿಟ್ಟು ಶಾಂತಿ ಸ್ಥಾಪನೆಯ ದಾರಿಯನ್ನು ಹಿಡಿಯದೆ ಎಂತ ಪ್ರಾರ್ಥಿಸಿ ಪತ್ರವನ್ನು ಮುಗಿಸಿದ್ದಾರೆ.

ಚೈನಾದ ಯುದ್ಧದ ಕಾರಣಗಳು.

1914ನೇ ಇಸವಿಯಲ್ಲಿ ಜರ್ಮನಿಯ ಯುದ್ಧದ ಆರಂಭ ಭಾಗದಲ್ಲಿ ಜಗತ್ತಿನಲ್ಲಿ ಎಂತಹ ತಳಮಳವೆದ್ದಿತೋ ಅಂತಹ ಭಯಂಕರ ತಪಲಗಳು ಇಂದಿನ ಜಗತ್ತನ್ನು ಆವರಿಸಿವೆ. ಜಗತ್ತಿನ ರಾಜಕಾರಣ ಪಟುಗಳೆಲ್ಲರ ದೃಷ್ಟಿಯೂ ಆಗ ಜರ್ಮನಿಯ ಕಡೆಗೆ ತಿರುಗಿದ್ದಂತೆ ಈಗ ಚೈನಾದ ಕಡೆಗೆ ತಿರುಗಿದೆ.

ಆಂದು ಆ ಮಹಾ ಯುದ್ಧವು ಆರಂಭವಾಗ ಪೂರ್ವದಲ್ಲಿ ಮೊದಲು ಇದ್ದ ಪರಿಸ್ಥಿತಿಗೂ, ಇಂದಿನ ಜಗತ್ತಿನ ಪರಿಸ್ಥಿತಿಗೂ ಬಹು ಅಂತರ ಉಂಟು. ಜರ್ಮನಿಯ ಯುದ್ಧವು ಜಗತ್ತಿಗೆಲ್ಲಾ ಬುದ್ಧಿಯನ್ನು ಕಲಿಸಿಕೊಟ್ಟಿತು. ಯುದ್ಧವು ಹುಡುಗಾಟವಲ್ಲವೆಂದೂ, ಜನಾಂಗದ ಸತ್ವವನ್ನೆಲ್ಲಾ ಹೀರಿಬಿಡುವ ಮಹಾ ವ್ಯಾಧಿಯೆಂದೂ ಸಕಲರೂ ಮನಗಂಡರು. ಇನ್ನು ಮುಂದೆ ಯುದ್ಧವಾಗದಂತೆ ನೋಡಿಕೊಳ್ಳಬೇಕೆಂಬ ಆಕಾಂಕ್ಷೆಯಿಂದ ಅಂತರಾಷ್ಟ್ರೀಯ ಸಮಿತಿಯು ಏರ್ಪಟ್ಟು ಆ ಸಮಿತಿಯವರು ಜಗತ್ತಿನ ಶಾಂತಿರಕ್ಷಣೆಗೆ ಸಕಲ ವಿಧವಾದ ಯತ್ನಗಳನ್ನು ಕೈಗೊಳ್ಳಬಯಸಿ, ತಮ್ಮ ಕಾರ್ಯವನ್ನು ಆರಂಭ ಮಾಡಿರುವರು. ಈ ಚಳವಳಿಗಳನ್ನು ಕಂಡು ಜನರು ಯುದ್ಧದ ಯುಗವು ಮುಗಿಯಿತೆಂದು ಭಾವಿಸುತ್ತಿರುವ ವೇಳೆಯಲ್ಲಿ ಪೌರಸ್ತ್ಯ ದೇಶಗಳಲ್ಲಿ ಗಣನಾರ್ಹವಾಗಿರುವ ಒಂದೇ ದೇಶವಾದ ಜಪಾನಿಗೂ, ಚೈನಾ ದೇಶಕ್ಕೂ ಕಲಹಗಳು ಆರಂಭವಾದವು.

ಈ ಕಲಹದ ಕಾರಣಗಳನ್ನರಿಯಲು ನಾವು ಚೈನಾ ಜಪಾನುಗಳ ಪ್ರಕೃತ ಪರಿಸ್ಥಿತಿಯನ್ನು ತಿಳಿಯತಕ್ಕದ್ದು ಅತ್ಯವಶ್ಯಕ.

ಅಗ್ನಿ ಮುಕ್ಕಾಲು ಶತಮಾನದಿಂದೀಚೆಗೆ ಜಪಾನು ದೇಶೀಯರು ಪಾಶ್ಚಾತ್ಯರ ಅನುಕರಣವನ್ನಾರಂಭಿಸಿ ತಮ್ಮ ದೇಶವನ್ನೆಲ್ಲಾ ಕೈಗಾರಿಕೆಯ ಕಾರ್ಖಾನೆಯನ್ನಾಗಿ ಮಾಡಿಬಿಟ್ಟಿದ್ದಾರೆ. ತಮ್ಮ ವ್ಯಾಪಾರ ಬಲದಿಂದ ದೇಶದ ಹಾಗೂ ಸರ್ಕಾರದ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಿಕೊಂಡಿರುವುದಲ್ಲದೆ, ಅನೇಕ ಯುದ್ಧದ ಹಡಗುಗಳನ್ನೂ, ಬಲಿಷ್ಠವಾದ ಸೈನ್ಯವನ್ನೂ ಉಳ್ಳವರಾಗಿದ್ದಾರೆ. ಕೈಗಾರಿಕೆಯೇ ಪ್ರಧಾನ ವೃತ್ತಿಯಾಗುಳ್ಳ ಇತರ ಪಾಶ್ಚಾತ್ಯ ದೇಶಗಳಂತೆ, ಜಪಾನರು ಕೂಡ ತಮ್ಮ ಸರಕುಗಳಿಗೆ ಗಿರಾಕಿಯನ್ನು ಹೊಂಚಲು ಕಾತುರರಾಗಿದ್ದಾರೆ. ಅವರ ವ್ಯಾಪಾರವು ಮುಗಿಯಿತೆಂದರಾಯಿತು, ಜಪಾನಿನಲ್ಲಿ ನಿರುದ್ಯೋಗ ಸಮಸ್ಯೆಯು ಎದ್ದು ದೇಶಕ್ಕೆ ಭೀತಿಯುಂಟಾಗಿ ಬಿಡುವುದು.

ಜಪಾನರು ತಮ್ಮ ಸರಕುಗಳಿಗೆ ಪಾಶ್ಚಾತ್ಯ ದೇಶದಲ್ಲಿ ಗಿರಾಕಿಗಳಿಲ್ಲ. ಏಕೆಂದರೆ ಆ ದೇಶಗಳಲ್ಲೆಲ್ಲಾ ಕೈಗಾರಿಕೆಯು ಪ್ರಬಲವಾಗಿದೆ; ಅಲ್ಲಿನ ಜನರು ತಮ್ಮ ದೇಶದ ಕೈಗಾರಿಕೆಗೆ ಉತ್ತೇಜನ ಕೊಡುವರೇ ವಿನಾ ಅಲ್ಲಿ ಜಪಾನರಿಗೆ ಗಿರಾಕಿಗಳು ದೊರೆಯರು. ಅಂದರೆ, ಜಪಾನ್ ವ್ಯಾಪಾರವೆಲ್ಲಾ ಪೌರಸ್ತ್ಯ ದೇಶಗಳಲ್ಲಿ ಮಾತ್ರ. ಇಲ್ಲಿ ಕೂಡ ಜಪಾನರಿಗೆ ಬಹು ದೂರನಾಗುವಂತಿಲ್ಲ. ಪೌರಸ್ತ್ಯ ದೇಶಗಳಲ್ಲೆಲ್ಲಾ ಉತ್ತಮ ವರ್ಗದ ಗಿರಾಕಿಯಾದ ಇಂಡಿಯಾವು ಬ್ರಿಟಿಷರ ಕೈಯಲ್ಲಿದೆ. ಇಂಡಿಯಾದ ವ್ಯಾಪಾರದಿಂದ ತಮಗೆ ಬಾಧಕವಾಗದಂತೆ ಮಾಡಿಕೊಳ್ಳಬೇಕೆಂಬುದು ಬ್ರಿಟಿಷರ ಇಚ್ಛೆ. ಜಪಾನರು ತಮ್ಮ ಸಾಮಾನನ್ನು ಮಾರಲು ಉಳಿದಿರುವ ಉತ್ತಮ ಸ್ಥಾನ ಚೈನಾ ದೇಶವೆನ್ನಬಹುದು, ಚೈನಾ ಜಪಾನಿನ ನೆರೆ ರಾಜ್ಯ.

ಈಗ ನಾವು ಚೈನಾದ ಪರಿಸ್ಥಿತಿಯನ್ನು ಪರಿಶೀಲಿಸೋಣ. ಜ ... ಇನ್ನತಿಯ ಶಿಖರವನ್ನು ಏರಲಾರಂಭಿಸಿದಾಗ ಚೈನಾ ... ಸ್ಥಿತಿಯಲ್ಲಿ ಮುಳುಗಿತ್ತು. ಚೈನಾದ ಕುಂಬಾ ... "ಪ್ರಜೆ; ಜನರಲ್ಲಿ ಐಕಮತ್ಯವಿರಲಿಲ್ಲ; ಹಳೇ ಸಂ ... ಸ್ಥಿಗೆ ಬಿದ್ದು ಅವರು ನರಳುತ್ತಿದ್ದರು; ಅವಿಶ್ವ ... ಜಾಗೃತಿಯೇ ಇರಲಿಲ್ಲ. ಸ್ವಲ್ಪ ಕಾಲದ ... ನವಸ್ಫೂರ್ತಿಯು ಹುಟ್ಟಿತು. ಪ್ರಗತಿಪಥ ... ಮುಂದುವರಿಯುತ್ತಿದ್ದ ಜಪಾನಿನ ಪ್ರಭಾ ... ಈ ನವಸ್ಫೂರ್ತಿಗೆ ಬಹುವಾಗಿ ಸಹಾಯ ಮಾ ... ನೇ ಕ್ರಮಕ್ರಮವಾಗಿ ಚೈನಾದಲ್ಲಿ ಜಾಗೃತಿ ... ರಾಷ್ಟ್ರೀಯತ್ವದ ಭಾವನೆಯು ಉದ್ದೀಪನ ... 1912ನೇ ಇಸವಿಯಲ್ಲಿ ಚೈನಾದಲ್ಲಿ ತಮ್ಮ ... (Republic) ವನ್ನು ಸ್ಥಾಪಿಸಿದರು. ಅ ... ಚೈನಾದಲ್ಲಿ ಅಂತಃಕಲಹಗಳು ನಡೆ ... ರಾಷ್ಟ್ರೀಯ ಭಾವನೆಯು ಬಲವಾಗಿ ಬೇರೂರಿದೆ ಯೆನ್ನಬಹುದು. ಸ್ವರಾಷ್ಟ್ರ ಹಾಗೂ ಸ್ವರಾಷ್ಟ್ರ ಗೌರವಗಳ ಬಗ್ಗೆ ಅವರಿಗೆ ವಿಶೇಷ ಅಭಿಮಾನವು ಬೆಳೆಯುತ್ತಿದೆ. ಈ ರಾಷ್ಟ್ರೀಯ ಭಾವನೆಯು ಚೈನಾದ ಉತ್ತರ ಭಾಗಕ್ಕಿಂತ ದಕ್ಷಿಣದಲ್ಲಿ ಗಾಢವಾಗಿದೆ.

ಇಂತು ಇವೆರಡು ದೇಶಗಳ ಪರಿಸ್ಥಿತಿ ಈಗ ತಿಳಿದ ಮೇಲೆ ಪರಸ್ಪರ ಸಂಬಂಧವನ್ನು ಪರೀಕ್ಷಿಸೋಣ. ಕೈಗಾರಿಕೆಯ ಸಾಧನಾದ ಜಪಾನಿನವರು ಚೈನಾದಲ್ಲಿ ಅನೇಕ ಕೈಗಾರಿಕೆಯ ಕಾರ್ಖಾನೆಗಳನ್ನು ಸ್ಥಾಪಿಸಿದ್ದಾರೆ. ಪೂರ್ವದಲ್ಲಿ ಚೈನಾಕ್ಕೆ ಸೇರಿದ ಕೊರಿಯ ಎಂಬ ಸಣ್ಣ ಭೂಭಾಗವು ಈಗ ಜಪಾನರ ವಶದಲ್ಲಿದೆ. ಅಲ್ಲದೆ ಅದಕ್ಕೆ ಸಂಬಂಧಿಸಿದಂತಿರುವ ಮಂಚೂರಿಯದಲ್ಲಿಯೂ ಜಪಾನರ ಪ್ರಾಬಲ್ಯ ಇದೆ. ಈ ಹಿಂದೆ ಈ ಮಂಚೂರಿಯಾದ ಅಧಿಕಾರದ ಬಗ್ಗೆ ರಷ್ಯಾದವರಿಗೂ, ಜಪಾನರಿಗೂ ಯುದ್ಧ ನಡೆದು ಜಪಾನರ ಕೈಮೇಲಾಯಿತಾದರೂ ಈಗ ಮಂಚೂರಿಯವು ರಷ್ಯಾದವರ ವ್ಯಾಪ್ತಿಗೆ ಸೇರಿದ್ದಂತೆ ಗಣ್ಯವಾಗಿದೆ; ಆದರೂ ಜಪಾನರ ಪ್ರಭಾವವಿರುವ ಸ್ಥಾನ ಅದು. ಈ ಮಂಚೂರಿಯವು ಚೈನಾದವರಿಗೆ ಸೇರಿದ್ದು.

ಇದಲ್ಲದೆ ಚೈನಾಕ್ಕೂ ಜಪಾನಿಗೂ ಇನ್ನೊಂದು ವಿಕಟವಾದ, ಮಹಾ ಪರಿಣಾಮಕಾರಿಯಾದ ಸಂಬಂಧವುಂಟು—ವ್ಯಾಪಾರ ಸಂಬಂಧ. ಚೈನಾದಲ್ಲಿ ಸ್ವದೇಶ ಪ್ರೇಮವು ಹೆಚ್ಚಿದಂತೆಲ್ಲ, ಜಪಾನರ ವ್ಯಾಪಾರವು ಕುಗ್ಗಲಾರಂಭವಾಯಿತು. ಆ ಕಾರಣದಿಂದ ಜಪಾನರಿಗೆ ರಾಷ್ಟ್ರೀಯ ಚೈನಾದವರನ್ನು ಕಂಡರೆ ಸ್ವಲ್ಪ ಹಾಗೆ ತಾನೆ. ಏಕೆಂದರೆ ಅವರು ಜಪಾನಿನ ಸಾಮಾನುಗಳಿಗೆ ಬಹಿಷ್ಕಾರ ಹಾಕಲು ಆರಂಭಿಸಿ ದೇಶದ ತುಂಬಾ ಬಹಿಷ್ಕಾರ ಸಮಿತಿಗಳನ್ನು ಸ್ಥಾಪಿಸಿ, ಜಪಾನಿನ ವ್ಯಾಪಾರಕ್ಕೆ ಕಂಟಕರಾಗಿರುವರು. ತಮ್ಮ ವ್ಯಾಪಾರವನ್ನು ಮುಂದುವರಿಸಲು ಜಪಾನರು ತಮ್ಮ ಕೈಲಾದುದನ್ನೆಲ್ಲಾ ಮಾಡದೆ ಬಿಡರು.

ಚೈನಾದಲ್ಲಿ ಜಪಾನರಲ್ಲದೆ ಇತರ ಪಾಶ್ಚಾತ್ಯ ದೇಶಗಳವರಿಗೂ ನಗರಗಳೂ, ವ್ಯಾಪಾರದ ಪಟ್ಟಣಗಳೂ ಉಂಟು. ಷಾಂಘೈ ನಗರವು ಅಂತರರಾಷ್ಟ್ರೀಯವಾದುದು. ಅದು ಚೈನಾದಲ್ಲಿರುವುದಾದರೂ ಚೈನಾದೊಡನೆ ವ್ಯಾಪಾರ, ಸಂಬಂಧವಿರುವ ಅನೇಕ ಜನಾಂಗಗಳಿಗೆ ಅಲ್ಲಿ ಸ್ಥಾನವಿದೆ.

ಈಗ್ಗೆ ಹಲವು ತಿಂಗಳುಗಳಿಂದ ಮಂಚೂರಿಯಾದಲ್ಲಿ ಚೈನಾದವರಿಗೂ, ಜಪಾನರಿಗೂ ಸಣ್ಣ ಪುಟ್ಟ ಕಲಹಗಳು ನಡೆಯುತ್ತಲೇ ಇದ್ದು, ಅದು ಆಗಾಗ ಉಗ್ರರೂಪವನ್ನು ತಾಳುವ ಪ್ರಸಂಗಗಳೂ ತೋರಿಬಂದುವಾದುದರಿಂದ, ಅಂತರರಾಷ್ಟ್ರೀಯ ಸಮಿತಿಯವರು ಮಂಚೂರಿಯಾದ ವಿಚಾರವಾಗಿ ತಕ್ಕ ವಿಚಾರಣೆಯನ್ನು ಅಲ್ಲಿನ ಪರಿಸ್ಥಿತಿಗಳ ವಿಮರ್ಶಿಸಲು ಒಂದು ಸಣ್ಣ ಸಮಿತಿಯನ್ನು ಸ್ಥಾಪಿಸಿದರು. ಆ ಸಮಿತಿಯು ಇನ್ನೇನು ಚೈನಾಕ್ಕೆ ಹೊರಡುವುದರಲ್ಲಿತ್ತು, ಆ ಸಮಿತಿಯು ಮಂಚೂರಿಯಾಕ್ಕೆ ಬಂದು ಅಲ್ಲಿನ ಸ್ಥಿತಿಗಳನ್ನು ವಿಮರ್ಶಿಸಿ ಯಾವುದಾದರೊಂದು ಗೊತ್ತುವಳಿಯನ್ನು ಮಾಡಿದ್ದರೆ, ಚೈನಾವೂ ಜಪಾನೂ ಆ ಗೊತ್ತುವಳಿಗೆ ಕಟ್ಟುಬಿದ್ದು ನಡೆಯಬೇಕಿತ್ತು. ಚೈನಾಸರ್ಕಾರವೂ, ಜಪಾನು ಸರ್ಕಾರವೂ ಅಂತರರಾಷ್ಟ್ರೀಯ ಸಮಿತಿಯ ಸದಸ್ಯವರ್ಗಕ್ಕೆ ಸೇರಿರುವುದರಿಂದ ಸಮಿತಿಯ ಆಜ್ಞೆಗೆ ಅವು ಒಳಪಡಬೇಕಾಗಿತ್ತು.

ಸಣ್ಣ ಪುಟ್ಟ ಕಲಹಗಳ ವಾತಾವರಣದಲ್ಲಿ ಚೈನಾ ಜಪಾನರ ಪರಸ್ಪರ ಅಸಮಾಧಾನವೂ, ದ್ವೇಷವೂ ಬೆಳೆಯುತ್ತ ಬಂತು. ಪಾಶ್ಚಾತ್ಯ ಸರ್ಕಾರಗಳವರೆಲ್ಲರೂ ಈ ಭೀಕರ ಪರಿಸ್ಥಿತಿಯನ್ನು ಆತುರತೆಯಿಂದ ನೋಡುತ್ತಲೇ ಇದ್ದರು. ಚೈನಾ ಜಪಾನರ ಸಣ್ಣ ಪುಟ್ಟ ಕಲಹಗಳು ದಿನ ದಿನಕ್ಕೆ ಬಲವಾಗುತ್ತ ಬಂದು, ಚೈನಾದವರೂ, ಜಪಾನರೂ ತಮ್ಮ ತಮ್ಮ ಸೈನ್ಯಗಳನ್ನು ಒಟ್ಟು ಗೂಡಿಸಲಾರಂಭಿಸಿದರು. ಚೈನಾದ ದಳವೊಂದು ಷಾಂಘೈ ನಗರದ ಹತ್ತಿರದಲ್ಲಿ ಠಾಣ್ಯ ಮಾಡಿತು. ಜಪಾನರು ಚೈನಾಕ್ಕೆ ತಮ್ಮ ಸೈನ್ಯಗಳನ್ನು ಕಳುಹಿಸಲಾರಂಭಿಸಿದರು, ಅವೂ ಷಾಂಘೈನ ಜಪಾನ್ ಸಂಸ್ಥೆಯಲ್ಲಿ ಬಂದು ಸೇರತೊಡಗಿದವು.

ಮೊದಲಿನಿಂದಲೂ ಜಪಾನರೇ ಕಲಹವು ಮುಂದುವರಿಸುತ್ತಾ, ಚೈನಾದವರನ್ನು ಯುದ್ಧಕ್ಕೆಳೆಯುವಂತೆ ತೋರುತ್ತ ಬಂದಿತ್ತಾದ್ದರಿಂದ ಇಂಗ್ಲೆಂಡು ಮತ್ತು ಅಮೇರಿಕೆಯ ಸರ್ಕಾರಗಳವರು ಒಟ್ಟಾಗಿ ಜಪಾನಿನ ಈ ವರ್ತನೆಯನ್ನು ತಡೆಯಬೇಕೆಂಬ ನಿರ್ಧಾರಕ್ಕೆ ಬರಲೆತ್ನಿಸಿದರು.

ಜನವರಿ ೨೭ನೇ ತಾರೀಕಿನ ದಿನ ಷಾಂಘೈ ಪಟ್ಟಣದಲ್ಲಿ ಚೈನಾ ಜಪಾನರಿಗೆ ಕಲಹವುಂಟಾಗಿ ಹಲವರು ಜಪಾನರು ಸಾವಿಗೆ ತುತ್ತಾದರು.

೨೮ನೇ ತಾರೀಕಿನ ದಿನ ನಡುರಾತ್ರಿಯಲ್ಲಿ ಜಪಾನರು ಚೈನಾದೇಶದ ಎಲ್ಲೆ ಕಟ್ಟೆಗೆ ನುಗ್ಗಿ ಷಾಂಘೈನ ಹತ್ತಿರದಲ್ಲಿದ್ದ ಛಾಪೆ ಎಂಬ ಊರನ್ನು ಆಕ್ರಮಿಸಲಾರಂಭಿಸಿದರು. ಜಪಾನರು ತಮ್ಮ ಆಕ್ರಮಣವನ್ನು ಪ್ರಾರಂಭಿಸುವ ಹೊತ್ತಿಗೆ ಚೈನಾದವರು ಜಪಾನರನ್ನು ತಡೆಗಟ್ಟಲು ಸಿದ್ಧರಾಗಿ ಬಂದರು. ಜಪಾನರು ಅದನ್ನು ಲಕ್ಷಿಸದೆ ಛಾಪೆ ನಗರವನ್ನೆಲ್ಲಾ ಆಕ್ರಮಿಸಿಕೊಂಡು ನಂತರ ಬೆಳಗಿನ ಜಾವ ನಾಲ್ಕುವರೆ ಗಂಟೆಯ ಹೊತ್ತಿನಲ್ಲಿ ಆ ಊರಿನ ಮೇಲೆ ಬಾಂಬುಗಳನ್ನು ಹಾಕಿದರು.

ಬೆಳಕು ಹರಿಯುವ ಹೊತ್ತಿಗೆ ಷಾಂಘೈನಲ್ಲಿ ಕೋಲಾಹಲವುಂಟಾಯಿತು. ಎಂಟೂವರೆ ಘಂಟೆಯ ಹೊತ್ತಿಗೆ ಷಾಂಘೈನಲ್ಲಿದ್ದ ಜಪಾನಿನ 'ಕಾಸ' ಕರ್ ದ ವೇಲೆ ಯಾರೋ ಬಾಂಬು ಹಾಕಿದರೆಂಬ ಗಲಾಟೆಯುಂಟಾಗಿ ಊರನ್ನೆಲ್ಲಾ ಬಹು ಘಾಬರಿಯುಂಟಾಯಿತು. ೨೯ನೇ ತಾರೀಕಿನ ದಿನ ಪರಿಸ್ಥಿತಿಯು ಬಹು ವಿಷಮವಾಯಿತು. ಜಪಾನರು ಛಾಪೆ ನಗರದ ಮೇಲೆ ದಿನವೆಲ್ಲಾ ಬಾಂಬುಗಳನ್ನು ಹಾಕಿದರು. ಚೈನಾದವರು ಛಾಪೆ ನಗರದ ರೈಲ್ವೆ ಸ್ಟೇಷನ್ನನ್ನು ಜಪಾನರು ಆಕ್ರಮಿಸಿಕೊಳ್ಳದಂತೆ ಬಹು ಧೈರ್ಯದಿಂದ ಕಾದಾಡಿದರು. ರೈಲ್ವೆ ಸ್ಟೇಷನ್ನಿನಲ್ಲಿದ್ದ ಒಂದು ಶಸ್ತ್ರಸಜ್ಜಿತವಾದ ರೈಲುಗಾಡಿಯನ್ನು ನಾಶಪಡಿಸಲು, ಜಪಾನರು ಆ ಗಾಡಿಯ ಮೇಲೆ ವಿಮಾನಗಳಿಂದ ಬಾಂಬುಗಳನ್ನು ಹಾಕಲೆತ್ನಿಸಿದರು. ಚೈನರು ಅದನ್ನು ಕಂಡು ರೈಲನ್ನು ನಡೆಸಿಕೊಂಡು ಹೋದರು. ಜಪಾನರ ವಿಮಾನಗಳು ಆ ರೈಲು ಗಾಡಿಯನ್ನು ಬಹು ದೂರದ ವರೆಗೆ ಬೆನ್ನಟ್ಟಿಕೊಂಡು ಹೋಗುತ್ತಾ ದಾರಿಯುದ್ದಕ್ಕೂ ಬಾಂಬುಗಳನ್ನು ಹಾಕಿ ಅನಾಹುತವನ್ನು ನಡೆಸಿದರು.

ಛಾಪೆ ನಗರದ ಮೇಲೆ ಬಾಂಬುಗಳನ್ನು ಹಾಕಿದ ಪರಿಣಾಮವಾಗಿ ಆ ಊರಿನ ಬಹು ಭಾಗವು ಉರಿದು ಸುಟ್ಟು ಹೋಗಿದೆ.

ಇದಲ್ಲದೆ ಜಪಾನರ ವಿಮಾನವೊಂದು ಅಂತರರಾಷ್ಟ್ರೀಯ ಸ್ಥಾನವಾದ ಷಾಂಘೈನ ಮೇಲೆ ಕೂಡ, ಬಾಂಬು ಹಾಕಿತು. ಇದರ ಫಲವಾಗಿ ಅಲ್ಪ ಸ್ವಲ್ಪ ಅನಾಹುತಗಳೂ ಆಗಿವೆ.

ಷಾಂಘೈ ನಗರದಲ್ಲಿರುವ ವಿವಿಧ ಜನಾಂಗಗಳ ರಾಷ್ಟ್ರ ಪ್ರತಿನಿಧಿಗಳು ಜಪಾನರ ಈ ವರ್ತನೆಯನ್ನು ಬಹುವಾಗಿ ಖಂಡಿಸಿದರು. ಈ ಸುದ್ದಿಯು ತಲುಪಿದೊಡನೆಯೇ ಇಂಗ್ಲೆಂಡಿನ ಮತ್ತು ಅಮೇರಿಕೆಯ ಸರ್ಕಾರಗಳವರು ತಮ್ಮ ತಮ್ಮ ಜನಾಂಗದ ಜನರ ರಕ್ಷಣೆಗಾಗಿ ಷಾಂಘೈಗೆ ಸೇನೆಗಳನ್ನೂ ಯುದ್ಧದ ಹಡಗುಗಳನ್ನೂ ಕಳುಹಿಸಿರುವರು.

ಷಾಂಘೈ ನಗರದ ವಾಲಂಟಿಯರ್ ಸೇನೆಯವರು ನಗರದಲ್ಲಿ ಶಾಂತಿಯನ್ನು ನೆಲೆಸಲು ಬಹುವಾಗಿ ಶ್ರಮವಹಿಸಿ ಕೆಲಸ ಮಾಡಿದರಲ್ಲದೆ, ವಿವಿಧ ರಾಷ್ಟ್ರ ಪ್ರತಿನಿಧಿಗಳು ಒಟ್ಟುಗೂಡಿ ಚೈನಾ ಜಪಾನರಿಗೆ ಒಂದು ತಾತ್ಕಾಲಿಕ ಒಪ್ಪಂದವನ್ನು ಮಾಡಿಸಲೆತ್ನಿಸಿದರು. ಎರಡು ಮೂರು ದಿನಗಳ ವರೆಗೆ ಷಾಂಘೈ ಬಿಟ್ಟು ಮಿಕ್ಕ ಸ್ಥಳಗಳಲ್ಲಿ ಚೈನಾದವರಿಗೂ ಜಪಾನರಿಗೂ ಹೊಡೆದಾಟಗಳು ನಡೆಯುತ್ತಲೇ ಇದ್ದು ಈಗ ಸ್ವಲ್ಪ ಸಮಾಧಾನ ಸ್ಥಿತಿಗೆ ಬಂದಿವೆ.

ಆದರೆ ಉಭಯಪಕ್ಷಗಳವರೂ, ಯುದ್ಧಕ್ಕೆ ಸನ್ನದ್ಧರಾಗಿ ನಿಂತಿದ್ದಾರೆ. ಈ ಮಧ್ಯೆ ಇಂಗ್ಲೀಷರ ಮತ್ತು ಅಮೇರಿಕದ ಸರ್ಕಾರಗಳವರು ಚೈನಾ ಜಪಾನರಿಬ್ಬರಿಗೂ, ತಮ್ಮ ಸಲಹೆಗಳನ್ನು ಕಳುಹಿಸಿ, ಅವೆರಡು ರಾಜ್ಯಗಳವರೂ ಅದರಂತೆ ನಡೆಯುವುದು ಯೋಗ್ಯವೆಂದು ತಿಳಿಸಿದ್ದಾರೆ. ಚೈನರು ಈ ಸಲಹೆಗಳನ್ನು ಪೂರ್ಣವಾಗಿ ಒಪ್ಪಿದ್ದಾರೆ. ಆದರೆ ಜಪಾನರು ತಾವು ಆ ಸಲಹೆಗಳನ್ನೆಲ್ಲಾ ತಾವು ಒಪ್ಪಲಾರೆವೆಂದೂ, ಮೂರು ಮಂದಿ ರಾಷ್ಟ್ರ ಪ್ರತಿನಿಧಿಗಳನ್ನು ಕರೆಸಿಕೊಂಡು ತಮ್ಮ ಅಭಿಪ್ರಾಯಗಳನ್ನವರಿಗೆ ಸೂಚಿಸಿ ಆ ಸಲಹೆಗಳ ಬಗ್ಗೆ ತಮ್ಮ ಮಾರ್ಪಾಟನ್ನು ಸೂಚಿಸುವರೆಂದೂ ತಿಳಿಸಿರುವುದಾಗಿ ಸುದ್ದಿ ಬಂದಿದೆ.

ರಾಜಕೀಯದ ವಿವರಗಳನ್ನೆಲ್ಲಾ ಪೂರ್ಣವಾಗಿ ಬಲ್ಲವರು, ಜಪಾನಿನವರ ವರ್ತನೆಯನ್ನು ಖಂಡಿಸುವುದಲ್ಲದೆ, ಅವರು ಚೈನರ ಮೇಲೆ ಯುದ್ಧಮಾಡಲು ಹೊರಟಿರುವರೆಂಬ ನಿರ್ಧಾರವನ್ನು ಕೂಡ ಅವರಿಗೆ ಕೂಡದೆ, ಯುದ್ಧದ ಮಾತೇ ಇಲ್ಲದೆ ಚೈನರ ಮೇಲೆ ಅತ್ಯಾಚಾರಗಳನ್ನು ನಡೆಸಿದ್ದೂ, ಅಂತರರಾಷ್ಟ್ರೀಯ ಕೇಂದ್ರವಾದ ಷಾಂಘೈ ನಗರದ ಮೇಲೆ ಬಾಂಬು ಹಾಕಿದ್ದೂ, ಅಲ್ಲಿ ತಮ್ಮ ಸೈನಿಕರನ್ನೆಲ್ಲಾ ಒಟ್ಟುಗೂಡಿಸಿದ್ದು ರಷ್ಯ ದೇಶಕ್ಕೆ ಸೇರಿದ ರೈಲಿನ ಅಧಿಕಾರಿಗಳು ರಷ್ಯಾ ದೇಶವು ಈ ಯುದ್ಧದಲ್ಲಿ ಭಾಗ ವಹಿಸುವುದಿಲ್ಲವಾಗಿ ಯುದ್ಧಕ್ಕೆ ಸಹಾಯಕಗಳಾದ ಜಪಾನ್ ಸೈನ್ಯಗಳನ್ನು ತಮ್ಮ ರೈಲಿನಲ್ಲಿ ಕರೆದುಕೊಂಡು ಹೋಗಲು ನಿರಾಕರಿಸಿದಾಗ ಜಪಾನರು, ಆ ರೈಲುಗಳನ್ನು ತಾನೇ ಆಕ್ರಮಿಸಿಕೊಳ್ಳಲು ಯತ್ನಿಸಿದ್ದು ತಪ್ಪೆಂದು ನಿರ್ಣಯಿಸಿರುವರು.

ಇಂಗ್ಲೆಂಡು ಅಮೇರಿಕಗಳಲ್ಲದೆ ಫ್ರಾನ್ಸ್ ಇಟಲಿ, ನಾರ್ವೆ ... ನ್ನು ದೇಶಗಳ ಸರ್ಕಾರದವರು ಕೂಡ ಈ ಯುದ್ಧವನ್ನು ನಿಲ್ಲಿಸಬೇಕೆಂಬುದಕ್ಕೆ ಸಂದೇಶಗಳನ್ನು ಕಳುಹಿಸಿರುವರು.

ಶೀಘ್ರವಾಗಿ ಶಾಂತಿ ಸ್ಥಾಪನೆಯಾಗಬಹುದೆಂದು ಊಹಿಸಲಾಗಿದೆ.

ಪ್ರ. ಮಹ.

ವಜ್ರದ ಅಡ್ಡಿಗೆ.

ಈ ಅಡ್ಡಿಗೆಗಳನ್ನು ಅಮೇರಿಕನ್ ಡೈಮಂಡ್ ಎಂಬ ಇಮಿಟೇಶನ್ ವಜ್ರದ ಕಲ್ಲುಗಳನ್ನು ಇಟ್ಟು ಕವರಿಯನ್ ಭಂಗಾರದಿಂದ ಕಟ್ಟಿದ ಕಟ್ಟಿದೆ. ಅದರ ಬಣ್ಣವು ಕೆಡದಂತೆ ಸವರನ್ ಭಂಗಾರದ ಬಣ್ಣ ಕೊಟ್ಟಿದೆ. ಈ ಕಲ್ಲುಗಳ ಪ್ರಕಾಶವು ಸಾಚಾ ವಜ್ರದ ಅಡ್ಡಿಗೆಗೆ ಸರಿಯಾಗಿದೆ. ಇದನ್ನು ನೋಡಿದವರು ೫,೦೦೦ ರೂ. ಗಳು ಕ್ರಯ ಕಟ್ಟುವರು. ಶ್ರೀಮಂತರಿಗೂ, ಗರೀಬರಿಗೂ ಉಪಯೋಗವು. ಕ್ರಯ ನಂ ೧ ರೂ. ೫–೧೨–೦ ೨ನೇ ನಂ ಗಟ್ಟಿ ಕಟ್ಟಿದ ಭಂಗಾರದ ಡಾಬು ನಂ ೧ ಕೊಡುವುದು ೪–೮–೦, ನಂ. ೨ ೩–೮–೦.

ವಿಳಾಸ:— ಕೆ. ಎಚ್. ಬೆನ್‌ಸನ್ ಅಂಡ್ ಕೋ,

12—6 ಪೋ ॥ ನಂ ॥ 1246, ಮದರಾಸು.

ಪಂಡಿತ ಮದನಮೋಹನ ಮಾಳವೀಯರು

ವೈಸರಾಯರಿಗೆ ಬರೆದ ಪತ್ರದಿಂದ.

ಮಹಾತ್ಮ ಗಾಂಧಿಯವರು ಈಗಿನ ಕಾಲದ ಅತೀ ಶ್ರೇಷ್ಠ ಹಿಂದೀಯನೆಂತಲೂ ಅವರ ಪರಿಶುದ್ಧತೆಯಿಂದಲೂ, ನಿಸ್ವಾರ್ಥತೆಯಿಂದಲೂ, ದೇಶದ ಮತ್ತು ಮನುಷ್ಯ ಜಾತಿಯ ಹಿತಕ್ಕಾಗಿ ಅವರು ಮಾಡುವ ಕೆಲಸಗಳಿಂದಲೂ, ಅವರು ಹಿಂದೂಸ್ಥಾನದ ಅಸಂಖ್ಯ ಜನರಿಂದ ಪೂಜಿಸಲ್ಪಡುತ್ತಾರೆ, ಪ್ರಪಂಚದ ಎಲ್ಲಾ ಭಾಗಗಳಿಂದಲೂ ಗೌರವಿಸಲ್ಪಡುತ್ತಾರೆಂತಲೂ ನಿಮಗೆ ತಿಳಿದಿತ್ತು. ಅವರು ಹತ್ತು ವರ್ಷಗಳಿಂದ ಹಿಂದೂಸ್ಥಾನದ ಅತಿ ಮುಖ್ಯ ರಾಜಕೀಯ ಸಂಸ್ಥೆಯಾದ ಕಾಂಗ್ರೆಸಿನ ನಾಯಕರಾಗಿದ್ದಾರೆಂತ ಮತ್ತು ಕೆಲವು ತಿಂಗಳುಗಳ ಕೆಳಗೆ ಶಾಸನ ಭಂಗದ ಚಳವಳಿ ರಭಸದಿಂದ ನಡೆಯುತ್ತಿರುವಾಗಲೇ ಬ್ರಿಟಿಷ್ ಮಂಡಲದ ಹುಕುಂ ಮೇರೆ ಇಂಡಿಯಾ ಸರಕಾರವು ಅವರೊಂದಿಗೆ ರಾಜಿ ಮಾಡಿಕೊಂಡು ಅವರನ್ನು ದುಂಡು ಮೇಜು ಪರಿಷತ್ತಿಗೆ ಕರೆಯಿಸಿಕೊಂಡಿತೆಂತಲೂ ನಿಮಗೆ ಗೊತ್ತಿತ್ತು. ಈ ವರ್ಷವೋ ಅಥವಾ ಬರುವ ವರ್ಷವೋ ಹೊಸ ರಾಜಕೀಯ ರಚನೆಯಾದಾಗ ದೇಶದ ಆಡಳಿತವನ್ನು ಮಹಾತ್ಮ ಗಾಂಧಿಯವರಿಗೆ ನೀವು ಬಹುಶಃ ಒಪ್ಪಿಸಬೇಕಾಗುತ್ತದೆ ಎಂಬುದನ್ನು ಊಹಿಸಿಕೊಳ್ಳಬಹುದು. ಅವರಿಗೆ ನೀವು ಭೇಟಿಕೊಡದಿದ್ದರೆ ದೇಶದಲ್ಲಿ ಅದ್ಭುತ ಸ್ಥಿತಿಯು ಬಂದೊದಗುತ್ತದೆ ಎಂಬುದು ನಿಮಗೆ ತಿಳಿದಿತ್ತು. ಇಂಥಾ ಮನುಷ್ಯನಿಗೆ ಹಿಂದೂ ದೇಶದ ಸರ್ಕಾರದ ತಾತ್ಕಾಲ ಮುಖಂಡರಾದ ನಿಮ್ಮ ಭೇಟಿ ದೊರಕುವ ಗೌರವವನ್ನು ನಿರಾಕರಿಸಲು ತಕ್ಕಿತ್ತು ಎಂಬುದನ್ನು ತಿಳಿಯದೆ ಹೋದದ್ದು ದುಃಖಕರವೇ ಸರಿ. ಭೇಟಿ ಕೊಡದೆ ಇದ್ದದ್ದು ಡಿಲ್ಲಿ ರಾಜಿಯಲ್ಲಿ ಹಾಕಿಟ್ಟಂತ ಸ್ನೇಹದ ವರ್ತನೆಗೆ ವಿರೋಧವಾಗಿ ವರ್ತಿಸಿದ್ದೇ ಆಯಿತು.

ನೀವೂ, ನಿಮ್ಮ ಸರ್ಕಾರವೂ ಇನ್ನೂ ಒಂದು ಮಾಡಿದಿರಿ. ಕಾನೂನಿನ ಆಡಳಿತದ ಬದಲಿಗೆ ಆರ್ಡಿನೇನ್ಸ್‌ಗಳ ಆಡಳಿತವನ್ನು ಪ್ರಾರಂಭಿಸಿದ್ದೀರಿ. ನಿಮಗೂ, ಗಾಂಧಿಯವರಿಗೂ ನಡೆದ ಪತ್ರವ್ಯವಹಾರದಲ್ಲೂ, ಅನಂತರ ಸರ್ಕಾರವು ಹೊರಡಿಸಿದ ಪತ್ರಗಳಲ್ಲೂ ಆರ್ಡಿನೇನ್ಸ್‌ಗಳ ಅವಶ್ಯಕತೆಯನ್ನು ತೋರಿಸಲು ಪ್ರಯತ್ನಿಸಿದ್ದೀರಿ. ಗವರ್ನಮೆಂಟ್ ಆಫ್ ಇಂಡಿಯಾ ಆಕ್ಟಿನಲ್ಲಿ ಹಿಂದೂಸ್ಥಾನದ ಶಾಂತಿ ಸ್ಥಾಪನೆಗಾಗಿಯೂ ಒಳ್ಳೇ ರೀತಿಯ ಆಡಳಿತ ನಡೆಸುವ ಬಗ್ಗೆ ತುರ್ತ ಸಂದರ್ಭದಲ್ಲಿ ಆರ್ಡಿನೇನ್ಸ್ ಮಾಡುವ ಹಕ್ಕೇನೋ ನಿಮಗೆ ಇದೆ.

ಶಾಸನ ಮಂಡಲಗಳಿರುವಲ್ಲಿ ಅವುಗಳ ಅನುಮತಿ ಪಡೆಯಲು ಅವಕಾಶವಿದ್ದರೆ ಅದನ್ನು ಪಡೆಯಲೇ ಬೇಕೆಂತ ಶಾಸನದ ಅರ್ಥವಾಗುತ್ತದೆ. ಶಾಸನ ಮಂಡಲದಲ್ಲಿ ಚರ್ಚೆಯಾಗಲು ಅವಕಾಶ ಕೊಟ್ಟರೆ ಸರ್ವ ಜನರಿಗೂ ಅದರ ಕಲಂಗಳು ತಿಳಿಯುತ್ತವೆ ಮತ್ತು ಪ್ರಜಾಪ್ರತಿನಿಧಿಗಳು ಅವುಗಳನ್ನು ತಿದ್ದುಪಡಿ ಮಾಡುತ್ತಾರೆ. ಆರ್ಡಿನೇನ್ಸ್‌ಗಳನ್ನು ಗವರ್ನರ್ ಜನರಲರೇ ಮಾಡಬಹುದಾದರೂ ಪ್ರಜಾ ಜನರಿಗೆ ಮೇಲ್ಕಂಡ ಅನುಕೂಲಗಳಿರುವುದಿಲ್ಲ. ಅವಶ್ಯವಿಲ್ಲದೆ ಹುರುಪಾಗಿ ಆರ್ಡಿನೇನ್ಸ್‌ಗಳನ್ನು ಮಂಜೂರು ಮಾಡುವ ಮತ್ತು ಆಡಳಿತ ನಡೆಸುವ ಅಧಿಕಾರಿಗಳಿಗೆ ಅವಶ್ಯವಿರುವುದಕ್ಕಿಂತ ಹೆಚ್ಚಿಗೆ ಅಧಿಕಾರ ಆರ್ಡಿನೇನ್ಸ್‌ಗಳಲ್ಲಿ ಕೊಡುವ ಸಂಭವಗಳೂ ಇವೆ. ಶಾಸನ ಮಂಡಲಿ ಇರುವಾಗ ಗವರ್ನರ್ ಜನರಲ್ ಆರ್ಡಿನೇನ್ಸ್ ಮಾಡಲು ಇರುವ ತನ್ನ ಹಕ್ಕನ್ನು ಬಹಳ ಅಪರೂಪವಾಗಿ ಉಪಯೋಗಿಸಬೇಕೆಂತಲೇ ಅರ್ಥ. ಈಗ ಜಾರಿಗೆ ತಂದಿರುವ ಆರ್ಡಿನೇನ್ಸ್‌ಗಳನ್ನು ನೀವು ಹೊರಡಿಸುವಾಗ ಈ ಎಲ್ಲಾ ವಿಷಯಗಳನ್ನು ನೀವು ಯೋಚಿಸಲಿಲ್ಲವೆಂತಲೇ ನಂಬುತ್ತೇನೆ.

ಉದಾಹರಣೆಗಾಗಿ ಬಂಗಾಳದ ಆರ್ಡಿನೇನ್ಸನ್ನು ತೆಗೆದುಕೊಳ್ಳುವ. ಬಂಗಾಳದಲ್ಲಿ ನಡೆಯುತ್ತಿರುವ ಕೊಲೆಪಾತಕಗಳನ್ನು ನಾನು ಪೂರ್ಣಪೂರ್ತಿ ಖಂಡಿಸಿ ಅವುಗಳಿಗಾಗಿ ತುಂಬಾ ವ್ಯಸನಪಡುತ್ತೇನೆ. ಆತ್ಮರಕ್ಷಣೆಗಾಗಿಯಾಗಲೀ ಅಥವ ತನ್ನ ರಾಜ್ಯವನ್ನು ಮುತ್ತಿಗೆ ಹಾಕಿದಾಗ ಹಾಗೆ ಮುತ್ತಿಗೆ ಹಾಕಿದವನನ್ನಾಗಲೀ ಹೊರತು ವಿನಾಯಿತಿ ಬೇರೆ ಸಂದರ್ಭಗಳಲ್ಲಿ ಒಬ್ಬನನ್ನು ಇನ್ನೊಬ್ಬನು ಕೊಲ್ಲುವುದು ಮಹಾಪಾಪವೆಂತ ನಾನು ನಂಬುತ್ತೇನೆ. ಬಂಗಾಳಕ್ಕಾಗಿ ತಾವು ಮಂಜೂರು ಮಾಡಿದ ಅತಿ ಕಠಿಣವಾದ ಮತ್ತು ದಬ್ಬಾಳಿಕೆಗೆ ಅವಕಾಶಕೊಡುವ ಆರ್ಡಿನೇನ್ಸನ್ನು ನಾನು ಖಂಡಿಸುತ್ತೇನೆ. ಹಿಂದೂಸ್ಥಾನದಲ್ಲಿ ಎಂದೂ ಹೊರಡದಂಥ ಕಠಿಣ ತರದ ಆರ್ಡಿನೇನ್ಸ್ ಇದೆ. ಅದರ ಕಲಂಗಳು ಅನ್ಯಾಯವಾದವು ಮತ್ತು ನಿರಂಕುಶ ಅಧಿಕಾರ ಕೊಡುವವೂ ಆಗಿವೆ ಮತ್ತು ನಿರಪರಾಧಿ ಪ್ರಜಾಜನರನ್ನು ಕಷ್ಟಕ್ಕೂ, ನಷ್ಟಕ್ಕೂ, ಅವಮರ್ಯಾದೆಗೂ ಗುರಿಪಡಿಸುವಂಥವಾಗಿವೆ. ಸರಕಾರವು ಯುಕ್ತವಾದ ಆಳ್ವಿಕೆಯ ರೀತಿಯನ್ನು ಅನುಸರಿಸಿದ್ದರೆ ಜನರ ಅನುಮತಿಯೊಡನೆ ನಿಷ್ಪಕ್ಷ ನ್ಯಾಯಯುಕ್ತನಾಗಿ ಆಳಲು ಪ್ರಾರಂಭಿಸಿದ್ದರೆ ಬಹಳ ಕಾಲದ ಮೊದಲೆಯೇ ಈ ಕ್ರಾಂತಿಕಾರಿಗಳು ಇಲ್ಲದೆ ಹೋಗುತ್ತಿದ್ದರು. ಅದು ಸಾಧ್ಯವಾಗದಿದ್ದರೂ ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರ ಕೊಡಬೇಕೆಂತ ಸರಕಾರದ ಇಷ್ಟವಾಗಿದ್ದರೆ 1925 ರಲ್ಲಿ ಮಾಡಿದಂತೆ ಶಾಸನ ಮಂಡಲಿಯ ಮೂಲಕ ಹೊಸ ಶಾಸನಗಳನ್ನು ಮಾಡಿಕೊಳ್ಳಬಹುದಿತ್ತು. ಆದರೆ ಸರ್ಕಾರವು ಇಂಥಾ ಕಠಿಣ ತರದ ಆರ್ಡಿನೇನ್ಸನ್ನು ಜಾರಿಗೆ ತಂದು ಜನರ ಮನಸ್ಸನ್ನು ನೋಯಿಸಿತು. ನಾನೂ ಮಹಾತ್ಮ ಗಾಂಧಿಯವರು ಇಂಗ್ಲೆಂಡಿನಲ್ಲಿದ್ದಾಗ ಆರ್ಡಿನೇನ್ಸ್‌ಗಳ ಕಲಂಗಳನ್ನು ನೋಡಿ ತುಂಬಾ ನೋವಾಯಿತು. ದುಂಡು ಮೇಜು ಪರಿಷತ್ತು ನಡೆಯುತ್ತಿರುವಾಗಲೇ ಇಂಥಾ ಆರ್ಡಿನೇನ್ಸ್ ಹೊರಟದ್ದು ತುಂಬಾ ಅನ್ಯಾಯವಾಯಿತೆಂತಲೂ ಅದನ್ನು ಕೂಡಲೇ ರದ್ದುಪಡಿಸಬೇಕೆಂತಲೂ ಅಥವ ಅದರ ಅತಿ ದುಷ್ಟಭಾಗಗಳನ್ನು ತೆಗೆದು ಹಾಕಿ ತಿದ್ದುಪಡಿಯಾದರೂ ಆಗಬೇಕೆಂತ ನಾನು ವಾದಿಸಿದೆ. ಮಹಾತ್ಮ ಗಾಂಧಿಯವರು ಇದರ ಕುರಿತು ಮಂತ್ರಿಯವರ ಮುಂದೆ ಸಂಭಾಷಣೆಯಲ್ಲಿ ಮಾತಾಡಿದರು. ಇತರ ಪ್ರಮುಖ ಹಿಂದೀಯರೂ ಹಾಗೆಯೇ ಮಾಡಿದರು. ಈ ವಿಷಯದಲ್ಲಿ ನೀವು ಮುಂದರಿಸುವಂತೆ ಕೇಳಿಕೊಳ್ಳಬೇಕೆಂತ ತೀರ್ಮಾನವಾಯಿತು. ನಾವು ಕೆಲವರು ಹೇಳಿದ ಸಲಹೆಗಳನ್ನು ಗಣನೆಗೆ ತೆಗೆದುಕೊಳ್ಳುವುದಾಗಿ ಸ್ಟೇಟ್ ಸೆಕ್ರೆಟರಿಯವರು ಹೇಳಿದ್ದರು. ಮಹಾತ್ಮ ಗಾಂಧಿಯವರು ಬಂಗಾಳಕ್ಕೆ ಹೋಗಿ ಕ್ರಾಂತಿಕಾರಿಗಳನ್ನು ಅವರ ದಾರಿಯಿಂದ ವಿಮುಖರಾಗಿಸುವಂತೆ ಪ್ರಯತ್ನಿಸಬೇಕೆಂತ ಗೊತ್ತಾಗಿತ್ತು. ತಪ್ಪುದಾರರು ಶಿಕ್ಷೆಗೆ ಗುರಿಯಾಗಲೇಬೇಕು. ಆದರೆ ಅವರ ದಿಗೆ ಒಟ್ಟು ವಿಚಾರ ಮಾಡಬೇಕು. ಒಟ್ಟು ಜನಸಮುದಾಯವೇ ದಬ್ಬಾಳಿಕೆಗೆ ಗುರಿಪಡಿಸಲ್ಪಡಬಾರದೆಂಬುದೇ ಉದ್ದೇಶ. ರಾಜಕೀಯ ರಚನೆಗೆ ಅವಶ್ಯವಾದ ಶಾಂತಿಯುಕ್ತವಾದ ವಾತಾವರಣವು ಉತ್ಪನ್ನವಾಗುವಂತೆ ಮಾಡಬೇಕೆಂಬುದೇ ಉದ್ದೇಶ. ಆದರೆ ತಾವು ದುಡುಕಿನಲ್ಲಿ ಮಾಡಿದ ಕಾರ್ಯಗಳಿಂದ ಈ ಉದ್ದೇಶಗಳನ್ನು ಸಾಧಿಸುವುದು ಅಸಾಧ್ಯವಾಯಿತು.

ಇನ್ನು ಏನೆಂದರೆ ದುಂಡು ಮೇಜು ಪರಿಷತ್ತು ನಡೆಯುತ್ತಿರುವಾಗಲೇ ಸಂಯುಕ್ತ ಪ್ರಾಂತ್ಯದ ಇನ್ನೊಂದು ಕಠಿಣ ತರದ ಆರ್ಡಿನೇನ್ಸನ್ನು ಜಾರಿಗೆ ತರಲಾಯಿತು. ಬಂಗಾಳ ಆರ್ಡಿನೇನ್ಸಿನಂತೆ ಅಲ್ಲಿನ ಕೊಲೆಪಾತಕಗಳಾದರೂ ಕಾರಣವೆಂತ ಹೇಳಬಹುದಾದರೂ ಸಂಯುಕ್ತ ಪ್ರಾಂತ್ಯದ ಆರ್ಡಿನೇನ್ಸಿಗೆ ಏನೂ ಕಾರಣವಿಲ್ಲ. ಈ ಸಂಬಂಧವಾಗಿ ನೀವು ಹೇಳುವದೇನೆಂದರೆ 'ಸರಕಾರವು ಕಾಂಗ್ರೆಸ್ ಮುಖಂಡರೊಂದಿಗೆ ಗೇಣಿ ಸಂಬಂಧ ವಿಷಯ ಚರ್ಚೆ ಮಾಡುತ್ತಿರುವಾಗಲೇ ಕಾಂಗ್ರೆಸಿನವರು ಗೇಣಿ ಕೊಡಬಾರದೆಂಬ ಚಳವಳ ಹೂಡಿದರು. ಅದನ್ನು ತಡೆಯದೆ ಬಿಟ್ಟಿದ್ದರೆ ದೇಶದೊಳಗಿನ ಎರಡು ಪಂಗಡಗಳೊಳಗೆ ಯುದ್ಧವಾಗುತ್ತಿತ್ತು.' ಇದನ್ನು ವಿಮರ್ಶಿಸೋಣ. ಆ ಪ್ರಾಂತ್ಯದಲ್ಲಿ ಕೃಷಿಕರಿಗೆ ಗೋಳು ಇತ್ತು. ಬೆಳೆಗಳು ಕೆಟ್ಟು ಹೋಗಿಯೂ, ಬೆಲೆ ಬಿದ್ದು ಹೋಗಿಯೂ ಕೃಷಿಕರು ತುಂಬಾ ಕಷ್ಟಕ್ಕೆ ಗುರಿಯಾಗಿದ್ದರು. ತಪ್ಪಿ ಮಾಡಬೇಕೆಂತ ಕೇಳುವುದರಲ್ಲಿ ನ್ಯಾಯವಿದೆ. ಸರ್ಕಾರವು ತುಂಬಾ ರಿಯಾಯಿತಿ ತೋರಿಸಿತು. ರೈತರು ಆ ರಿಯಾಯಿತಿಯು ಸಾಲದೆನ್ನುತ್ತಿದ್ದರು. ಈ ವಿಷಯದಲ್ಲಿ ಸರ್ಕಾರಕ್ಕೂ, ಕಾಂಗ್ರೆಸಿಗೂ ಚರ್ಚೆನಡೆದು ಒಂದು ಸಭೆ ಸೇರಿಸಿ ಚರ್ಚಿಸಬೇಕೆಂತ ತೀರ್ಮಾನವಾಗಿತ್ತು. ಗೇಣಿ ಕೊಡುವ ಕಾಲ ಬಂದಿದ್ದರೂ ಸಭೆ ನಡೆಯಲಿಲ್ಲ. ಚರ್ಚೆ ನಡೆಯುತ್ತಿರುವಾಗಲೇ ಮೊದಲನೇ ಕಂತಿನ ಹಣದ ವಸೂಲಿ ತರದೂದು ನಡೆಯಿತು. ರೈತರಿಗೆ ತಮ್ಮ ಹಿಡುವಳಿಗಳನ್ನು ಬಿಡಿಸಿ ಬಿಡುತ್ತಾರೆಂಬ ಭಯ ಹುಟ್ಟಿತು. ರೈತರು ಕಾಂಗ್ರೆಸಿನ ಆಲೋಚನೆ ಕೇಳಿದ್ದಕ್ಕೆ ಚರ್ಚೆ ನಡೆಯುತ್ತಿರುವುದರ ಫಲಿತಾಂಶವು ಏನಾಗುತ್ತೆಂತ ತಿಳಿಯುವವರೆಗೆ ಮುಂಗಾಮಿಯಾಗಿ ಗೇಣಿ ಕೊಡಬೇಡಿ ಎಂತ ಕಾಂಗ್ರೆಸ್ ಹೇಳಿತು. ಈ ಚಳವಳವನ್ನು ನಿಲ್ಲಿಸಿದ ವಿನಹ ಸರಕಾರವು ಈ ಸಂಬಂಧವಾದ ಚರ್ಚೆಯನ್ನು ಮುಂದರಿಸುವುದಿಲ್ಲವೆಂತ ಸರಕಾರವು ಕಾಂಗ್ರೆಸ್ ಕಮಿಟಿಗೆ ತಿಳಿಸಿದ್ದಕ್ಕೆ ವಸೂಲ್ ತಡೆಯದನ್ನು ನಿಲ್ಲಿಸಿದ ವಿನಹ ಚಳವಳವನ್ನು ನಿಲ್ಲಿಸಲು ಸಾಧ್ಯವಿಲ್ಲವೆಂತ ಕಾಂಗ್ರೆಸ್ ತಿಳಿಸಿತು. ಇದಕ್ಕೆ ಸರಕಾರವು ಒಪ್ಪಲಿಲ್ಲ. ಆದ್ದರಿಂದ ಈ ಚಳವಳವು ಪ್ರಾರಂಭವಾದದ್ದಕ್ಕೆ ಕಾಂಗ್ರೆಸಿನಷ್ಟೇ ಜವಾಬ್ದಾರಿಯು ಸರಕಾರದ ಮೇಲೂ ಇದೆ.

ಈ ರೀತಿ ಒಪ್ಪಂದಕ್ಕೆ ಬರಲು ಸಾಧ್ಯವಿಲ್ಲದಿದ್ದರೂ ಆರ್ಡಿನೇನ್ಸಿನ ಅವಶ್ಯಕತೆ ಇರಲಿಲ್ಲ. ಸರಕಾರವು ರೈತರಿಗೆ ತುಂಬಾ ರಿಯಾಯಿತಿ ತೋರಿಸಿತ್ತು. ಯಾವ ಚಳವಳವನ್ನಾದರೂ ಆಗ ಜಾರಿಯಲ್ಲಿದ್ದ ಕಾನೂನುಗಳಿಂದಲೇ ಅಡಗಿಸಬಹುದಿತ್ತು. ಆರ್ಡಿನೇನ್ಸನ್ನು ಹೊರಡಿಸುವಾಗ ಸರಕಾರವು ಕೊಟ್ಟ ಕಾರಣಗಳನ್ನು ಜಾಗರೂಕತೆಯಿಂದ ಅವಲೋಕಿಸಿ ನೋಡಿದೆನು. ಅದರಲ್ಲಿ ತಕ್ಕಷ್ಟು ಕಾರಣವಿದ್ದಂತೆ ತೋರಲಿಲ್ಲ. ಕಳೆದ ವರ್ಷ ಮಾರ್ಚಿಯಲ್ಲೇ ಪಂಡಿತ ಜವಾಹಿರ್‌ಲಾಲರು ಗ್ರಾಮಾಂತರಗಳಲ್ಲಿ ಕಾಂಗ್ರೆಸಿನ ಕೆಲಸವು ಚೆನ್ನಾಗಿ ನಡೆಯುವ ಬಗ್ಗೆ ಕೆಲಸಗಾರರನ್ನು ಕಳುಹಿಸಿದರೆಂತಲೂ, ಮಹಾತ್ಮ ಗಾಂಧಿಯವರು ಇಂಗ್ಲೆಂಡಿಗೆ ಹೋದ ಕೂಡಲೇ ತಮ್ಮ ಸ್ಥಿತಿಯನ್ನು ಭದ್ರಪಡಿಸುವ ಕೆಲಸ ಮಾಡಬೇಕೆಂತ ಹೇಳಿಕೊಂಡರೆಂತಲೂ ಸರಕಾರವು ಕೊಟ್ಟ ಕಾರಣಗಳಾಗಿವೆ. ಇದರಲ್ಲಿ ಏನು ತಪ್ಪಿದೆ? ಮುಂದಿನ ಹೋರಾಟದಲ್ಲಿ ಗಂಡಸರು ಹೋದ ನಂತರ ಹೆಂಗಸರೇ ಮುಂದಾಳುಗಳಾಗಲು ತಯಾರಾಗಬೇಕೆಂತ ಕಾಂಗ್ರೆಸಿನವರು ಹೇಳಿದರೆಂಬುದು ಇನ್ನೊಂದು ತಪ್ಪು. ಇದರಲ್ಲಿ ತಪ್ಪೇನಿದೆ. ಇದ್ದರೂ ಇಂಥಾ ಕಠಿಣ ತರದ ಆರ್ಡಿನೇನ್ಸನ್ನು ಜಾರಿಗೆ ತರುವಷ್ಟು ತಪ್ಪೇನಿದೆ? ಆರ್ಡಿನೇನ್ಸಿನ ಬದಲಿಗ ರೈತರ ಕಷ್ಟವನ್ನು ಇನ್ನೂ ಅವಲೋಕಿಸಿ ಹಣದ ಪಂಚಾಯಿತಿ ಕೊಟ್ಟಿದ್ದರೆ ಚಳವಳವು ಹುಟ್ಟುತ್ತಲೇ ಇರಲಿಲ್ಲ.

ವಾಯವ್ಯ ಸರಹದ್ದಿನ ಪ್ರಾಂತ್ಯದ ಇನ್ನೊಂದು ಕಠಿಣವಾದ ಆರ್ಡಿನೇನ್ಸನ್ನು ಜಾರಿಮಾಡಲು ಮುಖ್ಯ ಕಾರಣವು ಯಾವುದೆಂದರೆ—ಬೇರೆ ಪ್ರಾಂತ್ಯಗಳಲ್ಲಿ ಜಾರಿಯಲ್ಲಿರುವ ರಾಜಕೀಯ ರಚನೆಯನ್ನು ಆ ಪ್ರಾಂತ್ಯದಲ್ಲಿ ಕೂಡಲೇ ಕೊಡಲಾಗುವುದು ಎಂತ ಸರಕಾರವು ಹೇಳಿದರೂ ಇದರಿಂದ ಖಾನ್ ಅಬ್ದುಲ್ ಗಫರ್ ಖಾನ್ ಸಾಹೇಬರು ಉತ್ಸಾಹಭರಿತರಾಗಲಿಲ್ಲ ದರ್ಬಾರಿಗೆ ಬರಲಿಲ್ಲ ಎಂಬುದು. ಬೇರೆ ಪ್ರಾಂತ್ಯಗಳ ರಾಜಕೀಯ ರಚನೆಯು ತೃಪ್ತಿಕರವಾದದ್ದಲ್ಲವೆಂತ ಸರಕಾರವೇ ಒಪ್ಪುತ್ತಿರುವಾಗ ಸರಹದ್ದಿನ ಜನರಿಗೆ ಅದರಲ್ಲಿ ಉತ್ಸಾಹ ಹುಟ್ಟದಿದ್ದರೆ ಆರ್ಡಿನೇನ್ಸ್ ಜಾರಿಗೆ ಬರಬೇಕೇ?

ಖಾನ್ ಅಬ್ದುಲ್ ಗಫರ್‌ಖಾನರ ಮೇಲೆ ಸರಕಾರದ ಇನ್ನೊಂದು ತಕ್ಕರಾರೆಯೇನೆಂದರೆ ಇವರು ಸಂಪೂರ್ಣ ಸ್ವಾತಂತ್ರ್ಯ ಬೇಕೆಂತ ಕೇಳಿದರೆಂಬುದು. ಹಿಂದೂಸ್ಥಾನದ ಪ್ರತಿಯೊಬ್ಬನೂ ತನ್ನ ದೇಶಕ್ಕೆ ಸಂಪೂರ್ಣ ಸ್ವಾತಂತ್ರ್ಯವನ್ನು ಬಯಸುವುದು ಅವರ ಜನ್ಮ ಸಿದ್ಧ ಹಕ್ಕೆಂತ ಎಲ್ಲಾ ನ್ಯಾಯಬುದ್ಧಿಯ ಬ್ರಿಟಿಷರೂ ತಿಳಿದುಕೊಂಡಿದ್ದಾರೆಂತ ಯೋಚಿಸಿದ್ದೆ. ಹಿಂದೂಸ್ಥಾನಕ್ಕೂ, ಬ್ರಿಟನಿಗೂ ಒಳ್ಳೇದಾಗಬೇಕಾದರೆ ಎರಡು ರಾಜ್ಯಗಳೂ ಒಂದೇ ಸಮನಾದ ಹಕ್ಕುಗಳುಳ್ಳದ್ದಾಗಬೇಕು ಎಂತ ನಾವು ನಂಬುತ್ತೇವೆ. ಒಬ್ಬ ವ್ಯಕ್ತಿಯು ಸ್ನೇಹಿತನೂ, ಆಳಿಯೂ ಒಂದೇ ಸಾರಿ ಆಗಿರುವುದು ಸಾಧ್ಯವಿಲ್ಲ. 1930 ರಲ್ಲಿ ಸಂಪೂರ್ಣ ಸ್ವಾತಂತ್ರ್ಯವೇ ಹಿಂದೂಸ್ಥಾನದ ಧ್ಯೇಯವೆಂತ ಠರಾವು ಪಾಸಾಯಿತು. ಡಿಲ್ಲಿ ತಾತ್ಕಾಲಿಕ ರಾಜಿಯಲ್ಲಿ ಸಹ ಸಂಪೂರ್ಣ ಸ್ವಾತಂತ್ರ್ಯವೇ ಬೇಕೆಂತ ತಾನು ದುಂಡು ಮೇಜು ಪರಿಷತ್ತಿನಲ್ಲಿ ವಾದಿಸುವ ಹಕ್ಕು ತನಗಿರಬೇಕೆಂತ ಮಹಾತ್ಮ ಗಾಂಧಿಯವರು ಕೇಳಿದ್ದರು. ಅದರಂತೆಯೇ ವಾದಿಸಿದರು. ಇದಕ್ಕೆ ಸರಕಾರವು ಅಡ್ಡಿಮಾಡಲಿಲ್ಲ. ಹೀಗಿರುವಾಗ ಸಂಪೂರ್ಣ ಸ್ವಾತಂತ್ರ್ಯವೇ ಬೇಕೆಂತ ಖಾನ್ ಸಾಹೇಬರು ಹೇಳಿದ್ದರಲ್ಲಿ ತಪ್ಪೇನು? ಸರಕಾರದ ವರ್ತನೆಯಿಂದ ಶಾಂತಿ ಸ್ಥಾಪನೆಯಾಗುವ ಬದಲು ಇನ್ನೂ ಅತೃಪ್ತಿಯೇ ಹೆಚ್ಚಿತು.

ಪ್ರಿಯ ಮುಖಂಡರನ್ನು ದಸ್ತಗಿರಿ ಮಾಡಿದಾಗ ಜನರ ಗುಂಪು ಸೇರುವುದು ಸ್ವಾಭಾವಿಕ. ಲಾಠಿ ಚಾರ್ಜು ನಡೆಯಿತು. ಕೆಲವರು ಪೋಲೀಸರಿಗೆ ಕಲ್ಲು ಎಸೆದರು, ಪೋಲೀಸರು ಗುಂಡು ಹಾರಿಸಿದರು. 14 ಜನರು ಸತ್ತರು, 25 ಜನರಿಗೆ ಘಾಯವಾಯಿತು ಎಂತ ಸರ್ಕಾರದ ಲೆಕ್ಕ. ಇದರ ನಿಜವಾದ ಸಂಖ್ಯೆ ತಿಳಿಯಲು ತನಿಖೆಯಾಗಬೇಕಷ್ಟೆ. ಹೇಗೂ ನಿಶ್ಶಸ್ತ್ರರಾದ ಅಹಿಂಸಾಯುಕ್ತರಾದ 14 ಜನರನ್ನಾದರೂ ಕೊಲ್ಲಬೇಕಾದಷ್ಟು ಅವಶ್ಯವಿತ್ತೇ?

ರಾಜಿ ಮಾರ್ಗದಲ್ಲಿ ಸರ್ಕಾರದಲ್ಲಿ ಹೋಗಬೇಕೆಂತ ಇದ್ದರೂ ಕಾಂಗ್ರೆಸ್ಸೇ! ಅದಕ್ಕೆ ಮುಳ್ಳು ಹಾಕಿತು ಎಂಬುದಕ್ಕೆ ಪ್ರಾಂತೀಕ ಸರ್ಕಾರಗಳ ಪತ್ರಗಳಿಂದ ಆಧಾರ ದೊರಕುವದಿಲ್ಲ. ಸರಹದ್ದಿನ ಪ್ರಾಂತ್ಯದ ಆರ್ಡಿನೇನ್ಸನ್ನು ಒಂದು ವಾರದ ವರೆಗೂ ಸಂಯುಕ್ತ ಪ್ರಾಂತ್ಯದ ಆರ್ಡಿನೇನ್ಸನ್ನು 15 ದಿನಗಳವರೆಗೂ ಜಾರಿಗೆ ತಂದೆ ಇದ್ದಿದ್ದರೆ ಗಾಂಧೀಜೀಯವರಿಗೆ ಶಾಂತ ರೀತಿಯ ದಾರಿಯಲ್ಲೇ ಮುಂದರಿಸಲು ಸಾಧ್ಯವಿದೆಯೋ ಎಂತ ಅವಲೋಕಿಸಲು ಸಮಯ ದೊರಕುತ್ತಿತ್ತು.

ಒಂದು ವರ್ಷದ ವರೆಗೆ ಬಲವಾಗಿ ಆಳಿದನಂತರ ನಿಮಗಿಂತ ಮೊದಲಿನ ವೈಸರಾಯರು ಕಾಂಗ್ರೆಸಿನವರೊಂದಿಗೆ ಕಳೆದ ವರ್ಷ ರಾಜಿ ಮಾಡಿಕೊಂಡಾಗ ಹಿಂದುಸ್ಥಾನದಲ್ಲಿದ್ದ ಅನೇಕ ಯುರೋಪಿಯನರಿಗೆ ಅಧಿಕಾರಿಗಳು ಅಧಿಕಾರವಿಲ್ಲದವರು ಸಹ ರಾಜಿ ಮಾಡಿಕೊಂಡದ್ದು ಸಮ್ಮತವಾಗಲಿಲ್ಲ. ದುಂಡು ಮೇಜ ಪರಿಷತ್ತೇ ಅವರಿಗೆ ಒಪ್ಪಿಗೆ ಇರಲಿಲ್ಲ. ಕಾಂಗ್ರೆಸ್ ಭಾಗ ತೆಗೆದುಕೊಳ್ಳುವುದಂತೂ ಅಷ್ಟೂ ಒಪ್ಪಿಗೆ ಇರಲಿಲ್ಲ. ಇಂಗ್ಲೆಂಡಿನಲ್ಲಿ ಕೆಲವು ಕನ್ಸರ್ವೇಟಿವ್ ಮತ್ತು ಕಠಿಣ ವಾದಿಗಳು ಲಾರ್ಡ್ ಇರ್ವಿನರ ತತ್ವವನ್ನು ಸಂಪೂರ್ಣವಾಗಿ ಬಹಿರಂಗವಾಗಿ ವಿರೋಧಿಸಿದರು. ಆದರೂ ಲೇಬರ್ ಪಾರ್ಟಿಯ ಸರ್ಕಾರವಾದ್ದರಿಂದ ಲಾರ್ಡ್ ಇರ್ವಿನರ ರೀತಿಯೇ ಜಾರಿಯಾಯಿತು. ದುಂಡು ಮೇಜು ಪರಿಷತ್ತಿನ ಕಾರ್ಯವು ಮುಂದರಿಯಿತು. ಕನ್ಸರ್ವೇಟಿವ್ ಪಕ್ಷದವರು ಬಹಳ ಹೆಚ್ಚಾಗಿ ಪಾರ್ಲಿಮೆಂಟಿಗೆ ಚುನಾಯಿತರಾದರು. ಬಲವಾದ ಕನ್ಸರ್ವೇಟಿವ್ ಪಕ್ಷದವರೊಬ್ಬರು ಸ್ಟೇಟ್ ಸೆಕ್ರೆಟರಿಯಾಗಿ ಚುನಾಯಿತರಾದರು. ಕಾಂಗ್ರೆಸಿನ ಬಲವು ಬೆಳೆಯಿತ್ತು. ಇನ್ನೂ ಬೆಳೆಯುವುದರಲ್ಲಿತ್ತು. ಸಂಪೂರ್ಣ ಸ್ವಾತಂತ್ರ್ಯದ ತಿರುಳು ದೊರೆತ ವಿನಹ ಹಿಂದುಸ್ಥಾನಕ್ಕೆ ಸಮಾಧಾನವಾಗುವ ಸಂಭವವಿರಲಿಲ್ಲ. ನೀವೂ, ಸ್ಟೇಟ್ ಸೆಕ್ರೆಟರಿಯವರೂ ಸರ್ಕಾರದ ಧ್ಯೇಯವನ್ನು ಬದಲಾಯಿಸಲು ನಿಶ್ಚಯಿಸಿದಂತೆ ತೋರುತ್ತದೆ. ನೀವು ಕಲ್ಕತ್ತಾದಲ್ಲಿ ತಾ. 20—12—31 ರಲ್ಲಿ ಮಾಡಿದ ಭಾಷಣದಲ್ಲಿ ಇದರ ಸೂಚನೆ ಇತ್ತು. 'ಹಿಂದೂಸ್ಥಾನದ ಅಧಿಕಾರಿಗಳಲ್ಲೂ, ಅಧಿಕಾರದಲ್ಲಿ ಇಲ್ಲದವರಲ್ಲೂ ಸರ್ಕಾರವು ಕೆಲವು ತಿಂಗಳುಗಳಿಂದ ಅನುಸರಿಸಿದ ದಾರಿಯನ್ನು ಕುರಿತು ಸಂಶಯ ಹುಟ್ಟಿದೆ. ಈಗ ನಮ್ಮ ಧ್ಯೇಯದ ಕುರಿತು ಸಂಶಯ … ದರಲಿ, ರಾಜಕೀಯ ರಚನೆಯ ಕಾರ್ಯವನ್ನು ಆದಷ್ಟು ಶೀ… ದಲ್ಲಿ ಮುಂದರಿಸುತ್ತೇವೆ. ಆದರೆ ಕಾನೂನಿಗೆ ವಿರೋ… ವರ್ತಿಸುವ ಚಳವಳವನ್ನೇ ನಾವು ಬೆಳೆಯಲು… ಶಾಂತಿ ಸ್ಥಾಪನೆಗೆ ಸರ್ವ ಪ್ರಯತ್ನವೂ ಮಾಡ್ಯ… ಹಿಂದೂಸ್ಥಾನದ ಅಧಿಕಾರ ಬೇಡಿಕೆಗಳಿಗೆ ಅಷ್ಟು ಬೇ… ಸ್ವಸ್ಥ ಮನಸ್ಸಿನ ಆಗಲೀ ಮುಂದಿನ ಪ್ರಾಂತೀಕ ಸ… ಪೂರ್ಣ ಅಧಿಕಾರ ಕೊಡಲಾಗುವುದು.' ಎಂತ ಹೇ… ಈ ಉದ್ಗಾರವನ್ನು ಸ್ಟೇಟ್ ಸೆಕ್ರೆಟರಿಯವ… ಯಿಂದಲೇ ಪಡೆದಿರಿ.

ಪು. 78.

ಇದರಿಂದ ತಿಳಿಯುವುದೇನೆಂದರೆ—ಮಹಾ… ವರು ಹಿಂದುಸ್ಥಾನಕ್ಕೆ ತಲುಪುವ ಮುಂಚೆಯೇ ಕಾಂಗ್ರೆಸಿನ ಮೇಲೆ ಹೋರಾಟ ನಡೆಸಲು ನಿಶ್ಚ… ರಿದ್ದು ತಾವು ಮಹಾತ್ಮ ಗಾಂಧಿಯವರಿಗೆ ಭೆ…

ವ್ಯವಹಾರ ವೈಪರೀತ್ಯಗಳು ಕಲ್ಪ… ಮಾಡಿಕೊಳ್ಳಲು … ಹೋಗಿದೆ…

ಕೊಡಗು.

ಸನ್ ೧೯೩೨ನೇ ಇಸವಿ

ಫೆಬ್ರವರಿ ತಾ ೧೨ನೇ ಶುಕ್ರವಾರ.

ಪ್ರೆಸ್ ಆರ್ಡಿನೇನ್ಸ್

ಜಾರಿಯಲ್ಲಿರುವವರೆಗೆ

ನಾವು

ಅಗ್ರಲೇಖನ

ವನ್ನು

ಪ್ರಕಟಿಸುವುದಿಲ್ಲ.

"ಡೆಯಿಲಿ ಹೆರಾಲ್ಡ್" ಎಂಬ ಲಂಡನಿನ ಪತ್ರಿಕೆಯಿಂದ.

...ದೂಸ್ಥಾನದಲ್ಲಿ ಯುವಕರನ್ನು ಗಣನೆಗೆ ತೆಗೆದುಕೊ... ಎಂತ ಹೇಳಬೇಕಾದದ್ದೇ ಇಲ್ಲ. ಯುವಕರ ಸಾ... ಮೂರು ಕಾರಣಗಳಿವೆ:—

...ನೆಯದು:—ಬ್ರಿಟಿಷ್ ಸರ್ಕಾರವು ಹಿಂದೂಸ್ಥಾನದೊಂ... ಇಡಬೇಕಾದದ್ದೇ ಬ್ರಿಟಿಷರ ಧ್ಯೇಯ. ...ಬಂ... ವಾದ ವಿಷಯಗಳನ್ನು ನಿರ್ಣಯಿಸುವವರು ಹಿಂದೀ... ಗಿದ್ದಾರೆ.

...ಯದು—ಹಿಂದೀ ರಾಜಕೀಯ ರಚನೆಯ ಭದ್ರತೆ... ಹೇಗೆ ಉಪಯೋಗಿಸುತ್ತಾರೆ ಎಂಬದನ್ನು... ದ್ದರಿಂದ ಶಾಶ್ವತವಾದ ಜಯವಾಗಬೇಕಾದರೆ ...ಯುವಕರ ಸಹಕಾರ ಬೇಕಾಗಿದೆ.

ಮೂರನೇದು—ಮತ್ತು ಅತಿ ಮುಖ್ಯವಾದದ್ದು. ಸ್ವರಾಜ್ಯ ಬೇವನಾಗಗೆ ಅಡಚಣೆಗಳಾದ ಜಾತಿ, ಸಮಾಜ ಆರ್ಥಿಕ ಸಂಬಂಧವಾದ ಜಟಿಲವಾದ ಸಮಸ್ಯೆಗಳು ಹಿಂದೀ ಯುವಕರ ಧಾರಾಳ ಬುದ್ಧಿ ಮತ್ತು ದೇಶಭಕ್ತಿಯಿಂದಲೇ ಬಿಡುಗಡೆಯಾಗಬೇಕಷ್ಟೆ.

ಹಿಂದೀಯರೊಂದಿಗೆ ರಾಜಿಯಾಗಬೇಕಾಗಿದ್ದರಿಂದ ಯುವಕರ ಸಹಕಾರ ಬೇಕು. ಈಗ ಕಳೆದ ಮೂರು ವರ್ಷಗಳಲ್ಲಿ ಹಿಂದೂಸ್ಥಾನಕ್ಕೂ, ಬ್ರಿಟನಿಗೂ ಇದ್ದ ಸಂಬಂಧದಲ್ಲಿ ಸಮುದ್ರದಷ್ಟು ಬದಲಾವಣೆಯಾಗಿದೆ. ಗವರ್ನಮೆಂಟ್ ಆಫ್ ಇಂಡಿಯಾ ಆಕ್ಟಿನಲ್ಲಿ ಒಳಕೊಂಡಿರುವ ಮೊಂಟೆಗ್ಯೂರವರ ಹೇಳಿಕೆಗೆ ಹೊಸ ಜೀವ ಬಂದಿದೆ.

ಇದು ನಿಜ. ಆದರೆ ರಾಜಿಯಾಗಲು ನಿರ್ಣಯಿಸಲ್ಪಟ್ಟ ಉಪಾಯವು ನಾಶವಾಯಿತು. 1919ರಲ್ಲಿ ಪಾರ್ಲಿಮೆಂಟ್ ಹಿಂದೂಸ್ಥಾನವನ್ನು ಪರೀಕ್ಷೆಗೆ ಕೂತ ವಿದ್ಯಾರ್ಥಿಗಳು ಇನಾಮು ಪಡೆಯಲು ಮುಂದೆ ಬರುವ ಮತ್ತು ಸೋತವರಿಗೆ ಅದರ ಫಲ ದೊರಕುವ ರೀತಿಯಲ್ಲಿ ಎಣಿಸಿತ್ತು. ಬಹುಶಃ ಮಾರ್ಕು ಕೊಡಬೇಕಾಗಿತ್ತು, ಅಥವಾ ಮಾರ್ಕುಗಳನ್ನು ಮಾಡಬೇಕಾಗಿತ್ತು. ಹೆಡ್‌ಮಾಸ್ತರೊಬ್ಬನೇ ಮುಖ್ಯ ಮನುಷ್ಯನು. ಈ ಭಾವವು ಈಗ ಹೊರಟು ಹೋಗಿದೆ. ಆದರ ಬದಲು ಸರಿಸಮಾನರೊಳಗೆ ಚರ್ಚೆಯ ದಾರಿಯನ್ನು ಈ ಮೇಜಿನ ಸರ್ಕಾರವು ಅನುಸರಿಸಿತು. ಈಗಿನ ಸರ್ಕಾರವೂ ಅದೇ ದಾರಿಯನ್ನು ಹಿಡಿದಿದೆ. ಆದರೆ ಇದರಲ್ಲಿ ಜಯವಾಗಬೇಕಾದರೆ ಸರಿಯಾದ ಮನೋಭಾವದಲ್ಲಿ ಮುಂದುವರಿಯಬೇಕು. ಮುಖ್ಯವಾಗಿ ಹೇಳುವುದಾದರೆ ಹಿಂದೀ ಮನೋಭಾವವನ್ನು ಅರಿತುಕೊಂಡು ಮುಂದುವರಿಯಬೇಕು. ದುಂಡು ಮೇಜು ಪರಿಷತ್ತಿಗೆ ಬಂದವರ—ಬಹಳ ಜಾಗರೂಕತೆಯಿಂದ ಮಾತಾಡಿದ ಇವರ—ಮನೋಭಾವವನ್ನು ತಿಳಿದರೆ ಸಾಲದು. ಇವರು ಯಾರ ಪರವಾಗಿ ಮಾತನಾಡಿದರೋ ಅಂಥಾ ಗಲಭೆ ಮಾಡುವ ಜನಸಮುದಾಯದ ಮನೋಭಾವವನ್ನು ತಿಳಿಯಬೇಕು.

ಬೇರೆ ಬೇರೆ ಜಾತಿ, ಸಂಸ್ಕೃತಿ ಇರುವ ಜನ ಜಾತಿಗಳೊಳಗೆ ಅರ್ಧ ಭೂಖಂಡದಿಂದಲೇ ಬೇರ್ಪಡಿಸಲ್ಪಟ್ಟಿರುವ ಜನರೊಳಗೆ ರಾಜಿ ಒಪ್ಪಂದ ಮಾಡಿಕೊಳ್ಳಬೇಕಾದ ಕೆಲಸವು ಸುಲಭ ಸಾಧ್ಯವಲ್ಲ. ಇದಕ್ಕೆ ಸರ್ಕಾರ ಪತ್ರಗಳಾಗಲೀ, ಪತ್ರಿಕೆಗಳಲ್ಲಿ ದೊರಕುವ ವರ್ತಮಾನಗಳಾಗಲೀ ಸಾಲವು. ಇವು ಜನರ ಅಭಿರುಚಿಗೆ ತಕ್ಕಂತೆ ತಯಾರಿಸಲ್ಪಟ್ಟ ನಕ್ಷೆಗಳಾಗಿವೆ.

ಸಭೆಗಳ ಕಡೆಗಳಲ್ಲಿಡ ಸಭೆಗಳ ಮತ್ತು ಹೊಸತಾದ ಹೆಚ್ಚು ಹೆಚ್ಚು ಸಂಖ್ಯೆಯ ಸಂಪರ್ಕಗಳಿಂದಲೇ ಪ್ರಯೋಜನವಾಗಬೇಕಷ್ಟೆ. ಯುವಕ ಹಿಂದುಸ್ಥಾನವು ಜೀವಿಸುವ ವಾತಾವರಣವು ಎಂಥಾದ್ದೆಂತ ತಿಳಿದುಕೊಳ್ಳಬೇಕು. ಯುವಕ ಹಿಂದುಸ್ಥಾನವು ಎಚ್ಚರವಾಗಿದೆಯೆಂತ ನಮಗೆಲ್ಲರಿಗೂ ಗೊತ್ತಿದೆ. ಎಚ್ಚರವಾಗಿದೆ, ಉತ್ಸಾಹಭರಿತವಾಗಿದೆ. ಸಿಟ್ಟುಗೇಳುವಂತೆ ಇದೆ. ಕಳೆದ ಕಾನೂನು ಭಂಗದ ಚಳವಳದಲ್ಲಿ ಯುವಕ ಸಮಾಜವು ಮಾಡಿದ ಕೆಲಸವು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಬಾಲಕ ಬಾಲಕಿಯರು ವಾನರ ಸೈನ್ಯಗಳು, ಕಾನೂನು ಭಂಗದ, ಹಾಡಿಕೊಂಡು ಮೆರವಣಿಗೆ ನಡಿಸುವ, ಕಾರ್ಯಗಳಲ್ಲಿ ಮುಂದಾಳಾಗಿದ್ದರು.

ಸಾರ್ವಜನಿಕ ಶಾಂತಿ ಸ್ಥಾಪಿಸಬೇಕೆಂತ ಎಲ್ಲರೂ ಬಯಸುತ್ತಾರೆ. ಆದರೆ ಇಲ್ಲಿ ಅಪಾಯವಿದೆ. ಬಲದಿಂದ ಈ ಬೆಂಕಿಯನ್ನೆಲ್ಲಾ ಆರಿಸಬಹುದೆನ್ನುವ ಜನರು ಇದ್ದಾರೆ. ಆದರೆ ಇದಕ್ಕೆ ಇತಿಹಾಸದ ಆಧಾರವಿಲ್ಲ. ಯಾವ ಸರ್ಕಾರಕ್ಕೇ ಆಗಲಿ ಅದರ ಭದ್ರತೆಯು ಆಳಲ್ಪಡುವ ಜನರ ಒಪ್ಪಿಗೆಯನ್ನೇ ಹೊಂದಿದೆ. ಜನತೆಯ ಅಂಥಾ ಒಪ್ಪಿಗೆಯನ್ನು ಪಡೆಯುವುದೇ ಸರ್ಕಾರದ ಮುಖ್ಯ ಉದ್ದೇಶವಾಗಿರಬೇಕು. ಈ ಉದ್ದೇಶವನ್ನು ಸಾಧಿಸಲು ಬಹಳ ತಾಳ್ಮೆಯೂ ತಡವೂ ಅವಶ್ಯವಿದೆ.

ನಂಬಿಕೆಯನ್ನು ನಾವು ಸಂಪಾದಿಸಬೇಕಾಗಿದೆ. ಆದರೆ ಅದನ್ನು ಸಂಪಾದಿಸುವುದು ಎಷ್ಟೊಂದು ಕಷ್ಟಸಾಧ್ಯ! ದುಂಡು ಮೇಜಿನ ಜಯವು ದುಂಡು ಮೇಜಿಗೆ ಬಂದ ಪ್ರತಿನಿಧಿಗಳು ಹಿಂದುಸ್ಥಾನಕ್ಕೆ ಹಿಂತಿರುಗಿ ಜನರಲ್ಲಿ ಬ್ರಿಟನರ ಮೇಲೆ ನಂಬಿಕೆ ಹೆಚ್ಚಿಸುವುದರ ಮೇಲೆ ಹೊಂದಿತ್ತು. ಇದರಂತೆಯೇ ಇನ್ನೂ ಮೇಲೆಯೂ ಸಭೆಗಳ ಮೂಲಕ ಅನ್ಯೋನ್ಯ ಸಂಪರ್ಕವಾಗುವುದರಿಂದಲೇ ಹುಟ್ಟಿದ ನಂಬಿಕೆ ಬೆಳೆದೀತು.

ಇಂಥಾ ಸಭೆಗಳ ಸದಸ್ಯರನ್ನು ವಿಶೇಷರಂಗಳಾಗಿ ಉಪಯೋಗಿಸಬೇಕು. ಬ್ರಿಟಿಷ್ ರಾಜಕಾರಣ ಪಟುಗಳಿಗೆ ಯುವಕ ಹಿಂದೂಸ್ಥಾನದ ನಂಬಿಕೆಯನ್ನು ಕೂಡಲೇ ಪಡೆಯಲು ಸಾಧ್ಯವಿಲ್ಲದಿದ್ದರೆ ಈ ಕಾರ್ಯದಲ್ಲಿ ಜಯವನ್ನು ಪಡೆಯಲು ಶಕ್ತಿ ಇರುವ ಹಿಂದೀಯರನ್ನೇ ಉಪಯೋಗಿಸಬೇಕು. ಅವರು ತಮ್ಮ ದೇಶೀಯರನ್ನು ಒಪ್ಪಿಸಿಕೊಳ್ಳಬೇಕು. ಅವರು ತಮ್ಮ ದೇಶೀಯರನ್ನು ಒಪ್ಪಿಸಿಕೊಳ್ಳಬೇಕಾದದ್ದು ದೊಡ್ಡ ಕೆಲಸ.

ಸಭೆಗಳಿಂದಲೇ ರಾಜಿಯಾದೀತೆಂಬ ಆಶೆಯು ನಮ್ಮದಾದರೆ ಕಳೆದ ದುಂಡು ಮೇಜು ಪರಿಷತ್ತಿನಷ್ಟು ಸಮಾಧಾನಕರವಾಗಿರುವ ಪರಿಷತ್ತು ಇನ್ನು ಮುಂದಿನದು ಆಗಲು ಸಾಧ್ಯವಿಲ್ಲ. ದುಂಡು ಮೇಜು ಪರಿಷತ್ತಿನ ಅನ್ಯೋನ್ಯಭಾವ ಹೋಗಿ ಹೋರಾಟದ ಭಾವವೇ ಹುಟ್ಟೀತೋ ಎಂಬದೇ ಭಯ. ಬಲದಿಂದಲೇ ಪರಿಹಾರವಾಗಬೇಕೆಂಬ ಉಭಯತ್ರರ ತಪ್ಪು ನಂಬಿಕೆಯೇ ಹೋರಾಟಕ್ಕೆ ಕಾರಣ. ಯುದ್ಧವನ್ನು ಪ್ರಾರಂಭಿಸುವುದು ಸುಲಭ, ಆದರೆ ಅದನ್ನು ನಿಲ್ಲಿಸುವುದು ಕಷ್ಟ. ಶಾಂತಿ ಮತ್ತು ಅದನ್ನು ಹೇಗೆ ಸ್ಥಾಪಿಸಬೇಕೆಂಬುದೇ ಪ್ರತಿಯೊಬ್ಬ ಹಿಂದುಸ್ಥಾನದ ಹಿತವನ್ನು ಬಯಸುವವನ ಆಶೆ ಆಗಿರಬೇಕು.

ಯುವಕರ ಸಹಕಾರ ಬೇಕೆಂಬುದಕ್ಕೆ ಇನ್ನೊಂದು ಕಾರಣವೇನೆಂದರೆ—ರಾಜಕೀಯ ರಚನೆಯನ್ನು ಬುದ್ಧಿವಂತಿಕೆಯಿಂದ ತಯಾರಿಸಬೇಕು ಮತ್ತು ಅದನ್ನು ಸ್ನೇಹಭಾವದಿಂದ ಉಪಯೋಗಿಸಬೇಕು ಎಂಬದೇ. ದುಂಡು ಮೇಜು ಪರಿಷತ್ತಿನಲ್ಲಿ ಬಲವಾಗಿ ವಾದಿಸಿದ ಬೇಗಂ ಶಹಾನವಾಜ್, ಡಾಕ್ಟರ್ ಶಾಫತ್ ಅಹ್ಮದ ಖಾನ್, ಸರ್ದಾರ್ ಉಜ್ವಲ ಸಿಂಗ್, ಡಾಕ್ಟರ್ ಅಂಬೇಡ್ಕರ್ ಸಹ ಯುವಕರೇ. ಕಾಂಗ್ರೆಸ್ಸಿನ ಪರವಾಗಿ ಪಂಡಿತ ಜವಾಹಿರ್‌ಲಾಲರು ಬಂದಿದ್ದರೆ ಹಿಂದುಸ್ಥಾನದ ಮುಖ್ಯ ಪ್ರತಿನಿಧಿಗಳೆಲ್ಲಾ ಯುವಕರೇ ಆಗುತ್ತಿದ್ದರು. ಇವರೆಲ್ಲರೂ ತಮ ತಮಗೆ ಸಂಬಂಧಿಸುವ ಹಕ್ಕುಗಳನ್ನು ಕಾಪಾಡಲು ಮಾತಾಡಿದರಾದರೂ ಎಲ್ಲರ ಮಾತಿನಲ್ಲೂ ಉಕ್ಕಿ ಬರುವ ರಾಷ್ಟ್ರಭಾವನೆಯು ತೋರಿಬರುತಿತ್ತು. ಪ್ರಾರಂಭದಲ್ಲೇ ಬಿಕೇನಿರ ಮಹಾರಾಜರು 'ನಾವೆಲ್ಲರೂ ಹಿಂದೀಯರೇ' ಎಂತ ಹೇಳಿದ್ದರಲ್ಲಿ ಇದು ತೋರಿ ಬರುತ್ತದೆ. ಹಿಂದೀಯರೊಳಗೆ ಕಠಿಣ ತರದ ಮನಸ್ತಾಪಗಳಿವೆಯೆಂಬುದೇನೋ ನಿಜ. ಆದರೆ ಈ ಮನಸ್ತಾಪಗಳು ವಿದ್ಯಾರ್ಥಿಗಳಲ್ಲಾಗಲೀ ಕೂಲಿಕಾರರ ಚಳವಳಗಳಲ್ಲಾಗಲೀ ಕಂಡು ಬರುವದಿಲ್ಲ. ಹೆಂಗಸರ ಸಮಾಜದಲ್ಲಂತೂ ಮತದಿಂದ ಕಾರಣವಾಗುವ ಭೇದಗಳು ಸಹ ಇಲ್ಲ.

ಬ್ರಿಟಿಷ್ ಸಾಮ್ರಾಜ್ಯದ ಭದ್ರತೆಗಾಗಿ ಹೊಸ ಹಿಂದೂಸ್ಥಾನವೆಂಬ ಸ್ವಾತಂತ್ರ್ಯ ನಾಮಾಂಕಿತ ರಾಜ್ಯವನ್ನು ಸ್ಥಾಪಿಸಬೇಕಾದರೆ ಹಿಂದುಸ್ಥಾನದೊಳಗೆ ಒಗ್ಗಟ್ಟಿರಬೇಕು. ಅಂಥಾ ಒಗ್ಗಟ್ಟು ಯುವಕ ಹಿಂದೀಯರಿಂದಲ್ಲದೆ ಬೇರೆಯವರಿಂದ ದೊರೆಯಲಾರದು. ಅವರ ಹೃದಯದಲ್ಲಿ ಎಲ್ಲಾ ಸಂಸ್ಕೃತಿಗಳೆಂಬ ಅಮೂಲ್ಯ ಲೋಹಗಳು ಬೆರೆತು ರಾಷ್ಟ್ರೀಯ ಸ್ವಾತಂತ್ರ್ಯ ಎಂಬ ಹೊಸ ಹೊಳಪು ಹುಟ್ಟಬೇಕಾಗಿದೆ.

ಪಂ. ಮದನಮೋಹನ ಮಾಳವೀಯರು ಹಿಂದೂಸ್ಥಾನದಿಂದ ಚಿನ್ನವು ರಫ್ತಾಗುವುದರ ಕುರಿತು ಹೇಳುವುದೇನಂದರೆ.

'ಈ ದೇಶದಿಂದ ಇಷ್ಟೊಂದು ತುಂಬ ಚಿನ್ನ ಹೊರಗೆ ಹೋಗುತ್ತಿರುವುದನ್ನು ನೋಡಿ ನನಗೆ ತುಂಬಾ ನೋವಾಗಿದೆ. ಮಾರಾಟಕ್ಕೆ ಬಂದ ಎಲ್ಲಾ ಚಿನ್ನವನ್ನು ಇಂಡಿಯಾ ಸರ್ಕಾರವು ಕೊಂಡುಕೊಳ್ಳಬೇಕಿತ್ತು. ಆದರೆ ಅವರು ಹಾಗೆ ಮಾಡಲಿಲ್ಲ. ಯಾಕೆಂದರೆ ರೂಪಾಯಿಯ ವಿನಿಮಯವು ಈ ದೇಶಕ್ಕೆ ಪ್ರಯೋಜನಕರವಾಗಿರದಂತೆ ರೂಪಾಯಿಯನ್ನು ಇಂಗ್ಲಿಷ್ ನಾಣ್ಯಕ್ಕೆ ಜೋಡಿಸಿ ಇಡುವುದೇ ಅವರ ಧ್ಯೇಯವಾಗಿತ್ತು. ಅದ್ದರಿಂದ ಚಿನ್ನವನ್ನು ಮೊಂದೆ ಜನರೇ ಉಳಿಸಿಕೊಳ್ಳಬೇಕಾದ್ದು ಜನರ ಕರ್ತವ್ಯವಾಗಿದೆ.

ನಮ್ಮ ಚಿನ್ನವನ್ನೆಲ್ಲಾ ಹೊರಗೆ ಸಾಗಿಸಲು ಬಿಟ್ಟರೆ ನಮ್ಮ ನಾಣ್ಯವನ್ನೂ, ಆರ್ಥಿಕ ಸ್ಥಿತಿಯನ್ನೂ ಭದ್ರವಾಗಿಟ್ಟುಕೊಳ್ಳಲು ಅವಶ್ಯವಿರುವಷ್ಟು ಚಿನ್ನವನ್ನು ಹೊರದೇಶದಿಂದ ಪುನಃ ಬರಮಾಡಿಸಿಕೊಳ್ಳುವುದು ಸಾಧ್ಯವಿಲ್ಲ. ಕಷ್ಟದಲ್ಲಿರುವ ಜನರು ತಮ್ಮ ಹೊಟ್ಟೆಪಾಡಿಗಾಗಿ ಚಿನ್ನವನ್ನು ಮಾರಾಟ ಮಾಡಲು ಪ್ರಾರಂಭಿಸಿದ್ದೇ ಚಿನ್ನದ ರಫ್ತಿಗೆ ಕಾರಣವಾಯಿತು. ದಿಕ್ಕು ತೋರದೆ ಜನರು ಹೀಗೆ ಮಾಡಬೇಕಾಯಿತು. ಆದರೆ ಈಗ ಚಿನ್ನವಿರುವ ಹಿಂದೀಯರು ಚಿನ್ನಕ್ಕೆ ಕ್ರಯ ಬಂದಿದೆ ಎಂಬ ಕಾರಣದಿಂದ ಸಾರಿ ಹಿಂದಿನಿಂದ ಚಿನ್ನದ ಬೆಲೆ ಇಳಿದಾಗ ಕೊಂಡುಕೊಳ್ಳಬಹುದೆಂತ ಊಹಿಸಿ ಮಾರುವುದಾಗಿದೆ ಎಂತ ತಿಳಿಯುತ್ತೇನೆ. ಇದು ತಪ್ಪು ಭಾವನೆ. ಚಿನ್ನದ ಧಾರಣೆಯು ನಾಣ್ಯ ವಿನಿಮಯದಿಂದ ನಿರ್ಣಯಿಸಲ್ಪಡುವುದಾಗಿದೆ. ಈ ವಿನಿಮಯದ ಪರಿಸ್ಥಿತಿಯನ್ನೂ, ವ್ಯಾಪಾರದ ಭವಿಷ್ಯತ್ತನ್ನೂ ನೋಡಿದರೆ ಚಿನ್ನದ ಬೆಲೆ ಇಳಿಯುವಂತಿಲ್ಲ. ಇನ್ನೂ ಇನ್ನೂ ಚಿನ್ನದ ಬೆಲೆ ಏರಬಹುದಷ್ಟೆ ಅಲ್ಲದೆ ಚಿನ್ನವು ಹೊರಗೆ ಹೋಗುವುದನ್ನು ತಡೆದರೆ ರೂಪಾಯಿಗೆ ಚಿನ್ನದ ಲೆಕ್ಕದಲ್ಲಿ ಹೆಚ್ಚು ಬೆಲೆಯಾಗುತ್ತದೆ. ಆಗ ನಮ್ಮ ಕೃಷಿ ಉತ್ಪನ್ನಗಳಿಗೆ ಹೆಚ್ಚಿಗೆ ಬೆಲೆ ಸಿಕ್ಕುತ್ತದೆ. ಕಷ್ಟದಲ್ಲಿರುವ ನಮ್ಮ ಕೃಷಿಕರಿಗೆ ಅವರು ಬೆಳೆಸುವ ಪದಾರ್ಥಗಳಿಗೆ ಬೆಲೆ ಏರುವುದೇ ಬೇಕಾಗಿದೆ. ನಮ್ಮ ಭದ್ರತೆಗಾಗಿಯೂ, ತಮ್ಮ ದೇಶದ ಭದ್ರತೆಗಾಗಿಯೂ ಹಿಂದೀಯರು ತಮ್ಮ ಚಿನ್ನವನ್ನು ಉಳಿಸಿಕೊಳ್ಳಬೇಕಾಗಿ ನಾನು ಕೇಳಿಕೊಳ್ಳುತ್ತೇನೆ. ಅದ್ದರಿಂದ ಚಿನ್ನ ಇರುವವರು ಚಿನ್ನವನ್ನು ಮಾರಬಾರದೆಂತಲೂ, ವ್ಯಾಪಾರಿಗಳೂ, ಬ್ಯಾಂಕರುಗಳೂ ಚಿನ್ನವನ್ನು ಪರದೇಶಗಳಿಗೆ ಕಳುಹಿಸಬಾರದೆಂತಲೂ ಕೇಳಿಕೊಳ್ಳುತ್ತೇನೆ.

ಸ್ವದೇಶಿ.

ಬೊಂಬಾಯಿ ಸರ್ಕಾರವು ಹೊರಡಿಸಿದ ಒಂದು ಪತ್ರದಲ್ಲಿ ಹೇಳುವುದೇನೆಂದರೆ:—

"ಸ್ವದೇಶೀ ಸಾಮಾನುಗಳ ಉತ್ಪತ್ತಿ ಮತ್ತು ಉಪಯೋಗವನ್ನು ಹೆಚ್ಚಿಸಲು ಯಾವ ಮನುಷ್ಯನೇ ಆಗಲೀ, ಸಮಾಜವೇ ಆಗಲೀ ನಿಜವಾಗಿ ಮಾಡುವ ಕಾರ್ಯಗಳಿಗೆ ಸರ್ಕಾರವು ಅಡ್ಡಿ ಬರುವುದಿಲ್ಲ. ಯಾರನೇ ಆಗಲೀ ವ್ಯಾಪಾರ ಮಾಡಬೇಕೆಂತ ಸರ್ಕಾರವು ಬಲಾತ್ಕಾರ ಪಡಿಸುವುದಿಲ್ಲ. ಆದರೆ ಬೇರೆಯವರು ಮಾಡಬಹುದಾದ ಯಾವ ಕಾರ್ಯಕ್ಕೂ ಅಡ್ಡಿ ಬರಬಾರದೆಂತ ಮಾತ್ರ ಸರ್ಕಾರದ ಉದ್ದೇಶವಾಗಿದೆ."

Reg. No. M. 1550.
If not delivered please return to
"KODAGU" OFFICE MERCARA.

ಕೊಡಗು.

ಸತ್ಯೇನ ಧೂತದಯಾಯೇ, ವಿದ್ಯಾ ವಿಶಿ ಪ್ರಯುಕ್ತಸಾ ' ಖಕ ಮತ್ಯೇನ ದೇಶಾನಾಂ ಕುಸ್ತಿರಾ ರಾಜ್ಯ ಸಂಪದಾ

ವಾರ್ಷಿಕ ಚಂದಾ ರೂ. ೩—೮—೦.

ಸಂಪಾದಕ—ಮೂಚಿಮಂಡ ಯಂ. ಗಣಪತಿ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೧ | ಮಡಿಕೇರಿ, ಸನ್ ೧೯೩೨ನೇ ಇಸವಿ ಫೆಬ್ರವರಿ ತಾರೀಕು ೧೨ ನೇ ಶುಕ್ರವಾರ. | ಸಂಚಿಕೆ ೩೬

Office of Asst. Commr. & I... Magte., Mercara (Coorg). ... May 1931.
Dear Sir,
I am QUITE PLEASED with the workmanship of the two Coorg weapons (PICHAKATTI & ODIKKATTI)
Yours faithfully,
(Sd) (Rao Bhadur)
K. CHENGAPPA, B. A.
District Magistrate and Assistant Commissioner of Coorg.

JEWELLER
By Appointment to
H. E. The Governor of Madras.



PEECHAKATTI (WITH SILVER FITTINGS)
Prices—From Rs. 100 & upwards.

"New Bungalow,"
Ammatti, (Coorg).
14th December 1931.
Dear Sir,
I am IMMENSELY-PLEASED with the workmanship of the PICHAKATTI you made and sent me some time back.
Yours faithfully,
Sd/ K. P. MUDDAYYA,
Ammatti (Coorg.)

Telegrams: 'PRECIOUS.'

V. Subramaniaier
Jeweller,

Telephone: 3145.

CATALOGUE ON ENQUIRY.

52–12 Post Box 423, Triplicane, P. O., MADRAS.



...ರು ಬರೆದರೆ ಕೂಗಿನ
ಕ್ಯಾಟಲಾಗ್, ಮಾಫಿಯಾಗಿ
ಕಳುಹಿಸಲ್ಪಡುವದು.

ಕೋವಿಗಳು, ಕತ್ತಿಗಳು, ಬಚೀಗಳು, ತೋಟೆಗಳು, ಸೀತ್ರಗಳು, ಮಾತು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS.
Largest Importers of Firearms and Ammunition
Cheapest priced firm in India,
24–21 210 Abdul Rehman Street, BOMBAY.

ಎಂಪೈರ್ ಆಫ್ ಇಂಡಿಯಾ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
(ಸ್ಥಾಪನೆಯಾದದ್ದು 1897.)
ಹಿಂದೂಸ್ಥಾನದಲ್ಲಿ ಶ್ರೇಷ್ಠವೂ, ಜನಪ್ರಿಯವೂ ಆಗಿರುವ ಈ ಕಂಪೆನಿಯಲ್ಲಿ ನೀವು ಜೀವ ವಿಮೆ ಮಾಡ ಬೇಕಾದರೆ ಇದೇ ತಕ್ಕ ಸಮಯ.
ಬೋನಸ್ ವರ್ಷ! ಬೋನಸ್ ವರ್ಷ!!
ಸಾಹಸವಂತರಾದ ಏಜೆಂಟರು ಬೇಕಾಗಿದೆ.
ಹೆಡ್ ಆಫೀಸು:— ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ.
ಬ್ರಾಂಚ್ ಆಫೀಸು:— 152–3 ಕಮರ್ಷಲ್ ಸ್ಟ್ರೀಟ್, ಬೆಂಗಳೂರು.
52–22

ಬಾಲಾರ್ಕಮಧು.
ನಿಮ್ಮ ಮಕ್ಕಳ ಸೌಂದರ್ಯವನ್ನು ನೋಡಬೇಕಾದರೆ ಅದ್ಭುತ ಗುಣವುಳ್ಳ ಬಾಲಾರ್ಕ ಮಧುವನ್ನು ಕೊಡಿರಿ. ಮಕ್ಕಳು ರೋಗ



ಪೀಡಿತರಾಗಿ ಎಷ್ಟೇ ಕ್ಷೀಣವಾಗಿದ್ದರೂ ಅದರಿಂದ ಆಯುಷ್ಯವೂ, ಬಲವೂ ಬರುವವು. ದಿನ ದಿನಕ್ಕೆ ಆರೋಗ್ಯವೂ ... ಬ್ಬುವದು. ಇದು ಮಧುರವಾಗಿದೆ. ಚಿಕ್ಕ ಮಕ್ಕಳು ಸೇವಿಸುತ್ತಾರೆ ಶೀಸೆ 1 ಕ್ಕೆ 12 ಆಣೆ ಟಿ. ಪಿ. 12 ಆಣೆ. ಆರ್ಡರ್ ಜೊತೆಯಲ್ಲಿ ಅಡ್ವಾನ್ಸು ಮೊಬಲಗು ... ರೂ. 75 ... ಕಳ್ಳುದ್ದು. ಅಡ್ವಾನ್ಸ್ ಇಲ್ಲದ ಆರ್ಡರುಗಳನ್ನು ಗಮ...
ಯಂ. ವಿ. ಪ್ರಸಾದಿ ಔಷಧಾಲಯ...
52–4

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್ ನಂ ಅಪೆಕ್ಸ್ ಸೊಸೈಟಿ
ಅಫ್ : ಪ್ರಕಾರ ರಿಜಿಸ್ಟರಾಗಿದೆ.
(ಸ್ಥಾಪಿತವಾದದ್ದು 1922ರಲ್ಲು)

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	26,800
ಜಮೆಯಾದ ಠೇವಣಾತಿ	—	2,50,301

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೆ ಮಾತ್ರ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ತಕನ್ಯೂಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಪರಿಶೋಧಿಸಿ ಮಾನುತ್ತಾರೆ.

ಪ್ರೆಸಿಡೆಂಟರು,	ಟ್ರೆಜರರ್.
ಕೋಳಂಡ ಅಪ್ಪಯ್ಯನವರು	ಮನೆಯಪ್ಪಂಡ ಬೆಳ್ಯಪ್ಪ
ರಾವ್ ಬಹದ್ದೂರ್.	ನವರು.

ಸೆಕ್ರೆಟರಿ
ಸಿ. ಯಸ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.
ತಾರೀಖು 1-7-1931.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿದೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಸಲ್ಲಿಸಿ ಮುದ್ರಿತ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು,
ಉತ್ತರ ಕೊಡಗಿಗೆ ಮಿ॥ ಚೌರಿರ ಮಾದಯ್ಯನವರು,

ಸಬ್ ಏಜೆಂಟರುಗಳು.
ವೀರರಾಜಪೇಟೆ—ಮಿ. ಮುಂಡೇಕಂಡ ಸೋಮಯ್ಯನವರು, (ಖಾದಿಭಂಡಾರ.)
ನಾಪೋಕ್ಲು—ಎಮ್. ಆರ್. ವೆಂಕಪ್ಪಯ್ಯನವರು.
ಅಮ್ಮತ್ತಿ—ಸಿದ್ದಾಪುರ—ಮಿ. ಐನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮಿ. ಪಿ. ಜಿ. ಮುದ್ದಪ್ಪಯ್ಯನವರ ಮತ್ತು, ಅರಮಣಮಾಡ ಪಿ ಕಾರ್ಯಪ್ಪನವರು,
ಮಡಿಕೇರಿ & ಶಿತಿಮತ್ತಿ—ಮಿ. ಪಿ. ಮಾದಪ್ಪಯ್ಯನವರು,
ಸುಂಟಿಕೊಪ್ಪ—ಮಿ. ಅಪ್ಪಚೆಟ್ಟೋಳಂಡ ಮಾಚಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಿಗೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಿಸಲು ಅವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಜರಾಬು ಫಾರಮುಗಳೂ, ಬದ್ದು ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಕರಾರು ಫಾರಮುಗಳೂ, ಸ್ಟೋರ್ ಲೆಡ್ಜರ್ ಖರಾರು ಫಾರಮುಗಳೂ, ಓವರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಮೆಂಬರ್‌ಗಳ ರಿಜಿಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತಕ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಬೇಕಾದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಕಳುಹಿಸಲಾಗುವುದು.

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.
ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ-8013 ಜನರಿಗೆ 32 ಲಕ್ಷ ರೂ.
ಭಂಡವಾಳವು ಹೆಚ್ಚಾದದ್ದು—ಸುಮಾರು 1½ ಕೋಟಿ ರೂ.
ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,78,322 ಜನರಿಗೆ 38 ಕೋಟಿ ರೂ.
ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ರಕ್ಕಿಂತ ವಿಾರದ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟವಾಗಿವೆ.
ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.
ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಉತ್ಸಾಹವನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬುದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ಮೆಡಾಂಗ್	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪೂರ	ರಾವಲ್ ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೋ	ಪಾಟ್ನಾ	ಸುಕ್ಕೂರು
ಅಲ್ಲಾಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಜಾರ್ಜಟೌನ್	ಮಂಡಲೆ	ರಾಯಪುರ	ಸಿ. ಪೆಂಡ್ರವಾ
ಭೋಪಾಲ್	ಕರಾಚಿ	ಮಂಗಳೂರು	ರಾಂಚಿ	ವಿಶಾಖಪಟ್ಣ [52—19

ಕೆಮ್ಮಲ್ ಜ್ವರ ಮಾತ್ರೆ:—ಇದು ಇಂಜಕ್ಷನ್ ಮತ್ತು ಕ್ವಿನೈನು ಸೇವಿಸಿದರೂ ಗುಣವಾಗದಿರುವ ಮಲೇರಿಯ ಜ್ವರ, ಬಿಟ್ಟುಬಿಟ್ಟು ಬರುವ ಜ್ವರ, 3—4 ದಿವಸಕ್ಕೊಂದು ಸಾರಿ ಬರುವ ಜ್ವರ, ಚಳಿ ಬರುವ ಜ್ವರ ಮತ್ತು ಶ್ಲೇಷ್ಮ ದೋಷದಿಂದ ಬರುವ ಜ್ವರಗಳಿಗೆ ಶೀಘ್ರ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ. 1—8—0; 3ಕ್ಕೆ ರೂ. 4—0—0; 6ಕ್ಕೆ ರೂ. 7—8—0; 12ಕ್ಕೆ ರೂ. 14

ಚಂದನಾಸವ:—ಇದು ಶರೀರದ ದಾಹ, ನೀರು, ಮೂತ್ರ ಹಳದಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರ ನಿಂತಾಗ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನದೋಷ, ಮೂತ್ರನಾಳದಲ್ಲಿ ಚುಚ್ಚುವ ನೋವು. ಇವುಗಳಿಗೆ ಪರಮ ದಿವ್ಯ ಔಷಧ. ಬಾಟ್ಲಿ 1, 3, 6ಕ್ಕೆ ರೂ. 1—4—0 3—8—0; 6—12—0

ಕೋಮಲನಾಶಿನಿ:— ಈ ಹುಡಿಯನ್ನು ಬೆರಿಸಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು. ಡಬ್ಬಿ 1ಕ್ಕೆ 6 ಅ 1, 3 ಡಬ್ಬಿಗಳಿಗೆ ರೂ. 1, 1 ಡಜನಿಗೆ 3—8—0

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆಭಾರ, ಕಣ್ಣುರಿ, ಕಿವಿಯಿಂದ ಕೀವು ಸೋರುವುದು ಕಿವುಡತನ, ಕಣ್ಣು ನೋವು, ಅಪಸ್ಮಾರ ಹಿಸ್ಟೀರಿಯ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು. ಇವುಗಳೆಲ್ಲಾ ಶೀಘ್ರ ಗುಣವಾಗುತ್ತವೆ. ಉದುರುವ ಕೂದಲನ್ನು ಬಲಿಸಿ ನಿತ್ಯವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲದಲ್ಲಿ ಹಣ್ಣಾಗುವ ಕೂದಲನ್ನು ಕಪ್ಪು ಮಾಡುತ್ತದೆ, ಹೊಸ ಕೂದಲನ್ನು ಹುಟ್ಟಿಸುತ್ತದೆ. ಬೆಲೆ ಸೀಸೆಗೆ ರೂ. 1, 3 ಸೀಸೆಗೆ 2—10—0. ಒಂದು ದೊಡ್ಡ ಸೀಸೆಗೆ ರೂ. 2, 3 ಸೀಸೆಗಳಿಗೆ 5—8—0

ವಿಳಾಸ:— ಮನೋಲ್ಲಾಸಿನಿ ಕಂಪೆನಿ,
52—37 ಟೆಲಿಗ್ರಾಫ್ ಕಛೇರಿ ಹಿಂದುಗಡೆ, 9 ಮಂಗಳೂರು.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚ 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
52—4 ಗಿರಿಗಾಂವ, ಮುಂಬಯಿ.

Printed & published by M. M. Ganapathy at "Kodagu" Press Mc for "Kodagu" Ltd.

೫೩ ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ ಔಷಧಗಳು.

೧. ಧಾತುಪುಷ್ಟಿ ಲೇಹ.

ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕ ಶಕ್ತಿಯು ದಿನೇ ದಿನೇ ಕ್ಷೀಣಿಸುವಿಕೆ, ವೀರ್ಯ ವೃದ್ಧಿ ಬಾಧೆ, ರಕ್ತ ಪಿತ್ತ, ಒಳ ಜ್ವರ, ಮಲ ಬದ್ಧತೆ, ಕೈಕಾಲು ಬಚ್ಚುವುದು ಮೊದಲಾದುವುಗಳು ಪೂರ್ಣವಾಗಿ ಕಳೆದು ಹೋದ ಶಕ್ತಿಯು ಪುನಃ ಕುದುರಿಕೊಳ್ಳುವುದು. ಕ್ರಯ ಡಬ್ಬಿ 1ಕ್ಕೆ 2—8—0 ಮೂರು ಡಬ್ಬಿಗಳಿಗೆ ರೂ. 7—0—0

೨. ಅಶೋಕಾರಿಷ್ಟ ಮತ್ತು ಮಾತ್ರೆ.

ಹೆಂಗಸರ ಮುಟ್ಟು ದೋಷಗಳು, ಪ್ರಸೂತ್ಯಾದಿರೋಗಗಳನ್ನು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟ ನೋವು, ಸಂತಾನ ಹೀನತೆ, ಮೂರ್ಛೆ, ಮಲಬದ್ಧತೆ, ಒಳಜ್ವರ, ರಕ್ತಹೀನತೆ, ಕೈಕಾಲು ಸೆಳತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಅತಿ ಶೀಘ್ರದಲ್ಲಿಯೇ ಗುಣ ಪಡಿಸುವುದು. ಅಶೋಕಾರಿಷ್ಟ ಮತ್ತು ಮಾತ್ರೆಗಳು ಸಾವಿರಾರು ಹೆಂಗಸರಿಗೆ ಆಂತರಿಕ ಆರೋಗ್ಯವನ್ನು ಒದಗಿಸಿ, ಮನೋಭಿಲಾಷೆಯನ್ನು ಪೂರಯಿಸಿರುವವು.

ಕ್ರಯ 1 ಬಾಟ್ಲಿ ಔಷಧ, 1 ಡಬ್ಬಿ ಮಾತ್ರೆ ರೂ. 2 ಆ. 4.
3 ಬಾಟ್ಲಿ ಮತ್ತು ಡಬ್ಬಿಗಳಿಗೆ ರೂ. 6 ಆ. 4.

೩. ಮಲೇರಿಯೊ ನಿವಾರಣೆ.

ದಿನ ಬಿಟ್ಟು ಬರುವ ಜ್ವರ, ಚಳಿ ಜ್ವರ, 2 ಯಾ 3 ದಿನಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರ ಗಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರ ಗಡ್ಡೆಯನ್ನು ಕರಗಿಸಿ ಶಕ್ತಿಯನ್ನು ಉಂಟು ಮಾಡುತ್ತದೆ. ಬಾಟ್ಲಿ 1ಕ್ಕೆ 1—8—0, 3 ಬಾಟ್ಲಿಗಳಿಗೆ 4—2—0.

೪. ಮೇಹ ಕುಠಾರ.

ಇದು ಮೂತ್ರಸ್ಥಾನದಿಂದ ಕೆಂಪು, ಬಿಳಿದು, ಹಳದಿಯಂತೆ ಹೋಗತಕ್ಕ ಕೀವನ್ನೂ, ವ್ರಣವನ್ನೂ, ಉರಿಯನ್ನೂ ಗುಣಪಡಿಸುತ್ತದೆ. ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7.

೫. ಇಛ್ಛಾ ಭೇದಿ ಗುಟಿಕೆ.

ಆಯಾಸವನ್ನು ಉಂಟುಮಾಡುವ ಸುಖ ವಿರೇಚಕ. ಬಾಟ್ಲಿ 1ಕ್ಕೆ 0—12—0 ಆಣೆ. 3 ಬಾಟ್ಲಿಗಳಿಗೆ 2—2—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ರವಾನಿಸಬಹುದು. ಕೆಟಲಾಗು ತರಿಸಿ ನೋಡಿರಿ.

ಯಂ. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್,
52—9 ರಥಬೀದಿ, ಮಂಗಳೂರು, ದ. ಕನ್ನಡ

ಭಂಗಾರದ ಕೈಗಡಿಯಾರ.

ಈ ಚಿತ್ರದಲ್ಲಿ ಕಾಣುವ ಭಂಗಾರದ ಕೈಗಡಿಯಾರವು ಬಹು ಬಲಿಷ್ಟವಾದ (ಸ್ವಿಸ್ ಮೇಡ್) ಲೀವರ್ ಸಾಮಾನುಗಳಿಂದ ತಯಾರಾದವು. ಖರಾಬು ಗಂಟೆಯನ್ನು ತೋರಿಸುವವು. ಒಳಗಡೆ ಕೆಂಪುಗಳು ಇಟ್ಟಿವೆ. ಇದರ ಬಣ್ಣವು ಭಂಗಾರಕ್ಕೆ ಸರಿಸಮಾನವಿದು. ಇದನ್ನು ಈ ಜಾಹಿರಾತಿನಲ್ಲಿ ತರಿಸಿಕೊಳ್ಳುವವರಿಗೆ ಒಂದು ವಜ್ರದ ಉಂಗುರ, ಒಂದು ರೋಲ್ಡ್ ಗೋಲ್ಡ್ ಭಂಗಾರದ ಕಣ್ಣಿನ ಹಾರ (ನೆಕ್‌ಲೇಸ್), ಒಂದು ಟೇಬಲ್ ಟೈಂಪೀಸ ಇನಾಮವಾಗಿ ಕೊಡುವೆವು. 2 ಗಡಿಯಾರಗಳಿಗೂ ಖಾತ್ರಿಯಾದ 4 ವರ್ಷ ಗ್ಯಾರಂಟಿ ಪತ್ರ ಸಹ ಕಳುಹಿಸುವೆವು.

3 ಬಹುಮಾನಗಳ ಸಹಿತ ರಿಸ್ಟ್‌ವಾಚ್ 1ಕ್ಕೆ 6—8—0.

ವಿಳಾಸ:— ಸಿಟಿ ಮಾರ್ಟ್,
12—6 168. ಜೈನಾ ಬಜಾರ್, ಮದರಾಸ.

12 ಸೆಂಟ್ ಬಾಟಲ್, ವೆನ್‌ಟಿನ್ ಪೇನಾ ಲೀವರ್ ವಾಕೆಟ್ ವಾಚ್ 2—12—0 ಮಾತ್ರ.

ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ

ಲಿಲ್ಲಿ ಆಫ್ ದಿ ವ್ಯಾಲಿ ಮತ್ತು ಫೌನ್‌ಟೆನ್ ಪೇನಾ.

ಈ ಸುಗಂಧ ದ್ರವ್ಯವು ಫ್ರಾನ್ಸ್ ದೇಶದಲ್ಲಿ ಪುಷ್ಪಗಳ ಸಾರದಿಂದ ತಯಾರಿಸಿದ್ದು, ಇದರಲ್ಲಿ ಮದರ್ಯಾಸಕಗಳು ಯಾವುವೂ ಸೇರಿರುವುದಿಲ್ಲ. ಇದರಲ್ಲಿ ಒಂದೇ ಒಂದು ಬಿಂದುವನ್ನು ಬಟ್ಟೆಗೆ ಹಾಕಿದರೆ ಒಂದು ವಾರದ ವರೆಗೂ ಒಂದೇ ಸಮನಾಗಿ ಗಮಗಮಿಸುತ್ತಿರುವುದು. ಲಿಲ್ಲಿ ಆಫ್ ದಿ ವ್ಯಾಲಿ ಎಂಬ ಈ ಸುಗಂಧ ದ್ರವ್ಯಕ್ಕೆ ಸರಿಸಮಾನವಾದದ್ದು ಬೇರೊಂದು ಇಲ್ಲ. ಬಿನಾಮಾಯಿಯಲ್ಲಿ ತಯಾರಾದ 14 ಕ್ಯಾರೆಟ್ಟಿನ ಭಂಗಾರದ ನಿಬ್ಬು ಹಾಕಿದ ಫೌನ್‌ಟೆನ್ ಪೇನಾ, ಒಂದೇ ಸಲ 12 ಸೆಂಟ್ ಬಾಟಲ್, ಪೇನಾ ತರಿಸುವವರಿಗೆ ಒಂದು ಪಾಕೆಟ್ ವಾಚನ್ನು ಇನಾಮಾಗಿ ಕೊಡುತ್ತೇವೆ.

ಕ್ರಯ ರೂ 2—12—0 ಮಾತ್ರ.

The Legal Trading Co.
12—7 P. B. 243, Madras.

ದಿ ಬೊಂಬೇ ಲೈಫ್ ಎಶ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಎಂಬುವ ಸುಪ್ರಸಿದ್ಧ ದೇಶೀಯ ವಿಮೇ ಸಂಘ.

ಅಧ್ಯಕ್ಷರು:—ಮಾನನೀಯ ಸರ್ ಲಲ್ಲೂಭಾಯಿ ಸಾಮಲದಾಸ್,
ಕೆಟಿ., ಸಿ. ಐ. ಇ., ಜೆ. ಪಿ., ಯವರು.

ಕೊಚ್ಚಿಕಾರ ಬ್ರದರ್ಸ್, ಮದ್ರಾಸು ಬ್ರಾಂಚು ಸೆಕ್ರಟರಿಗಳು.

1. ಭಾಗ್ಯವಂತರ ಭಂಡಾರ, ವ್ಯಾಪಾರಸ್ಥರ ಕೋಶಾಗಾರ, ಕುಟುಂಬದ ಸಂರಕ್ಷಣಾನಿಲಯ. ಬಡವರ ಜೀವನಾಧಾರ ಇದೇ ಜೀವ ವಿಮೆಯ ತತ್ವವು.

2. ಹಿಂದೂಸ್ಥಾನದ ನಿವಾಸಿಯರಲ್ಲಿ ವಿಮಾ ತೆಗೆಯಬೇಕೆನ್ನುವವರ ಪ್ರಯೋಜನಾರ್ಥವಾಗಿ ಈ ಕಂಪೆನಿಯು ಭಾರತೀಯರ ಉತ್ತಮವಾದ ಆಡಳಿತದಿಂದ ಖರ್ಚು ಪೋಕಿ ಮಾಡಿ ಇಂಡಿಯಾ ಸರ್ಕಾರದ ಇಂಡಿಯನ್ ಟ್ರಸ್ಟು ಆಕ್ಟಿಗೆ ಒಳಪಟ್ಟು ಸರ್ಕಾರದ ಭದ್ರತೆಯಿಂದ ದೇಶೀಯರ ಸೇವೆಯಲ್ಲೇ ನಿರತವಾಗಿ ಹಿಂದೂಸ್ಥಾನದ ಎಲ್ಲಾ ಕಡೆಗಳಲ್ಲೂ ಅತಿ ಕೀರ್ತಿಯನ್ನು ಪಡೆದಿರುತ್ತೆ.

3. ಈ ಸ್ವದೇಶೀ ಕಂಪೆನಿಯು ಪೋಲಿಸಿದಾರರಿಗೆ ಪೋಲಿಸಿ ಅವಧಿ ಪೂರೈಸಿದನಂತರವಾಗಲೀ ಅಥವಾ ಮಧ್ಯದಲ್ಲಿ ಮರಣಾನಂತರ ವಾರೀಸುದಾರರಿಗಾಗಲೀ ಹೆಚ್ಚಿನ ಬೋನಸ್ ಅನ್ನದ ಕೊಡಸೆಯೂ, ದೀರ್ಘ ಸಮಯ ತೆಗೆಸಿಕೊಳ್ಳದೆಯೂ ಶೀಘ್ರದಲ್ಲಿ ವಿಮೇ ಮೊಬಲಗನ್ನು ಲಾಭ ಸಹಿತ ಪಾವತಿಕೊಡುವುದರಲ್ಲಿ ಹೆಸರುಗೊಂಡಿದೆ.

4. ಭರತಖಂಡದ ಮಹನೀಯರಿಂದ ಸ್ಥಾಪಿಸಲ್ಪಟ್ಟ ದೇಶೀಯರಿಂದಲೇ ಅತಿ ಕಡಿಮೆ ಖರ್ಚಿನಿಂದ ನಡೆಸಲ್ಪಡುವ ಈ ಸ್ವದೇಶೀ ಕಂಪೆನಿಯಲ್ಲಿ ಇಂದು ಭಾಗಿಗಳಾಗಿ, ಪತಿಪತ್ನಿಯರಿಗೆ ಮತ್ತು ವ್ಯಾಪಾರಸ್ಥರು ವಗೈರರಿಗೆ ಏಕೀಭವಿಸಿ (ಜಾಯಿಂಟ್ ಲೈಫ್) ಪೋಲಿಸಿ ತೆಗೆದುಕೊಳ್ಳಲು ಈ ಕಂಪೆನಿಯು ಹೊಸ ಅನುಕೂಲಗಳನ್ನು ಕಲ್ಪಿಸಿರುತ್ತೆ. ಇಂಥ ಸುಸಮಯವನ್ನು ಎಂದಿಗೂ ಕಳಕೊಳ್ಳಬಾರದು.

ಆಫೀಸು—
ಟೆಂಪಲ್ ಸ್ಟ್ರೀಟ್,
ಮಡಿಕೇರಿ. (26—16)

ಬಿ. ಎಸ್. ಐಯ್ಯಪ್ಪ,
ಕೊಡಗು ಚೀಫ್ ಏಜೆಂಟ್.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

14 ಕ್ಯಾರೆಟ್ ಭಂಗಾರದ ನಿಬ್ಬು ಹಾಕಿದ ಖಾತ್ರಿಯಾಗಿ ಬಂದೋಬಸ್ತಾಗಿ ಇದ್ದ ಫೌಂಟೆನ್ ಪೆನ್‌ಗಳು.

ಬ್ಲ್ಯಾಕ್ ವಂಡರ್ ಫೌಂಟನ್‌ಪೆನ್ 1ಕ್ಕೆ	ರೂ. 3	0	0
„ „ ಬಿಗ್ ಬ್ಯಾರೆಲ್ ಪೆನ್ 1ಕ್ಕೆ	3	3	0
„ „ ಸ್ಕ್ರೂ ಕ್ಯಾಪ್ ಪೆನ್ 1ಕ್ಕೆ	3	8	0
„ „ ಬಿಗ್ ಬ್ಯಾರೆಲ್ ಸ್ಕ್ರೂ ಕ್ಯಾಪ್ ಮೋಡಲ್ ಕಲರ್ ಫೌಂಟನ್‌ಪೆನ್ 1ಕ್ಕೆ	3	10	0
„ ಮೋಡಲ್ ಕಲರ್ ಸ್ಕ್ರೂ ಕ್ಯಾಪ್ ಫೌಂಟನ್‌ಪೆನ್ 1ಕ್ಕೆ	4	2	0
„ ಸೆಲ್ಫ್ ಫಿಲ್ಲಿಂಗ್ ಮೋಡಲ್ ಅಥವ ಬ್ರೌನ್ ಕಲರ್ ಫೌಂಟನ್‌ಪೆನ್ 1ಕ್ಕೆ	5	8	0
ಗೋ ಸ್ವಾನ್ ಫೌಂಟನ್‌ಪೆನ್ 1ಕ್ಕೆ	10	8	0
ವಾಟರ್‌ಮನ್ ಪೆನ್ 1ಕ್ಕೆ	14 6 0, & 20	10	0
ಪಾರ್ಕರ್ ಫೌಂಟನ್‌ಪೆನ್ 1ಕ್ಕೆ	3 8 0, & 3	12	
ಕಾನ್‌ಕ್ಲಿನ್ ಫೌಂಟನ್ ಪೆನ್ 1ಕ್ಕೆ	6 4 0, & 6	12	0
ಪೀಟರ್‌ಸನ್ ಫೌಂಟನ್ ಪೆನ್ 1ಕ್ಕೆ	8 2 0, & 8	10	0

ಟೈಂಪೀಸ್‌ಗಳು.

ಸ್ಟ್ಯಾಂಡ್ ಇರುವ ಸಣ್ಣ ಟೈಂಪೀಸ್ 1ಕ್ಕೆ	3	6	0
ಜರ್ಮನ್ ಮೇಡ್ ಸಣ್ಣ ಟೈಂಪೀಸ್ 1ಕ್ಕೆ	2	2	0
ಲಿಗಲಿಯಾ ಅಲಾರಂ ಟೈಂಪೀಸ್ 1ಕ್ಕೆ 6 9 0, &	6	15	0
ಲಿಗಲಿಯಾ ಸಣ್ಣಸೈಜಿನ ಅಲಾರಂ ಟೈಂಪೀಸ್ 1ಕ್ಕೆ	7	2	0
ಲಿಗಲಿಯಾ ಅಲಾರಂ ಸಣ್ಣ ಟೈಂಪೀಸ್ ರೇಡಿಯಂ ಡೈಲಿನದು 1ಕ್ಕೆ	8	10	0
ಬಿಗ್‌ಬೆನ್ ಅಲಾರಂ ಟೈಂಪೀಸ್ 1ಕ್ಕೆ	9	6	0
ಬಿಗ್‌ಬೆನ್ ಅಲಾರಂ ಸ್ಟ್ಯಾಂಡ್ ಇರತಕ್ಕ ಖಾತ್ರಿಯಾದ ಟೈಂಪೀಸ್ 1ಕ್ಕೆ	13	4	0
ಖಾತ್ರಿಯಾ ಬಂದೋಬಸ್ತಾ ಆದ ಪಾಕೆಟ್ ವಾಚ್ 1ಕ್ಕೆ	5	10	0
ಇದೇ ನಮೂನೆಯಲ್ಲಿ ಎಬ್ರಹಾರ್ಡ್ ಕಂಪೆನಿಯ ಪಾಕೆಟ್ ವಾಚ್ 1ಕ್ಕೆ	12	4	0
ನಿಕ್ಕಲ್ ಕೇಸ್ ಸಿಲಿಂಡರ್ ಮೂವ್ಮೆಂಟ್ ಸಾಧಾರಣ ತರಹ ರಿಸ್ಟ್ ವಾಚ್ 1ಕ್ಕೆ 5 4 0, 7 8 0, 10 0 0 &	12	8	0



ಚಿತ್ರದಲ್ಲಿ ತೋರಿಸುವ ನಮೂನೆ ಅಂದವಾದ ಟೇಬಲ್ ಕ್ಲಾಕ್ 1ಕ್ಕೆ 3—6—0 ಕಿಂಗ್ ಫೋರ್ ... ಲಾಯಿದಾರ. 78

ಮುಂಗಡ ಹಣ ರವಾನಿಸುವ ವಿಳಾಸ.—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

52—32

ಮಹಾತ್ಮರಿಗೆ ಮತ್ತೊಬ್ಬಳು ಶಿಷ್ಯಳು.

ಮಹಾತ್ಮರಿಗೆ ಬಹು ಮಂದಿ ಶಿಷ್ಯರಿದ್ದಾರೆ. ಆದರೆ ಅವರ ಶಿಷ್ಯತ್ವವನ್ನು ಸ್ವೀಕರಿಸಿದ ಪಾಶ್ಚಾತ್ಯ ಸ್ತ್ರೀ ಮೀರಾಬಾಯಿಯೊಬ್ಬಳೇ. ಮೀರಾಬಾಯಿಯು ಹೊಂದಿರುವ ಈ ಪವಿತ್ರ ಸ್ಥಾನವನ್ನು ಪಡೆಯಲು ಇನ್ನೊಬ್ಬ ಪಾಶ್ಚಾತ್ಯ ಸ್ತ್ರೀಯು ಈಗ ಹೊಂಚ ಹಾಕಿ ನಿಂತಿದ್ದಾಳೆ. ಇವಳು ಮೀರಾಬಾಯಿಗಿಂತ ಚಿಕ್ಕ ವಯಸ್ಸಿನವಳು. ಈಕೆಯ ಈಗಿನ ಹೆಸರು ನೀಲಾದೇವಿ. ಅವಳಿಗೀ ಹೆಸರು ಬಂದು ಬಹು ದಿನವಾಗಿಲ್ಲ. ಒಂದು ತಿಂಗಳಾಯಿತಷ್ಟೆ. ಕಳೆದ ಡಿಸೆಂಬರ್ ೨೧ನೇ ತಾರೀಕಿನ ದಿನ ಈಕೆಯು ಪವಿತ್ರವಾದ ಗಂಗಾ ನದಿಯಲ್ಲಿ ಮಿಂದು ಹಿಂದೂ ಮತವನ್ನಂಗೀಕರಿಸಿದಳು. ಅಂದು ಈಕೆಗೆ ೨೨ನೇ ಹುಟ್ಟಿದ ಹಬ್ಬ. ಆ ದಿನ ಅವಳ ಜಾತಕದ ನಕ್ಷತ್ರಗಳು ಬಹು ಶುಭದಾಯಕವಾಗಿದ್ದುವೆಂದೂ, ಅದಕ್ಕೇ ಅವಳು ಹಿಂದೂ ಧರ್ಮವನ್ನಲಂಕರಿಸಲು ತಕ್ಕದ್ದೆಂದೂ, ಈಕೆಯು ನಿರ್ಧರಿಸಿ ತನ್ನ ನಿರ್ಧಾರವನ್ನವಳು ನೆರವೇರಿಸಿದಳು.

ಅವಳೀಗ ಹಿಂದೂ ಧರ್ಮವನ್ನಂಗೀಕರಿಸಿರುವಳಾದರೂ ಪೂರ್ವಕಾಲದ ಗ್ರೀಕರಂತೆ ಈಕೆಯು ಉಡುಪನ್ನು ಧರಿಸುತ್ತಾಳೆ. ಈ ಅಸಾಧಾರಣವಾದ ಉಡುಪನ್ನು ಅವಳ ಅಸಾಧಾರಣ ಲಾವಣ್ಯವನ್ನೂ ಕಂಡು ಅನೇಕರು ಬೆರಗಾಗಿದ್ದಾರೆ.

ಈಗ ಇವಳು ಕಾಶ್ಮೀರ ದೇಶದ ಸುಂದರವಾದ ಕಣಿವೆಯೊಂದರಲ್ಲಿ ವಾಸಿಸುತ್ತಿರುವಳು. ಅವಳ ಜೊತೆಯಲ್ಲಿ ಅವಳ ಮೂರು ವರ್ಷದ ಮಗುವೊಂದು ಮಾತ್ರ ಇದೆ. ಈಕೆಯು ಅಮೇರಿಕಾ ದೇಶದವಳು. ಅಮೇರಿಕೆಯ ಸುಪ್ರಸಿದ್ಧ ಲೇಖಕರಾದ ಜಾರ್ಜ್ ಕ್ರೇಮ್ ಕುಕ್‌ರವರ ಮಗಳು. ಈಕೆಯು ಗ್ರೀಕ್ ಶ್ರೀಮಂತನೊಬ್ಬನನ್ನು ಮದುವೆಯಾಗಿದ್ದಳು. ಕೆಲವು ಕಾಲದ ಮೇಲೆ ಈಕೆಗೆ ಅಮೇರಿಕೆಯ ಜೀವನ ಮಾರ್ಗದಲ್ಲಿಯೂ, ನಾಗರೀಕತೆಯಲ್ಲಿಯೂ ಬರೀ ಥಳುಕು ಮಾತ್ರ ಇದೆಯೆಂದೂ, ಆ ಜೀವನದಲ್ಲಿ ಸುಖವಿಲ್ಲವೆಂದೂ ತೋರಿ ಬಂತು. ದಾಂಪತ್ಯ ಜೀವನವನ್ನು ತ್ಯಜಿಸಿಬಿಟ್ಟಳು. ಈಗ ಅವಳ ಹೊತ್ತಿಗೆ ಅವಳಿಗೊಂದು ಮಗುವಾಗಿತ್ತು. ಈಗವಳು ಅವಳ ಗಂಡನ ಸಂಸರ್ಗವನ್ನು ಬಿಟ್ಟು ತನ್ನ ಮಗುವಿನೊಡನೆ ವಾಸ ಮಾಡಿಕೊಂಡಿದ್ದಾಳೆ. ಈಕೆಯ ಗಂಡನು ಅಥೆನ್ಸಿನಲ್ಲಿ ವಾಸವಾಗಿದ್ದಾನೆ.

ಈಗ ನೀಲಾದೇವಿಗೆ ಮಹಾತ್ಮರ ಸಬರಮತಿಯಲ್ಲಿ ಆಶ್ರಮ ಜೀವನವನ್ನು ನಡೆಸಬೇಕೆಂಬ ಅಪೇಕ್ಷೆ ಹುಟ್ಟಿದೆ. ಅದಕ್ಕಾಗಿಯೇ ಅವಳು ಹಿಂದೂ ಧರ್ಮವನ್ನವಲಂಬಿಸಿದ್ದು. ತನ್ನ ಆಸ್ತಿಯೆಲ್ಲವನ್ನೂ ತನ್ನ ಮಗುವಿಗೆ ಕೊಟ್ಟುಬಿಟ್ಟು ತಾನೀಗ ಬಡತನವನ್ನಂಗೀಕರಿಸಿರುವಳು.

ತನ್ನ ಗುರುವಾದ ಮಹಾತ್ಮರು ಇಂದಿನ ಜಗತ್ತಿನ ಅತ್ಯಂತ ಯೋಗಿ ಶ್ರೇಷ್ಠರೆಂದೂ ಸಕಲ ವಿಧದಲ್ಲಿಯೂ ಏಸೂ ಕ್ರಿಸ್ತನಿಗೆ ಸಮಾನರೆಂದೂ, ಹೇಳುತ್ತಿರುವಳು. ಈಕೆಯು ತನ್ನ ಗುರುವರ್ಯರಾದ ಮಹಾತ್ಮರನ್ನು ಪ್ರಥಮತಃ ಕಾಶಿ ಕ್ಷೇತ್ರದಲ್ಲಿ ಸಂಧಿಸಲುದ್ದೇಶಿಸಿರುವಳೆಂದು ತಿಳಿದುಬಂದಿದೆ.

ಮೀರಾಬಾಯಿಯು ಗಾಂಧೀಜೀಯವರ ಆಶ್ರಮಕ್ಕೆ ಬರುವುದಕ್ಕೆ ಮುಂಚೆ ಆಶ್ರಮದ ನಿಯಮಗಳನ್ನು ತನ್ನ ಜೀವನದಲ್ಲಿ ಆಚರಣೆಗೆ ತರುವುದಕ್ಕಾಗಿ ಒಂದು ವರ್ಷಕಾಲ ಶ್ರಮಿಸಿ ತನ್ನ ಜೀವನವನ್ನು ಯೋಗ್ಯವನ್ನಾಗಿ ಮಾಡಿಕೊಂಡು ನಂತರ ಮಹಾತ್ಮರ ಆಶ್ರಮವನ್ನು ಸೇರಿದಳಷ್ಟೆ. ಅದರಂತೆಯೇ ನೀಲಾದೇವಿಯೂ ಸಕಲ ಸುಖಭೋಗಗಳನ್ನೂ ತ್ಯಜಿಸಿ ಆಶ್ರಮ ನಿಯಮಗಳನ್ನು ತನ್ನ ಜೀವನದಲ್ಲಿ ಆಚರಣೆಗೆ ತರುತ್ತಿದ್ದಾಳೆ. ಈಗ ಈಕೆಯು ತನ್ನ ಪೂರ್ವದ ಆಹಾರವನ್ನು ಬಿಟ್ಟು ಗಾಂಧೀಜೀಯವರು ಉಪಯೋಗಿಸುವ ಸಸ್ಯಾಹಾರವನ್ನೂ, ಆಡಿನ ಹಾಲನ್ನೂ ಉಪಯೋಗಿಸುತ್ತಿದ್ದಾಳೆ. ತನ್ನ ಗುರುವನ್ನು ಕಾಣುವ ಮುನ್ನ ತನ್ನ ಜೀವನವನ್ನು ಅತಿಪರಿಶುದ್ಧವನ್ನಾಗಿರಿಸಬೇಕೆಂಬ ಆಕಾಂಕ್ಷೆಯಿಂದ ಉಪವಾಸಾದಿಗಳನ್ನೂ, ಧ್ಯಾನ ಪ್ರಾರ್ಥನೆಗಳನ್ನೂ ಆಚರಿಸುತ್ತಿದ್ದಾಳೆ. ಸ್ವಲ್ಪ ಕಾಲ ಈ ಸಂಸ್ಕಾರಗಳನ್ನು ಹೊಂದಿದ ಮೇಲೆ ತಾನು ಮಹಾತ್ಮರನ್ನು ನೋಡಲು ಯೋಗ್ಯಳಾಗುವೆನೆಂದು ಹೇಳುತ್ತಾಳೆ. ಇದಲ್ಲದೆ ಗಾಂಧೀಜೀಯವರ ಆಶ್ರಮದಲ್ಲಿರುವ ಪ್ರತಿಯೊಬ್ಬರೂ, ಬ್ರಹ್ಮಚರ್ಯೆಯನ್ನಾಚರಿಸುತ್ತಿರುವುದು ಅತ್ಯವಶ್ಯಕವಾದುದರಿಂದ ಈಗ ಈಕೆಯು ಉಜ್ವಲ ಬ್ರಹ್ಮಚರ್ಯೆಯನ್ನು ಸಾಧಿಸಲು ಆರಂಭಿಸಿದ್ದಾಳೆ.

೨೩ ವರ್ಷ ಪ್ರಾಯದ ಚಿಕ್ಕ ಮಗುವಿನ ತಾಯಿಯಾದ [illegible]ಯು ಇಂದು ಸನ್ಯಾಸವನ್ನವಲಂಬಿಸಿರುವಳು. ತಾನು [illegible] ಬಾಲ್ಯದಲ್ಲಿ ಹಿಂದೂ ದೇಶದ ಮತ ಧರ್ಮಗಳ ವಿಚಾರ [illegible] ಪುಸ್ತಕಗಳನ್ನು ಓದಿದಂದಿನಿಂದ ಈ ಭೌತಿಕ ಬಂಧನಗ[illegible] ಬಿಡಿಸಿಕೊಳ್ಳಬೇಕೆಂದು ತನ್ನ ಮನಸ್ಸಿಗೆ ಅನ್ನಿಸುತ್ತಿತ್ತೆಂದೂ [illegible] ಗಾಂಧಿಯವರ ಬೋಧೆಯನ್ನು ಅನುಸರಿಸಿ ನಡೆಯು[illegible] ತನಗೆ ಮುಕ್ತಿಯುಂಟೆಂದು ಮನದಟ್ಟಾಗಿದೆಯೆಂ[illegible] ಸೂಚಿಸಿದ್ದಾಳೆ.

[illegible] ಆಧ್ಯಾತ್ಮಿಕ ಪ್ರಭಾವವೆಂತಹುದೆಂಬುದು [illegible] ಮುಮುಕ್ಷುಗಳಿಗೆ ಮಾತ್ರ ಗೊತ್ತು. [illegible]ಗೆ ಮಹಾತ್ಮರು ರಾಜಕೀಯ ಗುಲ್ಲು ಗಾರ[illegible] ಆತ್ಮರು ಆದರ್ಶ ಸಾಮ್ರಾಜ್ಯ ಚಕ್ರವರ್ತಿ.

'ಸ್ವಚಾಮಕ'

ಬ್ರಹ್ಮಚರ್ಯ—ನನ್ನ ಅನುಭವ.

(ಮಹಾತ್ಮ ಗಾಂಧಿಯವರ ಲೇಖನಿಯಿಂದ.)

ಬ್ರಹ್ಮಚರ್ಯದ ವಿಚಾರವಾಗಿ ಬರೆಯುವುದು ಸುಲಭವಾದ ಕೆಲಸವಲ್ಲ. ಆದರೆ ಬ್ರಹ್ಮಚರ್ಯೆಯ ವಿಚಾರವಾಗಿ ನನಗುಂಟಾಗಿರುವ ವಿವಿಧ ಅನುಭವಗಳನ್ನು ನನ್ನ ಲೇಖನಗಳನ್ನೋದುವವರಿಗೆ ತಿಳಿಸಬೇಕೆಂಬ ಬಯಕೆಯು ನನಗೆ ಬಹು ದಿನಗಳಿಂದಲೂ ಇತ್ತು. ಅಲ್ಲದೆ ಈ ವಿಚಾರವಾಗಿ ನನ್ನ ಅಭಿಪ್ರಾಯವನ್ನು ಪ್ರಕಟಿಸಬೇಕೆಂದು ಅನೇಕರು ನನಗೆ ಪತ್ರ ಬರೆದರು.

ನನ್ನ ಮಿತ್ರರೊಬ್ಬರು ಬ್ರಹ್ಮಚರ್ಯವೆಂದರೇನು? ಸಂಪೂರ್ಣ ಬ್ರಹ್ಮಚರ್ಯೆಯನ್ನು ಸಾಧಿಸುವುದು ಸಾಧ್ಯವೇ? ಅದು ಸಾಧ್ಯವಿದ್ದಲ್ಲಿ ಆ ಸಾಧನೆಯನ್ನು ಸಫಲಗೊಳಿಸಲು ನಾವು ಯಾವ ರೀತಿಯಲ್ಲಿ ವರ್ತಿಸಬೇಕು ಎಂದು ನನ್ನನ್ನು ಪ್ರಶ್ನಿಸಿದ್ದಾರೆ.

ಬ್ರಹ್ಮಚರ್ಯೆಯೆಂದರೆ 'ಬ್ರಹ್ಮ'ನನ್ನು ಹುಡುಕುವುದೆಂದರ್ಥ. ಬ್ರಹ್ಮನು ಸರ್ವವ್ಯಾಪಿ. ಆದುದರಿಂದ ನಾವು ನಮ್ಮ ಅಂತರಾತ್ಮನ ಸಾಕ್ಷಾತ್ಕಾರ ಮಾಡಿಕೊಂಡರೆ, ನಮಗೆ ಬ್ರಹ್ಮಸಾಕ್ಷಾತ್ಕಾರವಾಗುವುದು. ನಾವು ನಮ್ಮ ಇಂದ್ರಿಯಗಳನ್ನು ನಮ್ಮ ಅಧಿಕಾರಕ್ಕೊಳಗಮಾಡಿಕೊಳ್ಳುವ ವರೆಗೂ, ನಮಗೆ ಅಂತರಾತ್ಮನ ಸಾಕ್ಷಾತ್ಕಾರವಾಗುವುದು ಅಸಂಭವ. ಇದರಿಂದ ಬ್ರಹ್ಮಚರ್ಯವೆಂದರೇನೆಂಬುದನ್ನು ನಾವು ತಿಳಿಯಬಹುದು. ಎಲ್ಲಾ ಕಾಲಗಳಲ್ಲಿಯೂ, ಎಲ್ಲಾ ಸ್ಥಳಗಳಲ್ಲಿಯೂ, ನಮ್ಮ ಆಲೋಚನೆ, ಮಾತು, ಕೆಲಸ ಅಷ್ಟೇಕೆ, ನಮ್ಮ ಸಮಸ್ತ ಇಂದ್ರಿಯ ವ್ಯಾಪಾರಗಳನ್ನು ನಮ್ಮ ಅಧಿಕಾರಕ್ಕೊಳಪಡಿಸಿಟ್ಟುಕೊಂಡಿರುವುದೇ ಬ್ರಹ್ಮಚರ್ಯ.

ಬ್ರಹ್ಮಚರ್ಯೆಯನ್ನಭ್ಯಸಿಸುತ್ತಿರುವ ಸ್ತ್ರೀ ಪುರುಷರು ರಾಗರಹಿತರು. ಅಂತಹ ಬ್ರಹ್ಮಚಾರಿಗಳಲ್ಲಿ ದೈವತ್ವವುಂಟು.

ನಾನು ಈ ಹಿಂದೆ ಹೇಳಿದಂತಹ ಸಂಪೂರ್ಣ ಬ್ರಹ್ಮಚರ್ಯೆಯನ್ನು ಅನುಷ್ಠಾನಕ್ಕೆ ತರುವುದು ಸಾಧ್ಯ. ಈ ವಿಚಾರವಾಗಿ ನನಗೆ ಯಾವ ವಿಧವಾದ ಅನುಮಾನವೂ ಇಲ್ಲ. ಇಂತಹ ಸಂಪೂರ್ಣ ಬ್ರಹ್ಮಚರ್ಯವನ್ನು ಅನುಷ್ಠಿಸುವ ಶಕ್ತಿಯು ನನಗಿನ್ನೂ ದೊರೆತಿಲ್ಲವಾದರೂ, ಆ ಸಂಪೂರ್ಣ ಬ್ರಹ್ಮಚರ್ಯೆಯನ್ನು ನಡೆಸಲು ನಾನು ನಿರಂತರವೂ ಯತ್ನಿಸುತ್ತಿದ್ದೇನೆ. ನನ್ನ ಈ ಜನ್ಮದಲ್ಲಿಯೇ ನಾನು ಅಂತಹ ಸಂಪೂರ್ಣ ಸ್ಥಿತಿಯನ್ನು ಹೊಂದುವೆನೆಂಬ ಭರವಸೆಯು ನನಗಿಲ್ಲದಿಲ್ಲ. ಈಗ ನನ್ನ ಶರೀರವು ನನ್ನ ಅಧಿಕಾರಕ್ಕೊಳಪಟ್ಟು ಕೆಲಸ ಮಾಡುತ್ತಿದೆ. ಜಾಗ್ರತಾವಸ್ಥೆಯಲ್ಲಿ ಈ ಶರೀರವನ್ನು ನನ್ನ ಅಜ್ಞೆಗೊಳಪಡಿಸಿ ಇಟ್ಟುಕೊಳ್ಳಬಲ್ಲವನಾಗಿದ್ದೇನೆ. ನನ್ನ ನಾಲಿಗೆಯನ್ನು ತಕ್ಕ ಮಟ್ಟಿಗೆ ಗೆದ್ದಿದ್ದೇನೆ. ಆದರೆ ನನ್ನ ಆಲೋಚನೆಗಳನ್ನು ನನ್ನ ಸ್ವಾಧೀನದಲ್ಲಿಟ್ಟುಕೊಳ್ಳಲು ನಾನು ಇನ್ನೂ ಬಹಳ ಸಾಧನೆ ನಡೆಸಬೇಕಾಗಿದೆ. ಪ್ರಕೃತದಲ್ಲಿ ನನ್ನ ಮನಸ್ಸು, ನಾನದರ ಮೇಲೆ ತೋರಿಸುವ ಅಧಿಕಾರವನ್ನು ಆಗಾಗ್ಗೆ ಧಿಕ್ಕರಿಸಿ, ನನ್ನ ಮೇಲೆ ದಂಗೆಯೆದ್ದು ನನ್ನ ಅಧಿಕಾರವನ್ನು ಮೀರುತ್ತದೆ. ನನ್ನ ಮನಸ್ಸಿನಲ್ಲಿ ಅಂತಃಕಲಹಗಳು ನಡೆಯುತ್ತಲೇ ಇರುತ್ತವೆ.

ನಾನು ಜಾಗ್ರತಾವಸ್ಥೆಯಲ್ಲಿರುವಾಗ ಮಾತ್ರ ನಾನು ನನ್ನ ಮನಸ್ಸಿನಲ್ಲಿ ಅಂತಃಕಲಹಗಳೇಳದಂತೆ ನೋಡಿಕೊಳ್ಳಬಲ್ಲೆ. ಅಲ್ಲದೆ ಜಾಗ್ರತಾವಸ್ಥೆಯಲ್ಲಿ ಯಾವ ವಿಧವಾದ ದುಷ್ಟ ಭಾವನೆಯೂ ನನ್ನ ಮನಸ್ಸನ್ನು ಹೊಗಲಾರದು. ಆದರೆ ನಾನು ನಿದ್ರೆ ಹೋಗುತ್ತಿರುವ ಕಾಲದಲ್ಲಿ ಅನಿರೀಕ್ಷಿತವಾದ ಕನಸುಗಳು ಬಿದ್ದು, ಅಥವ ನನ್ನ ಶರೀರವು ಈ ಹಿಂದೆ ಅನುಭವಿಸಿದ ಸುಖಗಳ ಕೋರಿಕೆಯು ಮನಸ್ಸಿನಲ್ಲಿ ತೋರಿಬಂದು, ನನ್ನ ಮನಸು ವಿಚಲಿತವಾಗುವುದು. ಇಂತಹ ಕನಸುಗಳೂ, ಭಾವನೆಗಳೂ ಅಪರಿಶುದ್ಧವಾದುವುಗಳಾಗಿದ್ದಲ್ಲಿ, ಆ ಅಪರಿಶುದ್ಧತೆಗೆ ತಕ್ಕ ಪರಿಣಾಮವುಂಟಾಗುವುದು. ಇಂತಹ ಅವಸ್ಥೆಗಳನ್ನು ಯಾವನು ಅನುಭವಿಸುತ್ತಿರುವನೋ ಅವನು ರಾಗರಹಿತನೆನಿಸಿಕೊಳ್ಳಲಾರನು. ಇಂತಹ ಅವಸ್ಥೆಯು ತಗ್ಗಿಹೋಗುತ್ತಿದೆ. ಆದರೆ ಸಂಪೂರ್ಣವಾಗಿ ನಿಂತುಹೋಗಿಲ್ಲ. ನನ್ನ ಮನೋಭಾವಗಳ ಮೇಲೆ ನನಗೆ ಸಂಪೂರ್ಣವಾದ ಹತೋಟಿಯಿದ್ದಲ್ಲಿ, ಈಗ್ಗೆ ಹತ್ತು ವರ್ಷಗಳಿಂದ ನನ್ನನ್ನು ಬಾಧಿಸುತ್ತಿರುವ, ಕಫಜ್ವರ, ಆಮಶಂಕೆ ಮೊದಲ ವ್ಯಾಧಿಗಳು ನನ್ನನ್ನು ಪೀಡಿಸುತ್ತಿರಲಿಲ್ಲ. ತೇಜೋಪೂರ್ಣವಾದ ಆತ್ಮವು ವಾಸಿಸುವ ದೇಹವು ತೇಜೋಪೂರ್ಣವಾಗಿರಬೇಕೆಂದು ನನ್ನ ಭಾವನೆ. ನಮ್ಮ ರಾಗಾದಿಗಳು ಕಡಮೆಯಾಗುತಾ ಬಂದು ನಮ್ಮ ಆತ್ಮದ ತೇಜಸ್ಸು ಹೆಚ್ಚುತ್ತಾ ಹೋದಂತೆಲ್ಲಾ, ನಮ್ಮ ದೇಹದ ತೇಜಸ್ಸೂ ಆರೋಗ್ಯವೂ ಹೆಚ್ಚುತ್ತಾ ಹೋಗುವುದು. ಅದ್ದರಿಂದ ಆರೋಗ್ಯವಾದ ಶರೀರವು ಯಾವಾಗಲೂ ಪುಷ್ಟವಾಗಿರುತ್ತದೆಂದು ಯಾರೂ ಭಾವಿಸಬಾರದು. ತೇಜಃಪೂರ್ಣವಾದ ಧೀರ ಆತ್ಮವು ಬಡದೇಹದಲ್ಲಿ ವಾಸಿಸುತ್ತಿರಬಹುದು. ಸಂಪೂರ್ಣ ಆರೋಗ್ಯವನ್ನನುಭವಿಸುತ್ತಿರುವ ದೇಹವು ಬಡಕಲಾಗಿರಬಹುದು. ಚೆನ್ನಾದ ಬೆಳವಣಿಗೆಯುಳ್ಳ ಶರೀರವು ಅನೇಕ ರೋಗಗಳಿಗೆ ಆಶ್ರಯವಾಗಿರಬಹುದು. ಒಂದು ವೇಳೆ ಅಂತಹ ಪುಷ್ಟವಾದ ಶರೀರವು ರೋಗರಹಿತವಾಗಿದ್ದರೂ, ಮುಂದೆ ಬರತಕ್ಕದಾದ ರೋಗಗಳಿಂದ ತಪ್ಪಿಸಿಕೊಳ್ಳಲಾರದು. ಆದರೆ ನಾನು ಹೇಳಿದ ಸಂಪೂರ್ಣಾರೋಗ್ಯವುಳ್ಳ ದೇಹಕ್ಕೆ ಮಾತ್ರ ಈ ಯಾವ ರೋಗಗಳೂ ಅಂಟವು. ಅದರ ಶುದ್ಧವಾದ ರಕ್ತದಲ್ಲಿ ಸಕಲ ವಿಧವಾದ ವಿಷ ಕ್ರಿಮಿಗಳನ್ನೂ ಎದುರಿಸಿ ಜಯಿಸಬಲ್ಲ ಶಕ್ತಿಯಿದೆ.

ಅಂತಹ ಸಂಪೂರ್ಣ ಸಮತ್ವವನ್ನು ಹೊಂದುವುದು. ಅತಿ ಕಠಿಣವಾದ ಕಾರ್ಯ ಹಾಗಿಲ್ಲದಿದ್ದಲ್ಲಿ ಈ ಕಾಲದೊಳಗಾಗಿ ನಾನು ಆ ಸಂಪೂರ್ಣತ್ವವನ್ನು ಹೊಂದಬೇಕಾಗಿತ್ತು. ಏಕೆಂದರೆ, ನಾನು ಸಂಪೂರ್ಣ ಸ್ಥಿತಿಯನ್ನು ಪಡೆಯಲು ಎಷ್ಟು ನಿಶ್ಚಿತತೆಯಿಂದ ಯತ್ನಿಸುತ್ತಿರುವೆನೆಂಬುದು, ನನ್ನ ಅಂತರಾತ್ಮನಿಗೆ ಗೊತ್ತು. ನಾನು ಈ ಸಂಪೂರ್ಣ ಸ್ಥಿತಿಯನ್ನು ಪಡೆಯಲು ಯಾವ ಬಹಿರಾತಂಕವೂ ನನ್ನನ್ನು ತಡೆಯಲಾರದು. ಆದರೆ ಪೂರ್ವ ಸಂಸ್ಕಾರಗಳಿಂದ ವಿಮುಕ್ತರಾಗುವುದು ಎಲ್ಲರಿಗೂ ಸುಲಭವಲ್ಲ. ನನಗಂತೂ ಅದು ಕಠಿಣವಾಗಿ ತೋರುತ್ತದೆ. ನನಗಿನ್ನೂ ಆ ಸಂಪೂರ್ಣ ಸ್ಥಿತಿಯು ಪೂರ್ಣವಾಗಿ ದೊರೆತಿಲ್ಲದುದಕ್ಕಾಗಿ ನಾನು ಚಿಂತಿಸುವುದಿಲ್ಲ; ಆ ಪರಿಪೂರ್ಣ ಸ್ಥಿತಿಯು ಎಂತಹುದಿರಬಹುದೆಂಬುದರ ಮನೋಚಿತ್ರವು ನನ್ನ ಮುಂದಿದೆ. ಆ ಪರಿಪೂರ್ಣ ಸ್ಥಿತಿಯ ಆನಂದದ ಅನುಭವವನ್ನು ತಕ್ಕ ಮಟ್ಟಿಗೆ ಹೊಂದಿದವನಾಗಿದ್ದೇನೆ. ನಾನು ಈ ವರೆಗೆ ಸಾಧಿಸಿರುವ ಬ್ರಹ್ಮಚರ್ಯವನ್ನು ನೆನೆದು ನಾನು ಸಂಪೂರ್ಣ ಬ್ರಹ್ಮಚರ್ಯವನ್ನು ಸಾಧಿಸಬಲ್ಲೆನೆಂದು ದೃಢವಾಗಿ ನಂಬಿದ್ದೇನೆ. ಅಂತಹ ಸಂಪೂರ್ಣ ಬ್ರಹ್ಮಚರ್ಯವನ್ನು ಸಾಧಿಸುವುದರೊಳಗಾಗಿ ನಾನು ಸತ್ತು ಹೋದಲ್ಲಿ ಕೂಡ ನನ್ನ ಸಾಧನೆಯು ವ್ಯರ್ಥವಾಯಿತೆಂದು ಎಣಿಸಲಾರೆ. ಏಕೆಂದರೆ ನನ್ನ ಈ ಶರೀರದ ಅಸ್ತಿತ್ವದಲ್ಲಿ ನನಗೆಷ್ಟು ನಂಬಿಕೆಯಿದೆಯೋ, ಪುನರ್ಜನ್ಮವಿದೆಯೆಂಬ ಬಗ್ಗೆಯೂ ನನಗಷ್ಟೇ ನಂಬಿಕೆಯಿದೆ. ಆದ್ದರಿಂದ ನಮ್ಮ ಪ್ರಯತ್ನವೂ, ನಮ್ಮ ಸಾಧನೆಯೂ, ಅದೆಷ್ಟು ಅಲ್ಪವಾಗಿದ್ದರೂ, ನಾಶವಾಗಿಹೋಗುವುದಿಲ್ಲವೆಂಬ ಭರವಸೆಯು ನನಗಿದೆ.

ಬ್ರಹ್ಮಚರ್ಯವನ್ನು ಅಭ್ಯಸಿಸುತ್ತಿರುವವರು ತಮ್ಮ ಸಾಧನೆಗಳ ಬಗ್ಗೆ ನಂಬಿಕೆಯಿಡಬೇಕೆಂದೂ, ತಾಳ್ಮೆಯಿಂದ ತಮ್ಮ ಸಾಧನೆಯನ್ನು ಮುಂದುವರಿಸಬೇಕೆಂದೂ ತಿಳಿಸಬೇಕೆಂಬ ಉದ್ದೇಶದಿಂದ ನನ್ನ ಈ ಅನುಭವಗಳನ್ನು ತಿಳಿಸಿದ್ದೇನೆ. ಎಲ್ಲರಲ್ಲಿರುವ ಆತ್ಮವೂ ಒಂದೇ. ಆದ್ದರಿಂದ ಬ್ರಹ್ಮಚರ್ಯೆಯನ್ನು ಸಾಧಿಸುವ ಅವಕಾಶವು ಪ್ರತಿಯೊಬ್ಬರಿಗೂ ಏಕರೀತಿಯಲ್ಲಿಯೇ ಇದೆ, ಕೆಲವರಲ್ಲಿ ಬ್ರಹ್ಮಚರ್ಯ ಸಾಧನಾಶಕ್ತಿಯು ಈಗಾಗಲೇ ಸ್ಥಾಪಿತವಾಗಿದೆ. ಮತ್ತೆ ಕೆಲವರಲ್ಲಿ ಸ್ಥಾಪಿತವಾಗಬೇಕಾಗಿದೆ. ತಾಳ್ಮೆಯಿಂದ ಸಾಧನೆಗಳನ್ನು ನಡೆಸಿದಲ್ಲಿ ಪ್ರತಿಯೊಬ್ಬರೂ, ಒಂದೇ ವಿಧವಾದ ಅನುಭವಗಳನ್ನು ಹೊಂದಿರುವರು.

ನಾನು ಈ ವರೆಗೆ ಬ್ರಹ್ಮಚರ್ಯಕ್ಕೆ ಸಂಬಂಧಿಸಿದ ಸ್ಥೂಲ ವಿಚಾರಗಳನ್ನು ವಿಮರ್ಶಿಸಿದೆ. ಸಾಮಾನ್ಯ ವ್ಯವಹಾರದಲ್ಲಿ ಆಲೋಚನೆಗಳು, ಮಾತುಗಳು ಮತ್ತು ಕಾಮುಕ ವೃತ್ತಿಗಳನ್ನು ನಮ್ಮ ಹತೋಟಿಯಲ್ಲಿಟ್ಟುಕೊಳ್ಳುವುದೇ ಬ್ರಹ್ಮಚರ್ಯವೆಂದು ಪರಿಗಣಿಸಲ್ಪಟ್ಟಿದೆ. ಬ್ರಹ್ಮಚರ್ಯವನ್ನು ಈ ರೀತಿಯಾಗಿ ವಿವರಿಸುವುದೂ ನ್ಯಾಯವಾದದ್ದೇ. ಬ್ರಹ್ಮಚರ್ಯವನ್ನು ಸಾಧಿಸುವುದು ಬಹಳ ಶ್ರಮಸಾಧ್ಯವಾದ ಕೆಲಸವೆಂದು ಅನೇಕರು ನಂಬಿದ್ದಾರೆ. ನಾವು ನಮ್ಮ ಜಿಹ್ವಾ ಚಾಪಲ್ಯವನ್ನು ಗೆದ್ದಿಲ್ಲವಾದುದರಿಂದ ನಮ್ಮ ಕಾಮಾಸಕ್ತಿಯನ್ನು ಗೆಲ್ಲುವುದು ಅಸಾಧ್ಯವೆನಿಸುವಷ್ಟು ಕಷ್ಟವಾಗಿ ಪರಿಣಮಿಸಿದೆ. ರೋಗಗಳಿಗೆ ಸಿಕ್ಕಿ ನಿಶ್ಶಕ್ತರಾಗಿರುವ ಮನುಷ್ಯರಲ್ಲಿ ಕಾಮಾಸಕ್ತಿಯು ಬಹು ಹೆಚ್ಚಾಗಿರುವುದೆಂಬುದು ಅನೇಕ ಮಂದಿ ವೈದ್ಯರ ಅನುಭವಕ್ಕೆ ಬಂದಿದೆ. ಆದ್ದರಿಂದ ನಿಶ್ಶಕ್ತರಾದ ಜನರನ್ನುಳ್ಳ ಜನಾಂಗವು ತನ್ನ ಬ್ರಹ್ಮಚರ್ಯವನ್ನುಳಿಸಿಕೊಂಡಿರುವುದೆಂಬುದು ಅಸಹಜ.

ಬಡವಾಗಿದ್ದರೂ, ಆರೋಗ್ಯ ಪೂರ್ಣವಾಗಿರುವ ಶರೀರದ ವಿಚಾರವಾಗಿ ನಾನು ಈಗಾಗಲೇ ತಿಳಿಸಿದ್ದೇನೆ. ಅದನ್ನೋದಿದವರು ನಾನು ಶಾರೀರಕ ವೃದ್ಧಿಯನ್ನು ವ್ಯಾಯಾಮವನ್ನೂ ಅಲ್ಲಗಳೆದೆನೆಂದು ಭಾವಿಸಬಾರದು. ನಾನು ಬ್ರಹ್ಮಚರ್ಯವನ್ನು ಕುರಿತು ನನ್ನ ಮುರುಕು ಹರುಕು ಭಾಷೆಯ ಕೆಲವು ಮಾತುಗಳನ್ನು ಹೇಳಿದ್ದೇನೆ. ಆದ್ದರಿಂದ ಅನೇಕರು ನನ್ನ ಅಭಿಪ್ರಾಯಗಳನ್ನು ತಪ್ಪಾಗಿ ತಿಳಿದುಕೊಳ್ಳಲವಕಾಶವಿ[illegible] ಇಂದ್ರಿಯಗಳನ್ನು ನಿಗ್ರಹಿಸಿದಲ್ಲಿ ಶರೀರವು ತಗ್ಗುತ್ತದ್ದು ಸಹಜ. ದೇಹದಲ್ಲಿನ ಅಭಿಮಾನವು ಕುಗ್ಗುತ್ತಾ ಬಂ[illegible] ಹಾಗೆಲ್ಲಾ, ಶಾರೀರಕ ಶಕ್ತಿಯ ಮೇಲಿನ ಅಭಿಮಾನವೂ [illegible] ಗ್ಗುತ್ತಾ ಹೋಗುವುದು.

ಬ್ರಹ್ಮಚಾರಿಯ ದೇಹವು ತೆಳ್ಳಗಿದ್ದರೂ ನಿರಂತರವೂ ವರ್ಚಸ್ಸಂಯುಕ್ತವಾಗಿರುವುದು. ಬ್ರಹ್ಮಚರ್ಯವು ದೈವಿಕವಾದುದು.

ಪ್ರ. ಮತ.

ವಜ್ರದ ಅಡ್ಡಿಗೆ.

ಈ ಅಡ್ಡಿಗೆಗಳನ್ನು ಅಮೇರಿಕನ್ ಡೈಮಂಡ್ ಎಂಬ ಇಮಿಟೇ[illegible] ವಜ್ರದ ಕಲ್ಲುಗಳನ್ನು ಇಟ್ಟು ಕೆಮಿಯನ್ ಬಂಗಾರದಿಂದ ಕಟ್ಟಿದ ಕಟ್ಟಿದೆ. ಅದರ ಬದ್ಲಾ [illegible] ಕೆಡದಂತೆ ನವರನ್ ಬಂಗಾರದ ಬಣ್ಣ ಕೊಟ್ಟಿದೆ. ಈ ಕಲ್ಲುಗಳ ಪ್ರಕಾಶತೆ ಸಾಚಾ ವಜ್ರದ ಅಡ್ಡಿಗೆಗೆ ಸರಿಯಾಗಿದೆ. ಇದನ್ನು ನೋಡಿದವರು ೫,೦೦೦ ರೂ.ಗಳು ಕ್ರಯ ಕಟ್ಟುವರು. ಶ್ರೀಮಂತರು, ಗರೀಬರಿಗೂ ಲಾಯಕಾದವು. ಕ್ರಯ ಗಳ್ಗೆ ರೂ. ೫—೧೨. ೨೫೦ ಗಳ್ಗೆ ಕಟ್ಟಿದ ಬಂಗಾರದ ರಾಳು ಗಳ್ಗೆ ನಂ. ೧ ರೂ. ೪—೮—೦. ನಂ. ೨. ೩—೮—೦.



ವಿಳಾಸ,—ಕೆ. ಎನ್. ಜೆವೆಲ್ಲರ್ಸ್ ಅಂಡ್ ಕೋ,
12—5 ಪೋ|| ಬಾ|| 1246, ಮದರಾಸು

ವರ್ತಮಾನ ಸಂಗ್ರಹ.

ಒಳದೇಶ.

ದೇವಯ್ಯ ಮೆಮೋರಿಯಲ್ ಕಪ್ಪಿನ ಹಾಕಿ ಟೂರ್ನಮೆಂಟು ಈ ತಿಂಗಳ 15 ನೇ ತಾರೀಕಿನಲ್ಲಿ ಶುರುವಾಗುತ್ತದೆಂದು ತಿಳಿಯುತ್ತೇವೆ.

ಕಳೆದ ಡ್ರಾಯಿಂಗ್ ಪರೀಕ್ಷೆಯಲ್ಲಿ ಮ. ಮುಕ್ಕಾಟಿರ ಯಂ. ಪೂವಯ್ಯನವರು ಫಸ್ಟ್‌ಕ್ಲಾಸಿನಲ್ಲಿ ತೇರ್ಗಡೆಯಾಗಿರುವರೆಂದು ತಿಳಿದು ಸಂತೋಷಪಡುತ್ತೇವೆ.

ದಕ್ಷಿಣ ಕೊಡಗಿನ ಪುಂಡರ ಕಟ್ಟೆಗಳು ತಾ. 17–2–32 ರಲ್ಲಿ ವೀರರಾಜಪೇಟೆಯಲ್ಲೂ ಉತ್ತರ ಕೊಡಗಿನವು ತಾ. 19–2–32 ರಲ್ಲಿ ಮಡಿಕೇರಿಯಲ್ಲೂ ಹರಾಜಾಗುವವು.

'ಕೊಡಗು' ಪತ್ರಿಕೆಯ ಎಡಿಟರರಾದ ಮ. ಪಾಡ್ಯಂಡ ಬಿ. ಬೆಳ್ಯಪ್ಪನವರು ಸತ್ಯಾಗ್ರಹ ಸಂಬಂಧ ದಸ್ತಗಿರಿಯಾದ ಕಾರಣ ಮ. ಮಾಚಿಮಂಡ ಯಂ. ಗಣಪತಿಯವರು ಎಡಿಟರರಾಗಿ ನೇಮಕ ಮಾಡಲ್ಪಟ್ಟಿರುವರು.

ಹೆಬ್ಬುಲಿ ಕೊಂದರೆ 50 ರೂ. ಕಿರುಬ ಕೊಂದರೆ 25 ರೂ. ಇನಾಮು ಕೊಡಲಾಗುವುದು ಎಂತ ಇದ್ದ ರೂಲನ್ನು ತಿದ್ದಿ ಹೆಬ್ಬುಲಿಗೆ 25 ರೂ. ಕಿರುಬನಿಗೆ 15 ರೂ. ಮಾತ್ರ ಕೊಡಲಾಗುತ್ತದೆ ಎಂತ ಚೀಫ್ ಕಮಿಷನರು ತಿದ್ದಿದ್ದಾರೆ.

ಇದೇ ತಾರೀಕು 6ನೇ ಶನಿವಾರ ದಿವಸ ಸಾಯಂಕಾಲ 6 ಗಂಟೆಯಿಂದ ಜಮಿನ್ನಾರ ಸಂಘದ ಹಾಲಿನಲ್ಲಿ ಮ. ರಾ. ಶ್ರೀ. ಬಿ. ಕೆ. ಸುಬ್ಬರಾಯರು ವೇದಾಂತ ಸಂಘದವರ ಆಶ್ರಯದಲ್ಲಿ ಪುರಂದರದಾಸರ ಜೀವಚರಿತ್ರೆಯನ್ನು ಕುರಿತು ಹರಿಕಥೆ ಮಾಡುತ್ತಾರೆ.

ಮಡಿಕೇರಿ ಹೈಸ್ಕೂಲ್‌ನಲ್ಲಿ ಟೀಚರಾಗಿದ್ದ ಮ. ಬಿ. ವೆಂಕಟರಾಮಯ್ಯನವರ ಬದಲಿಗೆ ಮ. ಎ. ಪಿ. ಶ್ರೀನಿವಾಸ ಬಿ. ಎ. ಎಲ್. ಟಿ. ಯವರೂ, ವೀರರಾಜಪೇಟೆಯ ಹೈಸ್ಕೂಲ್‌ನಲ್ಲಿ ಟೀಚರಾಗಿದ್ದ ಮ. ಸೆಲ್ಲಮಕ್ಕಳ ಚಂಗಪ್ಪನವರ ಬದಲಿಗೆ ಮ. ಟಿ. ಯನ್. ಕೃಷ್ಣಯ್ಯ ಬಿ. ಎ. ಎಲ್. ಟಿ. ಯವರೂ ನೇಮಿಸಲ್ಪಟ್ಟಿದ್ದಾರೆ.

ಕುಂಜಲ ಗ್ರಾಮದಲ್ಲಿ ಮಾಲೆ ಜಾತಿಯ ಒಬ್ಬ ಗಂಡಸು, ಒಬ್ಬ ಹೆಂಗಸನ್ನು ಸಹ ಗುಂಡು ಹೊಡೆದು ಕೊಂದನೆಂಬ ತಕ್ಸೀರ್ ಕುರಿತು ಉದಿಯಂಡ ಸೋಮಯ್ಯನೆಂಬವನ ಮೇಲೆ ಸೆಶನ್ ಕೋರ್ಟಿನಲ್ಲಿ ಸೋಮವಾರದಿಂದ ಗುರುವಾರದವರೆಗೆ ವಿಚಾರ ನಡೆದಿದೆ. ಜಡ್ಜಮೆಂಟ್ ಇನ್ನೂ ಆಗಿರುವುದಿಲ್ಲ.

ಬೊಂಬಾಯಿಯಲ್ಲಿ ಕಾಂಗ್ರೆಸ್ ಆಸ್ಪತ್ರೆಯಲ್ಲಿ ಮೇಟ್ರನ್ (ಮುಖ್ಯನರ್ಸ್) ಆಗಿರುವ ಪಾಂಡಂಡ ಡಾಕ್ಟರ್ ಬೆಳ್ಯಪ್ಪನವರ ಮಗಳಿಗೆ ಬೊಂಬಾಯಿ ಕ್ರಾನಿಕಲ್ ಪತ್ರಿಕೆಯು ಹೊರಡಿಸಿದ ಹಿಂದೀರಾಜಕೀಯ ಮುಖಂಡರ ಸಂಬಂಧವಾದ ಒಂದು ಒಗಟನ್ನು ಬಯಸ್ಪದವಾಗಿ ಬಿಡಿಸಿದ್ದಕ್ಕೆ 1000 ರೂ. ಇನಾಮು ಸಿಕ್ಕಿತು.

ಈ ವರೆಗೆ ಮಲೇರಿಯಾ ಸಂಬಂಧ ಕೆಲಸಕ್ಕೆ ಇಟ್ಟಿದ್ದ ಇಬ್ಬರು ಡಾಕ್ಟರುಗಳ ಪೈಕಿ ಒಬ್ಬರೇ ಸಾಕೆಂತ ಸರ್ಕಾರದವರು ತೀರ್ಮಾನಿಸಿದ್ದಾರೆ. ಈ ಕೆಲಸ ಮಾಡುತ್ತಿದ್ದ ಡಾಕ್ಟರ್ ಸಿ. ಬಿ. ಕಾರ್ಯಪ್ಪನವರನ್ನು ಮಡಿಕೇರಿ ಆಸ್ಪತ್ರೆಗೆ ವರ್ಗಾಯಿಸಿದ್ದಾರೆ. ಅಲ್ಲಿ ಹಂಗಾಮಿ ಕೆಲಸ ಮಾಡುತ್ತಿದ್ದ ಡಾಕ್ಟರ್ ರುದ್ರಪ್ಪನವರು ಕೆಲಸದಿಂದ ನಿವೃತ್ತರಾಗಿರುತ್ತಾರೆ.

ಕೊಡಗು ಟೆರಿಟೋರಿಯಲ್ ಪಟಾಲಮಿನ ಆಫೀಸರುಗಳ ಮತ್ತು ಹೊಸ ಸಿಪಾಯಿಗಳ ಕವಾಯಿತು ತಾ. 10–3–32 ರಿಂದ 9–4–32 ರ ವರೆಗೂ ಇತರ ಎಲ್ಲರ ಕವಾಯಿತು ತಾ. 10–4–32 ರಿಂದ ತಾ. 9–5–32 ರ ವರೆಗೂ ನಡೆಯುತ್ತದೆಯೆಂದೂ ಇದಕ್ಕೆ ಹಾಜರಾಗದವರು ಶಿಕ್ಷೆಗೆ ಗುರಿಯಾಗುವರೆಂದೂ ಪಟಾಲಮಿನ ಕಮಾಂಡರು ಪ್ರಕಟಿಸುತ್ತಾರೆ.

ಫೆಬ್ರವರಿ 1 ನೇ ತಾರೀಕಿನಿಂದ 'ಶ್ರೀರಾಂ' ಬಸ್ಸ್ ಸರ್ವಿಸು ಬೆಳಿಗ್ಗೆ 9½ ಗಂಟೆಗೆ ವೀರರಾಜಪೇಟೆಯಿಂದ ಮೂರ್ನಾಡು ಮಾರ್ಗವಾಗಿ ಮಡಿಕೇರಿಗೆ ಬಂದು ಅದೇ ದಿನ ಪುನಃ ಮಧ್ಯಾಹ್ನ 2½ ಗಂಟೆಗೆ ಮಡಿಕೇರಿಯಿಂದ ಹೊರಟು ಮೂರ್ನಾಡು ವೀರರಾಜಪೇಟೆ, ಅಮ್ಮತ್ತಿ, ಪೊಳ್ಳಿಬೆಟ್ಟದ ಮಾರ್ಗವಾಗಿ ಗೋಣಿಕೊಪ್ಪಲಿಗೆ ಹೋಗುವುದರಿಂದ ಪ್ರಯಾಣಿಕರಿಗೆ ಒಳ್ಳೆ ಅನುಕೂಲವಾಗುವುದೆಂದು ನಂಬುತ್ತೇವೆ.

ಗ್ರಾಮಾಂತರಗಳಲ್ಲಿ ವಾಸಿಸುವ ರೈತರಿಗೆ ಕೃಷಿಯಿಂದಲ್ಲದೆ ಬೇರೆ ಕಸಬಿನಿಂದ ಬರುವ ಉತ್ಪತ್ತಿ ಮೇಲೆ ಕಂದಾಯ ಹಾಕಲು ಖಾನೂನು ಇಲ್ಲದೆ ಇತ್ತು. ಅಂಥಾ ಉತ್ಪತ್ತಿಯ ಮೇಲೆ ಕಂದಾಯ ಹಾಕುವ ಅಧಿಕಾರ ದೊರಕುವಂತೆ ಡಿಸ್ಟ್ರಿಕ್ಟ್ ಫಂಡ್ ರೆಗ್ಯುಲೇಶನನ್ನು ತಿದ್ದುಪಡಿ ಮಾಡುತ್ತಾರೆಂತಲೂ ಇದಕ್ಕೆ ತಕರಾರು ಹೇಳಬೇಕೆನ್ನುವವರು 1–3–32 ರ ವಳಗೆ ತಿಳಿಸಬೇಕೆಂತಲೂ ಕೊಡಗು ಗಜೆಟಿನಲ್ಲಿದೆ.

ಕಳೆದ ವಾರ ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಲ್ಲಿ ನಡೆದ ವಾಕ್ಚಾತುರ್ಯ ಸ್ಪರ್ಧೆಯಲ್ಲಿ ವೀರರಾಜಪೇಟೆ ಹೈಸ್ಕೂಲಿನ ಮ. ಬಿದ್ದಂಡ ಯನ್. ನಾಚಯ್ಯನವರು ಇಂಗ್ಲಿಷಿನಲ್ಲಿ ಮೊದಲನೆಯವರಾಗಿಯೂ, ಮತ್ತು ಅಕ್ಕರಾಮ ಶಾಸ್ತ್ರಿಯವರು ಎರಡನೆಯವರಾಗಿಯೂ, ಕನ್ನಡದಲ್ಲಿ ಅಕ್ಕರಾಮ ಶಾಸ್ತ್ರಿಯವರು ಮೊದಲನೆಯವರಾಗಿಯೂ ಮತ್ತು ಕೊತಂಡ ಜೆ. ಮಾಚಯ್ಯನವರು ಎರಡನೆಯವರಾಗಿಯೂ ತೇರ್ಗಡೆಯಾಗಿರುತ್ತಾರೆ.

ಕಳೆದ ತಾ. 31 ರಲ್ಲಿ ವೀರರಾಜಪೇಟೆ ಹೈಸ್ಕೂಲಿನವರಿಗೂ ಮತ್ತು ಯುರೋಪಿಯನ್ ಜಮೀನುದಾರರಿಗೂ ನಡೆದ ಕ್ರಿಕೆಟ್ ಪಂದ್ಯಾಟದಲ್ಲಿ ವೀರರಾಜಪೇಟೆಯವರು ಯುರೋಪಿಯನ್ ಟೀಮಿನವರನ್ನು ಸೋಲಿಸಿದರು. ಇದರಲ್ಲಿ ಭಾಗ ತೆಗೆದುಕೊಂಡ ಮ. ಐಚೆಟ್ಟಿರ ಮುತ್ತಣ್ಣನವರು, ಬಿ. ಕೆ. ದೇವಯ್ಯನವರು ಜೆ. ಯಸ್. ನಂಜಪ್ಪನವರು ಮತ್ತು ಎ. ಆರ್. ಗೋವಿಂದ ಸಿಂಗರವರು ತಮ್ಮ ಉಚ್ಚತರಗತಿಯ ಆಟವನ್ನು ಪ್ರದರ್ಶಿಸಿದರು.

ಬೊಂಬಾಯಿ ಕೊಡವರ ಸಂಘದ ಒಂದು ಮೀಟಿಂಗು 3–1–32ರಲ್ಲು ಮ. ಯಂ. ಯಸ್. ಮುತ್ತಣ್ಣ ಬಿ. ಎ. ಬಿ. ಯಲ್. ರವರ ಭವನದಲ್ಲು ನಡೆದು ಮಿಸೆಸ್. ಯಂ. ಯಸ್. ಮುತ್ತಣ್ಣನವರು ಪ್ರೆಸಿಡೆಂಟರಾಗಿಯೂ, ಮ. ಪಿ. ಎ. ಮಾಚ್ಚಯ್ಯನವರು ಕಾರ್ಯದರ್ಶಿಯವರಾಗಿಯೂ, ಮತ್ತು ಮ. ಪಿ. ಜಿ. ಐಯ್ಯಪ್ಪ ಬಿ. ಎ. ಯವರು ಖಜಾಂಚಿಯವರಾಗಿ 1932ನೇ ಸಂವತ್ಸರಕ್ಕೆ ನೇಮಿಸಲ್ಪಟ್ಟಿರುವರೆಂದು ತಿಳಿಯಬರುತ್ತದೆ.

ಧಾರವಾಡದಲ್ಲಿ ಪ್ರಕಟವಾಗುವ "ಜಯಕರ್ನಾಟಕ" ಎಂಬ ಮಾಸಪತ್ರಿಕೆಯ ಸಂಪಾದಕರಾದ ಶ್ರೀ. ಬೆಳಗಾಂವಿ ರಾಮಚಂದ್ರರಾಯರೂ ಮತ್ತು ಅದೇ ಊರಿನ ವಿಕ್ಟೋರಿಯ ಹೈಸ್ಕೂಲಿನ ಟೀಚರಾದ ಶ್ರೀ. ಸಂ. ಬಾ. ಜೋಶಿಯವರು ಈ ತಾ. 1 ರಲ್ಲಿ ಮಡಿಕೇರಿಗೆ ಬಂದು ತಾ. 2 ರಲ್ಲಿ ಹೈಸ್ಕೂಲ್ ಹಾಲಿನಲ್ಲಿ "ಕನ್ನಡ ಆಧುನಿಕ ಸಾಹಿತ್ಯ"ದ ಕುರಿತು ಉಪನ್ಯಾಸ ಮಾಡಿದರು. ಈಗಿನ ಹೊಸ ರೀತಿಯ ಕವಿತೆಗಳನ್ನು ಓದಿ, ಹಾಡಿ ತೋರಿಸಿದರು. ಇವುಗಳಲ್ಲಿ ಕೆಲವು ಇವರು ಬರೆದವೂ ಕೂಡಿದ್ದವು.

ಸತ್ಯಾಗ್ರಹದ ಸಂಬಂಧ ಗೋಣಿಕೊಪ್ಪಲಿನಲ್ಲಿ 5 ಸತ್ಯಾಗ್ರಹಿಗಳೂ ಮಡಿಕೇರಿಯಲ್ಲಿ ಕೊಳ್ಳಿಮಾಡ ವಿಯ್ಯಮ್ಮನವರೇ ಮೊದಲಾದ ಆರು ಸತ್ಯಾಗ್ರಹಿಗಳೂ ಮತ್ತು ವೀರರಾಜಪೇಟೆಯಲ್ಲಿ ಮೂರನೆಯ ಡಿಕ್ಟೇಟರಾದ ಪನಂಡ ಕಾರ್ಯಪ್ಪನವರೇ ಮೊದಲಾದ ಮೂರು ಸತ್ಯಾಗ್ರಹಿಗಳು ದಸ್ತಗಿರಿ ಮಾಡಲ್ಪಟ್ಟಿದ್ದಾರೆ. ಇವರೆಲ್ಲರು ವಿಚಾರವಾಗಿ ಈ 14 ಸ್ವಯಂ ಸೇವಕರಿಗೆ ಆರಾರು ತಿಂಗಳು ಕಠಿಣ ಸಜೆ ವಿಧಿಸಿ ಈ ದಿನವೇ ಕಣ್ಣಾನೂರಿಗೆ ಒಯ್ಯಲ್ಪಟ್ಟರು.

ಹಿಂದೂ ದೇಶ.

ಮದ್ರಾಸಿನ ಎಲ್ಲಾ ಜಿಲ್ಲೆಗಳಲ್ಲೂ ದಸ್ತಗಿರಿಗಳು ಆಗುತ್ತಲಿವೆ.

ಮದ್ರಾಸ್ ಪಟ್ಟಣದಲ್ಲಿ ಪಿಕೆಟ್ ಮಾಡುವವರನ್ನು ಚಿತ್ತದಿಂದ ಹೊಡೆದು ಓಡಿಸುತ್ತಿದ್ದಾರೆ.

ಪಂಡಿತ ಮದನಮೋಹನ ಮಾಳವೀಯವರು ಅಲ್ಲಹಾಬಾದಿನಲ್ಲಿದ್ದು ಅನೇಕ ಜಮೀನ್ದಾರರ ಕೂಡ ಗೇಣಿ ಕೊಡದ ಚಳವಳ ಕುರಿತು ಮಾತಾಡಿದರು.

ಮಂಗಳೂರಿನಲ್ಲಿ ಬಾವುಟ ಹಿಡಿದು ಮೆರವಣಿಗೆ ಮಾಡಿದ ಕೆಲವು ಮಹಿಳೆಯರು ದಸ್ತಗಿರಿಯಾದರು. ಪಿಕೆಟ್ ಮಾಡುವ ಕೆಲವು ಯುವಕರು ಲತ್ತಿ ಹೊಡತಕ್ಕೆ ಗುರಿಯಾಗುತ್ತಿದ್ದಾರೆ.

ಕಲ್ಕತ್ತದಲ್ಲಿ ಮೂರು ಬಾಲಕರು ಖಾನೂನು ಭಂಗ ಚಳವಳಕ್ಕೆ ಸೇರಿದ್ದಕ್ಕೆ ಅವರ ತಂದೆಯರಿಂದ ಯಾಕೆ ಜುಲುಮಾನೆ ವಸೂಲು ಮಾಡಬಾರದೆಂಬುದಕ್ಕೆ ಸಬಬು ತೋರಿಸಲು ನೋಟೀಸಾಗಿದೆ.

ಸರಕಾರೀ ಉದ್ಯೋಗಸ್ಥರ ಸಂಬಳವು ಶೇಕಡ ಹತ್ತರಂತೆ ಕಡಿಮೆ ಮಾಡಲ್ಪಟ್ಟ ಕಾರಣ ಸುಮಾರು 37 ಲಕ್ಷ ರೂಪಾಯಿ 1932—1933ನೇ ವರ್ಷದಲ್ಲಿ ಉಳಿತಾಯವಾಗಬಹುದೆಂದು ಫೈನಾನ್ಸ್ ಮೆಂಬರವರಿಂದ ಅಂದಾಜು ಮಾಡಲಾಗಿದೆ.

ಕಲಕತ್ತೆಯಲ್ಲಿ ಜುಲುಮಾನೆ ವಸೂಲಿಗಾಗಿ ಶ್ರೀಯುತ ವಕೀಲ್ ಎನ್. ಎಸ್. ಪ್ರಭುರವರ ಪತ್ನಿಯವರ ಕೊರಳಿನಿಂದ ತಾಳಿಯನ್ನು ಬಿಚ್ಚಿಸಿದ್ದಕ್ಕಾಗಿ ಮೇಲಧಿಕಾರಿಗಳಿಗೆ ಫಿರ್ಯಾದಾಗಿ ತಾಳಿಯನ್ನು ವಾಪಸು ಕೊಡಲು ಹುಕುಂ ಆಗಿದೆ.

ಬೊಂಬಾಯಿಯಲ್ಲಿ ಪಿಕೆಟಿಂಗ್, ಮೆರವಣಿಗೆ ಮುಂತಾದ್ದು ನಡೆಯುತ್ತಲೇ ಇದೆ. ಈ ವಾರ ಎರಡು ಸಾರಿ ಪ್ರಭು ಮಾಡಲು ಪ್ರಯತ್ನಿಸಿದ ಗುಂಪಿನ ಮೇಲೆ ಪೋಲೀಸರು ಗುಂಡು ಹಾರಿಸಿದರು. ದಸ್ತಗಿರಿಗಳು ಶಿಕ್ಷೆಗಳೂ ಆಗುತ್ತಲಿವೆ.

ಅಲ್ಲಹಾಬಾದಿನಲ್ಲಿ 64 ಗ್ರಾಮವಾಸಿಗಳು ಗೇಣಿ ಕೊಡಬಾರದೆಂಬ ಚಳವಳಕ್ಕೆ ಮದ್ದತ್ತು ಕೊಡುತ್ತಾರೆಂಬ ತಕ್ಸೀರಿಗೆ ಗುರಿಮಾಡಲ್ಪಟ್ಟು 62 ಜನರಿಗೆ ಆರಾರು ತಿಂಗಳು ಸಜೆಯಾಯಿತು. ಇಬ್ಬರು ಜಾಮೀನ್ ಬರಾರು ಕೊಟ್ಟದ್ದರಿಂದ ಖುಲಾಸಾಯಿತು.

ವಾಯುವ್ಯ ಸರಹದ್ದಿನ ಜೈಲಿನಲ್ಲಿ ಇರುವ ಖೈದಿಗಳ ಸಂಖ್ಯೆ 10,048 ಎಂತ ಎಸೆಂಬ್ಲಿ ಸವಾಲು ಜವಾಬಿನಿಂದ ತಿಳಿದಿದೆ. ಖಾನ್ ಅಬ್ದುಲ್ ಗಫರ್ ಖಾನರನ್ನು ಇಟ್ಟಿರುವುದು ಯಾವ ಜೈಲಿನಲ್ಲಿ ಎಂಬದನ್ನು ಸಾರ್ವಜನಿಕ ಕ್ಷೇಮಕ್ಕಾಗಿ ಹೇಳುವುದಿಲ್ಲವಾಗಿ ಜವಾಬು ಸಿಕ್ಕಿದೆ.

ಕಲಕತ್ತೆ ಮುನ್ಸಿಪಲ್ ಕಮಿಟಿ ಮೆಂಬರಾದ ಮ. ಮೂಸಾ ಸಾಹೇಬರನ್ನು ದಸ್ತಗಿರಿ ಮಾಡಿದರು. ಅನಂತರ ಯುವಕ ಮುಸ್ಲಿಮ್ ಸಂಘದ ಸೆಕ್ರೆಟರಿಯವರಾದ ಮ. ಪಿ. ಫೋಕರ್ ಮತ್ತು ಇಸಿದ್ದಿಕ್ಕ ಕುಞಕಣ್ಣನ್ ಎಂಬವರು ಪರದೇಶೀ ಬಟ್ಟೆ ಅಂಗಡಿ ಪಿಕೆಟ್ ಮಾಡಿದಾಗ ದಸ್ತಗಿರಿಯಾದರು.

ಶ್ರೀಮತಿ ಮಿರಾಬೆನ್‌ರವರು 4ನೇ ತಾರೀಕಿನಲ್ಲಿ ಬರೆದಿರುವುದೇನಂದರೆ—ಮಹಾತ್ಮ ಗಾಂಧಿಯವರನ್ನು ಹಿಡಿದು ಒಂದು ತಿಂಗಳಾಯಿತು, ಅವರಿಗೆ ಪ್ರಿಯವಾದ ಖಾದಿಯನ್ನು ಧರಿಸಿ ಅವರ ಮನಸ್ಸಂತೋಷಪಡಿಸಿರೇಳು. ಅವರನ್ನು ಹಿಡಿದ ಮಾಸಿಕ ದಿನ ಅಲ್ಪ ಸ್ವಲ್ಪ ಖಾದಿಯನ್ನಾದರೂ ಕೊಂಡುಕೊಳ್ಳಬೇಕು ಎಂತ ಕೇಳಿಕೊಂಡಿದ್ದಾರೆ.

ಮದ್ರಾಸ್ ಮುನ್ಸಿಪಲ್ ಕಮಿಟಿಯವರು ಮುನ್ಸಿಪಾಲಿಟಿಯು ಕಳುಹಿಸಿದ ಗಾಡಿಯನ್ನು ಪೋಲೀಸ್ ಅಧಿಕಾರಿಗಳು ಉಪಯೋಗಿಸಿದ್ದನ್ನು ಖಂಡಿಸಿದ್ದಕ್ಕೆ ಪಿಕೆಟ್ ಮಾಡುವವರ ಮೇಲೆ ದಯಾಯುಕ್ತವಾದ ನೀರು ಹಾರಿಸುವುದನ್ನು ಇನ್ನು ಮೇಲೆ ನಿಲ್ಲಿಸಲಾಗುತ್ತದೆಯೆಂತ ಪೋಲೀಸ್ ಕಮಿಷನರು ಜವಾಬು ಕೊಟ್ಟಿರುತ್ತಾರೆ.

ಮಹಾತ್ಮ ಗಾಂಧಿಯವರ ಕಡೇ ಮಗ ದೇವಿದಾಸ್ ಗಾಂಧಿಯವರಿಗೆ ಶ್ರೀಯುತ ಸಿ. ರಾಜಗೋಪಾಲಾಚಾರ್ಯರ ಮಗಳನ್ನು ಕೊಟ್ಟು ಮದುವೆ ಮಾಡುವುದೆಂದು ನಿಶ್ಚಯಿಸಿದ್ದರು. ಆದರೆ ತಂದೆ ತಾಯಿಗಳು ಜೈಲಿನಲ್ಲಿರುವಾಗ ತಾನು ಮದುವೆ ಮಾಡಿಕೊಳ್ಳುವುದಿಲ್ಲವೆಂತ ನಿಶ್ಚಯಿಸಿ ಖಾನೂನು ಭಂಗದ ಚಳವಳಕ್ಕೆ ಸೇರಿದ ಇವರನ್ನು ಸರಕಾರದವರು ಈಗ ಬಿಡುಗಡೆ ಮಾಡಿದ್ದಾರೆ.

ಡಿಲ್ಲಿ ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ಸರಕಾರಿ ಅಧಿಕಾರಿಗಳ ಖಂಡಿಸುವ ಇನ್ನೊಂದು ಕಡೆ ಕೊಟ್ಟಿರುವ ಠರಾವಿನ ಮೇಲೆ ಚರ್ಚೆ ನಡೆದು ಠರಾವು ಬಹುಮತದಿಂದ ಸೋತುಹೋಯಿತು. ಠರಾವಿನ ಪರವಾಗಿ 43 ಚುನಾಯಿತ ಮೆಂಬರುಗಳೂ ಒಬ್ಬ ನಿಯಮಿತ ಮೆಂಬರನೂ, ವಿರೋಧವಾಗಿ 26 ಅಧಿಕಾರಿಗಳೂ, 13 ನಿಯಮಿತ ಮೆಂಬರುಗಳೂ, 23 ಚುನಾಯಿತ ಮೆಂಬರುಗಳೂ ಓಟು ಕೊಟ್ಟರು.

ಮ. ಕೃಷ್ಣಕಾಂತ ಮಾಳವೀಯರ ಮೇಲೆ ನಡೆಯುತ್ತಿರುವ ರಾಜದ್ರೋಹದ ಮೊಕದ್ದಮೆಯಲ್ಲಿ ಪಂಡಿತ ಜವಾಹರ್‌ಲಾಲರನ್ನು ಬಚಾವು ಸಾಕ್ಷಿಯಾಗಿ ವಿಚಾರ ಮಾಡಿದರು. ತಾ. 3ರಲ್ಲಿ ಜವಾಹರ್‌ಲಾಲರು ಕೋರ್ಟಿಗೆ ಬಂದಾಗ ಅಸ್ವಸ್ಥವಾಗಿದ್ದಂತೆ ತೋರಿತು. ಒಂದುವಾರದಿಂದ ಸ್ವಲ್ಪ ಜ್ವರ ಬರುತ್ತಿದೆಯಂತೆ. ಇವರನ್ನು ಬರೈಲಿ ಜೈಲಿಗೆ ಸಾಗಿಸುತ್ತಾರೆಂತ ವರ್ತಮಾನವಿದೆ.

ಜೈಲಿನಲ್ಲಿ ಖೈದಿಗಳಿಗೆ ಈಗ ಕೊಡಲ್ಪಡುತ್ತಿರುವ ಆಹಾರವು ಸರಿಯಾಗಿಲ್ಲವಾದುದರಿಂದ ಪಚನ ಶಕ್ತಿಯನ್ನು ಹೆಚ್ಚಿಸಿ ಆರೋಗ್ಯವನ್ನುಂಟುಮಾಡಬಲ್ಲ ವಿಟಮಿನ್ ಎಂಬ ಪದಾರ್ಥವು ಹೆಚ್ಚಾಗಿರುವ ಆಹಾರವನ್ನು ಹೆಚ್ಚು ಪ್ರಮಾಣದಿಂದ ಕೊಡಬೇಕೆಂದು ಕೂನೂರಿನಲ್ಲಿರುವ ಆಹಾರ ಶಾಸ್ತ್ರನಿಪುಣರಾದ ಕರ್ನಲ್ ಮೆಕ್ಕಾರಿ ಎಂಬವರು ಮದ್ರಾಸು ಪ್ರಭುತ್ವದವರಿಗೆ ವರದಿ ಮಾಡಿರುತ್ತಾರೆ. ಜೈಲುಗಳ ಇನ್ಸ್ಪೆಕ್ಟರ್ ಜನರಲರವರು ಈ ನಿಪುಣರ ಸಲಹೆಗೆ ಪ್ರೋತ್ಸಾಹ ಕೊಟ್ಟಿರುವರು.

ತಮಿಳು ನಾಡಿನ ಒಂದು ಮುನ್ಸೀಫ್ ಕೋರ್ಟಿಗೆ ಖದ್ದರ್ ಬಟ್ಟೆ ಹಾಕಿ ಹೋಗುವ ವಕೀಲರುಗಳು ಕೋರ್ಟಿಗೆ ಹೋಗಕೂಡದೆಂತ ದಫೇದಾರನು ತಡೆದನು. ಡಿಸ್ಟ್ರಿಕ್ಟ್ ಜಡ್ಜಿಯರ ಹುಕುಂ ಮೇರೆ ತಾನು ಹೀಗೆ ನಡೆದನೆಂತ ಹೇಳಿದನು. ಡಿಸ್ಟ್ರಿಕ್ಟ್ ಜಡ್ಜಿಯರಿಗೆ ಫಿರ್ಯಾದು ಹೋಗಿ ವಿಚಾರಿಸುವಲ್ಲಿ ಪರದೇಶೀ ಬಟ್ಟೆಗೆ ಕಾಂಗ್ರೆಸ್ಸಿನವರು ಪಿಕೆಟ್ ಮಾಡುವುದಕ್ಕಾಗಿ ತಾನು ಖದ್ದರಿಗೆ ಪಿಕೆಟ್ ಮಾಡಿದೆನೆಂತ ಹೇಳಿದನು. ದಫೇದಾರನಿಗೆ ಡಿಸ್ಟ್ರಿಕ್ಟ್ ಜಡ್ಜಿಯರು ವಾಗ್ದಂಡನೆ ಮಾಡಿ ಇನ್ನು ಮುಂದೆ ನೋಡಿಕೊಳ್ಳುವುದಾಗಿ ಹೇಳಿದರು.

ಪೂನಾದ ಪ್ರಮುಖ ಲಾಯರಲ್ಲೊಬ್ಬರಾದ ಶ್ರೀ ಭೋಪಾಟ್ಕರ್ ಎಂಬವರು ಜೈಲಿನಲ್ಲಿದ್ದಾರೆ. ಇವರಿರುವ ಕೊಠಡಿಯೊಳಗೆ ಒಂದು ಸರ್ಪವು ರಾತ್ರಿ ಹೊತ್ತು ಕಾಣಿಸಿಕೊಂಡಿತು. ಸ್ವಲ್ಪ ದೂರದಲ್ಲಿ ಸರ್ಪವು ಹೆಡೆಯೆತ್ತಿ ಇವರನ್ನು ಕಚ್ಚಲು ತಯಾರಿದ್ದರೂ ಇವರ ಕೈಯಲ್ಲಿ ಆತ್ಮರಕ್ಷಣೆಯ ಆಯುಧವೇನೂ ಇರಲಿಲ್ಲ. 20 ನಿಮಿಷಗಳ ವರೆಗೆ ಈ ಸ್ಥಿತಿಯಲ್ಲಿ ಕಳೆದನಂತರ ಯಾರೋ ವಾರ್ಡರ್ ಅಲ್ಲೇ ದಾಟುವವನನ್ನು ಕರೆದು ಬಾಗಿಲು ತೆಗೆಸಿ ಬಚಾವಾದರು. ಸರ್ಪವು ಕೊಲ್ಲಲ್ಪಟ್ಟಿತು.

ಮಹಾತ್ಮ ಗಾಂಧಿ ಮತ್ತು ಕಾಂಗ್ರೆಸಿನವರೇ ಈಗಿನ ಹಿಂದೂಸ್ಥಾನದ ಸ್ಥಿತಿಗೆ ಕಾರಣರೆಂತ ಸ್ಟೇಟ್ ಸೆಕ್ರೆಟರಿಯವರು ಹೇಳಿರುವುದನ್ನು ಖಂಡಿಸಿ ಇಂಡಿಯಾ ಸರ್ಕಾರವೇ ಜವಾಬ್ದಾರಿಯೆಂತ ವಾದಿಸಿ ವೈಸರಾಯರಿಗೆ ಪಂಡಿತ ಮದನಮೋಹನ ಮಾಳವೀಯರು ಒಂದು ಉದ್ದವಾದ ಪತ್ರಿಕೆ ಬರೆದಿರುವರು. ಅದರ ಆಖೈರ್ ಪ್ರಾರ್ಥನೆ ಏನೆಂದರೆ:—'ಆರ್ಡಿನೇನ್ಸ್‌ಗಳನ್ನು ವಾಪಸು ತೆಗೆದುಕೊಳ್ಳಿ, ಮಹಾತ್ಮ ಗಾಂಧಿ ಮೊದಲಾದ ಈ ಚಳವಳದ ಸಂಬಂಧವಾದ ಎಲ್ಲಾ ಖೈದಿಗಳನ್ನೂ ಬಿಡಿ, ಸರ್ಕಾರಕ್ಕೆ ಮುಟ್ಟು ಗೋಲು ಹಾಕಿಕೊಂಡ ಆಸ್ತಿಗಳನ್ನೆಲ್ಲಾ ವಾಪಸು ಕೊಡಿ, ವಸೂಲು ಮಾಡಿದ ಜುಲುಮಾನೆಗಳನ್ನು ವಾಪಸು ಕೊಡಿ, ಮಹಾತ್ಮ ಗಾಂಧಿ ಮತ್ತು ಕಾಂಗ್ರೆಸ್ ಮುಖಂಡರನ್ನು ಸೇರಿಸಿಕೊಂಡು ಸ್ವಾತಂತ್ರ್ಯ ಸಮಸ್ಯೆಗಳನ್ನು ಚರ್ಚಿಸಿ ತೀರ್ಮಾನಿಸಿಕೊಳ್ಳಿ, ಶಾಂತಿ ಸ್ಥಾಪನೆಯೂ ಹಿಂದೂಸ್ಥಾನಕ್ಕೆ ಬ್ರಿಟನಿನ ಸಂಸ್ಥಾನಕ್ಕೂ ದೊರೆ... ರಾಜ್ಯಗಳಿಗೂ ಪ್ರಯೋಜನವಾಗುವ ರಾಜಕೀಯ... ನ್ನು ಕಲ್ಪಿಸಲು ಕಾಂಗ್ರೆಸಿನವರ ಸಹಾಯ... ಈ ಕೆಲಸಗಳನ್ನು ಮಾಡಲು ದೇವರು ತಮಗೆ... ನನ್ನ ಧೈರ್ಯವನ್ನು ದೇವರು ದಯಪಾಲಿಸಲಿ. 78— ಪ್ರಾರ್ಥಿಸುತ್ತೇನೆ.

ದಕ್ಷಿಣ ಅಮೇರಿಕದಲ್ಲಿ ಸಾಂಟಿಯಾ... ಎಂಬ ಪಟ್ಟಣದಲ್ಲಿ ಭೂಕಂಪದಿಂದ 2000... ದ್ದಾರೆಂತ ವರ್ತಮಾನವಿದೆ.

ಶರೀರ ದೌರ್ಬಲ್ಯವೇ ನಮ್ಮ ನಾಶಕ್ಕೆ ಕಾರಣವಾಯಿತು. ಮ ಹಾತ್ಮಾಜೀಯವರು ಈ ದೌರ್ಬಲ್ಯವನ್ನು ನಿರ್ಮೂಲಗೊಳಿಸಿ ನಮ್ಮನ್ನು ಉದ್ಧಾರ ಮಾಡಿರುವರು.

ಆ ಮಹಾ ಪುರುಷನು ನಮ್ಮ ದೇಶದ ಧೈರ್ಯ ಶೌರ್ಯ ಗಳಲ್ಲಿ ನಮಗಿಲ್ಲದೇ ಇದ್ದ ಆತ್ಮ ವಿಶ್ವಾಸವು ಪ್ರವಾಹ ರೂಪ ವಾಗಿ ಹರಿಯುವಂತೆ ಮಾಡಿರುವನು. ಇದೀಗ ನಮ್ಮ ಪ್ರ ಭುಗಳು ನಮ್ಮೊಡನೆ ಸಂಧಿ ಸಂಧಾನಗಳನ್ನು ನಡಿಸಲು ಸಿದ್ಧ ರಿರುವರು. ಏಕೆಂದರೆ ನಮ್ಮ ಹೋರಾಟವು ನ್ಯಾಯವಾಗಿ ಶ ಸ್ತ್ರ ಪ್ರಯೋಗದ ಸೂತ್ರಗಳು ಸಡಿಲವಾಗಿರುವರು ಅವರಿಗೆ ತಿಳಿ ಯಬಂದಿದೆ. ಈಗ ನಾವು ಧೈರ್ಯವಾಗಿ ವಿಶ್ವ ಸಮೂಹದಲ್ಲಿ ನಮ್ಮ ಸ್ಥಾನವಾವುದೆಂದು ಕೇಳಬಹುದು.

ಅಕ್ಷಯ ಭಾಗ್ಯ.

ಆತನು ಈಗ ಪಕ್ವಗೋಷ್ಠಿಗೆ ಹೋಗಿ ವಾಗ್ಯುದ್ಧದಲ್ಲಿ ಭಾಗಿಯಾಗಿರುವನು; 'ಖದ್ದರ್' ಎಂದು ಯಾವಾಗಲೂ ಸಾರ್ವ ಜನಿಕವಾಗಿ ಹೇಳುವನು; ಆಧುನಿಕ ವೈದ್ಯ ಮಾರ್ಗದಲ್ಲಿ ಆತನಿಗೆ ನಂಬಿಗೆ ಯುಂಟು ಅಥವಾ ಇಲ್ಲ; ಯಂತ್ರ ತಂತ್ರಗಳಲ್ಲಿನ ವಿಶ್ವಾಸ ವೂ ಅಷ್ಟಷ್ಟೆ. ಈ ಮುಂತಾದ ಕಾರಣಗಳಿಂದ ಆ ಮಹಾ ವ್ಯಕ್ತಿಯು ಹಲಕೆಲವು ಅಭಿಪ್ರಾಯಗಳಿಂದ ಬದ್ಧನಾಗಿರುವ ನೆಂದು ನಾವು ತಿಳಿಯಬಾರದು.

ಅಲ್ಲದೆ ಆತನು ಕೆಲವು ಸಂದರ್ಭಗಳಲ್ಲಿ ತಾನು ಕೈಗೊಂ ಡಿರುವ ಕಾರ್ಯಗಳಲ್ಲಿ ತಪ್ಪು ನೆಪ್ಪುಗಳನ್ನು ಮಾಡಬಹುದು. ಈ ವಿಷಯಗಳ ಸಂಬಂಧವಾಗಿ ಭಿನ್ನಾಭಿಪ್ರಾಯಗಳು ಯಾವಾ ಗಲೂ ಇದ್ದೇ ಇರುತ್ತವೆ. ಆದರೆ ಅವೆಲ್ಲ ಹೊರಗಿನ ವಿಷಯಗಳು ಆತನೇ ಎಷ್ಟೋ ಸಲ ತನ್ನ ತಪ್ಪುಗಳನ್ನು ಒಪ್ಪಿಕೊಂಡಿರು ವನು; ಕಾಲಕ್ಕೆ ತಕ್ಕಂತೆ ತನ್ನ ಅಭಿಪ್ರಾಯಗಳನ್ನು ಬದಲಾಯಿ ಸಿಕೊಂಡಿರುವನು. ಆದರೆ ತನ್ನ ಸತ್ಯಮಾರ್ಗವಲಂಬನದಲ್ಲಿ ಮಾತ್ರ ಆತನು ಒಂದು ಹೆಜ್ಜೆಯಾದರೂ ತಪ್ಪದೆ ಇರುವನು; ಈ ಸತ್ಯದ ಅಭಿಮಾನವೇ ಆತನ ಇಡೀ ಜೀವನದ ಆಧಾರ ವಾಗಿದೆ. 'ಸತ್ಯ ಮಾರ್ಗದ ತಪ್ಪಿ ನಡೆಯನು' ಎಂಬ ದೃಢ ನಿಶ್ಚಯವು ಆತನ ಅಮೃತ ಕುಂಡದಂತೆ ತನ್ನೊಡನೆಯೇ ಹುಟ್ಟಿಬಂದುದೆಂದು ಹೇಳಿದರೂ ತಪ್ಪಿಲ್ಲ. ಈ ಸ್ವಾಭಾವಿಕ ಶಕ್ತಿಯ ಪ್ರದರ್ಶನವೇ ಮಾನವ ಇತಿಹಾಸದ ಅಕ್ಷಯ ಭಾಗ್ಯ ವೆಂದೂ, ಶಾಶ್ವತ ಸಂಪತ್ತೆಂದೂ ಹೇಳಬಹುದು.

ಈ ಚಲನಶೀಲವಾದ ಜಗತ್ತಿನಲ್ಲಿ, ಬದಲಾವಣೆಗಳ ಪ್ರ ವಾಹವು ತಡೆಯಿಲ್ಲದೆ ಹರಿಯುತ್ತಿರುತ್ತದೆ. ಯಾವ ಅದ್ಭು ತ ಜೀವನವು ಈ ಕ್ಷಣಿಕವಾದ ಮಾರ್ಪಾಟುಗಳ ಎಲ್ಲೆಯನ್ನು ಮೀರಿ ನಮ್ಮ ಕಣ್ಣಿಗೆ ಸ್ಪಷ್ಟವಾಗಿ ಕಾಣುತ್ತಿದೆಯೋ ಅದ ಕ್ಕೆ ಕಾರಣಭೂತವಾದ ಮಹತ್ವಶಕ್ತಿಯ ಮಹಾತ್ಮ್ಯವನ್ನು ನಾವು ಗೌರವಿಸಬೇಕು.

ಗಂಭೀರವಾದ ಶಕ್ತಿ.

ಮಹಾತ್ಮರ ಜೀವನದಲ್ಲಿ ಕಾಣುವ ಈ ಚೈತನ್ಯವು ಇ ಡೀ ದೇಶವನ್ನೇ ಹೊಕ್ಕಿದೆ. ನಮ್ಮ ನಿಶಕ್ತಿಯನ್ನು ಅದು ಅಟ್ಟಿಸಿಕೊಂಡು ಹೋಗುತ್ತಿದೆ. ಈ ಅಂತಃ ಶಕ್ತಿಯಿಂದ ದೇದೀಪ್ಯಮಾನವಾದ ಮತ್ತು ಸಾಧಕನೆನಿಸಿಕೊಂಡ ಗಾಂಧಿ ಯ ದಿವ್ಯವಿಗ್ರಹವೇ, ಚರಿತಾಲದ ಗದ್ದುಗೆಯ ಮೇಲೆ ಎದ್ದು ನಿಂತಿದೆ. ಆಕ್ಷೇಪಣೆ, ಅಡಚಣೆ, ಅಪಾಯಗಳು; ಇವು ಯಾ ವುವೂ ಆತನಿಗೆ ಅಡ್ಡಬಂದಂತೆ ಕಾಣಲಿಲ್ಲ; ತನ್ನ ತಪ್ಪುಗಳನ್ನು ಆತನು ಮರೆತಿಲ್ಲ; ಕ್ಷಣಿಕ ಉದ್ರೇಕದ ಕಾರಣಗಳಾದ ಸನ್ನಿ ವೇಶಗಳ ಮಧ್ಯೆ ಆತನು ಸಿಕ್ಕಿದರೂ ಆತನ ಮನೋ ಭೂಮಿ ಕೆಯು ಈ ಸನ್ನಿವೇಶಗಳನ್ನು ಅತಿಕ್ರಮಿಸಿರುವುದಲ್ಲದೆ ತನ್ನ ವಿವೇಕ ಹಾಗೂ ವಿಚಾರ ಶಕ್ತಿಗಳನ್ನು ಅದೆಂದಿಗೂ ಕಳೆದು ಕೊಳ್ಳುವುದಿಲ್ಲ. ಯಾವ ಮಹಾ ಪುರುಷನಲ್ಲಿ ಈ ಸದ್ಗುಣ ವು ಮೂರ್ತಿಭವಿಸಿರುವುದೋ, ನಾವು ಆತನ ಜನ್ಮದಿನಾಚ ರಣೆ ಸಮಾರಂಭದಲ್ಲಿ ಆ ಮಹಾ ಪುರುಷನಿಗೆ ನಮಸ್ಕರಿಸು ತ್ತಿರುವುದು.

ವಿಶೇಷ ಗುಣ!

ಕೊನೆಯ ಮಾತು. ತನ್ನ ಹಿಂದಿನವರ ಉರುಳು ಅನು ಕರಣವೇ ಮನುಷ್ಯನ ವಿಶೇಷ ಗುಣವಲ್ಲ. ಆ ಗುಣವು ಪ ಶುಗಳಲ್ಲಿ ಹೆಚ್ಚಾಗಿ ಕಾಣುವುದು. ಆದರೆ ಮಾನವನು ಒಂ ದೊಂದು ಕಾಲದಲ್ಲಿ ಒಂದೊಂದು ರೀತಿಯಲ್ಲಿ ನೂತನ ನಿ ರ್ಮಾಣಗಳಿಗೆ ಕಾರಣ ಕರ್ತನೆನಿಸಿಕೊಳ್ಳುವನು. ಅತೀ ಪ್ರಾ ಚೀನ ಭಾವಗಳಿಂದ ಆತನು ಎಂದಿಗೂ ಬದ್ಧನಲ್ಲ. ಅನಾದಿ ಯಿಂದ ಯಾವ ಪ್ರಾಂತಿಕಾರಕ ಚೈತನ್ಯವನ್ನು ನಮ್ಮಲ್ಲಿ ಆತನು ಉತ್ಪನ್ನ ಮಾಡಿರುವನೋ ಆ ಪೂರ್ವತನ ಜೀವನವು ನಮ್ಮ ನ್ನಿರಂತರ ನೆಲಸಿ ನಮ್ಮ ಅಂಧಶ್ರದ್ಧೆಯನ್ನೂ ದಾಸ್ಯ ಮಾ ನ್ಯ ಹೋಗಲಾಡಿಸಿ, ನಮ್ಮ 'ಸಾಧನ'ವಾಗಿಂದೆಂದು ಹಾರೈಸುವೆನು.

ಈ ಜಾತಿ ಮತಗಳ ಜಗಳದಲ್ಲಿ ಯಾವಾಗಲೂ ಸ 'ಅಜ್ಞಾನಪ್ಪ ಆಲದ ಮರ'ವೆಂದು ಹಳೆಯ ಪದ್ಧತಿ ಕೊಂಡಿರುವುದನ್ನು ಎಂದಿನ ವರೆಗೆ ಬಿಡುವುದಿಲ್ಲವೋ ನಮ್ಮನ್ನು ಮುಕ್ತರನ್ನಾಗಿ ಮಾಡಲು ಯಾವ ಇಲ್ಲ. ಐರೇ ವೋಟುಗಳ ಭೇಟಿಯಿಂದಲೂ ಜಾತಿಗಳ ಪರಸ್ಪರ ಹಕ್ಕನ್ನು ನಿರ್ಧರಿಸಬೇ ಬದಲು, ಯಾವ ಜನಾಂಗವೂ ಸಿದ್ಧಿಯನ್ನು ಅಂತಃ ಕಲಹ ಮತ್ತು ಬಾಧನೆಗಳಿಂದ

ಯಾರು ತಮ್ಮ ಪಂಚಾಂಗಗಳಲ್ಲಿ ಹೇಳಿಕೆಯನ್ನು ತುಂಬುತ್ತ ಲೇ ಇರುವರೋ, ಅಜ್ಞಾನದ ಮೂಲಕ ತಮ್ಮ ವಿವೇಕವನ್ನು ನಾಶ ಮಾಡಿಕೊಂಡು ಯಾರು ತಮ್ಮ ಅನೇಕ ಜನ್ಮಗಳ ಪಾ ಪ ಪಾಲನ ಮಾಡಿಕೊಳ್ಳಲು ತೀರ್ಥ ಕ್ಷೇತ್ರಗಳಿಗೆ ನಿರ್ದಿಷ್ಟ ಕಾಲದಲ್ಲಿ ಹೋಗುವುದನ್ನು ಬಿಡುವುದಿಲ್ಲವೋ; ಯಾರು ವೇದವಾಕ್ಯವೆಂದೂ, ಶಾಸ್ತ್ರವೆಂದೂ ಹೇಳತಾ, ತಮ್ಮ ಬು ದ್ಧಿ ಶಕ್ತಿಗೆ ಸಂಚಕಾರ ಕಟ್ಟಿರುವರೋ; ಇಂಥಾ ಜನರು ಅ ಥವಾ ಜನಾಂಗವು ತಮ್ಮ 'ಸಾಧನ'ೆಯ ಮೂಲಕ ಶಾಶ್ವತ ಸಾತಂತ್ರ್ಯವನ್ನು ದೊರಕಿಸ ಸಾಧ್ಯದ ಅಂತರಿಕ ಮತ್ತು ಬಾ ಹ್ಯ ಶೃಂಖಲೆಗಳನ್ನು ಕಿತ್ತೊಗೆಯುವುದು ಅಸಾಧ್ಯವೇ ಸರಿ. ಮಾನವನ ಅತ್ಯುತ್ತಮ ಪರೀಕ್ಷೆಯೆಂದರೆ ತನ್ನ ಒಳಗೆ ಅಡಗಿರು ವ ಶತ್ರುಗಳನ್ನು ಗೆಲ್ಲುವುದು; ಈ ಉತ್ತಮ ವರ್ಗಕ್ಕೆ ಸೇರದ ಧೈರ್ಯ ಶೌರ್ಯಗಳು ಹೊರಗಿನ ಶತ್ರುಗಳನ್ನು ಗೆಲ್ಲುವುದ ರಲ್ಲಿ ಬೇಕಾಗುವುದಿಲ್ಲ. ನಾವು ಈ ದಿನ ಗೌರವಿಸುತ್ತಿ ರುವ ಮಹಾ ಪುರುಷನು ಮೇಲೆ ಹೇಳಿದ ಪರೀಕ್ಷೆಯಲ್ಲಿ ಜ ಯಶಾಲಿಯಾಗಿರುವನು. ಈ ಕಠಿಣ ಯುದ್ಧದಲ್ಲಿ ಗೆದ್ದಿರುವ ಆ ಮಹಾ ಮಹಿಮನ 'ಸಾಧನ'ವನ್ನು ಸ್ವೀಕರಿಸದೆ ಹೋದರೆ ಆತನನ್ನು ನಾವು ಎಷ್ಟು ಸ್ತುತಿಸಿದರೂ; ಆತನ ಸಂಬಂಧವಾಗಿ ಎಷ್ಟು ಹುಟ್ಟು ಹುಣ್ಣಿಮೆಗಳನ್ನು ಆಚರಿಸಿದರೂ ಅದು ನಿಷ್ಫಲ ವೇ ಸರಿ. ನಮ್ಮ 'ಸಾಧನ'ೆಯಾದರೋ ಇನ್ನೂ ಈಗ ಪ್ರಾ ರಂಭವಾಗಿದೆ; ಕಷ್ಟ ನಷ್ಟಗಳಿಂದ ಕೂಡಿದ ಈ 'ಸಾಧನ'ೆಯ ಮಾರ್ಗವು ಇನ್ನೂ ಮುಂದೆ ಇದೆ.

'ವಿಶ್ವಕರ್ನಾಟಕ'

ಡಿಲ್ಲಿ ಎಸೆಂಬ್ಲಿಯಲ್ಲಿ ಈ ವಾರ

ಚರ್ಚೆಯಾಗುತ್ತಿರುವ ಕರಾವು.

ಸರ್ಕಾರವು ಹೊರಡಿಸಿದ ಆರ್ಡಿನೇನ್ಸ್‌ಗಳನ್ನು ಸರ್ಕಾ ರದ ಅಧಿಕಾರಿಗಳು ಜಾರಿ ಮಾಡುತ್ತಿರುವ ರೀತಿಯನ್ನು ಎಸೆಂ ಬ್ಲಿಯು ಖಂಡಿಸುತ್ತದೆ. ನೈಸರ್ಗಿಕರು ಮಹಾತ್ಮ ಗಾಂಧಿ ಯವರಿಗೆ ಭೇಟಿ ಕೊಡದೇನೇ ಅವರನ್ನು ಸೆರೆ ಹಿಡಿದ ಕೃತ್ಯವು ನ್ಯಾಯವಾದದ್ದಲ್ಲವೆಂತ ಎಸೆಂಬ್ಲಿಯು ಅಭಿಪ್ರಾಯಪಡುತ್ತದೆ. ಖಾನ್ ಅಬ್ದುಲ್ ಗಾಫರ್‌ಖಾನರನ್ನು ಗಡೀಪಾರು ಮಾಡಿದ್ದು, ಹದಗೆಡಿಸಿ ಇಳಿಯುವ ಮುಂಚೆ ಸೆರೆಗೊಯ್ಯವನ್ನು ನೋಡಿದುದು ಸಹ ನ್ಯಾಯಕ್ಕೆ ಮರ್ಯಾದೆಗೂ ವಿರೋಧವಾಗಿದೆ. ಮಹಿಳೆಯರಿಗೆ ಕೊಡುವ ಶಿಕ್ಷೆ ಮತ್ತು ಖೈದಿಯರನ್ನು ಕರ ತರಗಳಿಗೆ ಅರಿಸುವ ರೀತಿಯೂ ಸಾರ್ವಜನಿಕ ಅಭಿಪ್ರಾಯವನ್ನು ಸಿಟ್ಟಿಗೆಬ್ಬಿಸುವಂಥಾದ್ದಾಗಿದೆ. ಕಳೆದ ಎಸೆಂಬ್ಲಿ ಮೀಟಿಂಗ್ ಆ ದ ಬಳಿಕೆಯೇ ಆರ್ಡಿನೇನ್ಸ್‌ಗಳನ್ನು ಹೊರಡಿಸಿದ್ದನ್ನು ಎಸೆಂ ಬ್ಲಿಯು ವಿರೋಧಿಸುತ್ತದೆ.

ಹಿಂಸಾಯುಕ್ತವಾದ ಮತ್ತು ಭಯೋತ್ಪಾದಕವಾದ ಎ ಲ್ಲಾ ಕೃತ್ಯಗಳನ್ನೂ, ಗೇಣ್ ಕೊಡದೆ ಇರುವಿಕೆ ಮುಂತಾದ ಚಳವಳವನ್ನು ಎಸೆಂಬ್ಲಿಯು ಖಂಡಿಸಿ ಎಲ್ಲಾ ದೇಶಭಕ್ತ ಕೆಲಸ ಗಾರರು ರಾಜಕೀಯ ರಚನಾ ಕಾರ್ಯದಲ್ಲಿ ಭಾಗಿಗಳಾಗ ಬೇಕಾದದ್ದೇ ಯುಕ್ತವೆಂತ ಅಭಿಪ್ರಾಯಪಡುತ್ತದೆ.

ಆರ್ಡಿನೇನ್ಸ್‌ಗಳ ಬದಲಾಗಿ ಬೇಕಾದ ಕಾನೂನು ಮಾಡ ಲು ಎಸೆಂಬ್ಲಿ ಮುಂದೆ ಬಿಲ್ಲ್‌ಗಳನ್ನು ಸರ್ಕಾರವು ತರಬೇಕೆಂತ ಲೂ ವಾಯವ್ಯ ಸರಹದ್ದಿನ ಪ್ರಾಂತ್ಯದಲ್ಲಿ ನಡೆದ ಅತ್ಯಾಚಾ ರಗಳ ಕುರಿತು ತನಿಖೆ ಮಾಡಲು ಒಂದು ಕಮಿಟಿ ನೇಮಿಸಬೇ ಕೆಂತಲೂ, ಹೊಸ ಸುಧಾರಣೆಯನ್ನು ರಚಿಸುವ ಕಾರ್ಯ ದಲ್ಲಿ ಕಾಂಗ್ರೆಸ್ ಮುಸ್ಲಿಂ, ಹಿಂದೂಗಳ ಜನರ ಸಹಕಾರವನ್ನು ಸಹ ತೆಗೆದುಕೊಳ್ಳಬೇಕೆಂತಲೂ ಸರ್ಕಾರಕ್ಕೆ ಎಸೆಂಬ್ಲಿಯು ಶಿ ಫಾರಸು ಮಾಡುತ್ತದೆ.

ಜೀನಾ ಜಪಾನರ ಯುದ್ಧ.

ಚೈನಾ ಜಪಾನರೊಳಗೆ ಶ್ಯಾಂಗ್ಹೈ ಎಂಬಲ್ಲಿ ಯುದ್ಧ ನ ಡೆಯುತ್ತಲಿದೆ. ಬಹಿರಂಗವಾಗಿ ಯುದ್ಧ ಪ್ರಾರಂಭವಾಯಿ ತೆಂತ ಮಾತ್ರ ತಿಳಿಸಿಲ್ಲ. ಯುನೈಟೆಡ್ ಸ್ಟೇಟ್ಸ್ ಮತ್ತು ಬ್ರಿ ಟನ್, ಇಟಲಿ ಮತ್ತು ಫ್ರಾನ್ಸಿನ ಸೈನ್ಯಗಳೂ ಯುದ್ಧದ ಹಡ ಗುಗಳೂ ಆ ಪ್ರಾಂತ್ಯಕ್ಕೆ ಹೋಗುತ್ತಲಿವೆ. ಯುದ್ಧ ಮಾಡ ಬಾರದೆಂತ ಆ ದೇಶಗಳ ಸರ್ಕಾರಗಳು ಬಹು ಕಠಿಣ ರೀತಿ ಯಿಂದ ಜಪಾನಿಗೆ ತಿಳಿಸಿವೆ. ಯುದ್ಧ ಪ್ರಾರಂಭವಾದರೆ ಪ್ರಪಂಚದ ಬೇರೆ ರಾಜ್ಯಗಳು ಭಾಗ ತೆಗೆದುಕೊಳ್ಳಬಹು ದೆಂತ ಊಹಿಸಲಾಗಿದೆ.

ಚಿತ್ತೂರ ಬಲೆಯಲ್ಲಿ ಹಿಡಿಯಲ್ಪಟ್ಟ ಕಳ್ಳ.

ಲೋಹಸಂಗಡಿನ ರಾಜಬೀದಿಯಲ್ಲಿ ಒಬ್ಬಳು ಹೆಂಗಸು ಹೋಗುತ್ತಿರುವಾಗ, ಆಕೆಯ ಬಂಗಾರದ ಕೈಚೀಲವನ್ನು ಒ ಬ್ಬ ಕಳ್ಳನು ಕಿತ್ತುಕೊಳ್ಳಲು ಆಕೆಯು ಕಿರಿಚಿಕೊಂಡಳು. ಆಗ ಕಳ್ಳನು ಆಕೆಯ ಹೆಕ್ಕತ್ತನ್ನು ತಿವಿದು ಓಡಿದನು. ಜನರು ಅ ವನನ್ನು ಹಿಡಿಯಲು ಹಿಂಬಾಲಿಸಿ ಓಡುತ್ತಿರುವಾಗ್ಗೆ ಕಳ್ಳನು ನದಿಯ ನೀರಿಗೆ ದುಮುಕಿ ಆಚೆ ದಡಕ್ಕೆ ಈಜಿಕೊಂಡು ಹೋ ಗುತ್ತಿರುವಲ್ಲಿ ಬೆಸ್ತ ಹತ್ತ ಬರುತ್ತಿದ್ದ ಜನರು, ಕಳ್ಳನನ್ನು ಹಿ ಡಿದುಕೊಳ್ಳಿ ಎಂದು ಗಟ್ಟಿಯಾಗಿ ಕೂಗಿಕೊಂಡರು. ಇವ ನ್ನ ಕೇಳಿ ಅಲ್ಲಿದ್ದ ಬೆಸ್ತನು ಆ ಕಳ್ಳನು ದಡಕ್ಕೆ ಸೇರುವುದ ರೊಳಗಾಗಿ ಬಲೆಯನ್ನು ಬೀಸಿ ಅವನನ್ನು ಹಿಡಿದ ಪೋಲೀಸರ ಕೈಗೆ ಒಪ್ಪಿಸಿದನು.

ವಂದನೆ.

ತಾ. 28—1—1932ರಲ್ಲಿ ನನ್ನ ಪತ್ನಿಯು ಮದ್ರಾಸು ಆಸ್ಪತ್ರೆಯಲ್ಲಿ ಸ್ವರ್ಗಸ್ಥಳಾದ ದಿನ ಅಲ್ಲಿನ ಕೊಡವ ಮಹ ನೀಯರೂ ಮತ್ತು ಮಹಿಳೆಯರೂ ನೆರೆ ಪದ್ಧತಿ ಮೇರೆ ಶವ ಸಂಸ್ಕಾರ ಮಾಡಲು ಸಹಾಯ ಮಾಡಿದ್ದಕ್ಕಾಗಿ ಅವರೆಲ್ಲ ರಿಗೆ ಪ್ರತ್ಯೇಕ ಪ್ರತ್ಯೇಕವಾಗಿ ವಂದನೆಗಳನ್ನರ್ಪಿಸಲು ಸಾಧ್ಯ ವಿಲ್ಲದ್ದರಿಂದ ಈ ಪತ್ರಿಕೆಯ ಮೂಲಕ ನನ್ನ ಕೃತಜ್ಞತೆಯ ನ್ನು ಸೂಚಿಸುತ್ತೇನೆ.

ತಮ್ಮ ಕ್ಷೇಮಾಭಿಲಾಷಿ,
ಪಾರುರ ಕಾರ್ಯಪ್ಪ.

ಸ್ತ್ರೀ ಪುರುಷರ ಪ್ರೀತಿಯ ಮರ್ಮಗಳನ್ನು ಚಿತ್ರ ಪಟಗಳ ಸಹಿತ ಇದ್ದದ್ದನ್ನು ಇದ್ದ ಹಾಗೆ ತಿಳಿಸುವ

ಸ್ತ್ರೀ ದಾಂಪತ್ಯ ರಹಸ್ಯವೆಂಬ ಮರ್ಮ ಶಾಸ್ತ್ರ.

ಈ ಪುಸ್ತಕವು ಫ್ರೆಂಚ್, ಹಿಂದೂಸ್ಥಾನಿ ಭಾ ಷೆಗಳಲ್ಲಿ ಬಹುಕಾಲದಿಂದ ಗುಪ್ತವಾಗಿತ್ತು. ಈ ಗ ನಾವು ಎಲ್ಲರಿಗೂ ವಿವರವಾಗಿ ತಿಳಿಯುವಂತೆ ಸುಲಭ ಶೈಲಿಯ ಕನ್ನಡ ಭಾಷೆಯಲ್ಲಿ ಭಾವಾಂತ ರಿಸಿ ಫೋಟೋಗಳ ಸಹಿತ ಅಂದವಾಗಿ ಮುದ್ರಿಸಿ ರುತ್ತೇವೆ. ಈ ಪುಸ್ತಕದಲ್ಲಿ ಸ್ತ್ರೀಪುರುಷರಿಗೆ ಬೇ ಕಾದ ಎಲ್ಲ ಮರ್ಮರಹಸ್ಯಗಳು, ಪುರುಷರು ಸ್ತ್ರೀ ಯರಲ್ಲಿ ನಡೆದುಕೊಳ್ಳಬೇಕಾದ ಬಗೆ, ಸ್ತ್ರೀಪುರುಷರ ಜಾತಿ ಯ ಲಕ್ಷಣಗಳು, ಸ್ತ್ರೀಯರಿಗೆ ಬೇಕಾದ ಅನೇಕ ಗುಪ್ತ ವಿಷ ಯಗಳು, ಸಂಭೋಗದ ಕಾಲ, ಗರ್ಭ ಧರಿಸುವುದು, ಗರ್ಭ ನಿಂ ತು ಹೋಗುವುದು, ಸಂಭೋಗದಿಂದಾಗುವ ಸಂತೋಷ, ಜನ ನೇಂದ್ರಿಯಗಳ ವರ್ಣನೆ, ಹಸ್ತ ಪ್ರಯೋಗದಿಂದಾಗುವ ಹಾ ನಿ, ಗರ್ಭಿಣಿಗೆ ಬೇಕಾದ ಅನೇಕ ಮರ್ಮನಿಯಮಗಳು, ಶಿಶು ಉತ್ಪತ್ತಿ ವಿಧಿ, ಗುಪ್ತ ವೈದ್ಯಗಳ ಚಿಕಿತ್ಸೆ, ಶಯನ ಗೃಹದ ರ ಹಸ್ಯನಿಯಮಗಳು, ಮಾನವ ಶರೀರದ ಮರ್ಮಗಳ ವಿವರ, ನ ಪುಂಸಕತ್ವಕ್ಕೆ ಚಿಕಿತ್ಸೆ, ಇನ್ನೂ ಸ್ತ್ರೀಪುರುಷರುಗಳಿಗೆ ಬೇಕಾ ದ ಲೀಲಾರಹಸ್ಯಗಳು ಚಿತ್ರಪಟಗಳ ಸಹಿತ ಪ್ರಿಂಟಾಗಿವೆ. ಕ್ರಯ ಪುಸ್ತಕ ೧ಕ್ಕೆ ೧ ರೂಪಾಯಿ.

The Legal Trading Co.,
12—7 P. B. 243, Madras.

ಸ್ವದೇಶೀ ಫಿಟೇಲುಗಳು.

ಕ್ರಯ ಸುಲಭ! ಅಂದವಾದ ಮೋಡುಗಳು!!

ಸ್ವಲ್ಪವೇ ಕಾಲದವೆಯೊಳಗೆ ಕಾರಣ ಬೇಕಾದವರು ಒಡನೆ ಆರ್ಡರು ಕಳುಹಿಸಿರಿ. ನಮ್ಮ ಕ್ರಯದ ವಿದೇಶೀ ಫಿಟೇಲುಗ ಳಿಗೂ, ಖುದ್ದಾಗಿ ನಮ್ಮಿಂದಲೇ ತಯಾರಿಸಲ್ಪಟ್ಟ ಈ ಫಿಟೇಲು ಗಳಿಗೂ ಕಳೆಗೂ, ಕೊರಳೆಗೂ ಎಷ್ಟರ ವ್ಯತ್ಯಾಸವೋ ಆ ವ್ಯತ್ಯಾಸವಿದೆಯೆಂದು ತಾವೇ ಒಪ್ಪಿಕೊಂಡಾರಿರಾ ರಿ. ಇನ್ನು ಫಿಟೇಲ್, ವೀಣೆ, ಹಾರ್ಮೋನಿಯಂ ಮುಂ ತಾದ ಸಂಗೀತ ಸಾಹಿತ್ಯಗಳ ರಿಪೇರಿ ಇತ್ಯಾದಿ ಬಹಳ ಕಮ್ಮಿ ದರದಲ್ಲಿ ಮಾಲುದಾರರ ಮನಒಪ್ಪುವಂತೆ ಮಾಡಿಕೊಡುವೆವು. ಫಿಟೇಲು ಹಾರ್ಮೋನಿಯಂ ಇತ್ಯಾದಿ ಕಲಿಯಬೇಕೆಂದಿರುವವ ರಿಗಂತೂ ಇದೊಂದು ಸುವರ್ಣಾವಕಾಶವು. ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ.

ಫಿಡ್ಲ್. ವೆಂಕಟಪ್ರಮಣಾಚಾರ್ಯ ಅಂಡ್ ಸನ್ಸ್,
4—3 ಪೊನ್ನಂಪೇಟೆ, (ದ. ಕೊಡಗು.)



ಈ ಗಡಿಯಾರಗಳು ಈ ನಕ್ಷೆಯ ಲ್ಲಿ ರುವಂತೆಯೇ ಇರುವವು. ನಮ್ಮ ಸ್ವಂತ ಆರ್ಡರ್ ಮೇಲೆ ಸ್ವಿಜರ್ಲೆಂಡಿನಲ್ಲಿ ತಯಾರಿಸಿ ತರಿಸಿರುತ್ತೇವೆ. ಸರಿಯಾ ಗಿ ಘಂಟೆಯನ್ನು ತೋರಿಸುತ್ತವೆ. ಇ ದು ವರೆಗೂ ಯಾರೂ ಈಗಿನ ದರದ ಬೆಲೆಗೆ ಮಾರಿಸಿರುವುದಿಲ್ಲ. ಆದ್ದ ರಿಂದ ಬೇಗನೆ ಬರೆದು ತರಿಸಿಕೊಳ್ಳಿರಿ. ನಮ್ಮಲ್ಲಿ ಸ್ವಲ್ಪವೇ ಇರುತ್ತವೆ. ಇವಕ್ಕೆ ಖಾತ್ರಿಯಾದ 3 ವರ್ಷ ಗ್ಯಾರಂಟಿ ಕೊಡುತ್ತೇವೆ. ಕ್ರಯ 1ಕ್ಕೆ 4—4—0.

ವಿಳಾಸ:— ಕೆ. ಎನ್. ಚಿನ್ನಸ್ವಾಮಿ ಅಂಡ್ ಕಂ.,
12—1 ಪೋ || ನಂ || 1246, ಮದರಾಸು.

ಬಂದೂಕುಗಳು. GUNS.

ಇತ್ತ ವಿಲಾಯಿತಿಯಲ್ಲಿ ತಯಾರಾದವು. ಇವುಗಳನ್ನು ಮನೆಯ ಲ್ಲಿ ಡಲು ಲೈಸನ್ಸ ಪಡೆಯಬೇಕಾಗಿಲ್ಲ. ಯಾರು ಬೇಕಾದರೂ ಇವರ ಭಯವಿಲ್ಲದೆ ಕೈಯಲ್ಲಿ ಹಿಡಿದುಕೊಂಡು ತಿರುಗಬಹುದು. ಸ್ಟಾಂಪು ರವಾನೆ ಸಹಿತ ಖುದ್ದಾಗಿ ಒಕ್ಕೆ ೫—೦—೦.

ಯಂ. ಲಿಯೋ ಅಂಡ್ ಕೋ.,
12—6 16ಕ, ಜೈನಿಮ ಶಾರ್ಟ್, ಮದರಾಸು.

ಲಾರ್ಡ್ ಇರ್ವಿನ್ನರ ಮನಸು ಬದಲಾಯಿತು.

ಕಳೆದ ತಿಂಗಳು 27ನೇ ತಾರೀಖಿನ ದಿನ ಲೀಡ್ಸ್ (ಇಂಗ್ಲೆಂಡ್) ನಲ್ಲಿ ಸೇರಿದ್ದ ಸಭೆಯೊಂದರಲ್ಲಿ ಭಾಷಣ ಮಾಡುತ್ತಾ, ಲಾರ್ಡ್ ಇರ್ವಿನರು:—"ನಾನು ವೈಸರಾಯಿ ಪದವಿಯಲ್ಲಿದ್ದಾಗ ಬ್ರಿಟನ್ನು, ಇಂಡಿಯಾಗಳೆರಡಕ್ಕೂ ಹಿತವನ್ನುಂಟುಮಾಡುವಂತಹ ಒಪ್ಪಂದವು ಏರ್ಪಡಲು ನನ್ನ ಸಾಮರ್ಥ್ಯವನ್ನೆಲ್ಲಾ ಉಪಯೋಗಿಸಿದೆ. ಈಗ ಕಾಂಗ್ರೆಸಿನವರಿಗೂ, ಇಂಡಿಯಾ ಸರ್ಕಾರಕ್ಕೂ ನಡೆಯುತ್ತಲಿರುವ ರಾಜಕೀಯ ಯುದ್ಧವು ಕ್ಷಣ ಕ್ಷಣಕ್ಕೆ ವಿಷಮವಾಗುತ್ತಿರುವುದನ್ನು ಕಂಡು ನನಗೆ ಸಂಕಟ ಉಂಟಾಗುತ್ತದೆ. ಈಗ್ಯೆ ಹಲವು ತಿಂಗಳುಗಳಿಂದ ಇಂಡಿಯಾದಲ್ಲಿ ನಡೆಯುತ್ತಿರುವ ಕಾರ್ಯಗಳ ಸುದ್ದಿಯನ್ನು ಪೂರ್ಣವಾಗಿ ವಿಮರ್ಶಿಸಿದಲ್ಲಿ, ಕಾಂಗ್ರೆಸಿನವರೇ ಮೊದಲು ಒಪ್ಪಂದವನ್ನು ಮುರಿದ ದೋಷಕ್ಕೆ ಗುರಿಯಾಗಬೇಕಾಗುತ್ತದೆ. ಕಾಂಗ್ರೆಸ್ಸಿನವರು ಮತ್ತೆ ಚಳವಳಿಯನ್ನು ಪ್ರಾರಂಭಿಸಿದ್ದು ಅನಾವಶ್ಯಕ ಮತ್ತು ಅನ್ಯಾಯ. ಹೀಗೆಂದ ಮಾತ್ರಕ್ಕೆ ನಾನು ಭಾರತೀಯರ ಸ್ವಾತಂತ್ರ್ಯಾಭಿಲಾಷೆಯ ಬಗ್ಗೆ ಅಸಹನೆಯನ್ನು ತೋರುತ್ತೇನೆಂದಲ್ಲ.

ಇಂಥಾ ನೀತಿಯನ್ನು ಆರಂಭಿಸಲು ಗಾಂಧಿಯವರಿಗೆ ಮನಸಿರಲಿಲ್ಲವೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಆದರೆ ಗಾಂಧಿಯವರು ಇಂಗ್ಲೆಂಡಿನಲ್ಲಿದ್ದಾಗಲೇ, ಗಾಂಧಿಯವರ ಅನುಯಾಯಿಗಳು ಇಂಡಿಯಾದ ಪರಿಸ್ಥಿತಿಯನ್ನು ಹದಗೆಡಿಸಿ ಗಾಂಧಿಯವರು ಯಾವ ವಿಧವಾದ ಸಮಾಧಾನವನ್ನು ಮಾಡಿಕೊಳ್ಳಲು ಅವಕಾಶವಿಲ್ಲದಂತೆ ಮಾಡಿಬಿಟ್ಟರು.

ನಾನು ಈಗ ಇಂಡಿಯಾದಲ್ಲಿ ವೈಸರಾಯಿಯಾಗಿದ್ದರೆ, ಲಾರ್ಡ್ ವಿಲ್ಲಿಂಗ್ಡನ್ನರು ಈಗ ಅನುಸರಿಸುತ್ತಿರುವ ನೀತಿಯನ್ನೇ ನಾನೂ ಅನುಸರಿಸುತ್ತಿದ್ದೆ." 'ಪ್ರಜಾಮತ'

ಶೌಕತ್ ಆಲಿ, ಅಂಬೇಡಕರ ಸಂದೇಶ.

೨೯ನೇ ತಾ. 'ಮುಲ್ತಾನ್' ಎಂಬ ಹಡಗಿನಿಂದ ಮೌಲಾನಾ ಶೌಕತ್ ಆಲಿಗಳೂ ಡಾ. ಅಂಬೇಡಕರರೂ ಬೊಂಬಾಯಿಯಲ್ಲಿ ಇಳಿದರು. ಬಾಲರ್ಡ್‌ಪಿಯರ್ ಬಳಿ ಆಯಾ ಪಕ್ಷದ (ಖಿಲಾಫತ್ ಪಕ್ಷ, ಅಸ್ಪೃಶ್ಯ ವರ್ಗ) ವರು ಇವರಿಗೆ ಅಭೂತಪೂರ್ವ ಸ್ವಾಗತ ಬಯಸಿದರೆಂದು ವರ್ತಮಾನ.

ಇವರಿಬ್ಬರೂ ಭಾರತದ ಪ್ರಕೃತದ ಪರಿಸ್ಥಿತಿಯ ವಿಚಾರವಾಗಿ ಸಂದೇಶಗಳನ್ನು—ಅಥವಾ ತಮ್ಮ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ

ಗಾಂಧಿ ಬಂಡು ಕೆಡಿಸಿದ.

ಡಾ. ಅಂಬೇಡಕರು—ಮಿ. ಗಾಂಧಿಯು ವಿಲಾಯಿತಿಗೆ ಬಂದು ಮೊದಲಿಂದ ಕೊನೆಯ ವರೆಗೂ ಎಲ್ಲ ಕೆಲಸ ಕೆಡಿಸಿದ. ನಮ್ಮ ಕುಲದವರ ವಿಚಾರದಲ್ಲಿ ಆತನ ನಡತೆಯನ್ನಂತೂ ನಾನು ಪೂರ್ಣ ಖಂಡಿಸುತ್ತೇನೆ. ಕಾಂಗ್ರೆಸಿನವರು ಮಿ. ಗಾಂಧಿಗಿಂತ ಉತ್ತಮ ಪ್ರತಿನಿಧಿಯನ್ನು ವಿಲಾಯಿತಿಗೆ ಕಳುಹಿಸಿದ್ದರೆ ಎಷ್ಟೋ ಚೆನ್ನಾಗಿತ್ತು.'

ಭೇಟಿ ಕೇಳಲು ಅಧಿಕಾರವಿಲ್ಲ?

ಮೌಲಾನಾ ಶೌಕತ್ ಆಲಿಯವರು:—'ಬ್ರಿಟಿಷರು ಶಾಂತಿ ಸಮಾಧಾನ ಮಾಡಿಕೊಳ್ಳಲು ಆತುರರಾಗಿದ್ದಾರೆ. ನಮ್ಮ ದೇಶದ ಹಿತಬಯಸಿಯೇ ಚಕ್ರಗೋಷ್ಠಿ ಸಮಿತಿಗಳು ಇಂಡಿಯಾಕ್ಕೆ ಬಂದಿವೆ. ಭಾರತೀಯರೆಲ್ಲರೂ ಆ ಸಮಿತಿಗಳಿಗೆ ಪೂರ್ಣ ಸಹಕಾರವನ್ನು ನೀಡಬೇಕೆಂದು ಪ್ರಾರ್ಥಿಸುತ್ತೇನೆ. ಕಾಂಗ್ರೆಸಿನವರು ಬೇಕಾದರೆ ಅಸಹಕಾರ ಮಾಡಲಿ, ಉಳಿದ ಪಕ್ಷಗಳು ಅವರನ್ನು ಅನುಸರಿಸುವಂತಿಲ್ಲ.''

ಪ್ರಕೃತ ರಾಜಕೀಯ ಸ್ಥಿತಿಗತಿಗಳನ್ನು ಕುರಿತು ಅವರು ಹೀಗೆ ಹೇಳಿದರು—

'ಕಾಂಗ್ರೆಸಿನವರು ಸತ್ಯಾಗ್ರಹವಾರಂಭಿಸಿದರು. ಇದನ್ನು ನೋಡಿ ನನಗೆ ಬಹಳ ವ್ಯಸನವಾಗುತ್ತದೆ. ಗಾಂಧಿ ವೆಲ್ಲಿಂಗ್ಡನ್ ಪತ್ರವ್ಯವಹಾರವನ್ನೆಲ್ಲ ಚೆನ್ನಾಗಿ ಓದಿದ್ದೇನೆ. ಈ ಘೋರ ವಿಷಾದ ಪ್ರಸಂಗಕ್ಕೆಲ್ಲ ಕಾಂಗ್ರೆಸೇ ಪೂರ್ಣ ಹೊಣೆ! ಕೋಮುವಾರು ಸಮಸ್ಯೆಯನ್ನು ಬಿಡಿಸದೆ ಈ ಗಾಂಧಿಯು ಯಾವ ಬಾಯಿಂದ ತಾನೇ ಹೋಗಿ ವೈಸರಾಯರ ಭೇಟಿ ಬೇಡಿದ? ಲಾರ್ಡ್ ವೆಲ್ಲಿಂಗ್ಡನ್ನರು ಗಾಂಧಿಗೆ 'ಭೇಟಿ ಕೊಡಲಾರೆ' ನೆಂದು ಹೇಳಿದರು. ಹಾಗೆ ಹೇಳಿದ್ದು ನ್ಯಾಯವಾಗಿದೆ. ನನಗೆ ಪೂರ್ಣ ಸಮ್ಮತವಾಗಿದೆ. ವೈಸರಾಯರು ಗಾಂಧಿಗೆ ಭೇಟಿ ಕೊಟ್ಟಿದ್ದರೆ ನಾನಾ ನಡತೆಯನ್ನು ಖಂಡಿತವಾಗಿ ವಿರೋಧಿಸುತ್ತಿದ್ದೆ.' 'ವಿ. ಕ.'

ಸರ್ ಸ್ಯಾಮ್ಯುಯಲ್ ಹೋರರ ಪ್ರತಾಪ.

ಕಳೆದ ತಾ. 28ರಂದು ಹೋರರು ಲಂಡನಿನಲ್ಲಿ ಈಗ ಸರ್ಕಾರದವರು ಇಂಡಿಯಾದಲ್ಲಿ ನಡೆಸುತ್ತಿರುವ ದಬ್ಬಾಳಿಕೆಯ ನೀತಿಯನ್ನು ನ್ಯಾಯವೆಂದು ಸಮರ್ಥಿಸುವ ಭಾಷಣವೊಂದನ್ನು ಮಾಡಿದರು. ಭಾರತ ಸಮಸ್ಯೆಯು ಇರ್ವಿನರ ಮನಸ್ಸು ಬದಲಾಯಿಸಿದ್ದೇ, ಭಾರತ ದೇಶದ ಪರಿಸ್ಥಿತಿಯನ್ನು ಬಿಚ್ಚಿ ತೋರಿಸುವಂತಿಹುದೆಂದು ಹೇಳಿದರು. ಭಾರತ ಸ್ವಾತಂತ್ರ್ಯವನ್ನು ವಿರೋಧಿಸಿದ ಈ ಭಾಷಣವು 'ವೈರ್‌ಲೆಸ್' ಮೂಲಕ ಜಗತ್ತಿನ ಎಲ್ಲಾ ಭಾಗಗಳಿಗೂ ಕಳುಹಿಸಲ್ಪಟ್ಟಿತು. ಹೋರರ ಭಾಷಣವಾದ ನಂತರ ಭಾರತ ದೇಶದ ಪಕ್ಷವನ್ನು ಹಿಡಿದು ವಾದಿಸುವವರಿಗೆ ಮಾತನಾಡಲು ಅವಕಾಶವಿರಲಿಲ್ಲ. ಹೋರರ ಮಾತೇ ವೇದವಾಕ್ಯವೆನ್ನುವಂತೆ ಪ್ರಸಂಗವು ನಡೆಸಲ್ಪಟ್ಟಿತು.

ತಮ್ಮ ಭಾಷಣಾಂತ್ಯದಲ್ಲಿ ಹೋರರು 'ನಾಯಿ ಬೊಗಳಿದರೇನು, ಆನೆಯು ಅದನ್ನು ಲಕ್ಷಿಸದೆ ಗಂಭೀರವಾಗಿ ತನ್ನ ನಡಿಗೆಯನ್ನು ಮುಂದುವರಿಸುವುದು' ಅಂದರು.

ಲಂಡನ್ನಿನ 'ಡೈಲಿ ಹೆರಾಲ್ಡ್' ಪತ್ರಿಕೆಯು ಈ ಭಾಷಣದ ಮೇಲೆ ಟೀಕೆ ಮಾಡುತ್ತಾ:—ಈಗ ಹೇಗೆ ಜರುಗುತ್ತಾ ನಡೆಯುತ್ತಿದ್ದೇವೆ ಎನ್ನುವುದನ್ನು ಹೇಳಿಕೊಳ್ಳುವುದರಲ್ಲಿ ಪ್ರಯೋಜನವಿಲ್ಲ; ಈಗಿನ ವಿಷಮ ಪರಿಸ್ಥಿತಿಯಿಂದ ಪಾರಾಗುವುದು ಹೇಗೆ ಎನ್ನುವುದನ್ನು ಯೋಚಿಸಬೇಕಾಗಿದೆ. ಈಗ ದಬ್ಬಾಳಿಕೆ ನಡೆಸುವುದರಲ್ಲಿ ಸರ್ಕಾರದವರು ತೋರಿದ ಕಾರ್ಯತತ್ಪರತೆಗಿಂತ, ಭಾರತೀಯರಿಗೆ ಸ್ವಾತಂತ್ರ್ಯ ದಾನಮಾಡುವುದರಲ್ಲಿ ಹೆಚ್ಚು ಕುಶಲತೆಯನ್ನು, ಕಾರ್ಯತತ್ಪರತೆಯನ್ನು ತೋರಿಸಬೇಕು. ಇಲ್ಲದಿದ್ದರೆ, ಬ್ರಿಟನ್ನಿಗೆ ಒಂದು ದೊಡ್ಡ ಅನಿಷ್ಟ ಬಂದೊದಗುವುದು' ಎಂದು ಸೂಚಿಸಿದೆ. 'ಪ್ರ. ಮತ.'

ತಾಲಿಗೂ ತಗಾದೆ.

ಶ್ರೀ. ವಿ. ಪಿ. ನಾರಾಯಣ ನಂಬಿಯಾರ್ (ಮದ್ರಾಸು ಶಾಸನ ಸಭಾ ಸದಸ್ಯರು) ಎಂಬವರಿಗೆ ತಲಚೇರಿಯ ವಕೀಲರಾದ ಶ್ರೀ. ಯಸ್. ಯಾ. ಶೆಕ್ರೂಜ್ ಎಂಬವರು ಕಳುಹಿಸಿರುವ ಪತ್ರವಿದು—

ಸತ್ಯಾಗ್ರಹ ಸಂಬಂಧವಾಗಿ ಶ್ರೀಮತಿ ಎಲ್. ಯಸ್. ಪ್ರಭು ಮತ್ತು ಇನ್ನಿಬ್ಬರು ಹೆಂಗಸರನ್ನು ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ೨೭—೧—೩೨ನೇ ದಿನ ವಿಚಾರಣೆಗೆ ಗುರಿ ಮಾಡಿದರು. ಶ್ರೀಮತಿ ಪ್ರಭುಗಳಿಗೆ ಅದೇ ದಿನ ೬ ತಿಂಗಳ ಕಠಿಣ ಶಿಕ್ಷೆ, ೧೦೦೦ ರೂ. ಗಳ ದಂಡವಾಯಿತು. ಉಳಿದ ಇಬ್ಬರಿಗೆ ಕೋರ್ಟು ಏಳುವ ವರೆಗೆ ಶಿಕ್ಷೆಯಾಯಿತು. ತೀರ್ಮಾನ ಕೊಟ್ಟ ಮೇಲೆ ಮ್ಯಾಜಿಸ್ಟ್ರೇಟರಾದ ಮಿ. ಡಾಷ್‌ವೆಲ್ ಐ. ಸಿ. ಯಸ್. ರವರು ಶ್ರೀಮತಿ ಪ್ರಭುಗಳನ್ನು ಕುರಿತು 'ಜುಲ್ಮಾನೆಯ ಹಣಕ್ಕಾಗಿ ನಿಮ್ಮ ಮೈಮೇಲಿನ ಒಡವೆಗಳನ್ನೆಲ್ಲ ತೆಗೆದುಕೊಡಿರೆಂದು ಆಜ್ಞೆ ಮಾಡಿದರು. ಮಂಗಳಸೂತ್ರ ಮಾತ್ರ ಬಿಟ್ಟು ಉಳಿದುವನ್ನೆಲ್ಲ ಆಕೆ ತೆಗೆದು ಕೊಟ್ಟಳು. ನಾನು ಕೋರ್ಟಿಗೆ ಮಂಗಳ ಸೂತ್ರವನ್ನು ಗಂಡ ಸತ್ತ ಮೇಲಲ್ಲದೆ ಅನ್ಯಥಾ ತೆಗೆಯಲಾಗದು. ಇದು ಧರ್ಮ ಸಮ್ಮತವಲ್ಲ; ನ್ಯಾಯ ಸಮ್ಮತವಲ್ಲವೆಂದು ತಿಳಿಸಿದೆನು. ಮಿ. ಡಾವೆಲ್ಲರು ನನ್ನ ಮಾತನ್ನು ಗಣನೆಗೆ ತರಲಿಲ್ಲ. ಕೋರ್ಟಿನಲ್ಲೇ ಬಹಿರಂಗವಾಗಿಯೇ ಪೋಲೀಸಿನವನನ್ನು ಕುರಿತು 'ತಾಲಿಯನ್ನು ತೆಗೆ' ಎಂದು ಹೇಳಿದರು. ಬಲ ಪ್ರಯೋಗ ಮಾಡಿ ತಾಲಿಯನ್ನು ಪೋಲೀಸಿನವರು ಕೀಳುವರೆಂದು, ಭಯಗೊಂಡು ಶ್ರೀಮತಿ ಪ್ರಭುವು 'ತಾಲಿಯನ್ನು ಕೀಳಬೇಕೆಂದು ತೀರ್ಮಾನ ಕೊಡಿ; ನನ್ನನ್ನು ಅಪರಾಧಿಯೆಂದು ಹೇಳಿ' ಎಂದರು. ಹಾಗೂ ಮಾಡಿದ್ದಾಯಿತು.

ತಾಲಿಯನ್ನು ತೆಗೆಸಿದ್ದು ಹಿಂದೂ ಧರ್ಮ ಮತ್ತು ವೈದಿಕ ಸಂಪ್ರದಾಯದ ಮೇಲೆ ನಡೆಸಿದ ಅತ್ಯಾಚಾರವೆಂದು ನಾನು ಬೇರೆ ಹೇಳಬೇಕಾಗಿಲ್ಲ. ಸಾವಿರ ನಡತೆಯನ್ನು ಖಂಡಿತವಾಗಿ ವಿರೋಧಿಸದಿರಲಾಗದು. ಸಿವಿಲ್ ಪ್ರೊಸೀಜರ್ ಕೋಡಿನ ವಿಧಿ ಪ್ರಕಾರ ಸಹ ತಾಲಿಯನ್ನು ವಶಪಡಿಸಿಕೊಳ್ಳಲಾಗದೆಂದು ನನಗೆ ಅನ್ನಿಸುತ್ತದೆ. ಮುಂದೇನು ಮಾಡಬೇಕೆಂಬ (ಸಭೆಯಲ್ಲಾಗಲೀ ಹೊರಗಾಗಲೀ) ವಿಚಾರವು ನಮಗೆ ಸೇರಿದ್ದು. ಹೇಗಾದರೂ ಮಾಡಿ ತಾಲಿಯನ್ನು ಹಿಂದಕ್ಕೆ ಕೊಡಿಸಿ.' 'ವಿ. ಕ'.

ಜಯ ಶ್ರೀ ಸಾಧಕ ಗಾಂಧೀಜಿ.

(ಕವೀಂದ್ರ ರವೀಂದ್ರರು ಮಹಾತ್ಮರ ಜನ್ಮ ದಿನವನ್ನು ತಮ್ಮ ಶಾಂತಿನಿಕೇತನದಲ್ಲಿ ಆಚರಿಸಿದ ಸಮಯದಲ್ಲಿ ಮಾಡಿದ ಅಮೋಘ ಭಾಷಣ.)

ಆಶ್ರಮವಾಸಿಗಳಾದ ನಾವೆಲ್ಲರೂ ಮಹಾತ್ಮರ ಹುಟ್ಟಿದ ಹಬ್ಬವನ್ನು ಈ ದಿನ ಆನಂದದಿಂದ ಆಚರಿಸುವ! ಈ ಪುಣ್ಯ ಪ್ರಸಂಗದಲ್ಲಿ ನಮ್ಮ ನಮ್ಮ ಚಿತ್ತಭಿತ್ತಿಯಲ್ಲಿ ಮೂಡಿಬೇಕಾದ ಸದ್ಭಾವಗಳ ಪಂಚರೂಪವನ್ನು ಸೂಕ್ಷ್ಮ ರೀತಿಯಲ್ಲಿ ನಿಮಗೆ ಮಾಡಿಕೊಡಲೆಳಸುವೆನು.

ಆಧುನಿಕ ಸಂಪ್ರದಾಯಕ್ಕೆ ಅನುಸರಿಸಿ, ಇಂತಹ ಹಬ್ಬಗಳು ಸರ್ವಸಾಮಾನ್ಯವಾಗಿ ಆಚರಿಸಲ್ಪಟ್ಟು ಅವುಗಳಲ್ಲಿ ಕಾಣಬೇಕಾದ ಅಂತಃಸ್ಫೂರ್ತಿಯು ಮಾಯವಾಗಿ ಹೋಗಿದೆ. ನೋಡಿದವರಿಗೆ, ಇದೂ ಒಂದು ತಮಾಷೆ, ಆಟ, ಒಂದು ತರದ ಕ್ಷಣಿಕ ಉದ್ರೇಕ ಎಂಬಂತೆ ತೋರುತ್ತದೆ. ಆದುದರಿಂದ, ಇಂತಹ ಪ್ರಸಂಗಗಳಲ್ಲಿ ನಾವು ಗ್ರಹಿಸಬೇಕಾದ ಅರ್ಥವು ಮನಸ್ಸಿನಲ್ಲಿ ಹೋಗುವುದೇ ಅಸಾಧ್ಯವಾಗಿದೆ.

ಮಹಾತ್ಮರಂತಹ ಪುಣ್ಯಪುರುಷರು ವರ್ತಮಾನಕಾಲಕ್ಕೆ ಮಾತ್ರ ಸೇರಿದವರಲ್ಲ; ಅವರು ಈಗಿನ ಕಾರ್ಯಕಲಾಪಗಳ ದೃಷ್ಟಿಯಿಂದಷ್ಟೇ ಅವರನ್ನು ನೋಡುವುದಾದರೆ ಅವರು ತೀರ ಸಣ್ಣಗೆ ಕಾಣುವರು. ಈ ಸಂಕುಚಿತ ದೃಷ್ಟಿಯಿಂದ ನೋಡಿ ನಾವು ಇಂತಹ ಚಿರಂಜೀವಿಗಳಾದ ವ್ಯಕ್ತಿಗಳನ್ನು ಅನಂತ ಕಾಲದ ಪರದೆಯ ಮೇಲೆ ಚಿತ್ರಿತರಾಗಿರುವ ದಿವ್ಯ ವಿಭೂತಿಗಳನ್ನು ಅಲ್ಪರಾಗಿ ಮಾಡಿಬಿಡುತ್ತೇವೆ. ನಮ್ಮ ಈಗಿನ ಅವಶ್ಯಕತೆಗಳಿಗನುಗುಣವಾಗಿ ಅವರ ವ್ಯಕ್ತಿತ್ವವನ್ನು ತೂಗಿ, ಅವರ ದೊಡ್ಡಸ್ತಿಕೆಯ ಬಗ್ಗೆ ನಮ್ಮ ಕೊನೆಯ ತೀರ್ಪನ್ನು ಕೊಟ್ಟುಬಿಡುತ್ತೇವೆ. ಆದರೆ ಪರಮಾತ್ಮನು ಇದನ್ನು ಸಹಿಸನು; ಅನಂತಕಾಲದ ಪರದೆಯ ಮೇಲೆ ಮೂಡಿರುವ ಚಿತ್ರವನ್ನು ನಾವು ಈ ರೀತಿಯಲ್ಲಿ ಅಸಂಬದ್ಧ ನಿತ್ಯಜೀವನದ ಕುರುಹುಗಳಾದ ದೊಂಕು ಬೊಂಕು ರೇಖೆಗಳಿಂದ ಹಾಳುಮಾಡಿರುವುದನ್ನು ನೋಡಿ ಸಂತಪ್ತನಾಗುವನು. ಕ್ಷಣಿಕವೂ ಆಕಸ್ಮಿಕವೂ ಆದ ಘಟನೆಗಳನ್ನು ಸೂಚಿಸುವ ಆ ವಕ್ರ ರೇಖೆಗಳನ್ನು ಆತನು ಅಳಿಸಿಬಿಡುವನು. ಮತ್ತು ಸಂಪೂರ್ಣವೂ, ಸರ್ವಲಕ್ಷಣಯುಕ್ತವೂ, ಸರ್ವಾಂಗ ಸುಂದರವೂ ಮತ್ತು ಹೃದಯಂಗಮವೂ ಆದ ಪ್ರತಿಬಿಂಬವನ್ನು ನಮ್ಮ ಕಣ್ಣ ಮುಂದೆ ಇಟ್ಟು, ನಮಗೆ ಪೂಜ್ಯರಾದ ಮಹಾನುಭಾವರು ಚಿರಕಾಲ ಜೀವಿಸುವಂತೆ ಮಾಡುವನು. ನಮ್ಮ ಸಮಾನಕಾಲಿಕರ ಸಂಬಂಧವಾದ ಹಬ್ಬಗಳನ್ನು ಆಚರಿಸುವಾಗಲೂ ಈ ಅಂಶಗಳನ್ನು ಮನಸ್ಸಿನಲ್ಲಿಡುವುದು ಅಗತ್ಯ.

ಹಿಂದೂಸ್ಥಾನದ ಇಂದಿನ ರಾಜಕೀಯ ಆಂದೋಳನವು ಇನ್ನು ಎಷ್ಟು ದಿನದಲ್ಲಿ ತಣ್ಣಗಾಗಬಹುದು; ಈಗಿನ ನಮ್ಮ ಆಶೆಯ ಆಕಾಂಕ್ಷೆಗಳು ಕಾಲದ ವಿಸ್ತಾರವಾದ ಪ್ರಾಂತದಲ್ಲಿ ಕಣ್ಮರೆಯಾಗಬಹುದು. ನಮ್ಮ ರಾಜಕೀಯ ಪ್ರಯತ್ನವು ಸಫಲವಾಯಿತೆಂದೇ ಭಾವಿಸಿರಿ; ಹೊರಗಿನವರು ನಮಗೆ ಕೊಡಬೇಕಾದುದು ಏನೂ ಉಳಿಯಲಿಲ್ಲವೆಂದೇ ಎಣಿಸಿರಿ; ಹಿಂದೂಸ್ಥಾನವು ಸ್ವಾತಂತ್ರ್ಯವನ್ನು ಪುನಃ ಪಡೆಯಿತೆಂದೇ ತಿಳಿಯಿರಿ; ಇಷ್ಟಾದರೂ ಇಂದಿನ ಇತಿಹಾಸದ ಅತ್ಯೋನ್ನತಿಯ ಕುರುಹೆನಿಸಿ ಮುಂದೆ ತನ್ನ ತಲೆಯನ್ನು ಗಂಭೀರವಾಗಿ ಮೇಲೆತ್ತಿ ನಿಲ್ಲುವ ವಿಷಯವಾವುದೋ ಅದರ ಕಡೆಗೆ ನಾವು ಹೆಚ್ಚು ಗಮನಕೊಡಬೇಕು. ಹಾಗೆ ನಾವು ವಿಚಾರ ಮಾಡಿದ್ದೇ ಆದರೆ, ನಮ್ಮ ಇಂದಿನ ಹಬ್ಬದ ಮಾನ್ಯನಾಯಕನ ಸ್ಥಾನವಾವುದು, ಆತನ ವಿಶೇಷ ಗುಣವಾವುದು ಎಂಬುದು ಸ್ಪಷ್ಟವಾಗುತ್ತದೆ. ಆಗ ನಾವು ಆತನನ್ನು ನಮ್ಮ ಸದ್ಯದ ರಾಜಕೀಯ ಜಯಾಪಜಯಗಳ ದೃಷ್ಟಿಯಿಂದ ನೋಡೆವು; ಯಾವ ಮಹಚ್ಛಕ್ತಿಯ ಸಹಾಯದಿಂದ ಆತನು ಇಡೀ ಹಿಂದೂಸ್ಥಾನವನ್ನೇ ಜಾಗ್ರತಗೊಳಿಸಿರುವನೋ ಆ ಶಕ್ತಿಯ ಮಹತ್ವವನ್ನು ನಾವು ಆಗ ಗ್ರಹಿಸಬಲ್ಲೆವು.

ಅದ್ಭುತ ಶಕ್ತಿಯದು!—ದೇಶದ ಎದೆಯ ಮೇಲೆ ಒಂದು ದೊಡ್ಡ ಬಂಡೆಯಂತೆ ಕೂತಿರುವ ತಾಮಸ ಪ್ರಕೃತಿಯನ್ನು ಮೇಲಕ್ಕೆತ್ತಿದ ಶಕ್ತಿಯೇ ಅದು.

ಕೆಲವು ವರ್ಷಗಳ ಕಾಲದಲ್ಲಿ ಹಿಂದೂಸ್ಥಾನವು ಒಂದು ಹೊಸ ಜನ್ಮವನ್ನೇ ತಾಳಿದಂತಾಗಿದೆ; ಇಡೀ ದೇಶವೇ ಒಂದು ಅದ್ಭುತ ಮಾರ್ಪಾಟನ್ನು ಹೊಂದಿದೆ. ಆತನು (ಗಾಂಧಿ) ಪ್ರವೇಶ ಮಾಡುವ ಮೊದಲು, ದೇಶವೆಲ್ಲಾ 'ಭಯ'ವೆಂಬ ದೊಡ್ಡ ಕಪ್ಪು ಬಟ್ಟೆಯಿಂದ ಆವೃತವಾಗಿದ್ದಿತು; ದುರ್ಬಲತೆಯ ತಾಂಡವನಿಸಿದ್ದಿತು. ಎಲ್ಲರೂ ಬೇರೊಬ್ಬರನ್ನು ಅನುಕರಿಸಿ ಬೇಡಿಕೊಳ್ಳುವುದರಲ್ಲಿಯೂ, ಅರ್ಜಿ ಹಾಕಿ ಕೂತುಕೊಳ್ಳುವುದರಲ್ಲಿಯೂ ನಿಸ್ಸೀಮರಾಗಿದ್ದರು; ತಮ್ಮ ಅಂತರಾತ್ಮನಲ್ಲಿ ಅಡಗಿದ್ದ 'ಆತ್ಮವಿಶ್ವಾಸ'ವೆಂಬ ವಜ್ರಕವಚದ ಪರಿವೆಯೇ ಒಬ್ಬರಿಗೂ ಗೊತ್ತಿರಲಿಲ್ಲ.

ಕಳ್ಳರಂತೆ ಹೊರಗಿನಿಂದ ಬಂದು ನಮ್ಮ ದೇಶವನ್ನು ಆಕ್ರಮಿಸಿಕೊಂಡಿರುವ ಪರಕೀಯರ ಶಕ್ತಿಯೇ ಸ್ಥಿರವಾದುದು; ಇತಿಹಾಸದ ಪ್ರವಾಹದಲ್ಲಿ, ಚಿರಕಾಲದಿಂದ ನಿರರ್ಗಳವಾಗಿ ಹರಿದು ಬರುತ್ತಿರುವ ನಮ್ಮ ಜನಾಂಗದ ಚೈತನ್ಯವು ಪರಕೀಯರ ಶಕ್ತಿಯ ಮುಂದೆ ಯಾವ ಕೆಲಸಕ್ಕೂ ಬಾರದು; ಇಂತಹ ಹೃದಯ ಪರಿಸ್ಥಿತಿಯು ನಮ್ಮದು!

ನಮ್ಮ ದೇಶದಲ್ಲಿ ನಾವು ಪರಕೀಯರಾಗಲು ನಾವೇ ಮುಖ್ಯ ಕಾರಣ; ಮಾತೃಭೂಮಿಯು ನಮ್ಮದೆಂದು ಹೇಳಿಕೊಳ್ಳಲು ಬೇಕಾದಷ್ಟು ಸೇವೆ, ಜ್ಞಾನ, ಮತ್ತು ನೆರೆಹೊರೆಯವರ ಮೇಲೆ ಪ್ರೇಮ ಇವು ನಮ್ಮಲ್ಲಿಲ್ಲ. ಆಡಳಿತದ ಯಂತ್ರವೂ, ರಾಜ್ಯಭಾರದ ಸೂತ್ರಗಳೂ ಬೇರೆಯವರ ಕೈಯಲ್ಲಿ! ಅವರು ತಮ್ಮ ಶಕ್ತಿ ಕಾರಣಗಳಿಂದಲೂ, ಬಂದೂಕುಗಳಿಂದಲೂ ಇಲ್ಲಿ ಮುಖ್ಯರೆನಿಸಿಕೊಂಡಿರುವರು. ನಾವು ಮಾತ್ರ ಕೀಳು ದರ್ಜೆಯವರು. ಬಹಳ ದಿನಗಳವರೆಗೂ ಈ ಭಾವನೆಯು ನಮ್ಮ ಅಜ್ಞಾನಾಂಧಕಾರಾವೃತವಾದ ತಲೆಯಲ್ಲಿ ಬೇರೂರಿತ್ತು. ಇತ್ತೀಚೆಗೆ ಅದು ಸ್ವಲ್ಪ ಸಡಿಲಿದಂತೆ ಕಾಣುತ್ತದೆ.

ಆಗಾಗ್ಗೆ ಹಲಕೆಲವು ಮಹಾತ್ಮರು ಲೋಕವನ್ನು ತಿಲಕರಂತಹರು—ಇಲ್ಲಿಲ್ಲಿ ಕಾಣಬಂದು ನಮ್ಮಲ್ಲಿ ಘನೀಭೂತವಾಗಿರುವ ಆಲಸ್ಯ ಪ್ರವೃತ್ತಿಯನ್ನು ನಿವೃತ್ತಿಮಾಡಲು ತಮ್ಮ ತನುಮನಗಳನ್ನು ಲೆಕ್ಕಿಸದೆ ನಮ್ಮ ಆತ್ಮಶಕ್ತಿಯನ್ನು ಜಾಗ್ರತಗೊಳಿಸಿರುವರು. ಆದರೆ, ಮಹಾತ್ಮ ಗಾಂಧಿಯವರು ಈ ಆತ್ಮಶಕ್ತಿಯ ತೇಜಸ್ಸು ಎಷ್ಟಿರುವುದೆಂಬುದನ್ನು ಕಾರ್ಯರೂಪದಲ್ಲಿ ತೋರಿಸಿ, ವಿಸ್ತಾರವಾದ ಕ್ಷೇತ್ರದಲ್ಲಿ ಅದರ ಉಪಯೋಗವನ್ನು ಮಾಡುತ್ತಿದ್ದಾರೆ.

ಮೊದಲು ತಮ್ಮಲ್ಲಿ ಹಿಂದೂಸ್ಥಾನದ ವಿಶಿಷ್ಟ ಜೀ[illegible]ನ್ನು ಸಾಕ್ಷಾತ್ಕರಿಸಿಕೊಂಡು, ತಮ್ಮ 'ತಪಸ್ಯ'ದ ಅಗ[illegible] ಹಿಮೆಯ ಬೆಂಬಲದಿಂದ ಕಾರ್ಯರಂಗಕ್ಕಿಳಿದು ಒಂದ[illegible] ಯುಗವನ್ನೇ ನಿರ್ಮಾಣಮಾಡಿದ್ದಾರೆ. ಇದರ[illegible] ವಾಗಿ ಇದೇ ಈಗ ನಮ್ಮ ದೇಶದಲ್ಲಿ ಜನರು [illegible] ತಮ್ಮ ಆತ್ಮಶಕ್ತಿಯ ಪ್ರದರ್ಶನ ಮಾಡತೊಡಗಿ[illegible]

ಪು. 78—

ನಿರ್ಭಯ.

ಪರದೇಶದ ಪರ್ಷಿಯಾ ಶಹಾ-ರಾಜನು ಸ್ವದ[illegible] ನ್ನಷ್ಟೇ ಅಲ್ಲ, ತನ್ನ ಚಕ್ರಾಧಿಪತ್ಯವನ್ನೂ ತನದ ತಳಹದಿಯ ಮೇಲೆ ಭದ್ರವಾಗಿ ಕಟ್ಟಿ[illegible] ನಿರ್ಭಲತೆಯ ಅಕ್ಷಯ ಕೊಡದಿದ್ದರೆ ಅವರ[illegible] ಸ್ವಶಕ್ತಿಗಳಿಗೂ ನಾವು ಹೆದರಬೇಕಾಗಿದ[illegible]

ಕೊಡಗು.

ಸನ್ ೧೯೩೨ನೇ ಇಸವಿ

ಫೆಬ್ರವರಿ ತಾ. ೫ನೇ ಶುಕ್ರವಾರ.

ಪ್ರೆಸ್ ಆರ್ಡಿನೇನ್ಸ್

ಜಾರಿಯಲ್ಲಿರುವ ವರಿವಿಗೆ

ನಾವು

ಅಗ್ರಲೇಖನ

ವನ್ನು

ಪ್ರಕಟಿಸುವುದಿಲ್ಲ.

ಕಳೆದ ವಾರ ವೈಸರಾಯರು ಎಸೆಂಬ್ಲಿಯಲ್ಲಿ ಮಾಡಿದ ಭಾಷಣದ ಮೇಲೆ

"ಅಮೃತ ಬಜಾರ್ ಪತ್ರಿಕೆ"ಯ ಲೇಖನ.

ಎಸೆಂಬ್ಲಿಯಲ್ಲಿ ವೈಸರಾಯರು ಮಾಡಿದ ಭಾಷಣವು ಎರಡು ಪಂಗಡಗಳಿಗೆ ಮಾತ್ರ ತೃಪ್ತಿಕೊಟ್ಟೀತು, ಒಂದು ಹಿಂದೂಸ್ಥಾನಕ್ಕೆ ಸ್ವರಾಜ್ಯ ಕೊಡಬಾರದೆನ್ನುವ ಬ್ರಿಟಿಷರು ಮತ್ತೊಂದು ಹಿಂದೂಸ್ಥಾನಕ್ಕೆ ಗೌರವವನ್ನುಂಟುಮಾಡುವ ರಾಜಿಯು ಬ್ರಿಟನಿಗೂ ಇಂಡಿಯಾಕ್ಕೂ ಸಾಧ್ಯವಿಲ್ಲವೆನ್ನುವ ಹಿಂದೀಯರು. ಆದರೆ ದೇಶದಲ್ಲಿ ಕವಿದಿರುವ ಕತ್ತಲೆಯು ಹೋಗಿ ಸಮಾಧಾನ ಯುಕ್ತವಾದ ಆಲೋಚನೆಗಳಿಗೆ ಅವಕಾಶವಾಗಬೇಕೆನ್ನುವವರಿಗೆ ಸಂಪೂರ್ಣ ಆಶಾಭಂಗವೇ ಆಯಿತು. ವೈಸರಾಯರ ಭಾಷಣವು ಆಕಾಶವನ್ನು ಇನ್ನಷ್ಟು ಕತ್ತಲಾಗಿ ಮಾಡಿತು. ಅತಿ ಸಂಕಟಯುಕ್ತವಾದ ಸಮಯದಲ್ಲಾದರೂ ಏನಾದರೂ ಒಳ್ಳೇದಾದೀತೆಂದು ಆಶಿಸುತ್ತಿದ್ದವರಿಗೆ ಒಂದೆರಡು ವಾಕ್ಯಗಳ ವಿನಹ ಇತರ ಭಾಷಣದಿಂದ ಏನೂ ಸಂತೋಷ ಕೊಡುವಂಥಾದ್ದಾಗಿಲ್ಲ.

ರಾಜಕೀಯ ಪರಿಸ್ಥಿತಿಯ ಕುರಿತು "ಕಾಂಗ್ರೆಸ್ಸಿನವರು ರಾಜಿ ದಾರಿಗೆ ಮುಳ್ಳು ಹಾಕುವ ವರೆಗೆ ನಾನೂ ನನ್ನ ಸರಕಾರವು ಆ ದಾರಿಯನ್ನು ಬಿಟ್ಟೇ ಇರಲಿಲ್ಲ" ವೆಂದಿದ್ದಾರೆ ವೈಸರಾಯರು. ತಾನು ಮತ್ತು ತನ್ನ ಸರಕಾರವೂ ತಪ್ಪೇ ಮಾಡಲಾರದು ಎಂತ ನಂಬಿದ್ದಾರೋ ಎಂತ ನಮಗೆ ತಿಳಿಯದು. ಬಹುಶಃ ಹಾಗೆ ತಿಳಿಯರು. ಕಾಂಗ್ರೆಸಿಗೆ ಸೇರದವರ ಮತ್ತು ಇಂಡಿಯನರಾದವರೂ ಸಹ ಅಲ್ಲದವರ ಅಭಿಪ್ರಾಯಗಳನ್ನು ವೈಸರಾಯರು ನೋಡಿ ಇರಬಹುದೆಂತ ನಂಬುತ್ತೇವೆ. ಇವರು ಮಹಾತ್ಮ ಗಾಂಧಿಯವರಿಗೆ ಸಂದರ್ಶನವನ್ನೀಯದೆ ಇದ್ದದನ್ನು ಯೂರೋಪಿಯನ್ ಎಸೋಸಿಯೇಶನಿನ ಅಭಿಪ್ರಾಯ ವಿನಹ ಯೂರೋಪಿಯನರು ಮತ್ತು ಸರಕಾರವು ಮಾಡಿದ್ದ ಯಾವುದೇ ಆಗಲಿ ನಿರ್ಣಯನ್ನುವ ಕೆಲವು ಹಿಂದೀಯರು ವಿನಹ ಇತರ ಎಲ್ಲಾ ಹಿಂದೀಯರೂ ಖಂಡಿಸಲು ಕಾರಣವೇನೆಂತ ವೈಸರಾಯರು ಸಮಾಧಾನ ಚಿತ್ತರಾಗಿ ಯೋಚಿಸಿದರೆ ಆಶ್ಚರ್ಯ ಪಡಿಸಲಾರದೇ? ಇದು ಬರೇ ಹಿಂದೂಸ್ಥಾನದ ಅಭಿಪ್ರಾಯವಲ್ಲ. ಅಂತರ ರಾಷ್ಟ್ರೀಯ ಪ್ರಖ್ಯಾತಿ ಇರುವ ರಾಜಪಟುಗಳೂ ಮತ್ತು ಬರ್ಟ್ರೆಂಡ್ ರಸೆಲ್ ಮತ್ತು ರೋಮನ್ ರೋಲಾಂಡರಂತ ಆಲೋಚನಾಪರರೂ ಸಹ ಖಂಡಿಸಿದ್ದಾರೆ. ಪಶ್ಚಿಮ ರಾಜ್ಯಗಳ ಮತದ ಮುಖಂಡರೆಲ್ಲರೂ ಮಹಾತ್ಮ ಗಾಂಧಿಯವರನ್ನು ನಿರಾಕರಿಸಿದ್ದಕ್ಕೆ ಆಕ್ಷೇಪಿಸಿದ್ದಾರೆ. ಸರ್ ಜಾನ್ ವೋನಾರ್ಡರು ಬರೇ ರಾಜಕೀಯ ಚಳವಳಿಗಾರರೆನ್ನಲು ಸಾಧ್ಯವಿಲ್ಲ. ಇವರು ಐ. ಸಿ. ಯಸ್. ಮತ್ತು ಪಂಜಾಬ್ ಎಗ್ಸಿಕ್ಯೂಟಿವ್ ಕೌನ್ಸಿಲಿನ ವೈಸ್ ಪ್ರೆಸಿಡೆಂಟರಾಗಿದ್ದರು. ಕರಿತ್ತಿಲ್ಲದೆ ಮಹಾತ್ಮಜೀಯವರಿಗೆ ವೈಸರಾಯರು ಭೇಟಿಕೊಡಬೇಕೆನ್ನುವುದಕ್ಕೆ ಇವರ ಅಭಿಪ್ರಾಯವೇನು?

"ಸಹಾಯ ಮಾಡಲು ಉದ್ದೇಶವಿದ್ದವರು (ಮಹಾತ್ಮ ಗಾಂಧಿಯವರು) ಒಳಗೆ ಪ್ರವೇಶಿಸದಂತೆ ಅತಿ ರಭಸದಿಂದ ಬಾಗಿಲನ್ನು ಮುಚ್ಚಲಾಯಿತು." ಕಾಂಗ್ರೆಸಿನವರು ಕರಾರನ್ನು ತೋರಿಸಿದರೆಂತ ವೈಸರಾಯರ ಭಾಷಣದಲ್ಲಿ ಹೇಳಿದರು. ಇದು ನಿಜವಲ್ಲ. ಈ ದೇಶದಲ್ಲಿರುವ ಬ್ರಿಟಿಷ್ ಕಠಿಣವಾದಿಗಳು ಆಡುವ ಮಾತಿದು. ಇದನ್ನು ವೈಸರಾಯರು ಉಪಯೋಗಿಸಿದ್ದು ವಿಷಾದಕರ. ವಾದಕ್ಕೆ ಎಡೆಯಿಲ್ಲದಿರುವಾಗ ಕರಾರನ್ನು, ಸಮಾನಸರಕಾರ ಸ್ಥಾಪನೆ ಎಂಬ ಇತ್ಯಾದಿ ಶಬ್ದಗಳನ್ನು ವಾದ ವಿವಾದದಲ್ಲಿ ಉಪಯೋಗಿಸುವ ಮಾತುಗಳೆಂತ ಹಿಂದಿನ ವೈಸರಾಯರುಗಳು ತಿಳಿದುಕೊಳ್ಳುತ್ತಿದ್ದರು, ಲಾರ್ಡ್ ವಿಲ್ಲಿಂಗ್ಡನ್ನರು ಹಾಗೆ ಮಾಡಲಿಲ್ಲ. ಇವರು ಇದರಿಂದ ತಪ್ಪಿಕೊಂಡರೆಂತಲೇ ನಮ್ಮ ಅಭಿಪ್ರಾಯ.

ಕಾನೂನು ಭಂಗ ಚಳವಳದ ಮೇಲೆ ನಿರಂಕುಶ ದಬ್ಬಾಳಿಕೆಯನ್ನು ನಡಿಸುವುದೂ ಬ್ರಿಟಿಷ್ ಸರಕಾರವು ಸೂಚಿಸಿದ ರಾಜಕೀಯ ರಚನೆಯ ಕಾರ್ಯದಲ್ಲಿ ಮುಂದರಿಯುವುದೂ ತನ್ನ ಕಾರ್ಯವಷ್ಟೆ ಎಂತ ಇವರು ಊಹಿಸಿರುವುದೂ ತಪ್ಪೇ. ವಿದ್ಯಮಾನವನ್ನು ತಪ್ಪಾಗಿ ತಿಳಿದುಕೊಂಡಿರುವುದೇ ಇದಕ್ಕೆ ಕಾರಣವೆಂತ ನಾವು ಊಹಿಸುತ್ತೇವೆ. ಅತೃಪ್ತಿಯಿಂದ ತುಂಬಿರುವ ವಾತಾವರಣದಲ್ಲಿ, ಸರಕಾರದ ಮನಸೆಲ್ಲಾ ಬೇರೆ ಕಾರ್ಯದಲ್ಲಿ ಮಗ್ನವಾಗಿರುವಾಗ ಸುಧಾರಣೆಯ ಕಮಿಟಿಗಳ ಕಾರ್ಯಗಳು ನಿಷ್ಫಲವಾಗುತ್ತವೆಂತ ವೈಸರಾಯರು ಇನ್ನೂ ತಿಳಿಯದಿರುವುದು ಆಶ್ಚರ್ಯ. ವೈಸರಾಯರಲ್ಲಿ ನಿಜವಾಗಿ ರಾಜಿ ಕಾರ್ಯಪಟುತ್ವವಿರುತ್ತಿದ್ದರೆ ಈಗಿನ ಸ್ಥಿತಿಯನ್ನು ಅಂತ್ಯಗೊಳಿಸಲು ಪ್ರಯತ್ನಿಸಿ ಅದಕ್ಕೆ ಎಸೆಂಬ್ಲಿಯ ಸಹಾಯ ಕೇಳಬೇಕಿತ್ತು. ಹಾಗೇನೂ ಮಾಡಲಿಲ್ಲ. ಅವರು ಹೇಳಲಿಕ್ಕಿದ್ದದನ್ನು ಎಸೆಂಬ್ಲಿಯು ಕೇಳಿಕೊಂಡು ಸುಮ್ಮನೆ ಇರಬೇಕು. ಯಾಕೆಂತ ಕೇಳಲು ಅವರಿಗೆ ಹಕ್ಕಿಲ್ಲ. ಹೇಳಿದಂತೆ ನಡೆಯುವುದು ಮಾತ್ರ ಅವರ ಕೆಲಸ. ಕಮಿಟಿಗಳಲ್ಲಿ ಕೆಲಸ ಮಾಡಲು ಕೇಳಿಕೊಂಡವರ ಪೈಕಿ ಹೆಚ್ಚಿನವರು ಕೆಲಸ ಮಾಡಲು ಒಪ್ಪಿರುವುದರಿಂದ ಬೇರೆಯವರ ಸಹಾಯ ಕೇಳುವುದು ಅವರಿಗೆ ಅವಶ್ಯ ತೋರಲಿಲ್ಲ. ಮೋಡರೇಟ್ ಪತ್ರಿಕೆಗಳಾದ "ಲೀಡರ್" "ಟ್ರಿಬ್ಯೂನ್" ಎಂಬ ಪತ್ರಿಕೆಗಳು ಕಮಿಟಿಗಳ ಸದಸ್ಯರು ಸರಿಯಾದವರಾಗಿಲ್ಲವೆಂತ ಟೀಕಿಸಿದ್ದು ವೈಸರಾಯರಿಗೆ ತಿಳಿದಿರಬಹುದೆಂತ ನಂಬುತ್ತೇವೆ. ಕಾನೂನು ಭಂಗದ ಚಳವಳ ಸಂಬಂಧವಾಗಿ ಹೊರಡಿಸಿದ ಕಾನೂನುಗಳ ಮತ್ತು ಅವುಗಳನ್ನು ಜಾರಿ ಮಾಡುವ ರೀತಿಯ ಕುರಿತು ಕಾಂಗ್ರೆಸಿಗೆ ಸೇರದವರ ಶಿಷ್ಟನ ಭಾವವು ಎಷ್ಟರ ಮಟ್ಟಿಗೆ ಇದೆ ಎಂಬುದು ಮದ್ರಾಸಿನ ಕೆಲವು ಪ್ರಮುಖರು—ಎಗ್ಸಿಕ್ಯೂಟಿವ್ ಕೌನ್ಸಿಲ್ ಮೆಂಬರು ಮಂತ್ರಿ, ಹೈಕೋರ್ಟು ಜಡ್ಜಿಗಳು ಸಹ ಆಗಿದ್ದವರು ಸೇರಿ ಈಗಿನ ರೀತಿಯನ್ನು ಖಂಡಿಸಿ ಹೊರಡಿಸಿದ ಪತ್ರದಿಂದ ತಿಳಿದೀತು. ಅದರಲ್ಲಿ ಹೇಳಿರುವುದೇನೆಂದರೆ, "ಸರಕಾರವು ಅದರ ರೀತಿಗಳಿಂದ ಸಮುದಾಯದವರ ಸಹಾನುಭೂತಿಯನ್ನು ಕಳೆಕೊಳ್ಳುತ್ತದೆ ಮತ್ತು ರಾಜಕೀಯ ಸುಧಾರಣೆಯ ಕುರಿತು ತೀರ್ಮಾನ ಮಾಡಲು ಅನುಗುಣವಿಲ್ಲದ ವಾತಾವರಣವನ್ನು ಸರಕಾರವೇ ಉಂಟುಮಾಡುತ್ತದೆ. ಪೋಲೀಸ್ ದಬ್ಬಾಳಿಕೆಯ ರೀತಿಯನ್ನು ಈ ಲೇಖನದಲ್ಲಿ ಸರಕಾರಕ್ಕೆ ತಿಳಿಸಿ ಕೊಟ್ಟಿದ್ದಾರೆ. ಆದರೆ ವೈಸರಾಯರು ಈ ವಿಷಯ ಕುರಿತು ತಮ್ಮ ಭಾಷಣದಲ್ಲಿ ಏನು ಹೇಳಿದ್ದಾರೆಂದರೆ:—ಈಗ ಕೊಟ್ಟ ವಿಶೇಷ ಅಧಿಕಾರಗಳು ದುರುಪಯೋಗವಾಗದಂತೆ ನೋಡಿಕೊಳ್ಳಲಾಗುತ್ತಾದರೂ ಈ ಹೊಸ ಕಾನೂನುಗಳ ಅವಶ್ಯಕತೆ ಇರುವ ವರೆಗೂ ಅವುಗಳನ್ನು ವಾಪಸು ತೆಗೆದುಕೊಳ್ಳಲಾಗುವುದಿಲ್ಲ." ವಿಶೇಷ ಅಧಿಕಾರಗಳು ದುರುಪಯೋಗವಾಗದಂತೆ ನೋಡಿಕೊಳ್ಳಲಾಗುತ್ತದೆಯೆಂತ ಹೇಳಿದ್ದು ತೃಪ್ತಿಕರವಾದರೂ ನಡೆಯುತ್ತಿರುವ ಕಾರ್ಯಗಳಿಂದ ಈ ಭರವಸೆಯನ್ನು ಜಾರಿ ಮಾಡುತ್ತಿಲ್ಲವೆಂತ ತೋರುತ್ತದೆ. ನಡೆಯುತ್ತಿರುವ ಅತ್ಯಾಚಾರಗಳನ್ನು ಪತ್ರಿಕೆಗಳಲ್ಲಾದರೂ ವೈಸರಾಯರು ನೋಡುತ್ತಿರಬಹುದಲ್ಲವೇ? ಪತ್ರಿಕೆಗಳ ಮೇಲೆ ಇಟ್ಟಿರುವ ಅಸಾಧಾರಣ ನಿರ್ಬಂಧದಿಂದ ನಡೆಯುತ್ತಿರುವ ವಿದ್ಯಮಾನಗಳನ್ನೂ ಜನರ ಅಭಿಪ್ರಾಯವನ್ನೂ ತಿಳಿಸಿಕೊಡಲು ಪತ್ರಿಕೆಗಳು ನಿಷ್ಪ್ರಯೋಜನವಾಗಿ ಹೋಗಿವೆ.

ಬೇರೆ ಭಾಗಗಳಿಗಿಂತ ಸ್ವಲ್ಪ ವ್ಯತ್ಯಾಸವಾಗಿರುವ ಇನ್ನೊಂದು ಮಾತು ಭಾಷಣದ ಅಂತ್ಯದಲ್ಲಿರುವುದು ಯಾವುದೆಂದರೆ—"ಚಕ್ರವರ್ತಿಗಳ ಅಧೀನದಲ್ಲಿರುವ ಸಾಮಂತ ರಾಜ್ಯಗಳ ಸರಿಸಮಾನತ್ವಕ್ಕೆ ಹಿಂದುಸ್ಥಾನವನ್ನು ಒಯ್ಯುವುದು ನನ್ನ ಸಾರ್ವಜನಿಕ ಕೆಲಸದ ಅಂತ್ಯಭಾಗದಲ್ಲಿ ನನಗೆ ದೊರೆತದ್ದಕ್ಕೆ ನನಗೆ ತುಂಬಾ ಸಂತೋಷವಿದೆ." ಸಂಪೂರ್ಣ ಸರಿಸಮಾನತ್ವ ಎಂಬ ಶಬ್ದಗಳು ಕಿವಿಗೆ ಇಂಪಾಗಿ ಕೇಳಬಹುದಾದರೂ ಚೆಂಗಾಗಿ ದೇಶಕ್ಕೆ ಎಸೆಂಬ್ಲಿಯಿಂದ ಕರತಾಡನವನ್ನು ಪಡೆದಿರಬಹುದಾದರೂ ಹಿಂದುಸ್ಥಾನವನ್ನು ಈ ಸ್ಥಿತಿಗೆ "ಒಯ್ಯುವುದು" ಎಂತ ಇರುವುದನ್ನು ನೋಡಿದರೆ ಈ ಒಯ್ಯುವ ಕಾರ್ಯವು ಎಷ್ಟು ವರ್ಷಗಳ ಕಾರ್ಯವೋ ಎಂತ ಸಂಶಯ ಬರುತ್ತದೆ. ಇಂಥಾ ಮಾತುಗಳು ಹಿಂದುಸ್ಥಾನದಲ್ಲಿ 50 ವರ್ಷಗಳ ಹಿಂದೆ ರುಚಿಸಬಹುದಾಗಿದ್ದರೂ ಈಗಿನ ಹಿಂದೀಯರಿಗೆ ಏನೂ ಒಪ್ಪಿಗೆಯಾಗುವಂಥವಾಗಿಲ್ಲ.

ಚಿನ್ನವು ಹಿಂದುಸ್ಥಾನದಿಂದ ಹೊರಗೆ ಹೋಗುವುದು ತೃಪ್ತಿಕರವೆಂತ ಇವರು ಹೇಳಿದ್ದು ನೋಡಿ ನಮಗೆ ಆಶ್ಚರ್ಯವಾಗಿದೆ. ಆದರೆ ಹಿಂದುಸ್ಥಾನದ ಸ್ಥಿತಿಯನ್ನು ಅರಿತ ಅರ್ಥಶಾಸ್ತ್ರಜ್ಞರು ಹಿಂದುಸ್ಥಾನದಿಂದ ಚಿನ್ನವು ಹೊರಗೆ ಹೋಗುವುದಕ್ಕಿಂತ ಹಾನಿಯು ಇನ್ನೊಂದಿಲ್ಲವೆನ್ನುತ್ತಾರೆ. ಸರ್ ಪುರುಷೋತ್ತಮದಾಸ್ ಠಾಕೂರದಾಸರು ಮೊನ್ನೆ ಹೇಳಿರುವುದೇನೆಂದರೆ—"ಇಂಗ್ಲೆಂಡು ತನ್ನ ಚಲಾವಣೆಯ ನೋಟಿನ ಬೆಲೆ ಕಡಿಮೆಯಾದರೂ ಚಿಂತೆ ಇಲ್ಲ, ಚಿನ್ನ ದೇಶದಿಂದ ಹೊರಗೆ ಹೋಗಬಾರದೆಂತ ಮಾಡಿರುವಾಗ ವಿಶಾಲಕೆ ಸರಕಾರ ಹುಕುಮಿನಿಂದ ಜಪಾನಿನಿಂದ ಚಿನ್ನ ಹೊರಗೆ ಹೋಗುವುದನ್ನು ಅಲ್ಲಿನ ಸರಕಾರವು ತಡೆದಿರುವಾಗ ಇಂಡಿಯಾ ಸರಕಾರಕ್ಕೆ ಹಿಂದುಸ್ಥಾನದಿಂದ ಚಿನ್ನ ಹೋಗುವುದು ತೃಪ್ತಿಯಾಗಿದೆ!" ಆರ್ಥಿಕ ಮಂತ್ರಿಯಾದ ಸರ್ ಜಾರ್ಜ್ ಶುಸ್ಟರು ಸ್ವಲ್ಪ ದಿನಗಳ ಮುಂಚೆ ಚಿನ್ನವು ಹಿಂದುಸ್ಥಾನದಿಂದ ಹೋಗುತ್ತಿರುವುದಕ್ಕೆ ನ್ಯಾಸನ ಸೂಚಿಸಿ ತಡೆಯುವ ಉಪಾಯವನ್ನು ಯೋಚಿಸಲಾಗುತ್ತದೆ ಎಂತ ಹೇಳಿದರು. ಈಗಾಗಲೇ ಈ ಅಭಿಪ್ರಾಯವು ಬದಲಾದದ್ದು ನೋಡಿದರೆ ಹಿಂದುಸ್ಥಾನದ ಹಿತಕ್ಕೆ ವಿರೋಧವಿರುವ ಬ್ರಿಟಿಷ್ ಜನರ ಅಭಿಪ್ರಾಯವೇ ಸರಕಾರವನ್ನು ಅನುಸರಿಸುತ್ತದೆ ಸ್ಪಷ್ಟವಾಗುತ್ತದೆ.

Coorg Forest Department, South Division

Timber Sale Notice.

Mercara, the 28th January 1932.

It is hereby notified that about 900 c. ft. o "A" class Teak, 1300 c. ft "B" class Teak, 70 c. ft. of Biti above 5' girth, 4000 c. ft. Biti belo 5' girth, 300 c. ft. of "A" class Honne, 800 c. f of "B" class Honne, 3000 c. ft. of Matti and 2(c. ft. Nandi, lying in the Coorg Timber Dep at Hunsur will be sold by public auction in co venient lots at Hunusur on 11—2—32, commer ing at 10 a. m. All the timber is open inspection.

For further particulars, please apply to t DIVISIONAL FOREST OFFICER, SOU COORG, MERCARA.

Reg. No. M. 1550.
If not delivered please return to
"KODAGU" OFFICE MERCARA.

ಕೊಡಗು.

ಸತ್ಯೇನ ಧೂತದಯಯಾ ವಿದ್ಯಾ ವಿೀಕಿ ಪ್ರಯುಕ್ತಕಾ ! ಅಸತ್ಯೇನ ದೇಶಾಕಾಂ ಸುಸ್ಥಿರಾ ರಾಜ್ಯ ಸಂಪದಾ

ವಾರ್ಷಿಕ ಚಂದಾ ರೂ. ೩—೪—೦. | ಸಂಪಾದಕ—ನೂಚಿಮಂಡ ಯಂ. ಗಣಪತಿ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವನು.

ಸಂಪುಟ ೧೧ | ಮಡಿಕೇರಿ, ಸನ್ ೧೯೩೨ನೇ ಇಸವಿ ಫೆಬ್ರವರಿ ತಾರೀಕು ೫ ನೇ ಶುಕ್ರವಾರ. | ಸಂಚಿಕೆ ೩೫

Office of the Asst.
Commr. & Dt. Magte.,
Mercara (Coorg). 6th May 1931.

Dear Sir,

I am QUITE PLEASED with the workmanship of the two Coorg weapons (PICHAKATTI & ODIKKATTI)

Yours faithfully,
(Sd) (Rao Bhadur)
K. CHENGAPPA, B. A.
District Magistrate and
Assistant Commissioner of Coorg.

JEWELLER
By Appointment tc
H. E The Gov rnor of Madras.



PEECHAKATTI (WITH SILVER FITTINGS)
Prices—From Rs. 160 & upwards.

" New Bungalow,"
Ammatti, (Coorg).
14th December 1931.

Dear Sir,

I am IMMENSELY-PLEASED with the workmanship of the PICHAKATTI you made and sent me some time back.

Yours faithfully,
Sd/ K. P. MUDDAYYA,
Ammatti (Coorg.)

Telegrams:
'PRECIOUS.'

Telephone:
3145.

V. Subramaniar Jeweller.

CATALOGUE ON ENQUIRY.

52–11

Post Box 423, Triplicane, P. O., MADRAS.



ಇದರ ಬದಲ್ ಕರೆ
ಕನ್ನಡಿಗರು ಮಾಡಿಯಾಗಿ
ಕಳುಹಿಸಲ್ಪಡುವದು.

ಕೋವಿಗಳು, ಕತ್ತಿಗಳು, ಬಟೀಗಳು, ಕೋಟೆಗಳು, ಪಿಸ್ತೂಗಳು, ಮದ್ದು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS.
Largest Importers of Firearms and Ammunition
Cheapest priced firm in India,

24–20 210 Abdul Rehman Street, BOMBAY.

ಎಂಪೈರ್ ಆಫ್ ಇಂಡಿಯಾ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
(ಸ್ಥಾಪನೆಯಾದದ್ದು 1897.)

ಹಿಂದೂಸ್ಥಾನದಲ್ಲಿ ಪ್ರಾಮುಖ್ಯವೂ, ಜನಪ್ರಿಯವೂ ಆಗಿರುವ ಈ ಕಂಪೆನಿಯಲ್ಲಿ ನೀವು ಜೀವ ವಿಮೆ ಮಾಡುವುದಕ್ಕೆ ಇದೇ ತಕ್ಕ ಸಮಯ.

ಬೋನಸ್ ವರ್ಷ ! | ಬೋನಸ್ ವರ್ಷ !!

ಸಾಹಸವಂತರಾದ ಏಜೆಂಟರು ಬೇಕಾಗಿದೆ.

ಹೆಡ್ ಆಫೀಸು:—
ಎಂಪೈರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್,
ಬೊಂಬಾಯಿ.

ಬ್ರಾಂಚ್ ಆಫೀಸು:—
152–3 ಕಮರ್ಷಲ್ ಸ್ಟ್ರೀಟ್,
ಬೆಂಗಳೂರು.

52–21

ಬಾಲಾರ್ಕಮಧು.

ನಿಮ್ಮ ಮಕ್ಕಳ ಸೌಂದರ್ಯವನ್ನು ನೋಡಬೇಕಾದರೆ ಅದ್ಭುತ ಗುಣವುಳ್ಳ ಬಾಲಾರ್ಕಮಧುವನ್ನು ಕೊಡಿರಿ. ಮಕ್ಕಳು ರೋಗ



ಪೀಡಿತರಾಗಿ ಎಷ್ಟೇ ಕ್ಷೀಣವಾಗಿದ್ದರೂ ಅದರಿಂದ ಬಹು ಬೇಗ ಗುಣವಾಗಿ, ಬಲವೂ ಬರುವದು. ದಿನ ದಿನಕ್ಕೆ ಆರೋಗ್ಯವೂ, ಕಾಂತಿಯೂ ಹೆಚ್ಚುವದು. ಇದು ಮಧುರವಾಗಿದೆ. ಚಿಕ್ಕ ಮಕ್ಕಳು ... ಕುಡಿಯುತ್ತಾರೆ. ಶೀಸೆ 1 ಕ್ಕೆ 12 ಆಣೆ ಬಿ. ಪಿ. 12 ಆಣೆ.

ಆರ್ಡರ್ ಕೊಡುವಾಗ ಅಡ್ರೆಸ್ಸು ಮೊದಲಾದದ್ದು ... ಬರೆಯಬೇಕು. ಅಡ್ರೆಸ್ ಇಲ್ಲದ ಆರ್ಡರುಗಳನ್ನು ...

ಯಂ. ವಿ. ಪ್ರಸಾ...
ಶಿವಮೊಗ್ಗ

52–3

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಓವರ್ ಅಡಿಷನಲ್ ಕಾನ್ಫರೆನ್ಸ್ ಅಲ್ಲ! ಪ್ರಕಾರ ರಿಜಿಸ್ಟರಾಗಿದೆ. (ಸ್ಥಾಪಿತವಾದದ್ದು 1922ರಲ್ಲಿ)

	ರೂ.
ಶೇರ್ ಬಂಡವಾಳ	— 50,000
ವಸೂಲಾದ ಶೇರ್ ಮೊಬಲಗು	— 26,800
ಒಟ್ಟು ಠೇವಣಾತಿ	— 2,50,301

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೆ ಬೇಕಾಗಿ ಸಾಲಕೊಡಲಾಗುತ್ತದೆ.

ಒಂದು ವರ್ಷ ಗಡುವಿನ ಅಥವ ಹೆಚ್ಚಿನ ಗಡುವಿನ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ಗಡುವಿನ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ.

ಪ್ರೆಸಿಡೆಂಟರು,	ಟ್ರೆಜರರ್
ಕೋಣಂಡ ಅಪ್ಪಯ್ಯನವರು	ಮನೆಯಪ್ಪಂಡ ಬೆಳ್ಯಪ್ಪ
ರಾವ್ ಬಹದ್ದೂರ್.	ನವರು.

ಸೆಕ್ರೆಟರಿ

ಸಿ. ಎಸ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್
ತಾರೀಖು 1- 7 —1931.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿದೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿದೆ.

ಏಜೆಂಟರುಗಳು.

ಉತ್ತರ ಕೊಡಗಿಗೆ ಮೆ: ಚೌರಿರ ಮೊಣ್ಣಯ್ಯನವರು,
ದಕ್ಷಿಣ ಕೊಡಗಿಗೆ—ಮೆ. ಸೋಮೆಯಂಡ ಅಪ್ಪಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮುಂಡೇಕಂಡ ಸೋಮಯ್ಯನವರು, (ಶಾಂತಿಭಂಡಾರ.)
ಶಾಲೋಕಪ್ಪ—ಎಮ್. ಆರ್. ವೆಂಕಪ್ಪಯ್ಯನವರು.
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು,
ಗೋಣಿಕೊಪ್ಪಲು—ಮೆ. ಜಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಬಸಂತ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುತ್ತಮ್ಮಯ್ಯನವರು,
ಮತ್ತು, ಅಡಮಣಮಾಡ ಪಿ. ಕಾರ್ಯಪ್ಪನವರು,
ಮಡಿಕೇರಿ & ಶಿರಿಮತ್ತಿ—ಮೆ. ಜಿ. ಮಾದಮ್ಮಯ್ಯನವರು,
ಕುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾಚ್ಚಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರಿಗೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನ್ನೂ ಇರಬೇಕಾದ ಅಮಿತ ಬಡಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಿಸಲು ಆವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಖರಾರು ಫಾರಮುಗಳೂ, ಜಮ್ಮ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು [illegible]ದಾರು ಫಾರಮುಗಳೂ, ಸ್ಟೋರ್ ಕೀಪರ್ ಖರಾರು ಫಾರಮುಗಳೂ, ಓವರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, [illegible] ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. [illegible] ಬೇಕಾದವರು ಆರ್ಡರು ಕೊಟ್ಟಲ್ಲಿ ವಿ. ಪಿ. [illegible] ಕಳುಹಿಸಲಾಗುವುದು.

ಮೇನೇಜರ್,
"[illegible]" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.
ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.
ಭಂಡವಾಳವು ಹೆಚ್ಚಾದದ್ದು—ಸುಮಾರು 16½ ಕೋಟಿ ರೂ.
ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮೊಬಲಗು 1,78,322 ಜನರಿಗೆ 59 ಕೋಟಿ ರೂ.
ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ರಕ್ಕಿಂತ ವಿಶೇಷ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದಾಗಿದೆ.
ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.
ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಉತ್ತೇಜನವನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬುದು ಅದರ ಹಿಂದಿನ ದಾಖ್ಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಫರೇಡ್ ಬೆಂಗಳೂರು.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ಮೊಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್ ಪಿಂಡಿ
ಅಜ್ಮೀರ್	ಡಕ್ಕಾ	ಲಕ್ನೋ	ಪಾಟ್ನಾ	ಸುಕ್ಕೂರು
ಅಲ್ಲಾಹಾಬಾದು	ಡಿಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಹೌಲಗಾಂವ್	ಮಂಡಲೆ	ರಾಯಪುರ	ತಿರುವೆಂದ್ರಮ್
ಭೋಪಾಲ್	ಕರಾಚಿ	ಮಂಗಳೂರು	ರಾಂಚಿ	ವಿಶಾಖಪಟ್ಣ [52—48

ಅಟ್ರೋಕವಾಯಿ ಮಲೆಜ್ವರಕ್ಕೆ:—ಇದು ಆರ್ಸೆನಿಕ್ ಮತ್ತು ಕ್ವಿನೈನು ಸೇವಿಸಿದರೂ ಗುಣವಾಗದಿರುವ ಮಲೆಜ್ವರ, ದಿನಾ ಬರುವ ಜ್ವರ, 3—4 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ ಮತ್ತು ಜ್ವರಗಡ್ಡೆ ದೋಷದಿಂದ ಬರುವ ವ್ಯಾಧಿಗಳಿಗೆ ಖಾತ್ರಿ ಗುಣ ಕೊಡುತ್ತದೆ. ಕ್ರಯ ಒಂದಕ್ಕೆ ರೂ. 1—4—0; 3ಕ್ಕೆ ರೂ. 4—0—0; 6ಕ್ಕೆ ರೂ. 7—8—0; 12ಕ್ಕೆ ರೂ. 14

ಮಲೆ ಜ್ವರ [illegible]

ಚಂದನಾಸವ:—ಇದು ಕ್ರಮೇಣ ಮೂತ್ರ ಕಟ್ಟು, ಮೂತ್ರ ಹನಿಹನಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಹಿಂದೆಗೆ ಉರಿ, ಮೂತ್ರನಾಳದಲ್ಲಿ ನೋವು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಸುಣ್ಣ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಉಬ್ಬುವ ರೋಗ, ಇವುಗಳಿಗೆ ಪರಮ ದಿವ್ಯ. ಚಿಕ್ಕ ಬಾಟ್ಲಿ 1, 3, 6ಕ್ಕೆ ರೂ. 1—4—0 3—8—0; 6—12—0

ರೋಮನಾಶಿನಿ:— ಈ ಪುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಹೋಗುವುದು. ತಗಡು 1ಕ್ಕೆ 6 ಆಣೆ, 3 ತಗಡುಗಳಿಗೆ ರೂ. 1. 1 ಡಜನಿಗೆ 3—8—0

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆಭಾರ, ಕಣ್ಣುರಿ, ಕಿವಿಯಿಂದ ಕೀವು ಸೋರುವುದು [illegible] ಕಣ್ಣು ಮಂಜು, ಅಪಸ್ಮಾರ [illegible] ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು, ಇವುಗಳೆಲ್ಲಕ್ಕೂ ಖಂಡಿತ ಗುಣಪಡಿಸುತ್ತದೆ. [illegible] ಉದುರುವ ಕೂದಲನ್ನು [illegible] ಕೂದಲನ್ನು ಬೆಳೆಯುವ ಕೂದಲಿಗೆ [illegible] ಕೂದಲನ್ನು [illegible] ಕೂದಲನ್ನು ಕಪ್ಪಾಗಿ ಮಾಡುತ್ತದೆ. ಚಿಕ್ಕ ಸೀಸೆಗೆ ರೂ. 1, 3 ಸೀಸೆಗೆ 2—10—0. ಒಂದು ದೊಡ್ಡ ಸೀಸೆಗೆ ರೂ. 2, 3 ಸೀಸೆಗಳಿಗೆ 5—8—0

ವಿಳಾಸ:— ಮನೋಲ್ಲಾಸಿನಿ ಕಂಪೆನಿ,
52-36 ಕಟ್ಟಿರಾಗು ಕಛೇರಿ ರೋಡು 9. ಬೆಂಗಳೂರು

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
52—3 ಗಿರಿಗಾಂವ, ಮುಂಬಯಿ.

Printed & published by M. M. Ganapathy at "Kodagu" Press Merc for "Kodagu" Ltd.

೫೩ ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ ಔಷಧಗಳು.

೧. ಧಾತುಪುಷ್ಟಿ ಲೇಹ.

ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕ ಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ಬಾಧೆ, ರಕ್ತ ಪಿತ್ತ, ಒಳ ಜ್ವರ, ಮಲ ಬದ್ಧತೆ, ಕೈಕಾಲು ಬಚ್ಚುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದ. ಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು—ಕ್ರಯ ಡಬ್ಬಿ 1ಕ್ಕೆ 2—8—0 ಮೂರು ಡಬ್ಬಿಗಳಿಗೆ ರೂ. 7—0—0

೨. ಅಶೋಕಾರಿಷ್ಟ ಮತ್ತು ಮಾತ್ರೆ.

ಹೆಂಗಸರ ಮುಟ್ಟಿನ ದೋಷಗಳು, ಮುಟ್ಟು ಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟ ನೋವು, ಸಂತಾನ ಹೀನತೆ, ಮೂರ್ಛೆ, ಮಲಬದ್ಧತೆ, ಒಳಜ್ವರ, ರಕ್ತಹೀನತೆ, ಕೈಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಅತಿ ಶೀಘ್ರದಲ್ಲಿಯೇ ಗುಣ ಪಡಿಸುವುದು. ಈ ಅಶೋಕಾರಿಷ್ಟ ಮತ್ತು ಮಾತ್ರೆಗಳು ಸಾವಿರಾರು ಹೆಂಗಸರಿಗೆ ಅಂತರಿಕ ಆರೋಗ್ಯವನ್ನು ಒದಗಿಸಿ, ಮನೋಭಿಲಾಷೆಯನ್ನು ಪೂರಯಿಸಿರುವವು.

ಕ್ರಯ 1 ಬಾಟ್ಲಿ ಔಷಧ, 1 ಡಬ್ಬಿ ಮಾತ್ರೆ ರೂ. 2 ಅ. 4
3 ಬಾಟ್ಲಿ ಮತ್ತು ಡಬ್ಬಿಗಳಿಗೆ ರೂ. 6 ಅ. 4.

೩. ಮಲೇರಿಯಾ ನಿವಾರಣೆ.

ದಿನ ಬಿಟ್ಟು ಬರುವ ಜ್ವರ, ನಾಲೆ ಜ್ವರ, 2 ಯಾ 3 ದಿನಗಳಿಗೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರ ಗಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರ ಗಡ್ಡೆಯನ್ನು ಕರಗಿಸಿ ಶಕ್ತಿಯನ್ನು ಉಂಟು ಮಾಡುತ್ತದೆ. ಬಾಟ್ಲಿ 1 ಕ್ಕೆ 1—8—0, 3 ಬಾಟ್ಲಿಗಳಿಗೆ 4—2—0.

೪. ಮೇಹ ಕುಠಾರ. ಇದು ಮೂತ್ರಸ್ಥಾನದಿಂದ ಕೆಂಪು, ಬಿಳಿದು, ಹಳದಿಯಂತೆ ಹೋಗತಕ್ಕ ಕೀವನ್ನೂ, ವ್ರಣವನ್ನೂ, ಉರಿಯನ್ನೂ ಗುಣಪಡಿಸುತ್ತದೆ. ಡಬ್ಬಿ 1 ಕ್ಕೆ ರೂ. 2—8—0. 3ಕ್ಕೆ ರೂ. 7.

೫. ಇಚ್ಛಾ ಭೇದಿ ಗುಟಿಕೆ. ಆಯಾಸವನ್ನು ಉಂಟುಮಾಡುವ ಸುಖ ವಿರೇಚಕ. ಬಾಟ್ಲಿ 1ಕ್ಕೆ 0—12—0 ಅಣೆ. 3 ಬಾಟ್ಲಿಗಳಿಗೆ 2—2—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ರವಾನಿಸಲಾಗುವುದು. ಕೆಟಲಾಗುತರಿಸಿ ನೋಡಿರಿ.

ಎಂ. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್,
52—8 ರಥಬೀದಿ, ಮಂಗಳೂರು, ದ. ಕನ್ನಡ

ಭಂಗಾರದ ಕೈಗಡಿಯಾರ.

ಈ ಚಿತ್ರದಲ್ಲಿ ಕಾಣುವ ಭಂಗಾರದ ಕೈಗಡಿಯಾರವು ಬಹು ಬಲಿಷ್ಟವಾದ (ಸ್ವಿಸ್ ಮೇಡ್) ಲೀವರ್ ಸಾಮಾನುಗಳಿಂದ ತಯಾರಾದವು. ಸರಿಯಾದ ಗಂಟೆಯನ್ನು ತೋರಿಸುವವು. ಒಳಗಡೆ ರತ್ನಗಳು ಇಟ್ಟಿವೆ. ಇದರ ಬಣ್ಣವು ಭಂಗಾರಕ್ಕೆ ಸರಿಯಾಗಿರುವುದು. ಇದನ್ನು ಈ ವಾರದಲ್ಲಿ ತರಿಸಿಕೊಳ್ಳುವವರಿಗೆ ಒಂದು ವಜ್ರದ ಉಂಗುರ, ಒಂದು ರೋಲ್ಡ್ ಗೋಲ್ಡ್ ಭಂಗಾರದ ಕತ್ತಿನ ಹಾರ (ನೆಕ್ಲೇಸ್), ಒಂದು ಟೇಬಲ್ ಟೈಂಪೀಸು ಇನಾಮಾಗಿ ಕೊಡುವೆವು. 3 ಗಡಿಯಾರಗಳಿಗೂ ಖಾತ್ರಿಯಾದ 4 ವರ್ಷ ಗ್ಯಾರಂಟಿ ಪತ್ರ ಸಹ ಕಳುಹಿಸುವೆವು.

3 ಬಹುಮಾನಗಳ ಸಹಿತ ರಿಸ್ಟ್‌ವಾಚ್ 1 ಕ್ಕೆ 6—8—0.
ವಿಳಾಸ:— ಸಿಟಿ ಮಾರ್ಟ್,
12—5 168. ಜೈನಾ ಬಜಾರ್, ಮದರಾಸು.

12 ಸೆಂಟ್ ಬಾಟಲ್, ಪಾಕೆಟ್ ವಾಚ್
ಪ್ರತಿಂದಾಗಿಲ್ಲ ಹೆಸರು.

ಲಿಲ್ಲಿ ಆಫ್ ದಿ ವ್ಯಾಲ್ಲಿ ಮತ್ತು ಫೌಂ.

ಈ ಸುಗಂಧ ದ್ರವ್ಯವು ಫ್ರಾನ್ಸ್ ದೇಶದಲ್ಲಿ ಪುಷ್ಪಗಳ ಸಾರ ತಯಾರಿಸಿದ್ದು. ಇದರಲ್ಲಿ ಮದದ್ರವ್ಯಗಳು ಯಾವವೂ ಸೇರಿರುವುದಿಲ್ಲ. ಇದರಲ್ಲಿ ಒಂದೇ ಒಂದು ಬೊಟ್ಟನ್ನು ಬಟ್ಟೆಗೆ ಹಾಕಿದರೆ ಒಂದು ವಾರದ ವರೆಗೂ ಒಂದೇ ತರಹವಾಗಿ ಗಮಗಮಿಸುತ್ತಿರುವುದು. ಲಿಲ್ಲಿ ಆಫ್ ದಿ ವ್ಯಾಲ್ಲಿ ಎಂಬ ಈ ಸುಗಂಧ ದ್ರವ್ಯಕ್ಕೆ ಸಮಾನವಾದದ್ದು ಬೇರೊಂದು ಇಲ್ಲ. ವಿಲಾಯಿತಿಯಲ್ಲಿ ತಯಾರಾದ 14 ಕ್ಯಾರೆಟ್ಟಿನ ಭಂಗಾರದ ನಿಬ್ಬು ಹಾಕಿದ ಫೌಂಟನ್ ಪೆನ್ನು, ಒಂದೇ ಸಲ 12 ಸೆಂಟ್ ಬಾಟಲ್, ಪೆನ್ನು ತರಿಸಿದವರಿಗೆ ಒಂದು ಪಾಕೆಟ್ ವಾಚನ್ನು ಇನಾಮಾಗಿ ಕೊಡುತ್ತೇವೆ.



ಕ್ರಯ ರೂ 2—12—0 ಮಾತ್ರ.

The Legal Trading Co.
12—6 P. B. 243, Madras.

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಎಂಬುವ ಸುಪ್ರಸಿದ್ಧ ದೇಶೀಯ ವಿಮೇ ಸಂಘ.

ಅಧ್ಯಕ್ಷರು:—ಮಾನನೀಯ ಸರ್ ಲಲ್ಲೂಭಾಯಿ ಸಾಮಲದಾಸ್,
ಕೆಟಿ., ಸಿ. ಐ. ಇ., ಜೆ. ಪಿ., ಯವರು.

ಕೊಚ್ಚಿಕಾರ ಬ್ರದರ್ಸ್, ಮದ್ರಾಸು ಬ್ರಾಂಚು ಸೆಕ್ರಟರಿಗಳು.

1 ಭಾಗ್ಯವಂತರ ಭಂಡಾರ, ವ್ಯಾಪಾರಸ್ಥರ ಕೋಶಾಗಾರ, ಕುಟುಂಬದ ಸಂರಕ್ಷಣಾನಿಲಯ, ಬಡವರ ಜೀವನಾಧಾರ ಇದೇ ಜೀವ ವಿಮೆಯ ತತ್ವವು.

2. ಹಿಂದೂಸ್ಥಾನದ ನಿವಾಸಿಯರಲ್ಲಿ ವಿಮಾ ತೆಗೆಯಬೇಕೆನ್ನುವವರ ಪ್ರಯೋಜನಾರ್ಥವಾಗಿ ಈ ಕಂಪೆನಿಯು ಭಾರತೀಯರ ಉತ್ತಮವಾದ ಆಡಳಿತದಿಂದ ಖರ್ಚು ಮೋಕೆ ಮಾಡಿ ಇಂಡಿಯಾ ಸರ್ಕಾರದ ಇಂಡಿಯನ್ ಟ್ರಸ್ಟ್ ಆಕ್ಟಿಗೆ ಒಳಪಟ್ಟು ಸರ್ಕಾರದ ಭದ್ರತೆಯಿಂದ ದೇಶೀಯರ ಸೇವೆಯಲ್ಲೇ ನಿರತವಾಗಿ ಹಿಂದೂಸ್ಥಾನದ ಎಲ್ಲಾ ಕಡೆಗಳಲ್ಲೂ ಅತಿ ಕೀರ್ತಿಯನ್ನು ಪಡೆದಿರುತ್ತೆ.

3. ಈ ಸ್ವದೇಶೀ ಕಂಪೆನಿಯು ಪೋಲಿಸಿದಾರರಿಗೆ ಪೋಲಿಸಿ ಅವಧಿ ಪೂರೈಸಿದನಂತರವಾಗಲೀ ಅಥವಾ ಮಧ್ಯದಲ್ಲು ಮರಣಾನಂತರ ವಾರೀಸುದಾರರುಗಳಿಗಾಗಲೀ ಹೆಚ್ಚಿನ ಖರ್ಚಿಗೆ ಆಸ್ಪದ ಕೊಡದೆಯೂ, ದೀರ್ಘ ಸಮಯ ತೆಗೆದುಕೊಳ್ಳದೆಯೂ ಶೀಘ್ರದಲ್ಲಿ ವಿಮೇ ಮೊಬಲಗನ್ನು ಲಾಭ ಸಹಿತ ವಾಪತಿಕೊಡುವುದರಲ್ಲಿ ಹೆಸರುಗೊಂಡಿದೆ.

4. ಭರತಖಂಡದ ಮಹನೀಯರಿಂದ ಸ್ಥಾಪಿಸಲ್ಪಟ್ಟ ದೇಶೀಯರಿಂದಲೇ ಅತಿ ಕಡಿಮೆ ಖರ್ಚಿನಿಂದ ನಡೆಸಲ್ಪಡುವ ಈ ಸ್ವದೇಶೀ ಕಂಪೆನಿಯಲ್ಲು ಇಂದು ಭಾಗಿಗಳಾಗಿ, ಪತಿಪತ್ನಿಯರಿಗೆ ಮತ್ತು ವ್ಯಾಪಾರಸ್ಥರು ವಗೈರರಿಗೆ ದ್ವಿಜೀವವಿಮೆ (ಜಾಯಿಂಟ್ ಲೈಫ್) ಪೋಲಿಸಿ ತೆಗೆದುಕೊಳ್ಳಲು ಈ ಕಂಪೆನಿಯು ತುಂಬಾ ಅನುಕೂಲಗಳನ್ನು ಕಲ್ಪಿಸಿರುತ್ತೆ. ಇಂಥ ಸುಸಮಯವನ್ನು ಎಂದಿಗೂ ಕಳೆಕೊಳ್ಳಬಾರದು.

ಆಫೀಸು—
ಟೆಂಪಲ್ ಸ್ಟ್ರೀಟ್,
ಮಡಿಕೇರಿ. (26—15)

ಬಿ. ಎಸ್. ಐಯ್ಯಪ್ಪ,
ಕೊಡಗು ಚೀಫ್ ಏಜೆಂಟ್.

ಎಂ. ಎಸ್. ಶಿದ್ಧಪ್ಪ ಅಂಡ್ ಬ್ರದರ್ಸ್

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

14 ಕ್ಯಾರೆಟ್ ಭಂಗಾರದ ನಿಬ್ಬು ಹಾಕಿದ ಖಾತ್ರಿಯುಳ್ಳ ಬಂದೋಬಸ್ತಾದ ಫೌಂಟನ್ ಪೆನ್‌ಗಳು.

ವಂಡರ್ ಫೌಂಟನ್‌ಪೆನ್ 1ಕ್ಕೆ	ರೂ. 3	0	0
„ ಬಿಗ್ ಬ್ಯಾರೆಲ್ ಪೆನ್ 1ಕ್ಕೆ	3	3	0
„ ಸ್ಕ್ರೂ ಕ್ಯಾಪ್ ಪೆನ್ 1ಕ್ಕೆ	3	8	0
„ ಬಿಗ್ ಬ್ಯಾರೆಲ್ ಸ್ಕ್ರೂ ಕ್ಯಾಪ್ ಮೊಡಲ್ ಕಲರ್ ಫೌಂಟನ್‌ಪೆನ್ 1ಕ್ಕೆ	3	14	0
„ ಮೊಡಲ್ ಕಲರ್ ಸ್ಕ್ರೂ ಕ್ಯಾಪ್ ಫೌಂಟನ್‌ಪೆನ್ 1ಕ್ಕೆ	4	2	0
„ ಸೆಲ್ಫ್ ಫಿಲ್ಲಿಂಗ್ ಮೊಡಲ್ ಅಥವ ಬ್ರವುನ್ ಕಲರ್ ಫೌಂಟನ್‌ಪೆನ್ 1ಕ್ಕೆ	5	8	0
ಸ್ವಾನ್ ಫೌಂಟನ್‌ಪೆನ್ 1ಕ್ಕೆ	10	8	0
ರ್ ಪೆನ್ 1ಕ್ಕೆ 14 6 0, &	20	10	0
ಕಬರ್ ಫೌಂಟನ್‌ಪೆನ್ 1ಕ್ಕೆ 3 8 0, &	3	12	
ರ್ ಫೌಂಟನ್ ಪೆನ್ 1ಕ್ಕೆ 6 4 0, &	6	12	0
ಶೇಫರ್ ಫೌಂಟನ್ ಪೆನ್ 1ಕ್ಕೆ 8 2 0, &	8	10	0

ಟೈಂಪೀಸ್‌ಗಳು.

ಸ್ಟ್ಯಾಂಡ್ ಇರುವ ಸಣ್ಣ ಟೈಂಪೀಸ್ 1ಕ್ಕೆ	3	6	0
ಜರ್ಮನ್ ಮೇಡ್ ಸಣ್ಣ ಟೈಂಪೀಸ್ 1ಕ್ಕೆ	2	2	0
ಲಿಗಲಿಯಾ ಅಲಾರಂ ಟೈಂಪೀಸ 1ಕ್ಕೆ 6 9 0, &	6	15	0
ಲಿಗಲಿಯಾ ಸಣ್ಣ ಸೈಜಿನ ಅಲಾರಂ ಟೈಂಪೀಸ್ 1ಕ್ಕೆ	7	2	0
ಲಿಗಲಿಯಾ ಅಲಾರಂ ಸಣ್ಣ ಟೈಂಪೀಸ್ ರೇಡಿಯಂ ಡೈಲಿನದು 1ಕ್ಕೆ	8	10	0
ಬಿಗ್‌ಬೆನ್ ಅಲಾರಂ ಟೈಂಪೀಸ್ 1ಕ್ಕೆ	9	6	0
ಬಿಗ್‌ಬೆನ್ ಅಲಾರಂ ಸ್ಟ್ಯಾಂಡ್ ಇರತಕ್ಕ ಖಾತ್ರಿಯಾದ ಟೈಂಪೀಸ್ 1ಕ್ಕೆ	13	4	0
ಖಾತ್ರಿಯಾ ಬಂದೋಬಸ್ತಾದ ಪಾಕೆಟ್ ವಾಚ್ 1ಕ್ಕೆ	5	10	0
ಇದೇ ನಮೂನೆಯಲ್ಲಿ ಎಚ್. ಹಾರ್ಡ ಕಂಪೆನಿಯ ಪಾಕೆಟ್ ವಾಚ್ 1ಕ್ಕೆ	12	4	0
ನಿಕ್ಕಲ್ ಕೇಸ್ ಸಿಲಿಂಡರ್ ಮುವ್ಮೆಂಟ್ ಸಾಧಾರಣ ತರಹ ರಿಸ್ಟ್ ವಾಚ್ 1ಕ್ಕೆ 5 4 0, 7 8 0, 10 0 0 &	12	8	0



ಇಲ್ಲಿ ನಮೂದಿಸಿರುವ ನಮೂನೆ ಅಂದವಾದ ಟೇಬಲ್ ಟೈಂಪೀಸ್ 1ಕ್ಕೆ 3—6—0 ಪ್ಯಾಕಿಂಗ್ ಪೋಸ್ಟೇಜ್ ..78.. ಬೇರೆಯದು.

ಮೇನೇಜರ್ ಗರಾಕಿಸುವ ವಿಳಾಸ:—ಎಂ. ಎಸ್. ಶಿದ್ಧಪ್ಪ ಅಂಡ್ ಬ್ರದರ್ಸ್,
52—31 ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಇಂದಿನ ಭಾರತದಲ್ಲಿ ಚಿನ್ನದ ಸೋರಿ.

(೩ನೇ ಪುಟದಿಂದ ಮುಂದುವರಿದದ್ದು.)

ಯುದ್ದೇನಿದೆ? ಜನಾಭಿಪ್ರಾಯಕ್ಕೆ ವಿರುದ್ಧವಾಗಿ ರಾಜ್ಯಾಡಳಿತವನ್ನು ನಡೆಸುತ್ತಿರುವ ಸರಕಾರದ ಆರ್ಥಿಕ ಸ್ಥಿತಿ ಬಗ್ಗೆ ಯಾರಿಗೆ ತಾನೇ ನಂಬಿಕೆ ಇರುತ್ತದೆ?

ಆದ್ದರಿಂದ ದಿನದಿನಕ್ಕೆ ಬೆಲೆಯನ್ನು ಕಳೆದುಕೊಳ್ಳುತ್ತಿರುವ ರೂಪಾಯಿ ಮತ್ತು ನೋಟುಗಳನ್ನು ತೆಗೆದುಕೊಂಡು ಅವಕ್ಕೆ ನಮ್ಮಲ್ಲಿರುವ ಅಲ್ಪ ಸ್ವಲ್ಪ ಚಿನ್ನವನ್ನು ಕೊಟ್ಟುಬಿಡುವುದು ಮೂರ್ಖತನ. ಹೀಗೆ ಚಿನ್ನವನ್ನು ಕೊಟ್ಟು ರೂಪಾಯಿಗಳನ್ನೂ, ನೋಟುಗಳನ್ನೂ ಕಟ್ಟಿಕೊಳ್ಳುವುದು ವಸ್ತುವನ್ನು ಬಿಟ್ಟು ನೆರಳನ್ನು ಹಿಡಿದುಕೊಳ್ಳಲೆತ್ನಿಸಿದಂತೆಯೇ ಸರಿ. ಆದ್ದರಿಂದ ಈಗ ಚಿನ್ನವನ್ನು ಹೆಚ್ಚು ಬೆಲೆಗೆ ಮಾರಿ, ಲಾಭ ಹೊಂದುತ್ತೇವೆನ್ನುವುದು ಅಸಹಜ. ಈಗ ನಮಗೆ ಲಾಭ ಬಂದಂತೆ ತೋರಿದರೂ, ಅದು ಲಾಭವಲ್ಲ; ಆ ಲಾಭಕ್ಕೆ ಬೆಲೆಯಿಲ್ಲ. ಈಗ ನಮ್ಮಲ್ಲಿರುವ ಚಿನ್ನವನ್ನು ಮಾರುವುದು ನಷ್ಟವೇ ಹೊರತು ಲಾಭವಲ್ಲ.

ಈ ಚಿನ್ನದ ಸೋರುವು ಒಂದು ದೊಡ್ಡ ರಾಷ್ಟ್ರೀಯ ಕಂಟಕ. ನಮ್ಮಲ್ಲಿರುವ ಚಿನ್ನವನ್ನು ಪರದೇಶಗಳವರಿಗೆ ಮಾರಿ ಲಾಭ ಹೊಂದಬಹುದಾದ ಸಂದರ್ಭಗಳು ಹಲವಿವೆ. ಆದರೆ ಈಗ ಬಂದೊದಗಿರುವ ಸಂದರ್ಭವು ಅಂತಹುದಲ್ಲವೆಂದು ನನ್ನ ಅಭಿಪ್ರಾಯ. ಹಿಂದೂದೇಶದ ಆರ್ಥಿಕ ಸ್ಥಿತಿಯನ್ನು ಚೆನ್ನಾಗಿ ಅರಿತ ಅರ್ಥಶಾಸ್ತ್ರಜ್ಞರೆಲ್ಲರೂ ಇದೇ ಅಭಿಪ್ರಾಯವುಳ್ಳವರಾಗಿದ್ದಾರೆ.

ಆದ್ದರಿಂದ ನಮ್ಮಲ್ಲಿರುವ ಅಲ್ಪ ಸ್ವಲ್ಪ ಚಿನ್ನವನ್ನು ಸೋರಿ ಹೋಗದೆ ರಕ್ಷಿಸಿಕೊಳ್ಳೋಣ.

ಈಗ ಇಂಗ್ಲೆಂಡಿನಲ್ಲಿ ಚಿನ್ನದ ಅವಶ್ಯಕತೆಯು ಬಹಳವಾಗಿದೆ. ಆದ್ದರಿಂದ ನ್ಯಾಯಾನ್ಯಾಯಗಳ ಗಮನವಿಲ್ಲದೆ ನಮ್ಮಲ್ಲಿರುವ ಚಿನ್ನವೆಲ್ಲವನ್ನೂ ಸೂರೆಗೊಳ್ಳಲು ಇಂಗ್ಲೆಂಡು ಕಾದು ನಿಂತಿದೆ, ಇದಲ್ಲದೆ, ನಾವು ಈಗ ಇಂಗ್ಲೆಂಡಿಗೆ ಯಾವ ವಿಧವಾದ ಸಹಾಯವನ್ನೂ ಮಾಡಲು ಸಿದ್ಧರಾಗಿಲ್ಲ. ಆದ್ದರಿಂದ ಭಾರತೀಯರು ಒಂದು ಚಿಕ್ಕಾಸಿನಷ್ಟು ಚಿನ್ನವನ್ನು ಸಹ ಯಾರಿಗೂ ಮಾರಬಾರದೆಂಬುದೇ ನನ್ನ ವಿನಂತಿ.

ಶ್ರೀ ಬಜಾಜರು ತಮ್ಮ ಈ ಸ್ಫೂರ್ತಿದಾಯಕವಾದ ವಿನಂತಿಯಲ್ಲಿ ಈಗ ಭಾರತ ದೇಶದ ಮುಂದೆದ್ದು ನಿಂತಿರುವ ದೊಡ್ಡ ರಾಷ್ಟ್ರೀಯ ಕಂಟಕವಾದ ಸುವರ್ಣ ಸಮಸ್ಯೆಯನ್ನು ಬಿಡಿಸಿ ಹೇಳಿದ್ದಾರೆ. ಈ ವಿನಂತಿಯನ್ನು ಓದಿದ ಅನೇಕರಿಗೆ ರೂಪಾಯಿಯ ಬೆಲೆ ಹದಿನಾರಾಣೆ. ಆ ಬೆಲೆ ಹೇಗೆ ಇಳಿದು ಹೋಗುತ್ತದೆಂದು ಅನೇಕರು ಕೇಳಬಹುದು. ಸಕಲ ಕಾಲಗಳಲ್ಲಿಯೂ ರೂಪಾಯಿಗೆ ಹದಿನಾರಾಣೆಯೇ ಚಲಾವಣೆ ಇಲ್ಲಿರುವುದಾದರೂ, ರೂಪಾಯಿಯ ಬೆಲೆಯು ತಗ್ಗಿದ್ದು ಜನರಿಗೆ ಗೊತ್ತಾಗುವುದಿಲ್ಲ. ಪದಾರ್ಥಗಳ ಬೆಲೆಯು ಏರಿದ್ದು ಮಾತ್ರ ಜನರಿಗೆ ತೋರುತ್ತದೆ. ಉದಾಹರಣೆಗಾಗಿ, ರೂಪಾಯಿಯ ಬೆಲೆಯು ಈಗ ಅದಕ್ಕಿರುವ ಬೆಲೆಯ ಅರ್ಧದಷ್ಟಕ್ಕೆ ಇಳಿದು ಹೋಯಿತೆಂದು ಭಾವಿಸೋಣ. ಆಗಲೂ ರೂಪಾಯಿಗೆ ಹದಿನಾರಾಣೆಯೇ ಚಲಾವಣೆಯಲ್ಲಿರುವುದಾದರೂ, ಈ ನಾಲ್ಕಾಣೆ ಬೆಲೆ ಇದ್ದ ಲ್ಯಾಂಪಿನ ಚಿಮಣಿಗೆ ಇದ್ದಕ್ಕಿದ್ದ ಹಾಗೆ ಎಂಟಾಣೆ ಬೆಲೆಯಾಗುವುದು. ನಾವು ಆ ಮೊದಲು ಒಂದು ರೂಪಾಯಿಗೆ ಕೊಳ್ಳುತ್ತಿದ್ದ ಸಾಮಾನಿಗೆ ಎರಡು ರೂಪಾಯಿ ಕೊಡಬೇಕಾಗುವುದು. ಹೀಗಾಗಲು ಕಾರಣವೇನು?

ಅಂತರಾಷ್ಟ್ರೀಯ ಆರ್ಥಿಕ ಪರಿವರ್ತನವು ಚಿನ್ನದ ಮೂಲಕ ನಡೆಯುವುದು. ಅಂದರೆ ನಾವು ಪರದೇಶದವರಿಗೆ ಕೊಡಬೇಕಾದ ಹಣವನ್ನೆಲ್ಲವನ್ನು ಚಿನ್ನದ ರೂಪದಲ್ಲಿ ಕೊಡಬೇಕು. ಪರದೇಶಗಳವರು ನಮಗೆ ಕೊಡಬೇಕಾದ ಹಣವನ್ನು ನಮಗೆ ಚಿನ್ನದ ರೂಪದಲ್ಲಿ ಕೊಡುವರು. ಅರ್ಥಾತ್, ಚಿನ್ನವು ಎಲ್ಲ ದೇಶಗಳಲ್ಲಿಯೂ ಚಲಾವಣೆಯಲ್ಲಿರುವ ನಾಣ್ಯವೆಂದಹಾಗಾಯಿತು.

ನಾವು ನಮ್ಮ ದೇಶದಲ್ಲಿ ಬೆಳ್ಳಿಯ ನಾಣ್ಯಗಳನ್ನು ಉಪಯೋಗಿಸುತ್ತಿರುವೆವಾದರೂ ಪರದೇಶಗಳವರೊಡನೆ ನಾವು ವ್ಯವಹಾರ ನಡೆಸುವಾಗ ಚಿನ್ನದಲ್ಲಿಯೇ ವ್ಯವಹಾರ ನಡೆಸಬೇಕು. ಆದ್ದರಿಂದ ಈಗ ನಮ್ಮ ದೇಶದಲ್ಲಿ ಎಷ್ಟು ರೂಪಾಯಿಗಳು ಚಲಾವಣೆಯಲ್ಲಿವೆಯೋ, ಎಷ್ಟು ನೋಟುಗಳು ಚಲಾವಣೆಯಲ್ಲಿವೆಯೋ ಅಷ್ಟು ಬೆಲೆ ಬಾಳುವ ಚಿನ್ನವು ನಮ್ಮಲ್ಲಿದ್ದರೆ ಆಗ ನಮ್ಮ ರೂಪಾಯಿಗಳಿಗೆ ಬೆಲೆಯುಂಟು. ಏಕೆಂದರೆ ನಮಗೆ ಬೇಕಾದಾಗ ನಾವು ರೂಪಾಯಿಗಳನ್ನೂ, ನೋಟುಗಳನ್ನೂ ನಮ್ಮಲ್ಲಿಟ್ಟುಕೊಂಡು ಚಿನ್ನದಲ್ಲಿ ವ್ಯವಹರಿಸಬಹುದು. ಆದರೆ ನಾವು ಚಿನ್ನವನ್ನೇ ಉಪಯೋಗಿಸುವ [illegible] ಚಿನ್ನದ ಗಟ್ಟಿಯಾಗಿ ರೂಪಾಯಿಯನ್ನೇ, ನೋಟುಗಳನ್ನೇ ಉಪಯೋಗಿಸುತ್ತಿದ್ದೇವೆಂದರ್ಥ. ಹೀಗಿದ್ದರೂ ನಮ್ಮ ರೂಪಾಯಿಗಳಿಗೂ, ನೋಟುಗಳಿಗೂ ಬೆಲೆಯುಂಟು, ಏಕೆಂದರೆ ಅವಕ್ಕೆ ಚಿನ್ನದ ಬೆಂಬಲವಿದೆ' [illegible] ಬದಲು ನಮ್ಮ ಚಿನ್ನವನ್ನೆಲ್ಲಾ ಪರದೇಶಕ್ಕೆ ಸೂ[illegible] ಚಿನ್ನದ ಬದಲು ರೂಪಾಯಿಗಳನ್ನೂ, ನೋಟುಗಳ[illegible] ಕೊಂಡರೆ ಶ್ರೀಯುತ ಬಜಾಜರು ಹೇಳಿದಂತೆ ವ[ಸ್ತುವನ್ನು] ಬಿಟ್ಟು ನೆರಳನ್ನು ಹಿಡಿದುಕೊಳ್ಳಲೆತ್ನಿಸಿದಂತೆಯೇ ಸರಿ.

ಕನ್ನಡ ಸಾಹಿತ್ಯ ಸುಧಾರಣೆ.

(ಕಾರವಾರದಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಶ್ರೀ ಮುಳಿಯ ತಿಮ್ಮಪ್ಪಯ್ಯನವರು ಕೊಟ್ಟ ಭಾಷಣದಿಂದ.)

ಧಾರವಾಡ, ಮೈಸೂರು, ಮಂಗಳೂರುಗಳೆಂಬ ಮೂರು ಪ್ರಾಂತ್ಯಗಳೇ ಕನ್ನಡ ಸಾಹಿತ್ಯದ ಕ್ಷೇತ್ರಗಳು. ಇವುಗಳಲ್ಲಿ ಕ್ರಮವಾಗಿ "ಗೆಳೆಯರ ಗುಂಪು, ಕರ್ಣಾಟಕ ಸಂಘ, ಮಿತ್ರಮಂಡಲಿ.' ಎಂಬ ಮೂರು ನೂತನ ಸಾಹಿತ್ಯ ಸುಧಾರಕ ಸಂಸ್ಥೆಗಳಿವೆ. ಅವುಗಳ ಸದಸ್ಯರೂ ಹೆಚ್ಚಾಗಿ ಪಾಶ್ಚಾತ್ಯ ಪೌರ್ವಾತ್ಯ ಸಂಸ್ಕೃತಿಗಳ ಸವಿಯನ್ನುಂಡು, ಉಣ್ಣುತ್ತಿರುವ ಯುವಕರು. ಅವರಿಗೆ ದರ್ಶನಗಳೆಂದರೆ, ಹೊಸಗನ್ನಡ ಸಾಹಿತ್ಯಕ್ಕೆ ಅತಿ ಗಟ್ಟಿ ಹಾಕಿ ಅಂದವಾದ ಮೋಲ್ಗಟ್ಟನ್ನು ಹಾರಯಿಸಿ ಉದ್ಯೋಗಿಸುತ್ತಿರುವ ಮಹನೀಯರಾದ ಶ್ರೀ ಆಲೂರು ವೆಂಕಟರಾಯರು, ಶ್ರೀ. ಬಿ. ಎಂ. ಶ್ರೀಕಂಠಯ್ಯನವರು, ಶ್ರೀ ಪಂಜೆ ಮಂಗೇಶರಾಯರು. ಈ ಸಂಸ್ಥೆಗಳುಂಟಾಗಿ ಈಗ ಈ ಮಹನೀಯರುಗಳಿಗೂ ಆನಂದವಾಗಿರಬಹುದು. ಕೆಲಸವೂ ಸಂವಾರಿಯಲ್ಲಿ ನಡೆಯುತ್ತಲಿದೆ. ಅದರಿಂದಲೇ ಮೇಲೆ "ಇದು ಕನ್ನಡ ಸಾಹಿತ್ಯದ ಪುಣ್ಯ"ವೆಂದು ಹೇಳಿರುದು, ಇವುಗಳ ಮೂಲಕವಾಗಿಯೂ, ವೈಯಕ್ತಿಕವಾಗಿಯೂ ಕೆಲವು ಮನೋಹರಗಳಾದ ನೂತನ ಕಾವ್ಯಗಳು ಪ್ರಕಟವಾಗಿದ್ದಾವೆ. ಹಲವು ಸಿದ್ಧವಾಗುತ್ತಿವೆ. ಈ ಸಂಸ್ಥೆಗಳ ಉದ್ದೇಶವೂ ಆಯಾ ಕವಿಗಳ ಯೋಗ್ಯತೆಯೂ ಎಂಥದೆಂಬುವುದನ್ನು ಸ್ವಲ್ಪ ವಿವೇಚಿಸುವ.

'ಕವಿಗಳೆಲ್ಲ ಬಣ್ಣಿಸಿಹುದ | ನೋಡುತ್ತಿರುವೆನು |
ಕಪ್ಪೆ ವಿಷನು ಮೊಸಳೆ ರಕ್ಷ | ಹಗೆ ತಿವಗೆ ಹೋಲಿಸಂತೆ|
ಶ್ಲೇಷೆಯಿಂದ ಬರೆವ ಯತ್ನ | ಬೇರೆ ಕಾಣೆನು |
ಕವಿಲೆ ನಿನ್ನ ಪ್ರೀತಿಯ ಎನ್ನ | ಬಾಳಿಗಾಗಲಿ |
ನಿನ್ನ ಬಿಕ್ಕರಿಗೆ ಬರಲಿ | ನಿನ್ನ ಚಿಕ್ಕವೆಸ್ಲೊಳೆರಲಿ |
ಕಾಣಬರುವ ಕವಲಿಗಂತು | ಹಾಡುತ್ತಿರುವೆನು |
ಕಂಡ ಕವಲಿನಂತುಟಲಿದೆ | ಎಂಬುದರಿಯೆನು |'

ಇದು ಶ್ರೀಯುತರಾದ ಕೆ. ವಿ. ಪುಟ್ಟಪ್ಪನವರು ತಮ್ಮ 'ಕೊಳಲ'ಲ್ಲಿ ಬಾರಿಸಿದ ಸಮುದ್ರ ವರ್ಣನೆ ಹಿಂದೆ ಹೇಳಿದ ಸರಳ ಪಕ್ತೆಗಳು ಎಂದು ಸೇರಿವೆಯೆಂಬುವುದನ್ನು ತಾವೇ ನೋಡಬಹುದು. ಬೇರೆ ಅರ್ಥಗಳೊದಗುವ ಪದಗಳನ್ನಿಟ್ಟು, ಶ್ಲೇಷಾಲಂಕಾರದಿಂದ ಹವಿಯೊಡನೆಯೂ ಶಿವನೊಡನೆಯೂ ಸಮುದ್ರವನ್ನು ಹೋಲಿಸುವ ಪದ್ಯಗಳನ್ನು ಹಲವು ಕಾವ್ಯಗಳಲ್ಲಿ ಕಾಣಬಹುದಷ್ಟೆ. ಅಂಥಾ ಶ್ಲೇಷದಿಂದ ಕವಿಯೆಂದರೆ ಒಂದು ಶಬ್ದ ಭಂಡಾರವೆನ್ನಬಹುದಲ್ಲದೆ ಅವನ ನಿಜವಾದ ಉದ್ದೇಶವು ಸಾಧಿಸಿದಂತಾಗುವುದಿಲ್ಲ. ಕವಿತಾ ರಸವನ್ನು ಸುರಿದು ರಸಿಕರನ್ನು ಸಂತಸಗೊಳಿಸುವುದಲ್ಲದೆ ಅದರಲ್ಲಿ ಸಂಸ್ಕೃತಿಯನ್ನುಂಟುಮಾಡುವುದೂ ಕವಿಯ ಉದ್ದೇಶವಾಗಿರಬೇಕಲ್ಲವೆ? ನಿಜವಾದ ಕವಿಗಳೆಂದರೆ ವರ್ಣ್ಯ ವಸ್ತುಗಳಲ್ಲಿ ಐಕ್ಯಗೊಂಡಿರುತ್ತಾರೆ. ಬೇಕಾದರೆ ಕಾಳಿದಾಸನ ಶಾಕುಂತಲ ನಾಟಕವನ್ನು ನೋಡಬಹುದು. ಅವನ ದೃಷ್ಟಿಗೆ ಆಶ್ರಮದಲ್ಲಿರುವ ಓಷಧಿಗಳೆಲ್ಲ ಮನುಷ್ಯ ಸಮಾಜವಾಗಿಯೇ ತೋರುತ್ತವೆ. ಪೂರ್ವದಲ್ಲಿ ಹೇಳಿದಂತೆ ಶ್ಲೇಷದಿಂದ ಬಣ್ಣಿಸುವ ಕವಿ ತನ್ಮಯನಾಗಿರುವುದಿಲ್ಲ. ಅದರಿಂದಲೇ ಶ್ರೀ ಪುಟ್ಟಪ್ಪನವರು ಆ ಕ್ರಮವನ್ನೆಲ್ಲ ಗಳೆದು ತಮ್ಮ ಕವಿಯ ಮನಸ್ಸು ಮುಂದೆ ಸರಳವಾಗಿ ಬಣ್ಣಿಸಿದ್ದಾರೆ. ಇವೀಗ ಹಿಂದಿನ ಸಾಹಿತ್ಯದಲ್ಲಿದ್ದ ನ್ಯೂನತೆಗಳನ್ನು ಬಿಟ್ಟು ಗುಣವನ್ನು ಸ್ವೀಕರಿಸಿ ನೂತನ ಸಾಹಿತ್ಯವನ್ನು ಅಂದವಾಗಿ ಹಬ್ಬಿಸುವ ಕ್ರಮವು. ಹಿಂದಿನವನ್ನೆಲ್ಲ ಬಿಡಬಾರದೆಂಬುವುದನ್ನು "ನುಗ್ಗಿ ಬರುತ್ತಿದೆ" ಎಂಬ ಪದ್ಯದಲ್ಲಿ ಅವರೇ ಹೇಳುತ್ತಾರೆ.

ಮಧುವೆ ಭಾರ ಮುದದ ತಾರ! ನೀನೇ ದೇವದೂತನು
ವರದ ಚಿಂತೆ ಮರೆಯದಂತೆ ಕಳುಹುವನು ವಿಧಾತನು
ಋಷಿಯ ಸಿಂಗರಿಸುತ ಬಾರ
ಪರದ ಬೆಳಕನೆಳೆಗೆ ತಾರ
ನೊಬಗೆ ತವನು ಎಂದು ಸಾರ
ಬಾರ ಶಕ್ತಿದಾಯಕ
ಹಳತ ಕೂಡಿ ಹೊಸತು ಮೂಡಿ ಬಾರಲೆ ಋತುನಾಯಕ

ವಸಂತನು ಹಳತಾದಿ ಉಪವನದಲ್ಲಿರುವ ಹಳೆಯ ತರುಲತೆಗಳನ್ನೇ ಹೊಸತನ್ನಾಗಿ ಮಾಡುವುದಲ್ಲವೆ? ಶ್ರೀ ಪುಟ್ಟಪ್ಪನವರೆಂದರೆ ಶಾಂತಿಕರಾದ ಸರಸ ಕವಿಗಳು. ನಮ್ಮ ಇನ್ನೊಂದು ಪ್ರಾಂತ್ಯದ ಕಾವ್ಯಾಂಶವನ್ನು ಉದಾಹರಿಸುತ್ತೇನೆ.

ಕವಿಯೇ ಕಾವ್ಯ ಸಮಾಧಿಯೊಳೊರಗ್ಗಿ
ಅಮೃತಾನಂದದಮೇತನ ಮೆರೆಯ್ಯ ||
ಗತ ಶತಮಾನದ ಬೇಗೆಗಳ ಬಿಟ್ಟು,
ನೂತನ ಯುಗಗಳ ರೆಂಬೆಗಳಟ್ಟು,
ಜೀವನ ರಸಗಳ ಕಾಂತಳ ಹೀರಿ,
ದಿನ ದಿನಗಳ ಪೂಟಲಿಗಳ ಬೀರಿ,
ಅದ್ಯಂತದ ಕಾಣದ ಹೆಮ್ಮರವಿದು
ತಲೆ ಮೇಗಡೆ ಹಸುರಿನ ಕೊಡೆ ಹಿಡಿಯುವುದು

ಶ್ರೀಯುತ ಕೆ. ಶಂಕರ ಭಟ್ಟರು ಬರೆದಿರುವ ಇನ್ನೂ ಅಚ್ಚಾಗದ 'ಹಣ್ಣು ಕಾಯಿ' ಎಂಬ ಕಾವ್ಯದೊಳಗಿನ 'ಕಾವ್ಯ ಸಮಾಧಿ' ಎಂಬ ಭಾಗದ ಆದಿಪದ್ಯವಿದು. ಕವಿಗಳು 'ಅದ್ಯಂತದ ಕಾಣದ ಹೆಮ್ಮ'ರವೆಂದು ಹೇಳಿರುವ ಪ್ರಪಂಚ ಸಾಹಿತ್ಯವೃಕ್ಷದ ಬೇರುಗಳನ್ನೂ ರೆಂಬೆಗಳನ್ನೂ ಅದು ಬೆಳೆಯುವ ರೀತಿಯನ್ನೂ ಅದರಲ್ಲಿ ಮೊಳೆದು ಲೋಕದ ಕಣ್ಣಾದಿರನಲ್ಲಿ ಬಿದ್ದು ಪ್ರಪಂಚ ಹಿತವನ್ನೆಸಗುವ ತತ್ತ್ವ ಕವಿತಾ ಕುಸುಮಗಳನ್ನೂ ಅಲಂಕಾರಿಕರಾದ ಕವಿಗಳು ಅಂದವಾಗಿ ವರ್ಣಿಸಿರುತ್ತಾರೆ. 'ಗತ ಶತಮಾನದ ಬೇಗೆಗಳ ಬಿಟ್ಟು, ನೂತನ ಯುಗಗಳ ರೆಂಬೆಗಳಟ್ಟು' ಎಂಬ ಭಾಗದ ಬಿಟ್ಟು, ಇಟ್ಟು ಎಂಬ ಪದಗಳಲ್ಲಿ ಒಂದಿಷ್ಟು ಪಕ್ವತಾ ರೂಪವಾದ ಶ್ಲೇಷವಿರಲೂ ಬಹುದು. ಭಾಷೆಗೆ ಅನ್ವಯಿಸಿದರೆ ಹಿಂದಿನ ಹಳಗನ್ನಡದ ಆ ಸ್ವರೂಪ ಆ ಕಾಲದ ವರ್ಣನಾದಿ ಪದ್ಧತಿಗಳನ್ನು ಬಿಡಬೇಕೆಂದೂ ಇಂದಿನ ಹೊಸಗನ್ನಡದ ಸ್ವರೂಪ, ಇಂದಿನ ನೂತನ ವರ್ಣನಾದಿ ಪದ್ಧತಿಗಳನ್ನು ಇಡಬೇಕೆಂದೂ ಆ ಶ್ಲೇಷದಿಂದ ಉದ್ದೇಶವಾಗಿರಲೂ ಬಹುದು. ಇಂಥ ಶ್ಲೇಷದಲ್ಲಿ ಸವಿ ಇಲ್ಲವೆ? ಮುಂದಿನ ಪದ್ಯವನ್ನು ನೋಡಿರಿ.

ವೇದದಿ ಬೋಧದಿ ಹುತ್ತವ ಕಟ್ಟಿ
ವಾದವು ಕರ್ಮದ ಪೊಟ್ಟುಬುಸುಗುಟ್ಟಿ
ಬೆದರಿಸುತಿರುವುದು ಮಾನವಕೋಟಿ
ಬೆದರುತಲಿರುವುದು ಜಲಿಪಿಲಿ ಗುಟ್ಟಿ
ನಿನ್ನಯ ಕಾವ್ಯ ತಪೋಬಲ ಸುತ್ತಲು
ಯುಗ ಧರ್ಮಗಳೇ ಹೆಣವಿವೆಯತ್ತಲು

ಮತ್ತೊಂದು ಪ್ರಾಂತ್ಯದ ಕವಿತೆಯ ಉದಾತ್ತತೆಯನ್ನು ನೋಡಿರಿ—

ಬಣ್ಣ ಬಣ್ಣದ ಹಕ್ಕಿ ಹೊನ್ನ ರನ್ನದ ತೋಡ
ನುಂಗನೆಯ ಕಂಪ ಹೂ ತಂಗನೆಯ ತಂಪುದೆಸೆ
ಕಂಗ ಮುಂದೆನ್ನ ಯಾತಾಳ ತಂತಿಯನರಿಯದಂಥ ಸಂತಿಯನು ನೆನೆಸಿ
ಕಂಗ ಕಟ್ಟಲು ಬರೆಸುವವು ಬಂಗಾರಬಡವಿ
ನನ್ನ ನೆತ್ತರು ಅವನ ತಾಳ ಮೇಳವ ಕೂಡಿ
ಧನ್ನ ಆಟದ ಮರವೆ ಮನಸಿಗಾಗುವ ವರೆಗೆ ಏನಿದ್ದರೇನು ನಮಗೆ

ಇದು ಶ್ರೀ. ಅಂಬಿಕಾತನಯದತ್ತರು ಬರೆದ 'ಹಕ್ಕಿಹಂಬಲ'ವೆಂಬ ಕವಿತೆಯ ಮೊದಲನೇ ಪದ್ಯವು. ಇದರ ಉದಾತ್ತ ವಿಚಾರಗಳು ಸ್ವಾಭಾವಿಕವಾಗಿವೆ. ಸ್ವಾತಂತ್ರ್ಯದ ಹೊನಲು ಇವರ ಭಾಷೆಯಲ್ಲಿಯೂ ಕಾವ್ಯ ಮಾರ್ಗದಲ್ಲಿಯೂ ಒಟ್ಟಿಗೆ ಹರಿಯುತ್ತದೆ. 'ಪ್ರಕೃತಿಯಲ್ಲಿ ದೃಶ್ಯಗಳು ಇಂದ್ರಿಯಗ್ರಾಮವನ್ನು ಮೋಹಿಸಲು ಯತ್ನಿಸುತ್ತವೆ ಆದರೆ ಅವು ಬಾಹ್ಯ ಸೌಂದರ್ಯಕ್ಕೆ ಮೋಹಿಸುವುದು ತಕ್ಕುದಲ್ಲ; ನನ್ನ ಮನಸು ಅದರಲ್ಲಿ ಲೀನವಾಗಿ ಆನಂದ ಪಡೆಯದೆ ಬರಿಯ ಬಾಹ್ಯಾಡಂಬರದಿಂದ ಏನೂ ಪ್ರಯೋಜನವಿಲ್ಲ' ಎಂಬುದೆ ಕವಿಗಳ ಅಭಿಪ್ರಾಯವೆಂದು ತೋರುತ್ತದೆ.

ದಿಗ್ದರ್ಶನಕ್ಕಾಗಿ ಇಷ್ಟು ಹೇಳಿದೆನು. ಎಲ್ಲರ ಪ್ರಯತ್ನವೂ ತಂತಮ್ಮ ವೈಶಿಷ್ಟ್ಯವನು ವಿಸ್ತರಿಸುವುದು. ಆನಂದದ ಸಂಗತಿ ಮೊದಲಿನ ಸಾಹಿತ್ಯದಲ್ಲಿ 'ಜೈನ ವೀರಶೈವ ವೈಷ್ಣವ' ಎಂಬ ಮತ ಭೇದವಿದ್ದರೆ ಈಗಿನ ಹೊಸಗನ್ನಡ ಸಾಹಿತ್ಯದಲ್ಲಿ ಅಂತಹ ಕವಲಿನ ಬಿಗಿತಕ್ಕೆ ಎಡೆಯಿಲ್ಲ. ಆಂಗ್ಲ ಭಾಷಾ ಪರಿಚಯದಿಂದೊದಗಿದ ಪಾಶ್ಚಾತ್ಯ ಸಂಸ್ಕೃತಿ ಈಗಿನ ವಾತಾವರಣದಿಂದುಂಟಾದ ರಾಷ್ಟ್ರೀಯ ಭಾವನಾ ಸಂಸ್ಕೃತಿ, ಆತ್ಮವಿಶ್ವಾಸದಿಂದ ನೆಲೆಗೊಂಡ ಶಾಶ್ವತ ಸಂಸ್ಕೃತಿ ಈ ಮೂವ್ವರಿಗಳಿಂದ ಹೆಣೆಯಲ್ಪಟ್ಟು ಇದು ಬಲವಾಗುತ್ತಿದೆ. ಸ್ವಲ್ಪ ಹಿಂದಿನ ಸಾಹಿತ್ಯದಲ್ಲಿ ಈ ಗುಣಗಳೆಲ್ಲ ಇದ್ದಂತೆ ತೋರುವುದಿಲ್ಲ; ಅದರಿಂದಲೇ ಅದು ಒಂದಿಷ್ಟು ಸಡಿಲಾಗಿರುವಂತೆ ತೋರುತ್ತದೆ. ನೃಪತುಂಗನಂತೆ ಈಗಿನವರು 'ಕನ್ನಡಂಗ'ಳನ್ನೆಲ್ಲ ಒಟ್ಟುಗೂಡಿಸಿ ದೇಸಿಯದ್ದಾಗಿ ಮಾತನಾಡುತ್ತಿರುವುದು, ಧೈರ್ಯವನ್ನೂ ಆನಂದವನ್ನೂ ಒದಗಿಸುತ್ತದೆ. ಮೇಲೆ ಹೇಳಿದ ಸಂಘಗಳಿಂದಲೂ ವೈಯಕ್ತಿಕವಾಗಿಯೂ ಪ್ರಕಟಿಸಲ್ಪಟ್ಟ ಕಾವ್ಯಗಳಲ್ಲಿ ಕೆಲಕೆಲವು ಪದ್ಯಗಳು ಇಷ್ಟರಲ್ಲೇ ಬೀದಿಪಾಡಾಗಲೂ ತೊಡಗಿವೆ. ಮೊದಲೊಮ್ಮೆ 'ಎಂದೇದಿವಸವೋ?' ಎಂಬುವುದು ಸಿಂಹಾವಲೋಕನವಾದರೆ ಇಂದು ಹಾಗಳೆಯದು. ಕಾರಣವೇನೆಂದರೆ, ಮೊದಲು ರಾಜಕೀಯಾಧಿಕಾರಿಗಳಂತೆ ಸಾಹಿತ್ಯವೂ ಸಾಂಪ್ರದಾಯಿಕರ ಕೈಯೊಳಗಿನ ಗಂಟೇ ಆಗಿತ್ತು. ಈಗ ಹಾಗಲ್ಲ: ಸಾಹಿತ್ಯವನ್ನೂ ಈ ಪ್ರಜಾ ಸತ್ತಾವಾದಿಗಳು ಪರೀಕ್ಷಿಸತೊಡಗಿದ್ದಾರೆ. ಅದರಿಂದ ಅವುಗಳು ರಸಯುಕ್ತವಾದ ಸಾರ್ವಜನಿಕವಾದ ಜೀವನಾಂಗಗಳೂ ಆಗಬೇಕಾಗಿವೆ.

ರಾ. ಬ.

ವಜ್ರದ ಅಡ್ಡಿಗೆ.

ಈ ಅಡ್ಡಿಗೆಗಳನ್ನು ಅಮೇರಿಕನ್ ಡೈಮಂಡ್ ಎಂಬ ಉಚಿತ ವಜ್ರದ ಕಲ್ಲುಗಳನ್ನು ಇಟ್ಟು ಕೆಂಪು ಯನ್ ಭಂಗಾರದಿಂದ ಕಟ್ಟಿದ ಕಟ್ಟಿದೆ. ಅದರ ಬಣ್ಣವು ಕೆಡದಂತೆ ಸವರನ್ ಭಂಗಾರದ ಬಣ್ಣ ಕೊಟ್ಟಿದೆ. ಈ ಕಲ್ಲುಗಳ ಪ್ರಕಾಶವು ನಿಜವಾದ ವಜ್ರದ ಅಡ್ಡಿಗೆಗೆ ಸರಿಯಾಗಿದೆ. ಇದನ್ನು ನೋಡಿದವರು ೫,೦೦೦ ರೂ.ಗಳು ಕ್ರಯ ಕಟ್ಟುವರು. ಶ್ರೀಮಂತರೂ, ಬಡವರೂ ಉಪಯೋಗಿಸಬಹುದು. ಕ್ರಯ ೧ಕ್ಕೆ ರೂ. ೫–೧[illegible] ಎಂಬ ಗಟ್ಟಿ ಕಟ್ಟಿದ ಭಂಗಾರದ ರಾಬು ೧ಕ್ಕೆ ನಂ. ೧ ರೂ. ೪–೮–೦, ನಂ. ೨ ೩–೮–೦.

ವಿಳಾಸ:— ಕೆ. ಎಸ್. ಬೆನ್ಸನ್ ಅಂಡ್ ಕೊ.,

12—5 ಪೋ|| ನಂ|| 1246, ಮದರಾಸು

ಕೊಡಗಿನ ಸತ್ಯಾಗ್ರಹ ಸಮಾಚಾರ ಸಂಗ್ರಹ.

ಇನ್ನೂ ಕೊಡಗಿನಲ್ಲಿ ದಸ್ತಗಿರಿಗಳು.
ಮೊದಲನೇ ಡಿಕ್ಟೇಟರರಿಗೆ ಆರು ತಿಂಗಳ ಕಠಿಣ ಸಜೆ.
ಮಹಿಳೆಯರ ದೃಢ ಪ್ರತಿಜ್ಞೆ.
ವೀರರಾಜೇಂದ್ರಪೇಟೆಯಲ್ಲಿ ಸ್ತ್ರೀಯರ ದಸ್ತಗಿರಿ.

ಕಳೆದ ಸಾರಿ ಪ್ರಕಟಿಸಿದಂದೀಚೆಗೆ, ದಸ್ತಗಿರಿ ಮಾಡಲ್ಪಟ್ಟ ಶ್ರೀಯುತ ಪಿ. ಎ. ಬೆಳ್ಯಪ್ಪನವರೇ ಮೊದಲಾದ 5 ಜನ ಸತ್ಯಾಗ್ರಹಿಗಳು ತಾ. 22ರಲ್ಲಿ ವಿಚಾರವಾಗಿ ಪ್ರತಿಯೊಬ್ಬರೂ ಆರು ತಿಂಗಳು ಕಠಿಣ ಸಜೆಗೆ ಗುರಿ ಪಡಿಸಲಾದರು. ಆ 5 ಜನ ಸತ್ಯಾಗ್ರಹಿಗಳು ಕಣ್ಣಾನೂರು ಜೈಲಿಗೆ ಒಯ್ಯಲ್ಪಟ್ಟರು.

ಕಳೆದ 23ನೇ ತಾರೀಕಿನಲ್ಲಿ ಗೋಣಿಕೊಪ್ಪಲಲ್ಲಿ 2ನೇ ಡಿಕ್ಟೇಟರಾದ ಶ್ರೀಯುತ ಹೆಚ್. ಆರ್. ಕೃಷ್ಣಯ್ಯನವರೂ ಅವರ ಜೊತೆಯಲ್ಲಿದ್ದ ಶ್ರೀ ಮನೆಯಪಂಡ ತಿಮ್ಮಯ್ಯನವರೂ ದಸ್ತಗಿರಿ ಮಾಡಲ್ಪಟ್ಟರು. ಅದೇ ದಿನ ವೀರರಾಜಪೇಟೆಯಲ್ಲಿ ಶ್ರೀ. ಕಾಳೇಂಗಡ ಚಿಣ್ಣಪ್ಪನವರೂ ದಸ್ತಗಿರಿಮಾಡಲ್ಪಟ್ಟರು

ತಾ. 24ರಲ್ಲಿ ಕೈಕೇರಿ ಗ್ರಾಮದಲ್ಲಿ ಶ್ರೀಯುತ ಜಮ್ಮಡ ಮಾದಪ್ಪನವರೂ ಗೋಣಿಕೊಪ್ಪಲಲ್ಲಿ ಶ್ರೀಯುತರುಗಳಾದ ಕುಪ್ಪಂಡ ಮುದ್ದಪ್ಪನವರು, ಮಚ್ಚಿಯಂಡ ಐಯ್ಯಪ್ಪನವರು ಚೇಂದಂಡ ಚಂಗಪ್ಪನವರು ಮತ್ತು ಕಾಳೇಂಗಡ ಐಯ್ಯಪ್ಪನವರೂ ದಸ್ತಗಿರಿ ಮಾಡಲ್ಪಟ್ಟು ವೀರರಾಜಪೇಟೆಗೆ ತರಲ್ಪಟ್ಟರು. ಅದೇದಿನ ಸಿದ್ದಾಪುರದಲ್ಲಿ ಶ್ರೀಯುತರುಗಳಾದ ಹೆಚ್. ಪಿ. ತಿಮ್ಮಯ್ಯನವರೂ ಮ. ಕಾ. ಕಾಕಮಂಡ ಪೂವಯ್ಯನವರೂ ದಸ್ತಗಿರಿ ಮಾಡಲ್ಪಟ್ಟು ವೀರರಾಜಪೇಟೆಗೆ ಸಾಗಿಸಲ್ಪಟ್ಟರು.

ತಾ. 25ರಲ್ಲಿ ಹುದಿಕೇರಿಯಲ್ಲಿ ಶ್ರೀಯುತರುಗಳಾದ ಚೊಟ್ಟೆಕಾಳಪಂಡ ಅಪ್ಪಣ್ಣನವರೂ ಚಿರಿಯಪಂಡ ಕ. ಕಾಳಪ್ಪನವರೂ ಮತ್ತು ಮಲ್ಲೇಚಿರ ಚಂಗಪ್ಪನವರೂ ದಸ್ತಗಿರಿ ಮಾಡಲ್ಪಟ್ಟು, ವೀರರಾಜಪೇಟೆಗೆ ಸಾಗಿಸಲ್ಪಟ್ಟರು.

ತಾ. 26ರಲ್ಲಿ ಪೋಲೀಸರ ಕೂಟವು ಅಮ್ಮತ್ತಿಯಲ್ಲಿ ನೆರೆದಿತ್ತು. ದಸ್ತಗಿರಿಗಳೇನೂ ನಡೆಯಲಿಲ್ಲ.

ತಾ. 27ರಲ್ಲಿ ವೀರರಾಜಪೇಟೆಯಲ್ಲಿ ಮೀಟಿಂಗು ಇರುವುದೆಂದು ಜನರಿಗೆ ಹೇಳುತ್ತಾ ನೋಟೀಸು ಹಂಚಿಕೊಂಡು ಹೋಗುತ್ತಿದ್ದ ಶ್ರೀಮತಿಯವರುಗಳಾದ ಪಂದ್ಯಂಡ ಸೀತವ್ವನವರೂ, (ಪಂದ್ಯಂಡ ಬೆಳ್ಯಪ್ಪನವರ ಪತ್ನಿ) ಬಿಳ್ಳಾಟಂಡ ಮುತ್ತವ್ವನವರನ್ನೂ ಮತ್ತು ಮುಕ್ಕಾಟಿರ ಬೋಜಮ್ಮನವರನ್ನೂ ಮಾರ್ಕೇಟು ಬಳಿಯಿಂದ ದಸ್ತಗಿರಿ ಮಾಡಿ ಪೋಲೀಸ್ ಸ್ಟೇಶನಿಗೆ ತೆಗೆದುಕೊಂಡು ಹೋದರು. ಇವರ ಸಂಗಡವೇ ನೋಟೀಸು ಹಂಚಿಕೊಂಡು ಹೋಗುತ್ತಿದ್ದ ಮ. ಬಿ. ಜಿ. ಗಣಪಯ್ಯನವರನ್ನು ಸಹ ದಸ್ತಗಿರಿಮಾಡಿದರು. ದಸ್ತಗಿರಿ ಮಾಡುವ ಮೊದಲು ಮುಕ್ಕಾಟಿರ ಬೋಜಮ್ಮನವರ ಕೈಯ್ಯಲ್ಲಿದ್ದ ರಾಷ್ಟ್ರೀಯ ಧ್ವಜವನ್ನು ಪೋಲೀಸಿನವರು ಕಸಿದುಕೊಂಡರು. ಇವರನ್ನು ಸ್ಟೇಷನಿಗೆ ತೆಗೆದುಕೊಂಡು ಹೋಗುವಾಗ ಸುಮಾರು 500 ಜನರು ಸಂಗಡವೇ ಹೋಗಿ ಪೋಲೀಸು ಸ್ಟೇಷನಿನ ಗೇಟು ದಾಟಲು ಬಿಡದ್ದರಿಂದ ಅಲ್ಲಿಯೇ ನಿಂತು, ನಮ್ಮನ್ನು ಸಹ ದಸ್ತಗಿರಿ ಮಾಡಿರೆಂದು ಹೇಳತೊಡಗಿದರು. ಇಲ್ಲ, ಇವರನ್ನು ಇನ್ನು 2 ಗಂಟೆಯನಂತರ ಬಿಟ್ಟುಬಿಡುತ್ತೇವೆಯೆಂದು ಸರ್ಕಲ್ ಇನ್‌ಸ್ಪೆಕ್ಟರವರು ಹೇಳುವಾಗ ಹಾಗೆಯೇ ನಮ್ಮನ್ನೂ ಸಹ ಮಾಡೆಂದು ಹೇಳಿದರು ಮತ್ತೂ ಒಳಗೆ ಹೋಗಲು ಬಿಡದ್ದರಿಂದ ಜಯಘೋಷವನ್ನು ಮಾಡಿ ಹಿಂತಿರುಗಿದರು.

ಮೇಲೆ ಕಾಣಿಸಿದವರ ವಿಚಾರಣೆಯು ನಡೆದು ಸತ್ಯಾಗ್ರಹಿಯಲ್ಲದ ಕಾಳೇಂಗಡ ಐಯ್ಯಪ್ಪನವರು 144ನೇ ಸೆಕ್ಷನಿನ ಪರಿಚಯ ನನಗೆ ಗೊತ್ತಿಲ್ಲದೆ ಜಯಘೋಷ ಮಾಡಿದರು ಎಂಬ ಕಾರಣ ಬಿಡುಗಡೆ ಮಾಡಿಸಿಕೊಂಡು ಹೋದರು. ಮಚ್ಚಿಯಂಡ ಐಯ್ಯಪ್ಪನವರಿಗೂ, ಕುಪ್ಪಂಡ ಮುದ್ದಪ್ಪನವರಿಗೂ ಮಲ್ಲೇಚಿರ ಚಂಗಪ್ಪನವರಿಗೂ ಚಿಕ್ಕವರಾದ ಕಾರಣ ನಾಲ್ಕು ತಿಂಗಳ ಪ್ರಕಾರವೂ, ಬಾಕಿಯವರಿಗೆ ಆರಾರು ತಿಂಗಳು ಕಠಿಣ ಸಜೆ ವಿಧಿಸಲಾಗಿದೆ.

ಜಮ್ಮಡ ಮಾದಪ್ಪನವರ, ಹೆಚ್. ಆರ್. ಕೃಷ್ಣಯ್ಯನವರ ಮತ್ತು ಮನೆಯಪಂಡ ತಿಮ್ಮಯ್ಯನವರ ಜಡ್ಜಮೆಂಟಿನ ವಿಷಯ ತಿಳಿದುಬಂದಿರುವುದಿಲ್ಲ.

ಹೆಂಗಸರಿಗೆ ಮೂರು ಮೂರು ತಿಂಗಳ ಸಾದಾ ಸಜೆ ವಿಧಿಸಲಾಗಿ ಮಡಿಕೇರಿ ಜೈಲಿಗೆ ತಾ. 29ರಲ್ಲಿ ತಂದಿರುತ್ತಾರೆ.

ಉಳಿದವರನ್ನು ಈ ದಿನವೇ ಕಣ್ಣಾನೂರಿಗೆ ಕಳುಹಿಸಬಹುದಾಗಿ ತಿಳಿಯಬರುತ್ತದೆ

ಹಿಂದೂದೇಶ.

ಅಹಮದಾಬಾದಿನಲ್ಲಿ ಲಾಠಿ ಪೆಟ್ಟು ತಿಂದಿದ್ದ ಒಬ್ಬ ಹುಡುಗನು ತಾ. 23 ರಲ್ಲಿ ಮೃತನಾದನು.

ಕಳೆದ ವಾರ ದಸ್ತಗಿರಿಯಾದ ಶ್ರೀಯುತ ಸೆನ್ ಗುಪ್ತರನ್ನು ಡಾರ್ಜಿಲಿಂಗ್ ಜೈಲಿಗೆ ಸಾಗಿಸಿರುತ್ತಾರೆ.

ಬೆಂಗಳೂರು ಕಂಟೋನ್ಮೆಂಟಿಗೆ ಪಿಕೆಟಿಂಗನ್ನು ನಿಷೇಧಿಸುವ ಆರ್ಡಿನೇನ್ಸನ್ನು ಜಾರಿಗೆ ತಂದಿರುವರು.

ಕಲಕತ್ತೆ ವಕೀಲರಾದ ಯಲ್. ಯಸ್. ಪ್ರಭು ಎಂಬವರಿಗೆ ಕಾನೂನು ಭಂಗಕ್ಕಾಗಿ ಒಂದು ವರ್ಷ ಕಠಿಣ ಸಜೆ ಮತ್ತು 1000 ರೂ. ಜುಲುಮಾನೆಯಾಗಿದೆ.

ಮಹಾತ್ಮ ಗಾಂಧಿಯವರನ್ನು ಶ್ರೀಮತಿ ಮೀರಾಬಾಯಿಯವರು ವಾರಕ್ಕೊಂದಾವರ್ತಿ ಜೈಲಿನಲ್ಲಿ ಸಂದರ್ಶಿಸಲು ಅನುಮತಿ ದೊರೆತಿದೆಯೆಂತ ತಿಳಿದು ಬಂದಿದೆ.

ಪರದೇಶೀ ಬಟ್ಟೆ ಅಂಗಡಿಗಳನ್ನು ಪಿಕೆಟ್ ಮಾಡಿದುದಕ್ಕಾಗಿ ಸ್ತ್ರೀಯರ ಸಮೇತ 25 ಸ್ವಯಂಸೇವಕರು ಅಹ್ಮದಾಬಾದಿನಲ್ಲಿ ದಸ್ತಗಿರಿ ಮಾಡಲ್ಪಟ್ಟಿರುವರು.

ಕಲ್ಕತ್ತಾ ಪೌರ ಸಭೆಯ ವಿದ್ಯಾ ಇಲಾಖೆಯ ಮುಖ್ಯಾಧಿಕಾರಿ ಮಿ. ಕ್ಷಿತೀಶಚಂದ್ರ ಚಟರ್ಜಿ ಮತ್ತು ಲಾವಣ್ಯಪ್ರಭಾದತ್ ಇವರುಗಳೂ ದಸ್ತಗಿರಿ ಮಾಡಲ್ಪಟ್ಟಿರುವರು.

ಈಗಿನ ಚಳವಳದಲ್ಲಿ ಸ್ತ್ರೀಯರು ಹೆಚ್ಚಾಗಿ ಭಾಗ ತೆಗೆದುಕೊಳ್ಳುತ್ತಾರಾದ ಕಾರಣ ಸಂಯುಕ್ತ ಪ್ರಾಂತ್ಯದಲ್ಲಿ ಸ್ತ್ರೀಯರನ್ನು ಪೋಲೀಸ್ ಕೆಲಸಕ್ಕೆ ಸೇರಿಸಲು ಪ್ರಾರಂಭಿಸಿದ್ದಾರೆ.

ಕಲ್ಕತ್ತಾ ಪಟ್ಟಣದ ಸಮೀಪವಿರುವ ಹೌರಾದಲ್ಲಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಕ್ರಿಂಟನ್ ಎಂಬವರಿಗೆ ರೈಲ್ ಗಾಡಿಯಲ್ಲಿದ್ದಾಗ ಬಾಂಬು ಎಸೆಯಲ್ಪಟ್ಟಿತು. ಅವರಿಗೆ ಏನೂ ಅಪಾಯವಾಗಲಿಲ್ಲ.

ಗತಿಸಿದ ಶ್ರೀಯುತ ದೇಶಬಂಧು ದಾಸರ ಸಹೋದರಿ ಶ್ರೀಮತಿ ಊರ್ಮಿಳಾ ದೇವಿ, ಶ್ರೀಮತಿ ಜ್ಯೋತಿರ್ಮಯಿ ಗಂಗುಲಿ ಮತ್ತು ಶ್ರೀಯುತ ಸೈಲನ್‌ರಾಯಿ ಇವರುಗಳು ದಸ್ತಗಿರಿ ಮಾಡಲ್ಪಟ್ಟಿರುವರು.

ತಾ. 21 ರಲ್ಲಿ ಬೊಂಬಾಯಿಯ 20 ವ್ಯಾಪಾರಿಗಳ ಸಂಸ್ಥೆಗಳು ಸೇರಿ ಮಹಾತ್ಮರ ದಸ್ತಗಿರಿಯನ್ನು ಖಂಡಿಸಿ ಸರಕಾರಕ್ಕೆ ತಿಳಿಸುವ ಬಗ್ಗೆ ಏರ್ಪಡಿಸಿದ್ದ ಮೀಟಿಂಗನ್ನು ಪೋಲೀಸರು ತಡೆಮಾಡಿದ್ದಾರೆ.

ಬನಾರಸ್ ಸೆಂಟ್ರಲ್ ಜೈಲಿನಲ್ಲಿ ಸ್ತ್ರೀ ಖೈದಿಗಳ ಪೈಕಿ ಒಬ್ಬಳು ಚೆನ್ನಾಗಿ ಉಪಚಾರ ಮಾಡಲ್ಪಡಲಿಲ್ಲವೆಂಬ ಕಾರಣದಿಂದ ಅಲ್ಲಿಯ, ಸ್ತ್ರೀ ಖೈದಿಗಳೆಲ್ಲರೂ ಉಪವಾಸ ವ್ರತವನ್ನು ಕೈಕೊಂಡಿರುವರೆಂದು ವರ್ತಮಾನ ಬಂದಿದೆ.

ತಾ. 21 ರಲ್ಲಿ ಡಾಕ್ಟರ್ ರವೀಂದ್ರನಾಥ್ ಟಾಗೂರರು ಮಂತ್ರಿಯವರಿಗೆ ಈಗಿನ ದಬ್ಬಾಳಿಕೆಯನ್ನು ನಿಷೇಧಿಸಿಯೂ ಮತ್ತು ಇಂಥಾ ವಾತಾವರಣದಲ್ಲಿ ರಾಜಕೀಯ ಸುಧಾರಣೆಯ ರಚನೆಯು ಅಸಾಧ್ಯವೆಂತಲೂ ತಂತಿ ಮೂಲಕ ತಿಳಿಸಿದ್ದಾರೆ.

ತಾ. 23ರಲ್ಲಿ ಮದ್ರಾಸ್ ಪಟ್ಟಣದಲ್ಲಿ ಪಿಕೆಟ್ ಮಾಡುತ್ತಿದ್ದ ಒಬ್ಬ ಮಹಿಳೆಯ ಮೇಲೆ ಪಂಪಿನ ಪಿಚಕಾರಿಯಿಂದ ನೀರು ಬಿಟ್ಟು ಅವಳು ಸ್ಮೃತಿ ತಪ್ಪಿ ಬಿದ್ದಳು. ಅವಳ ಸಮೀಪ ಬಂದ ಜನರನ್ನು ಬೆತ್ತದ ಪೆಟ್ಟು ಕೊಟ್ಟು ಪೋಲೀಸರು ಓಡಿಸಿದರು.

ತಾ. 26ರಲ್ಲಿ ಹಿಂದೂಸ್ಥಾನದ ಅನೇಕ ಕಡೆಗಳಲ್ಲಿ 'ಹಿಂದೂಸ್ಥಾನದ ಸ್ವಾತಂತ್ರ್ಯ ದಿನ'ವಾಗಿ ಆಚರಿಸಲು ಪ್ರಯತ್ನಿಸಿದರು. ಈ ಸಂಬಂಧವಾಗಿ ತುಂಬಾ ಜನರ ದಸ್ತಗಿರಿಯೂ ಆಗಿದೆ. ಕಲ್ಕತ್ತಾದಲ್ಲಿ ಮಾತ್ರವೇ 200 ಜನರು ದಸ್ತಗಿರಿಯಾಗಿದ್ದಾರೆ.

ಮದ್ರಾಸಿಗೆ ಹೋಗಿದ್ದ ಮೈಸೂರು ಮಹಾರಾಜರ ಮಾತೃಶ್ರೀಯವರಾದ ಮಹಾರಾಣಿಯವರಿಗೆ ಖಾಯಿಲೆಯಾಗಿ ಮೈಸೂರಿಗೆ ತರಲ್ಪಟ್ಟಿರುವರು. ಇನ್ನೂ ಯೆಂಬಾ ಖಾಯಿಲೆಯಾಗಿಕ್ಕಿಂತಲೂ ಈಗ ಸ್ವಲ್ಪ ವಾಸಿ ಇದೆಯೆಂತಲೂ ತಿಳಿದು ಬಂದಿದೆ.

ಕೋಮಿಲ್ಲಾದಲ್ಲಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿದ್ದ ಮಿ. ಸ್ಟಿವೆನ್ಸರನ್ನು ಗುಂಡು ಹೊಡೆದು ಕೊಂದರೆಂಬ ಮೊಕದ್ದಮ್ಮೆಗೆ ಗುರಿಯಾಗಿದ್ದ ಇಬ್ಬರು ಯುವತಿಯರಿಗೆ ಜೀವಮಾನವೆಲ್ಲಾ ನೀರಿನ ಮೇಲೆ ಕಳುಹಿಸಲ್ಪಡಬೇಕೆಂಬ ಶಿಕ್ಷೆಗೆ ಗುರಿಪಡಿಸಲ್ಪಟ್ಟಿದ್ದಾರೆ.

ಮಹಾತ್ಮ ಗಾಂಧಿಯವರಿಂದ ಶ್ರೀಮತಿ ಮೀರಾಬಾಯಿಯವರಿಗೆ ಈ ವಾರದ ಪತ್ರದಲ್ಲಿ ಬಾಕಿ ಇದ್ದ ನಿದ್ರೆಯನ್ನು ಮಾಡುತ್ತಿರುವುದಾಗಿಯೂ ಹಗಲು ಹೊತ್ತು ಎರಡು ಗಂಟೆ ನಡೆದಾಡುವುದಾಗಿಯೂ ಸ್ವಲ್ಪ ಓದುತ್ತಿರುವುದಾಗಿಯೂ ತಿಳಿಸಿರುತ್ತಾರೆ.

ರಾಜಮಹೇಂದ್ರಿಯಲ್ಲಿ ಕೋ-ಆಪರೇಟಿವ್ ಸೆಂಟ್ರಲ್ ಬ್ಯಾಂಕ್ ಮೀಟಿಂಗ್ ಒಂದನ್ನು ಪೋಲೀಸ್ ಆಫೀಸರು ತಡೆ ಮಾಡಿರುತ್ತಾರೆ. ಮೀಟಿಂಗ್‌ಗಳನ್ನು ನಡೆಸಕೂಡದೆಂತ 144 ನೇ ಸೆಕ್ಷನ್ ಮೇರೆ ಹುಕ್ಕುಂ ಇದ್ದದ್ದರಿಂದ ಪೋಲೀಸರು ಈ ರೀತಿ ತಡೆದದ್ದಾಗಿದೆ.

ಮದ್ರಾಸ್ ಮುನ್ಸಿಪಾಲಿಟಿಯ ನೀರಿನ ಗಾಡಿಗಳನ್ನೂ, ನೀರನ್ನೂ ಸತ್ಯಾಗ್ರಹಿಗಳ ಮೇಲೂ, ಜನರ ಗುಂಪಿನ ಮೇಲೂ ನೀರು ಹಾರಿಸಲು ಪೋಲೀಸಿನವರು ಉಪಯೋಗಿಸಿದ್ದನ್ನು ಮದ್ರಾಸ್ ಮುನ್ಸಿಪಲ್ ಮೀಟಿಂಗಿನಲ್ಲಿ ಖಂಡಿಸಿ ಠರಾವು ಪಾಸಾಯಿತು.

ಈ ವರೆಗೆ ಪೋಲೀಸಿನವರು ಒಬ್ಬರಿಬ್ಬರು ಇದ್ದಾಗಲೂ ಮತ್ತು ಹೆಚ್ಚು ಜನರು ಸೇರಿದಲ್ಲಿ ಸಹ ಅವಶ್ಯವಿಲ್ಲದಿದ್ದಾಗ ಸಹ ಲಾಠಿಯನ್ನು ಉಪಯೋಗಿಸುವುದು ಕಾನೂನಿಗೆ ವಿರೋಧವೆಂತ ಮದ್ರಾಸಿನ ಪ್ರಮುಖ ವಕೀಲರುಗಳು ಜಾಹೀರಾತು ಪತ್ರವೊಂದನ್ನು ಹೊರಡಿಸಿದ್ದಾರೆ.

ಮಧ್ಯ ಪ್ರಾಂತ್ಯದ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಎಲ್ಲಾ ಶಾಲೆಗಳಲ್ಲೂ ಕೈನೂಲು ಮತ್ತು ಕೈಮಗ್ಗದ ಕೈಗಾರಿಕೆಯನ್ನು ಕಡ್ಡಾಯವಾಗಿ ಕಲಿಸಬೇಕೆಂಬ ಠರಾವು ಮತ್ತು ಎಲ್ಲಾ ಭೂಕಂದಾಯವೂ ಪಟ್ಟು ಗೇಣಿ ಸಹ ಅರ್ಧದಷ್ಟು ಇಳಿಸಲ್ಪಡಬೇಕೆಂಬ ಠರಾವು ಸಹ ಪಾಸಾಗಿದೆ.

ಅಲ್ಲಹಾಬಾದಿನಲ್ಲಿ ಒಬ್ಬ ಕ್ರಾಂತಿಕಾರಿಯು ಇರುವನಾಗಿ ತಿಳಿದು ಒಬ್ಬಳು ಏರಿಷ್ ಮಹಿಳೆಯು ಇದ್ದ ಮನೆಯನ್ನು ಪ್ರವೇಶಿಸುವಾಗ ಅಲ್ಲಿದ್ದ ಕ್ರಾಂತಿಕಾರಿಯು ರಿವಾಲ್ವರಿನಿಂದ ಗುಂಡು ಹಾರಿಸತೊಡಗಿದನು. ಆದರೂ ಅವನನ್ನೂ ಏರಿಷ್ ಮಹಿಳೆಯನ್ನೂ ಸಹ ದಸ್ತಗಿರಿ ಮಾಡಿದ್ದಾರೆ.

ಸ್ವಾತಂತ್ರ್ಯ ದಿನವನ್ನಾಚರಿಸುವ ಪ್ರಯುಕ್ತ, ಮದ್ರಾಸಿನಲ್ಲಿ ಮಾಜಿ ಕೌನ್ಸಿಲ್ ಮೆಂಬರಾದ ಶ್ರೀಯುತ ಸಿ. ಎನ್. ಮುತ್ತುರಂಗ ಮೊದಲಿಯಾರ್‌ರವರು ಮೆರವಣಿಗೆ ತೆಗೆದುಕೊಂಡು ಹೋಗಲು ಏರ್ಪಾಡು ಮಾಡಿದ ಕಾರಣ, ಅವರು ಕಳೆದ 26 ನೇ ತಾ. ನಲ್ಲಿ ದಸ್ತಗಿರಿ ಮಾಡಲ್ಪಟ್ಟರು.

ಇದೇ ರೀತಿ ಬೊಂಬಾಯಿಯ ಹಲವು ಕಡೆಗಳಲ್ಲಿ ಸ್ವಾತಂತ್ರ್ಯ ದಿನ ಆಚರಣೆಯ ಏರ್ಪಾಡುಗಳೆಲ್ಲವೂ ಪೋಲೀಸಿನವರಿಂದ ಭಗ್ನಮಾಡಲ್ಪಟ್ಟವೆಂದು ತಿಳಿದು ಬಂದಿದೆ.

ಈಗಿನ ರಾಜಕೀಯ ಪರಿಸ್ಥಿತಿಯ ಕುರಿತು ಮತ್ತು ಮುಂದೆ ಏನು ಮಾಡಬೇಕೆಂಬುದನ್ನೂ ಚರ್ಚಿಸಲು ಕಾಂಗ್ರೆಸ್ ಚಳವಳಕ್ಕೆ ಸೇರದವರ ಸಭೆಯೊಂದನ್ನು ಡಿಲ್ಲಿಯಲ್ಲಿ ಪಂಡಿತ ಮದನಮೋಹನ ಮಾಳವೀಯರ ಅಧ್ಯಕ್ಷತೆಯಲ್ಲಿ ಕೂಡಿಸುವ ಬಗ್ಗೆ ದಿವಾನ್ ಚಮನ್‌ಲಾಲ್ ಎಂಬವರು ಆಮಂತ್ರಗಳನ್ನು ಕಳುಹಿಸಿದ್ದಾರೆ.

ಲಕ್ನೋದಲ್ಲಿ ನಡೆದ ಒಂದು ಮುಸಲ್ಮಾನರ ಕಾನ್‌ಫರೆನ್ಸಿನಲ್ಲಿ ಮಂತ್ರಿಯವರು ಮುಸಲ್ಮಾನರ ಹಕ್ಕುಗಳ ಭದ್ರತೆಗೆ ಸಾಕಷ್ಟು ಭರವಸೆ ಕೊಟ್ಟಿಲ್ಲವಾದುದರಿಂದ ದುಂಡು ಮೇಜಿನ ಕಮಿಟಿಗಳನ್ನು ಮುಸಲ್ಮಾನರು ಬಹಿಷ್ಕರಿಸಬೇಕೆಂತ ತೀರ್ಮಾನವಾಗಿದೆ. ಸರಹದ್ದಿನ ಪ್ರಾಂತ್ಯದಲ್ಲಿ ಸರ್ಕಾರವು ನಡೆಸುತ್ತಿರುವ ದಬ್ಬಾಳಿಕೆಯನ್ನೂ ಖಂಡಿಸಿದ್ದಾರೆ.

ಕಳೆದ 25ನೇ ತಾರೀಕಿನಲ್ಲಿ ಕಲ್ಕತ್ತೆಯ ಲಾಯಿಡ್ ಬ್ಯಾಂಕನ್ನು 5 ಜನ ಮಹಿಳೆಯರ ಸಮೇತ 9 ಜನ ಸ್ವಯಂ ಸೇವಕರು ಪಿಕೆಟ್ ಮಾಡಿದುದಕ್ಕಾಗಿ ದಸ್ತಗಿರಿ ಮಾಡಲ್ಪಟ್ಟರು. ಬರ್ರಾ ಬಜಾರಿನಲ್ಲಿ ಇಪ್ಪತ್ತು ಸ್ವಯಂ ಸೇವಕರು ಮೆರವಣಿಗೆಯನ್ನು ಮಾಡಿದುದಕ್ಕಾಗಿ ದಸ್ತಗಿರಿ ಮಾಡಲ್ಪಟ್ಟರು.

ಪೂರ್ವ ಬಂಗಾಳದ ಒಂದು ಗ್ರಾಮದಲ್ಲಿ ಒಂದು ಮೀಟಿಂಗನ್ನು ಚದರಿಸುವಾಗ ಒಬ್ಬ ಪೋಲೀಸ್ ಸಬ್ ಇನ್ಸ್‌ಪೆಕ್ಟರಿಗೂ, ಒಬ್ಬ ಕಾನ್ಸ್‌ಟೇಬಲನಿಗೂ ಜನರು ಹೊಡೆದರೆಂತಲೂ, ಅದಕ್ಕಾಗಿ ಪೋಲೀಸಿನವರು ಜನರ ಮೇಲೆ ಗುಂಡು ಹಾರಿಸಿದರೆಂತಲೂ ಅದರಿಂದ ಎಷ್ಟು ಜನರು ಸತ್ತರು ಯಾ ಘಾಯಪಟ್ಟರು ಎಂಬುದು ತಿಳಿದು ಬಂದಿಲ್ಲವಾಗಿಯೂ ವರ್ತಮಾನವಿದೆ.

ತಾ. 23 ರಲ್ಲಿ ಮದ್ರಾಸ್ ಸರಕಾರವು ಹೊರಡಿಸಿದ ಪತ್ರದಲ್ಲಿ ಹಿಂದೂಸ್ಥಾನದ ಸ್ವದೇಶೀ ಮಾಲುಗಳನ್ನು ಕೊಂಡುಕೊಳ್ಳಬೇಕೆಂಬ ಪ್ರಕಟಣೆಗಳನ್ನೂ ನಿಷಾಪ್ರತಿಷೇಧದ ಕೆಲಸವನ್ನೂ ತಡೆಯುವುದಿಲ್ಲವಾಗಿಯೂ ಆದರೆ ಪಿಕೆಟಿಂಗ್ ಮಾಡಿದರೆ ಜನರ ಗುಂಪು ಸೇರಿ ಪುಂಡಾಗಬಹುದಾದ್ದರಿಂದಲೂ ಪಿಕೆಟಿಂಗ್ ಈಗಿನ ಚಳವಳದ ಅಂಗವಾದ್ದರಿಂದಲೂ ಪಿಕೆಟಿಂಗ್ ಮಾಡಲು ಬಿಡುವುದಿಲ್ಲವಾಗಿಯೂ ತಿಳಿಸಿದ್ದಾರೆ

ಬೆಂಗಳೂರಲ್ಲಿ ದಸ್ತಗಿರಿಯಾಗಿರುವವರ ಪೈಕಿ ಒಬ್ಬ ನಾರಾಯಣಸ್ವಾಮಿ ಎಂಬವನ ಅಣ್ಣನು ತಾನು ತಮ್ಮನ ಪಕ್ಕಿಗೆ ಜಾಮೀನಾಗುವುದಾಗಿ ಹೇಳಿದನು. ಆದರೆ ನಾರಾಯಣಸ್ವಾಮಿಯೇ ಕ್ಷಮೆ ಕೇಳಿಕೊಂಡ ವಿನಹ ಬಿಡಲಾಗುವುದಿಲ್ಲವೆಂತ ಮ್ಯಾಜಿಸ್ಟ್ರೇಟರು ಹೇಳಿದರು. ನಾರಾಯಣಸ್ವಾಮಿ ಕ್ಷಮೆ ಕೇಳಲು ಒಪ್ಪದ್ದರಿಂದ ಆರು ತಿಂಗಳ ಸಜೆಗೆ ಗುರಿಮಾಡಲ್ಪಟ್ಟನು. ಇನ್ನೊಬ್ಬ ಹುಡುಗನಿಗೆ 8 ಛಡಿಪೆಟ್ಟು ಶಿಕ್ಷೆ ವಿಧಿಸಲಾಯಿತು.

ಲಾಠಿಯಿಂದ ಹೊಡೆಯುವುದು ವಗೈರೆ ಹಿಂಸಾಮಯವಾದ ಪೋಲೀಸರ ವರ್ತನೆಯನ್ನು ಖಂಡಿಸುವ ಠರಾವು ಒಂದು ಮದ್ರಾಸ್ ಕೌನ್ಸಿಲಿನಲ್ಲಿ ಚರ್ಚೆಯಾಯಿತು. ಮಿ. ಜೇಮ್ಸ್ ಎಂಬವರು ಕೋಪೋದ್ರೇಕದ ಭಾಷಣ ಮಾಡಿದರು. ಸರ್ಕಾರವು ಜನರ ನಂಬಿಕೆಯನ್ನು ಕಳಕೊಂಡಿದೆಯೆಂತ ಮೊದಲು ಮುಖ್ಯ ಮಂತ್ರಿಯಾಗಿದ್ದ ಡಾಕ್ಟರ್ ಸುಬ್ಬರಾಯನ್ ಮತ್ತು ಇತರರು ಹೇಳಿದರು. ಈ ರೀತಿ ಅ[illegible]ವಾಗಲು ಕಾಂಗ್ರೆಸಿನವರೇ ಕಾರಣವೆಂತ ಸರ್ಕಾರಿ ಮೆಂಬರರು ವಾ[illegible]ದರು.

ಮದ್ರಾಸ್ ಪಟ್ಟಣದಲ್ಲಿ ಆರ್ಡಿನೇನ್ಸ್ ಮೇಲೆ ಮಾಡಿದ್ದಕ್ಕಾಗಿ ಬಾದ್ಯಗಳಾದ ಡಾಕ್ಟರ್ ಪೇಟನ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ನಡೆಯುತ್ತಿದ್ದ ಕೇ. 78 ಯನ್ನು ಹೈಕೋರ್ಟು ತಡೆದು ನಿಲ್ಲಿಸಿದೆ. ಇ[illegible]ರೋಪಿಯನ್ ಬ್ರಿಟಿಷ್ ಪ್ರಜೆಯಾದ್ದರಿಂದ ಯ[illegible]ನ್ ಜಡ್ಜಿಯರಿಂದಲೇ ವಿಚಾರವಾಗಬೇಕೆಂತ [illegible]ರಲ್ಲಿ ಮಾಡಿದ ವಾದಾವನ್ನು ಮ್ಯಾಜಿಸ್ಟ್ರೇಟರು [illegible]ಲ್ಲ. ಅದರ ಮೇಲೆ ಹೈಕೋರ್ಟಿಗೆ ಅಪ್ಪೀ[illegible]ಗಿರುವದಾಗಿದೆ.

ಸ್ನೇಹಭಾವದ ಅವಶ್ಯಕತೆ.

ಇಂಗ್ಲೆಂಡಿನ "ಸ್ಪೆಕ್ಟೇಟರ್" ಎಂಬ ಪತ್ರಿಕೆಯು ಬರೆದಿರುವುದೇನೆಂದರೆ—

ಹಿಂದೀ ಕಾಂಗ್ರೆಸ್ ಸಭೆಯು ಕಾನೂನು ಭಂಗವನ್ನು ಪುನಃ ಪ್ರಾರಂಭಿಸಿದೆ. ಸರ್ಕಾರವು ಕಾಂಗ್ರೆಸನ್ನು ಕಾನೂನಿಗೆ ವಿರೋಧವಾದ ಸಂಸ್ಥೆಯೆಂದು ನಿರ್ಣಯಿಸಿ ಮಹಾತ್ಮ ಗಾಂಧಿಯವರನ್ನು 1827ನೇ ಇಸವಿಯ ಒಂದು ಕಾನೂನಿನ ಮೇರೆ ಸೆರೆ ಹಿಡಿದಿದೆ. ಸಂಯುಕ್ತ ಪ್ರಾಂತ್ಯ ಮತ್ತು ಸರಹದ್ದಿನ ಪ್ರಾಂತ್ಯದಲ್ಲಿ ಪ್ರತ್ಯೇಕ ಜಾರಿ ಮಾಡಿದ್ದ ಆರ್ಡಿನೇನ್ಸುಗಳನ್ನು ಬಿಟ್ಟು ಹಿಂದೂಸ್ಥಾನಕ್ಕೆ ವ್ಯಾಪಕವಾಗುವಂತೆ ಮಾಡಿದೆ. ಈ ಕಾನೂನುಗಳಿಂದ ಯಾವ ಮನುಷ್ಯನನ್ನೇ ಆಗಲೀ, ಒಡನೆ ಸಂಶಯದಿಂದ ವಾರಂಟಿಲ್ಲದೆ ಹಿಡಿದು ಬಂದೀಖಾನೆಯಲ್ಲಿ ಇಡಬಹುದು. ಹಿಂದೂಸ್ಥಾನದ ಪ್ರತಿಯೊಬ್ಬ ಪ್ರಜೆಯ ಸ್ವಾತಂತ್ರ್ಯವೂ ಪೋಲೀಸರ ಕೈಯಲ್ಲಿದೆ. ಅವರು ಇಷ್ಟ ಪಟ್ಟರೆ ಯಾವ ಸ್ವಾತಂತ್ರ್ಯವನ್ನಾದರೂ ಎಷ್ಟರ ಮಟ್ಟಿಗಾದರೂ ಕತ್ತರಿಸಬಹುದು.

ಈ ಕಾನೂನುಗಳನ್ನು ಮಾಡಿಕೊಳ್ಳಲು ಎಷ್ಟೇ ಅವಶ್ಯವಿರಲಿ—ಅವುಗಳನ್ನು ಹೊರಡಿಸಿದಕ್ಕೆ ವ್ಯಸನ ಪಡದೆ ಇರಲು ಸಾಧ್ಯವಿಲ್ಲ. ಹೇಗೂ ಕಡೆಯಲ್ಲಿ ಬಲವಾಗಿ ಆಕ್ಷೇಪಯು ಪ್ರಾರಂಭವಾಯಿತೆಂಬ ತೃಪ್ತಿಯು ಮುಂದಾಲೋಚನೆ ಇಲ್ಲದೆ ಉಂಟಾಗುವುದಾಗಿದೆ. ಇಂಥಾ ಬಲವಾದ ಆಕ್ಷೇಪಯು ಹೊರಟಿತೆಂತ ಸಂತೋಷ ಪಟ್ಟರೆ ಅನ್ನತ್ತು ಕೋಪೋದ್ರೇಕಕ್ಕೆ ಕಾರಣವಿದೆ. ಇಂಥಾ ಅತ್ಯಂತ ಅತೃಪ್ತಿಕರವಾದ ಸ್ಥಿತಿಯನ್ನು ವೈಸರಾಯರ ಕೌನ್ಸಿಲು ಕ್ಷಣೀಕರಿಸಲಾರರೆಂತ ನಂಬುತ್ತೇವೆ. ಪ್ರತಿಯೊಬ್ಬ ವ್ಯಕ್ತಿಯ ಸ್ವಾತಂತ್ರ್ಯವು ಕಾನೂನು ಮೇರೆ ಕಾದಿಡಲ್ಪಟ್ಟು ಮತ್ತು 'ವಿಚಾರ ವಿಲ್ಲದೆ ಸಜವಿಲ್ಲ' ವೆನ್ನುವ ಹಕ್ಕು ಇರುವ ಜನಾಂಗದ ಜವಾಬ್ದಾರಿ ಇರುವ ಪ್ರತಿಯೊಬ್ಬನಿಗೂ ಹಿಂದೂಸ್ಥಾನದ ಪೋಲೀಸಿನವರು ಯಾವನನ್ನೇ ಆಗಲೀ ವಿಚಾರವಿಲ್ಲದೆ ಗುಮಾನಿ ಮೇರೆ ಜೈಲಿನಲ್ಲಿ ಇಡಬಹುದೆಂಬುವುದನ್ನು ನೋಡಿ ಅಸಹ್ಯವೆನಿಸದಿರಲಾರದು. ಈ ಹೊಸ ಕಾನೂನುಗಳ ಪರಿಣಾಮವು ಅತ್ಯಂತ ಹಾನಿಕರವಾಗದೆ ಇರದು. ಕಾಂಗ್ರೆಸ್ಸಿನ ಬಲವು ಅಂತ್ಯದಲ್ಲಿ ಮುರಿಯಲ್ಪಡಬಹುದು. ಆದರೆ ಇನ್ನಷ್ಟು ದೇಶದ ವಿರೋಧವು ಹೆಚ್ಚುವುದು ಖಂಡಿತ. ಮೋಡರೇಟುಗಳು ಸಹ ಎಕ್ಸ್‌ಟ್ರೀಮಿಸ್ಟ್ ಆದಾರು. ಮ. ಗಾಂಧಿಯವರ ಗೌರವವು ಹಳ್ಳಿಗಾಡು, ಇಂಡಿಯಾದಲ್ಲೂ ಸಕಲ ಕಡೆಯಾದ ಏಕಾಏಕಿ ಬಲವಾದೀತು. ದಂಗೆಗಳು ತಕ್ಷಣವಾಗಿ ಹೆಚ್ಚಾಗಬಹುದು. ಈಗಾಗಲೇ ಪ್ರಾರಂಭವಾಗಿದೆ. ಯುದ್ಧದ ಭಾಷೆಯು ಉಪಯೋಗಿಸಲ್ಪಡುತ್ತಿದೆ. ಯುದ್ಧದ ಕಾರ್ಯಗಳೂ ಹಲವು ಕಡೆ ನಡೆಯುತ್ತಿದೆ. ಈ ಸಂಬಂಧವಾಗಿ ಒಂದು ಎಚ್ಚರ ಕೊಡಬೇಕಾಗಿದೆ. ಇಂಡಿಯನ್ ನ್ಯಾಶನಲ್ ಕಾಂಗ್ರೆಸನ್ನು ಮುರಿಯಬಹುದೆಂತಾಗಲೀ ಅದನ್ನು ಗಣನೆಗೆ ತೆಗೆದುಕೊಳ್ಳಬೇಕಾದದ್ದೇ ಇಲ್ಲವೆಂತಾಗಲೀ ಹೇಳಿದರೆ ಕಳೆದ 40 ವರ್ಷಗಳ ವಿದ್ಯಮಾನಗಳನ್ನು ಮರೆಯಬೇಕಾಗಿದೆ. ಕಾಂಗ್ರೆಸಿನ ಬಲವನ್ನು ಅನೇಕ ವೇಳೆ ಉತ್ಪ್ರೇಕ್ಷಿಸುತ್ತಾರೆ. ಬಹು ಕಡಮೆ ಸಂಖ್ಯೆಯ ಕೋಮಿನವರಾದ ಶೇಕಡ 46ರಷ್ಟು ಜನ ಸಂಖ್ಯೆಯು ಪರವಾಗಿ ಬಂದು ಮೇಜು ಪರಿಷತ್ತಿನ ಅಲ್ಪ ಸಂಖ್ಯಾತರ ಪರವಾಗಿ ಕಾಂಗ್ರೆಸಿಗೆ ಸೇರದವರು ಸಹ ಹಿಡಿತ್ತಿದ್ದರೆಂದರೇ ತಿಳಿಯುತ್ತದೆ. ಹೇಗೂ ದೇಶದ ಬೇರೆ ಎಲ್ಲಾ ಸಂಸ್ಥೆಗಳಿಗಿಂತಲೂ ಹೆಚ್ಚಾಗಿ ಕಾಂಗ್ರೆಸ್ಸೇ ಹೆಚ್ಚಿನ ಸಂಖ್ಯೆ ಜನರ ಅಭಿಪ್ರಾಯವನ್ನು ಸೂಚಿಸುವುದಾಗಿದೆಯೆಂತ ಒಪ್ಪಲೇ ಬೇಕು.

ಲಾರ್ಡ್ ವಿಲ್ಲಿಂಗ್ಡನ್ನರು ಸ್ಥಾನದಲ್ಲಿರುವ ತನ್ನ ಮತವನ್ನು ಗೌರವಿಸಬೇಕನ್ನಬಹುದು. ಆದರೆ ಅಂತಿಮ ಜವಾಬ್ದಾರಿಯು ಪಾರ್ಲಿಮೆಂಟಿನಲ್ಲಿರುವಾಗ್ಯೆ ವೈಸರಾಯರ ಕೆಲಸಗಳನ್ನು ಟೀಕಿಸದೇ ಬಾರದೆನ್ನಕೂಡದು. ವೈಸರಾಯರೇ ಅವರ ಕಲ್ಕತ್ತಾ ಭಾಷಣದಲ್ಲಿ ಯಾವರೀತಿಯಿಂದಲಾದರೂ ಶಾಂತಿ ಸ್ಥಾಪನೆ ಮಾಡಬೇಕೆಂತ ಹೇಳುವಾಗಲೇ ಹಿಂದೂಸ್ಥಾನಕ್ಕೆ ಮಂತ್ರಿಯಾದವರು ಕೊಟ್ಟ ವಾಗ್ದಾನವನ್ನು ನಡೆಸಿಕೊಡಬೇಕೆಂತ ಹೇಳಿದ್ದಾರೆ. ದ.ಕಾರ್ಪೊರೇಷನ್ ವೈಸರಾಯರ ಭಾಷಣವನ್ನು ಕೇಳುವವನು ಒಪ್ಪಿಸಿದ್ದರೆ ಅವರ ಸ್ಥಿತಿಗಳನ್ನು ನೋಡುವವರು ಸಾವಿರಾರು ಜನರು ಇದ್ದಾರೆ. ಕಾನೂನು ಭಂಗದ ಆಂದೋಲನವನ್ನು ದಬ್ಬಾಳಿಕೆಯಿಂದಲಾದರೂ ಅಡಗಿಸಬೇಕು. ಆದರೆ ಮಹಾತ್ಮ ಗಾಂಧಿಯವರು ಹಿಂದೂಸ್ಥಾನಕ್ಕೆ ತಲುಪಿ ಏಳೇ ದಿವಸದಲ್ಲಿ ಅವರನ್ನು ಸೆರೆ ಹಿಡಿದದ್ದಲ್ಲದೆ ಮತ್ತು ಅವರಿಗೂ, ವೈಸರಾಯರಿಗೂ ಭೇಟಿಯಾಗಲು ಬಿಡದಿದ್ದದ್ದಲ್ಲ ... ತುಂಬಾ ಇದೆಯೆಂತ ಕಂಡು ಬಂದಿದೆ. ಕಾಂಗ್ರೆಸಿಗೂ, ಸರ್ಕಾರಕ್ಕೂ ಯುದ್ಧವಿಲ್ಲದೆ ... ಮಾಡಲು ಸಾಧ್ಯವಿದೆಯೋ ಎಂತ ನೋಡಬಹುದಿತ್ತು. ... ಯರ ಅವಸರ ಸರಿಯೇ ಆಗಿರಬಹುದು. ಆದರೂ ... ವರಿಗೆ ಭೇಟಿಕೊಟ್ಟಿದ್ದರೆ ಅದು ಬಲವನ್ನು ಸೂಚಿಸುವ ... ಹೇಡಿತನವನ್ನಲ್ಲ. ಇನ್ನು ಗಾಂಧಿಯವ ... ಸೆರೆಯ ಹೊರಿಂದೆ ಇರುವಾಗ ಪ್ರಯೋಜನವಾ ... ಪ್ರಯೋಜನವಾಗದಿದ್ದರೂ, ಅನಂತರ ಸರ್ಕಾರ ... ದಬ್ಬಾಳಿಕೆಯಿಂದ ಹೆಚ್ಚಿನ ಪ್ರಯೋಜನವಾಗು ...

... ಸರ್ಕಾರವೂ, ಇಂಡಿಯಾ ಸರ್ಕಾರವೂ ಮು ... ಧ್ಯೇಯಕ್ಕೆ ವಿರೋಧವಿಲ್ಲವೆಂತ ಹಿಂದೀ ಜನಾಂಗಕ್ಕೆ ತೋರಿಸಬೇಕಾದದ್ದು ಅತೀ ಅವಶ್ಯವಾಗಿದೆ. ಇದು ಸುಲಭ ಸಾಧ್ಯವಲ್ಲ. ಈಗಾಗಲೇ ಹಿಂದೀಯರಿಗೂ, ಇಂಗ್ಲಿಷರಿಗೂ ವೈಮನಸ್ಸು ಒಂದಷ್ಟು ಕಾಣಬರುತ್ತದೆ. ಬ್ರಿಟನಿನವರು ಹಿಂದೂಸ್ಥಾನವನ್ನು ಬಲದಿಂದಲೇ ಆಳಬಹುದೆಂಬದನ್ನು ಯಾರೂ ಇಲ್ಲವೆನ್ನುವುದಿಲ್ಲ. ಆದರೆ ಇರ್ವಿನ್ ತತ್ವವನ್ನು ಬಿಟ್ಟು ಹೊಸ ತತ್ವವನ್ನು ಅವಲಂಭಿಸಿರುವುದರಿಂದ ರಾಷ್ಟ್ರೀಯ ಜಾಗೃತಿಯನ್ನು ಕೆನಡಾ, ದಕ್ಷಿಣ ಆಫ್ರಿಕಾ, ಐರ್ಲ್ಯಾಂಡಿನಲ್ಲಿ ಸಹ ಅಸ್ಯೋಸ್ಯತೆಗೆ ಉಪಯೋಗಿಸಿದ್ದನ್ನು ಹಿಂದೂಸ್ಥಾನದಲ್ಲಿ ಉಪಯೋಗಿಸಲು ಸಾಧ್ಯವಾದೀತೋ ಎಂಬುದೇ ಸಂಶಯ. ಹಿಂದೂಸ್ಥಾನಕ್ಕೆ ಸ್ವರಾಜ್ಯವನ್ನು ಒಂದು ಜಲಸಂಧಿಯ ಆಚೆಯಿಂದ ಕೊಡಲು ಸಾಧ್ಯವಿಲ್ಲ. ಈ ಜಲಸಂಧಿಯನ್ನು ಆಚೆಯಿಂದಲೂ, ಈಚೆಯಿಂದಲೂ ಉಭಯತ್ರರೂ ಕಟ್ಟಿ ಸೇತುವೆಯಿಂದ ಕೂಡಿಸಿದರೇನೇ ಸ್ವರಾಜ್ಯ ಸ್ಥಾಪನೆಯು ಸಾಧ್ಯವಾಗುತ್ತದೆ. ಬಲವಾಗಿ ಎಷ್ಟರ ಮಟ್ಟಿಗೆ ಆಳುತ್ತೇವೋ ಅಷ್ಟೇ ಮಟ್ಟಿಗೆ ದುಂಡು ಮೇಜು ಪರಿಷತ್ತಿನ ಕಾರ್ಯವನ್ನು ಮುಂದುವರಿಸಬೇಕು.

ಗಾಂಧೀಜೀಯವರ ಸೆಕ್ರೆಟರಿಗೆ ಕಠಿಣ ಸಜೆ.

ಅಹ್ಮದಾಬಾದಿನಲ್ಲಿ ಮಹಾತ್ಮಾಜೀಯವರ ಸೆಕ್ರೆಟರಿ ಶ್ರೀಯುತ ಪ್ಯಾರೆಲಾಲ್‌ಯವರಿಗೆ 6 ತಿಂಗಳ ಕಠಿಣ ಸಜೆ ಮತ್ತು 100 ರೂ. ಜುಲ್ಮಾನೆ, ಜುಲ್ಮಾನೆ ಕೊಡಲು ತಪ್ಪಿದರೆ ಮತ್ತೂ ಒಂದುವರೆ ತಿಂಗಳ ಕಠಿಣ ಸಜೆವಿಧಿಸಲಾಗಿದೆ.

ಸ್ತ್ರೀ ಪೋಲೀಸಿನವರು.

ದೆಹಲಿ ಪಟ್ಟಣದ ಸೀನಿಯರ್ ಪೋಲೀಸ್ ಸುಪರಿಂಟೆಂಡೆಂಟರು ಪೋಲೀಸ್ ಕೆಲಸಕ್ಕೆ ಶಿಕ್ಷಿತರಾಗಲು ಯೋಗ್ಯರಾದ ಸ್ತ್ರೀಯರು ತಮಗೆ ಬೇಕೆಂದು ಪ್ರಕಟಪಡಿಸುತ್ತಾರೆ. ಸ್ತ್ರೀ ಪೋಲೀಸಿನವರ ವಿಚಾರವು ಇಂಗ್ಲೆಂಡಿನಲ್ಲಿರುವವರಿಗೆ ಚೆನ್ನಾಗಿ ತಿಳಿದೇ ಇದೆ. ಈ ನಮ್ಮ ದೇಶದಲ್ಲಾದರೋ ಪೋಲೀಸ್ ಕೆಲಸಕ್ಕೆ ಈಗಿನ ವರೆಗೂ ಸ್ತ್ರೀಯರನ್ನು ಎಲ್ಲೂ ನೇಮಕ ಮಾಡಿರಲಿಲ್ಲ. ಈ ಕೆಲಸಕ್ಕೆ ಶಿಕ್ಷಿತರಾಗುವುದಕ್ಕಾಗಿ ಯಾರು ಬರುತ್ತಾರೋ ಅವರಿಗೆಲ್ಲಾ ಯಾತ್ರಿಕರು ಉಳಿಯುವ ಸ್ಥಳಗಳನ್ನೂ ಸ್ತ್ರೀಯರು ವಾಸಮಾಡುವ ಸ್ಥಳಗಳಲ್ಲಿ ವಾಸದ ಮನೆಗಳನ್ನೂ ಮುಫತ್ತಾಗಿ ಕೊಡಲಾಗುವುದೆಂದು ತಿಳಿಸುತ್ತಾರೆ. ಇಂಗ್ಲೆಂಡಿನಲ್ಲಿ ಹೇಗೋ ಹಾಗೇ ಇಂಡಿಯದಲ್ಲೂ ಸ್ತ್ರೀಯರೊಡನೆಯೂ ಮಕ್ಕಳೊಡನೆಯೂ ವ್ಯವಹರಿಸುವುದಕ್ಕೆ ಸ್ತ್ರೀ ಪೋಲೀಸಿನವರನ್ನು ನೇಮಕಮಾಡುತ್ತಾರೆ. ಈ ಕಾರಣದಿಂದ ಈ ನಮ್ಮ ದೇಶದಲ್ಲಿ ಮಾತ್ರವೇ ಅಲ್ಲದೆ ಎಲ್ಲಾ ದೇಶಗಳಲ್ಲೂ ಸ್ತ್ರೀ ಪೋಲೀಸಿನವರ ಸಂಖ್ಯೆಯು ಎಷ್ಟರ ಮಟ್ಟಿಗೆ ಅವಶ್ಯವೋ ಅಷ್ಟರ ಮಟ್ಟಿಗೂ ಇರುವುದು ಬಹಳ ಒಳ್ಳೆಯದು.

ಬಂದೂಕುಗಳು. GUNS.

ಇವೆ ವಿನಾಯಿತಿಯಲ್ಲಿ ಕಡಿಮೆಯಾದವು ಇವುಗಳನ್ನು ಮನೆಯಲ್ಲಿಡಲು ಲೈಸನ್ಸ ಪಡೆಯಬೇಕಾಗಿಲ್ಲ ಯಾರು ಬೇಕಾದರೂ ಯಾರ ಭಯವೂ ಇಲ್ಲದೆ ಕೈಯಲ್ಲಿ ಹಿಡಿದುಕೊಂಡು ತಿರುಗಬಹುದು.

೧೦೦ ರವೆಗಳ ಸಹಿತ ಕ್ರಯ ರೂ ೫—೦—೦.

ಯಂ. ಲಿಯೋ ಅಂಡ್ ಕೋ,

12—5 168 ಚೈನಾ ಬಜಾರ್, ಮದರಾಸು.

ಈ ಗಡಿಯಾರಗಳು ಈ ನಕ್ಷೆಯಲ್ಲಿರುವಂತೆಯೇ ಇರುವವು. ನಮ್ಮ ಸ್ವಂತ ಆರ್ಡರ್ ಮೇರೆ ಸೀಮೆಯಲ್ಲಿ ತಯಾರಿಸಿ ತರಿಸಿರುತ್ತೇವೆ. ಸರಿಯಾಗಿ ಘಂಟೆಯನ್ನು ತೋರಿಸುತ್ತವೆ. ಇದುವರೆಗೂ ಯಾರೂ ಈಗಿನ ಕಡಮೆ ಬೆಲೆಗೆ ತರಿಸಿರುವವರೇ ಇಲ್ಲ. ಆದ್ದರಿಂದ ಬೇಗನೆ ಬರೆದು ತರಿಸಿಕೊಳ್ಳಿರಿ. ನಮ್ಮಲ್ಲಿ ಸ್ವಲ್ಪವೇ ಇರುತ್ತವೆ. ಇವಕ್ಕೆ ಖಾತ್ರಿಯಾದ 3 ವರ್ಷ ಗ್ಯಾರಂಟಿ ಕೊಡುತ್ತೇವೆ. ಕ್ರಯ 1ಕ್ಕೆ ೪—೪—೦.

ವಿಳಾಸ:— ಕೆ. ಎನ್. ಬೆನ್‌ಸನ್ ಅಂಡ್ ಕೋ,

12—6 ಪೋ || ಸಂ || 1246, ಮದರಾಸು.

ಸ್ವದೇಶೀ ಫಿಟೀಲುಗಳು.

ಕ್ರಯ ಸುಲಭ! ಅಂದವಾದ ಮಾಲುಗಳು!!

ಸ್ವಲ್ಪವೇ ಉಳಿದಿವೆಯಾದ ಕಾರಣ ಬೇಕಾದವರು ಒಡನೆ ಆರ್ಡರು ಕಳುಹಿಸಿರಿ. ಕಮ್ಮಿ ಕ್ರಯದ ವಿದೇಶೀ ಫಿಟೀಲುಗಳಿಗೂ, ಮುದ್ದಾಗಿ ನಮ್ಮಿಂದಲೇ ತಯಾರಿಸಲ್ಪಟ್ಟ ಈ ಫಿಟೀಲುಗಳಿಗೂ ಕಾಗೆಗೂ, ಕೋಗಿಲೆಗೂ ಎಷ್ಟರ ವ್ಯತ್ಯಾಸವೋ ಅಷ್ಟು ವ್ಯತ್ಯಾಸವಿದೆಯೆಂದು ತಾವೇ ಒಪ್ಪಿಕೊಂಡಾರೆಂದಿರಿರಿ. ಇನ್ನು ಫಿಟೀಲ್, ವೀಣೆ, ಹಾರ್ಮೋನಿಯಂ ಮುಂತಾದ ಸಂಗೀತ ಸಾಹಿತ್ಯಗಳ ರಿಪೇರಿ ಇತ್ಯಾದಿ ಬಹಳ ಕಮ್ಮಿ ದರದಲ್ಲಿ ಮಾಲುದಾರರ ಮನಸ್ಸು ಬರುವಂತೆ ಮಾಡಿಕೊಡುವೆವು. ಫಿಟೀಲ್ ಹಾರ್ಮೋನಿಯಂ ಇತ್ಯಾದಿ ಕಲಿಯಬೇಕೆಂದಿರುವವರಿಗಂತೂ ಇದೊಂದು ಸುಸಮಯ. ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ.

ಫರ್ಮ್. ವೆಂಕಟ್ರಮಾಚಾರ್ಯ್ ಅಂಡ್ ಸನ್ಸ್,

4—2 ಪೊನ್ನಂಪೇಟೆ, (ದ. ಕೊಡಗು.)

ಸ್ತ್ರೀ ಪುರುಷರ ಪ್ರೀತಿಯ ಮರ್ಮಗಳನ್ನು ಚಿತ್ರಪಟಗಳ ಸಹಿತ ಇದ್ದದ್ದನ್ನು ಇದ್ದ ಹಾಗೆ ತಿಳಿಸುವ

ಸ್ತ್ರೀ ದಾಂಪತ್ಯ ರಹಸ್ಯವೆಂಬ ಮರ್ಮಶಾಸ್ತ್ರ.

ಈ ಪುಸ್ತಕವು ಫ್ರೆಂಚ್, ಹಿಂದೂಸ್ಥಾನಿ ಭಾಷೆಗಳಲ್ಲಿ ಬಹುಕಾಲದಿಂದ ಗುಪ್ತವಾಗಿತ್ತು. ಈಗ ನಾವು ಎಲ್ಲರಿಗೂ ವಿವರವಾಗಿ ತಿಳಿಯುವಂತೆ ಸುಲಭ ಶೈಲಿಯ ಕನ್ನಡ ಭಾಷೆಯಲ್ಲಿ ಭಾಷಾಂತರಿಸಿ ಫೋಟೋಗಳ ಸಹಿತ ಅಂದವಾಗಿ ಮುದ್ರಿಸಿರುತ್ತೇವೆ. ಈ ಪುಸ್ತಕದಲ್ಲಿ ಸ್ತ್ರೀಪುರುಷರಿಗೆ ಬೇಕಾದ ಎಲ್ಲ ಮರ್ಮರಹಸ್ಯಗಳು, ಪುರುಷರು ಸ್ತ್ರೀಯರಲ್ಲಿ ನಡೆದುಕೊಳ್ಳಬೇಕಾದ ಬಗೆ, ಸ್ತ್ರೀಪುರುಷರ ಜಾತಿಯ ಲಕ್ಷಣಗಳು, ಸ್ತ್ರೀಯರಿಗೆ ಬೇಕಾದ ಅನೇಕ ಗುಪ್ತ ವಿಷಯಗಳು, ಸಂಭೋಗದ ಕಾಲ, ಗರ್ಭ ನಿಲ್ಲುವುದು, ಗರ್ಭ ನಿಂತು ಹೋಗುವುದು, ಸಂಭೋಗದಿಂದಾಗುವ ಸಂತೋಷ, ಜನನೇಂದ್ರಿಯಗಳ ವರ್ಣನೆ, ಹಸ್ತ ಪ್ರಯೋಗದಿಂದಾಗುವ ಹಾನಿ, ಗರ್ಭಿಣಿಗೆ ಬೇಕಾದ ಅನೇಕ ಮರ್ಮನಿಯಮಗಳು, ಶಿಶು ಉತ್ಪತ್ತಿ ವಿಧ, ಗುಪ್ತ ವ್ಯಾಧಿಗಳ ಚಿಕಿತ್ಸೆ, ಶಯನ ಗೃಹದ ರಹಸ್ಯನಿಯಮಗಳು, ಮಾನವ ಶರೀರದ ಮರ್ಮಗಳ ವಿವರ, ನಪುಂಸಕತ್ವಕ್ಕೆ ಚಿಕಿತ್ಸೆ, ಇನ್ನೂ ಸ್ತ್ರೀಪುರುಷರುಗಳಿಗೆ ಬೇಕಾದ ಲೀಲಾರಹಸ್ಯಗಳು ಚಿತ್ರಪಟಗಳ ಸಹಿತ ಪ್ರಿಂಟಾಗಿವೆ.

ಕ್ರಯ: ಪುಸ್ತಕ ೧ಕ್ಕೆ ೧ ರೂಪಾಯಿ

The Legal Trading Co.,

12—6 P. B. 243, Madras.

ನೋಟೀಸು.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿಮಿಟೆಡ್, ಇವರ ಆಫೀಸಿನಿಂದ.

ಈ ಬ್ಯಾಂಕಿನ ಜನರಲ್ ಮೀಟಿಂಗು ತಾ. 21—2—1932 ನೇ ಆದಿತ್ಯವಾರ ದಿನ ಮಧ್ಯಾಹ್ನ 1 ಗಂಟೆಗೆ ಮಡಿಕೇರಿಯಲ್ಲಿ ಜಮೀನ್ದಾರರ ಸಂಘದ ಹಾಲ್‌ನಲ್ಲಿ ನಡೆಯುತ್ತದೆ.

ಚರ್ಚಿಸತಕ್ಕ ವಿಷಯಗಳು.

1. ಡೈರೆಕ್ಟರುಗಳ ರಿಪೋರ್ಟು ಮತ್ತು ಲಾಭ ಹಂಚುವಿಕೆ.
2. ಡೈರೆಕ್ಟರುಗಳ ಮತ್ತು ಅಧ್ಯಕ್ಷರ ಚುನಾವಣೆ.
3. ಅಧ್ಯಕ್ಷರ ಅನುಮತಿ ಮೇರೆ ಇತರ ಮುಖ್ಯದ ವಿಷಯಗಳು.

ನಿಮ್ಮ ಸಂಘದಿಂದ ಬ್ಯಾಂಕಿನ ಪ್ರತಿನಿಧಿಯಾಗಿ ಯಾರನ್ನು ಚುನಾಯಿಸಿದ್ದೀರೆಂಬುದನ್ನು ತಾ. 15—2—32ರ ಒಳಗೆ ನಮಗೆ ತಿಳಿಸಬೇಕಾಗಿ ಕೋರಲಾಗಿದೆ.

ಮಡಿಕೇರಿ, ಸಿ. ಯಂ. ವೆಂಕಪ್ಪಯ್ಯ,
ತಾ. 6—1—32. (ಗೌರವ ಕಾರ್ಯದರ್ಶಿ.)

ಬರುವುದು! ಬೇಗನೆ!! ಬರುವುದು!!!

ನಿರೀಕ್ಷಿಸಿರಿ! ಎದುರು ನೋಡಿರಿ!!

ಕರ್ನಾಟಕದಲ್ಲಿ ಸುಪ್ರಸಿದ್ಧ ನಟರಿಂದೊಡಗೂಡಿದ

ಗುರುಸಮರ್ಥ ನಾಟಕ ಮಂಡಳಿಯು

ಬೇಗನೆ ಮಡಿಕೇರಿಗೆ ಬರುವುದು.

ಮೀರಾಬಾಯಿ ಯಾರು?

ಶ್ರೀಮತಿ ಮೀರಾಬಾಯಿ, ಆಂಗ್ಲ ಸ್ತ್ರೀ. ಶ್ರೀಮಂತರ ವಂಶದಲ್ಲಿ ಹುಟ್ಟಿದವಳು. ಆಕೆಯ ತಂದೆಯು ಬ್ರಿಟಿಷ್ ಸೈನ್ಯಾಧಿಪತಿಗಳಲ್ಲೊಬ್ಬನಾಗಿದ್ದನು. ಈಗ್ಗೆ ಹಲವು ವರ್ಷಗಳ ಹಿಂದೆ ನಡೆದ ಯೂರೋಪಿನ ಮಹಾ ಯುದ್ಧದಲ್ಲಿ ಮೀರಾಬಾಯಿಯು (ಆಗ್ಗೆ ಆಕೆಯ ಹೆಸರು ಮಿಸ್ ಸ್ಲೇಡ್ ಎಂದು) ಯುದ್ಧರಂಗದಲ್ಲಿ ಘಾಯ ಹೊಂದಿದ ಸೈನಿಕರಿಗೆ ಔಷಧೋಪಚಾರಗಳನ್ನು ನಡೆಸುವ 'ದಾದಿ' ಯಾಗಿ ಕೆಲಸಮಾಡಿದಳು. ಆ ಯುದ್ಧದ ಕ್ರೌರ್ಯವನ್ನೂ ಹಿಂಸೆಯನ್ನೂ ಕಂಡು ಆಕೆಯ ಅಂತಃಕರಣದಲ್ಲಿ ಬಿರುಗಾಳಿಯೆದ್ದಿತು. ಆಕೆಯ ಮನಶ್ಶಾಂತಿಯು ತಪ್ಪಿತು. ಐರೋಪ್ಯನಾಗರಿಕತೆಯ ಮೇಲೆ ಜಿಗುಪ್ಸೆ ಹುಟ್ಟಿತು.

ಆಕೆಯ ಅಂತರಂಗವು ಅಶಾಂತವಾಗಿದ್ದ ಆ ಸಮಯದಲ್ಲಿ, ಐರೋಪ್ಯ ಸಂತ ಶ್ರೇಷ್ಠರಾದ ರೋಮೈನ್ ರೋಲೆಂಡರು ಮಹಾತ್ಮ ಗಾಂಧಿಯವರ ವಿಷಯವಾಗಿ ಬರೆದಿದ್ದ ಪುಸ್ತಕವೊಂದು ಆಕೆಯ ಕೈ ಸೇರಿ, ಅವಳದನ್ನು ಓದಿದಳು. ಅದನ್ನೋದಿದ ಮೇಲೆ ಅವಳ ಹೃದಯವನ್ನಾಕ್ರಮಿಸಿದ್ದ ಕಾರ್ಮುಗಿಲು ಕಳೆದು ಅರುಣೋದಯವಾಯಿತು. ಮಹಾತ್ಮರ ತತ್ವದ ಬೆಳಕು ಆಕೆಯ ಹೃದಯಾಂಧಕಾರವನ್ನು ನೀಗಿತು. ಮಹಾತ್ಮರಲ್ಲಿ ಭಕ್ತಿ ಹುಟ್ಟಿತು.

ಸಬರಮತಿಯ ಆಶ್ರಮಕ್ಕೆ ಬಂದು ಅಲ್ಲಿ ವಾಸಿಸಲು ಅವಕಾಶವನ್ನು ಬೇಡಿ ಮಹಾತ್ಮಜಿಯವರಿಗೊಂದು ಪತ್ರ ಬರೆದಳು. ಮಹಾತ್ಮರು, ಆಶ್ರಮ ಜೀವನವು ಬಹು ಕಠಿಣವಾದುದೆಂದೂ, ಆಶ್ರಮದಲ್ಲಿರುವುದು ಆಕೆಗೆ ಸಾಧ್ಯವಾಗಲಾರದೆಂದೂ ಉತ್ತರ ಬರೆದಿಟ್ಟರು. ಇದರಿಂದ ಆಕೆಯ ಉತ್ಸಾಹವು ಹಿಂಗಲಿಲ್ಲ. ತನಗೆ ಎಷ್ಟು ತಪ್ಪುವಾದರೂ ಸಂಯೋಗ ಕ್ರಮವಾದಕ್ಕೆ ತಕ್ಕ ಯೋಗ್ಯತೆ ಇನ್ನು ಪಡೆದೇ ತೀರಬೇಕೆಂಬ ಹಠ ಹುಟ್ಟಿತು. ಅಂದಿನಿಂದ ಆಕೆಯು ತನ್ನ ಶ್ರೀಮಂತ ಜೀವನವನ್ನು ತೊರೆದಳು. ಬೆಲೆ ಬಾಳುವ ಬಟ್ಟೆಗಳು ಮುಂತಾದುವನ್ನು ಬಿಸಿಗೆಸೆದಳು; ಆಭರಣಗಳನ್ನು ತ್ಯಜಿಸಿದಳು; ಸರಳ ಜೀವನ ಕ್ರಮಾರಂಭಿಸಿದಳು; ಏಕವಸನವನ್ನಾಶ್ರಯಿಸಿದಳು. ನಂತರ ಗಾಂಧಿಜಿಯವರ ಆಶ್ರಮದ ನಿಯಮಗಳನ್ನು ಆಚರಣೆಗೆ ತರಲು ಆರಂಭಿಸಿದಳು.

ಅಹಿಂಸೆಯೇ ಮಹಾತ್ಮರ ಪ್ರಥಮ ತತ್ವ. ಆ ತತ್ವಾಚರಣೆಯನ್ನಾರಂಭಿಸಿದೊಡನೆಯೇ ಆಕೆಯು ಮಾಂಸಾಹಾರವನ್ನು ಬಿಡಬೇಕಾಗಿ ಬಂತು; ಒಂದು ದಿನದಿಂದ ಅಂಟಿ ಬಂದಿದ್ದ ಆ ಅಭ್ಯಾಸವನ್ನು ಬಿಟ್ಟು ಬಿಟ್ಟಳು. ಸತ್ಯ ನಿಷ್ಠೆಯನ್ನವಲಂಬಿಸಿ ತನ್ನ ಜೀವನವನ್ನು ಪರಿಶುದ್ಧವನ್ನಾಗಿಸಲಾರಂಭಿಸಿದಳು. ಒಂದು ವರ್ಷಕಾಲ ಈ ವ್ರತವನ್ನಾಚರಿಸಿ, ತನ್ನ ಸಾಧನೆಯನ್ನು ವಿವರಿಸಿ ಮಹಾತ್ಮರಿಗೊಂದು ಪತ್ರವನ್ನು ಬರೆದಳು. ತನ್ನನ್ನು ಆಶ್ರಮಕ್ಕೆ ಸೇರಿಸಿಕೊಳ್ಳಲೇಬೇಕೆಂದು ಅವರನ್ನು ಒತ್ತಾಯಪಡಿಸಿದಳು.

ಆಕೆಯ ನಿಷ್ಠೆಯನ್ನೂ, ಮನೋಧಾರ್ಢ್ಯವನ್ನೂ ಕಂಡು ಮಹಾತ್ಮರು ಬೆರಗಾದರು. ಸ್ಲೇಡ್ ಕನ್ಯೆಯ ಅಂತಃಕರಣವು ಪರಿಪೂರ್ಣವಾಗಿದೆ ಎಂಬುದನ್ನರಿತರು. ತಮ್ಮ ಆಶ್ರಮಕ್ಕೆ ಬಂದು ಲೋಕಸೇವಾದೀಕ್ಷೆಯನ್ನು ಕೈಕೊಳ್ಳಲು ಆಕೆಗೆ ಅನುಮತಿ ಕೊಟ್ಟರು.

ಸ್ಲೇಡ್ ಕನ್ಯೆಯು ಸಬರಮತಿ ಆಶ್ರಮವನ್ನು ಸೇರಿದಳು. ಅವಳ ಅಂತಃಕರಣವು ಪರಿಪೂರ್ಣವಾಗಿದ್ದಂತೆ ಅಲ್ಲಿ ಅವಳ ಹೆಸರೂ ಪೂರ್ಣವಾಯಿತು. ಹೊಸ ಜೀವನವನ್ನಾರಂಭಿಸಿದ್ದ ಸ್ಲೇಡ್ ಕನ್ಯೆಗೆ ಹೊಸನಾಮಕರಣವಾಯಿತು. ಅಂದಿನಿಂದ ಮುಂದೆ ಆಶ್ರಮವಾಸಿಗಳು ಆಕೆಯನ್ನು 'ಮೀರಾಬಾಯಿ' ಎಂದು ಕರೆದರು.

ಈಗ್ಗೆ ಸ್ವಲ್ಪ ದಿನಗಳ ಹಿಂದೆ ಆಕೆಯನ್ನೊಬ್ಬರು 'ಮಿಸ್ ಸ್ಲೇಡ್' ಎಂದು ಸಂಬೋಧಿಸಿದಾಗ ಆಕೆಯು 'ಮಿಸ್ ಸ್ಲೇಡ್' ಸತ್ತು ಬಹುಕಾಲವಾಯಿತು; ಈಗ ಇರುವವಳು 'ಮೀರಾಬಾಯಿ' ಎಂದು ಉತ್ತರಕೊಟ್ಟಳೆಂದ ಮೇಲೆ ಆಕೆಯ ಅಂತಃಕರಣದ ಪರಿವರ್ತನವು ಎಂತಹುದಿರಬೇಕು!

ಮೀರಾಬಾಯಿಯು ಆಶ್ರಮವಾಸವನ್ನಾರಂಭಿಸಿದ ದಿನದಿಂದ ಮಹಾತ್ಮರ ಸೇವೆಯನ್ನು ಕೈಗೊಂಡಳು. ಅಂದಿನಿಂದ ಇಂದಿನ ವರೆಗೆ ಆಕೆಯು ತನ್ನ ಸೇವೆಯನ್ನು ನಡೆಸುತ್ತಲೇ ಇದ್ದಾಳೆ. ಇಂದು ಆಕೆಯು ಮಹಾತ್ಮರ ಪ್ರಿಯಶಿಷ್ಯಳು. ಮಹಾತ್ಮರ ಬಾಹಿಕ ಶರೀರದ ಹಿತವೆಲ್ಲಾ ಆಕೆಯ ಕಯ್ಯಲ್ಲಿದೆ. ಮಹಾತ್ಮರಿಗೆ ಆಹಾರ 'ನ್ನ'ವಮಾಡುವವಳು ಅವಳು; ಬಟ್ಟೆಯನ್ನೊಗೆದಿಡುವವಳು ಅವಳು. ಮಹಾತ್ಮರಿಗೆ ದೇಹದ ಸಕಲ ಸೌಕರ್ಯಗಳನ್ನೂ ಸಿದ್ಧಪಡಿಸುವವಳು ಅವಳು. ಮಹಾತ್ಮರು ಸೆರೆಮನೆಗೆ ತೆರಳಬೇಕಾದ ಅವರ ಗಂಟುಮೂಟೆ ಕಟ್ಟುವವಳೂ ಅವಳೇ. ಮಹಾತ್ಮರಿಗೆ ಪ್ರಿಯವಾದ, ಅವಶ್ಯವಾದ ವಸ್ತುಗಳಾವುವೆಂಬುದು ಅವಳಿಗೆ ಗೊತ್ತಾಗಿ ಹೋಗಿದೆ. ಅವಳಿಗೆ ಮಗುವಿನ ಮೇಲಿರುವ ಮಮತೆ ಅವಳಿಗೆ ಮಹಾತ್ಮರ ಮೇಲೆ. ಮಹಾತ್ಮರಿಗೆ ಅವಳಲ್ಲಿ ಪುತ್ರೀ ಪ್ರೇಮ.

ಮಹಾತ್ಮರು ಚಕ್ರಗೋಷ್ಠಿಗೆಂದು ಇಂಗ್ಲೆಂಡಿಗೆ ಹೋದಾಗ, ಮೀರಾಬಾಯಿಯೂ ಮಹಾತ್ಮರನ್ನು ಹಿಂಬಾಲಿಸಿ ಹೋದಳು, ಅವರ ಶರೀರದ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದಳು. ಮಹಾತ್ಮರ ಚಕ್ರಗೋಷ್ಠಿ ಪ್ರಯಾಣದ ಸಿದ್ಧತೆ ಮಾಡಲು, ಮೀರಾಬಾಯಿಯು ಹಲವು ದಿನಗಳು ನಿದ್ದೆ ಕೂಡ ಮಾಡಲಿಲ್ಲ. ಮಹಾತ್ಮರು ಚಳಿಗಾಲಿಯ ಸಂಜೆ ಇಲ್ಲಿದ ಹವಾಗಿನ ವೇಳೆ, ನಿಂತು ಆಲೋಚನಾಪರರಾಗಿ ಬರುತ್ತಿದ್ದಾಗ ಮೀರಾಬಾಯಿಯು ಅವರಿಗೆ ದುಪ್ಪಟಿಯನ್ನು ಹೊದಿಸಿ ಅವರಿಗೆ ಚಳಿ ತಗಲದಂತೆ ನೋಡಿಕೊಳ್ಳುತ್ತಿದ್ದಳು. ಆಕೆಗೆ ಅಷ್ಟೊಂದು ಮಮತೆ ಮಹಾತ್ಮರ ಮೇಲೆ!

ಮಹಾತ್ಮರು ಮೊನ್ನೆ ಸೆರೆಮನೆಗೆ ಹೋಗುವುದಕ್ಕೆ ಮುಂಚೆ, ತಮ್ಮ ಸೆರೆಮನೆಯ ವಾಸಕ್ಕೆ ಬೇಕಾದ ಪದಾರ್ಥಗಳ ಗಂಟು ಕಟ್ಟೆಂದು ಮೀರಾಬಾಯಿಗೆ ಹೇಳಿದರು. ಮಹಾತ್ಮರ ದಸ್ತಗಿರಿಯಾಗುವುದಕ್ಕೆ ಎರಡು ದಿನ ಮುಂಚೆಯೇ ಅವರ ಜೈಲು ಗಂಟು ಮೂಟೆಗಳನ್ನು ಆಕೆಯು ಕಟ್ಟಿಟ್ಟಿದ್ದಳು.

ನಡುರಾತ್ರಿಯಲ್ಲಿ ಮಹಾತ್ಮರ ದಸ್ತಗಿರಿಯಾಗಿ, ಮಹಾತ್ಮರು ಸೆರೆಮನೆಗೆ ಹೋಗಲಣಿಯಾದಾಗ ಮೀರಾಬಾಯಿಗೆ ತಡೆಯಲಾರದಷ್ಟು ದುಃಖ ಬಂತು. ದುಃಖವನ್ನು ತಡೆಯಲಾರದೆ ಮಹಾತ್ಮರನ್ನು ಹಿಡಿದುಕೊಂಡು ಅತ್ತು ಅತ್ತು ತನ್ನ ಕಣ್ಣೀರಿನಿಂದ ಮಹಾತ್ಮರ ಕಾಲು ತೊಳೆದುಬಿಟ್ಟಳು! ಇದನ್ನು ಕಂಡು ಸಮಚಿತ್ತರಾದ ಮಹಾತ್ಮರ ಮನಸ್ಸು ಕರಗಿ ಅಲುಗಿರಬೇಕು.

ಅಂದಿನ ಭೋಗಿಯಾದ ಮಿಸ್ ಸ್ಲೇಡ್ ಇಂದಿನ ತ್ಯಾಗಿಯಾದ ಮೀರಾಬಾಯಿ.

ಅಂದು ಆಕೆ ಶ್ರೀಮಂತೆ; ಇಂದು ಭಿಕ್ಷುಕಿ. ಅಂದು ಆಕೆ ಅಶಾಂತಳು; ಇಂದು ಶಾಂತಳು.

ಇಂಗ್ಲೆಂಡಿನಲ್ಲಿ ಸ್ವದೇಶಿ ಚಳವಳಿ.

(ಶ್ರೀ. ವಿ. ರಾಮಾಚಾರ್ಯ.)

ಇಲ್ಲಿ ಅದೊಂದು ವಾಕ್ಯ; ಅಲ್ಲಿ ಅನೇಕ ಸದ್ದು ಗಳು!—ಬ್ರಿಟಿಷ್ ವಸ್ತುಗಳನ್ನು ಬಹಿಷ್ಕರಿಸಿ ಸ್ವದೇಶೀ ಪದಾರ್ಥಗಳನ್ನೇ ಉಪಯೋಗಿಸಿರೆಂದು ಯಾರಾದರೂ ಬೋಧಿಸುವರೆಂದು ಆಂಗ್ಲರು ಒಂದರೆ ಸಾಕು, ಅವರಿಗಾಗದೇ ಕೋಲಾಹಲ ಹುನಾಸ!—ಇಲ್ಲ, ಅಲ್ಲೋ?—ಇಂಗ್ಲೆಂಡಿನಲ್ಲಿ; ಪದೇ ಪದೇ ಸರಕುಗಳಿಗೆ ಬದಲು ಬ್ರಿಟಿಷ್ ತಯಾರಿಕೆಯ ಸಾಮಾನುಗಳನ್ನೇ ಕೊಳ್ಳಬೇಕೆಂದು ಬೋಧಿಸುವುದು ಸಭ್ಯನಾದ ನಡವಳಿಕೆ. ನಾಗರೀಕತೆಯ ಲಕ್ಷಣ.

ಈಗ ಲಂಡನ್ನಿನಲ್ಲಿ, ಎಲ್ಲಿನೋಡಿದರಲ್ಲಿ 'ಬ್ರಿಟಿಷ್ ಸಾಮಾನುಗಳನ್ನೇ ಕೊಳ್ಳಿರಿ' ಎಂಬ ಜಾಹೀರಾತುಗಳು. ಬೀದಿಗಳಲ್ಲಿ, ಅಂಗಡಿಗಳ ಬಾಗಿಲಿನಲ್ಲಿ, ಅಂಗಡಿಗಳೊಳಗೆ, ರೈಲು ಸ್ಟೇಷನ್‌ಗಳಲ್ಲಿ, ರೈಲುಗಳಲ್ಲಿ, ಮೋಟಾರು ಬಸ್ಸುಗಳ ಮೇಲೆ ಎಲ್ಲೆಲ್ಲೂ ಈ ಜಾಹೀರಾತುಗಳೇ.

ರಾತ್ರಿಯ ಕಾಲದಲ್ಲಿ ಕಣ್ಣನ್ನು ಕೋರೈಸುವ ದೀಪ ಮಾಲಿಕೆಯಲ್ಲಿ 'ಬ್ರಿಟಿಷ್ ಪದಾರ್ಥಗಳನ್ನೇ ಕೊಳ್ಳಿರಿ' ಎಂಬ ಬೋರ್ಡುಗಳು!

ಇಂಗ್ಲಿಷ್ ಜನರು ಆಶ್ಚರ್ಯಸಕ್ತರು. ಪರದೇಶೀ ಸಾಮಾನುಗಳ ವ್ಯಾಪಾರವನ್ನು ತಡೆಗಟ್ಟಿ, ಸ್ವದೇಶೀ ತಯಾರಿಕೆಗಳಿಗೆ ಪ್ರೋತ್ಸಾಹ ಕೊಡುವುದು ಎಷ್ಟು ಅವಶ್ಯಕವೆಂಬುದೂ, ಎಂತಹ ಮಹಾ ಪ್ರಯೋಜನಕಾರಿಯೆಂಬುದೂ, ಅವರಿಗೆ ಗೊತ್ತು.

ಇಂದು ಇಂಗ್ಲೆಂಡಿನ ವಾತಾವರಣವು 'ಸ್ವದೇಶಿ' ಮಯವಾಗಿದೆ. 'ಸ್ವದೇಶಿ' 'ಸ್ವದೇಶಿ' 'ಸ್ವದೇಶಿ' ಎಲ್ಲೆಲ್ಲಿಯೂ ಸ್ವದೇಶಿ!

ಅಕ್ಕಲ್ಪಕಾಲದೊಳಗಾಗಿ, ಈಗ ಇಂಗ್ಲೆಂಡಿನಲ್ಲಿರುವ 'ಸ್ವದೇಶಿ ಸ್ವರ್ಗ'ವು ಇಂಡಿಯದಲ್ಲಿಯೂ ಬರುವುದು!

ಖಾದಿ ಪ್ರಶಂಸೆ.

ಲಂಡನ್ನಿನಲ್ಲಿ ಅನೇಕ ಜನರು, ನಮ್ಮ ಖಾದಿಯ ನೋಟವನ್ನು ಒಬ್ಬರಾಗಿ ಕೊಂಡಾಡಿದರು. ನಾವು ಅಲ್ಲಿಗೆ ಹೋದುದಕ್ಕೊಂದು ಹೊಲಿದದ್ದು ನಮ್ಮ ನಾವೀನ್ಯವಾದ ಖಾದಿಯೂ ದರೂ, ಅದು ಅಲ್ಲಿನ ಸೌಂದರ್ಯೋಪಾಸಕರ ಮನಸ್ಸನ್ನು ಆಕರ್ಷಿಸಿತು.

ನಾವು ತೆಗೆದುಕೊಂಡು ಹೋಗಿದ್ದ ಅಲ್ಲೋರಾದ ಹಳೆಯ ಶಾಲುಗಳನ್ನು ಆದನ್ನು ನೋಡಿ ಅವರು, 'ಈ ಶಾಲು ಎಷ್ಟು ಮುದ್ದಾಗಿದೆ!' ಎಂದು ಹೊಗಳಿದರು.

ನಾಸಿಕ್, ಉಟ್ಟಿದ್ದ ಖಾದಿ ಸೀರೆಯನ್ನು ಹಿಡಿದುನೋಡಿ, 'ಕೈನೂಲಿನಿಂದ ತಯಾರಾದ ಈ ಸೀರೆ ಎಷ್ಟು ಸೊಗಸಾಗಿದೆ' ಎಂದು ಪ್ರಶಂಸಿಸಿದರು. ಯಂತ್ರಗಳಿಂದ ಪದಾರ್ಥಗಳನ್ನು ನೋಡಿ, ಉಪಯೋಗಿಸಿ ಅವರಿಗೆ ಬೇಜಾರಾಗಿ ಹೋಗಿದೆ. ಕೈ ಕೆಲಸದಿಂದ ತಯಾರಾದ ಪದಾರ್ಥಗಳನ್ನವರು ಬಹುವಾಗಿ ಮೆಚ್ಚುತ್ತಾರೆ.

ಹಿಂದೂಸ್ಥಾನದ ಹಳ್ಳಿಗಳು.

ಯಂತ್ರಸಾಮ್ರಾಜ್ಯದಲ್ಲಿ ಮುಂದಾಳಾಗಿದ್ದ ಇಂಗ್ಲೆಂಡು, ಇಂದು ಆ ಯಂತ್ರಗಳ ವಿಷಮಯ ಪಾಶಕ್ಕೆ ಸಿಕ್ಕಿಬಿದ್ದು ನರಳುತ್ತಿದೆ. ಮೂರು ಕೋಟಿ ಬ್ರಿಟಿಷ್ ಕೂಲಿಕಾರರು ನಿರುದ್ಯೋಗಕ್ಕೆ ಬಲಿಯಾಗಿ, ತಿನ್ನಲು ಗತಿಯಿಲ್ಲದೆ, ಅಲೆಯುತ್ತಿದ್ದಾರೆ. ಬೇಕಾದ ಹಿಂದೂ ಹಳ್ಳಿಗಳಲ್ಲಿ, ಅಲ್ಲಿ ಜನರು ಬೇಸಾಯ ನಡೆಸಿಕೊಂಡು ತಮ್ಮ ಜೀವನವನ್ನು ನಡೆಸಿಕೊಳ್ಳುತ್ತಿರುವ ಜೀವನಗಳನ್ನು ಕಂಡು ಅವರು ಕರುಬ ಬೇಕಾಗಿದೆ. ಇಂಗ್ಲಿಷ್ ಜನರಲ್ಲಿ ಉಂಟಾಗಿರುವ ಈ ಜಾಗ್ರತೆಯ ಫಲವಾಗಿ ಕೈಕೆಲಸಗಳ ಮಹತ್ವವೇನೆಂಬುದು ಅವರಿಗೆ ಈಗ ಗೋಚರವಾಗುತ್ತಿದೆ. ಕೈಕೆಲಸದ ಸ್ವಾಭಾವಿಕ ಬೆಲೆಯೇನೆಂಬುದನ್ನವರು ಈಗ ಮನಗಾಣುತ್ತಿದ್ದಾರೆ.

ಖಾದಿಯನ್ನು ನಿರಾಕರಿಸುವ ಮತ್ತು ಚೀನಾಂಬರಗಳ ವ್ಯಾಮೋಹಕ್ಕೆ ಬಿದ್ದು ಖಾದಿಗೆ ಬದಲಾಗಿ ಹಿಂದೂ ದೇಶದ ಮಿಲ್ಲುಗಳ ಬಟ್ಟೆಗಳನ್ನು ಧರಿಸಬೇಕೆಂದು ವಾದಿಸುತ್ತಾ, ಯಂತ್ರಗಳ ಮಹತ್ವವನ್ನು ಹೊಗಳುತ್ತಿರುವವರು, ಯಂತ್ರಗಳ ತವರೂರಾದ ಇಂಗ್ಲೆಂಡು ಈಗ ಯಾವ ವಿಧವಾದ ಕಷ್ಟದಲ್ಲಿ ಸಿಕ್ಕಿಬಿದ್ದಿದೆ ಎಂಬುದನ್ನು ಸೂಕ್ಷ್ಮವಾಗಿ ಪರಿಶೀಲಿಸತಕ್ಕದ್ದು ಅತ್ಯವಶ್ಯಕ.

ಆದ್ದರಿಂದ ನೀವು ಉಪಯೋಗಿಸುವ ಸ್ವದೇಶೀ ಬಟ್ಟೆಯು ಖಾದಿಯೇ ಆಗಿರಬೇಕು. ಹಿಂದೂ ದೇಶದಲ್ಲೆಲ್ಲಾ ಹರಡಿರುವ ೭,೦೦,೦೦೦ ಸಣ್ಣ ಪುಟ್ಟ ಸಂಸಾರಗಳ ಭಾರತೀಯರು ರಾಟೆಯಲ್ಲಿ ನೂತು ಕೈಮಗ್ಗದಲ್ಲಿ ನೇಯ್ಯಬೇಕಾಗಿದೆ.

ನಮ್ಮ ದೇಶದಲ್ಲೆಲ್ಲಾ ಈ ಅಮೌಲ್ಯವಾದ ಹಳ್ಳಿಯ ಕೈಗಾರಿಕೆಯು ಚೆನ್ನಾಗಿ ಬೇರೂರಿದರೆ, ಇಡೀ ಪ್ರಪಂಚವೇ ನಮ್ಮ ದೇಶದ ಸುಖ ಸಂಪತ್ತಿಯನ್ನು ಕಂಡು ಬೆರಗಾಗುವದು.

ಇಂದಿನ ಭಾರತದಲ್ಲಿ ಚಿನ್ನದ ಸೂರೆ.

ಇಂದು ಬಡತನವೇ ಭಾರತ ದೇಶದ ಭಾಗ್ಯ. ಜಗತ್ತಿನ ಇತರ ಎಲ್ಲಾ ದೇಶಗಳಿಗಿಂತಲೂ ಹೀನವಾದ ಆರ್ಥಿಕ ದುರವಸ್ಥೆಯು ನಮ್ಮ ಈ ನಾಡನ್ನು ಮುಸುಕಿದೆ ಎಂಬುದು ನಿರ್ವಿವಾದದ ವಿಷಯ.

ಆದರೆ ಈಗ ಮೂರು ತಿಂಗಳಿಂದ ಹೊನ್ನಿನ ಹೊಳೆ ಹರಿಯುತ್ತಿದೆ. ಇದೇ ರೀತಿ ಚಿನ್ನವು ಇನ್ನು ಸ್ವಲ್ಪ ಕಾಲ ಹೊರ ದೇಶಕ್ಕೆ ಹರಿದು ಹೋಗುತ್ತಿದ್ದರೆ, ಈ ಮೊದಲೇ ಬಡತನದಿಂದ ಬೇಯುತ್ತಿರುವ ಭಾರತ ದೇಶವು, 'ದಿವಾಳಿ' ಸ್ಥಿತಿಗೆ ಬರುವುದೆಂಬುವುದರಲ್ಲಿ ಸಂದೇಹವಿಲ್ಲ.

ಈ ಅದ್ಭುತವಾದ ಚಿನ್ನದ ಸೂರೆಯನ್ನು ಕಂಡ, ಮಹಾತ್ಮ ಗಾಂಧಿಯವರು, ಕಣ್ಣೀರಿಟ್ಟ ಹೋದರು. ಆರ್ಥಿಕ ಸುಸ್ಥಿತಿಯೇ ರಾಷ್ಟ್ರೀಯ ಜೀವನದ ಆತ್ಮವಲ್ಲವೆ. ಚಿನ್ನವೇ ಆರ್ಥಿಕ ಸುಸ್ಥಿತಿಯ ಜೀವಾಳ. ರಾಷ್ಟ್ರ ಗೌರವದ ಆಶ್ರಯದಿಂದಿರುವ ಚಿನ್ನವು ಬಂದರಾಗಲಾರಂಭಿಸಿದ ರಾಷ್ಟ್ರದ ಶಕ್ತಿಯು ಕುಂದುವದು. ಇದನ್ನೆಲ್ಲವನ್ನೂ ಆಲೋಚಿಸಿ ಮಹಾತ್ಮಜೀಯವರು ಬೊಂಬಾಯಿನ ವರ್ತಕ ಪ್ರಮುಖರನ್ನು ಬರಮಾಡಿಕೊಂಡು ಅವರೊಡನೆ ಈ ಮಹತ್ವದ ಸಮಸ್ಯೆಯ ವಿಚಾರವಾಗಿ ಚರ್ಚೆ ನಡೆಸಿ, ಕೊನೆಗೆ ಈ ಚಿನ್ನದ ಸೂರೆಯನ್ನು ತಡೆಗಟ್ಟಬೇಕೆಂದು ಇಡೀ ಭಾರತ ಜನಾಂಗಕ್ಕೆ ಆಗ್ರಹ ಪೂರ್ವಕವಾದ ಒಂದು ವಿನಂತಿ ಮಾಡಬೇಕೆಂದು ನಿಶ್ಚಯಿಸಿದರು. ಅವರು ತಮ್ಮ ಈ ನಿರ್ಣಯವನ್ನು ಕಾರ್ಯರೂಪಕ್ಕೆ ತರುವ ಮುನ್ನವೇ ಕಾರಾಗೃಹಕ್ಕೆ ತೆರಳಬೇಕಾಗಿ ಬಂದಿತಾದುದರಿಂದ ಬೊಂಬಾಯಿನ ಪ್ರಮುಖ ವರ್ತಕರೂ, ಸುಪ್ರಸಿದ್ಧ ರಾಷ್ಟ್ರಭಕ್ತರೂ ಆದ ಶೇಟ್ ಜಮನಾಲಾಲ್ ಬಜಾಜರವರು (ಈಗ ಸೆರೆ ಮನೆಯಲ್ಲಿ ರಾಜಕೀಯ ಖೈದಿಗಳಾಗಿದ್ದಾರೆ) ಮಹಾತ್ಮರ ಅಭಿಪ್ರಾಯವನ್ನು ಮತ್ತು ಈ ಸಂವಾದ ವಿವರಣೆಯ ವಿಚಾರವಾಗಿ ತಮ್ಮ ಅನುಭವವನ್ನೂ ಕೂಡಿಸಿ ಭಾರತ ಜನಾಂಗಕ್ಕೆ ಈ ಕೆಳಗೆ ಕೊಟ್ಟಿರುವ ಸಂದೇಶವನ್ನು ಕೊಟ್ಟಿದ್ದಾರೆ.

ಅಂತ ರಾಷ್ಟ್ರೀಯ ವ್ಯಾಪ್ತಿಯುಳ್ಳ ಸಂಕಟಗಳಲ್ಲಿ ಅಗ್ರಸ್ಥಾನವುಳ್ಳದ್ದು ಚಿನ್ನ. ವಿಶ್ವದ ಎಲ್ಲ ಸರಕುಗಳ ಬೆಲೆಗಿಂತ ಚಿನ್ನದ ಬೆಲೆಯು ದೃಢವಾದದ್ದು. ದೂರಾಲೋಚನೆಯುಳ್ಳ ಯಾವ ಜನಾಂಗವೂ ತನ್ನಲ್ಲಿ ಭಂಡಾರವನ್ನು ಬಂದು ಮಾಡಿಕೊಳ್ಳಲಾರದು.

ಇಂಗ್ಲೆಂಡಿನಿಂದ ಚಿನ್ನವು ಹೊರ ದೇಶಗಳಿಗೆ ಹೋಗಲು ಆರಂಭವಾಯಿತೆಂದು ತಿಳಿದೊಡನೆಯೇ, ಇಂಗ್ಲೆಂಡಿನ ಸರ್ಕಾರದವರು ತಮ್ಮ ದೇಶದಲ್ಲಿದ್ದ ಚಿನ್ನದ ನಿಜವಾದ ಬೆಲೆಯನ್ನು ವ್ಯತ್ಯಾಸಗೊಳಿಸಿ,—ಬ್ಯಾಂಕುಗಳನ್ನೂ ಖಜಾನೆಗಳನ್ನೂ ಮುಚ್ಚಿ—ಹೊರ ದೇಶಕ್ಕೆ ಹೋಗುತ್ತಿದ್ದ ಚಿನ್ನವನ್ನು ತಡೆದುಬಿಟ್ಟರು. ಮುಂದಾಲೋಚನೆಯುಳ್ಳ ಸಕಲರೂ ಈ ಮಾರ್ಗವನ್ನೇ ಅನುಸರಿಸುವರು. ಇಂಡಿಯದಲ್ಲಿ ಈಗ ರಾಷ್ಟ್ರೀಯ ಪ್ರಭುತ್ವವಿದ್ದಲ್ಲಿ ಆ ಸರ್ಕಾರವು ಈ ಚಿನ್ನದ ಸೂರೆಯನ್ನು ತಕ್ಷಣವೇ ನಿಲ್ಲಿಸಿಬಿಡುತ್ತಿತ್ತು. ಆದರೆ ಈಗಿರುವ ಸರ್ಕಾರವು ಕಳೆದ ಮೂರು ತಿಂಗಳಿಂದ ಸುಮಾರೈವತ್ತು ಕೋಟಿ ರೂಪಾಯಿ ಬೆಲೆ ಬಾಳುವಷ್ಟು ಚಿನ್ನವು ಹೊರಗೆ ಹೋಗಲು ಅವಕಾಶ ಕೊಟ್ಟಿದೆ.

ಈ ಸೂರೆಯು ಮುಂದುವರಿದಲ್ಲಿ ಇಂಡಿಯಾ ದೇಶವು ಜಾಗ್ರತೆಯಾಗಿ 'ದಿವಾಳಿ' ಸ್ಥಿತಿಗೆ ಇಳಿಯುವುದು. ದ್ರವ್ಯ ರಹಿತವಾಗಿರುವ ದೇಶದಲ್ಲಿ ಸ್ವರಾಜ್ಯ ಸರ್ಕಾರವು ಆರಂಭವಾಗಬೇಕಾಗಿ ಬಂದು ಅದರಿಂದ ಸ್ವರಾಜ್ಯ ಸುಭದ್ರತೆಗೆ ಅನೇಕ ವಿಧವಾದ ತೊಂದರೆಗಳು ಸಂಭವಿಸುವುವು.

ರಾಷ್ಟ್ರೀಯ ಕಂಟಕ.

ಈಗ ಚಿನ್ನದ ಬೆಲೆಯು ಏರಿದೆ ಎಂಬುದು ನಿಜ. ಆದರೆ ದೊರೆಯುತ್ತಿದ್ದದಕ್ಕಿಂತ ಹೆಚ್ಚು ರೂಪಾಯಿ ನೋಟುಗಳೂ ದೊರೆಯುತ್ತಿವೆ. ಆದರೆ ಅವುಗಳಿಂದ ಏನೂ ಲಾಭವಿಲ್ಲ. ಈ ರೂಪಾಯಿಗಳ ಮತ್ತು ನೋಟುಗಳ ಬೆಲೆಯು ಇಳಿದು ಹೋಗಿದೆ ಹೀಗೆಯೇ ಇರುವುದಕ್ಕೆ ಏನು ಆಧಾರವಿದೆ? ಸರ್ಕಾರದ ಆರ್ಥಿಕ ಗ ... 78 ... ಇಳಿಯುತ್ತಿರುವ ಈ ಕಾಲದಲ್ಲಿ ... ಲೆಯು ದಿನದಿನಕ್ಕೆ ತಗ್ಗುತ್ತಾ ಹೋಗುವುದು ... ತನ್ನ ದೇಶದ ಚಿನ್ನವು ಸೂರೆಯಾಗುತ್ತಿರುವುದು ... ತಾ ಸುಮ್ಮನೆ ಕುಳಿತಿರುವದೆಂದು ಸರ್ಕಾರ ... ರವು ದಿನದಿನಕ್ಕೆ ಇಳಿಯುತ್ತಾ ಹೋಗ...

(6ನೇ ಪುಟದಲ್ಲಿ ಮುಂದುವರಿದಿದೆ)

ಕೊಡಗು.

ಸರ್ಕಾರದ ... ಇಸವಿ

ಜನವರಿ ತಾ. ೨೧ನೇ ಶುಕ್ರವಾರ.

ಪ್ರೆಸ್ ಆರ್ಡಿನೇನ್ಸ್

ಜಾರಿಯಲ್ಲಿರುವ ವರೆವಿಗೆ

ನಾವು

ಅಗ್ರ ಲೇಖನ

ವನ್ನು

ಪ್ರಕಟಿಸುವುದಿಲ್ಲ.

ವಾಚಕ ಮಹಾಶಯರಲ್ಲಿ ವಿಜ್ಞಾಪನೆ.

ಇದು ವರೆಗೆ "ಕೊಡಗು" ಪತ್ರಿಕೆಯ ಕಾರ್ಯಕಲಾಪಗಳನ್ನು ತೃಪ್ತಿ ವಹಿಸಿ ನಡಿಸುತ್ತಿದ್ದ ಸಂಪಾದಕರಾದ ಶ್ರೀಮಾನ್, ಪಂಡ್ಯಂಡ ಎ. ಬೆಳ್ಯಪ್ಪನವರು ಸತ್ಯಾಗ್ರಹ ಚಳವಳಿಯ ಸಂಬಂಧ ಕಾರಾಗೃಹ ವಾಸಕ್ಕೆ ಹೋದುದರಿಂದ ಇಂದು, "ಕೊಡಗು" ಪತ್ರಿಕೆಯ ಕಾರ್ಯಕಲಾಪಗಳನ್ನು ನಡಿಸುವ ಭಾರವು ನೂತನ ಸಂಪಾದಕರ ಮೇಲೆ ಬಿದ್ದಿದೆ. ಕೊಡಗು ಪತ್ರಿಕೆಯು ಹುಟ್ಟಿದಂದಿನಿಂದ, ಸರ್ವ ವಿಧದಲ್ಲಿಯೂ, ತಾವೆಲ್ಲರೂ ಪ್ರೋತ್ಸಾಹಿಸಿರುವು ಸ್ಮರಣೀಯವಾಗಿದೆ. ಈಗ ಸಂಪಾದಕರ ಬದಲಾವಣೆಯ ಕಾಲವು ಸಂಭವಿಸಿದೆ. ಇಂಥಾ ಬಿಕ್ಕಟ್ಟಿನ ಸಮಯದಲ್ಲಿ ಹೊಂದಿಕೊಂಡ ಜವಾಬ್ದಾರಿಯನ್ನು ನಿರ್ವಹಿಸಲು ವಾಚಕ ಮಹಾಶಯರಾದ ನಿಮ್ಮೆಲ್ಲರ ಪ್ರೋತ್ಸಾಹ, ಬೆಂಬಲಗಳು ಅತ್ಯಗತ್ಯ. ಈ ಘನವಾದ ಕರ್ತವ್ಯವನ್ನು ತಾವೆಲ್ಲರೂ ಮಾಡಿದರೆ, "ಕೊಡಗು" ಪತ್ರಿಕೆಯು ಬಂಧಿತನಾಗಿಯೂ, ತಮ್ಮೆಲ್ಲರ ಉದ್ದೇಶವನ್ನು ನೆರವೇರಿಸುವುದು.

ಸಂಪಾದಕೀಯ ಬದಲಾವಣೆಯನ್ನು ಒಂದಿಷ್ಟು ಮನಸ್ಸಿಗೆ ಹಚ್ಚಿಕೊಳ್ಳದೆ, ಎಂದಿನಂತೆ ತಾವೆಲ್ಲರೂ, ಚಂದಾದಾರರಾಗುವುದರ ಮೂಲಕವಾಗಿಯೂ, ಲೇಖಕರಾಗುವುದರ ಮೂಲಕವಾಗಿಯೂ, ಸರ್ವ ಪ್ರೋತ್ಸಾಹವನ್ನು ಕೊಡಬೇಕೆಂಬುದೇ ನಮ್ಮ ವಿನಯ ಪ್ರಾರ್ಥನೆ.

ಸಂಪಾದಕ.

ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ತಾ. ೨೫ರಲ್ಲಿ

ವೈಸರಾಯರು ಮಾಡಿದ ಭಾಷಣದಿಂದ.

ಚಿನ್ನದ ರಫ್ತು.

ಇಂಥಾ ಸಮಯದಲ್ಲಿ ಹಿಂದುಸ್ಥಾನದ ಆರ್ಥಿಕ ಸ್ಥಿತಿಯನ್ನು ಜನರಿಗೆ ಭಯ ಮತ್ತು ಕೊರಗು ಹುಟ್ಟುವಂತೆ ಕೆಲವು ಪತ್ರಿಕೆಗಳು ವಿವರಿಸುತ್ತಿದ್ದಾವೆ. ಮುಖ್ಯವಾಗಿ ಚಿನ್ನವು ದೇಶದ ಹೊರಗೆ ಹೋಗುತ್ತಿರುವುದು. ಹಿಂದೂಸ್ಥಾನಕ್ಕೆ ಪೂರ್ತಿ ನಾಶಕರವೆಂತ ಹೇಳುತ್ತಿವೆ. ಚಿನ್ನವನ್ನು ಮಾರುವವರು ತಮ್ಮಲ್ಲಿದ್ದ ಪದವಿಗಳಿಗೆ ಹೆಚ್ಚಿಗೆ ಬೆಲೆ ಪಡೆಯುತ್ತಾರೆ. ಈಗಿನ ಪರಿಸ್ಥಿತಿಯಲ್ಲಿ ಚಿನ್ನವನ್ನು ಪರದೇಶಗಳಿಗೆ ಮಾರುವುದು ಇಂದಿಯಾದ ಕ್ಷೇಮಕ್ಕೆಂದು ಖಂಡಿತವಾಗಿಯೂ ಹೇಳಬಹುದು. ಬೇರೆ ದೇಶಗಳು ಅತಿ ಕಠಿಣ ಆರ್ಥಿಕ ಸಂಕಟದಲ್ಲಿರುವಾಗ ಹಿಂದುಸ್ಥಾನವು ತನ್ನ ಕೂಡಿಟ್ಟ ಸಂಪತ್ತನ್ನು ಸ್ವಲ್ಪ ಮಟ್ಟಿಗೆ ಉಪಯೋಗಿಸುತ್ತದೆ. ತನ್ನಲ್ಲಿ ಶೇಖರಿಸಲ್ಪಟ್ಟಿರುವ ಚಿನ್ನದ ಒಂದು ಭಾಗವನ್ನು ಮಾತ್ರ ಬಿಟ್ಟು ಕೊಟ್ಟಂತಾಯಿತು. ಹೀಗೆ ಮಾಡುವದರಿಂದ ಅಂತರ ರಾಷ್ಟ್ರೀಯ ಆರ್ಥಿಕ ಸಂಬಂಧದಲ್ಲಿ ಹಿಂದುಸ್ಥಾನಕ್ಕೆ ಪ್ರಯೋಜನಕರವಾದ ಸ್ಥಿತಿಯುಂಟಾಗುತ್ತದೆ. ಈಗಿನ ಧಾರಣೆಯಲ್ಲಿ ಎಣಿಸುವುದಾದರೆ ಕಳೆದ ಐದೇ ಮೂವತ್ತು ವರ್ಷಗಳಲ್ಲಿ ಹಿಂದುಸ್ಥಾನದಲ್ಲಿ 700 ಕೋಟಿ ರೂಪಾಯಿನ ಚಿನ್ನವು ಶೇಖರಿಸಲ್ಪಟ್ಟಿರುವಾಗ 40 ಕೋಟಿ ರೂಪಾಯಿನ ಚಿನ್ನ ಮಾತ್ರ ಈಗ ಹೋದದ್ದು ಯಾವ ಲೆಖ್ಖ! 1915, 1918 ಮತ್ತು 1921ರಲ್ಲಿ ಮಾತ್ರ ಹಿಂದೂಸ್ಥಾನಕ್ಕೆ ಒಂದಿದ್ದಕ್ಕಿಂತ ಹಿಂದೂಸ್ಥಾನದಿಂದ ಹೋದ ಚಿನ್ನ ಹೆಚ್ಚಾಗಿದೆ. ನಿಜವಾಗಿ ನಿಷ್ಪಕ್ಷಪಾತ ದೃಷ್ಟಿಯಿಂದ ನೋಡುವುದಾದರೆ ಹಿಂದೂಸ್ಥಾನದಲ್ಲಿ ಪುರಾತನ ಕಾಲದಿಂದ ನಡೆದು ಬಂದ ಚಿನ್ನದ ನಗಗಳಲ್ಲಿ ಹಣವನ್ನು ಶೇಖರಿಸಿಡುವ ಪದ್ಧತಿಯಿಂದ ಹಿಂದೂಸ್ಥಾನದ ಆರ್ಥಿಕ ಸ್ಥಿತಿಯು ತಿರುಗುವಾಗ ಒಂದೊಂದು ವೇಳೆ ಪ್ರಯೋಜನವಾಗುತ್ತದೆಯೆಂತ ಹೇಳಬಹುದು.

ಕಾನೂನು ಭಂಗ.

ರಾಜಕೀಯ ಪರಿಸ್ಥಿತಿಯನ್ನು ವಿಮರ್ಶಿಸಿ ಹೇಳಿದ್ದೇನೆಂದರೆ—ಕಾಂಗ್ರೆಸಿನವರು ರಾಜೆಯ ದಾರಿಗೆ ಮುಳ್ಳು ಹಾಕುವವರೆಗೆ ನಾನಾಗಲೀ ನನ್ನ ಸರ್ಕಾರವಾಗಲೀ ರಾಜಿಯ ದಾರಿಯನ್ನು ಮುಚ್ಚಿರಲಿಲ್ಲ. ಸರ್ಕಾರವೆಂತ ಕರೆಸಿಕೊಳ್ಳುವ ಯಾವ ಸರ್ಕಾರವೇ ಆಗಲೀ ಕಾನೂನು ಭಂಗ ಸುರುವಾದಾಗ ಎದುರಾಗದೆ ಉಳಿಯಲು ಸಾಧ್ಯವಿಲ್ಲ. ಸಮುದಾಯದವರಾಗಲೀ ಕಾನೂನಿಗೆ ವಿರೋಧವಾಗಿ ವರ್ತಿಸಲು ಹೊರಟವರಾಗಲೀ ತಪ್ಪು ತಿಳುವಳಿಕೆ ಮಾಡಿಕೊಳ್ಳಬಾರದು. ಈ ವಿಷಯದಲ್ಲಿ ರಾಜಿಯೇನೂ ಇಲ್ಲ. ಈಗ ಕೊಟ್ಟಿರುವ ವಿಶೇಷ ತರದ ಹಕ್ಕುಗಳು ದುರುಪಯೋಗವಾದಂತೆ ನೋಡಿಕೊಳ್ಳಬಹುದೇ ಹೊರತು ಈಗ ಹೊರಡಿಸಿರುವ ಹೊಸ ಕಾನೂನುಗಳಿಗೆ ಅವಶ್ಯಕತೆ ಇರುವ ವರೆಗೆ ಅವುಗಳನ್ನು ವಾಪಸು ತೆಗೆದುಕೊಳ್ಳಲಾಗುವುದಿಲ್ಲ.

ರಾಷ್ಟ್ರದಲ್ಲಿ ಮಿತವ್ಯಯದ ಬಗ್ಗೆ

ಶ್ರೀ. ಪಂಡಿತ ಮದನಮೋಹನ ಮಾಳವೀಯರ ವಿಜ್ಞಾಪನೆ.

ಹಿಂದೂಸ್ಥಾನದ ಸ್ಥಿತಿಯನ್ನು ಜಾಗರೂಕತೆಯಿಂದ ಅವಲೋಕಿಸಿದೆನು. ಆ ವಿಷಯವಾಗಿ ಒಂದು ವಿಸ್ತಾರವಾದ ಹೇಳಿಕೆಯನ್ನು ಪ್ರಕಟಿಸಬೇಕೆಂತ ಇದ್ದೇನೆ. ಅದರ ಅತಿ ಮುಖ್ಯವಾದ ಒಂದು ವಿಷಯದ ಕುರಿತು ಕೂಡಲೇ ಈ ವಿಜ್ಞಾಪನೆಯನ್ನು ಪ್ರಕಟಿಸುವುದು ನನ್ನ ಕರ್ತವ್ಯವೆಂತ ನೆನಸಿದ್ದೇನೆ.

ಪ್ರಪಂಚದಲ್ಲೆಲ್ಲಾ ಒಂದು ಆರ್ಥಿಕ ಸಂಕಟವು ಬಂದಿದೆ. ಅತ್ಯಂತ ವಿಸ್ತಾರ ಕಾಲಿಯಾದ ರಾಷ್ಟ್ರದ ಆರ್ಥಿಕ ಭವಿಷ್ಯತ್ತಾದರೂ ಬಹು ಸಂಶಯಾಸ್ಪದವಾಗಿದೆ. ಹೀಗೆ ಬಂದೊದಗಿರುವ ಆರ್ಥಿಕ ಸಂಕಟದ ಪರಿಣಾಮವು ಸರಕಾರದ ಬಜೆಟ್ಟಿನಿಂದ ಇನ್ನಷ್ಟು ಹೆಚ್ಚಾಗಿದೆ. ಇನ್ನು ಮುಂದೆ ಆರ್ಥಿಕ ಸ್ಥಿತಿಯು ಹೇಗೆ ನಡೆದೀತು ಎಲ್ಲಿ ಅಂತ್ಯವಾದೀತು ಎಂತ ಹೇಳಲು ಸಾಧ್ಯವಿಲ್ಲ. ಆದ್ದರಿಂದ ಈ ವೊದಲಿಗಿಂತ ಈಗ ರಾಷ್ಟ್ರದಲ್ಲಿ ಮಿತವ್ಯಯವು ರಾಷ್ಟ್ರದ ಹಿತಕ್ಕೆ ಅತ್ಯವಶ್ಯವಾಗಿದೆ. ಅದ್ದರಿಂದ ಪ್ರತಿಯೊಬ್ಬ ಹಿಂದೀಯನಿಗೂ ನಾನು ವಿಜ್ಞಾಪಿಸಿಕೊಳ್ಳುವುದೇನೆಂದರೆ— ಅವನವನ ರಾಜಕೀಯ ಸಂದಿಗ್ಧತೆಯು ಹೇಗೇ ಇರಲಿ ತನ್ನ ತನ್ನ ಸ್ವಂತ ಹಿತಕ್ಕಾಗಿಯೂ ದರೂ ಖರ್ಚು ಮಾಡದೆ ತಡೆಯಬಹುದಾದ ಖರ್ಚನ್ನು ಮಾಡಲೇ ಬಾರದೆಂತ ಕೇಳಿಕೊಳ್ಳುತ್ತೇನೆ. ಅತ್ಯವಶ್ಯವಾದ ಸಾಮಾನು ವಿನಹ ಬೇರೆ ಸಾಮಾನನ್ನು ಕೊಂಡುಕೊಳ್ಳಬಾರದು, ಯಾಕೆಂದರೆ ಜನರ ಕೈಯ್ಯಲ್ಲಿರುವ ಪ್ರತಿಯೊಂದು ರೂಪಾಯಿಯೂ ಅತಿ ಅಮೂಲ್ಯವಾದದ್ದಾಗಿದೆ. ಬಡವ ದೊಡ್ಡವನೆಂಬ ಭೇದವಿಲ್ಲದೆ ಯಾರಿಗೂ ಇನ್ನು ಕೆಲವು ತಿಂಗಳುಗಳವರೆಗೆ ಹೆಚ್ಚಿನ ಹಣ ಕೈಗೆ ಬಂದೀತೆಂಬ ಆಶೆ ಇಟ್ಟುಕೊಳ್ಳಕೂಡದು. ಆದ್ದರಿಂದ ನಾವೆಲ್ಲರೂ ನಮ್ಮ ನಮ್ಮ ಕೈಯ್ಯಲ್ಲಿರುವ ಒಂದು ರೂಪಾಯಿಯನ್ನಾದರೂ ಬಿಡಬಾರದು. ಜೀವವನ್ನು ಉಳಿಸಿಕೊಳ್ಳಲು ಅವಶ್ಯವಿರುವಷ್ಟು ಮಾತ್ರ ಖರ್ಚು ಮಾಡಬೇಕು.

ಹಿಂದೂಸ್ಥಾನವು ಆರ್ಥಿಕ ಮತ್ತು ರಾಜಕೀಯ ವಿಷಯಗಳಲ್ಲಿ ಅತಿ ಬಿಕ್ಕಟ್ಟಿನ ಸ್ಥಿತಿಯಲ್ಲಿದೆ. ಆ ಸ್ಥಿತಿಯನ್ನು ನಾವು ನಮ್ಮ ಪುರಾತನ ರೀತಿಯಾದ ಸಾದಾ ಜೀವನ ಮತ್ತು ತ್ಯಾಗದಿಂದ ದಾಟಬೇಕು. ಭೋಗಾಸ್ಪದವಾದ ವಸ್ತುಗಳನ್ನು ಕೊಂಡುಕೊಳ್ಳುವುದನ್ನು ಬಿಟ್ಟರೂ ಸಾಲದು. ಅವಶ್ಯವಿಲ್ಲದ ಯಾವ ಖರ್ಚನ್ನಾಗಲೀ ಮಾಡಬಾರದು, ಅವಶ್ಯವಿಲ್ಲದ ಉದ್ಯೋಗವನ್ನಾದರೂ ಕೈಕೊಳ್ಳಬಾರದು. ಉಳಿಸಿದ ಒಂದು ರೂಪಾಯಿ ಎರಡು ರೂಪಾಯಿ ಗಳಿಸಿದಂತೆ ಎಂಬ ಪುರಾತನ ನಾಣ್ಣುಡಿಯನ್ನು ಜ್ಞಾಪಕದಲ್ಲಿಡಿ. ನಮ್ಮ ಆರ್ಥಿಕ ಬಲವನ್ನು ಶೇಖರಿಸಿ ಇಡಿ. ಈ ದಾರಿಯನ್ನು ಅನುಸರಿಸಿ ದೇಶವು ಇನ್ನೂ ಬಡತನಕ್ಕೆ ಇಳಿಯುವುದನ್ನು ತಪ್ಪಿಸಿ.

ನಾವು ರಾಜಕೀಯ ಬಿಕ್ಕಟ್ಟಿನಲ್ಲಿ ಇದ್ದೇವೆ. ನಾವಿರಾರು ಸಹೋದರ ಸಹೋದರಿಯರು ಜೈಲೊಳಗೆ ಕೂಡಲ್ಪಟ್ಟಿದ್ದಾರೆ. ಹಿಂದೂಸ್ಥಾನದ ಜೀವಿತ ಮನುಷ್ಯರಲ್ಲಿ ಅತಿ ಉತ್ಕೃಷ್ಟರಾದವರಾದ ಮಹಾತ್ಮ ಗಾಂಧಿಯವರನ್ನು ಯರವಾಡ ಜೈಲಿನಲ್ಲಿ ನಿರ್ಬಂಧದಲ್ಲಿ ಇಟ್ಟಿದ್ದಾರೆ. ನಮ್ಮ ಮಾತೃಭೂಮಿಗೆ ಸ್ವಾತಂತ್ರ್ಯ ಬೇಕೆಂತ ನಾವೆಲ್ಲರೂ ಇಚ್ಛಿಸುತ್ತೇವೆ. ಅನೇಕರು ಇದಕ್ಕಾಗಿ ಕೆಲಸ ಮಾಡುತ್ತಿದ್ದಾರೆ. ಕಷ್ಟ ಸಹಿಸುತ್ತಿದ್ದಾರೆ. ಹಿಂದೀಯರಾದ ನಾವೆಲ್ಲರೂ ನಮ್ಮ ಇಷ್ಟ ಸಾಧನೆಯಾಗಬೇಕಾದರೆ ಅಥವಾ ನಮಗೆ ವರ ಸಿಕ್ಕಬೇಕಾದರೆ ತಪಸ್ಸು ಮಾಡಬೇಕೆಂತ ನಂಬುವವರಾಗಿದ್ದೇವೆ. ತಪಸ್ಸೆಂದರೆ ಏನಾದರೂ ದಾನದ ಮೂಲಕ ಮಾಡುವ ತ್ಯಾಗ. ಅಥವ ನಮ್ಮ ಇಷ್ಟಗಳನ್ನು ನಿರ್ಬಂಧದಲ್ಲಿ ಇಡುವಿಕೆ ಅದೇ ಹಿಂದೂಸ್ಥಾನದ ಪುರಾತನ ರೀತಿ. ಹೆಚ್ಚಿಗೆ ತ್ಯಾಗವೂ ದಲೀ, ಮಾಡದಿದಲೀ, ಕಡಮೆ ಪಕ್ಷ ರಾಷ್ಟ್ರೀಯ ತಪಸ್ಸಾಗಿ ಇಷ್ಟಾದರೂ ಮಾಡಬೇಕಾಗಿದೆ. ಈಗಿನ ಆರ್ಥಿಕ ಸ್ಥಿತಿಯು ಇರುವ ವರೆಗೆ, ನಮ್ಮ ಅತೀ ಮಾನ್ಯ ಮುಖಂಡರಾದ ಮಹಾತ್ಮ ಗಾಂಧಿಯವರೂ ಮತ್ತು ಇತರ ಅಸಂಖ್ಯ ಸಹೋದರ ಸಹೋದರಿಯರು ಜೈಲಿನಲ್ಲಿರುವ ವರೆಗೆ, ನಮ್ಮ ಧ್ಯೇಯವಾದ ನಮ್ಮ ಮಾತೃಭೂಮಿಗೆ ಸ್ವಾತಂತ್ರ್ಯ ದೊರಕುವ ವರೆಗೆ ನಾವು ಯಾವುದೇ ಚಿಕ್ಕದಾಗಲೀ ದೊಡ್ಡದಾಗಲೀ ಅತಿ ಅವಶ್ಯವಿಲ್ಲದ ವಸ್ತುಗಳನ್ನು ಕೊಂಡುಕೊಳ್ಳುವುದಿಲ್ಲವೆಂತ ಪ್ರಮಾಣ ಮಾಡಿಕೊಳ್ಳಬೇಕು. ಅತ್ಯವಶ್ಯವಿರುವ ವಸ್ತುಗಳನ್ನು ಸಹ ಜಾಗರೂಕತೆಯಿಂದ ಸ್ವದೇಶೀ ಅಂದರೆ ಹಿಂದೂಸ್ಥಾನದಲ್ಲೇ ಆದದ್ದನ್ನು ಕೊಂಡುಕೊಳ್ಳಬೇಕು. ಇಂಗ್ಲೆಂಡಿನಲ್ಲಿ ಪ್ರತಿಯೊಬ್ಬ ಇಂಗ್ಲಿಷ್ ಗಂಡಸಿಗೂ ಹೆಂಗಸಿಗೂ ಪ್ರತಿಯೊಬ್ಬ ಸಾರ್ವಜನಿಕ ಕೆಲಸಗಾರನು ಪ್ರಿನ್ಸ್ ಆಫ್ ವೇಲ್ಸ್ (ಅಂದರೆ ಯುವರಾಜರು) ಮತ್ತು ಮಂತ್ರಿಯವರೂ ಸಹ ಬ್ರಿಟಿಷ್ ಸಾಮಾನಲ್ಲದೆ ಬೇರೆ ದೇಶದ ಸಾಮಾನನ್ನು ಕೊಂಡುಕೊಳ್ಳಬಾರದು, ಮಾರಲೂಬಾರದೆಂತ ಬೋಧನೆ ಕೊಡುತ್ತಾರೆ.

ಕಳೆದ ವರ್ಷ ನಾವು ಹೊರದೇಶದಿಂದ ತರಿಸಿದ ಸಾಮಾನಿಗಾಗಿ ನಮ್ಮ ದೇಶದಿಂದ 165 ಕೋಟಿ ರೂಪಾಯಿ ದೇಶದಿಂದ ಹೊರಗೆ ಹೋಯಿತು. ಹೀಗೆ ತರಿಸಿದ ಸಾಮಾನುಗಳಿಗೆ ಸುಂಕ ರೂಪದಿಂದ 18 ಕೋಟಿ ರೂಪಾಯಿ ಸರಕಾರಕ್ಕೆ ಕೊಟ್ಟೆವು.

ಈ ನನ್ನ ವಿಜ್ಞಾಪನೆಯನ್ನು ನನ್ನ ದೇಶದ ಗಂಡಸರು ಹೆಂಗಸರು ಮನಸಿಗೆ ತೆಗೆದುಕೊಂಡು ಅತಿ ಅಗತ್ಯವಿಲ್ಲದ ಸಾಮಾನುಗಳನ್ನು ಕೊಳ್ಳುವುದನ್ನು ಬಿಟ್ಟರೆ ಈಗಿನ ಆರ್ಥಿಕ ಸಂಕಟಕ್ಕೆ ಸಿಕ್ಕಿದ ನಮ್ಮ ಮಾತೃ ಭೂಮಿಯ ಕಷ್ಟ ಪರಿಹಾರಕ್ಕೆ ಸ್ವಲ್ಪ ಮಟ್ಟಿಗೆ ಸಹಾಯ ಮಾಡಿದಂತಾಗುತ್ತದೆ ಮತ್ತು ಸಾದಾಜೀವನವನ್ನೂ ಜೀವಿಸಿ ಅನುಕೂಲಗಳನ್ನು ಬಿಡುವ ತ್ಯಾಗ ಮಾಡಿದರೆ ನಮ್ಮ ದೇಶವು ಈಗ ಇಳಿದಿರುವ ಬಡತನದ ಮತ್ತು ಹೀನಸ್ಥಿತಿ ಸ್ಥಿತಿಯಿಂದ ಮೇಲಕ್ಕೆ ಎತ್ತಲು ಮಾಡಬೇಕಾದ ರಾಷ್ಟ್ರೀಯ ತಪಸ್ಸಿನಲ್ಲಿ ಭಾಗ ತೆಗೆದುಕೊಂಡಂತಾಗುತ್ತದೆ.

ಈ ವಿಜ್ಞಾಪನೆಯನ್ನು ಓದುವ ಪ್ರತಿಯೊಬ್ಬನೂ ಅಥವ ಪ್ರತಿಯೊಬ್ಬಳೂ ಸಾಧ್ಯವಾದಷ್ಟು ಇತರ ಮಹನೀಯರಿಗೆ ಇದನ್ನು ತಿಳಿಸಿಕೊಟ್ಟು ನಮ್ಮ ಮಾತೃಭೂಮಿಯ ಹಿತಕ್ಕಾಗಿ ಇದರಂತೆಯೇ ವರ್ತಿಸಬೇಕೆಂತ ಕೇಳಿಕೊಳ್ಳಬೇಕಾಗಿ ವಿಜ್ಞಾಪಿಸಿಕೊಳ್ಳುತ್ತೇನೆ.

Reg. No. M. 1550.
If not delivered please return to
"KODAGU" OFFICE MERCARA.

ಕೊಡಗು.

ಕಸ್ಯೇನ ಧಾತುದಯ ಯಥಾ ವಿದ್ಯಾ ವೀತಿ ಪ್ರಯುಕ್ತ ... ಐಕಮತ್ಯೇನ ದೇಶಾನಾಂ ಶುಶ್ರಿಣಾ ... ಗಿರಿಧರಾ

ವಾರ್ಷಿಕ ಚಂದಾ ರೂ. ೩—೮—೦.　　ಸಂಪಾದಕ—ಮೂಚಿನಂಡ ಯಂ. ಗಣಪತಿ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೧ | ಮಡಿಕೇರಿ, ಸನ್ ೧೯೩೨ನೇ ಇಸವಿ ಜನವರಿ ತಾರೀಕು ೨೯ ನೇ ಶುಕ್ರವಾರ. | ಸಂಚಿಕೆ ೩೪

Office of the Asst.
Commr. & Dt. Magte.,
Mercara (Coorg). 6th May 1931.
Dear Sir,
I am QUITE PLEASED with the workmanship of the two Coorg weapons (PICHAKATTI & ODIKKATTI)
Yours faithfully,
(Sd) (Rao Bhadur)
K. CHENGAPPA, B. A.
District Magistrate and Assistant Commissioner of Coorg.

JEWELLER
By Appointment to
H. E. The Governor of Madras.



PEECHAKATTI (WITH SILVER FITTINGS)
Prices From Rs 100 & upwards.

"New Bungalow,"
Ammatti, (Coorg).
14th December 1931.
Dear Sir,
I am IMMENSELY-PLEASED with the workmanship of the PICHAKATTI you made and sent me some time back.
Yours faithfully,
Sd/ K. P. MUTHAYYA,
Ammatti (Coorg.)

Telegrams: 'PRECIOUS.'

V. Subramaniaier
Jeweller,

Teleph no: 3145.

CATALOGUE ON ENQUIRY.

52—10　　Post Box 423, Triplicane, P. O., MADRAS.



ಕಾಗದ ಬರೆದರೆ ಈಗಿನ
ಕ್ಯಾಟಲಾಗು ಮಾಫಿಯಾಗಿ
ಕಳುಹಿಸಲ್ಪಡುವದು.

ಕೋವಿಗಳು, ಕತ್ತಿಗಳು, ಬಚೀಗಳು, ಕೋಟೆಗಳು, ... ಮುಂತಾದ ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS.
Largest Importers of Firearms and Ammunition
Cheapest priced firm in India,
24—19　　210 Abdul Rehman Street, BOMBAY.

ಬಾಲಾರ್ಕಮಧು.

ನಿಮ್ಮ ಮಕ್ಕಳ ಆರೋಗ್ಯವನ್ನು ನೋಡಬೇಕಾದರೆ ಅಮೃತ ಗುಣವುಳ್ಳ ಬಾಲಾರ್ಕಮಧುವನ್ನು ಕೊಡಿರಿ. ಮಕ್ಕಳು ರೋಗ



ಪೀಡಿತರಾಗಿ ಎಷ್ಟೇ ಕೃಶವಾಗಿದ್ದರೂ ಇದರಿಂದ ಬಹು ಬೇಗ ಪುಷ್ಟಿ, ಬಲವೂ ಬರುವವು. ದಿನ ದಿನಕ್ಕೆ ಆರೋಗ್ಯವೂ, ತೂಕವೂ ಹೆಚ್ಚುವವು. ಇದು ಮಧುರವಾಗಿದೆ. ಚಿಕ್ಕ ಮಕ್ಕಳು ಅಪೇಕ್ಷಿಸುತ್ತಾರೆ. ಶೀಸೆ 1 ಕ್ಕೆ 12 ಆಣೆ ಪೋ. ಖ. 12 ಆಣೆ.
ಆರ್ಡರ್ ಜೊತೆಯಲ್ಲಿ ಅಡ್ವಾನ್ಸು ಮೊಬಲಗು ಕಳುಹಿಸಬೇಕು. ಅಡ್ವಾನ್ಸ್ ಇಲ್ಲದ ಆರ್ಡರುಗಳನ್ನು ಗಮನಿಸಲಾಗುವುದಿಲ್ಲ.
ಯಂ. ವಿ. ಪ್ರಸಾದಿಕ
ಔಷಧಾಲಯ,
ಶಿವಮೊಗ್ಗ.
52—2

ಎಂಪೈರ್ ಆಫ್ ಇಂಡಿಯಾ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
(ಸ್ಥಾಪನೆಯಾದದ್ದು 1897.)
ಹಿಂದೂಸ್ಥಾನದಲ್ಲಿ ಪ್ರಾಮುಖ್ಯವೂ, ಜನಪ್ರಿಯವೂ ಆಗಿರುವ ಈ ಕಂಪೆನಿಯಲ್ಲಿ ನೀವು ಜೀವ ವಿಮೆ ಮಾಡುವುದಕ್ಕೆ ಇದೇ ತಕ್ಕ ಸಮಯ.
ಬೋನಸ್ ವರ್ಷ!　　ಬೋನಸ್ ವರ್ಷ!!
ಸಾಹಸವಂತರಾದ ಏಜೆಂಟರು ಬೇಕಾಗಿದೆ.
ಹೆಡ್ ಆಫೀಸು:—　　ಬ್ರ್ಯಾಂಚ್ ಆಫೀಸು:—
ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ.　　152—3 ಕನ್ನಿಂಗ್‌ಹ್ಯಾಮ್ ಸ್ಟ್ರೀಟ್, ಬೆಂಗಳೂರು.
52—20

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೊ ಆಪರೇಟಿವ್ ಸೊಸೈಟೀಸ್ ಅಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲಿ)

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	26,800
ಜಮಾಬಂದ ಠೇವಣಾತಿ	—	2,50,301

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೋಸ್ಕರ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ಮತ್ತು ಅಧವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ನೂರಕ್ಕೆ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ನೂರಕ್ಕೆ 4ರ ಬಡ್ಡಿ ದೊರೆಯುತ್ತೆ.

ವರ್ತಕ ಕೋ-ಆಪರೇಟಿವ್ ಸೊಸೈಟಿ ರಿಜಿಸ್ಟ್ರಾರವರು ಸಾಲ ಅನುಮೋದಿಸಿದ ಮಾಡುತ್ತಾರೆ.

ಪ್ರೆಸಿಡೆಂಟರು.	ಟ್ರೆಜರರ್
ಕೋಣಿಗನ ಅಪ್ಪಯ್ಯನವರು	ಮನೆಯಪ್ಪಂಡ ಬೆಳ್ಯಪ್ಪ
ರಾವ್ ಬಹದ್ದೂರ್.	ನವರು.

ಸೆಕ್ರೆಟರಿ

[illegible] ಬೆಳ್ಯಪ್ಪಯ್ಯನವರು, [illegible]
ಮಡಿಕೇರಿ 1-7-1931.

ನೋಟೀಸು.

ಈ ಕೆಳಗಿನ ಮಹಾಶಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಾದ ಸ್ಥಳಗಳಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಉತ್ತರ ಕೊಡಗಿಗೆ ಮೆ. ಚೌರಿರ ಮೊಣ್ಣಯ್ಯನವರು,
ದಕ್ಷಿಣ ಕೊಡಗಿಗೆ—ಮೆ. ಸೋಮೆಯಂಡ ಅಚ್ಚಯ್ಯನವರು,

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು, (ಖಾದಿಭಂಡಾರ.)
ಸಾಪ್ಪೋಕ್ಲು—ಎನ್ ಆರ್. ವೆಂಕಪ್ಪಯ್ಯನವರು.
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.
ಗೋಣಿಕೊಪ್ಪಲು—ಮೆ. ಜಮ್ಮಡ ಮಾದಪ್ಪನವರು,
ಅಮ್ಮತಿ—ಸಿದ್ದಾಪುರ—ಮೆ. ದಿನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಬಿ. ಮುದ್ದಯ್ಯನವರು,
ಮತ್ತು ಅರಮಣಮಾಡ ಪಿ ಕಾರ್ಯಪ್ಪನವರು,
ಹುದಿಕೇರಿ & ತಿತಿಮತ್ತಿ—ಮೆ. ಜಿ. ಮಾದಯ್ಯನವರು,
[illegible]ಂಟಿಕೊಪ್ಪ—ಮೆ. ಅಪ್ಪಚಟ್ಟೋಳಂಡ ಮೊಣ್ಣಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರಿಗೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮ್ಯಾನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿ[illegible] ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾ[illegible] ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾ[illegible] ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹ[illegible] ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು [illegible] ಪ್ರಕಾರ ನಡಿಸಲು ಅತ್ಯವಶ್ಯವಾಗಿರುವ, ರೂಲ್ಸಿಗನು[illegible]ವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, [illegible]ರು ಫಾರಮುಗಳೂ, ಜಮಾ ಮಂಜೂರಾತಿ ಫಾರಮು[illegible], ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು [illegible] ಫಾರಮುಗಳೂ, ಸ್ಟೋರ್ ಕೀಪರ್ ಖರಾರು ಫಾ[illegible], ಓವರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, [illegible]ರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತ[illegible] ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. [illegible]ಕ್ಕೆ ಆಗಬೇಕಾದವರು ಆರ್ಡರು ಕೊಟ್ಟಲ್ಲಿ ವಿ. ಪಿ. [illegible] ಕಳುಹಿಸಲಾಗುವುದು.

ಮ್ಯಾನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ.	ಒಟ್ಟು ಪ್ರೀಮಿಯಂನ ವರಮಾನ—179 ಲಕ್ಷ ರೂ.
ಕ್ಲೇಮುದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ.	ಪಾಲಿಸಿದಾರರಿಗೆ ಸಾಲ-8013 ಜನರಿಗೆ 32 ಲಕ್ಷ ರೂ.

ಭಂಡವಾಳವು ಹೆಚ್ಚಾದದ್ದು—ಸುಮಾರು 1½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮೊತ್ತದ 1,78,322 [illegible] ಕೋಟಿ ರೂ.

ಪಾಲಿಸಿ ಕೆಲಸಗಳಲ್ಲಿಯೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4 ರಷ್ಟು ಮಾತ್ರ [illegible] ಖರ್ಚಾಗಿದೆ. ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಪೆಟ್ಟಿಯನ್ನು ಬಲಪಡಿಸುವನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬುದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ [illegible]
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ಬೆಂಗಳೂರು	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೋ	ಪಾಟ್ನಾ	ಸಿಂಗಪೂರ್
ಅಲಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಡಾರ್ಜಿಲಿಂಗ್	ಮಂಡಲೆ	ರಾಯಪುರ	ಸಿ. ವೆಂಕಟೇಶ್
ಭೋಪಾಲ್	ಕರಾಚಿ	[illegible]	ರಾಂಚಿ	ವಿಶಾಖಪಟ್ಣ

52—47

ಕಟ್ಟಿಂಗ್ಸ್ ವಾರ್ಮ ಮಾಲ್ಟ್ [illegible] ಮತ್ತು [illegible] ಜ್ವರ, [illegible] ಬರುವ ಜ್ವರ, 3—4 ದಿವಸಕ್ಕೊಂದು ಸಾರಿ ಬರುವ [illegible] ಬರುವ ಜ್ವರ ಮತ್ತು ಜ್ವರಗಳು [illegible] ಬರುವ ಜ್ವರಗಳಿಗೆ [illegible] ಗುಣ ಕೊಡುತ್ತದೆ. [illegible] 1—8—0; 6ಕ್ಕೆ ರೂ 7—8—0 [illegible] 14



ಚಂದನಾಸವ:—ಇದು ಪ್ರಮೇಹ ನಾಶಕ ಸ್ಪಷ್ಟ, ಮೂತ್ರ ಹನಿಹನಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಹಿಂಡಿಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ಕಡೆಯಲ್ಲಿ [illegible] ವುದು, ದೇಹದಲ್ಲಿ ಉರಿ, ಬಾಯಾರಿಕೆ, [illegible] ಮೂತ್ರ ನಾಳದಲ್ಲಿ ಚುಚ್ಚುವ ನೋವು. ಇವುಗಳಿಗೆ ಪರಮ ಔಷಧ. ಬೆಲೆ ಬಾಟ್ಲ್ 1, 3, 6ಕ್ಕೆ ರೂ 1—4—0 3—8—0; 6—12—0

ರೋಮನಾಶಿನಿ:— ಈ ಪುಡಿಯನ್ನು ಅರೆದಲ್ಲಿ ಕೂದಲು ಬೇಡವಾದ ಭಾಗಗಳಿಗೆ ಹಚ್ಚಿದರೆ [illegible] ಬರುವುದು [illegible] 1ಕ್ಕೆ 6 ಆಣೆ. [illegible] 1 1 ಡಜನಿಗೆ 3—8—0

ಗಂಧಕೋಲ್ಹಾಪಿನಿ ತೈಲ:—ತಲೆನೋವು, ತಲೆತಿರುಗುವುದು, [illegible], ಕಣ್ಣು [illegible] ನೋವು. ಅವಸಾನ ಇದ್ದ ಬಾಧಿಸುವುದು, ನನಪು ಶಕ್ತಿ ಕುಂದಿಹೋಗುವುದು. ಇವುಗಳೆಲ್ಲಾ ಖಂಡಿತ ಗುಣಮಾಡುತ್ತದೆ. [illegible] ಕೂದಲನ್ನು [illegible] ಕೊಡಲಿಗೆ [illegible] ಹೊಳಪನ್ನೂ ಕೊಟ್ಟು [illegible] ಕೂದಲನ್ನು [illegible] ಹುಟ್ಟಿಸುತ್ತದೆ. ಬೆಲೆ ಸೀಸೆಗೆ ರೂ. 1, 3 ಸೀಸೆಗೆ 2—10—0 [illegible] ಸೀಸೆಗೆ ರೂ. 2, 3 ಸೀಸೆಗಳಿಗೆ 5—8—0

ವಿಳಾಸ:—ಮಾಡೋಲ್ಕಾ ಸಿನಿ ಕಂಪೆನಿ,

[illegible] 35 [illegible] 9. [illegible]

ನಿಮ್ಮ ಮಕ್ಕಳ ಸಲುವಾಗಿ

ಡೋಂಗರೆ ಇವರ ಬಾಲಾಮೃತ

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಿಗಾಂವ, ಮುಂಬಯಿ.

52—2

Printed & published by P. I. Belliappa at "Kodagu" Press Mercara for "Kodagu" Ltd.

ಕೊಡಗಿನಲ್ಲಿ ಖಾನೂನು ಭಂಗ.

೨೨ ಜನ ಸತ್ಯಾಗ್ರಹಿಗಳಿಗೆ ಆರಾರು ತಿಂಗಳು ಕಠಿಣ ಸಜೆ.

ಸಂತೆಗಳಲ್ಲಿ ಸತ್ಯಾಗ್ರಹಿಗಳ ದಸ್ತಗಿರಿಯ ಸುಗ್ಗಿ.

ಕೊಡಗು ಕಾಂಗ್ರೆಸ್ಸಿನ ಡಿಕ್ಟೇಟರರಾದ ಶ್ರೀ ಪಂದ್ಯಂಡ ಬೆಳ್ಳಿಯಪ್ಪನವರ ದಸ್ತಗಿರಿ.

ತಾ. 15ರಲ್ಲಿ ದಕ್ಷಿಣ ಕೊಡಗು ಸಬ್‌ಡಿವಿಜನಲ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಶ್ರೀಯುತ ಕೊಳ್ಳಿಮಾಡ ಕರುಂಬಯ್ಯನವರೇ ಮೊದಲಾದ 18 ಜನರ ವಿಚಾರವಾಗಿ ಆರಾರು ತಿಂಗಳ ಕಠಿಣ ಸಜೆ ವಿಧಿಸಲ್ಪಟ್ಟಿದೆ. ಇವರು ಯಾರೂ ವಿಚಾರದಲ್ಲಿ ಭಾಗ ತೆಗೆದುಕೊಳ್ಳುವುದಿಲ್ಲವಾಗಿ ಹೇಳಿದರು. ಶ್ರೀ. ಕರುಂಬಯ್ಯನವರು ಮತ್ತು ಅಜ್ಜಮಾಡ ಮಾದಪ್ಪನವರು ಒಂದೊಂದು ಸ್ಟೇಟ್‌ಮೆಂಟ್ ಕೊಟ್ಟರು. ಇವರಿಗೆ ಮಾತ್ರ 'ಬಿ' ಕ್ಲಾಸ್ ಕೊಡಲ್ಪಟ್ಟಿದೆಯೆಂತಲೂ, ಬಾಕಿಯವರಿಗೆ ಎಲ್ಲಾ 'ಸಿ' ಕ್ಲಾಸೆಂತಲೂ ವರ್ತಮಾನವಿದೆ. ಅದೇ ದಿನ 3 ಗಂಟೆಗೆ ಬಸ್ಸಿನಲ್ಲಿ ಇವರನ್ನೆಲ್ಲಾ ಮಡಿಕೇರಿಗೆ ಸಾಗಿಸಿದರು. ಮಡಿಕೇರಿಗೆ ತಂದೇ ಕಾದದ್ದು ಆವಶ್ಯಕವಿಲ್ಲವೆಂತ ಮಡಿಕೇರಿಯಲ್ಲಿ ತಿಳಿದದ್ದರಿಂದ ಕೂಡಲೇ ಅಂದರೆ ಸುಮಾರು 7 ಗಂಟೆಗೆ ವಾಪಸು ವೀರರಾಜಪೇಟೆಗೆ ಸಾಗಿಸಲ್ಪಟ್ಟು ಮಾರಣೆ ದಿನ ಬೆಳಗ್ಗೆ ಕಂಣಾನೂರಿಗೆ ಒಯ್ಯಲ್ಪಟ್ಟರು.

ತಾ. 17ನೇ ಆದಿತ್ಯವಾರ ಗೋಣಿಕೊಪ್ಪಲಿನಲ್ಲಿ ಚೇಮಾಡ ಸಂಜಪ್ಪನವರು ಮತ್ತು ಕೇಚಂ ಸುಬ್ಬಯ್ಯನವರೂ ದಸ್ತಗಿರಿಯಾಗಿ ಅದೇ ದಿನ ಬಸ್ಸಿನಲ್ಲಿ ವೀರರಾಜಪೇಟೆಗೆ ತರಲ್ಪಟ್ಟರು.

ತಾ. 18ನೇ ಸೋಮವಾರ ಮಡಿಕೇರಿಯಲ್ಲಿ ಮಲ್ಲೆಂಗಡ ಚಂಗಪ್ಪನವರು ಮತ್ತು ಮಲ್ಲೆಂಗಡ ಮಂದಯ್ಯನವರನ್ನೂ ಹಿಡಿದು ಮಾಡಿ ವೀರರಾಜಪೇಟೆಗೆ ಒಯ್ದು ಈ ನಾಲ್ವರ ಮೇಲೂ ತಾ. 19ರಲ್ಲಿ ವಿಚಾರಣೆಯಾಗಿ ಪ್ರತಿಯೊಬ್ಬರಿಗೂ ಆರಾರು ತಿಂಗಳು ಕಠಿಣ ಸಜೆ ವಿಧಿಸಿ ತಾ. 20ನೇ ಬೆಳಿಗ್ಗೆ ಕಣ್ಣಾನೂರಿಗೆ ಸಾಗಿಸಿದರು.

ತಾ. 19ರಲ್ಲಿ ಅಮ್ಮತ್ತಿಯಲ್ಲಿ ಪುಟ್ಟಿಚಂಡ ಪೊಣ್ಣಪ್ಪನವರು ಮತ್ತು ಪುಲಿಯಂಡ ಸುಬ್ಬಯ್ಯನವರೂ ಭಾಷಣ ಮಾಡಿದರು. ಸುಮಾರು 200 ಜನರು ಮೇಳೇ ನೆರೆದಿದ್ದರು. ಭಾಷಣವಾದ ಬಳಿಕ ರಾಷ್ಟ್ರೀಯ ಗೀತೆಗಳನ್ನು ಹಾಡುತ್ತಿದ್ದ ಜಯಘೋಷದೊಂದಿಗೆ ಮೆರವಣಿಗೆ ನಡೆದರು. ಇಷ್ಟಕ್ಕೇ ಸಾಧಾರಣ 2 ಗಂಟೆಗಳ ಕಾಲ ಹಿಡಿದಿರಬಹುದು. ಇಲ್ಲಿ ಪೊಲೀಸರು ಯಾವುದೇಸಂದು ಅನ್ಯಾಯ ಮಾಡಲಿಲ್ಲ. ಮೀಟಿಂಗೇನೋ ಸಾಂಗವಾಗಿ ನಡೆಸಿ ಇಬ್ಬರೂ ಹೊರಟು ಹೋದರು. ಅಲ್ಲಿದ್ದ ಒಬ್ಬ ಕಾನ್‌ಸ್ಟೇಬಲನು ಕೂಡಲೇ ವೀರರಾಜಪೇಟೆಗೆ ಹೋಗಿ ಡಿ. ಸುಪರಿಂಟೆಂಡೆಂಟರು ವಗೈರೆಯವರನ್ನು ಕರತಂದ ಪಕ್ಷದಲ್ಲಿ ಮೀಟಿಂಗು ಮುಗಿದಿತ್ತು.

ತಾ. 20ನೇ ಬುಧವಾರ 2 ಗಂಟೆ ಸಮಯಕ್ಕೆ ಕಾಂಗ್ರೆಸ್ ಡಿಕ್ಟೇಟರರಾದ ಶ್ರೀಯುತ ಪಂದ್ಯಂಡ ಮ. ಬೆಳ್ಳಿಯಪ್ಪನವರು ಭಾಷಣ ಮಾಡುವುದಕ್ಕಾಗಿ ಪೇಟೆಯಲ್ಲಿ ಹೋಗುತ್ತಿದ್ದರು. ಮಾರ್ಗದ, ರೋಡು ಚೌಕದ ಬಳಿ ತಲಪುತ್ತಲೇ ಸಬ್ ಇನ್ಸ್‌ಪೆಕ್ಟರ್ ಮೆ. ಮುಂಡಂಡ [illegible]ಪ್ಪನವರೂ ಪೊಲೀಸರೂ ಬಂದು ಅಡ್ಡಗಟ್ಟಿ ಹಿಡಿದು ನಿಲ್ಲಿಸಿದರು. ಇಷ್ಟರಲ್ಲೇ ನೂರಾರು ಪ್ರೇಕ್ಷಕರು ಸುತ್ತಲೂ ನೆರೆದರು. ಶ್ರೀ ಬೆಳ್ಳಿಯಪ್ಪನವರ ಸಂಗಡಲೇ ಕರಪತ್ರವನ್ನು ಹಂಚುತ್ತಿದ್ದ ಪುಲಿಯೇರಿ ಗ್ರಾಮದ ಅತ್ತರಯ್ಯನವರನ್ನೂ ಸೆರೆ ಹಿಡಿದು ಇವರಿಬ್ಬರನ್ನೂ ಮಾರ್ಗದ ರಸ್ತೆಯಲ್ಲಿ ಕೊಂಚ ಮುಂದಕ್ಕೆ ಒಂದು. ಅಲ್ಲಿಂದ ಒಡದಾರಿಗಾಗಿ ಸ್ಟೇಶನಿಗೆ ಸಾಗಿಸಿದರು. ಪಬ್ಲಿಕ್ ಕಡೆಯಿಂದ ಪುಸ್ತ ಪತ್ರಿಕೆಗಳನ್ನು ಹಂಚುತ್ತಾ ಗಡಿಯಾರ ಕಂಭದ ವರೆಗೆ ತಲಪಿದ್ದ ಪೊನ್ನಕಚ್ಚಿರ ಅಪ್ಪಯ್ಯನವರನ್ನೂ ದಸ್ತಗಿರಿ ಮಾಡಿ ಸ್ಟೇಶನಿಗೆ ಒಯ್ದರು. ಶ್ರೀ ಬೆಳ್ಳಿಯಪ್ಪನವರನ್ನು ಒಯ್ಯುವಾಗ ಸಂಗಡಿದ್ದ ಪ್ರೇಕ್ಷಕರನ್ನು ವಾಪಸು ಪೊಲೀಸರು ಕಳುಹಿಸಿಬಿಟ್ಟರು.

ತಾ. 21ರಲ್ಲಿ ಮೂರ್ನಾಡು ಸಂತೆಯಲ್ಲಿ ಉಪನ್ಯಾಸ ಮಾಡಲು ಪ್ರಯತ್ನಿಸಿದ ಶ್ರೀ ಪುಟ್ಟಿಚಂಡ ಪೊಣ್ಣಪ್ಪನವರೂ ಮತ್ತು ಪುಲಿಯಂಡ ಸುಬ್ಬಯ್ಯನವರೂ ದಸ್ತಗಿರಿ ಮಾಡಲ್ಪಟ್ಟಿದ್ದಾರೆ.

ಕೊಡಗಿನ ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯು ಖಾನೂನಿಗೆ ವಿರೋಧವಾದ ಸಂಸ್ಥೆಯಾಗಿ ಚೀಫ್ ಕಮಿಶನರು ಮಾಡಿರುವರು. ಈ ಕಮಿಟಿಯ ಮೆಂಬರುಗಳಾಗಿದ್ದ ಶ್ರೀ ಪಿ. ಐ. ಬೆಳ್ಳಿಯಪ್ಪ, ಸಿ. ಯನ್. ವೆಂಕಪ್ಪಯ್ಯ, ಕೆ. ಪಿ. ಚಿಣ್ಣಪ್ಪ ವಗೈರೆಗೆ ಕಾಂಗ್ರೆಸ್ ಕಮಿಟಿಯ ಕೆಲಸ ಮಾಡಬಾರದೆಂತಲೂ, ಹಾಗೆ ಮಾಡಿದ್ದು ತಿಳಿದು ಬಂದರೆ ದಸ್ತಗಿರಿ ಮಾಡಿ ಕ್ರಿಮಿನಲ್ ಮೊಕದ್ದಮ್ಮೆಗೆ ಗುರಿಮಾಡಲಾಗುತ್ತದೆ ಎಂತಲೂ ಎಚ್ಚರಿಸಲಾಗಿದೆಯೆಂತ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರ ನೋಟೀಸು ಜಾರಿಯಾಗಿದೆ.

ಕಳೆದ ವಾರ ಬೋಯಿಕೇರಿ ಎಸ್ಟೇಟಿನ ಮೆ. ಅಂಜಪರಂಡ ಚಂಗಪ್ಪನವರ ಭತ್ತದ ಮೆದೆಗೆ ಅವರು ಮನೆಯಲ್ಲಿಲ್ಲದಿದ್ದಾಗ ಅಕಸ್ಮಾತ್ತಾಗಿ ಬೆಂಕಿ ಬಿದ್ದು ಪೂರಾ ಸುಟ್ಟು ಹೋಗಿ ನಷ್ಟವುಂಟಾಗಿದೆ ಎಂದು ತಿಳಿಯುತ್ತೇವೆ.

ಮೇಲ್ಕಂಡ ಬಿಲ್ಲಿನ ಆಲೋಚನೆಗೆ ನೇಮಕವಾದ ಸಿಲೆಕ್ಟ್ ಕಮಿಟಿಯು ತಾ. 19 ರಲ್ಲೇ ಅದರ ಕೆಲಸವನ್ನು ಮಾಡಿ ಬಿಲ್ಲಿನಲ್ಲಿ ಅಲ್ಪ ಸ್ವಲ್ಪ ಮಾರ್ಪಾಡು ಮಾತ್ರ ಶಿಫಾರಸು ಮಾಡಿರುವರಾಗಿ ತಿಳಿಯಬಂದಿದೆ.

ತಾ. 20 ರಲ್ಲಿ ಫೈನಾನ್ಸ್ ಕಮಿಟಿ ಮೀಟಿಂಗಾಯಿತು. ರಿಟ್ರೆಂಚ್‌ಮೆಂಟ್ ಕಮಿಟಿಯ ಶಿಫಾರಸುಗಳ ಪೈಕಿ ಅಮ್ಮತ್ತಿ ನಾಡನ್ನು ತೆಗೆದು ಹಾಕುವದೊಂದು ವಿನಹ ಬೇರೆ ಎಲ್ಲಾ ಮಂಜೂರಾದವೆಂತ ತಿಳಿದು ಬಂದಿದೆ.

ಮಡಿಕೇರಿಯಲ್ಲಿ ಈ ವಾರ ನೇಟಿವ್ ಕಾಫಿ ಖಂಡಿಗೆ 235/—ರೂಪಾಯಿಯೂ ಮಂಗಳೂರಿನಲ್ಲಿ ಪಾರ್ಚ್‌ಮೆಂಟ್ ಕಾಫಿ ಹಂಡ್ರೆಡ್ ವೇಟಿಗೆ 55 ರಿಂದ 67 ರೂಪಾಯಿ ಧಾರಣೆಗೂ ಇತ್ತು. ಏಲ ಹಣ ಒಂದಕ್ಕೆ 35 ರೂಪಾಯಿಯ ಧಾರಣೆಯಲ್ಲಿದೆ. ಮತ್ತು ಬತ್ತಕ್ಕೆ ಗಾಡಿಗೆ 37 ರಿಂದ 40 ರೂಪಾಯಿಯ ಕ್ರಯದಲ್ಲಿದೆ.

ಕಳೆದ ಸೋಮವಾರ ದಿನ ಹಗಲು ಮುಗ್ಗೂರು ಗ್ರಾಮದ ಚೋಕಂಡ ಬೋಪಯ್ಯನೆಂಬವನಿಗೂ, ಅವನ ಅಣ್ಣ ಅಜ್ಜಯ್ಯನವರ ಮಗ ಐಯ್ಯಪ್ಪನೆಂಬವನಿಗೂ ಗದ್ದೆಯಲ್ಲಿ ದನ ಇಳಿದದ್ದರ ಸಂಬಂಧ ಜಗಳ ಉಂಟಾಗಿ ಬೋಪಯ್ಯನು ಐಯ್ಯಪ್ಪನಿಗೆ ಗುಂಡು ಹೊಡೆದನೆಂದೂ, ಅದರ ಪೆಟ್ಟಿನಿಂದ ಐಯ್ಯಪ್ಪನು ಕೂಡಲೆ ಮೃತನಾದನೆಂದೂ, ಬೋಪಯ್ಯನು ತಾನೇ ಗುಂಡು ಹೊಡೆದನೆಂದು ಪೊಲೀಸಿಗೆ ಹೋಗಿ ಹೇಳಿರುವನೆಂದೂ, ಪೊಲೀಸಿನವರು ವಿಚಾರ ಮಾಡುತ್ತಿರುವರೆಂದೂ ವರ್ತಮಾನ.

ತಾ. 18 ರಲ್ಲಿ ಮಡಿಕೇರಿಯಲ್ಲಿ ಕೊಡಗು ಕೌನ್ಸಿಲಿನ ವಿಶೇಷ ಅಧಿವೇಶನವೊಂದು ಚೀಫ್ ಕಮಿಶನರ ಅಧ್ಯಕ್ಷತೆಯಲ್ಲಿ ನಡೆಯಿತು. ಮೋಟಾರ್ ಗಾಡಿಗಳಿಂದ ಸುಂಕ ವಸೂಲ್ ಮಾಡುವುದನ್ನೂ ಮತ್ತು ಮುನಿಸಿಪಾಲಿಟಿಗಳು ಹಾಕುವ ಕಂದಾಯವನ್ನೂ ನಿಲ್ಲಿಸಿ ಅದರ ಬದಲು ಸರಕಾರ ಕಂದಾಯವನ್ನು ಮೋಟಾರು ಗಾಡಿಗಳ ಮೇಲೆ ಕರಪರಿತು ಹಾಕುವ ಬಗ್ಗೆ ಖಾನೂನು ಮಾಡಲು ಒಂದು ಬಿಲ್ಲನ್ನು ಸರಕಾರದ ಪರವಾಗಿ ಕೌನ್ಸಿಲ್ ಮುಂದೆ ಕಮಿಶನರು ಚರ್ಚೆಗೆ ತಂದರು. ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಅನುಮೋದಿಸಿದರು. ಈ ಬಿಲ್ಲನ್ನು ಸಿಲೆಕ್ಟ್ ಕಮಿಟಿಯ ಆಲೋಚನೆಗೆ ಬಿಡಬೇಕೆಂಬ ಠರಾವನ್ನು ಮೆ. ಗಳಿಯದ ಪುಚ್ಚಿಮಾಡ ನಾಣಯ್ಯನವರು, ಖಾಲೀಕಂಡ ಐಯ್ಯಮ್ಮನವರೂ, ಬಲ್ಯಂತನ ಬೆಳ್ಳಿಯಪ್ಪನವರೂ ವಿರೋಧಿಸಿದರು. ಈಗ ಹಾಕಬೇಕೆಂದಿರುವ ಕಂದಾಯವು ಬಹಳ ಹೆಚ್ಚಾಗುತ್ತಾದ್ದರಿಂದ ಮೋಟಾರುಗಳ ಓಡ್ಯಾಟವೇ ಕಡಿಮೆಯಾದೀತೆಂತಲೂ ದೇಶದ ಹೊರಗಿನಿಂದ ಬರುವ ಬಸ್ಸುಗಳು ಈಗಾಗಲೇ ಸುಂಕ ಕೊಡತ್ತಾ ಬರುವುದರಿಂದ ಅವುಗಳಿಗೆ ನಷ್ಟವಿಲ್ಲವೆಂತಲೂ, ದೇಶದೊಳಗೇನೇ ತಿರುಗುತ್ತಿದ್ದ ದೇಶೀಯರ ಬಸ್ಸುಗಳು ಈ ವರೆಗೆ ಸುಂಕ ಕೊಡುತ್ತಿದ್ದಿಲ್ಲವಾದ್ದರಿಂದ ಅವುಗಳಿಗೆ ತುಂಬಾ ನಷ್ಟವಾಗುತ್ತೆಂತಲೂ, ಈ ಕಂದಾಯವನ್ನು ಧರಿಸಬೇಕಾದುದಕ್ಕೆ ಸರ್ಕಾರ್ ಮಾಡಬಹುದೆಂತ ಕಾರಣಗಳನ್ನು ತೋರಿಸಿ ವಿರೋಧಿಸಿದರು. ಠರಾವು ಬಹುಮತದಿಂದ ಮಂಜೂರಾಯಿತು.

ಮಂಗಳೂರಿನ ವಾಷ್ಟಿಂಗ್ ಇನ್‌ಶ್ಯೂರೆನ್ಸ್ ಕಂಪೆನಿಯವರು ಕಳುಹಿಸಿದ ಕ್ಯಾಲೆಂಡರುಗಳನ್ನು ನಾವು ವಂದನಾಪೂರ್ವಕವಾಗಿ ಸ್ವೀಕರಿಸಿದ್ದೇವೆ.

ಹಿಂದೂದೇಶ.

ಎಲ್ಲಾ ಪ್ರಾಂತ್ಯಗಳಲ್ಲೂ ಖಾನೂನು ಭಂಗದ ಚಳವಳಿ ನಡೆಯುತ್ತಲೇ ಇದೆ.

ರೌಂಡ್ ಟೇಬಲ್ ಕಾನ್‌ಫರೆನ್ಸಿನ ಉಪ ಕಮಿಟಿಗಳ ಮೆಂಬರುಗಳ ಹೆಸರುಗಳು ಪ್ರಕಟವಾಗಿದೆ.

ಮಹಾತ್ಮಜೀಯವರ ಕಡೇ ಮಗ ರಾಮದಾಸ್ ಗಾಂಧಿಯವರನ್ನು ಗುಜರಾತಿನಲ್ಲಿ ದಸ್ತಗಿರಿ ಮಾಡಿದ್ದಾರೆ.

ಪಂಜಾಬಿನ ಕಾಂಗ್ರೆಸ್ ಮುಖಂಡರಾದ ಡಾಕ್ಟರ ಸತ್ಯಪಾಲ್, ಗೋಪಿಚಂದ್ ಮುಂತಾದವರನ್ನು ಹಿಡಿದಿದ್ದಾರೆ.

ಅಲ್ಲಹಾಬಾದಿನ ಸಮೀಪ ಒಂದು ದೇವಸ್ಥಾನದಲ್ಲಿ ಕಾಂಗ್ರೆಸಿನ ಮುದ್ರಾಶಾಲೆ ಇದ್ದದ್ದು ಪೊಲೀಸಿಗೆ ತಿಳಿದು ಅದನ್ನು ಸ್ವಾಧೀನಪಡಿಸಿಕೊಂಡಿದ್ದಾರೆ.

ಕಾಂಗ್ರೆಸಿನ ಪ್ರೆಸಿಡೆಂಟರಾಗಿ ನೇಮಿಸಲ್ಪಟ್ಟಿದ್ದ ಸರದಾರ್ ಶಾರ್ದೂಲ್ ಸಿಂಗರು ಬೊಂಬಾಯಿಂದ ಹೊರಟವರು ಲಾಹೋರಿಗೆ ತಲಪಲಿಲ್ಲವಾಗಿ ವರ್ತಮಾನವಿದೆ.

ಬೆಂಗಳೂರು ಕಂಟೋನ್ಮೆಂಟಿನಲ್ಲಿ ಪಿಕೆಟಿಂಗಿಗಾಗಿಯೂ, 144ನೇ ಸೆಕ್ಷನ್ ಹುಕುಂ ಉಲ್ಲಂಘನೆಗಾಗಿಯೂ ಕೆಲವರ ಮೇಲೆ ವಿಚಾರ ನಡೆದು ಶಿಕ್ಷೆಯಾಗಿದೆ.

ವಿಳದೇಶ.

ಕೌನ್ಸಿಲ್ ಮೀಟಿಂಗ್ ಬಗ್ಗೆ ಚೀಫ್ ಕಮಿಶನರು ತಾ. 18 ರಲ್ಲಿ ಮಡಿಕೇರಿಗೆ ಬಂದು ತಾ. 19ರಲ್ಲಿ ಹಿಂತಿರುಗಿ ಹೋದರು.

ವೀರರಾಜಪೇಟೆ ಹುದ್ದೆಗೆ ಮುನ್ಸಿಫರಾಗಿ ನೇಮಿಸಲ್ಪಟ್ಟಿದ್ದ ಮೆ. ಯನ್. ಮುದ್ದಪ್ಪ ಬಿ. ಎ. ಬಿ. ಎಲ್. ಇವರಿಗೆ ಮುನ್ಸಿಫ್ ಕೆಲಸವು ಖಾಯಂ ಮಾಡಲ್ಪಟ್ಟಿದೆಯಾಗಿ ತಿಳಿಯಬಂದಿದೆ.

ಮದ್ರಾಸ್ ಪಟ್ಟಣದಲ್ಲಿ ಪರದೇಶೀ ಬಟ್ಟೆ ಅಂಗಡಿಗಳನ್ನು ಅಲ್ಲಲ್ಲಿ ಪಿಕೆಟ್ ಮಾಡುತ್ತಾರೆ. ಪೊಲೀಸಿನವರು ಬೆತ್ತದ ಚಡಿಯಿಂದ ಹೊಡೆಯಲು ಪ್ರಾರಂಭಿಸಿದ್ದಾರೆ.

ಮಧುರೆಯಲ್ಲಿ ಪರದೇಶೀ ಬಟ್ಟೆ ಅಂಗಡಿಗಳ ಮುಂದೆ ಪಿಕೆಟ್ ಮಾಡಿದಾಗ ಪೊಲೀಸಿನವರು ಹೊಡೆದದ್ದಕ್ಕಾಗಿ ಪರದೇಶೀ ಬಟ್ಟೆ ಅಂಗಡಿಗಳೆಲ್ಲಾ ಮುಚ್ಚಲ್ಪಟ್ಟವು.

ಈ ವಾರದಲ್ಲಿ ಬರಹಾನಪುರದಲ್ಲಿ ಗುಂಪಿನ ಮೇಲೆ ಪೊಲೀಸ್ ಗುಂಡು ಹಾರಿತು. ಗುಂಪಿನವರು ಪೊಲೀಸಿನವರ ಮೇಲೆ ಕಲ್ಲು ಎಸೆದು ಕಾಟ ಮಾಡಿದರೆಂಬ ಕಾರಣ. ಒಬ್ಬನು ಸತ್ತದ್ದಲ್ಲದೆ ಅನೇಕರಿಗೆ ಘಾಯವಾಗಿದೆ.

ಶಿವಮೊಗ್ಗದಲ್ಲಿ ಒಬ್ಬರ ಸ್ವಂತ ಜಾಗದಲ್ಲಿ ಗಾಂಧಿಜೀಯವರ ದಸ್ತಗಿರಿಯನ್ನು ವಿರೋಧಿಸಲು ಮೀಟಿಂಗು ನಡೆಯುತ್ತಿದ್ದಾಗ ಪೊಲೀಸ್ ಲತ್ತಿ ಪ್ರಯೋಗವಾಯಿತು. ಇದನ್ನು ಊರಿನವರೆಲ್ಲರೂ ಸೇರಿ ಖಂಡಿಸಿರುತ್ತಾರೆ.

ಅಲ್ಲಹಾಬಾದಿನ ಸಮೀಪ ಒಂದು ಗ್ರಾಮದಲ್ಲಿ ಒಬ್ಬ ಹೆಡ್‌ಕಾನ್‌ಸ್ಟೇಬಲನು ಗುಂಪಿನ ಮೇಲೆ ಗುಂಡು ಹಾರಿಸಿದ್ದಾನೆ. ದಸ್ತಗಿರಿಯಾದ ಮನುಷ್ಯರನ್ನು ಬಿಡಿಸಲು ಗುಂಪಿನವರು ಪ್ರಯತ್ನಿಸಿ ಒಬ್ಬ ಕಾನ್‌ಸ್ಟೇಬಲನಿಗೆ ಘಾಯಪಡಿಸಿದ್ದು ಕಾರಣ.

ತಿರುಪೂರಿನಲ್ಲಿ ಪೊಲೀಸಿನವರು ಲತ್ತಿ ಚಾರ್ಜ್ ಅಂದರೆ ಲತ್ತಿಯಿಂದ ಹೊಡೆಯುವಾಗ ಒಬ್ಬನು ತಲೆ ಒಡೆದು ಸತ್ತನು. ಇನ್ನೊಬ್ಬನಿಗೆ ಅತೀ ಕಠಿಣ ಜಖಂ ಆಗಿದೆ. ಈ ವಿಷಯವಾಗಿ ಮದ್ರಾಸಿನ ಮುಖಸ್ಥರ ಪ್ರತಿನಿಧಿಗಳು ಸರ್ಕಾರಿ ಮೆಂಬರುಗಳಲ್ಲಿ ಮಾತಾಡಿದಾಗ ಅಕಸ್ಮಾತ್ ತಲೆಗೆ ಪೆಟ್ಟು ಬಿದ್ದಿರಬಹುದಾಗಿ ಹೇಳಿದರು.

ರಂಗರಾವ್ ತಲಚೇರಿಕಾರ್ ಬಿ. ಎ. ಎಲ್. ಎಲ್. ಬಿ. ಯವರು (ಕೊಡಗಿಗೆ ಕಳೆದ ವರ್ಷ ಬಂದಿದ್ದವರು) ಕುಂದಾಪುರದಲ್ಲಿ ದಸ್ತಗಿರಿಯಾಗಿ 6 ತಿಂಗಳ ಸಜೆಗೆ ಗುರಿಯಾದರು.

ಬೊಂಬಾಯಿ ಬಂದರದ ವ್ಯಾಪಾರ ಹಿಂದೂಸ್ಥಾನದ ಬಿನ್ನವು ಬಹಳವಾಗಿ ಪಶ್ಚಿಮ ರಾಜ್ಯಗಳಿಗೆ ರವಾನೆಯಾಗುತ್ತಿರುವುದರಿಂದ ಬೊಂಬಾಯಿ ಟಂಕಸಾಲೆಯ ಮುಂದೆ ಕಾಂಗ್ರೆಸಿನವರು ಪಿಕೆಟ್ ಮಾಡತೊಡಗಿದ್ದಾರೆ.

ಪಂಡಿತ ಮದನ ಮೋಹನ ಮಾಳವೀಯರು ಲಂಡನಿನಿಂದ ಬೊಂಬಾಯಿಗೆ ಹಿಂತಿರುಗಿ ಬಂದವರು ಅಲ್ಲಿನ ಮುಖ್ಯ ವ್ಯಾಪಾರಸ್ಥರನ್ನೂ, ಇತರ ಮುಖ್ಯಸ್ಥರನ್ನೂ ನೋಡಿ ಮಾತಾಡಿದರು. ವೈಸ್‌ರಾಯರೊಡನೆ ಭೇಟಿಗೆ ಅಪೇಕ್ಷಿಸುತ್ತಾರೆಂತಲೂ ತಿಳಿದಿದೆ. ತಾ. 21 ರಲ್ಲಿ ಅಲ್ಲಹಾಬಾದ್ ಮಾರ್ಗವಾಗಿ ಬನಾರಸಕ್ಕೆ ಪ್ರಯಾಣ ಬೆಳೆಸುತ್ತಾರೆ.

ಡಾಕ್ಟರ್ ಪಟ್ಟಾಭಿಸೀತಾರಾಮಯ್ಯನವರು ಮತ್ತೂ ಇನ್ನೊಬ್ಬ ಡಾಕ್ಟರ್ ಸಹ ಎರಡೆರಡು ವರ್ಷ ಶಿಕ್ಷೆಗೆ ಗುರಿಮಾಡಲ್ಪಟ್ಟು 'ಸಿ' ಕ್ಲಾಸಿಗೆ ಹಾಕಲ್ಪಟ್ಟಿದ್ದಾರೆ. ಇವರ ಪರವಾಗಿ ಇವರ ಮಕ್ಕಳು ಮತ್ತು ಬೇರೆ ಸಂಬಂಧಿಕರು ಇವರಿಗೆ ಮೇಲಿನ ಕ್ಲಾಸ್ ಕೊಡಬೇಕೆಂತ ಬರಕೊಂಡದ್ದಕ್ಕೆ ಅವರಿಂದಲೇ ಅರ್ಜಿ ಬರಬೇಕೆಂತ ತೀರ್ಮಾನ ಮಾಡಿದರು.

'ಬೊಂಬೆ ಕ್ರಾನಿಕಲ್' ಎಂಬ ಪತ್ರಿಕೆಯ ಎಡಿಟರಾದ ಶ್ರೀ. ಬ್ರೆಲ್ವಿ ಎಂಬವರನ್ನು ದಸ್ತಗಿರಿ ಮಾಡಿ ಕೆಲವು ದಿನ ಇಟ್ಟಿದ್ದು ಅನಂತರ ಪೊಲೀಸಿನವರ ಮುಂದೆ ಪ್ರತಿ ದಿನವೂ ಹಾಜರಾಗಬೇಕೆಂಬ ಹುಕುಂ ಮಾಡಿಬಿಟ್ಟಿದ್ದರು. ಇವರು ಪೊಲೀಸಿನವರ ಮುಂದೆ ಹೋಗಲಿಲ್ಲವೆಂಬ ತಕ್ಸೀರಿಗಾಗಿ ಎರಡು ವರ್ಷ ಕಠಿಣ ಸಜೆಗೆ ಗುರಿಮಾಡಲ್ಪಟ್ಟಿದ್ದಾರೆ.

ನಾಗಪುರದ ಕಾಂಗ್ರೆಸ್ ಮುಖಂಡರಾದ ಶ್ರೀ. ಅಭ್ಯಂಕರ್ ಎಂಬವರಿಗೆ ಮೂರು ವರ್ಷ ಕಠಿಣ ಸಜೆ ಮತ್ತು 10,000 ರೂ. ಜುಲ್ಮಾನೆ ವಿಧಿಸಿದ್ದರೂ ಇಂಥಾ ಕಠಿಣ ಸಜೆಯನ್ನು ವಿಧಿಸಿದ್ದು ಅನ್ಯಾಯವೆಂತ ಅಲ್ಲಿನ ಕೌನ್ಸಿಲಿನಲ್ಲಿ ವಾದ ಬಂದಾಗ ಈ ವಿಷಯ ತಪಾಸಿ ಮಾಡಿ ಶಿಕ್ಷೆಯನ್ನು ಕಡಿಮೆ ಮಾಡುವುದಾಗಿ ಸರ್ಕಾರಿ ಮೆಂಬರರು ತಿಳಿಸಿದರು.

ಮದ್ರಾಸಿನಲ್ಲಿ ಖದ್ದರ್ ಧರಿಸಿ ಮಾರ್ಕೆಟ್ ಬಳಿಗಾಗಿ ಹೋಗುತ್ತಿದ್ದ ಬ್ರಿಟಿಷ್ ಪ್ರಾಂತ್ಯದವರಾದ ಡಾಕ್ಟರ್ ಪೇಟನ್ ಎಂಬವರಿಗೆ ಪೊಲೀಸಿನವರು ಲತ್ತಿಯಿಂದ ಹೊಡೆದರೆಂತ ಕಂಡವರು ಪತ್ರಿಕೆಗೆ ಬರೆದಿದ್ದರು. ಈಚೆಗೆ ಸದರಿ ಡಾಕ್ಟರ್ ಪೇಟನರ ಮೇಲೆ ಪಿಕೆಟಿಂಗ್ ಮಾಡಿದರೆಂಬ ತಕ್ಸೀರಿಗಾಗಿ ವಿಚಾರ ನಡೆಸುತ್ತಿದ್ದಾರೆ. ಇವರು ಸ್ಕಾಟ್‌ಲ್ಯಾಂಡ್ ದೇಶಕ್ಕೆ ಸೇರಿದವರು.

ಪಿಕೆಟ್ ಮಾಡುತ್ತಿದ್ದ ಶ್ರೀಯುತ ಎ. ಎಸ್. ಶ್ರೀನಿವಾಸಯ್ಯಂಗಾರರ ಮಗಳಾದ ಶ್ರೀ. ಅಂಬುಜಮ್ಮಾಳ್ ಮತ್ತು ಖ್ಯಾತ ಹೈಕೋರ್ಟ್ ಜಡ್ಜಿಯರಾಗಿ ಸರ್ ಭಾಷ್ಯಂ ಅಯ್ಯಂಗಾರರ ಮಗಳಾದ ಶ್ರೀ ಜಾನಮ್ಮಾಳ್ ಮತ್ತು ಶ್ರೀ ಕಮಲಾಬಾಯಿ ಎಂಬವರು ಮದ್ರಾಸ್ ಪಟ್ಟಣದಲ್ಲಿ ಪಿಕೆಟ್ ಮಾಡಿದ್ದ ತಕ್ಸೀರಿಗಾಗಿ ಆರಾರು ತಿಂಗಳು ಸಾದಾ ಶಿಕ್ಷೆಗೆ ಗುರಿಪಡಿಸಲ್ಪಟ್ಟಿದ್ದಾರೆ.

ಪೂನಾದ ಕ್ರಿಸ್ತ ಸೇವಾಸಂಘಕ್ಕೆ ಸೇರಿದ [illegible]ನ್ ಎಂಬವರು ವಾಯುವ್ಯ ಸರಹದ್ದಿನ ಪ್ರಾಂತದವರನ್ನು ಅಲ್ಲಿಂದ ಗಡೀಪಾರ್ ಮಾಡಿರುತ್ತಾರೆ. ಗಾಂಧಿಯವರು ದಸ್ತಗಿರಿಯಾದಾಗ ಅದರ[illegible]ರು. ಇವರು ಮಹಾತ್ಮರ ಅಪೇಕ್ಷೆ ಮೇರೆ[illegible]ತ್ಯದ ಸ್ಥಿತಿಯನ್ನು ಖುದ್ದಾಗಿ ನೋಡಲು[illegible]ಯೂ ಅನೇಕರನ್ನು ಕಂಡನಂತರ ಚೀಫ್ [illegible] ಅಪೇಕ್ಷಿಸಿದಾಗ ಕೂಡಲೇ ಆ ಪ್ರಾಂತ್ಯದ[illegible]ಲ್ಪಟ್ಟಿದ್ದಾಗಿದೆ ಎಂತ ಈ [illegible]

ಜನಗಳನ್ನು ಅನುಸರಿಸಲಿಕ್ಕಾಗಿ ಪರದೇಶ ಬಟ್ಟೆಗಳ ವ್ಯಾಪಾರಂಭ ಮಾಡದಿದ್ದಾಗಿ ಬರಬಹುದು.

ದೇಶವನ್ನು ಗಿಡ್ಡ ಸ್ವಾಧೀನದಲ್ಲಿ ಇಟ್ಟುಕೊಳ್ಳಲಿಕ್ಕಾಗಿಯೇ ಸರ್ಕಾರದ ಖರ್ಚು ಹೆಚ್ಚಿರುವದಾಗಿದೆ. ಶಿಕ್ಷಣ, ಕೃಷಿ, ವೈದ್ಯ ಆರೋಗ್ಯ ಇವುಗಳಿಗಾಗಿ ಸ್ವಲ್ಪ ಹೆಚ್ಚು ಖರ್ಚು ಮಾಡಿದ್ದರೂ ಎಷ್ಟೋ ಕಷ್ಟ ನಿವಾರಣೆಯಾಗುತ್ತಿತ್ತು. ಹಿಂದೂಸ್ಥಾನದ ಉತ್ಪತ್ತಿಯನ್ನು ಎರಡರಷ್ಟು ಹೆಚ್ಚಿಸಿಕೊಂಡರೆ ಈಗ ಆಗುತ್ತಿರುವ ಖರ್ಚಿನ ಹಣವನ್ನು ಸರ್ಕಾರವು ಕುಲಘಡದಲ್ಲಿ ಎತ್ತಿಬಹುದೆಂಬುದನ್ನು ಯಾಕೆ ಸರ್ಕಾರವು ಯೋಚಿಸಲಿಲ್ಲವೋ ತಿಳಿಯದು. ಲಾರ್ಡ್ ಕರ್ಜನರ ಕಾಲದಲ್ಲಿ ಬಿಡಬಹುದಿತ್ತು.

ಶಾಂತಿ ಸ್ಥಾಪನೆಗೆ ಕೋರಿಕೆ.

(2ನೇ ಪುಟದಿಂದ ಮುಂದುವರಿದದ್ದು.)

ಕಟ್ಟಿ ವಹಿತುಗಳನ್ನು ನಡಿಸುವುದಿಲ್ಲವೆಂತ ಕೋಟ್ಯಂತರ ಹಿಂದೀಯರು ತಿಳಿಯುತ್ತಾರೆ. ನಿಮಗೆ ಮಹಾತ್ಮ ಗಾಂಧಿಯವರು ಒಬ್ಬರೇ ರಾಜಕೀಯ ಮನುಷ್ಯನಾಗಿರಬಹುದು, ಆದರೆ ಜನಗಳಿಗೆ ಪೂಜಾರ್ಹವಾದ ಮನುಷ್ಯರಾಗಿದ್ದಾರೆ. ಅಲರನರೆ ಜನಗಳಿಗೆ ... ಸಂಪತ್ತನ್ನು ಸಾಧಿಸುತ್ತಿರುವಾಗ ಮಹಾತ್ಮರು ಗರೀಬರ ಹೊಟ್ಟೆ ಬಟ್ಟೆಗೆ ಇಲ್ಲದ ಗ್ರಾಮವಾಸಿಗಳ ಗುಡಿಸಲುಗಳನ್ನು ಸೇರುತ್ತಾರೆ. ಜನಸಮುದಾಯದ ಬಡತನ ಮತ್ತು ಕಷ್ಟಗಳನ್ನು ಮಹಾತ್ಮರು ತಮ್ಮದಾಗಿಯೇ ಮಾಡಿಕೊಂಡಿದ್ದಾರೆ. ಆದುದರಿಂದ ಅವರನ್ನು ಅರ್ಧ ದೇವರೆಂತ ಜನರು ಭಾವಿಸುವುದಾಗಿದೆ. ಜನಸಮುದಾಯಕ್ಕೆ ಮಹಾತ್ಮರ ಕಾರ್ಯಗಳು ಮತಸಂಬಂಧವು ಆಗಿವೆ.

ಗಾಂಧೀ ತತ್ವ.

ನಿಮ್ಮಲ್ಲಿ ಕೆಲವರು ಮಹಾತ್ಮ ಗಾಂಧಿಯವರು ಒಬ್ಬರೇ ಚಳವಳಿಗಾರರೆಂತಲೂ, ಅವರಿಗೆ ಹಿಂಬಾಲಕರೇ ಇಲ್ಲವೆಂತಲೂ ಭಾವಿಸುತ್ತಾರೆ. ಆದರೆ ಸರ್ಕಾರವು ಖಾನೂನಿಗೆ ವಿರೋಧವೆಂತ ಮಾಡಿದ ಸಂಸ್ಥೆಗಳ ಉದ್ದವಾದ ಪಟ್ಟಿಯಿಂದಲೇ ಮಹಾತ್ಮ ಗಾಂಧಿಯವರ ಮತ್ತು ಗಾಂಧಿ ತತ್ವದ ಬಲವನ್ನು ಇದೇ ಎಂತ ನಿಮಗೆ ತಿಳಿದೀತು. ನಿಜವಾಗಿ ಹೇಳುವುದಾದರೆ ಗಾಂಧಿ ತತ್ವದ ಶಕ್ತಿಗೆ ಸ್ವಲ್ಪವಾದರೂ ಒಳಗಾಗದ ಮನುಷ್ಯನಾಗಲೀ ಸಂಸ್ಥೆಯಾಗಲೀ ಇಲ್ಲವೆನ್ನಬಹುದು.

ಶಾಂತಿ ಪ್ರಿಯರಾದ ಮತ್ತು ಮತದಲ್ಲಿ ನಂಬಿಕೆ ಇರುವ ಹಿಂದೀಯರು ಮಹಾತ್ಮ ಗಾಂಧಿಯವರಿಂದ ಹಿಂದೂಸ್ಥಾನಕ್ಕೆ ಆದ ಉಪಕಾರವನ್ನು ಎಂದೂ ಮರೆಯಲಾರರೆಂತ ನೆನಪಿಸಲ್ಪಡಿ. ಈ ಋಣವನ್ನು ಜನರು ಒಂದಲ್ಲ ಒಂದು ದಿನ ತೀರಿಸಿಯೇ ತೀರಿಸುತ್ತಾರೆ. ಗಾಂಧಿ ತತ್ವದ ಬೀಜವು ಕೋಟ್ಯಂತರ ಜನರ ಹೃದಯ ದಲ್ಲಿ ಬಿತ್ತಿ ಹೋಗಿದೆಯೆಂತಲೂ, ಅವರ ಹೃದಯಗಳನ್ನು ನೀವು ಕೋವಿ ಗುಂಡುಗಳಿಂದ ಸೀಳಿದರೂ ಈ ಬೀಜ ನಾಶವಾಗುವುದಿಲ್ಲವೆಂತಲೂ ಯಾಕೆಂದರೆ ಈ ಬೀಜವು ಹೃದಯಕ್ಕಿಂತಲೂ ಆಳವಾದ ತತ್ವದಲ್ಲೇ ನೆಟ್ಟಿದೆಯೆಂದೂ ನೆನಪಿಸಲ್ಪಡಿ. ಆದ್ದರಿಂದಲೇ ಗಾಂಧಿಯವರನ್ನು ದಸ್ತಗಿರಿ ಮಾಡಿದ ನಂತರ ಗಾಂಧಿ ತತ್ವವು ಒಂದಕ್ಕೆ ನೂರು ಮಡಿಯಾಗಿ ಪ್ರಸಾರವಾಗುತ್ತದೆ.

ಆರ್ಡಿನೆನ್ಸ್‌ಗಳ ಆಳ್ವಿಕೆಯಲ್ಲಿ ಜನರ ಜೀವ, ಆಸ್ತಿ, ಗೌರವವು ಸಹ ಖಾನೂನು ಮೀರಿಯೇ ಅಪಾಯವಾಗಿದೆ. ವ್ಯಾಪಾರವೂ ಸಾಧಾರಣ ದಿನ ಪರ್ಯಂತಗಳೇ ತಲ್ಲಣವಾಗಿ ಇಡೀ ಹಿಂದೂಸ್ಥಾನವೇ ಇನ್ನೂ ಕಷ್ಟಕ್ಕೆ ಇಡಾಗುತ್ತದೆ ನಲ್ಲಿದೆ. ಈ ಸ್ಥಿತಿಯು ಇನ್ನೂ ಹೆಚ್ಚು ಕಾಲ ಇದ್ದರೆ ಎರಡು ಜನಾಂಗಗಳೊಳಗೆ ಸ್ನೇಹ ಉಳಿಯುವುದು ಅಸಾಧ್ಯವಾದೀತು. ಆದ್ದರಿಂದ ಯೂರೋಪಿಯನ್ ಸ್ನೇಹಿತರು ಶಾಂತಿ ಸ್ನೇಹವನ್ನು ಸ್ಥಾಪಿಸಲು ಶಕ್ತಿ ಇರುವ ಮಹಾತ್ಮ ಗಾಂಧಿಯವರನ್ನು ಬಿಡುಗಡೆ ಮಾಡಿಸಲಿಕ್ಕೆ ತಮ್ಮ ಶಕ್ತಿಯನ್ನು ಉಪಯೋಗಿಸಬೇಕು.

ಬ್ರಿಟಿಷರಿಗೆ ಹಿಂದೀಯರ ಸಂಪರ್ಕವು ಸುಮಾರು ನೂರು ಶತಮಾನಗಳಿಂದಲೇ ಆಗಿದ್ದರೂ ಹಿಂದೀಯರು ಮನಸ್ಸಿನ ಭಾವವನ್ನು ತಿಳಿದುಕೊಂಡಿಲ್ಲ. ಯಾಕೆಂದರೆ—ಅವರು ಹಿಂದೀಯರೊಡನೆ ಸಹೋದರ ಭಾವದಿಂದ ನಡೆದವರಾಗಿಲ್ಲ. ಶ್ರೀಫ್ ಮತ್ತು ಅವನ ಸ್ನೇಹವೂ ಒಂದು ಕೋಟೆಯಲ್ಲಿ ಮತ್ತೆ ಅವರ ಸ್ನೇಹವಿಲ್ಲದೆ ಇದ್ದಾಗ ಇದೇ ಅನ್ನ ತಿನ್ನುವ ಹಿಂದೀಯರೇ ತಮ್ಮ ಅನ್ನವನ್ನು ತ್ಯಜಿಸಿ, ಅವರ ಸ್ನೇಹ ಶಕ್ತಿ ಕೊಟ್ಟು ತಾವು ಅನೇಕ ದಿನಗಳವರೆಗೆ ಹಸಿವೆಯನ್ನು ಸಹಿಸಿಕೊಂಡು ಇದ್ದದ್ದು.

ಈ ಘೋರ ಯುದ್ಧದಲ್ಲಿ ಬ್ರಿಟಿಷರ ಸಂಸ್ಕೃತಿ, ಸ್ವಾತಂತ್ರ್ಯ ಉಳಿಯಬೇಕೆಂದು ಹಿಂದೀಯರು ಜೀವದಾನ ಮಾಡಿದರು. ಇದನ್ನು ನೀವು ನೆನಪಿಸಿದ್ದರೆ ಹಿಂದೀ ಸ್ನೇಹದ ಧ್ಯೇಯ ತ್ಯಾಗವನ್ನು ಕಣ್ಣಾರೆ ಕಂಡ ಸ್ನೇಹಿತರನ್ನು ಕೇಳಿಕೊಳ್ಳಬಹುದಾಗಿದೆ. ಸ್ನೇಹದ ಪೂರ್ಣ ಶಕ್ತಿಯು ಹೊಂದಿಲ್ಲ. ನೀವು ಅವರಿಗೆ ಇಲ್ಲ.

ಸಂಕುಚಿತ ದೃಷ್ಟಿ.

ಹಿಂದೂಸ್ಥಾನದ ಜನಗಳಲ್ಲಿ ಸುಮಾರು 5000 ವರ್ಷಗಳ ಕೃಷಿಯುಳ್ಳ ಸಂಸ್ಕೃತಿ ಆಗಿದೆ. ಆಗಲೂ ಮಣ್ಣು ನಾರ

ನಿದ್ದೇ ಇದೆ. ನಮಗೆ ಅನೇಕ ನದಿ ಪರ್ವತಗಳು ಇರುವುದರಿಂದ ಪಾವನರಾದ ನಮಗೆ ಶ್ರೇಷ್ಠವಾಗಿದೆ. ನಮ್ಮ ಪೂರ್ವಿಕರು ಈ ಭೂಮಿಯನ್ನು ಪೂಜಿಸುತ್ತಿದ್ದರು. ಇಂಥಾ ಭೂಮಿ ಇಂಗ್ಲಿಷ್ ಜನರೊಂದಿಗೆ ವಿರೋಧ ಕಟ್ಟಿಕೊಳ್ಳಬಹುದೇ ಎಂತ ಯೋಚಿಸಬೇಕು. ಬ್ರಿಟನಿನ ಮಹತ್ವವೇ ಹಿಂದೂಸ್ಥಾನದಿಂದ, ಹಿಂದೂಸ್ಥಾನವನ್ನು ಆಕ್ರಮಿಸಿಯಲ್ಲಿಟ್ಟುಕೊಂಡು ಬ್ರಿಟನು ತನ್ನ ಈಗಿನ ಕಷ್ಟಗಳನ್ನು ನಿವಾರಿಸಿಕೊಳ್ಳಲಾರದು. ನ್ಯಾಯ ಶೀಲತೆಯ ಮತ್ತು ಸ್ವಾರ್ಥತೆಯ ದೃಷ್ಟಿಯಿಂದಲೂ ಮಹಾತ್ಮ ಗಾಂಧಿಯವರನ್ನು ಇತರ ಮುಖಂಡರನ್ನೂ ಕೂಡಲೇ ಬಿಡುವುದು, ಆರ್ಡಿನೆನ್ಸ್‌ಗಳನ್ನು ರದ್ದು ಪಡಿಸುವದೂ ಮತ್ತು ಶಾಂತಿ ಸ್ನೇಹವನ್ನು ಸ್ಥಾಪಿಸುವುದೂ ಅತ್ಯವಶ್ಯವಾಗಿದೆ. ಪ್ರಸ್ತುತ ಪವಿತ್ರ ಕಷ್ಟಕ್ಕೆ ಈಡಾಗಿದೆ. ಇಂಥಾ ಸಮಯದಲ್ಲಿ ಬೆಂಕಿಗೆ ತುಪ್ಪ ಹುಯ್ಯದ ಹಾಗೆ ನೋಡಬೇಕು. ನಾವೆಲ್ಲರೂ ಕಷ್ಟಕ್ಕೆ ಒಳಗಾಗಿದ್ದೇವೆ. ಜಗಳ ಮತ್ತು ದ್ವೇಷದ ಬದಲಿಗೆ ಸ್ನೇಹ ಶಾಂತಿ ಸ್ಥಾಪನೆಯಾಗಲಿ ಎಂತ ಆಶಿಸುತ್ತೇನೆ. ಹಿಂದೂಸ್ಥಾನದ ಪ್ರತಿಯೊಂದು ಮನೆಯಲ್ಲೂ, ಗುಡಿಸಲಲ್ಲೂ ಮಹಾತ್ಮ ಗಾಂಧಿಯವರನ್ನು ಪೂಜಿಸುತ್ತಿದ್ದಾರೆಂಬುದು ನಿಜವೋ ಅಲ್ಲವೋ ಎಂಬದನ್ನು ಹೋಗಿ ನೋಡಿ. ತಮ್ಮ ಜೀವನಕ್ಕೆ ನಿಯಮವನ್ನು ಅನುಸರಿಸುತ್ತಿರುವ ಜನರ ಮಾತುಗಳನ್ನು ನಂಬಬೇಕಿಲ್ಲ. ನಿಷ್ಪಕ್ಷ ಜನರನ್ನು ತಿಳಿದರೆ ಸತ್ಯ ತಿಳಿದೀತು.

ತನ್ನ ವ್ಯಕ್ತಿ ತಾನೇ ಜನರಿಂದ ಗೌರವ ಪಡೆಯುವ ಪಾಲನೆ ಮಾನನ್ನೇ ಪಡೆಯಬೇಕು. ಈಗಿನ ಆರ್ಡಿನೆನ್ಸಿನ ಆಳ್ವಿಕೆಯಲ್ಲಿ ಖಾನೂನಿಗೆ ಇರುವ ಗೌರವವೇ ನಾಶವಾಗಿ ಕೆಲಸವಿಲ್ಲದ ಕಷ್ಟಪಡುವ ಬಡವರಾದ ಮತ್ತು ಅವಮರ್ಯಾದೆಗೆ ಗುರಿಯಾದ ಜನರು ದಿಕ್ಕು ಕೋರದ ಸ್ಥಿತಿಗೆ ಬಂದಿರಿಯುತ್ತಾರೆ.

ಇಂಗ್ಲೆಂಡಿನಲ್ಲಿ ಪ್ರಚುರ ನಡೆಸುವ ಪತ್ರಿಕೆಗಳು ಈ ಚಳವಳಿಯು ಸೋತು ಹೋಯಿತೆಂತ ತೋರಿಸುವುದಿಲ್ಲವೆ. ಚಳವಳಿಯು ನಿಧಾನವಿಲ್ಲದ ಮುದಿ ಹೆಚ್ಚಾಗುತ್ತಲಿದೆಯೆಂಬುದೇ ನಿಜ. ನಿಮ್ಮ ಕರ್ತವ್ಯವೂ ಆತ್ಮ ಗೌರವವೂ ನಿಮ್ಮನ್ನು ನಿಜವಾದ ಸ್ಥಿತಿಯನ್ನು ತಿಳಿದುಕೊಳ್ಳುವಂತೆ ಮಾಡಿ ಶಾಂತಿ ನೆಲೆಸುವಂತೆ ಪ್ರಯತ್ನಿಸುವಂತೆ ಮಾಡುತ್ತೇವೆಂತ ನಂಬುತ್ತೇನೆ. ನಮ್ಮ ಕೋರಿಕೆಗೆ ಎರಡು ಜನಾಂಗ ಕ್ಷೇಮಕ್ಕಾಗಿ ಸ್ನೇಹ ಉಳಿಯಬೇಕೆಂಬುವುದೇ ಉದ್ದೇಶವಾಗಿದೆ. ನಿಜವಾದ ಸ್ಥಿತಿಯನ್ನು ತಿಳಿಯಲು ನಿಮಗೆ ದೇವರು ಬುದ್ಧಿ ಕೊಡಲಿ ಎಂತ ಪ್ರಾರ್ಥಿಸುತ್ತೇನೆ.

ನಮ್ಮ ದೇಶೀಯರಿಗೆ ಹೇಳಬೇಕಾದದ್ದೇನೆಂದರೆ ಹಿಂದೂಸ್ಥಾನದ ಆಕಾಶವು ಕಪ್ಪಾದ ಮೋಡದಿಂದ ಕವಿದಿದೆ. ಗುಡುಗು ಸಿಡಿಲುಗಳು ಘೋರಗರ್ಜಿಸುತ್ತಿವೆ. ಮಿಂಚುಗಳು ಹೊಳೆಯುತ್ತಿವೆ. ಆದರೂ ಇವುಗಳ ಹಿಂದೆ ಸೂರ್ಯನಿದ್ದಾನೆಂಬ ನಂಬಿಕೆಯನ್ನು ಬಿಡಬೇಡಿ. ಇಂಥಾ ಕಷ್ಟಗಳಿಂದಲೇ ನಮ್ಮ ಜನಾಂಗಕ್ಕೆ ಶಕ್ತಿಯು ಹೆಚ್ಚುತ್ತದೆ ಎಂತ ನಮ್ಮ ಕವಿಶ್ರೇಷ್ಠ ರವೀಂದ್ರರು ಹೇಳುತ್ತಾರೆ. ದುಃಖದ ದಾರಿಗಳ ದಾಟಿದರೆ ದುಃಖವಿಲ್ಲದ ರಾಜ್ಯ ಸಿಗುತ್ತದೆಯೆಂತ ಬಿಷಪ್ ಇಂಗ್ಲಿಷ್ ಕವಿಯೂ ಹೇಳಿರುತ್ತಾರೆ. ಸಮಾಧಾನ ತಂದುಕೊಳ್ಳಿ ....
.... ದೇವರನ್ನು ಪ್ರಾರ್ಥಿಸಿರಿ.

ಸೆನ್‌ಗುಪ್ತರ ದಸ್ತಗಿರಿ.

ಶ್ರೀಯುತ ಸೆನ್‌ಗುಪ್ತರು ಯೂರೋಪಿಗೆ ಹೋದವರು ತಾ. 20 ರಲ್ಲಿ ಬೊಂಬಾಯಿಗೆ ಹಿಂತಿರುಗಿ ಇಟಲಿ ದೇಶದ ಹಡಗ ಒಂದರಲ್ಲಿ ತಲುಪಿದಾಗ ಹಡಗದಿಂದ ಇಳಿಯುವ ಮುಂಚೆಯೇ 1818 ನೇ ಇಸ್ವಿಯ ಖಾನೂನು ಮೇರೆ ದಸ್ತಗಿರಿ ಮಾಡಲ್ಪಟ್ಟು ಪೂನಾದ ಯರವಾಡ ಜೈಲಿಗೆ ಸಾಗಿಸಲ್ಪಟ್ಟರು. ಬಂಗಾಳ ಸರಕಾರದ ಹುಕುಂ ಮೇರೆ ದಸ್ತಗಿರಿಯಾದದ್ದಾಗಿ ತಿಳಿದು ಬಂದಿದೆ. ಹಡಗ ಬಂದರಕ್ಕೆ ತಲುಪಿದ ವಡನೆ ಬೆಳಗಿನ ಝಾವ 4 ಗಂಟೆಗೆ ಪೋಲೀಸಿನವರು ದಸ್ತಗಿರಿ ಮಾಡಲು ಹೋದಾಗ ಹಡಗದ ಕ್ಯಾಪ್ಟನ್ ಇಟಲೀ ದೇಶದ ಬಾವುಟದ ಅಧೀನದಲ್ಲಿ ದಸ್ತಗಿರಿ ಮಾಡುವುದು ಯುಕ್ತವಲ್ಲವೆಂತ ಹೇಳಿದರು. ಅನಂತರ 7½ ಗಂಟೆಗೆ ಪುನಃ ಪೋಲೀಸಿನವರು ಹೋಗಿ ದಸ್ತಗಿರಿ ಮಾಡಿದರು.

ಸ್ವದೇಶೀ ಫಿಟೇಲುಗಳು.

ಕ್ರಯ ಸುಲಭ! **ಅಂದವಾದ ಮಾದರಿಗಳು!!**

ಸ್ವಲ್ಪವೇ ಉಳಿವೆಯೊದ ಕಾರಣ ಬೇಕಾದವರು ಒಡನೆ ಆರ್ಡರು ಕಳುಹಿಸಿರಿ. ಕಮ್ಮಿ ಕ್ರಯದ ವಿದೇಶೀ ಫಿಟೇಲುಗಳಿಗೂ, ಖುದ್ದಾಗಿ ನಮ್ಮಿಂದಲೇ ತಯಾರಿಸಲ್ಪಟ್ಟ ಈ ಫಿಟೇಲುಗಳಿಗೂ ಕಾಗೆಗೂ, ಕೋಗಿಲೆಗೂ ಎಷ್ಟರ ವ್ಯತ್ಯಾಸವೋ ಅಷ್ಟು ವ್ಯತ್ಯಾಸವಿದೆಯೆಂದು ತಾವೇ ಒಪ್ಪಿಕೊಂಡಾರಿರಿ. ಇನ್ನು ಫಿಟೇಲ್, ಪೀಪಿ, ಹಾರ್ಮೋನಿಯಂ ಮುಂತಾದ ಸಂಗೀತ ಸಾಹಿತ್ಯಗಳ ರಿಪೇರಿ ಇತ್ಯಾದಿ ಬಹಳ ಕಮ್ಮಿ ದರದಲ್ಲಿ ಮಾಲುದಾರರ ಮನಸ್ಸಿಪ್ಪುವಂತೆ ಮಾಡಿಕೊಡುವೆವು. ಫಿಟೇಲ್ ಹಾರ್ಮೋನಿಯಂ ಇತ್ಯಾದಿ ಕಲಿಯಬೇಕೆಂದಿರುವವರಿಗಾಗಿ ಇದೊಂದು ಸುಸಮಯ. ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ.

ಪಿ. ವೆಂಕಟ್ರಮಣಾಚಾರ್ಯರ್ ಅಂಡ್ ಸನ್ಸ್,
ಪೊನ್ನಂಪೇಟೆ, (ದ. ಕೊಡಗು.)

ವಜ್ರದ ಅಡ್ಡಿಗೆ.

ಈ ಅಡ್ಡಿಗೆಗಳನ್ನು ಅಮೇರಿಕನ್ ಡೈಮಂಡ್ ಎಂಬ ಇಮಿಟೇಶನ್ ವಜ್ರದ ಕಲ್ಲುಗಳನ್ನು ಇಟ್ಟು ಕೆವಿಯನ್ ಭಂಗಾರದಿಂದ ಕಟ್ಟಿದ ಕಟ್ಟಿದ್ದೆ. ಅವರ ಬಣ್ಣವು ಕೆಡದಂತೆ ಸದಾ ಭಂಗಾರದ ಬಣ್ಣ ಕಟ್ಟಿದೆ. ಈ ಅಡ್ಡಿಗೆಗಳ ಪ್ರಕಾಶವು ಸಾಚಾವಜ್ರದ ಅಡ್ಡಿಗೆಗೆ ಸರಿಯಾಗಿದೆ. ಇದನ್ನು ನೋಡಿದವರು ೫,೦೦೦ ರೂ. ಗಳು ಕ್ರಯ ಕಟ್ಟುವರು. ಶ್ರೀಮಂತರೂ, ಗರೀಬರೂ ಉಪಯೋಗಿಸತಕ್ಕ ಕ್ರಯ ಒಕ್ಕೆ ರೂ. ೫—೧೨—೦. ತಿಂಗಳ ಗಣ್ಣೆ ಕಟ್ಟಿದ ಭಂಗಾರದ ಡಾಬು ಒಕ್ಕೆ ನಂ. ೧ ರೂಪಾಯಿ ೮—೮—೦. ನಂ. ೨. ೩—೮—೦.

ವಿಳಾಸ:—ಕೆ. ಎಸ್. ಟೆಂಪ್ಸನ್ ಅಂಡ್ ಕೊ.,
12—4 ಪೋ || ನಂ || 1246, ಮದರಾಸು.

"COORG AND THE COORGS"

By P. M. Muthanna,

With a preface By T. E. V. Raghavan B. A. (Hon.) Pallachi.

This book with numerous illustrations traces briefly the origin of the Coorgs, their manners and customs and gives an account of the history of the last Rajas, the connection between E. I. C. Gvt. and Coorg and describes briefly the political history.

Price. Cloth bound Rs. 1/4/–
Card-Board Rs. 1/–

Supplied by:—

Co-operative Stores, Mercara, Coorg.
'Kodagu' Office, Mercara, "
Emporium, Siddapur, "
Coorg Pharmacy, Virajapet. "

3—3

ಸ್ತ್ರೀ ಪುರುಷರ ಪ್ರೀತಿಯ ಮರ್ಮಗಳನ್ನು ಚಿತ್ರ ಪಟಗಳ ಸಹಿತ ಇದ್ದದ್ದನ್ನು ಇದ್ದ ಹಾಗೆ ತಿಳಿಸುವ

ಸ್ತ್ರೀ ದಾಂಪತ್ಯ ರಹಸ್ಯವೆಂಬ ಮರ್ಮಶಾಸ್ತ್ರ.

ಈ ಪುಸ್ತಕವು ಫ್ರೆಂಚ್, ಹಿಂದೂಸ್ಥಾನಿ ಭಾಷೆಗಳಲ್ಲಿ ಬಹುಕಾಲದಿಂದ ಗುಪ್ತವಾಗಿತ್ತು. ಈಗ ನಾವು ಎಲ್ಲರಿಗೂ ವಿವರವಾಗಿ ತಿಳಿಯುವಂತೆ ಸುಲಭ ಶೈಲಿಯ ಕನ್ನಡ ಭಾಷೆಯಲ್ಲಿ ಭಾಷಾಂತರಿಸಿ ಫೋಟೋಗಳ ಸಹಿತ ಅಂದವಾಗಿ ಮುದ್ರಿಸಿರುತ್ತೇವೆ. ಈ ಪುಸ್ತಕದಲ್ಲಿ ಸ್ತ್ರೀಪುರುಷರಿಗೆ ಬೇಕಾದ ಎಲ್ಲಾ ಮರ್ಮರಹಸ್ಯಗಳು, ಪುರುಷರು ಸ್ತ್ರೀಯರಲ್ಲಿ ನಡೆದುಕೊಳ್ಳಬೇಕಾದ ಬಗೆ, ಸ್ತ್ರೀಪುರುಷರ ಜಾತಿಯ ಲಕ್ಷಣಗಳು, ಸ್ತ್ರೀಯರಿಗೆ ಬೇಕಾದ ಅನೇಕ ಗುಪ್ತ ವಿಷಯಗಳು, ಸಂಭೋಗದ ಕಾಲ, ಗರ್ಭಧಾರಣವು, ಗರ್ಭ ನಿರೋಧವು, ಸಂಭೋಗದಿಂದಾಗುವ ಸಂತೋಷ, ಬಹು ಸೌಂದರ್ಯಗಳ ವರ್ಣನೆ, ಹಸ್ತ ಪ್ರಯೋಗದಿಂದಾಗುವ ಮಾನಿ, ಗರ್ಭಿಣಿಗೆ ಬೇಕಾದ ಅನೇಕ ಮರ್ಮವಿಷಯಗಳು, ಶಿಶು ಉತ್ಪತ್ತಿ ವಿಧ, ಗುಪ್ತ ವೈದ್ಯಗಳ ಚಿಕಿತ್ಸೆ, ಶಯನ ಗೃಹದ ರಹಸ್ಯನಿಯಮಗಳು, ಮಾನವ ಶರೀರದ ಮರ್ಮಗಳ ವಿವರ, ನಪುಂಸಕತ್ವಕ್ಕೆ ಚಿಕಿತ್ಸೆ, ಇನ್ನೂ ಸ್ತ್ರೀಪುರುಷರಿಗೆ ಬೇಕಾದ ಲೀಲಾರಹಸ್ಯಗಳು ಚಿತ್ರಪಟಗಳ ಸಹಿತ ಪ್ರಿಂಟಾಗಿದೆ.

ಕ್ರಯ:—ಪುಸ್ತಕ ೧ಕ್ಕೆ ೧ ರೂಪಾಯಿ.

The Legal Trading Co.,
P. B. 243, Madras.

12—5



ಈ ಗಡಿಯಾರಗಳು ಈ ಸಣ್ಣ ಚಿತ್ರದಲ್ಲಿರುವಂತೆಯೇ ಇರುವವು. ನಮ್ಮ ಸ್ವಂತ ಆರ್ಡರ್ ಮೇಲೆ ಸೀಮೆಯಿಂದ ತಯಾರಿಸಿ ತರಿಸಿರುತ್ತೇವೆ. ಸರಿಯಾದ ಗಿ ಫುಟವನ್ನು ತೋರಿಸುತ್ತವೆ. ದಿವಸಗೂ ಯಾರೂ ಈಗಿನ ಕಡಿಮೆ ಬೆಲೆಗೆ ಕಳುಹಿಸುವವರೇ ಇಲ್ಲ. ಇದರಿಂದ ಬೇಗನೆ ಒರೆದು ತರಿಸಿಕೊಳ್ಳಿ. ನಮ್ಮಲ್ಲಿ ಸ್ವಲ್ಪವೇ ಇರುತ್ತವೆ. ಇವಕ್ಕೆ ಖಾತ್ರಿಯ ವರ್ಷ ಗ್ಯಾರಂಟಿ ಕೊಡುತ್ತೇವೆ. ಕ್ರಯ 1ಕ್ಕೆ 4—4—

ವಿಳಾಸ:—ಕೆ. ಎಸ್. ಟೆಂಪ್ಸನ್ ಅಂಡ್ ಕೊ.,
12—5 ಪೋ || ನಂ || 1246, ಮದರಾಸು.

ಹಿಂದುಸ್ಥಾನದ ಭಯಂಕರ ಬಡತನಕ್ಕೆ ಕಾರಣಗಳು.

(ಹೆಚ್. ಯನ್. ಬ್ರೈಯಿಲ್ಸ್ ಫರ್ಡ್)

(ಕಳೆದ ವಾರದಿಂದ ಮುಂದುವರಿದದ್ದು.)

ಉತ್ಪತ್ತಿ ಕಂದಾಯ ಕೊಡುವ ಪಟ್ಟಿಯನ್ನು ನೋಡಿದರೆ ಹಣ ಸಾಲ ಕೊಡುವವರು ಎಷ್ಟೊಂದು ಇದ್ದಾರೆಂತ ತಿಳಿಯುತ್ತದೆ. ಪಂಜಾಬಿನಲ್ಲಿ ಸಹಕಾರ ವ್ಯಾಪಾರದ ಸಂಘಗಳಿದ್ದರೂ ಉತ್ಪತ್ತಿ ಕಂದಾಯ ಕೊಡುವವರಲ್ಲಿ ನಾಲ್ಕರಲ್ಲಿ ಒಬ್ಬ ಬಡ್ಡಿಗೆ ಸಾಲ ಕೊಡುವವರಾಗಿದ್ದಾರೆ. ಅವರು ಹಿಂದೂಸ್ಥಾನದ ಉತ್ಪತ್ತಿಯ ಯಾವ ಭಾಗವನ್ನು ತೆಗೆದುಕೊಳ್ಳುತ್ತಾರೆಂಬುದನ್ನು ಅಂದಾಜು ಮಾಡಬಹುದು. ಕೃಷಿಕರ ಸಾಲವು 40 ಕೋಟಿ ಪೌಂಡಾಗಬಹುದೆಂತ ಅಂದಾಜು ಮಾಡಲಾಗಿದೆ. ಇದಕ್ಕೆ ಕಡಿಮೆ ಪಕ್ಷ ಶೇಕಡ 30 ರ ದರದಲ್ಲಿ ಬಡ್ಡಿ ಲೆಕ್ಕ ಹಾಕಿದರೆ ಈ ಸಾಹುಕಾರರ ಉತ್ಪತ್ತಿಯು 12 ಕೋಟಿ ಪೌಂಡಾಗಬಹುದು. ಶೇಕಡ 12 ರ ದರದ ಬಡ್ಡಿ ನ್ಯಾಯವೆಂತ ಒಪ್ಪಿದರೆ ಕಡಿಮೆ ಬಡ್ಡಿಯೇ 8 ಕೋಟಿ ಪೌಂಡಾಯಿತು. ಭೂಕಂದಾಯವನ್ನು ಹೋಲಿಸಿ ನೋಡಿ. ಇದು ಸುಮಾರು ಎರಡುವರೆ ಕೋಟಿ ಪೌಂಡಾಗುತ್ತದೆ. ಮಿಲಿಟರಿ ಖರ್ಚು 4 ಕೋಟಿ ಹತ್ತು ಲಕ್ಷ ಮಾತ್ರವಾಗುತ್ತದೆ.

ವ್ಯಾಪಾರದಲ್ಲಿ ಮಧ್ಯವರ್ತಿಗಳು ಎಷ್ಟೋ ತಿನ್ನುತ್ತಾರೆ. ಇವರು ತುಂಬಾ ಘಾಸಿ ಮಾಡುತ್ತಾರೆಂತ ಸರಕಾರವೇ ಒಪ್ಪುತ್ತದೆ. ಆದರೆ ಇವರು ಕೃಷಿಕನ ಉತ್ಪತ್ತಿಯಲ್ಲಿ ಯಾವ ಭಾಗವನ್ನು ತಿನ್ನುತ್ತಾರೆಂಬುದನ್ನು ಅಂದಾಜು ಮಾಡಿರುವುದಿಲ್ಲ.

ಕೃಷಿಕನ ಉತ್ಪತ್ತಿಯ ಮೇಲೆ ಜೀವಿಸುವವನು ಪ್ರತಿ ಜಮೀನ್‍ದಾರನೊಬ್ಬನಾಗಿದ್ದಾನೆ. ಸಾಧಾರಣವಾಗಿ ರೈತನು ಹಕ್ಕು ಕಳಕೊಂಡವನ ಸಂತತಿಯವನಾಗಿರುತ್ತಾನೆ. ಅಥವಾ ಬೇರೆ ಬಾಹಾರಾದ ಜಮೀನ್‍ದಾರನ ನೌಕರಿ ಕೊಂಡವನಾಗಿರುತ್ತಾನೆ. ಅಥವ ಒಬ್ಬ ಸಾಲಗಾರರ ಭೂಮಿಯನ್ನು ಸಾಲಕ್ಕೆ ವಹಿಸಿಕೊಂಡವನಾಗಿರುತ್ತಾನೆ.

ಈಗ ಹಿಂದೂಸ್ಥಾನದಲ್ಲಿರುವ ಭೂಮಿ ಹಿಡುವಳಿಯನ್ನು ಬ್ರಿಟಿಷರು ರಚಿಸಿದ್ದಾಗಿದೆ. ಮೊಗಲರ ಕಾಲದಲ್ಲಿ ಕಂದಾಯ ವಸೂಲ್ ಮಾಡುವ ಅಧಿಕಾರಿಗಳಿದ್ದರು. ಅವರು ವಸೂಲಾದ ಕಂದಾಯದ ಒಂದು ಭಾಗವನ್ನು ತಮ್ಮ ಕಮಿಶನಾಗಿ ಇಟ್ಟುಕೊಳ್ಳುತ್ತಿದ್ದರು. ಇಂಥವರನ್ನು ಕಂಪೆನಿ ಸರಕಾರವು ಅವರ ಸಂಗ್ರಹಿಸುತ್ತಿದ್ದ ಭೂಮಿಗಳ ಮಾಲೀಕರನ್ನಾಗಿಯೇ ಮಾಡಿ ಬಿಟ್ಟಿತು. ಇದು ಇಂಗ್ಲಿಷ್ ಭೂಮಿ ಹಿಡುವಳಿ ತಿಳಿದಿದ್ದ ಯಾವನಿಗೂ ಇಂಗ್ಲಿಷರಿಗೆ ಸ್ವಭಾವಿಕವಾಗಿಯೇ ತೋರಿತು. ಇದು ರಾಜ ತಂತ್ರವಾಗಿದ್ದರೂ ಇರಬಹುದು. ಇಂಥಾ ದೊಡ್ಡ ಭೂಮಾಲೀಕರನ್ನು ಗರೀಬರ ಮೇಲೆ ಅಧಿಕಾರ ನಡಿಸುವ ಹಕ್ಕು ಕೊಟ್ಟು ಸರಕಾರದ ಬೆಂಬಲಗಾರರನ್ನಾಗಿ ಮಾಡಿಕೊಂಡಿತು. ಈ ಹಿಡುವಳಿಯ ಅತಿ ದುಷ್ಟ ಪದ್ಧತಿಯು ಬಂಗಾಳದಲ್ಲಿದೆ. ಅಲ್ಲಿ ಇಂಥಾ ಹಿಡುವಳಿಗಳನ್ನು ಲಾರ್ಡ್ ಕಾರ್ನ್‍ವಾಲೀಸನು ಖಾಯಂ ಹಿಡುವಳಿಯಾಗಿ ಮಾಡಿಬಿಟ್ಟನು. ಜಮೀನ್‍ದಾರನಿಂದ ಸರಕಾರಕ್ಕೆ ಸಲ್ಲಬೇಕಾದ ಮೊಬಲಗನ್ನು ಹೆಚ್ಚಿಸಬಾರದಾದರೂ, ರೈತನಿಂದ ಜಮೀನ್‍ದಾರನಿಗೆ ಸಲ್ಲಬೇಕಾದ ಗೇಣಿಯನ್ನು ಪ್ರತಿ 12 ವರ್ಷಗಳಲ್ಲಿ ಹೆಚ್ಚಿಸಬಹುದು. ಈ ಹಕ್ಕನ್ನು 138 ವರ್ಷಗಳಿಂದ ನಿಷ್ಕರುಣೆಯಿಂದ ಉಪಯೋಗಿಸುತ್ತಲೇ ಬಂದರು. ಈ ಪದ್ಧತಿ ಮೇರೆ ಜಮೀನ್‍ದಾರನಿಗೆ ಸಿಕ್ಕುವ ಗೇಣಿ ಪೈಕಿ ಕಾಲು ಭಾಗ ಮಾತ್ರ ಸರಕಾರಕ್ಕೆ ಹೋಗುತ್ತದೆ. ಬಾಕಿ ಮುಕ್ಕಾಲು ಭಾಗ ಜಮೀನ್‍ದಾರನಿಗೇ ಉಳಿಯುತ್ತದೆ.

ಉತ್ತರ ಹಿಂದೂಸ್ಥಾನದಲ್ಲಿ ಇತರ ಕಡೆಗಳಲ್ಲಿ ಮುಖ್ಯವಾಗಿ ಸಂಯುಕ್ತ ಪ್ರಾಂತ್ಯದಲ್ಲಿ ಕಂದಾಯವನ್ನು 30 ವರ್ಷಕ್ಕೊಂದಾವರ್ತಿ ನಿರ್ಣಯಿಸುತ್ತಾರೆ. ಗೇಣಿಯ ಶೇಕಡ 55 ರಷ್ಟು ಜಮೀನ್‍ದಾರನು ಉಳಿಸಿಕೊಂಡು ಉಳಿದದ್ದನ್ನು ಸರಕಾರಕ್ಕೆ ಕೊಡುತ್ತಾನೆ. ಆಗಿಂದಾಗ್ಯೆ ಕಂದಾಯವನ್ನು ಬದಲಾಯಿಸುವ ಪದ್ಧತಿಯೇ ಒಳ್ಳೇದು. ಆದರೂ ಈಗಿನಂತೆ ಧಾರಣೆಯು ಬಹಳ ಹೆಚ್ಚು ಕಡಿಮೆಯಾಗುವಾಗ ಈ ಪದ್ಧತಿಯಿಂದ ಸಹ ಕೇಡಾಗುತ್ತದೆ. ದಕ್ಷಿಣ ಹಿಂದೂಸ್ಥಾನದಲ್ಲಿ ಮಧ್ಯವರ್ತಿ ಜಮೀನ್‍ದಾರನಿಲ್ಲ. ರೈತನೇ ಸರಕಾರಕ್ಕೆ ಕಂದಾಯ ಕೊಡುತ್ತಾನೆ. ಹಣ ಸಾಲ ಕೊಟ್ಟು ಭೂಮಿ ವಹಿಸಿಕೊಂಡ ಜಮೀನ್‍ದಾರನು ಕೆಲವು ಕಡೆಗಳಲ್ಲಿದ್ದಾನೆ.

ಕಂದಾಯ ವಸೂಲ್ ಮಾಡುವ ಅಧಿಕಾರ ಇದ್ದವರನ್ನೇ ಮಾಲೀಕರನ್ನಾಗಿ ಮಾಡಿದ್ದು ನಾವು ಈ ಪ್ರಾಂತ್ಯದವರಿಗೆ ಮಾಡಿದ ದೊಡ್ಡ ಅನ್ಯಾಯವಾಗಿದೆ. ನಮ್ಮ ಆಳ್ವಿಕೆಯು ತಪ್ಪಿದರೂ ಸಹ ಈ ಭೂಮಾಲೀಕರ ಹಕ್ಕು ತಪ್ಪುವುದಿಲ್ಲ. ಈ ಜಮೀನ್‍ದಾರರು ಭೂಮಿಯ ಉತ್ಪತ್ತಿಯಲ್ಲಿ ಭಾಗ ತೆಗೆದುಕೊಳ್ಳುತ್ತಾರೆಯೇ ಹೊರತು ಕೃಷಿಯ ಅಭಿವೃದ್ಧಿಗೆ ಏನೂ ಖರ್ಚು ಮಾಡುವುದಿಲ್ಲ. ಅವನು ಈ ಜಮೀನುಗಳ ಮೇಲೆ ಮೂಲಧನವೇನೂ ಹಾಕುವುದಿಲ್ಲ. ಅನೇಕ ವೇಳೆ ಅವನು ಕಠಿಣ ಹೃದಯದ ಮಾಲೀಕನಾಗುತ್ತಾನೆ. ಗೇಣಿ ಹಣ ವಸೂಲ್ ಮಾಡುವುದೂ ಅಲ್ಲದೆ ದವಸ ಧಾನ್ಯ ಮುಂತಾದ್ದರಲ್ಲಿ ಹಡಲಿಕೆ ಸಹ ತೆಗೆದುಕೊಳ್ಳುತ್ತಾನೆ. ಬೋಗ ಸಹ ಮಾಡುತ್ತಾನೆ. ಈಚೆಗೆ ಏರ್ಪಡಿಸಲ್ಪಟ್ಟ ಶಾಸನಗಳಿಂದ ರೈತನಿಗೆ ಸಹಾಯವೇನೂ ದೊರೆತಿಲ್ಲ. ಅನುಕೂಲಕ್ಕೆ ರೈತನ ಓಟೆಲ್ಲಾ ಜಮೀನ್‍ದಾರನ ಹೇಳಿಕೆಯಲ್ಲಿರುವುದರಿಂದ ಜಮೀನ್‍ದಾರನಿಗೆ ರಾಜಕೀಯ ವಿಚಾರದಲ್ಲಿ ತುಂಬಾ ಬಲವಿದೆ. ಬಡ ರೈತನಿಗೆ ಓಟಿಲ್ಲ. ಈ ಜಮೀನ್‍ದಾರ್ ಹಿಡುವಳಿಯನ್ನು ಪ್ರಾರಂಭದ ಬ್ರಿಟಿಷ್ ಅಧಿಕಾರಿಗಳು ಏರ್ಪಡಿಸಿದರು. ಈಗಲೂ ಸಹ ಅವರಿಗೆ ಸರಕಾರದ ಸಹಾಯ ತುಂಬಾ ಇದೆ. ಹಿಂದೂಸ್ಥಾನದಲ್ಲಿ ಕೃಷಿ ಉತ್ಪತ್ತಿಯು ಉತ್ಪತ್ತಿ ತೆರಿಗೆಗೆ ಗುರಿಯಾಗಿಲ್ಲ. ಇದು ಬಡ ರೈತನ ಸಹಾಯಕ್ಕಾಗಿಯಲ್ಲ. ಈ ಬಲವಾದ ತುಂಬಾ ಹಣವನ್ನು ಭೂಮಿಯಿಂದ ಪಡೆಯುವ ಜಮೀನ್‍ದಾರನ ಸಹಾಯಕ್ಕಾಗಿ ಮಾಡಿಕೊಂಡ ಏರ್ಪಾಡಾಗಿದೆ.

ರೈತನು ಜಮೀನ್‍ದಾರನಿಗೆ ಕೊಡುವ ಹಡಲಿಕೆಯು ಅವನ ಉತ್ಪತ್ತಿಯ ಯಾವ ಭಾಗವೆಂಬುದನ್ನು ನೋಡಬೇಕಾಗಿದೆ. ಬಂಗಾಳದಲ್ಲಿ ಭೂಮಿ ಕಂದಾಯದ ಮೂರರಷ್ಟು ಆಗುತ್ತದೆ. ಸಂಯುಕ್ತ ಪ್ರಾಂತ್ಯದಲ್ಲಿ ಭೂಕಂದಾಯದಷ್ಟೇ ಆಗುತ್ತದೆ. ಪಂಜಾಬಿನಲ್ಲಿ ರೈತನ ನಿವ್ವಳ ಉತ್ಪತ್ತಿಯ ಮೂರರಷ್ಟಾಗುತ್ತದೆ. ರಾಷ್ಟ್ರೀಯ ಪಕ್ಷದವರು ಈ ವಿಷಯಕ್ಕೆ ಸಾಕಷ್ಟು ಗಮನ ಕೊಟ್ಟಿರುವುದಿಲ್ಲ. ಈ ಪಕ್ಷದವರಿಗೆ ಧನಿಕರ ಸಂಬಂಧವಿರುವದರಿಂದ ಇರಬಹುದು. ರಾಷ್ಟ್ರೀಯ ಪಕ್ಷದವರು ಬರೇ ಭೂಕಂದಾಯವನ್ನು ಮಾತ್ರ ವಿರೋಧಿಸುತ್ತಾರೆ. ಆದರೆ ಭೂಕಂದಾಯದ ಸ್ವಲ್ಪ ಭಾಗವಾದರೂ ರೈತನಿಗೆ ಬೇರೆ ರೂಪದಲ್ಲಿ ಹಿಂತಿರುಗಿ ಬರುತ್ತದೆ. ಆದರೆ ಜಮೀನ್‍ದಾರನಿಗೆ ಕೊಡುವ ಗೇಣಿಯ ಸ್ವಲ್ಪ ಭಾಗವಾದರೂ ಹಿಂತಿರುಗುವುದಿಲ್ಲ.

ಹಿಂದೂಸ್ಥಾನದ ಸಂಪತ್ತಿನ ಹಂಚಿಕೆಯನ್ನು ಅಜಮಾಯಿಸುವುದರಲ್ಲಿ ರೈತನಿಗೆ ಸಾಲ ಕೊಡುವ ಸಾಹುಕಾರನೂ, ಜಮೀನ್‍ದಾರನೂ, ಮಾಲು ವಿಕ್ರಿ ಮಾಡುವುದರಲ್ಲಿ ಇರುವ ಮಧ್ಯಸ್ಥನೂ ತುಂಬಾ ಭಾಗವನ್ನು, ಸರಕಾರವು ತೆಗೆದುಕೊಳ್ಳುವುದಕ್ಕಿಂತ ಎಷ್ಟೋ ಹೆಚ್ಚು ಭಾಗವನ್ನು ತಿಂದು ಹಾಕುತ್ತಾರೆಂತಾಯಿತು. ರಾಷ್ಟ್ರೀಯ ಪಕ್ಷದವರು ಈ ರೀತಿ ಸಾಮಾಜಿಕ ರಚನೆಯಿಂದ ಆಗುವ ಕೆಡುಕಿಗಾಗಿ ಹೆಚ್ಚಾಗಿ ಸರಕಾರದ ಮೇಲೆಯೇ ಆಕ್ಷೇಪಿಸುತ್ತಾರೆ. ರೈತನು ಸಾಹುಕಾರನಿಗೂ, ಜಮೀನ್‍ದಾರನಿಗೂ ಕೊಡುವ ಹಡಲಿಕೆಯು ಹಿಂದೂಸ್ಥಾನದಲ್ಲೇ ಉಳಿಯುತ್ತದೆ. ಆದರೆ ಜನಾಂಗವನ್ನು ಜಯಿಸಿ ಆಳುವ ಜನಾಂಗಕ್ಕೆ ದೊಡ್ಡ ತೆರಿಗೆ ಕೊಡುತ್ತಿಲ್ಲವೇ?

ಇದು ನಿಜ—ಹಣ ದೇಶದಿಂದ ಹೊರಗೆ ಹೋಗುತ್ತದೆ. ಈ ಹಣವೆಲ್ಲಾ ಜಮೀನ್‍ದಾರನ, ಸಾಹುಕಾರನ ಹಣದಂತೆ ಹಿಂದೂಸ್ಥಾನದಲ್ಲೇ ಖರ್ಚಾಗುವುದಿಲ್ಲ. ಇದನ್ನು ಅಲ್ಲವೆನ್ನಲು ಸಾಧ್ಯವಿಲ್ಲ. ಆದರೆ ಹಾಗೆ ಕೊಡುವ ತೆರಿಗೆ ಬ್ರಿಟಿಷ್ ಜನರು ಮಾಡುವ ಕೆಲಸಕ್ಕೆ ಪ್ರತಿಫಲವೆಂತ ಜವಾಬು ಕೊಡಬಹುದು. ಇದಕ್ಕೆ ಕೆಲಸ ಮಾಡುವವರಿಗೆ ಕೊಡುವುದು ವಿಪರೀತವಾಗಿದೆಯೆಂತಲೂ, ಅವರು ಕೆಲಸ ಮಾಡಬೇಕೆಂತ ಇಂಡಿಯಾವು ಹೇಳುವುದಿಲ್ಲವೆಂತಲೂ, ಇಂಡಿಯಾದ ಅಪೇಕ್ಷೆಗೆ ವಿರೋಧವಾಗಿಯೆ ಮಾಡುವುದಾಗಿದೆಯೆಂತಲೂ ಹಿಂದೀಯರು ಜವಾಬು ಕೊಡುತ್ತಾರೆ. ಹೀಗೆ ಹಿಂದೂಸ್ಥಾನದ ಹೊರಗೆ ಸೋರಿ ಹೋಗುವ ಹಣವೇ ಹಿಂದೂಸ್ಥಾನದ ಬಡತನಕ್ಕೆ ಕಾರಣವೋ ಎಂಬ ಸವಾಲು ಉಳಿಯುತ್ತದೆ.

ಈ ಆಕ್ಷೇಪವು ಇಂಡಿಯಾ ಸರಕಾರವು ಇಂಗ್ಲೆಂಡಿನಲ್ಲಿ ವರ್ಷ ವರ್ಷ ಮಾಡುವ ಖರ್ಚಿಗೆ ಅನ್ವಯಿಸುತ್ತದೆ. ಇದರಲ್ಲಿ ಹೆಚ್ಚಿನ ಭಾಗವು ಹಿಂದೂಸ್ಥಾನದಲ್ಲಿ ರೈಲ್‍ವೇ, ನೀರಾವರಿ ಕಾಮಗಾರಿ ಮುಂತಾದ್ದಕ್ಕೆ ಹೊರಗಿನವರು ಹಾಕಿರುವ ಮೂಲ ಧನದ ಮೇಲೆ ಕೊಡುವ ಬಡ್ಡಿಯೇ ಮುಖ್ಯವಾಗಿದೆ. ಇದರ ನಂತರ ರಜೆಯಲ್ಲಿರುವ ಪೆನ್ಶನ್ ಪಡೆಯುವ ಉದ್ಯೋಗಸ್ಥರಿಗೆ ಕೊಡುವ ಸಂಬಳ ಮತ್ತು ಪೆನ್ಶನ್ ಹಣವಾಗಿದೆ. ಬ್ರಿಟಿಷರು ಮಾಡುವ ಕೆಲಸಗಳಿಗೆ ಹಿಂದೀಯರು ತರಬೇತು ಹೊಂದಿಲ್ಲವೆನ್ನುತ್ತಾರೆ. ಹಿಂದೀಯರನ್ನು ಇಂಗ್ಲಿಷರೇ ತರಬೇತು ಮಾಡಲಿಲ್ಲವೆಂಬ ಜವಾಬು ಇದೆ.

1887ನೇ ಇಸವಿಯ ದಂಗೆ ಕಳೆದ ನಂತರ ಈಸ್ಟ್ ಇಂಡಿಯಾ ಕಂಪೆನಿಗೆ ಉಂಟಾದ ನಷ್ಟವನ್ನು ಕೊಡಲಿಕ್ಕಾಗಿ ಮಾಡಿದ ಸಾಲವು ನ್ಯಾಯವಾದದ್ದಲ್ಲವೆಂತ ಹಿಂದೀಯರು ವಾದಿಸುವುದರಲ್ಲಿ ನ್ಯಾಯವಿದೆ. ಬ್ರಿಟಿಷ್ ಸರಕಾರವೇ ಈ ನಷ್ಟವನ್ನು ಕೊಡಬೇಕಿತ್ತು. ಈ ಅಧಿಕಾರ ಬದಲಾವಣೆಯಲ್ಲಿ ಹಿಂದೂಸ್ಥಾನವು ಭಾಗಿಯಾಗಿರಲಿಲ್ಲ. ಅವಶ್ಯವಿಲ್ಲದ, ಕೆಲವು ಅನ್ಯಾಯದ, ಕೆಲವು ಹಿಂದೂಸ್ಥಾನಕ್ಕೆ ಏನೂ ಸಂಬಂಧವಿಲ್ಲದ ಯುದ್ಧಗಳ ಖರ್ಚನ್ನು ಹಿಂದೂಸ್ಥಾನದ ಮೇಲೆ ಹೇರಿದ್ದು ನ್ಯಾಯವಿಲ್ಲವೆಂಬುದರಲ್ಲಿ ನ್ಯಾಯವಿದೆ. 1857 ರಲ್ಲಿ ಹಿಂದೂಸ್ಥಾನವು ಪುನಃ ಸೋತದ್ದಕ್ಕೆ ದಂಡತೆತ್ತಂತಾಯಿತು. ಅಫೀಮಿಗಾಗಿ ಚೈನಾದ ಮೇಲೆ ಮಾಡಿದ ಯುದ್ಧದಿಂದ ಚೈನಾದ ವ್ಯಾಪಾರವು ಬ್ರಿಟಿಷರಿಗೆ ಸಿಕ್ಕಿತು, ಹಿಂದಿಯರಿಗಲ್ಲ. ಹಾಂಗ್‍ಕಾಂಗನ್ನು ಬ್ರಿಟನಿಗೆ ಸೇರಿಸಿ ಕೊಂಡರೇ ಹೊರತು ಹಿಂದೂಸ್ಥಾನಕ್ಕೆ ಅಲ್ಲ. ಬರ್ಮಾವನ್ನು ಗೆಲ್ಲಬೇಕೆಂತ ಯಾವ ಹಿಂದೀಯನಿಗೆ ಆಸೆ ಇತ್ತು? ಮೊದಲನೇ ಅಫಘಾನ್ ಯುದ್ಧವು ನ್ಯಾಯವಾದದ್ದೆಂತ ಹೇಗೆ ಹೇಳಲು ಸಾಧ್ಯವಿದೆ? ಎಬಿಸೀನಿಯಕ್ಕೆ ಹಿಂದೀ ಸೈನ್ಯವನ್ನು ಕಳುಹಿಸಲು ಸಾಧ್ಯವಾಯಿತೆಂದರೆ ಅಷ್ಟರ ಮಟ್ಟಿಗೆ ಹಿಂದೂಸ್ಥಾನದಲ್ಲಿ ಆ ಸೈನ್ಯವು ಹೆಚ್ಚೇ ಆಗಿತ್ತು. ಹೀಗೆಯೇ ಎಷ್ಟೋ ಉದಾಹರಣೆ ಕೊಡಬಹುದು. ಈ ಲೆಖ್ಖವೆಲ್ಲಾ ತೀರಾ ಬಹಳ ದಿನವಾಯಿತೆಂತ ಜವಾಬು ಕೊಡುವುದುಂಟು. ಇದು ಸರಿಯಲ್ಲ. ಹೀಗೆ ಖರ್ಚಾದ ಹಣವಿದ್ದಿದ್ದರೆ ಹಿಂದೂಸ್ಥಾನದಲ್ಲಿ ಉಳಿಯುತ್ತಿತ್ತು.

ಈ ಪ್ರಪಂಚವು ಸ್ವತಂತ್ರವಾಗಿದ್ದಿದ್ದರೆ ಹಿಂದೂಸ್ಥಾನಕ್ಕೆ ಈ ಬಾಬುಗಳಲ್ಲಿ ಪೈಸೆ ಸಿಕ್ಕುತ್ತಿತ್ತು. ಒಂದು ಸಾಮ್ರಾಜ್ಯವು ಹಿಂದೂಸ್ಥಾನವನ್ನು ತನ್ನ ಬಲದಿಂದ ಗೆದ್ದಿತು. ತನ್ನ ಪ್ರಯೋಜನಕ್ಕೆ ಉಪಯೋಗಿಸಿಕೊಂಡಿತು. ಹಿಂದೂಸ್ಥಾನದ ಬಡತನದ ವಿಚಾರವು ಇಷ್ಟು ಸುಲಭದ ಜವಾಬಿಗೆ ಒಳಗಾಗುವುದಿಲ್ಲ. ಹುಚ್ಚುತನದ ಅವಶ್ಯದ ಯುದ್ಧಗಳೂ, ಖರ್ಚುಗಳೂ ಆದವೇನೋ ನಿಜ. ಕ್ಲೈವ್ ಹುಟ್ಟದೇ ಇದ್ದಿದ್ದರೆ ಹಿಂದೂಸ್ಥಾನಕ್ಕೆ ಇಂಥಾ ಯುದ್ಧಗಳು ಬರುತ್ತಿರಲಿಲ್ಲವೇ? ಹಿಂದೂಸ್ಥಾನಕ್ಕೆ ಬ್ರಿಟಿಷರು ಬರದೆ ಇದ್ದಿದ್ದರೆ ಹಿಂದೂಸ್ಥಾನವು ಸ್ವರ್ಗವೇ ಆಗಿರುತ್ತಿತ್ತು ಎನ್ನುತ್ತಾರೆ. ಹಿಂದೂಸ್ಥಾನದಲ್ಲಿ ಈ ತೆರನ ಯುದ್ಧಗಳು ಇರುತ್ತಲೇ ಇದ್ದವು. ಅಥವಾ ಯಾವನಾದರೂ ಒಬ್ಬ ರಾಜನು ಒಟ್ಟು ಹಿಂದೂಸ್ಥಾನವನ್ನು ಒಗ್ಗಟ್ಟಾಗಿ ಮಾಡಿದ್ದಿದ್ದರೆ ಆಗಲೂ ಸೈನ್ಯ, ನೌಕಾ ಸೈನ್ಯಕ್ಕಾಗಿ ಖರ್ಚು ಮಾಡಬೇಕಿತ್ತಲ್ಲವೇ?

ಮಿಲಿಟರಿಗಾಗಿಯೂ ಪೋಲೀಸಿಗಾಗಿಯೂ ಆಗುವ ಖರ್ಚಿನಿಂದ ದೇಶದೊಳಗೆ ಶಾಂತಿಯಾಯಿತು. ಅನ್ಯೋನ್ಯ ಯುದ್ಧಗಳು ಇಲ್ಲವಾಯಿತು. ಪರರಾಜರ ಧಾಳಿಯು ಅಪರೂಪವಾಯಿತು. ಎನ್ನುತ್ತಾರೆ. ಇದರಿಂದ ಪ್ರತ್ಯೇಕ ವ್ಯಕ್ತಿಗಳು ಹಣ ಕೂಡಿಸಲೂ ಅನುಕೂಲವಾಯಿತು. ಒಟ್ಟು ಜನಾಂಗಕ್ಕೂ ಸಂಪತ್ತನ್ನು ಹೆಚ್ಚಿಸಿಕೊಳ್ಳಲು ಅವಕಾಶವಾಯಿತು. ಬ್ರಿಟಿಷರ ಮಿಲಿಟರಿ ಖರ್ಚು ಹಿಂದೂಸ್ಥಾನದ ಮೇಲೆ ಬೀಳದೆ ಇದ್ದಿದ್ದರೂ ಹಿಂದೂಸ್ಥಾನವು ಇನ್ನೂ ಬಡತನದಲ್ಲೇ ಇರಬಹುದಿತ್ತು. ಈ ವಾದವನ್ನೆಲ್ಲಾ ಬಿಟ್ಟು ಹಿಂದೂಸ್ಥಾನದ ಸರ್ಕಾರವು ಮಾಡುತ್ತಿರುವ ಖರ್ಚಿನ ಭಾರವನ್ನು ಹೊರಲು ಹಿಂದೂಸ್ಥಾನಕ್ಕೆ ಶಕ್ತಿ ಇದೆಯೋ ಎಂತ ನೋಡಬೇಕಾಗಿದೆ. ಮ. ಗಾಂಧಿಯವರು ಕಠಿಣ ಸಮಸ್ಯೆಗಳನ್ನು ಸುಲಭ ರೀತಿಯಿಂದ ಬಿಡಿಸುವುದರಲ್ಲಿ ನಿಪುಣರು. ಅವರು ಹೇಳುವುದೇನೆಂದರೆ—ಸಿವಿಲ್ ಮತ್ತು ಮಿಲಿಟರಿ ಖರ್ಚನ್ನು ಅರ್ಧಕ್ಕೆ ಇಳಿಸಿ ಭೂಕಂದಾಯವನ್ನು ಸಹ ಅರ್ಧಕ್ಕೆ ಇಳಿಸಬೇಕು. ಉಪ್ಪಿನ ಸುಂಕವನ್ನು ತೆಗೆದುಬಿಡಬೇಕೆನ್ನುತ್ತಾರೆ. ಇಂಡಿಯಾ ಸರ್ಕಾರದ ಉತ್ಪತ್ತಿಯಲ್ಲಿ ಭೂಕಂದಾಯವು ಅಷ್ಟೊಂದು ಮುಖ್ಯವಾದದ್ದಲ್ಲ. 1883ರಿಂದ 1923ಕ್ಕೆ ಒಟ್ಟು ಸರ್ಕಾರದ ಉತ್ಪತ್ತಿಯಲ್ಲಿ ಶೇಕಡ 53ರಿಂದ 20ಕ್ಕೆ ಇಳಿದಿದೆ. ಆದರೆ ಅದು ಸಮಾಜ ರಚನೆಯಲ್ಲಿ ಬಹಳ ಮುಖ್ಯ ಅಂಶವಾಗಿದೆ. ಗ್ರಾಮಗಳಲ್ಲಿರುವ ಬಡ ರೈತನು ಕೊಡುವುದೇ ಭೂಕಂದಾಯ ಮತ್ತು ಉಪ್ಪಿನ ಸುಂಕ. ಪರದೇಶದಿಂದ ಸುಂಕಕ್ಕೆ ಈಡಾಗಿ ಬರುವ ಪದಾರ್ಥಗಳನ್ನು ಅವನು ಉಪಯೋಗಿಸುವುದೇ ಇಲ್ಲ. ರೈತನು ಕೊಡುವ ಭೂಕಂದಾಯವು ಅವನ ಉತ್ಪತ್ತಿಯ ಯಾವ ಭಾಗವಾಗುತ್ತೆಂಬುದನ್ನು ನಿರ್ಣಯಿಸುವುದು ಕಷ್ಟವಾದರೂ ಪಂಜಾಬಿನಲ್ಲಿ ರೈತನ ನಿವ್ವಳ ಉತ್ಪತ್ತಿಯ ಶೇಕಡ 20 ರಷ್ಟು ಆಗುತ್ತದೆಂಬುದನ್ನೇ ತೆಗೆದುಕೊಳ್ಳಬಹುದು. ಈಗಿನ ಧಾರಣೆಯಿಳಿತದಲ್ಲಿ ಇದು ಇನ್ನೂ ಹೆಚ್ಚಾಗಬಹುದು.

ಗ್ರಾಮವಾಸಿಗಳ ಹೀನ ಸ್ಥಿತಿಯನ್ನು ನೋಡಿದರೆ ಅವರ ಮೇಲೆ ಹೊರಿಸುವ ಯಾವ ತೆರಿಗೆಯೇ ಆಗಲೀ ಅನ್ಯಾಯವೆಂತ ತೋರುತ್ತದೆ. ರೈತನಿಗೆ ಹೊಟ್ಟೆ ತುಂಬಾ ಅನ್ನವೇ ಇಲ್ಲದಿರುವಾಗ ಅವನ ಮೇಲೆ ತೆರಿಗೆಯನ್ನು ಯಾವ ನಾಗರೀಕ ಸರ್ಕಾರ ಹಾಕೀತು? ಜನರ ಮೇಲೆ ತೆರಿಗೆಯು ಯಾವ ರೀತಿಯಲ್ಲಿ ಹಾಕಲ್ಪಟ್ಟಿದೆ ಎಂಬುದನ್ನು ವಿಚಾರಿಸಿದರೆ ಜನರ ಬಡತನದ ಕಾರಣ ತಿಳಿದೀತು.

ಮಧ್ಯವರ್ತಿ ಮತ್ತು ಪ್ರಾಂತೀಯ ಸರ್ಕಾರಗಳ ಒಟ್ಟು ಉತ್ಪತ್ತಿಯ ಶೇಕಡ 26ರಷ್ಟು ಮಿಲಿಟರಿಗೂ, ಶೇಕಡ 6 ವಿದ್ಯೆಗೂ, ಸಾರ್ವ. ಆರೋಗ್ಯ ಸಾಧನೆಗೂ ಖರ್ಚಾಗುತ್ತದೆ. ಮಿಲಿಟರಿ ಖರ್ಚನ್ನು ಸೂಕ್ಷ್ಮವಾಗಿ ನೋಡಿದರೆ ಇದರಲ್ಲಿ ಹೆಚ್ಚಿನ ಭಾಗವು ಹಿಂದೂಸ್ಥಾನದಲ್ಲಿ ಇನ್ನೊಂದು ದಂಗೆಯಾದೀತೋ ಎಂಬ ಭಯಕ್ಕಾಗಿಯೇ ಇರುವುದಾಗಿದೆ ಎಂತ ಸ್ಪಷ್ಟವಾಗುತ್ತದೆ. ಈಚೆಗೆ ತಾನೇ ಹಿಂದೀಯರಿಗೆ ಮಿಲಿಟರಿಯಲ್ಲಿ ಮುಖ್ಯ ಅಧಿಕಾರ ಕೊಟ್ಟದ್ದು. ಅವರಲ್ಲ ಫಿರಂಗಿ ಸೈನ್ಯಗಳಲ್ಲಿ ಹಿಂದೀಯರನ್ನು ಇನ್ನೂ ಸೇರಿಸಿಕೊಂಡಿಲ್ಲ. ಹಿಂದೀ ಸೈನ್ಯಕ್ಕೆಲ್ಲಾ ಆಫೀಸರುಗಳು ಇಂಗ್ಲಿಷ್‍ಮೆನ್ ಮಾತ್ರವಲ್ಲ. ಪ್ರತಿ ಮೂರು ಹಿಂದೀ ಸಿಪಾಯಿಗೆ ಒಬ್ಬ ಬ್ರಿಟಿಷ್ ಸಿಪಾಯಿ ಮುಂತೆ ಲೆಖ್ಖ ಬೀಳುವಷ್ಟು ಬ್ರಿಟಿಷ್ ಸೈನ್ಯವನ್ನು ಇಟ್ಟಿದ್ದಾರೆ. ಈ ಬ್ರಿಟಿಷ್ ಸಿಪಾಯಿಯ ಅಧೀನದಲ್ಲೇ ಭಯಂಕರವಾದ ಶಸ್ತ್ರಾಸ್ತ್ರಗಳನ್ನು ಇಟ್ಟಿದ್ದಾರೆ. ಹಿಂದೀ ಸಿಪಾಯಿಯನ್ನು ಹತೋಟಿಯಲ್ಲಿ ಇಡಲಿಕ್ಕೆ ಇವರು ಇರುವರು. ಒಬ್ಬ ಹಿಂದೀ ಸಿಪಾಯಿಗೆ ಆಗುವ ಖರ್ಚಿನ ನಾಲ್ಕರಷ್ಟು ಒಬ್ಬ ಬ್ರಿಟಿಷ್ ಸಿಪಾಯಿಗೆ ಖರ್ಚಾಗುತ್ತದೆ. ಒಬ್ಬ ಬ್ರಿಟಿಷ್ ಆಫೀಸರನಿಗೆ 25 ಹಿಂದೀ ಸಿಪಾಯಿಗಳಿಗೆ ಆ[illegible]ವಷ್ಟು ಖರ್ಚು ತಗಲುತ್ತದೆ. ಇಂಡಿಯಾ ಸರ್ಕಾರವು [illegible]ದು ಖರ್ಚು ಮಾಡುತ್ತದೆಯೆನ್ನಲಿಕ್ಕಾಗುವುದಿಲ್ಲ. [illegible]ಯವನ್ನು ಹೆಚ್ಚಿಸಬೇಕಾಗಿ ಬಂದಾಗ ಬಹಳ ಬೇಸರ[illegible]ಪ್ಪಿಸುತ್ತದೆ. ಆದರೆ ಮಿಲಿಟರಿ, ಪೋಲೀಸ್, [illegible] ಮಾಡುವ ಖರ್ಚನ್ನು ಇಳಿಸುವುದಿಲ್ಲ. ದೇಶದ[illegible]ದ ಮೇಲೆ ಅತೃಪ್ತಿ ಹೆಚ್ಚಿದಾಗ ತನ್ನ ಕ್ಷೇಮವ[illegible] ಕೊಳ್ಳಲು ಇರುವ ಸಂಸ್ಥೆಗಳು ಇವು.

ಸರ್ಕಾರದ ಸಿವಿಲ್ ಇಲಾಖೆಗಳಲ್ಲಿ ಬ್ರಿಟಿ[illegible]ಗಳಿಗೆ ಕೊಡುವ ಸಂಬಳವು ಅತ್ಯಧಿಕವಾಗಿದೆ. [illegible]ಲ್ಲಿರುವ ಬ್ರಿಟಿಷರು ತಮ್ಮ ಜೀವನಕ್ಕಾಗಿ [illegible]ಕ್ಕಿಂತ ಮೂರು ಖರ್ಚು ಮಾಡುತ್ತಾರೆ. [illegible] ತಮ್ಮ ಬಿಳೀ ಚರ್ಮದ ಗೌರವಕ್ಕಾಗಿ, [illegible]

ಕೊಡಗು.

ಸನ್ ೧೯೩೩ನೇ ಇಸವಿ

ಜನವರಿ ತಾ. ೨೭ನೇ ಶುಕ್ರವಾರ.

ಪ್ರೆಸ್ ಆರ್ಡಿನೇನ್ಸ್

ಜಾರಿಯಲ್ಲಿರುವ ವರೆಗೆ

ನಾವು

ಅಗ್ರಲೇಖನ

ವನ್ನು

ಪ್ರಕಟಿಸುವುದಿಲ್ಲ.

ಲತ್ತಿ ಹೊಡೆತಕ್ಕೆ ವಿರೋಧ.

ಮದ್ರಾಸ್ ಆಧिಪತ್ಯದಲ್ಲಿ ಪೋಲೀಸಿನವರು ಲತ್ತಿಯನ್ನು ಉಪಯೋಗಿಸುವುದು ಮುಂತಾದ ಕ್ರೂರ ಕೃತ್ಯಗಳನ್ನು ಖಂಡಿಸಿ ದಿವಾನ್ ಬಹದ್ದೂರ್ ಆರೋಗ್ಯಸ್ವಾಮಿ ಮೊದಲಿಯಾರ್ ಮುಂತಾದ ಸುಮಾರು 75 ಜನರು ಕಾಂಗ್ರೆಸಿಗೆ ಸೇರದ ಪ್ರಮುಖರು ಪ್ರಕಟಿಸಿದ ಪತ್ರ.

ಈಚೆಗೆ ಮದ್ರಾಸ್ ಪಟ್ಟಣದಲ್ಲೂ ಮತ್ತು ಆಧಿಪತ್ಯ ಬೇರೆ ಕೆಲವು ಕಡೆಗಳಲ್ಲಿ ನಡೆಯುತ್ತಿರುವ ಕೆಲವು ಕಡೆಗಳಲ್ಲಿ ನಡೆಯುತ್ತಿರುವ ಕೆಲವು ಸಂಗತಿಗಳು ನಮ್ಮನ್ನು ತುಂಬಾ ನೋಯಿಸಿದೆ. ನಾವು ಕಾಂಗ್ರೆಸ್ ಮೆಂಬರುಗಳಲ್ಲ, ಆದರೆ ಶಾಂತಿ ಸ್ಥಾಪನೆಯಾಗಿರಬೇಕೆಂಬ ಆಶೆ ಇರುವ ಪ್ರಜೆಗಳಾಗಿ ಪೋಲೀಸಿನವರಿಗೆ ಈಚೆಗೆ ಕೊಡಲ್ಪಟ್ಟ ಕೆಲಸವನ್ನು ಮಾಡುವುದರಲ್ಲಿ ಅವರು ಮನಸೋ ಇಚ್ಛೆ ದಬ್ಬಾಳಿಕೆ ಅನೇಕ ವೇಳೆ ಮಾನವಿಕ ವೃತ್ತಿಯ ನಡವಳಿಕೆ ನಡಿಸಿದ್ದನ್ನು ನಾವು ಬಲವಾಗಿ ಖಂಡಿಸುತ್ತೇವೆ. ಖಾನೂನಿನಂತೆ ಶಾಂತಿ ರಕ್ಷಣೆ ಮಾಡುವುದು ಸರ್ಕಾರದ ಕರ್ತವ್ಯವಾದರೂ ಮನಸೋ ಇಚ್ಛೆ ಲತ್ತಿಯನ್ನು ಉಪಯೋಗಿಸುವುದೂ ಬಣ್ಣದ ನೀರಿನ ಪಂಪಿನ ಪಿಚಕಾರಿಯನ್ನು ಕೆಲಸಗಾರರ ಮೇಲೂ, ಘಾಯಪಟ್ಟವರಿಗೆ ಸಹಾಯ ಮಾಡಲು ಬಂದ ಸ್ತ್ರೀ ಸ್ವಯಂಸೇವಕರ ಮೇಲೂ ನಿರಪರಾಧಿಗಳಾದ ಸಮುದಾಯದ ಮೇಲೂ ಬಿಡುವುದರಿಂದ ಸರ್ಕಾರದ ಕರ್ತವ್ಯವನ್ನು ಸಾಧಿಸಿದಂತಾಯಿತೆಂತ ನಾವು ನಂಬುವುದಿಲ್ಲ.

ಪೋಲೀಸಿನವರು ಕ್ರೂರ ರೀತಿಯಿಂದಲೂ ಅತಿರೇಕವಾಗಿಯೂ ವರ್ತಿಸಿದ್ದು ಪ್ರಕಟವಾಗದೆ ಇರುವ ದಿನವಿಲ್ಲ. ಇವುಗಳಲ್ಲಿ ಮುಖ್ಯವಾದುವು ಯಾವುವೆಂದರೆ—ಅತಿಯಾಗಿ ಲತ್ತಿಯಿಂದ ಹೊಡೆದ್ದರಿಂದ ಒಬ್ಬ ಸ್ವಯಂ ಸೇವಕನು ತಿರುಪೂರಿನಲ್ಲಿ ಸತ್ತನೆಂಬುದೊಂದು, ಅದೇ ಊರಿನಲ್ಲಿ ಖದ್ದರ್ ಟೋಪಿ ಹಾಕಿದನೆಂಬುದೊಂದೇ ಕಾರಣಕ್ಕಾಗಿ ಒಬ್ಬ ಸ್ವಯಂ ಸೇವಕನಿಗೆ ಹೊಡೆದದ್ದು. ಮಧುರೆಯಲ್ಲಿ ಘಾಯಪಟ್ಟ ಸ್ವಯಂ ಸೇವಕರ ಚಿಕಿತ್ಸೆಗಾಗಿ ಏರ್ಪಾಡಾದ ಆಸ್ಪತ್ರೆಯಿಂದ ರೆಡ್ ಕ್ರಾಸಿನ ಬಾವುಟೆಯನ್ನು ಎಳೆದುಕೊಂಡು ಹೋದದ್ದು, ಘಾಯಪಟ್ಟವರನ್ನು ಆಸ್ಪತ್ರೆಗೆ ಎತ್ತಿಕೊಂಡು ಹೋಗುತ್ತಿದ್ದ ಸ್ತ್ರೀಯರ ಮೇಲೆ ದಬ್ಬಾಳಿಕೆ ನಡಿಸಿದ್ದೂ, ಜ್ಞಾನತಪ್ಪಿ ಬಿದ್ದ ಸ್ವಯಂ ಸೇವಕರನ್ನು ಮತ್ತೂ ಲತ್ತಿಯಿಂದ ಹೊಡೆಯುವುದು. ಜನರನ್ನು ಧೀಕರಿಗೊಳಿಸಿ ಯಾವ ತರದ ನ್ಯಾಯವಾದ ಕೆಲಸ ಸಹ ಮಾಡದಂತೆ ಮಾಡಬೇಕೆಂಬುದೇ ಸರಕಾರದ ಉದ್ದೇಶವೆಂತ ಸಮುದಾಯದ ಜನರು ಸಂಬದೇಕಾಗಿ ಬಂದಿದೆ.

ಈ ವಿದ್ಯಮಾನಗಳಿಂದ ಜನ ಸಮುದಾಯವನ್ನು ಸರಕಾರದ ವಿರೋಧಿಗಳನ್ನಾಗಿ ಮಾಡಿಕೊಳ್ಳುತ್ತದೆಯೆಂತಲೂ, ಯಾವ ತರದ ರಾಜಕೀಯ ತೀರ್ಮಾನವೂ ಆಗಲು ಸಾಧ್ಯವಿಲ್ಲದ ವಾತಾವರಣವನ್ನು ಸರಕಾರವೇ ಮಾಡುತ್ತಿದೆಯೆಂದೂ ನಾವು ಸ್ಪಷ್ಟವಾಗಿ ಹೇಳಬೇಕಾಗಿದೆ.

ಶಾಂತಿ ಸ್ಥಾಪನೆಗೆ ಕೋರಿಕೆ.

ಬೊಂಬಾಯಿ ಕಾಟನ್ ಎಕ್ಸ್‌ಚೇಂಜ್ ಎಂಬ ಸಂಸ್ಥೆಯಲ್ಲಿ ಜಗಜೀವನದಾಸ್ ದೇಸಾಯಿ ಎಂಬವರು ಮಾಡಿದ ಭಾಷಣದ ಸಾರಾಂಶ.

ಮಹಾತ್ಮ ಗಾಂಧಿಯವರು ಹಿಂತಿರುಗಿ ಬಂದಾಗ ಅವರಿಗೆ ರಾಜಮರ್ಯಾದೆಯನ್ನಿತ್ತರು. ವೈಸರಾಯರ ಭೇಟಿ ಕೇಳಿದ್ದಕ್ಕೆ ತಿರಸ್ಕಾರ ಸಿಕ್ಕಿತು, ಜನರ ಇಷ್ಟ ದೇವತೆಯಂತಿರುವ ಗಾಂಧಿಯವರನ್ನು ಸೆರೆಮನೆಗೆ ಕಳುಹಿದರು. ಸುಶೀಲರಾದ ಅನೇಕ ಜನರನ್ನು ಹಿಡಿದರು.

ಸಹಸ್ರ ಮುಖವಿರುವ ಆರ್ಡಿನೇನ್ಸ್‌ಗಳ ಬಲದಿಂದ ಯಾರನ್ನು ಬೇಕಾದರೂ ಹಿಡಿಯಬಹುದು. ಬೊಂಬಾಯಿ ಸರಕಾರವು ಖಾನೂನಿಗೆ ಒಳಪಟ್ಟು ನಡೆಯುವ ಪ್ರಜೆಗಳಿಗೆ ಏನೂ ಭಯವಿಲ್ಲವೆಂತ ಒಂದು ಪತ್ರಿಕೆಯನ್ನು ಹೊರಡಿಸಿತು. ಈಗಿನ ಪರಿಸ್ಥಿತಿಯಲ್ಲಿ ನಮ್ಮ ಟೀಕೆ ಏನಿರಬೇಕೆಂಬುದನ್ನು ನಿಶ್ಚೈಸಲು ಇಲ್ಲಿ ಕೂಡಿದ್ದೇವೆ.

ಪರದೇಶೀಯರು ನಮ್ಮನ್ನು ತಮ್ಮ ಪ್ರಯೋಜನಕ್ಕೆ ಬೇಕಾದಂತೆ ಉಪಯೋಗಿಸಿಕೊಳ್ಳುತ್ತಾರೆಂಬುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಉದಾಹರಣೆಗಾಗಿ ಹೇಳುವುದಾದರೆ ಒಟ್ಟೆ ಮತ್ತು ಹತ್ತಿ ವ್ಯಾಪಾರವೆಲ್ಲಾ ಜಪಾನ್, ಸ್ವಿಸ್, ಗ್ರೀಕ್ ಮತ್ತು ಬ್ರಿಟಿಷರ ಅನುಕೂಲಕ್ಕಾಗಿ ಏರ್ಪಡಿಸಲ್ಪಟ್ಟಿದೆ. ಹಣದ ವಿನಿಮಯವನ್ನು ರೂಪಾಯಿಗೆ 18 ಪೆನ್ಸ್ ಎಂತ ನಿರಖು ಮಾಡಿ ಎಲ್ಲಾ ಪರದೇಶೀಯರಿಗೂ ಸಹಾಯ ಮಾಡಿ ನಮ್ಮ ದೇಶದಲ್ಲಿ ಈಗತಾನೇ ಪ್ರಾರಂಭವಾಗುವ ಕೈಗಾರಿಕೆಯನ್ನು ಹಾಳು ಮಾಡಿದರು. ಸರ್ಕಾರದ ವ್ಯಾಪಾರದ ನಿಯಮಗಳಿಂದ ಈಗತಾನೇ ಹತ್ತಿ ಕಾರ್ಖಾನೆಗಳನ್ನು ಪ್ರಾರಂಭಿಸಿದ ಜಪಾನ್ ಇಂಗ್ಲೆಂಡನ್ನೂ ಸಹ ಹಿಂದೆ ಹಾಕುತ್ತಿದೆ.

ಪತ್ರಿಕೆಗಳಿಗೆ ಬಾಯಿಕಟ್ಟೆಯಾಗಿರುವುದರಿಂದ ಈಗಿನ ರಾಜಕೀಯ ಪರಿಸ್ಥಿತಿಯ ಕುರಿತು ಏನೇನೋ ವರ್ತಮಾನಗಳು ಬರುತ್ತವೆ. ಎಂತೂ ಕಂಡು ಕೇಳದ ದಬ್ಬಾಳಿಕೆಯನ್ನು ಸರಕಾರವು ನಡಿಸುತ್ತಿದೆ ಎನ್ನುತ್ತಾರೆ. ಇಂಡಿಯಾ ಸರ್ಕಾರವೂ, ಬ್ರಿಟಿಷ್ ಸರ್ಕಾರವೂ ಆರ್ಥಿಕ ಸಂಕಟದಲ್ಲಿವೆ ಎನ್ನುತ್ತಾರೆ. ಇಂಥಾ ಸ್ಥಿತಿಯಲ್ಲಿ ಹಿಂದೂಸ್ಥಾನದಲ್ಲಿ ಅಪ್ರೀತಿಯನ್ನು ಬೆಳಸುವುದು ಯುಕ್ತವಲ್ಲ.

ಸ್ವದೇಶೀ ಕಾರ್ಯಕ್ರಮವನ್ನು ನೀವು ಸಾಧಿಸಲೇ ಬೇಕು. ಸ್ವದೇಶೀಯಲ್ಲದ್ದರಿಂದ ಹಣ ಸಂಪಾದನೆ ಮಾಡುವ ಆಶೆ ಬಿಡಬೇಕು. ಅಂಥಾ ಆಶೆ ನಿಮಗೆ ಹುಟ್ಟಿದರೆ ಈಗಿನ ಕಾಲಸ್ಥಿತಿಯು ನಿಮ್ಮನ್ನು ಹಾಳು ಮಾಡೀತು. ಮಹಾತ್ಮ ಗಾಂಧಿಯವರು ಖಾನೂನು ಭಂಗದ ಚಳವಳಿಕ್ಕೆ ಉತ್ತೇಜನ ಕೊಡುತ್ತೇವೆಂತ ನೀವು ಭರವಸೆ ಕೊಡಲಿಲ್ಲ. ಆದರೆ ಸ್ವದೇಶೀ ವ್ರತವನ್ನು ಆಚರಿಸುತ್ತೇವೆಂತ ಭರವಸೆ ಕೊಟ್ಟಿದ್ದೀರಿ. ಮಹಾತ್ಮ ಗಾಂಧಿಯವರು ದಸ್ತಗಿರಿಯಾಗಿರುವಾಗ ಅವರಿಗೆ ಕೊಟ್ಟ ಭಾಷೆಗೆ ವಿರೋಧವಾಗಿ ಹೋಗಬಾರದು. ನೀವು ಹಾಗೆ ವಿರೋಧವಾಗಿ ನಡೆದರೆ ಯಾವ ನಿಮ್ಮ ಮಕ್ಕಳಿಗಾಗಿ ನೀವು ಸಂಪಾದನೆ ಮಾಡುತ್ತೀರೋ ಅವರೇ ನಮ್ಮ ಹಿರಿಯರು ಕೊಟ್ಟ ವಾಗ್ದಾನಕ್ಕೆ 1932ರಲ್ಲಿ ತಪ್ಪಿದ್ದರಿಂದ ನಾವು ಗುಲಾಮರಾಗಿದ್ದೇವೆಂತ ಹೇಳಿಯಾರು. ಕೆಲವರು ಅವಸರ ಮಾಡಬಾರದೆನ್ನುತ್ತಾರೆ. ಆದರೆ ಸಕಾಲದಲ್ಲಿ ಮಾಡುವ ತ್ಯಾಗದಿಂದ ತುಂಬಾ ಪ್ರಯೋಜನವಾಗುತ್ತದೆ.

ನಮ್ಮ ಬ್ರಿಟಿಷ್ ಸ್ನೇಹಿತರಿಗೆ.

ಎಲ್ಲಾ ಜನಾಂಗಗಳೊಳಗೆ ಅದರಲ್ಲೂ ಹಿಂದೀಯರಿಗೂ ಬ್ರಿಟಿಷರಿಗೂ ಸ್ನೇಹವಿರಬೇಕೆಂಬುದೇ ನಮ್ಮ ಆಶೆ ಆದ್ದರಿಂದ ಸತ್ಯವನ್ನು ಬಹಳ ಮರ್ಯಾದೆಯಿಂದ ಯಾರ ಭಯವೂ ಇಲ್ಲದೆ ಯಾರ ಮೇಲೆ ಸಿಟ್ಟೂ ಇಲ್ಲದೆ ನಮ್ಮ ಮಾತಿಗೆ ಬೆಲೆ ಕೊಡಲಿ ಕೊಡದೇ ಇರಲಿ ಹೇಳುವುದು ನಮ್ಮ ಕರ್ತವ್ಯವಾಗಿದೆ. ಖಾನೂನುಭಂಗದಲ್ಲಿ ನಮಗೆ ನಂಬಿಕೆ ಇಲ್ಲದಿದ್ದರೂ ನಾವು ಮಹಾತ್ಮ ಗಾಂಧಿಯವರನ್ನು ಪೂಜಿಸುತ್ತೇವೆಂತಲೂ, ಗಾಂಧಿ ತತ್ವವು ನಮಗೆ ಒಪ್ಪಿಗೆಯಾಗಿದೆಯೆಂತಲೂ ಸ್ಪಷ್ಟವಾಗಿ ತಿಳಿಸಬೇಕಾಗಿದೆ. ಈ ಸರ್ಕಾರದಿಂದ ವಿದ್ಯೆ, ರಾಜಕೀಯ ವಿಚಾರ, ಸೈಯನ್ಸ್, ವ್ಯಾಪಾರ, ಸಂಘಟನೆ ಶಕ್ತಿ ಮುಂತಾದ್ದರಲ್ಲಿ ಸ್ವಲ್ಪ ಮಟ್ಟಿಗೆ ಪ್ರಯೋಜನ ಸಿಕ್ಕಿದೆಯೆಂತ ಧನ್ಯವಾದಗಳೊಡನೆ ಒಪ್ಪಬೇಕಾಗಿದೆ. ಆದರೆ ಈ ಪ್ರಯೋಜನಗಳು ಆಕಸ್ಮಿಕವಾಗಿ ದೊರಕಿದ್ದೇ ಹೊರತು ನೇರವಾಗಿ ದೊರಕಿದ್ದಲ್ಲ. ನೀವು ನಮ್ಮನ್ನು ಉಪಯೋಗಿಸಿಕೊಂಡು ನೀವು ಪ್ರಯೋಜನ ಹೊಂದುವುದೇ ನಿಮ್ಮ ಉದ್ದೇಶವೆಂಬುದೂ ಈ ಕಾರ್ಯದಲ್ಲಿ ಅನೇಕ ವೇಳೆ ತಿಳಿಯದೆಯೋ ಅಥವಾ ಹಣದ ಆಸೆಯಿಂದ ನಾವು ಸಹ ನಿಮ್ಮ ಸಂಗಡ ಸೇರಿಕೊಂಡಿದ್ದೇವೆಯೆಂತಲೂ ಈಗ ನಮಗೆ ತಿಳಿದಿದೆ. ಈಗ ನಮಗೆ ತಿಳುವಳಿಕೆ ಬಂದನಂತರವಾದರೂ ನಮ್ಮ ಜನರನ್ನು ನಿಮ್ಮ ಪ್ರಯೋಜನಕ್ಕೆ ಅಥವಾ ಯಾವುದೇ ಒಂದು ಗುಂಪು ಉಪಯೋಗಿಸುವ ಕಾರ್ಯದಲ್ಲಿ ನಾವು ಭಾಗಿಗಳಾಗಲು ಒಪ್ಪುವುದಿಲ್ಲ. ಕೆಲವರು ನಿಮ್ಮ ಸಂಗಡ ಸೇರುವವರೂ ಇರಬಹುದು. ಆದರೆ ಅವರ ಸಂಖ್ಯೆ ಬಹಳ ಕಡಿಮೆ ಇರಬಹುದು. ನಮಗೆ ಯಾರೊಂದಿಗೂ ದ್ವೇಷವಿಲ್ಲ, ನಿಷ್ಠುರವಿಲ್ಲ. ಎಲ್ಲರ ಸ್ನೇಹವೂ ಬೇಕು, ಹಿಂದೂಸ್ಥಾನಕ್ಕೂ ಬ್ರಿಟನಿಗೂ ಒಳ್ಳೇದಾಗಬೇಕೆಂತಲೇ ನಮ್ಮ ಅಪೇಕ್ಷೆ. ನಮಗೆ ಆಯುಧವಿಲ್ಲ. ಸಹಾಯವಿಲ್ಲ. ನಾವು ಬಡವರಾದರೂ ನಮ್ಮ ಸಂಖ್ಯೆಯು 35 ಕೋಟಿ ಇದೆಯೆಂತ ನೆನಪಿರಲಿ. ಈಗಿನಂತೆ ರಾಷ್ಟ್ರೀಯ ಜಾಗೃತಿಯಾಗದೆ ಇದ್ದಾಗಲೇ ಇತಿಹಾಸಕಾರ ಸೀಲಿ ಎಂಬವನು ಹೇಳಿದ್ದೇನೆಂದರೆ "ಇಂಗ್ಲಿಷ್ ಜನರು ಹಿಂದೂಸ್ಥಾನವನ್ನು ಗೆದ್ದದಲ್ಲ. ಹಿಂದೀಯರು ತಾವಾಗಿಯೇ ಅಧೀನರಾದದ್ದು. ಇಂಗ್ಲಿಷರಿಂದ ಆಳಲ್ಪಡಲು ಇಷ್ಟಪಡುವುದಿಲ್ಲವೆಂತ ಹಿಂದೀಯರು ನಿಶ್ಚೈಸಿದರೆ ಅವರ ಇಚ್ಛೆಯನ್ನು ಸಾಧಿಸಿಕೊಳ್ಳಲೇ ಬಹುದು."

ನಿಮ್ಮನ್ನು ನಾವು ಸ್ವಾಗತದಿಂದ ಬರಮಾಡಿಕೊಂಡೆವು ಯಾಕೆಂದರೆ ನಿಮ್ಮ ಹಿರಿಯರು ನಿಮ್ಮ ಹಿರಿಯರನ್ನು ನ್ಯಾಯವಂತರಾಗಿ ಕಂಡೆವು. ಆ ಅಭಿಪ್ರಾಯವನ್ನು ನಿಮ್ಮ ಅನ್ಯಾಯ, ದಬ್ಬಾಳಿಕೆ ಸ್ವಾರ್ಥತೆ, ವಾಗ್ದಾನಗಳನ್ನು ನಡೆಸದೆ ಇರುವಿಕೆ ಮುಂತಾದ ಗುಣಗಳಿಂದ ಹಾಳು ಮಾಡಿದರೆ ಕೋಟ್ಯಾಂತರ ಹಿಂದೀಯರು ನಿಮಗೆ ಸಹಕಾರವನ್ನು ಕೊಡುವುದನ್ನು ನಿಲ್ಲಿಸುತ್ತಾರೆ. ಆಗ ನಿಮ್ಮ ಆಳ್ವಿಕೆಯು ಕಷ್ಟವಾದೀತು. ಅಂತ್ಯದಲ್ಲಿ ನಷ್ಟವಾದೀತು.

"ಟೈಮ್ಸ್ ಆಫ್ ಇಂಡಿಯಾ," ಯೂ "ಈವಿನಿಂಗ್ ನ್ಯೂಸ್" ಎಂಬ ಪತ್ರಿಕೆಗಳನ್ನು ಓದಿದರೆ ಸ್ನೇಹದ ಕೈನೀಡಿದ್ದ ಮಹಾತ್ಮ ಗಾಂಧಿಯವರನ್ನು ದಸ್ತಗಿರಿಮಾಡಿದ್ದರಿಂದ ಹಿಂದೂಸ್ಥಾನಕ್ಕೂ ಇಂಗ್ಲೆಂಡಿಗೂ ಒಟ್ಟು ಮಾನವ ಜಾತಿಗೂ ಎಷ್ಟೊಂದು ಹಾನಿಯಾಯಿತೆಂತ ತಿಳಿಯಲಾರದು. ಇಂಥ ಅನಾವಶ್ಯದ ಕಾರ್ಯದಿಂದ ಆಗುವ ಹಾನಿಯನ್ನು ತಿಳಿದುಕೊಳ್ಳಲಾರದಷ್ಟು ನಿಮ್ಮ ದೂರದರ್ಶಿತ್ವವೂ ಮನುಷ್ಯ ಸ್ವಭಾವವನ್ನು ತಿಳಿದುಕೊಳ್ಳುವ ಶಕ್ತಿಯೂ ನ್ಯಾಯಬುದ್ಧಿಯೂ ಕೆಟ್ಟುಹೋಗಿದೆಯೋ? ನೀವು ಖಾನೂನು, ಶಾಂತಿಯ ಮಾತನ್ನಾಡುತ್ತೀರಿ. ಖಾನೂನೂ ಶಾಂತಿಯೂ ಮನುಷ್ಯನಿಗೋ, ಮನುಷ್ಯನು ಖಾನೂನು ಶಾಂತಿಗೋ ಎಂತ ಗೌರವದಿಂದ ಕೇಳುತ್ತೇವೆ.

ನೀವು ಖಾನೂನು ಶಾಂತಿಯೆಂತ ಕರೆಯುವುದೇ ನಮಗೆ ಅದಕ್ಕೆ ವಿರೋಧವಾಗಿ ಕಾಣುತ್ತದೆ. ಹೀಗೆ ಮತಭೇದವಿರುವುದು ಯಾತ್ತರಿಂದ ಎಂಬುದನ್ನು ಎಂದಾದರೂ ತಿಳಿಯಲಿಬೇಕು.

ಜನರ ಇಷ್ಟದೇವತೆಯಂತಿರುವ ಮಹಾತ್ಮ ಗಾಂಧಿಯವರನ್ನು ದಸ್ತಗಿರಿ ಮಾಡಿಟ್ಟ ಸರಕಾರದ ತಪ್ಪು ಎಂತ ಹೇಳುತ್ತೇವೆ. ಇದರಿಂದಲೇ ಸರಕಾರವು ನ್ಯಾಯಮಾಡುವುದಿಲ್ಲ

(೩ನೇ ಪುಟದಲ್ಲಿ ಮುಂದುವರಿದಿದೆ.)

೫೦ ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ ಔಷಧಗಳು.

೧. ಧಾತುಪುಷ್ಟಿ ಲೇಹ.

ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕ ಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ದೇಹ, ಪಿತ್ತದ ಬಾಧೆ, ರಕ್ತ ಪಿತ್ತ, ಒಳ ಜ್ವರ, ಮಲ ಬದ್ಧತೆ, ಕೈಕಾಲು ಬಚ್ಚುವುದು ಮೊದಲಾದುವುಗಳು ಪೂರ್ಣ ಗುಣವಾಗಿ ಕಳೆದು ಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು.-ಕ್ರಯ ಡಬ್ಬಿ 1ಕ್ಕೆ 2-8-0 ಮೂರು ಡಬ್ಬಿಗಳಿಗೆ ರೂ 7-0-0

೨. ಅಶೋಕಾರಿಷ್ಟ ಮತ್ತು ಮಾತ್ರೆ.

ಹೆಂಗಸರ ಮುಟ್ಟು ದೋಷಗಳು, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟ ನೋವು, ಸಂತಾನ ಹೀನತೆ, ಮೂರ್ಛೆ, ಮಲಬದ್ಧತೆ, ಒಳಜ್ವರ, ರಕ್ತಹೀನತೆ, ಕೈಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಅತಿ ಶೀಘ್ರದಲ್ಲಿಯೇ ಗುಣ ಪಡಿಸುವುದು. ಈ ಅಶೋಕಾರಿಷ್ಟ ಮತ್ತು ಮಾತ್ರೆಗಳು ಸಾವಿರಾರು ಹೆಂಗಸರಿಗೆ ಸಂತಾನ ಆರೋಗ್ಯವನ್ನು ಒದಗಿಸಿ, ಮನೋಭಿಲಾಷೆಯನ್ನು ಪೂರಯಿಸಿರುವವು.

ಕ್ರಯ 1 ಬಾಟ್ಲಿ ಔಷಧ, 1 ಡಬ್ಬಿ ಮಾತ್ರೆ ರೂ. 2 ಆ 4
3 ಬಾಟ್ಲಿ ಮತ್ತು ಡಬ್ಬಿಗಳಿಗೆ ರೂ. 6 ಆ. 4.

೩. ಮಲೇರಿಯಾ ನಿವಾರಣೆ.

ದಿನ ಬಿಟ್ಟು ಬರುವ ಜ್ವರ, ಮಲೆ ಜ್ವರ, 2 ಯಾ 3 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರ ಗಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರ ಗಡ್ಡೆಯನ್ನು ಕಂಗಿಸಿ ಶಕ್ತಿಯನ್ನು ಉಂಟು ಮಾಡುತ್ತದೆ ಬಾಟ್ಲಿ 1 ಕ್ಕೆ 1-8-0, 3 ಬಾಟ್ಲಿಗಳಿಗೆ 4-2-0.

೪. ಮೇಹ ಕುಠಾರ. ಇದು ಮೂತ್ರಸ್ಥಾನದಿಂದ ಕೆಂಪು, ಬಿಳಿದು, ಹಳದಿಯಂತೆ ಹೋಗತಕ್ಕ ಕೀವನ್ನೂ, ವ್ರಣವನ್ನೂ, ಉರಿಯನ್ನೂ ಗುಣಪಡಿಸುತ್ತದೆ ಡಬ್ಬಿ 1 ಕ್ಕೆ ರೂ. 2-8-0. 3ಕ್ಕೆ ರೂ 7.

೫. ಇಚ್ಛಾ ಭೇದಿ ಗುಟಿಕೆ. ಅಜೀರ್ಣವನ್ನು ಉಂಟುಮಾಡುವ ಸುಖ ವಿರೇಚಕ. ಬಾಟ್ಲಿ 1ಕ್ಕೆ 0-12-0 ಮಾತ್ರ. 3 ಬಾಟ್ಲಿಗಳಿಗೆ 2-2-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕಾಗದ ಮೂಲಕ ರೋಗಿಯ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕದಾದ ಔಷಧಿ ರವಾನಿಸಬಹುದು. ಕೆಟಲಾಗು ತರಿಸಿ ನೋಡಿರಿ.

ಎಂ. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್,
6 ರಥಬೀದಿ, ಮಂಗಳೂರು, ದ. ಕನ್ನಡ.

British Photo Camera Rs. 4-8-0

ಫೋಟೋ ಕ್ಯಾಮರಾ.

ಈ ಫೋಟೋ ಕ್ಯಾಮರಗಳು ವಿಲಾಯಿತಿಯಲ್ಲಿ ತಯಾರಾದವು. ಈ ಕ್ಯಾಮರಗಳಲ್ಲಿ ಒಬ್ಬರ ಸಹಾಯವಿಲ್ಲದೆ ಎಷ್ಟು ಮಂದಿಗಾದರೂ

ಫೋಟೋಗಳನ್ನು ತೆಗೆಯಬಹುದು. ಈ ಕ್ಯಾಮರಾ ಒಂದು ಇದ್ದರೆ ಬೇಕಾದವರಿಗೆ ಫೋಟೋ ತೆಗೆದು ಹಣ ಸಂಪಾದನೆ ಮಾಡಬಹುದು. ಪೋಸ್ಟ್ ಕಾರ್ಡಿನ ಸೈಜಿನಲ್ಲಿ ತೆಗೆಯಬಹುದು. ಫೋಟೋ ತೆಗೆಯುವುದನ್ನು ಕಲಿತುಕೊಳ್ಳಬೇಕಾಗಿಲ್ಲ. ಕ್ಯಾಮರಾ ಜೊತೆಯಲ್ಲಿಯೇ ಫೋಟೋ ತೆಗೆಯುವ ವಿಧಾನವನ್ನು ಕಳುಹಿಸುವೆವು.

ಇದನ್ನು ತರಿಸಿಕೊಳ್ಳುವವರಿಗೆ ಟೇಬಲ್ ಟೈಂಪೀಸ್ ಬಹುಮಾನವಾಗಿ ಕಳುಹಿಸುವೆವು. ಈ ಟೇಬಲ್ ಟೈಂಪೀಸ್‌ಗಳೂ ಈ ಚಿತ್ರದಲ್ಲಿ ಇರುವಂತೆಯೇ ಇರುವವು. ಡಬ್ಬಲ್ ಪಾಲೀಷಿನ ನಿಕ್ಕಲ್ ಕೇಸೂ, ಬಲಿಷ್ಠವಾದ ಲೀವರ್ ಮೂವ್‌ಮೆಂಟ್‌ಗಳಿಂದ ತಯಾರಿಸಲ್ಪಟ್ಟವು. ಸರಿಯಾದ ಕಾಲವನ್ನು ತೋರಿಸುವವು. ಇದಕ್ಕೆ 5 ವರ್ಷಗಳ ಗ್ಯಾರಂಟಿ ಕೊಡುವೆವು. ಕ್ರಯ ಫೋಟೋ ಕ್ಯಾಮರಾ ಬಹುಮಾನ ಟೈಂಪೀಸ್ ಸಹಿತ ರೂ 4-8-0.

The Legal Trading Co.
12-4 P B 243 Madras

ಶಕ್ತಿಯ ಉಂಗುರ (1ಕ್ಕೆ ರೂ. 1-4-0.)

ಈ ಉಂಗುರಗಳನ್ನು ಹಿಮಾಲಯ ಪರ್ವತದ ಒಬ್ಬ ಋಷಿಯಿಂದ ತಯಾರಿಸಿದ್ದು. ಇದನ್ನು ಬೆರಳಿನಲ್ಲಿ ಹಾಕಿಕೊಳ್ಳುವುದರಿಂದ ವ್ಯಾಪಾರದಲ್ಲಿ ಲಾಭವೂ, ಕೋರ್ಟಿನ ವ್ಯಾಜ್ಯಗಳಲ್ಲಿ ಜಯವೂ, ರೋಗ ಪೀಡಿತರಿಗೆ ಆರೋಗ್ಯವೂ, ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದೂ, ಸಂತಾನವೇ ಇಲ್ಲದಿದ್ದವರಿಗೆ ಸಂತಾನವೂ, ಬಿಳಿಯ ತೊನ್ನು ಹಿಡಿದವರಿಗೆ ಗುಣವೂ ಮತ್ತು ಇತರ ಅನೇಕ ವಿಧವಾದ ಕಾರ್ಯಗಳಲ್ಲಿ ಜಯ, ಧೈರ್ಯ, ಲಾಭಗಳನ್ನು ಉಂಟು ಮಾಡುವವು. ಮತ್ತು ಈ ಶಕ್ತಿಯ ಉಂಗುರಗಳನ್ನು ಮಕ್ಕಳ ಕೊರಳಿನಲ್ಲಿ ಕಟ್ಟುವುದರಿಂದ ಮಕ್ಕಳಿಗೆ ಬರುವ ಎಲ್ಲಾ ವಿಧವಾದ ವ್ಯಾಧಿಗಳನ್ನು ಗುಣಪಡಿಸುವವು. ಈ ಶಕ್ತಿಯ ಉಂಗುರಗಳು ನಾವು ತಿಳಿಸಿರುವಂತೆ ಫಲ ಕೊಡಲಿಲ್ಲವೆಂದು ವ್ಯಕ್ತಪಡಿಸುವವರಿಗೆ 50 ರೂ. ಗಳನ್ನು ಇನಾಮಾಗಿ ಕೊಡುವೆವು. ಶಕ್ತಿಯ ಉಂಗುರ 1ಕ್ಕೆ 1-4-0, 3ಕ್ಕೆ 3-4-0, 6ಕ್ಕೆ 6-0-0.

ವಿಳಾಸ.-ಕೆ. ಎಸ್. ರಾಧಾಕೃಷ್ಣ ಬ್ರದರ್ಸ್,
12-3 109 ಬ್ರಾಡ್ವೇ ಬಜಾರ್, ಮದರಾಸು

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಎಂಬುವ ಸುಪ್ರಸಿದ್ಧ ದೇಶೀಯ ವಿಮೇ ಸಂಘ.

ಅಧ್ಯಕ್ಷರು:-ಮಾನನೀಯ ಸರ್ ಲಲ್ಲೂಭಾಯಿ ಸಾಮಲದಾಸ್,
ಕೆಟಿ., ಸಿ. ಐ. ಇ., ಜೆ. ಪಿ., ಯವರು.

ಕೊಚ್ಚಿಕಾರ ಬ್ರದರ್ಸ್, ಮದ್ರಾಸು ಬ್ರಾಂಚು ಸೆಕ್ರೆಟರಿಗಳು.

1 ಭಾಗ್ಯವಂತರ ಭಂಡಾರ, ವ್ಯಾಪಾರಸ್ಥರ ಕೋಶಾಗಾರ, ಕುಟುಂಬದ ಸಂರಕ್ಷಣಾನಿಲಯ. ಬಡವರ ಜೀವನಾಧಾರ ಇದೇ ಜೀವ ವಿಮೆಯ ತತ್ವವು.

2. ಹಿಂದೂಸ್ಥಾನದ ನಿವಾಸಿಯರಲ್ಲಿ ವಿಮಾ ತೆಗೆಯಬೇಕೆನ್ನುವವರ ಪ್ರಯೋಜನಾರ್ಥವಾಗಿ ಈ ಕಂಪೆನಿಯು ಭಾರತೀಯರ ಉತ್ತಮವಾದ ಆಡಳಿತದಿಂದ ಖರ್ಚು ಕಡಿಮೆ ಮಾಡಿ ಇಂಡಿಯಾ ಸರ್ಕಾರದ ಇಂಡಿಯನ್ ಟ್ರಸ್ಟ್ ಆಕ್ಟಿಗೆ ಒಳಪಟ್ಟು ಸರ್ಕಾರದ ಭದ್ರತೆಯಿಂದ ದೇಶೀಯರ ಸೇವೆಯಲ್ಲೇ ನಿರತವಾಗಿ ಹಿಂದೂಸ್ಥಾನದ ಎಲ್ಲಾ ಕಡೆಗಳಲ್ಲೂ ಅತಿ ಕೀರ್ತಿಯನ್ನು ಪಡೆದಿರುತ್ತೆ.

3 ಈ ಸ್ವದೇಶೀ ಕಂಪೆನಿಯು ಪೋಲಿಸಿದಾರರಿಗೆ ಪೋಲಿಸಿ ಅವಧಿ ಪೂರೈಸಿದನಂತರವಾಗಲೀ ಅಥವಾ ಮಧ್ಯದಲ್ಲು ಮರಣಾನಂತರ ವಾರೀಸುದಾರರಿಗಾಗಲೀ ಹೆಚ್ಚಿನ ಖರ್ಚಿಗೆ ಅವಕಾಶ ಕೊಡದೆಯೂ, ದೀರ್ಘ ಸಮಯ ತೆಗೆದುಕೊಳ್ಳದೆಯೂ ಶೀಘ್ರದಲ್ಲಿ ವಿಮೇ ಮೊಬಲಗನ್ನು ಲಾಭ ಸಹಿತ ವಾಪತಿಕೊಡುವುದರಲ್ಲಿ ಹೆಸರುಗೊಂಡಿದೆ.

4 ಧನಿಕರಿಂದ ಮಹನೀಯರಿಂದ ಸ್ಥಾಪಿಸಲ್ಪಟ್ಟು ದೇಶೀಯರಿಂದಲೇ ಅತಿ ಕಡಿಮೆ ಖರ್ಚಿನಿಂದ ನಡೆಸಲ್ಪಡುವ ಈ ಸ್ವದೇಶೀ ಕಂಪೆನಿಯಲ್ಲು ಇಂದು ಭಾಗಿಗಳಾಗಿರಿ, ಪತಿಪತ್ನಿಯರಿಗೆ ಮತ್ತು ವ್ಯಾಪಾರಸ್ಥರು ವರ್ಗದವರಿಗೆ ಜೊತೆಯಾಗಿ (ಜಾಯಿಂಟ್ ಲೈಫ್) ಪೋಲಿಸಿ ತೆಗೆದುಕೊಳ್ಳಲು ಈ ಕಂಪೆನಿಯು ತುಂಬಾ ಅನುಕೂಲಗಳನ್ನು ಕಲ್ಪಿಸಿರುತ್ತೆ. ಇಂಥ ಸುಸಮಯವನ್ನು ಎಂದಿಗೂ ಕಳಕೊಳ್ಳಬಾರದು.

ಆಫೀಸು--
ಟೆಂಪಲ್ ಸೈಡ್,
ಮಡಿಕೇರಿ. (26-13)

ಬಿ. ಎಸ್. ಐಯ್ಯಪ್ಪ,
ಕೊಡಗು ಚೀಫ್ ಏಜೆಂಟ್.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಗ್ಯಾರೆಂಟಿ ಭಂಗಾರದ ನಿಬ್ಬು ಹಾಕಿದ ಖಾತ್ರಿಯಾ ಬಂದೋಬಸ್ತು ಆದ ಫೌಂಟೆನ್ ಪೆನ್‌ಗಳು.

ವಂಡರ್ ಫೌಂಟನ್‌ಪೆನ್ 1ಕ್ಕೆ	ರೂ 3	0	0
" ಬಿಗ್ ಬ್ಯಾರೆಲ್ ಪೆನ್ 1ಕ್ಕೆ	3	3	0
" ಸ್ಕ್ರೂ ಕ್ಯಾಪ್ ಪೆನ್ 1ಕ್ಕೆ	3	8	0
" ಬಿಗ್ ಬ್ಯಾರೆಲ್ ಸ್ಕ್ರೂ ಕ್ಯಾಪ್ ಮಾಡಲ್ ಕಲರ್ ಫೌಂಟನ್‌ಪೆನ್ 1ಕ್ಕೆ	3	14	0
" ಮಾಡಲ್ ಕಲರ್ ಸ್ಕ್ರೂ ಕ್ಯಾಪ್ ಫೌಂಟನ್‌ಪೆನ್ 1ಕ್ಕೆ	4	2	0
" ಸೆಲ್ಫ್ ಫಿಲ್ಲಿಂಗ್ ಮಾಡಲ್ ಅಥವ ಬ್ರೌನ್ ಕಲರ್ ಫೌಂಟನ್‌ಪೆನ್ 1ಕ್ಕೆ	5	8	0
ಸ್ವಾನ್ ಫೌಂಟನ್‌ಪೆನ್ 1ಕ್ಕೆ	10	8	0
ವಾಟರ್‌ಮನ್ ಪೆನ್ 1ಕ್ಕೆ	14 6 0, & 20	10	0
...ಬರ್ ಫೌಂಟನ್‌ಪೆನ್ 1ಕ್ಕೆ	3 8 0, & 3	12	
...ಫೌಂಟನ್ ಪೆನ್ 1ಕ್ಕೆ	6 4 0, & 6	12	0
...ಫೌಂಟನ್ ಪೆನ್ 1ಕ್ಕೆ	8 2 0, & 8	10	0

ಟೈಂಪೀಸ್‌ಗಳು.

ಸ್ಟ್ಯಾಂಡ್ ಇರುವ ಸಣ್ಣ ಟೈಂಪೀಸ್ 1ಕ್ಕೆ	3	6	0
ಜರ್ಮನ್ ಮೇಡ್ ಸಣ್ಣ ಟೈಂಪೀಸ್ 1ಕ್ಕೆ	2	2	0
ಲಿಗಲಿಯಾ ಅಲಾರಂ ಟೈಂಪೀಸ 1ಕ್ಕೆ 6 9 0, &	6	15	0
ಲಿಗಲಿಯಾ ಸಣ್ಣ ಸೈಜಿನ ಅಲಾರಂ ಟೈಂಪೀಸ್ 1ಕ್ಕೆ	7	2	0
ಲಿಗಲಿಯಾ ಅಲಾರಂ ಸಣ್ಣ ಟೈಂಪೀಸ್ ರೇಡಿಯಂ ಡೈಲಿನದು 1ಕ್ಕೆ	8	10	0
ಬಿಗ್‌ಬೆನ್ ಅಲಾರಂ ಟೈಂಪೀಸ 1ಕ್ಕೆ	9	6	0
ಬಿಗ್‌ಬೆನ್ ಅಲಾರಂ ಸ್ಟ್ಯಾಂಡ್ ಇರತಕ್ಕ ಖಾತ್ರಿಯಾದ ಟೈಂಪೀಸ್ 1ಕ್ಕೆ	13	4	0
ಖಾತ್ರಿಯಾ ಬಂದೋಬಸ್ತು ಆದ ಪಾಕೆಟ್ ವಾಚ್ 1ಕ್ಕೆ	5	10	0
...ನಮೂನೆಯಲ್ಲಿ ಎಲ್ಗಿನ್ ಹಾರ್ಡ ಕಂಪೆನಿಯ ಪಾಕೆಟ್ ವಾಚ್ 1ಕ್ಕೆ	12	4	0
ಸಿಲ್ವರ್ ಕೇಸ್ ಸಿಲಿಂಡರ್ ಮೂವ್‌ಮೆಂಟ್ ಸಾಧಾರಣ ತರಹ ರಿಸ್ಟ್ ವಾಚ್ 1ಕ್ಕೆ 5 4 0, 7 8 0, 10 0 0 &	12	8	0



ಇಲ್ಲಿ ಕಾಣುವ ಸಿಐಡಿ ನಮೂನೆಯಂಥ ಟೇಬಲ್ ಟೈಂಪೀಸ್ 1ಕ್ಕೆ 3-6-0 ...ಕಿಂಗ್ ಪೋಸ್ಟೇಜ್ ಅದಾಯ--

ಮೇಲೆ ಬರೆದ ಸಾಮಾನುಗಳಿಗೆ ಆರ್ಡರ್ ಕಳುಹಿಸಬೇಕಾದ ವಿಳಾಸ.-ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

54-29

ಸೋಮನ ಮಲೆ.

(ಅ. ಚೋಕ್ಕೆಯ್ಯನವರಿಂದ.)

ಸೋಮನ ಮಲೆಯ| ಸೋಮನ ಯಾರನು|
ಪ್ರೇಮದಿ ನೋಡುತಿಹೆ? ||
ಮಲೆಯೊ ಆತನ| ನೆಲೆಯೊ ಮೋಡನ|
ತಿಳಿಯೊ ತಾಕುವಿಯೊ? ||
ಚಂದದ ಮುಖವಿನ್ನ| ಅಂದದಿ ತೋರುದು|
ಇಂದು ಕುವರಿಯರಿಗೇ ||
ಚಿನ್ನನು ಎಸಗಿಟ್ಟು| ಚಿಣ್ಣನೆ ಮೆರೆಯುವೆ|
ನಿನ್ನ ದೇವ ಪರನೋ? ||
ಕನ್ಯರು ಮೆರೆಯೊಳ| ಧನ್ಯರ ನಿನಗೆಂದು|
ಅನ್ಯರು ದೂರರೇನೋ? ||
ಕಾಮನ ಬಾಣವು| ಸೋಮನೆ ನಿನ್ನನು|
ಕಾಮಿಸುತಿಹುದೇನೋ? ||
ಏನನು ಅನ್ನಕೆ| ಮಾನದ ತಂಬ್ರಾನು|
ನಿನ್ನೊಳಿ ಕಾತಿದನ್ನು? ||
ಬೇಡುವೆ ಸೋಮನೆ| ಕಾಡನು ನಿನ್ನೊಳು|
ಬೇಡಿತ್ತರೆ ನೋಡು ||
ಗಾಡುವ ಸೂರ್ಯನ| ಸತತವ ನೋಡುದು|
ಹಿತವೇ ನಿನಗೇನೋ? ||
ಅನ್ಯರು ಅನ್ಯರು| ಧನ್ಯನು ನೀನೆಂದು|
ಮಾನ್ಯದ ಸಾಗರಳ ||
ನಮಿಸುವಿಯೊ ನೀನು| ನಮಿಪರ ಸಮುದ್ರಕೆ|
ಮಮಕಾರದು ದೇವಾ ||
ಎದ್ದೇ ನೀ ನಿಲ್ಲು| ಸಿದ್ಧ ನಾನೆನ್ನು|
ಕದ್ದು ಬರುವೆ ನಿನ್ನೆಡೆಗೆ ||
ಸುತ್ತಲು ನಿನ್ನನು| ಎತ್ತಿನ ಹಗ್ಗವೊ|
ಮತ್ತಾನೆ ಕರಪಣಾಯಿಯೊ? ||
ಹುಲಿಯೊ ಕೋಲಿ| ಹುಲಿಯೊಟವನು|
ಹುಲಿ ನೀ ನೋಡುವಿಯೊ? ||
ಹುಟ್ಟುವ ಗುಂಡಿಗೆ| ಹುಟ್ಟುವ ಹಾಕಿದ|
ಚಿಟ್ಟಜ್ಜಿಯ ತೋರೋ ||

ಪತ್ರವ್ಯವಹಾರ.

[ವಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ.]

ಕೊಡಗು ವಾಜ್ ಮುಸ್ಲಿಂ ಸಹೋದರರೇ

ವೀರಾಜಪೇಟೆಯಲ್ಲಿ ನಡೆದ ಕೊಡಗೇತರರ ಮೀಟಿಂಗ್ ಸಂಬಂಧ ತಾ. 29—12—31 ರ ಪತ್ರಿಕೆಯಲ್ಲಿ ಅನೇಕ ಮಹನೀಯರ ಹೆಸರುಗಳ ಪೈಕಿ 3 ಜನ ಮುಸ್ಲಿಂ ಸಹೋದರರ ಹೆಸರುಗಳಿವೆ. ಇವುಗಳ ಪೈಕಿ ಮುಖ್ಯವಾಗಿ "ಖಾದಿ ಮಹಮ್ಮದ್ ಯೂಸುಫ್ ಸಾಹೇಬ್" ಎಂಬ ಹೆಸರಿನ ವಿಷಯವಾಗಿ ಕೊಂಚ ವಿವರಿಸಬೇಕಾಗಿದೆ. ಮಹಮ್ಮದೀಯರಲ್ಲಿ "ಖಾದಿ" ಎಂದರೆ ಗುರು ಯೆಂದರ್ಥ. ಹೀಗಿರುವಲ್ಲಿ ಒಬ್ಬ ಗುರು ಪಡುವ ಅಭಿಪ್ರಾಯಕ್ಕೆ ಹಿಂಬಾಲಕರೆಲ್ಲಾ ಸಮ್ಮತಿಸಿರಬಹುದೆಂಬ ತಪ್ಪು ಊಹೆಯು ಜನರಲ್ಲಿ ಉಂಟಾಗಲಿಕ್ಕೆ ಕಾರಣವಿದೆ. ಆದರೆ ಮೇಲ್ಕಂಡ ಮಹಮ್ಮದ್ ಯೂಸುಫ್ ಸಾಹೇಬರು ಖಂಡಿತವಾಗಿಯೂ ಮುಸಲ್ಮಾನರ ಖಾಜಿಯಾಗಿ ನೇಮಿಸಲ್ಪಟ್ಟಿಲ್ಲ. ಇವರ ತಂದೆಯವರು ಖಾಜಿಯಾಗಿ ನೇಮಿಸಲ್ಪಟ್ಟಿದ್ದರು. ಈಗ ಅವರು ಸ್ವರ್ಗಸ್ಥರಾಗಿರುತ್ತಾರೆ. ಇವರು ತಂದೆಯ ಬಿರುದನ್ನು ತನ್ನ ಹೆಸರಿನ ಸಂಗಡ ಇಟ್ಟುಕೊಂಡು, ತಿಳಿಯದ ಜನರನ್ನು ಮೋಸಗೊಳಿಸಲಿಕ್ಕಾಗಿ ಹೀಗೆ ಮಾಡಿರುತ್ತಾರೋ ಎಂಬ ಸಂಶಯ, ಅಲ್ಲದೆ ಇವರು ನಾನ್ ಕುರ್ಗ್ ಸಭೆಗೆ ಸೇರಲಿಕ್ಕೆ ಮುಂಚೆ ಎಲ್ಲಿಯೂ ಆಲೋಚನೆ ಮಾಡದೆ ತನ್ನ ಸ್ವಂತ ಇರಾದೆಯಿಂದ ಸೇರಿದ್ದಾರೆಯೇ ಹೊರತು, ಮುಸ್ಲಿಂ ಜನಾಂಗದ ಪರವಾಗಿ ಅಲ್ಲ.

2 ನೇಯ ಸಂಗತಿ. ಕೊಡಗಿನ ಮುಸಲ್ಮಾನರಿಗೆಲ್ಲಾ ತಮ್ಮ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಅಂಜುಮನ್ ಇತ್ತಿಹಾದೆ ಇಸ್ಲಾಂ" ಎಂಬ ಸಂಘವು ಈಗ [illegible] ವರ್ಷದ ಲಾಗಾಯಿತು ಸ್ಥಾಪಿತವಾಗಿ, ಮೂರು ವಾರ್ಷಿಕ ಸಭೆಗಳೂ ಸಹ ನಡೆದದ್ದು ಕೊಡಗಿನಲ್ಲಿ ಯಾರಿಗೂ ತಿಳಿಯದ್ದಲ್ಲ. ಇದಿರುವಾಗ್ಯೆ ಮುಸಲ್ಮಾನರಿಗೆ ಬೇರೊಂದು ಸಂಘದ ಮೂಲಕವಾಗಿ ಸಿಕ್ಕಲಿಕ್ಕಿರುವ ಮಾರ್ಗದರ್ಶನಗಳು ಸದ್ಯದ [illegible] ಕಂಡುಬರುವದಿಲ್ಲ. ಇವರೆಲ್ಲರೂ ತಮ್ಮ [illegible] ಕೆಲಸ ಮಾಡದೆ, ಈ ವಾಜ್ ಮುಸ್ಲಿಂ ಸಂಘದಲ್ಲಿ [illegible] ಮಾತ್ರ ಅಭಿವೃದ್ಧಿ ಹೊಂದುತ್ತಾ[illegible]

[illegible] ಅಂಜುಮನ್ ಇತ್ತಿಹಾದೆ ಇಸ್ಲಾಂ ಸಂಘವು ಕೊಡಗು [illegible] ಜನಾಂಗದ ಅಭಿವೃದ್ಧಿಗೆ ಮಾತ್ರವಿರುವದಲ್ಲದೆ, [illegible] ಜನಾಂಗದ ಯಾ ಸಂಘದ ನೀತಿಯಲ್ಲಿ ಪ್ರ[illegible] ವಿರೋಧ ಮಾಡಲಿಕ್ಕಿರುವದಲ್ಲವೆಂಬ ಸಂ[illegible] ಎಲ್ಲಾ ಜನಾಂಗಗಳಿಗೂ ಈ ಮೂಲಕ

ಈಗ ನಾನ್ ಕೊಡಗು ಸಂಘಕ್ಕೆ ಹೆಸರುಕೊಟ್ಟಿರುವ ಮುಸಲ್ಮಾನರೆಲ್ಲರೂ ಅವರವರ ಸ್ವಂತ ಇರಾದೆಯೇ ಹೊರತು ಅಂಜುಮನ್ನಿನ ತೀರ್ಮಾನವಲ್ಲ.

'ಕುರ್ಗ್ ಮುಸಲ್ಮಾನ್.'

ರಾಮನಾಮ ಮಹಿಮೆ.

ಅಯ್ಯಾ,

ಈ ತಾ. 10ನೇ ಆದಿತ್ಯವಾರ ಮಡಿಕೇರಿಯ ವೇದಾಂತ ಸಂಘದ ಮುಂಭಾಗದಲ್ಲಿ "ರಾಮ ನಾಮ ಮಹಿಮೆ" ಯ ವಿಷಯ 3 ಮಹನೀಯರು ಭಾಷಣ ಮಾಡಿದರು. ಈ ಉತ್ಸಾಹವನ್ನು ಶ್ರೀಮತಿ ಯಂ. ಗೌರಮ್ಮನವರು ವಹಿಸಿದರೆಂಬ ಸಂಗತಿ ಭಾಷಣಕಾರರ ಭಾಷಣದಿಂದ ತಿಳಿದು ಬಹಳ ಸಂತೋಷವಾಯಿತು.

ಇಂಥಾ ಉತ್ಸವವನ್ನು ಈ ಮೊದಲು ಇಲ್ಲಿ ಯಾರೂ ಮಾಡಿರುವುದಿಲ್ಲವೆಂಬ ಸಂಗತಿ ನಾನು ಇಲ್ಲಿ ಬರೆದು ತಿಳಿಸಿದರೂ ಅದು ತಪ್ಪಾಗಲಿಕ್ಕಿಲ್ಲ. ಇಂಥಾ ಶ್ರೀ ರಾಮ ಮಹಿಮೆಯನ್ನು ರಾಮಾಯಣದಲ್ಲಿ ಅನೇಕರು ಓದಿರಬಹುದು. ಆದರೆ ಶ್ರೀಮತಿಯವರು ರಾಮಾಯಣವನ್ನು ಓದಿದವರಲ್ಲಿ ಒಬ್ಬರಾಗಿದ್ದರೂ ಇವರು ಈ (ಕೆಲವು ತಿಂಗಳಿಗೆ) ಮೊದಲು "ರಾಮ ರಾಮ" ಎಂಬ ಎರಡಕ್ಷರದ ಮಂತ್ರವನ್ನು 2,02,108 ಸಲ ಬರೆದು ಬೊನ್ನೆ ದಿನದ ಪ್ರದರ್ಶನಕ್ಕೆ ಇಟ್ಟದ್ದು ಸಹ ಪೂರಾ ಸಂತೋಷಕರ. ಶ್ರೀಮತಿಯವರು ಸಾಧಾರಣ 60—70 ವರ್ಷ ಪ್ರಾಯದವರಾದರೂ ತನ್ನ ಈ ಪ್ರಾಯದಲ್ಲಿ ಮುಕ್ತಿ ಸಾಧನೆಗೆ ಬೇಕಾದ ಕರ್ತವ್ಯವನ್ನೂ, ಮಹಾ ಜನರಿಗೆ ಒಂದು ತರಹದ ಮೇಲ್ಪಂಕ್ತಿಯನ್ನೂ ಮಾಡಿಯೇ ಮಾಡಿದರು. ಇವರಿಗೆ ಶ್ರೀರಾಮನ ಕೃಪೆಯು ಪೂರ್ತಿ ಇರುವುದಲ್ಲದೆ ಆ ಉತ್ಸವಕ್ಕೆ ನೆರೆದ ಮಹನೀಯ ಮತ್ತು ಮಹಿಳೆಯರಿಗೂ ಇರುವುದೆಂದು ನಾನು ನಂಬಿರುವೆನು.

ಆದರೆ ಇದೇ ರೀತಿಯ ಉತ್ಸವವನ್ನು ಇನ್ನೂ ಅನೇಕ ಮಹನೀಯರಾಗಲೀ, ಮಹಿಳೆಯರಾಗಲೀ ಮಾಡಿ ರಾಮನ ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇನೆ. ಹೆಚ್ಚಾಗಿ ಇಂಥಾ ಉತ್ಸವವನ್ನು ನಮ್ಮ ಮಾತೆಯರೆಂದೆನ್ನಿಸಿಕೊಳ್ಳುವ ಸ್ತ್ರೀಯರೇ ಮಾಡಬೇಕೆಂದೂ ಸಹ ಬರೆದರೆ ಅದೂ ತಪ್ಪಾಗುವುದೇ? ಭಕ್ತಿ ಪುರಸ್ಸರವಾಗಿ ಒಂದೇ ಸಲ 'ರಾಮ' ನೆಂಬ ಎರಡಕ್ಷರದ ಮಂತ್ರವನ್ನು ಜಪಿಸಿದರೆ ಸಕಲ ಕಷ್ಟಗಳ ಪರಿಹಾರವಾಗುವುದಲ್ಲದೆ ಅಂಥವರು ಬ್ರಹ್ಮ ಸಾಕ್ಷಾತ್ಕಾರ ಪಡೆಯುವರೆಂದು ಅನೇಕ ಪುರಾಣ ಕಥೆಗಳೇ ಆಧಾರವಾಗಿದೆ ಎಂಬದು ವಾಚಕರಿಗೆ ತಿಳಿದಿರಬಹುದು. ಅಂಥಾ ಮಹಿಮೆಯ "ರಾಮ" ನೆಂಬ ಮಂತ್ರವನ್ನು 20,2,108 ಸಲ ಬರೆದ ಶ್ರೀಮತಿಯವರಿಗಾಗಲೀ, ಆ ಉತ್ಸವಕ್ಕೆ ಸೇರಿದ ಮಹಾ ಜನರಿಗಾಗಲೀ ಮುಕ್ತಿ ಸಿಕ್ಕುತ್ತದೆಂಬದಕ್ಕೆ ಸಂಶಯವೇನು 20,2,108 ಸಲ ಬರೆಯುವುದರ ಅರ್ಥ ಏನೆಂದರೆ:—ಒಂದು ಅಕ್ಷರಕ್ಕೆ ಒಂದು ಲಕ್ಷವೆಂತಲೂ, ಹೀಗೆ 'ರಾಮ' ನೆಂಬ ಎರಡಕ್ಷರಕ್ಕೆ ಎರಡು ಲಕ್ಷವೂ, ಅದರ ಶಾಂತಿಗಾಗಿ ಎರಡು ಸಾವಿರದ ಒಂದುನೂರ ಎಂಟು ಎಂದೂ ಗ್ರಹಿಸಬೇಕು. ಯಾರಾದರೂ ಇಂಥಾ "ರಾಮ ರಾಮ" ನೆಂಬ ಎರಡಕ್ಷರದ ಮಂತ್ರವನ್ನು ಪುಸ್ತಕದ ಮೂಲಕ ಬರೆಯುವುದಾದರೆ ಅಂಥ ವುಗಳನ್ನು ಪೂಜಾದಿ ಕಳೆದ ನಂತರ ಆ ಪುಸ್ತಕವನ್ನು ಪುಣ್ಯಕ್ಷೇತ್ರಕ್ಕೆ ತೆಗೆದುಕೊಂಡು ಹೋಗಿ ಅಲ್ಲಿ ತಾನು ಸ್ನಾನ, ಪೂಜೆ ವಗೈರೆ ತೀರಿಸಿ ಆ ರಾಮನಾಮದ ಪುಸ್ತಕವನ್ನು ಪುಣ್ಯಕ್ಷೇತ್ರದ ನದಿಯಲ್ಲಿ ಮುಳುಗಿಸಿ ಬರಬೇಕೆಂದು ಶ್ರೀಮತಿಯವರು ನನ್ನಲ್ಲಿ ತಿಳಿಸಿರುವರು. ಆದುದರಿಂದ ದೇಶದ ಮಹನೀಯರೂ, ಮಹಿಳೆಯರೂ ಸಹ ಶ್ರೀಮತಿಯವರು ಹಾಕಿದ ಮೇಲ್ಪಂಕ್ತಿಯನ್ನು ಆಚರಿಸಿ ದೇವರ ಪ್ರೀತಿಗೆ ಪಾತ್ರರಾಗದೇಕಾಗಿ ನಾನು ಹಾರೈಸುತ್ತೇನೆ.

ಯಂ. ಯಂ. ಬಿ.

ಕೊಡಗೇತರರ ಹೊಸ ಸಂಘ.

ಅಯ್ಯಾ,

ಕೊಡಗೇತರರ ಪೈಕಿ ಏಳು ಜನರಿಂದ ರುಜು ಮಾಡಲ್ಪಟ್ಟ ಒಂದು ನೋಟೀಸು ಈ ಕೆಳಗಿನ ರೀತಿ ಬರೆಯಲ್ಪಟ್ಟದ್ದನ್ನು ನಾನು ನೋಡಿದೆನು. "ನಮ್ಮ ಕೊಡವ ಸಹೋದರರು ತಮ್ಮ ರಾಜಕೀಯ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಕೊಡವ ಸಭೆ ಎಂಬ ಹೆಸರಿನಿಂದ ಒಂದು ಸಭೆಯನ್ನು ಏರ್ಪಡಿಸಿ ಅದರಿಂದ ಅವರ ಅಭಿವೃದ್ಧಿಯನ್ನು ಎಷ್ಟೋ ಹೆಚ್ಚುಗೊಳಿಸಿರುತ್ತಾರೆ" ಅದ್ದರಿಂದ ತಾವೂ ಸಹ ಈ ರೀತಿಯ ಸಂಘವೊಂದನ್ನು ಏರ್ಪಡಿಸಲು ಕಳೆದ ತಾರೀಕು 29—12—31 ರಲ್ಲಿ ವೀರಾಜಪೇಟೆಯಲ್ಲಿ ಮೀಟಿಂಗೊಂದನ್ನು ಮಾಡಿ ಈ ರೀತಿಯ ಸಭೆಯೊಂದನ್ನು ಮಾಡಿರುತ್ತಾರೆಂದು ತಿಳಿಯುತ್ತೇನೆ.

ದೇಶದ ರಾಜಕೀಯ ಬೆಳವಣಿಗೆಗೆ ಬಹಳ ಕೆಡಕನ್ನುಂಟುಮಾಡಿದ, ಮತ್ತು ಕೊಡವರ ಸಾಮಾಜಿಕ, ಮತ್ತು ಆರ್ಥಿಕ ಸ್ಥಿತಿಯನ್ನು ಯಾವ ವಿಧದಲ್ಲಿ ಯೂ ಅಭಿವೃದ್ಧಿಪಡಿಸದ ಮತ್ತು ಕೇವಲ 99 ಕೊಡವ ಜನರು ಪಸೋದಿಸಿದ, ಈ ಸಭೆಯ ಹೆಸರನ್ನೆತ್ತಿ ಹೊಸ ಕೊಡಗೇತರ ಸಭೆಯನ್ನು ಮಾಡಿರುವುದು ನೋಡಿದರೆ ಈ ಸಭೆಯು ಕೊಡವ ಸಭೆಯ ತತ್ವವನ್ನೇ ಹಿಂಬಾಲಿಸುವುದೆಂದು ಕಂಡೋಕ್ತವಾಗಿ, ದೇಶದ ಕೊಡಗೇತರ ಮಹನೀಯರು ನಂಬಲೇ ಬೇಕಾಗಿದೆ.

ಇಂಥಾ ಸಭೆಯಿಂದ ದೇಶಕ್ಕೆ ಇನ್ನು ಮುಂದಕ್ಕೆ ಯಾ[illegible]

ದಲು, ನನ್ನ ನವೀನ ಕೊಡವ ಸಭೆಯಿಂದ ದೇಶಕ್ಕೆ ಎಷ್ಟರ ಮಟ್ಟಿಗೆ ಪ್ರಯೋಜನವಾಗಿದೆಯೆಂಬುದನ್ನು ದೇಶೀಯರಲ್ಲಿ ಪುನಃ ಇಡುವುದು ಅತ್ಯಾವಶ್ಯವಾಗಿ ಕಾಣುತ್ತೆ. ಕೊಡವ ಸಭೆಯವರು ಮೊದಲಾಗಿ ತಮ್ಮ ಎಲ್ಲಾ ಕೆಲಸಕ್ಕೂ ದೇಶೀಯ ಕೊಡಗರ ಸಮ್ಮತವಿಲ್ಲದಿರೋಣದರಿಂದ ಸರಕಾರದವರೊಡನೆ ಒಳಸುಗ್ಗಿ ತಮ್ಮ ಸಭೆಯ ಹೆಸರನ್ನು ರಾಜ್ಯಾಡಳಿತ ವರದಿಯಲ್ಲಿ ಬರೆಸಿದ್ದು. (2) ಕೊಡಗು ಜಮೀನ್ದಾರ ಸಂಘದವರು ಮಾಡುತ್ತಿರುವ ಕೆಲಸಕ್ಕೆ ವಿರೋಧ ವರ್ತಿಸುತ್ತಿದ್ದುದು ಮತ್ತು ದೂರ್ವಾಡು ಸಿಕ್ಕಿದ್ದರೆ ಕೊಡಗನ್ನು ಮದ್ರಾಸು ಆಧಿಪತ್ಯದ ಒಂದು ಜಿಲ್ಲೆಯನ್ನಾಗಿ ಮಾಡಲು ಜಮೀನ್ದಾರ ಸಂಘದವರು ಮಾಡಿದ ಚಳವಳಿಕ್ಕೆ ವಿರೋಧಿಸಿದ್ದು. (3) ಸೈಮನ್ ಕಮಿಶನ್ನಿಗೆ ಡೆಪ್ಯುಟೇಶನ್ ಹೋಗಿ ಕೊಡಗಿನ ಮುಂದಿನ ರಾಜಕೀಯ ಭವಿಷ್ಯತ್ತಿಗೆ ಅಡ್ಡಿ ತಂದು ಕೆಲವು ಜನರ ಸ್ವದೇಹವನ್ನು ಸಾಧಿಸಿದ್ದು. (4) ಒಟ್ಟಾರೆ ಹೇಳಬೇಕಾದರೆ ದೇಶದ ಎಲ್ಲಾ ಅಭಿವೃದ್ಧಿಯ ಕಾರ್ಯಕ್ಕೆ ಕೊಡಗು ಜಮೀನ್ದಾರ ಸಂಘದವರು ಕೆಲಸ ಮಾಡುತ್ತಿರುವ ಸಮಯದಲ್ಲಿ ಅಂಥಾದಕ್ಕೆ ಅಡ್ಡಿ ತಂದದ್ದು. ವಗೈರೆ ಅನೇಕ ಕೆಲಸಗಳು ದೇಶದವರ ಮುಂದೆ ಕಣ್ಣಡಿಯಂತಿದೆ. ಇದನ್ನು ಕಣ್ಣಾರೆ ಕಂಡರೂ, ಮತ್ತು ಇಂಥಾ ಸಭೆಗೆ ಕೊಡವ ಮಹನೀಯರೊಳಗೆ ವಿರೋಧಿಸಲು ಸಹಾಯ ಮಾಡಿದ, ಕೊಡಗೇತರ ಮಹನೀಯರು, ರಾತ್ರಿ ಕಂಡ ಬಾವಿಗೆ, ಹಗಲು ಬೀಳುವುದು ದೇಶದ ದುರ್ಭಾಗ್ಯವೆಂದೇ ನಂಬಬೇಕಾಗಿದೆ.

ಭೂಲೋಕದಲ್ಲಿ ಒಬ್ಬರ ನಾಶಕ್ಕೆ ಇನ್ನೊಬ್ಬರು ಪ್ರಯತ್ನ ಪಟ್ಟರೆ, ಪ್ರಯತ್ನ ಪಟ್ಟವರು ತಾವೇ ನಾಶಹೊಂದಿಕೊಳ್ಳುತ್ತಾರೆ. ಹೀಗೆಯೇ ಕೊಡಗು ಜಮೀನ್ದಾರ ಸಂಘವನ್ನು ಕೊಡಗು ಪತ್ರಿಕೆಯನ್ನು ಮೂಲೆಗೊತ್ತಿ ನಾಶಮಾಡಬೇಕೆಂದು ಕೆಲಸ ಮಾಡಿದ ಸಂಸ್ಥೆಗಳು ಈಗ ಹೇಗಿವೆ ಎಂಬುದು ದೇಶದ ಜನರಿಗೆ ಮನವರಿಕೆ ಇದ್ದೇ ಇದೆ. ಈಗ ಅದೇ ಸ್ಥಿತಿಗೆ ಹೋಗಬೇಕೆಂದಿರುವ ಕೊಡಗೇತರ ಸಭೆಯೂದರೂ ಮಾಡುವುದೇನೆಂಬುದು ಅವರ ನೋಟೀಸಿನ ಉದ್ದೇಶದಿಂದಲೇ ವೇದ್ಯವಾಗುತ್ತೆ. ಈ ಮಹನೀಯರು ದಯವಿಟ್ಟು ಕೊಡವ ಸಭೆಯವರು ಮಾಡಿದ ಯಾವದಾದರೊಂದು ಒಳ್ಳೆಯ ಕೆಲಸವನ್ನು ದೇಶೀಯರ ಗೋಚರಕ್ಕೆ ತಂದಿದ್ದರೆ, ಅವರಿಗೆ ನಾನು ಬಹಳ ವಂದಿಸುತ್ತಿದ್ದೆನು.

ಒಟ್ಟಾರೆ ನೋಡಿದರೆ, ದೇಶದ ಒಗ್ಗಟ್ಟಿಗೆ ಮತ್ತು ಮುಂದಿನ ರಾಜಕೀಯ ಬೆಳವಣಿಗೆಗೆ ಕೊಡವ ಸಭೆಯವರು ಮಾಡಿದ ಕೆಡಕನ್ನೇ, ಈ ಕೊಡಗೇತರ ಮಹಾನೀಯರು ಮಾಡುವರೆಂದು ಕಂಡೋಕ್ತವಾಗಿ ತಿಳಿಯುತ್ತದೆ. ಇವರ ಈ ಮೀಟಿಂಗಿನಲ್ಲಿ ಮಿ. ಅಬ್ದುಲ್ ಖಾನ್‌ರವರು ಮಾತ್ರ ಬಲವಾಗಿ ಇಂಥಾ ಸಭೆಯನ್ನು ವಿರೋಧಿಸಿದರೆಂದು ತಿಳಿಯುತ್ತೇನೆ. ದೇಶಾಭಿಮಾನವುಳ್ಳ ಕೊಡಗೇತರ ಮಹನೀಯರೆಲ್ಲರೂ, ಮುಂದಕ್ಕೆ ಬಂದು ಇಂಥಾ ಸಭೆಯನ್ನು ಬಹಿರಂಗವಾಗಿ ಮೀಟಿಂಗ್ ಮಾಡಿ ಖಂಡಿಸುವುದು ಬಹಳ ಅವಶ್ಯವಿದೆ. ಏತತ್ಕಂಡರೆ ಕೊಡವ ಜನರ ಹೆಸರಿನಲ್ಲಿ ಹಲ ಕೆಲವು ಕೊಡವ ಜನರು ಸೇರಿ ಸಂಕಾಪಕ್ಕೆ ಇಲ್ಲದ ಸಲ್ಲದ್ದನ್ನು ಹೇಳಿ ತಮ್ಮ ಸ್ವಾರ್ಥವನ್ನು ಸಾಧಿಸಲು ಪ್ರಯತ್ನ ಪಟ್ಟರೋ ಅದೇ ರೀತಿ ಕೊಡಗೇತರರೆಂಬ ಹೆಸರಿನಿಂದ, ಕೊಡಗರನ್ನು ವಿನಾಯಿಸಿ, ಇತರ ಎಲ್ಲಾ ಮಂಗಡಗಳ ಹೆಸರಿನಿಂದ, ಹಲ ಕೆಲವರು ತಮ್ಮ ಸ್ವಾರ್ಥವನ್ನು ಸಾಧಿಸಲಿಕ್ಕಿರುವ ಸಭೆಯೆಂದು, ಈ ನೋಟೀಸಿನಿಂದ ವ್ಯಕ್ತವಾಗುತ್ತದೆ. ಅದ್ದರಿಂದ ಕೊಡಗೇತರ ಮಹನೀಯರು ಎಚ್ಚತ್ತು ನಿಮ್ಮ ಸಹೋದರರಾದ ಕೊಡವರು ಕೊಡವ ಸಭೆಯನ್ನು ಖಂಡಿಸಿದ ಕೆಲಸ ಮಾಡಿದ ರೀತಿ, ನೀವು ಸಹ ಮುಂದಕ್ಕೆ ಬಂದು, ಈ ಕೊಡಗೇತರ ಸಭೆಯನ್ನು ವಿರೋಧಿಸಿ, ದೇಶದ ಒಗ್ಗಟ್ಟಿಗೂ, ಮುಂದಿನ ರಾಜಕೀಯ ಕಲ್ಯಾಣಕ್ಕೂ ಸಹಾಯ ಮಾಡಬೇಕಾಗಿ ಕೋರುತ್ತೇನೆ. ಹೀಗೆ ಮಾಡದಿದ್ದರೆ, ಹಲ ಕೆಲವು ಜನರು, ನಿಮ್ಮೆಲ್ಲರ ಪ್ರತಿನಿಧಿಗಳೆಂದು ತಮ್ಮಷ್ಟಕ್ಕೆ ತಾವೇ ಹೇಳಿಕೊಂಡು ದೇಶವನ್ನು ಕಷ್ಟಕ್ಕೂ, ವ್ಯಸನಕ್ಕೂ ಇಳಿಸುವುದರಲ್ಲಿ ಸಂದೇಹವಿಲ್ಲ.

"ಕೊಡಗ"

ಭಂಗಾರದ ಕೈಗಡಿಯಾರ.

ಈ ಚಿತ್ರದಲ್ಲಿ ಕಾಣುವ ಭಂಗಾರದ ಕೈಗಡಿಯಾರವು ಬಹು ಬಲಿಷ್ಟವಾದ (ಸ್ವಿಸ್ ಮೇಡ್) ಲೀವರ್ ಯಂತ್ರವುಳ್ಳದ್ದಾಗಿದ್ದ ತಯಾರಾದದ್ದು. ಇದರ ಗಂಟೆ ಮುಳ್ಳು ತೋರುವವು ಒಳಗಡೆ ಕಂಪುಗಳು ಇಟ್ಟಿವೆ. ಇದರ ಬಣ್ಣವು ಭಂಗಾರಕ್ಕೆ ಸರಿಯಾಗಿರುವದು. ಇದನ್ನು ಈ ವಾರದಲ್ಲಿ ಕರಿಸಿಕೊಳ್ಳುವವರಿಗೆ ಒಂದು ವಜ್ರದ ಉಂಗುರ, ಒಂದು ಗೋಲ್ಡ್ ಗೋಲ್ಡ್ ಭಂಗಾರದ ಕತ್ತಿನ ಹಾರ (ನೆಕ್‌ಲೇಸ್), ಒಂದು ಟೇಬಲ್ ಟೈಂಪೀಸು ಇನಾಮಾಗಿ ಕೊಡುವೆವು. 2 ಗಡಿಯಾರಗಳಿಗೂ ಖಾತ್ರಿಯುಳ್ಳ 4 ವರ್ಷ ಗ್ಯಾರಂಟಿ ಪತ್ರ ಸಹ ಕಳುಹಿಸುವೆವು.

3 ಬಹುಮಾನಗಳ ಸಹಿತ ರಿಸ್ಟ್‌ವಾಚ್ 1 ಕ್ಕೆ 6—8—0.

ವಿಳಾಸ:— ಸಿಟಿ ಮಾರ್ಟ್,

12 [illegible] 168 [illegible]

೫೩ ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ ಔಷಧಗಳು.

೧. ಧಾತುಪುಷ್ಟಿ ಲೇಹ.

ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕ ಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ಥದ ಬಾಧೆ, ರಕ್ತ ಪಿತ್ತ, ಒಳ ಜ್ವರ, ಮಲ ಬದ್ಧತೆ, ಕೈಕಾಲು ಒಚ್ಚುವುದು ಮೊದಲಾದುವುಗಳು ಪೂರ್ಣ ಗುಣವಾಗಿ ಕಳೆದು ಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು.–ಕ್ರಯ ಡಬ್ಬಿ 1ಕ್ಕೆ 2–8–0 ಮೂರು ಡಬ್ಬಿಗಳಿಗೆ ರೂ. 7–0–0

೨. ಅಶೋಕಾರಿಷ್ಟ ಮತ್ತು ಮಾತ್ರೆ.

ಹೆಂಗಸರ ಮುಟ್ಟು ದೋಷಗಳು, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟ ನೋವು, ಸಂತಾನ ಹೀನತೆ, ಮೂರ್ಛೆ, ಮಲಬದ್ಧತೆ, ಒಳಜ್ವರ, ರಕ್ತಹೀನತೆ, ಕೈಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಅತಿ ಶೀಘ್ರದಲ್ಲಿಯೇ ಗುಣ ಪಡಿಸುವುದು. ಅಶೋಕಾರಿಷ್ಟ ಮತ್ತು ಮಾತ್ರೆಗಳು ಸಾವಿರಾರು ಹೆಂಗಸರಿಗೆ ಅಂತರಿಕ ಆರೋಗ್ಯವನ್ನು ಒದಗಿಸಿ, ಮನೋಭಿಲಾಷೆಯನ್ನು ಪೂರಯಿಸಿರುವವು.

ಕ್ರಯ 1 ಬಾಟ್ಲಿ ಔಷಧ, 1 ಡಬ್ಬಿ ಮಾತ್ರೆ ರೂ. 2 ಆ. 4
3 ಬಾಟ್ಲಿ ಮತ್ತು ಡಬ್ಬಿಗಳಿಗೆ ರೂ. 6 ಆ. 4.

೩. ಮಲೇರಿಯಾ ನಿವಾರಣೆ.

ದಿನ ಬಿಟ್ಟು ಬರುವ ಜ್ವರ, ಚಳಿ ಜ್ವರ, 2 ಯಾ 3 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರ ಗಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರ ಗಡ್ಡೆಯನ್ನು ಕಂಗಿಸಿ ಶಕ್ತಿಯನ್ನು ಉಂಟು ಮಾಡುತ್ತದೆ. ಬಾಟ್ಲಿ 1 ಕ್ಕೆ 1–8–0, 3 ಬಾಟ್ಲಿಗಳಿಗೆ 4–2–0.

೪. ಮೇಹ ಕುಠಾರ. ಇದು ಮೂತ್ರಸ್ಥಾನದಿಂದ ಕೆಂಪು, ಬಿಳಿದು, ಹಳದಿಯಂತೆ ಹೋಗತಕ್ಕ ಕೀವನ್ನೂ, ವ್ರಣವನ್ನೂ, ಉರಿಯನ್ನೂ ಗುಣಪಡಿಸುತ್ತದೆ. ಡಬ್ಬಿ 1 ಕ್ಕೆ ರೂ. 2–8–0. 3ಕ್ಕೆ ರೂ. 7.

೫. ಇಛ್ಛಾ ಭೇದಿ ಗುಟಿಕೆ. ಆಯಾಸವನ್ನುಂಟುಮಾಡುವ ಸುಖ ವಿರೇಚಕ. ಬಾಟ್ಲಿ 1ಕ್ಕೆ 0–12–0 ಆಣೆ. 3 ಬಾಟ್ಲಿಗಳಿಗೆ 2–2–0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ರವಾನಿಸಬಹುದು. ಕೆಟಲಾಗು ತರಿಸಿ ನೋಡಿರಿ.

ಮಂ. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್,
52–6 ರಥಬೀದಿ, ಮಂಗಳೂರು, ದ. ಕನ್ನಡ.

British Photo Camera Rs. 4–8–0

ಫೋಟೋ ಕ್ಯಾಮರಾ.

ಈ ಫೋಟೋ ಕ್ಯಾಮರಗಳು ವಿಲಾಯಿತಿಯಲ್ಲಿ ತಯಾರಾದವು. ಈ ಕ್ಯಾಮರಗಳಲ್ಲಿ ಒಬ್ಬರ ಸಹಾಯವಿಲ್ಲದೆ ಎಷ್ಟು ಮಂದಿಗಾದರೂ ಫೋಟೋಗಳನ್ನು ತಗೆಯಬಹುದು. ಈ ಕ್ಯಾಮರಾ ಒಂದು ಇದ್ದರೆ ಬೇಕಾದವರಿಗೆ ಫೋಟೋ ತಗೆದು ಹಣ ಸಂಪಾದನೆ ಮಾಡಬಹುದು. ಪೋಸ್ಟ್ ಕಾರ್ಡಿನ ಸೈಜಿನಲ್ಲಿ ತಗೆಯಬಹುದು. ಫೋಟೋ ತಗೆಯುತ್ತದನ್ನು ಕಲಿತುಕೊಳ್ಳಬೇಕಾಗಿಲ್ಲ, ಕ್ಯಾಮರಾ ಜತೆಯಲ್ಲಿಯೇ ಫೋಟೋ ತಗೆಯುವ ವಿಧಾನವನ್ನು ಕಳುಹಿಸುವೆವು.

ಇದನ್ನು ತರಿಸಿಕೊಳ್ಳುವವರಿಗೆ ಟೇಬಲ್ ಟೈಂಪೀಸ್ ಬಹುಮಾನವಾಗಿ ಕಳುಹಿಸುವೆವು. ಈ ಟೇಬಲ್ ಟೈಂಪೀಸ್‌ಗಳೂ ಈ ಚಿತ್ರಗಳಲ್ಲಿ ಇರುವಂತೆಯೇ ಇರುವವು. ಡಬ್ಬಲ್ ಪಾಲೀಷಿನ ನಿಕ್ಕಲ್ ಕೇಸೂ, ಬಲಿಷ್ಟವಾದ ಲೀವರ್ ಮೂವ್‌ಮೆಂಟ್‌ಗಳಿಂದ ತಯಾರಿಸಲ್ಪಟ್ಟವು. ಸರಿಯಾದ ಕಾಲವನ್ನು ತೋರಿಸುವವು. ಇದಕ್ಕೆ 5 ವರ್ಷಗಳ ಗ್ಯಾರಂಟಿ ಕೊಡುವೆವು. ಕ್ರಯ ಫೋಟೋ ಕ್ಯಾಮರಾ ಬಹುಮಾನ ಟೈಂಪೀಸ್ ಸಹಿತ ರೂ 4–8–0.

The Legal Trading Co.
12–4 P. B. 243. Madras.

ಶಕ್ತಿಯ ಉಂಗುರ (1ಕ್ಕೆ ರೂ. 1–4–0.)



ಈ ಉಂಗುರಗಳನ್ನು ಹಿಮಾಲಯ ಪರ್ವತದ ಒಬ್ಬ ಋಷಿಯಿಂದ ತಯಾರಿಸಿದ್ದು. ಇದನ್ನು ಬೆರಳಿನಲ್ಲಿ ಹಾಕಿಕೊಳ್ಳುವುದರಿಂದ ವ್ಯಾಪಾರದಲ್ಲಿ ಲಾಭವೂ, ಕೋರ್ಟಿನ ವ್ಯಾಜ್ಯಗಳಲ್ಲಿ ಜಯವೂ, ರೋಗ ಪೀಡಿತರಿಗೆ ಆರೋಗ್ಯವೂ, ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದೂ, ಸಂಪಾದನೆ ಇಲ್ಲದಿದ್ದವರಿಗೆ ಸಂಪಾದನೆ, ಬಿಳಿಯ ತೊನ್ನು ಹಿಡಿದವರಿಗೆ ಗುಣವೂ ಮತ್ತು ಇತರ ಅನೇಕ ವಿಧವಾದ ಕಾರ್ಯಗಳಲ್ಲಿ ಜಯ, ಧೈರ್ಯ, ಲಾಭಗಳನ್ನು ಉಂಟು ಮಾಡುವವು. ಮತ್ತು ಈ ಶಕ್ತಿಯ ಉಂಗುರಗಳನ್ನು ಮಕ್ಕಳ ಕೊರಳಿನಲ್ಲಿ ಕಟ್ಟುವುದರಿಂದ ಮಕ್ಕಳಿಗೆ ಬರುವ ಎಲ್ಲಾ ವಿಧವಾದ ವ್ಯಾಧಿಗಳನ್ನು ಗುಣಪಡಿಸುವವು. ಈ ಶಕ್ತಿಯ ಉಂಗುರಗಳು ನಾವು ತಿಳಿಸಿರುವಂತೆ ಪ್ರತಿ ಫಲ ಕೊಡದಲ್ಲಿಯೂ ಲಾಭವನ್ನು ಕೊಡಲಿಲ್ಲವೆಂದು ವ್ಯಕ್ತಪಡಿಸುವವರಿಗೆ 50 ರೂ. ಗಳನ್ನು ಇನಾಮಾಗಿ ಕೊಡುವೆವು. ಶಕ್ತಿಯ ಉಂಗುರ 1ಕ್ಕೆ 1–4–0, 3ಕ್ಕೆ 3–4–0, 6ಕ್ಕೆ 6–0–0.

ವಿಳಾಸ:– ಕೆ. ಎಸ್. ರಾಧಾಕೃಷ್ಣ ಬ್ರದರ್ಸ್,
12–3 109 ಚೈನಾ ಬಜಾರ್, ಮದರಾಸು.

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಎಂಬುವ ಸುಪ್ರಸಿದ್ಧ ದೇಶೀಯ ವಿಮೆ ಸಂಘ.

ಅಧ್ಯಕ್ಷರು:—ಮಾನನೀಯ ಸರ್ ಲಲ್ಲೂಭಾಯಿ ಸಾಮಲದಾಸ್, ಕೆಟಿ., ಸಿ. ಐ. ಇ., ಜೆ. ಪಿ., ಯವರು.

ಕೊಚ್ಚಿಕಾರ ಬ್ರದರ್ಸ್, ಮದ್ರಾಸು ಬ್ರಾಂಚು ಸೆಕ್ರೆಟರಿಗಳು.

1 ಭಾಗ್ಯವಂತರ ಭಂಡಾರ, ವ್ಯಾಪಾರಸ್ಥರ ಕೋಶಾಗಾರ, ಕುಟುಂಬದ ಸಂರಕ್ಷಣಾನಿಲಯ. ಬಡವರ ಜೀವನಾಧಾರ ಇವೇ ಜೀವ ವಿಮೆಯ ತತ್ವವು.

2. ಹಿಂದೂಸ್ಥಾನದ ನಿವಾಸಿಯರಲ್ಲಿ ವಿಮೆ ತೆಗೆಯಬೇಕೆನ್ನುವವರ ಪ್ರಯೋಜನಾರ್ಥವಾಗಿ ಈ ಕಂಪೆನಿಯು ಭಾರತೀಯರ ಉತ್ತಮವಾದ ಆಡಳಿತದಿಂದ ಖರ್ಚು ಬೋನಸ್ ಪಡೆದು ಇಂಡಿಯಾ ಸರ್ಕಾರದ ಇಂಡಿಯನ್ ಟ್ರಸ್ಟ್ ಆಕ್ಟಿಗೆ ಒಳಪಟ್ಟು ಸರ್ಕಾರದ ಭದ್ರತೆಯಿಂದ ದೇಶೀಯರ ಸೇವೆಯಲ್ಲೇ ನಿರತವಾಗಿ ಹಿಂದೂಸ್ಥಾನದ ಎಲ್ಲಾ ಕಡೆಗಳಲ್ಲೂ ಅತಿ ಕೀರ್ತಿಯನ್ನು ಪಡೆದಿರುತ್ತೆ.

3. ಈ ಸ್ವದೇಶೀ ಕಂಪೆನಿಯು ಪೋಲಿಸಿದಾರರಿಗೆ ಪೋಲಿಸಿ ಅವಧಿ ಪೂರೈಸಿದನಂತರವಾಗಲೀ ಅಥವಾ ಮಧ್ಯದಲ್ಲು ಮರಣಾನಂತರ ವಾರೀಸುದಾರರಿಗಾಗಲೀ ಹೆಚ್ಚಿನ ಖರ್ಚಿಗೆ ಅಸ್ಪದ ಕೊಡದೆಯೂ, ದೀರ್ಘ ಸಮಯ ತೆಗೆದುಕೊಳ್ಳದೆಯೂ ಶೀಘ್ರದಲ್ಲಿ ವಿಮೆ ಮೊಬಲಗನ್ನು ಲಾಭ ಸಹಿತ ವಾಪತಿಕೊಡುವುದರಲ್ಲಿ ಹೆಸರುಗೊಂಡಿದೆ.

4. ಭರತಖಂಡದ ಮಹನೀಯರಿಂದ ಸ್ಥಾಪಿಸಲ್ಪಟ್ಟು ದೇಶೀಯರಿಂದಲೇ ಅತಿ ಕಡಿಮೆ ಖರ್ಚಿನಿಂದ ನಡಿಸಲ್ಪಡುವ ಈ ಸ್ವದೇಶೀ ಕಂಪೆನಿಯಲ್ಲು ಒಂದು ಭಾಗಿಗಳಾಗಿರಿ; ಪತಿಪತ್ನಿಯರಿಗೆ ಮತ್ತು ವ್ಯಾಪಾರಸ್ಥರು ವಗೈರರಿಗೆ ಏಕಾಭವಿಸಿ (ಜಾಯಿಂಟ್ ಲೈಫ್) ಪೋಲಿಸಿ ತೆಗೆದುಕೊಳ್ಳಲು ಈ ಕಂಪೆನಿಯು ತುಂಬಾ ಅನುಕೂಲಗಳನ್ನು ಕಲ್ಪಿಸಿರುತ್ತೆ. ಇಂಥ ಸುಸಮಯವನ್ನು ಎಂದಿಗೂ ಕಳಕೊಳ್ಳಬಾರದು.

ಆಫೀಸು—
ಟೆಂಪಲ್ ಸೈಡ್,
ಮಡಿಕೇರಿ. (26–13)

ಬಿ. ಎಸ್. ಐಯ್ಯಪ್ಪ,
ಕೊಡಗು ಚೀಫ್ ಏಜೆಂಟ್.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಕ್ಯಾರೆಟ್ ಭಂಗಾರದ ನಿಬ್ಬು ಹಾಕಿದ ಖಾತ್ರಿಯೂ ಬಂದೋಬಸ್ತೂ ಆದ ಫೌಂಟನ್‌ಪೆನ್‌ಗಳು.

ವೆಲ್ಸ್ ವಂಡರ್ ಫೌಂಟನ್‌ಪೆನ್ 1ಕ್ಕೆ	ರೂ 3	0	0
„ „ ಬಿಗ್ ಬ್ಯಾರೆಲ್ ಪೆನ್ 1ಕ್ಕೆ	3	3	0
„ „ ಸ್ಕ್ರೂ ಕ್ಯಾಪ್ ಪೆನ್ 1ಕ್ಕೆ	3	8	0
„ „ ಬಿಗ್ ಬ್ಯಾರೆಲ್ ಸ್ಕ್ರೂ ಕ್ಯಾಪ್ ಮೊಡಲ್ ಕಲರ್ ಫೌಂಟನ್‌ಪೆನ್ 1ಕ್ಕೆ	3	14	0
„ ಮೊಡಲ್ ಕಲರ್ ಸ್ಕ್ರೂ ಕ್ಯಾಪ್ ಫೌಂಟನ್‌ಪೆನ್ 1ಕ್ಕೆ	4	2	0
„ „ ಸೆಲ್ಫ್ ಫಿಲ್ಲಿಂಗ್ ಮೊಡೆಲ್ ಅಥವ ಬ್ರೌನ್ ಕಲರ್ ಫೌಂಟನ್‌ಪೆನ್ 1ಕ್ಕೆ	5	8	0
ಗ್ ಸ್ವಾನ್ ಫೌಂಟನ್‌ಪೆನ್ 1ಕ್ಕೆ	10	8	0
ಪಾರ್ಕರ್ ಪೆನ್ 1ಕ್ಕೆ	14 6 0, & 20	10	0
ಬ್ಲೇಕ್‌ಬರ್ಡ್ ಫೌಂಟನ್‌ಪೆನ್ 1ಕ್ಕೆ	3 8 0, & 3	12	
...ನ್ ಫೌಂಟನ್ ಪೆನ್ 1ಕ್ಕೆ	6 4 0, & 6	12	0
ವಾಟರ್‌ಮನ್ ಫೌಂಟನ್ ಪೆನ್ 1ಕ್ಕೆ	8 2 0, & 8	10	0

ಟೈಂಪೀಸ್‌ಗಳು.

ಸ್ಟ್ಯಾಂಡ್ ಇರುವ ಸಣ್ಣ ಟೈಂಪೀಸ್ 1 ಕ್ಕೆ	3	6	0
ಜರ್ಮನ್ ಮೇಡ್ ಸಣ್ಣ ಟೈಂಪೀಸ್ 1ಕ್ಕೆ	2	2	0
ಲಿಗಲಿಯೂ ಅಲಾರಂ ಟೈಂಪೀಸ 1ಕ್ಕೆ 6 9 0, &	6	15	0
ಲಿಗಲಿಯೂ ಸಣ್ಣಸೈಜಿನ ಅಲಾರಂ ಟೈಂಪೀಸ್ 1ಕ್ಕೆ	7	2	0
ಲಿಗಲಿಯೂ ಅಲಾರಂ ಸಣ್ಣ ಟೈಂಪೀಸ್ ರೇಡಿಯಂ ಡೈಲಿನದು 1ಕ್ಕೆ	8	10	0
ಬಿಗ್‌ಬೆನ್ ಅಲಾರಂ ಟೈಂಪೀಸ್ 1ಕ್ಕೆ	9	6	0
ಬಿಗ್‌ಬೆನ್ ಅಲಾರಂ ಸ್ಟ್ಯಾಂಡ್ ಇರತಕ್ಕ ಖಾತ್ರಿಯಾದ ಟೈಂಪೀಸ್ 1ಕ್ಕೆ	13	4	0
ಖಾತ್ರಿಯೂ ಬಂದೋಬಸ್ತೂ ಆದ ಪಾಕೆಟ್ ವಾಚ್ 1ಕ್ಕೆ	5	10	0
ಇಟೋ ನಮೂನೆಯುಳ್ಳ ಎಬ್ರಹಾರ್ಡ್ ಕಂಪೆನಿಯ ಪಾಕೆಟ್ ವಾಚ್ 1ಕ್ಕೆ	12	4	0
ನಿಕ್ಕಲ್ ಕೇಸ್ ಸಿಲಿಂಡರ್ ಮೂವ್‌ಮೆಂಟ್ ಸಾಧಾರಣ ತರಹ ರಿಸ್ಟ್ ವಾಚ್ 1ಕ್ಕೆ 5 4 0, 7 8 0, 10 0 0 &	12	8	0



ಇಲ್ಲಿ ನಮೂದಿಸಿರುವ ನಮೂನೆಯಂಥ ವಾದ ಟೇಬಲ್ ಟೈಂಪೀಸ್ 1ಕ್ಕೆ 3–6–0 ಸ್ಟ್ರೈಕಿಂಗ್ ಪೋಸ್ಟೇಜ್ ಬಾಯಿವಾಸ.

ಮಾಲು ದೊರೆಯತಕ್ಕ ಮತ್ತು ರವಾನಿಸುವ ವಿಳಾಸ:—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

52–29

ಸೋಮನ ಮಲೆ.

(ಅ. ಬೋಪಯ್ಯನವರಿಂದ.)

ಸೋಮನ ಮಲೆಯೆ| ನೀಮದಿ ಯಾರನು|
ಪ್ರೇಮದಿ ನೋಡುತಿಹೆ? ||
ಮಳೆಯೂ ಆಳವ| ನೆಲೆಯೂ ಮಾಡುವ|
ಚಳಿಯೂ ಕಾಡುವಿಯೂ ? ||
ಚಂದದ ಮುಖವಿನ್ನ| ಅಂದದಿ ತೋರುದು|
ಇಂದು ಮುದಿಯರಿಗೇ ||
ಚಿನ್ನವು ಎನಗಿಟ್ಟು| ಚಿಣ್ಣನ ಪೊರೆಯುವೆ|
ನಿನ್ನ ದೇವ ದರ್ಪ ? ||
ಕನ್ನೆಯರು ಮಲೆಯೊಳ| ಧನ್ಯರೆ ನಿನಗೆಂದು|
ಅನ್ಯರು ಕೂರಲೇನೋ ? ||
ಕಾಮನ ಬಾಣವು| ಸೋಮನೆ ನಿನ್ನನು|
ಕಾಮಿಸುತಿಹುದೇನೋ ? ||
ಏನನು ಅನ್ನಲಿ| ಮಾನದ ತಂಬಾನು|
ನಿನ್ನೊಳಗೆ ಕಾಣಿದನ್ನು? ||
ದೇಹುವೆ ಸೋಮನೆ| ಕಾಡೆನು ನಿನ್ನೊಳು|
ದೇವತ್ವರ ನೋಡು ||
ಗತಿಸುವ ಸೂರ್ಯನ| ಸತತವು ನೋಡುದು|
ಹಿತವೇ ನಿನಗೇನೋ ? ||
ಅನ್ಯರು ಅನ್ಯರು| ಧನ್ಯನು ನೀನೆಂದು|
ಮಾನ್ಯದ ಸಾಗರಳ ||
ನಮಿಸುವಿಯೂ ನೀನು| ನಮಿಪದ ಸಮುದ್ರಕೆ|
ಮುಮುಕ್ಷಾರದು ದೇವಾ ||
ಎದ್ದೇ ನೀ ನಿಲ್ಲು| ಸಿದ್ಧ ನಾನೆನ್ನು|
ಕದ್ದು ಬರುವೆ ನಿನ್ನೆಡೆಗೆ ||
ಸುತ್ತಿಡು ನಿನ್ನನು| ಎತ್ತಿನ ಹಗ್ಗವೋ|
ಮುತ್ತಿನ ಕರವಣಿಯೊ ? ||
ಪುಲಿಯಾತಿ ಕೊಲ್ಲಲಿ| ಪುಲಿಯಾಟವನು|
ಹುಲಿ ನೀ ನೋಡುವಿಯೂ ? ||
ಹುಟ್ಟುವ ಗುಂಡಿಗೆ| ಹುಟ್ಟುವ ಹಾಕಿದ|
ಬಿಟ್ಟಜ್ಜಿಯ ತೋರೋ ||

ಪತ್ರವ್ಯವಹಾರ.

[ಬಾತ್ಮಿದಾರರು ಬರುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ.]

ಕೊಡಗು ನಾನ್ ಮುಸ್ಲಿಂ ಸಹೋದರರೇ

ವೀರರಾಜಪೇಟೆಯಲ್ಲಿ ನಡೆದ ಕೊಡಗೇತರರ ಮೀಟಿಂಗ್ ಸಂಬಂಧ ತಾ. 29—12—31 ರ ಹಸ್ತಪತ್ರದಲ್ಲಿ ಅನೇಕ ಮಹನೀಯರ ಹೆಸರುಗಳ ಪೈಕಿ 3 ಜನ ಮುಸ್ಲಿಂ ಸಹೋದರರ ಹೆಸರುಗಳಿವೆ. ಇವುಗಳ ಪೈಕಿ ಮುಖ್ಯವಾಗಿ "ಖಾಜಿ ಮಹಮ್ಮದ್ ಯೂಸುಫ್ ಸಾಹೇಬ್" ಎಂಬ ಹೆಸರಿನ ವಿಷಯವಾಗಿ ಕೊಂಚ ವಿವರಿಸಬೇಕಾಗಿದೆ. ಮಹಮ್ಮದೀಯರಲ್ಲಿ "ಖಾಜಿ" ಎಂದರೆ ಗುರು ಯೆಂದರ್ಥ. ಹೀಗಿರುವಲ್ಲಿ ಒಬ್ಬ ಗುರು ಪಡುವ ಅಭಿಪ್ರಾಯಕ್ಕೆ ಹಿಂಬಾಲಕರೆಲ್ಲಾ ಸಮ್ಮತಿಸಿರಬೇಕೆಂಬ ತಪ್ಪು ಊಹೆಗಳು ಜನರಲ್ಲಿ ಉಂಟಾಗಲಿಕ್ಕೆ ಕಾರಣವಿದೆ. ಆದರೆ ಮೇಲ್ಕಂಡ ಮಹಮ್ಮದ್ ಯೂಸುಫ್ ಸಾಹೇಬರು ಖಂಡಿತವಾಗಿಯೂ ಮುಸಲ್ಮಾನರ ಖಾಜಿಯಾಗಿ ನೇಮಿಸಲ್ಪಟ್ಟವರಲ್ಲ. ಇವರ ತಂದೆಯವರು ಖಾಜಿಯಾಗಿ ನೇಮಿಸಲ್ಪಟ್ಟಿದ್ದರು. ಈಗ ಅವರು ಸ್ವರ್ಗಸ್ಥರಾಗಿರುತ್ತಾರೆ. ಇವರು ತಂದೆಯ ಬಿರುದನ್ನು ತನ್ನ ಹೆಸರಿನ ಸಂಗಡ ಇಟ್ಟುಕೊಂಡು, ತಿಳಿಯದ ಜನರನ್ನು ಮೋಸಗೊಳಿಸಲಿಕ್ಕಾಗಿ ಹೀಗೆ ಮಾಡಿರುತ್ತಾರೋ ಎಂಬ ಸಂಶಯ, ಅಲ್ಲದೆ ಇವರು ನಾನ್ ಕೂರ್ಗ್ ಸಭೆಗೆ ಸೇರಲಿಕ್ಕೆ ಮುಂಚೆ ಎಲ್ಲಿಯೂ ಆಲೋಚನೆ ಮಾಡದೆ ತನ್ನ ಸ್ವಂತ ಇರಾದೆಯಿಂದ ಸೇರಿದ್ದಾರೆಯೇ ಹೊರತು, ಮುಸ್ಲಿಂ ಜನಾಂಗದ ಪರವಾಗಿ ಅಲ್ಲ.

2 ನೇಯ ಸಂಗತಿ. ಕೊಡಗಿನ ಮುಸಲ್ಮಾನರೆಲ್ಲಾ ತ[illegible] ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ [illegible] "ಇತ್ತಿಹಾದೆ ಇಸ್ಲಾಂ" ಎಂಬ ಸಂಘವು ಈಗ [illegible] ವರ್ಷದ ಲಾಗಾಯತು ಸ್ಥಾಪಿತವಾಗಿ, ಮೂರು ವಾ[illegible] ಸಭೆಗಳೂ ಸಹ ನಡೆದದ್ದು ಕೊಡಗಿನಲ್ಲಿ ಯಾರಿಗೂ ತಿ[illegible]ದ್ದಲ್ಲ. ಇದುವರೆಗೆ ಮುಸಲ್ಮಾನರಿಗೆ ಬೇರೊಂದು ಸ[illegible]ಘಿಕವಾಗಿ ಸಿಕ್ಕಲಿಕ್ಕಿರುವ ಮಾರ್ಗಗಳು ಸಿಕ್ಕಿದ್ದವೂ ಕಂಡುಬರುವದಿಲ್ಲ. ಇವರೆಲ್ಲರೂ ತಮ್ಮ [illegible] ಕೆಲಸ ಮಾಡದೆ, ನಾನ್ ಮುಸ್ಲಿಂ ಸಂಘದಲ್ಲಿ [illegible] ಮಾಡಿ ಶೀಘ್ರದಲ್ಲಿ ಅಭಿವೃದ್ಧಿ ಹೊಂದುತ್ತಾ[illegible].

[illegible]ಮನ್ ಇತ್ತಿಹಾದೆ ಇಸ್ಲಾಂ ಸಂಘವು, ಕೊಡಗ[illegible] ಜನಾಂಗದ ಅಭಿವೃದ್ಧಿಗೆ ಮಾತ್ರವಿರುವದಲ್ಲದೆ, [illegible] ಜನಾಂಗದ, ಯಾ ಸಂಘದ ಜೊತೆಯಲ್ಲಿ [illegible] ವಿರೋಧ ಮಾಡಲಿಕ್ಕಿರುವದಲ್ಲವೆಂಬ ಸಂ[illegible] ಎಲ್ಲಾ ಜನಾಂಗಗಳಿಗೂ ಈ ಮುಸಲ[illegible]

ಈಗ ನಾನ್ ಕೊಡಗು ಸಂಘಕ್ಕೆ ಹೆಸರುಕೊಟ್ಟಿರುವ ಮುಸಲ್ಮಾನರೆಲ್ಲರೂ ಅವರವರ ಸ್ವಂತ ಇರಾದೆಯೇ ಹೊರತು ಅಂಜುಮನ್ನಿನ ತೀರ್ಮಾನವಲ್ಲ.

'ಕೂರ್ಗ್ ಮುಸಲ್ಮಾನ್.'

ರಾಮನಾಮ ಮಹಿಮೆ.

ಅಯ್ಯಾ,

ಈ ತಾ 10ನೇ ಆದಿತ್ಯವಾರ ಮಡಿಕೇರಿಯ ವೇದಾಂತ ಸಂಘದ ಮುಂಭಾಗದಲ್ಲಿ "ರಾಮ ನಾಮ ಮಹಿಮೆ" ಯ ವಿಷಯ 3 ಮಹನೀಯರು ಭಾಷಣ ಮಾಡಿದರು. ಈ ಉತ್ಸಾಹವನ್ನು ಶ್ರೀಮತಿ ಯಂ. ಗೌರಮ್ಮನವರು ಮಾಡಿಸಿದರೆಂಬ ಸಂಗತಿ ಭಾಷಣಕಾರರ ಭಾಷಣದಿಂದ ತಿಳಿದು ಬಹಳ ಸಂತೋಷವಾಯಿತು.

ಇಂಥಾ ಉತ್ಸವವನ್ನು ಈ ವರೆಗೂ ಇಲ್ಲಿ ಯಾರೂ ಮಾಡಿರುವುದಿಲ್ಲವೆಂಬ ಸಂಗತಿ ನಾನು ಇಲ್ಲಿ ಬರೆದು ತಿಳಿಸಿದರೂ ಅದು ತಪ್ಪಾಗಲಿಕ್ಕಿಲ್ಲ. ಇಂಥಾ ಶ್ರೀ ರಾಮ ಮಹಿಮೆಯನ್ನು ರಾಮಾಯಣದಲ್ಲಿ ಅನೇಕರು ಓದಿರಬಹುದು. ಆದರೆ ಶ್ರೀಮತಿಯವರು ರಾಮಾಯಣವನ್ನು ಓದಿದವರಲ್ಲಿ ಒಬ್ಬರಾಗಿದ್ದರೂ ಇವರು ಈ (ಕೆಲವು ತಿಂಗಳಿನಿಂದ) ಮೊದಲು "ರಾಮ ರಾಮ" ಎಂಬ ಎರಡಕ್ಷರದ ಮಂತ್ರವನ್ನು 2,02,108 ಸಲ ಬರೆದು ಮೊನ್ನೆ ದಿನದ ಪ್ರದರ್ಶನಕ್ಕೆ ಇಟ್ಟದ್ದೂ ಸಹ ಪೂರಾ ಸಂತೋಷಕರ. ಶ್ರೀಮತಿಯವರು ಸಾಧಾರಣ 60—70 ವರ್ಷ ಪ್ರಾಯದವರಾದರೂ ತನ್ನ ಈ ಪ್ರಾಯದಲ್ಲಿ ಮುಕ್ತಿ ಸಾಧನೆಗೆ ಬೇಕಾದ ಕರ್ತವ್ಯವನ್ನು, ಮಹಾ ಜನರಿಗೆ ಒಂದು ತರಹದ ಮೇಲ್ಪಂಕ್ತಿಯನ್ನು ಮಾಡಿಯೇ ಮಾಡಿದರು. ಇವರಿಗೆ ಶ್ರೀರಾಮನ ಕೃಪೆಯು ಪೂರ್ತಿ ಇರುವುದಲ್ಲದೆ ಈ ಉತ್ಸವಕ್ಕೆ ನೆರೆದ ಮಹನೀಯರು ಮತ್ತು ಮಹಿಳೆಯರಿಗೂ ಇರಬಹುದೆಂದು ನಾನು ನಂಬಿರುವೆನು.

ಆದರೆ ಇದೇ ರೀತಿಯ ಉತ್ಸವವನ್ನು ಇನ್ನೂ ಅನೇಕ ಮಹನೀಯರಾಗಲಿ, ಮಹಿಳೆಯರಾಗಲಿ ನಡಸಿ ರಾಮನ ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇನೆ. ಹೆಚ್ಚಾಗಿ ಇಂಥಾ ಉತ್ಸವವನ್ನು ನಮ್ಮ ಮುಖಂಡರೆನ್ನಿಸಿಕೊಳ್ಳುವ ಸ್ತ್ರೀಯರೇ ಮಾಡಬೇಕೆಂದೂ ಸಹ ಬರೆದರೆ ಅದೂ ತಪ್ಪಾಗುವುದೇ? ಭಕ್ತಿ ಪೂರ್ವಕವಾಗಿ ಒಂದೇ ಸಲ 'ರಾಮ' ನೆಂಬ ಎರಡಕ್ಷರದ ಮಂತ್ರವನ್ನು ಜಪಿಸಿದರೆ ಸಕಲ ಕಷ್ಟಗಳ ಪರಿಹಾರವಾಗುವುದಲ್ಲದೆ ಅಂಥವರು ಬ್ರಹ್ಮ ಸಾಕ್ಷಾತ್ಕಾರ ಪಡೆಯುವರೆಂದು ಅನೇಕ ಪುರಾಣ ಕಥೆಗಳೇ ಆಧಾರವಾಗಿದೆ ಎಂಬುದು ವಾಚಕರಿಗೆ ತಿಳಿದಿರಬಹುದು. ಅಂಥಾ ಮಹಿಮೆಯ "ರಾಮ" ನೆಂಬ ಮಂತ್ರವನ್ನು 20,2,108 ಸಲ ಬರೆದ ಶ್ರೀಮತಿಯವರಿಗಾಗಲೀ, ಈ ಉತ್ಸವಕ್ಕೆ ಸೇರಿದ ಮಹಾಜನರಿಗಾಗಲೀ ಮುಕ್ತಿ ಸಿಕ್ಕುತ್ತದೆಂಬುದಕ್ಕೆ ಸಂಶಯವೇನು? 20,2,108 ಸಲ ಬರೆಯುವುದರ ಅರ್ಥ ಏನೆಂದರೆ—ಒಂದು ಅಕ್ಷರಕ್ಕೆ ಒಂದು ಲಕ್ಷವೆಂತಲೂ, ಹೀಗೆ 'ರಾಮ' ನೆಂಬ ಎರಡಕ್ಷರಕ್ಕೆ ಎರಡು ಲಕ್ಷವೂ, ಅದರ ಶಾಂತಿಗಾಗಿ ಎರಡು ಸಾವಿರದ ಒಂದುನೂರ ಎಂಟು ಎಂದೂ ಗ್ರಹಿಸಬೇಕು. ಯಾರಾದರೂ ಇಂಥಾ "ರಾಮ ರಾಮ" ನೆಂಬ ಎರಡಕ್ಷರದ ಮಂತ್ರವನ್ನು ಪುಸ್ತಕದ ಮೂಲಕ ಬರೆಯುವುದಾದರೆ ಅಂಥ ಪುಸ್ತಕಗಳನ್ನು ಪೂಜಾದಿ ಕಳೆದ ನಂತರ ಆ ಪುಸ್ತಕವನ್ನು ಪುಣ್ಯಕ್ಷೇತ್ರಕ್ಕೆ ತೆಗೆದುಕೊಂಡು ಹೋಗಿ ಅಲ್ಲಿ ತಾನು ಸ್ನಾನ, ಪೂಜೆ ವಗೈರೆ ತೀರಿಸಿ ಆ ರಾಮನಾಮದ ಪುಸ್ತಕವನ್ನು ಪುಣ್ಯ ಕ್ಷೇತ್ರದ ನದಿಯಲ್ಲಿ ಮುಳುಗಿಸಿ ಬರಬೇಕೆಂದು ಶ್ರೀಮತಿಯವರು ನನ್ನಲ್ಲಿ ತಿಳಿಸಿರುವರು. ಆದುದರಿಂದ ದೇಶದ ಮಹನೀಯರೂ, ಮಹಿಳೆಯರೂ ಸಹ ಶ್ರೀಮತಿಯವರು ಹಾಕಿದ ಮೇಲ್ಪಂಕ್ತಿಯನ್ನು ಅನುಸರಿಸಿ ದೇವರ ಪ್ರೀತಿಗೆ ಪಾತ್ರರಾಗಬೇಕಾಗಿ ನಾನು ಹಾರೈಸುತ್ತೇನೆ. ಯಂ. ಯಂ. ಬಿ.

ಕೊಡಗೇತರರ ಹೊಸ ಸಂಘ.

ಅಯ್ಯಾ,

ಕೊಡಗೇತರರ ಪೈಕಿ ಏಳು ಜನರಿಂದ ರುಜು ಮಾಡಲ್ಪಟ್ಟ ಒಂದು ನೋಟೀಸು ಈ ಕೆಳಗಿನ ರೀತಿ ಬರೆಯಲ್ಪಟ್ಟದ್ದನ್ನು ನಾನು ನೋಡಿದೆನು. "ನಮ್ಮ ಕೊಡವ ಸಹೋದರರು ತಮ್ಮ ರಾಜಕೀಯ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಕೊಡವ ಸಭೆ ಎಂಬ ಹೆಸರಿನಿಂದ ಒಂದು ಸಭೆಯನ್ನು ಏರ್ಪಡಿಸಿ ಅದರಿಂದ ಅವರ ಅಭಿವೃದ್ಧಿಯನ್ನು ಎಷ್ಟೋ ಹೆಚ್ಚುಗೊಳಿಸಿರುತ್ತಾರೆ" ಆದ್ದರಿಂದ ತಾವೂ ಸಹ ಈ ರೀತಿಯ ಸಂಘವೊಂದನ್ನು ಏರ್ಪಡಿಸಲು ಕಳೆದ ತಾರೀಕು 29—12—31 ರಲ್ಲಿ ವೀರರಾಜಪೇಟೆಯಲ್ಲಿ ಮೀಟಿಂಗೊಂದನ್ನು ಮಾಡಿ ಈ ರೀತಿಯ ಸಭೆಯೊಂದನ್ನು ಮಾಡಿರುತ್ತಾರೆಂದು ತಿಳಿಯುತ್ತೇನೆ.

ದೇಶದ ರಾಜಕೀಯ ಬೆಳವಣಿಗೆಗೆ ಬಹಳ ಕೆಡಕನ್ನುಂಟುಮಾಡಿದ, ಮತ್ತು ಕೊಡವರ ಸಾಮಾಜಿಕ, ಮತ್ತು ಆರ್ಥಿಕ ಸ್ಥಿತಿಯನ್ನು ಯಾವ ವಿಧದಲ್ಲಿಯೂ ಅಭಿವೃದ್ಧಿಪಡಿಸದ ಮತ್ತು ಕೇವಲ 93 ಕೊಡವ ಜನರು ವಿರೋಧಿಸಿದ, ಈ ಸಭೆಯ ಹೆಸರನ್ನೆತ್ತಿ ಹೊಸ ಕೊಡಗೇತರ ಸಭೆಯನ್ನು ಮಾಡಿರುವುದು ನೋಡಿದರೆ ಈ ಸಭೆಯು ಕೊಡವ ಸಭೆಯ ತತ್ವವನ್ನೇ ಹಿಂಬಾಲಿಸುವುದೆಂದು ಕಂಠೋಕ್ತವಾಗಿ, ದೇಶದ ಕೊಡಗೇತರ ಮಹನೀಯರು ನಂಬಲೇ ಬೇಕಾಗಿದೆ.

ಇಂಥಾ ಸಭೆಯಿಂದ ದೇಶಕ್ಕೆ ಇನ್ನು ಮುಂದಕ್ಕೆ ಯಾ[illegible]ಲ್ಲವೆಂಬುದಾಗಿ ಹೇಳುವುದಕ್ಕೆ ವೇದೆಯು, ನಮ್ಮ ನವೀನ ಕೊಡವ ಸಭೆಯಿಂದ ದೇಶಕ್ಕೆ ಎಷ್ಟರ ಮಟ್ಟಿಗೆ ಪ್ರಯೋಜನವಾಗಿದೆಯೆಂಬುದನ್ನು ದೇಶೀಯರಲ್ಲಿ ಪುನಃ ಇಡುವುದು ಅತ್ಯಾವಶ್ಯವಾಗಿ ಕಾಣುತ್ತೆ. ಕೊಡವ ಸಭೆಯವರು ಮೊದಲಾಗಿ ತಮ್ಮ ಎಲ್ಲಾ ಕೆಲಸಕ್ಕೂ ದೇಶೀಯ ಕೊಡಗರ ಸಮ್ಮತವಿಲ್ಲದಿರೋಣದರಿಂದ ಸರಕಾರದವರೊಡನೆ ಒಳಸುಗ್ಗಿ ತಮ್ಮ ಸಭೆಯ ಹೆಸರನ್ನು ರಾಜ್ಯಾಡಳಿತ ವರದಿಯಲ್ಲಿ ಬರೆಸಿದ್ದು. (2) ಕೊಡಗು ಜಮೀನ್ದಾರ ಸಂಘದವರು ಮಾಡುತ್ತಿರುವ ಕೆಲಸಕ್ಕೆ ವಿರೋಧ ವರ್ತಿಸುತ್ತಿದ್ದದ್ದು ಮತ್ತು ಮಾರ್ವಾಡು ಸಿಕ್ಕವಿದ್ದರೆ ಕೊಡಗನ್ನು ಮದ್ರಾಸು ಅಧಿಪತ್ಯದ ಒಂದು ಜಿಲ್ಲೆಯನ್ನಾಗಿ ಮಾಡಲು ಜಮೀನ್ದಾರ ಸಂಘದವರು ಹೂಡಿದ ಚಳವಳಿಗೆ ವಿರೋಧಿಸಿದ್ದು. (3) ಸೈಮನ್ ಕಮಿಶನ್ನಿಗೆ ಡೆಪ್ಯುಟೇಶನ್ ಹೋಗಿ ಕೊಡಗಿನ ಮುಂದಿನ ರಾಜಕೀಯ ಭವಿಷ್ಯತ್ತಿಗೆ ಅಡ್ಡ ತಂದು ಕೆಲವು ಜನರ ಸ್ವದೇಹವನ್ನು ಸಾಧಿಸಿದ್ದು. (4) ಒಟ್ಟಾರೆ ಹೇಳಬೇಕಾದರೆ ದೇಶದ ಎಲ್ಲಾ ಅಭಿವೃದ್ಧಿಯ ಕಾರ್ಯಕ್ಕೆ ಕೊಡಗು ಜಮೀನ್ದಾರ ಸಂಘದವರು ಕೆಲಸ ಮಾಡುತ್ತಿರುವ ಸಮಯದಲ್ಲಿ ಅಂಥಾದಕ್ಕೆ ಅಡ್ಡಿ ಬಂದದ್ದು. ವಗೈರೆ ಅನೇಕ ಕೆಲಸಗಳು ದೇಶದವರ ಮುಂದೆ ಕನ್ನಡಿಯಂತಿದೆ. ಇದನ್ನು ಕಣ್ಣಾರೆ ಕಂಡರೂ, ಮತ್ತು ಇಂಥಾ ಸಭೆಗೆ ಕೊಡವ ಮಹನೀಯರೊಳಗೆ ವಿರೋಧಿಸಲು ಸಹಾಯ ಮಾಡಿದ, ಕೊಡಗೇತರ ಮಹನೀಯರು, ರಾತ್ರಿ ಕಂಡ ಬಾವಿಗೆ, ಹಗಲು ಬೀಳುವುದು ದೇಶದ ದುರ್ಭಾಗ್ಯವೆಂದೇ ನಂಬಬೇಕಾಗಿದೆ.

ಭೂಲೋಕದಲ್ಲಿ ಒಬ್ಬರ ನಾಶಕ್ಕೆ ಇನ್ನೊಬ್ಬರು ಪ್ರಯತ್ನ ಪಟ್ಟರೆ, ಪ್ರಯತ್ನ ಪಟ್ಟವರು ತಾವೇ ನಾಶಹೊಂದಿಕೊಳ್ಳುತ್ತಾರೆ. ಹೀಗೆಯೇ ಕೊಡಗು ಜಮೀನ್ದಾರ ಸಂಘವನ್ನು ಕೊಡಗು ಪತ್ರಿಕೆಯನ್ನು ನಾಶಗೊಳಿಸಬೇಕೆಂದು ಕೆಲಸ ಮಾಡಿದ ಸಂಸ್ಥೆಗಳು ಈಗ ಹೇಗಿವೆ ಎಂಬುದು ದೇಶದ ಜನರಿಗೆ ಮನವರಿಕೆ ಇದ್ದೇ ಇದೆ. ಈಗ ಅದೇ ಸ್ಥಿತಿಗೆ ಹೋಗಬೇಕೆಂದಿರುವ ಕೊಡಗೇತರ ಸಭೆಯೂ ಆಗುವುದೇನೆಂಬುದು ಅವರ ನೋಟೀಸಿನ ಉದ್ದೇಶದಿಂದಲೇ ವೇದ್ಯವಾಗುತ್ತೆ. ಈ ಮಹನೀಯರು ದಯವಿಟ್ಟು ಕೊಡವ ಸಭೆಯವರು ಮಾಡಿದ ಉಪಕಾರದಿಂದೊಂದು ಒಳ್ಳೆಯ ಕೆಲಸವನ್ನು ದೇಶೀಯರ ಗೋಚರಕ್ಕೆ ತಂದಿದ್ದರೆ, ಅವರಿಗೆ ನಾನು ಬಹಳ ವಂದಿಸುತ್ತಿದ್ದೆನು.

ಒಟ್ಟಾರೆ ನೋಡಿದರೆ, ದೇಶದ ಒಗ್ಗಟ್ಟಿಗೆ ಮತ್ತು ಮುಂದಿನ ರಾಜಕೀಯ ಬೆಳವಣಿಗೆಗೆ ಕೊಡವ ಸಭೆಯವರು ಮಾಡಿದ ಕೆಡಕನ್ನೇ, ಈ ಕೊಡಗೇತರ ಮಹನೀಯರು ಮಾಡುವರೆಂದು ಕಂಠೋಕ್ತವಾಗಿ ತಿಳಿಯುತ್ತದೆ. ಇವರ ಈ ಮೀಟಿಂಗಿನಲ್ಲಿ ಮೆ ಅಬ್ದುಲ್ ಖಾನ್‌ರವರು ಮಾತ್ರ ಬಲವಾಗಿ ಇಂಥಾ ಸಭೆಯನ್ನು ವಿರೋಧಿಸಿರುವುದು ತಿಳಿಯುತ್ತೇನೆ. ದೇಶಭಿಮಾನವುಳ್ಳ ಕೊಡಗೇತರ ಮಹನೀಯರೆಲ್ಲರೂ, ಮುಂದಕ್ಕೆ ಬಂದು ಇಂಥಾ ಸಭೆಯನ್ನು ಬಹಿರಂಗವಾಗಿ ಮೀಟಿಂಗ್ ಮಾಡಿ ಖಂಡಿಸುವುದು ಬಹಳ ಅವಶ್ಯವಿದೆ. ಏತಕ್ಕೆಂದರೆ ಕೊಡವ ಜನರ ಹೆಸರಿನಲ್ಲಿ ಹಲ ಕೆಲವು ಕೊಡವ ಜನರು ಸೇರಿ ಸರಕಾರಕ್ಕೆ ಇಲ್ಲದ ಸಲ್ಲದ್ದನ್ನು ಹೇಳಿ ತಮ್ಮ ಸ್ವಾರ್ಥವನ್ನು ಸಾಧಿಸಲು ಪ್ರಯತ್ನ ಪಟ್ಟರೋ ಅದೇ ರೀತಿ ಕೊಡಗೇತರರೆಂಬ ಹೆಸರಿನಿಂದ, ಕೊಡಗರನ್ನು ವಿನಾಯಿಸಿ, ಇತರ ಎಲ್ಲಾ ಪಂಗಡಗಳ ಹೆಸರಿನಿಂದ, ಹಲ ಕೆಲವರು ತಮ್ಮ ಸ್ವಾರ್ಥವನ್ನು ಸಾಧಿಸಲಿಕ್ಕಿರುವ ಸಭೆಯೆಂದು, ಈ ನೋಟೀಸಿನಿಂದ ವ್ಯಕ್ತವಾಗುತ್ತದೆ. ಆದ್ದರಿಂದ ಕೊಡಗೇತರ ಮಹನೀಯರು ಎಚ್ಚತ್ತು, ನಿಮ್ಮ ಸಹೋದರರಾದ ಕೊಡವರು ಕೊಡವ ಸಭೆಯನ್ನು ಖಂಡಿಸಿದ ಕೆಲಸ ಮಾಡಿದ ರೀತಿ, ನೀವು ಸಹ ಮುಂದಕ್ಕೆ ಬಂದು, ಈ ಕೊಡಗೇತರ ಸಭೆಯನ್ನು ವಿರೋಧಿಸಿ, ದೇಶದ ಒಗ್ಗಟ್ಟಿಗೂ, ಮುಂದಿನ ರಾಜಕೀಯ ಕಲ್ಯಾಣಕ್ಕೂ ಸಹಾಯ ಮಾಡಬೇಕಾಗಿ ಕೋರುತ್ತೇನೆ. ಹೀಗೆ ಮಾಡದಿದ್ದರೆ, ಹಲ ಕೆಲವು ಜನರು, ನಿಮ್ಮೆಲ್ಲರ ಪ್ರತಿನಿಧಿಗಳೆಂದು ತಮ್ಮಷ್ಟಕ್ಕೆ ತಾವೇ ಹೇಳಿಕೊಂಡು ದೇಶವನ್ನು ಕಷ್ಟಕ್ಕೂ, ವ್ಯಸನಕ್ಕೂ ಇಳಿಸುವುದರಲ್ಲಿ ಸಂದೇಹವಿಲ್ಲ.

"ಕೊಡಗ"

ಭಂಗಾರದ ಕೈಗಡಿಯಾರ.



ಈ ಚಿತ್ರದಲ್ಲಿ ಕಾಣುವ ಭಂಗಾರದ ಕೈಗಡಿಯಾರವು ಬಹು ಬಲಿಷ್ಟವಾದ (ಸ್ವಿಸ್ ಮೇಡ್) ಲೀವರ್ ಯಂತ್ರಗಳಿಂದ ತಯಾರಾದವು. ಖರಾಬು ಗಂಟೆಯನ್ನು ತೋರಿಸುವವು. ಒಳಗಡೆ ರತ್ನಗಳು ಇಟ್ಟಿವೆ. ಇದರ ಬಣ್ಣವು ಭಂಗಾರಕ್ಕೆ ಸರಿಯಾಗಿರುವದು. ಇದನ್ನು ಈ ವಾರದಲ್ಲಿ ತರಿಸಿಕೊಳ್ಳುವವರಿಗೆ ಒಂದು ವಸ್ತ್ರದ ಉಂಗುರ, ಒಂದು ಗೋಲ್ಡ್ ಗೋಲ್ಡ್ ಭಂಗಾರದ ಕತ್ತಿನ ಹಾರ (ನೆಕ್‌ಲೇಸ್), ಒಂದು ಟೇಬಲ್ ಟೈಂಪೀಸು ಇನಾಮವಾಗಿ ಕೊಡುವೆವು. 2 ಗಡಿಯಾರಗಳಿಗೂ ಖಾತ್ರಿಯುಳ್ಳ 4 ವರ್ಷ ಗ್ಯಾರಂಟಿ ಪತ್ರ ಸಹ ಕಳುಹಿಸುವೆವು.

3 ಬಹುಮಾನಗಳ ಸಹಿತ ರಿಸ್ಟವಾಚ್ 1 ಕ್ಕೆ 6—8—0.

ವಿಳಾಸ:— **ಕಿಟ್ ಹೋಮ್,**

12—3   168, ಜೈನಾ ಬಜಾರ್, ಮದರಾಸು.

ಕೊಡಗಿನಲ್ಲಿ ಖಾನೂನು ಭಂಗ ಪ್ರಾರಂಭ.

ಗೋಣಿಕೊಪ್ಪಲು, ಹುದಿಕೇರಿ ಮತ್ತು ವೀರರಾಜೇಂದ್ರಪೇಟೆಗಳಲ್ಲಿ ಕಾಂಗ್ರೆಸು ಕೆಲಸಗಾರರ ದಸ್ತಗಿರಿಗಳು.

೧೮ ಸತ್ಯಾಗ್ರಹಿಗಳು ಸೆರೆ ಹಿಡಿಯಲ್ಪಟ್ಟರು.

ಸರಹದ್ದು ಪ್ರಾಂತ್ಯದಲ್ಲಿ ೪೨೧೬ ಜನರು ದಸ್ತಗಿರಿ ಮಾಡಲ್ಪಟ್ಟಿದ್ದಾರೆ.

ಈ ತಾ. 7ರಲ್ಲು ಕೊಡಗು ಜಿಲ್ಲಾ ಕಾಂಗ್ರೆಸು ಕಮಿಟಿಯ ಅಧ್ಯಕ್ಷರು ಮತ್ತು ಸೆಕ್ರೆಟರಿಯವರಿಗೂ ಕಮಿಶನರವರೊಡನೆ ನಡೆದ ಸಂಭಾಷಣೆಯಲ್ಲಿ ಕಾಂಗ್ರೆಸು ಕೆಲಸಗಾರರು ಕೊಡಗಿನಲ್ಲಿ ಖಾನೂನು ಭಂಗ ಚಳವಳವನ್ನು ಪ್ರಾರಂಭಿಸಲಾಗುವೆಂದು ಹೇಳಿದರ ಮೇಲೆ ಸದರಿ ದಿನ ಮಧ್ಯಾಹ್ನದ ಪೋಲಿಯ ಕಾಂಗ್ರೆಸ್ ಕಮಿಟಿಯ 15 ಮೆಂಬರುಗಳಿಗೆ ಪಬ್ಲಿಕ್ ಮೀಟಿಂಗು, ಮೆರವಣಿಗೆ, ಹಾಕಿ ವಗೈರೆ ಮಾಡಕೂಡದೆಂದು ಕ್ರಿ. ಪ್ರೋ. ಕೋ. 144ನೇ ಸೆಕ್ಷನ್ ಮೇರೆ ನೋಟೀಸು ಕೊಡಲಾಯಿತು. ಈ ತಾ. 10ರಲ್ಲಿ ಗೋಣಿಕೊಪ್ಪಲು ಸಂತೆಯಲ್ಲಿ ಸೇರಿದ್ದ ಜನಸಮುದಾಯದಲ್ಲಿ ಉತ್ಸಾಹವು ತುಂಬಿ ತುಳುಕುತ್ತಿತ್ತು. ನೋಟೀಸು ಕೊಡಲ್ಪಟ್ಟಿದ್ದರ ಪೈಕಿ ಮೆ. ಅಜ್ಜಿಕುಟ್ಟಿರ ಚಿಣ್ಣಪ್ಪನವರು ಪಬ್ಲಿಕ್ ಮೀಟಿಂಗಿನಲ್ಲಿ ಭಾಷಣ ಮಾಡಲು ಪ್ರಾರಂಭಿಸಿದ ಕೂಡಲೆ ಅವರನ್ನು, ಅವರೊಂದಿಗಿದ್ದ ಮೆ. ಪುತ್ತಮನೆ ಕಾಳನ್ಯಯ್ಯನವರು ಮತ್ತು ಮೆ. ಚೇಂದಿಮಾಡ ಮುದ್ದಯ್ಯನವರನ್ನೂ ಪೊಲೀಸು ಡೆಪ್ಯುಟಿ ಸುಪರಿಂಟೆಂಡೆಂಟರು ದಸ್ತಗಿರಿ ಮಾಡಿದರು. ಈ ಸಂಬಂಧ ಡಿಪ್ಯುಟಿ ಸುಪರಿಂಟೆಂಡೆಂಟರು, ಸುಭೇದಾರ ಮೇಜಿಸ್ಟ್ರೇಟರು, ಸರ್ಕಲ್ ಇನ್‌ಸ್ಪೆಕ್ಟರು, ಇಬ್ಬರು ಸಬ್ ಇನ್‌ಸ್ಪೆಕ್ಟರುಗಳು ಮತ್ತು ಸುಮಾರು 25 ಪೊಲೀಸಿನವರು ಆ ಸಂತೆಯಲ್ಲಿ ಬೆಳಗಿನಿಂದಲೇ ಹಾಜರಿದ್ದರು. ದಸ್ತಗಿರಿ ಮಾಡಲ್ಪಟ್ಟವರು ಕೂಡಲೇ ಬಸ್ಸಿನಲ್ಲಿ ವೀರರಾಜಪೇಟೆ ಸಬ್ ಜೈಲಿಗೆ ಸಾಗಿಸಲ್ಪಟ್ಟರು. ನೂರಾರು ಜನರು ಸೇರಿದ್ದ ಮೀಟಿಂಗು ಬರಖಾಸ್ತಾಯಿತು.

ಮರುದಿನ ಬೆಳಿಗ್ಗೆ ಪೊನ್ನಂಪೇಟೆ ಕುಶಾಲಪುರದಲ್ಲಿ ದಿವಂಗತ ಪಾರ್ವಂಗಡ ಕುಶಾಲಪ್ಪನವರ 3ನೇ ವಾರ್ಷಿಕ ಪುಣ್ಯತಿಥಿಯನ್ನು ಆಚರಿಸುವ ಜಗ್ಗ ಮೆ. ಮುಳ್ಳಾಂಡ ಚಂಗಪ್ಪನವರು ರಾಷ್ಟ್ರೀಯ ಧ್ವಜವನ್ನು ಹಾರಿಸುತ್ತಿದ್ದಾಗ್ಯೆ ಅಲ್ಲಿಗೆ ಬಂದಿದ್ದ ಪೊಲೀಸಿನವರು ಅವರನ್ನು ದಸ್ತಗಿರಿ ಮಾಡಿದರು. ಸುಮಾರು ಒಂದು ಗಂಟೆಯ ವರೆಗೆ ಲಾಕಪಿನಲ್ಲಿಟ್ಟು ನಂತರ ಹುದಿಕೇರಿ ಸಂತೆಗೆ ಕರೆದುಕೊಂಡು ಹೋಗಿ ಅಲ್ಲಿ ಬಿಡುಗಡೆ ಮಾಡಿದರು. ಮಧ್ಯಾಹ್ನ ಸಮಯದಲ್ಲಿ ಮೆ. ಚೆಕ್ಕೆರ ಮಾದಯ್ಯನವರು ಮತ್ತು ಮುಳ್ಳಾಂಡ ಚಂಗಪ್ಪನವರು ಹುದಿಕೇರಿ ಸಂತೆಯಲ್ಲಿ ಪಬ್ಲಿಕ್ ಮೀಟಿಂಗಿನಲ್ಲಿ ಭಾಷಣ ಮಾಡಲು ಪ್ರಯತ್ನಿಸಿದ್ದಾಗ್ಯೆ ಸೆರೆ ಹಿಡಿಯಲ್ಪಟ್ಟರು. ನಂತರ ಅಲ್ಲಿಂದ ಸ್ವಲ್ಪ ದೂರದಲ್ಲಿ ಮೆ. ಗಳಾದ (1) ಕೊಳ್ಳಿಮಾಡ ಕರುಂಬಯ್ಯನವರು (2) ಅಜ್ಜಮಾಡ ಮಾದಪ್ಪನವರು, (3) ಪೊನ್ನಿಮಾಡ ಮಾಚಯ್ಯನವರು, (4) ಹೊಟ್ಟೇಂಗಡ ಕುಶಾಲಪ್ಪನವರು, (5) ತಡಿಯಂಗಡ ಸುಬ್ಬಯ್ಯನವರು, (9) ಚೊಟ್ಟಂಡ ಗಣಪತಿಯವರು, (7) ತೀತಿರ ಕುಟ್ಟಪ್ಪನವರು, (8) ಅಂಡೆರಂಡ ಬಿದ್ದಪ್ಪನವರು ಪೊಲೀಸು ಇನ್‌ಸ್ಪೆಕ್ಟರಿಂದ ದಸ್ತಗಿರಿ ಮಾಡಲ್ಪಟ್ಟರು. ಇವರೆಲ್ಲರೂ ಕೂಡಲೆ ವೀರರಾಜಪೇಟೆ ಸಬ್ ಜೈಲಿಗೆ ಒಯ್ಯಲ್ಪಟ್ಟರು.

ತಾ. 12ರಲ್ಲಿ ಪೊಲೀಸಿನವರ ಕೂಟವು ಅಮ್ಮತ್ತಿ ಸಂತೆಗೂ ಹೋಗಿದ್ದಿತು. ಆದರೆ ಅಲ್ಲಿ ದಸ್ತಗಿರಿ ಏನೂ ಆಗಲಿಲ್ಲ.

ತಾ. 1?–1–31ರಲ್ಲಿ ವೀರರಾಜಪೇಟೆಯಲ್ಲಿ ಮಧ್ಯಾಹ್ನ ಮೇಲೆ ಸತ್ಯಾಗ್ರಹಿಗಳು ಮೀಟಿಂಗಿನ ವಾರ್ತೆಯನ್ನು ಜನರಿಗೆ ತಿಳಿಸಿ ಕ್ಲಬ್ ಎದುರಿನ ಮೈದಾನದಲ್ಲಿ ನಿಂತರು. ಮೀಟಿಂಗಿಗೆ ಬರುವ ಜನರನ್ನು ಪೊಲೀಸಿನವರು ತಡೆದರೂ ಸುಮಾರು 200 ಜನರ ವರೆಗೆ ಸೇರಿದ್ದರು. ಸತ್ಯಾಗ್ರಹಿಗಳು ಮೊದಲು 'ವಂದೇ ಮಾತರಂ' ಎಂಬ ಗೀತೆಯನ್ನು ಹಾಡಿದರು. ಕೂಡಲೆ ಸುಪರಿಂಟೆಂಡೆಂಟರೂ, ಸರ್ಕಲ್ ಇನ್‌ಸ್ಪೆಕ್ಟರೂ ಬಂದು ನೀವು ಖಾನೂನಿಗೆ ವಿರೋಧವಾಗಿ ನಡೆದರೆ ಖೈದು ಮಾಡುತ್ತೇವೆಂದರು. ಅದನ್ನು ಸತ್ಯಾಗ್ರಹಿಗಳು ಗಣನೆಗೆ ತೆಗೆದುಕೊಳ್ಳದ್ದರಿಂದ ಮೆ. ಗಳಾದ (1) ಎ. ಆರ್. ತಮ್ಮಯ್ಯನವರು, (2) ಕೆ. ಬಿ. ಅಪ್ಪಯ್ಯನವರು, (3) ಜ್ಯೆಯ್ಯಂಡ ಗಣಪತಿಯವರು, (4) ಕೇದಂಗಡ, ಕಾರ್ಯಪ್ಪನವರು ಮತ್ತು (5) ಕಡೇಮಾಡ ಮಯ್ಯಣ್ಣನವರನ್ನು ಸಹ ದಸ್ತಗಿರಿ ಮಾಡಿ ಸಿವಿಲ್ ಆಸ್ಪತ್ರೆ ಹಿಂಗಡೆಯಿಂದ ಕರಕೊಂಡು ಹೋಗಿ ಜೈಲಿಗೆ ಕಳುಹಿಸಿದರು.

ಕೊಡಗು ಕೌನ್ಸಿಲ್ ಮೀಟಿಂಗೊಂದು ಮಡಿಕೇರಿಯ ತಾ. 18ರಲ್ಲಿ ಮಧ್ಯಾಹ್ನ 2½ ಗಂಟೆಗೆ ನಡೆಯುತ್ತದೆ.

ಮಡಿಕೇರಿ ನಾಡು ಸಹಕಾರ ಸ್ಟೋರಿನ ಜನರಲ್ ಮೀಟಿಂಗು ಈ ತಾ. 24 ರಲ್ಲಿ ಫೆಡರೇಶನ್ ಆಫೀಸಿನಲ್ಲಿ ನಡೆಯುವದು.

ಸೆಂಟ್ರಲ್ ಸಹಕಾರ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ತಾ. 30–1–32ನೇ ಶನಿವಾರ ಬೆಳಿಗ್ಗೆ 11 ಗಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ನಡೆಯುತ್ತೆ.

ಕೊಂಬಂಡ ಕಾರ್ಯಪ್ಪ ಮೆಮೋರಿಯಲ್ ಹಾಕಿ ಟೂರ್ನಮೆಂಟಿನ ಕಡೇ ಆಟವು ತಾ. 12ರಲ್ಲಿ ಸೆಂಟ್ರಲ್ ಹೈಸ್ಕೂಲಿನ 'ಎ' ಟೀಮಿನವರಿಗೂ ಮತ್ತು ಟೀಚರ್ಸ್ ಯೂನಿಯನ್ ಟೀಮಿನವರಿಗೂ ನಡೆದು ಟೀಚರ್ಸ್ ಯೂನಿಯನ್‌ರವರು ಜಯಶೀಲರಾಗಿ ಬಟ್ಟಲನ್ನು ಅಧ್ಯಕ್ಷರಾದ ಮೆ. ಬಿ. ಎಸ್. ಕುಶಾಲಪ್ಪನವರಿಂದ ಸಂದನಾಪೂರ್ವಕವಾಗಿ ಸ್ವೀಕರಿಸಿದರು.

ಸೆಂಟ್ರಲ್ ಸಹಕಾರ ಬ್ಯಾಂಕಿನ ಜನರಲ್ ಮೀಟಿಂಗು ತಾ. 21–2–32ನೇ ಆದಿತ್ಯವಾರ ಮಧ್ಯಾಹ್ನ 1 ಗಂಟೆಗೆ ಕೊಡಗು ಜಮೀನ್ದಾರರ ಸಂಘದ ಹಾಲ್‌ನಲ್ಲಿ ನಡೆಯುತ್ತದೆ.

ಹಿಂದೂ ದೇಶ.

ಮಧ್ಯಪ್ರಾಂತ್ಯದ ಮುಖಂಡರು ಶಿಕ್ಷೆಗೆ ಗುರಿಯಾಗಿದ್ದಾರೆ. ಇನ್ನೂ ಅನೇಕರು ಹೋಗುತ್ತಲಿದ್ದಾರೆ.

ಕಲ್ಕತ್ತಾದಲ್ಲೂ ಪಿಕೆಟಿಂಗ್ ನಡೆಯುತ್ತದೆ. ಮೀಟಿಂಗಿನ ಏರ್ಪಾಡಿನಿಂದಾಗಲೇ ಮುಖಂಡರು ದಸ್ತಗಿರಿ ಮಾಡಲ್ಪಡುತ್ತಿದ್ದಾರೆ.

ಅಲ್ಲಹಾಬಾದಿನಲ್ಲಿ ಪಂಡಿತ ಜವಾಹರ್‌ಲಾಲರ ಅಕ್ಕಯವರೂ, ತಂಗಿ ಮಿಸೆಸ್ ಪಂಡಿತರೂ, ಭಾವ ಮೆ. ಪಂಡಿತರೂ ಸಹ ಶಿಕ್ಷೆಗೆ ಗುರಿಯಾಗಿದ್ದಾರೆ.

ಆಂಧ್ರ ಮುಖಂಡರಾದ ಮತ್ತು 'ಸ್ವರಾಜ್ಯ' ಪತ್ರಿಕೆಯ ಸಂಪಾದಕರಾದ ಶ್ರೀ. ಟಿ. ಪ್ರಕಾಶಂರವರಿಗೆ ಗುಂಟೂರಿನಲ್ಲಿ ಒಂದು ವರ್ಷ ಕಠಿಣ ಸಜೆಯಾಯಿತು.

ಬೊಂಬಾಯಿಯಲ್ಲಿ ಬಟ್ಟೆ ವ್ಯಾಪಾರದ ಮಾರ್ಕೆಟ್ ಮುಚ್ಚಿಯೇ ಇದೆ. ತೆರೆಯಲು ಪ್ರಯತ್ನಿಸಿದಾಗ ದೇಶ ಸೇವಿಕೆಯರಾದ ಮಹಿಳೆಯರು ಪಿಕೆಟ್ ಮಾಡುತ್ತಿದ್ದಾರೆ.

ತಮಿಳುನಾಡಿನ ಅನೇಕ ಜಿಲ್ಲೆಗಳಲ್ಲಿ 144ನೇ ಸೆಕ್ಷನಿನ ಹುಕುಮನ್ನು ಉಲ್ಲಂಘಿಸುತ್ತಾರೆ. ದಸ್ತಗಿರಿ ಮಾಡಲ್ಪಡುತ್ತಾರೆ, ಕೆಲವು ಕಡೆಗಳಲ್ಲಿ ಲಾಠಿಪೆಟ್ಟು ಸಹ ಬೀಳುತ್ತದೆ.

ಮಹಾತ್ಮಜಿಯವರ 'ಯಂಗ್ ಇಂಡಿಯಾ' ಪತ್ರಿಕೆಯ ಸಂಪಾದಕತ್ವವನ್ನು ಶ್ರೀ. ಮಹಾದೇವ ದೇಸಾಯಿಯವರು ವಹಿಸಿರುವರು. ಈಚೆಗೆ ಇವರೂ ದಸ್ತಗಿರಿಯಾಗಿದ್ದಾರೆ.

ಸರಹದ್ದಿನ ಪ್ರಾಂತ್ಯದಲ್ಲಿ ತಾ. 11ರ ವರೆಗೆ 4216 ಜನರು ದಸ್ತಗಿರಿಯಾಗಿದ್ದಾರೆ. ಬನ್ನು ಎಂಬ ಒಂದು ಗ್ರಾಮವಾಸಿಗಳಿಗೆಲ್ಲಾ ಒಟ್ಟಾಗಿ 300 ರೂ. ಜುಲುಮಾನೆ ಹಾಕಿದ್ದಾರೆ.

ಧಾರವಾಡ ಕರ್ಮವೀರ ಪತ್ರಿಕೆಯ ಸಂಪಾದಕರಾದ ದಿವಾಕರ ರಂಗರಾಯರು ದಸ್ತಗಿರಿ ಮಾಡಲ್ಪಟ್ಟಿರುವರು. ಇವರ ಪತ್ರಿಕೆಯ ಮುದ್ರಣಾಲಯವನ್ನೇ ಸರ್ಕಾರದವರು ಸ್ವಾಧೀನಪಡಿಸಿಕೊಂಡಿರುವರು.

ಮಹಾತ್ಮ ಗಾಂಧಿಯವರನ್ನು ಜೈಲಿನಿಂದ ಬಿಡುಗಡೆ ಮಾಡಿ ಯಾವುದೋ ಗ್ರಾಮದಲ್ಲಿ ಇರುವಂತೆಯೂ ಯಾವ ರಾಜಕೀಯ ಕೆಲಸವನ್ನೂ ಮಾಡದಂತೆಯೂ ಹುಕ್ಕುಂ ಮಾಡುತ್ತಾರೆಂಬ ವರ್ತಮಾನವಿದೆ.

ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಕಾರ್ನಾಡ್ ಸದಾಶಿವರಾಯರು ಪರದೇಶೀ ಬಟ್ಟೆ ಬಹಿಷ್ಕಾರ ಪತ್ರಗಳನ್ನು ಹಂಚಿದಕ್ಕಾಗಿ ಮಂಗಳೂರಲ್ಲಿ ಒಂದು ವರ್ಷ ಸಜಕ್ಕೆ ಗುರಿಯಾಗಿರುವರು.

ಬೊಂಬಾಯಿಯಲ್ಲಿ ಕಾಂಗ್ರೆಸಿನ ಮನೆಯನ್ನು ಪೊಲೀಸರು ಸ್ವಾಧೀನಪಡಿಸಿಕೊಂಡು ಆ ಮನೆಯ ಮೇಲೆ ಹಾರುತ್ತಿದ್ದ ಸ್ವರಾಜ್ಯ ಬಾವುಟವನ್ನು ಇಳಿಸಿ ಯೂನಿಯನ್ ಜ್ಯಾಕ್ (ಇಂಗ್ಲಿಷರ ಬಾವುಟ) ನ್ನು ಹಾರಿಸಿರುತ್ತಾರೆ.

ಬೊಂಬಾಯಿ ಕರ್ನಾಟಕದ ಇತರ ಮುಖಂಡರಾದ ಗಂಗಾಧರರಾವ್ ದೇಶಪಾಂಡೆ, ಹನುಮಂತರಾವ್ ಕೌಜಲಗಿ, ಹಾವೇರಿಯ ಹೊಸಮನೆ ಸಿದ್ದಪ್ಪ, ಮುದುವೇಡಕರ್ ಕೃಷ್ಣರಾವ್ ಮುಂತಾದವರು ಹಿಡಿಯಲ್ಪಟ್ಟಿದ್ದಾರೆ.

ಬಾಬೂ ರಾಜೇಂದ್ರ ಪ್ರಸಾದರನಂತರ ಕಾಂಗ್ರೆಸ್ ಅಧ್ಯಕ್ಷರಾದ ಡಾಕ್ಟರ್ ಅನ್ಸಾರಿಯವರಿಗೆ ಆರು ತಿಂಗಳ ಸಾದಾ ಸಜವಾಯಿತು. ಇವರು ಲಾಹೋರಿನ ಸರದಾರ್ ಶಾರ್ದೂಲ್ ಸಿಂಗರನ್ನು ಅಧ್ಯಕ್ಷರಾಗಿ ನೇಮಿಸಿರುವರು.

ಕಾಂಗ್ರೆಸಿನ ಧನವು ಬೊಂಬಾಯಿಯ ಒಂದು ಕಂಪೆನಿಯಲ್ಲಿ ಕಾಂಗ್ರೆಸ್ಸಿನ ಖಜಾನ್ಜಿಯಾದ ಜಮ್ನಾಲಾಲ್ ಬಜಾಜರ ಹೆಸರಿನಲ್ಲಿದ್ದದನ್ನು ಸರ್ಕಾರವು ಸ್ವಾಧೀನಪಡಿಸಿಕೊಂಡಿದೆ. ಇದು ಲಕ್ಷಾಂತರ ರೂಪಾಯಿಯೆಂತ ತಿಳಿದುಬಂದಿದೆ.

ಕರಾಚಿಯಲ್ಲಿ ಪರದೇಶೀ ಬಟ್ಟೆ ವ್ಯಾಪಾರಕ್ಕೆ ಅಡ್ಡಿ ಬರುತ್ತದೆಯೆಂಬ ಹೆದರಿಕೆಯಿಂದ ಅನೇಕ ವ್ಯಾಪಾರಿಗಳು ತಮ್ಮ ಮಾಲುಗಳನ್ನೆಲ್ಲಾ ಒಳದೇಶಕ್ಕೆ ಕಳುಹಿಸಿದರು. ಒಬ್ಬ ದೊಡ್ಡ ಸಾಹುಕಾರನಿಗೆ ಈ ಭೀತಿಯಿಂದ ಹುಚ್ಚು ಹಿಡಿದು ಹೋಯಿತು.

ಆಂಧ್ರದ ಮುಖಂಡರಲ್ಲಿ ಕೆಲವರಾದ ಡಾಕ್ಟರ್ ಪಟ್ಟಾಭಿ ಸೀತಾರಾಮಯ್ಯ, ಬುಲುಸು ಸಾಂಬಮೂರ್ತಿ, ಕಾಳೇಶ್ವರರಾವ್, ನಾಗೇಶ್ವರರಾವ್ ಮುಂತಾದವರೂ, ಅನೇಕ ಮಹಿಳೆಯರೂ ಸಹ ಕಠಿಣತು ವಾಯಿದೆಗಳ ಸಜಕ್ಕೆ ಗುರಿಪಡಿಸಲ್ಪಟ್ಟಿರುವರು.

ಶ್ರೀ ವಲ್ಲಭಭಾಯಿಯವರನ್ನು ಸೆರೆ ಹಿಡಿದಾಗ ಕಾಂಗ್ರೆಸಿನ ಅಧ್ಯಕ್ಷರಾಗಿ ನೇಮಿಸಲ್ಪಟ್ಟಿದ್ದ ಶ್ರೀ ರಾಜೇಂದ್ರ ಪ್ರಸಾದರು ಹಿಡಿಯಲ್ಪಟ್ಟು 6 ತಿಂಗಳು ಕಠಿಣ ಶಿಕ್ಷೆಗೆ ಗುರಿಮಾಡಲ್ಪಟ್ಟಿರುವರು. ಬಿಹಾರದ ಇನ್ನೂ ಅನೇಕ ಮುಖಂಡರು ಶಿಕ್ಷೆಗೆ ಗುರಿಯಾಗಿರುವರು.

ಲಾಹೋರಿನ ಡಿಕ್ಟೇಟರಾದ ಡಾಕ್ಟರ್ ಆಲಾಮರು ಹಿಡಿಯಲ್ಪಟ್ಟಿದ್ದಾರೆ. ಇದನ್ನು ಖಂಡಿಸಲಿಕ್ಕಾಗಿ ದೊಡ್ಡ ಸಭೆ ಸೇರಿತು. ಅದರಲ್ಲಿ ಕಾಂಗ್ರೆಸ್ ಮುಖಂಡರಾದ ಡಾಕ್ಟರ್ ಸತ್ಯಪಾಲ್ ಮುಂತಾದವರು ಭಾಷಣ ಮಾಡಿದರು. ಆ ಮೀಟಿಂಗಿನಲ್ಲಿ ದಸ್ತಗಿರಿಯೇನೂ ಆಗಲಿಲ್ಲ.

ಮಹಾತ್ಮ ಗಾಂಧಿಯವರ ಪತ್ನಿ ಕಸ್ತೂರಿ ಬಾಯಿ ಗಾಂಧಿಯವರೂ ಸರದಾರ್ ವಲ್ಲಭ ಭಾಯಿ ಪಟೇಲರ ಕುಮಾರ್ತಿ ಮಣಿಬೆನ್ ಪಟೇಲ್ ಮಿಸ್ ಮಿಟುಬೆನ್ ಪಟೇಲ್ ಮುಂತಾದ ಐದು ಜನ ಮಹಿಳೆಯರು ಬಾರ್ಡೋಲಿ ತಾಲೋಕಿನ ಒಂದು ಹಳ್ಳಿಯಲ್ಲಿ ದಸ್ತಗಿರಿ ಮಾಡಲ್ಪಟ್ಟಿದ್ದಾರೆ.

ಮದ್ರಾಸು ಪ್ರಾಂತ್ಯದ ಮುಖಂಡರಾದ ಶ್ರೀ. ರಾಜಗೋಪಾಲ ಚಾರ್ಯರಿಗೆ 6 ತಿಂಗಳ ಸಾದಾ ಸಜೆ ಶಿಕ್ಷೆಯೂ ಶ್ರೀ. ಸತ್ಯಮೂರ್ತಿಯವರಿಗೆ ಒಂದು ವರ್ಷ ಕಠಿಣ ಸಜ, 6 ತಿಂಗಳ ಸಾದಾ ಸಜದ ಶಿಕ್ಷೆಯೂ ಆಗಿರುವುದು. ಪರದೇಶೀ ಬಟ್ಟೆ ಬಹಿಷ್ಕಾರ ಮಾಡಬೇಕೆಂಬ ಹಸ್ತ ಪತ್ರಿಕೆಗಳನ್ನು ಹಂಚಿದ್ದೇ ಇವರ ತಕ್ಸೀರು.

ಮದ್ರಾಸ್ ಪಟ್ಟದಲ್ಲಿ ಪರದೇಶೀ ಬಟ್ಟೆ ಅಂಡಿಗಳನ್ನೂ, ಸಾರಾಯಿ ಅಂಗಡಿಗಳನ್ನೂ ಸ್ವಯಂ ಸೇವಕರು ಪಿಕೆಟ್ ಮಾಡುತ್ತಾರೆ. ಪಿಕೆಟ್ ಮಾಡುವವರಿಗೆ ಪೊಲೀಸರ ಲಾಠಿಯಿಂದ ಹೊಡಿಯುತ್ತಾರೆ. ಕೆಲವು ಸಾರಿ ಮೂರ್ಛೆ ತಪ್ಪಿ ಬೀಳುತ್ತಾರೆ. ಕೆಲವು ಸಾರಿ ಬಣ್ಣದ ನೀರನ್ನು ಜನರ ಮೇಲೂ ಪಿಕೆಟ್ ಮಾಡುವವರ ಮೇಲೂ ಪಂಪಿನ ಸಹಾಯದಿಂದ ಎರಚುತ್ತಾರೆ.

ರಾಜಶಾಹಿಯ ಶ್ರೀ ಜತೀಂದ್ರನಾಥ ದಾಸರೆಂಬ ಸರ್ಕಾರಿ ಅಧಿಕಾರಿಗಳೊಬ್ಬರ ಮನೆಗೆ ರಾತ್ರಿ ದರೋಡೆ ಖೋರರು ಬಂದು, ಬೆಕ್ಕಿನಂತೆ ಶಬ್ದ ಮಾಡಿದರು. ತಮ್ಮ ಪ್ರೀತಿಯ ಬೆಕ್ಕೆಂದೂಹಿಸಿ ದಾಸರೂ, ದಾಸರ ಶ್ರೀಮತಿಯವರೂ ಬಂದು ಬಾಗಿಲು ತೆರೆದರು. 'ಪ್ರೀತಿಯ ಬೆಕ್ಕ'ಗಳು ಕೂಡಲೇ ಮನೆಯೊಳಗೆ ನುಗ್ಗಿ ದಾಸರನ್ನೂ, ಪತ್ನಿಯನ್ನೂ ಕಟ್ಟಿ ಹಾಕಿ ಶ್ರೀಮತಿಯವರ ಕಂಠ ಹಾರವನ್ನು ಬಲಾತ್ಕಾರದಿಂದ ಎಳೆದು ತೆಗೆದು ಇತರ ಆಭರಣಗಳೊಂದಿಗೆ ಅಲ್ಲಿಂದ ಪಲಾಯನ ಮಾಡಿದರು.

ವೈಸ್‌ರಾಯರು ಆದಷ್ಟು ಬೇಗನೇ ರೌಂಡ್‌ಟೇಬಲಿನಲ್ಲಿ ಕೊಟ್ಟ ವಾಗ್ದಾನದಷ್ಟು ಸುಧಾರಣೆಯನ್ನು ಜಾರಿಗೆ ತರಲು ಪ್ರಯತ್ನಿಸುತ್ತಾರೆಂತಲೂ, ಹೊಸ ಸುಧಾರಣೆಯನ್ನು ಕೊಡುವ ಖಾನೂನು ಪಾರ್ಲಿಮೆಂಟಿನಲ್ಲಿ ಜಾರಿಗೆ ಬರುವ ಮೊದಲು ಈಗಿನ ಖಾನೂನು ಮೇರೆ ಸಾಧ್ಯವಿದ್ದಷ್ಟು ಸುಧಾರಣೆ ಕೊಡಲು ತಯಾರಿದ್ದಾರೆಂತಲೂ, ಕೂಡಲೇ ಒಬ್ಬ ಹಿಂದೀಯನನ್ನು ಡಿಲ್ಲಿಯಲ್ಲಿ ಒಬ್ಬ ಹೆಚ್ಚಿನ ಎಗ್ಸಿಕ್ಯೂಟಿವ್ ಕೌನ್ಸಿಲರಾಗಿ ನೇಮಿಸಿ ಸುಧಾರಣೆ ಕೆಲಸಕ್ಕೇನೇ ಇಡುತ್ತಾರೆಂತಲೂ ವರ್ತಮಾನವಿದೆ.

ಮಹಾತ್ಮರಿಗೆ ಎರ್ರವಡಾ ಕಾರಾಗೃಹದಲ್ಲಿ 11 ತಿಂಗಳ ಹಿಂದೆ ಕೊಡಲ್ಪಟ್ಟಿದ್ದ ಯೂರೋಪಿಯನ್ ವಾರ್ಡಿನಲ್ಲಿ ಒಂದು ಕೊಠಡಿಯು ಕೊಡಲ್ಪಟ್ಟಿದೆ. ಈ ಕೊಠಡಿಯು ಅಂದಿನಿಂದಲೂ ಖಾಲಿಯಾಗಿದ್ದಿತು. ಹಿಂದಿನ ವೇಳೆ ಇವರ ಮೇಲೆ ಕಾವಲಿದ್ದ ವಾರ್ಡರುಗಳೇ ಈ ವೇಳೆಯೂ ನಿಯಮಿಸಲ್ಪಟ್ಟಿರುವರು. ಮಹಾತ್ಮರಿರುವ ಕೊಠಡಿಯ ಸುತ್ತ 100 ಗಜ ವಿಸ್ತೀರ್ಣವುಳ್ಳ ಬೈಲು ಪ್ರದೇಶವಿದೆ. ರಾತ್ರಿ ವೇಳೆ ವಸಾರೆಯಲ್ಲಿ ಚಾಪೆ ಮೇಲೆ ಪುಸ್ತಕಗಳನ್ನು ದಿಂಬಾಗಿ ಮಾಡಿಕೊಂಡು ನಿದ್ರಿಸುವರು. ಇದು ವರೆಗೆ ನಿತ್ಯದಲ್ಲೂ 100 ಗಜ ನೂಲನ್ನು ತೆಗೆಯುತ್ತಿದ್ದವರು ಈಗ 500 ಗಜ ನೂಲನ್ನು ತೆಗೆಯಲೂ ಪದ್ಧತಿಯ ಮೇರೆಗೆ ಬೆಳಗಿನ ಜಾವ 4 ಘಂಟೆಗೇಳಲೂ ಸಂಕಲ್ಪಿಸಿಕೊಂಡಿರುವರು.

ಎಲ್ಲಾ ಪ್ರಾಂತ್ಯಗಳ ಗವರ್ನರರೂ ಆಯಾ ಪ್ರಾಂತ್ಯದ ವ್ಯಾಪಾರಸ್ಥರನ್ನು ಕರೆಸಿಕೊಂಡು ಧೈರ್ಯ ಹೇಳುತ್ತಿದ್ದಾರೆ— ಪರದೇಶೀ ಮುಖ್ಯವಾಗಿ ಬ್ರಿಟಿಷ್ ಸಾಮಾನುಗಳಿಗೆ ಬಹಿಷ್ಕಾರ ಹಾಕಬೇಕೆಂತ ಕಾಂಗ್ರೆಸಿನವರು ಜುಲುಂ ನಡಿಸುತ್ತಾರೆ. ಇದಕ್ಕೆ ಹೆದರಬೇಡಿರಿ ಇದನ್ನು ವಿರೋಧಿಸಲು ನೀವು ಯಾವ ಸಹಾಯ ಕೇಳಿದರೂ ಮಾಡಿಕೊಡುತ್ತೇವೆ" ಎಂತ ವಗೈರೆಯಾಗಿ ಬೋಧಿಸುತ್ತಾರೆ. ಬೇರೆ ಪ್ರಾಂತ್ಯಗಳ ವ್ಯಾಪಾರಿಗಳು ಏನು ಹೇಳಿದರೆಂತ ತಿಳಿಯಲಿಲ್ಲ. ಆದರೆ ಬೊಂಬಾಯಿಯಲ್ಲಿ ಶಿವಲಾಲ್ ಮೋತಿಲಾಲ್ ಎಂಬವರು ಕಾಂಗ್ರೆಸಿನ ಧ್ಯೇಯವನ್ನು ಪುಷ್ಟೀಕರಿಸಿದರು. ಗಾಂಧಿಯವರನ್ನು ಬಿಡದೆ [illegible] ವಿನಹ ಶಾಂತಿ ಇಲ್ಲವೆಂತ ವಾದಿಸಿದರು. ಇವರಿಗೆ [illegible] ಎಸೋಸಿಯೇಶನ್ ಪ್ರತಿನಿಧಿ ಮತ್ತು ಇತರರು ಬೆಂ[illegible]ರು. ಹಿಂದೀ ವ್ಯಾಪಾರಿಗಳ ಕೂಟದ ಪ್ರತಿನಿಧಿಯಾ[illegible] ಚೆಟ್ಟಿ ಎಂಬವರು ಆರ್ಡಿನೇನ್ಸ್ ಜಾರಿ ತರಲಿಲ್ಲವೆಂತಲೂ, ಆರ್ಡಿನೇನ್ಸಿನ ವಾತಾವರಣದಲ್ಲಿ ವ್ಯಾಪಾರವೂ ಆಗಲಾರದೆಂತ ತಿಳಿಸಿದರು. ಡಾಕ್ಟ[illegible] ಎಂಬ ಯೂರೋಪಿಯನ್ ಸದ್ಗೃಹಸ್ಥರು ಅನೆ[illegible]ಕು. ಈಗ ಇರುವ ವಾತಾವರಣದಿಂದ ಇಂಗ್ಲೆಂ[illegible] ಡಿಯಾಕ್ಕು ಹಾನಿಯೆಂತ ವಾದಿಸಿದರು. ಈ[illegible] "ಹಿಂದು" ಪತ್ರಿಕೆಯ ಬಾತ್ಮಿದಾರರು ಅ. ಪ. ವುದು.

ವಿಲಾಯಿತಿಯ ಮುಖಂಡರ ಮತಗಳು.

ಭಾರತ ಮಂತ್ರಿಯಾಗಿದ್ದ ಮಿ. ವೆಜ್ವುಡ್ ಬೆನ್ ಸಾಹೇಬರು—ಬಲವಾದ ಬಲವಂತಿಕೆಯಿಂದ ತರುಣರ ಮಹತ್ವಾಕಾಂಕ್ಷೆಯ ದೀಪವನ್ನು ಆರಿಸಿ ಬಿಡುವೆವೆಂದು ಒಂದು ಪಕ್ಷದವರು ಪ್ರಾಮಾಣಿಕ ಬುದ್ಧಿಯಿಂದಲೇ ತಿಳಿಯುತ್ತಾರೆ. ಇದು ಅತ್ಯಂತವಾದ ಅಲ್ಪ ವಿಚಾರವು. ಇದಕ್ಕೆ ಇತಿಹಾಸದ ಆಧಾರವೇ ಇಲ್ಲ, ರಾಜ್ಯವಾಳಲಿಕ್ಕೆ ನಾಗರಿಕರ ಒಪ್ಪಿಗೆ ಮತ್ತು ಪ್ರೀತಿಯು ಅವಶ್ಯವಾಗಿ ಬೇಕಾಗುತ್ತದೆಂಬುದನ್ನು ತಿಳಿದೂ ತಿಳಿಯದವರಂತೆ ನಟಿಸುತ್ತಾರೆ. ಪ್ರಜಾ ಪ್ರೀತಿಯನ್ನು ದೊರಕಿಸುವುದು ಉಚ್ಚತಮವಾದ ಧ್ಯೇಯವಾಗಿದೆ. ಹೀಗೆ ದೊರಕಿಸಿದ್ದನ್ನು ಕಾಯ್ದುಕೊಳ್ಳಲಿಕ್ಕೆ ಅಸಾಧಾರಣವಾದ ತಾಳ್ಮೆಯೂ, ಇಂದ್ರಿಯ ನಿಗ್ರಹವೂ ಬೇಕಾಗುತ್ತದೆ. ಈಗಿನ ದಬ್ಬಾಳಿಕೆಯಿಂದ ರೌಂಡ್ ಟೇಬಲಿನ ಶ್ರಮವೆಲ್ಲ ವ್ಯರ್ಥವಾಗಿ ಯುದ್ಧವಿಚಾರವೇ ಪ್ರಮುಖ ಮಾಡುವಂತಹದಾಗಿರುತ್ತದೆ. ಶಕ್ತಿ ಸಾಮರ್ಥ್ಯವೊಂದೇ ಉಪಾಯವಾಗುತ್ತದೆಂಬುದು ಎರಡೂ ಪಕ್ಷಗಳ ದ್ಯೋತಕವಾಗಿ ಪರಿಣಮಿಸುವದುಂಟು.

ಮಿ. ವಿಲ್‌ಫ್ರೆಡ್ ವೆಲ್ಲಾಕ—ಸರ್ಕಾರದವರು ಮಿ. ಗಾಂಧಿಯವರನ್ನು ಹಿಡಿದು ಕಾಂಗ್ರೆಸನ್ನು ಬೇಕಾಯದೆಶೀರ ಮಂಡಲ ಮಾಡಿದ್ದು ಐರ್ಲಂಡಿನ ಬ್ಲ್ಯಾಕ ಮತ್ತು ಟ್ಯಾನಿನ ದಬ್ಬಾಳಿಕೆಯ ಪುನರಾವೃತ್ತಿಯೇ ಆಗುತ್ತದೆ. ಹಿಂದೂ ಜನರು ಅಹಿಂಸೆಯ ಅಸಹಕಾರವನ್ನು ನಿಶ್ಚಯ ಹೃದಯದಿಂದ ಆಚರಿಸುವುದರಿಂದಲೇ ಐರ್ಲಂಡದಲ್ಲಾದಂಥ ರಕ್ತಪಾತವಾಗಲಾರದು. ಇಂಗ್ಲಿಷ್ ಜನರು ಹಿಂದೂಸ್ಥಾನದ ಕೂಡ ಸಹಕಾರ ಮಾಡಬೇಕೆಂಬ ಎಲ್ಲಾ ಆಶೆಯನ್ನು ಸರ್ಕಾರದವರು ಕಳೆದು ಬಿಟ್ಟರು. ಗಾಂಧಿಯವರ ಬೇಡಿಕೆಯನ್ನು ನಿರಾಕರಿಸಿದ್ದಂತೂ ಶೋಕಕ್ಕೆ ಮೂಲವಾಯಿತು. ಇದೇ ಕೊನೆಯ ಹೇಳಿಕೆಯಾದ ಪಕ್ಷದಲ್ಲಿ ಹಿಂದೂಸ್ಥಾನದ ಮಟ್ಟಿಗೆ ನಮ್ಮ ದೈವದಾಟ ಮುಗಿದಿತೆಂದೇ ಸ್ಪಷ್ಟವಾಗಿ ತಿಳಿಯಬೇಕು.

ಪಾದ್ರಿಗಳಾದ ನಾರವುಡ್—ಬಿಲ್ಡಿನ್, ಸೋರೆನಸೆನ ಮತ್ತು ಆರ್ಚರ್ಡರು ಒಂದು ಪತ್ರಿಕೆಯನ್ನು ಪ್ರಕಟಿಸಿದರು—

ಬ್ರಿಟಿಷ್ ಜನರು ತಾವು ಸ್ವಾತಂತ್ರ್ಯ ಪ್ರಿಯರೆಂದು ಹೇಳಿಕೊಳ್ಳುತ್ತಾರೆ. ಮಹಾತ್ಮರನ್ನು ಹಿಡಿದದ್ದು, ಆ ಧ್ಯೇಯಕ್ಕೆ ವಿರುದ್ಧವಾದದ್ದೂ, ತೀರ ಬುದ್ಧಿ ಶೂನ್ಯವಾದದ್ದೂ ಆಗುತ್ತದೆ. ರೌಂಡ್ ಟೇಬಲಿನ ವಚನ ಕೊಟ್ಟದಂತೂ ಮಣ್ಣಾಗಿ ಹೋಗುತ್ತದೆ. ಇವೆಲ್ಲಾ ಸಂಗತಿಗಳ ವಿಚಾರ ಮಾಡಿ, ಸರ್ಕಾರದವರು ತುಸುವಾದರೂ ತಡಮಾಡದೆ ಮಹಾತ್ಮರನ್ನು ಬಂಧಮುಕ್ತ ಮಾಡಬೇಕು.

ಕೂಲಿಕಾರರಲ್ಲಿ ಸ್ವತಂತ್ರ ಪಕ್ಷದವರಾದ ಮಿ. ಲ್ಯಾನ್ಸ್‌ಬರಿಯವರು ಅನ್ನುವುದೇನಂದರೆ—ಮಹಾತ್ಮರು ತುರಂಗದಲ್ಲಿ ಬಿದ್ದು, ಕಾಂಗ್ರೆಸು ಬಹಿಷ್ಕೃತವಾದದ್ದು ಬ್ರಿಟಿಷ್ ರಾಜನೀತಿಯ ಅತಿ ದೊಡ್ಡದಾದ ಪ್ರಮಾದವಾಯಿತು.

ದಬ್ಬಾಳಿಕೆಯಿಂದ ಕೆಲವೇಳೆ ಜಯವಾದಂತೆ ತೋರೀತು ಆದರೆ ಸ್ಥಿರ ಚಿರವಾಗದೆ ವಾದಗ್ರಸ್ತ ಪ್ರಶ್ನೆಯು ಬ್ರಹ್ಮ ಗಂಟನ್ನು ಬಿಡಿಸಿದಂತಾಗದು.

ಇಂಗ್ಲಿಷ್ ಜನರು ಶಕ್ತಿಯ ಕಸುವಿನಿಂದಲೇ ರಾಜ್ಯವಾಳುವದಾದರೆ—ಶಕ್ತಿಯ ಕಾಳಗದಲ್ಲಿ ನಮ್ಮ ಕಯ್ಯು ಕೆಳಗಾಗಿ, ನಮಗೆ ಅಲ್ಲಿಂದ ಹೊರಟು ಬರಬೇಕಾದೀತು.

ನಾವು ದಬ್ಬಾಳಿಕೆಯ ಗೋಜನ್ನು ಬಿಟ್ಟು ರಾಷ್ಟ್ರೀಯರ ಕೂಡ ಸಹಕಾರದಿಂದ ನಡೆದರೆ—ನಾವು ದೇಶದಲ್ಲಿ ಸುಭಿಕ್ಷ ಸುಕಾಲವನ್ನುಂಟುಮಾಡುವುದಲ್ಲದೆ, ನಮ್ಮ ದೇಶದ ವ್ಯಾಪಾರವನ್ನೂ ಅಭಿವೃದ್ಧಿಪಡಿಸಿದಂತಾಗುತ್ತದೆ. ೩೩ ಕೋಟಿ ಜನರ ಮಹತ್ವಾಕಾಂಕ್ಷೆಗಳನ್ನು ಹತ್ತಿಕ್ಕುವದು ಅಶಕ್ಯವಾದ ಮಾತು.

ಫೆಬ್ರುವರಿಯಲ್ಲಿ ಪಾರ್ಲಿಮೆಂಟ ಸಭೆಯು ಪ್ರಾರಂಭವಾದ ಕೂಡಲೇ—ಈ ಬಗ್ಗೆ ಚರ್ಚೆ ನಡೆಯಬೇಕು.

ಮೇಲಿನವರಿಗೆ ವಿರುದ್ಧವಾದ ಮತಗಳು.

ಕಲ್ಕತ್ತದಲ್ಲಿ ಗುಂಡು ಹಾರಿಸಿಕೊಂಡು ಪಾರಾದ [illegible] ಸಾಹೇಬರು—ನೆಪೋಲಿಯನ್ ಬೋನಾಪಾರ್ಟನು ವಿಲಾಯತಿಗೆ ಭಯಾನಕ ಪೀಡೆಯಾಗಿದ್ದಂತೆ ಗಾಂಧಿಯು ಆಗಿರುತ್ತಾನೆ. ಆದ್ದರಿಂದ ಅವನನ್ನು ಹಿಂದೂಸ್ಥಾನದ ಹೊರಗೆ ದೂರ ಎಲ್ಲಾದರೂ ಇಡಬೇಕು.

ಮಾರ್ನಿಂಗ್ ಪೋಸ್ಟ್—ಸಿಚಲಿಸ ನಡುಗಡ್ಡೆಯ ಹವೆಯು ಅತ್ಯುತ್ಕೃಷ್ಟವಾಗಿರುತ್ತದೆ. ಅಲ್ಲಿ ತಂದಿಡಬೇಕು.

ಸರ್ ಮಾರ್ಕ್ ಹಂಟರ್—ಅಂಡಮಾನದಲ್ಲಿ ಇಡಬೇಕು.

ಮುಂಬಯಿಯ ಜವಳಿ ವರ್ತಕರ ಹೇಳಿಕೆ.

ಮುಂಬಯಿಯ ಹಿಂದೀ ಜವಳಿ ವ್ಯಾಪಾರ ಸಂಘದವರು ಲಾರ್ಡ್ ವಿಲ್ಲಿಂಗ್ಡನ್ ಸಾಹೇಬರಿಗೆ ಈಗ ಕೊಟ್ಟಂತೆ [illegible] ಮಾಡಿದ್ದಾರೆ.

[illegible]ವು ಕೈಕೊಂಡ ದಬ್ಬಾಳಿಕೆಯ ಧೋರಣದ ಬಗ್ಗೆ [illegible] ವಿಚಾರ ಮಾಡಿರಿ. ಮಹಾತ್ಮರನ್ನು ಬಂಧಮುಕ್ತ [illegible] ರ ಭೇಟಿಯ ಯೋಗವನ್ನು ತಂದುಕೊಂಡು ಭಾ[illegible]ಟವನ್ನು ದೂರಮಾಡಬೇಕು. ಇಲ್ಲವಾದರೆ—ಈ [illegible]ದ ವ್ಯಾಪಾರೋದ್ಯೋಗದ ತುದಿಯು ಬಿಚ್ಚಿ [illegible] ಬಿಟ್ಟು ಹೋಗುವುದು. ಇದರ ಕೂಡ ದೇಶ[illegible] ಭಯಂಕರವಾಗಿ ಭಾವೀ ರಾಜ್ಯ ಘಟ[illegible]ದರೆ ಉಂಟಾಗುವುದು. ಕಾಂಗ್ರೆಸ್ಸು ಪ್ರತಿಷ್ಠಿತ [illegible] ಪದ್ಧತಿಯ ವತಿಯಿಂದ ಸರ್ಕಾರದ [illegible]

ಯಾಗಿರುತ್ತದೆ. ನಮಗೆ ಕಾಯಿದೆ ಭಂಗದ ಚಳವಳದಲ್ಲಿ ಸೇರಲಿಕ್ಕೆ ಬರಲಿಕ್ಕಿಲ್ಲ. ಕಾಯಿದೆ ಭಂಗದ ಹೊರತು ಪರದೇಶೀ ಬಟ್ಟೆಯ ಮೇಲೆ ಪೂರ್ಣ ಬಹಿಷ್ಕಾರ ಹಾಕುವ ಕೈಮಗ್ಗ ಮತ್ತು ಖಾದಿಗೆ ಉತ್ತೇಜನ ಕೊಡುವ ವಿಷಯವಾಗಿ ಕಾಂಗ್ರೆಸ್ಸಿಗೆ ನಮ್ಮ ವರ್ತಕ ಸಂಘದ ಪೂರ್ಣ ಬೆಂಬಲವುಂಟು ಮತ್ತು ಸದ್ಯದ ಸ್ಥಿತಿಯಲ್ಲಿ ಬ್ರಿಟಿಷ್ ಸರಕಿಗೆ ಬಹಿಷ್ಕಾರ ಹಾಕುವ ಯೋಜನೆ ಸಿದ್ಧಪಡಿಸಲು ಒಂದು ಕಮಿಟಿಯನ್ನು ನೇಮಿಸಿದ್ದೇವೆ. 'ವಿಜಯ'

ಮಹಾತ್ಮರ ಕೈಸೆರೆ.

ಸರ್ಕಾರವು ತಮ್ಮನ್ನು ಆದಷ್ಟು ಬೇಗನೆ ಬಂಧಿಸುವದೆಂಬುದು ಮಹಾತ್ಮರಿಗೆ ಗೊತ್ತಿದ್ದರೂ, ಅವರು ಕಳೆದ ಆದಿತ್ಯವಾರ ದಿವಸ ರಾತ್ರಿ ಅವರ ದರ್ಶನಾಪೇಕ್ಷೆಯಿಂದ ಕಟುಗುಟ್ಟುವ ಚಳಿಯಲ್ಲಿ ನಿಂತಿದ್ದ ಜನಸಮೂಹವನ್ನು ಮನೆಗೆ ಕಳುಹಿಸಿ ಶಾಂತ ಮನಸ್ಸಿನಿಂದ ನಿದ್ರೆ ಹೋದರು. ಮಹಾತ್ಮರ ಮನೋಗತವನ್ನು ತಿಳಿಯಬೇಕೆಂಬ ಲವಲವಿಕೆಯಿಂದ ಬಂದಿದ್ದ ಹಲ ಕೆಲವು ಪತ್ರ ಪ್ರತಿನಿಧಿಗಳಿಗೆ ಜನ ಸಂದಣಿಯಲ್ಲಿ ಮಹಾತ್ಮರನ್ನು ಕಾಣಲು ಅವಕಾಶವಾಗದ್ದರಿಂದ ಅವರು 'ಮಣಿಭವನ' (ಮುಂಬಯಿಯೊಳಗಿನ ಮಹಾತ್ಮರ ವಸತಿ ಗೃಹ) ದಲ್ಲಿಯೇ ಮಲಗಿಕೊಂಡಿದ್ದರು.

ಬೆಳಗು ಮುಂಜಾನೆ ಮೂರು ಗಂಟೆಗೆ ಸರಿಯಾಗಿ ಪೊಲೀಸ್ ಅಧಿಕಾರಿಗಳು ಮೋಟಾರು ತೆಗೆದುಕೊಂಡು ಮಣಿಭವನಕ್ಕೆ ಬಂದರು; ಮತ್ತು ಮಹಾತ್ಮರ ಕಿರಿಯ ಮಕ್ಕಳಾದ ದೇವಿದಾಸ ಗಾಂಧಿಯವರಿಗೆ ತಾವು ಬಂದ ಉದ್ದೇಶವನ್ನರುಹಿ ಅವರಿಗೆ ಮಹಾತ್ಮರ ಮೇಲೆ ಹೊರಟಿದ್ದ ವಾರಂಟನ್ನು ತೋರಿಸಿದರು. ಶ್ರೀ ದೇವಿದಾಸ ಗಾಂಧಿಯವರು ಮಹಾತ್ಮರು ಮಲಗಿದ್ದಲ್ಲಿಗೆ ಬಂದು ಈ ಸುದ್ದಿಯನ್ನು ಅರುಹಿದರು. ಈ ಸುದ್ದಿಯನ್ನು ಕೇಳಿ ಮಹಾತ್ಮರು ಆನಂದೋದ್ಗಾರವನ್ನು ತೆಗೆಯುತ್ತಿದ್ದರು. ಆದರೆ ಅಂದು ಅವರ ಮೌನವ್ರತದ ದಿವಸವಾದುದರಿಂದ ಹಾಗೆ ಮಾಡದೆ ಕೇವಲ ಮುಗುಳ್ನಗೆ ನಕ್ಕು ಪೊಲೀಸ ಅಧಿಕಾರಿಗಳೊಡನೆ ಹೋಗಲು ಸಿದ್ಧರಾಗ ಹತ್ತಿದರು. ಅವರ ನಿತ್ಯಾರ್ಥಿಗಳನ್ನು ತೀರಿಸಿಕೊಳ್ಳುವಷ್ಟರಲ್ಲಿ ಮಣಿಭವನದಲ್ಲಿ ಮಹಾತ್ಮರ ಅನುಯಾಯಿಗಳೆಲ್ಲ ಮಹಾತ್ಮರೊಡನೆ ಪ್ರಾರ್ಥನೆ ಮಾಡಲು ಬಂದು ನೆರೆದಿದ್ದರು. ಅವರೆಲ್ಲರೊಡನೆ ಮಹಾತ್ಮರು ಪರಮಾತ್ಮನ ಪ್ರಾರ್ಥನೆಯನ್ನು ಮಾಡಿ ಹೊರಡಲನುವಾದರು.

ಈ ಸಮಯದಲ್ಲಿ ಮಹಾತ್ಮರ ಧರ್ಮಪತ್ನಿಯವರಾದ ಕಸ್ತೂರಿಬಾಯಿಯವರಿಗೆ ದುಃಖವು ಉಕ್ಕಿ ಬರಲು ಅವರು ಕಣ್ಣಲ್ಲಿ ನೀರು ತಂದರು. ಮಹಾತ್ಮರು ಕಣ್ಣುಸನ್ನೆಯಿಂದ ಸುಮ್ಮನಿರಲು ಸೂಚಿಸಿದರು. ಆ ವೇಳೆ ಮಹಾತ್ಮರು ಅಲ್ಲಿದ್ದವರನ್ನೆಲ್ಲ ಪ್ರೇಮಪೂರ್ವಕವಾಗಿ ಆಲಿಂಗಿಸಿ ಅವರ ನಿರೋಪ ತಕ್ಕೊಂಡರು.

ಮಹಾತ್ಮರ ವಿನೋದ.

ಫಾದರ್ ಎಲ್ವಿನ್ನ (ಇವರು ಆಂಗ್ಲ ದೇಶದ ಪಾದ್ರಿಗಳು. ಮಹಾತ್ಮರ ತತ್ವಗಳಿಗೆ ಮೆಚ್ಚಿ ಅವರ ಶಿಷ್ಯತ್ವವನ್ನು ವಹಿಸಿರುವರು.) ರನ್ನು ವಾತ್ಸಲ್ಯದಿಂದ ಚಪ್ಪರಿಸಿದರು. ಇವರನ್ನು ಕಂಡು ಎಲ್ಲರೂ 'ಕೊಳ್ಳನೆ' ನಕ್ಕರು. ಎಲ್ವಿನ್ನರಿಗೆ ಮಹಾತ್ಮರು ಒಂದು ಪತ್ರವನ್ನು ಕೊಟ್ಟರು. ಅದರ ಸಾರಾಂಶ— 'ಪ್ರಿಯ ಎಲ್ವಿನರೆ, ನೀವು ಈ ಸಮಯದಲ್ಲಿ ಬಂದದ್ದನ್ನು ಕಂಡು ನನಗೆ ಆತ್ಮಾನಂದವಾಗುತ್ತಿದೆ. ನನ್ನ ದೇಶಬಾಂಧವರನ್ನು ನಾನು ಪ್ರೀತಿಸುವಂತೆ ನಿಮ್ಮ ದೇಶಬಾಂಧವ (ಆಂಗ್ಲ)ರನ್ನೂ ಪ್ರೀತಿಸುತ್ತೇನೆಂಬುವದನ್ನು ನೀವವರಿಗೆ ತಿಳಿಸಿರಿ. ಇಲ್ಲಿಯವರೆಗೆ ದ್ವೇಷಾಸೂಯ ಭಾವದಿಂದ ನಾನೆಂದಿಗೂ ಅವರೊಡನೆ ನಡೆಕೊಂಡಿರುವದಿಲ್ಲ. ದೇವರ ದಯವಿದ್ದರೆ ಇನ್ನು ಮುಂದಾದರೂ ಹಾಗೆ ಮಾಡುವುದಿಲ್ಲ. ಆಂಗ್ಲರಂತೆ ಅನ್ಯಾಯದ ಮಾರ್ಗವನ್ನು ಹಿಡಿದ ನನ್ನ ಬಾಂಧವರೊಡನೆ ನಾನು ನಡೆದುಕೊಂಡಂತೆಯೇ ಆಂಗ್ಲರೊಡನೆ ನಡೆದುಕೊಂಡಿದ್ದೇನೆ. ಪ್ರೇಮಪೂರ್ವಕ ವಂದನೆಗಳು—ಗಾಂಧಿ'

ಮಹಾತ್ಮರ ಮಮತೆಯ ಮೀರಾಬಾಯಿ.

ಮಹಾತ್ಮರ ಮಮತೆಯ ಮೀರಾಬಾಯಿ (ಇವರು ಮಹಾತ್ಮರ ಉಚ್ಚ ತತ್ವಗಳಿಗೆ ಮೆಚ್ಚಿ ಮಹಾತ್ಮರ ಮಗಳೂ, ಮಾತೆಯೂ, ಶಿಷ್ಯಳೂ ಆಗಿರುವ ಮಿಸ್ ಸ್ಲೇಡ ಎಂಬ ಆಂಗ್ಲ ವನಿತಾ ಮಣಿಯು)ಯವರು ಎಲ್ಲರಿಕ್ಕಿಂತಲೂ ಕೊನೆಗೆ ಮಹಾತ್ಮರ ನಿರೋಪ ತೆಗೆದುಕೊಂಡರು. ಅವರು ಅತ್ಯಂತ ಭಕ್ತಿ ಭಾವದಿಂದ ಮಹಾತ್ಮರ ಪಾದಗಳಿಗೆರಗಿ ಮಹಾತ್ಮರ ವಿಯೋಗವಾಗುವದೆಂಬ ದುಃಖದಿಂದ ಬಿಕ್ಕಿ ಅಳಹತ್ತಿದರು. ಮಹಾತ್ಮರು ಮಮತೆಯಿಂದ ಮೀರಾಬಾಯಿಯವರ ಕಂಬನಿಗಳನ್ನು ತೊಡೆದು ಮುಂದಕ್ಕಡಿಯಿಟ್ಟರು. ದೇವಿದಾಸರ ಕೈಯ್ಯಲಿ ಕೈಹಾಕಿಕೊಂಡು ಮೋಟಾರಿನ ವರೆಗೆ ಹೋಗಿ ಮೋಟಾರಿನಲ್ಲಿ ಹತ್ತಿ ಕೂತರು.

ಈ ಪೂರ್ವದಲ್ಲಿ ಸರದಾರ ವಲ್ಲಭಭಾಯಿಯವರಿಗೊಂದು ಮಹಾತ್ಮರು ಮಹಾದೇವಭಾಯಿ ದೇಸಾಯರ ಕೈಯ್ಯಲ್ಲಿ ಒಂದು ಪತ್ರವನ್ನು ಕೊಟ್ಟಿದ್ದರು. ಆದರೆ ಅವರ ಮೋಟಾರು ಹೊರಡುತ್ತಿರುವಾಗಲೇ ಮಣಿಲಾಲ್ ಕೊಠಾರಿಯವರು ಓಡುತ್ತಾ ಬಂದು—ಮಹಾತ್ಮಾಜಿ! ಸರದಾರರೂ ಸರ್ಕಾರದ ಕೈಸೆರೆಯಾದರೆಂದು ಕೂಗಿ ಹೇಳಿದರು. 'ಕ. ಟಾ'

ಒಬ್ಬ ಬ್ರಿಟಿಷ್ ಜ್ಯೋತಿಷ್ಯರು.

ಒಬ್ಬ ಜ್ಯೋತಿಷ್ಯರು ಬ್ರಿಟಿಷ್ ಚಕ್ರಾಧಿಪತ್ಯದ ಗ್ರಹಗತಿಗಳನ್ನು ನೋಡಿ ಮುಂದೆ ಚಕ್ರಾಧಿಪತ್ಯಕ್ಕೆ ಬರುವ ಸಂಪತ್ತುಗಳನ್ನೂ, ವಿಪತ್ತುಗಳನ್ನೂ ಮುದ್ರಿಸುವುದಕ್ಕೆ ಉಪಕ್ರಮಿಸಿದ್ದಾರೆ. ಮುಂದಿನ ಮೇ ಮತ್ತು ಆಗೋಸ್ತು ತಿಂಗಳುಗಳಲ್ಲಿ ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ವಿಪತ್ತು ಬರುವುದೆಂಬುವುದಾಗಿಯೂ, ಅದರ ಸೂಚನೆಗಳು ಈಗಲೇ ಉಪಕ್ರಮವಾಗುವುದೆಂಬುದಾಗಿಯೂ ಬರೆದಿರುತ್ತಾರೆ. ಅವರು 'ಈಗ ನಿರಂಕುಶ ಪ್ರವರ್ತನವು ಉಪಕ್ರಮವಾಗುವುದು. ಬ್ರಿಟಿಷ್ ಧರ್ಮಗಳ ಲೋಪಗಳು ಶೀಘ್ರದಲ್ಲಿಯೇ ಉಪಕ್ರಮವಾಗುವುದು. ಭಾರತೀಯರು ದೇಶ ಹಿತಾರ್ಥವಾಗಿ ದೇಹವನ್ನೂ ಬಿಡುವುದಕ್ಕೆ ಸಿದ್ಧರಾಗುವರು. ದೈಹಾರ್ದುಗಳ ಶಸ್ತ್ರಾಸ್ತ್ರಗಳಿಗೆ ಅನೇಕರು ಬಲಿಯಾಗುವರು. ಅನೇಕರು ಬಂಧಿಖಾನೆಗೆ ಹಾಕಲ್ಪಡುವರು. ಅನೇಕರು ವಿಚಿತ್ರವಾದ ಕಷ್ಟಗಳಿಗೆ ಗುರಿಯಾಗುವರು. ಶಾಸನಭಂಗ ಮಾಡುವ ಏರ್ಪಾಡುಗಳು ಪರಾಕಾಷ್ಠೆಗೆ ಬರುವವು. ಪರಾಕ್ರಮದಿಂದ ದೇವರು ಸುಪ್ರೀತನಾಗುವುದಿಲ್ಲವೆಂದು ಬ್ರಿಟಿಷ್ ಮಹಾ ಜನಗಳಿಗೆ ಗೊತ್ತಾಗುವುದು. ಪ್ರಪಂಚದಲ್ಲಿ ಸರ್ವರೂ ಸ್ವಾರ್ಥಪರತೆಯನ್ನೂ, ನಿರಂಕುಶ ಪ್ರವರ್ತನವನ್ನೂ ವಾಚಾಮಗೋಚರವಾಗಿ ನಿಂದಿಸುವರು. ಜನಾಂಗ ಸಂಘದವರು ಧರ್ಮ ಸಂಸ್ಥಾಪನೆಗೋಸ್ಕರ ಪ್ರಯತ್ನ ಮಾಡುವರು. ಬ್ರಿಟಿಷ್ ಮಂತ್ರಿಗಳಿಗೂ, ಪಾರ್ಲಿಮೆಂಟಿನವರಿಗೂ ಜ್ಞಾನೋದಯವಾಗುವುದು. ಇಂಡಿಯಾ ದೇಶಕ್ಕೆ ಸ್ವರಾಜ್ಯವು ಬರುವುದು. ಸ್ವರಾಜ್ಯ ಬರುವುದಕ್ಕೆ ಮುಂಚೆ ಈ ಅನರ್ಥಗಳೆಲ್ಲ ಆಗುವುವು. 'ರಾ. ಬ.'

ಎಂಪೈರ್ ಆಫ್ ಇಂಡಿಯಾ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

(ಸ್ಥಾಪನೆಯಾದದ್ದು 1897.)

ಹಿಂದೂಸ್ಥಾನದಲ್ಲಿ ಪ್ರಾಮುಖ್ಯವೂ, ಜನಪ್ರಿಯವೂ ಆಗಿರುವ ಈ ಕಂಪೆನಿಯಲ್ಲಿ ನೀವು ಜೀವ ವಿಮೆ ಮಾಡುವುದಕ್ಕೆ ಇದೇ ತಕ್ಕ ಸಮಯ.

ಬೋನಸ್ ವರ್ಷ! ಬೋನಸ್ ವರ್ಷ!!

ಸಾಹಸವಂತರಾದ ಏಜೆಂಟರು ಬೇಕಾಗಿದೆ.

ಹೆಡ್ ಆಫೀಸು:— ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ.

ಬ್ರಾಂಚ್ ಆಫೀಸು:— 152–3 ಕಮರ್ಷಿಯಲ್ ಸ್ಟ್ರೀಟ್, ಬೆಂಗಳೂರು.

52–18

ಬರುವುದು! ಬೇಗನೆ!! ಬರುವುದು!!!

ನಿರೀಕ್ಷಿಸಿರಿ! ಎದುರು ನೋಡಿರಿ!!

ಕರ್ನಾಟಕದಲ್ಲಿ ಸುಪ್ರಸಿದ್ಧ ನಟರಿಂದೊಡಗೂಡಿದ

ಗುರುಸಮರ್ಥ ನಾಟಕ ಮಂಡಳಿಯು

ಬೇಗನೆ ಮಡಿಕೇರಿಗೆ ಬರುವುದು.

ಹಿಂದುಸ್ಥಾನದ ಭಯಂಕರ ಬಡತನಕ್ಕೆ ಕಾರಣಗಳು.

(ಹೆಚ್. ಯನ್. ಬ್ರೈಯಲ್ಸ್ ಫರ್ಡ್)

ಈ ಕಷ್ಟತರವಾದ ಅಜವಾಯಿಸಿಕೆಯನ್ನು ಪ್ರಾರಂಭಿಸುತ್ತಿರುವಾಗ ಮೊದಲ ಭಾಗವನ್ನು ಗಣನೆಗೆ ತೆಗೆದುಕೊಳ್ಳಬೇಕಾಗಿದೆ. ಉದಾಹರಣೆಗಾಗಿ ಸ್ತ್ರೀಯರು ಸಹಾಯ ಮಾಡಬೇಕಾದಷ್ಟು ಮಾಡುತ್ತಿಲ್ಲವೆಂಬದನ್ನು ನೆನಪಿನಲ್ಲಿಡಬೇಕು. ಅವರು ಗುಮಾಸ್ತರುಗಳಾಗಿಯಾಗಲೀ, ಅಂಗಡಿಯಲ್ಲಿ ಮಾರುವವರಾಗಿಯಾಗಲೀ ಕೆಲಸ ಮಾಡುವುದಿಲ್ಲ. ಉತ್ತರ ಹಿಂದೂಸ್ಥಾನದಲ್ಲಿ ಪರ್ದಾ ಪದ್ಧತಿಯಿಂದ ರೈತರ ಹೆಂಗಸರು ಗದ್ದೆ ಕೆಲಸಕ್ಕೆ ಹೋಗಲು ಸಾಧ್ಯವಿಲ್ಲ. ಕೆಳಗಿನ ಜನರ ದರ್ಜೆಯ ಜನರಾದರೋ ಅವರಿಗೆ ಯೋಗ್ಯವಲ್ಲದ ಕೆಲಸಗಳನ್ನು ಅಂದರೆ ಗಿರ್ಣಿಗಳಲ್ಲಿ, ಕಟ್ಟಡದ ಕೆಲಸಗಳಲ್ಲಿ, ಬಂದರಗಳಲ್ಲೂ ಮಾಡುತ್ತಾರೆ.

ಗಂಡಸರಾದರೋ ಸಂಖ್ಯೆಯಲ್ಲಿ ತುಂಬಾ ಇದ್ದರೂ ಬಲದಲ್ಲಿ ಯುರೋಪಿನ ಎಲ್ಲಾ ಜನಾಂಗಗಳಿಗಿಂತಲೂ ಹಿಂದೆ ಇದ್ದಾರೆ. ಪಂಜಾಬಿಗಳನ್ನೂ, ಮರಾಠರನ್ನೂ ಬಿಟ್ಟರೆ ದೇಹದ ಬೆಳವಣಿಗೆಯಲ್ಲಿ ಬಹಳ ಚಿಕ್ಕ ದೇಹವುಳ್ಳವರಾಗಿದ್ದಾರೆ. ಜೀವವಾದ ಮನುಷ್ಯನ ಬರೇ ಒಂದು ಭಾಗವೆಂದನ್ನಬಹುದು. ಬ್ರಿಟನಿನಲ್ಲಿ ಜನರ ಸರಾಸರಿ ಆಯುಸ್ಸು 54 ವರ್ಷವಾಗಿರುವಾಗ ಹಿಂದೂಸ್ಥಾನದಲ್ಲಿ ಬರೇ 23 ವರ್ಷವಾಗಿದೆ. ಅವರ ಆರೋಗ್ಯವೋ ಯಾವಾಗಲೂ ಕಡಿಮೆ ತರದ್ದೇ ಆಗಿರುತ್ತದೆ. ಆರೋಗ್ಯ, ಪೂರ್ತಿ ಬಲವೆಂಬುದು ಏನೆಂಬುದೇ ಗೊತ್ತಿಲ್ಲ. ಮಲೇರಿಯಾದಿಂದ ವರ್ಷಕ್ಕೆ 10 ಲಕ್ಷ ಜನರು ಸಾಯುತ್ತಾರೆ. ಇದು ಕೋಟಿ ಜನರನ್ನು ಹಾಸಿಗೆಯಲ್ಲಿ ಮಲಗಿಸುತ್ತದೆ. ಇದೇ ಕಾರಣ ... ಬಂಗಾಳದಲ್ಲಿ ಶೀತಜ್ವರವಿರುವ ಭಾಗದಲ್ಲಿ ಮರಣ ಸಂಖ್ಯೆ ಸಾವಿರಕ್ಕೆ 46.1 ಆಗಿರುವಾಗ ಆ ಊರಿನ ಯುರೋಪಿಯನರಿರುವ ಭಾಗದಲ್ಲಿ ಸಾವಿರಕ್ಕೆ 12.3 ಮಾತ್ರವಾಗಿದೆ. ಬೊಂಬಾಯಿಯಲ್ಲಿ ಸಾವಿರಕ್ಕೆ 410 ಶಿಶುಗಳ ಮರಣವಾಗುತ್ತಿರುವಾಗ್ಯೆ ಲಂಡನಿನಲ್ಲಿ 70 ಮಾತ್ರವಾಗಿದೆ. ಬೇಕಾದಷ್ಟು ಆಹಾರವಿಲ್ಲದಿರುವಿಕೆಯೂ ಆರೋಗ್ಯ ಏರ್ಪಾಡು ಇಲ್ಲದೆ ಇರುವುದೇ ಈ ತಾರತಮ್ಯಕ್ಕೆ ಕಾರಣವಾಗಿದೆ. ಕೆಲಸಗಾರರ ಮಕ್ಕಳು ಹಾಲಿನ ರುಚಿಯೇ ನೋಡಿರುವುದಿಲ್ಲ.

ವಿದ್ಯೆ ಇಲ್ಲದಿರುವುದರಿಂದ ಈ ಅರೆ ಹೊಟ್ಟೆ ತಿನ್ನುವ ಕೆಲಸಗಾರರ ಕೆಲಸವು ಇನ್ನೂ ಕಡಿಮೆ ದರ್ಜೆಗೆ ಇಳಿಸುತ್ತದೆ. ಗಂಡಸರಲ್ಲಿ ಬರೇ ಶೇಕಡ 18.3 ಮಾತ್ರವೂ ಹೆಂಗಸರಲ್ಲಿ ಶೇಕಡ 1.9 ಮಾತ್ರವೂ ಅಕ್ಷರಸ್ಥರಾಗಿದ್ದಾರೆ. ಉನ್ನತಿಯನ್ನು ಪಡೆಯಬೇಕೆಂಬ ಅಭಿಲಾಷೆಯೇ ಇಲ್ಲ. ಆರ್ಥಿಕ ಸ್ಪರ್ಧೆ ... ಜನರನ್ನು ಉತ್ತೇಜಿಸುವುದೇ ಇಲ್ಲ. ಜಾತಿ ಭೇದಗಳು ಜನರನ್ನು ಕಷ್ಟಗಳಿಗೆ ಒಳಪಡಿಸಿವೆ.

ಈ ಅಡಚಣೆಗಳಿರುವುದೂ ಅಲ್ಲದೆ ಕೆಲಸಗಾರರಿಗೆ ಸಾಕಷ್ಟು ಕೆಲಸವಿಲ್ಲ. ಯಾಕೆಂದರೆ ವರ್ಷದ ಮೂರನೇ ಒಂದು ಭಾಗದಲ್ಲಿ ಗ್ರಾಮವಾಸಿಗಳಿಗೆ ಕೆಲಸವೇ ಇಲ್ಲ. ಆದ್ದರಿಂದ ಹಿಂದೂಸ್ಥಾನದ ಬಡತನಕ್ಕೆ ಮೊದಲನೇ ಮತ್ತು ಸುಲಭವಾಗಿ ತೋರಿಬರುವ ಕಾರಣವು ಹಿಂದೂಸ್ಥಾನದ ಜನತೆಯು ಅರ್ಧಕ್ಕೆ ಮಾತ್ರ ಕೆಲಸವಿರುವುದೇ.

ಕೃಷಿ ವ್ಯವಸಾಯದಲ್ಲಿ ಬಹು ಪುರಾತನ ರೀತಿಯನ್ನೇ ಅನುಸರಿಸುವುದರಿಂದ ಹಾಳಾಗುತ್ತಿರುವ ಕೆಲಸವನ್ನು ಗಣನೆಗೆ ತೆಗೆದುಕೊಳ್ಳಬೇಕಾಗಿದೆ. ಒಂದು ಎಕರೆಯಲ್ಲಿ ಗೋಧಿ ಬೆಳೆಸಲಿಕ್ಕೆ ಒಬ್ಬ ಮನುಷ್ಯನು 40 ದಿನ ಕೆಲಸ ಮಾಡಬೇಕಾಗಿದೆ. ಅಮೇರಿಕಾದ ಸಂಯುಕ್ತ ಪ್ರಾಂತ್ಯದ ಈಗಿನ ಕಾಲದ ಯಂತ್ರಗಳನ್ನು ಉಪಯೋಗಿಸುತ್ತಿರುವ ಹೊಲಗಳಲ್ಲಿ ಒಬ್ಬನಿಗೆ ಒಂದು ಎಕರೆಯಲ್ಲಿ ಗೋಧಿ ವ್ಯವಸಾಯ ಮಾಡಲು ಒಂದು ದಿನ ಸಹ ಬೇಕಾಗಿಲ್ಲ. ಆದ್ದರಿಂದ ಒಂದೇ ಭೂಮಂಡಲದಲ್ಲಿ ಒಂದೇ ಕ್ರಮದಲ್ಲಿ ಗೋಧಿಯನ್ನು ಬೆಳೆ ಮಾಡುವ ಹಿಂದೀ ರೈತನಿಗೆ ಅಮೇರಿಕಾದ ರೈತನಿಗೆ ಸಿಕ್ಕುವ ಉತ್ಪತ್ತಿಯ ಅತ್ಯಲ್ಪ ಭಾಗ ಮಾತ್ರ ಸಿಕ್ಕುತ್ತದೆಂದು ಸ್ಪಷ್ಟವಾಯಿತು. ಅಲ್ಲದೆ ಹಿಂದೂಸ್ಥಾನದಲ್ಲಿ ಜನಸಂಖ್ಯೆ ಹೆಚ್ಚಿರುವುದರಿಂದ ಅದೇ ಪುರಾತನ ರೀತಿಯ ವ್ಯವಸಾಯವಾದರೂ ಈಗ ಕೆಲಸ ಮಾಡುತ್ತಿರುವ ಜನಸಂಖ್ಯೆಯ ಅರ್ಧವೇ ಈಗ ವ್ಯವಸಾಯವಾಗುತ್ತಿರುವ ಭೂಮಿಗೆ ಸಾಕಾಗಿದೆ. ಹದಿನೆಂಟನೇ ಶತಮಾನದಲ್ಲಿ ಅಂದರೆ 1800ನೇ ಇಸವಿ ವರೆಗೆ ಒಂದು ಹಿಡುವಳಿಯ ಸರಾಸರಿ ವಿಸ್ತಾರವು 40 ಎಕರೆ ಆಗಿದ್ದಾಗ ಈಗ ಏಳು ಎಕರೆಗೆ ಇಳಿದಿದೆ. ಕೆಲವು ಪ್ರಾಂತ್ಯಗಳಲ್ಲಿ ಒಂದು ಹಿಡುವಳಿಯ ಸರಾಸರಿ ವಿಸ್ತಾರವು 2½ ಎಕರೆಗೆ ಸಹ ಇಳಿದಿದೆ. ಸ್ವಲ್ಪ ಬುದ್ಧಿವಂತಿಕೆಯಿಂದ ಕೆಲಸ ಮಾಡಿದರೆ ಹುಟ್ಟುವಳಿಯನ್ನು ಎಷ್ಟೋ ಹೆಚ್ಚಿಸಿಕೊಳ್ಳಬಹುದು. ಗೋಧಿಯ ಸರಾಸರಿ ಹುಟ್ಟುವಳಿಯು ಇಂಗ್ಲೆಂಡಿನ ಅರ್ಧದಷ್ಟು, ಹತ್ತಿಯ ಹುಟ್ಟುವಳಿಯು ಅಮೇರಿಕಾದ ಅರ್ಧದಷ್ಟು ಮಾತ್ರವಾಗಿದೆ. ಉತ್ತಮ ಬೀಜವನ್ನು ಉಪಯೋಗಿಸಿ ಹುಟ್ಟುವಳಿಯನ್ನು ಎಷ್ಟೋ ಹೆಚ್ಚಿಸಬಹುದು. ಬದು (ಏರಿ) ಗಳನ್ನು ವ್ಯವಸಾಯಕ್ಕೆ ತಂದು ಶೇಕಡ 50ರಷ್ಟು ಉತ್ಪತ್ತಿ ಹೆಚ್ಚಿಸಬಹುದು. ಖಾಲಿ ಜಾಗಗಳಲ್ಲಿ ಬೆಳೆಯುವಂಥ ಧಾನ್ಯಗಳನ್ನು ಬೆಳೆಸಿ ಶೇಕಡ 20 ರಷ್ಟು ಉತ್ಪತ್ತಿ ಹೆಚ್ಚಿಸಿಕೊಳ್ಳಬಹುದು. ಗೊಬ್ಬರವೇ ಇಲ್ಲ ಅಥವಾ ಅತಿ ಸ್ವಲ್ಪ ಉಪಯೋಗಿಸುತ್ತಾರೆ. ಸಗಣಿಯನ್ನು ಸೌದೆಯಾಗಿ ಉಪಯೋಗಿಸುತ್ತಾರೆ. ಬೇಕಾದಷ್ಟು ಭೂಮಿಗೆ ಬೇಕಾದಷ್ಟು ಗೊಬ್ಬರವಾಗಿ ಉಪಯೋಗಿಸುವ ಮನುಷ್ಯರ ಸಗಣಿಯನ್ನು ಅಶುದ್ಧವಾಗುತ್ತದೆಂಬ ಕಾರಣದಿಂದ ಹಿಂದೀಯರು ಗೊಬ್ಬರವಾಗಿ ಉಪಯೋಗಿಸುವುದೇ ಇಲ್ಲ.

ಗೋವಿನ ಮೇಲೆ ಇರುವ ಭಕ್ತಿಯ ವಿಷಯದಿಂದ ಬೆಳವಣಿಗೆ ಇಲ್ಲದ ಅರೆ ಹೊಟ್ಟೆಯಲ್ಲಿರುವ ಪ್ರಯೋಜನಕ್ಕೆ ಬಾರದ ದನಗಳನ್ನು ಕಾರಣಯುಕ್ತವಾದ ರೀತಿಯಿಂದ ಇಟ್ಟುಕೊಳ್ಳಲು ಸಾಧ್ಯವಿಲ್ಲವಾಗಿದೆ.

ಹಿಂದೂಸ್ಥಾನದ ಕೃಷಿಯನ್ನು ಒಳ್ಳೇ ರೀತಿಯಲ್ಲಿ ನಡೆಸಿದರೆ ಕಡಿಮೆ ಸಂಖ್ಯೆ ಜನರು ಕೆಲಸ ಮಾಡಿ ಹೆಚ್ಚಿನ ಪ್ರಯೋಜನ ಹೊಂದಬಹುದು. ಆಗ ಗದ್ದೆ ಹೊಲಗಳಲ್ಲಿ ಕೆಲಸವಿಲ್ಲದಿರುವವರು ಬೇರೆ ಕಸುಬನ್ನು ನಡೆಸಬಹುದು. ಅವರಿಗೆ ಉತ್ತಮ ರೀತಿಯ ವಸತಿ ಮತ್ತು ಬಟ್ಟೆ ಬೇಕೆಂತ ಆಸೆ ಹುಟ್ಟೀತು. ಗ್ರಾಮಗಳಲ್ಲಿ ನಡೆಸಬಹುದಾದ ಕೈಗಾರಿಕೆಗಳಿಗೆ ಉತ್ತೇಜನ ದೊರೆಯುತ್ತದೆ. ಮುಖ್ಯವಾಗಿ ನೀರಿನ ಅಬ್ಬಿಗಳಿಂದ ವಿದ್ಯುಚ್ಛಕ್ತಿ, ಉತ್ಪನ್ನ ಮಾಡಿಕೊಂಡರೆ ವಿದ್ಯುಚ್ಛಕ್ತಿಯು ಸುಲಭವಾಗಿ ಸಿಕ್ಕಿ ಕೈಗಾರಿಕೆಗಳಿಗೆ ಸಹಾಯವಾದೀತು; ಆದರೆ ಕೈಗಾರಿಕೆಯ ಬೆಳವಣಿಗೆಯು ಗುಂಪು ಕೂಡಿರುವ ಪಟ್ಟಣಗಳಲ್ಲೇ ಆಗಬೇಕಾಗಿದೆ.

ಕೃಷಿಯ ಅಭಿವೃದ್ಧಿಗಾಗಲೀ ಸಹಕರಿಸಿ ಮಾರಾಟ ಮಾಡಲಿಕ್ಕಾಗಲೀ ವಿದ್ಯುಚ್ಛಕ್ತಿ, ಉತ್ಪನ್ನ ಮಾಡಿಕೊಳ್ಳಲಿಕ್ಕಾಗಲೀ ... ಪಟ್ಟಣಗಳ ಕೈಗಾರಿಕೆಗಳನ್ನು ಹೆಚ್ಚಿಸಿಕೊಳ್ಳಲಿಕ್ಕೆ ಹಿಂದೂಸ್ಥಾನದಲ್ಲಿ ಸಾಕಷ್ಟು ಮೂಲಧನವಿದೆಯೋ? ಉಪಯೋಗಿಸಲ್ಪಡದೆ ಇರುವ ಧನವು ತುಂಬಾ ಇದೆ. ಪ್ರತಿ ವರ್ಷವೂ ಇಪ್ಪತ್ತು ಕೋಟಿ ಡಾಲರಿನ ಬೆಲೆಯ ಚಿನ್ನವು ಹಿಂದೂಸ್ಥಾನಕ್ಕೆ ಬರುತ್ತದೆ. ಅವೆಲ್ಲಾ ಪೆಟ್ಟಿಗೆಯೊಳಗಾಗೀ ದೇವಸ್ಥಾನಗಳ ಖಜಾನೆಗಳಲ್ಲಾಗಲೀ ಅಥವಾ ಹೆಂಗಸರ ಮೈ ಮೇಲಾಗಲೀ ಸೇರಿಕೊಳ್ಳುತ್ತದೆ. ಭೂಮಿಯಲ್ಲಿ ಹೂಣಿಡಲ್ಪಡುವದೂ ಇದೆ. ಈ ಅಸಾಧಾರಣ ಚಿನ್ನದ ಶೇಖರವು ವಿಪರೀತವಾಗಿದೆ. ಬ್ಯಾಂಕುಗಳಲ್ಲಿ ಹಣವು ಇಡಲ್ಪಟ್ಟಿದ್ದರೆ ಸಾಧಾರಣದ ನಿಯಮದ ಮೇರೆ ಪತ್ತು, ಸಂಭಕ್ತರಷ್ಟು ಬೆಳೆಯುತಿತ್ತು. ಭೂಮಿಯೊಳಗಿನಿಂದ ಹೊರಗೆ ಹೊರಡಿಸುವ ಉಪಾಯವೇನಾದರೂ ಇದೆಯೋ? ರಾಷ್ಟ್ರೀಯ ಸರ್ಕಾರವಾದರೆ ದೇಶಭಕ್ತಿಯನ್ನು ಬೆಳೆಸಿ ಕ್ರಮಕ್ರಮವಾಗಿ ಈ ಕೂಡಿದ ಧನವನ್ನು ಹೊರಡಿಸಲು ಸಾಧ್ಯವಾದೀತು. ಗ್ರಾಮವಾಸಿಗಳಿಗೆ ಸಂತೋಷವನ್ನುಂಟು ಮಾಡುವ ಅಥವಾ ವಿದ್ಯಾಭ್ಯಾಸವನ್ನು ಕೊಡುವ ತಂತಿ ಇಲ್ಲದೆ ಸಂಗೀತ ಹಾಡುವ ಮತ್ತು ವರ್ತಮಾನ ಕೊಡುವ ಏರ್ಪಾಡನ್ನು ಪ್ರತಿಯೊಂದು ಗ್ರಾಮದ ಮಧ್ಯ ಸ್ಥಳದಲ್ಲಿ ಏರ್ಪಡಿಸುವುದರಿಂದ ಗ್ರಾಮವಾಸಿಗಳ ಮನಸು ಎಷ್ಟರ ಮಟ್ಟಿಗೆ ಬದಲಾದೀತೆಂತ ಊಹಿಸಬಹುದು. ಅಭಿವೃದ್ಧಿ ಹೊಂದಬೇಕೆಂಬ ಆಶೆಯನ್ನು ಜನರಲ್ಲಿ ಹುಟ್ಟಿಸಿ, ಮುಂದಾಗಿ ಏರ್ಪಡಿಸಿಕೊಂಡ ಕ್ರಮದಲ್ಲೇ ಅಭಿವೃದ್ಧಿ ಮಾಡಿಕೊಳ್ಳಬಹುದೆಂಬ ಭರವಸೆಯನ್ನೂ ಹುಟ್ಟಿಸಿದರೆ ಕೂಡಿಟ್ಟ ಧನವು ಹೊರಗೆ ಬಂದೀತು. ಪರದೇಶೀ ಆಳರಸರಿಂದ ಇದು ಸಾಧ್ಯವಿಲ್ಲ. ಉಜ್ವಲ ರಾಷ್ಟ್ರಭಕ್ತಿಯನ್ನು ಹುಟ್ಟಿಸುವ ರಾಷ್ಟ್ರ ಪಕ್ಷವು ಸರ್ಕಾರವನ್ನು ನಡಿಸುವುದಾದರೆ, ಮೂಲಧನ ದೊರೆತೀತು.

ಹಿಂದೂಸ್ಥಾನದ ಬಡತನಕ್ಕೆ ಕಾರಣಗಳು ವಿಧ ವಿಧ ಇವೆ. ನಿರ್ದಯವಾಗಿ ಮಾಡುವ ಜಾತಿ ಭೇದಗಳೂ, ಬಾಲ್ಯವಿವಾಹವೂ, ನ್ಯಾಯರೀತಿಯಿಂದ ಕೃಷಿಯನ್ನು ನಡಸಲಿಕ್ಕೂ ಹಿಂದೂಸ್ಥಾನದ ಅಸಂಖ್ಯಾತ ಧನಗಳ ಯುಕ್ತ ರೀತಿಯ ಉಪಯೋಗಕ್ಕೂ ಅಡ್ಡಿ ಬರುವ ಮೂಢ ಭಕ್ತಿಗಳೂ ಬಹಳ ಮಟ್ಟಿಗೆ ಬಡತನಕ್ಕೆ ಕಾರಣವಾಗಿದೆ. ಬ್ರಿಟಿಷರ ಆಳ್ವಿಕೆಯಲ್ಲಿ ಮಾಡಬೇಕಾದದ್ದನ್ನು ಮಾಡದೆಯೂ ಮಾಡಬಾರದ್ದನ್ನು ಮಾಡಿಯೂ ಬ್ರಿಟಿಷ್ ಆಡಳಿತದಿಂದ ಬಡತನಕ್ಕೆ ತುಂಬಾ ಕಾರಣವಾಗಿದೆ. ಅದರ ಗುಣಗಳೇ ಅತ್ಯಂತ ಹಾನಿಯನ್ನುಂಟು ಮಾಡಿತು. ಶಾಂತಿಯನ್ನು ಕೊಟ್ಟು ಕ್ಷಾಮ ಮತ್ತು ಪ್ಲೇಗನ್ನು ಇಲ್ಲದಂತೆ ಮಾಡಿ ಜನ ಸಂಖ್ಯೆ ಹೆಚ್ಚುವಂತೆ ಮಾಡಿತು. ರೈಲ್ವೇಗಳನ್ನೂ ರಸ್ತೆಗಳನ್ನೂ ಮಾಡಿಕೊಟ್ಟು ಪರದೇಶದಿಂದ ಬರುವ ಮಿಶನ್‌ಗಳಲ್ಲಿ ತಯಾರಾಗುವ ಸುಲಭ ಕ್ರಯದ ಸಾಮಾನುಗಳು ಗ್ರಾಮವಾಸಿಗಳಿಗೆ ದೊರಕುವಂತೆ ಮಾಡಿತು. ಗ್ರಾಮದ ಕೈಗಾರಿಕೆಗಳು ಹಾಳಾದವು. ಕೈಗಾರಿಕೆಯಿಂದ ಜೀವಿಸುವವರೂ ಸಹ ಕೃಷಿಯ ಮೇಲೆ ಬೀಳಬೇಕಾಯಿತು. ಕಂಪೆನಿ ಸರ್ಕಾರವು ಇದಕ್ಕೆ ಬೇಕಾದಷ್ಟು ಧನ ಸಹಾಯ ಮಾಡಿತು. ಕೈನೂಲಿನಿಂದ ತಯಾರಿಸಲ್ಪಡುತ್ತಿದ್ದ ಬಟ್ಟೆಯು ಪರದೇಶಗಳಿಗೆ ಹೋಗಿ ಆಗುತ್ತಿದ್ದ ವ್ಯಾಪಾರವು ವಿಪರೀತ ಸುಂಕ ಹಾಕಲ್ಪಟ್ಟದ್ದರಿಂದ ಹಾಳಾಯಿತು. ಅನಂತರ ಲಾಂಕಾಶಯರದಲ್ಲಿ ಮಿಶನುಗಳು ತಯಾರಾದನಂತರ ಹಿಂದೂಸ್ಥಾನಕ್ಕೆ ಬರುವ ಸಾಮಾನುಗಳಿಗೆ ಸುಂಕವಿರಬಾರದೆಂಬ ತತ್ವವನ್ನು ಅವಲಂಬಿಸಿದ್ದರಿಂದ ಹಿಂದೂಸ್ಥಾನದಲ್ಲಿ ಮಿಶನ್‌ಗಳ ಸ್ಥಾಪನೆಗೆ ಅಡಚಣೆಯುಂಟಾಯಿತು

ಕಳೆದ ದೊಡ್ಡ ಯುದ್ಧದ ವರೆಗೂ ಇಂಡಿಯಾ ಸರಕಾರವು ಹಿಂದೂಸ್ಥಾನದ ಆಧುನಿಕ ಕೈಗಾರಿಕೆಗಳ ಬೆಳವಣಿಗೆಗೆ ಏನೇನೂ ಪ್ರಯತ್ನ ಪಡಲಿಲ್ಲ. ಅದಕ್ಕೆ ಕಾರಣ ಸ್ಪಷ್ಟವಾಗಿದೆ. ಇಂಗ್ಲೆಂಡಿನಿಂದ ತಯಾರಾದ ಸಾಮಾನುಗಳನ್ನು ಕಳುಹಿಸುವ ವರೆಗೆ ಸಹಾಯವಾಯಿತು. ಆದರೆ ಕೃಷಿಯ ... ಯಾವ ಸಹಾಯ ಕೊಡ... ಇಲ್ಲವೆಂಬದಕ್ಕೆ ಕಾರಣ ತಿಳಿಯುವುದಿಲ್ಲ. ಮೊದಲನೇ ಕೃಷಿ ಪರೀಕ್ಷಾಕ್ಷೇತ್ರ ಸ್ಥಾಪನೆಯಾದದ್ದೇ 1903ರಲ್ಲಿ. ಅದು ಸಹ ಅಮೇರಿಕದ ಒಬ್ಬ ಕೋಟಿಪತಿಯ ದಾನದಿಂದ. ಹಿಂದೀ ಪ್ರಾಂತ್ಯಗಳಲ್ಲೆಲ್ಲಾ ಅತಿ ಮುಂದುವರಿದ ಪಂಜಾಬಿನಲ್ಲಿ ಸಹ ಕೃಷಿಯ ಅಭಿವೃದ್ಧಿಗಾಗಿ ಪ್ರತಿ 1000 ಜನ ಸಂಖ್ಯೆಗೆ ಬರೇ 30 ಡಾಲರ್ ಖರ್ಚು ಮಾಡುತ್ತಾರೆ. ಬ್ರಿಟನಿನವರು 300 ಡಾಲರ್ ಖರ್ಚು ಮಾಡುತ್ತಾರೆ. ಯುದ್ಧದ ನಂತರ ಹಿಂದೀ ಸರಕಾರವೂ ತನ್ನ ಧ್ಯೇಯವನ್ನು ಬಹಳವಾಗಿ ಬದಲಾಯಿಸಿದೆ. ಬ್ರಿಟನಿಗೆ ಹಾನಿಯಾಗುತ್ತಾದರೂ ಹಿಂದೀ ಕೈಗಾರಿಕೆಗೆ ಸಹಾಯವಾಗುವಂತೆ ದೇಶಕ್ಕೆ ಬರುವ ಸಾಮಾನುಗಳ ಮೇಲೆ ಸ್ವಲ್ಪವಾದರೂ ಸುಂಕ ಹಾಕಿದೆ. "ಇದ್ದಂತೆ ಇರಲಿ" ಎಂಬ ತತ್ವವನ್ನು ಬಿಟ್ಟಿದೆ. ಆದರೆ ರಾಷ್ಟ್ರೀಯ ಸರಕಾರವು ಮಾಡಬಹುದಾದ ಪ್ರಯತ್ನವನ್ನು ಈಗಿನ ಸರಕಾರವು ಮಾಡಲಾರದು. ನದಿ ಮತ್ತು ಸಂಬಳಗಳಿಗೆ ವಿರೋಧವಾಗಿ ವರ್ತಿಸಲು, ದೇಶದ ಶಕ್ತಿಯನ್ನು ಉಪಯೋಗಿಸುವಂತೆ ಮಾಡಲು, ರಾಷ್ಟ್ರಭಕ್ತಿಯನ್ನು ಹುಟ್ಟಿಸಲು ಈಗಿನ ಸರಕಾರಕ್ಕೆ ಸಾಧ್ಯವಿಲ್ಲ.

ಸುಧಾರಿಸಿದ ಕ್ರಮವಿಲ್ಲದೆ ಗುಂಪು ಕೂಡಿದ ಗ್ರಾಮಗಳಲ್ಲಿ ಉತ್ಪನ್ನವಾಗುವ ಸಂಪತ್ತು ಸಹ ಯುಕ್ತ ರೀತಿಯಿಂದ ಹಂಚಲ್ಪಟ್ಟಿರುವುದಿಲ್ಲ. ಈ ದೋಷವು ಹಿಂದೂಸ್ಥಾನದಲ್ಲಿ ಮಾತ್ರ ಕಂಡು ಬರುವುದಲ್ಲ. ಕೃಷಿಕರ ಸಂಪತ್ತನ್ನು ಸೆಳೆದುಕೊಂಡು ಜೀವಿಸುವ ಜನರು ತಮ್ಮಲ್ಲಿ ಸೇರುವ ಧನವನ್ನು ಜನರಿಗೆ ಉಪಕಾರವಾಗುವ ರೀತಿಯಲ್ಲಿ ಉಪಯೋಗಿಸುವುದಿಲ್ಲ. ಗ್ರಾಮಗಳಲ್ಲಿ ಲೇವಾದೇವಿ ಮಾಡುವ ಮತ್ತು ತುಂಬಾ ಜಮೀನಿರುವ ಮಾಲೀಕರನ್ನು ಪಾಶ್ಚಿಮಾತ್ಯ ದೇಶಗಳಲ್ಲಿ ಇರುವ ಬ್ಯಾಂಕರುಗಳಿಗೂ ಭೂಮಾಲೀಕರಿಗೂ ಹೋಲಿಸ ಕೂಡದು. ಶೇಕಡ 37½ಯಿಂದ 75ರ ವರೆಗಿನ ದರದ ಬಡ್ಡಿಯಲ್ಲಿ ಅದೂ ಚಕ್ರ ಬಡ್ಡಿಯಲ್ಲಿ ಸೇರುವ ಹಣವನ್ನು ರೈತರಿಗೆ ಪ್ರಯೋಜನವಾಗುವ ಕಾರ್ಯನೆಗಳನ್ನು ಹೊರಡಿಸುವುದರಲ್ಲಿ ಉಪಯೋಗಿಸುವುದೇ ಅಪರೂಪ. ಗ್ರಾಮವಾಸಿಗಳಿಗೆ ಸಾಲಕೊಟ್ಟು ಆರ್ಥಿಕ ಸಹಾಯ ಮಾಡುತ್ತಾನೆಂತಲೂ ಹೇಳಲಿಕ್ಕಾಗುವುದಿಲ್ಲ. ಅವನು ಭೂಮಿ ರೂಪಿತಕ್ಕೆ ಮಾತ್ರ ಹಣ ಕೊಡುವುದಲ್ಲ. ರೈತನ ದನ ಸತ್ತದ್ದಕ್ಕೆ ಅಥವಾ ಮದುವೆ ಮೊದಲಿಕ್ಕೆ ಸಾಹುಕಾರನು ಸಾಲ ಕೊಡುವುದಾಗಿದೆ. ಗ್ರಾಮದವರ ಸಾಲದ ಹೆಚ್ಚಿನ ಭಾಗವು ಪ್ರಯೋಜನ ಕೊಡುವಂಥಾದ್ದಲ್ಲ.

(ಮುಂದುವರಿಯುವುದು.)

"COORG AND THE COORGS"

By P. M. Muthanna,

With a preface By T. E. V. Raghavan

B. A. (Hon.) Pallachi.

This book with numerous illustrations traces briefly the origin of the Coorgs, their manners and customs and gives an account of the history of the last Rajas, the connection between E. I. C. Gvt. and Coorg and describes briefly the political history.

Price. Cloth bound Rs. 1/4/–
Card-Board Rs. 1/–

Supplied by:–

Co-operative Stores, Mercara, Coorg.
'Kodagu' Office, Mercara, ,,
Emporium, Siddapur, ,,
Coorg Pharmacy, Virajapet. ,,

3–2

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿಮಿಟೆಡ್, ಇದರ ಆಫೀಸಿನಿಂದ.

ಈ ಬ್ಯಾಂಕಿನ ಜನರಲ್ ಮೀಟಿಂಗು ತಾ. 21–2–1932ನೇ ಆದಿತ್ಯವಾರ ದಿನ ಮಧ್ಯಾಹ್ನ 1 ಗಂಟೆಗೆ ಮಡಿಕೇರಿಯ ಜಮೀನ್ದಾರರ ಸಂಘದ ಹಾಲ್‌ನಲ್ಲಿ ನಡೆಯುತ್ತದೆ.

ಚರ್ಚಿಸತಕ್ಕ ವಿಷಯಗಳು.

1. ಡೈರೆಕ್ಟರುಗಳ ರಿಪೋರ್ಟು ಮತ್ತು ಲಾಭ ಹಂಚು.
2. ಡೈರೆಕ್ಟರುಗಳ ಮತ್ತು ಅಧ್ಯಕ್ಷರ ಚುನಾವಣೆ.
3. ಅಧ್ಯಕ್ಷರ ಅನುಮತಿ ಮೇರೆ ಇತರ ವಿಷಯಗಳು.

ನಿಮ್ಮ ಸಂಘದಿಂದ ಬ್ಯಾಂಕಿನ ಪ್ರತಿನಿಧಿಯಾಗಿ ... ನ್ನು ಚುನಾಯಿಸಿದ್ದೀರೆಂಬದನ್ನು ತಾ. 15–2–32 ... ನಮಗೆ ತಿಳಿಸಬೇಕಾಗಿ ಕೋರಲಾಗಿದೆ.

ಮಡಿಕೇರಿ, ಕೆ. ಯಸ್. ಶಂ...

ತಾ. 6–1–32. (ಗೌರವ ಕಾರ್ಯ...)

ಕೊಡಗು.

ಸನ್ ೧೯೩೧ನೇ ಇಸವಿ

ಜನವರಿ ತಾ ೧೬ನೇ ಶುಕ್ರವಾರ.

ಪ್ರೆಸ್ ಆರ್ಡಿನೇನ್ಸು

ಜಾರಿಯಲ್ಲಿರುವವರಿವಿಗೆ

ನಾವು

ಅಗ್ರಲೇಖನ

ವನ್ನು

ಪ್ರಕಟಿಸುವುದಿಲ್ಲ.

ಹಿಂದೂಸ್ಥಾನದ ವೈಸರಾಯರಾಗಿದ್ದ ಲಾರ್ಡ್ ಇರ್ವಿನರು

ಲಾರ್ಡ್ ಇರ್ವಿನರು ... ರಮೆಂಟಿನಲ್ಲಿ ಮಾಡಿದ ಭಾಷಣದಿಂದ.

...ಸ್ಥಾನದ ಚಳವಳವು ಅಲ್ಪ ಸ್ವಲ್ಪ ಜನರ ಕೆಲಸ ...ಗಾಗಿ ಬಲವಾಗಿ ಧೈರ್ಯದಿಂದ, ಕೆಲಸ ಮಾಡಿದ ...ವನ್ನು ನಿಲ್ಲಿಸಿಬಿಡಬಹುದು, ಅನಂತರ ಏನೂ ...ರಾದು ಎಂಬ ಅಭಿಪ್ರಾಯಗಳು ಸಂಪೂರ್ಣ ...ಶಾಸನ ಭಂಗದ ಚಳವಳ ಶುರುವಾಗುವ ... ಹಿಂದೂಸ್ಥಾನದ 2, 3 ವರುಷ ಮುಖಂಡರ

ನ್ನು ಕರೆಸಿ ಆಲೋಚಿಸಿದೆ, ಜನರ ಬೆಂಬಲವಿದ್ದರೆ 'ಶಾಂತಿ' ಎನ್ನಿಸಿಕೊಳ್ಳಬಹುದಾದ ಮರುಭೂಮಿಯನ್ನು ಮಾಡುವ ದಬ್ಬಾಳಿಕೆ ನಡಿಸಬಹುದೋ ಎಂತ ಯೋಚಿಸಿದೆ. ಪತ್ರಿಕೆಗಳ ಬಾಯಿ ಕಟ್ಟುವುದು, ಕಾನ್ಸಿಲುಗಳನ್ನು ಮುಚ್ಚುವುದು, ಭಾಷಣ ಮಾಡುವ ಹಕ್ಕನ್ನು ತೆಗೆಯುವುದು ಮುಂತಾದ್ದನ್ನು ಸೂಚಿಸಿದೆ. ಇವೆಲ್ಲಾ ರೀತಿಯಿಂದ ಈ ಚಳವಳವನ್ನು ನಿಲ್ಲಿಸಲು ಪ್ರಯತ್ನಿಸಬಹುದಿತ್ತು. ಈ ವಿಷಯದಲ್ಲಿ ಅಭಿಪ್ರಾಯ ಕೊಡಲು ಅರ್ಹತೆ ಇರುವವರ ಸಂಗಡ ಚರ್ಚಿಸಿದಾಗಲೆಲ್ಲಾ ಒಂದೇ ತೀರ್ಮಾನಕ್ಕೆ ಬರುತ್ತಿದ್ದೆ. ಇದು ಸಾಧ್ಯವಾಗಬಹುದಾದ ರೀತಿಯೆಂತ ಊಹಿಸಿದರೂ ಹಿಂದೂಸ್ಥಾನದ ರಾಜಕೀಯ ರಚನೆಯನ್ನು ಬೆಳಸಬೇಕೆಂಬ ಈ ಸಭೆಯ ಉದ್ದೇಶವನ್ನು ಸಾಧಿಸುವುದರಲ್ಲಿ, ಒಂದು, ಎರಡು, ಮೂರು, ನಾಲ್ಕು ಐದು ವರ್ಷಗಳ ಅಂತ್ಯದಲ್ಲಿ ಎಷ್ಟರ ಮಟ್ಟಿಗೆ ಸಾಧಿಸಬಹುದಿತ್ತು? ನೀವು ಮುಂದುವರಿಯುವ ಬಗೆಗೆ ಬಹಳ ಹಿಮ್ಮೆಟ್ಟುತ್ತಿದ್ದಿರಿ. ಆದ್ದರಿಂದ ರಚನಾತ್ಮಕ್ಕೆ ಸಹಾಯವಾಗುವ ದಾರಿಯನ್ನು ಅವಲಂಬಿಸಬೇಕಾಗಿದೆ.

(ಇವರು ಮಹಾತ್ಮ ಗಾಂಧಿಯವರೊಂದಿಗೆ ಮಾಡಿಕೊಂಡ ಒಪ್ಪಂದದಲ್ಲಿ ಭದ್ರತೆಗಳು ಇರಲು ಮಹಾತ್ಮರು ಒಪ್ಪಿದ್ದಾರೆಂಬುದನ್ನು ಸೂಚಿಸಿ ಅಂಥಾ ಭದ್ರತೆಗಳ ರಚನೆಗೆ ಉಭಯ ಪಕ್ಷದವರೂ ಒಪ್ಪಂದವಾಗುವಂತೆ ಪ್ರಯತ್ನಿಸಬೇಕೆಂತ ಹೇಳಿದರು.)

ಬ್ರಿಟಿಷ್ ಜನರು ಹಿಂದೂಸ್ಥಾನಕ್ಕೆ ಕೊಟ್ಟ ವಾಗ್ದಾನಗಳನ್ನು ನೆನಪಿನಲ್ಲಿಡಬೇಕೆಂತ ಅನೇಕರು ಹೇಳಿದರು. ಇದಕ್ಕೆ ನಾನೂ ಒಪ್ಪುತ್ತೇನೆ. ಯುದ್ಧ ತೀರಿದ ನಂತರ ನಮ್ಮ ಜನಾಂಗವು ಸಂತೋಷದಲ್ಲಿದ್ದಾಗ ಹಿಂದೂಸ್ಥಾನಕ್ಕೆ ತುಂಬಾ ವಾಗ್ದಾನಗಳನ್ನು ಕೊಟ್ಟೆವು. ಅನಂತರ ಮನಸು ಸಮಾಧಾನಕ್ಕೆ ಬಂದಾಗ ಹಿಂದೂಸ್ಥಾನಕ್ಕೆ ಕೊಟ್ಟ ವಾಗ್ದಾನಗಳು ಹೆಚ್ಚಾಯಿತೆಂತಲೂ, ಇದನ್ನು ಹಿಂದೀಯರು ತಿಳಿದುಕೊಂಡು ಅದಕ್ಕೆ ಸರಿಯಾಗಿ ವರ್ತಿಸಬೇಕೆಂತಲೂ ಇಲ್ಲಿ ಅನೇಕರು ಹೇಳತೊಡಗಿದ್ದರು. ಕೆಲವು ಪತ್ರಿಕೆಗಳು ಮನಸು ಬಂದಂತೆ ಬರೆಯಲು ಪ್ರಾರಂಭಿಸಿದವು. ಇದರಿಂದ ತುಂಬಾ ಕೆಡಕಾಯಿತು.

ಹಿಂದೂಸ್ಥಾನಕ್ಕೆ ಪ್ರಜಾ ಪ್ರತಿನಿಧಿ ಸರಕಾರವು ತಕ್ಕದಾದದ್ದೋ ಎಂತ ಕೆಲವರು ಸಂಶಯಪಡುತ್ತಾರೆ. ಸೈಮನ್ ಕಮಿಶನ್ ರಿಪೋರ್ಟು ಸಹ ಜನರಿಗೆ ಒಪ್ಪಿಗೆಯಾಗುವ ಸುಧಾರಣೆ ಕೊಡಬೇಕೆಂತ ಬರೆದಿದೆ. ಪ್ರಜಾ ಪ್ರತಿನಿಧಿ ಸರಕಾರವನ್ನು ಏರ್ಪಡಿಸಿಕೊಟ್ಟು ಅದರ ಅನುಭವದಿಂದ ಹಿಂದೂಸ್ಥಾನಕ್ಕೆ ಅರ್ಹವಾದ ರಚನೆಯನ್ನು ತಯಾರಿಸಿಕೊಳ್ಳಲು ಅವಕಾಶ ಕೊಡುವುದು ಅವಶ್ಯವೆಂತ ನಾನು ನಂಬುತ್ತೇನೆ.

....

ಹಿಂದೂಸ್ಥಾನದ ಸಮಸ್ಯೆ ಅತಿ ಕಠಿಣ ತರದ್ದೆಂತ ನಾನು ಒಪ್ಪುತ್ತೇನೆ. ಜಾತಿ ಭೇದಗಳು, ಪರ ರಾಜರ ಭಾಳಿಯನ್ನು ತಡೆಯುವುದು, ಮುಂತಾದ ದೊಡ್ಡ ವಿಷಯಗಳಿವೆ. ನನ್ನ ಅಭಿಪ್ರಾಯವು ನಮ್ಮ ಸೋಲುವಿಕೆಯನ್ನು ಸೂಚಿಸುತ್ತದೆ ಎಂತ ಕೆಲವರು ಭಾವಿಸುತ್ತಾರೆ. ಬ್ರಿಟೀಷ್ ರಾಜ್ ಅಂತ್ಯವಾಯಿತೆಂತ ಕೂಗಿಕೊಳ್ಳುತ್ತಾರೆ. ನಿಜವಾದ ಹಕ್ಕುಗಳನ್ನು ಹಿಂದೀಯರಿಗೆ ವಹಿಸಿದಾಗ ಬ್ರಿಟಿಷ್ ರಾಜ್ ಅಂತ್ಯವಾಗಲೇಬೇಕು. ಆದರೆ ನಿಜವಾದ ಸೋಲು ನೀವು ಹಿಂದೂಸ್ಥಾನವನ್ನು ಮುಂದರಿಸಲಿಕ್ಕೆ ಬಿಡದಿದ್ದರೇನೇ ಸಂಭವಿಸುವುದಾಗಿದೆ. ನಾವು ಮುಂದರಿಸದೆ ಇದ್ದರೂ, ಅಥವಾ ಹಿಂದಕ್ಕೆ ಹೋದರೂ, ಹಿಂದೂಸ್ಥಾನವು ಬಹಳ ರಭಸದಿಂದ ಮುಂದುವರಿಯುತ್ತಲೇ ಇದೆ. ನಿಮ್ಮನ್ನು ಮೀರಿ ಹೋಗುತ್ತದೆ. ಆದ್ದರಿಂದ ಅನುಕೂಲ ದೊರೆತದ್ದನ್ನು ನಾವು ಉಪಯೋಗಿಸಿಕೊಳ್ಳಬೇಕು.

ಹಿಂದೂಸ್ಥಾನವನ್ನು ಆಳಲಿಕ್ಕೆ ನಮಗೆ ಶಕ್ತಿ ಇಲ್ಲವೆಂತಲ್ಲ, ನಾವು ಹೆದರಿದ್ದೇವೆಂತಲ್ಲ, ಆದರೆ ಪ್ರಪಂಚವು ಬಹಳ ರಭಸದಿಂದ ಮಾರ್ಪಾಡಾಗುತ್ತಲಿದೆ, ಸಾಮ್ರಾಜ್ಯವೆಂಬ ಅಭಿಪ್ರಾಯವು ನಾಶವಾಗಲೇಬೇಕು. ಆದ್ದರಿಂದ ನಾವು ಮಾಡುವುದು ತಪ್ಪೇ ಆಗಬಹುದಾದರೂ, ಆಶಾಭಂಗಕ್ಕೆ ಕಾರಣವಾಗಬಹುದಾದರೂ, ನಮಗೆ ಕೆಲವರ ಬೆಂಬಲ ದೊರಕದೆ ಇರಬಹುದಾದರೂ, 1917 ರಲ್ಲಿ ನಾವು ಕೈಕೊಂಡ ಧ್ಯೇಯವನ್ನೇ ನಾವು ಅನುಸರಿಸಬೇಕೆಂತ ನನ್ನ ಅಭಿಪ್ರಾಯವಾಗಿದೆ. ಬ್ರಿಟನಿಗೂ ಹಿಂದೂಸ್ಥಾನಕ್ಕೂ ಏನೋ ದೈವವಶಾತ್ ಒಂದು ಸಂಬಂಧವು ಬೆಳೆದಿದೆ. ಆ ಸಂಬಂಧವನ್ನು ಅನ್ಯೋನ್ಯ ಸಹಾಯವಾಗುವಂತೆ ಉಪಯೋಗಿಸಿಕೊಳ್ಳುವುದೇ ಬುದ್ಧಿವಂತಿಕೆಯಾಗಿದೆ.

ಈಗಿನ ರಾಜಕೀಯ ಪರಿಸ್ಥಿತಿಯ ಕುರಿತು

ಡಾಕ್ಟರ್ ರವೀಂದ್ರನಾಥ ಟಾಗೋರರವರ ಅಭಿಪ್ರಾಯ.

ಸರ್ಕಾರದೊಂದಿಗೆ ಒಪ್ಪಂದ ಮಾಡಿಕೊಳ್ಳಲು ಅವಕಾಶ ಕೊಡದೇನೇ ಮಹಾತ್ಮರನ್ನು ದಸ್ತಗಿರಿ ಮಾಡಿದ್ದಾರೆ. ಹಿಂದೂಸ್ಥಾನದ ಚರಿತ್ರೆಯ ರಚನೆಯು ಎರಡು ಪಕ್ಷಗಳ ಪೈಕಿ ಒಂದಾದ ಹಿಂದೂಸ್ಥಾನದ ಜನಾಂಗವನ್ನು ತೃಣೀಕರಿಸಬಹುದೆಂತ ನಮ್ಮನ್ನು ಆಳುವವರ ಅಭಿಪ್ರಾಯವಾಗಿರುತ್ತದೆ. ಆದರೂ ಇದ್ದ ಸಂಗತಿ ಇಷ್ಟೇ ಇದೆ. ಎರಡು ಪಕ್ಷಗಳ ಪೈಕಿ ಹಿಂದೀ ಜನಾಂಗವಾದ ನಾವು ಆಳಸ್ಥಾನಕ್ಕಾಗಿ ಬಂದಿರುವ ಇನ್ನೊಂದು ಪಕ್ಷಕ್ಕಿಂತ ಬಹಳ ಮುಖ್ಯವೆಂಬದನ್ನು ನಾವು ಪ್ರಪಂಚಕ್ಕೆ ತೋರಿಸಿಕೊಡಬೇಕಾಗಿದೆ. ಆದರೆ ರಾಜಕೀಯ ತುಚ್ಛತನದಲ್ಲಿ ನಮ್ಮ ಬುದ್ಧಿ ಭ್ರಮೆಮಾಡಿಕೊಂಡರೆ, ಅದು ಆತ್ಮಹತ್ಯೆ ಮಾಡಿಕೊಂಡಂತೆಯೋ ಆಗಿ ಒಳ್ಳೆ ಅವಕಾಶವನ್ನು ಕಳಕೊಂಡಂತಾಗುತ್ತದೆ. ದಿಕ್ಕು ತೋರದಿರುವಿಕೆಯಿಂದಲೇ ನಮಗೆ ದೃಢ ನಿಶ್ಚಯ ಹುಟ್ಟಬೇಕು, ಬಲದ ಶಾಂತತೆಯು ತೋರಬರಬೇಕು. ನಮ್ಮನ್ನೇ ಹಾಳುಮಾಡಿಕೊಳ್ಳಲಿಕ್ಕೆ ನಮ್ಮ ಬಲವನ್ನು ಉಪಯೋಗಿಸಿಬಿಡಬಾರದು.

ನಮ್ಮ ಬಂಧುಗಳೊಳಗೆ ಇರುವ ಕೂಡಿಟ್ಟ ದ್ವೇಷಗಳನ್ನು ಬಿಟ್ಟು ಬಿಡಬೇಕು. ಭ್ರಾತೃಭಾವದಿಂದ ನಮ್ಮ ಪ್ರೀತಿಯನ್ನು ತಿರಸ್ಕರಿಸಿದವರನ್ನು ಸಹ ಸೇರಿಕೊಂಡು ಒಗ್ಗಟ್ಟಾಗಬೇಕು. ಇಂಥಾ ಸಂಕಟ ಬಂದೊದಗಿದಾಗಲೇ ನಮ್ಮ ಶಕ್ತಿಯೆಲ್ಲಾ ಶೇಖರಿಸಲ್ಪಟ್ಟು ನಮ್ಮ ಸ್ವಾತಂತ್ರ್ಯವನ್ನು ಸಂಪಾದಿಸಲು ಹೊಸ ದಾರಿ ತೋರುವುದು. ಬೆದರಿಕೆಯಿಂದ ತನ್ನ ಬಲವನ್ನು ಉಪಯೋಗಿಸುವ ಸರ್ಕಾರದ ಮುಂದಾದರೂ ನಮ್ಮ ದೇಶಪ್ರೇಮದಿಂದ ನಮ್ಮ ಧ್ಯೇಯವಾದ ಸ್ವತಂತ್ರ್ಯವೆಂಬ ಮೋಕ್ಷವನ್ನು ಪಡೆಯಲು ನಮ್ಮನ್ನು ಎಚ್ಚರಗೊಳಿಸಿಕೊಳ್ಳಬೇಕು. ಮನುಷ್ಯತ್ವವನ್ನಾದರೂ ಮರೆಸಿಬಿಡುವಷ್ಟು ಪ್ರಪಂಚಿಕ ಬಲವಿರುವವರಿಗಿಂತ ನೈತಿಕ ಗುಣದಲ್ಲಿ ನಾವು ಮೇಲು ಎಂಬದನ್ನು ತೋರಿಸಲು ನಾನು ಎಂದೂ ಮರೆಯಬಾರದ ಸಮಯವಾಗಿದೆ.

ಸರ್ ತೇಜ್ ಬಹದ್ದೂರ್ ಸಪ್ರೂರವರ ಅಭಿಪ್ರಾಯದ ಸಾರಾಂಶ.

ವೈಸರಾಯರು ಗಾಂಧಿಜೀಯವರಿಗೆ ಭೇಟಿಕೊಡಬೇಕಾಗಿತ್ತು. ಗಾಂಧಿಯವರು ವೈಸರಾಯರನ್ನು ನೋಡಲು ಬಹಳ ಕುತೂಹಲದಲ್ಲಿದ್ದರು. ಮುಂದಿನ ಕಮಿಟಿಗಳ ಕೆಲಸದಲ್ಲಿ ಮಿ. ಗಾಂಧಿಯವರ ಸಹಕಾರ ದೊರೆಯುವಂತೆ ನಾವು ಸರ್ವ ಪ್ರಯತ್ನ ಮಾಡುತ್ತೇವೆಂತ ವಾಗ್ದಾನ ಕೊಟ್ಟಿದ್ದೆವು. ಇದು ಈಗ ಅಸಾಧ್ಯವಾಯಿತು ನಮ್ಮ ಕಷ್ಟಗಳು ಹೆಚ್ಚಾಯಿತು.

ಗೇಣಿ ಕೊಡುವುದಿಲ್ಲವೆಂಬ ಚಳವಳದಿಂದ ದೇಶಕ್ಕೆ ತುಂಬಾ ಹಾನಿ ಇದೆ. ಕೂಟಗಳೊಳಗೆ ಜಗಳವಾಗಬಹುದು. ಗೇಣಿದಾರರ ಕಷ್ಟಪರಿಹಾರಕ್ಕೆ ಸಹಾಯ ಮಾಡಬಾರದೆಂತಲ್ಲ. ಆದರೆ ಈ ಚಳವಳವು ಜಮಿನ್‌ದಾರರಿಗೂ, ರೈತರಿಗೂ ಹಾನಿಕರವಾಗಿದೆ. ಗವರ್ನರು ಸಹಾನುಭೂತಿ ತೋರಿಸುತ್ತಿದ್ದಾರೆಂತ ನಂಬುತ್ತೇನೆ. ಅವರ ಸಹಾನುಭೂತಿಯು ಸಾಲದೆಂತಾದರೆ ಪುನಃ ಚರ್ಚೆ ಮಾಡಿಕೊಳ್ಳಬಹುದಿತ್ತು. ಆದ್ದರಿಂದ ಕಾಂಗ್ರೆಸ್ ಕಮಿಟಿಯು ಈ ಚಳವಳ ಹೂಡಿದ್ದು ವ್ಯಸನಕರ. ಅದರಲ್ಲೂ ಮಿ. ಗಾಂಧಿಯವರು ಒಂದು ತಿಂಗಳೊಳಗೆ ಬರುತ್ತಾರೆಂತ ತಿಳಿದಿದ್ದಾಗ ಮಾಡಬಾರದಿತ್ತು.

ವೈಸರಾಯರಿಗೂ, ಗಾಂಧಿಯವರಿಗೂ ಸಂಭಾಷಣೆ ಆಗಬಹುದಾದ ಸಂಭವವಿರುವಾಗ ವರ್ಕಿಂಗ್ ಕಮಿಟಿಯು ಶಾಸನ ಭಂಗ ಚಳವಳವನ್ನೂ ಹೂಡಬಾರದಿತ್ತು. ಸರಹದ್ದಿನ ಪ್ರಾಂತ್ಯದ ಸ್ಥಿತಿ ನನಗೆ ಗೊತ್ತಿಲ್ಲದ್ದರಿಂದ ಅದರ ವಿಷಯ ಏನೂ ಹೇಳುವುದಿಲ್ಲ. ಬಂಗಾಳದ ಆರ್ಡಿನೇನ್ಸ್ ಕುರಿತು ಮಹಾತ್ಮ ಗಾಂಧಿಯವರಲ್ಲಿ ನಾನು ಲಂಡನಿನಲ್ಲಿ ಮಾತಾಡಿದ್ದೆ. ಅವರು ಬಂಗಾಳದಲ್ಲಿ ಸಂಚರಿಸಿ ಶಾಂತಿ ಸ್ಥಾಪನೆಗೆ ಸಹಾಯ ಮಾಡಬೇಕೆಂತ ಕೇಳಿಕೊಂಡಿದ್ದೆ. ಒಪ್ಪಿದ್ದರು—ಆರ್ಡಿನೇನ್ಸನ್ನು ಬದಲಾಯಿಸಲು ನಾನು ಮತ್ತು ಜಯಕರರೂ ಸಲಹೆ ಕೊಟ್ಟಿದ್ದೆವು.

ವರ್ಕಿಂಗ್ ಕಮಿಟಿಯ ಠರಾವಿನಿಂದಾಗಲೀ, ಸರಕಾರದ ಆರ್ಡಿನೇನ್ಸ್‌ಗಳಿಂದಾಗಲೀ, ಗಾಂಧಿ ಮುಂತಾದವರನ್ನು ಜೈಲಿನಲ್ಲಿಡುವುದರಿಂದಾಗಲೀ ಶಾಶ್ವತವಾದ ಶಾಂತಿ ಸ್ಥಿತಿಯೇನೂ ಸ್ಥಾಪನೆಯಾಗುವುದಿಲ್ಲ. ಮಂತ್ರಿಯವರು ನೇಮಿಸಿದ ಕಮಿಟಿಗಳು ಬರುವುದೇನೋ ನಿಜ. ಆದರೆ ಕಾಂಗ್ರೆಸಿಗೂ, ಸರಕಾರಕ್ಕೂ ಹೋರಾಟ ನಡೆಯುತ್ತಿರುವಾಗ ಬರುತ್ತವೆ. ಕಮಿಟಿಗಳ ರಚನಾ ಕಾರ್ಯಕ್ಕೆ ಅಡ್ಡಿಯಾದರೆ ವಿಷಾದ, ಮತ್ತು ಕಮಿಟಿಗಳಿಗೆ ರಚನಾತ್ಮಕ ಸಲಹೆಕೊಡುವ ಮನಸ್ಸಿಲ್ಲವೆಂಬ ಅಭಿಪ್ರಾಯ ಸಮುದಾಯದಲ್ಲಿ ಹುಟ್ಟಿದರೂ ವಿಷಾದ. ಆದರೆ ಸರಕಾರದ ರಚನಾ ಕಾರ್ಯವು ಶಾಂತಿಯುತ ವಾತಾವರಣದಲ್ಲಿ ಆಗುವಂತೆ ಸರಕಾರವು ಮಾಡಿದ್ದರೆ ಅದೂ ವಿಷಾದಕರ. ಅದು ಸುಲಭ ಸಾಧ್ಯವಿಲ್ಲ. ಮಂತ್ರಿಯವರು ಹೇಳಿದ ಕಾರ್ಯಕ್ರಮವನ್ನಲ್ಲಾ ತೀವ್ರದಲ್ಲೇ ಮಾಡದಿದ್ದರೆ ಸ್ಥಿತಿಯು ಇನ್ನೂ ಕಠಿಣವಾದೀತು. ಅಲ್ಪ ಸ್ವಲ್ಪ ಸುಧಾರಣೆ ಕೊಟ್ಟರೆ ಶಾಂತಿ ಸ್ಥಾಪನೆಯಾದೀತೆನ್ನುವವರು ಇಲ್ಲಿಯೂ, ಇಂಗ್ಲೆಂಡಿನಲ್ಲಿಯೂ ಇದ್ದಾರೆ. ಆದರೆ ಈ ತತ್ವವನ್ನವಲಂಬಿಸಿದರೆ ಹಿಂದೂಸ್ಥಾನದ ಸ್ಥಿತಿಯು ಇನ್ನಷ್ಟು ಕೆಟ್ಟು ಹೋಗುತ್ತದೆ.

ಸ್ಥಿತಿಯನ್ನು ಅರಿತುಕೊಂಡು ಅದಕ್ಕೆ ತಕ್ಕಂತೆ ವರ್ತಿಸುವುದು ಸರಕಾರದ ಕರ್ತವ್ಯವಾದರೂ ಜನಸಮುದಾಯದ ಅಭಿಪ್ರಾಯದ ಬೆಂಬಲ ಪಡೆಯಲು ಸರಕಾರವು ಪ್ರಯತ್ನಿಸಲೇಬೇಕು. ಆ ಬಗ್ಗೆ ಸ್ವರಾಜ್ಯ ಸರಕಾರವನ್ನು ಪಡೆಯಲು ಇಚ್ಛೆ ಇರುವವರೆಲ್ಲರನ್ನೂ ಕರೆಸಿಕೊಂಡು ಒಂದು ಕಾನ್ಫರೆನ್ಸನ್ನು ವೈಸರಾಯರು ಮಾಡಬೇಕು.

ಸರಕಾರವು ವಹಿಸಿಕೊಂಡ ಅಸಾಧಾರಣ ಅಧಿಕಾರಗಳನ್ನು ಸರಕಾರವು ಬಹಳ ಜಾಗರೂಕತೆಯಿಂದಲೂ, ಅದನ್ನು ಕಡಿಮೆಯಾಗಿಯೂ ಉಪಯೋಗಿಸಬೇಕು. ಯಾಕೆಂದರೆ ಶಾಸನ ಭಂಗದ ಚಳವಳದಲ್ಲಿ ನಂಬದಿದ್ದರೂ ಸ್ವರಾಜ್ಯ ಸ್ಥಾಪನೆಯಾಗಬೇಕೆಂಬ ಅಭಿಪ್ರಾಯ ಬಲವಾಗಿದೆ. ಈ ಅಭಿಪ್ರಾಯಕ್ಕೆ ವಿರೋಧ ಹೋಗಬಾರದು.

Reg. No. M. 1550.
If not delivered please return to "KODAGU" OFFICE MERCARA.

ಕೊಡಗು.

[illegible]

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಪಂದ್ಯಂಡ. ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೧ | ಮಡಿಕೇರಿ, ಸನ್ ೧೯೩೨ನೇ ಇಸವಿ ಜನವರಿ ತಾರೀಕು ೧೫ ನೇ ಶುಕ್ರವಾರ. | ಸಂಚಿಕೆ ೩

Office of the Asst. Commr. & Dt. Magte., Mercara (Coorg). 6th May 1931.

Dear Sir,

I am QUITE PLEASED with the workmanship of the two Coorg weapons (PICHAKATTI & ODIKKATTI).

Yours faithfully,
(Sd) (Rao Bhadur)
K. CHENGAPPA, B. A.
District Magistrate and Assistant Commissioner of Coorg.

JEWELLER
By Appointment to
H. E. The Governor of Madras.



PEECHAKATTI (WITH SILVER FITTINGS)
Prices–From Rs. 100 & upwards.

"New Bungalow," Ammatti, (Coorg). 14th December 1931.

Dear Sir,

I am IMMENSELY-PLEASED with the workmanship of the PICHAKATTI you made and sent me some time back.

Yours faithfully,
Sd/ K. P. MUDDAYYA,
Ammatti (Coorg.)

Telegrams: 'PRECIOUS.'

Telephone: 3145.

V. Subramaniaiyer Jeweller,

CATALOGUE ON ENQUIRY.

52–8 Post Box 423, Triplicane, P. O., MADRAS.



ಕಾಗದ ಬರೆದರೆ ಈಗಿನ ಕ್ಯಾಟಲಾಗು ಪುಕ್ಕಟೆಯಾಗಿ ಕಳುಹಿಸಲ್ಪಡುವುದು.

ತೋವಿಗಳು, ಕತ್ತಿಗಳು, ಬಚೀಗಳು, ಕೋವಿಗಳು, ಪಿಸ್ತೂಲುಗಳು, ಮದ್ದು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS.
Largest Importers of Firearms and Ammunition
Cheapest priced firm in India,
24–17 210 Abdul Rehman Street, BOMBAY.



ಈ ಗಡಿಯಾರಗಳು ಈ ನಕ್ಷೆಯಲ್ಲಿರುವಂತೆಯೇ ಇರುವವು. ನಮ್ಮ ಸ್ವಂತ ಆರ್ಡರ್ ಮೇಲೆ ಸೀಮೆಯಲ್ಲಿ ತಯಾರಿಸಿ ತರಿಸಿರುತ್ತೇವೆ. ಸರಿಯಾಗಿ ಘಂಟೆಯನ್ನು ತೋರಿಸುತ್ತವೆ. ಇದುವರೆಗೂ ಯಾರೂ ಈಗಿನ ಕಡಿಮೆ ಬೆಲೆಗೆ ತರಿಸಿರುವವರೇ ಇಲ್ಲ. ಆದ್ದರಿಂದ ಬೇಗನೆ ಬರೆದು ತರಿಸಿಕೊಳ್ಳಿರಿ. ನಮ್ಮಲ್ಲಿ ಸ್ವಲ್ಪವೇ ಇರುತ್ತವೆ. ಇವಕ್ಕೆ ಖಾತ್ರಿಯಾದ 3 ವರ್ಷ ಗ್ಯಾರಂಟಿ ಕೊಡುತ್ತೇವೆ. ಕ್ರಯ 1ಕ್ಕೆ 4—4—0.

ಬಿ. ಎಸ್. ಬೆನ್‌ಸನ್ ಅಂಡ್ ಕೊ,
12—4 ಪೋ॥ ನಂ॥ 1246, ಮದರಾಸು.

1932 ನೇ ಇಸವಿಯ ಪಾಕೆಟ್ ಡೈರಿ ಇನಾಂ.

ಈ ಪೇನಾವನ್ನು ಕೊಳ್ಳುವವರಿಗೆ 1932 ನೇ ಇಸವಿಯ ಪಾಕೆಟ್ ಡೈರಿ ಇನಾಮಾಗಿ ಕೊಡುತ್ತೇವೆ. ಈ ಡೈರಿಯಲ್ಲಿ ಎಲ್ಲಾ ರಾಜರುಗಳ ಹೆಸರೂ, ಗವರ್ನರುಗಳ ಹೆಸರೂ, ಯಾರ್ಯಾರಿಗೆ ಎಷ್ಟು ಗುಂಡುಗಳು ಹಾರಿಸಬೇಕೆಂಬುದೂ ಮತ್ತು ರೈಲು, ಟಪಾಲು, ರಿಜಿಸ್ಟ್ರೇಶನ್ ಚಾರ್ಜುಗಳೂ, ಪಂಚಾಂಗ, ಎಲ್ಲಾ ಮತಸ್ಥರ ಹಬ್ಬಗಳೂ, ಸರಕಾರ ರಜಗಳೂ ಕನ್ನಡ, ಇಂಗ್ಲೀಷು ಭಾಷೆಗಳಲ್ಲಿ ಪ್ರಿಂಟಾಗಿವೆ. ಈ ಫೌಂಟನ್ ಪೇನಾವು ವಿಲಾಯತಿಯಲ್ಲಿ ತಯಾರಾದದ್ದು. ಇದಕ್ಕೆ ಭಂಗಾರದ ಹಾಗೆ ಪಟ್ಟು ಹಾಕಿದೆ. ಪಾಕೆಟ್ ಡೈರಿ ಸಹಿತ ಪೇನಾ 1ಕ್ಕೆ 1—12—0.

ಯಂ. ಡಿಯೋ ಅಂಡ್ ಕೋ,
12—4 168 ಬ್ರಾಡ್‌ವೇ ಬಜಾರ್, ಮದರಾಸು.

ಬಾಲಾರ್ಕಮಧು.

ನಿಮ್ಮ ಮಕ್ಕಳ ಸೌಂದರ್ಯವನ್ನು ನೋಡಬೇಕಾದರೆ ಅದ್ಭುತ ಗುಣವುಳ್ಳ ಬಾಲಾರ್ಕಮಧುವನ್ನು ಕೊಡಿರಿ. ಮಕ್ಕಳು ರೋಗ



ಪೀಡಿತರಾಗಿ ಎಷ್ಟೇ ಕ್ಷೀಣವಾಗಿದ್ದರೂ ಇದರಿಂದ ಬಹು ಬೇಗ ಗುಣವೂ, ಬಲವೂ ಬರುವದು. ದಿನ ದಿನಕ್ಕೆ ಆರೋಗ್ಯವೂ, ಕಾಂತಿಯೂ ಹೆಚ್ಚುವದು. ಇದು ಮಧುರವಾಗಿದೆ. ಚಿಕ್ಕ ಮಕ್ಕಳು ಅತಿ ಪ್ರೀತಿಯಿಂದ ಸೇವಿಸುತ್ತಾರೆ. ಶೀಸೆ 1ಕ್ಕೆ 12 ಆಣೆ ವಿ. ಪಿ. 12 ಆಣೆ.

ಆರ್ಡರ್ ಜೊತೆಯಲ್ಲಿ ಹಣವನ್ನು ಕಳುಹಿಸಲು [illegible]. ಅಡ್ವಾನ್ಸ್ ಇಲ್ಲದ ಆರ್ಡರುಗಳನ್ನು ಗಮನಿಸುವುದಿಲ್ಲ.

ಎಂ. ವಿ. ಪ್ರಸಾದಿಕ ಔಷಧಾಲಯ,
52—52 ಶಿವಮೊಗ್ಗ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರ ಬ್ಯಾಂಕ್,
ಲಿಮಿಟೆಡ್ ಕೊ ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.
(ಸ್ಥಾಪಿತವಾದದ್ದು 1922ರಲ್ಲು)

	ರೂ.
ಶೇರ್ ಬಂಡವಾಳ್ —	50,000
ವಸೂಲಾದ ಶೇರ್ ಮೊಬಲಗು —	26,800
ಜಮೊಬಂದ ಠೇವಣಾತಿ —	2,50,301

ಈ ಬ್ಯಾಂಕಿನಂತ ಕೊಡಗು ದೇಶದ ಸಹಕಾರ ಸಂಘಗಳಿಗೋಸ್ಕರ ಹಣಕ್ಕಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ತಕರ್ಗೊಂದಾವರ್ತಿ ಕೊಆಪರೇಟಿವ್ ರಜಿಸ್ಟ್ರಾರವರು ಲೆಕ್ಕ ಆಡಿಟ್ಮಾಡುತ್ತಾರೆ.

ಪ್ರೆಸಿಡೆಂಟರು, ಕೋಳಂಡ ಅಪ್ಪಯ್ಯನವರು ರಾವ್ ಬಹದ್ದೂರ್. — ಟ್ರೆಜರರ್ ಮನೆಯಪ್ಪಂಡ ಬೆಳ್ಯಪ್ಪನವರು.

ಸೆಕ್ರೆಟರಿ

ಸಿ. ಎಸ್. ವೆಂಕಪ್ಪಯ್ಯನವರು, ಬಿ.ಎ, ಬಿ.ಎಲ್;

ತಾರೀಖು 1-7-1931.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲುಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲ್ಪಟ್ಟಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್ರವರ ಜವಾಬ್ದಾರಿಕೆ ಮೇರೆ ರಶೀತಿ ಪುಸ್ತಕಗಳು ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು,

ಉತ್ತರ ಕೊಡಗಿಗೆ-ಮೆ| ಚೌರಿರ ಮಾದಯ್ಯನವರು,
ದಕ್ಷಿಣ ಕೊಡಗಿಗೆ—ಮೆ| ಸೋಮೆಯಂಡ ಅಪ್ಪಯ್ಯನವರು,

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು, (ಖಾದಿಭಂಡಾರ.)
ಸಾಪೋಕ್ಲು—ಎಮ್. ಆರ್. ವೆಂಕಪ್ಪಯ್ಯನವರು.
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.
ಗೋಣಿಕೊಪ್ಪಲು—ಮೆ. ಜಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಬಿಸಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಯ್ಯನವರು,
ಪ.ಕು. ಅರಮಣಮಾಡ ಪಿ ಕಾರ್ಯಪ್ಪನವರು,
ಕುದಿಕೇರಿ & ತಿತಿಮತ್ತಿ—ಮೆ. ಜಿ. ಮಾದಯ್ಯನವರು,
ಸುಂಟಿಕೊಪ್ಪ—ಮೆ| ಅಪ್ಪಚೆಟ್ಟೋಳಂಡ ಮಾದಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನ್ನೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಿಸಲು ಅತ್ಯವಶ್ಯವಾಗಿರುವ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದರಖಾಸ್ತು ಫಾರಮುಗಳೂ, ... ಫಾರಮುಗಳೂ, ಜಮ್ಮ ಮಂಜೂರಾತಿ ಫಾರಮು ... ಫಾರಮುಗಳೂ, ಸ್ಟೋರ್ ... ಸರಕಾರು ಫಾರಮುಗಳೂ, ... ಪುಸ್ತಕಗಳೂ, ... ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ... ನಮ್ಮಲ್ಲಿ ... ದೊರೆಯುತ್ತವೆ. ... ಬೇಕಾದವರು ಆರ್ಡರು ... ಕಳುಹಿಸಲಾಗುವುದು.

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.
ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.

ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,78,322 ಜನರಿಗೆ 38ಕೋಟಿ ರೂ ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ರಕ್ಕಿಂತ ವಿಶೇಷ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದಾಗಿದೆ.

ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಒತ್ತಾಸೆಯನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಭಿವೃದ್ಧಿಯಿಂದಲೂ ವ್ಯಕ್ತವಾಗುತ್ತದೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತ	ಕೌಲಾಲಂಪೂರು	ಬೆಳಗಾವ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್ ಪಿಂಡಿ
ಅಜ್ಮೀರ್	ಡಕ್ಕಾ	ಲಕ್ನೋ	ಪಾಟ್ನಾ	ಸುಕ್ಕೂರು
ಅಲಹಾಬಾದು	ಡೆಲ್ಲಿ	ಮದ್ರಾಸ	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಡಾರ್ಜಿಲಿಂಗ್	ಮಂಡಲೆ	ರಾಯಪುರ	ತಿರುವೆಂದ್ರಮ್
ಭೋಪಾಲ್	ಕರಾಚಿ	ಮಂಗಳೂರು	ರಾಂಚಿ	ವಿಶಾಖಪಟ್ಣ [52—15

ಕಷಾಯವು ಮಲೇರಿಯ ಜ್ವರಕ್ಕೆ:—ಇದು ಕ್ವಿನೈನ್ ಮತ್ತು ಕ್ವಿನೈನ್ ಸೇವಿಸಿದರೂ ಗುಣವಾಗದಿರುವ ಮಲೆ ಜ್ವರ, ದಿನದಿನ ಬರುವ ಜ್ವರ, 3—4 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ ಮತ್ತು ಜ್ವರಗೆಡ್ಡೆ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1—8—0; 3ಕ್ಕೆ ರೂ. 4—0—0, 6ಕ್ಕೆ ರೂ 7—8—0 12ಕ್ಕೆ ರೂ. 14

ಮಲೆ ಜ್ವರಕ್ಕೆ ರತಿ ಕಷಾಯ

ಚಂದನಾಸವ:—ಇದು ಪ್ರಮೇಹ ಮೂತ್ರ ಕೃಚ್ಛ್ರ, ಮೂತ್ರ ಹನಿಹನಿಯಾಗಿ ಬೀಳುವುದು, ಮೂತ್ರಕೋಶದ ಉರಿ, ಮೂತ್ರ ಪಿಂಡಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಹುಣ್ಣುವ ರೋಗ. ಇವುಗಳಿಗೆ ಪರಮ ದಿವ್ಯ. ಬೆಲೆ ಬಾಟ್ಲಿ 1, 3, 6ಕ್ಕೆ ರೂ 1—4—0 3—8—0; 6—12—0

ರೋಮನಾಶಿನಿ:—ಈ ಪುಡಿಯನ್ನು ನೀರಿನಲ್ಲಿ ಕಲಸಿ ಹಚ್ಚಿದಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಹೋಗುವುದು. ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ. 1, 1 ಡಜನಿಗೆ 3—8—0

ಮನೋಲ್ಲಾಸಿನಿ ತೈಲ:—ತಲೆನೋವು, ತಲೆತಿರುಗುವುದು, ತಲೆಭಾರ, ಕಣ್ಣುರಿ, ತಿರಿಯಿಂದ ಕೀವು ಸೋರುವುದು ಕಿವುಡುತನ, ಕಣ್ಣು ನೋವು, ಅಶಕ್ತಿ ತಿದ್ದಿ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು. ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಿಕ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಬೆಲೆ ಸೀಸೆಗೆ ರೂ. 1, 3 ಸೀಸೆಗೆ 2—10—0 ಒಂದು ದೊಡ್ಡ ಸೀಸೆಗೆ ರೂ. 2, 3 ಸೀಸೆಗಳಿಗೆ 5—8—0

ವಿಳಾಸ:—ಮನೋಲ್ಲಾಸಿನಿ ಕಂಪೆನಿ,

52-34 ಚಿಕ್ಕಪೇಟೆ ... 9. ಬೆಂಗಳೂರು.

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,

52-52 ಗಿರಿಗಾಂವ, ಮುಂಬಯಿ.

Printed & published by P. I. Belliappa at "Kodagu" Press, Mercara

೩ ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ ಔಷಧಗಳು.

೧. ಧಾತುಪುಷ್ಟಿ ಲೇಹ.

ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿ ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ದೇಹ ಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತ ಬಾಧೆ, ರಕ್ತ ಪಿತ್ತ, ಒಳ ಜ್ವರ, ಮಲ ಬದ್ಧತೆ, ಕೈಕಾಲು ಉರಿ ಹತ್ತುವುದು ಮೊದಲಾದುವುಗಳು ಪೂರ್ಣ ಗುಣವಾಗಿ ಕಳೆದು ಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು.—ಕ್ರಯ 1ಕ್ಕೆ 2—8—0 ಮೂರು ಡಬ್ಬಿಗಳಿಗೆ ರೂ. 7—0—0

೨. ಅಶೋಕಾರಿಷ್ಟ ಮತ್ತು ಮಾತ್ರೆ.

ಹೆಂಗಸರ ಮುಟ್ಟು ದೋಷಗಳು, ಮುಟ್ಟುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟ ನೋವು, ರಕ್ತ ಹೀನತೆ, ಮೂರ್ಛೆ, ಮಲಬದ್ಧತೆ, ಒಳಜ್ವರ, ರಕ್ತಹೀನ ಕಾಲು ಸೆಳತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಅತಿ ಶೀಘ್ರದಲ್ಲಿಯೇ ಗುಣ ಪಡಿಸುವುದು. ಅಶೋಕಾರಿಷ್ಟ ಮತ್ತು ಮಾತ್ರೆಗಳು ಸಾವಿರಾರು ಹೆಂಗಸರಿಗೆ ಆರೋಗ್ಯವನ್ನು ಒದಗಿಸಿ, ಮನೋಭಿಲಾಷೆಯನ್ನು ಕೊಡುತ್ತಿರುವವು.

ಕ್ರಯ 1 ಬಾಟ್ಲಿ ಔಷಧ, 1 ಡಬ್ಬಿ ಮಾತ್ರೆ, ರೂ. 2 ಆ. 4. 3 ಬಾಟ್ಲಿ ಮತ್ತು ಡಬ್ಬಿಗಳಿಗೆ ರೂ. 6 ಆ. 4.

೩. ಮಲೇರಿಯಾ ನಿವಾರಣೆ.

ದಿನ ಬಿಟ್ಟು ಬರುವ ಜ್ವರ, ಚಳಿ ಜ್ವರ, 2 ಯಾ 3 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರ ಗಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರ ಗಡ್ಡೆಯನ್ನು ಕರಗಿಸಿ ಶಕ್ತಿಯನ್ನು ಉಂಟು ಮಾಡುತ್ತದೆ. ಬಾಟ್ಲಿ 1 ಕ್ಕೆ 1—8—0, 3 ಬಾಟ್ಲಿಗಳಿಗೆ 4—2—0.

೪. ಮೇಹ ಕುಠಾರ.

ಇದು ಮೂತ್ರಸ್ಥಾನದಿಂದ ಕೀವು ಬೀಳದು, ಹಳದಿಯಂತೆ ಹೋಗತಕ್ಕ ಕೀವನ್ನೂ, ಮೂತ್ರದ ಉರಿಯನ್ನೂ ಗುಣಪಡಿಸುತ್ತದೆ. ಡಬ್ಬಿ 1 ಕ್ಕೆ ರೂ. 2—8—0. 3ಕ್ಕೆ ರೂ. 7.

೫. ಇಛ್ಛಾ ಭೇದಿ ಗುಟಿಕೆ.

ಆಯಾಸವನ್ನು ಮಾಡುವ ಸುಖ ವಿರೇಚಕ. ಬಾಟ್ಲಿ 1ಕ್ಕೆ 0—12—0 3 ಬಾಟ್ಲಿಗಳಿಗೆ 2—2—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ರೋಗಲಕ್ಷಣಗಳನ್ನು ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕವಾದ ಔಷಧವನ್ನು ರವಾನಿಸಬಹುದು. ಕೆಟಲಾಗು ತರಿಸಿ ನೋಡಿರಿ.

ಎಸ್. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್ಸ್,
5 ರಥಬೀದಿ, ಮಂಗಳೂರು, ದ. ಕನ್ನಡ.

British Photo Camera Rs. 4—8—0

ಫೋಟೋ ಕ್ಯಾಮರಾ.

ಈ ಫೋಟೋ ಕ್ಯಾಮರಗಳು ವಿಲಾಯತಿಯಲ್ಲಿ ತಯಾರಾದವು. ಈ ಕ್ಯಾಮರಗಳಲ್ಲಿ ಇತರ ಸಹಾಯವಿಲ್ಲದೆ ಎಷ್ಟು ಮಂದಿಗಾದರೂ ಫೋಟೋಗಳನ್ನು ತೆಗೆಯ ಬಹುದು.

ಈ ಕ್ಯಾಮರಾ ಒಂದು ಇದ್ದರೆ ಬೇಕಾದವರಿಗೆ ಫೋಟೋ ತೆಗೆದು ಹಣ ಸಂಪಾದನೆ ಮಾಡಬಹುದು. ಪೋಸ್ಟ್ ಕಾರ್ಡಿನ ಸೈಜಿನಲ್ಲಿ ತೆಗೆಯಬಹುದು. ಫೋಟೋ ತೆಗೆಯುವುದನ್ನು ಕಲಿತುಕೊಳ್ಳಬೇಕಾಗಿಲ್ಲ. ಕ್ಯಾಮರಾ ಜೊತೆಯಲ್ಲಿಯೇ ಫೋಟೋ ತೆಗೆಯುವ ವಿಧಾನವನ್ನು ಕಳುಹಿಸುವೆವು.

ಇದನ್ನು ತರಿಸಿಕೊಳ್ಳುವವರಿಗೆ ಟೇಬಲ್ ಟೈಂಪೀಸ್ ಬಹುಮಾನವಾಗಿ ಕಳುಹಿಸುವೆವು. ಈ ಟೇಬಲ್ ಟೈಂಪೀಸ್‌ಗಳೂ ಈ ಚಿತ್ರದಲ್ಲಿ ಇರುವಂತೆಯೇ ಇರುವವು. ಡಬ್ಬಲ್ ಬಾಲೀಷಿನ ನಿಕ್ಕಲ್ ಕೇಸೂ, ಬಲಿಷ್ಠವಾದ ಲೀವರ್ ಮೂವ್‌ಮೆಂಟ್‌ಗಳಿಂದ ತಯಾರಿಸಲ್ಪಟ್ಟವು, ಸರಿಯಾದ ಕಾಲವನ್ನು ತೋರಿಸುವವು. ಇದಕ್ಕೆ 5 ವರ್ಷಗಳ ಗ್ಯಾರಂಟಿ ಕೊಡುವೆವು. ಕ್ರಯ ಫೋಟೋ ಕ್ಯಾಮರಾ ಬಹುಮಾನ ಟೈಂಪೀಸ್ ಸಹಿತ ರೂ 4—8—0.

The Legal Trading Co.
12—3 P. B. 243. Madras.

ಶಕ್ತಿಯ ಉಂಗುರ (1 ಕ್ಕೆ ರೂ. 1—4—0.)

ಈ ಉಂಗುರಗಳನ್ನು ಹಿಮಾಲಯ ಪರ್ವತದ ಒಬ್ಬ ಋಷಿಯಿಂದ ತಯಾರಿಸಿದ್ದು. ಇದನ್ನು ಬೆರಳಿನಲ್ಲಿ ಹಾಕಿಕೊಳ್ಳುವುದರಿಂದ ವ್ಯಾಪಾರದಲ್ಲಿ ಲಾಭವೂ, ಕೋರ್ಟಿನ ವ್ಯಾಜ್ಯಗಳಲ್ಲಿ ಜಯವೂ, ರೋಗ-ಪೀಡಿತರಿಗೆ ಆರೋಗ್ಯವೂ, ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದೂ, ಸಂತಾನವೇ ಇಲ್ಲದಿದ್ದವರಿಗೆ ಸಂತಾನವೂ, ಬಿಳಿಯ ತೊನ್ನು ಹಿಡಿದವರಿಗೆ ಗುಣವೂ ಮತ್ತು ಇತರ ಅನೇಕ ವಿಧವಾದ ಕಾರ್ಯಗಳಲ್ಲಿ ಜಯ, ಧೈರ್ಯ, ಲಾಭಗಳನ್ನು ಉಂಟು ಮಾಡುವವು. ಮತ್ತು ಈ ಶಕ್ತಿಯ ಉಂಗುರಗಳನ್ನು ಮಕ್ಕಳ ಕೊರಳಿನಲ್ಲಿ ಕಟ್ಟುವುದರಿಂದ ಮಕ್ಕಳಿಗೆ ಬರುವ ಎಲ್ಲಾ ವಿಧವಾದ ವ್ಯಾಧಿಗಳನ್ನು ಗುಣಪಡಿಸುವವು. ಈ ಶಕ್ತಿಯ ಉಂಗುರಗಳು ನಾವು ತಿಳಿಸಿದಂತೆ ಪ್ರತಿ ಫಲ ನೀಡದಲ್ಲಿಯೂ ಲಾಭವನ್ನು ಕೊಡಲಿಲ್ಲವೆಂದು ವ್ಯಕ್ತಪಡಿಸುವವರಿಗೆ 50 ರೂ. ಗಳನ್ನು ಇನಾಮಾಗಿ ಕೊಡುವೆವು. ಶಕ್ತಿಯ ಉಂಗುರ 1ಕ್ಕೆ 1—4—0, 3ಕ್ಕೆ 3—4—0, 6ಕ್ಕೆ 6—0—0.

ವಿಳಾಸ:— ಕೆ. ಎಸ್. ರಾಧಾಕೃಷ್ಣ ಬ್ರದರ್ಸ್
12—2 109 ಥ್ಯನಾ ಬಜಾರ್, ಮದರಾಸು.

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಎಂಬುವ ಸುಪ್ರಸಿದ್ಧ ದೇಶೀಯ ವಿಮೆ ಸಂಘ.

ಅಧ್ಯಕ್ಷರು:—ಮಾನನೀಯ ಸರ್ ಲಲ್ಲೂಭಾಯಿ ಸಾಮಲದಾಸ್, ಕೆಟಿ., ಸಿ. ಐ. ಇ., ಜೆ. ಪಿ., ಯವರು.

ಕೊಟ್ಟಿಕಾರ ಬ್ರದರ್ಸ್, ಮದ್ರಾಸು ಬ್ರಾಂಚು ಸೆಕ್ರಟರಿಗಳು.

1. ಭಾಗ್ಯವಂತರ ಭಂಡಾರ, ವ್ಯಾಪಾರಸ್ಥರ ಕೋಶಾಗಾರ, ಕುಟುಂಬದ ಸಂರಕ್ಷಣಾನಿಲಯ. ಬಡವರ ಜೀವನಾಧಾರ ಇದೇ ಜೀವ ವಿಮೆಯ ತತ್ವವು.

2. ಹಿಂದೂಸ್ಥಾನದ ನಿವಾಸಿಯರಲ್ಲಿ ವಿಮೆ ತೆಗೆಯಬೇಕೆನ್ನುವವರ ಪ್ರಯೋಜನಾರ್ಥವಾಗಿ ಈ ಕಂಪೆನಿಯು ಭಾರತೀಯರ ಉತ್ತಮವಾದ ಆಡಳಿತದಿಂದ ಖರ್ಚು ಕಡಮೆ ಮಾಡಿ ಇಂಡಿಯಾ ಸರ್ಕಾರದ ಇಂಡಿಯನ್ ಟ್ರಸ್ಟ್ ಆಕ್ಟಿಗೆ ಒಳಪಟ್ಟು ಸರ್ಕಾರದ ಭದ್ರತೆಯಿಂದ ದೇಶೀಯರ ಸೇವೆಯಲ್ಲೇ ನಿರತವಾಗಿ ಹಿಂದೂಸ್ಥಾನದ ಎಲ್ಲಾ ಕಡೆಗಳಲ್ಲೂ ಅತಿ ಕೀರ್ತಿಯನ್ನು ಪಡೆದಿರುತ್ತೆ.

3. ಈ ಸ್ವದೇಶೀ ಕಂಪೆನಿಯು ಪೋಲಿಸಿದಾರರಿಗೆ ಪೋಲಿಸಿ ಅವಧಿ ಪೂರೈಸಿದನಂತರವಾಗಲೀ ಅಥವಾ ಮಧ್ಯದಲ್ಲು ಮರಣಾನಂತರ ವಾರೀಸುದಾರರಿಗಾಗಲೀ ಹೆಚ್ಚಿನ ಖರ್ಚಿಗೆ ಆಸ್ಪದ ಕೊಡದೆಯೂ, ದೀರ್ಘ ಸಮಯ ತೆಗೆದುಕೊಳ್ಳದೆಯೂ ಶೀಘ್ರದಲ್ಲಿ ವಿಮೆ ಮೊಬಲಗನ್ನು ಲಾಭ ಸಹಿತ ಪಾವತಿಕೊಡುವುದರಲ್ಲಿ ಹೆಸರುಗೊಂಡಿದೆ.

4. ಭರತಖಂಡದ ಮಹನೀಯರಿಂದ ಸ್ಥಾಪಿಸಲ್ಪಟ್ಟು ದೇಶೀಯರಿಂದಲೇ ಅತಿ ಕಡಿಮೆ ಖರ್ಚಿನಿಂದ ನಡಿಸಲ್ಪಡುವ ಈ ಸ್ವದೇಶೀ ಕಂಪೆನಿಯಲ್ಲಿ ಇಂದು ಭಾಗಿಗಳಾಗಿರಿ; **ಪತಿಪತ್ನಿಯರಿಗೆ ಮತ್ತು ವ್ಯಾಪಾರಸ್ಥರು ವರ್ಗದವರಿಗೆ ಏಕೀಭವಿಸಿ (ಜಾಯಿಂಟ್ ಲೈಫ್)** ಪೋಲಿಸಿ ತೆಗೆದುಕೊಳ್ಳಲು ಈ ಕಂಪೆನಿಯು ತುಂಬಾ ಅನುಕೂಲಗಳನ್ನು ಕಲ್ಪಿಸಿರುತ್ತೆ. ಇಂಥ ಸುಸಮಯವನ್ನು ಎಂದಿಗೂ ಕಳಕೊಳ್ಳಬಾರದು.

ಆಫೀಸು—
ಟೆಂಪಲ್ ಸ್ಟ್ರೀಟ್,
ಮಡಿಕೇರಿ. (26—12)

ಬಿ. ಎಸ್. ಐಯ್ಯಪ್ಪ,
ಕೊಡಗು ಚೀಫ್ ಏಜೆಂಟ್.

ಎಂ.ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಚಿನ್ನದ ಬಂಗಾರದ ನಿಬ್ಬು ಹಾಕಿದ ಖಾತ್ರಿಯಾದ ಮೋಬಸನ್ಸ್ ಅವರ ಫೌಂಟೆನ್‌ಪೆನ್‌ಗಳು.

ಮಂಡರ್ ಫೌಂಟೆನ್‌ಪೆನ್ 1ಕ್ಕೆ	ರೂ. 3 0 0
„ ಬಿಗ್ ಬ್ಯಾರೆಲ್ ಪೆನ್ 1ಕ್ಕೆ	3 3 0
„ ಸ್ಕ್ರೂ ಕ್ಯಾಪ್ ಪೆನ್ 1ಕ್ಕೆ	3 8 0
„ ಬಿಗ್ ಬ್ಯಾರೆಲ್ ಸ್ಕ್ರೂ ಕ್ಯಾಪ್ ಮೊಡಲ್ ಕಲರ್ ಫೌಂಟೆನ್‌ಪೆನ್ 1ಕ್ಕೆ	3 14 0
„ ಮೊಡಲ್ ಕಲರ್ ಸ್ಕ್ರೂ ಕ್ಯಾಪ್ ಫೌಂಟೆನ್‌ಪೆನ್ 1ಕ್ಕೆ	4 2 0
„ ಸೆಲ್ಫ್ ಫಿಲ್ಲಿಂಗ್ ಮೊಡಲ್ ಅಥವ ಬ್ರವುನ್ ಕಲರ್ ಫೌಂಟೆನ್‌ಪೆನ್ 1ಕ್ಕೆ	5 8 0
ಫೌಂಟೆನ್‌ಪೆನ್ 1ಕ್ಕೆ	10 8 0
1ಕ್ಕೆ	14 6 0, & 20 10 0
ಫೌಂಟೆನ್‌ಪೆನ್ 1ಕ್ಕೆ	3 8 0, & 3 12
ಫೌಂಟೆನ್ ಪೆನ್ 1ಕ್ಕೆ	6 4 0, & 6 12 0
ಪೆನ್ 1ಕ್ಕೆ	8 2 0, & 8 10 0

ಟೈಂ ಪೀಸ್‌ಗಳು.

ಸ್ಟ್ಯಾಂಡ್ ಇರುವ ಸಣ್ಣ ಟೈಂಪೀಸ್ 1ಕ್ಕೆ	3 6 0
ಜರ್ಮನ್ ಮೇಡ್ ಸಣ್ಣ ಟೈಂಪೀಸ್ 1ಕ್ಕೆ	2 2 0
ಲಿಗಲಿಯೂ ಅಲಾರಂ ಟೈಂಪೀಸ 1ಕ್ಕೆ	6 9 0, & 6 15 0
ಲಿಗಲಿಯೂ ಸಣ್ಣ ಸೈಜಿನ ಅಲಾರಂ ಟೈಂಪೀಸ್ 1ಕ್ಕೆ	7 2 0
ಲಿಗಲಿಯೂ ಅಲಾರಂ ಸಣ್ಣ ಟೈಂಪೀಸ್ ರೇಡಿಯಂ ಡೈಲಿನದು 1ಕ್ಕೆ	8 10 0
ಬಿಗ್‌ಬೆನ್ ಅಲಾರಂ ಟೈಂಪೀಸ್ 1ಕ್ಕೆ	9 6 0
ಬಿಗ್‌ಬೆನ್ ಅಲಾರಂ ಸ್ಟ್ಯಾಂಡ್ ಇರತಕ್ಕ ಖಾತ್ರಿಯಾದ ಟೈಂಪೀಸ್ 1ಕ್ಕೆ	13 4 0
ಖಾತ್ರಿಯೂ ಬಾಳಿಕೆಯೂ ಇದ್ದ ಪಾಕೆಟ್ ವಾಚ್ 1ಕ್ಕೆ	5 10 0
ವಿಜೀ ನಮೂನೆಯಲ್ಲಿ ಎಬ್ಬ ಹಾಕ್ಟ ಕಂಪೆನಿಯ ಪಾಕೆಟ್ ವಾಚ್ 1ಕ್ಕೆ	12 4 0
ನಿಕ್ಕಲ್ ಕೇಸ್ ಸಿಲೆಂಡರ್ ಮೂವ್‌ಮೆಂಟ್ ಸಾಧಾರಣ ತರಹ ರಿಸ್ಟ್ ವಾಚ್ 1ಕ್ಕೆ	5 4 0, 7 8 0, 10 0 0 & 12 8 0



ಈ ಕ್ಕೆ . . ನಮೂನೆ
ಸಿಟುವ ನಮೂನೆ ಅಲಾ
ವಾದ ಟೇಬಲ್ ಟೈಂಪೀ
ಸ್ 1ಕ್ಕೆ 3—6—0
ಕೆಟಲಾಗ್ ಫ್ರೀ
ಬಾಯಿಸಿ.

ಮಾರಾಟಗಾರ ರವಾನಿಸುವವರು:— ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ಮಹಾತ್ಮ ಗಾಂಧಿಯವರಿಗೂ, ವೈಸರಾಯರಿಗೂ ನಡೆದ

ತಂತಿ ವರ್ತಮಾನಗಳು.

ನಾನು ನಿನ್ನೆ ದಿನ ತಾ. 29—12—31 ರಲ್ಲಿ ಹಡಗದಿಂದ ಇಳಿಯುವಾಗ ಯು. ಪಿ. ಮತ್ತು ಸರಹದ್ದಿನ ಪ್ರಾಂತ್ಯದ ಆರ್ಡಿನೇನ್ಸ್‌ಗಳನ್ನೂ, ಗುಂಡು ಹಾರಿಸುವಿಕೆಯನ್ನೂ, ಅಮೂಲ್ಯ ಸ್ನೇಹಿತರ ದಸ್ತಗಿರಿಯನ್ನೂ ನಿರೀಕ್ಷಿಸಿರಲಿಲ್ಲ. ಬಂಗಾಳದ ಆರ್ಡಿನೇನ್ಸ್ ಮೊದಲೇ ಇತ್ತಷ್ಟೆ. ಇದರಿಂದ ನಮಗೂ, ನಿಮಗೂ ಇದ್ದ ಸ್ನೇಹ ಸಂಬಂಧವು ಆಖೈರಾಯಿತೆಂತ ನಾನು ತಿಳಿಯಬೇಕೋ ಯಾ ನಿಮ್ಮನ್ನು ನಾನು ನೋಡಿ, ಕಾಂಗ್ರೆಸ್ಸಿನ ಮುಂದಿನ ಕಾರ್ಯವನ್ನು ಹೇಗೆ ನಿರ್ಣಯಿಸಿಕೊಳ್ಳಬೇಕೆಂಬದಕ್ಕೆ ನಿಮ್ಮ ಆಲೋಚನೆ ತೆಗೆದುಕೊಳ್ಳಬೇಕೆಂತ ನಿರೀಕ್ಷಿಸುತ್ತೀರೋ, ತಂತಿಯಿಂದ ಜವಾಬು ಕೊಡಬೇಕೆಂತ ಕೋರುತ್ತೇನೆ.

ತಾ. 31—12—31.

ವೈಸರಾಯರ ಪ್ರೈವೇಟ್ ಸೆಕ್ರೆಟರಿಯವರ ಜವಾಬು.

ಯು. ಪಿ. ಮತ್ತು ಸರಹದ್ದಿನ ಪ್ರಾಂತ್ಯದ ಆರ್ಡಿನೇನ್ಸ್‌ಗಳ ನಮೂದಿಸಿ ಕಳುಹಿಸಿದ ತಂತಿ ವರ್ತಮಾನಕ್ಕೆ ವೈಸರಾಯರು ಧನ್ಯವಾದಗಳನ್ನು ಹೇಳುತ್ತಾರೆ. ಬಂಗಾಳದಲ್ಲಿ ಸರ್ಕಾರದ ಆಫೀಸರುಗಳನ್ನೂ, ಇತರರನ್ನೂ ಕ್ರೂರವಾಗಿ ಕೊಲ್ಲುತ್ತಿರುವ ಕೊಲೆಗಳನ್ನು ನಿಲ್ಲಿಸಲಿಕ್ಕಾಗಿ ಸರ್ಕಾರವು ಬಂದೋಬಸ್ತು ಮಾಡಲೇಬೇಕಾಗಿದೆ.

ವೈಸರಾಯರೂ, ಅವರ ಸರ್ಕಾರವೂ ಎಲ್ಲಾ ರಾಜಕೀಯ ಪಂಗಡಗಳ ಸಂಗಡಲೂ ಸ್ನೇಹದಲ್ಲೇ ಇರಲಿಕ್ಕೂ, ಶೀಘ್ರದಲ್ಲೇ ಮಾಡಲಿಕ್ಕಿರುವ ಮುಂದಿನ ರಾಜಕೀಯ ಬದಲಾವಣೆಯಲ್ಲಿ ಎಲ್ಲರ ಸಹಕಾರ ಬೇಕೆಂತಲೂ ಅಪೇಕ್ಷಿಸುತ್ತಾರೆ. ಆದರೆ ಸಹಕಾರವು ಅನ್ಯೋನ್ಯವಾಗಿರಬೇಕು, ಯು. ಪಿ. ಮತ್ತು ಸರಹದ್ದಿನ ಪ್ರಾಂತ್ಯದಲ್ಲಿ ಕಾಂಗ್ರೆಸು ಮಾಡುತ್ತಿರುವ ಕಾರ್ಯಗಳು ಸಹಕಾರಕ್ಕೆ ವಿರೋಧವಾಗಿವೆ. ಯು. ಪಿ. ಯಲ್ಲಿ ರೈತರ ಕಷ್ಟ ನಿವಾರಣೆಗೆ ಸಾಧ್ಯವಿದ್ದಷ್ಟು ಸಹಾಯವನ್ನು ಸರ್ಕಾರವು ತೋರಿಸುತ್ತಿದ್ದಾಗ ಕಾಂಗ್ರೆಸಿನವರು ಗೇಣಿ ಕೊಡಬಾರದೆಂಬ ಚಳವಳ ಪ್ರಾರಂಭಿಸಿದರು. ಈ ಚಳವಳದಿಂದ ಉಂಟಾಗಬಹುದಾದ ಅನ್ಯಾಯತ್ವವನ್ನೂ, ದೇಶದೊಳಗೆ, ಪಂಗಡಗಳೊಳಗೆ ಉಂಟಾಗಬಹುದಾದ ದ್ವೇಷವನ್ನೂ ನಿಲ್ಲಿಸಲಿಕ್ಕಾಗಿ ಸರ್ಕಾರವು ತಕ್ಕ ಬಂದೋಬಸ್ತು ಮಾಡಬೇಕಾಯಿತು.

ವಾಯುವ್ಯ ಸರಹದ್ದಿನ ಪ್ರಾಂತ್ಯದಲ್ಲಿ ಅಬ್ದುಲ್ ಗಫಾರ್ ಖಾನ್ ಮತ್ತು ಅವರ ಹೇಳಿಕೆಯಲ್ಲಿದ್ದ ಸಂಸ್ಥೆಗಳೂ ಸರ್ಕಾರಕ್ಕೆ ವಿರೋಧವಾದ ಮತ್ತು ಜನಾಂಗಗಳೊಳಗೆ ವಿರೋಧ ಹುಟ್ಟುವ ಕಾರ್ಯಗಳಲ್ಲಿ ಎಡೆಬಿಡದೆ ನಿರತರಾಗಿದ್ದರು. ಇವರ ಸಹಕಾರ ಬೇಕೆಂತ ಚೀಫ್ ಕಮಿಶನರು ಕೇಳಿದಾಗ್ಯೂ, ಅದಕ್ಕೆ ಒಪ್ಪದೆ ಮಂತ್ರಿಯವರು ಆ ಪ್ರಾಂತ್ಯಕ್ಕೆ ಸುಧಾರಣೆ ಕೊಡಬಹುದೆಂತ ಹೇಳಿದ್ದನ್ನು ತಿರಸ್ಕರಿಸಿ ಆ ಪ್ರಾಂತ್ಯಕ್ಕೂ, ಹಿಂದೂಸ್ಥಾನಕ್ಕೂ ಪೂರ್ಣ ಸ್ವಾತಂತ್ರ್ಯವೇ ಬೇಕೆಂತ ಹೇಳಿದರು. ಖಾನ್ ಅಬ್ದುಲ್ ಗಫಾರ್ ಖಾನರು ಕ್ರಾಂತಿಯಾಗಬೇಕೆಂಬ ಉದ್ದೇಶದ ಮತ್ತು ಸರಹದ್ದಿನ ಪ್ರಾಂತ್ಯದಲ್ಲಿ ದಂಗೆ ಎಬ್ಬಿಸಲು ಉತ್ತೇಜನ ಕೊಡುವ ಭಾಷಣಗಳನ್ನು ಕೊಡುತ್ತಿದ್ದರು. ಸರ್ಕಾರದವರು ಬಹಳ ತಾಳ್ಮೆಯಿಂದ ಅವರ ಸಹಕಾರ ಪಡೆಯಲು ಪ್ರಯತ್ನಿಸಿದರು. ಆ ಪ್ರಾಂತ್ಯದ ಶಾಂತಿಭಂಗವನ್ನು ತಡೆಯಲು ಸಾಧ್ಯವೇ ಇಲ್ಲವೆಂತ ತೋರಿದಾಗ ಆಖೈರಿನಲ್ಲಿ ಸರ್ಕಾರವು ಮುಂದರಿಸಬೇಕಾಗಿ ಬಂತು.

ಆಗಸ್ಟು ತಿಂಗಳಲ್ಲಿ ಆ ಪ್ರಾಂತ್ಯದ ಕಾಂಗ್ರೆಸ್ ಕೆಲಸವ[illegible] ಖಾನ್ ಅಬ್ದುಲ್ ಗಫಾರ್ ಖಾನರಿಗೆ ಒಪ್ಪಿಸಲಾಯಿತೆಂತ [illegible]ವರ ಸ್ವಯಂ ಸೇವಕರ ದಳವನ್ನು ಕಾಂಗ್ರೆಸ್ಸಿನ ಅಂಗ[illegible] ಅಂಗೀಕರಿಸಲಾಯಿತೆಂತಲೂ ತಿಳಿಯಿತು. ಶಾಂತಿಭಂಗ ನಡೆಸುವ ಇಂಥಾ ಸಂಘಗಳೊಡನೆ ಸಹಕರಿಸುವುದು [illegible]ಸಾಧ್ಯವಾಯಿತು.

ನೀವು ದುಂಡು ಮೇಜು ಪರಿಷತ್ತಿನ ಕಾರ್ಯಕ್ಕಾಗಿ ಲಂ[illegible] ಇದ್ದೀರಿ. ನೀವು ಅಲ್ಲಿ ಮಾಡಿದ ಭಾಷಣಗಳಿಂದ [illegible] ಮತ್ತು ಸರಹದ್ದಿನ ಪ್ರಾಂತ್ಯಗಳಲ್ಲಿ ಆಗುತ್ತಿದ್ದ ಚ[illegible] ನಿಮ್ಮ ಒಪ್ಪಿಗೆಯಿಂದ ಆಯಿತೆಂತ ವೈಸರಾಯರು [illegible] ಇದು ಹೌದಾದರೆ ದುಂಡು ಮೇಜು ಪರಿ[illegible] ಮನೋಭಾವವೇ ಅಂದರೆ ಸ್ನೇಹ ಭಾವವೇ [illegible]ರೆ ನಡೆಯಲು ಯಾವ ರೀತಿಯಲ್ಲಿ ವರ್ತಿಸ[illegible] [illegible]ರಾಯರು ಅಭಿಪ್ರಾಯ ಕೊಡಲು ತಯಾ[illegible] ಬಂಗಾಳ, ಯು. ಪಿ. ಮತ್ತು ಸರಹದ್ದಿನ [illegible] ಬ್ರಿಟಿಷ್ ಸರ್ಕಾರದ ಒಪ್ಪಿಗೆಯಿಂದ ನಡೆಸಲ್[illegible] [illegible]ತು ನಿಮಗೆ ಮಾತಾಡಲು ಬರುವುದಿಲ್ಲ [illegible] ಸ್ಪಷ್ಟವಾಗಿ ತಿಳಿಸುತ್ತಾರೆ. ಒಳ್ಳೇ ಸ[illegible] [illegible]ರುವ ಈ ಪ್ರಾಂತ್ಯಗಳ ಆರ್ಡಿನೇನ್ಸ್‌ಗಳು [illegible]ವೇರುವ ವರೆಗೆ ಜಾರಿಯಲ್ಲಿ ಇರಲೇ[illegible]

[illegible]ಂದ ನಂತರ ಈ ತಂತೀ ವರ್ತಮಾನ [illegible]ಸಿದೆ.

ಮೀವಿಲ್,
ಪ್ರೈವೇಟ್ ಸೆಕ್ರೆಟರಿ.

ಗಾಂಧೀಜೀಯವರ ಉತ್ತರ.

ವೈಸರಾಯರ ಜವಾಬಿಗೆ ಧನ್ಯವಾದ ಕೊಡುತ್ತೇನೆ. ಸ್ನೇಹಭಾವದಿಂದ ನಾನು ಕೇಳಿಕೊಂಡದ್ದನ್ನು ವೈಸರಾಯರು ತಿರಸ್ಕರಿಸಿದ ರೀತಿಯು ಅವರ ಗೌರವ ಸ್ಥಾನಕ್ಕೆ ಯುಕ್ತವಾದದ್ದಾಗಿಲ್ಲವೆಂತ ದುಃಖಿಸುತ್ತೇನೆ. ನಾನು ನಮೂದಿಸಿದ ಆರ್ಡಿನೇನ್ಸ್ ಮತ್ತು ಇತರ ಕಾರ್ಯಗಳಿಗೆ ಸರ್ಕಾರದ ಕಾರಣವೇನೆಂಬದನ್ನು ತಿಳಿಯಲು ನಾನು ಅಪೇಕ್ಷಿಸಿದ್ದೆ. ನನ್ನ ಸ್ನೇಹದ ಕೋರಿಕೆಗೆ ಸಂತೋಷ ಪಡದೆ ನನ್ನ ಅಮೂಲ್ಯ ಜೊತೆ ಕೆಲಸಗಾರರನ್ನು ಮುಂದಾಗಿಯೇ ತಿರಸ್ಕರಿಸಬೇಕೆಂತ ನನಗೆ ಹೇಳಿ, ಇಂಥಾ ಅಗೌರವ ಕಾರ್ಯಕ್ಕೆ ನಾನು ಒಪ್ಪಿ ಭೇಟಿ ಬೇಕೆಂತ ಕೇಳಿದರೂ ಜನಾಂಗಕ್ಕೆ ಅತಿ ಅವಶ್ಯವಾದ ಈ ಸಂಗತಿಗಳ ಕುರಿತು ನಾನು ಮಾತೇ ಆಡಕೂಡದೆನ್ನುತ್ತಾರೆ.

ಈ ಆರ್ಡಿನೇನ್ಸ್ ಮತ್ತು ಇತರ ಕಾರ್ಯಗಳಿಗೆ ಬಲವಾಗಿ ವಿರೋಧಿಸದಿದ್ದರೆ ಜನಾಂಗದ ಗೌರವವೇ ಕೆಟ್ಟು ಹೋಗುತ್ತದೆ. ಹೀಗಿರುವಾಗ ರಾಜಕೀಯ ಸುಧಾರಣೆಯ ಮಾತು ಗಮನಕ್ಕೆ ಬರುವಂಥವಾಗಿಲ್ಲ. ಏನೋ ಒಂದು ರಾಜಕೀಯ ಸುಧಾರಣೆ ಸಿಕ್ಕುತ್ತೆಂಬ ನಿರೀಕ್ಷಣೆಯಿಂದ ಜನಾಂಗದ ರಾಷ್ಟ್ರೀಯ ಭಾವನೆಯನ್ನು ಕೊಲ್ಲಲು ಯಾವ ಗೌರವಯುಕ್ತ ಹಿಂದೀಯನೂ ಒಪ್ಪಲಾರನೆಂತ ನಂಬುತ್ತೇನೆ. ಹಾಗೆ ರಾಷ್ಟ್ರೀಯ ಭಾವನೆಯು ಸತ್ತ ಮೇಲೆ ರಾಜಕೀಯ ಸುಧಾರಣೆಯನ್ನು ಉಪಯೋಗಿಸಲು ಶಕ್ತಿ ಇರುವ ಜನಾಂಗವೇ ಉಳಿದಿರಲಾರದು

ವಾಯುವ್ಯ ಸರಹದ್ದಿನ ಪ್ರಾಂತ್ಯದಲ್ಲಿ ನಡೆದ ಕಾರ್ಯಗಳನ್ನು ವಿವರಿಸಿದ್ದೀರಿ. ಜನ ಪ್ರಿಯ ಮುಂದಾಳುಗಳನ್ನು ಹಿಡಿಯಲೂ, ಖಾನೂನಿಗೆ ವಿರೋಧವಾದ ಆರ್ಡಿನೇನ್ಸುಗಳನ್ನು ಮಾಡಲೂ, ಆಸ್ತಿ, ಜೀವದ ಅಭದ್ರತೆಯನ್ನುಂಟುಮಾಡಲೂ ತನ್ನ ಪ್ರಿಯ ಮುಂದಾಳುಗಳನ್ನು ದಸ್ತಗಿರಿ ಮಾಡಿದ್ದಕ್ಕಾಗಿ ಅತೃಪ್ತಿ ತೋರಿಸಲು ಧೈರ್ಯಪಟ್ಟವರನ್ನು ಗುಂಡು ಹೊಡೆಯಲೂ ನೀವು ವಿವರಿಸಿದ ಸಂಗತಿಗಳೂ ಕಾರಣ ಸಾಲದು. ಖಾನ್ ಅಬ್ದುಲ್ ಗಫರ್ ಖಾನರು ಸಂಪೂರ್ಣ ಸ್ವಾತಂತ್ರ್ಯವೇ ಬೇಕೆಂತ ಹೇಳುತ್ತಿದ್ದರೆ ಅದು ಸ್ವಾಭಾವಿಕವಾದ ಹಕ್ಕನ್ನೇ ಕೇಳಿದ್ದಾಯಿತು. 1929 ರಲ್ಲಿ ಕಾಂಗ್ರೆಸ್ ಅದನ್ನೇ ಕೇಳಿತು. ನಾನು ಬ್ರಿಟಿಷ್ ಸರಕಾರದ ಮುಂದೆ ಅದನ್ನೇ ಹೇಳಿದೆ. ಕಾಂಗ್ರೆಸಿನವರು ನನಗೆ ಕೊಟ್ಟ ಹುಕುಮಿನಲ್ಲಿ ಸಂಪೂರ್ಣ ಸ್ವಾತಂತ್ರ್ಯವನ್ನೇ ಸಾಧಿಸಬೇಕೆಂತ ಇದ್ದದ್ದು ಸರಕಾರಕ್ಕೆ ತಿಳಿದರೂ ನನ್ನನ್ನು ಲಂಡನ್ ಪರಿಷತ್ತಿಗೆ ಸರಕಾರವು ಆಮಂತ್ರಿಸಿತು ಎಂಬದನ್ನು ವೈಸರಾಯರಿಗೆ ನಾನು ಜ್ಞಾಪಿಸಬೇಕಾಗಿದೆ.

ಒಂದು ದರ್ಬಾರಿಗೆ ಹೋಗಲು ನಿರಾಕರಿಸಿದ್ದು ವಿಚಾರವಿಲ್ಲದೇ ಒಬ್ಬನನ್ನ ಬಂದೀಖಾನೆಯಲ್ಲಿ ಇಡುವಷ್ಟು ದೊಡ್ಡ ತಪ್ಪೆಂತ ನನಗೆ ತೋರುವುದಿಲ್ಲ. ಖಾನ್ ಸಾಹೇಬರು ಜನಾಂಗಗಳೊಳಗೆ ಮತ್ಸರ ಹೆಚ್ಚಿಸುವ ಕಾರ್ಯ ಮಾಡಿದ್ದರೆ ಅದು ವ್ಯಸನಕರ. ಆದರೆ ಹಾಗೆ ಮಾಡುತ್ತಿಲ್ಲವೆಂತ ನನಗೆ ಅವರು ಹೇಳಿದ್ದಾರೆ. ಆದರೂ ಹಾಗೆ ಮಾಡಿದ್ದರಾದರೆ ಅವರ ಮೇಲೆ ಬಹಿರಂಗ ವಿಚಾರ ನಡಿಸಬೇಕಿತ್ತು. ಆಗ ಅವರು ತನ್ನ ಪ್ರತಿವಾದ ಮಾಡಿಕೊಳ್ಳುತ್ತಿದ್ದರು.

ಯು. ಪಿ. ಯಲ್ಲಿ ಗೇಣಿ ಕೊಡಬಾರದೆಂಬ ಚಳವಳವನ್ನು ಕಾಂಗ್ರೆಸು ಮಂಜೂರು ಮಾಡಿದೆಯೆಂತ ವೈಸರಾಯರು ತಪ್ಪು ತಿಳಿದುಕೊಂಡಿದ್ದಾರೆ. ಈ ವಿಷಯದಲ್ಲಿ ಸರ್ಕಾರಕ್ಕೂ ಕಾಂಗ್ರೆಸಿಗೂ ಪತ್ರವ್ಯವಹಾರ ನಡಿಯುತ್ತಿರುವಾಗಲೇ ಗೇಣಿ ಕೊಡುವ ಕಾಲ ಬಂತು. ಪತ್ರವ್ಯವಹಾರ ತೀರುವ ವರೆಗೆ ಗೇಣಿ ಕೊಡದೆ ಬಾಕಿ ಮಾಡಿ ಎಂತ ಕಾಂಗ್ರೆಸ್ ಮುಂದಾಳುಗಳು ಹೇಳಬೇಕಾಯಿತು, ಪತ್ರವ್ಯವಹಾರ ಮುಗಿಯುವ ವರೆಗೆ ಸರ್ಕಾರವು ತಾನಾಗಿಯೇ ಗೇಣಿ ವಸೂಲಿಯನ್ನು ಬಾಕಿ ಮಾಡಿದರೆ ಕಾಂಗ್ರೆಸಿನವರು ಗೇಣಿ ಕುಳಗಳಿಗೆ ಕೊಟ್ಟ ಸಲಹೆಯನ್ನು ವಾಪಸು ತೆಗೆದುಕೊಳ್ಳಬಹುದೆಂತ ಶೆರ್ವಾನಿಯವರು ತಿಳಿಸಿದರು. ಈ ವಿಷಯವನ್ನು ನಿಮ್ಮ ತಂತಿಯಲ್ಲಿ ಏಕಾಏಕಿ ತಿರಸ್ಕರಿಸುವಂತೆ ತಿರಸ್ಕರಿಸಬಹುದಾದ ವಿಷಯವಲ್ಲ.

ಯು. ಪಿ. ಯ ಈ ಚರ್ಚೆಯು ಬಹಳ ದೀರ್ಘ ಕಾಲದ್ದು. ಇದು ಬಡತನದಲ್ಲಿ ಮುಳುಗಿರುವ ಲಕ್ಷಾಂತರ ರೈತರಿಗೆ ಸಂಬಂಧಪಡುವಂಥಾದ್ದು. ತನ್ನ ತಾಬೆಯಲ್ಲಿರುವ ಜನ ಸಮುದಾಯದ ಕ್ಷೇಮವನ್ನು ಬಯಸುವ ಯಾವ ಸರ್ಕಾರವೇ ಆಗಲೀ ಕಾಂಗ್ರೆಸ್ಸಿನವರ ಸಹಾಯಕ್ಕೆ ಕೃತಜ್ಞತೆ ತೋರಿಸೀತು. ಕಾಂಗ್ರೆಸ್ಸಿಗೆ ಜನ ಸಮುದಾಯದ ಮೇಲೆ ತುಂಬಾ ಬಲವಿದೆಯೆಂತ ಸರ್ಕಾರವು ಒಪ್ಪುತ್ತದೆ. ಜನ ಸಮುದಾಯವು ಕಾಂಗ್ರೆಸ್ಸಿನಲ್ಲಿ ಇಟ್ಟ ನಂಬಿಕೆಗೆ ಸರಿಯಾಗಿ ವರ್ತಿಸಬೇಕಾದದ್ದು ಕಾಂಗ್ರೆಸ್ಸಿನ ಕರ್ತವ್ಯವಾಗಿದೆ.

ಕಂದಾಯ ಕೊಡದೆ ಇರುವದು ಜನರಿಗೆ ಬಹು ಪುರಾತನ ಕಾಲದಿಂದ ನಡೆದು ಬಂದ ಸ್ವಾಭಾವಿಕ ಹಕ್ಕಾಗಿದೆ. ತಮ್ಮ ಮೇಲೆ ಹೊರಿಸಿದ ತೆರಿಗೆಯ ಭಾರವನ್ನು ತಪ್ಪಿಸಿಕೊಳ್ಳಲು ಬೇರೆ ಯಾವ ಉಪಾಯವಿಲ್ಲದೆ ಇರುವಾಗ ಇದನ್ನು ಉಪಯೋಗಿಸುತ್ತಾರೆ. ಅನ್ಯಾಯತ್ವವನ್ನು ಬೆಳೆಸಲು ಕಾಂಗ್ರೆಸಿಗೆ ಎಂದಿಗೂ ಮನಸ್ಸಿಲ್ಲ.

ಬಂಗಾಳದ ವಿಷಯವೇನೆಂದರೆ—ಕೊಲೆಗಳನ್ನು ಖಂಡಿಸುವುದರಲ್ಲಿ ಸರ್ಕಾರದೊಂದಿಗೆ ಕಾಂಗ್ರೆಸೂ ಇದೆ. ಇಂಥಾ ಕೊಲೆಗಳನ್ನು ನಿರ್ಮೂಲ ಮಾಡಲಿಕ್ಕೆ ಮಾಡಬೇಕಾದ ಕಾರ್ಯಗಳಲ್ಲಿ ಕಾಂಗ್ರೆಸು ಮನಃಪೂರ್ತಿಯಾಗಿ ಸಹಕರಿಸುತ್ತದೆ. ಕೊಲೆಪಾತಕರ ದಾರಿಯನ್ನು ಕಾಂಗ್ರೆಸು ಖಂಡಿಸುತ್ತಾದರೂ ಬಂಗಾಳದ ಆರ್ಡಿನೇನ್ಸ್ ಮುಂತಾದ ಸರ್ಕಾರದ ದಬ್ಬಾಳಿಕೆಯನ್ನೂ ಕಾಂಗ್ರೆಸ್ಸಿನ ಅಹಿಂಸಾ ನೀತಿಗೆ ಒಳಪಟ್ಟು ಖಂಡಿಸಬೇಕಾಗಿದೆ.

ಸಹಕಾರವು ಅನ್ಯೋನ್ಯವಾಗಿರಬೇಕೆಂತ ನಿಮ್ಮ ತಂತಿಯಲ್ಲಿರುವುದಕ್ಕೆ ನನ್ನ ಮನಃಪೂರ್ತಿ ಒಪ್ಪಿಗೆ ಇದೆ. ವೈಸರಾಯರ ಜವಾಬಿನಿಂದ ಸಹಕಾರವನ್ನು ಕಾಂಗ್ರೆಸ್ಸಿನಿಂದ ಮಾತ್ರ ನಿರೀಕ್ಷಿಸುತ್ತಾರೆಂತಲೂ ಸರ್ಕಾರವು ಸಹಕರಿಸಲು ತಯಾರಿಲ್ಲವೆಂತಲೂ ಅರ್ಥವಾಗುತ್ತದೆ. ನಾನು ನಮೂದಿಸಿದ ವಿಷಯಗಳ ಮೇಲೆ ಎರಡು ಅಭಿಪ್ರಾಯಗಳಿರಬಹುದಾದರೂ ಅವುಗಳನ್ನು ಚರ್ಚಿಸಲೇ ಕೂಡದೆಂತ ವೈಸರಾಯರು ಹೇಳಿಬಿಟ್ಟಿದ್ದಾರೆ. ಜನತೆಯ ಅಭಿಪ್ರಾಯವನ್ನು ನಾನು ಕೊಟ್ಟಿದ್ದೇನೆ. ಅದರ ಮೇಲೆ ನಾನು ಆಖೈರ್ ತೀರ್ಮಾನಕ್ಕೆ ಬರುವ ಮುಂಚೆ ಸರ್ಕಾರದ ಮತವನ್ನು ತಿಳಿದುಕೊಂಡು ನಂತರ ಕಾಂಗ್ರೆಸಿಗೆ ಸಲಹೆ ಕೊಡಬೇಕೆಂತ ಇದ್ದೆ.

ನಿಮ್ಮ ತಂತಿಯ ಆಖೈರ್ ಪೇರಾದ ವಿಷಯ-ಯು. ಪಿ. ಮತ್ತು ಸರಹದ್ದಿನ ಪ್ರಾಂತ್ಯದಲ್ಲಿ ನನ್ನ ಜೊತೆಗಾರರು ಮಾಡಿದ ಕಾರ್ಯಗಳಿಗೆ ನನ್ನ ನೈತಿಕ ಜವಾಬ್ದಾರಿ ಇದೆ. ಆದರೆ ನಾನು ಇಂಡಿಯಾದಿಂದ ಗೈರ್ಹಾಜರಾಗಿದ್ದಾಗ ನಡೆದ ತಪಶೀಲ್ ಕಾರ್ಯಗಳು ನನಗೆ ತಿಳಿದಿಲ್ಲ. ಆದರಿಂದಲೇ ವರ್ಕಿಂಗ್ ಕಮಿಟಿಗೆ ಸಲಹೆ ಕೊಡುವ ಮುಂಚೆ ನನ್ನ ತಿಳುವಳಿಕೆಯನ್ನು ಪೂರ್ತಿಗೊಳಿಸಲಿಕ್ಕಾಗಿಯೇ ವೈಸರಾಯರನ್ನು ನೋಡಿ ಸಲಹೆ ತೆಗೆದುಕೊಳ್ಳಬೇಕೆಂತ ಕೇಳಿಕೊಂಡದ್ದಾಗಿದೆ. ನಾನು ಸ್ನೇಹದಿಂದ ಕೇಳಿಕೊಂಡದ್ದಕ್ಕೆ ವೈಸರಾಯರು ಕೊಟ್ಟ ಜವಾಬು ತಕ್ಕದಾಗಿಲ್ಲವೆಂತ ತಿಳಿಸಬೇಕಾಗಿದೆ.

ಈಗಲೂ ತಡವಾಗಲಿಲ್ಲವಾದರೆ ಏನೂ ಕರಾರು ಇಡದೆ ನನ್ನ ಭೇಟಿಗೆ ಅವಕಾಶ ಕೊಡುವಂತೆ ಪುನರಾಲೋಚನೆ ಮಾಡಬೇಕಾಗಿ ಕೇಳಿಕೊಳ್ಳುತ್ತೇನೆ. ಅವರು ನನಗೆ ತಿಳಿಸಿಕೊಡುವ ಎಲ್ಲಾ ವಿದ್ಯಮಾನಗಳನ್ನೂ ಪಕ್ಷಪಾತವಿಲ್ಲದೆ ಅಜಮಾಯಿಸುತ್ತೇನೆಂತ ವಾಗ್ದಾನ ಕೊಟ್ಟೇನು. ಆಯಾ ಪ್ರಾಂತ್ಯಗಳಿಗೆ ಹೋಗಿ ಅಧಿಕಾರಿಗಳ ಸಹಾಯದಿಂದ ವಿದ್ಯಮಾನಗಳನ್ನು ತಿಳಿದುಕೊಂಡೇನು. ಅನಂತರ ವರ್ಕಿಂಗ್ ಕಮಿಟಿಯು ಈ ವರೆಗೆ ತಿಳಿದುಕೊಂಡದ್ದು ತಪ್ಪಾಗಿದೆಯೆಂತ ಕಂಡು ಬಂದರೆ ನಮ್ಮ ತಪ್ಪನ್ನು ಒಪ್ಪಿಕೊಂಡು ಅದಕ್ಕೆ ತಕ್ಕಂಥಾ ಕಾರ್ಯಕ್ರಮವನ್ನು ಕೈಕೊಳ್ಳಲು ವರ್ಕಿಂಗ್ ಕಮಿಟಿಗೆ ಸಲಹೆ ಕೊಟ್ಟೇನು. ಸರ್ಕಾರದೊಂದಿಗೆ ಸಹಕರಿಸಲು ಒಪ್ಪಿದರೂ ಅದಕ್ಕೆ ಇರುವ ಅಡಚಣೆಗಳನ್ನು ತಿಳಿಸಿ ಕೊಡಬೇಕಾಗಿದೆ. ಅಹಿಂಸೆಯೇ ನನ್ನ ನೀತಿಯಾಗಿದೆ. ಖಾನೂನುಭಂಗವು ಜನರ ಸ್ವಾಭಾವಿಕ ಹಕ್ಕಾಗಿದೆ. ಮುಖ್ಯವಾಗಿ ತಮ್ಮ ಸರ್ಕಾರದ ಆಡಳಿತದಲ್ಲಿ ಹಕ್ಕಿಲ್ಲದಿರುವಾಗ ಖಾನೂನು ಭಂಗವೊಂದೇ ದಾರಿಯೆಂತ ನಾನು ನಂಬುತ್ತೇನೆ. ಅಲ್ಲದೆ ಹಿಂಸೆಯ ಅಥವಾ ಹಿಂಸಾಯುಕ್ತವಾದ ದಂಗೆಗಿಂತ ಪ್ರಯೋಜನಕರವಾಗಿ ಉಪಯೋಗಿಸಲಿರುವ ದಾರಿಯಾಗಿದೆ. ನನ್ನ ನೀತಿಯನ್ನು ನಾನು ಎಂದೂ ಬಿಡಲು ಸಾಧ್ಯವಿಲ್ಲ. ಅದಕ್ಕನುಗುಣವಾಗಿ ಮತ್ತು ನಮಗೆ ದೊರೆತ ನಿರಾಕರಿಸಲ್ಪಡದ ವರ್ತಮಾನಗಳಿಂದಲೂ ಇಂಡಿಯಾ ಸರ್ಕಾರದ ಈಚೆಗಿನ ವರ್ತನೆಯಿಂದಲೂ ನಾನು ಜನಸಮುದಾಯಕ್ಕೆ ಸಲಹೆ ಕೊಡಲು ಅವಕಾಶ ದೊರಕದೆ ಹೋದೀತು ಎಂಬದಕ್ಕಾಗಿ ವರ್ಕಿಂಗ್ ಕಮಿಟಿಯು ನನ್ನ ಸಲಹೆಯನ್ನು ಅಂಗೀಕರಿಸಿಕೊಂಡು ಖಾನೂನು ಭಂಗದ ಕ್ರಮವನ್ನು ಸೂಚಿಸುವ ಠರಾವು ಒಂದನ್ನು ನಿಮ್ಮ ಜವಾಬಿನ ನಿರೀಕ್ಷಣೆ ಇಟ್ಟುಕೊಂಡು ಮಂಜೂರು ಮಾಡಿಕೊಂಡಿದೆ. ಅದನ್ನು ಇದರ ಸಂಗಡ ಕಳುಹಿಸುತ್ತೇನೆ.

ನನ್ನನ್ನು ನೋಡುವದರಿಂದ ಪ್ರಯೋಜನವಿದೆಯೆಂತ ವೈಸರಾಯರಿಗೆ ತೋರಿದರೆ ನಮ್ಮೊಳಗೆ ಚರ್ಚೆಯಾಗುವ ವರೆಗೆ ಈ ಠರಾವನ್ನು ಜಾರಿಗೆ ತರುವುದಿಲ್ಲ. ಚರ್ಚೆಯ ಫಲಿತಾಂಶವಾಗಿ ಠರಾವನ್ನು ಬಿಡಬೇಕಾಗಬಹುದೆಂತ ಆಶಿಸುತ್ತೇನೆ.

ನನಗೂ ವೈಸರಾಯರಿಗೂ ನಡೆದ ತಂತೀ ವ್ಯವಹಾರವು ಕೂಡಲೇ ಪ್ರಕಟಿಸಲ್ಪಡಬೇಕಾದದ್ದು ಮುಖ್ಯವಾಗಿದೆ. ಆದ್ದರಿಂದ ಅದನ್ನು ನಾನು ಪ್ರಕಟಿಸಿದ್ದೇನೆ.

ವೈಸರಾಯರ ಪ್ರೈವೇಟ್ ಸೆಕ್ರೆಟರಿಯ ಜವಾಬು.

ನಿಮ್ಮ 1ನೇ ತಾರೀಕಿನ ಟೆಲಿಗ್ರಾಮ್ ವೈಸರಾಯರಿಗೆ ತಲುಪಿದೆಯೆಂದೂ ಅದನ್ನು ಅವರೂ ಅವರ ಸರ್ಕಾರದವರೂ ಗಮನಕ್ಕೆ ತೆಗೆದುಕೊಂಡರೆಂದೂ ನಿಮಗೆ ತಿಳಿಸಲು ಹೇಳಿರುತ್ತಾರೆ. ನಿಮ್ಮ ಟೆಲಿಗ್ರಾಮಿನಲ್ಲಿಯೂ ಠರಾವಿನಲ್ಲಿಯೂ ನಮೂದಿಸಿರುವ ಕರಾರುಗಳಿಗೆ ಒಪ್ಪದಿದ್ದರೆ ಖಾನೂನು ಭಂಗ ನಡೆಸಲು ನಿಮ್ಮ ಸಲಹೆಯೊಡನೆ ವರ್ಕಿಂಗ್ ಕಮಿಟಿಯು ತೀರ್ಮಾನಿಸಿದೆಯೆಂತ ತಿಳಿಯಲು ಅವರು ವ್ಯಸನಪಡುತ್ತಾರೆ. ಮಂತ್ರಿಯವರ ಹೇಳಿಕೆಯಲ್ಲಿ ಸೂಚಿಸಿರುವ ಮೇರೆ ರಾಜಕೀಯ ರಚನೆಯನ್ನು ಶೀಘ್ರದಲ್ಲೇ ಮುಂದರಿಸಬೇಕೆಂತ ಸರ್ಕಾರವು ಯೋಚಿಸಿರುವಾಗ ನೀವು ಹೀಗೆ ಮಾಡಿದ್ದು ಇಷ್ಟು ವ್ಯಸನಕರ. 15.

ಯಾವದಾದರೂ ರಾಜಕೀಯ ಸಂಸ್ಥೆಯು [illegible] ಗೆ ವಿರೋಧ ನಡೆ[illegible] [illegible]ಂತ ಬೆದರಿಸಿ[illegible] [illegible]ಗಳನ್ನು ಕನ[illegible] ಆ[illegible] ಮಾ[illegible]

Press Merc

ಯುಗಳನ್ನು ಉಪಯೋಗಿಸಿ ಅಂತ್ಯದಲ್ಲಿ ಜಾರಿಗೆ ತಂತ ಕಾ ರ್ಯಗಳು ನಿಮ್ಮ ತೀರ್ಮಾನಕ್ಕೆ ಸೇರಿಸಿಟ್ಟಿರಬೇಕೆಂಬದನ್ನು ಒ ಪ್ಪಲಿಕ್ಕಾಗುವುದಿಲ್ಲ. ಕಾನೂನು ಭಂಗದ ಚಳವಳವನ್ನು ಪ್ರಾರಂಭಿಸುತ್ತೇನೆಂಬ ಭಯವನ್ನು ತೋರಿಸಿರುವಾಗ ನಿಮ್ಮನ್ನು ವೈಸರಾಯರು ಕರೆಸಿಕೊಂಡು ಚರ್ಚಿಸಿದ್ದರಿಂದ ಏನಾದ ರೂ ಪ್ರಯೋಜನವಾದೀತೆಂತ ನೀವಾಗಲೀ ವರ್ಕಿಂಗ್ ಕಮಿಟಿಯವರಾಗಲೀ ನಂಬೀರೆಂತ ವೈಸರಾಯರೂ ಅವರ ಸರ್ಕಾರವೂ ನಂಬುವುದಿಲ್ಲ. ಕಾಂಗ್ರೆಸಿನವರು ನಡಿಸುವುದಾಗಿ ನಿಶ್ಚೈಸಿರುವ ಕಾರ್ಯದಿಂದ ಆಗುವ ಎಲ್ಲಾ ಪರಿಣಾಮಗಳಿಗೂ ನೀವೂ ಕಾಂಗ್ರೆಸಿನವರೂ ಜವಾಬ್ದಾರರಾಗುತ್ತೀರಿ. ನೀವು ನಿಶ್ಚೈಸಿರುವ ಚಳವಳಕ್ಕೆ ಎದುರಾಗಲು ಸರ್ಕಾರವು ಅವಶ್ಯವಿರುವ ಕೆಲಸಗಳನ್ನು ಮಾಡಲು ತಯಾರಿದೆ.

ವರ್ತಮಾನ ಸಂಗ್ರಹ.

ಒಳದೇಶ.

ಮಹಾತ್ಮರ ದಸ್ತಗಿರಿಗಾಗಿ ತಾ. ೫ರಲ್ಲಿ ವೀರಾಜಪೇಟೆಯಲ್ಲಿ ಪೂರ್ತಿ ಹರತಾಳ ಆಚರಿಸಲ್ಪಟ್ಟಿತು.

ಮೆ. ನಿಡ್ಯಮಲೆ ಸೋಮಣ್ಣ ಬಿ. ಎ. ಬಿ. ಎಲ್. ರವರು ಈ ವಾರದಿಂದ ಮಡಿಕೇರಿಯಲ್ಲಿ ಲಾಯರು ಕೆಲಸವನ್ನು ಪ್ರಾರಂಭಿಸಿರುವರು.

ಈ ತಾ. 10 ನೇ ಆದಿತ್ಯವಾರ ದಿವಸ ಅಪರಾಹ್ನ 3 ಘಂಟೆಯಿಂದ ವೇದಾಂತ ಸಂಘದ ಮುಂಭಾಗದಲ್ಲು ಶ್ರೀ ರಾಮ ಮಹಿಮೆಯ ವಿಷಯವಾಗಿ ಶ್ರೀವರ್ತನ್ ಓಡ್ಲುಮನೆ ಆತ್ಮಾರಾಮ ಶಾಸ್ತ್ರಿಗಳು ಉಪನ್ಯಾಸ ಮಾಡುತ್ತಾರೆಂದು ತಿಳಿಯಬರುತ್ತದೆ.

ಕಾಂಗ್ರೆಸ್ಸಿನ ವರ್ಕಿಂಗ್ ಕಮಿಟಿಯ ತೀರ್ಮಾನದಂತೆ ಸವಿನಯ ಕಾನೂನು ಭಂಗ ಚಳವಳವನ್ನು ಪ್ರಾರಂಭಿಸುವ ಉದ್ದೇಶ್ಯ ಕೊಡಗಿನ ಜಿಲ್ಲಾ ಕಾಂಗ್ರೆಸ್ ಕಮಿಟಿಯು ಒಡೆಯಲ್ಪಟ್ಟು ಮೆ. ಪಿ. ಐ. ಬೆಳ್ಯಪ್ಪನವರು 'ಡಿಕ್ಟೇಟರ' (ಸರ್ವಾಧಿಕಾರಿ) ಆಗಿ ನೇಮಿಸಲ್ಪಟ್ಟಿರುವರೆಂದು ತಿಳಿಯಬರುತ್ತದೆ.

ಈ ತಾ. 1 ರಲ್ಲಿ ಕೆದಮುಳ್ಳೂರು ಗ್ರಾಮದ ಕುಂಜಿರ ಚಂಗಪ್ಪನೆಂಬ ವಿದ್ಯಾರ್ಥಿಗೆ ರಾತ್ರಿ ಕಾಡು ಬೆಕ್ಕು ಬೇಟೆಗೆ ಹೋಗಿದ್ದಲ್ಲು ಅವನ ಜೊತೆಯಲ್ಲಿದ್ದ ನಾಯರ್ ತಿಮ್ಮಯ್ಯನೆಂಬವನ ಕೋವಿಯಿಂದ ಆಕಸ್ಮಾತು ಹಾರಿದ ಗುಂಡು ತಗಲಿ ಚಂಗಪ್ಪನು ಕೂಡಲೆ ಮೃತನಾದನೆಂದು ತಿಳಿಯಬರುತ್ತದೆ.

ತಾ. 10—12—'31 ರಲ್ಲು ಕುಟ್ಟದ ಹೂಪಿನ ಕಾಡು ತೋಟದ ಮೇಸ್ತ್ರಿ ಅಬ್ದುಲ್ ಎಂಬವನು ಚಂದು ಮತ್ತು ಕುಂಞಾಟ್ಟಿ ಎಂಬಿಬ್ಬರನ್ನು ಕೆಲಸಕ್ಕೆ ಬಾರದ್ದರಿಂದ ಹೊಡೆದು ಕೊಂದು, ಗುಟ್ಟಾಗಿ ಹೂಣಿಬಿಟ್ಟಿದ್ದನೆಂದು ಅವನ ಮೇಲೆ ಕೇಸು ನಡೆಯುತ್ತಿದೆಯೂಗಿ ಇತ್ತೀಚೆಗೆ ತಿಳಿಯಬರುತ್ತದೆ.

ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರ ಪತ್ರದ ಮೇರೆ ಕೊಡಗಿನ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರು ಮತ್ತು ಸೆಕ್ರೆಟರಿಯವರು ಕಮಿಶನರವರೊಂದಿಗೆ ನಿನ್ನೆ ದಿನ ಅವರ ಆಫೀಸಿನಲ್ಲಿ ದೇಶದ ರಾಜಕೀಯ ಪರಿಸ್ಥಿತಿಯನ್ನು ಕುರಿತು ಸಂಭಾಷಣೆ ನಡಿಸಿದರು. ಇದರ ವಿವರವು ಇನ್ನೊಂದು ಕಡೆ ಪ್ರಕಟಿಸಲಾಗಿದೆ.

ಕೋರವಂಡ ಕಾರ್ಯಪ್ಪ ಮೆಮೋರಿಯಲ್ ಕಪ್ಪಿನ ಹಾಕಿ ಟೂರ್ನಮೆಂಟು ಮಡಿಕೇರಿ ಕ್ರಿಕೆಟ್ ಮೈದಾನದಲ್ಲಿ ಈ ತಾ. 6 ರಲ್ಲಿ ಪ್ರಾರಂಭವಾಗಿದೆ. ತಾ. 6 ರಲ್ಲಿ ಟೆಂಪ್ರೋರಿಯಲ್ ಪಟಾಲಾಮಿನ ಟೀಮಿನವರು ಪೋಲೀಸು ಟೀಮಿನವರನ್ನೂ, ತಾ. 7 ರಲ್ಲಿ ಸೆಂಟ್ರಲ್ ಹೈಸ್ಕೂಲಿನ ಎ. ಟೀಮಿನವರು ಬಿ. ಟೀಮಿನವರನ್ನೂ ಸೋಲಿಸಿದರು. ಈ ದಿನವೂ, ನಾಳೆಯೂ ಪಂಥದ ಆಟಗಳು ನಡೆದು ಆಖೈರು ಆಟವು ಈ ತಾ. ... ರಲ್ಲಿ ನಡೆಯುವುದೆಂದು ತಿಳಿಯುತ್ತೇವೆ.

ಕಾಂಗ್ರೆಸ್ ಮುಂದಾಳುಗಳ ಮೇಲೆ ಸರ್ಕಾರವು ಮಾಡುವ ಕಾರ್ಯಗಳನ್ನು ಖಂಡಿಸಲಿಕ್ಕಾಗಲೀ, ಅಂಥಾ ಮುಂದಾಳುಗಳಿಗೆ ಸಹಾನುಭೂತಿ ತೋರಿಸಲಿಕ್ಕಾಗಲೀ ಒಂದು ತಿಂಗಳ ವರೆಗೆ ಕೊಡಗಿನಲ್ಲಿ ಪಬ್ಲಿಕ್ ಮೀಟಿಂಗು, ಮೆರವಣಿಗೆ ಇಂತಾದ್ದನ್ನು ಮಾಡಕೂಡದೆಂದು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಹುಕುಂ ಮಾಡಿದ್ದಾರೆ. ಇನ್ನೊಂದು ಕಡೆ ಪ್ರಕಟವಾದ ಈ ನೋಟೀಸನ್ನು ಕೊಡಗಿನ ಜಿಲ್ಲಾ ಕಾಂಗ್ರೆಸ್ ಕಮಿಟಿಯ 15 ಮೆಂಬರುಗಳ ಮೇಲೆ ಜಾರಿ ಮಾಡಿರುವರೆಂದು ತಿಳಿಯಬರುತ್ತದೆ.

ವೀರಾಜಪೇಟೆಯಲ್ಲಿ ಒಬ್ಬ ವ್ಯಾಪಾರಿಯಾಗಿದ್ದ ಮೆ. ... ಕ್ಷೆಟ್ಟಿರ ಬೆಳ್ಯಪ್ಪನವರು ಈ ತಾ. 3 ರಲ್ಲಿ ಬೆಳಿಗ್ಗೆ ಸುಮಾರು 11 ಗಂಟೆ ಸಮಯದಲ್ಲಿ ಬಿಟ್ಟಂಗಾಲದಲ್ಲಿಯ ತಮ್ಮ ಮನೆ ಸಮೀಪವಿರುವ ಕೆರೆಯಲ್ಲಿ ಮೀನಿಗೆ ಗುಂಡು ಹೊಡೆದು ... ತೆಗೆಯಲು ಕೆರೆಗೆ ಇಳಿಯುವಾಗ್ಗೆ ಹುಲ್ಲಿನೊಳಗಿನಿಂದ ... ಕಾಲಿಗೆ ಏನೋ ಕಚ್ಚಿತೆಂದೂ, ಅದು ಉರಿಯುತ್ತಿದ್ದು ಬಂತೆಂದೂ, ಆದ ಕಾರಣ ಅದು ವಿಷದ ಹಾವಿನ ... ತವಾಗಿರಬಹುದೆಂದು ಹಲವು ತರಹದ ಔಷಧಿಗಳು ... ರೂ ಅದೇ ದಿನ ರಾತ್ರಿ ಸುಮಾರು 11 ಗಂಟೆಗೆ ಮೃತರಾದರೆಂದೂ, ನಂತರವೂ ವಿಷವನ್ನು ತೆಗೆಯಲು ಚಿಕಿತ್ಸೆ ಮಾಡಿ ... ನಿಷ್ಫಲವಾಯಿತೆಂದೂ ತಿಳಿದು ವಿಷಾದಿಸುತ್ತೇವೆ.

ಹೊರದೇಶ.

...ಂಟನ್ ಪೆನ್ ... ನ್ ಪೆನ್ ... ಂಟನ್ ಪೆನ್ 1... ಲ್ಲಿ ಕೈದು ಮಾಡಲ್ಪಟ್ಟ 41 ಮಂ... ಗಿ ಸಾವಿರ ರೂಪಾಯಿಗಳ ...

ಕಾನೂನು ಭಂಗ ಚಳವಳ ಪ್ರಾರಂಭ.

ದಸ್ತಗಿರಿಗಳ ಸುಗ್ಗಿ.

ಮಹಾತ್ಮ ಗಾಂಧಿ, ಪಟೇಲ ಸಹೋದರರು, ರಾಜೇಂದ್ರ ಪ್ರಸಾದ್, ನಾರಿಮನ್, ಕಮಲದೇವಿ, ಬ್ರೆಲ್ವಿ ಮುಂತಾದ ಪ್ರಸಿದ್ಧ ಮುಖಂಡರ ದಸ್ತಗಿರಿ.

ಬಾಬು ಸುಭಾಸ್ ಚಂದ್ರ ಭೋಸರವರ ಗಡೀಪಾರು.

ಜವಾಹಿರ್‌ಲಾಲರಿಗೆ ೨ ವರ್ಷ ಕಠಿಣ ಸಜೆ.

ಸರ್ ಮಹ್ಮದ್ ಶಾಫಿಯವರ ಮರಣ.

ಬನಾರಸಿನಲ್ಲಿ ಗುಂಡಿನ ಸುರಿಮಳೆ.

ಲಾಠಿ ಪ್ರಯೋಗದ ಬಹಾರಿ.

ಕೊಡಗಿನ ಕಾಂಗ್ರೆಸ್ ಮುಖಂಡರ ವಾಗ್ಬಂಧನ—ಮೀಟಿಂಗುಗಳಿಗೆ ನಿರ್ಬಂಧ—ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರ ಕಟ್ಟಾಜ್ಞೆ.

ನಾಗಪುರದ ಶೇಟ ಬಾಬುಲಿಯೆಂದೋರ್ವ ಜೈನ ವೃದ್ಧೆಯು ಆತ್ಮ ಶುದ್ಧಿಗಾಗಿ ಉಪವಾಸ ವ್ರತವನ್ನು ಕೈಕೊಂಡು 47 ದಿನಗಳ ಉಪವಾಸವಾದ ಮೇಲೆ ಪ್ರಾಣತ್ಯಾಗ ಮಾಡಿದಳು.

ಮೈಸೂರಾಯರ ಎಗ್ಸಿಕ್ಯುಟಿವ್ ಕೌನ್ಸಿಲಿನ ಹಂಗಾಮಿ ಮೆಂಬರಾಗಿದ್ದ ಸರ್ ಮಹ್ಮದ್ ಶಾಫಿಯವರು ನಿಮೋನಿಯ ಕಾಯಿಲದಿಂದ ತಾ. 6ರಲ್ಲಿ ಶಿವಾಧೀನರಾದರೆಂದು ತಿಳಿಯುತ್ತೇವೆ.

ಮಧುರೆಯ ಸಮೀಪ ಸೆರಿಯಕ್ಕುಲಂ ಎಂಬಲ್ಲಿ 144ನೆಯ ಸೆಕ್ಷನು ಜಾರಿಯಾಗಿತ್ತು. ಜನರು ಇದನ್ನು ಮುರಿಯುವಾಗ ಪೋಲೀಸರು ಲಾಠಿ ಪ್ರಯೋಗವನ್ನು ಮಾಡಿದರು. ಅನೇಕ ಮಂದಿ ಕಾಂಗ್ರೆಸು ಧುರೀಣರಿಗೆ ತುಂಬಾ ಗಾಯವಾಗಿದೆ.

ವಲ್ಲಭ ಭಾಯಿಯವರ ನಂತರ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ನೇಮಿಸಲ್ಪಟ್ಟಿದ್ದ ಬಾಬು ರಾಜೇಂದ್ರ ಪ್ರಸಾದ್‌ರವರು ತಾ. 5 ರಲ್ಲಿ ಸೆರೆಹಿಡಿಯಲ್ಪಟ್ಟಿರುವರು. ಅವರು ಡಾಕ್ಟರ್ ಅನ್ಸಾರಿಯವರನ್ನು ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ನೇಮಿಸಿರುವರು.

ತಾ. 5 ರಲ್ಲಿ ಬನಾರಸಿನಲ್ಲಿ 144 ನೇ ಸೆಕ್ಷನಿನ ಹುಕುಮಿಗೆ ವಿರೋಧವಾಗಿ ಮೀಟಿಂಗು ಸೇರಿದನ್ನು ಚದರಿಸಲು ಯತ್ನಿಸಿದಾಗ್ಯೆ, ಯಾರೋ ಪೋಲೀಸಿನವರಿಗೆ ಕಲ್ಲು ಹೊಡೆದರೆಂದು ಪೋಲೀಸಿನವರು 14 ಸಾರಿ ಗುಂಡು ಹಾರಿಸಿದರೆಂದೂ, ಒಬ್ಬನು ಮೃತನಾದನೆಂದೂ ವರ್ತಮಾನ.

ಕಾಂಗ್ರೆಸ್ಸಿನವರು ಪ್ರಾರಂಭಿಸಿರುವ ಕಾನೂನುಭಂಗ ಚಳವಳವನ್ನು ಮುರಿಯಲು ವೈಸರಾಯರು ನಾಲ್ಕು ಆರ್ಡಿನೇನ್ಸುಗಳನ್ನು ಜಾರಿಗೆ ತಂದಿರುವರು. ಕಾಂಗ್ರೆಸ್ಸಿನ ವರ್ಕಿಂಗ್ ಕಮಿಟಿಯು ಕಾನೂನಿಗೆ ವಿರೋಧವಾದ ಸಂಸ್ಥೆಯೆಂದು ಇಂಡಿಯಾ ಸರಕಾರದವರು ಪ್ರಕಟಿಸಿರುವರು.

ಈ ತಾ. 6 ರಲ್ಲಿ ಬೊಂಬಾಯಿಯಲ್ಲಿ ಎಸ್ಸೆಂಬ್ಲಿಯ ಮಾಜಿ ಅಧ್ಯಕ್ಷರಾದ ವಿ. ಜೆ. ಪಟೇಲರವರು, ಬೊಂಬಾಯಿಯ ಪ್ರಸಿದ್ಧ ಮುಖಂಡರಾದ ಕೆ. ಯಫ್. ನಾರಿಮನ್‌ರವರು, ಮೆ. ಮುನ್ಶಿಯವರು, ಅವರ ಪತ್ನಿಯವರು, ಜಮ್ನದಾಸ್ ದ್ವಾರಕದಾಸ್, ಮೆ. ಸಯ್ಯದಾ ಮಹ್ಮದ್ ಬ್ರೆಲ್ವಿ, ಕಮಲದೇವಿ ಚಟ್ಟೋಪಧ್ಯಾಯ ಮೊದಲಾದ 45 ಮುಖ್ಯಸ್ಥರು ದಸ್ತಗಿರಿ ಮಾಡಲ್ಪಟ್ಟರು. ಹಿಂದೂಸ್ಥಾನದ ಹಲವು ಕಡೆಗಳಲ್ಲಿ ದಸ್ತಗಿರಿಯು ನಡೆಯುತ್ತಲೇ ಇದೆ.

'ಗಡಿನಾಡಿನ ಸುಧಾರಣೆ' ಗಳಿಗೆ ಈಗಾಗಲೇ ಆರಂಭವಾಗಿದೆ. 40 ಸದಸ್ಯರಿರುವ ಒಂದು ಲೆಜಿಸ್ಲೆಟಿವ್ ಕೌನ್ಸಿಲನ್ನು ರಚಿಸುವರಂತೆ; ಇದರಲ್ಲಿ ಚುನಾಯಿತ ಸದಸ್ಯರು 26, ನೇಮಕವಾಗುವವರು 14; ಪಂಗಡಗಳ ಪ್ರಮಾಣದಲ್ಲಿ ಪ್ರಾತಿನಿಧ್ಯ; ಆದರೂ, ಅಲ್ಲಿ ಅಲ್ಪ ಸಂಖ್ಯಾಕರಾಗಿರುವ ಹಿಂದೂಗಳಿಗೂ, ಸಿಖ್ಖರಿಗೂ ತಂತಮ್ಮ ಜಾತಿಗಳ ಸಂಖ್ಯೆಯ ಪ್ರಮಾಣವನ್ನು ಮೀರಿ ಮೂರು ಪಾಲಷ್ಟು ಹೆಚ್ಚಾಗಿ ಪ್ರಾತಿನಿಧ್ಯ ದೊರೆಯುವದಂತೆ ಗವರ್ನರರ ನೇತೃತ್ವದಲ್ಲಿ ಒಬ್ಬರು ಎಗ್ಸಿಕ್ಯುಟಿವ್ ಕೌನ್ಸಿಲರರು ಮತ್ತು ಒಬ್ಬರು ಮಂತ್ರಿಗಳಿರುವ ಮಂತ್ರಿ ಮಂಡಲ; ಆರ್ಥಿಕ ವಿಚಾರದ ಕುರಿತು ಇನ್ನೂ ಡಿಲ್ಲಿಯ ಪ್ರಭುಗಳಿಂದ ತೀರ್ಮಾನ ಬಂದಿಲ್ಲ. ಇಷ್ಟೆಲ್ಲ ನಡಯಲಿದೆ. 'ಕೆಂಪಂಗಿ' ಯವರ ಚಳವಳವೇನೂ ಕಡಿಮೆಯಾದುದಿಲ್ಲ.

ಪೂನಾ ಯುವಕ ಪರಿಷತ್ತಿನಲ್ಲಿ ಭಾಷಣ ಮಾಡಿ ಅಲ್ಲಿಂದ ಬೊಂಬಾಯಿಗೆ ಬಂದು ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯ ಸಭೆಯ ಕಾರ್ಯ ಮುಗಿದು ಕಲ್ಕತ್ತೆಗೆ ಹೊರಟ ಶ್ರೀ ಸುಭಾಸ್ ಚಂದ್ರಬೋಸರನ್ನು '1818ರ III ನೇ ರೆಗ್ಯುಲೇಷನ್', ಎಂಬ 114 ವರ್ಷಗಳ ಹಿಂದಿನ ಕಾನೂನಿನನ್ವಯ ಕಲ್ಯಾಣ ರೈಲ್ವೇ ಸ್ಟೇಷನಿನ ಸಮೀಪ ರೈಲ್ವೇ ಬಂಡಿಯಲ್ಲೇ ದಸ್ತಗಿರಿ ಮಾಡಿ ಕೊಂಡೊಯ್ದರು; ಎಲ್ಲಿಗೆಂದು ತಿಳಿದಿಲ್ಲ. ಬೋಸರು ಹೊರಡುವ ಮುಂಚಿತವಾಗಿಯೇ ಇಬ್ಬರು ಪೋಲೀಸು ಆಫೀಸರರು ಬೊಂಬಾಯಿಯಿಂದ ಕಲ್ಯಾಣಕ್ಕೆ ಬಂದು ಕಾದು ನಿಂತು, ಬೋಸರು ಬಂದೊಡನೆ ರೈಲ್ವೇ ಬಂಡಿಯನ್ನು ಪ್ರವೇಶಿಸಿ, ಕಲ್ಯಾಣದಿಂದ ರೈಲು ಹೊರಟ ಕೂಡಲೇ ವಾರಂಟು ... ಕೈದು ಮಾಡಿದರು. ಗಡೀಪಾರಿನ ತಕ್ಕ ... ವರೆಂಬ ವಾರ್ತೆ ಇಲ್ಲ.

ಮಹಾತ್ಮ ಗಾಂಧಿಯವರು ಬೊಂಬಾಯಿಯ 1827ನೇ ವರ್ಷದ 25ನೇ ರೆಗ್ಯುಲೇಷನ್ ಮೇರೆ ಈ ತಾ. 4ನೇ ಸೋಮವಾರ ಪ್ರಾತಃಕಾಲ 3. 10 ಗಂಟೆಗೆ 'ಮಣಿ' ಭವನ'ದಲ್ಲಿ ಪೋಲೀಸು ಕಮಿಷನರ್ ವಿಲ್ಸನ್‌ರವರಿಂದ ದಸ್ತಗಿರಿ ಮಾಡಲ್ಪಟ್ಟರು. ಮಹಾತ್ಮರು ಜೈಲಿಗೆ ಹೊರಟಾಗ್ಯೆ 'ದೇವರ ಕರುಣೆಯು ಅಪಾರವಾದದ್ದಾಗಿದೆ. ಸತ್ಯವನ್ನೂ, ಅಹಿಂಸಾ ತತ್ವವನ್ನೂ ಎಂದೂ ಬಿಡಬಾರದೆಂತಲೂ, ಸ್ವರಾಜ್ಯ ಪಡೆಯಲು ಜೀವವನ್ನೂ, ಸರ್ವಸ್ವವನ್ನೂ ಕೊಡಲು ಹಿಂಜರಿಯಬಾರದೆಂದೂ ಜನರಿಗೆ ತಿಳಿಸಿ' ಎಂದು ವಲ್ಲಭಭಾಯಿ ಪಟೇಲರವರಿಗೆ ಬರೆದು ಕಳುಹಿಸಿದರು. ಅದೇ ಸಮಯದಲ್ಲಿ ಕಾಂಗ್ರೆಸ್ಸಿನ ಅಧ್ಯಕ್ಷರಾದ ವಲ್ಲಭಭಾಯಿ ಪಟೇಲರವರು ಇದೇ ರೆಗ್ಯುಲೇಶನ್ ಮೇರೆ ಬೇರೊಂದು ಕಡೆ ಅವರ ಮನೆಯಲ್ಲಿ ದಸ್ತಗಿರಿ ಮಾಡಲ್ಪಟ್ಟರು. ಇವರಿಬ್ಬರೂ ಒಂದೇ ಕಾರಿನಲ್ಲಿ ಯೆರವಾಡ ಜೈಲಿಗೆ ಸಾಗಿಸಲ್ಪಟ್ಟರು. ಮಹಾತ್ಮರು ಮನೆಯನ್ನು ಬಿಟ್ಟಾಗ್ಯೆ ಅಲ್ಲಿದ್ದ ಅವರ ಪತ್ನಿ, ಮನೆಯ ಯಜಮಾನತಿ, ಕೆಲವು ಸ್ನೇಹಿತರು ಕಣ್ಣೀರು ಸುರಿಸಿದರು. ಮೌನ ದಿನವಾದುದರಿಂದ ಮಹಾತ್ಮರು ಮಾತನಾಡದೆ ಅವರೆಲ್ಲರ ಬೆನ್ನಿಗೆ ಮೆಲ್ಲ ತಟ್ಟಿ ಸಮಧಾನ ಪಡಿಸಿದರು.

ಹಿಂದುಸ್ಥಾನದಲ್ಲಿ ಪುನಹ ಅಶಾಂತಿಯು ಹಬ್ಬಿದ ವಿಷಯವಾಗಿ ಮುಖ್ಯ ಮಂತ್ರಿಗಳು ಒಬ್ಬ ಪತ್ರಿಕಾ ಪ್ರತಿನಿಧಿಯೊಡನೆ ಹೇಳುತ್ತಾರೆ—'ಹಿಂದೂಸ್ಥಾನದ ಅವಸ್ಥೆಯು ಬಹಳ ಶೋಚನೀಯವಾಗಿದೆ. ಚಕ್ರಗೋಷ್ಠಿಯಲ್ಲಿ ಸಮಾಧಾನಕರವಾದ ತೀರ್ಮಾನದ ಮೇಲೂ, ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯವನ್ನು ಕೊಡುವುದಕ್ಕೆ ತಕ್ಕ ಏರ್ಪಾಡಾದ ಮೇಲೂ, ಅಲ್ಲಿಯವರು ಹಿಂದು ಮುಂದು ನೋಡದೆ ದಂಗೆ ಏಳುವುದಕ್ಕೆ ಪ್ರಾರಂಭಿಸಿದ್ದಾರೆ. ಸ್ವರಾಜ್ಯಾಮೃತವನ್ನು ಹಿಂದೂಸ್ಥಾನದ ಬಾಯಿಗೆ ಹೊಯ್ಯಬೇಕೆಂದು ಹೋಗುವಾಗ ಹಿಂಸಾವಿರೋಧಿಗಳಾದವರೇ, ಶಾಂತಚಿತ್ತರಾದವರೇ ತಡೆದುಬಿಟ್ಟರು. ಬಹಳ ಶೋಚನೀಯ!' ಎಂದು.

ವಿಜ್ಞಾಪನೆ.

ನನ್ನ ಪತ್ನಿಯ ಮರಣದಿಂದ ನನಗುಂಟಾದ ಅಪಾರವಾದ ದುಃಖಕ್ಕಾಗಿ ಹಲವು ನೆಂಟರಿಷ್ಟರು ನನಗೆ ಸಂತಾಪದ ಪತ್ರಗಳನ್ನು ಬರೆದುದಲ್ಲದೆ, ಇನ್ನೂ ಅನೇಕರು ಖುದ್ದು ನನ್ನಲ್ಲಿಗೆ ಒಂದು ಸಮಾಧಾನ ಪಡಿಸಿರುವರು. ಅವರಿಗೆಲ್ಲಾ ಪ್ರತ್ಯೇಕ ಪ್ರತ್ಯೇಕವಾಗಿ ಪತ್ರ ಬರೆದು ನನ್ನ ಕೃತಜ್ಞತೆಯನ್ನು ಸೂಚಿಸಲು ಸಾಧ್ಯವಿಲ್ಲದ್ದರಿಂದ ಈ ಮೂಲಕ ಎಲ್ಲರಿಗೂ ನನ್ನ ವಿನಯಪೂರ್ವಕ ವಂದನೆಗಳನ್ನು ಅರ್ಪಿಸುತ್ತೇನೆ.

ಅತಪ್ಪರು.
ತಾ. 2—1—32
1—1.

ತಮ್ಮ ವಿನಯದ
ಚೆಪ್ಪುಡಿರ ಟಿ. ದೇವಯ್ಯ.

ನೋಟೀಸು.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿಮಿಟೆಡ್, ಇದರ ಆಫೀಸಿನಿಂದ.

ಈ ಬ್ಯಾಂಕಿನ ಜನರಲ್ ಮೀಟಿಂಗು ತಾ. 21—2—19... ನೇ ಆದಿತ್ಯವಾರ ದಿನ ಮಧ್ಯಾಹ್ನ 1 ಗಂಟೆಗೆ ಮಡಿಕೇರಿಯ ಜಮೀನ್ದಾರರ ಸಂಘದ ಹಾಲ್‌ನಲ್ಲಿ ನಡೆಯುತ್ತದೆ.

ಚರ್ಚೆಗೆ ಸಕ್ಕ ವಿಷಯಗಳು.

1. ಡೈರೆಕ್ಟರುಗಳ ರಿಪೋರ್ಟು ಮತ್ತು ಲಾಭ ಹಂಚಿಕೆ...
2. ಡೈರೆಕ್ಟರುಗಳ ಮತ್ತು ಅಧ್ಯಕ್ಷರ ಚುನಾವಣೆ...
3. ಅಧ್ಯಕ್ಷರ ಅನುಮತಿ ಮೇರೆ ಇತರ ಕುರಿತ... ಯಗಳು.

ನಿಮ್ಮ ಸಂಘದಿಂದ ಬ್ಯಾಂಕಿನ ಪ್ರತಿನಿಧಿಯಾಗಿ... ನ್ನು ಚುನಾಯಿಸಿದ್ದೀರೆಂಬದನ್ನು ತಾ. 15—2—... ನಮಗೆ ತಿಳಿಸಬೇಕಾಗಿ ಕೋರಲಾಗಿದೆ.

ಮಡಿಕೇರಿ,   ಸಿ. ಯಸ್. ಬೆಂ...
ತಾ. 6—1—32.

ಕೊಡಗು.

ಸನ್ ೧೯೩೨ನೇ ಇಸವಿ

ಜನವರಿ ತಾ. ೮ನೇ ಶುಕ್ರವಾರ.

ಹಿಂದೂಸ್ಥಾನದ ರಾಜಕೀಯ ಪರಿಸ್ಥಿತಿ.

ಕಳೆದ ವಾರ "ಮುಂದೇನು" ಎಂತ ಯೋಚಿಸಿದ್ದೆವು. ಜವಾಬು ಬಂದೇ ಬಿಟ್ಟಿತು. ವೈಸರಾಯರ ಭೇಟಿಯನ್ನು ಮಹಾತ್ಮ ಗಾಂಧಿಯವರು ಅಪೇಕ್ಷಿಸಿದರು. ವೈಸರಾಯರು ನಿರಾಕರಿಸಿದರು. ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಸವಿನಯ ಕಾನೂನು ಭಂಗದ ಠರಾವನ್ನು ಮಂಜೂರು ಮಾಡಿತು. ಒಟ್ಟು ಹಿಂದೂಸ್ಥಾನಕ್ಕೆಲ್ಲಾ ವ್ಯಾಪಕವಾಗುವಂಥ ಹೊಸ ಹೊಸ ಕಠಿಣ ತರದ ಆರ್ಡಿನೇನ್ಸ್‌ಗಳನ್ನು ಸರ್ಕಾರವು ಮಂಜೂರು ಮಾಡಿಕೊಂಡಿದೆ. ವಿಚಾರವಿಲ್ಲದೆ ಜೈಲಿನಲ್ಲಿ ದಬ್ಬುವಾದ 1827ರ ಬೊಂಬಾಯಿಯ ಒಂದು ಕಾನೂನು ಮೇರೆ ಮಹಾತ್ಮ ಗಾಂಧಿಯವರನ್ನೂ, ಕಾಂಗ್ರೆಸಿನ ಪ್ರೆಸಿಡೆಂಟರಾದ ಸರದಾರ್ ವಲ್ಲಭಭಾಯಿ ಪಟೇಲರನ್ನೂ ಸೆರೆಹಿಡಿದು ಪೂನಾದ ಸಮೀಪವಿರುವ ಯರವಾಡ ಜೈಲಿನಲ್ಲಿಟ್ಟರು. ಇನ್ನೊಂದು 1818ನೇ ಇಸವಿಯ ಕಾನೂನು ಮೇರೆ ಸುಭಾಸ್ ಚಂದ್ರಬೋಸರನ್ನು ಸೆರೆ ಹಿಡಿದರು. ಸಂಯುಕ್ತ ಪ್ರಾಂತ್ಯದ ಆರ್ಡಿನೇನ್ಸ್ ಮೇರೆ ಅಲ್ಲಹಾಬಾದಿನಿಂದ ಹೊರಡಬಾರದೆಂತ ಪಂಡಿತ ಜವಾಹಿರ್‌ಲಾಲರಿಗೂ, ಮೆ. ಶರ್ವಾನಿಯವರಿಗೂ ಕೊಟ್ಟಿದ್ದ ಹುಕುಮನ್ನು ಉಲ್ಲಂಘಿಸಿ ಬೊಂಬಾಯಿಯಲ್ಲಿ ಮಹಾತ್ಮ ಗಾಂಧಿಯವರನ್ನು ನೋಡಲಿಕ್ಕೂ, ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮೀಟಿಂಗು ನಡಿಸಲಿಕ್ಕೂ ಹೋದ ತಪ್ಪಿಗಾಗಿ ಪಂಡಿತ ಜವಾಹಿರ್‌ಲಾಲರಿಗೆ 2 ವರ್ಷ ಕಠಿಣ ಸಜೆಯೂ, 500 ರೂ. ಜುಲುಮಾನೆ ತಪ್ಪಿದರೆ ಪುನಹ 6 ತಿಂಗಳ ಸಜೆ ಮತ್ತು ಶರ್ವಾನಿಯವರಿಗೆ 6 ತಿಂಗಳ ಕಠಿಣ ಸಜೆಯೂ, 150 ರೂ. ಜುಲುಮಾನೆ ತಪ್ಪಿದರೆ 3 ತಿಂಗಳ ಸಜೆ ತಿಳ್ಳಿಗೆ ಸಹ ಮೇಜಿಸ್ಟ್ರೇಟರಿಂದ ವಿಧಿಸಲ್ಪಟ್ಟಿದೆ. ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಕಾನೂನಿಗೆ ವಿರೋಧವಾದ ಸಂಸ್ಥೆಯಾಗಿ ಮಾಡಲ್ಪಟ್ಟಿದೆ. ಸರ್ಕಾರವು ರಾಜಕೀಯ ಸುಧಾರಣೆ ಕೊಡುವ ಬಗ್ಗೆ ಮಾಡಬೇಕಾದ ಕೆಲಸವನ್ನು ಬೇಗನೆ ಮಾಡಲು ಪ್ರಯತ್ನಿಸುತ್ತಿರುವಾಗ್ಯೆ ಕಾಂಗ್ರೆಸ್ ತೀರ್ಮಾನವು ಮಾಡಿದ್ದು ಸರಿಯಲ್ಲವೆಂತ ಪಗ್ಗೆರೆ ವಿವರಗಳನ್ನು ಕೊಡುವ ಪತ್ರವೊಂದನ್ನು ಸರ್ಕಾರವು ಪ್ರಕಟಿಸಿದೆ.

ಈ ರೀತಿ ಒಂದೇ ವಾರದಲ್ಲಿ ಅನೇಕಾನೇಕ ಕಾರ್ಯಗಳು ನಡೆದು ಹೋಗಿವೆ. ಮುಂದೆ ಹಿಂದೂಸ್ಥಾನದಲ್ಲಿ ಅಶಾಂತಿಯು ತುಂಬಾ ಆಗಲಿಕ್ಕಿದೆ. ಇಂಥಾ ಪರಿಸ್ಥಿತಿಗೆ ಜವಾಬ್ದಾರರು ಯಾರೆಂಬದನ್ನು ವಿಚಾರಿಸಬೇಕಾಗಿದೆ. ಮಹಾತ್ಮ ಗಾಂಧಿಯವರು ಬೊಂಬಾಯಿಯಲ್ಲಿ ಹಡಗದಿಂದ ಇಳಿಯುವಾಗ ಮುಂದೆ ನಡೆಯಲಿಕ್ಕಿರುವ ದುಂಡು ಮೇಜು ಪರಿಷತ್ತಿನ ಕಾರ್ಯದಲ್ಲಿ ಸಹಕರಿಸಲು ನಿಶ್ಚೈಸಿಕೊಂಡು ಬಂದಿದ್ದೇನೆಂತಲೂ, ಆದರೆ ಬಂಗಾಳ ಆರ್ಡಿನೇನ್ಸ್ ಜೊತೆಗೆ ಯು. ಪಿ. ಆರ್ಡಿನೇನ್ಸ್ ಮತ್ತು ವಾಯವ್ಯ ಸರಹದ್ದಿನ ಪ್ರಾಂತ್ಯದ [illegible]ನೇನ್ಸ್‌ಗಳೂ, ಜೊತೆ ಕೆಲಸಗಾರರಾದ ಪಂಡಿತ ಜವಾಹಿರ್ ಮತ್ತು ಖಾನ್ ಅಬ್ದುಲ್ ಗಫಾರ್ ಖಾನರ ದಸ್ತಗಿ[illegible] ಪರಿಸ್ಥಿತಿಯನ್ನು ಬದಲಾಯಿಸಿದೆಂದೂ, ಆದರೂ [illegible]ಕಾಂಗ್ರೆಸ್ಸಿಗೆ ತಾನು ಸಲಹೆ ಏನು ಕೊಡಬೇಕೆಂಬದಕ್ಕೆ ವೈಸ[illegible]ರಿಂದ ಸೂಚನೆ ತೆಗೆದುಕೊಳ್ಳಲು ಅವರ ಭೇಟಿಯನ್ನು [illegible]ಸಿದರು. ಆದರೆ ಸಂಯುಕ್ತ ಪ್ರಾಂತ್ಯ (ಯು. ಪಿ) ಸರಹದ್ದಿನ ಪ್ರಾಂತ್ಯದ ಆರ್ಡಿನೇನ್ಸ್‌ಗಳ ಕುರಿತು [illegible]ಚರ್ಚೆ ನಡೆದೇ ನೇ ರಾಜಕೀಯ ರಚನೆಯ ಕಾರ್ಯದಲ್ಲಿ ಸಹಕಾರದ ವಿಷಯದಲ್ಲಿ ಮಾತ್ರ ಸಲಹೆ ಪಡೆಯಬೇಕಾದರೆ [illegible]ಕೆಂತ ವೈಸರಾಯರ ಸರ್ಕಾರವು ತಿಳಿಸಿತು. ಅತ್ಯ[illegible]ಕ್ಕೆ ವಿರೋಧವಾಗುವಂಥ ಈ ನಿರ್ಬಂಧಗಳಿಗೆ ಒಳಪ[illegible]ಗೆ ತಯಾರಿಲ್ಲವೆಂತ ಮಹಾತ್ಮ ಗಾಂಧಿಯವರು [illegible] [illegible]ರಾಯರು ಶರತ್ತುಗಳನ್ನು ಬಿಟ್ಟು ಭೇಟಿ ಕೊಡುವ [illegible]ಲೋಚನೆ ಮಾಡಬೇಕೆಂತ ಕೇಳಿಕೊಂಡರು. ಇ[illegible]ರಾಯರು ಒಪ್ಪಲಿಲ್ಲ. ಈ ಎಲ್ಲಾ ತಪಶೀಲ್ [illegible] ಈಗ ಪ್ರಕಟವಾಗಿದೆ.

[illegible]ಮಿ ರಾಜಿಯಾಗುವಾಗಲೂ, ಅನಂತರ ವ[illegible] [illegible]ಗೆ ಹೋಗುವಾಗಲೂ ಖುದ್ದು ರೂಬು ರೂ[illegible] [illegible] ಸರ್ಕಾರಕ್ಕೂ ಕಾಂಗ್ರೆಸಿಗೂ ವಿಷ್ಟೋ[illegible] [illegible]ದು ಹೋಗಿ ಮಹಾತ್ಮರು ಲಂಡನ್ನಿಗೆ [illegible]ವಾಯಿತು. ಈಗಲಾದರೂ ಮಹಾತ್ಮ[illegible] [illegible]ಸರಾಯರೊಡನೆ ಸಂಭಾಷಣೆ ನಡಿಸಿದ್ದರೆ [illegible]ಯಿಂದ ತೀರ್ಮಾನವು ಇಷ್ಟು ಬೇಗನೆ [illegible]ರಿಯುತ್ತಿರಲಿಲ್ಲ.

[illegible]ಯವರು ಲಂಡನ್ನಿನಲ್ಲಿರುವಾಗಲೇ ಬಂ[illegible] [illegible]ದರು. ಕೆಲವು ತರ ಕೃತ್ಯಗಳ [illegible] ನಡೆದದ್ದಕ್ಕಾಗಿ ಹೀಗೆ ಮಾಡಿದ್ದಾ[illegible]ದರೂ ಇಂಥಾ ಆರ್ಡಿನೇನ್ಸ್ ಮಾಡಿ ಒಟ್ಟು ಬಂಗಾಳದ ಜನಾಂಗವನ್ನೇ ದಬ್ಬಾಳಿಕೆಗೆ ಗುರಿಪಡಿಸಿದರು. ಸಂಯುಕ್ತ ಪ್ರಾಂತ್ಯದಲ್ಲಿ ಸರ್ಕಾರಕ್ಕೂ ಕಾಂಗ್ರೆಸಿಗೂ ರೈತರ ಬಡತನದ ಕಾರಣದಿಂದ ಗೇಣಿ ಕೊಡುವ ಸಂಬಂಧ ಪತ್ರವ್ಯವಹಾರ ನಡಿಯುತ್ತಿರುವ ವರೆಗೆ ಗೇಣಿ ಕೊಡಬೇಡಿ ಎಂತ ಕಾಂಗ್ರೆಸಿನವರು ಸಲಹೆ ಕೊಟ್ಟದ್ದಕ್ಕಾಗಿ ಆರ್ಡಿನೇನ್ಸ್ ಮಾಡಿಕೊಂಡು ಜನ ಪ್ರಿಯರಾದ ಯುವಕರ ಆದರ್ಶ ಮೂರ್ತಿಯಾದ ಪಂಡಿತ ಜವಾಹಿರ್‌ಲಾಲರನ್ನು ಸೆರೆ ಹಿಡಿದದ್ದು ಅಲ್ಲದೆ ಜನಸಮುದಾಯಕ್ಕೆ ಒಪ್ಪಿಗೆಯಾಗದ ಕಾರಣಗಳಿಗಾಗಿ ಸರಹದ್ದಿನ ಪ್ರಾಂತ್ಯದಲ್ಲಿ ಆರ್ಡಿನೇನ್ಸುಗಳನ್ನು ಮಾಡಿಕೊಂಡು ಖಾನ್ ಅಬ್ದುಲ್ ಗಫಾರ್ ಖಾನರನ್ನು ಸೆರೆಹಿಡಿದುಬಿಟ್ಟರು. ಇದನ್ನೆಲ್ಲಾ ನೋಡಿದರೆ ಮಹಾತ್ಮ ಗಾಂಧಿಯವರು ರಾಜಿ ಮಾರ್ಗವನ್ನು ಕೈಕೊಳ್ಳಲು ಅವಕಾಶವೇ ಇರದಂತೆ ಮಾಡಬೇಕೆಂಬದೇ ಅಳರಸರ ಇಚ್ಛೆಯಾಗಿತ್ತೆಂಬದು ಸ್ಪಷ್ಟವಾಗುತ್ತದೆ.

ಸರ್ಕಾರವೇ ದುಡುಕಿದರು ಎಂಬದು ಕಾಂಗ್ರೆಸಿನವರ ಅಭಿಪ್ರಾಯ ಮಾತ್ರವಲ್ಲ. ಬೊಂಬಾಯಿಯ ಇಂಗ್ಲಿಷ್ ಜನರು ನಡಿಸುವ 'ಟೈಮ್ಸ್ ಆಫ್ ಇಂಡಿಯಾ' ದಂಥ ಸರ್ಕಾರಕ್ಕೆ ಒತ್ತಾಸೆ ಕೊಡುವ ಪತ್ರಿಕೆಯೂ, ಕಾಮನ್ ವೆಲ್ತ್ ಆಫ್ ಇಂಡಿಯಾ ಲೀಗಿನ ಅಧ್ಯಕ್ಷರಾದ ನಾಮಧಾರಿ ಬರ್ಟ್ರೆಂಡ್ ರಸ್ಸೆಲ್ ರಂಥ ಇಂಗ್ಲಿಷ್ ಸದ್ಗೃಹಸ್ಥರೂ, ಸರ್ ಪುರುಷೋತ್ತಮದಾಸ್ ಠಾಕೂರ್‌ದಾಸ್ ಸಪ್ರೂ, ಮತ್ತು ಜಿನ್ನಾರಂಥಾ ಮಧ್ಯಗಾಮಿ (ಮೋಡರೇಟ್) ಗಳೂ ಸಹ ಅಭಿಪ್ರಾಯಪಟ್ಟಿರುತ್ತಾರೆ. ಪ್ರಪಂಚ ವಿಖ್ಯಾತರಾದ ರಾಜಕೀಯದಲ್ಲಿ ಶ್ರೈಹಾಳದ ರವೀಂದ್ರನಾಥ್ ಠಾಕೂರರವರೂ ಸಹ ಸರ್ಕಾರದ ವರ್ತನೆಯನ್ನು ಖಂಡಿಸಿರುತ್ತಾರೆ.

ಈ ಹೊಸ ಹೋರಾಟದ ಪರಿಣಾಮಯು ನಮ್ಮ ದೇಶವನ್ನೂ ಸಹ ಶೀಘ್ರದಲ್ಲೇ ಆವರಿಸುವಂತಿದೆ. ಇನ್ನೊಂದು ಕಡೆ ಪ್ರಕಟಿಸಿದ ಕಮಿಷನರರಿಗೂ ಕಾಂಗ್ರೆಸ್ಸಿನ ಕೆಲಸಗಾರರಿಗೂ ಆದ ಸಂಭಾಷಣೆಯಿಂದ ಆರ್ಡಿನೇನ್ಸುಗಳು ಇಲ್ಲಿಗೂ ಶೀಘ್ರದಲ್ಲೇ ವ್ಯಾಪಿಸಲ್ಪಡುತ್ತವೆಯೆಂತ ತೋರುತ್ತದೆ. ಆರ್ಡಿನೇನ್ಸುಗಳು ಬರುವ ಮುಂಚೆ ಮೀಟಿಂಗ್, ಮೆರವಣಿಗೆ, ಕೂಟ ಮುಂತಾದ್ದನ್ನು ಮಾಡಬಾರದೆಂತ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಕೆಲವರಿಗೆ ಕೊಟ್ಟಿರುವ ನೋಟಿಸ್ ಇನ್ನೊಂದು ಕಡೆ ಪ್ರಕಟವಾಗಿದೆ. ಇದರಿಂದ ಮಧ್ಯವರ್ತಿ ಮತ್ತು ಪ್ರಾಂತೀಕ ಸರ್ಕಾರಗಳು ಮುಂದಾಗಲಿಕ್ಕಿರುವ ಹೋರಾಟದ ಮಹತ್ವವನ್ನು ಅರಿತುಕೊಂಡಿದ್ದಾರೆಂತ ತಿಳಿಯ ಬರುತ್ತದೆ

ಕಮಿಷನರವರ ಮತ್ತು ಕಾಂಗ್ರೆಸ್ ಕೆಲಸಗಾರರ ಸಂಭಾಷಣೆ.

ಕಮಿಷನರವರನ್ನು ಕಾಣಬೇಕೆಂದು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಪತ್ರ ಬರೆದಿದ್ದ ಮೇರೆ ಕೊಡಗಿನ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಮೆ. ಪಿ. ಐ. ಬೆಳ್ಯಪ್ಪನವರು ಮತ್ತು ಸೆಕ್ರೆಟರಿಯಾದ ಮೆ. ಕೆ. ಸಿ. ಕರುಂಬಯ್ಯನವರು ಈ ತಾ. 7 ನೇ ಗುರುವಾರ 11 ಗಂಟೆಗೆ ಕಮಿಷನರವರನ್ನು ಅವರ ಆಫೀಸಿನಲ್ಲಿ ಭೇಟಿ ಮಾಡಿದರು. ಅಲ್ಲಿ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರೂ ಹಾಜರಿದ್ದರು.

'ಚೀಫ್ ಕಮಿಷನರವರ ಹುಕುಂ ಮೇರೆ ದೇಶದ ರಾಜಕೀಯ ಪರಿಸ್ಥಿತಿಯನ್ನು ಕುರಿತು ಕಾಂಗ್ರೆಸ್ ಚಳವಳದ ಪ್ರತಿನಿಧಿಗಳಾದ ನಿಮ್ಮೊಡನೆ ಮಾತಾಡಲು ಇಲ್ಲಿಗೆ ನಿಮ್ಮನ್ನು ಕರೆಯಿಸಿದ್ದಾಗಿದೆ. ಕಳೆದ 9 ತಿಂಗಳಿಂದ ಜಾರಿಯಲ್ಲಿದ್ದ ಡೆಲ್ಲಿ ಒಪ್ಪಂದವು ಈಗ ಅಂತ್ಯವಾಗಿ, ಕಾಂಗ್ರೆಸ್ಸಿನವರ ಕಾನೂನು ಭಂಗ ಚಳವಳದ ಕಡೆ ಸರ್ಕಾರದ ವರ್ತನೆಯು ಬದಲಾಗಿ ಈಗಾಗಲೆ ನಾಲ್ಕು ತರಹದ ರಾಜಾಜ್ಞೆಗಳ (ಆರ್ಡಿನೇನ್ಸ್) ನ್ನು ವೈಸರಾಯರು ಜಾರಿಗೆ ತಂದದ್ದು ನಿಮಗೆ ಪತ್ರಿಕೆಗಳ ಮೂಲಕ ಗೊತ್ತಾಗಿರಬಹುದು. ಸರ್ಕಾರದವರು ಇಂಡಿಯಾಕ್ಕೆ ಜವಾಬ್ದಾರಿ ಸರ್ಕಾರ ಪದ್ಧತಿಯನ್ನು ಕೊಡಬೇಕೆಂದು ಮನಃಪೂರ್ತಿಯಾದ ಪ್ರಯತ್ನ ಮಾಡುತ್ತಿರುವಾಗ್ಯೆ ಕಾಂಗ್ರೆಸ್ಸಿನವರು ಕಾನೂನು ಭಂಗ ಚಳವಳವನ್ನು ಪುನಹ ಆರಂಭಿಸಿ ಆರ್ಡಿನೇನ್ಸುಗಳನ್ನು ಜಾರಿಗೆ ತರುವಂತೆ ಸರ್ಕಾರದವರನ್ನು ಬಲತ್ಕರಿಸಿರುವರು. ಕಳೆದ ಸತ್ಯಾಗ್ರಹ ಚಳವಳದಿಂದ ದೇಶಕ್ಕೇನೂ ಪ್ರಯೋಜನವುಂಟಾಗಿರುವುದಿಲ್ಲ. ಅದರಿಂದ ಇನ್ನೂ ದೇಶಕ್ಕೂ ಜನರಿಗೂ ತುಂಬಾ ಕಷ್ಟ ನಷ್ಟಗಳುಂಟಾಗುವವು. ಕೊಡಗಿನಲ್ಲಿ ಮೇಲಿನ ಆರ್ಡಿನೇನ್ಸುಗಳನ್ನು ಜಾರಿಗೆ ತರಲು ತಾನು ಹಿಂಜರಿಯುತ್ತೇನೆ; ಆದರೆ ಇಲ್ಲಿ ಕಾಂಗ್ರೆಸ್ಸಿನ ಚಳವಳವನ್ನು ಹೂಡಿದರೆ ಜಾರಿಗೆ ತರಬೇಕಾಗುತ್ತೆ. ಅದು ಈಗ ನಿಮ್ಮ ಕೈಯ್ಯಲ್ಲಿದೆ.' ಎಂದು ಹೇಳಿ, ನೀವು ಇಲ್ಲಿ ಕಾಂಗ್ರೆಸ್ಸಿನ ಕಾರ್ಯ ಕ್ರಮವನ್ನು ಜಾರಿಗೆ ತರುವುದಿಲ್ಲವೆಂದು ಭಾಷೆ ಕೊಡುತ್ತೀರೋ ಎಂದು ಕಮಿಷನರವರು ಕಾಂಗ್ರೆಸ್ ಕೆಲಸಗಾರರನ್ನು ಕೇಳಿದರು.

ಅದಕ್ಕೆ ಕಾಂಗ್ರೆಸ್ಸಿನ ಕೆಲಸಗಾರರು ಹೀಗೆಂದು ಉತ್ತರ ಕೊಟ್ಟರು.—' ಕಾಂಗ್ರೆಸ್ ಕೆಲಸವನ್ನು ಇಲ್ಲಿ ನಡಿಸುವುದಿಲ್ಲವೆಂತು ನಾವೆಂದಿಗೂ ಭಾಷೆಕೊಡುವುದಿಲ್ಲ. ನಮ್ಮ ಕಮಿಟಿಯು ಅಖಿಲ ಭಾರತ ಕಾಂಗ್ರೆಸ್ಸಿನ ಒಂದು ಶಾಖೆಯಾಗಿದೆ. ಸೆಂಟ್ರಲ್ ಕಾಂಗ್ರೆಸ್ಸಿನ ವರ್ಕಿಂಗ್ ಕಮಿಟಿಯವರು ಮಾಡಿದ ತೀರ್ಮಾನವನ್ನು ಕೈಕೊಳ್ಳುವುದೇ ನಮ್ಮ ಧರ್ಮ. ನಮ್ಮ ಚಳವಳವು ಕೊಡಗಿನ ಮಟ್ಟಿಗೆ ಮಾತ್ರವಲ್ಲ. ಇಡೀ ಹಿಂದೂಸ್ಥಾನದ ಸ್ವಾತಂತ್ರ್ಯಕ್ಕಾಗಿ ಆಗಿದೆ. ಕಾನೂನುಭಂಗ ಚಳವಳವನ್ನು ಪುನಹ ಸುರುಮಾಡುವಂತೆ ಸರ್ಕಾರದವರು ಕಾಂಗ್ರೆಸ್ಸಿನವರನ್ನು ಬಲತ್ಕರಿಸಿದ್ದಾಗಿದೆ. ಶಾಂತ ರೀತಿಯಿಂದ ತೀರ್ಮಾನಿಸಿಕೊಳ್ಳಬೇಕೆಂದೂ, ಹಿಂದೀ ಜನಾಂಗವನ್ನು ಪುನಹ ಸತ್ಯಾಗ್ರಹ ಚಳವಳದ ಬೆಂಕಿಗಾಗಿ ದಾಟದಂತೆ ಮಾಡಬೇಕೆಂದೂ ಬಹು ಕುತೂಹಲದಿಂದ ಮಹಾತ್ಮ ಗಾಂಧಿಯವರು ಸಂಭಾಷಣೆಗಾಗಿ ವೈಸರಾಯರನ್ನು ಕೇಳಿಕೊಂಡರೂ ವೈಸರಾಯರು ತಿರಸ್ಕರಿಸಿದ್ದರಿಂದಲೇ ಕಾಂಗ್ರೆಸ್ಸಿನವರು ಕಾನೂನುಭಂಗ ಚಳವಳವನ್ನು ಹೂಡಿದ್ದಾಗಿದೆ. ನಮ್ಮ ಮುಂದಾಳಾದ ಮಹಾತ್ಮರ ನಿಶ್ಚಯದಂತೆ ನಡೆಯುವದು ನಮ್ಮ ಕರ್ತವ್ಯ. ಗುಲಾಮಗಿರಿಯಲ್ಲಿ ಜೀವಿಸುವುದಕ್ಕಿಂತ ಸ್ವಾತಂತ್ರ್ಯ ಹೋರಾಟದಲ್ಲಿ ಸಾಯುವುದೇ ಲೇಸೆಂದು ಕಾಂಗ್ರೆಸ್ಸಿನವರಾದ ನಮ್ಮ ಅಭಿಪ್ರಾಯ. ಆದರೆ ಇಲ್ಲಿಯ ಕಾಂಗ್ರೆಸ್ಸಿನ ಕೆಲಸಗಾರರು ಅಹಿಂಸಾ ತತ್ವವನ್ನೇ ಅನುಸರಿಸಿ ನಡೆಯುವಂತೆ ನೋಡಿಕೊಳ್ಳುತ್ತೇವೆಂದು ಭರವಸೆಕೊಡಬಲ್ಲೆವು.'

ಹಾಗಾದರೆ ಕೊಡಗಿನಲ್ಲಿ ಇನ್ನು ಮುಂದೆ ಕಾಂಗ್ರೆಸ್ ಕೆಲಸವನ್ನು ನಡಿಸಲು ಮೀಟಿಂಗುಗಳನ್ನಾಗಲೀ, ಮೆರವಣಿಗೆ ಕೂಟಗಳನ್ನಾಗಲೀ ಮಾಡಕೂಡದೆಂದು ಹುಕುಂ ಮಾಡುತ್ತೇನೆಂದು ಕಮಿಷನರು ಹೇಳಿದರು.

ನಂತರ ಕಮಿಷನರು ಕೊಡಗು ಪತ್ರಿಕೆಯ ಸಂಪಾದಕರಾದ ಮೆ. ಬೆಳ್ಯಪ್ಪನವರನ್ನು ಕುರಿತು ಪತ್ರಿಕೆಯಲ್ಲಿ ಕಾನೂನು ಭಂಗ ಚಳವಳಕ್ಕೆ ಉತ್ತೇಜನ ಕೊಡುವಂಥ ಕಾರ್ಯಕ್ರಮಗಳನ್ನೂ, ಪ್ರಕಟಣೆಗಳನ್ನೂ ಪ್ರಕಟಿಸಿದ್ದೇ ಆದರೆ ಕಾನೂನು ಮೇರೆ ಜಾರಿ ಮಾಡಲಾಗುತ್ತದೆಂದು ಇಂಡಿಯಾ ಸರ್ಕಾರದಿಂದ ತಂತೀ ಬಂದಿದೆ; ಆ ವಿಷಯ ನಿಮಗೆ ತಿಳಿಸಿರುತ್ತೇನೆಂದು ಹೇಳಿದರು.

ಈ ಸಂಭಾಷಣೆಯ ಸಾರಾಂಶವನ್ನು ಪ್ರಕಟಿಸಲು ಕಮಿಷನರವರ ಅನುಮತಿ ಕೊಟ್ಟಿರುತ್ತಾರೆ.

ಈ ಕೆಳಗಿನ ನೋಟೀಸಿನ ನಕಲನ್ನು ಪ್ರಕಟಣೆ ಬಗ್ಗೆ ನಮಗೆ ಕಳುಹಿಸಿರುತ್ತಾರೆ.

ಕೊಡಗು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರ ಕೋರ್ಟಿನಲ್ಲಿ,

ತಾ. 7—1—1932

ಕ್ರಿ. ಮಿ. ನಂ. $\frac{1}{1932}$

ಈ ದಿನ ನನ್ನ ಮುಂದೆ ಕೊಡಗಿನ ಡಿಪ್ಯುಟಿ ಸುಪರಿಂಟೆಂಡೆಂಟರು ಮಧ್ಯವರ್ತಿ ಯೂ ಪ್ರಾಂತೀಕ ಸರ್ಕಾರ ಯೂ ಅದರ ಅಧಿಕಾರಿಗಳು ಕಾಂಗ್ರೆಸ್ಸಿನ ಅಥವಾ ಅದೇ ತರದ ಇತರ ಸಂಸ್ಥೆಗಳ ಕೆಲವು ಮುಂದಾಳುಗಳ ಮೇಲೂ ಇಂಡಿಯಾ ಸರ್ಕಾರವೂ, ಪ್ರಾಂತೀಕ ಸರ್ಕಾರಗಳೂ ಅಥವಾ ಅವರ ಅಧಿಕಾರಿಗಳೂ ನಡಿಸಿರುವ ಕಾರ್ಯಗಳ ಮೇಲೆ ಜನರಿಗೆ ವಿರೋಧ ಅಭಿಪ್ರಾಯ ಹುಟ್ಟುವ ಬಗ್ಗೆ ಅಥವಾ ಅಂಥಾ ಮುಂದಾಳುಗಳ ಮೇಲೆ ಸಹಾನುಭೂತಿ ತೋರಿಸುವ ಬಗ್ಗೆ ಅಥವಾ ಇದಕ್ಕಾಗಿ ಹರತಾಳ, ಸಂಪೂರ್ಣ ಕೆಲಸ ನಿಲ್ಲಿಸುವಿಕೆ ಬಗ್ಗೆ ಮೀಟಿಂಗುಗಳು, ಕೂಟಗಳು, ಮೆರವಣಿಗೆಗಳು ಮುಂತಾದವನ್ನು ಕಾಂಗ್ರೆಸಿನ ಅಥವಾ ಆ ತರದ ಸಂಸ್ಥೆಯ ಸದಸ್ಯರೂ, ಕಾನೂನುಭಂಗಕ್ಕೆ ಸಹಾನುಭೂತಿ ಇರುವವರೂ ನಡಿಸಬಹುದೆಂತ ಕೊಡಗಿನ ಡಿಪ್ಯುಟಿ ಸುಪರಿಂಟೆಂಡೆಂಟರು ಅರ್ಜಿ ಬರೆಕೊಂಡು ಪ್ರಮಾಣ ಕೈಹೇಳಿಯತ್ತು ಕೊಟ್ಟದ್ದರಿಂದಲೂ ಮತ್ತು ಪೋಲೀಸ್ ವರದಿಯಿಂದ ಅಂಥಾ ಮೀಟಿಂಗು, ಕೂಟ, ಮೆರವಣಿಗೆ ಮುಂತಾದ್ದರಿಂದ ಶಾಂತತಾ ಭಂಗವಾಗಬಹುದೆಂತ ನನಗೆ ತೃಪ್ತಿಯಾಗಿರುವುದರಿಂದಲೂ, ಕ್ರಿ. ಪ್ರೊ. ಕೋಡು 144ನೇ ಸೆಕ್ಷನ್ ಮೇರೆ ನಾನು ಹುಕುಂ ಕೊಡಬೇಕಾದ ಅವಶ್ಯ ಬಂದಿದೆ ಎಂತ ನನಗೆ ತೋರುವುದರಿಂದಲೂ ಎಲ್ಲರಿಗೂ ಮುಂದು ನೋಟೀಸು ಜಾರಿ ಮಾಡುವಷ್ಟು ಸಮಯವಿಲ್ಲವೆಂತ ನನಗೆ ತೋರುವುದರಿಂದಲೂ,

ಕೊಡಗು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟನಾದ ರಾವ್ ಬಹದ್ದೂರ್ ಕೇಟೋಳಿ ಚಂಗಪ್ಪ ಬಿ. ಎ. ಯಾದ ನಾನು ಅಂಥಾ ಮೀಟಿಂಗ್, ಕೂಟ, ಮೆರವಣಿಗೆ ಮುಂತಾದ್ದನ್ನು ಪಬ್ಲಿಕ್ಕಿನವರು ಯಾರೂ ಮಾಡಕೂಡದೆಂತಲೂ ಈ ಕೆಳಗೆ ಹೆಸರು ಬರೆದವರೂ ಮತ್ತು ಪಬ್ಲಿಕ್ಕಿನ ಇತರರೂ ಸಹ ಅಂಥಾ ಮೀಟಿಂಗ್, ಕೂಟ, ಮೆರವಣಿಗೆ ಮುಂತಾದ್ದನ್ನು ಕೊಡಗಿನ ಸರಹದ್ದಿನೊಳಗೆ ಪಬ್ಲಿಕ್ ಸ್ಥಳ, ರಸ್ತೆ, ಜನ ತಿರುಗಾಡುವ ದಾರಿ ಮತ್ತು ಪಬ್ಲಿಕ್ಕಿನವರು ಸೇರಬಹುದಾದ ಯಾವುದೇ ಸ್ಥಳದಲ್ಲಿ ಏರ್ಪಡಿಸುವದಾಗಲೀ, ನಡಿಸುವುದಾಗಲೀ, ಸೇರುವುದಾಗಲೀ ಅಥವ ಬೇರೆ ಯಾವ ವಿಧದಿಂದಲೂ ಭಾಗ ತೆಗೆದುಕೊಳ್ಳುವುದಾಗಲೀ ಆಗಬಾರದೆಂತ ಈ ಮೂಲಕ ಏಕ ಪಕ್ಷ ಹುಕುಂ ಮಾಡಿರುತ್ತೇನೆ.

ಈ ಹುಕುಂ ಈ ದಿವಸದಿಂದ ಒಂದು ತಿಂಗಳ ವರೆಗೆ ಜಾರಿಯಲ್ಲಿರತಕ್ಕದ್ದು ಮತ್ತು ಕೆಳಗೆ ಹೆಸರು ಬರೆದಿರುವವರಿಗೂ ಸಮುದಾಯದ ಸರ್ವರಿಗೂ ವ್ಯಾಪಿಸತಕ್ಕದ್ದು:

ಈ ಹುಕುಂ ಈ ಕೆಳಗಿನವರ ಮೇಲೆ ಜಾರಿಯಾಗತಕ್ಕದ್ದು.

1. ಮೆ. ಗಳಿದ ಪಿ. ಐ. ಬೆಳ್ಯಪ್ಪ, 2. ಕೆ. ಸಿ. ಕರುಂಬಯ್ಯ, 3. ಅಜ್ಜಿಕುಟ್ಟಿರ ಚಿಣ್ಣಪ್ಪ, 4. ಸಿ. ಯನ್. ವೆಂಕಪ್ಪಯ್ಯ, 5. ಜಮ್ಮಡ ಮಾದಪ್ಪ, 6. ಪುಳ್ಳಮನೆ ಮುದ್ದಮಯ್ಯ, 7. ಕೋಟೆರ ಚಿಣ್ಣಪ್ಪ, 8. ಮುಂಡೇಪಂಡ ಸೋಮಣ್ಣ, 9. ಪಿಷ್ಟಂಡ ದೇವಯ್ಯ, 10. ಅಬ್ದುಲ್ ಗಫೂರ್ ಖಾನ್, 11. ಹೆಚ್ ಆರ್ ಕೃಷ್ಣಯ್ಯ, 12. ಕಾಳೇಂಗಡ ಚಿಣ್ಣಪ್ಪ, 13. ಅಜ್ಜಮಾಡ ಮಾದಪ್ಪ, 14. ಐನಂಡ ಕಾರ್ಯಪ್ಪ, 15. ಸೋಮೆಯಂಡ ಅಣ್ಣಯ್ಯ.

ತಾ. 7—1—1932ರಲ್ಲಿ ಕೋರ್ಟು ಮೊಹರಿನಿಂದ ನನ್ನ [illegible] ನಿನೊಡನೆ ಕೊಡೋಣಾಗಿದೆ.

[illegible] Press. Me[illegible]

(ಡಿಸ್ಟ್ರಿ[illegible]

Reg. No. M. 1550.
If not delivered please return to
"KODAGU" OFFICE MERCARA.

ಕೊಡಗು.

ಸತ್ಯೇನ ಭೂಷಿತಯೆಯಯಾ ವಿದ್ಯಾ ನೀತಿ ಪ್ರಯುಕ್ತಿಕಾ / ಐಕಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ

ವಾರ್ಷಿಕ ಚಂದಾ ರೂ. ೩—೮—೦. | ಸಂಪಾದಕ—ಪಂದ್ಯಂಡ. ಐ. ಬೆಳ್ಳಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೧ | ಮಡಿಕೇರಿ, ಸನ್ ೧೯೩೨ನೇ ಇಸವಿ ಜನವರಿ ತಾರೀಕು ೮ ನೇ ಶುಕ್ರವಾರ. | ಸಂಚಿಕೆ ೪೧

589. Gemset Brooch.


629. Bracelets.

592. Gemset Brooch.

583. Nose-screw.

561. Earrings.

V. Subramaniaier Jeweller,
Post Box 423, Triplicane, P. O., MADRAS.

CATALOGUE FREE ON ENQUIRY.

711. Gold Brooch.

713. Gold Brooch.

52—7



ಬಾಡಿಗೆ ಬರೆದ ಜಾಗ ಖಾಲಿಯಾಗಿ ಕಾಣಿಸಲ್ಪಡುವದು.

ಕೋವಿಗಳು, ಕತ್ತಿಗಳು, ಬಟ್ಟೆಗಳು, ತೋಟೆಗಳು, ರಿವಾಲ್ವರುಗಳು, ಇವುಗಳ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS.
Largest Importers of Firearms and Ammunition
Cheapest priced firm in India.
24—16 213 Abdul Rehman Street. BOMBAY.



ಈ ಗಡಿಯಾರಗಳು ಈ ನಕ್ಷೆಯಲ್ಲಿರುವಂತೆಯೇ ಇರುವವು. ನಮ್ಮ ಸ್ವಂತ ಆರ್ಡರ್ ಮೇಲೆ ಸೀಮೆಯಲ್ಲಿ ತಯಾರಿಸಿ ತರಿಸಿರುತ್ತೇವೆ. ಸರಿಯಾಗಿ ಘಂಟೆಯನ್ನು ತೋರಿಸುತ್ತವೆ. ಇದುವರೆಗೂ ಯಾರೂ ಈಗಿನ ಕಡಿಮೆ ಬೆಲೆಗೆ ತರಿಸಿರುವವರೇ ಇಲ್ಲ. ಆದ್ದರಿಂದ ಬೇಗನೆ ಬರೆದು ತರಿಸಿಕೊಳ್ಳಿರಿ ನಮ್ಮಲ್ಲಿ ಸ್ವಲ್ಪವೇ ಇರುತ್ತವೆ. ಇವಕ್ಕೆ ಖಾತ್ರಿಯಾದ 3 ವರ್ಷ ಗ್ಯಾರಂಟಿ ಕೊಡುತ್ತೇವೆ. ಕ್ರಯ 1ಕ್ಕೆ 4—4—0.

ವಿಳಾಸ:—ಕೆ. ಎನ್. ಬೆನ್‌ಸನ್ ಅಂಡ್ ಕೊ.,
12— ಪೋಸ್ಟ್ || ನಂ || 1246, ಮದರಾಸು.

1932 ನೇ ಇಸವಿಯ ಪಾಕೆಟ್ ಡೈರಿ ಇನಾಂ.

ಈ ಪೆನ್ನಾವನ್ನು ಕೊಳ್ಳುವವರಿಗೆ 1932 ನೇ ಇಸವಿಯ ಪಾಕೆಟ್ ಡೈರಿ ಇನಾಮಾಗಿ ಕೊಡುವೆವು. ಈ ಡೈರಿಯಲ್ಲಿ ಎಲ್ಲಾ ರಾಜರುಗಳ ಹೆಸರೂ, ಗವರ್ನರುಗಳ ಹೆಸರೂ, ಯಾರ್ಯಾರಿಗೆ ಎಷ್ಟು ಗುಂಡುಗಳು ಹಾರಿಸಬೇಕೆಂಬುದೂ ಮತ್ತು ರೈಲು, ಟಪಾಲು, ರಿಜಿಸ್ಟ್ರೇಷನ್ ಚಾರ್ಜುಗಳೂ, ಪಂಚಾಂಗ, ಎಲ್ಲಾ ಮತಸ್ಥರ ಹಬ್ಬಗಳೂ, ಸರ್ಕಾರಿ ರಜಗಳೂ ಕನ್ನಡ ಇಂಗ್ಲೀಷು ಭಾಷೆಗಳಲ್ಲಿ ಪ್ರಿಂಟಾಗಿವೆ. ಈ ಫೌಂಟನ್ ಪೆನ್ನಾವು ವಿಲಾಯಿತಿಯಲ್ಲಿ ತಯಾರಾದದ್ದು. ಇದಕ್ಕೆ ಭಂಗಾರದಂಥ ನಿಬ್ಬು ಹಾಕಿದೆ. ಪಾಕೆಟ್ ಡೈರಿ ಸಹಿತ ಪೆನ್ನಾ 1ಕ್ಕೆ 1—12—0.

ಯಂ. ಲಿಯೋ ಆಂಡ್ ಕೋ.,
12—3 168 ಚೈನಾ ಬಜಾರ್, ಮದರಾಸು.

ಬಾಲಾರ್ಕಮಧು.

ನಿಮ್ಮ ಮಕ್ಕಳ ಸೌಂದರ್ಯವನ್ನು ನೋಡಬೇಕಾದರೆ ಅದ್ಭುತ ಗುಣವುಳ್ಳ ಬಾಲಾರ್ಕಮಧುವನ್ನು ಕೊಡಿರಿ. ಮಕ್ಕಳು ರೋಗ



ಪೀಡಿತರಾಗಿ ಎಷ್ಟೇ ಕ್ಷೀಣವಾಗಿದ್ದರೂ ಇದರಿಂದ ಬಹು ಬೇಗ ಆರೋಗ್ಯವೂ, ಬಲವೂ ಬರುವದು. ದಿನ ದಿನಕ್ಕೆ ಆರೋಗ್ಯವೂ, ಪುಷ್ಟಿಯೂ ಹೆಚ್ಚುವದು. ಇದು ಮಧುರವಾಗಿದೆ. ಚಿಕ್ಕ ಮಕ್ಕಳು ಸೇವಿಸುತ್ತಾರೆ. ಶೀಸೆ 1ಕ್ಕೆ 12 ಆಣೆ ವಿ. ಪಿ. 12 ಆಣೆ.

ಆರ್ಡರ್ ಜೊತೆಯಲ್ಲಿ ಅಡ್ವಾನ್ಸ್ ಮೊಬಲಗು ಕಳುಹಿಸತಕ್ಕದ್ದು. ಅಡ್ವಾನ್ಸ್ ಇಲ್ಲದ ಆರ್ಡರುಗಳನ್ನು ಗಮನಿಸುವದಿಲ್ಲ.

ಯಂ. ವಿ. ಪ್ರಸಾದಿಕ
ಔಷಧಾಲಯ
ಶಿ.

52—51

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್: ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲು)

	ರೂ.
ಶೇರ್ ಬಂಡವಾಳ್ —	50,000
ವಸೂಲಾದ ಶೇರ್ ಮೊಬಲಗು —	26,800
ಜಮಾಬಂದ ಠೇವಣಾತಿ —	2,50,301

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೋಸ್ಕರ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ಪ್ರಕಾರದಲ್ಲಿ ಬಡ್ಡಿ ದೊರೆಯುತ್ತೆ, ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟು ಮಾಡಿಸುತ್ತಾರೆ.

ಪ್ರೆಸಿಡೆಂಟರು,
ಕೋದಂಡ ಅಪ್ಪಯ್ಯನವರು,
ರಾವ್ ಬಹದ್ದೂರ್.

ಟ್ರೆಜರರ್,
ಮನೆಯಪ್ಪಂಡ ಬೆಳ್ಯಪ್ಪನವರು.

ಸೆಕ್ರೆಟರಿ
ಸಿ. ಯನ್. ವೆಂಕಟ್ಟಯ್ಯನವರು, ಬಿ.ಎ., ಬಿ.ಎಲ್.

ತಾರೀಖು 1-7-1931.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಉತ್ತರ ಕೊಡಗಿಗೆ ಶ್ರೀ ಚೌರಿರ ಮಾದಯ್ಯನವರು,
ದಕ್ಷಿಣ ಕೊಡಗಿಗೆ—ಮೆ. ಸೋಮೆಯಂಡ ಅಚ್ಚಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು. (ಜಾದಿಭಂಡಾರ.)
ನಾಪೋಕ್ಲು—ಎಮ್. ಆರ್. ವೆಂಕಪ್ಪಯ್ಯನವರು.
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.
ಪೊನ್ನಂಪೇಟೆನಾಡು—ಮೆ. ಜಮ್ಮಡ ಮಾದಪ್ಪನವರು.
ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು.
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಪ್ಪಯ್ಯನವರು,
ಮಡಿಕೇರಿ, ಆಲಮಣಮಾಡ ಪಿ ಕಾರ್ಯಪ್ಪನವರು,
ಕುದಿಕೇರಿ & ತಿತಿಮತ್ತಿ—ಮೆ. ಪೆ. ಪೂವಪ್ಪಯ್ಯನವರು,
ಗೋಣಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾಚಯ್ಯನವರು.

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರಿಗೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

ಟಿಕೆಟ್ಟು ಸಿದ್ಧವಾಗಿವೆ.

...ಸಗಳ ಮತ್ತು ದವಸ ಭಂಡಾರಗಳ ಪ್ರತಿ ...ಯೂ ಇರಬೇಕಾದ ಅಮಿತ ಜವಾ ...ಾಯಕ ಸಂಘದ ಮತ್ತು ದವಸ ಭಂಡಾ ...ರು, ಪಾಸ್ ಬುಕ್ಕುಗಳೂ, ಎಲ್ಲಾ ಸಹ ... ದವಸ ಭಂಡಾರಗಳ ಕೆಲಸಗಳನ್ನು ...ಸಲು ಅವಶ್ಯವಾಗಿರುವ, ರೂಲ್ಸಿಗನುಸರಿಸಲ್ಪಟ್ಟಿರುವ ನಾನಾ ಫಾರಮುಗಳೂ, ...ಳೂ, ಜಮಾ ಮಂಜೂರಾತಿ ಫಾರಮು ...ಒಪ್ಪಿಗೆ ಫಾರಮುಗಳೂ, ಜಾಮೀನು ... ಸ್ಟೋರ್ ಕೀಪರ್ ಬರಾರು ಫಾ... ...ಸ್ತಕಗಳೂ, ರಶೀತಿ ಪುಸ್ತಕಗಳೂ, ...ಪುಸ್ತಕಗಳೂ ಮತ್ತು ಚೆಕ್ ಪುಸ್ತ... ...ಕ್ರಯದಲ್ಲಿ ದೊರೆಯುತ್ತವೆ. ...ು ಆರ್ಡರು ಕೊಟ್ಟಲ್ಲಿ ವಿ. ಪಿ. ...ದು.

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.

ವಿಮೆದಾರರಿಗೆ ಕೊಟ್ಟದ್ದು—3231 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ 8013 ಜನರಿಗೆ 32 ಲಕ್ಷ ರೂ.

ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,78,322 ಜನರಿಗೆ 38 ಕೋಟಿ ರೂ.

ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ರಕ್ಕಿಂತ ಹೊರದ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದಾಗಿದೆ. ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ... ಟೀನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ್ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಒತ್ತಾಸೆಯನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬದು ಅದರ ಹಿಂದಿನ ದಾಖಲೆಗಳಿಂದಲೂ. ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ಮೊಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೋ	ಪಾಟ್ನಾ	ಸುಕ್ಕೂರು
ಅಲಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಹಾಂಗ್ ಕಾಂಗ್	ಮಂಡಲೆ	ರಾಯಪುರ	ತಿರುವೆಂದ್ರಮ್
ಭೋಪಾಲ್	ಕರಾಚಿ	ಮಂಗಳೂರು	ರಾಂಚಿ	ವಿಶಾಖಪಟ್ಟಣ

[52—

ಎಂಪೈರ್ ಆಫ್ ಇಂಡಿಯಾ ಲೈಫ್ ಅಸ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

(ಸ್ಥಾಪನೆಯಾದದ್ದು 1897.)

ಹಿಂದೂಸ್ಥಾನದಲ್ಲಿ ಪ್ರಾಮುಖ್ಯವೂ, ಜನಪ್ರಿಯವೂ ಆಗಿರುವ ಈ ಕಂಪೆನಿಯಲ್ಲಿ ನೀವು ಜೀವ ವಿಮೆ ಮಾಡುವುದಕ್ಕೆ ಇದೇ ತಕ್ಕ ಸಮಯ.

ಬೋನಸ್ ವರ್ಷ! ಬೋನಸ್ ವರ್ಷ!!

ಸಾಹಸವಂತರಾದ ಏಜೆಂಟರು ಬೇಕಾಗಿದೆ.

ಹೆಡ್ ಆಫೀಸು:—
ಎಂಪೈರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್,
ಬೊಂಬಾಯಿ.

ಬ್ರಾಂಚ್ ಆಫೀಸು:—
152-3 ಕಮರ್ಷಿಯಲ್ ಸ್ಟ್ರೀಟ್,
ಬೆಂಗಳೂರು.

52-17



26-23

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಿಗಾಂವ, ಮುಂಬಯಿ.

52-51

Printed & published by P. I. Belliappa at "Kodagu" Press Merca[ra] for "Kodagu" Ltd.

೩೩ ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ ಔಷಧಗಳು.

೧. ಧಾತುಪುಷ್ಟಿ ಲೇಹ.

ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕ ಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ಬಾಧೆ, ರಕ್ತ ಪಿತ್ತ, ಒಳ ಜ್ವರ, ಮಲ ಬದ್ಧತೆ, ಕೈಕಾಲು ಬಚ್ಚುವುದು ಮೊದಲಾದುವುಗಳು ಪೂರ್ಣ ಗುಣವಾಗಿ ಕಳೆದು ಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು.—ಕ್ರಯ ಡಬ್ಬಿ 1ಕ್ಕೆ 2—8—0 ಮೂರು ಡಬ್ಬಿಗಳಿಗೆ ರೂ. 7—0—0

೨. ಅಶೋಕಾರಿಷ್ಟ ಮತ್ತು ಮಾತ್ರೆ.

ಹೆಂಗಸರ ಮುಟ್ಟು ದೋಷಗಳು, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟ ನೋವು, ಸಂತಾನ ಹೀನತೆ, ಮೂರ್ಛೆ, ಮಲಬದ್ಧತೆ, ಒಳಜ್ವರ, ರಕ್ತಹೀನತೆ, ಕೈಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಅತಿ ಶೀಘ್ರದಲ್ಲಿಯೇ ಗುಣ ಪಡಿಸುವುದು. ಅಶೋಕಾರಿಷ್ಟ ಮತ್ತು ಮಾತ್ರೆಗಳು ಸಾವಿರಾರು ಹೆಂಗಸರಿಗೆ ಅಂತರಿಕ ಆರೋಗ್ಯವನ್ನು ಒದಗಿಸಿ, ಮನೋಭಿಲಾಷೆಯನ್ನು ಪೂರಯಿಸಿರುವವು.

ಕ್ರಯ 1 ಬಾಟ್ಲಿ ಔಷಧ, 1 ಡಬ್ಬಿ ಮಾತ್ರೆ ರೂ. 2 ಆ. 4.
3 ಬಾಟ್ಲಿ ಮತ್ತು ಡಬ್ಬಿಗಳಿಗೆ ರೂ. 6 ಆ. 4.

೩. ಮಲೇರಿಯಾ ನಿವಾರಣೆ.

ದಿನ ಬಿಟ್ಟು ಬರುವ ಜ್ವರ, ಮಲೆ ಜ್ವರ, 2 ಯಾ 3 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರ ಗಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರ ಗಡ್ಡೆಯನ್ನು ಕರಗಿಸಿ ಶಕ್ತಿಯನ್ನು ಉಂಟು ಮಾಡುತ್ತದೆ. ಬಾಟ್ಲಿ 1 ಕ್ಕೆ 1—8—0, 3 ಬಾಟ್ಲಿಗಳಿಗೆ 4—2—0.

೪. ಮೇಹ ಕುಠಾರ. ಇದು ಮೂತ್ರಸ್ಥಾನದಿಂದ ಕೆಂಪು, ಬಿಳಿದು, ಹಳದಿಯಂತೆ ಹೋಗತಕ್ಕ ಕೀವನ್ನೂ, ವ್ರಣವನ್ನೂ, ಉರಿಯನ್ನೂ ಗುಣಪಡಿಸುತ್ತದೆ. ಡಬ್ಬಿ 1 ಕ್ಕೆ ರೂ. 2—8—0. 3ಕ್ಕೆ ರೂ. 7.

೫. ಇಚ್ಛಾ ಭೇದಿ ಗುಟಿಕೆ. ಆಯಾಸವನ್ನು ಉಂಟುಮಾಡುವ ಸುಖ ವಿರೇಚಕ. ಬಾಟ್ಲಿ 1ಕ್ಕೆ 0—12—0 ಆಣೆ. 3 ಬಾಟ್ಲಿಗಳಿಗೆ 2—2—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ರವಾನಿಸಬಹುದು. ಕೆಟಲಾಗು ತರಿಸಿ ನೋಡಿರಿ.

ಎಂ. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್,
52—4 **ರಥಬೀದಿ, ಮಂಗಳೂರು, ದ. ಕನ್ನಡ.**

ರಘು ಕಷಾಯ ಮಲೆಜ್ವರಕ್ಕೆ:—ಇದು ಅಂಡಕ್ಸ್ಟಾರ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಮಲೆ ಜ್ವರ, ದಿನ ಬಿಟ್ಟು ಬರುವ ಜ್ವರ, 3—4 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ. 1—8—0; 3ಕ್ಕೆ ರೂ. 4—0—0; 6ಕ್ಕೆ ರೂ. 7—8—0; 12ಕ್ಕೆ ರೂ. 14

ಮಲೆ ಜ್ವರಕ್ಕೆ ರಘು ಕಷಾಯ

ಚಂದನಾಸವ:—ಇದು ಪ್ರಮೇಹ ಮೂತ್ರ ಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಹಿಂದಗೆಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು. ಇವುಗಳಿಗೆ ಪರಮ ಔಷಧಿ. ಬೆಲೆ ಬಾಟ್ಲಿ 1, 3, 5ಕ್ಕೆ ರೂ. 1—4—0 3—8—0; 6—12—0

ರೋಮನಾಶಿನಿ:— ಈ ಹುಡಿಯನ್ನು ನೀರಿನಲ್ಲಿ ಕಲಸಿ ಕೂದಲು ತೆಗೆಯಬೇಕಾದ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು. ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ. 1, 1 ಡಜನಿಗೆ 3—8—0

ಮನೋಲ್ಲಾಸಿನಿ ತೈಲ:— ತಲೆನೋವು, ತಲೆತಿರುಗುವುದು, ತಲೆಹುರಿ, ತಲ್ಲುರಿ, ಕಿವಿಯಿಂದ ಕೀವು ಸೋರುವುದು ಕಿವುಡುತನ, ಕಣ್ಣು ನೋವು, ಅತಿಸಾರ ನಿದ್ರೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು. ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಬೆಲೆ ಸೀಸೆಗೆ ರೂ. 1, 3 ಸೀಸೆಗೆ 2—10—0. ಒಂದು ದೊಡ್ಡ ಸೀಸೆಗೆ ರೂ. 2, 3 ಸೀಸೆಗಳಿಗೆ 5—8—0

ವಿಳಾಸ:—ಮನೋಲ್ಲಾಸಿನಿ ಕಂಪೆನಿ,
52—33 ಕೆಟಲಾಗು ತರಿಸಿ ನೋಡಿರಿ. 9. ಮಂಗಳೂರು.

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಎಂಬುವ ಸುಪ್ರಸಿದ್ಧ ದೇಶೀಯ ವಿಮೇ ಸಂಘ.

ಅಧ್ಯಕ್ಷರು:—ಮಾನನೀಯ ಸರ್ ಲಲ್ಲೂಭಾಯಿ ಸಾಮಲದಾಸ್, ಕೆಟಿ., ಸಿ. ಐ. ಇ., ಜೆ. ಪಿ., ಯವರು.

ಕೊಚ್ಚಿಕಾರ ಬ್ರದರ್ಸ್, ಮದ್ರಾಸು ಬ್ರಾಂಚು ಸೆಕ್ರೆಟರಿಗಳು.

1. ಭಾಗ್ಯವಂತರ ಭಂಡಾರ, ವ್ಯಾಪಾರಸ್ಥರ ಕೋಶಾಗಾರ, ಕುಟುಂಬದ ಸಂರಕ್ಷಣಾನಿಲಯ. ಬಡವರ ಜೀವನಾಧಾರ ಇದೇ ಜೀವ ವಿಮೆಯ ತತ್ವವು.

2. ಹಿಂದೂಸ್ಥಾನದ ನಿವಾಸಿಯರಲ್ಲಿ ವಿಮೆ ತೆಗೆಯಬೇಕೆನ್ನುವವರ ಪ್ರಯೋಜನಾರ್ಥವಾಗಿ ಈ ಕಂಪೆನಿಯು ಭಾರತೀಯರ ಉತ್ತಮವಾದ ಆಡಳಿತದಿಂದ ಖರ್ಚು ಹೋತೆ ಮಾಡಿ ಇಂಡಿಯಾ ಸರ್ಕಾರದ ಇಂಡಿಯನ್ ಟ್ರಸ್ಟ್ ಆಕ್ಟಿಗೆ ಒಳಪಟ್ಟು ಸರ್ಕಾರದ ಭದ್ರತೆಯಿಂದ ದೇಶೀಯರ ಸೇವೆಯಲ್ಲೇ ನಿರತವಾಗಿ ಹಿಂದೂಸ್ಥಾನದ ಎಲ್ಲಾ ಕಡೆಗಳಲ್ಲೂ ಅತಿ ಕೀರ್ತಿಯನ್ನು ಪಡೆದಿರುತ್ತೆ.

3. ಈ ಸ್ವದೇಶೀ ಕಂಪೆನಿಯು ಪೊಲಿಸಿದಾರರಿಗೆ ಪೊಲಿಸಿ ಅವಧಿ ಪೂರೈಸಿದನಂತರವಾಗಲೀ ಅಥವಾ ಮಧ್ಯದಲ್ಲಿ ಮರಣಾನಂತರ ವಾರೀಸುದಾರರಿಗಾಗಲೀ ಹೆಚ್ಚಿನ ಖರ್ಚಿಗೆ ಆಸ್ಪದ ಕೊಡದೆಯೂ, ದೀರ್ಘ ಸಮಯ ಕೆಡಿಸಿಕೊಳ್ಳದೆಯೂ ಶೀಘ್ರದಲ್ಲಿ ವಿಮೇ ಮೊಬಲಗನ್ನು ಲಾಭ ಸಹಿತ ಪಾವತಿಕೊಡುವುದರಲ್ಲಿ ಹೆಸರುಗೊಂಡಿದೆ.

4. ಭರತಖಂಡದ ಮಹನೀಯರಿಂದ ಸ್ಥಾಪಿಸಲ್ಪಟ್ಟ ದೇಶೀಯರಿಂದಲೇ ಅತಿ ಕಡಿಮೆ ಖರ್ಚಿನಿಂದ ನಡೆಸಲ್ಪಡುವ ಈ ಸ್ವದೇಶೀ ಕಂಪೆನಿಯಲ್ಲಿ ಇಂದು ಭಾಗಿಗಳಾಗಿ; **ಪತಿಪತ್ನಿಯರಿಗೆ ಮತ್ತು ವ್ಯಾಪಾರಸ್ಥರು ವಗೈರೆಗೆ ಏಕೀಭವಿಸಿ (ಜಾಯಿಂಟ್ ಲೈಫ್) ಪೊಲಿಸಿ ತೆಗೆದುಕೊಳ್ಳಲು ಈ ಕಂಪೆನಿಯು ತುಂಬಾ ಅನುಕೂಲಗಳನ್ನು ಕಲ್ಪಿಸಿರುತ್ತೆ.** ಇಂಥ ಸುಸಮಯವನ್ನು ಎಂದಿಗೂ ಕಳಕೊಳ್ಳಬಾರದು.

ಆಫೀಸು—
ಟೆಂಪಲ್ ಸ್ಟ್ರೀಟ್, **ಬಿ. ಎಸ್. ಐಯ್ಯಪ್ಪ,**
ಮಡಿಕೇರಿ. (26—11) **ಕೊಡಗು ಚೀಫ್ ಏಜೆಂಟ್.**

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು

೧೪ ಕ್ಯಾರೆಟ್ ಭಂಗಾರದ ನಿಬ್ಬು ಹಾಕಿದ ಖಾತ್ರಿಯುಳ್ಳ ಬಂದೋಬಸ್ತಾದ ಫೌಂಟೆನ್‌ಪೆನ್‌ಗಳು.	ಟೈಂ ಪೀಸ್‌ಗಳು.
ಪರಲ್ ಪಂಡರ್ ಫೌಂಟನ್‌ಪೆನ್ 1ಕ್ಕೆ ರೂ. 3 0 0	ಸ್ಟ್ಯಾಂಡ್ ಇರುವ ಸಣ್ಣ ಟೈಂಪೀಸ್ 1ಕ್ಕೆ 3 6 0
" " ಬಿಗ್ ಬ್ಯಾರೆಲ್ ಪೆನ್ 1ಕ್ಕೆ 3 3 0	ಜರ್ಮನ್ ಮೇಡ್ ಸಣ್ಣ ಟೈಂಪೀಸ್ 1ಕ್ಕೆ 2 2 0
" " ಸ್ಕ್ರೂ ಕ್ಯಾಪ್ ಪೆನ್ 1ಕ್ಕೆ 3 8 0	ಲಿಗಲಿಯೂ ಅಲಾರಂ ಟೈಂಪೀಸ 1ಕ್ಕೆ 6 9 0, & 6 15 0
" " ಬಿಗ್ ಬ್ಯಾರೆಲ್ ಸ್ಕ್ರೂ ಕ್ಯಾಪ್ ಮೊಚಲ್ ಕಲರ್ ಫೌಂಟನ್‌ಪೆನ್ 1ಕ್ಕೆ 3 14 0	ಲಿಗಲಿಯೂ ಸಣ್ಣ ಸೈಜಿನ ಅಲಾರಂ ಟೈಂಪೀಸ್ 1ಕ್ಕೆ 7 2 0
" ಮೊಡಲ್ ಕಲರ್ ಸ್ಕ್ರೂ ಕ್ಯಾಪ್ ಫೌಂಟನ್‌ಪೆನ್ 1ಕ್ಕೆ 4 2 0	ಲಿಗಲಿಯೂ ಅಲಾರಂ ಸಣ್ಣ ಟೈಂಪೀಸ್ ರೇಡಿಯಂ ಡೈಲಿನದು 1ಕ್ಕೆ 8 10 0
" " ಸೆಲ್ಫ್ ಫಿಲ್ಲಿಂಗ್ ಮಾಡಲ್ ಅಥವ ಬ್ರವುನ್ ಕಲರ್ ಫೌಂಟನ್‌ಪೆನ್ 1ಕ್ಕೆ 5 8 0	ಬಿಗ್‌ಬೆನ್ ಅಲಾರಂ ಟೈಂಪೀಸ್ 1ಕ್ಕೆ 9 6 0
ಬಿಗ್ ಸ್ಟ್ರಾಟ್ ಫೌಂಟನ್‌ಪೆನ್ 1ಕ್ಕೆ 10 8 0	ಬಿಗ್‌ಬೆನ್ ಅಲಾರಂ ಸ್ಟ್ಯಾಂಡ್ ಇರತಕ್ಕ ಖಾತ್ರಿಯಾದ ಟೈಂಪೀಸ್ 1ಕ್ಕೆ 13 4 0
ಶಾರ್ಪರ್ ಪೆನ್ 1ಕ್ಕೆ 14 6 0, & 20 10 0	ಖಾತ್ರಿಯುಳ್ಳ ಬಂದೋಬಸ್ತಾದ ಪಾಕೆಟ್ ವಾಚ್ 1ಕ್ಕೆ 5 10 0
ವ್ಯಾಕಬರ್ ಫೌಂಟನ್‌ಪೆನ್ 1ಕ್ಕೆ 3 8 0, & 3 12	ಬೇರೆ ನಮೂನೆಯಲ್ಲಿ ಎಚ್. ಹಾರ್ಡ್ ಕಂಪೆನಿ ಪಾಕೆಟ್ ವಾಚ್ 1ಕ್ಕೆ 12 4 0
ಸ್ವಾನ್ ಫೌಂಟನ್ ಪೆನ್ 1ಕ್ಕೆ 6 4 0, & 6 12 0	ನಿಕ್ಕಲ್ ಕೇಸ್ ಸಿಲಿಂಡರ್ ಮುವ್‌ಮೆಂಟ್ ಸಾಧಾರಣ ತರಹ
ವಾಟರ್‌ಮನ್ ಫೌಂಟನ್ ಪೆನ್ 1ಕ್ಕೆ 8 2 0, & 8 10 0	ರಿಸ್ಟ್ ವಾಚ್ 1ಕ್ಕೆ 5 4 0, 7 8 0, 10 0 0 & 12 8 0

ಪೂರ್ಣ ವಿವರಗಳಿಗೆ ಬರೆಯಿರಿ. ವಿಳಾಸ:—ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

52—27

ಕೊಡಗರ ಮದುವೆಯಲ್ಲಿ ಖೋತೆ.

ಅರಿಶಿನದು ತಾಸೆಂದು | ಪರಪೂರ್ಣವಾದುದೆಂದು |
ಹಿಗ್ಗಬೇಡೆಚ್ಚರಿಕೆ ||
ಹಿರಿಯರು ತೋರಿದ | ದಾರಿಯೆ ತಪ್ಪೆಂದು |
ಸಾರಬೇಡೆಚ್ಚರಿಕೆ ||
ಅಂಕವ ತಾನೆಂದು | ನೆರೆಯೊಳು ನೀನೆಂದು |
ಮೆರೆಯಬೇಡೆಚ್ಚರಿಕೆ ||
ಕೊರಗಿಸುವುದು ನಿನ್ನ | ಖೋತೆಯ ಮದುವೆಯು |
ನೀತಿ ಕೇಳೆಚ್ಚರಿಕೆ ||
ಮಿರುಕ ಖರ್ಚಿಯು | ಸಾರುತಾನೀನೆಂದು |
ದೂರಬೇಡೆಚ್ಚರಿಕೆ ||
ಪರಿಣಾಮವೇನೆಂದು | ಮಲಯೊಳ ಮದುವೆ |
ಮರೆಯಬೇಡೆಚ್ಚರಿಕೆ ||
ದಣಿದು ಹೋರಿಸಲು | ಭಾರಸಮ್ಪ್ರಿಯದ |
ನೇರಕೇಳೆಚ್ಚರಿಕೆ ||
ಕೇರಳು ಕೊಡವರು | ಮೀರಿದ ಕರ್ಚನ್ನು |
ಸಾರಿದರೆಚ್ಚರಿಕೆ ||
ಘೋರದ ದುಃಖವು | ಸಹಿಲಿಸ ಸಮೃದ್ಧಿಯು |
ಭಾರದರೆಚ್ಚರಿಕೆ ||
ಧೀರರು ಅಜ್ಜರು | ತೀರ ತಿಳಿದ್ದರು |
ನೇರದು ಎಚ್ಚರಿಕೆ ||
ಏರಲು ಸದದಿಂದ | ಮದುವೆಯ ದಿನಗಳು |
ಮುದವಿದೆ ಎಚ್ಚರಿಕೆ ||
ನವ್ವದು ದುಃಖವು | ತುರಿತದ ಮದುವೆಯು |
ಅರಿಯದಲೆಚ್ಚರಿಕೆ ||

ಅ. ಬೊ.

ಕರ್ನಾಟಕಕ್ಕೆ
ಪಂಡಿತ ಜವಾಹರಲಾಲರ ಸಂದೇಶವು.

ಪಂಡಿತ ಜವಾಹರಲಾಲರು ತಮ್ಮ ನಾಲ್ಕು ದಿನಗಳ ಅಂತ ಪ್ರವಾಸವನ್ನು ತೀರಿಸಿಕೊಂಡು ಕರ್ನಾಟಕವನ್ನು ಹೋಗುವಾಗ ಕರ್ನಾಟಕದ ಜನತೆಗೆ ಕೆಳಗಿನ ಸಂದೇ ಕೊಟ್ಟರು.

ನನ್ನ ಸಂಗಡಿಗರಾದ ಡಾಕ್ಟರ ಹರ್ಡೀಕರರ ಬಿನ್ನಪದಗೆ ಹಿಂದೂಸ್ಥಾನೀ ಸೇವಾದಲದ ಮೊದಲನೇಯ ಪದ ನ ಸಮಾರಂಭಕ್ಕಾಗಿಯೂ, ದಲದಲ್ಲಿ ಶಿಕ್ಷಣವನ್ನು ಪಡೆದ ಸೈನಿಕರಿಗೆ ಪ್ರಶಸ್ತಿ ಪತ್ರಗಳನ್ನು ಕೊಡುವದಕ್ಕಾಗಿಯೂ ಕರ್ನಾಟಕಕ್ಕೆ ಬಂದೆನು. ಸಂಯುಕ್ತ ಪ್ರಾಂತದ ಸಂಯವಾದ ಸದ್ಯಸ್ಥಿತಿಯ ಬಿಕ್ಕಟ್ಟಿನಲ್ಲಿ ಸಿಕ್ಕಿದುದರಿಂದ ಸಮಯಾನುಕೂಲವಾಗದಿದ್ದರೂ ಕೊನೆಗೆ ಕರ್ನಾಟಕದ ಒಂದು ಭಾಗವನ್ನಾದರೂ ಕಾಣಲಿಕ್ಕೆ ಅನುವಾಯಿತೆಂ ಆನಂದದ ಸಂಗತಿ. ಈ ಪ್ರಾಂತದ ಸಂಚಾರವನ್ನು ಳ್ಳುವದು ಮನಸ್ಸಿನಲ್ಲಿ ಇರದಿದ್ದರೂ ನನ್ನ ಸ್ನೇಹಿತರ ಮಂಗಡಿಗರ ಒಲವಿನ ಒತ್ತಾಯಕ್ಕೆ ಇಲ್ಲೆನ್ನುವದು ನನ್ನಿಂ ಲ್ಲ. ಆದರೂ ನನ್ನ ಅಪೇಕ್ಷೆಯಂತೆ ಎಲ್ಲ ಸ್ಥಳಗಳ ಂದರ್ಶಿಸುವದು ಸಾಧ್ಯವಾಗಲಿಲ್ಲ. ಕ ಪ್ರಾಂ ಕಾಂ ಕಮಿಟಿಯ ಅಧಿಕಾರಿಗಳಿಗೂ, ಡಾ. ಹರ್ಡೀಕರರಿಗೂ ವಾದಷ್ಟು ಹೆಚ್ಚು ಮುಖ್ಯ ಊರುಗಳನ್ನು ಕಾಣುವಂ ಪ್ರವಾಸದ ಕಾರ್ಯ ಕ್ರಮವನ್ನೇರ್ಪಡಿಸಲು ತುಂಬಾ ನರಿಯಾಯಿತೆನ್ನುವದನ್ನು ನಾನು ಬಲ್ಲೆ. ಅವರು ತಮ್ಮ ಯತ್ನ ಮಾಡಿದರೂ, ಒಳ್ಳೇ ಕಾರ್ಯವು ಜರಗಿದ ಊರುಗಳಿಗೆ ಹೋಗುವದು ಎಷ್ಟು ಮಾತ್ರಕ್ಕೂ ಶಕ್ಯ ದಿಂದ ನಾವೆಲ್ಲರೂ ಮನಸ್ಸಿನಲ್ಲಿ ಮರುಗಿದೆವು. ಅಪರಾಧಿಯು ನಾನಲ್ಲದೆ ಇನ್ನಾರೂ ಅಲ್ಲ. ಆದ ಎಲ್ಲರ ಕ್ಷಮಾಪಣೆ ಬೇಡುವೆನು. ನಾನು ಆ ಹೋಗಬೇಕಾದ ಊರಿನ ದಾರಿಯಲ್ಲಿರುವ ಸ್ಥಳಗ ಗೆ ಭೆಟ್ಟಿಕೊಟ್ಟು ಸಂದರ್ಶಿಸಿದೆನಲ್ಲದೆ ಸುತ್ತು ಮುತ್ತು ಎಲ್ಲಿಯೂ ನನಗೆ ಅನುಕೂಲವಾಗಲಿಲ್ಲ. ಡಾ. ಹರ್ಡೀಕರರಿಗೂ ಪ್ರಾಂ. ಕಮಿಟಿಯ ಅಧ್ಯಕ್ಷರಾದ ಶ್ರೀ. ಕರ್ನಾಡ ಯರಿಗೂ ಕರ್ನಾಟಕ ದಲಾಧಿಪತಿಗಳಾದ ಶ್ರೀ. ರಾಯರಿಗೂ ನನ್ನ ಪ್ರವಾಸದ ಕಾರ್ಯಕ್ರಮ ವಹಿಸಿದ ಇನ್ನಿತರ ಕೆಲಸಗಾರರಿಗೂ ನಾಗಿದ್ದೇನೆ.

ನಾಲ್ಕು ದಿವಸಗಳ ವಸತಿಯು ಕೃತಿ ಅಲ್ಪದಿಂದ ತುಂಬಿ ಹೋಗಿತ್ತು. ಇಲ್ಲಿಯವರು ಮುಂದೆ ಬರಬಹು ಗರೂ ಎದುರಿಸುವ ಸಿದ್ಧತೆಯನ್ನು ಎದೆಯುಬ್ಬಿ ಬಂದಿತು. ಹಾ ಪಟ್ಟಣಗಳಲ್ಲಿಯೂ ನೆರೆದ ಜ ಗೆ ನಾನಂದಾಶ್ಚರ್ಯವಾಯಿ ಲೂ ಪ್ರೇಮದಿಂದ ಮುತ್ತಿ ತ್ಸಾಹಗಳು ಕೇವಲ ನನ್ನಂ ಗಿಯಲ್ಲ. ಆದರೆ ಅವರ ದ ಒಂದು ದರ್ಶನವನ್ನೇ ನ ಚೀನ ಚಂಚಲೆಯ ಪ್ರಭಾವದಿಂ ಂಡಿದ ಈ ಪ್ರಾಂತದ ಸ್ಮರಣೆ ನೇ ನಮ್ಮನ್ನೆದುರಿಸಬಹು ಎದೆಗೊಟ್ಟು ನಿಲ್ಲು ಕರ್ನಾಟಕರು ತಪ್ಪಲಾರರೆಂಬ ಮನವರಿಕೆಯಿಂದಲೂ ಇಲ್ಲಿಂದ ಹೋಗುತ್ತಿದ್ದೇವೆ. ದಿವ್ಯವಾದ ತಮ್ಮ ಚರಿತ್ರೆಗೆ ಕರ್ನಾಟಕರು ಘನತೆಯ ಇನ್ನೊಂದು ಪುಟವನ್ನು ಜೋಡಿಸಲಿ.

ತಾ. ೨೦—೧೨—೩೧ ಜವಾಹಿರಲಾಲ ನೆಹರು.

ಗೋಣಿಕೊಪ್ಪಲು ವನಗಳ ಪ್ರದರ್ಶನದ ಮೀಟಿಂಗು.

ತಾ. 22—12—1931ರಲ್ಲಿ ಗೋಣಿಕೊಪ್ಪಲು ಟೌನ್ ಹಾಲ್‌ನಲ್ಲಿ ಕೂಡಿದ ದಕ್ಷಿಣ ಕೊಡಗಿನ ದನಗಳ ಮತ್ತು ತರಕಾರಿಗಳ ಪ್ರದರ್ಶನದ ಜನರಲ್ ಮೀಟಿಂಗಿನ ಪ್ರೋಸೀಡಿಂಗ್ಸ್.

ಅಕಾಲವಾಗಿ ಸುರುವಾದ ಮಳೆಯ ದೆಸೆಯಿಂದಲೂ ಮತ್ತು ಅನೇಕ ಜನರು ಬೆಳೆ ಕುಯಿಲು ಕೆಲಸಕ್ಕೆ ಸೇರುವಾಗಿದ್ದರಿಂದಲೂ ಈ ದಿನದ ಮೀಟಿಂಗಿಗೆ ಸುಮಾರು 50 ಜನರು ಮಾತ್ರ ಹಾಜರಿದ್ದರು. ಈ ದಿನದ ಮೀಟಿಂಗಿಗೆ ಮೆ. ಕೊಂಗಂಡ ಬಿ. ಗಣಪತಿ ಯಂ. ಯಲ್. ಸಿ. ಯವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು.

ಮುಂದಿನ ದನಗಳ ಮತ್ತು ತರಕಾರಿಗಳ ಪ್ರದರ್ಶನದ ಬಗ್ಗೆ ಕೆಲಸ ನಡೆಸಲು 22 ಮಹನೀಯರುಗಳು ಕಮಿಟಿ ಮೆಂಬರುಗಳಾಗಿ ಆರಿಸಲ್ಪಟ್ಟರು.

ಈ ಕಮಿಟಿ ಮೆಂಬರುಗಳಿಗೆ ಬೇಕಾದ ಸ್ಥಳಗಳಲ್ಲಿ ಚಂದಾ ವಗೈರೆ ವಸೂಲು ಮಾಡುವ ಕೆಲಸಗಳಿಗೆ ಬೇಕಾಗುವ ಮೆಂಬರುಗಳನ್ನು ಚುನಾಯಿಸಿಕೊಳ್ಳುವ ಹಕ್ಕು ಕೊಡಲಾಯಿತು.

ಕಳೆದ 2 ವರ್ಷಗಳಿಂದ ಮೇಲ್ಕಂಡ ಪ್ರದರ್ಶನಗಳನ್ನು ನವಂಬರ್, ಡಿಸಂಬರ್ ಮಾಹೆಗಳಲ್ಲಿ ಮಾಡುವುದರಿಂದ ಜನರಲ್ಲಿ ಹಣ ಕಾಸುಗಳಿಲ್ಲದೆ ಪ್ರದರ್ಶನಗಳಲ್ಲಿ ವ್ಯಾಪಾರ ನಡೆಯುವುದಿಲ್ಲವಾಗಿ ತಿಳಿಸಲ್ಪಟ್ಟಿದರಿಂದ ರೈತರ ಅನುಕೂಲಕ್ಕಾಗಿ ಬರುವ 1932ನೇ ಇಸವಿ ಫೆಬ್ರವರಿ ತಾ. 19, 20 ಮತ್ತು 21 ಈ ಮೂರು ದಿನಗಳಲ್ಲಿ ಪ್ರದರ್ಶನವನ್ನು ನಡೆಸುವಂತೆ ತೀರ್ಮಾನವಾಯಿತು.

ಪ್ರೆಸಿಡೆಂಟರು ಕೊಡಗು ಕಮಿಷನರ್ ಸಾಹೇಬರವರನ್ನು ಪ್ರದರ್ಶನದ ಖರ್ಚಿನ ಬಗ್ಗೆ 100 ರೂ. ಕೊಡಬೇಕೆಂದು ಪತ್ರ ಮೂಲಕ ಬರೆದು ಕೇಳಬೇಕೆಂದು ಸರ್ವ ಸಮ್ಮತದಿಂದ ತೀರ್ಮಾನವಾಯಿತು.

30 ಚಂದಾ ಪಟ್ಟಿಗಳನ್ನೂ, 2000 ನೋಟೀಸು ಫಾರಂಗಳನ್ನೂ ಪ್ರಿಂಟು ಮಾಡಿಸುವಂತೆ ಸೆಕ್ರೆಟರಿಯವರನ್ನು ಕೇಳಿಕೊಳ್ಳಲಾಯಿತು.

ಮೇಲಿನ ಪ್ರದರ್ಶನಗಳ ತಾರೀಕುಗಳನ್ನು ವಿವರವಾಗಿ ಪತ್ರ ಮೂಲಕ ಕೊಡಗು ಕಮಿಷನರ್ ಸಾಹೇಬರವರಿಗೂ ಮತ್ತು ಡಿಪ್ಯುಟಿ ಡೈರೆಕ್ಟರ್ ಸಾಹೇಬರವರಿಗೂ ತಿಳಿಸುವಂತೆ ಪ್ರೆಸಿಡೆಂಟರನ್ನು ಕೇಳಿಕೊಳ್ಳಲಾಯಿತು.

ಅಧ್ಯಕ್ಷರು ಪ್ರದರ್ಶನದಿಂದ ಉಂಟಾಗುವ ಪ್ರಯೋಜನಗಳನ್ನು ಸಾಂಗವಾಗಿ ವಿವರಿಸಿ ಮುಂದಿನ ಏರ್ಪಾಡುಗಳನ್ನು ಚೆನ್ನಾಗಿ ಮಾಡುವಂತೆ ಕಮಿಟಿಯವರನ್ನು ಕೇಳಿಕೊಂಡ ಮೇಲೆ ಅಧ್ಯಕ್ಷರಿಗೆ ವಂದನೆಯಿಂದ ಸಭೆ ಬರಖಾಸ್ತು ಮಾಡಲಾಯಿತು.

ಕೆ. ಬಿ. ಗಣಪತಿ.
(ಅಧ್ಯಕ್ಷರು)

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಆಯುರ್ವೇದ ಔಷಧಾಲಯ.

ಕೊಡಗಿನ ಡಿಸ್ಟ್ರಿಕ್ಟು ಬೋರ್ಡು ಮೆಂಬರುಗಳಲ್ಲಿ ವಿನಂತಿ — ಒಂದು ತಿಂಗಳ ಹಿಂದೆ ಭಾಗಮಂಡಲ ಆಯುರ್ವೇದ ಔಷಧಾಲಯದ ವಿಷಯದಲ್ಲಿ ಪ್ರಕಟಗೆಯಾದ ಒಂದು ಚಾತ್ಮಿಯನ್ನು ನೋಡಿದೆನು. ಭಾಗಮಂಡಲ ಆಸ್ಪತ್ರೆಯು ಬಹಳ ಚೆನ್ನಾಗಿ ನಡೆಯುತ್ತಿದೆಯೆಂದೂ, ಕಾಯಿಲೆಸ್ಥರು ಬಹಳವಾಗಿ ಚಿಕಿತ್ಸೆ ಹೊಂದುತ್ತಿರುವರೆಂದೂ ಕಮಿಷನರು ಸಹ ನೋಡಿ ಬಹಳ ಶ್ಲಾಘಿಸಿದ್ದಾರೆಂದೂ ತಿಳಿಯುತ್ತೇನೆ. ಆದರೆ ನಮ್ಮ ಸಿವಿಲ್ ಸರ್ಜನರು ಈ ವಿಷಯ ಯಾವ ನಿಗಳೆಗದು ಕೊಳ್ಳುವುದಿಲ್ಲವೆಂದೂ ಸಹ ತಿಳಿದು ವ್ಯಸನವಾಯಿತು.

ಇಡೀ ಹಿಂದೂದೇಶವೇ ಸ್ವದೇಶ, ಸ್ವಭಾಷೆ, ಸ್ವರಾಜ್ಯಕ್ಕೆ ಹೋರಾಡುತ್ತಿರುವ ಈ ಸಮಯದಲ್ಲಿ ನಮ್ಮ ಡಿಸ್ಟ್ರಿಕ್ಟು ಬೋರ್ಡು ಮೆಂಬರುಗಳು ಮತ್ತು ಮುನ್ಸಿಪಾಲಿಟಿಯವರು ಈ ನಮ್ಮ ವೇದದ ಪುರಾತನದ ಆಯುರ್ವೇದ ಔಷಧವನ್ನು ಮತ್ತು ಔಷಧಾಲಯವನ್ನು ಪ್ರಚಾರಕ್ಕೆ ತರಲು ಮುಂದಕ್ಕೆ ಬಾರಬಾರದೇ? ಸಿವಿಲ್ ಸರ್ಜನರಂಥವರು ಸ್ವದೇಶಾಭಿಮಾನದಿಂದ ಇಂಗ್ಲಿಷ್ ನಮೂನೆಯ ಆಸ್ಪತ್ರೆಗಳು ಮತ್ತು ಔಷಧಾಲಯಗಳೇ ಒಳ್ಳೆಯವೆಂದು ಹೇಳಬಹುದು. ಆದರೆ ಅವರು ಯಾರ ಹಣದಿಂದ ತಮ್ಮ ಸಂಬಳವನ್ನು ಹೊಂದಿಕೊಳ್ಳುತ್ತಿರುವುದು ಎಂಬುದನ್ನು ನೋಡಬೇಕಾಗಿದೆ. ನಮ್ಮ ಬಡ ದೇಶದ ಜನರ ಉತ್ಪತ್ತಿಯಿಂದ ಸಂಬಳ ಪಡೆಯುತ್ತಿರುವಾಗ ದೇಶೀಯರಿಗೆ ಅನುಕೂಲ ಮತ್ತು ಉತ್ತೇಜನ ಕೊಡುವ ಎಲ್ಲಾ ವಿಷಯಗಳಲ್ಲಿಯೂ ಅವರು ...

ಭಾಗಮಂಡಲದಂಥ ಮೂಲೆಯಲ್ಲಿ ಇಂಥಾ ಆಯುರ್ವೇದ ಔಷಧಾಲಯವನ್ನು ತೆರೆಯಲಿಕ್ಕೆ ಏರ್ಪಾಡು ಮಾಡಿದಂಥಾದರ ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಕಡಿಮೆ ಮಾಡುವುದು ಸರಿಯಲ್ಲ. ಇಂಥಾವುಗಳನ್ನು ಮಡಿಕೇರಿಯೂ ವೀರರಾಜಪೇಟೆಯಂಥ ಮುಖ್ಯ ಪಟ್ಟಣಗಳಲ್ಲಿ ತೆರೆದು, ಆಯುರ್ವೇದ ಔಷಧಗಳನ್ನು ಪ್ರಚಾರಕ್ಕೆ ತರುವುದು ಅತ್ಯವಶ್ಯವಿದೆ. ಈಗಾಗಲೇ ಮುನ್ಸಿಪಾಲಿಟಿಯವರು ಆಸ್ಪತ್ರೆಗಳಲ್ಲಿ ಕೊಡುತ್ತಿರುವ ಹಣದ ಜೊತೆಗೆ ಸರ್ಕಾರದವರು ಯೂ ಡಿಸ್ಟ್ರಿಕ್ಟು ಬೋರ್ಡಿನವರು ಕೊಂಚ ಹಣ ಸೇರಿಸಿದರೆ ಒಂದು ನಾಜೂಕಾದ ಆಸ್ಪತ್ರೆಯನ್ನು ಮಡಿಕೇರಿ ಯೂ ವೀರರಾಜಪೇಟೆಯಲ್ಲಿ ತೆರೆಯ ಬಹುದು. ಅಲ್ಲದೆ ಆಯುರ್ವೇದದಲ್ಲಿರುವ ಕಲಿಯತಕ್ಕ ಒಳ್ಳೆ ವಿಷಯಗಳನ್ನು ಇಂಗ್ಲಿಷ್ ಪದ್ಧತಿಗೂ, ಇಂಗ್ಲಿಷ್ ಪದ್ಧತಿಯಲ್ಲಿ ಕಲಿಯತಕ್ಕ ವಿಷಯಗಳನ್ನು ಆಯುರ್ವೇದಕ್ಕೂ ಕಲೆಸಿ ಕೆಲಸ ಮಾಡಲು ಅನುಕೂಲವಿದೆ. ಮುನ್ಸಿಪಾಲಿಟಿ ಮತ್ತು ಡಿಸ್ಟ್ರಿಕ್ಟ್ ಬೋರ್ಡು ಮೆಂಬರಾಳುಗಳು ಇಂಥಾದ್ದಕ್ಕೆ ಗಮನಕೊಡಬೇಕಾದದ್ದು ಅತ್ಯವಶ್ಯವಿದೆ.

ಅನೇಕ ವರ್ಷ ತರಬೇತಿ ಹೊಂದಿ ಚಿನ್ನದ ಪದಕಗಳನ್ನೂ, ಯೋಗ್ಯತಾ ಪತ್ರಗಳನ್ನೂ ಪಡೆದಿರುವ ಆಯುರ್ವೇದ ಡಾಕ್ಟರಿಗೆ ಒಬ್ಬ ಐವತ್ತು ರೂಪಾಯಿಗಳ ಸಂಬಳವೂ, ಇಂಗ್ಲಿಷ್ ಪದ್ಧತಿಯಲ್ಲಿ ತರಬೇತಾದ ಎಲ್. ಯಂ. ಪಿ. ಯವರಿಗೆ 75 ರೂ ಸಂಬಳದಿಂದ ಕೆಲಸ ಸುರುಮಾಡಿಸುವುದನ್ನು ನೋಡಿದರೆ ಸರ್ಕಾರದ ಅಭಿಪ್ರಾಯವು ಕತ್ತಲೆಗೆ, ಆದರೆ ಮೇಲಿನ ನಮ್ಮ ಮೆಂಬರುಗಳಿಗೆ ಇರುವ ಸಹಾನುಭೂತಿಯೂ ತಿಳಿಯುತ್ತೆ. ಆಯುರ್ವೇದ ಔಷಧಾಲಯವು ಚೆನ್ನಾಗಿ ನಡೆಯಬೇಕಾದರೆ ಡಿಸ್ಟ್ರಿಕ್ಟ್ ಬೋರ್ಡಿನ ಆಸ್ಪತ್ರೆಗಳಿಗೆ ಕೊಟ್ಟಂಥ ಎಲ್ಲಾ ಸಲಕರಣೆಯನ್ನು ಕೊಟ್ಟು ಸಬ್ ಅಸಿಸ್ಟೆಂಟ್ ಸರ್ಜನರ ಗ್ರೇಡಿಗೆ ಆಯುರ್ವೇದ ಡಾಕ್ಟರರ ಗ್ರೇಡನ್ನು ತರುವುದಲ್ಲದೆ, ಇಂಥಾದ್ದನ್ನು ಹೆಚ್ಚಿನ ಪ್ರಚಾರಕ್ಕೆ ತರುವ ಉದ್ದೇಶದಿಂದ ಪಟ್ಟಣಕ್ಕೆ ತರುವುದು ಅತ್ಯಾವಶ್ಯವಿದೆ.

ನಮ್ಮ ಡಿಸ್ಟ್ರಿಕ್ಟ್ ಬೋರ್ಡು ಮೆಂಬರುಗಳು ಈ ವಿಷಯದಲ್ಲಿ ಪುನಃ ಎಚ್ಚತ್ತು ಆಯುರ್ವೇದ ಔಷಧಾಲಯದ ಸ್ಥಿತಿಯನ್ನು ಉತ್ತಮ ಸ್ಥಿತಿಗೆ ತಂದು ಕೊಡಗಿನಲ್ಲಿ ಇನ್ನೂ ಅನೇಕ ಕಡೆಗಳಲ್ಲಿ ಈ ಔಷಧಾಲಯವನ್ನು ತೆರೆಯಲಿಕ್ಕೆ ತೊಂದರೆ ತೆಗೆದುಕೊಳ್ಳುವರೆಂದು ನಂಬಿ ಈ ವಿನಂತಿಯನ್ನು ಮಾಡುತ್ತೇನೆ.

'ಹಿತಾಭಿಲಾಷಿ

ಭಂಗಾರದ ಕೈಗಡಿಯಾರ.



ಈ ಚಿತ್ರದಲ್ಲಿ ಕಾಣುವ ಭಂಗಾರದ ಕೈಗಡಿಯಾರವು ಬಹು ಬಲಿಷ್ಟವಾದ (ಸ್ವಿಸ್ ಮೇಡ್) ಲೀವರ್ ಸಾಮಾನುಗಳಿಂದ ತಯಾರಾದವು. ಸರಿಯಾದ ಗಂಟೆಯನ್ನು ತೋರಿಸುವವು. ಒಳಗಡೆ ರಂಧ್ರಗಳು ಇಟ್ಟಿವೆ. ಇದರ ಬಣ್ಣವು ಭಂಗಾರಕ್ಕೆ ಸರಿಯಾಗಿರುವದು. ಇದನ್ನು ಈ ವಾರದಲ್ಲಿ ತರಿಸಿಕೊಳ್ಳುವವರಿಗೆ ಒಂದು ವಜ್ರದ ಉಂಗುರ, ಒಂದು ರೋಲ್ಡ್ ಗೋಲ್ಡ್ ಭಂಗಾರದ ಕತ್ತಿನ ಹಾರ (ನೆಕ್‌ಲೇಸ್), ಒಂದು ಟೇಬಲ್ ಟೈಂಪೀಸ ಇನಾಮಾಗಿ ಕೊಡುವೆವು. 2 ಗಡಿಯಾರಗಳಿಗೂ ಖಾತ್ರಿಯಾದ 4 ವರ್ಷ ಗ್ಯಾರಂಟಿ ಪತ್ರ ಸಹ ಕಳುಹಿಸುವೆವು.

3 ಬಹುಮಾನಗಳ ಸಹಿತ ರಿಸ್ಟ್‌ವಾಚ 1 ಕ್ಕೆ 6—8—0.

ವಿಳಾಸ:— ಸಿಟಿ ಮಾರ್ಟ್,

12—2 168, ಜೈನಾ ಬಜಾರ್, ಮದರಾಸ.

British Photo Camera Rs. 4—8—0

ಫೋಟೋ ಕ್ಯಾಮರಾ.

ಈ ಫೋಟೋ ಕ್ಯಾಮರಗಳು ವಿಲಾಯಿತಿಯಲ್ಲಿ ತಯಾರಾದವು. ಈ ಕ್ಯಾಮರಗಳಲ್ಲಿ ಒಬ್ಬರ ಸಹಾಯವಿಲ್ಲದೆ ಎಷ್ಟು ಮಾದರಿಯ ಫೋಟೋಗಳನ್ನು ತೆಗೆಯಬಹುದು. ಈ ಕ್ಯಾಮರಾ ಒಂದು ಇದ್ದರೆ ಬೇಕಾದವರಿಗೆ ಫೋಟೋ ತೆಗೆದು ಹಣ ಸಂಪಾದನೆ ಮಾಡಬಹುದು. ಪೋಸ್ಟ್ ಕಾರ್ಡಿನ ಸೈಜಿನಲ್ಲಿ ತೆಗೆಯಬಹುದು. ಫೋಟೋ ತೆಗೆಯುವುದನ್ನು ಕಲಿತುಕೊಳ್ಳಬೇಕಾಗಿಲ್ಲ. ಕ್ಯಾಮರಾ ಜೊತೆಯಲ್ಲಿಯೇ ಫೋಟೋ ತೆಗೆಯುವ ವಿಧಾನವನ್ನು ಕಳುಹಿಸುವೆವು.



ಇದನ್ನು ತರಿಸಿಕೊಳ್ಳುವವರಿಗೆ ಟೇಬಲ್ ಟೈಂಪೀಸ್ ಬಹುಮಾನವಾಗಿ ಕಳುಹಿಸುವೆವು. ಈ ಟೇಬಲ್ ಟೈಂಪೀಸ್‌ಗಳೂ ಈ ಚಿತ್ರಗಳಲ್ಲಿ ಇರುವಂತೆಯೇ ಇರುವವು. ಡಬ್ಬಲ್ ಪಾಲೀಷಿನ ನಿಕ್ಕಲ್ ಕೇಸೂ, ಬಲಿಷ್ಟವಾದ ಲೀವರ್ ಮೂವ್‌ಮೆಂಟ್ಸ್‌ಗಳಿಂದ ತಯಾರಿಸಲ್ಪಟ್ಟವು, ಸರಿಯಾದ ಕಾಲವನ್ನು ತೋರಿಸುವವು. ಇವಕ್ಕೆ 5 ವರ್ಷಗಳ ಗ್ಯಾರಂಟಿ ಕೊಡುವೆವು. ಕ್ರಯ ಫೋಟೋ ಕ್ಯಾಮರಾ ಬಹುಮಾನ ಟೈಂಪೀಸ್ ಸಹಿತ ರೂ. 4—8—0.

The Legal Trading Co.

12—2 P. B. 243. Madras.

Reg. No. M. 1550.
If not delivered please return to
"KODAGU" OFFICE MERCARA.

ಕೊಡಗು.

ಸತ್ಯೇನ ಭೂತದಯಯಾ ವಿದ್ಯಾ ಶೀಲ ಪ್ರಯುಕ್ತಯಾ । ಏಕ ಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ

ವಾರ್ಷಿಕ ಚಂದಾ ರೂ. ೩—೮—೦.

ಸಂಪಾದಕ—ಪಂದ್ಯಂಡ ಐ. ಬೆಳ್ಳಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೧	ಮಡಿಕೇರಿ, ಸನ್ ೧೯೩೨ನೇ ಇಸವಿ ಜನವರಿ ತಾರೀಕು ೧ ನೇ ಶುಕ್ರವಾರ.	ಸಂಚಿಕೆ ೩೦

589. Gemset Brooch.


629. Bracelets.


592. Gemset Brooch.

583. Nose-screw.

561. Ear-rings.

V. Subramaniajer Jeweller,

Post Box 423, Triplicane, P. O., MADRAS.

CATALOGUE FREE ON ENQUIRY.



711. Gold Brooch.

713. Gold Brooch.

52—6



ಕೋವಿಗಳು, ಕತ್ತಿಗಳು, ಬಚೀಗಳು, ತೋಟೆಗಳು, ಕೇಗ್ಗುಗಳು, ಮದ್ದು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS.
Largest Importers of Firearms and Ammunition
Cheapest priced firm in India,
24—15 **210 Abdul Rehman Street, BOMBAY.**

ಕಾಗದ ಬರೆದರೆ ದಿಗಿನ ಕ್ಯಾಟಲಾಗ ಮಫತಿಯಾಗಿ ಕಳುಹಿಸಲ್ಪಡುವುದು.

ಬಾಲಾರ್ಕಮಧು.

ನಿಮ್ಮ ಮಕ್ಕಳ ಸೌಂದರ್ಯವನ್ನು ನೋಡಬೇಕಾದರೆ ... ಗುಣವಿಶ್ಚ ಬಾಲಾರ್ಕ ಮಧುವನ್ನು ಕೊಡಿರಿ. ಮಕ್ಕಳ ...



ಪೀಡಿತರಾಗಿ ಎಷ್ಟೇ ಕ್ಷೀಣವಾಗಿದ್ದರೂ ... ದರಿಂದ ಬಹು ... ಯೂ, ಬಲವೂ ಬರುವದು. ದಿನ ದಿನಕ್ಕೆ ಆರೋಗ್ಯವೂ, ... ಡ್ಡುವದು. ಇದು ಮಧುರವಾಗಿದೆ. ಚಿಕ್ಕ ಮಕ್ಕಳು ... ಸೇವಿಸುತ್ತಾರೆ ಶೀಸೆ 1 ಕ್ಕೆ 12 ಆಣೆ ... ಡ. ಖ. 12 ಆಣೆ. ... ತ್ತು ದೊಬಲಗು ಕಳು... ಆರ್ಡರ್ ಜೊತೆಯಲ್ಲಿ ಅಡ್ವಾನ್ಸ ... ದಾರರುಗಳನ್ನು ಗಮನಿಸ ಕಳ್ಳುದ್ದು. ಅಡ್ವಾನ್ಸ್ ಇಲ್ಲದ ಆರ್...

ಯಂ. ವಿ. ಪ್ರಸಾದಿಕ ಔಷಧಾಲಯ, ಶಿ... (...)

52—50



ಈ ಗಡಿಯಾರಗಳು ಈ ನಕ್ಷೆಯಲ್ಲಿರುವಂತೆಯೇ ಇರುವವು. ನಮ್ಮ ಸ್ವಂತ ಆರ್ಡರ್ ಮೇಲೆ ಸೀಮೆಯಲ್ಲಿ ತಯಾರಿಸಿ ತರಿಸಿದ್ದೇವೆ. ಸರಿಯಾಗಿ ಘಂಟೆಯನ್ನು ತೋರಿಸುತ್ತವೆ. ಇದುವರೆಗೂ ಯಾರೂ ಈಗಿನ ಕಡಮೆ ಬೆಲೆಗೆ ತರಿಸಿರುವವರೇ ಇಲ್ಲ. ಅದರಿಂದ ಬೇಗನೆ ಬರೆದು ತರಿಸಿಕೊಳ್ಳಿರಿ ನಮ್ಮಲ್ಲಿ ಸ್ವಲ್ಪವೇ ಇರುತ್ತವೆ. ಇವಕ್ಕೆ ಖಾತ್ರಿಯಾಗಿ 3 ವರ್ಷ ಗ್ಯಾರಂಟಿ ಕೊಡುತ್ತೇವೆ. ಕ್ರಯ 1 ಕ್ಕೆ 4—4—0.

ವಿಳಾಸ:—ಕೆ. ಎನ್. ಬಿನ್ಸನ್ ಅಂಡ್ ಕೊ,
12—2 ಪೋ ॥ ನಂ ॥ 1246, ಮದರಾಸು.

1932 ನೇ ಇಸವಿಯ ಪಾಕೆಟ್ ಡೈರಿ ಇನಾಂ.

ಈ ಪೇನಾವನ್ನು ಕೊಳ್ಳುವವರಿಗೆ 1932 ನೇ ಇಸವಿಯ ಪಾಕೆಟ್ ಡೈರಿ ಇನಾಮಾಗಿ ಕೊಡುವೆವು. ಈ ಡೈರಿಯಲ್ಲಿ ಎಲ್ಲಾ ರಾಜರುಗಳ ಹೆಸರೂ, ಗವರ್ನರುಗಳ ಹೆಸರೂ, ಯಾರ್ದ್ಯಾರಿಗೆ ಎಷ್ಟು ಗುಂಡುಗಳು ಹಾರಿಸಬೇಕೆಂಬುದೂ ಮತ್ತು ರೈಲು, ಟಪಾಲು, ರಿಜಿಸ್ಟ್ರೇಶನ್ ಚಾರ್ಜುಗಳೂ, ಪಂಚಾಂಗ, ಎಲ್ಲಾ ಮತಸ್ಥರ ಹಬ್ಬಗಳೂ, ಸರ್ಕಾರಿ ರಜಗಳೂ ಕನ್ನಡ, ಇಂಗ್ಲೀಸು ಭಾಷೆಗಳಲ್ಲಿ ಪ್ರಿಂಟಾಗಿವೆ. ಈ ವಿನ್ಸ್ಟನ್ ಪೇನಾವು ವಿಲಾಯಿತಿಯಲ್ಲಿ ತಯಾರಾದದ್ದು. ಇದಕ್ಕೆ ಭಂಗಾರ ದಂಥ ನಿಬ್ಬು ಹಾಕಿದೆ. ಪಾಕೆಟ್ ಡೈರಿ ಸಹಿತ ಪೇನಾ 1 ಕ್ಕೆ 1—12—0.

ಯಂ. ಲಿಯೋ ಅಂಡ್ ಕೋ,
12—2 168 ಜ್ಞೆನಾ ಬಜಾರ್, ಮದರಾಸು.

1932-33

KODAGU Weekly

News paper :-

File No: ARS19APP83

MICROFILMED BY

KARNATAKA STATE

ARCHIVES
1983

ROLLNO: 163

START